ಕರ್ನಾಟಕ ಸರ್ಕಾರ

ಪಾಶ್ಚಾತ್ಯ ತತ್ತ್ವಜ್ಞಾನದ ಇತಿಹಾಸ

ಮೂಲ

ಬರ್ಟ್ರಂಡ್ ರಸೆಲ್

ಕನ್ನಡಕ್ಕೆ

ಡಾ। ಪಿ.ವಿ. ನಾರಾಯಣ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಬೆಂಗಳೂರು-೫೬೦೦೫೬

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೪೫೫

ಪಾಶ್ಚಾತ್ಯ ತತ್ತ್ವಜ್ಞಾನದ ಇತಿಹಾಸ

ಪಾಶ್ಚಾತ್ಯ ತತ್ತ್ವಜ್ಞಾನದ ಇತಿಹಾಸ

ಮೂಲ

ಬರ್ಟ್ರಂಡ್ ರಸೆಲ್

ಕನ್ನಡಕ್ಕೆ

ಡಾ। ಪಿ.ವಿ. ನಾರಾಯಣ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ ಅಂಚೆ

ಮಲ್ಲತ್ತಹಳ್ಳಿ, ಬೆಂಗಳೂರು – ೫೬೦೦೫೬

PASHACHATIYA TATVAGNANADA ITHIHASA–Kannada Translation of HISTORY OF WESTERN PHILOSOPHY by Butrand Russel; translated by Dr. P.V. Narayana; Published by Ishwar K. Mirji, Registrar, Kuvempu Bhasha Bharathi Pradhikara, Kalagrama, Jnana Bharathi Post, Mallathahalli, Bengaluru-560056.

First Edition	:	2022
Pages	:	xxxii +1160
Price	:	Rs. 500/-

ಮೊದಲ ಮುದ್ರಣ	:	೨೦೨೨
ಪುಟಗಳು	:	xxxii+೧೧೬೦
ಬೆಲೆ	:	ರೂ. ೫೦೦/-
ಪ್ರತಿಗಳು	:	೫೦೦
ISBN	:	೯೭೮-೯೩-೯೧೮೧೨-೬೧-೪

ಪ್ರಕಾಶಕರು
ಈಶ್ವರ್ ಕೆ. ಮಿರ್ಜಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ ಅಂಚೆ
ಮಲ್ಲತ್ತಹಳ್ಳಿ, ಬೆಂಗಳೂರು-೫೬೦೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ : ರಾಜಾ ಪ್ರಿಂಟರ್ಸ್

Title	:	Pashachatiya Tatvagnanada Ithihasa
Author's Name	:	Butrand Russel
Translator's Name	:	Dr. P.V. Narayana
Published By	:	Ishwar K. Mirji, Registrar Kuvempu Bhasha Bharathi Pradhikara
Publisher's Address	:	Kuvempu Bhasha Bharathi Pradhikara Kalagrama, Jnana Bharathi Post Mallathahalli, Bengaluru-560056
Printer's Details	:	Raja Printers, Bengaluru
Edition Details	:	1st Edition
ISBN	:	978-93-91812-61-4
Copyright©	:	Kuvempu Bhasha Bharathi Pradhikara

ಮುದ್ರಕರು
ರಾಜಾ ಪ್ರಿಂಟರ್ಸ್
ನಂ. ೨೦/೧, ೧ನೇ ಅಡ್ಡರಸ್ತೆ, ೩ನೇ ಮುಖ್ಯ ರಸ್ತೆ
ಪುಖ್‌ರಾಜ್ ಲೇಔಟ್, ಬನ್ನೇರುಘಟ್ಟ ರಸ್ತೆ
ಬೆಂಗಳೂರು-೫೬೦೦೩೦, ದೂ: ೦೮೦-೨೨೨೩೮೦೬೬

ಅಧ್ಯಕ್ಷರ ಮಾತು

'ಜ್ಞಾನ ಮತ್ತು ಸಾಹಿತ್ಯದ ನಿರಂತರ ಕೊಡುಕೊಳ್ಳುವಿಕೆಯ ಮೂಲಕ ಕನ್ನಡ ಸಂಸ್ಕೃತಿಯ ಸಂವರ್ಧನೆ' ಎಂಬುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಧ್ಯೇಯವಾಕ್ಯವಾಗಿದೆ. ಈ ಕೊಡುಕೊಳ್ಳುವಿಕೆಯು ವ್ಯಕ್ತಿ, ಸಂಸ್ಥೆ, ಭಾಷೆ ಇವೆಲ್ಲ ಘಟಕಗಳ ನಡುವೆ ಪರಸ್ಪರ ನಡೆಯಬೇಕಾಗುತ್ತದೆ. ಹೀಗಾಗಿ ಕನ್ನಡದಲ್ಲಿ ಹುಟ್ಟಿರುವ ಜ್ಞಾನ ಮತ್ತು ಸಾಹಿತ್ಯವನ್ನು ಸಾಧ್ಯವಾದಷ್ಟು ಹೆಚ್ಚು ಕನ್ನಡಿಗರಿಗೆ ಮತ್ತು ಕನ್ನಡೇತರರಿಗೆ ತಲುಪಿಸಬೇಕಾಗಿದೆ. ಅದೇ ರೀತಿ ಹೊರಗಿನ ಜ್ಞಾನ ಮತ್ತು ಸಾಹಿತ್ಯವು ಕನ್ನಡಿಗರಿಗೆ ಸುಲಭವಾಗಿ ಸಿಗುವಂತೆ ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಪ್ರಾಧಿಕಾರವು ಕಾರ್ಯೋನ್ಮುಖವಾಗಿದೆ.

ಪಾಶ್ಚಾತ್ಯ ತತ್ತ್ವಜ್ಞಾನಕ್ಕೆ ಸಾಕಷ್ಟು ಸುದೀರ್ಘವಾದ ಇತಿಹಾಸವಿದೆ. ಪ್ರಾಚೀನ ಗ್ರೀಕ್ ಸಂಸ್ಕೃತಿಗೂ ಭಾರತೀಯ ಪ್ರಾಚೀನ ಸಂಸ್ಕೃತಿಗೂ ಸಾಕಷ್ಟು ಹತ್ತಿರದ ಹೋಲಿಕೆಯೂ ಇದೆಯೆನ್ನುತ್ತಾರೆ. ಭಾರತದಲ್ಲಿ ಪ್ರಾಚೀನವಾದುದು ಇಂದಿಗೂ ಅಲ್ಪಸ್ವಲ್ಪ ಉಳಿದಿದೆ. ಪಶ್ಚಿಮದಲ್ಲಿ ಉಳಿಯಲಿಲ್ಲ ಎನ್ನುವುದು ನಿಜ. ಈಚಿನ ಶತಮಾನಗಳನ್ನು ಗಮನಿಸಿದರೆ, ವಸಾಹತುಸಾಹಿ ಆಳ್ವಿಕೆಯು ಪಶ್ಚಿಮದವರಿಗೆ ಇತರ ಸಂಸ್ಕೃತಿಗಳನ್ನು ನೋಡಲು, ಅಧ್ಯಯನ ಮಾಡಲು ಮತ್ತು ಅವುಗಳ ಬಗ್ಗೆ ಬರೆಯಲು ಅವಕಾಶವನ್ನು ಮಾಡಿಕೊಟ್ಟಿತು. ಇತರರನ್ನು ಅಧ್ಯಯನ ಮಾಡುವ ಆಸಕ್ತಿ ಪಶ್ಚಿಮದವರಿಗೆ ನಮಗಿಂತ ಹೆಚ್ಚು. ಅದೇನೇ ಇದ್ದರೂ ಒಟ್ಟಿನಲ್ಲಿ ವಸಾಹತುಶಾಹಿ ಆಡಳಿತದಿಂದಾಗಿ ಪಶ್ಚಿಮದವರ ಅನುಭವ ವಿಸ್ತಾರವಾಯಿತು. ಅದರ ಪರಿಣಾಮ ಬೇರೆ ಬೇರೆ ರೀತಿಯಲ್ಲಿ ಪಶ್ಚಿಮದ ಆಧುನಿಕ ತತ್ತ್ವಶಾಸ್ತ್ರಜ್ಞರ ಮೇಲೆಯೂ ಆಗಿರಬಹುದು. ಪಶ್ಚಿಮದ ತತ್ತ್ವಶಾಸ್ತ್ರದ ಬಗ್ಗೆ ಬೇಕಾದಷ್ಟು ಇತರ ಪುಸ್ತಕಗಳು ಇವೆಯಾದರೂ ಬರ್ಟ್ರೆಂಡ್ ರಸೆಲ್ ಅವರ ಕೃತಿಗೆ ವಿಶೇಷ ಮಹತ್ತ್ವ ಇದ್ದೇ ಇದೆ. ಅವರು ಬರೆದ 'ಹಿಸ್ಟರಿ ಅಫ್ ವೆಸ್ಟರ್ನ್ ಫಿಲಾಸಫಿ' ಕೃತಿಯ ಕನ್ನಡ ಭಾಷಾಂತರವು ಆಸಕ್ತರಿಗೆ ಈ ಮೂಲಕ ಕನ್ನಡದಲ್ಲಿ ದೊರೆಯುತ್ತಿದೆ.

ಕನ್ನಡದ ಪ್ರಸಿದ್ಧ ಸಂಶೋಧಕರು, ಲೇಖಕರು ಹಾಗೂ ಭಾಷಾಂತರಕಾರರೂ ಆದ ಡಾ.ಪಿ.ವಿ. ನಾರಾಯಣ ಅವರು ಒಂದೆರಡು ವರ್ಷಗಳ ಹಿಂದೆಯೇ ಈ ಅನುವಾದದ ತಯಾರಿ ನಡೆಸಿದ್ದರು. ತಾಂತ್ರಿಕವಾಗಿ ಅನುಮತಿ ಇತ್ಯಾದಿ ಪ್ರಕ್ರಿಯೆಗಳು

ಪೂರೈಸುವಾಗ ಸ್ವಲ್ಪ ತಡವಾಯಿತು. ಈ ಬೃಹತ್ ಗ್ರಂಥವನ್ನು ಸುಂದರವಾಗಿ ಕನ್ನಡಕ್ಕೆ ಅನುವಾದಿಸಿಕೊಟ್ಟಿರುವ ಡಾ. ಪಿ.ವಿ. ನಾರಾಯಣ ಅವರಿಗೆ ಕೃತಜ್ಞತೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ವತಿಯಿಂದ ಈ ಕೃತಿಯನ್ನು ಪ್ರಕಟಿಸಲು ತುಂಬು ಮನಸ್ಸಿನಿಂದ ಸಹಕರಿಸಿದ ಪ್ರಾಧಿಕಾರದ ಸದಸ್ಯರಿಗೆ, ಪ್ರಾಧಿಕಾರದ ಕೆಲಸಗಳಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಂಡಿರುವ ರಿಜಿಸ್ಟ್ರಾರ್ ಶ್ರೀ ಈಶ್ವರ್ ಕು ಮಿರ್ಜಿ ಅವರಿಗೆ, ಪ್ರಾಧಿಕಾರದ ಸಿಬ್ಬಂದಿ ವರ್ಗದವರಿಗೆ, ಅಂದವಾಗಿ ಮುದ್ರಿಸಿರುವ ಮುದ್ರಣಾಲಯದ ಮಾಲಿಕರಿಗೆ ಹಾಗೂ ಅಲ್ಲಿಯ ಎಲ್ಲಾ ಸಿಬ್ಬಂದಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಡಾ. ಅಜಕ್ಕಳ ಗಿರೀಶ ಭಟ್
ಅಧ್ಯಕ್ಷರು

ಅನುವಾದಕರ ಮಾತುಗಳು

ನನಗೆ ಮೊದಲಿನಿಂದಲೂ ಬರ್ಟ್ರಂಡ್ ರಸೆಲ್ ಅವರ ಬರಹಗಳು ಇಷ್ಟ; ಅದಕ್ಕೆ ಕಾರಣ, ನಾನು ಬಿ.ಎ. ಓದುವಾಗ ಪಠ್ಯವಾಗಿದ್ದ ಮತ್ತು ಅನಂತರ ನಾನೇ ಪಾಠ ಮಾಡಬೇಕಾಗಿ ಬಂದ 'The Impact of Science on Society' ಪುಸ್ತಕ ನನ್ನ ಮೇಲೆ ಮಾಡಿದ್ದ ಪ್ರಭಾವ. ರಸೆಲ್ ಅವರ ವ್ಯಾಪಕ ವಿದ್ವತ್ತು, ವೈಜ್ಞಾನಿಕ ದೃಷ್ಟಿಕೋನ, ಮಾನವೀಯ ಸ್ಪಂದನೆ, ನಿರಂತರ ಜನಪರವಾದ ಕ್ರಿಯಾಶೀಲತೆ ಮುಂತಾದವು ನನಗೆ ಆದರ್ಶವೆನಿಸಿದ್ದವು. ಮೊದಲು ಅವರು ಗಣಿತದಲ್ಲಿ ಆಸಕ್ತಿಯನ್ನು ತಾಳಿ ಆಲ್‌ಫ್ರೆಡ್ ವೈಟ್‌ಹೆಡ್ ಅವರೊಡನೆ 'Principa Mathematica' ದಂತಹ ಮಹತ್ವದ ಗ್ರಂಥವನ್ನು ಪ್ರಕಟಿಸಿದರೂ, ಆ ಮುಂದೆ ತತ್ವಜ್ಞಾನದತ್ತ ಅವರ ಆಸಕ್ತಿ ಹೆಚ್ಚಾಗಿ, ಮಾನವನ ಬದುಕನ್ನು ಹೆಚ್ಚು ಹಸನುಗೊಳಿಸುವ ಕೆಲಸವನ್ನು ತತ್ವಜ್ಞಾನವು ಹೇಗೆ ಮಾಡಬಹುದು ಎಂದು ಚಿಂತಿಸಿದವರು. ವಿಜ್ಞಾನದ ಅತ್ಯಾಧುನಿಕ ಆವಿಷ್ಕಾರಗಳ ಬಗ್ಗೆ ಅರಿವಿದ್ದವರು; ಐನ್‌ಸ್ಟೈನ್‌ರ ಸಾಪೇಕ್ಷ ಸಿದ್ಧಾಂತದ ಬಗ್ಗೆ ಮೊದಲು ವಿವೇಚಿಸಿದವರು. ವಿಜ್ಞಾನದ ಅತ್ಯಾಧುನಿಕ ಆವಿಷ್ಕಾರಗಳ ಬಗ್ಗೆ ಅರಿವಿದ್ದವರು; ಐನ್‌ಸ್ಟೈನ್‌ರ ಸಾಪೇಕ್ಷ ಸಿದ್ಧಾಂತದ ಬಗ್ಗೆ ಮೊದಲು ವಿವೇಚಿಸಿದವರು. ವೈಜ್ಞಾನಿಕ ಅತ್ಯಾಧುನಿಕ ಆವಿಷ್ಕಾರಗಳ ಬಗ್ಗೆ ಅರಿವಿದ್ದವರು; ಐನ್‌ಸ್ಟೈನ್‌ರ ಸಾಪೇಕ್ಷ ಸಿದ್ಧಾಂತದ ಬಗ್ಗೆ ಮೊದಲು ವಿವೇಚಿಸಿದವರು. ವೈಜ್ಞಾನಿಕ ಸ್ಪಷ್ಟತೆ–ನಿಷ್ಕೃಷ್ಟತೆಗಳು ಮತ್ತು ಮಾನವನ ಅಂತರಂಗಿಕ ಬದುಕಿನ ತರ್ಕಾತೀತತೆ ಇವುಗಳ ನಡುವಣ 'ಸಮಾನವಲಯ'ವೇ ತತ್ವಜ್ಞಾನ ಎಂದವರು ಭಾವಿಸಿದ್ದರು. ಎರಡೂ ಮಹಾಯುದ್ಧಗಳನ್ನು ಕಂಡ ಅವರು ಜಗತ್ತಿನಲ್ಲಿ ಶಾಂತಿಸ್ಥಾಪನೆಗಾಗಿ ಕೊನೆಯವರೆಗೂ ಹೆಣಗಿದವರು; ತಮ್ಮ ತೊಂಬತ್ತೈದನೆಯ ವಯಸ್ಸಿನಲ್ಲಿಯೂ ಚಳವಳಿಗಳಲ್ಲಿ ಭಾಗವಹಿಸಿದವರು. ಅಣ್ವಸ್ತ್ರಗಳ ವಿರುದ್ಧದ ಅವರ ಅಭಿಯಾನಕ್ಕೆ ಮೊದಲು ಸಹಿ ಮಾಡಿದ್ದೇ ಐನ್‌ಸ್ಟೈನ್ ಎಂದ ಮೇಲೆ ಅವರ ಕಾರ್ಯದ ಮಹತ್ವದ ಅರಿವಾದೀತು. ತಮ್ಮ ವೈಚಾರಿಕ ಕೃತಿಗಳಿಗಾಗಿಯೇ ಅವರು ಸಾಹಿತ್ಯದ ನೊಬೆಲ್ ಪ್ರಶಸ್ತಿಯನ್ನು ಪಡೆದರು; ಪ್ರಶಸ್ತಿಯ ಆಶಂಸನದಲ್ಲಿ ಅವರಿಗೆ ಈ ಪ್ರಶಸ್ತಿಯನ್ನು ತಂದಿತ್ತ ಕೃತಿಗಳಲ್ಲಿ 'A History of Western Philosophy' ಯನ್ನೂ ಮಹತ್ವದ್ದೆಂದು ಸೇರಿಸಲಾಗಿತ್ತು. ಅದು

ಪ್ರಕಟಗೊಂಡ ಬಳಿಕ ಮಿಶ್ರ ಪ್ರತಿಕ್ರಿಯೆಗಳಿಗೆ ಒಳಗಾಯಿತೆಂಬುದು ನಿಜ, ಆದರೆ ಅಂತಹ ಟೀಕೆಗಳು ಬರಬಹುದೆಂಬ ನಿರೀಕ್ಷೆ ಅವರಿಗಿದ್ದುದು ಈ ಗ್ರಂಥಕ್ಕೆ ಅವರು ಬರೆದ ಮೊದಲ ಮಾತುಗಳಲ್ಲಿಯೇ ವ್ಯಕ್ತವಾಗಿದೆ.

ರಸೆಲ್ ಅವರ ಐದು ಕೃತಿಗಳನ್ನು ಈಗಾಗಲೇ ಕನ್ನಡದಲ್ಲಿ ತಂದಿದ್ದೆ; ಇದನ್ನೂ ಕನ್ನಡಿಸುವ ಹಂಬಲ ನನಗಿದ್ದರೂ ಅದರ ಗಾತ್ರದ ಜೊತೆಗೆ, ಅಲ್ಲಿನ ತತ್ವಜ್ಞಾನದೊಡನೆ ಮಿಳಿತವಾಗಿದ್ದ ಗಣಿತ, ವಿಜ್ಞಾನ, ರಾಜಕೀಯ–ಆರ್ಥಿಕ ಚಾರಿತ್ರಿಕ ಹಿನ್ನೆಲೆ–ಇವು ನನ್ನನ್ನು ದಿಗಿಲುಗೊಳಿಸಿತ್ತು. ಆದರೆ ಕುವೆಂಪು ಭಾಷಾಭಾರತಿಯ ಹಿಂದಿನ ಅಧ್ಯಕ್ಷರು ಈ ಕೃತಿಯನ್ನು ಕನ್ನಡಕ್ಕೆ ತರಲು ನನ್ನನ್ನು ಕೇಳಿದಾಗ 'ಏನೇ ಆಗಲಿ ನೋಡಿಬಿಡೋಣ' ಎಂದು ಆ ಕೆಲಸವನ್ನು ಒಪ್ಪಿಕೊಂಡು ನಿಗದಿತ ಅವಧಿಯಲ್ಲಿ ಮುಗಿಸಿದೆ. ಸರಿ, ಆದರೆ ಅನುವಾದವನ್ನು ಪ್ರಕಟಿಸುವ ಹಕ್ಕಿನ ಪ್ರಶ್ನೆ ಒಂದು ರೀತಿಯ ಅನಿಶ್ಚತತೆಯನ್ನು ಉಂಟುಮಾಡಿತು. ಈಗಿನ ಅಧ್ಯಕ್ಷರಾದ ಪ್ರೊ। ಅಜಕ್ಕಳ ಗಿರೀಶ ಭಟ್‌ರು ಚಾಕಚಕ್ಯತೆಯಿಂದ ಅದನ್ನು ಪರಿಹರಿಸಿ ಈ ಅನುವಾದವು ಪ್ರಕಟವಾಗಲು ನೆರವಾಗಿದ್ದಾರೆ.

ಈ ಅನುವಾದವು ಹೇಗೆಯೇ ಇರಲಿ, ತುಂಬ ಆಸಕ್ತಿ, ಶ್ರದ್ಧೆ ಮತ್ತು ಪ್ರಾಮಾಣಿಕ ಪ್ರಯತ್ನಗಳಿಂದ ಈ ಕಾರ್ಯವನ್ನು ನಿರ್ವಹಿಸಿರುವ ಕೃತಕೃತ್ಯ ಭಾವನೆ ನನ್ನಲ್ಲಿದೆ. ನಾನು ಅನುವಾದಿಸಿರುವ ಕೃತಿಗಳಲ್ಲಿ ತುಂಬ ಮಹತ್ವದ ಈ ಕೃತಿಯನ್ನು ಕನ್ನಡಕ್ಕೆ ತರಲು ಹೇಳಿದ ಕುವೆಂಪು ಭಾಷಾಭಾರತಿಯ ಹಿಂದಿನ ಅಧ್ಯಕ್ಷರಿಗೆ ಹಾಗೂ ಅದನ್ನು ಸುಂದರವಾಗಿ ಹೊರಬರುವಂತೆ ಶ್ರಮವಹಿಸಿದ ಈಗಿನ ಅಧ್ಯಕ್ಷರು ಮತ್ತು ಸದಸ್ಯರಿಗೆ ನಾನು ಕೃತಜ್ಞನಾಗಿದ್ದೇನೆ.

ಪಿ.ವಿ. ನಾರಾಯಣ

ಮುನ್ನುಡಿ

ಈ ಪುಸ್ತಕಕ್ಕೆ ಸಹಜವಾಗಿಯೇ ಬರಬಹುದಾದ ಆಕ್ಷೇಪಣೆಗಳಿಗೂ ಮೀರಿದವು ಬಾರದಿರಲೆಂಬ ಕಾರಣದಿಂದ ನಾನು ಕೆಲವು ಕ್ಷಮಾಯಾಚನೆಯ ಮತ್ತು ವಿವರಣೆಗಳ ಮಾತುಗಳನ್ನು ಹೇಳಬೇಕಾಗಿದೆ.

ವಿವಿಧ ಪಂಥಗಳ ಪರಿಣತರ ಹಾಗೂ ಬಿಡಿ ತತ್ವಜ್ಞಾನಿಗಳಲ್ಲಿ ನಾನು ಕ್ಷಮಾಯಾಚನೆ ಮಾಡಬೇಕಾಗಿದೆ. ಪ್ರಾಯಶಃ ಲೀಬ್‌ನಿಝ್‌ನನ್ನು ಹೊರತುಪಡಿಸಿದರೆ, ನಾನು ವಿವೇಚಿಸಿರುವ ಪ್ರತಿಯೊಬ್ಬ ತತ್ವಜ್ಞಾನಿಯೂ ನನಗಿಂತ ಬೇರೆ ಅನೇಕರಿಗೇ ಹೆಚ್ಚು ಅರ್ಥವಾಗಿರುತ್ತಾನೆ. ವ್ಯಾಪಕ ವಿಷಯಗಳನ್ನು ಕುರಿತು ದೊಡ್ಡ ದೊಡ್ಡ ಪುಸ್ತಕಗಳನ್ನು ಬರೆಯಲೇಬೇಕಾದರೆ, ನಾವು ಅಮರರಲ್ಲವಾದ್ದರಿಂದ, ಇಂಥ ಪುಸ್ತಕಗಳನ್ನು ಬರೆಯುವವರು, ಒಬ್ಬನೇ ಲೇಖಕನ ಅಥವಾ ಒಂದು ಕಿರು ಅವಧಿಯ ಮೇಲೆ ಕೇಂದ್ರೀಕರಿಸಬಹುದಾದುದಕ್ಕಿಂತ ಕಡಿಮೆ ಕಾಲವನ್ನು ವಿನಿಯೋಗಿಸಬೇಕಾದುದು ಅನಿವಾರ್ಯವಾಗುತ್ತದೆ. ರಾಜಿಯಾಗದ ಕಟ್ಟುಪಾಡುಗಳ ಕೆಲವು ಮಂದಿ ವಿದ್ವಾಂಸರು ವ್ಯಾಪಕ ವಿಷಯಗಳನ್ನು ಕುರಿತ ಪುಸ್ತಕಗಳನ್ನು ಬರೆಯಲೇಬಾರದು, ಅಥವಾ ಬರೆಯಲೇ ಬೇಕಾದಾಗಲೂ, ವಿವಿಧ ಲೇಖಕರಿಂದ ಕಿರುಹೊತ್ತಗೆಗಳನ್ನು ಬರೆಸಬೇಕೆಂದು ವಿಧಿಸಬಹುದು. ಹೀಗೆ ಹಲವಾರು ಲೇಖಕರು ಸೇರಿ ಒಂದುಕೆಲಸವನ್ನು ಮಾಡಿದರೆ ಏನೋ ಕಳೆದುಹೋಗುತ್ತದೆ. ಇತಿಹಾಸದ ಚಲನೆಯಲ್ಲಿ ಯಾವುದಾದರೂ ಐಕ್ಯವಿದ್ದರೆ, ಹಿಂದೆ ಏನಾಯಿತು ಮತ್ತು ಮುಂದೆ ಏನು ನಡೆಯಿತು ಎಂಬಿವುಗಳಲ್ಲಿ ನಿಕಟವಾದ ಸಂಬಂಧವಿದ್ದರೆ, ಇದನ್ನು ಒಬ್ಬನ ಮನಸ್ಸು ಗಮನಿಸುವುದು ಮತ್ತು ಸಂಯೋಜಿಸುವುದು ಆವಶ್ಯಕವಾಗುತ್ತದೆ. ರೂಸೋನನ್ನು ಅಧ್ಯಯನ ಮಾಡಿದವನು, ಅವನು ಪ್ಲೇಟೋನ ಸ್ಪಾರ್ಟಾ ಮತ್ತು ಪ್ಲೂಟಾರ್ಕ್ ಜೊತೆ ಹೊಂದಿದ್ದ ಸಂಬಂಧಕ್ಕೆ ನ್ಯಾಯ ಒದಗಿಸುವುದು ಕಷ್ಟವಾಗಬಹುದು. ಸ್ಪಾರ್ಟಾದ ಇತಿಹಾಸಕಾರನಿಗೆ ಬರಲಿರುವ ಹಾಬ್ಸ್, ಫ಼ಿಷ್ತೆ ಮತ್ತು ಲೆನಿನ್‌ರ ಬಗ್ಗೆ ಮುನ್‌ಸೂಚಿಸುವ ಎಚ್ಚರ ಇರಲಾರದು. ಇಂಥ ಸಂಬಂಧಗಳನ್ನು ಗುರುತಿಸುವುದು ಈ ಪುಸ್ತಕದ ಉದ್ದೇಶಗಳಲ್ಲಿ ಒಂದು, ಈ ಉದ್ದೇಶವನ್ನು ವ್ಯಾಪಕ ಸಮೀಕ್ಷೆಯು ಮಾತ್ರವೇ ನೆರವೇರಿಸಬಲ್ಲುದು.

ತಾತ್ವಿಕತೆಯ ಇತಿಹಾಸದ ಬಗೆಗಿನ ಅನೇಕ ಪುಸ್ತಕಗಳಿವೆಯಾದರೂ, ಅವಾವುವೂ ನಾನು ಹೊಂದಿರುವ ಈ ಉದ್ದೇಶವನ್ನು ಹೊಂದಿರುವುದು ನನ್ನ ಗಮನಕ್ಕೆ ಬಂದಿಲ್ಲ. ತತ್ವಜ್ಞಾನಿಗಳು ಪರಿಣಾಮಗಳೂ ಹೌದು, ಕಾರಣಗಳೂ ಹೌದು: ತಮ್ಮ ಕಾಲದ ಸಾಮಾಜಿಕ ಪರಿಸ್ಥಿತಿಗಳ ಹಾಗೂ ರಾಜಕೀಯ ಮತ್ತು ಸಂಸ್ಥೆಗಳ ಪರಿಣಾಮಗಳು; ಮತ್ತು (ಅವರು ಅದೃಷ್ಟವಂತರಾಗಿದ್ದರೆ) ಆನಂತರ ಕಾಲದ ರಾಜಕೀಯ ಮತ್ತು ಸಂಸ್ಥೆಗಳನ್ನು ರೂಪಿಸುವ ನಂಬಿಕೆಗಳ ಕಾರಣಗಳು. ಬಹುಪಾಲು ತಾತ್ವಿಕ ಇತಿಹಾಸಗಳಲ್ಲಿ, ಪ್ರತಿ ತತ್ವಜ್ಞಾನಿಯೂ ನಿರ್ವಾತದಲ್ಲಿನಂತೆ ಕಾಣಿಸಿಕೊಳ್ಳುತ್ತಾನೆ; ಅವನ ಅಭಿಪ್ರಾಯಗಳು ಆ ಮುಂಚಿನ ತತ್ವಜ್ಞಾನಗಳೊಡನೆ ಹೊಂದಿರುವ ಸಂಬಂಧಗಳನ್ನು ಗುರುತಿಸುವುದಿಲ್ಲ, ಇದಕ್ಕೆ ವ್ಯತಿರಿಕ್ತವಾಗಿ ನಾನು ಸತ್ಯವು ಅವಕಾಶ ನೀಡುವವರೆಗೂ ಪ್ರತಿಯೊಬ್ಬ ತತ್ವಜ್ಞಾನಿಯೂ ತನ್ನ ಪರಿಸ್ಥಿತಿಗಳ ಫಲ; ಅವನು ಭಾಗವಾಗಿರುವ ಸಮಾಜದಲ್ಲಿ ಹರಿದು ಹಂಚಿಹೋಗಿರುವ ಭಾವನೆಗಳು ಮತ್ತು ಚಿಂತನೆಗಳು ಅವನಲ್ಲಿ ಹರಳೀಕರಣಗೊಂಡಿರುತ್ತವೆ ಎಂದು ತೋರಿಸಲು ಪ್ರಯತ್ನಿಸಿದ್ದೇನೆ.

ಇದಕ್ಕಾಗಿ ಕೇವಲ ಸಾಮಾಜಿಕ ಇತಿಹಾಸದಿಂದ ಕೂಡಿದ ಕೆಲವು ಅಧ್ಯಾಯಗಳನ್ನು ಮಧ್ಯೆ ಮಧ್ಯೆ ಸೇರಿಸುವುದು ಅನಿವಾರ್ಯವಾಯಿತು. ಹೆಲೆನಿಸ್ಟಿಕ್ ಯುಗದ ತಿಳಿವಳಿಕೆಯಿಲ್ಲದಿದ್ದರೆ ಸಂಯಮವಾದಿಗಳು ಮತ್ತು ಎಪಿಕ್ಯೂರಿಯನ್‌ರನ್ನು, ಅಥವಾ ಐದರಿಂದ ಹದಿಮೂರನೇ ಶತಮಾನದವರೆಗಿನ ಚರ್ಚ್‌ನ ಬೆಳವಣಿಗೆಯನ್ನು ಆಧುನಿಕ ಬಗೆಯಲ್ಲಿ ಅಲ್ಪಸ್ವಲ್ಪವಾದರೂ ತಿಳಿದುಕೊಳ್ಳದಿದ್ದರೆ ಸೂಕ್ಷ್ಮತಾರ್ಕಿಕರನ್ನು, ಅರ್ಥಮಾಡಿಕೊಳ್ಳಲು ಯಾರಿಗೂ ಸಾಧ್ಯವಾಗುವುದಿಲ್ಲ. ಹೀಗಾಗಿ ನಾನು ತಾತ್ವಿಕ ಚಿಂತನೆಗಳ ಮೇಲೆ ಅಧಿಕ ಪ್ರಭಾವ ಬೀರಿದ ಮುಖ್ಯ ಐತಿಹಾಸಿಕ ರೂಪುರೇಷೆಗಳನ್ನು ಸಂಕ್ಷೇಪವಾಗಿ ವಿವರಿಸಿದ್ದೇನೆ; ಕೆಲವು ಓದುಗರಿಗೆ ಇತಿಹಾಸ ಅಪರಿಚಿತವಾಗಿರಬಹುದೆಂದು ಭಾವಿಸಿ ಅದನ್ನು ಆದಷ್ಟೂ ವಿವರವಾಗಿ ಹೇಳಿದ್ದೇನೆ – ಉದಾಹರಣೆಗೆ, ಮಧ್ಯಯುಗಗಳಿಗೆ ಸಂಬಂಧಿಸಿದಂತೆ. ಆದರೆ ಈ ಐತಿಹಾಸಿಕ ಅಧ್ಯಾಯಗಳಲ್ಲಿ ಸಮಾಕಾಲೀನದಲ್ಲಾಗಲೀ ಆನಂತರದಲ್ಲಾಗಲೀ ಯಾವುದೇ ಪರಿಣಾಮವಿರದ ಅಥವಾ ಅಲ್ಪ ಪರಿಣಾಮದ ಸಂಗತಿಗಳನ್ನು ನಿಷ್ಠುರವಾಗಿ ಕೈಬಿಟ್ಟಿದ್ದೇನೆ.

ಪ್ರಸ್ತುತ ಪುಸ್ತಕದಲ್ಲಿನಂತೆ ಆಯ್ಕೆಯ ಸಮಸ್ಯೆಯು ತುಂಬ ಕ್ಲಿಷ್ಟಕರವಾದದ್ದು. ವಿವರಗಳಿಲ್ಲದ ಪುಸ್ತಕವು ನೀರಸವಾಗಿಯೂ ಆಸಕ್ತಿರಹಿತವೂ ಆಗಿಬಿಡುತ್ತದೆ; ವಿವರಗಳಾದರೋ ಅನವಶ್ಯಕವಾಗಿ ಲಂಬವಾಗುವ ಅಪಾಯವಿರುತ್ತದೆ. ಸಾಕಷ್ಟು ಮುಖ್ಯರಾದವರೆಂದು ನಾನು ಭಾವಿಸಿರುವ ತತ್ವಜ್ಞಾನಿಗಳ ಬಗ್ಗೆ ಮಾತ್ರವೇ ವಿವೇಚಿಸುವ ಮೂಲಕ, ಮತ್ತು ಅವರಿಗೆ ಸಂಬಂಧಪಟ್ಟಂತೆ, ಮೂಲತಃ ಅಷ್ಟೊಂದು

ಮುಖ್ಯವಲ್ಲದಿದ್ದರೂ, ನಿದರ್ಶನಾತ್ಮಕವಾದ ಮತ್ತು ಸ್ಪಷ್ಟತೆಯ ಕಾರಣದಿಂದ ಆವಶ್ಯಕವೆನಿಸಿದ ವಿರಗಳನ್ನಷ್ಟೇ ನೀಡುವ ಮೂಲಕ ಇವೆರಡರ ನಡುವಣ ಮಧ್ಯಮಮಾರ್ಗವನ್ನು ಅನುಸರಿಸಿದ್ದೇನೆ.

ಅತ್ಯಂತ ಪ್ರಾಚೀನ ಕಾಲದಿಂದಲೂ ತಾತ್ವಿಕತೆಯು ಪಂಥಗಳಿಗೆ ಮಾತ್ರ ಸಂಬಂಧಿಸಿಲ್ಲ ಅಥವಾ ಕೆಲವು ಮಂದಿ ಪಂಡಿತರ ನಡುವಣ ವಿವಾದದ ವಿದ್ಯಮಾನ ಮಾತ್ರವಾಗಿರಲಿಲ್ಲ. ಅದು ಆ ಸಮಾಜದ ಒಂದು ಅವಿಭಾಜ್ಯ ಅಂಗವೇ ಆಗಿತ್ತು; ಹೀಗಾಗಿ ನಾನದನ್ನು ಪರಿಗಣಿಸಲು ಯತ್ನಿಸಿದ್ದೇನೆ. ಈ ಪುಸ್ತಕದಲ್ಲಿ ಏನಾದರೂ ಗುಣವಿದ್ದರೆ, ಅದಕ್ಕೆ ಕಾರಣ ಈ ನನ್ನ ದೃಷ್ಟಿಕೋನ.

ಈ ಪುಸ್ತಕವು ಹೊರಬರಲು ಕಾರಣ ಡಾ। ಆಲ್‌ಬರ್ಟ್ ಸಿ. ಬ್ಯಾರ್‍ನ್ಸ್; ಮೂಲತಃ ಇದನ್ನು ನಾನು ನಾನು ಭಾಗಶಃ ಉಪನ್ಯಾಸಗಳಾಗಿ ವಿನ್ಯಾಸಗೊಳಿಸಿ ಪೆನ್ಸಿಲ್ವೇನಿಯದ ಬ್ಯಾರ್‍ನ್ಸ್ ಪ್ರತಿಷ್ಠಾನದಲ್ಲಿ ಮಂಡಿಸಿದ್ದೇನೆ.

1932 ರಿಂದೀಚೆಗಿನ ನನ್ನ ಬಹುತೇಕ ಕೃತಿಗಳಲ್ಲಿನಂತೆ, ನನ್ನ ಸಂಶೋಧನೆ ಮತ್ತು ಇನ್ನೂ ಅನೇಕ ವಿಧಗಳಲ್ಲಿ ನನ್ನ ಹೆಂಡತಿ ಪ್ಯಾಟ್ರೀಸಿಯ ರಸೆಲ್ ನನ್ನೊಂದಿಗೆ ಬಹುವಾಗಿ ಸಹಕರಿಸಿದ್ದಾರೆ.

ಬರ್ಟ್ರೆಂಡ್ ರಸೆಲ್

ಪೀಠಿಕೆ

ನಾವು 'ತಾತ್ವಿಕ' ಎಂದು ಕರೆಯುವ ಬದುಕು ಮತ್ತು ಜಗತ್ತುಗಳ ಬಗೆಗಿನ ಪರಿಕಲ್ಪನೆಗಳು ಎರಡು ಸಂಗತಿಗಳ ಉತ್ಪನ್ನ: ಒಂದು, ಪಾರಂಪರಿಕವಾದ ಧಾರ್ಮಿಕ ಮತ್ತು ನೈತಿಕ ಪರಿಕಲ್ಪನೆಗಳು; ಮತ್ತೊಂದು, ಅತ್ಯಂತ ವ್ಯಾಪಕವಾದ ಅರ್ಥದಲ್ಲಿ 'ವೈಜ್ಞಾನಿಕ'ವೆಂದು ಕರೆಯಬಹುದಾದ ಒಂದು ಬಗೆಯ ಅನಾವರಣ (ಡಿಸ್ಕವರಿ). ವಿವಿಧ ತತ್ವಶಾಸ್ತ್ರಜ್ಞರ ಕಾರ್ಯಸ್ವರೂಪದಲ್ಲಿ ಈ ಎರಡು ಸಂಗತಿಗಳು ಮೇಳೈಸುವ ರೀತಿಯಲ್ಲಿ ಸಾಕಷ್ಟು ಭಿನ್ನತೆಗಳಿರುತ್ತವೆ, ಆದರೆ ಇವೆರಡೂ ಒಂದಲ್ಲ ಒಂದು ಪ್ರಮಾಣದಲ್ಲಿ ಇರುವುದೇ ತತ್ವಜ್ಞಾನದ ಲಕ್ಷಣ.

ತತ್ವಜ್ಞಾನ' ಎಂಬ ಶಬ್ದವನ್ನು ವಿವಿಧ ಅರ್ಥಚ್ಛಾಯೆಗಳಲ್ಲಿ ಬಳಸಲಾಗುತ್ತದೆ, ಕೆಲವು ವ್ಯಾಪಕವಾದುವಾದರೆ, ಮತ್ತೆ ಕೆಲವು ಸಂಕುಚಿತವಾದವು. ನಾನು ಅದನ್ನು ತುಂಬ ವ್ಯಾಪಕಾರ್ಥದಲ್ಲಿ ಬಳಸುತ್ತೇನೆ; ಅದನ್ನೇ ನಾನೀಗ ವಿವರಿಸುತ್ತೇನೆ.

ನಾನು ಅರ್ಥವಿಸುವ ಬಗೆಯಲ್ಲಿ ತತ್ವಜ್ಞಾನವು ಮತಧರ್ಮಶಾಸ್ತ್ರ ಮತ್ತು ವಿಜ್ಞಾನಗಳ ನಡುವಿನದು. ಮತಧರ್ಮಶಾಸ್ತ್ರದಂತೆ ಅದರಲ್ಲಿ, ಇದುವರೆಗೆ ಖಚಿತವಾಗಿ ನಿರ್ಧರಿಸಲಾಗದ ವಿಷಯಗಳ ಕುರಿತ ಆಧಾರಕಲ್ಪನೆ(ಹೈಪಾಥೆಸಿಸ್)ಗಳೂ ಇರುತ್ತವೆ, ಆದರೆ ಅದು ವಿಜ್ಞಾನದಂತೆ ಪ್ರಮಾಣವಾಕ್ಕುಗಳಿಗಿಂತ, ಸಾಂಪ್ರದಾಯಿಕವಾದುದೋ ಅರಿವಿನಿಂದುಂಟಾದುದೋ, ಮಾನವನ ತಾರ್ಕಿಕತೆಗೆ ಸಿಲುಕುವಂತಹದು. ಎಲ್ಲ ಖಚಿತ ಜ್ಞಾನವೂ ವಿಜ್ಞಾನದ ವಲಯಕ್ಕೆ ಸೇರಿದವೆಂಬುದು; ಇಂತಹ ಖಚಿತ ಜ್ಞಾನಕ್ಕೆ ಹೊರತಾದ ಎಲ್ಲ ಶಾಸ್ತ್ರಪ್ರಾಮಾಣ್ಯ (ಡಾಗ್ಮಾ)ವೂ ಮತಧರ್ಮಶಾಸ್ತ್ರದ (ಥಿಯಾಲಜಿ) ವಲಯಕ್ಕೆ ಸೇರಿದವೆಂಬುದು ನನ್ನ ನಿಲವು. ಆದರೆ ವಿಜ್ಞಾನ ಮತ್ತು ಮತಧರ್ಮಶಾಸ್ತ್ರಗಳ ನಡುವೆ 'ಯಾರಿಗೂ ಸಂಬಂಧಿಸದ ವಲಯ'ವೊಂದಿದೆ, ಅದು ಎರಡೂ ಪಕ್ಷದವರ ಟೀಕೆಗೊಳಗಾಗುವಂತಹುದು. ಈ ನಡುವಣ 'ಯಾರಿಗೂ ಸಂಬಂಧಿಸದ ವಲಯ'ವೇ ತತ್ವಜ್ಞಾನ. ಊಹನಾತ್ಮಕ ಮನಸ್ಸುಗಳಿಗೆ ಅತ್ಯಂತ ಆಸಕ್ತಿದಾಯಕವೆನಿಸುವ ಬಹುತೇಕ ಎಲ್ಲ ಸಮಸ್ಯೆಗಳೂ ವಿಜ್ಞಾನವು ಉತ್ತರಿಸಲಾಗದವು, ಹಾಗೆಯೇ ಮತಧರ್ಮಶಾಸ್ತ್ರಜ್ಞರ ನೆಚ್ಚಿಕೆಯ ಉತ್ತರಗಳು ಹಿಂದಿನ ಶತಮಾನಗಳಲ್ಲಿದ್ದಷ್ಟು ಈಗ ನೆಚ್ಚಿಕೆಯನ್ನುಂಟುಮಾಡಲಾರವು. ಮನಸ್ಸು

ಮತ್ತು ಭೌತವಸ್ತುಗಳೆಂದು ವಿಭಜನೆಗೊಂಡ ಜಗತ್ತಿನಲ್ಲಿ ಮನಸ್ಸು ಎಂದರೇನು, ಭೌತವಸ್ತು ಎಂದರೆ ಯಾವುದು? ಮನಸ್ಸು ಭೌತವಸ್ತುವಿಗೆ ಅಧೀನವೇ, ಅಥವಾ ಅದಕ್ಕೆ ತನ್ನದೇ ಆದ ಸಾಮರ್ಥ್ಯಗಳಿವೆಯೇ? ವಿಶ್ವಕ್ಕೆ ಒಂದು ಉದ್ದೇಶವಿದೆಯೇ, ಅಖಂಡತೆಯಿದೆಯೇ? ಅದು ಯಾವುದೋ ಗುರಿಯತ್ತ ವಿಕಸನಗೊಳ್ಳುತ್ತಿದೆಯೇ? ಪ್ರಕೃತಿ ನಿಯಮಗಳೆಂಬುವು ನಿಜವಾಗಿ ಇವೆಯೇ? ಅಥವಾ ನಮ್ಮಲ್ಲಿ ಅಂತರ್ಗತವಾದ ವ್ಯವಸ್ಥೆಯ ಪ್ರೀತಿಯಿಂದಾಗಿ ನಾವು ಅವುಗಳನ್ನು ನಂಬುತ್ತೇವೆಯೇ? ಮಾನವನು ಖಗೋಳವಿಜ್ಞಾನಿಗೆ ಕಾಣುವಂತಹ ಅಶುದ್ಧ ಇಂಗಾಲದ ಅತಿಸೂಕ್ಷ್ಮ ಕಣವೇ, ಸಣ್ಣದೂ ಅಪ್ರಮುಖವೂ ಆದ ಗ್ರಹವೊಂದರ ಮೇಲೆ ಹರಿಯುವ ಸತ್ವಹೀನ ನೀರಿನ ಕಣವೇ? ಅಥವಾ ಅವನು ಹ್ಯಾಮ್ಲೆಟ್‌ಗೆ ಕಾಣುವಂತಹವನೇ? ಅಥವಾ ಒಮ್ಮೆಗೇ ಅವನು ಎರಡೂ ಆಗಿರಬಹುದೇ? ಉದಾತ್ತ ಜೀವನಕ್ರಮ ಮತ್ತು ಕ್ಷುಲ್ಲಕ ಜೀವನಕ್ರಮ ಎಂಬುದಿದೆಯೇ ಅಥವಾ ಎಲ್ಲ ಜೀವನ ಬಗೆಯೂ ನಿಸ್ಸಾರ್ಥಕವಾದುದೇ? ಉದಾತ್ತ ಜೀವನಕ್ರಮ ಎಂಬುದೊಂದು ಇರುವುದಾದರೆ ಅದು ಎಂತಹದು, ಅದನ್ನು ನಾವು ಹೇಗೆ ಸಾಧಿಸಬಹುದು? ಒಳಿತು ಎಂಬುದು ಮೌಲಿಕವಾದುದಾಗಬೇಕಾದರೆ ಅದು ಚಿರಂತನವಾಗಿರಬೇಕೆ, ಅಥವಾ ವಿಶ್ವವು ನಿಷ್ಕರುಣೆಯಿಂದ ವಿನಾಶದೆಡೆ ಸಾಗುತ್ತಿದ್ದರೂ ನಾವು ಒಳಿತನ್ನು ಸಾಧಿಸಲೆತ್ನಿಸಬೇಕೆ? ವಿವೇಕ ಎಂಬುದಿದೆಯೇ, ಅಥವಾ ಹಾಗಿರುವುದು ಅವಿವೇಕದ ಆತ್ಯಂತಿಕ ಸುಧಾರಿತ ರೂಪವೇ? ಇಂತಹ ಪ್ರಶ್ನೆಗಳಿಗೆ ಪ್ರಯೋಗಾಲಯಗಳಲ್ಲಿ ಯಾವ ಉತ್ತರವನ್ನೂ ಕಂಡುಕೊಳ್ಳಲಾಗುವುದಿಲ್ಲ. ಮತಧರ್ಮಶಾಸ್ತ್ರಜ್ಞರು ಇವುಗಳಿಗೆ ಖಚಿತವಾದ ಉತ್ತರಗಳನ್ನು ನೀಡುತ್ತೇವೆಂದು ಹೇಳಿಕೊಳ್ಳುತ್ತಾರೆ. ಆದರೆ ಅವರ ಖಚಿತತೆಯು ಆಧುನಿಕ ಮನಸ್ಸುಗಳಿಗೆ ಸಂಶಯವನ್ನುಂಟುಮಾಡುತ್ತವೆ. ಈ ಸಮಸ್ಯೆಗಳನ್ನು ಅಧ್ಯಯನ ಮಾಡುವುದು, ತತ್ವಜ್ಞಾನದ ಕಾರ್ಯವಿಧಾನ, ಅವುಗಳಿಗೆ ಉತ್ತರಗಳನ್ನು ಒದಗಿಸುವುದಲ್ಲ.

ಇಂತಹ ಬಗೆಹರಿಸಲಾಗದ ಸಮಸ್ಯೆಗಳ ಬಗ್ಗೆ ಯಾಕಾದರೂ ತಲೆಕೆಡಿಸಿಕೊಳ್ಳಬೇಕು, ಸಮಯ ವ್ಯರ್ಥಮಾಡಬೇಕು ಎಂದು ಕೇಳಬಹುದು. ಈ ಪ್ರಶ್ನೆಗೆ ಇತಿಹಾಸಕಾರನಂತೆಯೋ ಅಥವಾ ಬ್ರಹ್ಮಾಂಡದ ಏಕಾಕಿತನದ ಭಯವನ್ನು ಎದುರಿಸುವ ವ್ಯಕ್ತಿಯಾಗಿಯೋ ಉತ್ತರಿಸಬಹುದು.

ಇತಿಹಾಸಕಾರನ ಉತ್ತರವು, ನನ್ನ ಸಾಮರ್ಥ್ಯದಲ್ಲಿ ನೀಡಬಹುದಾದಷ್ಟು ಮಟ್ಟಿಗೆ, ಈ ಕೃತಿಯುದ್ದಕ್ಕೂ ಕಾಣಿಸುತ್ತದೆ. ಮಾನವರು ಸ್ವತಂತ್ರ ಊಹಾತ್ಮಕತೆಯನ್ನು ಅನುಸರಿಸತೊಡಗಿದಾಗಿನಿಂದ, ಕೆಡುಕು ಯಾವುದು ಒಳಿತು ಯಾವುದು ಎಂಬ ಬಗ್ಗೆ ಅಸಂಖ್ಯ ಪ್ರಮುಖ ವಿಧಾನಗಳಲ್ಲಿ ಅವರ ಕಾರ್ಯಗಳು ಜಗತ್ತು ಮತ್ತು ಮಾನವನನ್ನು ಕುರಿತ ತಮ್ಮದೇ ಆದ ಸಿದ್ಧಾಂತಗಳನ್ನವಲಂಬಿಸಿವೆ. ಇದು ಹಿಂದಿನ

ಕಾಲದಂತೆಯೇ ಇವತ್ತಿಗೂ ಅನ್ವಯಿಸುವಂತಹುದೇ. ಒಂದು ಕಾಲವನ್ನೋ ಅವಕಾಶವನ್ನೋ ಅರ್ಥಮಾಡಿಕೊಳ್ಳಲು ನಾವು ಅದರ ತತ್ವಜ್ಞಾನವನ್ನು ಅರಿಯಬೇಕು, ನಾವೂ ಕೊಂಚ ಮಟ್ಟಿಗೆ ತತ್ವಜ್ಞಾನಿಗಳೇ ಆಗಿರಬೇಕು. ಇಲ್ಲಿ ಅನ್ಯೋನ್ಯವಾದ ಕಾರಣತತ್ವವಿದೆ: ಮಾನವರ ಪರಿಸ್ಥಿತಿಗಳು ಅವರ ತತ್ವಜ್ಞಾನದ ಸ್ವರೂಪವನ್ನು ನಿರ್ಧರಿಸುತ್ತವೆ, ಆದರೆ ಅದಕ್ಕೆ ವ್ಯತಿರಿಕ್ತವಾಗಿ, ಅವರ ತತ್ವಜ್ಞಾನವು ಅವರ ಪರಿಸ್ಥಿತಿಗಳನ್ನು ನಿರ್ಧರಿಸುತ್ತವೆ ಕೂಡ. ಶತಮಾನಗಳುದ್ದಕ್ಕೂ ನಡೆದಿರುವ ಈ ಪ್ರಕ್ರಿಯೆಯು ಮುಂದಿನ ಪುಟಗಳ ಅಧ್ಯಯನವಿಷಯವಾಗಿರುತ್ತದೆ.

ಆದರೆ, ಇದಕ್ಕಿಂತ ಹೆಚ್ಚು ವೈಯಕ್ತಿಕವಾದ ಉತ್ತರವೂ ಒಂದಿದೆ. ವಿಜ್ಞಾನವು ನಾವು ಏನನ್ನು ತಿಳಿಯಬಹುದು ಎಂಬುದನ್ನು ಹೇಳುತ್ತದೆ, ಆದರೆ ನಾವು ತಿಳಿಯಬಹುದಾದುದು ತೀರ ಸ್ವಲ್ಪ, ಎಷ್ಟನ್ನು ನಾವು ತಿಳಿಯಲು ಸಾಧ್ಯವಿಲ್ಲ ಎನ್ನುವುದನ್ನು ಮರೆತರೆ, ಬಹು ಮುಖ್ಯವಾದ ಅನೇಕ ವಿಷಯಗಳ ಬಗ್ಗೆ ನಾವು ಅಸಂವೇದನಾಶೀಲರಾಗಿಬಿಡುತ್ತೇವೆ. ಮತಧರ್ಮಶಾಸ್ತ್ರವು, ಮತ್ತೊಂದು ಕಡೆ, ನಮಗೇನೂ ಗೊತ್ತಿಲ್ಲವೋ ಅಂಥ ವಿಷಯಗಳ ಬಗ್ಗೆ ಶಾಸ್ತ್ರಪ್ರಾಮಾಣ್ಯಗಳ ಶ್ರದ್ಧೆಯನ್ನು ಬೇರೂರಿಸುತ್ತದೆ ಮತ್ತು ಹಾಗೆ ಮಾಡುವುದರ ಮೂಲಕ ವಿಶ್ವದ ಕುರಿತು ಅಸಂಬದ್ಧ ದುರಹಂಕಾರವನ್ನು ಉಂಟುಮಾಡುತ್ತದೆ. ಭರವಸೆಗಳು ಮತ್ತು ಭಯಗಳ ಬಗೆಗಿನ ಅನಿಶ್ಚಿತತೆಯು ಯಾತನಾಮಯ ನಿಜ, ಆದರೆ ಸಾಂತ್ವನಕರ ಕಾಗಕ್ಕ ಗುಬ್ಬಕ್ಕಗಳ ಕತೆಗಳ ನೆರವಿಲ್ಲದೆ ಬದುಕಲು ಸಾಧ್ಯವಾಗಬೇಕಾದರೆ ಅದನ್ನು ನಾವು ತಡೆದುಕೊಳ್ಳಬೇಕು. ತತ್ವಜ್ಞಾನವು ಎತ್ತುವ ಪ್ರಶ್ನೆಗಳನ್ನು ಮರೆಯುವುದಾಗಲೀ, ಅವುಗಳಿಗೆ ನಾವು ಸಂಶಯಾತೀತವಾದ ಉತ್ತರಗಳನ್ನು ಕಂಡುಕೊಂಡೆವೆಂದು ನಂಬುವುದಾಗಲೀ ಒಳ್ಳೆಯದಲ್ಲ. ನಿಶ್ಚಿತತೆಯಿಲ್ಲದೆ, ಆದರೆ ಹಿಂಜರಿಕೆಯಿಂದ ಕುಂಠಿತಗೊಳ್ಳದೆ, ಬದುಕಬಹುದೆಂದು ತಿಳಿಯಹೇಳುವುದೇ ಅದನ್ನು ಅಧ್ಯಯನ ಮಾಡುವವರಿಗೆ ನಮ್ಮ ಕಾಲದ ತತ್ವಜ್ಞಾನದ ಬಹು ಮುಖ್ಯ ಸಂದೇಶ.

ತತ್ವಜ್ಞಾನವು, ಮತಧರ್ಮಶಾಸ್ತ್ರಕ್ಕಿಂತ ಭಿನ್ನವಾಗಿ, ಗ್ರೀಸಿನಲ್ಲಿ ಕ್ರಿಪೂ ಆರನೆಯ ಶತಮಾನದಲ್ಲಿ ಆರಂಭಗೊಂಡಿತು. ಪ್ರಾಚೀನತೆಯಲ್ಲಿ ತನ್ನ ದಾರಿಯನ್ನು ಸವೆಸಿದ ಬಳಿಕ, ರೋಮ್ ಪತನಗೊಂಡು ಕ್ರೈಸ್ತಮತಧರ್ಮವು ಉದಯಗೊಂಡದ್ದರಿಂದ ಅದು ಮತಧರ್ಮಶಾಸ್ತ್ರದಲ್ಲಿ ಮತ್ತೆ ಮುಳುಗಿತು. ಹನ್ನೊಂದರಿಂದ ಹದಿನಾಲ್ಕನೆಯ ಶತಮಾನಗಳ ನಡುವಣ ಅದರ ಎರಡನೆಯ ಮಹಾಯುಗದಲ್ಲಿ, ಎರಡನೆಯ ಫ್ರೆಡೆರಿಕ್ (೧೧೯೫–೧೨೫೦)ನಂತಹ ಕೆಲವರು ಪ್ರಬಲ ಬಂಡಾಯಗಾರಿದ್ದರೂ, ಅದು ಕ್ಯಾಥೋಲಿಕ್ ಚರ್ಚ್‌ನ ಪ್ರಾಬಲ್ಯಕ್ಕೊಳಗಾಯಿತು. ಮತಧರ್ಮಸುಧಾರಣೆಯಲ್ಲಿ ಪರ್ಯವಸಾನಗೊಂಡ ಗೊಂದಲಗಳಿಂದ ಈ ಯುಗವು ಕೊನೆಗೊಂಡಿತು. ಮೂರನೆಯ ಯುಗವು ಹದಿನೇಳನೆಯ ಶತಮಾನದಿಂದ ಇವತ್ತಿನವರೆಗೆ

ವ್ಯಾಪಿಸುತ್ತದೆ; ಇದರಲ್ಲಿ, ಎರಡೂ ಬಗೆಯ ಪೂರ್ವಿಕರಿಗಿಂತ ಹೆಚ್ಚಾಗಿ, ವಿಜ್ಞಾನವು ಪ್ರಬಲವಾಗಿದೆ; ಪಾರಂಪರಿಕ ಧಾರ್ಮಿಕ ಶ್ರದ್ಧೆಗಳಿಗೆ ಪ್ರಾಮುಖ್ಯವಿದೆಯಾದರೂ, ಅವುಗಳಿಗೆ ಸಮರ್ಥನೆಯ ಆವಶ್ಯಕತೆಯಿದೆಯೆಂಬುದರ ಅರಿವೂ ಇದೆ; ವಿಜ್ಞಾನದಿಂದಾಗಿ ಆವಶ್ಯಕವೆನ್ನಿಸುವ ವಿಷಯಗಳಲ್ಲಿ ಇವು ಬದಲಾಗುತ್ತಲೂ ಇವೆ. ಈ ಯುಗದ ಕೆಲವು ಮಂದಿ ತತ್ವಜ್ಞಾನಿಗಳು, ಕ್ಯಾಥೋಲಿಕ್ ದೃಷ್ಟಿಯಲ್ಲಿ, ಸಂಪ್ರದಾಯವಾದಿಗಳೇ, ಆದರೆ ಅವರ ಚಿಂತನೆಗಳು ಚರ್ಚ್‌ಗಿಂತ ಧರ್ಮನಿಪರಪೇಕ್ಷಕ ಸರ್ಕಾರವೇ ಮುಖ್ಯ ಎಂಬ ಅಭಿಪ್ರಾಯದವು.

ಈ ಯುಗದುದ್ದಕ್ಕೂ ಸಾಮಾಜಿಕ ಸಾಮರಸ್ಯ ಮತ್ತು ವ್ಯಕ್ತಿಸ್ವಾತಂತ್ರ್ಯಗಳು, ಮತಧರ್ಮ ಮತ್ತು ವಿಜ್ಞಾನಗಳಂತೆ, ಒಂದು ಬಗೆಯ ಸಂಘರ್ಷದಲ್ಲಿವೆ ಅಥವಾ ಮುಜುಗರದ ಹೊಂದಾಣಿಕೆಯಿಂದಿವೆ. ಗ್ರೀಸಿನಲ್ಲಿ ಸಾಮಾಜಿಕ ಸಾಮರಸ್ಯವು ನಗರ ಪ್ರಭುತ್ವ (ಸಿಟಿ ಸ್ಟೇಟ್) ಬಗೆಗಿನ ನಿಷ್ಠೆಯಿಂದಾಗಿ ಸುಭದ್ರವಾಗಿತ್ತು; ಅರಿಸ್ಟಾಟಲ್ ಕೂಡ, ಅಲೆಕ್ಸಾಂಡರ್‌ನ ಕಾಲದಲ್ಲಿ ಈ ನಗರ ಪ್ರಭುತ್ವಗಳು ಹೆಸರಿಗೆ ಮಾತ್ರವಾಗುತ್ತಿದ್ದರೂ, ಬೇರಾವುದೇ ರಾಜ್ಯವ್ಯವಸ್ಥೆಯಲ್ಲಿ ಒಳಿತು ಕಾಣುತ್ತಿರಲಿಲ್ಲ. ನಗರದ ಬಗೆಗಿನ ನಿಷ್ಠೆಯ ಕಾರಣದಿಂದಾಗಿ ವ್ಯಕ್ತಿಸ್ವಾತಂತ್ರ್ಯವು ಮೊಟಕುಗೊಳ್ಳುವ ಪ್ರಮಾಣದಲ್ಲಿ ವ್ಯಾಪಕ ವ್ಯತ್ಯಾಸಗಳಿದ್ದವು. ಸ್ಪಾರ್ಟಾದಲ್ಲಿ ಅದು, ಆಧುನಿಕ ಜರ್ಮನಿ ಅಥವಾ ರಷ್ಯಾದಂತೆ, ತೀರ ಮೀತವಾದುದಾಗಿತ್ತು; ಅಥೆನ್ಸ್‌ನಲ್ಲಿ, ಆಗಾಗ್ಗೆ ಕಿರುಕುಳವಿರುತ್ತಿದ್ದರೂ, ತನ್ನ ಅತ್ಯುತ್ತಮ ಅವಧಿಯಲ್ಲಿ, ಸರ್ಕಾರದಿಂದ ತೀರ ಕಡಿಮೆ ಪ್ರಮಾಣದ ಮಿತಿಗೊಳಗಾದರೂ, ಪ್ರಜೆಗಳಿಗೆ ಅಸಾಧಾರಣ ಸ್ವಾತಂತ್ರ್ಯವಿತ್ತು. ಅರಿಸ್ಟಾಟಲ್‌ವರೆಗಿನ ಗ್ರೀಕ್ ಚಿಂತನೆಯು ಮತಧಾರ್ಮಿಕ ಹಾಗೂ ನಗರದ ಬಗೆಗಿನ ನಿಷ್ಠೆಗಳ ಪ್ರಾಮುಖ್ಯದಿಂದ ಕೂಡಿತ್ತು. ಅದರ ನೈತಿಕವ್ಯವಸ್ಥೆಯು ಪ್ರಜೆಗಳ ಬದುಕು ಹಾಗೂ ವ್ಯಾಪಕ ರಾಜಕೀಯ ಅಂಶಗಳಿಂದ ಕೂಡಿತ್ತು. ಗ್ರೀಕರು ಮೊದಲು ಮ್ಯಾಸಿಡೋನಿಯನ್ನರಿಗೆ, ಆನಂತರ ರೋಮನ್ನರಿಗೆ ಅಧೀನರಾದಾಗ, ತಮ್ಮ ಸ್ವತಂತ್ರ ಅವಧಿಯಲ್ಲಿ ಸೂಕ್ತವೆನಿಸಿದ್ದ ಪರಿಕಲ್ಪನೆಗಳು ಅನ್ವಯವಾಗುತ್ತಿರಲಿಲ್ಲ. ಇದರಿಂದ, ಒಂದೆಡೆ ಸಂಪ್ರದಾಯವಿಚ್ಛಿನ್ನತೆಯಿಂದಾಗಿ ಸತ್ವ ಕಳೆದುಕೊಳ್ಳುವಂತಾಯಿತು, ಮತ್ತೊಂದೆಡೆ ನೈತಿಕತೆಯಲ್ಲಿ ವೈಯುಕ್ತಿಕತೆ ಹೆಚ್ಚಿ ಸಾಮಾಜಿಕತೆ ಕಡಿಮೆಯಾಗುವಂತಾಯಿತು. ಒಳ್ಳೆಯ ಬದುಕು ಎನ್ನುವುದು ನಗರದೊಡನೆ ವ್ಯಕ್ತಿ ಹೊಂದಿರುವ ಸಂಬಂಧ ಎಂಬುದರ ಬದಲಾಗಿ ಆತ್ಮವು ಪರಮಾತ್ಮನೊಡನೆ ಹೊಂದುವ ಸಂಬಂಧ ಎಂದು ಸ್ಟಾಯಿಕ್‌ರು (ಸಂಯಮವಾದಿಗಳು) ಭಾವಿಸಿದರು. ಹೀಗೆ ಅವರು ಕ್ರಿಶ್ಚಿಯನ್ ಮತಕ್ಕೆ ಎಡೆಮಾಡಿಕೊಟ್ಟರು. ಅದು ಮೊದಮೊದಲು ಸಂಯಮವಾದದಂತೆ ರಾಜಕೀಯೇತರವಾಗಿತ್ತು; ಮೊದಲ ಮೂರು ಶತಮಾನಗಳ ಕಾಲ ಅದು ಸರ್ಕಾರಗಳ ಮೇಲೆ ಪ್ರಭಾವವನ್ನು ಹೊಂದಿರಲಿಲ್ಲ. ಅಲೆಕ್ಸಾಂಡರ್‌ನಿಂದ

ಕಾನ್‌ಸ್ಟಂಟೈನ್‌ವರೆಗಿನ ಆರೂವರೆ ಶತಮಾನಗಳ ಕಾಲ ಸಾಮಾಜಿಕ ಸಾಮರಸ್ಯವು ಸುಭದ್ರವಾಗಿತ್ತು; ಅದಕ್ಕೆ ಕಾರಣ ತತ್ವಜ್ಞಾನವೂ ಅಲ್ಲ, ಪ್ರಾಚೀನ ನಿಷ್ಠೆಯೂ ಅಲ್ಲ, ಶಕ್ತಿಪ್ರಯೋಗ – ಮೊದಲು ಸೈನ್ಯದ ಬಲದಿಂದ ಆ ಬಳಿಕ ನಾಗರಿಕ ಆಡಳಿತದಿಂದ. ರೋಮನ್ ಸೈನ್ಯಗಳು, ರೋಮನ್ ರಸ್ತೆಗಳು, ರೋಮನ್ ಕಾನೂನು ಮತ್ತು ರೋಮನ್ ಅಧಿಕಾರಿಗಳು ಶಕ್ತಿಕೇಂದ್ರೀಕೃತ ಸರ್ಕಾರವನ್ನು ಮೊದಲು ಸೃಷ್ಟಿಸಿ ಆನಂತರ ನೆಲೆಗೊಳಿಸಿದವು. ಅದಕ್ಕೂ ರೋಮನ್ ತತ್ವಜ್ಞಾನಕ್ಕೂ ಯಾವುದೇ ಸಂಬಂಧವಿಲ್ಲ, ಯಾಕೆಂದರೆ ಯಾವುದಾದರೂ ಇದ್ದರೆ ತಾನೇ!

ಈ ದೀರ್ಘ ಅವಧಿಯಲ್ಲಿ, ಸ್ವಾತಂತ್ರ್ಯಕಾಲದಿಂದ ಇಳಿದುಬಂದಿದ್ದ ಗ್ರೀಕ್ ಚಿಂತನೆಗಳು ಕ್ರಮೇಣ ಬದಲಾವಣೆಗಳಿಗೊಳದಾದುವು. ಕೆಲವು ಹಳೆಯ ಚಿಂತನೆಗಳು, ಮತಧಾರ್ಮಿಕವೆಂದು ಪರಿಗಣಿಸಬಹುದಾದ ಚಿಂತನೆಗಳು, ಹೆಚ್ಚಿನ ಪ್ರಾಮುಖ್ಯವನ್ನು ಪಡೆದುವು, ಹೆಚ್ಚು ತಾರ್ಕಿಕವಾದ ಮತ್ತೂ ಕೆಲವು ಆ ಕಾಲಕ್ಕೆ ಸೂಕ್ತವೆನಿಸದಿದ್ದ ಕಾರಣ ಮೂಲೆಗುಂಪಾದುವು. ಹೀಗೆ ನಂತರದ ಪ್ಯಾಗನ್ನರು ಕ್ರಿಶ್ಚಿಯನ್ ಶಾಸ್ತ್ರಪ್ರಾಮಾಣ್ಯಗಳಿಗೆ ಸೂಕ್ತವಾದ ರೀತಿಯಲ್ಲಿ ಎಡೆಮಾಡಿಕೊಡುವಂತೆ ಗ್ರೀಕ್ ಪರಂಪರೆಯನ್ನು ಕತ್ತರಿಸಿ ಓರಣಗೊಳಿಸಿದರು.

ಕ್ರಿಶ್ಚಿಯನ್ ಮತವು ಬೋಧನೆಯಲ್ಲಿ ಈಗಾಗಲೇ ಅಂತರ್ಗತವಾಗಿದ್ದ ಒಂದು ಅಭಿಪ್ರಾಯವನ್ನು ಜನಪ್ರಿಯಗೊಳಿಸಿತು, ನಾನು ಹೇಳುತ್ತಿರುವುದು, ವ್ಯಕ್ತಿಯು ಸರ್ಕಾರಕ್ಕೆ ಸಲ್ಲಿಸಬೇಕಾದ ಕರ್ತವ್ಯಕ್ಕಿಂತ ದೇವರಿಗೆ ಸಲ್ಲಿಸಬೇಕಾದ ಕರ್ತವ್ಯ ಹೆಚ್ಚು ಮುಖ್ಯವಾದುದು ಎಂಬ ಅಭಿಪ್ರಾಯ.[೧] 'ನಾವು ದೇವರಿಗೆ ವಿಧೇಯವಾಗಿರಬೇಕೇ ಹೊರತು ಮನುಷ್ಯನಿಗಲ್ಲ' ಎಂಬ ಈ ಅಭಿಪ್ರಾಯವು, ಸಾಕ್ರಟೀಸ್ ಮತ್ತು ಪ್ರವರ್ತಕರು ಹೇಳಿದಂತೆ, ಕಾನ್‌ಸ್ಟಾಂಟೈನ್‌ನ ಮತಾಂತರದ ನಂತರವೂ ಮುಂದುವರಿಯಿತು, ಇದಕ್ಕೆ ಕಾರಣ ಹಿಂದಿನ ಕ್ರಿಶ್ಚಿಯನ್ ಚಕ್ರವರ್ತಿಗಳು ಏರಿಯನ್ನರಾಗಿದ್ದುದು ಅಥವಾ ಏರಿಯನ್‌ವಾದದ ಕಡೆಗೆ ಒಲವಿದ್ದವರು. ಚಕ್ರವರ್ತಿಗಳು ಸಂಪ್ರದಾಯನಿಷ್ಠರಾದ ಬಳಿಕ ಅದು ಸ್ಥಗಿತಗೊಂಡಿತು. ಬೈಜಾಂಟಿಯನ್ ಚಕ್ರಾಧಿಪತ್ಯದಲ್ಲಿ ಅದು ಸುಪ್ತವಾಗಿತ್ತು, ಹಾಗೆಯೇ ಮುಂದಿನ ರಷ್ಯನ್ ಚಕ್ರಾಧಿಪತ್ಯದಲ್ಲಿ, ಅದು ತನ್ನ ಕ್ರೈಸ್ತಮತಧರ್ಮವನ್ನು ಕಾನ್‌ಸ್ಟಾಂಟಿನೋಪಲ್‌ನಿಂದ ಪಡೆಯಿತು.[೨] ಪಶ್ಚಿಮ ಯೂರೋಪ್‌ನ ನಾಗರಿಕತೆಗೆ

---

೧. ಈ ಅಭಿಪ್ರಾಯವು ಹಿಂದೇನೂ ಅಪರಿಚಿತವಾದುದಾಗಿರಲಿಲ್ಲ, ಉದಾಹರಣೆಗೆ, ಅದನ್ನು ಸಾಫೋಕ್ಲೀಸ್‌ನ 'ಅಂತಿಗೊನೆ'ಯಲ್ಲಿ ಹೇಳಿದೆ. ಆದರೆ ಸಂಯಮವಾದಿಗಳಿಗಿಂತ ಮುಂಚೆ ಆ ಅಭಿಪ್ರಾಯದವರು ಕೇವಲ ಕೆಲವರು ಮಾತ್ರ.

೨. ಈ ಕಾರಣಕ್ಕಾಗಿಯೇ ಆಧುನಿಕ ರಷ್ಯನ್ ಸ್ಟಾಲಿನ್‌ಗಿಂತ ಹೆಚ್ಚಾಗಿ ದ್ವಂದ್ವಾತ್ಮಕ ಭೌತವಾದವನ್ನು ಅನುಸರಿಸಬೇಕೆಂದು ಆಲೋಚಿಸದಿರುವುದು.

ಬಾರ್ಬೇರಿಯನ್ನರ ಆಕ್ರಮಣವು ಆರು ಶತಮಾನಗಳ ಕಾಲದವರೆಗೆ ತಡೆಯೊಡ್ಡಿತು. ಡೇನ್‌ರು ಒಂಬತ್ತನೇ ಶತಮಾನದಲ್ಲಿ ನಾಶಮಾಡುವವರೆಗೆ ಐರ್ಲಂಡ್‌ನಲ್ಲಿ ಅದು ಹಬೆಯಾಡುತ್ತಿತ್ತು. ಅಲ್ಲಿ ಅದು ಲುಪ್ತವಾಗುವ ಮೊದಲು ಒಬ್ಬ ಮುಖ್ಯ ವ್ಯಕ್ತಿಯನ್ನು ಎತ್ತಿ ನಿಲ್ಲಿಸಿತು, ಸ್ಕಾಟಸ್ ಎರಿಗೆನ. ಪೂರ್ವ ಚಕ್ರಾಧಿಪತ್ಯದಲ್ಲಿ, ಗ್ರೀಕ್ ನಾಗರಿಕತೆಯು ೧೪೫೩ ರಲ್ಲಿ ಕಾನ್‌ಸ್ಟಾಂಟಿನೋಪಲ್ ಪತನಗೊಳ್ಳುವವರೆಗೆ ಅದು ಒಣಕಲಾಗಿ ಮ್ಯೂಸಿಯಮ್‌ನಲ್ಲಿಯಂತೆ ಉಳಿದಿತ್ತು. ಆದರೆ ಕಾನ್‌ಸ್ಟಾಂಟಿನೋಪಲ್‌ನಿಂದ ಜಗತ್ತಿಗೆ, ಕಲಾತ್ಮಕ ಪರಂಪರೆ ಮತ್ತು ರೋಮನ್ ಕಾನೂನಿನ ಜಸ್ಟಿನಿಯನ್ ಸಂಹಿತೆಗಳ ಹೊರತಾಗಿ, ಮುಖ್ಯವಾದುದೇನೂ ಮೂಡಿಬರಲಿಲ್ಲ.

ಕತ್ತಲ ಯುಗದಲ್ಲಿ, ಐದನೆಯ ಶತಮಾನದ ಕೊನೆಯಿಂದ ಹನ್ನೊಂದರ ಮಧ್ಯದವರೆಗೆ, ಪಶ್ಚಿಮ ರೋಮನ್ ಜಗತ್ತು ಕೆಲವು ಸ್ವಾರಸ್ಯಕರ ಬದಲಾವಣೆಗಳನ್ನು ಕಂಡಿತು. ಕ್ರೈಸ್ತಮತಧರ್ಮವು ತಂದೊಡ್ಡಿದ್ದ ದೇವರ ಬಗೆಗಿನ ಕರ್ತವ್ಯ ಮತ್ತು ಸರ್ಕಾರದ ಬಗೆಗಿನ ಕರ್ತವ್ಯಗಳ ನಡುವಣ ಸಂಘರ್ಷವು ಚರ್ಚ್ ಮತ್ತು ರಾಜನ ನಡುವಣ ಸಂಘರ್ಷದ ರೂಪವನ್ನು ತಾಳಿತು. ಪೋಪ್‌ನ ಧಾರ್ಮಿಕ ವ್ಯಾಪ್ತಿಯು ಇಟಲಿ, ಫ್ರಾನ್ಸ್ ಮತ್ತು ಸ್ಪೈನ್, ಗ್ರೇಟ್ ಬ್ರಿಟನ್ ಮತ್ತು ಐರ್ಲಂಡ್, ಜರ್ಮನಿ, ಸ್ಕಾಂಡಿನೇವಿಯ, ಮತ್ತು ಪೋಲಂಡ್‌ಗಳವರೆಗೆ ಹಬ್ಬಿತು. ಮೊದಲು, ಇಟಲಿ ಮತ್ತು ದಕ್ಷಿಣ ಫ್ರಾನ್ಸ್ ಬಿಷಪ್‌ರ ಮತ್ತು ಕ್ರೈಸ್ತ ಮಠಾಧಿಪತಿಗಳ ಮೇಲಿನ ಅವನ ಹಿಡಿತವು ಅಲ್ಪವಾಗಿತ್ತು, ಆದರೆ ಏಳನೆಯ ಗ್ರೆಗರಿಯ ಕಾಲದಿಂದ (ಹನ್ನೊಂದನೇ ಶತಮಾನದ ಕೊನೆ) ಅದು ವಾಸ್ತವವೂ ಆಯಿತು, ಪರಿಣಾಮಕಾರಿಯೂ ಆಯಿತು. ಆ ಬಳಿಕ, ಪಶ್ಚಿಮ ಯೂರೋಪ್‌ನಾದ್ಯಂತ ಕ್ರೈಸ್ತ ಪುರೋಹಿತವರ್ಗವು ಒಂದೇ ಸಂಘಟನೆಯಾಗಿ ರೂಪುಗೊಂಡು ರೋಮ್‌ನಿಂದ ನಿರ್ದೇಶಿತವಾಗಿ ಧರ್ಮನಿರಪೇಕ್ಷಕ ರಾಜರೊಡನೆಯ ಸಂಘರ್ಷದಲ್ಲಿ ಜಾಣತನದಿಂದಲೂ ನಿರ್ದಯವಾಗಿಯೂ ಅಧಿಕಾರವನ್ನು ಚಲಾಯಿಸುತ್ತ, ಸಾಮಾನ್ಯವಾಗಿ ಜಯಶಾಲಿಯಾಗುತ್ತ, ೧೩೦೦ ರವರೆಗೂ ಮುಂದುವರಿಯಿತು. ಚರ್ಚ್ ಮತ್ತು ಸರ್ಕಾರಗಳ ನಡುವಣ ಸಂಘರ್ಷವು ಕ್ರೈಸ್ತ ಪುರೋಹಿತವರ್ಗ ಮತ್ತು ಸಾಮಾನ್ಯರ ನಡುವಣ ಸಂಘರ್ಷ ಮಾತ್ರವಾಗಿರಲಿಲ್ಲ; ಅದು ಮೆಡಿಟರೇನಿಯನ್ ಜಗತ್ತು ಮತ್ತು ಉತ್ತರ ಬಾರ್ಬೇರಿಯನ್‌ರ ನಡುವಣ ಸಂಘರ್ಷದ ಪುನರ್ನವೀಕರಣವೂ ಆಗಿತ್ತು. ಚರ್ಚ್ ಐಕ್ಯವು ರೋಮನ್ ಚಕ್ರಾಧಿಪತ್ಯದ ಐಕ್ಯದಲ್ಲಿ ಪ್ರತಿಧ್ವನಿಸಿತು; ಅದರ ಧಾರ್ಮಿಕ ಭಾಷೆ ಲ್ಯಾಟಿನ್, ಅದರ ಪ್ರಮುಖ ವ್ಯಕ್ತಿಗಳು ಇಟಾಲಿಯನ್, ಸ್ಪಾನಿಶ್, ಅಥವಾ ದಕ್ಷಿಣ ಫ್ರೆಂಚ್‌ರು ಆಗಿದ್ದರು. ಶಿಕ್ಷಣವು ಪುನಶ್ಚೇತನಗೊಂಡಾಗ, ಅವರ ಶಿಕ್ಷಣವು ಪ್ರಾಚೀನ ಮಾದರಿಯದಾಯಿತು, ಕಾನೂನು ಮತ್ತು ಸರ್ಕಾರಗಳ ಬಗೆಗಿನ ಅವರ ಕಲ್ಪನೆಗಳು ಮಾರ್ಕಸ್ ಔರೀಲಿಯಸ್‌ಗೆ ತಿಳಿಯುವಂತಹುದ್ದೇ

ಹೊರತು ಸಮಕಾಲೀನ ಮಹಾರಾಜರುಗಳಿಗೆ ತಿಳಿಯುವಂತಹುದಾಗಿರಲಿಲ್ಲ. ಚರ್ಚ್ ಒಮ್ಮೆಗೇ ಹಳೆಯದು ಮತ್ತು ಸಮಕಾಲೀನದಲ್ಲಿನ ಅತ್ಯಂತ ನಾಗರಿಕವಾದುದರ ಮುಂದುವರಿಕೆಯ ಸಂಕೇತವಾಯಿತು.

ಇದಕ್ಕೆ ವ್ಯತಿರಿಕ್ತವಾಗಿ, ಧರ್ಮನಿರಪೇಕ್ಷಕ ಅಧಿಕಾರವು ರಾಜರು ಮತ್ತು ಟ್ಯೂಟನ್ ವಂಶಜ ಸಾಮಂತರ ಕೈಗಳಲ್ಲಿತ್ತು; ಜರ್ಮನಿಯ ಕಾಡುಗಳಿಂದ ತಾವು ಬಿಡುಗಡೆಗೊಳಿಸಿದ್ದ ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸಲು ಅವರು ಪ್ರಯತ್ನಿಸಿದರು. ಆ ಸಂಸ್ಥೆಗಳಿಗೆ ಪರಮಾಧಿಕಾರವು ಹೊರತಾಗಿತ್ತು, ಈ ವೀರ್ಯವತ್ತಾದ ವಿಜಯಿಗಳಿಗೆ ಅವು ಸತ್ವಹೀನವೂ ನಿರ್ಜೀವ ವಿಧಿಬದ್ಧತೆಯಾಗಿಯೂ ಕಾಣಿಸಿದುವು. ರಾಜನು ಸಾಮಂತ ಶ್ರೀಮಂತರೊಡನೆ ಅಧಿಕಾರವನ್ನು ಹಂಚಿಕೊಳ್ಳಬೇಕಾಗಿತ್ತು: ಆದರೆ ಅವರೆಲ್ಲ ಒಂದೇ ಬಗೆಯಲ್ಲಿ ಆಗಾಗ್ಗೆ ಯುದ್ಧ, ಕೊಲೆ, ಲೂಟಿ ಅಥವಾ ಮಾನಭಂಗಗಳ ರೂಪದಲ್ಲಿ ತಮ್ಮ ಭಾವೋದ್ರೇಕವನ್ನು ಸ್ಫೋಟಗೊಳಿಸುವ ಅವಕಾಶಕ್ಕಾಗಿ ನಿರೀಕ್ಷಿಸುತ್ತಿದ್ದವರೇ. ಮಹಾರಾಜರು ಪಶ್ಚಾತ್ತಾಪಪಡಬಹುದು, ಯಾಕೆಂದರೆ ಅವರು ಪ್ರಾಮಾಣಿಕವಾಗಿ ಧರ್ಮಶ್ರದ್ಧೆಯುಳ್ಳವರು, ಮತ್ತು ಎಷ್ಟೇ ಆಗಲಿ, ಪಶ್ಚಾತ್ತಾಪವೇ ಭಾವೋದ್ರೇಕದ ಒಂದು ರೂಪ ತಾನೇ. ಆದರೆ ಆಧುನಿಕ ಸಮ್ರಾಟನಿಗಿರಬೇಕಾದ ಮತ್ತು ತನ್ನ ನೌಕರರಿಂದ ಪಡೆಯುವ ಒಳ್ಳೆಯ ನಡವಳಿಕೆಯ ಕ್ರಮವನ್ನು ಅವರಲ್ಲಿ ಚರ್ಚ್ ಉಂಟುಮಾಡಲಾಗಲಿಲ್ಲ. ಕುಡಿಯಲು, ಕೊಲೆ ಮಾಡಲು ಮತ್ತು ಸ್ವೇಚ್ಛೆಯಂತೆ ಕಾಮಕ್ರೀಡೆಯಾಡಲಾಗದಿದ್ದರೆ ಜಗತ್ತನ್ನು ಗೆದ್ದು ತಾನೇ ಫಲವೇನು? ಹೆಮ್ಮೆಯ ನೈಟ್‌ಗಳ ಪಡೆಯೊಡನೆ ತಾವೇಕೆ ಇಂದ್ರಿಯನಿಗ್ರಹ ಪಾಲಿಸುವ ಮತ್ತು ಸೈನ್ಯವಿಲ್ಲದ ಪುಸ್ತಕಕ್ರಿಮಿಗಳ ಮುಂದೆ ವಿನಮ್ರರಾಗಿರಬೇಕು? ಕ್ರೈಸ್ತ ಪಾದ್ರಿವರ್ಗದ ಅನುಮೋದನೆಯಿರದಿದ್ದರೂ ಅವರು ದ್ವಂದ್ವಯುದ್ಧ ಮತ್ತು ಕದನದ ಮೂಲಕ ವಿಚಾರಣೆಗಳನ್ನು ಉಳಿಸಿಕೊಂಡರು, ಜೊತೆಗೆ ಅವರು ಯುದ್ಧಕ್ರೀಡೆ ಮತ್ತು ಆಸ್ಥಾನ ಮರ್ಯಾದೆಗಳನ್ನು ರೂಪಿಸಿದರು. ಕೆಲವೊಮ್ಮೆ, ಕೋಪೋದ್ರೇಕದಲ್ಲಿ, ಅವರು ಶ್ರೇಷ್ಠ ಪಾದ್ರಿಗಳ ಕೊಲೆಯನ್ನೂ ಮಾಡುತ್ತಿದ್ದರು.

ಸೈನ್ಯವೆಲ್ಲ ರಾಜರ ಪರವಾಗಿದ್ದವು, ಆದರೂ ಚರ್ಚ್ ಗೆದ್ದಿತು. ಇದಕ್ಕೆ ಸ್ವಲ್ಪಮಟ್ಟಿಗೆ ಕಾರಣ ಅದು ಶಿಕ್ಷಣವನ್ನು ಸಂಪೂರ್ಣವಾಗಿ ತನ್ನ ಹಿಡಿತದಲ್ಲಿಟ್ಟುಕೊಂಡಿದ್ದುದು, ಸ್ವಲ್ಪಮಟ್ಟಿಗೆ ಕಾರಣ ರಾಜರು ತಮ್ಮತಮ್ಮೊಡನೆ ಸದಾ ಕಾದಾಟದಲ್ಲಿ ನಿರತರಾಗಿರುತ್ತಿದ್ದುದು. ಆದರೆ ಮುಖ್ಯವಾದ ಕಾರಣ, ಕೆಲವು ಅಪವಾದಗಳನ್ನು ಬಿಟ್ಟರೆ, ರಾಜರು ಮತ್ತು ಜನರಿಬ್ಬರೂ ಚರ್ಚ್‌ಗೆ ಮೂಲಾಧಿಕಾರವಿರುವುದೆಂದು ಬಲವಾಗಿ ನಂಬಿದ್ದುದು. ರಾಜನು ನಿರಂತರವಾಗಿ ಸ್ವರ್ಗದಲ್ಲಿರಬೇಕೇ ನರಕದಲ್ಲಿ ಕೊಳೆಯಬೇಕೇ ಎಂಬುದನ್ನು ಚರ್ಚ್

ನಿರ್ಣಯಿಸಬಹುದಾಗಿತ್ತು; ಚರ್ಚ್ ಜನರನ್ನು ರಾಜನಿಷ್ಠೆಯಿಂದ ಸ್ವತಂತ್ರಗೊಳಿಸಬಹುದಾಗಿತ್ತು, ಮತ್ತು ಅದೇ ರೀತಿ ಬಂಡಾಯವನ್ನು ಪ್ರಚೋದಿಸಬಹುದಾಗಿತ್ತು. ಎಲ್ಲಕ್ಕಿಂತ ಮಿಗಿಲಾಗಿ, ಚರ್ಚ್ ಅನಾಯಕತ್ವದ ಬದಲು ಸುವ್ಯವಸ್ಥೆಯನ್ನು ಸಂಕೇತಿಸುತ್ತಿತ್ತು, ಹೀಗಾಗಿ ಕ್ರಮೇಣ ಅದು ಪ್ರಬಲವಾಗುತ್ತಿದ್ದ ವ್ಯಾಪಾರಿಶ್ರೇಣಿಯ ಬೆಂಬಲ ಪಡೆಯುವಂತಾಯಿತು. ವಿಶೇಷವಾಗಿ, ಇಟಲಿಯಲ್ಲಿ ಈ ಕೊನೆಯ ಕಾರಣವು ನಿರ್ಣಾಯಕವಾಗಿತ್ತು.

ಚರ್ಚ್‌ನ ಸ್ವಾತಂತ್ರ್ಯದ ಸ್ವಲ್ಪ ಭಾಗವನ್ನಾದರೂ ಉಳಿಸಲು ಟ್ಯೂಟಾನಿಕ್‌ರು ಮಾಡಿದ ಪ್ರಯತ್ನವು ರಾಜಕಾರಣದಲ್ಲಿ ಮಾತ್ರವಲ್ಲ ಕಲಾಕಲ್ಪನೆ, ಸಾಹಸಮಯತೆ ಮತ್ತು ಯುದ್ಧಗಳಲ್ಲಿಯೂ ಪ್ರತಿಧ್ವನಿಸಿತು. ಬೌದ್ಧಿಕ ವಲಯದಲ್ಲಿ ಅದು ಪ್ರತಿಧ್ವನಿಸಿದ್ದು ತೀರ ಕಡಿಮೆ, ಯಾಕೆಂದರೆ ಶಿಕ್ಷಣವು ಕ್ರೈಸ್ತ ಪಾದ್ರಿಗಳಿಗೆ ಮಾತ್ರ ಸೀಮಿತವಾಗಿತ್ತು. ಮಧ್ಯಯುಗದ ತಾತ್ವಿಕತೆಯ ಸ್ವರೂಪವು ಆ ಕಾಲದ ಯಥಾವತ್ತಾದ ಪ್ರತಿಬಿಂಬವಲ್ಲ, ಅದು ಒಂದು ಪಕ್ಷವು ಆಲೋಚಿಸುತ್ತಿದ್ದುದರ ಪ್ರತಿಬಿಂಬ. ಆದರೆ ಮತಬೋಧಕರಲ್ಲಿ – ವಿಶೇಷವಾಗಿ ಫ್ರಾನ್ಸಿಸ್ಕನ್ ಕ್ರೈಸ್ತಭಿಕ್ಷುಗಳಲ್ಲಿ – ಹಲವಾರು ಕಾರಣಗಳಿಂದಾಗಿ, ಕೆಲವರು ಪೋಪ್‌ನೊಡನೆ ಭಿನ್ನಾಭಿಪ್ರಾಯವುಳ್ಳವರಾಗಿದ್ದರು. ಇದಕ್ಕೂ ಮಿಗಿಲಾಗಿ, ಸಂಸ್ಕೃತಿಯು ಜನಸಾಮಾನ್ಯರಲ್ಲಿ ಆಲ್ಪ್ಸ್‌ನ ಉತ್ತರ ಭಾಗಕ್ಕಿಂತ ಕೆಲವು ಶತಮಾನಗಳ ಮುಂಚೆಯೇ ಇಟಲಿಯಲ್ಲಿ ಹರಡಿತ್ತು. ಹೊಸ ಮತಧರ್ಮವೊಂದನ್ನು ಸ್ಥಾಪಿಸಲು ಆಲೋಚಿಸಿದ ಎರಡನೆಯ ಫ್ರೆಡೆರಿಕ್ ಜನಸಾಮಾನ್ಯರ ಅತೀವ ಪೋಪ್‌ವಿರೋಧಿ ನಿಲವನ್ನು ಕನ್ನಡಿಸುತ್ತದೆ. ಎರಡನೆಯ ಫ್ರೆಡೆರಿಕ್ ಸಾರ್ವಭೌಮನಾಗಿದ್ದ ನೇಪಲ್ಸ್ ಚಕ್ರಾಧಿಪತ್ಯದಲ್ಲಿಯೇ ಹುಟ್ಟಿದ ಥಾಮಸ್ ಆಕ್ವಿನಾಸ್ ಇವತ್ತಿಗೂ ಪೋಪ್ ತಾತ್ವಿಕತೆಯ ಸಮಂಜಸ ವಿಶ್ಲೇಷಕನಾಗಿದ್ದಾನೆ. ಸುಮಾರು ಐವತ್ತು ವರ್ಷಗಳ ಬಳಿಕ ಡಾಂಟೆ ಸಮತೋಲನವನ್ನು ಸಾಧಿಸಿಕೊಂಡು ಇಡೀ ಮಧ್ಯಯುಗದ ಚಿಂತನೆಯ ಸಂತುಲಿತ ವಿವರಣೆಯನ್ನಷ್ಟೇ ನೀಡಿದ್ದಾನೆ.

ಡಾಂಟೆಯ ಬಳಿಕ, ರಾಜಕೀಯ ಹಾಗೂ ಬೌದ್ಧಿಕ ಕಾರಣಗಳಿಂದಾಗಿ, ಮಧ್ಯಯುಗೀನ ತಾತ್ವಿಕ ಸಮತೋಲನವು ನಿಂತುಹೋಯಿತು. ತಾನಿದ್ದಷ್ಟು ಕಾಲವೂ ಅದು ಅಚ್ಚುಕಟ್ಟುತನ ಹಾಗೂ ಕಿರು ಪರಿಪೂರ್ಣತೆಗಳಿಂದ ಕೂಡಿತ್ತು; ಯಾವುದೇ ಸಿದ್ಧಾಂತವಾಗಿರಲಿ, ಅದರ ಬಹು ಸೀಮಿತ ಪರಿಪ್ರೇಕ್ಷ್ಯದ ಹಿನ್ನೆಲೆಯಲ್ಲಿ ನಿಖರತೆಯಿಂದ ಮಂಡನೆ ಮಾಡುತ್ತಿತ್ತು. ಆದರೆ ಮತಧರ್ಮಸಭೆಯ (ಕನ್‌ಸಿಲಿಯರ್) ಚಳವಳಿ ಮತ್ತು ರಿನೇಸಾನ್ಸ್‌ನ ಪೋಪ್ ಪ್ರಭುತ್ವಗಳಿಂದಾದ ಮಹಾ ಬಿರುಕು ಮತಧರ್ಮಸುಧಾರಣೆಗೆ ಎಡೆ ಮಾಡಿಕೊಟ್ಟು ಕ್ರಿಶ್ಚಿಯನ್ ಚಕ್ರಾಧಿಪತ್ಯ ಹಾಗೂ ಮತಧರ್ಮಶಾಸ್ತ್ರದ ಪೋಪ್‌ಕೇಂದ್ರಿತಪ್ರಭುತ್ವ ಸಿದ್ಧಾಂತಗಳ ಅಖಂಡತೆಯನ್ನು ನಾಶಮಾಡಿತು. ರೆನೇಸಾನ್ಸ್ ಯುಗದಲ್ಲಿ ಪ್ರಾಚೀನತೆ ಹಾಗೂ ಭೂಮಿಯ ಮೇಲ್ಮೈಗಳ

ಬಗೆಗಿನ ಹೊಸ ಜ್ಞಾನವು ಜನರು ಸಿದ್ಧಾಂತಗಳೆಂದರೆ ಮಾನಸಿಕ ಸೆರೆಯೆನಿಸುವಂತೆ ಮಾಡಿ ಅವುಗಳ ಬಗ್ಗೆ ರೋಸಿಹೋಗುವಂತೆ ಮಾಡಿತು. ಕೊಪರ್ನಿಕನ್ ಖಗೋಳವಿಜ್ಞಾನವು ಹಿಂದಿನ ಟಾಲೆಮಿ ಸಿದ್ಧಾಂತದಲ್ಲಿದ್ದುದಕ್ಕಿಂತ ಭೂಮಿ ಮತ್ತು ಮನುಷ್ಯನಿಗಿದ್ದ ಸ್ಥಾನವನ್ನು ಹೆಚ್ಚು ವಿನಮ್ರಗೊಳಿಸಿತು. ಬುದ್ಧಿವಂತ ಜನಗಳಲ್ಲಿ ಹೊಸ ವಾಸ್ತವಗಳ ಬಗ್ಗೆ ಸಂತೋಷ ಉಂಟಾಯಿತು, ತಾರ್ಕಿಕತೆಯ ಸಂತೋಷ, ವಿಶ್ಲೇಷಣೆ ಮತ್ತು ಕ್ರಮಬದ್ಧತೆಗಳ ಸಂತೋಷ. ಕಲೆಯ ವಿಷಯದಲ್ಲಿ ರಿನೇಸಾನ್ಸ್‌ನಲ್ಲಿ ಕ್ರಮಬದ್ಧವಾಗಿದ್ದರೂ, ಆಲೋಚನೆಯಲ್ಲಿ ಅದು ವ್ಯಾಪಕವೂ ಫಲಪ್ರದವೂ ಆದ ಕ್ರಮಹೀನತೆಯ ಪರವಾಗೇ ಇತ್ತು. ಈ ವಿಷಯದಲ್ಲಿ, ಆ ಕಾಲದ ಮಾದರಿ ವಿಶ್ಲೇಷಕನೆಂದರೆ ಮಾಂಟೇನ್.

ರಾಜಕೀಯ ಸಿದ್ಧಾಂತದಲ್ಲಿ, ಕಲೆಯ ಹೊರತಾದ ಮಿಕ್ಕೆಲ್ಲ ವಿಷಯಗಳಲ್ಲಿಯಂತೆ, ಕ್ರಮಬದ್ಧತೆ ಕುಸಿಯಿತು. ಮಧ್ಯ ಯುಗವು ವಾಸ್ತವದಲ್ಲಿ ಪ್ರಕ್ಷುಬ್ಧವಾಗಿದ್ದರೂ, ಆಲೋಚನೆಯಲ್ಲಿ ವಿಧಿಬದ್ಧತೆಯ ಬಗೆಗಿನ ತೀವ್ರ ಅಪೇಕ್ಷೆ ಮತ್ತು ರಾಜಕೀಯ ಅಧಿಕಾರದ ಬಗೆಗಿನ ಸಂಕ್ಷಿಪ್ತ ಸಿದ್ಧಾಂತಗಳ ಕಡೆಗಿನ ಒಲವು ಮುಖ್ಯವಾಗಿದ್ದವು. ಎಲ್ಲ ಅಧಿಕಾರವೂ ಆತ್ಯಂತಿಕವಾಗಿ ದೇವರಿಂದ ನೀಡಲಾದದ್ದು; ಪರಿಶುದ್ಧ ವಿಷಯಗಳಲ್ಲಿ ಅದನ್ನವನು ಪೋಪ್‌ಗೆ ವಹಿಸಿದ್ದರೆ ಧರ್ಮಾತೀತ ವಿಷಯಗಳಲ್ಲಿ ಚಕ್ರವರ್ತಿಗೆ ವಹಿಸಿದ್ದಾನೆ. ಆದರೆ ಪೋಪ್ ಮತ್ತು ಚಕ್ರವರ್ತಿಗಳಿಬ್ಬರ ಪ್ರಾಮುಖ್ಯವೂ ಹದಿನೈದನೆಯ ಶತಮಾನದಲ್ಲಿ ಕುಂಠಿತವಾಯಿತು. ಇಟಾಲಿಯನ್ ರಾಜಕೀಯದ ಊಹಾತೀತ ಗೋಜಲು ಮತ್ತು ಲಜ್ಜಾಹೀನ ಆಟಗಳಲ್ಲಿ ತೊಡಗಿಕೊಂಡ ಪೋಪ್ ಇಟಾಲಿಯನ್ ರಾಜರಲ್ಲಿ ಒಬ್ಬನಂತಾದ. ಫ್ರಾನ್ಸ್, ಸ್ಪೆಯಿನ್, ಮತ್ತು ಇಂಗ್ಲಂಡ್‌ಗಳ ಹೊಸ ರಾಷ್ಟ್ರೀಯ ರಾಜತ್ವವು, ತಮ್ಮದೇ ವಲಯಗಳಲ್ಲಿ, ಹೊಂದಿದ್ದ ಅಧಿಕಾರದಲ್ಲಿ ಪೋಪ್ ಆಗಲೀ ಚಕ್ರವರ್ತಿಯಾಗಲೀ ಮೂಗು ತೂರಿಸುವಂತಿರಲಿಲ್ಲ. ರಾಷ್ಟ್ರೀಯ ಸರ್ಕಾರಗಳು ಬಂದೂಕುಗಳಿಂದಾಗಿ ಜನರ ಆಲೋಚನೆ ಮತ್ತು ಭಾವನೆಗಳ ಮೇಲೆ ಪ್ರಭಾವ ಬೀರುತ್ತಿದ್ದವು; ಹಿಂದೆ ಪರಿಸ್ಥಿತಿ ಹೀಗಿರಲಿಲ್ಲ, ನಾಗರಿಕತೆಯ ಐಕ್ಯದ ಬಗೆಗಿನ ರೋಮನ್ ಶ್ರದ್ಧೆಯಲ್ಲಿ ಉಳಿದುಕೊಂಡಿದ್ದುದುದನ್ನು ಅದು ಕ್ರಮೇಣ ವಿನಾಶಗೊಳಿಸಿತ್ತು.

ಈ ರಾಜಕೀಯ ಅವ್ಯವಸ್ಥೆಯು ಮೆಕಿಯವೆಲ್ಲಿಯ 'ಪ್ರಿನ್ಸ್' ಕೃತಿಯಲ್ಲಿ ಮಾತು ಪಡೆದಿದೆ. ಯಾವುದೇ ಮಾದರಿ ಸಿದ್ಧಾಂತವಿರದಿದ್ದಾಗ, ರಾಜಕೀಯವು ಅಧಿಕಾರಕ್ಕಾಗಿ ನಡೆಸುವ ನಗ್ನ ಹೋರಾಟವಾಗಿಬಿಡುತ್ತದೆ. ಈ ಆಟವನ್ನು ಹೇಗೆ ಯಶಸ್ವಿಯಾಗಿ ಮುನ್ನಡೆಸಬಹುದೆಂಬುದರ ಬಗ್ಗೆ 'ಪ್ರಿನ್ಸ್' ಹರಿತವಾದ ಸಲಹೆಗಳನ್ನು ನೀಡುತ್ತದೆ. ಗ್ರೀಸ್‌ನ ಮಹಾ ಯುಗದಲ್ಲಿ ನಡೆದಿದ್ದುದು ಮತ್ತೆ ರಿನೇಸಾನ್ಸ್‌ನ ಇಟಲಿಯಲ್ಲಿ ಮರುಕಳಿಸಿತು: ಸಾಂಪ್ರದಾಯಿಕ ನೈತಿಕ ನಿರ್ಬಂಧಗಳು ಕಣ್ಮರೆಯಾದುವು, ಅವುಗಳು

ಮೂಢಶ್ರದ್ಧೆಗಳೊಡನೆ ತಳುಕು ಹಾಕಿಕೊಂಡಿರುವಂತೆ ಭಾವಿಸಲಾಯಿತು; ನಿರ್ಬಂಧಗಳಿಂದ ಸ್ವತಂತ್ರಗೊಂಡ ವ್ಯಕ್ತಿಗಳು ವೀರ್ಯವಂತರೂ ಆದರು, ಸೃಜನಶೀಲರೂ ಆದರು, ಇದರಿಂದ ಪ್ರತಿಭೆಯ ಅಪರೂಪದ ಹೂಗಳು ಅರಳಿದುವು. ಆದರೆ ನೈತಿಕತೆಯ ವಿನಾಶದಿಂದ ಅನಿವಾರ್ಯವಾಗಿ ಅನಾಯಕತೆ ಮತ್ತು ವಿದ್ರೋಹಗಳು ವ್ಯೆತಾಳಿ ಇಟಾಲಿಯನ್ನರನ್ನು ಸಮುದಾಯಿಕವಾಗಿ ನಿರ್ವೀರ್ಯಗೊಳಿಸಿತು. ಅವರೂ ಗ್ರೀಕರಂತೆ ತಮಗಿಂತಲೂ ಕಡಿಮೆ ನಾಗರಿಕವಾದ ಆದರೆ ಸಾಮಾಜಕ ಸಾಮರಸ್ಯದ ಕೊರತೆಯಿಲ್ಲದಿದ್ದ ಅವಕಾಶಗಳ ಪ್ರಾಬಲ್ಯಕ್ಕೊಳಗಾಗಿ ಪತನಗೊಂಡರು.

ಆದರೆ ಇದರ ಪರಿಣಾಮವು ಮಾತ್ರ ಗ್ರೀಸ್‌ನ ವಿಷಯಕ್ಕಿಂತಲೂ ಕಡಿಮೆ ವಿನಾಶಕಾರಕವೆನಿಸಿತು. ಇದಕ್ಕೆ ಕಾರಣ, ಸ್ಪೆಯಿನ್ ಒಂದನ್ನು ಹೊರತುಪಡಿಸಿದಂತೆ, ಹೊಸ ಪ್ರಬಲ ರಾಷ್ಟ್ರಗಳು ಇಟಾಲಿಯನ್‌ರಂತೆಯೇ ಮಹತ್ತನ್ನು ಸಾಧಿಸುವ ಸಾಮರ್ಥ್ಯವಿರುವವರಂತೆ ಕಂಡರು.

ಹದಿನಾರನೆಯ ಶತಮಾನದ ಬಳಿಕ ಯೂರೋಪ್ ಚಿಂತನೆಯ ಇತಿಹಾಸವು ಮತಧರ್ಮಸುಧಾರಣೆಯ ಪ್ರಾಬಲ್ಯಕ್ಕೊಳಗಾಗಿದೆ. ಮತಧರ್ಮಸುಧಾರಣೆಯು ಸಂಕೀರ್ಣವೂ ಬಹುಮುಖಿಯೂ ಆದ ಒಂದು ಚಳುವಳಿ, ಮತ್ತು ಅದರ ಯಶಸ್ಸಿಗೆ ಅನೇಕ ಕಾರಣಗಳಿವೆ. ಮುಖ್ಯವಾಗಿ, ಅದು ರೋಮ್‌ನ ಮರುಪ್ರಾಬಲ್ಯದ ವಿರುದ್ಧ ಉತ್ತರ ದೇಶಗಳು ನಡೆಸಿದ ಬಂಡಾಯ. ಅದು ಉತ್ತರವನ್ನು ನಿಗ್ರಹಿಸಿದ್ದ ಮತಧರ್ಮದ ಶಕ್ತಿಯಾದರೂ ಇಟಲಿಯಲ್ಲಿ ಮತಧರ್ಮವು ಕ್ಷಯಿಸಿತ್ತು: ಪೋಪ್‌ಪ್ರಭುತ್ವವು ಕೇವಲ ಒಂದು ಸಂಸ್ಥೆಯಾಗಿ ಮಾತ್ರ ಉಳಿದು ಜರ್ಮನಿ ಮತ್ತು ಇಂಗ್ಲಂಡ್‌ಗಳಿಂದ ಗೌರವವನ್ನು ಪಡೆಯುತ್ತಿತ್ತು, ಆದರೆ ಇನ್ನೂ ಮತಧರ್ಮಶ್ರದ್ಧೆ ಹೊಂದಿದ್ದ ಈ ದೇಶಗಳು ಬೋರ್ಜಿಯಗಳ ಮತ್ತು ಮೆಡಿಸ್ಯೆಗಳ ಬಗ್ಗೆ ಗೌರವಭಾವವನ್ನು ಹೊಂದಿರಲಿಲ್ಲ; ತಾವು ಆತ್ಮಗಳನ್ನು ಶುದ್ಧಿಲೋಕ(ಪರ್ಗೇಟರಿ)ದಿಂದ ಪಾರುಮಾಡುವುದಾಗಿ ಹೇಳಿಕೊಂಡು ಇವರು ಜನರಿಂದ ಹಣ ವಸೂಲಿ ಮಾಡಿ ವೈಭವ ಮತ್ತು ಅನೈತಿಕ ಚಟುವಟಿಕೆಗಳಿಗೆ ವ್ಯಯಮಾಡುತ್ತಿದ್ದರು. ರಾಷ್ಟ್ರೀಯ ಪ್ರೇರಣೆಗಳು, ಆರ್ಥಿಕ ಪ್ರೇರಣೆಗಳು ಹಾಗೂ ನೈತಿಕ ಪ್ರೇರಣೆಗಳು ಒಗ್ಗೂಡಿ ರೋಮ್‌ನ ವಿರುದ್ಧದ ಬಂಡಾಯವನ್ನು ಬಲಗೊಳಿಸಿದುವು. ಅದಕ್ಕೂ ಮಿಗಿಲಾಗಿ, ತಮ್ಮ ಪ್ರದೇಶಗಳಲ್ಲಿ ಚರ್ಚ್ ಕೇವಲ ರಾಷ್ಟ್ರೀಯಭಾವನೆಯದಾದರೆ ಅದೇ ಪ್ರಬಲವಾಗಬಹುದು, ಆಗ ಅದು ಪೋಪ್ ಪ್ರಭುತ್ವದಲ್ಲಿ ಪಡೆದುದಕ್ಕಿಂತ ಹೆಚ್ಚಿನ ಅಧಿಕಾರವನ್ನು ಹೊಂದಬಹುದೆಂಬುದನ್ನು ರಾಜರು ಬಹು ಬೇಗ ಅರ್ಥಮಾಡಿಕೊಂಡರು. ಈ ಎಲ್ಲ ಕಾರಣಗಳಿಂದಾಗಿ, ಲೂಥರ್‌ನ ಮತಧರ್ಮಶಾಸ್ತ್ರೀಯ ನವೀನತೆಯನ್ನು ಉತ್ತರ ಯೂರೋಪ್‌ನಾದ್ಯಂತ

ರಾಜರು ಹಾಗೂ ಜನರು ಒಂದೇ ಬಗೆಯಲ್ಲಿ ಸ್ವಾಗತಿಸಿದರು.

ಕ್ಯಾಥೋಲಿಕ್ ಚರ್ಚ್ ಮೂರು ಆಕರಗಳಿಂದ ರೂಪುಗೊಂಡಿತು. ಅದರ ಪರಿಶುದ್ಧ ಇತಿಹಾಸವು ಯೆಹೂದಿಯಾಗಿತ್ತು, ಮತಧರ್ಮಶಾಸ್ತ್ರ ಗ್ರೀಕ್ ಆಗಿತ್ತು, ಅದರ ಆಡಳಿತ ಮತ್ತು ವಿಧಿಸಂಹಿತೆಗಳು, ಕೊನೆಯ ಪಕ್ಷ, ಪರೋಕ್ಷವಾಗಿಯಾದರೂ, ರೋಮನ್ ಆಗಿತ್ತು. ಮತಧರ್ಮಸುಧಾರಣೆಯು ರೋಮನ್ ಅಂಶಗಳನ್ನು ತಿರಸ್ಕರಿಸಿತು, ಗ್ರೀಕ್ ಅಂಶಗಳನ್ನು ಮಿದುಗೊಳಿಸಿತು ಹಾಗೂ ಯೆಹೂದಿ ಅಂಶಗಳನ್ನು ಬಲಗೊಳಿಸಿತು. ಹೀಗೆ ಮೊದಲು ರೋಮನ್ ಚಕ್ರಾಧಿಪತ್ಯ ಮತ್ತು ಆನಂತರ ರೋಮನ್ ಚರ್ಚ್‌ಗಳು ಉಂಟುಮಾಡಿದ್ದ ಸಾಮಾಜಿಕ ಸಾಮರಸ್ಯದ ಕೆಲಸವನ್ನು ಅದು ಇಲ್ಲವಾಗಿಸಿ ರಾಷ್ಟ್ರೀಯ ಶಕ್ತಿಗಳೊಂದಿಗೆ ಸಹಕರಿಸಿತು. ಕ್ಯಾಥೋಲಿಕ್ ಸಿದ್ಧಾಂತದ ಪ್ರಕಾರ ದೈವಿಕ ಜ್ಞಾನವು ಮತಧರ್ಮಗ್ರಂಥಗಳಲ್ಲಿ ಮುಗಿಯುವುದಿಲ್ಲ, ಅದರ ಬದಲು ಚರ್ಚ್ ಮಾಧ್ಯಮದ ಮೂಲಕ ಯುಗದಿಂದ ಯುಗಕ್ಕೆ ಮುಂದುವರಿದು ಬರುತ್ತದೆ; ಹೀಗಾಗಿ ಪ್ರತಿ ವ್ಯಕ್ತಿಯೂ ತನ್ನ ವೈಯಕ್ತಿಕ ಅಭಿಪ್ರಾಯವನ್ನು ಅಡಗಿಸಿಕೊಳ್ಳುವುದು ಕರ್ತವ್ಯ. ಇದಕ್ಕೆ ವ್ಯತಿರಿಕ್ತವಾಗಿ, ಪ್ರಾಟೆಸ್ಟಂಟರು ಚರ್ಚ್ ದೈವಿಕಜ್ಞಾನದ ಮಾಧ್ಯಮವೆಂಬುದನ್ನು ಅಲ್ಲಗಳೆದರು; ಬೈಬಲ್‌ನಲ್ಲಿ ಮಾತ್ರವೇ ಸತ್ಯವನ್ನು ಕಂಡುಕೊಳ್ಳಬಹುದು, ಅದನ್ನು ಪ್ರತಿಯೊಬ್ಬನೂ ತನಗೆ ತಾನೇ ವ್ಯಾಖ್ಯಾನಿಸಿಕೊಳ್ಳಬಹುದು. ವ್ಯಕ್ತಿಗಳ ವ್ಯಾಖ್ಯಾನಗಳಲ್ಲಿ ವ್ಯತ್ಯಾಸವಿದ್ದರೆ ವಿವಾದವನ್ನು ನಿಷ್ಕರ್ಷೆಗೊಳಿಸುವ ಯಾವುದೇ ದೈವ ನಿಯಮಿತ ಮಾಧ್ಯಮವೂ ಇಲ್ಲ. ಅನುಷ್ಠಾನದಲ್ಲಿ, ಮೊದಲು ಚರ್ಚ್‌ಗೆ ಸೇರಿದ್ದ ಈ ಅಧಿಕಾರವನ್ನು ಸರ್ಕಾರ ಪಡೆಯಿತು, ಆದರೆ ಇದು ಆಕ್ರಮಣ ಮಾತ್ರವಾಗಿತ್ತು. ಪ್ರಾಟೆಸ್ಟಂಟ್ ಸಿದ್ಧಾಂತದ ಪ್ರಕಾರ, ಆತ್ಮ-ಪರಮಾತ್ಮರ ನಡುವೆ ಯಾವುದೇ ಮಧ್ಯವರ್ತಿಯೂ ಇರಬಾರದು.

ಈ ಬದಲಾವಣೆಯ ಪರಿಣಾಮಗಳು ಮಹತ್ವಪೂರ್ಣವಾದವು. ಸತ್ಯಾಸತ್ಯತೆಯನ್ನು ಯಾವುದೇ ಪ್ರಮಾಣವಾಕ್ಕುಗಳಿಂದ ತೀರ್ಮಾನಿಸಬಾರದು, ಧ್ಯಾನದ ಮೂಲಕ ಹಾಗೆ ಮಾಡಬೇಕು. ಈ ಪ್ರವೃತ್ತಿ ಬಹು ಬೇಗ ರಾಜಕೀಯದಲ್ಲಿ ಅನಾಯಕತ್ವದ ಕಡೆಗೆ ಬೆಳೆಯಿತು; ಮತಧರ್ಮದಲ್ಲಿ, ಕ್ಯಾಥೋಲಿಕ್ ಸಂಪ್ರದಾಯದಲ್ಲಿ ಬಹು ಕಷ್ಟದಿಂದ ಸೇರಿಕೊಂಡಿದ್ದ ಅನುಭಾವದ ಕಡೆಗೆ ವಾಲಿತು. ಒಂದೇ ಪ್ರಾಟೆಸ್ಟಂಟ್ ಪಂಥವು ಮೂಡಲಿಲ್ಲ, ಅನೇಕ ಉಪಪಂಥಗಳು ಮೈದೋರಿದುವು; ಸಂಪ್ರದಾಯಾಚರಣೆಯ ವಿರುದ್ಧವಾಗಿ ಒಂದೇ ತತ್ವಜ್ಞಾನ ಹೊಮ್ಮಲಿಲ್ಲ, ಎಷ್ಟು ಮಂದಿ ತತ್ವಜ್ಞಾನಿಗಳಿದ್ದರೋ ಅಷ್ಟೂ ಸಂಖ್ಯೆಯಲ್ಲಿ ಬೆಳೆದುವು. ಹದಿಮೂರನೆಯ ಶತಮಾನದಲ್ಲಾದಂತೆ ಒಬ್ಬ ಸಾಮ್ರಾಟ ಮಾತ್ರ ಪೋಪ್ ವಿರುದ್ಧವಾಗಿ ನಿಲ್ಲಲಿಲ್ಲ, ಆದರೆ ಬಹುಸಂಖ್ಯೆಯ ಸಂಪ್ರದಾಯವಿರೋಧಿ ರಾಜರು ಎದ್ದು ನಿಂತರು. ಇದರ ಪರಿಣಾಮವಾಗಿ, ಸಾಹಿತ್ಯದಲ್ಲಿಯಂತೆ ಚಿಂತನೆಯಲ್ಲಿಯೂ, ವ್ಯಕ್ತಿನಿಷ್ಠತೆಯು

ಆಳವಾಗುತ್ತ ಹೋಯಿತು; ಮೊದಲು ಇದು ಆಧ್ಯಾತ್ಮಿಕ ಗುಲಾಮತನದಿಂದ ಆರೋಗ್ಯಕರವಾಗಿ ಬಿಡುಗಡೆಗೊಂಡಂತೆ ಕಂಡರೂ ಕ್ರಮೇಣ ಸಾಮಾಜಿಕ ವಿವೇಕಕ್ಕೆ ವಿರುದ್ಧವೆನಿಸುವ ವೈಯಕ್ತಿಕ ಪ್ರತ್ಯೇಕತೆಗೆ ಎಡೆಗೊಟ್ಟಿತು.

ಆಧುನಿಕ ತತ್ವಜ್ಞಾನವು ಮೊದಲಾಗುವುದು ಡೆಕಾರ್ಟೆಯಿಂದ. ಅವನ ಪ್ರಕಾರ ಮೂಲಭೂತ ಸತ್ಯವೆಂದರೆ ತನ್ನ ಮತ್ತು ತನ್ನ ಚಿಂತನೆಗಳ ಅಸ್ತಿತ್ವ, ಅದರಿಂದಲೇ ಹೊರಜಗತ್ತನ್ನು ವ್ಯಾಖ್ಯಾನಿಸಬೇಕು. ಬೆಳವಣಿಗೆಯಲ್ಲಿನ ಮೊದಲ ಹಂತ ಇದು, ಅದು ಬರ್ಕ್ಲೇ ಮತ್ತು ಕ್ಯಾಂಟ್ ಮೂಲಕ, ಎಲ್ಲವೂ ಅಹಮಿಕೆಯ ವಿಕಸಿತ ರೂಪವೇ ಎಂದು ವಾದಿಸಿದ, ಫ್ಲಿಷ್ತೆಯವರೆಗೂ ಬೆಳೆಯಿತು. ಇದೊಂದು ಹುಚ್ಚು ವಾದ, ಆ ತುದಿಯಿಂದ ನೋಡಿದರೆ, ತತ್ವಜ್ಞಾನವು ಮೊದಲಿನಿಂದಲೂ ದಿನನಿತ್ಯದ ಸಾಮಾನ್ಯಜ್ಞಾನವಲಯಕ್ಕೆ ಪಲಾಯನ ಮಾಡುವುದೇ ಆಗಿದೆ.

ತತ್ವಜ್ಞಾನದ ವ್ಯಕ್ತಿನಿಷ್ಠತೆಯ ಜೊತೆ ಎಂದರೆ ರಾಜಕೀಯದಲ್ಲಿ ಅನಾಯಕತ್ವ ಸಾಗುತ್ತದೆ. ಲೂಥರ್ ಬದುಕಿದ್ದಾಗಲೇ ಅಪ್ರಿಯ ಅನಾಮಧೇಯ ಅನುಯಾಯಿಗಳು ಪುನರ್ಜ್ಞಾನಸ್ನಾನ(ಅನಾಬಾಪ್ಟಿಸಂ)ದ ಸಿದ್ಧಾಂತವನ್ನು ಮಂಡಿಸಿದ್ದರು, ಮೊದಲು ಇದು ಕೆಲವು ಕಾಲ ಪುರೋಹಿತನಿಗೆ ಪ್ರಾಮುಖ್ಯವುಂಟುಮಾಡಿತ್ತು. ಈ ಪುನರ್ಜ್ಞಾನಸ್ನಾನ ಪ್ರತಿಪಾದಕರು ಎಲ್ಲ ನಿಯಮಗಳನ್ನೂ ತಿರಸ್ಕರಿಸಿದರು, ಒಳ್ಳೆಯ ವ್ಯಕ್ತಿಯನ್ನು ಪ್ರತಿ ಕ್ಷಣವೂ ಪವಿತ್ರಾತ್ಮವು ಮುನ್ನಡೆಸುವ ಕಾರಣದಿಂದಾಗಿ ಅವನಿಗೆ ಯಾವುದೇ ಕಟ್ಟುಪಾಡುಗಳಿರಲಾರದೆಂದು ವಾದಿಸಿದರು. ಈ ನೆಲೆಯಿಂದ ಅವರು ಕಮ್ಯುನಿಸಂ ಮತ್ತು ಲೈಂಗಿಕ ಸ್ವೇಚ್ಛೆಯೆಡೆಗೆ ಸಾಗಿಬಂದರು. ಹೀಗಾಗಿ ವೀರಾವೇಶದ ಪ್ರತಿರೋಧದ ಮೂಲಕ ಅವರ ಹುಟ್ಟಡಗಿಸಲಾಯಿತು. ಆದರೆ ಅವರ ಈ ಸಿದ್ಧಾಂತವು ತನ್ನ ಮಿದು ರೂಪದಲ್ಲಿ ಹಾಲಂಡ್, ಇಂಗ್ಲಂಡ್ ಮತ್ತು ಅಮೆರಿಕಗಳಿಗೆ ಹಬ್ಬಿತು; ಐತಿಹಾಸಿಕವಾಗಿ, ಅದೇ ಕ್ವಾಕರ್‌ವಾದದ ಮೂಲ. ಅನಾಯಕತೆಯ ಬಿರುಸು ರೂಪವು, ಮತಧರ್ಮದ ಜೊತೆಗಿನ ಸಂಬಂಧಗಳನ್ನು ಕಳೆದುಕೊಂಡು, ಹತ್ತೊಂಬತ್ತನೆಯ ಶತಮಾನದಲ್ಲಿ ತಲೆಯೆತ್ತಿತು. ರಷ್ಯಾ, ಸ್ಪೆಯಿನ್ ಮತ್ತು ಕಡಿಮೆ ತೀವ್ರತೆಯಿಂದ ಇಟಲಿಯಲ್ಲಿ ಅದಕ್ಕೆ ತಕ್ಕಮಟ್ಟಿಗಿನ ಯಶಸ್ಸು ದೊರೆಯಿತು, ಇಂದಿಗೂ ಅದು ಅಮೆರಿಕದ ವಲಸೆ ಅಧಿಕಾರಿಗಳ ಪಾಲಿನ ಗುಮ್ಮನಾಗಿ ಉಳಿದಿದೆ. ಅದರ ಈ ಆಧುನಿಕ ರೂಪವು, ಮತಧರ್ಮವಿರೋಧಿಯಾದರೂ, ಪ್ರಾಟೆಸ್ಟಂಟಿಸಂನ ಮೊದಲ ಸತ್ವವನ್ನು ಉಳಿಸಿಕೊಂಡಿದೆ; ಪೋಪ್‌ರ ವಿರುದ್ಧ ಲೂಥರ್ ತೋರಿದ ಆಕ್ರೋಶದ ಬದಲು ಈಗ ಧರ್ಮನಿರಪೇಕ್ಷಕ ಸರ್ಕಾರಗಳ ವಿರುದ್ಧದ ಆಕ್ರೋಶವಾಗಿದೆ ಎಂಬುದಷ್ಟೇ ವ್ಯತ್ಯಾಸ.

ವ್ಯಕ್ತಿನಿಷ್ಠತೆಯು ಸಡಿಲಗೊಂಡರೆ ಅದು ಯಾವುದೇ ಮಿತಿಯಲ್ಲಿ ಉಳಿಯದೆ ತನ್ನಷ್ಟಕ್ಕೇ ಮುಂದುವರಿಯುತ್ತದೆ. ನೈತಿಕತೆಯಲ್ಲಿ, ವ್ಯಕ್ತಿಪ್ರಜ್ಞೆಗೆ ಪ್ರಾಟೆಸ್ಟಂಟ್ ನೀಡುವ

ಒತ್ತು ಮೂಲತಃ ಅನಾಯಕತ್ವವೇ. ಅಭ್ಯಾಸ ಮತ್ತು ಪದ್ಧತಿಗಳು ಎಷ್ಟು ಪ್ರಬಲವಾಗಿದ್ದುವೆಂದರೆ, ಪುರೋಹಿತರ ವಿಷಯದಲ್ಲಿ ಕೆಲವೊಮ್ಮೆ ನಡೆದ ಸ್ಫೋಟದಂತೆ, ನೈತಿಕತೆಯ ವ್ಯಕ್ತಿನಿಷ್ಠವಾದಿಗಳ ಶಿಷ್ಯರು ರೂಢಿಗತವಾಗಿ ಸಮಂಜಸವೆನ್ನುವ ರೀತಿಯಲ್ಲಿಯೇ ತಮ್ಮ ನಡತೆಯನ್ನು ಮುಂದುವರಿಸಿದರು. ಆದರೆ ಇದೊಂದು ಅಸ್ಥಿರ ಸಮತೋಲನ. ಹದಿನೆಂಟನೆಯ ಶತಮಾನದ 'ಸಂವೇದನಾಶೀಲತೆ'ಯ ಪಂಥವು ಅದನ್ನು ಮುರಿಯಲು ಆರಂಭಿಸಿತು: ಒಂದು ಕ್ರಿಯೆಯು ಮಾಡುವ ಸತ್ಪರಿಣಾಮಗಳ ಕಾರಣದಿಂದಾಗಿಯೋ ಅಥವಾ ಅದು ನೀತಿಸಂಹಿತೆಗೆ ಅನುಗುಣವಾಗಿದೆಯೆಂದೋ ಮೆಚ್ಚದೆ, ಅದು ಉದ್ರೇಕಿಸುವ ಭಾವನೆಗಳ ಕಾರಣಕ್ಕಾಗಿ ಮೆಚ್ಚಲಾಗುತ್ತಿತ್ತು. ಕಾರ್ಲೈಲ್ ಮತ್ತು ನೀಷೆ ಹೇಳಿದಂತೆ, ಈ ಪ್ರವೃತ್ತಿಯಿಂದ ವಿಭೂತಿಪೂಜೆಯ ಪಂಥ ಮತ್ತು ಎಂತಹದೋ ತೀವ್ರ ಭಾವೋದ್ರೇಕದ ಬೈರಾನಿಕ್ ಪಂಥ ಬೆಳೆಯಿತು.

ಕಲೆ ಮತ್ತು ಸಾಹಿತ್ಯಗಳಲ್ಲಿನ ರೊಮ್ಯಾಂಟಿಕ್ ಚಳವಳಿಯು ವ್ಯಕ್ತಿನಿಷ್ಠ ಪ್ರವೃತ್ತಿಯಿಂದ ಆವೃತವಾಗಿದೆ; ಅದು ಜನರನ್ನು ಒಂದು ಸಮುದಾಯದ ಸದಸ್ಯರನ್ನಾಗಿ ಪರಿಗಣಿಸದೆ ಸೌಂದರ್ಯಾತ್ಮಕ ಆನಂದದಿಂದ ನಿರುಕಿಸಬಹುದಾದ ವಸ್ತುವಾಗಿ ಅಳೆಯುತ್ತದೆ. ಹುಲಿಗಳು ಕುರಿಗಳಿಗಿಂತ ಹೆಚ್ಚು ಸುಂದರವಾದರೂ ಅವುಗಳು ಪಂಜರದಲ್ಲಿರಬೇಕೆಂದು ನಾವು ಬಯಸುತ್ತೇವೆ. ಮಾದರಿ ರೊಮ್ಯಾಂಟಿಕ್‌ನು ಎಲ್ಲ ಭೇದಗಳನ್ನೂ ಕಳಚಿಬಿಡುತ್ತಾನೆ; ಕುರಿಯ ಮೇಲೆ ಹುಲಿ ಅದ್ಭುತ ರೀತಿಯಿಂದ ಹಾರಿ ಕೊಂದುಹಾಕುವ ಪರಿಯನ್ನು ಕಂಡು ಅವನು ಆನಂದಿಸುತ್ತಾನೆ. ತಮ್ಮನ್ನು ಹುಲಿಗಳೆಂದು ಕಲ್ಪಿಸಿಕೊಳ್ಳುವಂತೆ ಅವನು ಜನರನ್ನು ಪ್ರಚೋದಿಸುತ್ತಾನೆ, ಅದರಲ್ಲಿ ಅವನು ಯಶಸ್ವಿಯಾದಾಗ ಪರಿಣಾಮವೇನೂ ಪೂರ್ತಿ ಆನಂದದಾಯಕವಾಗಿರುವುದಿಲ್ಲ.

ಆಧುನಿಕ ಕಾಲದ ವ್ಯಕ್ತಿನಿಷ್ಠತೆಯ ಇನ್ನೂ ಹೆಚ್ಚು ಅವಿವೇಕದ ಬಗೆಗಳ ಹಿನ್ನೆಲೆಯಲ್ಲಿ ನಾನಾ ಬಗೆಯ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ಮೊದಲನೆಯದಾಗಿ, ಅರೆರಾಜಿಯಾದ ತತ್ವಜ್ಞಾನವು ಉದಾರತೆಯ ಸಿದ್ಧಾಂತ, ಅದು ಸರ್ಕಾರ ಮತ್ತು ವ್ಯಕ್ತಿಗಳ ವಲಯಕ್ಕೆ ತಕ್ಕಂತೆ ಅನ್ವಯಿಸಲು ಪ್ರಯತ್ನಿಸಿತು. ಆಧುನಿಕ ರೂಪದಲ್ಲಿ ಇದು ಮೊದಲಾಗುವುದು ಲಾಕ್‌ನಿಂದ. ಅವನು ಪುನರ್ಜ್ಞಾನಸ್ನಾನವಾದಿಗಳ ವ್ಯಕ್ತಿಸಿದ್ಧಾಂತವಾದ 'ಸಂಭ್ರಮ'ಕ್ಕೆ ಎಂತೋ ಅಂತೆಯೇ ಆತ್ಯಂತಿಕ ಅಧಿಕಾರ ಹಾಗೂ ಸಂಪ್ರದಾಯದ ಕುರುಡು ಅನುಸರಣೆಗೆ ವಿರುದ್ಧವಾಗಿದ್ದ. ಮತ್ತಷ್ಟು ಸಂಪೂರ್ಣ ಬಂಡಾಯವು ಸರ್ಕಾರದ ಆರಾಧನೆಯಲ್ಲಿ ಕೊನೆಯಾಗುತ್ತದೆ; ಕ್ಯಾಥಾಲಿಸಿಸಂ ಚರ್ಚ್‌ಗೆ ಅಥವಾ ಇನ್ನೂ ಕೆಲವೇಳೆ ದೇವರಿಗೆ ನೀಡಿದ ಸ್ಥಾನವನ್ನೇ ಇದು ಸರ್ಕಾರಕ್ಕೆ ನೀಡುತ್ತದೆ. ಹಾಬ್ಸ್, ರೂಸೋ, ಮತ್ತು ಹೆಗೆಲ್ ಈ ಸಿದ್ಧಾಂತದ

ವಿವಿಧ ಮಜಲುಗಳ ಪ್ರತಿನಿಧಿಗಳು; ಅವರ ಸಿದ್ಧಾಂತಗಳು ವಾಸ್ತವದಲ್ಲಿ ಕ್ರಾಮ್‌ವೆಲ್, ನೆಪೋಲಿಯನ್, ಮತ್ತು ಆಧುನಿಕ ಜರ್ಮನಿಯಲ್ಲಿ ಅಂತರ್ಗತವಾಗಿವೆ. ಸೈದ್ಧಾಂತಿಕವಾಗಿ ಕಮ್ಯುನಿಸಂ ಆ ತತ್ವಜ್ಞಾನಗಳಿಂದ ತುಂಬ ದೂರವಾದುದಾದರೂ, ಆಚರಣೆಯಲ್ಲಿ ಸರ್ಕಾರದ ಆರಾಧನೆಯ ಫಲವಾದ ಸಮುದಾಯದ ಬಗೆಯನ್ನು ಹೋಲುತ್ತದೆ.

ದೀರ್ಘಕಾಲದ ಈ ಬೆಳವಣಿಗೆಯುದ್ದಕ್ಕೂ, ಅಂದರೆ ಕ್ರಿಪೂ ೬೦೦ ರಿಂದ ಇಂದಿನವರೆಗೂ, ತತ್ವಜ್ಞಾನಿಗಳು ಎರಡು ಬಗೆಯವರಾಗಿದ್ದಾರೆ: ಸಾಮಾಜಿಕ ಸಂಬಂಧವನ್ನು ಬೆಸೆಯುವವರು ಮತ್ತು ಅದನ್ನು ಸಡಿಲಗೊಳಿಸುವವರು. ಮಿಕ್ಕವರೂ ಈ ಎರಡು ಬಗೆಗಳೊಡನೆ ಸಂಬಂಧಪಟ್ಟವರು. ಶಿಸ್ತುಪಾಲಕರು ಹೊಸದೋ ಹಳೆಯದೋ ಅಂತೂ ಒಂದಲ್ಲ ಒಂದು ಬಗೆಯ ಶಾಸ್ತ್ರಪ್ರಾಮಾಣ್ಯವನ್ನು ಸಮರ್ಥಿಸುವವರು; ಅವರ ಶಾಸ್ತ್ರಪ್ರಾಮಾಣ್ಯಗಳನ್ನು ಪ್ರಾಯೋಗಿಕವಾಗಿ ರುಜುವಾತು ಮಾಡಲಾಗದ್ದರಿಂದ, ಇವರು ಹೆಚ್ಚೋ ಕಡಿಮೆಯೋ ಪ್ರಮಾಣದಲ್ಲಿ ವಿಜ್ಞಾನಕ್ಕೆ ವಿರುದ್ಧವಾಗಿರಬೇಕಾದ ಅನಿವಾರ್ಯತೆಯುಳ್ಳವರು. ಸುಖಕ್ಕಿಂತ ಉದಾತ್ತತೆ ಅಥವಾ ಸಾಹಸಗಳು ಹೆಚ್ಚು ಉಪಾದೇಯವೆಂದು ಸದಾ ಬೋಧಿಸುತ್ತಿದ್ದವರು. ಮಾನವ ಸ್ವಭಾವದ ಕಾರಣಾತೀತ ಭಾಗದ ಬಗ್ಗೆ ಹೆಚ್ಚು ಸಹಾನುಭೂತಿ ಹೊಂದಿದ್ದವರು, ಯಾಕೆಂದರೆ ಸಾಧಾರವೆಂಬುದು ಸಾಮಾಜಿಕ ಸಾಮರಸ್ಯಕ್ಕೆ ವಿರುದ್ಧವೆಂದೇ ಅವರು ಭಾವಿಸಿದ್ದರು. ಮತ್ತೊಂದು ಕಡೆ, ಅತಿರೇಕದ ಅನಾಯಕತ್ವವಾದಿಗಳನ್ನು ಹೊರತುಪಡಿಸಿ, ಸ್ವಾತಂತ್ರ್ಯವಾದಿಗಳು ವೈಜ್ಞಾನಿಕತೆ, ಉಪಯುಕ್ತತೆ, ವೈಚಾರಿಕತೆಗಳ ಕಡೆ ವಾಲಿದರು, ಅವರು ತೀವ್ರ ವೈರತ್ವ ಭಾವದ ವಿರುದ್ಧರಾದವರು, ಎಲ್ಲ ಆಳವಾದ ಮತಧರ್ಮ ರೂಪಗಳ ಶತ್ರುಗಳು. ತತ್ವಜ್ಞಾನವೆಂದು ನಾವೀಗ ಗುರುತಿಸುವ ಚಿಂತನೆ ಮೊದಲಾಗುವ ಮೊದಲು ಈ ಸಂಘರ್ಷವು ಗ್ರೀಸ್‌ನಲ್ಲಿತ್ತು, ಇದು ಅತ್ಯಂತ ಪ್ರಾಚೀನ ಗ್ರೀಕ್ ಚಿಂತನೆಯಲ್ಲಿ ವ್ಯಕ್ತವಾಗಿದೆ. ಇದು ಈಗಲೂ ಬದಲಾದ ರೂಪಗಳಲ್ಲಿ ಮುಂದುವರಿದಿದೆ, ಅಲ್ಲದೆ ಮುಂದೆಯೂ ಮುಂದುವರಿಯುವುದರಲ್ಲಿ ಅನುಮಾನವಿಲ್ಲ.

ಈ ವಿವಾದದಲ್ಲಿ ಭಾಗಿಯಾಗಿ – ಈ ದೀರ್ಘ ಅವಧಿಯಲ್ಲಿ ಉಳಿದುಕೊಂಡು ಬಂದಿರುವ – ಪ್ರತಿ ಪಕ್ಷದ ವಾದವೂ ಭಾಗಶಃ ಸರಿ, ಭಾಗಶಃ ತಪ್ಪು. ಸಾಮಾಜಿಕ ಸಾಮರಸ್ಯವು ಆವಶ್ಯಕವಾದುದು, ಆದರೆ ಕೇವಲ ವೈಚಾರಿಕ ವಾದಗಳಿಂದ ಸಾಮರಸ್ಯವನ್ನು ಉಂಟುಮಾಡುವಲ್ಲಿ ಮಾನವಸಂಕುಲವು ಇನ್ನೂ ಗೆಲುವು ಸಾಧಿಸಬೇಕಾಗಿದೆ. ಪ್ರತಿ ಸಮುದಾಯವೂ ಪರಸ್ಪರ ವಿರುದ್ಧವಾದ ಎರಡು ಅಪಾಯುಗಳನ್ನೆದುರಿಸುತ್ತಿದೆ: ಒಂದೆಡೆ, ವಿಪರೀತ ಶಿಸ್ತು ಹಾಗೂ ಸಂಪ್ರದಾಯಶರಣತೆಗಳಿಂದಾಗುವ ಅಸೂಕ್ಷ್ಮತೆ; ಮತ್ತು ಇನ್ನೊಂದೆಡೆ, ವೈಯಕ್ತಿಕತೆಯ

ಅತಿರೇಕದ ಬೆಳವಣಿಗೆ ಮತ್ತು ವ್ಯಕ್ತಿಸ್ವಾತಂತ್ರ್ಯಗಳಿಂದಾಗಿ ಸಹಕಾರವು ಮರೀಚಿಕೆಯಾಗಿ ಪರಕೀಯ ದಾಳಿಗೆ ಪಕ್ಕಾಗುವ ಸಾಧ್ಯತೆ. ಒಟ್ಟಾರೆ, ಪ್ರಮುಖ ನಾಗರಿಕತೆಗಳು ಕಠಿಣ ಮೂಢನಂಬಿಕಯ ವ್ಯವಸ್ಥೆಯಿಂದ ಆರಂಭವಾಗಿ, ಕ್ರಮೇಣ ಸಡಿಗೊಳ್ಳುತ್ತ, ಹಳೆಯ ಸಂಪ್ರದಾಯಗಳ ಒಳ್ಳೆಯ ಅಂಶಗಳು ಉಳಿದು ಅದರ ಕೆಡುಕು ಅಂಶಗಳು ಇಲ್ಲವಾಗುವ ಪ್ರಖರ ಪ್ರತಿಭೆಯ ಕಾಲದವರೆಗೂ ಅದಿನ್ನೂ ಬೆಳೆದಿಲ್ಲ. ಆದರೆ ಕೆಡುಕುಗಳು ಹೊರಬರುತ್ತಿದ್ದಂತೆ, ಅದು ಅನಾಯಕತ್ವಕ್ಕೆ ಅವಕಾಶವಾಗಿ ಆನಂತರ ಅನಿವಾರ್ಯವಾಗಿ ಹೊಸ ಶಾಸ್ತ್ರಪ್ರಾಮಾಣ್ಯಗಳ ಪಾಕವನ್ನು ಸಿದ್ಧಗೊಳಿಸಿ ಹೊಸ ಬಗೆಯ ದೌರ್ಜನ್ಯಕ್ಕೆ ಎಡೆಮಾಡಿಕೊಡುತ್ತದೆ. ಈ ಕೊನೆಯಿಲ್ಲದ ತೂಗಾಟದಿಂದ ಪಾರಾಗಲು ಉದಾರತೆಯ ಸಿದ್ಧಾಂತವು ಒಂದು ಪ್ರಯತ್ನ. ಉದಾರತೆಯ ತಿರುಳೆಂದರೆ ಅವೈಚಾರಿಕ ಶಾಸ್ತ್ರಪ್ರಾಮಾಣ್ಯಗಳನ್ನಾಧರಿಸದ ಹಾಗೂ ಸಮುದಾಯದ ಸ್ಥಿರ ಅಸ್ತಿತ್ವಕ್ಕೆ ಆವಶ್ಯಕವಾದುದಕ್ಕಿಂತ ಹೆಚ್ಚಿನ ನಿರ್ಬಂಧಗಳನ್ನೊಡ್ಡದ ವ್ಯವಸ್ಥೆ. ಈ ಪ್ರಯತ್ನವು ಫಲಪ್ರದವಾಗುವುದೋ ಎಂಬುದನ್ನು ಭವಿಷ್ಯವೇ ನಿರ್ಧರಿಸಬೇಕು.

ಪರಿವಿಡಿ

ಸಂಪುಟ ೩ : ಆಧುನಿಕ ತತ್ವಜ್ಞಾನ

ಪಾಶ್ಚಾತ್ಯ ತತ್ತ್ವಜ್ಞಾನದ ಇತಿಹಾಸ

ಸಂಪುಟ ೧

ಪ್ರಾಚೀನ ತತ್ವಜ್ಞಾನ

ಭಾಗ ೧
ಸಾಕ್ರಟಿಕ್‌ಪಂಥಪೂರ್ವ

೧
ಗ್ರೀಕ್ ನಾಗರಿಕತೆಯ ಉದಯ

ಗ್ರೀಸ್‌ನಲ್ಲಿ ಇದ್ದಕ್ಕಿಂತೆಯೇ ನಾಗರಿಕತೆಯು ಉದಯವಾದ ಬಗೆಯಷ್ಟು ಆಶ್ಚರ್ಯಕರವಾದುದಾಗಲೀ ಅದರ ಕಾರಣಗಳನ್ನು ಹುಡುಕುವುದರಷ್ಟು ಕಷ್ಟಕರವಾದುದಾಗಲೀ ಬೇರಾವುದೂ ಇಲ್ಲ. ನಾಗರಿಕತೆಯನ್ನು ರೂಪಿಸುವಲ್ಲಿ ಇರಬಹುದಾದ ಬಹಳಷ್ಟು ಅಂಶಗಳು ಸಾವಿರಾರು ವರ್ಷಗಳ ಹಿಂದೆಯೇ ಈಜಿಪ್ಟ್ ಮತ್ತು ಮೆಸಪೊಟೋಮಿಯಗಳಲ್ಲಿ ಇದ್ದವು, ಅಲ್ಲಿಂದ ನೆರೆಯ ದೇಶಗಳಿಗೂ ಹಬ್ಬಿದ್ದವು. ಆದರೆ ಅದರಲ್ಲಿ ಕೆಲವು ಅಂಶಗಳ ಕೊರತೆಯಿತ್ತು, ಅವುಗಳನ್ನು ಗ್ರೀಕರು ತುಂಬಿದರು. ಕಲೆ ಮತ್ತು ಸಾಹಿತ್ಯಗಳಲ್ಲಿ ಅವರು ಸಾಧಿಸಿದುದರ ಬಗ್ಗೆ ಎಲ್ಲರಿಗೂ ಗೊತ್ತಿದೆ, ಆದರೆ ಕೇವಲ ಬೌದ್ಧಿಕ ವಲಯದಲ್ಲಿ ಅವರು ಮಾಡಿದ ಸಾಧನೆ ಮತ್ತಷ್ಟು ಅಸಾಧಾರಣವಾದುದು. ಅವರು ಗಣಿತ[೩] ಮತ್ತು ವಿಜ್ಞಾನಗಳನ್ನೂ ತತ್ವಜ್ಞಾನವನ್ನೂ ಕಂಡುಹಿಡಿದರು; ಅವರು ವರದಿಗಳ ಬದಲು ಇತಿಹಾಸವನ್ನು ಮೊದಲ ಬಾರಿಗೆ ಬರೆದರು; ಜಗತ್ತಿನ ಸ್ವರೂಪ ಹಾಗೂ ಜೀವನಧ್ಯೇಯಗಳ ಬಗ್ಗೆ ಅನಿರ್ಬಂಧಿತವಾಗಿ ಆಲೋಚಿಸಿದರು, ಅದನ್ನು ಯಾವುದೇ ಸಾಂಪ್ರದಾಯಿಕತೆಯು ಕಟ್ಟಿಹಾಕಿರಲಿಲ್ಲ. ಆಗ ಸಂಭವಿಸಿದುದು ಎಷ್ಟು ಆಶ್ಚರ್ಯಕರವೆಂದರೆ, ಇತ್ತೀಚಿನವರೆಗೂ, ಗ್ರೀಕ್ ಪ್ರತಿಭೆಯ ಬಗ್ಗೆ ಜನರು ಬಾಯಿಬಿಟ್ಟುಕೊಂಡು ಮಾತಾಡುವುದರಲ್ಲಿಯೇ ತೃಪ್ತಿ ಹೊಂದಿದ್ದರು. ಆದರೆ, ವೈಜ್ಞಾನಿಕ ವಿಧಾನದಲ್ಲಿ ಗ್ರೀಕರ ಬೆಳವಣಿಗೆಯನ್ನು ಅರ್ಥವಿಸಿಕೊಳ್ಳುವುದು ಸಾಧ್ಯ, ಮತ್ತು ಹಾಗೆ ಮಾಡುವುದು ಸಮಂಜಸವೂ ಹೌದು.

ತತ್ವಜ್ಞಾನವು ಥೇಲೀಸ್‌ನಿಂದ ಆರಂಭವಾಗುತ್ತದೆ, ಅವನ ಕಾಲವನ್ನು, ಅದೃಷ್ಟವಶಾತ್, ಅವನು ಮುನ್‌ಸೂಚಿಸಿದ ಗ್ರಹಣವೊಂದರ ತೇದಿಯಿಂದ

---

೩. ಅಂಕಗಣಿತ ಮತ್ತು ಸ್ವಲ್ಪಮಟ್ಟಿಗಿನ ಜ್ಯಾಮಿತಿಗಳು ಈಜಿಪ್ಷಿಯನ್ನರಲ್ಲೂ ಬ್ಯಾಬಿಲೋನಿಯನ್ನರಲ್ಲೂ ಅಸ್ತಿತ್ವದಲ್ಲಿದ್ದುವು, ಆದರೆ ಬರಿಯ ಅನುಭವಾಧಾರಿತವಾದವು. ಸಾಮಾನ್ಯ ಆಧಾರಗಳಿಂದ ಸಾಧಿಸಬಹುದಾದ ನಿಗಮನ ತರ್ಕವು ಗ್ರೀಕರ ಅನ್ವೇಷಣೆ.

ನಿರ್ಣಯಿಸಬಹುದು, ಖಗೋಳವಿಜ್ಞಾನಿಗಳ ಪ್ರಕಾರ ಅದು ಸಂಭವಿಸಿದ್ದು ಕ್ರಿಪೂ ೫೮೫ರಲ್ಲಿ. ತತ್ವಜ್ಞಾನ ಮತ್ತು ವಿಜ್ಞಾನ – ಅವು ಮುಂಚೆ ಬೇರೆಯವಾಗಿರಲಿಲ್ಲ – ಹೀಗಾಗಿ ಕ್ರಿಪೂ ಆರನೇ ಶತಮಾನದ ಆರಂಭದಲ್ಲಿ ಒಟ್ಟಿಗೇ ಜನಿಸಿದುವು. ಗ್ರೀಸ್ ಮತ್ತದರ ನೆರೆಯ ದೇಶಗಳಲ್ಲಿ ಈ ಹಿಂದೆ ಏನು ನಡೆಯುತ್ತಿದ್ದವು? ಅದಕ್ಕೆ ಉತ್ತರ ಯಾವುದಾದರೂ ಅದು ಊಹಾತ್ಮಕವೇ ಆಗಿರುತ್ತದೆ; ಆದರೆ ಪ್ರಾಕ್ತನವಿಜ್ಞಾನವು ನಮ್ಮ ಪೂರ್ವಿಕರು ಹೊಂದಿದ್ದುದಕ್ಕಿಂತ ಹೆಚ್ಚಿನ ತಿಳಿವಳಿಕೆಯನ್ನು ಈಗ ನಮಗೆ ನೀಡುತ್ತದೆ.

ಸುಮಾರು ಕ್ರಿಪೂ ೪೦೦೦ದ ಹೊತ್ತಿಗೆ ಬರವಣಿಗೆಯ ಕಲೆಯು ಈಜಿಪ್ಟ್‌ನಲ್ಲಿ ಆರಂಭವಾಯಿತು, ಮೆಸಪೊಟೋಮೊಯದಲ್ಲಿ ಅದಕ್ಕಿಂತ ಬಹು ವಿಳಂಬವಾಗೇನೂ ಅಲ್ಲ. ಬೇಕಾದ ವಸ್ತುಗಳ ಚಿತ್ರಗಳನ್ನು ಬಿಡಿಸುವುದರ ಮೂಲಕವೇ ಪ್ರತಿ ದೇಶದಲ್ಲಿಯೂ ಬರವಣಿಗೆಯು ಆರಂಭಗೊಂಡುದು. ಈ ಚಿತ್ರಗಳು ಬಹುಬೇಗ ರೂಢಿಗತವಾಯಿತು, ಹೀಗಾಗಿ ಪದಗಳು ಭಾವಲಿಪಿಯ (ಐಡಿಯೋಗ್ರಾಮ್) ಮೂಲಕ ವ್ಯಕ್ತವಾದುವು, ಅವು ಚೈನಾದಲ್ಲಿ ಈಗಲೂ ಬಳಕೆಯಲ್ಲಿವೆ. ಕ್ರಮೇಣ ಈ ತೊಡಕಿನ ವ್ಯವಸ್ಥೆಯು ಸಾವಿರಾರು ವರ್ಷಗಳುದ್ದಕ್ಕೂ ವರ್ಣಮಾಲೆಯ ಬಳಕೆಯಾಗಿ ರೂಪುಗೊಂಡಿತು.

ಈಜಿಪ್ಟ್ ಮತ್ತೆ ಮೆಸೊಪೊಟೇಮಿಯಗಳಲ್ಲಿ ನಾಗರಿಕತೆಯು ಬೆಳೆದುದು ನೈಲ್, ಟೈಗ್ರಿಸ್ ಮತ್ತು ಯೂಫ್ರಟೀಸ್ ನದಿಗಳಿಂದಾಗಿ, ಇವುಗಳಿಂದ ಕೃಷಿಯು ಸುಲಭವೂ ಸಮೃದ್ಧವಾಗಿ ಉತ್ಪಾದಕವೂ ಆಯಿತು. ಈ ನಾಗರಿಕತೆಯು ಅನೇಕ ವಿಧಗಳಲ್ಲಿ ಸ್ಪೆಯಿನ್‌ನ ಜನರು ಮೆಕ್ಸಿಕೋ ಮತ್ತು ಪೆರುಗಳಲ್ಲಿ ಕಂಡುದರಂತೆಯೇ ಇತ್ತು. ಅಲ್ಲಿ ದರ್ಪಿಷ್ಟ ಅಧಿಕಾರದ ದೈವಿಕ ರಾಜನಿದ್ದ; ಈಜಿಪ್ಟ್‌ನಲ್ಲಿ ಭೂಮಿಯೆಲ್ಲಕ್ಕೂ ಅವನೇ ಒಡೆಯನಾಗಿದ್ದ. ಅಲ್ಲಿ ಬಹುದೇವತಾ ಮತಧರ್ಮವಿತ್ತು, ಅವರಲ್ಲಿ ಪರಮದೈವದೊಡನೆ ರಾಜನಿಗೆ ಆತ್ಮೀಯ ಒಡನಾಟವಿರುತ್ತಿತ್ತು. ಅಲ್ಲಿನದು ಸೇನಾ ಕುಲೀನಪ್ರಭುತ್ವ ಮತ್ತು ಪುರೋಹಿತ ಕುಲೀನಪ್ರಭುತ್ವ. ಈ ಪುರೋಹಿತ ಕುಲೀನಪ್ರಭುತ್ವವು, ರಾಜನು ದುರ್ಬಲನಾಗಿದ್ದರೋ ಕಠಿಣ ಯುದ್ಧಗಳಲ್ಲಿ ತೊಡಗಿಕೊಂಡಿದ್ದರೋ, ರಾಜನ ಪರಮಾಧಿಕಾರವನ್ನು ಎಷ್ಟೋ ವೇಳೆ ತನ್ನ ಕೈಗೆ ತೆಗೆದುಕೊಳ್ಳಬಹುದಾಗಿತ್ತು. ಭೂಮಿಯನ್ನು ಉಳುತ್ತಿದ್ದವರು ಗುಲಾಮರು, ಅವರೆಲ್ಲ ರಾಜ, ಕುಲೀನವರ್ಗ ಮತ್ತು ಪುರೋಹಿತವರ್ಗದ ಒಡೆತನದಲ್ಲಿದ್ದವರು.

ಈಜಿಪ್ಟ್ ಮತ್ತು ಬ್ಯಾಬಿಲೋನಿಯನ್ ಮತಧರ್ಮಶಾಸ್ತ್ರಗಳಲ್ಲಿ ಸಾಕಷ್ಟು ವ್ಯತ್ಯಾಸವಿತ್ತು. ಈಜಿಪ್ಟಿಯನ್ನರು ಸಾವಿನ ಯೋಚನೆಯಿಂದ ಆವೃತರಾಗಿದ್ದವರು, ಸತ್ತವರ ಆತ್ಮಗಳು ಕೆಳಲೋಕಕ್ಕೆ ಹೋಗುತ್ತವೆ, ಭೂಮಿಯಲ್ಲಿ ತಾವು ನಡೆಸಿದ್ದ ಜೀವನಕ್ಕನುಗುಣವಾಗಿ ಅಲ್ಲಿ ಓಸಿರಿಸ್‌ನ ಗುಣಮಾಪನಕ್ಕೆ ಒಳಗಾಗುತ್ತವೆ ಎಂದು

ನಂಬಿದ್ದರು. ಆತ್ಮವು ಕೊನೆಗೆ ದೇಹವನ್ನು ಪ್ರವೇಶಿಸುತ್ತದೆ ಎಂಬುದು ಅವರ ಆಲೋಚನೆಯಾಗಿತ್ತು; ಇದರಿಂದಾಗಿ ಮಮ್ಮೀಕರಣಕ್ಕೊಳಗಾಗಿ ಅವುಗಳಿಗೆಂದು ಅದ್ಭುತ ಸಮಾಧಿಗಳನ್ನು ನಿರ್ಮಿಸುತ್ತಿದ್ದರು. ಕ್ರಿಪೂ ನಾಲ್ಕನೆಯ ಸಹಸ್ರಮಾನದ ಕೊನೆ ಮತ್ತು ಮೂರನೆಯದರ ಆರಂಭದಲ್ಲಿ ವಿವಿಧ ರಾಜರು ಪಿರಮಿಡ್‌ಗಳನ್ನು ನಿರ್ಮಿಸಿದರು. ಈ ಅವಧಿಯ ಬಳಿಕ, ಈಜಿಪ್ಟ್ ನಾಗರಿಕತೆಯು ಹೆಚ್ಚೆಚ್ಚು ರೂಢಮಾದರಿಯದಾಯಿತು, ಮತ್ತು ಮತಧಾರ್ಮಿಕ ಸಂಪ್ರದಾಯಶರಣತೆಯು ಪ್ರಗತಿಗೆ ಕಂಟಕವಾಯಿತು. ಕ್ರಿಪೂ ೧೮೦೦ ರ ಹೊತ್ತಿಗೆ ಈಜಿಪ್ಟ್ ಅನ್ನು ಸೆಮೆಟಿಸ್ ಮತ್ತು ಹೈಸ್ಕೋಸ್‌ಗಳು ಗೆದ್ದರು, ಅವರು ದೇಶವನ್ನು ಸುಮಾರು ಎರಡು ಶತಮಾನಗಳ ಕಾಲ ಆಳಿದರು, ಆದರೆ ಈಜಿಪ್ಟ್‌ನ ಮೇಲೆ ಅಳಿಸಲಾಗದ ಪರಿಣಾಮವನ್ನೇನೂ ಉಂಟುಮಾಡಲಿಲ್ಲ, ಆದರೆ ಅವರು ಅಲ್ಲಿದ್ದುದೇ ಈಜಿಪ್ಟ್‌ನ ನಾಗರಿಕತೆಯು ಸಿರಿಯ ಮತ್ತು ಪಾಲಿಸ್ಟೈನ್‌ಗಳಿಗೆ ಹಬ್ಬಲು ಸಹಾಯಕವಾಯಿತು.

ಬಾಬಿಲೋನಿಯವು ಈಜಿಪ್ಟ್‌ಗಿಂತ ಹೆಚ್ಚು ಯುದ್ಧೋತ್ಸಾಹದಿಂದ ಬೆಳವಣಿಗೆಯನ್ನು ಹೊಂದಿತು. ಮೊದಲಿಗೆ, ಆಳುವವರ್ಗವು ಸೆಮೆಟಿಸ್ ಆಗಿರದೆ ಸುಮೇರಿಯನ್ನರಾಗಿದ್ದರು, ಆದರೆ ಅವರ ಮೂಲವಾವುದೋ ತಿಳಿಯದು. ಅವರು ಬೆಣೆಲಿಪಿ (ಕ್ಯೂನಿಫಾರ್ಮ್) ಬರವಣಿಗೆಯನ್ನು ಕಂಡುಹಿಡಿದರು, ಅವರನ್ನು ಗೆದ್ದ ಸೆಮೆಟಿಸ್ ಅವರಿಂದ ಇದನ್ನು ಪಡೆದರು. ಹಲವಾರು ಸ್ವತಂತ್ರ ನಗರಗಳಿದ್ದ ಕಾಲವೊಂದಿತ್ತು, ಅವು ಪರಸ್ಪರ ಹೋರಾಟ ಮಾಡುತ್ತಿದ್ದವು, ಆದರೆ ಕೊನೆಗೆ ಬ್ಯಾಬಿಲೋನ್ ಜನರು ಪರಮಶ್ರೇಷ್ಠವಾಗಿ ಒಂದು ಚಕ್ರಾಧಿಪತ್ಯವನ್ನು ಸ್ಥಾಪಿಸಿದರು. ಬೇರೆ ನಗರಗಳ ದೇವರುಗಳು ಅದರ ಅಧೀನಕ್ಕೊಳಗಾದರು, ಬ್ಯಾಬಿಲೋನ್‌ನ ದೇವರಾದ ಮಾರ್ಡುಕ್, ಮುಂದೆ ಗ್ರೀಕ್ ದೇವಾವಳಿಯಲ್ಲಿ ಜ್ಯೂಸ್ ಪಡೆದ ಸ್ಥಾನದಂತಹ, ಸ್ಥಾನವನ್ನು ಹೊಂದಿದ. ಇಂತಹುದೇ ಬೆಳವಣಿಗೆಯು ಈಜಿಪ್ಟ್‌ನಲ್ಲಿಯೂ ಸಂಭವಿಸಿತು, ಆದರೆ ಅದು ನಡೆದುದು ಬಹಳ ಕಾಲದ ಬಳಿಕ.

ಈಜಿಪ್ಟ್ ಮತ್ತು ಬ್ಯಾಬಿಲೋನಿಯಗಳ ಮತಧರ್ಮಗಳು, ಇತರ ಮತಧರ್ಮಗಳಂತೆಯೇ, ಮೂಲತಃ ಫಲವಂತಿಕೆಯ ಪಂಥಗಳು. ಭೂಮಿ ಹೆಣ್ಣು, ಸೂರ್ಯ ಗಂಡು. ಎತ್ತನ್ನು ಸಾಮಾನ್ಯವಾಗಿ ಪುರುಷ ವೀರ್ಯವಂತಿಕೆಯ ಸಾಕಾರವೆಂದು ಪರಿಗಣಿಸಲಾಗಿತ್ತು, ಹೀಗಾಗಿ ಎತ್ತು ದೇವರುಗಳು ಸಾಮಾನ್ಯವೆನಿಸಿದುವು. ಬ್ಯಾಬಿಲೋನ್, ಇಷ್ತಾರ್, ಭೂದೇವತೆಯು ಹೆಣ್ಣು ದೇವರುಗಳಲ್ಲಿ ಪರಮಶ್ರೇಷ್ಠವೆನಿಸಿತ್ತು. ಪಶ್ಚಿಮ ಏಷ್ಯಾದಾದ್ಯಂತ ಮಹಾ ಮಾತೆಯನ್ನು ವಿವಿಧ ಹೆಸರುಗಳಿಂದ ಪೂಜಿಸಲಾಗುತ್ತಿತ್ತು. ಏಷ್ಯಾ ಮೈನರ್‌ನಲ್ಲಿ ಗ್ರೀಕ್ ವಸಾಹತುಶಾಹಿಗಳು ಅವಳಿಗಾಗಿ ದೇವಸ್ಥಾನಗಳನ್ನು ನಿರ್ಮಿಸಿ, ಅವಳನ್ನು

ಆರ್ಟೆಮಿಸ್ ಎಂದು ಕರೆದು ಅಲ್ಲಿನ ಆರಾಧನಾಪಂಥವನ್ನು ತಮ್ಮದಾಗಿಸಿಕೊಂಡರು. ಇದೇ 'ಎಫೇನಿಯನ್‌ರ ಡಯಾನಾ'[೪] ಕ್ರಿಶ್ಚಿಯನ್ ಮತಧರ್ಮವು ಅವಳನ್ನು ವರ್ಜಿನ್ ಮೇರಿಯಾಗಿ ಮಾರ್ಪಡಿಸಿತು, ಎಫೆಸಿಸ್ ಪರಿಷತ್ತು 'ದೇವತಾ ಮಾತೃ' ಎಂಬ 'ಅವರ್ ಲೇಡಿ'ಯ ಬಿರುದನ್ನು ನಿಯಮಬದ್ಧವಾಗಿಸಿತು.

ಮತಧರ್ಮವು ಚಕ್ರಾಧಿಪತ್ಯವೊಂದರ ಸರ್ಕಾರದೊಡನೆ ತಳುಕುಹಾಕಿಕೊಂಡಿರುವ ಕಡೆಗಳಲ್ಲೆಲ್ಲ ರಾಜಕೀಯ ಉದ್ದೇಶಗಳು ಅದರ ಪ್ರಾಚೀನ ಲಕ್ಷಣಗಳನ್ನು ಪರಿವರ್ತಿಸಲು ಪ್ರಯತ್ನ ನಡೆಸಿದವು. ದೇವತೆಯೋ ದೇವತೆಗಳೋ ಸರ್ಕಾರದೊಡನೆ ಸಮನ್ವಯಗೊಂಡು, ಸಮೃದ್ಧ ಬೆಳೆಯನ್ನಷ್ಟೇ ಅಲ್ಲದೆ ಯುದ್ಧದಲ್ಲಿ ಗೆಲವನ್ನೂ ತಂದುಕೊಡಬೇಕಾಗಿತ್ತು. ಶ್ರೀಮಂತ ಪುರೋಹಿತವರ್ಗವು ವಿಧಿಯನ್ನೂ ಮತಧರ್ಮಶಾಸ್ತ್ರವನ್ನೂ ವಿಸ್ತೃತಗೊಳಿಸಿ, ಚಕ್ರಾಧಿಪತ್ಯದ ವಿವಿಧ ವಿಭಾಗಗಳೊಂದಿಗೆ ದೇವತೆಗಳನ್ನು ಸಮೀಕರಿಸಿತು.

ಸರ್ಕಾರದೊಡನೆಯ ಸಂಬಂಧದಿಂದಾಗಿ ದೇವತೆಗಳು ನೀತಿಯೊಡನೆಯೂ ಸಮೀಕರಣಗೊಂಡರು. ಮತಧರ್ಮಶಾಸ್ತ್ರಕಾರರು ದೇವರಿಂದಲೇ ವಿಧಿಸಂಹಿತೆಗಳನ್ನು ಪಡೆದರು, ಹೀಗಾಗಿ ವಿಧಿಯನ್ನು ಮೀರುವುದು ಧರ್ಮಬಾಹಿರ ಕಾರ್ಯ ಎಂಬಂತಾಯಿತು. ಇನ್ನೂ ಉಳಿದುಬಂದಿರುವ ಪ್ರಾಚೀನ ಕಾನೂನು ವಿಧಿಗಳು ಬ್ಯಾಬಿಲೋನ್‌ನ ರಾಜ (ಕ್ರಿಪೂ ೨೦೬೭-೨೦೨೫) ಹಮ್ಮುರಾಬಿಯದು; ಮಾರ್ಡೂಕ್‌ನಿಂದ ಈ ವಿಧಿಸಂಹಿತೆಯನ್ನು ತನಗೆ ನೀಡಲಾಯಿತೆಂದು ರಾಜನೇ ದೃಢಪಡಿಸಿದ. ಮತಧರ್ಮ ಮತ್ತು ನೈತಿಕತೆಗಳ ನಡುವಣ ಸಂಬಂಧವು ಪ್ರಾಚೀನ ಕಾಲದುದ್ದಕ್ಕೂ ಹೆಚ್ಚು ಹೆಚ್ಚು ನಿಕಟವಾದವು.

ಬ್ಯಾಬಿಲೋನಿಯನ್ ಮತಧರ್ಮವು, ಈಜಿಪ್ಟ್‌ನದಕ್ಕೆ ಭಿನ್ನವಾಗಿ, ಬದುಕಿನ ನಂತರದ ಸುಖಕ್ಕಿಂತ ಹೆಚ್ಚಾಗಿ ಈ ಜಗತ್ತಿನಲ್ಲಿನ ಸಮೃದ್ಧಿಗಾಗಿ ಹಾತೊರೆಯಿತು. ಮಂತ್ರವಿದ್ಯೆ, ದೈವೀಕರಣ ಮತ್ತು ಜ್ಯೋತಿಷ್ಯಗಳು, ಬ್ಯಾಬಿಲೋನಿಯಕ್ಕೆ ಮಾತ್ರ ವಿಶಿಷ್ಟವಲ್ಲದಿದ್ದರೂ, ಬೇರೆಲ್ಲೆಡೆಗಿಂತಲೂ ಅಲ್ಲಿ ಹೆಚ್ಚು ಬೆಳವಣಿಗೆಯನ್ನು ಕಂಡುವು. ಮುಖ್ಯವಾಗಿ ಬ್ಯಾಬಿಲೋನ್ ಮೂಲಕ ಅವರು ನಂತರದ ಪ್ರಾಚೀನತೆಯನ್ನು ತಮ್ಮದಾಗಿಸಿಕೊಂಡರು. ವಿಜ್ಞಾನದ ಕೆಲವಂಶಗಳು ಬ್ಯಾಬಿಲೋನ್‌ನಿಂದ ಬಂದವು: ದಿನವನ್ನು ಇಪ್ಪತ್ತನಾಲ್ಕು ಗಂಟೆಗಳಾಗಿಯೂ ವೃತ್ತವೊಂದನ್ನು ೩೬೦°ಗಳಾಗಿಯೂ ವಿಭಾಗೀಕರಿಸಿದ್ದು, ಮತ್ತು ಗ್ರಹಣಗಳಲ್ಲಿನ ಆವರ್ತವನ್ನು ಗುರುತಿಸಿದ್ದು, ಇದರಿಂದಾಗಿ ಚಂದ್ರಗ್ರಹಣಗಳನ್ನು ಕರಾರುವಾಕ್ಕಾಗಿ ಹಾಗೂ ಸೂರ್ಯಗ್ರಹಣಗಳ

೪. ಡಯಾನಾ ಆರ್ಟೆಮಿಸ್‌ನ ಲ್ಯಾಟಿನ್ ಪರ್ಯಾಯ ಹೆಸರು. ಗ್ರೀಕ್ ಟೆಸ್ಟಮೆಂಟ್‌ನಲ್ಲಿ ಆರ್ಟೆಮಿಸ್ ಎಂದು ಉಕ್ತವಾಗಿರುವುದನ್ನೇ ನಮ್ಮ ಅನುವಾದಗಳು ಡಯಾನಾ ಎನ್ನುತ್ತವೆ.

ಸಂಭವನೀಯತೆಯ ಬಗ್ಗೆ ಮುನ್ನುಡಿಯಬಹುದಾಯಿತು. ಮುಂದೆ ನಾವು ನೋಡುವಂತೆ, ಬ್ಯಾಬಿಲೋನಿಯನ್ ಜ್ಞಾನವನ್ನು ಥೇಲ್ಸ್‌ನಿಂದ ಪಡೆಯಲಾಯಿತು.

ಈಜಿಪ್ಟ್ ಹಾಗೂ ಮೆಸೊಪೊಟೇಮಿಯಾಗಳ ನಾಗರಿಕತೆಯು ಕೃಷಿಯದಾಗಿತ್ತು, ಅದರ ಸುತ್ತಲಿನ ದೇಶಗಳದ್ದು, ಮೊದಲಿಗೆ, ಪಶುಪಾಲನೆಯದಾಗಿತ್ತು. ವಾಣಿಜ್ಯದ ಬೆಳವಣಿಗೆಯಿಂದ ಹೊಸ ಅಂಶವೊಂದು ಸೇರಿಕೊಂಡಿತು, ಮೊದಲಿಗೆ ಅದು ಪೂರ್ತಿ ಯುದ್ಧಸಂಬಂಧಿಯಾಗಿತ್ತು. ಕ್ರಿಪೂ ೧೦೦೦ದವರೆಗೆ ಆಯುಧಗಳನ್ನು ಕಂಚಿನಿಂದ ತಯಾರಿಸುತ್ತಿದ್ದರು, ತಮ್ಮ ಪ್ರದೇಶಗಳಲ್ಲಿ ಆವಶ್ಯಕವಾದ ಲೋಹಗಳನ್ನು ಹೊಂದಿರದ ದೇಶಗಳು ಅವುಗಳನ್ನು ವ್ಯಾಪಾರದ ಮೂಲಕವಾಗಿಯೋ ದರೋಡೆಯ ಮೂಲಕವಾಗಿಯೋ ಪಡೆಯಬೇಕಾಗಿತ್ತು. ದರೋಡೆಯು ತಾತ್ಕಾಲಿಕವಾಗಿದ್ದು, ಎಲ್ಲಿ ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿತಿಗಳು ಸರಿಸುಮಾರು ಸ್ಥಿರವಾಗಿದ್ದುವೋ ಅಲ್ಲೆಲ್ಲ ವಾಣಿಜ್ಯವು ಹೆಚ್ಚು ಲಾಭದಾಯಕವಾಗಿ ಕಂಡಿತು. ವಾಣಿಜ್ಯದಲ್ಲಿ ಕ್ರೀಟ್ ದ್ವೀಪವು ಮುಂಚೂಣಿಯಲ್ಲಿದ್ದಂತೆ ಕಾಣುತ್ತದೆ. ಸುಮಾರು ಹನ್ನೊಂದು ಶತಮಾನಗಳ ಕಾಲ, ಅಂದರೆ ಸುಮಾರು ಕ್ರಿಪೂ ೨೫೦೦ ರಿಂದ ಕ್ರಿಪೂ ೧೪೦೦ ರವರೆಗೆ, ಕಲೆಯ ವಿಷಯದಲ್ಲಿ ಮುಂದುವರಿದಿದ್ದ ನಾಗರಿಕತೆಯು, ಮಿನೋಅನ್ ಎಂಬ ಹೆಸರಿನಲ್ಲಿ ಕ್ರೀಟ್‌ನಲ್ಲಿ ಪ್ರಚಲಿತವಾಗಿತ್ತು. ಅಳಿದುಳಿದಿರುವ ಕ್ರೀಟನ್ ಕಲೆಯು ಉಲ್ಲಾಸ ಮತ್ತು ವೈಭವರಾಹಿತ್ಯಗಳ ಸುಳಿವನ್ನು ನೀಡುತ್ತವೆ; ಇದು ಈಜಿಪ್ಟ್‌ನ ದೇವಾಲಯಗಳ ಭಯಂಕರ ಮ್ಲಾನತೆಗಿಂತ ತುಂಬ ಭಿನ್ನವಾದುದು.

ಈ ಪ್ರಮುಖ ನಾಗರಿಕತೆಯ ಬಗ್ಗೆ, ಸರ್ ಆರ್ಥರ್ ಎವಾನ್ಸ್ ಮತ್ತಿತರರ ಉತ್ಖನನಗಳವರೆಗೂ, ತಿಳಿದಿದ್ದುದು ತೀರ ಅಲ್ಪ. ಈಜಿಪ್ಟ್‌ನೊಡನೆ (ಹೈಸ್ಕೋಸ್‌ನ ಕಾಲವನ್ನು ಹೊರತುಪಡಿಸಿದಂತೆ) ನಿಕಟ ಸಂಬಂಧ ಹೊಂದಿದ್ದ ಅದು ಕಡಲತಡಿಯ ನಾಗರಿಕತೆಯಾಗಿತ್ತು. ಈಜಿಪ್ಟ್ ಮತ್ತು ಕ್ರೀಟ್‌ಗಳ ನಡುವಣ ಸಾಕಷ್ಟು ಪ್ರಮಾಣದ ವ್ಯಾಪಾರವು ಕ್ರೀಟ್‌ನ ನಾವಿಕರಿಂದ ನಡೆಯುತ್ತಿದ್ದುದು ಈಜಿಪ್ಟ್‌ನ ಚಿತ್ರಗಳಿಂದ ವಿದಿತವಾಗುತ್ತದೆ; ಈ ವ್ಯಾಪಾರವು ಕ್ರಿಪೂ ೧೫೦೦ ರಲ್ಲಿ ತನ್ನ ಉತ್ತುಂಗವನ್ನು ತಲುಪಿತು. ಕ್ರೀಟ್‌ನ ಮತಧರ್ಮವು ಸಿರಿಯ ಮತ್ತು ಏಷ್ಯಾ ಮೈನರ್‌ಗಳ ಮತಧರ್ಮಗಳೊಡನೆ ಸಂಬಂಧವನ್ನು ಹೊಂದಿದ್ದಂತೆ ತೋರುತ್ತದೆ, ಆದರೆ ಕಲೆಯ ವಿಷಯದಲ್ಲಿ ಅದು ಈಜಿಪ್ಟ್‌ನೊಂದಿಗೆ ಹೆಚ್ಚು ನಿಕಟತೆಯನ್ನು ಹೊಂದಿತ್ತು; ಮತ್ತು ಕ್ರೀಟ್‌ನ ಕಲೆಯು ತೀರ ಸ್ವತಂತ್ರದ್ದಾಗಿ ಆಶ್ಚರ್ಯಜನಕವೆನಿಸುವಷ್ಟು ಜೀವಂತಿಕೆಯಿಂದ ಕೂಡಿತ್ತು. ಕ್ರೀಟ್‌ನ ನಾಗರಿಕತೆಯ ಕೇಂದ್ರವೆಂದರೆ ನಾಸಸ್‌ನಲ್ಲಿನ 'ಮಿನೋಸ್ ಅರಮನೆ'; ಇದರ ನೆನಪು ಪ್ರಾಚೀನ ಈಜಿಪ್ಟ್ ಸಂಪ್ರದಾಯಗಳಲ್ಲಿ ಮಾರ್ದನಿಗೊಳ್ಳುತ್ತದೆ. ಕ್ರೀಟ್‌ನ ಅರಮನೆಗಳು ಅದ್ಭುತ ರಚನೆಗಳು, ಆದರೆ ಅವು ಕ್ರಿಪೂ ಹದಿನಾಲ್ಕನೆಯ ಶತಮಾನದ ಕೊನೆಯಲ್ಲಿ, ಪ್ರಾಯಶಃ ಗ್ರೀಸ್‌ನ

ಆಕ್ರಮಣಕಾರರಿಂದ, ನಾಶವಾದವು. ಕ್ರೀಟ್‌ನ ಇತಿಹಾಸದ ಕಾಲಾನುಕ್ರಮವನ್ನು ಕ್ರೀಟ್‌ನಲ್ಲಿ ಸಿಕ್ಕಿದ ಈಜಿಪ್ಟ್‌ನ ವಸ್ತುಗಳ ಹಾಗೂ ಈಜಿಪ್ಟ್‌ನಲ್ಲಿ ಸಿಕ್ಕಿದ ಕ್ರೀಟ್‌ನ ವಸ್ತುಗಳ ಸಹಾಯದಿಂದ ಪುನಾರಚಿಸಲಾಗಿದೆ. ಈ ಬಗೆಗಿನ ನಮ್ಮ ತಿಳಿವಳಿಕೆಯು ಸಂಪೂರ್ಣವಾಗಿ ಪ್ರಾಕ್ತನ ಪುರಾವೆಗಳನ್ನು ಆಧರಿಸಿದ್ದು.

ಕ್ರೀಟನ್ನರು ಒಂದೋ ಹಲವೋ ದೇವತೆಗಳನ್ನು ಆರಾಧಿಸುತ್ತಿದ್ದವರು. ಬಹುತೇಕ ಅನುಮಾನಾತೀತವಾದ ದೇವತೆಯೆಂದರೆ 'ಪ್ರಾಣಿಗಳ ಒಡತಿ', ಅವಳೊಬ್ಬ ಬೇಟೆಗಾತಿ, ಮತ್ತು ಪ್ರಾಯಶಃ ಪ್ರಾಚೀನ ಆರ್ಟೆಮಿಸ್‌ನ ಮೂಲ.[೫] ಸಹಜವಾಗಿಯೇ ಅವಳು ತಾಯಿಯೂ ಆಗಿದ್ದಳು; 'ಪ್ರಾಣಿಗಳ ಒಡೆಯ'ನನ್ನು ಬಿಟ್ಟರೆ ಒಂದೇ ಗಂಡು ದೈವವೆಂದರೆ ಅವಳ ಚಿಕ್ಕ ಮಗ. ಅವರು ಸಾವಿನನಂತರದ ಅಸ್ತಿತ್ವದಲ್ಲಿ ಶ್ರದ್ಧೆಯಿಟ್ಟಿದ್ದ ಕೆಲವು ಕುರುಹುಗಳಿವೆ, ಅದರ ಪ್ರಕಾರ, ಈಜಿಪ್ಟ್‌ನ ಶ್ರದ್ಧೆಯಂತೆಯೇ, ಇಹಲೋಕದ ಬದುಕಿಗೆ ಪುರಸ್ಕಾರವೋ ಶಾಸ್ತಿಯೋ ದೊರಕುತ್ತಿತ್ತು. ಆದರೆ ಒಟ್ಟಾರೆ ಕ್ರೀಟನ್ನರು, ಅವರ ಕಲೆಯ ಆಧಾರದ ಮೇಲೆ ಹೇಳುವುದಾದರೆ, ನಿರಾಶೆಯ ಮೂಢಶ್ರದ್ಧೆಗಳಿಂದ ಮಸುಕಾಗದ ಲವಲವಿಕೆಯಿಂದ ಕೂಡಿದವರಾಗಿದ್ದಂತೆ ತೋರುತ್ತದೆ. ಅವರಿಗೆ ಗೂಳಿಕಾಳಗವು ಬಹು ಪ್ರಿಯವಾಗಿತ್ತು, ಅವುಗಳಲ್ಲಿ ಹೆಣ್ಣುಗಂಡು ಅಶ್ವಾರೋಹಿ ಗೂಳಿಮಲ್ಲರು ಪಾಲ್ಗೊಂಡು ಅದ್ಭುತ ದೊಂಬವಿದ್ಯೆಯನ್ನು ಪ್ರದರ್ಶಿಸುತ್ತಿದ್ದರು. ಗೂಳಿಕಾಳಗವು ಮತಧಾರ್ಮಿಕ ಆಚರಣೆಯಾಗಿದ್ದಂತೆಯೂ ಅದರಲ್ಲಿ ಭಾಗಿಗಳಾಗುತ್ತಿದ್ದವರು ಉನ್ನತ ವರ್ಗದವರಾಗಿದ್ದಂತೆಯೂ ತೋರುವುದೆಂದು ಸರ್ ಆರ್ಥರ್ ಏವಾನ್ಸ್ ಅಭಿಪ್ರಾಯಪಡುತ್ತಾರೆ: ಆದರೆ ಇದು ವ್ಯಾಪಕ ಒಪ್ಪಿಗೆಯ ಅಭಿಪ್ರಾಯವಾಗಿಲ್ಲ. ಅಳಿದುಳಿದಿರುವ ಚಿತ್ರಗಳು ಅತೀವ ಚಲನಶೀಲತೆಯಿಂದಲೂ ವಾಸ್ತವತೆಯಿಂದಲೂ ಕೂಡಿವೆ.

ಕ್ರೀಟನ್ನರದು ಉದ್ದಕ್ಕೆ ಬರೆಯುವ ಲಿಪಿ, ಆದರೆ ಅದನ್ನಿನ್ನೂ ಓದಲಾಗಿಲ್ಲ. ತಮ್ಮ ದೇಶದಲ್ಲವರು ಶಾಂತಿಯಿಂದ ಕೂಡಿದ್ದರು, ಅವರ ನಗರಗಳ ಸುತ್ತ ಕೋಟೆ ಗೋಡೆಗಳಿರಲಿಲ್ಲ; ಕಡಲ ಸಾಮರ್ಥ್ಯ ಅವರ ರಕ್ಷಣೆಗಿದ್ದುದರಲ್ಲಿ ಅನುಮಾನವಿಲ್ಲ.

ಮನೋವನ್ ಸಂಸ್ಕೃತಿಯು ನಾಶವಾಗುವ ಮುನ್ನ, ಕ್ರಿಪೂ ೧೬೦೦ ರಲ್ಲಿ ಅದು ಗ್ರೀಸ್‌ನ ಮುಖ್ಯ ವಲಯಕ್ಕೆ ಹಬ್ಬಿತ್ತು, ಅಲ್ಲಿ ಅದು ಕ್ರಮೇಣ ಆದ ಪರಿಷ್ಕರಣೆಗೊಳಗಾಗಿ ಕ್ರಿಪೂ ೯೦೦ ರವೆಗೂ ಪ್ರಚಲಿತವಾಗಿತ್ತು. ಮುಖ್ಯ ವಲಯದ ನಾಗರಿಕತೆಯನ್ನು ಮೈಸೀನಿಯನ್ ಎಂದು ಕರೆಯುತ್ತಾರೆ. ಅದು ನಮಗೆ ತಿಳಿಯುವುದು ರಾಜರ ಗೋರಿಗಳು ಮತ್ತು ಬೆಟ್ಟದ ತುದಿಗಳಲ್ಲಿರುವ ಕೋಟೆಗಳ

೫. ಅವಳಿಗೊಬ್ಬ ಗಂಡು ಅವಳಿಯೋ ಸಂಗಾತಿಯೋ ಇದ್ದ, ಆದರೆ ಅವನಿಗೆ ಅಷ್ಟೊಂದು ಪ್ರಾಮುಖ್ಯವಿಲ್ಲ. ಆನಂತರದ ದಿನಗಳಲ್ಲಿ ಆರ್ಟೆಮಿಸ್ ಅನ್ನು ಏಷ್ಯಾ ಮೈನರ್‌ನ 'ಮಹಾ ಮಾತೆ' ಎಂದು ಗುರುತಿಸಲಾಯಿತು.

ಮೂಲಕ. ಗ್ರೀಸ್‌ನಲ್ಲಿ ಮೊದಲಿದ್ದುದಕ್ಕಿಂತ ಹೆಚ್ಚಿನ ಯುದ್ಧಭೀತಿಯಿದ್ದುದನ್ನು ಈ ಕೋಟೆಗಳು ಸಾರುತ್ತವೆ. ಅರಮನೆಗಳಲ್ಲಿನ ಹೆಚ್ಚು ಪ್ರಾಚೀನವಾದ ಕಲಾಕೃತಿಗಳು ವಾಸ್ತವದಲ್ಲಿ ಕ್ರೇಟನ್ ಕಲಾಕೌಶಲ ಅಥವಾ ಕ್ರೇಟ್‌ಗೆ ನಿಕಟ ಸಂಬಂಧವಿದ್ದುದನ್ನು ತೋರಿಸುತ್ತದೆ. ಮೈಸೀನಿಯನ್ ನಾಗರಿಕತೆಯು ದಂತಕತೆಗಳ ಮಸುಕಿನಲ್ಲಿ ನೋಡಿದಾಗ ಹೋಮರ್ ವರ್ಣಿಸಿದುದೇ ಆಗಿರುವುದು ಗೋಚರಿಸುತ್ತದೆ.

ಮೈಸೀನಿಯನ್ನರ ಬಗೆಗಿನ ವಿವರಗಳು ತೀರ ಅಸ್ಪಷ್ಟವಾಗಿವೆ. ಅವರ ನಾಗರಿಕತೆಗೆ ಕಾರಣ ಕ್ರೇಟನ್ನರು ಅವರನ್ನು ಗೆದ್ದುದೇ ಅಥವಾ ಅದಕ್ಕೂ ಮೊದಲಿನಿಂದ ಇದ್ದ ಜನಾಂಗವೇ? ಈ ಪ್ರಶ್ನೆಗಳಿಗೆ ಯಾವುದೇ ಖಚಿತ ಉತ್ತರ ಸಾಧ್ಯವಿಲ್ಲ, ಆದರೆ ಅವರನ್ನು ಗೆದ್ದವರು ಗ್ರೀಕ್ ಭಾಷಿಕರು ಎಂಬುದನ್ನು ಹಾಗೂ ಕನಿಷ್ಠ ಪಕ್ಷ ಶ್ರೀಮಂತವರ್ಗವು ತಮ್ಮೊಡನೆ ಗ್ರೀಕ್ ಭಾಷೆಯನ್ನು ತಂದ ಉತ್ತರದ ಹೊಂಗೂದಲ ಅತಿಕ್ರಮಣಕಾರರಾಗಿದ್ದರೆಂಬುದನ್ನು ತೋರಿಸಲು ಸಾಕಷ್ಟು ಪುರಾವೆಗಳು ದೊರೆಯುತ್ತವೆ.[೬] ಗ್ರೀಕರು ಗ್ರೀಸ್‌ಗೆ ಮೂರು ತಂಡಗಳಲ್ಲಿ ಒಂದಾದ ಮೇಲೊಂದರಂತೆ ಬಂದರು, ಮೊದಲು ಅಯೋನಿಯನ್ನರು, ಆನಂತರ ಅಖಿಯನ್ನರು, ಮತ್ತು ಕೊನೆಯದಾಗಿ ಡೋರಿಯನ್ನರು. ಗೆದ್ದವರಾದರೂ ಅಯೋನಿಯನ್ನರು ಕ್ರೇಟನ್ ನಾಗರಿಕತೆಯನ್ನು, ಮುಂದೆ ರೋಮನ್ನರು ಗ್ರೀಸ್‌ನ ನಾಗರಿಕತೆಯನ್ನು ಅಳವಡಿಸಿಕೊಂಡಂತೆಯೇ, ಸಂಪೂರ್ಣವಾಗಿ ಅಳವಡಿಸಿಕೊಂಡಂತೆ ಕಾಣುತ್ತದೆ. ಆದರೆ ಅಯೋನಿಯನ್ನರು ತಮ್ಮ ಮುಂದಿನ ತಂಡ ಅಖಿಯನ್ನರಿಂದ ಕ್ಷೋಭೆಗೊಂಡದ್ದಲ್ಲದೆ ಅದಕ್ಕೂ ಹೆಚ್ಚಿನದಾಗಿ ಹೊರದೂಡಲ್ಪಟ್ಟರು. ಬೊಗಾಸ್-ಕೀಯುಇಯಲ್ಲಿ ದೊರೆತ ಹಿಟೈಟ್ ಫಲಕಗಳಿಂದ ಅಖಿಯನ್ನರು ಕ್ರಿಪೂ ಹದಿನಾಲ್ಕನೆಯ ಶತಮಾನದಲ್ಲಿ ಸುವ್ಯವಸ್ಥಿತವಾದ ಒಂದು ವಿಶಾಲ ಸಾಮ್ರಾಜ್ಯವನ್ನು ಹೊಂದಿದ್ದುದಾಗಿ ತಿಳಿಯುತ್ತದೆ. ಅಯೋನಿಯನ್ನರು ಮತ್ತು ಅಖಿಯನ್ನರ ಯುದ್ಧದಿಂದಾಗಿ ದುರ್ಬಲವಾದ ಮೈಸೀನಿಯನ್ ನಾಗರಿಕತೆಯು ಕೊನೆಯ ಗ್ರೀಕ್ ಆಕ್ರಮಣಕಾರರಾದ ಡೋರಿಯನ್ನರಿಂದ ನಾಶವಾಯಿತೆಂದೇ ಹೇಳಬೇಕು. ಹಿಂದಿನ ಆಕ್ರಮಣಕಾರರು ಹೆಚ್ಚಿನ ಮಟ್ಟಿಗೆ ಮಿನೋವನ್ ಮತಧರ್ಮವನ್ನು ಅನುಸರಿಸಿದರೂ, ಡೋರಿಯನ್ನರು ತಮ್ಮ ಪೂರ್ವಿಕರ ಮೂಲ ಇಂಡೋ-ಯೂರೋಪಿಯನ್ ಮತಧರ್ಮವನ್ನು ಉಳಿಸಿಕೊಂಡರು. ಆದರೂ ಮೈಸೀನಿಯನ್ನರ ಕಾಲದ ಮತಧರ್ಮವು ಹೆಚ್ಚಿನದಾಗಿ ಕೆಳವರ್ಗದವರಲ್ಲಿ ಉಸಿರಾಡುತ್ತ ಬಂದು, ಪ್ರಾಚೀನ ಗ್ರೀಸ್‌ನ ಮತಧರ್ಮವು

---

೬ ಮಾರ್ಟಿನ್‌ಪಿ. ನಿಲ್‌ಸನ್ ಅವರ 'ದ ಮಿನೋಮ್-ಮೈಸೆಮೋನ್ ರಿಲಿಜನ್ ಅಂಡ್ ಇಟ್ಸ್ ಸರ್ವೈವಲ್ ಇನ್ ಗ್ರೀಕ್ ರಿಲಿಜನ್' ಅನ್ನು ನೋಡಿ: ಪು. ೧೧ ಅಡಿಟಿಪ್ಪಣಿ.

ಎರಡರ ಬೆಸುಗೆಯಾಗಿತ್ತು. ಹಾಗೆ ನೋಡಿದರೆ, ಕೆಲವು ಪ್ರಾಚೀನ ದೇವತೆಗಳು ಮೈಸೀನಿಯನ್ ಮೂಲದವರಾಗಿದ್ದರು.

ಈ ವಿವರಣೆಗಳು ಸಂಭವನೀಯವೆಂಬಂತೆ ತೋರಿದರೂ, ಮೈಸೀನಿಯನ್ನರು ಗ್ರೀಕರೇ ಅಲ್ಲವೇ ಎಂಬುದು ನಮಗೆ ತಿಳಿಯದು ಎಂಬುದನ್ನು ನೆನಪಿನಲ್ಲಿರಿಸಿಕೊಳ್ಳಬೇಕು. ನಮಗೆ ತಿಳಿದಿರುವುದೆಂದರೆ, ಅವರ ನಾಗರಿಕತೆಯು ಕಂಚಿನಯುಗವು ಮುಗಿದು ಕಬ್ಬಿಣಯುಗವು ಪ್ರಾರಂಭವಾಗುವ ಹೊತ್ತಿಗೆ ಕ್ಷೀಣಿಸಿ ಕೆಲವು ಕಾಲದ ಮಟ್ಟಿಗೆ ಕಡಲ ಯಾಜಮಾನ್ಯವು ಫಿನೀಷಿಯನ್ನರಿಗೆ ದಾಟಿಹೋಯಿತು ಎಂಬುದಷ್ಟೇ.

ಮೈಸೀನಿಯನ್ ಯುಗದ ಉತ್ತರಭಾಗ ಮತ್ತದರ ಕೊನೆಯ ನಂತರದ ಕಾಲಗಳಲ್ಲಿ ಕೆಲವು ಆಕ್ರಮಣಕಾರರು ನೆಲೆನಿಂತು ಬೇಸಾಯಗಾರರಾದರು, ಮತ್ತೆ ಕೆಲವರು ಮೊದಲು ದ್ವೀಪಗಳು ಮತ್ತು ಏಷ್ಯಾ ಮೈನರ್‌ವರೆಗೆ, ಆನಂತರ ಸಿಸಿಲಿ ಮತ್ತು ದಕ್ಷಿಣ ಇಟಲಿಯವರೆಗೆ ಮುಂದುವರಿದು ಅಲ್ಲಿ ನಗರಗಳನ್ನು ನಿರ್ಮಿಸಿ ಜೀವನೋಪಾಯಕ್ಕಾಗಿ ಕಡಲ ವ್ಯಾಪಾರವನ್ನು ಆಶ್ರಯಿಸಿದರು. ಈ ಕಡಲತೀರದ ನಗರಗಳಲ್ಲೇ ಗ್ರೀಕರು ನಾಗರಿಕತೆಗೆ ಹೊಸ ಗುಣಾತ್ಮಕ ಕಾಣಿಕೆಗಳನ್ನು ಕೊಟ್ಟರು; ಅಥೆನ್ಸ್‌ನ ಪ್ರಾಧಾನ್ಯವು ಆನಂತರದ್ದು, ಮತ್ತು ಆಗಲೂ ಹಾಗಾದದ್ದು ನೌಕಾ ಸಾಮರ್ಥ್ಯದ ಮೂಲಕವೇ.

ಗ್ರೀಕ್ ಪ್ರಧಾನ ವಲಯವು ಪರ್ವತಮಯವಾಗಿದ್ದು ಬಹುತೇಕ ಬರಡಾದುದು. ಆದರೆ ಅಲ್ಲಿಯೂ ಕೆಲವು ಫಲವತ್ತಾದ ಕಣಿವೆಗಳಿವೆ, ಅವು ಕಡಲಿಗೆ ಸಮೀಪವಿದ್ದರೂ ಸಂಚಾರ ಸುಲಭ ಭೂಪ್ರದೇಶಗಳಿಂದ ಬೇರ್ಪಟ್ಟು ಪರಸ್ಪರ ಸಂಪರ್ಕಕ್ಕೆ ದೂರವಾಗಿದ್ದವು. ಬೇಸಾಯದಿಂದ ಜೀವಿಸುತ್ತ, ಕಡಲಿಗೆ ಹತ್ತಿರವಾದ ನಗರಗಳ ಸುತ್ತಲಿದ್ದ ಕಾರಣ ಈ ಕಣಿವೆಗಳಲ್ಲಿ ಪ್ರತ್ಯೇಕ ಸಮುದಾಯಗಳು ಬೆಳೆದದ್ದು ಕಡಿಮೆ. ಇಂತಹ ಪರಿಸ್ಥಿತಿಗಳಲ್ಲಿ, ಜನಸಂಖ್ಯೆಯು ಬೆಳೆದು ಆಂತರಿಕ ಸಂಪನ್ಮೂಲಗಳು ಸಾಲದಾದಾಗ, ನೆಲದ ಮೇಲೆ ಬದುಕು ಸಾಗಿಸಲು ಕಷ್ಟವೆನಿಸಿ ಜನರು ನೌಕಾಯಾನಕ್ಕೆ ತೊಡಗುವುದು ಸಹಜ. ಮುಖ್ಯ ವಲಯದ ನಗರಗಳಲ್ಲಿ, ಅದರಲ್ಲಿಯೂ ತಮ್ಮ ಸ್ಥಳಗಳಿಗಿಂತಲೂ ಹೆಚ್ಚು ಸುಲಭವಾಗಿ ಜೀವನೋಪಾಯವನ್ನು ಕಂಡುಕೊಳ್ಳಬಹುದಾದ ಕಡೆ, ವಸಾಹತುಗಳೇರ್ಪಟ್ಟುವು. ಹೀಗೆ ಅತ್ಯಂತ ಪ್ರಾಚೀನ ಐತಿಹಾಸಿಕ ಯುಗದಲ್ಲಿ ಏಷ್ಯಾ ಮೈನರ್, ಸಿಸಿಲಿ ಮತ್ತು ಇಟಲಿಗಳಲ್ಲಿನ ಗ್ರೀಕರು ಮುಖ್ಯ ಪ್ರದೇಶದ ಗ್ರೀಕ್ ಜನರಿಗಿಂತ ಹೆಚ್ಚು ಶ್ರೀಮಂತರಾಗಿದ್ದರು.

ಗ್ರೀಸ್‌ನ ವಿವಿಧ ಭಾಗಗಳಲ್ಲಿನ ಸಾಮಾಜಿಕ ವ್ಯವಸ್ಥೆಯು ವಿಭಿನ್ನವಾಗಿದ್ದವು. ಸ್ಪಾರ್ಟಾದಲ್ಲಿ, ದಮನಿತ ಜನಾಂಗಗಳ ಗುಲಾಮರ ದುಡಿಮೆಯ ಮೇಲೆ ಜೀವಿಸುತ್ತಿದ್ದ ಸಣ್ಣ ಶ್ರೀಮಂತವರ್ಗವಿತ್ತು; ಬಡತನದ ಬೇಸಾಯಪ್ರದೇಶಗಳಲ್ಲಿ, ಜನಸಂಖ್ಯೆಯ

ಬಹುಪಾಲು ರೈತರು, ತಮ್ಮ ಕುಟುಂಬದ ಸದಸ್ಯರೊಡನೆ ತಮ್ಮ ಹೊಲದಲ್ಲಿ ದುಡಿಯುತ್ತಿದ್ದವರು. ಆದರೆ ವ್ಯಾಪಾರ ಉದ್ದಿಮೆಗಳು ಮುಂದುವರಿದ ಕಡೆಗಳಲ್ಲಿ ಗುಲಾಮರನ್ನು – ಗಂಡಸರನ್ನು ಗಣಿಗಳಲ್ಲಿ, ಹೆಂಗಸರನ್ನು ಬಟ್ಟೆ ಗಿರಣಿಗಳಲ್ಲಿ – ಸೇವೆಗಿರಿಸಿಕೊಂಡ ಬಿಡಿ ವ್ಯಕ್ತಿಗಳು ಶ್ರೀಮಂತರಾದರು. ಅಯೋನಿಯದಲ್ಲಿನ ಈ ಗುಲಾಮರು ಸುತ್ತಮುತ್ತಲಿನ ಕಾಡುಜನರು, ಸಾಮಾನ್ಯವಾಗಿ ಯುದ್ಧಗಳಲ್ಲಿ ಮೂಲತಃ ಸೆರೆಸಿಕ್ಕಿದ್ದವರು. ಶ್ರೀಮಂತಿಕೆ ಹೆಚ್ಚಾದಷ್ಟೂ ಗೌರವಸ್ಥ ಹೆಂಗಸರನ್ನು ಪ್ರತ್ಯೇಕವಾಗಿಡುವುದು ಹೆಚ್ಚಾಯಿತು; ಮುಂದೆ, ಸ್ಪಾರ್ಟಾ ಮತ್ತು ಲೆಸ್‌ಬಾಸ್‌ಗಳ ಹೊರತಾಗಿ, ಗ್ರೀಕ್ ನಾಗರಿಕ ಬದುಕಿನ ಬಹುತೇಕ ವಲಯಗಳಲ್ಲಿ ಇವರ ಪಾತ್ರ ಗೌಣವಾಯಿತು.

ಸಾಮಾನ್ಯವಾಗಿ ಆದುದೆಂದರೆ, ಮೊದಲು ರಾಜಪ್ರಭುತ್ವದಿಂದ ಶ್ರೀಮಂತಪ್ರಭುತ್ವಕ್ಕೆ, ಆನಂತರ ನಿರಂಕುಶ ಮತ್ತು ಪ್ರಜಾಪ್ರಭುತ್ವಗಳ ಪರ್ಯಾಯದೆಡೆಗೆ ಬೆಳವಣಿಗೆ. ರಾಜರುಗಳು ಈಜಿಪ್ಟ್ ಮತ್ತು ಬ್ಯಾಬಿಲೋನಿಯಗಳಂತೆ ಆತ್ಯಂತಿಕರೇನಾಗಿರಲಿಲ್ಲ; ಅವರಿಗೆ ಹಿರಿಯರ ಪರಿಷತ್ತು ಸಲಹೆ ನೀಡುತ್ತಿತ್ತು, ಹೀಗಾಗಿ ಅವರು ನಿರ್ಭಯವಾಗಿ ಸಂಪ್ರದಾಯಗಳನ್ನು ಮೀರಲಾಗುತ್ತಿರಲಿಲ್ಲ. 'ನಿರಂಕುಶಾಧಿಕಾರ' ಎಂದರೆ ಕೆಟ್ಟ ಸರ್ಕಾರ ಎಂದೇನೂ ಅರ್ಥವಲ್ಲ, ವಂಶಪರಂಪರೆಯ ಅಧಿಕಾರವನ್ನು ಹೊಂದಿರದ ಒಬ್ಬ ವ್ಯಕ್ತಿಯ ಆಡಳಿತ ಎಂದಷ್ಟೇ ಅರ್ಥ. 'ಪ್ರಜಾಪ್ರಭುತ್ವ' ಎಂದರೆ ಎಲ್ಲ ಪ್ರಜೆಗಳ ಸರ್ಕಾರ ಎಂದರ್ಥ, ಆದರೆ ಅವರಲ್ಲಿ ಗುಲಾಮರೂ ಹೆಂಗಸರೂ ಸೇರುತ್ತಿರಲಿಲ್ಲ. ಮೊದಮೊದಲ ನಿರಂಕುಶಾಧಿಕಾರಿಗಳು, ತಮ್ಮ ತಮ್ಮ ಧನಿಕಪ್ರಭುತ್ವಗಳಲ್ಲಿ ಅತ್ಯಂತ ಶ್ರೀಮಂತರಾದವರು, ಮೆಡಿಸ್ಸೆಯಲ್ಲಿಯಂತೆ, ಅಧಿಕಾರವನ್ನು ಪಡೆಯುತ್ತಿದ್ದರು. ಹಲವೊಮ್ಮೆ ಅವರ ಶ್ರೀಮಂತಿಕೆಯ ಮೂಲ ಚಿನ್ನ ಮತ್ತು ಬೆಳ್ಳಿಯ ಗಣಿಗಳು, ಅಯೋನಿಯದ ಪಕ್ಕದಲ್ಲಿದ್ದ ಲಿಡಿಯ ಚಕ್ರಾಧಿಪತ್ಯದಿಂದ ಹೊಸತಾಗಿ ಬಂದ ನಾಣ್ಯಪದ್ಧತಿಯಿಂದ ಶ್ರೀಮಂತಿಕೆ ಹೆಚ್ಚಾಯಿತು.[೭] ನಾಣ್ಯಪದ್ಧತಿಯನ್ನು ಕ್ರಿಪೂ ೭೦೦ ಕ್ಕೆ ಸ್ವಲ್ಪ ಮುಂಚೆ ಸ್ಥಾಪಿಸಲಾದಂತೆ ತೋರುತ್ತದೆ.

ವ್ಯಾಪಾರವೋ ಕಡಲ್ಗಳ್ಳತನವೋ – ಆರಂಭದಲ್ಲಿ ಇವೆರಡಕ್ಕೂ ಹೆಚ್ಚೇನೂ ವ್ಯತ್ಯಾಸವಿರಲಿಲ್ಲ – ಅಂತೂ ಗ್ರೀಕರ ಪಾಲಿಗೆ ಸಂದ ಪ್ರಮುಖ ಫಲಿತವೆಂದರೆ ಬರಹ. ಈಜಿಪ್ಟ್ ಮತ್ತು ಬ್ಯಾಬಿಲೋನಿಯಗಳಲ್ಲಿ ಹಾಗೂ ಗ್ರೀಕ್‌ನ ಒಂದು ಪ್ರಭೇದವೆಂದು ಪರಿಗಣಿತವಾದ ಮಿನೋವನ್ ಕ್ರೀಟನ್ನರಲ್ಲಿ ಸಾವಿರಾರು ವರ್ಷಗಳಿಂದ ಬರವಣಿಗೆಯು ರೂಢಿಯಲ್ಲಿದ್ದರೂ, ಗ್ರೀಕರು ವರ್ಣಮಾಲೆಯ

---

೭. ಪಿ. ಎನ್. ಉರೆ ಅವರ 'ದ ಆರಿಜಿನ್ ಆಫ್ ಟಿರನಿ' ಗ್ರಂಥವನ್ನು ನೋಡಿ.

ಬರವಣಿಗೆಯನ್ನು ಯಾವಾಗ ಆರಂಭಿಸಿದರು ಎಂಬುದು ಅನಿಶ್ಚಿತವಾಗಿದೆ. ಅವರು ಈ ಕಲೆಯನ್ನು ಕಲಿತದ್ದು, ಸಿರಿಯದ ಇನ್ನಿತರ ಜನಾಂಗಗಳಂತೆ ಈಜಿಪ್ಟ್ ಮತ್ತು ಬ್ಯಾಬಿಲೋನಿಯಗಳ ಪ್ರಭಾವಕ್ಕೆ ಒಳಗಾಗಿದ್ದ ಫಿನೀಷಿಯನ್ನರಿಂದ; ಅಯೋನಿಯ, ಇಟಲಿ ಮತ್ತು ಸಿಸಿಲಿಗಳಲ್ಲಿ ಗ್ರೀಕ್ ನಗರಗಳು ತಲೆಯಿತ್ತುವ ಮುಂಚೆಯೇ ಕಡಲ ವ್ಯಾಪಾರದಲ್ಲಿ ಅವರು ನಿಷ್ಣಾತರಾಗಿದ್ದವರು. ಹದಿನಾಲ್ಕನೆಯ ಶತಮಾನದಲ್ಲಿ (ಈಜಿಪ್ಟ್‌ನ ಸಂಪ್ರದಾಯ ವಿರೋಧಿ ದೊರೆ) ಇಖ್ನಾಟನ್‌ವರೆಗೆ, ಸಿರಿಯನ್ನರು ಇನ್ನೂ ಬಳಸುತ್ತಿದ್ದ ಬರವಣಿಗೆಯೆಂದರೆ ಬ್ಯಾಬಿಲೋನಿಯದ ಬೆಣೆಲಿಪಿಯೇ ಆಗಿತ್ತು; ಆದರೆ ಟೈರ್‌ನ ಹೈರಮ್ (ಕ್ರಿಪೂ ೯೬೯–೯೩೬) ಫಿನೀಷಿಯನ್ ವರ್ಣಮಾಲೆಯನ್ನು ಬಳಸಿದ, ಅದು ಈಜಿಪ್ಟ್‌ನ ಲಿಪಿಯಿಂದ ಮೂಡಿಬಂತು. ಈಜಿಪ್ಷಿಯನ್ನರು ಮೊದಲು ಶುದ್ಧ ಚಿತ್ರಲಿಪಿಯನ್ನು ಬಳಸುತ್ತಿದ್ದರು, ಕ್ರಮೇಣ ರೂಢಿಗತವಾದ ಈ ಚಿತ್ರಗಳು ಧ್ವನಿಯನ್ನು (ಮೊದಲಾದರೆ ಚಿತ್ರದಲ್ಲಿನ ವಸ್ತುವನ್ನೇ ಸೂಚಿಸುತ್ತಿದ್ದವು) ಕನ್ನಡಿಸುವಂತಾಯಿತು, ಮತ್ತು ಕೊನೆಗೆ, 'ಅರಸದಲ್ಲಿನ ಅ' ಎಂಬ ತತ್ವವನ್ನಾಧರಿಸಿದ ಒಂದೇ ಧ್ವನಿಯನ್ನು ಸಂಕೇತಿಸುವಂತಾಯಿತು.[೮] ಈ ಕೊನೆಯ ಹಂತವನ್ನು ಈಜಿಪ್ಷಿಯನ್ನರೇ ಸಂಪೂರ್ಣವಾಗಿ ಅಳವಡಿಸಿಕೊಳ್ಳಲಿಲ್ಲ, ಹಾಗೆ ಮಾಡಿದ್ದು ಫಿನೀಷಿಯನ್ನರು, ಅವರು ವರ್ಣಮಾಲೆಗೆ ಎಲ್ಲ ಸೌಲಭ್ಯಗಳನ್ನೂ ಉಂಟುಮಾಡಿದರು. ಫಿನೀಷಿಯನ್ನರಿಂದ ಅದನ್ನು ಎರವಲು ಪಡೆದ ಗ್ರೀಕರು ತಮ್ಮ ಭಾಷೆಗನುಗುಣವಾಗಿ ಅದನ್ನು ಮಾರ್ಪಡಿಸಿದರು, ಜೊತೆಗೆ ಬರಿಯ ವ್ಯಂಜನಗಳಲ್ಲದೆ ಸ್ವರಗಳನ್ನೂ ಸೇರಿಸುವ ಮುಖ್ಯ ಕೆಲಸವನ್ನು ಮಾಡಿದರು. ಈ ಅನುಕೂಲಕರ ಬರಹ ಪದ್ಧತಿಯಿಂದಾಗಿ ಗ್ರೀಕ್ ನಾಗರಿಕತೆಯು ಬಹುಬೇಗ ಬೆಳೆಯಲು ಸಹಾಯಕವಾಯಿತು.

ಗ್ರೀಕ್ ನಾಗರಿಕತೆಯ ಬಹು ಮುಖ್ಯ ಫಲವೆಂದರೆ ಹೋಮರ್. ಹೋಮರ್ ಬಗೆಗಿನ ಎಲ್ಲವೂ ಊಹಾತ್ಮಕವಾದುದೇ, ಆದರೆ ಬಹು ವ್ಯಾಪಕ ಅಭಿಪ್ರಾಯವೆಂದರೆ ಅವನು ಒಬ್ಬನೇ ಆಗಿರದೆ ಅನೇಕ ಕವಿಗಳ ಸರಮಾಲೆ ಎಂಬುದು. ಈ ಅಭಿಪ್ರಾಯವನ್ನು ಹೊಂದಿದವರ ಪ್ರಕಾರ, 'ಇಲಿಯಡ್' ಮತ್ತು 'ಒಡಿಸಿ'ಗಳ ರಚನೆಯ ನಡುವೆ ಎರಡು ಶತಮಾನಗಳ ಅಂತರವಿತ್ತು, ಕೆಲವರ ಅಭಿಪ್ರಾಯದಲ್ಲಿ ಕ್ರಿಪೂ ೭೫೦–೫೫೦[೯], ಮತ್ತೆ ಕೆಲವರು 'ಹೋಮರ್' ಅವಧಿ ಕ್ರಿಪೂ ಎಂಟನೆಯ

---

೮. ನಿದರ್ಶನಕ್ಕೆ, ಹೀಬ್ರೂ ವರ್ಣಮಾಲೆಯ ಮೂರನೆಯ ಅಕ್ಷರವಾದ 'ಗಿಮೆಲ್' ಎಂದರೆ ಒಂಟೆ, ಅದರ ಸಂಕೇತವೆಂದರೆ ರೂಢಿಗತವಾದ ಒಂಟೆಯ ಚಿತ್ರ.

೯. ಬೆಲೋಕ್, *'ಗ್ರೀಶಿಷೆ ಗೆಚಿಚ್ಟೆ'*, ಅಧ್ಯಾಯ ೧೨

ಶತಮಾನಕ್ಕೆ ಮುಗಿದಿತ್ತು ಎನ್ನುತ್ತಾರೆ.[೧೦] ಹೊಮೆರಿಕ್ ಕಾವ್ಯಗಳನ್ನು, ಈಗಿನ ರೂಪದಲ್ಲಿ, ಅಥೆನ್ಸ್‌ನಿಂದ ಫೀಯಿಸ್ಟ್ರಾಟಸ್ ತಂದ, ಅವನು ಕ್ರಿಪೂ ೫೬೦ ರಿಂದ ೫೨೭ ರವರೆಗೆ (ಮಧ್ಯೆ ಮಧ್ಯೆ) ಆಳಿದ. ಅವನ ಕಾಲದ ಬಳಿಕ ಅಥೆನ್ಸ್‌ನ ಯುವಜನತೆಯು ಹೋಮರ್ ಕಾವ್ಯಗಳನ್ನು ಗಟ್ಟಿಮಾಡಿಕೊಂಡರು, ಇದು ಆಗಿನ ಶಿಕ್ಷಣದ ಬಹು ಮುಖ್ಯ ಭಾಗವಾಗಿತ್ತು. ಗ್ರೀಸ್‌ನ ಕೆಲವು ಭಾಗಗಳಲ್ಲಿ, ವಿಶೇಷವಾಗಿ ಸ್ಪಾರ್ಟಾದಲ್ಲಿ, ಹೋಮರ್‌ಗೆ ಈಚಿನವರೆಗೂ ಅದೇ ಮಹತ್ವವಿರಲಿಲ್ಲ.

ಹೋಮರ್ ಕಾವ್ಯಗಳು, ಮಧ್ಯಯುಗದ ಉತ್ತರಾರ್ಧದಲ್ಲಿ ಆಸ್ಥಾನದ ಸಾಹಸಗಾಥೆಗಳಲ್ಲಿಯಂತೆ, ನಾಗರಿಕ ಶ್ರೀಮಂತವರ್ಗದ ಮನೋಭಾವವನ್ನು ಕನ್ನಡಿಸುತ್ತವೆ, ಈಗಲೂ ಸಾಮಾನ್ಯ ಜನತೆಯಲ್ಲಿರುವ ವಿವಿಧ ಪಾಮರ ಕಂದಾಚಾರಗಳನ್ನವು ಕಡೆಗಣಿಸುತ್ತವೆ. ಬಹು ಕಾಲಾನಂತರದಲ್ಲಿ, ಈ ಕಂದಾಚಾರಗಳು ಮತ್ತೆ ವ್ಯಾಪಕವಾದುವು. ಹೋಮರ್‌ನು ಅಷ್ಟು ಪ್ರಾಚೀನನಾಗಿರದೆ, ಹಳೆಯ ಮಿಥಕಗಳನ್ನು ಸಕಾರಣವಾಗಿ ವಿವರಿಸುವ ಹದಿನೆಂಟನೆಯ ಶತಮಾನದಲ್ಲಿನವರಂತೆ, ನಗರ ಕುಲೀನರ ಆದರ್ಶಗಳನ್ನು ಎತ್ತಿ ಹಿಡಿಯುವ ಕೇವಲ ಪರಿಷ್ಕರಣಕಾರನಾಗಿದ್ದವನು ಎಂಬುದು ಮಾನವಶಾಸ್ತ್ರದಿಂದ ಉತ್ತೇಜಿತರಾದ ಕೆಲವು ಆಧುನಿಕ ಲೇಖಕರ ಅಭಿಪ್ರಾಯ. ಮತಧರ್ಮದ ಪ್ರತಿನಿಧಿಗಳಂತೆ ಹೋಮರ್‌ನಲ್ಲಿ ಚಿತ್ರಿತರಾದ ಒಲಿಂಪಿಯದ ದೇವತೆಗಳು ಅವನ ಕಾಲದಲ್ಲಾಗಲೀ ಆನಂತರವಾಗಲೀ ಗ್ರೀಕರ ಪೂಜಾವಸ್ತುಮಾತ್ರಗಳಾಗಿರಲಿಲ್ಲ. ಸಾಮಾನ್ಯರ ಮತಧರ್ಮದಲ್ಲಿ ಇನ್ನಷ್ಟು ಭಯಂಕರವೂ ಅನಾಗರಿಕವೂ ಆದ ಅಂಶಗಳು ಇದ್ದವು, ಅವುಗಳನ್ನು ಗ್ರೀಕ್ ಬುದ್ಧಿಜೀವಿಗಳು ಹೆಚ್ಚೆಂದರೆ ಕಡೆಗಣಿಸಿದರು, ಆದರೆ ದುರ್ಬಲ ಕ್ಷಣದಲ್ಲಿಯೋ ಭಯಗೊಳಿಸುವ ಸನ್ನಿವೇಶದಲ್ಲಿಯೋ ಅವುಗಳ ಮೂಲಕ ಹರಿಹಾಯುತ್ತಿದ್ದರು. ಪ್ರಾಚೀನ ಕಾಲದಲ್ಲಿ ಅವಿತುಕೊಂಡಿದ್ದ ಮತ್ತು ಹೋಮರ್‌ನು ಕೈಬಿಟ್ಟಿದ್ದ ಶ್ರದ್ಧೆಗಳು ಅವನತಿಯ ಕಾಲದಲ್ಲಿ ಮತ್ತೆ ಮೇಲೆದ್ದವು. ಮಿಕ್ಕಂತೆ ಅಸಂಗತವೂ ಆಶ್ಚರ್ಯಕರವೂ ಆಗಿ ಕಾಣುವ ಅನೇಕ ಸಂಗತಿಗಳನ್ನು ಇದು ವಿವರಿಸುತ್ತದೆ.

ಎಲ್ಲ ಕಡೆಯೂ, ಪ್ರಾಚೀನ ಮತಧರ್ಮವು ವೈಯಕ್ತಿಕವಾಗಿರದೆ ಜನಾಂಗೀಯವಾಗಿದ್ದವು. ಜನಾಂಗದ ಹಿತವನ್ನು ಕಾಪಾಡುವ ಕಾರಣದಿಂದ, ವಿಶೇಷವಾಗಿ ಫಲವಂತಿಕೆ. ಸಸ್ಯಗಳು, ಪ್ರಾಣಿಗಳು ಮತ್ತು ಮಾನವಸಂಬಂಧವಾದ ಕೆಲವು ಆಚರಣೆಗಳನ್ನು ಉದ್ದೇಶಪೂರ್ವಕವಾಗಿ ಇಂದ್ರಜಾಲದೊಡನೆ ನೆರವೇರಿಸುತ್ತಿದ್ದರು. ಸೂರ್ಯನು ತನ್ನ ಶಕ್ತಿಯನ್ನು ಕಡಿಮೆಮಾಡಿಕೊಳ್ಳುತ್ತ ಹೋಗುವ ಉತ್ತರಾಯಣ ಸಂಕ್ರಮಣ ಕಾಲದಲ್ಲಿ ವಸಂತ ಮತ್ತು ಸುಗ್ಗಿಯ ಕುರಿತ ಆಚರಣೆಗಳೂ

---

೧೦. ರಾಸ್ಟೋವ್ಸ್‌ಟ್ಜೆಫ್, 'ಹಿಸ್ಟರಿ ಆಫ್ ದ ಏನ್ಷಂಟ್ ವರ್ಲ್ಡ್', ಭಾಗ ೧, ಪು. ೩೯

ಇರುತ್ತಿದ್ದವು. ಕೆಲವೊಮ್ಮೆ ಇವು ಸಾಮಾಹಿಕ ಉದ್ದೀಪನವನ್ನು ಮಾಡುವಂತಿರುತ್ತಿದ್ದವು, ಇಂತಹ ಸಂದರ್ಭಗಳಲ್ಲಿ ವ್ಯಕ್ತಿಗಳು ತಮ್ಮ ಅನನ್ಯತೆಯನ್ನು ಮರೆತು ಇಡೀ ಜನಾಂಗದೊಡನೆ ಒಂದಾಗುತ್ತಿದ್ದರು. ಜಗತ್ತಿನೆಲ್ಲೆಡೆಯೂ, ಮತಧರ್ಮ ವಿಕಾಸದ ಯಾವುದೋ ಘಟ್ಟದಲ್ಲಿ ಪರಿಶುದ್ಧ ಪ್ರಾಣಿಗಳನ್ನೂ ಮಾನವರನ್ನೂ ವಿಧ್ಯುಕ್ತವಾಗಿ ಬಲಿಗೊಟ್ಟು ಅವುಗಳ ಮಾಂಸಸೇವನೆ ಮಾಡುತ್ತಿದ್ದರು. ವಿವಿಧ ಮತಧರ್ಮಗಳಲ್ಲಿ, ಈ ಘಟ್ಟವು ಬೇರೆ ಬೇರೆ ಸಂದರ್ಭಗಳಲ್ಲಿ ಸಂಭವಿಸುತ್ತಿತ್ತು. ಬಲಿಗೊಟ್ಟ ನರನ ಮಾಂಸವನ್ನು ತಿನ್ನುವ ಪರಿಪಾಟಕ್ಕಿಂತಲೂ ನರಬಲಿ ದೀರ್ಘಕಾಲ ಮುಂದುವರಿಯಿತು. ಐತಿಹಾಸಿಕ ಕಾಲದ ಆರಂಭದಲ್ಲಿನ ಗ್ರೀಸಿನಲ್ಲಿ ಅದಿನ್ನೂ ನಿಂತಿರಲಿಲ್ಲ. ಅಂತಹ ಕ್ರೂರ ಅಂಶಗಳನ್ನು ಒಳಗೊಳ್ಳದ ಫಲವಂತಿಕೆಯ ಆಚರಣೆಗಳು ಗ್ರೀಸಿನಲ್ಲಿ ತುಂಬ ಸಾಮಾನ್ಯವಾಗಿದ್ದವು; ಅದರಲ್ಲೂ ಎಲ್ಯೂಸಿನಿಯನ್ ರಹಸ್ಯಾಚರಣೆಗಳು ಸಾಂಕೇತಿಕತೆಯಲ್ಲಿ ಮೂಲತಃ ಕೃಷಿಸಂಬಂಧಿಯೇ.

ಹೋಮರ್‌ನಲ್ಲಿನ ಮತಧರ್ಮವು ಅಷ್ಟೇನೂ ಮತಧಾರ್ಮಿಕವಾಗಿರಲಿಲ್ಲ ಎನ್ನುವುದನ್ನು ಒಪ್ಪಬೇಕು. ದೇವತೆಗಳೆಲ್ಲ ಪೂರ್ತಿ ಮಾನವರಂತೆಯೇ, ಅಮರತೆ ಹಾಗೂ ಅತಿಮಾನುಷ ಸಾಮರ್ಥ್ಯಗಳನ್ನು ಹೊಂದಿದ್ದುದರ ವಿಷಯದಲ್ಲಿ ಮಾತ್ರ ಅವರು ಮನುಷ್ಯರಿಗಿಂತ ಭಿನ್ನ. ನೈತಿಕವಾಗಿ ಅವರ ಬಗ್ಗೆ ಹೇಳಬೇಕಾದ ವಿಶೇಷವೇನೂ ಇಲ್ಲ, ಅಂಥವರು ಜನರಲ್ಲಿ ಹೇಗೆ ಭಯಭಕ್ತಿಗಳನ್ನು ಉಂಟುಮಾಡಬಲ್ಲವರಾಗಿದ್ದರು ಎಂಬುದನ್ನು ವಿವರಿಸುವುದು ಕಷ್ಟ. ಆನಂತರದ್ದು ಎನ್ನಲಾದ ಕೆಲವು ಭಾಗಗಳಲ್ಲಿ, ಅವರನ್ನು ಅತೀವ ಅಗೌರವದಿಂದಲೇ ಕಾಣಲಾಗಿದೆ. ಹೋಮರ್‌ನಲ್ಲಿ ಕಾಣುವ ಅಂತಹ ಮತಧಾರ್ಮಿಕ ಭಾವನೆಯು ವಿಧಿ ಅಥವಾ ಆವಶ್ಯಕತೆ ಅಥವಾ ಹಣೆಬರಹದಂತಹ ಅಸ್ಪಷ್ಟ ವಿಷಯಗಳ ಬಗೆಗಿರುವಷ್ಟು ಒಲಿಂಪಸ್ ದೇವತೆಗಳ ಬಗ್ಗೆಯಿಲ್ಲ, ಅವನ ಪ್ರಕಾರ ಸ್ಯೂಸ್ ಕೂಡ ಪರತಂತ್ರನೇ. ಎಲ್ಲ ಗ್ರೀಕ್ ಚಿಂತನೆಯ ಮೇಲೆ ವಿಧಿ ತುಂಬ ಪ್ರಭಾವ ಬೀರಿದೆ, ಪ್ರಾಯಶಃ ಅದರಿಂದಲೇ ವಿಜ್ಞಾನವು ಪ್ರಕೃತಿ ನಿಯಮದಲ್ಲಿನ ತನ್ನ ಶ್ರದ್ಧೆಯನ್ನು ಸಾಧಿಸಿಕೊಂಡಿರಬೇಕು.

ಗಿಲ್ಬರ್ಟ್ ಮರ್‍ರೆಯವರ ಪ್ರಕಾರ, ಹೋಮರ್‌ನ ದೇವತೆಗಳು ಜಯಶೀಲ ಶ್ರೀಮಂತವರ್ಗದ ದೇವತೆಗಳು, ಭೂಮಿಯನ್ನು ಸ್ವತಃ ಉಳುತ್ತಿದ್ದವರ ಫಲವಂತಿಕೆಯ ದೇವತೆಗಳಲ್ಲ:[೧೧]

'ಬಹುತೇಕ ದೇಶಗಳ ದೇವತೆಗಳು ತಾವು ಜಗತ್ತನ್ನು ಸೃಷ್ಟಿಸಿದೆವೆಂದು ಹೇಳಿಕೊಳ್ಳುತ್ತಾರೆ. ಒಲಿಂಪಿಯನ್ ದೇವತೆಗಳು ಹಾಗೇನೂ ಹೇಳಿಕೊಳ್ಳುವುದಿಲ್ಲ. ಅವರು ಮಾಡಿದ ದೊಡ್ಡ ಪ್ರಯತ್ನವೆಂದರೆ ಅದನ್ನು ವಶಪಡಿಸಿಕೊಳ್ಳುವುದಷ್ಟೇ....

---

೧೧. *'ಫೈವ್ ಸ್ಟೇಜಸ್ ಆಫ್ ಗ್ರೀಕ್ ರಿಲಿಜನ್'*, ಪು. ೬೭

ತಮ್ಮ ಚಕ್ರಾಧಿಪತ್ಯಗಳನ್ನು ಗೆದ್ದ ಬಳಿಕ ಅವರೇನು ಮಾಡುತ್ತಾರೆ? ಸರ್ಕಾರದ ಕೆಲಸ ಮಾಡುತ್ತಾರೆಯೇ? ಕೃಷಿಯನ್ನು ಅಭಿವೃದ್ಧಿಡಿಸುತ್ತಾರೆಯೇ? ಅವರೇನಾದರೂ ವ್ಯಾಪಾರ ಉದ್ದಿಮೆಗಳಲ್ಲಿ ತೊಡಗಿಕೊಳ್ಳುತ್ತಾರೆಯೇ? ಒಂದಿಷ್ಟೂ ಇಲ್ಲ. ಅವರೇಕೆ ಪ್ರಾಮಾಣಿಕತೆಯಿಂದ ದುಡಿಯಬೇಕು? ತಮ್ಮ ಆದಾಯದಿಂದ ಬದುಕುತ್ತ ಕಾಣಿಕೆ ಕೊಡದ ಜನಗಳ ಮೇಲೆ ಸಿಡಿಲುಗರೆಯುತ್ತಾರೆ. ಮುಖ್ಯಸ್ಥರನ್ನು, ಶ್ರೀಮಂತ ಕಡಲ್ಗಳ್ಳರನ್ನು ಅವರು ವಶಪಡಿಸಿಕೊಳ್ಳುತ್ತಾರೆ. ಹೊಡೆದಾಟ, ಭೂರಿಭೋಜನ, ಆಟಗಳಲ್ಲಿ ತೊಡಗಿಕೊಂಡು ಸಂಗೀತ ಹಾಡಿಕೊಳ್ಳುತ್ತಾರೆ; ಕಂಠಪೂರ್ತಿ ಕುಡಿದು ತಮಗಾಗಿ ಸೇವೆ ಮಾಡುವ ಕುಂಟ ಕಮ್ಮಾರನನನ್ನು ನೋಡಿ ಅಟ್ಟಹಾಸಗೈಯುತ್ತಾರೆ. ತಮ್ಮ ರಾಜನ ಹೊರತು ಅವರಿಗೆ ಯಾರ ಬಗ್ಗೆಯೂ ಭಯವೆಂಬುದೇ ಇಲ್ಲ. ಪ್ರಣಯ ಯುದ್ಧಗಳ ಹೊರತು ಅವರೆಂದೂ ಸುಳ್ಳು ಹೇಳುವುದಿಲ್ಲ.'

ಹಾಗೆಯೇ ಹೋಮರ್‌ನ ಮಾನವ ನಾಯಕರು ಕೂಡ ಸನ್ನಡತೆಯವರಲ್ಲ. ಮುಖ್ಯ ಕುಟುಂಬವು ಪಿಲಾಪ್‌ರದು. ಆದರೆ ಅದು ಸುಖೀ ಕುಟುಂಬದ ಮಾದರಿಯನ್ನೇನೂ ಸೃಷ್ಟಿಸಲಿಲ್ಲ.

'ವಂಶದ ಏಷ್ಯಾಟಿಕ್ ಸ್ಥಾಪಕನಾದ ಟಾಂಟಲಸ್ ಅದರ ಕಾರ್ಯವನ್ನು ದೇವತೆಗಳ ವಿರುದ್ಧದ ದಾಳಿಯಿಂದ ಆರಂಭಿಸಿದ; ಮನುಷ್ಯಮಾಂಸವನ್ನು, ಅದೂ ತನ್ನ ಮಗ ಪೆಲೋಸ್‌ನದು, ಮೋಸದಿಂದ ತಿನ್ನುವಂತೆ ಮಾಡಿದ ಎಂದು ಕೆಲವರು ಹೇಳುತ್ತಾರೆ. ಪೆಲೋಸ್ ಪವಾಡಸದೃಶವಾಗಿ ಮತ್ತೆ ಜೀವ ಪಡೆದು ತಾನೂ ದಾಳಿ ನಡೆಸಿದ. ಅವನು ಪೀಸಾದ ರಾಜನಾದ ಆಯಿನೋಮಸ್ ವಿರುದ್ಧ ಅವನ ರಥದ ಸಾರಥಿಯಾದ ಮಿರ್ಟಿಲೋಸ್‌ನ ಕುತಂತ್ರದಿಂದ ಪ್ರಸಿದ್ಧವಾದ ರಥದ ಸ್ಪರ್ಧೆಯಲ್ಲಿ ಗೆದ್ದು, ಆ ಬಳಿಕ ಪ್ರತಿಫಲವನ್ನು ನೀಡುವುದಾಗಿ ಹೇಳಿದ್ದ ತನ್ನ ಸಹಾಯಕನನ್ನೇ ಸಮುದ್ರಕ್ಕೆಸೆಯುವ ಮೂಲಕ ತೊಡೆದುಹಾಕಿದ. ಆ ಶಾಪ ಅವನ ಮಕ್ಕಳಾದ ಏಟ್ರಿಯಸ್ ಮತ್ತು ಥೈಯೆಸ್ಟೀಸ್‌ರಿಗೂ, ಗ್ರೀಕರು 'ಏಟ್' ಎಂದು ಕರೆಯುವ ದಮನಿಸಲಾಗದುದಲ್ಲದಿದ್ದರೂ ಪ್ರಬಲವಾದ ಅಪರಾಧಪ್ರವೃತ್ತಿಯ ರಘದಲ್ಲಿ ತಟ್ಟಿತು. ಥೈಯೆಸ್ಟೀಸ್ ತನ್ನ ಸೋದರನ ಹೆಂಡತಿಯನ್ನೇ ಭ್ರಷ್ಟಗೊಳಿಸಿ ಆ ಮೂಲಕ 'ಅದೃಷ್ಟ' ಎನ್ನುವ ಹೆಸರಿನ ಕುಟುಂಬದ ಟಗರನ್ನು ಕಳವು ಮಾಡಿದ. ಇದಕ್ಕೆ ಪ್ರತೀಕಾರವಾಗಿ ಏಟ್ರಿಯಸ್ ಸೋದರನನ್ನು ಗಡಿಪಾರು ಮಾಡಿಸಿದ. ಸಂಧಾನದ ನೆಪದಲ್ಲಿ ಮತ್ತೆ ಅವನನ್ನು ಬರಮಾಡಿಕೊಂಡು ಅವನ ಮಕ್ಕಳ ಮಾಂಸದಿಂದ ಮಾಡಿದ ಅಡುಗೆಯ ಔತಣವನ್ನು ಆವನಿಗೆ ನೀಡಿದ. ಈಗ ಶಾಪವು ಏಟ್ರಿಯಸ್‌ನ ಮಗ ಆಗಮೆಮ್ನನ್‌ಗೆ ಇಳಿದು ಬಂದು, ಒಂದು ಪರಿಶುದ್ಧವಾದ ಸಾರಂಗವನ್ನು ಕೊಲ್ಲುವ ಮೂಲಕ ಅವನನ್ನು ಕೆರಳಿಸಿದ; ತನ್ನ ಮಗಳು ಇಫೀಜೀನಿಯಳನ್ನು ದೇವತೆಯ ಅನುಗ್ರಹಕ್ಕಾಗಿ ಬಲಿಗೊಟ್ಟು ತನ್ನ ಪಡೆ ಸುರಕ್ಷವಾಗಿ ಟ್ರಾಯ್ ಸೇರುವಂತೆ

ಮಾಡಿಕೊಂಡ. ಇದಕ್ಕೆ ಪ್ರತಿಯಾಗಿ ಅವನ ದ್ರೋಹಿ ಹೆಂಡತಿ ಕ್ಲೈಟೆಮ್ನೆಸ್ಟ್ರಳೇ ತನ್ನ ಪ್ರಿಯಕರನಾದ ಥೈಯೆಸ್ಟೀಸ್‌ನ ಉಳಿದಿದ್ದ ಮಗ ಐಗಿಸ್ಥೋಸ್‌ನ ಜೊತೆಗೂಡಿ ಅವನನ್ನು ಕೊಲೆ ಮಾಡಿದಳು. ಆಗಮೆಮ್ನನ್‌ನ ಮಗ ಒರೆಸ್ಟೀಸ್ ತನ್ನ ತಾಯಿ ಮತ್ತು ಐಗಿಸ್ಥೋಸ್‌ರನ್ನು ಕೊಂದು ತಂದೆಯ ಕೊಲೆಯ ಸೇಡುತೀರಿಸಿಕೊಂಡ.'[೧೨]

ಅಂತಿಮವಾಗಿ ಸಿದ್ಧಗೊಂಡ ಹೋಮರ್ ಏಷ್ಯಾ ಮೈನರ್ ಮತ್ತದರ ನೆರೆಯ ದ್ವೀಪಗಳ ಭಾಗವಾಗಿದ್ದ ಅಯೋನಿಯದ ಉತ್ಪನ್ನ. ಹೆಚ್ಚೆಂದರೆ ಕ್ರಿಪೂ ಆರನೆಯ ಶತಮಾನದ ಅವಧಿಯಲ್ಲಿ ಹೋಮರ್‌ನ ಕಾವ್ಯಗಳು ಈಗಿನ ರೂಪದಲ್ಲಿ ಸಿದ್ಧಗೊಂಡುವು. ಇದೇ ಶತಮಾನದ ಅವಧಿಯಲ್ಲಿಯೇ ಗ್ರೀಕ್ ವಿಜ್ಞಾನ ಮತ್ತು ತತ್ತ್ವಜ್ಞಾನಗಳು ಹಾಗೂ ಗಣಿತಗಳು ಆರಂಭಗೊಂಡವು. ಇದೇ ವೇಳೆಗೆ ಜಗತ್ತಿನ ಇತರ ಭಾಗಗಳಲ್ಲಿ ಅತ್ಯಂತ ಪ್ರಮುಖವೆನಿಸಿದ ಮೂಲಭೂತ ಸಂಗತಿಗಳು ಸಂಭವಿಸುತ್ತಿದ್ದವು. ಕನ್‌ಫ್ಯೂಷಿಯಸ್, ಬುದ್ಧ ಮತ್ತು ಝರೋಸ್ಟ್ರರು ಬದುಕಿದ್ದುದೇ ಆದರೆ ಪ್ರಾಯಶಃ ಅದು ಈ ಅವಧಿಯಲ್ಲೇ.[೧೩] ಈ ಶತಮಾನದ ಮಧ್ಯಭಾಗದಲ್ಲಿ ಪರ್ಷಿಯನ್ ಚಕ್ರಾಧಿಪತ್ಯವನ್ನು ಸೈರಸ್ ಸ್ಥಾಪಿಸಿದ; ಅದರ ಕೊನೆಯ ಭಾಗದಲ್ಲಿ, ಪರ್ಷಿಯನ್ನರು ಸೀಮಿತ ಸ್ವಾಯತತ್ತೆಯನ್ನು ನೀಡಿದ್ದ ಅಯೋನಿಯದ ಗ್ರೀಕ್ ನಗರಗಳು ವಿಫಲವಾದ ಬಂಡಾಯನ್ನು ನಡೆಸಿದವು, ಡೇರಿಯಸ್ ಆ ಪ್ರಯತ್ನವನ್ನು ದಮನಮಾಡಿ ಆ ನಗರಗಳ ಶ್ರೇಷ್ಠವ್ಯಕ್ತಿಗಳನ್ನು ಗಡೀಪಾರು ಮಾಡಿದ. ಈ ಕಾಲದ ಕೆಲವು ಮಂದಿ ತತ್ತ್ವಜ್ಞಾನಿಗಳು ದೇಶಭ್ರಷ್ಟರಾದವರು, ಅವರು ಇನ್ನೂ ಅಡಿಯಾಳಾಗದ ಗ್ರೀಕ್ ಜಗತ್ತಿನ ಭಾಗಗಳಲ್ಲಿ ಅಲೆದಾಡಿದರು, ಮುಖ್ಯವಾಗಿ ಅಯೋನಿಯಕ್ಕೆ ಸೀಮಿತವಾಗಿದ್ದ ಭಾಗಗಳಲ್ಲಿ ನಾಗರಿಕತೆಯನ್ನು ಹಬ್ಬಿಸಿದರು. ಅಲೆದಾಟದ ಕಾಲದಲ್ಲಿ ಅವರನ್ನು ಗೌರವದಿಂದ ಕಾಣಲಾಯಿತು. ಕ್ರಿಪೂ ಆರನೆಯ ಶತಮಾನದ ಉತ್ತರಾರ್ಧದಲ್ಲಿ ನಿರಾಶ್ರಿತನಾಗಿ ಅಲೆದಾಡುತ್ತಿದ್ದ ಕ್ಸನೋಫನೀಸ್ ಕೇಳುವುದೆಂದರೆ: 'ನಾವು ಇಂತಹ ವಿಷಯಗಳನ್ನು ಚಳಿಗಾಲದಲ್ಲಿ ಚೆನ್ನಾಗಿ ಊಟಮಾಡಿ, ಮೆತ್ತನೆಯ ಕುರ್ಚಿಗಳಲ್ಲಿ ಬೆಂಕಿಯ ಪಕ್ಕದಲ್ಲಿ ಕೂತು, ಮಧುರವಾದ ದ್ರಾಕ್ಷಾರಸನ್ನು ಹೀರುತ್ತ ಕಡಲೆಬೀಜವನ್ನು ಕುರುಕುತ್ತ, "ಮಹಾಸ್ವಾಮಿಗಳೇ, ನೀವು ಯಾವ ದೇಶದವರು? ನಿಮಗೆ ವಯಸ್ಸೆಷ್ಟು? ಮೀಡ್ ಜನವನ್ನು ಕಂಡಾಗ ನಿಮಗೆ ಎಷ್ಟು ವರ್ಷ?" ಎಂದು ಹೇಳಬೇಕು. ಸಲಾಮಿಸ್ ಮತ್ತು ಪ್ಲೇಟಿಯ ಯುದ್ಧಗಳಲ್ಲಿ ಮಿಕ್ಕ ಗ್ರೀಸ್‌ನ ಭಾಗದವರು ತಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವಲ್ಲಿ ಸಫಲರಾದರು, ಆನಂತರ

---

೧೨. ಎಚ್. ಜೆ. ರೋಸ್: 'ಪ್ರಿಮಿಟಿವ್ ಕಲ್ಚರ್ ಇನ್ ಗ್ರೀಸ್' (೧೯೨೫), ಪು ೧೯೩

೧೩. ಆದರೆ ಝರೋಸ್ಟ್ರನ ಕಾಲ ಕೇವಲ ಊಹಾತ್ಮಕವಾದುದು. ಕೆಲವರು ಅವನನ್ನು ಕ್ರಿಪೂ ೧೦೦೦ ದವನೆಂದು ಹೇಳುತ್ತಾರೆ. ನೋಡಿ, 'ಕೇಂಬ್ರಿಜ್ ಏನ್ಷಿಯಂಟ್ ಹಿಸ್ಟರಿ' ಭಾಗ ೪, ಪು. ೨೦೭

ಸ್ವಲ್ಪ ಕಾಲ ಅಯೋನಿಯ ಬಿಡುಗಡೆಗೊಂಡಿತು.'[೧೪]

ಗ್ರೀಸ್ ಅನ್ನು ಹಲವಾರು ಸ್ವತಂತ್ರ ದೇಶಗಳಾಗಿ ವಿಭಾಗೀಕರಿಸಲಾಯಿತು, ಪ್ರತಿಯೊಂದರಲ್ಲೂ ಒಂದು ನಗರಪ್ರಭುತ್ವ ಹಾಗೂ ಅದರ ಸುತ್ತಲಿನ ಸ್ವಲ್ಪ ಕೃಷಿಭೂಮಿಗಳು ಸೇರಿದ್ದವು. ಗ್ರೀಕ್ ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿನ ನಾಗರಿಕತೆಯ ಮಟ್ಟಗಳು ತೀರ ಭಿನ್ನವಾಗಿದ್ದವು. ಅವುಗಳಲ್ಲಿನ ಕೆಲವೇ ನಗರಗಳು ಮಾತ್ರ ಗ್ರೀಕ್ ಸಾಧನೆಗೆ ತಮ್ಮ ಕೊಡುಗೆಗಳನ್ನು ನೀಡಿದವು. ಸ್ಪಾರ್ಟ (ಇದರ ಬಗ್ಗೆ ಮುಂದೆ ನಾನು ಸಾಕಷ್ಟು ಪ್ರಸ್ತಾಪಮಾಡಬೇಕಾಗಿದೆ) ಸೇನಾವಿಷಯದಲ್ಲಿ ಬಹು ಮುಖ್ಯವಾಗಿತ್ತು, ಆದರೆ ಸಾಂಸ್ಕೃತಿಕವಾಗಲ್ಲ. ದೊಡ್ಡ ವಾಣಿಜ್ಯ ಕೇಂದ್ರವಾಗಿದ್ದ ಕಾರಿಂಥ್ ಸಮೃದ್ಧವೂ ಶ್ರೀಮಂತವೂ ಆಗಿತ್ತು, ಆದರೆ ಅಲ್ಲಿ ಶ್ರೇಷ್ಠ ವ್ಯಕ್ತಿಗಳು ಬರಲಿಲ್ಲ.

ಅಲ್ಲಿ ಗಾದೆಮಾತಾಗಿರುವ ಆರ್ಕೇಡಿಯದಂತಹ ಕೇವಲ ಕೃಷಿಪ್ರಧಾನ ಗ್ರಾಮಸಮುದಾಯಗಳಿದ್ದವು, ಅವುಗಳ ಬಗ್ಗೆ ನಗರದ ಜನರು ಮೋಹಕ ಕಲ್ಪನೆಗಳನ್ನು ಹೊಂದಿದ್ದರು, ಆದರೆ ಅಲ್ಲಿ ಪ್ರಾಚೀನ ಬರ್ಬರ ಭಯಾನಕತೆಯೇ ತುಂಬಿಕೊಂಡಿತ್ತು.

ಅಲ್ಲಿಯ ಜನ ಹರ್ಮಿಸ್ ಮತ್ತು ಪಾನ್‌ಗಳ ಆರಾಧಕರು, ಅವರಲ್ಲಿ ಅನೇಕ ಫಲವಂತಿಕೆಯ ಆಚರಣೆಗಳಿದ್ದವು, ಅವುಗಳ:ಲ್ಲಿ ಎಷ್ಟೋ ವೇಳೆ ದೇವತಾವಿಗ್ರಹದ ಸ್ಥಾನದಲ್ಲಿ ಕೇವಲ ಚೌಕಾಕಾರದ ಒಂದು ಕಂಬ ಕಾರ್ಯನಿರ್ವಹಿಸುತ್ತಿತ್ತು. ಮೇಕೆಯು ಫಲವಂತಿಕೆಯ ಪ್ರತೀಕವಾಗಿತ್ತು, ಇದಕ್ಕೆ ಕಾರಣ ರೈತರು ಎತ್ತುಗಳನ್ನು ಕೊಳ್ಳುವಷ್ಟು ಧನಿಕರಾಗದಿರುವುದು. ಆಹಾರದ ಕೊರತೆಯಾದಾಗ ಪಾನ್‌ನ ವಿಗ್ರಹವನ್ನು ಹೊಡೆಯುತ್ತಿದ್ದರು. (ಇಂತಹುದೇ ಆಚರಣೆಗಳು ಚೈನಾದ ದೂರದ ಹಳ್ಳಿಗಳಲ್ಲಿವೆ.) ವೃಕಮಾನವರ (ಬೇಕಾದಾಗ ಮನುಷ್ಯಾಕಾರವನ್ನು ತಾಳಬಲ್ಲು)ದೆಂದು ಹೇಳಲಾದ ಒಂದು ವಂಶವೇ ಇತ್ತು, ಪ್ರಾಯಶಃ ಅದು ನರಬಲಿ ಮತ್ತು ನರಮಾಂಸಭಕ್ಷಣೆಗೆ ಸಂಬಂಧಿಸಿದ್ದು. ಬಲಿಯಾದ ಮನುಷ್ಯನ ಮಾಂಸವನ್ನು ತಿನ್ನುವವರು ವೃಕಮಾನವರಾಗುತ್ತಾರೆಂಬ ಶ್ರದ್ಧೆಯಿತ್ತು. ಸ್ಯೂಸ್ ಲೈಕಾಸ್(ವೃಕಮಾನವ ಸ್ಯೂಸ್)ಗೆ ಸಂಬಂಧಿಸಿದ ಒಂದು ಪರಿಶುದ್ಧ ಗುಹೆಯಿತ್ತು; ಈ ಗುಹೆಯಲ್ಲಿ ಯಾರದೂ ನೆರಳಿರುತ್ತಿರಲಿಲ್ಲ, ಅಲ್ಲದೆ ಅದನ್ನು ಹೊಕ್ಕವರು ಒಂದು ವರ್ಷದೊಳಗೆ ಸಾಯುತ್ತಾರೆಂಬ ಪ್ರತೀತಿಯಿತ್ತು. ಈ ಎಲ್ಲ ಮೂಢಶ್ರದ್ಧೆಗಳು ಈ ಪ್ರಾಚೀನ ಕಾಲದಲ್ಲಿಯೂ ಪ್ರಚಲಿತವಾಗಿದ್ದವು.[೧೫]

---

೧೪. ಅಥೆನ್ಸ್ ಸ್ಪಾರ್ಟಾಕ್ಕೆ ಸೋತುದರ ಫಲವಾಗಿ, ಪರ್ಷಿಯನ್ನರು ಏಷ್ಯಾ ಮೈನರ್‌ನ ಇಡೀ ಕರಾವಳಿಯನ್ನು ಮತ್ತೆ ಸ್ವಾಧೀನಪಡಿಸಿಕೊಳ್ಳುವಂತಾಯಿತು. ಅವರ ಈ ಹಕ್ಕನ್ನು ಅಂಟಾಲ್ಸಿಡಸ್‌ನ ಶಾಂತಿಸಂಧಾನದಲ್ಲಿ (ಕ್ರಿಪೂ ೩೮೭–೬) ಗೌರವಿಸಲಾಯಿತು. ಐವತ್ತು ವರ್ಷಗಳ ಬಳಿಕ ಅಲೆಗ್ಸಾಂಡರ್‌ನ ಚಕ್ರಾಧಿಪತ್ಯದಲ್ಲಿ ಅವು ಸೇರಿದುವು.

೧೫. ರೋಸ್, 'ಪ್ರಿಮಿಟಿವ್ ಗ್ರೀಸ್', ಪು. ೬೫ ಅಡಿಟಿಪ್ಪಣಿ.

ಪಾನ್ (ಮೂಲ ಹೆಸರು ಪಾವನ್ ಆಗಿತ್ತೆಂದು ಕೆಲವರು ಹೇಳುತ್ತಾರೆ) ಪದದ ಅರ್ಥ ಮೇಯಿಸುವವನು ಅಥವಾ ಕುರುಬ ಎಂದು. ಮುಂದೆ, ಅಂದರೆ ಪರ್ಷಿಯನ್ ಯುದ್ಧದ ಬಳಿಕ ಕ್ರಿಪೂ ಐದನೆಯ ಶತಮಾನದಲ್ಲಿ ಅಥೆನ್ಸ್ ಸ್ವೀಕರಿಸಿದ ಅವನ ಆರಾಧನೆಯಿಂದಾಗಿ, ಸಕಲದೇವತೆ ಎಂದು ವ್ಯಾಖ್ಯಾನಿಸಲಾಗುವ ಹೆಚ್ಚು ಪ್ರಚಲಿತವಾದ ಹೆಸರನ್ನು ಹೊಂದಿದ.[೧೬]

ಆದರೆ ಪ್ರಾಚೀನ ಗ್ರೀಸ್‌ನಲ್ಲಿ ನಮ್ಮ ಮತಧರ್ಮದ ಕಲ್ಪನೆಗೆ ಹೊಂದುವಂತಹ ಬಹುತೇಕ ಅಂಶಗಳು ಇದ್ದವು. ಇದು ಒಲಿಂಪಿಯನ್ನರಿಗೆ ಸಂಬಂಧಪಡದೆ, ದ್ರಾಕ್ಷಾರಸ ಮತ್ತು ಕುಡಿತದ ದೇವತೆಯೆಂದು ಪ್ರಚಲಿತವಾಗಿರುವ, ಡಯೋನಿಸಸ್ ಅಥವಾ ಬ್ಯಾಕಸ್‌ನೊಂದಿಗೆ ಸಂಬಂಧಿಸಿತ್ತು. ಅವನ ಆರಾಧನೆಯ ವಿಧಾನದಿಂದ ಗಾಢವಾದ ಅನುಭಾವಿಕತೆ ಉದಿಸಿ ಸಾಕಷ್ಟು ಮಂದಿ ತತ್ತ್ವಜ್ಞಾನಿಗಳ ಮೇಲೆ ಪ್ರಭಾವ ಬೀರಿತು, ಹಾಗೂ ಜೊತೆಗೆ ಕ್ರಿಶ್ಚಿಯನ್ ಮತಧರ್ಮಶಾಸ್ತ್ರ ಸ್ವರೂಪಕ್ಕೂ ಭಾಗಶಃ ಕಾರಣವಾಯಿತು ಎಂಬುದು ಅದ್ಭುತ ವಿಚಾರ. ಗ್ರೀಕ್ ಚಿಂತನೆಯ ಬೆಳವಣಿಗೆಯನ್ನು ಕುರಿತು ಅಧ್ಯಯನ ಮಾಡುವವರೆಲ್ಲ ಇದನ್ನು ಅರ್ಥಮಾಡಿಕೊಳ್ಳಬೇಕು.

ಡಯೋನಿಸಸ್ ಅಥವಾ ಬ್ಯಾಕಸ್ ಮೂಲತಃ ಥ್ರೇಸಿಯನ್ ಬುಡಕಟ್ಟಿನ ದೇವತೆ. ಥ್ರೇಸಿಯನ್ನರು ಗ್ರೀಕರಿಗಿಂತ ತೀರ ಕಡಿಮೆ ಸಂಸ್ಕೃತಿವಂತರಾಗಿದ್ದವರು, ಇವರನ್ನು ಗ್ರೀಕರು ಬರ್ಬರರೆಂದು ಭಾವಿಸಿದ್ದರು. ಎಲ್ಲ ಪ್ರಾಚೀನ ಬೇಸಾಯಗಾರರಂತೆ, ಅವರಲ್ಲಿಯೂ ಫಲವಂತಿಕೆಯ ಆಚರಣೆಗಳಿದ್ದವು, ಫಲವಂತಿಕೆಯನ್ನು ಹೆಚ್ಚಿಸುವ ಒಬ್ಬ ದೇವತೆಯಿದ್ದ. ಅವನ ಹೆಸರು ಬ್ಯಾಕಸ್. ಅವನಿಗೆ ಮನುಷ್ಯರೂಪವಿತ್ತೋ ಎತ್ತಿನ ರೂಪವಿತ್ತೋ ಎಂಬುದು ಯಾವಾಗಲೂ ಸ್ಪಷ್ಟವಾಗಿರಲಿಲ್ಲ. ಅವರಿಗೆ ಬಿಯರ್ ಮಾಡುವ ವಿಧಾನ ತಿಳಿದ ಮೇಲೆ, ಪ್ರಮತ್ತತೆ ಎಂಬುದು ದೈವಿಕವಾದುದೆನಿಸಿ, ಬ್ಯಾಕಸ್‌ಗೆ ಗೌರವ ನೀಡಿದರು. ಮುಂದೆ ಅವರಿಗೆ ದ್ರಾಕ್ಷಾರಸದ ಪರಿಚಯವಾಗಿ ದ್ರಾಕ್ಷಾರಸಪಾನ ಆರಂಭವಾದ ನಂತರ ಅವರು ಅವನನ್ನು ಮತ್ತಷ್ಟು ಹಿರಿದಾಗಿ ಗೌರವಿಸಿದರು. ಫಲವಂತಿಕೆಯನ್ನು ಹೆಚ್ಚಿಸುವ ಅವನ ಕಾರ್ಯಗಳು ದ್ರಾಕ್ಷಿ ಮತ್ತು ದ್ರಾಕ್ಷಾರಸವು ಉಂಟುಮಾಡುತ್ತಿದ್ದ ದೈವಿಕ ಹುಚ್ಚಿಗೆ ಸಾಮಾನ್ಯವಾಗಿ ಅಧೀನವಾದವು ಎಂದು ಭಾವಿಸಲಾಯಿತು.

ಥ್ರೇಸ್ ಜನಾಂಗದಿಂದ ಈ ದೇವತೆಯ ಆರಾಧನೆಯು ಯಾವಾಗ ಗ್ರೀಕರಿಗೆ ದತ್ತವಾಯಿತು ಎಂಬುದು ತಿಳಿದಿಲ್ಲವಾದರೂ, ಅದು ಸಂಭವಿಸಿದ್ದು ಪ್ರಾಯಶಃ ಐತಿಹಾಸಿಕ ಕಾಲದ ಆರಂಭಕ್ಕೆ ಸ್ವಲ್ಪವೇ ಮುಂಚೆ. ಬ್ಯಾಕಸ್ ಆರಾಧನೆಯನ್ನು ಸಂಪ್ರದಾಯಶರಣರು ವಿರೋಧಿಸಿದರು, ಆದರೂ ಅದು

---

೧೬. ಜೆ. ಈ. ಹ್ಯಾರಿಸನ್, '*ಪ್ರಾಲೆಗೋಮೆನ ಇನ್ ದ ಸ್ಟಡಿ ಆಫ್ ಗ್ರೀಕ್ ರಿಲಿಜನ್*.' ಪು. ೬೫೧.

ಬೇರೂರಿತು. ಅದರಲ್ಲಿ, ಕಾಡುಪ್ರಾಣಿಗಳನ್ನು ಚಿಂದಿಚಿಂದಿ ಮಾಡುವುದು, ಅವುಗಳನ್ನು ಬೇಯಿಸದೆ ತಿನ್ನುವುದು ಮುಂತಾದ ಅನೇಕ ಅನಾಗರಿಕ ಅಂಶಗಳಿದ್ದವು. ಕುತೂಹಲಕರವಾಗಿ, ಅದರಲ್ಲಿ ಕೆಲವು ಸ್ತ್ರೀಲಕ್ಷಣಗಳಿವೆ. ಗೌರವಸ್ಥ ವಿವಾಹಿತೆಯರೂ ಕನ್ಯೆಯರೂ ದೊಡ್ಡ ತಂಡಗಳಲ್ಲಿ ಬೆಟ್ಟಗಳ ಮೇಲೆ, ಭಾಗಶಃ ಮದ್ಯಪಾನದ ಅಮಲಿನಿಂದಲೂ, ಆದರೆ ಮುಖ್ಯವಾಗಿ ಆನುಭಾವಿಕತೆಯ ಆನಂದವನ್ನು ಉದ್ರೇಕಿಸುವ, ಕುಣಿತಗಳಲ್ಲಿ ರಾತ್ರಿಗಳನ್ನು ಕಳೆಯುತ್ತಿದ್ದರು. ಅವರ ಗಂಡಂದಿರಿಗೆ ಇದು ಕಿರಿಕಿರಿಯನ್ನು ಉಂಟುಮಾಡುವಂತಹುದಾಗಿತ್ತು, ಆದರೆ ಅವರು ಮತಧರ್ಮವನ್ನು ವಿರೋಧಿಸುವ ಧೈರ್ಯವನ್ನು ತೋರಿಸುತ್ತಿರಲಿಲ್ಲ. ಈ ಆರಾಧನೆಯ ಚೆಲುವು ಮತ್ತು ಬರ್ಬರತೆಗಳೆರಡನ್ನೂ ಯೂರಿಪಿಡೀಸ್ ತನ್ನ 'ಬ್ಯಾಕೆ'ಯಲ್ಲಿ ಚಿತ್ರಿಸಿದ್ದಾನೆ.

ಗ್ರೀಸ್‌ನಲ್ಲಿ ಡಯೋನಿಸಸ್ ಕಂಡ ಯಶಸ್ಸು ಆಶ್ಚರ್ಯಕರವೇನಲ್ಲ. ಬೇಗ ನಾಗರಿಕತೆಯನ್ನು ಮೈಗೂಡಿಸಿಕೊಂಡ ಸಮುದಾಯಗಳಂತೆ ಗ್ರೀಕರೂ, ಕೊನೆಯ ಪಕ್ಷ ಅವರಲ್ಲಿನ ಒಂದು ಭಾಗವು, ಪ್ರಾಚೀನತೆಯ ಬಗ್ಗೆ ಒಲವು ಬೆಳೆಸಿಕೊಂಡರು; ಪ್ರಚಲಿತ ನೈತಿಕತೆಯು ಅನುಮತಿಸುವುದಕ್ಕಿಂತ ಹೆಚ್ಚಿನ ಪ್ರವೃತ್ತಿಸಹಜ ಹಾಗೂ ಭಾವೋದ್ದೀಪಕ ರೀತಿಗಳ ಕುರಿತ ಹಂಬಲ ಅವರಲ್ಲುಂಟಾಯಿತು. ಭಾವನೆಗಿಂತ ನಡವಳಿಕೆಯಲ್ಲಿ ಹೆಚ್ಚು ನಾಗರಿಕವಾಗಿ ಕಾಣುವ ಒತ್ತಡದ ಗಂಡು ಅಥವಾ ಹೆಣ್ಣುಗಳಿಗೆ ವೈಚಾರಿಕತೆಯು ಕಿರಿಕಿರಿಯದಾಗಿಯೂ ಸನ್ನಡತೆಯು ಭಾರ ಹಾಗೂ ಗುಲಾಮತನದ್ದೂ ಆಗಿ ಭಾಸವಾಗುತ್ತದೆ. ಇದು ಆಲೋಚನೆ ಮತ್ತು ಭಾವನೆಗಳಲ್ಲಿಯೂ ನಡವಳಿಕೆಯಲ್ಲಿಯೂ ಪ್ರತಿಕ್ರಿಯಾತ್ಮಕವಾಗುತ್ತದೆ. ಆಲೋಚನೆಯ ಪ್ರಕ್ರಿಯೆಯೇ ನಮಗೆ ಹೆಚ್ಚುಬೇಕಾದದ್ದು, ಆದರೆ ಅದಕ್ಕೂ ಮೊದಲು ಭಾವನೆ ಮತ್ತು ನಡತೆಗಳಲ್ಲಿನ ಪ್ರತಿಕ್ರಿಯೆಯ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕು.

ನಾಗರಿಕ ಮನುಷ್ಯ ಮತ್ತು ಅನಾಗರಿಕ ವ್ಯಕ್ತಿ – ಇವರ ನಡುವಣ ವ್ಯತ್ಯಾಸವು ಮುಖ್ಯವಾಗಿ ವಿವೇಚನೆ, ಅಥವಾ ಮತ್ತಷ್ಟು ವಿಶಾಲ ಶಬ್ದವನ್ನು ಬಳಸುವುದಾದರೆ, ಮುಂದಾಲೋಚನೆ. ಅವನು ಇಂದಿನ ನೋವುಗಳನ್ನು ಮುಂದಿನ ಸಂತೋಷಕ್ಕಾಗಿ, ಅವು ಸಾಕಷ್ಟು ದೂರವಿರಬಹುದಾದರೂ, ಸಹಿಸಿಕೊಳ್ಳುತ್ತಾನೆ. ಈ ಅಭ್ಯಾಸವು ಕೃಷಿಯ ಬೆಳವಣಿಗೆಯಿಂದಾಗಿ ಆರಂಭವಾಯಿತು, ಮುಂದಿನ ಚಳಿಗಾಲದ ಆಹಾರಕ್ಕಾಗಿ ಯಾವುದೇ ಪ್ರಾಣಿಯಾಗಲೀ ಅನಾಗರಿಕನಾಗಲೀ ವಸಂತಕಾಲದಲ್ಲಿ ಕೆಲಸಮಾಡುವುದಿಲ್ಲ, ಆದರೆ ಜೇನುನೊಣಗಳ ಜೇನುಸಂಗ್ರಹಣೆ ಅಥವಾ ಅಳಿಲುಗಳು ಕಾಯಿಗಳನ್ನು ಬಚ್ಚಿಡುವುದರಂತಹ ಕೆಲವು ಸಹಜ ರೂಪದ ಕಾರ್ಯಗಳು ಇದಕ್ಕೆ ಹೊರತು. ಈ ವಿಷಯಗಳಲ್ಲಿ ಯಾವುದೇ ಮುಂದಾಲೋಚನೆಯಿರುವುದಿಲ್ಲ; ನೋಡುವ ವ್ಯಕ್ತಿಗೆ, ಮುಂದೆ ಇದರಿಂದ ಉಪಯೋಗವಾಗುತ್ತದೆಂಬುದು

ಸ್ಪಷ್ಟವಾದರೂ, ಅವು ಕೆಲಸ ಮಾಡುವುದು ಸಹಜಪ್ರವೃತ್ತಿಯಿಂದಾಗಿ. ಯಾವುದೇ ಸಹಜಪ್ರವೃತ್ತಿಯ ತುಡಿತವಿಲ್ಲದಿದ್ದಾಗ ಮಾತ್ರವೇ ಕೆಲಸ ಮಾಡುವಾಗ ಮುಂದಾಲೋಚನೆಯುಂಟಾಗುತ್ತದೆ, ಇದಕ್ಕೆ ಕಾರಣ ವೈಚಾರಿಕತೆಯಿಂದಾಗಿ ಮುಂದೆ ಯಾವಾಗಲಾದರೂ ಇದರಿಂದ ಉಪಯೋಗವಿದೆ ಎಂಬುದರ ಅರಿವುಂಟಾಗುವುದು. ಬೇಟೆಗೆ ಮುಂದಾಲೋಚನೆಯ ಆವಶ್ಯಕತೆಯಿಲ್ಲ, ಅದು ಸಂತೋಷ ತರುತ್ತದೆ, ಆದರೆ ಭೂಮಿಯನ್ನುಳುವುದು ದುಡಿಮೆ, ಅದನ್ನು ಸಹಜಪ್ರವೃತ್ತಿಯಿಂದ ಮಾಡಲಾಗದು.

ನಾಗರಿಕತೆಯು ಸಹಜಪ್ರವೃತ್ತಿಯನ್ನು ಮುಂದಾಲೋಚನೆಯಿಂದ ತಡೆಯುತ್ತದೆ, ಅದು ಸ್ವಯಂಪ್ರೇರಿತ ತಡೆ, ಜೊತೆಗೆ ನಿಯಮ, ರೂಢಿ ಮತ್ತು ಮತಧರ್ಮಗಳು ಅದಕ್ಕೆ ಕಾರಣ. ಈ ತಡೆಯು ಅನಾಗರಿಕತೆಯಿಂದ ಹುಟ್ಟುತ್ತದೆ, ಆದರೆ ಅದು ಸಹಜಪ್ರವೃತ್ತಿಯನ್ನು ಕಡಿಮೆ ಮಾಡಿ ಹೆಚ್ಚು ವ್ಯವಸ್ಥಿತವಾಗುವಂತೆ ಮಾಡುತ್ತದೆ. ಕೆಲವು ಕಾರ್ಯಗಳನ್ನು ಅಪರಾಧಗಳೆಂದು ಪರಿಗಣಿಸಲಾಗುತ್ತದೆ, ಅವಕ್ಕೆ ಶಿಕ್ಷೆಯುಂಟು. ಮತ್ತೆ ಕೆಲವಕ್ಕೆ, ಕಾನೂನಿನ ಪ್ರಕಾರ ಶಿಕ್ಷೆಯಿಲ್ಲದಿದ್ದರೂ ಅವು ಕೆಟ್ಟದೆಂದು ಪರಿಗಣಿತವಾಗುತ್ತದೆ, ಅಂತಹ ಕಾರ್ಯದಲ್ಲಿ ತೊಡಗುವವರನ್ನು ಸಾಮಾಜಿಕ ಭರ್ತ್ಸನೆಗೆ ಗುರಿಪಡಿಸಲಾಗುತ್ತದೆ. ಖಾಸಗಿ ಆಸ್ತಿಯ ಪದ್ಧತಿಯ ಜೊತೆಗೆ ಬಂದುದು ಹೆಂಗಸರನ್ನು ಹಿಡಿತದಲ್ಲಿರಿಸಿಕೊಳ್ಳುವುದು, ಸಾಮಾನ್ಯವಾಗಿ ಗುಲಾಮವರ್ಗದ ಸೃಷ್ಟಿ ಆರಂಭವಾಯಿತು. ಒಂದೆಡೆ ಸಾಮುದಾಯಿಕ ಆಶಯಗಳನ್ನು ವ್ಯಕ್ತಿಯ ಮೇಲೆ ಹೇರಲಾದರೆ, ಮತ್ತೊಂದೆಡೆ ವ್ಯಕ್ತಿಯು, ತನ್ನ ಬದುಕನ್ನು ಒಟ್ಟಾರೆಯಾಗಿ ಪರಿಭಾವಿಸುವ ಅಭ್ಯಾಸದಿಂದ, ಭವಿಷ್ಯಕ್ಕಾಗಿ ವರ್ತಮಾನವನ್ನು ಹೆಚ್ಚೆಚ್ಚಾಗಿ ಅವಗಣಿಸುತ್ತಾನೆ.

ಈ ಪ್ರಕ್ರಿಯೆಯನ್ನು ಅತಿರೇಕಕ್ಕೆ ಒಯ್ಯುವುದು ಸಾಧ್ಯವಿದೆ, ನಿದರ್ಶನಕ್ಕೆ ಜಿಪುಣ. ಆದರೆ ಅಂಥ ಅತಿರೇಕಗಳನ್ನು ಪರಿಗಣಿಸದೆ, ವಿವೇಚನೆಯಿಂದಾಗಿ ಬದುಕಿನ ಅತ್ಯಂತ ಮೌಲಿಕವಾದ ಕೆಲವನ್ನು ಸುಲಭವಾಗಿ ಕಳೆದುಕೊಳ್ಳುವ ಪರಿಸ್ಥಿತಿಯುಂಟಾಗಬಹುದು. ಡಯೋನಿಸಸ್‌ನ ಆರಾಧಕ ವಿವೇಚನೆಯ ವಿರುದ್ಧ ಕಾರ್ಯಪ್ರವೃತ್ತನಾಗುತ್ತಾನೆ. ದೈಹಿಕವೋ ಆಧ್ಯಾತ್ಮಿಕವೋ ಆದ ಅಮಲಿನಲ್ಲಿ ವಿವೇಚನೆಯು ನಾಶಪಡಿಸಿದ ಭಾವತೀವ್ರತೆಗಳನ್ನು ಮರಳಿ ಪಡೆಯುತ್ತಾನೆ; ಜಗತ್ತು ಸುಖಸೌಂದರ್ಯಗಳಿಂದ ಕೂಡಿರುವಂತೆ ಅನುಭವ ಪಡೆಯುತ್ತಾನೆ, ದಿನನಿತ್ಯದ ಕೆಲಸಗಳಿಂದ ಅವನ ಕಲ್ಪನಾತ್ಮಕತೆಯು ಇದ್ದಕ್ಕಿದ್ದಂತೆ ಬಿಡುಗಡೆ ಪಡೆಯುತ್ತದೆ. ಬ್ಯಾಕಸ್ ದೇವತೆಯ ಆಚರಣೆಗಳು 'ಮೈಮರೆ'ವನ್ನು ಉಂಟುಮಾಡಿತು, ಅಂದರೆ ಆರಾಧಕನಲ್ಲಿ ದೇವತೆಯು ಆವಾಹಿತವಾಯಿತು, ಹೀಗಾಗಿ ಅವನು ತಾನು ದೇವತೆಯಲ್ಲಿ ಒಂದುಗೂಡಿರುವ ಅನುಭವವನ್ನು ಹೊಂದುತ್ತಾನೆ. ಮಾನವನ

ಸಾಧನೆಯ ಅತ್ಯುಚ್ಚವಾದವು ಕೆಲವು ಮಟ್ಟಿಗೆ ಅಮಲನ್ನು ಒಳಗೊಳ್ಳುವಂತಹವು,[೧೭] ಸ್ವಲ್ಪಮಟ್ಟಿಗೆ ವಿವೇಚನೆಯನ್ನು ಭಾವಾವೇಶವು ಆಕ್ರಮಿಸಿದಂತಹವು. ಬ್ಯಾಕಸ್ ಅಂಶವಿಲ್ಲದೆ ಬದುಕಿನಲ್ಲಿ ಸ್ವಾರಸ್ಯ ಉಳಿಯದು; ಅದರಿಂದಾಗಿ, ಅದು ಅಪಾಯಕಾರಿಯಾದುದು. ವಿವೇಚನೆ ಮತ್ತು ಭಾವಾವೇಶಗಳ ನಡುವಣ ಸಂಘರ್ಷವು ಇತಿಹಾಸದುದ್ದಕ್ಕೂ ನಡೆದುಕೊಂಡು ಬಂದಿದೆ. ಈ ಸಂಘರ್ಷದಲ್ಲಿ ನಾವು ಯಾವ ಕಡೆಯೂ ಸಂಪೂರ್ಣವಾಗಿ ಸೇರಿಕೊಳ್ಳಲಾಗದು.

ಚಿಂತನೆಯ ವಲಯದಲ್ಲಿ, ಪ್ರಶಾಂತ ನಾಗರಿಕತೆಯು ಸ್ಥೂಲವಾಗಿ ವಿಜ್ಞಾನಕ್ಕೆ ಸಂವಾದಿ. ಆದರೆ ವಿಜ್ಞಾನವು, ಕಲಬೆರಕೆಯಾಗದಿದ್ದರೆ, ತೃಪ್ತಿ ತರಲಾರದು; ಮನುಷ್ಯರಿಗೆ ಭಾವಾವೇಶವೂ ಬೇಕು, ಕಲೆ ಮತ್ತು ಮತಧರ್ಮಗಳೂ ಬೇಕು. ವಿಜ್ಞಾನವು ಜ್ಞಾನಕ್ಕೆ ಮಿತಿಯನ್ನು ಹೇರಬಹುದು, ಆದರೆ ಕಲ್ಪನೆಗೆ ಮಿತಿಯೊಡ್ಡಬಾರದು. ಗ್ರೀಕ್ ತತ್ವಜ್ಞಾನಿಗಳಲ್ಲಿ, ಆನಂತರದ ಕಾಲಗಳಲ್ಲಿದ್ದಂತೆಯೇ, ಕೆಲವರು ಮೂಲತಃ ವೈಜ್ಞಾನಿಕಪ್ರವೃತ್ತಿಯವರಾದರೆ, ಕೆಲವರು ಮೂಲತಃ ಮತಧಾರ್ಮಿಕ ಪ್ರವೃತ್ತಿಯವರು. ಎರಡನೆಯ ಗುಂಪಿನವರು, ನೇರವಾಗಿಯೋ ಪರೋಕ್ಷವಾಗಿಯೋ, ಹೆಚ್ಚಿನದಕ್ಕೆ ಬ್ಯಾಕಸ್ ಮತಧರ್ಮಕ್ಕೆ ಋಣಿಯಾಗಿದ್ದವರು. ಇದು ವಿಶೇಷವಾಗಿ ಅನ್ವಯಿಸುವುದು ಪ್ಲೇಟೋಗೆ, ಅವನ ಮೂಲಕ ಅಂತಿಮವಾಗಿ ಕ್ರಿಶ್ಚಿಯನ್ ಮತಧರ್ಮಶಾಸ್ತ್ರವು ಒಳಗೊಳ್ಳುವಂತಾದ ಆ ಮುಂದಿನ ಬೆಳವಣಿಗೆಗಳಗೆ.

ಡಯೋನಿಸಸ್‌ನ ಆರಾಧನೆಯು ತನ್ನ ಮೂಲ ಸ್ವರೂಪದಲ್ಲಿ ನಯವಿಹೀನವಾಗಿತ್ತು, ಅನೇಕ ವೇಳೆ ಅಸಹ್ಯಕರವಾಗಿತ್ತು. ಈ ರೂಪದಲ್ಲಿ ಅದು ತತ್ವಜ್ಞಾನಿಗಳ ಮೇಲೇನೂ ಪ್ರಭಾವ ಬೀರಲಿಲ್ಲ, ಆದರೆ ಆರ್ಫಿಯಸ್‌ಗೆ ಆರೋಪಿಸುವ ಅದರ ಆಧ್ಯಾತ್ಮಿಕ ರೂಪವು ವೈರಾಗ್ಯಪರವಾಗಿತ್ತು, ದೈಹಿಕ ಅಮಲಿನ ಜಾಗದಲ್ಲಿ ಮಾನಸಿಕ ಅಮಲಿಗೆ ಎಡೆಮಾಡಿಕೊಟ್ಟಿತು.

ಆರ್ಫಿಯಸ್‌ನದು ತೇಜೋಹೀನವಾದರೂ ಸ್ವಾರಸ್ಯಕರ ವ್ಯಕ್ತಿತ್ವ. ಅವನು ವಾಸ್ತವ ವ್ಯಕ್ತಿಯೇ ಆಗಿದ್ದ ಎಂದು ಕೆಲವರು ಹೇಳಿದರೆ, ಅವನು ದೇವತೆಯೋ ಕಲ್ಪನಾವೀರನೋ ಆಗಿದ್ದ ಎನ್ನುತ್ತಾರೆ ಮತ್ತೆ ಕೆಲವರು. ಪಾರಂಪರಿಕವಾಗಿ, ಅವನು ಮೂಡಿದುದು ಬ್ಯಾಕಸ್‌ನಂತೆಯೇ ಥ್ರೇಸ್‌ನಿಂದ, ಆದರೆ ಅವನು (ಅಥವಾ ಅವನ ಹೆಸರಿನೊಂದಿಗೆ ತಳುಕುಹಾಕಿಕೊಂಡ ಚಳವಳಿಯು) ಕ್ರೀಟ್‌ನಿಂದ ಬಂದುದು. ಆರ್ಫಿಕ್ ಸಿದ್ಧಾಂತಗಳು ಈಜಿಪ್ಟ್ ಮೂಲದಲ್ಲಿದ್ದುದನ್ನು ಒಳಗೊಂಡಿರುವುದು ನಿಶ್ಚಿತ; ಈಜಿಪ್ಟ್ ಮುಖ್ಯವಾಗಿ ಕ್ರೀಟ್ ಮೂಲಕವೇ ಗ್ರೀಸ್‌ನ ಮೇಲೆ ಪ್ರಭಾವ ಬೀರಿದುದು. ಆರ್ಫಿಯಸ್ ಒಬ್ಬ ಸುಧಾರಕನಾಗಿದ್ದು, ಬ್ಯಾಕಸ್‌ಸಂಬಂಧಿ

---

೧೭. ನಾನು ಹೇಳುತ್ತಿರುವುದು ಮದ್ಯದ ಅಮಲನ್ನಲ್ಲ, ಮಾನಸಿಕ ಅಮಲನ್ನು ಕುರಿತು.

ಸಂಪ್ರದಾಯಶರಣತೆಯಿಂದ ಉನ್ಮತ್ತ ಬ್ಯಾಕಸ್ ಉಪಾಸಕರು ಅವನನ್ನು ಚಿಂದಿಮಾಡಿಬಿಟ್ಟರು. ಅವನು ಸಂಗೀತಾರಾಧಕನಾಗಿದ್ದುದು ಅವನ ಕುರಿತ ಕತೆಗಳ ಮೂಲರೂಪದಲ್ಲಿ ಪ್ರಾಮುಖ್ಯವನ್ನು ಪಡೆದಿಲ್ಲವಾದರೂ ಮುಂದೆ ಅದಕ್ಕೆ ಪ್ರಾಮುಖ್ಯ ಉಂಟಾಯಿತು. ಮೂಲತಃ ಅವನೊಬ್ಬ ಪುರೋಹಿತ ಮತ್ತು ತತ್ವಜ್ಞಾನಿ.

ಆರ್ಫಿಯಸ್ (ಇದ್ದುದೇ ಆದರೆ) ಬೋಧಿಸಿದುದು ಏನೇ ಆಗಿರಲಿ, ಅವನ ಬೋಧನೆಗಳು ಪ್ರಸಿದ್ಧವಾದವೇ. ಅವು ಆತ್ಮಗಳ ದೇಹಾಂತರದಲ್ಲಿ ಶ್ರದ್ಧೆಯಿಟ್ಟಿದ್ದವು; ಸಾವಿನ ನಂತರ ಆತ್ಮವು ಇಹಲೋಕದಲ್ಲಿ ಬದುಕಿದ ರೀತಿಗನುಗುಣವಾಗಿ ಚಿರಶಾಂತಿಯನ್ನೋ ಶಾಶ್ವತ ಅಥವಾ ತಾತ್ಕಾಲಿಕ ಶಿಕ್ಷೆಯನ್ನೋ ಹೊಂದುತ್ತವೆಂದು ಬೋಧಿಸುತ್ತವೆ. ಅವು ಶುದ್ಧವಾಗುವ ಗುರಿಯನ್ನು ಹೊಂದಿದ್ದವು, ಇದು ಸಾಧ್ಯವಾಗುವುದು ಸ್ವಲ್ಪ ಮಟ್ಟಿಗಿನ ಶುದ್ಧೀಕರಣ ವಿಧಿಗಳಿಂದ ಹಾಗೂ ಸ್ವಲ್ಪ ಮಟ್ಟಿಗೆ ಕೆಲವು ಬಗೆಯ ಕಳಂಕಗಳಿಂದ ದೂರವಿರುವುದರ ಮೂಲಕ. ಅವುಗಳನ್ನು ನಂಬಿದವರಲ್ಲಿ ಅತ್ಯಂತ ಸಂಪ್ರದಾಯಸ್ಥವಾದವರು, ಧಾರ್ಮಿಕ ಆಚರಣೆಗಳ ಸಂದರ್ಭಗಳಲ್ಲಿ ಪ್ರಸಾದವೆಂದು ತಿನ್ನುವುದರ ಹೊರತಾಗಿ, ಪ್ರಾಣಿ ಆಹಾರದಿಂದ ದೂರವಿದ್ದರು. ಮಾನವನು ಸ್ವಲ್ಪಮಟ್ಟಿಗೆ ಮರ್ತ್ಯ, ಸ್ವಲ್ಪಮಟ್ಟಿಗೆ ದೈವಿಕ ಎಂದವರು ನಂಬಿದ್ದರು. ಪರಿಶುದ್ಧ ಬದುಕಿನಿಂದ ದೈವಿಕಾಂಶವು ಹೆಚ್ಚುತ್ತ ಮರ್ತ್ಯಭಾಗವು ಕ್ಷೀಣಿಸುತ್ತದೆ. ಕೊನೆಯಲ್ಲಿ, ವ್ಯಕ್ತಿಯೊಬ್ಬನು ಬ್ಯಾಕಸ್‌ನಲ್ಲಿ ಐಕ್ಯಗೊಳ್ಳಬಹುದು, ಆಗ ಅವನೂ ಬ್ಯಾಕಸ್ಸೇ ಆಗಿಬಿಡುತ್ತಾನೆ. ಅದರಲ್ಲಿ ವಿಶದವಾದ ಮತಧರ್ಮಶಾಸ್ತ್ರವಿತ್ತು; ಅದರ ಪ್ರಕಾರ ಬ್ಯಾಕಸ್ ಎರಡು ಬಾರಿ ಜನ್ಮಿಸಿದವನು, ಒಮ್ಮೆ ತಾಯಿ ಸೆಮೆಲಿಯ ಗರ್ಭದಿಂದ, ಮತ್ತೊಮ್ಮೆ ತನ್ನ ತಂದೆ ಸ್ಯೂಸ್‌ನ ತೊಡೆಯಿಂದ.

ಡಯೋನಿಸಸ್‌ಗೆ ಸಂಬಂಧಿಸಿದಂತೆ ಅನೇಕ ಬಗೆಯ ಪೌರಾಣಿಕತೆಯಿದೆ. ಅದರಲ್ಲಿನ ಒಂದರ ಪ್ರಕಾರ, ಡಯೋನಿಸಸ್ ಸ್ಯೂಸ್ ಮತ್ತು ಪರ್ಸಿಫೋನಿಯರ ಮಗ; ಇನ್ನೂ ಹುಡುಗನಾಗಿರುವಾಗಲೇ, ಅವನನ್ನು ಟೈಟನ್ನರು ಚೂರುಚೂರು ಕತ್ತರಿಸಿದರು, ಹೃದಯವೊಂದನ್ನುಳಿದು ಮಿಕ್ಕಂತೆ ಅವನ ಮಾಂಸವನ್ನು ತಿಂದರು. ಕೆಲವರ ಪ್ರಕಾರ, ಈ ಹೃದಯವನ್ನು ಸ್ಯೂಸ್ ಸೆಮೆಲಿಗೆ ಕೊಟ್ಟ; ಮತ್ತೆ ಕೆಲವರ ಪ್ರಕಾರ, ಸ್ಯೂಸ್ ಅದನ್ನು ನುಂಗಿದ; ಈ ಎರಡರ ಪ್ರಕಾರವೂ, ಅವನಿಗೆ ಇದರಿಂದ ಮರುವುಟ್ಟು ಉಂಟಾಯಿತು. ಬ್ಯಾಕಸ್ ಆರಾಧಕರು ಕಾಡುಪ್ರಾಣಿಗಳನ್ನು ತುಂಡುಗಳನ್ನಾಗಿಸಿ ಹಸಿ ಮಾಂಸವನ್ನು ತಿನ್ನುವುದು, ಟೈಟನ್ನರು ಡಯೋನಿಸಸ್ ಅನ್ನು ತುಂಡುತುಂಡು ಮಾಡುವುದನ್ನು ಸಂಕೇತಿಸುತ್ತದೆ; ಕೆಲವರ್ಥದಲ್ಲಿ ಆ ಪ್ರಾಣಿಯು ದೇವರ ಅವತಾರ. ಟೈಟನ್ನರು ಭೂಮಿಯಲ್ಲಿ ಹುಟ್ಟಿದವರು, ಆದರೆ ದೇವತೆಯನ್ನು ತಿನ್ನುವ ಮೂಲಕ ಅವರಲ್ಲಿ ದೈವಿಕತೆಯ ಅಂಶವೊಂದು ಸೇರಿಕೊಂಡಿತು. ಹೀಗಾಗಿ ಮಾನವರು ಭಾಗಶಃ ಮರ್ತ್ಯರು, ಭಾಗಶಃ ದೈವಿಕತೆಯುಳ್ಳವರು; ಬ್ಯಾಕಸ್‌ಸಂಬಂಧಿ

ಆಚರಣೆಗಳು ಅವನನ್ನು ಪೂರ್ಣ ದೈವಿಕತೆಯೆಡೆಗೆ ನಡೆಸುವುದೇ ಆಗಿದೆ.

ಈಡಿಪಸ್ ಆರ್ಫಿಯಸ್ ಪುರೋಹಿತನ ಬಾಯಲ್ಲಿ ಒಂದು ತಪ್ಪೊಪ್ಪಿಗೆಯನ್ನು ಹೇಳಿಸುತ್ತಾನೆ; ಅದು ಬೋಧಪ್ರದವಾಗಿದೆ.[೧೮]

ಡೈರಿಯನ್ ವಂಶದ ಒಡೆಯನೇ,
ಜ್ಯೂಸ್‌ನ ಮಗನೇ, ನಿನ್ನ ಪಾದದಡಿ
ಕ್ರೀಟರ ನೂರಾರು ಪೀಠಗಳನ್ನು ಹೊಂದಿದವನೇ,
ನಾನು ಮಂಕು ಗುಡಿಯಿಂದ ನಿನ್ನಿಂದ ಇದನ್ನು ಬಯಸುತ್ತೇನೆ,

ಕಬ್ಬಿಣಯುತ ಉಕ್ಕು ಮತ್ತು ಎತ್ತಿನ ರಕ್ತಗಳಿಂದಲೂ
ಸೈಪ್ರಸ್ ಮರದ ದೋಷರಹಿತ ಜಂತೆಗಳಿಂದಲೂ
ನಿರ್ಮಿತವಾದ ಶೀಘ್ರ ಹಾಗೂ ಕೆತ್ತನೆಯ
ತೊಲೆಗಳ ಸದೃಢ ಸೂರಿನಡಿ ಇರುವವನೇ,

ನನ್ನ ದಿನಗಳ ಪರಿಶುದ್ಧ ತೊರೆ ಹರಿದಿದೆ,
ಐಡಿಯನ್ ಜೋವ್[೧೯]ನ ದೀಕ್ಷಾಸ್ನಾನ ಹೊಂದಿದ
ಝಾಗ್ರಿಯಸ್ ಸುತ್ತಾಡುವೆಡೆ ಸುತ್ತಾಡುವ ಸೇವಕ ನಾನು
ಅವನ ಗುಡುಗುರೋದನವನ್ನು ಸಹಿಸಿಕೊಂಡಿದ್ದೇನೆ.

ಕೆಂಪು ರಕ್ತಸಿಕ್ತ ಔತಣಗಳನ್ನು ಅವನಿಗರ್ಪಿಸಿರುವೆ;
ಮಹಾಮಾತೆಯ ಜ್ವಾಲೆಯನ್ನೆತ್ತಿ ಹಿಡಿದಿರುವೆ,
ಬಿಡುಗಡೆ ಸಿಕ್ಕಿ ಬ್ಯಾಕಸ್ ಎಂಬ ಹೆಸರ ಕೊಟ್ಟಿದ್ದಾರೆ
ಕವಚ ತೊಟ್ಟ ಪುರೋಹಿತರು.

ಮಾನವನ ಕ್ಷುದ್ರ ಜನ್ಮದಿಂದ ಸತ್ತ ಜೇಡಿಯ ಮಣ್ಣು
ನಾನು ಪರಿಶುದ್ಧ ಬಿಳಿಯ ಉಡುಪನ್ನುಟ್ಟು ಪರಿಶುದ್ಧನಾಗಿ,
ಜೀವ ತುಂಬಿದ್ದ ಮಾಂಸವನ್ನು ನನ್ನ ತುಟಿಗಳಿಗೆ
ಮುಟ್ಟಿಸದೆ ದೂರ ನಿಂತಿದ್ದೇನೆ.

---

೧೮. ಈ ಅಧ್ಯಾಯದಲ್ಲಿನ ಪದ್ಯಾನುವಾದಗಳು ಪ್ರೊಫೆಸರ್ ಗಿಲ್ಬರ್ಟ್ ಮರ್ರೆಯವರದು.
೧೯. ಡಯೋನಿಸಸ್‌ನೊಡನೆ ರಹಸ್ಯಾಚರಣೆಯಲ್ಲಿ ಗುರುತಿಸಲಾದವನು.

ಸಮಾಧಿಗಳಲ್ಲಿ ಆರ್ಫಿಕ್ ಫಲಕಗಳು ದೊರಕಿವೆ, ಮುಂದಿನ ಜಗತ್ತಿನ ದಾರಿಯನ್ನು ಹೇಗೆ ಕ್ರಮಿಸಬೇಕು, ಹಾಗೂ ಮುಕ್ತಿ ಹೊಂದಲು ಅರ್ಹತೆಯನ್ನು ಸಾಬೀತುಪಡಿಸಲು ಏನು ಹೇಳಬೇಕು ಎಂಬುದರ ಕುರಿತು ಅವುಗಳಲ್ಲಿ ಸತ್ತ ವ್ಯಕ್ತಿಯ ಆತ್ಮಕ್ಕೆ ಸಲಹೆಗಳನ್ನು ನೀಡಲಾಗಿದೆ. ಬಹುಪಾಲು ಅವೆಲ್ಲ ತುಂಡು ತುಂಡಾದ ಅಪೂರ್ಣ ವಾಕ್ಯಗಳು; ಆದರೆ ಹೆಚ್ಚು ಪೂರ್ಣವೆನಿಸುವ (ಪೆಟೇಲಿಯ ಫಲಕ) ಪಠ್ಯ ಹೀಗಿದೆ:

ಹೇಡೀಸ್ ಭವನದ ಎಡಕ್ಕೆ ನಿನಗೆ ಕಾಣುವುದು ಒಂದು ಚಿಲುಮೆಯ ತಾಣ.
ಅದರ ಬದಿಗಿದೆ ಒಂದು ಬಿಳಿಯ ಸೈಪ್ರೆಸ್.
ಈ ಬಾವಿ–ಚಿಲುಮೆಯು ಹತ್ತಿರವೇನಿಲ್ಲ.
ನೆನಪು ಸರಸಿನ ಬದಿಗೆ ನಿನಗೆ ಮತ್ತೊಂದು ಕಾಣಿಸುವುದು.
ತಂಪು ನೀರಿನ ಹರಿವು ಅದರದ್ದು, ಅದಕ್ಕೆ ಕಾವಲುಗಾರರಿರಿರುವರು,
ಹೇಳು: 'ನಾನು ಮರ್ತ್ಯ ಹಾಗೂ ಚಿಕ್ಕೆಗಳ ಸ್ವರ್ಗದ ಶಿಶು;
ಆದರೆ ನನ್ನ ವಂಶವು ಸ್ವರ್ಗದ್ದು ಮಾತ್ರ, ಇದು ನಿನಗೇ ಗೊತ್ತು.
ಅಯ್ಯೋ, ಬಾಯಾರಿ ನನ್ನ ಬಾಯಿ ಒಣಗಿದೆ, ಸಾಯುತ್ತಿದ್ದೇನೆ,
ನೆನಪು ಸರಸಿನ ತಂಪು ನೀರನು ನನಗೆ ಬೇಗ ನೀಡಿ.'
ತಾವೇ ನಿನಗವರು ಪರಿಶುದ್ಧ ಬಾವಿ–ಚಿಲುಮೆಯ ನೀರನ್ನು ಕರುಣೆಯಿಂದ ನೀಡುವರು,
ಆ ಬಳಿಕ ಇತರ ವೀರರ ಜೊತೆಗೆ ನಿನಗೆ ದೈವತ್ವ ಲಭಿಸುವುದು .. ..

ಮತ್ತೊಂದು ಫಲಕದಲ್ಲಿ ಹೀಗಿದೆ: 'ಕಷ್ಟಗಳನನುಭವಿಸಿ ನರಳಿರುವ ನಿನಗೆ ಸ್ವಾಗತ .. .. ಇಂತಹವರೇ ಮಾನವತ್ವದಿಂದ ದೈವತ್ವಕ್ಕೇರುವವರು.' ಮತ್ತೊಂದು: 'ಆನಂದದ ಪರಿಶುದ್ಧ ಜೀವಿಯೇ, ನೀನು ಮಾನವನ ಬದಲು ದೇವರೇ ಆಗುತ್ತೀಯೆ.'

ಆತ್ಮವು ಕುಡಿಯಬೇಕಾದ ಚಿಲುಮೆಮೂಲದ ನೀರು ಲೀತಿ ನದಿಯದಲ್ಲ, ಅದರಿಂದ ಮರವೆಯುಂಟಾಗುತ್ತದೆ; ಮತ್ತೊಂದು ಚಿಲುಮೆಮೂಲವೆಂದರೆ ನೆಮೋಸೈನ್, ಜ್ಞಾಪಕಶಕ್ತಿ. ಮುಂದಿನ ಜಗತ್ತಿನಲ್ಲಿ ಆತ್ಮವು ಮುಕ್ತಿಯನ್ನು ಹೊಂದಬೇಕಾದರೆ, ಮರೆಯಬಾರದು, ಅದರ ಬದಲು, ಸಹಜವಾದುದಕ್ಕಿಂತ ಹೆಚ್ಚಿನ ಜ್ಞಾಪಕಶಕ್ತಿಯನ್ನು ಸಂಪಾದಿಸಬೇಕು.

ಆರ್ಫಿಕ್ ಆರಾಧಕರದು ವೈರಾಗ್ಯಪರ ಪಂಥ; ದ್ರಾಕ್ಷಾರಸ ಅವರಿಗೆ ಒಂದು ಸಂಕೇತ ಅಷ್ಟೆ; ಮುಂದೆ, ಕ್ರಿಶ್ಚಿಯನ್ ಮತಸಂಸ್ಕಾರಗಳಲ್ಲಿದ್ದಂತೆ. ಅವರು ಬಯಸಿದ ಪ್ರಮತ್ತತೆಯೆಂದರೆ ದೇವರ ಜೊತೆಗಿನ ಐಕ್ಯದ 'ಸಂಭ್ರಮ.' ಸಾಮಾನ್ಯ ವಿಧಾನಗಳಿಂದ ಪಡೆಯಲಾರದ ರಹಸ್ಯಾಚರಣೆಯ ಜ್ಞಾನವನ್ನು ಈ ವಿಧಾನದಿಂದ ಹೊಂದಬೇಕೆಂಬ ಶ್ರದ್ಧೆಯವರು ಅವರು. ಈ ರಹಸ್ಯಾಚರಣೆಯ ಅಂಶವು ಪೈಥಾಗೊರಾಸ್‌ನಿಂದ

ಗ್ರೀಕ್ ತತ್ವಜ್ಞಾನದಲ್ಲಿ ಸೇರಿಕೊಂಡಿತು, ಅವನು ಆರ್ಫಿಸಮ್‌ನ ಸುಧಾರಕ, ಯಾಕೆಂದರೆ ಆರ್ಫಿಯಸ್ ಕೂಡ ಒಬ್ಬ ಡಯೋನಿಸಸ್ ಮತಧರ್ಮ ಸುಧಾರಕನಾಗಿದ್ದವನು. ಆರ್ಫಿಕ್ ಅಂಶಗಳು ಪೈಥಾಗೊರಾಸ್‌ನಿಂದ ಪ್ಲೇಟೋನ ತತ್ವಜ್ಞಾನದಲ್ಲಿ, ಪ್ಲೇಟೋನಿಂದ ಆನಂತರದ ಬಹುತೇಕ ತತ್ವಜ್ಞಾನದಲ್ಲಿ ಸೇರಿಕೊಂಡವು, ಅವೆಲ್ಲ ಬಹುತೇಕ ಮತಧಾರ್ಮಿಕವಾದವೇ.

ಆರ್ಫಿಸಂ ಎಲ್ಲೆಲ್ಲಿ ಪ್ರಭಾವಶಾಲಿಯಾಯಿತೋ ಅಲ್ಲೆಲ್ಲ ಖಚಿತವಾಗಿ ಬ್ಯಾಕಿಕ್ ಎನಿಸುವ ಕೆಲವು ಅಂಶಗಳು ಉಳಿದುಕೊಂಡುವು. ಅವುಗಳಲ್ಲಿ ಒಂದು ಸ್ತ್ರೀಲಕ್ಷಣ. ಇದರ ಸಾಕಷ್ಟು ಅಂಶಗಳನ್ನು ಪೈಥಾಗೊರಾಸ್‌ಲ್ಲಿಯೇ ಕಾಣಬಹುದು. ಇದು ಪ್ಲೇಟೋನಲ್ಲಿ ಸ್ತ್ರೀಯರಿಗೆ ಸಂಪೂರ್ಣ ರಾಜಕೀಯ ಸಮಾನತೆ ದೊರೆಯಬೇಕೆಂದು ವಾದಿಸುವವರೆಗೂ ಹೋಯಿತು. 'ಹೆಂಗಸರು ಒಂದು ಲಿಂಗದವರಾಗಿ ಸಹಜವಾಗಿಯೇ ಹೆಚ್ಚು ಪರಿಶುದ್ಧರು' ಎನ್ನುತ್ತಾನೆ ಪೈಥಾಗೊರಾಸ್. ಮತ್ತೊಂದು ಬ್ಯಾಕಿಕ್ ಅಂಶ ಎಂದರೆ ತೀವ್ರ ಭಾವೋದ್ರೇಕದ ಬಗ್ಗೆ ಗೌರವಭಾವ. ಗ್ರೀಕ್ ರುದ್ರನಾಟಕಗಳು ಡಯೋನಿಸಸ್ ಆಚರಣೆಗಳಿಂದಾಗಿಯೇ ಹುಟ್ಟಿದುವು. ಅದರಲ್ಲೂ ಯೂರಿಪಿಡೀಸ್, ಆರ್ಫಿಸಮ್‌ನ ಇಬ್ಬರು ಪ್ರಮುಖ ದೇವತೆಗಳಿಗೆ ಗೌರವವಿತ್ತ, ಅವರೇ ಡಯೋನಿಸಸ್ ಮತ್ತು ಈರಾಸ್. ಅವನಿಗೆ ತಣ್ಣನೆಯ ಧಾರ್ಮಿಕ ಸನ್ನಡತೆಯವರ ಬಗ್ಗೆ ಅಷ್ಟೊಂದು ಗೌರವವಿರಲಿಲ್ಲ, ಅಂಥವರು ಅವನ ರುದ್ರನಾಟಕಗಳಲ್ಲಿ ಸೂಕ್ತ ರೀತಿಯಲ್ಲಿ ಮತಿಭ್ರಮಣೆಗೊಳಗಾಗುತ್ತಾರೆ ಅಥವಾ ತಮ್ಮ ಧರ್ಮದ್ರೋಹದಿಂದ ಕುಪಿತರಾದ ದೇವತೆಗಳಿಂದ ದುಃಖಕ್ಕೊಳಗಾಗುತ್ತಾರೆ.

ಗ್ರೀಕರ ಬಗೆಗಿನ ಪಾರಂಪರಿಕ ಸಂಪ್ರದಾಯವೆಂದರೆ ಅವರು ಅಭಿನಂದನಾರ್ಹ ಪ್ರಶಾಂತತೆಯನ್ನು ಹೊಂದಿದವರು, ಅದರಿಂದ ಅವರು ಭಾವಾವೇಶವನ್ನು ಹೊರಗಿನಿಂದ ಪರಿಭಾವಿಸುವಲ್ಲಿ ಸಮರ್ಥರಾದರು, ಅವರು ವ್ಯಕ್ತವಾದ ಚೆಲುವನ್ನು ಕಾಣಬಲ್ಲವರಾದರು, ಆದರೆ ಶಾಂತಚಿತ್ತರೂ ಸಮಚಿತ್ತದವರೂ ಆದರು. ಇದು ಏಕಪಕ್ಷೀಯ ದೃಷ್ಟಿಕೋನವೇ ಸರಿ. ಅದು ಪ್ರಾಯಶಃ ಹೋಮರ್, ಸಾಫೋಕ್ಲೀಸ್ ಮತ್ತು ಅರಿಸ್ಟಾಟಲ್‌ರ ವಿಷಯದಲ್ಲಿ ನಿಜವಾದುದು ಕೂಡ; ಆದರೆ ನೇರವಾಗಿಯೋ ಪರೋಕ್ಷವಾಗಿಯೋ ಬ್ಯಾಕಿಕ್ ಅಥವಾ ಆರ್ಫಿಕ್ ಅಂಶಗಳ ಪ್ರಭಾವಕ್ಕೊಳಗಾದ ಗ್ರೀಕರ ವಿಷಯದಲ್ಲಿ ಖಚಿತವಾಗಿ ಹೀಗೆ ಹೇಳಲು ಸಾಧ್ಯವಿಲ್ಲ. ಅಥೀನಿಯನ್ ಅಧಿಕೃತ ಮತಧರ್ಮದ ಬಹು ಪರಿಶುದ್ಧ ಭಾಗವು ಬಹುತೇಕ ಎಲ್ಯೂಸಿಯನ್ ರಹಸ್ಯಾಚರಣೆಗಳಿಂದ ಕೂಡಿದ್ದು, ಎಲ್ಯೂಸಿಸ್‌ನಲ್ಲಿ ಹಾಡಲಾಗುತ್ತಿದ್ದ ಒಂದು ಕೀರ್ತನೆಯು ಹೀಗಿದೆ:

ನಿನ್ನ ದ್ರಾಕ್ಷಾರಸ ಬಟ್ಟಲು ಮೇಲೆತ್ತಿ
ನಿನ್ನ ಪ್ರಮತ್ತ ಸಮಾರಂಭದೊಡನೆ,

ಎಲ್ಯೂಸಿಸ್‌ನ ಹೂದುಂಬಿದ ಕಣಿವೆಗೆ
ಸೆಣಸುವ ಬ್ಯಾಕಸ್, ನಿನಗೆ ಈ ಸ್ತೋತ್ರ ಸ್ವಾಗತ!

ಯೂರೀಪಿಡೀಸ್‌ನ 'ಬ್ಯಾಕೆ'ಯಲ್ಲಿನ ಮೇಳದವರಾದ ಬ್ಯಾಕಸ್ ಆರಾಧಕರು (ಮೇಇನಾಡ್) ಪ್ರಶಾಂತತೆಗೆ ವಿರುದ್ಧವಾಗಿ ಕಾವ್ಯ ಹಾಗೂ ಅನಾಗರಿಕತೆಗಳ ಮಿಶ್ರಣವನ್ನು ತೋರಿಸುತ್ತಾರೆ. ಒಂದು ಕಾಡುಪ್ರಾಣಿಯ ಅಂಗಾಂಗಗಳನ್ನು ಕೊಯ್ದು ಚೂರು ಚೂರು ಮಾಡಿ ಅಲ್ಲಿಯೇ ಆಗಲೇ ಆ ಹಸಿಮಾಂಸವನ್ನು ತಿನ್ನುತ್ತಾರೆ.

ಓ ಸಂತಸ, ಸಂತಸ ಪರ್ವತಗಳ ತುದಿಯಲ್ಲಿ
ಪರಿಶುದ್ಧ ಪ್ರಾಣಿಯ ಚರ್ಮ ಜೋತಾಡುತ್ತಿರುವಾಗ,
ಮತ್ತೆಲ್ಲವೂ ಕೊಚ್ಚಿಹೋಗುತ್ತಿರುವಾಗ
ಸವೆದ ಆಯುಸ್ಸಿನಲ್ಲಿ ಕರಗಿಹೋಗಿಬಿಡುವುದು.
ಹರಿದ ಪರಿಶುದ್ಧ ಆಡಿನ ರಕ್ತದಿಂದ
ಕಾಡುಮಿಗದ ಬೇಟೆಯ ವೈಭವಗಳೆಲ್ಲ,
ಬೇಗ ಕೆಂಪಗಾದ ಪರ್ವತಗಳ ಆನಂದಕೆ,
ಬೆಟ್ಟತುದಿಯ ಮೇಲೆ ಬೆಳಗು ಹರಿಯುವಾಗ.
ಫ್ರೀಜಿಯನ್ ಲಿಡಿಯಗಳ ಪರ್ವತಗಳಿಗೆ
ಬ್ರೊಮೊಯೋಸ್ ತೋರಿಸುವನು ಹಾದಿಯ.

(ಬ್ರೋಮಿಯೋಸ್ ಎಂಬುದು ಡಯೋನಿಸಸ್‌ಗಿದ್ದ ಅನೇಕ ಹೆಸರುಗಳಲ್ಲಿ ಒಂದು). ಪರ್ವತಗಳ ಮೇಲಿನ ಮೇಇನಾಡ್‌ಗಳ ನರ್ತನವು ಬಿರುಸಿನದು ಮಾತ್ರವಲ್ಲ, ನಾಗರಿಕತೆಯ ಭಾರ ಮತ್ತು ರಕ್ಷಣೆಗಳಿಂದ ಮಾನವೇತರ ಸೌಂದರ್ಯ ಮತ್ತು ಗಾಳಿ ಹಾಗೂ ನಕ್ಷತ್ರಗಳ ಸ್ವಾತಂತ್ರ್ಯದತ್ತ ಪಾರಾಗಿ ಹೋಗುವುದೂ ಹೌದು. ಸ್ವಲ್ಪ ಕಡಿಮೆ ಉನ್ಮತ್ತತೆಯಲ್ಲಿ ಅವರ ಹಾಡು:

ಚಿಕ್ಕೆಗಳು ಮರೆಯಾಗುವವರೆಗೂ ಕತ್ತಲಲ್ಲಿ
ನೀಳ ನೀಳ ನರ್ತನಗಳು,
ನನ್ನ ಬಳಿಗೆ ಎಂದಾದರೂ ಮತ್ತೆ ಬರುವುವೋ?
ಗಂಟಲ ಬಳಿ ಇಬ್ಬನಿಯ, ನನ್ನ ಕೂದಲಲ್ಲಿ ಗಾಳಿಯ
ಸ್ಪರ್ಶ ನನಗಾಗುವುದೋ? ನಮ್ಮ ಬಿಳಿಯ ಪಾದ
ಮಂಕಾದ ವಿಸ್ತಾರದಲ್ಲಿ ಹೊಳೆಯುವುದೋ?
ಹುಲ್ಲು ಚೆಲುವುಗಳಲ್ಲಿ ಒಂಟಿಯಾಗಿ ಕಾಡಿನೆಡೆಗೆ
ಭಯವ ತೊರೆದ ಬೇಟೆಮಿಗವು
ಓಡಿಹೋದ ಜಿಂಕೆಮರಿಯ ಕಾಲುಗಳು
ಬಲೆಯ ಮೀರಿ ಸಾವಿನಿಂದ ದೂರ ಓಡಿದೋಟ.

ದೂರದಲ್ಲಿ ಇನ್ನೂ ದನಿಯೊಂದು ಕೇಳುತಿದೆ,
ಭಯದ ಕೂಗು, ಬೇಟೆ ನಾಯ ರಭಸದೋಟ,
ಬಿರುಸಿನ ಶ್ರಮ, ಜೋರು ಓಟದರೆಳೆ,
ದೂರ ದೂರ, ಆದರೂನು ನದಿಯ ಗುಂಟ ಕಣಿವೆಯಲ್ಲಿ,
ಅದೇನು ಆನಂದವೋ ಭಯವೋ, ಬಿರುಗಾಳಿಯ ರಭಸ ಹೆಜ್ಜೆ?
ಜನರ ಕಾಟದಿಂದ ದೂರವಾದ ನಿರಾಳ ನೆಲದೆಡೆಗೆ,
ದನಿಯಾವುದೂ ಕೇಳಿಸದೆಡೆ, ನೆರಳ ಹಸುರ ನಡುವಿನಲ್ಲಿ
ಕಾಡುಮೇಡುಗಳ ಕಿರುಜೀವಗಳು ಕಾಣದಂತೆ ಬದುಕುವುವು.

ಗ್ರೀಕರು 'ಪ್ರಶಾಂತ'ರೆಂಬುದನ್ನು ಪುನರುಚ್ಚರಿಸುವ ಮುಂಚೆ, ಫಿಲೆಡೆಲ್ಫಿಯದ ವಿವಾಹಿತೆಯರು ಯೂಜೀನ್ ಓ'ನೀಲ್‌ನ ನಾಟಕವೊಂದರಲ್ಲಿಯಾದರೂ ಈ ರೀತಿಯಲ್ಲಿ ನಡೆದುಕೊಳ್ಳುವುದನ್ನು ಕಲ್ಪಿಸಿಕೊಳ್ಳಿ.

ಡಯೋನಿಸಸ್‌ನ ಸುಧಾರಣೆಯಿಲ್ಲದ ಆರಾಧಕರಿಗಿಂತ ಆರ್ಫಿಕ್‌ರು ಹೆಚ್ಚೇನೂ 'ಪ್ರಶಾಂತ'ರಲ್ಲ. ಆರ್ಫಿಕ್‌ರಿಗೆ ಈ ಲೋಕದ ಬದುಕೆಂದರೆ ನೋವು ಮತ್ತು ದಣಿವುಗಳಷ್ಟೆ. ಬದುಕು–ಸಾವುಗಳ ಕೊನೆಯಿಲ್ಲದೆ ತಿರುಗುವ ಚಕ್ರಕ್ಕೆ ಸಿಲುಕಿರುವವರು ನಾವು, ನಮ್ಮ ನಿಜವಾದ ಬದುಕು ನಕ್ಷತ್ರಗಳು, ಆದರೆ ನಾವು ಭೂಮಿಗೆ ಬದ್ಧರಾಗಿದ್ದೇವೆ. ಶುದ್ಧೀಕರಣ ಮತ್ತು ಪ್ರಾಯಶ್ಚಿತ್ತಗಳ ಮೂಲಕ ಹಾಗೂ ವಿರಕ್ತ ಬದುಕಿನಿಂದ ಮಾತ್ರವೇ ಈ ಚಕ್ರದಿಂದ ನಾವು ಬಿಡುಗಡೆಗೊಳ್ಳಬಹುದು, ಕೊನೆಯಲ್ಲಿ ಪರಮಾತ್ಮನಲ್ಲಿ ಐಕ್ಯವಾಗಿ ಚಿರಸುಖವನ್ನು ಪಡೆಯಬಹುದು.

ನಾನು ಮನೆಗೆ ಹಿಂದಿರುಗಿದಾಗ,
ನನ್ನೆಲ್ಲ ಬವಣೆಗಳನ್ನು ದೇವರಲ್ಲಿ ತೋಡಿಕೊಳ್ಳುತ್ತೇನೆ.

ಎಲ್ಲರೂ ಅಲ್ಲದಿದ್ದರೂ, ಬಹುಪಾಲು ಗ್ರೀಕರು ಭಾವಾವೇಶವುಳ್ಳವರು, ಅಸುಖಿಗಳು, ತಮ್ಮಲ್ಲಿಯೇ ಬಡಿದಾಡುಕೊಳ್ಳುತ್ತಿದ್ದವರು, ಒಂದು ಕಡೆ ಬುದ್ಧಿಶಕ್ತಿಯಿಂದ ಮುಂದುವರಿಯುತ್ತ, ಮತ್ತೊಂದೆಡೆ ಸ್ವರ್ಗ ಮತ್ತು ನರಕಸೃಷ್ಟಿ ಮಾಡುವ ಹಟಮಾರಿತನದ ಕಲ್ಪನೆಯಿಂದ ಭಾವಾವೇಶಕ್ಕೊಳಗಾಗುತ್ತ ಇದ್ದವರು. 'ಅತಿರೇಕ ಕೂಡದು' ಎಂಬ ಧ್ಯೇಯದವರಾದರೂ, ಎಲ್ಲದರಲ್ಲೂ ಅತಿರೇಕದವರು – ಶುದ್ಧ ಚಿಂತನೆಯಲ್ಲಿ, ಕಾವ್ಯರಚನೆಯಲ್ಲಿ, ಮತಧರ್ಮದಲ್ಲಿ, ಮತ್ತು ಪಾಪಕಾರ್ಯದಲ್ಲಿ. ಈ ಭಾವಾವೇಶ ಮತ್ತು ಚಿಂತನೆಗಳ ಸಮಾಗಮವೇ ಅವರನ್ನು ಶ್ರೇಷ್ಠರನ್ನಾಗಿ ಮಾಡಿದ್ದು, ಶ್ರೇಷ್ಠರಾಗಿದ್ದದ್ದು. ಎರಡೂ ಒಟ್ಟಿಗೇ ಬದಲಾಯಿಸಿದಂತೆ ಅವುಗಳಲ್ಲಿ ಒಂದು ಮಾತ್ರವೇ; ಎಂದೂ ಜಗತ್ತನ್ನು ಬದಲಾಯಿಸಲಾಗುತ್ತಿರಲಿಲ್ಲ. ಪುರಾಣಗಳಲ್ಲಿ ಅವರ ಮಾದರಿ ಒಲಿಂಪಿಯದ ಸ್ಯೂಸ್ ಅಲ್ಲ, ಅವನೆಂದರೆ ಸ್ವರ್ಗದಿಂದ ಬೆಂಕಿಯನ್ನು ಹೊತ್ತು ತಂದು ಚಿರಂತನ ಯಾತನೆಗೆ ಗುರಿಯಾದ ಪ್ರೊಮಿಥಿಯಸ್.

ಗ್ರೀಕರ ಒಟ್ಟಾರೆ ಲಕ್ಷಣಗಳನ್ನು ಹೇಳುವಾಗ, ಈಗ ವಿವರಿಸಿದ ಲಕ್ಷಣಗಳನ್ನಷ್ಟೇ ಹೇಳಿದರೆ, ಅದು ಗ್ರೀಕರ ಲಕ್ಷಣ 'ಪ್ರಶಾಂತತೆ' ಎಂದು ಹೇಳಿದಂತೆಯೇ ಏಕಪಕ್ಷೀಯವಾಗುತ್ತದೆ. ವಾಸ್ತವದಲ್ಲಿ, ಗ್ರೀಸ್‌ನಲ್ಲಿ ಎರಡು ಪ್ರವೃತ್ತಿಗಳಿದ್ದವು: ಒಂದು ಭಾವಾವೇಶ, ಅನುಭಾವಿಕತೆ, ಪರಲೋಕಾಸಕ್ತಿ ಇವುಗಳದ್ದಾದರೆ, ಮತ್ತೊಂದು ಲವಲವಿಕೆ, ಪ್ರಯೋಗವಾದ ಹಾಗೂ ವಿವಿಧ ವಿಷಯಗಳ ಬಗೆಗಿನ ಜ್ಞಾನವನ್ನು ಪಡೆಯಬೇಕೆನ್ನುವ ಆಸಕ್ತಿಗಳಿಂದ ಕೂಡಿದುದು. ಹೆರಾಡೊಟಸ್ ಎರಡನೆಯ ಪ್ರವೃತ್ತಿಯನ್ನು ಪ್ರತಿನಿಧಿಸುತ್ತಾನೆ; ಹಾಗೆಯೇ ಅತ್ಯಂತ ಪ್ರಾಚೀನ ಅಯೋನಿಯನ್ ತತ್ವಜ್ಞಾನಿಗಳು; ಅಂತೆಯೇ, ಒಂದು ಹಂತದವರೆಗೆ, ಅರಿಸ್ಟಾಟಲ್. ಬೆಲೋಕ್[೨೦] ಆರ್ಫಿಸಮ್ ಅನ್ನು ವರ್ಣಿಸಿದ ಬಳಿಕ ಹೀಗೆನ್ನುತ್ತಾರೆ:

'ಆದರೆ ಗ್ರೀಕ್ ದೇಶದಲ್ಲಿ, ಈ ಜಗತ್ತನ್ನು ನಿರಾಕರಿಸಿ ನಿಜದ ಬದುಕು ಇದಾದ ಮೇಲಿದೆಯೆಂಬ ಶ್ರದ್ಧೆಯ ಬಗ್ಗೆ ಯುವ ಹುಮ್ಮಸ್ಸು ತುಂಬಿಕೊಂಡಿತ್ತು. ಅದಕ್ಕನುಗುಣವಾಗಿ, ಆರ್ಫಿಕ್ ಸಿದ್ಧಾಂತವು ದೀಕ್ಷಾಸ್ನಾನ ಪಡೆದ ಸಣ್ಣ ಗುಂಪಿಗೆ ಸೀಮಿತವಾಗಿತ್ತು. ಅದರ ಪ್ರಭಾವವು – ದೇಶದ ಮತಧರ್ಮದ ಮೇಲೆ, ಅನುಭಾವಿಕತೆಗಳ ವೈಭವೀಕರಣವನ್ನು ದೇಶದ ಮತಧರ್ಮಾಚರಣೆಗಳಲ್ಲಿ ಸೇರಿಸಿ ಕಾನೂನಾತ್ಮಕ ರಕ್ಷಣೆಯೊದಗಿಸಿದ್ದ ಅಥೆನ್ಸ್‌ನಂತಹ ಸಣ್ಣ ಸಮುದಾಯಗಳ ಮೇಲೆ ಕೂಡ – ಕಿಂಚಿತ್ತೂ ಇರಲಿಲ್ಲ. ಈ ಚಿಂತನೆಗಳು – ಸಾಕಷ್ಟು ಬೇರೆ ಮತಧರ್ಮಶಾಸ್ತ್ರ ರೂಪದಲ್ಲಿ ಎಂಬುದು ನಿಜ –ಗ್ರೀಕ್ ಜಗತ್ತನ್ನು ಗೆಲ್ಲಲು ಒಂದು ಸಹಸ್ರಮಾನವೇ ಬೇಕಾಯಿತು.'

ಇದು ಅತಿಶಯೋಕ್ತಿ ಎನ್ನಿಸಬಹುದು, ಅದರಲ್ಲಿಯೂ ಆರ್ಫಿಸಂ ಅನ್ನು ಒಳಗೊಂಡ ಯೂಲೀಸಿಯನ್ ಅನುಭಾವಿಕತೆಗಳ ವಿಷಯದಲ್ಲಿ, ಸ್ಥೂಲವಾಗಿ ಹೇಳಬೇಕೆಂದರೆ, ಮತಧಾರ್ಮಿಕ ಮನೋಭಾವದವರು ಆರ್ಫಿಸಂ ಕಡೆಗೆ ಒಲಿದರು, ಆದರೆ ವಿಚಾರವಂತರು ಅದನ್ನು ತಿರಸ್ಕರಿಸಿದರು. ಅದರ ಸ್ಥಾನವನ್ನು ಹದಿನೆಂಟನೆಯ ಶತಮಾನದ ಉತ್ತರಾರ್ಧ ಹಾಗೂ ಹತ್ತೊಂಬತ್ತರ ಪೂರ್ವಾರ್ಧದಲ್ಲಿದ್ದ ಇಂಗ್ಲಂಡ್‌ನ ವಿಧಾನವಾದಕ್ಕೆ (ಮೆಥಡಿಸಂ) ಹೋಲಿಸಬಹುದು.

ಒಬ್ಬ ವಿದ್ಯಾವಂತ ಗ್ರೀಕ್ ಪ್ರಜೆ ತನ್ನ ತಂದೆಯಿಂದ ಏನು ಕಲಿತಿರಬಹುದೆಂಬುದನ್ನು ಹೆಚ್ಚು ಕಡಿಮೆ ನಾವು ಬಲ್ಲೆವು, ಆದರೆ ಅದಕ್ಕೂ ಹಿಂದೆ ಅವನು ತನ್ನ ತಾಯಿಯಿಂದ ಏನು ಕಲಿತಿದ್ದ ಎಂಬುದರ ಬಗ್ಗೆ ನಮ್ಮ ತಿಳಿವಳಿಕೆ ಅತ್ಯಲ್ಪ. ಯಾಕೆಂದರೆ ಗಂಡಸರು ನಾಗರಿಕತೆ ಮತ್ತು ಆನಂದಗಳಿಂದ ಅವಳನ್ನು ಬಹುತೇಕ ದೂರವಿರಿಸಿದ್ದರು. ಅತ್ಯುತ್ತಮ ಕಾಲದಲ್ಲೂ ವಿದ್ಯಾವಂತ ಅಥೀನಿಯನ್ನರು,

---

೨೦. ಬೆಲೋಕ್, *'ಗ್ರೀಶಿಷೆ ಚೆಚಿಚ್ಟೆ'*, ಭಾಗ ೧, ೧. ಪು. ೪೧೪

ತಮ್ಮ ಪ್ರಜ್ಞಾಪೂರ್ವಕ ಮನೋವ್ಯಾಪಾರಗಳಲ್ಲಿ ಎಷ್ಟೇ ವಿಚಾರವಂತಿಕೆಯನ್ನು ಹೊಂದಿರಲಿ, ಪರಂಪರೆ ಮತ್ತು ಬಾಲ್ಯಗಳ ಹೆಚ್ಚು ಪ್ರಾಚೀನ ಆಲೋಚನೆ ಮತ್ತು ಭಾವನೆಗಳನ್ನು ಉಳಿಸಿಕೊಂಡಿದ್ದರು; ಅದು ಒತ್ತಡದ ಸಮಯದಲ್ಲಿ ಹೆಚ್ಚು ಸಫಲ ಪರಿಣಾಮವುಂಟುಮಾಡುತ್ತಿತ್ತು. ಈ ಕಾರಣದಿಂದಾಗಿ, ಗ್ರೀಕ್ ಮನೋದೃಷ್ಟಿಯನ್ನು ಯಾವುದೇ ಸರಳ ವಿಧಾನದಿಂದ ವಿಶ್ಲೇಷಿಸಲಾಗದು.

ಗ್ರೀಕ್ ಚಿಂತನೆಯ ಮೇಲೆ ಮತಧರ್ಮದ, ಅದರಲ್ಲಿಯೂ ಆರ್ಫಿಯನೇತರ ಮತಧರ್ಮದ, ಪ್ರಭಾವವನ್ನು ಇತ್ತೀಚಿನವರೆಗೂ ಸಮಂಜಸ ರೀತಿಯಲ್ಲಿ ಗುರುತಿಸಲಾಗಿರಲಿಲ್ಲ. ಆನ್ ಹ್ಯಾರಿಸನ್‌ರ ಕ್ರಾಂತಿಕಾರಕ ಗ್ರಂಥವಾದ '*ಪ್ರಾಲೆಗಮೆನ ಟು ದ ಸ್ಟಡಿ ಆಫ್ ಗ್ರೀಕ್ ರಿಲಿಜನ್*' ಸಾಮಾನ್ಯ ಗ್ರೀಕ್ ಜನರ ಮತಧರ್ಮದಲ್ಲಿನ ಪ್ರಾಚೀನ ಹಾಗೂ ಡಯೋನಿಸಸ್ ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ. ಎಫ್. ಎಂ. ಕಾರ್ನ್‌ಫರ್ಡ್ ಅವರ '*ಫ್ರಮ್ ರಿಲಿಜನ್ ಟು ಫಿಲಾಸಫಿ*' ಗ್ರಂಥವು ತತ್ವಜ್ಞಾನಿಗಳ ಮೇಲೆ ಮತಧರ್ಮವು ಮಾಡಿದ ಪ್ರಭಾವವನ್ನು ಗ್ರೀಕ್ ತತ್ವಜ್ಞಾನದ ಅಧ್ಯಯನಾಸಕ್ತರಿಗೆ ತಿಳಿಸಿತು. ಆದರೆ ಆ ಗ್ರಂಥದ ವ್ಯಾಖ್ಯಾನಗಳು ಮತ್ತು ಅದರ ಮಾನವಶಾಸ್ತ್ರೀಯ ಅಂಶಗಳನ್ನು ನಂಬಲರ್ಹವೆಂದು ಸಂಪೂರ್ಣವಾಗಿ ಒಪ್ಪಲು ಸಾಧ್ಯವಿಲ್ಲ.[೨೧] ನನಗೆ ತಿಳಿದ ಮಟ್ಟಿಗೆ ಅತ್ಯಂತ ಸಮತೋಲನದಿಂದ ಕೂಡಿದ ಹೇಳಿಕೆಯನ್ನು ಜಾನ್ ಬರ್ನೆಟ್ ಅವರ '*ಅರ್ಲಿ ಗ್ರೀಕ್ ಫಿಲಾಸಫಿ*'ಯಲ್ಲಿ, ಅದರಲ್ಲಿಯೂ ಎರಡನೆಯ ಅಧ್ಯಾಯ 'ವಿಜ್ಞಾನ ಮತ್ತು ಮತಧರ್ಮ'ದಲ್ಲಿ ಕಾಣಬಹುದು. ವಿಜ್ಞಾನ ಮತ್ತು ಮತಧರ್ಮಗಳ ನಡುವಣ ಸಂಘರ್ಷವು ಉಂಟಾದದ್ದು, ಕ್ರಿಯಾಶೀಲತೆಯು ಅಯೋನಿಯದಿಂದ ಪಶ್ಚಿಮಕ್ಕೆ ವರ್ಗಾವಣೆಗೊಂಡುದರೊಡನೆ 'ಕ್ರಿಪೂ ಆರನೆಯ ಶತಮಾನದಲ್ಲಿ ಹೆಲಾಸ್‌ನಲ್ಲಿ ವ್ಯಾಪಿಸಿದ ಮತಧಾರ್ಮಿಕ ಪುನರುಜ್ಜೀವನದಿಂದ' ಎಂದು ಅವರೆನ್ನುತ್ತಾರೆ. 'ಹೆಲಾಸ್ ಪ್ರದೇಶದ ಮತಧರ್ಮವು ಅಯೋನಿಯದಲ್ಲಿನದಕ್ಕಿಂತ ತೀರ ಭಿನ್ನವಾದ ರೀತಿಯಲ್ಲಿ ಬೆಳವಣಿಗೆ ಹೊಂದಿತ್ತು. ಅದರಲ್ಲಿಯೂ, ಥ್ರೇಸ್‌ನಿಂದ ಬಂದ, ಆದರೆ ಹೋಮರ್‌ನಲ್ಲಿ ಉಲ್ಲೇಖವೇ ಇರದ, ಡಯೋನಿಸಸ್‌ನ ಆರಾಧನೆಯಲ್ಲಿ ಮನುಷ್ಯ-ಜಗತ್ತುಗಳ ನಡುವಣ ಸಂಬಂಧವನ್ನು ಹೊಸ ಬಗೆಯಲ್ಲಿ ನೋಡುವ ಚಿಂತನೆಯ ಅಣುರೂಪದಲ್ಲಿತ್ತು. ಉನ್ನತ ದೃಷ್ಟಿಕೋಣದ ಶ್ರೇಯಸ್ಸನ್ನು ಥ್ರೇಸಿಯನ್ನರಿಗೇ ಆರೋಪಿಸುವುದು ಖಂಡಿತ ತಪ್ಪು; ಆದರೆ, ಆತ್ಮವು ತನ್ನತನದ ದುರ್ಬಲ ಪ್ರತಿರೂಪಕ್ಕೂ ಮಿಗಿಲಾದುದು, ಅದೊಮ್ಮೆ "ದೇಹದಿಂದ ಹೊರಹೋದಾಗ" ಮಾತ್ರವೇ ಅದು ತನ್ನ ನಿಜಸ್ವರೂಪವನ್ನು

---

೨೧. ಮತ್ತೊಂದು ಕಡೆ, ಪ್ಲೇಟೋ ಸಂವಾದಗಳ ಬಗೆಗಿನ ಕಾರ್ನ್‌ಫೋರ್ಡ್ ಅವರ ಗ್ರಂಥಗಳ ಬಗ್ಗೆ ನನಗೆ ಸಂಪೂರ್ಣ ಮೆಚ್ಚಿಕೆಯಿದೆ.

ತೋರಿಸಬಲ್ಲುದು ಎಂಬುದನ್ನು ಭಾವಪರವಶತೆಯ ವಿದ್ಯಮಾನವು ಗ್ರೀಕರಿಗೆ ತಿಳಿಸಿಕೊಟ್ಟಿತು.

'ಪೂರ್ವದ ಮತಧರ್ಮಗಳು ಈಗಾಗಲೇ ತಲುಪಿದ್ದಂತಹುದೇ ಹಂತವನ್ನು ಗ್ರೀಕ್ ಮತಧರ್ಮಗಳು ತಲುಪುವಂತೆ ತೋರುತ್ತಿತ್ತು; ಆದರೆ ವಿಜ್ಞಾನದ ಬೆಳವಣಿಗೆಯಿಂದಾಗಿ, ಈ ಪ್ರವೃತ್ತಿಯನ್ನು ಯಾವುದು ತಡೆದಿರಬಹುದು ಎಂಬುದನ್ನು ಕಂಡುಕೊಳ್ಳುವುದು ಕಷ್ಟ. ಪುರೋಹಿತಶಾಹಿಯಿಲ್ಲದ ಕಾರಣ ಗ್ರೀಕ್ ಮತಧರ್ಮವು ಪೌರ್ವಾತ್ಯ ಮಾದರಿಯನ್ನು ಅನುಸರಿಸುವುದರಿಂದ ಪಾರಾಯಿತು ಎಂಬುದು ಸಾಮಾನ್ಯ ತಿಳಿವಳಿಕೆ; ಆದರೆ ಇದು ಕಾರಣದ ಪ್ರಭಾವಕ್ಕೆ ಸಂದ ಅಪಚಾರ. ಪುರೋಹಿತಶಾಹಿಯು ಮತಸಿದ್ಧಾಂತಗಳನ್ನು ಸೃಷ್ಟಿಸುವುದಿಲ್ಲ, ಆದರೆ ಒಮ್ಮೆ ಸೃಷ್ಟವಾದ ಅವುಗಳನ್ನು ರಕ್ಷಿಸುವರೆಂಬುದು ನಿಜ. ಅವುಗಳ ಹಿಂದಿನ ಬೆಳವಣಿಗೆಯ ಹಂತಗಳಲ್ಲಿ, ಪೌರ್ವಾತ್ಯ ಜನರಲ್ಲಿ ಸೂಚಿತಾರ್ಥದಲ್ಲಿ ಪುರೋಹಿತಶಾಹಿಯಿರಲಿಲ್ಲ. ಪುರೋಹಿತಶಾಹಿಯ ಗೈರಿಗಿಂತ ಹೆಚ್ಚಾಗಿ ಗ್ರೀಸ್ ಅನ್ನು ಪಾರುಮಾಡಿದ್ದು ಅದರಲ್ಲಿದ್ದ ವೈಜ್ಞಾನಿಕ ಆಲೋಚನಾಪಂಥಗಳು.

'ಹೊಸ ಮತಧರ್ಮವು – ಒಂದರ್ಥದಲ್ಲಿ ಹೊಸದು, ಮತ್ತೊಂದರ್ಥದಲ್ಲಿ ಮಾನವಸಂಕುಲದಷ್ಟೇ ಹಳೆಯದು – ಆರ್ಫಿಕ್ ಸಮುದಾಯಗಳ ತಳಹದಿಯ ಮೇಲೆ ಸ್ಥಾಪಿತವಾದ ಬೆಳವಣಿಗೆಗಳಿಂದ ತನ್ನ ಅತ್ಯುನ್ನತ ಹಂತವನ್ನು ತಲುಪಿತು. ನಮಗೆ ತಿಳಿದ ಮಟ್ಟಿಗೆ, ಇವುಗಳ ತವರು ಆಟ್ಟಿಕ; ಆದರೆ ಅದು ಅಸಾಧಾರಣ ವೇಗದಿಂದ, ಅದರಲ್ಲೂ ದಕ್ಷಿಣ ಇಟಲಿ ಮತ್ತು ಸಿಸಿಲಿಗಳಲ್ಲಿ, ಹರಡಿತು. ಮೊದಮೊದಲು ಅವು ಡಯೋನಿಸಸ್ ಆರಾಧನೆಯ ಸಂಘಟನೆಗಳಾಗಿದ್ದವು; ಆದರೆ ಗ್ರೀಕರಿಗೆ ಹೊಸತೆನಿಸುವ ಎರಡು ಲಕ್ಷಣಗಳಿಂದಾಗಿ ಭಿನ್ನವೆನಿಸಿತು. ಮತಧಾರ್ಮಿಕ ಅಧಿಕೃತತೆಗಾಗಿ ಅವರು ದಿವ್ಯಜ್ಞಾನ (ರೆವೆಲೇಷನ್)ವನ್ನು ನಂಬಿದವರು, ಮತ್ತು ಅವರು ಕೃತಕ ಸಮುದಾಯಗಳಂತೆ ಸಂಘಟಿತರಾಗಿದ್ದವರು. ಅವರ ಮತಧರ್ಮಶಾಸ್ತ್ರವನ್ನು ಒಳಗೊಂಡ ಕಾವ್ಯಗಳನ್ನು, ಸ್ವತಃ ಹೇಡಿಸ್‌ಗೆ ಇಳಿದು ಹೋಗಿದ್ದರಿಂದ ಮುಂದಿನ ಜಗತ್ತಿನಲ್ಲಿ ದೇಹರಹಿತ ಆತ್ಮವು ಕಷ್ಟಗಳನ್ನು ಎದುರಿಸುವ ದಿಸೆಯಲ್ಲಿ ಸೂಕ್ತ ಮಾರ್ಗದರ್ಶಕನೆಂದು ಭಾವಿಸಲಾದ ಥ್ರೇಸಿಯನ್ ಆರ್ಫಿಯಸ್‌ಗೆ ಆರೋಪಿಸಲಾಗುತ್ತದೆ.'

ಆರ್ಫಿಕ್ ಶ್ರದ್ಧೆಗಳಿಗೂ ಇದೇ ಹೊತ್ತಿನಲ್ಲಿ ಇಂಡಿಯದಲ್ಲಿ ಪ್ರಚಲಿತವಾಗಿದ್ದ ಶ್ರದ್ಧೆಗಳಿಗೂ ಆಶ್ಚರ್ಯಕರ ರೀತಿಯ ಸಾದೃಶ್ಯಗಳಿವೆಯೆಂದು ಬರ್ನೆಟ್ ಅಭಿಪ್ರಾಯಪಡುತ್ತಾರೆ. ಆದರೆ ಆ ಎರಡರ ನಡುವೆ ಸಂಪರ್ಕಗಳು ಸಾಧ್ಯವಿರಲಿಲ್ಲವೆಂದೂ ಹೇಳುತ್ತಾರೆ. ಆನಂತರ ಅವರು 'ಆರ್ಗಿ' ಶಬ್ದದ ಮೂಲಾರ್ಥದ ಕಡೆ ಗಮನ ಹರಿಸುತ್ತಾರೆ, ಈ ಶಬ್ದವನ್ನು ಆರ್ಫಿಕ್‌ರು 'ಮತಧಾರ್ಮಿಕ

ವಿಧಿ' ಎಂಬರ್ಥದಲ್ಲಿ ಬಳಸುತ್ತಿದ್ದರು, ಮತಧಾರ್ಮಿಕನ ಆತ್ಮವನ್ನು ಶುದ್ಧೀಕರಿಸಿ ಜನ್ಮಚಕ್ರದಿಂದ ಪಾರಾಗಲು ಅದು ಸಹಾಯಕವೆಂದು ಅವರು ಭಾವಿಸಿದ್ದರು. ಒಲಂಪಿಯನ್ ಆರಾಧನಾಪಂಥಗಳಿಗೆ ಭಿನ್ನವಾಗಿ ಆರ್ಫಿಕ್‌ರು, ದೀಕ್ಷಾಸ್ನಾನ ಹೊಂದಿದ ಮತಧಾರ್ಮಿಕ ಸಮುದಾಯಗಳ ಯಾರಾದರೂ, ಜನಾಂಗ ಅಥವಾ ಲಿಂಗಭೇದವಿಲ್ಲದೆ, ಹೋಗಬಹುದಾದ 'ಚರ್ಚ್' ಎನ್ನಬಹುದಾದ ಸಂಸ್ಥೆಯನ್ನು ಸ್ಥಾಪಿಸಿದರು. ಮತ್ತು ಅವುಗಳ ಪ್ರಭಾವದಿಂದಲೇ ಜೀವನಮಾರ್ಗವೆನಿಸಿದ ತತ್ವಜ್ಞಾನವು ಉದಯಿಸಿತು.

○

೨
ಮೈಲೇಸಿಯನ್ ಪಂಥ

ವಿದ್ಯಾರ್ಥಿಗಳಿಗೆಂದು ಬರೆದ ಎಲ್ಲ ತತ್ವಜ್ಞಾನದ ಪುಸ್ತಕಗಳಲ್ಲೂ ಉಕ್ತವಾದ ಮೊದಲ ಅಂಶವೆಂದರೆ, ಎಲ್ಲವೂ ನೀರಿನಿಂದಾಗಿದೆ ಎಂದು ಹೇಳಿದ ಥೇಲೀಸ್‌ನಿಂದ ತತ್ವಜ್ಞಾನವು ಆರಂಭಗೊಂಡಿತು ಎಂಬುದೇ ಆಗಿದೆ. ಇದು, ತತ್ವಜ್ಞಾನದ ಬಗ್ಗೆ ಗೌರವಭಾವವಿರಿಸಿಕೊಳ್ಳಬೇಕೆಂದು ಪಠ್ಯಕ್ರಮವು ನಿರೀಕ್ಷೆಗೆ – ಅಂಥ ಪ್ರಬಲವಾಗೇನೂ ಅಲ್ಲ – ಹೆಣಗುವ ಆರಂಭಿಕ ವಿದ್ಯಾರ್ಥಿಗೆ ನಿರುತ್ಸಾಹವನ್ನುಂಟುಮಾಡುವಂತಹುದು, ಆದರೆ ಅದರ ಬಗ್ಗೆ ಗೌರವವಿರಿಸಿಕೊಳ್ಳಲು ಸಾಕಷ್ಟು ಕಾರಣವಿದೆ. ಪ್ರಾಯಶಃ ಥೇಲೀಸ್ ಆಧುನಿಕ ಅರ್ಥದಲ್ಲಿ ತತ್ವಜ್ಞಾನಿಗಿಂತ ಹೆಚ್ಚಾಗಿ ವಿಜ್ಞಾನಿಯಾಗಿದ್ದ.

ಥೇಲೀಸ್ ಏಷ್ಯಾ ಮೈನರ್‌ನ ಮಿಲೆಟಸ್‌ನವನು, ಅದು ಉಚ್ಛ್ರಾಯದಲ್ಲಿದ್ದ ಒಂದು ವಾಣಿಜ್ಯ ನಗರ. ಅದರಲ್ಲಿ ದೊಡ್ಡ ಸಂಖ್ಯೆಯ ಗುಲಾಮರಿದ್ದರು; ಜನಸಂಖ್ಯೆಯ ಬಡವ–ಬಲ್ಲಿದರ ನಡುವೆ ಬಿರುಸಾದ ಸಂಘರ್ಷವಿತ್ತು. 'ಮಿಲೆಟಸ್‌ನಲ್ಲಿ ಮೊದಲು ಜಯಶಾಲಿಗಳಾಗಿ ಶ್ರೀಮಂತವರ್ಗದವರ ಹೆಂಡಿರು ಮಕ್ಕಳನ್ನು ಕೊಲೆಗೈದರು, ಆನಂತರ ಶ್ರೀಮಂತವರ್ಗವು ಮೇಲುಗೈಯಾಗಿ ನಗರದ ಬಯಲು ಪ್ರದೇಶಕ್ಕೆಲ್ಲ ಬೆಂಕಿ ಹಚ್ಚಿ ತಮ್ಮ ವಿರೋಧಿಗಳನ್ನು ಜೀವಂತ ಸುಟ್ಟರು.'[೨೨] ಥೇಲೀಸ್‌ನ ಕಾಲದ ಏಷ್ಯಾ ಮೈನರ್‌ನ ಬಹುತೇಕ ನಗರಗಳಲ್ಲಿ ಇಂತಹದೇ ಪರಿಸ್ಥಿತಿಯಿತ್ತು.

ಮಿಲೆಟಸ್, ಅಯೋನಿಯದ ಇತರ ವಾಣಿಜ್ಯ ನಗರಗಳಂತೆ, ಕ್ರಿಪೂ ಏಳನೆಯ ಮತ್ತು ಆರನೆಯ ಶತಮಾನಗಳಲ್ಲಿ ಬಹು ಮುಖ್ಯ ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಳಿಗೆ ಒಳಗಾಯಿತು. ಮೊದಲು ರಾಜಕೀಯಾಧಿಕಾರವು ಭೂಮಾಲೀಕರಾದ ಶ್ರೀಮಂತವರ್ಗದವರ ಕೈಯಲ್ಲಿತ್ತು, ಆದರೆ ಇದು ಕ್ರಮೇಣ

---

೨೨. ರೆಸ್ಟೋವ್‌ಸ್ಟೆವ್, 'ಹಿಸ್ಟರಿ ಆಫ್ ದ ಏನ್ಷಿಯಂಟ್ ವರ್ಲ್ಡ್', ಸಂಪು ೧, ಪು. ೨೦೪.

ಶ್ರೀಮಂತ ವರ್ತಕರ ವಶವಾಯಿತು. ಆನಂತರ ಅವರ ಸ್ಥಾನವನ್ನು ನಿರಂಕುಶಪ್ರಭುಗಳು ಆಕ್ರಮಿಸಿಕೊಂಡರು. ಯಥಾಪ್ರಕಾರ ಅವರು ಪ್ರಜಾಪ್ರಭುತ್ವಾತ್ಮಕ ಪಕ್ಷದ ಸಹಾಯದಿಂದ ಅಧಿಕಾರವನ್ನು ಗಳಿಸಿದರು. ಲಿಡಿಯ ಚಕ್ರಾಧಿಪತ್ಯವು ಗ್ರೀಸ್‌ನ ಪೂರ್ವ ಕರಾವಳಿಯ ಭಾಗದಲ್ಲಿತ್ತು, ಆದರೆ ಅವರು ನಿನೆವಗಳ (ಕ್ರಿಪೂ ೬೦೬) ಸೋಲಿನವರೆಗೂ ಅವರೊಡನೆ ಸ್ನೇಹದಿಂದಿದ್ದರು. ಲಿಡಿಯವನ್ನು ಅದರ ಪಾಡಿಗೆ ಬಿಟ್ಟದ್ದರಿಂದ, ಅವರು ಪಶ್ಚಿಮದ ಗಮನವನ್ನು ಸೆಳೆಯಲು ಸ್ವತಂತ್ರರಾಗಿದ್ದರು. ಆದರೆ ಮಿಲೆಟಸ್ ಸಾಮಾನ್ಯವಾಗಿ, ಅದರಲ್ಲಿಯೂ ಲಿಡಿಯದ ಕೊನೆಯ ದೊರೆ ಕ್ರೋಯೆಸಸ್‌ನೊಡನೆ (ಅವನನ್ನು ಸೈರಸ್ ಕ್ರಿಪೂ ೫೪೬ ರಲ್ಲಿ ಸೋಲಿಸಿದ), ಸ್ನೇಹಸಂಬಂಧವನ್ನು ಹೊಂದಿರಲು ಸಾಧ್ಯವಾಯಿತು. ಅವರು ಈಜಿಪ್ಟ್‌ನೊಡನೆ ಮುಖ್ಯ ಸಂಬಂಧವನ್ನು ಹೊಂದಿದ್ದರು, ದೊರೆಯು ಗ್ರೀಕ್ ಸಂಬಳಕೂಲಿಗಳನ್ನು ಆಶ್ರಯಿಸಿದ್ದು ಕೆಲವು ನಗರಗಳನ್ನು ಗ್ರೀಕ್ ವ್ಯಾಪಾರಕ್ಕೆ ಸ್ವತಂತ್ರಗೊಳಿಸಿದ್ದ. ಈಜಿಪ್ಟ್‌ನಲ್ಲಿನ ಅವರ ಮೊದಲ ವಸಾಹತು ಎಂದರೆ ಮಿಲೆಟಸ್‌ನ ಸೇನೆ ಆಕ್ರಮಿಸಿಕೊಂಡಿದ್ದ ಒಂದು ಕೋಟೆ. ಆದರೆ ಬಹು ಮುಖ್ಯವಾದುದೆಂದರೆ, ಕ್ರಿಪೂ ೬೧೦-೫೬೦ ರ ಅವಧಿಯ, ಡಾಫ್ನೆ. ಇಲ್ಲೆ ಜೆರೇಮಿಯ ಮತ್ತಿತರ ಯೆಹೂದಿ ದೇಶಭ್ರಷ್ಟರು ನೆಬುಛಾಡ್ರೆಜ಼ಾರ್‌ನ ಆಶ್ರಯ ಪಡೆದರು (ಜೆರೇಮಿಯ, ೧೮, ೫ ಅಡಿಟಿಪ್ಪಣಿ). ಈಜಿಪ್ಟ್ ಗ್ರೀಕರ ಮೇಲೆ ನಿಶ್ಚಿತವಾಗಿ ಪ್ರಭಾವ ಬೀರಿದರೂ, ಯೆಹೂದಿಗಳು ಹಾಗೆ ಮಾಡಲಿಲ್ಲ, ಅಥವಾ ಜೆರೇಮಿಯ ಸಂಶಯಗ್ರಸ್ತ ಅಯೋನಿಯನ್ನರ ಬಗ್ಗೆ ಭಯದಿಂದಿದ್ದ ಮಾತ್ರ ಎಂದೂ ನಾವು ತಿಳಿಯುವ ಹಾಗಿಲ್ಲ.

ಥೇಲೀಸ್‌ನ ಕಾಲವನ್ನು ಕುರಿತಾಗಿ, ನಮಗೆ ತಿಳಿದಂತೆ ಇರುವ ಪ್ರಬಲ ಆಧಾರವೆಂದರೆ, ಅವನು ಒಂದು ಗ್ರಹಣವನ್ನು ಮುನ್‌ಸೂಚಿಸಿದ್ದ ಕೀರ್ತಿಯಿಂದಾಗಿ, ಇದು ಖಗೋಳವಿಜ್ಞಾನಿಗಳ ಪ್ರಕಾರ, ಕ್ರಿಪೂ ೫೮೫ ರಲ್ಲಿ ಸಂಭವಿಸಿರಬೇಕು. ಬೇರೆ ಆಧಾರವೆಂದರೆ, ಅವನ ಚಟುವಟಿಕೆಗಳು ಇದೇ ಕಾಲದವು ಎಂಬ ಬಗ್ಗೆ. ಗ್ರಹಣವನ್ನು ಮುನ್‌ಸೂಚಿಸಿದ್ದು ಅವನ ಅಸಾಧಾರಣ ಪ್ರತಿಭೆಯ ದ್ಯೋತಕವೇನಲ್ಲ. ಮಿಲೆಟಸ್ ಲಿಡಿಯದೊಡನೆ ಸಂಬಂಧವಿರಿಸಿಕೊಂಡಿತ್ತು, ಮತ್ತು ಲಿಡಿಯವು ಬ್ಯಾಬಿಲೋನಿಯದೊಡನೆ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿದ್ದಿತು, ಬ್ಯಾಬಿಲೋನಿನ ಖಗೋಳವಿಜ್ಞಾನಿಗಳು ಗ್ರಹಣಗಳು ಸುಮಾರು ಹತ್ತೊಂಬತ್ತು ವರ್ಷಗಳ ಆವರ್ತದಲ್ಲಿ ಸಂಭವಿಸುತ್ತವೆ ಎಂಬುದನ್ನು ಕಂಡುಕೊಂಡುಕೊಂಡಿದ್ದರು. ಅವರು ಹೆಚ್ಚು ಕಡಿಮೆ ಪರಿಪೂರ್ಣವಾಗಿ ಚಂದ್ರಗ್ರಹಣವನ್ನು ಮುನ್‌ಸೂಚಿಸಬಲ್ಲವರಾಗಿದ್ದರು, ಆದರೆ ಸೂರ್ಯಗ್ರಹಣದ ವಿಷಯದಲ್ಲಿ ಹಾಗಾಗಲಿಲ್ಲ, ಅದಕ್ಕೆ ಕಾರಣ ಸೂರ್ಯಗ್ರಹಣವು ಒಂದೆಡೆ ಕಾಣಿಸಿ ಮತ್ತೊಂದೆಡೆ ಕಾಣಿಸದಿರುವುದು. ಹೀಗಾಗಿ ಅವರಿಗೆ ಗೊತ್ತಿದ್ದುದು ಗ್ರಹಣವು ಇಂತಿಂಥ ದಿನಗಳಂದು

ಗ್ರಹಣ ಸಂಭವಿಸುವುದಕ್ಕೆ ಕಾಯುವುದನ್ನು ಸೂಚಿಸುವುದು ಎಂಬುದಷ್ಟೇ. ಪ್ರಾಯಶಃ ಇಷ್ಟೇ ಥೇಲೀಸ್‌ಗೂ ತಿಳಿದಿದ್ದುದು. ಅವನಿಗಾಗಲೀ ಅವರಿಗಾಗಲೀ ಈ ಆವರ್ತ ಏಕೆ ಎಂಬುದು ತಿಳಿದಿರಲಿಲ್ಲ.

ಥೇಲೀಸ್ ಈಜಿಪ್ಟ್‌ನಲ್ಲಿ ಓಡಾಡಿದ್ದನೆಂದು ಹೇಳುತ್ತಾರೆ. ಆನಂತರ ಅವನು ಜ್ಯಾಮಿತಿ ವಿಜ್ಞಾನವನ್ನು ತಂದ. ಜ್ಯಾಮಿತಿಯ ಕುರಿತು ಈಜಿಪ್ಷಿಯನ್ನರಿಗೆ ಗೊತ್ತಿದ್ದುದು ಮುಖ್ಯವಾಗಿ ವ್ಯಾವಹಾರಿಕ ಸೂತ್ರಗಳು ಮಾತ್ರ, ಮುಂದೆ ಗ್ರೀಕರು ಕಂಡುಕೊಂಡ ನಿಗಮನ ಆಧಾರಗಳನ್ನು ಥೇಲೀಸ್ ಕಂಡುಕೊಂಡಿದ್ದ ಎಂದು ತಿಳಿಯಲು ಆಧಾರವಿಲ್ಲ. ಹಡಗು ಸಮುದ್ರದಲ್ಲಿ ಎಷ್ಟು ದೂರದಲ್ಲಿದೆ ಎಂಬುದನ್ನು ಭೂಮಿಯ ಮೇಲಿನ ಎರಡು ಬಿಂದುಗಳ ಪರಿವೀಕ್ಷಣೆಯಿಂದ ಲೆಕ್ಕ ಹಾಕುವುದನ್ನು ಪ್ರಾಯಶಃ ಅವನು ತಿಳಿದಿದ್ದ; ಹಾಗೆಯೇ ಪಿರಮಿಡ್ ಒಂದರ ನೆರಳಿನ ಆಧಾರದ ಮೇಲೆ ಅದರ ಎತ್ತರವನ್ನು ಅಂದಾಜಿಸುವುದೂ ಅವನಿಗೆ ತಿಳಿದಿತ್ತು. ಇನ್ನೂ ಕೆಲವು ಜ್ಯಾಮಿತೀಯ ಪ್ರಮೇಯ (ಥಿಯರಂ)ಗಳನ್ನು ತಪ್ಪಾಗಿ ಅವನಿಗೆ ಆರೋಪಿಸಲಾಗಿದೆ.

ಗ್ರೀಸ್‌ನ ಸಪ್ತ ಪ್ರತಿಭಾವಂತರಲ್ಲಿ ಅವನೂ ಒಬ್ಬ, ಅವರಲ್ಲಿ ಪ್ರತಿಯೊಬ್ಬನೂ ಒಂದು ವಿವೇಕಯುತ ಹೇಳಿಕೆಯಿಂದ ವಿಶೇಷವಾಗಿ ಮಾನ್ಯವಾಗಿದ್ದಾನೆ, 'ನೀರು ಅತ್ಯಂತ ಶ್ರೇಷ್ಠ' ಎಂಬುದು ಅವನ ಹೇಳಿಕೆಯೆಂಬುದು ಸರಿಯಲ್ಲ.

ಅರಿಸ್ಟಾಟಲ್‌ನ ಪ್ರಕಾರ, ನೀರು ಮೂಲ ದ್ರವ್ಯ, ಅದರಿಂದಲೇ ಮಿಕ್ಕೆಲ್ಲವೂ ಆಗಿದೆ ಎಂದು ಅವನು ಭಾವಿಸಿದ್ದ. ಅವನ ಶ್ರದ್ಧೆಯಲ್ಲಿ ಭೂಮಿಯು ನೀರಿನ ಮೇಲೆ ನಿಂತಿದೆ. ಅಯಸ್ಕಾಂತಕ್ಕೆ ಆತ್ಮವಿದೆ, ಯಾಕೆಂದರೆ ಅದು ಕಬ್ಬಿಣವನ್ನು ಚಲಿಸುವಂತೆ ಮಾಡುತ್ತದೆ, ಹಾಗೂ ಎಲ್ಲ ವಸ್ತುಗಳೂ ದೇವತೆಗಳಿಂದ ತುಂಬಿವೆ ಎಂದೂ ಅವನು ನಂಬಿದ್ದನೆಂಬುದು ಅರಿಸ್ಟಾಟಲ್‌ನ ಹೇಳಿಕೆ.[೨೩]

ಎಲ್ಲವೂ ನೀರಿನಿಂದಾಗಿವೆ ಎಂಬ ಹೇಳಿಕೆಯನ್ನು ಒಂದು ವೈಜ್ಞಾನಿಕ ಆಧಾರಕಲ್ಪನೆ ಎಂದು ಭಾವಿಸಬಹುದು, ಮೂರ್ಖತನದ್ದು ಎಂದೇನೂ ಅಂದುಕೊಳ್ಳಬೇಕಾಗಿಲ್ಲ. ಇಪ್ಪತ್ತು ವರ್ಷಗಳ ಹಿಂದೆ ಒಪ್ಪಿತವಾಗಿದ್ದ ದೃಷ್ಟಿಯೆಂದರೆ ಎಲ್ಲವೂ ನೀರಿನ ಮೂರನೇ ಎರಡಷ್ಟು ಭಾಗವಾದ ಜಲಜನಕದಿಂದಾಗಿದೆ ಎಂಬುದು. ಗ್ರೀಕರು ತಮ್ಮ ಆಧಾರಕಲ್ಪನೆಗಳಲ್ಲಿ ದುಡುಕಿದರು ಎಂಬುದು ನಿಜ, ಆದರೆ ಮಿಲೀಸಿಯನ್ ಪಂಥವು, ಕನಿಷ್ಠ ಪಕ್ಷ, ಅದನ್ನು ವೈಚಾರಿಕವಾಗಿ ಪರೀಕ್ಷಿಸಲು ಸಿದ್ಧವಿತ್ತು. ಅವನ ಕುರಿತ ವಿಷಯವನ್ನು ತೃಪ್ತಿಕರವಾಗಿ ಪುನಾರಚಿಸಲು ನಮಗೆ ತಿಳಿದಿರುವುದು ಅತ್ಯಲ್ಪವಾದರೂ, ಮಿಲೆಟಸ್‌ನ ಅವನ ಮುಂದಿನವರ ಬಗ್ಗೆ ಸಾಕಷ್ಟು ಮಾಹಿತಿಯಿದೆ, ಮತ್ತು ಅದರಿಂದಾಗಿ ಅವರ ಮನೋದೃಷ್ಟಿಯ ಸ್ವಲ್ಪ ಭಾಗ

---

೨೩. ಬರ್ನೆಟ್ ('ಅರ್ಲಿ ಗ್ರೀಕ್ ಫಿಲಾಸಫಿ', ಪು. ೫೧) ಈ ಕೊನೆಯ ಹೇಳಿಕೆಯನ್ನು ಪ್ರಶ್ನಿಸುತ್ತಾರೆ.

ಅವನ ಕೊಡುಗೆ ಎಂದು ಭಾವಿಸುವುದು ಸಮಂಜಸವಾದುದು. ಅವನ ವಿಜ್ಞಾನ ಮತ್ತವನ ತತ್ವಜ್ಞಾನಗಳೆರಡೂ ಹಸಿ ಹಸಿಯಾದವು, ಆದರೆ ಅವು ಚಿಂತನೆ ಮತ್ತು ಪರಿವೀಕ್ಷಣೆಗಳನ್ನು ಪ್ರೇರಿಸಬಲ್ಲಂಥವು.

ಅವನ ಬಗ್ಗೆ ಅನೇಕ ದಂತಕತೆಗಳು ಪ್ರಚಲಿತವಾಗಿವೆ; ಆದರೆ ನಾವು ಹೇಳಿದವಕ್ಕಿಂತ ಹೆಚ್ಚಿನ ವಾಸ್ತವಾಂಶಗಳು ತಿಳಿದಿಲ್ಲ. ಕೆಲವು ಕತೆಗಳು ರಮ್ಯವಾಗಿವೆ, ನಿದರ್ಶನಕ್ಕೆ ಅರಿಸ್ಟಾಟಲ್ ತನ್ನ 'ಪಾಲಿಟಿಕ್ಸ್' (ಸು. ೧೨೫೯) ಗ್ರಂಥದಲ್ಲಿ ಹೇಳಿರುವ ಒಂದು: 'ಅವನ ಬಡತನಕ್ಕಾಗಿ ಅವನನ್ನು ದೂಷಿಸುತ್ತಿದ್ದರು, ಅದರಿಂದಾಗಿ ತತ್ವಜ್ಞಾನವು ನಿರುಪಯುಕ್ತವೆಂದು ತೋರಿಸಬೇಕಾಗಿತ್ತು. ಕತೆಯ ಪ್ರಕಾರ, ನಕ್ಷತ್ರಗಳ ಬಗೆಗಿನ ತನ್ನ ತಿಳಿವಳಿಕೆಯಿಂದಾಗಿ ಅವನು ಇನ್ನೂ ಚಳಿಗಾಲವಿರುವಾಗಲೇ ಬರುವ ವರ್ಷದಲ್ಲಿ ಸಮೃದ್ಧ ಆಲಿವ್ ಬೆಳೆ ಬರುತ್ತದೆಂದು ಸೂಚಿಸುವ ಸಾಮರ್ಥ್ಯ ಹೊಂದಿದ್ದ. ಹೀಗಾಗಿ, ಕಡಿಮೆ ಹಣವಿದ್ದರೂ, ಅವನು ಚಿಯೋಸ್ ಮತ್ತು ಮೈಲಟೆಸ್‌ಗಳ ಎಲ್ಲ ಆಲಿವ್-ಗಾಣಗಳ ಉಪಯೋಗಕ್ಕಾಗಿ ಠೇವಣಿ ಇಡುತ್ತಿದ್ದ, ಬೇರಾರೂ ಅವನ ವಿರುದ್ಧ ಹರಾಜು ಕೂಗುತ್ತಿರಲಿಲ್ಲವಾದ್ದರಿಂದ ಅವನಿಗೆ ಅವು ಕಡಿಮೆ ಬಾಡಿಗೆಗೆ ದೊರೆಯುತ್ತಿದ್ದವು. ಸುಗ್ಗಿ ಕಾಲ ಬಂದಾಗ, ಇದ್ದಕ್ಕಿದ್ದಂತೆ ಎಲ್ಲವಕ್ಕೂ ಒಮ್ಮೆಗೇ ಬೇಡಿಕೆ ಹೆಚ್ಚುತ್ತಿತ್ತು, ತನ್ನ ಮನಸೋ ಇಚ್ಛೆ ಅವುಗಳಿಗೆ ಬೆಲೆ ಹೇಳುತ್ತಿದ್ದ, ಹೀಗಾಗಿ ಸಾಕಷ್ಟು ಹಣ ಮಾಡಲು ಸಾಧ್ಯವಾಗುತ್ತಿತ್ತು. ಈ ರೀತಿ ತತ್ವಜ್ಞಾನಿಗಳು ಬಯಸಿದರೆ ತಾವು ಸುಲಭವಾಗಿ ಶ್ರೀಮಂತರಾಗಬಹುದೆಂಬುದನ್ನು ಅವನು ಜಗತ್ತಿಗೇ ತೋರಿಸಿಕೊಟ್ಟ, ಆದರೆ ಅವರ ಆದರ್ಶವೇ ಬೇರೆಯಾಗಿರುತ್ತಿತ್ತು.'

ಅನಾಕ್ಸಿಮ್ಯಾಂಡರ್, ಮಿಲೀಸಿಯನ್ ಪಂಥದ ಎರಡನೆಯ ತತ್ವಜ್ಞಾನಿ; ಅವನು ಥೇಲೀಸ್‌ಗಿಂತ ಹೆಚ್ಚು ಕುತೂಹಲದಾಯಕ ವ್ಯಕ್ತಿಯಾಗಿದ್ದ. ಅವನ ಕಾಲದ ಬಗ್ಗೆ ಅನಿರ್ದಿಷ್ಟತೆಯಿದೆ, ಆದರೆ ಕ್ರಿಪೂ ೫೪೬ ರಲ್ಲಿ ಅವನಿಗೆ ಅರವತ್ತನಾಲ್ಕು ವರ್ಷವಂತೆ, ಇದು ಸತ್ಯಕ್ಕೆ ಹತ್ತಿರವಾಗಿರುವಂತೆ ತೋರುತ್ತದೆ. ಅವನ ಪ್ರಕಾರ ಎಲ್ಲವೂ ಒಂದೇ ಆದಿಮ ದ್ರವ್ಯದಿಂದ ಬಂದವು, ಆದರೆ ಥೇಲೀಸ್ ಹೇಳಿದಂತೆ, ನೀರಲ್ಲ, ಹಾಗೂ ನಮಗೆ ತಿಳಿದ ಬೇರಾವುದೂ ವಸ್ತುವಲ್ಲ. 'ಅದು ಅನಂತವಾದುದು, ನಿತ್ಯವಾದುದು ಮತ್ತು ಕಾಲಾತೀತವಾದುದು, ಅದು ಎಲ್ಲ ಜಗತ್ತುಗಳನ್ನೂ ಒಳಗೊಳ್ಳುವಂತಹುದು.' ಅವನ ಪ್ರಕಾರ ನಮ್ಮದು ಅನೇಕ ಜಗತ್ತುಗಳಲ್ಲಿ ಒಂದು ಮಾತ್ರ. ಆದಿಮ ದ್ರವ್ಯವು ನಮಗೆ ಪರಿಚಿತವಾಗಿರುವ ವಿವಿಧ ದ್ರವ್ಯಗಳಾಗಿ ರೂಪಾಂತರಗೊಂಡು, ಅವು ಪರಸ್ಪರ ರೂಪಾಪರಾವರ್ತನಕ್ಕೊಳಗಾಗುತ್ತಿದ್ದವು. ಇದಕ್ಕಾಗಿ ಅವನು ಕೊಡುವ ಹೇಳಿಕೆ ಮುಖ್ಯವೂ ಅದ್ಭುತವೂ ಆದುದು:

'ಯಾವುದರಿಂದ ವಸ್ತುಗಳ ಉದಯವಾಗುತ್ತದೋ ಅವು ಮತ್ತೊಮ್ಮೆ ಅದರಲ್ಲಿಯೇ ಇಲ್ಲವಾಗುತ್ತವೆ, ಇದು ಕಡ್ಡಾಯ, ಯಾಕೆಂದರೆ ಅವು ಒಂದಕ್ಕೊಂದು

ತಮಗಾದ ಅನ್ಯಾಯಕ್ಕಾಗಿ ಕಾಲದ ವ್ಯವಸ್ಥೆಗನುಗುಣವಾಗಿ ಪರಿಹಾರ ಮತ್ತು ತೃಪ್ತಿಗಳನ್ನು ಕೊಟ್ಟುಕೊಳ್ಳುತ್ತವೆ.'

ನ್ಯಾಯದ ಕಲ್ಪನೆಗೆ, ವೈಶ್ವಿಕ ಹಾಗೂ ಮಾನವ ಅರ್ಥದಲ್ಲಿ, ಗ್ರೀಕ್ ಮತಧರ್ಮ ಹಾಗೂ ತತ್ವಜ್ಞಾನಗಳಲ್ಲಿ ಒಂದು ಪಾತ್ರವಿತ್ತು, ಆದರೆ ಇದನ್ನು ಅರ್ಥಮಾಡಿಕೊಳ್ಳುವುದು ಆಧುನಿಕನಿಗೆ ಅಷ್ಟು ಸುಲಭವಲ್ಲ. ಹಾಗೆ ನೋಡಿದರೆ, 'ನ್ಯಾಯ' ಎಂಬ ಶಬ್ದವೇ ಅವನೆಂದುಕೊಂಡ ಅರ್ಥವನ್ನು ಪೂರ್ತಿ ನೀಡಲಾರದು, ಆದರೆ ಇದಕ್ಕಿಂತ ಉತ್ತಮವಾದ ಶಬ್ದವನ್ನು ಹುಡುಕುವುದು ಕಷ್ಟ. ಆನಾಕ್ಸಿಮ್ಯಾಂಡರ್ ಹೇಳುತ್ತಿರುವುದು ಪ್ರಾಯಶಃ ಇದನ್ನು: ಜಗತ್ತಿನಲ್ಲಿನ ಬೆಂಕಿ, ಮಣ್ಣು ಮತ್ತು ನೀರುಗಳು ಒಂದು ನಿರ್ದಿಷ್ಟ ಪ್ರಮಾಣವಿರಬೇಕು, ಆದರೆ ಈ ದ್ರವ್ಯಗಳಲ್ಲಿ ಪ್ರತಿಯೊಂದೂ (ಅವುಗಳನ್ನು ದೇವರೆಂದು ಭಾವಿಸಲಾಗುತ್ತಿತ್ತು), ತನ್ನ ಚಕ್ರಾಧಿಪತ್ಯವನ್ನು ವಿಸ್ತರಿಸಲು ನಿರಂತರವಾಗಿ ಹೆಣಗುತ್ತಿದೆ. ಆದರೆ ಉಳಿದದ್ದನ್ನು ಸರಿಹೊಂದಿಸಲು ಒಂದು ಬಗೆಯ ಆವಶ್ಯಕತೆ ಅಥವಾ ಸಹಜ ನಿಯಮವಿದೆ. ನಿದರ್ಶನಕ್ಕೆ, ಬೆಂಕಿಯಿದ್ದೆಡೆ ಬೂದಿಯಿರುತ್ತದೆ, ಅದು ಮಣ್ಣೇ ತಾನೇ. ನ್ಯಾಯದ ಕಲ್ಪನೆಯು – ಚಿರಂತನ ಪರಿಮಿತಿಗಳನ್ನು ಮೀರದ – ಅತ್ಯಂತ ಮಹತ್ತರವಾದ ಗ್ರೀಕ್ ಶ್ರದ್ಧೆಗಳಲ್ಲಿ ಒಂದು. ದೇವತೆಗಳೂ ಮನುಷ್ಯರಂತೆಯೇ ನ್ಯಾಯಕ್ಕೊಳಗಾದವರೇ. ಆದರೆ ಈ ಪರಮ ಶಕ್ತಿಯು ಖಾಸಗಿಯಾದುದಲ್ಲ, ಅದು ಪರಮೋಚ್ಚ ದೈವವಲ್ಲ.

ಆದಿಮ ದ್ರವ್ಯವು ನೀರು ಅಥವಾ ನಮಗೆ ತಿಳಿದ ಬೇರಾವುದೂ ಆಗಿರಲಾರದು ಎಂದು ಸಾಧಿಸಲು ಆನಾಕ್ಸಿಮ್ಯಾಂಡರ್ ಬಳಿ ಒಂದು ತರ್ಕವಿತ್ತು. ಅವುಗಳಲ್ಲಿ ಯಾವುದಾದರೊಂದು ಆದಿಮವಾಗಿದ್ದರೆ ಅದು ಬೇರೆಲ್ಲವುಗಳನ್ನೂ ಜಯಿಸಿಬಿಡುತ್ತಿತ್ತು. ನಮಗೆ ತಿಳಿದ ಈ ದ್ರವ್ಯಗಳು ಪರಸ್ಪರ ವಿರೋಧವಾದವು ಎಂದು ಅವನು ಹೇಳುತ್ತಿದ್ದನೆಂದು ಅರಿಸ್ಟಾಟಲ್ ಉಲ್ಲೇಖಿಸುತ್ತಾನೆ. ಗಾಳಿ ತಣ್ಣಗಿರುತ್ತದೆ, ನೀರು ತೇವವಾಗಿರುತ್ತದೆ, ಬೆಂಕಿ ಬಿಸಿಯಾಗಿರುತ್ತದೆ. 'ಹೀಗಾಗಿ, ಅವುಗಳಲ್ಲಿ ಯಾವುದಾದರೊಂದು ಸನಾತನವಾದುದಾಗಿದ್ದರೆ, ಮಿಕ್ಕವು ಇಷ್ಟು ಹೊತ್ತಿಗೆ ಇಲ್ಲವಾಗಿರುತ್ತಿದ್ದವು.' ಆದ್ದರಿಂದ, ಆದಿಮ ದ್ರವ್ಯವು ಈ ವೈಶ್ವಿಕ ಸಂಘರ್ಷದಲ್ಲಿ ತಟಸ್ಥವಾದುದಾಗಿರಬೇಕು.

ನಿರಂತರ ಚಲನೆಯ ಕಾರಣದಿಂದ ಕ್ರಮೇಣ ಜಗತ್ತುಗಳು ರೂಪುಗೊಂಡುವು. ಯೆಹೂದಿ ಅಥವಾ ಕ್ರಿಶ್ಚಿಯನ್ ಮತಧರ್ಮಶಾಸ್ತ್ರಗಳಲ್ಲಿ ಹೇಳಿದಂತೆ, ಜಗತ್ತುಗಳು ಸೃಷ್ಟಿಗೊಳ್ಳಲಿಲ್ಲ, ವಿಕಾಸಗೊಂಡವು. ಪ್ರಾಣಿ ಜಗತ್ತಿನಲ್ಲಿಯೂ ವಿಕಾಸವಿತ್ತು. ತೇವದ ವಸ್ತುವು ಆವಿಯಾಗಿ ಅದರಿಂದ ಜೀವಜಂತುಗಳು ಉದಯಿಸಿದವು. ಎಲ್ಲ ಪ್ರಾಣಿಗಳಂತೆ ಮಾನವನೂ ಮತ್ಸ್ಯಗಳಿಂದಲೇ ರೂಪುಗೊಂಡವನು. ಬೇರೆ ಬಗೆಯ ಪ್ರಾಣಿಗಳಿಂದ ಅವನು ರೂಪುಗೊಂಡಿರಬೇಕು, ಯಾಕೆಂದರೆ ತನ್ನ ದೀರ್ಘ

ಶೈಶವದಿಂದಾಗಿ ಅವನು ಈಗಿನಂತೆ ಮೂಲತಃ ಉಳಿಯಲಾಗುತ್ತಿರಲಿಲ್ಲ.

ಸ್ವಂತ ಕಲ್ಪನೆಗಳಲ್ಲಿ ಅವನು ವೈಜ್ಞಾನಿಕವಾಗಿದ್ದ, ತರ್ಕಬದ್ಧವಾಗಿದ್ದ. ಸ್ಮಿಲೆಟಸ್‌ನ ತ್ರಿಮೂರ್ತಿಗಳಲ್ಲಿ ಕೊನೆಯವನಾದ ಆನಾಕ್ಸಿಮಿನೀಸ್ ಆನಾಕ್ಸಿಮ್ಯಾಂಡರ್‌ನಷ್ಟು ಆಸಕ್ತಿದಾಯಕನಲ್ಲವಾದರೂ, ಕೆಲವು ಮುಖ್ಯ ಮುನ್ನಡೆಗಳನ್ನು ಸಾಧಿಸಿದ್ದಾನೆ. ಅವನ ಕಾಲವೂ ಅನಿರ್ದಿಷ್ಟವೇ. ಅವನು ನಿಶ್ಚಿತವಾಗಿ ಆನಾಕ್ಸಿಮ್ಯಾಂಡರ್‌ನ ನಂತರದವನು, ಅವನು ಕ್ರಿಪೂ ೪೯೪ಳ ಕ್ಕಿಂತ ಮುಂಚೆ ಜೀವಿಸಿದ್ದವನು. ಯಾಕೆಂದರೆ ಅದೇ ವರ್ಷ ಅಯೋನಿಯನ್ನರ ದಂಗೆಯನ್ನಡಗಿಸುವ ಪ್ರಯತ್ನದಲ್ಲಿ ಪರ್ಷಿಯನ್ನರು ಮಿಲೆಟಸ್ ಅನ್ನು ನಾಶಪಡಿಸಿದರು.

ಅವನ ಪ್ರಕಾರ, ಮೂಲ ದ್ರವ್ಯವೆಂದರೆ ಗಾಳಿ. ಆತ್ಮವು ಗಾಳಿಯೇ, ಬೆಂಕಿಯು ಪರಿಷ್ಕರಣಗೊಂಡ ಗಾಳಿ, ಅದನ್ನು ಸಾಂದ್ರಗೊಳಿಸಿದಾಗ ಗಾಳಿಯು ಮೊದಲು ನೀರಾಗುತ್ತದೆ, ಮತ್ತೂ ಸಾಂದ್ರಗೊಳಿಸಿದಾಗ ಮಣ್ಣು, ಆನಂತರ ಕೊನೆಯಲ್ಲಿ ಕಲ್ಲಾಗುತ್ತದೆ. ವಿವಿಧ ದ್ರವ್ಯಗಳ ನಡುವಣ ಸಾಂದ್ರತೆಯ ಪ್ರಮಾಣಕ್ಕನುಗುಣವಾದ ಪರಿಮಾಣಾತ್ಮಕ ವ್ಯತ್ಯಾಸಗಳನ್ನು ಗುರುತಿಸುವ ಗುಣ ಈ ಸಿದ್ಧಾಂತದಲ್ಲಿದೆ.

ಭೂಮಿಯ ಆಕಾರವು ಒಂದು ದುಂಡು ಮೇಜಿನಂತಿದೆ, ಎಲ್ಲವನ್ನೂ ಗಾಳಿಯು ಆವರಿಸಿದೆ ಎಂದವನು ಭಾವಿಸಿದ: 'ಗಾಳಿಯೇ ಆದ ನಮ್ಮ ಆತ್ಮವು ನಮ್ಮನ್ನು ಒಗ್ಗೂಡಿಸಿದೆ, ಅಂತೆಯೇ ಉಸಿರು ಮತ್ತು ಗಾಳಿಯು ಜಗತ್ತಿನ ಎಲ್ಲವನ್ನೂ ಆವರಿಸಿದೆ.' ಅಂದರೆ ಜಗತ್ತು ಉಸಿರಾಡುತ್ತದೆ.

ಹಿಂದಿನ ಕಾಲಗಳಲ್ಲಿ ಅನಾಕ್ಸಿಮ್ಯಾಂಡರ್‌ಗಿಂತ ಹೆಚ್ಚಾಗಿ ಅನಾಕ್ಸಿಮಿನೀಸ್ ಬಗ್ಗೆ ಮೆಚ್ಚಿಕೆಯಿತ್ತು. ಆದರೆ ಆಧುನಿಕ ಜಗತ್ತು ಈ ಬೆಲೆಗಟ್ಟುವಿಕೆಯನ್ನು ಅದಲುಬದಲು ಮಾಡುತ್ತದೆ. ಅವನು ಪೈಥಾಗೊರಾಸ್‌ನ ಹಾಗೂ ಆ ಮುಂದಿನ ಆಧಾರಕಲ್ಪನೆಗಳ ಮೇಲೆ ಮುಖ್ಯ ಪ್ರಭಾವ ಬೀರಿದ್ದವನು. ಪೈಥಾಗೊರಾಸ್ ಪಂಥದವರು ಭೂಮಿಯು ಗೋಲಾಕಾರವಾಗಿದೆ ಎಂದು ಕಂಡುಕೊಂಡರು, ಆದರೆ ಪರಮಾಣುವಾದಿಗಳು ಅದು ಬಿಲ್ಲೆಯಂತಿದೆ ಎಂಬ ಅನಾಕ್ಸಿಮಿನೀಸ್‌ನ ಕಲ್ಪನೆಗೇ ಅಂಟಿಕೊಂಡರು.

ಮೈಲೇಸಿಯನ್ ಪಂಥವು ಮುಖ್ಯವಾದುದು, ತನ್ನ ಸಾಧನೆಗಳಿಗಾಗಿ ಅಲ್ಲ, ತಾನು ಮಾಡಿದ ಪ್ರಯತ್ನಕ್ಕಾಗಿ. ಅದು ಸಾಧ್ಯವಾದುದು ಗ್ರೀಕ್ ಚಿಂತನೆಯು ಬ್ಯಾಬಿಲೋನಿಯ ಮತ್ತು ಈಜಿಪ್ಟ್‌ಗಳ ಜೊತೆ ಸಂಪರ್ಕ ಹೊಂದಿದುದದಿಂದಾಗಿ. ಮೈಲೆಟಸ್ ಒಂದು ಶ್ರೀಮಂತ ವಾಣಿಜ್ಯ ನಗರ, ಅದರಲ್ಲಿನ ಹಿಂದಿನ ಪೂರ್ವಾಗ್ರಹಗಳೂ ಕಂದಾಚಾರಗಳೂ ಅನೇಕ ದೇಶಗಳ ಜೊತೆಗಿನ ಸಂಬಂಧದಿಂದಾಗಿ ಮಿದುಗೊಂಡುವು. ಕ್ರಿಪೂ ಐದನೆಯ ಶತಮಾನದ ಆರಂಭದಲ್ಲಿ ಡೇರಿಯಸ್ ಅಧೀನಪಡಿಸಿಕೊಳ್ಳುವವರೆಗೆ ಅಯೋನಿಯವು ಸಾಂಸ್ಕೃತಿಕವಾಗಿ ಗ್ರೀಕ್ ಜಗತ್ತಿನ ಅತ್ಯಂತ ಮುಖ್ಯ ಭಾಗವಾಗಿತ್ತು. ಡಯೋನಿಸಸ್ ಮತ್ತು

ಆರ್ಫಿಯಸ್‌ರಿಗೆ ಸಂಬಂಧಿಸಿದ ಮತಧಾರ್ಮಿಕ ಚಳವಳಿಗಳಿಂದ ಅದು ಬಹುತೇಕ ದೂರವಿತ್ತು, ಅದರ ಮತಧರ್ಮವು ಗ್ರೀಕ್ ಆಗಿತ್ತು, ಆದರೆ ಅದನ್ನದು ಗಂಭೀರವಾಗಿ ಪರಿಗಣಿಸಿದ್ದಂತೆ ತೋರುವುದಿಲ್ಲ. ಥೇಲೀಸ್, ಅನಾಕ್ಸಿಮ್ಯಾಂಡರ್ ಮತ್ತು ಅನಾಕ್ಸಿಮಿನೀಸ್‌ರ ಆಧಾರಕಲ್ಪನೆಗಳನ್ನು ವೈಜ್ಞಾನಿಕ ಆಧಾರಕಲ್ಪನೆಗಳೆಂದು ಪರಿಗಣಿಸಬೇಕು, ಅವುಗಳಲ್ಲಿ ಕಿಂಚಿತ್ತೂ ಮಾನವಾರೋಪಣದ ಬಯಕೆಗಳಾಗಲೀ ನೈತಿಕ ಚಿಂತನೆಗಳಾಗಲೀ ಕಾಣುವುದಿಲ್ಲ. ಅವರು ಕೇಳಿದ ಪ್ರಶ್ನೆಗಳು ಸಮಂಜಸವಾದವು, ಅವುಗಳ ಗಟ್ಟಿತನವು ಮುಂದಿನ ಅನ್ವೇಷಕರಿಗೆ ಉತ್ತೇಜನವಿತ್ತಿತು.

ದಕ್ಷಿಣ ಇಟಲಿಯ ಗ್ರೀಕ್ ನಗರಗಳೊಡನೆ ತಳುಕುಹಾಕಿಕೊಂಡಿರುವ ಗ್ರೀಕ್ ತತ್ತ್ವಜ್ಞಾನದ ಮುಂದಿನ ಹಂತವು ಹೆಚ್ಚು ಮತಧಾರ್ಮಿಕವಾದುದು, ಅದರಲ್ಲೂ ಆರ್ಫಿಕ್ ಆದುದು. ಕೆಲವು ಅಂಶಗಳಲ್ಲಿ ಅದು ಆಸಕ್ತಿದಾಯಕವೂ, ಸಾಧನೆಯಲ್ಲಿ ಪ್ರಶಂಸಾರ್ಹವಾದುದೂ ಆದುದಾದರೂ, ಸತ್ವದಲ್ಲಿ ಮೈಲೇಸಿಯನ್ ಪಂಥಕ್ಕಿಂತ ಕಡಿಮೆ ವೈಜ್ಞಾನಿಕವಾದುದಾಗಿತ್ತು.

೩

ಪೈಥಾಗೊರಾಸ್

ಪ್ರಾಚೀನ ಹಾಗೂ ಆಧುನಿಕ ಕಾಲಗಳಲ್ಲಿ ಪೈಥಾಗೊರಾಸ್‌ನ ಪ್ರಭಾವಗಳನ್ನು ವಿವರಿಸುವುದು ಈ ಅಧ್ಯಾಯದ ವಸ್ತು; ಇಡೀ ಮಾನವಕುಲದಲ್ಲಿ ಅವನು, ಬೌದ್ಧಿಕವಾಗಿ ವಿವೇಕತನದಿಂದ ಕೂಡಿದ್ದಾಗಲೂ ಹಾಗೂ ವಿವೇಕರಹಿತತೆಯಿಂದ ಕೂಡಿದ್ದಾಗಲೂ, ಅತ್ಯಂತ ಪ್ರಮುಖನಾದ ವ್ಯಕ್ತಿ. ನಿಗಮನ ತರ್ಕದಿಂದ ಸಾಧಿಸಿ ತೋರಿಸಬಹುದಾದ ರೀತಿಯ ಗಣಿತವು ಅವನಿಂದಲೇ ಆರಂಭಗೊಳ್ಳುವುದು, ಮತ್ತು ಅವನಲ್ಲಿ ಅದು ಆನುಭಾವಿಕತೆಯೊಡನೆ ಒಂದು ಬಗೆಯ ನಿಕಟ ಸಂಬಂಧವುಳ್ಳುದಾಗಿದೆ. ತತ್ವಜ್ಞಾನದ ಮೇಲೆ ಗಣಿತದ ಪ್ರಭಾವವು ಭಾಗಶಃ ಅವನಿಂದಲೇ ಆದುದು, ಮತ್ತು ಅವನ ಕಾಲದಿಂದಲೂ ಅದು ಗಹನವೂ ಆಗಿದೆ, ದುರದೃಷ್ಟಕರವಾದುದೂ ಆಗಿದೆ.

ಅವನ ಬದುಕಿನ ಬಗ್ಗೆ ನಮಗೆ ತಿಳಿದಿರುವ ಅತ್ಯಲ್ಪ ವಿವರಗಳಿಂದಲೇ ಆರಂಭಿಸೋಣ. ಅವನು ಸಮೋಸ್ ದ್ವೀಪದ ನಿವಾಸಿ, ಕ್ರಿಪೂ ೫೩೨ ರ ಹೊತ್ತಿಗೆ ಉಚ್ಛ್ರಾಯದಲ್ಲಿದ್ದವನು. ಅವನು ಮೆನೆಸಾರ್ಕೊಸ್‌ನ ಎಂಬುವವನ ಮಗ ಎಂದು ಕೆಲವರು ಹೇಳುತ್ತಾರೆ, ಮತ್ತೆ ಕೆಲವರು ದೇವತೆಯಾದ ಅಪಾಲೋನ ಮಗ ಎನ್ನುತ್ತಾರೆ; ಇವೆರಡರಲ್ಲಿ ಯಾವುದನ್ನು ಒಪ್ಪಬೇಕೆಂಬ ತೀರ್ಮಾನವನ್ನು ನಾನು ಓದುಗರಿಗೇ ಬಿಡುತ್ತೇನೆ. ಅವನ ಕಾಲದಲ್ಲಿ ಸಮೋಸ್ ಅನ್ನು ನಿರಂಕುಶಾಧಿಪತಿಯಾದ ಪಾಲಿಕ್ರಿಟೀಸ್ ಆಳುತ್ತಿದ್ದ, ಅವನೊಬ್ಬ ಉಡಾಳ, ಭಾರಿ ಹಣವಂತ ಮತ್ತು ಅವನ ಬಳಿ ದೊಡ್ಡ ನೌಕಾಪಡೆಯಿತ್ತು.

ಸಮೋಸ್ ಮಿಲೆಟಸ್‌ನ ವಾಣಿಜ್ಯ ಪ್ರತಿಸ್ಪರ್ಧಿ; ಅದರ ವರ್ತಕರು ಸ್ಪೆಯಿನ್‌ನ ಟಾರ್ಟೆಸಸ್‌ನಷ್ಟು ದೂರದವರೆಗೂ ಹೋಗುತ್ತಿದ್ದರು, ಆ ಕಾಲದಲ್ಲಿ ಅದು ಗಣಿಗಳಿಗೆ ಪ್ರಖ್ಯಾತವಾಗಿದ್ದ ಊರು. ಪಾಲಿಕ್ರಿಟೀಸ್ ಸಮೋಸ್‌ನ ನಿರಂಕುಶಾಧಿಪತಿಯಾದದ್ದು ಕ್ರಿಪೂ ೫೩೫ ರ ಹೊತ್ತಿಗೆ; ಅವನು ಕ್ರಿಪೂ ೫೧೫ ರವರೆಗೂ ಆಳುತ್ತಿದ್ದ. ಅವನನ್ನು ನೈತಿಕ ನಿರ್ಬಂಧಗಳು ಅಷ್ಟೇನೂ ಕಾಡಲಿಲ್ಲ,

ತನ್ನ ಇಬ್ಬರು ಸೋದರರನ್ನು ಅವನು ನಿವಾರಿಸಿಕೊಂಡ, ಅವರೂ ಮೊದಮೊದಲು ಅವನ ನಿರಂಕುಶಾಧಿಪತ್ಯದಲ್ಲಿ ಕೈಜೋಡಿಸಿದ್ದವರೇ, ಅವನು ತನ್ನ ನೌಕಾಪಡೆಯನ್ನು ಬಹುತೇಕ ಕಡಲುಗಳ್ಳತನಕ್ಕೆ ಬಳಸುತ್ತಿದ್ದ. ಮಿಲೆಟಸ್ ಆಗತಾನೇ ಪರ್ಷಿಯಕ್ಕೆ ಸೋತಿದ್ದುದನ್ನು ಅವನು ತನ್ನ ಲಾಭಕ್ಕಾಗಿ ಬಳಸಿಕೊಂಡ. ಪರ್ಷಿಯನ್‌ರು ಪಶ್ಚಿಮದಲ್ಲಿ ಮತ್ತಷ್ಟು ವಿಸ್ತರಣೆ ನಡೆಸುವುದನ್ನು ತಪ್ಪಿಸಲು ಅವನು ಈಜಿಪ್ಟ್‌ನ ದೊರೆ ಅಮಾಸಿಸ್ ಜೊತೆ ಸೇರಿಕೊಂಡ. ಆದರೆ ಪರ್ಷಿಯದ ದೊರೆ ಕ್ಯಾಂಬಿಸೆಸ್ ತನ್ನ ಶಕ್ತಿಯನ್ನೆಲ್ಲ ಈಜಿಪ್ಟ್ ಅನ್ನು ಗೆಲ್ಲಲು ವಿನಿಯೋಗಿಸಿದಾಗ ಪಾಲಿಕ್ರೇಟೀಸ್‌ಗೆ ಅವನೇ ಗೆಲ್ಲುವ ಸಂಭವವಿದೆಯೆಂಬುದು ಅರಿವಾಯಿತು, ಹೀಗಾಗಿ ಅವನು ಪಕ್ಷ ಬದಲಾಯಿಸಿದ. ತನ್ನ ರಾಜಕೀಯ ಶತ್ರುಗಳಿಂದ ಕೂಡಿದ ನೌಕಾಪಡೆಯೊಂದನ್ನು ಈಜಿಪ್ಟ್ ಮೇಲೆ ಯುದ್ಧಮಾಡಲು ಕಳಿಸಿದ; ಆದರೆ ಆ ನೌಕಾಪಡೆಯ ನಾಯಕರು ದಂಗೆಯೆದ್ದು ಅವನ ಮೇಲೆ ದಾಳಿ ಮಾಡಲು ಸಮೋಸ್‌ಗೇ ವಾಪಸಾದರು. ಅವನೇ ಮೇಲುಗೈ ಸಾಧಿಸಿದರೂ, ತನ್ನ ದುರಾಸೆಯ ಕಾರಣದಿಂದಲೇ ಸೋಲುವಂತಾಯಿತು. ಹಿರಿಯ ದೊರೆಯ ವಿರುದ್ಧ ಅವನು ದಂಗೆಯೇಳುವ ಇಚ್ಛೆ ಹೊಂದಿರುವನೆಂದು ಹೇಳಿ, ಸಹಾಯ ಮಾಡಿದರೆ ಅವನಿಗೆ ಭಾರಿ ಮೊತ್ತವನ್ನು ನೀಡುವುದಾಗಿ ಪಾಲಿಕ್ರೇಟೀಸ್‌ಗೆ ಆಸೆ ಹುಟ್ಟಿಸಿ ಸಂದರ್ಶನವೊಂದಕ್ಕೆಂದು ಮುಖ್ಯ ಭಾಗಕ್ಕೆ ಹೋಗಿದ್ದ ಅವನನ್ನು ಪರ್ಷಿಯನ್ ಸತ್ರಪರು (ಮಾಂಡಲಿಕರು) ಸಾರ್ಡಿಸ್‌ನಲ್ಲಿ ಸೆರೆ ಹಿಡಿದು ಗಲ್ಲಿಗೇರಿಸಿದರು.

ಪಾಲಿಕ್ರೇಟೀಸ್ ಕಲೆಯ ಪೋಷಕನಾಗಿದ್ದ, ಹಾಗೂ ಮಹತ್ತರವಾದ ಸಾರ್ವಜನಿಕ ಕೆಲಸಗಳಿಂದ ಸಮೋಸ್ ಅನ್ನು ಸುಂದರವಾಗಿಸಿದ. ಅನಾಕ್ರಿಯಾನ್ ಅವನ ಆಸ್ಥಾನ ಕವಿ. ಆದರೆ ಪೈಥಾಗೊರಾಸ್ ಅವನ ಪ್ರಭುತ್ವವನ್ನು ಇಷ್ಟಪಡಲಿಲ್ಲ, ಹೀಗಾಗಿ ಸಮೋಸ್ ಅನ್ನು ಬಿಟ್ಟು ಬಂದ. ಪೈಥಾಗೊರಾಸ್ ಈಜಿಪ್ಟ್ ಅನ್ನು ಸಂದರ್ಶಿಸಿ ಅಲ್ಲಿ ತನ್ನ ಜ್ಞಾನದ ಬಹುತೇಕವನ್ನು ಗಳಿಸಿದ ಎಂದು ಹೇಳುತ್ತಾರೆ, ಅದೇನೂ ಅಸಂಭವವಲ್ಲ. ಅದೇನೇ ಆದರೂ, ಅವನು ಅಂತಿಮವಾಗಿ ದಕ್ಷಿಣ ಇಟಲಿಯ ಕ್ರೋಟಾನ್‌ನಲ್ಲಿ ನೆಲಸಿದ.

ದಕ್ಷಿಣ ಇಟಲಿಯ ಗ್ರೀಕ್ ನಗರಗಳು, ಸಮೋಸ್ ಮತ್ತು ಮಿಲೆಟಸ್‌ಗಳಂತೆಯೇ, ಶ್ರೀಮಂತವೂ ಅಭಿವೃದ್ಧಿಶೀಲವೂ ಆಗಿದ್ದವು; ಅಲ್ಲದೆ ಅವು ಪರ್ಷಿಯನ್ನರ ದಾಳಿಯ ಅಪಾಯಕ್ಕೆ ಒಳಗಾಗುವಂತಿರಲಿಲ್ಲ.[೨೪] ಅತ್ಯಂತ ದೊಡ್ಡವೆಂದರೆ ಸೈಬಾರಿಸ್ ಮತ್ತು ಕ್ರೋಟಾನ್. ಸೈಬಾರಿಸ್ ತನ್ನ ವೈಭವಕ್ಕಾಗಿ ಗಾದೆ ಮಾತಾಗಿತ್ತು; ತನ್ನ ಅತ್ಯಂತ

---

೨೪. ಸಿಸಿಲಿಯ ಗ್ರೀಕ್ ನಗರಗಳು ಕಾರ್ಥೇಜಿನಿಯನ್ನರಿಂದಾಗುವ ಅಪಾಯಕ್ಕೆ ಒಳಗಾಗಬಹುದಾಗಿತ್ತು, ಆದರೆ ಇಟಲಿಯಲ್ಲಿ ಇಂತಹ ಭಯಕ್ಕೆ ಕಾರಣವಿರಲಿಲ್ಲ.

ಉಚ್ಛ್ರಾಯ ಸ್ಥಿತಿಯಲ್ಲಿ ಅದರ ಜನಸಂಖ್ಯೆಯು ಮೂರು ಲಕ್ಷದಷ್ಟಿತ್ತು ಎಂದು ಡಯೋಡರಸ್ ಹೇಳುತ್ತಾನೆ. ಆದರೆ ಇದು ಅತಿಶಯೋಕ್ತಿ ಎಂಬುದರಲ್ಲಿ ಅನುಮಾನವಿಲ್ಲ. ಕ್ರೋಟಾನ್ ಸೈಬಾರಿಸ್‌ನಷ್ಟೇ ದೊಡ್ಡದಾಗಿತ್ತು. ಅಯೋನಿಯದ ಸರಕನ್ನು ಇಟಲಿಗೆ ಆಮದುಮಾಡಿಕೊಳ್ಳುವ ಮೂಲಕ ಈ ಎರಡೂ ನಗರಗಳು ಉಳಿದಿದ್ದವು; ಒಂದಷ್ಟನ್ನು ಆ ಅವಕಾಶದಲ್ಲಿಯೇ ಬಳಕೆಗೆ ತಂದು, ಮತ್ತಷ್ಟನ್ನು ಗೌಲ್ ಮತ್ತು ಸ್ಪೆಯಿನ್‌ಗಳಿಗೆ ಪಶ್ಚಿಮ ಕರಾವಳಿಯ ಮೂಲಕ ಮರುರಫ್ತು ಮಾಡುತ್ತಿದ್ದವು. ಪೈಥಾಗೊರಾಸ್ ಕ್ರೋಟಾನ್‌ಗೆ ಬಂದಾಗ ಇಟಲಿಯ ಅನೇಕ ಗ್ರೀಕ್ ನಗರಗಳು ಒಂದರೊಡನೊಂದು ಬಿರುಸಿನ ಸೆಣೆಸಾಟದಲ್ಲಿ ತೊಡಗಿದ್ದವು. ಕ್ರೋಟಾನ್ ಅನ್ನು ಆಗ ತಾನೇ ಲೋಕ್ರೈ ಸೋಲಿಸಿತ್ತು. ಆದರೆ ಅವನು ಅಲ್ಲಿಗೆ ಬಂದ ಸ್ವಲ್ಪ ಕಾಲದಲ್ಲಿಯೇ ಕ್ರೋಟಾನ್ ಸೈಬಾರಿಸ್ ವಿರುದ್ಧದ ಸೆಣೆಸಾಟದಲ್ಲಿ ಸಂಪೂರ್ಣ ಗೆಲವನ್ನು ಸಾಧಿಸಿತ್ತು. ಸೈಬಾರಿಸ್ ಸಂಪೂರ್ಣವಾಗಿ ನಾಶಗೊಂಡಿತು (ಕ್ರಿಪೂ ೫೧೦).ಆ ನಗರಕ್ಕೆ ಮೈಲೆಟಸ್‌ನೊಡನೆ ನಿಕಟ ವಾಣಿಜ್ಯ ಸಂಪರ್ಕವಿತ್ತು. ಕ್ರೋಟಾನ್ ಔಷಧಿಗಳಿಗೆ ಪ್ರಖ್ಯಾತವಾಗಿತ್ತು; ಕ್ರೋಟಾನ್‌ನ ಡೆಮೋಸಿಡೀಸ್ ಎಂಬೊಬ್ಬ ಪಾಲಿಕ್ರಿಟೀಸ್‌ಗೆ, ಆನಂತರ ಡೇರಿಯಸ್‌ಗೆ ವೈದ್ಯನಾಗಿದ್ದ.

ಕ್ರೋಟಾನ್‌ನಲ್ಲಿ ಪೈಥಾಗೊರಾಸ್‌ನ ಶಿಷ್ಯವರ್ಗವೊಂದು ಸ್ಥಾಪಿತವಾಯಿತು, ಅದು ಸ್ವಲ್ಪ ಕಾಲ ನಗರದಲ್ಲಿ ಪ್ರಭಾವಶಾಲಿಯಾಗಿತ್ತು. ಆದರೆ ಕೊನೆಯಲ್ಲಿ ಜನರು ಅವನ ವಿರುದ್ಧ ತಿರುಗಿಬಿದ್ದರು, ಅವನು ಅಲ್ಲಿಂದ (ದಕ್ಷಿಣ ಇಟಲಿಯಲ್ಲೇ ಇದ್ದ) ಮೆಟಾಪಾನ್ಷನ್‌ಗೆ ವಾಸ್ತವ್ಯ ಬದಲಾಯಿಸಿದ, ಅಲ್ಲಿಯೇ ಕೊನೆಯುಸಿರೆಳೆದ. ಬಹು ಬೇಗ ಅವನು ಪೌರಾಣಿಕವ್ಯಕ್ತಿಯಾಗಿಬಿಟ್ಟ, ಅವನಿಗೆ ಪವಾಡಗಳನ್ನೂ ಮಾಂತ್ರಿಕ ಶಕ್ತಿಯನ್ನೂ ಆರೋಪಿಸಲಾಯಿತು, ಜೊತೆಗೆ ಅವನು ಗಣಿತ ಪಂಥವೊಂದನ್ನೂ ಸ್ಥಾಪಿಸಿದ್ದ.[೨೫] ಹೀಗೆ ಅವನ ನೆನಪನ್ನು ಪರಸ್ಪರ ವಿರೋಧಿಯಾದ ಎರಡು ಪರಂಪರೆಗಳು ಉಳಿಸಿಕೊಂಡು ಬಂದುವು; ಇದರಲ್ಲಿ ಸತ್ಯವಾವುದು ಎಂಬುದನ್ನು ಬೇರ್ಪಡಿಸುವುದು ಕಷ್ಟ.

ಪೈಥಾಗೊರಾಸ್ ಇತಿಹಾಸದಲ್ಲಿ ಅತ್ಯಂತ ಆಸಕ್ತಿದಾಯಕ ಹಾಗೂ ಸಮಸ್ಯಾತ್ಮಕ ವ್ಯಕ್ತಿತ್ವದವನು. ಅವನ ಬಗ್ಗೆ ಪ್ರಚಲಿತವಿರುವ ಪರಂಪರೆಗಳು ಬೇರ್ಪಡಿಸಲಾರದ ಸತ್ಯ ಮತ್ತು ಮಿಥ್ಯಗಳ ಮಿಶ್ರಣವಾಗಿವೆ. ಆದರೆ ಅವುಗಳು ಇರುವ ಮತ್ತು ವಿವಾದಾತ್ಮಕ ರೂಪದಲ್ಲಿಯೂ ನಮ್ಮ ಮುಂದೆ ಬಹು ಕುತೂಹಲಕಾರಕ ಮನಸ್ಸೊಂದನ್ನು ತೆರೆದಿಡುತ್ತದೆ. ಸಂಕ್ಷಿಪ್ತವಾಗಿ ಹೇಳಬಹುದಾದರೆ, ಅವನು ಐನ್‌ಸ್ಟೈನ್ ಮತ್ತು

---

೨೫. 'ಅವನು ಮೊದಲು ಗಣಿತ ಮತ್ತು ಅಂಕಗಣಿತಗಳ ಬಗ್ಗೆ ಕೆಲಸ ಮಾಡಿದ, ಆಮೇಲೆ, ಒಂದು ಕಾಲದಲ್ಲಿ, ಫೇರೆಸೈಡೀಸ್ ಕೈಗೊಂಡಿದ್ದ ಪವಾಡಗಳಿಗೆ ಇಳಿದುಬಿಟ್ಟ' ಎಂದು ಅವನ ಬಗ್ಗೆ ಅರಿಸ್ಟಾಟಲ್ ಹೇಳುತ್ತಾನೆ.

ಮಿಸಿಸ್ ಎಡಿಗಳ ಸಂಗಮ. ಅವನು ಮತಧರ್ಮವೊಂದನ್ನು ಸ್ಥಾಪಿಸಿದ, ಅದರ ಪ್ರಮುಖ ತತ್ವಗಳೆಂದರೆ ಆತ್ಮಗಳ ದೇಹಾಂತರ[೨೬] ಮತ್ತು ಹುರುಳಿಯನ್ನು ತಿನ್ನುವುದರಿಂದ ಬರುವ ಪಾಪ. ಅವನ ಮತಧರ್ಮವು ಒಂದು ಮತಧಾರ್ಮಿಕ ವ್ಯವಸ್ಥೆಯಲ್ಲಿ ಸೇರಿಹೋಗಿತ್ತು, ಅದು ಅಲ್ಲಿ ಇಲ್ಲಿ, ಪ್ರಭುತ್ವದ ಹತೋಟಿ ಹೊಂದಿ ಸಂತರ ಆಡಳಿತವನ್ನು ಸ್ಥಾಪಿಸಿತು. ಆದರೆ ಹುರುಳಿಯ ಬಳಿಕ ಪ್ರಾಯಶ್ಚಿತ್ತ ಮಾಡಿಕೊಳ್ಳದೆ ಅದಕ್ಕಾಗಿ ಹಾತೊರೆಯುತು, ಬಳಿಕ ಹೆಚ್ಚು ಕಡಿಮೆ ಬಂಡಾಯವೆದ್ದಿತು.

ಪೈಥಾಗೊರಾಸ್‌ನ ವ್ಯವಸ್ಥೆಯಲ್ಲಿನ ಕೆಲವು ನಿಯಮಗಳೆಂದರೆ:

೧. ಹುರುಳಿಯಿಂದ ದೂರವಿರುವುದು.

೨. ಕೆಳಗೆ ಬಿದ್ದಿರುವುದನ್ನು ಎತ್ತಿಕೊಳ್ಳದಿರುವುದು.

೩. ಬಿಳಿ ಹುಂಜವನ್ನು ಮುಟ್ಟದಿರುವುದು.

೪. ಬ್ರೆಡ್ ಅನ್ನು ಮುರಿಯದಿರುವುದು.

೫. ಅಡ್ಡಕಂಬಿಯನ್ನು ದಾಟದಿರುವುದು.

೬ ಬೆಂಕಿಯನ್ನು ಕಬ್ಬಿಣದ ಸರಳಿನಿಂದ ಕೆದಕದಿರುವುದು.

೭ ಇಡೀ ಲೋಫ್‌ನಿಂದ ತಿನ್ನದಿರುವುದು.

೮. ಹಾರದಿಂದ ಕೀಳದಿರುವುದು.

೯. ಅಳತೆ ಪಾತ್ರೆಯ ಮೇಲೆ ಕುಳಿತುಕೊಳ್ಳದಿರುವುದು.

೧೦. ಹೃದಯಭಾಗವನ್ನು ತಿನ್ನದಿರುವುದು.

೧೧. ಹೆದ್ದಾರಿಗಳಲ್ಲಿ ಓಡಾಡದಿರುವುದು.

೧೨. ತನ್ನ ಮನೆಯ ಸೂರಿನಡಿ ಕವಲುತೋಕೆ ಹಕ್ಕಿ (ಸ್ವಾಲೋ) ಬರುವುದನ್ನು ತಡೆಯುವುದು.

೧೩. ಬೆಂಕಿಯಿಂದ ಗಡಿಗೆಯನ್ನು ಹೊರತೆಗೆದಾಗ, ಅದರ ಕುರುಹು ಬೂದಿಯಲ್ಲಿ ಉಳಿಯದಂತೆ ಮಾಡದೆ ಎರಡನ್ನೂ ಒಟ್ಟಿಗೆ ಕದಡುವುದು.

೧೪. ಬೆಳಕಿನ ಪಕ್ಕದಲ್ಲಿರುವ ಕನ್ನಡಿಯಲ್ಲಿ ನೋಡಿಕೊಳ್ಳದಿರುವುದು.

---

೨೬. ನಕಲಿ: ಕಾಡುಕೋಳಿಯ ಬಗ್ಗೆ ಪೈಥಾಗೊರಾಸ್‌ನ ಅಭಿಪ್ರಾಯವೇನು?
ಮಾಲ್ವೋಲಿಯೋ: ನಮ್ಮ ಅಜ್ಜಿಯ ಆತ್ಮವು ಅಂಥ ಹಕ್ಕಿಯೊಂದರಲ್ಲಿ ಸಂತೋಷದಿಂದ ಸೇರಬಹುದು ಅಂತ.
ನಕಲಿ: ಅವನ ಅಭಿಪ್ರಾಯದ ಬಗ್ಗೆ ನೀಮಗೇನು ಅನ್ನಿಸತ್ತೆ?
ಮಾಲ್ವೋಲಿಯೋ: ಆತ್ಮ ದೊಡ್ಡು ಅಂತ ನನ್ನ ಭಾವನೆ; ಅವನ ಅಭಿಪ್ರಾಯವನ್ನ ಯಾರೂ ಒಪ್ಪೋದಕ್ಕೆ ಸಾಧ್ಯವೇ ಇಲ್ಲ.
ನಕಲಿ: ಒಳ್ಳೇದು, ನಾನು ಹೊರಡ್ತೀನಿ. ನೀನಿನ್ನೂ ಕತ್ತಲೇಲೇ ಉಳಿದಿರಬೇಕು. ನೀನು ಪೈಥಾಗೊರಾಸ್‌ನ ಅಭಿಪ್ರಾಯಾನ ಒಪ್ಪಬೇಕು; ನಿನ್ನ ಅಜ್ಜಿ ಆತ್ಮಕ್ಕೆ ತೊಂದರೆಯಾಗತ್ತೇಂತ ಕಾಡುಕೋಳೀನ ಕೊಲ್ಲಕ್ಕೆ ಹೆದರ್ಕೋಬೇಕು. ಆಗ ನಾನು ನಿಂಗೆ ಬುದ್ಧಿ ಸರಿಯಾಗಿದೇಂತ ಒಪ್ತೀನಿ (ಟ್ವೆಲ್ಫ್‌ತ್ ನೈಟ್)

೧೫. ಹಾಸಿಗೆಯಿಂದ ಮೇಲೆದ್ದಾಗ, ಹಾಸಿಗೆ ಬಟ್ಟೆಗಳನ್ನು ಮಡಚಿ ತನ್ನ ದೇಹದ ಗುರುತು ಹೋಗುವಂತೆ ನಯಗೊಳಿಸುವುದು.

ಇವೆಲ್ಲ ಪ್ರಾಚೀನ ಬಹಿಷ್ಕಾರ ಕಲ್ಪನೆಗೆ ಸೇರುವಂತಹವು.

ಕಾರ್ನ್‌ಫರ್ಡ್ (‘ಫ್ರಂ ರಿಲಿಜನ್ ಟು ಫಿಲಾಸಫಿ’) ಅಭಿಪ್ರಾಯ ಪಡುವುದೇನೆಂದರೆ, ‘ಪೈಥಾಗೊರಾಸ್ ಪಂಥವು ಅನುಭಾವಿಕ ಪರಂಪರೆಯ ಮುಖ್ಯ ವಾಹಿನಿಯ ಪ್ರತಿನಿಧಿ, ನಾವದನ್ನು ವೈಜ್ಞಾನಿಕ ಪ್ರವೃತ್ತಿಯ ವಿರುದ್ಧ ಇರಿಸಿದ್ದೇವೆ.’ ಅವರ ಪ್ರಕಾರ, ‘ತರ್ಕದ ಅನ್ವೇಷಕ’ ಎಂದು ಕರೆಯಲಾಗುವ ಪಾರ್ಮನೈಡೀಸ್ ‘ಪೈಥಾಗೊರಾಸ್ ಸಿದ್ಧಾಂತದ ಒಂದು ಕುಡಿ. ಪ್ಲೇಟೋ ಸ್ವತಃ ಅವನ ಮುಖ್ಯ ಸ್ಫೂರ್ತಿಯನ್ನು ಇಟಾಲಿಯನ್ ತತ್ವಜ್ಞಾನದ ಆಕರದಲ್ಲಿ ಕಾಣುತ್ತಾನೆ.’ ಪೈಥಾಗೊರಾಸ್ ಸಿದ್ಧಾಂತವು ಆರ್ಫಿಕ್ ಸಿದ್ಧಾಂತದ ಸುಧಾರಣೆಯ ಒಂದು ಚಳವಳಿಯಾಗಿತ್ತು ಎನ್ನುತ್ತಾರೆ ಅವರು. ಇತಿಹಾಸದುದ್ದಕ್ಕೂ ಸಾಗುವ ವೈಚಾರಿಕತೆ ಮತ್ತು ಅನುಭಾವಿಕತೆಗಳ ವಿರೋಧವು ಮೊದಲು ಕಾಣಿಸುವುದು ಗ್ರೀಕರಲ್ಲಿ, ಒಲಂಪಿಕ್ ದೇವತೆಗಳು ಮತ್ತು ಮಾನವಶಾಸ್ತ್ರಜ್ಞರು ವಿವೇಚಿಸಿರುವ ಪ್ರಾಚೀನ ಶ್ರದ್ಧೆಗಳೊಡನೆ ಸಂಬಂಧ ಹೊಂದಿದ್ದ ಇತರ ಕಡಿಮೆ ಸುಸಂಸ್ಕೃತ ದೇವತೆಗಳ ನಡುವಣ ವಿರೋಧದಲ್ಲಿ. ಈ ವಿಭಜನೆಯಲ್ಲಿ, ಪೈಥಾಗೊರಾಸ್ ಅನುಭಾವಿಕತೆಯ ಕಡೆಗಿದ್ದಾನೆ, ಆದರೆ ಅವನ ಅನುಭಾವಿಕತೆಯು ವಿಶಿಷ್ಟ ಬೌದ್ಧಿಕ ಬಗೆಯದಾಗಿತ್ತು. ತನಗೆ ತಾನು ಅರೆ ದೈವಿಕ ಲಕ್ಷಣವನ್ನವನು ಆರೋಪಿಸಿಕೊಂಡಿದ್ದ, ಹಾಗೂ ಹೀಗೆ ಹೇಳಿದಂತೆ ತೋರುತ್ತದೆ: ‘ಮನುಷ್ಯರೂ ಇದ್ದಾರೆ, ದೇವತೆಗಳೂ ಇದ್ದಾರೆ; ಪೈಥಾಗೊರಾಸ್‌ನಂತಹ ಜೀವಿಗಳೂ ಇದ್ದಾರೆ.’ ಕಾರ್ನ್‌ಫರ್ಡ್ ಹೀಗೆನ್ನುತ್ತಾರೆ: ‘ಅವ್ಯಕ್ತ ದೈವ ಸಮಗ್ರತೆಯಲ್ಲಿ ಮೌಲ್ಯಗಳನ್ನಿಟ್ಟು, ವ್ಯಕ್ತ ಜಗತ್ತನ್ನು ಮಿಥ್ಯ ಹಾಗೂ ಭ್ರಮಾತ್ಮಕ, ಸ್ವರ್ಗೀಯ ಬೆಳಕು ಕಾವಳ ಮತ್ತು ಕತ್ತಲಲ್ಲಿ ಮಬ್ಬಾಗುವಂತೆ ಮಾಡುವ ಬಗ್ಗಡಗೊಂಡ ಮಾಧ್ಯಮವೆಂದು ಕರೆಯುವ ಅವನಲ್ಲಿ ಪರಲೋಕಪರತೆ ಹೆಚ್ಚು.’

ಪೈಥಾಗೊರಾಸ್ ‘ಆತ್ಮವು ಅಮರ, ಅದು ಇತರ ಜೀವಿಗಳಾಗಿ ರೂಪಾಂತರಗೊಳ್ಳುತ್ತದೆ, ಅಲ್ಲದೆ ಅಸ್ತಿತ್ವಕ್ಕೆ ಬರುವುದೆಲ್ಲವೂ ಯಾವುದೋ ಚಕ್ರನೇಮಿಗತಿಯ ವರ್ತುಲದಲ್ಲಿ ಮತ್ತೆ ಮತ್ತೆ ಹುಟ್ಟುತ್ತವೆ; ಯಾವುದೂ ಸಂಪೂರ್ಣವಾಗಿ ಹೊಸದಲ್ಲ ಮತ್ತು ಜೀವಸಹಿತ ಹುಟ್ಟುವ ಎಲ್ಲವೂ ಪರಸ್ಪರ ಸಂಬಂಧ ಹೊಂದಿದವು ಎಂದು ಮೊದಲಿಗೆ ಬೋಧಿಸಿದ’ ಡಿಕಯಾರ್‌ಕಾಸ್ ಎಂದು ಹೇಳುತ್ತಾನೆ.[೨೭] ಸಂತ ಫ್ರಾನ್ಸಿಸ್‌ನಂತೆಯೇ ಪೈಥಾಗೊರಾಸ್ ಪ್ರಾಣಿಗಳಿಗೂ ಬೋಧಿಸಿದ ಎನ್ನುತ್ತಾರೆ.

---

೨೭. ಕಾರ್ನ್‌ಫರ್ಡ್, ಪೂರ್ವೋಕ್ತ, ಪು. ೨೦೧.

ಅವನು ಸ್ಥಾಪಿಸಿದ ಪಂಥದಲ್ಲಿ ಗಂಡಸರು ಹೆಂಗಸರಿಬ್ಬರನ್ನೂ ಸಮಾನತೆಯ ನೆಲೆಯಲ್ಲಿ ಸೇರಿಸಿಕೊಳ್ಳಲಾಗುತ್ತಿತ್ತು; ಆಸ್ತಿಯನ್ನು ಸಮಾನವಾಗಿ ಹೊಂದಿರಲಾಗುತ್ತಿತ್ತು, ಮತ್ತು ಏಕರೂಪದ ಜೀವನಕ್ರಮವಿತ್ತು. ಅವನು ಸತ್ತ ನಂತರವೂ ಪೈಥಾಗೊರಾಸ್‌ನ ಕಾರಣದಿಂದಾಗಿ ವೈಜ್ಞಾನಿಕ ಹಾಗೂ ಗಣಿತಗಳ ಅನ್ವೇಷಣೆವನ್ನೂ ಸಾಮೂಹಿಕವೆಂದು ಭಾವಿಸಲಾಗುತ್ತಿತ್ತು. ಮೆಟೆಪಾನ್ಟಸ್‌ನ ಹಿಪಾಸೋಸ್ ಈ ನಿಯಮವನ್ನು ಮೀರಿದ್ದಕ್ಕಾಗಿ ಅವನ ಶ್ರದ್ಧಾಹೀನತೆಯಿಂದ ಕೋಪಗೊಂಡ ದೈವವು ನೌಕಾಘಾತದಲ್ಲಿ ಅವನನ್ನು ಸಿಲುಕಿಸಿತು.

ಆದರೆ ಇದೆಲ್ಲಕ್ಕೂ ಗಣಿತಕ್ಕೂ ಏನು ಸಂಬಂಧ? ಅದನ್ನು ಧ್ಯಾನಾತ್ಮಕ ಬದುಕನ್ನು ಶ್ಲಾಘಿಸುವ ನೀತಿಯ ಮೂಲಕ ಸೇರಿಸಲಾಗಿದೆ. ಈ ನೀತಿಯನ್ನು ಬರ್ನೆಟ್ ಈ ರೀತಿ ಸಂಗ್ರಹಿಸಿ ಹೇಳುತ್ತಾರೆ:

ನಾವು ಈ ಜಗತ್ತಿಗೆ ಆಗಂತುಕರು, ದೇಹವೆಂಬುದು ಆತ್ಮದ ಗೋರಿ, ಆದರೂ ನಾವು ಆತ್ಮಘಾತದ ಮೂಲಕ ಪಲಾಯನ ಮಾಡಲು ಪ್ರಯತ್ನಿಸಬಾರದು. ಯಾಕೆಂದರೆ ನಾವೆಲ್ಲ ಯಜಮಾನನಾದ ದೇವರ ಸೇವಕರು; ಅವನ ಅಪ್ಪಣೆಯಿಲ್ಲದೆ ಪಲಾಯನಗೈಯಲು ನಮಗೆ ಅಧಿಕಾರವಿಲ್ಲ. ಒಲಂಪಿಕ್ ಕ್ರೀಡೆಗಳಿಗಾಗಿ ಮೂರು ಬಗೆಯ ಜನರಂತೆಯೇ ಈ ಜಗತ್ತಿನಲ್ಲಿ ಮೂರು ಬಗೆಯ ಜನರಿದ್ದಾರೆ. ಅತ್ಯಂತ ಕೆಳಸ್ತರದ ಜನರು ಕೊಳ್ಳಲು ಮಾರಲು ಬಂದವರು, ಅವರ ನಂತರ ಮೇಲುಸ್ತರದಲ್ಲಿ ಸ್ಪರ್ಧೆಗಾಗಿ ಬಂದವರು. ಎಲ್ಲರಿಗಿಂತ ಮೇಲಾದವರು ನೋಡುವುದಕ್ಕೆಂದೇ ಬಂದವರು. ಹೀಗಾಗಿ ಎಲ್ಲಕ್ಕಿಂತ ಮಿಗಿಲಾದ ಶುದ್ಧೀಕರಣ ಎಂದರೆ ಅನಾಸಕ್ತ ವಿಜ್ಞಾನ, ಅದಕ್ಕಾಗಿ ತನ್ನನ್ನು ಮುಡುಪಾಗಿಟ್ಟ ವ್ಯಕ್ತಿಯು ನಿಜವಾದ ತತ್ವಜ್ಞಾನಿ, ಅವನು ಜೀವನಚಕ್ರದಿಂದ ಪರಿಣಾಮಕಾರಿಯಾಗಿ ಬಿಡುಗಡೆಗೊಂಡವನು.[೨೮]

ಶಬ್ದಗಳ ಅರ್ಥಗಳಲ್ಲಾಗುವ ಬದಲಾವಣೆಗಳು ಕೆಲವೊಮ್ಮೆ ಬೋಧಪ್ರದವಾಗದವು. ನಾನು ಹಿಂದೆ 'ಆರ್ಗಿ' ಶಬ್ದದ ಬಗ್ಗೆ ಹೇಳಿದ್ದೆ; ಈಗ ನಾನು 'ಥಿಯರಿ' ಬಗ್ಗೆ ಮಾತನಾಡುತ್ತೇನೆ. ಇದು ಮೂಲತಃ ಆರ್ಫಿಕ್ ಪಂಥದ ಶಬ್ದ, ಇದನ್ನು ಕಾರ್ನ್‌ಫರ್ಡ್ ಅವರು 'ಭಾವತೀವ್ರತೆಯ ಸಹಾನುಭೂತ್ಯಾತ್ಮಕ ಚಿತ್ತೈಕಾಗ್ರತೆ' ಎಂದು ವ್ಯಾಖ್ಯಾನಿಸುತ್ತಾರೆ. ಈ ಅರ್ಥದಲ್ಲಿ ಅವರು, 'ಪ್ರೇಕ್ಷಕನನ್ನು ನರಳುವ ದೇವರೊಡನೆ ಗುರುತಿಸಲಾಗುತ್ತದೆ, ತನ್ನ ಸಾವಿನಲ್ಲಿ ಸತ್ತು ಹೊಸ ಜನ್ಮ ತಾಳುತ್ತಾನೆ' ಎನ್ನುತ್ತಾರೆ. ಪೈಥಾಗೊರಾಸ್ ಪ್ರಕಾರ ಈ 'ಭಾವತೀವ್ರತೆಯ ಸಹಾನುಭೂತ್ಯಾತ್ಮಕ ಚಿತ್ತೈಕಾಗ್ರತೆ'ಯು ಬೌದ್ಧಿಕವಾದುದು; ಅದನ್ನು ಗಣಿತಜ್ಞಾನದ ಮೂಲಕ ತಿಳಿಸಲಾಗುತ್ತಿತ್ತು. ಈ ಬಗೆಯಲ್ಲಿ, ಪೈಥಾಗೊರಾಸ್ ಸಿದ್ಧಾಂತದಲ್ಲಿ

---

೨೮. *'ಅರ್ಲಿ ಗ್ರೀಕ್ ಫಿಲಾಸಫಿ': ಪು. ೧೦೮.*

'ಥಿಯರಿ' ಎಂಬುದು ಆಧುನಿಕ ಅರ್ಥವನ್ನು ಹೊಂದಿತು. ಆದರೆ ಪೈಥಾಗೊರಾಸ್‌ನಿಂದ ಸ್ಫೂರ್ತಿಗೊಂಡವರೆಲ್ಲರಲ್ಲಿಯೂ ತನ್ನ ಭಾವಪರವಶ ದಿವ್ಯಜ್ಞಾನದ ಅಂಶವನ್ನುಳಿಸಿಕೊಂಡಿತು. ಈ ಬಗೆಯಲ್ಲಿ ಶಾಲಾ ದಿನಗಳಲ್ಲಿ ನಿರ್ಲಕ್ಷ್ಯದಿಂದ ಅಲ್ಪಸ್ವಲ್ಪ ಗಣಿತವನ್ನು ಕಲಿತವರಿಗೆ ಇದು ವಿಚಿತ್ರವೆನ್ನಿಸಬಹುದು. ಆದರೆ ಅದನ್ನು ಪ್ರೀತಿಸಿದವರಿಗೆ ಇದ್ದಕ್ಕಿದ್ದಂತೆ ಅರ್ಥವು ಹೊಳೆಯುವ ಉನ್ಮತ್ತ ಆನಂದವನ್ನು ಆಗಾಗ್ಗೆ ಅನುಭವಿಸಿದವರಿಗೆ ಗಣಿತವು ಪೈಥಾಗೊರಾಸ್‌ನ ಅಭಿಪ್ರಾಯವು ನಿಜವಲ್ಲವಾದರೂ ತೀರ ಸಹಜವಾಗಿ ಕಾಣುತ್ತದೆ. ವೈಚಾರಿಕ ತತ್ವಜ್ಞಾನಿಯು ತನ್ನ ವಿಷಯದ ಗುಲಾಮನಂತೆ ಗೋಚರಿಸಬಹುದು, ಆದರೆ ಶುದ್ಧ ಗಣಿತಜ್ಞನು, ಸಂಗೀತಗಾರನಂತೆ, ವ್ಯವಸ್ಥಿತ ಚೆಲುವಿನ ಜಗತ್ತನ್ನು ಬೇಕಾದಂತೆ ನಿರ್ಮಿಸಿಕೊಳ್ಳುತ್ತಾನೆ.

ಪೈಥಾಗೊರಾಸ್‌ನ ನೀತಿಯನ್ನು ಬರ್ನೆಟ್‌ರ ಅರ್ಥದಲ್ಲಿ ನೋಡುವವರಿಗೆ ಆಧುನಿಕ ಮೌಲ್ಯಗಳಿಗೆ ಅದು ವಿರುದ್ಧವಾಗಿರುವಂತೆ ಕಾಣುತ್ತದೆ. ಫುಟ್‌ಬಾಲ್ ಪಂದ್ಯಕ್ಕೆ ಸಂಬಂಧಿಸಿದಂತೆ ಆಧುನಿಕ ಮನೋಭಾವದ ಜನರು ನೋಡುಗರಿಗಿಂತ ಆಟಗಾರರು ಭವ್ಯವಾಗಿರುವಂತೆ ಕಾಣುತ್ತಾರೆ. ಹಾಗೆಯೇ ಪ್ರಭುತ್ವದ ವಿಷಯದಲ್ಲಿ: ಸ್ಪರ್ಧೆಯ ಆಟದಲ್ಲಿರುವ ರಾಜಕಾರಣಿಗಳನ್ನು ಅಭಿಮಾನಿಗಳು ಕೇವಲ ನೋಡುಗರಿಗಿಂತ ಹೆಚ್ಚು ಮೆಚ್ಚುತ್ತಾರೆ. ಮೌಲ್ಯಗಳ ಬದಲಾವಣೆಯು ವ್ಯವಸ್ಥೆಯ ಬದಲಾವಣೆಗೆ ಸಂಬಂಧಿಸಿರುತ್ತದೆ – ಸೈನಿಕ, ಸಭ್ಯಪ್ರಜೆ, ಶ್ರೀಮಂತಪ್ರಭು, ಮತ್ತು ಸರ್ವಾಧಿಕಾರಿ – ಇವರೆಲ್ಲರೂ ಒಳ್ಳೆಯದು ಮತ್ತು ಸತ್ಯವಾದದ್ದರ ಬಗ್ಗೆ ತನ್ನದೇ ಅಳತೆಗೋಲು ಹೊಂದಿರುತ್ತಾರೆ. ತತ್ವಜ್ಞಾನದ ಸಿದ್ಧಾಂತಗಳ ಬಗ್ಗೆ ಸಭ್ಯಪ್ರಜೆಗೆ ದೀರ್ಘ ಅನುಭವವಿದೆ, ಯಾಕೆಂದರೆ ಅವನು ಗ್ರೀಕ್ ಪ್ರತಿಭೆಯೊಡನೆ ಸಂಬಂಧವಿರಿಸಿಕೊಂಡಿರುತ್ತಾನೆ, ಚಿತ್ತೈಕಾಗ್ರತೆಯ ಮೌಲ್ಯವು ಮತಧಾರ್ಮಿಕ ಬೆಂಬಲವನ್ನು ಪಡೆಯುತ್ತದೆ, ಹಾಗೂ ಅನಾಸಕ್ತ ಸತ್ಯದ ಆದರ್ಶವು ಅಕೆಡೆಮಿಕ್ ಬದುಕಿಗೆ ಗೌರವವನ್ನು ದೊರಕಿಸಿರುತ್ತದೆ. ಸಭ್ಯಪ್ರಜೆ ಎಂದರೆ ಗುಲಾಮರ ಅಥವಾ ಪ್ರಶ್ನೆಗೊಳಗಾಗದ ಕೆಳಹಂತದವರೆನ್ನಿಸಿಕೊಂಡವರ ದುಡಿಮೆಯಿಂದ ಬದುಕುವ ಸಮಾನರ ಸಮಾಜದಲ್ಲಿ ಒಬ್ಬನೆಂದು ಅರ್ಥವಿಸಬೇಕಾಗುತ್ತದೆ. ಈ ವ್ಯಾಖ್ಯೆಯಲ್ಲಿ ಸಂತ ಮತ್ತು ಸಾಧುಗಳೂ ಸೇರುತ್ತಾರೆ, ಯಾಕೆಂದರೆ ಅವರ ಬದುಕು ಕ್ರಿಯಾಶೀಲವಾಗಿರುವುದಕ್ಕಿಂತ ಹೆಚ್ಚು ಚಿತ್ತೈಕಾಗ್ರತೆಯಿಂದ ಕೂಡಿರುತ್ತದೆ.

ಸತ್ಯದ ಬಗೆಗಿನ ಆಧುನಿಕ ವ್ಯಾಖ್ಯೆಗಳು, ವ್ಯವಹಾರ ಸಿದ್ಧಾಂತ ಮತ್ತು ಸಾಧನ ಸಿದ್ಧಾಂತಗಳ ಬಗ್ಗೆ ಇದ್ದಂತೆ, ಧ್ಯಾನಾತ್ಮಕವಾಗಿರುವುದಕ್ಕಿಂತ ಹೆಚ್ಚಾಗಿ ಕಾರ್ಯಸಾಧ್ಯವಾಗಿದ್ದು, ಶ್ರೀಮಂತಪ್ರಭುತ್ವಕ್ಕೆ ಬದಲಾಗಿ ಕೈಗಾರಿಕಾವ್ಯವಸ್ಥೆಯಿಂದ ಪ್ರೇರಿತವಾಗಿವೆ.

ಗುಲಾಮಪದ್ಧತಿಯನ್ನು ಸಹಿಸುವ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಯಾವುದೇ ಭಾವನೆಯಿರಲಿ, ಅದು ಶುದ್ಧ ಗಣಿತಕ್ಕೆ ಋಣಿಯಾದ ಮೇಲಿನ ಅರ್ಥದಲ್ಲಿನ ಸಭ್ಯಪ್ರಜೆಗೆ. ಧ್ಯಾನಾತ್ಮಕ ಆದರ್ಶವು, ಅದು ಶುದ್ಧ ಗಣಿತದ ಉದಯಕ್ಕೆ ಕಾರಣವಾದುದರಿಂದ, ಒಂದು ಉಪಯುಕ್ತ ಚಟುವಟಿಕೆಯ ಮೂಲವಾಯಿತು; ಇದರಿಂದ ಅದರ ಘನತೆ ಹೆಚ್ಚಾಯಿತು, ಮತಧರ್ಮಶಾಸ್ತ್ರದಲ್ಲಿ, ತತ್ವಶಾಸ್ತ್ರದಲ್ಲಿ ಹಾಗೂ ನೀತಿಶಾಸ್ತ್ರದಲ್ಲಿ ಅದಕ್ಕೆ ಯಶಸ್ಸು ದೊರೆಯುವಂತಾಯಿತು., ಇಲ್ಲದಿದ್ದರೆ ಹಾಗಾಗುತ್ತಿರಲಿಲ್ಲ.

ಇವಿಷ್ಟೂ ಪೈಥಾಗೊರಾಸ್‌ನ ಎರಡು ಮುಖಗಳ ವಿವರಣೆಯಾಯಿತು: ಮತಧಾರ್ಮಿಕ ಪ್ರವಾದಿಯಾಗಿ ಮತ್ತು ಶುದ್ಧ ಗಣಿತಜ್ಞನಾಗಿ. ಈ ಎರಡೂ ಕ್ಷೇತ್ರಗಳಲ್ಲಿನ ಅವನ ಪ್ರಭಾವ ಅಳತೆಗೆ ಸಿಕ್ಕದಂತಹುದು, ಆದರೆ ಆಧುನಿಕ ಮನಸ್ಸಿಗೆ ಕಾಣುವಂತೆ ಅವೆರಡೂ ಭಿನ್ನವಾದವಾಗಿರಲಿಲ್ಲ.

ತಮ್ಮ ಆರಂಭಿಕ ಹಂತದಲ್ಲಿ ಬಹುತೇಕ ವಿಜ್ಞಾನಗಳು ಯಾವುದಾದರೊಂದು ಸುಳ್ಳು ಶ್ರದ್ಧೆಗೆ ಸಂಬಂಧವಿರಿಸಿಕೊಂಡಿರುತ್ತವೆ, ಇದರಿಂದ ಅವಕ್ಕೊಂದು ಕಲ್ಪನಾತ್ಮಕ ಬೆಲೆ ಪ್ರಾಪ್ತವಾಗುತ್ತದೆ. ಖಗೋಳವಿಜ್ಞಾನವು ಜ್ಯೋತಿಷ್ಯದೊಡನೆ ಸಂಬಂಧವಿರಿಸಿಕೊಂಡಿದ್ದರೆ, ರಸಾಯನವಿಜ್ಞಾನವು ರಸವಿದ್ಯೆಯೊಡನೆ ಸಂಬಂಧವಿರಿಸಿಕೊಂಡಿತ್ತು. ಗಣಿತವು ಮತ್ತಷ್ಟು ಸುಧಾರಿತ ತಪ್ಪಿನೊಡನೆ ಸಂಬಂಧವಿರಿಸಿಕೊಂಡಿತ್ತು. ಗಣಿತ ಜ್ಞಾನವು ಖಚಿತ, ನಿರ್ದಿಷ್ಟ ಎಂಬಂತೆ ಹಾಗೂ ವಾಸ್ತವ ಜಗತ್ತಿನಲ್ಲಿ ಅನ್ವಯಿಸಬಹುದಾದುದು ಎಂಬಂತೆ ತೋರಿತು. ಅಲ್ಲದೆ, ವೀಕ್ಷಣೆಯಿಲ್ಲದೆ ಅದನ್ನು ಕೇವಲ ಚಿಂತನೆಯಿಂದ ಪಡೆಯಬಹುದಾಗಿತ್ತು. ಹೀಗಾಗಿ, ಅದು ಆದರ್ಶವೊಂದನ್ನು ನೀಡುವಂತೆ ತೋರಿತು, ಮತ್ತು ಅದರಿಂದಾಗಿ ದಿನನಿತ್ಯದ ವೈಚಾರಿಕ ಜ್ಞಾನ ಕಡಿಮೆಯಯಿತು. ಗಣಿತದ ಆಧಾರದ ಮೇಲೆ ಆಲೋಚನೆಯು ಇಂದ್ರಿಯಗ್ರಹಣಕ್ಕಿಂತ, ವೀಕ್ಷಣೆಗಿಂತ ಆಧಾರಕಲ್ಪನೆಯು ಮಿಗಿಲಾದುದು ಎಂದು ಭಾವಿಸುವಂತಾಯಿತು. ಇಂದ್ರಿಯಜ್ಞಾನದ ಜಗತ್ತು ಗಣಿತಕ್ಕೆ ಹೊಂದದಿದ್ದರೆ, ಇಂದ್ರಿಯಜ್ಞಾನದ ಜಗತ್ತಿಗೆ ಅಷ್ಟರ ಮಟ್ಟಿನ ಕೊರತೆ. ಗಣಿತದ ಆದರ್ಶದ ಸಮೀಪ ಸಾಗುವ ವಿಧಾನಗಳ ವಿವಿಧ ಮಾರ್ಗಗಳನ್ನು ಅನ್ವೇಷಿಸಲಾಯಿತು. ಇದರಿಂದ ಹೊರಬಂದ ಸಲಹೆಗಳಲ್ಲಿನ ಬಹುಪಾಲು ತತ್ವಜಿಜ್ಞಾಸೆ (ಮೆಟಫಿಸಿಕ್ಸ್) ಮತ್ತು ಜ್ಞಾನಮೀಮಾಂಸೆ(ಥಿಯರಿ ಆಫ್ ನಾಲೆಜ್)ಗಳಲ್ಲಿ ತಪ್ಪು ತಿಳಿವಳಿಕೆಯ ಮೂಲವಾದುವು. ಈ ಬಗೆಯ ತತ್ವಜ್ಞಾನವು ಪೈಥಾಗೊರಾಸ್‌ನಿಂದ ಆರಂಭಗೊಂಡಿತು.

ಎಲ್ಲರಿಗೂ ತಿಳಿದಿರುವಂತೆ, ಪೈಥಾಗೊರಾಸ್ 'ಎಲ್ಲ ವಸ್ತುಗಳೂ ಅಂಕಿಗಳು' ಎಂದು ಹೇಳಿದ. ಈ ಹೇಳಿಕೆಯು ಆಧುನಿಕ ವಿಧಾನದಲ್ಲಿ ವ್ಯಾಖ್ಯಾನಗೊಂಡರೆ

ತಾರ್ಕಿಕ ಅವಿವೇಕವೇ ಸರಿ, ಆದರೆ ಅವನ ಅರ್ಥದ ಪ್ರಕಾರ ಅದು ಅವಿವೇಕವಲ್ಲ. ಸಂಗೀತದಲ್ಲಿ ಸಂಖ್ಯೆಯ ಪ್ರಾಮುಖ್ಯವನ್ನು ಅವನು ಕಂಡುಕೊಂಡ; ಸಂಗೀತ ಮತ್ತು ಅಂಕಗಣಿತಗಳ ನಡುವೆ ಅವನು ಸ್ಥಾಪಿಸಿದ ಸಂಬಂಧವು ಗಣಿತ ಪರಿಭಾಷೆಯಲ್ಲಿ 'ಸಂಗತ ಸಾಧನ' (ಹಾರ್ಮೋನಿಕ್ ಮೀನ್) ಮತ್ತು 'ಸಂಗತ ಶ್ರೇಣಿ' (ಹಾರ್ಮೋನಿಕ್ ಪ್ರಾಗ್ರೆಷನ್) ಎಂಬಿವುಗಳಲ್ಲಿ ಉಳಿದು ಬಂದಿದೆ. ಅಂಕಿಗಳನ್ನು ದಾಳ ಅಥವಾ ಇಸ್ಪೀಟು ಎಲೆಗಳ ಮೇಲೆ ಕಾಣಿಸಿಕೊಳ್ಳುವ ಆಕಾರಗಳೆಂದು ಅವನು ಬಗೆದ. ಈಗಲೂ ನಾವು ಅಂಕಿಗಳ ವರ್ಗ (ಸ್ಕ್ವೇರ್) ಮತ್ತು ಘನಗಳ (ಕ್ಯೂಬ್) ಬಗ್ಗೆ ಮಾತಾಡುತ್ತೇವೆ, ಈ ಶಬ್ದಗಳಿಗೆ ನಾವು ಅವನಿಗೆ ಋಣಿಗಳು. ಅವನು ಆಯತ ಸಂಖ್ಯೆಗಳು, ತ್ರಿಭುಜ ಸಂಖ್ಯೆಗಳು, ಪಿರಮಿಡೀಯ ಸಂಖ್ಯೆಗಳು ಮುಂತಾದವುಗಳ ಬಗ್ಗೆಯೂ ಹೇಳಿದ. ಇವು ಈ ಆಕಾರಗಳನ್ನು ರಚಿಸಲು ಬೇಕಾದ ಕಲ್ಲುಹರಳುಗಳ (ಅಥವಾ, ಇನ್ನಷ್ಟು ಸಹಜವಾಗಿ ಹೇಳುವುದಾದರೆ, ಗುಂಡುಗಳ) ಸಂಖ್ಯೆಗಳು. ಪ್ರಾಯಶಃ ಅವನು ಜಗತ್ತನ್ನು ಪರಮಾಣುಗಳಿಂದಾದುದು, ವಸ್ತುಗಳು ವಿವಿಧ ಆಕಾರಗಳಲ್ಲಿ ರಚಿಸಿದ ಪರಮಾಣುಗುಚ್ಛಗಳು ಎಂದು ಭಾವಿಸಿದ್ದ. ಈ ರೀತಿಯಲ್ಲಿ ಅವನು ಅಂಕಗಣಿತವನ್ನು ಸೌಂದರ್ಯಮೀಮಾಂಸೆಯಲ್ಲಿ ಹೇಗೋ ಹಾಗೆಯೇ ಭೌತವಿಜ್ಞಾನದಲ್ಲಿಯೂ ಅಂಕಗಣಿತವನ್ನು ಮೂಲಭೂತ ಅಧ್ಯಯನವಿಷಯವಾಗಿ ಮಾಡಲು ಆಶಿಸಿದ.

ಪೈಥಾಗೊರಾಸ್ ಅಥವಾ ಅವನ ನೇರ ಶಿಷ್ಯರ ಅತ್ಯಂತ ಶ್ರೇಷ್ಠ ಅನಾವರಣವೆಂದರೆ, ಸಮಕೋನ ತ್ರಿಭುಜಗಳ ಬಗೆಗಿನ, ಸಮಕೋನದ ಪಕ್ಕದ ಭುಜಗಳ ಮೇಲಿನ ವರ್ಗದ ಮೊತ್ತವು ಉಳಿದ ಭುಜ(ಅಂದರೆ ಕರ್ಣ)ದ ಮೇಲಿನ ವರ್ಗಕ್ಕೆ ಸಮನಾದುದು ಎಂಬ, ಪ್ರಮೇಯ. 3, 4, 5 ಆಗಿರುವ ತ್ರಿಭುಜದಲ್ಲಿ ಒಂದು ಸಮಕೋನವಾಗಿರುತ್ತದೆ ಎಂಬುದನ್ನು ಈಜಿಪ್ಷಿಯನ್ನರು ತಿಳಿದಿದ್ದರು; ಆದರೆ $3^2 + 4^2 = 5^2$ ಎಂಬುದನ್ನೂ, ಈ ಸೂಚನೆಯ ಮೇಲೆ ಕ್ರಿಯಾಶೀಲವಾಗಿ, ಸಾಮಾನ್ಯ ಪ್ರಮೇಯದ ರುಜುವಾತನ್ನು ಕಂಡುಕೊಳ್ಳಲು ಸಾಧ್ಯವಾಯಿತು.

ಪೈಥಾಗೊರಾಸ್‌ನ ದುರದೃಷ್ಟದಿಂದ ಅವನ ಪ್ರಮೇಯವು ಒಮ್ಮೆಗೇ ಅಪರಿಮೇಯ (ಇನ್‌ಕಮೇಂಝುರಬಲ್)ಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು, ಇದು ಇಡೀ ಅವನ ತತ್ವಜ್ಞಾನವನ್ನು ಅಲ್ಲಗಳೆಯುವಂತೆ ತೋರಿತು. ಸಮಭುಜ ಸಮಕೋನ ತ್ರಿಕೋನದಲ್ಲಿ, ಕರ್ಣದ ಮೇಲಿನ ವರ್ಗವು ಇನ್ನುಳಿದ ಭುಜಗಳ ವರ್ಗದ ಎರಡರಷ್ಟು ಆಗಿರುತ್ತದೆ. ತ್ರಿಭುಜದಲ್ಲಿನ p ಭುಜದ ಉದ್ದವು ಒಂದು ಅಂಗುಲ ಎಂದು ಭಾವಿಸೋಣ; ಆಗ ಕರ್ಣದ ಉದ್ದವೆಷ್ಟು? ಅದರ ಉದ್ದವು m/n ಅಂಗುಲಗಳು ಎಂದು ಭಾವಿಸೋಣ. ಆಗ m^2/n^2=೨.m ಮತ್ತು n ಇವುಗಳು ಸಾಮಾನ್ಯ ಅಪವರ್ತನವನ್ನು ಹೊಂದಿದ್ದರೆ, ಅದನ್ನು ವಿಭಾಗಿಸಿ, ಆಗ

m ಅಥವಾ n ಒಂದು ಬೆಸಸಂಖ್ಯೆಯಾಗಿರಬೇಕು. ಈಗ $m^2=2n^2$, ಹೀಗಾಗಿ m^2 ಸಮಸಂಖ್ಯೆ, ಟ ಕೂಡ ಸಮಸಂಖ್ಯೆ, ಹೀಗಾಗಿ ಟಿ ಬೆಸಸಂಖ್ಯೆ. $m = 2p$ ಎಂದು ಭಾವಿಸೋಣ. ಆಗ $4p^2 = 2n^2$. ಅಂದರೆ, $n^2 = 2p^2$. ಹೀಗಾಗಿ n ಸಮಸಂಖ್ಯೆ, ಕಾಂಟ್ರ ಹೈಪ್. ಹೀಗಾಗಿ ಯಾವುದೇ m/n ದ ಭಿನ್ನರಾಶಿಯು ಕರ್ಣವನ್ನು ಅಳೆಯಲಾರದು. ಮೇಲಿನ ರುಜುವಾತು ಸಾರತಃ ಯೂಕ್ಲಿಡ್, ಭಾಗ X[7] ರಲ್ಲಿದೆ.

ಈ ವಾದವು, ನಾವು ಯಾವುದೇ ಉದ್ದದ ಘಟಕವನ್ನು ಅಳವಡಿಸಿಕೊಂಡರೂ, ಆ ಘಟಕದ ಸಂಖ್ಯೆಗೆ ನಿಖರವಾದ ಸಂಬಂಧ ಹೊಂದಿರಲಾರದ ಉದ್ದಗಳು ಎಂಬುದನ್ನು ಸಾಬೀತುಪಡಿಸುತ್ತದೆ. ಅಂದರೆ ನಾವು ಹೇಳುತ್ತಿರುವ m ಮತ್ತು n ಎಂಬ ಎರಡು ಪೂರ್ಣ ಸಂಖ್ಯೆಗಳು ಇಲ್ಲ, m ರಷ್ಟು ಉದ್ದವು ಘಟಕದ n ರಷ್ಟು ಆಗಿರುವುದಿಲ್ಲ. ಇದರಿಂದಾಗಿ, ಜ್ಯಾಮಿತಿಯನ್ನು ಅಂಕಗಣಿತದಿಂದ ಸ್ವತಂತ್ರಗೊಳಿಸಿ ಸಾಧಿಸಬೇಕೆಂಬ ಬಗ್ಗೆ ಗ್ರೀಕ್ ಗಣಿತಜ್ಞರಿಗೆ ಮನದಟ್ಟಾಯಿತು. ತನ್ನ ಕಾಲದಲ್ಲಿಯೇ ಜ್ಯಾಮಿತಿಯನ್ನು ಅಂಕಗಣಿತದಿಂದ ಸ್ವತಂತ್ರವಾಗಿಸಿ ಅಧ್ಯಯನ ಮಾಡುವ ವಿಧಾನವು ಆರಂಭಗೊಂಡಿತ್ತು ಎಂಬುದರ ಬಗ್ಗೆ ಪ್ಲೇಟೋನ ಸಂವಾದಗಳಲ್ಲಿಯೇ ಪುರಾವೆ ದೊರೆಯುತ್ತದೆ; ಅದನ್ನು ಯೂಕ್ಲಿಡ್ ಪರಿಪೂರ್ಣಗೊಳಿಸಿದ. ಯೂಕ್ಲಿಡ್, ಭಾಗ ಎರಡರಲ್ಲಿ ನಾವು ಸಹಜವಾಗಿಯೇ ಬೀಜಗಣಿತ ರೂಪದಲ್ಲಿ ಸಾಧಿಸಬೇಕಾದವನ್ನು ಜ್ಯಾಮಿತೀಯವಾಗಿ ಸಾಧಿಸಿರುವುದನ್ನು ಕಾಣಬಹುದು. $(a+b)^2= a^2+2ab+b^2$ ಎಂಬುದು ಅಂತಹ ಒಂದು. ಅಪರಿಮೇಯದ ಬಗೆಗಿನ ಕಷ್ಟದಿಂದಾಗಿ ಅವನು ಈ ಬಗೆಯ ಜ್ಯಾಮಿತೀಯ ಮಾರ್ಗದ ಆವಶ್ಯಕತೆಯನ್ನು ಕಂಡುಕೊಂಡ. ಹಾಗೆಯೇ ಭಾಗ ಐದು ಮತ್ತು ಆರರಲ್ಲಿ ಅವನು ಅನುಪಾತ (ಪ್ರೊಪೋರ್ಷನ್)ದ ಪ್ರತಿಪಾದನೆಗೂ ಇದು ಅನ್ವಯಿಸುತ್ತದೆ. ಇಡೀ ಕ್ರಮವು ತಾರ್ಕಿಕವಾಗಿ ಉಲ್ಲಾಸದಿಂದ ಕೂಡಿ, ಹತ್ತೊಂಬತ್ತನೆಯ ಶತಮಾನದ ಗಣಿತಜ್ಞರ ತರ್ಕಬದ್ಧತೆಯನ್ನು ನಿರೀಕ್ಷಿಸುತ್ತದೆ. ಅಪರಿಮೇಯಗಳ ಬಗೆಗಿನ ಸಮಂಜಸ ಅಂಕಗಣಿತೀಯ ಸಿದ್ಧಾಂತವು ಎಲ್ಲಿಯವರೆಗೆ ಲಭ್ಯವಿರಲಿಲ್ಲವೋ ಆ ತನಕ ಜ್ಯಾಮಿತಿಯಲ್ಲಿ ಯೂಕ್ಲಿಡ್‌ನ ಮಾರ್ಗವು ಅತ್ಯುತ್ತಮವೆನಿಸಿತ್ತು. ಡೆಕಾರ್ಟೆಯು ವಿಶ್ಲೇಷಕ ಜ್ಯಾಮಿತಿ (ಕೋಆರ್ಡಿನೇಟ್ ಜ್ಯಾಮಿಟ್ರಿ)ಯುನ್ನು ಪರಿಚಯಿಸಿ, ಆ ಮೂಲಕ ಮತ್ತೆ ಅಂಕಗಣಿತದ ಸಾರ್ವಭೌಮತೆಯುನ್ನು ಸ್ಥಾಪಿಸಿದಾಗ, ಅಪರಿಮೇಯುಗಳ ಸಮಸ್ಯೆಗೆ ಪರಿಹಾರವೊಂದರ ಸಾಧ್ಯತೆಯನ್ನು ಕಲ್ಪಿಸಿಕೊಂಡ, ಆದರೆ ಅವನ ಕಾಲದಲ್ಲಿಯೇ ಅಂಥದ್ದೊಂದು ಪರಿಹಾರವನ್ನು ಕಂಡುಕೊಂಡಿರಲಿಲ್ಲ.

ತತ್ವಜ್ಞಾನ ಮತ್ತು ವೈಜ್ಞಾನಿಕ ವಿಧಾನಗಳ ಮೇಲೆ ಬೀರಿರುವ ಜ್ಯಾಮಿತಿಯ ಪ್ರಭಾವವು ಗಾಢವಾದುದು. ಗ್ರೀಕರು ಸ್ಥಾಪಿಸಿದ ಜ್ಯಾಮಿತಿಯು ಸ್ವಯಂವೇದ್ಯವಾದ

(ಅಥವಾ ಹಾಗೆ ಭಾವಿಸುವ) ಸೂತ್ರ (ಆಕ್ಸಿಯಂ)ಗಳಿಂದ ಆರಂಭಗೊಳ್ಳುತ್ತದೆ, ನಿಗಮನ ತರ್ಕದ ಮೂಲಕ ಸ್ವಯಂವೇದ್ಯವಾಗಿರುವುದರಿಂದ ಬಹು ದೂರವಾದ ಪ್ರಮೇಯಗಳತ್ತ ಮುಂದುವರಿಯುತ್ತದೆ. ಸೂತ್ರಗಳು ಹಾಗೂ ಪ್ರಮೇಯಗಳು ವಾಸ್ತವ ಅವಕಾಶ(ಸ್ಪೇಸ್)ದಿಂದ ಸ್ವತಂತ್ರವೆಂದು ಭಾವಿಸಲಾಗುತ್ತದೆ, ಇದು ಅನುಭವದಿಂದ ಮೂಡಿಬಂದದ್ದು. ಮೊದಲು ಸ್ವಯಂವೇದ್ಯವಾದುವನ್ನೂ ಆನಂತರ ನಿಗಮನದ ಮೂಲಕ ಸಾಧಿಸಬಹುದೆಂಬುದನ್ನು ಗಮನಿಸುತ್ತ ವಾಸ್ತವ ಜಗತ್ತಿನ ಸತ್ಯಗಳನ್ನು ಕಂಡುಕೊಳ್ಳುವುದು ಸಾಧ್ಯವೆಂಬ ಭಾವನೆ ಬೆಳೆಯಿತು. ಈ ದೃಷ್ಟಿಕೋನವು ಪ್ಲೇಟೋ ಮತ್ತು ಕ್ಯಾಂಟ್ ಮತ್ತು ಆ ಮಧ್ಯದ ತತ್ವಜ್ಞಾನಿಗಳನ್ನು ಪ್ರಭಾವಿಸಿತು. 'ಸತ್ಯಗಳು ಸ್ವಯಂವೇದ್ಯವಾದವು ಎಂಬುದು ನಮ್ಮ ನಿಲವು' ಎಂದು ಸ್ವಾತಂತ್ರ್ಯ ಘೋಷಣೆಯು ಸಾರಿದಾಗ, ಅದು ಯೂಕ್ಲಿಡ್ ಮಾದರಿಯನ್ನೇ ಅನುಸರಿಸಿತು. ಹದಿನೆಂಟನೆಯ ಶತಮಾನದ ಸಹಜ ಹಕ್ಕುಗಳ ಸಿದ್ಧಾಂತವು ರಾಜಕೀಯದಲ್ಲಿನ ಯೂಕ್ಲಿಡ್ ಸೂತ್ರಗಳ ಹುಡುಕಾಟವಾಗಿತ್ತು.[೨೯] ನ್ಯೂಟನ್‌ನ '**ಪ್ರಿನ್ಸಿಪಿಯ**'ದ ರಚನೆಯಲ್ಲಿ, ಅದು ಒಪ್ಪಿಕೊಂಡ ವೈಚಾರಿಕ ಸಾಮಗ್ರಿಯ ಹೊರತಾಗಿಯೂ, ಪೂರ್ತಿಯಾಗಿ ಯೂಕ್ಲಿಡ್‌ನ ಪ್ರಭಾವವು ಎದ್ದು ಕಾಣುತ್ತದೆ. ತನ್ನ ನಿಖರ ವಿದ್ವದೀಯ ಸ್ವರೂಪಗಳಲ್ಲಿ ಮತಧರ್ಮಶಾಸ್ತ್ರವೂ ಇದೇ ಮೂಲದಿಂದ ತನ್ನ ಶೈಲಿಯನ್ನು ರೂಪಿಸಿಕೊಳ್ಳುತ್ತದೆ. ಖಾಸಗಿ ಮತಧರ್ಮವನ್ನು ಪರವಶತೆಯಿಂದ ರೂಪಿಸಿಕೊಂಡರೆ, ಮತಧರ್ಮಶಾಸ್ತ್ರವು ಗಣಿತದಿಂದ ರೂಪಿತವಾಗುತ್ತದೆ; ಮತ್ತು ಇವೆರಡನ್ನೂ ಪೈಥಾಗೊರಾಸ್‌ನಲ್ಲಿ ಕಾಣಬಹುದು.

ಸನಾತನವೂ ನಿಖರವೂ ಆದ ಸತ್ಯದಲ್ಲಿನ ಶ್ರದ್ಧೆಗೆ, ಮತ್ತು ಅತಿಸೂಕ್ಷ್ಮ ಬುದ್ಧಿಗ್ರಾಹ್ಯ ಜಗತ್ತಿನ ಮೂಲವು ಗಣಿತವೇ ಎಂಬುದು ನನ್ನ ತಿಳಿವಳಿಕೆ. ಜ್ಯಾಮಿತಿಯು ನಿಖರ ವೃತ್ತಗಳ ಬಗ್ಗೆ ಹೇಳುತ್ತದೆ, ಆದರೆ ಯಾವುದೇ ಗ್ರಾಹ್ಯ ವಸ್ತುವೂ ನಿಖರವಾದ ವೃತ್ತವಲ್ಲ; ಆದರೆ ಎಷ್ಟೇ ಎಚ್ಚರಿಕೆಯಿಂದ ಕೈವಾರ (ಕಾಂಪಸಸ್)ಗಳನ್ನು ಬಳಸಿದರೂ ಅದರಲ್ಲಿ ಸ್ವಲ್ಪಮಟ್ಟಿಗಿನ ಅನಿಖರತೆಗಳೂ ಕ್ರಮರಹಿತತೆಗಳೂ ಇರುತ್ತವೆ. ಇದರಿಂದ ಎಲ್ಲ ನಿಖರ ವೈಚಾರಿಕತೆಯೂ ಆದರ್ಶವಾದುದಕ್ಕೆ ಅನ್ವಯಿಸುತ್ತದೆಯೇ ಹೊರತು ಗ್ರಾಹ್ಯ ವಸ್ತುಗಳಿಗಲ್ಲ ಎಂಬುದು ಸೂಚಿತವಾಗುತ್ತದೆ. ಇನ್ನೂ ಮುಂದೆ ಹೋಗಿ, ಚಿಂತನೆಯು ವಸ್ತುಗಳಿಗಿಂತ ಶ್ರೇಷ್ಠವಾದುವು ಹಾಗೂ ಚಿಂತನೆಯ ವಿಷಯಗಳು ಇಂದ್ರಿಯಗ್ರಾಹ್ಯವಾದವುಗಳಿಗಿಂತ ಹೆಚ್ಚು ಸತ್ಯವಾದುವು ಎಂದು ವಾದಿಸುವುದು ಸಹಜವೇ ಆಗುತ್ತದೆ. ಚಿರಂತನ ಕಾಲದೊಡನೆ ತಳುಕುಹಾಕಿಕೊಂಡ ಅನುಭಾವಿಕ

---

೨೯. ಜೆಫರ್‌ಸನ್‌ರ 'ಪರಿಶುದ್ಧವೂ ನಿರಾಕರಿಸಲಾಗದ' ಎಂಬುದಕ್ಕೆ ಫ್ರಾಂಕ್ಲಿನ್ 'ಸ್ವಯಂವೇದ್ಯ' ಎಂಬ ಪರ್ಯಾಯವನ್ನು ಸೂಚಿಸುತ್ತಾರೆ.

ಸಿದ್ಧಾಂತಗಳು ಕೂಡ ಶುದ್ಧ ಗಣಿತದಿಂದ ಗಟ್ಟಿಗೊಳ್ಳುತ್ತವೆ, ಯಾಕೆಂದರೆ ಗಣಿತೀಯ ವಸ್ತುಗಳು, ಸಂಖ್ಯೆಗಳಂತೆ, ವಾಸ್ತವವೇ ಆದರೆ, ಚಿರಂತನವಾದವು ಮತ್ತು ಕಾಲಬದ್ಧವಲ್ಲ. ಅಂತಹ ಚಿರಂತನ ವಸ್ತುಗಳನ್ನು ದೈವಚಿಂತನೆಗಳು ಎಂದು ಭಾವಿಸಬಹುದು. ದೇವರು ಜ್ಯಾಮಿತಿಜ್ಞ (ಜಿಯೋಮಿಟರ್) ಎಂಬ ಪ್ಲೇಟೋನ ಸಿದ್ಧಾಂತ ಮತ್ತು ಅವನು (ದೇವರು) ಅಂಕಗಣಿತದ ಗೀಳಿನವನು ಎಂಬ ಸರ್ ಜೇಮ್ಸ್ ಜೀನ್‌ರ ಶ್ರದ್ಧೆಗಳು ಇಂತಹವೇ. ಭವಿಷ್ಯದ್ದರ್ಶನಕ್ಕೆ ವಿರುದ್ಧವಾದ ವೈಚಾರಿಕ ಮತಧರ್ಮದಲ್ಲಿ, ಪೈಥಾಗೊರಾಸ್‌ನ, ಮತ್ತು ಢಾಳಾಗಿ ಪ್ಲೇಟೋನ ಕಾಲದಿಂದ, ಸಂಪೂರ್ಣವಾಗಿ ಗಣಿತ ಮತ್ತು ಗಣಿತ ವಿಧಾನಗಳು ಮೇಲುಗೈ ಪಡೆದಿವೆ.

ಪೈಥಾಗೊರಾಸ್‌ನಿಂದ ಆರಂಭಗೊಂಡ ಗಣಿತ ಮತ್ತು ಮತಧರ್ಮಶಾಸ್ತ್ರಗಳ ಸಮನ್ವಯವು, ಮಧ್ಯಕಾಲೀನ ಗ್ರೀಸ್‌ನ ಮತ್ತು ಕ್ಯಾಂಟ್‌ವರೆಗಿನ ಆಧುನಿಕ ಕಾಲದ, ಮತಧಾರ್ಮಿಕ ತತ್ವಜ್ಞಾನದ ಮುಖ್ಯ ಲಕ್ಷಣ. ಪೈಥಾಗೊರಾಸ್‌ಗಿಂತ ಹಿಂದಿನ ಆರ್ಫಿಸಂ ಏಷ್ಯಾದ ಅನುಭಾವಿಕ ಮತಧರ್ಮಗಳಂತೆಯೇ ಇತ್ತು. ಆದರೆ ಪ್ಲೇಟೋ, ಸಂತ ಆಗಸ್ಟೈನ್, ಥಾಮಸ್ ಆಕ್ವಿನಾಸ್, ಡೆಕಾರ್ಟೆ, ಸ್ಪಿನೋಜ಼ ಮತ್ತು ಲೀಬ್‌ನಿಜ಼್‌ಗಳಲ್ಲಿ ಮತಧರ್ಮ ಮತ್ತು ವೈಚಾರಿಕತೆಗಳ ನಡುವೆ, ನೈತಿಕ ಆಕಾಂಕ್ಷೆ ಹಾಗೂ ಕಾಲಾತೀತವಾದುದರ ಬಗೆಗಿನ ತಾರ್ಕಿಕ ಗೌರವಗಳ ನಿಕಟ ಸಾಮರಸ್ಯವಿದೆ. ಇದು ಪೈಥಾಗೊರಾಸ್‌ನಿಂದ ಬಂದು ಯೂರೋಪ್‌ನ ಬೌದ್ಧೀಕರಣಗೊಂಡ ಮತಧರ್ಮಶಾಸ್ತ್ರ ಮತ್ತು ಏಷ್ಯಾದ ಹೆಚ್ಚು ನೇರವಾದ ಅನುಭಾವಿಕತೆಯ ನಡುವಣ ವ್ಯತ್ಯಾಸವನ್ನು ತೋರಿಸುತ್ತದೆ. ಪೈಥಾಗೊರಾಸ್‌ನ ತಪ್ಪು ಎಲ್ಲಿದೆ ಎಂಬುದನ್ನು ಖಚಿತವಾಗಿ ತೋರಿಸಲು ಸಾಧ್ಯವಾದುದು ಇತ್ತೀಚೆಗಷ್ಟೇ. ಚಿಂತನವಲಯದಲ್ಲಿ ಅವನಷ್ಟು ಪ್ರಭಾವಶಾಲಿಯಾದವರು ಬೇರಾರೂ ನನಗೆ ತಿಳಿದಿಲ್ಲ. ಪ್ಲೆಟಾನಿಸಂ ಅನ್ನು ವಿಶ್ಲೇಷಿಸಿದರೆ ಅದು ಸತ್ವತಃ ಪೈಥಾಗೊರಿಯನಿಸಂ ಎನ್ನಿಸುವುದರಿಂದಾಗಿ ನಾನೀ ಮಾತನ್ನಾಡುತ್ತಿದ್ದೇನೆ. ಇಂದ್ರಿಯಗ್ರಾಹ್ಯವಲ್ಲದೆ ಬುದ್ಧಿಗ್ರಾಹ್ಯವಾದ ಚಿರಂತನ ಜಗತ್ತಿನ ಬಗೆಗಿನ ಇಡೀ ಗ್ರಹಿಕೆಯು ಅವನಿಂದಲೇ ಬಂದುದು. ಅವನಿಲ್ಲದಿದ್ದರೆ, ಕ್ರಿಶ್ಚಿಯನ್ನರು ಕ್ರಿಸ್ತನು 'ಶಬ್ದ' (ದ ವರ್ಡ್) ಎಂದು ಪರಿಭಾವಿಸಲು ಸಾಧ್ಯವಾಗುತ್ತಿರಲಿಲ್ಲ; ಅವನಿಲ್ಲದಿದ್ದರೆ, ಮತಧರ್ಮಶಾಸ್ತ್ರಜ್ಞರು ದೇವರು ಮತ್ತು ಅಮರತ್ವದದ ಬಗ್ಗೆ ತಾರ್ಕಿಕ ಆಧಾರಗಳನ್ನು ನೀಡಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಈಗಲೂ ಇವೆಲ್ಲ ಅವನಲ್ಲಿ ಅಂತರ್ಗತವಾಗಿವೆ. ಮುಂದೆ ಸಾಗಿದಂತೆ ನಮಗೆ ಅದು ಸ್ಪಷ್ಟವಾಗುತ್ತ ಹೋಗುತ್ತದೆ.

○

೪

ಹೆರಾಕ್ಲಿಟಸ್

ಇವತ್ತು ಗ್ರೀಕರ ಬಗ್ಗೆ ಪರಸ್ಪರ ವಿರುದ್ಧವಾದ ಎರಡು ದೃಷ್ಟಿಕೋನಗಳಿರುವುದು ಸಾಮಾನ್ಯ. ಒಂದು, ರಿನೇಸಾನ್ಸ್‌ನಿಂದ ಇತ್ತೀಚಿನವರೆಗೂ ವಾಸ್ತವದಲ್ಲಿ ಒಂದೇ ಆಗಿದ್ದ, ಅತ್ಯಂತ ಶ್ರೇಷ್ಠವಾದುದೆಲ್ಲವನ್ನೂ ಕಂಡುಹಿಡಿದವರೆಂಬ ಹಾಗೂ ಆಧುನಿಕರು ಸರಿಗಟ್ಟಲಾಗದ ಅತಿಮಾನುಷ ಪ್ರತಿಭೆಯಿಂದ ಕೂಡಿದ್ದವರೆಂಬ ಕುರುಡು ಶ್ರದ್ಧೆಯಿಂದ ಗ್ರೀಕರನ್ನು ನೋಡುವುದು. ಇನ್ನೊಂದು, ವಿಜ್ಞಾನದ ಗೆಲವಿನಿಂದ ಉತ್ತೇಜಿತರಾಗಿ ಪ್ರಗತಿಯ ಬಗೆಗಿನ ಆಶಾದಾಯಕ ಶ್ರದ್ಧೆಯಿಂದ ಕೂಡಿ ಪ್ರಾಚೀನರ ಪ್ರಾವೀಣ್ಯವನ್ನು ದುಃಸ್ವಪ್ನವೆಂದು ಭಾವಿಸಿ ಅವರ ಅತ್ಯುತ್ತಮ ಕೊಡುಗೆಗಳನ್ನೂ ಈಗ ಮರೆತುಬಿಡುವುದೇ ಲೇಸೆಂಬ ಮನೋಭಾವ. ನಾನಂತೂ ಈ ಎರಡೂ ಅತಿರೇಕದ ದೃಷ್ಟಿಕೋನಗಳಲ್ಲಿ ಒಂದರ ಪರವಾಗಿಯೂ ಇಲ್ಲ. ಎರಡೂ ಭಾಗಶಃ ಸರಿ, ಭಾಗಶಃ ತಪ್ಪು. ಯಾವುದೇ ವಿವರಣೆಗಳಿಗೆ ತೊಡಗುವ ಮುಂಚೆ, ಗ್ರೀಕ್ ಚಿಂತನೆಯಿಂದ ಯಾವ ಬಗೆಯ ವಿವೇಕವನ್ನು ನಾವು ಪಡೆಯಬಹುದು ಎಂಬುದರ ಬಗ್ಗೆ ಹೇಳಲು ಪ್ರಯತ್ನಿಸುತ್ತೇನೆ.

ಜಗತ್ತಿನ ಸ್ವರೂಪ ಮತ್ತು ರಚನೆಗಳ ಬಗ್ಗೆ ನಾನಾ ಬಗೆಯ ಊಹಾಸಿದ್ಧಾಂತಗಳು ಸಾಧ್ಯ. ತತ್ವಜಿಜ್ಞಾಸೆಯ ಪ್ರಗತಿಯು, ಅದು ಇರುವೆಡೆ, ಈ ಎಲ್ಲ ಊಹಾಸಿದ್ಧಾಂತಗಳ, ಅವುಗಳ ಸೂಚನೆಗಳ ಮತ್ತು ವಿರೋಧಿ ಊಹಾಸಿದ್ಧಾಂತಗಳ ಪ್ರತಿಪಾದಕರು ಎತ್ತುವ ಆಕ್ಷೇಪಗಳಿಗೆ ಉತ್ತರಿಸುವ ಪುನಾರಚನೆಯ ರೂಪದ ಕ್ರಮೇಣವಾದ ಸುಧಾರಣೆಯಾಗಿತ್ತು. ಈ ಎಲ್ಲ ರೀತಿಗಳಿಗನುಗುಣವಾಗಿ ವಿಶ್ವವನ್ನು ಕಲ್ಪಿಸಿಕೊಳ್ಳುವುದು ಕಲ್ಪನಾಸುಖ ಮಾತ್ರವಲ್ಲದೆ ಸಿದ್ಧಾಂತಾಂಧತೆಗೆ (ಡಾಗ್ಮಾಟಿಸಂ) ಮರುಮದ್ದಾಗಿತ್ತು. ಅದಕ್ಕೂ ಮಿಗಿಲಾಗಿ, ಯಾವುದೇ ಊಹಾಸಿದ್ಧಾಂತವನ್ನು ಸಾಧಿಸಿ ತೋರಿಸುವುದು ಸಾಧ್ಯವಿಲ್ಲವಾದರೂ, ಅದರಲ್ಲಿ ಪ್ರತಿಯೊಂದೂ ತನ್ನಲ್ಲಿ ತಾನು ಹಾಗೂ ಅದರ ಮಂಡನೆಯಲ್ಲಿ ತಿಳಿದ ವಸ್ತುಸ್ಥಿತಿಗಳೊಡನೆ ಸುಸಂಗತವಾದುದು ಯಾವುದು ಎಂದು ಗುರುತಿಸುವುದರಲ್ಲಿ

ಅಸಲಿ ಜ್ಞಾನವಿದೆ. ಆಧುನಿಕ ತತ್ವಜ್ಞಾನದಲ್ಲಿ ಈಗ ಪ್ರಧಾನವಾದ ಬಹುತೇಕ ಊಹಾಸಿದ್ಧಾಂತಗಳ ಬಗ್ಗೆ ಗ್ರೀಕರು ಮೊದಲು ಆಲೋಚಿಸಿದ್ದರು. ಅಮೂರ್ತ ವಿಷಯಗಳ ಬಗೆಗಿನ ಅವರ ಕಲ್ಪನಾತ್ಮಕ ಅನ್ವೇಷಣಾಪ್ರವೃತ್ತಿಯ ಬಗ್ಗೆ ಎಷ್ಟು ಹೊಗಳಿದರೂ ಸಾಲದು. ಗ್ರೀಕರ ಬಗ್ಗೆ ನಾನು ಏನು ಹೇಳಬೇಕೋ ಅದು ಈ ದೃಷ್ಟಿಕೋನದಿಂದ ಕೂಡಿದವಾಗಿರುತ್ತದೆ. ಸ್ವತಂತ್ರ ಅಸ್ತಿತ್ವ ಮತ್ತು ಬೆಳವಣಿಗೆಯುಳ್ಳ ಸಿದ್ಧಾಂತಿಗಳಿಗೆ ಅವರು ಜನ್ಮವಿತ್ತರೆಂಬುದು ನನ್ನ ಭಾವನೆ; ಮೊದಲು ಬಾಲಿಶವೆಂಬಂತೆ ಕಂಡರೂ ಎರಡು ಸಾವಿರ ವರ್ಷಗಳಿಗೂ ಮಿಕ್ಕ ಕಾಲಾವಧಿಯಲ್ಲಿ ಉಳಿದುಕೊಂಡು ಬೆಳೆದುಕೊಂಡು ಬರುವ ಸಾಮರ್ಥ್ಯವನ್ನು ಅವು ತೋರಿಸಿವೆ.

ಅಮೂರ್ತ ಚಿಂತನೆಗೆ ಗ್ರೀಕರು ಹೆಚ್ಚು ಮೌಲಿಕ ಕೊಡುಗೆಯನ್ನಿತ್ತಿದ್ದಾರೆಂಬುದು ಸತ್ಯ: ಅವರು ಗಣಿತ ಮತ್ತು ತರ್ಕಬದ್ಧ ವೈಚಾರಿಕತೆಯನ್ನು ಕಂಡುಹಿಡಿದರು. ವಿಶೇಷತಃ ಜ್ಯಾಮಿತಿಯು ಗ್ರೀಕ್ ಅನಾವರಣ, ಅದಿಲ್ಲದೆ ಆಧುನಿಕ ವಿಜ್ಞಾನವು ಅಸಾಧ್ಯ. ಆದರೆ ಗಣಿತಕ್ಕೆ ಸಂಬಂಧಿಸಿದಂತೆ, ಗ್ರೀಕ್ ಪ್ರತಿಭೆಯ ಏಕಪಕ್ಷೀಯತೆ ಕಾಣಿಸುತ್ತದೆ: ಸ್ವಯಂವೇದ್ಯವೆಂದು ವೀಕ್ಷಣೆಯಲ್ಲಿ ಕಂಡುದನ್ನವರು ಅನುಗಮನಾತ್ಮಕವಾಗಿಯಲ್ಲದೆ ನಿಗಮನಾತ್ಮಕವಾಗಿಯೂ ತರ್ಕಿಸಿದರು. ಈ ವಿಧಾನವನ್ನು ಅನುಸರಿಸಿದ್ದರಿಂದಾದ ಆಶ್ಚರ್ಯಕರ ಯಶಸ್ಸು ಪ್ರಾಚೀನ ಜಗತ್ತನ್ನು ಮಾತ್ರವಲ್ಲದೆ ಆಧುನಿಕ ಜಗತ್ತಿನ ಬಹು ಭಾಗವನ್ನೂ ತಪ್ಪುದಾರಿಗೆಳೆಯಿತು. ಮೂಲತತ್ವ (ಪ್ರಿನ್ಸಿಪಲ್)ಗಳನ್ನು ನಿರ್ದಿಷ್ಟ ವಸ್ತುಸ್ಥಿತಿಗಳನ್ನು ವೀಕ್ಷಣೆಯ ಮೂಲಕ ಅನುಗಮನಾತ್ಮಕವಾಗಿ ತಲುಪುವ ವೈಜ್ಞಾನಿಕ ವಿಧಾನವು, ಬಹು ನಿಧಾನವಾಗಿ, ತತ್ವಜ್ಞಾನಿಯ ಮನಸ್ಸಿನಿಂದ ಉದ್ಭವಿಸಿದ ಉಜ್ವಲ ಸೂತ್ರವನ್ನು ನಿಗಮನಾತ್ಮಕವಾದ ರೀತಿಯಲ್ಲಿ ಕಂಡುಕೊಳ್ಳುವ ಗ್ರೀಕ್ ಶ್ರದ್ಧೆಯನ್ನು ತೊರೆಯಿತು. ಬೇರೆಯವುಗಳಲ್ಲದೆ, ಈ ಕಾರಣದಿಂದಾಗಿಯೂ ಗ್ರೀಕರನ್ನು ಕುರುಡು ಗೌರವದಿಂದ ಕಾಣುವುದು ತಪ್ಪು. ಅವರಲ್ಲಿ ಕೆಲವೇ ಕೆಲವರು ಅದರ ಬಗ್ಗೆ ಒಲವನ್ನಿರಿಸಿಕೊಂಡಿದ್ದರೂ, ವೈಜ್ಞಾನಿಕ ವಿಧಾನವು, ಒಟ್ಟಾರೆಯಾಗಿ, ಅವರ ಮನೋಭಾವಕ್ಕೆ ಹೊರತಾದುದಾಗಿತ್ತು. ಕಳೆದ ನಾಲ್ಕು ಶತಮಾನಗಳುದ್ದಕ್ಕೂ ಆಗಿರುವ ಬೌದ್ಧಿಕ ಪ್ರಗತಿಯನ್ನು ಕಡೆಗಣಿಸಿ ಅವರನ್ನು ವೈಭವೀಕರಿಸುವುದು ಆಧುನಿಕ ಚಿಂತನೆಯ ಮೇಲೆ ಪ್ರತಿಬಂಧಕ ಪರಿಣಾಮವನ್ನು ಬೀರುತ್ತದೆ.

ಗ್ರೀಕರಿಗೇ ಆಗಲಿ ಬೇರೆ ಯಾರಿಗೇ ಆಗಲೀ ಕುರುಡು ಗೌರವ ತೋರಿಸುವುದರ ವಿರುದ್ಧವಾದ ಸಾಮಾನ್ಯ ವಾದವೂ ಇದೆ. ಒಬ್ಬ ತತ್ವಜ್ಞಾನಿಯನ್ನು ಕುರಿತ ಅಧ್ಯಯನದಲ್ಲಿ ಸಮರ್ಪಕ ಧೋರಣೆಯೆಂದರೆ ಇಂತಹ ಗೌರವವೂ ಅಲ್ಲ ಅನಾದರವೂ ಅಲ್ಲ, ಮೊದಲಿಗೆ ಇರಬೇಕಾದದ್ದು, ಅವನ ಸಿದ್ಧಾಂತಗಳನ್ನು ನಂಬಿದರೆ ಹೇಗೆ ಎಂಬ

ಒಂದು ಬಗೆಯ ಕಲ್ಪನಾತ್ಮಕ ಸಹಾನುಭೂತಿ, ಆನಂತರ ವಿಮರ್ಶಾತ್ಮಕ ಧೋರಣೆಯ ಅನುಸರಣೆ, ಅದೆಂದರೆ ಸಾಧ್ಯವಾದಷ್ಟೂ ತನ್ನ ಇದುವರೆಗಿನ ಅಭಿಪ್ರಾಯಗಳನ್ನು ಬದಿಗಿರಿಸುವ ಮನಃಸ್ಥಿತಿ. ಪ್ರಕ್ರಿಯೆಯೊಂದರ ಮೊದಲ ಭಾಗದಲ್ಲಿ ಅನಾದರವೂ ಎರಡನೆಯ ಭಾಗದಲ್ಲಿ ಗೌರವವೂ ಮೂಗು ತೂರಿಸುತ್ತದೆ. ಎರಡು ಅಂಶಗಳನ್ನು ನೆನಪಿನಲ್ಲಿರಿಸಿಕೊಳ್ಳಬೇಕು: ಯಾರ ಸಿದ್ಧಾಂತಗಳು ಮತ್ತು ಅಭಿಪ್ರಾಯಗಳು ಅಧ್ಯಯನಯೋಗ್ಯವೋ ಅಂಥವನನ್ನು ಬುದ್ಧಿವಂತನೆಂದು ಭಾವಿಸಲಾಗುತ್ತದೆ, ಆದರೆ ಯಾವುದೇ ವಿಷಯದ ಬಗ್ಗೆ ಯಾರೇ ಆಗಲೀ ಸಂಪೂರ್ಣವೂ ಅಂತಿಮವೂ ಆದ ತೀರ್ಮಾನಕ್ಕೆ ಬಂದಿರಲಾರರು. ನಮಗೆ ಅಸಂಗತವೆನ್ನಿಸುವ ಅಭಿಪ್ರಾಯವನ್ನು ಬುದ್ಧಿವಂತನೊಬ್ಬ ವ್ಯಕ್ತಪಡಿಸಿದಾಗ, ಅದನ್ನು ನಿಜವೆಂದು ಹೇಗೋ ಸಾಧಿಸುವ ಪ್ರಯತ್ನಕ್ಕೆ ತೊಡಗಬಾರದು, ಅದರ ಬದಲು ಅದು ನಿಜವೆಂದು ಗೋಚರಿಸುವುದು ಹೇಗೆ ಎಂದು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಈ ಬಗೆಯ ಐತಿಹಾಸಿಕ ಮತ್ತು ಮಾನಸಿಕ ಕಲ್ಪನೆಯ ಪ್ರಯತ್ನವು ನಮ್ಮ ಆಲೋಚನೆಯ ಹರಹನ್ನು ಒಮ್ಮೆಲೇ ವಿಸ್ತರಿಸಿ, ನಮ್ಮವೇ ಅನೇಕ ಪ್ರಿಯವಾದ ಪೂರ್ವಾಗ್ರಹಗಳು ವಿಭಿನ್ನ ಮನೋಭಾವದ ಕಾಲದವರಿಗೆ ಹೇಗೆ ಅಸಂಬದ್ಧವಾಗಿ ಕಾಣುತ್ತದೆ ಎಂಬ ಅರಿವನ್ನುಂಟುಮಾಡುತ್ತದೆ.

ಈ ಅಧ್ಯಾಯದಲ್ಲಿ ನಾವು ಚರ್ಚಿಸಲಿರುವ ಪೈಥಾಗೊರಾಸ್ ಮತ್ತು ಹೆರಾಕ್ಲಿಟಸ್‌ರ ನಡುವೆ ಮತ್ತೊಬ್ಬ ಅಷ್ಟೇನೂ ಮುಖ್ಯನಲ್ಲದ ಕ್ಸೆನೋಫೆನೀಸ್ ಎಂಬ ತತ್ವಜ್ಞಾನಿಯಿದ್ದ. ಅವನ ಕಾಲದ ಬಗ್ಗೆ ಖಚಿತತೆಯಿಲ್ಲ, ಅವನು ಪೈಥಾಗೊರಾಸ್‌ನ ಹೆಸರು ಹೇಳುವುದದರಿಂದಲೂ, ಅವನ ಬಗ್ಗೆ ಹೆರಾಕ್ಲಿಟಸ್ ಹೇಳುವುದರಿಂದಲೂ ಅವನ ಕಾಲದ ಬಗ್ಗೆ ನಿರ್ಣಯಿಸಬಹುದು. ಅವನು ಹುಟ್ಟಿನಲ್ಲಿ ಅಯೋನಿಯನ್, ಆದರೆ ತನ್ನ ಜೀವಿತದ ಬಹುಭಾಗವನ್ನವನು ದಕ್ಷಿಣ ಇಟಲಿಯಲ್ಲಿ ಕಳೆದ. ಅವನ ಶ್ರದ್ಧೆಯೆಂದರೆ ಎಲ್ಲ ವಸ್ತುಗಳೂ ಮಣ್ಣು ಮತ್ತು ನೀರುಗಳಿಂದಾದವು ಎಂಬುದು. ದೇವರ ಬಗ್ಗೆ ಅವನದು ಖಚಿತವಾದ ಚಿಂತನೆ. 'ಕಳ್ಳತನ, ಹಾದರ ಮತ್ತು ಒಬ್ಬರನ್ನೊಬ್ಬರು ಮೋಸಗೊಳಿಸುವುದು ಮುಂತಾದ ಮರ್ತ್ಯರ ಎಲ್ಲ ನಾಚಿಕೆಗೇಡಿನ ಹಾಗೂ ಕಳಂಕಕಾರಕ ಕೃತ್ಯಗಳಿಗೆ ದೇವತೆಗಳೇ ಕಾರಣವೆಂದು ಹೋಮರ್ ಮತ್ತು ಹೀಸಿಯಾಡ್ ಆರೋಪಿಸುತ್ತಾರೆ .. .. ದೇವತೆಗಳೂ ತಮ್ಮ ಹಾಗೆಯೇ ಇರುವವರು, ತಮ್ಮದರಂತಹ ಬಟ್ಟೆಗಳನ್ನೇ ಧರಿಸುತ್ತಾರೆ, ಅವರ ಆಕಾರ ಮತ್ತು ಧ್ವನಿಗಳೂ ತಮ್ಮಂತಹವೇ ಎಂದು ಮರ್ತ್ಯರು ಭಾವಿಸುತ್ತಾರೆ .. .. ನಿಜ, ಎತ್ತುಗಳು, ಕುದುರೆಗಳು ಹಾಗೂ ಸಿಂಹಗಳಿಗೆ ಕೈಗಳಿದ್ದಿದ್ದರೆ, ಮನುಷ್ಯರಂತೆಯೇ ತಮ್ಮ ಕೈಗಳಿಂದ ಬಣ್ಣ ಹಾಕುವ ಚಿತ್ರಕಾರರಾಗಿದ್ದರೆ, ಕುದುರೆಗಳು ದೇವತೆಗಳನ್ನು ಕುದುರೆಗಳಂತೆಯೂ, ಎತ್ತುಗಳು ಎತ್ತುಗಳಂತೆಯೂ ತಮ್ಮವೇ ದೇಹಗಳ ಬೇರೆ

ಬೇರೆ ಬಗೆಗಳಲ್ಲಿ ಚಿತ್ರಿಸುತ್ತಿದ್ದವು .. .. ಇಥಿಯೋಪಿಯನ್ನರು ದೇವತೆಗಳನ್ನು ಕಪ್ಪು ಬಣ್ಣದವರಾಗಿಯೂ ಚಪ್ಪಟೆ ಮೂಗಿನವರಾಗಿಯೂ ಮಾಡುತ್ತಾರೆ, ಥ್ರೇಸಿಯನ್ನರು ದೇವತೆಗಳಿಗೆ ನೀಲಿ ಕಣ್ಣುಗಳೂ ಕೆಂಪು ಕೂದಲೂ ಇವೆಯೆಂದು ಹೇಳುತ್ತಾರೆ.' ಮನುಷ್ಯನ ಆಕಾರ ಆಲೋಚನೆಗಳಿರದ ಒಬ್ಬನೇ ದೇವರಲ್ಲಿ ಅವನಿಗೆ ಶ್ರದ್ಧೆ, ಆ ದೇವರು 'ತನ್ನ ಆಲೋಚನೆಯ ಬಲದಿಂದಲೇ ಸುಲಭವಾಗಿ ಎಲ್ಲ ವಸ್ತುಗಳನ್ನೂ ಅಲ್ಲಾಡಿಸಬಲ್ಲ.' ಪೈಥಾಗೊರಾಸ್‌ನ ಆತ್ಮಗಳ ದೇಹಾಂತರ ಸಿದ್ಧಾಂತವನ್ನು ಕ್ಸೆನೋಫೆನೀಸ್ ಗೇಲಿಮಾಡುತ್ತಾನೆ. 'ಅವನು (ಪೈಥಾಗೊರಾಸ್) ಒಮ್ಮೆ ಹೋಗುತ್ತಿರುವಾಗ ನಾಯಿಗೆ ಹಿಂಸೆ ಕೊಡುವುದನ್ನು ನೋಡುತ್ತಾನೆ, "ನಿಲ್ಲಿಸಿ, ಅದನ್ನು ಹೊಡೆಯಬೇಡಿ! ಅದು ನನ್ನ ಸ್ನೇಹಿತನೊಬ್ಬನ ಆತ್ಮವನ್ನು ಹೊತ್ತಿದೆ. ಅದರ ಧ್ವನಿಯನ್ನು ಕೇಳಿ ಅದನ್ನು ಗುರುತಿಸಿದೆ" ಎಂದವನು ಹೇಳುತ್ತಾನೆಂದು ಕೆಲವರು ಹೇಳುತ್ತಾರೆ. ಮತಧಾರ್ಮಿಕ ವಿಷಯಗಳ ಸತ್ಯಾಸತ್ಯತೆಯ ಪ್ರಮಾಣೀಕರಣ ಅಸಾಧ್ಯವೆಂಬುದು ಅವನ ಶ್ರದ್ಧೆ. 'ದೇವತೆಗಳು ಹಾಗೂ ಅವರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಯಾರಿಗೂ ಸತ್ಯವೇನೆಂಬುದು ತಿಳಿದಿಲ್ಲ, ತಿಳಿಯವುದೂ ಇಲ್ಲ. ನಿಜ, ಯಾವನಾದರೊಬ್ಬ ಸತ್ಯವನ್ನೇ ಹೇಳುತ್ತೇನೆಂದು ನುಡಿದರೆ, ಅವನಿಗೇ ಅದು ತಿಳಿದಿರುವುದಿಲ್ಲ – ಅವೆಲ್ಲ ಊಹೆಗಳಲ್ಲದೇ ಬೇರೇನಲ್ಲ.'[೩೦]

ಕ್ಸೆನೋಫೆನೀಸ್ ಪೈಥಾಗೊರಾಸ್ ಮತ್ತಿತರರ ಆನುಭಾವಿಕ ಪ್ರವೃತ್ತಿಯನ್ನು ವಿರೋಧಿಸಿದ ವೈಚಾರಿಕರ ಸಾಲಿಗೆ ಸೇರುತ್ತಾನೆ, ಆದರೆ ಸ್ವತಂತ್ರ ಚಿಂತಕನಾಗಿ ಮೊದಲನೆಯ ಮೊದಲ ಸಾಲಿಗೆ ಸೇರತಕ್ಕವನಲ್ಲ.

ಪೈಥಾಗೊರಾಸ್‌ನ ಸಿದ್ಧಾಂತಗಳನ್ನು ಅವನ ಶಿಷ್ಯರ ಸಿದ್ಧಾಂತಗಳಿಂದ ಬೇರ್ಪಡಿಸುವುದು ಕಷ್ಟಕರವೆಂಬುದನ್ನಾಗಲೇ ಗಮನಿಸಿದ್ದೇವೆ. ಪೈಥಾಗೊರಾಸ್ ತೀರ ಹಳಬನಾದರೂ, ಅವನ ಪಂಥದ ಪ್ರಭಾವವು ಮುಖ್ಯವಾಗಿ ಬೇರೆ ಅನೇಕ ತತ್ತ್ವಜ್ಞಾನಿಗಳ ಆನಂತರ ಉಂಟಾದುದು. ಈಗಲೂ ಪ್ರಭಾವಶಾಲಿಯಾದ ಸಿದ್ಧಾಂತವೊಂದನ್ನು ಪ್ರತಿಪಾದಿಸಿದವರಲ್ಲಿ ಮೊದಲಿಗನೆಂದರೆ ಹೆರಾಕ್ಲಿಟಸ್; ಅವನು ಕ್ರಿಪೂ ೫೦೦ ರ ಹೊತ್ತಿಗೆ ಕ್ರಿಯಾಶೀಲನಾಗಿದ್ದವನು. ಈಫಿಯಸ್‌ನ ಶ್ರೀಮಂತ ಪ್ರಜೆಗಳಲ್ಲಿ ಅವನೊಬ್ಬ ಎನ್ನುವುದರ ಹೊರತು ಅವನ ಬದುಕಿನ ಬಗ್ಗೆ ತಿಳಿದಿರುವುದು ಅತ್ಯಲ್ಪ. ಪ್ರಾಚೀನರಲ್ಲಿ ಅವನು ಪ್ರಸಿದ್ಧನಾಗಿರುವುದು ಎಲ್ಲವೂ ಸ್ಥಿತ್ಯಂತರದಲ್ಲಿಯೇ ಇವೆ ಎಂಬ ಸಿದ್ಧಾಂತದಿಂದಾಗಿ, ಆದರೆ ಇದು, ಮುಂದೆ ನಾವು ಗಮನಿಸುವಂತೆ, ಅವನ ತತ್ತ್ವಜಿಜ್ಞಾಸೆಯ ಒಂದು ಮುಖ ಮಾತ್ರ.

---

೩೦. ಎಡೆವಿನ್ ಬೇವನ್, 'ಸ್ಟಾಯಿಕ್ಸ್ ಅಂಡ್ ಸ್ಕೆಪ್ಟಿಕ್ಸ್‌ನಲ್ಲಿ (ಆಕ್ಸ್‌ಫರ್ಡ್) ಉದ್ಧೃತ, ಪು. ೧೨೧

ಹೆರಾಕ್ಲಿಟಸ್ ಅಯೋನಿಯನ್ನನಾದರೂ ಮೈಲೆಟಸ್‌ನ ವೈಜ್ಞಾನಿಕ ಪರಂಪರೆಗೆ ಸೇರಿದವನಲ್ಲ.[೩೧] ಅವನೊಬ್ಬ ಅನುಭಾವಿ, ಆದರೆ ವಿಶಿಷ್ಟ ಬಗೆಯವನು. ಅವನ ಪ್ರಕಾರ ಬೆಂಕಿಯೇ ಮೂಲ ದ್ರವ್ಯ; ಬೆಂಕಿಯಲ್ಲಿನ ಜ್ವಾಲೆಯಂತೆಯೇ ಪ್ರತಿಯೊಂದೂ ಬೇರಾವುದೋ ಒಂದರ ವಿನಾಶದಿಂದಲೇ ಹುಟ್ಟುತ್ತದೆ. 'ಮರ್ತ್ಯರು ಅಮರರು, ಅಮರರು ಮರ್ತ್ಯರು, ಒಬ್ಬ ಇನ್ನೊಬ್ಬನ ಸಾವಿನಿಂದಾಗಿ ಬದುಕುತ್ತಾನೆ, ಇನ್ನೊಬ್ಬನ ಬದುಕಿನ ಕಾರಣ ಸಾಯುತ್ತಾನೆ.' ಜಗತ್ತಿನಲ್ಲಿ ಸಾಮರಸ್ಯವಿದೆ, ಆದರೆ ಅದು ವಿರೋಧಗಳಿಂದಾದುದು. 'ಎಲ್ಲ ವಸ್ತುಗಳೂ ಒಂದರಿಂದಲೇ ಉದಯಿಸುವುದು, ಒಂದು ಎಲ್ಲದರಿಂದ ಉದಯಿಸುವುದು'; ಆದರೆ ಅನೇಕವು ಒಂದಕ್ಕಿಂತ ಕಡಿಮೆ ವಾಸ್ತವವಾದವು, ಅದೆಂದರೆ ದೇವರು.

ಅವನ ಬರವಣಿಗೆಯಲ್ಲಿ ಉಳಿದಿರುವುದರ ಆಧಾರದಿಂದ ಹೇಳುವುದಾದರೆ, ಅವನು ಹೊಂದಾಣಿಕೆಯ ಸ್ವಭಾವದವನಾಗಿದ್ದಂತೆ ಕಾಣಿಸುವುದಿಲ್ಲ. ಅವನು ಅನಾದರದ ಸ್ವಭಾವದವನು, ಪ್ರಜಾಪ್ರಭುತ್ವಾತ್ಮಕ ವ್ಯಕ್ತಿಗೆ ವಿರುದ್ಧ ಸ್ವಭಾವದವನು. ತನ್ನ ಸಹಜೀವಿಗಳ ಬಗ್ಗೆ ಅವನು ಹೇಳುವುದು ಇದು: 'ಎಫೀಸಿನಿಯನ್ನರು, ಅವರಲ್ಲಿನ ಪ್ರತಿಯೊಬ್ಬ ಹಿರಿಯನೂ ನೇಣು ಹಾಕಿಕೊಂಡು ನಗರವನ್ನು ಗಡ್ಡ ಬೆಳೆಯದ ಕಿರಿಯರಿಗೆ ಬಿಟ್ಟುಕೊಡುವುದು ಒಳ್ಳೆಯದು. ಯಾಕೆಂದರೆ ಅವರು ತಮ್ಮಲ್ಲಿನ ಅತ್ಯಂತ ಒಳ್ಳೆಯವನಾದ ಹರ್ಮಡೋರಸ್ ಅನ್ನು ಹೊರಹಾಕಿದವರು. "ನಮ್ಮಲ್ಲಿ ಅತ್ಯಂತ ಶ್ರೇಷ್ಠರಾದವರಾರೂ ಇರಬಾರದು; ಅಂಥವರಾದರೂ ಇದ್ದರೆ ಅವನು ಬೇರೆಡೆ ಇತರರ ಜೊತೆಯಲ್ಲಿರಲಿ" ಎಂದವರು ಹೇಳಿದರು. ತನ್ನ ಹಿಂದಿದ್ದ ಪ್ರತಿಭಾವಂತರ ಬಗ್ಗೆ ಅವನು ಕೆಟ್ಟದಾಗಿ ಮಾತನಾಡುತ್ತಾನೆ, ಒಬ್ಬ ಮಾತ್ರ ಇದಕ್ಕೆ ಹೊರತು. 'ಹೋಮರ್‌ನನ್ನು ಪಟ್ಟಿಯಿಂದ ಹೊರದಬ್ಬಿ ಚಾಟಿಯಿಂದ ಹೊಡೆಯಬೇಕು.' 'ನಾನು ಕೇಳಿದ ಪ್ರತಿಪಾದನೆಗಳಲ್ಲೆಲ್ಲ ಯಾರೂ ಬೇರೆಯವರಿಗಿಂತ ಬೇರೆಯಾಗಿ ವಿವೇಕವನ್ನು ತಿಳಿಯುವ ಸಾಮರ್ಥ್ಯವನ್ನು ಹೊಂದಿದವರಿಲ್ಲ.' 'ಅನೇಕ ವಿಷಯಗಳನ್ನು ಕಲಿಯುವುದು ತಿಳಿವಳಿಕೆಯನ್ನು ನೀಡುವುದಲ್ಲ, ಹೀಗಿದ್ದಿದ್ದರೆ ಹೇಸಿಯಾಡ್ ಮತ್ತು ಪೈಥಾಗೊರಾಸ್‌ರಿಗೂ, ಕ್ಸೆನೋಫೆನೀಸ್ ಮತ್ತು ಹೆಕ್ಟಾಟಿಯಸ್‌ರಿಗೂ ತಿಳಿವಳಿಕೆ ಬರಬೇಕಾಗಿತ್ತು.' 'ಪೈಥಾಗೊರಾಸ್ .. .. ಅನೇಕ ವಿಷಯಗಳ ತಿಳಿವಳಿಕೆಯನ್ನೂ ಚೇಷ್ಟೆಯ ಕಲೆಯನ್ನೂ ತನ್ನದೆಂದು ಹೇಳಿಕೊಂಡ.' ಅವನ ಟೀಕೆಗೆ ಹೊರತಾದವನು ಒಬ್ಬನು ಮಾತ್ರ, ಟ್ಯೂಟಮಸ್. ಅವನನ್ನು 'ಮಿಕ್ಕವರಿಗಿಂತ ಮಿಗಿಲೆಂದು ಪರಿಗಣಿಸಬೇಕು.' ಅವನನ್ನು ಹೊಗಳಲು

---

೩೧. ಕಾರ್ನ್‌ಫೋರ್ಡ್, ಪೂರ್ವೋಕ್ತ (ಪು. ೧೮೪) ಇದನ್ನು ಒತ್ತಿ ಹೇಳುತ್ತಾರೆ. ಅವರು ಸರಿ ಎಂಬುದು ನನ್ನ ಭಾವನೆಯೂ ಹೌದು. ಇತರ ಅಯೋನಿಯನ್ನರ ಜೊತೆ ಸೇರಿಸುವ ಮೂಲಕ ಅವನ ಬಗ್ಗೆ ಅನೇಕ ವೇಳೆ ತಪ್ಪು ಭಾವನೆ ಮೂಡಿದೆ.

ಕಾರಣವೇನೆಂದು ನೋಡಿದರೆ ಗೊತ್ತಾಗುವುದು, ಟ್ಯೂಟೆಮಸ್ 'ಬಹುತೇಕ ಜನರು ಕೆಟ್ಟವರು' ಎಂದು ಹೇಳಿದುದು.

ಮನುಷ್ಯರ ಬಗೆಗಿನ ಅನಾದರದಿಂದಾಗಿ ಮಾನವರು ತಮ್ಮ ಒಳಿತಿಗೋಸ್ಕರ ಕ್ರಿಯಾಶೀಲವಾಗಿ ಮಾಡಬಲ್ಲುದು ಬಲಪ್ರಯೋಗವೊಂದೇ ಎಂದವನು ಭಾವಿಸುವಂತಾಯಿತು. 'ಪ್ರತಿ ಪ್ರಾಣಿಯೂ ಮೇಯಲು ಹೋಗುವುದು ಅದಕ್ಕೆ ಏಟು ಬಿದ್ದಾಗಲೇ' ಎಂದವನು ಹೇಳಿದ; ಮತ್ತೆ, 'ಕತ್ತೆಗಳಿಗೆ ಹುಲ್ಲುಕಡ್ಡಿ ಬೇಕೇ ಹೊರತು ಚಿನ್ನವಲ್ಲ' ಎಂದ.

ನಿರೀಕ್ಷೆ ಮಾಡಬಹುದಾದಂತೆಯೇ ಹೆರಾಕ್ಲಿಟಸ್ ಯುದ್ಧದಲ್ಲಿ ಶ್ರದ್ಧೆಯಿರಿಸಿಕೊಂಡಿದ್ದವನು 'ಯುದ್ಧವು ಎಲ್ಲದರ ತಂದೆ, ಎಲ್ಲದರ ರಾಜ; ಆದರೆ ಅವನು ಕೆಲವರನ್ನು ದೇವರಾಗಿಸಿದ್ದರೆ, ಮತ್ತೆ ಕೆಲವರನ್ನು ಮನುಷ್ಯರನ್ನಾಗಿಸಿದ್ದಾನೆ, ಕೆಲವರು ಸ್ವತಂತ್ರರು, ಮತ್ತೆ ಕೆಲವರು ಸೆರೆಯಾಳುಗಳು' ಎಂಬುದು ಅವನ ಹೇಳಿಕೆ. ಮತ್ತೆ, 'ಹೋಮರ್ "ದೇವತೆಗಳು ಮತ್ತು ಮನುಷ್ಯರಲ್ಲಿನ ಆ ಸಂಘರ್ಷವು ನಾಶವಾಗಲಿ!" ಎಂದು ಹೇಳಿದುದು ತಪ್ಪು. ವಿಶ್ವದ ನಾಶಕ್ಕಾಗಿ ತಾನು ಪ್ರಾರ್ಥಿಸುತ್ತಿದ್ದೇನೆಂಬುದು ಅವನಿಗೆ ತಿಳಿಯಲಿಲ್ಲ; ಅವನ ಪ್ರಾರ್ಥನೆಯನ್ನೇನಾದರೂ ಕೇಳಿದರೆ ಎಲ್ಲವೂ ನಾಶಗೊಳ್ಳುತ್ತವೆ.' ಮತ್ತೂ ಒಂದೆಡೆ ಹೀಗೆನ್ನುತ್ತಾನೆ: 'ಯುದ್ಧವು ಎಲ್ಲರಿಗೂ ಸಮಾನ ಮತ್ತು ಸಂಘರ್ಷವು ನ್ಯಾಯ ಎಂಬುದನ್ನು ನಾವು ತಿಳಿಯಬೇಕು. ಎಲ್ಲವೂ ಅಸ್ತಿತ್ವಕ್ಕೆ ಬರುವುದು ಮತ್ತು ಕೊನೆಗೊಳ್ಳುವುದು ಸಂಘರ್ಷದಿಂದಲೇ.'

ಅವನ ನೀತಿಯು ಒಂದು ಬಗೆಯ ಹೆಮ್ಮೆಯ ವೈರಾಗ್ಯಪರತೆ, ನೀಷೆಯದಕ್ಕೆ ತುಂಬ ಸನಿಹವಾದದ್ದು. ಆತ್ಮವು ಬೆಂಕಿ ನೀರುಗಳ ಮಿಶ್ರಣ ಎಂಬುದು ಅವನು ತಿಳಿವಳಿಕೆ, ಅವುಗಳಲ್ಲಿ ಬೆಂಕಿ ಶ್ರೇಷ್ಠ ಮತ್ತು ನೀರು ಅಶ್ರೇಷ್ಠ. ಹೆಚ್ಚಿನ ಪಾಲು ಬೆಂಕಿಯಿರುವ ಆತ್ಮವನ್ನವನು 'ಒಣಕಲು' ಎನ್ನುತ್ತಾನೆ. 'ಒಣಕಲು ಆತ್ಮವು ಅತ್ಯಂತ ವಿವೇಕಿಯಾದುದು ಮತ್ತು ಶ್ರೇಷ್ಠವಾದುದು.' 'ತೇವಗೊಳ್ಳುವುದೆಂದರೆ ಆತ್ಮಗಳಿಗೆ ಉಲ್ಲಾಸದಾಯಕ.' 'ದಟ್ಟಾಡುತ್ತ ನಡೆಯುವ ಕುಡಿದ ವ್ಯಕ್ತಿಗೆ ಆತ್ಮವು ತೇವಗೊಂಡಿರುವುದರಿಂದ ತಾನು ಎಲ್ಲಿ ಹೆಜ್ಜೆಯಿಡುತ್ತಿರುವೆನೆಂಬ ಅರಿವಿರುವುದಿಲ್ಲ, ಅವನನ್ನು ಇನ್ನೂ ಗಡ್ಡ ಬಾರದ ಹುಡುಗ ಸರಿಯಾಗಿ ನಡೆಸುತ್ತಾನೆ.' 'ಆತ್ಮಗಳು ನೀರಾಗುವುದೆಂದರೆ ಸಾಯುವುದು.' 'ತನ್ನ ಹೃದಯದ ಅಪೇಕ್ಷೆಗಳೊಡನೆ ಸೆಣಸುವುದು ಕಷ್ಟ ಅದು ಏನೆಲ್ಲವನ್ನೂ ಬಯಸುತ್ತದೋ, ಅದನ್ನು ಆತ್ಮದ ಬೆಲೆಗೊಟ್ಟು ಕೊಳ್ಳುತ್ತದೆ.' 'ಬಯಸಿದುದನ್ನೆಲ್ಲ ಪಡೆಯುವುದು ಮನುಷ್ಯರಿಗೆ ಒಳ್ಳೆಯದಲ್ಲ.' ಸ್ವಯಂಪ್ರಭುತ್ವದಿಂದಲೂ ಹಾಗೂ ತಮ್ಮ ಕೇಂದ್ರ ಅಪೇಕ್ಷೆಯಿಂದ ದೂರವಾಗುವ ಭಾವೋದ್ರೇಕಗಳನ್ನು ಕಡೆಗಣಿಸುವುದರಿಂದಲೂ ಪಡೆಯುವ ಅಧಿಕಾರಕ್ಕೆ ಹೆರಾಕ್ಲಿಟಸ್ ಬೆಲೆಗೊಡುವನೆಂದು ಹೇಳಬಹುದು.

ತನ್ನ ಕಾಲದ ಮತಧರ್ಮದ ಬಗ್ಗೆ, ಕನಿಷ್ಠ ಪಕ್ಷ ಬ್ಯಾಕಿಕ್ ಮತಧರ್ಮದ ಬಗ್ಗೆ, ಅವನ ಧೋರಣೆಯು ಬಹುತೇಕ ವಿರೋಧಿಯಾದುದು, ಆದರೆ ಅದು ವೈಜ್ಞಾನಿಕ ತರ್ಕದ ಕಾರಣದಿಂದಾದ ದ್ವೇಷವಲ್ಲ. ಅವನದು ತನ್ನದೇ ಆದ ಮತಧರ್ಮ, ಕೆಲವೆಡೆ ತನ್ನ ಕಾಲದ ಮತಧರ್ಮಶಾಸ್ತ್ರವನ್ನು ತನ್ನ ಸಿದ್ಧಾಂತಕ್ಕನುಗುಣವಾಗಿ ವ್ಯಾಖ್ಯಾನಿಸುತ್ತಾನೆ, ಅಂತೆಯೇ ಕೆಲವೆಡೆ ಸಾಕಷ್ಟು ತಿರಸ್ಕಾರದಿಂದ ಅಲ್ಲಗಳೆಯುತ್ತಾನೆ. ಅವನನ್ನು ಬಾಕಿಕ್ ಎಂದೂ (ಕಾರ್ನ್‌ಫರ್ಡ್), ಅದರ ಅನುಭಾವಿಕತೆಗಳ ವ್ಯಾಖ್ಯಾನಕಾರನೆಂದೂ (ಫೀಡೆರರ್) ಕರೆಯುತ್ತಾರೆ. ಆದರೆ ಸೂಕ್ತ ಭಾಗಗಳು ಈ ದೃಷ್ಟಿಯನ್ನು ಸಮರ್ಥಿಸುವುದಿಲ್ಲವೆಂಬುದು ನನ್ನ ಅನಿಸಿಕೆ. ಅವನೆನ್ನುತ್ತಾನೆ: 'ಜನರು ಆಚರಿಸುವ ನಿಗೂಢಾಚರಣೆಗಳು ಅಪರಿಶುದ್ಧವಾದವು.' ಇದು ಸಾಧ್ಯವಾಗುವ ಆನುಭಾವಿಕತೆಗಳು 'ಅಪರಿಶುದ್ಧ'ವಲ್ಲ, ಆದರೆ ಆಚರಣೆಯಲ್ಲಿದ್ದುದಕ್ಕಿಂತ ಭಿನ್ನವಾದವು ಎಂದವನು ಸೂಚಿಸುತ್ತಾನೆ. ತುಚ್ಛವೆನಿಸಿದವುಗಳ ಬಗ್ಗೆ ತೀರ ತಿರಸ್ಕಾರಭಾವದಿಂದ ಪ್ರಚಾರದಲ್ಲಿ ತೊಡಗದಿದ್ದರೆ, ಅವನು ಮತಧಾರ್ಮಿಕ ಸುಧಾರಕನಾಗಬಹುದಿತ್ತು.

ಈ ಕೆಳಗಿನವು ಹೆರಾಕ್ಲಿಟಸ್‌ನ ನೇರ ಹೇಳಿಕೆಗಳು, ಇವು ತನ್ನ ಕಾಲದ ಮತಧರ್ಮಶಾಸ್ತ್ರದ ಬಗೆಗಿನ ಅವನ ಧೋರಣೆಯನ್ನು ವ್ಯಕ್ತಪಡಿಸುತ್ತವೆ:

ಡೆಲ್ಫಿಯ ದೇವವಾಣಿಯ ಒಡೆಯನು ಮಾತನಾಡುವುದೂ ಇಲ್ಲ, ಅರ್ಥವನ್ನು ಮುಚ್ಚಿಡುವುದೂ ಇಲ್ಲ, ಅದನ್ನು ಸನ್ನೆಗಳ ಮೂಲಕ ತೋರಿಸುತ್ತಾನೆ.

ಸಿಬಿಲ್ ವಿಷಾದದ ತುಟಿಗಳಿಂದ ಸಂತಸರಹಿತವಾಗಿ ಬಡಬಡಿಸುತ್ತ, ಸಿಂಗಾರವಿಲ್ಲದೆ ಪರಿಮಳ ಪೂಸದೆ, ತನ್ನ ಕಂಠದಿಂದ ಸಾವಿರ ವರ್ಷಗಳನ್ನು ತಲುಪುತ್ತಾಳೆ, ಅವಳಲ್ಲಿನ ದೇವತೆಗೆ ಕೃತಜ್ಞತೆಗಳು.

ಆತ್ಮಗಳು ಅಧೋಲೋಕದಲ್ಲಿ ನಾರುತ್ತವೆ.

ಹೆಚ್ಚು ಹೆಚ್ಚು ಸಾವುಗಳು ಹೆಚ್ಚು ಹೆಚ್ಚು ಪಾಲು ಪಡೆಯುತ್ತವೆ. (ಅವರ ಮುಂದೆ ಸಾಯುವವರು ದೇವತೆಗಳಾಗುತ್ತಾರೆ).

ರಾತ್ರಿ–ನಡಿಗೆಯವರು, ಯಕ್ಷಿಣಿಗಾರರು, ಬ್ಯಾಕಸ್ ಪೂಜಾರಿಗಳು, ಪಾನಪಾತ್ರೆ ಪೂಜಾರಿಣಿಯರು, ಆನುಭಾವಿಕತಾಪ್ರಿಯರು.

ಗಂಡಸರು ಆಚರಿಸುವ ಆನುಭಾವಿಕತೆಗಳು ಅಪರಿಶುದ್ಧ ಆನುಭಾವಿಕತೆಗಳು.

ದೇವತೆಗಳು ಅಥವಾ ವೀರರು ಯಾರು ಎಂದು ತಿಳಿಯದೆ, ಒಬ್ಬ ಮನುಷ್ಯನ ಮನೆಯ ಮುಂದೆ ಮಾತಾಡುವಂತೆ, ಅವರು ಈ ವಿಗ್ರಹಗಳ ಮುಂದೆ ಪ್ರಾರ್ಥಿಸುತ್ತಾರೆ.

ಡಯೋನಿಸಸ್ ಕುರಿತಲ್ಲದೆ ಮೆರವಣಿಗೆಯಲ್ಲಿ ಶಿಶ್ನೋಪಾಸನೆಯ ಹಾಡುಗಳನ್ನು ಹಾಡಿದರೆ, ಅವರು ಅತ್ಯಂತ ನಾಚಿಕೆಗೇಡಿನ ಕಾರ್ಯ ಮಾಡುತ್ತಿರುತ್ತಾರೆ. ಆದರೆ ಹೇಡಿಸ್ ಅಂದರೆ ಡಯೋನಿಸಸ್ ತಾನೇ, ಅವನ ಹೆಸರಿನಲ್ಲಿ ಹುಚ್ಚರಾಗಿ ಹಬ್ಬ

ಆಚರಿಸುತ್ತಾರೆ.

ಕೆಸರಿನಲ್ಲಿಳಿದು ಕಾಲಿನ ಕೆಸರನ್ನು ತೊಳೆದುಕೊಳ್ಳುವ ಹಾಗೆ, ಅವರು ರಕ್ತದಿಂದ ಕಲುಷಿತಗೊಂಡು ತಮ್ಮನ್ನು ವ್ಯರ್ಥವಾಗಿ ಶುದ್ಧೀಕರಿಸಿಕೊಳ್ಳುತ್ತಾರೆ. ಅವರ ಈ ಕೃತ್ಯವನ್ನು ನೋಡಿದವನು ಅವರನ್ನು ಹುಚ್ಚರೆಂದೇ ಭಾವಿಸುತ್ತಾರೆ.

ಹೆರಾಕ್ಲಿಟಸ್ ಬೆಂಕಿಯನ್ನು ಆದಿಮ ಮೂಲವಸ್ತುವೆಂದೂ, ಅದರಿಂದಲೇ ಮಿಕ್ಕೆಲ್ಲವೂ ಹುಟ್ಟಿದವೆಂದೂ ನಂಬಿದ್ದ. ಥೇಲೀಸ್ ಪ್ರಕಾರ ಸಕಲವೂ ನೀರಿನಿಂದ ಆಗಿದೆಯೆಂದು ಭಾವಿಸಿದ್ದನೆಂಬುದು ಓದುಗರ ನೆನಪಿನಲ್ಲಿರಲು ಸಾಕು; ಅನಾಕ್ಸಿಮೇನಿಸ್ ಪ್ರಕಾರ ಗಾಳಿಯೇ ಆದಿಮ ಮೂಲವಸ್ತು.; ಹೆರಾಕ್ಲಿಟಸ್ ಬೆಂಕಿಯ ಬಗ್ಗೆ ಒಲವು ತೋರಿಸಿದ. ಕೊನೆಗೆ ಎಂಪೆಡೋಕ್ಲೀಸ್ ಮಣ್ಣು, ಗಾಳಿ, ಬೆಂಕಿ ಮತ್ತು ನೀರು ಎಂಬ ನಾಲ್ಕು ಮೂಲವಸ್ತುಗಳನ್ನು ಒಪ್ಪಿಕೊಂಡು ಮುತ್ಸದ್ದಿಯಂತೆ ಒಂದು ರಾಜೀಸೂತ್ರವನ್ನು ಸೂಚಿಸಿದ. ಪ್ರಾಚೀನರ ರಸಾಯನವಿಜ್ಞಾನ ಇಲ್ಲಿಗೇ ನಿಂತುಬಿಟ್ಟಿತು. ಮಹಮದೀಯ ರಸವಾದಿಗಳು ಪರುಷ ಶಿಲೆ (ಫಿಲಾಸಫರ್ಸ್ ಸ್ಟೋನ್), ಜೀವಾಮೃತ (ಎಲಿಕ್ಸಿರ್ ಆಫ್ ಲೈಫ್) ಮತ್ತು ಮೂಲಲೋಹಗಳನ್ನು ಚಿನ್ನವಾಗಿ ಮಾರ್ಪಡಿಸುವ ವಿಧಾನದ ಅನಾವರಣವನ್ನು ಕೈಗೊಳ್ಳುವವರೆಗೆ ಈ ವಿಜ್ಞಾನಶಾಖೆಯಲ್ಲಿ ಮುಂದೆ ಯಾವುದೂ ಬೆಳವಣಿಗೆಯಾಗಲಿಲ್ಲ.

ಹೆರಾಕ್ಲಿಟಸ್‌ನ ತತ್ವಮೀಮಾಂಸೆಯು ಆಧುನಿಕರ ಬಹುತೇಕ ಮಹತ್ವಾಕಾಂಕ್ಷೆಯನ್ನು ತೃಪ್ತಿಗೊಳಿಸುವ ದಿಸೆಯಲ್ಲಿ ಜೀವಂತವಾಗಿದೆ.

ಎಲ್ಲರಿಗೂ ಒಂದೇ ಆಗಿರುವ ಈ ಜಗತ್ತು ಯಾವ ದೇವತೆಯಿಂದಾಗಲೀ ಮಾನವನಿಂದಾಗಲೀ ಸೃಷ್ಟಿಗೊಳ್ಳಲಿಲ್ಲ; ಆದರೆ ಅದು ಹಿಂದೆ, ಇಂದು ಹಾಗೂ ಎಂದೆಂದಿಗೂ ಹೊತ್ತಿಕೊಳ್ಳುತ್ತ ಆರುತ್ತ ಸಾಗಿರುವ ಜೀವಂತವಾದ ಬೆಂಕಿ.

'ಬೆಂಕಿಯ ರೂಪಾಂತರಗಳು ಅಂದರೆ, ಮೊದಲಿಗೆ ಸಮುದ್ರ; ಸಮುದ್ರದ ಅರ್ಧಭಾಗ ಭೂಮಿ, ಇನ್ನರ್ಧ ಸುಂಟರಗಾಳಿ'

ಇಂತಹ ಜಗತ್ತಿನಲ್ಲಿ ನಿರಂತರ ಬದಲಾವಣೆಗಳನ್ನು ನಿರೀಕ್ಷಿಸಲಾಯಿತು, ಇಂತಹ ನಿರಂತರ ಬದಲಾವಣೆಯಲ್ಲಿ ಹೆರಾಕ್ಲಿಟಸ್‌ಗೆ ಶ್ರದ್ಧೆಯಿತ್ತು.

ಆದರೆ ಅವನದು ಮತ್ತೊಂದು ಸಿದ್ಧಾಂತವಿದೆ; ನಿರಂತರ ಬದಲಾವಣೆಗಿಂತಲೂ ಅವನು ಅದರಲ್ಲಿ ಹೆಚ್ಚು ಶ್ರದ್ಧೆಯಿರಿಸಿದ್ದ; ಅದೆಂದರೆ ವಿರೋಧಗಳ ಸಮ್ಮಿಲನ ಸಿದ್ಧಾಂತ. 'ತಾನು ವಿರೋಧಿಸುವುದರಲ್ಲಿಯೇ ಅದಕ್ಕೆ ಸಾಮರಸ್ಯವೂ ಇರುತ್ತದೆ ಎಂಬುದು ಮಾನವರಿಗೆ ತಿಳಿದಿಲ್ಲ. ಅದು ವಿರೋಧೀ ಸಂಘರ್ಷಗಳ ಹೊಂದಾಣಿಕೆ, ಪಿಟೀಲು ಮತ್ತು ಕಮಾನುಗಳಂತೆ' ಎಂದವನು ಹೇಳಿದ. ಸಂಘರ್ಷದ ಬಗೆಗಿನ ಅವನ ಈ ಶ್ರದ್ಧೆಯು ಈ ಸಿದ್ಧಾಂತಕ್ಕೆ ಸಂಬಂಧಿಸಿದೆ; ಯಾಕೆಂದರೆ ವಿರೋಧಿ ವಸ್ತುಗಳ ಸಂಘರ್ಷವೇ ಚಲನೆಯನ್ನು ಉಂಟುಮಾಡುತ್ತದೆ, ಅದೇ ಸಾಮರಸ್ಯ.

ಜಗತ್ತಿನಲ್ಲಿ ಒಂದು ಬಗೆಯ ಐಕ್ಯವಿದೆ, ಆದರೆ ಅದು ವೈವಿಧ್ಯಗಳ ಫಲವಾದ ಐಕ್ಯ:

'ಯುಗ್ಮಗಳು (ಕಪಲ್ಸ್) ಪೂರ್ಣವೂ ಹೌದು, ಅಪೂರ್ಣವೂ ಹೌದು, ಪರಸ್ಪರ ಒಟ್ಟಾಗುವುದೂ ಹೌದು, ದೂರವಾಗುವುದೂ ಹೌದು, ಸಮರಸದ್ದೂ ಹೌದು, ವಿರೋಧವಾದ್ದೂ ಹೌದು. ಒಂದು ಎಲ್ಲದರಿಂದಾಗಿದೆ, ಮತ್ತು ಎಲ್ಲವೂ ಒಂದರಿಂದಲೇ ಆಗಿದೆ.'

ಕೆಲವು ವೇಳೆ ಐಕ್ಯವು ವೈವಿಧ್ಯಕ್ಕಿಂತ ಹೆಚ್ಚು ಮೂಲಭೂತವಾದುದು ಎಂದು ಅವನೆನ್ನುತ್ತಾನೆ:

'ಒಳಿತು ಕೆಡುಕುಗಳೆರಡೂ ಒಂದೇ.'

'ದೇವರಿಗೆ ಎಲ್ಲವೂ ಸರಿ, ಒಳ್ಳೆಯದು ಮತ್ತು ಸಮಂಜಸ, ಆದರೆ ಮನುಷ್ಯನು ಕೆಲವನ್ನು ಸರಿ ಎಂದೂ ಮತ್ತೆ ಕೆಲವನ್ನು ತಪ್ಪೂ ಎಂದೂ ಭಾವಿಸುತ್ತಾನೆ.'

'ಮೇಲೇರುವುದೂ ಕೆಳಗಿಳಿಯುವುದೂ ಎರಡೂ ಒಂದೇ.'

'ದೇವರು ಅಂದರೆ ಹಗಲು ಮತ್ತು ರಾತ್ರಿ, ಚಳಿಗಾಲ ಮತ್ತು ಬೇಸಿಗೆಕಾಲ, ಯುದ್ಧ ಮತ್ತು ಶಾಂತಿ, ತೃಪ್ತಿ ಮತ್ತು ಹಸಿವು; ಆದರೆ ಅವನು ವಿವಿಧ ಆಕಾರಗಳನ್ನು ತಾಳುತ್ತಾನೆ, ಬೆಂಕಿಯಂತೆ, ಅದು ಮಸಾಲೆಗಳೊಡನೆ ಬೆರೆತಾಗ ರುಚಿಗನುಗುಣವಾಗಿ ಬೇರೆ ಬೇರೆ ಹೆಸರುಗಳನ್ನು ಕೊಡುವಂತೆ.'

ವಿರೋಧಗಳೇ ಇಲ್ಲದಿದ್ದರೆ ಒಂದುಗೂಡುವಂತಹ ಸಾಮರಸ್ಯವೂ ಇರುತ್ತಿರಲಿಲ್ಲ: 'ವಿರೋಧಗಳು ನಮಗೆ ಒಳ್ಳಯದೇ.'

ಈ ಸಿದ್ಧಾಂತದಲ್ಲಿ ಹೆಗೆಲ್‌ನ ತತ್ವಜ್ಞಾನದ ಬೀಜವಿದೆ, ಅದು ಹೊರಡುವುದೇ ವಿರೋಧಗಳ ನಡುವೆ ಸಾಮರಸ್ಯವನ್ನು ತರುವ ಮೂಲಕ.

ಹೆರಾಕ್ಲಿಟಸ್‌ನ ತತ್ವಮೀಮಾಂಸೆಯಲ್ಲಿ, ಅನಾಕ್ಸಿಮ್ಯಾಂಡರ್‌ನದರಲ್ಲಿನಂತೆ, ದೈವಿಕ ನ್ಯಾಯದ ಮುಖ್ಯ ಪಾತ್ರವಿದೆ; ಎರಡೂ ಸಂಪೂರ್ಣ ಜಯಗಳಿಸುವಂತೆ ಮಾಡುವ ಮೂಲಕ ಅದು ವಿರೋಧಗಳ ಸಂಘರ್ಷವನ್ನು ತಪ್ಪಿಸುತ್ತದೆ.

'ಎಲ್ಲವೂ ಬೆಂಕಿಯ ವಿನಿಮಯ ವಸ್ತುಗಳೇ, ಎಲ್ಲವೂ ಬೆಂಕಿಯೇ, ಆಭರಣಗಳ ಚಿನ್ನ, ಮತ್ತು ಚಿನ್ನದ ಆಭರಣಗಳಂತೆ.'

'ಬೆಂಕಿಯು ಬದುಕುವುದು ಗಾಳಿಯ ಸಾವಿನಿಂದಾಗಿ, ಮತ್ತು ಗಾಳಿಯು ಬೆಂಕಿಯ ಸಾವಿನಿಂದ ಬದುಕುತ್ತದೆ; ನೀರು ಮಣ್ಣಿನ ಸಾವಿನಿಂದ ಬದುಕಿದರೆ, ಮಣ್ಣು ನೀರಿನ ಸಾವಿನಿಂದ ಉಳಿಯುತ್ತದೆ.'

'ಸೂರ್ಯ ಎಂದಿಗೂ ತನ್ನ ಮಿತಿಯನ್ನು ಮೀರುವುದಿಲ್ಲ. ಅವನು ಹಾಗೆ ಮಾಡಿದರೆ ನ್ಯಾಯದ ಅಧಿದೇವತೆಯಾದ ಎರಿನ್ಯೀಸ್ ಅವನನ್ನು ಹೊರದೂಡುತ್ತಾಳೆ.'

'ಯುದ್ಧವು ಎಲ್ಲರಿಗೂ ಸಮಾನ ಎಂಬುದನ್ನು ನಾವು ಅರಿತುಕೊಳ್ಳಬೇಕು, ಸಂಘರ್ಷವೇ ನ್ಯಾಯ.'

'ದೇವರು' 'ದೇವತೆ'ಗಳಿಗಿಂತ ಭಿನ್ನ ಎಂದೇ ಹೆರಾಕ್ಲಿಟಸ್ ಪದೇ ಪದೇ ಹೇಳುತ್ತಾನೆ. 'ಮಾನವನ ಮಾರ್ಗದಲ್ಲಿ ವಿವೇಕವಿಲ್ಲ, ಆದರೆ ದೇವರದರಲ್ಲಿ ಇದೆ .. .. ಮನುಷ್ಯನನ್ನು ದೇವರು ಕೂಸು ಎನ್ನುತ್ತಾನೆ, ಮನುಷ್ಯನಿಗೆ ಅವನ ಕೂಸಿನಂತೆ .. .. ದೇವರಿಗೆ ಹೋಲಿಸಿದರೆ ಅತ್ಯಂತ ವಿವೇಕಶಾಲಿ ಮನುಷ್ಯನು ಮಾನವಮಂಗ, ಅತ್ಯಂತ ಸ್ಫುರದ್ರೂಪಿ ಮಾನವಮಂಗವು ಮನುಷ್ಯನಿಗೆ ಹೋಲಿಸಿದರೆ ಕುರೂಪಿಯಾಗಿರುವಂತೆ.'

ದೇವರು ವೈಶ್ವಿಕ ನ್ಯಾಯದ (ಕಾಸ್ಮಿಕ್ ಜಸ್ಟಿಸ್) ಸಾಕಾರವೆಂಬುದರಲ್ಲಿ ಅನುಮಾನವೇ ಇಲ್ಲ.

ಹೆರಾಕ್ಲಿಟಸ್‌ನ ಅತ್ಯಂತ ಪ್ರಸಿದ್ಧ ಸಿದ್ಧಾಂತವೆಂದರೆ ಪ್ರತಿಯೊಂದೂ ಬದಲಾಯಿಸುತ್ತಲೇ ಇರುತ್ತದೆ ಎಂಬುದು; ಪ್ಲೇಟೋನ 'ಥಿಯೇಟೆಟಸ್'ನಲ್ಲಿ ವರ್ಣಿತವಾಗಿರುವಂತೆ ಅವನ ಶಿಷ್ಯರೂ ಇದನ್ನೇ ಒತ್ತಿ ಹೇಳುತ್ತಾರೆ.

'ಒಂದೇ ನದಿಯಲ್ಲಿ ನೀನು ಎರಡು ಬಾರಿ ಕಾಲಿರಿಸಲಾರೆ; ಯಾಕೆಂದರೆ ಹೊಸ ನೀರು ನಿನ್ನ ಮೇಲೆ ಸದಾ ಹರಿಯುತ್ತಲೇ ಇರುತ್ತದೆ.'[೨]

'ಸೂರ್ಯನು ಪ್ರತಿನಿತ್ಯವೂ ಹೊಸಬನೇ.'

ಚಿರಂತನ ಬದಲಾವಣೆಯ ಬಗೆಗಿನ ಅವನ ಶ್ರದ್ಧೆಯನ್ನು 'ಎಲ್ಲ ವಸ್ತುಗಳೂ ಹರಿಯುತ್ತಿವೆ' ಎಂಬ ಹೇಳಿಕೆಯ ಮೂಲಕ ವ್ಯಕ್ತಪಡಿಸಲಾಗಿದೆ ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಆದರೆ ಇದು, ವಾಷಿಂಗ್ಟನ್‌ನ 'ತಂದೆಯೇ, ನಾನು ಸುಳ್ಳು ಹೇಳಲಾರೆ' ಹಾಗೂ ವೆಲಿಂಗ್ಟನ್‌ನ 'ಅವರನ್ನು ಮೇಲಿನದು ಕಾಪಾಡುತ್ತದೆ' ಎಂಬ ಹೇಳಿಕೆಗಳಂತೆ ಪ್ರಾಯಶಃ ಹಳೆಯ ಒಡಂಬಡಿಕೆಯದು. ಪ್ಲೇಟೋಗಿಂತ ಹಿಂದಿನ ಎಲ್ಲ ತತ್ತ್ವಜ್ಞಾನಿಗಳದರಂತೆ ಅವನ ಮಾತುಗಳು ಉದ್ಧೃತಗಳ ಮೂಲಕವಷ್ಟೇ ಸಿಕ್ಕುವುದು; ಅದೂ ಅಲ್ಲಗಳೆಯುವುದಕ್ಕೆಂದು ಪ್ಲೇಟೋ ಮತ್ತು ಅರಿಸ್ಟಾಟಲ್‌ರು ಆರಿಸಿಕೊಂಡವು. ಆಧುನಿಕ ತತ್ವಜ್ಞಾನಿಗಳು ಕೇವಲ ಪ್ರತಿವಾದಿಗಳ ಖಂಡನೆಗಳ ಮೂಲಕ ಮಾತ್ರ ಪರಿಚಯಗೊಂಡಿದ್ದರೆ ಏನಾಗುತ್ತಿತ್ತು ಎಂದು ಯೋಚಿಸಿದರೆ, ಸಾಕ್ರಟೀಸ್‌ಪೂರ್ವದವರು ಎಷ್ಟು ಅಭಿನಂದನಾರ್ಹರು ಎಂಬುದು ತಿಳಿಯುತ್ತದೆ. ಅವರ ಶತ್ರುಗಳು ಹಬ್ಬಿಸಿದ ದ್ವೇಷದ ಮಸುಕಿನಲ್ಲಿಯೂ ಅವರು ಎಂತಹ ದೊಡ್ಡವರು ಎಂಬುದು ಮನಗಾಣುತ್ತದೆ. ಇದು ಏನಾದರಾಗಿರಲಿ, 'ಯಾವುದೂ ಎಂದೂ ಇಲ್ಲ, ಎಲ್ಲವೂ ಆಗುತ್ತಿದೆ' (ಪ್ಲೇಟೋ), ಮತ್ತು 'ಯಾವುದೂ ಅಚಲವಾಗಿ ಇಲ್ಲ' (ಅರಿಸ್ಟಾಟಲ್) ಎನ್ನುವುದರ ಮೂಲಕ ಪ್ಲೇಟೋ ಮತ್ತು ಅರಿಸ್ಟಾಟಲ್ ಇಬ್ಬರೂ ಅದನ್ನು ತಮಗೆ ಕಲಿಸಿದವನು ಹೆರಾಕ್ಲಿಟಸ್ ಎಂಬುದನ್ನು ಒಪ್ಪುತ್ತಾರೆ.

---

೩೨. ಆದರೆ ಇದನ್ನೂ ಗಮನಿಸಿ: 'ಒಂದೇ ನದಿಯಲ್ಲಿ ನಾವು ಕಾಲಿರಿಸುತ್ತೇವೆ ಮತ್ತು ಕಾಲಿರಿಸುವುದಿಲ್ಲ: ನಾವಿದ್ದೇವೆ, ಹಾಗೂ ಇಲ್ಲವೂ ಇಲ್ಲ.'

ಪ್ಲೇಟೋಗೆ ಸಂಬಂಧಿಸಿದಂತೆ ಪರಿಶೀಲಿಸಲು ಈ ಸಿದ್ಧಾಂತಕ್ಕೆ ಮತ್ತೆ ನಾನು ಮರಳುತ್ತೇನೆ; ಅವನಿಗೆ ಅದನ್ನು ಅಲ್ಲಗಳೆಯುವುದರಲ್ಲೇ ಹೆಚ್ಚು ಆಸಕ್ತಿ. ತತ್ವಜ್ಞಾನವು ಈ ಕುರಿತು ಏನು ಹೇಳುತ್ತದೆ ಎಂದು ಹುಡುಕಹೊರಡುವುದಿಲ್ಲ, ಆದರೆ ನನ್ನ ಕೆಲಸ ಕವಿಗಳು ಏನು ಹೇಳಿದ್ದಾರೆ ಮತ್ತು ವಿಜ್ಞಾನವು ಏನು ತಿಳಿಸುತ್ತದೆ ಎಂಬುದರ ಬಗ್ಗೆ ಮಾತ್ರ.

ಶಾಶ್ವತವಾದದ್ದರ ಬಗ್ಗೆ ಅತ್ಯಂತ ಗಾಢವಾದ ಹುಡುಕಾಟ ನಡೆಸುವುದೇ ತತ್ವಜ್ಞಾನಿಗಳ ಪ್ರವೃತ್ತಿಗಳಲ್ಲಿ ಒಂದು. ಅದು ಮನೆಯ ಬಗೆಗಿನ ಪ್ರೀತಿ ಮತ್ತು ಅಪಾಯದಿಂದ ತಪ್ಪಿಸಿಕೊಳ್ಳಬಹುದಾದ ನೆಲೆ – ಇವುಗಳಿಂದಾಗಿ ಪ್ರಚೋದಿತವಾದುದೆಂಬುದರಲ್ಲಿ ಸಂದೇಹವಿಲ್ಲ. ಅದಕ್ಕನುಗುಣವಾಗಿ, ಹೆಚ್ಚು ದುರಂತಗಳನ್ನೆದುರಿಸಿದವರಲ್ಲಿ ಇದು ಹೆಚ್ಚು ತೀವ್ರವಾಗಿರುತ್ತದೆ. ಮತಧರ್ಮವು ಎರಡು ರೀತಿಗಳ ಶಾಶ್ವತತೆಯನ್ನು ಬಯಸುತ್ತದೆ; ದೇವರು ಮತ್ತು ಅಮರತ್ವ. ದೇವರಲ್ಲಿ ಪರಿವರ್ತನಶೀಲತೆಯಾಗಲೀ ಬದಲಾಗುವ ಸುಳಿವಾಗಲೀ ಇಲ್ಲ; ಸಾವಿನ ನಂತರದ ಇರುವಿಕೆ ಶಾಶ್ವತವೂ ಹೌದು, ಬದಲಾಗದ್ದೂ ಹೌದು. ಹತ್ತೊಂಬತ್ತನೆಯ ಶತಮಾನದಲ್ಲಿನ ಉಲ್ಲಾಸವು ಜನರನ್ನು ಈ ಸ್ಥಾವರ ಗ್ರಹಿಕೆಗಳ ವಿರುದ್ಧ ತಿರುಗಿಸಿತು. ಆಧುನಿಕ ಉದಾರ ಮತಧರ್ಮಶಾಸ್ತ್ರವು ಸ್ವರ್ಗದಲ್ಲಿ ಪ್ರಗತಿಯನ್ನೂ ದೇವರಲ್ಲಿ ವಿಕಸನವನ್ನೂ ನಂಬಿತು. ಆದರೆ ಈ ಕಲ್ಪನೆಯಲ್ಲಿಯೂ ಶಾಶ್ವತವಾದುದೊಂದು ಇದೆ, ಅದೆಂದರೆ ಪ್ರಗತಿಯೇ ಮತ್ತದರ ವ್ಯಾಪಕ ಗುರಿ. ಒಮ್ಮೆ ವಿನಾಶವನ್ನೆದುರಿಸಿದರೆ ಮನುಷ್ಯ ಭರವಸೆಗಳು ತಮ್ಮ ದೈವಿಕ ನೆಲೆಗೆ ಹಿಂತಿರುಗುವ ಸಾಧ್ಯತೆಯಿದೆ: ಮನುಷ್ಯನ ಬದುಕಿನಲ್ಲಿ ದುಃಖವೇ ತುಂಬಿದ್ದರೆ ಮನಶ್ಶಾಂತಿಯನ್ನು ಸ್ವರ್ಗದಲ್ಲಿ ಮಾತ್ರ ಕಾಣಬಹುದೆಂಬುದು.

ತಮ್ಮ ಪ್ರೀತಿಯ ಎಲ್ಲ ವಸ್ತುಗಳನ್ನೂ ಕೊಚ್ಚಿಕೊಂಡುಹೋಗಬಲ್ಲ ಕವಿಗಳು ಕಾಲದ ಶಕ್ತಿಯನ್ನು ಕುರಿತು ಮ್ಲಾನಗೊಂಡಿದ್ದಾರೆ:

ಕಾಲವು ಯೌವನದ ಏಳಿಗೆಯನ್ನು ಇರಿಯುತ್ತದೆ,
ಸುಂದರಿಯ ಹುಬ್ಬುಗಳ ಸಮತೆಯನ್ನು ಓರೆಗೊಳಿಸುತ್ತದೆ,
ನಿಸರ್ಗ ಸತ್ಯದ ಅಪರೂಪಗುಣಗಳನ್ನು ಮೇಯುತ್ತದೆ,
ಅದರ ಕುಡುಗೋಲಿಗೆ ಸಿಕ್ಕಲು ಏನೂ ಉಳಿಯುವುದಿಲ್ಲ.

ಆದರೆ ತಮ್ಮ ಕಾವ್ಯಗಳು ಮಾತ್ರ ಅವಿನಾಶಿಯಾದುವು ಎಂದು ಸಾಮಾನ್ಯವಾಗಿ ಸೇರಿಸುತ್ತಾರೆ.

ಇಷ್ಟಾದರೂ ಭರವಸೆಯ ಕಾಲಗಳಲ್ಲಿ ನನ್ನ ಕವಿತೆಗಳು ಉಳಿಯುತ್ತವೆ,
ಅವನ ಕ್ರೂರ ಕೈಗಳ ನಡುವೆಯೂ ನಿನ್ನ ಬೆಲೆಯನ್ನು ಸ್ತುತಿಸುತ್ತ.

ಆದರೆ ಇದು ಸಾಹಿತ್ಯದ ಸಾಂಪ್ರದಾಯಿಕ ಕಲ್ಪನೆ ಮಾತ್ರ.

ತತ್ವಜ್ಞಾನದೆಡೆಗೆ ಒಲವುಳ್ಳ ಅನುಭಾವಿಗಳು ಕಾಲದ ದೃಷ್ಟಿಯಲ್ಲಿ ಎಲ್ಲವೂ ಅಶಾಶ್ವತ ಎಂಬುದನ್ನು ಅಲ್ಲಗಳೆಯಲಾಗದೆ, ಕೊನೆಯಿರದ ಕಾಲವನ್ನೆದುರಿಸುವ ಶಾಶ್ವತತೆಯ ಒಂದು ಪರಿಕಲ್ಪನೆಯನ್ನು ಸೃಷ್ಟಿಸುತ್ತಾರೆ, ಆದರೆ ಅದರ ಅಸ್ತಿತ್ವವು ಐಹಿಕ ಪ್ರಕ್ರಿಯೆಯ ಹೊರಗೆ. ಚಿರಂತನ ಬದುಕು ಎಂದರೆ, ಕೆಲವು ಮತಧರ್ಮಶಾಸ್ತ್ರಜ್ಞರ ಪ್ರಕಾರ, ಉದಾಹರಣೆಗೆ ಡೀನ್ ಇಂಜ್, ಮುಂದಿನ ಕಾಲದ ಪ್ರತಿ ಕ್ಷಣದಲ್ಲಿಯೂ ಉಳಿಯುವಂತಹುದು ಎಂದರ್ಥವಲ್ಲ, ಆದರೆ ಕಾಲದಿಂದ ಹೊರತಾದ ಅಸ್ತಿತ್ವವನ್ನು ಹೊಂದುವುದು ಎಂದು. ಅದರಲ್ಲಿ ಹಿಂದಿನದು ಮುಂದಿನದು ಎಂಬುದಿರುವುದಿಲ್ಲ, ಹೀಗಾಗಿ ತಾರ್ಕಿಕವಾಗಿ ಬದಲಾವಣೆಯ ಸಾಧ್ಯತೆಯಿರುವುದಿಲ್ಲ. ಈ ದೃಷ್ಟಿಕೋನವನ್ನು ವೌನ್ ಕಾವ್ಯಾತ್ಮಕವಾಗಿ ಹೀಗೆ ವ್ಯಕ್ತಪಡಿಸುತ್ತಾನೆ:

ಆ ರಾತ್ರಿ ನಾನು ಚಿರಂತನತೆಯನ್ನು ಕಂಡೆ,
ಪರಿಶುದ್ಧ ಕೊನೆಯಿರದ ಬೆಳಕಿನುಂಗುರದ ರೀತಿ,
ಅದರ ದೀಪ್ತಿಯಲ್ಲಿ ಎಲ್ಲವೂ ಶಾಂತ,
ಅದರಡಿಯಲ್ಲಿ ಸುತ್ತಲೂ ಗಂಟೆ, ದಿನ ವರ್ಷಗಳ ಕಾಲ
ಗೋಲಗಳಿಂದ ನೂಕಲ್ಪಟ್ಟು
ದೊಡ್ಡ ನೆರಳಿನ ಹಾಗೆ ಓಲಾಡಿತು, ಆ ಆವರ್ತದಲ್ಲಿ ಜಗವು
ಮತ್ತದರ ಪರಿವಾರದಲ್ಲಿ ತೂರಾಡಿತು.

ಅತ್ಯಂತ ಪ್ರಸಿದ್ಧವಾದ ತತ್ವಜ್ಞಾನ ಪದ್ಧತಿಗಳಲ್ಲಿನ ಹಲವು ಈ ಗ್ರಹಿಕೆಯನ್ನು ನಿರ್ಭಾವುಕ ಗದ್ಯದಲ್ಲಿ ನಿರೂಪಿಸಲು ಪ್ರಯತ್ನಿಸಿವೆ; ತಾಳ್ಮೆಯಿಂದ ಅನ್ವೇಷಿಸಿದರೆ ಕೊನೆಯಲ್ಲಿ ನಾವು ಒಪ್ಪಿಕೊಳ್ಳುವಂತೆ ಮಾಡುತ್ತವೆ.

ಬದಲಾವಣೆಯಲ್ಲಿ ಶ್ರದ್ಧೆಯಿಟ್ಟ ಹೆರಾಕ್ಲಿಟಸ್‌ನೇ ಚಿರಂತನವಾದ ಯಾವುದೋ ಇರುವಂತೆ ಒಪ್ಪುತ್ತಾನೆ. (ಕೊನೆಯಿರದ ಅವಧಿಗೆ ವಿರೋಧವಾದ) ಚಿರಂತನೆಯ ಪರಿಕಲ್ಪನೆಯು ಪಾರ್ಮನೈಡೀಸ್‌ನಿಂದ ಬಂದುದು, ಅದನ್ನು ಹೆರಾಕ್ಲಿಟಸ್‌ನಲ್ಲಿ ಕಾಣುವುದಿಲ್ಲ. ಆದರೆ ಅವನ ತತ್ವಜ್ಞಾನದಲ್ಲಿ ಕೇಂದ್ರಾಗ್ನಿಯು ಯಾವತ್ತೂ ಸಾಯುವುದಿಲ್ಲ: 'ಈ ಜಗತ್ತು ಯಾವತ್ತಿನಿಂದಲೂ ಇದೆ, ಈಗ ಇದೆ ಮತ್ತು ಮುಂದೆಂದೂ ಇರುತ್ತದೆ, ಸದಾ ನಿಗಿನಿಗಿಸುವ ಬೆಂಕಿ.' ಆದರೆ ಬೆಂಕಿಯು ಸದಾ ಬದಲಾಗುವಂತಹುದು, ಅದರ ಶಾಶ್ವತತೆಯು ಪ್ರಕ್ರಿಯೆಯದೇ ಹೊರತು ಸತ್ವರೂಪದ್ದಲ್ಲ – ಆದರೆ ಈ ದೃಷ್ಟಿಕೋನವನ್ನು ನಾವು ಹೆರಾಕ್ಲಿಟಸ್‌ಗೆ ಆರೋಪಿಸಬಾರದು.

ತತ್ವಜ್ಞಾನದಂತೆಯೇ ವಿಜ್ಞಾನವು ಕೂಡ ಬದಲಾಗುವ ಸಂಗತಿಗಳ ಅಡಿಯಲ್ಲಿ ಶಾಶ್ವತವಾದ ಯಾವುದೋ ಇರುವುದನ್ನು ಕಂಡುಕೊಳ್ಳುವ ಮೂಲಕ ನಿರಂತರ ಬದಲಾವಣೆಯ ಸಿದ್ಧಾಂತದಿಂದ ದೂರಸರಿಯಲು ಪ್ರಯತ್ನಿಸಿದೆ. ರಸಾಯನವಿಜ್ಞಾನವು

ಇದನ್ನು ಪೂರೈಸುವಂತೆ ತೋರಿತು. ನಾಶಪಡಿಸುವಂತೆ ಕಾಣುವ ಬೆಂಕಿಯು ಪುನಾಸಂಯೋಜಿಸುತ್ತದೆ: ಅದು ಮೂಲವಸ್ತುಗಳ ಮರುಜೋಡಣೆ ಮಾಡುತ್ತದೆ, ಆದರೆ ಸುಟ್ಟುಹೋಗುವ ಮುಂಚೆ ಇದ್ದ ಪ್ರತಿ ಪರಮಾಣುವೂ ಪ್ರಕ್ರಿಯೆಯು ಪೂರ್ಣಗೊಂಡಾಗಲೂ ಉಳಿದಿರುತ್ತದೆ. ಇದಕ್ಕನುಗುಣವಾಗಿ, ಪರಮಾಣುಗಳು ಅವಿನಾಶಿಯಾದುವು, ಭೌತಿಕ ಜಗತ್ತಿನ ಎಲ್ಲ ಬದಲಾವಣೆಗಳೂ ಶಾಶ್ವತ ಮೂಲವಸ್ತುಗಳ ಕೇವಲ ಮರುವ್ಯವಸ್ಥೆ ಎಂದು ಭಾವಿಸಲಾಯಿತು. ಈ ದೃಷ್ಟಿಕೋನವು ವಿಕಿರಣಶೀಲತೆಯನ್ನು (ರೇಡಿಯೋಆಕ್ಟಿವ್) ಕಂಡುಹಿಡಿಯುವ ತನಕ ಮುಂದುವರಿಯಿತು, ಆಗ ಪರಮಾಣುಗಳೂ ವಿಘಟನೆಗೊಳ್ಳುತ್ತವೆ ಎಂಬುದು ಮನದಟ್ಟಾಯಿತು.

ಯಾವುದನ್ನೂ ನಿಲ್ಲಿಸಲಿಲ್ಲ, ಎಲೆಕ್ಟ್ರಾನ್ ಮತ್ತು ಪ್ರೋಟಾನ್‌ಗಳೆಂಬ ಮತ್ತಷ್ಟು ಸೂಕ್ಷ್ಮ ಘಟಕಗಳನ್ನು ಭೌತವಿಜ್ಞಾನಿಗಳು ಹೊಸತಾಗಿ ಸೃಷ್ಟಿಸಿದರು. ಇವುಗಳಿಂದಲೇ ಪರಮಾಣುಗಳ ರಚಿತವಾಗಿವೆ; ಹಿಂದೆ ಪರಮಾಣುಗಳಿಗೆ ಆರೋಪಿಸಲಾಗಿದ್ದ ಅವಿನಾಶಿತ್ವವನ್ನು ಈ ಘಟಕಗಳು ಹೊಂದಿವೆಯೆಂದು ಕೆಲವು ವರ್ಷಗಳು ಭಾವಿಸಲಾಗಿತ್ತು. ದುರದೃಷ್ಟವಶಾತ್, ಪ್ರೋಟಾನ್‌ಗಳು ಮತ್ತು ಎಲೆಕ್ಟ್ರಾನ್‌ಗಳು ಒಂದಾಗಿ ಸಿಡಿಯಬಲ್ಲುದೆಂದು ತೋರಿಬಂದಿತು; ಅದರಿಂದ ಹೊಸ ಭೌತದ್ರವ್ಯವಲ್ಲ, ಬೆಳಕಿನ ವೇಗದಲ್ಲಿ ವಿಶ್ವದೆಲ್ಲೆಡೆ ಹರಡಬಲ್ಲ ಶಕ್ತಿತರಂಗವುಂಟಾಗುವುದೆಂದು ಗೊತ್ತಾಯಿತು. ಶಕ್ತಿಯು ಶಾಶ್ವತವಾದ ಭೌತದ್ರವ್ಯದ ಸ್ಥಾನವನ್ನು ಆಕ್ರಮಿಸಿಕೊಳ್ಳಬೇಕಾಯಿತು. ಆದರೆ ಆ ಶಕ್ತಿಯು, ಭೌತದ್ರವ್ಯದಂತಲ್ಲದೆ, ಸಾಮಾನ್ಯ ಅರ್ಥದ 'ವಸ್ತು'ವಿನ ಸುಧಾರಿತರೂಪವಲ್ಲ; ಅದು ಕೇವಲ ಭೌತಪ್ರಕ್ರಿಯೆಗಳ ಲಕ್ಷಣಗಳಷ್ಟೆ. ಅದನ್ನು ರೋಚಕವಾಗಿ ಹೆರಾಕ್ಲಿಟಸ್‌ನ ಬೆಂಕಿಯೊಡನೆ ಗುರುತಿಸಬಹುದು, ಆದರೆ ಅದು ಉರಿಯುವಂತಹುದು, ಉರಿಸುವಂತಹುದಲ್ಲ. 'ಉರಿಸುವುದು' ಆಧುನಿಕ ಭೌತವಿಜ್ಞಾನದಿಂದ ಕಾಣೆಯಾಯಿತು.

ಸಣ್ಣದರಿಂದ ದೊಡ್ಡದರ ಕಡೆಗೆ ತಿರುಗಿದರೆ, ಆಕಾಶಕಾಯಗಳು ಶಾಶ್ವತವಾದವುಗಳೆಂಬ ಪರಿಗಣಿಸುವುದನ್ನು ಖಗೋಳವಿಜ್ಞಾನವು ಒಪ್ಪುವುದಿಲ್ಲ. ಗ್ರಹಗಳೆಲ್ಲ ಸೂರ್ಯನಿಂದ ಸಿಡಿದು ಬಂದವು, ಸೂರ್ಯನೇ ನೀಹಾರಿಕೆ (ನೆಬ್ಯುಲ)ಯಿಂದ ಹೊರಬಂದವನು. ಅದು ಕೆಲವು ವರ್ಷಗಳ ತಿಳಿವಳಿಕೆಯಾಗಿತ್ತು, ಇನ್ನೂ ಸ್ವಲ್ಪ ಕಾಲ ಉಳಿಯುತ್ತದೆ, ಆದರೆ ಈಗಲೋ ಮುಂದೆಯೋ – ಪ್ರಾಯಶಃ ದಶಲಕ್ಷ ದಶಲಕ್ಷ ವರ್ಷಗಳಲ್ಲಿ – ಅದು ಸಿಡಿದುಹೋಗುತ್ತದೆ, ಎಲ್ಲ ಗ್ರಹಗಳೂ ನಾಶವಾಗುತ್ತವೆ. ಖಗೋಳವಿಜ್ಞಾನಿಗಳಾದರೂ ಹೀಗನ್ನುತ್ತಾರೆ, ಆ ವಿನಾಶದ ದಿನ ಹತ್ತಿರ ಬಂದಂತೆಲ್ಲ ಅವರು ತಮ್ಮ ಲೆಕ್ಕಾಚಾರಗಳಲ್ಲಿ ತಪ್ಪುಗಳನ್ನು ಗುರುತಿಸಬಹುದು.

ಹೆರಾಕ್ಲಿಟಸ್ ಹೇಳಿದಂತಹ ನಿರಂತರ ಬದಲಾವಣೆಯ ಸಿದ್ಧಾಂತವು

ದುಃಖದಾಯಕ; ವಿಜ್ಞಾನವು, ನಾವು ನೋಡಿದಂತೆ, ಅದನ್ನು ಅಲ್ಲಗಳೆಯುವಂತಹುದೇನನ್ನೂ ಮಾಡಲಾಗದು. ತತ್ವಜ್ಞಾನಿಗಳ ಮುಖ್ಯ ಅಭಿಲಾಷೆಗಳಲ್ಲಿ ಒಂದೆಂದರೆ, ವಿಜ್ಞಾನವು ಕೊಲ್ಲುವಂತೆ ತೋರುವ ಭರವಸೆಗಳನ್ನು ಪುನರುಜ್ಜೀವನಗೊಳಸುವುದು. ಅದಕ್ಕನುಗುಣವಾಗಿ, ತತ್ವಜ್ಞಾನಿಗಳು ತುಂಬ ದೃಢತೆಯಿಂದ ಕಾಲದ ಚಕ್ರಾಧಿಪತ್ಯಕ್ಕೆ ಸೇರದ ಯಾವುದಕ್ಕೋ ಹುಡುಕಾಟ ನಡೆಸಿದರು. ಇಂತಹ ಹುಡುಕಾಟವು ಪಾರ್ಮನೈಡೀಸ್‌ನಿಂದ ಆರಂಭಗೊಳ್ಳುತ್ತದೆ.

❍

೫
ಪಾರ್ಮನೈಡೀಸ್

ಗ್ರೀಕರು ತಮ್ಮ ಸಿದ್ಧಾಂತಗಳಲ್ಲಿಯಾಗಲೀ ಅವುಗಳ ಅನುಷ್ಠಾನದಲ್ಲಾಗಲೀ ಪರಿಷ್ಕರಣೆಗಳಿಗೆ ಅಂಟಿಕೊಂಡವರಲ್ಲ. ಹೆರಾಕ್ಲಿಟಸ್ ಎಲ್ಲವೂ ಬದಲಾವಣೆಗೊಳ್ಳುತ್ತದೆ ಎಂದು ಹೇಳಿದ: ಆದರೆ ಯಾವುದೂ ಬದಲಾಗುವುದಿಲ್ಲ ಎಂದು ಪಾರ್ಮನೈಡೀಸ್ ಅದನ್ನು ಪ್ರತಿಭಟಿಸಿದ.

ಪಾರ್ಮನೈಡೀಸ್ ದಕ್ಷಿಣ ಇಟಲಿಯ ಎಲಿಯ ನಿವಾಸಿ, ಕ್ರಿಪೂ ಐದನೆಯ ಶತಮಾನದ ಮೊದಲರ್ಧದಲ್ಲಿ ಕ್ರಿಯಾಶೀಲನಾಗಿದ್ದವನು. ಪ್ಲೇಟೋ ಪ್ರಕಾರ, ಅರಿಸ್ಟಾಟಲ್ ತನ್ನ ಯೌವನದಲ್ಲಿ (ಸುಮಾರು ಕ್ರಿಪೂ ೪೫೦) ಆಗಲೇ ಮುದುಕನಾಗಿದ್ದ ಪಾರ್ಮನೈಡೀಸ್‌ನನ್ನು ಸಂದರ್ಶಿಸಿ ಅವನಿಂದ ಸಾಕಷ್ಟು ವಿಷಯಗಳನ್ನು ತಿಳಿದಿದ್ದ. ಈ ಸಂದರ್ಶನವು ಐತಿಹಾಸಿಕವಾಗಿರಲಿ ಬಿಡಲಿ, ಬೇರೆಡೆ ಸ್ಪಷ್ಟವಾಗಿರುವಂತೆ, ಪ್ಲೇಟೋ ತಾನೇ ಪಾರ್ಮನೈಡೀಸ್‌ನ ಸಿದ್ಧಾಂತಗಳಿಂದ ಪ್ರಭಾವಿತನಾಗಿದ್ದನೆಂದು ಊಹಿಸಬಹುದು. ದಕ್ಷಿಣ ಇಟಲಿಯ ಹಾಗೂ ಸಿಸಿಲಿಗಳ ತತ್ವಜ್ಞಾನಿಗಳು, ತಮ್ಮ ಮನೋಭಾವದಲ್ಲಿ ಒಟ್ಟಾರೆ ವೈಜ್ಞಾನಿಕತೆ ಹಾಗೂ ಸಂಶಯಪ್ರವೃತ್ತಿಯವರಾಗಿದ್ದ ಅಯೋನಿಯಕ್ಕಿಂತ ಹೆಚ್ಚಾಗಿ, ಅನುಭಾವ ಮತ್ತು ಮತಧಾರ್ಮಿಕತೆಯೆಡೆಗೆ ವಾಲಿದ್ದವರು. ಆದರೆ ಪೈಥಾಗೊರಾಸ್‌ನ ಪ್ರಭಾವದಿಂದಾಗಿ ಗಣಿತವು ಅಯೋನಿಯಕ್ಕಿಂತ ಹೆಚ್ಚಾಗಿ ಮ್ಯಾಗ್ನಾ ಗ್ರೇಸಿಯದಲ್ಲಿ ಬೆಳೆಯಿತು. ಆದರೆ ಆ ಕಾಲದಲ್ಲಿ ಗಣಿತವು ಅನುಭಾವಿಕತೆಯೊಡನೆ ಮೇಳೈಸಿತ್ತು. ಪಾರ್ಮನೈಡೀಸ್ ಪೈಥಾಗೊರಾಸ್‌ನಿಂದ ಪ್ರಭಾವಿತನಾಗಿದ್ದ, ಆದರೆ ಎಷ್ಟರ ಮಟ್ಟಿಗೆ ಎಂಬುದು ಊಹೆಯ ವಿಷಯ. ಐತಿಹಾಸಿಕವಾಗಿ ಪಾರ್ಮನೈಡೀಸ್ ಏಕೆ ಮುಖ್ಯನಾಗುತ್ತಾನೆಂದರೆ, ಅವನು ತತ್ವಜಿಜ್ಞಾಸೆಯ ವಾದವೊಂದರ ರೀತಿಯನ್ನು ಕಂಡುಕೊಂಡ ಕಾರಣದಿಂದ. ಆನಂತರದ ಹೆಗೆಲ್ ಒಳಗೊಂಡಂತೆ ಅವನ ಕಾಲದವರೆಗೆ ಆಗಿಹೋದ ಬಹುಪಾಲು ತತ್ವಜಿಜ್ಞಾಸುಗಳಲ್ಲಿ ಒಂದಲ್ಲ ಒಂದು ಅದನ್ನು ರೂಪದಲ್ಲಿ ಕಾಣಬಹುದು. ಅವನು ತರ್ಕಶಾಸ್ತ್ರವನ್ನು ಕಂಡುಹಿಡಿದಂತೆ ಹೇಳಲಾಗುತ್ತದೆ, ಆದರೆ ಅವನು ಕಂಡುಹಿಡಿದದ್ದು ತರ್ಕಬದ್ಧವಾದ ತತ್ವಜಿಜ್ಞಾಸೆಯನ್ನು.

'ಪ್ರಕೃತಿಯ ಕುರಿತು' ಎಂಬ ಕವನವು ಪಾರ್ಮನೈಡೀಸ್‌ನ ಸಿದ್ಧಾಂತವನ್ನು ಮಾತಿನಲ್ಲಿ ವ್ಯಕ್ತಪಡಿಸುತ್ತದೆ. ಇಂದ್ರಿಯಗಳು ಮೋಸಗೊಳಿಸುವಂತಹುವು ಎಂದವನು ಭಾವಿಸಿದ್ದ, ಅನೇಕ ಐಂದ್ರಿಯಕ ವಸ್ತುಗಳನ್ನು ಕೇವಲ ಭ್ರಮೆ ಎಂದು ತಿಳಿದಿದ್ದ. ಸತ್ಯವಾದುದು ಅನಂತವೂ ಅವಿಭಾಜ್ಯವೂ ಆದ 'ಅದು' ಮಾತ್ರವೇ, ಹೆರಾಕ್ಲಿಟಸ್‌ನಲ್ಲಿಯಂತೆ ಅದು ವಿರೋಧಗಳ ಸಾಮರಸ್ಯವಲ್ಲ, ಯಾಕೆಂದರೆ ಇಲ್ಲಿ ವಿರೋಧಗಳೇ ಇಲ್ಲ. 'ತಣ್ಣಗೆ' ಎಂಬುದು 'ಬಿಸಿಯಾಗಿರದೆ' ಎಂದೂ 'ಕತ್ತಲೆ' ಎಂಬುದು 'ಬೆಳಕಲ್ಲದ್ದು' ಎಂದೂ ಅವನು ಭಾವಿಸಿದ್ದುದು ಸ್ಪಷ್ಟವಾಗಿದೆ. 'ನಾವು ದೇವರನ್ನು ಕಲ್ಪಿಸಿಕೊಂಡಂತೆ ಪಾರ್ಮನೈಡೀಸ್ 'ಅದ'ನ್ನು ಕಲ್ಪಿಸಿಕೊಳ್ಳಲಿಲ್ಲ; ಅವನದನ್ನು ಮೂಲದ್ರವ್ಯ ಮತ್ತು ವಿಸ್ತೃತ (ಮೆಟೀರಿಯಲ್ ಅಂಡ್ ಎಕ್ಸ್‌ಟೆಂಡೆಡ್) ಎಂದು ಭಾವಿಸಿದ್ದಂತೆ ತೋರುತ್ತದೆ; ಯಾಕೆಂದರೆ ಅದನ್ನು ಗೋಲಾಕೃತಿಯದೆಂದು ವರ್ಣಿಸುತ್ತಾನೆ. ಆದರೆ ಅದು ಅವಿಭಾಜ್ಯವಾದುದು, ಯಾಕೆಂದರೆ ಅದು ಇಡಿಯಾಗಿ ಎಲ್ಲೆಡೆ ಇದೆ.

ಪಾರ್ಮನೈಡೀಸ್ ತನ್ನ ಬೋಧನೆಯನ್ನು ಎರಡು ವಿಭಾಗ ಮಾಡುತ್ತಾನೆ: ಅವುಗಳನ್ನು 'ಸತ್ಯದ ಮಾರ್ಗ' ಮತ್ತು 'ಅಭಿಪ್ರಾಯದ ಮಾರ್ಗ' ಎಂದು ಕರೆದ. ಎರಡನೆಯದರ ಬಗ್ಗೆ ನಾವು ತಲೆಕೆಡಿಸಿಕೊಳ್ಳಬೇಕಾದ್ದಿಲ್ಲ. ಸತ್ಯ ಮಾರ್ಗದ ಬಗ್ಗೆ ಅವನು ಹೇಳುವುದೆಂದರೆ, ಅದು ಉಳಿದು ಬಂದಿರುವ ರೀತಿಯಲ್ಲಿ, ಪ್ರಮುಖ ಅಂಶಗಳಲ್ಲಿ ಕೆಳಗಿನಂತಿದೆ:

'ಇಲ್ಲದುದರ ಬಗ್ಗೆ ನೀನೇನೂ ತಿಳಿಯಲಾರೆ – ಅದು ಅಸಾಧ್ಯ – ಆ ಬಗ್ಗೆ ಮಾತಾಡಬೇಡ; ಯಾಕೆಂದರೆ ಅದು ಇರಬಹುದಾದುದು ಮತ್ತು ಇರಬಹುದೆಂದು ಆಲೋಚಿಸಬಹುದಾದ್ದಕ್ಕಿಂತ ಭಿನ್ನವೇನಲ್ಲ.'

'ಹಾಗಾದರೆ, ಭವಿಷ್ಯದಲ್ಲಿ ಏನಿರುತ್ತದೆ? ಅಥವಾ ಅದು ಹೇಗೆ ಅಸ್ತಿತ್ವಕ್ಕೆ ಬರುತ್ತದೆ? ಅದು ಅಸ್ತಿತ್ವಕ್ಕೆ ಬಂದುದಾದರೆ, ಅದು ಅದಲ್ಲ; ಅಥವಾ ಭವಿಷ್ಯದಲ್ಲಿ ಉಂಟಾಗಬಹುದಾದುದಾರೆ ಅದೂ ಅಲ್ಲ. ಹೀಗೆ ಆಗುವುದು ನಾಶವಾಗುತ್ತದೆ ಮತ್ತು ಗತಿಸುವುದನ್ನು ಕೇಳಲಾರೆವು.'

'ಆಲೋಚಿಸಬಹುದಾದ ವಸ್ತು ಮತ್ತು ಯಾವುದಕ್ಕಾಗಿ ಆಲೋಚನೆಯು ಇರುತ್ತದೋ ಎರಡೂ ಒಂದೇ; ಯಾಕೆಂದರೆ ಯಾವುದನ್ನು ಕುರಿತು ಮಾತಾಡುತ್ತೀಯೋ ಅದು ಇಲ್ಲದುದರ ಬಗ್ಗೆ ನೀನು ಆಲೋಚನೆಯನ್ನು ಮಾಡಲಾರೆ.'[೩೩]

೩೩. ಬರ್ನೆಟ್ ಅವರ ಟಿಪ್ಪಣಿ: 'ಇದರರ್ಥ ಪ್ರಾಯಶಃ ಇದು .. .. ವಾಸ್ತವವಾದ ಯಾವುದರದೋ ಹೆಸರಲ್ಲದ ಹೆಸರೊಂದಕ್ಕೆ ಸಂವಾದಿಯಾದ ಆಲೋಚನೆ ಇರಲಾರದು.'

ಈ ವಾದದ ಸಾರವೆಂದರೆ: ಆಲೋಚಿಸಿದಾಗ ಯಾವುದರ ಬಗ್ಗೆಯೋ ಆಲೋಚನೆಯಿರುತ್ತದೆ; ಒಂದು ಹೆಸರನ್ನು ಬಳಸಿದಾಗ ಅದು ವಸ್ತುವೊಂದರ ಹೆಸರಾಗಿರಬೇಕು; ಹೀಗಾಗಿ ಆಲೋಚನೆ ಮತ್ತು ಭಾಷೆಗಳಿಗೆ ತಮಗೆ ಹೊರತಾದ ವಸ್ತುಗಳಿರಬೇಕು. ಒಮ್ಮೆ ಮತ್ತು ಇತರ ಸಂದರ್ಭಗಳಲ್ಲಿ ವಸ್ತುವೊಂದರ ಬಗ್ಗೆ ಆಲೋಚಿಸುವಾಗ ಹಾಗೂ ಮಾತಾಡುವಾಗ ಯಾವುದರ ಬಗ್ಗೆ ಆಲೋಚಿಸಲಾಗುತ್ತದೆಯೋ ಅಥವಾ ಮಾತಾಡಲಾಗುತ್ತದೆಯೋ ಅದು ಎಲ್ಲ ಕಾಲದಲ್ಲೂ ಅಸ್ತಿತ್ವದಲ್ಲಿರಬೇಕು. ಹೀಗಾಗಿ ಯಾವ ಬದಲಾವಣೆಯೂ ಇರಲಾರದು, ಯಾಕೆಂದರೆ ವಸ್ತುಗಳ ಬರುವಿಕೆ ಮತ್ತು ಕಣ್ಮರೆಯಾಗುವಿಕೆಯಲ್ಲಿಯೇ ಬದಲಾವಣೆ ಇರುವುದು.

ಆಲೋಚನೆ ಮತ್ತು ಭಾಷೆಗಳ ಮೂಲಕ ಒಟ್ಟಾರೆ ಜಗತ್ತಿಗೆ ಅನ್ವಯಿಸುವ ತತ್ವಜ್ಞಾನದಲ್ಲಿನ ಮೊದಲ ವಾದದ ನಿದರ್ಶನ. ಇದನ್ನು ಸಮಂಜಸವೆಂದು ಒಪ್ಪಲಾಗದು, ಆದರೆ ಅದರಲ್ಲಿನ ಸತ್ಯಾಂಶವೇನೆಂಬುದರ ಬಗ್ಗೆ ಯೋಚಿಸುವುದು ಲಾಭದಾಯಕ.

ನಾವು ನಮ್ಮ ವಾದವನ್ನೂ ಈ ರೀತಿ ಮಂಡಿಸಬಹುದು: ಭಾಷೆಯೆಂಬುದು ಅರ್ಥಹೀನವಲ್ಲದಿದ್ದರೆ, ಪದಗಳಿಗೆ ಅರ್ಥಗಳಿರಬೇಕು. ಅವು ಬೇರೆ ಪದಗಳನ್ನಷ್ಟೇ ಸೂಚಿಸಬಾರದು, ಅದರ ಬದಲು ನಾವು ಮಾತಾಡಿದರೂ ಮಾತಾಡದಿದ್ದರೂ ಅದು ಇರುವ ಯಾವುದಕ್ಕೋ ಅನ್ವಯಿಸಬೇಕು. ನಿದರ್ಶನಕ್ಕೆ, ಜಾರ್ಜ್ ವಾಷಿಂಗ್ಟನ್ ಬಗ್ಗೆ ಆಲೋಚಿಸುತ್ತೇವೆ ಎಂದುಕೊಳ್ಳಿ. ಆ ಹೆಸರಿನ ಐತಿಹಾಸಿಕ ವ್ಯಕ್ತಿಯೊಬ್ಬನಿಲ್ಲದಿದ್ದರೆ, ಆ ಹೆಸರು ಅರ್ಥಹೀನವೆಂದು ತೋರಬಹುದು, ಮತ್ತು ಕೇವಲ ಹೆಸರನ್ನು ಸೂಚಿಸುವ ವಾಕ್ಯ ಅರ್ಥವಿಲ್ಲದ್ದು. ಜಾರ್ಜ್ ವಾಷಿಂಗ್ಟನ್ ಹಿಂದೆ ಯಾವಾಗಲೋ ಇದ್ದಿಬೇಕೆಂಬುದು ಮಾತ್ರವಲ್ಲ, ಯಾವುದೋ ಒಂದರ್ಥದಲ್ಲಿ ಅವನಿನ್ನೂ ಇರಬೇಕು, ಯಾಕೆಂದರೆ ನಾವಿನ್ನೂ ಅವನ ಹೆಸರನ್ನು ಅರ್ಥಪೂರ್ಣವಾಗಿ ಉಪಯೋಗಿಸಬಹುದಾದ ಕಾರಣಕ್ಕೆ. ಇದು ಸತ್ಯವಲ್ಲವೆಂಬುದು ಮೇಲುನೋಟಕ್ಕೇ ಕಾಣುತ್ತದೆ, ಆದರೆ ಈ ವಾದದಿಂದ ಪಾರಾಗುವುದು ಹೇಗೆ?

ಒಬ್ಬ ಕಲ್ಪನೆಯ ವ್ಯಕ್ತಿಯ ನಿದರ್ಶನವನ್ನು ತೆಗೆದುಕೊಳ್ಳೋಣ, ಹ್ಯಾಮ್ಲೆಟ್ ಎಂದುಕೊಳ್ಳಿ. 'ಹ್ಯಾಮ್ಲೆಟ್ ಡೆನ್ಮಾರ್ಕಿನ ರಾಜಕುಮಾರನಾಗಿದ್ದ' ಎಂಬ ಹೇಳಿಕೆಯನ್ನು ಪರಿಶೀಲಿಸಿ. ಒಂದರ್ಥದಲ್ಲಿ ಇದು ನಿಜ, ಆದರೆ ಸರಳ ಐತಿಹಾಸಿಕ ಅರ್ಥದಲ್ಲಲ್ಲ. 'ಹ್ಯಾಮ್ಲೆಟ್ ಡೆನ್ಮಾರ್ಕಿನ ರಾಜಕುಮಾರನಾಗಿದ್ದನೆಂದು ಷೇಕ್ಸ್‌ಪಿಯರ್ ಹೇಳುತ್ತಾನೆ' ಎಂಬುದು ಸರಿಯಾದ ಹೇಳಿಕೆ. ಇದನ್ನೇ ಮತ್ತಷ್ಟು ಸ್ಪಷ್ಟವಾಗಿ 'ಹ್ಯಾಮ್ಲೆಟ್ ಎಂಬ ಹೆಸರಿನ ಡೆನ್ಮಾರ್ಕಿನ ರಾಜಕುಮಾರನೊಬ್ಬನಿದ್ದನೆಂದು ಷೇಕ್ಸ್‌ಪಿಯರ್ ಹೇಳುತ್ತಾನೆ' ಎಂದು ಹೇಳಬಹುದು. ಇದರಲ್ಲಿ ಕಲ್ಪನಾತ್ಮಕವಾದ ಯಾವುದೂ ಇಲ್ಲ. ಷೇಕ್ಸ್‌ಪಿಯರ್

ಮತ್ತು ಡೆನ್ಮಾರ್ಕ್ ಮತ್ತು 'ಹ್ಯಾಮ್ಲೆಟ್' ಎಂಬ ಸದ್ದು ಎಲ್ಲವೂ ನಿಜ, ಆದರೆ 'ಹ್ಯಾಮ್ಲೆಟ್' ಎಂಬ ಸದ್ದು ನಿಜವಾಗಿ ಒಂದು ಹೆಸರಲ್ಲ, ಯಾಕೆಂದರೆ ಯಾರನ್ನೂ 'ಹ್ಯಾಮ್ಲೆಟ್' ಎಂದು ಕರೆಯುವುದಿಲ್ಲ. 'ಹ್ಯಾಮ್ಲೆಟ್ ಎಂಬುದು ಕಲ್ಪನಾತ್ಮಕ ವ್ಯಕ್ತಿಯೊಬ್ಬನ ಹೆಸರು' ಎಂದು ಹೇಳಿದರೆ ಅದು ನಿಖರವಾಗಿ ಸರಿಯಲ್ಲ: 'ಹ್ಯಾಮ್ಲೆಟ್ ಎಂಬುದು ಒಬ್ಬ ನಿಜವಾದ ವ್ಯಕ್ತಿಯ ಹೆಸರು ಎಂಬಂತೆ ಕಲ್ಪಿಸಿಕೊಳ್ಳಲಾಗಿದೆ' ಎನ್ನಬೇಕು.

ಹ್ಯಾಮ್ಲೆಟ್ ಒಬ್ಬ ಕಲ್ಪನೆಯ ವ್ಯಕ್ತಿ; ಯೂನಿಕಾರ್ನ್ ಎಂಬುದು ಕಲ್ಪನಾತ್ಮಕ ಪ್ರಾಣಿಜಾತಿ. 'ಯೂನಿಕಾರ್ನ್' ಅನ್ನು ಉಲ್ಲೇಖಿಸುವ ಕೆಲವು ವಾಕ್ಯಗಳು ನಿಜ, ಮತ್ತೆ ಕೆಲವು ಸುಳ್ಳು, ಆದರೆ ಎರಡೂ ಸಂದರ್ಭಗಳಲ್ಲಿ ನೇರವಾಗಿ ಅಲ್ಲ. 'ಯೂನಿಕಾರ್ನ್‌ಗೆ ಒಂದೇ ಕೊಂಬು' ಮತ್ತು 'ಹಸುವಿಗೆ ಎರಡು ಕೊಂಬುಗಳು' ಎಂಬ ವಾಕ್ಯಗಳನ್ನು ನೋಡಿ. ಎರಡನೆಯ ಹೇಳಿಕೆ ನಿಜವೆಂದು ಸಾಧಿಸಲು ಹಸುವೊಂದನ್ನು ತೋರಿಸಬೇಕು; ಕೆಲವು ಪುಸ್ತಕಗಳಲ್ಲಿ ಹಸುವಿಗೆ ಎರಡು ಕೊಂಬುಗಳಿವೆಯೆಂದು ಹೇಳಿದೆ ಎಂದಷ್ಟೇ ಹೇಳಿದರೆ ಸಾಲದು. ಆದರೆ ಯೂನಿಕಾರ್ನ್‌ಗೆ ಒಂದೇ ಕೊಂಬು ಎಂಬುದಕ್ಕೆ ಆಧಾರವನ್ನು ಪುಸ್ತಕಗಳಲ್ಲಿ ಮಾತ್ರ ಕಾಣಬಹುದು; ಹಾಗೆ ನೋಡಿದರೆ, ಸರಿಯಾದ ಹೇಳಿಕೆಯೆಂದರೆ 'ಒಂದೇ ಕೊಂಬು ಇರುವ ಯೂನಿಕಾರ್ನ್ ಎಂಬ ಪ್ರಾಣಿಗಳಿವೆಯೆಂದು ಕೆಲವು ಪುಸ್ತಕಗಳು ಖಚಿತವಾಗಿ ಹೇಳುತ್ತವೆ' ಎಂಬುದು. ಯೂನಿಕಾರ್ನ್‌ಗಳ ಬಗೆಗಿನ ಎಲ್ಲ ಹೇಳಿಕೆಗಳೂ ವಾಸ್ತವವಾಗಿ 'ಯೂನಿಕಾರ್ನ್' ಎಂಬ ಪದದ ಕುರಿತು, ಹ್ಯಾಮ್ಲೆಟ್ ಕುರಿತ ಎಲ್ಲ ಹೇಳಿಕೆಗಳೂ 'ಹ್ಯಾಮ್ಲೆಟ್' ಎಂಬ ಪದದ ಬಗ್ಗೆ ಆಗಿರುವಂತೆ.

ಆದರೆ ಬಹುಪಾಲು ಕಡೆಗಳಲ್ಲಿ, ನಾವು ಪದಗಳ ಬಗ್ಗೆ ಮಾತನಾಡುತ್ತಿರುವುದಿಲ್ಲ, ಅವುಗಳ ಅರ್ಥದ ಬಗ್ಗೆ ಮಾತಾಡುತ್ತಿರುತ್ತೇವೆ ಎಂಬುದು ಸ್ಪಷ್ಟವಾಗಿದೆ. ಪದವೊಂದನ್ನು ಅರ್ಥಪೂರ್ಣವಾಗಿ ಬಳಸಬೇಕಾದರೆ ಅದು ಯಾವುದನ್ನಾದರೂ ಸೂಚಿಸಬೇಕು, ಶೂನ್ಯವನ್ನಲ್ಲ, ಅಂದರೆ ಪದದ ಅರ್ಥವು ಒಂದರ್ಥದಲ್ಲಿ ಅಸ್ತಿತ್ವದಲ್ಲಿರಬೇಕು ಎಂಬ ಪಾರ್ಮನೈಡೀಸ್‌ನ ವಾದದವರೆಗೆ ಇದು ನಮ್ಮನ್ನು ಕರೆದೊಯ್ಯುತ್ತದೆ.

ಹಾಗಾದರೆ ನಾವು ಜಾರ್ಜ್ ವಾಷಿಂಗ್ಟನ್ ಬಗ್ಗೆ ಏನೆಂದು ಹೇಳಬೇಕು? ನಮಗೆ ಎರಡು ಆಯ್ಕೆಗಳು ಮಾತ್ರ ಇರುವಂತೆ ತೋರುತ್ತದೆ: ಒಂದು, ಅವನು ಇನ್ನೂ ಅಸ್ತಿತ್ವದಲ್ಲಿದ್ದಾನೆ ಎಂಬುದು; ಎರಡನೆಯದು, 'ಜಾರ್ಜ್ ವಾಷಿಂಗ್ಟನ್' ಎಂಬ ಪದಗಳನ್ನು ಬಳಸಿದಾಗ ನಾವು ಆ ಹೆಸರಿನ ಯಾವನೋ ವ್ಯಕ್ತಿಯನ್ನು ಕುರಿತು ಮಾತನಾಡುತ್ತಿಲ್ಲ ಎಂಬುದು. ಎರಡೂ ವಿರೋಧಾಭಾಸಗಳಂತೆ ತೋರುತ್ತವೆ, ಆದರೆ ಎರಡನೆಯ ಹೇಳಿಕೆ ಕಡಿಮೆ ವಿರೋಧಾಭಾಸದ್ದು, ಅದು ನಿಜವಾಗಿರುವ ಅರ್ಥವೊಂದನ್ನು ತೋರಿಸಲು ನಾನು ಪ್ರಯತ್ನಿಸುತ್ತೇನೆ.

ಪದಗಳಿಗೆ ನಿಶ್ಚಿತ ಅರ್ಥಗಳಿವೆಯೆಂದು ಪಾರ್ಮನೈಡೀಸ್ ಭಾವಿಸುತ್ತಾನೆ,

ಇದೇ ಅವನ ವಾದದ ತಳಹದಿ, ಅದನ್ನವನು ಪ್ರಶ್ನಾತೀತವೆಂದು ನಂಬುತ್ತಾನೆ. ಒಂದು ಪದದ ಅಧಿಕೃತ ಅಥವಾ ಸಾಮಾಜಿಕ ಒಪ್ಪಿತವಿರುವುದೆಂದು ಭಾವಿಸಲಾದ ಅರ್ಥವನ್ನು ನಿಘಂಟು ಅಥವಾ ವಿಶ್ವಕೋಶವು ನೀಡಿದರೂ, ಒಂದೇ ಪದವನ್ನು ಬಳಸುವ ಯಾವ ಇಬ್ಬರು ವ್ಯಕ್ತಿಗಳ ಮನಸ್ಸುಗಳಲ್ಲಿಯೂ ಒಂದೇ ಬಗೆಯ ಆಲೋಚನೆಯಿರುವುದಿಲ್ಲ.

ಜಾರ್ಜ್ ವಾಷಿಂಗ್ಟನ್ ತನ್ನ ಹೆಸರನ್ನು ಅಥವಾ 'ನಾನು' ಎಂಬ ಪದವನ್ನು ಸಮಾನಾರ್ಥಕ ಪದಗಳಾಗಿ ಬಳಸಬಹುದಿತ್ತು. ತನ್ನ ಆಲೋಚನೆಗಳನ್ನೂ ತನ್ನ ದೇಹದ ಚಲನಗಳನ್ನೂ ಅವನು ಕಾಣಬಹುದಿತ್ತು, ಹೀಗಾಗಿ ತನ್ನ ಹೆಸರನ್ನವನು ಬೇರಾರಿಗೂ ಸಾಧ್ಯವಾಗದ ಪೂರ್ಣಾರ್ಥದಲ್ಲಿ ಬಳಸಬಹುದಿತ್ತು. ಅವನು ಮುಂದಿರುವಾಗ ಅವನ ಸ್ನೇಹಿತರು ಅವನ ದೇಹದ ಚಲನಗಳನ್ನು ಕಾಣಬಹುದಿತ್ತು, ಮತ್ತವನ ಆಲೋಚನೆಗಳನ್ನು ಊಹಿಸಿಕೊಳ್ಳಬಹುದಿತ್ತು. ಅವನು ಮುಂದಿರುವಾಗ ಸ್ನೇಹಿತರಿಗೆ 'ಜಾರ್ಜ್ ವಾಷಿಂಗ್ಟನ್' ಎಂಬ ಹೆಸರು ಮೂರ್ತವಾದುದೇನನ್ನೋ ಸೂಚಿಸಬಹುದಿತ್ತು. ಅವನ ಮರಣಾನಂತರ ನೋಡುವುದರ ಬದಲು ನೆನಪುಗಳನ್ನು ತರಬೇಕಾಯಿತು, ಅವನ ಹೆಸರನ್ನು ಬಳಸಿದಾಗ ಇದು ಅವರ ಮಾನಸಿಕ ಪ್ರಕ್ರಿಯೆಯ ಬದಲಾವಣೆಗೆ ಕಾರಣವಾಗುತ್ತಿತ್ತು. ಅವನ ಪರಿಚಯವೇ ಇಲ್ಲದಿರುವ ನಮಗೆ ಮಾನಸಿಕ ಪ್ರಕ್ರಿಯೆಗಳು ಮತ್ತೆ ಬೇರೆಯವು. ನಾವು ಅವನ ಚಿತ್ರದ ಬಗ್ಗೆ ಯೋಚಿಸಿ, 'ಹೌದು, ಆ ವ್ಯಕ್ತಿ' ಎಂದು ನಮಗೆ ನಾವು ಹೇಳಿಕೊಳ್ಳಬಹುದು. 'ಸಂಯುಕ್ತ ಸಂಸ್ಥಾನಗಳ ಮೊದಲ ಅಧ್ಯಕ್ಷ' ಎಂಬ ಆಲೋಚನೆ ಉಂಟಾಗಬಹುದು. ಆ ವಿಷಯ ನಮಗೆ ಅದು ಗೊತ್ತಿಲ್ಲದಿದ್ದರೆ, ಅವನು ನಮಗೆ ಕೇವಲ 'ಜಾರ್ಜ್ ವಾಷಿಂಗ್ಟನ್ ಎಂಬ ಹೆಸರಿನ ವ್ಯಕ್ತಿ'. ಹೆಸರು ನಮಗೆ ಏನನ್ನೇ ಸೂಚಿಸಲಿ, ಅದು ಅವನೇ ಆಗಿರಲಾರದು, ಯಾಕೆಂದರೆ ಅವನು ನಮಗೆಂದೂ ಗೊತ್ತೇ ಇರದವನು, ಹಾಗಾಗಿ ನಮ್ಮ ಇಂದ್ರಿಯ ಅಥವಾ ನೆನಪು ಅಥವಾ ಆಲೋಚನೆಯಲ್ಲಿ ಇರಬಹುದು. ಇದು ಪಾರ್ಮೆನೈಡೀಸ್‌ನ ವಾದದ ಟೊಳ್ಳನ್ನು ತೋರಿಸುತ್ತದೆ.

ಪದಗಳ ಇಂತಹ ನಿರಂತರ ಬದಲಾವಣೆಯು ಪದಗಳ ಮೂಲಕ ವ್ಯಕ್ತವಾಗುವ ಪ್ರತಿಪಾದನೆಯ ಸತ್ಯಾಸತ್ಯತೆಗೆ ಸಾಮಾನ್ಯವಾಗಿ ಯಾವುದೇ ಬದಲಾವಣೆಯುಂಟುಮಾಡಲಾರದು. 'ಜಾರ್ಜ್ ವಾಷಿಂಗ್ಟನ್' ಎಂಬ ಹೆಸರು ಪ್ರಸ್ತಾಪವಾಗುವ ಯಾವುದೇ ಸತ್ಯವಾದ ಹೇಳಿಕೆಯು, ಹೆಸರಿನ ಬದಲು 'ಸಂಯುಕ್ತ ಸಂಸ್ಥಾನಗಳ ಮೊದಲ ಅಧ್ಯಕ್ಷ' ಎಂಬ ಪದಬೃಂದವನ್ನು ಪರ್ಯಾಯವಾಗಿ ಬಳಸಿದರೂ ಅದು ನಿಯಮದಂತೆ ನಿಜವಾಗಿಯೇ ಉಳಿಯುತ್ತದೆ. ಈ ನಿಯಮಕ್ಕೆ ಅಪವಾದಗಳೂ ಇವೆ. ವಾಷಿಂಗ್ಟನ್‌ನ ಆಯ್ಕೆಗೆ ಮುಂಚೆ 'ಜಾರ್ಜ್ ವಾಷಿಂಗ್ಟನ್ ಸಂಯುಕ್ತ ಸಂಸ್ಥಾನಗಳ ಮೊದಲ ಅಧ್ಯಕ್ಷನಾಗುತ್ತಾನೆ ಎಂಬುದು ನನ್ನ ನಿರೀಕ್ಷೆ'

ಎಂದೊಬ್ಬ ಹೇಳಬಹುದಾಗಿತ್ತು, ಆದರೆ ಅವನಿಗೆ, ಅನನ್ಯತೆಯ ನಿಯಮದ (ಲಾ ಆಫ್ ಐಡೆಂಟಿಟಿ) ಬಗ್ಗೆ ಆಳವಾದ ವಿಚಿತ್ರ ಒಲವು ಇದ್ದ ಪಕ್ಷದ ಹೊರತಾಗಿ, 'ಸಂಯುಕ್ತ ಸಂಸ್ಥಾನಗಳ ಮೊದಲ ಅಧ್ಯಕ್ಷ ಸಂಯುಕ್ತ ಸಂಸ್ಥಾನಗಳ ಮೊದಲ ಅಧ್ಯಕ್ಷನಾಗುತ್ತಾನೆಂಬುದು ನನ್ನ ನಿರೀಕ್ಷೆ' ಎಂದು ಹೇಳುವಂತಿರಲಿಲ್ಲ. ಇಂತಹ ಅಪರೂಪದ ಸನ್ನಿವೇಶಗಳ ಬಗ್ಗೆ ನಿಯಮವೊಂದನ್ನು ರೂಪಿಸುವುದು ಸುಲಭ. ಉಳಿದವುಗಳಲ್ಲಿ 'ಜಾರ್ಜ್ ವಾಷಿಂಗ್ಟನ್' ಎಂಬುದಕ್ಕೆ ಬದಲಾಗಿ ಅವನಿಗೆ ಮಾತ್ರ ಅನ್ವಯಿಸುವ ಯಾವುದೇ ಪದಬೃಂದವನ್ನು ಬಳಸಬಹುದು. ಅಂತಹ ಪದಬೃಂದಗಳ ಮೂಲಕ ಮಾತ್ರ ನಮಗೆ ಅವನ ವಿಷಯ ಏನು ಗೊತ್ತಿದೆ ಎಂಬುದು ತಿಳಿಯುತ್ತದೆ.

ಗತಕಾಲದ್ದೆಂದು ಸಾಮಾನ್ಯವಾಗಿ ಹೇಳುವುದನ್ನು ನಾವೀಗ ತಿಳಿಯಬಹುದಾದ್ದರಿಂದ ಅದು ಸತ್ಯವಾಗಿಯೂ ಗತಕಾಲದ್ದಾಗಿರುತ್ತದೆ, ಆದರೆ, ಕೆಲವು ಅರ್ಥಗಳಲ್ಲಿ, ಅದು ಈಗಲೂ ಅಸ್ತಿತ್ವದಲ್ಲಿರಬೇಕು ಎಂದು ಪಾರ್ಮನೈಡೀಸ್ ವಾದಿಸುತ್ತಾನೆ. ಹೀಗಾಗಿ ಅವನು ಅಂಥ ಬದಲಾವಣೆಯೇ ಇಲ್ಲ ಎಂದು ಊಹಿಸುತ್ತಾನೆ. ಜಾರ್ಜ್ ವಾಷಿಂಗ್ಟನ್ ಕುರಿತು ನಾವೀಗ ಏನು ಹೇಳುತ್ತಿದ್ದೇವೆಯೋ ಅದು ಈ ವಾದವನ್ನು ಎದುರಿಸಬಲ್ಲುದು. ಒಂದರ್ಥದಲ್ಲಿ ನಮಗೆ ಗತಕಾಲದ ಬಗ್ಗೆ ಏನೂ ಗೊತ್ತೇ ಇಲ್ಲ ಎಂದು ಹೇಳಬಹುದು. ನೆನಪಿಸಿಕೊಂಡಾಗ, ನೆನಪು ಈಗ ಉಂಟಾಗುತ್ತದೆ, ನೆನಪಿಸಿಕೊಂಡ ಸಂಗತಿಯಂತೆಯೇ ಇರುವುದಿಲ್ಲ. ಆದರೆ ನೆನಪು ಗತಕಾಲದ ಸಂಗತಿಯ ವರ್ಣನೆ ಮಾಡಲು ಸಮರ್ಥವಾಗುತ್ತದೆ; ಆದರೆ ವ್ಯಾವಹಾರಿಕವಾಗಿ, ವರ್ಣನೆ ಮತ್ತು ವರ್ಣಿತಗಳ ನಡುವೆ ವ್ಯತ್ಯಾಸ ಮಾಡುವ ಆವಶ್ಯಕತೆಯಿಲ್ಲ.

ಭಾಷೆಯ ಮೂಲಕ ತತ್ವಜಿಜ್ಞಾಸೆಯ ತೀರ್ಮಾನಗಳನ್ನು ರೂಪಿಸುವುದು ಎಷ್ಟು ಸುಲಭ ಹಾಗೂ ಇಂತಹ ತಪ್ಪು ವಾದವನ್ನು ನಿವಾರಿಸಿಕೊಳ್ಳುವ ಏಕೈಕ ಮಾರ್ಗವೆಂದರೆ ಬಹುಪಾಲು ತತ್ವಜಿಜ್ಞಾಸುಗಳು ಮಾಡಿದುದಕ್ಕಿಂತ ಮುಂದಕ್ಕೆ ಭಾಷೆಯ ತಾರ್ಕಿಕ ಮತ್ತು ಮನೋವೈಜ್ಞಾನಿಕ ಅಧ್ಯಯನವನ್ನು ಕೊಂಡೊಯ್ಯುವುದು ಎಂಬುದನ್ನು ಇಡೀ ವಾದವು ತೋರಿಸಿಕೊಡುತ್ತದೆ.

ಆದರೆ ಪಾರ್ಮನೈಡೀಸ್ ಜೀವ ತಾಳಿ ನಾನು ಹೇಳುತ್ತಿರುವುದನ್ನು ಓದಬಲ್ಲನಾದರೆ ಅದು ತೀರ ಟೊಳ್ಳೆಂದು ಅವನು ತಳ್ಳಿಹಾಕುತ್ತಿದ್ದನೆಂಬುದು ನನ್ನ ಭಾವನೆ. 'ಜಾರ್ಜ್ ವಾಷಿಂಗ್ಟನ್ ಕುರಿತಾದ ನಿನ್ನ ಹೇಳಿಕೆಗಳು ಗತಕಾಲಕ್ಕೆ ಸಂಬಂಧಿಸಿದವು ಎಂಬುದು ನಿನಗೆ ಹೇಗೆ ಗೊತ್ತು? ನೀನೇ ವಿವರಿಸಿರುವಂತೆ, ಈಗಿರುವ ಸಂಗತಿಗಳ ಬಗ್ಗೆ ನೇರವಾಗಿ ಪ್ರಸ್ತಾಪ ಮಾಡಬಹುದು; ಉದಾಹರಣೆಗೆ, ನಿನ್ನ ನೆನಪುಗಳು ಈಗ ಸಂಭವಿಸುತ್ತವೆ, ನೀನು ನೆನಪಿಸಿಕೊಳ್ಳುತ್ತೇನೆಂದು ಭಾವಿಸುವ ಕಾಲದಲ್ಲಲ್ಲ. ನೆನಪನ್ನು ಜ್ಞಾನದ ಒಂದು ಆಕರವೆಂದು ಒಪ್ಪಬೇಕಾದರೆ, ಗತಕಾಲವು

ಈಗ ಮನಸ್ಸಿನ ಮುಂದಿರಬೇಕು, ಹೀಗಾಗಿ ಅದು ಒಂದರ್ಥದಲ್ಲಿ ಈಗಲೂ ಅಸ್ತಿತ್ವದಲ್ಲಿರಬೇಕು' ಎಂದವನು ಹೇಳುತ್ತಿದ್ದ.

ಸದ್ಯಕ್ಕೆ ಈ ವಾದಕ್ಕೆ ಉತ್ತರಿಸುವುದಿಲ್ಲ; ಅದಕ್ಕೆ ನೆನಪಿನ ಬಗೆಗಿನ ಚರ್ಚೆಯು ಬೇಕಾಗುತ್ತದೆ, ಅದು ಗೋಜಲಿನ ವಿಷಯ. ಇಲ್ಲಿ ನಾನು ಈ ವಾದವನ್ನು ಮುಂದಿಡುತ್ತಿರುವುದು, ತತ್ವಜ್ಞಾನಕ್ಕೆ ಸಂಬಂಧಿಸಿದ ಮುಖ್ಯವಾದ ಸಿದ್ಧಾಂತಗಳನ್ನು ಅವುಗಳ ಮೂಲರೂಪದಲ್ಲಿ ಅಲ್ಲಗಳೆದು ಸಾಮಾನ್ಯವಾಗಿ ಹೊಸ ರೂಪದಲ್ಲಿ ಸ್ವೀಕರಿಸಬಹುದು ಎಂಬುದನ್ನು ಓದುಗರಿಗೆ ನೆನಪಿಸಲು. ಖಂಡನೆಗಳು ಅಂತಿಮವೇನಲ್ಲವಲ್ಲ; ಬಹುತೇಕ ಸಂದರ್ಭಗಳಲ್ಲಿ ಅವು ಮತ್ತಷ್ಟು ಪರಿಷ್ಕರಣೆಗೆ ನಾಂದಿಯಾಗಿರುತ್ತವೆ.

ಆಧುನಿಕ ಕಾಲದವರೆಗಿನ ತತ್ವಜ್ಞಾನವು ಪಾರ್ಮನೈಡೀಸ್‌ನಿಂದ ಏನನ್ನು ಸ್ವೀಕರಿಸಿದೆಯೋ ಅದು ಎಲ್ಲ ಬದಲಾವಣೆಯ ಅಸಾಧ್ಯತೆಯನ್ನಲ್ಲ. ಅದು ತೀರ ಉಗ್ರ ವಿರೋಧಾಭಾಸ; ಆದರೆ ಸಾರದ ಅವಿನಾಶಿತ್ವವನ್ನು. 'ಸಾರ' ಎಂಬ ಪದವು ಅವನ ತಕ್ಷಣದ ನಂತರದವರಲ್ಲಿ ಬಳಕೆಗೊಳ್ಳಲಿಲ್ಲ, ಆದರೆ ಅವರ ಆಧಾರಕಲ್ಪನೆಗಳಲ್ಲಿ ಅದರ ಕಲ್ಪನೆಯಿತ್ತು. ಸಾರವನ್ನು ನಾನಾ ವಿಶೇಷಣಗಳ ನಿರಂತರ ಜ್ಞಾತೃಪದವೆಂದು ಭಾವಿಸಲಾಗಿತ್ತು. ಹೀಗಾಗಿ ಎರಡು ಸಾವಿರ ವರ್ಷಗಳಿಗೂ ದೀರ್ಘ ಕಾಲ ಅದು ತತ್ವಜ್ಞಾನ, ಮನೋವಿಜ್ಞಾನ, ಭೌತವಿಜ್ಞಾನ ಮತ್ತು ಮತಧರ್ಮಶಾಸ್ತ್ರಗಳ ಮೂಲಭೂತ ಪರಿಕಲ್ಪನೆಗಳಲ್ಲಿ ಒಂದಾಯಿತು ಮತ್ತು ಒಂದಾಗಿ ಮುಂದುವರಿದಿದೆ. ಅದರ ಕುರಿತು ಮುಂದೆ ನಾನು ಹೇಳಬೇಕಾದದ್ದು ಬಹಳವಿದೆ. ಸದ್ಯಕ್ಕೆ, ಸುವ್ಯಕ್ತ ವಾಸ್ತವಗಳನ್ನು ಅಲ್ಲಗಳೆಯದೆ, ಪಾರ್ಮನೈಡೀಸ್‌ನ ವಾದಗಳಿಗೆ ನ್ಯಾಯ ಒದಗಿಸುವ ದೃಷ್ಟಿಯಿಂದ ಅವುಗಳನ್ನು ಪರಿಚಯಿಸುವುದಷ್ಟೆ ನನ್ನ ಉದ್ದೇಶವಾಗಿತ್ತು ಎಂಬುದನ್ನು ಸೂಚಿಸಬಯಸುತ್ತೇನೆ.

೬
ಎಂಪೆಡೋಕ್ಲೀಸ್

ತತ್ವಜ್ಞಾನಿ, ಪ್ರವಾದಿ, ವಿಜ್ಞಾನಿ ಹಾಗೂ ಅಳಲೆಕಾಯಿ ಪಂಡಿತ – ಇವುಗಳ ಮಿಶ್ರಣವನ್ನು ಈಗಾಗಲೇ ಪೈಥಾಗೊರಾಸ್‌ನಲ್ಲಿ ಕಂಡಿದ್ದರೂ, ಅದರ ಪೂರ್ಣ ರೂಪ ಎಂಪೆಡೋಕ್ಲೀಸ್‌ನದು. ಅವನಿದ್ದುದು ಕ್ರಿಪೂ ಸುಮಾರು ೪೪೦ ರಲ್ಲಿ, ಅಂದರೆ ಅವನು ಪಾರ್ಮನೈಡೀಸ್‌ನ ಕಿರಿಯ ಸಮಕಾಲೀನ, ಆದರೆ ಅವನ ಸಿದ್ಧಾಂತಗಳು ಹೆರಾಕ್ಲಿಟಸ್‌ನದರೊಂದಿಗೆ ಹೆಚ್ಚು ನಿಕಟ ಸಂಬಂಧವನ್ನು ಹೊಂದಿವೆ. ಅವನು ಸಿಸಿಲಿಯ ದಕ್ಷಿಣ ಕರಾವಳಿಯ ಆಕ್ರಗಾಸ್‌ನ ಪ್ರಜೆ; ಅವನೊಬ್ಬ ಪ್ರಜಾಪ್ರಭುತ್ವಾತ್ಮಕ ರಾಜಕಾರಣಿ, ಜೊತೆಗೆ ತಾನು ದೇವರೆಂದೂ ಅವನು ಹೇಳಿಕೊಳ್ಳುತ್ತಿದ್ದ. ಬಹುಪಾಲು ಗ್ರೀಕ್ ನಗರಗಳಲ್ಲಿ, ಅದರಲ್ಲೂ ಸಿಸಿಲಿಯಲ್ಲಿನವುಗಳಲ್ಲಿ, ಸದಾ ಪ್ರಜಾಪ್ರಭುತ್ವ ಮತ್ತು ನಿರಂಕುಶಪ್ರಭುತ್ವಗಳ ನಡುವೆ ಘರ್ಷಣೆ ನಡೆಯುತ್ತಲೇ ಇತ್ತು. ಯಾವುದೇ ಪಕ್ಷವು ಸೋತರೂ ಅದರ ನಾಯಕರನ್ನು ಗಲ್ಲಿಗೇರಿಸಲಾಗುತ್ತಿತ್ತು, ಇಲ್ಲವೇ ಗಡೀಪಾರು ಮಾಡಲಾಗುತ್ತಿತ್ತು. ಗಡೀಪಾರಾದವರು ಗ್ರೀಸ್‌ನ ಶತ್ರುಗಳಾಗಿದ್ದ ಪೂರ್ವದಲ್ಲಿನ ಪರ್ಷಿಯ ಅಥವಾ ಪಶ್ಚಿಮದ ಕಾರ್ಥೇಜ್‌ನೊಡನೆ ಸಂಧಾನ ಮಾಡಿಕೊಳ್ಳಲು ಅಳುಕುತ್ತಿದ್ದರು. ಎಂಪೆಡೋಕ್ಲೀಸ್ ಕ್ರಮೇಣ ಗಡೀಪಾರಾದ, ಆದರೆ ಆನಂತರ ಅವನು ಪಿತೂರಿಗಾರ ದೇಶಭ್ರಷ್ಟನಾಗುವ ಬದಲು ಸಂತ ಜೀವನವನ್ನು ಆರಿಸಿಕೊಂಡಂತೆ ಕಾಣುತ್ತದೆ. ತನ್ನ ಯೌವನ ಕಾಲದಲ್ಲವನು ಹೆಚ್ಚು ಕಡಿಮೆ ಆರ್ಫಿಕ್ ಮತಾವಲಂಬಿಯಾಗಿದ್ದ ಸಂಭವ ಹೆಚ್ಚು. ತನ್ನ ಗಡೀಪಾರಿಗಿಂತ ಮುಂಚೆ ಅವನು ರಾಜಕಾರಣ ಮತ್ತು ವಿಜ್ಞಾನಗಳನ್ನು ಮೇಳೈಸಿದ್ದ, ಆನಂತರ ಬದುಕಿನಲ್ಲಷ್ಟೇ, ದೇಶಭ್ರಷ್ಟನಾಗಿರುವಾಗ, ಅವನೊಬ್ಬ ಪ್ರವಾದಿಯಾದ.

ಎಂಪೆಡೋಕ್ಲೀಸ್ ಬಗ್ಗೆ ದಂತಕತೆಗಳು ವಿಪುಲವಾಗಿವೆ. ಅವನು ಪವಾಡಗಳನ್ನು ಕೆಲವೇಳೆ ಮಾಟದಿಂದ ಮತ್ತೆ ಕೆಲವೇಳೆ ವೈಜ್ಞಾನಿಕ ವಿಧಾನಗಳಿಂದ ಮಾಡುತ್ತಿದ್ದಂತೆ ಭಾವಿಸಲಾಗಿದೆ. ಅವನು ಗಾಳಿಯನ್ನು ನಿಯಂತ್ರಿಸಬಲ್ಲವನಾಗಿದ್ದನಂತೆ, ಮೂವತ್ತು ದಿನಗಳ ಕಾಲ ಸತ್ತಂತಿದ್ದವಳಂತಿದ್ದ ಹೆಂಗಸೊಬ್ಬಳೊಬ್ಬಳಿಗೆ ಮರುಜೀವ ನೀಡಿದನಂತೆ;

ಕೊನೆಯಲ್ಲಿ, ತಾನು ದೇವರೆಂದು ತೋರಿಸಲು ಎಟ್ನಾದ ಕಮರಿಯೊಂದಕ್ಕೆ ಹಾರಿ ಪ್ರಾಣಬಿಟ್ಟನಂತೆ. ಕವಿಯ ಮಾತುಗಳಲ್ಲಿ:

ಎಂಪೆಡೋಕ್ಲೀಸ್ ಮಹಾಶಯ, ಅತ್ಯುತ್ಸಾಹಿ ಜೀವಿ,
ಎಟ್ನಾದೊಳಕ್ಕೆ ಹಾರಿದ, ಪೂರ್ತಿ ಬೆಂದು ಹೋದ.

ಈ ವಸ್ತುವಿನ ಮೇಲೇ ಮ್ಯಾಥ್ಯೂ ಆರ್ನಾಲ್ಡ್ ಕವನವೊಂದನ್ನು ರಚಿಸಿದ, ಆದರೆ (ಅದು ಅವನ ಬಹು ಕೆಟ್ಟ ಪದ್ಯಗಳಲ್ಲೊಂದು) ಅದರಲ್ಲಿ ಈ ಸಾಲುಗಳಿಲ್ಲ.

ಪಾರ್ಮನೈಡೀಸ್‌ನಂತೆಯೇ ಎಂಪೆಡೋಕ್ಲೀಸ್ ಕೂಡ ಪದ್ಯರೂಪದಲ್ಲಿ ಬರೆದ. ಅವನ ಪ್ರಭಾವಕ್ಕೊಳಗಾದ ಲ್ಯೂಕ್ರೀಷಿಯಸ್ ಅವನನ್ನು ದೊಡ್ಡ ಕವಿಯೆಂದು ಹೊಗಳುತ್ತಾನೆ; ಆದರೆ ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಅವನ ಬರವಣಿಗೆಯ ತುಣುಕುಗಳಷ್ಟೇ ಉಳಿದಿರುವುದರಿಂದಾಗಿ ಅವನ ಕಾವ್ಯಯೋಗ್ಯತೆ ಸಂಶಯಾಸ್ಪದವೇ.

ಅವನ ವಿಜ್ಞಾನ ಮತ್ತು ಮತಧರ್ಮಗಳ ಬಗ್ಗೆ ಬೇರೆಯಾಗಿ ವಿವೇಚಿಸುವುದು ಆವಶ್ಯಕ. ಯಾಕೆಂದರೆ ಅವರೆಡೂ ಒಂದರೊಡನೊಂದು ಹೊಂದಿಕೊಳ್ಳುವುದಿಲ್ಲ. ಮೊದಲಿಗೆ ನಾನು ವಿಜ್ಞಾನವನ್ನು ಕುರಿತು ವಿವೇಚಿಸುತ್ತೇನೆ, ಕೊನೆಯಲ್ಲಿ ಅವನ ಮತಧರ್ಮದ ಬಗ್ಗೆ.

ವಿಜ್ಞಾನಕ್ಕೆ ಅವನ ಕೊಡುಗೆಗಳಲ್ಲಿ ಅತ್ಯಂತ ಮಹತ್ತರವಾದುದೆಂದರೆ ಗಾಳಿಯನ್ನು ಭಿನ್ನ ಮೂಲತತ್ವ ಎಂದು ಕಂಡುಕೊಂಡದ್ದು. ಒಂದು ಪಾತ್ರೆಯನ್ನು ನೀರಿನಲ್ಲಿ ಬೋರಲು ಹಾಕಿದಾಗ ನೀರು ಪಾತ್ರೆಯೊಳಕ್ಕೆ ಹೋಗುವುದಿಲ್ಲ ಎಂಬುದನ್ನು ಗಮನಿಸುವುದರ ಮೂಲಕ ಇದನ್ನು ಸಾಧಿಸಿದ. ಅವನೆನ್ನುತ್ತಾನೆ:

'ಹುಡುಗಿಯೊಬ್ಬಳು ಹೊಳೆಯುವ ತಾಮ್ರದ ಜಲ ಗಡಿಯಾರದೊಡನೆ ಆಡುತ್ತಿದ್ದಾಗ, ಕೊಳವೆಯ ಬಾಯನ್ನು ತನ್ನ ಸುಂದರ ಕೈಯ ಮೇಲೆ ಇರಿಸಿಕೊಂಡು ಜಲ ಗಡಿಯಾರವನ್ನು ನಿರ್ಮಲವಾದ ಹರಿಯುವ ನೀರಿನಲ್ಲಿ ಮುಳುಗಿಸುತ್ತಾಳೆ; ಆದರೆ ನೀರಿನ ಹರಿವು ಪಾತ್ರೆಗೆ ಬೀಳುವುದಿಲ್ಲ, ಅದರೊಳಗಿನ ಗಾಳಿಯಷ್ಟೂ ಸಾಲು ತೂತುಗಳಲ್ಲಿ ಒತ್ತಿಕೊಂಡು, ಅವಳು ಹರಿವನ್ನು ಅದುಮಿಟ್ಟುಕೊಂಡುದನ್ನು ತೆರವುಗೊಳಿಸವವರೆಗೂ ಹೊರಗೇ ಉಳಿಯುತ್ತದೆ, ಆಮೇಲೆ ಗಾಳಿ ಹೊರಹೋಗಿ ಅದರಷ್ಟೇ ಪ್ರಮಾಣದ ನೀರು ಒಳಗೆ ಹರಿಯುತ್ತದೆ.'

ಉಸಿರಾಟವನ್ನು ವಿವರಿಸುವಾಗ ಈ ವಿವರಣೆಯು ದೊರೆಯುತ್ತದೆ.

ಕೇಂದ್ರಾಪಗಾಮಿ ಬಲದ (ಸೆಂಟ್ರಿಫ್ಯೂಗಲ್ ಫೋರ್ಸ್) ಕನಿಷ್ಠ ಒಂದು ನಿದರ್ಶನವನ್ನವನು ಕಂಡುಹಿಡಿದ: ನೀರು ತುಂಬಿದ ಬಟ್ಟಲ ತುದಿಗೆ ದಾರ ಕಟ್ಟಿ ಸುತ್ತ ತಿರುಗಿಸಿದಾಗ ನೀರು ಚೆಲ್ಲುವುದಿಲ್ಲ.

ಸಸ್ಯಗಳಲ್ಲಿ ಲಿಂಗಭೇದವಿದೆ ಎಂಬುದು ಅವನಿಗೆ ತಿಳಿದಿತ್ತು. ವಿಕಸನ ಮತ್ತು ಅರ್ಹತಮದ ಉಳಿವಿನ ಬಗ್ಗೆ ಅವನೊಂದು ಸಿದ್ಧಾಂತವನ್ನು ಹೊಂದಿದ್ದ (ಆದರೆ

ಅದು ಸ್ವಲ್ಪಮಟ್ಟಿಗೆ ಕಲ್ಪನಾತಿರೇಕದಿಂದ ಕೂಡಿರುವುದು ನಿಜ). ಮೂಲತಃ, 'ಅಸಂಖ್ಯಾತ ಬುಡಕಟ್ಟುಗಳೂ ಮರ್ತ್ಯಜೀವಿಗಳೂ ವಿವಿಧ ಆಕಾರಗಳಲ್ಲಿ ವ್ಯಾಪಕವಾಗಿ ಚದುರಿ ಹೋಗಿದ್ದವು, ಅದೊಂದು ಅಚ್ಚರಿಯ ವಿಷಯ.' ಕತ್ತಿಲ್ಲದ ತಲೆಗಳು, ಭುಜವಿಲ್ಲದ ತೋಳುಗಳು, ಹಣೆಗಳಿಲ್ಲದ ಕಣ್ಣುಗಳು, ಜೊತೆಗೂಡಲು ಹಾತೊರೆಯುವ ಒಂಟಿ ಅಂಗಗಳು ಇದ್ದವು. ಇವು ಆಕಸ್ಮಿಕವಾಗಿ ಸೇರಿಕೊಂಡು, ಅಸಂಖ್ಯ ಕೈಗಳುಳ್ಳ ಜೀವಿಗಳು, ಬೇರೆ ಬೇರೆ ದೆಸೆಗಳ ಕಡೆ ನೋಡುವ ಮುಖಗಳು ಮತ್ತು ಎದೆಗಳುಳ್ಳ ಜೀವಿಗಳು, ಎತ್ತುಗಳ ದೇಹ ಮತ್ತು ಮನುಷ್ಯರ ಮುಖಗಳುಳ್ಳ ಜೀವಿಗಳು ಉಂಟಾದುವು. ಗಂಡುಹೆಣ್ಣುಗಳೆರಡರ ಲಕ್ಷಣಗಳನ್ನು ಒಗ್ಗೂಡಿಸಿಕೊಂಡರೂ ಬರಡಾದ ಉಭಯಲಿಂಗಿಗಳದಿದ್ದವು, ಕೊನೆಗೆ ಕೆಲವು ರೂಪಗಳು ಮಾತ್ರ ಉಳಿದುಕೊಂಡವು.

ಖಗೋಳವಿಜ್ಞಾನದ ಬಗ್ಗೆ: ಇದು ಸೂರ್ಯನ ವಿಷಯದಲ್ಲಿಯೂ ನಿಜವಾದರೂ, ಚಂದ್ರನು ಬೆಳಕನ್ನು ಪ್ರತಿಫಲಿಸುವುದರಿಂದ ಹೊಳೆಯುತ್ತಾನೆ ಎಂಬುದು ಅವನಿಗೆ ಗೊತ್ತಿತ್ತು. ಬೆಳಕಿಗೆ ಚಲಿಸಲು ಕಾಲ ಬೇಕು, ಆದರೆ ಬಹು ಅಲ್ಪ ಕಾಲ, ನಾವದನ್ನು ಕಾಣಲು ಸಾಧ್ಯವಿಲ್ಲ; ಚಂದ್ರನ ಮಧ್ಯಪ್ರವೇಶದಿಂದ ಸೂರ್ಯಗ್ರಹಣಗಳಾಗುತ್ತವೆ ಎಂಬುದೂ ಅವನಿಗೆ ಗೊತ್ತಿತ್ತು. ಇದನ್ನವನು ಅನಾಕ್ಸಾಗೊರಾಸ್‌ನಿಂದ ಕಲಿತಂತೆ ಕಾಣುತ್ತದೆ.

ಅವನು ಇಟಾಲಿಯನ್ ವೈದ್ಯಪಂಥದ ಸ್ಥಾಪಕ. ಅವನಿಂದ ಆರಂಭಗೊಂಡ ವೈದ್ಯಕೀಯ ಶಾಲೆಯು ಪ್ಲೇಟೋ ಮತ್ತು ಅರಿಸ್ಟಾಟಲ್ ಇಬ್ಬರ ಮೇಲೂ ಪ್ರಭಾವ ಬೀರಿತು. ಬರ್ನೆಟ್ ಅವರ ಪ್ರಕಾರ (ಪು. ೨೩೪), ಇಡೀ ವೈಜ್ಞಾನಿಕ ಹಾಗೂ ತತ್ತ್ವಜ್ಞಾನೀಯ ಚಿಂತನೆಗಳ ಮೇಲೆ ಇದು ಪ್ರಭಾವ ಬೀರಿತು.

ಇವೆಲ್ಲ ಅವನ ಕಾಲದ ವೈಜ್ಞಾನಿಕ ಕಸುವನ್ನು ತೋರಿಸುತ್ತವೆ, ಆದರೆ ಗ್ರೀಸ್‌ನಲ್ಲಿ ಇದಕ್ಕೆ ಸಾಟಿಯಾದ ಕಾಲ ಆ ಮುಂದೆ ಬರಲಿಲ್ಲ.

ಈಗ ಅವನ ವಿಶ್ವವಿಜ್ಞಾನದ (ಕಾಸ್ಮಾಲಜಿ) ಕಡೆ ಬರುತ್ತೇನೆ. ಈಗಾಗಲೇ ನೋಡಿರುವಂತೆ, ಮಣ್ಣು, ಗಾಳಿ, ಬೆಂಕಿ ಮತ್ತು ನೀರು ಇವುಗಳು ನಾಲ್ಕು ಮೂಲವಸ್ತುಗಳು ಎಂಬುದನ್ನು ಹೇಳಿದವನು ಅವನೇ (ಆದರೆ ಅವನು ಮೂಲವಸ್ತು – ಎಲಿಮೆಂಟ್ – ಎಂಬ ಮಾತನ್ನು ಬಳಸಲಿಲ್ಲ). ಇದರಲ್ಲಿ ಪ್ರತಿಯೊಂದೂ ಸದಾ ಇರುವಂತಹುದು, ಆದರೆ ಅವುಗಳನ್ನು ಬೇರೆ ಬೇರೆ ಪ್ರಮಾಣಗಳಲ್ಲಿ ಬೆರೆಸಿದಾಗ ನಾವೀಗ ಜಗತ್ತಿನಲ್ಲಿ ಕಾಣುವ ಬದಲಾಗುವ ಮೂಲತತ್ವಗಳು ಉಂಟಾಗುತ್ತವೆ. ಅವುಗಳು ಪ್ರೀತಿಯಿಂದ ಒಂದಾದವು, ಘರ್ಷಣೆಯಿಂದ ದೂರಾದವು. ಪ್ರೀತಿ ಮತ್ತು ಘರ್ಷಣೆಗಳು, ಎಂಪೆಡೋಕ್ಲೀಸ್ ಪ್ರಕಾರ, ಮಣ್ಣು, ಗಾಳಿ, ಬೆಂಕಿ ಮತ್ತು ನೀರು ಇವುಗಳು ಯಾವುದೋ ಹಂತದಲ್ಲಿನ ಮೂಲತತ್ವಗಳು. ಪ್ರೀತಿಯು

ಹೆಚ್ಚಾಗಿದ್ದ ಕಾಲಗಳೂ ಇದ್ದವು, ಘರ್ಷಣೆಯು ತೀವ್ರವಾಗಿದ್ದ ಕಾಲಗಳೂ ಇದ್ದವು. ಪ್ರೀತಿಯು ಸಂಪೂರ್ಣ ಗೆಲವನ್ನು ಸಾಧಿಸಿದ್ದ ಸುವರ್ಣ ಯುಗವೂ ಇತ್ತು. ಆ ಕಾಲದಲ್ಲಿ, ಜನರು ಸೈಪ್ರಸ್‌ನ ಆಫ್ರೋಡೈಟಿಯನ್ನು ಮಾತ್ರ ಪೂಜಿಸುತ್ತಿದ್ದರು (ಪು. ೧೨೮). ಜಗತ್ತಿನ ಬದಲಾವಣೆಗಳಿಗೆ ಯಾವ ಉದ್ದೇಶವೂ ಇರುವುದಿಲ್ಲ, ಇದು ಆಗುವುದು ಆಕಸ್ಮಿಕವಾಗಿ ಮತ್ತು ಆವಶ್ಯಕತೆಯಿಂದಾಗಿ. ಮೂಲವಸ್ತುಗಳು ಪ್ರೀತಿಯಿಂದ ಸಾಮರಸ್ಯದಿಂದ ಬೆರೆತ ಕಾಲ ಮತ್ತು ಘರ್ಷಣೆಯು ಅವುಗಳನ್ನು ಮತ್ತೆ ಬೇರ್ಪಡಿಸುವ ಕಾಲ; ಘರ್ಷಣೆಯು ಬೇರ್ಪಡಿಸುವ ಕಾಲ ಮತ್ತು ಪ್ರೀತಿಯು ಮತ್ತೆ ಅವುಗಳನ್ನು ಒಂದುಗೂಡಿಸುವ ಕಾಲ – ಇವುಗಳ ಪರ್ಯಾಯವಿತ್ತು. ಹೀಗಾಗಿ ಯಾವುದೇ ಸಂಯುಕ್ತವಸ್ತುವೂ ತಾತ್ಕಾಲಿಕವಾದುದು; ಆದರೆ ಮೂಲವಸ್ತುಗಳು, ಪ್ರೀತಿ ಮತ್ತು ಘರ್ಷಣೆಗಳೊಡನೆ, ಶಾಶ್ವತವಾಗಿರುವಂತಹುವು.

ಹೆರಾಕ್ಲಿಟಸ್‌ನಲ್ಲೂ ಇದರಂಥದೇ ಭಾವನೆಯಿದೆ: ಬರಿ ಘರ್ಷಣೆಯಲ್ಲ, ಪ್ರೀತಿ ಮತ್ತು ಘರ್ಷಣೆಗಳೆರಡೂ ಒಟ್ಟಾಗಿ ಬದಲಾವಣೆಯನ್ನು ತರುತ್ತದೆ ಎಂಬುದೇ ಅದು. ಪ್ಲೇಟೋ ತನ್ನ 'ಸೂಫಿಸ್ಟ್'ನಲ್ಲಿ (ಪು. ೨೪೨) ಹೆರಾಕ್ಲಿಟಸ್ ಮತ್ತು ಎಂಪೆಡೊಕ್ಲೀಸ್‌ರನ್ನು ಸೇರಿಸುತ್ತಾನೆ:

> **ಎರಡು ತತ್ವಗಳನ್ನು ಒಗ್ಗೂಡಿಸುವುದು (ಒಂದು ಮತ್ತು ಅನೇಕ) ಕ್ಷೇಮಕರ ಎಂದು ಅಯೋನಿಯದ ಮತ್ತು ಈಚೆಗೆ ಸಿಸಿಲಿಯದ ಚಿಂತಕರು ತೀರ್ಮಾನಕ್ಕೆ ಬಂದಿದ್ದಾರೆ. ಒಂದು ಮತ್ತು ಅನೇಕವಾಗಿರುವುದು, ಶತ್ರುತ್ವ ಮತ್ತು ಮಿತ್ರತ್ವದಿಂದ ಒಂದಾಗುತ್ತವೆ, ಸದಾ ಒಂದಾಗುತ್ತ ಬೇರ್ಪಡುತ್ತ ಇರುತ್ತವೆ ಎಂದು ಗಾಢ ಚಿಂತಕರು ಹೇಳಿದರೆ, ಮಿದು ಚಿಂತಕರು ನಿರಂತರ ಘರ್ಷಣೆ ಮತ್ತು ಶಾಂತಿಗಳ ಬದಲಿಗೆ, ಅವುಗಳ ಸಡಿಲಿಕೆ ಮತ್ತು ಬದಲಾಗುವಿಕೆಗಳನ್ನು ಒತ್ತಿ ಹೇಳುತ್ತಾರೆ. ಶಾಂತಿ ಮತ್ತು ಐಕ್ಯಗಳು ಆಫ್ರೋಡೈಟಿಯ ಪ್ರಭಾವಾನುಸಾರಿಯಾಗಿ, ಘರ್ಷಣೆಯ ತತ್ವದಂತೆ, ಮತ್ತೆ ಅನೇಕತೆ ಮತ್ತು ಹೋರಾಟಗಳಿರುತ್ತವೆ ಎನ್ನುತ್ತಾರೆ.**

ಭೌತ ಜಗತ್ತು ಗೋಲಾಕಾರವಾದುದು ಎಂದು ಎಂಪೆಡೋಕ್ಲೀಸ್ ಅಭಿಪ್ರಾಯಪಡುತ್ತಾನೆ. ಸುವರ್ಣ ಯುಗದಲ್ಲಿ ಘರ್ಷಣೆಯು ಹೊರಗಿದ್ದು, ಪ್ರೀತಿ ಒಳಗಿರುತ್ತದೆ. ಆನಂತರ ಕ್ರಮೇಣ ಘರ್ಷಣೆಯು ಒಳಬಂದು ಪ್ರೀತಿಯನ್ನು ಹೊರದೂಡುತ್ತದೆ. ಘರ್ಷಣೆಯು ಸಂಪೂರ್ಣ ಒಳಬಂದು ಪ್ರೀತಿಯು ಸಂಪೂರ್ಣವಾಗಿ ಹೊರಹೋಗುವವರೆಗೂ ಇದು ನಡೆಯುತ್ತದೆ. ಆನಂತರ – ಯಾವ ಕಾರಣಕ್ಕೆಂಬುದು ಸ್ಪಷ್ಟವಾಗದಿದ್ದರೂ – ಸುವರ್ಣ ಯುಗ ಮರಳುವವರೆಗೂ, ಆದರೆ ಶಾಶ್ವತವಾಗಿ ಸಲ್ಲ, ಒಂದು ಪ್ರತಿ–ಆಂದೋಲನ ಆರಂಭಗೊಳ್ಳುತ್ತದೆ. ಮತ್ತೆ ಇಡೀ ಚಕ್ರಗತಿಯು ಪುನರಾವರ್ತನೆಯಾಗುತ್ತದೆ. ಈ ಎರಡು ಅತಿರೇಕಗಳಲ್ಲಿ

ಒಂದು ಶಾಶ್ವತವಾಗಿರುತ್ತದೆಂದು ಯಾರಾದರೂ ಭಾವಿಸಬಹುದು, ಆದರೆ ಅದು ಎಂಪೆಡೋಕ್ಲೀಸ್‌ನ ನಿಲವಲ್ಲ. ಪಾರ್ಮನೈಡೀಸ್‌ನ ವಾದವನ್ನು ಪರಿಗಣಿಸಿ ಅವನು ಚಲನೆಯನ್ನು ವಿವರಿಸಲು ಪ್ರಯತ್ನಿಸಿದ. ಆದರೆ ಯಾವಾಗಲಾದರೂ ಬದಲಾಗದ ವಿಶ್ವದತ್ತ ಸಾಗಲು ಅವನಿಗೆ ಇಷ್ಟವಿರಲಿಲ್ಲ.

ಮತಧರ್ಮದ ಬಗೆಗಿನ ಎಂಪೆಡೋಕ್ಲೀಸ್‌ನ ದೃಷ್ಟಿಯು ಮುಖ್ಯವಾಗಿ ಪೈಥಾಗೊರಾಸ್‌ನದು. ಅವನು ಹೇಳುವುದೆಂದರೆ: 'ಅವರಲ್ಲಿ ಅಸಾಧಾರಣ ಜ್ಞಾನಿಯಾದ ಒಬ್ಬ ವ್ಯಕ್ತಿಯಿದ್ದ, ಅವನು ಬುದ್ಧಿವಂತ ಕಾರ್ಯಗಳಲ್ಲಿ ನಿಷ್ಣಾತನಾದವನು, ಅವನು ಜ್ಞಾನಭಂಡಾರವನ್ನು ಸೂರೆಗೊಂಡಿದ್ದವನು, ಯಾಕೆಂದರೆ ಯೋಚಿಸಿದಾಗಲೆಲ್ಲ ಅವನ ಮನಸ್ಸಿನಲ್ಲಿ ಅಸ್ತಿತ್ವದಲ್ಲಿನ ಎಲ್ಲ ವಸ್ತುಗಳನ್ನೂ ಕಾಣುತ್ತಿದ್ದ, ಸಾಮಾನ್ಯರಿಗಿಂತ ಹತ್ತು, ಇಪ್ಪತ್ತು ಪಟ್ಟು'. ಸುವರ್ಣಯುಗದಲ್ಲಿ, ಈಗಾಗಲೇ ಗಮನಿಸಿರುವಂತೆ, ಜನರು ಪೂಜಿಸುತ್ತಿದ್ದುದು ಆಫ್ರೋಡೈಟಿಯನ್ನು ಮಾತ್ರ. 'ಬಲಿಪೀಠವು ಎತ್ತಿನ ರಕ್ತದಿಂದ ಗಬ್ಬು ಹೊಡೆಯುತ್ತಿರಲಿಲ್ಲ, ಜೀವವನ್ನು ಬೇರ್ಪಡಿಸಿದ ಬಳಿಕ ದೊಡ್ಡ ಅಂಗಾಂಗಗಳನ್ನು ತಿನ್ನುವುದನ್ನು ಜನರು ತೀವ್ರ ಅಸಹ್ಯಕರವೆಂದು ಭಾವಿಸಿದರು.'

ಒಂದು ಹಂತದಲ್ಲಿ ತನ್ನನ್ನವನು ದೇವರೆಂದು ವರ್ಣಿಸಿಕೊಳ್ಳುತ್ತಾನೆ:

ಗೆಳೆಯರೇ, ಆಕ್ರಗಾಸ್‌ನ ಹಳದಿ ಬಂಡೆಯನ್ನು ನಗರದಲ್ಲಿ, ಆ ಪೀಠದ ಮೇಲೆ, ಭವ್ಯವಾದ ಕೆಲಸಗಳಲ್ಲಿ ತೊಡಗಿರುವವರು, ಅಪರಿಚಿತನ ಗೌರವದ ಆಶ್ರಿತರು, ಕ್ಷುಲ್ಲಕತೆಯಲ್ಲಿ ಅಕುಶಲರಾದ ಜನರು ವಾಸಿಸುವ ಅದ್ಭುತ ನರಗಕ್ಕೆ ನಮಸ್ಕಾರ. ನಿಮ್ಮ ಜೊತೆಯಲ್ಲಿ ಅಮರ ದೇವತೆಯಾದ ನಾನು ಸುತ್ತಾಡುತ್ತೇನೆ, ಈಗ ನಾನು ಅಮರನಲ್ಲ, ಅಲಂಕಾರ ಪಟ್ಟಿ ಮತ್ತು ಹಾರಗಳಿಂದ ಭೂಷಿತನಾಗಿ ಎಲ್ಲರ ಗೌರವಕ್ಕೆ ಪಾತ್ರನಾದವನು. ಏಳಿಗೆಯ ನಗರಗಳಲ್ಲಿ ಗಂಡು ಹೆಣ್ಣುಗಳ ಗುಂಪುಗಳಲ್ಲಿ ನಾನು ನೇರವಾಗಿ ಹೊಕ್ಕಾಗ ಅವರು ಗೌರವವನ್ನು ತೋರಿಸುತ್ತಾರೆ. ಅಸಂಖ್ಯ ತಂಡಗಳಲ್ಲಿ ಅವರು ನನ್ನನ್ನು ಹಿಂಬಾಲಿಸಿ ಬಂದು ಲಾಭ ಪಡೆಯುವ ಮಾರ್ಗ ಯಾವುದೆಂದು ಕೇಳಬಹುದು. ಕೆಲವರಿಗೆ ದೈವವಾಣಿಯಲ್ಲಿ ಅಪೇಕ್ಷೆ, ಎಲ್ಲ ಬಗೆಯ ಕಾಯಿಲೆಯ ಯಾತನಾಮಯ ಅನುಭವದಿಂದ ಶಿಥಿಲಗೊಂಡ ಮತ್ತೆ ಕೆಲವರಿಗೆ ನನ್ನಿಂದ ಸಾಂತ್ವನದ ನುಡಿಗಳನ್ನು ಕೇಳಲು ಕಾತರ .. .. ಆದರೆ ಅವುಗಳೆಲ್ಲ ಬಹು ಮಹತ್ವದ್ದೆಂಬಂತೆ ಬಗೆದು ಮರ್ತ್ಯರ ಅಶಾಶ್ವತ ಜನರನ್ನು ಮೀರಲೆಂಬಂತೆ ನಾನೇಕೆ ಈ ವಿಷಯಗಳ ಬಗ್ಗೆ ಯೋಚಿಸಲಿ?

ಮತ್ತೊಂದು ಕ್ಷಣ, ತನ್ನ ಅಶ್ರದ್ಧೆಗಾಗಿ ಪ್ರಾಯಶ್ಚಿತ್ತಕ್ಕೊಳಗಾದ ದೊಡ್ಡ ಪಾಪಿಯೆಂಬಂತೆ ಹಲುಬುತ್ತಾನೆ:

ಹಿರಿಯ ಪ್ರತಿಜ್ಞೆಗಳಿಂದ ಬದ್ಧವಾದ, ದೀರ್ಘ ದಿನಗಳು ಹಣೆಬರಹವಾದ ಯಾವುದಾದರೊಂದು ಪಿಶಾಚವು ತನ್ನ ಕೈಗಳನ್ನು ರಕ್ತಸಿಕ್ತಗೊಳಿಸಿಕೊಂಡಿದೆಯೋ

ಅಥವಾ ತಾನೇ ಘರ್ಷಣೆ-ಸುಳ್ಳುಪ್ರತಿಜ್ಞೆಗಳನ್ನುಸರಿಸಿ ಅನುಗ್ರಹೀತರಾದವರ ಮನೆಗಳಿಂದ ಮೂವತ್ತು ಸಾವಿರ ವರ್ಷಗಳು ಅಲೆಯಬೇಕಾಗಿದೆಯೋ, ಈ ಕಾಲದ ಉದ್ದಕ್ಕೂ ಎಲ್ಲ ಮರ್ತ್ಯರೂಪಗಳಲ್ಲಿ ಹುಟ್ಟಬೇಕಾಗಿದೆಯೋ, ಬಾಳಿನ ಒಂದು ದಣಿವಿನ ಹಾದಿಯಿಂದ ಮತ್ತೊಂದಕ್ಕೆ ಹೋಗಬೇಕಾಗಿದೆಯೋ ಅಂಥದಕ್ಕೆ ಆವಶ್ಯಕತೆಯ ದೈವಾಜ್ಞೆಯೊಂದಿದೆ, ದೇವತೆಗಳ ಪ್ರಾಚೀನ ಕಟ್ಟಾಜ್ಞೆ, ಯಾಕೆಂದರೆ ಬಲವಾದ ಗಾಳಿ ಅವನನ್ನು ಸಮುದ್ರಕ್ಕೆ ಎಸೆಯುತ್ತದೆ, ಮತ್ತು ಸಮುದ್ರವು ಕೊಳಕು ಭೂಮಿಗೆ ದಬ್ಬುತ್ತದೆ; ಭೂಮಿ ಅವನನ್ನು ಉರಿಯುವ ಸೂರ್ಯನೆಡೆ ನೂಕುತ್ತದೆ, ಅವನು ಮತ್ತೆ ಅವನನ್ನು ಗಾಳಿಯ ಸುಳಿಗೆ ಸಿಲುಕಿಸುತ್ತದೆ. ಒಬ್ಬ ಅವನನ್ನು ಮತ್ತೊಬ್ಬನಿಂದ ಪಡೆದು ಕೊನೆಗೆ ಎಲ್ಲರೂ ಅವನನ್ನು ತಿರಸ್ಕರಿಸುತ್ತಾರೆ. ಇಂತವರಲ್ಲಿ ಈಗ ನಾನೂ ಒಬ್ಬ, ದೇವತೆಗಳು ಹೊರದಬ್ಬಿದ ಒಬ್ಬ ಅಲೆಮಾರಿ, ಏಕೆಂದರೆ ನಾನು ಭಾವನಾಶೂನ್ಯ ಘರ್ಷಣೆಯಲ್ಲಿ ಸಿಲುಕಿಕೊಳ್ಳುತ್ತೇನೆ.

ಅವನ ಪಾಪದ ಸ್ವರೂಪವೇನೋ ನಮಗೆ ತಿಳಿಯದು; ಪ್ರಾಯಶಃ ಅದು ತುಂಬ ಯಾತನಾಮಯವೆಂದು ಭಾವಿಸಬೇಕಿಲ್ಲ. ಯಾಕೆಂದರೆ ಅವನೇ ಹೇಳುತ್ತಾನೆ:

'ನನ್ನ ತುಟಿಗಳಿಂದ ನುಂಗಿಬಿಡುವ ಪಾಪಕೃತ್ಯಗಳನ್ನು ಮಾಡಹುದೆಂದು ಸಾವಿನ ನಿಷ್ಕರುಣಿ ದಿನವು ನನ್ನನ್ನು ಕೊನೆಗೊಳಿಸದಿರುವುದೇ ನನ್ನ ಸಂಕಟ!

'ಹಸಿರುಸೊಪ್ಪುಗಳಿಂದ ಸಂಪೂರ್ಣ ದೂರವಿರು .. ..

'ಹತಭಾಗ್ಯರೇ, ಕಡು ಹತಭಾಗ್ಯರೇ, ಹುರುಳಿಗಳಿಂದ ನಿಮ್ಮ ಕೈ ದೂರವಿರಲಿ!'

ಹೀಗಾಗಿ ಪ್ರಾಯಶಃ ಅವನು ಹಸಿರು ಸೊಪ್ಪನ್ನು ತಿನ್ನುವುದು ಹಾಗೂ ಹುರುಳಿಯನ್ನು ಕುರುಕುವುದಕ್ಕಿಂತ ಹೆಚ್ಚಿನ ಕೆಟ್ಟುದೇನನ್ನೂ ಮಾಡಿರಲಾರ.

ಪ್ಲೇಟೋ ತನ್ನ ಅತ್ಯಂತ ಪ್ರಸಿದ್ಧ ಭಾಗದಲ್ಲಿ ಈ ಬದುಕನ್ನು ಒಂದು ಗುಹೆಗೆ ಹೋಲಿಸುತ್ತಾನೆ, ಅದರಲ್ಲಿ ಮೇಲಿನ ಉಜ್ವಲ ಜಗತ್ತಿನಲ್ಲಿನ ವಾಸ್ತವಗಳ ನೆರಳುಗಳು ಮಾತ್ರ ಕಾಣುತ್ತವೆ ಎಂಬುದನ್ನು ಎಂಪೆಡೊಕ್ಲೀಸ್ ಆಗಲೇ ನಿರೀಕ್ಷಿಸಿದ್ದ; ಅದರ ಮೂಲವು ಆರ್ಫಿಕ್ ಬೋಧನೆಯಲ್ಲಿದೆ.

ಕೆಲವರು – ಅನೇಕ ಅವತಾರಗಳ ಮೂಲಕ ಪಾಪದೂರರಾದವರೆಂದು ಭಾವಿಸಲಾದವರು – ಅಂತಿಮವಾಗಿ ದೇವತೆಗಳ ಸಾಹಚರ್ಯದಲ್ಲಿ ಚಿರತನ ಆನಂದವನ್ನು ಗಳಿಸುತ್ತಾರೆ.

ಆದರೆ ಕೊನೆಗೂ ಅವರು[೩೪] ಮರ್ತ್ಯ ಮಾನವರ ನಡುವೆ ಪ್ರವಾದಿಗಳಂತೆ, ಹಾಡು ಬರೆಯುವವರಂತೆ, ವೈದ್ಯರಂತೆ ಹಾಗೂ ರಾಜಕುಮಾರರಂತೆ ಗೋಚರಿಸುತ್ತಾರೆ; ಆನಂತರ ಅವರು ಗೌರವಾಧಿಕ್ಯದಿಂದ ಇತರ ದೇವತೆಗಳ ಅಗ್ಗಿಷ್ಟಿಕೆ ಹಾಗೂ ಊಟದ ಮೇಜುಗಳನ್ನು ಹಂಚಿಕೊಳ್ಳುವ ಹಾಗೂ ಮಾನವ

ಯಾತನೆಗಳಿಂದ ದೂರವಾಗಿ ಯಾತನೆಗೊಳಗಾಗದ ಹಾಗಿರುವ ದೇವತೆಗಳಾಗಿ ಮೇಲೇಳುತ್ತಾರೆ.

ಇವೆಲ್ಲದರಲ್ಲಿ ಆರ್ಫಿಕ್ ಮತ್ತು ಪೈಥಾಗೊರಿಯನ್ ಸಿದ್ಧಾಂತಗಳ ಬೋಧನೆಗಳಲ್ಲಿಲ್ಲದಿದ್ದುದಕ್ಕಿಂತ ಹೆಚ್ಚಿನದೇನೂ ಕಾಣಿಸುವುದಿಲ್ಲ.

ಎಂಪೆಡೊಕ್ಲೀಸ್‌ನ ಸ್ವಂತಿಕೆಯಿರುವುದು, ವಿಜ್ಞಾನವಲ್ಲದೆ, ನಾಲ್ಕು ಮೂಲವಸ್ತುಗಳ ಸಿದ್ಧಾಂತದಲ್ಲಿ ಮತ್ತು ಬದಲಾವಣೆಯನ್ನು ವಿವರಿಸಲು ಪ್ರೀತಿ ಮತ್ತು ಘರ್ಷಣೆಯ ತತ್ವಗಳನ್ನು ಬಳಸಿಕೊಂಡದ್ದರಲ್ಲಿ.

ಅವನು ಏಕದೇವೋಪಾಸನೆಯನ್ನು ಅಲ್ಲಗಳೆದ, ಪ್ರಕೃತಿಯು ಉದ್ದೇಶಕ್ಕಿಂತಲೇ ಆಕಸ್ಮಿಕತೆ ಮತ್ತು ಆವಶ್ಯಕತೆಗಳಿಂದ ಕ್ರಮಬದ್ಧಗೊಳ್ಳುವುದೆಂದು ಭಾವಿಸಿದ. ಈ ಅಂಶಗಳಿಂದಾಗಿ ಅವನ ತತ್ವಜ್ಞಾನವು ಪಾರ್ಮನೈಡೀಸ್, ಪ್ಲೇಟೋ ಮತ್ತು ಅರಿಸ್ಟಾಟಲ್‌ಗಳವರದಕ್ಕಿಂತ ಹೆಚ್ಚು ವೈಜ್ಞಾನಿಕವಾಯಿತು. ಇತರ ಅಂಶಗಳಲ್ಲಿ ಅವನು ಸಮಕಾಲೀನ ಮೂಢಶ್ರದ್ಧೆಗಳನ್ನು ಹೊಂದಿದ್ದವನು, ಆದರೆ ಅವನು ಇದರಲ್ಲಿ ಅವನ ನಂತರದ ವಿಜ್ಞಾನಿಗಳಿಗಿಂತ ಅಧ್ವಾನದವನಾಗಿರಲಿಲ್ಲ ಎಂಬುದೂ ನಿಜ.

೦

೩೪. 'ಅವರು' ಯಾರೆಂಬುದು ತಿಳಿಯುವುದಿಲ್ಲ, ಆದರೆ ತಮ್ಮ ಪರಿಶುದ್ಧತೆಯನ್ನು ಕಾಪಾಡಿಕೊಂಡವರು ಎಂದು ಊಹಿಸಬಹುದು.

೭
ಸಂಸ್ಕೃತಿಯ ಹಿನ್ನೆಲೆಯಲ್ಲಿ ಅಥೆನ್ಸ್

ಎರಡು ಪರ್ಷಿಯನ್ ಯುದ್ಧಗಳ ಕಾಲದಲ್ಲಿ (ಕ್ರಿಪೂ ೪೯೦ ಮತ್ತು ಕ್ರಿಪೂ ೪೮೦-೭೯) ಅಥೆನ್ಸ್‌ನ ಹಿರಿತನ ಆರಂಭವಾಗುತ್ತದೆ. ಅದಕ್ಕೂ ಮುಂಚೆ ಅಯೋನಿಯ ಮತ್ತು ಮ್ಯಾಗ್ನಾ ಗ್ರೇಸಿಯಗಳು (ದಕ್ಷಿಣ ಇಟಲಿ ಮತ್ತು ಸಿಸಿಲಿಗಳಲ್ಲಿನ ಗ್ರೀಕ್ ನಗರಗಳು) ಹಿರಿಯ ವ್ಯಕ್ತಿಗಳನ್ನು ಸೃಷ್ಟಿಸಿದ್ದವು. ಅಥೆನ್ಸ್‌ನ ನಾಯಕತ್ವದಲ್ಲಿ ಪರ್ಷಿಯನ್ ದೊರೆ ಡೇರಿಯಸ್‌ನನ್ನು ಮ್ಯಾರಥಾನ್‌ನಲ್ಲಿ ಅಥೆನ್ಸ್ ಗೆದ್ದುದು, ಮತ್ತು ಅವನ ಮಗ ಮತ್ತು ಉತ್ತರಾಧಿಕಾರಿ ಕ್ಸರ್‌ಕ್ಸಸ್‌ನ ನೌಕಾದಳವನ್ನು ಸೋಲಿಸಿದುದು (ಕ್ರಿಪೂ ೪೮೦) ಅಥೆನ್ಸ್‌ಗೆ ಹೆಚ್ಚಿನ ಘನತೆಯನ್ನುಂಟುಮಾಡಿದುವು. ದ್ವೀಪಗಳಲ್ಲಿನ ಹಾಗೂ ಏಷ್ಯಾ ಮೈನರ್‌ನ ಮುಖ್ಯ ಭೂಭಾಗಗಳಲ್ಲಿನ ಅಯೋನಿಯನ್‌ರು ಪರ್ಷಿಯದ ವಿರುದ್ಧ ತಿರುಗಿಬಿದ್ದಿದ್ದರು; ಪರ್ಷಿಯನ್ನರನ್ನು ಗ್ರೀಸ್‌ನ ಮುಖ್ಯಭಾಗದಿಂದ ಹೊಡೆದೋಡಿಸಿದ್ದು ಅವರ ಬಿಡುಗಡೆಯ ಮೇಲೆ ಪ್ರಭಾವ ಬೀರಿತು. ಈ ಪ್ರಕ್ರಿಯೆಯಲ್ಲಿ ತಮ್ಮ ಪ್ರದೇಶದ ಬಗ್ಗೆಯಷ್ಟೇ ಕಳಕಳಿ ಹೊಂದಿದ್ದ ಸ್ಪಾರ್ಟನ್ನರು ಭಾಗವಹಿಸಲಿಲ್ಲ. ಹೀಗಾಗಿ ಪರ್ಷಿಯದ ವಿರುದ್ಧದ ಮೈತ್ರಿಯಲ್ಲಿ ಅಥೆನ್ಸ್ ಪ್ರಧಾನ ಭಾಗಿಯೆನಿಸಿತು. ಈ ಮೈತ್ರಿಯ ರಚನೆಯಿಂದಾಗಿ, ಪ್ರತಿ ಭಾಗಿಯೂ ನಿರ್ದಿಷ್ಟ ಸಂಖ್ಯೆಯ ಹಡಗುಗಳನ್ನೋ ಅವುಗಳ ಬೆಲೆಯನ್ನೋ ತೆರಬೇಕಾಗಿತ್ತು. ಬಹುತೇಕ ಭಾಗಿಗಳು ಎರಡನೆಯದನ್ನೇ ಆಯ್ದುಕೊಂಡರು, ಇದರಿಂದಾಗಿ ಅಥೆನ್ಸ್ ಇತರ ಭಾಗಿಗಳಿಗಿಂತಲೂ ನೌಕಾದಳದಲ್ಲಿ ಹೆಚ್ಚಿನ ಮೇಲುಗೈ ಪಡೆಯುವಂತಾಯಿತು; ಕ್ರಮೇಣ ಮೈತ್ರಿಯು ಅಥೆನ್ಸ್ ಚಕ್ರಾಧಿಪತ್ಯವಾಗಿ ಮಾರ್ಪಾಟು ಹೊಂದಲು ಕಾರಣವಾಯಿತು. ಅಥೆನ್ಸ್ ಶ್ರೀಮಂತವಾಯಿತು, ಪೆರಿಕ್ಲೀಸ್‌ನ ವಿವೇಕಯುತ ನಾಯಕತ್ವದಿಂದಾಗಿ ಏಳಿಗೆ ಹೊಂದುವಂತಾಯಿತು. ಅವನು ಪ್ರಜೆಗಳ ಆಯ್ಕೆಗನುಗುಣವಾಗಿ ಸುಮಾರು ಮೂವತ್ತು ವರ್ಷಗಳ ಕಾಲ, ಕ್ರಿಪೂ ೪೩೦ ರಲ್ಲಿ ಸೋಲುವವರೆಗೂ, ಆಡಳಿತ ನಡೆಸಿದ.

ಅಥೆನ್ಸ್‌ನ ಇತಿಹಾಸದಲ್ಲಿ ಪೆರಿಕ್ಲೀಸ್‌ನ ಕಾಲವು ಅತ್ಯಂತ ಸುಖಕರವೂ ವೈಭವಯುತವೂ ಆದ ಕಾಲ. ಪರ್ಷಿಯನ್ ಯುದ್ಧಗಳ ಹೋರಾಡಿದ್ದ ಈಸ್ಕಿಲಸ್ ಗ್ರೀಕ್ ದುರಂತನಾಟಕಕ್ಕೆ ನಾಂದಿ ಹಾಡಿದ; ಅವನ ದುರಂತ ನಾಟಕಗಳಲ್ಲೊಂದಾದ 'ಪರ್ಸೇ' ಹೋಮರ್ ಸಂಪ್ರದಾಯದ ಸಾಹಿತ್ಯವಸ್ತುಗಳ ಬದಲಾಗಿ ಕ್ಸರ್‌ಕ್ಸಸ್‌ನ ಸೋಲನ್ನೇ ವಸ್ತುವಾಗಿ ಮಾಡಿಕೊಂಡಿತು. ಅವನನ್ನು ತಕ್ಷಣವೇ ಸಾಫೋಕ್ಲೀಸ್ ಅನುಸರಿಸಿದ, ಸಾಫೋಕ್ಲೀಸ್‌ನನ್ನು ಯೂರಿಪಿಡೀಸ್ ಅನುಸರಿಸಿದ. ಪೆರಿಕ್ಲೀಸ್‌ನ ಸೋಲು ಹಾಗೂ ಸಾವಿನನಂತರ ನಡೆದ ಪೆಲೋಪೊನ್ನೀಸಿಯ ಯುದ್ಧದ ಕರಾಳ ದಿನಗಳವರೆಗೆ ಅವರಿಬ್ಬರೂ ಮುಂದುವರಿದರು. ಆನಂತರದ ಅವಧಿಯ ಸಂಶಯಪ್ರವೃತ್ತಿಯನ್ನು ಯೂರಿಪಿಡೀಸ್ ಪ್ರತಿಫಲಿಸುತ್ತಾನೆ. ಅವನ ಸಮಕಾಲೀನನಾದ ವೈನೋದಿಕಗಳ ಕರ್ತೃ ಅರಿಸ್ಟೋಫೆನೀಸ್ ಎಲ್ಲ ಇಸಂಗಳನ್ನೂ ಸದೃಢವೂ ಮಿತವಾದುದೂ ಆದ ವ್ಯವಹಾರಜ್ಞಾನದ ನೆಲೆಯಲ್ಲಿ ಗೇಲಿ ಮಾಡುತ್ತಾನೆ; ಅದರಲ್ಲಿಂತೂ, ಸಾಫೋಕ್ಲೀಸ್‌ನನ್ನು ಸ್ಯೂಸ್‌ನ ಅಸ್ತಿತ್ವವನ್ನು ಅಲ್ಲಗಳೆಯುವವನಂತೆಯೂ ಅಪರಿಶುದ್ಧವಾದ ನಕಲಿ ವೈಜ್ಞಾನಿಕತೆಯ ಕೆಸರಲ್ಲಿ ಒದ್ದಾಡುವವನಂತೆಯೂ ಚಿತ್ರಿಸುತ್ತಾನೆ.

ಕ್ಸರ್‌ಕ್ಸಸ್ ಅಥೆನ್ಸ್ ಅನ್ನು ವಶಪಡಿಸಿಕೊಂಡಿತ್ತು; ಆಕ್ರೋಪೋಲಿಸ್‌ನ ದೇವಾಲಯಗಳನ್ನು ಬೆಂಕಿಯು ನಾಶಪಡಿಸಿತ್ತು. ಅವುಗಳ ಪುನಾರಚನೆಗೆ ಪೆರಿಕ್ಲೀಸ್ ತನ್ನನ್ನು ಪೂರ್ತಿ ತೊಡಗಿಸಿಕೊಂಡ. ಪಾರ್ಥೆನಾನ್ ಮತ್ತಿತರ ದೇವಾಲಯಗಳು ನಮ್ಮ ಮೇಲೆ ಪ್ರಭಾವ ಬೀರಲು ಈಗಲೂ ಉಳಿದಿವೆ. ಅವುಗಳನ್ನು ನಿರ್ಮಿಸಿದವನು ಅವನೇ. ದೇವರುಗಳು ಮತ್ತು ದೇವತೆಗಳ ಬೃಹತ್ ಮೂರ್ತಿಗಳನ್ನು ನಿರ್ಮಿಸುವುದಕ್ಕೆಂದು ಸರ್ಕಾರವೇ ಫೀಯಿಡಿಯಾಸ್ ಎಂಬ ಶಿಲ್ಪಿಯನ್ನು ನೇಮಿಸಿತು. ಈ ಕಾಲದ ಕೊನೆಯಲ್ಲಿ ಅಥೆನ್ಸ್ ಗ್ರೀಕ್ ಜಗತ್ತಿನ ಅತ್ಯಂತ ಸುಂದರವೂ ಅದ್ಭುತವೂ ಆದ ನಗರವಾಗಿತ್ತು.

ಇತಿಹಾಸದ ಪಿತಾಮಹನೆನಿಸಿದ ಹೆರಾಡೊಟಸ್ ಏಷ್ಯಾ ಮೈನರ್‌ನ ಹ್ಯಾಲಿಕಾರ್ನಸಸ್‌ನ ಮೂಲದವನಾದರೂ, ಅವನು ವಾಸಿಸುತ್ತಿದ್ದುದು ಅಥೆನ್ಸ್‌ನಲ್ಲಿ. ಅಥೆನ್ಸ್ ಸರ್ಕಾರವು ಅವನಿಗೆ ಪ್ರೋತ್ಸಾಹವಿತ್ತಿತು. ಅಥೆನ್ಸ್ ದೃಷ್ಟಿಕೋನದಿಂದ ಅವನು ಪರ್ಷಿಯನ್ ಯುದ್ಧಗಳ ಇತಿಹಾಸವನ್ನು ರಚಿಸಿದ.

ಪೆರಿಕ್ಲೀಸ್‌ನ ಕಾಲದಲ್ಲಿ ಅಥೆನ್ಸ್ ಮಾಡಿದ ಸಾಧನೆಗಳು ಇಡೀ ಇತಿಹಾಸದಲ್ಲಿ ಅತ್ಯಂತ ಆಶ್ಚರ್ಯಕರವಾದುವು. ಆ ಕಾಲದವರೆಗೂ ಅಥೆನ್ಸ್ ಇತರ ಗ್ರೀಕ್ ನಗರಗಳಿಗೆ ಹಿಂದೆ ಬಿದ್ದಿತ್ತು; ಕಲೆಯಲ್ಲಾಗಲೀ ಸಾಹಿತ್ಯದಲ್ಲಾಗಲೀ ಹಿರಿಯರಾರನ್ನೂ ಸೃಷ್ಟಿಸಿರಲಿಲ್ಲ (ಸಾಲೋನ್ ಹೊರತಾಗಿ, ಅವನು ಮೂಲತಃ ಒಬ್ಬ ಕಾನೂನು ರಚಯಿತ). ಇದ್ದಕ್ಕಿದ್ದಂತೆಯೇ, ವಿಜಯದಿಂದಲೂ ಶ್ರೀಮಂತಿಕೆಯಿಂದಲೂ ಪುನಾರಚನೆಯ

ಆವಶ್ಯಕತೆಯಿಂದಲೂ ಉತ್ತೇಜನಗೊಂಡು, ವಾಸ್ತುಶಿಲ್ಪಿಗಳೂ ನಾಟಕಕಾರರೂ ಆಧುನಿಕ ಕಾಲದವರೆಗಿನ ಹಾಗೂ ಮುಂದಿನ ಕಾಲದಲ್ಲಿಯೂ ಮೀರಿಸಲಾಗದವೆನ್ನಿಸಿದ ಕೃತಿಗಳನ್ನು ರಚಿಸಿದರು. ಕ್ರಿಪೂ ಸುಮಾರು ೪೩೦ ರ ಹೊತ್ತಿಗೆ, ಗುಲಾಮರನ್ನೂ ಒಳಗೊಂಡಂತೆ ಅಥೆನ್ಸ್‌ನಲ್ಲಿದ್ದುದು ಸುಮಾರು ೨,೩೦,೦೦೦ ಜನರಷ್ಟೆ, ಆಟ್ಟಿಕದ ಹಳ್ಳಿಗಳಲ್ಲಿ ಬಹುಶಃ ಇನ್ನೂ ಕಡಿಮೆ ಜನರು ವಾಸಿಸುತ್ತಿದ್ದರು. ಜನಸಂಖ್ಯೆಯ ಈ ಮಿತಿಯನ್ನು ಗಮನಿಸಿದರೆ ಅದರ ಸಾಧನೆ ಹೆಚ್ಚಿನ ಆಶ್ಚರ್ಯವನ್ನುಂಟುಮಾಡುವಂತಹುದು. ಹಿಂದೆಂದೂ ಹಾಗೂ ಆ ಮುಂದೆಯೂ ಅಷ್ಟೇ ಜನಸಂಖ್ಯೆಯಿದ್ದ ಯಾವುದೇ ಪ್ರದೇಶದಲ್ಲಿಯೂ ಈ ಪರಿಯ ಸಾಧನೆಯ ಉತ್ತುಂಗವನ್ನು ಕಾಣಲಾರೆವು.

ತತ್ವಜ್ಞಾನದ ವಲಯದಲ್ಲಿ ಅಥೆನ್ಸ್ ಮಹತ್ವದ ಇಬ್ಬರನ್ನು ಮಾತ್ರ ಕೊಡುಗೆಯಾಗಿ ಕೊಟ್ಟಿದೆ; ಸಾಕ್ರಟೀಸ್ ಮತ್ತು ಪ್ಲೇಟೋ. ಪ್ಲೇಟೋ ಸ್ವಲ್ಪ ಈಚಿನವನು, ಆದರೆ ಸಾಕ್ರಟೀಸ್ ತನ್ನ ಯೌವನ ಮತ್ತು ವಾರ್ಧಕ್ಯಪೂರ್ವವನ್ನು ಪೆರಿಕ್ಲೀಸ್‌ನ ಆಡಳಿತದಲ್ಲಿ ಕಳೆದವನು. ಅಥೆನ್ಸ್ ನಾಗರಿಕರಿಗೆ ತತ್ವಜ್ಞಾನದಲ್ಲಿ ಸಾಕಷ್ಟು ಆಸಕ್ತಿಯಿತ್ತು, ಇತರ ನಗರಗಳ ಬೋಧಕರ ಮಾತುಗಳನ್ನು ಕೇಳುತ್ತಿದ್ದರು. ಸೂಫಿಸ್ಟರ ಬಗ್ಗೆ ವಾದಕಲೆಯಲ್ಲಿ ಆಸಕ್ತಿಯಿದ್ದ ಯುವಕರಿಗೆ ವಿಶೇಷ ಆಕರ್ಷಣೆ. 'ಪ್ರೊಟಾಗೊರಾಸ್'ನಲ್ಲಿ ಪ್ಲೇಟೋನ ಸಾಕ್ರಟೀಸ್ ಇತರೆಡೆಯಿಂದ ಬಂದ ಪ್ರಸಿದ್ಧರ ಮಾತುಗಳಿಗೆ ಜೋತುಬೀಳುತ್ತಿದ್ದ ಆಪ್ತ ಶಿಷ್ಯರ ಬಗ್ಗೆ ವಿಡಂಬನಾತ್ಮಕವಾಗಿ ವರ್ಣಿಸುತ್ತಾನೆ. ಮುಂದೆ ನೋಡುವಂತೆ, ಪೆರಿಕ್ಲೀಸ್ ಅನಾಕ್ಸಾಗೊರಾಸ್‌ನನ್ನು ಕರೆಸಿಕೊಂಡ, ಸೃಷ್ಟಿಯಲ್ಲಿ ಮನಸ್ಸಿನ ಸರ್ವೋತ್ಕೃಷ್ಟತೆಯ ಬಗ್ಗೆ ಸಾಕ್ರಟೀಸ್ ಅವನಿಂದ ತಿಳಿವಳಿಕೆಯನ್ನು ಪಡೆದನಂತೆ.

ಬಹುತೇಕ ಸಂವಾದಗಳು ಪೆರಿಕ್ಲೀಸ್‌ನ ಕಾಲದಲ್ಲಿ ನಡೆದಿರುವಂತೆ ಪ್ಲೇಟೋ ಚಿತ್ರಿಸಿದ್ದಾನೆ; ಅವುಗಳಲ್ಲಿ ಶ್ರೀಮಂತರ ಜೀವನಕ್ರಮದ ಬಗ್ಗೆ ಸಮ್ಮತವೆನಿಸುವ ಚಿತ್ರವಿದೆ. ಪ್ಲೇಟೋ ಅಥೆನ್ಸ್‌ನ ಶ್ರೀಮಂತ ಕುಟುಂಬಕ್ಕೆ ಸೇರಿದವನು; ಯುದ್ಧಪೂರ್ವದಲ್ಲಿ ಹಾಗೂ ಪ್ರಜಾಪ್ರಭುತ್ವಾತ್ಮಕತೆಯು ಮೇಲುವರ್ಗಗಳವರ ಶ್ರೀಮಂತಿಕೆ ಮತ್ತು ಸುರಕ್ಷೆಯನ್ನು ಹಾಳುಗೆಡಹುವ ಮುಂಚಿನ ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದವನು. ಕೆಲಸ ಮಾಡಬೇಕಾದ ತುರ್ತು ಇರದ ಯುವಕರು ತಮ್ಮ ವಿರಾಮದ ಬಹು ವೇಳೆಯನ್ನು ವಿಜ್ಞಾನ, ಗಣಿತ ಮತ್ತು ತತ್ವಜ್ಞಾನದ ಅಧ್ಯಯನದಲ್ಲಿ ಕಳೆಯುತ್ತಿದ್ದರು. ಅವರಿಗೆ ಹೋಮರ್ ಬಹುಪಾಲು ಕಂಠಸ್ಥನಾಗಿದ್ದ; ಅವರು ವೃತ್ತಿಪರ ಪದ್ಯಪಾಠಕರ ಗುಣಾವಗುಣಗಳ ಬಗ್ಗೆ ವಿಮರ್ಶಾತ್ಮಕವಾಗಿ ಮಾತನಾಡುತ್ತಿದ್ದವರು. ಕಾಲ ಕಳೆದ ಮೇಲೆ ನಿಗಮನ ತರ್ಕಕಲೆಯನ್ನು ಕಂಡುಕೊಳ್ಳಲಾಯಿತು, ಇದು, ಸಮಂಜಸವೋ ಅಲ್ಲವೋ, ಜ್ಞಾನದ ಎಲ್ಲ ಕ್ಷೇತ್ರಗಳ ಬಗೆಗಿನ ಹೊಸ ಸಿದ್ಧಾಂತಮಂಡನೆಯ ಔತ್ಸುಕ್ಯಕ್ಕೆ ಕಾರಣವಾಯಿತು. ಆ ಕಾಲದಲ್ಲಿ,

ಇತರೇ ಕೆಲವು ಕಾಲಗಳಲ್ಲಿಯಂತೆ, ಪ್ರತಿಭಾವಂತಿಕೆ ಹಾಗೂ ಸುಖಗಳೆರಡೂ ಮತ್ತು ಬುದ್ಧಿಶಕ್ತಿಯ ಮೂಲಕ ಸುಖ ಹೊಂದುವ ಸಾಧ್ಯತೆಯುಂಟಾದುವು.

ಈ ಸ್ವರ್ಣಯುಗದ ನಿರ್ಮಾಣಕ್ಕೆ ಕಾರಣವಾದ ಶಕ್ತಿ ಸಮತೋಲನವು ಅಸ್ಥಿರವಾಗಿತ್ತು. ಅದಕ್ಕೆ ಒಳಗೆ ಮತ್ತು ಹೊರಗೆ ಅಪಾಯಗಳಿದ್ದವು – ಒಳಗೆ ಪ್ರಜಾಪ್ರಭುತ್ವದ್ದು, ಸ್ಪಾರ್ಟಾದಿಂದ ಹೊರಗಿನದು. ಪೆರಿಕ್ಲೀಸ್ ಬಳಿಕ ಏನು ನಡೆಯಿತೆಂಬುದನ್ನು ಅರ್ಥಮಾಡಿಕೊಳ್ಳಲು ಆಟ್ಟಿಕದ ಪ್ರಾಚೀನ ಇತಿಹಾಸವನ್ನು ಸ್ಥೂಲವಾಗಿ ತಿಳಿದುಕೊಳ್ಳಬೇಕು.

ಇತಿಹಾಸಕಾಲದ ಆರಂಭದಲ್ಲಿ ಆಟ್ಟಿಕವು ಸ್ವಯಂಪೂರ್ಣವಾದ ಒಂದು ಕೃಷಿಪ್ರದೇಶ: ಅಥೆನ್ಸ್ ಅದರ ರಾಜಧಾನಿ, ಅದೂ ದೊಡ್ಡದೇನಲ್ಲ, ಆದರೆ ಅದರಲ್ಲಿ ಕುಶಲಕರ್ಮಿಗಳು ಮತ್ತು ಕೌಶಲವಂತರಾದ ಕೆಲಸಗಾರರ ಸಂಖ್ಯೆ ಬೆಳೆಯುತ್ತಿತ್ತು. ಅವರಿಗೆ ತಮ್ಮ ಉತ್ಪನ್ನಗಳನ್ನು ಹೊರಗೆ ಮಾರುವ ಹಂಬಲ. ಕ್ರಮೇಣ, ಆಹಾರಧಾನ್ಯಗಳನ್ನು ಬೆಳೆಯುವುದಕ್ಕಿಂತ, ಅದನ್ನು ಕಪ್ಪು ಸಮುದ್ರದ ಕರಾವಳಿ ಪ್ರದೇಶದಿಂದ ಆಮದು ಮಾಡಿಕೊಂಡು, ಅದರ ಬದಲು ದ್ರಾಕ್ಷಿ ಹಾಗೂ ಆಲಿವ್ ಬೇಸಾಯವನ್ನು ಕೈಗೊಂಡರೆ ಹೆಚ್ಚು ಲಾಭದಾಯಕವೆಂದವರು ಕಂಡುಕೊಂಡರು. ಆಹಾರಧಾನ್ಯಗಳನ್ನು ಬೆಳೆಯುವುದಕ್ಕಿಂತ ಈ ಬಗೆಯ ಬೇಸಾಯಕ್ಕೆ ಹೆಚ್ಚಿನ ಬಂಡವಾಳ ಬೇಕಾಗಿತ್ತು; ಇದರಿಂದಾಗಿ ಸಣ್ಣ ಹಿಡುವಳಿದಾರರು ಸಾಲಕ್ಕೆ ಸಿಲುಕಿಕೊಂಡರು. ಇತರ ಗ್ರೀಕ್ ರಾಜ್ಯಗಳಂತೆಯೇ ಆಟ್ಟಿಕದಲ್ಲಿಯೂ ಹೋಮರ್‌ನ ಕಾಲದಲ್ಲಿ ರಾಜತ್ವವಿತ್ತು, ಆದರೆ ರಾಜನು ಯಾವುದೇ ರಾಜಕೀಯ ಅಧಿಕಾರವಿಲ್ಲದೆ ಕೇವಲ ಧಾರ್ಮಿಕ ನೌಕರನಾಗಿದ್ದ. ಹೀಗಾಗಿ ಸರ್ಕಾರವು ಶ್ರೀಮಂತವರ್ಗದ ಕೈಸೇರಿತು, ಅವರು ಹಳ್ಳಿಗಾಡಿನ ಬೇಸಾಯಗಾರರನ್ನೂ ನಗರದ ಕುಶಲಕರ್ಮಿಗಳನ್ನೂ ಹತ್ತಿಕ್ಕಿದರು. ಕ್ರಿಪೂ ಆರನೆಯ ಶತಮಾನದ ಆರಂಭದಲ್ಲಿ ಸಾಲೋನ್‌ನಿಂದ ಒಂದು ಬಗೆಯ ಪ್ರಜಾಪ್ರಭುತ್ವದ ಕಡೆಗೆ ಸಂಧಾನವಾಯಿತು; ಅವನ ಬಹುಪಾಲು ಕೆಲಸವು ಆ ಮುಂದಿನ ಪೀಯಿಸಿಸ್ಟ್ರಾಟಸ್ ಮತ್ತವನ ಮಕ್ಕಳ ನಿರಂಕುಶಾಧಿಕಾರದಲ್ಲಿಯೂ ಉಳಿದು ಬಂತು. ಈ ಕಾಲವು ಕೊನೆಗೊಂಡಾಗ, ನಿರಂಕುಶಾಧಿಕಾರದ ವಿರೋಧಿಗಳಾದ ಶ್ರೀಮಂತವರ್ಗವು ಪ್ರಜಾಪ್ರಭುತ್ವದ ಕಡೆಗೆ ಒಲವು ತೋರಿದರು. ಪೆರಿಕ್ಲೀಸ್‌ನ ಪತನವದವರೆಗೂ ಪ್ರಜಾಪ್ರಭುತ್ವಾತ್ಮಕ ಪ್ರಕ್ರಿಯೆಗಳು ಶ್ರೀಮಂತವರ್ಗಕ್ಕೆ ಅಧಿಕಾರ ನೀಡಿದುವು, ಹತ್ತೊಂಬತ್ತನೆಯ ಶತಮಾನದಲ್ಲಿ ಇಂಗ್ಲಂಡ್‌ನಲ್ಲಿ ಆದಂತೆ. ಆದರೆ ಅವನ ಜೀವಿತಾವಧಿಯ ಕೊನೆಯಲ್ಲಿ ಅಥೆನ್ಸ್‌ನ ಪ್ರಜಾಪ್ರಭುತ್ವಾತ್ಮಕ ನಾಯಕರು ಹೆಚ್ಚಿನ ಅಧಿಕಾರಕ್ಕೆ ಬೇಡಿಕೆಯಿಡಲು ಆರಂಭಿಸಿದರು. ಅದೆ ಹೊತ್ತಿನಲ್ಲಿ, ಅಥೆನ್ಸ್‌ನ ಆರ್ಥಿಕ ಸಮೃದ್ಧಿಯೊಡನೆ ಸೇರಿಹೋಗಿದ್ದ ಅವನ ಸಾಮ್ರಾಜ್ಯಶಾಹಿ ಧೋರಣೆಯು ಸ್ಪಾರ್ಟಾದೊಡನೆ ಸಂಘರ್ಷವನ್ನು ಹೆಚ್ಚಿಸಿತು.

ಕೊನೆಗೆ ಇದು ಪೆಲೋಪಿನೇಸಿಯ ಯುದ್ಧದಲ್ಲಿ (ಕ್ರಿಪೂ ೪೩೧–೪೦೪) ಪರ್ಯವಸಾನವಾಗಿ, ಅಥೆನ್ಸ್ ಸಂಪೂರ್ಣವಾಗಿ ಸೋತುಹೋಯಿತು.

ರಾಜಕೀಯ ಕುಸಿತವಾದರೂ ಅಥೆನ್ಸ್‌ನ ಘನತೆ ಉಳಿದು ಬಂತು, ಸರಿಸುಮಾರು ಒಂದು ಸಾವಿರ ವರ್ಷಗಳ ಕಾಲದುದ್ದಕ್ಕೂ ಅಲ್ಲಿ ತತ್ವಜ್ಞಾನವೇ ಕೇಂದ್ರದಲ್ಲಿದ್ದುದು. ಅಲೆಕ್ಸಾಂಡ್ರಿಯ ಅಥೆನ್ಸ್‌ನ ಗಣಿತ ಹಾಗೂ ವಿಜ್ಞಾನಗಳ ಮೇಲೆ ಮಂಕು ಕವಿಸಿತು, ಆದರೆ ಪ್ಲೇಟೋ ಮತ್ತು ಅರಿಸ್ಟಾಟಲ್ ಅಥೆನ್ಸ್ ಅನ್ನು ತತ್ವಜ್ಞಾನಕ್ಷೇತ್ರದಲ್ಲಿ ಶ್ರೇಷ್ಠವಾಗಿಸಿದ್ದರು. ಮಿಕ್ಕ ಶಾಲೆಗಳು ನಾಶವಾದರೂ ಪ್ಲೇಟೋ ಬೋಧಿಸುತ್ತಿದ್ದ ಅಕಾಡೆಮಿಯು ಉಳಿಯಿತು; ಮತ್ತು ಕ್ರೈಸ್ತೇತರ ಆಚಾರಗಳ ಒಂದು ದ್ವೀಪದ ಹಾಗೆ, ರೋಮ್ ಚಕ್ರಾಧಿಪತ್ಯವನ್ನು ಕ್ರೈಸ್ತಮತಕ್ಕೆ ಮತಾಂತರಗೊಳಿಸಿದ ಮೇಲೂ, ಎರಡು ಶತಮಾನಗಳ ಕಾಲ ಸ್ಥಿರವಾಗಿತ್ತು. ಅಂತಿಮವಾಗಿ, ಕ್ರಿಪೂ ೫೨೯ ರಲ್ಲಿ ಅದು ಜಸ್ಟಿನಿಯನ್‌ನ ಮತಧರ್ಮಾಂಧತೆಯ ಕಾರಣದಿಂದ ಮುಚ್ಚಿಹೋಯಿತು, ಯೂರೋಪ್‌ನ ಮೇಲೆ ಕತ್ತಲೆ ಇಳಿದುಬಂತು.

❍

೮
ಅನಾಕ್ಸಾಗೊರಾಸ್

ತತ್ವಜ್ಞಾನಿ ಅನಾಕ್ಸಾಗೊರಾಸ್ – ಪೈಥಾಗೊರಾಸ್, ಹೆರಾಕ್ಲಿಟಸ್, ಅಥವಾ ಪಾರ್ಮನೈಡೀಸ್‌ರ – ಸಮಕ್ಕೆ ಬರಲಾರನಾದರೂ, ಅವನಿಗೆ ತಕ್ಕಮಟ್ಟಿಗಿನ ಐತಿಹಾಸಿಕ ಮಹತ್ವವಿದೆ. ಅವನು ಅಯೋನಿಯದವನು, ಅಯೋನಿಯ ಸಂಪ್ರದಾಯದ ವೈಜ್ಞಾನಿಕ, ವೈಚಾರಿಕ ನೆಲೆಯಲ್ಲಿ ಮುಂದುವರಿದ. ಅಯೋನಿಯನ್ನರಿಗೆ ತತ್ವಜ್ಞಾನವನ್ನು ಪರಿಚಯಿಸಿದವನು ಹಾಗೂ ಭೌತಿಕ ಬದಲಾವಣೆಗಳಿಗೆ ಮನಸ್ಸೇ ಮೂಲ ಕಾರಣ ಎಂದು ಮೊಟ್ಟ ಮೊದಲಿಗೆ ಸೂಚಿಸಿದವನು ಅವನೇ.

ಅವನು ಕ್ರಿಪೂ ಸುಮಾರು ೫೦೦ ರಲ್ಲಿ ಅಯೋನಿಯದ ಕ್ಲಾಝೋಮೆನೇಯಲ್ಲಿ ಹುಟ್ಟಿದ, ಆದರೆ ತನ್ನ ಬದುಕಿನ ಮೂವತ್ತು ವರ್ಷಗಳನ್ನು, ಕ್ರಿಪೂ ೪೬೨–೪೩೨ ರ ನಡುವೆ, ಅಥೆನ್ಸ್‌ನಲ್ಲಿ ಕಳೆದ. ಪ್ರಾಯಶಃ ಅಲ್ಲಿಗೆ ಬರಲು ತನ್ನ ಸಹನಗರಜೀವಿಗಳಿಗೆ ನಾಗರಿಕತೆಯ ಒಲವು ಬೆಳೆಸಬೇಕೆಂಬ ಆಸೆಯಿದ್ದ ಪೆರಿಕ್ಲೀಸ್ ಪ್ರೇರಣೆ ನೀಡಿರಬೇಕು. ಪ್ರಾಯಶಃ ಮಿಲೆಟಸ್‌ನಿಂದ ಬಂದಿದ್ದ ಆಸ್ಪಾಸಿಯ ಅವನನ್ನು ಪೆರಿಕ್ಲೀಸ್‌ಗೆ ಪರಿಚಯಮಾಡಿಸಿದ. ತನ್ನ 'ಫೇಡ್ರಸ್'ನಲ್ಲಿ ಹೀಗೆನ್ನುತ್ತಾನೆ:

> **ವಿಜ್ಞಾನಿಯಾಗಿದ್ದ ಅನಾಕ್ಸಾಗೊರಾಸ್‌ನನ್ನು ಆಕಸ್ಮಿಕವಾಗಿ ಭೇಟಿಯಾದಂತೆ ತೋರುತ್ತದೆ, ಉನ್ನತ ವಿಷಯಗಳನ್ನು ಕುರಿತ ಅವನ ಸಿದ್ಧಾಂತದ ಬಗ್ಗೆ ಗೌರವವನ್ನು ಬೆಳೆಸಿಕೊಂಡ ಹಾಗೂ ಅನಾಕ್ಸಾಗೊರಾಸ್‌ನ ಸಂವಾದಗಳು ಮುಖ್ಯವಾಗಿ ಕುರಿತಿದ್ದ ಬುದ್ಧಿಶಕ್ತಿ ಮತ್ತು ಭ್ರಮೆಗಳ ನಿಜಸ್ವರೂಪದ ಬಗ್ಗೆ ಅರಿವನ್ನು ಹೊಂದಿದ್ದ, ಅದರಿಂದ ಅವನು ಭಾಷಣಕಲೆಯಲ್ಲಿ ಮುಂದುವರಿಯಲು ಬೇಕಾದುದನ್ನು ಗಳಿಸಿಕೊಂಡ.**

ಅನಾಕ್ಸಾಗೊರಾಸ್ ಯೂರಿಪಿಡೀಸ್‌ನ ಮೇಲೂ ತನ್ನ ಪ್ರಭಾವವನ್ನು ಬೀರಿದನೆಂದು ಹೇಳುತ್ತಾರೆ, ಆದರೆ ಇದು ಅನುಮಾನಸ್ಪದವಾದುದು.

ಬೇರೆ ಕಾಲಗಳ ಬೇರೆ ಬೇರೆ ನಗರಗಳ ನಾಗರಿಕರಂತೆಯೇ ಅಥೆನ್ಸ್ ನಾಗರಿಕರು ಕೂಡ ತಾವು ಹೊಂದಿಕೊಂಡಿದ್ದ ಮಟ್ಟಕ್ಕಿಂತ ಹೆಚ್ಚಿನ ಸಂಸ್ಕೃತಿಯನ್ನು

ಪರಿಚಯಿಸುವವರ ಬಗ್ಗೆ ಸ್ವಲ್ಪ ಮಟ್ಟಿಗಿನ ವಿರೋಧವನ್ನು ತೋರಿಸಿದರು. ಪೆರಿಕ್ಲೀಸ್‌ಗೆ ವಯಸ್ಸಾದಾಗ, ಅವನ ಎದುರಾಳಿಗಳು ಅವನ ಸ್ನೇಹಿತರನ್ನು ಟೀಕಿಸುವ ಮೂಲಕ ಅವನ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿದರು. ಅವನ ವಿಗ್ರಹಗಳ ರಚನೆಗೆ ಬಳಸಿಕೊಳ್ಳಬೇಕಾದ ಚಿನ್ನದ ಸ್ವಲ್ಪ ಭಾಗವನ್ನು ಫೀಯಿಡಿಂಯಸ್ ದುರುಪಯೋಗಪಡಿಸಿಕೊಂಡನೆಂದು ಆರೋಪಿಸಿದರು. ಮತಧರ್ಮವನ್ನು ಅನುಸರಿಸದೆ 'ಉನ್ನತ ವಿಷಯಗಳ' ಬಗೆಗಿನ ಸಿದ್ಧಾಂತಗಳನ್ನು ಬೋಧಿಸುವವರ ವಿರುದ್ಧವಾಗಿ ಅಂಥವರನ್ನು ಉಚ್ಚಾಟನೆಗೊಳಿಸುವ ಕಾನೂನನ್ನು ಅವರು ಜಾರಿಗೊಳಿಸಿದರು. ಈ ಕಾನೂನಿನ ಪ್ರಕಾರ, ಸೂರ್ಯ ನಿಗಿನಿಗಿ ಸುಡುವ ಕಲ್ಲುಗುಂಡೆಂದೂ ಚಂದ್ರ ಮಣ್ಣೆಂದೂ ಬೋಧಿಸುತ್ತಿದ್ದ ಅವನ ಮೇಲೆ ಆರೋಪ ಹೊರಿಸಿ ಅನಾಕ್ಸಾಗೊರಾಸ್ ವಿರುದ್ದ ಕ್ರಮ ಜರುಗಿಸಿದರು. (ಅವು ಹಳೆಯವೆಂದು ಹಾಸ್ಯ ಮಾಡಿದ ಸಾಕ್ರಟೀಸ್ ವಿರುದ್ಧವೂ ಇದೇ ಆರೋಪದ ಮೇಲೆ ಕ್ರಮ ಜರುಗಿಸಲಾಯಿತು.) ಅದರ ಬೇರೆ ಪರಿಣಾಮವೇನಾಯಿತೋ ತಿಳಿಯದು, ಆದರೆ ಅದರಿಂದ ಅನಾಕ್ಸಾಗೊರಾಸ್ ಅಥೆನ್ಸ್ ಬಿಟ್ಟು ಹೋಗಬೇಕಾಯಿತು. ಪ್ರಾಯಶಃ ಪೆರಿಕ್ಲೀಸ್ ಅವನನ್ನು ಸೆರೆಯಿಂದ ಬಿಡುಗಡೆಗೊಳಿಸಿ ದೂರ ಕಳಿಸಿದ ಸಂಭವ ಹೆಚ್ಚು. ಅವನು ಅಯೋನಿಯಕ್ಕೆ ಮರಳಿದ, ಅವನು ಸತ್ತ ದಿನಾಂಕದಂದು ಶಾಲಾ ಮಕ್ಕಳಿಗೆ ರಜೆ ಘೋಷಿಸಲಾಯಿತು.

ಪ್ರತಿಯೊಂದನ್ನೂ ಕೊನೆಯಿಲ್ಲದ ಬಗೆಯಲ್ಲಿ ವಿಭಜಿಸಬಹುದೆಂದೂ. ಅತ್ಯಂತ ಸಣ್ಣ ಕಣವೂ ತನ್ನಲ್ಲಿ ಎಲ್ಲ ಮೂಲವಸ್ತುಗಳನ್ನು ಒಳಗೊಂಡಿರುತ್ತದೆಂದು ಅನಾಕ್ಸಾಗೊರಾಸ್ ವಾದಿಸಿದ. ಅದರಲ್ಲಿ ಯಾವುದು ಬಹು ಹೆಚ್ಚಿನ ಪ್ರಮಾಣದಲ್ಲಿರುತ್ತದೋ ಆದೇ ರೀತಿ ಕಾಣುವುದೆಂದ. ಹೀಗೆ, ನಿದರ್ಶನಕ್ಕೆ, ಪ್ರತಿಯೊಂದರಲ್ಲೂ ಸ್ವಲ್ಪ ಮಟ್ಟಿಗಿನ ಬೆಂಕಿ ಇರುತ್ತದೆ, ಆದರೆ ಅದರಲ್ಲಿ ಬೆಂಕಿಯ ಅಂಶವೇ ಮುಖ್ಯವಾಗಿದ್ದಾಗ ಅದನ್ನು ಬೆಂಕಿಯೆನ್ನುತ್ತೇವೆ. ಎಂಪೆಡೋಕ್ಲೀಸ್‌ನಂತೆಯೇ ಅವನು ಶೂನ್ಯದ ವಿರುದ್ಧ ವಾದಿಸಿದ, ನೀರು ಗಡಿಯಾರ ಅಥವಾ ಉಬ್ಬಿದ ಚರ್ಮದಲ್ಲಿ ಏನೂ ಇಲ್ಲದಂತೆ ಕಂಡರೂ ಗಾಳಿಯಿರುತ್ತದೆ ಎಂದ.

ಮನಸ್ಸು (ನೌಸ್) ಒಂದು ವಸ್ತುವಾಗಿ ಜೀವಂತ ವಸ್ತುಗಳನ್ನು ಪ್ರವೇಶಿಸುತ್ತದೆ ಹಾಗೂ ಅದು ಮೃತವಸ್ತುಗಳಿಗಿಂತ ಭಿನ್ನ ಎಂಬ ತನ್ನ ಹಿಂದಿನವರ ವಾದದ ಬಗ್ಗೆ ಅವನು ಭಿನ್ನಾಭಿಪ್ರಾಯ ಹೊಂದಿದ್ದ. ಅವನ ಪ್ರಕಾರ, ಎಲ್ಲದರಲ್ಲಿಯೂ ಮನಸ್ಸಿನ ಹೊರತಾಗಿ ಮಿಕ್ಕೆಲ್ಲದರ ಒಂದಂಶವಿರುತ್ತದೆ, ಕೆಲವದರಲ್ಲಿ ಮನಸ್ಸೂ ಇರುತ್ತದೆ. ಮನಸ್ಸು ಎಲ್ಲ ಜೀವಂತ ವಸ್ತುಗಳ ಮೇಲೆ ಅಧಿಕಾರ ಹೊಂದಿರುತ್ತದೆ; ಅದು ಅನಂತವಾದುದು, ಸ್ವಯಂನಿಯಂತ್ರಿತವಾದುದು, ಯಾವುದರಲ್ಲಿಯೂ ಸೇರದ್ದು. ಮನಸ್ಸಿನ ವಿಷಯದ ಹೊರತಾಗಿ, ಎಷ್ಟೇ ಸಣ್ಣದಾಗಿರಲಿ ಎಲ್ಲದರಲ್ಲಿಯೂ, ಕಪ್ಪು

ಬಿಳಿಪು, ಬಿಸಿಯದು– ತಣ್ಣಗಿನದರಂತಹ ವಿರೋಧಗಳ ಅಂಶವಿರುತ್ತದೆ. ಅವನ ಪ್ರಕಾರ ಹಿಮವೂ ಭಾಗಶಃ ಕಪ್ಪು.

ಮನಸ್ಸೇ ಎಲ್ಲ ಚಲನೆಯ ಮೂಲ. ಅದು ಪರಿಭ್ರಮಣವನ್ನುಂಟುಮಾಡುತ್ತದೆ, ಅದು ಕ್ರಮೇಣ ಜಗತ್ತಿನಾದ್ಯಂತ ಹರಡುತ್ತದೆ, ಅದರಿಂದ ಅತ್ಯಂತ ಹಗುರ ವಸ್ತುಗಳು ಪರಿಧಿಗೆ ಸರಿಯುವಂತಾಗುತ್ತದೆ ಹಾಗೂ ಅತ್ಯಂತ ಭಾರವಾದವು ಕೇಂದ್ರದತ್ತ ಹೋಗುವಂತಾಗುತ್ತದೆ. ಮನಸ್ಸು ಏಕರೂಪವಾದದ್ದು, ಪ್ರಾಣಿಗಳದ್ದೂ ಮನುಷ್ಯನದರಂತೆಯೇ ಇರುತ್ತದೆ. ಮನುಷ್ಯ ಮಿಗಿಲೆನಿಸುವಂತೆ ಕಾಣುವುದು ಅವನಿಗೆ ಕೈಗಳಿರುವ ಕಾರಣದಿಂದಾಗಿ; ಎಲ್ಲ ವ್ಯತ್ಯಾಸಗಳು ದೈಹಿಕ ವ್ಯತ್ಯಾಸಗಳ ಕಾರಣದಿಂದಾದುವು.

ಅರಿಸ್ಟಾಟಲ್ ಮತ್ತು ಪ್ಲೇಟೋಪ್ರಣೀತ ಸಾಕ್ರಟೀಸ್‌ರು ಅನಾಕ್ಸಾಗೊರಾಸ್ ಮನಸ್ಸನ್ನು ಪರಿಚಯಿಸಿದ ಬಳಿಕ ಅದನ್ನು ಬಳಸಿಕೊಳ್ಳಲಿಲ್ಲ ಎಂದು ಆರೋಪಿಸುತ್ತಾರೆ. ಬೇರಾವುದೂ ತಿಳಿಯದ್ದರಿಂದಾಗಿ ಅವನು, ಮನಸ್ಸೇ ಎಲ್ಲದಕ್ಕೆ ಕಾರಣವೆಂದು ಹೇಳಿದ. ಸಾಧ್ಯವಾದಾಗ ಅವನು ಯಾಂತ್ರಿಕ ವಿವರಣೆಯನ್ನು ನೀಡುತ್ತಾನೆ. ಆಕಸ್ಮಿಕತೆ ಮತ್ತು ಆವಶ್ಯಕತೆಗಳು ಎಲ್ಲದರ ಕಾರಣಗಳೆಂಬುದನ್ನವನು ನಿರಾಕರಿಸುತ್ತಾನೆ; ಆದರೆ ಅವನ ವಿಶ್ವವಿಜ್ಞಾನದಲ್ಲಿ ಯಾವುದೇ ದೂರದರ್ಶಿತ್ವವಿಲ್ಲ. ನೈತಿಕತೆ ಮತ್ತು ಮತಧರ್ಮಗಳ ಬಗ್ಗೆ ಅವನು ಹೆಚ್ಚು ಯೋಚಿಸಿದಂತೆ ಕಾಣುವುದಿಲ್ಲ; ಅವನ ಮೇಲೆ ಕಾನೂನು ಕ್ರಮ ಜರುಗಿಸಿದವರು ಆರೋಪಿಸಿದಂತೆ ಪ್ರಾಯಶಃ ಅವನೊಬ್ಬ ನಾಸ್ತಿಕ. ಅವನ ಮೇಲೆ ಪೈಥಾಗೊರಾಸ್ ಹೊರತಾಗಿ ಬೇರೆಲ್ಲ ಹಿಂದಿನವರೂ ಪ್ರಭಾವ ಬೀರಿದ್ದಾರೆ. ಪಾರ್ಮನೈಡೀಸ್‌ನ ಪ್ರಭಾವವು ಎಂಪೆಡೋಕ್ಲೀಸ್‌ನದರಷ್ಟೇ ಆಗಿತ್ತು.

ವಿಜ್ಞಾನದಲ್ಲಿ ಅವನಿಗೆ ವಿಶೇಷ ಅರಿವಿತ್ತು. ಚಂದ್ರನು ಪ್ರತಿಫಲಿತ ಬೆಳಕಿನಿಂದಾಗಿ ಬೆಳಗುತ್ತಾನೆಂದು ಮೊದಲಿಗೆ ಹೇಳಿದವನು ಅವನೇ; ಆದರೆ ಪಾರ್ಮನೈಡೀಸ್‌ನ ಆನುಭಾವಿಕ ಬರವಣಿಗೆಯ ತುಣುಕು ಅವನಿಗೂ ಈ ವಿಷಯ ತಿಳಿದಿತ್ತೆಂಬುದನ್ನು ಸೂಚಿಸುತ್ತದೆ. ಅನಾಕ್ಸಾಗೊರಾಸ್ ಗ್ರಹಣಗಳ ಬಗ್ಗೆ ಸರಿಯಾದ ಸಿದ್ಧಾಂತವನ್ನು ಮಂಡಿಸಿದ, ಚಂದ್ರನು ಸೂರ್ಯನಿಗಿಂತ ಕೆಳಗಿರುವ ವಿಷಯ ಅವನಿಗೆ ತಿಳಿದಿತ್ತು. ಸೂರ್ಯ ಮತ್ತು ನಕ್ಷತ್ರಗಳು ನಿಗಿ ನಿಗಿ ಉರಿಯುವ ಕಲ್ಲುಕೆಂಡಗಳು, ನಮಗೆ ನಕ್ಷತ್ರಗಳ ಬಿಸಿ ಅನುಭವಕ್ಕೆ ಬರದಿರುವುದು ಅವು ಅತೀವ ದೂರದಲ್ಲಿರುವುದರಿಂದ ಎಂದವನು ಹೇಳಿದ. ಸೂರ್ಯ ಪೆಲೋಪಿನೆಸಸ್‌ಗಿಂತ ದೊಡ್ಡದು. ಚಂದ್ರನಲ್ಲಿ ಪರ್ವತಗಳಿವೆ ಮತ್ತು ಜನರೂ ಇದ್ದಾರೆ ಎಂದು ಭಾವಿಸಿದ.

ಅನಾಕ್ಸಿಗೊರಾಸ್ ಅನಾಕ್ಸಿಮೆನೀಸ್ ಪಂಥದವನು ಎಂದು ಹೇಳಲಾಗುತ್ತದೆ. ಅವನು ಖಂಡಿತವಾಗಿಯೂ ಅಯೋನಿಯನ್ನರ ವೈಚಾರಿಕ ಹಾಗೂ ವೈಜ್ಞಾನಿಕ

ಪರಂಪರೆಯನ್ನು ಉಳಿಸಿದವನು. ಪೈಥಾಗೊರಾಸ್‌ಪಂಥದಿಂದ ಸಾಕ್ರಟೀಸ್‌ವರೆಗೆ ಮತ್ತು ಸಾಕ್ರಟೀಸ್‌ನಿಂದ ಪ್ಲೇಟೋವರೆಗೆ ಹರಿದು ಬಂದು ಗ್ರೀಕ್ ತತ್ವಜ್ಞಾನದಲ್ಲಿ ಅಂಧಶ್ರದ್ಧೆಯ ಒಲವನ್ನು ತಂದ ನೈತಿಕ ಹಾಗೂ ಮತಧಾರ್ಮಿಕ ಪೂರ್ವಾಗ್ರಹಗಳು ಅವನಲ್ಲಿ ಕಾಣುವುದಿಲ್ಲ. ಅವನು ಮೊದಲ ಪಂಕ್ತಿಯಲ್ಲೇನೂ ಇಲ್ಲದಿರಬಹುದು, ಅದರೆ ತತ್ವಜ್ಞಾನವನ್ನು ಅಥೆನ್ಸ್‌ಗೆ ತಂದ ಮೊದಲಿಗನೆಂಬುದಕ್ಕಾಗಿ ಹಾಗೂ ಸಾಕ್ರಟೀಸ್‌ನನ್ನು ರೂಪಿಸುವುದರಲ್ಲಿ ಪ್ರಭಾವ ಬೀರಿದವರಲ್ಲಿ ಒಬ್ಬನಾಗಿ ಅವನು ಮುಖ್ಯನಾಗುತ್ತಾನೆ.

೬
ಪರಮಾಣುಸಿದ್ಧಾಂತಿಗಳು (ಆಟಮಿಸ್ಟ್‌ಸ್)

ಪರಮಾಣುಸಿದ್ಧಾಂತದ ಸ್ಥಾಪಕರು ಇಬ್ಬರು, ಲ್ಯೂಸಿಪ್ಪಸ್ ಮತ್ತು ಡೆಮಾಕ್ರಿಟಸ್. ಅವರಿಬ್ಬರನ್ನೂ ಬೇರ್ಪಡಿಸುವುದು ಕಷ್ಟ, ಏಕೆಂದರೆ ಸಾಮಾನ್ಯವಾಗಿ ಅವರಿಬ್ಬರನ್ನೂ ಒಟ್ಟಿಗೇ ಹೆಸರಿಸಲಾಗುವುದು, ಮತ್ತು ಲ್ಯೂಸಿಪ್ಪಸ್‌ನ ಕೆಲವು ಕೃತಿಗಳು ಕಾಲಕ್ರಮೇಣ ಡೆಮಾಕ್ರಿಟಸ್‌ನದೆಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದು.

ಲ್ಯೂಸಿಪ್ಪಸ್ ಕ್ರಿಪೂ ಸುಮಾರು ೪೪೦ ರಲ್ಲಿದ್ದಂತೆ ಕಾಣುತ್ತದೆ.[೩೫] ಅವನು ಮಿಲೆಟಸ್‌ನಿಂದ ಬಂದು ಆ ನಗರಕ್ಕೆ ಸಂಬಂಧಿಸಿದ ವೈಜ್ಞಾನಿಕ ವೈಚಾರಿಕ ತತ್ವಜ್ಞಾನವನ್ನು ಅನ್ವೇಷಿಸಿದ. ಅವನ ಮೇಲೆ ಪಾರ್ಮನೈಡೀಸ್ ಮತ್ತು ಜೀನೋರ ಪ್ರಭಾವ ಗಾಢವಾಗಿತ್ತು. ಅವನ ಬಗ್ಗೆ ತಿಳಿದಿರುವುದು ಎಷ್ಟು ಅಲ್ಪವೆಂದರೆ ಎಪಿಕ್ಯೂರಸ್ (ಡೆಮೋಕ್ರಿಟಸ್ ನಂತರದ ಅನುಯಾಯಿ) ಅವನ ಅಸ್ತಿತ್ವವನ್ನೇ ಸಂಪೂರ್ಣವಾಗಿ ಅಲ್ಲಗಳೆಯುತ್ತಾನೆ, ಹಾಗೆಯೇ ಕೆಲವು ಆಧುನಿಕರು ಈ ಅಭಿಪ್ರಾಯವನ್ನು ಪುನರುಜ್ಜೀವನಗೊಳಿಸಿದ್ದಾರೆ. ಆದರೆ, ಅರಿಸ್ಟಾಟಲ್‌ನಲ್ಲಿ ಅವನ ಬಗೆಗಿನ ಅನೇಕ ಉಲ್ಲೇಖಗಳಿವೆ, ಹೀಗಾಗಿ ಅವನು ಕೇವಲ ಕಲ್ಪನಾತ್ಮಕ ವ್ಯಕ್ತಿಯಾಗಿದ್ದರೆ ಇವು (ಪಠ್ಯ ಉದ್ಧೃತಗಳನ್ನೊಳಗೊಂಡಂತೆ) ಹೇಗೆ ಬಂದವೆಂಬುದಕ್ಕೆ ಕಾರಣ ಹೇಳಲಾಗುವುದಿಲ್ಲ.

ಡೆಮಾಕ್ರಿಟಸ್‌ನ ಬಗ್ಗೆ ಅವನಿಗಿಂತ ಹೆಚ್ಚಿನ ಖಚಿತತೆಯಿದೆ. ಅವನು ಥ್ರೇಸ್‌ನ ಆಬ್ಡೆರಾದ ನಿವಾಸಿ; ಅವನ ಕಾಲದ ಬಗ್ಗೆ ಹೇಳಬೇಕೆಂದರೆ, ಅನಾಕ್ಸರಾಸ್ ಮುದುಕನಾಗಿದ್ದಾಗ ತಾನು ಚಿಕ್ಕವನಾಗಿದ್ದೆ, ಕ್ರಿಪೂ ಸುಮಾರು ೪೩೨, ಎಂಬ ಅವನ ಹೇಳಿಕೆಯನ್ನು ಆಧರಿಸಿ, ಅವನು ಕ್ರಿಪೂ ೪೨೦ ರ ಹೊತ್ತಿಗೆ ಇದ್ದನೆಂದು ಹೇಳಬಹುದು. ಅವನು ಜ್ಞಾನದಾಹಿಯಾಗಿ ದಕ್ಷಿಣ ಮತ್ತು ಪೂರ್ವ ದ್ವೀಪಗಳಲ್ಲಿ

---

೩೫. ಸಿರಿಲ್ ಬೈಲೀ, 'ದ ಗ್ರೀಕ್ ಅಟಾಮಿಸ್ಟ್ಸ್ ಅಂಡ್ ಎಪಿಕ್ಯೂರಸ್', ಅವನು ಕ್ರಿಪೂ ೪೩೦ ಅಥವಾ ಅದಕ್ಕಿಂತಲೂ ಸ್ವಲ್ಪ ಮುಂಚೆ ಇದ್ದನೆಂದು ಅವರು ಹೇಳುತ್ತಾರೆ.

ವ್ಯಾಪಕವಾಗಿ ಸಂಚರಿಸಿದ; ಅವನು ಸಾಕಷ್ಟು ಸಮಯವನ್ನು ಈಜಿಪ್ಟ್‌ನಲ್ಲಿ ಕಳೆದಂತೆ ತೋರುತ್ತದೆ, ಹಾಗೂ ಖಚಿತವಾಗಿ ಅವನು ಪರ್ಷಿಯಕ್ಕೂ ಹೋಗಿದ್ದ. ಆನಂತರ ಆಬ್ಡೆರಾಕ್ಕೆ ವಾಪಸಾಗಿ ಅಲ್ಲೇ ಉಳಿದುಕೊಂಡ. 'ತನ್ನ ಹಿಂದಿನ ಎಲ್ಲ ಹಾಗೂ ಸಮಕಾಲೀನ ತತ್ವಜ್ಞಾನಿಗಳಿಗಿಂತ ಅವನು ಜ್ಞಾನಸಿರಿಯಲ್ಲಿ ಮಿಗಿಲಾಗಿದ್ದವನು, ಹಾಗೂ ತಾರ್ಕಿಕ ಮತ್ತು ಆಲೋಚನಾಖಚಿತತೆಯಲ್ಲಿ ಅತ್ಯಂತ ಮೊನಚಾಗಿದ್ದವನು' ಎಂಬುದು ಅವನ ಬಗ್ಗೆ ಝೆಲ್ಲರ್ ಅಭಿಪ್ರಾಯ.

ಡೆಮಾಕ್ರಿಟಸ್‌ನು ಸಾಕ್ರಟೀಸ್ ಮತ್ತು ಸಾಫೋಕ್ಲೀಸ್‌ರ ಸಮಕಾಲೀನ, ಮತ್ತು ಕೇವಲ ಕಾಲಾನುಕ್ರಮದ ನೆಲೆಯಲ್ಲಿ, ಇತಿಹಾಸದ ಆನಂತರದ ಕಾಲದಲ್ಲಿ ಪರಿಗಣಿಸಬೇಕು. ಆದರೆ ತೊಂದರೆಯೆಂದರೆ ಅವನನ್ನು ಲ್ಯೂಸಿಪ್ಪಸ್‌ನಿಂದ ಬೇರ್ಪಡಿಸುವುದು ತುಂಬ ಕಷ್ಟಕರವಾದುದು. ಈ ಕಾರಣದಿಂದಾಗಿ, ನಾನು ಅವನನ್ನು ಸಾಕ್ರಟೀಸ್ ಮತ್ತು ಸಾಫೋಕ್ಲೀಸ್‌ರಿಗಂತ ಹಿಂದಿನವನು ಎಂದು ಪರಿಗಣಿಸುತ್ತೇನೆ. ಆದರೆ ಅವನ ತತ್ವಜ್ಞಾನದ ಒಂದು ಭಾಗವು ಅವನ ಸಹನಗರವಾಸಿ ಮತ್ತು ಸೂಫಿಸ್ಟರಲ್ಲಿ ಅತ್ಯಂತ ಪ್ರಸಿದ್ಧನಾಗಿದ್ದ ಪ್ರೋಟಾಗೊರಾಸ್‌ಗೆ ಉತ್ತರವೆಂಬಂತಿದೆ. ಪ್ರೋಟಾಗೊರಾಸ್ ಅಥೆನ್ಸ್ ಅನ್ನು ಸಂದರ್ಶಿಸಿದಾಗ ಅವನನ್ನು ಉತ್ಸಾಹದಿಂದ ಬರಮಾಡಿಕೊಳ್ಳಲಾಯಿತು; ಮತ್ತೊಂದೆಡೆ, ಡೆಮಾಕ್ರಿಟಸ್ ಹೀಗೆನ್ನುತ್ತಾನೆ: 'ನಾನು ಅಥೆನ್ಸ್‌ಗೆ ಹೋದಾಗ ಯಾರಿಗೂ ನನ್ನ ಬಗ್ಗೆ ತಿಳಿದಿರಲಿಲ್ಲ.' ಬಹು ದೀರ್ಘ ಕಾಲ ಅಥೆನ್ಸ್‌ನಲ್ಲಿ ಅವನ ತತ್ವಜ್ಞಾನವನ್ನು ಅವಗಣಿಸಲಾಗಿತ್ತು. 'ಪ್ಲೇಟೋಗೆ ಡೆಮಾಕ್ರಿಟಸ್ ಬಗ್ಗೆ ತಿಳಿವಳಿಕೆಯಿತ್ತು ಎಂಬುದು ಖಚಿತವಾಗಿಲ್ಲ .. .. ಆದರೆ ಅರಿಸ್ಟಾಟಲ್‌ಗೆ ಡೆಮಾಕ್ರಿಟಸ್ ಬಗ್ಗೆ ಚೆನ್ನಾಗಿಯೇ ಗೊತ್ತು, ಯಾಕೆಂದರೆ ಅವನೂ ಉತ್ತರದಿಂದ ಅಯೋನಿಯಕ್ಕೆ ಬಂದಿದ್ದವನು.'[೩೬] ಎಂದು ಬರ್ನೆಟ್ ಹೇಳುತ್ತಾರೆ.

ತನ್ನ ಸಂವಾದಗಳಲ್ಲಿ ಪ್ಲೇಟೋ ಅವನ ಬಗ್ಗೆ ಉಲ್ಲೇಖವನ್ನೇ ಮಾಡುವುದಿಲ್ಲ, ಆದರೆ ಅವನನ್ನು ಕಂಡರೆ ಆದರರಹಿತತೆ ಎಷ್ಟರ ಮಟ್ಟಿಗೆಂದರೆ ಅವನ ಪುಸ್ತಕಗಳನೆಲ್ಲ ಬೆಂಕಿಗೆಸೆಯಬೇಕು ಎಂಬಷ್ಟು. ಹೀತ್ ಗಣಿತಜ್ಞನೆಂದು ಅವನನ್ನು ಗೌರವಿಸುತ್ತಾನೆ ಎಂದು ಡಯೋಜಿನೀಸ್ ಲೇರ್ಷಿಯಸ್ ಹೇಳುತ್ತಾನೆ.[೩೭]

ಲ್ಯೂಸಿಪ್ಪಸ್ ಮತ್ತು ಡೆಮಾಕ್ರಿಟಸ್‌ರ ತತ್ವಜ್ಞಾನದ ಮೂಲ ವಿಚಾರಗಳು ಲ್ಯೂಸಿಪ್ಪಸ್‌ನ ಕಾರಣದಿಂದಾದವು, ಆದರೆ ಅವುಗಳನ್ನು ಬೇರೆ ಮಾಡಿ ರುಜುಮಾತು ಮಾಡಿ ತೋರಿಸುವುದು ಅಸಾಧ್ಯ; ಅಲ್ಲದೆ, ನಮ್ಮ ಉದ್ದೇಶಕ್ಕೆ ಈ ಬಗೆಯ ಪ್ರಯ್ಯತ್ನ ಮುಖ್ಯವೂ ಅಲ್ಲ. ಪಾರ್ಮನೈಡೀಸ್ ಮತ್ತು ಎಂಪೆಡೋಕ್ಲೀಸ್ ಕ್ರಮವಾಗಿ

---

೩೬. 'ಫ್ರಂ ಥೇಲಿಸ್ ಟು ಪ್ಲೇಟೋ', ಪು. ೧೯೩.
೩೭. 'ಗ್ರೀಕ್ ಮ್ಯಾಥಮಾಟಿಕ', ಭಾಗ ೧, ಪು. ೧೭.

ಪ್ರತಿಪಾದಿಸಿದ ಏಕತ್ವಸಿದ್ಧಾಂತ ಮತ್ತು ಬಹುತ್ವಸಿದ್ಧಾಂತಗಳ ನಡುವೆ ಹೊಂದಾಣಿಕೆ ಮಾಡಲು ಪಟ್ಟ ಪ್ರಯತ್ನವು, ಡೆಮಾಕ್ರಿಟಸ್ ಅಲ್ಲದಿದ್ದರೂ ಲ್ಯೂಸಿಪ್ಪಸ್‌ನನ್ನು ಪರಮಾಣುಸಿದ್ಧಾಂತದೆಡೆಗೆ ಕರೆದೊಯ್ದಿತು. ಅವರ ದೃಷ್ಟಿಕೋನವು ಆಧುನಿಕ ವಿಜ್ಞಾನದ ದೃಷ್ಟಿಕೋನದಂತೆಯೇ ಇದ್ದು, ಗ್ರೀಕ್ ಆಧಾರಕಲ್ಪನೆಗಳು ಮಾಡಬಹುದಾಗಿದ್ದ ಬಹುತೇಕ ತಪ್ಪುಗಳನ್ನು ನಿವಾರಿಸಿಕೊಂಡಿತು. ಪ್ರತಿಯೊಂದೂ, ಜ್ಯಾಮಿತೀಯವಾಗಲ್ಲದಿದ್ದರೂ ಭೌತಿಕವಾಗಿ, ಅವಿನಾಶಿಯಾದ ಪರಮಾಣುಗಳಿಂದ ರಚನೆಗೊಂಡಿದೆ; ಪರಮಾಣುಗಳ ನಡುವೆ ಖಾಲಿ ಅವಕಾಶವಿದೆ; ಪರಮಾಣುಗಳು ಅವಿನಾಶಿಯಾದವು; ಅವು ಸದಾ ಚಲನೆಯಲ್ಲಿದ್ದವು ಮತ್ತು ಮುಂದೆಯೂ ಹಾಗಿರುತ್ತವೆ; ಅಸಂಖ್ಯ ಪರಮಾಣುಗಳಿವೆ ಹಾಗೂ ಪರಮಾಣುಗಳ ಬಗೆಗಳೂ ಅಸಂಖ್ಯವಾಗಿವೆ; ಅವುಗಳಲ್ಲಿನ ವ್ಯತ್ಯಾಸವು ಆಕಾರ ಮತ್ತು ಗಾತ್ರಗಳಿಗೆ ಸಂಬಂಧಿಸಿದವು – ಎಂದವರು ನಂಬಿದ್ದರು. ಪರಮಾಣುಸಿದ್ಧಾಂತಿಗಳ ಪ್ರಕಾರ, ಪರಮಾಣುಗಳು ಶಾಖದಲ್ಲೂ ವ್ಯತ್ಯಾಸ ಹೊಂದಿರುತ್ತವೆ, ಬೆಂಕಿಯನ್ನು ಉಂಟುಮಾಡುವ ಗೋಲಾಕಾರದ ಪರಮಾಣುಗಳು ಅತ್ಯಂತ ಶಾಖದಿಂದ ಕೂಡಿರುತ್ತವೆ; ತೂಕಕ್ಕೆ ಸಂಬಂಧಿಸಿದಂತೆ, 'ಯಾವುದೇ ಅವಿಭಜನೀಯವು ಹೆಚ್ಚಿದಷ್ಟೂ ತೂಕವೂ ಹೆಚ್ಚು' ಎಂಬ ಡೆಮಾಕ್ರಿಟಸ್‌ನ ಹೇಳಿಕೆಯನ್ನುದ್ಧರಿಸಿ ಅರಿಸ್ಟಾಟಲ್[೩೮] ಹೇಳುತ್ತಾನೆ. ಆದರೆ ಪರಮಾಣುಗಳಿಗೆ ಮೂಲತಃ ತೂಕವಿತ್ತೇ ಎಂಬ ಪ್ರಶ್ನೆಯು ಬಗೆಗಿನ ಪರಮಾಣುಸಿದ್ಧಾಂತಿಗಳ ಸಿದ್ಧಾಂತಗಳು ವಿವಾದಾಸ್ಪದವಾದವು.

ಪರಮಾಣುಗಳು ಸದಾ ಚಲನೆಯಲ್ಲಿದ್ದವು, ಆದರೆ ಮೂಲಚಲನೆಯ ಸ್ವರೂಪದ ಬಗ್ಗೆ ವ್ಯಾಖ್ಯಾನಕಾರರಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವರು, ಅದರಲ್ಲೂ ಜಲೆಟ್, ಪರಮಾಣುಗಳು ಸದಾ ಬೀಳುತ್ತಿದ್ದವು ಎಂಬಂತೆ ಭಾವಿಸಿದ್ದರು, ಹಾಗೂ ಹೆಚ್ಚು ಭಾರವಾದವು ಹೆಚ್ಚು ವೇಗದಿಂದ ಬೀಳುತ್ತವೆ; ಅವು ಕಡಿಮೆ ತೂಕದವನ್ನು ಹಿಡಿದಿಟ್ಟುಕೊಂಡವು, ಇದರಿಂದಾದ ಒತ್ತಡದಿಂದ ಪರಮಾಣುಗಳು ಬಿಲಿಯರ್ಡ್ಸ್ ಚೆಂಡುಗಳಂತೆ ಚದುರಿಹೋದವು – ಎಂದು ಹೇಳುತ್ತಾರೆ. ಇದು ಖಚಿತವಾಗಿ ಎಪಿಕ್ಯೂರಸ್‌ನ ಅಭಿಪ್ರಾಯ. ಅರಿಸ್ಟಾಟಲ್‌ನ ಟೀಕೆಯನ್ನು ಪರಿಗಣಿಸುವ ದಡ್ಡತನದ ಪ್ರಯತ್ನದಿಂದ ಅವನು ಡೆಮಾಕ್ರಿಟಸ್‌ನ ಸಿದ್ಧಾಂತಗಳ ಮೇಲೆ ಬಹುವಾಗಿ ಅವಲಂಬಿಸುತ್ತಾನೆ. ಆದರೆ ಲ್ಯೂಸಿಪ್ಪಸ್ ಮತ್ತು ಡೆಮಾಕ್ರಿಟಸ್‌ರ ಪ್ರಕಾರ, ತೂಕವು ಪರಮಾಣುಗಳ ಮೂಲ ಗುಣವಲ್ಲ ಎಂದು ಭಾವಿಸಲು ಸಾಕಷ್ಟು ಪುರಾವೆಯಿದೆ. ಅವರ ಅಭಿಪ್ರಾಯದಲ್ಲಿ, ಆಧುನಿಕ ಕಾಲದ ಅನಿಲಗಳ ಚಲನಾತ್ಮಕ ಸಿದ್ಧಾಂತದಲ್ಲಿನಂತೆ ಪರಮಾಣುಗಳು ಮೂಲತಃ ಅಡ್ಡಾದಿಡ್ಡಿಯಾಗಿ ಚಲಿಸುತ್ತಿದ್ದವು. ಅನಂತ ಶೂನ್ಯದಲ್ಲಿ

---

೩೮. *'ಆನ್ ಜನರೇಷನ್ ಅಂಡ್ ಕರಪ್ಷನ್'*, ಪು. ೩೧೬

ಮೇಲೆ–ಕೆಳಗುಗಳಿಲ್ಲ, ಆತ್ಮದಲ್ಲಿನ ಪರಮಾಣುಗಳ ಚಲನೆಯು ಗಾಳಿಯಿಲ್ಲದಾಗಿನ ಬಿಸಿಲಕೋಲಿನ ಕಣಗಳಂತೆ ಎಂದು ಡೆವಾಕ್ರಿಟಸ್ ಹೇಳಿದ. ಇದು ಎಪಿಕ್ಯೂರಸ್‌ನದಕ್ಕಿಂತ ಹೆಚ್ಚು ಜಾಣ ದೃಷ್ಟಿಕೋನ; ಅದು ಲ್ಯೂಸಿಪ್ಪಸ್ ಮತ್ತು ಡೆಮಾಕ್ರಿಟಸ್‌ರದೆಂದು ನಾವು ಭಾವಿಸಬಹುದೆನ್ನಿಸುತ್ತದೆ.[೩೯]

ಸಂಘಟ್ಟನೆಗಳ ಪರಿಣಾಮವಾಗಿ ಪರಮಾಣುಗಳು ಆವರ್ತಗಳನ್ನು (ವೋರ್ಟೆಕ್ಸ್) ನಿರ್ಮಿಸುವಂತಾದುವು. ಮಿಕ್ಕವು ಅನಾಕ್ಸಾಗೊರಾಸ್‌ನಲ್ಲಿನಂತೆ ಮುಂದೆ ಸಾಗಿದವು, ಆದರೆ ಮನಸ್ಸಿನ ಕ್ರಿಯೆಯಿಂದ ಎನ್ನುವುದರ ಬದಲು ಆವರ್ತಗಳನ್ನು ಯಾಂತ್ರಿಕವಾಗಿ ವಿವರಿಸಿದ್ದು ಪ್ರಗತಿಯಾಯಿತು.

ಎಲ್ಲದಕ್ಕೂ ಆಕಸ್ಮಿಕತೆಯೇ ಕಾರಣವೆಂದು ಆರೋಪಿಸಿ ಪರಮಾಣು ಸಿದ್ಧಾಂತಿಗಳನ್ನು ಟೀಕಿಸುವುದು ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿತ್ತು. ಅದಕ್ಕೆ ವ್ಯತಿರಿಕ್ತವಾಗಿ, ಅವರು ತೀವ್ರ ನಿಯತಿವಾದಿಗಳು (ಡಿಟರ್ಮಿನಿಸ್ಟ್); ಎಲ್ಲವೂ ನಿಸರ್ಗ ನಿಯಮಗಳಿಗನುಗುಣವಾಗಿ ಸಂಭವಿಸುವುದೆಂದು ಅವರು ನಂಬಿದ್ದರು. ಯಾವುದಾದರೂ ಆಕಸ್ಮಿಕವಾಗಿ ಸಂಭವಿಸಬಹುದೆಂಬುದನ್ನು ಡೆಮಾಕ್ರಿಟಸ್ ಸ್ಪಷ್ಟವಾಗಿ ಅಲ್ಲಗಳೆದ.[೪೦] ಲ್ಯೂಸಿಪ್ಪಸ್, ಅವನ ಅಸ್ತಿತ್ವವನ್ನೇ ಅಲ್ಲಗಳೆದಿದ್ದರೂ, ಒಂದು ಮಾತನ್ನು ಹೇಳಿದುದು ತಿಳಿದಿದೆ: 'ಏನೂ ಇಲ್ಲದೆ ಯಾವುದೂ ಸಂಭವಿಸದು, ಪ್ರತಿಯೊಂದೂ ಒಂದು ಭೂಮಿಕೆಯಿಂದ ಆವಶ್ಯಕತೆಗೆನುಗುಣವಾಗಿ ಸಂಭವಿಸುತ್ತದೆ'. ಜಗತ್ತು ಮೂಲದಲ್ಲಿ ಹೇಗಿತ್ತೋ ಹಾಗೆ ಉಂಟಾಗಲು ಅದಕ್ಕೆ ಕಾರಣವೇನು ಎಂದವನು ಹೇಳಲಿಲ್ಲ ಎಂಬುದು ಸತ್ಯವೇ; ಪ್ರಾಯಶಃ ಇದನ್ನು ಆಕಸ್ಮಿಕತೆಗೆ ಆರೋಪಿಸಿರಬಹುದು. ಆದರೆ ಒಮ್ಮೆ ಈ ಜಗತ್ತು ಅಸ್ತಿತ್ವಕ್ಕೆ ಬಂದ ಮೇಲೆ, ಅದರ ಮುಂದಿನ ಬೆಳವಣಿಗೆಗಳೆಲ್ಲವೂ ಬದಲಾಗದ ಯಾಂತ್ರಿಕ ತತ್ವಗಳಿಗನುಗುಣವಾಗಿ ನಡೆಯುವುದು ನಿಶ್ಚಿತವಾಯಿತು. ಪರಮಾಣುಗಳ ಮೂಲ ಚಲನೆಗೆ ಕಾರಣವೇನೆಂಬುದನ್ನು ವಿವರಿಸದಿದ್ದುದಕ್ಕಾಗಿ ಅರಿಸ್ಟಾಟಲ್ ಮತ್ತಿತರರು ಅವನನ್ನೂ ಡೆಮಾಕ್ರಿಟಸ್ ಅನ್ನೂ ಟೀಕಿಸಿದರು, ಆದರೆ ಇದರಲ್ಲಿ ಪರಮಾಣುಸಿದ್ಧಾಂತಿಗಳು ತಮ್ಮ ಟೀಕಾಕಾರರಿಗಿಂತ ಹೆಚ್ಚು ವೈಜ್ಞಾನಿಕವಾಗಿದ್ದರು. ನಿಮಿತ್ತಸಿದ್ಧಾಂತವು (ಕಾಸೇಷನ್) ಯಾವುದರಿಂದಲೋ ಆರಂಭಗೊಂಡಿರಬೇಕು, ಎಲ್ಲೆಲ್ಲಿ ಅದು ಆರಂಭಗೊಳ್ಳುವುದೋ ಆರಂಭಿಕ ಆಧಾರಾಂಶಕ್ಕೆ ಯಾವುದೇ ಕಾರಣವನ್ನು ನೀಡಲಾಗದು. ಜಗತ್ತು ಅಸ್ತಿತ್ವಕ್ಕೆ ಬರಲು ಸೃಷ್ಟಿಕರ್ತ ಕಾರಣವೆನ್ನಬಹುದು, ಆದರೆ ಅಲ್ಲಿಯೂ ಸೃಷ್ಟಿಕರ್ತನಿರಲು ಕಾರಣವೇನು

---

೩೯. ಈ ವ್ಯಾಖ್ಯಾನವನ್ನು ಬರ್ನೆಟ್ ಅಳವಡಿಸಿಕೊಂಡಿದ್ದಾರೆ, ಜೊತೆಗೆ ಲ್ಯೂಸಿಪ್ಪಸ್‌ಗೆ ಸಂಬಂಧಿಸಿದಂತೆ ಬೈಲಿ ಕೂಡ (ಪೂರ್ವೋಕ್ತ, ಪು. ೮೧).

೪೦. ನೋಡಿ, ಬೈಲೀ, ಪೂರ್ವೋಕ್ತ, ಪು ೧೨೧, ಡೆಮಾಕ್ರಿಟಸ್‌ನ ನಿಯತಿವಾದವನ್ನು ಕುರಿತು.

ಎಂದು ಹೇಳಲಾಗುವುದಿಲ್ಲ. ಹಾಗೆ ನೋಡಿದರೆ, ಪರಮಾಣುಸಿದ್ಧಾಂತಿಗಳ ಸಿದ್ಧಾಂತವು ಪ್ರಾಚೀನರು ಪ್ರತಿಪಾದಿಸಿದ ಬೇರಾವುದೇ ಸಿದ್ಧಾಂತಕ್ಕಿಂತಲೂ ಆಧುನಿಕ ವಿಜ್ಞಾನಕ್ಕೆ ಹೆಚ್ಚು ಸನಿಹವಾದುದು.

ಸಾಕ್ರಟೀಸ್, ಪ್ಲೇಟೋ ಮತ್ತು ಅರಿಸ್ಟಾಟಲ್‌ರು ಮಾಡದಂತೆ, ಜಗತ್ತನ್ನು ಉದ್ದೇಶ ಅಥವಾ ಅಂತಿಮ ಕಾರಣದ ಪರಿಕಲ್ಪನೆಯಿಲ್ಲದೆಯೇ ವಿವರಿಸಲು ಪರಮಾಣುಸಿದ್ಧಾಂತಿಗಳು ಪ್ರಯತ್ನಿಸಿದರು. ಒಂದು ಘಟನೆಯು ಯಾವುದಕ್ಕಾಗಿ ಸಂಭವಿಸಿದೆಯೋ ಅದರ 'ಅಂತಿಮ ಕಾರಣ' ಭವಿಷ್ಯದ ವಿದ್ಯಮಾನ. ಮಾನುಷ ವಿಚಾರಗಳಿಗೆ ಆ ಪರಿಕಲ್ಪನೆಯನ್ನು ಅನ್ವಯಿಸಬಹುದು. ಬೇಕರ್ ಬ್ರೆಡ್ ಯಾಕೆ ತಯಾರಿಸಿದ? ಯಾಕೆಂದರೆ ಜನರು ಹಸಿಯುತ್ತಾರೆ, ಅದಕ್ಕಾಗಿ. ರೈಲ್ವೆಯನ್ನು ಯಾಕೆ ನಿರ್ಮಿಸಲಾಗಿದೆ? ಜನರು ಪ್ರಯಾಣ ಮಾಡಲು ಬಯಸುತ್ತಾರೆ, ಅದಕ್ಕಾಗಿ. ಅಂಥ ಸಂದರ್ಭಗಳಲ್ಲಿ ಅವು ಪೂರೈಸುವ ಉದ್ದೇಶಗಳಿಂದ ಆ ಕುರಿತ ವಿವರಣೆ ನೀಡಬಹುದು. ಒಂದು ಘಟನೆಯನ್ನು ಕುರಿತು 'ಯಾಕೆ?' ಎಂದು ಕೇಳಿದರೆ, ನಮಗೆ ಎರಡು ಬಗೆಯ ಅರ್ಥಗಳಲ್ಲಿ ಒಂದಾಗಿರುತ್ತದೆ. 'ಈ ಘಟನೆಯಿಂದ ಯಾವ ಉದ್ದೇಶ ಸಫಲವಾಯಿತು?' ಎಂಬ ಅರ್ಥವಿರಬಹುದು; ಅಥವಾ 'ಈ ಘಟನೆ ಸಂಭವಿಸಲು ಹಿಂದಿನ ಯಾವ ಸನ್ನಿವೇಶ ಕಾರಣ' ಎಂಬುದಿರಬಹುದು. ಮೊದಲನೆಯ ಪ್ರಶ್ನೆಗೆ ಇರುವ ಉತ್ತರ ಮೂಲಸಂಕಲ್ಪಸಿದ್ಧಾಂತದ (ಟೆಲಿಯೋಲಾಜಿಕಲ್) ವಿವರಣೆಯಾಗಿರಬಹುದು ಅಥವಾ ಅಂತಿಮ ಕಾರಣಗಳ ವಿವರಣೆಯಾಗಿರಬಹುದು. ಎರಡನೆಯದಕ್ಕೆ ಉತ್ತರವು ಯಾಂತ್ರಿಕ ವಿವರಣೆಯಾಗಿರುತ್ತದೆ. ಈ ಎರಡರಲ್ಲಿ ವಿಜ್ಞಾನವು ಯಾವ ಪ್ರಶ್ನೆಯನ್ನು ಹಾಕಬೇಕು ಅಥವಾ ಎರಡೂ ಪ್ರಶ್ನೆಗಳನ್ನೋ ಎಂಬುದನ್ನು ನಾನು ಊಹಿಸಿಕೊಳ್ಳಲಾರೆ. ಯಾಂತ್ರಿಕ ವಿವರಣೆಯು ವೈಜ್ಞಾನಿಕ ತಿಳಿವಳಿಕೆಯತ್ತ ಕರೆದೊಯ್ಯುತ್ತದೆ, ಆದರೆ ಮೂಲಸಂಕಲ್ಪಸಿದ್ಧಾಂತದ ಪ್ರಶ್ನೆಯಲ್ಲ ಎಂಬುದನ್ನು ಅನುಭವವು ತೋರಿಸಿಕೊಟ್ಟಿದೆ. ಪರಮಾಣುಸಿದ್ಧಾಂತಿಗಳು ಕೇಳಿದ್ದು ಯಾಂತ್ರಿಕ ಪ್ರಶ್ನೆಯನ್ನು, ಅದಕ್ಕೆ ಯಾಂತ್ರಿಕ ಉತ್ತರವನ್ನು ನೀಡಿದರು. ಅವರ ನಂತರದವರು, ರಿನೇಸಾನ್ಸ್‌ವರೆಗೂ, ಆಸಕ್ತರಾಗಿದ್ದುದು ಮೂಲಸಂಕಲ್ಪಸಿದ್ಧಾಂತದ ಪ್ರಶ್ನೆಯಲ್ಲಿ, ಇದರಿಂದ ವಿಜ್ಞಾನವು ಕಿರು ಓಣಿಯಲ್ಲಿ ಸಾಗಬೇಕಾಯಿತು.

ಎರಡೂ ಪ್ರಶ್ನೆಗಳ ಬಗ್ಗೆಯೂ, ಜನಜನಿತ ಆಲೋಚನೆಯಲ್ಲಿ ಹಾಗೂ ತತ್ವಜ್ಞಾನವಲಯದಲ್ಲಿ, ಕಡೆಗಣಿಸಿರುವ ಒಂದು ಮಿತಿಯಿದೆ. (ದೇವರನ್ನೂ ಒಳಗೊಂಡಂತೆ) ಅಖಂಡ ವಾಸ್ತವದ ಬಗ್ಗೆ ಎರಡರಲ್ಲಿ ಯಾವುದನ್ನೂ ಗ್ರಾಹ್ಯವಾಗುವಂತೆ ಕೇಳಲಾಗುವುದಿಲ್ಲ, ಅದರ ಒಂದು ಅಂಶದ ಬಗ್ಗೆ ಮಾತ್ರ ಕೇಳಬಹುದು. ಮೂಲಸಂಕಲ್ಪಸಿದ್ಧಾಂತದ ವಿವರಣೆಗೆ ಸಂಬಂಧಿಸಿದಂತೆ, ಅದು

ಬಹುಬೇಗ, ಪ್ರಕೃತಿಯ ಹಾದಿಯಲ್ಲಿ ಕಂಡುಕೊಳ್ಳುವ ಉದ್ದೇಶಗಳನ್ನುಳ್ಳ ಸೃಷ್ಟಿಕರ್ತನ ಅಥವಾ ಕನಿಷ್ಠ ಪಕ್ಷ, ನಿರ್ಮಾಪಕನ ಕಡೆಗೆ ಬಂದುಬಿಡುತ್ತದೆ. ಆದರೆ ಸೃಷ್ಟಿಕರ್ತನ ಯಾವ ಉದ್ದೇಶವು ನೆರವೇರುತ್ತದೆ ಎಂದು ಯಾವನಾದರೊಬ್ಬ ಹಟಮಾರಿ ಮೂಲಸಂಕಲ್ಪಸಿದ್ಧಾಂತದ ಬೆನ್ನು ಹತ್ತಿದರೆ ಅವನ ಪ್ರಶ್ನೆಯು ಧರ್ಮವಿರೋಧಿಯೆನಿಸುವುದು ಖಂಡಿತ. ಅದಕ್ಕೂ ಮಿಗಿಲಾಗಿ, ಅದು ಅರ್ಥವಿಲ್ಲದ್ದು, ಯಾಕೆಂದರೆ ಅದನ್ನು ಹೆಚ್ಚು ಅರ್ಥಪೂರ್ಣವೆನಿಸಬೇಕಾದರೆ, ತನ್ನ ಉದ್ದೇಶವನ್ನು ನೆರವೇರಿಸಲು ಅಧಿಸೃಷ್ಟಿಕರ್ತನೊಬ್ಬ (ಸೂಪರ್-ಕ್ರಿಯೇಟರ್) ಸೃಷ್ಟಿಕರ್ತನೊಬ್ಬನನ್ನು ಸೃಷ್ಟಿಸಿದನೆಂದು ಕಲ್ಪಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ ಉದ್ದೇಶದ ಪರಿಕಲ್ಪನೆಯು ವಾಸ್ತವದ ಮಿತಿಯಲ್ಲಿ ಅನ್ವಯಿಸುವಂತಹುದೇ ಹೊರತು ಅಖಂಡ ವಾಸ್ತವತೆಗಲ್ಲ.

ಇದರಿಂದೇನೂ ಭಿನ್ನವಲ್ಲದ ವಾದವು ಯಾಂತ್ರಿಕ ವಿವರಣೆಯ ಬಗ್ಗೆಯೂ ಅನ್ವಯಿಸುತ್ತದೆ. ಒಂದು ಘಟನೆಯು ಇನ್ನೊಂದಕ್ಕೆ ಕಾರಣವಾಗುತ್ತದೆ, ಅದು ಮತ್ತೊಂದಕ್ಕೆ, ಹೀಗೇ. ಆದರೆ ಅಖಂಡ ವಾಸ್ತವದ ಕಾರಣವೇನೆಂದು ಪ್ರಶ್ನಿಸಿದರೆ ಮತ್ತೆ ನಮ್ಮನ್ನು ಅದು ತಾನೇ ಕಾರಣನಲ್ಲದ ಸೃಷ್ಟಿಕರ್ತನ ಕಡೆಗೇ ದೂಡುತ್ತದೆ. ಎಲ್ಲ ಸಾಂದರ್ಭಿಕ ವಿವರಣೆಗಳಿಗೂ ಒಂದು ಆರೋಪಿಸಬಹುದಾದ ಆರಂಭವಿರಬೇಕು. ಈ ಕಾರಣದಿಂದಾಗಿ, ಪರಮಾಣುಗಳ ಮೂಲ ಚಲನೆಯ ಕಾರಣವನ್ನು ವಿವರಿಸದಿರುವುದು ಪರಮಾಣುಸಿದ್ಧಾಂತಿಗಳ ಸಿದ್ಧಾಂತದ ಕೊರತೆಯೇನೂ ಆಗುವುದಿಲ್ಲ.

ತಮ್ಮ ಸಿದ್ಧಾಂತಗಳ ಕಾರಣಗಳು ಸಂಪೂರ್ಣವಾಗಿ ಪ್ರಯೋಗಾತ್ಮಕವಾದವು ಎಂದು ಭಾವಿಸಬೇಕಾಗಿಲ್ಲ. ಅಣುಸಿದ್ಧಾಂತವು ಆಧುನಿಕ ಯುಗದಲ್ಲಿ ರಸಾಯನವಿಜ್ಞಾನದ ವಾಸ್ತವಗಳನ್ನು ವಿವರಿಸಲು ಮರುಜನ್ಮ ಪಡೆಯಿತು, ಆದರೆ ಈ ವಿವರಗಳು ಗ್ರೀಕರಿಗೆ ಗೊತ್ತಿರಲಿಲ್ಲ. ಹಿಂದಿನ ಕಾಲದಲ್ಲಿ ಪ್ರಯೋಗಾತ್ಮಕ ವೀಕ್ಷಣೆಗೂ ತಾರ್ಕಿಕ ಮಂಡನೆಗೂ ಅಂಥ ನಿರ್ದಿಷ್ಟ ವ್ಯತ್ಯಾಸವೇನೂ ಇರಲಿಲ್ಲ. ವೀಕ್ಷಣೆಯ ಸಂಗತಿಗಳ ಬಗ್ಗೆ ಪಾರ್ಮನೈಡೀಸ್‌ಗೆ ಆದರವಿರಲಿಲ್ಲ ಎಂಬುದು ನಿಜವೇ; ಆದರೆ ಅನಕ್ಸಾಗೊರಾಸ್ ಮತ್ತು ಎಂಪೆಡೋಕ್ಲೀಸ್‌ರು ಜಲ ಗಡಿಯಾರಗಳು ಮತ್ತು ತಿರುಗುವ ಪಾತ್ರೆಗಳ ವೀಕ್ಷಣೆಗಳನ್ನು ಸಂಯೋಜಿಸಿ ತಮ್ಮ ತತ್ವಜಿಜ್ಞಾಸೆಯನ್ನು ರೂಪಿಸಿದರು. ಸೂಫಿಸ್ಟರು ಬರುವವರೆಗೂ, ಅಧಿಕ ವೈಚಾರಿಕತೆ ಮತ್ತು ಅಲ್ಪ ವೀಕ್ಷಣೆಗಳನ್ನು ಸೇರಿಸುವ ಮೂಲಕ ತತ್ವಜಿಜ್ಞಾಸೆ ಮತ್ತು ವಿಶ್ವವಿಜ್ಞಾನವನ್ನು ಸಂಪೂರ್ಣವಾಗಿ ಸ್ಥಾಪಿಬಹುದೆಂಬುದರ ಬಗ್ಗೆ ಯಾವ ತತ್ವಜ್ಞಾನಿಯೂ ಅನುಮಾನಪಟ್ಟಂತೆ ಕಾಣಲಿಲ್ಲ. ಅದೃಷ್ಟವಶಾತ್, ಎರಡು ಸಾವಿರ ವರ್ಷಗಳಿಗೂ ಹೆಚ್ಚಿನ ಕಾಲದ ಬಳಿಕ ಸ್ವಲ್ಪ ಆಧಾರವನ್ನು ಕಂಡುಕೊಳ್ಳಲಾದ ಆಧಾರಕಲ್ಪನೆಯೊಂದನ್ನು ಪರಮಾಣುಸಿದ್ಧಾಂತಿಗಳು ಮಾಡಿದರು. ಆದರೆ ತಮ್ಮ ಕಾಲದಲ್ಲಿಯೇ ಅವರ

ಶ್ರದ್ಧೆಗೆ ಯಾವುದೇ ಅಸ್ತಿವಾರವಿಲ್ಲದೆ ಅದು ಬಡಕಲಾಗಿತ್ತು.[೪೧]

ಲ್ಯೂಸಿಪ್ಪಸ್ ತನ್ನ ಕಾಲದ ಇತರ ತತ್ವಜ್ಞಾನಿಗಳಂತೆಯೇ, ಪಾರ್ಮೆನೈಡೀಸ್‌ನ ವಾದಗಳನ್ನು ಸುಸ್ಪಷ್ಟವಾದ ಚಲನೆ ಮತ್ತು ಬದಲಾವಣೆಯ ವಾಸ್ತವದೊಡನೆ ಹೊಂದಿಸಲು ಆಸಕ್ತನಾಗಿದ್ದ. ಅರಿಸ್ಟಾಟಲ್[೪೨] ಹೇಳುವುದೆಂದರೆ:

'ಈ ಅಭಿಪ್ರಾಯಗಳು (ಪಾರ್ಮೆನೈಡೀಸ್‌ನವು) ತಾರ್ಕಿಕವಾಗಿ ದ್ವಂದ್ವಾತ್ಮಕ ಚರ್ಚೆಗಳ ಮೂಲಕ ಸಾಗುವಂತೆ ಕಂಡರೂ, ವಾಸ್ತವಗಳನ್ನು ಪರಿಗಣಿಸಿದಾಗ, ಅವುಗಳನ್ನು ನಂಬುವುದು ಮಾತ್ರ ಹುಚ್ಚುತನದ ಬಾಗಿಲು ಎನಿಸುತ್ತದೆ. ಬೆಂಕಿ ಮತ್ತು 'ಮಂಜು' ಎರಡೂ ಒಂದೇ ಎಂದು ಹೇಳುವುದು ಹುಚ್ಚನಿಗೂ ಮಿಗಿಲಾಗಿ ತಲೆ ಕೆಟ್ಟಿರುವವನಿಗೆ ಮಾತ್ರ ಸರಿ; ಸಮಂಜಸವಾದುದು ಹಾಗೂ ರೂಢಿಯಲ್ಲಿ ಸಮಂಜಸವೆನ್ನಿಸುವಂತೆ ಕಾಣಿಸುವುದು ಇವೆರಡರ ನಡುವಣ ವ್ಯತ್ಯಾಸವನ್ನು ಕಾಣದಿರುವ ಮಟ್ಟಿಗೆ ಕೆಲವರು ಹುಚ್ಚರಿರುತ್ತಾರೆ.'

ಆದರೆ, ಇಂದ್ರಿಯಗ್ರಾಹ್ಯತೆಯೊಡನೆ ಹೊಂದಿಕೊಂಡ ಹಾಗೂ ವಸ್ತುಗಳ ಆಗುವ ಮತ್ತು ಗತವಾಗುವ ಅಥವಾ ಚಲನೆ ಮತ್ತು ಬಾಹುಳ್ಯಗಳನ್ನು ನಿರಾಕರಿಸದ ಸಿದ್ಧಾಂತ ತನ್ನದೆಂದು ಲ್ಯೂಸಿಪ್ಪಸ್ ತಿಳಿದಿದ್ದ. ಈ ವಿನಾಯಿತಿಗಳನ್ನವನು ಕಲ್ಪನಾತ್ಮಕ ವಾಸ್ತವಗಳಿಗೆ ತೋರಿಸಿದ್ದ: ಮತ್ತೊಂದೆಡೆ, ಶೂನ್ಯವಿಲ್ಲದಿದ್ದರೆ ಚಲನೆಯಿಲ್ಲ ಎಂದು ಏಕತ್ವವಾದಿಗಳಿಗೆ ಶರಣಾಗಿದ್ದ. ಇದರಿಂದಾಗಿ ಅವನು ಮಂಡಿಸುವ ಸಿದ್ಧಾಂತ ಹೀಗಾಯಿತು: 'ಶೂನ್ಯವು ಇರುವುದಲ್ಲ ಮತ್ತು ಇರುವುದಲ್ಲದರ ಭಾಗವೂ ಅಲ್ಲ, ನಿರ್ದಿಷ್ಟ ಅರ್ಥದಲ್ಲಿ ಈ ಶಬ್ದವು ಶುದ್ಧ ವಸ್ತುಪೂರಿತಸ್ಥಿತಿ. ಆದರೆ ಈ ವಸ್ತುಪೂರಿತಸ್ಥಿತಿ ಒಂದು ಅಲ್ಲ; ಅದಕ್ಕೆ ವಿರುದ್ಧವಾಗಿ, ಅಸಂಖ್ಯವೂ ತಮ್ಮ ಗಾತ್ರದಲ್ಲಿ ಅಗೋಚರವೂ ಆದವು ಅನೇಕ. ಈ ಅನೇಕವು ಶೂನ್ಯದಲ್ಲಿ ಚಲಿಸುತ್ತದೆ (ಯಾಕೆಂದರೆ ಶೂನ್ಯ ಎಂಬುದಿದೆ): ಅವು ಒಟ್ಟಾಗುವುದರ ಮೂಲಕ ಆಗುವುದನ್ನು ನಿರ್ಮಿಸುತ್ತದೆ, ಮತ್ತು ಬೇರಾಗುವುದರ ಮೂಲಕ ಗತವಾಗುತ್ತದೆ. ಅದಕ್ಕೂ ಮಿಗಿಲಾಗಿ, ಪರಸ್ಪರ ಸಂಪರ್ಕದಲ್ಲಿರುವಾಗ (ಯಾಕೆಂದರೆ ಅವು ಒಂದಲ್ಲ) ಕ್ರಿಯಾಶೀಲವಾಗುತ್ತವೆ ಮತ್ತು ಕ್ರಿಯೆಗಳಿಗೊಳಗಾಗುತ್ತವೆ, ಹಾಗೂ ಒಟ್ಟಾಗಿ ಕೂಡಿದಾಗ ಉತ್ಪಾದಿಸುತ್ತವೆ ಮತ್ತು ಹೆಣೆದುಕೊಳ್ಳುತ್ತವೆ. ಇನ್ನೊಂದು ಕಡೆ, ವಸ್ತುಸ್ಥಿತಿಯಾದ ಒಂದರಿಂದ ಬಾಹುಳ್ಯವಾಗಲಾರದು, ಹಾಗೆಯೇ ವಸ್ತುಸ್ಥಿತಿಯಾದ ಬಾಹುಳ್ಯದಿಂದ ಒಂದು ಆಗಲಾರದು: ಇದು ಅಸಾಧ್ಯ'.

---

೪೧. ಪರಮಾಣುಸಿದ್ಧಾಂತಿಗಳ ಸಿದ್ಧಾಂತದ ತಾರ್ಕಿಕವೂ ಗಣಿತಾತ್ಮಕವೂ ಆದ ನೆಲೆಗಳಿಗೆ ನೋಡಿ, ಗ್ಯಾಸ್ಟನ್ ಮಿಲ್‌ಹ್ಯಾಂಡ್, 'ಲ ಫಿಲಾಸಫಿ ಜಿಯೋಮೆಟರ್ಸ್‌ದ ಲ ಗ್ರೀಸ್', ಅಧ್ಯಾಯ ೪

೪೨. 'ಆನ್ ಜನರೇಷನ್ ಅಂಡ್ ಕರಪ್ಷನ್', ಪು. ೩೨೫ಎ

ಇಲ್ಲಿಯವರೆಗೆ ಎಲ್ಲರೂ ಒಪ್ಪಿಕೊಂಡು ಬಂದಿರುವ ಒಂದು ಅಂಶವಿತ್ತು ಎಂಬುದನ್ನು ನೋಡಬಹುದು.. ಅದೆಂದರೆ ಬಾಹುಳ್ಯದಲ್ಲಿ ಚಲನೆ ಇರಲು ಸಾಧ್ಯವಿಲ್ಲ ಎಂಬುದು. ಸದಾ ಕಾಲ ಅಸ್ತಿತ್ವದಲ್ಲಿದ್ದದ್ದೇ ಆದರೆ, ಬಾಹುಳ್ಯದಲ್ಲಿ ಚಕ್ರನೇಮಿಗತಿಯ ಚಲನೆಯಿರಬಹುದು. ಇಲ್ಲಿನ ತಿಳಿವಳಿಕೆಯೆಂದರೆ ವಸ್ತುವೊಂದು ಶೂನ್ಯದಲ್ಲಿ ಮಾತ್ರ ಚಲಿಸಬಹುದು, ಮತ್ತು ಬಾಹುಳ್ಯದಲ್ಲಿ ಖಾಲಿ ಪ್ರದೇಶವಿರಲಾರದು ಎಂಬುದು. ಚಲನೆಯು ಬಾಹುಳ್ಯದಲ್ಲಿ ಎಂದಿಗೂ ಆರಂಭವಾಗಲಾರದು ಎಂದು ಕ್ರಮಬದ್ಧವಾಗಿಯೇ ವಾದಿಸಬಹುದು; ಆದರೆ ಅದು ಸಂಭವಿಸಲೇ ಸಾಧ್ಯವಿಲ್ಲ ಎಂಬುದನ್ನು ಅಂಥದೇ ಕ್ರಮಬದ್ಧತೆಯಿಂದ ವಾದಿಸಲಾಗದು. ಆದರೆ, ಗ್ರೀಕರ ದೃಷ್ಟಿಯಲ್ಲಿ, ಪಾರ್ಮನೈಡೀಸ್‌ನ ಬದಲಾಗದ ಜಗತ್ತನ್ನು ಮಾತಿಲ್ಲದೆ ಒಪ್ಪಿಕೊಳ್ಳಬೇಕು, ಇಲ್ಲವೇ ಶೂನ್ಯವಿದೆ ಎಂದು ಒಪ್ಪಬೇಕು.

ಇಲ್ಲದಿರುವ ವಿರುದ್ಧ ಪಾರ್ಮನೈಡೀಸ್‌ನ ವಾದಗಳು ಶೂನ್ಯದ ವಿರುದ್ಧ ತಾರ್ಕಿಕವಾಗಿ ಅಲ್ಲಗಳೆಯಲಾಗದ್ದು ಎಂಬುದನ್ನು, ಏನೂ ಇಲ್ಲವೆಂದು ಭಾವಿಸಿದ್ದ ಕಡೆ ಗಾಳಿ ಇರುತ್ತದೆ ಎಂದು ಕಂಡುಕೊಂಡದ್ದು ಗಟ್ಟಿಗೊಳಿಸಿತು. (ತರ್ಕ ಮತ್ತು ವೀಕ್ಷಣೆಗಳ ಗೊಂದಲಮಯ ಮಿಶ್ರಣ ಸಾಮಾನ್ಯವಾಗಿದ್ದುದರ ಒಂದು ನಿದರ್ಶನ ಇದು.) ಪಾರ್ಮನೈಡೀಸ್‌ನ ನಿಲವನ್ನು ನಾವು ಈ ರೀತಿ ಮಂಡಿಸಬಹುದು: 'ಶೂನ್ಯವಿದೆಯೆಂದು ನೀವು ಹೇಳುತ್ತೀರಿ, ಹೀಗಾಗಿ ಶೂನ್ಯ ಏನೂ ಅಲ್ಲದ್ದು ಅಲ್ಲ; ಹೀಗಾಗಿ ಅದು ಶೂನ್ಯವಲ್ಲ.' ಪರಮಾಣುಸಿದ್ಧಾಂತಿಗಳು ಈ ವಾದಕ್ಕೆ ಉತ್ತರಿಸಿದರೆಂದು ಹೇಳಲಾಗದು. ಚಲನೆ ಎಂಬುದು ಅನುಭವಸತ್ಯ, ಕಲ್ಪಿಸಿಕೊಳ್ಳಲು ಎಷ್ಟೇ ಕಷ್ಟವಾದರೂ ಶೂನ್ಯವಿರಬೇಕು ಎಂದು ಹೇಳುವುದರ ಮೂಲಕ ಅದನ್ನು ಅವಗಣಿಸುತ್ತೇವೆ ಎಂದವರು ಹೇಳಿದರು.[೪೩]

ಈ ಸಮಸ್ಯೆಯ ಮುಂದಿನ ಚರಿತ್ರೆಯನ್ನು ಪರುಶೀಲಿಸೋಣ. ತಾರ್ಕಿಕ ತೊಂದರೆಯನ್ನು ನಿವಾರಿಸಿಕೊಳ್ಳಲು, ಮೊದಲಿಗೆ ಮತ್ತು ಬಹು ಮುಖ್ಯವಾಗಿ ಭೌತದ್ರವ್ಯ (ಮ್ಯಾಟರ್) ಮತ್ತು ಅವಕಾಶ (ಸ್ಪೇಸ್) ನಡುವಣ ವ್ಯತ್ಯಾಸವನ್ನು ಗುರುತಿಸುವುದು. ಈ ದೃಷ್ಟಿಕೋನದ ಪ್ರಕಾರ, ಅವಕಾಶ ಏನೂ ಅಲ್ಲದ್ದಲ್ಲ, ಆದರೆ ಒಂದು ಭಾಗದ ಸ್ವರೂಪದ್ದು, ಅದರಲ್ಲಿ ಯಾವುದೇ ಭೌತದ್ರವ್ಯ ತುಂಬಿರಬಹುದು

---

೪೩. ಬೈಲೀ (ಪೂರ್ವೋಕ್ತ ಪು. ೭೫) ಇದಕ್ಕೆ ವಿರುದ್ಧವಾಗಿ, ಲ್ಯೂಸಿಪ್ಪಸ್ ಬಳಿ ಇದಕ್ಕೆ ಉತ್ತರವಿತ್ತು, ಅದು 'ಅತೀವ ಸೂಕ್ಷ್ಮ'ವಾಗಿತ್ತು. ಸಾರತಃ ಅದು ಭೌತಿಕವಲ್ಲದ ಯಾವುದೋ ಒಂದರ (ಶೂನ್ಯದ) ಅಸ್ತಿತ್ವವನ್ನು ಒಪ್ಪುವುದರಲ್ಲಿದೆ. ಹಾಗೆಯೇ ಬರ್ನೆಟ್ ಹೇಳುತ್ತಾರೆ: 'ಪ್ರಾಚೀನ ಕಾಲದ ಮಹಾ ಭೌತವಾದಿಗಳೆಂದು ಭಾವಿಸುವ ಪರಮಾಣುಸಿದ್ಧಾಂತಿಗಳು ಕಾಯವೊಂದಿಲ್ಲದೆಯೇ ವಸ್ತುವೊಂದು ವಾಸ್ತವವಾಗಿರಬಹುದು ಎಂದು ಹೇಳುವುದರಲ್ಲಿ ಮೊದಲಿಗರೆಂಬುದು ಕುತೂಹಲಕಾರಕ ಅಂಶ.'

ಅಥವಾ ಇಲ್ಲದಿರಬಹುದು. ಅರಿಸ್ಟಾಟಲ್ (ಫಿಸಿಕ್ಸ್, ೨೦೮ ಬಿ) ಹೀಗೆನ್ನುತ್ತಾನೆ: 'ಶೂನ್ಯವು ಇದೆ ಎಂಬ ಸಿದ್ಧಾಂತವು ಸ್ಥಳವನ್ನೊಳಗೊಂಡುದನ್ನು ಸೂಚಿಸುತ್ತದೆ; ಯಾಕೆಂದರೆ ಶೂನ್ಯ ಎಂದರೆ ಕಾಯವಿಲ್ಲದ್ದು ಎಂದು ಹೇಳಲಾಗುತ್ತದೆ.' ಈ ದೃಷ್ಟಿಕೋನವನ್ನು ನ್ಯೂಟನ್ ಅತ್ಯಂತ ಸ್ಪಷ್ಟವಾಗಿ ಹೇಳುತ್ತಾನೆ; ಪರಿಪೂರ್ಣ ಅವಕಾಶವನ್ನವನು ಒತ್ತಿ ಹೇಳುತ್ತಾನೆ, ಮತ್ತು ಅದರಂತೆ ಪರಿಪೂರ್ಣವು ಸಾಪೇಕ್ಷ ಚಲನೆಯಿಂದ ಭಿನ್ನವಾಗಿಸುತ್ತದೆ. ಕೊಪರ್ನಿಕಸ್ ವಿವಾದದಲ್ಲಿ, ಎರಡೂ ಪಕ್ಷಗಳು (ಆ ಕುರಿತು ಎಷ್ಟೇ ಕಡಿಮೆ ಅರ್ಥಮಾಡಿಕೊಂದಿದ್ದರೂ) ಈ ದೃಷ್ಟಿಕೋನಕ್ಕೆ ಬದ್ಧರಾಗಿದ್ದರು, ಯಾಕೆಂದರೆ 'ಸ್ವರ್ಗಗಳು ಪೂರ್ವದಿಂದ ಪಶ್ಚಿಮಕ್ಕೆ ತಿರುಗುತ್ತದೆ' ಎಂದು ಹೇಳುವುದಕ್ಕೂ 'ಭೂಮಿಯು ಪಶ್ಚಿಮದಿಂದ ಪೂರ್ವದ ಕಡೆಗೆ ತಿರುಗುತ್ತದೆ' ಎಂದು ಹೇಳುವುದಕ್ಕೂ ಸ್ವಲ್ಪ ವ್ಯತ್ಯಾಸವಿದೆ ಎಂದವರು ಭಾವಿಸಿದರು. ಎಲ್ಲ ಚಲನೆಯೂ ಸಾಪೇಕ್ಷವಾಗಿದ್ದರೆ, ಈ ಎರಡು ಹೇಳಿಕೆಗಳೂ, 'ಜಾನ್ ಜೇಮ್ಸ್‌ನ ತಂದೆ' ಎನ್ನುವುದಕ್ಕೂ 'ಜೇಮ್ಸ್ ಜಾನ್‌ನ ಮಗ' ಎಂದಂತೆಯೇ ಒಂದನ್ನೇ ಬೇರೆ ಬೇರೆ ರೀತಿಯಲ್ಲಿ ಹೇಳಿದಂತೆ. ಆದರೆ ಎಲ್ಲ ಚಲನೆಯೂ ಸಾಪೇಕ್ಷವಾದುದಾದರೆ ಮತ್ತು ಅವಕಾಶವು ಅಸ್ತಿತ್ವದಲ್ಲಿಲ್ಲದಿದ್ದರೆ, ನಮಗೆ ಪಾರ್ಮನೈಡೀಸ್ ವಾದವೇ ಉಳಿಯುವಂತಹುದ್ದು.

ಮೊದಮೊದಲಿನ ಗ್ರೀಕ್ ತತ್ತ್ವಜ್ಞಾನಿಗಳ ಇಂತಹದೇ ವಾದಗಳ ಡೆಕಾರ್ಟೆ, ವಿಸ್ತರಣವು ಭೌತದ್ರವ್ಯದ ಸಾರಲಕ್ಷಣ, ಹೀಗಾಗಿ ಭೌತದ್ರವ್ಯವು ಎಲ್ಲೆಡೆಯೂ ವ್ಯಾಪಿಸಿದೆ ಎಂದು ಹೇಳುತ್ತಾನೆ. ಅವನ ಪ್ರಕಾರ ವಿಸ್ತರಣ ಎಂಬುದೊಂದು ವಿಶೇಷಣವೇ ಹೊರತು ಸ್ವತಂತ್ರ ಅಸ್ತಿತ್ವದ್ದಲ್ಲ, ಅದರಲ್ಲಿ ಅಸ್ತಿತ್ವದಲ್ಲಿರುವುದು ಭೌತದ್ರವ್ಯ. ಮತ್ತು ಅದರಲ್ಲಿ ಅಸ್ತಿತ್ವದಲ್ಲಿರುವುದೇನೂ ಇಲ್ಲದಿದ್ದರೆ ಅದು ಇರಲು ಸಾಧ್ಯವಿಲ್ಲ. ಅವನ ಪ್ರಕಾರ ಖಾಲಿ ಅವಕಾಶವು ಸುಖಪಡುವ ಚೇತನವೊಂದಿಲ್ಲದ ಸುಖದಂತೆಯೇ ಅಸಂಗತವಾದುದು. ಸ್ವಲ್ಪ ಭಿನ್ನ ನೆಲೆಯಲ್ಲಿ ಲೀಬ್‌ನಿಜ಼್ ಕೂಡ ವಸ್ತುಪೂರಿತವನ್ನು ನಂಬಿದ್ದ, ಆದರೆ ಅವಕಾಶವೆಂಬುದು ಸಂಬಂಧಗಳ ಒಂದು ವ್ಯವಸ್ಥೆಯಷ್ಟೆ ಎಂದು ಹೇಳಿದ. ಈ ವಿಷಯದ ಬಗ್ಗೆ ಅವನ ಮತ್ತು ನ್ಯೂಟನ್ ನಡುವೆ ಪ್ರಸಿದ್ಧವಾದೊಂದು ವಿವಾದವಿತ್ತು, ನ್ಯೂಟನ್‌ನನ್ನು ಕ್ಲಾರ್ಕ್ ಪ್ರತಿನಿಧಿಸಿದ್ದ. ಈ ವಿವಾದವು ಐನ್‌ಸ್ಟೈನ್ ಕಾಲದವರೆಗೂ ಉಳಿದು ಬಂದಿತ್ತು, ಅವನ ಸಿದ್ಧಾಂತವು ಅಂತಿಮವಾಗಿ ಲೀಬ್‌ನಿಜ಼್‌ಗೆ ಗೆಲವನ್ನು ತಂದಿತು.

ಒಂದಲ್ಲ ಒಂದರ್ಥದಲ್ಲಿ ಭೌತದ್ರವ್ಯವು ಎಂದೂ, ಈಗಲೂ ನಂಬಿರುವ ಆಧುನಿಕ ಭೌತವಿಜ್ಞಾನಿಯು, ಖಾಲಿ ಅವಕಾಶವನ್ನು ನಂಬುವುದಿಲ್ಲ. ಭೌತದ್ರವ್ಯವಿಲ್ಲದೆಡೆ ಮತ್ತೇನೋ ಇರುತ್ತದೆ, ಅದರಲ್ಲೂ ಬೆಳಕಿನ ತರಂಗಗಳು. ಪಾರ್ಮನೈಡೀಸ್‌ನ ವಾದಗಳ ಮೂಲಕ ಭೌತದ್ರವ್ಯವು ತತ್ತ್ವಜ್ಞಾನದಲ್ಲಿ ಪಡೆದುಕೊಂಡಿದ್ದ ಉನ್ನತ ಸ್ಥಾನವು

ಅದಕ್ಕೀಗ ಉಳಿದಿಲ್ಲ. ಅದು ಬದಲಾಗದ ದ್ರವ್ಯ, ಆದರೆ ಅದು ಸಂಗತಿಗಳನ್ನು ಕ್ರೋಡೀಕರಿಸುವ ಒಂದು ರೀತಿ. ಕೆಲವು ದ್ರವ್ಯಗಳು ಭೌತವಸ್ತುಗಳೆಂದು ಕರೆಯಲಾಗುವ ಗಂಪಿಗೆ ಸೇರಿದರೆ, ಬೆಳಕಿನ ತರಂಗಗಳಂತಹ ಉಳಿದವು ಹಾಗಿರುವುದಿಲ್ಲ. ಜಗತ್ತಿನ ಸಾಮಗ್ರಿಯೆಂದರೆ ಸಂಗತಿಗಳು, ಅದರಲ್ಲಿನ ಪ್ರತಿಯೊಂದೂ ಅಲ್ಪಾಯುಷಿ. ಈ ರೀತಿಯಲ್ಲಿ, ಆಧುನಿಕ ಭೌತವಿಜ್ಞಾನವು ಪಾರ್ಮನೈಡೀಸ್‌ಗಿಂತ ಹೆರಾಕ್ಲಿಟಸ್ ಪಕ್ಷದಲ್ಲಿ ನಿಲ್ಲುತ್ತದೆ. ಆದರೆ ಐನ್‌ಸ್ಟೈನ್ ಮತ್ತು ಕ್ವಾಂಟಂ ಸಿದ್ಧಾಂತಗಳು ಬರುವವರೆಗೆ ಅದು ಪಾರ್ಮನೈಡೀಸ್ ಪರವಾಗಿತ್ತು.

ಅವಕಾಶದ ಬಗ್ಗೆ ಹೇಳುವುದಾದರೆ, ಆಧುನಿಕ ದೃಷ್ಟಿಕೋನವೆಂದರೆ ಅದು ನ್ಯೂಟನ್ ಹೇಳಿದಂತೆ ದ್ರವ್ಯವೂ ಅಲ್ಲ, ಮತ್ತು ಲ್ಯೂಸಿಪ್ಪಸ್ ಮತ್ತು ಡೆಮಾಕ್ರಿಟಸ್ ಹೇಳಬೇಕಾಗಿದ್ದ ರೀತಿಯಂತೆ ಡೆಕಾರ್ಟೆ ಯೋಚಿಸಿದ ವಿಸ್ತರಣಗೊಂಡ ಕಾಯಗಳ ಒಂದು ವಿಶೇಷಣವೂ ಅಲ್ಲ, ಅದರ ಬದಲು ಲೀಬ್‌ನಿಜ಼್ ನಿಲವಿನಂತೆ ಸಂಬಂಧಗಳ ಒಂದು ವ್ಯವಸ್ಥೆ. ಈ ನಿಲವು ಶೂನ್ಯದ ಅಸ್ತಿತ್ವದೊಡನೆ ಹೊಂದಿಕೊಳ್ಳುತ್ತದೋ ಇಲ್ಲವೋ ಎಂಬ ಬಗ್ಗೆ ಸ್ಪಷ್ಟತೆಯಿಲ್ಲ. ಅಮೂರ್ತ ತಾರ್ಕಿಕತೆಯ ವಿಷಯವಾಗಿ ಅದು ಶೂನ್ಯದ ಅಸ್ತಿತ್ವದೊಡನೆ ಹೊಂದಾಣಿಕೆ ಮಾಡಿಕೊಳ್ಳಬಹುದು. ಯಾವೆರಡು ವಸ್ತುಗಳ ನಡುವೆಯೂ ಸ್ವಲ್ಪವೋ ಹೆಚ್ಚೋ ಅಂತರವಿರುತ್ತದೆ, ಆದರೆ ಅಂತರವು ಅದರ ನಡುವಣ ವಸ್ತುಗಳ ಅಸ್ತಿತ್ವವನ್ನು ಸೂಚಿಸುವುದಿಲ್ಲ. ಆದರೆ ಅಂತಹ ದೃಷ್ಟಿಕೋನವು ಆಧುನಿಕ ಯುಗದ ಭೌತವಿಜ್ಞಾನದಲ್ಲಿ ಉಪಯೋಕ್ಕೆ ಬರುವುದಿಲ್ಲ. ಐನ್‌ಸ್ಟೈನ್ ನಂತರ ಅಂತರ ಇರುವುದು ಸಂಗತಿಗಳ ನಡುವೆಯೇ ಹೊರತು ವಸ್ತುಗಳ ನಡುವೆ ಅಲ್ಲ, ಅದು ಕಾಲ ಮತ್ತು ಅವಕಾಶ (ಟೈಮ್ ಅಂಡ್ ಸ್ಪೇಸ್)ಗಳನ್ನೊಳಗೊಂಡುದು. ಸಾರತಃ ಅದೊಂದು ಕಾರಣರೂಪಿ ಪರಿಕಲ್ಪನೆ; ಆಧುನಿಕ ಭೌತವಿಜ್ಞಾನದ ಪ್ರಕಾರ ದೂರದಲ್ಲಿ ಯಾವ ಕ್ರಿಯೆಯೂ ಇರಲಾರದು. ಆದರೆ ಇವೆಲ್ಲವೂ ಪ್ರಯೋಗಾತ್ಮಕ ನೆಲೆಯಲ್ಲಿ ನಿಂತವೇ ಹೊರತು ತಾರ್ಕಿಕ ನೆಲೆಯಲ್ಲಲ್ಲ. ಅದರಲ್ಲೂ ಆಧುನಿಕ ದೃಷ್ಟಿಕೋನವನ್ನು ವಿಕಲ ಸಮೀಕರಣಗಳ (ಡಿಫರೆನ್ಷಿಯಲ್ ಈಕ್ವೇಷನ್) ಮೂಲಕವಾಗಿ ಹೊರತು ಬೇರೆ ರೀತಿಯಲ್ಲಿ ವ್ಯಕ್ತಪಡಿಸಲಾಗುವುದಿಲ್ಲ; ಹೀಗಾಗಿ ಅದು ಪ್ರಾಚೀನ ಕಾಲದ ತತ್ವಜ್ಞಾನಿಗಳಿಗೆ ಅರ್ಥವಾಗುತ್ತಿರಲಿಲ್ಲ.

ಅದರಂತೆ, ಪರಮಾಣುಸಿದ್ಧಾಂತಿಗಳ ದೃಷ್ಟಿಕೋನಗಳ ತಾರ್ಕಿಕ ಬೆಳವಣಿಗೆಯೆಂದರೆ ನ್ಯೂಟನ್‌ನ ಪರಿಪೂರ್ಣ ಅವಕಾಶವೇ ಆಗಿದೆ, ಅದು ಇಲ್ಲದುದಕ್ಕೆ ಅಸ್ತಿತ್ವವನ್ನು ಆರೋಪಿಸುವ ಕಷ್ಟವನ್ನೆದುರಿಸಬಲ್ಲುದು. ಈ ಸಿದ್ಧಾಂತಕ್ಕೆ ಯಾವುದೇ ತಾರ್ಕಿಕ ಅಭ್ಯಂತರಗಳಿಲ್ಲ. ಮುಖ್ಯ ಅಭ್ಯಂತರವೆಂದರೆ ಪರಿಪೂರ್ಣ ಅವಕಾಶವನ್ನು ತಿಳಿದುಕೊಳ್ಳುವುದೇ ಸಾಧ್ಯವಿಲ್ಲ ಮತ್ತು ಹಾಗಾಗಿ ಪ್ರಯೋಗಾತ್ಮಕ

ವಿಜ್ಞಾನದಲ್ಲಿ ಆವಶ್ಯಕವಾದ ಆಧಾರಕಲ್ಪನೆ ಇರಲಾರದು. ಇದಕ್ಕಿಂತ ಹೆಚ್ಚಿನ ವ್ಯಾವಹಾರಿಕ ಅಭ್ಯಂತರವೆಂದರೆ ಭೌತವಿಜ್ಞಾನವು ಅದಿಲ್ಲದೆಯೇ ಮುಂದುವರಿಯಬಹುದು. ಆದರೆ ಪರಮಾಣುಸಿದ್ಧಾಂತಿಗಳ ಮಾತು ತಾರ್ಕಿಕವಾಗಿ ಉಳಿಯುತ್ತದೆ, ಅದು ಯಾವುದೇ ಪ್ರಾಚೀನ ತತ್ವಜ್ಞಾನಿಗಳ ಜಗತ್ತಿಗಿಂತ ವಾಸ್ತವ ಜಗತ್ತಿಗೆ ಹೆಚ್ಚು ಹತ್ತಿರವಾದುದು.

ಡೆಮಾಕ್ರಿಟಸ್ ತನ್ನ ಸಿದ್ಧಾಂತಗಳ ಬಗ್ಗೆ ಸಾಕಷ್ಟು ವಿವರವಾಗಿ ಕೆಲಸ ಮಾಡಿದ; ಅವನ ಅನೇಕ ವಿವರಣೆಗಳು ಆಸಕ್ತಿದಾಯಕವಾಗಿವೆ. ಪ್ರತಿ ಪರಮಾಣುವೂ ದುರ್ಭೇದ್ಯ ಹಾಗೂ ವಿಭಜನಾತೀತ, ಯಾಕೆಂದರೆ ಅದರಲ್ಲಿ ಶೂನ್ಯವೇ ಇರುವುದಿಲ್ಲ ಎಂದವನು ಹೇಳಿದ. ಸೇಬಿನ ಹಣ್ಣನ್ನು ಕತ್ತರಿಸಲು ನೀವು ಚಾಕುವನ್ನು ಬಳಸಿದಾಗ ಅದು ಒಳಹೊಗಲು ಖಾಲಿ ಜಾಗವನ್ನು ಗುರುತಿಸಬೇಕು, ಸೇಬಿನಲ್ಲಿ ಶೂನ್ಯವೇ ಇಲ್ಲದಿದ್ದರೆ, ಅದು ಸಂಪೂರ್ಣ ಅಭೇದ್ಯವಾಗಿರುತ್ತಿತ್ತು ಮತ್ತು ಹಾಗಾಗಿ ಭೌತಿಕವಾಗಿ ವಿಭಜನಾತೀತವಾಗುತ್ತಿತ್ತು. ಪ್ರತಿ ಪರಮಾಣುವೂ ಆಂತರಿಕವಾಗಿ ಬದಲಾವಣೆಗೊಳ್ಳದ್ದು ಮತ್ತು ಇದು ವಾಸ್ಯವದಲ್ಲಿ ಪಾರ್ಮನೈಡೀಸ್‌ನ ಒಂದು ಚಿಂತನೆ. ಪರಮಾಣುಗಳು ಮಾಡುವ ಒಂದೇ ಕ್ರಿಯೆಯೆಂದರೆ ಚಲಿಸಿ ಪರಸ್ಪರ ಘಟ್ಟಿಸಿಕೊಳ್ಳುವುದು, ಮತ್ತು ತಮ್ಮಲ್ಲಿ ಸೂಕ್ತ ಆಕಾರಗಳಿದ್ದಾಗ ಪರಸ್ಪರ ಹೆಣೆದುಕೊಂಡು ಒಂದಾಗುವುದು. ಅವು ಎಲ್ಲ ಬಗೆಯ ಆಕಾರಗಳಲ್ಲಿರುತ್ತವೆ; ಬೆಂಕಿಯಲ್ಲಿ ಸಣ್ಣ ಗೋಲಾಕಾರದ ಪರಮಾಣುಗಳಿರುತ್ತವೆ, ಆತ್ಮವೂ ಹಾಗೆಯೇ. ಘಟ್ಟನೆಯಿಂದ ಪರಮಾಣುಗಳು ಆವರ್ತ (ವೋರ್ಟೆಕ್ಸ್) ಗಳನ್ನುಂಟುಮಾಡುತ್ತವೆ, ಮತ್ತು ಅವು ಕಾಯಗಳನ್ನು ಉಂಟುಮಾಡುತ್ತ ಕೊನೆಗೆ ಜಗತ್ತುಗಳನ್ನು ಸೃಷ್ಟಿಸುತ್ತವೆ.[೪೪] ಅನೇಕ ಜಗತ್ತುಗಳಿವೆ, ಕೆಲವು ಬೆಳೆಯುತ್ತಿವೆ, ಕೆಲವು ಕ್ಷೀಣಿಸುತ್ತಿವೆ; ಕೆಲವದರಲ್ಲಿ ಸೂರ್ಯ ಅಥವಾ ಚಂದ್ರ ಇರದಿರಬಹುದು, ಕೆಲವದರಲ್ಲಿ ಅನೇಕವಿರಬಹುದು. ಪ್ರತಿ ಜಗತ್ತಿಗೂ ಆರಂಭ ಮತ್ತು ಅಂತ್ಯಗಳಿರುತ್ತವೆ. ಜಗತ್ತೊಂದು ತನಗಿಂತ ದೊಡ್ಡ ಜಗತ್ತು ಘಟ್ಟಿಸಿದಾಗ ನಾಶವಾಗಬಹುದು. ಈ ವಿಶ್ವವಿಜ್ಞಾನವನ್ನು ಶೆಲ್ಲಿಯ ಮಾತುಗಳಲ್ಲಿ ಸಂಕ್ಷೇಪವಾಗಿ ಹೇಳಬಹುದು:

ಜಗತ್ತುಗಳು ಜಗತ್ತುಗಳ ಮೇಲೆ ಸದಾ ಹೊರಳಾಡುತ್ತಿವೆ
ಸೃಷ್ಟಿಯಿಂದ ವಿನಾಶದ ತನಕ,
ನದಿಯ ಮೇಲಣ ನೀರ ಗುಳ್ಳೆಗಳಂತೆ
ಹೊಳೆಯುತ್ತ, ಬಿರಿಯುತ್ತ, ಘಟ್ಟಿಸುತ್ತ.

ಆದಿಮ ರಾಡಿಯಿಂದ ಜೀವ ಬೆಳೆಯಿತು. ಜೀವಂತ ವಸ್ತುಗಳಲ್ಲಿ ಸ್ವಲ್ಪ

---

೪೪. ಇದು ಸಂಭವಿಸುವುದೆಂದು ಭಾವಿಸಲಾದ ಹಾದಿಯಲ್ಲಿ, ನೋಡಿ, ಬೈಲೀ, ಪೂರ್ವೋಕ್ತ, ೧೩೮ ಅಡಿಟಿಪ್ಪಣಿ

ಬೆಂಕಿಯಿರುತ್ತದೆ, ಬಹುತೇಕ ಮಿದುಳಿನಲ್ಲಿ ಅಥವಾ ಎದೆಯಲ್ಲಿ (ಈ ವಿಷಯದಲ್ಲಿ ಪರಿಣತರಲ್ಲಿ ಅಭಿಪ್ರಾಯಭೇದಗಳಿವೆ). ಆಲೋಚನೆ ಒಂದು ಬಗೆಯ ಚಲನೆ, ಅದರಿಂದಾಗಿ ಅದು ಬೇರೆಡೆ ಚಲನೆಯನ್ನುಂಟುಮಾಡಬಲ್ಲುದು. ಗ್ರಹಿಕೆ ಮತ್ತು ಆಲೋಚನೆಗಳು ಭೌತಿಕ ಪ್ರಕ್ರಿಯೆಗಳು. ಗ್ರಹಿಕೆ ಎರಡು ಬಗೆಯದು: ಒಂದು ಇಂದ್ರಿಯಗಳದು, ಮತ್ತೊಂದು ತಿಳಿವಳಿಕೆಯದು. ಎರಡನೆ ಬಗೆಯ ಗ್ರಹಿಕೆಯು ಗ್ರಹಿಸಿದ ವಸ್ತುಗಳನ್ನು ಮಾತ್ರವೇ ಅವಲಂಬಿಸಿದ್ದರೆ, ಮೊದಲನೆಯ ಬಗೆಯು ನಮ್ಮ ಇಂದ್ರಿಯುಗಳ ಮೇಲೆಯೂ ಅವಲಂಬಿಸಿರುತ್ತದೆ, ಹೀಗಾಗಿ ವಂಚಿಸುವಂತಹುದಿರಬಹುದು. ಲಾಕ್‌ನಂತೆಯೇ ಡೆಮಾಕ್ರಿಟಸ್ ಕೂಡ ಬಿಸಿಪು, ರುಚಿ ಮತ್ತು ಬಣ್ಣಗಳು ವಾಸ್ತವದಲ್ಲಿ ವಸ್ತುಗಳಲ್ಲಿರುವುದಿಲ್ಲ, ಅವು ನಮ್ಮ ಇಂದ್ರಿಯಗಳಿಂದ ಆಗುವಂತಹುದು; ಆದರೆ ತೂಕ, ಸಾಂದ್ರತೆ ಮತು ಕಾಠಿಣ್ಯದಂತಹ ಗುಣಗಳು ವಸ್ತುತಃ ವಸ್ತುಗಳಲ್ಲಿಯೇ ಇರುವಂತಹುವು, ಎನ್ನುತ್ತಾನೆ.

ಡೆಮಾಕ್ರಿಟಸ್ ಅಪ್ಪಟ ಭೌತವಾದಿ; ಹಿಂದೆ ನೋಡಿದಂತೆ, ಅವನ ಪ್ರಕಾರ ಆತ್ಮವು ಪರಮಾಣುಗಳಿಂದಾದುದು, ಮತ್ತು ಅದು ಒಂದು ಭೌತಿಕ ಪ್ರಕ್ರಿಯೆ. ವಿಶ್ವಕ್ಕೆ ಯಾವುದೇ ಉದ್ದೇಶವಿಲ್ಲ; ಇರುವುದು ಯಾಂತ್ರಿಕ ನಿಯಮಗಳಿಗೊಳಪಟ್ಟ ಪರಮಾಣುಗಳು ಮಾತ್ರ. ಜನಜನಿತ ಮತಧರ್ಮದಲ್ಲಿ ಅವನಿಗೆ ಶ್ರದ್ಧೆಯಿರಲಿಲ್ಲ; ಅವನು ಅನಾಕ್ಸೊರಾಸ್‌ನ ವ್ಯವಹಾರಜ್ಞಾನ (ನೌಸ್)ದ ವಿರುದ್ಧ ವಾದಿಸಿದವನು. ನೈತಿಕತೆಯ ವಿಷಯದಲ್ಲಿ ಅವನು ಜೀವನದ ಗುರಿ ಉಲ್ಲಾಸ, ಹಾಗೂ ಅದನ್ನು ಪರಿಷ್ಕರಣೆ ಮತ್ತು ಸಂಸ್ಕೃತಿಗಳಿಂದ ಪಡೆಯಬಹುದೆಂದು ಭಾವಿಸಿದ್ದವನು. ಉಗ್ರ ಹಾಗೂ ಭಾವಪರವಶತೆಗಳ ವಿರೋಧಿ; ಅವನು ಲೈಂಗಿಕತೆಯನ್ನು ನಿರಾಕರಿಸಿದ, ಯಾಕೆಂದರೆ ಅದರಿಂದಾಗಿ ಪ್ರಜ್ಞೆಯು ಸೌಖ್ಯದಲ್ಲಿ ಮುಳಗಿಹೋಗುತ್ತದೆ. ಸ್ನೇಹವನ್ನವನು ಗೌರವಿಸಿದ, ಆದರೆ ಸ್ತ್ರೀಯರ ಬಗ್ಗೆ ಒಳ್ಳೆಯ ಅಭಿಪ್ರಾಯವಿರಲಿಲ್ಲ, ಮಕ್ಕಳನ್ನವನು ಅಪೇಕ್ಷಿಸಲಿಲ್ಲ, ಯಾಕೆಂದರೆ ಅವರ ಶಿಕ್ಷಣವು ತತ್ವಜ್ಞಾನಕ್ಕೆ ಅಡ್ಡಿಯಾಗುತ್ತದೆ. ಇದರಲ್ಲೆಲ್ಲ ಅವನು ಜೆರೆಮಿ ಬೆಂಥಮ್‌ನ ಹಾಗಿದ್ದವನು; ಹಾಗೆಯೇ ಗ್ರೀಕರು ಪ್ರಜಾಪ್ರಭುತ್ವವೆಂದು ಯಾವುದನ್ನು ಕರೆದರೋ ಅದರ ಬಗೆಗಿನ ಒಲವಿನಲ್ಲಿಯೂ.[೪೫]

ಡೆಮಾಕ್ರಿಟಸ್, ಕನಿಷ್ಠ ಪಕ್ಷ ನನ್ನ ಅಭಿಪ್ರಾಯದಲ್ಲಿ, ಆನಂತರದ ಪ್ರಾಚೀನ ಮತ್ತು ಮಧ್ಯಯುಗೀನ ಚಿಂತನೆಗಳನ್ನು ವಿಷಮಗೊಳಿಸಿದ ತಪ್ಪುಗಳಿಂದ ಸ್ವತಂತ್ರರಾಗಿದ್ದ ಗ್ರೀಕ್ ತತ್ವಜ್ಞಾನಿಗಳಲ್ಲಿ ಕೊನೆಯವನು. ಈವರೆಗೆ ನಾವು ವಿವೇಚಿಸಿದ ಎಲ್ಲ

---

೪೫. 'ಪ್ರಜಾಪ್ರಭುತ್ವದಲ್ಲಿನ ಬಡತನವು ನಿರಂಕುಶಾಧಿಕಾರದ ಸಮೃದ್ಧಿಗಿಂತ ಉತ್ತಮ, ಗುಲಾಮತನಕ್ಕಿಂತ ಸ್ವಾತಂತ್ರ್ಯವು ಉತ್ತಮವಾಗಿರುವಂತೆ' ಎಂಬುದವನ ಅಭಿಪ್ರಾಯ.

ತತ್ವಜ್ಞಾನಿಗಳೂ ಜಗತ್ತನ್ನು ಅರ್ಥಮಾಡಿಕೊಳ್ಳುವಲ್ಲಿ ನಿರಾಸಕ್ತ ಪ್ರಯತ್ನವನ್ನು ಮಾಡಿದವರು. ಅದನ್ನು ಅರ್ಥಮಾಡಿಕೊಳ್ಳುವುದು ಸುಲಭವೆಂದವರು ಭಾವಿಸಿದ್ದರು, ಆದರೆ ಈ ಆಶಾವಾದವಿಲ್ಲದೆ ಅವರಿಗೆ ಆರಂಭಿಸುವ ಧೈರ್ಯವಿರಲಿಲ್ಲ. ತಮ್ಮ ಕಾಲದ ಪೂರ್ವಾಗ್ರಹಗಳನ್ನಷ್ಟೇ ಒಳಗೊಳಗೊಳ್ಳದ ಅವರ ಮುಖ್ಯ ಮನೋಭಾವವು ಅಕೃತ್ರಿಮವಾದ ವೈಜ್ಞಾನಿಕತೆಯೇ. ಆದರದು ವೈಜ್ಞಾನಿಕ ಮಾತ್ರವೇ ಆಗಿರಲಿಲ್ಲ; ಅದು ಪ್ರತಿಭಾತ್ಮಕವೂ ವೀರ್ಯವಂತವೂ ಆಗಿದ್ದು ಸಾಹಸಮಯತೆಯ ಸಂತಸದಿಂದ ತುಂಬಿತ್ತು. ಧೂಮಕೇತುಗಳು, ಗ್ರಹಣಗಳು, ಮತ್ಸ್ಯಗಳು ಮತ್ತು ಸುಂಟರಗಾಳಿಗಳು, ಮತಧರ್ಮ ಮತ್ತು ನೈತಿಕತೆ – ಹೀಗೆ ಅವರಿಗೆ ಎಲ್ಲದರ ಬಗ್ಗೆಯೂ ಆಸಕ್ತಿಯಿತ್ತು.; ಹರಿತವಾದ ಬುದ್ಧಿಶಕ್ತಿಯೊಡನೆ ಅವರು ಮಕ್ಕಳ ಉತ್ಸಾಹವನ್ನೂ ಹೊಂದಿದ್ದರು.

ಈ ಹಂತದಿಂದ ಮುಂದಕ್ಕೆ, ಹಿಂದಿನ ಅಸೀಮ ಸಾಧನೆಯಿದ್ದರೂ, ಮೊದಲು ಪತನದ ಕೆಲವು ಬೀಜಗಳು ಕಾಣಿಸಿ, ಆನಂತರ ಕ್ರಮೇಣ ವಿನಾಶದತ್ತ ಸಾಗಿತು. ಡೆಮಾಕ್ರಿಟಸ್‌ನ ನಂತರದ ತತ್ವಜ್ಞಾನದಲ್ಲಿ ಇಲ್ಲದಿರುವುದೆಂದರೆ, ವಿಶ್ವಕ್ಕಿಂತ ಮನುಷ್ಯನಿಗೇ ಹೆಚ್ಚು ಪ್ರಾಧಾನ್ಯವಿತ್ತುದು. ಮೊದಲು ಸೂಫಿಸ್ಟರಿಂದ ಸಂದೇಹವಾದ ಬಂತು, ಅದು ಹೊಸ ಜ್ಞಾನವನ್ನು ಪಡೆಯುವ ಪ್ರಯತ್ನಕ್ಕಿಂತ ಹೆಚ್ಚಾಗಿ ನಮಗೆ ಹೇಗೆ ತಿಳಿಯುತ್ತದೆ ಎಂಬುದರತ್ತ ಒಯ್ದಿತು. ಆನಂತರ ಬಂದದ್ದು, ಸಾಕ್ರಟೀಸ್‌ನೊಡನೆ, ನೈತಿಕತೆಯ ಬಗೆಗಿನ ಒತ್ತು; ಪ್ಲೇಟೋನಿಂದ ಬಂದುದು ಇಂದ್ರಿಯಗ್ರಾಹ್ಯ ಜಗತ್ತನ್ನು ಅಲ್ಲಗಳೆದು ಸ್ವಯಂನಿರ್ಮಿತವಾದ ಪರಿಶುದ್ಧ ಚಿಂತನೆಯ ಜಗತ್ತಿಗಿತ್ತ ಮಾನ್ಯತೆ; ಅರಿಸ್ಟಾಟಲ್‌ನಿಂದ ಬಂದುದು, ವಿಜ್ಞಾನದಲ್ಲಿನ ಮೂಲ ಪರಿಕಲ್ಪನೆಯೆಂದರೆ ಉದ್ದೇಶ ಎಂಬ ಶ್ರದ್ಧೆ. ಪ್ಲೇಟೋ ಮತ್ತು ಅರಿಸ್ಟಾಟಲ್‌ರ ಪ್ರತಿಭೆಯ ಹೊರತಾಗಿಯೂ, ಅವರ ಚಿಂತನೆಗಳಲ್ಲಿನ ಅವಗುಣಗಳು ಕೊನೆಯಿಲ್ಲದಷ್ಟು ವಿನಾಶಕಾರಕವಾದುವು. ಅವರ ಕಾಲವಾದ ಬಳಿಕ, ಆದದ್ದು ವೀರ್ಯವಂತಿಕೆಯ ಇಳಿವು, ಮತ್ತು ಕ್ರಮೇಣ ನಡೆದ ಜನಜನಿತ ಮೂಢಶ್ರದ್ಧೆಗಳ ಪುನರುತ್ಥಾನ. ಕ್ಯಾಥೋಲಿಕ್ ಸಂಪ್ರದಾಯನಿಷ್ಠತೆಯ ಕಾರಣದಿಂದಾಗಿ ಭಾಗಶಃ ಹೊಸ ಚಿಂತನೆಯು ಉದಯಿಸಿತಾದರೂ, ನವೋದಯದ (ರಿನೈಸಾನ್ಸ್)ವರೆಗೂ ತತ್ವಜ್ಞಾನಕ್ಕೆ ವೀರ್ಯವಂತಿಕೆಯಾಗಲೀ ಸಾಕ್ರಟೀಸ್‌ಪೂರ್ವದವರ ಲಕ್ಷಣವಾದ ಸ್ವತಂತ್ರತೆಯಾಗಲೀ ಮರಳಲಿಲ್ಲ.

೦

೧೦
ಪ್ರೋಟಾಗೊರಾಸ್

ನಾವು ಇದುವರೆಗೂ ಪರಿಶೀಲಿಸಿದ ಸಾಕ್ರಟೀಸ್‌ಪೂರ್ವ ಪದ್ಧತಿಗಳು ಕ್ರಿಪೂ ೫ ನೆಯ ಶತಮಾನದ ಉತ್ತರಾರ್ಧದಲ್ಲಿ ಸಂದೇಹವಾದಿ ಚಳವಳಿಯನ್ನೆದುರಿಸಬೇಕಾಯಿತು; ಅದರಲ್ಲಿನ ಬಹು ಮುಖ್ಯ ವ್ಯಕ್ತಿಯೆಂದರೆ, ಸೂಫಿಸ್ಟರ ಮುಖಂಡನಾಗಿದ್ದ ಪ್ರೋಟಾಗೊರಾಸ್. 'ಸೂಫಿಸ್ಟ್' ಎನ್ನುವ ಪದ ಮೂಲತಃ ಕೆಟ್ಟ ಅರ್ಥವನ್ನೇನೂ ಹೊಂದಿರಲಿಲ್ಲ; ಬಹುಶಃ ಅದರ ಅರ್ಥ ಈಗಿನ 'ಪ್ರಾಧ್ಯಾಪಕ' ಎಂಬುದಕ್ಕೆ ಹತ್ತಿರವಾಗಿತ್ತು. ಯುವಕರಿಗೆ ಮುಂದಿನ ವ್ಯಾವಹಾರಿಕ ಬದುಕಿಗೆ ಉಪಯುಕ್ತವೆಂದು ಭಾವಿಸಲಾದ ಕೆಲವು ವಿಷಯಗಳನ್ನು ಬೋಧಿಸುತ್ತ ಉಪಜೀವಿಸುತ್ತಿದ್ದ ವ್ಯಕ್ತಿ ಸೂಫಿಸ್ಟ್. ಅಂತಹ ಶಿಕ್ಷಣಕ್ಕೆ ಸಾರ್ವಜನಿಕ ವ್ಯವಸ್ಥೆಯಿರದಿದ್ದ ಕಾರಣದಿಂದಾಗಿ ಸೂಫಿಸ್ಟರು ಸ್ವಂತ ಆದಾಯಮೂಲಗಳನ್ನು ಹೊಂದಿದ್ದವರಿಗೆ ಅಥವಾ ಅಂತಹವರ ಮಕ್ಕಳಿಗೆ ಮಾತ್ರ ಬೋಧಿಸುತ್ತಿದ್ದರು. ಇದು ಅವರಿಗೆ ಸಹಜವಾಗಿ ವರ್ಗ ಪಕ್ಷಪಾತಕ್ಕೆ ಕಾರಣವಾಗಿತ್ತು, ಬರಬರುತ್ತ ಆ ಕಾಲದ ರಾಜಕೀಯ ಪರಿಸ್ಥಿತಿಗಳಿಗನುಗುಣವಾಗಿ ಹೆಚ್ಚಾಯಿತು. ಅಥೆನ್ಸ್ ಮತ್ತು ಇನ್ನೂ ಅನೇಕ ನಗರಗಳಲ್ಲಿ ರಾಜಕೀಯವಾಗಿ ಪ್ರಜಾಪ್ರಭುತ್ವವು ಮೇಲುಗೈ ಪಡೆದಿತ್ತು; ಆದರೆ ಹಿಂದಿನ ಶ್ರೀಮಂತ ಕುಟುಂಬಗಳಿಗೆ ಸೇರಿದ್ದ ಐಶ್ವರ್ಯವನ್ನು ಮೊಟಕುಗೊಳಿಸುವ ದಿಸೆಯಲ್ಲಿ ಏನೂ ನಡೆದಿರಲಿಲ್ಲ. ನಮಗೀಗ ಗ್ರೀಕ್ ಸಂಸ್ಕೃತಿ ಎಂದು ಕಾಣುವುದನ್ನು ಮೈಗೂಡಿಸಿಕೊಂಡಿದ್ದವರು ಮುಖ್ಯವಾಗಿ ಶ್ರೀಮಂತರು. ಅವರಿಗೆ ಶಿಕ್ಷಣ ಮತ್ತು ವಿರಾಮಗಳೆರಡೂ ಇದ್ದವು, ಅವರ ಅನೂಚಾನವಾದ ಪೂರ್ವಾಗ್ರಹಗಳನ್ನು ಪ್ರವಾಸವು ಕುಂದಿಸಿತ್ತು, ತಮ್ಮ ಕಾಲವನ್ನವರು ಚರ್ಚೆಗಳಲ್ಲಿ ಕಳೆಯುತ್ತಿದ್ದುದು ಅವರ ಮಾತುಗಾರಿಕೆಯನ್ನು ಮೊನಚುಗೊಳಿಸಿತ್ತು. ಪ್ರಜಾಪ್ರಭುತ್ವವೆಂಬ ಸಂಸ್ಥೆಯು ಗುಲಾಮಪದ್ಧತಿಯನ್ನು ತಲುಪಲೇ ಇಲ್ಲ, ಇದರಿಂದಾಗಿ ಶ್ರೀಮಂತ ಯುವಕರು ಸ್ವತಂತ್ರ ಪ್ರಜೆಗಳನ್ನು ದಮನಿಸದೆಯೇ ತಮ್ಮ ಶ್ರೀಮಂತಿಕೆಯನ್ನನುಭವಿಸಬಹುದಾಗಿತ್ತು.

ಆದರೆ ಅನೇಕ ನಗರಗಳಲ್ಲಿ, ಅದರಲ್ಲೂ ಅಥೆನ್ಸ್‌ನಲ್ಲಿ, ಬಡಪ್ರಜೆಗಳಿಗೆ ಶ್ರೀಮಂತರ ಬಗ್ಗೆ ಎರಡು ರೀತಿಯ ದ್ವೇಷವಿತ್ತು, ಮಾತ್ಸರ್ಯ ಹಾಗೂ ಸಾಂಪ್ರದಾಯಿಕತೆ. ಶ್ರೀಮಂತರು ಅನಾಚಾರಿಗಳೂ ಅನೀತಿವಂತರೂ ಆಗಿರುವರೆಂದು ಭಾವಿಸಲಾಗಿತ್ತು, ಇದು ಅನೇಕ ಸಂದರ್ಭಗಳಲ್ಲಿ ನಿಜವೂ ಆಗಿತ್ತು. ಹಳೆಯ ಶ್ರದ್ಧೆಗಳನ್ನವರು ಬುಡಮೇಲು ಮಾಡುತ್ತಿದ್ದರು, ಪ್ರಾಯಶಃ ಪ್ರಜಾಪ್ರಭುತ್ವವನ್ನು ಹಾಳುಗೆಡವಲು ಪ್ರಯತ್ನಿಸುತ್ತಿದ್ದರು. ರಾಜಕೀಯ ಪ್ರಜಾಪ್ರಭುತ್ವ ಹಾಗೂ ಸಾಂಸ್ಕೃತಿಕ ಸಾಂಪ್ರದಾಯಿಕತೆಗಳು ಪರಸ್ಪರ ಸಂಬಂಧಿಸಿದವು ಎಂಬ ಶ್ರದ್ಧೆಯಿದ್ದಂತಿತ್ತು; ಸಾಂಸ್ಕೃತಿಕ ಪರಿವರ್ತನಕಾರರು ರಾಜಕೀಯ ಪ್ರತಿಗಾಮಿಗಳಾಗುವ ಪ್ರವೃತ್ತಿಯಿತ್ತು. ಆಧುನಿಕ ಅಮೆರಿಕದಲ್ಲಿಯೂ ಸುಮಾರು ಇಂಥದೇ ಸನ್ನಿವೇಶ ಇದೆ: ಮುಖ್ಯವಾಗಿ ಕ್ಯಾಥೋಲಿಕ್ ಸಂಘಟನೆಯಾದ ಟಾಮನಿಯು ವಿವೇಚನೆಯ ದಾಳಿಗೆ ವಿರುದ್ಧವಾಗಿ ಪರಂಪರಾಗತ ಮತಧರ್ಮಶಾಸ್ತ್ರವನ್ನು ಮತ್ತು ನೈತಿಕ ಶಾಸ್ತ್ರಪ್ರಾಮಾಣ್ಯಗಳನ್ನು ಸಮರ್ಥಿಸುವುದರಲ್ಲಿ ತೊಡಗಿದೆ. ಆದರೆ ಅಮೆರಿಕದಲ್ಲಿ ವಿವೇಕಿಗಳು ಅಥೆನ್ಸ್‌ನಲ್ಲಿದ್ದುದಕ್ಕಿಂತಲೂ ರಾಜಕೀಯುವಾಗಿ ಹೆಚ್ಚು ದುರ್ಬಲರು, ಅದಕ್ಕೆ ಕಾರಣ ಅವರು ಶ್ರೀಮಂತಪ್ರಭುತ್ವದೊಂದಿಗೆ ಸಮಾನ ಧ್ಯೇಯವನ್ನು ಹೊಂದಿಲ್ಲದಿರುವುದು. ಆದರೆ ಮುಖ್ಯವೂ ಅತ್ಯಂತ ಬುದ್ಧಿಶಕ್ತಿಯದೂ ಆದ ಒಂದು ವರ್ಗವು ಶ್ರೀಮಂತಪ್ರಭುತ್ವದ ಸಮರ್ಥನೆಯಲ್ಲಿ ಆಸಕ್ತಿ ವಹಿಸಿದೆ, ಅದೆಂದರೆ ಸಂಘಟನೆಯ ವಕೀಲರದು. ಕೆಲವು ಅಂಶಗಳಲ್ಲಿ ಅವರ ಕಾರ್ಯಗಳು ಅಥೆನ್ಸ್‌ನಲ್ಲಿ ಸೂಫಿಸ್ಟರು ಕೈಗೊಂಡಿದ್ದ ಕಾರ್ಯಗಳಂತೆಯೇ ಇವೆ.

ಅಥೆನ್ಸ್‌ನ ಪ್ರಜಾಪ್ರಭುತ್ವವು ಗುಲಾಮರನ್ನೂ ಹೆಂಗಸರನ್ನೂ ಒಳಗೊಳ್ಳದ ಅತೀವ ಮಿತಿಯನ್ನು ಹೊಂದಿದ್ದರೂ, ಎಷ್ಟೋ ಆಧುನಿಕ ವ್ಯವಸ್ಥೆಗಳಿಗಿಂತ ಹೆಚ್ಚು ಪ್ರಜಾಪ್ರಭುತ್ವಾತ್ಮಕವಾಗಿತ್ತು. ನ್ಯಾಯಾಧೀಶರು ಹಾಗೂ ಆಡಳಿತಾಧಿಕಾರಿಗಳೂ ಜನರಿಂದ ಚುನಾಯಿತರಾಗಿ ಸ್ವಲ್ಪ ಕಾಲ ಸೇವೆಯಲ್ಲಿರುತ್ತಿದ್ದರು; ಹೀಗಾಗಿ ಅವರು ನಮ್ಮ ನ್ಯಾಯದರ್ಶಿ ಮಂಡಳಿಯ (ಜ್ಯೂರಿ) ಸದಸ್ಯರಂತೆಯೇ ಸಾಮಾನ್ಯ ಪ್ರಜೆಗಳು; ಸಾಧಾರಣ ಪ್ರಜೆಗಳ ಹಾಗೆಯೇ ಅವರಿಗೆ ಪೂರ್ವಾಗ್ರಹಗಳೂ ವೃತ್ತಿಪರತೆಯ ಕೊರತೆಯೂ ಇದ್ದವು. ಸಾಮಾನ್ಯವಾಗಿ, ಹೆಚ್ಚಿನ ಸಂಖ್ಯೆಯ ನ್ಯಾಯಾಧೀಶರು ಅವರ ವಿಚಾರಣೆ ನಡೆಸುತ್ತಿದ್ದರು. ವಾದಿ–ಪ್ರತಿವಾದಿಗಳಿಬ್ಬರೂ, ಅಥವಾ ಆರೋಪಿ ಮತ್ತು ಅಭಿಯೋಜಕ (ಪ್ರಾಸೆಕ್ಯೂಟರ್) ಇಬ್ಬರೂ ಖುದ್ದು ಹಾಜರಿರುತ್ತಿದ್ದರೇ ವಿನಾ ವೃತ್ತಿ ವಕೀಲರ ಮೂಲಕವಲ್ಲ. ಸಹಜವಾಗಿಯೇ ಜಯಾಪಜಯಗಳು ಹೆಚ್ಚಾಗಿ ಜನಜನಿತ ಪೂರ್ವಾಗ್ರಹಗಳಿಗೆ ಒಪ್ಪಿಗೆಯಾಗುವಂತೆ ಮಾಡುವ ವಾದವೈಖರಿಯನ್ನು ಅನುಸರಿಸುತ್ತಿದ್ದವು. ವ್ಯಕ್ತಿಯೊಬ್ಬ ತನ್ನ ವಾದವನ್ನು ತಾನೇ ಮಂಡಿಸಬೇಕಾಗಿದ್ದರೂ ಅವನು ತನಗಾಗಿ ವಾದವನ್ನು ಬರೆದು ಕೊಡಲು

ಪರಿಣತನನ್ನು ಹಣಕೊಟ್ಟು ನೇಮಿಸಿಕೊಳ್ಳಬಹುದಾಗಿತ್ತು ಅಥವಾ, ಅನೇಕರು ಇಚ್ಛಿಸುತ್ತಿದ್ದಂತೆ, ಅವರು ನ್ಯಾಯಾಲಯಗಳಲ್ಲಿ ಗೆಲ್ಲಲು ಬೇಕಾದ ಶಿಕ್ಷಣವನ್ನು ಹಣ ಕೊಟ್ಟು ಪಡೆಯಬಹುದಾಗಿತ್ತು. ಈ ಕಲೆಯನ್ನು ಸೂಫಿಸ್ಟರು ಕಲಿಸುವರೆಂದು ಭಾವಿಸಲಾಗಿತ್ತು.

ಪೆರಿಕ್ಲೀಸ್‌ನ ಕಾಲವು ಅಥೆನ್ಸ್ ಇತಿಹಾಸದಲ್ಲಿ ಇಂಗ್ಲಂಡ್ ಇತಿಹಾಸದಲ್ಲಿನ ವಿಕ್ಟೋರಿಯನ್ ಯುಗದಂತಿತ್ತು. ಅಥೆನ್ಸ್ ಶ್ರೀಮಂತವೂ ಬಲಿಷ್ಠವೂ ಆಗಿ ಯುದ್ಧಭಯದಿಂದ ದೂರವಾಗಿ ಶ್ರೀಮಂತವರ್ಗದವರು ನಿರ್ವಹಿಸುತ್ತಿದ್ದ ಪ್ರಜಾಪ್ರಭುತ್ವಾತ್ಮಕ ಸಂವಿಧಾನವನ್ನು ಹೊಂದಿತ್ತು. ನಾವಾಗಲೇ ಅನಾಕ್ಸಾಗೊರಾಸ್‌ನ ವಿಷಯದಲ್ಲಿ ನೋಡಿದಂತೆ, ಪೆರಿಕ್ಲೀಸ್‌ಗೆ ವಿರುದ್ಧವಾದ ಪ್ರಜಾಪ್ರಭುತ್ವಾತ್ಮಕತೆಯು ಬರಬರುತ್ತ ಶಕ್ತಿಯುತವಾಗಿ, ಅವನ ಸ್ನೇಹಿತರ ಮೇಲೆ ಒಬ್ಬರಾದ ಮೇಲೊಬ್ಬರಂತೆ ದಾಳಿ ಮಾಡುತ್ತಿತ್ತು. ಕ್ರಿಪೂ ೪೩೧ ರಲ್ಲಿ ಪೆಲೋಪಿನೀಸಿಯನ್ ಯುದ್ಧ ಪ್ರಾರಂಭವಾಯಿತು;[೪೬] ಅಥೆನ್ಸ್ (ಇತರ ಅನೇಕ ಸ್ಥಳಗಳಂತೆಯೇ) ಪ್ಲೇಗ್ ಪೀಡಿತವಾಯಿತು; ಸುಮಾರು ೨೩೦೦೦೦ ರಷ್ಟಿದ್ದ ಜನಸಂಖ್ಯೆಯು ಬಹಳವಾಗಿ ಕ್ಷೀಣಿಸಿತು, ಮುಂದೆ ಎಂದೂ ಹಿಂದಿನ ಮಟ್ಟವನ್ನು ತಲುಪಲೇ ಇಲ್ಲ (ಬರಿ, 'ಹಿಸ್ಟರಿ ಆಫ್ *ಗ್ರೀಸ್*', ಪು. ೪೪೪). ಪೆರಿಕ್ಲೀಸ್‌ನನ್ನು ಕ್ರಿಪೂ ೪೩೦ ರಲ್ಲಿ ಸೇನಾಧಿಕಾರಿ ಪದವಿಯಿಂದ ಪ್ರಚ್ಯುತಗೊಳಿಸಿದ್ದಲ್ಲದೆ, ಸಾರ್ವಜನಿಕ ಹಣದ ದುರುಪಯೋಗದ ಆರೋಪದ ಮೇಲೆ ಅವನಿಗೆ ದಂಡ ವಿಧಿಸಲಾಯಿತು, ಆದರೆ ಬಹುಬೇಗ ಅವನು ಪುನಃಸ್ಥಾಪಿತನಾದ. ಅವನ ಇಬ್ಬರು ಔರಸ ಪುತ್ರರು ಪ್ಲೇಗ್‌ನಿಂದಾಗಿ ಸತ್ತರು, ಅವನೇ ಮರುವರ್ಷ ಅಂದರೆ ಕ್ರಿಪೂ ೪೨೯ ರಲ್ಲಿ ಮೃತಿ ಹೊಂದಿದ. ಫೀಯಿಡಿಯುಸ್ ಮತ್ತು ಅನಾಕ್ಸಾಗೊರಾಸ್ ಅವರನ್ನು ಆಪಾದಿತರನ್ನಾಗಿಸಲಾಯಿತು; ಆಸ್‌ಪೇಸಿಯ ಮತಧರ್ಮನಿಷ್ಠನಲ್ಲವೆಂದೂ ಮನೆಯನ್ನು ಸುವ್ಯವಸ್ಥಿತವಾಗಿ ಇರಿಸಲಿಲ್ಲವೆಂದೂ ಆರೋಪಿಸಿದರೂ ಆನಂತರ ಆರೋಪಮುಕ್ತಗೊಳಿಸಲಾಯಿತು.

ಇಂತಹ ಸಮಾಜದಲ್ಲಿ, ಪ್ರಜಾಪ್ರಭುತ್ವವಾದಿ ರಾಜಕಾರಣಿಗಳನ್ನು ಎದುರು ಹಾಕಿಕೊಳ್ಳುವ ಸಂಭವವಿದ್ದ ಜನರಿಗೆ ವಾದಕೌಶಲವನ್ನು ಸಂಪಾದಿಸಿಕೊಳ್ಳುವುದು ಅಪೇಕ್ಷಣೀಯವೆನಿಸಿತು. ಅಥೆನ್ಸ್, ಆರೋಪ ಮಾಡುವ ಚಟಕ್ಕೆ ಬಿದ್ದಿದ್ದರೂ, ಒಂದು ವಿಷಯದಲ್ಲಿ ಆಧುನಿಕ ಅಮೆರಿಕಕ್ಕಿಂತ ಕಡಿಮೆ ಅನುದಾರವಾಗಿತ್ತು; ಯಾಕೆಂದರೆ ಮತಧರ್ಮನಿಷ್ಠೆಯಿಲ್ಲದವರೆಂದೂ ಯುವಕರ ಮನಸ್ಸನ್ನು

---

೪೬ ಅದು ಕೊನೆಗೊಂಡದ್ದು ಕ್ರಿಪೂ ೪೦೪ ರಲ್ಲಿ, ಅಥೆನ್ಸ್ ಅನ್ನು ಸಂಪೂರ್ಣವಾಗಿ ಪತನಗೊಳಿಸುವ ಮೂಲಕ.

ಕೆಡಿಸುವರೆಂದೂ ಆರೋಪಕ್ಕೊಳಗಾದವರು ನ್ಯಾಯಾಲಯದಲ್ಲಿ ಖುದ್ದು ಸಮರ್ಥಿಸಿಕೊಳ್ಳಬಹುದಾಗಿತ್ತು.

ಒಂದು ವರ್ಗದ ಜನರಲ್ಲಿ ಸೂಫಿಸ್ಟರು ಎಷ್ಟು ಜನಪ್ರಿಯರಾಗಿದ್ದರೆಂಬುದನ್ನೂ, ಮತ್ತೊಂದು ವರ್ಗದವರಲ್ಲಿ ಜನವಿರೋಧಿಗಳೆನ್ನಿಸಿದ್ದರೆಂಬುದನ್ನೂ ಇದು ತೋರಿಸುತ್ತದೆ. ಆದರೆ ಅವರಲ್ಲಿ ತಾವು ವ್ಯಕ್ತ್ಯತೀತ ಉದ್ದೇಶಗಳನ್ನು ನೆರವೇರಿಸುತ್ತಿದ್ದೇವೆಂಬ ಭಾವನೆಯಿತ್ತು, ಮತ್ತು ಅವರಲ್ಲಿನ ಕೆಲವರು ತತ್ವಜ್ಞಾನದ ಬಗ್ಗೆ ಪ್ರಾಮಾಣಿಕ ಕಾಳಜಿಯಿರಿಸಿಕೊಂಡಿದ್ದರು. ಅವರನ್ನು ಅಣಕಿಸುವುದರಲ್ಲಿ ಹಾಗೂ ದೂಷಿಸುವುದರಲ್ಲಿ ಪ್ಲೇಟೋ ತೊಡಗಿಕೊಂಡಿದ್ದ, ಆದರೆ ಅವರನ್ನು ನಾವು ಅವನ ವಾದಗಳ ಕಾರಣದಿಂದ ಬೆಲೆಗಟ್ಟಬಾರದು. ಲಘು ಧಾಟಿಯಿಂದ 'ಯೂಥೈಡೆಮಸ್'ನ ಕೆಳಕಂಡ ಭಾಗವನ್ನು ತೆಗೆದುಕೊಳ್ಳಿ, ಅದರಲ್ಲಿ ಡಯೋನಿಡಾರಸ್ ಮತ್ತು ಯೂಥೈಡೆಮಸ್ ಎಂಬ ಇಬ್ಬರು ಸೂಫಿಸ್ಟರು ಕ್ಲೆಸಿಪ್ಪಸ್ ಎಂಬ ಸರಳ ಮನಸ್ಸಿನ ವ್ಯಕ್ತಿಯನ್ನು ಗೊಂದಲಗೊಳಿಸಲು ಹೊರಡುತ್ತಾರೆ. ಡಯೋನಿಡಾರಸ್ ಆರಂಭಿಸುತ್ತಾನೆ:

ನೀನೊಂದು ನಾಯಿ ಎಂದು ಕರೆದುಕೊಂಡೆಯಾ?
ಹೌದು, ಅವುಗಳಲ್ಲಿನ ಖಳ ಎಂದ ಕ್ಲೆಸಿಪ್ಪಸ್.
ಅದಕ್ಕೆ ಮರಿಗಳಿದ್ದವೇ?
ಅವುಗಳು ತೀರ ಅವನಂತೆಯೇ ಇವೆ.
ಈ ನಾಯಿಯು ಅವುಗಳ ತಂದೆಯೇ?
ಅವನು ಹೌದೆಂದ, ನಾನು ಅದನ್ನೂ
ಈ ಮರಿಗಳ ತಾಯಿಯನ್ನೂ ಒಟ್ಟಿಗೇ ನೋಡಿದೆ.
ಅವನು ನಿನಗೆ ಸೇರಿದವನಲ್ಲವೇ
ಖಂಡಿತ ಹೌದು,
ಹಾಗಾದರೆ ಅದು ತಂದೆ, ಮತ್ತು ನಿನಗೆ ಸೇರಿದ್ದು;
ಹೀಗಾಗಿ, ನೀನು ನಿನ್ನ ತಂದೆ
ಮತ್ತು ಮರಿಗಳು ನಿನ್ನ ಸೋದರರು.

ಮತ್ತಷ್ಟು ಗಂಭೀರ ಧಾಟಿಯಲ್ಲಿ, 'ಸೂಫಿಸ್ಟ್' ನಲ್ಲಿನ ಸಂವಾದವನ್ನು ತೆಗೆದುಕೊಳ್ಳಿ, ಇದು ವ್ಯಾಖ್ಯೆಯ ಬಗೆಗಿನ ತರ್ಕಬದ್ಧ ಚರ್ಚೆ, ಅದರಲ್ಲಿ ಸೂಫಿಸ್ಟನನ್ನು ಒಂದು ನಿದರ್ಶನವಾಗಿ ತೆಗೆದುಕೊಂಡಿದೆ. ಅದರ ತರ್ಕ ನಮಗೀಗ ಅಪ್ರಸ್ತುತ; ಈಗ ನಾನು ಹೇಳಬಯಸುವ ಒಂದೇ ಅಂಶವೆಂದರೆ ಸಂವಾದದ ಕೊನೆಯಲ್ಲಿನ ತೀರ್ಮಾನ:

'ವಿರುದ್ಧವಾದ ಕಲೆಯು, ಪ್ರತಿಮಾನಿರ್ಮಾಣದಿಂದ ಸಾಧಿಸಿಕೊಂಡ ಸಾದೃಶ್ಯವನ್ನುಂಟುಮಾಡುವ ಅಪ್ರಾಮಾಣಿಕವಾದ ಪ್ರಚ್ಛನ್ನ ಅಣಕದ ಬಗೆಯಿಂದ ಹುಟ್ಟಿ, ದೈವಿಕವಾಗಿರದೆ ಮಾನುಷವಾದ ಉತ್ಪನ್ನದ ಭಾಗವೆಂದು ಶಬ್ದಗಳ ನೆಳಲಿನಾಟವನ್ನು ತೋರಿಸುತ್ತದೆ – ಅಂಥ ರಕ್ತ ಮತ್ತು ವಂಶಕ್ಕೆ ಸೇರಿದವನೆಂದು ಅಧಿಕೃತ ಸೂಫಿಸ್ಟನಿಗೆ ಪೂರ್ಣ ಸತ್ಯದಿಂದ ನಿಗದಿಪಡಿಸಬಹುದು.' (ಕಾರ್ನ್‌ಫರ್ಡ್ ಅವರ ಅನುವಾದ).

ಪ್ರೋಟಾಗೊರಾಸ್ ಬಗ್ಗೆ ಒಂದು ಕತೆಯಿದೆ, ಅದು ಕಲ್ಪನೆಯದೆಂಬುದರಲ್ಲಿ ಅನುಮಾನವಿಲ್ಲ, ಆದರೆ ಅದು ಸೂಫಿಸ್ಟರಿಗೂ ನ್ಯಾಯಾಲಯಗಳಿಗೂ ಇದ್ದ ಸಂಬಂಧದ ಬಗೆಗಿನ ಜನಜನಿತ ಭಾವನೆಯನ್ನು ಸೂಚಿಸುತ್ತದೆ. ತನ್ನ ಮೊದಲ ಮೊಕದ್ದಮೆಯಲ್ಲಿ ಗೆದ್ದರೆ ತನ್ನ ಶುಲ್ಕವನ್ನವನು ಕೊಡಬೇಕು ಇಲ್ಲದಿದ್ದರೆ ಬೇಡವೆಂಬ ಷರತ್ತಿನ ಮೇಲೆ, ಅವನು ಯುವಕನೊಬ್ಬನಿಗೆ ತರಬೇತಿ ನೀಡಿದ. ತನ್ನ ಶುಲ್ಕವಸೂಲಿಗೆಂದು ಆ ಮೊದಲನೆಯ ಮೊಕದ್ದಮೆಯನ್ನು ತಾನೇ ಹೂಡಿದನಂತೆ.

ಇಲ್ಲಿಗೆ ಈ ಪೂರ್ವಪುರಾಣಗಳನ್ನು ನಿಲ್ಲಿಸಿ, ಪ್ರೋಟಾಗೊರಾಸ್ ಬಗ್ಗೆ ನಿಜವಾಗಿ ತಿಳಿದಿರುವುದೇನು ಎಂಬುದನ್ನು ಪರಿಗಣಿಸೋಣ.

ಪ್ರೋಟಾಗೊರಾಸ್ ಕ್ರಿಪೂ ೫೦೦ ರಲ್ಲಿ ಆಬ್ಡೆರಾದಲ್ಲಿ ಹುಟ್ಟಿದ, ಇಲ್ಲಿಂದಲೇ ಡೆಮಾಕ್ರಿಟಸ್ ಕೂಡ ಬಂದದ್ದು. ಅವನು ಎರಡು ಬಾರಿ ಅಥೆನ್ಸ್‌ಗೆ ಹೋಗಿದ್ದ, ಎರಡನೇ ಬಾರಿ ಹೋದದ್ದು ಕ್ರಿಪೂ ೪೩೨ ಕ್ಕಿಂತ ಈಚೆಯಲ್ಲ. ಥೂರಿಯೈ ನಗರಕ್ಕೆ ಅವನು ಕ್ರಿಪೂ ೪೪೪–೩ರಲ್ಲಿ ಒಂದು ಕಾನೂನುಸಂಹಿತೆಯನ್ನು ರಚಿಸಿದ. ಮತಧರ್ಮವಿರೋಧಿಯೆಂಬ ಕಾರಣಕ್ಕೆ ಅವನ ಮೇಲೆ ಮೊಕದ್ದಮೆ ಹೂಡಲಾಯಿತೆಂದು ಹೇಳುವ ಸಂಪ್ರದಾಯವೊಂದಿದೆ, ಆದರಿದು ಸತ್ಯವಲ್ಲ, ಅವನು 'ದೇವತೆಗಳ ಕುರಿತು' ಎಂಬ ಪುಸ್ತಕವೊಂದನ್ನು ಬರೆದಿದ್ದರೂ. ಈ ಪುಸ್ತಕವು ಹೀಗೆ ಆರಂಭವಾಗುತ್ತದೆ: 'ದೇವತೆಗಳ ಬಗ್ಗೆ ಹೇಳುವುದಾದರೆ, ಅವರು ಇದ್ದಾರೆಯೋ ಇಲ್ಲವೋ, ಅವರ ಆಕೃತಿ ಎಂತಹವೋ ಎಂಬುದನ್ನು ನಾನು ನಿಖರವಾಗಿ ಹೇಳಲಾರೆ, ಯಾಕೆಂದರೆ ಈ ಕುರಿತ ಖಚಿತ ತಿಳಿವಳಿಕೆ ಪಡೆಯಲು ಅನೇಕ ಅಡ್ಡಿಗಳಿವೆ ಹಾಗೂ ಮನುಷ್ಯ ಜೀವನ ತೀರ ಹ್ರಸ್ವಕಾಲದ್ದು.'

ಅವನು ಅಥೆನ್ಸ್‌ಗೆ ಎರಡನೆಯ ಬಾರಿ ಹೋದದ್ದನ್ನು ಕುರಿತು ಪ್ಲೇಟೋನ 'ಪ್ರೋಟಾಗೊರಾಸ್'ನಲ್ಲಿ ವ್ಯಂಗ್ಯಾತ್ಮಕ ಧಾಟಿಯ ವರ್ಣನೆಯೊಂದಿದೆ, ಹಾಗೆಯೇ ಅವನ ಸಿದ್ಧಾಂತಗಳ ಕುರಿತು 'ಥಿಯಟೇಟಸ್' ನಲ್ಲಿ ಗಂಭೀರ ಚರ್ಚೆಗಳಿವೆ. ಅವನು ಮುಖ್ಯವಾಗಿ ಪ್ರಸಿದ್ಧನಾಗಿರುವುದು ತನ್ನ 'ಮನುಷ್ಯ ತಾವಾಗಿಯೇ ಇರುವ ವಸ್ತುಗಳ ಹಾಗೂ ತಾವಾಗಿಲ್ಲದೆ ಇಲ್ಲದ, ಎಲ್ಲ ವಸ್ತುಗಳ ಅಳತೆಗೋಲು' ಎಂಬ ಸಿದ್ಧಾಂತಕ್ಕಾಗಿ. ಇದನ್ನು, ಪ್ರತಿ ವ್ಯಕ್ತಿಯೂ ಎಲ್ಲ ವಸ್ತುಗಳ ಅಳತೆಗೋಲು, ಹಾಗೂ

ವ್ಯಕ್ತಿಗಳ ಅಭಿಪ್ರಾಯಗಳು ಬೇರೆಯಾದರೆ ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದನ್ನು ವಸ್ತುನಿಷ್ಠವಾದ ಸತ್ಯವಾವುದೂ ಇಲ್ಲ ಎಂದು ವ್ಯಾಖ್ಯಾನಿಸಲಾಗುತ್ತದೆ. ಈ ಸಿದ್ಧಾಂತವು ಸಾರತಃ ಸಂದೇಹಾತ್ಮಕವಾದದ್ದು, ಮತ್ತು ಇಂದ್ರಿಯಗಳು 'ಮೋಸಗೊಳಿಸು'ವಂತಹವು ಎಂಬ ಶ್ರದ್ಧೆಯನ್ನಾಧರಿಸಿದ್ದು.

ವ್ಯವಹಾರ ಸಿದ್ಧಾಂತದ (ಪ್ರಾಗ್ಮಾಟಿಸಂ) ಮೂವರು ಸ್ಥಾಪಕರಲ್ಲೊಬ್ಬರಾದ ಎಫ್.ಸಿ.ಎಸ್. ಷಿಲ್ಲರ್ ಅವರು ತಮ್ಮನ್ನು ತಾವು ಪ್ರೋಟಾಗೊರಾಸ್‌ನ ಶಿಷ್ಯ ಎಂದು ಕರೆದುಕೊಳ್ಳುತ್ತಿದ್ದರು. ಇದಕ್ಕೆ ಕಾರಣವೆಂದರೆ, ಪ್ಲೇಟೋ 'ಥಿಯಟೇಟಸ್' ನಲ್ಲಿ, ಒಂದು ಅಭಿಪ್ರಾಯಕ್ಕಿಂತ ಮತ್ತೊಂದು ಉತ್ತಮವಾಗಿರಬಹುದು, ಆದರೆ ಅದು ಹೆಚ್ಚು ಸತ್ಯದಿಂದ ಕೂಡಿರಬೇಕಾದದ್ದಿಲ್ಲ ಎಂಬ ಪ್ರೋಟಾಗೊರಾಸ್‌ನ ಮಾತಿನ ಒಂದು ವ್ಯಾಖ್ಯಾನದಂತೆ ಹೇಳಿದ್ದರಿಂದ ಎಂಬುದು ನನ್ನ ಅನಿಸಿಕೆ. ನಿದರ್ಶನಕ್ಕೆ, ವ್ಯಕ್ತಿಯೊಬ್ಬನಿಗೆ ಕಾಮಾಲೆಯಿದ್ದರೆ ಅವನಿಗೆ ಎಲ್ಲವೂ ಹಳದಿಯಾಗಿ ಕಾಣುತ್ತದೆ. ಇದರ ಆಧಾರದ ಮೇಲೆ ವಸ್ತುಗಳು ನಿಜವಾಗಿಯೂ ಹಳದಿಯಾಗಿಲ್ಲವೆಂದು ಹೇಳಲಾಗದು, ಆದರೆ ಅವು ಕಾಣಿಸುವ ಬಣ್ಣಗಳು ಆರೋಗ್ಯವಂತನಿಗೆ ಕಾಣಿಸುವಂತಹವು. ಆದರೆ, ಆರೋಗ್ಯವು ಕಾಯಿಲೆಗಿಂತ ಉತ್ತಮವಾದದ್ದರಿಂದಾಗಿ, ಆರೋಗ್ಯವಂತನ ಅಭಿಪ್ರಾಯವು ಕಾಮಾಲೆ ರೋಗಿಯ ಅಭಿಪ್ರಾಯಕ್ಕಿಂತ ಉತ್ತಮವಾದುದು ಎಂದು ಹೇಳಬಹುದು. ಈ ತರ್ಕವು ವ್ಯವಹಾರ ಸಿದ್ಧಾಂತಕ್ಕೆ ಹತ್ತಿರವಾಗಿರುವುದು ಸ್ಪಷ್ಟವಾಗಿದೆ.

ವ್ಯಾವಹಾರಿಕ ದೃಷ್ಟಿಯಿಂದ ವಸ್ತುನಿಷ್ಠ ಸತ್ಯದ ಬಗೆಗಿನ ಅಪಶ್ರದ್ಧೆಯು ಬಹುಮತವನ್ನು ಸೃಷ್ಟಿಸುತ್ತದೆ, ಮತ್ತದು ಏನನ್ನು ನಂಬಬೇಕೆಂಬುದನ್ನು ತೀರ್ಮಾನಿಸುತ್ತದೆ. ಹೀಗಾಗಿ ಪ್ರೋಟಾಗೊರಾಸ್ ಕಾನೂನು ಮತ್ತು ಸಾಂಪ್ರದಾಯಿಕ ನೈತಿಕತೆಗಳ ಸಮರ್ಥಕನಾಗಲು ಮುಂದಾದ. ಈಗಾಗಲೇ ನೋಡಿರುವಂತೆ, ಅವನಿಗೆ ದೇವತೆಗಳ ಅಸ್ತಿತ್ವದ ಬಗ್ಗೆ ಖಚಿತ ತಿಳಿವು ಇಲ್ಲದಿದ್ದರೂ ಅವರನ್ನು ಪೂಜಿಸಬೇಕೆಂಬ ಖಚಿತ ನಿಲವು ಅವನದು. ಈ ದೃಷ್ಟಿಕೋನವು, ಸೈದ್ಧಾಂತಿಕ ಸಂದೇಹಾತ್ಮಕತೆಯು ಸುಸಂಬದ್ಧವೂ ತರ್ಕಬದ್ಧವೂ ಆದುದೆಂಬ ನಿಲವಿನವರಿಗೆ ಸಹಜವಾದುದೇ ಆಗಿದೆ.

ಪ್ರೋಟಾಗೊರಾಸ್ ತನ್ನ ಯೌವನ ಕಾಲವನ್ನು ಗ್ರೀಸ್‌ನ ನಗರಗಳಲ್ಲಿ, 'ವ್ಯಾವಹಾರಿಕ ಪರಿಣತಿ ಮತ್ತು ಉನ್ನತ ಮಾನಸಿಕ ಸಂಸ್ಕೃತಿಯನ್ನು' (ಜೆಲರ್, ಪು. ೧೨೦೦) ಬಯಸುವವರಿಗೆ ಶುಲ್ಕ ಪಡೆದು ಬೋಧಿಸುವ ಉಪನ್ಯಾಸ ಸಂಚಾರವನ್ನು ಕೈಗೊಳ್ಳಲು ವಿನಿಯೋಗಿಸಿದ. ಬೋಧನೆಗೆ ಈ ರೀತಿ ಶುಲ್ಕ ವಿಧಿಸುವುದನ್ನು, ಆಧುನಿಕ ಅನಿಸಿಕೆಯಂತೆ ದೊಡ್ಡಸ್ತಿಕೆಯಿಂದ ಪ್ಲೇಟೋ ವಿರೋಧಿಸಿದ. ಪ್ಲೇಟೋಗೆ ಸಾಕಷ್ಟು ಸ್ವಂತ ವರಮಾನವಿತ್ತು, ಹೀಗಾಗಿ ಅವನಂತೆ ಅದೃಷ್ಟವಂತರಾಗದಿದ್ದವರ ಆವಶ್ಯಕತೆಗಳನ್ನು ಅರ್ಥಮಾಡಿಕೊಳ್ಳದಿದ್ದುದು

ಸಹಜವಾಗಿತ್ತು. ಸಂಬಳವನ್ನು ಯಾವುದೇ ಕಾರಣಕ್ಕೂ ನಿರಾಕರಿಸದ ಆಧುನಿಕ ಪ್ರಾಧ್ಯಾಪಕರು ಪ್ಲೇಟೋನ ಟೀಕೆಯನ್ನು ಪದೇ ಪದೇ ಹೇಳುವುದು ವಿಚಿತ್ರವೆನಿಸುತ್ತದೆ.

ಮತ್ತೊಂದು ಅಂಶದ ಬಗ್ಗೆಯೂ ಸೂಫಿಸ್ಟರು ಬಹುತೇಕ ಸಮಕಾಲೀನ ತತ್ವಜ್ಞಾನಿಗಳೊಡನೆ ಭಿನ್ನಾಭಿಪ್ರಾಯವನ್ನು ಹೊಂದಿದ್ದರು. ಸೂಫಿಸ್ಟರ ಹೊರತಾಗಿ, ಸ್ವಲ್ಪಮಟ್ಟಿಗಿನ ಸೋದರಿಕೆಯ ಆಸ್ತಿಯನ್ನು ಹೊಂದಿದ ಅಧ್ಯಾಪಕರು ಶಾಲೆಯೊಂದನ್ನು ಸ್ಥಾಪಿಸುವುದು ವಾಡಿಕೆಯಾಗಿತ್ತು; ಅಲ್ಲಿ ಹೆಚ್ಚೋ ಕಡಿಮೆಯೋ ಸಮಾನ ಜೀವನವಿರುತ್ತಿತ್ತು. ಕೊಂಚ ಮಟ್ಟಿಗೆ ಮಠೀಯ ನಿಯಮಗಳಂತಹವು ಅಲ್ಲಿರುತ್ತಿದ್ದವು, ಹಾಗೆಯೇ ಸಾರ್ವಜನಿಕರಿಗೆ ತಿಳಿಸದ ಮತಸಿದ್ಧಾಂತವೂ ಅನುಷ್ಠಾನದಲ್ಲಿರುತ್ತಿತ್ತು. ಆರ್ಫಿಸಂನಿಂದ ಮೂಡಿಬಂದ ತತ್ವಜ್ಞಾನವಿರುವೆಡೆಯಲ್ಲೆಲ್ಲ ಇದು ಸಹಜವಾಗಿತ್ತು. ಇವರಲ್ಲಿ ಸೂಫಿಸ್ಟರಾರೂ ಇರಲಿಲ್ಲ. ತಾವು ಬೋಧಿಸುವುದಕ್ಕೂ ಮತಧರ್ಮ ಅಥವಾ ಪುಣ್ಯಕ್ಕೂ ಯಾವುದೇ ಸಂಬಂಧವಿಲ್ಲವೆಂಬ ಭಾವನೆಯೇ ಅವರ ಮನಸ್ಸಿನಲ್ಲಿರುತ್ತಿದ್ದುದು. ಅವರು ವಾದಕಲೆಯನ್ನು, ಮತ್ತದಕ್ಕೆ ಸಹಾಯಕವಾಗುವ ಜ್ಞಾನವನ್ನು ಕಲಿಸುತ್ತಿದ್ದರು. ಸ್ಥೂಲವಾದ ಅರ್ಥದಲ್ಲಿ, ಆಧುನಿಕ ವಕೀಲರಂತೆ ಅವರು ಒಂದು ಅಭಿಪ್ರಾಯದ ಪರವಾಗಿಯೋ ವಿರೋಧವಾಗಿಯೋ ಹೇಗೆ ವಾದಿಸಬಹುದೆಂಬುದನ್ನು ತೋರಿಸಿಕೊಡಲು ತಯಾರಾಗಿದ್ದರು, ಅವರೇನೂ ತಮ್ಮದೇ ತೀರ್ಮಾನದ ಪರವಾಗಿ ಮಾತನಾಡುವ ಬಗ್ಗೆ ತಲೆಕೆಡಿಸಿಕೊಂಡವರಲ್ಲ. ಮತಧರ್ಮದೊಡನೆ ನಿಕಟ ಸಂಬಂಧವಿದ್ದ ತತ್ವಜ್ಞಾನವು ಯಾರಿಗೆ ಜೀವನ ಮಾರ್ಗವಾಗಿತ್ತೋ ಅವರಿಗೆ ಇದರಿಂದ ಆಘಾತವೆನಿಸಿತ್ತು; ಅವರಿಗೆ ಸೂಫಿಸ್ಟರು ಕ್ಷುಲ್ಲಕರಾಗಿಯೂ ಅನೀತಿವಂತರಾಗಿಯೂ ಕಾಣಿಸಿದರು.

ಸಾಮಾನ್ಯ ಜನತೆಯಲ್ಲಿ ಮಾತ್ರವಲ್ಲದೆ, ಪ್ಲೇಟೋ ಮತ್ತು ಆ ಮುಂದಿನ ತತ್ವಜ್ಞಾನಿಗಳು ಸೂಫಿಸ್ಟರ ಬಗ್ಗೆ ಅಸಹನೆಯನ್ನು ತೋರಿಸುವುದಕ್ಕೆ, ಎಷ್ಟರ ಮಟ್ಟಿಗೆ ಎನ್ನುವುದನ್ನು ಹೇಳಲಾಗದಿದ್ದರೂ ಸ್ವಲ್ಪ ಮಟ್ಟಿಗೆ, ಅವರ ಬೌದ್ಧಿಕ ಔನ್ನತ್ಯವೇ ಕಾರಣ. ಪ್ರಾಮಾಣಿಕವಾದ ಸತ್ಯಾನ್ವೇಷಣೆಯು ನೈತಿಕ ಪರಿಗಣನೆಯನ್ನು ಮಾಡಬಾರದು; ಯಾವುದೇ ಸಮಾಜದಲ್ಲಿ ಸತ್ಯವು ಎಷ್ಟರ ಮಟ್ಟಿಗಿನ ಆತ್ಮೋನ್ನತಿಗೆ ಕಾರಣವಾಗುವುದೆಂದು ಮುಂಚಿತವಾಗಿಯೇ ತಿಳಿಯಲು ಸಾಧ್ಯವಿಲ್ಲ. ತರ್ಕವು ಎಲ್ಲಿಗೆ ಕರೆದೊಯ್ಯುವುದೋ ಅಲ್ಲಿಯವರೆಗೂ ಮುಂದುವರಿಯಲು ಸೂಫಿಸ್ಟರು ಸಿದ್ಧರಾಗಿದ್ದರು. ಕೆಲವು ಸಂದರ್ಭಗಳಲ್ಲಿ ಅದು ಅವರನ್ನು ಸಂದೇಹವಾದದತ್ತ ಒಯ್ದಿತು. ಅವರಲ್ಲೊಬ್ಬನಾದ ಗಾರ್ಜಿಯಸ್ 'ಯಾವುದೂ ಅಸ್ತಿತ್ವದಲ್ಲಿಲ್ಲ; ಯಾವುದಾದರೂ ಅಸ್ತಿತ್ವದಲ್ಲಿದ್ದರೆ ಅದನ್ನು ತಿಳಿಯಲು ಸಾಧ್ಯವಿಲ್ಲ; ಏನೂ ಅಸ್ತಿತ್ವದಲ್ಲಿಲ್ಲ ಎನ್ನುವುದನ್ನು ಒಪ್ಪಿಕೊಂಡರೂ ಅದನ್ನವನು ಇತರರಿಗೆ ಸಂವಹಿಸಲಾರ' ಎಂಬ ನಿಲವನ್ನು ತಾಳಿದ. ಅವನ ವಾದದ ಸ್ವರೂಪವೇನೋ ನಮಗೆ ತಿಳಿಯದು, ಆದರೆ

ಅವನ ವಿರೋಧಿಗಳು ಆತ್ಮೋದ್ಧಾರವನ್ನು ಮರೆಹೋಗುವಂತೆ ಮಾಡುವ ತಾರ್ಕಿಕ ಬಲವೊಂದು ಅದರಲ್ಲಿತ್ತು ಎಂಬುದನ್ನು ನಾನು ಕಲ್ಪಿಸಿಕೊಳ್ಳಬಲ್ಲೆ. ತನ್ನ ಆಲೋಚನೆಯು ಪುಣ್ಯಕರವಾದದ್ದು ಎಂಬ ಭಾವನೆ ಜನರಲ್ಲುಂಟಾಗುವ ದೃಷ್ಟಿಕೋನವನ್ನು ಸಮರ್ಥಿಸುವ ಕಾಳಜಿ ಪ್ಲೇಟೋನದು. ಅವನೆಂದೂ ಬೌದ್ಧಿಕವಾಗಿ ಪ್ರಾಮಾಣಿಕವಾಗಿರಲಿಲ್ಲ, ಏಕೆಂದರೆ ಅವನು ಸಿದ್ಧಾಂತಗಳ ಸಾಮಾಜಿಕ ಪ್ರಭಾವಗಳಿಗನುಗುಣವಾಗಿ ತೀರ್ಮಾನ ಮಾಡುವ ಜಾಯಮಾನದವನು. ಈ ವಿಷಯದಲ್ಲೂ ಅವನು ಪ್ರಾಮಾಣಿಕವಾಗಿಲ್ಲ; ತಾನು ತರ್ಕವನ್ನು ಅನುಸರಿಸುತ್ತಿರುವವನು ಹಾಗೂ ಶುದ್ಧಾಂಗವಾಗಿ ಸೈದ್ಧಾಂತಿಕ ಮಾನದಂಡದಿಂದ ತೀರ್ಮಾನ ಮಾಡುವವನು ಎಂದು ತೋರಿಸಿಕೊಳ್ಳುತ್ತಾನೆ; ಅದಕ್ಕೆ ವ್ಯತಿರಿಕ್ತವಾಗಿ, ಆತ್ಮೋದ್ಧಾರದ ಫಲಿತ ನೀಡುವ ದಿಸೆಯಲ್ಲಿ ಚರ್ಚೆಯನ್ನು ತಿರಿಚುತ್ತಾನೆ. ಈ ಅವಗುಣವನ್ನೇ ಅವನು ತತ್ವಜ್ಞಾನವನ್ನಾಗಿ ಮಾಡಿಕೊಂಡ, ಆಗಿನಿಂದಲೂ ಅದೇ ರೀತಿ ಮುಂದುವರಿದಿದ್ದಾನೆ. ಅವನ ಸಂವಾದಗಳಿಗೆ ಈ ಬಣ್ಣ ಬರಲು ಸೂಫಿಸ್ಟರ ಬಗ್ಗೆ ಅವನು ಇರಿಸಿಕೊಂಡಿದ್ದ ವಿದ್ವೇಷವೇ ಪ್ರಾಯಶಃ ಕಾರಣ. ಪ್ಲೇಟೋ ನಂತರದ ಎಲ್ಲ ತತ್ವಜ್ಞಾನಿಗಳ ದೋಷವೆಂದರೆ ತಮ್ಮ ನೈತಿಕ ಅನಾವರಣವು ತಲುಪಬೇಕಾದ ತೀರ್ಮಾನಗಳು ತಮಗೆ ಆಗಲೇ ತಿಳಿದಿವೆ ಎಂಬ ರೀತಿಯ ತಾರ್ಕಿಕತೆಯನ್ನು ಅನುಸರಿಸುವುದು.

ತಮ್ಮ ಸಮಕಾಲೀನರಿಗೆ ಅನೈತಿಕವೆನ್ನುವಂತೆ ಹಾಗೂ ಇವತ್ತಿನ ಪ್ರಜಾಪ್ರಭುತ್ವಾತ್ಮಕ ರಾಷ್ಟ್ರಗಳವರಿಗೂ ಹಾಗೆಯೇ ಎನ್ನುವಂತೆ ತೋರುವ ರಾಜಕೀಯ ಸಿದ್ಧಾಂತಗಳನ್ನು ಬೋಧಿಸುವ ಜನರು ಕ್ರಿಪೂ ೫ ನೆಯ ಶತಮಾನದ ಅಥೆನ್ಸ್‌ನಲ್ಲಿದ್ದರು ಎಂಬಂತೆ ತೋರುತ್ತದೆ. 'ರಿಪಬ್ಲಿಕ್'ನ ಮೊದಲ ಅಧ್ಯಾಯದಲ್ಲಿ, ಬಲಿಷ್ಠರ ಹಿತಾಸಕ್ತಿಯ ಹೊರತಾದ ಯಾವ ನ್ಯಾಯವೂ ಇಲ್ಲ, ಸರ್ಕಾರಗಳು ತಮ್ಮ ಅನುಕೂಲಕ್ಕಾಗಿ ಕಾನೂನುಗಳನ್ನು ರೂಪಿಸುತ್ತವೆ, ಹಾಗೂ ಅಧಿಕಾರಕ್ಕಾಗಿ ನಡೆಸುವ ಸ್ಪರ್ಧೆಯಲ್ಲಿ ಮನವಿ ಮಾಡಲು ಯಾವುದೇ ವ್ಯಕ್ತ್ಯತೀತ ಮಾನದಂಡವಿಲ್ಲ ಎಂದು ಥ್ರಾಸಿಮ್ಯಾಶಸ್ ವಾದಿಸುತ್ತಾನೆ. ಪ್ಲೇಟೋ ಪ್ರಕಾರ (ಗಾರ್ಜಿಯಸ್‌ನಲ್ಲಿ) ಕ್ಯಾಲಿಕ್ಲೀಸ್ ಒಂದು ಸರಳ ಸಿದ್ಧಾಂತವನ್ನು ಮಂಡಿಸುತ್ತಾನೆ. ನಿಸರ್ಗ ನಿಯಮವು ಬಲಿಷ್ಠರ ನಿಯಮವೇ ಆಗಿದೆ, ಆದರೆ ಅನುಕೂಲದ ದೃಷ್ಟಿಯಿಂದ ಬಲಿಷ್ಠರನ್ನು ನಿಯಂತ್ರಿಸಲು ಜನ ಸಂಸ್ಥೆಗಳನ್ನೂ ನೀತಿಸಂಹಿತೆಗಳನ್ನೂ ರೂಪಿಸುತ್ತಾರೆ ಎಂದವನು ಹೇಳಿದ. ಅಂಥ ಸಿದ್ಧಾಂತಗಳು ಹಿಂದಿನ ಕಾಲಕ್ಕಿಂತಲೂ ನಮ್ಮ ಕಾಲದಲ್ಲಿ ವ್ಯಾಪಕ ಅನುಮೋದನೆಯನ್ನು ಪಡೆದಿವೆ. ಅವುಗಳ ಬಗ್ಗೆ ಏನೇ ಆಲೋಚನೆ ಮಾಡಲಿ, ಅವು ಸೂಫಿಸ್ಟರ ಲಕ್ಷಣವಂತೂ ಅಲ್ಲ.

ಕ್ರಿಪೂ ೫ ನೆಯ ಶತಮಾನದಲ್ಲಿ – ಬದಲಾವಣೆಗಳನ್ನು ತರಲು ಸೂಫಿಸ್ಟರು ಯಾವ ಪಾತ್ರವನ್ನೇ ವಹಿಸಿರಲಿ – ಮಾತಿನ ಚಕಮಕಿಯ ಮತ್ತು ಕ್ರೂರ ಸಿನಿಕತನಗಳ ಕಠಿಣ ಪರಿಶುದ್ಧ ಸರಳತೆಯಿಂದ ನಿಧಾನ ಮಾತು ಹಾಗೂ ಅಷ್ಟೇ ಕ್ರೂರವಾದ ಕುಸಿಯುತ್ತಿದ್ದ ಸಂಪ್ರದಾಯಶರಣತೆಯ ಸಮರ್ಥನೆಗಳ ನಡುವಣ ಸಂಘರ್ಷದ ಕಡೆಗೆ ಅಥೆನ್ಸ್‌ನಲ್ಲಿ ಬದಲಾವಣೆ ಸಾಗುತ್ತಿತ್ತು. ಶತಮಾನದ ಮೊದಲಲ್ಲಿ ಪರ್ಷಿಯನ್ನರ ವಿರುದ್ಧದ ಹೋರಾಟದಲ್ಲಿ ಅಯೋನಿಯ ನಗರಗಳನ್ನು ರಕ್ಷಿಸುವಲ್ಲಿ ಅಥೆನ್ಸ್‌ನ ಬೆಂಬಲ ಹಾಗೂ ಕ್ರಿಪೂ ೪೯೦ ರ ಮ್ಯಾರಥಾನ್‌ನ ಗೆಲವುಗಳನ್ನು ಕಾಣುತ್ತೇವೆ. ಕೊನೆಯಲ್ಲಿ ಕಾಣುವುದು ಅಥೆನ್ಸ್ ಕ್ರಿಪೂ ೪೦೪ ರಲ್ಲಿ ಸ್ಪಾರ್ಟಾದಿಂದ ಸೋಲು ಹಾಗೂ ಕ್ರಿಪೂ ೩೯೯ ರಲ್ಲಿ ಸಾಕ್ರಟೀಸ್‌ನನ್ನು ಮರಣದಂಡನೆಗೆ ಗುರಿಪಡಿಸಿದ್ದು. ಈ ಕಾಲಾನಂತರ ಅಥೆನ್ಸ್ ರಾಜಕೀಯವಾಗಿ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿತು, ಆದರೆ ಸಂಶಯಾತೀತವಾಗಿ ಸಾಂಸ್ಕೃತಿಕ ಯಾಜಮಾನ್ಯವನ್ನು ಪಡೆಯಿತು, ಇದು ಕ್ರೈಸ್ತಮತಧರ್ಮದ ಗೆಲವಿನವರೆಗೂ ಮುಂದುವರಿಯಿತು.

ಪ್ಲೇಟೋ ಮತ್ತು ಆನಂತರದ ಎಲ್ಲ ಗ್ರೀಕ್ ಚಿಂತನೆಯನ್ನು ಅರ್ಥಮಾಡಿಕೊಳ್ಳಲು ಕ್ರಿಪೂ ೫ ನೆಯ ಶತಮಾನದ ಅಥೆನ್ಸ್‌ನ ಇತಿಹಾಸದ ಸ್ವಲ್ಪ ತಿಳಿವಳಿಕೆ ಆವಶ್ಯಕ. ಮೊದಲ ಪರ್ಷಿಯನ್ ಯುದ್ಧದಲ್ಲಿ, ಹಿರಿಮೆಯ ಹೆಚ್ಚಿನಂಶವು ಅಥೆನ್ಸ್‌ನವರಿಗೆ ದಕ್ಕಿತು. ಇದಕ್ಕೆ ಕಾರಣ ಮ್ಯಾರಥಾನ್‌ನ ನಿರ್ಣಾಯಕ ಗೆಲವು. ಹತ್ತು ವರ್ಷಗಳ ನಂತರ ನಡೆದ ಎರಡನೆಯ ಯುದ್ಧದಲ್ಲಿ, ಅಥೆನ್ಸ್ ಗ್ರೀಕ್‌ರಲ್ಲೆಲ್ಲ ಸಮುದ್ರದಲ್ಲಿ ಅತ್ಯಂತ ಮೇಲುಗೈ ಪಡೆದಿದ್ದರೂ, ನೆಲದ ಮೇಲೆ ಗೆಲವು ಮುಖ್ಯವಾಗಿ ಸ್ಪಾರ್ಟಾಕ್ಕೆ ಸಲ್ಲಬೇಕು, ಅವರು ಗ್ರೀಕ್ ಜಗತ್ತಿನ ಅಭಿಷಿಕ್ತ ನಾಯಕರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಆದರೆ ಸ್ಪಾರ್ಟನ್ನರು ತೀರ ಪ್ರಾದೇಶಿಕ ದೃಷ್ಟಿಕೋನದವರು, ಯೂರೋಪ್‌ನ ಗ್ರೀಸ್‌ನಿಂದ ಹೊಡೆದೋಡಿಸಿದ ಬಳಿಕ ಅವರು ಪರ್ಷಿಯನ್ನರ ವಿರೋಧವನ್ನು ಕೈಬಿಟ್ಟಿದ್ದರು. ಏಷ್ಯಾಟಿಕ್ ಗ್ರೀಸ್‌ನ ನಾಯಕತ್ವ ಮತ್ತು ಪರ್ಷಿಯನ್ನರು ವಶಪಡಿಸಿಕೊಂಡಿದ್ದ ದ್ವೀಪಗಳನ್ನು ಬಿಡುಗಡೆಗೊಳಿಸುವ ಪ್ರಯತ್ನದಲ್ಲಿ ಗೆಲವು ಸಾಧಿಸುವಲ್ಲಿ ಅಥೆನ್ಸ್ ಅತೀವ ಯಶಸ್ವಿಯಾಗಿತ್ತು. ಅಥೆನ್ಸ್ ನೌಕಾಸಾಮರ್ಥ್ಯದಲ್ಲಿ ಮುಂದಾಳೆನಿಸಿತು, ಮತ್ತು ಅಯೋನಿಯ ದ್ವೀಪಗಳ ಮೇಲೆ ತಕ್ಕಮಟ್ಟಿಗಿನ ಪ್ರಜಾಪ್ರಭುತ್ವಾತ್ಮಕ ನಿಯಂತ್ರಣವನ್ನು ಸಾಧಿಸಿತು. ಸ್ವಲ್ಪ ಮಟ್ಟಿಗಿನ ಚಕ್ರಾಧಿಪತ್ಯವಾದಿ ಮತ್ತು ಸ್ವಲ್ಪಮಟ್ಟಿಗಿನ ಪ್ರಜಾಪ್ರಭುತ್ವವಾದಿಯಾಗಿದ್ದ ಪೆರಿಕ್ಲೀಸ್‌ನ ನಾಯಕತ್ವದಲ್ಲಿ ಅಥೆನ್ಸ್ ಏಳಿಗೆಯನ್ನು ಕಂಡಿತು. ಅಥೆನ್ಸ್‌ನ ವೈಭವದ ಸ್ಮಾರಕವಾಗಿ ಇವತ್ತಿಗೂ ನಿಂತಿರುವ ಕ್ಸರ್‌ಕ್ಸೀಸ್ ನಾಶಗೊಳಿಸಿದ್ದಕ್ಕೆ ಬದಲಾಗಿ ನಿರ್ಮಾಣಗೊಂಡ ಮಹಾ ದೇವಾಲಯಗಳು ಅವನ ಪ್ರೇರಣೆಯಿಂದಲೇ ನಡೆದದ್ದು. ನಗರದ ಶ್ರೀಮಂತಿಕೆ ವೇಗವಾಗಿ ವೃದ್ಧಿಯಾಯಿತು, ಜೊತೆಗೆ ಸಂಸ್ಕೃತಿಯ ದೃಷ್ಟಿಯಿಂದಲೂ, ಮತ್ತು

ಅಂಥ ಕಾಲದಲ್ಲಿ ಸಾಮಾನ್ಯವಾಗಿ ಆಗುವಂತೆ, ಅದರಲ್ಲೂ ಶ್ರೀಮಂತಿಕೆಯು ವಿದೇಶಿ ವ್ಯಾಪಾರದಿಂದಾಗಿ ಹಾಗಾದಾಗ ಪಾರಂಪರಿಕ ನೈತಿಕತೆ ಹಾಗೂ ಪಾರಂಪರಿಕ ಶ್ರದ್ಧೆಗಳು ಹಿನ್ನಡೆ ಕಂಡವು.

ಈ ಕಾಲದಲ್ಲಿನ ಅಥೆನ್ಸ್‌ನಲ್ಲಿ ಸಾಕಷ್ಟು ಹೆಚ್ಚಿನ ಸಂಖ್ಯೆಯ ಪ್ರತಿಭಾವಂತರಿದ್ದರು. ಮೂವರು ಮಹಾ ನಾಟಕಕಾರರಾದ ಈಸ್ಕಿಲಸ್, ಸಾಫೋಕ್ಲೀಸ್ ಮತ್ತು ಯೂರಿಪಿಡೀಸ್ ಕ್ರಿಪೂ ೫ ನೆಯ ಶತಮಾನಕ್ಕೆ ಸೇರಿದವರು. ಈಸ್ಕಿಲಸ್ ಮ್ಯಾರಥಾನ್ ಕದನದಲ್ಲಿ ಪಾಲ್ಗೊಂಡಿದ್ದ ಹಾಗೂ ಸಲಾಮಿಸ್ ಯುದ್ಧವನ್ನು ಕಂಡಿದ್ದ. ಸಾಫೋಕ್ಲೀಸ್ ಇನ್ನೂ ಮತಧಾರ್ಮಿಕ ಸಾಂಪ್ರದಾಯಿಕತೆಯಲ್ಲೇ ಉಳಿದಿದ್ದ. ಆದರೆ ಯೂರಿಪಿಡೀಸ್ ಪ್ರೋಟಾಗೊರಾಸ್‌ನಿಂದಲೂ ಆ ಕಾಲದ ಸ್ವತಂತ್ರ ಚಿಂತನೆಯಿಂದಲೂ ಪ್ರಭಾವಿತನಾಗಿದ್ದ; ಹೀಗಾಗಿ ಅವನ ಪೌರಾಣಿಕತೆಯು ಸಂದೇಹಾತ್ಮಕವಾಗಿಯೂ ವಿಧ್ವಂಸಕವಾಗಿಯೂ ಇದೆ. ವೈನೋದಿಕಗಳ ಲೇಖಕನಾದ ಅರಿಸ್ಟೋಫೇನೀಸ್ – ಸಾಕ್ರಟೀಸ್, ಸೂಫಿಸ್ಟರು ಮತ್ತು ತತ್ವಜ್ಞಾನಿಗಳನ್ನು – ಲೇವಡಿ ಮಾಡಿದರೂ ಅವನು ಅವರ ವರ್ತುಲದಲ್ಲೇ ಇದ್ದ. ಪ್ಲೇಟೋ ತನ್ನ 'ಸಿಂಪೋಸಿಯಮ್'ನಲ್ಲಿ ಅವನು ಸಾಕ್ರಟೀಸ್‌ನೊಡನೆ ತುಂಬ ಸ್ನೇಹಪರನಾಗಿದ್ದನೆಂದು ಚಿತ್ರಿಸುತ್ತಾನೆ. ಮೂರ್ತಿಶಿಲ್ಪಿ ಫೀಯಿಡಿಯಸ್, ಹಿಂದೆಯೇ ಗಮನಿಸಿರುವಂತೆ, ಪೆರಿಕ್ಲೀಸ್‌ನ ವಲಯಕ್ಕೆ ಸೇರಿದ್ದ.

ಅಥೆನ್ಸ್‌ನ ಹಿರಿಮೆಯು ಈ ಕಾಲದಲ್ಲಿ ಬುದ್ಧಿಶಕ್ತಿಗಿಂತಲೂ ಹೆಚ್ಚು ಕಲಾತ್ಮಕವಾಗಿತ್ತು. ಸಾಕ್ರಟೀಸ್‌ನ ಹೊರತಾಗಿ, ಕ್ರಿಪೂ ೫ ನೆಯ ಶತಮಾನದ ಯಾವನೇ ಗಣಿತಜ್ಞನಾಗಲೀ ತತ್ವಜ್ಞಾನಿಯಾಗಲೀ ಅಥೆನ್ಸ್‌ನವನಾಗಿರಲಿಲ್ಲ. ಆದರೆ ಸಾಕ್ರಟೀಸ್ ಬರಹಗಾರನಲ್ಲ, ಮೌಖಿಕ ವಾದಕ್ಕಷ್ಟೇ ಸೀಮಿತನಾಗಿದ್ದವನು.

ಕ್ರಿಪೂ ೪೩೧ ರಲ್ಲಿ ಶುರುವಾದ ಪೆಲೋಪೊನೀಸಿಯನ್ ಯುದ್ಧ ಮತ್ತು ಕ್ರಿಪೂ ೪೨೯ ರಲ್ಲಿ ಪೆರಿಕ್ಲೀಸ್‌ನ ಸಾವು ಅಥೆನ್ಸ್‌ನ ಇತಿಹಾಸದಲ್ಲಿ ಕಗ್ಗತ್ತಲ ಅವಧಿಯನ್ನು ಕಾಣಿಸಿದವು. ಅಥೆನ್ಸ್ ಜನರು ಕಡಲ ಸಾಮರ್ಥ್ಯದಲ್ಲಿ ಮಿಗಿಲೆನಿಸಿದ್ದರೂ, ಸ್ಪಾರ್ಟನ್ನರ ನೆಲದ ಸಾಮರ್ಥ್ಯದ ಸಾರ್ವಭೌಮತೆಯು ಬೇಸಿಗೆಯ ಕಾಲದಲ್ಲಿ ಪದೇ ಪದೇ (ಅಥೆನ್ಸ್ ಹೊರತಾದ) ಆಟ್ಟಿಕವನ್ನು ವಶಪಡಿಸಿಕೊಳ್ಳುವಂತಾಯಿತು. ಇದರ ಪರಿಣಾಮವೆಂದರೆ ಅಥೆನ್ಸ್ ಜನಸಂಖ್ಯೆ ಮಿತಿಮೀರಿದ್ದು, ಇದರಿಂದಾಗಿ ಪ್ಲೇಗ್ ಪಿಡುಗಿನಿಂದ ಪೀಡಿತವಾಯಿತು. ಕ್ರಿಪೂ ೪೧೪ ರಲ್ಲಿ ಅಥೀನಿಯನ್ನರು ಸ್ಪಾರ್ಟಾದೊಡನೆ ಕೈಜೋಡಿಸಿದ್ದ ಸಿರಾಕ್ಯೂಸ್ ಅನ್ನು ವಶಪಡಿಸಿಕೊಳ್ಳುವ ನಿರೀಕ್ಷೆಯಲ್ಲಿ ಸಿಸಿಲಿಗೆ ಒಂದು ದೊಡ್ಡ ಯುದ್ಧಪಡೆಯನ್ನು ಕಳಿಸಿತು. ಆದರೆ ಈ ಪ್ರಯತ್ನವು ವಿಫಲಗೊಂಡಿತು. ಯುದ್ಧವು ಅಥೆನ್ಸ್ ಜನರನ್ನು ಬಿರುಸಾಗಲು ಹಾಗೂ ಹಿಂಸಕರಾಗಲು ಪ್ರಚೋದಿಸಿತು. ಕ್ರಿಪೂ ೪೧೬ ರಲ್ಲಿ ಅವರು ಮೆಲಾಸ್ ದ್ವೀಪವನ್ನು

ಗೆದ್ದರು, ಸೈನಿಕ ವಯಸ್ಸಿನ ಎಲ್ಲರನ್ನೂ ಕೊಂದು ಹಾಕಿ, ಉಳಿದವರನ್ನು ಗುಲಾಮರನ್ನಾಗಿಸಿಕೊಂಡರು. ಯೂರಿಪಿಡೀಸ್‌ನ 'ದ ಟ್ರೋಜನ್ ವಿಮೆನ್' ಇಂತಹ ಅಮಾನುಷ ವರ್ತನೆಯ ಬಗೆಗಿನ ಪ್ರತಿಭಟನೆ. ಸ್ಪಾರ್ಟಾ ಅಲ್ಪಜನಾಧಿಪತ್ಯ ಮತ್ತು ಶ್ರೀಮಂತಪ್ರಭುತ್ವದ ಪರವಾಗಿದ್ದು, ಅಥೆನ್ಸ್ ಪ್ರಜಾಪ್ರಭುತ್ವದ ಪರವಾಗಿದ್ದುದರಿಂದ ಈ ಸಂಘರ್ಷಕ್ಕೊಂದು ಸೈದ್ಧಾಂತಿಕ ಮುಖವೂ ಇತ್ತು. ಅಥೀನಿಯನ್ನರಿಗೆ ತಮ್ಮವರೇ ಕೆಲವು ಶ್ರೀಮಂತರ ವಿರುದ್ಧ ಅವಕಾಶದ್ರೋಹ ಮಾಡಿದರೆಂಬ ಅನುಮಾನವಿತ್ತು. ಇದು ಕ್ರಿಪೂ ೪೦೫ ರ ಈಗೊಸ್ಪೊಟಮಿಯ ಯುದ್ಧದಲ್ಲಿನ ನೌಕಾದಳದ ಅಂತಿಮ ಸೋಲಿನಲ್ಲಿ ಇದು ಮುಖ್ಯ ಪಾತ್ರವಹಿಸಿತ್ತೆಂದು ಸಾಮಾನ್ಯವಾಗಿ ಭಾವಿಸಲಾಗಿದೆ.

ಯುದ್ಧದ ಕೊನೆಯಲ್ಲಿ ಸ್ಪಾರ್ಟನ್ನರು ಅಥೆನ್ಸ್‌ನಲ್ಲಿ ಒಂದು ಅಲ್ಪಜನಾಧಿಪತ್ಯವನ್ನು ಸ್ಥಾಪಿಸಿದರು, ಇದು ಮೂವತ್ತು ಮಂದಿ ನಿರಂಕುಶಾಧಿಪತಿಗಳು (ಥರ್ಟೀ ಟೈರಾನ್ಟ್ಸ್) ಎಂಬ ಹೆಸರು ಪಡೆದಿದೆ. ಈ ಮೂವತ್ತರಲ್ಲಿ, ಅವರ ನಾಯಕನಾದ ಕ್ರಿಟಿಯಸ್ ಸೇರಿದತೆ ಕೆಲವರು ಸಾಕ್ರಟೀಸ್‌ನ ವಿದ್ಯಾರ್ಥಿಗಳಾಗಿದ್ದವರು. ಅವರನ್ನು ಜನ ದ್ವೇಷಿಸುತ್ತಿದ್ದುದು ಸಮಂಜಸವೇ ಆಗಿತ್ತು, ಮತ್ತವರನ್ನು ಒಂದೇ ವರ್ಷದಲ್ಲಿ ಪದಚ್ಯುತಿಗೊಳಿಸಲಾಯಿತು. ಸ್ಪಾರ್ಟಾದ ಒಪ್ಪಿಗೆಯೊಡನೆ ಪ್ರಜಾಪ್ರಭುತ್ವವನ್ನು ಮರಳಿ ಸ್ಥಾಪಿಸಲಾಯಿತು. ಆದರದು ಕಹಿಗೊಂಡ ಪ್ರಜಾಪ್ರಭುತ್ವ, ತನ್ನ ಆಂತರಿಕ ಶತ್ರುಗಳ ವಿರುದ್ಧದ ನೇರ ಸೇಡಿನ ಕಾರಣದಿಂದ ಅದು ಸಾಮೂಹಿಕ ಕ್ಷಮಾದಾನದ ವಿರೋಧವಾಗಿತ್ತು. ಕ್ಷಮಾದಾನಕ್ಕೊಳಗಾಗದ್ದರಿಂದ ಅವರನ್ನು ಕಾನೂನು ಕ್ರಮಕ್ಕೊಳಪಡಿಸುವ ನೆವ ಸಿಕ್ಕಿದ್ದರಿಂದ ಸಂತಸಗೊಂಡಿತ್ತು. ಇಂತಹ ವಾತಾವರಣದಲ್ಲಿಯೇ ಸಾಕ್ರಟೀಸ್‌ನ ವಿಚಾರಣೆ ಮತ್ತು ಮರಣದಂಡನೆಗಳು ನಡೆದವು (ಕ್ರಿಪೂ ೩೯೯).

೦

ಭಾಗ ೨

(ಸಾಕ್ರಟೀಸ್, ಪ್ಲೇಟೋ ಮತ್ತು ಅರಿಸ್ಟಾಟಲ್)

೧೧
ಸಾಕ್ರಟೀಸ್

ಸಾಕ್ರಟೀಸ್ ಇತಿಹಾಸಕಾರನಿಗೆ ಕಠಿಣ ವಸ್ತು. ನಮಗೆ ಗೊತ್ತಿರುವ ಅನೇಕರ ಬಗೆಗಿನ ಮಾಹಿತಿ ಖಚಿತವಾದರೂ ಕೊಂಚ, ಮತ್ತೆ ಕೆಲವರ ಬಗ್ಗೆ ಅಪಾರ ಮಾಹಿತಿ ಸಿಕ್ಕುತ್ತದೆ; ಆದರೆ ಸಾಕ್ರಟೀಸ್ ವಿಷಯದಲ್ಲಿ ಅನಿಶ್ಚಿತತೆಯಿರುವುದು ನಮಗೆ ಗೊತ್ತಿರುವುದು ಸ್ವಲ್ಪವೋ ಹೆಚ್ಚೋ ಎಂಬುದರ ಬಗ್ಗೆ. ಅವನು ತಕ್ಕಮಟ್ಟಿಗಿನ ಜೀವನಾಧಾರವನ್ನು ಹೊಂದಿದ್ದ ಅಥೆನ್ಸ್ ಪ್ರಜೆ ಎಂಬುದು ಸಂಶಯಾತೀತ; ತನ್ನ ಸಮಯವನ್ನವನು ಸಂವಾದಕ್ಕೆ ವಿನಿಯೋಗಿಸುತ್ತಿದ್ದವನು, ಯುವಕರಿಗೆ ತತ್ವಜ್ಞಾನವನ್ನು ಬೋಧಿಸುತ್ತಿದ್ದವನು, ಆದರೆ ಸೂಫಿಸ್ಟರಂತೆ ಹಣಕ್ಕಾಗಿ ಅಲ್ಲ. ಅವನ ಬಗ್ಗೆ ವಿಚಾರಣೆ ನಡೆದು ಮರಣದಂಡನೆಗೆ ಗುರಿಯಾಗಿ ಕ್ರಿಪೂ ೩೯೯ ರಲ್ಲಿ ಮತ್ತು ತನ್ನ ಎಪ್ಪತ್ತನೆಯ ವಯಸ್ಸಿನಲ್ಲಿ ದಂಡನೆಗೊಳಗಾದ ಎಂಬುದೂ ನಿಶ್ಚಿತ. ಅಥೆನ್ಸ್‌ನಲ್ಲಿ ಅವನು ಸುಪರಿಚಿತ ವ್ಯಕ್ತಿಯಾಗಿದ್ದ ವ್ಯಕ್ತಿ, ಯಾಕೆಂದರೆ ಅರಿಸ್ಟೋಫೆನೀಸ್ ಅವನ ವ್ಯಂಗ್ಯಚಿತ್ರವನ್ನು ತನ್ನ 'ದ ಕ್ಲೌಡ್ಸ್'ನಲ್ಲಿ ನೀಡುತ್ತಾನೆ. ಆದರೆ ಇಷ್ಟನ್ನು ಮೀರಿದರೆ ನಾವು ವಿವಾದದಲ್ಲಿ ಸಿಲುಕುತ್ತೇವೆ. ಕ್ಸೆನೋಫೋನ್ ಮತ್ತು ಪ್ಲೇಟೋ ಎಂಬ ಅವನ ಇಬ್ಬರ ವಿದ್ಯಾರ್ಥಿಗಳು ಅವನ ಬಗ್ಗೆ ಬೇಕಾದಷ್ಟು ಬರೆದಿದ್ದಾರೆ, ಆದರೆ ಅವರು ಹೇಳಿದುದರಲ್ಲಿ ತುಂಬ ವ್ಯತ್ಯಾಸಗಳಿವೆ. ಇಬ್ಬರೂ ಒಂದೇ ವಿಷಯವನ್ನು ಹೇಳಿದಾಗಲೂ ಕ್ಸೆನೋಫೋನ್ ಪ್ಲೇಟೋನನ್ನು ನಕಲು ಮಾಡುತ್ತಾನೆ ಎಂಬುದು ಬರ್ನೆಟ್ ಅವರ ಅಭಿಪ್ರಾಯ. ಭಿನ್ನವಾಗಿರುವ ಕಡೆಗಳಲ್ಲಿಯೂ ಕೆಲವರು ಅದನ್ನು ಒಪ್ಪಿಕೊಂಡರೆ ಮತ್ತೆ ಕೆಲವರು ಒಪ್ಪುವುದಿಲ್ಲ, ಮತ್ತೆ ಕೆಲವರು ಇಬ್ಬರನ್ನೂ ಒಪ್ಪುವುದಿಲ್ಲ. ಇಂತಹ ಅಪಾಯಕಾರಿ ವಿವಾದದಲ್ಲಿ ನಾನು ಪಕ್ಷಗಳನ್ನು ವಹಿಸುವ ಸಾಹಸ ಮಾಡಲಾರೆ; ವಿವಿಧ ಅಭಿಪ್ರಾಯಗಳಷ್ಟನ್ನೇ ನಾನು ಮಂಡಿಸುತ್ತೇನೆ.

ನಾವು ಕ್ಸೆನೋಫೋನ್‌ನಿಂದ ಆರಂಭಿಸೋಣ; ಅವನೊಬ್ಬ ಸೈನಿಕ, ಅವನ ಬುದ್ಧಿಶಕ್ತಿ ಹೆಚ್ಚಿನದೇನಲ್ಲ, ಮತ್ತು ಒಟ್ಟಾರೆ ಮನೋಧರ್ಮದಲ್ಲಿ ಸಾಂಪ್ರದಾಯಿಕ ವ್ಯಕ್ತಿ. ಸಾಕ್ರಟೀಸ್‌ನ ಮೇಲೆ ಧರ್ಮವಿರೋಧ ಮತ್ತು ಯುವಕರನ್ನು ಹಾಳುಮಾಡುವ

ಆಪಾದನೆ ಮಾಡಿದ್ದರ ಬಗ್ಗೆ ಅವನಿಗೆ ವ್ಯಥೆ; ಅದಕ್ಕೆ ವ್ಯತಿರಿಕ್ತವಾಗಿ, ಸಾಕ್ರಟೀಸ್ ಅಪಾರ ಧರ್ಮನಿಷ್ಠ ಮತ್ತು ತನ್ನ ಪ್ರಭಾವಕ್ಕೊಳಗಾದವರ ಮೇಲೆ ಆರೋಗ್ಯಕರ ಪ್ರಭಾವವನ್ನು ಬೀರಿದ ಎಂದು ವಾದಿಸುತ್ತಾನೆ. ಅವನ ಚಿಂತನೆಗಳು ವಿಧ್ವಂಸಕವಾಗಿರುವುದಕ್ಕಿಂತ ಮಿಗಿಲಾಗಿ ಮಂದವೂ ಮಾಮೂಲಿಯೂ ಆದವೆಂಬಂತೆ ತೋರುತ್ತವೆ. ಸಾಕ್ರಟೀಸ್‌ನ ಬಗೆಗಿನ ದ್ವೇಷಕ್ಕೆ ಕಾರಣವೇನು ಎಂದು ವಿವರಿಸದಿರುವುದರಿಂದ ಈ ಸಮರ್ಥನೆಯು ಅತಿರೇಕಕ್ಕೆ ಹೋಗುತ್ತದೆ. ಬರ್ನೆಟ್ ಅವರು ಹೇಳುವಂತೆ 'ಥೇಲೀಸ್ ಟು ಪ್ಲೇಟೋ', ಪು. ೧೪೯): 'ಕ್ಸೆನೋಫೋನ್‌ನ ಸಾಕ್ರಟೀಸ್ ಸಮರ್ಥನೆಯು ಅತಿಯಾಗಿ ಉತ್ಪ್ರೇಕ್ಷಿತವಾದುದು, ಅವನು ಹಾಗೆಯೇ ಇದ್ದಿದ್ದರೆ ಮರಣದಂಡನೆಗೆ ಗುರಿಪಡಿಸುತ್ತಿರಲಿಲ್ಲ.'

ಕ್ಸೆನೋಫೋನ್ ಹೇಳಿದುದೆಲ್ಲ ಸತ್ಯವಾದುದಾಗಿರಬೇಕೆಂದು ನಂಬುವ ಪ್ರವೃತ್ತಿಯೊಂದಿದೆ, ಯಾಕೆಂದರೆ ಯಾವುದನ್ನೂ ಅಸತ್ಯವೆಂದು ನಂಬುವಂತಹ ಬುದ್ಧಿವಂತಿಕೆ ಅವನಿಗಿರಲಿಲ್ಲ. ಇದು ಒಪ್ಪಬಹುದಾದ ತರ್ಕಮಾರ್ಗವಲ್ಲ. ಬುದ್ಧಿವಂತನೊಬ್ಬ ಏನು ಹೇಳಿದನೆಂಬ ಬಗೆಗಿನ ದಡ್ಡನೊಬ್ಬನ ವರದಿಯು ಎಂದೂ ನಿಖರವಾಗಿರಲಾರದು, ಯಾಕೆಂದರೆ ತಾನು ಕೇಳಿಸಿಕೊಂಡದ್ದನವನು ಅಪ್ರಜ್ಞಾಪೂರ್ವಕವಾಗಿ ತನ್ನ ತಿಳಿವಳಿಕೆಗೆ ಸಿಕ್ಕುವಂತಹುದಷ್ಟಕ್ಕೆ ಮಾರ್ಪಡಿಸಿಕೊಂಡಿರುತ್ತಾನೆ. ತತ್ವಜ್ಞಾನದ ಬಗ್ಗೆ ಮುಗ್ಧನಾಗಿರುವ ನನ್ನ ಸ್ನೇಹಿತನಿಗಿಂತ ತತ್ವಜ್ಞಾನಿಗಳಲ್ಲಿನ ನನ್ನ ಕಡುವಿರೋಧಿ ನನ್ನ ಮಾತನ್ನು ವರದಿಮಾಡುವುದನ್ನು ನಾನು ಸ್ವಾಗಸುತ್ತೇನೆ. ಹೀಗಾಗಿ ತತ್ವಜ್ಞಾನದ ಕಠಿಣ ಅಂಶದ ಬಗ್ಗೆಯಾಗಲೀ ಸಾಕ್ರಟೀಸ್‌ಗೆ ಮರಣದಂಡನೆ ವಿಧಿಸಿದ್ದು ನ್ಯಾಯವಲ್ಲ ಎಂದು ಸಮರ್ಥಿಸಲು ವಾದವೊಂದರ ಭಾಗವಾಗಿ ಕ್ಸೆನೋಫೋನ್ ಹೇಳುವುದನ್ನು ಒಪ್ಪಲಾಗದು.

ಆದರೆ ಕ್ಸೆನೋಫೋನ್‌ನ ಕೆಲವು ನೆನಪುಗಳು ನಂಬಲರ್ಹವಾದವು. ಅಧಿಕಾರ ಸ್ಥಾನಗಳಿಗೆ ಸಮರ್ಥ ಜನರು ಬರುವುದಕ್ಕೆ ಸಾಕ್ರಟೀಸ್ ಯಾವ ರೀತಿ ಸದಾ ನಿರತನಾಗಿರುತ್ತಿದ್ದ ಎಂದವನು ವಿವರಿಸುತ್ತಾನೆ (ಪ್ಲೇಟೋ ಕೂಡ ಇದನ್ನು ಹೇಳುತ್ತಾನೆ). ಅವನು ಕೇಳುತ್ತಿದ್ದ ಪ್ರಶ್ನೆಗಳೆಂದರೆ: 'ನನ್ನ ಷೂಗಳನ್ನು ರಿಪೇರಿ ಮಾಡಿಸಲು ಯಾರನ್ನು ಕೇಳಬೇಕು?' ಎಂಬ ಪ್ರಶ್ನೆಗೆ ಸರಳ ಯುವಕ 'ಸಾಕ್ರಟೀಸ್ ಅವರೇ, ಒಬ್ಬ ಷೂ ತಯಾರಕನನ್ನು' ಎಂದು ಉತ್ತರಿಸುತ್ತಾನೆ. ಅವನು ಬಡಗಿಗಳು, ಕಂಚುಗಾರರು ಮುಂತಾದವರ ಬಳಿ ಹೋಗಿ ಹೀಗಿರಬಹುದಾದ ಒಂದು ಪ್ರಶ್ನೆಯನ್ನು ಕೇಳುತ್ತಾನೆ: 'ಸರ್ಕಾರವೆಂಬ ಹಡಗನ್ನು ಯಾರು ನಿರ್ವಹಿಸಬೇಕು?' ಅವನು ಥರ್ಟಿ ಟೈರಂಟ್ಸ್ ಜೊತೆ ಸಂಘರ್ಷಕ್ಕಿಳಿದಾಗ, ಅವನ ಬಳಿ ಅಭ್ಯಾಸ ಮಾಡಿದ್ದರಿಂದಾಗಿ ಅವನ ಎಲ್ಲ ಮಾರ್ಗಗಳನ್ನೂ ಬಲ್ಲ ಅವರ ಮುಖಂಡನಾದ ಕ್ರಿಷಿಯಸ್ ಅವನು ಯುವಕರಿಗೆ ಬೋಧಿಸುವುದನ್ನು ನಿಷೇಧಿಸುತ್ತಾನೆ, ಜೊತೆಗೆ 'ನಿನ್ನ ಷೂ ತಯಾರಕರು,

ಕಂಚುಗಾರರು ಮತ್ತು ಬಡಗಿಗಳ ಜೊತೆಗಿನ ಸಂಬಂಧ ನಿಲ್ಲಿಸಬೇಕು. ನೀನು ಅವರಿಗೆ ಕೊಟ್ಟ ಪ್ರಚಾರವನ್ನು ಪರಿಗಣಿಸಿ ಅವರನ್ನು ತುಳಿದು ಹಾಕಬೇಕು' ಎಂದೂ ಸೇರಿಸುತ್ತಿದ್ದ (ಕ್ಸೆನೊಫೋನ್, 'ಮೆಮೋರಬಿಲಿಯ', ಭಾಗ ೧, ಅಧ್ಯಾಯ ೨). ಇದು ನಡೆದದ್ದು ಪೆಲೋಪೋನಿಸಿಯ ಯುದ್ಧ ಮುಗಿದು ಸ್ಪಾರ್ಟನ್ನರು ಒಂದು ಅಲ್ಪಜನಾಧಿಪತ್ಯದ ಸರ್ಕಾರವನ್ನು ರಚಿಸಿದ್ದ ಅಲ್ಪ ಅವಧಿಯಲ್ಲಿ. ಆದರೆ ಬಹು ಕಾಲ ಅಥೆನ್ಸ್ ಪ್ರಜಾಪ್ರಭುತ್ವವನ್ನು ಹೊಂದಿತ್ತು, ಎಷ್ಟರ ಮಟ್ಟಿಗೆ ಎಂದರೆ, ಸೇನಾಧಿಪತಿಗಳೂ ಚುನಾಯಿತರಾಗುತ್ತಿದ್ದರು ಅಥವಾ ಸಾರ್ವಜನಿಕರಿಂದ ಆಯ್ಕೆಗೊಳ್ಳುತ್ತಿದ್ದರು. ಸೇನಾಧಿಪತಿಯಾಗಬೇಕೆಂದು ಬಯಸಿದ್ದ ಒಬ್ಬ ವ್ಯಕ್ತಿಯನ್ನು ಸಾಕ್ರಟೀಸ್ ಭೇಟಿಯಾದಾಗ ಅವನು ಕೊಂಚ ಯುದ್ಧಕಲೆಯನ್ನು ಅರಿಯುವುದು ಒಳ್ಳೆಯದು ಎಂದು ಅವನಿಗೆ ತಿಳಿಹೇಳಿದ. ಆ ಯುವಕ ಅದರಂತೆ ಹೋಗಿ ಯುದ್ಧೋಪಾಯಗಳ ಬಗ್ಗೆ ಕಿರುಕಾಲದ ತರಬೇತಿ ಪಡೆದ. ಅವನು ವಾಪಸಾದಾಗ, ಸಾಕ್ರಟೀಸ್ ಸ್ವಲ್ಪ ವ್ಯಂಗ್ಯಪೂರಿತವಾಗಿ ಹೊಗಳಿ, ಅವನನ್ನು ಹೆಚ್ಚಿನ ಅಧ್ಯಯನಕ್ಕಾಗಿ ವಾಪಸ್ಸು ಕಳಿಸಿದ (ಅದೇ, ಭಾಗ ೩, ಅಧ್ಯಾಯ ೧). ಮತ್ತೊಬ್ಬ ಯುವಕನನ್ನವನು ಹಣಕಾಸಿನ ವ್ಯವಹಾರತತ್ವಗಳ ಬಗ್ಗೆ ಕಲಿಯಲು ಕಳಿಸಿಕೊಟ್ಟ. ಇದೇ ಬಗೆಯ ಯೋಜನೆಗಳನ್ನವನು, ಯುದ್ಧಸಚಿವನನ್ನೂ ಒಳಗೊಂಡಂತೆ, ಅನೇಕರ ವಿಷಯದಲ್ಲಿ ನಡೆಸಿದ. ಆದರೆ ಹೆಮ್‌ಲಾಕ್ ಮೂಲಕ ಅವನನ್ನು ಮುಗಿಸುವುದೇ ಅವನು ದೂರುತ್ತಿದ್ದ ಕೆಡುಕುಗಳನ್ನು ಹೋಗಲಾಡಿಸುವುದಕ್ಕಿಂತ ಉತ್ತಮವೆಂದು ತೀರ್ಮಾನಿಸಲಾಯಿತು.

ಪ್ಲೇಟೋ ಸಾಕ್ರಟೀಸ್ ಬಗ್ಗೆ ಕೊಡುವ ವಿವರಣೆಗಳು ಕ್ಸೆನೋಫೋನ್ ವಿಷಯದಲ್ಲಿನಕ್ಕಿಂತ ಭಿನ್ನ ರೀತಿಯಲ್ಲಿ ಕಷ್ಟಕರವಾದುದು; ಅದೆಂದರೆ, ಪ್ಲೇಟೋಗೆ ಸಾಕ್ರಟೀಸ್ ಅನ್ನು ಐತಿಹಾಸಿಕವಾಗಿ ಚಿತ್ರಿಸುವ ಇಚ್ಛೆ ಎಷ್ಟರ ಮಟ್ಟಿಗಿತ್ತು, ಮತ್ತು ತನ್ನ ಸಂವಾದಗಳಲ್ಲಿನ 'ಸಾಕ್ರಟೀಸ್' ಎಂಬ ವ್ಯಕ್ತಿಯು ತನ್ನ ಅಭಿಪ್ರಾಯಗಳ ಮುಖವಾಣಿಯಾಗಬೇಕೆಂಬ ಇಚ್ಛೆ ಎಷ್ಟರಮಟ್ಟಿಗಿತ್ತು, ಎಂದು ತೀರ್ಮಾನಿಸುವುದು ಕಷ್ಟ. ತತ್ವಜ್ಞಾನಿಯಾಗಿರುವುದರ ಜೊತೆಗೆ ಪ್ಲೇಟೋ ತುಂಬ ಪ್ರತಿಭಾವಂತನೂ ಆಕರ್ಷಕಶೈಲಿಯವನೂ ಆದ ಬರಹಗಾರನಾಗಿದ್ದವನು. ಅವನ ಸಂವಾದಗಳಲ್ಲಿನ ಚರ್ಚೆಗಳು ಅವನು ದಾಖಲಿಸುವ ರೀತಿಯಲ್ಲಿಯೇ ನಡೆದುವು ಎಂದು ಯಾರೂ ಭಾವಿಸಲಾರರು, ಅವನೇ ಗಂಭೀರವಾಗಿ ತೋರಿಸಿಕೊಳ್ಳಲಾರ. ಆದರೆ, ಕನಿಷ್ಠ ಪಕ್ಷ, ಮೊದಮೊದಲಿನ ಸಂವಾದಗಳಲ್ಲಿನ ಸಂಭಾಷಣೆಗಳು ಸಂಪೂರ್ಣವಾಗಿ ಸಹಜವಾಗಿವೆ ಮತ್ತು ಪಾತ್ರಗಳು ನಂಬಲರ್ಹವಾದ ಬಗೆಯಲ್ಲಿವೆ. ಕಲ್ಪನಾತ್ಮಕ ಲೇಖಕನಾದ ಪ್ಲೇಟೋನ ಶ್ರೇಷ್ಠತೆಯೇ ಇತಿಹಾಸಕಾರನಾದ ಅವನ ಬಗ್ಗೆ ಸಂದೇಹಗಳನ್ನೆಬ್ಬಿಸುತ್ತದೆ. ಅವನ ಸಾಕ್ರಟೀಸ್ ಘನತೆ ಮತ್ತು ಅಸಾಧಾರಣ ಆಸಕ್ತಿದಾಯಕ ಪಾತ್ರ, ಬಹುತೇಕ ಸೃಷ್ಟ್ಯಾತ್ಮಕ ಜನರ ಸಾಮರ್ಥ್ಯವನ್ನು

ಮೀರಿದಂತಹುದು; ಆದರೆ ಅವನನ್ನು ಪ್ಲೇಟೋ ಸೃಷ್ಟಿಸಿರಬಹುದೆಂಬುದು ನನ್ನ ಭಾವನೆ. ಅವನು ನಿಜವಾಗಿ ಹಾಗೆ ಮಾಡಿದನೇ ಎಂಬುದು ಮತ್ತೊಂದೇ ಪ್ರಶ್ನೆ.

ಐತಿಹಾಸಿಕವೆಂದು ಸಾಮಾನ್ಯವಾಗಿ ಪರಿಗಣಿಸಲಾಗುವ ಸಂವಾದವೆಂದರೆ 'ಅಪಾಲಜಿ'. ತನ್ನ ವಿಚಾರಣೆಯ ಕಾಲದಲ್ಲಿ ಸಾಕ್ರಟೀಸ್ ತನ್ನನ್ನು ಸಮರ್ಥಿಸಿಕೊಳ್ಳಲು ಮಾಡಿದ ಭಾಷಣವೇ ಇದೆಂದು ತಿಳಿಯಲಾಗಿದೆ, ಆದರೆ ಬೇರಾರೋ ವರದಿ ಮಾಡಿದುದಾಗಿರದೆ, ಈ ಘಟನೆಯಾದ ಕೆಲವು ವರ್ಷಗಳ ಬಳಿಕ ಪ್ಲೇಟೋನ ನೆನಪಿನಲ್ಲಿ ಉಳಿದದ್ದನ್ನು ಸಾಹಿತ್ಯಾತ್ಮಕವಾಗಿ ಒಟ್ಟುಗೂಡಿಸಿ ಬರೆದದ್ದು. ವಿಚಾರಣೆಯ ಕಾಲದಲ್ಲಿ ಪ್ಲೇಟೋ ಹಾಜರಿದ್ದ, ಹೀಗಾಗಿ ಅದು ನಿಶ್ಚಿತವಾಗಿಯೂ ಬಹುತೇಕ ಸ್ಪಷ್ಟವಾಗಿರುವಂತೆ ತೋರುತ್ತದೆ, ಆದರೆ ಸಾಕ್ರಟೀಸ್ ಆಡಿದ ಮಾತುಗಳನ್ನು ಪ್ಲೇಟೋ ನೆನಪಿಸಿಕೊಂಡು ಬರೆದದ್ದು ಅದು; ಅದರ ಉದ್ದೇಶ, ಸ್ಥೂಲವಾಗಿ ಹೇಳಬೇಕೆಂದರೆ, ಐತಿಹಾಸಿಕತೆ. ತನ್ನೆಲ್ಲ ಮಿತಿಗಳ ನಡುವೆಯೂ ಇದು ಸಾಕ್ರಟೀಸ್‌ನ ನಿಖರ ವ್ಯಕ್ತಿತ್ವಚಿತ್ರಣವನ್ನು ಮಾಡುತ್ತಿರಲು ಸಾಕು.

ಸಾಕ್ರಟೀಸ್‌ನ ವಿಚಾರಣೆಯ ಮುಖ್ಯ ಸಂಗತಿಗಳ ಬಗ್ಗೆ ಸಂಶಯಗಳಿಲ್ಲ. 'ಸಾಕ್ರಟೀಸ್ ಕೆಡುಕು ಮಾಡುವ ವಿಷಯಗಳನ್ನು ಮತ್ತು ಭೂಮಿಯ ಕೆಳಗೂ ಸ್ವರ್ಗದ ಮೇಲೆಯೂ ಇರುವ ವಿಷಯಗಳನ್ನು ಹುಡುಕಾಡುವ, ಹಾಗೂ ಕೆಟ್ಟುದನ್ನು ಒಳಿತಾದ ಕಾರಣವೆಂದು ಇತರರಿಗೆ ಬೋಧಿಸುತ್ತಿದ್ದ ವಿಲಕ್ಷಣ ವ್ಯಕ್ತಿ' ಎಂಬ ಆಪಾದನೆಯ ಮೇಲೆ ಅವನ ಮೇಲೆ ಮೊಕದ್ದಮೆ ಹೂಡಲಾಗಿತ್ತು. ಅವನ ಬಗೆಗಿನ ದ್ವೇಷಕ್ಕಿದ್ದ ವಾಸ್ತವ ಕಾರಣವು, ಬಹುತೇಕ ನಿಶ್ಚಿತವಾಗಿ, ಅವನು ಶ್ರೀಮಂತಪ್ರಭುತ್ವವಾದಿಗಳ ಪಕ್ಷಕ್ಕೆ ಸಂಬಂಧಿಸಿದವನಾಗಿದ್ದ ಎಂಬುದು; ಅವನ ಬಹುಪಾಲು ವಿದ್ಯಾರ್ಥಿಗಳು ಈ ಪಕ್ಷಕ್ಕೆ ಸೇರಿದ್ದವರು, ಮತ್ತು ಅಧಿಕಾರಸ್ಥಾನಗಳಲ್ಲಿದ್ದ ಕೆಲವರು ಕೆಡುಕರಾಗಿದ್ದುದು. ಆದರೆ ಕ್ಷಮಾದಾನದ ಕಾರಣದಿಂದ ಈ ಆಪಾದನೆಯನ್ನು ಹೊರಿಸಿ ಮೊಕದ್ದಮೆ ಹೂಡುವಂತಿರಲಿಲ್ಲ. ಅವನು ತಪ್ಪಿತಸ್ಥನೆಂಬುದು ಬಹುಮತದ ಅಭಿಪ್ರಾಯವಾಗಿತ್ತು; ಅಥೆನ್ಸ್ ಕಾನೂನಿಗನುಗುಣವಾಗಿ, ಮರಣದಂಡನೆಗಿಂತ ಕಡಿಮೆ ದಂಡನೆಯನ್ನು ವಿಧಿಸಲು ಹೇಳಬಹುದಾಗಿತ್ತು. ಆಪಾದಿತನು ತಪ್ಪಿತಸ್ಥನೆಂದು ಕಂಡುಬಂದರೆ, ಫಿರ್ಯಾದಿಪಕ್ಷವು ಸೂಚಿಸಿದ್ದ ಅಥವಾ ಆರೋಪಿಯ ಪರ ವಕೀಲರು ಸೂಚಿಸಿದ್ದ ದಂಡನೆಯನ್ನಾಗಲೀ ನ್ಯಾಯಾಧೀಶರುಗಳು ಆಯ್ಕೆ ಮಾಡಿಕೊಳ್ಳಬಹುದಾಗಿತ್ತು. ಹೀಗಾಗಿ ಅದು ಭಾರಿ ಶಿಕ್ಷೆಯೊಂದನ್ನು ಸೂಚಿಸುವ ಸಾಕ್ರಟೀಸ್‌ನ ಆಸಕ್ತಿಯನ್ನವಲಂಬಿಸಿತ್ತು, ಮತ್ತದನ್ನು ನ್ಯಾಯಾಲಯವು ಸೂಕ್ತವೆಂದು ಪರಿಗಣಿಸಬಹುದಾಗಿತ್ತು. ಆದರೆ ಅವನು ಮೂವತ್ತು ಮಿನೇಗಳ ದಂಡವನ್ನು ಸೂಚಿಸಿದ, ಅದಕ್ಕೆ (ಪ್ಲೇಟೋನನ್ನು ಒಳಗೊಂಡಂತೆ) ಅವನ ಅನೇಕ ಸ್ನೇಹಿತರು ಜಾಮೀನುದಾರರಾಗಲು ಸಿದ್ಧರಿದ್ದರು. ಇದು ಬಹು ಸಣ್ಣ ದಂಡವಾದದ್ದರಿಂದ

ನ್ಯಾಯಾಲಯವು ಇರಿಸುಮುರಿಸಿಗೊಳಗಾಯಿತು, ಅವನು ತಪ್ಪಿತಸ್ಥನೆಂದು ತೀರ್ಮಾನಿಸಿದ್ದಕ್ಕಿಂತ ಹೆಚ್ಚಿನ ಬಹುಮತದಿಂದ ಮರಣದಂಡನೆಯನ್ನು ವಿಧಿಸಿತು. ಸಂಶಯಾತೀತವಾಗಿ ಅವನು ಇದರ ಫಲಿತಾಂಶವನ್ನು ಊಹಿಸಿದ್ದ. ಮರಣದಂಡನೆಯಿಂದ ಪಾರಾಗುವ ಇಚ್ಛೆ ಅವನಿಗಿಲ್ಲದ್ದು ಸ್ಪಷ್ಟವಾಗಿತ್ತು, ಯಾಕೆಂದರೆ ರಿಯಾಯಿತಿಯನ್ನು ಪಡೆದಿದ್ದರೆ ತನ್ನದು ತಪ್ಪು ಎಂದು ಒಪ್ಪಿಕೊಂಡಂತಾಗುತ್ತಿತ್ತು.

ಮೊಕದ್ದಮೆ ಹೂಡಿದವರು ಆನಿಟಸ್ ಎಂಬ ಪ್ರಜಾಪ್ರಭುತ್ವವಾದಿ ರಾಜಕಾರಣಿ; 'ಯುವಕನಾಗಿದ್ದು ಅಪರಿಚಿತನಾದ, ಉದ್ದ ಕೂದಲು, ಕುರುಚಲು ಗಡ್ಡ ಮತ್ತು ಸೊಟ್ಟ ಮೂಗಿನ' ಮಿಲೆಟಸ್ ಎಂಬ ಒಬ್ಬ ದುರಂತನಾಟಕದ ಕರ್ತೃ; ಅಜ್ಞಾತ ವಾಗ್ಮಿ ಲೈಕೆನ್. (ನೋಡಿ, ಬರ್ನೆಟ್, 'ಥೇಲೀಸ್ ಟು ಪ್ಲೇಟೋ', ಪು, ೧೮೦.) ಸಾಕ್ರಟೀಸ್ ದೇಶವೇ ಪೂಜಿಸುವ ದೇವತೆಗಳನ್ನು ಪೂಜಿಸದೆ ಇತರ ದೈವಗಳನ್ನು ಸೂಚಿಸುವವನು ಎಂದೂ, ಇದನ್ನೆಲ್ಲ ಕಿರಿಯರಿಗೆ ಬೋಧಿಸಿ ಅವರನ್ನು ಹಾದಿ ತಪ್ಪಿಸುವ ಅಪರಾಧ ಮಾಡುವವನೆಂದೂ ಅವರು ವಾದಿಸಿದರು.

ಪ್ಲೇಟೋನ ಸಾಕ್ರಟೀಸ್ ಎಷ್ಟರ ಮಟ್ಟಿಗೆ ವಾಸ್ತವ ವ್ಯಕ್ತಿಗೆ ಹತ್ತಿರವಾಗಿದ್ದ ಎಂಬ ತೀರ್ಮಾನಿಸಲಾಗದ ಸಮಸ್ಯೆಯಿಂದ ನಾವು ಇನ್ನೂ ಹೆಚ್ಚಿನ ತೊಂದರೆ ತೆಗೆದುಕೊಳ್ಳದೆ, ಈ ಆಪಾದನೆಗಳ ಕುರಿತು ಸಾಕ್ರಟೀಸ್ ಏನು ಹೇಳಿದ ಎಂಬ ಪ್ಲೇಟೋನ ವಿವರಣೆಯನ್ನು ನೋಡೋಣ.

ತನ್ನ ಮೇಲೆ ಮೊಕದ್ದಮೆ ಹೂಡಿರುವವರದು ವಾಗ್ವಿಲಾಸವಷ್ಟೇ ಎಂದು ಸಾಕ್ರಟೀಸ್ ಆರಂಭಿಸಿ ತನ್ನ ವಿರುದ್ಧ ಮಾಡಲಾದ ವಾಗ್ವಿಲಾಸದ ಆರೋಪವನ್ನು ತಳ್ಳಿಹಾಕಿದ. ಸತ್ಯದ ಬಗ್ಗೆಯಷ್ಟೇ ತನ್ನ ವಾಗ್ವಿಲಾಸ ಸಾಮರ್ಥ್ಯ ಎಂದ. ಹೀಗಾಗಿ, 'ಶಬ್ದಗಳು ಹಾಗೂ ವಾಕ್ಯಖಂಡಗಳಿಂದ ಅಲಂಕರಿಸದೆ' ತಾನು ರೂಢಿಸಿಕೊಂಡಿರುವ ರೀತಿಯಲ್ಲಿ ಮಾತನಾಡಿದರೆ ಕೋಪಿಸಿಕೊಳ್ಳಬಾರದೆಂದ.[೪೭] ತಾನು ಎಪ್ಪತ್ತು ವರ್ಷದವನೆಂದೂ, ಇಲ್ಲಿಯವರೆಗೆ ನ್ಯಾಯಾಲಯದಲ್ಲಿ ಕಾಣಿಸಿಕೊಂಡವನಲ್ಲವೆಂದೂ, ತನ್ನ ನ್ಯಾಯಾಲಯಕ್ಕೆ ಹೊರತಾದ ಮಾತುಗಾರಿಕೆಯನ್ನು ಕ್ಷಮಿಸಬೇಕೆಂದೂ ಕೇಳಿಕೊಂಡ.

ತನ್ನ ಮೇಲೆ ಆರೋಪಿಸಿರುವ ಈ ಫಿರ್ಯಾದುದಾರರಲ್ಲದೆ, ನ್ಯಾಯಾಧೀಶರುಗಳು ಮಕ್ಕಳಾಗಿದ್ದಾಗಿನಿಂದಲೂ 'ಮೇಲುಗಡೆಯ ಸ್ವರ್ಗ ಮತ್ತು ಭೂಮಿಯ ಕೆಳಗಿನವುಗಳನ್ನು ಕುರಿತು ಚಿಂತಿಸುವ ಹಾಗೂ ಕೆಟ್ಟುದನ್ನು ಒಳ್ಳೆಯದೆಂದು ತೋರುವಂತೆ ಮಾಡುವ ಬುದ್ಧಿವಂತ ಸಾಕ್ರಟೀಸ್ ಬಗ್ಗೆ ಹೇಳುತ್ತ' ಓಡಾಡುತ್ತಿದ್ದ

---

೪೭. ಪ್ಲೇಟೋನ ಮಾತುಗಳನ್ನು ಉದ್ಧರಿಸುವಾಗ ನಾನು ಸಾಮಾನ್ಯವಾಗಿ ಜ್ಯೂಯೆಟ್ ಅವರ ಭಾಷಾಂತರವನ್ನು ಅನುಸರಿಸಿದ್ದೇನೆ.

ಬಹಳಷ್ಟು ಜನ ಫಿರ್ಯಾದುದಾರರಿರುವರೆಂದೂ ಹೇಳಿದ. ಅಂಥವರು ದೇವತೆಗಳ ಅಸ್ತಿತ್ವದಲ್ಲಿ ಶ್ರದ್ಧೆಯಿಲ್ಲದವರೆಂದ. ಜನಾಭಿಪ್ರಾಯದ ಈ ಹಳೆಯ ಆರೋಪವು ವಿಧಿವತ್ತಾದ ಆರೋಪಕ್ಕಿಂತ ಹೆಚ್ಚು ಅಪಾಯಕಾರಿಯಾದುದು, ಆದರೆ ಅರಿಸ್ಟೋಫೇನೀಸ್ ಹೊರತುಪಡಿಸಿ ಈ ಜನರು ಯಾರೆಂಬದು ತನಗೆ ತಿಳಿದಿಲ್ಲವೆಂದ.[೮೮] ಈ ದ್ವೇಷದ ಹಳೆಯ ಕಾರಣಗಳಿಗೆ ಉತ್ತರಿಸುತ್ತ, ತಾನು ವಿಜ್ಞಾನಿಯಲ್ಲವೆಂದೂ – 'ನನಗೂ ಭೌತಿಕವಾದುದರ ಬಗೆಗಿನ ಚಿಂತನೆಗೂ ಯಾವ ಸಂಬಂಧವೂ ಇಲ್ಲ' –ತಾನು ಬೋಧಕನಲ್ಲ, ತಿಳಿವಳಿಕೆ ಹೇಳಿದ್ದಕ್ಕಾಗಿ ಶುಲ್ಕ ತೆಗೆದುಕೊಳ್ಳುವವನಲ್ಲ ಎಂದವನು ಹೇಳಿದ. ಮುಂದುವರಿದು ಅವನು ಸೂಫಿಸ್ಟರ ಬಗ್ಗೆ ಗೇಲಿ ಮಾಡುತ್ತ ಅವರು ತಮಗಿರುವುದೆಂದು ಹೇಳುವ ಜ್ಞಾನವನ್ನು ಅಲ್ಲಗಳೆದ. ಆದರೆ 'ತನ್ನನ್ನು ಯಾಕಾಗಿ ಬುದ್ಧಿವಂತನೆಂದು ಕರೆಯುತ್ತಾರೋ ತನಗೇಕೆ ಈ ಅಪಕೀರ್ತಿಯೋ?' ಎಂದ.

ಡೆಲ್ಫಿಯ ದೈವವಾಣಿಯು ಒಮ್ಮೆ ಸಾಕ್ರಟೀಸ್‌ಗಿಂತ ಹೆಚ್ಚು ಬುದ್ಧಿವಂತರಾದವರು ಯಾರಾದರೂ ಇದ್ದಾರೆಯೇ ಎಂದು ಕೇಳಿದಾಗ, ಇಲ್ಲ ಎಂದು ಉತ್ತರಿಸಿದಂತೆ ತೋರುತ್ತದೆ. ತನಗೇನೂ ತಿಳಿದಿಲ್ಲದಿದ್ದರೂ, ದೇವತೆ ಸುಳ್ಳು ಹೇಳಿರಲಾರದೆಂದೂ, ಇದರಿಂದ ತನಗೆ ಸಂಪೂರ್ಣ ಗೊಂದಲವಾಗಿದೆ ಎಂದೂ ಸಾಕ್ರಟೀಸ್ ನುಡಿದ. ಹೀಗಾಗಿ ತಾನು ಬುದ್ಧಿವಂತರೆಂದು ಹೆಸರು ಹೊಂದಿದವರ ಬಳಿ ಹೋಗಿ ಸುಳ್ಳು ಹೇಳಿದ್ದಕ್ಕಾಗಿ ದೇವತೆಯ ಮೇಲೆ ಕ್ರಮ ಕೈಗೊಳ್ಳಬಹುದೇ ಎಂದು ತಿಳಿಯಲು ಹೋದೆನೆಂದ. ಮೊದಲು ತಾನು 'ಅನೇಕರು ಬುದ್ಧಿವಂತನೆಂದು ಕರೆಯುತ್ತ, ವಾಸ್ತವವಾಗಿ ಇನ್ನೂ ಹೆಚ್ಚು ಬುದ್ಧಿವಂತನಾದ' ರಾಜಕಾರಣಿಯೊಬ್ಬನ ಬಳಿ ಹೋದೆ. ಆದರೆ ಅವನು ಬುದ್ಧಿವಂತನಲ್ಲವೆಂಬುದನ್ನು ಕಂಡುಕೊಂಡೆ, ಆನಂತರ ಅವನಿಗದನ್ನು ವಿವರಿಸಿದೆ, 'ಅದರ ಪರಿಣಾಮವೆಂದರೆ ತನ್ನನ್ನವನು ದ್ವೇಷಿಸಿದ'. ಆನಂತರ ಕವಿಗಳ ಬಳಿ ಹೋಗಿ, ತಮ್ಮ ಕೃತಿಗಳ ಭಾಗಗಳನ್ನು ವಿವರಿಸಬೇಕೆಂದು ಕೇಳಿಕೊಂಡೆ, ಆದರೆ ಅವರಿಗೆ ಹಾಗೆ ಮಾಡಲು ಸಾಧ್ಯವಾಗಲಿಲ್ಲ. 'ಕವಿಗಳು ಕಾವ್ಯರಚನೆ ಮಾಡುವುದು ಬುದ್ಧಿಶಕ್ತಿಯಿಂದಲ್ಲ, ಒಂದು ಬಗೆಯ ಪ್ರತಿಭೆ ಮತ್ತು ಸ್ಫೂರ್ತಿಯಿಂದ ಎಂದು ತಿಳಿದುಕೊಂಡೆ'. ಆನಂತರ ನಾನು ಕುಶಲಕರ್ಮಿಗಳ ಬಳಿಗೆ ಹೋದೆ, ಆದರೆ ಅವರೂ ತಮ್ಮ ಕ್ರಿಯಾವಿಧಾನದಲ್ಲಿ ಅಂಥವರೇ ಎಂದು ತಿಳಿದು ನಿರಾಶೆಗೊಂಡೆ. ಈ ರೀತಿ ತಾನು ಅನೇಕ ಅಪಾಯಕರ ಶತ್ರುಗಳನ್ನು ಹೊಂದಿದೆ. ಕೊನೆಗೆ ಅವನು ಈ ರೀತಿ ಮುಗಿಸಿದ: 'ದೇವರೊಬ್ಬನೇ ಬುದ್ಧಿವಂತ, ತನ್ನ ಉತ್ತರದಿಂದ ಜನರ ಬುದ್ಧಿಶಕ್ತಿಗೆ ಯಾವುದೇ ಬೆಲೆಯಿಲ್ಲ ಅಥವಾ ಇದ್ದರೂ ತುಂಬ ಅಲ್ಪ ಎಂದು

---

೮೮. 'ಕ್ಲೌಡ್ಸ್'ನಲ್ಲಿ ಸಾಕ್ರಟೀಸ್ ಸ್ಯೂಸ್‌ನ ಅಸ್ತಿತ್ವವನ್ನು ಅಲ್ಲಗಳೆಯುವವನೆಂದು ಚಿತ್ರಿಸಲಾಗಿದೆ.

ತೋರಿಸುವ ಇಚ್ಛೆ ಅವನದು; ಅವನು ಹೇಳಿದ್ದು ಸಾಕ್ರಟೀಸ್ ಕುರಿತು ಅಲ್ಲ, ತನ್ನ ಹೆಸರನ್ನವನು ನಿದರ್ಶನಕ್ಕೆ ಹೇಳಿದ್ದಾನೆ, ಓ ಜನರೇ, ಸಾಕ್ರಟೀಸನಂತೆ ತನ್ನ ಬುದ್ಧಿವಂತಿಗೆ ವಾಸ್ತವವಾಗಿ ಯಾವ ಬೆಲೆಯೂ ಇಲ್ಲ ಎಂದು ತಿಳಿದವನೇ ಅತ್ಯಂತ ಬುದ್ಧಿವಂತ.' ಈ ರೀತಿ ಬುದ್ಧಿವಂತರೆಂದು ಸೋಗು ಹಾಕುವವರ ನಿಜವನ್ನು ಬದಲು ಮಾಡುವುದರಲ್ಲೇ ಅವನ ಕಾಲವೆಲ್ಲ ಕಳೆಯಿತು, ಅವನು ಅತೀವ ಬಡತನದಲ್ಲಿ ನರಳಬೇಕಾಯಿತು, ಆದರೆ ದೈವವಾಣಿಯನ್ನು ಸಮರ್ಥಿಸುವುದು ತನ್ನ ಕರ್ತವ್ಯವೆಂದವನು ಭಾವಿಸಿದ.

ಶ್ರೀಮಂತವರ್ಗದ ಯುವಕರಿಗೆ ಜನರ ದಿಟವನ್ನು ಬಯಲು ಮಾಡುವ ತನ್ನ ಮಾತುಗಳನ್ನು ಕೇಳುವುದು, ತಾವೂ ಹಾಗೆ ಮಾಡುವುದು ಅದರಲ್ಲೇ ಸಂತೋಷ ಪಡುವುದು – ಈ ಬಗೆಯಲ್ಲಿ ಅವನ ಶತ್ರುಗಳ ಸಂಖ್ಯೆಯನ್ನು ಹೆಚ್ಚಿಸಿದರು. 'ಯಾಕೆಂದರೆ ತಮ್ಮ ಜ್ಞಾನದ ಟೊಳ್ಳುತನವನ್ನು ಕಂಡುಹಿಡಿದ ಎಂದು ಒಪ್ಪಿಕೊಳ್ಳುವುದು ಅವರಿಗಿಷ್ಟವಿರಲಿಲ್ಲ.'

ಮೊದಲ ವರ್ಗದ ಆರೋಪಗಳ ಬಗ್ಗೆ ಇಷ್ಟು.

ಆನಂತರ ಸಾಕ್ರಟೀಸ್ 'ತನ್ನನ್ನು ತಾನು ಬಣ್ಣಿಸಿಕೊಳ್ಳುವಂತೆ, ಒಳ್ಳೆಯ ವ್ಯಕ್ತಿಯೂ ನಿಜವಾದ ದೇಶಭಕ್ತನೂ' ಆದ ತನ್ನ ಫಿರ್ಯಾದುದಾರ ಮೆಲೆಟಸ್‌ನನ್ನು ಕುರಿತು ಪರೀಕ್ಷಿಸುತ್ತಾನೆ. ಯುವಕರನ್ನು ತಿದ್ದುವವರು ಯಾರು ಎಂದು ಕೇಳುತ್ತಾನೆ. ಮೆಲೆಟಸ್ ಮೊದಲು ಉಲ್ಲೇಖಿಸುವುದು ನ್ಯಾಯಾಧೀಶರನ್ನು; ಆನಂತರ, ಒತ್ತಾಯದಿಂದ, ಹಂತ ಹಂತವಾಗಿ, ಸಾಕ್ರಟೀಸ್ ಹೊರತಾಗಿ ಉಳಿದೆಲ್ಲ ಅಥೆನ್ಸ್ ಜನರೂ ಯುವಕರನ್ನು ತಿದ್ದುತ್ತಾರೆ ಎನ್ನುತ್ತಾನೆ; ಇದಕ್ಕಾಗಿ ಸಾಕ್ರಟೀಸ್ ಅಥೆನ್ಸ್ ಅನ್ನು ಅದೃಷ್ಟವಂತ ನಗರವೆಂದು ಅಭಿನಂದಿಸುತ್ತಾನೆ. ಮುಂದೆ, ಕೆಟ್ಟ ಮನುಷ್ಯರಿಗಿಂತ ಒಳ್ಳೆಯವರ ನಡುವೆ ಬದುಕುವುದು ಒಳ್ಳೆಯದು, ಹೀಗಾಗಿ ತನ್ನ ಸಹಪ್ರಜೆಗಳನ್ನು ಭ್ರಷ್ಟರನ್ನಾಗಿಸುವಷ್ಟು ತಾನು ಮೂರ್ಖನಾಗಿರಲು ಸಾಧ್ಯವಿಲ್ಲವೆನ್ನುತ್ತಾನೆ.; ಆದರೆ ಗೊತ್ತಿಲ್ಲದೆ ಹಾಗೆ ಮಾಡಿದ್ದರೆ, ಮೆಲೆಟಸ್ ತನಗೆ ತಿಳಿಹೇಳಬೇಕೇ ಹೊರತು ಆರೋಪಿಯನ್ನಾಗಿಸಬಾರದು.

ಈ ದೋಷಾರೋಪವು ಸಾಕ್ರಟೀಸ್ ದೇಶದ ದೇವತೆಗಳನ್ನು ಅಲ್ಲಗಳೆದಿರುವುದಲ್ಲದೆ, ತನ್ನವೇ ಆದ ದೇವತೆಗಳನ್ನು ಪರಿಚಯಿಸುತ್ತಾನೆ ಎನ್ನುತ್ತದೆ; ಆದರೆ ಮೆಲೆಟಸ್ ಸಾಕ್ರಟೀಸ್ ಸಂಪೂರ್ಣ ನಾಸ್ತಿಕ ಎಂದು ಹೇಳಿ ಹೀಗೆನ್ನುತ್ತಾನೆ: 'ಸೂರ್ಯ ಒಂದು ಕಲ್ಲುಗುಂಡು ಹಾಗೂ ಚಂದ್ರ ಭೂಮಿ ಎನ್ನುತ್ತಾನೆ.' ತಾನು ಅನಾಕ್ಸಾಗೊರಾಸ್ ಮೇಲೆ ಮೊಕದ್ದಮೆ ಹೂಡಿರುವುದಾಗಿ ಮೆಲೆಟಸ್ ಭಾವಿಸಿದ್ದಾನೆ, ಅವನ ವಾದವನ್ನು ಬೇಕಾದರೆ ಒಂದು ದ್ರಕ್ಮ ಕೊಟ್ಟು ರಂಗಭೂಮಿಯ ಮೇಲೆ ನೋಡಬಹುದು (ಪ್ರಾಯಶಃ ಯೂರಿಪಿಡೀಸ್‌ನ ನಾಟಕಗಳು) ಎಂದು ಸಾಕ್ರಟೀಸ್

ಉತ್ತರಿಸುತ್ತಾನೆ. ತಾನು ಸಂಪೂರ್ಣ ನಾಸ್ತಿಕನೆಂಬ ಈ ಹೊಸ ಆಪಾದನೆಯು ದೋಷಾರೋಪಕ್ಕೆ ವ್ಯತಿರಿಕ್ತವಾಗಿದೆ ಎಂದು ಸಾಕ್ರಟೀಸ್ ಹೇಳಿ, ಆನಂತರ ಹೆಚ್ಚು ಸಾಮಾನ್ಯ ವಿಷಯಗಳ ಬಗ್ಗೆ ಪ್ರಸ್ತಾಪಿಸುತ್ತಾನೆ.

'ಅಪಾಲಜಿ'ಯ ಉಳಿದ ಭಾಗ ಸಾರತಃ ಧಾಟಿಯಲ್ಲಿ ಮತಧಾರ್ಮಿಕವಾಗಿದೆ. ಅವನೊಬ್ಬ ಸೈನಿಕ, ಮತ್ತು ಈಗಲೂ ಮೇಲಿನವರ ಆಜ್ಞೆಯಂತೆ ತನ್ನ ಹುದ್ದೆಯಲ್ಲಿ ಮುಂದುವರಿಯುತ್ತಿದ್ದಾನೆ. ಈಗ 'ತತ್ತ್ವಜ್ಞಾನಿಯ ಕರ್ತವ್ಯವನ್ನು ಪೂರೈಸಲು ನನ್ನ ಮತ್ತು ಇತರ ವ್ಯಕ್ತಿಗಳನ್ನು ಶೋಧಿಸಲು ದೇವರು ಆಜ್ಞಾಪಿಸಿದ್ದಾನೆ' ಎನ್ನುತ್ತಾನೆ, ಆದರೆ ಯುದ್ಧದ ಹೊತ್ತಿನಲ್ಲಿ ತನ್ನ ಹುದ್ದೆಯನ್ನು ತೊರೆಯುವುದು ಅಪಮಾನಕರ. ಸಾವಿನ ಭಯ ವಿವೇಕವಲ್ಲ, ಯಾಕೆಂದರೆ ಸಾವು ಮತ್ತಷ್ಟು ಒಳಿತಾದುದಾಗಿರಲಾರದು ಎಂಬುದನ್ನು ಯಾರೂ ತಿಳಿಯಲಾರರು. ಇಲ್ಲಿಯವರೆಗೆ ಮಾಡಿದಂತೆ ಚಿಂತನೆ ನಡೆಸುವುದನ್ನು ನಿಲ್ಲಿಸಬೇಕು ಎಂಬ ಷರತ್ತಿನ ಮೇಲೆ ಅವನಿಗೆ ಬದುಕಲು ಅವಕಾಶ ನೀಡಿದರೆ, ತಾನು ಹೀಗೆನ್ನುತ್ತೇನೆ: 'ಅಥೆನ್ಸ್ ಜನರೇ, ನಾನು ನಿಮ್ಮನ್ನು ಗೌರವಿಸುತ್ತೇನೆ ಮತ್ತು ಪ್ರೀತಿಸುತ್ತೇನೆ; ಆದರೆ ನಾನು ವಿಧೇಯತೆಯಿಂದ ಪಾಲಿಸುವುದು ದೇವರ ಆಜ್ಞೆಯನ್ನು,[೪೯] ನನಗೆ ಆಯುಸ್ಸು ಮತ್ತು ಶಕ್ತಿಯಿರುವವರೆಗೂ ನಾನು ಎಂದಿಗೂ ತತ್ತ್ವಜ್ಞಾನವನ್ನು ಬೋಧಿಸುವುದನ್ನು, ನಾನು ಭೇಟಿಯಾಗುವ ಯಾರಿಗಾದರೂ ತಿಳಿವಳಿಕೆ ಹೇಳುವುದನ್ನು ನಿಲ್ಲಿಸುವುದಿಲ್ಲ.. .. ಏಕೆಂದರೆ, ಇದು ದೇವರ ಆಜ್ಞೆಯೆಂಬುದನ್ನು ನೆನಪಿಡಿ, ಮತ್ತು ದೇಶದಲ್ಲಿ ದೇವರಿಗೆ ಸಲ್ಲಿಸಿದ ನನ್ನ ಸೇವೆಗಿಂತ ಉತ್ತಮವಾದುದು ಯಾವುದೂ ನಡೆದಿಲ್ಲ.' ಮುಂದುವರಿದು:

> ನಾನು ಹೇಳುವುದು ಮತ್ತಷ್ಟಿದೆ, ಅದನ್ನು ನೀವು ನಿಲ್ಲಿಸಲು ಇಚ್ಛಿಸಬಹುದು; ಆದರೆ ನನ್ನ ಮಾತನ್ನು ಕೇಳುವುದು ನಿಮಗೇ ಒಳ್ಳೆಯದು, ಆದ್ದರಿಂದ ನನ್ನನ್ನು ತಡೆಯಬೇಡಿರೆಂದು ಕೇಳಿಕೊಳ್ಳುತ್ತೇನೆ. ನೀವು ನನ್ನಂತಹ ವ್ಯಕ್ತಿಯನ್ನು ಕೊಂದರೆ, ನನಗೆ ಗಾಸಿ ಮಾಡುವುದಕ್ಕಿಂತ ಹೆಚ್ಚಾಗಿ ನಿಮಗೆ ನೀವೇ ಗಾಸಿ ಮಾಡಿಕೊಳ್ಳುತ್ತೀರಿ ಎಂಬುದನ್ನು ತಿಳಿಯಿರಿ. ನನ್ನನ್ನು ಯಾವುದೂ ಗಾಸಿಗೊಳಿಸಲಾರದು, ಮೆಲೆಟಸ್ ಅಥವ ಆನಿಟಸ್ ಹಾಗೆ ಮಾಡಲಾರರು, ಯಾಕೆಂದರೆ ಕೆಟ್ಟ ವ್ಯಕ್ತಿಯೊಬ್ಬ ತನಗಿಂತ ಉತ್ತಮನಾದ ಮತ್ತೊಬ್ಬನನ್ನು ಗಾಸಿಗೊಳಿಸುವುದು ಸಲ್ಲದು. ಆನಿಟಸ್ ಪ್ರಾಯಶಃ ಅವನನ್ನು ಕೊಲ್ಲಬಹುದು ಅಥವಾ ದೇಶಭ್ರಷ್ಟಗೊಳಿಸಬಹುದು ಇಲ್ಲವೇ ಅವನ ನಾಗರಿಕ ಹಕ್ಕುಗಳನ್ನು ಕಸಿದುಕೊಳ್ಳಬಹುದೆಂಬುದನ್ನು ನಾನು ಅಲ್ಲಗಳೆಯುವುದಿಲ್ಲ; ಅವನಿಗೆ ದೊಡ್ಡ ಗಾಸಿಮಾಡುತ್ತಿದ್ದೇನೆ ಎಂದವನು ಭಾವಿಸಬಹುದು'; ಆದರೆ ಅದನ್ನು ನಾನು ಒಪ್ಪುವುದಿಲ್ಲ. ಯಾಕೆಂದರೆ ಅವನು

---

೪೯. ನೋಡಿ, 'ಆಕ್ಟ್ಸ್', ೫. ೨೯.

ಮಾಡುತ್ತಿರುವಂತಹುದನ್ನು ಮಾಡುವ ಕೆಡುಕು – ಮತ್ತೊಬ್ಬನ ಜೀವವನ್ನು ಅನ್ಯಾಯದಿಂದ ತೆಗೆದುಕೊಳ್ಳುವುದು – ಇನ್ನೂ ದೊಡ್ಡದು.

ತನಗಾಗಿ ಅಲ್ಲ, ನ್ಯಾಯಾಧೀಶರುಗಳಿಗಾಗಿ ತಾನು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ ಎಂದವನು ಹೇಳುತ್ತಾನೆ. ದೇಶಕ್ಕಾಗಿ ದೇವರು ಕೊಟ್ಟಿರುವ ಒಂದು ತೊಣಚಿ ತಾನು, ಅಂತಹ ಇನ್ನೊಬ್ಬನನ್ನು ಕಾಣುವುದು ಸುಲಭವಲ್ಲ. '(ಇದ್ದಕ್ಕಿದ್ದಂತೆ ನಿದ್ದೆಯಿಂದ ಎಚ್ಚರಗೊಂಡವನ ಹಾಗೆ) ನೀವು ಮನಸ್ಸಿನ ಹದವನ್ನು ಕಳೆದುಕೊಳ್ಳಬಹುದು, ಆನಿಟಸ್ ಸೂಚಿಸಿದಂತೆ ನೀವು ನನ್ನನ್ನು ಕೊಂದು ಉರುಳಿಸಬಹುದು, ಆಲೋಚಿಸಬಹುದು, ಆನಂತರ ದೇವರು ಮತ್ತೊಂದು ತೊಣಚಿಯನ್ನು ನಿಮ್ಮೆಡೆಗೆ ಕಳಿಸದಿದ್ದರೆ ನಿಮ್ಮ ಉಳಿದ ಕಾಲವೆಲ್ಲ ನಿದ್ರಿಸಬಹುದು.'

ಅವನು ಯಾಕೆ ಖಾಸಗಿಯಾಗಿ ಉಳಿದಿದ್ದಾನೆ, ಸಾರ್ವಜನಿಕ ವಿಷಯಗಳ ಬಗ್ಗೆ ತಿಳಿವಳಿಕೆ ನೀಡಲಿಲ್ಲ? 'ದೈವವಾಣೀ ಅಥವಾ ಸೂಚನೆ ಬಂದಾಗ ಆಗಾಗ ಮತ್ತು ಬೇರೆ ಬೇರೆ ಸ್ಥಳಗಳಲ್ಲಿ ನಾನು ಮಾತನಾಡುವುದನ್ನು ನೀವು ಕೇಳಿರಬಹುದು, ತಾನು ಗೇಲಿ ಮಾಡುವ ಆ ದೈವದ ವಿರುದ್ಧ ಮೆಲೆಟಸ್ ಆರೋಪ ಮಾಡುತ್ತಾನೆಯೇ? ಈ ಸೂಚನೆ, ಒಂದು ಬಗೆಯ ಧ್ವನಿಯು ನಾನು ಮಗುವಾಗಿದ್ದಾಗ ಮೊದಲು ಬಂತು; ನಾನು ಮಾಡುವ ಯಾವುದನ್ನೂ ಅದು ನಿಷೇಧಿಸುತ್ತದೆಯೇ ಹೊರತು ಎಂದಿಗೂ ಆಜ್ಞಾಪಿಸುವುದಿಲ್ಲ. ಇದರಿಂದಾಗಿ ನನಗೆ ರಾಜಕಾರಣಿಯಾಗಲು ಭಯ.' ಮುಂದುವರಿದು, ರಾಜಕಾರಣದಲ್ಲಿ ಪ್ರಾಮಾಣಿಕ ವ್ಯಕ್ತಿ ಯಾವನೂ ದೀರ್ಘ ಕಾಲ ಬದುಕಲಾರ ಎಂದು ಹೇಳುತ್ತಾನೆ. ತಾನು ಅನಿವಾರ್ಯವಾಗಿ ಸಾರ್ವಜನಿಕ ವ್ಯವಹಾರಗಳಲ್ಲಿ ತೊಡಗಿಕೊಳ್ಳಬೇಕಾಗಿ ಬಂದ ಎರಡು ಸಂದರ್ಭಗಳನ್ನು ಉಲ್ಲೇಖಿಸುತ್ತಾನೆ, ಪ್ರಜಾಪ್ರಭುತ್ವವನ್ನು ವಿರೋಧಿಸಿದ್ದು ಮೊದಲನೆಯದಾದರೆ, ಎರಡನೆಯದು ಮೂವತ್ತು ಮಂದಿ ನಿರಂಕುಶಾಧಿಪತಿಗಳನ್ನು ವಿರೋಧಿಸಿದ್ದು. ಎರಡೂ ಸಂದರ್ಭಗಳಲ್ಲಿ ಅಧಿಕಾರಸ್ಥರು ಕಾನೂನುಬಾಹಿರವಾಗಿ ನಡೆದುಕೊಳ್ಳುತ್ತಿದ್ದರು.

ಅಲ್ಲಿ ಹಾಜರಿರುವರಲ್ಲಿ ಅನೇಕರು ತನ್ನ ವಿದ್ಯಾರ್ಥಿಗಳಾಗಿದ್ದವರು, ಮತ್ತು ಅವರ ತಂದೆಯರು–ಸೋದರರು ಎಂಬುದನ್ನು ಹೇಳುತ್ತಾನೆ; ತಾನು ಯುವಕರನ್ನು ಭ್ರಷ್ಟಗೊಳಿಸುವೆನೆಂದು ಸಾಕ್ಷ್ಯ ಹೇಳಲು ಇವರಲ್ಲಿ ಯಾರನ್ನೂ ಫಿರ್ಯಾದುದಾರರು ಆಹ್ವಾನಿಸಿಲ್ಲ. ('ಅಪಾಲಜಿ'ಯಲ್ಲಿ ಬರುವ ಪ್ರತಿವಾದಿಯ ವಕೀಲನು ಒಪ್ಪಬಹುದಾದ ವಾದ ಇದೊಂದೇ.) ವಾಡಿಕೆಯಂತೆ ಅಳುತ್ತಿರುವ ತನ್ನ ಮಕ್ಕಳನ್ನು ನ್ಯಾಯಾಧೀಶರ ಮನಸ್ಸುಗಳನ್ನು ಮಿದುಗೊಳಿಸಲು ನ್ಯಾಯಾಲಯಕ್ಕೆ ಕರೆತರಲು ಅವನು ನಿರಾಕರಿಸುತ್ತಾನೆ; ಅಂಥ ವರ್ತನೆಯು ಆರೋಪಿ ಹಾಗೂ ನಗರ ಎರಡನ್ನೂ ಗೇಲಿ ಮಾಡಿದಂತೆ ಎನ್ನುತ್ತಾನೆ. ತನ್ನ ಕೆಲಸದ ನ್ಯಾಯಾಧೀಶರಿಗೆ ಮನದಟ್ಟು ಮಾಡಿಕೊಡುವುದೇ ಹೊರತು ಅವರಿಂದ ಉಪಕಾರವನ್ನು ಬಯಸುವುದಲ್ಲ.

ತೀರ್ಪಿನ ಬಳಿಕ, ಮತ್ತು ಪರ್ಯಾಯವಾಗಿ ಸೂಚಿಸಿದ ಮೂವತ್ತು ಮಿನೇಗಳ ದಂಡವನ್ನು ತಿರಸ್ಕರಿಸಿದ ಮೇಲೆ (ಇದಕ್ಕೆ ಸಂಬಂಧಿಸಿದಂತೆ, ಅವನು ನ್ಯಾಯಾಲಯದಲ್ಲಿ ಹಾಜರಿದ್ದ ಪ್ಲೇಟೋನನ್ನು ಜಾಮೀನುದಾರರಲ್ಲಿ ಒಬ್ಬನಾಗಿ ಹೆಸರಿಸುತ್ತಾನೆ), ಕೊನೆಯದಾಗಿ ಈ ಮಾತುಗಳನ್ನಾಡುತ್ತಾನೆ:

ಈಗ, ನನ್ನನ್ನು ಮರಣದಂಡನೆಗೆ ಗುರಿಮಾಡಿದ ಜನರೇ, ಮರಣಸಮಯದಲ್ಲಿ ಜನರಿಗೆ ಭವಿಷ್ಯ ನುಡಿಯುವ ಶಕ್ತಿ ಪ್ರಾಪ್ತವಾಗುವುದರಿಂದ, ನಾನು ನಿಮಗೆ ಭವಿಷ್ಯವೊಂದನ್ನು ಹೇಳಲೇಬೇಕಾಗಿದೆ. ನನ್ನ ಕೊಲೆಗಾರರಾದ ನಿಮ್ಮ ಮೇಲೆ ನನಗೆ ನೀವಿತ್ತಿರುವ ಶಿಕ್ಷೆಗಿಂತ ಘೋರವಾದ ಶಿಕ್ಷೆಯು ಅಪ್ಪಳಿಸಲಿದೆ .. .. ಜನರನ್ನು ಕೊಲ್ಲುವ ಮೂಲಕ ನಿಮ್ಮ ಕೆಟ್ಟ ಬದುಕನ್ನು ಟೀಕಿಸುವ ಯಾರನ್ನಾದರೂ ತಡೆಯವೆವೆಂದು ಭಾವಿಸಿದ್ದರೆ ಅದು ತಪ್ಪು; ಈ ರೀತಿಯ ಪಲಾಯನ ಸಾಧ್ಯವೂ ಅಲ್ಲ, ಗೌರವಯುತವೂ ಅಲ್ಲ; ಅತ್ಯಂತ ಸುಲಭವೂ ಉದಾತ್ತವೂ ಅದ ಮಾರ್ಗವು ಇತರರ ಶಕ್ತಿಗುಂದಿಸುವುದಲ್ಲ, ಬದಲಿಗೆ ನಿಮ್ಮನ್ನು ತಿದ್ದಿಕೊಳ್ಳುವುದು.

ಆನಂತರ, ತನ್ನ ಬಿಡುಗಡೆಗಾಗಿ ಮತಹಾಕಿದ್ದ ನ್ಯಾಯಾಧೀಶರ ಕಡೆಗೆ ತಿರುಗಿ, ತಾನು ಅಂದು ಮಾಡಿರುವುದೆಲ್ಲ ಎಂದರೆ, ಇತರ ಹಲವು ಸಂದರ್ಭಗಳಲ್ಲಿ ಮಾತಿನ ನಡುವೆಯೇ ತನ್ನನ್ನು ತಡೆದಿದ್ದರೂ ದೈವವಾಣಿಯು ತನ್ನನ್ನೆಂದೂ ವಿರೋಧಿಸಿಲ್ಲ ಎಂಬುದನ್ನಷ್ಟೇ. ಇದು 'ನನಗೆ ಏನು ಸಂಭವಿಸಿದೆಯೋ ಅದು ಒಳಿತಾದುದು ಹಾಗೂ ಸಾವು ಎಂಬುದು ಕೆಟ್ಟುದು ಎಂದು ಭಾವಿಸುವವರದು ತಪ್ಪು ಕಲ್ಪನೆ ಎಂದು ಸೂಚಿಸಲು'. 'ಸಾವು ಎಂಬುದು ಕನಸಿಲ್ಲದ ನಿದ್ದೆ – ಅದು ನೇರವಾಗಿ ಒಳಿತಾದುದು – ಅಥವಾ ಆತ್ಮವು ಮತ್ತೊಂದು ಲೋಕಕ್ಕೆ ವಲಸೆ ಹೋಗುತ್ತದೆ. ಅಲ್ಲದೆ ಆರ್ಫಿಯಸ್ ಮತ್ತು ಮಾಸಿಯಸ್ ಮತ್ತು ಹೇಸಿಯಾಡ್ ಮತ್ತು ಹೋಮರ್ ಜೊತೆ ಸಂಭಾಷಿಸಬಹುದಾದರೆ ವ್ಯಕ್ತಿ ಏನು ತಾನೇ ಕೊಡಲಾರ? ಉಹ್ಞೂ, ಇದು ನಿಜವಾದರೆ ನಾನು ಮತ್ತೆ ಮತ್ತೆ ಸಾಯುತ್ತೇನೆ.' ಮುಂದಿನ ಲೋಕದಲ್ಲಿ ಅನ್ಯಾಯದ ಕಾರಣ ಸಾವಿಗೀಡಾದವರೊಡನೆ ತಾನು ಸಂಭಾಷಿಸುತ್ತೇನೆ, ಹಾಗೂ, ಎಲ್ಲಕ್ಕೂ ಮಿಗಿಲಾಗಿ, ತನ್ನ ಜ್ಞಾನಾನ್ವೇಷಣೆಯನ್ನು ಮುಂದುವರಿಸುತ್ತೇನೆ. 'ಮತ್ತೊಂದು ಲೋಕದಲ್ಲಿ ಪ್ರಶ್ನೆ ಕೇಳುವವರನ್ನು ಮರಣಕ್ಕೆ ಗುರಿಪಡಿಸುವುದಿಲ್ಲ: ಖಂಡಿತ ಇಲ್ಲ. ಹೇಳುವುದು ನಿಜವಾದರೆ, ನಾವಿರುವುದಕ್ಕಿಂತ ಹೆಚ್ಚು ಸಂತೋಷದಿಂದಿರುವುದಲ್ಲದೆ, ಅವರು ಅಮರರಾಗಿರುತ್ತಾರೆ .. ..'

'ಹೊರಡುವ ಕಾಲ ಬಂದಿದೆ, ನಾವು ನಮ್ಮ ಹಾದಿ ಹಿಡಿಯುತ್ತೇವೆ – ನಾನು ಸಾವಿನ ಕಡೆ, ನೀವು ಜೀವಿಸುವ ಕಡೆ. ಎರಡರಲ್ಲಿ ಯಾವುದು ಒಳ್ಳೆಯದು, ದೇವರೇ ಬಲ್ಲ.'

'ಅಪಾಲಜಿ'ಯು ಒಂದು ಬಗೆಯ ವ್ಯಕ್ತಿಯ ಬಗೆಗೆ ಸ್ಪಷ್ಟ ಚಿತ್ರವನ್ನು ನೀಡುತ್ತದೆ:

ತನ್ನ ಬಗ್ಗೆ ಸಂಪೂರ್ಣ ಶ್ರದ್ಧೆಯುಳ್ಳ, ಉನ್ನತ ಬುದ್ಧಿಶಕ್ತಿಯ, ಐಹಿಕ ಯಶಸ್ಸಿನ ಬಗ್ಗೆ ಗಮನಿಸದ, ತಾನು ದೈವಿಕ ವಾಣಿಯೊಂದರಿಂದ ಪ್ರೇರಿತನಾಗಿದ್ದೇನೆಂದು ನಂಬುವ ಮತ್ತು ಸರಿಯಾದ ಬದುಕಿಗೆ ಸ್ಪಷ್ಟ ಚಿಂತನೆಯು ಅತ್ಯಂತ ಆವಶ್ಯಕವೆಂದು ತಿಳಿದ ವ್ಯಕ್ತಿ. ಕೊನೆಯ ಅಂಶವೊಂದನ್ನು ಬಿಟ್ಟು, ಅವನು ಕ್ರಿಶ್ಚಿಯನ್ ಹುತಾತ್ಮನನ್ನು ಅಥವಾ ಕಟ್ಟಾ ಅನುಯಾಯಿಯನ್ನು ಹೋಲುತ್ತಾನೆ. ಸಾವಿನ ಬಳಿಕ ಏನು ಸಂಭವಿಸುತ್ತದೆ ಎಂಬುದನ್ನು ವಿವರಿಸುವ ಕೊನೆಯ ಭಾಗದಲ್ಲಿ, ಅವನು ಅಮರತ್ವದಲ್ಲಿ ಶ್ರದ್ಧೆಯಿರಿಸಿಕೊಂಡಿದ್ದವನೆಂದು, ತನಗೆ ಆ ಕುರಿತು ನಿಶ್ಚಿತತೆಯಿಲ್ಲವೆಂದು ಹೇಳಿಕೊಳ್ಳುವುದು ಕೇವಲ ಊಹೆ ಎಂದು ನಂಬದೇ ಇರಲು ಸಾಧ್ಯವಿಲ್ಲ. ಕ್ರಿಶ್ಚಿಯನ್ನನಂತೆ ಚಿರಂತನ ಯಾತನೆಯ ಭಯವನ್ನವನು ಅನುಭವಿಸುವುದಿಲ್ಲ: ಮುಂದಿನ ಲೋಕದಲ್ಲಿನ ತನ್ನ ಜೀವನವು ಸುಖಮಯವಾಗಿರುತ್ತದೆಂಬ ಬಗ್ಗೆ ಅವನಿಗೆ ಅನುಮಾನವೇ ಇಲ್ಲ. 'ಫೀಡೋ' ನಲ್ಲಿ ಪ್ಲೇಟೋ ಚಿತ್ರಿಸುವ ಸಾಕ್ರಟೀಸ್ ಅಮರತ್ವದ ಬಗೆಗಿನ ತನ್ನ ಶ್ರದ್ಧೆಗೆ ಕಾರಣಗಳನ್ನು ನೀಡುತ್ತಾನೆ; ಐತಿಹಾಸಿಕ ಸಾಕ್ರಟೀಸ್‌ನ ಮೇಲೆ ಇವು ಪ್ರಭಾವವನ್ನು ಬೀರಿತ್ತೇ ಎಂದು ಹೇಳಲು ಸಾಧ್ಯವಿಲ್ಲ.

ಐತಿಹಾಸಿಕ ಸಾಕ್ರಟೀಸ್ ದೈವವಾಣಿ ಅಥವಾ 'ಡೈಮನ್'ದಿಂದ ಪ್ರೇರಿತನಾಗುವೆನೆಂದು ಹೇಳುತ್ತಿದ್ದುದರ ಬಗ್ಗೆ ಯಾವ ಅನುಮಾನವೂ ಇದ್ದಂತಿಲ್ಲ. ಕ್ರಿಶ್ಚಿಯನ್ನರು ಯಾವುದನ್ನು ಮನಸ್ಸಾಕ್ಷಿ ಎಂದು ಕರೆಯುತ್ತಾರೋ ಅದರಂತಹುದೇ, ಅಥವಾ ಅವನಿಗದು ವಾಸ್ತವ ವಾಣಿಯಾಗಿ ಕೇಳಿಸುತ್ತಿತ್ತೇ ಎಂಬುದನ್ನು ತಿಳಿಯುವುದು ಅಸಾಧ್ಯ. ಜೋನ್ ಆಫ್ ಆರ್ಕ್ ವಾಣಿಗಳಿಂದ ಪ್ರೇರಿತಳಾಗುತ್ತಿದ್ದಳು, ಇವು ಹುಚ್ಚಿನ ಸಾಮಾನ್ಯ ಕುರುಹುಗಳು. ಸಾಕ್ರಟೀಸ್‌ನಿಗೆ ಮೂರ್ಛೆರೋಗದ ಅರೆಯರಿವು ಉಂಟಾಗುತ್ತಿತ್ತು: ಕನಿಷ್ಠ ಪಕ್ಷ, ಅಂಥ ಘಟನೆಗೆ ನೀಡಬಹುದಾದ ಸಹಜ ವಿವರಣೆ ಎಂದರೆ ಇದೇ ಆಗಿರುವಂತೆ ತೋರುತ್ತದೆ; ಇಂತಹದೊಂದು ಸಂದರ್ಭ ಅವನು ಸೈನಿಕಸೇವೆಯಲ್ಲಿದ್ದಾಗ ಸಂಭವಿಸಿತ್ತು:

> **ಒಂದು ದಿನ ಬೆಳಿಗ್ಗೆ ತಾನು ಬಗೆಹರಿಸಲಾಗದಿದ್ದ ಯಾವುದರ ಬಗ್ಗೆಯೋ ಅವನು ಯೋಚಿಸುತ್ತಿದ್ದ; ಅದನ್ನವನು ಕೈಬಿಡಲಾರ, ಆದರೆ ಬೆಳಗಿನ ಜಾವದಿಂದ ಮಧ್ಯಾಹ್ನದವರೆಗೂ ಅದರ ಬಗೆಗಿನ ಯೋಚನೆ ಮುಂದುವರಿಸಿದ – ಅವನು ಯೋಚನೆಯಲ್ಲಿ ಮುಳುಗಿ ನಿಂತುಬಿಟ್ಟ; ಮಧ್ಯಾಹ್ನ ಅವನ ಗಮನ ಸೆಳೆಯಲಾಯಿತು, ಸಾಕ್ರಟೀಸ್ ಬೆಳಗಿನ ಜಾವದಿಂದಲೇ ಯಾವುದರ ಬಗ್ಗೆಯೋ ಯೋಚಿಸುತ್ತ ನಿಂತುಬಿಟ್ಟಿದ್ದಾನೆ ಎಂಬ ವದಂತಿ ಅಚ್ಚರಿಗೊಂಡ ಜನರಲ್ಲಿ ಹರಡಿತು. ಕೊನೆಗೆ, ಸಂಜೆ ಊಟವಾದ ಬಳಿಕ ಕುತೂಹಲದಿಂದ ಕೆಲವು ಮಂದಿ ಅಯೋನಿಯನ್ನರು (ಇದು ನಡೆದದ್ದು ಚಳಿಗಾಲದಲ್ಲಲ್ಲದೆ ಬೇಸಿಗೆಯಲ್ಲಿ ಎಂಬುದನ್ನು ಸ್ಪಷ್ಟಪಡಿಸಬೇಕು) ಅವನು ರಾತ್ರಿಯಿಡೀ ನಿಂತುಕೊಂಡಿರುತ್ತಾನೆಯೇ**

ಎಂಬುದನ್ನು ಗಮನಿಸಲು ತಮ್ಮ ಹಾಸಿಗೆಗಳನ್ನು ತಂದು ಬಯಲಿನಲ್ಲಿ ಮಲಗಿಕೊಂಡರು. ಅವನು ಮಾರನೆಯ ಬೆಳಗಿನವರೆಗೂ ನಿಂತೇ ಇದ್ದ; ಬೆಳಕು ಹರಿಯುತ್ತಲೇ ಅವನು ಸೂರ್ಯನಿಗೆ ಪ್ರಾರ್ಥನೆ ಸಲ್ಲಿಸಿ ತನ್ನ ಹಾದಿ ಹಿಡಿದು ನಡೆದ ('ಸಿಂಪೋಸಿಯಂ', ೨೨೦).'

ಈ ಬಗೆಯ ಸನ್ನಿವೇಶವು ಕಡಿಮೆ ತೀವ್ರತೆಯಲ್ಲಿ ಸಾಕ್ರಟೀಸ್‌ನ ಬದುಕಿನಲ್ಲಿ ಸಾಮಾನ್ಯವಾಗಿತ್ತು. '*ಸಿಂಪೋಸಿಯಂ*'ನ ಆರಂಭದಲ್ಲಿ, ಸಾಕ್ರಟೀಸ್ ಮತ್ತು ಅರಿಸ್ಟೋಡೆಮಸ್‌ರು ಒಟ್ಟಿಗೇ ಔತಣಕ್ಕೆ ಹೋಗುತ್ತಾರೆ, ಆದರೆ ಸಾಕ್ರಟೀಸ್ ಅನ್ಯಮನಸ್ಕತೆಯಿಂದ ಹಿಂದುಳಿಯುತ್ತಾನೆ. ಅರಿಸ್ಟೋಡೆಮಸ್ ಬಂದಾಗ, ಅತಿಥೇಯನಾದ ಆಗಥಾನ್, 'ನೀವು ಸಾಕ್ರಟೀಸ್‌ರನ್ನು ಏನು ಮಾಡಿದಿರಿ?' ಎಂದು ಕೇಳುತ್ತಾನೆ. ಸಾಕ್ರಟೀಸ್ ತನ್ನ ಜೊತೆಗಿಲ್ಲದಿರುವುದನ್ನು ಕಂಡ ಅರಿಸ್ಟೋಡೆಮಸ್ ಅಚ್ಚರಿಗೊಳ್ಳುತ್ತಾನೆ. ಅವನನ್ನು ಹುಡುಕಲು ಸೇವಕನೊಬ್ಬನನ್ನು ಕಳಿಸುತ್ತಾರೆ, ಅವನು ಪಕ್ಕದ ಮನೆಯೊಂದರ ಮುಂದೆ ಸಾಕ್ರಟೀಸ್ ನಿಂತಿರುವುದನ್ನು ಕಾಣುತ್ತಾನೆ. ಸೇವಕ ವಾಪಸು ಬಂದು, 'ಅವರು ಅಲ್ಲೇ ನಿಂತುಬಿಟ್ಟಿದ್ದಾರೆ, ನಾನು ಕರೆದರೂ ಹ್ಞೂಗುಟ್ಟಲಿಲ್ಲ' ಎನ್ನುತ್ತಾನೆ. ಅವನ ಬಗ್ಗೆ ಚೆನ್ನಾಗಿ ತಿಳಿದಿದ್ದವರು, 'ಎಲ್ಲೋ ನಿಂತು ಕಾರಣವಿಲ್ಲದೆ ಮೈಮರೆತುಬಿಡುವ ಚಾಳಿಯವರು' ಎಂದು ವಿವರಿಸುತ್ತಾರೆ. ಅವನ ಪಾಡಿಗೆ ಅವನನ್ನು ಬಿಟ್ಟು ಬರುತ್ತಾರೆ, ಔತಣದ ಮಧ್ಯಭಾಗದಲ್ಲಿ ಅವನೂ ಬರುತ್ತಾನೆ.

ಸಾಕ್ರಟೀಸ್ ನೋಡಲು ಏನೇನೂ ಚೆನ್ನಾಗಿರಲಿಲ್ಲವೆಂಬುದನ್ನು ಎಲ್ಲರೂ ಒಪ್ಪುತ್ತಾರೆ, ಅವನದು ಅಪ್ಪಚ್ಚಿ ಮೂಗು ಮತ್ತು ಡೊಳ್ಳು ಹೊಟ್ಟೆ; 'ವಿಡಂಬನಾ ನಾಟಕದಲ್ಲಿನ ಎಲ್ಲ ಸೈಲೀನಸ್‌ಗಳಿಗಿಂತ ಅವನು ಹೆಚ್ಚು ಕುರೂಪಿ' (ಕ್ಸೆನೋಫೋನ್, '*ಸಿಂಪೋಸಿಯಂ*'). ಸದಾ ಅವನು ಧರಿಸುತ್ತಿದ್ದುದು ಹಳೆಯ ಗಲೀಜು ಬಟ್ಟೆಗಳನ್ನು, ಎಲ್ಲ ಕಡೆಗೂ ಬರಿಗಾಲಲ್ಲೇ ನಡೆದುಕೊಂಡು ಹೋಗುತ್ತಿದ್ದ. ಚಳಿ–ಸೆಕೆಗಳನ್ನಾಗಲೀ, ಹಸಿವು–ಬಾಯಾರಿಕೆಯನ್ನಾಗಲೀ ಅವನು ಲೆಕ್ಕಿಸುತ್ತಿರಲಿಲ್ಲ ಎಂಬುದು ಎಲ್ಲರಿಗೂ ಆಶ್ಚರ್ಯಕರವಾಗಿತ್ತು. '*ಸಿಂಪೋಸಿಯಂ*'ನಲ್ಲಿನ ಆಲ್ಸಿಬಿಯಾಡೀಸ್ ಸೈನಿಕಸೇವೆಯಲ್ಲಿದ್ದ ಸಾಕ್ರಟೀಸ್‌ನನ್ನು ವರ್ಣಿಸುತ್ತ ಹೇಳುವುದಿದು:

ಯಾವ ಸಾಮಾನು ಸರಂಜಾಮೂ ಸಿಕ್ಕದೆ ನಾವೆಲ್ಲ ಊಟವಿಲ್ಲದೆ ಇರಬೇಕಾದಂತಹ ಸಂದರ್ಭಗಳಲ್ಲಿ, ಅವರು ತೋರುತ್ತಿದ್ದ ತಾಳ್ಮೆ ಅಚ್ಚರಿಗೊಳಿಸುವಂತಹುದು. ಅಂಥ ಸಂದರ್ಭಗಳು ಯುದ್ಧಕಾಲದಲ್ಲಿ ಆಗಾಗ ನಡೆಯುತ್ತಿದ್ದವು. ಅವರು ನನಗೆ ಮಾತ್ರವಲ್ಲ ಮಿಕ್ಕ ಎಲ್ಲರಿಗೂ ಮೇಲ್ದರ್ಜೆಯವರು; ಅವರಂತಹವರು ಬೇರೆ ಯಾರೂ ಇರಲಿಲ್ಲ .. .. ಚಳಿಯನ್ನು ತಡೆದುಕೊಳ್ಳುವುದರಲ್ಲಿ ಅವರು ತೋರುತ್ತಿದ್ದ ಸೈರಣೆಯೂ ಆಶ್ಚರ್ಯಕರವೇ. ತುಂಬ ಕಾವಳ ಸುರಿಯುತ್ತಿತ್ತು, ಆ ಪ್ರದೇಶದಲ್ಲಿ ಚಳಿಗಾಲ ಭಯಂಕರವಾದುದು,

ಮಿಕ್ಕೆಲ್ಲರೂ ಇಲ್ಲ ಒಳಗೇ ಇರುತ್ತಿದ್ದರು ಅಥವಾ ಹೊರಗೆ ಹೋಗಬೇಕಾದಾಗ ಒಂದು ಹೊರೆ ಬಟ್ಟೆಯನ್ನು ತೊಟ್ಟುಕೊಂಡಿರುತ್ತಿದ್ದರು, ಕಾಲುಗಳಿಗೆ ವಿಶೇಷ ಶೂ ಧರಿಸಿ, ಬೆಚ್ಚನೆಯ ಉಣ್ಣೆ ಬಟ್ಟೆಯನ್ನು ಸುತ್ತಿಕೊಂಡಿರುತ್ತಿದ್ದರು; ಇಷ್ಟಾದರೂ ಸಾಕ್ರಟೀಸ್ ತಮ್ಮ ಎಂದಿನ ಬಟ್ಟೆ ಧರಿಸಿ ಬರಿಗಾಲಲ್ಲೇ ಹಿಮದ ಮೇಲೆ ನಡೆಯುತ್ತ ಶೂ ಹಾಕಿದ್ದ ಬೇರೆ ಸೈನಿಕರಿಗಿಂತ ಉತ್ತಮವಾಗಿ ಹೆಜ್ಜೆ ಹಾಕುತ್ತ, ತಮ್ಮನ್ನವರು ಕಡೆಗಣಿಸುವರೆಂದು ಬಗೆದು ಅವರನ್ನು ಮೊನಚುಗಣ್ಣಿಂದ ನೋಡುತ್ತಿದ್ದರು.

ಎಲ್ಲ ದೈಹಿಕ ಕಾಮನೆಗಳನ್ನವನು ನಿಯಂತ್ರಿಸಿದ್ದ ರೀತಿಯನ್ನು ಎಲ್ಲರೂ ಒತ್ತಿ ಹೇಳುತ್ತಾರೆ. ಅವನು ವೈನ್ ಕುಡಿಯುತ್ತಿದ್ದುದು ಅಪರೂಪ, ಆದರೆ ಕುಡಿದಾಗ ಮಿಕ್ಕೆಲರನ್ನೂ ಮೀರಿಸುತ್ತಿದ್ದ; ಆದರೆ ಅವನೆಂದೂ ಕುಡಿದವನಂತೆ ಕಾಣುತ್ತಿರಲಿಲ್ಲ. ಪ್ರಣಯದಲ್ಲಿ ಅವನಿಗೆ ಎಷ್ಟೇ ಪ್ರಬಲ ಆಮಿಷವಿರಲಿ, ಪ್ಲೇಟೋ ಹೇಳುವುದು ನಿಜವಾದರೆ, ಅವನು ನಿರ್ಭಾವುಕನಾಗಿರುತ್ತಿದ್ದ. ಅವನೊಬ್ಬ ಪರಿಪೂರ್ಣ ಆರ್ಫಿಕ್ ಸಂತ: ದೈವಿಕ ಆತ್ಮ ಮತ್ತು ಐಹಿಕ ದೇಹ ಇವುಗಳ ದ್ವಂದ್ವದಲ್ಲಿ ಅವನು ದೇಹಕ್ಕಿಂತ ಆತ್ಮದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಿದ್ದ. ಕೊನೆಯಲ್ಲಿ, ಸಾವಿನ ಬಗೆಗಿನ ಅವನ ಅವಗಣನೆಯು ಈ ನಿಯಂತ್ರಣವನ್ನು ಸಾಬೀತುಪಡಿಸುತ್ತದೆ. ಅದೇ ವೇಳೆಗೆ ಅವನೇನೂ ಸಂಪ್ರದಾಯನಿಷ್ಠ ಆರ್ಫಿಕ್ ಅಲ್ಲ; ಅದರ ಮೂಲ ತತ್ವಗಳನ್ನಷ್ಟೇ ಅವನು ಒಪ್ಪಿದ್ದುದು, ಮೂಢಶ್ರದ್ಧೆಗಳನ್ನೂ ಅಲ್ಲ, ಶುದ್ಧೀಕರಣದ ವಿಧಿಗಳನ್ನೂ ಅಲ್ಲ.

ಪ್ಲೇಟೋ ಚಿತ್ರಣದ ಸಾಕ್ರಟೀಸ್ ಸಂಯಮವಾದಿಗಳು (ಸ್ಟಾಯಿಕ್ಸ್) ಮತ್ತು ಸಿನಿಕರು ಇಬ್ಬರನ್ನೂ ನಿರೀಕ್ಷಿಸುತ್ತಾನೆ. ಸಂಯಮವಾದಿಗಳ ಪ್ರಕಾರ ಅತ್ಯಂತ ಒಳ್ಳೆಯದೇ ಪುಣ್ಯ, ಹೊರ ಕಾರಣಗಳಿಂದ ವ್ಯಕ್ತಿಗೆ ಪುಣ್ಯವನ್ನು ನಿರಾಕರಿಸಲಾಗದು; ನ್ಯಾಯಾಧೀಶರು ತನಗೆ ಹಾನಿಮಾಡಲರರು ಎಂಬ ಅವನ ವಾದದಲ್ಲಿ ಈ ಸ್ಪಷ್ಟವಾಗಿದೆ. ಸಿನಿಕ್‌ರು ಐಹಿಕ ವಸ್ತುಗಳನ್ನು ತಿರಸ್ಕರಿಸಿದರು, ನಾಗರಿಕತೆಯ ಸೌಲಭ್ಯಗಳನ್ನು ತಿರಸ್ಕರಿಸುವುದರ ಮೂಲಕ ತಮ್ಮ ಅವಜ್ಞೆಯನ್ನು ತೋರಿಸಿದರು; ಸಾಕ್ರಟೀಸ್ ಬರಿಗಾಲಲ್ಲಿ ನಡೆಯುವುದು ಮತ್ತು ಅನಾಕರ್ಷಕ ಬಟ್ಟೆ ಧರಿಸುವುದು – ಇವುಗಳಲ್ಲಿ ಕಾಣುವುದು ಈ ಅಂಶವೇ.

ಸಾಕ್ರಟೀಸ್‌ನ ಆದ್ಯತೆಗಳು ವೈಜ್ಞಾನಿಕತೆಗಿಂತ ನೈತಿಕವಾದವು ಎಂಬುದು ಬಹುತೇಕ ಸತ್ಯವೆಂದು ತೋರುತ್ತದೆ. 'ಅಪಾಲಜಿ'ಯಲ್ಲಿ ನಾವು ನೋಡಿದಂತೆ, ಅವನು ಹೇಳುವುದು: 'ನನಗೂ ಭೌತಿಕ ಊಹನೆಗಳಿಗೂ ಯಾವುದೇ ಸಂಬಂಧವಿಲ್ಲ.' ಪ್ಲೇಟೋನ ಅತ್ಯಂತ ಹಿಂದಿನ ಸಂವಾದವು ಬಹುಪಾಲು ಸಾಕ್ರಟೀಸ್‌ಸಂಬಂಧಿತವೆನಿಸಿದವು, ಅವು ಮುಖ್ಯವಾಗಿ ನೈತಿಕ ಪರಿಭಾಷೆಯ ವ್ಯಾಖ್ಯೆಯ ಹುಡುಕಾಟದಲ್ಲಿ ತೊಡಗಿರುವಂತಹುವು. 'ಚಾರ್ಮೈಡೀಸ್' ಸಂಯಮ ಅಥವಾ ಮಿತಾಚಾರದ ಬಗ್ಗೆ; 'ಲೈಸಿಸ್' ಸ್ನೇಹದ ಬಗ್ಗೆ; 'ಲ್ಯಾಖೀಸ್' ಧೈರ್ಯದ ಬಗ್ಗೆ

ಆಲೋಚಿಸುವಂತಹುವು. ಇವೆಲ್ಲದರಲ್ಲಿ ಯಾವುದೇ ತೀರ್ಮಾನಗಳನ್ನು ಕೈಗೊಳ್ಳಲಾಗಿಲ್ಲ, ಆದರೆ ಅಂಥ ಪ್ರಶ್ನೆಗಳ ಬಗ್ಗೆ ಪರಿಶೀಲನೆ ನಡೆಸುವುದು ಮುಖ್ಯವೆಂದು ತಾನು ಭಾವಿಸುವುದಾಗಿ ಸಾಕ್ರಟೀಸ್ ಸ್ಪಷ್ಟಪಡಿಸುತ್ತಾನೆ. ತನಗೇನೂ ತಿಳಿಯದು, ತನಗೇನೂ ತಿಳಿದಿಲ್ಲವೆಂಬುದನ್ನು ತಿಳಿಯುವುದರಲ್ಲಿ ತಾನು ಇತರರಿಗಿಂತ ಹೆಚ್ಚು ವಿವೇಕಿ ಎಂಬುದಾಗಿ ಸಾಕ್ರಟೀಸ್ ಉದ್ದಕ್ಕೂ ಹೇಳಿಕೊಳ್ಳುತ್ತಾನೆ; ಆದರೆ ಅವನ ಪ್ರಕಾರ ಜ್ಞಾನವೇನೂ ಅಗ್ರಾಹ್ಯವೇನಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಜ್ಞಾನಾನ್ವೇಷಣೆಯು ಅತ್ಯಂತ ಮುಖ್ಯವಾದುದೆಂದವನು ಭಾವಿಸುತ್ತಾನೆ. ಯಾರೂ ಬೇಕೆಂದು ಪಾಪಗೈಯುವುದಿಲ್ಲ, ಹೀಗಾಗಿ ಎಲ್ಲರನ್ನೂ ಪರಿಪೂರ್ಣ ಸದ್ಗುಣಿಗಳನ್ನಾಗಿಸಲು ಜ್ಞಾನದ ಆವಶ್ಯಕತೆಯಿದೆ ಎಂಬುದು ಅವನ ನಿಲವು.

ಸದ್ಗುಣ ಮತ್ತು ಜ್ಞಾನಗಳ ನಡುವಣ ನಿಕಟ ಸಂಬಂಧವು ಸಾಕ್ರಟೀಸ್ ಪ್ಲೇಟೋರ ವಿಶಿಷ್ಟ ಗುಣ. ಒಂದು ಹಂತದವರೆಗೆ ಅದು ಕ್ರಿಶ್ಚಿಯಾನಿಟಿಯಲ್ಲಿ ಇರದುದಕ್ಕೆ ವಿರುದ್ಧವಾಗಿ ಎಲ್ಲ ಗ್ರೀಕ್ ಚಿಂತನೆಯಲ್ಲೂ ಅಡಕವಾಗಿದೆ. ಕ್ರಿಶ್ಚಿಯನ್ ನೈತಿಕತೆಯಲ್ಲಿ ಪರಿಶುದ್ಧ ಹೃದಯ ಅತ್ಯಂತ ಆವಶ್ಯಕ ಮತ್ತು ಅದು ಕನಿಷ್ಠ ಪಕ್ಷ, ಶಿಕ್ಷಿತರಲ್ಲಿ ಕಾಣುವಷ್ಟನ್ನೇ ಅಜ್ಞಾನಿಗಳಲ್ಲಿಯೂ ಕಾಣಬಹುದು. ಗ್ರೀಕ್ ಮತ್ತು ಕ್ರಿಶ್ಚಿಯನ್ ನೈತಿಕತೆಯ ಬಗೆಗಿನ ಈ ವ್ಯತ್ಯಾಸವು ಇಂದಿನವರೆಗೂ ಮುಂದುವರಿದಿದೆ.

ದ್ವಂದ್ವೀಯಪ್ರಕ್ರಿಯೆ (ಡಯಲೆಕ್ಟಿಕ್), ಅಂದರೆ ಪ್ರಶ್ನೋತ್ತರಗಳ ಮೂಲಕ ಜ್ಞಾನಾನ್ವೇಷಣೆಯ ವಿಧಾನವು, ಸಾಕ್ರಟೀಸ್‌ನೇನೂ ಕಂಡುಕೊಂಡುದಲ್ಲ. ಅದನ್ನು ಕ್ರಮಬದ್ಧವಾಗಿ ಮೊದಲು ಅನುಷ್ಠಾನಕ್ಕೆ ತಂದವನು ಪಾರ್ಮೆನೈಡೀಸ್‌ನ ಶಿಷ್ಯನಾದ ಝೀನೋ; ಪ್ಲೇಟೋನ ಸಂವಾದ 'ಪಾರ್ಮೆನೈಡೀಸ್'ನಲ್ಲಿ, ಝೀನೋ ಸಾಕ್ರಟೀಸ್‌ನನ್ನು ಈ ವಿಧಾನಕ್ಕೊಳಪಡಿಸುತ್ತಾನೆ, ಪ್ಲೇಟೋಚಿತ್ರಿತ ಸಾಕ್ರಟೀಸ್ ಮುಂದೆ ಅದಕ್ಕೆ ಇತರರನ್ನು ಒಳಪಡಿಸುತ್ತಾನೆ. ಆದರೆ ಸಾಕ್ರಟೀಸ್ ಅನುಷ್ಠಾನಗೊಳಿಸಿ ಈ ವಿಧಾನವನ್ನು ಬೆಳೆಸಿದನೆಂದು ಭಾವಿಸಲು ಕಾರಣಗಳಿವೆ. ಸಾಕ್ರಟೀಸ್ ಮರಣದಂಡನೆಗೆ ಗುರಿಯಾದಾಗ ಮುಂದಿನ ಲೋಕದಲ್ಲಿ ತಾನು ನಿರಂತರವಾಗಿ ಪ್ರಶ್ನೆಗಳನ್ನು ಕೇಳುತ್ತಿರಬಹುದಾದ್ದರಿಂದ ತನ್ನನ್ನು ಮರಣದಂಡನೆಗೆ ಗುರಿಪಡಿಸಲಾಗದು, ತಾನು ಅಮರನಾಗುತ್ತೇನೆ ಎಂದು ಸಂತಸದಿಂದ ಆಲೋಚಿಸಿದನೆಂಬುದನ್ನಾಗಲೇ ನೋಡಿದ್ದೇವೆ. ಅವನು 'ಅಪಾಲಜಿ' ಯಲ್ಲಿ ವರ್ಣಿತವಾದ ರೀತಿಯಲ್ಲಿ ಅವನು ದ್ವಂದ್ವೀಯ ಪ್ರಕ್ರಿಯೆಯನ್ನು ಅನುಷ್ಠಾನಗೊಳಿಸಿದ್ದುದು ನಿಶ್ಚಿತವಾದುದಾದರೆ, ಅವನ ವಿರುದ್ಧದ ವಿದ್ವೇಷಕ್ಕೆ ಕಾರಣವನ್ನು ಗುರುತಿಸಬಹುದು: ಅಥೆನ್ಸ್‌ನಲ್ಲಿನ ಎಲ್ಲ ಆಷಾಢಭೂತಿಗಳು ಅವನ ವಿರುದ್ಧ ಒಂದಾಗಿ ಸೇರಿಕೊಂಡಿದ್ದಿರಬಹುದು.

ದ್ವಂದ್ವೀಯ ಪ್ರಕ್ರಿಯೆಯು ಕೆಲವು ವಿಷಯಗಳಿಗೆ ಸೂಕ್ತವಾದುದು, ಮತ್ತೆ ಕೆಲವಕ್ಕೆ ಸೂಕ್ತವಲ್ಲ. ಪ್ರಾಯಶಃ ಈ ಅಂಶವೇ ಈ ಮಾರ್ಗದಲ್ಲಿ ನಡೆಯಲು

ಸಾಧ್ಯವಾಗಬಹುದಾದ ಬಹುತೇಕ ಭಾಗಗಳಲ್ಲಿ ಪ್ಲೇಟೋನ ವಿಚಾರಣೆಗಳ ಸ್ವರೂಪವನ್ನು ನಿರ್ಧರಿಸಲು ಸಹಾಯಕವಾಗಿರಬಹುದು. ಅಲ್ಲದೆ, ಪ್ಲೇಟೋನ ಪ್ರಭಾವವು ಮುಂದಿನ ಎಲ್ಲ ತತ್ವಜ್ಞಾನಗಳು ಈ ವಿಧಾನದ ಮಿತಿಗಳಿಂದ ಕೂಡಿವೆ.

ಕೆಲವು ವಿಚಾರಗಳು ಈ ವಿಧಾನದಲ್ಲಿ ನಿರ್ವಹಿಸಲು ಸ್ಪಷ್ಟವಾಗಿ ಸೂಕ್ತವಾದುವಲ್ಲ – ನಿದರ್ಶನಕ್ಕೆ ಪ್ರಯೋಗಾತ್ಮಕ ವಿಜ್ಞಾನ. ತನ್ನ ಸಿದ್ಧಾಂತಗಳನ್ನು ಸಮರ್ಥಿಸಲು ಗೆಲಿಲಿಯೋ ಸಂವಾದಗಳನ್ನು ಬಳಸಿಕೊಂಡನೆಂಬುದು ಸತ್ಯ, ಆದರೆ ಅದು ಪೂರ್ವಾಗ್ರಹವನ್ನು ಮೀರುವ ರೀತಿ ಅಷ್ಟೆ – ಅವನ ಅನಾವರಣಗಳನ್ನು (ಡಿಸ್ಕವರಿ) ತುಂಬ ಕಷ್ಟದಿಂದಲೂ ಕೃತಕತೆಯಿಂದಲೂ ಸಂವಾದಗಳಲ್ಲಿ ತುರುಕುವುದು ಹೊರತು ಅನ್ಯತಃ ಸಾಧ್ಯವಿರಲಿಲ್ಲ. ಪ್ಲೇಟೋನ ಕೃತಿಗಳಲ್ಲಿನ ಸಾಕ್ರಟೀಸ್ ವ್ಯಕ್ತಿಯಲ್ಲಿ ಈಗಾಗಲೇ ಇರುವ ಜ್ಞಾನವನ್ನು ತಾನು ಪ್ರಶ್ನೆಗಳ ಮೂಲಕ ಹೊರತೆಗೆಯುತ್ತಿರುವೆನೆಂದು ನಟಿಸುತ್ತಿರುತ್ತಾನೆ. ಈ ರೀತಿ ತನ್ನನ್ನವನು ಸೂಲಗಿತ್ತಿಗೆ ಹೋಲಿಸಿಕೊಳ್ಳುತ್ತಾನೆ. 'ಫೀಡೋ' ಮತ್ತು 'ಮೇನೋ'ಗಳಲ್ಲಿ ಅವನು ತನ್ನ ಈ ವಿಧಾನವನ್ನು ಜ್ಯಾಮಿತೀಯ ಸಮಸ್ಯೆಗಳಿಗೆ ಅನ್ವಯಿಸಿದಾಗ, ಯಾವ ನ್ಯಾಯಾಧೀಶನೂ ಅನುಮತಿಸಲಾಗದ ಮುಖ್ಯ ಪ್ರಶ್ನೆಗಳನ್ನವನು ಕೇಳಬೇಕಾಗುತ್ತದೆ. ಈ ವಿಧಾನವು ಸ್ಮೃತಿಸಿದ್ಧಾಂತಕ್ಕೆ ಹೊಂದಿಕೊಳ್ಳುತ್ತದೆ, ಅದರ ಪ್ರಕಾರ, ನಮ್ಮ ಹಿಂದಿನ ಜನ್ಮದಲ್ಲಿ ತಿಳಿದಿದ್ದುದನ್ನು ನೆನಪಿಸಿಕೊಳ್ಳುವುದರ ಮೂಲಕ ಕಲಿಯುತ್ತೇವೆ. ಈ ದೃಷ್ಟಿಕೋನಕ್ಕೆ ವ್ಯತಿರಿಕ್ತವಾಗಿ, ಸೂಕ್ಷ್ಮದರ್ಶಕದ ಮೂಲಕ ಅನಾವರಣಗೊಳಿಸಿದ ಯಾವುದೇ ವಿಷಯವನ್ನು ತೆಗೆದುಕೊಳ್ಳಿ, ನಿದರ್ಶನಕ್ಕೆ ಬ್ಯಾಕ್ಟೀರಿಯಗಳ ಮೂಲಕ ಹರಡುವ ರೋಗ; ಅಂತಹ ಜ್ಞಾನವನ್ನು ಹಿಂದೆ ಅಜ್ಞಾನಿಯಾಗಿದ್ದವನಿಂದ ಪ್ರಶ್ನೋತ್ತರಗಳ ಮೂಲಕ ಹೊರತರುವುದನ್ನು ಒಪ್ಪಲಾಗದು.

ಸಾಕ್ರಟೀಸ್‌ನ ವಿಧಾನದಿಂದ ನಿರ್ವಹಿಸಬಹುದಾದ ವಿಷಯಗಳು ಎಂದರೆ, ಸಮಂಜಸ ತೀರ್ಮಾನಕ್ಕೆ ಬರಲು ಬೇಕಾಗುವ ಜ್ಞಾನವನ್ನು ಈಗಾಗಲೇ ಹೊಂದಿದ್ದು ನಮಗೆ ತಿಳಿದಿರುವುದನ್ನು ಆಲೋಚನೆಯ ಗೊಂದಲದಿಂದಲೋ ವಿಶ್ಲೇಷಣೆಯ ಕೊರತೆಯಿಂದಲೋ ಸೂಕ್ತ ತರ್ಕದಿಂದ ಬಳಸಿಕೊಳ್ಳಲಾಗದಿದ್ದಂಥವು. ಪ್ಲೇಟೋ ಸಂವಾದಗಳನ್ನಳವಡಿಸಿಕೊಳ್ಳಲು ಅತ್ಯಂತ ಸೂಕ್ತವಾದುದು 'ನ್ಯಾಯ ಎಂದರೇನು?' ಎಂಬಂತಹ ಪ್ರಶ್ನೆ. ನಾವೆಲ್ಲ 'ನ್ಯಾಯ' 'ಅನ್ಯಾಯ' ಎಂಬ ಶಬ್ದಗಳನ್ನು ಧಾರಾಳವಾಗಿ ಬಳಸುತ್ತೇವೆ, ನಾವು ಅವುಗಳನ್ನು ಯಾವ ಅರ್ಥದಲ್ಲಿ ಬಳಸುತ್ತೇವೆಂಬುದನ್ನು ಪರಿವೀಕ್ಷಿಸಿದರೆ ಅದರ ಅತ್ಯಂತ ಸೂಕ್ತ ಅರ್ಥದಲ್ಲಿ ಬಳಸಬಹುದಾದುದನ್ನು ಅನುಗಮನ ತರ್ಕದ ಮೂಲಕ ತಲುಪಬಹುದು. ನಮಗಿರಬೇಕಾದ ತಿಳಿವಳಿಕೆಯೆಂದರೆ ಆ ಪದಗಳನ್ನು ಯಾವ ಯಾವ ಅರ್ಥದಲ್ಲಿ ಬಳಸಲಾಗುತ್ತದೆ ಎಂಬುದಷ್ಟೆ. ಆದರೆ ನಮ್ಮ ಪರಿವೀಕ್ಷಣೆಯು ತೀರ್ಮಾನಗೊಂಡಾಗ, ನಾವು

ಭಾಷಿಕ ಅನಾವರಣವೊಂದನ್ನು ಮಾಡಿರುತ್ತೇವೆಯೇ ಹೊರತು ನೈತಿಕತೆಯ ಅನಾವರಣವನ್ನಲ್ಲ.

ಆದರೆ ಈ ವಿಧಾನವನ್ನು ನಾವು ಹೆಚ್ಚಿನ ಬಗೆಯ ವಿಷಯಗಳಿಗೆ ಲಾಭದಾಯಕವಾಗಿ ಅನ್ವಯಿಸಬಹುದು. ಎಲ್ಲೆಲ್ಲಿ ವಾಸ್ತವತೆಯ ಆಧಾರದ ಮೇಲಲ್ಲದೆ ತರ್ಕದ ಆಧಾರದ ಮೇಲೆ ಚರ್ಚಿಚಸಲಾಗುತ್ತದೆಯೋ ಅಲ್ಲಿ ಚರ್ಚೆಯೇ ಸತ್ಯವನ್ನು ಹೊರತರುವ ಅತ್ಯಂತ ಸೂಕ್ತ ವಿಧಾನ. ಪ್ರಜಾಪ್ರಭುತ್ವವು ಒಳ್ಳೆಯದು, ಕೆಲ ಅಭಿಪ್ರಾಯಗಳನ್ನು ಹೊಂದಿದರವರಿಗೆ ಮತದಾನದ ಹಕ್ಕು ಇರಬಾರದು ಎಂದು ಯಾರಾದರೂ ಪ್ರತಿಪಾದಿಸುತ್ತಿದ್ದಾರೆ ಎಂದು ಭಾವಿಸೋಣ; ನಾವು ಅವರ ಮೇಲೆ ಅಸಂಗತತೆಯ ಆಪಾದನೆ ಮಾಡಬಹುದು, ಮತ್ತು ಅವನ ಎರಡು ಹೇಳಿಕೆಗಳಲ್ಲಿ ಕನಿಷ್ಠ ಪಕ್ಷ ಒಂದು ತಪ್ಪು ಎಂದು ಸಾಧಿಸಬಹುದು. ತಾರ್ಕಿಕ ತಪ್ಪುಗಳು ಎಷ್ಟೋ ಜನರು ಭಾವಿಸುವುದಕ್ಕಿಂತ ಹೆಚ್ಚಿನ ವ್ಯಾವಹಾರಿಕ ಉಪಯೋಗವನ್ನು ಪಡೆದಿವೆ ಎಂಬುದು ನನ್ನ ತಿಳಿವಳಿಕೆ; ಇಲ್ಲದಿದ್ದರೆ, ಪ್ರತಿಯೊಂದು ವಿಷಯದಲ್ಲಿಯೂ ತನಗೆ ಬೇಕೆನಿಸಿದ ಅಭಿಪ್ರಾಯವನ್ನು ಹೊಂದಲು ಅಂಥ ಜನರಿಗೆ ಅನುಕೂಲಕರವಾಗುತ್ತದೆ. ಯಾವುದೇ ತಾರ್ಕಿಕ ಸಾಮಂಜಸ್ಯವುಳ್ಳ ಸಿದ್ಧಾಂತವು ಸ್ವಲ್ಪಮಟ್ಟಿಗೆ ನೋವುಂಟುಮಾಡುವಂತಹುದೂ ಹಾಗೂ ಸದ್ಯದ ಪೂರ್ವಾಗ್ರಹಗಳಿಗೆ ವಿರುದ್ಧವಾದುದೂ ಆಗಿರುವುದರಲ್ಲಿ ಸಂದೇಹವಿಲ್ಲ. ದ್ವಂದ್ವೀಯ ಪ್ರಕ್ರಿಯೆಯು – ಅಥವಾ, ಸಾಮಾನ್ಯ ಮಾತಿನಲ್ಲಿ, ಸ್ವತಂತ್ರ ಚರ್ಚೆಯ ಅಭ್ಯಾಸವು – ತಾರ್ಕಿಕ ಸಾಮಂಜಸ್ಯವನ್ನು ಹೆಚ್ಚಿಸುತ್ತದೆ; ಈ ರೀತಿ ಅದು ಉಪಯುಕ್ತವಾದುದು. ಆದರೆ ಹೊಸ ವಸ್ತುಸ್ಥಿತಿಗಳನ್ನು ಕಂಡುಕೊಳ್ಳುವ ಉದ್ದೇಶದಿಂದ ಕೂಡಿರುವಾಗ ಅದು ಅನುಪಯುಕ್ತ. ಪ್ರಾಯಶಃ 'ತತ್ವಜ್ಞಾನ'ವನ್ನು ಪ್ಲೇಟೋನ ವಿಧಾನದಲ್ಲಿ ಕಂಡುಕೊಳ್ಳಬಹುದಾದ ಅನ್ವೇಷಣೆಗಳ ಒಟ್ಟು ಮೊತ್ತ ಎಂದು ನಾವು ವ್ಯಾಖ್ಯಾನಿಸಬಹುದೇನೋ. ಈ ವ್ಯಾಖ್ಯಾನವು ಸೂಕ್ತವಲ್ಲವಾದರೆ, ಅದಕ್ಕೆ ಕಾರಣ ಮುಂದಿನ ತತ್ವಜ್ಞಾನಿಗಳ ಮೇಲೆ ಪ್ಲೇಟೋ ಬೀರಿರುವ ಪ್ರಭಾವ.

೧೨
ಸ್ಪಾರ್ಟಾದ ಪ್ರಭಾವ

ಪ್ಲೇಟೋನನ್ನು ಅರ್ಥಮಾಡಿಕೊಳ್ಳಲು, ಅಂತೆಯೇ ಇತರ ಅನೇಕ ತತ್ತ್ವಜ್ಞಾನಿಗಳನ್ನು ಕೂಡ, ಸ್ಪಾರ್ಟಾ ಬಗ್ಗೆ ಒಂದಷ್ಟು ತಿಳಿವಳಿಕೆ ಆವಶ್ಯಕ. ಗ್ರೀಕ್ ಚಿಂತನೆಯ ಮೇಲೆ ಸ್ಪಾರ್ಟಾದ್ದು ಇಬ್ಬಗೆಯ ಪ್ರಭಾವ: ವಾಸ್ತವತೆಗಳ ಮೂಲಕ ಮತ್ತು ಪೌರಾಣಿಕತೆಯ ಮೂಲಕ. ಎರಡೂ ಮುಖ್ಯವೇ. ವಾಸ್ತವತೆಯೇ ಸ್ಪಾರ್ಟಾ ಅಥೆನ್ಸ್ ಅನ್ನು ಯುದ್ಧದಲ್ಲಿ ಗೆಲ್ಲಲು ಕಾರಣವಾದುದು; ಪೌರಾಣಿಕತೆಯು ಪ್ಲೇಟೋನ ರಾಜಕೀಯ ಸಿದ್ಧಾಂತವನ್ನು ಹಾಗೂ ಮುಂದಿನ ಅಸಂಖ್ಯ ಲೇಖಕರನ್ನು ಪ್ರಭಾವಿಸಿತು. ಪೂರ್ಣ ಪ್ರಮಾಣದಲ್ಲಿ ಬೆಳೆದ ಪೌರಾಣಿಕತೆಯನ್ನು ನಾವು ಪ್ಲೂಟಾರ್ಕ್‌ನ 'ಲೈಫ್ ಆಫ್ ಲೈಕರ್ಗಸ್' ನಲ್ಲಿ ಕಾಣಬಹುದು; ಅದು ವಹಿಸಿಕೊಳ್ಳುವ ಆದರ್ಶಗಳು ರೂಸೋ, ನೀಷೆ ಮತ್ತು ರಾಷ್ಟ್ರೀಯ ಸಮಾಜವಾದದ ಸಿದ್ಧಾಂತಗಳ ರೂಪಣೆಯಲ್ಲಿ ದೊಡ್ಡ ಪಾತ್ರವನ್ನು ವಹಿಸಿದವು.[೫೦] ಐತಿಹಾಸಿಕವಾಗಿ ಪೌರಾಣಿಕತೆಯು ವಾಸ್ತವತೆಗಿಂತ ಹೆಚ್ಚಿನ ಪ್ರಾಮುಖ್ಯವನ್ನು ಪಡೆಯುತ್ತದೆ. ಆದರೆ, ನಾವು ಎರಡನೆಯ ಅಂಶದಿಂದ ಆರಂಭಿಸೋಣ. ಯಾಕೆಂದರೆ ವಾಸ್ತವತೆಯೇ ಪೌರಾಣಿಕತೆಯ ಆಕರ.

ಸ್ಪಾರ್ಟಾ ಅಥವಾ ಲ್ಯಾಸೆಡೆಮಾನ್‌ನ ರಾಜಧಾನಿ ಲ್ಯಾಕೋನಿಯ; ಅದು ಪೆಲೋಪೊನ್ನೆಸ್‌ನ ಆಗ್ನೇಯದಲ್ಲಿದೆ. ಉತ್ತರದಿಂದ ಡೋರಿಯನ್ ಆಕ್ರಮಣಕ್ಕೊಳಗಾಗಿ ತಾವು ಅಲ್ಲಿ ಕಂಡ ಜನಸಮುದಾಯವನ್ನು ಗುಲಾಮಸ್ಥಿತಿಗೆ ತಳ್ಳಿದ್ದ ಕಾಲದಲ್ಲಿ ಆಳುವ ವರ್ಗವಾಗಿದ್ದ ಸ್ಪಾರ್ಟನ್ನರು ದೇಶವನ್ನು ಗೆದ್ದರು. ಈ ಗುಲಾಮರನ್ನು ಜೀತಗಾರರೆಂದು (ಹೇಲಟ್ಸ್) ಎಂದು ಕರೆಯಲಾಗುತ್ತಿತ್ತು. ಇತಿಹಾಸಯುಗದಲ್ಲಿ, ಭೂಮಿಯೆಲ್ಲ ಸ್ಪಾರ್ಟನ್ನರಿಗೆ ಸೇರಿತ್ತು; ಆದರೆ ತಾವೇ ಬೇಸಾಯಮಾಡಲು ಕಾನೂನು ಮತ್ತು ಸಂಪ್ರದಾಯಗಳು ಅಡ್ಡಿಯಾಗಿದ್ದವು; ದುಡಿಮೆ ಅಗೌರವಯುತವಾದದ್ದು ಹಾಗೂ ಸೈನಿಕಸೇವೆಗೆ ತಾವು

---

೫೦. ಡಾ. ಥಾಮಸ್ ಮತ್ತು ಇಂಗ್ಲಿಷ್ ಪಬ್ಲಿಕ್ ಸ್ಕೂಲ್‌ಗಳ ಬಗ್ಗೆ ಹೇಳಬೇಕಾದ್ದೇ ಇಲ್ಲ.

ಯಾವಾಗಬೇಕಾದರೂ ಲಭ್ಯವಾಗಬಹುದಾದುದು – ಈ ಎರಡೂ ಕಾರಣಗಳು. ಗುಲಾಮರನ್ನು ಕೊಳ್ಳುವ ಮತ್ತು ಮಾರುವಪದ್ಧತಿ ಇರಲಿಲ್ಲ, ಅವರು ತುಂಡುಗಳಾಗಿ ವಿಂಗಡಿಸಿ ಪ್ರತಿ ಪ್ರಾಪ್ತವಯಸ್ಕ ಸ್ಪಾರ್ಟನ್ನನಿಗೂ ಒಂದೋ ಹೆಚ್ಚೋ ಎಂದು ಒಡೆತನ ನೀಡಿದ್ದ ಭೂಮಿಯ ಸಂಬಂಧ ಹೊಂದಿದ್ದರು. ಈ ತುಂಡುಗಳನ್ನು, ಜೀತದಾಳುಗಳಂತೆ, ಕೊಳ್ಳುವಂತಿರಲಿಲ್ಲ ಮತ್ತು ಮಾರಾಟ ಮಾಡುವಂತಿರಲಿಲ್ಲ, ಅದರ ಬದಲಿಗೆ ತಂದೆಯಿಂದ ಮಗನಿಗೆ ವರ್ಗಾವಣೆಗೊಳ್ಳುವಂತಹ ಕಾನೂನು ಜಾರಿಯಲ್ಲಿತ್ತು. (ಆದರೆ ಅದನ್ನವರು ಬೇರೆಯವರಿಗೆ ಬಿಟ್ಟುಕೊಡಬಹುದಾಗಿತ್ತು.) ತನ್ನ ತುಂಡಿನಲ್ಲಿ ದುಡಿಯುವ ಜೀತದಾಳಿನಿಂದ ಒಡೆಯನು ತನಗಾಗಿ ಎಪ್ಪತ್ತು ಮೆಡಿಮ್ನಿ (ಸುಮಾರು ೧೦೫ ಬುಶೆಲ್), ಹೆಂಡತಿಗಾಗಿ ಹನ್ನೆರಡು ಮೆಡಿಮ್ನಿ ಧಾನ್ಯವನ್ನೂ, ನಿಗದಿತ ಪ್ರಮಾಣದ ಮದ್ಯ ಹಾಗೂ ಹಣ್ಣುಗಳನ್ನು ಪ್ರತಿವರ್ಷ ಪಡೆಯುತ್ತಿದ್ದ.[೫೧] ಇದಕ್ಕೂ ಮೀರಿದುದು ಜೀತದಾರರಿಗೆ ಸೇರುತ್ತಿತ್ತು. ಈ ಜೀತದಾಳುಗಳು ಗ್ರೀಕರು ಹಾಗೂ ಸ್ಪಾರ್ಟನ್ನರಂತೆ, ತಮ್ಮ ಗುಲಾಮಸ್ಥಿತಿಗಾಗಿ ತೀವ್ರವಾಗಿ ಖೇದಗೊಂಡಿದ್ದರು. ಸಾಧ್ಯವಾದಾಗ ಬಂಡಾಯವೇಳುತ್ತಿದ್ದರು. ಈ ಅಪಾಯವನ್ನೆದುರಿಸಲು ಸ್ಪಾರ್ಟನ್ನರು ಗೂಢಚಾರ ವ್ಯವಸ್ಥೆಯನ್ನು ಹೊಂದಿದ್ದರು, ಮತ್ತು ಈ ಮುನ್ನೆಚ್ಚರಿಕೆಗೆ ಪೂರಕವಾಗಿ ಮತ್ತೊಂದು ವ್ಯವಸ್ಥೆಯೂ ಇತ್ತು: ವರ್ಷಕ್ಕೊಮ್ಮೆ ಅವರು ಜೀತದಾಳುಗಳ ವಿರುದ್ಧ ಯುದ್ಧ ಸಾರುತ್ತಿದ್ದರು, ಇದರಿಂದ ತಮ್ಮ ಯುವಕರು ಮಾನವಹತ್ಯೆಯ ಕಾನೂನಿನ ಭಯವಿಲ್ಲದೆ ತಮ್ಮ ಮಾತು ಕೇಳದವರನ್ನು ಕೊಲ್ಲಬಹುದಾಗಿತ್ತು. ಜೀತದಾಳುಗಳಿಗೆ ಸರ್ಕಾರದಿಂದ ಮುಕ್ತಿ ಸಿಕ್ಕರೂ ತಮ್ಮ ಒಡೆಯರಿಂದ ಬಿಡುಗಡೆ ಪಡೆಯಲು ಸಾಧ್ಯವಿರಲಿಲ್ಲ. ಬಿಡುಗಡೆಯ ಭಾಗ್ಯವು ಯುದ್ಧದಲ್ಲಿ ಅಸಾಧಾರಣ ಶೌರ್ಯ ತೋರಿಸಿದವರಿಗೆ ಆಗಾಗ ದೊರೆಯುತ್ತಿತ್ತು, ಅಷ್ಟೆ.

ಕ್ರಿಪೂ ಎಂಟನೆಯ ಶತಮಾನದ ಒಂದು ಕಾಲದಲ್ಲಿ ಸ್ಪಾರ್ಟನ್ನರು ನೆರೆಯ ದೇಶವಾದ ಮೆಸ್ಸೀನಿಯವನ್ನು ಗೆದ್ದು ಅದರ ಜನಸಂಖ್ಯೆಯ ಬಹುಭಾಗವನ್ನು ಜೀತದಾಳುಗಳ ಸ್ಥಾನಕ್ಕಿಳಿಸಿದರು. ಸ್ಪಾರ್ಟಾದಲ್ಲಿ ಸಹಜ ಬೆಳವಣಿಗೆಗೆ (ಲೇಬನ್ಸ್‌ರೌಮ್) ದೇಶದ ಕೊರತೆಯಿತ್ತು. ಆದರೆ ಹೊಸ ಪ್ರದೇಶವು ತತ್ಕಾಲಕ್ಕೆ ಅತೃಪ್ತಿಯ ಈ ಮೂಲವನ್ನು ತೊಡೆದುಹಾಕಿತು.

ಸ್ಪಾರ್ಟನ್ನರು ಅನುಸರಿಸಿದ ಸಮಾನ ಮಾರ್ಗವೆಂದರೆ ಭೂತುಂಡುಗಳನ್ನು ನಿರ್ಮಿಸಿದ್ದು. ಶ್ರೀಮಂತರು ತಮ್ಮದೇ ಜಮೀನುಗಳನ್ನು ಹೊಂದಿರುತ್ತಿದ್ದರು, ಆದರೆ ತುಂಡುಗಳು ಸರ್ಕಾರವು ಹಂಚಿಕೆ ಮಾಡಿದ ಸಾಮಾನ್ಯ ಭೂಮಿಯದೇ ಆಗಿದ್ದವು.

---

೫೧. ಬರಿ, 'ಹಿಸ್ಟರಿ ಆಫ್ ಗ್ರೀಕ್ಸ್', ಭಾಗ ೧, ಪು. ೧೩೮. ಸ್ಪಾರ್ಟನ್ ಗಂಡಸರು ಹೆಂಡತಿ ತಿನ್ನುವ ಸುಮಾರು ಆರರಷ್ಟು ತಿನ್ನುತ್ತಿದ್ದರು.

ಲ್ಯಾಕೋನಿಯದ ಇತರ ಭಾಗಗಳಲ್ಲಿನ ಸ್ವತಂತ್ರ ನಿವಾಸಿಗಳನ್ನು 'ಪೆರಿಯೋಕೈ'ಎಂದು ಕರೆಯುತ್ತಿದ್ದರು, ಅವರು ರಾಜಕೀಯ ಅಧಿಕಾರವನ್ನು ಹಂಚಿಕೊಳ್ಳಬೇಕಾಗಿತ್ತು.

ಸ್ಪಾರ್ಟಾ ಪ್ರಜೆಯ ಏಕೈಕ ಕೆಲಸವೆಂದರೆ ಯುದ್ಧ, ಅದಕ್ಕೆಂದು ಹುಟ್ಟಿನಿಂದಲೇ ತರಬೇತಿ ನೀಡಲಾಗುತ್ತಿತ್ತು. ಬುಡಕಟ್ಟುಗಳ ಹಿರಿಯರು ಪರಿಶೀಲನೆಯ ನಂತರ ರೋಗಿಷ್ಟ ಮಕ್ಕಳನ್ನು ಕಡೆಗಣಿಸಲಾಗುತ್ತಿತ್ತು; ಬಲಿಷ್ಠರೆಂದು ತೀರ್ಮಾನಿಸಿದವರನ್ನಷ್ಟೇ ಬೆಳೆಸುತ್ತಿದ್ದರು. ಇಪ್ಪತ್ತನೇ ವಯಸ್ಸಿನವರೆಗೂ, ಎಲ್ಲ ಹುಡುಗರೂ ಒಂದೇ ದೊಡ್ಡ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದರು: ತರಬೇತಿಯ ಉದ್ದೇಶ ಅವರನ್ನು ಗಟ್ಟಿಗೊಳಿಸಿ ನೋವನ್ನು ಕಡೆಗಣಿಸುವಂತೆ ಮಾಡುವುದಲ್ಲದೆ, ಶಿಸ್ತಿಗೊಳಪಡುವಂತೆ ಮಾಡುವುದು. ಸಾಂಸ್ಕೃತಿಕ ಅಥವಾ ವೈಜ್ಞಾನಿಕ ಶಿಕ್ಷಣದ ಬಗ್ಗೆ ಅವರು ಗಂಭೀರರಾಗಿರಲಿಲ್ಲ; ಅದರ ಗುರಿ ಅವಕಾಶಕ್ಕೆ ಸಂಪೂರ್ಣವಾಗಿ ನಿಷ್ಠೆಯಿಂದಿರುವ ಒಳ್ಳೆಯ ಯೋಧರನ್ನು ತಯಾರಿಸುವುದು.

ಇಪ್ಪತ್ತನೇ ವಯಸ್ಸಿಗೆ ಸೈನಿಕ ಶಿಕ್ಷಣ ಆರಂಭಗೊಳ್ಳುತ್ತಿದ್ದುದು. ಇಪ್ಪತ್ತನ್ನು ಮೀರಿದ ಯಾರಾದರೂ ಮದುವೆಯಾಗಲು ಸ್ವತಂತ್ರರಾಗಿರುತ್ತಿದ್ದರು, ಅದರೆ ಮೂವತ್ತನೇ ವಯಸ್ಸಿನವರೆಗೆ ಅವರು 'ಗಂಡಸರ ಮನೆ'ಯಲ್ಲಿ ವಾಸ ಮಾಡಬೇಕಾಗಿತ್ತು, ಅಲ್ಲಿಯವರೆಗೆ ತನ್ನ ಮದುವೆ ಅನೈತಿಕ ಸಂಬಂಧವೇನೋ ಎಂಬಂತೆ ನಿರ್ವಹಿಸಬೇಕಾಗಿತ್ತು. ಮೂವತ್ತರ ನಂತರ ಅವನೊಬ್ಬ ಪೂರ್ಣ ಪ್ರಜೆ ಎನಿಸಿಕೊಳ್ಳುತ್ತಿದ್ದ. ಪ್ರತಿ ಪ್ರಜೆಯೂ ಒಂದು ಮೆಸ್‌ಗೆ ಸೇರಿರುತ್ತಿದ್ದ, ಇತರರ ಜೊತೆ ಊಟ ಮಾಡುತ್ತಿದ್ದ; ತನ್ನ ತುಂಡಿನಲ್ಲಿ ಬೆಳೆದುದರ ಒಂದು ಭಾಗವನ್ನು ಅದಕ್ಕೆ ಕಾಣಿಕೆ ನೀಡುತ್ತಿದ್ದ. ಯಾವ ಸ್ಪಾರ್ಟಾ ಪ್ರಜೆಯೂ ದಿಕ್ಕಿಲ್ಲದವನಾಗಬಾರದು ಹಾಗೂ ಯಾರೂ ಶ್ರೀಮಂತನಾಗಬಾರದು ಎಂಬುದು ಸರ್ಕಾರದ ಸಿದ್ಧಾಂತವಾಗಿತ್ತು. ಪ್ರತಿಯೊಬ್ಬನೂ ತನ್ನ ತುಂಡಿನಲ್ಲಿ ಬೆಳೆದುದನ್ನು ಅವಲಂಬಿಸಬೇಕಾಗಿತ್ತು, ಅದನ್ನು ಉಡುಗೊರೆಯ ಹೊರತಾಗಿ ಬೇರೆ ರೀತಿಯಲ್ಲಿ ಪರಭಾರೆ ಮಾಡುವಂತಿರಲಿಲ್ಲ. ಯಾರೂ ಚಿನ್ನ ಅಥವಾ ಬೆಳ್ಳಿಯನ್ನು ಹೊಂದುವಂತಿರಲಿಲ್ಲ, ನಾಣ್ಯಗಳನ್ನು ಕಬ್ಬಿಣದಿಂದ ತಯಾರಿಸಲಾಗುತ್ತಿತ್ತು. ಸ್ಪಾರ್ಟಾದ ಸರಳತೆ ಬಲಿಷ್ಠವಾಯಿತು.

ಸ್ಪಾರ್ಟಾದಲ್ಲಿನ ಹೆಂಗಸರ ಸ್ಥಿತಿ ವಿಚಿತ್ರವಾಗಿತ್ತು. ಗ್ರೀಸ್‌ನ ಇತರ ಭಾಗಗಳಲ್ಲಿದ್ದಂತೆ ಗೌರವಸ್ಥ ಮಹಿಳೆಯರನ್ನು ಬೇರೆಯಾಗಿರಿಸುತ್ತಿರಲಿಲ್ಲ. ಹುಡುಗರಿಗೆ ನೀಡುತ್ತಿದ್ದ ದೈಹಿಕ ಶಿಕ್ಷಣವನ್ನು ಹುಡುಗಿಯರಿಗೂ ನೀಡಲಾಗುತ್ತಿತ್ತು; ಅದಕ್ಕೂ ವಿಶಿಷ್ಟವಾದುದೆಂದರೆ, ಹುಡುಗರೂ ಹುಡುಗಿಯರೂ ಒಟ್ಟಿಗೇ ಬತ್ತಲೆಯಾಗಿ ದೈಹಿಕ ಶಿಕ್ಷಣವನ್ನು ಪಡೆಯುತ್ತಿದ್ದುದು. ಅದರಿಂದ ಬಯಸುತ್ತಿದ್ದುದು (ನಾನು ಪ್ಲೂಟಾರ್ಕ್‌ನ 'ಲೈಕರ್ಗಸ್'ನ ನಾರ್ತ್ ಅವರ ಭಾಷಾಂತರದಿಂದ ಉದ್ಧೃತಗೊಳಿಸುತ್ತಿದ್ದೇನೆ):

ಹುಡುಗಿಯರು ಓಡುವುದು, ಕುಸ್ತಿ, ಈಟಿಯೆಸೆತ, ಬಾಣ ಬಿಡುವುದು ಮುಂತಾದ ವ್ಯಾಯಾಮದ ಮೂಲಕ ದೇಹವನ್ನು ಗಟ್ಟಿಗೊಳಿಸಿಕೊಳ್ಳಬೇಕು, ಬಾಣ ಬಿಡುವ ಮತ್ತು ಹರಡಿಕೊಳ್ಳುವ ಫಲವಾಗಿ ಬಲಿಷ್ಠವೂ ವೀರ್ಯವಂತವೂ ಆದರ ದೇಹದಿಂದ ಕೂಡಿ ಕೊನೆಯಲ್ಲಿ ಅವರು ಗರ್ಭಿಣಿಯರಾಗಬಹುದು: ಈ ರೀತಿ ಅವರು ವ್ಯಾಯಾಮಗಳಿಂದ ಶಕ್ತಿ ತುಂಬಿಕೊಂಡರೆ ಹೆರಿಗೆಯ ನೋವನ್ನು ತಡೆದುಕೊಳ್ಳಲು ಸುಲಭವಾಗುತ್ತದೆ.... ಹೀಗೆ ಕನ್ಯೆಯರು ಎಲ್ಲರೆದುರಿಗೆ ಬತ್ತಲೆಯಾಗಿ ಕಾಣಿಸಿಕೊಂಡರೂ ಅವರಲ್ಲಿ ಅಪ್ರಾಮಾಣಿಕತೆ ಇರುವುದಾಗಲೀ ತೋರುವುದಾಗಲೀ ಇರಲಿಲ್ಲ, ಈ ಎಲ್ಲ ಕ್ರೀಡೆಯೂ ಆಟ ಮತ್ತು ಆಟಿಕೆಗಳಿಂದ ಕೂಡಿ ಯೌವನದ ಲಾಂಪಟ್ಯ ಇರುತ್ತಿರಲಿಲ್ಲ.

ಮದುವೆಯಾಗದೆ ಉಳಿಯುವ ಗಂಡಸರು 'ಕಾನೂನಿನಂತೆ ಕುಖ್ಯಾತ'ರಾಗುತ್ತಿದ್ದರು: ತೀವ್ರ ಚಳಿಯಲ್ಲಿಯೂ ಅವರನ್ನು ಕಿರಿಯರು ವ್ಯಾಯಾಮ ಹಾಗೂ ನರ್ತನ ಮಾಡುವ ಜಾಗದ ಹೊರಗೆ ಬತ್ತಲೆಯಾಗಿ ಆ ಕಡೆಯಿಂದ ಈ ಕಡೆ ಈ ಕಡೆಯಿಂದ ಅ ಕಡೆ ತಿರುಗಾಡಬೇಕಾಗಿತ್ತು.

ಸರ್ಕಾರಕ್ಕೆ ಲಾಭದಾಯಕವಲ್ಲದ ಯಾವುದೇ ಭಾವನೆಯನ್ನು ಸ್ತ್ರೀಯರು ತೋರಿಸುವಂತಿರಲಿಲ್ಲ. ಹೇಡಿಯ ಬಗ್ಗೆ ಅವರು ತಿರಸ್ಕಾರವನ್ನು ತೋರಿಸಬಹುದಾಗಿತ್ತು, ಅಂಥವರು ಅವರ ಮಕ್ಕಳೇ ಆಗಿದ್ದರೆ ಅದನ್ನು ಮೆಚ್ಚಿಕೊಳ್ಳಲಾಗುತ್ತಿತ್ತು; ಆದರೆ ನವಜಾತ ಶಿಶುಗಳನ್ನು ದುರ್ಬಲವೆನ್ನುವ ಕಾರಣದಿಂದ ಕೊಂದರೆ ಅಥವಾ ಯುದ್ಧದಲ್ಲಿ ಹೋರಾಡುತ್ತ ಸತ್ತರೆ ಅವರು ದುಃಖಪಡುವಂತಿರಲಿಲ್ಲ. ಅಂತಹವರನ್ನು ಇತರ ಗ್ರೀಕರು ಅಸಾಧಾರಣ ಪರಿಶುದ್ಧರೆಂದು ಪರಿಗಣಿಸುತ್ತಿದ್ದರು; ಅದೇ ವೇಳೆಗೆ, ಗಂಡನಿಂದ ಮಕ್ಕಳನ್ನು ಪಡೆಯದವರು ಮಕ್ಕಳನ್ನು ನೀಡಬಲ್ಲಂತಹ ಬೇರೆ ಗಂಡಸಿನ ಜೊತೆ ಪ್ರಯತ್ನಿಸಲು ಅಜ್ಞಾಪಿಸಲಾಗುತ್ತಿತ್ತು. ಮಕ್ಕಳನ್ನು ಪಡೆಯುವುದನ್ನು ಪ್ರೋತ್ಸಾಹಿಸುವ ಕಾನೂನು ಜಾರಿಯಲ್ಲಿತ್ತು. ಅರಿಸ್ಟಾಟಲ್‌ನ ಪ್ರಕಾರ, ಮೂವರು ಮಕ್ಕಳ ತಂದೆಯು ಸೈನಿಕ ಶಿಕ್ಷಣದಿಂದ ವಿನಾಯಿತಿ ಪಡೆಯುತ್ತಿದ್ದ, ಮತ್ತು ನಾಲಕ್ಕು ಮಕ್ಕಳ ತಂದೆ ಸರ್ಕಾರದ ಎಲ್ಲ ಜವಾಬುದಾರಿಗಳಿಂದ ಸ್ವತಂತ್ರಗೊಳ್ಳುತ್ತಿದ್ದ.

ಸ್ಪಾರ್ಟಾದ ಸಂವಿಧಾನ ಸಂಕೀರ್ಣವಾದುದು. ಎರಡು ಬೇರೆ ಬೇರೆ ವಂಶಗಳ ಇಬ್ಬರು ರಾಜರುಗಳಿದ್ದರು. ವಂಶಪಾರಂಪರ್ಯವಾಗಿ ರಾಜತ್ವ ಮುಂದುವರಿಯುತ್ತಿತ್ತು. ಇಬ್ಬರಲ್ಲಿ ಒಬ್ಬ ರಾಜನು ಯುದ್ಧ ಸಮಯದಲ್ಲಿ ಸೈನ್ಯದ ದಳಪತಿಯಾಗುತ್ತಿದ್ದ, ಆದರೆ ಶಾಂತಿಸಮಯದಲ್ಲಿ ಅವರ ಅಧಿಕಾರ ಮಿತವಾದುದು. ಹಬ್ಬಗಳಲ್ಲಿ ಅವರು ಇತರರಿಗಿಂತ ಎರಡು ಪಟ್ಟು ಆಹಾರವನ್ನು ಪಡೆಯುತ್ತಿದ್ದರು, ಮತ್ತು ಅವರಲ್ಲಿ ಯಾರಾದರೂ ಸತ್ತರೆ ಸಾಮೂಹಿಕ ಸೂತಕವಿರುತ್ತಿತ್ತು. ಅವರು ಹಿರಿಯರ ಪರಿಷತ್ತಿನ

ಸದಸ್ಯರಾಗಿರುತ್ತಿದ್ದರು. ರಾಜರನ್ನೂ ಒಳಗೊಂಡಂತೆ ಅದರಲ್ಲಿ ಮೂವರು ಸದಸ್ಯರಿರುತ್ತಿದ್ದರು. ಇತರ ಇಪ್ಪತ್ತೆಂಟು ಮಂದಿ ಸದಸ್ಯರು ಅರವತ್ತರ ಮೇಲಿನವರು, ಕೇವಲ ಶ್ರೀಮಂತವರ್ಗಕ್ಕೆ ಸೇರಿದ ಅವರನ್ನು ಇಡೀ ಜನಸಂಖ್ಯೆಯು ಜೀವಾವಧಿಗೆ ಆಯ್ಕೆ ಮಾಡುತ್ತಿತ್ತು. ಈ ಪರಿಷತ್ತು ಅಪರಾಧಿಗಳ ವಿಚಾರಣೆ ನಡೆಸುತ್ತಿತ್ತು ಹಾಗೂ ಸಭೆಯ ಮುಂದೆ ಚರ್ಚೆಗೆ ಬರಬೇಕಾದ ವಿಷಯಗಳ ಸಿದ್ಧಪಡಿಸುತ್ತಿತ್ತು. ಈ ಸಭೆಯು ಎಲ್ಲ ಪ್ರಜೆಗಳನ್ನೊಳಗೊಂಡಿರುತ್ತಿತ್ತು; ಅದು ಯಾವುದನ್ನೂ ಆರಂಭಿಸುವಂತಿರಲಿಲ್ಲ, ಸಭೆಯ ಮುಂದೆ ಮಂಡಿಸಲಾದ ವಿಷಯದ ಬಗ್ಗೆ ಹೌದು ಅಥವಾ ಇಲ್ಲ ಎಂದು ತನ್ನ ಅಭಿಪ್ರಾಯವನ್ನು ಸೂಚಿಸಬಹುದಾಗಿತ್ತು. ಅದರ ಒಪ್ಪಿಗೆಯಿಲ್ಲದೆ ಯಾವುದೇ ಕಾನೂನನ್ನು ಜಾರಿಗೊಳಿಸುವಂತಿರಲಿಲ್ಲ. ಆದರೆ ಅದರ ಒಪ್ಪಿಗೆಯು, ಆವಶ್ಯಕವಾದರೂ, ಸಾಕಾಗುತ್ತಿರಲಿಲ್ಲ: ಹಿರಿಯರು ಮತ್ತು ದಂಡಾಧಿಕಾರಿಗಳು (ಮ್ಯಾಜಿಸ್ಟ್ರೇಟ್ಸ್) ನಿರ್ಣಯವನ್ನು ಒಪ್ಪಿಕೊಂಡಾಗ ಮಾತ್ರ ಅದು ಸಿಂಧುವಾಗುತ್ತಿತ್ತು.

ರಾಜರುಗಳ ಜೊತೆಗೆ, ಹಿರಿಯರ ಪರಿಷತ್ತು ಮತ್ತು ಸಭೆಗಳಲ್ಲದೆ, ಸ್ಪಾರ್ಟಾಕ್ಕೆ ವಿಶೇಷವಾದ, ನಾಲ್ಕನೆಯ ಶಾಖೆಯೊಂದು ಸರ್ಕಾರದ ಭಾಗವಾಗಿತ್ತು. ಅದೆಂದರೆ ಐವರು ನ್ಯಾಯಪತಿಗಳು (ಫೈವ್ ಎಫರ್ಸ್). ಇವರನ್ನು ಒಟ್ಟು ಪ್ರಜಾಸಮುದಾಯದಿಂದ ಆಯ್ಕೆ ಮಾಡಲಾಗುತ್ತಿತ್ತು. ಆಯ್ಕೆಯ ವಿಧಾನವನ್ನು ಅರಿಸ್ಟಾಟಲ್ 'ತೀರ ಬಾಲಿಶ' ಎಂದು ಕರೆಯುತ್ತಾನೆ; ಇದನ್ನು ಬರಿ ಲಾಟರಿ ವಿಧಾನ ಎನ್ನುತ್ತಾರೆ. ಇದು ಅದರ ಸಂವಿಧಾನದ ಪ್ರಜಾಪ್ರಭುತ್ವಾತ್ಮಕ ಅಂಶ.[೫೨] ಇದರಲ್ಲಿ ರಾಜರುಗಳಲ್ಲಿ ಸಮತೋಲನವನ್ನು ಕಾಪಾಡಲೆಂಬ ಆಶಯವಿತ್ತು. ಪ್ರತಿ ತಿಂಗಳೂ ರಾಜರುಗಳು ತಾವು ಸಂವಿಧಾನವನ್ನು ರಕ್ಷಿಸುವೆವೆಂಬ ಪ್ರಮಾಣವಚನ ತೆಗೆದುಕೊಳ್ಳಬೇಕಾಗಿತ್ತು, ತಮ್ಮ ಪ್ರಮಾಣವನ್ನು ಕಾಪಾಡಿಕೊಳ್ಳುವವರೆಗೂ ತಾವವರನ್ನು ಬೆಂಬಲಿಸುತ್ತೇವೆಂದು ಎಫರ್ಸ್ ಪ್ರಮಾಣ ಮಾಡುತ್ತಿದ್ದರು. ರಾಜರಲ್ಲೊಬ್ಬ ಯುದ್ಧ ಪರಿಸ್ಥಿತಿಯಂತಹುದರಲ್ಲಿ ಕಾರ್ಯಯಾತ್ರೆ ಕೈಗೊಂಡಾಗ, ಅವನ ನಡತೆಯನ್ನು ಗಮನಿಸಲು ಎಫರ್ಸ್‌ನಲ್ಲಿ ಇಬ್ಬರು ಅವನೊಡನೆ ಹೋಗುತ್ತಿದ್ದರು. ಎಫರ್ಸ್ ಅತ್ಯುಚ್ಚ ನಾಗರಿಕ ನ್ಯಾಯಾಲಯ, ರಾಜರ ಮೇಲೆ ಅವರಿಗೆ ದಂಡಾಧಿಕಾರ ವ್ಯಾಪ್ತಿಯಿರುತ್ತಿತ್ತು.

ಆನಂತರ ಪ್ರಾಚೀನ ಕಾಲದಲ್ಲಿ, ಸ್ಪಾರ್ಟಾದ ಸಂವಿಧಾನವು ಲೈಕರ್ಗಸ್ ಎಂಬ ಹೆಸರಿನ ಒಬ್ಬ ಶಾಸಕನ ಕಾರಣದಿಂದ ಆದುದು ಎಂದು ಭಾವಿಸಲಾಗಿತ್ತು,

---

೫೨. ಸ್ಪಾರ್ಟಾದ ಸಂವಿಧಾನದಲ್ಲಿನ 'ಪ್ರಜಾಪ್ರಭುತ್ವಾತ್ಮಕ' ಅಂಶದ ಬಗ್ಗೆ ಮಾತನಾಡುವಾಗ, ಇಡೀ ಪ್ರಜಾಸಮುದಾಯವು ಆಳುವ ವರ್ಗವಾಗಿದ್ದು, ಜೀತದಾಳುಗಳ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದವರು, ಯಾವ ಅಧಿಕಾರವನ್ನೂ ಪೆರಿಯೋಕೈಗೆ ನೀಡುತ್ತಿರಲಿಲ್ಲವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಅವನು ಕ್ರಿಪೂ ೮೮೫ ರಲ್ಲಿ ತನ್ನ ಕಾಯಿದೆಗಳನ್ನು ಜಾರಿಗೆ ತಂದನೆಂದು ಹೇಳಲಾಗುತ್ತದೆ. ವಾಸ್ತವದಲ್ಲಿ, ಸ್ಪಾರ್ಟಾದ ವ್ಯವಸ್ಥೆಯು ಕ್ರಮಶಃ ಆದದ್ದು, ಅಲ್ಲದೆ ಲೈಕರ್ಗಸ್ ಒಬ್ಬ ಕಲ್ಪಿತ ವ್ಯಕ್ತಿ, ಮೂಲತಃ ಅವನೊಬ್ಬ ದೇವತೆ. ಅವನ ಹೆಸರಿನ ಅರ್ಥ 'ತೋಳ ಓಡಿಸುವವನು' ಎಂದು. ಅವನು ಆರ್ಕೇಡಿಯನ್ ಮೂಲದವನು.

ಸ್ಪಾರ್ಟಾ ಆಡಳಿತವು ಇತರ ಗ್ರೀಕರಲ್ಲಿ ಮೆಚ್ಚಿಕೆಯನ್ನುಂಟು ಮಾಡಿತ್ತೆಂಬುದು ನಮ್ಮಲ್ಲಿ ಅಚ್ಚರಿ ತರುತ್ತದೆ. ಮೂಲತಃ, ಅದು ಇತರ ನಗರಗಳಿಗಿಂತ ಅಲ್ಪ ಪ್ರಮಾಣದ ವ್ಯತ್ಯಾಸ ಹೊಂದಿತ್ತು, ಆನಂತರ ಬದಲಾಯಿತು. ಆ ಹಿಂದಿನ ದಿನಗಳಲ್ಲಿ ಬೇರೆಲ್ಲ ಕಡೆಯಂತೆಯೇ ಅದು ಕವಿಗಳನ್ನೂ ಕಲೆಗಾರರನನ್ನೂ ಸೃಷ್ಟಿಸಿತ್ತು. ಆದರೆ ಕ್ರಿಪೂ ಏಳನೆಯ ಶತಮಾನದ ಹೊತ್ತಿಗೆ, ಅಥವಾ ಇನ್ನೂ ಈಚೆಗೆ, ಅದರ ಸಂವಿಧಾನವು (ಲೈಕರ್ಗಸ್ ಮಾಡಿದ್ದೆಂದು ಸುಳ್ಳೇ ಹೇಳಲಾದ) ನಾವೀಗ ಪರಿಶೀಲಿಸುತ್ತಿರುವ ಸ್ವರೂಪದಲ್ಲಿ ಹರಳುಗಟ್ಟಿತು; ಮಿಕ್ಕೆಲ್ಲವನ್ನೂ ಯುದ್ಧದ ಯಶಸ್ಸಿಗಾಗಿ ಬಲಿಗೊಡಲಾಯಿತು. ಹೀಗಾಗಿ ಗ್ರೀಸ್ ಜಗತ್ತಿನ ನಾಗರಿಕತೆಗೆ ಏನೇನು ಕೊಡುಗೆ ನೀಡಿತ್ತೋ ಅದರ ಭಾಗವಾಗಲು ಸ್ಪಾರ್ಟಾ ಸೋತಿತು. ಗೆದ್ದಿದ್ದರೆ ನಾಜಿ ಪಡೆ ನಮಗೆ ಎಂತಹ ಸರ್ಕಾರವನ್ನು ರಚಿಸುತ್ತಿತ್ತೋ ಸ್ಪಾರ್ಟಾ ಅದರ ಒಂದು ಕಿರು ಮಾದರಿ ದೇಶವಾಗಿ ಕಾಣುತ್ತದೆ. ಗ್ರೀಕರಿಗೆ ಅದು ಬೇರೆ ರೀತಿಯಾಗಿ ಕಾಣಿಸಿತು. ಬರಿ ಅವರು ಹೇಳುವಂತೆ:

> ಕ್ರಿಪೂ ಐದನೆಯ ಶತಮಾನದಲ್ಲಿ ಅಥೆನ್ಸ್ ಅಥವಾ ಮಿಲೆಟಸ್‌ನಿಂದ ಬಂದ ಅಪರಿಚಿತನೊಬ್ಬ ನಗರದ ನಿರಾಡಂಬರ ಗೋಡೆಯಂತಿದ್ದ ಬಿಡಿ ಬಿಡಿಯಾಗಿ ಹಳ್ಳಿಗಳನ್ನು ಸಂದರ್ಶಿಸಿದ್ದರೆ, ಪುರಾತನ ಕಾಲವೊಂದಕ್ಕೆ ರವಾನೆಗೊಂಡಂತೆ ಭಾವಿಸುತ್ತಿದ್ದ. ಆಗ ಜನರು ಹೆಚ್ಚು ಧೈರ್ಯವಂತರೂ, ಉತ್ತಮರೂ ಮತ್ತು ಸರಳರೂ, ಶ್ರೀಮಂತಿಕೆಯಿಂದ ಕೆಡದವರೂ, ವಿಚಾರಗಳಿಂದ ವಿಚಲಿತರಾಗದರೂ ಆಗಿದ್ದರು. ರಾಜಕೀಯ ವಿದ್ಯಮಾನಗಳ ಬಗ್ಗೆ ಯೋಚಿಸುತ್ತಿದ್ದ ಪ್ಲೇಟೋನಂತಹ ತತ್ವಜ್ಞಾನಿಗೆ, ಸ್ಪಾರ್ಟಾ ದೇಶವು ಆದರ್ಶ ಸಾಧಿಸುವ ಅತ್ಯಂತ ಹತ್ತಿರದ ದಾರಿ ಎನಿಸಿತು. ಸಾಮಾನ್ಯ ಗ್ರೀಕರು ಅದನ್ನು ಸದೃಢವಾದ ಸರಳ ಸುಂದರ ವ್ಯವಸ್ಥೆಯೆಂಬಂತೆ, ಡೋರಿಯನ್ ನಗರವು ತನ್ನ ಸ್ವಂತ ಮನೆಗಿಂತಲೂ ಹೆಚ್ಚು ಉದಾತ್ತವಾದರೂ ವಾಸಿಸಲು ಯೋಗ್ಯವಲ್ಲದ ಭವ್ಯವಾಗಿ ಡೋರಿಯನ್ ದೇವಸ್ಥಾನದಂತೆ ಕಾಣುತ್ತಿತ್ತು.[೫೩]

ಇತರ ಗ್ರೀಕರು ಸ್ಪಾರ್ಟಾ ಬಗ್ಗೆ ಮೆಚ್ಚುಗೆಯನ್ನು ಹೊಂದಲು ಒಂದು ಕಾರಣವೆಂದರೆ ಅದರ ಸ್ಥಿರತೆ. ಮಿಕ್ಕೆಲ್ಲ ಗ್ರೀಕ್ ನಗರಗಳಲ್ಲಿ ಬಂಡಾಯವಿರುತ್ತಿದ್ದವು, ಆದರೆ ಕ್ರಮೇಣ ಎಫರ್‌ಸ್‌ರ ಅಧಿಕಾರ ಹೆಚ್ಚಾಯಿತು, ಆದರೆ ಇದು ಹಿಂಸೆಯಿಂದಲ್ಲ

೫೩. 'ಹಿಸ್ಟರಿ ಆಫ್ ಗ್ರೀಕ್ಸ್', ಭಾಗ, ಪು. ೧೪೧.

ಕಾನೂನುಬದ್ಧವಾಗಿ ನಡೆಯಿತು ಎಂಬಷ್ಟನ್ನು ಬಿಟ್ಟರೆ, ಸ್ಪಾರ್ಟಾದ ಸಂವಿಧಾನವು ಶತಮಾನಗಳ ಕಾಲ ಬದಲಾಗದೆ ಉಳಿಯಿತು.

ಬಹಳ ದೀರ್ಘ ಕಾಲದವರೆಗೆ, ಸ್ಪಾರ್ಟನ್ನರು ಅಜೇಯ ಯೋಧರ ಸಮುದಾಯವನ್ನು ನಿರ್ಮಿಸಬೇಕೆಂಬ ತಮ್ಮ ಮೂಲ ಉದ್ದೇಶದಲ್ಲಿ ಬದಲಾಗಲಿಲ್ಲ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಥರ್ಮೋಪೈಲೇ ಯುದ್ಧದಲ್ಲಿ (ಕ್ರಿಪೂ ೪೮೦), ತಾಂತ್ರಿಕವಾಗಿ ಸೋಲಾದರೂ, ಅವರ ಶೌರ್ಯದ ಅತ್ಯುತ್ತಮ ಉದಾಹರಣೆ. ಥರ್ಮೋಪೈಲೇ ಎಂಬುದು ಪರ್ವತಗಳಲ್ಲಿನ ಇಕ್ಕಟ್ಟಾದ ಒಂದು ಕಣಿವೆ, ಅಲ್ಲಿ ಪರ್ಷಿಯನ್ ಸೈನ್ಯವನ್ನು ತಡೆದು ನಿಲ್ಲಿಸಬಹುದೆಂದು ನಿರೀಕ್ಷಿಸಲಾಗಿತ್ತು. ಮುನ್ನೂರು ಮಂದಿ ಸ್ಪಾರ್ಟನ್ನರು ತಮ್ಮ ಸಲಕರಣೆಗಳೊಂದಿಗೆ ನೇರ ದಾಳಿಯನ್ನು ಹಿಮ್ಮೆಟ್ಟಿಸಿದರು. ಆದರೆ ಕೊನೆಗೆ ಪರ್ಷಿಯನ್ನರು ಪರ್ವತಪ್ರದೇಶವನ್ನು ಬಳಸಿ ಬಂದು ಎರಡೂ ಕಡೆಯಿಂದ ಗ್ರೀಕರ ಮೇಲೆ ಬಿದ್ದರು. ಪ್ರತಿಯೊಬ್ಬ ಸ್ಪಾರ್ಟನ್ನನೂ ಸ್ಥಳದಲ್ಲಿಯೇ ಸತ್ತ. ಅವರಲ್ಲಿ ಇಬ್ಬರು ತಾತ್ಕಾಲಿಕ ಕುರುಡುಂಟುಮಾಡುವ ಕಣ್ಣಿನ ಕಾಯಿಲೆಯಿಂದಾಗಿ ಯುದ್ಧದಿಂದ ದೂರ ಉಳಿದಿದ್ದರು. ಅವರಲ್ಲೊಬ್ಬ ತಾನು ಜೀತದಾಳಗಳ ನೇತೃತ್ವ ವಹಿಸಿ ಹಟ ತೊಟ್ಟು, ಯುದ್ಧದಲ್ಲಿ ಸತ್ತ; ಇನ್ನೊಬ್ಬ, ಅರಿಸ್ಟೋಡೆಮಸ್, ತನಗೆ ಯುದ್ಧಮಾಡಲಾಗದಷ್ಟು ಕಾಯಿಲೆಯೆಂದು ಹೇಳಿ ಯುದ್ಧದಲ್ಲಿ ಪಾಲುಗೊಳ್ಳಲಿಲ್ಲ. ಅವನು ಸ್ಪಾರ್ಟಾಕ್ಕೆ ಹಿಂದಿರುಗಿದಾಗ, ಯಾರೂ ಅವನೊಂದಿಗೆ ಮಾತನಾಡಲಿಲ್ಲ; ಅವನನ್ನು 'ಹೇಡಿ ಅರಿಸ್ಟೋಡೆಮಸ್' ಎಂದು ಕರೆದರು. ಒಂದು ವರ್ಷದ ಬಳಿಕ, ಅವನು ಸ್ಪಾರ್ಟನ್ನರು ಗೆದ್ದ ಪ್ಲಾಟಿಯ ಯುದ್ಧದಲ್ಲಿ ಭಾಗಿಯಾಗಿ ಶೌರ್ಯದಿಂದ ಹೋರಾಡಿ ಸತ್ತು ತನ್ನ ಕಳಂಕವನ್ನು ತೊಡೆದುಕೊಂಡ.

ಯುದ್ಧದ ಬಳಿಕ, ಸ್ಪಾರ್ಟನ್ನರು ಥರ್ಮೋಪೈಲೇಯಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಿ ಅದರ ಮೇಲೆ ಇಷ್ಟನ್ನು ಬರೆದರು: 'ಅಪರಿಚಿತನೇ, ತಮ್ಮ ಆಜ್ಞೆಗನುಸಾರವಾಗಿ ನಾವಿಲ್ಲಿ ಮಲಗಿದ್ದೇವೆ ಎಂದು ಲ್ಯಾಸೆಡೆಮೋನಿಯನ್ನರಿಗೆ ತಿಳಿಸು.'

ಬಹು ದೀರ್ಘ ಕಾಲ, ತಾವು ನೆಲದ ಮೇಲೆ ಅಜೇಯರೆಂಬುದನ್ನು ಸ್ಪಾರ್ಟನ್ನರು ನಿಜ ಮಾಡಿದರು. ಕ್ರಿಪೂ ೩೭೧ ರವರೆಗೂ ಅವರು ತಮ್ಮ ಸಾರ್ವಭೌಮತೆಯನ್ನುಳಿಸಿಕೊಂಡು, ಆದರೆ ಅವರು ಆ ವರ್ಷ ಲ್ಯೂಕ್ಟ್ರ ಯುದ್ಧದಲ್ಲಿ ಥೀಬನ್ನರಿಂದ ಸೋಲನನ್ನನುಭವಿಸಿದರು. ಇದು ಅವರ ಸೈನಿಕ ಮಹತ್ತಿನ ಕೊನೆಯಾಯಿತು.

ಯುದ್ಧವಲ್ಲದೆ, ಸ್ಪಾರ್ಟಾದ ವಾಸ್ತವತೆಯು ಸಿದ್ಧಾಂತದಂತೆ ಇರಲಿಲ್ಲ. ಅದರ ಉನ್ನತಿಯ ಕಾಲದಲ್ಲಿ ಬದುಕಿದ್ದ ಹೆರೋಡೊಟಸ್, ಯಾವ ಸ್ಪಾರ್ಟನ್ನನೂ ಲಂಚದ ಆಮಿಷವನ್ನು ಬಿಡಲಿಲ್ಲ ಎಂದು ಆಶ್ಚರ್ಯಕರವಾಗಿ ಹೇಳುತ್ತಾನೆ. ಶ್ರೀಮಂತಿಕೆಯ

ಬಗ್ಗೆ ತಿರಸ್ಕಾರ ಹಾಗೂ ಸರಳ ಜೀವನದ ಒಲವು ಇವುಗಳು ಸ್ಪಾರ್ಟಾ ಶಿಕ್ಷಣದಲ್ಲಿ ಅಳವಡಿಸಿಕೊಂಡಿದ್ದ ಒಂದು ಮುಖ್ಯ ಅಂಶವಾಗಿದ್ದರೂ ವಾಸ್ತವ ಹೀಗಿತ್ತು. ಸ್ಪಾರ್ಟಾ ಹೆಂಗಸರು ಪರಿಶುದ್ಧರಾಗಿದ್ದರೆಂದು ಹೇಳುತ್ತಾರಾದರೂ, ಹೆಸರಾಂತ ರಾಜತ್ವವೊಂದರ ಉತ್ತರಾಧಿಕಾರಿಯನ್ನು ಅವನು ತಾಯಿಯು ಗಂಡನಿಂದ ಪಡೆದ ಮಗನಲ್ಲವೆಂಬ ಕಾರಣದಿಂದ ತಿರಸ್ಕರಿಸಲಾಗುತ್ತಿತ್ತು. ಸ್ಪಾರ್ಟನ್ನರು ಗಟ್ಟಿಯಾದ ದೇಶಭಕ್ತರು ಎನ್ನಲಾಗುತ್ತದಾದರೂ, ಪ್ಲೇಟಿಯ ಯುದ್ಧದಲ್ಲಿ ಗೆದ್ದಿದ್ದ ರಾಜ ಪೌಸನಿಯಾಸ್ ಕೊನೆಯಲ್ಲಿ ಕ್ಸರ್‌ಕ್ಸ್‌ನಿಂದ ಹಣ ಪಡೆಯುತ್ತಿದ್ದವನೆನ್ನಿಸಿಕೊಂಡ. ಥಾಳಾಗಿ ಕಾಣುವ ಇಂತಹ ಸಂಗತಿಗಳಲ್ಲದೆ, ಸ್ಪಾರ್ಟಾದ ಧೋರಣೆಯು ಸದಾ ಕಾಲ ಕ್ಷುಲ್ಲಕವೂ ಪ್ರಾದೇಶಿಕವೂ ಆಗಿದ್ದುದು. ಅಥೆನ್ಸ್ ಏಷ್ಯಾ ಮೈನರ್ ಹಾಗೂ ಅಕ್ಕಪಕ್ಕದ ದ್ವೀಪಗಳ ಗ್ರೀಕರನ್ನು ಪರ್ಷಿಯನ್ನರಿಂದ ಬಿಡುಗಡೆಗೊಳಿಸಿದಾಗ, ಸ್ಪಾರ್ಟಾ ದೂರ ನಿಂತಿತ್ತು; ಪೆಲೋಪೊನ್ನೆಸಸ್ ಎಲ್ಲಿಯವರೆಗೆ ಸುರಕ್ಷಿತವಾಗಿತ್ತೋ ಅಲ್ಲಿಯವರೆಗೆ ಇತರ ಗ್ರೀಕರ ಹಣೆಬರಹ ಎಂದರೆ ಅನಾದರಕ್ಕೊಳಗಾದುದು. ಗ್ರೀಕ್ ಜಗತ್ತಿನ ಒಕ್ಕೂಟದ ಪ್ರತಿ ಪ್ರಯತ್ನವೂ ಸ್ಪಾರ್ಟಾದ ಪ್ರತ್ಯೇಕತಾವಾದದಿಂದ ವಿಫಲಗೊಂಡಿತು.

ಸ್ಪಾರ್ಟಾದ ಪತನದ ನಂತರ ಜೀವಿಸಿದ್ದ ಅರಿಸ್ಟಾಟಲ್ ಅದರ ಸಂವಿಧಾನದ ಬಗ್ಗೆ ಅತೀವ ಅಸಮಾಧಾನದ ಅಭಿಪ್ರಾಯವನ್ನು ನೀಡುತ್ತಾನೆ.[೫೪] ಅವನು ಹೇಳುವುದು ಇತರರು ಹೇಳುವುದಕ್ಕಿಂತ ಎಷ್ಟು ಭಿನ್ನವಾದುದೆಂದರೆ, ಅವನು ಅದೇ ಸ್ಥಳದ ಬಗ್ಗೆ ಹೇಳುತ್ತಿರುವನೆಂದು ನಂಬುವುದು ಕಷ್ಟ. ಉದಾಹರಣೆಗೆ, 'ಇಡೀ ದೇಶವನ್ನು ಗಟ್ಟಿಯಾಗಿಯೂ ಸಂಯಮಪೂರ್ಣವಾಗಿಯೂ ಮಾಡಬೇಕೆಂದು ಶಾಸಕ ಬಯಸಿ, ತನ್ನ ವಿಚಾರವನ್ನು ಗಂಡಸರ ವಿಷಯದಲ್ಲಿ ಜಾರಿಗೆ ತಂದ, ಆದರವನು ಹೆಂಗಸರನ್ನು ನಿರ್ಲಕ್ಷಿಸಿದ, ಅವರು ಎಲ್ಲ ಬಗೆಯ ಲೋಲುಪತೆ ಹಾಗೂ ವೈಭವಗಳಲ್ಲಿ ಬದುಕುತ್ತಿದ್ದರು. ಅಂತಹ ಪರಿಸ್ಥಿತಿಯ ಪರಿಣಾಮವೆಂದರೆ, ಅದರಲ್ಲೂ, ಯುದ್ಧೋತ್ಸಾಹದ ಸಮುದಾಯಗಳಲ್ಲಿರುವಂತೆ ಪ್ರಜೆಗಳು ತಮ್ಮ ಹೆಂಡಂದಿರ ವ್ಯಾಪ್ತಿಯಲ್ಲಿರುವವರು ಸಂಪತ್ತಿಗೆ ಅತೀವ ಬೆಲೆ ಕೊಡುವಂತಾಯಿತು .. .. ಪ್ರತಿದಿನದ ಬದುಕಿನಲ್ಲಿ ಪ್ರಯೋಜನಕ್ಕೆ ಬಾರದ ಆದರೆ ಯುದ್ಧದಲ್ಲಿ ಬೇಕಾದ ಧೈರ್ಯದ ವಿಷಯದಲ್ಲಿಯೂ, ಲ್ಯಾಸೆಡೇಮೋನಿಯನ್ ಸ್ತ್ರೀಯರ ಪ್ರಭಾವವು ತೀರ ಕೆಡುಕಿನದಾಗಿತ್ತು .. .. ಲ್ಯಾಸೆಡೇಮೋನಿಯನ್ ಸ್ತ್ರೀಯರ ಸ್ವೈರವು ಹಿಂದಿನ ಕಾಲದಿಂದಲೂ ಇತ್ತು, ಇದನ್ನಲ್ಲದೆ ಮತ್ತೇನನ್ನು ತಾನೇ ನಿರೀಕ್ಷಿಸಬಹುದು. ಯಾಕೆಂದರೆ .. .. ಶ್ರದ್ಧೆಯ ಪ್ರಕಾರ, ಲೈಕರ್ಗಸ್ ಹೆಂಗಸರನ್ನು ತನ್ನ ಕಾನೂನಿನಡಿ ತರಬೇಕೆಂದಾಗ ಅವರು ಬಂಡೆದ್ದ ಕಾರಣದಿಂದ ಅವನು ಸುಮ್ಮನಾದ.'

---

೫೪. 'ಪಾಲಿಟಿಕ್ಸ್', ಭಾಗ ೨, ಪು. ೯ (೧೨೬೯ಬಿ-೧೨೭೦ಎ)

ಅವನು ಮುಂದೆ ಸ್ಪಾರ್ಟನ್ನರ ದುರಾಶೆಯನ್ನು ಕುರಿತು ಹೇಳುತ್ತಾನೆ, ಅದಕ್ಕೆ ಕಾರಣ ಅವನ ಪ್ರಕಾರ ಆಸ್ತಿಯ ಅಸಮಾನ ಹಂಚಿಕೆ. ಭೂಮಿಯ ತುಂಡುಗಳನ್ನು ಮಾರಾಟ ಮಾಡಲಾಗದಿದ್ದರೂ, ಅದನ್ನು ಕೊಡಬಹುದಾಗಿತ್ತು ಅಥವಾ ಬಿಟ್ಟುಕೊಡಬಹುದಾಗಿತ್ತು. ಎಲ್ಲ ಭೂಮಿಯ ಐದನೇ ಎರಡು ಭಾಗ ಹೆಂಗಸರಿಗೆ ಸೇರಿತ್ತು ಎಂದೂ ಅವನು ಸೇರಿಸುತ್ತಾನೆ. ಅದರ ಪರಿಣಾಮವೆಂದರೆ ಪ್ರಜೆಗಳ ಸಂಖ್ಯೆ ತುಂಬ ಇಳಿಮುಖವಾದುದು; ಹಿಂದೆ ಥೀಬೀಸ್‌ರಿಂದ ಸೋಲು ಕಾಣುವವರೆಗೆ ಹತ್ತು ಸಾವಿರವಿದ್ದ ಕಡೆ, ಅದು ಒಂದು ಸಾವಿರಕ್ಕಿಂತ ಕಡಿಮೆಯಾಯಿತು.

ಸ್ಪಾರ್ಟನ್ ಸಂವಿಧಾನದ ಪ್ರತಿ ಅಂಶವನ್ನೂ ಅರಿಸ್ಟಾಟಲ್ ಟೀಕಿಸುತ್ತಾನೆ. ಅವನ ಪ್ರಕಾರ, ಕೆಲವು ವೇಳೆ ಎಫರ್ಸ್ ತೀರ ಬಡವರಾಗಿರುತ್ತಿದ್ದರು, ಹೀಗಾಗಿ ಅವರನ್ನು ಲಂಚಕೋರರನ್ನಾಗಿ ಮಾಡುವುದು ಸುಲಭವಾಗಿತ್ತು; ಅವರ ಅಧಿಕಾರ ಎಷ್ಟು ಹಿರಿದೆಂದರೆ, ಸಂವಿಧಾನವನ್ನು ಪ್ರಜಾಪ್ರಭುತ್ವಪರವಾಗಿ ಮಾರ್ಪಡಿಸಲು ರಾಜರುಗಳ ಕೂಡ ಅವರನ್ನು ಓಲೈಸಬೇಕಾಗಿತ್ತು. ಎಫರ್ಸ್‌ರಿಗೆ ಅತೀವ ಸ್ವಾತಂತ್ರ್ಯವಿದ್ದು, ಸಾಮಾನ್ಯ ಪ್ರಜೆಯ ಮೇಲಿನ ನಿರ್ಬಂಧವು ತಾಳಲಾರದಾಗಿದ್ದು ಅದನ್ನು ಮರೆಯಲು ರಹಸ್ಯವಾಗಿ ಇಂದ್ರಿಯಲೋಲುಪತೆಯ ಕ್ರಿಯೆಯಲ್ಲಿ ತೊಡಗಿಕೊಳ್ಳುವಂತಹ ಪರಿಸ್ಥಿತಿಯಿದ್ದರೂ, ಅವರು ಮಾತ್ರ ಸಂವಿಧಾನದ ಆಶಯಗಳ ವಿರುದ್ಧ ಜೀವನ ನಡೆಸಲು ಸಹಾಯಕವಾಗುವಂತಿತ್ತು.

ಸ್ಪಾರ್ಟಾ ಪತನದ ಹಾದಿಯಲ್ಲಿದ್ದಾಗ ಅರಿಸ್ಟಾಟಲ್ ಬರೆದ, ಆದರೆ ತಾನು ಕೆಟ್ಟುದೆಂದು ಹೇಳುತ್ತಿರುವ ಕೆಲವು ಅಂಶಗಳು ಹಿಂದಿನಿಂದಲೂ ಇವೆ ಎಂಬುದನ್ನು ಸ್ಪಷ್ಟಪಡಿಸಿದ. ಅವನ ಧಾಟಿಯು ಎಷ್ಟು ನೇರ ಮತ್ತು ವಾಸ್ತವಿಕವಾದುದೆಂದರೆ, ಅವನನ್ನು ನಂಬದಿರುವುದು ಕಷ್ಟ, ಕಾನೂನಿನಲ್ಲಿನ ಅತಿ ಕಾಠಿಣ್ಯದ ಫಲಗಳ ಬಗೆಗಿನ ಆಧುನಿಕ ಅನುಭವಗಳ ರೀತಿಯಲ್ಲಿಯೇ ಅದೂ ಇದೆ. ಆದರೆ ಜನರ ಮನಸ್ಸಿನಲ್ಲಿ ಉಳಿದು ಬಂದಿದ್ದುದು ಅರಿಸ್ಟಾಟಲ್‌ನ ಸ್ಪಾರ್ಟಾ ಅಲ್ಲ, ಅದು ಪ್ಲೂಟಾರ್ಕ್‌ನ ಪೌರಾಣಿಕ ಸ್ಪಾರ್ಟಾ ಹಾಗೂ ಮತ್ತು ಪ್ಲೇಟೋನ 'ರಿಪಬ್ಲಿಕ್'ನಲ್ಲಿನ ತಾತ್ವಿಕ ಸ್ಪಾರ್ಟಾ. ಶತಮಾನಗಳ ಕಾಲ ಯುವಕರು ಈ ಕೃತಿಗಳನ್ನು ಓದುತ್ತಿದ್ದರು, ಅವರ ಮನಸ್ಸಿನಲ್ಲಿ ಲೈಕರ್ಗಸ್‌ರೋ ಅಥವಾ ತತ್ವಜ್ಞಾನಿ ರಾಜರೋ ಆಗುವ ಆದರ್ಶ ಉಳಿದು ಬಂತು. ಇದರ ಫಲವಾದ ಆದರ್ಶ ಮತ್ತು ಅಧಿಕಾರದಾಹ ಜನರನ್ನು ಮತ್ತೆ ಮತ್ತೆ ದಾರಿ ತಪ್ಪಿಸಿತು, ಈಗಲೂ ಹಾಗೆಯೇ ಮಾಡುತ್ತಿದೆ.

ಮಧ್ಯಕಾಲೀನ ಹಾಗೂ ಆಧುನಿಕ ಓದುಗರ ಮನಸ್ಸಿನಲ್ಲಿ ಸ್ಪಾರ್ಟಾ ಬಗೆಗಿನ ಪೌರಾಣಿಕತೆಯು ಮುಖ್ಯವಾಗಿ ಪ್ಲೂಟಾರ್ಕ್‌ನಿಂದಾಗಿ ನಿಂತುಬಿಟ್ಟಿತು. ಅವನು ಬರೆದಾಗ ಸ್ಪಾರ್ಟಾ ರಮ್ಯವಾದ ಹಿಂದಿನ ಕಾಲಕ್ಕೆ ಸೇರಿಬಿಟ್ಟಿತ್ತು, ಅದರ ಮಹಾಯುಗವು ಅವನ ಕಾಲಕ್ಕೆ ನಮಗೆ ಕೊಲಂಬಸ್‌ನ ಕಾಲ ಹೇಗೋ ಹಾಗೆಯೇ

ತುಂಬ ದೂರದಲ್ಲಿತ್ತು. ಸಾಂಸ್ಥಿಕ ಇತಿಹಾಸಕಾರರು ಅವನು ಹೇಳಿದುದನ್ನು ಬಹು ಎಚ್ಚರಿಕೆಯಿಂದ ವಿಶ್ಲೇಷಿಸಬೇಕು, ಆದರೆ ಪೌರಾಣಿಕತೆಯ ಇತಿಹಾಸಕಾರರಿಗೆ ಅದು ಬಹು ಮುಖ್ಯವಾದುದೇ ಸರಿ. ಅದು ಸದಾ ಕಾಲ ಗ್ರೀಸ್ ಜನರ ಕಲ್ಪನೆ, ಆದರ್ಶಗಳು ಮತ್ತು ಭರವಸೆಗಳ ಮೇಲೆ ಬೀರಿದ ಪರಿಣಾಮದ ಮೂಲಕ ಜಗತ್ತಿನ ಮೇಲೆ ಪ್ರಭಾವ ಬೀರಿದೆಯೇ ಹೊರತು ನೇರವಾದ ರಾಜಕೀಯಾಧಿಕಾರದ ಮೂಲಕವಲ್ಲ. ಅನೇಕ ಆಧುನಿಕ ಸಂಹಿತೆಯ ಆಕರಗಳಾದ ಕಾನೂನುಗಳ ರೀತಿಯಲ್ಲಿ ರೋಮ್ ಮಾಡಿದ ಪ್ರಭಾವವು ಇನ್ನೂ ಉಳಿದಿದೆ, ಆದರೆ ಇವುಗಳನ್ನು ಮುಖ್ಯವಾಗಿ ಮಾಡಿದ್ದು ರೋಮನ್ ಸೈನ್ಯಗಳು. ಧೀಮಂತ ಹೋರಾಟಗಾರರಾದ ಗ್ರೀಕ್‌ರು ಪಡೆದದ್ದು ಕೆಲವೇ ಗೆಲವುಗಳನ್ನು, ಯಾಕೆಂದರೆ ಅವರು ತಮ್ಮ ಸೈನ್ಯವನ್ನು ಮುಖ್ಯವಾಗಿ ಪರಸ್ಪರರ ವಿರುದ್ಧ ಬಳಸಿದರು. ಸನಿಹ ಪೂರ್ವದಲ್ಲಿ ಗ್ರೀಕ್‌ತನವು ಹರಡಲು ಹಾಗೂ ಈಜಿಪ್ಟ್, ಸಿರಿಯ ಮತ್ತು ಏಷ್ಯಾ ಮೈನರ್‌ನ ದ್ವೀಪಗಳಲ್ಲಿ ಗ್ರೀಕ್ ಸಾಹಿತ್ಯ ಭಾಷೆಯಾಗಿ ಮಾಡುವುದು ಅರೆಬರ್ಬರನಾದ ಅಲೆಗ್ಸಾಂಡರ್‌ನ ಕೆಲಸವಾಯಿತು. ಗ್ರೀಕರು ಈ ಕೆಲಸವನ್ನೆಂದೂ ಮಾಡಲಾರದವರಾಗಿದ್ದರು, ಅವರ ಸೈನಿಕ ಶಕ್ತಿ ಕಡಿಮೆಯಿದ್ದುದರಿಂದಲ್ಲ, ಅವರ ರಾಜಕೀಯ ಅಸಂಸಕ್ತಿಯಲ್ಲಿ ಅಸಮರ್ಥರಾಗಿದ್ದುದರಿಂದ. ಗ್ರೀಕ್‌ನ ರಾಜಕೀಯ ವಾಹನಗಳು ಯಾವತ್ತೂ ಗ್ರೀಕೇತರವಾದವು; ಆದರೆ ಅನ್ಯ ಅವಕಾಶಗಳ ಮೇಲೆ ಸ್ಫೂರ್ತಿದಾಯಕ ಪರಿಣಾಮವನ್ನು ಬೀರಿದುದು ಗ್ರೀಕ್ ಪ್ರತಿಭೆ, ಇದರಿಂದಾಗಿ ತಾವು ಗೆದ್ದವರ ಸಂಸ್ಕೃತಿಯನ್ನು ಅವರು ಹರಡುವಂತಾಯಿತು.

ಜಗತ್ತಿನ ಇತಿಹಾಸಕಾರನಿಗೆ ಮುಖ್ಯವಾದುದೆಂದರೆ ಗ್ರೀಕ್ ನಗರಗಳ ನಡುವಣ ಕ್ಷುಲ್ಲಕ ಯುದ್ಧಗಳಲ್ಲ, ಅಥವಾ ಪಕ್ಷ ಅಧಿಕಾರಕ್ಕಾಗಿನ ಕ್ಷುದ್ರ ಕಚ್ಚಾಟಗಳಲ್ಲ, ಸಂಕ್ಷಿಪ್ತ ಘಟನೆ ಕೊನೆಗೊಂಡಾಗ ಮನುಸಂಕುಲ ಉಳಿಸಿಕೊಂಡ ನೆನಪುಗಳು – ದಿನಪೂರ್ತಿ ಗಾಳಿ ಹಿಮಗಳ ನಡುವೆ ಹೆಣಗಬೇಕಾದ ಕಷ್ಟಕರ ದಿನಗಳೆವ ಪರ್ವತಾರೋಹಿಯ ನೆನಪಿನಲ್ಲಿ ಉಳಿಯುವ ಆಲ್ಪ್ಸ್‌ನಲ್ಲಿನ ಭವ್ಯ ಸೂರ್ಯೋದಯದಂತೆ. ದಿನಗಳೆದಂತೆ ಮಸುಕಾಗುವ ಈ ನೆನಪುಗಳು, ಬೆಳಗಿನ ಜಾವದಲ್ಲಿ ವಿಶಿಷ್ಟವಾಗಿ ಹೊಳೆಯುವ ಕೆಲವು ಶಿಖರಗಳ ಬಿಂಬಗಳನ್ನು ಜನರ ಮನಸ್ಸಿನಲ್ಲುಳಿಸಿ, ಮೋಡಗಳ ಹಿಂದೆ ಕಾಂತಿಯಿದ್ದು ಯಾವಾಗ ಬೇಕಾದರೂ ಕಾಣಿಸಿಕೊಳ್ಳಬಹುದೆಂಬ ನಿರೀಕ್ಷೆಯನ್ನು ಜೀವಂತವಾಗಿರಿಸುತ್ತದೆ. ಇವರಲ್ಲೆಲ್ಲ, ಕ್ರೈಸ್ತಮತಧರ್ಮದ ಮೊದಲಲ್ಲಿ ಅತ್ಯಂತ ಮುಖ್ಯನಾದವನು ಪ್ಲೇಟೋ, ಮತ್ತು ಮಧ್ಯಕಾಲೀನ ಚರ್ಚ್ ವಿಷಯದಲ್ಲಿ ಅರಿಸ್ಟಾಟಲ್; ಆದರೆನಂತರ, ಜನರು ರಾಜಕೀಯ ಸ್ವಾತಂತ್ರ್ಯಕ್ಕೆ ಬೆಲೆ ಕೊಡಲಾರಂಭಿಸಿದಂದಿನಿಂದ, ಅವರು ಮುಖ ಮಾಡಿದ್ದು ಎಲ್ಲರಿಗಿಂತ ಹೆಚ್ಚಾಗಿ ಪ್ಲೂಟಾರ್ಕ್‌ನ ಕಡೆಗೆ. ಹದಿನೆಂಟನೆಯ ಶತಮಾನದ ಇಂಗ್ಲಿಷ್ ಮತ್ತು ಫ್ರೆಂಚ್ ಉದಾರವಾದಿಗಳ ಮೇಲೂ,

ಸಂಯುಕ್ತ ಸಂಸ್ಥಾನಗಳ ಸ್ಥಾಪಕರ ಮೇಲೂ ಅವನು ಅಗಾಧ ಪ್ರಭಾವವನ್ನು ಬೀರಿದ; ಅವನು ಜರ್ಮನಿಯ ರೊಮ್ಯಾಂಟಿಕ್ ಚಳವಳಿಯ ಮೇಲೂ ಪ್ರಭಾವ ಬೀರಿದ, ಮತ್ತು ಪರೋಕ್ಷ ಹಾದಿಗಳಲ್ಲಿ ಜರ್ಮನ್ ಚಿಂತನೆಯ ಮೇಲೆ ಇವತ್ತಿನವರೆಗೂ ಪ್ರಭಾವ ಬೀರುತ್ತಿದ್ದಾನೆ. ಅವನ ಪ್ರಭಾವವು ಕೆಲವು ರೀತಿಗಳಲ್ಲಿ ಒಳ್ಳೆಯದು, ಮತ್ತೆ ಕೆಲವದರಲ್ಲಿ ಕೆಟ್ಟುದು; ಲೈಕರ್ಗಸ್ ಮತ್ತು ಸ್ಪಾರ್ಟಾ ವಿಷಯದಲ್ಲಿ ಅದು ಕೆಟ್ಟುದು. ಅವನು ಲೈಕರ್ಗಸ್ ಬಗ್ಗೆ ಏನು ಹೇಳುತ್ತಾನೆಯೋ ಅದು ಮುಖ್ಯ, ಅಲ್ಪ ಸ್ವಲ್ಪ ಪುನರಾವರ್ತನೆಗಳಿರಬಹುದಾದರೂ, ಆ ಕುರಿತು ನಾನು ಸಂಕ್ಷಿಪ್ತವಾಗಿ ವಿವೇಚಿಸುತ್ತೇನೆ.

ಸ್ಪಾರ್ಟಾಕ್ಕೆ ಕಾನೂನುಗಳನ್ನು ನೀಡಲು ನಿರ್ಧರಿಸಿದ ಲೈಕರ್ಗಸ್ ವಿವಿಧ ಸಂಸ್ಥೆಗಳನ್ನು ತಿಳಿಯಲು ವ್ಯಾಪಕ ಪ್ರವಾಸ ಕೈಗೊಳ್ಳುತ್ತಾನೆ ಎಂದು ಪ್ಲೂಟಾರ್ಕ್ ಹೇಳುತ್ತಾನೆ. ಅವನಿಗೆ ಕ್ರೀಟ್‌ನ ಕಾನೂನುಗಳು ಇಷ್ಟವಾದವು, ಅವು 'ನೇರವಾದವೂ ಕಠಿಣವಾದವೂ' ಆಗಿದ್ದವು.[೨೫] ಆದರೆ ಅವನಿಗೆ ಅಯೋನಿಯದವು ಇಷ್ಟವಾಗಲಿಲ್ಲ, ಅವುಗಳಲ್ಲಿ 'ಅನವಶ್ಯಕವಾದವೂ ಟೊಳ್ಳಾದವೂ' ಇದ್ದವು. ಸೈನಿಕರನ್ನು ಮಿಕ್ಕ ಜನಗಳಿಂದ ಬೇರೆಯಾಗಿ ನೋಡುವ ಅನುಕೂಲತೆಯನ್ನವನು ಈಜಿಪ್ಟ್‌ನಲ್ಲಿ ಕಲಿತ, ಆನಂತರ, ತನ್ನ ಪ್ರವಾಸದಿಂದ ವಾಪಸ್ಸಾಗಿ, 'ಅವುಗಳನ್ನು ಸ್ಪಾರ್ಟಾದಲ್ಲಿ ಜಾರಿಗೆ ತಂದ: ಅಲ್ಲಿ ವರ್ತಕರು, ಕುಶಲಕರ್ಮಿಗಳು, ಮತ್ತು ದುಡಿಮೆಗಾರರಿಗೆ ತಮ್ಮದೇ ಆದ ಪಾತ್ರವನ್ನಿತ್ತು ಒಂದು ಉದಾತ್ತ ಜನತಾ ರಾಜ್ಯವನ್ನು ಸ್ಥಾಪಿಸಿದ'. ಸ್ಪಾರ್ಟಾದ ಪ್ರಜೆಗಳಲ್ಲಿ ಅವನು ಭೂಮಿಯನ್ನು ಸಮಾನ ವಿಭಾಗಗಳನ್ನು ಮಾಡಿದ, ಅದಕ್ಕೆ ಕಾರಣವೆಂದರೆ 'ದಿವಾಳಿತನ, ಮತ್ಸರ, ಆಸೆಬಡುಕತನ, ಮತ್ತು ರಸವಂತಿಕೆಗಳನ್ನೂ, ಅಂತೆಯೇ ಶ್ರೀಮಂತಿಕೆ ಮತ್ತು ಬಡತನಗಳನ್ನು ನಗರದಿಂದ ಹೊರದೂಡುವುದು'. ಚಿನ್ನ-ಬೆಳ್ಳಿಯ ನಾಣ್ಯಗಳನ್ನು ನಿಷೇಧಿಸಿ, ಕಬ್ಬಿಣ ನಾಣ್ಯಗಳಿಗೆ ಮಾತ್ರ ಅವಕಾಶ ನೀಡಿದ. ಅವುಗಳ 'ಬೆಲೆ ಎಷ್ಟು ಕಡಿಮೆಯದೆಂದರೆ, ಹತ್ತು ಮಿನಗಳಷ್ಟು ಬೆಲೆ ಬಾಳುವ ನಾಣ್ಯಗಳು ಮನೆಯ ಕೊಠಡಿಯೊಂದನ್ನು ತುಂಬಿಬಿಡುವಷ್ಟು.' ಈ ರೀತಿಯಲ್ಲವನು 'ಅನವಶ್ಯಕವೂ ಅನುತ್ಪಾದಕವೂ ಆದ ಜ್ಞಾನವನ್ನು' ಹೊರದೂಡಿದ. ಯಾಕೆಂದರೆ ಅವುಗಳ ವೃತ್ತಿಪರರಿಗೆ ಕೊಡುವಷ್ಟು ಹಣ ಇರುತ್ತಿರಲಿಲ್ಲ. ಈ ಕಾನೂನಿನಿಂದ ಅವನು ಎಲ್ಲ ಬಾಹ್ಯ ವ್ಯಾಪಾರವನ್ನೂ ಅಸಾಧ್ಯಗೊಳಿಸಿದ. ಭಾಷಣಕಾರರು, ದಳ್ಳಾಳಿಗಳು, ಚಿನಿವಾರರು ಕಬ್ಬಿಣದ ನಾಣ್ಯಗಳನ್ನು ಇಷ್ಟಪಡದೆ ಸ್ಪಾರ್ಟಾದಿಂದ ದೂರವುಳಿದರು. ಆನಂತರ ಅವನು ಎಲ್ಲ ಪ್ರಜೆಗಳೂ ಒಟ್ಟಿಗೇ ಊಟಮಾಡಬೇಕು, ಒಂದೇ ಬಗೆಯ ಆಹಾರ ಸೇವಿಸಬೇಕು ಎಂದು ಆಜ್ಞಾಪಿಸಿದ.

---

೨೫. ಪ್ಲೂಟಾರ್ಕ್‌ನನ್ನು ಉದ್ಧರಿಸುವಾಗ ನಾನು ನಾರ್ಟ ಅವರ ಭಾಷಾಂತರವನ್ನು ಬಳಸುತ್ತೇನೆ.

ಇತರ ಸುಧಾರಕರಂತೆಯೇ ಲೈಕರ್ಗಸ್ ಮಕ್ಕಳ ಶಿಕ್ಷಣವು 'ಅತ್ಯಂತ ಮುಖ್ಯವೂ ಮತ್ತು ಅತ್ಯಂತ ಮಹತ್ವದ್ದೂ ಆದ ವಿಷಯ, ಸುಧಾರಕನು ಇದನ್ನು ಸ್ಥಾಪಿಸಬೇಕು' ಎಂದು ಭಾವಿಸಿದ್ದ; ಮತ್ತು ಸೈನ್ಯಾಧಿಕಾರವನ್ನು ಬಯಸುವವರೆಲ್ಲರಂತೆಯೇ ಅವನೂ ಜನಸಂಖ್ಯೆ ಹೆಚ್ಚಿಸುವುದರ ಬಗ್ಗೆ ಆಸಕ್ತನಾಗಿದ್ದ. 'ಯುವಕರ ಮುಂದೆ ಕನ್ಯೆಯರು ನಗ್ನರಾಗಿ ನಾಟಕ, ಕ್ರೀಡೆ ಮತ್ತು ನರ್ತನಗಳಲ್ಲಿ ತೊಡಗುವಂತೆ ಮಾಡುವುದು ಯುವಕರು ಮದುವೆಯಾಗಲು ಪ್ರಚೋದಿಸುವುದಕ್ಕೆ; ಪ್ಲೇಟೋ ಹೇಳುವಂತೆ ಜ್ಯಾಮಿತೀಯ ಕಾರಣಗಳಿಂದಲ್ಲ, ಅದರೆಡೆಗೆ ಇಷ್ಟದಿಂದಲೂ ಪ್ರೀತಿಯಿಂದಲೂ ಸೆಳೆಯುವುದಕ್ಕಾಗಿ'. ಮೊದಲ ಕೆಲವು ವರ್ಷಗಳ ಕಾಲ ಮದುವೆಯನ್ನು ಗುಟ್ಟಾದ ವ್ಯವಹಾರವೆಂದು ಕಾಣುವ ಅಭ್ಯಾಸವು 'ಇಬ್ಬರಲ್ಲಿಯೂ ಸ್ಥಿರವಾಗಿ ಉರಿಯುವ ಪ್ರೇಮವಾಗಿ ಮುಂದುವರಿಯುವ ಹಾಗೂ ಒಬ್ಬರನ್ನೊಬ್ಬರು ಹೊಸದಾಗಿ ಬಯಸುವಂತೆ' ಮಾಡುತ್ತಿತ್ತು – ಇದು, ಕನಿಷ್ಠ ಪಕ್ಷ, ಪ್ಲೂಟಾರ್ಕ್‌ನ ಅಭಿಪ್ರಾಯ. ವಯಸ್ಸಾಗಿದ್ದರೂ ಚಿಕ್ಕ ವಯಸ್ಸಿನ ಹೆಂಡತಿಯನ್ನು ಪಡೆದಿದ್ದ ಗಂಡಸು ತನಗಿಂತ ಚಿಕ್ಕ ವಯಸ್ಸಿನವನಿಂದ ಹೆಂಡತಿಯಲ್ಲಿ ಮಕ್ಕಳನ್ನು ಪಡೆಯುವುದನ್ನು ಕೆಟ್ಟುದೆಂದು ಭಾವಿಸುತ್ತಿರಲಿಲ್ಲ ಎಂದವನು ಮುಂದುವರಿದು ಹೇಳುತ್ತಾನೆ. 'ಪ್ರಾಮಾಣಿಕನಾದವನು ಇನ್ನೊಬ್ಬನ ಹೆಂಡತಿಯನ್ನು ಪ್ರೇಮಿಸುವುದು .. .. ಅವಳೊಡನೆ ತಾನು ಮಲಗಲು ಹಾಗೂ ಆ ಫಲವತ್ತಾದ ಭೂಮಿಯನ್ನು ಉಳಲು ಮತ್ತು ಇಷ್ಟಪಡುವಂತಹ ಮಕ್ಕಳ ಬೀಜವನ್ನು ಬಿತ್ತಲು ಅವಕಾಶವೀಯಬೇಕೆಂದು ಕೇಳಿಕೊಳ್ಳುವುದು ಕಾನೂನುಬದ್ಧವಾಗಿಯೂ ಇತ್ತು'. ಅಲ್ಲೆಲ್ಲ ಮೂರ್ಖ ಮತ್ಸರಕ್ಕೆ ಅವಕಾಶವಿರಲಿಲ್ಲ, ಯಾಕೆಂದರೆ 'ಮಕ್ಕಳು ಗಂಡಸರ ಖಾಸಗಿ ಆಸ್ತಿಯಾಗುವುದು ಲೈಕರ್ಗಸ್‌ಗೆ ಇಷ್ಟವಿರಲಿಲ್ಲ, ಅದರ ಬದಲು ಅವರು ಸಮೂಹದ ಒಳಿತಿಗಾಗಿ ಎಲ್ಲರಿಗೂ ಸೇರಿರಬೇಕು; ಇದೇ ಕಾರಣಕ್ಕಾಗಿಯೇ ಪ್ರಜೆಗಳಾಗುವಂತಹವರು ಎಲ್ಲರ ಮಕ್ಕಳಾಗುವುದರ ಬದಲು ಪ್ರಾಮಾಣಿಕರ ಮಕ್ಕಳು ಮಾತ್ರ ಆಗಿರಬೇಕೆಂಬುದು ಅವನ ಅಭಿಪ್ರಾಯ. ಇದೇ ತತ್ವವನ್ನು ರೈತರು ಜಾನುವಾರುಗಳ ವಿಷಯದಲ್ಲಿ ಅನುಸರಿಸುತ್ತಾರೆಂದೂ ಅವನು ವಿವರಿಸುತ್ತಾನೆ'.

ಮಗುವೊಂದು ಹುಟ್ಟಿದಾಗ ತಂದೆಯು ಅದನ್ನು ಪರೀಕ್ಷಿಸಲು ಕುಟುಂಬದ ಹಿರಿಯರಿಗೆ ತೋರಿಸುತ್ತಿದ್ದ: ಅದು ಆರೋಗ್ಯವಾಗಿದ್ದರೆ ಬೆಳೆಸಲೆಂದು ಅದನ್ನವರು ತಂದೆಗೆ ವಾಪಸು ನೀಡುತ್ತಿದ್ದರು; ಇಲ್ಲದಿದ್ದರೆ, ಅದನ್ನು ನೀರು ತುಂಬಿದ ಆಳವಾದ ಗುಂಡಿಯಲ್ಲಿ ಬಿಸುಡುತ್ತಿದ್ದರು. ಮಕ್ಕಳನ್ನು ಮೊದಲಿನಿಂದಲೂ ದೇಹವನ್ನು ಗಟ್ಟಿಗೊಳಿಸುವ ಪ್ರಕ್ರಿಯೆಗೊಳಪಡಿಸುತ್ತಿದ್ದರು. ಅದು ಕೆಲವು ವಿಷಯಗಳಲ್ಲಿ ಸರಿಯೂ ಆಗಿತ್ತು – ಉದಾಹರಣೆಗೆ, ಮಕ್ಕಳಿಗೆ ಬಿಗಿಯಾದ ಬಟ್ಟೆಗಳನ್ನು ಹಾಕುತ್ತಿರಲಿಲ್ಲ. ಏಳನೆಯ ವರ್ಷದಲ್ಲಿ ಗಂಡುಮಕ್ಕಳನ್ನು ಮನೆಯಿಂದ ಹೊರಗೆ ವಸತಿ ಶಾಲೆಯಲ್ಲಿ

ಸೇರಿಸುತ್ತಿದ್ದರು. ಅಲ್ಲಿ ಅವರನ್ನು ವಿಭಾಗಗಳಾಗಿ ವಿಂಗಡಿಸಲಾಗುತ್ತಿತ್ತು, ಅವರ ಉಸ್ತುವಾರಿಗಾಗಿ ಅವರಲ್ಲಿಯೇ ಒಬ್ಬ ಧೈರ್ಯವಂತನಾದವನನ್ನು ನೇಮಿಸುತ್ತಿದ್ದರು. 'ಅವರಿಗೆ ಆವಶ್ಯಕವಾದಷ್ಟು ಸ್ಪರ್ಶ ಶಿಕ್ಷಣವನ್ನು ನೀಡಲಾಗುತ್ತಿತ್ತು; ಉಳಿದ ಅವರ ಸಮಯವನ್ನೆಲ್ಲ ಅವರು ವಿಧೇಯತೆ, ನೋವನ್ನು ಸಹಿಸುವುದು, ಶ್ರಮಸಹಿಷ್ಣುತೆ, ಹೋರಾಟದಲ್ಲಿ ಸ್ಥಿರವಾಗಿರುವುದನ್ನು ಕಲಿಯಲು ಕಳೆಯುತ್ತಿದ್ದರು.' ಬಹು ಸಮಯ ಅವರು ಬತ್ತಲೆಯಾಗಿಯೇ ಆಟವಾಡುತ್ತಿದ್ದರು; ಹನ್ನೆರಡು ವರ್ಷಗಳಾದ ಬಳಿಕ ಅವರು ಕೋಟುಗಳನ್ನು ಧರಿಸುತ್ತಿರಲಿಲ್ಲ, ಅವರ ಉಡುಪು ಯಾವಾಗಲೂ 'ಕೊಳಕು ಹಾಗೂ ಅಸಹ್ಯಕರವಾಗಿರುತ್ತಿತ್ತು', ವರ್ಷದ ಕೆಲವು ದಿನಗಳ ಹೊರತು ಅವರು ಸ್ನಾನವನ್ನು ಮಾಡುತ್ತಿರಲಿಲ್ಲ. ಅವರು ಮಲಗುತ್ತಿದ್ದುದು ಒಣಹುಲ್ಲು ಹಾಸಿನ ಮೇಲೆ, ಚಳಿಗಾಲದಲ್ಲಿ ಅದಕ್ಕೆ ದತ್ತೂರಿಯನ್ನು ಸೇರಿಸುತ್ತಿದ್ದರು. ಅವರಿಗೆ ಕಳ್ಳತನ ಕಲಿಸುತ್ತಿದ್ದರು, ಸಿಕ್ಕಿಬಿದ್ದರೆ ಶಿಕ್ಷೆಗೊಳಪಡಿಸುತ್ತಿದ್ದರು–ಕದ್ದದ್ದಕ್ಕಲ್ಲ, ಮೂರ್ಖತನಕ್ಕಾಗಿ.

ಗಂಡಾಗಲೀ ಹೆಣ್ಣಾಗಲೀ ಸ್ವಲಿಂಗಪ್ರೇಮವು ಸ್ಪಾರ್ಟಾದಲ್ಲಿ ಮಾನ್ಯವಾದ ಪದ್ಧತಿ, ಅದು ಯೌವನಪೂರ್ವ ಹುಡುಗರ ಶಿಕ್ಷಣದ ಒಂದು ಭಾಗವೂ ಆಗಿರುತ್ತಿತ್ತು. ಹುಡುಗನೊಬ್ಬನ ಪ್ರೇಮಿಯು ತನ್ನ ವರ್ತನೆಗಾಗಿ ಪ್ರಶಂಸೆ ಅಥವಾ ಭರ್ತ್ಸನೆಗಳನ್ನು ಪಡೆಯುತ್ತಿದ್ದ; ಒಮ್ಮೆ ಹುಡುಗನೊಬ್ಬನು ತಾನು ಹೋರಾಟದಲ್ಲಿ ಗಾಯಗೊಂಡೆನೆಂದು ಕೂಗಿದಾಗ ಹೇಡಿತನಕ್ಕಾಗಿ ಅವನ ಪ್ರೇಮಿಯನ್ನು ದಂಡಿಸಲಾಯಿತೆಂದು ಪ್ಲೂಟಾರ್ಕ್ ಹೇಳುತ್ತಾನೆ.

> ಸ್ಪಾರ್ಟಾದವರ ಬದುಕಿನ ಯಾವ ಹಂತದಲ್ಲಿಯೂ ಸ್ವಾತಂತ್ರ್ಯ ಎಂಬುದಿರಲಿಲ್ಲ. **ಪೂರ್ತಿ ಪುರುಷರಾಗಿ ಬೆಳೆದ ಮೇಲೂ ಬದುಕಿನ ಶಿಸ್ತು ಮತ್ತು ಕ್ರಮಬದ್ಧತೆ ಮುಂದುವರಿಯುತ್ತಿದ್ದವು. ತನಗೆ ಬೇಕೆಂಬ ರೀತಿಯಲ್ಲಿ ಬದುಕುವುದು ಕಾನೂನುಬದ್ಧವಾಗಿರಲಿಲ್ಲ, ಒಂದು ಶಿಬಿರದಲ್ಲಿದ್ದಂತೆಯೇ ಅವರು ನಗರದಲ್ಲಿರುತ್ತಿದ್ದರು. ತನಗೆ ಎಷ್ಟು ನೀಡಲಾಗುತ್ತಿತ್ತೋ ಅಷ್ಟರಲ್ಲಿಯೇ ವ್ಯಕ್ತಿಯು ಬದುಕಬೇಕಾಗಿತ್ತು, ಅವನಿಂದ ನಿರೀಕ್ಷಿಸಲಾದ ಇತರ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿತ್ತು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ತಾನು ಹುಟ್ಟಿರುವುದು ತಮಗಾಗಿಯಲ್ಲ, ದೇಶಕ್ಕಾಗಿ ಎಂಬುದು ಮನಸ್ಸಿನಲ್ಲಿರಬೇಕಾಗಿತ್ತು .. .. ಲೈಕರ್ಗಸ್ ನಗರಕ್ಕೆ ತಂದ ಅತ್ಯಂತ ಶ್ರೇಷ್ಠವೂ ಸೌಖ್ಯದಾಯಕವೂ ಆದ ಅಂಶವೆಂದರೆ ಪ್ರಜೆಗಳು ಧಾರಾಳವಾಗಿ ಅನುಭವಿಸಬಹುದಾದ ವಿಶ್ರಾಂತಿ ಮತ್ತು ಬಿಡುವು, ಒಂದೇ ಷರತ್ತು: ಅವರು ಯಾವುದೇ ದುಷ್ಟ ಅಥವಾ ಕ್ಷುಲ್ಲಕ ಕಾರ್ಯದಲ್ಲಿ ತೊಡಗಬಾರದು; ಹೆಚ್ಚು ಶ್ರೀಮಂತಿಕೆಯನ್ನು ಪಡೆಯಬೇಕೆಂದು ಅವರು ಎಚ್ಚರ ವಹಿಸಬೇಕಾಗಿರಲಿಲ್ಲ, ಯಾಕೆಂದರೆ ವಸ್ತುಗಳಿಗೆ ಯಾವ ಗೌರವವೂ ಇರಲಿಲ್ಲ, ಬೆಲೆಯೂ ಇರಲಿಲ್ಲ. ಜೀತದಾಳುಗಳಿಗಾದರೋ, ಯುದ್ಧಕಾದಲ್ಲಿ**

ಬಂಧಿತರಾದವರು, ಅವರ ಭೂಮಿಯಲ್ಲಿ ಉತ್ತನೆ ಬಿತ್ತನೆ ಮಾಡಿ ಬೆಳೆದುದರಲ್ಲಿ ಪ್ರತಿ ವರ್ಷ ಒಂದು ಪಾಲನ್ನು ಇವರಿಗೆ ಒಪ್ಪಿಸುತ್ತಿದ್ದರು.

ಸೋಮಾರಿತನದ ಆಪಾದನೆಯ ಮೇಲೆ ಅಥೇನಿಯನೊಬ್ಬನನ್ನು ಶಿಕ್ಷೆಗೆ ಗುರಿಪಡಿಸಿದ ಕಥೆಯೊಂದನ್ನು ಪ್ಲೂಟಾರ್ಕ್ ಹೇಳುತ್ತಾನೆ, ಅದನ್ನು ಕೇಳಿದ ಒಬ್ಬ ಸ್ಪಾರ್ಟನ್‌ನು ಹೀಗೆ ಉದ್ಗರಿಸುತ್ತಾನೆ: 'ಉದಾತ್ತತೆಯಿಂದ ಸಭ್ಯಗೃಹಸ್ಥನಾಗಿ ಬಾಳಿದ ಆ ವ್ಯಕ್ತಿಯನ್ನು ನನಗೆ ತೋರಿಸಿ.'

ಲೈಕರ್ಗಸ್ 'ತನ್ನ ಪ್ರಜೆಗಳನ್ನು ಹೊಂದಿಕೊಂಡಿರುವಂತೆ ಹೀಗೆ ಮಾಡಿದ, ಅವರು ತಮ್ಮ ಪಾಡಿಗೆ ತಾವು ಬದುಕುತ್ತಿರಲಿಲ್ಲ ಹಾಗೂ ಬದುಕುವಂತಿರಲಿಲ್ಲ, ಅವರು ಒಬ್ಬರೊಡನೊಬ್ಬರು ಬೆರೆತುಕೊಂಡಿರುತ್ತಿದ್ದರು, ಒಟ್ಟಿಗೇ ಇರುತ್ತಿದ್ದರು, ರಾಣಿ ಜೇನಿನ ಸುತ್ತ ಸುತ್ತುವ ಜೇನುನೊಣಗಳಂತೆ' ಎಂದೂ ಪ್ಲೂಟಾಕ್ ಹೇಳುತ್ತಾನೆ.

ಸ್ಪಾರ್ಟನ್ನರು ಪ್ರವಾಸ ಹೋಗುವಂತಿರಲಿಲ್ಲ, ಬೇರೆ ದೇಶದವರೂ, ವ್ಯಾಪಾರಕ್ಕಾಗಿ ಹೊರತು, ಸ್ಪಾರ್ಟಾ ಪ್ರವೇಶಿಸುವಂತಿರಲಿಲ್ಲ, ವಿದೇಶೀ ಪದ್ಧತಿಗಳು ಲ್ಯಾಸೆಡೇಮೋನಿಯನ್ ಋಜುತ್ವವನ್ನು ಕಲುಷಿತಗೊಳಿಸಬಹುದೆಂಬ ಕಾರಣದಿಂದ.

ತಮಗೆ ಬೇಕೆನಿಸಿದಾಗ ಜೀತದಾಳುಗಳನ್ನು ಕೊಲ್ಲುವ ಅವಕಾಶ ಸ್ಪಾರ್ಟನ್ ಪ್ರಜೆಗಳಿಗಿತ್ತು ಎಂದು ಪ್ಲೂಟಾರ್ಕ್ ಹೇಳಿದರೂ, ಅಂಥ ನೀಚ ದೇಶಕ್ಕೆ ಲೈಕರ್ಗಸ್ ಕಾರಣವೆಂಬುದನ್ನವನು ನಂಬುವುದಿಲ್ಲ. 'ಅಂಥ ಕ್ರೂರ ಕೃತ್ಯವೊಂದನ್ನು ಲೈಕರ್ಗಸ್ ಸ್ಥಾಪಿಸಿದ ಅಥವಾ ಅನ್ವೇಷಿಸಿದ ಎಂಬುದನ್ನು ನಾನು ಒಪ್ಪಿಕೊಳ್ಳುವುದಿಲ್ಲ: ಏಕೆಂದರೆ, ಇತರ ಅನೇಕ ಕಾರ್ಯಗಳಲ್ಲಿ ಅವನು ತೋರುವ ಸೌಮ್ಯತೆ ಮತ್ತು ನ್ಯಾಯಪರತೆಗಳನ್ನು ನೋಡಿದಾಗ, ನನ್ನ ಪ್ರಕಾರ ಅವನ ಸ್ವಭಾವವು ಮೃದುವೂ ದಯಾಪೂರಿತವೂ ಆಗಿತ್ತು.' ಈ ವಿಷಯದಲ್ಲಿ ಬಿಟ್ಟರೆ ಪ್ಲೂಟಾರ್ಕ್ ಸ್ಪಾರ್ಟಾ ಸಂವಿಧಾನದ ಬಗ್ಗೆ ಪ್ರಶಂಸೆಯನ್ನು ವ್ಯಕ್ತಪಡಿಸುತ್ತಾನೆ.

ಪ್ಲೇಟೋ ಮೇಲೆ ಸ್ಪಾರ್ಟಾ ಮಾಡಿದ ಪ್ರಭಾವವು, ವಿಶೇಷವಾಗಿ ಅವನ ಆದರ್ಶರಾಜ್ಯ (ಯುಟೋಪಿಯ)ದ ಪರಿಕಲ್ಪನೆಯಲ್ಲಿ ಕಾಣುತ್ತೇವೆ. ಆ ಕುರಿತ ವಿವರಣೆ ಮುಂದಿನ ಅಧ್ಯಾಯದ ವಸ್ತು.

೧೩

ಪ್ಲೇಟೋ ಅಭಿಪ್ರಾಯಗಳ ಮೂಲ ಆಕರಗಳು

ಹಿಂದಿನವರಾಗಲೀ ಆಧುನಿಕರಾಗಲೀ ತತ್ವಜ್ಞಾನಿಗಳಲ್ಲಿ ಅತ್ಯಂತ ಪ್ರಭಾಶಾಲಿಗಳಾಗಿದ್ದವರೆಂದರೆ ಪ್ಲೇಟೋ ಮತ್ತು ಅರಿಸ್ಟಾಟಲ್‌ರು; ಅವರಿಬ್ಬರಲ್ಲಿಯೂ, ಮುಂದಿನ ಯುಗಗಳ ಮೇಲೆ ಹೆಚ್ಚು ಪ್ರಭಾವ ಬೀರಿದವನೆಂದರೆ ಪ್ಲೇಟೋನೇ. ನಾನಿದನ್ನು ಎರಡು ಕಾರಣಗಳಿಂದ ಹೇಳುತ್ತಿದ್ದೇನೆ: ಮೊದಲನೆಯದು, ಅರಿಸ್ಟಾಟಲ್‌ನೇ ಪ್ಲೇಟೋ ಬೆಳಕಿನಲ್ಲಿ ಬೆಳಗಿದವನು; ಎರಡನೆಯದು, ಕನಿಷ್ಠ ಪಕ್ಷ, ಹದಿಮೂರನೆಯ ಶತಮಾನದವರೆಗೂ, ಕ್ರಿಶ್ಚಿಯನ್ ಮತಧರ್ಮಶಾಸ್ತ್ರ ಮತ್ತು ತತ್ವಜ್ಞಾನಗಳು ಅರಿಸ್ಟಾಟಲೀಯವಾಗಿರುವುದಕ್ಕಿಂತ ಹೆಚ್ಚಾಗಿ ಪ್ಲೇಟೋಮಯವಾಗಿವೆ. ಹೀಗಾಗಿ, ತಾತ್ವಿಕ ಚಿಂತನೆಯ ಇತಿಹಾಸದಲ್ಲಿ, ಪ್ಲೇಟೋ ಬಗ್ಗೆ, ಅದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಅರಿಸ್ಟಾಟಲ್ ಬಗ್ಗೆ, ಇತರೆಲ್ಲ ಅವರ ಪೂರ್ವಸೂರಿಗಳ ಅಥವಾ ಮುಂದಿನವರ ಬಗೆಗಿಂತ ಹೆಚ್ಚು ವಿಸ್ತಾರವಾಗಿ ವಿವೇಚಿಸುವುದು ಆವಶ್ಯಕ.

ಪ್ಲೇಟೋ ತತ್ವಜ್ಞಾನದ ಅತ್ಯಂತ ಪ್ರಮುಖ ವಿಷಯಗಳೆಂದರೆ: ಮೊದಲಿಗೆ, ಅವನ ಆದರ್ಶರಾಜ್ಯ, ದೀರ್ಘ ಸರಣಿಯ ಅತ್ಯಂತ ಹಳೆಯದು; ಎರಡನೆಯದು, ಇನ್ನೂ ಬಗೆಹರಿಯದ ವೈಶ್ವಿಕ ವಿಷಯಗಳ ಬಗೆಗಿನ ಅವನ ಮೊದಲ ಪ್ರಯತ್ನವಾದ ಆಲೋಚನಾ ಸಿದ್ಧಾಂತ (ಥಿಯರಿ ಆಫ್ ಐಡಿಯಾಸ್); ಮೂರನೆಯದು, ಅಮರತ್ವ ಸಮರ್ಥನೆಯ ಅವನ ವಾದಗಳು; ನಾಲ್ಕನೆಯದು, ಅವನ ವಿಶ್ವವಿಜ್ಞಾನ; ಐದನೆಯದು, ಜ್ಞಾನವು ಗ್ರಹಿಕೆಗಿಂತ ಮಿಗಿಲಾಗಿ ಸ್ಮರಣೆ ಎಂಬ ಅವನ ಊಹೆ. ಆದರೆ ಇವುಗಳಲ್ಲಿ ಯಾವುದರ ಬಗ್ಗೆಯಾದರೂ ಆಲೋಚಿಸುವ ಮುಂಚೆ, ಅವನ ರಾಜಕೀಯ ಮತ್ತು ತಾತ್ವಿಕ ನಿಲವುಗಳನ್ನು ರೂಪಿಸಿದ ಅವನ ಜೀವನ ಪರಿಸ್ಥಿತಿಗಳು ಮತ್ತವನ ಮೇಲಾದ ಪ್ರಭಾವಗಳ ಕುರಿತು ಕೆಲವು ಮಾತುಗಳನ್ನಾಡುತ್ತೇನೆ.

ಪ್ಲೇಟೋ ಹುಟ್ಟಿದ್ದು ಕ್ರಿಪೂ ೪೨೮–೭ ರಲ್ಲಿ, ಪೆಲೊಪೊನೀಸಿಯ ಯುದ್ಧದ ಮೊದಲ ವರ್ಷಗಳಲ್ಲಿ. ಅವನು ದೊಡ್ಡ ಶ್ರೀಮಂತ, ಮೂವತ್ತು ಮಂದಿ ನಿರಂಕುಶಾಧಿಕಾರಿಗಳಿಗೆ ಬೇಕಾಗಿದ್ದ ಅನೇಕರಿಗೆ ಸಂಬಂಧಿಸಿದ್ದವನು. ಅಥೆನ್ಸ್

ಸೋತಾಗ ಅವನಿನ್ನೂ ಚಿಕ್ಕವನು, ಸೋಲಿಗೆ ಕಾರಣ ಪ್ರಜಾಪ್ರಭುತ್ವ ಎಂದು ಆರೋಪಿಸಿದ್ದವನು, ಈ ಆಲೋಚನೆಯು ಅವನ ಸಾಮಾಜಿಕ ಸ್ಥಿತಿ ಮತ್ತು ಕೌಟುಂಬಿಕ ಸಂಬಂಧಗಳಿಂದಾಗಿ ಪ್ರಭಾವಿತವಾದದ್ದಿರಬಹುದು. ತಾನು ಅಪಾರ ಪ್ರೀತಿ–ಗೌರವಗಳನ್ನು ಹೊಂದಿದ್ದ ಸಾಕ್ರಟೀಸ್‌ನ ವಿದ್ಯಾರ್ಥಿ ಅವನು; ಸಾಕ್ರಟೀಸ್‌ಗೆ ಮರಣದಂಡನೆ ವಿಧಿಸಿದ್ದು ಪ್ರಜಾಪ್ರಭುತ್ವ. ಹೀಗಾಗಿ, ತನ್ನ ಆದರ್ಶ ಪ್ರಜಾರಾಜ್ಯದ ಮೆಚ್ಚುಗೆಗಾಗಿ ಅವನು ಸ್ಪಾರ್ಟಾ ಕಡೆ ನೋಡಿದ್ದು ಆಶ್ಚರ್ಯಕರವೇನಲ್ಲ. ಮುಂದಿನ ಕಾಲಗಳ ಜನರನ್ನು ಮೋಸಗೊಳಿಸುವಂತೆ ಅನುದಾರ ಸಲಹೆಗಳನ್ನು ಚೆಂದಗೊಳಿಸಿ ಹೇಳುವಲ್ಲಿ ಅವನು ಕುಶಲ; ಇದರಿಂದಲೇ ಮುಂದಿನವರು ಅವನ 'ರಿಪಬ್ಲಿಕ್' ಅನ್ನು, ಅಲ್ಲಿನ ಸಲಹೆಗಳು ಮೂಲವೇನೆಂದು ಅರಿಯದೆ, ಪ್ರಶಂಸಿಸಿದ್ದು. ಪ್ಲೇಟೋನನ್ನು ಹೊಗಳುವುದು ಸರಿಯೇ. ಆದರೆ ಅವನನ್ನು ಅರ್ಥಮಾಡಿಕೊಳ್ಳುವುದಲ್ಲ. ಇದೆ ಮಹಾಪುರುಷರ ಹಣೆಬರಹ. ನನ್ನ ಉದ್ದೇಶ ಇದಕ್ಕೆ ವಿರುದ್ಧವಾದದ್ದು. ಅವನನ್ನು ಅರ್ಥಮಾಡಿಕೊಳ್ಳುವುದು ನನ್ನ ಇರಾದೆ, ಆದರೆ ಅವನೊಬ್ಬ ಆಧುನಿಕ ಇಂಗ್ಲಿಷ್ ಅಥವಾ ಅಮೆರಿಕನ್ ಸರ್ವಾಧಿಕಾರ (ಟೊಟಾಲಿಟೇರಿಯನಿಸಂ) ಸಮರ್ಥಕರ ಸಮಕಾಲೀನನಾಗಿದ್ದರೆ ಎಷ್ಟೋ ಅಷ್ಟೇ ಗೌರವದಿಂದ ಕಾಣುತ್ತೇನೆ.

ಅವನ ಮೇಲೆ ಬಿದ್ದ ಶುದ್ಧ ತಾತ್ವಿಕ ಪ್ರಭಾವಗಳು ಕೂಡ ಅವನನ್ನು ಸ್ಪಾರ್ಟಾ ಪರವಾಗಿ ನಿಲ್ಲುವಂತೆ ಮಾಡುವಂತಹವೇ. ಈ ಪ್ರಭಾವಗಳನ್ನು ಬೀರಿದವರೆಂದರೆ, ಸ್ಥೂಲವಾಗಿ, ಪೈಥಾಗೊರಾಸ್, ಪಾರ್ಮನೈಡೀಸ್, ಹೆರಾಕ್ಲಿಟಸ್ ಮತ್ತು ಸಾಕ್ರಟೀಸ್.

ಪ್ಲೇಟೋ ಪೈಥಾಗೊರಾಸ್‌ನಿಂದ (ಅದು ಸಾಕ್ರಟೀಸ್ ಮೂಲಕವೋ ಅಲ್ಲವೋ) ಪ್ರಭಾವಿತವಾದುದೆಂದರೆ ಅವನ ತತ್ತ್ವಜ್ಞಾನದಲ್ಲಿನ ಆರ್ಫಿಕ್ ಅಂಶಗಳಲ್ಲಿ: ಮತಧಾರ್ಮಿಕ ಪ್ರವೃತ್ತಿ, ಅಮರತ್ವದಲ್ಲಿನ ಶ್ರದ್ಧೆ, ಅನ್ಯಲೋಕವಾದ, ಪುರೋಹಿತ ಧಾಟಿ ಮತ್ತು ಗವಿಯ ಉಪಮೆ ಸೂಚಿಸುವ ಎಲ್ಲವೂ; ಅಲ್ಲದೆ, ಗಣಿತದ ಬಗೆಗಿನ ಗೌರವ ಮತ್ತು ಬುದ್ಧಿಶಕ್ತಿ ಮತ್ತು ಅನುಭಾವಿಕತೆಗಳ ಆಪ್ತ ಮಿಶ್ರಣ.

ಪೈಥಾಗೊರಾಸ್‌ನಿಂದ ಅವನು ಪ್ರಭಾವಿತವಾದ ಅಂಶಗಳೆಂದರೆ, ವಾಸ್ತವತೆಯು ಚಿರಂತನ ಮತ್ತು ಕಾಲಾತೀತ ಎಂಬುದು, ಮತ್ತು ತಾರ್ಕಿಕ ಕಾರಣದಿಂದ, ಎಲ್ಲ ಬದಲಾವಣೆಗಳೂ ಭ್ರಮಾತ್ಮಕ ಎಂಬುದರಲ್ಲಿನ ಶ್ರದ್ಧೆ.

ಹೆರಾಕ್ಲಿಟಸ್‌ನಿಂದ ಅವನು ಪ್ರಭಾವಿತನಾದುದು ಇಂದ್ರಿಯಗ್ರಾಹ್ಯ ಜಗತ್ತಿನಲ್ಲಿ ಯಾವುದೂ ಸ್ಥಿರವಲ್ಲ ಎಂಬ ನೇತ್ಯಾತ್ಮಕ ಅಂಶದಲ್ಲಿ. ಇದು ಪಾರ್ಮನೈಡೀಸ್‌ನ ಸಿದ್ಧಾಂತದಲ್ಲಿ ಸೇರಿ, ಜ್ಞಾನವನ್ನು ಇಂದ್ರಿಯಗಳ ಮೂಲಕವಲ್ಲ, ಬುದ್ಧಿಶಕ್ತಿಯಿಂದ ಮಾತ್ರ ಪಡೆಯಲು ಸಾಧ್ಯ ಎಂಬ ನಿಲವಿಗೆ ಅವನು ಬರುವಂತಾಯಿತು. ಅದು ಪೈಥಾಗೊರಿಯನಿಸಂನೊಡನೆ ಹೊಂದಿಕೊಂಡಿತು.

ಸಾಕ್ರಟೀಸ್‌ನಿಂದ ಅವನು ಪ್ರಾಯಶಃ ಕಲಿತದ್ದೆಂದರೆ ನೈತಿಕ ಪ್ರಶ್ನೆಗಳ ಬಗೆಗಿನ ಚಿಂತನೆ, ಮತ್ತು ಜಗತ್ತನ್ನು ಯಾಂತ್ರಿಕ ವಿವರಣೆಗಳ ಬದಲು ಮೂಲಸಂಕಲ್ಪದ ದೃಷ್ಟಿಕೋನದಿಂದ ವಿವರಿಸುವ ಪ್ರವೃತ್ತಿಗಳನ್ನು. ಅವನ ಚಿಂತನೆಯಲ್ಲಿ ಸಾಕ್ರಟೀಸ್‌ಪೂರ್ವದವರಿಗಿಂತ ಹೆಚ್ಚಿಗೆ 'ಒಳಿತು' ಪ್ರಧಾನವಾಯಿತು; ಹೀಗಾಗಿ ಇದನ್ನು ಸಾಕ್ರಟೀಸ್‌ನಿಂದಾದ ಪ್ರಭಾವ ಎಂದು ತೀರ್ಮಾನಿಸುವುದು ಕಷ್ಟ.

ರಾಜಕೀಯ ಸರ್ವಾಧಿಕಾರದೊಡನೆ ಇವೆಲ್ಲ ಯಾವ ರೀತಿ ಸಂಬಂಧ ಪಡೆದಿವೆ?

ಮೊದಲನೆಯದಾಗಿ, ಒಳಿತು ಮತ್ತು ವಾಸ್ತವತೆಗಳು ಕಾಲಾತೀತವಾಗಿದ್ದು, ಅತ್ಯುತ್ತಮ ದೇಶವೆಂದರೆ ಸ್ವರ್ಗೀಯ ಮಾದರಿಯ ಹೆಚ್ಚು ಕಡಿಮೆ ನಕಲು ಎನ್ನಬಹುದಾದುದು, ಅದರಲ್ಲಿ ಕನಿಷ್ಠ ಪ್ರಮಾಣದ ವ್ಯತ್ಯಾಸಗಳೂ ಗರಿಷ್ಠ ಮಟ್ಟದ ಸ್ಥಿರ ಪರಿಪೂರ್ಣತೆಗಳೂ ಇರುವ ಹಾಗೂ ಅದರ ಆಳುವವರು ಚಿರಂತನ ಒಳಿತನ್ನು ಚೆನ್ನಾಗಿ ಅರ್ಥಮಾಡಿಕೊಂಡವರು ಎಂಬುದು.

ಎರಡನೆಯದಾಗಿ, ಎಲ್ಲ ಅನುಭಾವಿಗಳಂತೆಯೇ ಪ್ಲೇಟೋ ತನ್ನ ಶ್ರದ್ಧೆಗಳಲ್ಲಿ ನಿಶ್ಚಿತತೆಯ ಮೂಲ ಹೊಂದಿದ ಸಾರತಃ ಜೀವನದ ಮೂಲಕವಲ್ಲದೆ ಬೇರೆ ಬಗೆಯಿಂದ ಸಂವಹಿಸಲಾಗದ ಅಂಶವನ್ನು ಹೊಂದಿರುವುದು ಎಂಬುದು. ಪೈಥಾಗೊರಿಯನ್ನರು ದೀಕ್ಷಾಸ್ನಾನಿಕ (ಇನಿಷಿಯೇಟ್) ನಿಯಮವನ್ನು ಸ್ಥಾಪಿಸಲು ಹೆಣಗಿದರು, ಮತ್ತು ಇದು ಆಳದಲ್ಲಿ ಪ್ಲೇಟೋ ಬಯಸುವಂತಹುದು. ಒಬ್ಬ ವ್ಯಕ್ತಿಯು ಒಳ್ಳೆಯ ಮುತ್ಸದ್ದಿಯಾಗಬೇಕಾದರೆ ಅವನು ಒಳಿತನ್ನು ತಿಳಿದಿರಬೇಕು; ಇದನ್ನವನು ಬುದ್ಧಿಶಕ್ತಿ ಮತ್ತು ನೈತಿಕ ಶಿಸ್ತಿನಿಂದ ಸಾಧಿಸಿಕೊಳ್ಳಬೇಕು. ಈ ಶಿಸ್ತಿಗೊಳಪಡದವರು ಸರ್ಕಾರದ ಭಾಗವಾದರೆ ಅವರು ಖಂಡಿತ ಭ್ರಷ್ಟಗೊಳಿಸುತ್ತಾರೆ.

ಮೂರನೆಯದಾಗಿ, ಪ್ಲೇಟೋ ತತ್ತ್ವಗಳಿಗನುಗುಣವಾಗಿ ಒಳ್ಳೆಯ ಆಳುವವರನ್ನು ಸಿದ್ಧಪಡಿಸಲು ಸಾಕಷ್ಟು ಶಿಕ್ಷಣ ಆವಶ್ಯಕ. ಸಿರಾಕ್ಯೂಸ್‌ನ ಸರ್ವಾಧಿಕಾರಿ ಕಿರಿಯ ಡಯೋನಿಸಿಯಸ್‌ನನ್ನು ಒಳ್ಳೆಯ ಆಳುವವನನ್ನಾಗಿ ಮಾಡಲು ಅವನಿಗೆ ಜ್ಯಾಮಿತಿಯನ್ನು ಕಲಿಸುವಂತೆ ಒತ್ತಾಯ ಪಡಿಸಿದ್ದು ಸರಿಯಲ್ಲವೆಂದು ನಮಗೆ ಅನ್ನಿಸುತ್ತದೆ, ಆದರೆ ಪ್ಲೇಟೋನ ದೃಷ್ಟಿಕೋನದಲ್ಲಿ ಅದು ಆವಶ್ಯಕ. ಗಣಿತವಿಲ್ಲದೆ ಒಳ್ಳೆಯ ವಿವೇಕ ಅಸಾಧ್ಯ ಎಂದು ಆಲೋಚಿಸುವುದರಲ್ಲಿ ಅವನು ಸಾಕಷ್ಟು ಪ್ರಮಾಣದಲ್ಲಿ ಪೈಥಾಗೊರಿಯನ್ ಆಗಿದ್ದ. ಈ ದೃಷ್ಟಿಕೋನವು ಸ್ವಲ್ಪಜನಾಧಿಪತ್ಯವನ್ನು ನಿರ್ದೇಶಿಸುತ್ತದೆ.

ನಾಲ್ಕನೆಯದಾಗಿ, ಬಹುತೇಕ ಗ್ರೀಕ್ ತತ್ವಜ್ಞಾನಿಗಳಂತೆಯೇ ಪ್ಲೇಟೋ ಕೂಡ ವಿವೇಕಕ್ಕೆ ಬಿಡುವು ಆವಶ್ಯಕ, ಯಾರು ಜೀವನೋಪಾಯಕ್ಕಾಗಿ ಕೆಲಸ ಮಾಡಬೇಕೋ ಅಂಥವರಲ್ಲಿ ಅದು ಕಾಣಲಾಗದು, ಮತ್ತು ಹೀಗಾಗಿ ಯಾರಿಗೆ ಸ್ವಂತ

ಆದಾಯವಿದೆಯೋ ಅಥವಾ ಯಾರ ಜೀವನನನಿರ್ವಹಣೆಯ ಆತಂಕವನ್ನು ಸರ್ಕಾರ ಹೋಗಲಾಡಿಸುವುದೋ ಅಂಥವರಲ್ಲಿ ಮಾತ್ರ ಕಾಣಬಹುದು ಎಂದು ಭಾವಿಸಿದ. ಈ ದೃಷ್ಟಿಕೋನವು ಸಾರತಃ ಶ್ರೀಮಂತಪ್ರಭುತ್ವದ್ದು.

ಪ್ಲೇಟೋನನ್ನು ಆಧುನಿಕ ಚಿಂತನೆಗಳಿಂದ ಎದುರಿಸುವಾಗ ಎರಡು ಸಾಮಾನ್ಯ ಪ್ರಶ್ನೆಗಳೇಳುತ್ತವೆ. ಮೊದಲನೆಯ ಪ್ರಶ್ನೆಯೆಂದರೆ: 'ವಿವೇಕ; ಎಂಬುದಿದೆಯೇ?' ಎಂಬುದು. ಎರಡನೆಯದು: ಇರುತ್ತದೆ ಎಂದು ಒಪ್ಪಿದ ಬಳಿಕ, 'ಅದಕ್ಕೆ ರಾಜಕೀಯ ಅಧಿಕಾರವನ್ನು ನೀಡುವ ಸಂವಿಧಾನವೊಂದು ಸಾಧ್ಯವೇ?' ಎಂಬುದು.

'ವಿವೇಕ', ನಾವು ತಿಳಿಯುವ ಅರ್ಥದಲ್ಲಿ, ಷೂ ತಯಾರಕ, ಅಥವಾ ವೈದ್ಯ ಅಥವಾ ವ್ಯೂಹಪರಿಣತ ಸೇನಾನಾಯಕನದರಂತೆ, ಯಾವುದೇ ವಿಧವಾದ ವಿಶಿಷ್ಟ ಕೌಶಲವಲ್ಲ. ಇವಕ್ಕಿಂತ ಅದು ಹೆಚ್ಚು ಸಾಮಾನ್ಯವಾದುದಾಗಿರಬೇಕು, ಯಾಕೆಂದರೆ ಅದನ್ನು ಹೊಂದುವುದರಿಂದ ಒಬ್ಬನಿಗೆ ವಿವೇಚನೆಯಿಂದ ಆಳಲು ಸಾಮರ್ಥ್ಯವುಂಟಾಗುತ್ತದೆ. ಅದು ಒಳಿತರ ಜ್ಞಾನದಿಂದ ಬರುವಂತಹುದು ಎಂದು ಪ್ಲೇಟೋ ಹೇಳುತ್ತಿದ್ದನೆಂದೂ; ಯಾರೂ ಬೇಕೆಂದೇ ಪಾಪಗೈಯುವುದಿಲ್ಲ ಎಂಬ ಸಾಕ್ರಟೀಸ್‌ನ ಸೂತ್ರದಿಂದ ಅದಕ್ಕೆ ಸಮರ್ಥನೆ ನೀಡುತ್ತಿದ್ದನೆಂದೂ ನನಗನ್ನಿಸುತ್ತಿದ್ದುದರಿಂದ ಹೊರಬರುವುದೆಂದರೆ, ಯಾರಿಗೆ ಒಳ್ಳೆಯದಾವುದು ಎಂಬುದು ತಿಳಿದಿದೆಯೋ ಅವನು ಒಳ್ಳೆಯದನ್ನು ಮಾಡುತ್ತಾನೆ ಎಂಬುದು. ನಮಗೆ ಅಂಥ ದೃಷ್ಟಿಕೋನವು ವಾಸ್ತವದೂರ ಅನ್ನಿಸುತ್ತದೆ. ನಾವು ಮತ್ತಷ್ಟು ಸ್ವಾಭಾವಿಕವಾಗಿ ಹೇಳಬೇಕಾದುದೆಂದರೆ, ಆಸಕ್ತಿಗಳಲ್ಲಿ ವೈವಿಧ್ಯವಿರುತ್ತದೆ, ಆದ್ದರಿದ ಮುತ್ಸದ್ದಿಯಾದವನು ಸಾಧ್ಯವಾದ ಅತ್ಯಂತ ಶ್ರೇಷ್ಠ ಸಂಧಾನಮಾರ್ಗವನ್ನು ಅವಲಂಬಿಸಬೇಕು ಎಂಬುದನ್ನು. ಒಂದು ವರ್ಗ ಅಥವಾ ದೇಶದ ಸದಸ್ಯರು ಒಂದು ಸಮಾನಾಸಕ್ತಿಯನ್ನು ಹೊಂದಿರಬಹುದಾದರೂ, ಆದರೆ ಅದು ಇತರ ವರ್ಗಗಳ ಮತ್ತು ದೇಶಗಳ ಆಸಕ್ತಿಗಳಿಗೆ ವಿರುದ್ಧವಾಗಿರುತ್ತದೆ. ಒಟ್ಟಾರೆ ಮಾನವಸಂಕುಲಕ್ಕೆ ಸಮಾನವಾದ ಆಸಕ್ತಿಗಳಿರಬಹುದು, ಆದರೆ ರಾಜಕೀಯ ಕ್ರಿಯೆಯನ್ನು ನಿರ್ಧರಿಸಲು ಅಷ್ಟು ಸಾಕಾಗುವುದಿಲ್ಲ. ಪ್ರಾಯಶಃ ಹಾಗೆ ಅವರು ಮುಂದೆ ಎಂದಾದರೂ ಮಾಡಿಯಾರು, ಆದರೆ ಇಷ್ಟೊಂದು ಸಂಖ್ಯೆಯ ಸಾರ್ವಭೌಮ ಅವಕಾಶಗಳಿರುವವರೆಗೂ ಅಲ್ಲ. ಆಗಲೂ ಸಮಾನಾಸಕ್ತಿಯ ಪೂರೈಕೆಯ ಅತ್ಯಂತ ಕಷ್ಟಕರ ಅಂಶವೆಂದರೆ ಪರಸ್ಪರ ವಿರುದ್ಧವಾದ ವಿಶಿಷ್ಟ ಆಸಕ್ತಿಗಳಲ್ಲಿ ಸಂಧಾನ ಮಾಡುವುದು.

'ವಿವೇಕ' ಎಂಬುದೊಂದಿದೆ ಎಂದು ಭಾವಿಸಿದರೂ, ವಿವೇಕಿಗಳ ಕೈಗೆ ಸರ್ಕಾರವನ್ನು ಕೊಡುವ ಸಂವಿಧಾನವಿದೆಯೇ? ಬಹುಮತಗಳು, ಸಾಮಾನ್ಯ ಪರಿಷತ್ತುಗಳಂತೆ, ತಪ್ಪು ಮಾಡಬಹುದು ಎಂಬುದು ಸ್ಪಷ್ಟವೇ, ಹಾಗೆ ಮಾಡಿಯೂ

ಇವೆ. ಶ್ರೀಮಂತಪ್ರಭುತ್ವವು ಎಲ್ಲ ಸಂದರ್ಭಗಳಲ್ಲೂ ವಿವೇಕದಿಂದ ಕೂಡಿವೆ ಎನ್ನಲಾಗುವುದಿಲ್ಲ; ಎಷ್ಟೋ ವೇಳೆ ರಾಜರು ಮೂರ್ಖತನದಿಂದ ಕೂಡಿರುತ್ತಾರೆ; ತಪ್ಪೇ ಮಾಡದ ಪೋಪ್‌ಗಳು ಕೂಡ ದೊಡ್ಡ ತಪ್ಪುಗಳನ್ನು ಎಸಗಿದ್ದಾರೆ. ವಿಶ್ವವಿದ್ಯಾಲಯದ ಸ್ನಾತಕರಿಗೆ ಅಥವಾ ದೈವಜ್ಞಾನದ ಡಾಕ್ಟರೇಟ್ ಪದವೀಧರರಿಗೆ ಸರ್ಕಾರವನ್ನು ವಹಿಸಬಹುದು ಎಂದು ಯಾರಾದರೂ ಹೇಳಬಲ್ಲರೇ? ಅಥವಾ, ಬಡವರಾಗಿ ಹುಟ್ಟಿ ಭಾರಿ ಐಶ್ವರ್ಯವನ್ನು ಗಳಿಸಿದವರಿಗೆ? ಯಾವುದೇ ನಿಗದಿತ ಕಾನೂನಾತ್ಮಕ ಆಯ್ಕೆಯ ವಿಧಾನದಿಂದ ಜನಗಳಲ್ಲಿ ಯಾವ ಗುಂಪು ಮಿಕ್ಕವರಿಗಿಂತ ಹೆಚ್ಚು ವಿವೇಕಿಗಳು ಎಂದು ತೀರ್ಮಾನಿಸುವುದು ಅಸಾಧ್ಯ ಹಾಗೂ ವ್ಯವಹಾರಸಾಧ್ಯವಲ್ಲ ಎಂಬುದು ಸ್ಪಷ್ಟ.

ಸೂಕ್ತ ತರಬೇತಿಯ ಮೂಲಕ ಜನರಿಗೆ ರಾಜಕೀಯ ವಿವೇಕವನ್ನು ಕಲಿಸಬಹುದು ಎಂದು ಸೂಚಿಸಬಹುದು. ಆದರೆ ಆಗಲೂ ಪ್ರಶ್ನೆಯೊಂದು ಉದ್ಭವಿಸುತ್ತದೆ: ಸೂಕ್ತ ತರಬೇತಿ ಎಂದರೆ ಯಾವುದು? ಇದು ಪಕ್ಷದ ಪ್ರಶ್ನೆಯಾಗಿ ಮಾರ್ಪಡುತ್ತದೆ.

'ವಿವೇಕಿ'ಗಳ ಗುಂಪೊಂದನ್ನು ಗುರುತಿಸುವ ಹಾಗೂ ಅವರಿಗೆ ಸರ್ಕಾರವನ್ನು ವಹಿಸುವ ಸಮಸ್ಯೆಯು ಈ ರೀತಿಯಲ್ಲಿ ಬಗೆಹರಿಸಲಾಗದ್ದು. ಇದೇ ಪ್ರಜಾಪ್ರಭುತ್ವಕ್ಕೆ ಆತ್ಯಂತಿಕ ಕಾರಣ.

❍

೧೪
ಪ್ಲೇಟೋನ ಆದರ್ಶರಾಜ್ಯ (ಯುಟೋಪಿಯ)

ಪ್ಲೇಟೋನ ಅತ್ಯಂತ ಪ್ರಮುಖ ಸಂವಾದವಾದ 'ರಿಪಬ್ಲಿಕ್' ಸ್ಥೂಲವಾಗಿ ಮೂರು ಭಾಗಗಳನ್ನೊಳಗೊಂಡಿದೆ. ಮೊದಲನೆಯದು (ಭಾಗ ೫ ರ ಸುಮಾರು ಕೊನೆಯವರೆಗೆ) ಒಂದು ಆದರ್ಶ ರಾಜ್ಯದ ನಿರ್ಮಾಣದ ಬಗೆಗೆ ಚಿಂತಿಸುತ್ತದೆ; ಇದು ಯುಟೋಪಿಯದ ಆರಂಭಿಕ ಭಾಗ

ಇಲ್ಲಿ ತಲುಪಲಾದ ತೀರ್ಮಾನವೆಂದರೆ ಆಳುವವರು ತತ್ತ್ವಜ್ಞಾನಿಗಳಾಗಿರಬೇಕು ಎಂಬುದು. ಭಾಗ ೬ ಮತ್ತು ೭ ಗಳು 'ತತ್ತ್ವಜ್ಞಾನಿ'ಯ ವ್ಯಾಖ್ಯೆಯನ್ನು ನೀಡುವ ಪ್ರಯತ್ನವಾಗಿದೆ. ಈ ಚರ್ಚೆಯು ಎರಡನೆಯ ಭಾಗದ ವಸ್ತು.

'ರಿಪಬ್ಲಿಕ್'ನ ಸಾಮಾನ್ಯ ಉದ್ದೇಶವೆಂದರೆ 'ನ್ಯಾಯ' ಎಂದರೇನೆಂಬುದನ್ನು ಸೂತ್ರೀಕರಿಸುವುದು. ಆದರೆ ಆರಂಭಿಕ ಹಂತದಲ್ಲಿಯೇ, ದೊಡ್ಡದನ್ನು ನೋಡುವುದು ಚಿಕ್ಕದನ್ನು ನೋಡುವುದಕ್ಕಿಂತ ಸುಲಭವಾದುದರಿಂದ, ನ್ಯಾಯಪರ ವ್ಯಕ್ತಿಯನ್ನಾಗಿಸುವುದು ಯಾವುದು ಎನ್ನುವುದಕ್ಕಿಂತ ನ್ಯಾಯಪರ ಸರ್ಕಾರವನ್ನು ರೂಪಿಸುವುದು ಯಾವುದು ಎಂಬುದನ್ನು ವಿವರಿಸುವ ತೀರ್ಮಾನ ಮಾಡುತ್ತದೆ. ಕಲ್ಪಿಸಿಕೊಳ್ಳಬಹುದಾದ ಅತ್ಯಂತ ಶ್ರೇಷ್ಠ ಸರ್ಕಾರದ ಲಕ್ಷಣಗಳಲ್ಲಿ ನ್ಯಾಯವೂ ಒಂದಾಗಿರಬೇಕಾದ್ದರಿಂದ, ಅಂಥ ಸರ್ಕಾರವನ್ನು ಮೊದಲು ವರ್ಣಿಸಲಾಗಿದೆ, ಆನಂತರ ಅದರ ಯಾವ ಪರಿಪೂರ್ಣತೆಯನ್ನು 'ನ್ಯಾಯ' ಎಂದು ಕರೆಯಬೇಕೆಂಬುದನ್ನು ತೀರ್ಮಾನಿಸಲಾಗಿದೆ.

ಮೊದಲಿಗೆ ನಾವು ಪ್ಲೇಟೋನ ಆದರ್ಶರಾಜ್ಯವನ್ನು ಸ್ಥೂಲವಾಗಿ ವಿವರಿಸೋಣ, ಆನಂತರ ಅಲ್ಲಿ ಉದ್ಭವಿಸುವ ಅಂಶಗಳ ಕುರಿತು ಚಿಂತಿಸೋಣ.

ಜನಸಂಖ್ಯೆಯನ್ನು ಮೂರು ವರ್ಗಗಳಾಗಿ ವಿಂಗಡಿಸಬೇಕೆಂಬ ತೀರ್ಮಾನದೊಂದಿಗೆ ಪ್ಲೇಟೋ ಆರಂಭಿಸುತ್ತಾನೆ; ಸಾಮಾನ್ಯ ಜನತೆ, ಸೈನಿಕರು ಮತ್ತು ಪಾಲಕರು. ಈ ಕೊನೆಯದು ಮಾತ್ರವೇ ರಾಜಕೀಯ ಅಧಿಕಾರವನ್ನು ಹೊಂದಿರಬೇಕು. ಆ ವರ್ಗದ ಸಂಖ್ಯೆಯು ಉಳಿದೆರಡು ವರ್ಗಗಳ ಸಂಖ್ಯೆಗಿಂತ

ತುಂಬ ಕಡಿಮೆಯಿರಬೇಕು. ಮೊದಲಿಗೆ, ಅವರನ್ನೊಬ್ಬ ಶಾಸಕ ಆಯ್ಕೆಮಾಡಬೇಕೆಂದು ಕಾಣುತ್ತದೆ, ಆ ಬಳಿಕ, ಅವರು ಸಾಮಾನ್ಯವಾಗಿ ವಂಶಪಾರಂಪರ್ಯದಿಂದ ಮುಂದುವರಿಯಬೇಕು, ಆದರೆ ವಿಶೇಷ ಸಂದರ್ಭಗಳಲ್ಲಿ ಕೆಳವರ್ಗಗಳಲ್ಲಿನ ಒಂದು ಭರವಸೆಯ ಮಗುವನ್ನು ಆ ದರ್ಜೆಗೇರಿಸಬೇಕು, ಮಿಕ್ಕ ಪಾಲಕರ ಇತರ ಮಕ್ಕಳಲ್ಲಿ ಒಂದು ಮಗುವೋ ಯುವಕನೋ ತೃಪ್ತಿಕರವಲ್ಲವೆಂದಾದರೆ ಅವನ ದರ್ಜೆಯನ್ನಿಳಿಸಬಹುದು.

ಪ್ಲೇಟೋನ ಈ ಕಲ್ಪನೆಯ ಮುಖ್ಯ ಸಮಸ್ಯೆಯೆಂದರೆ, ಪಾಲಕರು ಶಾಸಕನ ಆಶಯಗಳನ್ನು ಕಾರ್ಯಗತಗೊಳಿಸಬೇಕೆಂಬುದು. ಈ ಬಗ್ಗೆ ಅವನಲ್ಲಿ ಶೈಕಣಿಕ, ಆರ್ಥಿಕ, ಜೈವಿಕ, ಮತ್ತು ಮತಧಾರ್ಮಿಕವಾದ ಅನೇಕ ಸಲಹೆಗಳಿವೆ. ಈ ಸಲಹೆಗಳು ಪಾಲಕರಿಗಲ್ಲದೆ ಉಳಿದೆರಡು ವರ್ಗಗಳಿಗೆ ಹೇಗೆ ಅನ್ವಯಿಸಬುದೆಂಬುದು ಇಲ್ಲಿ ಸ್ಪಷ್ಟವಾಗುವುದಿಲ್ಲ. ಅವುಗಳಲ್ಲಿ ಕೆಲವು ಸೈನಿಕರಿಗೆ ಅನ್ವಯಸುತ್ತವೆ ಎಂಬುದೇನೋ ಸ್ಪಷ್ಟವಾದರೂ, ಪ್ಲೇಟೋ ಮುಖ್ಯವಾಗಿ ಪಾಲಕರ ಬಗ್ಗೆಯಷ್ಟೇ ಆಲೋಚಿಸುತ್ತಾನೆ; ಅವರು ಪ್ರಾಚೀನ ಪರಗ್ವೆಯ ಜೆಸ್ಯೂಟರು, ೧೮೭೦ ರವರೆಗಿನ ಚರ್ಚ್ ರಾಜ್ಯಗಳಲ್ಲಿನ ಎಕ್ಲಿಸಿಯಾಸ್ಟಿಕ್‌ರು ಮತ್ತು ಈಗ ಸೋವಿಯತ್ ಒಕ್ಕೂಟದಲ್ಲಿನ ಕಮ್ಯೂನಿಸ್ಟರಂತೆ ಬೇರೆಯೇ ಒಂದು ವರ್ಗವಾಗಬೇಕಾಗುತ್ತದೆ.

ಪರಿಶೀಲಿಸಬೇಕಾದ ಮೊದಲ ಅಂಶವೆಂದರೆ ಶಿಕ್ಷಣ. ಇದು ಎರಡು ಭಾಗವಾಗಿ ವಿಭಾಗಗೊಂಡಿದೆ: ಸಂಗೀತ ಮತ್ತು ವ್ಯಾಯಾಮ. ಎರಡಕ್ಕೂ ಈಗಿಗಿಂತ ಹೆಚ್ಚು ವ್ಯಾಪಕವಾದ ಅರ್ಥವಿದೆ. 'ಸಂಗೀತ'ವು ಕಲಾದೇವಿಯರ (ಮ್ಯೂಸಸ್) ವ್ಯಾಪ್ತಿಯಲ್ಲಿನ ಎಲ್ಲವನ್ನೂ ಒಳಗೊಳ್ಳುತ್ತದೆ; ಮತ್ತು 'ವ್ಯಾಯಾಮ' (ಜಿಮ್ನಾಸ್ಟಿಕ್ಸ್) ಎಂಬುದು ದೈಹಿಕ ಶಿಕ್ಷಣ ಮತ್ತು ದೇಹಪಟುತ್ವವನ್ನೊಳಗೊಳ್ಳುತ್ತದೆ. 'ಸಂಗೀತ' ಎಂಬುದು ನಾವೀಗ 'ಸಂಸ್ಕೃತಿ' ಎಂದು ಕರೆಯಬಹುದಾದಷ್ಟು ವ್ಯಾಪಕಾರ್ಥವುಳ್ಳದ್ದು, ಮತ್ತು 'ವ್ಯಾಯಾಮ'ವು ನಾವೀಗ 'ಅಥ್ಲೆಟಿಕ್ಸ್' ಎನ್ನುವುದಕ್ಕಿಂತ ಹೆಚ್ಚಿನರ್ಥವುಳ್ಳದ್ದು.

ಜನರನ್ನು 'ಮಹನೀಯ' (ಜಂಟಲ್‌ಮೆನ್) ರನ್ನಾಗಿ – ಪ್ಲೇಟೋ ಪ್ರಭಾವದಿಂದಾಗಿ ಇಂಗ್ಲಂಡ್‌ನಲ್ಲಿ ಈ ಶಬ್ದಕ್ಕಿರುವ ಅರ್ಥದಲ್ಲಿ – ಮಾಡುವುದಕ್ಕೆ ಸಂಸ್ಕೃತಿ ಮೀಸಲಾಗಿರಬೇಕು. ಅವನ ಕಾಲದ ಅಥೆನ್ಸ್, ಒಂದು ಅಂಶದಲ್ಲಿ, ಹತ್ತೊಂಬತ್ತನೆಯ ಶತಮಾನದ ಇಂಗ್ಲಂಡ್ ಅನ್ನು ಸರಿಸುಮಾರು ಹೋಲುವಂತಹುದಾಗಿತ್ತು: ಶ್ರೀಮಂತಿಕೆ ಮತ್ತು ಸಾಮಾಜಿಕ ಗೌರವಗಳುಳ್ಳ ಶ್ರೀಮಂತವರ್ಗವು ಎರಡರಲ್ಲೂ ಇತ್ತು, ಆದರೆ ರಾಜಕೀಯ ಅಧಿಕಾರದ ಒಡೆತನವಲ್ಲ; ಎರಡರಲ್ಲೂ ಶ್ರೀಮಂತವರ್ಗವು ಸಭ್ಯ ನಡತೆಯಿಂದ ಸಾಧ್ಯವಾದಷ್ಟು ಅಧಿಕಾರವನ್ನು ಗಳಿಸಿಕೊಳ್ಳಬೇಕಾಗಿತ್ತು. ಆದರೆ ಪ್ಲೇಟೋನ ಆದರ್ಶರಾಜ್ಯದಲ್ಲಿ ಶ್ರೀಮಂತವರ್ಗಕ್ಕೆ ಕಡಿವಾಣಗಳಿರಲಿಲ್ಲ.

ಮುಖ್ಯವಾಗಿ ಗಾಂಭೀರ್ಯ, ಸಭ್ಯತೆ ಮತ್ತು ಧೈರ್ಯಗಳು ಶಿಕ್ಷಣದಿಂದ ನೆಲೆಗೊಳ್ಳಬೇಕು. ಯುವಕರ ಕೈಗೆ ಸಿಕ್ಕುವ ಸಾಹಿತ್ಯ ಹಾಗೂ ಅವರು ಕೇಳಬಹುದಾದ ಸಂಗೀತ ಇವುಗಳ ಮೇಲೆ ಮೊದಲಿನಿಂದ ನಿಯಂತ್ರಣವಿರಬೇಕು. ತಾಯಂದಿರೂ ದಾದಿಯರೂ ಮಕ್ಕಳಿಗೆ ಅಧಿಕೃತವೆಂದು ಮಾನ್ಯವಾದ ಕತೆಗಳನ್ನಷ್ಟೇ ಹೇಳಬೇಕು. ಅನೇಕ ಕಾರಣಗಳಿಗಾಗಿ, ಹೋಮರ್ ಮತ್ತು ಹೇಸಿಯಾಡ್‌ರಿಗೆ ಅವಕಾಶವಿರಬಾರದು. ಮೊದಲಿಗೆ, ಅವರು ದೇವತೆಗಳನ್ನು ಕೆಲವು ಸಂದರ್ಭಗಳಲ್ಲಿ ಕೆಟ್ಟುದಾಗಿ ನಡೆದುಕೊಳ್ಳುತ್ತಾರೆಂದು ಅನೀತಿಯುತವಾಗಿ ಚಿತ್ರಿಸುವುದು; ದೇವತೆಗಳಿಂದ ಯಾವತ್ತೂ ಕೆಟ್ಟುದು ಬರಲು ಸಾಧ್ಯವಿಲ್ಲ ಎಂಬುದನ್ನು ಕಿರಿಯರಿಗೆ ಬೋಧಿಸಬೇಕು, ಯಾಕೆಂದರೆ ದೇವರು ಎಲ್ಲದರ ಕರ್ತೃವಲ್ಲ, ಒಳ್ಳೆಯದರ ಕರ್ತೃ ಮಾತ್ರ. ಎರಡನೆಯದಾಗಿ, ಹೋಮರ್ ಮತ್ತು ಹೇಸಿಯಾಡ್‌ರಲ್ಲಿ ಓದುಗರು ಸಾವಿನ ಬಗ್ಗೆ ಭಯಪಡುವಂತೆ ಮಾಡಬೇಕೆಂಬ ಉದ್ದೇಶದಿಂದ ರಚಿಸಿದ ಅಂಶಗಳಿವೆ, ಅದರ ಬದಲಿಗೆ ಯುವಕರು ಯುದ್ಧದಲ್ಲಿ ಸಾಯಲು ಸಿದ್ಧರಾಗುವಂತೆ ಮಾಡುವ ಅಂಶಗಳು ಶಿಕ್ಷಣದಲ್ಲಿರಬೇಕು. ಸಾವಿಗಿಂತ ಗುಲಾಮಗಿರಿಯು ಕೀಳು ಎಂಬ ಮನೋಭಾವವನ್ನು ಹುಡುಗರಲ್ಲಿ ಬಿತ್ತಬೇಕು, ಹೀಗಾಗಿ ಅವರೆದುರಿಗೆ ಒಳ್ಳೆಯವರು, ಗೆಳೆಯರ ಸಾವಿಗೆ ಕೂಡ, ಗೋಳಾಡುವ ಹಾಗೂ ಹಲುಬುವ ಕತೆಗಳಿರಬಾರದು. ಮೂರನೆಯದಾಗಿ, ಸನ್ನಡತೆಯೆಂದರೆ ಎಂದೂ ಜೋರಾಗಿ ನಗದಿರುವುದು, ಆದರೆ ಹೋಮರ್ 'ದೇವತೆಗಳಲ್ಲಿನ ಬತ್ತದ ಅಟ್ಟಹಾಸ'ವನ್ನು ವರ್ಣಿಸುತ್ತಾನೆ. ಈ ಭಾಗವನ್ನು ಬೋಧಿಸುವ ಶಾಲಾ ಅಧ್ಯಾಪಕನು ಉಲ್ಲಾಸವನ್ನು ಹೇಗೆ ತಾನೆ ತೆಗಳಬೇಕು? ನಾಲ್ಕನೆಯದಾಗಿ, ಹೋಮರ್‌ನಲ್ಲಿ ವೈಭವಪೂರಿತ ಹಬ್ಬಗಳ ಹೊಗಳಿಕೆಯ ಭಾಗಗಳಿವೆ, ಹಾಗೆಯೇ ದೇವತೆಗಳ ಕಾಮನೆಯ ವರ್ಣನೆಗಳಿವೆ; ಇಂತಹ ಭಾಗಗಳು ಸಂಯಮವನ್ನು ಸಡಿಲಗೊಳಿಸುತ್ತವೆ. ನಿಜವಾದ ಪ್ಲೇಟೋ ಅನುಯಾಯಿ ಡೀನ್ ಇಂಜ್ ಈ ಸುಪ್ರಸಿದ್ಧ ಪ್ರಾರ್ಥನೆಯ ಒಂದು ಸಾಲಿನ ಬಗ್ಗೆ – ಸ್ವರ್ಗದ ಸಂತೋಷವನ್ನು ವರ್ಣಿಸುವ ಒಂದು ಭಾಗದಲ್ಲಿ ಬರುವ 'ಗೆದ್ದವರ ಕೇಕೆ, ಹಬ್ಬವನ್ನಾಚರಿಸುವವರ ಹಾಡು' – ಆಕ್ಷೇಪವೆತ್ತುತ್ತಾನೆ. ಹೀಗಾಗಿ ಕೆಟ್ಟವರು ಸಂತೋಷವಾಗಿರುವ ಅಥವಾ ಒಳ್ಳೆಯವರು ದುಃಖಿತರಾಗಿರುವ ಕತೆಗಳಿರಬಾರದು; ಅವು ಎಳೆಯ ಮನಸ್ಸುಗಳ ಮೇಲೆ ದುರದೃಷ್ಟಕರ ಪರಿಣಾಮವನ್ನು ಬೀರಬಹುದು. ಈ ಎಲ್ಲ ಅಂಶಗಳಿಂದಾಗಿ, ಕವಿಗಳನ್ನು ದೂರೀಕರಿಸಬೇಕು.

ಮುಂದೆ ಪ್ಲೇಟೋ ನಾಟಕದ ಬಗ್ಗೆ ಕುತೂಹಲಕಾರಕ ವಾದವನ್ನು ಮಂಡಿಸುತ್ತಾನೆ. ಒಳ್ಳೆಯ ವ್ಯಕ್ತಿಯು ಕೆಟ್ಟ ಮನುಷ್ಯನನ್ನು ಅನುಕರಿಸುವುದನ್ನು ಇಷ್ಟಪಡಬಾರದು; ಈಗಿನ ಬಹುತೇಕ ನಾಟಕಗಳಲ್ಲಿ ಖಳನಾಯಕರಿದ್ದಾರೆ, ಹೀಗಾಗಿ ನಾಟಕಕಾರ ಹಾಗೂ ಖಳನಾಯಕನ ಪಾತ್ರ ವಹಿಸುವ ನಟ – ಇಬ್ಬರೂ ನಾನಾ

ಬಗೆಯ ಅಪರಾಧಗಳನ್ನು ಮಾಡುವವರನ್ನು ಅನುಕರಿಸಬೇಕಾಗುತ್ತದೆ. ಅಪರಾಧಿಗಳು ಮಾತ್ರವಲ್ಲ, ಹೆಂಗಸರು, ಗುಲಾಮರು ಮತ್ತು ಸಾಮಾನ್ಯವಾಗಿ ಕೀಳು ಜನರನ್ನು ಮೇಲುವರ್ಗದವರು ಅನುಕರಿಸಬಾರದು. (ಗ್ರೀಸ್‌ನಲ್ಲಿ, ಎಲಿಜ಼ಬೆತ್ ಕಾಲದ ಇಂಗ್ಲಂಡ್‌ನಲ್ಲಿನಂತೆ, ಸ್ತ್ರೀಪಾತ್ರಗಳನ್ನು ಪುರುಷರೇ ವಹಿಸುತ್ತಿದ್ದರು.) ಹೀಗಾಗಿ, ನಾಟಕಗಳಿಗೆ ಅವಕಾಶವಿರಬೇಕಾದರೆ, ಅವು ಕುಲೀನ ಮನೆತನದ ಒಳ್ಳೆಯ ಗಂಡಸರನ್ನು ಹೊರತುಪಡಿಸಿ ಉಳಿದ ಯಾವ ಪಾತ್ರಗಳನ್ನೂ ಹೊಂದಿರಬಾರದು. ಇದು ಹೇಗೆ ಸಾಧ್ಯವಾಗದು ಎಂಬುದು ಸುಸ್ಪಷ್ಟವಾಗಿದೆ, ಪ್ಲೇಟೋ ತನ್ನ ನಗರದಿಂದ ಎಲ್ಲ ನಾಟಕಕಾರರನ್ನು ಬಹಿಷ್ಕರಿಸುತ್ತಾನೆ.

> **ಏನನ್ನು ಬೇಕಾದರೂ ಅನುಕರಿಸಬಲ್ಲ ಈ ಅನುಕರಣಚತುರರು ನಮ್ಮ ಬಳಿ ಬಂದು ತಮ್ಮ ಅಭಿನಯವನ್ನೂ ಕಾವ್ಯವನ್ನೂ ಪ್ರದರ್ಶಿಸಲು ಅವಕಾಶ ಕೇಳಿದಾಗಲೆಲ್ಲ, ನಾವು ಅವರನ್ನು ಶ್ರೇಷ್ಠರು, ಅದ್ಭುತ ವ್ಯಕ್ತಿಗಳು ಎಂದು ಕಾಲಿಗೆ ಬಿದ್ದು ಪೂಜಿಸುತ್ತೇವೆ; ಆದರೆ ನಮ್ಮ ದೇಶದಲ್ಲಿ ಅಂತಹವರು ಇರಲು ಅವಕಾಶವಿಲ್ಲವೆಂದು ಅವರಿಗೆ ಹೇಳಬೇಕು; ಅವರಿಗೆ ಕಾನೂನು ಅವಕಾಶ ನೀಡಲಾರದು. ಹೀಗಾಗಿ ಅವರಿಗೆ ಪರಿಮಳವನ್ನು ಪೂಸಿ, ಅವರ ತಲೆಗೆ ಉಣ್ಣೆಯ ಕಿರೀಟ ತೊಡಿಸಿ ಅವರನ್ನು ಮತ್ತೊಂದು ನಗರಕ್ಕೆ ಕಳಿಸಬೇಕು.**

ಈಗ ನಾವು ಸಂಗೀತದ (ಆಧುನಿಕ ಅರ್ಥದಲ್ಲಿ) ನಿಷೇಧದ ವಿಷಯಕ್ಕೆ ಬರೋಣ. ಲಿಡಿಯ ಮತ್ತು ಅಯೋನಿಯದ ಸಂಗೀತ ಮೇಳಗಳನ್ನು ನಿಷೇಧಿಸಬೇಕು; ಮೊದಲ ಕಾರಣ, ಅವು ದುಃಖವನ್ನು ವ್ಯಕ್ತಪಡಿಸುತ್ತವೆ ಎಂಬುದು, ಎರಡನೆಯದು ಅದು ಆರಾಮದಾಯಕವಾದದ್ದು ಎಂಬುದು. ಡೋರಿಯ (ಅದರ ಧೈರ್ಯವಂತಿಕೆಗಾಗಿ) ಮತ್ತು ಫ್ರಿಜಿಯ (ಅದರ ಸಂಯಮಕ್ಕಾಗಿ) ಅಂತಹದವಕ್ಕೆ ಮಾತ್ರ ಅವಕಾಶ ನೀಡಬಹುದು. ಒಪ್ಪಿತವಾದ ಲಯಗಾರಿಕೆಯು ಸರಳವಾಗಿದ್ದು, ಧೈರ್ಯವಂತ ಹಾಗೂ ಸಾಮರಸ್ಯಪೂರ್ಣ ಜೀವನವನ್ನು ಅಭಿವ್ಯಕ್ತಿಪಡಿಸುವಂತಿರಬೇಕು.

ದೈಹಿಕ ತರಬೇತಿಯು ಕಠಿಣವಾಗಿರಬೇಕು. ಯಾರೂ ಹುರಿದುದಲ್ಲದೆ ಬೇಯಿಸಿದ ಮೀನು ಅಥವಾ ಮಾಂಸವನ್ನು ತಿನ್ನಬಾರದು, ಆದರೆ ಯಾವುದೇ ಬಗೆಯ ಗೊಜ್ಜಾಗಲೀ ವ್ಯಂಜನ ಪದಾರ್ಥಗಳಾಗಲೀ ಇರಬಾರದು. ತನ್ನ ನಿಯಮಗಳಿಗನುಸಾರವಾಗಿ ಬೆಳೆದವರಾರಿಗೂ ವೈದ್ಯರ ಆವಶ್ಯಕತೆಯೇ ಇರುವುದಿಲ್ಲ.

ಒಂದು ನಿರ್ದಿಷ್ಟ ವಯಸ್ಸಿನವರೆಗೂ, ಯುವಕರಾರೂ ಕುರೂಪವನ್ನಾಗಲೀ ಪಾಪಕಾರ್ಯವನ್ನಾಗಲೀ ಕಾಣಬಾರದು. ಆದರೆ ಸೂಕ್ತ ಸಮಯದಲ್ಲಿ, ಅವರೆದುರು, ಹೆದರಿಸದ ಭಯಾನಕ ದೃಶ್ಯಗಳು ಹಾಗೂ ಬಯಕೆಯನ್ನು ಕಲುಷಿತಗೊಳಿಸದ ದುಷ್ಟ ಸಂತೋಷಗಳ 'ಆಕರ್ಷಣೆ'ಗಳನ್ನೊಡ್ಡಬೇಕು. ಈ ಪರೀಕ್ಷೆಗಳನ್ನು ಯಶಸ್ವಿಯಾಗಿ

ಎದುರಿಸಿದ ನಂತರ ಅವರನ್ನು ಪಾಲಕರಾಗಲು ಯೋಗ್ಯರೆಂದು ತೀರ್ಮಾನಿಸಬೇಕು.

ಯುವಕರಾಗಿ ಬೆಳೆಯುವ ಮುಂಚೆಯೇ ಹುಡುಗರು ಯುದ್ಧವನ್ನು ನೋಡಬೇಕು, ಆದರೆ ತಾವೇ ಅದರಲ್ಲಿ ಭಾಗವಹಿಸಬೇಕಾದ್ದಿಲ್ಲ.

ಇನ್ನು ಆರ್ಥಿಕತೆಗೆ ಸಂಬಂಧಿಸಿದಂತೆ: ಪಾಲಕರಿಗೆ ಮತ್ತು ಸೈನಿಕರಿಗೆ (ನನ್ನ ತಿಳಿವಳಿಕೆಯಲ್ಲಿ) ಪ್ಲೇಟೋ ಪರಿಪೂರ್ಣ ಕಮ್ಯುನಿಸಂ ಅನ್ನೇ ನಿಗದಿಪಡಿಸುತ್ತಾನೆ, ಆದರೆ ಇದು ಸ್ಪಷ್ಟವಾಗಿಲ್ಲ. ಪಾಲಕರು ಸಣ್ಣ ಮನೆಗಳಲ್ಲಿ ವಾಸಿಸಬೇಕು ಹಾಗೂ ಸರಳ ಆಹಾರವನ್ನು ಸೇವಿಸಬೇಕು; ಅವರು ಶಿಬಿರದಲ್ಲಿ ವಾಸಿಸುತ್ತ ಇತರರ ಜೊತೆಗೆ ಊಟಮಾಡಬೇಕು. ಅತ್ಯವಶ್ಯಕವಾದುದಕ್ಕಿಂತ ಹೆಚ್ಚಿನ ಆಸ್ತಿ ಅವರ ಬಳಿ ಇರಬಾರದು. ಚಿನ್ನಬೆಳ್ಳಿಗಳನ್ನು ನಿಷೇಧಿಸಬೇಕು. ಶ್ರೀಮಂತರಾಗಿರದಿದ್ದರೇನಂತೆ, ಸುಖವಾಗಿರದಿರಲು ಕಾರಣವೇ ಇಲ್ಲ. ನಗರದ ಉದ್ದೇಶ ಸರ್ವಜನ ಸುಖವೇ ಹೊರತು ಒಂದು ವರ್ಗದ ಸುಖವಲ್ಲ. ಶ್ರೀಮಂತಿಕೆ–ಬಡತನಗಳು ಸಾಮಾನ್ಯ, ಆದರೆ ಪ್ಲೇಟೋನ ನಗರದಲ್ಲಿ ಈ ಎರಡೂ ಇರುವುದಿಲ್ಲ. ಯುದ್ಧದ ಬಗ್ಗೆ ಕೌತುಕಮಯವಾದ ವಾದವೊಂದಿದೆ, ಅದೆಂದರೆ ಮೈತ್ರಿಯನ್ನು ಕೊಂಡುಕೊಳ್ಳುವುದು ಸುಲಭ, ಯಾಕೆಂದರೆ ನಮ್ಮ ನಗರದ ಗೆಲವನ್ನು ಯಾವುದೇ ಬಗೆಯಲ್ಲಿ ಕಲುಷಿತಗೊಳಿಸುವುದು ನಮಗಿಷ್ಟವಿಲ್ಲ.

ಒಲ್ಲದ ಮನಸ್ಸಿನಿಂದ ಪ್ಲೇಟೋನ ಸಾಕ್ರಟೀಸ್ ತನ್ನ ಕಮ್ಯುನಿಸಂ ಅನ್ನು ಕುಟುಂಬಕ್ಕೆ ಅನ್ವಯಿಸಲು ಹೊರಡುತ್ತಾನೆ. ಸ್ನೇಹಿತರಿಗೆ, ಹೆಂಗಸರು ಮತ್ತು ಮಕ್ಕಳು ಕೂಡ, ಎಲ್ಲವೂ ಸಮಾನವಾಗಿರಬೇಕು. ಇದು ಅನೇಕ ತೊಂದರೆಗಳನ್ನು ತರಬಲ್ಲುದೆಂಬುದನ್ನವನು ಒಪ್ಪುತ್ತಾನೆ, ಆದರೆ ಅವೇನೂ ಅನಿವಾರಣೀಯವಲ್ಲ ಎಂದೂ ಹೇಳುತ್ತಾನೆ. ಮೊದಲನೆಯದಾಗಿ, ಹುಡುಗಿಯರಿಗೆ ಹುಡುಗರು ಪಡೆಯುವಂತಹ ಶಿಕ್ಷಣ, ಸಂಗೀತ, ಅಂಗಸಾಧನೆ, ಮತ್ತು ಯುದ್ಧಕಲೆಗಳನ್ನೇ ಕಲಿಸಬೇಕು. ಹೆಂಗಸರು ಎಲ್ಲ ವಿಷಯಗಳಲ್ಲಿಯೂ ಗಂಡಸರಿಗೆಸಮಾನವಾಗಿರಬೇಕು. 'ಗಂಡಸನ್ನು ಒಳ್ಳೆಯ ಪಾಲಕನನ್ನಾಗಿ ಮಾಡುವ ಶಿಕ್ಷಣವು ಹೆಂಗಸನ್ನೂ ಒಳ್ಳೆಯ ಪಾಲಕಿಯಾಗುವಂತೆ ಮಾಡುತ್ತದೆ. ಏಕೆಂದರೆ ಅವರಿಬ್ಬರ ಮೂಲಸ್ವಭಾವವೂ ಒಂದೇ.' ಗಂಡಸರು ಮತ್ತು ಹೆಂಗಸರ ನಡುವೆ ವ್ಯತ್ಯಾಸಗಳಿವೆ ಎಂಬುದರಲ್ಲಿ ಅನುಮಾನವೇನಿಲ್ಲ, ಆದರೆ ರಾಜಕೀಯದಲ್ಲಿ ಅದರ ಯಾವ ಪಾತ್ರವೂ ಇರಬಾರದು. ಕೆಲವು ಹೆಂಗಸರು ತತ್ವಚಿಂತಕರಾಗಿರುತ್ತಾರೆ, ಹೀಗಾಗಿ ಪಾಲಕಿಯರಾಗಲು ಯೋಗ್ಯರು; ಕೆಲವರು ಯುದ್ಧೋತ್ಸಾಹಿಗಳು, ಹೀಗಾಗಿ ಒಳ್ಳೆಯ ಸೈನಿಕರಾಗಬಹುದು.

ಕೆಲವು ಮಂದಿ ಗಂಡಸರು ಕೆಲವರು ಹೆಂಗಸರನ್ನು ಪಾಲಕರನ್ನಾಗಿ ಆಯ್ಕೆ ಮಾಡಿದ ಶಾಸಕನು, ಅವರೆಲ್ಲರೂ ಒಂದೇ ಮನೆಯಲ್ಲಿರಬೇಕು ಹಾಗೂ ಒಂದೇ ಬಗೆಯ ಊಟ ಮಾಡಬೇಕು ಎಂದು ವಿಧಿಸುತ್ತಾನೆ, ನಮಗೆ ಗೊತ್ತಿರುವ ಮದುವೆಯ

ಸ್ವರೂಪವು ಸಂಪೂರ್ಣವಾಗಿ ಬದಲಾಗುತ್ತದೆ.[೫೭] ಕೆಲವು ಹಬ್ಬಗಳಂದು, ಜನಸಂಖ್ಯೆಯನ್ನು ಒಂದೇ ಬಗೆಯಲ್ಲಿರಿಸಲು ಬೇಕಾಗುವ, ವಧೂವರರನ್ನು ಲಾಟರಿ ಮೂಲಕ ಒಟ್ಟಿಗೇ ಸೇರಿಸಲಾಗುತ್ತದೆ, ಅವರಿಗೆ ಅದನ್ನೊಪ್ಪುವ ಶಿಕ್ಷಣವನ್ನು ನೀಡಲಾಗಿರುತ್ತದೆ. ಆದರೆ ಕಡಿಮೆಯಾದುದನ್ನು ನಗರದ ಆಡಳಿತಗಾರರು ಸುಸಂತಾನ ತತ್ವಗಳಿಗನುಗುಣವಾಗಿ ಸರಿದೂಗಿಸುತ್ತಾರೆ. ಅತ್ಯುತ್ತಮ ತಂದೆಯರು ಹೆಚ್ಚು ಮಕ್ಕಳನ್ನು ಪಡೆಯುವಂತೆ ಅವರು ವ್ಯವಸ್ಥೆಮಾಡುತ್ತಾರೆ. ಹುಟ್ಟಿದಾಗಲೇ ಎಲ್ಲ ಮಕ್ಕಳನ್ನೂ ತಂದೆತಾಯಿಯರಿಂದ ತೆಗೆದುಕೊಂಡು ಹೋಗಲಾಗುತ್ತದೆ. ತಾಯ್ತಂದೆಯರಿಗೆ ತಮ್ಮ ಮಕ್ಕಳಾರೆಂದೂ, ಮಕ್ಕಳಿಗೆ ತಮ್ಮ ತಾಯ್ತಂದೆಯರಾರೆಂದೂ ತಿಳಿಯದ ಹಾಗೆ ಕಟ್ಟುನಿಟ್ಟಾದ ಏರ್ಪಾಟುಗಳಾಗುತ್ತವೆ. ವಿಕಲಾಂಗ ಮಕ್ಕಳು, ಹಾಗೂ ಕೀಳುಸಂತಾನ ಮಕ್ಕಳನ್ನು 'ಮಾಡಬೇಕಾದಂತೆ, ಯಾರಿಗೂ ಗೊತ್ತಾಗದ ನಿಗೂಢ ಜಾಗದಲ್ಲಿ ಇರಿಸಲಾಗುತ್ತದೆ.' ಸರ್ಕಾರದ ಒಪ್ಪಿಗೆಯಿಲ್ಲದ ಕೂಟದಿಂದ ಹುಟ್ಟುವ ಮಕ್ಕಳನ್ನು ನ್ಯಾಯಬಾಹಿರರೆಂದು ಪರಿಗಣಿಸಲಾಗುತ್ತದೆ. ತಾಯಂದಿರು ಇಪ್ಪತ್ತರಿಂದ ನಲವತ್ತು ವರ್ಷದವರಾಗಿರಬೇಕು ಮತ್ತು ತಂದೆಯರು ಇಪ್ಪತ್ತೈದರಿಂದ ಐವತ್ತೈದು ವರ್ಷದವರಾಗಿರಬೇಕು. ಈ ವಯಸ್ಸಿನ ಹೊರಗೆ ಸಂಭೋಗವು ಸ್ವತಂತ್ರವಾಗಿರಬೇಕು, ಆದರೆ ಗರ್ಭಪಾತವೋ ಶಿಶುಹತ್ಯೆಯೋ ಕಡ್ಡಾಯ. ಸರ್ಕಾರ ಏರ್ಪಡಿಸುವ 'ಮದುವೆ'ಗಳಲ್ಲಿ ಸಂಬಂಧಪಟ್ಟವರಿಗೆ ಯಾವ ಮಾತಿಗೂ ಅವಕಾಶವಿರುವುದಿಲ್ಲ; ದೇಶದ ಬಗೆಗಿನ ತಮ್ಮ ಕರ್ತವ್ಯದಿಂದ ಅವರು ಪ್ರೇರಿತರಾಗಬೇಕೇ ವಿನಾ ಬಹಿಷ್ಕೃತ ಕವಿಗಳು ವೈಭವೀಕರಿಸುವ ಸಾಮಾನ್ಯ ಭಾವನೆಗಳಿಂದಲ್ಲ.

ಯಾರಿಗೂ ತನ್ನ ತಾಯ್ತಂದೆಯರಾರೆಂದು ತಿಳಿದಿಲ್ಲವಾದ್ದರಿಂದ, ತನ್ನ ತಂದೆಯಾಗಬಹುದಾದ ಯಾವುದೇ ಗಂಡಸನ್ನೂ 'ಅಪ್ಪ' ಎಂದೇ ಕರೆಯಬೇಕು, ಹಾಗೆಯೇ 'ತಾಯಿ', 'ಅಕ್ಕ'–'ತಂಗಿ', 'ಅಣ್ಣ'–'ತಮ್ಮ'ರ ವಿಷಯವೂ. (ಈ ಪದ್ಧತಿಯಿರುವ ಅನೇಕ ಬುಡಕಟ್ಟುಗಳು ಮಿಷನರಿಗಳನ್ನು ಗೊಂದಲಗೊಳಿಸಿದ್ದೂ ಉಂಟು.) ಒಬ್ಬ 'ತಂದೆ' ಮತ್ತು 'ಮಗಳ' ನಡುವೆಯಾಗಲೀ, 'ತಾಯಿ' ಮತ್ತು 'ಮಗ'ನ ನಡುವೆಯಾಗಲೀ ಮದುವೆ ನಡೆಯುವ ಹಾಗಿಲ್ಲ. ಇದು ಸಾಮಾನ್ಯ ನಿಯಮವಾದರೂ, ತೀರ ಕಟ್ಟುನಿಟ್ಟೇನಲ್ಲ. 'ಅಣ್ಣ' ಮತ್ತು 'ತಂಗಿ'ಯರ ನಡುವಣ ಮದುವೆಯನ್ನೂ ತಪ್ಪಿಸಬೇಕು. (ಪ್ಲೇಟೋ ಏನಾದರೂ ಮತ್ತಷ್ಟು ಎಚ್ಚರದಿಂದ ಯೋಚಿಸಿದ್ದುದಾದರೆ, ತೀರ ಅಪವಾದ ಎಂದವನು ಭಾವಿಸುವ 'ಅಣ್ಣ–ತಂಗಿ'ಯರ ಮದುವೆಯ ಹೊರತಾಗಿ ಮಿಕ್ಕೆಲ್ಲ ಮದುವೆಗಳನ್ನೂ ತಾನು ನಿಷೇಧಿಸಿರುವುದಾಗಿ ತಿಳಿಯುತ್ತಿದ್ದ.)

---

೫೭ ಈ ಹೆಂಗಸರು, ವಿನಾಯಿತಿಯಿಲ್ಲದಂತೆ, ಈ ಗಂಡಸರ ಸಮಾನ ಹೆಂಡತಿಯರಾಗಿರಬೇಕು, ಯಾವ ಗಂಡಸಿಗೂ ತನ್ನವಳೇ ಆದ ಹೆಂಡತಿಯಿರಬಾರದು.

'ತಂದೆ' 'ತಾಯಿ' 'ಮಗ' 'ಮಗಳು' ಎಂಬಂತಹ ಪದಗಳಿಗೆ ಈಗ ಹೊಂದಿಕೊಂಡಿರುವ ಭಾವನೆಗಳು ಪ್ಲೇಟೋ ಕಾಲಕ್ಕೂ ಅನ್ವಯಿಸುತ್ತಿದ್ದವು; ಒಬ್ಬ ಯುವಕನು ಒಬ್ಬ ಮುದುಕನಿಗೆ ಹೊಡೆಯಲಾರ, ಏಕೆಂದರೆ ಅವನು ತನ್ನ ಅಪ್ಪನಾಗಿರಬಹುದು ಎಂಬ ಭಾವನೆಯಿಂದ.

ಇದರಿಂದ ನಿರೀಕ್ಷಿಸಿದ ಅನುಕೂಲವೆಂದರೆ ಈ ಖಾಸಗಿ ಒಡೆತನದ ಭಾವನೆಗಳನ್ನು ಕನಿಷ್ಠಗೊಳಿಸಿ, ಸಾರ್ವಜನಿಕತೆಯನ್ನು ಗರಿಷ್ಠಗೊಳಿಸುವುದು ಮತ್ತು ಖಾಸಗಿ ಆಸ್ತಿ ಇಲ್ಲದ ಪರಿಸ್ಥಿತಿಯನ್ನು ಒಪ್ಪಿಕೊಳ್ಳುವುದು. ಇದರ ಪ್ರೇರಕಗಳೆಂದರೆ ಕ್ರೈಸ್ತಪುರೋಹಿತಶಾಹಿಯ ಬ್ರಹ್ಮಚರ್ಯದ ಪ್ರೇರಕಗಳಂತಹವು.[೫೭]

ಕೊನೆಯದಾಗಿ, ನಾನು ಈ ವ್ಯವಸ್ಥೆಯ ಮತಧರ್ಮಶಾಸ್ತ್ರದ ವಿಷಯಕ್ಕೆ ಬರುತ್ತೇನೆ. ನಾನು ಆಲೋಚಿಸುತ್ತಿರುವುದು ಗ್ರೀಕರ ಸ್ವೀಕೃತ ದೇವರುಗಳ ಬಗ್ಗೆಯಲ್ಲ, ಆದರೆ ಸರ್ಕಾರವು ಜನರಲ್ಲಿ ಬಿತ್ತಲು ಉದ್ದೇಶಿಸಿದ್ದ ಪೌರಾಣಿಕತೆಯ ಬಗ್ಗೆ. ವೈದ್ಯನಿಗೆ ಔಷಧಿ ಕೊಡುವುದು ಹೇಗೆಯೋ ಹಾಗೆಯೇ ಸುಳ್ಳು ಹೇಳುವುದು ಸರ್ಕಾರದ ಒಂದು ಅಧಿಕಾರವಾಗಿರಬೇಕೆಂದು ಪ್ಲೇಟೋ ಸ್ಪಷ್ಟವಾಗಿ ಹೇಳುತ್ತಾನೆ. ಈಗಾಗಲೇ ನೋಡಿರುವಂತೆ, ಲಾಟರಿ ವಿಧಾನದಲ್ಲಿ ಮದುವೆಯನ್ನು ಏರ್ಪಡಿಸುವಂತೆ ಸರ್ಕಾರವು ತೋರಿಸಿಕೊಳ್ಳುತ್ತಿತ್ತು, ಆದರೆ ಇದೇನು ಮತಧಾರ್ಮಿಕ ವಿಷಯವಲ್ಲವೆನ್ನಿ.

'ಒಂದು ರಾಜ ಸುಳ್ಳು' ಇರುತ್ತಿತ್ತು, ಅದು ಆಳುವವರನ್ನು ವಂಚಿಸಬಹುದಾಗಿತ್ತು, ಆದರೆ ಉಳಿದ ನಗರವನ್ನಂತೂ ವಂಚಿಸುತ್ತಿತ್ತು. ಈ 'ಸುಳ್ಳಿನ' ಬಗ್ಗೆ ವಿವರವಾದ ನಿರೂಪಣೆಯಿದೆ. ಅದರ ಬಹು ಮುಖ್ಯ ಭಾಗವೆಂದರೆ ದೇವರು ಮೂರು ವರ್ಗಗಳ ಜನರನ್ನು – ಅತ್ಯುತ್ತಮ ಜನರನ್ನು ಚಿನ್ನದಿಂದಲೂ, ಎರಡನೆಯವರನ್ನು ಬೆಳ್ಳಿಯಿಂದಲೂ ಮತ್ತು ಸಾಮಾನ್ಯರನ್ನು ಹಿತ್ತಾಳೆ ಮತ್ತು ಕಬ್ಬಿಣಗಳಿಂದಲೂ ಸೃಷ್ಟಿಸಿದ್ದಾನೆ – ಎಂಬ ಸಿದ್ಧಾಂತ. ಚಿನ್ನದಿಂದ ಮಾಡಲಾದವರು ಪಾಲಕರಾಗಲು ಯೋಗ್ಯರು, ಬೆಳ್ಳಿಯಿಂದ ಮಾಡಲಾದವರು ಸೈನಿಕರಾಗಲು ಯೋಗ್ಯರು ಹಾಗೂ ಇತರರು ದೈಹಿಕ ಶ್ರಮವನ್ನು ಮಾಡಬೇಕು. ಸಾಮಾನ್ಯವಾಗಿ, ಆದರೆ ಯಾವಾಗಲೂ ಅಲ್ಲ, ಮಕ್ಕಳು ತಾಯ್ತಂದೆಯರ ದರ್ಜೆಗೆ ಸೇರಿದವರಾಗಿರುತ್ತಾರೆ, ಹಾಗಿಲ್ಲದಾಗ, ಅವರನ್ನು ಕೆಳದರ್ಜೆಗಿಳಿಸಬಹುದು ಅಥವಾ ಮೇಲ್ದರ್ಜೆಗೇರಿಸಬಹುದು. ಈ ಪೌರಾಣಿಕತೆಯನ್ನು ಈಗಿನ ಪೀಳಿಗೆಯವರನ್ನು ನಂಬುವಂತೆ ಮಾಡುವುದು ಅಸಾಧ್ಯ ಎಂದು ಹೇಳಲಾಗುತ್ತದೆ, ಆದರೆ ಅದರ ಮುಂದಿನ ಮತ್ತದರ ನಂತರದ ಪೀಳಿಗೆಗಳವರನ್ನು ಅದನ್ನು ಅನುಮಾನಿಸದಂತೆ ಮಾಡಬಹುದು.

ಪೌರಾಣಿಕತೆಯಲ್ಲಿನ ಶ್ರದ್ಧೆಯನ್ನು ಎರಡು ಪೀಳಿಗೆಗಳಲ್ಲಿ ನೆಲೆಗೊಳಿಸಬಹುದು

೫೭. ನೋಡಿ, ಹೆನ್ರಿ ಸಿ. ಲಿಯ, 'ಎ ಹಿಸ್ಟರಿ ಆಫ್ ಸ್ಯಾಕ್ರಿಡೋಟಲ್ ಸೆಲಿಬಸಿ'

ಎಂದು ಪ್ಲೇಟೋ ಭಾವಿಸುವುದು ಸರಿಯಾಗಿಯೇ ಇದೆ. ಮಿಕಾಡೋ ಸೂರ್ಯದೇವತೆಯ ವಂಶಸ್ಥ ಹಾಗೂ ಜಪಾನ್ ಜಗತ್ತಿನ ಮಿಕ್ಕೆಲ್ಲ ಭಾಗಗಳಿಗಿಂತ ಹಿಂದೆಯೇ ಸೃಷ್ಟಿಯಾದದ್ದು ಎಂದು ಜಪಾನೀಯರು ನಂಬುವಂತೆ ೧೮೬೮ ರಿಂದೀಚೆಗೆ ಕಲಿಸಲಾಗಿದೆ. ಯಾವನೇ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕ, ವಿದ್ವತ್‌ಕೃತಿಯಲ್ಲಿ ಕೂಡ ಈ ಸಿದ್ಧಾಂತಗಳ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸುವುದಿಲ್ಲ, ಹಾಗೆ ಮಾಡಿದರೆ ಅದನ್ನು ಅಜಾಪಾನೀಯ ಚಟುವಟಿಕೆ ಎಂದು ಭಾವಿಸಲಾಗುತ್ತದೆ. ಆದರೆ ಪ್ಲೇಟೋ ಅರ್ಥಮಾಡಿಕೊಳ್ಳದಿರುವುದೆಂದರೆ, ಅಂಥ ಪೌರಾಣಿಕತೆಯ ಕಡ್ಡಾಯ ಒಪ್ಪಿಗೆಯು ತತ್ವಜ್ಞಾನಕ್ಕೆ ವಿರುದ್ಧವಾದುದು, ಬುದ್ಧಿಶಕ್ತಿಯನ್ನು ಕುಂಠಿತಗೊಳಿಸುವ ಶಿಕ್ಷಣ ಎಂಬುದನ್ನು.

ಇಷ್ಟೆಲ್ಲ ಚರ್ಚೆಯ ಹೆಸರಿಗೆ ಮಾತ್ರವಾದ ಗುರಿಯಾದ 'ನ್ಯಾಯ'ದ ವ್ಯಾಖ್ಯೆಯು ಭಾಗ ೪ ರಲ್ಲಿ ಕಾಣಸಿಗುತ್ತದೆ. ಅದರಲ್ಲಿ, ತನ್ನ ಕೆಲಸ ಮಾಡುವುದು, ಅಧಿಕಪ್ರಸಂಗಿಯಾಗದಿರುವುದು; ವ್ಯಾಪಾರಿ, ಸಹಾಯಕ, ಮತ್ತು ಪಾಲಕ ತನ್ನ ತನ್ನ ಕೆಲಸವನ್ನು ಮಾಡಿಕೊಂಡು, ಇತರ ವರ್ಗಗಳ ವಿಷಯದಲ್ಲಿ ಮೂಗು ತೂರಿಸದಿದ್ದರೆ ಆಗ ನಗರವು 'ನ್ಯಾಯ'ದಿಂದ ಕೂಡಿರುತ್ತದೆ ಎಂದು ಹೇಳಿದೆಯಂತೆ.

ಪ್ರತಿಯೊಬ್ಬರೂ ತಮ್ಮ ಕೆಲಸವನ್ನು ನಿರ್ವಹಿಸಬೇಕು ಎಂಬುದು ಮೆಚ್ಚಬೇಕಾದ ಅಂಶವೇ; ಆದರೆ ಅದು ಆಧುನಿಕನೊಬ್ಬನು 'ನ್ಯಾಯ'ವೆಂದು ಕರೆಯುವುದಕ್ಕೆ ಸಂವಾದಿಯಾದುದೆಂದು ಹೇಳಲಾಗದು. ಹೀಗೆ ಭಾಷಾಂತರಗೊಂಡ ಗ್ರೀಕ್ ಪದವು ಗ್ರೀಕ್ ಚಿಂತನೆಯಲ್ಲಿ ತುಂಬ ಮುಖ್ಯವಾದ ಪರಿಕಲ್ಪನೆಯೊಂದಕ್ಕೆ ಸಂವಾದಿಯಾದುದು, ಅದಕ್ಕೆ ಅರ್ಥವಿರುವ ನಿರ್ದಿಷ್ಟ ಪದ ನಮ್ಮಲ್ಲಿಲ್ಲ. ಅನಾಕ್ಸಿಮ್ಯಾಂಡರ್ ಹೇಳಿದುದನ್ನಿಲ್ಲಿ ನೆನಪಿಸಿಕೊಳ್ಳುವುದು ಸೂಕ್ತ:

> **ವಸ್ತುಗಳು ಯಾವುದರಿಂದ ಮೂಡುತ್ತವೆಯೋ ಮತ್ತೆ ಅದಕ್ಕೇ ಮರಳುತ್ತವೆ, ಇದು ವಿಧಿ; ಯಾಕೆಂದರೆ ಅವರು ತಾವು ಮಾಡಿದ ಅನ್ಯಾಯಗಳ ಪರಸ್ಪರ ಸರಿಪಡಿಸುವಿಕೆ ಮತ್ತು ತೃಪ್ತಿಗೊಳ್ಳುವಿಕೆಗಳನ್ನು ಕಾಲಕ್ಕನುಗುಣವಾಗಿ ಮಾಡುತ್ತಾರೆ.**

ತತ್ವಜ್ಞಾನವು ಆರಂಭಗೊಳುವುದಕ್ಕೆ ಮುಂಚೆ, ಗ್ರೀಕರಿಗೆ ವಿಶ್ವದ ಬಗ್ಗೆ ಸೂಕ್ಷ್ಮ ಭಾವನೆಯ ಸಿದ್ಧಾಂತವೊಂದಿತ್ತು, ಅದನ್ನು ಮತಧಾರ್ಮಿಕ ಅಥವಾ ನೈತಿಕ ಎಂದು ಕರೆಯಬಹುದು. ಈ ಸಿದ್ಧಾಂತದ ಪ್ರಕಾರ, ಪ್ರತಿಯೊಂದು ವಸ್ತು ಅಥವಾ ವ್ಯಕ್ತಿಗೆ ನಿಗದಿತ ಸ್ಥಳ ಹಾಗೂ ಕಾರ್ಯವೊಂದಿರುತ್ತದೆ. ಇದು ಸ್ಯೂಸ್‌ನ ಆಜ್ಞೆಯ ಪ್ರಕಾರವಾಗಿರುವುದಲ್ಲ, ಯಾಕೆಂದರೆ ಸ್ಯೂಸ್‌ನೇ ಇತರರು ಒಳಗಾಗಿರುವ ನಿಯಮಕ್ಕೆ ತಾನೂ ಬದ್ಧನಾಗಿರುತ್ತಾನೆ. ಈ ಸಿದ್ಧಾಂತವು ವಿಧಿ ಅಥವಾ ಆವಶ್ಯಕತೆಯ ಪರಿಕಲ್ಪನೆಗೆ ಸಂಬಂಧಿಸಿದ್ದು. ಅದು ಆಕಾಶಕಾಯಗಳಿಗೂ ಖಚಿತವಾಗಿ ಅನ್ವಯಿಸುವಂತಹುದು. ಆದರೆ ವೀರ್ಯವಂತಿಕೆಯಿದ್ದೆಡೆ, ಅಲ್ಲಿ ಅಂಥ ಮಿತಿಯನ್ನು ಮೀರುವ ಪ್ರವೃತ್ತಿ

ಇರುತ್ತದೆ, ಇದರಿಂದಾಗಿ ಸಂಘರ್ಷಗಳು ಆರಂಭವಾಗುತ್ತವೆ. ಒಂದು ಬಗೆಯ ಮಹಾ ಒಲಿಂಪಿಯನ್ ನಿಯಮವು ಹ್ಯೂಬ್ರಿಸ್ ಅನ್ನು ಶಿಕ್ಷಿಸುತ್ತದೆ, ಹೀಗೆ ಅತಿಕ್ರಮಣಕಾರನು ಉಲ್ಲಂಘಿಸಬಯಸಿದ್ದ ಚಿರಂತನ ನಿಯಮವನ್ನು ಪುನಃಸ್ಥಾಪಿಸುತ್ತದೆ. ಇಡೀ ಈ ದೃಷ್ಟಿಕೋನವು, ಮೂಲತಃ, ಅಪ್ರಜ್ಞಾಪೂರ್ವಕವಾಗಿ, ತತ್ವಜ್ಞಾನದಲ್ಲಿ ನುಸುಳಿಕೊಂಡಿತು; ಅಂತೆಯೇ ಇದು ಹೆರಾಕ್ಲಿಟಸ್ ಮತ್ತು ಎಂಪೆಡೋಕ್ಲೀಸ್‌ರದರಂತಹ ಸಂಘರ್ಷ ವಿಶ್ವಜ್ಞಾನಗಳಲ್ಲಿಯೂ ಮತ್ತು ಪಾರ್ಮನೈಡೀಸ್‌ನ ಏಕತ್ವ ಸಿದ್ಧಾಂತದಲ್ಲಿಯೂ ಸೇರಿತು. ನಿಸರ್ಗ ಹಾಗೂ ಮಾನವ ನಿಯಮಗಳೆರಡರಲ್ಲಿನ ಶ್ರದ್ಧೆಯ ಮೂಲ ಈ ಶ್ರದ್ಧೆಯೇ ಆಗಿದೆ. ಇದು ಸ್ಪಷ್ಟವಾಗಿ ಪ್ಲೇಟೋನ ನ್ಯಾಯದ ಪರಿಕಲ್ಪನೆಯಲ್ಲಿ ಅಡಕವಾಗಿದೆ.

'ನ್ಯಾಯ' ಎಂಬ ಪದವು, ಈಗಲೂ ನ್ಯಾಯಪದ್ಧತಿಯಲ್ಲಿ ಬಳಕೆಯಲ್ಲಿದೆ. ಅದು ರಾಜಕೀಯ ಊಹನೆಗಳಿಗಿಂತ ಪ್ಲೇಟೋನ ಪರಿಕಲ್ಪನೆಗೆ ಹೆಚ್ಚು ಹತ್ತಿರವಾಗಿದೆ. ಪ್ರಜಾಪ್ರಭುತ್ವಾತ್ಮಕ ಸಿದ್ಧಾಂತದ ಪ್ರಭಾವದಿಂದಾಗಿ ನಾವು ನ್ಯಾಯವನ್ನು ಸಮಾನತೆಯೊಂದಿಗೆ ಜೋಡಿಸುತ್ತೇವೆ. ಆದರೆ ಪ್ಲೇಟೋನಲ್ಲಿ ಅಂತಹುದರ ಸುಳಿವಿಲ್ಲ. 'ನಿಯಮ'ಕ್ಕೆ ಬಹುತೇಕ ಸಮಾನವೆಂದು ತಿಳಿಯಲಾಗುವ ಅರ್ಥದಲ್ಲಿ 'ನ್ಯಾಯ' – ನ್ಯಾಯಾಲಯಗಳು ಎಂಬ ಶಬ್ದಗಳಲ್ಲಿ ಬಳಸುವಂತೆ –ಮುಖ್ಯವಾಗಿ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ್ದು, ಅಲ್ಲಿ ಸಮಾನತೆಗೂ ಅದಕ್ಕೂ ಸಂಬಂಧವೇ ಇಲ್ಲ. 'ನ್ಯಾಯ'ದ ವ್ಯಾಖ್ಯೆಯ ಮೊದಲ ಸೂಚನೆಯು, 'ರಿಪಬ್ಲಿಕ್'ನ ಆರಂಭದಲ್ಲಿ, ಸಾಲ ತೀರಿಸುವುದನ್ನು ಸೂಚಿಸುತ್ತದೆ. ಬಹು ಬೇಗ ಈ ವ್ಯಾಖ್ಯೆಯು ಅಸಮರ್ಪಕವೆಂದು ಕೈಬಿಡಲಾಯಿತು, ಅದರ ಒಂದಷ್ಟು ಕೊನೆಯಲ್ಲಿ ಉಳಿದಿದೆ.

ಪ್ಲೇಟೋನ ವ್ಯಾಖ್ಯೆಗೆ ಸಂಬಂಧಿಸಿದಂತೆ ಅನೇಕ ಅಂಶಗಳನ್ನು ಗಮನಿಸಬೇಕು. ಮೊದಲನೆಯದು, ನ್ಯಾಯವಿಲ್ಲದಿರುವುದು ಅಧಿಕಾರ ಮತ್ತು ಸವಲತ್ತುಗಳ ಅಸಮಾನ ಹಂಚಿಕೆಯನ್ನು ಸಾಧ್ಯ ಮಾಡುತ್ತದೆ. ಪಾಲಕರು ಎಲ್ಲ ಅಧಿಕಾರವನ್ನು ಹೊಂದಿರಬೇಕು, ಏಕೆಂದರೆ ಅವರು ಸಮುದಾಯದ ಅತ್ಯಂತ ವಿವೇಕಿಗಳು; ಅನ್ಯಾಯವು ಪ್ಲೇಟೋ ಪ್ರಕಾರ ಸಂಭವಿಸುವುದು ಇತರ ವರ್ಗಗಳ ಜನರಲ್ಲಿ ಕೆಲವು ಮಂದಿ ಪಾಲಕರಿಗಿಂತ ಹೆಚ್ಚು ವಿವೇಕಿಗಳಾಗಿದ್ದಾಗ. ಆ ಕಾರಣಕ್ಕಾಗಿಯೇ, ಹುಟ್ಟು ಮತ್ತು ಶಿಕ್ಷಣದ ಇಮ್ಮಡಿ ಅನುಕೂಲವು ಬಹುತೇಕ ಸಂದರ್ಭಗಳಲ್ಲಿ ಪಾಲಕರ ಮಕ್ಕಳು ಇತರರ ಮಕ್ಕಳಿಗಿಂತ ಉತ್ತಮರಾಗಿರುತ್ತಾರೆ ಎಂದು ಭಾವಿಸಿದರೂ, ಪ್ಲೇಟೋ ಪ್ರಜೆಗಳ ಬಡ್ತಿ ಮತ್ತು ಹಿಂಬಡ್ತಿಗಳಿಗೆ ಅವಕಾಶ ಮಾಡಿಕೊಡುತ್ತಾನೆ. ಇದಕ್ಕಿಂತ ಹೆಚ್ಚು ನಿಖರವಾದ ಆಡಳಿತ ವಿಜ್ಞಾನವಿದ್ದಿದ್ದರೆ, ಹಾಗೂ ಅದರ ತತ್ವಗಳನ್ನು ಜನರು ಪಾಲಿಸುತ್ತಿದ್ದರೆ, ಪ್ಲೇಟೋನ ಈ ವ್ಯವಸ್ಥೆಯ ಬಗ್ಗೆ ಹೆಚ್ಚಿನದನ್ನು ಹೇಳಬಹುದಾಗಿತ್ತು. ಅತ್ಯಂತ ಉತ್ತಮರನ್ನು ಕಾಲ್ಚೆಂಡು ತಂಡದಲ್ಲಿ ಸೇರಿಸುವುದು ಅನ್ಯಾಯವೆಂದು ಯಾರೂ

ಭಾವಿಸಲಾರರು, ಅವರಿಗೆ ಅದರಿಂದ ಹಿರಿಮೆ ಸಿಕ್ಕುವುದೆಂಬುದು ನಿಜವಾದರೂ. ಕಾಲ್ಚೆಂಡಾಟವನ್ನೂ ಅಥೆನ್ಸ್ ಸರ್ಕಾರದಂತೆಯೇ ಪ್ರಜಾಪ್ರಭುತ್ವಾತ್ಮಕವಾಗಿ ನಿರ್ವಹಿಸಿದ್ದರೆ ವಿಶ್ವವಿದ್ಯಾಲಯಕ್ಕಾಗಿ ಆಡುವ ಆಟಗಾರರು ಯಾರೆಂಬುದನ್ನು ಲಾಟರಿ ಮುಖೇನ ತೀರ್ಮಾನಿಸಲಾಗುತ್ತಿತ್ತು. ಆದರೆ ಸರ್ಕಾರದ ವಿಷಯದಲ್ಲಿ, ಯಾರಿಗೆ ಅತ್ಯಂತ ಹೆಚ್ಚು ಕೌಶಲವಿದೆ ಎಂಬುದನ್ನು ತಿಳಿಯುವುದು ಕಷ್ಟಕರವೇ ಸರಿ. ಹಾಗೂ ರಾಜಕಾರಣಿಯೊಬ್ಬ ತನ್ನ ಕೌಶಲವನ್ನು ಸ್ವಂತ ಅಥವಾ ತನ್ನ ವರ್ಗ ಅಥವಾ ಪಕ್ಷ ಅಥವಾ ಪಂಥದ ಹಿತದ ಬದಲು ಸರ್ವಜನಹಿತಕ್ಕಾಗಿ ಬಳಸಿಕೊಳ್ಳುವನೆಂದು ನಿಶ್ಚಿತವಾಗಿ ಹೇಳಲಾಗದು.

ಮುಂದಿನ ಅಂಶವೆಂದರೆ, ಪ್ಲೇಟೋನ 'ನ್ಯಾಯ'ದ ವ್ಯಾಖ್ಯೆಯು ಸಾಂಪ್ರದಾಯಿಕ ರೀತಿಯಲ್ಲಿಯೋ ತನ್ನ ಚಿಂತನೆಗನುಗುಣವಾಗಿಯೋ ಸಂಘಟಿತವಾದ ಅವಕಾಶವನ್ನು ಕಲ್ಪಿಸಿಕೊಳ್ಳುತ್ತದೆ, ಇದರಿಂದ ಅದರ ಸಮಗ್ರತೆಯಲ್ಲಿ ಒಂದು ಬಗೆಯ ನೈತಿಕ ಆದರ್ಶವನ್ನು ಸಾಧಿಸಬಹುದು ಎಂಬುದು. 'ನ್ಯಾಯ'ವು ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ನಿರ್ವಹಿಸುವುದರಲ್ಲಿದೆ ಎಂದು ಹೇಳುತ್ತಾನೆ. ಆದರೆ ವ್ಯಕ್ತಿಯ ಕರ್ತವ್ಯವಾವುದು? ಪ್ರಾಚೀನ ಈಜಿಪ್ಟ್ ಅಥವಾ ಇಂಕಾಸ್ ಚಕ್ರಾಧಿಪತ್ಯದಂತೆ ದೇಶವೊಂದರಲ್ಲಿ ಪೀಳಿಗೆಗಳು ಕಳೆದರೂ ಬದಲಾಗದೆ ಉಳಿಯುತ್ತದೆ: ವ್ಯಕ್ತಿಯ ಕರ್ತವ್ಯವೆಂದರೆ ಅವನ ತಂದೆಯ ಕರ್ತವ್ಯ, ಇದರಿಂದ ಯಾವ ಪ್ರಶ್ನೆಯೂ ಉದ್ಭವಿಸುವುದಿಲ್ಲ. ಆದರೆ ಪ್ಲೇಟೋನ ದೇಶದಲ್ಲಿ ಯಾವನಿಗೂ ಕಾನೂನೂಬದ್ಧ ತಂದೆಯಿಲ್ಲ. ಹೀಗಾಗಿ ಅವನ ಕರ್ತವ್ಯವು ಯಾವುದೆಂಬುದನ್ನು ತನ್ನ ಅಭಿರುಚಿಗನುಗುಣವಾಗಿಯೋ, ಇಲ್ಲವೇ ತನ್ನ ಸಾಮರ್ಥ್ಯಕ್ಕನುಗುಣವಾಗಿಯೋ ದೇಶವು ಆಯ್ಕೆ ಮಾಡಿದುದೋ ಆಗುತ್ತದೆ. ಪ್ಲೇಟೋ ಎರಡನೆಯದನ್ನು ಬಯಸುತ್ತಾನೆಂಬುದು ಸ್ಪಷ್ಟ. ಆದರೆ ಕೆಲ ಬಗೆಯ ಕೆಲಸಗಳು, ತುಂಬ ಕೌಶಲಪೂರ್ಣವಾದುದಾದರೂ, ಕೆಟ್ಟುದೆಂದು ಪರಿಗಣಿತವಾಗಿರಬಹುದು. ಪ್ಲೇಟೋ ಇದನ್ನು ಕಾವ್ಯದ ದೃಷ್ಟಿಕೋನವೆಂದು ಹೇಳಿದರೆ, ನಾನಿದನ್ನು ನೆಪೋಲಿಯನ್ ಕೆಲಸವೆಂದು ಹೇಳಬೇಕಾಗುತ್ತದೆ. ಹೀಗಾಗಿ, ವ್ಯಕ್ತಿಯ ಕರ್ತವ್ಯವಾವುದೆಂದು ನಿರ್ಧರಿಸಲು ಸರ್ಕಾರದ ಉದ್ದೇಶಗಳು ಆವಶ್ಯಕ. ಎಲ್ಲ ಆಳುವವರೂ ತತ್ವಜ್ಞಾನಿಗಳಾರಬೇಕಾದರೂ, ಹೊಸತನವೇನೂ ಇರಬಾರದು: ತತ್ವಜ್ಞಾನಿಯೆಂದರೆ ಎಲ್ಲ ಕಾಲಕ್ಕೂ ಪ್ಲೇಟೋ ಹೇಳಿದುದನ್ನು ಅರ್ಥಮಾಡಿಕೊಳ್ಳುವವನು ಮತ್ತು ಅದನ್ನೊಪ್ಪುವವನು.

ಪ್ಲೇಟೋನ ಗಣರಾಜ್ಯವು ಏನನ್ನು ಸಾಧಿಸುತ್ತದೆ ಎಂದು ನಾವು ಕೇಳಿದಾಗ, ಉತ್ತರವು ನೀರಸವಾಗಿರುತ್ತದೆ. ಅದು ಸರಿಸುಮಾರು ಸಮಾನ ಸಂಖ್ಯೆಯ ಜನಸಂಖ್ಯೆಯ ವಿರುದ್ಧದ ಯುದ್ಧಗಳಲ್ಲಿ ಯಶಸ್ಸು ಕಾಣುತ್ತದೆ, ಮತ್ತು ಸ್ವಲ್ಪ

ಜನರಿಗೆ ಜೀವನೋಪಾಯವನ್ನು ಕಲ್ಪಿಸುತ್ತದೆ. ಅದು ಖಂಡಿತ ಕಲೆ–ವಿಜ್ಞಾನಗಳನ್ನು ಸೃಷ್ಟಿಸಲಾರದು, ಅದಕ್ಕೆ ಕಾರಣ ಅದರ ಪೆಡಸುತನ; ಮಿಕ್ಕೆಲ್ಲದರಂತೆ ಈ ವಿಷಯದಲ್ಲಿಯೂ ಅದು ಸ್ಪಾರ್ಟಾದಂತಿರುತ್ತದೆ. ಎಷ್ಟೇ ನವಿರು ಮಾತುಗಳನ್ನಾಡಿದರೂ, ಯುದ್ಧಕೌಶಲ ಮತ್ತು ತಿನ್ನಲು ಬೇಕಾದಷ್ಟು ಆಹಾರ – ಇವುಗಳನ್ನಷ್ಟೇ ಸಾಧಿಸಬಹುದು. ಪ್ಲೇಟೋ ಅಥೆನ್ಸ್‌ನಲ್ಲಿ ಜೀವಿಸಿದ್ದುದು ಬರ ಮತ್ತು ಸೋಲುಗಳ ಕಾಲದಲ್ಲಿ; ಪ್ರಾಯಶಃ, ಆತ್ಯಂತ ಶ್ರೇಷ್ಠ ಮುತ್ಸದ್ದಿತನದಿಂದ ಈ ಕೆಡುಕುಗಳನ್ನು ನಿವಾರಿಸಬಹುದೆಂಬ ಆಲೋಚನೆಯೇ ಅವನ ಸುಪ್ತಪ್ರಜ್ಞೆಯ ನೆಲೆಯಲ್ಲಿದ್ದಿರಬಹುದು.

ಗಂಭಿರವಾಗಿ ಬಯಸಿದ್ದರೆ, ಆದರ್ಶರಾಜ್ಯವು ಅದರ ಸೃಷ್ಟಿಕರ್ತನ ಆದರ್ಶಗಳನ್ನು ಒಳಗೊಂಡಿರಬೇಕು ತಾನೇ? 'ಆದರ್ಶಗಳು' ಎಂದರೇನೆಂಬುದನ್ನು ಒಂದು ಕ್ಷಣ ಪರಿಗಣಿಸೋಣ. ಮೊದಲನೆಯದಾಗಿ, ಅವುಗಳಲ್ಲಿ ಶ್ರದ್ಧೆಯಿಟ್ಟವರಿಗೆ ಅವು ಬೇಕು; ಆದರೆ ವ್ಯಕ್ತಿಯೊಬ್ಬ ತನ್ನ ವೈಯಕ್ತಿಕ ಸೌಕರ್ಯವನ್ನು ಬಯಸಿದಂತೆಯೇ ಅವುಗಳನ್ನು ಬಯಸಲಾರ. 'ಆದರ್ಶ' ಮತ್ತು ಸಾಮಾನ್ಯ ಉದ್ದೇಶ ಇವುಗಳ ನಡುವಣ ವ್ಯತ್ಯಾಸವೆಂದರೆ ಮೊದಲನೆಯದು ವ್ಯಕ್ತ್ಯತೀತವಾದುದು, ಅದನ್ನು ಬಯಸುವ ವ್ಯಕ್ತಿಯ ಆಸೆಗಳಿಗೂ ಅದಕ್ಕೂ ಸಂಬಂಧವಿರುವುದಿಲ್ಲ ಎಂಬುದು ಸುಸ್ಪಷ್ಟ, ಹೀಗಾಗಿ ಅದು, ಸೈದ್ಧಾಂತಿಕವಾಗಿ, ಎಲ್ಲರೂ ಬಯಸುವಂತಹುದಾಗಬಹುದು. ಹೀಗಾಗಿ 'ಆದರ್ಶ' ಎಂಬುದನ್ನು ನಾವು ಸ್ವಕೇಂದ್ರಿತವಾಗಿಲ್ಲದ ಬಯಕೆ, ಅದನ್ನು ಬಯಸುವ ವ್ಯಕ್ತಿ ಎಲ್ಲರೂ ಬಯಸಬೇಕೆಂದು ಆಶಿಸುವಂತಹುದು, ಪ್ರತಿಯೊಬ್ಬನಿಗೂ ಬೇಕಾದಷ್ಟು ಆಹಾರವಿದ್ದು, ಎಲ್ಲರೂ ಮಿಕ್ಕೆಲ್ಲರನ್ನೂ ಪ್ರೀತಿಯಿಂದ ಕಾಣುವಂತಿರಬೇಕು ಮುಂತಾಗಿ ಆಶಿಸಬಹುದು. ಇಂತಹುದಾವುದಕ್ಕಾದರೂ ಆಶಿಸಿದರೆ, ಎಲ್ಲರೂ ಹಾಗೆಯೇ ಇರಬೇಕೆಂದು ಬಯಸುತ್ತೇನೆ. ಈ ರೀತಿಯಲ್ಲಿ, ಅದು ನನ್ನ ವ್ಯಕ್ತಿಗತ ಬಯಕೆಯನ್ನು ಆಧರಿಸುವುದಾದರೂ – ಯಾಕೆಂದರೆ ನನ್ನ ಬಯಕೆಯು ನನಗೆ ಸಂಬಂಧಿಸಿಲ್ಲವಾದರೂ, ನನ್ನದಾಗಿಯೇ ಉಳಿದು – ವ್ಯಕ್ತ್ಯತೀತವೆಂಬಂತಹ ಒಂದು ನೈತಿಕತೆಯನ್ನು ರೂಪಿಸಬಹುದು. ಉದಾಹರಣೆಗೆ, ಪ್ರತಿಯೊಬ್ಬನೂ ವಿಜ್ಞಾನವನ್ನು ಅರ್ಥಮಾಡಿಕೊಳ್ಳಬೇಕೆಂದು, ಮತ್ತೊಬ್ಬನು ಎಲ್ಲರೂ ಕಲೆಯನ್ನು ಆಸ್ವಾದಿಸಬೇಕೆಂದು ಬಯಸಬಹುದು. ಈ ಇಬ್ಬರು ವ್ಯಕ್ತಿಗಳ ನಡುವಣ ವ್ಯತ್ಯಾಸವೇ ಅವರ ಬಯಕೆಗಳಲ್ಲಿನ ವ್ಯತ್ಯಾಸವನ್ನು ಮಾಡುವಂತಹುದು.

ವಿವಾದವೊಂದು ಸೃಷ್ಟಿತವಾದಾಗ ವೈಯಕ್ತಿಕತೆಯು ಮೇಲೆದ್ದು ನಿಲ್ಲುತ್ತದೆ. 'ಎಲ್ಲರೂ ಸುಖವಾಗಿರಬೇಕೆಂದು ಬಯಸುವುದು ಸರಿಯಲ್ಲ; ನೀನು ಜರ್ಮನರ ಸುಖವನ್ನು ಮತ್ತು ಇತರ ಎಲ್ಲರ ಅಸುಖವನ್ನು ಬಯಸಬೇಕು' ಎಂದು

ಯಾವನಾದರೊಬ್ಬ ಹೇಳಿದನೆನ್ನಿ. ಇಲ್ಲಿ 'ಬೇಕು' ಎಂಬುದು ನಾನು ಬಯಸಬೇಕಾದದ್ದು ಯಾವುದೆಂಬುದನ್ನು ಹೇಳಿದವನು ಬಯಸುತ್ತಿದ್ದಾನೆ ಎಂಬುದನ್ನು ಸೂಚಿಸುತ್ತದೆ. ನಾನು ಜರ್ಮನ್ ಅಲ್ಲದಿದ್ದರೂ ಅದನ್ನು ಪ್ರತಿಭಟಿಸಬಹುದು, ಜರ್ಮನರಲ್ಲದವರ ಅಸುಖವನ್ನು ಬಯಸುವುದು ಮಾನಸಿಕವಾಗಿ ನನಗೆ ಅಸಾಧ್ಯವಾಗಬಹುದು, ಆದರೆ ಈ ಉತ್ತರವು ಅಸಮರ್ಪಕವೆನಿಸುತ್ತದೆ.

ಮತ್ತೆ, ಶುದ್ಧ ವ್ಯಕ್ತ್ಯತೀತ ಆದರ್ಶಗಳ ವಿಷಯದಲ್ಲಿ ವಿವಾದ ಉಂಟಾಗಬಹುದು. ನೀಷೆಯ ನಾಯಕನು ಕ್ರಿಶ್ಚಿಯನ್ ಸಂತನಿಗಿಂತ ಭಿನ್ನ, ಆದರೂ ಇಬ್ಬರನ್ನೂ ವ್ಯಕ್ತ್ಯತೀತ ನೆಲೆಯಲ್ಲಿ ಗೌರವಿಸಬಹುದು, ಒಬ್ಬನನ್ನು ನೀಷೆಯ ಅನುಯಾಯಿಗಳು, ಇನ್ನೊಬ್ಬನನ್ನು ಕ್ರಿಶ್ಚಿಯನ್ನರು. ನಮ್ಮ ಬಯಕೆಗಳ ಮೂಲಕವಾಗಿಯಲ್ಲದೆ ಇವೆರಡರನ್ನು ನಾವು ಹೇಗೆ ಬಗೆಹರಿಸಬಹುದು? ಆದರೆ, ಮುಂದೇನೂ ಇಲ್ಲದಿದ್ದಾಗ, ನೈತಿಕ ಭಿನ್ನಾಭಿಪ್ರಾಯವನ್ನು ಭಾವನಾತ್ಮಕತೆಯ ಮೂಲಕವೋ, ಕೊನೆಯ ಅಸ್ತ್ರವಾಗಿ, ಬಲವಂತದಿಂದಲೋ ನಿರ್ಧರಿಸಬಹುದು. ವಸ್ತುಸ್ಥಿತಿಗಳ ವಿಷಯದಲ್ಲಿ ನಾವು ವಿಜ್ಞಾನ ಮತ್ತು ವೈಜ್ಞಾನಿಕ ವಿಧಾನವಾದ ಪರಿವೀಕ್ಷಣೆಗಳನ್ನು ಅವಲಂಬಿಸಬಹುದು; ಆದರೆ ನೈತಿಕ ಪ್ರಶ್ನೆಗಳ ವಿಷಯದಲ್ಲಿ ಇದಕ್ಕೆ ಸಂವಾದಿಯಿರಲಾರದು. ಆದರೂ, ಇದು ನಿಜವಾದ ಪ್ರಶ್ನೆಯಾದರೆ, ನೈತಿಕ ವಿವಾದಗಳು ಅಧಿಕಾರಕ್ಕಾಗಿ – ಪ್ರಚಾರದ ಅಧಿಕಾರವನ್ನೊಳಗೊಂಡಂತೆ – ನಡೆಯುವ ಸ್ಪರ್ಧೆಯಲ್ಲಿ ಪರಿಹಾರಗೊಳ್ಳಬಹುದು.

ಈ ದೃಷ್ಟಿಕೋನವನ್ನು ಅದರ ಸ್ಥೂಲ ರೂಪದಲ್ಲಿ 'ರಿಪಬ್ಲಿಕ್' ನ ಮೊದಲ ಭಾಗದಲ್ಲಿ ಥ್ರೈಸಿಮ್ಯಾಕಸ್ ಮಂಡಿಸುತ್ತಾನೆ, ಪ್ಲೇಟೋ ಸಂವಾದಗಳಲ್ಲಿನ ಎಲ್ಲ ಪಾತ್ರಗಳಂತೆಯೇ ಅವನೂ ಒಬ್ಬ ವಾಸ್ತವಿಕ ವ್ಯಕ್ತಿ. ಚಾಕ್ಲೆಡಾನ್‌ನ ಒಬ್ಬ ಸೂಫಿಸ್ಟ್ ಅವನು, ಜೊತೆಗೆ ಪ್ರಖ್ಯಾತನಾದ ಭಾಷಣಕಲೆಯ ಅಧ್ಯಾಪಕ; ಅವನು ಕ್ರಿಪೂ ೪೨೭ ರಲ್ಲಿ ರಚಿತವಾದ ಅರಿಸ್ಟೋಫೆನೀಸ್‌ನ ಮೊದಲ ವೈನೋದಿಕದಲ್ಲಿ ಕಾಣಿಸಿಕೊಳ್ಳುತ್ತಾನೆ. ಸಾಕ್ರಟೀಸ್ ಬಳಿಕ ಕೆಲಕಾಲ ಸಿಫಾಲಸ್ ಎಂಬ ಮುದುಕನೊಡನೆ ಹಾಗೂ ಪ್ಲೇಟೋನ ಅಣ್ಣಂದಿರಾದ ಗ್ಲೌಕಾನ್ ಮತ್ತು ಅಡೆಮ್ಯಾಂಟಸ್‌ರೊಡನೆ ನ್ಯಾಯ ಕುರಿತು ಸ್ನೇಹಪರತೆಯಿಂದ ಚರ್ಚಿಸುತ್ತಿದ್ದ. ಚರ್ಚೆಯನ್ನು ಸಹಿಸಿಕೊಂಡು ಕೇಳಿಸಿಕೊಳ್ಳುತ್ತಿದ್ದ ಥ್ರೈಸಿಮ್ಯಾಕಸ್ ಅರ್ಥಹೀನ ಚರ್ಚೆಯ ವಿರುದ್ಧ ಸಿಡಿದೇಳುತ್ತಿದ್ದ. ನ್ಯಾಯ ಎನ್ನುವುದು ಬಲಿಷ್ಠನ ಹಿತಾಸಕ್ತಿಯಲ್ಲದೆ ಬೇರೆ ಅಲ್ಲ ಎಂದವನು ಒತ್ತಿ ಹೇಳುತ್ತಿದ್ದ.

ಈ ಅಭಿಪ್ರಾಯವನ್ನು ಸಾಕ್ರಟೀಸ್ ತನ್ನ ಚಮತ್ಕಾರಯುತ ಮಾತುಗಳ ಮೂಲಕ ಅಲ್ಲಗಳೆದ; ಅವನೆಂದೂ ಅದನ್ನು ಸಾವಧಾನವಾಗಿ ಎದುರಿಸಲಿಲ್ಲ. ಅದು ನೈತಿಕತೆ ಮತ್ತು ರಾಜಕಾರಣಗಳ ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತದೆ,

ಅಂದರೆ 'ಒಳ್ಳೆಯದು' ಮತ್ತು 'ಕೆಟ್ಟುದು' ಎಂದು ನಿರ್ಣಯಿಸುವ, ಈ ಶಬ್ದಗಳನ್ನು ಬಳಸುವವನ ಇಚ್ಛೆಯನ್ನು ಹೊರತುಪಡಿಸಿ, ಒಂದು ಮಾನದಂಡವಿದೆಯೇ ಎಂಬುದು. ಇಲ್ಲದಿದ್ದರೆ, ಥ್ರೈಸಿಮ್ಯಾಕಸ್ ಹೇಳುವ ಅನೇಕ ಪರಿಣಾಮಗಳು ಅಲ್ಲಗಳೆಯಲಾಗದವು. ಹೀಗಿದ್ದರೂ ಅಂಥದೊಂದು ಇದೆಯೆಂದು ಹೇಗೆ ಹೇಳುವುದು?

ಈ ಹಂತದಲ್ಲಿ, ಮತಧರ್ಮದಲ್ಲಿ ಒಂದು ಸರಳ ಉತ್ತರವಿರುವಂತೆ ಎದ್ದು ಕಾಣುತ್ತದೆ. ದೇವರು ಒಳ್ಳೆಯದು ಮತ್ತು ಕೆಟ್ಟುದನ್ನು ಮಾಡಿದ್ದಾನೆ, ಯಾರ ಮನಸ್ಸು ದೈವದ ಇಚ್ಛಾಶಕ್ತಿಯೊಡನೆ ಸಾಮರಸ್ಯದಿಂದಿರುವುದೋ ಅಂಥವನು ಒಳ್ಳೆಯವನು. ಆದರೆ ಈ ಉತ್ತರವು ಸಂಪ್ರದಾಯನಿಷ್ಠವಾದುದೇನೂ ಅಲ್ಲ. ದೇವರು ಒಳ್ಳೆಯವನು ಎಂದು ಮತಧರ್ಮಶಾಸ್ತ್ರಜ್ಞರು ಹೇಳುತ್ತಾರೆ, ಅಂದರೆ ಒಳ್ಳೆಯದು ಎಂಬುದಕ್ಕೆ ದೈವದ ಇಚ್ಛಾಶಕ್ತಿಗೆ ಹೊರತಾದ ಮಾನದಂಡವೊಂದಿದೆಯೆಂಬುದನ್ನು ಸೂಚಿಸುತ್ತದೆ. ಈ ರೀತಿಯಲ್ಲಿ ನಾವು ಒಂದು ಪ್ರಶ್ನೆಯನ್ನು ಎದುರಿಸಲೇಬೇಕಾದ ಸ್ಥಿತಿ ಉಂಟಾಗುತ್ತದೆ: 'ಸುಖವು ಒಳ್ಳೆಯದು' ಎಂಬ ಹೇಳಿಕೆಯಲ್ಲಿ 'ಹಿಮವು ಬೆಳ್ಳಗಿದೆ' ಎಂಬ ಹೇಳಿಕೆಯಲ್ಲಿನಂತೆ ಒಂದು ವಸ್ತುನಿಷ್ಠ ನಿಜ ಅಥವಾ ಸುಳ್ಳು ಇದೆಯೇ ಎಂಬುದು.

ಈ ಪ್ರಶ್ನೆಗೆ ಉತ್ತರಿಸಲು ದೀರ್ಘ ಚರ್ಚೆಯೊಂದು ಆವಶ್ಯಕವಾಗುತ್ತದೆ. ವ್ಯಾವಹಾರಿಕ ದೃಷ್ಟಿಯಿಂದ, ಕೆಲವರು ಯೋಚಿಸಿ ಇದೆ ಎಂದು, ಮೂಲಭೂತ ಅಂಶವನ್ನು ಗಮನಿಸದೆ, ಹೀಗೆನ್ನಬಹುದು: '"ವಸ್ತುನಿಷ್ಠ ಸತ್ಯ" ಯಾವುದೆಂಬುದು ನನಗೆ ತಿಳಿಯದು, ಆದರೆ ಅದನ್ನು ಕುರಿತು ಅನಾವರಣ ನಡೆಸಿದ ಬಹುತೇಕ ಎಲ್ಲರೂ, ಒಪ್ಪಿ ಎತ್ತಿ ಹಿಡಿದರೆ, ಅಂತಹ ಹೇಳಿಕೆಯು ನಿಜವೆಂದು ನಾನು ಪರಿಗಣಿಸುತ್ತೇನೆ.' ಈ ಅರ್ಥದಲ್ಲಿ, ಸೀಸರ್ ಕೊಲೆಯಾದ, ನೀರಿನಲ್ಲಿ ಆಮ್ಲಜನಕ ಮತ್ತು ಜಲಜನಕಗಳಿರುತ್ತವೆ ಎಂಬಂತಹವುಗಳಂತೆ ಹಿಮವು ಬೆಳ್ಳಗಿದೆ ಎಂಬುದು ಸತ್ಯ. ಆನಂತರ ನಮಗೆದುರಾಗುವುದು ವಾಸ್ತವತೆಯ ಪ್ರಶ್ನೆ: ಹೀಗೆ ಒಪ್ಪಿಗೆಯಾಗುವ ಹೇಳಿಕೆಗಳು ನೈತಿಕತೆಯಲ್ಲಿವೆಯೇ ಎಂಬುದು. ಇದ್ದರೆ, ಅಂತಹವುಗಳನ್ನು ಖಾಸಗಿ ನಡಾವಳಿಯ ಹಾಗೂ ರಾಜಕಾರಣದ ಸಿದ್ಧಾಂತದ ನೆಲೆಗಳನ್ನಾಗಿ ಮಾಡಬಹುದು. ಇಲ್ಲದಿದ್ದರೆ, ಬಲಿಷ್ಠ ಗುಂಪುಗಳ ನಡುವೆ ಒಮ್ಮತ ಮೂಡದ ನೈತಿಕತೆಯ ಭಿನ್ನಾಭಿಪ್ರಾಯ ಮೂಡಿದಾಗ, ತಾತ್ವಿಕ ಸತ್ಯ ಯಾವುದೇ ಇರಲಿ, ಬಲವಂತದಿಂದಲೋ ಪ್ರಚಾರದಿದಲೋ ಅಥವಾ ಎರಡರಿಂದಲೋ ತೀರ್ಮಾನಿಸುವ ವ್ಯಾವಹಾರಿಕ ದಾರಿಗೆ ನಮ್ಮನ್ನು ದೂಡುತ್ತದೆ.

ಪ್ಲೇಟೋಗೆ ಈ ಪ್ರಶ್ನೆ ಇದೆ ಎಂದು ಅನ್ನಿಸುವುದೇ ಇಲ್ಲ. ಅವನ ನಾಟಕೀಯ ಪ್ರಜ್ಞೆಯು ಥ್ರೈಸಿಮ್ಯಾಕಸ್‌ನ ಸ್ಥಿತಿಯನ್ನು ಬಲವಂತದಿಂದ ಹೇಳುವತ್ತ ದೂಡಿದರೂ, ಅವನಿಗೆ ಅದರ ಸಾಮರ್ಥ್ಯದ ಅರಿವಿಲ್ಲ, ಹೀಗಾಗಿ ಅವನು ಅದರ ವಿರುದ್ಧ ಎದ್ದು ಕಾಣುವಂತೆ ಅನ್ಯಾಯದ ಹಾದಿಯಲ್ಲಿ ವಾದಿಸುತ್ತಾನೆ. 'ಒಳ್ಳೆಯದು' ಇದೆ, ಅದರ

ಸ್ವರೂಪವನ್ನು ವಿವರಿಸಬಹುದು ಎಂದು ಪ್ಲೇಟೋ ನಂಬುತ್ತಾನೆ. ಅದರ ವಿರುದ್ಧ ಅಭಿಪ್ರಾಯ ಮಂಡಿಸುವಾಗ ಒಂದು ಬೌದ್ಧಿಕ ತಪ್ಪು ನಡೆಯುತ್ತದೆ, ಅದೆಂದರೆ ಒಂದು ವಸ್ತುಸ್ಥಿತಿಯ ಬಗೆಗಿನ ಭಿನ್ನಾಭಿಪ್ರಾಯವು ವೈಜ್ಞಾನಿಕವೆಂಬಂತೆ ವಾದಿಸುವುದು.

ಪ್ಲೇಟೋ ಮತ್ತು ಥ್ರೈಸಿಮ್ಯಾಕಸ್‌ರ ನಡುವಣ ವ್ಯತ್ಯಾಸವು ಬಹು ಮುಖ್ಯವಾದುದು; ತತ್ವಜ್ಞಾನದ ಇತಿಹಾಸಕಾರನಿಗೆ ಅದು ಗಮನಿಸಬೇಕಾದ ಒಂದು ಅಂಶವೇ ವಿನಾ ನಿರ್ಣಯಿಸಬೇಕಾದುದಲ್ಲ. ಪ್ಲೇಟೋ ತನ್ನ ಆದರ್ಶರಾಜ್ಯವು ಒಳ್ಳೆಯದು ಎಂಬುದನ್ನು 'ಸಾಧಿಸಿ' ತೋರಿಸುವುದಾಗಿ ಭಾವಿಸಬಹುದು, ನೈತಿಕತೆಯ ವಸ್ತುನಿಷ್ಠತೆಯನ್ನು ಒಪ್ಪಿಕೊಳ್ಳುವ ಪ್ರಜಾಪ್ರಭುತ್ವವಾದಿಯು ಅವನ ಆದರ್ಶರಾಜ್ಯ ಕೆಟ್ಟುದು ಎಂದು 'ಸಾಧಿಸಿ' ತೋರಿಸಬಹುದು. ಆದರೆ ಥ್ರೈಸಿಮ್ಯಾಕಸ್‌ನನ್ನು ಒಪ್ಪುವ ಯಾರೇ ಆದರೂ, 'ಇದರಲ್ಲಿ ಸಾಧಿಸಿ ತೋರಿಸುವ ಅಥವಾ ತೋರಿಸಲಾಗದ ಎಂಬುದಾವುದೂ ಇಲ್ಲ; ಇರುವ ಪ್ರಶ್ನೆಯೆಂದರೆ ನೀವು ಪ್ಲೇಟೋನ ಆದರ್ಶರಾಜ್ಯವನ್ನು ಒಪ್ಪುವಿರೋ ಇಲ್ಲವೋ ಎಂಬುದಷ್ಟೇ. ಒಪ್ಪುವುದಾದರೆ, ಅದು ನಿಮ್ಮ ಮಟ್ಟಿಗೆ ಒಳ್ಳೆಯದು; ಒಪ್ಪದಿದ್ದರೆ, ನಿಮ್ಮ ಮಟ್ಟಿಗೆ ಒಳ್ಳೆಯದಲ್ಲ. ಅನೇಕರು ಒಪ್ಪಿ, ಇನ್ನೂ ಅನೇಕರು ಒಪ್ಪದಿದ್ದರೆ, ತರ್ಕದ ಮೂಲಕ ಅದನ್ನು ನಿರ್ಣಯಿಸಲು ಸಾಧ್ಯವಿಲ್ಲ, ಹಾಗೆ ಮಾಡಬಹುದಾದುದು ವಾಸ್ತವವಾದ ಅಥವಾ ಪ್ರಚ್ಛನ್ನ ಬಲವಂತದಿಂದ. ತತ್ವಜ್ಞಾನದಲ್ಲಿ ಇನ್ನೂ ಸ್ವತಂತ್ರವಾಗಿರುವ ಪ್ರಶ್ನೆಗಳಲ್ಲಿ ಇದೂ ಒಂದು. ಎರಡೂ ಕಡೆ ವಾದಿಸುವವರಲ್ಲಿ ಗೌರವನೀಯರಾದವರು ಇದ್ದಾರೆ. ಆದರೆ ಬಹು ದೀರ್ಘ ಕಾಲದಿಂದ ಪ್ಲೇಟೋ ಒಪ್ಪಿದ ಅಭಿಪ್ರಾಯಕ್ಕೆ ಪ್ರಶ್ನಾತೀತವೆಂಬಂತಹ ಮನ್ನಣೆಯಿದೆ.

ಒಂದು ವಸ್ತುನಿಷ್ಠ ಮಾನದಂಡದ ಬದಲಾಗಿ ಮಂಡಿತವಾದ ಅಭಿಪ್ರಾಯವು ಕೆಲವು ಪರಿಣಾಮಗಳನ್ನು ಬೀರುತ್ತದೆಂಬುದನ್ನು ಕೆಲವರು ಮಾತ್ರ ಒಪ್ಪುತ್ತಾರೆ ಎಂಬುದನ್ನೂ ನಾವು ಗಮನಿಸಬೇಕು. ನಾವು ಒಪ್ಪುವಂತಹ ಮತ್ತು ಅಂತಿಮವಾಗಿ ಎಲ್ಲರೂ ಒಪ್ಪುವ ಅಭಿಪ್ರಾಯವನ್ನು ಮಂಡಿಸುವ ಗೆಲಿಲಿಯೋ ಮಾಡಿದಂತಹ ವೈಜ್ಞಾನಿಕ ಅನಾವರಣಗಳ ಬಗ್ಗೆ ನಾವು ಹೇಳಬಹುದಾದುದೇನು? ಅವರು ತರ್ಕದ ಮೂಲಕ ಹಾಗೆ ಮಾಡುತ್ತಾರೆಯೇ ಹೊರತು ಭಾವನಾತ್ಮಕತೆಯಿಂದಲಾಗಲೀ ಸರ್ಕಾರದ ಒತ್ತಡದಿಂದಾಗಲೀ ಬಲವಂತದಿಂದಾಗಲೀ ಅಲ್ಲ. ಇಲ್ಲಿ ಜನಾಭಿಪ್ರಾಯಕ್ಕೆ ಭಿನ್ನವಾದ ಒಂದು ಗುಣವಿದೆ. ನೈತಿಕ ವಿಚಾರಗಳಲ್ಲಾದರೆ, ಮಹಾ ಮತಧಾರ್ಮಿಕ ಬೋಧಕರಂತಹ ಉದಾಹರಣೆಗಳಿವೆ. ಸಬ್ಬತ್‌ರಂದು ಜೋಳದ ತೆನೆಯನ್ನು ಕೀಳುವುದು ತಪ್ಪಲ್ಲವೆಂದು ಕ್ರಿಸ್ತ ಹೇಳಿದ, ಆದರೆ ನಿಮ್ಮ ಶತ್ರುಗಳನ್ನು ದ್ವೇಷಿಸುವುದು ತಪ್ಪು ಎಂದ. ಇಂತಹ ನೈತಿಕ ಅನಾವರಣಗಳು ಬಹುಮತಾಭಿಪ್ರಾಯಕ್ಕೆ ಹೊರತಾದ ಮಾನದಂಡಗಳಿರಬಹುದಾದುದನ್ನು ಸೂಚಿಸುತ್ತವೆ. ಯಾವುದೇ ಮಾನದಂಡವಾಗಲೀ,

ಅದು ವೈಜ್ಞಾನಿಕ ವಸ್ತುಸ್ಥಿತಿಯಲ್ಲಿನಂತೆ ವಾಸ್ತವ ವಸ್ತುಸ್ಥಿತಿಯಲ್ಲ. ಇದು ಕಷ್ಟಕರವಾದ ಪ್ರಶ್ನೆ, ಅದನ್ನು ನಾನು ಬಗೆಹರಿಸಬಲ್ಲೆನೆಂದು ಹೇಳಲಾರೆ. ಸದ್ಯಕ್ಕೆ, ಅದನ್ನು ಗಮನಿಸುವುದಷ್ಟಕ್ಕೇ ತೃಪ್ತಿಪಟ್ಟುಕೊಳ್ಳಬೇಕು.

ಪ್ಲೇಟೋನ ಆದರ್ಶರಾಜ್ಯವು, ಆಧುನಿಕ ಯುಟೋಪಿಯಗಳಂತಲ್ಲದೆ, ವಾಸ್ತವವಾಗಿ ಸ್ಥಾಪಿಸಬೇಕು ಎಂದು ಬಯಸಿದಂತಿದೆ. ನಮಗೀಗ ಕಾಣುವಂತೆ ಅದೇನೂ ಆಗ ಕಲ್ಪನಾತ್ಮಕವೋ ಸಾಧಿಸಲು ಅಸಾಧ್ಯವೋ ಆಗಿರಲಿಲ್ಲ. ಅದರಲ್ಲಿನ ಅನೇಕ ನಿಬಂಧನೆಗಳು, ಅವ್ಯಾವಹಾರಿಕವೆಂದು ನಾವು ಭಾವಿಸಬಹುದಾದವುಗಳ ಸಮೇತ, ಸ್ಪಾರ್ಟಾದಲ್ಲಿ ವಾಸ್ತವವಾಗಿದ್ದವು. ತತ್ವಜ್ಞಾನಿಗಳ ಆಳ್ವಿಕೆಯನ್ನು ಸ್ಥಾಪಿಸಲು ಪೈಥಾಗೊರಾಸ್ ಪ್ರಯತ್ನಿಸಿದ. ಪ್ಲೇಟೋನ ಕಾಲದಲ್ಲಿ, ಅವನು ಸಿಸಿಲಿ ಮತ್ತು ದಕ್ಷಿಣ ಇಟಲಿಗಳಿಗೆ ಭೇಟಿಯಿತ್ತಾಗ, ಪೈಥಾಗೊರಾಸ್ ಪಂಥದ ಅರ್ಖೈಟಸ್ ತಾರಾಸ್‌ನಲ್ಲಿ (ಈಗಿನ ಟರಾಂಟೋ) ರಾಜಕೀಯವಾಗಿ ಪ್ರಭಾವಶಾಲಿಯಾಗಿದ್ದ. ತಮ್ಮ ನೀತಿಸಂಹಿತೆಯನ್ನು ರೂಪಿಸಲು ಸಂತನೊಬ್ಬನನ್ನು ಕೇಳಿಕೊಳ್ಳುವುದು ಆಗ ಸಾಮಾನ್ಯ ರೂಢಿಯಾಗಿತ್ತು. ಅಥೆನ್ಸ್‌ಗಾಗಿ ಸೋಲೋನ್ ಈ ಕೆಲಸ ಮಾಡಿದ; ತ್ಯೂರಿಯೈಗಾಗಿ ಪ್ರೋಟಾಗೊರಾಸ್ ಮಾಡಿದ. ಈ ಕಾಲದ ವಸಾಹತುಗಳು ಆ ಕಾಲದಲ್ಲಿ ತಮ್ಮ ತವರು ನಗರಗಳಿಂದ ಸಂಪೂರ್ಣ ಸ್ವತಂತ್ರವಾಗಿದ್ದವು; ಹೀಗಾಗಿ ಪ್ಲೇಟೋ ಅನುಯಾಯಿಯು ಸ್ಪೈಯಿನ್ ಅಥವಾ ಗೌಲ್‌ನ ಸಮುದ್ರ ತೀರದಲ್ಲಿ ಆದರ್ಶರಾಜ್ಯವನ್ನು ಸ್ಥಾಪಿಸುವುದು ಅಸಾಧ್ಯವೇನಾಗಿರಲಿಲ್ಲ. ದುರದೃಷ್ಟವಶಾತ್ ಪ್ಲೇಟೋ ಕಾರ್ಥೇಜ್‌ನೊಡನೆ ಯುದ್ಧನಿರತವಾದ ದೊಡ್ಡ ವಾಣಿಜ್ಯ ನಗರವಾದ ಸಿರಾಕ್ಯೂಸ್‌ಗೆ ಹೋಗಬೇಕಾಯಿತು; ಅಂತ ಸನ್ನಿವೇಶದಲ್ಲಿ, ಯಾವ ತತ್ವಜ್ಞಾನಿಯೂ ಹೆಚ್ಚಿನದೇನನ್ನೂ ಸಾಧಿಸಲು ಸಾಧ್ಯವಿರಲಿಲ್ಲ. ಮುಂದಿನ ಪೀಳಿಗೆಯಲ್ಲಿ, ಮ್ಯಾಸಿಡೋನಿಯದ ಉಚ್ಛ್ರಾಯವು ಸಣ್ಣ ಅವಕಾಶಗಳನ್ನು ಓಬಿರಾಯನ ಕಾಲದ್ದಾಗಿಸಿತು, ಸಣ್ಣ ಪ್ರಮಾಣದ ರಾಜಕೀಯ ಪ್ರಯೋಗಗಳನ್ನೆಲ್ಲ ವ್ಯರ್ಥಗೊಳಿಸಿತು.

೦

೧೫
ಆದರ್ಶರೂಪಸಿದ್ಧಾಂತ (ಥಿಯರಿ ಆಫ್ ಐಡಿಯಾಸ್)

'ರಿಪಬ್ಲಿಕ್'ನ ಮಧ್ಯಭಾಗವು, ಅಂದರೆ ಭಾಗ ೫ ರ ಉತ್ತರಭಾಗದಿಂದ ಹಿಡಿದು ಭಾಗ ೭ ರವರೆಗೆ, ರಾಜಕೀಯವನ್ನು ದೂರವಿರಿಸಿ ಶುದ್ಧ ತತ್ವಜ್ಞಾನದ ಪ್ರಶ್ನೆಗಳನ್ನು ಕುರಿತು ಚಿಂತಿಸುತ್ತದೆ. ಈ ಪ್ರಶ್ನೆಗಳನ್ನು ಒಂದು ರೀತಿ ಇದ್ದಕ್ಕಿದ್ದಂತೆ ಕೇಳಿರುವ ಹೇಳಿಕೆಯಲ್ಲಿ ಪ್ರಸ್ತಾಪಿಸಲಾಗಿದೆ.:

> **ತತ್ವಜ್ಞಾನಿಗಳು ರಾಜರಾಗಿರುವವರೆಗೂ ಅಥವಾ ಈ ಜಗತ್ತಿನ ರಾಜರೂ ರಾಜಕುಮಾರರೂ ತಾತ್ವಿಕ ಬಲದ ಸಾರವನ್ನು ಮೈಗೂಡಿಸಿಕೊಳ್ಳುವವರೆಗೆ, ರಾಜಕೀಯ ಹಿರಿತನ ಮತ್ತು ವಿವೇಕಗಳು ಒಗ್ಗೂಡುವವರೆಗೆ, ಆ ಇನ್ನೊಂದನ್ನು ಬಿಟ್ಟು ಯಾವುದೇ ಸಾಮಾನ್ಯ ವಿಷಯುಗಳನ್ನು ಬಲವಂತದಿಂದ ದೂರವಿರಿಸಿರುವವರೆಗೆ, ನಗರಗಳು ಈ ಕೆಡುಕುಗಳಿಂದ ಮುಕ್ತಿ ಪಡೆಯಲಾರವು – ಉಹ್ಞೂ, ನಾನು ನಂಬುವಂತೆ, ಮಾನವ ಸಂಕುಲವು – ಆಗ ಮಾತ್ರ ನಮ್ಮ ಈ ಅವಕಾಶವು ಜೀವನಸಾಧ್ಯತೆಯನ್ನು ಹೊಂದಿ ಬೆಳಕನ್ನು ಕಾಣುತ್ತದೆ.**

ಇದು ನಿಜವಾದರೆ, ತತ್ವಜ್ಞಾನಿಯ ಲಕ್ಷಣವೇನು, ಮತ್ತು 'ತತ್ವಜ್ಞಾನ'ದ ಸ್ವರೂಪವೇನು ಎಂದು ನಾವು ನಿರ್ಧರಿಸಬೇಕಾಗುತ್ತದೆ. ಇದರಿಂದಂಟಾಗುವ ಚರ್ಚೆಯು 'ರಿಪಬ್ಲಿಕ್'ನ ಅತ್ಯಂತ ಪ್ರಸಿದ್ಧವಾದ ಭಾಗ; ಮತ್ತು ಪ್ರಾಯಶಃ ಅತ್ಯಂತ ಪ್ರಭಾವಶಾಲಿ. ಅದರ ಕೆಲವು ಭಾಗಗಳಲ್ಲಿ ಅಸಾಧಾರಣ ಸಾಹಿತ್ಯ ಸೌಂದರ್ಯವಿದೆ; ಓದುಗನು ಅಲ್ಲಿ ಹೇಳಿರುವುದನ್ನು (ನನ್ನಂತೆ) ಒಪ್ಪದಿರಹುದಾದರೂ, ಅದರಿಂದ ಸಂಚಲಿತನಾಗುವುದು ನಿಶ್ಚಿತ.

ಪ್ಲೇಟೋನ ತತ್ವಜ್ಞಾನವು ವಸ್ತುಸ್ಥಿತಿ ಮತ್ತು ರೂಪಾತ್ಮಕತೆಗಳ ವ್ಯತ್ಯಾಸದ ಮೇಲೆ ಅವಲಂಬಿತವಾಗಿದೆ. ಇದನ್ನು ಮೊದಲು ಗುರುತಿಸಿದವನು ಪಾರ್ಮನೈಡೀಸ್; ನಾವೀಗ ಪರಿಶೀಲಿಸುತ್ತಿರುವ ಇಡೀ ಚರ್ಚೆಯಾದ್ಯಂತ, ಪಾರ್ಮನೈಡೀಸ್‌ನ ಪದಗುಚ್ಛಗಳೂ ಮತ್ತು ತರ್ಕಗಳೂ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಆದರೆ, ಅದರಲ್ಲಿ ವಸ್ತುಸ್ಥಿತಿಯ ಬಗ್ಗೆ ಮತಧಾರ್ಮಿಕ ಧಾಟಿಯಿದೆ, ಇದು

ಪಾರ್ಮನೈಡೀಸ್‌ಗಿಂದ ಪೈಥಾಗೊರಾಸ್‌ಪಂಥದ್ದಂತಿದೆ. ಅಲ್ಲಿ ಗಣಿತ ಮತ್ತು ಸಂಗೀತಗಳ ಬಗ್ಗೆ ವಿಶೇಷ ಪ್ರಸ್ತಾಪಗಳಿವೆ, ಇದನ್ನು ನಾವು ನೇರವಾಗಿ ಪೈಥಾಗೊರಾಸ್‌ನ ಶಿಷ್ಯರಲ್ಲಿ ಕಾಣುತ್ತೇವೆ. ಪಾರ್ಮನೈಡೀಸ್‌ನ ತರ್ಕ ಮತ್ತು ಪೈಥಾಗೊರಾಸ್ ಮತ್ತು ಆರ್ಫಿಕ್‌ರ ಪರಲೋಕಸಂಬಂಧೀ ಅಂಶಗಳು ಸೇರಿ ಬುದ್ಧಿ ಹಾಗೂ ಮತಧಾರ್ಮಿಕ ಭಾವನೆಗಳಿಗೆ ತೃಪ್ತಿಕರವೆನಿಸುವ ಸಿದ್ಧಾಂತವೊಂದನ್ನು ರೂಪಿಸಿವೆ; ಇದರ ಪರಿಣಾಮವು ತುಂಬ ಸಮರ್ಥವಾದ ಸಂಶ್ಲೇಷಣೆ, ಅದು ಹಲವಾರು ಪರಿಷ್ಕರಣೆಗಳೊಂದಿಗೆ, ಹೆಗಲ್ ಅವನನ್ನೂ ಒಳಗೊಂಡಂತೆ ಅವನವರೆಗಿನ ದೊಡ್ಡ ತತ್ವಜ್ಞಾನಿಗಳನ್ನು ಆಳವಾಗಿ ಪ್ರಭಾವಿಸಿದೆ. ಆದರೆ ಪ್ರಭಾವಕ್ಕೊಳಗಾದವರು ತತ್ವಜ್ಞಾನಿಗಳು ಮಾತ್ರ. ಸಂಗೀತ ಮತ್ತು ಚಿತ್ರಕಲೆಗಳನ್ನೂ ಕ್ಯಾಥೋಲಿಕ್ ಚರ್ಚ್‌ನ ಆಡಂಬರದ ಆಚರಣೆಗಳನ್ನೂ ಪ್ಯೂರಿಟನ್ನರು ಏಕೆ ವಿರೋಧಿಸಿದರು? ಅದಕ್ಕೆ ನೀವು 'ರಿಪಬ್ಲಿಕ್'ನ ಹತ್ತನೆಯ ಭಾಗದಲ್ಲಿ ಉತ್ತರವನ್ನು ಕಾಣಬಹುದು. ಶಾಲಾ ಮಕ್ಕಳೇಕೆ ಅಂಕಗಣಿತವನ್ನು ಕಲಿಯಬೇಕೆಂದು ಒತ್ತಾಯಿಸಲಾಯಿತು? ಇವಕ್ಕೆ ಕಾರಣಗಳು ಏಳನೆಯ ಭಾಗದಲ್ಲಿವೆ.

ಈ ಕೆಳಗಿನ ವಾಕ್ಯಬೃಂದವು ಪ್ಲೇಟೋನ ಆದರ್ಶರೂಪಸಿದ್ಧಾಂತವನ್ನು ಸಾರವತ್ತಾಗಿ ಹೇಳುತ್ತದೆ:

ಪ್ರಶ್ನೆಯೆಂದರೆ: ತತ್ವಜ್ಞಾನಿ ಅಂದರೆ ಯಾರು? ಮೊದಲ ಉತ್ತರ ಅದರ ವ್ಯುತ್ಪತ್ತಿಯಲ್ಲಿ ಸಿಕ್ಕುತ್ತದೆ: ತತ್ವಜ್ಞಾನಿಯೆಂದರೆ ವಿವೇಕಪ್ರೇಮಿ. ಆದರೆ ಇದು ಕುತೂಹಲಭರಿತ ವ್ಯಕ್ತಿಯು ಜ್ಞಾನವನ್ನು ಪ್ರೀತಿಸುವ ಅರ್ಥದಲ್ಲಿ ಜ್ಞಾನಪ್ರೇಮಿ ಎನ್ನುವುದೇ ಅಲ್ಲ; ಕ್ಷುಲ್ಲಕ ಕುತೂಹಲವು ತತ್ವಜ್ಞಾನಿಯನ್ನಾಗಿಸಲಾರದು. ಹೀಗಾಗಿ ವ್ಯಾಖ್ಯೆಯನ್ನು ಬದಲಾಯಿಸಲಾಗಿದೆ: ತತ್ವಜ್ಞಾನಿಯೆಂದರೆ 'ಸತ್ಯದರ್ಶನ'ವನ್ನು ಇಷ್ಟಪಡುವವನು. ಆದರೆ ದರ್ಶನ ಎಂದರೇನು?

ಒಬ್ಬನು ಸುಂದರ ವಸ್ತುಗಳನ್ನು ಇಷ್ಟಪಡುತ್ತಾನೆ ಎಂದಿಟ್ಟುಕೊಳ್ಳಿ, ಅಂದರೆ, ಹೊಸ ದುರಂತನಾಟಕಗಳಲ್ಲಿನ ಹೊಸ ಅಂಶವನ್ನು ಗುರುತಿಸಬಲ್ಲವನು, ಹೊಸ ಚಿತ್ರಗಳನ್ನು ನೋಡುವವನು, ಹೊಸ ಸಂಗೀತವನ್ನು ಕೇಳುವವನು. ಅಂಥವನು ತತ್ವಜ್ಞಾನಿಯಲ್ಲ, ಯಾಕೆಂದರೆ ಅವನು ಕೇವಲ ಸುಂದರ ವಸ್ತುಗಳನ್ನು ಇಷ್ಟಪಡುತ್ತಾನೆ, ಆದರೆ ತತ್ವಜ್ಞಾನಿಯು ಸೌಂದರ್ಯವನ್ನೇ ಇಷ್ಟಪಡುವವನು. ಬರೀ ಸುಂದರ ವಸ್ತುಗಳನ್ನು ಇಷ್ಟಪಡುವವನು ಕನಸು ಕಾಣುತ್ತಾನೆ, ಆದರೆ ಆತ್ಯಂತಿಕ ಸೌಂದರ್ಯವನ್ನು ಬಲ್ಲ ವ್ಯಕ್ತಿಯು ಸದಾ ಎಚ್ಚರದಿಂದಿರುತ್ತಾನೆ. ಮೊದಲನೆಯವನಿಗೆ ಅಭಿಪ್ರಾಯ ಮಾತ್ರವಿದೆ, ಎರಡನೆಯವನಿಗೆ ಜ್ಞಾನವಿದೆ.

'ಜ್ಞಾನ' ಮತ್ತು 'ಅಭಿಪ್ರಾಯ'ಗಳ ನಡುವಣ ವ್ಯತ್ಯಾಸವೇನು? ಜ್ಞಾನ ಹೊಂದಿದ ವ್ಯಕ್ತಿಯು ಯಾವುದೋ ಒಂದರ ಬಗ್ಗೆ ಜ್ಞಾನವನ್ನು ಹೊಂದಿರುತ್ತಾನೆ, ಅಂದರೆ

ಇರುವ ಯಾವುದೋ ಒಂದನ್ನು, ಯಾಕಂದರೆ ಇಲ್ಲದಿರುವುದು ಏನೂ ಅಲ್ಲ. (ಇದು ಪಾರ್ಮೆನೈಡೀಸ್‌ನನ್ನು ನೆನಪಿಸುತ್ತದೆ.) ಹೀಗಾಗಿ ಜ್ಞಾನವು ದೋಷಾತೀತವಾದದ್ದು, ಯಾಕೆಂದರೆ ಅದು ತಪ್ಪು ಜ್ಞಾನವೆಂಬುದನ್ನು ತಾರ್ಕಿಕವಾಗಿ ಅದು ತಪ್ಪು ಎಂದು ಸಾಧಿಸುವುದು ಅಸಾಧ್ಯ. ಆದರೆ ಅಭಿಪ್ರಾಯವು ತಪ್ಪಾಗಿರಬಹುದು. ಇದು ಹೇಗಾದೀತು? ಇಲ್ಲದುದರ ಬಗ್ಗೆ ಅಭಿಪ್ರಾಯವಿರಲಾರದು, ಯಾಕೆಂದರೆ ಅದು ಅಸಾಧ್ಯ. ಅಥವಾ ಇರುವುದರ ಬಗ್ಗೆ, ಹೀಗಾದರೆ ಅದು ಜ್ಞಾನವಾಗುತ್ತದೆ. ಹೀಗಾಗಿ ಅಭಿಪ್ರಾಯವು ಇರುವುದರ ಮತ್ತು ಇಲ್ಲದಿರುವುದರ ಬಗ್ಗೆ ಆಗಿರುತ್ತದೆ.

ಆದರೆ ಇದು ಹೇಗೆ ಸಾಧ್ಯ? ಇದಕ್ಕೆ ಉತ್ತರವೆಂದರೆ, ಕೆಲವು ನಿರ್ದಿಷ್ಟ ವಸ್ತುಗಳು ತಮ್ಮ ವಿರೋಧದ ಲಕ್ಷಣಗಳನ್ನೂ ಹೊಂದಿರುತ್ತವೆ: ಸುಂದರವಾದುದು, ಕೆಲವು ಅಂಶಗಳಲ್ಲಿ, ಕುರೂಪವೂ ಆಗಿರುತ್ತದೆ; ನ್ಯಾಯವಾದುದು, ಕೆಲವಂಶಗಳಲ್ಲಿ ಅನ್ಯಾಯವಾಗಿರುತ್ತದೆ ಮುಂತಾದುವು. ಎಲ್ಲ ಇಂದ್ರಿಯಗ್ರಾಹ್ಯ ವಸ್ತುಗಳೂ, ಪ್ಲೇಟೋ ವಾದಿಸುವಂತೆ, ಈ ವಿರೋಧಲಕ್ಷಣಗಳನ್ನು ಹೊಂದಿರುತ್ತವೆ; ಹೀಗಾಗಿ ಅವು ಇರುವ ಮತ್ತು ಇಲ್ಲದಿರುವುದರ ನಡುವಿನದು. ಹೀಗಾಗಿ ಅವು ಅಭಿಪ್ರಾಯದ ವಸ್ತುಗಳೇ ಹೊರತು ಜ್ಞಾನದ್ದಲ್ಲ. 'ಆದರೆ ಯಾರು ಆತ್ಯಂತಿಕವಾದ, ಚಿರಂತನವಾದ ಮತ್ತು ಬದಲಾಗದುದನ್ನು ಕಾಣುತ್ತಾನೆಯೋ ಅವನಿಗೆ ಜ್ಞಾನವಿದೆ ಎನ್ನಬಹುದು, ಕೇವಲ ಅಭಿಪ್ರಾಯವಿದೆ ಎಂಬಂತಹವನಿಗಲ್ಲ.'

ಹೀಗಾಗಿ ನಾವು ಬರುವ ತೀರ್ಮಾನವೆಂದರೆ, ಅಭಿಪ್ರಾಯವೆಂಬುದು ಇಂದ್ರಿಯಗ್ರಾಹ್ಯ ಜಗತ್ತು, ಆದರೆ ಜ್ಞಾನವು ಇಂದ್ರಿಯಾತೀತ ಚಿರಂತನ ಜಗತ್ತು; ಉದಾಹರಣೆಗೆ, ಅಭಿಪ್ರಾಯವು ನಿರ್ದಿಷ್ಟ ಸುಂದರ ವಸ್ತುಗಳಿಗೆ ಸಂಬಂಧಪಟ್ಟುದಾದರೆ, ಜ್ಞಾನವು ಸೌಂದರ್ಯದ ಬಗ್ಗೆಯೇ ಇರುವಂತಹುದು.

ಮುಂದಿಟ್ಟಿರುವ ತರ್ಕವು ಒಂದೇ: ಒಂದು ವಸ್ತುವು ಸುಂದರವೂ ಆಗಿದೆ ಕುರೂಪವೂ ಆಗಿದೆ, ನ್ಯಾಯವೂ ಆಗಿದೆ ಅನ್ಯಾಯವೂ ಆಗಿದೆ ಎಂಬುದು ಸ್ವವಿರೋಧಿಯಾದದ್ದು, ಆದರೂ ಕೆಲವು ವಸ್ತುಗಳು ಇಂತಹ ವಿರೋಧಿಲಕ್ಷಣಗಳನ್ನು ಒಗ್ಗೂಡಿಸಿಕೊಂಡಿರುವಂತೆ ಕಾಣುತ್ತವೆ. ಹೀಗಾಗಿ ನಿರ್ದಿಷ್ಟ ವಸ್ತುಗಳು ವಾಸ್ತವವಲ್ಲ. ಹೆರಾಕ್ಲಿಟಸ್ ಹೇಳಿದ್ದ: 'ನಾವು ಅದೇ ನದಿಯೊಳಗೆ ಕಾಲಿಡುತ್ತೇನೆ, ಕಾಲಿಡಲಾರೆವು; ನಾವು ಇದ್ದೇವೆ ಮತ್ತು ಇಲ್ಲ,' ಎಂದು. ಇದನ್ನು ಪಾರ್ಮೆನೈಡೀಸ್ ಜೊತೆಗೆ ಸೇರಿಸಿದರೆ ನಾವು ಪ್ಲೇಟೋನ ಫಲಿತಾಂಶವನ್ನು ತಲುಪಿರುತ್ತೇವೆ.

ಪ್ಲೇಟೋನ ಸಿದ್ಧಾಂತದಲ್ಲಿ ಅವನ ಹಿಂದಿನವರಲ್ಲಿ ಕಾಣಲಾಗದ ಬಹು ಮಹತ್ವದ ಯಾವುದೋ ಒಂದಿದೆ, ಅದೆಂದರೆ 'ಆದರ್ಶರೂಪ' ಅಥವಾ 'ರೂಪ' ಸಿದ್ಧಾಂತ. ಈ ಸಿದ್ಧಾಂತವು ಭಾಗಶಃ ತಾರ್ಕಿಕವಾಗಿದ್ದು, ಉಳಿದಂತೆ ತತ್ವಜಿಜ್ಞಾಸೆಯಾಗಿದೆ. ತಾರ್ಕಿಕ ಭಾಗವು ಸಾಮಾನ್ಯ ಪದಗಳ ಅರ್ಥಕ್ಕೆ ಸಂಬಂಧಿಸಿದೆ. 'ಬೆಕ್ಕು' ಎಂದು

ಕರೆಯುವ ವರ್ಗದಲ್ಲಿ ಅನೇಕ ಬಿಡಿ ಪ್ರಾಣಿಗಳಿವೆ. 'ಬೆಕ್ಕು' ಎಂಬ ಪದದ ಅರ್ಥವೇನು? ಪ್ರತಿ ಬಿಡಿ ಬೆಕ್ಕಿಗಿಂತ ವಿಭಿನ್ನವಾದುದು ಎಂಬುದು ಸ್ಪಷ್ಟ. ಪ್ರಾಣಿಯೊಂದು ಬೆಕ್ಕು ಎಂದು ಕಾಣುತ್ತದೆ, ಯಾಕಂದರೆ ಅದು ಎಲ್ಲ ಬೆಕ್ಕುಗಳಿಗೂ ಸಮಾನವಾದ ಸ್ವರೂಪದಲ್ಲಿ ಭಾಗಿಯಾಗಿರುತ್ತದೆ. 'ಬೆಕ್ಕು' ಎಂಬಂತಹ ಸಾಮಾನ್ಯ ಪದಗಳಿಲ್ಲದಿದ್ದರೆ (ರೂಢನಾಮಗಳು) ಭಾಷೆಯ ಬಳಕೆಯು ಸುಲಭವಾಗುವುದಿಲ್ಲ, ಅಂಥ ಪದಗಳು ಅರ್ಥವಿಹೀನವೇನಲ್ಲ ಎಂಬುದು ಸ್ಪಷ್ಟವಾದುದು. ಆದರೆ 'ಬೆಕ್ಕು' ಎಂಬ ಪದವು ಏನನ್ನಾದರೂ ಸೂಚಿಸಿದರೆ, ಅದು ಈ ಅಥವಾ ಆ ಬೆಕ್ಕನ್ನು ಸೂಚಿಸುತ್ತಿರದೆ, ಸಾರ್ವತ್ರಿಕ ಬೆಕ್ಕುತನವನ್ನು ಸೂಚಿಸುತ್ತದೆ. ಯಾವುದೋ ನಿರ್ದಿಷ್ಟ ಬೆಕ್ಕೊಂದು ಹುಟ್ಟಿದಾಗ ಇದು ಹುಟ್ಟಲಿಲ್ಲ, ಅಥವಾ ಅದು ಸತ್ತಾಗ ಸಾಯುವುದಿಲ್ಲ. ವಾಸ್ತವವಾಗಿ ಅದಕ್ಕೆ ಕಾಲ ಅಥವಾ ಅವಕಾಶದಲ್ಲಿ ಯಾವ ಸ್ಥಾನವೂ ಇಲ್ಲ; ಅದು 'ಚಿರಂತನ'. ಇದು ಸಿದ್ಧಾಂತದ ತಾರ್ಕಿಕ ಭಾಗ. ಅದರ ಪರವಾದ ವಾದಗಳು, ಆತ್ಯಂತಿಕವಾಗಿ ಸಿಂಧುವೋ ಅಸಿಂಧುವೋ, ಗಟ್ಟಿಯಾದುವು; ಮತ್ತು ಅದರ ತತ್ವಜಿಜ್ಞಾಸೆಯ ಭಾಗದಿಂದ ಹೊರತಾದವು.

ಈ ಸಿದ್ಧಾಂತದ ತತ್ವಜಿಜ್ಞಾಸೆಯ ಭಾಗದ ಪ್ರಕಾರ, 'ಬೆಕ್ಕು' ಎಂಬ ಪದದ ಅರ್ಥ ಬೆಕ್ಕು ಎಂಬ ಒಂದು ಆದರ್ಶರೂಪ, ದೇವರು ಸೃಷ್ಟಿಸಿದ 'ಆ ಬೆಕ್ಕು', ಮತ್ತು ಅದು ವಿಶಿಷ್ಟ. ನಿರ್ದಿಷ್ಟ ಬೆಕ್ಕುಗಳು ಬೆಕ್ಕಿನ ಸ್ವರೂಪದಲ್ಲಿ ಭಾಗಿಗಳಾಗಿರುತ್ತವೆ, ಆದರೆ ಹೆಚ್ಚು ಕಡಿಮೆ ಪ್ರಮಾಣದ ಅಪರಿಪೂರ್ಣತೆಯಿಂದ; ಈ ಅಪರಿಪೂರ್ಣತೆಗಳ ಕಾರಣದಿಂದಲೇ ಅವು ಅನೇಕವಾಗಿರಲು ಸಾಧ್ಯ. ಬೆಕ್ಕು ಸತ್ಯ, ನಿರ್ದಿಷ್ಟ ಬೆಕ್ಕುಗಳು ತೋರಿಕೆ (ಅಪೇರೆಂಟ್).

'ರಿಪಬ್ಲಿಕ್'ನ ಕೊನೆಯ ಭಾಗದಲ್ಲಿ, ಚಿತ್ರಕಾರರ ಖಂಡನೆಯ ಪೀಠಿಕೆಯಂತೆ, ಆದರ್ಶರೂಪ ಅಥವಾ ಸ್ವರೂಪ ಸಿದ್ಧಾಂತದ ಬಗೆಗಿನ ಸ್ಫುಟವಾದ ವಿವರಣೆಯಿದೆ.

ಇಲ್ಲಿ ಪ್ಲೇಟೋ ವಿವರಿಸುವುದೆಂದರೆ, ಅನೇಕ ವ್ಯಕ್ತಿಗಳು ಒಂದೇ ಹೆಸರಿನವರಾಗಿದ್ದರೆ, ಅವರಿಗೆ ಸಮಾನ 'ಆದರ್ಶರೂಪ' ಅಥವಾ 'ಸ್ವರೂಪ' ಇರುತ್ತದೆ. ಉದಾಹರಣೆಗೆ, ಎಷ್ಟೋ ಮಂಚಗಳಿರಬಹುದಾದರೂ, ಮಂಚದ ಒಂದೇ 'ಆದರ್ಶರೂಪ' ಅಥವಾ 'ಸ್ವರೂಪ' ಇರುತ್ತದೆ. ಮಂಚವೊಂದರ ಕನ್ನಡಿಯಲ್ಲಿ ಜನಬಿಂಬವು ಹೇಗೆ ತೋರಿಕೆಯೋ, ಸತ್ಯವಲ್ಲವೋ, ಹಾಗೆಯೇ ಅನೇಕ ನಿರ್ದಿಷ್ಟ ಮಂಚಗಳು ಅಸತ್ಯ, ಅವೆಲ್ಲ 'ಆದರ್ಶರೂಪ'ದ ನಕಲುಗಳು, ಅದೇ ಏಕಮೇವವಾದ ಸತ್ಯ ಮಂಚ, ದೇವರಿಂದ ಸೃಷ್ಟಿತವಾದದ್ದು. ದೇವರಿಂದ ಸೃಷ್ಟಿತವಾದ ಈ ಒಂದು ಮಂಚದ ಬಗ್ಗೆ ಜ್ಞಾನ ಇರಬಹುದು, ಆದರೆ ಬಡಗಿಗಳು ಮಾಡಿದ ಅನೇಕ ಮಂಚಗಳ ವಿಷಯದಲ್ಲಿ ಅಭಿಪ್ರಾಯ ಇರಬಹುದು, ಅಷ್ಟೆ. ತತ್ವಜ್ಞಾನಿಯು ಈ ಒಂದೇ ಆದ ಸತ್ಯ ಮಂಚದ ಬಗ್ಗೆ ಆಸಕ್ತನಾಗಿರುತ್ತಾನೆಯೇ ಹೊರತು

ಇಂದ್ರಿಯಗ್ರಾಹ್ಯ ಲೋಕದಲ್ಲಿನ ಅನೇಕ ಮಂಚಗಳ ಬಗ್ಗೆಯಲ್ಲ. ಸಾಧಾರಣ ಐಹಿಕ ವಿಷಯಗಳ ಬಗ್ಗೆ ಅವನಿಗೆ ಒಂದು ಬಗೆಯ ಅನಾದರವಿರುತ್ತದೆ: 'ಮನೋಔಜ್ವಲ್ಯವಿರುವ ಹಾಗೂ ಎಲ್ಲ ಕಾಲ ಮತ್ತು ಎಲ್ಲ ಅವಕಾಶಗಳನ್ನು ಕಾಣುವವನು ಹೇಗೆ ತಾನೇ ಮಾನವಜೀವನವನ್ನು ಕುರಿತು ಹೆಚ್ಚು ಯೋಚಿಸಬಲ್ಲ?' ತತ್ವಜ್ಞಾನಿಯಾಗುವ ಸಾಮರ್ಥ್ಯವಿರುವ ಯುವಕನೊಬ್ಬ ತನ್ನ ಜೊತೆಗಾರರ ನಡುವೆ ನ್ಯಾಯವಂತಿಕೆ ಮತ್ತು ಔದಾರ್ಯಗಳಲ್ಲಿ ಬೇರೆಯಾಗಿರುತ್ತಾನೆ, ಅವನಿಗೆ ಕಲಿಯುವ ಉತ್ಸಾಹ, ಒಳ್ಳೆಯ ನೆನಪಿನ ಶಕ್ತಿ, ಸಹಜವಾದ ಸಾಮರಸ್ಯಪೂರ್ಣ ಮನಸ್ಸುಗಳಿರುತ್ತವೆ. ಅಂಥವನಿಗೆ ತತ್ವಜ್ಞಾನಿ ಮತ್ತು ಪಾಲಕನನ್ನಾಗಿಸುವ ಶಿಕ್ಷಣ ನೀಡಲಾಗುತ್ತದೆ.

ಈ ಹಂತದಲ್ಲಿ ಆಡೀಮ್ಯಾಂಟಸ್ ಪ್ರತಿಭಟಿಸುತ್ತಾನೆ. ಅವನು ಸಾಕ್ರಟೀಸನೊಡನೆ ವಾದಮಾಡಲು ಪ್ರಯತ್ನಿಸಿ, ಪ್ರತಿಹಂತದಲ್ಲಿಯೂ ಪ್ರತಿ ಹೆಜ್ಜೆಯಲ್ಲಿಯೂ ತಾನು ಒಂದಷ್ಟು ದಾರಿ ತಪ್ಪುತ್ತ, ಕೊನೆಯಲ್ಲಿ, ತನ್ನ ಹಿಂದಿನ ಕಲ್ಪನೆಗಳೆಲ್ಲ ತಲೆಕೆಳಗಾಗುವ ರೀತಿ ಆಗುತ್ತಿರುವುದೆಂದೂ ಹೇಳುತ್ತಾನೆ. ಸಾಕ್ರಟೀಸ್ ಏನಾದರೂ ಹೇಳಲಿ, ಇದೇ ಆಗುತ್ತದೆ, ಎಲ್ಲರಿಗೂ ಸ್ಪಷ್ಟವಾಗುವಂತೆ, ತತ್ವಜ್ಞಾನಕ್ಕೆ ಅಂಟಿಕೊಂಡವರೆಲ್ಲ ವಿಚಿತ್ರ ಪಿಶಾಚಿಗಳಂತಾಗುತ್ತಾರೆ, ಮಹಾವಂಚಕರೂ ಆಗುತ್ತಾರೆಂದು ಹೇಳಬೇಕಾಗಿಯೇ ಇಲ್ಲ; ಅವರಲ್ಲಿನ ಅತಿ ಶ್ರೇಷ್ಠನೂ ತತ್ವಜ್ಞಾನದಿಂದ ನಿರುಪಯುಕ್ತನಾಗುತ್ತಾನೆ.

ಈಗಿರುವ ಪ್ರಪಂಚದಲ್ಲಿ ಇದು ನಿಜವೇ ಎಂದು ಸಾಕ್ರಟೀಸ್ ಒಪ್ಪಿಕೊಳ್ಳುತ್ತಾನೆ. ಆದರೆ ಇದಕ್ಕೆ ಇತರರನ್ನು ದೂಷಿಸಬೇಕೇ ಹೋರತು ತತ್ವಜ್ಞಾನಗಳನ್ನಲ್ಲ ಎನ್ನುತ್ತಾನೆ; ವಿವೇಕಿಗಳ ಸಮುದಾಯದಲ್ಲಿ ತತ್ವಜ್ಞಾನಿಗಳು ಮೂರ್ಖರಂತೆ ಕಾಣುವುದಿಲ್ಲ; ಅದಕ್ಕೆ ವಿರುದ್ಧವಾಗಿ, ಮೂರ್ಖರ ಸಮುದಾಯದಲ್ಲಿ ವಿವೇಕಿಗಳನ್ನೇ ವಿವೇಕಶೂನ್ಯರೆಂದು ತೀರ್ಮಾನಿಸುತ್ತಾರೆ.

ಈ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ನಾವು ಮಾಡಬೇಕಾದುದೇನು? ನಮ್ಮ ಆದರ್ಶರಾಜ್ಯವನ್ನು ಉದ್ಘಾಟಿಸುವ ಎರಡು ಬಗೆಗಳಿದ್ದವು: ತತ್ವಜ್ಞಾನಿಗಳು ಆಳುವವರಾಗುವುದು, ಅಥವಾ ಆಳುವವರು ತತ್ವಜ್ಞಾನಿಗಳಾಗುವುದು. ಆರಂಭಿಸಲು ಮೊದಲಿನ ರೀತಿ ಅಸಾಧ್ಯವೆನ್ನಿಸುತ್ತದೆ, ಯಾಕೆಂದರೆ ಈಗಾಗಲೇ ತಾತ್ವಿಕತೆಯಿಂದ ಕೂಡಿರದ ನಗರದಲ್ಲಿ ತತ್ವಜ್ಞಾನಿಗಳು ಜನಪ್ರಿಯರಾಗಿರುವುದಿಲ್ಲ. ಆದರೆ ರಾಜಕುಮಾರನಾಗಿ ಹುಟ್ಟುವವನು ತತ್ವಜ್ಞಾನಿಯಾಗಿರಬಹುದು, ಅಲ್ಲದೆ, 'ಒಬ್ಬನು ಸಾಕು, ತನ್ನ ಇಚ್ಛಾಶಕ್ತಿಗೆ ವಿಧೇಯವಾಗಿರುವ ನಗರವನ್ನಾಳುವ ಒಬ್ಬನಿದ್ದರೆ, ಅವನು ಜಗತ್ತು ಅನುಮಾನದಿಂದ ನೋಡುವ ಆದರ್ಶ ರಾಜ್ಯವ್ಯವಸ್ಥೆಯನ್ನು ತರಬಹುದು.' ಸಿರಾಕ್ಯೂಸ್‌ನ ನಿರಂಕುಶಪ್ರಭುವಾದ ಡಯೋನಿಸಿಯಸ್‌ನ ಮಗನಲ್ಲಿ ಅಂಥವನನ್ನು ಕಾಣಬಹುದೆಂದು ಪ್ಲೇಟೋ ಆಶಿಸಿದ, ಆದರೆ ಅವನು ನಿರಾಶಾದಾಯಕ ವ್ಯಕ್ತಿಯಾದ.

'ರಿಪಬ್ಲಿಕ್'ನ ಆರು ಮತ್ತು ಏಳನೆಯ ಭಾಗಗಳಲ್ಲಿ, ಪ್ಲೇಟೋ ಎರಡು ಪ್ರಶ್ನೆಗಳನ್ನು ಕುರಿತು ಚಿಂತಿಸುತ್ತಾನೆ; ಮೊದಲನೆಯದು, ತತ್ವಜ್ಞಾನ ಎಂದರೇನು? ಎರಡನೆಯದು, ಸೂಕ್ತ ಮನೋಭೂಮಿಕೆಯಿರುವ ಯುವಕನನ್ನೋ ಯುವತಿಯನ್ನೂ ತತ್ವಜ್ಞಾನಿಯನ್ನಾಗಿ ಮಾಡುವುದು ಹೇಗೆ?

ಪ್ಲೇಟೋನ ದೃಷ್ಟಿಯಲ್ಲಿ ತತ್ವಜ್ಞಾನವು ಒಂದು ಬಗೆಯ ದರ್ಶನ, 'ಸತ್ಯದರ್ಶನ'. ಅದು ಶುದ್ಧ ಬೌದ್ಧಿಕವಲ್ಲ; ಅದು ಬರಿ ವಿವೇಕವಲ್ಲ, ಆದರೆ ವಿವೇಕ ಪ್ರೇಮ. ಸ್ಪಿನೋಜನ 'ದೇವರ ಬಗೆಗಿನ ಬೌದ್ಧಿಕ ಪ್ರೇಮ'ವೂ ಇಂತಹುದೇ ಆದರ್ಶರೂಪ ಮತ್ತು ಭಾವನೆಗಳ ಆತ್ಮೀಯ ಬೆಸುಗೆ. ಯಾವುದೇ ಬಗೆಯ ಸೃಜನಾತ್ಮಕ ಕಾರ್ಯವನ್ನು ಮಾಡಿರುವವನು, ದೀರ್ಘ ಶ್ರಮದ ಬಳಿಕ, ಇದ್ದಕ್ಕಿದ್ದಂತೆ ವೈಭವಪೂರಿತವಾಗಿ ಸತ್ಯ ಅಥವಾ ಸೌಂದರ್ಯವು ಕಾಣಿಸುತ್ತದೆ, ಎಂಬ ಅನುಭವವನ್ನು ಹೆಚ್ಚೋ ಕಡಿಮೆಯೋ ಪ್ರಮಾಣದಲ್ಲಿ, ಅನುಭವಿಸಿರುತ್ತಾನೆ – ಅದು ಒಂದು ಸಣ್ಣ ವಿಷಯದ ಬಗ್ಗೆಯಿರಬಹುದು ಅಥವಾ ಅದು ವಿಶ್ವದ ಬಗ್ಗೆಯೇ ಆಗಿರಬಹುದು. ಅನುಭವವು ಆ ಕ್ಷಣದಲ್ಲಿ ತುಂಬ ತೃಪ್ತಿ ತರುತ್ತದೆ; ಆ ಬಗ್ಗೆ ಸಂಶಯವು ಆನಂತರ ಉಂಟಾಗಬಹುದು, ಆದರೆ ಆ ಕ್ಷಣದಲ್ಲಿ ಮಾತ್ರ ಸಂಪೂರ್ಣ ಸತ್ಯವಾಗಿರುತ್ತದೆ. ಕಲೆ, ವಿಜ್ಞಾನ, ಸಾಹಿತ್ಯ ಮತ್ತು ತತ್ವಜ್ಞಾನದ ಅತ್ಯಂತ ಶ್ರೇಷ್ಠ ಸೃಜನಕೃತಿಗಳು ಇಂತಹ ಕ್ಷಣದ ಫಲಿತವಾಗಿರುತ್ತದೆ. ಅದು ನನಗೆ ಬಂದಂತೆಯೇ ಬರುತ್ತದೋ ಎಂಬುದನ್ನು ಹೇಳಲಾರೆ. ನನ್ನ ಮಟ್ಟಿಗೆ, ಯಾವುದಾದರೊಂದು ವಿಷಯದ ಬಗ್ಗೆ ಕೃತಿಯನ್ನು ರಚಿಸುವಾಗ ಮೊದಲು ಅದರ ವಿವರಗಳೆಲ್ಲ ಪರಿಚಿತವಾಗುವವರೆಗೂ ಅದರಲ್ಲಿ ಸಂಪೂರ್ಣವಾಗಿ ಮುಳುಗಬೇಕು; ಆನಂತರ, ಅದೃಷ್ಟವಂತನಾಗಿದ್ದರೆ, ಯಾವತ್ತಾದರೂ ಅದರ ಭಾಗಗಳೆಲ್ಲ ಸೂಕ್ತ ರೀತಿಯಲ್ಲಿ ಹೆಣೆದುಕೊಂಡ ಇಡಿಯನ್ನು ಕಾಣುತ್ತೇನೆ, ಆಮೇಲೆ ನಾನು ಕಂಡುದನ್ನು ಬರೆದಿಡುವುದಷ್ಟೇ ನನ್ನ ಕೆಲಸ. ಇದಕ್ಕೆ ಹತ್ತಿರವಾದ ಸಾದೃಶ್ಯವೆಂದರೆ, ದಾರಿ ತೆವರು ಕಣಿವೆಗಳು ಬೇರೆ ಬೇರೆಯಾಗಿ ಪರಿಚಿತವಾಗುವವರೆಗೆ ಕಾವಳದಲ್ಲಿ ಪರ್ವತವೊಂದರ ಮೇಲೆ ಮೊದಲು ಓಡಾಡುವುದು, ಆನಂತರ ದೂರದಿಂದ, ಬಿಸಿಲಿನ ಬೆಳ್ಳಂಬೆಳಕಿನಲ್ಲಿ ಇಡಿಯಾಗಿ ನೋಡುವುದು.

ಈ ಅನುಭವವು ಒಳ್ಳೆಯ ಸೃಜನಕೃತಿಗೆ ಆವಶ್ಯಕವೆಂಬುದು ನನ್ನ ಭಾವನೆ. ಆದರೆ ಇಷ್ಟೇ ಸಾಲದು; ಅದು ತರುವ ವ್ಯಕ್ತಿನಿಷ್ಠ ಖಚಿತತೆಯು ಆತ್ಯಂತಿಕವಾಗಿ ದಾರಿ ತಪ್ಪಿಸುವಂತಹುದ್ದಾಗಬಹುದು. ನಗು ಅನಿಲ (ಲಾಫಿಂಗ್ ಗ್ಯಾಸ್)ದ ಅನುಭವ ಪಡೆದ ವ್ಯಕ್ತಿಯೊಬ್ಬನು, ಅದರ ಗುಂಗಿನಲ್ಲಿರುವಾಗ, ತನಗೆ ವಿಶ್ವದ ರಹಸ್ಯ ತಿಳಿದಿರುತ್ತಿತ್ತು, ಆದರೆ ಅದರಿಂದ ಹೊರಗೆ ಬಂದಾಗ, ಅದು ಮರೆತುಹೋಗಿರುತ್ತಿತ್ತು; ಕೊನೆಗೆ, ಅಸಾಧಾರಣ ಪ್ರಯತ್ನದಿಂದ, ದರ್ಶನವು ಕಣ್ಮರೆಯಾಗುವ ಮುಂಚೆ ಆ ರಹಸ್ಯವನ್ನು

ಬರೆದಿಡುತ್ತಾನೆ; ಪೂರ್ತಿ ಎಚ್ಚರಗೊಂಡಾಗ, ತಾನು ಬರೆದಿರುವುದನ್ನು ನೋಡಲು ಧಾವಿಸುತ್ತಾನೆ. ಅದರಲ್ಲಿ 'ಎಲ್ಲೆಡೆಯೂ ಪೆಟ್ರೋಲಿಯಮ್‌ನ ವಾಸನೆ ತುಂಬಿಕೊಂಡಿತ್ತು' ಎಂದು ವಿಲಿಯಂ ಜೇಮ್ಸ್ ವರ್ಣಿಸುತ್ತಾನೆ. ಅನಿರೀಕ್ಷಿತ ದರ್ಶನವು ದಾರಿತಪ್ಪಿಸುವುದಾಗಿರಬಹುದು, ಹೀಗಾಗಿ, ದೈವಿಕ ಅಮಲು ಇಳಿದ ಮೇಲೆ, ಅದನ್ನು ಆವೇಶರಹಿತವಾಗಿ ಪರೀಕ್ಷಿಸಬೇಕು.

'ರಿಪಬ್ಲಿಕ್' ಅನ್ನು ರಚಿಸಿದಾಗ ತಾನು ಸಂಪೂರ್ಣವಾಗಿ ನಂಬಿದ್ದ ದರ್ಶನದ ಸ್ವರೂಪವನ್ನು ಓದುಗರಿಗೆ ವಿವರಿಸಲು ಪ್ಲೇಟೋಗೆ ಕೊನೆಗೆ ಒಂದು ಅನ್ಯೋಕ್ತಿಯ ನೆರವು ಬೇಕಾಯಿತು, ಗುಹೆಯ ಅನ್ಯೋಕ್ತಿ. ಆದರೆ ಆದರ್ಶರೂಪಗಳ ಜಗತ್ತಿನ ಅನಿವಾರ್ಯತೆಯನ್ನು ಕಂಡುಕೊಳ್ಳುವಂತೆ ಮಾಡಲು ಇದು ಅನೇಕ ಪೂರ್ವಭಾವಿ ಚರ್ಚೆಗೆ ಆಸ್ಪದವಿತ್ತಿತು.

ಮೊದಲು, ಬೌದ್ಧಿಕ ಜಗತ್ತು ಮತ್ತು ಇಂದ್ರಿಯ ಜಗತ್ತುಗಳ ನಡುವಣ ವ್ಯತ್ಯಾಸವನ್ನು ಗುರುತಿಸಲಾಗಿದೆ; ಆನಂತರ ಬೌದ್ಧಿಕ ಮತ್ತು ಐಂದ್ರಿಯಕ ದರ್ಶನಗಳನ್ನು ಮತ್ತೆ ಎರಡು ವಿಧವಾಗಿ ವಿಂಗಡಿಸಲಾಗಿದೆ. ಎರಡೂ ಬಗೆಯ ಐಂದ್ರಿಯಕ ದರ್ಶನಗಳು ನಮಗೆ ಪ್ರಸ್ತುತವಲ್ಲ; ಎರಡು ಬಗೆಯ ಬೌದ್ಧಿಕ ದರ್ಶನಗಳನ್ನು ಕ್ರಮವಾಗಿ 'ತರ್ಕ' (ರೀಸನ್) ಮತ್ತು 'ತಿಳಿವಳಿಕೆ' (ಅಂಡರ್‌ಸ್ಟಾಂಡಿಂಗ್) ಎಂದು ಕರೆಯಲಾಗಿದೆ. ತಿಳಿವಳಿಕೆಯು ಗಣಿತದಲ್ಲಿ ಬಳಸಲಾಗುವ ಬುದ್ಧಿಶಕ್ತಿ; ತಾನು ಪರೀಕ್ಷಿಸಲಾಗದ ಆಧಾರಕಲ್ಪನೆಯನ್ನು ಬಳಸಿಕೊಳ್ಳುವುದರಿಂದಾಗಿ ಅದು ತತ್ವಕ್ಕಿಂತ ಕೆಳಗಿನದು. ಉದಾಹರಣೆಗೆ, ಜ್ಯಾಮಿತಿಯಲ್ಲಿ 'ಎಬಿಸಿ ಒಂದು ಸಮಬಾಹುತ್ರಿಭುಜ ಎಂದುಕೊಳ್ಳೋಣ' ಎಂದು ಹೇಳುತ್ತೇವೆ. ಅದು ನಾವು ಬರೆದ ಒಂದು ಚಿತ್ರವಾಗಿದ್ದು ಅದು ಅಲ್ಲವೆಂಬ ಖಾತರಿಯಿದ್ದರೂ, ಯಾಕೆಂದರೆ ನಾವು ಪರಿಪೂರ್ಣ ಸರಳರೇಖೆಯನ್ನು ಬರೆಯಲು ಆಗುವುದಿಲ್ಲ, ಎಬಿಸಿ ವಾಸ್ತವವಾಗಿಯೂ ಒಂದು ಸರಳರೇಖಾತ್ರಿಭುಜವೇ ಎಂದು ಕೇಳುವುದು ನಿಯಮವಿರುದ್ಧ. ಹೀಗೆಯೇ, ಗಣಿತವು ಯಾವುದು ಇದೆ ಎಂದು ಹೇಳಲಾರದು, ಆದರೆ ಹೀಗಿದ್ದರೆ ಏನಾಗುತ್ತದೆ ಎಂದು ಹೇಳಬಹುದು .. .. ಐಂದ್ರಿಯಕ ಜಗತ್ತಿನಲ್ಲಿ ಸರಳರೇಖೆಗಳೇ ಇಲ್ಲ; ಹೀಗಾಗಿ ಗಣಿತವು ಆಧಾರಕಲ್ಪನೆಗೂ ಮಿಗಿಲಾದ ಸತ್ಯವನ್ನು ಹೇಳಬೇಕಾದರೆ, ಇಂದ್ರಿಯಾತೀತ ಜಗತ್ತಿನಲ್ಲಿ ಇಂದ್ರಿಯಾತೀತ ಸರಳ ರೇಖೆಗಳು ಇವೆಯೆಂಬುದಕ್ಕೆ ಸಾಕ್ಷ್ಯವನ್ನು ತೋರಿಸಬೇಕು. ಇದನ್ನು ತಿಳಿವಳಿಕೆಯು ಮಾಡಲಾರದು, ಆದರೆ ಪ್ಲೇಟೋ ಪ್ರಕಾರ ಅದನ್ನು ತರ್ಕವು ಮಾಡಬಹುದು: ಸ್ವರ್ಗದಲ್ಲಿ ಸರಳರೇಖಾತ್ರಿಭುಜವಿದೆ, ಆ ಕುರಿತು ಜ್ಯಾಮಿತೀಯ ಪ್ರತಿಪಾದನೆಗಳಿಂದ ಖಚಿತವಾಗಿ ಹೇಳಬಹುದೇ ವಿನಾ ಆಧಾರಕಲ್ಪನಾವಲಂಬಿತವಾಗಿಯಲ್ಲ.

ಈ ಹಂತದಲ್ಲಿ, ಪ್ಲೇಟೋ ಕೂಡ ಗಮನಿಸಿದ, ಒಂದು ತೊಂದರೆಯಿದೆ, ಅದು ಆಧುನಿಕ ಆದರ್ಶವಾದಿ ತತ್ವಜ್ಞಾನಿಗಳಿಗೆ ಢಾಳಾಗಿ ಕಾಣಿಸಿತು. ದೇವರು ಒಂದು ಮಂಚವನ್ನಷ್ಟೇ ಸೃಷ್ಟಿಸಿದ ಎಂಬುದನ್ನು ನಾವಾಗಲೇ ನೋಡಿದ್ದೇವೆ, ಹೀಗಾಗಿ ಅವನು ಒಂದೇ ಒಂದು ಸರಳರೇಖೆಯನ್ನು ನಿರ್ಮಿಸಿದ ಎಂದು ಊಹಿಸಿಕೊಳ್ಳಬಹುದು. ಆದರೆ ಸ್ವರ್ಗದಲ್ಲಿ ತ್ರಿಭುಜವಿದ್ದರೆ, ಆಗ ಅವನು ಕನಿಷ್ಠ ಪಕ್ಷ ಮೂರು ಸರಳರೇಖೆಗಳನ್ನು ನಿರ್ಮಿಸಬೇಕಾಗಿತ್ತು. ಜ್ಯಾಮಿತೀಯ ವಸ್ತುಗಳು ಆದರ್ಶವಾಗಿದ್ದರೂ, ಅನೇಕ ನಿದರ್ಶನಗಳಲ್ಲಿ ಇರಬೇಕಾಗಿತ್ತು; ನಮಗೆ ಅಡ್ಡಹಾಯುವ ಎರಡು ವೃತ್ತಗಳ ಸಾಧ್ಯತೆಯೂ ಇರಬೇಕು ಮುಂತಾದವು. ಪ್ಲೇಟೋನ ಸಿದ್ಧಾಂತದ ಪ್ರಕಾರ, ಜ್ಯಾಮಿತಿಯು ಆತ್ಯಂತಿಕ ಸತ್ಯವನ್ನು ಹೇಳುವ ಸಾಮರ್ಥ್ಯವನ್ನು ಹೊಂದಿರಲಾರದು, ಬರಿಯ ತೋರಿಕೆಗಳ ಅಧ್ಯಯನದ ಭಾಗವೆಂದು ಅದನ್ನು ತಿರಸ್ಕರಿಸಬೇಕು. ಆದರೆ, ಈ ಅಂಶವನ್ನು ನಾವು ಕಡೆಗಣಿಸೋಣ, ಈ ಕುರಿತು ಪ್ಲೇಟೋನ ವಿವರಣೆಯು ಅಸ್ಪಷ್ಟವಾಗಿದೆ.

ಸ್ಪಷ್ಟವಾದ ಬೌದ್ಧಿಕ ದರ್ಶನ ಮತ್ತು ಗೊಂದಲಮಯ ಇಂದ್ರಿಯಗ್ರಹಿಕೆಯ ದರ್ಶನಗಳ ನಡುವಣ ವ್ಯತ್ಯಾಸವನ್ನು ಕಾಣುವ ಇಂದ್ರಿಯದ ಸಾದೃಶ್ಯದಿಂದ ವಿವರಿಸಲು ಪ್ಲೇಟೋ ಪ್ರಯತ್ನಿಸುತ್ತಾನೆ. ನೋಟವು ಇತರ ಇಂದ್ರಿಯಗಳಿಗಿಂತ ಭಿನ್ನವಾದುದು, ಯಾಕೆಂದರೆ ಅದಕ್ಕೆ ಕಣ್ಣು ಮತ್ತು ವಸ್ತುಗಳಷ್ಟೇ ಅಲ್ಲದೆ ಬೆಳಕೂ ಆವಶ್ಯಕ. ಬಿಸಿಲು ಬಿದ್ದ ವಸ್ತುಗಳನ್ನು ನಾವು ಸ್ಪಷ್ಟವಾಗಿ ನೋಡುತ್ತೇವೆ; ಸಂಜೆಬೆಳಕಿನಲ್ಲಿ ನಮ್ಮ ನೋಟದಲ್ಲಿ ಗೊಂದಲವಿರುತ್ತದೆ, ಕಗ್ಗತ್ತಲಲ್ಲಿ ಏನೂ ಕಾಣಿಸದು. ಆದರ್ಶರೂಪಗಳ ಜಗತ್ತು ಎಂದರೆ ಬಿಸಿಲು ಬೆಳಗುವ ವಸ್ತುಗಳನ್ನು ನೋಡುವುದು, ಗತಿಸುವ ವಸ್ತುಗಳ ಜಗತ್ತು ಸಂಜೆಬೆಳಕಿನ ಗೊಂದಲಮಯ ಜಗತ್ತು. ಕಣ್ಣನ್ನು ಆತ್ಮಕ್ಕೆ ಹೋಲಿಸಿದರೆ, ಬೆಳಕಿನ ಮೂಲವಾದ ಸೂರ್ಯನನ್ನು ಸತ್ಯ ಅಥವಾ ಒಳಿತಿಗೆ.

> ಆತ್ಮವು ಕಣ್ಣಿನಂತೆ: ಸತ್ಯ ಮತ್ತು ಇರುವಿಕೆಗಳಿರುವುದರ ಮೇಲೆ ನಟ್ಟಿರುವಾಗ ಆತ್ಮವು ಕಾಣುತ್ತದೆ ಮತ್ತು ಗ್ರಹಿಸುತ್ತದೆ, ಬುದ್ಧಿಶಕ್ತಿಯಿಂದ ಬೆಳಗುತ್ತದೆ, ಆದರೆ ಆಗುವ ಮತ್ತು ಗತಿಸುವ ಸಂಜೆಬೆಳಕಿನ ಕಡೆಗೆ ತಿರುಗಿದಾಗ, ಆಗ ಅದಕ್ಕೆ ಅಭಿಪ್ರಾಯ ಮಾತ್ರ ಇರುತ್ತದೆ, ಅದು ಪಿಳಪಿಳಿಸುತ್ತ, ಒಂದು ಅಭಿಪ್ರಾಯದ ನಂತರ ಮತ್ತೊಂದನ್ನು ಪಡೆಯುತ್ತ ಬುದ್ಧಿಶಕ್ತಿಯನ್ನು ಹೊಂದಿರುವಂತೆ ಕಾಣುವುದಿಲ್ಲ .. .. ತಿಳಿದುದು ತಿಳಿದ ಮತ್ತು ತಿಳಿದವನಿಗೆ ತಿಳಿಯುವ ಸಾಮರ್ಥ್ಯವನ್ನು ನೀಡುವ ಸತ್ಯವನ್ನು ಶ್ರುತಪಡಿಸುತ್ತದೆ, ಅಂತಹುದನ್ನು ನೀವು ಒಳಿತಾದ ಆದರ್ಶರೂಪವೆಂದು ಕರೆಯಬೇಕೆಂದು ಬಯಸುತ್ತೇನೆ; ಇದನ್ನು ನೀವು ವಿಜ್ಞಾನದ ಕಾರಣವೆಂದು ಪರಿಗಣಿಸುತ್ತೀರಿ.

ಇದು ಪ್ರಸಿದ್ಧವಾದ ಗುಹೆ ಅಥವಾ ಬಿಲದ ಉಪಮೆಯೆಡೆ ಕರೆದೊಯ್ಯುತ್ತದೆ. ಇದರ ಪ್ರಕಾರ, ತತ್ವಜ್ಞಾನವಿಲ್ಲದವರನ್ನು ಗುಹೆಯೊಂದರಲ್ಲಿರುವ ಬಂದಿಗಳೆಂದು ಭಾವಿಸಬಹುದು. ಅವರು ಒಂದು ದಿಕ್ಕಿನ ಕಡೆ ಮಾತ್ರ ನೋಡಬಹುದು, ಯಾಕೆಂದರೆ ಅವರು ಬಂಧಿತರು, ಹಿಂದೆ ಬೆಂಕಿ ಮುಂದೆ ಗೋಡೆಗಳಿವೆ. ಗೋಡೆಗೂ ಅವರಿಗೂ ನಡುವೆ ಏನೂ ಇಲ್ಲ; ಅವರು ನೋಡುವುದು ಬೆಂಕಿಯು ಗೋಡೆಯ ಮೇಲೆ ಮೂಡಿಸುವ ಬರೀ ತಮ್ಮ ಮತ್ತು ತಮ್ಮ ಹಿಂದಿರುವ ವಸ್ತುಗಳ ನೆರಳುಗಳನ್ನಷ್ಟೆ. ಅನಿವಾರ್ಯವಾಗಿ ಅವರು ಈ ನೆರಳುಗಳನ್ನು ಸತ್ಯವೆಂದು ತಿಳಿಯುತ್ತಾರೆ, ಅವುಗಳಿಗೆ ಕಾರಣವಾದ ವಸ್ತುಗಳ ಅರಿವೇ ಅವರಿಗಿರುವುದಿಲ್ಲ. ಕೊನೆಗೆ ಒಬ್ಬ ಗುಹೆಯಿಂದ ತಪ್ಪಿಸಿಕೊಂಡು ಸೂರ್ಯನ ಬಿಸಿಲಿಗೆ ಬರುತ್ತಾನೆ; ಮೊದಲ ಬಾರಿಗೆ ಅವನಿಗೆ ನಿಜವಾದ ವಸ್ತುಗಳು ಕಾಣುತ್ತವೆ, ಆಗ ತಾನು ಇದುವರೆಗೂ ನೆರಳುಗಳಿಂದ ವಂಚನೆಗೀಡಾಗಿದ್ದೆನೆಂದು ಅರಿಯುತ್ತಾನೆ. ಅವನು ಪಾಲಕನಾಗಲು ಯೋಗ್ಯನಾದ ತತ್ವಜ್ಞಾನಿಯಂತಹವನಾಗಿದ್ದರೆ, ಗುಹೆಗೆ ವಾಪಸ್ಸು ಹೋಗಿ ಹಿಂದೆ ತನ್ನ ಜೊತೆಗಾರರಾಗಿದ್ದವರಿಗೆ ಸತ್ಯವಾವುದೆಂಬುದರ ಬಗ್ಗೆ ತಿಳಿಹೇಳುವುದು, ಮತ್ತು ದಾರಿ ತೋರಿಸುವುದು ತನ್ನ ಕರ್ತವ್ಯವೆಂದವನು ಭಾವಿಸುತ್ತಾನೆ. ಆದರೆ ಅವರನ್ನು ನಂಬುವಂತೆ ಮಾಡುವುದು ಅವನಿಗೆ ಕಷ್ಟವಾಗುತ್ತದೆ, ಯಾಕೆಂದರೆ ಬಿಸಿಲಿನಿಂದೀಚೆ ಬಂದ ಅವನಿಗೆ ಕಾಣುವುದು ಬರಿಯ ನೆರಳುಗಳು, ಅದೂ ಅವುಗಳಿರುವುದಕ್ಕಿಂತ ಕಡಿಮೆ ಸ್ಪಷ್ಟವಾಗಿ, ಅದರಿಂದಾಗಿ ಅವನು ತಪ್ಪಿಸಿಕೊಳ್ಳುವ ಮುಂಚಿಗಿಂತ ಹೆಚ್ಚು ಮೂರ್ಖನಾಗಿದ್ದಂತೆ ಕಾಣುತ್ತಾನೆ.

> 'ಈಗ, ನಮ್ಮ ಸ್ವಭಾವವು ಎಷ್ಟರಮಟ್ಟಿಗೆ ತಿಳಿವಳಿಕೆಯನ್ನು ಪಡೆದಿದೆ ಅಥವಾ ಇಲ್ಲ ಎಂಬುದನ್ನು ಒಂದು ಆಕೃತಿಯಲ್ಲಿ ತೋರಿಸುತ್ತೇನೆ ಎಂದು ಹೇಳಿದೆ.– ನೋಡಿ! ಭೂಮಿಯ ಕೆಳಗೆ ಗುಹೆಯುದ್ದಕ್ಕೂ ಬಿದ್ದಿರುವ ಬೆಳಕಿನ ಕಡೆಗೆ ಬಾಯಿ ಬಿಟ್ಟುಕೊಂಡಿರುವ ಬಿಲದಲ್ಲಿ ಬದುಕುವ ಜೀವಿಗಳೇ; ಇಲ್ಲಿ ಅವರು ಚಿಕ್ಕವಯಸ್ಸಿನಿಂದ ಇದ್ದಾರೆ, ಅತ್ತಿತ್ತ ಚಲಿಸದಂತೆ ಅವರ ಕೊರಳು ಮತ್ತು ಕಾಲುಗಳಿಗೆ ಸರಪಳಿ ಬಿಗಿದಿದೆ, ತಲೆಯನ್ನು ಆಚೀಚೆ ಜರುಗಿಸುವುದು ಸಾಧ್ಯವಾಗದಂತೆ ಬಿಗಿದ ಸರಪಳಿಂದಾಗಿ ತಮ್ಮ ಮುಂದಿರುವುದನ್ನು ಮಾತ್ರ ಅವರು ಕಾಣಬಲ್ಲರು. ಅವರ ಮೇಲೆ ಮತ್ತು ಮುಂದೆ ದೂರದಲ್ಲಿ ಬೆಂಕಿಯ ಜ್ವಾಲೆ ಉರಿಯುತ್ತಿದೆ ಬೆಂಕಿ ಮತ್ತು ಬಂದಿಗಳ ನಡುವೆ ಒಂದು ಎತ್ತರವಾದ ದಾರಿಯಿದೆ; ನೋಡಿದರೆ, ದಾರಿಯುದ್ದಕ್ಕೂ, ಮುಂದೆ ಬೊಂಬೆಗಳನ್ನು ತೋರಿಸುವ ಸೂತ್ರದ ಬೊಂಬೆಯಾಡಿಸುವವರ ಮುಂದಿನ ಪರದೆಯಂತೆ, ಎತ್ತರವಲ್ಲದ ಗೋಡೆ ಕಟ್ಟಿರುವುದು ನಿಮಗೆ ಕಾಣುತ್ತದೆ.
>
> 'ನನಗೆ ಕಾಣುತ್ತದೆ.

'ನಾನಾ ಬಗೆಯ ಪಾತ್ರೆಗಳನ್ನು ಹೊತ್ತು ಗೋಡೆಯ ಗುಂಟ ಸಾಗುತ್ತಿರುವ ಜನ, ಉಣ್ಣೆ ಮತ್ತು ಕಲ್ಲು ಮತ್ತಿತರ ವಸ್ತುಗಳಿಂದ ಮಾಡಿದ ಪ್ರಾಣಿಗಳ ಆಕೃತಿಗಳು ವಿಗ್ರಹಗಳು ಗೋಡೆಯ ಮೇಲೆ ನಿಮಗೆ ಕಾಣಿಸುತ್ತಿವೆಯೇ ಎಂದು ನಾನು ಕೇಳಿದೆ. ಅವರಲ್ಲಿ ಕೆಲವರು ಮಾತಾಡುತ್ತಿದ್ದರೆ, ಮತ್ತೆ ಕೆಲವರು ಸುಮ್ಮನಿದ್ದಾರೆ. 'ನೀವು ನನಗೆ ತೋರಿಸಿರುವುದು ವಿಚಿತ್ರ ಆಕೃತಿಗಳನ್ನು ಅವರು ವಿಚಿತ್ರ ಬಂದಿಗಳು. 'ನಮ್ಮಂತಹವರೇ, ಎಂದುತ್ತರಿಸಿದೆ. ಅವರು ಕಾಣುತ್ತಿರುವುದು ಬೆಂಕಿಯು ಗುಹೆಯ ಎದುರಿನ ಗೋಡೆಯ ಮೇಲೆ ಬೀಳಿಸಿರುವ ಅವರದೇ ನೆರಳುಗಳನ್ನು, ಅಥವಾ ಪರಸ್ಪರರ ನೆರಳುಗಳನ್ನು.'

ಪ್ಲೇಟೋ ತತ್ತ್ವಜ್ಞಾನದಲ್ಲಿನ ಒಳಿತಿನ ಸ್ಥಾನ ತುಂಬ ವಿಚಿತ್ರವಾದುದು, ಅವನು ಹೇಳುವುದೆಂದರೆ, ವಿಜ್ಞಾನ ಮತ್ತು ಸತ್ಯಗಳು ಒಳಿತಿನಂತೆ, ಆದರೆ ಒಳಿತಿಗೆ ಇನ್ನೂ ಉನ್ನತ ಸ್ಥಾನವಿದೆ. 'ಒಳಿತು ಎಂಬುದು ಸಾರವಲ್ಲ, ಆದರೆ ಸಾರಕ್ಕಿಂತ ಘನತೆ ಮತ್ತು ಸಾಮರ್ಥ್ಯಗಳಲ್ಲಿ ಮೇಲುಮಟ್ಟದ್ದು.' ದ್ವಂದ್ವೀಯಪ್ರಕ್ರಿಯೆಯು ಆತ್ಯಂತಿಕ ಒಳಿತಿನ ಗ್ರಹಿಕೆಯಲ್ಲಿ ಬೌದ್ಧಿಕ ಜಗತ್ತಿನ ಕೊನೆಯತ್ತ ಕರೆದೊಯ್ಯುತ್ತದೆ. ಒಳಿತಿನ ಮೂಲಕವಾಗಿಯೇ ದ್ವಂದ್ವೀಯಪ್ರಕ್ರಿಯೆಯು ಗಣಿತಜ್ಞನ ಆಧಾರಕಲ್ಪನೆಯನ್ನು ತ್ಯಜಿಸುವ ಸಾಮರ್ಥ್ಯ ಪಡೆಯುತ್ತದೆ. ಇದರಲ್ಲಿ ಅಂತಸ್ಥವಾದ ಕಲ್ಪನೆಯೆಂದರೆ, ತೋರಿಕೆಗೆ ವಿರುದ್ಧವಾದ ವಾಸ್ತವತೆಯು ಪರಿಪೂರ್ಣವೂ ಪೂರ್ತಿಯೂ ಆದ ಒಳಿತು; ಆದ್ದರಿಂದ, ಒಳಿತನ್ನು ಗ್ರಹಿಸುವುದೆಂದರೆ ವಾಸ್ತವವನ್ನು ಗ್ರಹಿಸಿದಂತೆ. ಪ್ಲೇಟೋನ ತತ್ತ್ವಜ್ಞಾನದಾದ್ಯಂತ ಪೈಥಾಗೊರಿಯನ್ ಪಂಥದಂತಹುದೇ ಬುದ್ಧಿಶಕ್ತಿ ಮತ್ತು ಅನುಭಾವಿಕತೆಗಳ ಮಿಶ್ರಣವಿದೆ, ಆದರೆ ಈ ಕೊನೆಯ ಹಂತದಲ್ಲಿ ಅನುಭಾವಿಕತೆ ಸ್ಪಷ್ಟವಾಗಿ ಮೇಲುಗೈ ಪಡೆಯುತ್ತದೆ.

ಪ್ಲೇಟೋನ ಆದರ್ಶರೂಪಸಿದ್ಧಾಂತದಲ್ಲಿ ಎದ್ದು ಕಾಣುವ ಅನೇಕ ದೋಷಗಳಿವೆ. ಇವುಗಳಿದ್ದರೂ, ಅದು ತತ್ತ್ವಜ್ಞಾನದ ಪ್ರಮುಖ ಮುನ್ನಡೆಯಾಗಿದೆ. ಯಾಕೆಂದರೆ ವೈಶ್ವಿಕಗಳ ಸಮಸ್ಯೆಯ ಮೇಲೆ ಒತ್ತು ನೀಡಿದ ಮೊದಲ ಸಿದ್ಧಾಂತ ಅದು; ಈ ಸಮಸ್ಯೆಯು ತನ್ನ ವಿವಿಧ ರೂಪಗಳಲ್ಲಿ ಇಂದಿನವರೆಗೂ ಮುಂದುವರಿದಿದೆ. ಆರಂಭಿಕಗಳಲ್ಲಿ ನಾಜೂಕಿಲ್ಲದಿರುವುದು ಸಹಜ, ಆದರೆ ಈ ಕಾರಣದಿಂದ ಅವುಗಳ ಅಸಲಿತನವನ್ನು ಕಡೆಗಣಿಸಲಾಗದು. ಪ್ಲೇಟೋ ಹೇಳಬೇಕಾಗಿರುವುದರಲ್ಲಿ, ಆವಶ್ಯಕವಾದ ತಿದ್ದುಪಾಟುಗಳ ನಂತರವೂ, ಏನೋ ಉಳಿದುಬಂದಿದೆ. ಉಳಿದುದರ ಆತ್ಯಂತಿಕ ಕನಿಷ್ಠವು, ಪ್ಲೇಟೋ ವಿರುದ್ಧವಾಗಿರುವವರ ದೃಷ್ಟಿಯಲ್ಲಿಯೂ, ಇದು: ಕೇವಲ ಅಂಕಿತನಾಮಗಳಿರುವ ಭಾಷೆಯ ಮೂಲಕ ಅಭಿಪ್ರಾಯವನ್ನು ಅಭಿವ್ಯಕ್ತಿಗೊಳಿಸಲು ಸಾಧ್ಯವಿಲ್ಲ, ಜೊತೆಗೆ 'ಮನುಷ್ಯ' 'ನಾಯಿ' 'ಬೆಕ್ಕು' ಮುಂತಾದ ರೂಢನಾಮಗಳೂ; ಅಥವಾ, ಇವುಗಳಲ್ಲದಿದ್ದರೆ, 'ಅಂತಹ' 'ಮುಂಚೆ' ಮುಂತಾದ

ಸಾಪೇಕ್ಷಶಬ್ದಗಳೂ ಇರಬೇಕು. ಅಂತಹ ಪದಗಳು ಅರ್ಥವಿಲ್ಲದ ಸದ್ದುಗಳಲ್ಲ, ಜಗತ್ತಿನಲ್ಲಿ ಅಂಕಿತನಾಮಗಳು ಸೂಚಿಸುವಂತಹ ಕೇವಲ ನಿರ್ದಿಷ್ಟ ವಸ್ತುಗಳ ಹೆಸರುಗಳು ಮಾತ್ರ ಇದ್ದಿದ್ದರೆ ಅವುಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟಕರವಾಗುತ್ತಿತ್ತು. ಈ ವಾದವನ್ನೆದುರಿಸುವ ಮಾರ್ಗಗಳಿರಬಹುದು, ಆದರೆ ಮೇಲು ನೋಟಕ್ಕೆ ವೈಶ್ವಿಕಗಳ ಪರವಾದ ನಿಲವು ಸರಿಯೇ. ಅದನ್ನು ಒಂದು ಮಟ್ಟದವರೆಗೆ ಸಮಂಜಸವೆಂದು ತಾತ್ಕಾಲಿಕವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ಅಷ್ಟನ್ನು ಒಪ್ಪಿದ ಮೇಲೆ, ಪ್ಲೇಟೋ ಹೇಳುವ ಉಳಿದವೂ ಬರುತ್ತವೆ.

ಮೊದಲನೆಯದಾಗಿ, ಪ್ಲೇಟೋಗೆ ತತ್ವಜ್ಞಾನದ ಭಾಷಾವಿನ್ಯಾಸದ ಗ್ರಹಿಕೆಯಿಲ್ಲ. ನಾನು 'ಸಾಕ್ರಟೀಸ್ ಮಾನವೀಯ ವ್ಯಕ್ತಿ', 'ಪ್ಲೇಟೋ ಮಾನವೀಯ ವ್ಯಕ್ತಿ' ಮುಂತಾಗಿ ಹೇಳಬಹುದು. ಈ ಎಲ್ಲ ಹೇಳಿಕೆಗಳಲ್ಲೂ, 'ಮಾನವೀಯ ವ್ಯಕ್ತಿ' ಎಂಬ ಪದವು ಒಂದೇ ಆರ್ಥವನ್ನು ಹೊಂದಿದೆ ಎಂದು ಹೇಳಬಹುದು. ಆದರೆ ಅದರ ಅರ್ಥ ಏನೇ ಇರಲಿ, ಪ್ಲೇಟೋ, ಮತ್ತಿತರ ಮಾನವಸಂಕುಲಕ್ಕೆ ಸೇರಿದ ವ್ಯಕ್ತಿಗಳದು ಸಾಕ್ರಟೀಸ್ ತರಹದ್ದೇ ಅಲ್ಲ ಎಂದು ಅರ್ಥವಾಗುತ್ತದೆ. 'ಮಾನವೀಯ' ಎಂಬುದು ಒಂದು ಗುಣವಾಚಕ, ಆದರೆ 'ಮಾನವೀಯ ವ್ಯಕ್ತಿ' 'ಮಾನವೀಯ ವ್ಯಕ್ತಿ' ಎಂದು ಹೇಳುವುದು ಅಸಂಬದ್ಧವಾಗುತ್ತದೆ. ಸೌಂದರ್ಯವು ಸುಂದರವಾದುದು ಎಂದವನು ಭಾವಿಸುತ್ತಾನೆ; ಅವನ ಪ್ರಕಾರ ವಿಶ್ವ'ಮಾನವ' ಎಂಬುದು ಒಂದು ದೇವರು ಸೃಷ್ಟಿಸಿದ ಮನುಷ್ಯ ಮಾದರಿಯ ಹೆಸರು ಎಂದವನು ಭಾವಿಸುತ್ತಾನೆ. ಅವರಲ್ಲಿ ವಾಸ್ತವ ಮನುಷ್ಯರು ಅಪರಿಪೂರ್ಣರು ಮತ್ತು ಅವಾಸ್ತವ ನಕಲುಗಳು. ವೈಶ್ವಿಕವಾದುದು ಮತ್ತು ನಿರ್ದಿಷ್ಟವಾದುದರ ನಡುವೆ ಎಂತಹ ಭಾರಿ ಕಂದಕವಿದೆಯೆಂಬುದನ್ನವನು ಅರ್ಥಮಾಡಿಕೊಳ್ಳುವುದೇ ಇಲ್ಲ. ಅವನ 'ಆದರ್ಶರೂಪಗಳು' ಮತ್ತೊಂದು ನಿರ್ದಿಷ್ಟಗಳು, ಸಾಮಾನ್ಯವಾದವುಗಳಿಗಿಂತ ನೈತಿಕವಾಗಿಯೂ ಸೌಂದರ್ಯಾತ್ಮಕವಾಗಿಯೂ ಮೇಲುಮಟ್ಟದವು. ಸ್ವಲ್ಪ ಸಮಯದ ನಂತರ, 'ಪಾರ್ಮನೈಡೀಸ್'ನಲ್ಲಿರುವಂತೆ, ಅವನೇ ಈ ತೊಂದರೆಯನ್ನು ಅರ್ಥಮಾಡಿಕೊಳ್ಳುತ್ತಾನೆ. ಅದರಲ್ಲಿ ತತ್ವಜ್ಞಾನಿಯೊಬ್ಬನ ಸ್ವವಿಮರ್ಶೆಯ ಇತಿಹಾಸದಲ್ಲಿಯೇ ಅಪೂರ್ವವಾದ ನಿದರ್ಶನಗಳಿವೆ.

'ಪಾರ್ಮನೈಡೀಸ್' ಅನ್ನು ಪ್ಲೇಟೋನ ಮಲಸೋದರನಾದ ಆಂಟೀಫೋನ್ ನಿರೂಪಿಸಿದನೆಂಬ ಭಾವನೆಯಿದೆ. ಅವನೊಬ್ಬನಿಗೇ ಸಂಭಾಷಣೆಗಳು ನೆನಪಿದ್ದುದು, ಆದರೀಗ ಅವನ ಆಸಕ್ತಿ ಕುದುರೆಗಳ ಬಗೆಗಿತ್ತು. ಅವನು ಕಡಿವಾಣವನ್ನು ಹೊತ್ತು ತಿರುಗುತ್ತಿದ್ದುದು ಕಾಣುತ್ತಿತ್ತು, ಝೀನೋ ಮತ್ತು ಸಾಕ್ರಟೀಸ್‌ರ ನಡುವಣ ಸಂಭಾಷಣೆಯನ್ನು ನಿರೂಪಿಸಲು ಪಾರ್ಮನೈಡೀಸ್‌ನನ್ನು ತುಂಬ ಕಷ್ಟಪಟ್ಟು ಒಪ್ಪಿಸಿದರಂತೆ. ಇದು ಆದಾಗ ಪಾರ್ಮನೈಡೀಸ್ ಮುದುಕ (ಸುಮಾರು ಅರುವತ್ತೈದು

ವರ್ಷ), ಝೀನೋ ಮಧ್ಯಮಯಸ್ಕ (ಸುಮಾರು ನಲವತ್ತು) ಮತ್ತು ಸಾಕ್ರಟೀಸ್ ಇನ್ನೂ ಚಿಕ್ಕವನಾಗಿದ್ದನೆಂದು ಹೇಳುತ್ತಾರೆ. ಸಾಕ್ರಟೀಸ್ ಆದರ್ಶರೂಪಸಿದ್ಧಾಂತವನ್ನು ನಿರೂಪಿಸುತ್ತಾನೆ; ಸಾದೃಶ್ಯ, ನ್ಯಾಯ, ಸೌಂದರ್ಯ ಮತ್ತು ಒಳಿತುಗಳ ಆದರ್ಶರೂಪಗಳು ಇರುವುದರ ಬಗ್ಗೆ ಅವನಿಗೆ ಖಾತರಿಯಿದೆ; ಆದರೆ ಮನುಷ್ಯನ ಬಗೆಗಿನ ಆದರ್ಶರೂಪ ಇರುವುದರ ಬಗ್ಗೆ ಖಾತರಿಯಿಲ್ಲ; ಕೂದಲು, ಕೆಸರು, ಕಸದಂತಹ ವಸ್ತುಗಳ ಬಗ್ಗೆ ಆದರ್ಶರೂಪಗಳಿರಬಹುದೆಂಬುದನ್ನವನು ಕೋಪದಿಂದ ತಿರಸ್ಕರಿಸುತ್ತಾನೆ. ಆದರೆ ಕೆಲವೊಮ್ಮೆ ಅವನು ಆದರ್ಶರೂಪಗಳಿರದ ಯಾವುದೂ ಇಲ್ಲ ಎಂದೂ ಹೇಳುತ್ತಾನೆ. ತಳವಿಲ್ಲದ ಅರ್ಥವಿಹೀನತೆಯಲ್ಲಿ ಬೀಳುವ ಭಯದಿಂದವನು ಈ ದೃಷ್ಟಿಕೋನದಿಂದ ದೂರಸರಿಯುತ್ತಾನೆ.

'ಸಾಕ್ರಟೀಸ್, ಹೌದು ಎಂದು ಪಾರ್ಮನೈಡೀಸ್ ಹೇಳಿದ; ಯಾಕೆಂದರೆ ನೀನಿನ್ನೂ ಚಿಕ್ಕವನು; ತತ್ವಜ್ಞಾನವನ್ನು ನೀನು ಬಿಗಿಹಿಡಿತದಿಂದ ಸಾಧಿಸಿಕೊಳ್ಳಬಹುದಾದ ಸಮಯವೊಂದು ಬರುತ್ತದೆ ಎಂಬುದು ನನ್ನ ಭಾವನೆ; ಆಗ ನೀನು ಅತ್ಯಂತ ಕ್ಷುಲ್ಲಕ ವಸ್ತುವನ್ನೂ ತಿರಸ್ಕರಿಸುವುದಿಲ್ಲ.'

ತನ್ನ ದೃಷ್ಟಿಯಲ್ಲಿ, 'ಮಿಕ್ಕೆಲ್ಲ ವಸ್ತುಗಳೂ ಭಾಗಿಯಾಗುವ ಕೆಲವು ಆದರ್ಶರೂಪಗಳಿರುತ್ತವೆ, ಅವುಗಳಿಂದಲೇ ಅವುಗಳ ಹೆಸರುಗಳನ್ನು ಸಾಧಿಸುತ್ತಾರೆ; ಉದಾಹರಣೆಗೆ, ಸಾದೃಶ್ಯಗಳುಳ್ಳವು ಸಾದೃಶ್ಯವುಳ್ಳವಾಗುತ್ತವೆ, ಯಾಕೆಂದರೆ ಅವು ಸಾದೃಶ್ಯದಲ್ಲಿ ಭಾಗಿಗಳು; ಹಿರಿಯ ವಸ್ತುಗಳು ಹಿರಿಯವಾಗುತ್ತವೆ, ಯಾಕೆಂದರೆ ಅವು ಹಿರಿತನದಲ್ಲಿ ಭಾಗಿಗಳು; ನ್ಯಾಯಯುತವೂ ಸುಂದವೂ ಆದ ವಸ್ತುಗಳು ನ್ಯಾಯಯುತ ಮತ್ತು ಸುಂದರವಾದವುಗಳಾಗುತ್ತವೆ, ಯಾಕೆಂದರೆ ಅವು ನ್ಯಾಯ ಮತ್ತು ಸೌಂದರ್ಯದ ಭಾಗಿಗಳು' ಎಂದು ಸಾಕ್ರಟೀಸ್ ಹೇಳುತ್ತಾನೆ.

ಪಾರ್ಮನೈಡೀಸ್ ತೊಂದರೆಗಳನ್ನು ತೋರಿಸಲು ಮುಂದಾಗುತ್ತಾನೆ. (ಅ) ವ್ಯಕ್ತಿಯು ಇಡೀ ಆದರ್ಶರೂಪದಲ್ಲಿ ಭಾಗಿಯೋ ಅಥವಾ ಅದರ ಒಂದು ಭಾಗದಲ್ಲಿಯೋ? ಈ ಎರಡೂ ದೃಷ್ಟಿಗಳಿಗೂ ಆಕ್ಷೇಪಣೆಗಳಿವೆ, ಮೊದಲನೆಯದು ಒಂದೇ ವಸ್ತು ಒಮ್ಮೆಗೇ ಅನೇಕ ಕಡೆ ಇರುತ್ತದೆ; ಎರಡನೆಯದು, ಆದರ್ಶರೂಪವು ಭಾಜ್ಯವಾಗುತ್ತದೆ, ಸಣ್ಣತನದ ಭಾಗವಾದ ವಸ್ತುವು ಆತ್ಯಂತಿಕ ಸಣ್ಣದಕ್ಕಿಂತ ಹೆಚ್ಚು ಸಣ್ಣದಾಗುತ್ತದೆ. (ಆ) ವ್ಯಕ್ತಿಯೊಬ್ಬನು ಒಂದು ಆದರ್ಶರೂಪದಲ್ಲಿ ಭಾಗಿಯಾದಾಗ, ವ್ಯಕ್ತಿ ಮತ್ತು ಆದರ್ಶರೂಪ ಎರಡೂ ಒಂದೇ ಬಗೆಯವು; ಹೀಗಾಗಿ ನಿರ್ದಿಷ್ಟಗಳು ಮತ್ತು ಮೂಲ ಆದರ್ಶರೂಪವನ್ನು ಒಳಗೊಳ್ಳುವ ಮತ್ತೊಂದು ಆದರ್ಶರೂಪವಿರಬೇಕಾಗುತ್ತದೆ; ಹೀಗೇ ಕೊನೆಯಿಲ್ಲದಂತೆ. ಹೀಗಾಗಿ, ಪ್ರತಿ ಆದರ್ಶರೂಪವೂ ಒಂದೇ ಅಗಿರುವುದರ ಬದಲು, ಆದರ್ಶರೂಪಗಳ ಅನಂತ ಸರಣಿಯಾಗುತ್ತದೆ. (ಇದು ಅರಿಸ್ಟಾಟಲ್‌ನ 'ಮೂರನೆಯ ವ್ಯಕ್ತಿ'ಯ ವಾದವೇ

ಆಗಿದೆ.) (ಇ) ಆದರ್ಶರೂಪಗಳು ಪ್ರಾಯಶಃ ಆಲೋಚನೆಗಳು ಎಂದು ಸಾಕ್ರಟೀಸ್ ಸೂಚಿಸುತ್ತಾನೆ; ಆದರೆ ಆಲೋಚನೆಗಳು ಯಾವುದಾದರೊಂದರ ಬಗ್ಗೆ ಇರಬೇಕು ಎಂಬುದನ್ನು ಪಾರ್ಮನೈಡೀಸ್ ತೋರಿಸುತ್ತಾನೆ. (ಈ) ಆದರ್ಶರೂಪಗಳು ಅದರಲ್ಲಿ ಭಾಗಿಗಳಾಗುವ ನಿರ್ದಿಷ್ಟಗಳನ್ನು ಆದರ್ಶರೂಪವು, (ಅ) ದಲ್ಲಿ ಹೇಳಿದ ಕಾರಣಕ್ಕಾಗಿ, ಸಾಧ್ಯವಿಲ್ಲ. (ಉ) ಆದರ್ಶರೂಪಗಳು, ಯಾವುದಾದರೂ ಇದ್ದರೆ, ನಮಗೆ ತಿಳಿದಿಲ್ಲವಾದವಾಗಿರಬೇಕು, ಯಾಕೆಂದರೆ ನಮ್ಮ ಜ್ಞಾನವು ಆತ್ಯಂತಿಕವಲ್ಲ. (ಊ) ದೇವರ ಜ್ಞಾನವು ಆತ್ಯಂತಿಕವಾದರೆ, ಅವನಿಗೆ ನಾವು ಗೊತ್ತಿರುವುದಿಲ್ಲ, ಹೀಗಾಗಿ ನಮ್ಮನ್ನವನು ಆಳಲಾರ.

ಆದರೂ, ಆದರ್ಶರೂಪಸಿದ್ಧಾಂತವನ್ನು ಕೈಬಿಡಲಾಗಿದೆ. ಆದರ್ಶರೂಪಗಳಿಲ್ಲದೆ ಮನಸ್ಸು ನೆಲೆಸಬಹುದಾದ ಯಾವುದೂ ಇರಲಾರದು, ಹೀಗಾಗಿ ತಾರ್ಕಿಕತೆಯು ಹಾಳಾಗುತ್ತದೆ ಎಂದು ಸಾಕ್ರಟೀಸ್ ಹೇಳುತ್ತಾನೆ. ತನ್ನ ತೊಂದರೆಗಳು ಪೂರ್ವಸಿದ್ಧತೆಯಿಲ್ಲದ ಕಾರಣದಿಂದ ಉಂಟಾದವು, ಆದರೆ ಖಚಿತ ತೀರ್ಮಾನವನ್ನು ತೆಗೆದುಕೊಳ್ಳಲಾಗಿಲ್ಲ ಎಂದು ಪಾರ್ಮನೈಡೀಸ್ ಅವನಿಗೆ ಹೇಳುತ್ತಾನೆ.

ಇಂದ್ರಿಯಗ್ರಾಹ್ಯ ನಿರ್ದಿಷ್ಟಗಳ ವಾಸ್ತವತೆಯ ಬಗೆಗಿನ ಪ್ಲೇಟೋನ ಆಕ್ಷೇಪಣೆಗಳು ಪರೀಕ್ಷೆಯನ್ನು ತಾಳಲಾರವು ಎಂಬುದು ನನ್ನ ತಿಳಿವಳಿಕೆ. ನಿದರ್ಶನಕ್ಕೆ, ಸುಂದರವಾಗಿರುವುದು ಒಂದಲ್ಲ ಒಂದು ಬಗೆಯಲ್ಲಿ ಕುರೂಪಿಯೂ ಹೌದು; ಎರಡರಷ್ಟಿರುವುದು ಅರ್ಧಭಾಗವೂ ಹೌದು ಇತ್ಯಾದಿಯನ್ನೂ ಅವನು ಹೇಳುತ್ತಾನೆ. ಆದರೆ ನಾವು ಕಲಾಕೃತಿಯೊಂದನ್ನು ಕುರಿತು ಹೇಳುವಾಗ ಅದು ಕೆಲವು ಭಾಗಗಳಲ್ಲಿ ಸುಂದರವಾಗಿದೆ ಮತ್ತು ಕೆಲವೆಡೆ ಕುರೂಪವಾಗಿದೆ ಎಂದರೆ ವಿಶ್ಲೇಷಣೆಯು ಯಾವಾಗಲೂ (ಕನಿಷ್ಠ ಪಕ್ಷ, ಸೈದ್ಧಾಂತಿಕವಾಗಿ) 'ಈ ಭಾಗ ಅಥವಾ ದೃಷ್ಟಿಯು ಸುಂದರವಾಗಿದೆ, ಆದರೆ ಇನ್ನೊಂದು ಭಾಗ ಅಥವಾ ದೃಷ್ಟಿಯು ಕುರೂಪವಾಗಿದೆ' ಎಂದು ಹೇಳಲು ಆಸ್ಪದ ನೀಡುತ್ತದೆ. 'ಎರಡರಷ್ಟು' ಮತ್ತು 'ಅರ್ಧಭಾಗ'ಗಳನ್ನು ಕುರಿತಂತೆ, ಅವು ಸಾಪೇಕ್ಷ ಪದಗಳು; ಎರಡು ಒಂದರ ಎರಡರಷ್ಟು ಮತ್ತು ನಾಲ್ಕರ ಅರ್ಧದಷ್ಟು ಎಂದು ಹೇಳುವುದರಲ್ಲಿ ವಿರೋಧವೇನೂ ಇಲ್ಲ. ಸಾಪೇಕ್ಷ ಪದಗಳನ್ನು ಅರ್ಥಮಾಡಿಕೊಳ್ಳದಿರುವುದರಿಂದಾಗಿ ಪ್ಲೇಟೋ ಪದೇ ಪದೇ ತೊಂದರೆಗೆ ಸಿಲುಕಿಕೊಳ್ಳುತ್ತಾನೆ. ಎ ಎಂಬುದು ಬಿಗಿಂತ ದೊಡ್ಡದು ಮತ್ತು ಸಿಗಿಂತ ಚಿಕ್ಕದು ಎಂದರೆ, ಅವನು ಅದನ್ನು ಎ ಚಿಕ್ಕದೂ ಹೌದು, ದೊಡ್ಡದೂ ಹೌದು ಎಂದು ತಿಳಿಯುತ್ತಾನೆ, ಅವನಿಗದು ವಿರೋಧದಂತೆ ಕಾಣುತ್ತದೆ. ಇಂತಹ ತೊಂದರೆಗಳು ತತ್ವಜ್ಞಾನದ ಬಾಲಗ್ರಹಗಳು.

ವಾಸ್ತವ ಮತ್ತು ತೋರಿಕೆಗಳ ನಡುವಣ ವ್ಯತ್ಯಾಸವು ಪಾರ್ಮನೈಡೀಸ್, ಪ್ಲೇಟೋ ಮತ್ತು ಹೆಗೆಲ್ ಆರೋಪಿಸುವ ಪರಿಣಾಮಗಳನ್ನು ಬೀರಲಾರದು.

ತೋರಿಕೆಯು ವಾಸ್ತವವಾಗಿಯೂ ತೋರಿದರೆ, ಅದೇನೂ ಅಲ್ಲ, ಹೀಗಾಗಿ ಅದು ವಾಸ್ತವತೆಯ ಭಾಗ; ಇದು ಪಾರ್ಮನೈಡೀಸ್ ಬಗೆಯ ಸರಿಯಾದ ವಾದ. ತೋರಿಕೆಯು ವಾಸ್ತವವಾಗಿ ತೋರದಿದ್ದಾಗ, ಅದರ ಬಗ್ಗೆ ತಲೆಯನ್ನೇಕೆ ಕೆಡಿಸಿಕೊಳ್ಳಬೇಕು? ಯಾರಾದರೂ ಹೀಗನ್ನುತ್ತಾರೆಂದಿಟ್ಟುಕೊಳ್ಳಿ: 'ತೋರಿಕೆಯು ವಾಸ್ತವವಾಗಿ ತೋರುವುದಿಲ್ಲ, ಆದರೆ ತೋರಿದಂತೆ ತೋರುತ್ತದೆ.' ಇದರಿಂದೇನೂ ಉಪಯೋಗವಿಲ್ಲ; ಯಾಕೆಂದರೆ ನಾವು ಆಗ ಮತ್ತೆ ಕೇಳುತ್ತೇವೆ: ಅದು ವಾಸ್ತವವಾಗಿಯೂ ತೋರಿದಂತೆ ತೋರುವುದೇ?' ತೋರಿಕೆಯೆಂದರೆ ತೋರುವಂತೆ ತೋರುವುದಷ್ಟೆ ಎಂದಾದರೆ, ಬೇಗಲೋ ತಡವಾಗಿಯೋ ವಾಸ್ತವವಾದ ತೋರಿಕೆಯನ್ನು ನಾವು ತಲುಪಬೇಕು. ಹೀಗಾಗಿ ಅದು ವಾಸ್ತವತೆಯ ಭಾಗ. ದೇವರು ಸೃಷ್ಟಿಸಿದ ಒಂದೇ ಒಂದು ಮಂಚವಿದ್ದರೂ, ಅನೇಕ ಮಂಚಗಳು ತೋರುವುದನ್ನು ಪ್ಲೇಟೋ ನಿರಾಕರಿಸುವ ಕನಸೂ ಕಾಣಲಾರ. ಅನೇಕ ತೋರಿಕೆಗಳಿರುವ ವಸ್ತುಸ್ಥಿತಿಯ ಪರಿಣಾಮಗಳನ್ನವನು ಎದುರಿಸಿದಂತೆ ಕಾಣುವುದಿಲ್ಲ; ಮತ್ತು ಈ ಅನೇಕತೆಯು ವಾಸ್ತವತೆಯ ಭಾಗವೇ. ಜಗತ್ತನ್ನು ಒಂದು ಇನ್ನೊಂದಕ್ಕಿಂತ ಹೆಚ್ಚು ವಾಸ್ತವವಾದ ಭಾಗಗಳಾಗಿ ಒಡೆಯುವ ಯಾವುದೇ ಪ್ರಯತ್ನವು ವಿಫಲವಾಗುತ್ತದೆ.

ಇದಕ್ಕೆ ಸಂಬಂಧಿಸಿದಂತೆ ಪ್ಲೇಟೋನ ಮತ್ತೊಂದು ಕುತೂಹಲಕಾರಕ ದೃಷ್ಟಿಯಿದೆ, ಅದೆಂದರೆ ಜ್ಞಾನ ಮತ್ತು ಅಭಿಪ್ರಾಯಗಳು ಭಿನ್ನ ವಸ್ತುಗಳಿಗೆ ಸಂಬಂಧಿಸರಬೇಕು ಎಂಬುದು. 'ಹಿಮ ಬೀಳಲಿದೆ ಎಂದು ನಾನು ಭಾವಿಸಿದರೆ, ಅದು ಅಭಿಪ್ರಾಯ; ಆಮೇಲೆ ನಾನು ಹಿಮ ಬೀಳುವುದನ್ನು ನೋಡಿದರೆ ಅದು ಜ್ಞಾನ'; ಆದರೆ 'ವಸ್ತುವು ಎರಡೂ ಸಂದರ್ಭಗಳಲ್ಲಿ ಒಂದೇ ಆಗಿದೆಯಲ್ಲ' ಎಂದು ನಾವು ಕೇಳಬೇಕಾಗುತ್ತದೆ. ಯಾವುದೇ ಸಂದರ್ಭದಲ್ಲಿ ಯಾವುದಾದರೂ ಅಭಿಪ್ರಾಯದ ವಸ್ತುವಾದರೆ, ಅದು ಜ್ಞಾನದ ವಸ್ತುವಾಗಲಾರದು ಎಂದೇ ಪ್ಲೇಟೋ ಭಾವಿಸುತ್ತಾನೆ. ಜ್ಞಾನವು ನಿಶ್ಚಿತವಾದುದು ದೋಷರಹಿತವಾದುದು; ಅಭಿಪ್ರಾಯವು ದೋಷಪೂರ್ಣವಾದುದು ಮಾತ್ರವಲ್ಲ, ಖಂಡಿತವಾಗಿ ತಪ್ಪುತಿಳಿಯುವಂತಹುದು, ಏಕೆಂದರೆ ಕೇವಲ ತೋರಿಕೆಯ ವಾಸ್ತವತೆಯನ್ನದು ಊಹಿಸಿಕೊಳ್ಳುತ್ತದೆ. ಈ ಎಲ್ಲವೂ ಪಾರ್ಮನೈಡೀಸ್ ಹೇಳಿದುದರ ಪುನರುಕ್ತಿಯೇ.

ಒಂದು ವಿಷಯದಲ್ಲಿ ಪ್ಲೇಟೋನ ತತ್ವಜಿಜ್ಞಾಸೆಯು ಪಾರ್ಮನೈಡೀಸ್‌ನದಕ್ಕಿಂತ ಭಿನ್ನವೆಂದು ಎದ್ದು ಕಾಣುತ್ತದೆ. ಪಾರ್ಮನೈಡೀಸ್‌ಗೆ 'ಒಂದು' ಒಂದೇ ಆದುದು: ಪ್ಲೇಟೋಗೆ ಅನೇಕ ಆದರ್ಶರೂಪಗಳಿವೆ. ಒಂದು ಸೌಂದರ್ಯ ಮತ್ತು ಒಳಿತುಗಳು ಇರುವುದಲ್ಲದೆ, ನಾವಾಗಲೇ ನೋಡಿದಂತೆ, ದೇವರು ಸಷ್ಟಿಸಿದ ಸ್ವರ್ಗೀಯ ಮಂಚವಿದೆ; ಒಬ್ಬ ಸ್ವರ್ಗೀಯ ವ್ಯಕ್ತಿಯಿದ್ದಾನೆ, ಸ್ವರ್ಗೀಯ ನಾಯಿಯಿದೆ, ಮುಂತಾದ

ನೋವನ ಹಡಗಿನ ಎಲ್ಲವೂ ಇವೆ. 'ರಿಪಬ್ಲಿಕ್'ನಲ್ಲಿ ಇವನ್ನೆಲ್ಲ ಕುರಿತು ಪ್ಲೇಟೋ ಕೂಲಂಕಷವಾಗಿ ಆಲೋಚಿಸಿದಂತೆ ಕಾಣುವುದಿಲ್ಲ. ಪ್ಲೇಟೋನ ಆದರ್ಶರೂಪ ಅಥವಾ ಆಕಾರವು, ಆಲೋಚನೆಯ ವಸ್ತುವಾದರೂ, ಆಲೋಚನೆಯಲ್ಲ. ದೇವರು ಇದನ್ನೆಲ್ಲ ಹೇಗೆ ಸೃಷ್ಟಿಸಿರಬಹುದು ಎಂಬುದನ್ನು ಕಲ್ಪಿಸಿಕೊಳ್ಳುವುದು ಕಷ್ಟ, ಯಾಕಂದರೆ ಅವುಗಳ ಇರುವಿಕೆ ಕಾಲಾತೀತವಾದುದು; ಹಾಗೆ ಮಾಡಲು ನಿರ್ಧರಿಸಿದಾಗ ಅವನ ಆಲೋಚನೆಯು ಅವನು ಸೃಷ್ಟಿಸಿದನೆಂದು ಹೇಳಲಾಗುವ ಪ್ಲೇಟೋನ ಮಂಚವಾಗಬೇಕೆನ್ನುವ ಉದ್ದೇಶದಿಂದ ಹೊರತು ಬೇರೆ ಆಲೋಚನೆಯಿಂದ ಮಂಚವೊಂದನ್ನು ಸೃಷ್ಟಿಸಲು ನಿರ್ಧರಿಸಿರಲಾರ. ಕಾಲಾತೀತವಾದುದನ್ನು ನಾಶಪಡಿಸಲು ಸಾಧ್ಯವಿಲ್ಲ. ಈಗ ನಾವು ಅನೇಕ ತತ್ವಜಿಜ್ಞಾಸೆಯ ಮತಧರ್ಮಶಾಸ್ತ್ರಜ್ಞರನ್ನು ಕೋಟಲೆಗೀಡುಮಾಡಿದ ತೊಂದರೆಯೊಂದರ ಕಡೆಗೆ ಬರುತ್ತೇವೆ. ಅವಕಾಶ-ಕಾಲಬದ್ಧವಾದ ಆಕಸ್ಮಿಕ ಜಗತ್ತನ್ನು ಸೃಷ್ಟಿಸಿರಬಹುದು; ಆದರೆ ಇದು ಭ್ರಮಾತ್ಮಕವೆಂದೂ ಕೆಟ್ಟುದೆಂದೂ ತೆಗಳುವ ಅನುದಿನದ ಜಗತ್ತು. ಹೀಗಾಗಿ ಸೃಷ್ಟಿಕರ್ತನು ಭ್ರಮೆ ಮತ್ತು ಕೆಡುಕನ್ನು ಮಾತ್ರ ಸೃಷ್ಟಿಸಿದಂತೆ ತೋರುತ್ತದೆ. ಕೆಲವು ಅಧ್ಯಾತ್ಮರಹಸ್ಯಪಂಥದವರು (ನಾಸ್ಟಿಕ್ಸ್) ಈ ದೃಷ್ಟಿಕೋನವನ್ನು ಹಟದಿಂದ ಅಳವಡಿಸಿಕೊಂಡರು; ಆದರೆ ಪ್ಲೇಟೋನಲ್ಲಿನ ತೊಂದರೆಯೆಂದರೆ, ಅದು ಮೇಲ್ಮೈಗಿಂತ ಕೆಳಗಿನದು, ಅದರ ಬಗ್ಗೆ ತನ್ನ 'ರಿಪಬ್ಲಿಕ್'ನಲ್ಲಿ ಅರಿವೇ ಇದ್ದಂತಿಲ್ಲ.

ಪಾಲಕನಾಗಬೇಕಾದ ತತ್ವಜ್ಞಾನಿಯು, ಪ್ಲೇಟೋ ಪ್ರಕಾರ, ಗುಹೆಗೆ ವಾಪಸಾಗಬೇಕು, ಮತ್ತು ಎಂದೂ ಸತ್ಯದ ಬಿಸಿಲನ್ನೇ ಕಾಣದ ಜನಗಳ ನಡುವೆ ಬದುಕಬೇಕು. ದೇವರೇ ತನ್ನ ಸೃಷ್ಟಿಯನ್ನು ಬದಲಾಯಿಸಲು ಬಯಸಿದರೆ ಹೀಗೆ ಮಾಡಬೇಕೇನೋ ಅನ್ನಿಸುತ್ತದೆ. ಕ್ರಿಶ್ಚಿಯನ್ ಪ್ಲೇಟೋವಾದಿಯು ಅವತಾರವನ್ನು ಹೀಗೇ ವ್ಯಾಖ್ಯಾನಿಸಬಹುದು. ಆದರೆ ದೇವರು ಆದರ್ಶರೂಪಗಳ ಜಗತ್ತಿನ ಬಗ್ಗೆ ತೃಪ್ತನಾಗಿರಲಿಲ್ಲ ಎಂಬುದನ್ನು ವಿವರಿಸುವುದು ಪೂರ್ತಿಯಾಗಿ ಅಸಾಧ್ಯ. ತತ್ವಜ್ಞಾನಿಯು ಗುಹೆಯಿರುವುದನ್ನು ಕಾಣುತ್ತಾನೆ, ಮತ್ತು ಅದಕ್ಕೆ ವಾಪಸಾಗುವುದಕ್ಕೆ ಉಪಕಾರದೃಷ್ಟಿಯಿಂದ ಪ್ರೇರಿತನಾಗುತ್ತಾನೆ. ಆದರೆ ಸೃಷ್ಟಿಕರ್ತನು, ತಾನೇ ಎಲ್ಲವನ್ನೂ ಸೃಷ್ಟಿಸಿದ್ದರೆ ಗುಹೆಯನ್ನು ಸಂಪೂರ್ಣವಾಗಿ ಬಿಟ್ಟುಬಿಡಬಹುದಾಗಿತ್ತಲ್ಲ ಎಂದು ಅಂದುಕೊಳ್ಳಬಹುದು.

ಪ್ರಾಯಶಃ ಈ ತೊಂದರೆಯು ಉದ್ಭವಿಸುವುದು ಸೃಷ್ಟಿಕರ್ತನ ಬಗೆಗಿನ ಕ್ರಿಶ್ಚಿಯನ್ ಪರಿಕಲ್ಪನೆಯಿಂದ, ಹೀಗಾಗಿ ದೇವರು ಎಲ್ಲವನ್ನೂ ಸೃಷ್ಟಿಸಲಿಲ್ಲ, ಒಳ್ಳೆಯದನ್ನು ಮಾತ್ರ ಸೃಷ್ಟಿಸಿದ ಎಂದ ಪ್ಲೇಟೋನನ್ನು ಇದಕ್ಕಾಗಿ ಹೊಣೆಗಾರನನ್ನಾಗಿ ಮಾಡಲಾಗುವುದಿಲ್ಲ. ಇಂದ್ರಿಯಗ್ರಾಹ್ಯ ಜಗತ್ತಿನ ಬಾಹುಳ್ಯವು, ಈ ದೃಷ್ಟಿಕೋನದ

ಪ್ರಕಾರ, ದೇವರ ಹೊರತಾದ ಬೇರೊಂದು ಮೂಲದಿಂದ ಆದುದಾಗಿರಬಹುದು. ಮತ್ತು ಆದರ್ಶರೂಪಗಳು ತನ್ನ ಸತ್ವದ ಘಟಕಗಳಾಗಿ ಪ್ರಾಯಶಃ ದೇವರಿಂದ ಅಷ್ಟಾಗಿ ಸೃಷ್ಟಿಗೊಳ್ಳಲಿಲ್ಲ. ಆದರ್ಶರೂಪಗಳ ಬಾಹುಳ್ಯಕ್ಕೆ ಕಾರಣವಾದ ಅನೇಕತ್ವವು ಈ ರೀತಿಯಲ್ಲಿ ಆತ್ಯಂತಿಕವಲ್ಲ. ಆತ್ಯಂತಿಕವಾಗಿ ಇರುವವನು ಒಬ್ಬನೇ ದೇವರು ಅಥವಾ ಒಳಿತು, ಅವನಿಗೆ ಆದರ್ಶರೂಪಗಳು ಜ್ಞೇಯಗಳು. ಏನೇ ಆದರೂ ಇದು ಪ್ಲೇಟೋನನ್ನು ವ್ಯಾಖ್ಯಾನಿಸಲು ಸಾಧ್ಯವಾಗುವ ಒಂದು ರೀತಿ.

ಆನಂತರ ಪಾಲಕನಾಗಬೇಕಾದ ಯುವಕನೊಬ್ಬನಿಗೆ ನೀಡಬೇಕಾದ ಸೂಕ್ತ ಶಿಕ್ಷಣದ ಆಸಕ್ತಿಕರ ರೂಪುರೇಷೆಗಳ ಕಡೆಗೆ ಸಾಗುತ್ತಾನೆ. ಯುವಕನೊಬ್ಬನನ್ನು ಈ ಗೌರವಕ್ಕೆ ಆಯ್ಕೆಮಾಡುವುದು ಬೌದ್ಧಿಕ ಮತ್ತು ನೈತಿಕ ಗುಣಗಳ ಸಂಯೋಗದ ಆಧಾರದ ಮೇಲೆ ಎಂಬುದನ್ನಾಗಲೇ ನೋಡಿದ್ದೇವೆ; ಅವನು ನ್ಯಾಯಯುತನೂ ಸತ್ಕುಲಪ್ರಸೂತನೂ ಆಗಿರಬೇಕು, ಅವನಿಗೆ ಒಳ್ಳೆಯ ನೆನಪಿನ ಶಕ್ತಿ ಮತ್ತು ಹೊಂದಿಕೊಳ್ಳುವ ಬುದ್ಧಿಯಿದ್ದು ಕಲಿಯುವುದರಲ್ಲಿ ಪ್ರೀತಿಯಿರಬೇಕು. ಈ ಗುಣಗಳಿಗಾಗಿ ಆಯ್ಕೆಮಾಡಲಾದ ಯುವಕನು ಇಪ್ಪತ್ತರಿಂದ ಮೂವತ್ತನೇ ವರ್ಷದವರೆಗೆ ನಾಲ್ಕು ಪೈಥಾಗೊರಿಯನ್ ಅಧ್ಯಯನಗಳಲ್ಲಿ ತೊಡಗಿರಬೇಕು; ಅಂಕಗಣಿತ, ಜ್ಯಾಮಿತಿ (ಸಮತಲ ಮತ್ತು ಘನಸ್ಥಿತಿ), ಖಗೋಳವಿಜ್ಞಾನ ಮತ್ತು ಸ್ವರಮೇಳ. ಯಾವುದೇ ಉಪಯೋಗದ ಕಾರಣದಿಂದ ಇವುಗಳ ಅಧ್ಯಯನದಲ್ಲಿ ತೊಡಗಬಾರದು, ಆದರೆ ಚಿರಂತನ ವಸ್ತುಗಳ ದರ್ಶನದ ದೃಷ್ಟಿಯಿಂದ ಇವುಗಳನ್ನು ಕಲಿಸಬೇಕು. ಉದಾಹರಣೆಗೆ, ಖಗೋಳವಿಜ್ಞಾನದ ವಿಷಯದಲ್ಲಿ ಅವನು ಯಥಾರ್ಥ ಆಕಾಶಕಾಯಗಳ ಬಗ್ಗೆ ತಲೆಕೆಡಿಸಿಕೊಳ್ಳಬಾರದು, ಆದರೆ ಆದರ್ಶ ಆಕಾಶಕಾಯಗಳ ಗಣಿತ ಮತ್ತು ಚಲನೆಗಳ ಬಗ್ಗೆ ತಿಳಿದುಕೊಳ್ಳಬೇಕು. ಆಧುನಿಕ ಕಿವಿಗಳಿಗೆ ಇದು ಅಸಂಬದ್ಧದಂತೆ ಕೇಳಿಸಬಹುದು, ಆದರೆ ವಿಚಿತ್ರವೆಂದರೆ, ಈ ದೃಷ್ಟಿಕೋನವು ಪ್ರಯೋಗಾತ್ಮಕ ಖಗೋಳವಿಜ್ಞಾನದ ವಿಷಯದಲ್ಲಿ ಫಲಪ್ರದವಾಯಿತು. ಇದು ಸಾಧ್ಯವಾದದ್ದು ಹೇಗೆ ಎಂಬುದು ಕುತೂಹಲದಾಯಕವಾಗಿದ್ದು ಪರಿಶೀಲನಾರ್ಹವಾಗಿದೆ.

ಗ್ರಹಗಳ ವ್ಯಕ್ತ ಚಲನೆಯು, ಆ ಕುರಿತು ತುಂಬ ಆಳವಾಗಿ ವಿಶ್ಲೇಷಣೆ ಮಾಡುವವರೆಗೂ, ಕ್ರಮವಿಹೀನವೆಂದೂ ಸಂಕೀರ್ಣವೆಂದೂ, ಪೈಥಾಗೊರಿಯನ್ ಸೃಷ್ಟಿಕರ್ತನು ಆಯ್ಕೆ ಮಾಡುವಂತಹುದಲ್ಲವೆಂದೂ ಅನ್ನಿಸಬಹುದು. ಸ್ವರ್ಗಗಳು ಗಣಿತದ ಚೆಲುವನ್ನು ಎತ್ತಿ ತೋರಿಸಬೇಕು, ಹೀಗಾಗುವುದು ಗ್ರಹಗಳ ವೃತ್ತಾಕಾರದ ಚಲನೆಯಿಂದ ಎಂಬುದು ಪ್ರತಿ ಗ್ರೀಕನಿಗೆ ಸ್ಪಷ್ಟವಾಗಿತ್ತು. ವಿಶೇಷವಾಗಿ ಇದು ಪ್ಲೇಟೋನಿಗೆ ಸ್ಪಷ್ಟವಾಗಿತ್ತು, ಯಾಕೆಂದರೆ ಅವನು ಒಳಿತಿನ ಮೇಲೆ ಒತ್ತುಕೊಟ್ಟವನು. ಸಮಸ್ಯೆ ಹೀಗೆ ಉದ್ಭವಿಸಿತು: ಗ್ರಹಗಳ ಕ್ರಮವಿಹೀನ ಚಲನೆಯನ್ನು ಕಡಿಮೆಮಾಡಿ,

ಕ್ರಮಬದ್ಧವೂ ಸುಂದರವೂ ಸರಳವೂ ಆಗುವಂತೆ ಮಾಡುವ ಯಾವುದಾದರೂ ಆಧಾರಕಲ್ಪನೆಯಿದೆಯೇ? ಅಂಥದೊಂದು ಇದ್ದರೆ, ಅದನ್ನು ಒಳಿತಿನ ಆದರ್ಶರೂಪದಿಂದ ಸಮರ್ಥಿಸಬಹುದು. ಸಾಮೋಸ್‌ನ ಅರಿಸ್ಟಾರ್ಕಸ್ ಅಂಥದೊಂದು ಆಧಾರಕಲ್ಪನೆಯನ್ನು ಕಂಡುಕೊಂಡ: ಅದೆಂದರೆ, ಭೂಮಿಯನ್ನೊಳಗೊಂಡಂತೆ ಎಲ್ಲ ಗ್ರಹಗಳೂ ಸೂರ್ಯನ ಸುತ್ತ ವರ್ತುಲಾಕಾರದಲ್ಲಿ ಚಲಿಸುತ್ತವೆ ಎಂಬುದು. ಈ ದೃಷ್ಟಿಕೋನವನ್ನು ಎರಡು ಸಾವಿರ ವರ್ಷಗಳ ಕಾಲ ಅಲ್ಲಗಳೆಯಲಾಯಿತು, ಅದಕ್ಕೆ ಭಾಗಶಃ ಕಾರಣ ಅರಿಸ್ಟಾಟಲನ ಪ್ರಮಾಣವಾಕ್ಕು, ಅವನು ಅಂತಹುದೇ ಆಧಾರಕಲ್ಪನೆಯನ್ನು ಪೈಥಾಗೊರಿಯನ್ನರಿಗೆ ಆರೋಪಿಸುತ್ತಾನೆ ('ದೆ ಕೊಯೆಲೋ', ೨೬೯ ಟಿಪ್ಪಣಿ). ಅದನ್ನು ಕೊಪರ್ನಿಕಸ್ ಸ್ವಾಗತಿಸಿದ, ಅದರ ಯಶಸ್ಸು ಪ್ಲೇಟೋನ ಖಗೋಳವಿಜ್ಞಾನದ ಸೌಂದರ್ಯಪಕ್ಷಪಾತವನ್ನು ಸಮರ್ಥಿಸುವಂತೆ ತೋರುತ್ತದೆ. ದುರದೃಷ್ಟವಶಾತ್, ಕೆಪ್ಲರ್ ಗ್ರಹಗಳು ಸೂರ್ಯನನ್ನು ನಾಭಿಯಾಗಿಸಿಕೊಂಡು, ಕೇಂದ್ರವಾಗಿರಿಸಿಕೊಂಡಲ್ಲ, ಅಂಡಾಕೃತಿಯಲ್ಲಿ ಚಲಿಸುತ್ತವೆಯೇ ವಿನಾ ವರ್ತುಲಾಕಾರದಲ್ಲಲ್ಲ ಎಂಬುದನ್ನು ಅನ್ವೇಷಿಸಿದ; ಆ ಬಳಿಕ ನ್ಯೂಟನ್ ಅವು ನಿರ್ದಿಷ್ಟ ಅಂಡಾಕೃತಿಯಲ್ಲಿಯೂ ಚಲಿಸುವುದಿಲ್ಲವೆಂಬುದನ್ನು ಕಂಡುಹಿಡಿದ. ಹೀಗಾಗಿ ಪ್ಲೇಟೋ ಬಯಸಿದ್ದ ಮತ್ತು ಸಾಮೋಸ್‌ನ ಅರಿಸ್ಟಾರ್ಕಸ್ ಕಂಡುಕೊಂಡ ಜ್ಯಾಮಿತೀಯ ಸರಳತೆಯು ಅಂತಿಮವಾಗಿ ಭ್ರಮೆಯೆನಿಸಿತು.

ಈ ಸಂಕಿಪ್ತ ವಿಜ್ಞಾನ ಇತಿಹಾಸವು ಸಾಮಾನ್ಯವಾದ ಧ್ಯೇಯವಾಕ್ಯವೊಂದನ್ನು ಸಾಬೀತುಪಡಿಸುತ್ತದೆ. ಎಷ್ಟೇ ಅಸಂಬದ್ಧವಾದರೂ, ಆಧಾರಕಲ್ಪನೆಯೊಂದು, ಹೊಸ ರೀತಿಯಲ್ಲಿ ವಿಷಯಗಳನ್ನು ಪರಿಕಲ್ಪಿಸಿಕೊಳ್ಳುವಲ್ಲಿ ಸಹಾಯಕವಾಗುವುದಾದರೆ, ವಿಜ್ಞಾನದಲ್ಲಿ ಪ್ರಯೋಜನಕಾರಿಯಾಗಬಹುದು. ಆದರೆ, ಇದು ಅದೃಷ್ಟವಶಾತ್ ಈ ಉದ್ದೇಶವನ್ನು ನೆರವೇರಿಸಿದರೆ, ಅದು ಮತ್ತಷ್ಟು ಮುನ್ನಡೆಗೆ ಅಡ್ಡಿಯೂ ಆಗಬಹುದು. ಜಗತ್ತನ್ನು ವೈಜ್ಞಾನಿಕವಾಗಿ ಅರ್ಥಮಾಡಿಕೊಳ್ಳುವಲ್ಲಿ ಒಳಿತಿನಲ್ಲಿನ ಶ್ರದ್ಧೆಯು, ಒಂದು ಹಂತದಲ್ಲಿ, ಖಗೋಳವಿಜ್ಞಾನದಲ್ಲಿ ಉಪಯುಕ್ತವೆನಿಸಿತು. ಆದರೆ ಮುಂದೆ ಅದು ಹಾನಿಕಾರಕವಾಯಿತು. ಪ್ಲೇಟೋನ ನೈತಿಕ ಹಾಗೂ ಸೌಂದರ್ಯ ಪಕ್ಷಪಾತವು, ಅರಿಸ್ಟಾಟಲ್‌ನಲ್ಲಿ ಮತ್ತಷ್ಟು ಹೆಚ್ಚಾಗಿ, ಗ್ರೀಕ್ ವಿಜ್ಞಾನದ ಸಾವಿಗೆ ಸಾಕಷ್ಟು ಕಾರಣವಾಯಿತು.

ಪ್ಲೇಟೋ ಅಂಕಗಣಿತ ಮತ್ತು ಜ್ಯಾಮಿತಿಗಳಿಗೆ ಅತೀವ ಪ್ರಾಮುಖ್ಯ ನೀಡಿದ್ದರೂ, ಅವನ ತತ್ವಜ್ಞಾನದ ಮೇಲೆ ಅದು ಗಾಢವಾದ ಪ್ರಭಾವವನ್ನು ಬೀರಿದ್ದರೂ, ಆಧುನಿಕ ಪ್ಲೇಟೋವಾದಿಗಳು, ಕೆಲವು ಅಪವಾದಗಳ ಹೊರತಾಗಿ, ಗಣಿತದ ಬಗ್ಗೆ ಏನೂ ಗೊತ್ತಿಲ್ಲದವರು. ಇದು ಪರಿಣತಿಯ ಕೆಡುಕಿನ ಒಂದು ನಿದರ್ಶನ. ಪ್ಲೇಟೋ ಮುಖ್ಯವೆಂದು ಭಾವಿಸಿದ ವಿಷಯಗಳ ಬಗ್ಗೆ ತಿಳಿಯಲು ಸಮಯವಿಲ್ಲದಂತೆ ತನ್ನ

ಯೌವನವನ್ನು ಗ್ರೀಕ್ ಬಗ್ಗೆ ವಿನಿಯೋಗಿಸಿರದಿದ್ದರೆ ಪ್ಲೇಟೋ ಬಗ್ಗೆ ಯಾವನೂ ಬರೆಯಬಾರದು.

೧೬
ಪ್ಲೇಟೋನ ಅಮರತ್ವ ಸಿದ್ಧಾಂತ

'ಫೀಡೋ' ಎಂಬ ಹೆಸರಿನ ಸಂವಾದವು ಅನೇಕ ದೃಷ್ಟಿಗಳಿಂದ ಆಸಕ್ತಿಕರವಾಗಿದೆ. ಅದು ಸಾಕ್ರಟೀಸ್ ಬದುಕಿನ ಕೊನೆಯ ಕ್ಷಣಗಳನ್ನು ಚಿತ್ರಿಸುವ ಉದ್ದೇಶವುಳ್ಳುದು: ಹೆಮ್‌ಲಾಕ್ ಕುಡಿಯುವ ಮುಂಚೆಯ ಮತ್ತು ಆನಂತರ ಪ್ರಜ್ಞೆಯನ್ನು ಕಳೆದುಕೊಳ್ಳುವವರೆಗಿನ ಅವನ ಸಂವಾದ. ಅತ್ಯಂತ ಗರಿಷ್ಠಮಟ್ಟದ ವಿವೇಕಿಯೂ ಒಳ್ಳೆಯವನೂ ಆದ ವ್ಯಕ್ತಿಯು ಸಾವಿನ ಭಯವನ್ನು ಹೊಂದಿಲ್ಲದಿರುವ ಆದರ್ಶವ್ಯಕ್ತಿಯನ್ನಿದು ಚಿತ್ರಿಸುತ್ತದೆ. ಸಾವನ್ನು ಎದುರಿಸುವ ಸಾಕ್ರಟೀಸ್, ಪ್ಲೇಟೋ ಬಿಂಬಿಸುವಂತೆ, ಪ್ರಾಚೀನ ಮತ್ತು ಆಧುನಿಕ ಕಾಲದಲ್ಲಿ, ನೈತಿಕವಾಗಿ ಮುಖ್ಯವಾದವನು. ರಾಗಾವೇಶ ಮತ್ತು ಶಿಲುಬೆಗೇರಿಸಿದ ಗಾಸ್ಪೆಲ್ ವರ್ಣನೆಯು ಕ್ರಿಶ್ಚಿಯನ್ನರಿಗೆ ಹೇಗೆ ಮುಖ್ಯವೋ, 'ಫೀಡೋ' ಧರ್ಮಬಾಹಿರ ಅಥವಾ ಸ್ವತಂತ್ರಚಿಂತನೆಯ ತತ್ವಜ್ಞಾನಿಗಳಿಗೆ ಅಷ್ಟೇ ಮುಖ್ಯ.[೫೮] ಸಾಕ್ರಟೀಸ್‌ನ ಕೊನೆಯ ಕ್ಷಣಗಳ ನಿರುದ್ವಿಗ್ನತೆಯು ಅವನ ಅಮರತ್ವದಲ್ಲಿನ ಶ್ರದ್ಧೆಯಿಂದ ಕೂಡಿದುದು, ಮತ್ತು 'ಫೀಡೋ' ಹುತಾತ್ಮನೊಬ್ಬನ ಸಾವನ್ನು ಚಿತ್ರಿಸುವುದಷ್ಟಕ್ಕೇ ಅಲ್ಲ, ಆನಂತರ ಕ್ರಿಶ್ಚಿಯನ್‌ರ ಅನೇಕ ಸಿದ್ಧಾಂತಗಳ ಚಿತ್ರಣದ ದೃಷ್ಟಿಯಿಂದಲೂ ಅಷ್ಟೇ ಮುಖ್ಯ. ಸಂತ ಪೌಲ್ ಮತ್ತು ಪಾದ್ರಿಗಳ ಮತಧರ್ಮಶಾಸ್ತ್ರವು, ನೇರವಾಗಿಯೋ ಪರೋಕ್ಷವಾಗಿಯೋ, ಅದರಿಂದಲೇ ಹೆಚ್ಚು ಮೂಡಿರುವುದು; ಪ್ಲೇಟೋನನ್ನು ಅವಗಣಿಸಿದರೆ ಅದನ್ನು ಅರ್ಥಮಾಡಿಕೊಳ್ಳುವುದು ಕಷ್ಟ.

ಸಾಕ್ರಟೀಸ್‌ನ ಗೆಳೆಯರೂ ಶಿಷ್ಯರೂ ಸೇರಿ ಅವನು ಥೆಸಲಿಗೆ ತಪ್ಪಿಸಿಕೊಂಡು ಹೋಗಬಹುದಾದ ಉಪಾಯವೊಂದನ್ನು ರೂಪಿಸಿದ್ದರು ಎಂಬುದನ್ನು ಆ ಮುಂಚಿನ

---

೫೮. ಅನೇಕ ಕ್ರಿಶ್ಚಿಯನ್ನರಿಗೂ, ಅದು ಏಸುವಿನ ಸಾವಿನ ನಂತರ ಮುಖ್ಯವಾದುದು. 'ಪ್ರಾಚೀನ ಅಥವಾ ಆಧುನಿಕ ದುರಂತನಾಟಕದಲ್ಲಾಗಲೀ, ಕಾವ್ಯ ಮತ್ತು ಚರಿತ್ರೆಯಲ್ಲಾಗಲೀ (ಒಂದೇ ಒಂದು ಅಪವಾದವನ್ನು ಬಿಟ್ಟು), ಪ್ಲೇಟೋನಲ್ಲಿನ ಸಾಕ್ರಟೀಸ್‌ನ ಕೊನೆಯ ಕ್ಷಣಗಳಂತಹುದು ಯಾವುದೂ ಇಲ್ಲ.' ಇದು ಬೆಂಜಮಿನ್ ಜೋವೆಟ್ ಅವರ ಮಾತುಗಳು.

ಸಂವಾದವಾದ 'ಕ್ರೈಟೋ' ನಿರೂಪಿಸುತ್ತದೆ. ಅವನು ಹಾಗೆ ಮಾಡಿದ್ದರೆ ಪ್ರಾಯಶಃ ಅಥೇನಿಯನ್ ಆಡಳಿತವು ಸಂತೋಷಪಡುತ್ತಿತ್ತು, ಅಲ್ಲದೆ ಸೂಚಿಸಿದ ಉಪಾಯವು ಸಫಲವಾಗುವ ಸಾಧ್ಯತೆಯಿರಲಿಲ್ಲ. ಆದರೆ ಸಾಕ್ರಟೀಸ್ ಅದನ್ನೊಪ್ಪಲಿಲ್ಲ. ತನ್ನನ್ನು ಸಮಂಜಸ ಕಾನೂನುಮಾರ್ಗದಿಂದ ಮರಣದಂಡನೆಗೊಳಪಡಿಸಲಾಗಿದೆ, ಅದನ್ನು ನಿವಾರಿಸುವ ಯಾವುದನ್ನೇ ಆಗಲಿ ಮಾಡುವುದು ತಪ್ಪು ಎಂದವನು ವಾದಿಸಿದ. ಪರ್ವತೋಪದೇಶ (ಸೆರ್ಮನ್ ಆನ್ ದ ಮೌಂಟ್)ದೊಡನೆ ನಾವು ತಳುಕು ಹಾಕುವ ತತ್ತ್ವವನ್ನವನು ಮೊದಲಿಗೆ ಘೋಷಿಸಿದ; ಅದೆಂದರೆ 'ಅವನಿಂದಾಗಿ ನಾವು ಯಾವುದೇ ಕೆಡುಕನ್ನು ಅನುಭವಿಸಿದರೂ, ಯಾರಿಗಾದರೂ ಕೆಡುಕಾದಾಗ ಆ ಕೆಡುಕನ್ನು ನಾವು ಪ್ರತಿಭಟಿಸಬಾರದು.' ಎಂಬುದು. ಆನಂತರ ತಾನು ಅಥೆನ್ಸ್‌ನ ಕಾನೂನುಗಳ ಜೊತೆ ಸಂವಾದಕ್ಕಿಳಿದಂತೆ ಕಲ್ಪಿಸಿಕೊಳ್ಳುತ್ತಾನೆ; ಅದರಲ್ಲಿ ಮಗ ತಂದೆಗೆ ಅಥವಾ ಗುಲಾಮನು ಯಜಮಾನನಿಗೆ ತೋರಿಸಬೇಕಾದ ಗೌರವವನ್ನೇ ತಾವು ಅವನಿಂದ ನಿರೀಕ್ಷಿಸುವುದಾಗಿಯೂ; ಹಾಗೂ ಅದಕ್ಕಿಂತ ಹೆಚ್ಚಾಗಿ, ಯಾವನೇ ಅಥೆನ್ಸ್ ಪ್ರಜೆಯು ಅದನ್ನು ಇಷ್ಟಪಡುವುದಿಲ್ಲವಾದರೆ ಬೇರೆಡೆಗೆ ವಲಸೆ ಹೋಗಲು ಸ್ವತಂತ್ರನಿರುವುದಾಗಿಯೂ ಮತ್ತಷ್ಟು ತೀವ್ರವಾಗಿ ಸೂಚಿಸುತ್ತವೆ. ಕಾನೂನುಗಳು ತಮ್ಮ ದೀರ್ಘ ಮಾತನ್ನು ಮುಗಿಸುವುದು ಹೀಗೆ:

> ಸಾಕ್ರಟೀಸ್, ನಿನ್ನನ್ನು ಬೆಳೆಸಿದ ನಮ್ಮ ಮಾತನ್ನು ಕೇಳು. ಮೊದಲು ಬದುಕು ಮತ್ತು ಮಕ್ಕಳ ಬಗ್ಗೆ ಆನಂತರ ನ್ಯಾಯದ ಬಗ್ಗೆ ಯೋಚಿಸಬೇಡ; ಕೆಳಗಿನ ಲೋಕದ ರಾಜಕುಮಾರರ ಮುಂದೆ ನಿನ್ನನ್ನು ಸಮರ್ಥಿಸಿಕೊಳ್ಳಬಹುದಾದ ನ್ಯಾಯವನ್ನು ಕುರಿತು ಮೊದಲು ಯೋಚಿಸು. ಕ್ರೈಟೋ ಸೂಚಿಸಿದಂತೆ ನೀನು ಮಾಡುವುದಾದರೆ, ನೀನಾಗಲೀ ನಿನಗೆ ಸಂಬಂಧಿಸಿದವರಾಗಲೀ ಈ ಬದುಕಿನಲ್ಲಿ ಹೆಚ್ಚು ಸೌಖ್ಯದಿಂದಲೂ ಪರಿಶುದ್ಧವಾಗಿಯೂ ಅಥವಾ ನ್ಯಾಯಯುತವಾಗಿಯೂ, ಅಥವಾ ಮತ್ತೊಂದು ಲೋಕದಲ್ಲಿ ಹೆಚ್ಚು ಸುಖವಾಗಿಯೂ ಬದುಕಲಾರೆ. ಈಗ ನೀನು ಮುಗ್ಧತೆಯಿಂದ ಹೋದರೆ, ಯಾತನೆಯಿಂದ ಕೂಡಿರುತ್ತೀಯೆ ಹೊರತು ಕೆಡುಕನ್ನು ಮಾಡದವನಾಗಿ ಅಲ್ಲ; ಒಂದು ಬಲಿಪಶುವಾಗಿ, ಆದರೆ ಕಾನೂನಿನದಲ್ಲ, ಮನುಷ್ಯರಿಂದ. ನಮ್ಮೊಡನೆ ನೀನು ಮಾಡಿಕೊಂಡ ಒಡಂಬಡಿಕೆ ಅಥವಾ ಒಪ್ಪಂದಗಳನ್ನು ಮುರಿದು, ಕೆಡುಕನ್ನು ಕೆಡುಕಿನಿಂದಲೇ, ಗಾಯುವನ್ನು ಗಾಯುದಿಂದಲೇ ಹಿಂದಿರುಗುಸುವುದಾದರೆ, ಕೊಂಚವಾದರೂ ಅಪಚಾರವೆಸಗಬಾರದವರಿಗೆ – ಅಂದರೆ ನಿನಗೆ, ನಿನ್ನ ಗೆಳೆಯರಿಗೆ, ಮತ್ತು ನಿನ್ನ ದೇಶಕ್ಕೆ ಹಾಗೂ ನಮಗೆ – ನೀನು ಅಪಚಾರವೆಸಗುವುದಾದರೆ, ನೀನು ಬದುಕಿರುವವರೆಗೂ ನಿನ್ನ ಬಗ್ಗೆ ನಾವು ಕೋಪಗೊಂಡಿರುತ್ತೇವೆ, ಮತ್ತು ಅಧೋಲೋಕದಲ್ಲಿರುವ ನಮ್ಮ

ಸೋದರರಾದ ಕಾನೂನುಗಳು ನಿನ್ನನ್ನು ಶತ್ರುವೆಂಬಂತೆ ಪರಿಗಣಿಸುತ್ತವೆ; ಯಾಕೆಂದರೆ ನೀನು ನಮ್ಮನ್ನು ನಾಶಗೊಳಿಸಲು ಗರಿಷ್ಠವಾಗಿ ಪ್ರಯತ್ನಿಸಿದ್ದೀಯೆ ಎಂದು ಅವರೆಲ್ಲರಿಗೂ ತಿಳಿಯುತ್ತದೆ.

'ಅನುಭಾವಿಯ ಕಿವಿಯಲ್ಲಿ ಕೊಳಲ ಧ್ವನಿಯಂತೆ ಈ ಧ್ವನಿಯು ನನ್ನ ಕಿವಿಗಳಲ್ಲಿ ಗುಂಂಯ್‌ಗುಡುವಂತೆ ತೋರುತ್ತದೆ' ಎಂದು ಅವನು ಹೇಳುತ್ತಾನೆ. ಅದಕ್ಕನುಗುಣವಾಗಿಯೇ ಅವನು ನಿರ್ಧರಿಸುತ್ತಾನೆ, ಅದೆಂದರೆ ಇಲ್ಲೇ ಇದ್ದು ಮರಣದಂಡನೆಗೆ ಒಳಗಾಗುವುದು.

'ಫೀಡೋ'ದಲ್ಲಿ ಕೊನೆಯ ಗಳಿಗೆ ಬರುತ್ತದೆ; ಅವನ ಬೇಡಿಗಳನ್ನು ಕಳಚುತ್ತಾರೆ, ತನ್ನ ಗೆಳೆಯರೊಡನೆ ಸ್ವತಂತ್ರವಾಗಿ ಮಾತನಾಡುವ ಅವಕಾಶ ನೀಡುತ್ತಾರೆ. ಅವಳ ಅಳು ತನ್ನ ಚರ್ಚೆಗೆ ಅಡ್ಡಿಯುಂಟುಮಾಡಬಾರದೆಂದು ಅಳುತ್ತಿರುವ ತನ್ನ ಹೆಂಡತಿಯನ್ನವನು ದೂರ ಕಳಿಸುತ್ತಾನೆ.

ತತ್ವಜ್ಞಾನ ಸತ್ವವನ್ನುಳ್ಳ ಯಾರೂ ಸಾವಿಗೆ ಹೆದರುವುದಿಲ್ಲವೆಂದೂ, ಬದಲಿಗೆ ಅದನ್ನು ಸ್ವಾಗತಿಸುವನೆಂದೂ ಅವನು ಆರಂಭಿಸಿದರೂ, ಅವನು ತನ್ನ ಜೀವವನ್ನು ತಾನೇ ತೆಗೆದುಕೊಳ್ಳುವುದಿಲ್ಲ, ಯಾಕೆಂದರೆ ಅದನ್ನು ಕಾನೂನುಬಾಹಿರವೆಂದು ಪರಿಗಣಿಸಲಾಗುತ್ತಿತ್ತು. ಆತ್ಮಹತ್ಯೆಯು ಏಕೆ ಕಾನೂನುಬಾಹಿರವೆಂದು ಸ್ನೇಹಿತರು ಕೇಳಿದಾಗ, ಆರ್ಫಿಕ್ ಸಿದ್ಧಾಂತಕ್ಕನುಗುಣವಾಗಿ ಉತ್ತರಿಸುತ್ತಾನೆ; ಅದು ಸರಿಸುಮಾರು ಕ್ರಿಶ್ಚಿಯನ್ ಹೇಳುವುದನ್ನೇ ಹೋಲುತ್ತದೆ: 'ಮನುಷ್ಯನಿಗೆ ಬಾಗಿಲು ಹಾಕುವ ಅಥವಾ ತೆಗೆದು ಓಡಿಹೋಗುವ ಸ್ವಾತಂತ್ರ್ಯವಿಲ್ಲದಂತೆ ಅವನು ಬಂಧಿತನಾಗಿದ್ದಾನೆಂದು ಗುಟ್ಟಾಗಿ ಪಿಸುಗುಟ್ಟುವ ಸಿದ್ಧಾಂತವೊಂದಿದೆ; ಇದು ನಾನು ಅರ್ಥಮಾಡಿಕೊಳ್ಳಲಾಗದ ರಹಸ್ಯ' ದೇವರು ಮತ್ತು ಮನುಷ್ಯನ ಸಂಬಂಧವನ್ನವನು ದನ ಮತ್ತು ದನದೊಡೆಯನ ಸಂಬಂಧಕ್ಕೆ ಹೋಲಿಸುತ್ತಾನೆ; ದನವು ದೂರ ಓಡಿಹೋಗಲು ಪ್ರಯತ್ನಿಸಿದರೆ ಒಡೆಯನು ಕೋಪಗೊಂಡು ಅದನ್ನು ಸುಮ್ಮನೆ ಬಿಡುವುದಿಲ್ಲ, ಹೀಗಾಗಿ 'ಮನುಷ್ಯನು ಕಾಯಬೇಕೇ ಹೊರತು, ನನ್ನನ್ನು ಈಗ ಕರೆಯುತ್ತಿರುವಂತೆ, ದೇವರು ಕರೆಯುವವರೆಗೂ ತನ್ನ ಜೀವವನ್ನವನು ತೊರೆಯಬಾರದು ಎಂದು ಹೇಳುವುದರಲ್ಲಿ ಅರ್ಥವಿರಬೇಕು.' ಅವನು ಸಾವಿನಿಂದಾಗಿ ದುಃಖಗೊಳ್ಳುವುದಿಲ್ಲ, ಯಾಕೆಂದರೆ ಅವನ ಶ್ರದ್ಧೆಯೆಂದರೆ, 'ಮೊದಲಿಗೆ, ವಿವೇಕಿಯೂ ಒಳ್ಳೆಯವನೂ ಆದ ಮತ್ತೊಬ್ಬ ದೇವನ ಬಳಿಗೆ ತಾನು ಹೋಗುತ್ತಿರುವ ಬಗ್ಗೆ (ಈ ವಿಷಯದಲ್ಲಿ ತಾನು ಬೇರಾವುದೇ ಅಂಥ ವಿಚಾರದ ಬಗ್ಗೆಯಂತೆ, ನಿಶ್ಚಿತವಾದ ಶ್ರದ್ಧೆಯುಳ್ಳವನು) ಮತ್ತು ಎರಡನೆಯದಾಗಿ, (ಈ ಬಗ್ಗೆ ನನಗೆ ಖಾತರಿಯಿಲ್ಲ) ನಾನು ಬಿಟ್ಟು ಹೋಗುತ್ತಿರುವವರಿಗಿಂತ ಗತಿಸಿದ ಮನುಷ್ಯರು ಉತ್ತಮರು. ಸಾಯುವವರಿಗೆ ಕೆಡುಕಿಗಿಂತ ಹೆಚ್ಚು ಒಳಿತಾದ ಏನೋ ಇನ್ನೂ ಉಳಿದಿರುತ್ತದೆ.'

ಸಾವು ಎಂದರೆ ದೇಹ ಮತ್ತು ಆತ್ಮಗಳ ಬೇರ್ಪಡುವಿಕೆ ಎಂದು ಸಾಕ್ರಟೀಸ್ ಹೇಳುತ್ತಾನೆ. ಇಲ್ಲಿ ನಾವು ಪ್ಲೇಟೋನ ವಾಸ್ತವ ಮತ್ತು ತೋರಿಕೆಗಳ ನಡುವಣ, ಆದರ್ಶರೂಪಗಳು ಮತ್ತು ಇಂದ್ರಿಯಗ್ರಾಹ್ಯ ವಸ್ತುಗಳು, ತಾರ್ಕಿಕತೆ ಮತ್ತು ಇಂದ್ರಿಯಗ್ರಾಹ್ಯ ದರ್ಶನ, ಆತ್ಮ ಮತ್ತು ದೇಹಗಳ ನಡುವಣ ದ್ವಂದ್ವಕ್ಕೆ ಬರುತ್ತೇವೆ. ಈ ಎಲ್ಲ ಯುಗ್ಮಗಳು ಪರಸ್ಪರ ಸಂಬಂಧವುಳ್ಳವು; ಎಲ್ಲ ಜೋಡಿಗಳಲ್ಲಿ ಮೊದಲನೆಯವು ವಾಸ್ತವತೆ ಮತ್ತು ಒಳ್ಳೆಯತನಗಳ ದೃಷ್ಟಿಯಿಂದ ಎರಡನೆಯವಕ್ಕಿಂತ ಶ್ರೇಷ್ಠವಾದವು. ಈ ದ್ವಂದ್ವದ ಸಹಜ ಪರಿಣಾಮವೆಂದರೆ ವಿರಕ್ತಿಪೂರ್ಣ ನೈತಿಕತೆ. ಕ್ರೈಸ್ತಮತಧರ್ಮವು ಈ ಸಿದ್ಧಾಂತವನ್ನು ಭಾಗಶಃ ಅಳವಡಿಸಿಕೊಂಡಿತು, ಆದರೆ ಎಂದಿಗೂ ಪೂರ್ಣವಾಗಲ್ಲ. ಅದರಲ್ಲಿ ಎರಡು ಅಡ್ಡಿಗಳು: ಮೊದಲನೆಯದು, ಕಾಣುವ ಜಗತ್ತಿನ ಸೃಷ್ಟಿ, ಪ್ಲೇಟೋ ಹೇಳಿದುದು ಸರಿಯಾದರೆ ಅದೊಂದು ಕೆಡುಕಿನ ಕಾರ್ಯವಾಗಿರಬಹುದು, ಹೀಗಾಗಿ ಸೃಷ್ಟಿಕರ್ತ ಒಳ್ಳೆಯವನಾಗಿರಲಾರ. ಎರಡನೆಯದು, ಸಂಪ್ರದಾಯನಿಷ್ಠ ಕ್ರೈಸ್ತಮತಧರ್ಮವು ಬ್ರಹ್ಮಚರ್ಯವು ಹೆಚ್ಚು ಶ್ರೇಯಸ್ಕರವಾದರೂ, ಎಂದಿಗೂ ಮದುವೆಯನ್ನು ಖಂಡಿಸಲಾಗಲಿಲ್ಲ. ಮ್ಯಾನಿಖೀಯನ್ನರು ಈ ಎರಡೂ ವಿಚಾರಗಳಲ್ಲಿ ದೃಢತೆಯಿಂದಿದ್ದರು.

ತತ್ತ್ವಜ್ಞಾನ, ವಿಜ್ಞಾನ ಮತ್ತು ಜನತೆಯ ಆಲೋಚನೆಗಳಿಗೆ ಸಾಮಾನ್ಯ ವಿಷಯವಾದ ಮನಸ್ಸು ಮತ್ತು ಭೌತವಸ್ತುಗಳ ನಡುವಣ ವ್ಯತ್ಯಾಸವು ಮತಧಾರ್ಮಿಕ ಮೂಲವೊಂದನ್ನು ಹೊಂದಿದೆ, ಅದು ಆರಂಭವಾದದ್ದು ಆತ್ಮ ಮತ್ತು ಮನಸ್ಸುಗಳ ನಡುವಣ ವ್ಯತ್ಯಾಸದಿಂದ. ಈಗಾಗಲೇ ನೋಡಿದಂತೆ, ಆರ್ಫಿಕ್ ತನ್ನನ್ನು ಭೂಮಿ ಹಾಗೂ ನಕ್ಷತ್ರಭರಿತ ಸ್ವರ್ಗದ ಮಗನೆಂದು ಕರೆದುಕೊಳ್ಳುತ್ತಾನೆ; ಭೂಮಿಯಿಂದ ದೇಹ ಬಂದಿದ್ದರೆ, ಸ್ವರ್ಗದಿಂದ ಆತ್ಮ ಬಂದಿದೆ. ಈ ಸಿದ್ಧಾಂತವನ್ನೇ ಪ್ಲೇಟೋ ತತ್ತ್ವಜ್ಞಾನದ ಮೂಲಕ ಪ್ರತಿಪಾದಿಸುವುದು.

'ಫೀಡೋ'ದಲ್ಲಿ ಸಾಕ್ರಟೀಸ್ ತನ್ನ ಸಿದ್ಧಾಂತವನ್ನು ಒಮ್ಮೆಗೇ ವಿರಕ್ತಿಸೂಚಕತೆಯಿಂದ ಬೆಳೆಸಲು ತೊಡಗುತ್ತಾನೆ; ಆದರೆ ಅವನ ವಿರಕ್ತಿಯು ಹದ ಮತ್ತು ಸೌಮ್ಯತೆಗಳಿಂದ ಕೂಡಿದುದು. ತತ್ತ್ವಜ್ಞಾನಿಯು ಸಾಮಾನ್ಯ ಸುಖಗಳಿಂದ ಸಂಪೂರ್ಣವಾಗಿ ವಿಮುಖವಾಗಿರಬೇಕೆಂದು ಅವನು ಹೇಳುವುದಿಲ್ಲ, ಆದರೆ ಅವನು ಅದಕ್ಕೆ ದಾಸನಾಗಬಾರದೆನ್ನುತ್ತಾನೆ. ತತ್ತ್ವಜ್ಞಾನಿಯು ತಿನ್ನುವುದು ಕುಡಿಯುವುದರ ಬಗ್ಗೆ ಯೋಚಿಸಬೇಕಾದ್ದಿಲ್ಲ, ಆದರೆ ಅವನು ಆವಶ್ಯಕವಾದಷ್ಟನ್ನು ಮಾತ್ರ ತಿನ್ನಬೇಕು; ಉಪವಾಸದ ಸೂಚನೆಯೇನಿಲ್ಲ. ಅಲ್ಲದೆ, ಸಾಕ್ರಟೀಸ್ ವೈನ್ ಬಗ್ಗೆ ಅನಾದರದಿಂದಿದ್ದರೂ, ಸಂದರ್ಭ ಬಂದಾಗ, ಬೇರೆಲ್ಲರಿಗಿಂತ ಹೆಚ್ಚು ಕುಡಿಯುತ್ತಿದ್ದನೆಂದೂ, ಆದರೆ ಎಂದೂ ಮತ್ತಿಗೆ ಒಳಗಾಗುತ್ತಿರಲಿಲ್ಲವೆಂದೂ ಹೇಳುತ್ತಾರೆ. ಅವನು ಖಂಡಿಸಿದುದು ಕುಡಿಯುವುದನ್ನಲ್ಲ, ಕುಡಿಯುವುದರಲ್ಲಿ

ಸಂತೋಷ ಕಾಣುವುದನ್ನು. ಅದರಂತೆಯೇ, ತತ್ವಜ್ಞಾನಿಯು ಪ್ರಣಯದ ಸುಖಕ್ಕೆ, ಅಥವಾ ದುಬಾರಿ ಉಡುಪು ಅಥವಾ ಪಾದರಕ್ಷೆಗಾಗಲೀ, ಮನುಷ್ಯನ ಇತರ ಆಭರಣಗಳಿಗಾಗಲೀ ಬೆಲೆ ಕೊಡಬಾರದು. ಅವನು ಕೇವಲ ಆತ್ಮದ ಬಗ್ಗೆ ಆಲೋಚಿಸಬೇಕು, ದೇಹದ ಬಗ್ಗೆಯಲ್ಲ. 'ತನಗೆ ಸಾಧ್ಯವಾದಷ್ಟೂ ಮಟ್ಟಿಗೆ ಅವನು ದೇಹದಿಂದ ವಿಮುಖನಾಗಿ ಆತ್ಮದತ್ತ ಗಮನ ಹರಿಸಬೇಕು.'

ಈ ಸಿದ್ಧಾಂತವು ಜನಜನಿತಗೊಂಡರೆ ವಿರಕ್ತಿಪರವಾಗುವುದು ಸುಸ್ಪಷ್ಟವಾಗಿದೆ: ಆದರೆ ಅದರ ಉದ್ದೇಶ ಅದಲ್ಲ, ಅಂದರೆ ವಿರಕ್ತನಾಗಿಸುವುದಲ್ಲ. ತತ್ವಜ್ಞಾನಿಯು ಇಂದ್ರಿಯ ಸುಖಗಳಿಂದ ದೂರನಾಗುವುದಿಲ್ಲ, ಆದರೆ ಇತರ ವಿಷಯಗಳ ಬಗ್ಗೆ ಯೋಚಿಸುತ್ತಿರುತ್ತಾನೆ. ತಮ್ಮ ಊಟವನ್ನೇ ಮರೆಯುವ ಅಥವಾ, ಕನಿಷ್ಠ ಪಕ್ಷ, ಊಟವಾದ ಮೇಲೆ ಪುಸ್ತಕವನ್ನೋದುವ ಕೆಲವು ತತ್ವಜ್ಞಾನಿಗಳನ್ನು ನಾನು ನೋಡಿದ್ದೇನೆ. ಇವರು ಪ್ಲೇಟೋ ಹೇಳಿದಂತೆ ನಡೆಯುತ್ತಿರುತ್ತಾರೆ: ನೈತಿಕ ಪ್ರಯತ್ನದಿಂದ ಹೊಟ್ಟೆಬಾಕತನವನ್ನವರು ದೂರವಿಡುವುದಿಲ್ಲ, ಆದರೆ ಇತರ ವಿಷಯಗಳಲ್ಲಿ ಹೆಚ್ಚು ಆಸಕ್ತರಾಗಿರುತ್ತಾರೆ. ಅಂದರೆ ತತ್ವಜ್ಞಾನಿಯು, ಅದೇ ಮರಗುಳಿತನದಿಂದ, ಮದುವೆಯಾಗಬೇಕು, ಮಕ್ಕಳನ್ನು ಹೆತ್ತು ಸಾಕಬೇಕು; ಆದರೆ ಸ್ತ್ರೀವಿಮೋಚನೆಯಿಂದಾಗಿ ಇದು ಕಷ್ಟಕರವಾಗಿದೆ. ಕ್ಸಾಂಥಿಪ್ ಚಂಡಿಯಾಗಿದ್ದುದರಲ್ಲಿ ಆಶ್ಚರ್ಯಕರವಾದುದೇನೂ ಇಲ್ಲ.

ಮುಂದುವರಿಯುತ್ತ, 'ಸುಖವೆಂದರೇನೆಂದರಿಯದ ಮತ್ತು ದೇಹಸುಖದಲ್ಲಿ ಭಾಗಿಯಾಗದ' ವ್ಯಕ್ತಿಗೆ ಬದುಕುವುದು ಉಪಯುಕ್ತವಲ್ಲವೆಂದು ಯೋಚಿಸದ ಹಾಗೆ ತತ್ವಜ್ಞಾನಿಗಳು ಆತ್ಮವನ್ನು ದೇಹದಿಂದ ಬೇರ್ಪಡಿಸುವ ಪ್ರಯತ್ನ ಮಾಡಬೇಕೆಂದೂ ಸಾಕ್ರಟೀಸ್ ಹೇಳುತ್ತಾನೆ. ಪ್ರಾಯಶಃ ಮರೆಗುಳಿಯಾಗಿ ಪ್ಲೇಟೋ ಕೆಲವು ಬಗೆಯ ನೀತಿವಾದಿಗಳನ್ನು ಎದುರಿಸಲು, ದೇಹಸುಖಗಳು ಮಾತ್ರವೇ ಗಣನೀಯವಾದವು ಎಂದು ಹೇಳಿದ. ಇಂದ್ರಿಯಸುಖವನ್ನರಸದವನು ಸಂಪೂರ್ಣವಾಗಿ ಸುಖವನ್ನು ತೊರೆಯಬೇಕೆಂದು ಹೇಳಿ ಈ ನೀತಿವಾದಿಗಳು ಹೇಳಲಾಗದಷ್ಟು ಹಾನಿಯನ್ನುಂಟುಮಾಡಿದ್ದಾರೆ. ದೇಹ ಮತ್ತು ಮನಸ್ಸುಗಳ ಭೇದವನ್ನು ಒಪ್ಪಿಕೊಳ್ಳಬಹುದಾದಷ್ಟರಲ್ಲಿ, ಹೀನ ಸುಖಗಳು ಮತ್ತು ಉನ್ನತ ಸುಖಗಳು ಮಾನಸಿಕವಾದವು – ಉದಾಹರಣೆಗೆ, ಹೊಟ್ಟೆಕಿಚ್ಚು, ನಾನಾ ಬಗೆಯ ಕ್ರೌರ್ಯ ಮತ್ತು ಅಧಿಕಾರದಾಹ. ಮಿಲ್ಟನ್‌ನ ಸೈತಾನನು ದೇಹಹಿಂಸೆಯಿಂದ ಮೇಲೆದ್ದು ತನಗೆ ಸುಖನೀಡುವ ರೀತಿಯ ವಿನಾಶದತ್ತ, ಅಂದರೆ ಮನಸ್ಸಿನ ನಾಶದತ್ತ, ತನ್ನ ಗಮನವನ್ನೆಲ್ಲ ಹರಿಸುತ್ತಾನೆ. ಅನೇಕ ಮಂದಿ ದೊಡ್ಡ ಧರ್ಮಬೋಧಕರು ಇಂದ್ರಿಯಸುಖವನ್ನು ಬಿಟ್ಟು, ಇತರವುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲಾಗದೆ, ಅದಮ್ಯ ಅಧಿಕಾರದಾಹಕ್ಕೊಳಗಾಗಿದ್ದಾರೆ; ಇದು ಅವರನ್ನು, ಮತಧರ್ಮದ ನೆವದಿಂದ,

ಭಯಂಕರ ಕ್ರೌರ್ಯ ಹಾಗೂ ಪೀಡನೆಗಳತ್ತ ಒಯ್ದಿದೆ. ನಮ್ಮ ಕಾಲದಲ್ಲಿಯೇ, ಹಿಟ್ಲರ್ ಈ ಪಂಗಡಕ್ಕೆ ಸೇರಿದವನು: ಇಂದ್ರಿಯಸುಖಗಳು ಅವನಿಗೆ ಎಷ್ಟಕ್ಕೂ ಮುಖ್ಯವೆನಿಸಲಿಲ್ಲ. ದೇಹದ ನಿರಂಕುಶತೆಯಿಂದ ಬಿಡುಗಡೆಗೊಳ್ಳುವುದು ಹಿರಿತನಕ್ಕೆ ಕಾರಣವಾಗುತ್ತದೆ, ಆದರೆ ಪಾಪದ ಹಿರಿತನದಷ್ಟೇ ಪುಣ್ಯದ ಹಿರಿತನಕ್ಕೂ.

ಇದು ದಾರಿ ಬಿಟ್ಟ ಚರ್ಚೆ; ಈಗ ನಾವು ಸಾಕ್ರಟೀಸ್ ಕಡೆಗೆ ಮರಳೋಣ.

ಪ್ಲೇಟೋ (ಸರಿಯೋ ತಪ್ಪೋ) ಸಾಕ್ರಟೀಸ್‌ನದೆಂದು ಹೇಳುವ ಮತಧರ್ಮದ ಬೌದ್ಧಿಕ ಮುಖದ ಕಡೆಗೆ ನಾವೀಗ ಬರುತ್ತೇವೆ. ದೇಹವು ಜ್ಞಾನಾನ್ವೇಷಣೆಗಿರುವ ಒಂದು ಅಡ್ಡಿ, ಹಾಗೂ ನೋಟ ಮತ್ತು ಕೇಳುವಿಕೆಗಳು ನಿಖರವಲ್ಲದ ಸಾಕ್ಷಿಗಳು ಎಂದದು ಹೇಳುತ್ತದೆ. ನಿಜವಾದ ಅಸ್ತಿತ್ವವು, ಆತ್ಮಕ್ಕೆ ತಿಳಿಯುವುದೇ ಆದರೆ, ಆಲೋಚನೆಯಲ್ಲಿ ತೋರ್ಪಡಿಸಿಕೊಳ್ಳುತ್ತದೆಯೇ ಹೊರತು ಇಂದ್ರಿಯಗಳಲ್ಲಲ್ಲ. ಒಂದು ಕ್ಷಣ, ಈ ಸಿದ್ಧಾಂತದ ಸೂಚ್ಯಾರ್ಥಗಳನ್ನು ಗಮನಿಸೋಣ. ಪ್ರಯೋಗಾತ್ಮಕ ಜ್ಞಾನವನ್ನದು, ಇತಿಹಾಸ ಮತ್ತು ಭೂಗೋಳಗಳನ್ನೊಳಗೊಡಂತೆ, ಸಂಪೂರ್ಣವಾಗಿ ತಿರಸ್ಕರಿಸುತ್ತದೆ. ಒಂದು ಕಾಲಕ್ಕೆ ಅಥೆನ್ಸ್ ಇತ್ತೇ ಅಥವಾ ಸಾಕ್ರಟೀಸ್ ಎಂಬ ವ್ಯಕ್ತಿಯೊಬ್ಬ ಇದ್ದನೇ ಎಂಬುದನ್ನಾಗಲೀ ನಾವು ತಿಳಿದುಕೊಳ್ಳಲೂ ಸಾಧ್ಯವಾಗುವುದಿಲ್ಲ; ಅವನ ಸಾವು, ಸಾಯುವಾಗ ಅವನು ತೋರುವ ಸ್ಥೈರ್ಯ – ಇವುಗಳೂ ತೋರಿಕೆಯ ಜಗತ್ತಿಗೇ ಸೇರುತ್ತವೆ. ನೋಟ ಮತ್ತು ಕೇಳುವಿಕೆಗಳ ಮೂಲಕ ಮಾತ್ರ ಆ ಬಗ್ಗೆ ಏನನ್ನಾದರೂ ನಾವು ತಿಳಿದುಕೊಳ್ಳಬಹುದು, ಆದರೆ ನಿಜವಾದ ತತ್ತ್ವಜ್ಞಾನಿಯು ನೋಟ ಮತ್ತು ಕೇಳುವಿಕೆಗಳನ್ನು ತಿರಸ್ಕರಿಸುತ್ತಾನೆ. ಆಗ ಅವನಿಗೆ ಏನುಳಿದಂತಾಯಿತು? ಮೊದಲು, ತರ್ಕ ಮತ್ತು ಗಣಿತ: ಆದರೆ ಇವು ಆಧಾರಕಲ್ಪನಾಧಾರಿತವಾದುವು, ವಾಸ್ತವ ಜಗತ್ತಿನ ಬಗೆಗಿನ ಯಾವುದೇ ಅಭಿಪ್ರಾಯವನ್ನು ಖಂಡಿತವಾಗಿ ಸಮರ್ಥಿಸಲಾರವು. ಮುಂದಿನ ಹೆಜ್ಜೆ – ಇದು ತುಂಬ ಮಹತ್ವಪೂರ್ಣವಾದುದು –ಒಳಿತರ ಆದರ್ಶರೂಪವನ್ನು ಆಧರಿಸುತ್ತದೆ. ಈ ಆಲೋಚನೆಗೆ ಬಂದ ಮೇಲೆ, ತತ್ತ್ವಜ್ಞಾನಿಗೆ ವಾಸ್ತವವು ಒಳಿತು ಎಂಬ ಅರಿವು ಉಂಟಾಗಿರುತ್ತದೆಂದು ಭಾವಿಸಲಾಗುತ್ತದೆ, ಹೀಗೆ ಆದರ್ಶರೂಪಗಳ ಜಗತ್ತು ವಾಸ್ತವ ಜಗತ್ತನ್ನು ಕಲ್ಪಿಸಿಕೊಳ್ಳುವ ಸಾಮರ್ಥ್ಯವನ್ನು ಅವನು ಪಡೆಯುತ್ತಾನೆ. ವಾಸ್ತವ ಮತ್ತು ಒಳಿತುಗಳ ಅನನ್ಯತೆಗಳನ್ನು ಸಾಬೀತುಪಡಿಸುವ ವಾದಗಳನ್ನು ಮುಂದಿನ ತತ್ತ್ವಜ್ಞಾನಿಗಳು ಹೊಂದಿದ್ದರು, ಆದರೆ ಪ್ಲೇಟೋ ಅದನ್ನು ಸ್ವಯಂವೇದ್ಯವೆಂದು ಭಾವಿಸಿದಂತೆ ಕಾಣುತ್ತದೆ. ಅವನನ್ನು ಅರ್ಥಮಾಡಿಕೊಳ್ಳುವ ಬಯಕೆ ಇರುವುದಾದರೆ, ಈ ಊಹನೆಯು ಸಮರ್ಥನೀಯವೆಂದು ಕಲ್ಪನಾತ್ಮಕವಾಗಿ ಅಂದುಕೊಳ್ಳಬೇಕಾಗುತ್ತದೆ.

ಮನಸ್ಸು ತಾನಾಗಿ ಒಗ್ಗೂಡಿರುವಾಗ ಆಲೋಚನೆಯು ಅತ್ಯುತ್ತಮವೆಂದೂ, ಧ್ವನಿಗಳಿಂದಲಾಗಲೀ ನೋಟಗಳಿಂದಾಗಲೀ ನೋವು–ನಲಿವುಗಳಿಂದಲಾಗಲೀ ಅದಕ್ಕೆ

ಅಡ್ಡಿಯಾಗಲಾರದು, ದೇಹದಿಂದ ಸ್ವತಂತ್ರವಾಗಿ ಅದು ಸತ್ಯದ ಅಸ್ತಿತ್ವವನ್ನು ಕುರಿತು ಮಗ್ನವಾಗಿರುತ್ತದೆಂದೂ; 'ಈ ವಿಷಯದಲ್ಲಿ ತತ್ತ್ವಜ್ಞಾನಿಯು ದೇಹವನ್ನು ಗೌರವಿಸಲಾರ' ಎಂದೂ ಸಾಕ್ರಟೀಸ್ ಹೇಳುತ್ತಾನೆ. ಈ ಅಂಶದಿಂದ ಸಾಕ್ರಟೀಸ್ ಆದರ್ಶರೂಪಗಳ ಅಥವಾ ಸತ್ವಗಳ ಸಿದ್ಧಾಂತದೆಡೆಗೆ ಸಾಗುತ್ತಾನೆ. ಆತ್ಯಂತಿಕ ನ್ಯಾಯ, ಆತ್ಯಂತಿಕ ಸೌಂದರ್ಯ ಮತ್ತು ಆತ್ಯಂತಿಕ ಒಳಿತುಗಳಿವೆ, ಆದರೆ ಅವು ಕಣ್ಣಿಗೆ ಕಾಣಿಸುವುದಿಲ್ಲ. 'ನಾನು ಇವುಗಳ ಬಗ್ಗೆಯಷ್ಟೇ ಹೇಳುವುದಿಲ್ಲ, ಆದರೆ ಆತ್ಯಂತಿಕ ಹಿರಿತನ, ಆರೋಗ್ಯ ಮತ್ತು ಶಕ್ತಿಗಳ, ಹಾಗೂ ಎಲ್ಲದರ ಸಹಜ ಸ್ವರೂಪದ ಸತ್ವದ ಬಗ್ಗೆಯೂ ಹೇಳುತ್ತೇನೆ.' ಅವೆಲ್ಲವನ್ನೂ ಬೌದ್ಧಿಕ ದರ್ಶನದಿಂದ ಮಾತ್ರ ಕಾಣಲು ಸಾಧ್ಯ. ಹೀಗಾಗಿ, ನಾವು ದೇಹದಿಂದ ಕೂಡಿರುವಾಗ, ಹಾಗೂ ಆತ್ಮವು ದೇಹದ ಕೆಡುಕುಗಳಿಂದ ಮಲಿನಗೊಂಡಿರುವಾಗ ನಮ್ಮ ಸತ್ಯದ ಹಂಬಲವು ತೃಪ್ತವಾಗುವುದಿಲ್ಲ.

ಈ ದೃಷ್ಟಿಕೋನವು, ಜ್ಞಾನಸಾಧನೆಯಲ್ಲಿ ವೈಜ್ಞಾನಿಕ ಪರಿವೀಕ್ಷಣೆಗಳು ಹಾಗೂ ಪ್ರಯೋಗಗಳ ಸಾಧನಗಳನ್ನು ಹೊರತುಪಡಿಸುತ್ತದೆ. ಪ್ರಯೋಗಶೀಲನ ಮನಸ್ಸು 'ಒಗ್ಗೂಡಿರುವು'ದಿಲ್ಲ, ಮತ್ತು ಧ್ವನಿ ಹಾಗೂ ನೋಟಗಳನ್ನು ದೂರೀಕರಿಸುವ ಗುರಿ ಹೊಂದಿರುವುದಿಲ್ಲ. ಪ್ಲೇಟೋ ಶಿಫಾರಸು ಮಾಡುವ ಮಾರ್ಗದಿಂದ ಅನುಸರಿಸಬಹುದಾದ ಎರಡು ಬಗೆಯ ಮಾನಸಿಕ ಚಟುವಟಿಕೆಗಳೆಂದರೆ ಗಣಿತ ಮತ್ತು ಆನುಭಾವಿಕ ಒಳನೋಟ. ಪ್ಲೇಟೋ ಮತ್ತು ಪೈಥಾಗೊರಾಸ್‌ರಲ್ಲಿ ಈ ಎರಡೂ ಹೇಗೆ ಆಪ್ತವಾಗಿ ಸೇರಿರುತ್ತದೆ ಎಂಬುದನ್ನಿದು ವಿವರಿಸುತ್ತದೆ.

ಅನುಭವೈಕವಾದಿಗಳಿಗೆ ದೇಹವು ಚಿರಂತನ ವಾಸ್ತವದೊಡನೆ ನಾವು ಸಂಪರ್ಕಗೊಳ್ಳುವಂತೆ ಮಾಡುವಂತಹುದು. ಆದರೆ ಇದು ಗಾಜಿನ ಮೂಲಕ ಕುರುಡಾಗಿ ನೋಡುವಂತೆ ಮಾಡುವ ಹಾಗೂ ಕಾಮನೆಗಳ ಮೂಲಕವಾಗಿ ಜ್ಞಾನಾನ್ವೇಷಣೆ ಮತ್ತು ಸತ್ಯದರ್ಶನಗಳಿಂದ ನಮ್ಮನ್ನು ವಿಮುಖಗೊಳಿಸುವ ಇಮ್ಮಡಿ ಕೆಡುಕು. ಒಂದಷ್ಟು ಉದ್ಧೃತಗಳು ಇದನ್ನು ಸ್ಪಷ್ಟಪಡಿಸುತ್ತದೆ:

> **ಆಹಾರವನ್ನು ಬಯಸುವ ಕಾರಣದಿಂದಾಗಿ ದೇಹವು ಕೊನೆಯಿಲ್ಲದ ತೊಂದರೆಗೆ ಎಡೆಯೀಯುತ್ತದೆ; ಅದು ರೋಗಗಳಿಗೊಳಗಾಗುವ ಸಂಭವವಿದ್ದು ಸತ್ಯಾನ್ವೇಷಣೆಯಲ್ಲಿ ನಮ್ಮನ್ನು ಆವರಿಸಿ ಅಡ್ಡಿಪಡಿಸುತ್ತದೆ; ಅದು ನಮ್ಮಲ್ಲಿ ಪ್ರೀತಿ ಕಾಮನೆ ಭಯ ಮತ್ತು ಎಲ್ಲ ಬಗೆಯ ಭ್ರಮೆಗಳನ್ನು ಮತ್ತು ಕೊನೆಯಿಲ್ಲದ ಮೂರ್ಖತನವನ್ನು ತುಂಬುತ್ತದೆ; ಜನರು ಹೇಳುವ ಹಾಗೆ ನಮ್ಮ ಆಲೋಚನಾ ಸಾಮರ್ಥ್ಯವನ್ನೆಲ್ಲ ಬರಿದುಗೊಳಿಸುತ್ತದೆ. ಯುದ್ಧಗಳು, ಹೋರಾಟಗಳು, ಮತ್ತು ಪಂಗಡಗಳು ಹೇಗೆ ಉಂಟಾಗುತ್ತವೆ? ದೇಹ ಮತ್ತು ದೇಹದ ಕಾಮನೆಗಳಿಂದಲ್ಲದೆ ಬೇರೆಲ್ಲಿಂದ? ಯುದ್ಧಗಳಾಗುವುದು ಹಣದ ಆಸೆಯಿಂದ, ಹಣವನ್ನು ಗಳಿಸಬೇಕಾದುದು ದೇಹಕ್ಕಾಗಿ, ಅದರ ಪೋಷಣೆಗಾಗಿ. ಈ ಎಲ್ಲ**

ತೊಂದರೆಗಳಿಂದಾಗಿ ನಮಗೆ ತತ್ವಜ್ಞಾನದ ಕಡೆ ಗಮನ ನೀಡಲು ಕಾಲವೇ ಉಳಿಯುವುದಿಲ್ಲ, ಮತ್ತು ಕೊನೆಯದು ಹಾಗೂ ಎಲ್ಲಕ್ಕಿಂತ ಕ್ಷುಲ್ಲಕವಾದುದು ಎಂದರೆ, ವಿರಾಮದಲ್ಲಿ ಒಂದಷ್ಟು ಕಾಲವನ್ನು ಚಿಂತನೆಗೆ ತೊಡಗುವಂತೆ ಮಾಡಲು ದೇಹವು ಸದಾ ನಮ್ಮಲ್ಲಿ ನುಸುಳಿ, ನಮ್ಮ ಅನಾವರಣದಲ್ಲಿ ಕ್ಷೋಭೆ ಮತ್ತು ಗೊಂದಲಗಳನ್ನು ಸೃಷ್ಟಿಸುತ್ತದೆ. ನಮ್ಮನ್ನು ಸತ್ಯದರ್ಶನದಿಂದ ದೂರವುಳಿಯುವಂತೆ ಮಾಡಿ ಅಚ್ಚರಿಯುಂಟುಮಾಡುತ್ತದೆ. ನಮಗೆ ಯಾವುದರ ಬಗ್ಗೆಯಾದರೂ ವಾಸ್ತವ ಜ್ಞಾನವಿರುವುದಾದರೆ ದೇಹವನ್ನು ತೊರೆಯಬೇಕು ಎಂಬುದನ್ನು ಅನುಭವವು ರುಜುವಾತು ಮಾಡಿದೆ. ಆತ್ಮವು ವಸ್ತುಗಳನ್ನು ಹಾಗೆಯೇ ಕಾಣಬೇಕು; ಆ ಬಳಿಕವಷ್ಟೇ ನಮಗೆ ಬಯಸಿದ ಜ್ಞಾನವು ದೊರೆಯುವುದು, ಇದರಿಂದಾಗಿ ಅವುಗಳ ಬಗ್ಗೆ ನಮಗೆ ಒಲವಿದೆ ಎಂದು ಹೇಳಬೇಕು; ಬದುಕಿರುವ ಅವಧಿಯಲ್ಲಲ್ಲ, ಸಾವಿನ ಬಳಿಕ. ಯಾಕೆಂದರೆ ದೇಹದೊಡನೆ ಇರುವ ಆತ್ಮಕ್ಕೆ ಪರಿಶುದ್ಧ ಜ್ಞಾನ ದೊರೆಯಲಾರದು, ಬೇಕಾದರೆ ಜ್ಞಾನವನ್ನು ಸಾವಿನ ಬಳಿಕವಷ್ಟೇ ಪಡೆಯಬೇಕು .. .. ಈ ರೀತಿ ದೇಹದ ಬಗೆಗಿನ ಮೂರ್ಖತನವನ್ನು ನಿವಾರಿಸಿಕೊಂಡ ಬಳಿಕ ನಾವು ಪರಿಶುದ್ಧಗೊಳ್ಳುತ್ತೇವೆ, ಪರಿಶುದ್ಧವಾದುದರೊಡನೆ ಸಂಭಾಷಿಸುತ್ತೇವೆ, ಎಲ್ಲೆಡೆಯೂ ನಮ್ಮ ಬಗ್ಗೆ ಬೆಳ್ಳಂಬೆಳಕನ್ನು ಪಡೆಯುತ್ತೇವೆ, ಅದು ಸತ್ಯದ ಬೆಳಕಲ್ಲದೆ ಬೇರಲ್ಲ. ಅಪರಿಶುದ್ಧರಾದವರು ಪರಿಶುದ್ಧವಾದವುಗಳ ಬಳಿ ಬರಲು ಅನುಮತಿಯಿರುವುದಿಲ್ಲ .. .. ಪರಿಶುದ್ಧಗೊಳ್ಳುವುದೆಂದರೆ ಆತ್ಮವನ್ನು ದೇಹದಿಂದ ಬೇರ್ಪಡಿಸುವುದಲ್ಲದೆ ಬೇರೇನು? .. .. ಆತ್ಮವು ಹೀಗೆ ದೇಹದಿಂದ ಬೇರ್ಪಟ್ಟು ಬಿಡುಗಡೆಗೊಳ್ಳುವುದನ್ನು ಸಾವು ಎನ್ನಲಾಗುತ್ತದೆ .. .. ನಿಜವಾದ ತತ್ವಜ್ಞಾನಿಗಳು ಮತ್ತು ಅವರು ಮಾತ್ರವೇ ಸದಾ ಆತ್ಮದ ಬಿಡುಗಡೆಯನ್ನು ಬಯಸುವವರು. ಬೇರೆಲ್ಲವನ್ನೂ ವಿನಿಮಯ ಮಾಡಿಕೊಳ್ಳಬೇಕಾದ ಒಂದು ನಾಣ್ಯವಿದೆ, ಅದೆಂದರೆ ವಿವೇಕ.

ಅನುಭಾವದ ಮೂಲಪುರುಷರು ನಿಜವಾದ ಅರ್ಥವನ್ನು ಬಲ್ಲವರಾಗಿ ಕಾಣಿಸುತ್ತಾರೆ, ವಿವೇಕಹೀನವಾದುದನ್ನು ಅವರು ಮಾತಾಡುತ್ತಿರಲಿಲ್ಲ, ಪರಿಶುದ್ಧಗೊಳ್ಳದ ಮತ್ತು ದೀಕ್ಷಾಸ್ನಾನ ಹೊಂದದವನು ಅಧೋಲೋಕಕ್ಕೆ ಹೋದಾಗ ಚರ್ಮದ ಮೇಲೆ ಮಲಗುತ್ತಾನೆ, ಆದರೆ ಪರಿಶುದ್ಧಗೊಂಡು ದೀಕ್ಷಾಸ್ನಾನ ಪಡೆದ ನಂತರ ಬಂದವನು ದೇವತೆಗಳ ಜೊತೆ ಮಲಗುತ್ತಾನೆ ಎಂಬ ರೂಪಕದ ಮೂಲಕ ಹಿಂದೆಯೇ ಅವರು ಅದನ್ನು ಹೇಳಿದ್ದರು. ಅನುಭಾವಿಕತೆಯಲ್ಲಿ ಹೇಳಿರುವಂತೆ, ಹಲವರು ಧ್ವಜದಂಡವನ್ನು ಹೊರುವವರು, ಆದರೆ ಅನುಭಾವಿಗಳು ಕೆಲವರು, ಅಂದರೆ ನಾನು ಈ ಶಬ್ದಗಳನ್ನು

ವ್ಯಾಖ್ಯಾನಿಸುವುದೆಂದರೆ, ಅವರೇ ನಿಜವಾದ ತತ್ವಜ್ಞಾನಿಗಳು.

ಈ ಭಾಷೆ ಪೂರ್ತಿ ರಹಸ್ಯಪೂರ್ಣವಾಗಿದೆ, ಅನುಭಾವಿಕತೆಯಿಂದ ಸಾಧಿತವಾಗಿದೆ. 'ಪರಿಶುದ್ಧತೆ' ಎಂಬುದು ಆರ್ಫಿಕ್ ಪರಿಕಲ್ಪನೆ. ಮೂಲತಃ ಅದೊಂದು ಆಚರಣೆ, ಆದರೆ ಪ್ಲೇಟೋಗೆ ಅದು ದೇಹ ಮತ್ತದರ ಆವಶ್ಯಕತೆಗಳ ಗುಲಾಮತನದಿಂದ ಬಿಡುಗಡೆ. ಯುದ್ಧಗಳು ಹಣದ ಆಸೆಯಿಂದ ಆಗುತ್ತವೆ, ಮತ್ತು ಹಣವು ದೇಹದ ಬಳಕೆಗಾಗಿರುವುದು ಎಂದು ಅವನು ಹೇಳುವುದು ಕುತೂಹಲಕರವಾಗಿದೆ. ಇದರಲ್ಲಿನ ಮೊದಲ ಅಭಿಪ್ರಾಯವು ಮಾರ್ಕ್ಸ್‌ನ ಅಭಿಪ್ರಾಯವೇ ಆಗಿದೆ, ಆದರೆ ಎರಡನೆಯದು ಬೇರೆಯದೇ ದೃಷ್ಟಿಕೋನವುಳ್ಳದು. ತನ್ನ ಬಯಕೆಗಳನ್ನು ಕನಿಷ್ಠಗೊಳಿಸಿಕೊಂಡರೆ ಮನುಷ್ಯನು ಸ್ವಲ್ಪ ಹಣದಿಂದ ಜೀವನ ನಡೆಸಬಹುದು ಎಂಬುದು ಪ್ಲೇಟೋನ ಅಭಿಪ್ರಾಯ, ಮತ್ತು ಇದು ಸಮಂಜಸವಾಗಿಯೂ ಇದೆ. ಆದರೆ ತತ್ವಜ್ಞಾನಿಗೆ ದೈಹಿಕ ಶ್ರಮದಿಂದ ವಿನಾಯಿತಿ ನೀಡಬೇಕೆಂದೂ ಅವನು ಹೇಳುತ್ತಾನೆ, ಆದರೆ ಅವನು ಇತರರ ದುಡಿಮೆಯಿಂದ ಬಂದ ಸಂಪತ್ತನ್ನು ಅನುಭವಿಸಬೇಕು. ತೀರ ಬಡ ಅವಕಾಶದಲ್ಲಿ ತತ್ವಜ್ಞಾನಿಗಳೇ ಇರುವ ಸಂಭವವಿಲ್ಲ. ಪೆರಿಕ್ಲೀಸ್ ಕಾಲದ ಆಥೆನ್ಸ್ ಸಾಮ್ರಾಜ್ಯಶಾಹಿಯು ಅಥೀನಿಯನ್ನರು ತತ್ವಜ್ಞಾನವನ್ನು ಅಧ್ಯಯನ ಮಾಡುವ ಅವಕಾಶ ಮಾಡಿತು. ಸ್ಥೂಲವಾಗಿ ಹೇಳಬೇಕೆಂದರೆ, ಬೌದ್ಧಿಕ ಸಾಮಗ್ರಿಗಳು ಬಹುತೇಕ ಐಹಿಕ ಸಾಮಗ್ರಿಗಳಷ್ಟೇ ದುಬಾರಿಯಾದುವು, ಮತ್ತು ಆರ್ಥಿಕ ಪರಿಸ್ಥಿತಿಗಳಿಂದ ಸ್ವತಂತ್ರವಾದುವು. ವಿಜ್ಞಾನಕ್ಕಾಗಿ ಗ್ರಂಥಾಲಯಗಳು, ಪ್ರಯೋಗಾಲಯಗಳು, ದೂರದರ್ಶಕಗಳು, ಸೂಕ್ಷ್ಮದರ್ಶಕಗಳು ಮುಂತಾದುವು ಬೇಕು, ವಿಜ್ಞಾನಿಗಳನ್ನು ಇತರರ ದುಡಿಮೆಯಿಂದ ಪೋಷಿಸಬೇಕು. ಆದರೆ ಅನುಭಾವಿಗೆ ಇದೆಲ್ಲ ಮೂರ್ಖತನದ್ದು. ಇಂಡಿಯದ ಅಥವಾ ಟಿಬೆಟ್‌ನ ದೇವಮಾನವನು ವಿವೇಕಿಯೆನ್ನಿಸಿಕೊಂಡವನು, ಅವನಿಗೆ ಯಾವುದೇ ಉಪಕರಣಗಳು ಬೇಕಿಲ್ಲ, ಬರೀ ಲಂಗೋಟಿಯನ್ನು ಧರಿಸುತ್ತಾನೆ, ಅನ್ನವನ್ನಷ್ಟೇ ತಿನ್ನುತ್ತಾನೆ, ಅವನ ಪೋಷಣೆಗೆ ಅತ್ಯಲ್ಪ ದಾನಧರ್ಮ ಇದ್ದರೆ ಸಾಕು. ಇದು ಪ್ಲೇಟೋನ ದೃಷ್ಟಿಕೋನದ ತಾರ್ಕಿಕ ಗಂತವ್ಯ.

ಮತ್ತೆ 'ಫೀಡೋ'ಗೆ ಮರಳುವುದಾದರೆ ಸಾವಿನ ಬಳಿಕ ಆತ್ಮದ ಅಸ್ತಿತ್ವದ ಬಗ್ಗೆ ಸೀಬೀಸ್ ಅನುಮಾನ ವ್ಯಕ್ತಪಡಿಸುತ್ತಾನೆ, ಸಾಕ್ರಟೀಸ್‌ನನ್ನು ಈ ಕುರಿತು ಸಂವಾದಕ್ಕೆ ಆಹ್ವಾನಿಸುತ್ತಾನೆ. ಅವನೇನೋ ಅದಕ್ಕೆ ಕೈಹಾಕಿದ, ಆದರೆ ಅವನ ವಾದಗಳು ತೀರ ಬಡಕಲಾದವು.

ಮೊದಲ ವಾದವೆಂದರೆ, ವಿರೋಧವಾದುದಿರುವ ಎಲ್ಲವೂ ವಿರೋಧದಿಂದಲೇ ಮೂಡಿಬರುತ್ತವೆ ಎಂಬುದು. ಈ ಹೇಳಿಕೆಯು ಅನಾಕ್ಸಿಮ್ಯಾಂಡರ್‌ನ ವೈಶ್ವಿಕ ನ್ಯಾಯದ ಕುರಿತ ಹೇಳಿಕೆಯನ್ನು ನೆನಪಿಸುತ್ತದೆ. ಈಗ, ಬದುಕು ಸಾವು ವಿರೋಧಗಳು,

ಹೀಗಾಗಿ ಪ್ರತಿಯೊಂದೂ ಇನ್ನೊಂದನ್ನು ಒಡಮೂಡಿಸಬೇಕು. ಮುಂದಿನ ಹಂತವೆಂದರೆ, ಸತ್ತವರ ಆತ್ಮಗಳು ಬೇರೆಲ್ಲೋ ಇರುತ್ತವೆ, ಕಾಲಕ್ರಮೇಣ ಅವು ಭೂಮಿಗೆ ಮರಳುತ್ತವೆ ಎಂಬುದು. 'ಬೀಜವು ಸತ್ತಲ್ಲದೆ ಮೊಳಕೆಯೊಡೆಯದು' ಎಂಬ ಸಂತ ಪೌಲ್‌ನ ಹೇಳಿಕೆಯು ಇಂತಹ ಸಿದ್ಧಾಂತದ ವಲಯಕ್ಕೇ ಸೇರುತ್ತದೆ.

ಎರಡನೆಯ ವಾದವೆಂದರೆ, ಜ್ಞಾನ ಎಂಬುದು ನೆನಪು, ಹೀಗಾಗಿ ಹುಟ್ಟಿಗಿಂತ ಮುಂಚೆ ಆತ್ಮವು ಪ್ರಚೋದಿತವಾಗಿರಬೇಕು. ಜ್ಞಾನ ಎಂಬುದು ನೆನಪು ಎಂಬ ಸಿದ್ಧಾಂತವು ಮುಖ್ಯವಾಗಿ, ಅನುಭವದಿಂದ ಗಳಿಸಲಾರದ ಸಂಪೂರ್ಣ ಸಮಾನತೆಯಂತಹ ಆದರ್ಶರೂಪಗಳಿವೆ ಎಂಬುದರಿಂದ ಸಮರ್ಥನೆಗೊಳ್ಳುತ್ತದೆ. ನಮಗೆ ಸುಮಾರು ಸಮಾನತೆಯ ಅನುಭವವಿದೆ, ಆದರೆ ಸಂಪೂರ್ಣ ಸಮಾನತೆಯನ್ನು ನಾವು ಇಂದ್ರಿಯಗ್ರಾಹ್ಯ ವಸ್ತುಗಳಲ್ಲಿ ಕಾಣಲಾರೆವು, ಆದರೂ ನಮಗೆ 'ಸಂಪೂರ್ಣ ಸಮಾನತೆ' ಎಂದರೇನು ಎಂಬುದು ಗೊತ್ತಿರುತ್ತದೆ. ಇದನ್ನು ನಾವು ಅನುಭವದಿಂದ ಪಡೆದುಕೊಂಡಿಲ್ಲದಿರುವುದರಿಂದ, ಅದನ್ನು ನಾವು ನಮ್ಮ ಹಿಂದಿನ ಜನ್ಮದಿಂದ ಹೊತ್ತು ತಂದಿರಬೇಕು. ಇಂತಹುದೇ ವಾದವು ಮಿಕ್ಕೆಲ್ಲ ಆದರ್ಶರೂಪಗಳಿಗೂ ಅನ್ವಯಿಸುತ್ತದೆ ಎಂದವನು ಹೇಳುತ್ತಾನೆ. ಹೀಗೆ ಸತ್ವದ ಅಸ್ತಿತ್ವ ಮತ್ತು ಅವುಗಳನ್ನು ಅರ್ಥಮಾಡಿಕೊಳ್ಳಬಲ್ಲ ಸಾಮರ್ಥ್ಯಗಳು ಜ್ಞಾನಸಮೇತವಾದ ಆತ್ಮವು ಮುಂಚಿನಿಂದ ಇರುವಂತಹುದು ಎಂದು ತೋರಿಸುತ್ತದೆ.

ಎಲ್ಲ ಜ್ಞಾನವೂ ನೆನಪು ಎಂಬ ವಾದವನ್ನು ಮತ್ತಷ್ಟು ದೀರ್ಘವಾಗಿ 'ಮೇನೋ'ದಲ್ಲಿ ಬೆಳೆಸಲಾಗಿದೆ (೮೨ ರ ಮುಂದೆ). 'ಇಲ್ಲಿ ಕಲಿಕೆಯಿಲ್ಲ, ಇರುವುದೆಲ್ಲ ನೆನಪು' ಎಂದು ಸಾಕ್ರಟೀಸ್ ಹೇಳುತ್ತಾನೆ. ಮೇನೋ ತನ್ನ ಗುಲಾಮ ಹುಡುಗನನ್ನು ಕರೆದು, ಅವನು ಜ್ಯಾಮಿತೀಯ ಸಮಸ್ಯೆಗಳಿಗೆ ಉತ್ತರ ಹೇಳುವುದನ್ನು ಕೇಳಿ ತಾನು ಈ ಅಂಶವನ್ನು ಸಾಧಿಸಿ ತೋರಿಸಿದೆನೆಂದು ಹೇಳಿಕೊಳ್ಳುತ್ತಾನೆ. ಹುಡುಗನ ಉತ್ತರಗಳು ಅವನಿಗೆ ಜ್ಯಾಮಿತಿಯು ನಿಜವಾಗಿಯೂ ತಿಳಿದಿತ್ತು, ಇಲ್ಲಿಯವರೆಗೂ ತನಗೆ ಈ ಜ್ಞಾನವಿತ್ತೆಂಬುದನ್ನು ಅವನು ತಿಳಿದಿರಲಿಲ್ಲ ಎಂಬುದನ್ನು ತೋರಿಸಬಲ್ಲುದು. ಆತ್ಮವು ಹಿಂದಿನ ಜನ್ಮದಿಂದ ಜ್ಞಾನವನ್ನು ತಂದಿತೆಂಬ ತೀರ್ಮಾನವನ್ನು 'ಮೇನೋ'ದಲ್ಲಿಯೂ 'ಫೀಡೋ'ದಲ್ಲಿರುವ ರೀತಿಯಲ್ಲಿಯೇ ಮಾಡಲಾಗಿದೆ.

ಈ ಕುರಿತು, ಮೊದಲನೆಯದಾಗಿ, ಅನುಭವೈಕ ಜ್ಞಾನಕ್ಕೆ ಇದು ಒಂದಷ್ಟೂ ಅನ್ವಯಿಸುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಪಿರಮಿಡ್‌ಗಳನ್ನು ಕಟ್ಟಿದುದನ್ನೋ, ಟ್ರಾಯ್ ಮೇಲಿನ ದಾಳಿ ನಡೆದುದನ್ನೋ, ಈ ಸಂಗತಿಗಳಾದಾಗ ಅವನು ಇರದ ಹೊರತು, ಗುಲಾಮ ಹುಡುಗನು ಅವುಗಳನ್ನು 'ನೆನಪಿಸಿ'ಕೊಳ್ಳುವಂತೆ ಮಾಡಬಹುದೆಂದು ಹೇಳಲಾಗುವುದಿಲ್ಲ. ತಾರ್ಕಿಕ ಎಂದು ಕರೆಯಲಾಗುವ ಜ್ಞಾನವು ಮಾತ್ರ – ಅದೂ ತರ್ಕಶಾಸ್ತ್ರ ಮತ್ತು ಗಣಿತ – ಅನುಭವವಿಲ್ಲದಿದ್ದರೂ

ಪ್ರತಿಯೊಬ್ಬರಲ್ಲಿಯೂ ಇರುತ್ತದೆ ಎಂದು ಭಾವಿಸಬಹುದು (ಪ್ಲೇಟೋ ನಿಜವಾಗಿಯೂ ಜ್ಞಾನವೆಂದು ಒಪ್ಪುವ ಆನುಭಾವಿಕ ಒಳನೋಟಗಳನ್ನು ಬಿಟ್ಟು). ಗಣಿತದ ವಿಷಯದಲ್ಲಿ ಈ ವಾದವನ್ನು ಹೇಗೆ ಎದುರಿಸಬಹುದೆಂಬುದನ್ನೀಗ ನೋಡೋಣ.

ಸಮಾನತೆಯ ಪರಿಕಲ್ಪನೆಯನ್ನು ತೆಗೆದುಕೊಳ್ಳಿ. ಇಂದ್ರಿಯಗ್ರಾಹ್ಯ ವಸ್ತುಗಳಲ್ಲಿನ ಸಂಪೂರ್ಣ ಸಮಾನತೆಯ ಯಾವ ಅನುಭವವೂ ನಮಗೆ ಇಲ್ಲ, ನಮಗಿರುವುದು ಸುಮಾರು ಸಮಾನ ಎಂಬುದರ ಅನುಭವವಷ್ಟೇ ಎಂದು ಒಪ್ಪಿಕೊಳ್ಳೋಣ. ಹಾಗಾದರೆ ಸಂಪೂರ್ಣ ಸಮಾನತೆಯ ಕಲ್ಪನೆ ಹೇಗೆ ಉಂಟಾಗುತ್ತದೆ? ಅಥವಾ ನಮಗೆ ಅಂಥ ಕಲ್ಪನೆಯೇ ಪ್ರಾಯಶಃ ಇಲ್ಲವೋ?

ಒಂದು ವಾಸ್ತವ ನಿದರ್ಶನವನ್ನು ನೋಡೋಣ. ಯಾವುದೋ ನಿರ್ದಿಷ್ಟ ಉಷ್ಣತೆಯಲ್ಲಿನ ಒಂದು ಸರಳಿನ ಉದ್ದವನ್ನು ಮೀಟರ್ ಎಂದು ಪ್ಯಾರಿಸ್‌ನಲ್ಲಿ ಹೇಳಲಾಗುತ್ತದೆ. ಅದೇ ಸರಳಿನ ಉದ್ದವು ಸರಿಯಾಗಿ ಒಂದು ಮೀಟರ್ ಎಂದು ಹೇಳಿದರೆ ನಾವು ಏನೆಂದು ಅರ್ಥಮಾಡಿಕೊಳ್ಳಬೇಕು? ನಮಗೇನೂ ಅರ್ಥವಾಗುವುದಿಲ್ಲವೆಂಬುದು ನನ್ನ ಭಾವನೆ. 'ಈಗ ವಿಜ್ಞಾನಕ್ಕೆ ತಿಳಿದಿರುವ ಅತ್ಯಂತ ನಿಖರ ಅಳತೆಯ ಪ್ರಕ್ರಿಯೆಗಳು ಸರಳಿನ ಉದ್ದವು ಪ್ಯಾರಿಸ್‌ನ ಪ್ರಮಾಣದ ಮೀಟರ್‌ಗಿಂತ ಕಡಿಮೆ ಉದ್ದವೋ ಹೆಚ್ಚು ಉದ್ದವೋ ಎಂದು ಹೇಳಲಾರವು. ನಾವು ತಕ್ಕಮಟ್ಟಿಗೆ ಸ್ಥೂಲವಾಗಿ ಹೇಳಬಹುದಾದರೆ, ಅಳತೆಯ ತಂತ್ರಗಳಲ್ಲಿನ ಮುಂದಿನ ಯಾವ ಪರಿಷ್ಕರಣೆಗಳೂ ಈ ಫಲಿತಾಂಶವನ್ನು ಬದಲಾಯಿಸಲಾರದು ಎಂದು ಮುನ್ನುಡಿಯಬಹುದು. ಆದರೆ ಇದೂ ಒಂದು ಅನುಭವೈಕ ಹೇಳಿಕೆಯೇ, ಯಾಕೆಂದರೆ ಅನುಭವೈಕ ನಿದರ್ಶನವು ಅದನ್ನು ಯಾವುದೇ ಕ್ಷಣದಲ್ಲಿ ತಪ್ಪೆಂದು ಸಾಧಿಸಬಹುದು. ಪ್ಲೇಟೋ ನಮಗಿರುವುದೆಂದು ಹೇಳುವ ಸಂಪೂರ್ಣ ಸಮಾನತೆಯು ನಮಗೆ ನಿಜವಾಗಿ ಇರುವುದೆಂದು ನಾನು ಭಾವಿಸುವುದಿಲ್ಲ.

ನಾವು ಹಾಗೆ ಭಾವಿಸಿದರೂ, ಒಂದು ವಯಸ್ಸನ್ನು ತಲುಪುವವರೆಗೂ ಯಾವ ಮಗುವೂ ಅದನ್ನು ಹೊಂದಿರಲಾರದು, ಅನುಭವವು – ಅದೂ ನೇರವಾಗಿಯಲ್ಲ – ಅದನ್ನು ಹೊರಪಡಿಸಬಹುದು ಎಂಬುದು ಸ್ಪಷ್ಟ. ಅದಕ್ಕೂ ಮಿಗಿಲಾಗಿ, ಹುಟ್ಟಿಗೆ ಹಿಂದಿನ ಅಸ್ತಿತ್ವದ ನಮ್ಮ ಅನುಭವವು ಇಂದ್ರಿಯಗ್ರಾಹ್ಯತೆಯ ಮೂಲಕವಲ್ಲದಿದ್ದರೆ, ಈ ಬದುಕಿನಷ್ಟೇ ಅದೂ ಈ ಕಲ್ಪನೆಯನ್ನುಂಟುಮಾಡಲು ಅಸಮರ್ಥವಾಗುತ್ತಿತ್ತು. ನಮ್ಮ ಹಿಂದಿನ ಅಸ್ತಿತ್ವವು ಭಾಗಶಃ ಇಂದ್ರಿಯಾತೀತವಾಗಿತ್ತೆಂದು ಭಾವಿಸಿದರೆ, ನಮ್ಮ ಈಗಿನ ಅಸ್ತಿತ್ವಕ್ಕೂ ಅದನ್ನೇ ಏಕೆ ಅನ್ವಯಿಸಬಾರದು? ಈ ಎಲ್ಲ ಕಾರಣಗಳಿಂದಾಗಿ ಈ ವಾದವು ಬಿದ್ದುಹೋಗುತ್ತದೆ.

ನೆನಪಿನ ಸಿದ್ಧಾಂತವು ರುಜುವಾತುಗೊಂಡಿದೆ ಎಂದು ಪರಿಗಣಿಸಿದರೆ, 'ಯಾವುದು ಬೇಕಾಗಿತ್ತೊ ಸುಮಾರು ಅದರ ಅರ್ಧದಷ್ಟು ಸಾಧಿತವಾಗಿದೆ; ಅಂದರೆ,

ನಾವು ಹುಟ್ಟುವ ಮುಂಚೆಯೇ ನಮ್ಮ ಆತ್ಮಗಳು ಪ್ರಚೋದಿತವಾಗಿರುತ್ತವೆ, ಹಾಗೂ ಸಾವಿನ ನಂತರವೂ ಹುಟ್ಟಿಗೆ ಮೊದಲೂ ಆತ್ಮವು ಅಸ್ತಿತ್ವದಲ್ಲಿರುತ್ತದೆ ಎಂಬ ಉಳಿದರ್ದಕ್ಕೆ ಆಧಾರ ಬೇಕಾಗುತ್ತದೆ' ಎಂದು ಸೀಬೀಸ್ ಹೇಳುತ್ತಾನೆ. ಇದಕ್ಕನುಗುಣವಾಗಿ ಸಾಕ್ರಟೀಸ್ ಈ ಕುರಿತು ಆಲೋಚಿಸುತ್ತಾನೆ. ಎಲ್ಲವೂ ವಿರೋಧಗಳಿಂದಲೇ ಮೂಡುತ್ತವೆ, ಅದಕ್ಕನುಗುಣವಾಗಿ ಹುಟ್ಟು ಸಾವನ್ನುಂಟುಮಾಡುವಂತೆಯೇ ಸಾವು ಹುಟ್ಟನ್ನು ಉಂಟುಮಾಡುತ್ತದೆ ಎಂಬುದರ ಮುಂದಿನ ಹಂತ ಎಂದವನು ಹೇಳುತ್ತಾನೆ. ಜೊತೆಗೆ, ಇನ್ನೂ ದೀರ್ಘವಾದ ತತ್ವಜ್ಞಾನದ ಇತಿಹಾಸವುಳ್ಳ, ಇನ್ನೊಂದು ವಾದವನ್ನೂ ಅದಕ್ಕೆ ಸೇರಿಸುತ್ತಾನೆ: ಸಂಕೀರ್ಣವಾದುದಷ್ಟು ಮಾತ್ರವೇ ಬದಲಾಗಬಹುದು, ಮತ್ತು ಆತ್ಮವು, ಆದರ್ಶರೂಪದಂತೆಯೇ, ಸರಳವಾದುದೇ ಹೊರತು ವಿವಿಧ ಭಾಗಗಳಿಂದಾದುದಲ್ಲ. ಸತ್ವಗಳು ಬದಲಾಗಲಾರವು: ನಿದರ್ಶನಕ್ಕೆ, ಆತ್ಯಂತಿಕ ಸೌಂದರ್ಯವು ಸದಾ ಹಾಗೇ ಇರುತ್ತದೆ, ಆದರೆ ಸುಂದರ ವಸ್ತುಗಳು ಬದಲಾಗುತ್ತಲೇ ಇರುತ್ತವೆ. ಹೀಗೆ ಕಾಣುವ ವಸ್ತುಗಳು ಅಶಾಶ್ವತ, ಆದರೆ ಕಾಣದವು ಚಿರಂತನ. ದೇಹ ಕಾಣುವಂತಹುದ್ದು, ಆದರೆ ಆತ್ಮವು ಕಾಣದ್ದು, ಹೀಗಾಗಿ ಆತ್ಮವನ್ನು ಚಿರಂತನ ವಸ್ತುಗಳ ಗುಂಪಿಗೆ ಸೇರಿಸಬಹುದು.

ಚಿರಂತನವಾದ ಆತ್ಮವು ಚಿರಂತನ ವಿಷಯಗಳ ಧ್ಯಾನದಲ್ಲಿ ಸಲೀಸಾಗಿರುತ್ತದೆ, ಅಂದರೆ, ಸತ್ವಗಳಲ್ಲಿ; ಆದರೆ, ಇಂದ್ರಿಯಗ್ರಾಹ್ಯ ಕಲ್ಪನೆಯಲ್ಲಿ, ಅಂದರೆ ಬದಲಾಗುವ ಜಗತ್ತನ್ನು ಕುರಿತ ಧ್ಯಾನದಲ್ಲಿ ಅದು ಸೋಲುತ್ತದೆ ಮತ್ತು ಗೊಂದಲಕ್ಕೊಳಗಾಗುತ್ತದೆ:

> ದೇಹವನ್ನು ಗ್ರಹಿಕೆಯ ಸಾಧನವಾಗಿ ಬಳಸಿಕೊಳ್ಳುವಾಗ, ಅಂದರೆ ನೋಟ ಅಥವಾ ಕೇಳುವಿಕೆಯ ಅಥವಾ ಬೇರೆ ಇಂದ್ರಿಯವನ್ನು ಬಳಸಿಕೊಳ್ಳುವಾಗ, (ಯಾಕೆಂದರೆ ದೇಹವನ್ನು ಬಳಸಿಕೊಳ್ಳುವುದು ಎಂದರೆ ಇಂದ್ರಿಯಗಳನ್ನು ಬಳಸಿಕೊಳ್ಳುವುದಾದ್ದರಿಂದ), ಆತ್ಮವು .. .. ದೇಹದಿಂದ ಬದಲಾಗಬಹುದಾದ ವಲಯಕ್ಕೆ ಎಳೆದುಕೊಂಡು ಹೋಗುತ್ತದೆ, ಅಲೆದು ಗೊಂದಲಕ್ಕೊಳಗಾಗುತ್ತದೆ; ಜಗತ್ತು ಅದರ ಸುತ್ತ ತಿರುಗುತ್ತದೆ, ಬದಲಾಗುವಿಕೆಯ ಸ್ಪರ್ಶದಿಂದ ಅದು ಕುಡುಕನಂತೆ ಆಡುತ್ತದೆ .. .. ಆದರೆ ತನ್ನ ಸ್ವಸ್ಥಾನಕ್ಕೆ ಮರಳಿದಾಗ ಅದು ಯೋಚಿಸುತ್ತದೆ ಮತ್ತು ತನ್ನ ಪಾಡಿಗೆ ತಾನಿದ್ದಾಗ ತನ್ನ ಸಂಬಂಧಿಗಳಾದ ಹಾಗೂ ತಾನು ಯಾವಾಗಲೂ ಜೀವಿಸುವ ಪರಿಶುದ್ಧತೆ ಚಿರಂತನತೆ ಅಮರತ್ವ ಮತ್ತು ಬದಲಾಗದ ವಲಯವಾದ ಮತ್ತೊಂದು ಲೋಕಕ್ಕೆ ಜಾರಿಕೊಳ್ಳುತ್ತದೆ, ಮತ್ತು ಅವುಗಳಿಂದ ದೂರಾಗದೆ ಅಡ್ಡಿಗಳನ್ನೆದುರಿಸುವುದಿಲ್ಲ. ಆಗ ಅದು ತನ್ನ ತಪ್ಪುದಾರಿಗಳಿಂದ ದೂರ ಸರಿಯುತ್ತದೆ, ಬದಲಾಗದವುಗಳೊಡನೆ ಸೇರಿ ತಾನೂ ಬದಲಾಗದೆ ಉಳಿಯುತ್ತದೆ. ಆತ್ಮದ ಈ ಸ್ಥಿತಿಯನ್ನೇ ವಿವೇಕ ಎನ್ನುವುದು.

ನಿಜವಾದ ತತ್ವಜ್ಞಾನಿಯ ಆತ್ಮವು, ಬದುಕಿನಲ್ಲಿ ತಾನೊಳಗಾಗಿದ್ದ ದೇಹದ ದಾಸ್ಯದಿಂದ ಬಿಡುಗಡೆಗೊಂಡು, ಸಾವಿನ ಬಳಿಕ ದೇವತೆಗಳ ಜೊತೆಗಿನ ಸಂತಸದಲ್ಲಿರಲು ಅಗೋಚರ ಜಗತ್ತಿಗೆ ಹೋಗುತ್ತದೆ. ಆದರೆ ದೇಹವನ್ನು ಇಷ್ಟಪಟ್ಟು ಶುದ್ಧವಾಗಿಡದ ಆತ್ಮವು ಸಮಾಧಿಯನ್ನು ಕಾಡುವ ಪಾಪದೇವತೆಯಾಗುತ್ತದೆ, ತನ್ನ ಸ್ವಭಾವಕ್ಕನುಗುಣವಾಗಿ ಇಲ್ಲವೇ ಕತ್ತೆ ಅಥವಾ ತೋಳ ಅಥವಾ ಗಿಡುಗನಂತಹವುಗಳಲ್ಲಿ ಸೇರಿಕೊಳ್ಳುತ್ತದೆ. ತತ್ವಜ್ಞಾನಿಯಲ್ಲದಿದ್ದರೂ ಧರ್ಮನಿಷ್ಠನಾಗಿ ಬಾಳಿದವನು ದುಂಬಿಯೋ ಕಣಜವೋ ಇರುವೆಯೋ ಆಗುತ್ತದೆ, ಅಥವಾ ಹಿಂಡುಗಳಲ್ಲಿ ವಾಸಿಸುವ ಪ್ರಾಣಿಯಾಗುತ್ತದೆ.

ನಿಜವಾದ ತತ್ವಜ್ಞಾನಿಯು ಮಾತ್ರ ಸಾವಿನ ಬಳಿಕ ಸ್ವರ್ಗಕ್ಕೆ ಹೋಗುತ್ತಾನೆ. 'ತತ್ವಜ್ಞಾನವನ್ನು ಅಧ್ಯಯನ ಮಾಡದ ಮತ್ತು ಸಂಪೂರ್ಣವಾಗಿ ಪರಿಶುದ್ಧನಲ್ಲದ ಯಾರಿಗೂ ಇಲ್ಲಿಂದ ಬಿಟ್ಟು ಹೋದಾಗ ದೇವತೆಗಳ ಜೊತೆಯಲ್ಲಿರಲು ಅವಕಾಶ ಕೊಡುವುದಿಲ್ಲ, ಆದರೆ ಜ್ಞಾನಪ್ರೇಮಿಗಳೊಡನೆ ಇರಲು ಅವಕಾಶವಿರುತ್ತದೆ.' ಆದ್ದರಿಂದಲೇ ತತ್ವಜ್ಞಾನದ ನಿಜವಾದ ಅನ್ವೇಷಕನು ದೈಹಿಕ ಕಾಮನೆಗಳಿಂದ ದೂರವಾಗಿರುತ್ತಾನೆ: ಅವನು ಬಡತನ ಅಥವಾ ಅಪಮಾನದಿಂದ ಭಯಗೊಳ್ಳುವನೆಂದಲ್ಲ, ಆದರೆ 'ತತ್ವಜ್ಞಾನವು ತನ್ನನ್ನು ಸ್ವೀಕರಿಸುವವರೆಗೂ ತನ್ನನ್ನು ದೇಹಕ್ಕೆ ಅಂಟಿಹಾಕಲಾಗಿತ್ತು ಅಥವಾ ಕಟ್ಟಿಹಾಕಲಾಗಿತ್ತು, ಆಗ ತಾನು ಸೆರೆಮನೆಯ ಕಂಬಿಗಳ ಮೂಲಕ ವಾಸ್ತವತೆಯನ್ನು ಕಾಣಬಲ್ಲೆನಾಗಿದ್ದೇನೇ ಹೊರತು ತನ್ನಷ್ಟಕ್ಕೇ ಅಲ್ಲ.. .. ಬಂಧನದಲ್ಲಿ ಕಾಮನೆಯ ಕಾರಣದಿಂದಾಗಿ ತಾನು ಅದಕ್ಕೆ ಪ್ರಮುಖ ಶಾಮೀಲುದಾರನಾಗಿದ್ದೆ ಎಂಬ ಪ್ರಜ್ಞೆಯು ಆತ್ಮಕ್ಕಿರುತ್ತದೆ.' ತತ್ವಜ್ಞಾನಿಯು ಸಂಯಮಿಯಾಗಿರಲು ಕಾರಣ 'ಪ್ರತಿ ನಲಿವು ಅಥವಾ ನೋವು ಆತ್ಮವನ್ನು ದೇಹಕ್ಕೆ ಸೇರಿಸಿ ಕೊನೆಗೆ ದೇಹವೇ ಆಗಿಬಿಡುವಂತೆ ಮತ್ತು ದೇಹವು ನಿಜವೆಂದು ಹೇಳಿದುದನ್ನು ನಿಜವೆಂದೇ ಭಾವಿಸುವ ಪರಿಯಲ್ಲಿ ಜೋಡಿಸುವ ಮೊಳೆಯಂತೆ.'

ಈ ಹಂತದಲ್ಲಿ ಸಿಮಿಯಾಸ್ ಮಧ್ಯ ಪ್ರವೇಶಿಸಿ, ಆತ್ಮವು ಒಂದು ಸಾಮರಸ್ಯ ಎಂಬ ಪೈಥಾಗೊರಾಸ್‌ನ ಅಭಿಪ್ರಾಯವನ್ನು ತಿಳಿಸಿ ಹೀಗೆನ್ನುತ್ತಾನೆ: ಕೊಳಲು ಸೀಳಿಹೋದರೆ ಸಾಮರಸ್ಯವು ಉಳಿದೀತೇ? ಆಗ ಸಾಕ್ರಟೀಸ್ ಹೀಗೆ ಉತ್ತರಿಸುತ್ತಾನೆ: ಆತ್ಮ ಒಂದು ಸಾಮರಸ್ಯವಲ್ಲ, ಯಾಕೆಂದರೆ ಸಾಮರಸ್ಯವು ಸಂಕೀರ್ಣವಾದದ್ದು, ಆದರೆ ಆತ್ಮವು ಸರಳವಾದದ್ದು. ಅದಕ್ಕೂ ಮಿಗಿಲಾಗಿ, ಆತ್ಮವು ಸಾಮರಸ್ಯ ಎಂಬ ಸಿದ್ಧಾಂತವು, ನೆನಪಿನ ಸಿದ್ಧಾಂತವು ಸಾಧಿಸಿ ತೋರಿಸಿರುವ ಪೂರ್ವ ಅಸ್ತಿತ್ವದೊಡನೆ ಹೊಂದಿಕೊಳ್ಳುವುದಿಲ್ಲ, ಯಾಕೆಂದರೆ ಕೊಳಲಿಗಿಂತ ಮುಂಚೆ ಸಾಮರಸ್ಯ ಇರಲಾರದು.

ಆನಂತರ ತನ್ನದೇ ಆದ ತಾತ್ವಿಕ ಸಿದ್ಧಾಂತದ ಕಾರಣವನ್ನು ನೀಡಲು ಮುಂದಾಗುತ್ತಾನೆ; ಅದು ಸ್ವಾರಸ್ಯಕರವಾಗಿದೆಯಾದರೂ ಮುಖ್ಯ ವಾದಕ್ಕೆ

ಸುಸಂಬದ್ಧವಾಗಿಲ್ಲ. ಆದರ್ಶರೂಪ ಸಿದ್ಧಾಂತವನ್ನವನು ಪ್ರತಿಪಾದಿಸಲು ತೊಡಗಿ, 'ಆದರ್ಶರೂಪಗಳು ಇವೆ, ಮತ್ತು ಮಿಕ್ಕ ವಸ್ತುಗಳು ಅದರೊಡನೆ ಭಾಗಿಗಳಾಗಿ ತಮ್ಮ ಹೆಸರುಗಳನ್ನು ಅದರಿಂದ ಸಾಧಿಸಿಕೊಳ್ಳುತ್ತವೆ' ಎಂಬ ತೀರ್ಮಾನ ನೀಡುತ್ತಾನೆ. ಕೊನೆಗೆ ಸಾವಿನ ಬಳಿಕ ಆತ್ಮಗಳ ಸ್ಥಿತಿಯನ್ನು ಕುರಿತು ಹೀಗೆ ವರ್ಣಿಸುತ್ತಾನೆ: 'ಒಳ್ಳೆಯದು ಸ್ವರ್ಗಕ್ಕೆ ಹೋಗುತ್ತದೆ, ಕೆಟ್ಟುದು ನರಕಕ್ಕೆ ಹೋಗುತ್ತದೆ, ಮಧ್ಯದವು ಶುದ್ಧಿಲೋಕಕ್ಕೆ (ಪರ್ಗೇಟರಿ) ಹೋಗುತ್ತದೆ.'

ವಿದಾಯದ ಮಾತುಗಳ ಬಳಿಕ ಅವನ ಅಂತ್ಯವನ್ನು ವರ್ಣಿಸಲಾಗಿದೆ: ಅವನ ಕೊನೆಯ ಮಾತುಗಳು: 'ಕ್ರೈಟೋ, ನಾನು ಆಸ್ಕೆಪಿಯಾಸ್‌ಗೆ ಒಂದು ಹುಂಜವನ್ನು ಕೊಡಬೇಕು, ಅವನ ಸಾಲ ತೀರಿಸುವುದನ್ನು ನೆನಪಿನಲ್ಲಿಟ್ಟುಕೊಳ್ಳುತ್ತೀಯಾ?' ತಮ್ಮ ಕಾಯಿಲೆ ವಾಸಿಯಾದ ಬಳಿಕ ಹಾಗೂ ಸಾಕ್ರಟೀಸ್ ಬಿಟ್ಟು ಬಿಟ್ಟು ಬರುವ ಜ್ವರವನ್ನು ವಾಸಿಮಾಡಿಕೊಳ್ಳಲು ಆಸ್ಕಿಪಿಯಾಸ್‌ನಿಂದ ಪಡೆದಿದ್ದ ಹುಂಜವನ್ನು ಅವನಿಗೆ ವಾಪಸು ಕೊಡುತ್ತಾರೆ.

'ತನ್ನ ಕಾಲದ ಎಲ್ಲದರಲ್ಲಿಯೂ ಆತನು ಅತ್ಯಂತ ವಿವೇಕಿ, ನ್ಯಾಯಪರ ಮತ್ತು ಉತ್ತಮನಾಗಿದ್ದವನು' ಎಂದು ಫೀಡೋ ಕೊನೆಯಲ್ಲಿ ನುಡಿಯುತ್ತಾನೆ.

ಪ್ಲೇಟೋನ ಸಾಕ್ರಟೀಸ್ ಎಷ್ಟೋ ಕಾಲದವರೆಗೆ ಆ ಮುಂದಿನ ತತ್ವಜ್ಞಾನಿಗಳಿಗೆ ಮಾದರಿಯಾದ. ನೈತಿಕವಾಗಿ ಅವನ ಬಗ್ಗೆ ನಾವೇನು ಭಾವಿಸಬಹುದು? (ನನ್ನ ಏಕೈಕ ಗಮನವಿರುವುದು ಪ್ಲೇಟೋ ಮನುಷ್ಯನಂತೆ ಚಿತ್ರಿಸುವ ರೀತಿಯ ಕಡೆಗೆ). ಅವನ ಸದ್ಗುಣಗಳು ಸುಸ್ಪಷ್ಟ. ಪ್ರಾಪಂಚಿಕ ಯಶಸ್ಸಿನ ಬಗ್ಗೆ ಅವನಿಗೆ ಗಮನವಿಲ್ಲ, ಎಷ್ಟರ ಮಟ್ಟಿಗೆ ಎಂದರೆ ತನ್ನ ಕೊನೆಯ ಕ್ಷಣದವರೆಗೂ ಭಯರಹಿತನಾಗಿದ್ದು ಶಾಂತಚಿತ್ತನೂ ಸಭ್ಯನೂ ಹಾಸ್ಯಪರನೂ ಆಗಿದ್ದ; ತಾನು ಸತ್ಯವೆಂದು ನಂಬಿದುದರ ಕಡೆಗೆ ಮಿಕ್ಕೆಲ್ಲಕ್ಕಿಂತ ಹೆಚ್ಚಾಗಿ ಗಮನವಿರಿಸಿಕೊಂಡಿದ್ದ. ಆದರೆ ಅವನಲ್ಲಿ ಕೆಲವು ಗಂಭಿರ ದೋಷಗಳಿದ್ದವು. ತನ್ನ ವಾದಪರತೆಯಲ್ಲಿ ಅವನು ಅಪ್ರಾಮಾಣಿಕನೂ ಮಿಥ್ಯಾತರ್ಕಿಯೂ ಆಗಿದ್ದ, ಮತ್ತು ತನ್ನ ಖಾಸಗಿ ಆಲೋಚನೆಯಲ್ಲಿ, ತನಗೆ ಒಪ್ಪಿತವಾದ ತೀರ್ಮಾನಗಳಿಗೆ ಬರಲು ತನ್ನ ಬುದ್ಧಿಶಕ್ತಿಯನ್ನು ಬಳಸಿಕೊಳ್ಳುತ್ತಿದ್ದನೇ ಹೊರತು ನಿರ್ಲಿಪ್ತ ಜ್ಞಾನಾನ್ವೇಷಣೆಯಲ್ಲಿ ಅಲ್ಲ. ಅವನಲ್ಲಿ ಕೆಟ್ಟ ಮಾದರಿಯ ಧರ್ಮಬೋಧಕನನ್ನು ನೆನಪಿಸುವ ಸ್ವಸಂತೃಪ್ತಿ ಮತ್ತು ನಯವಂತಿಕೆಗಳು ತುಂಬಿದ್ದವು. ಸಾವಿನೆದುರಿನಲ್ಲಿ ಅವನು ತೋರಿಸಿದ ಧೈರ್ಯವು ತಾನು ದೇವತೆಗಳೊಡನೆ ಚಿರಂತನ ಸುಖದಲ್ಲಿ ಬಾಳುವುದಾಗಿ ಶ್ರದ್ಧೆಯಿಡದಿದ್ದಿದ್ದರೆ ಮತ್ತಷ್ಟು ಮಹತ್ವದ್ದೆನಿಸುತ್ತಿತ್ತು. ತನಗಿಂತ ಹಿಂದಿನ ಕೆಲವರಿಗಿಂತಲೂ ಆಲೋಚನಾಕ್ರಮದಲ್ಲಿ ಅವನೇನೂ ಹೆಚ್ಚು ವೈಜ್ಞಾನಿಕವಾದವನಲ್ಲ, ಆದರೆ ವಿಶ್ವವು ತನ್ನ ಒಪ್ಪಿತ ನೈತಿಕ ಮಾನಕಗಳಿಗೆ ಅನುಗುಣವಾಗಿರುವಂತೆ ಸಾಧಿಸಲು ಅವನು ನಿರ್ಧರಿಸಿಕೊಂಡಿರುತ್ತಿದ್ದ. ಇದು

ಸತ್ಯಕ್ಕೆಸಗಿದ ದ್ರೋಹ ಮತ್ತು ಅತ್ಯಂತ ಹೇಯ ತಾತ್ವಿಕ ಪಾತಕ. ಮಾನವನಾಗಿ ಅವನನ್ನು ಸಂತರ ಗುಂಪಿಗೆ ಸೇರಿಸಬಹುದು, ಆದರೆ ತತ್ವಜ್ಞಾನಿಯಾಗಿ ಅವನು ವೈಜ್ಞಾನಿಕ ಶುದ್ಧಿಲೋಕದಲ್ಲಿ ದೀರ್ಘಕಾಲ ಕಳೆಯಬೇಕು.

○

೧೭
ಪ್ಲೇಟೋನ ವಿಶ್ವಮೂಲ ಸಿದ್ಧಾಂತ (ಕಾಸ್ಮೋಗನಿ)

ಪ್ಲೇಟೋನ ವಿಶ್ವಮೂಲ ಸಿದ್ಧಾಂತವನ್ನು 'ಟೈಮೇಯಸ್'ನಲ್ಲಿ ಕಾಣಬಹುದು.[೫೯] ಅದನ್ನು ಸಿಸೆರೋ ಲ್ಯಾಟಿನ್ ಭಾಷೆಗೆ ಅನುವಾದಿಸಿದ, ಅದಕ್ಕಿಂತ ಹೆಚ್ಚಾಗಿ, ಅದು ಮಧ್ಯಯುಗದಲ್ಲಿ ಪಾಶ್ಚಿಮಾತ್ಯರಿಗೆ ತಿಳಿದಿದ್ದ ಏಕೈಕ ಸಂವಾದವಾಗಿತ್ತು. ಹೀಗಾಗಿ ಇವೆರಡೂ ಮತ್ತು ಹಿಂದಿನ ನವಪ್ಲೇಟೋವಾದದಲ್ಲಿ ಅದು ಪ್ಲೇಟೋನ ಇತರವುಗಳಿಗಿಂತ ಹೆಚ್ಚಿನ ಪ್ರಭಾವ ಬೀರಿತ್ತು. ಇದು ಕುತೂಹಲಕರವಾಗಿದೆ, ಯಾಕೆಂದರೆ ಅದರಲ್ಲಿ ಅವನ ಇತರ ಬರವಣಿಗೆಗಳಿಗಿಂತ ಹೆಚ್ಚಿನ ಪ್ರಮಾಣದ ಪೆದ್ದುತನ ಇದೆ. ತತ್ವಜ್ಞಾನವಾಗಿ ಅದು ಮುಖ್ಯವಾದುದು, ಆದರೆ ಐತಿಹಾಸಿಕವಾಗಿ ಅದೆಷ್ಟು ಪ್ರಭಾವಶಾಲಿಯಾಗಿತ್ತೆಂದರೆ ಅದನ್ನು ತಕ್ಕಮಟಿಗೆ ವಿವರವಾಗಿಯೇ ಪರಿಶೀಲಿಸಬೇಕು.

ಹಿಂದಿನ ಸಂವಾದಗಳಲ್ಲಿ ಸಾಕ್ರಟೀಸ್ ಆಕ್ರಮಿಸಿಕೊಂಡಿದ್ದ ಸ್ಥಾನವನ್ನು ನೋಡಿದರೆ, 'ಟೈಮೇಯಸ್'ನಲ್ಲಿ, ಪೈಥಾಗೊರಾಸ್ ಮತ್ತವನ ಪಂಥದ (ಒಂದು ಹಂತದವರೆಗೆ) ಸಂಖ್ಯೆಯೇ ಜಗತ್ತಿನ ವಿವರಣೆ ಎಂಬುದನ್ನೂ ಒಳಗೊಂಡಂತೆ, ಸಿದ್ಧಾಂತಗಳನ್ನು ಮುಖ್ಯವಾಗಿ ಅಳವಡಿಸಿಕೊಳ್ಳಲಾಗಿದೆ. ಮೊದಲಿಗೆ ಇದರಲ್ಲಿ 'ರಿಪಬ್ಲಿಕ್'ನ ಮೊದಲ ಐದು ಭಾಗಗಳ ಸಾರಾಂಶವಿದೆ, ಆನಂತರ, ಹರ್ಕ್ಯುಲೀಸ್‌ನ ಕಂಬಗಳಿಂದ ದೂರವಾದ ಮತ್ತು ಲಿಬಿಯ ಮತ್ತು ಏಷ್ಯಾಗಳನ್ನು ಸೇರಿಸಿದರೆ ಎಷ್ಟೋ ಅದಕ್ಕಿಂತ ದೊಡ್ಡದಾದ ದ್ವೀಪವಾಗಿತ್ತೆಂದು ಹೇಳಲಾಗುವ ಅಟ್ಲಾಂಟಿಸ್‌ನ ಪೌರಾಣಿಕತೆಯಿದೆ. ಆ ಬಳಿಕ, ಪೈಥಾಗೊರಾಸ್‌ನ ಖಗೋಳವಿಜ್ಞಾನಿ ಟೈಮಿಯಸ್ ಹೇಳುವ ಮನುಷ್ಯ ಸೃಷ್ಟಿಯವರೆಗಿನ ಜಗತ್ತಿನ ಇತಿಹಾಸದ ನಿರೂಪಣೆಯಿದೆ. ಅವನ ಹೇಳುವುದರ ರೂಪುರೇಖೆಗಳು ಇಂತಿವೆ:

---

೫೯. ಈ ಸಂವಾದದಲ್ಲಿ ಅಸ್ಪಷ್ಟತೆ ತುಂಬಿಕೊಂಡಿದೆ, ಮತ್ತು ವ್ಯಾಖ್ಯಾನಕಾರರ ಭಿನ್ನಾಭಿಪ್ರಾಯಗಳಿಗೆ ಕಾರಣವಾಗಿದೆ. ಒಟ್ಟಾರೆ, ನಾನು ಬಹುತೇಕ ಮೆಚ್ಚುಗೆಗೆ ಅರ್ಹವಾದ ಕಾರ್ನ್‌ಫರ್ಡ್‌ರ ಗ್ರಂಥ 'ಪ್ಲೇಟೋಸ್ ಕಾಸ್ಮೋಗನಿ'ಯಲ್ಲಿನ ವಿಚಾರಗಳನ್ನು ಒಪ್ಪುತ್ತೇನೆ.

ಬದಲಾಗದುದನ್ನು ಬುದ್ಧಿಶಕ್ತಿ ಮತ್ತು ತರ್ಕಗಳು ಗ್ರಹಿಸುತ್ತವೆ, ಬದಲಾಗುವುದನ್ನು ಅಭಿಪ್ರಾಯವು ಗ್ರಹಿಸುತ್ತದೆ. ಜಗತ್ತು ಇಂದ್ರಿಯಗ್ರಾಹ್ಯವಾದುದರಿಂದ, ಅದು ಚಿರಂತನವಾಗಿರಲಾರದು, ಹೀಗಾಗಿ ಅದನ್ನು ದೇವರು ಸೃಷ್ಟಿಸಿರಬೇಕು. ದೇವರು ಒಳ್ಳೆಯವನಾದುದರಿಂದ ಅವನು ಜಗತ್ತನ್ನು ಚಿರಂತನವಾದುದರ ಮಾದರಿಯಲ್ಲಿ ಸೃಷ್ಟಿಸಿದ; ಅದರಲ್ಲಿ ಮತ್ಸರವಿಲ್ಲ, ಜಗತ್ತು ಆದಷ್ಟೂ ತನ್ನಂತೆಯೇ ಇರಬೇಕೆಂದು ಬಯಸಿದ. 'ಎಲ್ಲ ವಸ್ತುಗಳೂ ಒಳ್ಳೆಯವಾಗಿರಬೇಕೆಂದೂ ಸಾಧ್ಯವಾದಷ್ಟೂ ಕೆಟ್ಟುದು ಇರಬಾರದೆಂದೂ ದೇವರು ಬಯಸಿದ.' 'ಕಾಣುವ ಗೋಲವು ಸ್ಥಿರವಾಗಿಲ್ಲದೆ, ಕ್ರಮವಿಹೀನವೂ ಅವ್ಯವಸ್ಥಿತವೂ ಆದ ರೀತಿಯಲ್ಲಿ ಚಲಿಸುತ್ತಿರುವುದನ್ನು ಗಮನಿಸಿ, ಅವ್ಯವಸ್ಥೆಯಿಂದ ಅದನ್ನು ವ್ಯವಸ್ಥೆಗೆ ಒಳಪಡಿಸಿದ.' (ಹೀಗೆ ಪ್ಲೇಟೋನ ದೇವರು, ಯೆಹೂದಿ ಮತ್ತು ಕ್ರಿಶ್ಚಿಯನ್ ದೇವರಂತಲ್ಲದೆ, ಶೂನ್ಯದಿಂದ ಜಗತ್ತನ್ನು ಸೃಷ್ಟಿಸಲಿಲ್ಲ, ಅದರ ಬದಲು ಹಿಂದೆಯೇ ಇದ್ದ ಸಾಮಗ್ರಿಯನ್ನು ಪುನರ್‌ವ್ಯವಸ್ಥೆಗೊಳಿಸಿದ.) ಆತ್ಮದಲ್ಲಿ ಅವನು ಬುದ್ಧಿಶಕ್ತಿಯನ್ನೂ, ದೇಹದಲ್ಲಿ ಆತ್ಮವನ್ನೂ ಇರಿಸಿದ. ಆತ್ಮ ಮತ್ತು ಬುದ್ಧಿಶಕ್ತಿಗಳಿಂದ ಕೂಡಿದ ಒಂದು ಜೀವಿಯಂತೆ ಅವನು ಒಟ್ಟಾರೆ ಜಗತ್ತನ್ನು ಮಾಡಿದ. ಇರುವುದು ಒಂದೇ ಜಗತ್ತೇ ವಿನಾ, ಅನೇಕ ಸಾಕ್ರಟೀಸ್‌ಪೂರ್ವದವರು ಹೇಳಿದಂತೆ, ಅನೇಕವಲ್ಲ. ಒಂದಕ್ಕಿಂತ ಹೆಚ್ಚು ಜಗತ್ತುಗಳಿರಲಾರವು, ಯಾಕೆಂದರೆ ದೇವರು ಗ್ರಹಿಸಿದ ಚಿರಂತನವಾದ ಮೂಲದಂತೆ ಆದಷ್ಟೂ ಇರುವಂತೆ ವಿನ್ಯಾಸಗೊಳಿಸಿ ಸೃಷ್ಟಿಸಿದ ನಕಲು ಅದು. ಇಡಿಯಾಗಿ ಜಗತ್ತು, ಮಿಕ್ಕೆಲ್ಲ ಪ್ರಾಣಿಗಳನ್ನೂ ತನ್ನಲ್ಲಿ ಒಳಗೊಂಡಿರುವ ಕಣ್ಣಿಗೆ ಕಾಣುವ ಒಂದು ಪ್ರಾಣಿ. ಅದೊಂದು ಗೋಲ, ಹಾಗಿರುವುದು ಹಾಗಿಲ್ಲದಿರುವುದಕ್ಕಿಂತ ಉತ್ತಮವಾದುದರಿಂದ, ಗೋಲ ಮಾತ್ರವೇ ಎಲ್ಲ ಕಡೆಯೂ ಒಂದೇ ರೀತಿಯಲ್ಲಿದೆ. ಅದು ಸುತ್ತುತ್ತದೆ, ಯಾಕೆಂದರೆ ವೃತ್ತಾಕಾರದ ಚಲನೆ ಅತ್ಯಂತ ಪರಿಪೂರ್ಣ; ಅಲ್ಲದೆ ಇದೊಂದೇ ಚಲನೆಯಾದ್ದರಿಂದ ಅದಕ್ಕೆ ಕೈಗಳಾಗಲೀ ಕಾಲುಗಳಾಗಲೀ ಬೇಕಿಲ್ಲ.

ಚತುರ್ಭೂತಗಳಾದ ಬೆಂಕಿ, ಗಾಳಿ, ನೀರು ಮತ್ತು ಮಣ್ಣುಗಳಲ್ಲಿ ಒಂದೊಂದೂ ಒಂದು ಸಂಖ್ಯೆಯಿಂದ ಪ್ರತಿನಿಧಿತವಾಗಿರುವುದು ಸ್ಪಷ್ಟವಾಗಿದೆ, ಅವು ಒಂದೇ ಅನುಪಾತದಲ್ಲಿವೆ; ಅಂದರೆ ಬೆಂಕಿ, ಗಾಳಿ, ನೀರು ಮತ್ತು ಮಣ್ಣುಗಳು ಸಂಬಂಧಿತ ಪ್ರಮಾಣಾನುಗುಣವಾಗಿವೆ. ದೇವರು ಜಗತ್ತನ್ನು ಈ ಎಲ್ಲ ನಾಲ್ಕನ್ನೂ ಬಳಸಿಕೊಂಡು ನಿರ್ಮಿಸಿದ. ಹೀಗಾಗಿ ಅದು ಪರಿಪೂರ್ಣವಾಗಿದೆ ಮತ್ತು ಅದಕ್ಕಾಗಿಯೇ ಅದು ಮುಪ್ಪು ಮತ್ತು ರೋಗಗಳಿಗೆ ಒಳಗಾಗುವುದಿಲ್ಲ. ಅದು ಪ್ರಮಾಣಾನುಗುಣವಾಗಿ ಸಾಮರಸ್ಯದಿಂದ ಕೂಡಿದೆ, ಇದು ಸ್ನೇಹಪರತೆಯನ್ನುಂಟುಮಾಡುವಂತಹುದು, ಮತ್ತು ಇದರಿಂದಾಗಿ ದೇವರಿಂದಲ್ಲದೆ ವಿಘಟಿತವಾಗಲಾರದು.

ದೇವರು ಮೊದಲು ಆತ್ಮವನ್ನು, ಆನಂತರ ದೇಹವನ್ನು ಮಾಡಿದ. ಆತ್ಮವು ಅವಿಭಜನೀಯ-ಬದಲಾಗದ ಮತ್ತು ವಿಭಜನೀಯ-ಬದಲಾಗುವುಗಳ ಸಂಯುಕ್ತವಾಗಿದ್ದು, ಅದು ಮಧ್ಯವರ್ತಿಯಾದ ಸಾರವಾಗಿದೆ.

ಇನ್ನು ಮುಂದೆ ಗ್ರಹಗಳ ಬಗೆಗಿನ ಪೈಥಾಗೊರಾಸ್‌ನ ವಿವರಣೆ ಬರುತ್ತದೆ, ಅದು ಕಾಲದ ಮೂಲವನ್ನು ಕುರಿತು ಹೇಳುತ್ತದೆ:

ತಂದೆ ಸೃಷ್ಟಿಕರ್ತನು ತಾನು ಚಲಿಸುವ ಮತ್ತು ಜೀವಂತವಾಗಿರುವಂತೆ ಮಾಡಿರುವ, ಚಿರಂತನ ದೇವತೆಗಳ ಪ್ರತಿಕೃತಿಯಾದ ಜೀವಿಯನ್ನು ನೋಡಿದಾಗ, ಅವನು ಸಂತಸಗೊಂಡ; ಮತ್ತು ತನ್ನ ಆನಂದದಲ್ಲಿ ನಕಲನ್ನು ಮೂಲಕ್ಕೆ ಮತ್ತಷ್ಟು ಹತ್ತಿರವಾಗುವಂತೆ ಮಾಡಬೇಕೆಂದು ನಿರ್ಧರಿಸಿದ. ಇದು ಚಿರಂತನವಾದದ್ದರಿಂದ, ಅವನು ವಿಶ್ವವನ್ನು ಸಾಧ್ಯವಾದಷ್ಟೂ ಚಿರಂತನವನ್ನಾಗಿ ಮಾಡಲು ನೋಡಿದ. ಆದರ್ಶಜೀವಿಯ ಸ್ವಭಾವವು ಚಿರಂಜೀವಿಯಾದ್ದರಿಂದ ಅದನ್ನು ಸಂಪೂರ್ಣವಾಗಿ ಜೀವಿಯೊಂದಕ್ಕೆ ಸೇರಿಸುವುದು ಅಸಾಧ್ಯವಾಗಿತ್ತು. ಹೀಗಾಗಿ ಚಿರಂತನೆಯ ಚಲನಶೀಲ ಪ್ರತಿಕೃತಿಯನ್ನು ಮಾಡಲು ಅವನು ನಿರ್ಧರಿಸಿದ, ಮತ್ತವನು ಸ್ವರ್ಗವನ್ನು ವ್ಯವಸ್ಥೆಗೊಳಿಸಿದ ಮೇಲೆ ಈ ಪ್ರತಿಕೃತಿಯನ್ನು ಚಿರಂತನಗೊಳಿಸಿದ. ಆದರೆ ಅದರ ಸಂಖ್ಯಾನುಗುಣವಾಗಿ ಚಲನಶೀಲವಾಗಿಸಿದರೂ ಚಿರಂತನೆಯು ತನ್ನಲ್ಲೇ ಐಕ್ಯತೆಯಿಂದ ಕೂಡಿರುವಂತೆ ಮಾಡಿದ. ಈ ಪ್ರತಿಕೃತಿಯನ್ನೇ ನಾವು ಕಾಲವೆನ್ನುವುದು.[೬೦]

ಇದಲ್ಲದೆ, ರಾತ್ರಿಗಳಾಗಲೀ ಹಗಲುಗಳಾಗಲೀ ಇರಲಿಲ್ಲ. ಚಿರಂತನತೆಯ ಸಾರದ ಬಗ್ಗೆ ನಾವು ಅದು ಇತ್ತು ಅಥವಾ ಇರುತ್ತದೆ ಎಂದು ಹೇಳಬಾರದು; ಇದೆ ಎಂಬುದಷ್ಟೇ ಸರಿ. 'ಚಿರಂತನೆಯ ಚಲಿಸುವ ಪ್ರತಿಕೃತಿ'ಯಲ್ಲಿಯೇ ಅದು ಇತ್ತು ಮತ್ತು ಇರುತ್ತದೆ ಎಂಬುದೂ ಸೂಚಿತವಾಗಿದೆ.

ಕಾಲ ಮತ್ತು ಸ್ವರ್ಗಗಳು ಒಟ್ಟಿಗೇ ಅಸ್ತಿತ್ವಕ್ಕೆ ಬಂದುವು. ಪ್ರಾಣಿಗಳು ಅಂಕಗಣಿತವನ್ನು ಕಲಿಯಲು ಸಹಾಯಕವಾಗುವಂತೆ ದೇವರು ಸೂರ್ಯನನ್ನು ಮಾಡಿದ-ರಾತ್ರಿ ಹಗಲುಗಳ ಪರ್ಯಾಯಗಳಿಲ್ಲದೆ ನಾವು ಸಂಖ್ಯೆಗಳ ಬಗ್ಗೆ ಯೋಚಿಸಲಾಗುತ್ತಿರಲಿಲ್ಲ ಎಂದು ಅಂದುಕೊಳ್ಳಬೇಕು. ಹಗಲು ರಾತ್ರಿ, ತಿಂಗಳು ವರ್ಷಗಳ ನೋಟವು ಸಂಖ್ಯೆಯ ಪರಿಜ್ಞಾನವನ್ನು ಉಂಟುಮಾಡಿ ಕಾಲದ ಪರಿಕಲ್ಪನೆಯನ್ನು ನೀಡಿದೆ, ಇದರಿಂದ ತತ್ತ್ವಜ್ಞಾನವು ಬಂದಿದೆ. ಇದು ನೋಟದಿಂದ ದತ್ತವಾದ ಅತ್ಯಂತ ದೊಡ್ಡ ವರ.

---

೬೦. ವಾಘನ್ 'ಐ ಸಾ ಇಟರ್ನಿಟಿ ದ ಅದರ್ ನೈಟ್' ಎಂದು ಮೊದಲಾಗುವ ಕವನವನ್ನು ಬರೆದಾಗ ಈ ಭಾಗವನ್ನು ಓದುತ್ತಿದ್ದಿರಬೇಕು.

ಇಡೀ ಜಗತ್ತಿನ ಹೊರತಾಗಿ, ನಾಲ್ಕು ಬಗೆಯ ಜೀವಿಗಳಿವೆ: ದೇವತೆಗಳು, ಪಕ್ಷಿಗಳು, ಮೀನುಗಳು ಮತ್ತು ಭೂಪ್ರಾಣಿಗಳು. ದೇವತೆಗಳು ಮುಖ್ಯವಾಗಿ ಬೆಂಕಿ; ಸ್ಥಿರ ನಕ್ಷತ್ರಗಳು ದೈವಿಕವಾದ ಚಿರಂತನ ಪ್ರಾಣಿಗಳು. ತಾನು ಅವರನ್ನು ನಾಶಗೊಳಿಸಬಲ್ಲೆನೆಂದೂ, ಆದರೆ ತಾನು ಹಾಗೆ ಮಾಡುವುದಿಲ್ಲವೆಂದೂ, ಸೃಷ್ಟಿಕರ್ತನು ದೇವತೆಗಳಿಗೆ ಹೇಳಿದ. ದೈವಿಕವೂ ಅಮರವೂ ಆದ ಭಾಗವನ್ನು ಮಾಡಿದ ಸೃಷ್ಟಿಕರ್ತನು ಮಿಕ್ಕೆಲ್ಲ ಮರ್ತ್ಯ ಪ್ರಾಣಿಗಳನ್ನು ಮಾಡುವ ಜವಾಬ್ದಾರಿಯನ್ನು ಅವರಿಗೆ ನೀಡಿದ. (ದೇವತೆಗಳ ಬಗೆಗಿನ ಈ ಮತ್ತು ಪ್ಲೇಟೋನಲ್ಲಿ ಬರುವ ಮುಂದಿನ ಭಾಗಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿಲ್ಲ. ತಾನು ಸಂಭವನೀಯತೆಯನ್ನು ನಿರೀಕ್ಷಿಸುವವನೇ ಹೊರತು ಆ ಕುರಿತು ತನಗೆ ಖಚಿತತೆಯಿಲ್ಲ ಎಂದು ಮೊದಲಿಗೇ ಟೈಮೇಯಸ್ ಹೇಳುತ್ತಾನೆ. ಅನೇಕ ವಿವರಗಳು ಕಲ್ಪನಾತ್ಮಕವಾದುವೇ ಹೊರತು ಅಕ್ಷರಶಃ ಅರ್ಥಮಾಡಬಾರದೆಂಬುದು ಸ್ಪಷ್ಟವಾಗಿದೆ.)

ಪ್ರತಿ ನಕ್ಷತ್ರಕ್ಕೂ ಸೃಷ್ಟಿಕರ್ತನು ಒಂದು ಆತ್ಮವನ್ನು ಮಾಡಿದನೆಂದು ಟೈಮೇಯಸ್ ಹೇಳುತ್ತಾನೆ. ಆತ್ಮಗಳಿಗೆ ಸಂವೇದನೆ, ಪ್ರೇಮ, ಭಯ, ಮತ್ತು ಕೋಪಗಳಿರುತ್ತವೆ; ಇವುಗಳನ್ನು ಮೀರಿದಾಗ ಅವು ನ್ಯಾಯನಿಷ್ಠವಾಗಿ ಬದುಕುತ್ತವೆ, ಇಲ್ಲದಿದ್ದರೆ ಇಲ್ಲ. ಮನುಷ್ಯನೊಬ್ಬನು ಚೆನ್ನಾಗಿ ಬಾಳಿದರೆ, ಸಾವಿನ ನಂತರ ತನ್ನ ನಕ್ಷತ್ರದಲ್ಲಿ ಚಿರಂತನ ಸುಖದಿಂದ ಬದುಕುತ್ತಾನೆ. ಆದರೆ ಕೆಟ್ಟದಾಗಿ ಬದುಕಿದರೆ, ಅವನು ಮುಂದಿನ ಜನ್ಮದಲ್ಲಿ ಹೆಂಗಸಾಗುತ್ತಾನೆ. ಅವನು (ಅಥವಾ ಅವಳು) ಕೆಟ್ಟುದನ್ನು ಮಾಡುವುದನ್ನು ಮುಂದುವರಿಸಿದರೆ, ಅವನು (ಅಥವಾ ಅವಳು) ನಿರ್ದಯಿಯಾಗುತ್ತಾಳೆ, ಮತ್ತು ಅದನ್ನು ಗೆಲ್ಲುವವರೆಗೂ ಮರುವುಟ್ಟು ಪಡೆಯುತ್ತಲೇ ಇರಬೇಕಾಗುತ್ತದೆ. ದೇವರು ಕೆಲವು ಆತ್ಮಗಳನ್ನು ಭೂಮಿಯ ಮೇಲೆಯೂ, ಕೆಲವನ್ನು ಚಂದ್ರನ ಮೇಲೆಯೂ, ಮತ್ತೆ ಕೆಲವನ್ನು ಗ್ರಹಗಳು ಮತ್ತು ನಕ್ಷತ್ರಗಳಲ್ಲಿಯೂ ಇಟ್ಟು ಅವುಗಳ ದೇಹವನ್ನು ವಿನ್ಯಾಸಗೊಳಿಸುವುದನ್ನು ದೇವತೆಗಳಿಗೆ ವಹಿಸಿದ.

ಎರಡು ಬಗೆಯ ಕಾರಣಗಳಿವೆ: ಬುದ್ಧಿವಂತವಾದವು ಮತ್ತು ಇತರರಿಂದ ಚಲನಶೀಲವಾಗಿ ತಾವೂ ಇತರವನ್ನು ಚಲನಶೀಲವಾಗುವಂತೆ ಮಾಡುವಂತಹುವು. ಮೊದಲನೆಯವು ಮನಸ್ಸಿನಿಂದ ಕೂಡಿದವು, ಒಳ್ಳೆಯ ಹಾಗೂ ನ್ಯಾಯಪರವಾದ ವಸ್ತುಗಳನ್ನು ಮಾಡುವ ಕೆಲಸಗಾರರು. ಎರಡನೆಯ ಗುಂಪಿನವು ವಿನ್ಯಾಸ ಅಥವಾ ಕ್ರಮಗಳಿಲ್ಲದ ಎಗ್ರಾಬಿರ್ರಿ ಪರಿಣಾಮಗಳನ್ನು ಮಾಡುವಂತಹುವು. ಎರಡೂ ಬಗೆಗಳನ್ನು ಕುರಿತು ಅರಿಯಬೇಕು, ಏಕೆಂದರೆ ಸೃಷ್ಟಿಯು ಆವಶ್ಯಕತೆ ಮತ್ತು ಮನಸ್ಸುಗಳ ಮಿಶ್ರಣ. (ಆವಶ್ಯಕತೆಯು ದೇವರ ಸಾಮರ್ಥ್ಯಕ್ಕೊಳಪಡುವುದಲ್ಲ) ಆವಶ್ಯಕತೆಯಿಂದ

ಮಾಡಲಾದ ಭಾಗದ ಬಗ್ಗೆ ಟೈಮೇಯಸ್ ಮುಂದೆ ವಿವೇಚಿಸುತ್ತದೆ.[೬೧]

ಮಣ್ಣು, ಗಾಳಿ ಮತ್ತು ನೀರುಗಳು ಮೊದಲ ತತ್ವಗಳೂ ಅಲ್ಲ, ಮೊದಲಕ್ಷರಗಳಾಗಲೀ ಮೂಲವಸ್ತುಗಳಾಗಲೀ ಅಲ್ಲ, ಅಥವಾ ಅಕ್ಷರಗಳೋ ಅಥವಾ ಸಂಯುಕ್ತಗಳೋ ಅಲ್ಲ. ನಿದರ್ಶನಕ್ಕೆ, ಬೆಂಕಿಯನ್ನು 'ಇದು' ಎನ್ನುಬಾರದು 'ಇಂತಹ' ಎನ್ನಬೇಕು – ಅಂದರೆ, ಅದೊಂದು ಭೌತವಸ್ತುವಲ್ಲ, ಭೌತವಸ್ತುವಿನ ಒಂದು ಸ್ಥಿತಿ. ಈ ಹಂತದಲ್ಲಿ ಒಂದು ಪ್ರಶ್ನೆಯನ್ನೆತ್ತಲಾಗಿದೆ: ಗ್ರಾಹ್ಯ ಸತ್ವಗಳು ಕೇವಲ ಹೆಸರುಗಳಲ್ಲವೇ? ಇದಕ್ಕೆ ಉತ್ತರವು ಮನಸ್ಸು ನಿಜವಾದ ಅಭಿಪ್ರಾಯವೋ ಅಲ್ಲವೋ ಎಂಬ ಕಡೆ ತಿರುಗುತ್ತದೆ ಎನ್ನಲಾಗಿದೆ. ಅಲ್ಲದಿದ್ದರೆ, ಜ್ಞಾನ ಎಂದರೆ ಸತ್ವದ ಜ್ಞಾನವಾಗಿರಬೇಕು, ಹೀಗಾಗಿ ಸತ್ವವು ಕೇವಲ ಹೆಸರುಗಳಾಗಲಾರವು. ಈಗ, ಮನಸ್ಸು ಮತ್ತು ನಿಜವಾದ ಅಭಿಪ್ರಾಯಗಳು ಭಿನ್ನವಾದರೆ – ಯಾಕೆಂದರೆ ಒಂದನ್ನು ಶಿಕ್ಷಣದಿಂದ ಕಲಿಸಬಹುದು ಮತ್ತೊಂದನ್ನು ಅನುನಯದಿಂದ – ಒಂದರೊಡನೆ ನಿಜವಾದ ಕಾರಣವಿರುತ್ತದೆ, ಆದರೆ ಮತ್ತೊಂದರೊಡನೆ ಅಲ್ಲ. ಎಲ್ಲ ವ್ಯಕ್ತಿಗಳೂ ನಿಜವಾದ ಅಭಿಪ್ರಾಯಕ್ಕೆ ಭಾಗಿಗಳು, ಆದರೆ ಮನಸ್ಸು ದೇವತೆಗಳ ವಿಶೇಷಗಳು ಮತ್ತು ಕೆಲವೇ ವ್ಯಕ್ತಿಗಳಲ್ಲಿರುವಂತಹವು.

ಸತ್ವದ ಜ್ಞಾನ ಮತ್ತು ಕ್ಷಣಿಕ ಇಂದ್ರಿಯಗ್ರಾಹ್ಯ ವಸ್ತುಗಳ ನಡುವಣ ಅವಕಾಶದ ಕುತೂಹಲಕಾರಕ ಸಿದ್ಧಾಂತದೆಡೆಗೆ ನಮ್ಮನ್ನು ಒಯ್ಯುತ್ತದೆ:

> **ಎಲ್ಲ ಕಾಲಕ್ಕೂ ಒಂದೇ ಅಗಿರುವ, ಸೃಷ್ಟಿತವಾಗದ ಹಾಗೂ ವಿನಾಶಗೊಳಿಸಲಾರದ, ಒಂದು ಬಗೆಯ ವಸ್ತುವಿದೆ, ಅದು ಹೊರಗಿನಿಂದ ತನ್ನೊಳಗೆ ಏನನ್ನೂ ಸೇರಿಸಿಕೊಳ್ಳುವುದಿಲ್ಲ, ಅಥವಾ ತಾನು ಬೇರಯದರೊಳಗೆ ಹೋಗುವುದೂ ಇಲ್ಲ, ಆದರೆ ಇಂದ್ರಿಯಗ್ರಾಹ್ಯತೆಗೆ ಒಳಗಾಗದಂತಹುದು, ಅದರ ಬಗೆಗಿನ ಚಿತ್ತೈಕಾಗ್ರತೆಯು ಬುದ್ಧಿಶಕ್ತಿಗೆ ಮಾತ್ರ ಸಾಧ್ಯವಾಗುವಂತಹುದು. ಅಲ್ಲದೆ, ಅದರಲ್ಲಿ ಮತ್ತು ಅದರಂತೆಯೇ, ಇಂದ್ರಿಯಗ್ರಾಹ್ಯವೂ, ಸೃಷ್ಟಿತವಾದದ್ದೂ, ಮತ್ತು ಸದಾ ಚಲನಶೀಲವೂ, ಒಮ್ಮೆ ಸ್ಥಳದಲ್ಲಿ ಕಾಣಿಸಿಕೊಂಡು ಮತ್ತೊಮ್ಮೆ ಕಣ್ಮರೆಯಾಗುವಂತಹುದೂ, ಅಭಿಪ್ರಾಯ ಮತ್ತು ವಿವೇಚನೆಯಿಂದ ಗ್ರಹಿಸಬಹುದಾದುದೂ ಆದ ಅದೇ ಹೆಸರಿನ ಮತ್ತೊಂದು ಸ್ವಭಾವವೂ ಇರುತ್ತದೆ, ಇದರೊಡನೆ ಮೂರನೆಯ ಸ್ವಭಾವವೂ ಒಂದಿದೆ: ಅದೆಂದರೆ ಅವಕಾಶ, ಚಿರಂತನವಾದದ್ದು, ವಿನಾಶಕ್ಕೆ ಆಸ್ಪದವೀಯದ ಮತ್ತು ಎಲ್ಲ ಸೃಷ್ಟಿತ ವಸ್ತುಗಳಿಗೂ**

---

೬೧. 'ಆವಶ್ಯಕತೆಯನ್ನು ಆಧುನಿಕ ಪರಿಕಲ್ಪನೆಯಾದ ನಿಯತಿವಾದಕ್ಕನುಗುಣವಾದ ನಿಯಮ ಎಂಬುವುದರೊಡನೆ ಗೊಂದಲಗೊಳಿಸಬಾರದೆಂದು ಕಾರ್ನ್‌ಫರ್ಡ್ (ಪೂರ್ವೋಕ್ತ) ಹೇಳುತ್ತಾರೆ. 'ಆವಶ್ಯಕತೆಯ ಮೂಲಕ ಸಂಭವಿಸುವ ವಸ್ತುಗಳು ಒಂದು ಉದ್ದೇಶದ ಕಾರಣದಿಂದ ಆದುವಲ್ಲ, ಅವು ಅಸ್ತವ್ಯಸ್ತವೂ ನಿಯಮಗಳಿಗೆ ಹೊರತಾದುವೂ ಆದವು'.

ನೆಲೆಯೊದಗಿಸುವ ಮತ್ತು ಇಂದ್ರಿಯದ ನೆರವಿಲ್ಲದೆ, ಒಂದು ಬಗೆಯ ಹುಸಿ ತರ್ಕದಿಂದ ಗ್ರಹಿಸಬಹುದಾದುದು, ಆದರೆ ವಾಸ್ತವವಲ್ಲದ್ದು. ಕನಸಿನಲ್ಲಿ ನಾವು ಕಾಣುವಂತಹುದು, ಅಸ್ತಿತ್ವದಲ್ಲಿರುವ ಎಲ್ಲವೂ, ಒಂದು ಸ್ಥಳದಲ್ಲಿದ್ದು ಅವಕಾಶವನ್ನು ಆಕ್ರಮಿಸಿಕೊಳ್ಳುವುದೆಂದು ಹೇಳುವಂತಹುದ್ದು, ಆದರೆ ಸ್ವರ್ಗದಲ್ಲಾಗಲೀ ಭೂಮಿಯ ಮೇಲಾಗಲೀ ಅಸ್ತಿತ್ವವಿಲ್ಲದ್ದು.

ಇದು ತುಂಬ ಕಠಿಣವಾದ ಭಾಗ, ಅದನ್ನು ನಾನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿರುವೆನೆಂದು ಹೇಳಿಕೊಳ್ಳಲಾರೆ. ಇಲ್ಲಿ ಹೇಳಲಾದ ಸಿದ್ಧಾಂತವು, ಜ್ಯಾಮಿತಿಯ ಬಗೆಗಿನ ಆಲೋಚನೆಯಿಂದ ಉಂಟಾದದ್ದೆಂದು ನನ್ನ ಭಾವನೆ. ಅಂಕಗಣಿತದಂತೆ ಶುದ್ಧ ತರ್ಕದ ವಿಷಯದಂತೆ ಕಾಣಿಸಿದರೂ, ಅವಕಾಶಕ್ಕೆ ಸಂಬಂಧಿಸಿದ್ದಾಗಿಯೂ ಇಂದ್ರಿಯಗ್ರಾಹ್ಯ ಜಗತ್ತಿನ ಭಾಗವಾಗಿಯೂ ತೋರುವಂತಹುದ್ದು. ಒಟ್ಟಾರೆ, ಮುಂದಿನ ತತ್ವಜ್ಞಾನಿಗಳಲ್ಲಿ ಸಾದೃಶ್ಯಗಳನ್ನು ಹೊಂದಿರುವುದು ಆಶ್ಚರ್ಯಕರ; ಅವಕಾಶದ ಬಗೆಗಿನ ಈ ದೃಷ್ಟಿಕೋನವನ್ನು ಕ್ಯಾಂಟ್ ಇಷ್ಟಪಡುತ್ತಿದ್ದನೆಂದು ನನ್ನ ಭಾವನೆ, ಏಕೆಂದರೆ ಅದು ಅವನ ಕಲ್ಪನೆಗೆ ಹತ್ತಿರವಾಗಿದೆ.

ಭೌತ ಜಗತ್ತಿನ ನಿಜವಾದ ಮೂಲವಸ್ತುಗಳು ಮಣ್ಣು, ಗಾಳಿ, ಬೆಂಕಿ ಮತ್ತು ನೀರುಗಳಲ್ಲ, ಅವು ಎರಡು ಬಗೆಯ ಸಮಕೋನ ತ್ರಿಭುಜಗಳು, ಅರ್ಧ ಚೌಕಾಕಾರವಾದ ಒಂದು, ಮತ್ತೊಂದು ಅರ್ಧ, ಅದಕ್ಕೆ ಸಮಾನವಾದ ಸಮಬಾಹು ತ್ರಿಭುಜ. ಮೂಲತಃ ಎಲ್ಲವೂ ಗೊಂದಲಮಯವಾಗಿತ್ತು, ಮತ್ತು 'ಕ್ರಮಬದ್ಧಗೊಳಿಸಿ ಒಂದು ವಿಶ್ವವನ್ನಾಗಿ ರೂಪಿಸುವ ಮುಂಚೆ ಮೂಲವಸ್ತುಗಳು ಬೇರೆ ಬೇರೆ ಸ್ಥಳಗಳಲ್ಲಿದ್ದವು.' ಆಗ ದೇವರು ಆಕಾರ ಮತ್ತು ಸಂಖ್ಯೆಗಳ ಮೂಲಕ ಅವನ್ನು ರೂಪಿಸಿದ, ಮತ್ತು 'ಸುಂದರವೂ ಅಲ್ಲದ ಉತ್ತಮವೂ ಅಲ್ಲದ ರೀತಿಯಲ್ಲಿದ್ದ ಅವುಗಳನ್ನು ಸಾಧ್ಯವಾದಷ್ಟೂ ಅತ್ಯಂತ ಸುಂದರವಾದುದೂ ಉತ್ತಮವಾದುದೂ ಆಗುವಂತೆ ಮಾಡಿದ.' ಮೇಲೆ ಹೇಳಿದ ಎರಡೂ ಬಗೆಯ ತ್ರಿಕೋನಗಳು ಅತ್ಯಂತ ಸುಂದರವಾದುವು, ಹೀಗಾಗಿಯೇ ದೇವರು ಅವುಗಳನ್ನು ಭೌತವಸ್ತುನಿರ್ಮಾಣಕ್ಕೆ ಬಳಸಿಕೊಂಡ ಎಂದು ಹೇಳಲಾಗಿದೆ. ಈ ಎರಡೂ ಬಗೆಯ ತ್ರಿಕೋನಗಳಿಂದ, ಐದು ಬಗೆಯ ಸಮಮುಖಿ ಘನಾಕೃತಿ (ರೆಗ್ಯುಲರ್ ಸಾಲಿಡ್) ಗಳಲ್ಲಿ ನಾಲ್ಕನ್ನು ನಿರ್ಮಿಸಬಹುದು, ಮತ್ತು ನಾಲ್ಕು ಮೂಲವಸ್ತುಗಳಲ್ಲಿನ ಒಂದರ ಪ್ರತಿ ಪರಮಾಣುವೂ ಸಮಮುಖಿ ಘನಾಕೃತಿಯಾಗಿದೆ. ಮಣ್ಣಿನ ಪರಮಾಣುಗಳು ಘನಗಳು (ಕ್ಯೂಬ್); ಬೆಂಕಿಯವು ಚತುರ್ಮುಖಿ (ಟೆಟ್ರಾಹೆಡ್ರನ್); ಗಾಳಿಯವು ಅಷ್ಟಮುಖಿ (ಆಕ್ಟಾಹೆಡ್ರನ್), ಮತ್ತು ನೀರಿನವು ವಿಂಶತಿಮುಖಿ (ಐಕಸಾಹೆಡ್ರನ್). [ಸದ್ಯದಲ್ಲಿಯೇ ನಾನು ದ್ವಾದಶಮುಖಿ (ಡೋಡೆಕಾಹೆಡ್ರನ್)ಗಳ ವಿಷಯಕ್ಕೆ ಬರುತ್ತೇನೆ.]

ಯೂಕ್ಲಿಡ್‌ನ ಹದಿಮೂರನೆಯ ಭಾಗದಲ್ಲಿ ಮಂಡಿಸಿರುವ ಸಮಮುಖಿ ಘನಾಕೃತಿಗಳ ಸಿದ್ಧಾಂತವು, ಪ್ಲೇಟೋನ ಕಾಲದಲ್ಲಿ, ಈಚಿನ ಅನ್ವೇಷಣೆ; ಅದನ್ನು ಟೈಮಿಯೇಸ್ ಪೂರ್ಣಗೊಳಿಸಿದ. ಸಂವಾದದಲ್ಲಿ ಅವನ ಹೆಸರಿನವನು ಯುವಕನಂತೆ ಕಾಣಿಸುತ್ತಾನೆ. ಪರಂಪರೆಯ ಪ್ರಕಾರ, ಐದೇ ಬಗೆಯ ಚತುರ್ಮುಖೀ ಘನಾಕೃತಿಗಳಿವೆ ಎಂಬುದನ್ನು ಮೊದಲು ಸಾಧಿಸಿ ಹೇಳಿದವನು ಅವನೇ, ಅಲ್ಲದೆ ಅವನು ಅಷ್ಟಮುಖಿ (ಆಕ್ಟಾಹೆಡ್ರನ್) ಮತ್ತು ವಿಂಶತಿಮುಖಿ (ಐಕಸಾಹೆಡ್ರನ್) ಗಳನ್ನು ಕಂಡುಹಿಡಿದ.[೬೨] ಸಮಮುಖೀ ಚತುರ್ಮುಖಿ, ಅಷ್ಟಮುಖಿ ಮತ್ತು ವಿಂಶತಿಮುಖಿಗಳು ಸಮಬಾಹು ತ್ರಿಕೋನಗಳನ್ನು ತಮ್ಮ ಹೊರಮೈಗಳಾಗಿ ಪಡೆದಿವೆ; ದ್ವಾದಶಮುಖಿಯಲ್ಲಿ ಸಮಮುಖೀ ಪಂಚಬಾಹುಗಳು; ಹೀಗಾಗಿ ಪ್ಲೇಟೋ ಹೇಳುವ ಎರಡು ತ್ರಿಕೋನಗಳಿಂದ ರಚಿಸಲು ಸಾಧ್ಯವಿಲ್ಲ. ಇದೇ ಕಾರಣಕ್ಕಾಗಿಯೇ ಅವನು ನಾಲ್ಕು ಮೂಲವಸ್ತುಗಳ ವಿಷಯದಲ್ಲಿ ಅವುಗಳನ್ನು ಬಳಸುವುದಿಲ್ಲ.

ದ್ವಾದಶಮುಖಿಯ ಬಗ್ಗೆ, ಪ್ಲೇಟೋ ಹೇಳುವುದೆಂದರೆ, 'ವಿಶ್ವನಿರ್ಮಾಣದಲ್ಲಿ ದೇವರು ಬಳಸಿಕೊಂಡದ್ದರಲ್ಲಿ ಐದನೆಯ ಒಂದು ಭಾಗ ಇದೇ' ಎಂದು. ಇದು ಅಸ್ಪಷ್ಟ ಹೇಳಿಕೆ, ವಿಶ್ವವು ದ್ವಾದಶಮುಖಿಯಾದುದು ಎಂದು ಸೂಚಿಸುತ್ತದೆ, ಆದರೆ ಬೇರೆ ಕಡೆ ಅದು ಗೋಲಾಕಾರವಾದುದು ಎಂದು ಕರೆದಿದೆ.[೬೩] ಐಮೂಲೆಯ ನಕ್ಷತ್ರವು ಯಕ್ಷಿಣಿಯಲ್ಲಿ ಯಾವಾಗಲೂ ಮುಖ್ಯ ಪಾತ್ರ ವಹಿಸುತ್ತಿತ್ತು. ಮತ್ತು ಈ ನಿಲವಿಗೆ ಪೈಥಾಗೊರಾಸ್‌ಪಂಥೀಯರು ಮೂಲ, ಅದನ್ನವರು 'ಆರೋಗ್ಯ' ಎಂದು ಕರೆದರು, ಮತ್ತು ಸೋದರಬಳಗದ ಸದಸ್ಯರನ್ನು ಗುರುತಿಸಲು ಬಳಸುತ್ತಿದ್ದರು.[೬೪] ದ್ವಾದಶಮುಖಿಯು ತನ್ನ ಹೊರಮೈಯಲ್ಲಿ ಪಂಚಮುಖಿಗಳನ್ನು ಹೊಂದಿರುತ್ತದೆಂಬ, ಮತ್ತು ಒಂದರ್ಥದಲ್ಲಿ, ವಿಶ್ವದ ಸಂಕೇತ ಎಂಬ ವಸ್ತುಸ್ಥಿತಿಯು ಅದರ ಗುಣಲಕ್ಷಣಗಳಿಗೆ ಕಾರಣವಿದ್ದಂತೆ ತೋರುತ್ತದೆ. ಈ ವಿಷಯವು ಆಕರ್ಷಕವಾಗಿದೆಯಾದರೂ ಅದರ ನಿಖರತೆಯ ಬಗ್ಗೆ ಖಚಿತವಾಗಿ ಹೇಳುವುದು ಕಷ್ಟ.

ಸಂವೇದನೆಯ ಬಗ್ಗೆ ಚರ್ಚೆಯಾದ ಮೇಲೆ ಟೈಮೇರಿಯಸ್ ಮುಂದುವರಿದು ಮನುಷ್ಯನಲ್ಲಿನ ಎರಡು ಆತ್ಮಗಳ ಬಗ್ಗೆ ವಿವರಿಸಲು ತೊಡಗುತ್ತಾನೆ. ಒಂದು ಅಮರವಾದದ್ದು, ಮತ್ತೊಂದು ಮರ್ತ್ಯ; ಒಂದನ್ನು ದೇವರು ಸೃಷ್ಟಿಸಿದ್ದರೆ, ಮತ್ತೊಂದನ್ನು ದೇವತೆಗಳು. ಮರ್ತ್ಯ ಆತ್ಮವು 'ಭಯಾನಕವೂ ಅಪ್ರತಿರೋಧ್ಯವೂ ಆದ ರಾಗಭಾವಗಳಿಗೆ ಒಳಗಾಗುವಂತಹುದು – ಮೊದಲನೆಯದಾಗಿ, ಕೆಡುಕು ಮಾಡಲು ಪ್ರಬಲ ಪ್ರಚೋದನೆಯಾದ ಸಂತೋಷ; ಆನಂತರ ನೋವು,

---

೬೨. ನೋಡಿ, ಹೀತ್, 'ಗ್ರೀಕ್ ಮ್ಯಾಥಮಾಟಿಕ್ಸ್', ಸಂ. ೧, ಪು. ೧೫೯, ೧೬೨, ೨೯೪–೨೯೬.
೬೩. ಈ ಎರಡೂ ಹೇಳಿಕೆಗಳ ಸಮನ್ವಯಕ್ಕಾಗಿ ನೋಡಿ, ಕಾರ್ನ್‌ಫರ್ಡ್, ಪೂರ್ವೋಕ್ತ, ಪು.೨೧೯.
೬೪. ಹೀತ್, ಪೂರ್ವೋಕ್ತ, ಪು. ೧೬೧.

ಒಳ್ಳೆಯದರಿಂದ ದೂರವಿರಿಸುವಂತಹುದು; ಮತ್ತೆರಡು ಮೂರ್ಖ ಸಲಹೆಗಾರರಾದ ದುಡುಕು ಮತ್ತು ಭಯ, ಮತ್ತು ದುರ್ದಮನೀಯವಾದ ಕೋಪ, ಮತ್ತು ಸುಲಭವಾಗಿ ದಾರಿ ತಪ್ಪಿಸುವ ಭರವಸೆ; ಇವುಗಳನ್ನು ಅವರು (ದೇವತೆಗಳು) ಎಲ್ಲ ಪ್ರೀತಿಯಿಂದ ತರ್ಕಹೀನ ಇಂದ್ರಿಯಗಳೊಡನೆ ಬೆರೆಸಿದರು, ಮತ್ತು ಮನುಷ್ಯರನ್ನು ರೂಪಿಸಿದರು.'

ಅಮರ ಆತ್ಮವು ತಲೆಯಲ್ಲಿದ್ದರೆ, ಮರ್ತ್ಯದ್ದು ಎದೆಯಲ್ಲಿರುತ್ತದೆ.

ಕರುಳುಗಳ ಉದ್ದೇಶವೆಂದರೆ ಆಹಾರವನ್ನು ಒಳಗಿರಿಸಿಕೊಂಡು ಹೊಟ್ಟೆಬಾಕತನವನ್ನು ತಡೆಯುವುದು ಎಂಬಂತಹ ಸ್ವಾರಸ್ಯಕರ ಶರೀರವಿಜ್ಞಾನವಿದೆ, ಮತ್ತದರಲ್ಲಿ ಜನ್ಮಾಂತರದ ಬಗೆಗಿನ ಮತ್ತೊಂದು ವಿವರಣೆಯಿದೆ. ಹೇಡಿಗಳೂ ನೀಚರೂ ಆದ ಗಂಡಸರು ಮುಂದಿನ ಜನ್ಮದಲ್ಲಿ ಹೆಂಗಸರಾಗುತ್ತಾರೆ. ಗಣಿತದ ಜ್ಞಾನವಿಲ್ಲದೆಯೇ ನಕ್ಷತ್ರಗಳನ್ನು ನೋಡಿಯೇ ಖಗೋಳವಿಜ್ಞಾನವನ್ನು ಕಲಿಯಬಹುದೆಂದು ಭಾವಿಸುವ ಮುಗ್ಧ ಹಾಗೂ ಹಗುರ ಮನಸ್ಸಿನ ಗಂಡಸರು ಪಕ್ಷಿಗಳಾಗುತ್ತಾರೆ; ಯಾವುದೇ ತತ್ವಜ್ಞಾನವಿಲ್ಲದವರು ಕ್ರೂರ ಕಾಡುಪ್ರಾಣಿಗಳಾಗುತ್ತಾರೆ; ಅತ್ಯಂತ ಮೂರ್ಖರು ಮೀನುಗಳಾಗುತ್ತಾರೆ.

ಅದನ್ನು ಈ ಸಂವಾದದ ಕೊನೆಯ ಭಾಗ ಹೀಗೆ ಸಂಕ್ಷಿಪ್ತಗೊಳಿಸುತ್ತದೆ:

ವಿಶ್ವದ ಬಗೆಗಿನ ನಮ್ಮ ಚರ್ಚೆಗೆ ಒಂದು ಅಂತ್ಯವಿದೆ ಎಂದು ನಾವೀಗ ಹೇಳಬಹುದು. ಜಗತ್ತು ಅಮರ ಮತ್ತು ಮರ್ತ್ಯ ಪ್ರಾಣಿಗಳನ್ನು ಸ್ವೀಕರಿಸಿದೆ, ಮತ್ತು ಅವುಗಳಿಂದ ಕೃತಕೃತ್ಯವಾಗಿದೆ, ಕಾಣುವುದನ್ನು ಒಳಗೊಂಡ ಕಾಣುವ ಪ್ರಾಣಿಯಾಗಿದೆ – ಬುದ್ಧಿಶಕ್ತಿ, ಅತ್ಯಂತ ಶ್ರೇಷ್ಠ, ಅತ್ಯಂತ ಉತ್ತಮ, ಅತ್ಯಂತ ಸುಂದರ, ಅತ್ಯಂತ ಪರಿಪೂರ್ಣವಾದುದರ ಪ್ರತೀಕವಾದ ಸಂವೇದನೀಯ ದೇವರು – ಏಕೈಕ ಸ್ವರ್ಗವನ್ನು ಪಡೆದ.

ಟೈಮೇಯಸ್‌ನಲ್ಲಿನ ಯಾವುದನ್ನು ಗಂಭೀರವಾಗಿ ಪರಿಗಣಿಸಬೇಕು, ಯಾವುದನ್ನು ಕಲ್ಪನೆಯಾಟ ಎಂದು ತಿಳಿಯುವುದು ಕಷ್ಟ. ಅಸ್ತವ್ಯಸ್ತತೆಯಿಂದ ವ್ಯವಸ್ಥೆಗೊಳಿಸುವುದೇ ಸೃಷ್ಟಿ ಎಂಬ ವಿವರಣೆಯನ್ನು ಸಾಕಷ್ಟು ಗಂಭೀರವಾಗಿ ಪರಿಗಣಿಸಬಹುದೆಂದು ನನ್ನ ಭಾವನೆ; ಹಾಗೆಯೇ ನಾಲ್ಕು ಮೂಲವಸ್ತುಗಳ ನಡುವಣ ಅನುಪಾತ ಮತ್ತು ಅವುಗಳ ಮತ್ತು ಸಮಮುಖಿ ಘನಾಕೃತಿಗಳು ಮತ್ತು ತ್ರಿಭುಜಗಳ ನಡುವಣ ಸಂಬಂಧ. ಕಾಲ ಮತ್ತು ಅವಕಾಶಗಳ ವಿವರಣೆಯು ಪ್ಲೇಟೋನ ಶ್ರದ್ಧೆ ಎಂಬುದು ಸ್ಪಷ್ಟ. ಹಾಗೆಯೇ ಸೃಷ್ಟಿತ ಜಗತ್ತು ಚಿರಂತನ ಮೂಲಾಕೃತಿಯ ನಕಲು ಎಂಬ ದೃಷ್ಟಿಕೋನ. ಜಗತ್ತಿನಲ್ಲಿ ಆವಶ್ಯಕತೆ ಮತ್ತು ಉದ್ದೇಶಗಳ ಮಿಶ್ರಣದ ಬಗೆಗಿನ ವಿವರಣೆ ಸರಿಸುಮಾರು ಎಲ್ಲ ಗ್ರೀಕರ ಶ್ರದ್ಧೆ, ತತ್ವಜ್ಞಾನದ ಉದಯಕ್ಕಿಂತ ಬಹಳ ಹಿಂದಿನದು. ಪ್ಲೇಟೋ ಅದನ್ನು ಒಪ್ಪಿಕೊಂಡು ಕ್ರಿಶ್ಚಿಯನ್ ಮತಧರ್ಮಶಾಸ್ತ್ರಕ್ಕೆ ತೊಂದರೆ ಕೊಟ್ಟ ಕೆಡುಕಿನ ಸಮಸ್ಯೆಯನ್ನು ದೂರತಳ್ಳಿದ.

ಅವನ ಜಗತ್ತು – ಪ್ರಾಣಿ ಎಂಬುದನ್ನವನು ಗಂಭೀರವಾಗಿ ಪರಿಗಣಿಸಿದನೆಂಬುದು ನನ್ನ ಭಾವನೆ. ಆದರೆ ಜನ್ಮಾಂತರದ ಮತ್ತು ದೇವತೆಗಳಿಗೆ ಮತ್ತು ಇತರ ಅನಗತ್ಯಗಳಿಗೆ ಆರೋಪಿಸಲಾದ ಪಾತ್ರ ಇವುಗಳ ಬಗೆಗಿನ ವಿವರಗಳು, ಸಾಧ್ಯವಾದಷ್ಟೂ ಗಟ್ಟಿತನವನ್ನು ನೀಡಲು ಬಳಸಿದವೆಂಬುದು ನನ್ನ ಭಾವನೆ.

ಇಡೀ ಸಂವಾದವು, ಹಿಂದೆಯೇ ಹೇಳಿದಂತೆ, ಅಧ್ಯಯನ ಯೋಗ್ಯವಾಗಿರುವುದು ಅದು ಮುಂದಿನ ಪ್ರಾಚೀನ ಹಾಗೂ ಮಧ್ಯಯುಗೀನ ಚಿಂತನೆಗಳ ಮೇಲಿನ ಪ್ರಭಾವದ ಕಾರಣದಿಂದಾಗಿ; ಮತ್ತು ಈ ಪ್ರಭಾವವು ಕೇವಲ ಕಲ್ಪನಾತ್ಮಕವಾದಕ್ಕೆ ಮಾತ್ರ ಸೀಮಿತವಾಗಿಲ್ಲ.

○

೧೮
ಪ್ಲೇಟೋ ದೃಷ್ಟಿಯಲ್ಲಿ ಜ್ಞಾನ ಮತ್ತು ಗ್ರಹಿಕೆ

ಪ್ರಾಯೋಗಿಕ ಜ್ಞಾನವು ಗ್ರಹಿಕೆಯ ಮೇಲೆ ನಿಂತಿದೆ ಮತ್ತು ಅದರಿಂದ ಸಾಧಿತವಾಗಿದೆಯೆಂದು ಬಹುತೇಕ ಆಧುನಿಕ ಜನರು ಊಹಿಸಿಕೊಳ್ಳುತ್ತಾರೆ. ಆದರೆ ಪ್ಲೇಟೋನಲ್ಲಿಯೂ ಇತರ ಕೆಲವು ಪಂಥಗಳ ತತ್ವಜ್ಞಾನಿಗಳಲ್ಲಿಯೂ ಬಹು ಭಿನ್ನವಾದ ಸಿದ್ಧಾಂತವಿದೆ. ಅದೆಂದರೆ ಇಂದ್ರಿಯಗಳಿಂದ ಪಡೆಯಬಹುದಾದುದರಲ್ಲಿ 'ಜ್ಞಾನ'ವೆಂದು ಕರೆಯಲು ಯೋಗ್ಯವಾದ ಯಾವುದೂ ಇಲ್ಲ, ಮತ್ತು ನಿಜವಾದ ಜ್ಞಾನವು ಪರಿಕಲ್ಪನೆಗಳಿಂದ ಮಾತ್ರ ಕೂಡಿರುವಂತಹುದು ಎಂಬುದು. ಈ ದೃಷ್ಟಿಯಲ್ಲಿ, '೨x೨ = ೪' ಎಂಬುದು ನಿಜವಾದ ಜ್ಞಾನ; ಆದರೆ 'ಹಿಮವು ಬೆಳ್ಳಗಿರುತ್ತದೆ'ಯಂಥ ಹೇಳಿಕೆಯು ಸಂದಿಗ್ಧತೆ ಮತ್ತು ಅನಿಶ್ಚಿತತೆಗಳಿಂದ ಕೂಡಿದ್ದು, ಅದು ತತ್ವಜ್ಞಾನಿಯ ಸತ್ಯಭಂಡಾರದಲ್ಲಿ ಇರಲಾರದು.

ಈ ದೃಷ್ಟಿಕೋನದ ಮೂಲವನ್ನು ಪ್ರಾಯಶಃ ಪಾರ್ಮೆನೈಡೀಸ್‌ನಲ್ಲಿ ಹುಡುಕಬಹುದು. ಆದರೆ ಸ್ಪಷ್ಟ ರೂಪದಲ್ಲಿ ತತ್ವಜ್ಞಾನದ ಜಗತ್ತು ಅದು ಪ್ಲೇಟೋಗೆ ಸೇರಿದ್ದೆಂದು ಭಾವಿಸುತ್ತದೆ. ಈ ಅಧ್ಯಾಯದಲ್ಲಿ 'ಥಿಯಾಟೆಟಸ್'ನ ಮೊದಲರ್ಧವನ್ನು ಆವರಿಸಿರುವ ಜ್ಞಾನವೆಂಬುದು ಗ್ರಹಿಕೆಯೇ ಆಗಿದೆ ಎಂಬ ದೃಷ್ಟಿಕೋನವನ್ನು ಕುರಿತ ಪ್ಲೇಟೋನ ಟೀಕೆಯ ಬಗ್ಗೆ ವಿವೇಚಿಸುತ್ತೇನೆ.

ಈ ಸಂವಾದವು 'ಜ್ಞಾನ'ದ ವ್ಯಾಖ್ಯೆಯನ್ನು ಮಾಡುವುದರಲ್ಲಿ ತೊಡಗುತ್ತದೆ, ಆದರೆ ಕೊನೆಯಲ್ಲಿ ನೇತ್ಯಾತ್ಮಕ ತೀರ್ಮಾನವನ್ನು ತಲುಪುತ್ತದೆ. ಅನೇಕ ವ್ಯಾಖ್ಯೆಗಳನ್ನು ಮುಂದಿರಿಸಿ ಅವುಗಳನ್ನು ತಿರಸ್ಕರಿಸುತ್ತದೆ; ಆದರೆ ತೃಪ್ತಿಕರವಾದದ್ದೆಂದು ಕರೆಯಬಹುದಾದದ ಯಾವ ವ್ಯಾಖ್ಯೆಯನ್ನೂ ಅದು ಮುಂದಿಡುವುದಿಲ್ಲ.

ಸೂಚಿತವಾದ ವ್ಯಾಖ್ಯೆಗಳಲ್ಲಿ ಮೊದಲನೆಯದು ಮತ್ತು ನಾನು ಪರಿಗಣಿಸುವ ಏಕೈಕ ವ್ಯಾಖ್ಯೆಯು ಥಿಯಾಟೆಟಸ್‌ನ ಮಾತುಗಳಲ್ಲಿ ಹೀಗೆ ನಿರೂಪಿತವಾಗಿದೆ:

'ತನಗೆ ಗೊತ್ತಿರುವ ಯಾವುದನ್ನಾದರೂ ತಾನು ಗ್ರಹಿಸಿದ್ದೇನೆ ಎಂದು ಯಾರಾದರೂ ಹೇಳಿದರೆ, ನನಗೆ ಸದ್ಯಕ್ಕೆ ತಿಳಿದ ಮಟ್ಟಿಗೆ, ಜ್ಞಾನ ಎಂದರೆ ಗ್ರಹಿಕೆಯಲ್ಲದೆ ಬೇರೆಯಲ್ಲ ಎನ್ನುತ್ತೇನೆ.'

ಸಾಕ್ರಟೀಸ್ ಈ ಸಿದ್ಧಾಂತವನ್ನು ಪ್ರೋಟಾಗೊರಸ್‌ನ, 'ಮನುಷ್ಯನು ಎಲ್ಲದರ ಮಾನದಂಡ', ಅಂದರೆ ಯಾವುದೇ ವಸ್ತು 'ನನಗೆ ಹೇಗೆ ಕಾಣಿಸುತ್ತದೋ ಹಾಗಿರುವುದು, ಮತ್ತು ನಿನಗೆ ನಿನಗೆ ಕಾಣಿಸುವ ಬಗೆಯದು' ಎಂಬುದರೊಡನೆ ಗುರುತಿಸುತ್ತಾನೆ. 'ಹಾಗಾದರೆ ಗ್ರಹಿಕೆಯು ಸದಾ ಇರುವಂತಹುದು ಮತ್ತು ಜ್ಞಾನವಾದುದರಿಂದ ದೋಷಾತೀತವಾದುದು' ಎಂದೂ ಸಾಕ್ರಟೀಸ್ ಸೇರಿಸುತ್ತಾನೆ.

ಮುಂದಣ ವಾದದ ಬಹುಭಾಗವು ಗ್ರಹಿಕೆಯ ಲಕ್ಷಣನಿರೂಪಣೆಗೆ ಸಂಬಂಧಿಸಿದೆ. ಒಮ್ಮೆ ಇದು ಸಂಪೂರ್ಣಗೊಂಡಾಗ, ಗ್ರಹಿಕೆಯಾಗಿರುವಂತಹ ವಿಷಯವು ಜ್ಞಾನವಾಗಲಾರದು ಎಂದು ಸಾಧಿಸುವುದಕ್ಕೆ ಹೆಚ್ಚು ಕಾಲ ಹಿಡಿಸಲಾರದು.

ಪ್ರೋಟಾಗೊರಾಸ್‌ನ ಸಿದ್ಧಾಂತಕ್ಕೆ ಸಾಕ್ರಟೀಸ್ ಪ್ರತಿಯೊಂದೂ ಸದಾ ಕಾಲವೂ ಬದಲಾಗುತ್ತಿರುತ್ತದೆ, ಅಂದರೆ 'ನಾವು "ಇವೆ" ಎಂದು ಹೇಳುವ ಎಲ್ಲ ವಸ್ತುಗಳೂ ಆಗುವ ಪ್ರಕ್ರಿಯೆಯಲ್ಲಿರುತ್ತವೆ' ಎಂಬ ಹೆರಾಕ್ಲಿಟಿಸ್‌ನ ಸಿದ್ಧಾಂತವನ್ನು ಸೇರಿಸುತ್ತಾನೆ. ಇವು ಇಂದ್ರಿಯಗ್ರಾಹ್ಯ ವಿಷಯಗಳ ಮಟ್ಟಿಗೆ ಸತ್ಯವಾದರೂ, ನಿಜವಾದ ಜ್ಞಾನದ ವಿಷಯಗಳ ಬಗ್ಗೆಯಲ್ಲ ಎಂದು ಪ್ಲೇಟೋ ನಂಬುತ್ತಾನೆ. ಆದರೆ ಅವನ ಇತ್ಯಾತ್ಮಕ ಸಿದ್ಧಾಂತಗಳು ಸಂವಾದದುದ್ದಕ್ಕೂ, ಹಿನ್ನೆಲೆಯಲ್ಲಿರುತ್ತವೆ. ಹೆರಾಕ್ಲಿಟಸ್‌ನ ಸಿದ್ಧಾಂತದಿಂದ ಅದು ಇಂದ್ರಿಯಗ್ರಾಹ್ಯ ವಿಷಯಗಳಿಗೆ ಮಾತ್ರ ಅನ್ವಯಿಸುವುದೆಂದಾದರೂ, ಗ್ರಹಿಕೆಯೇ ಜ್ಞಾನವೆಂಬ ವ್ಯಾಖ್ಯೆಯೊಂದಿಗೆ, ಜ್ಞಾನವೆಂದರೆ ಏನು 'ಆಗುತ್ತದೆ' ಎಂಬುದೇ ಹೊರತು ಏನು ಆಗಿದೆ ಎಂಬುದಲ್ಲ ಎಂಬುದು ಸಿದ್ಧವಾಗುತ್ತದೆ.

ಈ ಹಂತದಲ್ಲಿ, ಪ್ರಾಥಮಿಕವೆನ್ನಿಸುವ ಕೆಲವು ಗೊಂದಲಗಳುಂಟಾಗುತ್ತವೆ. ೬ ಎಂಬುದು ೪ ಕ್ಕಿಂತ ದೊಡ್ಡದಾದರೂ ೧೨ ಎಂಬುದಕ್ಕಿಂತ ಸಣ್ಣದು; ೬ ಎಂಬುದು ದೊಡ್ಡದೂ ಹೌದು ಸಣ್ಣದೂ ಹೌದು ಎಂಬುದು ವಿರೋಧ ಎಂಬುದನ್ನು ತಿಳಿದಿದ್ದೇವೆ. ಈಗ ಸಾಕ್ರಟೀಸ್ ಇನ್ನೂ ಚಿಕ್ಕವನೂ ಪೂರ್ತಿ ಬೆಳೆದಿಲ್ಲದವನೂ ಅದ ಥಿಯೋಟೆಟಸ್‌ಗಿಂತ ಹೆಚ್ಚು ಎತ್ತರವಾಗಿದ್ದಾನೆ, ಆದರೆ ಇನ್ನು ಕೆಲವು ವರ್ಷಗಳಲ್ಲಿ ಸಾಕ್ರಟೀಸ್ ಥಿಯೋಟೆಟಸ್‌ಗಿಂತ ಕುಳ್ಳನಾಗುತ್ತಾನೆ. ಹೀಗಾಗಿ ಸಾಕ್ರಟೀಸ್ ಎತ್ತರವೂ ಹೌದು ಕುಳ್ಳೂ ಹೌದು. ಸಾಪೇಕ್ಷ ಪ್ರತಿಪಾದನೆಯ ಪರಿಕಲ್ಪನೆಯು ಪ್ಲೇಟೋನನ್ನು ಗೊಂದಲಗೊಳಿಸಿದಂತೆ ಕಾಣುತ್ತದೆ, ಹಾಗೆಯೇ ಅದು ಹೆಗೆಲ್‌ವರೆಗಿನ (ಅವನನ್ನೂ ಸೇರಿಸಿಕೊಂಡಂತೆ) ಬಹುತೇಕ ಮಹಾ ತತ್ವಜ್ಞಾನಿಗಳನ್ನೂ ಗೊಂದಲಗೊಳಿಸಿದೆ. ಆದರೆ ಆ ಗೊಂದಲಗಳು ವಾದದ ದೃಷ್ಟಿಯಿಂದ ಸಂಗತವಾದುವಲ್ಲ, ಆದ್ದರಿಂದ ಅವಗಣಿಸಬಹುದು.

ಇನ್ನು ಗ್ರಹಿಕೆಯ ಬಗ್ಗೆ, ಅದನ್ನು ವಸ್ತು ಮತ್ತು ಇಂದ್ರಿಯಗಳ ನಡುವಣ ಒಡನಾಟ ಎಂದು ಭಾವಿಸಲಾಗಿದೆ.; ಹೆರಾಕ್ಲಿಟಸ್‌ನ ಸಿದ್ಧಾಂತದ ಪ್ರಕಾರ ಇವೆರಡೂ ಸದಾ ಬದಲಾಗುತ್ತಿರುವಂಥವು, ಮತ್ತು ಇವೆರಡೂ ಬದಲಾವಣೆಗೊಳ್ಳುತ್ತ

(ಪರ್‌ಸೆಪ್ಟ್) ಬದಲಾಯಿಸುವಂತಹುವು. ಆರೋಗ್ಯವಾಗಿದ್ದಾಗ ತನಗೆ ವೈನ್ ಮಧುರವಾಗಿರುವಂತೆ ಕಾಣುತ್ತದೆ, ಆದರೆ ಕಾಯಿಲೆ ಬಿದ್ದಾಗ ಹುಳಿಯಾಗಿರುತ್ತದೆ. ಇಲ್ಲಿ ಆಗಿರುವುದು ಬಲಾಯಿಸಿದ ಇಂದ್ರಿಯಗ್ರಹಿಕೆಯಿಂದಾಗಿ ಐಂದ್ರಿಯಕಜ್ಞಾನವು ಬದಲಾಗಿರುವುದು.

ಪ್ರೋಟಾಗೊರಾಸ್‌ನ ಸಿದ್ಧಾಂತದ ಬಗೆಗಿನ ಕೆಲವು ಆಕ್ಷೇಪಣೆಗಳನ್ನು ಎತ್ತಲಾಗಿದೆ, ಮುಂದೆ ಇವುಗಳಲ್ಲಿನ ಕೆಲವನ್ನು ಹಿಂದೆಗೆದುಕೊಳ್ಳಲಾಗಿದೆ. ಪ್ರೊಟಾಗೊರಾಸ್ ಎಲ್ಲ ವಸ್ತುಗಳ ಮಾನದಂಡವಾಗಿ ಹಂದಿಗಳನ್ನೂ ಕಪಿಗಳನ್ನೂ ಒಪ್ಪಿಕೊಳ್ಳಬೇಕಾಗಿತ್ತು, ಯಾಕೆಂದರೆ ಅವೂ ಇಂದ್ರಿಯಗ್ರಹಿಕೆಯುಳ್ಳವು. ಕನಸುಗಳು ಮತ್ತು ಹುಚ್ಚುಗಳಲ್ಲಿನ ಇಂದ್ರಿಯಗ್ರಹಿಕೆಯ ಸಿಂಧುತ್ವದ ಬಗ್ಗೆ ಪ್ರಶ್ನೆಗಳನ್ನೆತ್ತಲಾಗಿದೆ. ಪ್ರೊಟಾಗೊರಾಸ್ ಸರಿಯಾಗಿದ್ದರೆ, ಒಬ್ಬನು ಇನ್ನೊಬ್ಬನಿಗಿಂತ ಹೆಚ್ಚು ತಿಳಿದಿರುತ್ತಾನೆ; ಪ್ರೊಟಾಗೊರಾಸ್ ದೇವತೆಗಳಷ್ಟೇ ವಿವೇಕಿಯಾಗಿರುವುದಲ್ಲದೆ, ಅದಕ್ಕಿಂತಲೂ ಹೆಚ್ಚು ಗಂಭೀರವಾದುದೆಂದರೆ, ಅವನು ಮೂರ್ಖನಿಗಿಂತ ಹೆಚ್ಚು ವಿವೇಕಿಯಲ್ಲ ಎಂದು ಅದು ಸೂಚಿಸುತ್ತದೆ. ಅಲ್ಲದೆ, ಒಬ್ಬನ ತೀರ್ಮಾನವು ಬೇರೊಬ್ಬನದರಷ್ಟೇ ಸರಿಯಾದುದಾಗಿದ್ದರೆ, ಪ್ರೊಟಾಗೊರಾಸ್‌ನನ್ನು ತಪ್ಪು ತಿಳಿಯಲಾಗಿದೆ ಎಂದು ತೀರ್ಮಾನಿಸುವ ಜನರಿಗೆ ಅದೇ ಕಾರಣದಿಂದ ಅವನು ಸರಿಯಾಗಿರುವಂತೆ ಕಾಣುತ್ತದೆ.

ಈ ಹಲವಾರು ಆಕ್ಷೇಪಣೆಗಳಿಗೆ ಸಾಕ್ರಟೀಸ್ ಉತ್ತರ ನೀಡುವ ಜವಾಬ್ದಾರಿ ಹೊರುತ್ತಾನೆ ಮತ್ತು ಅದಕ್ಕಾಗಿ ತನ್ನನ್ನು ಪ್ರೊಟಾಗೊರಾಸ್‌ನ ಸ್ಥಾನದಲ್ಲಿರಿಸಿಕೊಳ್ಳುತ್ತಾನೆ. ಕನಸುಗಳಿಗೆ ಸಂಬಂಧಿಸಿದಂತೆ, ಗ್ರಹಿಕೆಗಳು ಗ್ರಹಿಕೆಗಳಾಗಿ ಸರಿ. ಇನ್ನು ಹಂದಿಗಳ ಮತ್ತು ಕಪಿಗಳ ಬಗ್ಗೆ, ಇದೊಂದು ಕ್ಷುಲ್ಲಕ ಬೈಗುಳ ಎಂದು ಅದನ್ನು ತಿರಸ್ಕರಿಸಲಾಗಿದೆ. ಪ್ರತಿ ವ್ಯಕ್ತಿಯೂ ವಸ್ತುಗಳ ಮಾನದಂಡ, ಒಬ್ಬನು ಇನ್ನೊಬ್ಬನಷ್ಟೇ ವಿವೇಕಿ ಎನ್ನುವುದಾದರೆ, ಪ್ರೊಟಾಗೊರಾಸ್‌ನ ಪರವಾಗಿ ಸಾಕ್ರಟೀಸ್ ಒಂದು ಸ್ವಾರಸ್ಯಕರ ಉತ್ತರವನ್ನು ನೀಡುತ್ತಾನೆ; ಒಂದು ತೀರ್ಮಾನ ಮತ್ತೊಂದಕ್ಕಿಂತ ಹೆಚ್ಚು ನಿಜವಾಗಿರಲಾರದಾದರೂ, ಅದು ಉತ್ತಮ ಪರಿಣಾಮಗಳನ್ನು ಮಾಡುವ ಅರ್ಥದಲ್ಲಿ, ಹೆಚ್ಚು ಉತ್ತಮವಾಗಿರಬಹುದಲ್ಲ. ಇದು ವ್ಯವಹಾರ ಸಿದ್ಧಾಂತವನ್ನು ಸೂಚಿಸುತ್ತದೆ.[೭೫]

ಈ ಉತ್ತರವು ಸಾಕ್ರಟೀಸ್ ಕಂಡುಕೊಂಡದ್ದಾದರೂ, ಅವನಿಗದು ತೃಪ್ತಿಕರವೆನಿಸಲಿಲ್ಲ. ನಿದರ್ಶನಕ್ಕೆ, ವೈದ್ಯನು ನನ್ನ ರೋಗ ಪಡೆಯಬಹುದಾದ ಸ್ವರೂಪದ ಬಗ್ಗೆ ಮುಂಚೆಯೇ ಹೇಳಿದಾಗ ನನಗಿಂತ ಹೆಚ್ಚಾಗಿ ಅವನಿಗೇ ನನ್ನ

---

೭೫. ಪ್ರೊಟಾಗೊರಸ್ ಬಗ್ಗೆ ಎಫ್.ಸಿ.ಎಸ್. ಷಿಲ್ಲರ್ ಮೆಚ್ಚುಗೆಯನ್ನು ಸೂಚಿಸಲು ಮೊದಲು ಪ್ರೇರಿಸಿದ್ದು ಈ ಭಾಗವೇ ಎಂದು ಭಾವಿಸಲಾಗಿದೆ.

ಭವಿಷ್ಯದ ಬಗ್ಗೆ ತಿಳಿದಿರುತ್ತದೆ. ಅವಕಾಶಕ್ಕೆ ಯಾವುದು ಉತ್ತಮ ಎಂದು ತೀರ್ಮಾನಿಸುವಾಗ, ವ್ಯಕ್ತಿಗಳ ನಡುವೆ ಭಿನ್ನಾಭಿಪ್ರಾಯವುಂಟಾದರೆ, ಭವಿಷ್ಯದ ವಿಷಯದಲ್ಲಿ ಒಬ್ಬನು ಇನ್ನೊಬ್ಬನಿಗಿಂತ ಹೆಚ್ಚು ವಿವೇಕಿ ಎಂಬುದನ್ನು ತೋರಿಸುತ್ತದೆ. ಹೀಗಾಗಿ ವಿವೇಕಿಯು ಮೂರ್ಖನಿಗಿಂತ ವಸ್ತುಗಳ ಬಗೆಗಿನ ಉತ್ತಮ ಮಾನದಂಡ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ.

ಈ ಆಕ್ಷೇಪಣೆಗಳೆಲ್ಲವೂ ಪ್ರತಿ ವ್ಯಕ್ತಿಯೂ ಎಲ್ಲ ವಸ್ತುಗಳ ಮಾನದಂಡ ಎಂಬುದರ ಬಗೆಗಿನವು, ಮತ್ತು ಒಂದು ಇನ್ನೊಂದಕ್ಕೆ ಎಡೆಗೊಡುತ್ತದೆ ಎಂಬುದಕ್ಕೆ ಮಾತ್ರ ಪರೋಕ್ಷವಾಗಷ್ಟೇ, 'ಜ್ಞಾನ' ಎಂದರೆ 'ಗ್ರಹಿಕೆ' ಎಂಬುದರ ಬಗೆಗಿನದು. ಆದರೆ ಈ ಬಗ್ಗೆ ಒಂದು ನೇರವಾದ ವಾದವೂ ಇದೆ, ಅದೆಂದರೆ, ಗ್ರಹಿಕೆಯಷ್ಟೇ ನೆನಪೂ ಮುಖ್ಯ ಎಂಬುದು. ಇದನ್ನು ಒಪ್ಪಿ, ಪ್ರತಿಪಾದನೆಯನ್ನು ಅದರಂತೆ ತಿದ್ದುಪಡಿ ಮಾಡಲಾಯಿತು.

ಆನಂತರ ನಾವು ಬರುವುದು ಹೆರಾಕ್ಲಿಟಸ್‌ನ ಸಿದ್ಧಾಂತದ ಕುರಿತ ಟೀಕೆಯ ಬಗ್ಗೆ. ಎಫೆಸಸ್‌ನ ಅವನ ಪ್ರತಿಭಾವಂತ ಯುವ ಶಿಷ್ಯರುಗಳ ಅನುಷ್ಠಾನಕ್ಕನುಗುಣವಾಗಿ, ಮೊದಲು ಇದನ್ನು ಅತಿರೇಕಗಳಿಗೊಯ್ಯಲಾಯಿತು ಎಂದು ಹೇಳುತ್ತಾರೆ. ಒಂದು ವಸ್ತುವು ಎರಡು ಬಗೆಯಲ್ಲಿ ಬದಲಾಗಬಹುದು: ಚಲನಸಾಮರ್ಥ್ಯ ಮತ್ತು ಗುಣಮಟ್ಟದ ವ್ಯತ್ಯಾಸ. ಈ ಎರಡೂ ಬಗೆಗಳಲ್ಲಿ ಪ್ರತಿಯೊಂದೂ ಸದಾ ಬದಲಾಗುತ್ತಲೇ ಇರುತ್ತದೆ ಎಂದು ಪರಿವರ್ತನ ಸಿದ್ಧಾಂತ (ಡಾಕ್ಟ್ರೀನ್ ಆಫ್ ಫ್ಲಕ್ಸ್) ಪ್ರತಿಪಾದಿಸುತ್ತದೆ.[೬೬] ಪ್ರತಿಯೊಂದು ವಸ್ತುವೂ ಪ್ರತಿಕ್ಷಣವೂ ಒಂದಷ್ಟು ಗುಣಾತ್ಮಕ ಬದಲಾವಣೆಗಳಿಗೆ ಒಳಗಾಗುತ್ತಿರುವುದಷ್ಟೇ ಅಲ್ಲ, ಪ್ರತಿ ವಸ್ತುವೂ ತನ್ನ ಗುಣಗಳನ್ನೇ ಸದಾ ಬದಲಾಯಿಸಿಕೊಳ್ಳುತ್ತಿರುತ್ತದೆ – ಹೀಗಾಗಿ, ಬುದ್ಧಿವಂತರು ಎಫೆಸಸ್ ಕಡೆ ನೋಡುತ್ತಾರೆಂದು ಹೇಳಲಾಗಿದೆ. ಇದರಿಂದ ಎಡವಟ್ಟು ಪರಿಣಾಮಗಳಾದುವು. 'ಇದು ಬೆಳ್ಳಗಿದೆ' ಎಂದು ಹೇಳಲು ಸಾಧ್ಯವಿಲ್ಲ, ಯಾಕೆಂದರೆ ನಾವು ಮಾತು ಆರಂಭಿಸಿದಾಗ ಬೆಳ್ಳಗಿದ್ದ ಅದು ವಾಕ್ಯವನ್ನು ಮುಗಿಸುವಷ್ಟರಲ್ಲಿ ಬೆಳ್ಳಗಿರುವುದಿಲ್ಲ.

---

೬೬ ಹೆರಾಕ್ಲಿಟಸ್‌ನ ಸಿದ್ಧಾಂತದ ಅತಿರೇಕದಲ್ಲಿ ಚಲನಸಾಮರ್ಥ್ಯವು ಅಸಾಧ್ಯ ಎಂಬುದನ್ನು ಪ್ಲೇಟೋ ಆಗಲೀ ಎಫೆಸಸ್‌ನ ಕ್ರಿಯಾಶೀಲ ಯುವಕರಾಗಲೀ ಗಮನಿಸಿರಲಿಲ್ಲ. ಚಲನೆ ಎಂದರೆ ಎ ಎಂಬ ವಸ್ತುವು ಈ ಕ್ಷಣ ಇಲ್ಲಿದ್ದರೆ, ಇನ್ನೊಂದು ಕ್ಷಣ ಅಲ್ಲಿರುತ್ತದೆ ಎಂಬ ಗುಣ; ಚಲಿಸುವಾಗ ಅದು ಅದೇ ವಸ್ತುವಾಗಿರಬೇಕು. ಪ್ಲೇಟೋ ಪರಿಶೀಲಿಸುವ ಸಿದ್ಧಾಂತದಲ್ಲಿ ಗುಣಮಟ್ಟ ಮತ್ತು ಸ್ಥಳಗಳೆರಡರ ಬದಲಾವಣೆ ಇದೆಯೇ ವಿನಾ ಮೂಲಸತ್ವದಲ್ಲಲ್ಲ. ಈ ದೃಷ್ಟಿಯಲ್ಲಿ, ಪ್ಲೇಟೋ ಕಾಲದಲ್ಲಿ ಹೆರಾಕ್ಲಿಟಸ್‌ನ ಶಿಷ್ಯರು ತೋರಿಸಿದ ತೀವ್ರ ಅತಿರೇಕಕ್ಕಿಂತಲೂ ಆಧುನಿಕ ಕ್ವಾಂಟಂ ಭೌತವಿಜ್ಞಾನವು ಮುಂದೆ ಸಾಗುತ್ತದೆ. ಇದು ವಿಜ್ಞಾನಕ್ಕೆ ಮಾರಕ ಎಂದು ಪ್ಲೇಟೋ ಆಲೋಚಿಸುತ್ತಿದ್ದ, ಆದರೆ ಹಾಗೇನೂ ಆಗಿಲ್ಲ.

ನಾವು ವಸ್ತುವೊಂದನ್ನು ನೋಡುತ್ತಿದ್ದೇವೆ ಎಂದು ಹೇಳಲಾಗುವುದಿಲ್ಲ, ಯಾಕೆಂದರೆ ನೋಡುವುದು ಸದಾ ನೋಡದಿರುವುದಾಗಿ ಬದಲಾಗುತ್ತಲೇ ಇರುತ್ತದೆ.[೬೭] ಪ್ರತಿಯೊಂದೂ ಎಲ್ಲ ವಿಧದಲ್ಲಿ ಬದಲಾಗುತ್ತಿದ್ದರೆ, ನೋಡುವುದನ್ನು ನೋಡದಿರುವುದು ಎನ್ನುವುದರ ಬದಲಾಗಿ ನೋಡುವುದು ಎನ್ನುವ ಅಧಿಕಾರ ಇರುವುದಿಲ್ಲ, ಅಥವಾ ಗ್ರಹಿಕೆಯನ್ನು ಅಗ್ರಹಿಕೆಯೆನ್ನದೆ ಗ್ರಹಿಕೆ ಎನ್ನಲಾಗದು. 'ಗ್ರಹಿಕೆಯೇ ಜ್ಞಾನ' ಎಂದು ಹೇಳಿದಾಗ, ನಾವು ಅದನ್ನು 'ಗ್ರಹಿಕೆಯು ಜ್ಞಾನವಲ್ಲ' ಎಂದೂ ಹೇಳಬಹುದು.

ಈ ಮೇಲಿನ ವಾದವು ಏನನ್ನು ಸೂಚಿಸುವುದೆಂದರೆ, ಬೇರಾವುದೇ ನಿರಂತರವಾಗಿ ಪರಿವರ್ತನೆಗೊಳ್ಳುತ್ತಿರಬಹುದಾದರೂ, ಪದಗಳ ಅರ್ಥಗಳು ಕನಿಷ್ಠ ಪಕ್ಷ, ತಾತ್ಕಾಲಿಕವಾಗಿಯಾದರೂ, ನಿಶ್ಚಿತವಾಗಿರಬೇಕು, ಇಲ್ಲದಿದ್ದರೆ ಯಾವ ಹೇಳಿಕೆಯೂ ನಿಶ್ಚಿತವಾಗಲಾರದು, ಹಾಗೆಯೇ ಯಾವ ಹೇಳಿಕೆಯೂ ಸುಳ್ಳಾಗಿರುವುದಕ್ಕಿಂತ ಸತ್ಯವಾಗಿರಲಾರದು. ಚರ್ಚೆ ಮತ್ತು ಜ್ಞಾನ ಸಾಧ್ಯವಾಗಬೇಕಾದರೆ, ಹೆಚ್ಚೋ ಕಡಿಮೆಯೋ ಸ್ಥಿರವಾದ ಯಾವುದಾದರೂ ಇರಬೇಕು. ಇದನ್ನು ಒಪ್ಪಬಹುದು. ಆದರೆ ಬಹುಪಾಲಿನ ಪರಿವರ್ತನೆಯು ಈ ಒಪ್ಪಿಗೆಯಿಂದ ಸಮಂಜಸವಾಗಿರುತ್ತದೆ.

ಈ ಹಂತದಲ್ಲಿ, ತೀರ ದೊಡ್ಡವನು ಅಥವಾ ಭವ್ಯ ಎಂಬ ಕಾರಣದಿಂದ ಪಾರ್ಮನೈಡೀಸ್ ಬಗ್ಗೆ ಚರ್ಚಿಸಲು ಒಪ್ಪದಿರಬಹುದು. ಅವನೊಬ್ಬ 'ಪೂಜ್ಯ ಮತ್ತು ಪರಮವ್ಯಕ್ತಿ.' 'ಮಹಾ ಉದಾತ್ತವಾದ ಒಂದು ಬಗೆಯ ಗಾಢತೆ ಅವನಲ್ಲಿತ್ತು.' 'ನಾನು ಮಿಕ್ಕೆಲ್ಲಕ್ಕಿಂತ ಹೆಚ್ಚಾಗಿ ಗೌರವಿಸುವ ವ್ಯಕ್ತಿ ಆತ.' ಇಂತಹ ಮಾತುಗಳ ಮೂಲಕ ಪ್ಲೇಟೋ ಸ್ಥಾವರ ವಿಶ್ವದ ಬಗೆಗಿನ ಪ್ರೀತಿಯನ್ನು, ಹಾಗೂ ವಾದದ ಕಾರಣದಿಂದ ಒಪ್ಪುವ ಹೆರಾಕ್ಲಿಟ್‌ನ ಪರಿವರ್ತನೆಯ ಬಗೆಗಿನ ಅವನ ಅಪ್ರೀತಿಯನ್ನು ತೋರಿಸುತ್ತಾನೆ. ಈ ಗೌರವದ ಮಾತುಗಳನ್ನಾಡಿದ ಬಳಿಕ ಅವನು ಹೆರಾಕ್ಲಿಟಸ್‌ಗೆ ಪರ್ಯಾಯವಾಗಿ ಪಾರ್ಮನೈಡೀಸ್‌ನ ಚಿಂತನೆಯನ್ನು ಬೆಳಸುವುದಿಲ್ಲ.

ಜ್ಞಾನ ಮತ್ತು ಗ್ರಹಿಕೆಗಳ ಅನನ್ಯತೆಯ ವಿರುದ್ಧವಾದ ತನ್ನ ಅಂತಿಮ ವಾದವನ್ನು ಪ್ಲೇಟೋ ತಲುಪುತ್ತಾನೆ. ನಾವು ಕಣ್ಣು ಹಾಗೂ ಕಿವಿಯ ಮೂಲಕ ಗ್ರಹಿಸುತ್ತೇವೆಯೇ ಹೊರತು ಅವುಗಳ ಜೊತೆ ಅಲ್ಲ ಎಂಬುದರಿಂದ ತನ್ನ ವಾದವನ್ನವನು ಆರಂಭಿಸುತ್ತಾನೆ; ನಮ್ಮ ಕೆಲವು ಬಗೆಯ ಜ್ಞಾನವು ಯಾವುದೇ ಇಂದ್ರಿಯಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದು ಹೇಳುತ್ತಾನೆ. ನಿದರ್ಶನಕ್ಕೆ, ಶಬ್ದಗಳು ಮತ್ತು ಬಣ್ಣಗಳು ಬೇರೆ ಬೇರೆ, ಆದರೆ ಇವೆರಡನ್ನೂ, 'ಅಸ್ತಿತ್ವ ಮತ್ತು ಅನಸ್ತಿತ್ವ, ಸಾಮ್ಯ

---

೬೭. ಈ ಜಾಹೀರಾತಿನೊಡನೆ ಹೋಲಿಸಿ: 'ಅದು ಶೆಲ್ ಆಗಿದೆ, ಆಗಿದ್ದದ್ದು.' 'That's Shell, that was.'

ಅಸಾಮ್ಯ, ಅನನ್ಯತೆ ಭಿನ್ನತೆ ಮತ್ತು ಒಟ್ಟಾರೆ ಐಕ್ಯ ಮತ್ತು ಸಂಖ್ಯೆಗಳನ್ನು' ಒಟ್ಟಿಗೇ ಗ್ರಹಿಸಬಲ್ಲ ಯಾವುದೇ ಇಂದ್ರಿಯವೂ ನಮಗಿಲ್ಲ. ಇದೇ ಗೌರವನೀಯತೆ ಮತ್ತು ಅಗೌರವನೀಯತೆ ಹಾಗೂ ಒಳ್ಳೆಯದು ಮತ್ತು ಕೆಟ್ಟುದಕ್ಕೂ ಅನ್ವಯಿಸುತ್ತದೆ. 'ಮನಸ್ಸು ಕೆಲವು ವಿಷಯಗಳನ್ನು ಕುರಿತು ತನ್ನದೇ ಆದ ಸಾಧನಮಾರ್ಗದಿಂದ, ಮಿಕ್ಕವನ್ನು ದೈಹಿಕ ಸಾಮರ್ಥ್ಯಗಳಿಂದ ಚಿಂತಿಸಬಹುದು.' ಸ್ಪರ್ಶದ ಮೂಲಕ ಗಟ್ಟಿಯಾದುದು ಮತ್ತು ಮೃದುವಾದುದನ್ನು ನಾವು ಗ್ರಹಿಸುತ್ತೇವೆ, ಆದರೆ ಅವುಗಳ ಅಸ್ತಿತ್ವವನ್ನೂ, ಅವುಗಳ ಪರಸ್ಪರ ವಿರೋಧಿಗುಣಗಳನ್ನೂ ಗ್ರಹಿಸುವುದು ಮನಸ್ಸು. ಮನಸ್ಸು ಮಾತ್ರವೇ ಅಸ್ತಿತ್ವವನ್ನು ಕಾಣಬಲ್ಲುದು, ಅಸ್ತಿತ್ವವನ್ನು ತಲುಪದಿದ್ದರೆ ನಾವು ಸತ್ಯವನ್ನೂ ತಲುಪಲು ಸಾಧ್ಯವಿಲ್ಲ. ಹೀಗಾಗಿ, ನಾವು ಇಂದ್ರಿಯಗಳ ಮೂಲಕ ವಿಷಯಗಳನ್ನು ತಿಳಿಯಲು ಸಾಧ್ಯವಿಲ್ಲ, ಯಾಕೆಂದರೆ ಇಂದ್ರಿಯಗಳ ಮೂಲಕ ಮಾತ್ರವೇ ವಸ್ತುಗಳ ಅಸ್ತಿತ್ವವನ್ನು ಅರಿಯಲಾರೆವು. ಆದ್ದರಿಂದ, ಜ್ಞಾನವು ಚಿಂತನೆಯಲ್ಲಿದೆ, ಅಭಿಪ್ರಾಯದಲ್ಲಲ್ಲ, ಗ್ರಹಿಕೆಯು ಜ್ಞಾನವಲ್ಲ, ಯಾಕೆಂದರೆ ಅದಕ್ಕೆ 'ಅಸ್ತಿತ್ವವನ್ನು ಅರಿಯುವಲ್ಲಿ ಯಾವ ಪಾತ್ರವೂ ಇಲ್ಲದಿರುವುದರಿಂದಾಗಿ, ಸತ್ಯವನ್ನು ತಿಳಿಯುವಲ್ಲಿ ಯಾವ ಪಾತ್ರವೂ ಇಲ್ಲ.'

ಜ್ಞಾನ ಮತ್ತು ಗ್ರಹಿಕೆಗಳ ಅನನ್ಯತೆಯ ವಿರೋಧದ ಈ ವಾದದಲ್ಲಿ ಯಾವುದನ್ನು ಒಪ್ಪಬಹುದು ಯಾವುದನ್ನು ತಿರಸ್ಕರಿಸಬಹುದು ಎಂದು ಬೇರ್ಪಡಿಸುವುದು ಸುಲಭವಲ್ಲ. ಪ್ಲೇಟೋನ ಚರ್ಚೆಯಲ್ಲಿ ಪರಸ್ಪರ ಸಂಬಂಧಪಟ್ಟ ಮೂರು ಪ್ರಮೇಯ (ಥೀಸಿಸ್) ಗಳಿವೆ:

೧. ಗ್ರಹಿಕೆಯೇ ಜ್ಞಾನ;

೨. ಮನುಷ್ಯನೇ ಎಲ್ಲ ವಸ್ತುಗಳ ಮಾನದಂಡ;

೩. ಪ್ರತಿಯೊಂದೂ ಪರಿವರ್ತನಶೀಲವಾದುದು.

೧. ವಾದವು ಮೂಲತಃ ಈ ಮೊದಲನೆಯ ಪ್ರಮೇಯಕ್ಕೆ ಸಂಬಂಧಿಸಿದ್ದರೂ, ಅದನ್ನು ಕುರಿತೇ ವಾದವು ನಡೆದಿಲ್ಲ; ಕೊನೆಯ ಭಾಗವು ಮಾತ್ರ ನಮಗೀಗ ಸಂಬಂಧಪಟ್ಟಿದೆ. ಸಾದೃಶ್ಯ, ಅಸ್ತಿತ್ವ ಮತ್ತು ಸಂಖ್ಯೆಗಳ ಅರಿವು – ಇವುಗಳು ಜ್ಞಾನಕ್ಕೆ ಅತ್ಯವಶ್ಯಕವಾದುವು, ಆದರೆ ಇವುಗಳನ್ನು ಗ್ರಹಿಕೆಯ ವ್ಯಾಪ್ತಿಯಲ್ಲಿ ತರಲಾಗದು, ಯಾಕೆಂದರೆ ಯಾವುದೇ ಇಂದ್ರಿಯವು ಅವುಗಳ ಮೇಲೆ ಪರಿಣಾಮ ಬೀರಲಾರದು ಎಂದು ಇಲ್ಲಿ ವಾದಿಸಲಾಗಿದೆ. ಈ ಅಂಶಗಳ ಬಗ್ಗೆ ಹೇಳಬೇಕಾದವು ಭಿನ್ನವಾದವು. ನಾವು ಸಾಮ್ಯ ಮತ್ತು ಅಸಾಮ್ಯಗಳಿಂದ ಆರಂಭಿಸೋಣ.

ನಾನು ನೋಡುತ್ತಿರುವ ಬಣ್ಣದ ಎರಡೂ ಛಾಯೆಗಳು, ಒಮ್ಮೆಗೇ ಸಾಮ್ಯತೆಯಿಂದಿರಬಹುದು ಅಥವಾ ಸಾಮ್ಯತೆಯನ್ನು ಹೊಂದಿಲ್ಲದಿರಬಹುದು; ಇದನ್ನು ನಾನು ಒಪ್ಪಬೇಕಾದುದು, 'ಇಂದ್ರಿಯಗ್ರಾಹ್ಯ'ವಾಗಿ ಖಂಡಿತ ಅಲ್ಲ, ಆದರೆ

'ಗ್ರಹಿಕೆಯ ತೀರ್ಮಾನದಂತೆ.' ಇಂದ್ರಿಯಗ್ರಾಹ್ಯತೆ ಜ್ಞಾನವಲ್ಲ, ಕೇವಲ ಸಂಭವಿಸುವಂತದು, ಅದು ಭೌತವಿಜ್ಞಾನ ಮತ್ತು ಮನೋವಿಜ್ಞಾನಗಳೆರಡಕ್ಕೂ ಸಂಬಂಧಿಸಿದ್ದು. ಪ್ಲೇಟೋನಂತೆಯೇ, ನಾವೂ ಸಹಜವಾಗಿ ಗ್ರಾಹಿ ಮತ್ತು ವಸ್ತುವಿನ ನಡುವಣ ಸಂಬಂಧವಾಗಿ ಗ್ರಹಿಕೆಯ ಬಗ್ಗೆ ಆಲೋಚಿಸುತ್ತೇವೆ: 'ನಾನು ಮೇಜನ್ನು ನೋಡುತ್ತೇನೆ' ಎನ್ನುತ್ತೇವೆ. ಆದರೆ ಇಲ್ಲಿ, 'ನಾನು' ಮತ್ತು 'ಮೇಜು' ಎಂಬವು ತಾರ್ಕಿಕ ರಚನೆ. ಕಚ್ಚಾ ಘಟನೆಯ ಮೂಲವು ಕೆಲವು ಬಣ್ಣಗಳ ಒಂದಷ್ಟು ತೇಪೆಗಳಷ್ಟೆ; ಇವುಗಳು ಸ್ಪರ್ಶಕ್ಕೆ ಸಂಬಂಧಪಟ್ಟಿದ್ದು, ಅವು ಪದಗಳಾಗಲು ಕಾರಣವಾಗಬಹುದು; ಮತ್ತು ಅವು ನೆನಪಿನ ಆಕರವಾಗಬಹುದು. ಸ್ಪರ್ಶದ ಪ್ರತಿಕೃತಿಗಳಿಂದ ತುಂಬಿದ ಇಂದ್ರಿಯಗ್ರಾಹ್ಯತೆಯು 'ವಸ್ತು'ವಾಗುತ್ತದೆ, ಅದು ದೈಹಿಕವಾದುದೆಂದು ಭಾವಿಸಲಾಗುವಂತಹುದು; ಪದಗಳು ಮತ್ತು ನೆನಪುಗಳಿಂದ ತುಂಬಿದ ಇಂದ್ರಿಯಗ್ರಾಹ್ಯತೆಯು 'ಗ್ರಹಿಕೆ'ಯಾಗುತ್ತದೆ, ಮತ್ತು ಅದು 'ವಿಷಯ'ವೊಂದರ ಭಾಗವೆಂದು ಪರಿಗಣಿತವಾಗುವುದರಿಂದ ಮಾನಸಿಕವಾಗುತ್ತದೆ. ಇಂದ್ರಿಯಗ್ರಾಹ್ಯತೆಯು ಕೇವಲ ಒಂದು ಘಟನೆ, ಅದು ಸುಳ್ಳೂ ಅಲ್ಲ, ಸತ್ಯವೂ ಅಲ್ಲ; ಪದಗಳಿಂದ ಕೂಡಿದ ಇಂದ್ರಿಯಗ್ರಾಹ್ಯತೆಯು ಒಂದು ತೀರ್ಮಾನ, ಅದು ನಿಜವಾಗಿರಬಹುದು ಅಥವಾ ಸುಳ್ಳಾಗಿರಬಹುದು. ಈ ತೀರ್ಮಾನವನ್ನೇ ನಾನು 'ಗ್ರಹಿಕೆಯ ತೀರ್ಮಾನ'ವೆಂದು ಕರೆಯುತ್ತೇನೆ. 'ಜ್ಞಾನವೆಂದರೆ ಗ್ರಹಿಕೆಯೇ' ಎಂಬ ಪ್ರತಿಪಾದನೆಯನ್ನು 'ಜ್ಞಾನವೆಂದರೆ ಗ್ರಹಿಕೆಯ ಬಗೆಗಿನ ತೀರ್ಮಾನ' ಎಂದು ಅರ್ಥವಿಸಬೇಕು. ಈ ರೂಪದಲ್ಲಿ ಮಾತ್ರ ಅದು ವ್ಯಾಕರಣಬದ್ಧವಾಗಿ ಸಮರ್ಪಕವೆನಿಸುವುದು.

ಸಾದೃಶ್ಯ ಮತ್ತು ಸಾದೃಶ್ಯವಿಲ್ಲದಿರುವುದರ ಬಗೆಗೆ ಮತ್ತೆ ಬರೋಣ. ನಾನು ಎರಡು ಬಣ್ಣಗಳನ್ನು, ಅವುಗಳ ಸಾದೃಶ್ಯಕ್ಕೋ ಸಾದೃಶ್ಯವಿಲ್ಲದಿರುವುದಕ್ಕೋ, ಒಟ್ಟಿಗೇ ಕಲ್ಪಿಸಿಕೊಂಡಾಗ ಅದು ದತ್ತಾಂಶದ ಭಾಗವಾಗಿ ಮತ್ತು ಗ್ರಹಿಕೆಯ ತೀರ್ಮಾನವನ್ನು ದೃಢಪಡಿಸುವ ಭಾಗವಾಗಿರಲು ಸಾಧ್ಯ. ಸಾದೃಶ್ಯ ಅಥವಾ ಸಾದೃಶ್ಯವಿಲ್ಲದಿರುವಿಕೆಗಳಲ್ಲಿ ಇಂದ್ರಿಯಗಳ ಪಾತ್ರವೇನೂ ಇರುವುದಿಲ್ಲವೆಂಬ ಪ್ಲೇಟೋನ ವಾದವು ಸಿಪ್ಪೆಯನ್ನು ಅವಗಣಿಸುತ್ತದೆ ಹಾಗೂ ಎಲ್ಲ ಇಂದ್ರಿಯಗಳೂ ದೇಹದ ಮೇಲ್ಮೈಯಾಗಿರಬೇಕು ಎಂದು ಊಹಿಸಿಕೊಳ್ಳುತ್ತದೆ.

ಸಾದೃಶ್ಯ ಮತ್ತು ಸಾದೃಶ್ಯವಿಲ್ಲದಿರುವುದನ್ನು ಸಾಧ್ಯ ಗ್ರಹಿಕೆಯ ದತ್ತಾಂಶದ ಭಾಗವಾಗಿಸುವ ವಾದವು ಹೀಗಿದೆ: 'ಎ' ಮತ್ತು 'ಬಿ' ಎಂಬ ಒಂದೇ ಬಣ್ಣದ ಎರಡು ಛಾಯೆಗಳನ್ನು ನಾವು ನೋಡುತ್ತೇವೆಂದುಕೊಳ್ಳೋಣ, ಆಗ ನಾವು 'ಎ' 'ಬಿ'ಯ ತರಹವೇ ಇದೆ ಎಂದು ತೀರ್ಮಾನಿಸುತ್ತೇವೆ. ಪ್ಲೇಟೋ ಮಾಡುವಂತೆ ನಾವೂ ಇನ್ನೂ ಒಂದಷ್ಟು ಊಹಿಸಿಕೊಳ್ಳೋಣ. ಅಂತಹ ತೀರ್ಮಾನವು ಒಟ್ಟಾರೆ

ಸರಿ, ಮತ್ತು ನಾವು ಪರಿಗಣಿಸುತ್ತಿರುವ ವಿಷಯದಲ್ಲಿಯೂ ಅದು ವಿಶಿಷ್ಟವಾಗಿ ಸರಿ. ಹೀಗಾಗಿ, ಸಾಮ್ಯತೆಯನ್ನು ದೃಢಪಡಿಸುವ ನಮ್ಮ ತೀರ್ಮಾನದಲ್ಲಿ ಮಾತ್ರವಲ್ಲದೆ, 'ಎ' ಮತ್ತು 'ಬಿ' ಗಳ ನಡುವೆ ಸಾಮ್ಯತೆಯ ಸಂಬಂಧ ಇರುತ್ತದೆ, ನಮ್ಮ ತೀರ್ಮಾನ ಮಾತ್ರವಿದ್ದಿದ್ದರೆ, ಅದು ನಿಜವೋ ಸುಳ್ಳೋ ಎಂದು ಪರಿಗಣಿಸಲು ಅಸಮರ್ಥವಾದ ಮನಸ್ವೀ ತೀರ್ಮಾನವಾಗುತ್ತಿತ್ತು. ಅದು ನಿಜವೋ ಸುಳ್ಳೋ ಎಂದು ಪರಿಗಣಿಸಲು ಅಸಮರ್ಥವಾದುದರಿಂದಾಗಿ 'ಎ' ಮತ್ತು 'ಬಿ' ಗಳ ನಡುವಣ ಸಾದೃಶ್ಯ ಮುಂದುವರಿಯುತ್ತದೆ, ಹಾಗೂ ಅದು ಕೇವಲ 'ಮಾನಸಿಕ'ವಾಗಲಾರದು. 'ಎ' ಮತ್ತು 'ಬಿ' ಯಂತಿದೆ (ಅದು ನಿಜವಾಗಿದ್ದರೆ) ಎಂಬ ತೀರ್ಮಾನವು 'ಎ ಕೆಂಪಗಿದೆ' ಅಥವಾ 'ಎ ಗುಂಡಗಿದೆ' ಎಂಬಂತೆಯೇ ವಸ್ತುತಃ ಸರಿಯಾದುದು ಮನಸ್ಸು ಬಣ್ಣದ ಗ್ರಹಿಕೆಗಿಂತಲೂ ಹೆಚ್ಚಾದ ಸಾದೃಶ್ಯವು ಗ್ರಹಿಕೆಯಲ್ಲಿ ಸೇರಿರುವುದಿಲ್ಲ.

ಈಗ ನಾನು 'ಅಸ್ತಿತ್ವ'ದ ವಿಷಯಕ್ಕೆ ಬರುತ್ತೇನೆ, ಅದಕ್ಕೆ ಪ್ಲೇಟೋ ಹೆಚ್ಚಿನ ಒತ್ತು ನೀಡುತ್ತಾನೆ. ಶಬ್ದ ಮತ್ತು ಬಣ್ಣಗಳಿಗೆ ಸಂಬಂಧಿಸಿದಂತೆ, ಎರಡನ್ನೂ ಒಮ್ಮೆಗೇ ಒಳಗೊಳ್ಳುವ, ಅಂದರೆ ಅವು ಅಸ್ತಿತ್ವದಲ್ಲಿವೆ ಎಂಬ ಆಲೋಚನೆಯು ನಮಗಿರುತ್ತದೆ. ಅಸ್ತಿತ್ವವು ಎಲ್ಲದಕ್ಕೂ ಸಂಬಂಧಿಸಿದ್ದು, ಮತ್ತು ಮನಸ್ಸು ತಾನಾಗಿ ಅರಿಯುವ ವಿಷಯಗಳಲ್ಲಿ ಸೇರಿರುವಂತಹುದು; ಅಸ್ತಿತ್ವವನ್ನು ತಲುಪದೆಯೇ ಸತ್ಯವನ್ನು ತಲುಪುವುದು ಅಸಾಧ್ಯ.

ಈ ವಿಷಯದಲ್ಲಿ ಪ್ಲೇಟೋನ ವಿರುದ್ಧವಾದ ವಾದವು ಸಾದೃಶ್ಯ ಮತ್ತು ಸಾದೃಶ್ಯವಿಲ್ಲದಿರುವುದರ ವಿಷಯಕ್ಕಿಂತಲೂ ಭಿನ್ನವಾದದ್ದು. ಅಸ್ತಿತ್ವದ ಬಗ್ಗೆ ಪ್ಲೇಟೋ ಹೇಳುವ ಎಲ್ಲವೂ ವ್ಯಾಕರಣಾತ್ಮವಾಗಿ ಅಥವಾ ವಾಕ್ಯಾತ್ಮಕವಾಗಿ ಅಸಮಂಜಸವಾದುವು ಎಂಬುದಷ್ಟೇ. ಈ ಅಂಶವು ಮುಖ್ಯವಾದುದು, ಪ್ಲೇಟೋಗೆ ಸಂಬಂಧಿಸಿದಂತೆ ಮಾತ್ರವಲ್ಲ, ದೈವದ ಅಸ್ತಿತ್ವದ ಬಗೆಗಿನಂತಹ ಮೂಲತತ್ವಜ್ಞಾನದ (ಆಂಟೊಲಾಜಿಕಲ್) ವಿಷಯಗಳ ಬಗ್ಗೆಯೂ ಹೌದು.

'ಸಿಂಹಗಳು ಅಸ್ತಿತ್ವದಲ್ಲಿವೆ, ಆದರೆ ಏಕಶೃಂಗಿಯಲ್ಲ' ಎಂದು ನೀವು ಮಕ್ಕಳಿಗೆ ಹೇಳುತ್ತೀರೆಂದುಕೊಳ್ಳಿ. ಸಿಂಹಗಳಿಗೆ ಸಂಬಂಧಿಸಿದಂತೆ ನಿಮ್ಮ ಹೇಳಿಕೆಯನ್ನು ಸಾಬೀತುಮಾಡಲು ನೀವು ಮಗುವನ್ನು ಮೃಗಾಲಯಕ್ಕೆ ಕರೆದೊಯ್ದು, 'ನೋಡು, ಅದೇ ಸಿಂಹ' ಎಂದು ಹೇಳಬಹುದು. ಆದರೆ, ನೀವು ತತ್ವಜ್ಞಾನಿಯಲ್ಲದಿದ್ದರೆ, 'ನೋಡಿದೆಯ, ಸಿಂಹವು ಅಸ್ತಿತ್ವದಲ್ಲಿದೆ' ಎಂಬ ಮಾತನ್ನು ಸೇರಿಸುವುದಿಲ್ಲ. ತತ್ವಜ್ಞಾನಿಯಾಗಿದ್ದು ಈ ಮಾತನ್ನು ಸೇರಿಸಿದರೆ, ನೀವು ಅಸಂಬದ್ಧವಾದುದನ್ನು ಹೇಳುತ್ತೀರಿ. 'ಸಿಂಹಗಳು ಅಸ್ತಿತ್ವದಲ್ಲಿವೆ' ಎಂದರೆ 'ಸಿಂಹಗಳು ಇವೆ' ಎಂದೇ ಅರ್ಥ. ಅಂದರೆ, 'ಎಕ್ಸ್ ಎಂಬುದು ಒಂದು ಸಿಂಹ' ಎಂಬುದು ಒಂದು ನಿರ್ದಿಷ್ಟ ಸಿಂಹಕ್ಕೆ ಅನ್ವಯಿಸುವಂತಹುದು. ಆದರೆ ಈ ನಿರ್ದಿಷ್ಟ ಸಿಂಹವು ಅಸ್ತಿತ್ವದಲ್ಲಿದೆ

ಎಂದು ಹೇಳಲಾಗದು. ಈ ಕ್ರಿಯಾಪದವನ್ನು ನಾವು ಪೂರ್ಣವೋ ಅಪೂರ್ಣವೋ ಆದ ಒಂದು ವರ್ಣನೆಯಲ್ಲಿ ಮಾತ್ರ ಬಳಸಬಹುದು. 'ಮೃಗಾಲಯದಲ್ಲಿನ ಅತ್ಯಂತ ದೊಡ್ಡ ಸಿಂಹ' ಎಂಬುದು ಪೂರ್ಣ, ಯಾಕೆಂದರೆ ಅದು ಒಂದೇ ಒಂದು ಸಿಂಹಕ್ಕೆ ಮಾತ್ರ ಅನ್ವಯಿಸುತ್ತದೆ.

ಈಗ, ಒಂದು ಕೆಂಪು ತೇಪೆಯನ್ನು ನಾನು ನೋಡುತ್ತಿರುವೆನೆಂದು ಭಾವಿಸಿಕೊಳ್ಳಿ. 'ಇದು ಸದ್ಯದ ನನ್ನ ಗ್ರಾಹ್ಯವಿಷಯ' ಎಂದು ಎಂದು ನಾನು ಹೇಳಬಹುದು. ಅಲ್ಲದೆ, 'ನನ್ನ ಸದ್ಯದ ಗ್ರಾಹ್ಯವಿಷಯವು ಅಸ್ತಿತ್ವದಲ್ಲಿದೆ' ಎಂದೂ ಹೇಳಬಹುದು; ಆದರೆ 'ಇದು ಅಸ್ತಿತ್ವದಲ್ಲಿದೆ' ಎಂದು ಹೇಳಬಾರದು, ಯಾಕೆಂದರೆ 'ಅಸ್ತಿತ್ವದಲ್ಲಿದೆ' ಎಂಬ ಪದವು ವರ್ಣನೆಯಲ್ಲಿ ಮಾತ್ರ ಸಮಂಜಸವೇ ಹೊರತು ಹೆಸರಿನ ವಿಷಯದಲ್ಲಲ್ಲ.[೬೮] 'ಅಸ್ತಿತ್ವ' ಎಂಬುದು ಮನಸ್ಸಿಗೆ ಅರಿವಿರುವ ವಸ್ತುಗಳಲ್ಲಿ ಒಂದು ವಸ್ತು ಎಂಬುದನ್ನು ಸಿದ್ಧಪಡಿಸುತ್ತದೆ.

ನಾನೀಗ ಸಂಖ್ಯೆಯನ್ನು ಅರ್ಥಮಾಡಿಕೊಳ್ಳುವುದರ ಕಡೆಗೆ ಬರುತ್ತೇನೆ. ಇಲ್ಲಿ ತೀರ ಭಿನ್ನವಾದ ಎರಡು ವಿಷಯಗಳಿವೆ: ಒಂದು ಕಡೆ, ಅಂಕಗಣಿತದ ಪ್ರತಿಪಾದನೆ; ಮತ್ತು ಮತ್ತೊಂದು ಕಡೆ, ಎಣಿಕೆಯ ಪ್ರಾಯೋಗಿಕ ಪ್ರತಿಪಾದನೆ. '೨ +೨ = ೪' ಎಂಬುದು ಮೊದಲನೆಯ ಬಗೆಯದು; 'ನನಗೆ ಹತ್ತು ಬೆರಳುಗಳಿವೆ' ಎಂಬುದು ಎರಡನೆಯ ಬಗೆಯದು.

ಅಂಕಗಣಿತ ಹಾಗೂ ಶುದ್ಧ ಗಣಿತಗಳು ಸಾಮಾನ್ಯವಾಗಿ ಗ್ರಹಿಕೆಯಿಂದ ಬರುವುದಿಲ್ಲ ಎಂಬ ಪ್ಲೇಟೋನ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಶುದ್ಧ ಗಣಿತದಲ್ಲಿ 'ಜನರು ಜನರೇ' ಎಂಬಂತಹ ಪುನರುಕ್ತಿಗಳಿವೆ, ಆದರೆ ಮತ್ತಷ್ಟು ಸಂಕೀರ್ಣವಾದವು. ಗಣಿತದ ಒಂದು ಪ್ರತಿಪಾದನೆಯು ಸರಿಯಾಗಿದೆ ಎಂದು ತಿಳಿಯಲು ನಾವೇನೂ ಜಗತ್ತನ್ನೇ ಕಲಿಯಬೇಕಾಗಿಲ್ಲ, ಸಂಕೇತಗಳ ಅರ್ಥಗಳನ್ನಷ್ಟೇ ಕಲಿತರೆ ಸಾಕು; ಮತ್ತು ಸಂಕೇತಗಳು, ವ್ಯಾಖ್ಯೆಗಳನ್ನು ಬಿಟ್ಟರೆ (ಅವುಗಳ ಉದ್ದೇಶ ಬರೀ ಸಂಕ್ಷೇಪ), 'ಅಥವಾ' ಮತ್ತು 'ಅಲ್ಲ', 'ಎಲ್ಲ' ಮತ್ತು 'ಕೆಲವು' ಎಂಬಂತಹ ಪದಗಳು, ಸಾಕ್ರಟೀಸ್‌ನಂತೆ, ವಾಸ್ತವ ಜಗತ್ತಿನಲ್ಲಿ ಏನನ್ನೂ ಸೂಚಿಸುವುದಿಲ್ಲ. ಗಣಿತಾತ್ಮಕ ಸೂತ್ರವೊಂದು ಎರಡು ಗುಂಪಿನ ಸಂಕೇತಗಳೂ ಒಂದೇ ಅರ್ಥವನ್ನು ಹೊಂದಿವೆಯೆಂಬುದನ್ನು ಹೇಳುತ್ತವೆ. ಎಲ್ಲಿಯವರೆಗೆ ನಾವು ಶುದ್ಧ ಗಣಿತಕ್ಕೆ ಸೀಮಿತವಾಗಿರುತ್ತೇವೆಯೋ ಅಲ್ಲಿಯವರೆಗೆ ಏನನ್ನು ಗ್ರಹಿಸಬಹುದು ಎಂಬುದನ್ನು ಸ್ವಲ್ಪವೂ ತಿಳಿಯದೆ ಅರ್ಥಮಾಡಿಕೊಳ್ಳಬಹುದು. ಹೀಗಾಗಿ, ಗಣಿತಾತ್ಮಕ ಸತ್ಯವು, ಪ್ಲೇಟೋ ವಾದಿಸುವಂತೆ, ಗ್ರಹಿಕೆಯಿಂದ ಸ್ವತಂತ್ರವಾದುದು; ಆದರೆ ಅದು ಎಲ್ಲ

---

೬೮. ಈ ವಿಷಯದ ಬಗ್ಗೆ ಈ ಗ್ರಂಥದ ಕೊನೆಯ ಅಧ್ಯಾಯವನ್ನು ನೋಡಿ.

ವಿಶಿಷ್ಟ ಬಗೆಯ ಸತ್ಯವೂ ಆಗಿರುತ್ತದೆ, ಮತ್ತು ಸಂಕೇತಗಳ ಬಗ್ಗೆಯಷ್ಟೇ ಯೋಚಿಸುತ್ತದೆ.

'ನನಗೆ ಹತ್ತು ಬೆರಳುಗಳಿವೆ' ಎಂಬಂತಹ ಎಣಿಕೆಯ ಪ್ರತಿಪಾದನೆಯು ಬೇರೆ ಗುಂಪಿಗೆ ಸೇರಿದವು; ಇವು ಸ್ವಲ್ಪ ಮಟ್ಟಿಗಾದರೂ ಗ್ರಹಿಕೆಯನ್ನು ಅವಲಂಬಿಸುವುದು ಸ್ಪಷ್ಟ. 'ಬೆರಳು' ಎಂಬ ಕಲ್ಪನೆಯು ಗ್ರಹಿಕೆಯಿಂದ ಬೆರ್ಪಟ್ಟುದು; ಆದರೆ 'ಹತ್ತು' ಎಂಬ ಗ್ರಹಿಕೆಯ ವಿಷಯವೇನು? ಇಲ್ಲಿ ನಾವು ವಾಸ್ತವವಾದ ವೈಶ್ವಿಕ ಅಥವಾ ಸೈದ್ಧಾಂತಿಕ ಸತ್ಯದತ್ತ ಬಂದಂತೆ ತೋರುತ್ತದೆ. 'ಹತ್ತು' ಎಂಬುದು ಗ್ರಹಿಕೆಯಿಂದ ಬೇರ್ಪಟ್ಟದ್ದು ಎಂದು ಹೇಳಲು ಸಾಧ್ಯವಿಲ್ಲ, ಯಾಕೆಂದರೆ ಯಾವುದೇ ಒಂದನ್ನು ಹತ್ತನ್ನಾಗಿ ನೋಡಬಹುದಾದ ಗ್ರಾಹ್ಯವನ್ನು ಬೇರೆ ಬಗೆಯಲ್ಲಿಯೂ ನೋಡಬಹುದು. ಒಂದು ಕೈನ ಎಲ್ಲ ಬೆರಳುಗಳನ್ನೂ ಒಟ್ಟಾರೆ 'ಅಂಗುಲೀಯಕ' (ಡಿಜಿಟರಿ) ಎಂಬ ಹೆಸರಿನಿಂದ ಕರೆಯುತ್ತೇನೆಂದಿಟ್ಟುಕೊಳ್ಳಿ; ಆಗ ನಾನು 'ನನಗೆ ಎರಡು ಅಂಗುಲೀಯಕಗಳಿವೆ' ಎಂದು ಹೇಳಬಹುದು. ಇದು ಹಿಂದೆ ನಾನು ಹತ್ತು ಎಂಬ ಸಂಖ್ಯೆಯೊಡನೆ ವಿವರಿಸಬಹುದೆಂದು ಹೇಳಿದ ಗ್ರಹಿಕೆಯನ್ನೇ ವಿವರಿಸುತ್ತದೆ. ಹೀಗೆ 'ಇದು ಕೆಂಪಗಿದೆ' ಎಂಬ ಹೇಳಿಕೆಯಲ್ಲಿಗಿಂತ 'ನನಗೆ ಹತ್ತು ಬೆರಳುಗಳಿವೆ' ಎಂಬ ಹೇಳಿಕೆಯಲ್ಲಿ ಗ್ರಹಿಕೆಯು ಸಣ್ಣ ಪಾತ್ರವನ್ನೂ, ಕಲ್ಪನೆಯು ಹೆಚ್ಚಿನ ಪಾತ್ರವನ್ನೂ ವಹಿಸುತ್ತದೆ. ಆದರೆ ಈ ವಿಷಯವು ಪ್ರಮಾಣಕ್ಕೆ ಸಂಬಂಧಿಸಿದ್ದು.

'ಹತ್ತು' ಎಂಬ ಪದವು ಬರುವ ಪ್ರತಿಪಾದನೆಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಉತ್ತರ ಎಂದರೆ, ಈ ಪ್ರತಿಪಾದನೆಗಳನ್ನು ಸರಿಯಾಗಿ ವಿಶ್ಲೇಷಿಸಿದರೆ ಅವುಗಳಲ್ಲಿ 'ಹತ್ತು' ಎಂಬುದಕ್ಕೆ ಸಂವಾದಿಯಾದ ಯಾವುದೇ ಘಟಕವೂ ಇರುವುದಿಲ್ಲ. ಇದನ್ನು ಹತ್ತರಂತಹ ದೊಡ್ಡ ಸಂಖ್ಯೆಯ ವಿಚಾರದಲ್ಲಿ ವಿವರಿಸುವುದು ಸಂಕೀರ್ಣವಾದುದು. ಹೀಗಾಗಿ, ಅದರ ಬದಲು, 'ನನಗೆ ಎರಡು ಕೈಗಳಿವೆ' ಎಂಬುದನ್ನು ತೆಗೆದುಕೊಳ್ಳೋಣ. ಇದರ ಅರ್ಥ:

'ಎ' ಮತ್ತು 'ಬಿ' ಸಾಮ್ಯತೆಯಿಲ್ಲದ ಬಗೆಯಲ್ಲಿ ಒಂದು 'ಎ' ಇದೆ ಹಾಗೆಯೇ 'ಬಿ' ಇದೆ, ಆದರೆ 'ಎಕ್ಸ್' ಹೇಗಾದರೂ ಇರಬಹುದು, "'ಎಕ್ಸ್' ನನ್ನ ಒಂದು ಕೈ" ಎಂಬುದು ನಿಜ, ಆದರೆ 'ಎಕ್ಸ್' 'ಎ' ಅಥವಾ 'ಎಕ್ಸ್' 'ಬಿ' ಆಗಿದ್ದಾಗ ಮಾತ್ರ.'

ಇಲ್ಲಿ 'ಎರಡು' ಎಂಬ ಪದವು ಬರುವುದಿಲ್ಲ. ಎ' ಮತ್ತು 'ಬಿ' ಎಂಬ ಎರಡು ಅಕ್ಷರಗಳು ಬರುತ್ತವೆಂಬುದು ನಿಜ, ಆದರೆ ಅವು ಕಪ್ಪೋ ಬಿಳುಪೋ ಅಥವಾ ಅವಕ್ಕಿರುವ ಬಣ್ಣ ಯಾವುದೋ ಎಂಬುದನ್ನು ತಿಳಿಯುವುದಕ್ಕಿಂತ ಹೆಚ್ಚಾಗಿ ಅವು ಎರಡು ಎಂದು ನಾವು ತಿಳಿಯಬೇಕಾಗಿಲ್ಲ.

ಹೀಗೆ ಸಂಖ್ಯೆಗಳು ಒಂದು ನಿಶ್ಚಿತ ಅರ್ಥದಲ್ಲಿ 'ರೂಪಾತ್ಮಕವಾದುದು'. ಪ್ರತಿಯೊಂದೂ ಎರಡನ್ನುಳ್ಳ ವಿವಿಧ ಗುಂಪುಗಳ ಪ್ರತಿಪಾದನೆಗಳನ್ನು ದೃಢಪಡಿಸುವಾಗಿನ ವಸ್ತುಸ್ಥಿತಿಗಳಲ್ಲಿ, ಅವು ಎರಡನ್ನು ಸಾಮಾನ್ಯವಾಗಿ ಹೊಂದಿರುತ್ತವೆ,

ಆದರೆ ಘಟಕಗಳಾಗಲ್ಲ, ರೂಪಾತ್ಮಕವಾಗಿ. ಈ ದೃಷ್ಟಿಯಿಂದ ಅವು ಬಿಡುಗಡೆಯ ಪ್ರತಿಮೆ, ಅಥವಾ ಚಂದ್ರ, ಅಥವಾ ಜಾರ್ಜ್ ವಾಷಿಂಗ್‌ಟನ್‌ಗಳಿಗೆ ಸಂಬಂಧಿಸಿದ ಪ್ರತಿಪಾದನೆಗಳಿಗಿಂತ ಭಿನ್ನ. ಅಂತಹ ಪ್ರತಿಪಾದನೆಗಳು ಕಾಲ-ಅವಕಾಶಗಳ ನಿರ್ದಿಷ್ಟ ಭಾಗಕ್ಕೆ ಅನ್ವಯಿಸುತ್ತವೆ; ಬಿಡುಗಡೆಯ ಪ್ರತಿಮೆಯ ಬಗೆಗೆ ನೀಡಬಹುದಾದ ಎಲ್ಲ ಹೇಳಿಕೆಗಳಲ್ಲಿನ ಸಾಮಾನ್ಯಾಂಶ ಇದು. ಆದರೆ 'ಎರಡು ಇಂಥಿಂಥವಿವೆ' ಎಂಬಂತಹ ಹೇಳಿಕೆಗಳಲ್ಲಿ ರೂಪಾತ್ಮಕತೆಯನ್ನು ಬಿಟ್ಟರೆ ಸಾಮಾನ್ಯಾಂಶ ಯಾವುದೂ ಇಲ್ಲ. ಎರಡು ಎಂಬ ಸಂಕೇತವಿರುವ ಪ್ರತಿಪಾದನೆಯಲ್ಲಿ, ಅದರ ಅರ್ಥ ಮತ್ತು ಆ ಸಂಕೇತದ ನಡುವಣ ಸಂಬಂಧವು, 'ಕೆಂಪು' ಎಂಬ ಸಂಕೇತವಿರುವ ಪ್ರತಿಪಾದನೆಯಲ್ಲಿ ಅದರ ಅರ್ಥ ಮತ್ತು ಆ ಸಂಕೇತದ ನಡುವಣ ಸಂಬಂಧಕ್ಕಿಂತ ತುಂಬ ಸಂಕೀರ್ಣವಾದುದು. ಒಂದರ್ಥದಲ್ಲಿ, 'ಎರಡು' ಎಂಬ ಸಂಕೇತಕ್ಕೆ ಯಾವುದೇ ಅರ್ಥವಿಲ್ಲ, ಯಾಕೆಂದರೆ ಒಂದು ಸತ್ಯವಾದ ಪ್ರತಿಪಾದನೆಯಲ್ಲಿ ಅದು ಇದ್ದರೆ ಅದರ ಅರ್ಥದಲ್ಲಿ ಅದಕ್ಕೆ ಸಂವಾದಿಯಾದ ಯಾವುದೇ ಘಟಕವಿರುವುದಿಲ್ಲ. ಬೇಕಾದರೆ ಮುಂದುವರಿದು, ಸಂಖ್ಯೆಗಳು ಚಿರಂತನ, ಅಪರಿವರ್ತನೀಯ ಮುಂತಾದವು ಎಂದು ಹೇಳಬಹುದು, ಆದರೆ ಅವು ತಾರ್ಕಿಕ ಕಲ್ಪನೆಗಳು ಎಂದೂ ಸೇರಿಸಬೇಕು.

ಇನ್ನೂ ಒಂದು ವಿಚಾರವಿದೆ, ಶಬ್ದ ಮತ್ತು ಬಣ್ಣಗಳಿಗೆ ಸಂಬಂಧಿಸಿದಂತೆ, ಪ್ಲೇಟೋ 'ಇವು ಒಟ್ಟಿಗೆ ಎರಡು, ಮತ್ತು ಅವುಗಳಲ್ಲಿನ ಬಿಡಿ ಒಂದು' ಎನ್ನುತ್ತಾನೆ. ನಾವು ಎರಡು ಎಂಬುದರ ಬಗ್ಗೆ ನೋಡಿದ್ದೇವೆ, ಈಗ ನಾವು ಒಂದು ಎಂಬುದರ ಬಗ್ಗೆ ನೋಡೋಣ. ಇಲ್ಲಿ ಅಸ್ತಿತ್ವಕ್ಕೆ ಸಂಬಂಧಿಸಿದಂತಹ ಒಂದು ದೋಷ ಇಲ್ಲಿದೆ. 'ಒಂದು' ಎಂಬ ಜ್ಞೇಯವು ವಸ್ತುಗಳಿಗೆ ಅನ್ವಯಿಸುವುದಿಲ್ಲ, ಗುಂಪುಗಳಿಗೆ ಮಾತ್ರ ಅನ್ವಯಿಸುತ್ತದೆ. 'ಭೂಮಿಗೆ ಒಂದು ಉಪಗ್ರಹವಿದೆ' ಎಂದು ನಾವು ಹೇಳಬಹುದು, ಆದರೆ 'ಚಂದ್ರನು ಒಂದು' ಎನ್ನುವುದು ವಾಕ್ಯಾತ್ಮಕ ದೋಷ. ಇಂತಹ ಹೇಳಿಕೆ ಏನನ್ನು ಸೂಚಿಸುತ್ತದೆ? 'ಚಂದ್ರರು ಅನೇಕ' ಎನ್ನಬಹುದು, ಯಾಕೆಂದರೆ ಅದಕ್ಕೆ ಅನೇಕ ಭಾಗಗಳಿವೆ. 'ಭೂಮಿಗೆ ಒಂದು ಉಪಗ್ರಹವಿದೆ' ಎಂದು ಹೇಳುವುದು 'ಭೂಮಿಯ ಉಪಗ್ರಹ' ಬಗೆಗಿನ ಕಲ್ಪನೆಯ ಒಂದು ಲಕ್ಷಣವನ್ನು ಹೇಳುವುದಕ್ಕಾಗಿ, ಅದೇಂದರೆ ಈ ಕೆಳಗಿನ ಲಕ್ಷಣ:

' "ಎಕ್ಸ್ ಭೂಮಿಯ ಒಂದು ಉಪಗ್ರಹ" ಎಂಬುದರಲ್ಲಿ ಸಿ ಇದೆ ಎಂಬುದು, ಎಕ್ಸ್ ಎಂಬುದು ಸಿ ಆಗಿರುವಾಗ ಸತ್ಯವಾಗುತ್ತದೆ.'

ಇದೊಂದು ಖಗೋಳವೈಜ್ಞಾನಿಕ ಸತ್ಯ; ಆದರೆ 'ಭೂಮಿಯ ಒಂದು ಉಪಗ್ರಹ' ಎಂಬುದರ ಬದಲು 'ಚಂದ್ರ' ಅಥವಾ ಮಿಕ್ಕಾವುದೇ ಅಂಕಿತನಾಮವನ್ನು ಬಳಸಿದರೆ ಅದು ಅರ್ಥಹೀನವಾಗಿರುತ್ತದೆ ಅಥವಾ ಬರಿ ಮಾತುಗಾರಿಕೆಯಾಗುತ್ತದೆ. ಹೀಗಾಗಿ

'ಒಂದು' ಎಂಬುದು ಕೆಲವು ಪರಿಕಲ್ಪನೆಗಳ ಒಂದು ಲಕ್ಷಣ, 'ಹತ್ತು' ಎಂಬುದು 'ನನ್ನ ಬೆರಳು' ಎಂಬುದರ ಲಕ್ಷಣವು ಹೇಗೋ ಹಾಗೆ. ಆದರೆ 'ಭೂಮಿಗೆ ಒಂದು ಉಪಗ್ರಹವಿದೆ, ಅದೆಂದರೆ ಚಂದ್ರ, ಹೀಗಾಗಿ ಚಂದ್ರ ಒಂದೇ' ಎಂಬ ವಾದವು, 'ಏಸುದೂತರು ಹನ್ನೆರಡು ಮಂದಿ; ಪೀಟರ್ ಒಬ್ಬ ಏಸುದೂತ, ಹೀಗಾಗಿ ಪೀಟರ್ ಹನ್ನೆರಡು ಮಂದಿ' ಎಂಬುದರಷ್ಟೇ ಅರ್ಥಹೀನ. ಆದರೆ 'ಹನ್ನೆರಡು' ಎಂಬುದರ ಬದಲು 'ಬಿಳಿ' ಎಂದಿದ್ದರೆ ಹೇಳಿಕೆ ಅರ್ಥಪೂರ್ಣವಾಗುತ್ತಿತ್ತು.

ಮೇಲಿನ ವಿವೇಚನೆಗಳು ತೋರಿಸಿರುವಂತೆ, ಗ್ರಹಿಕೆಯಿಂದ ಸಾಧಿತವಲ್ಲದ ತರ್ಕ ಮತ್ತು ಗಣಿತ ಎಂಬ ರೂಪಾತ್ಮಕ ಜ್ಞಾನವಿರುವುದಾದರೂ, ಮಿಕ್ಕೆಲ್ಲ ಜ್ಞಾನದ ಬಗೆಗಿನ ಪ್ಲೇಟೋನ ವಾದಗಳು ತಪ್ಪಾದುವು. ಇದರಿಂದ ಅವನ ತೀರ್ಮಾನಗಳು ಸುಳ್ಳು ಎಂದೇನೂ ಸಾಬೀತಾಗುವುದಿಲ್ಲ; ಆದರೆ ಅದು ನಿಜವೆಂದು ನಂಬಲು ಸೂಕ್ತವಾದ ಕಾರಣವನ್ನು ಕೊಟ್ಟಿಲ್ಲ ಎಂದಷ್ಟೇ ಸಾಧಿತವಾಗುತ್ತದೆ.

೨. ನಾನೀಗ ಪ್ರೊಟಾಗೊರಾಸ್‌ನ ನಿಲವಿನ ಬಗ್ಗೆ ಬರುತ್ತೇನೆ. ಅವನ ಪ್ರಕಾರ, ಮನುಷ್ಯನೇ ಎಲ್ಲ ವಸ್ತುಗಳ ಮಾನದಂಡ, ಅಥವಾ ಅದನ್ನು ವ್ಯಾಖ್ಯಾನಿಸಿದಂತೆ, ಪ್ರತಿ ವ್ಯಕ್ತಿಯೂ ಎಲ್ಲ ವಸ್ತುಗಳ ಮಾನದಂಡ. ಇದರ ಕುರಿತ ನಮ್ಮ ಚರ್ಚೆಯು ಯಾವ ಹಂತದಲ್ಲಿ ನಡೆಯಬೇಕು ಎಂಬುದನ್ನಿಲ್ಲಿ ನಿರ್ಧರಿಸಬೇಕಾದುದು ಆವಶ್ಯಕ. ಆರಂಭಕ್ಕೆ, ನಾವು ಗ್ರಾಹ್ಯವಿಷಯಗಳಿಗೂ ಊಹನೆಗಳಿಗೂ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಿಕೊಳ್ಳಬೇಕಾದುದು ಆವಶ್ಯಕ. ಗ್ರಾಹ್ಯವಿಷಯಗಳಲ್ಲಿ ಪ್ರತಿ ವ್ಯಕ್ತಿಯೂ ತನ್ನಷ್ಟಕ್ಕೇ ಸೀಮಿತಗೊಂಡಿರುತ್ತಾನೆ; ಕೇಳುವಿಕೆ ಮತ್ತು ಓದುವಿಕೆಗಳ ಮೂಲಕ ಪಡೆದ ಇತರರ ಗ್ರಾಹ್ಯವಿಷಯಗಳ ಬಗ್ಗೆ ಅವನು ತಿಳಿಯುವುದು ತನ್ನ ಗ್ರಾಹ್ಯವಿಷಯಗಳ ಆಧಾರದ ಮೇಲಿನ ಊಹನೆಗಳಿಂದ. ಕನಸುಗಾರರ ಮತ್ತು ಹುಚ್ಚರ ಗ್ರಾಹ್ಯವಿಷಯಗಳೂ, ಗ್ರಾಹ್ಯವಿಷಯಗಳಾಗಿ ಇತರವುಗಳಂತೆಯೇ ಗ್ರಾಹ್ಯವಿಷಯಗಳು; ಅವುಗಳ ಬಗೆಗಿನ ಒಂದೇ ತಕರಾರೆಂದರೆ, ಅವುಗಳ ಸಂದರ್ಭಗಳು ಅಸಾಮಾನ್ಯವಾದವು, ಅವುಗಳನ್ನು ಕುರಿತ ಊಹನೆಗಳು ತಪ್ಪಾಗಿರಲು ಸಾಧ್ಯ ಎಂಬುದು.

ಆದರೆ ಊಹನೆಗಳ ಕುರಿತು? ಅವೂ ಅಷ್ಟೇ ವ್ಯಕ್ತಿಗತವಾದುವೋ ಅಥವಾ ಖಾಸಗಿಯೋ ಅದುವೇ? ಒಂದರ್ಥದಲ್ಲಿ, ಅವು ಹಾಗೆಯೇ ಎಂದು ನಾವು ಒಪ್ಪಬಹುದು. ನಾನು ಯಾವುದನ್ನು ನಂಬಬೇಕು, ನಾನು ನಂಬುವುದು ನನ್ನ ಮನಸ್ಸಿಗೆ ಒಪ್ಪಿತವಾದ ಯಾವುದೋ ಕಾರಣದಿಂದಾಗಿ. ನನ್ನ ಕಾರಣವು ಬೇರೆ ಯಾರಿಗೋ ಒಪ್ಪಿತವಾಗಿರಬಹುದು ಎಂಬುದು ನಿಜ, ಅದು ಸಮಂಜಸವಾದ ಕಾರಣವೇ: ಉದಾಹರಣೆಗೆ, ನಾನು ನ್ಯಾಯಾಧೀಶನಾಗಿದ್ದು ಸಾಕ್ಷ್ಯವನ್ನು ಕೇಳುತ್ತಿರುವಾಗ. ಆದರೆ ನಾನೆಷ್ಟೇ ಪ್ರೊಟಾಗೊರಾಸ್‌ಪಂಥದವನಾಗಿರಲಿ,

ಅಂಕಿಅಂಶಗಳ ಬಗ್ಗೆ ನನ್ನದಕ್ಕಿಂತ ಹೆಚ್ಚಾಗಿ ಲೆಕ್ಕಪರಿಶೀಲಕನ ಅಭಿಪ್ರಾಯವನ್ನು ಒಪ್ಪುವುದು ಸಕಾರಣವಾಗಿರುತ್ತದೆ; ಯಾಕೆಂದರೆ ಮೊದಲಿಗೆ ನಾನು ಒಪ್ಪದಿದ್ದರೂ ಎಚ್ಚರಿಕೆಯಿಂದ ಮತ್ತೆ ಮತ್ತೆ ಪರಿಶೀಲಿಸಿದಾಗ ಅವನು ಸರಿಯಾಗಿರುವುದು ನನಗೆ ಮನದಟ್ಟಾಗಿರಬಹುದು. ಈ ಅರ್ಥದಲ್ಲಿ ಬೇರಾವನೋ ವ್ಯಕ್ತಿ ನನಗಿಂತ ಹೆಚ್ಚು ಬುದ್ಧಿವಂತ ಎಂದು ಒಪ್ಪಿಕೊಳ್ಳಬಹುದು. ಸಮರ್ಪಕವಾಗಿ ವ್ಯಾಖ್ಯಾನಿಸಿದರೆ, ಪ್ರೊಟಾಗೊರಾಸ್‌ನ ನಿಲವು ನಾನೆಂದೂ ತಪ್ಪು ಮಾಡಲಾರೆ ಎಂಬ ದೃಷ್ಟಿಕೋನವನ್ನು ಹೊಂದಿರುವಂತಹುದಲ್ಲ, ಆದರೆ ನನ್ನ ತಪ್ಪುಗಳ ಬಗೆಗಿನ ಪುರಾವೆಗಳು ನನಗೆ ಗೊತ್ತಾಗಬೇಕು ಎಂಬುದು. ನನ್ನ ಹಿಂದಿನ ಸ್ಥಿತಿಯನ್ನು ಬೇರೊಬ್ಬ ವ್ಯಕ್ತಿಯನ್ನು ಅಳೆಯುವಂತೆಯೇ ಅಳೆಯಬಹುದು. ಆದರೆ ಇವುಗಳೆಲ್ಲ ಸಿಂಧುವಾಗುವುದು, ಊಹನೆಗಳು ಮತ್ತು ಗ್ರಾಹ್ಯವಿಷಯಗಳ ವಿಷಯದಲ್ಲಿ ಕೊಂಚಮಟ್ಟಿಗಿನ ವ್ಯಕ್ತ್ಯತೀತ ನೆಲೆಯ ಸಮರ್ಪಕತೆ ಇರಬೇಕು ಎಂಬುದನ್ನು ಒಪ್ಪಿಕೊಂಡಾಗ. ನಾನು ಮಾಡುವ ಯಾವುದೇ ಊಹನೆ ಮಿಕ್ಕವುಗಳಷ್ಟೇ ಸಮರ್ಪಕವಾಗಿದ್ದಾಗ, ಪ್ಲೇಟೋ ಪ್ರೊಟಾಗೊರಾಸ್‌ನಿಂದ ಆರಂಭವಾಯಿತೆನ್ನುವ ಬೌದ್ಧಿಕ ಅನಾಯಕತ್ವವು ಮುಂದುವರಿಯುವುದಿಲ್ಲ. ಪ್ಲೇಟೋ ಸರಿಯಾಗಿರುವಂತೆ ತೋರುತ್ತಾನೆ. ಆದರೆ ಗ್ರಹಿಕೆಗಳು ಪ್ರಯೋಗಸಾಧ್ಯ ವಸ್ತುಗಳ ಬಗೆಗಿನ ಊಹನೆಗಳ ಸಮರ್ಪಕತೆಯ ಒರೆಗಲ್ಲುಗಳು ಎಂದು ಅನುಭವೈಕವಾದಿಯು ಹೇಳುತ್ತಾನೆ.

೩. ವೈಶ್ವಿಕ ಪರಿವರ್ತನ ಸಿದ್ಧಾಂತವನ್ನು ಪ್ಲೇಟೋ ಗೇಲಿ ಮಾಡುತ್ತಾನೆ. ಅವನು ನೀಡುವ ಅತಿರೇಕದ ರೂಪದಲ್ಲಿ ಯಾರಾದರೂ ಅಂಥದೊಂದನ್ನು ಸಮರ್ಥಿಸಿದ್ದರೇ ಎಂದು ನಂಬುವುದು ಕಷ್ಟವಾಗುತ್ತದೆ. ಉದಾಹರಣೆಗೆ, ನಾವು ನೋಡುವ ಬಣ್ಣಗಳು ಸದಾ ಬದಲಾಗುತ್ತಿರುತ್ತವೆ ಎಂದು ಭಾವಿಸೋಣ. 'ಕೆಂಪು' ಎಂಬ ಶಬ್ದವು ಅದರ ನಾನಾ ಛಾಯೆಗಳಿಗೆ ಅನ್ವಯಿಸುತ್ತದೆ, ಹೀಗಾಗಿ 'ನಾನು ಕೆಂಪನ್ನು ನೋಡುತ್ತೇನೆ' ಎಂದರೆ ಅದನ್ನು ಹೇಳುವ ಅವಧಿಯವರೆಗೆ ಈ ಹೇಳಿಕೆಯು ನಿಜವಾಗಿ ಉಳಿದಿರುತ್ತದೆ ಎನ್ನುವುದಕ್ಕೆ ಕಾರಣವಿಲ್ಲ. ಪ್ಲೇಟೋ ಗ್ರಹಿಸುವುದು ಮತ್ತು ಗ್ರಹಿಸದಿರುವುದು ಹಾಗೂ ತಿಳಿಯುವುದು ಮತ್ತು ತಿಳಿಯದಿರುವುದರಂತಹ ತಾರ್ಕಿಕ ವಿರೋಧಗಳಿಗೆ ಸದಾ ಪರಿವರ್ತನಶೀಲತೆಯ ಪ್ರಕ್ರಿಯೆಯನ್ನು ಅನ್ವಯಿಸಿ ತನ್ನ ಫಲಿತಾಂಶಗಳನ್ನು ಪಡೆಯುತ್ತಾನೆ. ಆದರೆ ಇಂತಹ ವಿರೋಧಗಳು ಅಂತಹ ಪ್ರಕ್ರಿಯೆಗಳನ್ನು ವರ್ಣಿಸಲು ಸೂಕ್ತವಲ್ಲ. ಮಂಜು ಮುಸುಕಿದ ದಿನ ಒಬ್ಬ ವ್ಯಕ್ತಿಯು ರಸ್ತೆಯ ಗುಂಟ ಹೋಗುವುದನ್ನು ನೀವು ನೋಡುತ್ತೀರೆಂದಿಟ್ಟುಕೊಳ್ಳಿ: ಬರಬರುತ್ತ ಅವನು ಹೆಚ್ಚೆಚ್ಚು ಮುಸುಕಾಗುತ್ತ, ಕೊನೆಗೆ ಒಂದು ಹಂತದಲ್ಲಿ ಅವನು ಕಾಣುವುದೇ ಇಲ್ಲ, ಆದರೆ ಮಧ್ಯೆ ಮಧ್ಯೆ ಸಂಶಯವುಂಟಾಗುತ್ತದೆ. ತಾರ್ಕಿಕ ವಿರೋಧಗಳನ್ನು ನಮ್ಮ ಅನುಕೂಲಕ್ಕಾಗಿ ಸೃಷ್ಟಿಸಿಕೊಳ್ಳಲಾಗಿದೆ, ಆದರೆ ನಿರಂತರ ಪರಿವರ್ತನೆಗೆ

ಪರಿಮಾಣಾತ್ಮಕ ಸಲಕರಣೆ ಬೇಕಾಗುತ್ತದೆ, ಅದರ ಸಾಧ್ಯತೆಯನ್ನು ಪ್ಲೇಟೋ ಕಡೆಗಣಿಸುತ್ತಾನೆ. ಈ ವಿಷಯದಲ್ಲಿ ಅವನು ಹೇಳುವುದು ಗುರಿಯನ್ನು ತಲುಪುವುದಿಲ್ಲ.

ಅದೇ ವೇಳೆಗೆ, ಪದಗಳಿಗೆ ಸ್ವಲ್ಪಮಟ್ಟಿಗೆ ಖಚಿತ ಅರ್ಥಗಳು ಇಲ್ಲದಿದ್ದರೆ, ಚರ್ಚೆಯು ಅಸಾಧ್ಯ ಎನ್ನುವುದನ್ನು ಒಪ್ಪಬೇಕು. ಇಲ್ಲಿ ಮತ್ತೆ ತೀರ ಆತ್ಯಂತಿಕವಾಗಿರುವುದು ಸುಲಭ. ಪದಗಳು ತಮ್ಮ ಅರ್ಥವಂತಿಕೆಯಲ್ಲಿ ಬದಲಾಗುತ್ತಿರುತ್ತವೆ: 'ಆದರ್ಶರೂಪ' ಎಂಬ ಪದವನ್ನು ಉದಾಹರಣೆಯಾಗಿ ತೆಗೆದುಕೊಳ್ಳಿ. ಅದಕ್ಕೆ ಪ್ಲೇಟೋ ನೀಡುವ ಅರ್ಥದಂತಹುದನ್ನು ಕಲಿಯಲು ಸಾಕಷ್ಟು ಶಿಕ್ಷಣ ಪ್ರಕ್ರಿಯೆ ನಡೆಯಬೇಕು. ಪದಗಳಿಗೆ ಅರ್ಥ ಬದಲಾಗುವುದು ಅವು ವರ್ಣಿಸುವ ಅರ್ಥ ಬದಲಾಗುವುದಕ್ಕಿಂತ ನಿಧಾನವಾಗಿರಬೇಕು; ಆದರೆ ಪದಗಳಿಗೆ ಅರ್ಥಗಳು ಬದಲಾಗಲೇಬಾರದೆಂಬುವ ಆವಶ್ಯಕತೆಯಿಲ್ಲ. ಪ್ರಾಯಶಃ ಇದು ತರ್ಕ ಮತ್ತು ಗಣಿತಗಳ ಅಮೂರ್ತ ಪದಗಳಿಗೆ ಅನ್ವಯಿಸುವುದಿಲ್ಲ; ಆದರೆ ಆ ಪದಗಳು, ನಾವಾಗಲೇ ನೋಡಿದಂತೆ, ರೂಪಾತ್ಮಕತೆಗಳಿಗೆ ಮಾತ್ರ ಅನ್ವಯಿಸುವಂತಹುವೇ ಹೊರತು ಪ್ರತಿಪಾದನೆಗಳ ವಸ್ತುಗಳಿಗಲ್ಲ. ಮತ್ತೆ ಇಲ್ಲಿ ತರ್ಕ ಮತ್ತು ಗಣಿತಗಳು ವಿಶಿಷ್ಟವಾದುವು. ಪೈಥಾಗೊರಾಸ್‌ಪಂಥದ ಪ್ರಭಾವದಿಂದಾಗಿ ಪ್ಲೇಟೋ ಇತರ ಜ್ಞಾನವನ್ನು ಅತಿಯಾಗಿ ಗಣಿತದಲ್ಲಿ ಬೆರೆಸಿದ. ಅವನು ಈ ತಪ್ಪಿನಲ್ಲಿ ಮಿಕ್ಕ ಅನೇಕ ಅತ್ಯಂತ ದೊಡ್ಡ ತತ್ತ್ವಜ್ಞಾನಿಗಳೊಡನೆ ಸೇರುತ್ತಾನೆ, ಆದರೂ ಅದು ತಪ್ಪೇ.

೧೯
ಅರಿಸ್ಟಾಟಲ್‌ನ ತತ್ವಜಿಜ್ಞಾಸೆ (ಮೆಟಫಿಸಿಕ್ಸ್)

ಯಾವುದೇ ಮಹತ್ವದ ತತ್ವಜ್ಞಾನಿಯನ್ನು ಅಧ್ಯಯನ ಮಾಡುವಾಗ, ಅದರಲ್ಲೂ ಅರಿಸ್ಟಾಟಲ್ ಅನ್ನು, ಅವನನ್ನು ಎರಡು ದೃಷ್ಟಿಕೋನಗಳಿಂದ ಅಧ್ಯಯನ ಮಾಡಬೇಕು: ಅವನ ಹಿಂದಿನವರ ಹಿನ್ನೆಲೆಯಲ್ಲಿ, ಮತ್ತು ಅವನ ಮುಂದಿನವರ ಹಿನ್ನೆಲೆಯಲ್ಲಿ. ಮೊದಲಿನ ದೃಷ್ಟಿಕೋನದಿಂದ, ಅರಿಸ್ಟಾಟಲ್‌ನ ಗುಣಗಳು ಅಧಿಕ; ಎರಡನೆಯದರಲ್ಲಿ, ಅವನ ದೋಷಗಳೂ ಅಷ್ಟೇ ಅಧಿಕ. ಅವನ ದೋಷಗಳಿಗೆ ಅವನಿಗಿಂತ ಅವನ ನಂತರದವರು ಹೆಚ್ಚು ಜವಾಬ್ದಾರರು. ಅವನು ಬಂದದ್ದು ಗ್ರೀಕ್ ಚಿಂತನೆಯ ಕೊನೆಯ ಅವಧಿಯಲ್ಲಿ, ಅವನ ಸಾವಿನ ನಂತರ ಅವನಿಗೆ ಸುಮಾರು ಸಮಾನನೆಂದು ಭಾವಿಸಬಹುದಾದ ತತ್ವಜ್ಞಾನಿಯು ಬರಲು ಎರಡು ಸಾವಿರ ವರ್ಷಗಳೇ ಬೇಕಾದುವು. ಈ ದೀರ್ಘ ಅವಧಿಯ ಕೊನೆಯ ವೇಳೆಗೆ, ವಿಜ್ಞಾನದ ವಿಷಯದಲ್ಲಿ ಹಾಗೂ ತತ್ವಜ್ಞಾನದ ವಿಷಯದಲ್ಲಿ, ಅವನ ಪ್ರಾಮಾಣ್ಯವು (ಅಥಾರಿಟಿ) ಹೆಚ್ಚು ಕಡಿಮೆ ಚರ್ಚ್‌ನಷ್ಟೇ ಪ್ರಶ್ನಾತೀತವೆನಿಸಿತು; ಇದು ಪ್ರಗತಿಗೆ ಮಾರಕವಾಯಿತು. ಹದಿನೇಳನೆಯ ಶತಮಾನದ ಆರಂಭದಿಂದಲೂ, ಬಹುಪಾಲು ಗಂಭೀರ ಬೌದ್ಧಿಕ ಬೆಳವಣಿಗೆಯು ಕೆಲವು ಅರಿಸ್ಟಾಟಲ್‌ಪಂಥದ ಸಿದ್ಧಾಂತಗಳನ್ನು ಖಂಡಿಸಿ ಮುನ್ನಡೆಯಬೇಕಾಯಿತು. ತರ್ಕದಲ್ಲಿ, ಇದು ಈಗಲೂ ನಿಜ. ಅವನ ಹಿಂದಿನವರು (ಪ್ರಾಯಶಃ ಡೆಮಾಕ್ರಿಟಸ್‌ನ ಹೊರತಾಗಿ) ಪ್ರಾಮಾಣ್ಯವನ್ನು ಪಡೆದಿದ್ದರೂ ಅಷ್ಟೇ ವಿನಾಶಕಾರಕವಾಗಿರುತ್ತಿತ್ತು. ಅವನಿಗೆ ನ್ಯಾಯ ಒದಗಿಸಲು ನಾವು ಮೊದಲಿಗೆ ಅವನ ಮರಣಾನಂತರದ ಅತಿಯಾದ ಕೀರ್ತಿಯನ್ನು ಮರೆಯಬೇಕು, ಮತ್ತು ಅದರಿಂದಾದ ಅವನ ಅತಿ ಖಂಡನೆಯನ್ನೂ ಮರೆಯಬೇಕು.

ಅರಿಸ್ಟಾಟಲ್ ಪ್ರಾಯಶಃ ಕ್ರಿಪೂ ೩೮೪ ರಲ್ಲಿ ಥ್ರೇಸ್‌ನ ಸ್ಟಗೀರದಲ್ಲಿ ಹುಟ್ಟಿದ. ಅವನ ತಂದೆ ಮ್ಯಾಸಿಡೋನಿಯದ ರಾಜನ ಕುಟುಂಬ ವೈದ್ಯನ ಸ್ಥಾನವನ್ನು ವಂಶಪರಂಪರೆಯಿಂದ ಪಡೆದಿದ್ದ. ತನ್ನ ಸುಮಾರು ಹದಿನೆಂಟನೆಯ ವಯಸ್ಸಿಗೆ ಅರಿಸ್ಟಾಟಲ್ ಅಥೆನ್ಸ್‌ಗೆ ಬಂದು ಪ್ಲೇಟೋನ ವಿದ್ಯಾರ್ಥಿಯಾದ; ಅವನು

ಅಕೆಡೆಮಿಯಲ್ಲಿ ಕ್ರಿಪೂ ೩೬೭–೩೪೭ ರಲ್ಲಿ ಪ್ಲೇಟೋ ಸಾಯುವವರೆಗೆ ಸುಮಾರು ಇಪ್ಪತ್ತು ವರ್ಷಗಳ ಕಾಲ ಇದ್ದ. ಆನಂತರ ಸ್ವಲ್ಪ ಕಾಲ ಪ್ರವಾಸ ಕೈಗೊಂಡು, ಆ ಬಳಿಕ ಹರ್ಮಿಯಸ್ ಎಂಬ ನಿರಂಕುಶ ಪ್ರಭುವಿನ ಸೋದರಿ ಅಥವಾ ಅಣ್ಣನ ಮಗಳನ್ನು ಮದುವೆಯಾದ. (ಅವಳು ಹರ್ಮಿಯಸ್‌ನ ವೇಶ್ಯೆಯೊಬ್ಬಳ ಮಗಳೆಂಬ ಪುಕಾರೂ ಇದೆ, ಆದರೆ ಎರಡೂ ಕತೆಗಳನ್ನು ಅವನು ನಪುಂಸಕನಾಗಿದ್ದ ಎಂಬ ವಸ್ತುಸ್ಥಿತಿಯು ಅಲ್ಲಗಳೆಯುತ್ತದೆ.) ಕ್ರಿಪೂ ೩೪೩ ರಲ್ಲಿ ಅವನು ಹದಿಮೂರು ವರ್ಷದವನಾಗಿದ್ದ ಅಲೆಕ್ಸಾಂಡರ್‌ನ ಖಾಸಗಿ ಶಿಕ್ಷಕನಾಗಿ ಅವನಿಗೆ ಹದಿನಾರು ವರ್ಷವಾಗುವರೆಗೆ ಮುಂದುವರಿದ. ಅಲೆಕ್ಸಾಂಡರ್ ಪ್ರಾಪ್ತವಯಸ್ಕನಾದನೆಂದು ಅವನ ತಂದೆ ಘೋಷಿಸಿ ಫಿಲಿಪ್‌ನ ಗೈರುಹಾಜರಿಯಲ್ಲಿ ರಾಜಪ್ರತಿನಿಧಿ (ರೀಜೆಂಟ್) ಯನ್ನಾಗಿ ಮಾಡಿದ. ಅರಿಸ್ಟಾಟಲ್ ಮತ್ತು ಅಲೆಕ್ಸಾಂಡರ್‌ರ ನಡುವಣ ಸಂಬಂಧದ ಸ್ವರೂಪದ ಯಾವುದೇ ಅಂಶದ ಬಗ್ಗೆಯೂ ಖಚಿತತೆಯಿಲ್ಲ, ಹೀಗಾಗಿ ಅದರ ಬಗ್ಗೆ ದಂತಕತೆಗಳು ಹುಟ್ಟಿಕೊಂಡುವು. ಅವರ ನಡುವೆ ನಡೆದಿದ್ದುದೆನ್ನಲಾದ ಪತ್ರವ್ಯವಹಾರವು ಖೋಟಾ ಎಂದು ಪರಿಗಣಿತವಾಗಿದೆ. ಇವರಿಬ್ಬರನ್ನೂ ಮೆಚ್ಚುವ ಜನರು ಶಿಕ್ಷಕನು ವಿದ್ಯಾರ್ಥಿಯ ಮೇಲೆ ತನ್ನ ಪ್ರಭಾವವನ್ನು ಬೀರಿದನೆಂದು ಹೇಳುತ್ತಾರೆ. ಅಲೆಕ್ಸಾಂಡರ್‌ನ ಜೀವನಪಥವು ತತ್ವಜ್ಞಾನದ ವ್ಯಾವಹಾರಿಕ ಉಪಯುಕ್ತತೆಯನ್ನು ತೋರಿಸುತ್ತದೆ ಎಂದು ಹೆಗೆಲ್ ಭಾವಿಸುತ್ತಾನೆ. ಈ ವಿಷಯದಲ್ಲಿ ಎ. ಡಬ್ಲ್ಯು. ಬೆನ್, 'ಅಲೆಕ್ಸಾಂಡರ್‌ನ ನಡವಳಿಕೆಗಿಂತ ಉತ್ತಮವಾದ ಬೇರೆಯ ಶಿಫಾರಸು ಪತ್ರ ತತ್ವಜ್ಞಾನಕ್ಕಿರದಿದ್ದರೆ ದುರದೃಷ್ಟಕರವಾಗುತ್ತಿತ್ತು .. .. ದುರಹಂಕಾರಿ, ಕುಡುಕ, ಕ್ರೂರಿ, ಸೇಡಿನ ವ್ಯಕ್ತಿ ಮತ್ತು ಮೂಢಶ್ರದ್ಧೆಗಳ ಮೂಟೆಯಾಗಿದ್ದ ಅವನು ಪರ್ವತಪ್ರದೇಶದ ಮುಖಂಡರ ದುರ್ಬುದ್ಧಿಯ ಜೊತೆಗೆ ಪೌರಸ್ತ್ಯ ದಮನಕಾರಿಯ ಆವೇಶವನ್ನೂ ಮೈಗೂಡಿಸಿಕೊಂಡಿದ್ದ'[೬೯] ಎಂದು ಹೇಳುತ್ತಾರೆ.

ನಾನು ಬೆನ್ ಅವರ ಹೇಳಿಕೆಯಲ್ಲಿ ಅಲೆಕ್ಸಾಂಡರ್‌ನ ನಡತೆಯ ಬಗ್ಗೆ ಹೇಳಿದುದನ್ನು ಒಪ್ಪುವೆನಾದರೂ, ಅವನ ಕೆಲಸವು ತುಂಬ ಮಹತ್ವದ್ದಾಗಿಯೂ ಅತೀವ ಉಪಯುಕ್ತವಾಗಿಯೂ ಇತ್ತು, ಏಕೆಂದರೆ ಅವನಿಲ್ಲದಿದ್ದರೆ ಇಡೀ ಗ್ರೀಕ್ ಪರಂಪರೆಯು ನಾಶವಾಗಿಬಿಡುತ್ತಿತ್ತು. ಅವನ ಮೇಲೆ ಬಿದ್ದ ಅರಿಸ್ಟಾಟಲ್‌ನ ಪ್ರಭಾವದ ಮಟ್ಟಿಗೆ ಹೇಳುವುದಾರೆ, ಅದು ನಮ್ಮ ಊಹೆಗೆ ಬಿಟ್ಟ ವಿಚಾರ. ನನ್ನ ಮಟ್ಟಿಗೆ, ಅದು ಇಲ್ಲವೆಂದೇ ನನ್ನ ಭಾವನೆ. ಅಲೆಕ್ಸಾಂಡರ್ ಆವೇಶಭರಿತನೂ ಮಹತ್ವಾಕಾಂಕ್ಷಿಯೂ ಆಗಿದ್ದ ಹುಡುಗ; ತನ್ನ ತಂದೆಯ ಜೊತೆಗಿನ ಭಿನ್ನಾಭಿಪ್ರಾಯದಿಂದ ಕೂಡಿದ್ದ, ಶಿಕ್ಷಣದ ಬಗ್ಗೆ ಅಸಹನೆಯಿಂದ ಕೂಡಿದ್ದ. ಯಾವ

---

೬೯. 'ದ ಗ್ರೀಕ್ ಫಿಲಾಸಫರ್ಸ್' ಸಂಪುಟ ೧, ಪು. ೨೮೫.

ದೇಶದಲ್ಲಿಯೂ ಒಂದು ಲಕ್ಷ ಮಂದಿಗಿಂತ ಹೆಚ್ಚು ಜನ ಇರಬಾರದೆಂಬುದು ಅರಿಸ್ಟಾಟಲ್‌ನ ಭಾವನೆ,[೨೦] ಮತ್ತು ಸುವರ್ಣಮಾಧ್ಯಮದ ತತ್ವವನ್ನು ಬೋಧಿಸುತ್ತಿದ್ದ. ಅವನ ವಿದ್ಯಾರ್ಥಿಯು ಅವನನ್ನು ಓಬೀರಾಯನ ಕಾಲದ ನೀರಸ ಪಂಡಿತನೆಂದೂ, ಚೇಷ್ಟೆ ಮಾಡದಿರುವಂತೆ ನೋಡಿಕೊಳ್ಳಲು ತಂದೆ ತನ್ನ ಮೇಲೆ ನಿಗಾ ಇಡಲು ನೇಮಿಸಿದ್ದನೆಂದೂ ಭಾವಿಸುತ್ತಿದ್ದ, ಅಲೆಕ್ಸಾಂಡರ್ ಅಥೆನ್ಸ್ ನಾಗರಿಕತೆಯ ಬಗ್ಗೆ ಒಂದು ಬಗೆಯ ಪ್ರತಿಷ್ಠಾಪೂಜಕ ಗೌರವವನ್ನಿರಿಸಿಕೊಂಡಿದ್ದ ಎಂಬುದು ನಿಜ, ಆದರೆ ತಾವೇನೂ ಅನಾಗರಿಕರಲ್ಲ ಎಂದು ತೋರಿಸಲು ಅವನ ವಂಶದವರೆಲ್ಲರೂ ಇದೇ ಬಗೆಯ ಭಾವನೆಯನ್ನು ಹೊಂದಿದ್ದರು. ಇದು ಹತ್ತೊಂಬತ್ತನೆಯ ಶತಮಾನದ ರಷ್ಯನ್ನರು ಪ್ಯಾರಿಸ್ ಬಗ್ಗೆ ಇರಿಸಿಕೊಂಡಿದ್ದ ಭಾವನೆಯನ್ನು ಹೋಲುವಂತಹುದು. ಹೀಗಾಗಿ ಇದು ಅರಿಸ್ಟಾಟಲ್‌ನ ಪ್ರಭಾವದಿಂದಾದುದು ಎಂದು ಹೇಳಲಾಗುವುದಿಲ್ಲ. ಅಲೆಕ್ಸಾಂಡರ್‌ನಲ್ಲಿ ಈ ಮೂಲದಿಂದ ಬಂದ ಬೇರಾವುದೇ ಪ್ರಭಾವ ಆಗಿರುವ ಸಂಭವ ನನಗೆ ಕಾಣಿಸುತ್ತಿಲ್ಲ.

ಅಲೆಕ್ಸಾಂಡರ್‌ನ ಪ್ರಭಾವ ಅರಿಸ್ಟಾಟಲ್ ಮೇಲೆ ಆದುದು ತೀರ ಅಲ್ಪ ಎಂಬುದು ಇದಕ್ಕಿಂತ ಹೆಚ್ಚು ಆಶ್ಚರ್ಯಕರವಾದ ವಿಷಯ. ಏಕೆಂದರೆ ರಾಜಕೀಯದ ಬಗೆಗಿನ ಅವನ ಕಲ್ಪನೆಗಳು ನಗರ ಪ್ರಭುತ್ವಗಳ ಯುಗವು ಮುಗಿದು ಚಕ್ರಾಧಿಪತ್ಯಗಳಿಗೆ ಎಡೆ ಮಾಡಿಕೊಟ್ಟಿದ್ದ ಅಂಶದ ಬಗ್ಗೆ ಸಂಪೂರ್ಣ ಕುರುಡಾಗಿತ್ತು. ಕೊನೆಯವರೆಗೂ ಅರಿಸ್ಟಾಟಲ್ ಅವನ ಬಗ್ಗೆ 'ಸೋಮಾರಿಯಾದ ಅಹಂಕಾರಿ ಹುಡುಗ, ತತ್ವಜ್ಞಾನದ ಬಗ್ಗೆ ಏನನ್ನೂ ಅರಿಯಲಾರದವನು' ಎಂದು ಭಾವಿಸಿದ್ದಿರಬಹುದೆಂಬುದು ನನ್ನ ಅನುಮಾನ. ಒಟ್ಟಾರೆ, ಈ ಇಬ್ಬರು ಮಹಾಪುರುಷರ ಸಂಪರ್ಕವು, ಅವರಿಬ್ಬರೂ ದೂರದೂರವೇ ಬದುಕಿದ್ದರೇನೋ ಎಂಬಂತೆ, ಫಲಹೀನವಾಗಿತ್ತೆಂಬಂತೆ ಕಾಣುತ್ತದೆ.

ಕ್ರಿಪೂ ೩೩೫–೩೨೩ ರವರೆಗೆ (ಇಲ್ಲಿನ ಕೊನೆಯ ವರ್ಷದಲ್ಲಿ ಅಲೆಕ್ಸಾಂಡರ್ ತೀರಿಕೊಂಡ), ಅಟರಿಸ್ಟಾಟಲ್ ಅಥೆನ್ಸ್‌ನಲ್ಲಿ ಬದುಕಿದ್ದ. ಈ ಹನ್ನೆರಡು ವರ್ಷಗಳ ಅವಧಿಯಲ್ಲಿ ಅವನು ತನ್ನ ಶಾಲೆಯನ್ನು ತೆರೆದ ಮತ್ತು ತನ್ನ ಬಹುಪಾಲು ಗ್ರಂಥಗಳ ರಚನೆ ಮಾಡಿದ. ಅಲೆಕ್ಸಾಂಡರ್ ಸತ್ತ ಮೇಲೆ ಅಥೆನ್ಸ್ ಜನ ಬಂಡೆದ್ದರು, ಅರಿಸ್ಟಾಟಲ್ ಅನ್ನೂ ಒಳಗೊಂಡಂತೆ ಅವನ ಸ್ನೇಹಿತರ ವಿರುದ್ಧ ತಿರುಗಿಬಿದ್ದರು. ಅವನ ಮೇಲೆ ಧರ್ಮಬಾಹಿರತೆಯ ಆರೋಪ ಹೊರಿಸಲಾಯಿತಾದರೂ ಅವನು ಸಾಕ್ರಟೀಸ್‌ಗಿಂತ ಭಿನ್ನವಾಗಿ ಶಿಕ್ಷೆಯನ್ನು ತಪ್ಪಿಸಿಕೊಳ್ಳಲು ಓಡಿಹೋದ. ಆ ಮುಂದಿನ ವರ್ಷ (ಕ್ರಿಪೂ ೩೨೨) ಅವನು ಸತ್ತ.

---

೨೦. *'ದ ಗ್ರೀಕ್ ಫಿಲಾಸಫರ್ಸ್', ಸಂಪುಟ ೧, ಪು. ೨೮೫.*

ಒಬ್ಬ ತತ್ವಜ್ಞಾನಿಯಾಗಿ ಅರಿಸ್ಟಾಟಲ್ ಹಲವಾರು ಅಂಶಗಳಲ್ಲಿ ತನ್ನ ಹಿಂದಿನವರಿಗಿಂತ ಭಿನ್ನನಾಗಿದ್ದ. ತಾನೊಬ್ಬ ಪ್ರಾಧ್ಯಾಪಕನಂತೆ ಅವನು ಗ್ರಂಥಗಳನ್ನು ಬರೆದ: ಅವನ ಉದ್ಗ್ರಂಥಗಳು ವ್ಯವಸ್ಥಿತವಾದವು; ತನ್ನ ವಾದಗಳನ್ನವನು ಬೇರೆ ಬೇರೆ ಶೀರ್ಷಿಕೆಗಳಡಿಯಲ್ಲಿ ಮಂಡಿಸುತ್ತಾನೆ, ಅವನೊಬ್ಬ ವೃತ್ತಿಪರ ಅಧ್ಯಾಪಕನೇ ಹೊರತು ಸ್ಫೂರ್ತಗೊಂಡ ಪ್ರವಾದಿಯಲ್ಲ. ಅವನ ಕೃತಿಗಳು ವಿಮರ್ಶಾತ್ಮಕವಾದವು, ಎಚ್ಚರಿಕೆಯಿಂದ ಕೂಡಿದವು, ಬ್ಯಾಕಿಕ್ ಉತ್ಸಾಹವೊಂದಿನಿತೂ ಇಲ್ಲದ ಶುಷ್ಕವಾದವು. ಪ್ಲೇಟೋನಲ್ಲಿನ ಆರ್ಫಿಕ್ ಅಂಶಗಳು ಅರಿಸ್ಟಾಟಲ್‌ನಲ್ಲಿ ತೆಳುವಾಗಿ, ವ್ಯಹಾರಜ್ಞಾನದಿಂದ ಬಲಿಷ್ಠವಾಗಿವೆ. ತಾತ್ವಿಕತೆಯಿಂದ ಕೂಡಿರುವಾಗ ಅವನ ಸಹಜ ಸ್ವಭಾವವನ್ನು ತನ್ನ ಮೇಲಾದ ಪ್ರಭಾವಗಳು ಮರೆಮಾಡಿಬಿಟ್ಟಿವೆ ಎನ್ನಿಸುತ್ತದೆ. ಅವನೂ ಆವೇಶಪೂರಿತನಲ್ಲ, ಉದಾತ್ತ ಅರ್ಥದಲ್ಲಿ ಮತಧಾರ್ಮಿಕನಲ್ಲ. ಅವನ ಹಿಂದಿನವರ ದೋಷಗಳೆಂದರೆ ಯುವಕರು ಅಸಾಧ್ಯವಾದುದನ್ನು ಮಾಡುವ ಮಹಾದೋಷಗಳು; ಅವನ ದೋಷಗಳಾದರೋ ತನ್ನ ಕಾಲದ ದೋಷಗಳು, ರೂಢಿಗತ ಪೂರ್ವಾಗ್ರಹಗಳಿಂದ ಸ್ವತಂತ್ರವಾಗದಂತಹವು. ವಿವರಣೆಯಲ್ಲಿ ಮತ್ತು ವಿಮರ್ಶೆಯಲ್ಲಿ ಅವನು ಪಳಗಿದವನು; ದೀರ್ಘ ರಚನೆಗಳಲ್ಲಿ ಅವನು ಸೋಲುತ್ತಾನೆ, ಇದಕ್ಕೆ ಕಾರಣ ಮೂಲಭೂತ ಸ್ಪಷ್ಟತೆ ಮತ್ತು ಅವನತೀವ್ರ ಆವೇಶಗಳ ಕೊರತೆ.

ಅರಿಸ್ಟಾಟಲ್‌ನ ತತ್ವಜಿಜ್ಞಾಸೆಯ ವಿಷಯವನ್ನು ಎಲ್ಲಿಂದ ಆರಂಭಿಸಬೇಕೆಂದು ತೀರ್ಮಾನಿಸುವುದು ಕಷ್ಟಕರ ವಿಷಯ, ಪ್ರಾಯಶಃ ಆದರ್ಶರೂಪ ಸಿದ್ಧಾಂತದ ಬಗೆಗಿನ ಅವನ ವಿಮರ್ಶೆಯಿಂದ ಮತ್ತು ತನ್ನದೇ ಪರ್ಯಾಯವಾದ ವೈಶ್ವಿಕಸಿದ್ಧಾಂತದಿಂದ (ಡಾಕ್ಟ್ರೀನ್ ಆಫ್ ಯೂನಿವರ್ಸಲ್ಸ್) ಆರಂಭಿಸುವುದು ಅತ್ಯಂತ ಸೂಕ್ತವೆನಿಸುತ್ತದೆ. ಆದರ್ಶರೂಪ ಸಿದ್ಧಾಂತದ ವಿರುದ್ಧ ಅವನು ಉಜ್ವಲವಾದ ಅನೇಕ ವಾದಗಳನ್ನು ಮುಂದಿಡುತ್ತಾನೆ, ಅವುಗಳಲ್ಲಿ ಬಹು ಪಾಲು ಪ್ಲೇಟೋನ 'ಪಾರ್ಮನೈಡೀಸ್'ನಲ್ಲಿ ಆಗಲೇ ಕಾಣಿಸಿಕೊಂಡಿದ್ದವು. ಅತ್ಯಂತ ಪ್ರಬಲ ವಾದವೆಂದರೆ 'ಮೂರನೆಯ ವ್ಯಕ್ತಿ': ಆದರ್ಶ ಪುರುಷನನ್ನು ಹೋಲುವ ಪುರುಷನು ಪುರುಷನಾದರೆ, ಆದರ್ಶಪುರುಷ ಮತ್ತು ಸಾಮಾನ್ಯ ಪುರುಷರಿಬ್ಬರೂ ಹೋಲುವ ಇನ್ನೂ ಹೆಚ್ಚಿನ ಆದರ್ಶಪುರುಷನೊಬ್ಬನಿರಬೇಕು. ಮತ್ತೆ, ಸಾಕ್ರಟೀಸ್ ಮನುಷ್ಯನೂ ಹೌದು, ಪ್ರಾಣಿಯೂ ಹೌದು; ಹಾಗಾದರೆ, ಎಷ್ಟು ಬಗೆಯ ಪ್ರಾಣಿಗಳಿವೆಯೋ ಅಷ್ಟೂ ಬಗೆಯ ಆದರ್ಶಪ್ರಾಣಿಗಳಿರಬೇಕು. ಈ ವಿಷಯವನ್ನು ಮುಂದುವರಿಸುವುದರ ಆವಶ್ಯಕತೆಯಿಲ್ಲ. ಅನೇಕ ವ್ಯಕ್ತಿಗಳು ಒಂದೇ ವಿಶೇಷಣಕ್ಕೊಳಪಟ್ಟರೆ, ಅದಕ್ಕೆ ಕಾರಣ ತಮ್ಮಂತೆಯೇ ಇರುವ ಯಾವುದರದೋ ಕಾರಣದಿಂದಲ್ಲದೆ, ಹೆಚ್ಚು ಆದರ್ಶವಾಗಿರುವುದರಿಂದ ಇಷ್ಟು ಸಾಧಿತವಾಯಿತೆಂದು ಭಾವಿಸಬಹುದು, ಆದರೆ ಅರಿಸ್ಟಾಟಲ್‌ನ ಸ್ವಂತ ಸಿದ್ಧಾಂತವು ಸ್ಪಷ್ಟತೆಯಿಂದ ದೂರವೇ ಉಳಿಯುತ್ತದೆ. ಸ್ಪಷ್ಟತೆಯ

ಈ ಕೊರತೆಯೇ ಮಧ್ಯಯುಗದ ನಾಮಮಾತ್ರವಾದಿಗಳು ಮತ್ತು ವಾಸ್ತವವಾದಿಗಳ ನಡುವಣ ವಿವಾದಕ್ಕೆ ಕಾರಣವೆನಿಸಿತು.

ಸ್ಥೂಲವಾಗಿ ಹೇಳಬೇಕೆಂದರೆ, ಅರಿಸ್ಟಾಟಲ್‌ನ ತತ್ವಜಿಜ್ಞಾಸೆಯು, ವ್ಯವಹಾರಜ್ಞಾನದಿಂದ ತೀವ್ರತೆಯನ್ನು ಕಳೆದುಕೊಂಡ ಪ್ಲೇಟೋ ಎಂದು ವರ್ಣಿಸಬಹುದು. ಅವನು ಯಾಕೆ ಕಷ್ಟಕರವೆಂದರೆ ಪ್ಲೇಟೋ ಮತ್ತು ವ್ಯವಹಾರಜ್ಞಾನಗಳು ಸುಲಭವಾಗಿ ಬೆರೆತುಕೊಳ್ಳುವುದಿಲ್ಲ. ಅವನನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ, ಅವನಿಗೆ ಅದು ಭಾಗಶಃ ತತ್ವಜ್ಞಾನದ ಅರಿವಿಲ್ಲದ ಮುಗ್ಧನೊಬ್ಬನ ಸಾಮಾನ್ಯ ಅಭಿಪ್ರಾಯಗಳ ಅಭಿವ್ಯಕ್ತಿ ಅನ್ನಿಸಬಹುದು, ಮಿಕ್ಕ ಸಮಯವನ್ನು ಪ್ಲೇಟೋವಾದವನ್ನು ತನ್ನ ಹೊಸ ಪರಿಭಾಷೆಯಲ್ಲಿ ವ್ಯಕ್ತಪಡಿಸಲು ಪ್ರಯತ್ನಿಸಬೇಕು. ಯಾವುದೇ ಒಂದು ಭಾಗದ ಮೇಲೆ ಅದು ಒತ್ತು ನೀಡುವುದಿಲ್ಲ, ಯಾಕೆಂದರೆ ಮುಂದಿನ ಯಾವುದೋ ಭಾಗದಲ್ಲಿ ಅದನ್ನು ಸರಿಪಡಿಸುವ ಅಥವಾ ಪರಿಷ್ಕರಿಸಿರುವ ಸಾಧ್ಯತೆಯಿರುತ್ತದೆ. ಒಟ್ಟಾರೆ, ಅವನ ವೈಶ್ವಿಕಸಿದ್ಧಾಂತ ಹಾಗೂ ಅವನ ಭೌತವಸ್ತು ಮತ್ತು ರೂಪಗಳ ಸಿದ್ಧಾಂತಗಳೆರಡನ್ನೂ ಅರ್ಥಮಾಡಿಕೊಳ್ಳಬಹುದಾದ ಅತ್ಯಂತ ಸುಲಭ ಮಾರ್ಗವೆಂದರೆ, ಮೊದಲಿಗೆ ಅವನ ದೃಷ್ಟಿಕೋನವಾದ ವ್ಯವಹಾರಜ್ಞಾನ ಸಿದ್ಧಾಂತವನ್ನು ಮಂಡಿಸಿ, ಆನಂತರ ಪ್ಲೇಟೋನನ್ನು ಒಳಗುಮಾಡುವ ಪರಿಷ್ಕರಣಗಳ್ನು ಪರಿಗಣಿಸುವುದು.

ಒಂದು ಹಂತದವರೆಗೆ, ವೈಶ್ವಿಕಸಿದ್ಧಾಂತವು ಸಾಕಷ್ಟು ಸರಳವಾದುದು. ಭಾಷೆಯಲ್ಲಿ ಅಂಕಿತನಾಮಗಳಿರುತ್ತವೆ ಮತ್ತು ವಿಶೇಷಣಗಳಿರುತ್ತವೆ. ಅಂಕಿತ ನಾಮಗಳು 'ವಸ್ತುಗಳು' ಅಥವಾ 'ವ್ಯಕ್ತಿಗಳಿಗೆ' ಅನ್ವಯಿಸುತ್ತವೆ, ಅವುಗಳಲ್ಲಿ ಪ್ರತಿಯೊಂದೂ ತಾನು ಪ್ರತಿನಿಧಿಸುವ ವ್ಯಕ್ತಿ ಅಥವಾ ವಸ್ತುವಿಗೆ ಮಾತ್ರ ಅನ್ವಯಿಸುವಂತಹುದು. ಸೂರ್ಯ, ಚಂದ್ರ, ಫ್ರಾನ್ಸ್, ನೆಪೋಲಿಯನ್ – ಇವುಗಳು ವಿಶಿಷ್ಟವಾದವು; ಈ ಹೆಸರುಗಳು ಅನ್ವಯಿಸುವ ಅನೇಕ ಸನ್ನಿವೇಶಗಳಿರುವುದಿಲ್ಲ. ಅದರ ಬದಲಿಗೆ, 'ಬೆಕ್ಕು', 'ನಾಯಿ', 'ಮನುಷ್ಯ' ಮುಂತಾದವು ವಿವಿಧ ವಸ್ತುಗಳಿಗೆ ಅನ್ವಯಿಸುತ್ತವೆ. ವೈಶ್ವಿಕಸಿದ್ಧಾಂತವು ಇಂತಹ ಪದಗಳ ಅರ್ಥಗಳನ್ನು ಹಾಗೂ 'ಬಿಳಿ', 'ಕಠಿಣ', 'ಗುಂಡಗಿನ', ಮುಂತಾದ ವಿಶೇಷಣಗಳನ್ನು ಕುರಿತದ್ದು. ಅವನೆನ್ನುತ್ತಾನೆ:[೨೧] 'ನನ್ನ ಪ್ರಕಾರ "ವೈಶ್ವಿಕ" ಎಂಬ ಪದದ ಅರ್ಥವು ಒಂದೇ ವಿಶೇಷಣದಡಿ ವರ್ಣಿಸಬಹುದಾದ ಗುಣವುಳ್ಳ ಅನೇಕ ವಸ್ತುಗಳು. "ಬಿಡಿ" ಎಂದರೆ ಅಂತಹ ವಿಶೇಷಣದಿಂದ ಕೂಡಿರದಂತಹವು.'

ಒಂದು ಅಂಕಿತನಾಮದಿಂದ ಸೂಚಿತವಾದುದು 'ದ್ರವ್ಯ' (ಸಬ್‌ಸ್ಟೆನ್ಸ್),

---

೨೧. 'ಆನ್ ಇಂಟರ್‌ಪ್ರಿಟೇಷನ್', ೧೭ ಟಿಪ್ಪಣಿ.

ವಿಶೇಷಣದಿಂದ ಅಥವಾ ವರ್ಗವೊಂದರಿಂದ ಸೂಚಿತವಾದ 'ಮಾನವ', ಅಥವಾ 'ಮನುಷ್ಯ' ಎಂಬಂತಹವು ವೈಶ್ವಿಕಗಳು. ದ್ರವ್ಯವು 'ಇದು', ಆದರೆ ವೈಶ್ವಿಕವು 'ಅಂಥ' – ಅದು ಒಂದು ವರ್ಗವನ್ನು ಸೂಚಿಸುತ್ತದೆಯೇ ಹೊರತು ಒಂದು ನಿರ್ದಿಷ್ಟ ವಸ್ತುವನ್ನಲ್ಲ. ವೈಶ್ವಿಕವು ದ್ರವ್ಯವಲ್ಲ, ಯಾಕೆಂದರೆ ಅದು ಒಂದು 'ಇದು' ಅಲ್ಲ. (ಪ್ಲೇಟೋನ ಸ್ವರ್ಗೀಯ ಮಂಚ ಎಂಬುದು 'ಇದು' ಅಥವಾ ನೋಡಬಹುದಾದುದು; ಈ ಒಂದು ವಿಷಯದಲ್ಲಿ ಅರಿಸ್ಟಾಟಲ್ ಪ್ಲೇಟೋ ಬಗ್ಗೆ ವಿರೋಧ ವ್ಯಕ್ತಪಡಿಸುವುದು.) ಅರಿಸ್ಟಾಟಲ್ ಹೇಳುತ್ತಾನೆ: 'ಯಾವುದೇ ವೈಶ್ವಿಕ ಪದವು ಒಂದು ದ್ರವ್ಯದ ಹೆಸರಾಗಿರುವುದು ಅಸಾಧ್ಯವೆಂದು ತೋರುತ್ತದೆ. ಏಕೆಂದರೆ .. .. ಪ್ರತಿ ವಸ್ತುವಿನ ದ್ರವ್ಯವು ಅದಕ್ಕೇ ವಿಶಿಷ್ಟವಾದುದು, ಬೇರೆ ಯಾವುದಕ್ಕೂ ಸೇರದುದು; ಆದರೆ ವೈಶ್ವಿಕವು ಸಾಮಾನ್ಯವಾದುದು, ಯಾಕೆಂದರೆ ವೈಶ್ವಿಕವಾದುದು ಒಂದಕ್ಕಿಂತ ಹೆಚ್ಚಾದುವಕ್ಕೆ ಸೇರಿದುದು. ಇಲ್ಲಿಯವರೆಗಿನ ತಾತ್ಪರ್ಯವೆಂದರೆ, ವೈಶ್ವಿಕವು ತನಗೆ ತಾನೇ ಇರಲಾರದು, ಕೆಲವು ವಸ್ತುಗಳಲ್ಲಿ ಮಾತ್ರ ಇರಬಲ್ಲುದು.

ಮೇಲುನೋಟಕ್ಕೆ, ಅರಿಸ್ಟಾಟಲ್‌ನ ಸಿದ್ಧಾಂತವು ಸಾಕಷ್ಟು ನೇರವಾಗಿದೆ. 'ಫುಟ್‌ಬಾಲ್ ಆಟ ಎಂಬುದೊಂದು ಇದೆ' ಎನ್ನುತ್ತೇನೆ ಎಂದುಕೊಳ್ಳೋಣ, ಬಹುಜನರು ಈ ಹೇಳಿಕೆಯನ್ನು ಸಾಮಾನ್ಯವೆಂದು ತಿಳಿಯುತ್ತಾರೆ. ಆದರೆ ನಾನು ಫುಟ್‌ಬಾಲ್ ಆಟಗಾರರಿಲ್ಲದೆ ಫುಟ್‌ಬಾಲ್ ಆಟವಿರಬಹುದೆಂದು ಊಹಿಸುವುದಾದರೆ, ನಾನು ಅರ್ಥಹೀನವಾದುದನ್ನು ಹೇಳುತ್ತಿದ್ದೇನೆಂದು ಸರಿಯಾಗಿಯೇ ತಿಳಿಯುತ್ತಾರೆ. ಹಾಗೆಯೇ, ತಂದೆತನ ತಾಯ್ತನವಿದೆ, ಏಕೆಂದರೆ ತಂದೆತಾಯಿಯರಿದ್ದಾರೆ ಎನ್ನುವ ಒಂದೇ ಕಾರಣದಿಂದ, ಸಿಹಿತನ ಎಂಬುದೊಂದಿದೆ, ಯಾಕೆಂದರೆ ಸಿಹಿ ವಸ್ತುಗಳಿರುವ ಕಾರಣದಿಂದ, ಕೆಂಪುತನವಿದೆ, ಯಾಕೆಂದರೆ ಕೆಂಪು ವಸ್ತುಗಳಿರುವುದರಿಂದ. ಈ ಅವಲಂಬನೆಯು ಪರಸ್ಪರವಲ್ಲ ಎಂದು ಭಾವಿಸಲಾಗುತ್ತದೆ: ಫುಟ್‌ಬಾಲ್ ಆಟವನ್ನೆಂದೂ ಆಡದ ಜನರಿದ್ದರೂ ಫುಟ್‌ಬಾಲ್ ಆಟವಿರುತ್ತದೆ; ಸಾಮಾನ್ಯವಾಗಿ ಸಿಹಿಯಾಗಿರುವ ವಸ್ತುಗಳು ಹುಳಿಯಾಗಬಹುದು; ಮತ್ತು ಸಾಮಾನ್ಯವಾಗಿ ಕೆಂಪಗಿರುವ ನನ್ನ ಮುಖವು ನನ್ನ ಮುಖವಾಗಿದ್ದುಕೊಂಡೇ ಬಿಳಿಚಿಕೊಳ್ಳಬಹುದು. ಈ ರೀತಿಯಲ್ಲಿ, ವಿಶೇಷಣದಿಂದ ಸೂಚಿತವಾಗುವುದು ತನ್ನ ಇರುವಿಕೆಗೆ ಅದು ಅನ್ವಯಿಸುವ ಅಂಕಿತನಾಮದ ಮೇಲೆ ಅವಲಂಬಿತವಾಗಿರುತ್ತದೆ, ಆದರೆ ಇದರ ಪ್ರತಿಕ್ರಮದಲ್ಲಲ್ಲ (ವೈಸಿ ವರ್ಸ) ಎಂದು ನಾವು ತೀರ್ಮಾನಿಸುವಂತೆ ಮಾಡುತ್ತದೆ. ಇದೇ ಅರಿಸ್ಟಾಟಲ್‌ನ ಅರ್ಥ ಎಂಬುದು ನನ್ನ ಭಾವನೆ. ಈ ವಿಷಯದ ಅವನ ಸಿದ್ಧಾಂತವು, ಇನ್ನೂ ಅನೇಕವಂತೆ, ಪ್ರೌಢಭಾಷೆಯಲ್ಲಿ ನಿರೂಪಿತವಾದ ವ್ಯವಹಾರಜ್ಞಾನ ಪೂರ್ವಾಗ್ರಹ.

ಆದರೆ ಈ ಸಿದ್ಧಾಂತಕ್ಕೆ ನಿಖರತೆಯನ್ನು ನೀಡುವುದು ಸುಲಭವಲ್ಲ. ಫುಟ್‌ಬಾಲ್

ಆಟಗಾರರಿಲ್ಲದೆ ಫುಟ್‌ಬಾಲ್ ಆಟವಿರಲಾರದು ಎಂದು ಭಾವಿಸೋಣ, ಇವನೋ ಅವನೋ ಫುಟ್‌ಬಾಲ್ ಆಟಗಾರನಿಲ್ಲದೆ ಆಟ ಇರಬಹುದು. ಒಬ್ಬ ವ್ಯಕ್ತಿಯು ಫುಟ್‌ಬಾಲ್ ಆಟವಾಡದೆಯೇ ಬದುಕಿರಬಹುದು ಎಂದೂ ಅಂದುಕೊಳ್ಳೋಣ, ಆದರೆ ಏನನ್ನೂ ಮಾಡದೆಯೇ ಅವನು ಬದುಕಿರಲಾರ. ಕೆಂಪುತನ ಎಂಬ ಗುಣವು ಯಾವುದೇ ವಸ್ತುವಿಲ್ಲದೇ ಇರಲಾರದು, ಆದರೆ ಇದೋ ಅದೋ ವಸ್ತುವಿಲ್ಲದೆ ಅದು ಇರಬಹುದು. ಹಾಗೆಯೇ ಯಾವುದೇ ವಸ್ತು ಯಾವುದೋ ಗುಣವಿಲ್ಲದೆ ಇರಲಾರದು, ಆದರೆ ಈ ಗುಣವೋ ಆ ಗುಣವೋ ಇಲ್ಲದೆ ಇರಬಹುದು. ವಸ್ತುಗಳು ಮತ್ತು ಗುಣಗಳ ನಡುವಣದ್ದೆಂದು ಭಾವಿಸಲಾಗುವ ನೆಲೆಯು ಹೀಗಾಗಿ ಭ್ರಮಾತ್ಮಕವೆನಿಸುತ್ತದೆ.

ಈ ವ್ಯತ್ಯಾಸದ ವಾಸ್ತವವಾದ ನೆಲೆಯು ಭಾಷಿಕವಾದುದು; ಅದು ವಾಕ್ಯರಚನೆಗೆ ಸಂಬಂಧಿಸಿದ್ದು. ಅದರಲ್ಲಿ ಅಂಕಿತನಾಮಗಳಿವೆ, ವಿಶೇಷಣಗಳಿವೆ, ಮತ್ತು ಸಂಬಂಧಸೂಚಕ ಪದಗಳಿವೆ; 'ಜಾನ್ ಬುದ್ಧಿವಂತ, ಜೇಮ್ಸ್ ಮೂರ್ಖ. ಜಾನ್ ಜೇಮ್ಸ್‌ಗಿಂತ ಎತ್ತರ' ಎಂದು ಹೇಳಬಹುದು. ಇಲ್ಲಿ 'ಜಾನ್' ಮತ್ತು 'ಜೇಮ್ಸ್' ಅಂಕಿತನಾಮಗಳು, 'ಬುದ್ಧಿವಂತ' ಮತ್ತು 'ಮೂರ್ಖ' ವಿಶೇಷಣಗಳು, 'ಎತ್ತರ' ಎಂಬುದು ಸಂಬಂಧಸೂಚಕ ಪದ. ತತ್ವಜಿಜ್ಞಾಸುಗಳು, ಅರಿಸ್ಟಾಟಲ್‌ನಿಂದ ಮೊದಲುಗೊಂಡು, ಈ ಭಾಷಿಕ ವ್ಯತ್ಯಾಸಗಳನ್ನು ತತ್ವಜಿಜ್ಞಾಸೆಯ ಮೂಲಕ ಚರ್ಚಿಸಿದ್ದಾರೆ. ಜಾನ್ ಮತ್ತು ಜೇಮ್ಸ್ ವಸ್ತುಗಳು, ಬುದ್ಧಿಶಕ್ತಿ ಮತ್ತು ಮೂರ್ಖತನ ವೈಶ್ವಿ.ಕಗಳು. (ಸಂಬಂಧ ಪದಗಳನ್ನು ಅವಗಣಿಸಲಾಗಿದೆ ಅಥವಾ ಅಪಾರ್ಥಮಾಡಲಾಗಿದೆ.) ಸಾಕಷ್ಟು ಎಚ್ಚರ ವಹಿಸಿದ್ದರೆ ತತ್ವಜಿಜ್ಞಾಸೆಯ ವ್ಯತ್ಯಾಸಗಳು ಈ ವಾಕ್ಯಾತ್ಮಕ ವ್ಯತ್ಯಾಸಗಳಿಗೆ ಕೊಂಚಮಟ್ಟಿಗೆ ಸಂಬಂಧಿಸಿದೆ ಎಂಬುದನ್ನು ಗುರುತಿಸಬಹುದಾಗಿತ್ತು. ಹಾಗಾಗಿದ್ದರೆ ಅದು ದೀರ್ಘ ಪ್ರಕ್ರಿಯೆಯ ಮೂಲಕ ಮಾತ್ರವೇ ಆಗಿರುತ್ತಿತ್ತು, ಒಂದು ಕೃತಕ ತತ್ವಜ್ಞಾನ ಭಾಷೆಯನ್ನು ಪ್ರಾಸಂಗಿಕವಾಗಿ ಸೃಷ್ಟಿಸುವುದರ ಮೂಲಕ. ಈ ಭಾಷೆಯಲ್ಲಿ 'ಜಾನ್' ಮತ್ತು 'ಜೇಮ್ಸ್' ಅಂತಹ ಹೆಸರುಗಳಿರುತ್ತಿರಲಿಲ್ಲ, ಹಾಗೆಯೇ 'ಬುದ್ಧಿವಂತ' ಮತ್ತು 'ಮೂರ್ಖ' ಎಂಬಂತಹ ವಿಶೇಷಣಗಳೂ ಇರುತ್ತಿರಲಿಲ್ಲ; ಭಾಷೆಯ ಸಾಮಾನ್ಯ ಪದಗಳೆಲ್ಲ ವಿಶ್ಲೇಷಣೆಗೊಳಗಾಗುತ್ತಿದ್ದವು, ಅವುಗಳ ಬದಲು ಕಡಿಮೆ ಮಹತ್ವದ ಪದಗಳು ಪರ್ಯಾಯವಾಗಿ ಸೇರುತ್ತಿದ್ದವು. ಈ ಕೆಲಸವನ್ನು ಪೂರ್ಣಗೊಳಿಸುವವರೆಗೂ, ನಿರ್ದಿಷ್ಟಗಳು ಮತ್ತು ವೈಶ್ವಿಕಗಳ ಪ್ರಶ್ನೆಯನ್ನು ಸೂಕ್ತವಾಗಿ ಚರ್ಚಿಸಲಾಗುತ್ತಿರಲಿಲ್ಲ. ಕೊನೆಗೂ ಚರ್ಚಿಸಬಹುದಾದ ಹಂತವನ್ನು ತಲುಪಿದಾಗ, ನಾವು ಚರ್ಚಿಸುತ್ತಿರುವ ಪ್ರಶ್ನೆಯು ಏನಾಗಬೇಕಿತ್ತೆಂದು ಮೊದಲು ಯೋಚಿಸಿರುತ್ತಿದ್ದೆವೋ ಅದಕ್ಕಿಂತ ಭಿನ್ನವಾಗಿರುತ್ತಿತ್ತು.

ಹೀಗಾಗಿ, ನನಗೆ ಅರಿಸ್ಟಾಟಲ್‌ನ ವೈಶ್ವಿಕಸಿದ್ಧಾಂತವನ್ನು ಸ್ಪಷ್ಟಪಡಿಸಲು ಸಾಧ್ಯವಾಗಿಲ್ಲದಿದ್ದರೆ, ಅದು ಸ್ಪಷ್ಟವಾಗಿಲ್ಲದಿರುವುದೇ ಆಗಿದೆ (ಎಂದೇ ಹೇಳುತ್ತೇನೆ.) ಆದರೆ ಆದರ್ಶರೂಪಸಿದ್ಧಾಂತಕ್ಕಿಂತ ಅದು ಮುಂದುವರಿದದ್ದು ಎಂಬುದಂತೂ ನಿಜವೇ, ಖಂಡಿತವಾಗಿಯೂ ಅಪ್ಪಟವೂ ಬಹು ಮುಖ್ಯವೂ ಆದ ಸಮಸ್ಯೆಗೆ ಸಂಬಂಧಿಸಿದ್ದು.

ಅರಿಸ್ಟಾಟಲ್ ಮತ್ತವನ ಪ್ರೌಢ ಅನುಯಾಯಿಗಳಲ್ಲಿ ಮುಖ್ಯವಾದ ಮತ್ತೊಂದು ಪದವೂ ಇದೆ, ಅದೆಂದರೆ ಸತ್ವ (ಎಸೆನ್ಸ್). ಇದೇನೂ 'ವೈಶ್ವಿಕ'ವೆನ್ನುವುದರ ಸಮಾನಾರ್ಥಕ ಪದವಲ್ಲ. ನಿಮ್ಮ 'ಸತ್ವ'ವು 'ನಿಮ್ಮ ಸ್ವಭಾವತಃ ನೀವು ಆಗಿರುವುದು'. ಅದು ನಿಮ್ಮತನವನ್ನು ಕಳೆದುಕೊಳ್ಳದೆ ಯಾವ ಲಕ್ಷಣಗಳನ್ನು ನೀವು ಕಳೆದುಕೊಳ್ಳಲು ಸಾಧ್ಯವಿಲ್ಲವೋ ಅಂತಹ ನಿಮ್ಮ ಲಕ್ಷಣಗಳು. ವಿಶಿಷ್ಟ ವ್ಯಕ್ತಿ ಮಾತ್ರವಲ್ಲ, ಒಂದು ಜೀವಜಾತಕ್ಕೂ ಸತ್ವವಿದೆ. ಜೀವಜಾತದ ವ್ಯಾಖ್ಯೆಯಲ್ಲಿ ಅದರ ಲಕ್ಷಣಗಳನ್ನು ಉಲ್ಲೇಖಿಸಬೇಕು. ಅರಿಸ್ಟಾಟಲ್‌ನ ತರ್ಕಕ್ಕೆ ಸಂಬಂಧಿಸಿದಂತೆ 'ಸತ್ವ'ದ ಪರಿಕಲ್ಪನೆಗೆ ನಾನೀಗ ವಾಪಸಾಗುತ್ತೇನೆ. ಸದ್ಯ ನಾನು ಅದನ್ನು ನಿರ್ದಿಷ್ಟತೆಗೆ ನಿಲುಕದ ಗೊಂದಲಪೂರ್ಣ ಕಲ್ಪನೆ ಎಂದಷ್ಟೇ ಕರೆಯುತ್ತೇನೆ.

ಅರಿಸ್ಟಾಟಲ್‌ನ ತತ್ವಜಿಜ್ಞಾಸೆಯ ಮುಂದಿನ ಅಂಶವೆಂದರೆ 'ರೂಪ' ಮತ್ತು 'ಭೌತವಸ್ತು'ಗಳ ನಡುವಣ ವ್ಯತ್ಯಾಸ. ('ಭೌತವಸ್ತು' ಎಂಬುದು 'ರೂಪ'ಕ್ಕೆ ಯಾವ ದೃಷ್ಟಿಯಿಂದ ವಿರೋಧವೋ ಹಾಗೆ ಪರಿಭಾವಿಸಬೇಕು, ಅದು 'ಭೌತವಸ್ತು' ಮತ್ತು 'ಮನಸ್ಸು'ಗಳ ನಡುವಣ ಸಂಬಂಧಕ್ಕಿಂತ ಭಿನ್ನ.)

ಮತ್ತೆ ಇಲ್ಲಿ ಅಟರಿಸ್ಟಾಟಲ್‌ನ ಸಿದ್ಧಾಂತದಡಿಯಲ್ಲಿ ವ್ಯವಹಾರಜ್ಞಾನವು ಸೇರಿಕೊಂಡಿದೆ, ಆದರೆ ವೈಶ್ವಿಕಗಳ ವಿಷಯದಲ್ಲಿರುವುದಕ್ಕಿಂತ ಪ್ಲೇಟೋನ ಪರಿಷ್ಕರಣೆಗಳು ಹೆಚ್ಚು ಮುಖ್ಯ. ನಾವು ಅಮೃತಶಿಲೆಯ ವಿಗ್ರಹದಿಂದ ಆರಂಭಿಸಬಹುದು: ಇಲ್ಲಿ ಅಮೃತಶಿಲೆ ಭೌತವಸ್ತು, ಶಿಲ್ಪಿಯು ಕೊಟ್ಟ ಆಕಾರವು ರೂಪ. ಅಥವಾ, ಅರಿಸ್ಟಾಟಲ್‌ನೇ ಕೊಟ್ಟ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ವ್ಯಕ್ತಿಯೊಬ್ಬ ಕಂಚಿನ ಗೋಲವನ್ನು ಮಾಡಿದರೆ ಕಂಚು ಭೌತವಸ್ತು ಗೋಲಾಕಾರವು ರೂಪ; ಅದೇ ಪ್ರಶಾಂತ ಸಾಗರದ ವಿಷಯದಲ್ಲಿ, ನೀರು ಭೌತವಸ್ತು ಮತ್ತು ನಯವಂತಿಕೆಯು ರೂಪ. ಇಲ್ಲಿಯವರೆಗೆ ಎಲ್ಲ ಸರಳ.

ಮುಂದುವರಿದು ಅವನು, ರೂಪದ ಕಾರಣದಿಂದಾಗಿ ಭೌತವಸ್ತುವು ಒಂದು ನಿರ್ದಿಷ್ಟ ವಸ್ತುವಾಗುತ್ತದೆ, ಇದೇ ವಸ್ತುವಿನ ಸತ್ವ ಎನ್ನುತ್ತಾನೆ. ಅರಿಸ್ಟಾಟಲ್ ಹೇಳುತ್ತಿರುವುದು ಸರಳ ವ್ಯವಹಾರಜ್ಞಾನದಂತೆ ತೋರುತ್ತದೆ: 'ವಸ್ತು'ವಿಗೆ ಪರಿಮಿತಿಗಳಿರಬೇಕು, ಮತ್ತು ಪರಿಮಿತಿಯು ಅದರ ರೂಪವಾಗುತ್ತದೆ. ಒಂದು ಅಳತೆ ನೀರನ್ನು ತೆಗೆದುಕೊಳ್ಳಿ: ಅದರ ಯಾವುದೇ ಭಾಗವನ್ನು ಒಂದು ಪಾತ್ರೆಯಲ್ಲಿ

ಹಾಕಿ ಅದಕ್ಕೆ ರೂಪವನ್ನು ನೀಡಬಹುದು, ಆಗ ಈ ಭಾಗವೇ 'ವಸ್ತು'ವಾಗುತ್ತದೆ. ಆದರೆ ಈ ಭಾಗವನ್ನು ಒಟ್ಟು ನೀರಿನಿಂದ ಬೇರ್ಪಡಿಸಿರದಿದ್ದರೆ ಅದು 'ವಸ್ತು' ಎನಿಸುತ್ತಿರಲಿಲ್ಲ. ವಿಗ್ರಹವು ಒಂದು 'ವಸ್ತು', ಅದು ಒಳಗೊಂಡಿರುವ ಅಮೃತಶಿಲೆಯು ಒಂದರ್ಥದಲ್ಲಿ ಗಣಿಯೊಂದರಲ್ಲಿನ ಬದಲಾಗದ ಅಮೃತಶಿಲೆಯ ಬಂಡೆಯು ಗಣಿಯ ಭಾಗ. ಸಹಜವಾಗಿಯೇ 'ಸತ್ವ'ವನ್ನು ನೀಡುವುದು ರೂಪವಲ್ಲ, ನಮ್ಮ ಮನಸ್ಸಿನಲ್ಲಿ ಸೇರಿಹೋಗಿರುವ ಅದರ ಪರಮಾಣು ಆಧಾರಕಲ್ಪನೆ. ಆದರೆ ಪ್ರತಿ ಪರಮಾಣುವೂ 'ವಸ್ತು'ವಾದರೆ, ಅದಕ್ಕೆ ಕಾರಣ ಅದು ಇತರ ಪರಮಾಣುಗಳಿಂದ ಪರಿಮಿತವಾಗಿಲ್ಲ ಎನ್ನುವುದು, ಹೀಗಾಗಿ ಅದಕ್ಕೂ ಒಂದು 'ರೂಪ'ವಿದೆ.

ಈಗ ನಾವು ಹೊಸದೊಂದು ಹೇಳಿಕೆಗೆ ಬರುತ್ತೇವೆ; ಅದು ಮೊದಲ ನೋಟಕ್ಕೆ ಕಷ್ಟಕರವಾದುದೆನಿಸಬಹುದು. ಆತ್ಮವು ದೇಹದ ರೂಪದಲ್ಲಿ ಇದೆ. 'ರೂಪ' ಎಂಬುದು 'ಆಕಾರ' ಎಂಬುದಲ್ಲ ಎನ್ನುವುದಿಲ್ಲಿ ಸ್ಪಷ್ಟವಾಗಿದೆ. ಆತ್ಮವು ದೇಹದ ರೂಪದಲ್ಲಿದೆ ಎಂಬುದರ ಅರ್ಥದ ಬಗ್ಗೆ ನಾನು ಮುಂದೆ ಮರಳುತ್ತೇನೆ; ಸದ್ಯಕ್ಕೆ, ಅರಿಸ್ಟಾಟಲ್‌ನ ವ್ಯವಸ್ಥೆಯಲ್ಲಿ, ಆತ್ಮವು ದೇಹವನ್ನು ಒಂದು 'ವಸ್ತು'ವನ್ನಾಗಿ ಮಾಡುವಂತಹುದು, ಅದರಲ್ಲಿ ಉದ್ದೇಶದ ಹೊಂದಿಕೆ (ಯೂನಿಟಿ)ಯಿದೆ, 'ಸಾವಯವ' (ಆರ್ಗ್ಯಾನಿಕ್) ಎಂಬುದರ ಲಕ್ಷಣಗಳನ್ನು ಹೊಂದಿದೆ. ಕಣ್ಣಿನ ಉದ್ದೇಶ ನೋಡುವುದು, ಆದರೆ ಅದನ್ನು ದೇಹದಿಂದ ಬೇರ್ಪಡಿಸಿದರೆ ನೋಡಲಾರದು. ವಾಸ್ತವವಾಗಿ ನೋಡುವುದು ಆತ್ಮವೇ.

ಹೀಗಾಗಿ 'ರೂಪ'ವು ಭೌತವಸ್ತುವಿನ ಭಾಗವೊಂದಕ್ಕೆ ಹೊಂದಿಕೆ ನೀಡುವಂತಹುದು, ಮತ್ತು ಎಲ್ಲ ಕಾಲಕ್ಕೂ ಅಲ್ಲದಿದ್ದರೂ, ಸಾಮಾನ್ಯವಾಗಿ ಈ ಹೊಂದಿಕೆಯು ಮೂಲಸಂಕಲ್ಪಸಿದ್ಧಾಂತದ್ದು. ಆದರೆ 'ರೂಪ'ವು ಇದಕ್ಕಿಂತಲೂ ಮಿಗಿಲಾದುದು, ಈ ಮಿಗಿಲು ಬಹು ಕಠಿಣವಾದದ್ದು.

ಒಂದು ವಸ್ತುವಿನ ರೂಪವು ಅದರ ಸತ್ವ ಮತ್ತು ಮೂಲ ದ್ರವ್ಯ ಎನ್ನಲಾಗುತ್ತದೆ. ರೂಪಗಳು ಸತ್ವಪೂರ್ಣವಾದವು, ಆದರೆ ವೈಶ್ವಿಕಗಳಲ್ಲ. ವ್ಯಕ್ತಿಯೊಬ್ಬ ಕಂಚಿನ ಗೋಲವನ್ನು ಮಾಡಿದಾಗ, ಭೌತವಸ್ತು ಮತ್ತು ರೂಪಗಳೆರಡೂ ಆಗಲೇ ಅಸ್ತಿತ್ವದಲ್ಲಿದ್ದವು, ಅವನು ಮಾಡಿದುದೇನೆಂದರೆ ಎರಡನ್ನೂ ಒಗ್ಗೂಡಿಸುವ ಕೆಲಸ; ವ್ಯಕ್ತಿ ಹೇಗೆ ಕಂಚನ್ನು ಮಾಡುವುದಿಲ್ಲವೋ ಹಾಗೆಯೇ ರೂಪವನ್ನೂ ಮಾಡುವುದಿಲ್ಲ. ಎಲ್ಲವೂ ಭೌತವಸ್ತುವನ್ನೊಳಗೊಂಡಿರುವುದಿಲ್ಲ; ಚಿರಂತನ ವಸ್ತುಗಳಿವೆ, ಅವಕಾಶದಲ್ಲಿ ಚಲಿಸಬಲ್ಲಂತಹವುಗಳ ಹೊರತಾಗಿ, ಅವಕ್ಕೆ ಭೌತವಸ್ತುವಿಲ್ಲ. ರೂಪವನ್ನು ಪಡೆಯುತ್ತ ವಸ್ತುಗಳು ವಾಸ್ತವವಾಗಿ ಹೆಚ್ಚಾಗುತ್ತವೆ; ರೂಪವಿಲ್ಲದ ಭೌತವಸ್ತು ಒಂದು ಸಾಧ್ಯತೆ ಮಾತ್ರ.

ರೂಪಗಳೇ ಸತ್ವಗಳು, ಅವು ಭೌತವಸ್ತುವಿಲ್ಲದೆ ಅಸ್ತಿತ್ವದಲ್ಲಿರುವ, ಆದರೆ ಉದಾಹೃತ ರೂಪಗಳಲ್ಲಿರುವಂತಹುವು ಎಂಬ ವಾದವು, ಪ್ಲೇಟೋ ಆದರ್ಶರೂಪಗಳ ವಿರುದ್ಧವಾದ ತನ್ನದೇ ವಾದಗಳಲ್ಲಿ ಅರಿಸ್ಟಾಟಲ್ ಅನ್ನು ಬಯಲುಮಾಡುವಂತೆ ತೋರುತ್ತದೆ. ರೂಪವು ವೈಶ್ವಿಕದಿಂದ ಭಿನ್ನವಾದುದು, ಆದರೆ ಕೆಲವು ಅದರವೇ ಲಕ್ಷಣಗಳನ್ನು ಹೊಂದಿರುತ್ತವೆ ಎಂದು ಹೇಳಲು ಅವನು ತವಕಿಸುತ್ತಾನೆ. ರೂಪವು ಭೌತವಸ್ತುವಿಗಿಂತ ಹೆಚ್ಚು ವಾಸ್ತವವಾದುದು; ಇದು ಆದರ್ಶರೂಪಗಳ ಏಕೈಕ ವಾಸ್ತವವನ್ನು ನೆನಪಿಸುತ್ತದೆ. ಪ್ಲೇಟೋನ ತಾತ್ವಿಕಸಿದ್ಧಾಂತವನ್ನು ಅರಿಸ್ಟಾಟಲ್ ಬದಲಾಯಿಸುವ ರೀತಿಯು ಅದು ಇರುವುದಕ್ಕಿಂತ ಕಡಿಮೆಯಾದುದು ಎಂಬಂತೆ ತೋರುತ್ತದೆ. ಈ ದೃಷ್ಟಿಕೋನವನ್ನು ಜ಼ೆಲರ್‌ನಿಂದ ಪಡೆಯಲಾಗಿದೆ, ಭೌತವಸ್ತು ಮತ್ತು ರೂಪಗಳ ಪ್ರಶ್ನೆಯನ್ನು ಕುರಿತು ಅವನು ಹೀಗೆನ್ನುತ್ತಾನೆ:[೭]

> ಈ ವಿಷಯವನ್ನು ಕುರಿತ ಅರಿಸ್ಟಾಟಲ್‌ನ ಸ್ಪಷ್ಟತೆಯಿಲ್ಲದ ಕೊನೆಯ ವಿವರಣೆಯನ್ನು, ಆದರ್ಶರೂಪವನ್ನು ಮೂಲಸಿದ್ಧಾಂತವಾಗಿಸುವ ಪ್ಲೇಟೋನ ಪ್ರವೃತ್ತಿಯಿಂದ ಅವನು ತನ್ನನ್ನು ಅರೆವಾಸಿ ಮಾತ್ರ ಬಿಡುಗಡೆಗೊಳಿಸಿಕೊಂಡಿದ್ದನೆಂಬ ವಸ್ತುಸ್ಥಿತಿಯಲ್ಲಿ ಕಾಣಬಹುದು; ಈ ಕುರಿತು ಮುಂದೆ ನೋಡುತ್ತೇವೆ. ಅವನಿಗೆ 'ರೂಪಗಳು', ಪ್ಲೇಟೋಗೆ 'ಆದರ್ಶರೂಪ'ಗಳಂತೆ, ಎಲ್ಲ ಬಿಡಿ ವಸ್ತುಗಳನ್ನೂ ಒಗ್ಗಿಸುವ ತಮ್ಮದೇ ತಾತ್ವಿಕ ಅಸ್ತಿತ್ವಗಳು. ಆದರ್ಶರೂಪಗಳು ಅನುಭವದಿಂದ ಹೊರತಾದುವೆಂಬುದನ್ನು ಸೂಕ್ಷ್ಮವಾಗಿ ಗಮನಿಸುತ್ತ ಹೋದಂತೆ, ಈ ಆದರ್ಶರೂಪಗಳು, ಅದರಲ್ಲೂ ಅನುಭವದಿಂದ ಮತ್ತು ಗ್ರಹಿಕೆಗೆ ಅತ್ಯಂತವಾದ ದೂರವಾದ ಹಂತದಲ್ಲಿ, ಮಾನವನ ಆಲೋಚನೆಯ ತಾರ್ಕಿಕ ಉತ್ಪನ್ನಗಳನ್ನು ಅಸ್ಪಷ್ಟ ಕಲ್ಪನೆಯಾದ ಸಂವೇದನಾತೀತ ಜಗತ್ತನ್ನಾಗಿಯೂ, ಅದೇ ಅರ್ಥದಲ್ಲಿ ವಸ್ತುವನ್ನು, ಬೌದ್ಧಿಕ ಅಪರೋಕ್ಷಜ್ಞಾನವಾಗಿಯೂ ರೂಪಾಂತರಗೊಳಿಸಿದ.

ಈ ಟೀಕೆಗೆ ಅರಿಸ್ಟಾಟಲ್ ಯಾವ ಬಗೆಯಲ್ಲಿ ಉತ್ತರಿಸಬಹುದಾಗಿತ್ತೋ ನನಗೆ ತಿಳಿಯದು.

ನನಗೆ ಹೊಳೆಯುವ ಒಂದೇ ಉತ್ತರವೆಂದರೆ, ಯಾವುದೇ ಎರಡು 'ವಸ್ತು'ಗಳು ಒಂದೇ 'ರೂಪ'ವನ್ನು ಹೊಂದಿರಲಾರವು ಎಂಬುದು. ಯಾವನಾದರೊಬ್ಬ ಎರಡು ಕಂಚಿನ ಗೋಲಗಳನ್ನು ಮಾಡಿದರೆ (ಹಾಗೆಂದು ನಾವು ಹೇಳಬೇಕಾಗುತ್ತದೆ), ಒಂದೊಂದಕ್ಕೂ ತನ್ನದೇ ವಿಶೇಷ ಗೋಲಾಕಾರವಿರುತ್ತದೆ, ಅದು ವಾಸ್ತವಿಕವೂ ನಿರ್ದಿಷ್ಟವೂ ಆದುದಾಗಿರುತ್ತದೆ, ಅದು ವೈಶ್ವಿಕ 'ಗೋಲಾಕೃತಿ'ಯ ಒಂದು

---

೭. 'ಅರಿಸ್ಟಾಟಲ್', ಸಂಪುಟ ೧, ಪು. ೨೦೪.

ನಿದರ್ಶನವಾದರೂ ಅದರೊಂದಿಗೆ ಸಂಪೂರ್ಣ ಸಾಮ್ಯ ಹೊಂದಿರಲಾರದು. ನಾನು ಉದ್ಧೃತಗೊಳಿಸಿರುವ ಭಾಗದ ಭಾಷೆಯು ತಕ್ಷಣ ಈ ವ್ಯಾಖ್ಯಾನವನ್ನು ಸಮರ್ಥಿಸುತ್ತದೆ ಎಂದೆನಿಸುವುದಿಲ್ಲ. ಅರಿಸ್ಟಾಟಲ್‌ನ ದೃಷ್ಟಿಯ ನಿರ್ದಿಷ್ಟ ಗೋಲಾಕಾರವು ಅರ್ಥವಾಗದುದು, ಯಾಕೆಂದರೆ ಅದು ಹೆಚ್ಚು ರೂಪ ಮತ್ತು ಕಡಿಮೆ ವಸ್ತುವನ್ನೊಳಗೊಂಡಿರುತ್ತದೆ ಎಂಬ ಅವನ ತಾತ್ವಿಕತೆಯ ಸಾರದಂತಿದ್ದು, ಕ್ರಮೇಣ ಹೆಚ್ಚು ಅರ್ಥವಾಗುವಂತಿರುತ್ತದೆ ಎಂಬ ತಕರಾರನ್ನು ಎದುರಿಸಬಹುದು. ಇದು, ಅನೇಕ ನಿರ್ದಿಷ್ಟ ವಸ್ತುಗಳಲ್ಲಿ ಆ ರೂಪವಿರಬಹುದು ಎನ್ನುವುದಲ್ಲವಾದರೆ, ಮಿಕ್ಕ ಅವನ ದೃಷ್ಟಿಕೋನ ಭಾಗಕ್ಕೆ ಇದು ಹೊಂದಿಕೆಯಾಗುವುದಿಲ್ಲ. ಎಷ್ಟು ಗೋಲಾಕಾರದ ವಸ್ತುಗಳ ನಿದರ್ಶನಗಳಿವೆಯೋ ಅಷ್ಟೂ ಗೋಲಾಕಾರಗಳಿರಬಹುದು ಎಂದವನು ಹೇಳುವುದಾದರೆ, ಅವನು ತನ್ನ ತಾತ್ವಿಕತೆಗೆ ಮೂಲಭೂತ ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ನಿದರ್ಶನಕ್ಕೆ, ರೂಪಗಳು ತನ್ನ ವಸ್ತುವಿನಂತೆಯೇ ಇರುತ್ತದೆ ಎಂಬ ಅವನ ದೃಷ್ಟಿಕೋನವು ಮೇಲೆ ಸೂಚಿಸಿದುದರೊಡನೆ ಹೊಂದಿಕೆಯಾಗಲಾರದು.

ಅರಿಸ್ಟಾಟಲ್‌ನ ವಸ್ತು ಆಕಾರಗಳ ಸಿದ್ಧಾಂತವು ಸಾಧ್ಯತೆ ಮತ್ತು ವಾಸ್ತವತೆಗಳ ನಡುವಣ ವ್ಯತ್ಯಾಸಕ್ಕೆ ಸಂಬಂಧ ಹೊಂದಿದೆ. ಬರಿಯ ವಸ್ತುವನ್ನು ರೂಪದ ಒಂದು ಸಾಧ್ಯತೆ ಎಂದು ಭಾವಿಸಲಾಗಿದೆ; ಬದಲಾವಣೆಯ ನಂತರ ಪ್ರಸ್ತುತ ವಸ್ತುವು ಹಿಂದಿಗಿಂತ ಹಚ್ಚು ರೂಪವನ್ನು ಪಡೆದಿರುತ್ತದೆ ಎಂಬ ಅರ್ಥದಲ್ಲಿ ಎಲ್ಲ ಬದಲಾವಣೆಗಳೂ 'ವಿಕಾಸ' ಎಂದು ಕರೆಯಬೇಕಾದವು. ಹೆಚ್ಚು ರೂಪವನ್ನು ಪಡೆದಿರುವುದನ್ನು ಹೆಚ್ಚು ವಾಸ್ತವವೆಂದು ಪರಿಗಣಿಸಲಾಗುತ್ತದೆ. ದೇವರು ಪರಿಶುದ್ಧ ರೂಪ ಮತ್ತು ಪರಿಶುದ್ಧ ವಾಸ್ತವತೆ; ಹೀಗಾಗಿ, ಅವನಲ್ಲಿ ಬದಲಾವಣೆಗಳಿರಲು ಸಾಧ್ಯವಿಲ್ಲ. ಈ ಸಿದ್ಧಾಂತವು ಆಶಾವಾದಿಯೂ ಮೂಲಸಂಕಲ್ಪಾನುಗುಣವೂ ಆಗಿರುತ್ತದೆ: ವಿಶ್ವ ಮತ್ತು ಅದರಲ್ಲಿನ ಸಕಲವೂ ಹಿಂದಿದ್ದುದಕ್ಕಿಂತಲೂ ಉತ್ತಮವಾಗುವುದರತ್ತ ವಿಕಾಸವಾಗುತ್ತಿರುತ್ತದೆ.

ಪರಿಕಲ್ಪನೆಯಿರದ ರೂಪವಾಗಿ ನಮ್ಮ ಹೇಳಿಕೆಯನ್ನು ಅನುವಾದಗೊಳಿಸಬಲ್ಲೆವು ಎಂಬರ್ಥದಲ್ಲಿ ಬಳಸುವುದಾದರೆ, ಸಾಧ್ಯತೆಯ ಪರಿಕಲ್ಪನೆಯು ಕೆಲವು ವಿಚಾರಗಳಲ್ಲಿ ಅನುಕೂಲಕರ. 'ಅಮೃತಶಿಲೆಯ ಬಂಡೆಯೊಂದು ವಿಗ್ರಹವಾಗುವ ಸಾಧ್ಯತೆಯದು' ಅಂದರೆ 'ಅಮೃತಶಿಲೆಯ ಬಂಡೆಯಿಂದ, ಸೂಕ್ತ ಕಾರ್ಯಗಳ ಮೂಲಕ, ವಿಗ್ರಹವನ್ನು ಮಾಡಲಾಗುತ್ತದೆ.' ಆದರೆ ಮೂಲಭೂತವೂ ವ್ಯತ್ಯಸ್ತಗೊಳ್ಳದ್ದೂ ಆದ ಸಾಧ್ಯತೆಯನ್ನು ಬಳಸಿದರೆ, ಅದು ಆಲೋಚನೆಯನ್ನು ಯಾವಾಗಲೂ ಮರೆಮಾಚುತ್ತದೆ. ಅದರ ಬಳಕೆಯು ಅರಿಸ್ಟಾಟಲ್ ಪದ್ಧತಿಯ ಒಂದು ಕೆಟ್ಟ ಅಂಶ.

ಅರಿಸ್ಟಾಟಲ್‌ನ ಮತಧರ್ಮಶಾಸ್ತ್ರವು ಕುತೂಹಲಕರವಾದುದು, ಹಾಗೂ ಮಿಕ್ಕುಳಿದ ಅವನ ತತ್ವಜಿಜ್ಞಾಸೆಗೆ ತೀರ ಹತ್ತಿರದ ಸಂಬಂಧವುಳ್ಳುದು – ಹಾಗೆ ನೋಡಿದರೆ, ನಾವು ಯಾವುದನ್ನು ತತ್ವಜಿಜ್ಞಾಸೆ ಎನ್ನುತ್ತೇವೆಯೋ ಅದಕ್ಕೆ ಅವನು ಕೊಡುವ ಹೆಸರುಗಳಲ್ಲಿ ಮತಧರ್ಮಶಾಸ್ತ್ರ ಎಂಬುದೂ ಒಂದು. (ಆ ಹೆಸರಿನ ಅವನ ಗ್ರಂಥವನ್ನು ಅವನು ಹಾಗೆ ಕರೆಯಲಿಲ್ಲ.)

ಮೂರು ಬಗೆಯು ವಸ್ತುಗಳಿವೆಯೆಂದು ಅವನು ಹೇಳುತ್ತಾನೆ: ಸಂವೇದನಾಶೀಲವೂ ನಾಶವಾಗುವಂತಹವೂ ಆದವು, ಸಂವೇದನಾಶೀಲವಾದರೂ ನಾಶವಾಗದಂತಹವು, ಮತ್ತು ಸಂವೇದನಾಶೀಲವಲ್ಲದ ಹಾಗೂ ನಾಶವಾಗಲಾರದವು. ಮೊದಲ ಗುಂಪಿಗೆ ಪ್ರಾಣಿಗಳೂ ಸಸ್ಯಗಳು ಸೇರುತ್ತವೆ, ಎರಡನೆಯದರಲ್ಲಿ ಆಕಾಶಕಾಯಗಳು ಸೇರುತ್ತವೆ, (ಇವುಗಳಲ್ಲಿ ಚಲನೆಯ ಹೊರತು ಮಿಕ್ಕಾವುದೂ ಬದಲಾಗವು ಎಂದು ಅರಿಸ್ಟಾಟಲ್ ನಂಬಿದ್ದ), ಮೂರನೆಯದರಲ್ಲಿ ಮನುಷ್ಯನಲ್ಲಿನ ವೈಚಾರಿಕ ಆತ್ಮ ಮತ್ತು ದೇವರು ಸೇರುತ್ತಾರೆ.

ದೇವರ ಪರವಾದ ಮುಖ್ಯ ವಾದವೆಂದರೆ, ಮೊದಲನೆಯ ವಾಕ್ಯಖಂಡ; ಚಲನೆಯನ್ನು ಆರಂಭಿಸುವ ಯಾವುದಾದರೂ ಇರಬೇಕು, ಮತ್ತು ಈ ಯಾವುದಾದರೂ ತಾನೇ ಚಲಿಸಬಾರದು ಮತ್ತು ಚಿರಂತನ ವಸ್ತುವೂ ವಾಸ್ತವವೂ ಆಗಿರಬೇಕು. ಬಯಕೆ ಮತ್ತು ಆಲೋಚನೆಗಳ ಉದ್ದೇಶವು ತಾವೇ ಚಲಿಸದೆ ಈ ಬಗೆಯ ಚಲನೆಯನ್ನುಂಟುಮಾಡುತ್ತವೆ ಎಂದು ಅರಿಸ್ಟಾಟಲ್ ಹೇಳಿದ. ಹೀಗೆ ದೇವರನ್ನು ಪ್ರೇಮಿಸುವ ಕಾರಣದಿಂದ ಅವನ್ನು ಉಂಟುಮಾಡುತ್ತಾನೆ, ಆದರೆ ಮಿಕ್ಕೆಲ್ಲ ಚಲನೆಯ ಕಾರಣವೂ ತಾವು ಚಲಿಸುತ್ತಲೇ ಕಾರ್ಯನಿರ್ವಹಿಸುತ್ತವೆ (ಬಿಲಿಯರ್ಡ್ಸ್ ಚೆಂಡಿನ ಹಾಗೆ). ದೇವರು ಪರಿಶುದ್ಧ ಚಿಂತನೆ, ಯಾಕೆಂದರೆ ಚಿಂತನೆಯು ಅತ್ಯಂತ ಶ್ರೇಷ್ಠ. 'ಬದುಕೂ ದೇವರಿಗೇ ಸೇರಿದುದು; ಯಾಕೆಂದರೆ ಚಿಂತನೆಯ ವಾಸ್ತವತೆಯೇ ಬದುಕು, ದೇವರು ಆ ವಾಸ್ತವತೆ, ಮತ್ತು ಸ್ವಯಮಾವಲಂಬಿತ ವಾಸ್ತವತೆಯು ಅತ್ಯಂತ ಶ್ರೇಷ್ಠವೂ ಚಿರಂತನವೂ ಆದ ಬದುಕು. ಹೀಗಾಗಿಯೇ ನಾವು ದೇವರನ್ನು ಅತ್ಯಂತ ಶ್ರೇಷ್ಠವೂ ಚಿರಂತನವೂ ಆದ ಜೀವಂತವಸ್ತು ಎನ್ನುವುದು. ನಿರಂತರವೂ ಚಿರಂತನವೂ ಆದ ಬದುಕು ದೇವರಿಗೆ ಸೇರಿದ್ದು, ಯಾಕೆಂದರೆ ಅದೇ ದೇವರು' (೧೦೭೨[ಬಿ]).

'ಈಗ ಹೇಳಿದುದರಿಂದ ಸ್ಪಷ್ಟವಾಗುವುದೇನೆಂದರೆ, ಚಿರಂತನವೂ ನಿಶ್ಚಲವೂ ಆದ ವಸ್ತುವೊಂದಿದೆ ಮತ್ತು ಅದು ಸಂವೇದನಾಶೀಲ ವಸ್ತುಗಳಿಗಿಂತ ಬೇರೆಯಾದುದು ಎಂಬುದು. ಈ ವಸ್ತುವಿಗೆ ಆಯಾಮಗಳಿರಲು ಸಾಧ್ಯವಿಲ್ಲ ಎಂಬುದು ಸಾಬೀತಾಗಿದೆ, ಆದರೆ ಅದು ಅಖಂಡ ಮತ್ತು ಅವಿಭಜನೀಯ .. .. ಅಲ್ಲದೆ, ಬೇರೆಲ್ಲ ವಸ್ತುಗಳೂ ಸ್ಥಳಾಂತರದ ನಂತರ ಬದಲಾವಣೆಗೊಳ್ಳುವಂತಹವಾದರೆ, ಅದು ಮಾತ್ರ

ನಿರ್ಭಾವುಕವೂ ವ್ಯತ್ಯಾಸರಹಿತವೂ ಆದುದೆಂದೂ ಸಾಬೀತುಪಡಿಸಲಾಗಿದೆ (೧೦೭೩ಬಿ).

ಕ್ರಿಶ್ಚಿಯನ್ನರ ದೂರದರ್ಶಿತ್ವದ ಗುಣವು ದೇವರಿಗಿಲ್ಲ, ಹಾಗೆಂದರೆ ಪರಿಪೂರ್ಣವಾದುದರ ಹೊರತು, ಅಂದರೆ ಅವನ ಹೊರತಾಗಿ, ಬೇರೆಯದರ ಬಗೆ ಯೋಚನೆಯನ್ನು ಮಾಡಿದರೆ, ಅವನ ಪರಿಪೂರ್ಣತೆಯನ್ನು ಅವಗಣಿಸಿದಂತೆ. 'ದೈವಚಿಂತನೆಯು ತನ್ನ ಬಗ್ಗೆ ಮಾತ್ರ ಚಿಂತಿಸುವಂತಹುದು (ಅದೇ ಅತ್ಯಂತ ಹಿರಿಮೆಯುಳ್ಳುದಾದ್ದರಿಂದ), ಅದರ ಚಿಂತನೆಯು ಚಿಂತನೆಯ ಬಗೆಗಿನ ಚಿಂತನೆ' (೧೦೭೪ಬಿ). ಚಂದ್ರನಡಿಯ ನಮ್ಮ ಲೋಕದ ಇರುವಿಕೆಯ ಬಗ್ಗೆ ದೇವರಿಗೆ ತಿಳಿದಿಲ್ಲ ಎಂದು ಊಹಿಸಿಕೊಳ್ಳಬೇಕು, ಸ್ಪಿನೋಜ಼ ಹೇಳಿದಂತೆ, ಮನುಷ್ಯರು ದೇವರನ್ನು ಪ್ರೀತಿಸಬೇಕು, ಆದರೆ ದೇವರು ಮಾನವರನ್ನು ಪ್ರೀತಿಸುವುದು ಅಸಾಧ್ಯ.

ಚಲಿಸದ ಚಲನಕಾರಣವಾದ ದೇವರು ವ್ಯಾಖ್ಯೆಗೆ ಸಿಕ್ಕುವಂತಹವನಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಖಗೋಳವೈಜ್ಞಾನಿಕ ತೀರ್ಮಾನಗಳು ನಲವತ್ತೇಳು ಅಥವಾ ಐವತ್ತೈದು ಚಲಿಸದ ಚಲನಕಾರಣಗಳಿವೆ ಎನ್ನುವುದನ್ನು ತಿಳಿಸುತ್ತವೆ (೧೦೭೪ಎ). ಇವಕ್ಕೂ ದೇವರಿಗೂ ಇರುವ ಸಂಬಂಧದ ಬಗ್ಗೆ ಸ್ಪಷ್ಟವಾಗಿ ಹೇಳಿಲ್ಲ; ಹೀಗಾಗಿ ಸಹಜ ವ್ಯಾಖ್ಯಾನವೆಂದರೆ ನಲವತ್ತೇಳು ಅಥವಾ ಐವತ್ತೈದು ಮಂದಿ ದೇವತೆಗಳಿದ್ದಾರೆ ಎಂದು. ದೇವತೆಗಳ ಬಗೆಗಿನ ಈ ಭಾಗಗಳಲ್ಲಿ ಒಂದರ ನಂತರ, 'ಅವರನ್ನು ಒಂದು ವಸ್ತುವೆಂದು ಭಾವಿಸಬೇಕೋ ಅನೇಕವೆಂದೋ ಎಂಬ ಪ್ರಶ್ನೆಯನ್ನು ಕಡೆಗಣಿಸಲಾಗುವುದಿಲ್ಲ' ಎಂದು ಹೇಳುವ ಅರಿಸ್ಟಾಟಲ್, ಆನಂತರ ದಿಢೀರನೆ ನಲವತ್ತೇಳು ಅಥವಾ ಐವತ್ತೈದು ಮಂದಿ ಚಲನಕಾರಣಗಳ ಬಗೆಗಿನ ಚರ್ಚೆಗೆ ತೊಡಗುತ್ತಾನೆ.

ಚಲಿಸದ ಚಲನಕಾರಣದ ಬಗೆಗಿನ ಪರಿಕಲ್ಪನೆಯು ಕಷ್ಟಕರವಾದುದು. ಆಧುನಿಕ ಮನಸ್ಸಿಗೆ, ಬದಲಾವಣೆಯ ಕಾರಣವು ಹಿಂದಿನ ಬದಲಾವಣೆಯಾಗಿರಬೇಕು, ವಿಶ್ವವು ಯಾವಾಗಲಾದರೂ ಸ್ಥಾವರವಾಗಿದ್ದಿದ್ದರೆ, ಅದು ನಿರಂತರವಾಗಿ ಹಾಗೆಯೇ ಇರುತ್ತಿತ್ತು ಎನಿಸುತ್ತದೆ. ಅರಿಸ್ಟಾಟಲ್ ಏನು ಹೇಳುತ್ತಾನೆಂಬುದನ್ನು ಅರ್ಥಮಾಡಿಕೊಳ್ಳಲು, ಅವನು ಕಾರಣಗಳನ್ನು ಕುರಿತು ಏನು ಹೇಳುತ್ತಾನೆ ಎಂಬುದನ್ನು ತಿಳಿಯಬೇಕು. ಅವನ ಪ್ರಕಾರ, ನಾಲ್ಕು ಬಗೆಯ ಕಾರಣಗಳಿವೆ: ವಸ್ತ್ವಾತ್ಮಕ, ರೂಪಾತ್ಮಕ, ಸಮರ್ಥ ಹಾಗೂ ಅಂತಿಮ. ಮತ್ತೆ ವಿಗ್ರಹವನ್ನು ಮಾಡುವ ಮನುಷ್ಯನ ಕಡೆಗೆ ತಿರುಗೋಣ. ವಿಗ್ರಹದ ವಸ್ತ್ವಾತ್ಮಕ ಕಾರಣವೆಂದರೆ ಅಮೃತಶಿಲೆ, ರೂಪಾತ್ಮಕ ಕಾರಣವೆಂದರೆ ಮಾಡಬೇಕಾದ ವಿಗ್ರಹದ ಸತ್ವ, ಸಮರ್ಥ ಕಾರಣವೆಂದರೆ ಅಮೃತಶಿಲೆಯೊಡನೆ ಸಂಪರ್ಕಕ್ಕೆ ಬರುವ ಉಳಿ, ಮತ್ತು ಅಂತಿಮ ಕಾರಣವೆಂದರೆ ಶಿಲ್ಪಿಯ ಕಲ್ಪನೆಯ ಕೊನೆ. ಆಧುನಿಕ ಪರಿಭಾಷೆಯಲ್ಲಿ, 'ಕಾರಣ' ಎಂಬ ಪದವು

ಸಮರ್ಥ ಕಾರಣಕ್ಕೆ ಮಾತ್ರ ಸೀಮಿತವಾದುದು. ಚಲಿಸದ ಚಲನಕಾರಣವು ಅಂತಿಮ ಕಾರಣವೆಂದು ತಿಳಿಯುಬಹುದು: ಅದು ಬದಲಾವಣೆಗೆ ಒಂದು ಉದ್ದೇಶವನ್ನೊದಗಿಸುತ್ತದೆ, ಅದು ಸತ್ವತಃ ದೇವರಂತಹುದರ ಕಡೆಗಿನ ವಿಕಾಸ.

ಅರಿಸ್ಟಾಟಲ್‌ನ ಮನಃಸ್ಥಿತಿಯು ಗಾಢ ಮತಧಾರ್ಮಿಕವಾದುದಲ್ಲ ಎಂದು ಹೇಳಿದೆ, ಆದರೆ ಇದು ಭಾಗಶಃ ಸತ್ಯ. ಅವನ ಮತಧಾರ್ಮಿಕತೆಯ ಒಂದು ಮಗ್ಗುಲನ್ನು ಸ್ವತಂತ್ರವಾಗಿ ಪ್ರಾಯಶಃ ಈ ರೀತಿ ವ್ಯಾಖ್ಯಾನಿಸಬಹುದು:

ದೇವರು ಪರಿಶುದ್ಧ ಚಿಂತನೆಯಾಗಿ, ಸೌಖ್ಯವಾಗಿ, ಪೂರ್ಣ ಸ್ವಯಂ ಕೃತಕೃತ್ಯನಾಗಿ, ಯಾವುದೇ ಸಾಕಾರಗೊಳ್ಳದ ಉದ್ದೇಶಗಳಿಲ್ಲದೆ ಚಿರಂತನವಾಗಿರುತ್ತಾನೆ. ಇಂದ್ರಿಯಜಗತ್ತು, ಅದಕ್ಕೆ ವ್ಯತಿರಿಕ್ತವಾಗಿ, ಅಪರಿಪೂರ್ಣ; ಆದರೆ ಅದಕ್ಕೆ ಜೀವ, ಬಯಕೆ, ಅಪರಿಪೂರ್ಣ ಚಿಂತನೆ, ಮತ್ತು ಆಕಾಂಕ್ಷೆಗಳಿರುತ್ತವೆ. ಎಲ್ಲ ಜೀವಂತ ವಸ್ತುಗಳೂ ಹೆಚ್ಚೋ ಕಡಿಮೆಯೋ ಪ್ರಮಾಣದಲ್ಲಿ ದೇವರ ಅರಿವುಳ್ಳವಾಗಿರುತ್ತವೆ, ಮತ್ತು ದೇವರ ಬಗೆಗಿನ ಮೆಚ್ಚಿಕೆ ಮತ್ತು ಪ್ರೀತಿಯಿಂದ ಚಲನಶೀಲವಾಗಿರುತ್ತವೆ. ಹೀಗೆ ದೇವರು ಎಲ್ಲ ಚಟುವಟಿಕೆಗಳ ಅಂತಿಮ ಕಾರಣ. ಬದಲಾವಣೆಯೆಂದರೆ ವಸ್ತುವಿಗೆ ಆಕಾರ ನೀಡುವುದು, ಆದರೆ ಇಂದ್ರಿಯಗ್ರಾಹ್ಯ ವಸ್ತುಗಳಾದರೆ ಭೌತವಸ್ತುವಿನ ತಳಪದರವೊಂದು ಸದಾ ಉಳಿಯುತ್ತದೆ. ದೇವರು ಮಾತ್ರವೇ ವಸ್ತುರಹಿತ ರೂಪವನ್ನು ಹೊಂದಿರುವುದು. ಜಗತ್ತು ಹೆಚ್ಚೆಚ್ಚು ರೂಪಾತ್ಮಕತೆಯ ಕಡೆಗೆ ವಿಕಾಸಗೊಳ್ಳುತ್ತಿರುತ್ತದೆ, ಹೀಗೆ ಕ್ರಮೇಣ ಹೆಚ್ಚು ದೇವರಂತಾಗುತ್ತಿರುತ್ತದೆ. ಆದರೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದಿಲ್ಲ, ಯಾಕೆಂದರೆ ವಸ್ತುವನ್ನು ಸಂಪೂರ್ಣವಾಗಿ ಇಲ್ಲವಾಗಿಸಲಾಗದು. ಇದು ಪ್ರಗತಿ ಮತ್ತು ವಿಕಾಸಗಳ ಮತಧರ್ಮ, ಯಾಕೆಂದರೆ ದೇವರ ಸ್ಥಿರ ಪರಿಪೂರ್ಣತೆಯು ಜಗತ್ತನ್ನು ಪರಿಮಿತ ಜೀವಿಗಳು ಅವನಿಗಾಗಿ ತುಡಿಯುವ ಪ್ರೀತಿಯ ಮೂಲಕ ಮಾತ್ರ ಚಲನೆಯನ್ನುದ್ದೀಪಿಸುತ್ತದೆ. ಪ್ಲೇಟೋ ಗಣಿತಾತ್ಮಕವಾಗಿದ್ದ, ಅರಿಸ್ಟಾಟಲ್ ಜೈವಿಕ; ಅವರಿಬ್ಬರ ನಡುವಣ ಮತಧಾರ್ಮಿಕತೆಯ ವ್ಯತ್ಯಾಸವನ್ನು ಈ ವಿವರಣೆಯು ಸ್ಪಷ್ಟಗೊಳಿಸುತ್ತದೆ.

ಆದರೆ ಇದು ಅರಿಸ್ಟಾಟಲ್‌ನ ಮತಧರ್ಮದ ಒಂದು ಮುಖ ಮಾತ್ರ; ಅವನಲ್ಲಿ ಗ್ರೀಕರ ಸ್ಥಿರ ಪರಿಪೂರ್ಣತೆಯ ಪ್ರೀತಿಯೂ ಇದೆ ಮತ್ತು ಕ್ರಿಯೆಗಿಂತ ಪರಿಭಾವನೆಯ ಬಗೆಗಿನ ಹೆಚ್ಚಿನ ಒಲವೂ ಇದೆ. ಅವನ ಆತ್ಮಸಿದ್ಧಾಂತದ ಚಿಂತನೆಯು ಅವನ ತಾತ್ವಿಕತೆಯ ಈ ಮುಖದ ನಿದರ್ಶನ.

ಅರಿಸ್ಟಾಟಲ್ ಅಮರತ್ವವನ್ನು ಯಾವುದಾದರೂ ರೂಪದಲ್ಲಿ ಬೋಧಿಸಿದನೇ ಇಲ್ಲವೇ ಎಂಬುದು ಅವನ ವ್ಯಾಖ್ಯಾನಕಾರರಿಗೆ ಒಂದು ಕಗ್ಗಂಟಾದ ಪ್ರಶ್ನೆಯಾಗಿತ್ತು. ಹಾಗೆ ಮಾಡಲಿಲ್ಲ ಎನ್ನುವ ಆವೆರೋಸ್‌ಗೆ ಕ್ರಿಶ್ಚಿಯನ್ ಅವಕಾಶಗಳಲ್ಲಿ ಅನುಯಾಯಿಗಳಿದ್ದರು, ಅವರಲ್ಲಿನ ಅತಿರೇಕಿಗಳನ್ನು ಎಪಿಕ್ಯೂರಿಯನ್ನರು ಎಂದು

ಕರೆಯಲಾಗುತ್ತಿತ್ತು, ಅವರನ್ನು ಡಾಂಟೆ ನರಕದಲ್ಲಿ ನೋಡುತ್ತಾನೆ. ಅರಿಸ್ಟಾಟಲ್‌ನ ಸಿದ್ಧಾಂತವು ನಿಜವಾಗಿಯೂ ಸಂಕೀರ್ಣವಾದುದು, ಹೀಗಾಗಿ ಅದು ಸುಲಭವಾಗಿ ಅಪಾರ್ಥಗಳಿಗೆ ಎಡೆಮಾಡಿಕೊಡುತ್ತದೆ. 'ಆನ್ ದ ಸೋಲ್' ಎಂಬ ಅವನ ಗ್ರಂಥದಲ್ಲಿ, ಆತ್ಮವನ್ನು ದೇಹವು ಮಿತಿಗೊಳಿಸಿದೆ ಎಂದು ಪರಿಗಣಿಸುತ್ತಾನೆ, ಹಾಗೂ ಪೈಥಾಗೊರಾಸ್‌ನ ಜನ್ಮಾಂತರ ಸಿದ್ಧಾಂತವನ್ನು ಲೇವಡಿಮಾಡುತ್ತಾನೆ (೪೦೭ಬಿ). ಆತ್ಮವು ದೇಹದೊಂದಿಗೆ ನಾಶವಾಗುತ್ತದೆಂದು ತೋರುತ್ತದೆ: 'ನಿಸ್ಸಂದೇಹವಾಗಿ ಆತ್ಮವು ಅದರ ದೇಹದಿಂದ ಬೇರ್ಪಡಿಸಲಾಗದ್ದು' (೪೧೩ಎ), ಆದರೆ ತಕ್ಷಣವೇ 'ಅಥವಾ ಕನಿಷ್ಠ ಪಕ್ಷ ಅದರ ಕೆಲವು ಭಾಗಗಳಿಂದಾದರೂ' ಎಂದೂ ಸೇರಿಸುತ್ತಾನೆ. ದೇಹ-ಆತ್ಮಗಳು ವಸ್ತು ಮತ್ತು ರೂಪಗಳ ಸಂಬಂಧ ಹೊಂದಿದವು: 'ಜೀವಸಾಧ್ಯತೆಯನ್ನು ತನ್ನಲ್ಲಿ ಹೊಂದಿದ ವಸ್ತ್ವಾತ್ಮಕ ದೇಹದ ರೂಪ ಎಂಬರ್ಥದಲ್ಲಿ ಆತ್ಮವು ಅದರ ಸತ್ವವಾಗಿರಬೇಕು. ಆದರೆ ಸತ್ವವು ವಾಸ್ತವತೆ, ಹೀಗಾಗಿ ಮೇಲೆ ಹೇಳಿದಂತೆ, ಆತ್ಮವು ಒಂದು ದೇಹದ ವಾಸ್ತವತೆ' (೪೧೨ಎ). 'ವಸ್ತುವೊಂದರ ಸತ್ವ ಎಂಬ ಅಂತಿಮ ಸೂತ್ರದ ಅರ್ಥದಂತೆ ಆತ್ಮವು ಸತ್ವ, ಅಂದರೆ ಅದು ಈಗ ತಾನೇ ಸೂಚಿಸಿದಂತೆ ದೇಹವೊಂದರ "ಸತ್ವಾತ್ಮಕವಾದ ಯಾವುದೋ" ಆಗಿರುತ್ತದೆ' (ಅಂದರೆ ಜೀವವಿರುವಂತದು) (೪೧೨ಬಿ). ಆತ್ಮವು ತನ್ನಲ್ಲಿ ಜೀವಸಾಧ್ಯತೆಯನ್ನು ಹೊಂದಿರುವ ಸಹಜ ದೇಹದ ಮೊದಲ ದರ್ಜೆಯ ವಾಸ್ತವತೆ. ದೇಹ ಎಂದು ವರ್ಣಿತವಾಗುವ ದೇಹವು ವ್ಯವಸ್ಥಿತವಾದದ್ದು (೪೧೨ಎ). ದೇಹ ಆತ್ಮಗಳೆರಡೂ ಒಂದೇ ಅಲ್ಲವೇ ಎಂದು ಕೇಳುವುದು ಮೇಣ ಮತ್ತು ಅದನ್ನೊತ್ತಿದಾಗ ಬರುವ ಆಕಾರಗಳೆರಡೂ ಒಂದೇ ಎಂದಂತೆ ಅರ್ಥಹೀನವಾದುದು (೪೧೨ಬಿ). ಸ್ವಯಂಪೋಷಣೆಯೊಂದೇ ಸಸ್ಯಗಳಿಗಿರುವ ಏಕೈಕ ಮನೋಬಲ (೪೧೩ಎ). ಆತ್ಮವು ದೇಹದ ಅಂತಿಮ ಕಾರಣ (೪೧೪ಎ).

ತನ್ನ ಪುಸ್ತಕದಲ್ಲವನು 'ಆತ್ಮ' ಮತ್ತು 'ಮನಸ್ಸು'ಗಳ ನಡುವೆ ವ್ಯತ್ಯಾಸ ಮಾಡುತ್ತಾನೆ, ಅಲ್ಲದೆ ಮನಸ್ಸು ಆತ್ಮಕ್ಕಿಂತ ಉನ್ನತ ಮಟ್ಟದ್ದು ಮತ್ತು ದೇಹ ಒಡ್ಡುವ ಪರಿಮಿತಿಗಳಿಗೆ ಕಡಿಮೆ ಒಳಗಾಗುವಂತಹುದು ಎನ್ನುತ್ತಾನೆ. ಆತ್ಮ ಮತ್ತು ದೇಹಗಳ ಸಂಬಂಧವನ್ನು ಕುರಿತು ಮಾತನಾಡಿದ ಮೇಲೆ, 'ಮನಸ್ಸಿನ ವಿಷಯವು ವಿಭಿನ್ನ; ಅದು ಆತ್ಮದೊಳಗೆ ಸೇರಿಸಲ್ಪಟ್ಟ ಸ್ವತಂತ್ರವಾದ ವಸ್ತುವೆಂಬಂತೆ ತೋರುತ್ತದೆ ಹಾಗೂ ನಾಶಗೊಳಿಸಲು ಸಾಧ್ಯವಲ್ಲದ್ದು' (೪೦೮ಬಿ) ಎನ್ನುತ್ತಾನೆ. ಮತ್ತೆ, 'ಮನಸ್ಸು ಮತ್ತು ಯೋಚನಾಸಾಮರ್ಥ್ಯ ಕುರಿತಂತೆ ನಮಗೆ ಇನ್ನೂ ಯಾವುದೇ ಸಾಕ್ಷ್ಯಾಧಾರಗಳಿಲ್ಲ; ಅದು ಚಿರಂತನ ಮತ್ತು ನಾಶಗೊಳ್ಳುವುದಕ್ಕೆ ತೀರ ಭಿನ್ನವಾದ ಆತ್ಮವೆಂಬಂತೆ ಕಾಣುತ್ತದೆ; ಮಿಕ್ಕೆಲ್ಲ ಮನೋಬಲಗಳಿಂದ ದೂರ ಒಂಟಿಯಾಗಿ ಅಸ್ತಿತ್ವದಲ್ಲಿರಲು ಸಮರ್ಥವಾದುದು. ಆತ್ಮದ ಮಿಕ್ಕಿತರ ಭಾಗಗಳು, ನಾವು ಹೇಳಿದುದು ಸ್ಪಷ್ಟಗೊಳಿಸುವಂತೆ, ವಿರುದ್ಧ

ಹೇಳಿಕೆಗಳ ನಡುವೆಯೂ, ಬೇರೆಯಾಗಿ ಅಸ್ತಿತ್ವದಲ್ಲಿರಲು ಅಸಮರ್ಥವಾದವು' (೪೧೩ಬಿ) ಎನ್ನುತ್ತಾನೆ. ಮನಸ್ಸು ಗಣಿತ ಮತ್ತು ತತ್ವಜ್ಞಾನಗಳನ್ನು ಅರ್ಥಮಾಡಿಕೊಳ್ಳಬಲ್ಲ ನಮ್ಮ ಭಾಗ; ಅದರ ಉದ್ದೇಶಗಳು ಕಾಲಾತೀತವಾದವು, ಹೀಗಾಗಿ ತಾನೇ ಕಾಲಾತೀತ ಎಂದು ಭಾವಿಸಬಹುದಾದುದು. ಆತ್ಮವು ದೇಹವನ್ನು ಚಲನಶೀಲವಾಗಿಸುವಂತಹುದು ಮತ್ತು ಇಂದ್ರಿಯಗ್ರಾಹ್ಯ ವಸ್ತುಗಳನ್ನು ನೋಡುವಂತಹುದು; ಅದರ ಲಕ್ಷಣಗಳೆಂದರೆ ಸ್ವಪೋಷಣೆ, ಸಂವೇದನೆ, ಭಾವಪೂರಿತತೆ ಮತ್ತು ಪ್ರೇರಕಸಾಮರ್ಥ್ಯಗಳು (೪೧೩ಬಿ); ಆದರೆ ಮನಸ್ಸಿಗೆ ದೇಹ ಮತ್ತು ಇಂದ್ರಿಯಗಳಿಗೆ ಸಂಬಂಧಿಸದಂತೆ ಆಲೋಚಿಸುವ ಉನ್ನತ ಸಾಮರ್ಥ್ಯವಿದೆ. ಹೀಗಾಗಿ ಮನಸ್ಸು ಅಮರವಾಗಬಲ್ಲುದು, ಆದರೆ ಆತ್ಮದ ಮಿಕ್ಕುಳಿದ ಭಾಗಗಳಲ್ಲ.

ಅರಿಸ್ಟಾಟಲ್‌ನ ಆತ್ಮಸಿದ್ಧಾಂತವನ್ನು ಅರ್ಥಮಾಡಿಕೊಳ್ಳಲು, ನಾವು ಗಮನಿಸಬೇಕಾದುದೆಂದರೆ, ಆತ್ಮವು ದೇಹದ 'ರೂಪ', ದೈಶಿಕ (ಸ್ಪೇಷಿಯಲ್) 'ಆಕಾರ'ವು ಒಂದು ಬಗೆಯದು. ಆತ್ಮ ಮತ್ತು ಆಕಾರಗಳಿಗಿರುವ ಸಂಬಂಧದಲ್ಲಿ ಸಮಾನಾಂಶವಾವುವು? ಅದೆಂದರೆ ಒಂದು ಪ್ರಮಾಣದ ಭೌತವಸ್ತುವಿಗೆ ಐಕ್ಯವನ್ನು ನೀಡುವುದು ಎಂದು ನನ್ನ ಭಾವನೆ. ಮುಂದೆ ಪ್ರತಿಮೆಯಾಗುವ ಅಮೃತಶಿಲೆ ಬಂಡೆಯ ಭಾಗವು ಮಿಕ್ಕ ಅಮೃತಶಿಲೆಯಿಂದ ಬೇರ್ಪಟ್ಟಿರುವುದಿಲ್ಲ; ಅದಿನ್ನೂ 'ವಸ್ತು'ವಲ್ಲ, ಹೀಗಾಗಿ ಅದಕ್ಕಿನ್ನೂ ಐಕ್ಯ ಇಲ್ಲ. ಶಿಲ್ಪಿಯು ಪ್ರತಿಮೆಯನ್ನು ಮಾಡಿದ ಬಳಿಕ, ಅದು ಐಕ್ಯವನ್ನು ಹೊಂದುತ್ತದೆ, ಅದು ತನ್ನ ಆಕಾರದಿಂದ ಪಡೆಯುವಂತಹುದು. ದೇಹದ ಆಕಾರವಾಗುವ ಗುಣದಿಂದಾಗಿ ಪ್ರಾಪ್ತವಾದ ಆತ್ಮದ ಮುಖ್ಯ ಲಕ್ಷಣವೆಂದರೆ ಅದು ದೇಹವನ್ನು – ಉದ್ದೇಶವನ್ನು ಹೊಂದಿದ ಒಂದು ಸಾವಯವ – ಘಟಕವನ್ನಾಗಿ ಮಾಡುತ್ತದೆನ್ನುವುದು. ಬಿಡಿ ಅಂಗದ ಉದ್ದೇಶವು ತನ್ನಿಂದ ಹೊರಗೆ ಇರುತ್ತದೆ; ಕಣ್ಣು, ಒಂಟಿಯಾಗಿ ನೋಡಲಾರದು. ಹೀಗೆ ಇಡಿಯ ಘಟಕವಾಗಿರುವ ಪ್ರಾಣಿ ಅಥವಾ ಸಸ್ಯಗಳಲ್ಲಿನ ಇಂತಹ ಅನೇಕ ಸಂಗತಿಗಳನ್ನು ಹೇಳಬಹುದು, ಆದರೆ ಅದರ ಯಾವುದೇ ಒಂದು ಭಾಗದ ಬಗ್ಗೆ ಹಾಗೆ ಹೇಳಲಾಗುವುದಿಲ್ಲ. ಇಂತಹುದೇ ಸಂಘಟನೆಯಲ್ಲಿ ಅಥವಾ ಆಕಾರದಲ್ಲಿ ಅದು ಅಸ್ತಿತ್ವವನ್ನು ನೀಡುತ್ತದೆ. ಪ್ರಾಣಿ ಅಥವಾ ಸಸ್ಯಕ್ಕೆ ಯಾವುದು ಅಸ್ತಿತ್ವವನ್ನು ನೀಡುತ್ತದೆಯೋ ಅದನ್ನೇ ಅರಿಸ್ಟಾಟಲ್ 'ಆತ್ಮ'ವೆಂದು ಕರೆಯುವುದು. ಆದರೆ 'ಮನಸ್ಸು' ಬೇರೆ ದೇಹಕ್ಕೆ ಕಡಿಮೆ ನಿಕಟ ಪ್ರಮಾಣದ ಮಿತಿಗೊಳಗಾದುದು; ಪ್ರಾಯಶಃ ಅದು ಆತ್ಮದ ಒಂದು ಭಾಗ, ಆದರೆ ಅದನ್ನು ಪಡೆದಿರುವುದು ಅಲ್ಪಪ್ರಮಾಣದ ಜೀವಿಗಳು ಮಾತ್ರ (೪೧೪ಎ). ಚಿಂತನೆಯಾಗಿ ಮನಸ್ಸು ಚಲನೆಯ ಕಾರಣವಾಗಲಾರದು, ಯಾಕೆಂದರೆ ಅದೆಂದೂ ಕಾರ್ಯಸಾಧ್ಯವಾದುದರ ಬಗ್ಗೆ

ಯೋಚಿಸುವುದಿಲ್ಲ, ಮತ್ತು ಯಾವುದರಿಂದ ದೂರವಿರಬೇಕು ಹಾಗೂ ಯಾವುದನ್ನು ಹಿಂಬಾಲಿಸಬೇಕು ಎಂದು ಹೇಳುವುದಿಲ್ಲ (೪೩೨ಬಿ).

ಸ್ವಲ್ಪವೇ ಬೇರೆಯಾದ ಮಾತುಗಳಲ್ಲಿರುವ ಇಂತಹುದೇ ಸಿದ್ಧಾಂತವನ್ನು ನಿಕೋಮ್ಯಾಕಿಯನ್ ಎಥಿಕ್ಸ್‌ನಲ್ಲಿ ಮಂಡಿಸಲಾಗಿದೆ. ಆತ್ಮದಲ್ಲಿ ಒಂದು ವೈಚಾರಿಕ ಭಾಗವಿದೆ ಮತ್ತು ಅವೈಚಾರಿಕವಾದ ಇನ್ನೊಂದು ಭಾಗವಿದೆ. ಅವೈಚಾರಿಕ ಭಾಗದಲ್ಲಿ ಎರಡು ಮಗ್ಗುಲು: ಪ್ರತಿ ಜೀವಂತ ವಸ್ತುವಿನಲ್ಲೂ, ಸಸ್ಯದಲ್ಲಿಯೂ, ಕಾಣುವ ಸಸ್ಯೀಯ (ವೆಜಿಟೇಟಿವ್) ಭಾಗ, ಮತ್ತು ಎಲ್ಲ ಪ್ರಾಣಿಗಳಲ್ಲೂ ಇರುವ ಕಾಮ್ಯ – ಹಸಿವಿನ – (ಅಪಿಟಿಟಿವ್) ಭಾಗ (೧೧೦೨ಬಿ). ವೈಚಾರಿಕ ಆತ್ಮದ ಬದುಕು ಚಿಂತನೆಯಲ್ಲಿರುತ್ತದೆ, ಸಂಪೂರ್ಣವಾಗಿ ಸಾಧಿಸಿಕೊಳ್ಳಲಾಗದಿದ್ದರೂ ಅದು ಮನುಷ್ಯನ ಸಂಪೂರ್ಣ ಸುಖ. 'ಅಂಥ ಜೀವನವು ಮನುಷ್ಯನಿಗೆ ಕೈಗೆಟುಕದ್ದು; ತಾನು ಮನುಷ್ಯನಾಗಿರುವಷ್ಟರಿಂದಲೇ ಅವನು ಹಾಗೆ ಜೀವಿಸಲಾರ, ಅದು ಸಾಧ್ಯವಾಗುವುದು ಅವನಲ್ಲಿರುವ ಯಾವುದೋ ದೈವಿಕವಾದುದರಿಂದ; ತನ್ನ ಚಟುವಟಿಕೆಗಳಲ್ಲಿ ನಮ್ಮ ಸಂಯೋಜಿತ ಸ್ವಭಾವವು ಬೇರೊಂದು (ಕಾರ್ಯಸಾಧ್ಯ) ಬಗೆಯ ಸದ್ಗುಣ ಕಾರ್ಯಗಳಿಗಿಂತ ತುಂಬ ಮಿಗಿಲಾದುದು. ಆಗ ಮನುಷ್ಯನೊಡನೆ ಹೋಲಿಸಿದರೆ ವೈಚಾರಿಕತೆಯು ದೈವಿಕವಾದುದಾದರೆ, ಅದಕ್ಕನುಗುಣವಾದ ಬದುಕು, ಮನುಷ್ಯ ಬದುಕಿನೊಡನೆ ಹೋಲಿಸಿದರೆ ದೈವಿಕವೇ ಆಗುತ್ತದೆ. ಆದರೆ ನಮಗೆ ಬುದ್ಧಿ ಹೇಳುವವರನ್ನು ನಾವು ಅನುಸರಿಸಬಾರದು, ಯಾಕೆಂದರೆ ಮನುಷ್ಯರ ಬಗ್ಗೆ ಚಿಂತನೆ ನಡೆಸಲು ಅವರೂ ಮನುಷ್ಯರೇ; ಮರ್ತ್ಯದ ಬಗ್ಗೆ ಚಿಂತಿಸಲು ಅವರೂ ಮರ್ತ್ಯರೇ. ಹೀಗಾಗಿ ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ನಾವು ಅಮರರಾಗಬೇಕು, ನಮ್ಮಲ್ಲಿನ ಅತ್ಯುನ್ನತವಾದುದಕ್ಕನುಗುಣವಾಗಿ ಬದುಕಲು ಸರ್ವಯತ್ನ ಮಾಡಬೇಕು. ಯಾಕೆಂದರೆ ಗಾತ್ರದಲ್ಲಿ ಸಣ್ಣದಾದರೂ, ಅದರಲ್ಲಿನ ಸಾಮರ್ಥ್ಯವು ಮಿಗಿಲು, ಹೀಗಾಗಿ ಮೀರುವುದು ಸಮಂಜಸವಾದುದು' (೧೧೭೭ಬಿ).

ಈ ಭಾಗಗಳಿಂದ ಶ್ರುತವಾಗುವುದೆಂದರೆ, ವೈಯುಕ್ತಿಕತೆಯು (ಇಂಡಿವಿಜುವಾಲಿಟಿ) – ಒಬ್ಬನನ್ನು ಮತ್ತೊಬ್ಬನಿಗಿಂತ ಭಿನ್ನವಾಗಿಸುವುದು – ದೇಹಕ್ಕೆ ಮತ್ತು ಅವೈಚಾರಿಕ ಆತ್ಮಕ್ಕೆ ಸಂಬಂಧಿಸಿದ್ದು–ಒಬ್ಬನಿಗೆ ಸಿಂಪಿ (ಆಯ್‌ಸ್ಟರ್) ಇಷ್ಟ, ಮತ್ತೊಬ್ಬನಿಗೆ ಪೈನಾಪಲ್ ಇಷ್ಟ– ಇದು ಅವರಿಬ್ಬರನ್ನೂ ಭಿನ್ನವಾಗಿಸುತ್ತದೆ. ಆದರೆ ಅವರು ಮಗ್ಗಿಯ ಬಗ್ಗೆ ಯೋಚಿಸುತ್ತಿದ್ದರೆ, ಅವರು ಸರಿಯಾಗಿ ಯೋಚಿಸಿದರೆ, ಅವರಿಬ್ಬರ ನಡುವೆ ವ್ಯತ್ಯಾಸವಿರುವುದಿಲ್ಲ. ಅವೈಚಾರಿಕತೆಯು ನಮ್ಮನ್ನು ಬೇರೆ ಮಾಡುತ್ತದೆ, ವೈಚಾರಿಕತೆಯು ಒಂದುಗೂಡಿಸುತ್ತದೆ. ಹೀಗೆ ಮನಸ್ಸು ಅಥವಾ ವೈಚಾರಿಕತೆಯ ಅಮರತ್ವವು ಬಿಡಿ ವ್ಯಕ್ತಿಗಳ ಅಮರತ್ವವಲ್ಲ, ಆದರೆ ದೇವರ ಅಮರತ್ವದಲ್ಲಿನ ಒಂದು ಪಾಲು. ಈ ಅರ್ಥದಲ್ಲೇ ಪ್ಲೇಟೋ ಅದನ್ನು ಬೋಧಿಸಿದ,

ಕ್ರೈಸ್ತಮತಧರ್ಮವು ಅದನ್ನೇ ಮುಂದೆ ಬೋಧಿಸಿತು. ಅವನು ನಂಬಿದ್ದು ಅಷ್ಟನ್ನು ಮಾತ್ರ, ಮನುಷ್ಯರು ವೈಚಾರಿಕರಾಗಿರುವ ಮಟ್ಟಿಗೆ, ಅವರು ದೈವಿಕತಯಲ್ಲಿ ಭಾಗಿಗಳು, ಹಾಗೆ ಮಾಡುವುದೇ ಅತ್ಯಂತ ಶ್ರೇಷ್ಠ ಸತ್ಕಾರ್ಯ. ಆದರೆ ಅವನು ಅದರಲ್ಲಿ ಸಂಪೂರ್ಣ ಜಯಶಾಲಿಯಾಗಿದ್ದರೆ, ಅವನು ಪ್ರತ್ಯೇಕ ವ್ಯಕ್ತಿಯಾಗಿ ಉಳಿಯುತ್ತಿರಲಿಲ್ಲ. ಅರಿಸ್ಟಾಟಲ್‌ನ ಮಾತುಗಳನ್ನು ವ್ಯಾಖ್ಯಾನಿಸುವ ಬಗೆ ಇದೊಂದೇ ಅಲ್ಲ, ಆದರೆ ಇದು ಅತ್ಯಂತ ಸಹಜವಾದುದೆಂದು ನನ್ನ ತಿಳಿವಳಿಕೆ.

○

೨೦
ಅರಿಸ್ಟಾಟಲ್‌ನ ನೀತಿಸಂಹಿತೆ (ಎಥಿಕ್ಸ್)

ಅರಿಸ್ಟಾಟಲ್‌ನ ಕೃತಿಶ್ರೇಣಿಯಲ್ಲಿ ನೀತಿಸಂಹಿತೆಯ ಬಗೆಗಿನ ಮೂರು ಗ್ರಂಥಗಳೂ ಸೇರಿವೆ; ಆದರೆ ಇವುಗಳಲ್ಲಿ ಎರಡನ್ನು ಅವನ ಶಿಷ್ಯರು ರಚಿಸಿದರೆಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಮೂರನೆಯದಾದ 'ನಿಕೋಮ್ಯಾಶಿಯನ್ ಎಥಿಕ್ಸ್'ನ ಕರ್ತೃತ್ವದ ಬಗ್ಗೆ ಬಹುಮಟ್ಟಿಗೆ ಒಮ್ಮತವಿದ್ದು, ಅವನದೇ ಎಂದು ಭಾವಿಸಲಾಗಿದೆ, ಆದರೆ ಇದರಲ್ಲೂ ಒಂದು ಭಾಗವು (ಭಾಗಗಳು, ೫, ೬ ಮತ್ತು ೭) ಅವನ ಶಿಷ್ಯರ ಕೃತಿಗಳಿಂದ ಆಯ್ದ ಭಾಗಗಳನ್ನೊಳಗೊಂಡಿದೆಯೆಂದು ಅನೇಕರು ಹೇಳುತ್ತಾರೆ. ಆದರೆ ಈ ವಿವಾದಾತ್ಮಕ ಅಭಿಪ್ರಾಯವನ್ನು ಕಡೆಗಣಿಸಿ ಇಡೀ ಗ್ರಂಥವು ಅರಿಸ್ಟಾಟಲ್‌ಕೃತವೆಂದು ಪರಿಗಣಿಸುತ್ತೇನೆ.

ನೀತಿಸಂಹಿತೆಯ ಬಗೆಗಿನ ಅರಿಸ್ಟಾಟಲ್‌ನ ದೃಷ್ಟಿಯು, ಮುಖ್ಯವಾಗಿ, ತನ್ನ ಕಾಲದ ವಿದ್ಯಾವಂತ ಹಾಗೂ ಅನುಭವಿಗಳ ಅಭಿಪ್ರಾಯಗಳನ್ನು ಪ್ರತಿನಿಧಿಸುತ್ತದೆ. ಪ್ಲೇಟೋನದರಂತೆ ಅವು ಆನುಭಾವಿಕ ಮತಧರ್ಮದಿಂದ ತುಂಬಿಕೊಂಡಿಲ್ಲ; ಅಂತೆಯೇ 'ರಿಪಬ್ಲಿಕ್'ನಲ್ಲಿನ ಆಸ್ತಿ ಮತ್ತು ಕುಟುಂಬಗಳಿಗೆ ಸಂಬಂಧಿಸಿದಂತೆ ಇರುವ ಅಸಾಂಪ್ರದಾಯಿಕ ವಾದಗಳೊಡನೆ ಮುಖಾಮುಖಿಯಾಗುವುದೂ ಇಲ್ಲ. ಸಭ್ಯತೆಯ ದೃಷ್ಟಿಯಿಂದ ಆರಕ್ಕೇರದ ಮೂರಕ್ಕಿಳಿಯದ ಸತ್ಪ್ರಜೆಗಳು 'ಎಥಿಕ್ಸ್'ನಲ್ಲಿ ಜನರ ನಡತೆಯು ಯಾವ ತತ್ವಗಳಿಂದ ಕ್ರಮಬದ್ಧಗೊಳ್ಳಬೇಕೆಂದು ನಿರೀಕ್ಷಿಸುತ್ತಾರೋ ಅಂತಹವುಗಳ ವ್ಯವಸ್ಥಿತ ನಿರೂಪಣೆಯನ್ನು ಕಾಣಬಹುದು. ಅದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸುವವರಿಗೆ ನಿರಾಶೆಯಾಗುವುದು ಖಂಡಿತ. ಹದಿನೇಳನೆಯ ಶತಮಾನದಿಂದೀಚೆಗೆ ಯುವಜನತೆಯ ಅತ್ಯುತ್ಸಾಹ ಮತ್ತು ದಾಷ್ಟಿಕವನ್ನು ತಹಬಂದಿಗೆ ತರಲು ನೀತಿನಿಯಮಗಳನ್ನು ಆಚರಿಸಲಾಗುವ ಗೌರವಸ್ಥ ಮಧ್ಯವಯಸ್ಕ ಜನರಿಗೆ ಈ ಗ್ರಂಥವು ಮೆಚ್ಚಿಕೆಯಾಗುತ್ತದೆ. ಆದರೆ ಗಾಢ ಭಾವನೆಗಳಿಂದ ಕೂಡಿದವರಿಗೆ ಇದು ಹಿಡಿಸಲಾರದು.

ಆತ್ಮದ ಚಟುವಟಿಕೆಯೇ ಸುಖ ಎಂದು ಇಲ್ಲಿ ಹೇಳಲಾಗಿದೆ. ಆತ್ಮವನ್ನು

ವೈಚಾರಿಕ ಹಾಗೂ ಅವೈಚಾರಿಕ ಎಂದು ಎರಡು ಭಾಗಗಳಾಗಿ ಪ್ಲೇಟೋ ವಿಂಗಡಿಸುವುದು ಸಮಂಜಸವಾದುದು ಎಂದು ಅರಿಸ್ಟಾಟಲ್ ಅಭಿಪ್ರಾಯಪಡುತ್ತಾನೆ. ಅವೈಚಾರಿಕ ಆತ್ಮವನ್ನವನು, ಸಸ್ಯಗಳಲ್ಲೂ ಕಾಣಬಹುದಾದ, ಸಸ್ಯೀಯ (ವೆಜಿಟೇಟಿವ್) ಹಾಗೂ ಎಲ್ಲ ಬಗೆಯ ಪ್ರಾಣಿಗಳಲ್ಲಿ ಕಾಣುವ ಕಾಮ್ಯ (ಅಪಿಟೆಟಿವ್) ಎಂದು ಮತ್ತೆ ಎರಡು ಭಾಗವಾಗಿ ವಿಂಗಡಿಸುತ್ತಾನೆ. ಕಾಮ್ಯ ಭಾಗವು ಇಷ್ಟಪಡುವ ವಸ್ತುಗಳು ಸ್ವಲ್ಪಮಟ್ಟಿಗೆ ವೈಚಾರಿಕ ಭಾಗವು ಒಪ್ಪುವಂತಹ ಬಗೆಯಲ್ಲಿ ವೈಚಾರಿಕವಾಗಿಯೂ ಇರಬಹುದು. ಇದು ಪುಣ್ಯಕಾರ್ಯವನ್ನು ನಿರ್ಧರಿಸಲು ಆವಶ್ಯಕವಾದುದು, ಯಾಕೆಂದರೆ ಅದು ಅರಿಸ್ಟಾಟಲ್‌ನ ಪ್ರಕಾರ ಶುದ್ಧ ಚಿಂತನಾತ್ಮಕವಾಗಿರುತ್ತದೆ, ಕಾಮ್ಯದ ಸಹಾಯವಿಲ್ಲದೆ ದಿನನಿತ್ಯದ ಕಾರ್ಯಚಟುವಟಿಕೆಗಳು ಸಾಗಲಾರದು.

ಎರಡು ಬಗೆಯ ಪುಣ್ಯಕಾರ್ಯಗಳಿವೆ: ಆತ್ಮದ ಎರಡು ಭಾಗಗಳಿಗೆ ಸಂಬಂಧಿಸಿದಂತಹ ಬೌದ್ಧಿಕ ಹಾಗೂ ನೈತಿಕ. ಬೌದ್ಧಿಕ ಸದ್ಗುಣಗಳು ಬೋಧನೆಯ ಫಲ, ನೈತಿಕ ಸದ್ಗುಣಗಳು ಅಭ್ಯಾಸದ ಫಲ. ಪ್ರಜೆಗಳು ಒಳ್ಳೆಯ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವಂತೆ ಮಾಡಬೇಕಾದುದು ಶಾಸಕನ ಕರ್ತವ್ಯ. ನ್ಯಾಯಪರ ಕ್ರಿಯೆಗಳ ಅಭ್ಯಾಸದಿಂದ ನಾವು ನ್ಯಾಯಪರರಾಗುತ್ತೇವೆ, ಅದರಂತೆಯೇ ಇತರ ಸದ್ಗುಣಗಳೂ. ಒಳ್ಳೆಯ ಅಭ್ಯಾಸಗಳನ್ನು ಅಳವಡಿಸಿಕೊಳ್ಳಬೇಕೆಂಬ ಒತ್ತಾಯವು ಕಾಲಕ್ರಮೇಣ ಒಳ್ಳೆಯ ಕಾರ್ಯಗಳನ್ನು ಮಾಡುವುದರಲ್ಲಿ ಸಂತೋಷವನ್ನು ಕಾಣುತ್ತೇವೆಂಬುದು ಅರಿಸ್ಟಾಟಲ್‌ನ ಅಭಿಪ್ರಾಯ. ಇದನ್ನು ನೋಡಿದಾಗ, ಹ್ಯಾಮ್ಲೆಟ್ ತನ್ನ ತಾಯಿಗೆ ಹೇಳುವ ಮಾತುಗಳು ನೆನಪಿಗೆ ಬರುವುದು ಸಹಜ:

ನಿನಗಿಲ್ಲದಿದ್ದರೂ ಇದೆಯೆಂದು ಸದ್ಗುಣವನ್ನು ಊಹಿಸಿಕೋ.
ಅಭ್ಯಾಸ ಪಿಶಾಚವಿವೇಕವನ್ನೆಲ್ಲ ನುಂಗಿಹಾಕುವುದು,
ರೂಢಿ ಪಾಪದೇವತೆ ಉನ್ನತ ಹಾಗೂ ಒಳ್ಳೆಯ ಕಾರ್ಯಗಳಲ್ಲಿ
ಧರಿಸುವ ಗೌನು ಅಥವಾ ಪೋಷಾಕನ್ನು ನೀಡಿ
ಅಷ್ಟುಮಟ್ಟಿಗೆ ದೈವಿಕವೆನಿಸುತ್ತದೆ.

ಈಗ ನಾವು ಸುಪ್ರಸಿದ್ಧವಾದ ಸುವರ್ಣಮಾಧ್ಯಮ ಸಿದ್ಧಾಂತಕ್ಕೆ ಬರುತ್ತೇವೆ. ಪ್ರತಿ ಸದ್ಗುಣವೂ ದುರ್ಗುಣಗಳೆಂಬ ಎರಡು ಅತಿರೇಕಗಳ ನಡುವಣ ನಡುವಿನದು. ಇದನ್ನು ಅನೇಕ ಸದ್ಗುಣಗಳ ಪರಿಶೀಲನೆಯ ಮೂಲಕ ಸಾಧಿಸಲಾಗಿದೆ. ಧೈರ್ಯವೆಂಬುದು ಹೇಡಿತನ ಮತ್ತು ದುಡುಕುತನಗಳ ನಡುವಣದು; ಉದಾರತೆಯು ದುಂದುಗಾರಿಕೆ ಮತ್ತು ಕೃಪಣತೆಗಳ ನಡುವಿನದು; ಹೆಮ್ಮೆಯು ಡೌಲು ಮತ್ತು ದೈನ್ಯಗಳ ನಡುವಿನದು; ವಾಕ್‌ಚಾತುರ್ಯವು ಕೋಡಂಗಿತನ ಮತ್ತು ಒಡ್ಡತನಗಳ ನಡುವಿನದು; ಸೌಶೀಲ್ಯವು ಲಜ್ಜೆ ಮತ್ತು ಮಾನಹೀನತೆಗಳ ನಡುವಿನದು. ಆದರೆ ಕೆಲವು ಸದ್ಗುಣಗಳು ಈ ವ್ಯವಸ್ಥೆಗೆ ಹೊಂದಿಕೊಳ್ಳಲಾರವು: ನಿದರ್ಶನಕ್ಕೆ, ಸತ್ಯಸಂಧತೆ.

ಇದು ಒಣಜಂಬ ಮತ್ತು ತೋರಿಕೆಯ ಸಭ್ಯತೆಯ ನಡುವಣದ್ದೆಂದು ಅರಿಸ್ಟಾಟಲ್ ಹೇಳುತ್ತಾನೆ (೧೧೦೮ಎ), ಆದರೆ ಇದು ತನ್ನ ಬಗೆಗಿನ ಸತ್ಯಸಂಧತೆಗೆ ಅನ್ವಯಿಸುತ್ತದೆ, ಅಷ್ಟೆ. ಆದರೆ ತನ್ನ ವಿಶಾಲಾರ್ಥದಲ್ಲಿ ಸತ್ಯಸಂಧತೆಯು ಈ ವ್ಯವಸ್ಥೆಗೆ ಹೇಗೆ ಒಗ್ಗುವುದೆಂಬುದು ಅರ್ಥವಾಗುವುದಿಲ್ಲ. ಹಿಂದೆ ಅರಿಸ್ಟಾಟಲ್‌ನ ಈ ಸಿದ್ಧಾಂತವನ್ನು ಅನುಷ್ಠಾನಗೊಳಿಸಿದ್ದ ಒಬ್ಬ ಮೇಯರ್ ಇದ್ದ; ಅಧಿಕಾರಾವಧಿಯ ಕೊನೆಗೆ ಭಾಷಣ ಮಾಡುತ್ತ, ತಾನು ಪಕ್ಷಪಾತ ಮತ್ತು ನಿಷ್ಪಕ್ಷಪಾತಗಳ ನಡುವಣ ಮಾರ್ಗವನ್ನು ತುಳಿಯಲು ಪ್ರಯತ್ನಿಸಿದ್ದಾಗಿ ಹೇಳಿದ. ಸತ್ಯಸಂಧತೆಯನ್ನು ಮಧ್ಯಮಾರ್ಗವೆಂದು ಪರಿಗಣಿಸುವುದು ಇಷ್ಟೇ ಅಸಂಗತ.

ನೈತಿಕ ಪ್ರಶ್ನೆಗಳ ಬಗೆಗಿನ ಅರಿಸ್ಟಾಟಲ್‌ನ ಅಭಿಪ್ರಾಯಗಳು ತನ್ನ ಕಾಲದ ಸಾಂಪ್ರದಾಯಿಕ ಸ್ವರೂಪಕ್ಕೆ ಅನುಗುಣವಾದವು. ಕೆಲವು ವಿಷಯಗಳಲ್ಲಿ ಅವು ನಮ್ಮ ಕಾಲದವುಗಳಿಗಿಂತ ಭಿನ್ನವಾದವು, ಅದೂ ಮುಖ್ಯವಾಗಿ ಶ್ರೀಮಂತಪ್ರಭುತ್ವಕ್ಕೆ ಸಂಬಂಧಿಸಿದಂತಹವು. ಎಲ್ಲ ಮಾನವರಿಗೂ ಸಮಾನ ಹಕ್ಕುಗಳಿವೆ ಮತ್ತು ಸಮಾನತೆಯು ನ್ಯಾಯಪರತೆಯನ್ನೂ ಒಳಗೊಳ್ಳುತ್ತದೆ ಎಂಬ, ಕನಿಷ್ಠ ಪಕ್ಷ, ನೈತಿಕ ಸಿದ್ಧಾಂತವನ್ನು ನಾವು ಒಪ್ಪುತ್ತೇವೆ; ಆದರೆ ನ್ಯಾಯವು ಒಳಗೊಳ್ಳುವುದು ಸಮಾನತೆಯನ್ನಲ್ಲ ಸರಿಯಾದ ಪ್ರಮಾಣವನ್ನು – ಅಂದರೆ ಕೆಲವು ವೇಳೆ ಮಾತ್ರ ಸಮಾನತೆಯನ್ನೊಳಗೊಳ್ಳುತ್ತದೆ – ಎಂಬುದು ಅರಿಸ್ಟಾಟಲ್‌ನ ಭಾವನೆ (೧೧೩೧ಬಿ).

ಯಜಮಾನ ಅಥವಾ ತಂದೆಯ ನ್ಯಾಯವು ಪ್ರಜೆಯೊಬ್ಬನ ನ್ಯಾಯಕ್ಕಿಂತ ಭಿನ್ನವಾದುದು, ಯಾಕೆಂದರೆ ಮಗ ಅಥವಾ ಗುಲಾಮನೇ ಆಸ್ತಿ, ಹೀಗಾಗಿ ಸ್ವಂತ ಆಸ್ತಿಗೆ ಅನ್ಯಾಯವಾಗಲು ಸಾಧ್ಯವೇ ಇಲ್ಲ (೧೧೩೪ಬಿ). ಆದರೆ ಗುಲಾಮರಿಗೆ ಸಂಬಂಧಿಸಿದಂತೆ, ತನ್ನ ಗುಲಾಮನೇ ತನಗೆ ಸ್ನೇಹಿತನಾಗಿರುವ ಸಂದರ್ಭದ ಸಾಧ್ಯತೆಗೆ ಸಂಬಂಧಿಸಿದಂತೆ, ಈ ಸಿದ್ಧಾಂತದಲ್ಲಿ ಸ್ವಲ್ಪ ಬದಲಾವಣೆಯಿದೆ: 'ಎರಡೂ ಪಕ್ಷಗಳಲ್ಲಿ ಯಾವುದೇ ಸಮಾನಾಂಶವಿಲ್ಲ; ಗುಲಾಮನು ಜೀವಂತ ಸಾಧನ .. .. ಗುಲಾಮ ಅಷ್ಟೆ, ಅವನೊಂದಿಗೆ ಸ್ನೇಹದಿಂದಿರಲು ಸಾಧ್ಯವಿಲ್ಲ. ಆದರೆ ಮನುಷ್ಯನಾಗಿ ಹಾಗಿರಬಹುದು; ಅವರ ನಡುವೆ ಯಾವುದೇ ಒಬ್ಬ ವ್ಯಕ್ತಿ ಇನ್ನೊಬ್ಬನೊಡನಂತೆಯೇ ಕಾನೂನಿನ ವ್ಯವಸ್ಥೆಯಲ್ಲಿ ಅಥವಾ ಒಪ್ಪಂದವೊಂದರ ಪಕ್ಷವಾಗಿ, ಒಂದು ಬಗೆಯ ನ್ಯಾಯವಿರುವಂತೆ ತೋರುತ್ತದೆ' (೧೧೬೧ಬಿ).

ಕೆಟ್ಟವನಾದರೆ ಮಗನನ್ನು ತಂದೆಯು ಬೈಯಬಹುದು; ಆದರೆ ಮಗನು ತಂದೆಯನ್ನು ಬೈಯಲಾಗದು, ಯಾಕೆಂದರೆ ವಾಪಸು ಮಾಡಲು ಸಾಧ್ಯವಾಗದಂತಹ ಋಣ ಅವನ ಮೇಲಿರುತ್ತದೆ, ಅದರಲ್ಲೂ ತನ್ನ ಅಸ್ತಿತ್ವಕ್ಕೆ ಅವನೇ ಕಾರಣವಾಗಿರುವುದರಿಂದ (೧೧೬೩ಬಿ). ಅಸಮಾನ ಸಂಬಂಧಗಳಲ್ಲಿ ಅದು ಸಮಂಜಸ, ಯಾಕೆಂದರೆ ಪ್ರತಿಯೊಬ್ಬನೂ ತನ್ನ ಯೋಗ್ಯತೆಗೆ ಅನುಗುಣವಾಗಿ

ಪ್ರೀತಿಗೆ ಅರ್ಹನಾಗುತ್ತಾನೆ; ಕೆಳಸ್ತರದವನು ಮೇಲುಸ್ತರದವನನ್ನು – ಮೇಲುಸ್ತರದವನು ಕೆಳಸ್ತರದವನನ್ನು ಪ್ರೀತಿಸುವುದಕ್ಕಿಂತ – ಹೆಚ್ಚು ಪ್ರೀತಿಸಬೇಕು: ಹೆಂಡಿರು, ಮಕ್ಕಳು, ಪ್ರಜೆಗಳು ತಮ್ಮ ಗಂಡಂದಿರು, ತಂದೆತಾಯಿಯರು ಮತ್ತು ರಾಜರನ್ನು ಅವರು ತಮ್ಮನ್ನು ಪ್ರೀತಿಸುವುದಕ್ಕಿಂತ ಹೆಚ್ಚು ಪ್ರೀತಿಸಬೇಕು. ಒಳ್ಳೆಯ ಮದುವೆಯಲ್ಲಿ, 'ಗಂಡಸು ಯಾವ ವಿಷಯದಲ್ಲಿ ಆಳಬೇಕೋ ಅಂತಹವುಗಳಲ್ಲಿ ಗಂಡಸು ತನ್ನ ಯೋಗ್ಯತಾನುಸಾರ ಆಳುತ್ತಾನೆ, ಆದರೆ ಹೆಂಗಸಿಗೆ ತಕ್ಕನಾದ ವಿಷಯಗಳಲ್ಲಿ ಅದನ್ನವನು ಅವಳಿಗೆ ವಹಿಸುತ್ತಾನೆ' (೧೧೬೦[ಬಿ]). ಅವನು ಅವಳ ವಲಯದಲ್ಲಿ ಆಳಬಾರದು, ಅದಕ್ಕೂ ಹೆಚ್ಚಾಗಿ, ಅವಳು ಹಕ್ಕುದಾರಿಣಿಯಾಗಿರುವ ಕೆಲವು ಸಂದರ್ಭಗಳಲ್ಲಿ ಆಗುವಂತೆ, ಅವಳು ಅವನ ವಲಯದಲ್ಲಿ ಕೈಹಾಕಬಾರದು.

ಅರಿಸ್ಟಾಟಲ್‌ನ ಪರಿಕಲ್ಪನೆಯ ಅತ್ಯುತ್ತಮ ವ್ಯಕ್ತಿ ಎಂದರೆ ಕ್ರಿಶ್ಚಿಯನ್ ಸಂತನಿಗಿಂತ ತೀರ ಭಿನ್ನನಾದವನು. ಅವನಿಗೆ ತಕ್ಕನಾದ ಹೆಮ್ಮೆಯಿರಬೇಕು, ತನ್ನ ಸದ್ಗುಣಗಳ ಅಪಮೌಲ್ಯ ಮಾಡಬಾರದು. ಯಾರನ್ನು ತಿರಸ್ಕರಿಸಬೇಕೋ ಅಂತಹವರನ್ನು ಅವನು ತಿರಸ್ಕರಿಸಬೇಕು (೧೧೨೪[ಬಿ]). ಹೆಮ್ಮೆಯ ಅಥವಾ ಉದಾತ್ತ ವ್ಯಕ್ತಿಯ ವರ್ಣನೆಯು,[೭೩] ಕ್ರೈಸ್ತೇತರ ಮತ್ತು ಕ್ರಿಶ್ಚಿಯನ್ ನೈತಿಕತೆಯ ವ್ಯತ್ಯಾಸವನ್ನು ತೋರಿಸುವಲ್ಲಿ, ಮತ್ತು ಕ್ರೈಸ್ತ ಮತಧರ್ಮವನ್ನು ನೀಷೆ ಗುಲಾಮ–ನೈತಿಕತೆ ಎಂದು ಕರೆದುದನ್ನು ಸಮರ್ಥಿಸುವಲ್ಲಿ, ತುಂಬ ಕುತೂಹಲಕಾರಿಯಾಗಿದೆ.

> **ಅತ್ಯಂತ ಹೆಚ್ಚಿನದಕ್ಕೆ ಅರ್ಹನಾದ ಉದಾತ್ತ ವ್ಯಕ್ತಿಯು ಅತ್ಯುನ್ನತ ಮಟ್ಟದಲ್ಲಿ ಒಳ್ಳೆಯವನಾಗಿರಬೇಕು; ಯಾಕೆಂದರೆ ಉತ್ತಮರು ಅತ್ಯಂತ ಉನ್ನತವಾದುದಕ್ಕೆ ಅರ್ಹರಾಗಿರುತ್ತಾರೆ, ಅಂತೆಯೇ ಅತ್ಯುತ್ತಮರು ಅತ್ಯುತ್ತಮವಾದುದಕ್ಕೆ. ಹೀಗಾಗಿ ನಿಜವಾಗಿಯೂ ಉದಾತ್ತರಾದವನು ಒಳ್ಳೆಯವನಾಗಿರಬೇಕು. ಪ್ರತಿ ಸದ್ಗುಣದ ಶ್ರೇಷ್ಠತೆಯು ಉದಾತ್ತ ವ್ಯಕ್ತಿಯ ಲಕ್ಷಣವಾಗಿರುವಂತೆ ಕಾಣುತ್ತದೆ. ಉದಾತ್ತ ವ್ಯಕ್ತಿಯು, ತನ್ನ ತೋಳುಗಳನ್ನು ಬೀಸುತ್ತ ಅಪಾಯದಿಂದ ಪಲಾಯನ ಮಾಡುವುದು ಅಥವಾ ಇತರರಿಗೆ ತೊಂದರೆ ಕೊಡುವುದು ಅವನಿಗೆ ತಕ್ಕುದಲ್ಲ; ಯಾಕೆಂದರೆ ಯಾವುದೂ ದೊಡ್ಡದಲ್ಲ ಎನ್ನುವ ವ್ಯಕ್ತಿಯು ಯಾತಕ್ಕಾಗಿ ಶೋಭೆ ತಾರದ ಕೆಲಸಕ್ಕೆ ಕೈಹಾಕಬೇಕು? .. .. ಹಾಗಾದರೆ, ಉದಾತ್ತತೆಯು ಒಂದು ಬಗೆಯಲ್ಲಿ ಸದ್ಗುಣಗಳ ಕಿರೀಟಮಣಿ; ಯಾಕೆಂದರೆ ಅದು ಅವುಗಳನ್ನು ಮತ್ತಷ್ಟು**

---

೭೩. ಗ್ರೀಕ್ ಪದದ ಅಕ್ಷರಶಃ ಅರ್ಥ 'ಹಿರಿಯ ಆತ್ಮದವನು' ಎಂದು, ಇದನ್ನು ಸಾಮಾನ್ಯವಾಗಿ 'ಉದಾತ್ತ' ಎಂದು ಅನುವಾದಿಸಲಾಗುತ್ತದೆ, ಆದರೆ ಆಕ್ಸ್‌ಫರ್ಡ್ ಅನುವಾದವು ಅದನ್ನು 'ಹೆಮ್ಮೆ' ಎನ್ನುತ್ತದೆ. ಈ ಎರಡೂ ಪದಗಳು ತಮ್ಮ ಆಧುನಿಕ ಬಳಕೆಯಲ್ಲಿನ ಅರಿಸ್ಟಾಟಲ್‌ನ ಅರ್ಥವನ್ನು ಬಿಂಬಿಸುತ್ತವೆಯಾದರೂ ನಾನು 'ಉದಾತ್ತ' ಎಂಬುದನ್ನು ಇಷ್ಟಪಡುತ್ತೇನೆ. ಹೀಗಾಗಿ ಆಕ್ಸ್‌ಫರ್ಡ್ ಅನುವಾದ 'ಹೆಮ್ಮೆ'ಯ ಬದಲಾಗಿ ನಾನು ಈ ಪದವನ್ನೇ ಬಳಸಿದ್ದೇನೆ.

ಶ್ರೇಷ್ಠವಾಗಿಸುತ್ತದೆ, ಅವಿಲ್ಲದೆ ಅದನ್ನು ಕಾಣುವುದು ಅಸಾಧ್ಯವೇ ಸರಿ. ಹೀಗಾಗಿ ನಿಜವಾಗಿಯೂ ಉದಾತ್ತನಾಗುವುದು ಕಷ್ಟಸಾಧ್ಯ, ಯಾಕೆಂದರೆ ನಡವಳಿಕೆಯಲ್ಲಿನ ಘನತೆ ಮತ್ತು ಒಳ್ಳೆಯತನಗಳಿಲ್ಲದೆ ಹಾಗಿರಲು ಸಾಧ್ಯವಿಲ್ಲ. ಹೀಗೆ ಉದಾತ್ತ ವ್ಯಕ್ತಿಯು ಗೌರವ ಅಗೌರವಗಳ ಬಗ್ಗೆ ಎಚ್ಚರ ವಹಿಸುತ್ತಾನೆ; ಶ್ರೇಷ್ಠವೂ ಒಳ್ಳೆಯವರು ಕೊಡುವಂತಹುವೂ ಆದ ಗೌರವಗಳಿಂದ ಅವನಿಗೆ ತಕ್ಕಮಟ್ಟಿಗೆ ಸಂತಸವಾಗುತ್ತದೆ, ಅದು ತಾನಾಗಿಯೋ ಅಥವಾ ಕಡಿಮೆಯಾಗಿಯೋ ಬಂದಂಥದೆಂದವನು ಯೋಚಿಸುತ್ತಾನೆ. ಯಾಕೆಂದರೆ ಪರಿಪೂರ್ಣ ಸದ್ಗುಣಕ್ಕೆ ತಕ್ಕುನಾದ ಯಾವುದೇ ಗೌರವವಿರಲಾರದು, ಆದರು ಅದನ್ನವನ್ನು ಒಪ್ಪಿಕೊಳ್ಳಲು ಕಾರಣ ತನಗೆ ನೀಡಲು ಅದಕ್ಕಿಂತ ದೊಡ್ಡದಾದುದು ಯಾವುದೂ ಇಲ್ಲವೆಂಬುದು; ಆದರೆ ಸಾಮಾನ್ಯ ವ್ಯಕ್ತಿಗಳು ಮತ್ತು ಕ್ಷುಲ್ಲಕ ಕಾರಣಗಳಿಗಾಗಿ ನೀಡುವ ಗೌರವವನ್ನು ಅವನು ಸಂಪೂರ್ಣವಾಗಿ ತಿರಸ್ಕರಿಸುತ್ತಾನೆ, ಯಾಕೆಂದರೆ ಅದು ಅವನಿಗೆ ತಕ್ಕುದಲ್ಲ, ಅದು ಅಗೌರವವೂ ಹೌದು, ಯಾಕೆಂದರೆ ಅವನ ಮಟ್ಟಿಗೆ ಅದು ಸಮಂಜಸವಲ್ಲ .. .. ಅಧಿಕಾರ ಮತ್ತು ಐಶ್ವರ್ಯಗಳು ಗೌರವದ ಕಾರಣದಿಂದಾಗಿ ಅಪೇಕ್ಷಣೀಯ, ಆದರೆ ಗೌರವವೂ ಅಲ್ಪದ್ದು ಎಂದು ಭಾವಿಸುವವನಿಗೆ ಮಿಕ್ಕವೂ ಅಂತೆಯೇ. ಆದ್ದರಿಂದ ಉದಾತ್ತ ವ್ಯಕ್ತಿಗಳು ಅಸಡ್ಡೆಯವರು ಎಂದು ಜನ ತಿಳಿಯುತ್ತಾರೆ .. .. ಉದಾತ್ತ ವ್ಯಕ್ತಿಯು ಕ್ಷುಲ್ಲಕ ಅಪಾಯಗಳಿಗೆ ಸಿಲುಕಿಕೊಳ್ಳುವುದಿಲ್ಲ .. .. ಆದರೆ ಅವನು ದೊಡ್ಡ ಅಪಾಯಗಳನ್ನೆದುರಿಸುತ್ತಾನೆ; ತನಗೆ ಅಪಾಯವೊದಗಿದಾಗ ಅವನು ತನ್ನ ಪ್ರಾಣವನ್ನೂ ಲೆಕ್ಕಿಸುವುದಿಲ್ಲ, ಬದುಕಲು ಯೋಗ್ಯವಲ್ಲದ ಸಂದರ್ಭಗಳು ಇರುತ್ತವೆ ಎಂದವನಿಗೆ ಗೊತ್ತು. ಇತರರಿಗೆ ಉಪಕಾರ ಮಾಡುವ ಪೈಕಿ ಅವನು; ಆದರೆ ತಾನೇ ಉಪಕಾರ ಪಡೆಯಲು ನಾಚಿಕೆಪಡುತ್ತಾನೆ; ಯಾಕೆಂದರೆ ಒಂದು ಉನ್ನತವಾದುದು, ಮತ್ತೊಂದು ಕ್ಷುದ್ರವಾದುದು. ತನಗಾದ ಉಪಕಾರಕ್ಕೆ ಮಿಗಿಲಾದ ರೀತಿಯಲ್ಲಿ ಪ್ರತ್ಯುಪಕಾರ ಮಾಡಲು ತವಕಿಸುತ್ತಾನೆ; ಇದರಿಂದಾಗಿ ತನಗೆ ಉಪಕಾರ ಮಾಡಿದವನು ಪ್ರತ್ಯುಪಕಾರವನ್ನು ಪಡೆಯುವುದಲ್ಲದೆ ತಾನೇ ಋಣದಲ್ಲಿ ಬೀಳುತ್ತಾನೆ .. .. ಏನನ್ನೂ ಯಾವುದನ್ನೂ ಬಯಸದಿರುವುದು ಉದಾತ್ತತೆಯ ಗುಣ, ಆದರೆ ಸಹಾಯಮಾಡಲು ಸದಾ ಸಿದ್ಧ; ಉನ್ನತ ಮಟ್ಟದಲ್ಲಿದ್ದರೂ ಮಧ್ಯಮವರ್ಗದವರ ಬಗ್ಗೆ ಡೌಲು ತೋರಿಸದವರ ಜೊತೆ ಅವನು ಘನತೆಯಿಂದ ನಡೆದುಕೊಳ್ಳುತ್ತಾನೆ. ಯಾಕೆಂದರೆ ಉದಾತ್ತರಿಗಿಂತ ಮಿಗಿಲಾಗಿರುವುದು ಕಷ್ಟಕರ; ಆದರೆ ಮಧ್ಯಮವರ್ಗದವರಿಗಿಂತ ಉತ್ತಮವಾಗಿರುವುದು ಸುಲಭ. ಉನ್ನತ ಮಟ್ಟದವರ ಜೊತೆ ಸೌಜನ್ಯದ ವರ್ತನೆ ಅಸಭ್ಯತೆಯ ಲಕ್ಷಣವಲ್ಲ, ಆದರೆ ದೀನರ ಬಗ್ಗೆ ಹಾಗಿರುವುದು ದುರ್ಬಲರ

> ಮೇಲೆ ದಬ್ಬಾಳಿಕೆ ಮಾಡಿದಷ್ಟೇ ಕೀಳಾದುದು .. .. ಅವನು ತನ್ನ ಪ್ರೀತಿ ಮತ್ತು ದ್ವೇಷಗಳೆರಡರಲ್ಲೂ ಸ್ವತಂತ್ರನಾಗಿರಬೇಕು, ಯಾಕೆಂದರೆ ತನ್ನ ಭಾವನೆಗಳನ್ನು ಮುಚ್ಚಿಟ್ಟುಕೊಳ್ಳುವುದು, ಅಂದರೆ ಜನರು ಆಲೋಚಿಸುವುದಕ್ಕಿಂತ ಸತ್ಯದ ಬಗ್ಗೆ ಕಡಿಮೆ ಎಚ್ಚರ ವಹಿಸುವುದು ಹೇಡಿತನ .. .. ಸತ್ಯವನ್ನು ನುಡಿಯುವ ಸಂದರ್ಭದಲ್ಲಿ ಹಾಗೂ ಕ್ಷುದ್ರವಾದುದರ ಬಗ್ಗೆ ವ್ಯಂಗ್ಯವಾಗಿ ಮಾತನಾಡುವುದರ ಹೊರತಾಗಿ ಅವನು ಮಾತನ್ನೇ ಆಡುವುದಿಲ್ಲ .. .. ಅವನು ಮೆಚ್ಚಿಕೆಯನ್ನೂ ಸೂಚಿಸಲಾರ, ಯಾಕೆಂದರೆ ಅವನಿಗೆ ಯಾವುದೂ ಹಿರಿದಲ್ಲ .. .. ಅವನು ಹರಟೆಕೋರನಲ್ಲ; ಯಾಕೆಂದರೆ ಅವನು ತನ್ನ ಬಗ್ಗೆಯಾಗಲೀ ಇತರರ ಬಗ್ಗೆಯಾಗಲೀ ಮಾತನ್ನೇ ಆಡುವುದಿಲ್ಲ; ತನ್ನ ಬಗೆಗಿನ ಹೊಗಳಿಕೆಯನ್ನಾಗಲೀ ಇತರರ ಬಗೆಗಿನ ಬಯ್ಗುಳವನ್ನಾಗಲೀ ಅವನು ಲೆಕ್ಕಿಸುವುದಿಲ್ಲ .. .. ಸುಂದರವೂ ಲಾಭದಾಯಕವಲ್ಲದ್ದೂ ಆದ ವಸ್ತುಗಳನ್ನವನು ಹೊಂದಿರುತ್ತಾನೆಯೇ ಹೊರತು ಅಸುಂದರವಾದ ಮತ್ತು ಉಪಯುಕ್ತವಾದವುಗಳನ್ನಲ್ಲ .. .. ಅಲ್ಲದೆ, ಉದಾತ್ತನಾದವನಿಗೆ ನಿಧಾನಗತಿ, ಗಾಢ ಧ್ವನಿ, ಹದವಾದ ಮಾತುಗಾರಿಕೆ ಸೂಕ್ತವಾದುದು .. .. ಉದಾತ್ತ ವ್ಯಕ್ತಿ ಇಂತಹವನು; ಅವನಿಗಿಂತ ಕಡಿಮೆ ಮಟ್ಟದವನು ಅತಿ ವಿನೀತನಾಗುತ್ತಾನೆ, ಅವನನ್ನು ಮೀರಿಸುವವನು ಟೊಳ್ಳು ಎನಿಸುತ್ತಾನೆ (೧೧೨೩ಬಿ–೧೧೨೫ಎ).

ಟೊಳ್ಳು ವ್ಯಕ್ತಿ ಹೇಗಿರುತ್ತಾನೆಂದು ಯೋಚಿಸುವುದೂ ಭಯಂಕರವಾದುದು.

ಉದಾತ್ತ ವ್ಯಕ್ತಿಯ ಬಗ್ಗೆ ಏನನ್ನು ಯೋಚಿಸುವಾಗಲಾಗಲೀ, ಒಂದು ಅಂಶವಂತೂ ಸ್ಪಷ್ಟ: ಅವನಂತಹವರು ಸಮಾಜದಲ್ಲಿ ಬಹಳ ಜನರಿರಲಾರರು. ನಾನು ಈ ಪದದ ಸಾಮಾನ್ಯ ಅರ್ಥದಲ್ಲಿ, ಅಂದರೆ ಸದ್ಗುಣಿಗಳು ಬಹಳ ಜನರಿರಲಾರರು, ಎಂದು ಹೇಳುತ್ತಿಲ್ಲ, ಆದರೆ ಹಾಗೆನ್ನುತ್ತಿರುವುದು ಸದ್ಗುಣಿಗಳು ಹೆಚ್ಚು ಜನರು ಇರುವ ಸಂಭವ ಇಲ್ಲ, ಹಾಗಿರುವುದು ಕಷ್ಟ ಎಂಬರ್ಥದಲ್ಲಿ; ಉದಾತ್ತ ವ್ಯಕ್ತಿಯ ಸದ್ಗುಣಗಳು ಅವನು ಹೊಂದಿರುವ ಸಾಮಾಜಿಕ ಸ್ಥಾನವನ್ನು ಬಹುಮಟ್ಟಿಗೆ ಅವಲಂಬಿಸುವುದೆಂಬುದು ನನ್ನ ಅಭಿಪ್ರಾಯ. ಅರಿಸ್ಟಾಟಲ್ ನೈತಿಕತೆಯನ್ನು ರಾಜಕಾರಣದ ಭಾಗವೆಂದು ಪರಿಗಣಿಸುತ್ತಾನೆ; ಅವನು ಹೆಮ್ಮೆಯನ್ನು ಹೊಗಳುವುದನ್ನು ನೋಡಿದರೆ, ಅವನ ಪ್ರಕಾರ ರಾಜಪ್ರಭುತ್ವವೇ ಅತ್ಯುತ್ಕೃಷ್ಟ ಸರ್ಕಾರ, ಶ್ರೀಮಂತಪ್ರಭುತ್ವ ಅದರ ಮುಂದಿನದೆಂದು ಭಾವಿಸುತ್ತಾನೆಂದು ತಿಳಿಯಬಹುದು. ರಾಜರೂ ಶ್ರೀಮಂತರೂ 'ಉದಾತ್ತ'ರಾಗಿರಬಹುದು, ಆದರೆ ಸಾಮಾನ್ಯ ನಾಗರಿಕರು ಅಂತಹ ಮಾದರಿಯ ನಡವಳಿಕೆಯನ್ನು ಅನುಸರಿಸ ಹೊರಟರೆ ನಗೆಪಾಟಲಿಗೀಡಾಗುತ್ತಾರೆ.

ಇದರಿಂದ ಒಂದು ಪ್ರಶ್ನೆ ಏಳುತ್ತದೆ; ಅದು ಅರ್ಧ ನೈತಿಕವಾದುದು, ಅರ್ಧ

ರಾಜಕೀಯವಾದುದು. ಸಾಂವಿಧಾನಿಕ ವ್ಯವಸ್ಥೆಯಲ್ಲಿ ಕೆಲವರಿಗೆ ಮಾತ್ರ ಅತ್ಯುತ್ತಮವಾದುದು, ಉಳಿದ ಬಹುಸಂಖ್ಯಾತರು ಅದಕ್ಕಿಂತ ಕಡಿಮೆ ದರ್ಜೆಯವುಗಳಿಂದ ತೃಪ್ತಿಗೊಳ್ಳುವವರು – ಅಂತಹ ಜನರಿರುವ ಸಮಾಜವನ್ನು ನಾವು ಒಳ್ಳೆಯದೆಂದು ನೈತಿಕವಾಗಿ ಪರಿಗಣಿಸಬಹುದೇ? ಪ್ಲೇಟೋ ಮತ್ತು ಅರಿಸ್ಟಾಟಲ್‌ರು ಇದನ್ನು ಒಪ್ಪುತ್ತಾರೆ, ನೀಷೆಯೂ ಅವರೊಡನೆ ಸೇರುತ್ತಾನೆ. ಸಂಯಮವಾದಿಗಳೂ ಕ್ರಿಶ್ಚಿಯನ್ನರೂ ಪ್ರಜಾಪ್ರಭುತ್ವವಾದಿಗಳು ಇಲ್ಲ ಎನ್ನುತ್ತಾರೆ. ಆದರೆ ಅವರ 'ಇಲ್ಲ' ಎಂಬುದು ಅನೇಕ ಬಗೆಯವು. 'ಬಹುಜನ ಹಿತಾಯ'ವೇ ಸದ್ಗುಣ ಎಂಬುದನ್ನು ಸಂಯಮವಾದಿಗಳೂ ಕ್ರಿಶ್ಚಿಯನ್ನರೂ ಒಪ್ಪುತ್ತಾರೆ, ಬಾಹ್ಯ ಪರಿಸ್ಥಿತಿಗಳು ಯಾವನನ್ನೂ ಸದ್ಗುಣಿಯಾಗುವುದನ್ನು ತಡೆಯಲಾರದು; ಹೀಗಾಗಿ ನ್ಯಾಯಯುತ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವ ಆವಶ್ಯಕತೆಯಿಲ್ಲ, ಯಾಕೆಂದರೆ ಸಾಮಾಜಿಕ ಅನ್ಯಾಯವು ಕೇವಲ ಅಮುಖ್ಯ ವಿಷಯಗಳ ಮೇಲೆ ಮಾತ್ರ ಪರಿಣಾಮ ಬೀರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಪ್ರಜಾಪ್ರಭುತ್ವವಾದಿಯ ಪ್ರಕಾರ, ಕನಿಷ್ಠ ಪಕ್ಷ ರಾಜಕೀಯವಾಗಿ, ಬಹು ಮುಖ್ಯವಾದ ಒಳ್ಳೆಯವು ಎಂದರೆ ಅಧಿಕಾರ ಮತ್ತು ಆಸ್ತಿಗಳು; ಈ ವಿಷಯಗಳಲ್ಲಿ ಅನ್ಯಾಯವೆನಿಸುವ ಸಾಮಾಜಿಕ ವ್ಯವಸ್ಥೆಯನ್ನವನು ಒಪ್ಪಲಾರ.

ಸಂಯಮವಾದಿ–ಕ್ರಿಶ್ಚಿಯನ್ ದೃಷ್ಟಿಕೋನವು ಅರಿಸ್ಟಾಟಲ್‌ನದಕ್ಕಿಂತ ಭಿನ್ನವಾದ ಸದ್ಗುಣದ ಪರಿಕಲ್ಪನೆಯನ್ನು ಬೇಡುತ್ತದೆ; ಯಾಕೆಂದರೆ ಸದ್ಗುಣವು ಯಜಮಾನನಿಗೆ ಹೇಗೋ ಗುಲಾಮನಿಗೂ ಹಾಗೆ ಸಾಧ್ಯ ಎಂಬುದನ್ನದು ಎತ್ತಿ ಹಿಡಿಯಬೇಕು. ಕ್ರಿಶ್ಚಿಯನ್ ನೈತಿಕತೆಯು ಹೆಮ್ಮೆಯನ್ನು ಒಪ್ಪುವುದಿಲ್ಲ, ಆದರೆ ಅದನ್ನು ಅರಿಸ್ಟಾಟಲ್ ಸದ್ಗುಣವೆಂದು ಪರಿಗಣಿಸುತ್ತಾನೆ; ಹಾಗೆಯೇ ಅದು ವಿನಮ್ರತೆಯನ್ನು ಮೆಚ್ಚಿಕೊಳ್ಳುತ್ತದೆ, ಇದು ಅರಿಸ್ಟಾಟಲ್ ಪ್ರಕಾರ ದುರ್ಗುಣವೇ ಸರಿ. ಪ್ಲೇಟೋ ಮತ್ತು ಅರಿಸ್ಟಾಟಲ್‌ರು ಮಿಕ್ಕೆಲ್ಲಕ್ಕಿಂತ ಬೆಲೆ ನೀಡುವ ಬೌದ್ಧಿಕ ಸದ್ಗುಣಗಳನ್ನು, ಬಡವರು ಮತ್ತು ದೀನರು ಮಿಕ್ಕವರಂತೆಯೇ ಸದ್ಗುಣಿಗಳಾಗಲು ಸಾಧ್ಯವಾಗುವುದರಿಂದ, ಆ ಪಟ್ಟಿಯಿಂದ ತೆಗೆದುಹಾಕಬೇಕಾಗುತ್ತದೆ. ತಪ್ಪು ವ್ಯಾಕರಣವನ್ನು ಬೋಧಿಸುತ್ತಿದ್ದ ಬಿಷಪ್‌ಗೆ ಪೋಪ್ ಗ್ರಿಗೊರಿ ಮಹಾಶಯ (ದ ಗ್ರೇಟ್) ವಿಧ್ಯುಕ್ತವಾಗಿ ಛೀಮಾರಿ ಹಾಕುತ್ತಾನೆ.

ಅತ್ಯಂತ ಶ್ರೇಷ್ಠ ಸದ್ಗುಣವು ಕೆಲವರಿಗೆ ಮಾತ್ರ ಎಂಬ ಅರಿಸ್ಟಾಟಲ್ ದೃಷ್ಟಿಕೋನವು ತಾರ್ಕಿಕವಾಗಿ ರಾಜಕೀಯಕ್ಕೆ ನೈತಿಕತೆಯನ್ನು ಅಡಿಯಾಳಾಗಿಸುತ್ತದೆ. ಉದ್ದೇಶವು ಒಳ್ಳೆಯ ವ್ಯಕ್ತಿಗಿಂತ ಒಳ್ಳೆಯ ಸಮಾಜ ಎನ್ನುವುದಾದರೆ, ಒಳ್ಳೆಯ ಸಮಾಜದಲ್ಲಿ ಅಧೀನತೆಯಿರುವುದು ಸಾಧ್ಯ. ವಾದ್ಯಮೇಳವೊಂದರಲ್ಲಿ ಮೊದಲನೆಯ ಪಿಟೀಲು ಓಬೋಕ್ಕಿಂತ ಮುಖ್ಯವಾದುದಾದರೂ, ಒಟ್ಟಾರೆ ಮೇಳದ ಯಶಸ್ಸಿಗೆ ಈ ಎರಡೂ ಆವಶ್ಯಕ. ಪ್ರತಿ ವಾದ್ಯಕಾರನಿಗೂ ಬೇರೆಯಾಗಿ ಪ್ರಮುಖ ಸ್ಥಾನವನ್ನು

ನೀಡುವ ತತ್ವದ ಮೇಲೆ ವಾದ್ಯಮೇಳವನ್ನು ಸಂಯೋಜಿಸುವುದು ಅಸಾಧ್ಯ. ಎಷ್ಟೇ ಪ್ರಜಾಪ್ರಭುತ್ವಾತ್ಮಕವಾಗಿರಲಿ, ದೊಡ್ಡ ಆಧುನಿಕ ಅವಕಾಶಕ್ಕೆ ಕೂಡ ಇದೇ ತತ್ವವು ಅನ್ವಯಿಸುತ್ತದೆ. ಆಧುನಿಕ ಪ್ರಜಾಪ್ರಭುತ್ವವು – ಹಿಂದಿನ ಕಾಲದಕ್ಕಿಂತ ಭಿನ್ನವಾಗಿ – ಕೆಲವು ಆಯ್ದ ವ್ಯಕ್ತಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡುತ್ತದೆ. ಅಧ್ಯಕ್ಷರುಗಳು ಅಥವಾ ಪ್ರಧಾನಿಗಳು ಸಾಮಾನ್ಯ ಪ್ರಜೆಗಳಲ್ಲಿ ನಿರೀಕ್ಷಿಸದ ವಿಶೇಷ ಅರ್ಹತೆಗಳನ್ನು ಪಡೆದಿರಬೇಕಾಗುತ್ತದೆ. ಜನರು ಮತಧರ್ಮ ಅಥವಾ ರಾಜಕೀಯ ವಿವಾದಗಳ ಆಧಾರದ ಮೇಲೆ ಯೋಚಿಸದಿರುವಾಗ, ಒಬ್ಬ ಒಳ್ಳೆಯ ಗಾರೆ ಕೆಲಸದವನಿಗಿಂತ ಅಧ್ಯಕ್ಷರಿಗೆ ಹೆಚ್ಚಿನ ಗೌರವವನ್ನು ತೋರಿಸಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಅಧ್ಯಕ್ಷರು ಅರಿಸ್ಟಾಟಲ್ ಕಲ್ಪನೆಯ ಉದಾತ್ತ ವ್ಯಕ್ತಿಯಂತಿರಬೇಕೆಂದು ನಿರೀಕ್ಷಿಸಲಾಗದು, ಆದರೂ ಅವರು ಸಾಮಾನ್ಯ ಪ್ರಜೆಗಳಿಗಿಂತ ತನಗೆ ಸಂಬಂಧಿಸಿದಂತೆ ಕೆಲವು ಅರ್ಹತೆಗಳನ್ನು ಹೊಂದಿರಬೇಕೆಂದು ನಿರೀಕ್ಷಿಸಲಾಗುತ್ತದೆ. ಈ ವಿಶಿಷ್ಟ ಅರ್ಹತೆಗಳನ್ನು ಪ್ರಾಯಶಃ 'ನೈತಿಕ'ವಾದುದೆಂದು ಪರಿಗಣಿಸಬೇಕಾಗಿಲ್ಲ. ಅದಕ್ಕೆ ಕಾರಣ ಅರಿಸ್ಟಾಟಲ್ ಈ ವಿಶೇಷಣವನ್ನು ಬಳಸುವುದಕ್ಕಿಂತ ಸಂಕುಚಿತ ಅರ್ಥದಲ್ಲಿ ನಾವು ಬಳಸುವುದು.

ಕ್ರಿಶ್ಚಿಯನ್ ಸಿದ್ಧಾಂತಾಂಧತೆಯ ಪರಿಣಾಮವಾಗಿ ನೈತಿಕ ಹಾಗೂ ಇತರ ಅರ್ಹತೆಗಳ ವ್ಯತ್ಯಾಸವು ಗ್ರೀಕ್ ಕಾಲಕ್ಕಿಂತ ಹೆಚ್ಚು ಮೊನಚನ್ನು ಪಡೆಯುತ್ತದೆ. ದೊಡ್ಡ ಕವಿಯಾಗಿರುವುದೋ ಸಂಗೀತಗಾರನಾಗಿರುವುದೋ ಚಿತ್ರಕಾರನಾಗಿರುವುದೋ ಒಬ್ಬ ವ್ಯಕ್ತಿಯ ಹೆಚ್ಚುಗಾರಿಕೆ, ಆದರೆ ಅದು 'ನೈತಿಕ' ಹೆಚ್ಚುಗಾರಿಕೆಯಲ್ಲ. ಅಂತಹ ಕಲೆಗಳನ್ನು ಆರಾಧಿಸುವುದರಿಂದ ಅವರನ್ನು ಹೆಚ್ಚು ಸದ್ಗುಣಿಗಳೆಂದಾಗಲೀ ಸ್ವರ್ಗಕ್ಕೆ ಹೋಗುವವರೆಂದಾಗಲೀ ನಾವು ಪರಿಗಣಿಸುವುದಿಲ್ಲ. ನೈತಿಕ ಸದ್ಗುಣವು ಸಂಕಲ್ಪಾನುಗುಣ ಕಾರ್ಯಕ್ಕೆ ಅನ್ವಯಿಸುವಂಥದು, ಅಂದರೆ ಸಾಧ್ಯವಾದ ಕಾರ್ಯಮಾರ್ಗಗಳಲ್ಲಿ ಸರಿಯಾದುದನ್ನು ಆರಿಸಿಕೊಳ್ಳುವುದು.[೭೪] ನೃತ್ಯನಾಟಕವನ್ನು ರಚಿಸದಿರುವುದಕ್ಕಾಗಿ ನನ್ನನ್ನು ಅವಮಾನಿಸಬೇಕಾದುದಿಲ್ಲ, ಯಾಕೆಂದರೆ ನನಗೆ ಅದರ ರಚನೆ ತಿಳಿಯದು. ಸಂಪ್ರದಾಯನಿಷ್ಠ ದೃಷ್ಟಿಕೋನವೆಂದರೆ, ಎಲ್ಲಿ ಎರಡು ಕಾರ್ಯಮಾರ್ಗಗಳು ಸಾಧ್ಯವೋ, ನನ್ನ ಮನಸ್ಸು ಯಾವುದನ್ನು ಸರಿಯೆಂದು ಭಾವಿಸುವುದೋ, ಅದನ್ನು ಬಿಟ್ಟು ಬೇರೆಯದನ್ನು ಆರಿಸಿಕೊಳ್ಳುವುದು ಪಾಪಕರ. ಸದ್ಗುಣವೆಂದರೆ ಮುಖ್ಯವಾಗಿ ಪಾಪದಿಂದ ದೂರವಿರುವುದೇ ಹೊರತು ಸಕಾರಾತ್ಮಕವಾದುದಲ್ಲ. ವಿದ್ಯಾವಂತ ವ್ಯಕ್ತಿಯು ಅವಿದ್ಯಾವಂತನಿಗಿಂತ, ಬುದ್ಧಿವಂತನು ಪೆದ್ದನಿಗಿಂತ ನೈತಿಕವಾಗಿ ಹೆಚ್ಚು ಉತ್ತಮವಾಗಿರಬೇಕೆಂದು ನಿರೀಕ್ಷಿಸಲು ಕಾರಣವಿಲ್ಲ.

---

೭೪. ಅರಿಸ್ಟಾಟಲ್ ಕೂಡ ಇದನ್ನು ಹೇಳುತ್ತಾನೆಂಬುದು ನಿಜ (೧೧೧೦ಚಿಎ), ಆದರೆ ಅವನು ನೀಡುವ ಅರ್ಥವು ಕ್ರಿಶ್ಚಿಯನ್ ವ್ಯಾಖ್ಯಾನದಂತೆ ದೂರಗಾಮಿ ಪರಿಣಾಮವನ್ನು ಹೊಂದಿರುವುದಲ್ಲ.

ಈ ರೀತಿಯಲ್ಲಿ, ಸಾಮಾಜಿಕವಾಗಿ ಮುಖ್ಯವೆನಿಸುವ ಅನೇಕ ಸದ್ಗುಣಗಳು ನೈತಿಕ ಪರಿವಲಯದಿಂದ ದೂರವಾದವು. 'ಅನೈತಿಕ' ಎಂಬ ವಿಶೇಷಣವು ಆಧುನಿಕ ಬಳಕೆಯಲ್ಲಿ 'ಅನಪೇಕ್ಷಣೀಯ' ಎಂಬ ವಿಶೇಷಣಕ್ಕಿಂತ ತುಂಬ ಸಂಕುಚಿತ ವ್ಯಾಪ್ತಿಯನ್ನು ಹೊಂದಿದೆ. ದುರ್ಬಲ ಮನಸ್ಸಿನವನಾಗಿರುವುದು ಅನಪೇಕ್ಷಣೀಯವೇ ಹೊರತು ಅನೈತಿಕವಾದುದಲ್ಲ.

ಆದರೆ ಅನೇಕ ಆಧುನಿಕ ತತ್ವಜ್ಞಾನಿಗಳು ನೈತಿಕತೆಯ ಈ ದೃಷ್ಟಿಕೋನವನ್ನು ಒಪ್ಪುವುದಿಲ್ಲ. ಒಳ್ಳೆಯುದೆಂದರೆ ಏನೆಂಬುದನ್ನು ಮೊದಲು ವಿವರಿಸಿ, ಅದಕ್ಕನುಗುಣವಾಗಿ ಒಳ್ಳೆಯುದನ್ನು ಸಾಧಿಸುವ ರೀತಿಯುಲ್ಲಿ ನಮ್ಮ ಕಾರ್ಯಗಳಿರಬೇಕೆಂದು ಆಲೋಚಿಸುವವರು ಅವರು. ಈ ಅಂಶವು ಹೆಚ್ಚಾಗಿ ಅರಿಸ್ಟಾಟಲ್ ದೃಷ್ಟಿಕೋನವನ್ನು ಹೋಲುವಂತಹುದು; ಅವನ ಪ್ರಕಾರ, ಸುಖವು ಒಳ್ಳೆಯದು. ಅತ್ಯಂತ ಹೆಚ್ಚಿನ ಸುಖವು ತತ್ವಜ್ಞಾನಿಗೆ ಮಾತ್ರ ಸಾಧ್ಯವೆಂಬುದು ನಿಜವಾದರೂ, ಅರಿಸ್ಟಾಟಲ್‌ಗೆ ಅದು ತನ್ನ ಸಿದ್ಧಾಂತಕ್ಕೆ ತಡೆಯೆನಿಸುವುದಿಲ್ಲ.

ನೈತಿಕ ಸಿದ್ಧಾಂತಗಳನ್ನು, ಸದ್ಗುಣವನ್ನು ಗುರಿಯಾಗಿ ಅಥವಾ ಸಾಧನವಾಗಿ ಪರಿಗಣಿಸುವ ಆಧಾರದ ಮೇಲೆ, ಎರಡು ಗುಂಪುಗಳಾಗಿ ವಿಂಗಡಿಸಬಹುದು. ಒಟ್ಟಾರೆ ಅರಿಸ್ಟಾಟಲ್ ಸದ್ಗುಣಗಳು ಗುರಿಸಾಧನೆಯ, ಅಂದರೆ ಸುಖಸಾಧನೆಯ, ಸಾಧನಗಳೆಂದು ಪರಿಗಣಿಸುತ್ತಾನೆ. 'ನಾವು ಪಡೆಯಬೇಕೆಂದು ಆಶಿಸುವ ಗುರಿ, ನಾವು ಆಯ್ದುಕೊಂಡು ಕಾರ್ಯಶೀಲವಾಗುವ ಸಾಧನ, ಸಾಧನಕ್ಕನುಗುಣವಾದ ಕ್ರಿಯೆಗಳು ಆಯ್ಕೆಗನುಗುಣವಾಗಿಯೂ ಸ್ವಯಂಪ್ರೇರಿತವಾಗಿಯೂ ಇರಬೇಕು. ಹಾಗಾದಾಗ ಸದ್ಗುಣಗಳ ಬಳಕೆಯು ಸಾಧನಗಳಿಗೆ ಸಂಬಂಧಿಸಿರುತ್ತವೆ' (೧೧೧೩ಬಿ). ಕ್ರಿಯೆಗಳ ಗುರಿಯಲ್ಲಿ ಸೇರುವ ಸದ್ಗುಣಕ್ಕೆ ಮತ್ತೊಂದು ಅರ್ಥವೂ ಇದೆ: 'ಮಾನವನ ಒಳಿತು ಎಂಬುದು ಪರಿಪೂರ್ಣ ಜೀವನದಲ್ಲಿ ಸದ್ಗುಣಾನುಗುಣವಾಗಿರುವ ಆತ್ಮದ ಕ್ರಿಯಾತ್ಮಕತೆ' (೧೦೯೮ಎ). ಬೌದ್ಧಿಕ ಸದ್ಗುಣಗಳು ಗುರಿಗಳೆಂದು ಅವನು ಹೇಳುತ್ತಾನೆಂಬುದು ನನ್ನ ತಿಳಿವಳಿಕೆಯಾದರೂ, ವ್ಯಾವಹಾರಿಕ ಸದ್ಗುಣಗಳು ಸಾಧನಮಾತ್ರಗಳು. ಸದ್ಗುಣಭರಿತ ಕ್ರಿಯೆಗಳ ಪರಿಣಾಮಗಳು ಸಾಮಾನ್ಯ ಒಳಿತನ್ನೊಳಗೊಂಡರೂ, ಅವು ಸದ್ಗುಣಭರಿತ ಕ್ರಿಯೆಗಳಷ್ಟು ಒಳಿತಲ್ಲ, ಅವುಗಳಿಗೆ ಅವುಗಳ ಕಾರಣದಿಂದಲೇ ಬೆಲೆಗಟ್ಟಬೇಕೇ ವಿನಾ ಅದರ ಪರಿಣಾಮದ ಕಾರಣದಿಂದಲ್ಲ ಎಂಬುದು ಕ್ರಿಶ್ಚಿಯನ್ ನೀತಿವಿದರ ಅಭಿಪ್ರಾಯ. ಮತ್ತೊಂದೆಡೆ, ಸೌಖ್ಯವನ್ನೇ ಒಳಿತೆಂದು ಭಾವಿಸುವವರು ಸದ್ಗುಣಗಳನ್ನು ಸಾಧನಗಳೆಂದು ಪರಿಗಣಿಸುತ್ತಾರೆ. ಒಳಿತಿನ ಬಗೆಗಿನ ಮಿಕ್ಕಾವುದೇ ವ್ಯಾಖ್ಯೆಯು, ಸದ್ಗುಣ ಎಂಬ ವ್ಯಾಖ್ಯೆಯ ಹೊರತಾಗಿ, ಅದೇ ಪರಿಣಾಮಗಳನ್ನು ಹೊಂದಿರುತ್ತವೆ, ಅಂದರೆ ಸದ್ಗುಣಗಳು ತಾವೇ ಅಲ್ಲದ ಒಳಿತಿನ ಸಾಧನಗಳು. ಈ ಪ್ರಶ್ನೆಯ ಕುರಿತು ಹಿಂದೆಯೇ ಹೇಳಿದಂತೆ, ನೀತಿಸಂಹಿತೆಯ

ಮೊದಲ ಕರ್ತವ್ಯವೆಂದರೆ ಒಳಿತು ಎಂಬುದರ ವ್ಯಾಖ್ಯೆ ನೀಡುವುದು, ಸದ್ಗುಣ ಎಂದರೆ ಒಳಿತನ್ನು ಸಾಧಿಸುವ ಕ್ರಿಯೆ ಎಂಬ ವ್ಯಾಖ್ಯೆ ನೀಡುವವರೊಡನೆ ಪೂರ್ಣವಾಗಲ್ಲದಿದ್ದರೂ, ಮುಖ್ಯಾಂಶದಲ್ಲಿ ಅರಿಸ್ಟಾಟಲ್ ಸಹಮತ ವ್ಯಕ್ತಪಡಿಸುತ್ತಾನೆ.

ನೈತಿಕತೆ ಮತ್ತು ರಾಜಕಾರಣಗಳ ಸಂಬಂಧವು ಸಾಕಷ್ಟು ಮುಖ್ಯವಾದ ಮತ್ತೊಂದು ನೈತಿಕ ಪ್ರಶ್ನೆಯನ್ನೆತ್ತುತ್ತದೆ. ಸಮಂಜಸ ಕ್ರಿಯೆಯು ಗುರಿಯಾಗಿರಿಸಿಕೊಳ್ಳಬೇಕಾದ ಒಳಿತು ಇಡೀ ಸಮುದಾಯದ ಅಥವಾ ಆತ್ಯಂತಿಕವಾಗಿ ಇಡೀ ಮನುಸಂಕುಲದ ಒಳಿತು ಎಂಬುದನ್ನು ಒಪ್ಪಿಕೊಂಡರೆ, ಈ ಸಾಮಾಜಿಕ ಒಳಿತು ಬಿಡಿ ವ್ಯಕ್ತಿಗಳು ಅನುಭವಿಸುವ ಒಳಿತುಗಳ ಮೊತ್ತವೇ, ಅಥವಾ ಅದು ಮೂಲಭೂತವಾಗಿ ಇಡಿಗೆ ಸಂಬಂಧಿಸಿದ್ದೇ, ಅದರ ಭಾಗಗಳಿಗೆ ಅಲ್ಲವೇ? ನಾವು ಇದನ್ನು ಮಾನವ ದೇಹದ ಸಾದೃಶ್ಯದಿಂದ ಶ್ರುತಪಡಿಸಬಹುದು. ಸುಖಗಳು ಪ್ರಮುಖವಾಗಿ ದೇಹದ ವಿವಿಧ ಭಾಗಗಳಿಗೆ ಸಂಬಂಧಿಸಿದ್ದು, ಆದರೆ ಅದು ಇಡಿಯಾಗಿ ವ್ಯಕ್ತಿಗೆ ಸಂಬಂಧಿಸಿದ್ದು ಎಂದು ತಿಳಿಯುತ್ತೇವೆ; ಸುವಾಸನೆಯನ್ನು ಇಡೀ ದೇಹ ಅನುಭವಿಸುತ್ತದೆ, ಬರೀ ಮೂಗಲ್ಲ. ಸುಸಂಘಟಿತವಾದ ಸಮಾಜದಲ್ಲಿ, ಇದರಂತೆಯೇ, ಮೇಲ್ಮೆಯು ಇಡಿಗೆ ಅನ್ವಯಿಸುತ್ತದೆಯೇ ವಿನಾ ಯಾವುದೇ ಒಂದು ಭಾಗಕ್ಕಲ್ಲ ಎಂದು ಕೆಲವರು ವಾದಿಸುತ್ತಾರೆ. ಅವರು ತತ್ವಜಿಜ್ಞಾಸುಗಳಾಗಿದ್ದರೆ, ಹೆಗೆಲ್‌ನಂತೆ ಅವರೂ, ಯಾವುದೇ ಗುಣವು ಒಳಿತು ಎಂಬುದಾದರೆ ಅದು ಇಡೀ ವಿಶ್ವಕ್ಕೇ ಅನ್ವಯಿಸಬೇಕು; ಆದರೆ ವ್ಯಕ್ತಿಯ ಬದಲು ದೇಶಕ್ಕೆ ಅನ್ವಯಿಸುವುದು ಕಡಿಮೆ ವಿವೇಕದ್ದು ಎಂಬುದನ್ನು ಸಾಮಾನ್ಯವಾಗಿ ಸೇರಿಸುತ್ತಾರೆ. ತಾರ್ಕಿಕವಾಗಿ ಈ ದೃಷ್ಟಿಕೋನವನ್ನು ಹೀಗೆ ಮಂಡಿಸಬಹುದು: ದೇಶಕ್ಕೆ ಜನಭರಿತ, ವಿಶಾಲ, ಅಧಿಕಾರಯುಕ್ತ ಮುಂತಾದ ಅನೇಕ ಗುಣಗಳನ್ನು ಅನ್ವಯಿಸಿ ಹೇಳಬಹುದು, ಆದರೆ ಬಿಡಿ ವ್ಯಕ್ತಿಗಳಿಗಲ್ಲ. ನಾವೀಗ ಪರಿಶೀಲಿಸುತ್ತಿರುವ ದೃಷ್ಟಿಕೋನವು ಈ ಗುಂಪಿಗೆ ನೈತಿಕ ಗುಣಗಳನ್ನು ಸೇರಿಸಿ, ಅವು ವ್ಯಕ್ತಿಗಳಿಗೆ ಸಾಧಿತವಾಗಿ ಅನ್ವಯಗೊಳ್ಳುತ್ತವೆ ಎನ್ನುತ್ತದೆ. ವ್ಯಕ್ತಿಯೊಬ್ಬ ಜನಭರಿತವಾದ ಅಥವಾ ಒಳ್ಳೆಯ ದೇಶಕ್ಕೆ ಸೇರಿರಬಹುದು; ಆದರೆ ಅವನು ಜನಭರಿತಕ್ಕಿಂತಲೂ ಹೆಚ್ಚಿನ ಒಳಿತಿನವನಲ್ಲ. ಜರ್ಮನ್ ತತ್ವಜ್ಞಾನಿಗಳು ವ್ಯಾಪಕವಾಗಿ ಒಪ್ಪುವ ಈ ದೃಷ್ಟಿಕೋನವು, ಸ್ವಲ್ಪಮಟ್ಟಿಗೆ ಅವನ ನ್ಯಾಯ ಪರಿಕಲ್ಪನೆಯ ಹೊರತಾಗಿ, ಅರಿಸ್ಟಾಟಲ್‌ನದಲ್ಲ.

'ನೀತಿಸಂಹಿತೆ'ಯ ಗಣನೀಯ ಭಾಗವು ಸ್ನೇಹ, ಮತ್ತು ಪ್ರೀತಿಯನ್ನೊಳಗೊಳ್ಳುವ ಎಲ್ಲ ಸಂಬಂಧಗಳ ಕುರಿತ ಚರ್ಚೆಯನ್ನೊಳಗೊಂಡಿದೆ. ಪರಿಪೂರ್ಣ ಸ್ನೇಹವು ಒಳ್ಳೆಯವರ ನಡುವೆ ಮಾತ್ರ ಸಾಧ್ಯ, ಅಲ್ಲದೆ ಅನೇಕರೊಂದಿಗೆ ಸ್ನೇಹವು ಅಸಾಧ್ಯ. ಯಾರೂ ತನಗಿಂತ ಮೇಲುಮಟ್ಟದವನೊಂದಿಗೆ, ಅವನೂ ಮೇಲ್ಮಟ್ಟದ ಸದ್ಗುಣವನ್ನು ಹೊಂದಿರದಿದ್ದರೆ, ಸ್ನೇಹದಿಂದಿರಬಾರದು, ಅದು ಅವನ ಬಗ್ಗೆ ತೋರುವ ಗೌರವವನ್ನು

ಸಮರ್ಥಿಸುತ್ತದೆ. ಅಸಮಾನ ಸಂಬಂಧಗಳಲ್ಲಿ, ಅಂದರೆ ಗಂಡ–ಹೆಂಡತಿ, ತಂದೆ–ಮಗ ಇಂತಹವುಗಳಲ್ಲಿ, ಮೇಲಿನವನನ್ನು ಹೆಚ್ಚು ಪ್ರೀತಿಸಬೇಕು. ದೇವರೊಂದಿಗೆ ಸ್ನೇಹದಿಂದಿರಲು ಸಾಧ್ಯವಿಲ್ಲ, ಯಾಕೆಂದರೆ ಅವನು ನಮ್ಮನ್ನು ಪ್ರೀತಿಸಲಾರ. ವ್ಯಕ್ತಿಯೊಬ್ಬ ತನ್ನೊಡನೆ ತಾನು ಸ್ನೇಹದಿಂದಿರಲು ಸಾಧ್ಯವೇ ಎಂಬುದನ್ನು ಕುರಿತೂ ಅರಿಸ್ಟಾಟಲ್ ಚರ್ಚಿಸುತ್ತಾನೆ; ಕೊನೆಗೆ, ಅವನು ಒಳ್ಳೆಯವನಾಗಿದ್ದರೆ ಮಾತ್ರ ಇದು ಸಾಧ್ಯ; ಕೆಟ್ಟವನು ಎಷ್ಟೋ ವೇಳೆ ತನ್ನನ್ನು ತಾನು ದ್ವೇಷಿಸುತ್ತಾನೆ ಎಂಬ ತೀರ್ಮಾನಕ್ಕೆ ಬರುತ್ತಾನೆ. ಒಳ್ಳೆಯವನು ತನ್ನನ್ನು ತಾನು ಪ್ರೀತಿಸಬೇಕು, ಆದರೆ ಉದಾತ್ತವಾಗಿ (೧೧೬೯[ಬಿ]). ದುರದೃಷ್ಟ ಸನ್ನಿವೇಶದಲ್ಲಿ ಸ್ನೇಹಿತನು ಸಾಂತ್ವನ ತರುತ್ತಾನೆ, ಆದರೆ ಯಾರೂ ಅವರಿಂದ ಸಹಾನುಭೂತಿಯನ್ನು ಅಪೇಕ್ಷಿಸಿ ಅವರನ್ನು ಅಸುಖಿಗಳನ್ನಾಗಿಸಬಾರದು, ಸಾಮಾನ್ಯವಾಗಿ ಹೀಗೆ ಮಾಡುವವರು ಹೆಂಗಸರು ಮತ್ತು ಹೆಣ್ಣಿಗರು (೧೧೭೧[ಬಿ]). ದುರದೃಷ್ಟಕರ ಸನ್ನಿವೇಶಗಳಲ್ಲಿ ಮಾತ್ರವೇ ಸ್ನೇಹಿತರು ಅಪೇಕ್ಷಣೀಯವಲ್ಲ, ಸುಖವಾಗಿರುವ ವ್ಯಕ್ತಿಗೆ ತನ್ನ ಸುಖವನ್ನು ಹಂಚಿಕೊಳ್ಳಲೂ ಸ್ನೇಹಿತರು ಬೇಕು. 'ಯಾರೂ ಒಂಟಿಯಾಗಿರಲು ಇಡೀ ಜಗತ್ತನ್ನು ಬಯಸುವುದಿಲ್ಲ, ಮನುಷ್ಯನು ರಾಜಕೀಯ ಜೀವಿಯಾದ್ದರಿಂದ ಅವನು ಇತರರೊಂದಿಗೆ ಬಾಳುವ ಸ್ವಭಾವವನ್ನು ಹೊಂದಿರುತ್ತಾನೆ' (೧೧೬೯[ಬಿ]). ಸ್ನೇಹದ ಬಗ್ಗೆ ಹೇಳಿರುವ ವಿಷಯಗಳೆಲ್ಲ ವಿವೇಕಯುತವಾದದ್ದಾದರೂ, ಯಾವುದೂ ಸಾಮಾನ್ಯ ಜ್ಞಾನಕ್ಕಿಂತ ಹೆಚ್ಚಿನದಲ್ಲ.

'ಸಂತೋಷ'ದ ಬಗ್ಗೆ ಚರ್ಚಿಸುವಾಗಲೂ ಅರಿಸ್ಟಾಟಲ್ ಮತ್ತೆ ತನ್ನ ವಿವೇಕವನ್ನು ತೋರಿಸುತ್ತಾನೆ, ಆದರೆ ಅದನ್ನು ಪ್ಲೇಟೋ ವಿರಕ್ತಿಪರ ದೃಷ್ಟಿಯಿಂದ ಪರಿಗಣಿಸಿದ್ದ. ಅರಿಸ್ಟಾಟಲ್ ಬಳಸುವ ಅರ್ಥದಲ್ಲಿ ಸಂತೋಷವು, ಸಂತೋಷವಿಲ್ಲದೆ ಸುಖವಿರಲಾರದಾದರೂ, ಸುಖಕ್ಕಿಂತ ಭಿನ್ನವಾದುದು, ಸಂತೋಷದ ಬಗೆಗಿನ ಮೂರು ದೃಷ್ಟಿಕೋನಗಳಿವೆ: (೧) ಅದು ಎಂದೂ ಒಳೆಯದಲ್ಲ; (೨) ಕೆಲವು ಬಗೆಯ ಸಂತೋಷವು ಒಳ್ಳೆಯದು, ಆದರೆ ಬಹುತೇಕವು ಕೆಟ್ಟವು; (೩) ಸಂತೋಷವು ಒಳ್ಳೆಯದಾದರೂ ಅತ್ಯಂತ ಹೆಚ್ಚಿನದಲ್ಲ. ನೋವು ಕೆಟ್ಟುದು, ಹೀಗಾಗಿ ಸುಖವು ಒಳ್ಳೆಯದಾಗಿರಬೇಕು ಎಂಬುದರಿಂದಾಗಿ, ಇವುಗಳಲ್ಲಿ ಮೊದಲಿನದನ್ನವನು ತಿರಸ್ಕರಿಸುತ್ತಾನೆ. ವ್ಯಕ್ತಿಯು ವಿನಾಶದಲ್ಲಿ ಸುಖವಾಗಿರಬಲ್ಲ ಎಂಬುದು ಅವಿವೇಕಿತನ: ಸುಖಕ್ಕೆ ಸ್ವಲ್ಪಮಟ್ಟಿಗಿನ ಬಾಹ್ಯ ಅದೃಷ್ಟವೂ ಆವಶ್ಯಕ ಎಂದವನು ಸರಿಯಾಗಿಯೇ ತೀರ್ಮಾನಿಸುತ್ತಾನೆ. ಎಲ್ಲ ಸಂತೋಷಗಳು ದೈಹಿಕವಾದವು ಎಂಬ ಭಾವನೆಯನ್ನೂ ಅವನು ಅಲ್ಲಗಳೆಯುತ್ತಾನೆ; ಎಲ್ಲದರಲ್ಲೂ ಯಾವುದೋ ದೈವಿಕವಾದದ್ದು ಒಂದಷ್ಟಿರುತ್ತದೆ, ಹೀಗಾಗಿ ಹೆಚ್ಚಿನ ಸಂತೋಷಕ್ಕೆ ಅವಕಾಶವಿರುತ್ತದೆ. ದುರದೃಷ್ಟವಂತರಲ್ಲದಿದ್ದರೆ ಒಳ್ಳೆಯ ವ್ಯಕ್ತಿಗಳು ಸಂತೋಷ ಪಡೆಯುತ್ತಾರೆ, ದೇವರು

ಸದಾಕಾಲ ಒಂದೇ ಆದ ಸರಳ ಸಂತೋಷವನ್ನನುಭವಿಸುತ್ತಾನೆ (೧೧೫೨–೧೧೫೪).

ಗ್ರಂಥದ ಮುಂದಿನೊಂದು ಭಾಗದಲ್ಲಿಯೂ ಸಂತೋಷದ ಬಗೆಗಿನ ಚರ್ಚೆಯಿದೆ, ಆದರೆ ಮೇಲಿನದರ ಜೊತೆಗೆ ಸಂಪೂರ್ಣವಾಗಿ ತಾಳೆಯಾಗಲಾರದು. ಕೆಟ್ಟ ಸಂತೋಷಗಳಿವೆ, ಆದರೆ ಅವು ಒಳ್ಳೆಯ ವ್ಯಕ್ತಿಗಳ ಸಂತೋಷಗಳಲ್ಲ ಎಂದಿಲ್ಲಿ ವಾದಿಸಲಾಗಿದೆ (೧೧೭೩$^{ಬಿ}$). ಪ್ರಾಯಶಃ ಸಂತೋಷಗಳಲ್ಲಿ ಭಿನ್ನತೆಗಳಿವೆ (ಅದೇ); ಅಲ್ಲದೆ, ಸಂತೋಷವು ಒಳ್ಳೆಯವೋ ಕೆಟ್ಟವೋ ಎಂಬುದು ಒಳ್ಳೆಯ ಅಥವಾ ಕೆಟ್ಟ ಕಾರ್ಯಗಳಿಗೆ ಸಂಬಂಧಿಸಿರುತ್ತವೆ (೧೧೭೫$^{ಬಿ}$). ಸಂತೋಷಕ್ಕಿಂತ ಮಿಗಿಲಾದವೆನಿಸಿದ ಅನೇಕ ವಿಷಯಗಳಿವೆ; ಯಾರೂ ಮಗುವಿನ ಬುದ್ಧಿಯೊಂದಿಗೆ, ಹಾಗಿರುವುದು ಸಂತೋಷದಾಯಕವೆನಿಸಿದರೂ, ಇಡೀ ಬದುಕನ್ನು ಕಳೆಯುವುದರಲ್ಲಿ ತೃಪ್ತಿ ಹೊಂದಲಾರರು. ಪ್ರತಿ ಪ್ರಾಣಿಗೂ ತನ್ನದೇ ಆದ ಸಮಂಜಸ ಸಂತೋಷವಿರುತ್ತದೆ, ಮನುಷ್ಯನ ಸಮಂಜಸ ಸಂತೋಷವು ವೈಚಾರಿಕತೆಗೆ ಸಂಬಂಧಿಸಿರುವಂತಹುದು.

ಇದು ಇಡೀ ಗ್ರಂಥದಲ್ಲಿ ಸಾಮಾನ್ಯಜ್ಞಾನ ಮಾತ್ರವಲ್ಲದ ಸಿದ್ಧಾಂತವೊಂದರತ್ತ ಕರೆದೊಯ್ಯುತ್ತದೆ. ಸುಖವು ಸರಿಯಾದ ಚಟುವಟಿಕೆಯಲ್ಲಿ ಅಂತರ್ಗತವಾಗಿರುತ್ತದೆ; ಪರಿಪೂರ್ಣ ಸುಖವು ಅತ್ಯುತ್ತಮ ಕಾರ್ಯದಲ್ಲಿ ಅಡಗಿರುತ್ತದೆ, ಅದು ಧ್ಯಾನಾಸಕ್ತತೆ. ಯುದ್ಧ ಅಥವಾ ರಾಜಕಾರಣ ಅಥವಾ ಬೇರಾವುದೇ ವ್ಯಾವಹಾರಿಕ ಬದುಕಿಗಿಂತ ಧ್ಯಾನಾಸಕ್ತಿಯು ಹೆಚ್ಚು ಅಪೇಕ್ಷಣೀಯ. ಅದರಿಂದ ಬಿಡುವು ದೊರೆಯುತ್ತದೆ, ಬಿಡುವಿನಿಂದ ಸುಖವುಂಟಾಗುತ್ತದೆ. ವ್ಯಾವಹಾರಿಕ ಬಗೆಯದು ಕೇವಲ ಎರಡನೆಯ ದರ್ಜೆಯ ಸುಖವನ್ನು ತರುವಂತಹುದು; ಅತ್ಯಂತ ಶ್ರೇಷ್ಠ ಸುಖವು ವೈಚಾರಿಕತೆಯಿಂದ ದೊರೆಯುತ್ತದೆ, ಯಾಕೆಂದರೆ ವೈಚಾರಿಕತೆಯು, ಮಿಕ್ಕೆಲ್ಲದಕ್ಕಿಂತ, ಮನುಷ್ಯತನ. ಮಾನವನು ಸಂಪೂರ್ಣ ಧ್ಯಾನಾಸಕ್ತಿಯಿಂದ ಕೂಡಿರಲಾರ, ಆದರೆ ಅದರಲ್ಲಿ ಎಷ್ಟರ ಮಟ್ಟಿಗೆ ತೊಡಗುತ್ತಾನೆಯೋ ಅಷ್ಟರ ಮಟ್ಟಿಗೆ ದೈವಿಕ ಬದುಕನ್ನು ಹೊಂದುತ್ತಾನೆ. 'ಮಿಕ್ಕೆಲ್ಲವನ್ನೂ ಆನಂದದಲ್ಲಿ ಮೀರಿಸುವ ದೇವರ ಕಾರ್ಯಚಟುವಟಿಕೆಯು ಕೂಡ ಧ್ಯಾನಾಸಕ್ತಿಯದಾಗಿರಬೇಕು.' ಎಲ್ಲ ಮನುಷ್ಯರಿಗಿಂತ ತತ್ವಜ್ಞಾನಿಯು ತನ್ನ ಕಾರ್ಯಚಟುವಟಿಕೆಯಲ್ಲಿ ಹೆಚ್ಚು ದೈವಸಮಾನನಾಗಿರುತ್ತಾನೆ, ಹೀಗಾಗಿ ಅವನು ಅತ್ಯಂತ ಸುಖಿ ಮತ್ತು ಶ್ರೇಷ್ಠ ಸುಖಿ:

> **ಯಾರು ವೈಚಾರಿಕತೆಯನ್ನು ಬಳಸುತ್ತಾನೋ ಮತ್ತು ಬೆಳೆಸುತ್ತಾನೋ ಅವನು ಅತ್ಯುತ್ತಮ ಮನಃಸ್ಥಿತಿಯಲ್ಲಿಯೂ ದೇವತೆಗಳಿಗೆ ಪ್ರಿಯನಾದವನೂ ಆಗುತ್ತಾನೆ. ಯಾಕೆಂದರೆ ದೇವತೆಗಳಿಗೆ ಮಾನವ ವ್ಯಾಪಾರಗಳ ಬಗ್ಗೆ ಯಾವುದೇ ಬಗೆಯ ಕಾಳಜಿಯಿದ್ದರೆ–ಇರುತ್ತದೆಂದು ಭಾವಿಸಲಾಗುತ್ತದೆ–ಅವರು ಅತ್ಯುತ್ತಮವಾದುದೂ ತಮಗೆ ತೀರ ಹತ್ತಿರದ್ದೂ ಆದುದರಲ್ಲಿ (ಅಂದರೆ**

> **ವೈಚಾರಿಕತೆ) ಸಂತಸಪಡುವುದು ಸಕಾರಣವಾದುದು; ಅಲ್ಲದೆ, ತಮಗೆ ಪ್ರಿಯವಾದುದೂ ಸಮಂಜಸವಾದುದೂ ಹಾಗೂ ಉದಾತ್ತವಾದುದೂ ಆದ ವಿಷಯಗಳನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಪ್ರೀತಿಸುವವರಿಗೆ ಸೂಕ್ತ ಪ್ರತಿಫಲವನ್ನು ನೀಡಬೇಕು. ಈ ಎಲ್ಲ ಗುಣಗಳೂ ಅತ್ಯಂತ ಹೆಚ್ಚಾಗಿ ತತ್ವಜ್ಞಾನಿಗೆ ಅನ್ವಯಿಸುವುದೆಂಬುದು ಸ್ವತಃಸಿದ್ಧ. ಹೀಗಾಗಿ ಅವನು ದೇವತೆಗಳಿಗೆ ಅತ್ಯಂತ ಪ್ರಿಯನಾದವನು. ಹೀಗೆ ಆದವನು ಅತ್ಯಂತ ಸುಖಿಯೂ ಆಗಿರುತ್ತಾನೆಂದು ಊಹಿಸಬಹುದು; ಈ ರೀತಿಯಲ್ಲಿ ಕೂಡ ತತ್ವಜ್ಞಾನಿಯು ಮಿಕ್ಕೆಲ್ಲರಿಗಿಂತ ಹೆಚ್ಚು ಹೆಚ್ಚು ಸುಖಿಯಾಗುತ್ತಾನೆ (೧೧೭೯ª).**

ಇದು ವಸ್ತುತಃ 'ಎಥಿಕ್ಸ್'ನ ಉಪಸಂಹಾರದ ಭಾಗ. ಆನಂತರ ಕೆಲವು ಪ್ಯಾರಾಗಳು ರಾಜಕೀಯಕ್ಕೆ ಸ್ಥಿತ್ಯಂತರಗೊಳ್ಳುವ ಕಡೆಗೆ ಗಮನ ಹರಿಸುವಂತಹವು.

ಈಗ ನಾವು 'ಎಥಿಕ್ಸ್'ನ ಗುಣಾವಗುಣಗಳ ಬಗ್ಗೆ ತೀರ್ಮಾನಿಸಲು ಪ್ರಯತ್ನಪಡೋಣ. ಗ್ರೀಕ್ ತತ್ವಜ್ಞಾನಿಗಳು ಚಿಂತಿಸಿರುವ ಅನೇಕ ವಿಷಯಗಳಿಗಿಂತ ಭಿನ್ನವಾಗಿ ಎಥಿಕ್ಸ್ ಯಾವುದೇ ಬಗೆಯಲ್ಲಿ ಮುಂದುವರಿದಿಲ್ಲ, ಅಂದರೆ ಹೊಸ ವಿಷಯಗಳನ್ನು ಕಂಡುಕೊಂಡಿಲ್ಲ. 'ಎಥಿಕ್ಸ್'ನಲ್ಲಿನ ಯಾವುದೂ ವೈಜ್ಞಾನಿಕ ಅರ್ಥದಲ್ಲಿ ತಿಳಿದಿಲ್ಲ. ಹೀಗಾಗಿ ಪ್ರಾಚೀನ ಗ್ರಂಥವೊಂದು ಆಧುನಿಕವಾದುದಕ್ಕಿಂತ ಯಾವುದೇ ಬಗೆಯಲ್ಲಿ ಕೀಳೆಂದು ಪರಿಗಣಿಸಲು ಸಾಧ್ಯವಾಗದು. ಅರಿಸ್ಟಾಟಲ್ ಖಗೋಳವಿಜ್ಞಾನದ ಬಗ್ಗೆ ಮಾತನಾಡುವಾಗ ನಾವು ಅವನದು ತಪ್ಪು ತಿಳಿವಳಿಕೆಯೆಂದು ಖಚಿತವಾಗಿ ಹೇಳಬಹುದು; ಆದರೆ ಅವನು ನೈತಿಕತೆಯ ಬಗ್ಗೆ ಮಾತನಾಡುವಾಗ ಅದೇ ಅರ್ಥದಲ್ಲಿ ಅವನು ಸರಿ ಅಥವಾ ತಪ್ಪು ಎನ್ನಲು ಬರುವುದಿಲ್ಲ. ಸ್ಥೂಲವಾಗಿ ಹೇಳಬೇಕೆಂದರೆ, ಅರಿಸ್ಟಾಟಲ್ ಅಥವಾ ಬೇರಾವುದೇ ತತ್ವಜ್ಞಾನಿಯ ನೀತಿಸಂಹಿತೆಯ ಬಗ್ಗೆ ಮೂರು ಪ್ರಶ್ನೆಗಳನ್ನು ಮುಂದಿಡಬಹುದು: (೧) ಅದು ಆಂತರಿಕವಾಗಿ ಸುಸಂಗತವಾಗಿದೆಯೇ? (೨) ಅದು ಕೃತಿಕಾರನ ಇತರ ದೃಷ್ಟಿಕೋನಗಳಿಗೆ ಅನುಗುಣವಾಗಿದೆಯೇ? (೩) ನಮ್ಮ ಸ್ವಂತ ನೈತಿಕ ಭಾವನೆಗಳಿಗೆ ಹೊಂದಿಕೊಳ್ಳುವಂತಹ ಪ್ರಶ್ನೆಗಳಿಗೆ ಇದರಲ್ಲಿ ಉತ್ತರಗಳಿವೆಯೇ? ಮೊದಲನೆಯ ಮತ್ತು ಎರಡನೆಯ ಪ್ರಶ್ನೆಗಳಿಗೆ ಬರುವ ಉತ್ತರವು ನಕಾರಾತ್ಮಕವಾಗಿದ್ದರೆ, ಪ್ರಸ್ತುತ ತತ್ವಜ್ಞಾನಿಯು ಬೌದ್ಧಿಕವಾಗಿ ತಪ್ಪು ಮಾಡಿರುವನೆಂದು ಹೇಳಬಹುದು. ಆದರೆ ಮೂರನೆಯ ಪ್ರಶ್ನೆಗೆ ಸಿಗುವ ಉತ್ತರ ನಕಾರಾತ್ಮಕವಾಗಿದ್ದರೆ, ಅವನು ತಪ್ಪಿರುವನೆಂದು ಹೇಳಲು ನಮಗೆ ಯಾವ ಅಧಿಕಾರವೂ ಇಲ್ಲ, ಅವನು ನಮಗೆ ತಾಳಿಕೆಯಾಗುವುದಿಲ್ಲ ಎಂದಷ್ಟೇ ಹೇಳಬಹುದು.

ನಿಕೋಮ್ಯಾಕಿಯನ್ ಎಥಿಕ್ಸ್ ನಲ್ಲಿ ಮಂಡಿತವಾದ ನೈತಿಕ ಸಿದ್ಧಾಂತಗಳನ್ನು ಕುರಿತ ಈ ಮೂರು ಪ್ರಶ್ನೆಗಳ ಕುರಿತು ನಾವೀಗ ಒಂದೊಂದಾಗಿ ಪರಿಶೀಲಿಸೋಣ.

(೧) ಒಟ್ಟಾರೆ ಗ್ರಂಥವು ಸುಸಂಗತವಾಗಿದೆ, ಆದರೆ ಕೆಲವು ಅಮುಖ್ಯ ವಿಚಾರಗಳಲ್ಲಿ ಹಾಗಿಲ್ಲದಿರಬಹುದು, ಅಷ್ಟೆ.

ಒಳ್ಳೆಯದು ಸುಖಕರ, ಮತ್ತು ಸುಖವು ಯಶಸ್ವೀ ಚಟುವಟಿಕೆಯಲ್ಲಿರುತ್ತದೆ ಎಂಬ ಸಿದ್ಧಾಂತವನ್ನು ಸರಿಯಾದ ರೀತಿಯಲ್ಲಿ ಮಂಡಿಸಲಾಗಿದೆ. ಪ್ರತಿ ಸದ್ಗುಣವೂ ಎರಡು ಅತಿರೇಕಗಳ ನಡುವಣ ಸುವರ್ಣಮಾಧ್ಯಮ ಎಂಬ ಸಿದ್ಧಾಂತವು, ತುಂಬ ಜಾಣ್ಮೆಯಿಂದ ಹೆಣೆಯಲಾಗಿದ್ದರೂ, ಅಷ್ಟು ಯಶಸ್ವಿಯಾಗಿಲ್ಲ, ಯಾಕೆಂದರೆ, ಎಲ್ಲ ಚಟುವಟಿಕೆಗಳಿಗಿಂತ ಅತ್ಯುತ್ತಮವಾದುದೆಂದು ಹೇಳಿದ್ದರೂ, ಬೌದ್ಧಿಕ ಚಿಂತನೆಗೆ ಅದನ್ನು ಅನ್ವಯಿಸಲು ಸಾಧ್ಯವಿಲ್ಲ. ಆದರೆ ಸುವರ್ಣ ಮಾಧ್ಯಮವು ಕೇವಲ ವ್ಯಾವಹಾರಿಕ ಸದ್ಗುಣಗಳಿಗೆ ಮಾತ್ರ ಅನ್ವಯಿಸುವುದೇ ಹೊರತು ಬೌದ್ಧಿಕ ಚಟುವಟಿಕೆಗಳಿಗಲ್ಲ ಎಂಬ ಸಮಜಾಯಿಷಿಯನ್ನು ನೀಡಬಹುದು. ಮತ್ತೊಂದು ಅಂಶವನ್ನು ಪರಿಗಣಿಸುವುದಾದರೆ, ಪ್ರಾಯಶಃ ಶಾಸಕನ ಸ್ಥಾನವು ಅಸ್ಪಷ್ಟ. ಅವನು ಮಕ್ಕಳು ಮತ್ತು ಯುವಜನತೆಯಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುವ ಅಭ್ಯಾಸವನ್ನು ಉಂಟುಮಾಡಬೇಕು, ಅದರಿಂದ ಅವರು ಸದ್ಗುಣಗಳಲ್ಲಿಯೇ ಸಂತೋಷವನ್ನು ಕಾಣುವಂತಾಗಬೇಕು, ಕಾನೂನಿನ ಒತ್ತಡವಿಲ್ಲದೆ ಸನ್ನಡತೆಯುಳ್ಳವರಾಗಬೇಕು. ಯುವಜನತೆಯು ಕೆಟ್ಟ ಅಭ್ಯಾಸಗಳನ್ನು ಬೆಳೆಸಿಕೊಳ್ಳುವಂತೆ ಮಾಡುವುದೂ ಶಾಸಕನಿಗೆ ಸಾಧ್ಯ ಎಂಬುದು ಸ್ಪಷ್ಟವಾಗಿಯೇ ಇದೆ, ಇದನ್ನು ನಿವಾರಿಸಬೇಕಾದರೆ ಅವನಿಗೆ ಪ್ಲೇಟೋನ ಪೋಷಕನ ವಿವೇಕವಿರಬೇಕು, ಆದರೆ ಅದನ್ನು ನಿವಾರಿಸದೆ ಹೋದರೆ, ಸನ್ನಡತೆಯು ಸಂತೋಷಕರ ಎಂಬ ವಾದವು ಬಿದ್ದುಹೋಗುತ್ತದೆ. ಆದರೆ ಈ ಸಮಸ್ಯೆಯು ನೈತಿಕತೆಗಿಂತ ಪ್ರಾಯಶಃ ರಾಜಕೀಯಕ್ಕೆ ಹೆಚ್ಚು ಸೇರುತ್ತದೆ.

(೨) ಅರಿಸ್ಟಾಟಲ್‌ನ ನೀತಿಸಂಹಿತೆಯು ಎಲ್ಲ ಆಂಶಗಳಲ್ಲಿಯೂ ಅವನ ತತ್ವಜಿಜ್ಞಾಸೆಗೆ ಅನುಗುಣವಾಗಿದೆ. ಹಾಗೆ ನೋಡಿದರೆ, ಅವನ ತತ್ವಜಿಜ್ಞಾಸೆಯ ಸಿದ್ಧಾಂತಗಳೇ ನೈತಿಕ ಆಶಾವಾದದ ಅಭಿವ್ಯಕ್ತಿಯಂತಿವೆ. ಅವನಿಗೆ ಅಂತಿಮ ಕಾರಣಗಳ ವೈಜ್ಞಾನಿಕ ಪ್ರಾಮುಖ್ಯದಲ್ಲಿ ಶ್ರದ್ಧೆಯಿದೆ; ವಿಶ್ವದ ಬೆಳವಣಿಗೆಯ ಹಾದಿಯನ್ನು ಉದ್ದೇಶವು ನಿಯಂತ್ರಿಸುತ್ತದೆ, ಸಂಘಟನೆಯ ವಿಸ್ತಾರ ಅಥವಾ ಆಕಾರವನ್ನೊಳಗೊಳ್ಳುವಂತಹ ಮುಖ್ಯ ಬದಲಾವಣೆಗಳು, ಮತ್ತು ಸತ್ಕಾರ್ಯಗಳು ಮೂಲತಃ ಈ ಪ್ರವೃತ್ತಿಯನ್ನು ಬಯಸುವಂತಹವೇ ಎಂಬ ಶ್ರದ್ಧೆಯನ್ನು ಇದು ಸೂಚಿಸುತ್ತದೆ. ಅವನ ವ್ಯಾವಹಾರಿಕ ನೈತಿಕತೆಯ ಬಹುಭಾಗವು ಅಷ್ಟೇನೂ ತಾತ್ವಿಕವಾದುದಲ್ಲ ಎಂಬುದು ನಿಜ, ಅವು ಮಾನವ ವ್ಯಾಪಾರಗಳ ಕೇವಲ ಪರಿವೀಕ್ಷಣೆಯ ಫಲಗಳು ಅಷ್ಟೆ. ಆದರೆ ಅವನ ಸಿದ್ಧಾಂತದ ಈ ಭಾಗವು, ಅವನ ತತ್ವಜಿಜ್ಞಾಸೆಗೆ ಸಂಬಂಧಿಸದೆ ಸ್ವತಂತ್ರವಾದುದಾದರೂ, ಅದಕ್ಕೆ ಹೊಂದಿಕೊಳ್ಳದಂಥದಲ್ಲ.

(೩) ಅರಿಸ್ಟಾಟಲ್‌ನ ನೈತಿಕ ಅಭಿರುಚಿಯನ್ನು ನಮ್ಮದರೊಂದಿಗೆ ಹೋಲಿಸಿ ನೋಡುವ ಸಂದರ್ಭದಲ್ಲಿ, ನಮಗೆ ಕಾಣುವುದು, ಮೊದಲನೆಯದಾಗಿ, ಈಗಾಗಲೇ ನೋಡಿರುವಂತೆ, ಹೆಚ್ಚು ಆಧುನಿಕ ಮನಸ್ಸಿಗೆ ಸರಿಹೊಂದದ ಅಸಮಾನತೆಯ ಸ್ವೀಕರಣ. ಗುಲಾಮ ಪದ್ಧತಿ, ಹೆಂಡಿರು ಮಕ್ಕಳುಗಳಿಗಿಂತ ಗಂಡಂದಿರು ಮತ್ತು ತಂದೆಯರ ಶ್ರೇಷ್ಠತೆಗಳಿಗೆ ವಿರೋಧವಿಲ್ಲದಿರುವುದು ಮಾತ್ರವಲ್ಲ, ಅತ್ಯಂತ ಶ್ರೇಷ್ಠವಾದುದು ಕೆಲವರಿಗೆ – ಉದಾತ್ತರು ಮತ್ತು ತತ್ವಜ್ಞಾನಿಗಳಿಗೆ ಮಾತ್ರ – ಎಂದೂ ಪ್ರತಿಪಾದಿಸಿರುವುದು. ಇದರರ್ಥ ಬಹುತೇಕ ಜನರು ಕೆಲವೇ ಮಂದಿ ಆಳುವವರು ಮತ್ತು ಋಷಿಗಳ ಉತ್ಪಾದನೆಗೆ ಸಾಧನಗಳು ಮಾತ್ರ ಎಂಬುದು. ಪ್ರತಿ ವ್ಯಕ್ತಿಯೂ ತನ್ನಲ್ಲಿ ತಾನು ಪೂರ್ಣ ಎಂದು ಕ್ಯಾಂಟ್ ಪ್ರತಿಪಾದಿಸಿದ, ಮತ್ತು ಇದನ್ನು ಕ್ರೈಸ್ತಮತಧರ್ಮವು ಆರಂಭಿಸಿದ ದೃಷ್ಟಿಕೋನದ ಅಭಿವ್ಯಕ್ತಿ ಎಂದು ಭಾವಿಸಬಹುದು. ಆದರೆ ಕ್ಯಾಂಟ್‌ನ ದೃಷ್ಟಿಕೋನದಲ್ಲಿ ಒಂದು ತಾರ್ಕಿಕ ತೊಂದರೆಯಿದೆ, ಅದೇಂದರೆ ಇಬ್ಬರು ವ್ಯಕ್ತಿಗಳ ಆಸಕ್ತಿಗಳಲ್ಲಿ ವಿರೋಧವಿದ್ದರೆ ತೀರ್ಮಾನವನ್ನು ಹೇಗೆ ಮಾಡಬೇಕು ಎಂಬ ಸಾಧನದ ಕೊರತೆ. ಪ್ರತಿಯೊಬ್ಬನೂ ತನ್ನಲ್ಲಿ ತಾನು ಪೂರ್ಣನಾಗಿದ್ದರೆ, ಯಾವುದು ಮಿಗಿಲು ಎಂದು ನಿರ್ಧರಿಸುವ ತತ್ವವನ್ನು ರೂಪಿಸುವುದು ಹೇಗೆ? ಅಂಥದೊಂದು ತತ್ವವು ಸಮುದಾಯವನ್ನು ಪರಿಗಣಿಸಬೇಕೇ ಹೊರತು ಕೇವಲ ವ್ಯಕ್ತಿಯನ್ನಲ್ಲ. ಜಗತ್ತಿನ ವಿಶಾಲ ಅರ್ಥದಲ್ಲಿ, ಅದೊಂದು 'ನ್ಯಾಯ' ತತ್ವವಾಗಿರಬೇಕು. ಬೆಂಥಮ್ ಮತ್ತು ಉಪಯುಕ್ತತಾವಾದಿಗಳು 'ನ್ಯಾಯ'ವನ್ನು 'ಸಮಾನತೆ' ಎಂದು ವ್ಯಾಖ್ಯಾನಿಸುತ್ತಾರೆ; ಇಬ್ಬರು ವ್ಯಕ್ತಿಗಳ ಆಸಕ್ತಿಗಳ ಸಂಘರ್ಷಿಸಿದಾಗ, ಸರಿಯಾದ ಮಾರ್ಗವೆಂದರೆ ಯಾವುದು ಹೆಚ್ಚು ಸುಖದ ಒಟ್ಟಂದವನ್ನು ತರುವುದೋ ಅದು, ಎರಡು ಪಕ್ಷಗಳಲ್ಲಿ ಯಾರು ಅದರ ಫಲಾನುಭವಿಗಳು ಎಂಬುದನ್ನು, ಅಥವಾ ಅದನ್ನು ಇಬ್ಬರೂ ಹೇಗೆ ಹಂಚಿಕೊಳ್ಳುತ್ತಾರೆ ಎಂಬುದನ್ನು ಲೆಕ್ಕಿಸದಿರುವುದು. ಒಳ್ಳೆಯವನಿಗೆ ಕಡಿಮೆ ಒಳ್ಳೆಯವನಿಗಿಂತ ಹೆಚ್ಚು ಕೊಟ್ಟರೆ, ಅದಕ್ಕೆ ಕಾರಣ, ಕೊಟ್ಟ ಕೊನೆಗೆ, ಸದ್ಗುಣವನ್ನು ಮಾನ್ಯಮಾಡಿ ದುರ್ಗುಣವನ್ನು ಶಿಕ್ಷಿಸುವುದರ ಮೂಲಕ ಸಾಮಾನ್ಯ ಸುಖವು ಹೆಚ್ಚುತ್ತದೆಂಬುದೇ ಹೊರತು ಒಳ್ಳೆಯವನು ಕೆಟ್ಟವನಿಗಿಂತ ಹೆಚ್ಚು ಪಡೆಯಲು ಅರ್ಹನಾಗಿರುತ್ತಾನೆ ಎಂಬ ಆತ್ಯಂತಿಕ ನೈತಿಕ ಸಿದ್ಧಾಂತದ ಕಾರಣದಿಂದಲ್ಲ. ಈ ದೃಷ್ಟಿಯಲ್ಲಿ 'ನ್ಯಾಯ'ವು ಅದರಿಂದಾಗುವ ಸುಖದ ಮೊತ್ತವನ್ನು ಅವಲಂಬಿಸಿರುತ್ತದೆಯೇ ವಿನಾ ಮಿಕ್ಕವರಿಗಿಂತ ಒಬ್ಬ ವ್ಯಕ್ತಿ ಅಥವಾ ಒಂದು ವರ್ಗದ ಬಗ್ಗೆ ತೋರುವ ಪಕ್ಷಪಾತವಲ್ಲ. ಪ್ಲೇಟೋ ಮತ್ತು ಅರಿಸ್ಟಾಟಲ್‌ರನ್ನೊಳಗೊಂಡಂತೆ ಗ್ರೀಕ್ ತತ್ವಜ್ಞಾನಿಗಳು ನ್ಯಾಯದ ಬಗ್ಗೆ ಬೇರೆಯೇ ಪರಿಕಲ್ಪನೆಯನ್ನು ಹೊಂದಿದ್ದರು, ಮತ್ತು ಅದು ಈಗಲೂ ಚಾಲತಿಯಲ್ಲಿದೆ. ಮೂಲತಃ ಮತಧರ್ಮದ ಆಧಾರದ ಮೇಲೆ ರೂಪಿಸಿದ ಚಿಂತನೆಯೆಂದರೆ, ಪ್ರತಿ ವಸ್ತು

ಅಥವಾ ವ್ಯಕ್ತಿಯು ತನ್ನದೇ ಆದ ಪರಿವಲಯವನ್ನು ಹೊಂದಿರುತ್ತದೆ, ಮತ್ತು ಅದನ್ನು ಮೀರುವುದು 'ಅನ್ಯಾಯ' ಎಂಬುದು. ತಮ್ಮ ನಡತೆ ಮತ್ತು ಒಲವುಗಳ ಕಾರಣದಿಂದಾಗಿ ಕೆಲವರು ಇತರರಿಗಿಂತ ಹೆಚ್ಚು ವಿಶಾಲವಾದ ಪರಿವಲಯವನ್ನು ಹೊಂದಿರುತ್ತಾರೆ, ಹೀಗಾಗಿ ಅವರು ಇತರರಿಗಿಂತ ಹೆಚ್ಚಿನ ಸುಖವನ್ನು ಅನುಭವಿಸುವುದು 'ಅನ್ಯಾಯ'ವೇನಲ್ಲ. ಅರಿಸ್ಟಾಟಲ್ ಈ ದೃಷ್ಟಿಕೋನವನ್ನು ಒಪ್ಪುತ್ತಾನೆ, ಅದರ ಮೂಲನೆಲೆ ಪ್ರಾಚೀನ ಮತಧರ್ಮ. ಇದು ಅತ್ಯಂತ ಪ್ರಾಚೀನ ತತ್ವಜ್ಞಾನಿಗಳಲ್ಲಿ ಎದ್ದು ಕಾಣುತ್ತದೆ, ಆದರೆ ಅವನಲ್ಲಿ ಅಷ್ಟು ಎದ್ದು ಕಾಣುವುದಿಲ್ಲ.

ಅರಿಸ್ಟಾಟಲ್‌ನಲ್ಲಿ ಸಹಾಯಪ್ರವೃತ್ತಿ ಅಥವಾ ಪರೋಪಕಾರಪ್ರವೃತ್ತಿ ಎಂದು ಯಾವುದನ್ನು ಕರೆಯುತ್ತೇವೋ ಅದು ಸಂಪೂರ್ಣವಾಗಿ ಕಾಣೆಯಾಗಿದೆ. ಅವನಿಗೆ ಅರಿವಿರುವ ಮಟ್ಟಿಗೆ ಕೂಡ, ಮಾನವ ಯಾತನೆಯು ಅವನ ಭಾವನೆಯನ್ನು ಆರ್ದ್ರಗೊಳಿಸುವುದಿಲ್ಲ; ಅವನದನ್ನು ಬೌದ್ಧಿಕವಾಗಿ ಕೆಡುಕು ಎಂದು ಬಗೆಯುತ್ತಾನೆ; ತನ್ನ ಸ್ನೇಹಿತರ ಹೊರತಾಗಿ ಅನ್ಯರು ಯಾತನೆ ಅನುಭವಿಸುವುದರ ಬಗ್ಗೆ ಅವನನ್ನು ಅಸುಖಿಗೊಳಿಸುವ ಯಾವುದೇ ಕುರುಹೂ ಕಾಣುವುದಿಲ್ಲ.

ಮತ್ತಷ್ಟು ಸ್ಪಷ್ಟವಾಗಿ ಹೇಳಬೇಕೆಂದರೆ 'ಎಥಿಕ್ಸ್'ನಲ್ಲಿ ಭಾವನಾದಾರಿದ್ರ್ಯವಿದೆ, ಆದರೆ ಅವನಿಗಿಂತ ಹಿಂದಿನ ತತ್ವಜ್ಞಾನಿಗಳಲ್ಲಿ ಇದು ಕಾಣುವುದಿಲ್ಲ. ಮಾನವನ ವಿಚಾರಗಳ ಬಗೆಗಿನ ಅರಿಸ್ಟಾಟಲ್‌ನ ಊಹನೆಗಳಲ್ಲಿ ಅನುಚಿತವಾದ ಆತ್ಮತೃಪ್ತಿ ಮತ್ತು ಆರಾಮದಾಯಕತೆಯಿದೆ; ಪರಸ್ಪರರಲ್ಲಿ ಉತ್ಕಟ ಭಾವನೆಯುಕ್ಕಿಸುವ ಎಲ್ಲವನ್ನೂ ಅವನು ಮರೆತಂತೆ ತೋರುತ್ತದೆ. ಸ್ನೇಹದ ಬಗೆಗಿನ ಅವನ ನಿರೂಪಣೆಯೂ ಉಗುರು ಬೆಚ್ಚಗಿನದು. ನಿರ್ಭಾವುಕತೆಯನ್ನು ಉಳಿಸಿಕೊಳ್ಳಲು ಕಷ್ಟವೆನಿಸುವ ಇಂತಹ ಯಾವುದೇ ಅನುಭವವೂ ಅವನಿಗಾಗಿರುವ ಕುರುಹೂ ಕಾಣುವುದಿಲ್ಲ; ನೈತಿಕ ಬದುಕಿನ ಗಾಢ ಮುಖವೂ ಅವನಿಗೆ ಪರಿಚಿತವಾಗಿದ್ದಂತೆ ತೋರುವುದಿಲ್ಲ. ಮತಧರ್ಮವು ಆಸಕ್ತಿ ತೋರುವ ಮಾನವಾನುಭವಗಳ ವಲಯವನ್ನೇ ಅವನು ಸಂಪೂರ್ಣವಾಗಿ ಕೈಬಿಡುತ್ತಾನೆ. ಅವನು ಹೇಳುವುದೆಲ್ಲ ದುರ್ಬಲ ಭಾವನೆಗಳ ಅನುಕೂಲಸ್ಥರಿಗೆ ಮಾತ್ರ; ದೇವರು ಅಥವಾ ಪಾಪದೇವತೆ ಮೈಮೇಲೆ ಬಂದವರ ಬಗ್ಗೆಯಾಗಲೀ ಬಾಹ್ಯ ದುರದೃಷ್ಟದಿಂದ ಹತಾಶೆಗೊಳಗಾದವರ ಬಗ್ಗೆಯಾಗಲೀ ಅವನು ಹೇಳುವುದೇನೂ ಇಲ್ಲ. ಈ ಕಾರಣಗಳಿಂದಾಗಿ, ಅದೆಷ್ಟೇ ಸುಪ್ರಸಿದ್ಧವಾಗಿರಲಿ, ಅವನ ನೀತಿಸಂಹಿತೆಯು ಆಂತರಿಕ ಪ್ರಾಮುಖ್ಯದ ಕೊರತೆಯಿಂದ ತುಂಬಿದೆ ಎಂಬುದು ನನ್ನ ತೀರ್ಮಾನ.

೦

೨೧
ಅರಿಸ್ಟಾಟಲ್‌ನ ರಾಜಕೀಯ (ಪಾಲಿಟಿಕ್ಸ್)

ಅರಿಸ್ಟಾಟಲ್‌ನ 'ಪಾಲಿಟಿಕ್ಸ್' ಆಸಕ್ತಿದಾಯಕವೂ ಹೌದು, ಮುಖ್ಯವಾದುದೂ ಹೌದು; ತನ್ನ ಕಾಲದ ಸುಶಿಕ್ಷಿತ ಗ್ರೀಕರ ಸಾಮಾನ್ಯ ಒಲವು ನಿಲವುಗಳನ್ನು ತೋರಿಸುವ ದೃಷ್ಟಿಯಿಂದ ಆಸಕ್ತಿದಾಯಕವಾದುದಾದರೆ, ಮಧ್ಯಕಾಲದ ಅಂತ್ಯದವರೆಗೂ ಪ್ರಭಾವಶಾಲಿಯಾಗಿದ್ದ ಅನೇಕ ತತ್ವಗಳ ಆಕರವಾಗಿರುವುದರಿಂದ ಮುಖ್ಯವಾದುದು. ಈಗಿನ ಕಾಲದ ಮುತ್ಸದ್ದಿಗೆ ವ್ಯಾವಹಾರಿಕವಾಗಿ ಉಪಯುಕ್ತವೆನಿಸುವ ಏನಾದರೂ ಇದರಲ್ಲಿದೆಯೆಂದು ತೋರುವುದಿಲ್ಲ; ಆದರೆ ಗ್ರೀಕ್ ಜಗತ್ತಿನ ವಿವಿಧ ಭಾಗಗಳಲ್ಲಿನ ವಿಭಿನ್ನ ಪಕ್ಷಗಳ ನಡುವಣ ತಿಕ್ಕಾಟಗಳ ಮೇಲೆ ಇದು ಸಾಕಷ್ಟು ಬೆಳಕು ಚೆಲ್ಲುತ್ತದೆ. ಗ್ರೀಕೇತರ ದೇಶಗಳಲ್ಲಿನ ಸರ್ಕಾರಗಳ ಸ್ವರೂಪದ ಬಗ್ಗೆ ಅದಕ್ಕೆ ಹೆಚ್ಚೇನೂ ಅರಿವಿದ್ದಂತೆ ಕಾಣಿಸದು. ಈಜಿಪ್ಟ್, ಬ್ಯಾಬಿಲೋನ್, ಪರ್ಷಿಯ, ಮತ್ತು ಕಾರ್ಥೇಜ್‌ಗಳ ಉಲ್ಲೇಖಗಳು ಬರುವುದೆಂಬುದು ನಿಜವಾದರೂ, ಕಾರ್ಥೇಜ್‌ನ ಹೊರತಾಗಿ, ಮಿಕ್ಕವುಗಳ ಬಗೆಗಿನದು ಕೇವಲ ನಾಮಮಾತ್ರದ್ದು. ಅದರಲ್ಲಿ ಅಲೆಕ್ಸಾಂಡರ್‌ನ ಬಗ್ಗೆ ಉಲ್ಲೇಖವಿಲ್ಲ, ಅವನು ಜಗತ್ತಿನಲ್ಲಿ ಮಾಡುತ್ತಿದ್ದ ಸಂಪೂರ್ಣ ಬದಲಾವಣೆಗಳ ಬಗ್ಗೆ ಕಿಂಚಿತ್ತಾದರೂ ಅರಿವು ಅದರಲ್ಲಿಲ್ಲ. ಚರ್ಚೆಗಳೆಲ್ಲ ನಗರ ಪ್ರಭುತ್ವದ (ಸಿಟಿ ಸ್ಟೇಟ್ಸ್) ಸುತ್ತ ಗಿರಕಿ ಹೊಡೆಯುತ್ತವೆ, ಅವುಗಳ ಅವನತಿಯ ಪೂರ್ವಸೂಚನೆಯೂ ಅದರಲ್ಲಿ ಕಾಣದು. ಸ್ವತಂತ್ರ ನಗರಗಳಾಗಿ ವಿಭಾಗೀಕರಣಗೊಂಡ ಕಾರಣದಿಂದಾಗಿ ಗ್ರೀಸ್ ರಾಜಕೀಯ ಪ್ರಯೋಗಗಳು ನಡೆಯುವ ಒಂದು ಪ್ರಯೋಗಾಲಯವಾಗಿತ್ತು; ಆದರೆ ಈ ಪ್ರಯೋಗಗಳು ಅರಿಸ್ಟಾಟಲ್‌ನ ಕಾಲದಿಂದ ಮಧ್ಯಯುಗದ ಇಟಾಲಿಯನ್ ನಗರಗಳ ಹುಟ್ಟಿಗೆ ಹೇಗೆ ಸುಸಂಗತವಾಗಿದ್ದವು ಎಂಬುದರ ಬಗ್ಗೆ ಏನೇನೂ ಇಲ್ಲ. ಅನೇಕ ವಿಧಗಳಲ್ಲಿ, ಅರಿಸ್ಟಾಟಲ್ ತಲುಪುವ ಅನುಭವವು ಈ ಗ್ರಂಥ ರಚನೆಯಾದ ಬಳಿಕ ಒಂದು ಸಾವಿರದ ಐನೂರು ವರ್ಷಗಳ ಕಾಲದವರೆಗೆ ಇದ್ದುದಕ್ಕಿಂತ ಆಧುನಿಕವೆನಿಸುವ ಜಗತ್ತಿಗೆ ಹೆಚ್ಚು ಸಂಗತವೆನಿಸುವಂತಹುದು.

ಇದರಲ್ಲಿ ಅನೇಕ ಆಶ್ಚರ್ಯಜನಕ ಸಾಂದರ್ಭಿಕ ಹೇಳಿಕೆಗಳಿವೆ, ಇವುಗಳಲ್ಲಿ ಕೆಲವನ್ನು ನಾವು ರಾಜಕೀಯ ಸಿದ್ಧಾಂತಗಳ ಕಡೆ ಗಮನಹರಿಸುವ ಮುಂಚೆ ಪರಿಗಣಿಸಬಹುದು. ಯೂರಿಪಿಡೀಸ್ ಮ್ಯಾಸೆಡಾನ್‌ನ ದೊರೆ ಆರ್ಖಿಲೌಸ್‌ನ ಆಸ್ಥಾನದಲ್ಲಿದ್ದಾಗ, ಅವನ ಮೇಲೆ ಡೆಮಾನಿಕಸ್ ಎಂಬುವವನು ದುರ್ಗಂಧ ಬೀರುವ ಆರೋಪ ಹೊರಿಸಿದನಂತೆ. ಅವನ ಕೋಪವನ್ನು ತಣಿಸಲು, ಡೆಮಾನಿಕಸ್‌ಗೆ ಚಾವಟಿ ಏಟು ಕೊಡಲು ಅವನಿಗೆ ಅನುಮತಿಯಿತ್ತನಂತೆ, ಅವನು ಹಾಗೆಯೇ ಮಾಡಿದ. ಅನೇಕ ವರ್ಷಗಳು ಕಾದ ಬಳಿಕ ಡೆಮಾನಿಕಸ್, ರಾಜನನ್ನು ಕೊಲ್ಲುವ ಯಶಸ್ವೀ ಸಂಚಿನಲ್ಲಿ ಭಾಗಿಯಾದನಂತೆ; ಆದರೆ ಇಷ್ಟು ಹೊತ್ತಿಗೆ ಯೂರಿಪಿಡೀಸ್ ಸತ್ತಿದ್ದ. ಗಾಳಿಯು ಉತ್ತರಮುಖಿಯಾಗಿರುವ ಚಳಿಗಾಲದಲ್ಲಿ ಗರ್ಭಧಾರಣೆ ಮಾಡಬೇಕು; ಅಸಭ್ಯತೆಯನ್ನು ಎಚ್ಚರಿಕೆಯಿಂದ ನಿವಾರಿಸಿಕೊಳ್ಳಬೇಕು, 'ಯಾಕೆಂದರೆ ಅಪಮಾನಕರ ಮಾತುಗಳು ಅಪಮಾನಕರ ಕ್ರಿಯೆಗಳಿಗೆ ಎಡೆ ಕೊಡುತ್ತವೆ', ಅಶ್ಲೀಲತೆಗೆ ಅವಕಾಶವಿದ್ದ ದೇವಸ್ಥಾನಗಳಲ್ಲಿ ಹೊರತಾಗಿ ಅನ್ಯತ್ರ ಅದನ್ನು ಸಹಿಸಬಾರದು. ತೀರ ಚಿಕ್ಕ ವಯಸ್ಸಿನಲ್ಲಿ ಮದುವೆಯಾಗಬಾರದು, ಯಾಕೆಂದರೆ ಹಾಗೆ ಮಾಡಿದರೆ, ಹುಟ್ಟುವ ಮಕ್ಕಳು ದುರ್ಬಲರೂ ಹೆಣ್ಣುಮಕ್ಕಳೂ ಆಗಿರುತ್ತವೆ, ಹೆಂಡಂದಿರು ಸ್ವೇಚ್ಛಾಚಾರಿಗಳಾಗುತ್ತಾರೆ, ಗಂಡಂದಿರು ಕುಂಠಿತ ಬೆಳವಣಿಗೆಯನ್ನು ಹೊಂದುತ್ತಾರೆ. ಮದುವೆಯಾಗುವ ಸೂಕ್ತ ವಯಸ್ಸೆಂದರೆ ಗಂಡಸರಿಗೆ ಮೂವತ್ತೇಳು ಮತ್ತು ಹೆಣ್ಣುಮಕ್ಕಳಿಗೆ ಹದಿನೆಂಟು. ಬಡತನದಿಂದ ಬಳಲುತ್ತಿದ್ದ ಥೇಲೀಸ್ ಎಲ್ಲ ಆಲಿವ್ ಗಾಣಗಳನ್ನು ಕಂತಿನ ಆಧಾರದ ಮೇಲೆ ಕೊಂಡುಕೊಂಡನಂತೆ, ಆಮೇಲೆ ಅವುಗಳ ಬಳಕೆಗೆ ತನ್ನದೇ ಆದ ಬಾಡಿಗೆಯನ್ನು ನಿಗದಿಪಡಿಸಿದನಂತೆ. ತತ್ವಜ್ಞಾನಿಗಳು ಹಣ ಮಾಡಬಹುದು ಎಂಬುದನ್ನು ತೋರಿಸಲು ಅವನು ಹೀಗೆ ಮಾಡಿದನಂತೆ. ಅವರು ಬಡವರಾಗಿದ್ದರೆ, ಅದಕ್ಕೆ ಕಾರಣ ಅವರು ಹಣಕ್ಕಿಂತ ಮಿಗಿಲಾದುದರ ಬಗ್ಗೆ ಆಲೋಚಿಸುತ್ತಿರುತ್ತಾರೆ ಎಂಬುದು. ಇವೆಲ್ಲ ಸಾಂದರ್ಭಿಕ ಉಲ್ಲೇಖಗಳು, ಅಷ್ಟೆ. ಹೆಚ್ಚು ಗಂಭೀರ ವಿಷಯಗಳನ್ನು ಪರಿಗಣಿಸಲು ಇದೀಗ ಸೂಕ್ತ ಸಮಯ.

ದೇಶದ ಪ್ರಾಮುಖ್ಯವನ್ನು ಎತ್ತಿ ಹಿಡಿಯುವ ಮೂಲಕ ಈ ಭಾಗವು ಆರಂಭವಾಗುತ್ತದೆ; ಅದು ಅತ್ಯುಚ್ಚ ಮಟ್ಟದ ಸಮುದಾಯ, ಅದರ ಉದ್ದೇಶ ಅತ್ಯಂತ ಶ್ರೇಷ್ಠವಾದ ಒಳಿತು. ಕಾಲಕ್ರಮದಲ್ಲಿ ಮೊದಲು ಬರುವುದು ಕುಟುಂಬ; ಅದು ಗಂಡು-ಹೆಣ್ಣು ಮತ್ತು ಯಜಮಾನ-ಗುಲಾಮರ ನಡುವಣ ಎರಡು ಮೂಲಭೂತ ಸಂಬಂಧದ ಮೇಲೆ ನಿರ್ಮಿತವಾದುದು, ಈ ಎರಡೂ ಸಹಜವಾದವು. ಹಲವಾರು ಕುಟುಂಬಗಳು ಸೇರಿ ಹಳ್ಳಿಯೊಂದು ನಿರ್ಮಿತವಾಗುತ್ತದೆ; ಹಾಗೆಯೇ ಹಲವಾರು ಹಳ್ಳಿಗಳ ಸಮೂಹವನ್ನೊಳಗೊಂಡುದೇ ದೇಶ, ಆದರೆ ಈ ಸೇರುವಿಕೆಯು ಸ್ವಾವಲಂಬಿಯಾಗುವಷ್ಟು ದೊಡ್ಡದಾಗಿರಬೇಕು. ಕಾಲಾನುಕ್ರಮದಲ್ಲಿ ದೇಶವು

ಕುಟುಂಬವಾದ ಮೇಲೆ ಬಂದರೂ, ಅದು ಮತ್ತು ಸಹಜವಾಗಿಯೇ ಅದಕ್ಕೂ ಮೊದಲೇ ವ್ಯಕ್ತಿಗೂ ಹಿಂದಿನದು; ಯಾಕೆಂದರೆ 'ಪೂರ್ತಿ ಬೆಳವಣಿಗೆಯಾದ ಮೇಲೆ ಏನಾಗುತ್ತದೋ ಅದನ್ನು ನಾವು ಸಹಜ ಎನ್ನುತ್ತೇವೆ'; ಮಾನವ ಸಮಾಜವು ಪೂರ್ಣ ಬೆಳವಣಿಗೆ ಹೊಂದಿದ ಮೇಲೆ ದೇಶವಾಗುತ್ತದೆ, ಹೀಗಾಗಿ ಇಡಿಯು ಬಿಡಿಗಿಂತ ಹಿಂದಿನದು. ಇಲ್ಲಿ ಕಾರ್ಯಶೀಲವಾಗಿರುವ ಕಲ್ಪನೆಯೆಂದರೆ 'ಜೀವಿ' (ಆರ್ಗಾನಿಸಂ): ದೇಹ ನಾಶವಾದ ಮೇಲೆ ಒಂದು ಕೈ ಕೈಯೇ ಅಲ್ಲ ಎಂದು ಹೇಳುತ್ತಾರೆ. ಇದರರ್ಥವೆಂದರೆ ಕೈ ಎಂಬುದನ್ನು ಅದರ ಉದ್ದೇಶದ ಆಧಾರದಲ್ಲಿ – ಅಂದರೆ ಹಿಡಿದುಕೊಳ್ಳುವುದು – ನಿರ್ಧರಿಸಬೇಕು; ಅದು ತನ್ನ ಕಾರ್ಯವನ್ನು ಸಜೀವ ದೇಹದ ಭಾಗವಾಗಿ ಮಾತ್ರ ನಿರ್ವಹಿಸಬಲ್ಲುದು. ಅದರಂತೆಯೇ, ದೇಶದ ಭಾಗವಾಗಿರದ ಹೊರತು ವ್ಯಕ್ತಿಯೊಬ್ಬ ತನ್ನ ಉದ್ದೇಶವನ್ನು ನೆರವೇರಿಸಲಾರ. ದೇಶವನ್ನು ಸ್ಥಾಪಿಸಿದವನು ಅತ್ಯಂತ ಶ್ರೇಷ್ಠ ದಾತ; ಯಾಕೆಂದರೆ ಕಾನೂನು ಇಲ್ಲದೆ ಮನುಷ್ಯನು ಅತ್ಯಂತ ಕೀಳು ಪ್ರಾಣಿಯಾಗುತ್ತಾನೆ, ಮತ್ತು ಕಾನೂನು ದೇಶದ ಅಸ್ತಿತ್ವವನ್ನವಲಂಬಿಸಿರುತ್ತದೆ ಎಂದು ಅರಿಸ್ಟಾಟಲ್ ವಿವರಿಸುತ್ತಾನೆ. ದೇಶವೆಂದರೆ ವಿನಿಮಯಕ್ಕಾಗಿ ಮತ್ತು ಅಪರಾಧ ನಿಯಂತ್ರಣಕ್ಕಾಗಿ ಮಾತ್ರ ಇರುವಂತಹುದಲ್ಲ. 'ದೇಶದ ಉದ್ದೇಶ ಒಳ್ಳೆಯ ಬದುಕು .. .. ಪರಿಪೂರ್ಣವೂ ಸ್ವಯಂಪೂರ್ಣವೂ ಆದ ಬದುಕಿನಲ್ಲಿ ದೇಶವು ಕುಟುಂಬಗಳ ಮತ್ತು ಹಳ್ಳಿಗಳ ಸಮುದಾಯ, ಅದೇ ಸುಖಮಯವೂ ಗೌರವಯುತವೂ ಆದ ಬದುಕು' (೧೨೮೦ಬಿ). 'ಒಂದು ರಾಜಕೀಯ ಸಮಾಜವು ಉದಾತ್ತ ಕಾರ್ಯಗಳಿಗಾಗಿ ಅಸ್ತಿತ್ವದಲ್ಲಿರುತ್ತದೆ, ಬರೀ ಒಡನಾಟಕ್ಕಲ್ಲ' (೧೨೮೧ಎ).

ಪ್ರತಿಯೊಂದೂ ಒಂದು ಕುಟುಂಬವನ್ನು ಹೊಂದಿದ ಮನೆತನಗಳನ್ನು ದೇಶವು ಒಳಗೊಂಡಿರುವುದರಿಂದ ರಾಜಕೀಯ ಚರ್ಚೆಯು ಕುಟುಂಬದಿಂದಲೇ ಆರಂಭವಾಗಬೇಕು. ಈ ಚರ್ಚೆಯ ಬಹುಭಾಗವು ಗುಲಾಮತನಕ್ಕೆ ಸಂಬಂಧಪಟ್ಟಿದೆ, ಯಾಕೆಂದರೆ ಪ್ರಾಚೀನ ಕಾಲದಲ್ಲಿ ಗುಲಾಮರನ್ನು ಕುಟುಂಬದ ಭಾಗವಾಗಿಯೇ ಕಾಣಲಾಗುತ್ತಿತ್ತು. ಗುಲಾಮತನವು ಆವಶ್ಯಕವಾದುದೂ ಹೌದು, ಸಮಂಜಸವಾದುದೂ ಹೌದು ಆದರೆ; ಗುಲಾಮನು ಸಹಜವಾಗಿಯೇ ಯಜಮಾನನಗಿಂತ ಕೀಳು. ಹುಟ್ಟಿನಿಂದಲೇ ಕೆಲವರನ್ನು ಅಡಿಯಾಳಾಗಿಸಲು, ಮತ್ತೆ ಕೆಲವರನ್ನು ಆಳಲು ಗುರುತಿಸಲಾಗುತ್ತಿತ್ತು. ಯಾರು ಹುಟ್ಟಿನಿಂದ ಸಹಜವಾಗಿಯೇ ತನಗಾಗಿಯಲ್ಲದೆ ಬೇರೆಯವನಿಗಾಗಿ ಇರುತ್ತಾನೆಯೋ ಅವನು ಗುಲಾಮ. ಗುಲಾಮರು ಗ್ರೀಕರಾಗಿರಬಾರದು, ಅವರು ಕಡಿಮೆ ಸಾಮರ್ಥ್ಯದ ಕೆಳಮಟ್ಟದ ಜನಾಂಗದವರಾಗಿರಬೇಕು (೧೨೫೫ಬಿ ಮತ್ತು ೧೩೩೦ಎ). ಮನುಷ್ಯನ ನಿಯಂತ್ರಣದಲ್ಲಿದ್ದರೆ ಸಾಕುಪ್ರಾಣಿಗಳು ಉತ್ತಮವಾಗುತ್ತವೆ, ಹಾಗೆಯೇ ಯಾರು

ಸಹಜವಾಗಿ ಕೀಳೋ ಅವರು ಉತ್ತಮರ ಹತೋಟಿಗೊಳಗಾಗಿ ಉತ್ತಮರಾಗುತ್ತಾರೆ. ಯುದ್ಧಖೈದಿಗಳನ್ನು ಗುಲಾಮರನ್ನಾಗಿಸಿಕೊಳ್ಳುವ ರೂಢಿಯು ಸಮರ್ಥನೀಯವೇ ಎಂಬುದಾಗಿ ಪ್ರಶ್ನಿಸಬಹುದು. ಯುದ್ಧದಲ್ಲಿ ಗೆಲ್ಲಲು ದೇಹಬಲವು ಕಾರಣವಾಗುವುದರಿಂದ ಅದನ್ನೇ ಉನ್ನತ ಗುಣವೆಂದು ಇದು ಸೂಚಿಸುತ್ತದೆ, ಆದರೆ ಇದೇ ಎಲ್ಲ ಕಾಲದಲ್ಲೂ ನಡೆಯಲಿಲ್ಲ. ಯಾರು ಆಳ್ವಿಕೆಗೊಳಗಾಗಬೇಕೋ ಅವರು ಮಣಿಯದಾದಾಗ ಅಂಥವರನ್ನು ಮಣಿಸಲು ಅವರ ವಿರುದ್ಧ ಯುದ್ಧ ಹೂಡುವುದು ನ್ಯಾಯಯುತವಾದುದು (೧೨೫೬ಬಿ). ಈ ರೀತಿಯಲ್ಲಿ, ಗೆದ್ದವರು ಸೋತವರನ್ನು ಗುಲಾಮರಾಗಿಸಿಕೊಳ್ಳುವುದನ್ನು ಸಮರ್ಥಿಸುವ ಸೂಚನೆಯಿದೆ. ಈ ವಾದವು ಎಲ್ಲ ಕಾಲದ ವಿಜಯಿಯನ್ನು ಸಮರ್ಥಿಸಲು ಸಾಕು. ಯಾವ ದೇಶವೂ ತಾನು ಇತರರಿಂದ ಆಳಲ್ಪಡಬೇಕು ಎಂಬುದು ಪ್ರಕೃತಿಯ ಬಯಕೆ, ಮತ್ತು ಪ್ರಕೃತಿಯ ಬಯಕೆಯನ್ನು ಯುದ್ಧದ ಮೂಲಕ ನಿರ್ಧರಿಸಬಹುದು ಎಂಬುದನ್ನು ಒಪ್ಪಲಾರದು. ಹೀಗಾಗಿ, ಪ್ರತಿ ಯುದ್ಧದಲ್ಲಿಯೂ ಗೆದ್ದವರದು ಸರಿ, ಸೋತವರದು ತಪ್ಪು. ಆಹಾ, ಎಂತಹ ವಾದ!

ಮುಂದೆ ಬರುವುದು ವ್ಯಾಪಾರದ ಬಗೆಗಿನ ಚರ್ಚೆ, ಇದು ಪ್ರೌಢ ಕುತರ್ಕದ ಮೇಲೆ ಗಾಢ ಪ್ರಭಾವ ಬೀರಿತು. ಒಂದು ವಸ್ತುವನ್ನು ಬಳಸುವ ಪರಿಗಳು ಎರಡು ಬಗೆಯವು: ಒಂದು ಸಮಂಜಸ, ಮತ್ತೊಂದು ಅಸಮಂಜಸ. ನಿದರ್ಶನಕ್ಕೆ, ಶೂವನ್ನು ಕಾಲಿಗೆ ಹಾಕಿಕೊಳ್ಳುವುದು ಸಮಂಜಸ ಬಳಕೆ, ಆದರೆ ಅದನ್ನು ವಿನಿಮಯ ಮಾಡಿಕೊಳ್ಳುವುದು ಅಸಮಂಜಸ ಬಳಕೆ. ಆ ಮುಂದೆ ಬರುವುದು ಶೂ ತಯಾರಕನದು ಒಂದು ಬಗೆಯ ಕೆಳಮಟ್ಟ, ಯಾಕೆಂದರೆ ತನ್ನ ಬದುಕಿಗಾಗಿ ಅವನು ಶೂವನ್ನು ಹಣಕ್ಕೆ ವಿನಿಮಯ ಮಾಡಿಕೊಳ್ಳಬೇಕು. ಚಿಲ್ಲರೆ ವ್ಯಾಪಾರದ ಹಣಗಳಿಕೆಯ ಕಲೆಯು ಸಹಜ ಭಾಗವಲ್ಲ ಎಂದು ಹೇಳಲಾಗಿದೆ (೧೨೫೭ಎ). ಹಣಗಳಿಕೆಯ ಸಹಜ ಮಾರ್ಗವೆಂದರೆ ಮನೆ ಮತ್ತು ಭೂಮಿಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವುದು. ಆದರೆ ಈ ರೀತಿಯಲ್ಲಿ ಹಣಗಳಿಸುವುದಕ್ಕೆ ಒಂದು ಮಿತಿಯಿದೆ, ಅದೇ ವ್ಯಾಪಾರಕ್ಕಾದರೆ ಈ ಮಿತಿಯಿಲ್ಲ. ವ್ಯಾಪಾರ ಎನ್ನುವುದು ಹಣಕ್ಕೆ ಸಂಬಂಧಪಟ್ಟುದು, ಆದರೆ ಹಣಗಳಿಕೆಯೆಂದರೆ ನಾಣ್ಯಗಳ ಸಂಗ್ರಹವಲ್ಲ. ವ್ಯಾಪಾರದ ಮೂಲಕ ಗಳಿಸಿದ ಹಣದ ಬಗ್ಗೆ ನ್ಯಾಯವಾಗಿಯೇ ದ್ವೇಷವಿದೆ, ಯಾಕೆಂದರೆ ಅದು ಅಸಹಜ. 'ಅತ್ಯಂತ ದ್ವೇಷಾಸ್ಪದವಾದುದು, ಮತ್ತು ದೊಡ್ಡ ಕಾರಣದಿಂದಾಗಿ ಬಡ್ಡಿ ವ್ಯವಹಾರ; ಅದು ಹಣದಿಂದ ಹೆಚ್ಚಿನ ಹಣವನ್ನು ಗಳಿಸುವ ಉದ್ದೇಶದ್ದೇ ಹೊರತು ತನ್ನ ಸಹಜ ಉದ್ದೇಶದ ಮೂಲಕವಾಗಿ ಅಲ್ಲ. ಹಣವು ವಿನಿಮಯದ ಬಳಕೆಗಾಗಿಯೇ ಇರುವುದು, ಆದರೆ ಬಡ್ಡಿಯ ಮೂಲಕ ಹೆಚ್ಚಿಸುವುದಕ್ಕಲ್ಲ.... ಹಣಗಳಿಕೆಯ ಎಲ್ಲ ವಿಧಾನಗಳಿಗಿಂತ ಈ ವಿಧಾನವು ಅತ್ಯಂತ

ಅಸಹಜವಾದದ್ದು' (೧೨೫೮).

ಈ ಸೂತ್ರದ ಪರಿಣಾಮವೇನೆಂಬುದರ ಬಗ್ಗೆ ಟಾನಿ ಅವರ 'ರಿಲಿಜನ್ ಅಂಡ್ ದ ರೈಸ್ ಆಫ್ ಕ್ಯಾಪಿಟಲಿಸಂ' ಗ್ರಂಥದಲ್ಲಿ ಓದಬಹುದು. ಆದರೆ ಅವರ ಚರಿತ್ರೆಯ ನಿರೂಪಣೆಯನ್ನು ನಂಬಬಹುದೇ ಹೊರತು, ಅವರ ವ್ಯಾಖ್ಯಾನದಲ್ಲಿ ಬಂಡವಾಳಶಾಹಿಪೂರ್ವ ಪರಿಸ್ಥಿತಿಯ ಬಗ್ಗೆ ಪಕ್ಷಪಾತವಿದೆ.

ಬಡ್ಡಿ ವ್ಯವಹಾರವೆಂದರೆ ಹಣವನ್ನು ಬಡ್ಡಿಗಾಗಿ ಎರವಲು ಕೊಡುವುದು, ಈಗಿನಂತೆಯೇ ದುಬಾರಿ ದರದಲ್ಲಿ ಅಲ್ಲ. ಗ್ರೀಕ್‌ರ ಕಾಲದಿಂದ ಇವತ್ತಿನವರೆಗೂ ಮನುಷ್ಯ ಸಂಕುಲವು, ಕನಿಷ್ಠ ಪಕ್ಷ ಅವರಲ್ಲಿ ಹೆಚ್ಚು ಆರ್ಥಿಕ ಬಲಿಷ್ಠರು, ಸಾಲಗಾರರು (ಡೆಟರ್ಸ್) ಮತ್ತು ಸಾಲಿಗರು (ಕ್ರೆಡಿಟರ್ಸ್) ಎಂಬುದಾಗಿ ವಿಭಜನೆಗೊಂಡಿದೆ; ಸಾಲಗಾರರು ಬಡ್ಡಿಯನ್ನು ಒಪ್ಪುವುದಿಲ್ಲ, ಆದರೆ ಸಾಲಿಗರು ಒಪ್ಪುತ್ತಾರೆ. ಬಹುಪಾಲು ಕಾಲಗಳಲ್ಲಿ ಸಾಲಗಾರರಾಗಿದ್ದುದು ಭೂಮಾಲೀಕರೇ, ವ್ಯಾಪಾರಿಗಳು ಸಾಲಿಗರು. ಕೆಲವರನ್ನು ಹೊರತುಪಡಿಸಿದರೆ, ತತ್ವಜ್ಞಾನಿಗಳ ಅಭಿಪ್ರಾಯವು ತಮ್ಮ ವರ್ಗದ ಆರ್ಥಿಕ ಹಿತಾಸಕ್ತಿಗಳಿಗೆ ಅನುಗುಣವಾಗಿತ್ತು. ಗ್ರೀಕ್ ತತ್ವಜ್ಞಾನಿಗಳು ಸೇರಿದ್ದುದು, ಅಥವಾ ಅವರ ಆಶ್ರಯದಾತರು, ಭೂಮಾಲೀಕರು; ಹೀಗಾಗಿ ಅವರು ಬಡ್ಡಿಪದ್ಧತಿಯನ್ನು ಒಪ್ಪಲಿಲ್ಲ. ಮಧ್ಯಕಾಲೀನ ತತ್ವಜ್ಞಾನಿಗಳು ಚರ್ಚ್ ಜನರು, ಚರ್ಚ್‌ನ ಆದಾಯಮೂಲವು ಮುಖ್ಯವಾಗಿ ಭೂಮಿ; ಹೀಗಾಗಿ ಅವರಿಗೆ ಅರಿಸ್ಟಾಟಲ್‌ನ ಅಭಿಪ್ರಾಯವನ್ನು ಬದಲಾಯಿಸಲು ಕಾರಣ ಕಾಣಲಿಲ್ಲ. ಬಡ್ಡಿಪದ್ಧತಿಯ ಬಗೆಗಿನ ಅವರ ವಿರೋಧವನ್ನು ಪುಷ್ಟಿಗೊಳಿಸಿದ್ದು ಯೆಹೂದಿ ದ್ವೇಷ, ಯಾಕೆಂದರೆ ಬಹುತೇಕ ಚಲಾವಣೆಯ ಹಣ ಯೆಹೂದಿಗಳದು. ಮತಪ್ರಚಾರರು ಮತ್ತು ಬ್ಯಾರನ್‌ಗಳ ನಡುವೆ ಘರ್ಷಣೆ ಇರುತ್ತಿತ್ತು, ಕೆಲವೇಳೆ ಬಿರುಸಾಗಿ. ಆದರೆ ಸಾಲ ಕೊಟ್ಟು ಬೆಳೆ ಕೈಕೊಟ್ಟಾಗ ತಮ್ಮ ಮೇಲೆ ಸವಾರಿ ಮಾಡುತ್ತಿದ್ದ ಕೆಡುಕ ಯೆಹೂದಿಯ ವಿರುದ್ಧ ಅವರು ಒಗ್ಗೂಡಬಹುದಾಗಿತ್ತು, ಅವನ ಹಿಡಿತಕ್ಕೆ ಸೂಕ್ತ ಫಲ ನೀಡಬೇಕಾಗಿತ್ತು.

ಮತಧರ್ಮಸುಧಾರಣೆಯೊಂದಿಗೆ ಪರಿಸ್ಥಿತಿಯು ಬದಲಾಯಿಸಿತು. ಶ್ರದ್ಧಾವಂತ ಪ್ರಾಟೆಸ್ಟಂಟರಲ್ಲಿ ಬಹುತೇಕರು ವ್ಯಾಪಾರೋದ್ಯಮಿಗಳು, ಅವರಿಗೆ ಬಡ್ಡಿ ತೆಗೆದುಕೊಂಡು ಸಾಲ ನೀಡುವುದು ಆವಶ್ಯಕವಾಗಿತ್ತು. ಇದರ ಪರಿಣಾಮವಾಗಿ ಮೊದಲು ಕಾಲ್ವಿನ್ ಮತ್ತು ಇತರ ಪ್ರಾಟೆಸ್ಟಂಟ್ ದೈವಜ್ಞರು (ಡಿವೈನ್) ಬಡ್ಡಿ ವಿಧಿಸುವುದಕ್ಕೆ ಅನುಮತಿಯಿತ್ತರು. ಕೊನೆಗೆ ಕ್ಯಾಥೋಲಿಕ್ ಚರ್ಚ್ ಕೂಡ ಅದೇ ದಾರಿಯನ್ನು ಹಿಡಿಯುವುದು ಅನಿವಾರ್ಯವಾಯಿತು. ಹಳೆಯ ಕಾಲದ ನಿಷೇಧಗಳು ಆಧುನಿಕ ಜಗತ್ತಿಗೆ ಸರಿಹೊಂದಲಿಲ್ಲ. ವಿಶ್ವವಿದ್ಯಾನಿಲಯಗಳ ಹಣಹೂಡಿಕೆಯ ಕಾರಣ ತಮ್ಮ ಆದಾಯ ಪಡೆಯುತ್ತಿದ್ದ ತತ್ವಜ್ಞಾನಿಗಳು, ತಾವು ಧರ್ಮಬೋಧಕರಾಗಿದ್ದುದನ್ನು

ನಿಲ್ಲಿಸಿದ ಕಾಲದಿಂದ ಅವರಿಗಿದ್ದ ಭೂಮಾಲೀಕತ್ವದೊಡಗಿನ ನಂಟು ಹೋಗಿ ಅವರು ಬಡ್ಡಿ ವ್ಯವಹಾರವನ್ನು ಒಪ್ಪಿದ್ದರು. ಪ್ರತಿ ಹಂತದಲ್ಲಿಯೂ, ಅನುಕೂಲಕರ ಆರ್ಥಿಕ ಅಭಿಪ್ರಾಯಗಳನ್ನು ಸಮರ್ಥಿಸುವ ಹಲವಾರು ಸಿದ್ಧಾಂತಗಳು ಬಂದಿವೆ.

ಅರಿಸ್ಟಾಟಲ್ ಪ್ಲೇಟೋನ ಯುಟೋಪಿಯವನ್ನು ಅನೇಕ ನೆಲೆಗಳಲ್ಲಿ ಟೀಕಿಸಿದ್ದಾನೆ. ಅದು ದೇಶಕ್ಕೆ ವಿಪರೀತ ಐಕ್ಯವನ್ನು ನೀಡುತ್ತದೆ, ಎಂಬುದನ್ನು ಕುರಿತು ಅದರಿಂದಾಗಿ ಅದನ್ನು ವ್ಯಕ್ತಿಯ ಮಟ್ಟಕ್ಕಿಳಿಸುತ್ತದೆ ಎಂಬ ಮೊದಲ ಕುತೂಹಲದಾಯಕ ಟೀಕೆ. ಪ್ರತಿ ಓದುಗನಿಗೂ ಸಹಜವಾಗಿ ಕಣ್ಣಿಗೆ ಬೀಳುವ ಮುಂದಿನ ಟೀಕೆಯೆಂದರೆ ಕುಟುಂಬ ಪದ್ಧತಿಯನ್ನು ರದ್ದುಪಡಿಸಬೇಕೆಂಬ ಪ್ರಸ್ತಾಪ. ಮಗತನ ಸಾಧ್ಯವಾಗುವ ವಯಸ್ಸಿನವರಿಗೆಲ್ಲ 'ಮಗ' ಎಂಬ ಹೆಸರನ್ನು ಕೊಟ್ಟರೆ ಸಾಕು, ವ್ಯಕ್ತಿಯು ಪ್ರಸ್ತುತ ತನ್ನ ಸ್ವಂತ ಮಗನ ಬಗ್ಗೆ ಹೊಂದಿರುವ ಎಲ್ಲ ಭಾವನೆಗಳನ್ನೂ ಆ ಎಲ್ಲರ ಬಗೆಗೂ ಹೊಂದುವಂತಾಗುತ್ತದೆಂದು ಪ್ಲೇಟೋ ಭಾವಿಸುತ್ತಾನೆ, ಅದರಂತೆಯೇ 'ತಂದೆ'ಯ ವಿಷಯವೂ. ಇದಕ್ಕೆ ವ್ಯತಿರಿಕ್ತವಾಗಿ, ಅತ್ಯಂತ ಹೆಚ್ಚಿನ ಸಂಖ್ಯೆಗೆ ಸಮಾನವಾಗಿ ಅನ್ವಯಿಸುವಂತಹುದು ಅತ್ಯಂತ ಕನಿಷ್ಠವಾಗಿರುತ್ತದೆ ಎಂದು ಅರಿಸ್ಟಾಟಲ್ ವಾದಿಸುತ್ತ, 'ಮಗಂದಿರು' ಹಲವಾರು 'ತಂದೆಯರಿಗೆ' ಸಮಾನವಾದರೆ ಅವರೆಲ್ಲರೂ ಸಾಮಾನ್ಯವಾಗಿ ಅವಜ್ಞೆಗೆ ಒಳಗಾಗುತ್ತಾರೆ, ಹೀಗಾಗಿ ಪೇಟೋನ ಅರ್ಥದಲ್ಲಿ 'ಮಗ'ನಾಗುವುದಕ್ಕಿಂತ 'ನಂಟ'ನಾಗಿರುವುದು ಮೇಲು. ಪ್ಲೇಟೋನ ಯೋಜನೆಯು ಪ್ರೀತಿಯನ್ನು ನೀರಾಗಿಸಿಬಿಡುತ್ತದೆ. ಆನಂತರ ಒಂದು ಕುತೂಹಲಕಾರಕ ವಾದವೊಂದಿದೆ: ಅದೆಂದರೆ, ಹಾದರದಿಂದ ದೂರಾಗಿರುವುದು ಸದ್ಗುಣವಾದರೆ ಇಂತಹ ಸದ್ಗುಣವನ್ನು ಮತ್ತು ಅದರಂತೆಯೇ ದುರ್ಗುಣವನ್ನು ತೊಡೆದುಹಾಕಿಬಿಟ್ಟ ಸಾಮಾಜಿಕ ವ್ಯವಸ್ಥೆಯು ಕರುಣಾಜನಕವಾಗುತ್ತದೆ (೧೨೬೩ಬಿ). ಆಮೇಲೆ ಅವನು ಕೇಳುತ್ತಾನೆ: ಹೆಂಗಸರೂ ಸಮಾನವಾಗಿಬಿಟ್ಟರೆ ಮನೆಯನ್ನು ನೋಡಿಕೊಳ್ಳುವವರು ಯಾರು? ಒಮ್ಮೆ ನಾನು 'ವಾಸ್ತುವಿಜ್ಞಾನ ಮತ್ತು ಸಾಮಾಜಿಕ ವ್ಯವಸ್ಥೆ' ಎಂಬ ಲೇಖನವೊಂದನ್ನು ಬರೆದೆ; ಅದರಲ್ಲಿ ಕಮ್ಯುನಿಸಂ ಅನ್ನು ಕುಟುಂಬ ಪದ್ಧತಿಯ ನಿಷೇಧದೊಡನೆ ಸೇರಿಸದಿದ್ದರೆ, ಅವರು ಹೆಚ್ಚು ಸಂಖ್ಯೆಯ ಜನರಿಗಾಗಿ ಸಮುದಾಯ ಅಡಿಗೆಮನೆಗಳು, ಊಟದ ಮನೆಗಳು ಹಾಗೂ ಶಿಶುಕಲ್ಯಾಣಕೇಂದ್ರಗಳನ್ನೂ ಸಮುದಾಯ ಮನೆಗಳ ಪರವಾಗಿ ಮಾತನಾಡುತ್ತಾರೆ ಎಂದು ಸೂಚಿಸಿದ್ದೆ. ಈ ಪದ್ಧತಿಯನ್ನು ಬ್ರಹ್ಮಚರ್ಯರಹಿತ ಆಶ್ರಮಗಳೆಂದು ವರ್ಣಿಸಬಹುದು. ಪ್ಲೇಟೋನ ಯೋಜನೆಯನ್ನು ಜಾರಿಗೆ ತರುವುದು ಆವಶ್ಯಕ, ಆದರೆ ಅವನು ಶಿಫಾರಸು ಮಾಡುವ ಅನೇಕ ಇತರ ವಿಷಯಗಳಿಗಿಂತ ಹೆಚ್ಚು ಅಸಾಧ್ಯವೇನೂ ಅಲ್ಲ.

ಪ್ಲೇಟೋನ ಕಮ್ಯುನಿಸಂ ಅರಿಸ್ಟಾಟಲ್‌ಗೆ ಕಿರಿಕಿರಿಯುಂಟುಮಾಡುತ್ತದೆ. ಅದು ಸೋಮಾರಿ ಜನರ ವಿರುದ್ಧವಾದ ಕೋಪವಾಗಿ ಮಾರ್ಪಡುತ್ತದೆ, ಸಹಪ್ರಯಾಣಿಕರಲ್ಲಿ ಸಾಮಾನ್ಯವಾದ ಜಗಳಗಳಾಗುತ್ತವೆ ಎಂದವನು ಹೇಳುತ್ತಾನೆ. ಪ್ರತಿಯೊಬ್ಬನೂ ತನ್ನ ಕೆಲಸವನ್ನು ತಾನು ಮಾಡಿಕೊಂಡಿದ್ದರೆ ಸಾಕು. ಆಸ್ತಿಯು ಖಾಸಗಿಯಾಗಿರಬೇಕು, ಆದರೆ ಅದನ್ನು ಸಮಾನ ಒಳಿತಿಗೆ ಬಳಕೆಮಾಡುವ ರೀತಿಯಲ್ಲಿ ಜನರು ಪರೋಪಕಾರ ಪ್ರವೃತ್ತಿ ಹೊಂದುವಂತೆ ಅವರನ್ನು ತರಬೇತಿಗೊಳಿಸುವುದು ಆವಶ್ಯಕ. ಪರೋಪಕಾರ ಮತ್ತು ದಾನಪ್ರವೃತ್ತಿಗಳು ಸದ್ಗುಣಗಳು, ಖಾಸಗಿ ಆಸ್ತಿಯಿಲ್ಲದಿದ್ದರೆ ಅವು ಅಸಾಧ್ಯ. ಕೊನೆಯಲ್ಲಿ ಅವನು ಹೇಳುವುದೆಂದರೆ: ಪ್ಲೇಟೋನ ಯೋಜನೆಗಳು ಒಳ್ಳೆಯವಾಗಿದ್ದರೆ, ಅವುಗಳ ಬಗ್ಗೆ ಈ ಮುಂಚೆಯೇ ಯಾರಾದರೂ ಚಿಂತನೆ ನಡೆಸುತ್ತಿದ್ದರು.[೭೫] ಪ್ಲೇಟೋ ಹೇಳುವುದನ್ನು ನಾನು ಒಪ್ಪುವುದಿಲ್ಲ, ಆದರೆ ಅದನ್ನು ಒಪ್ಪುವ ಹಾಗೆ ಏನಾದರೂ ಇದ್ದರೆ, ಅದಕ್ಕೆ ಕಾರಣನಾದವನ ವಿರುದ್ಧ ಅರಿಸ್ಟಾಟಲ್ ಮಾಡುವ ವಾದ.

ಗುಲಾಮಪದ್ಧತಿಗೆ ಸಂಬಂಧಿಸಿದಂತೆ ಈಗಾಗಲೇ ಗಮನಿಸಿರುವಂತೆ, ಅರಿಸ್ಟಾಟಲ್‌ಗೆ ಸಮಾನತೆಯಲ್ಲಿ ಶ್ರದ್ಧೆಯಿಲ್ಲ. ಆದರೆ ಗುಲಾಮರು ಮತ್ತು ಹೆಂಗಸರ ಅಡಿಯಾಳುತನವನ್ನು ಒಪ್ಪಿದೆವೆಂದುಕೊಳ್ಳೋಣ; ಆಗ ಎಲ್ಲ ಪ್ರಜೆಗಳು ರಾಜಕೀಯವಾಗಿ ಸಮಾನರೇ ಎಂಬ ಪ್ರಶ್ನೆಯು ಹಾಗೆಯೇ ಉಳಿಯುತ್ತದೆ. ಎಲ್ಲ ಕ್ರಾಂತಿಗಳು ಆಸ್ತಿಯ ಕ್ರಮಬದ್ಧತೆಯ ಕಡೆ ತಿರುಗುತ್ತದೆಂಬುದರಿಂದ ಇದು ಅಪೇಕ್ಷಣೀಯವೆಂದು ಕೆಲವರು ಭಾವಿಸುತ್ತಾರೆ, ಎಂದವನು ಹೇಳುತ್ತಾನೆ. ಆದರೆ, ಎಲ್ಲ ಅಪರಾಧಗಳೂ ಕೊರತೆಗಿಂತ ಅತಿಯಾಗುವುದರ ಕಾರಣದಿಂದ ನಡೆಯುತ್ತವೆ ಎಂಬ ವಿವರಣೆ ನೀಡಿ ಈ ವಾದವನ್ನು ಅವನು ತಿರಸ್ಕರಿಸುತ್ತಾನೆ. ಯಾವನೂ ಚಳಿಯಿಂದ ದೂರಮಾಡಲು ದೌರ್ಜನ್ಯ ಎಸಗುವುದಿಲ್ಲ.

ಇಡೀ ಸಮುದಾಯದ ಒಳಿತನ್ನು ಸಾಧಿಸುವ ಗುರಿಯನ್ನು ಹೊಂದಿರುವ ಸರ್ಕಾರವು ಒಳ್ಳೆಯದು, ತನ್ನ ಒಳಿತನ್ನು ಮಾತ್ರ ಗುರಿಯಾಗಿಟ್ಟುಕೊಂಡಿರುವುದು ಕೆಟ್ಟದ್ದು. ಒಳ್ಳೆಯ ಸರ್ಕಾರಗಳಲ್ಲಿ ಮೂರು ಬಗೆ: ರಾಜಪ್ರಭುತ್ವ, ಶ್ರೀಮಂತಪ್ರಭುತ್ವ ಮತ್ತು ಸಾಂವಿಧಾನಿಕ ಸರ್ಕಾರ (ಅಥವಾ ರಾಜ್ಯವ್ಯವಸ್ಥೆ); ಅಂತೆಯೇ ಮೂರು ಬಗೆಯ ಕೆಟ್ಟ ಸರ್ಕಾರಗಳು: ನಿರಂಕುಶಾಡಳಿತ, ಅಲ್ಪಜನಾಧಿಪತ್ಯ ಮತ್ತು ಪ್ರಜಾಪ್ರಭುತ್ವ ಅಲ್ಲದೆ ಇವುಗಳ ಅನೇಕ ಮಿಶ್ರಣರೂಪಗಳೂ ಇರಲು ಸಾಧ್ಯ. ಅಧಿಕಾರ ಹಿಡಿದವರ

---

೭೫. ನೋಡಿ, ಸಿಡ್ನಿ ಸ್ಮಿತ್‌ನಲ್ಲಿನ ನೂಡಲ್ಸ್ ಆರೇಷನ್, 'ಪ್ರಸ್ತಾಪವು ಸಮಂಜಸವಾಗಿದ್ದರೆ, ಸ್ಯಾಕ್ಸನ್ನರು ಅದನ್ನು ಕೈಬಿಡುತ್ತಿದ್ದರೇ? ಡೇನರು ಅದನ್ನು ಅನಾದರ ಮಾಡುತ್ತಿದ್ದರೇ? ಅದು ನಾರ್ಮನ್ನರ ವಿವೇಕದ ಕಣ್ಣು ತಪ್ಪಿಸುತ್ತಿತ್ತೇ?' (ಇದನ್ನು ನಾನು ನೆನಪಿನಿಂದ ಉದ್ಧರಿಸುತ್ತಿದ್ದೇನೆ.)

ನೈತಿಕ ಗುಣಗಳಿಗನುಗುಣವಾಗಿ ಒಳ್ಳೆಯ ಅಥವಾ ಕೆಟ್ಟ ಸರ್ಕಾರಗಳನ್ನು ನಿರ್ಧರಿಸುವ ಪ್ರವೃತ್ತಿಯನ್ನು ಕಾಣುತ್ತೇವೆಯೇ ವಿನಾ ಸಂವಿಧಾನ ಸ್ವರೂಪದ ಮೇಲಲ್ಲ. ಆದರೆ ಇದು ಭಾಗಶಃ ಮಾತ್ರ ನಿಜ. ಶ್ರೀಮಂತಪ್ರಭುತ್ವವು ಸದ್ಗುಣಿಗಳ ಆಳ್ವಿಕೆ, ಅಲ್ಪಜನಾಧಿಪತ್ಯವು ಹಣವಂತರ ಆಳ್ವಿಕೆ; ಸದ್ಗುಣ ಮತ್ತು ಹಣವಂತಿಕೆಗಳನ್ನು ಕಟ್ಟುನಿಟ್ಟಾಗಿ ಸಮಾನಾರ್ಥಕವೆಂದು ಅರಿಸ್ಟಾಟಲ್ ಪರಿಗಣಿಸುವುದಿಲ್ಲ. ಸುವರ್ಣ ಮಾಧ್ಯಮ ಸಿದ್ಧಾಂತದ ಪ್ರಕಾರ ಅವನು ಹೇಳುವುದು ಎಂದರೆ ತಕ್ಕಮಟ್ಟಿಗಿನ ಸಾಮರ್ಥ್ಯವನ್ನು ಸದ್ಗುಣದೊಂದಿಗೆ ಸೇರಿಸುವುದು. 'ಮನುಷ್ಯಸಂಕುಲವು ಬಾಹ್ಯ ವಸ್ತುಗಳಿಂದ ಸದ್ಗುಣವನ್ನು ಸ್ಥಾಪಿಸಲಾರದು ಅಥವಾ ಹೊಂದಲಾರದು. ಆದರೆ ಸದ್ಗುಣ ಮತ್ತು ಸುಖಗಳ ನೆರವಿನಿಂದ ಬಾಹ್ಯ ವಸ್ತುಗಳು ಹಾಗೆ ಮಾಡಬಲ್ಲುದು; ಕೆಲಸಕ್ಕೆ ಬಾರದಷ್ಟು ಪ್ರಮಾಣದ ಬಾಹ್ಯ ವಸ್ತುಗಳನ್ನು ಹೊಂದಿದ್ದೂ ಉನ್ನತ ಗುಣಗಳ ಕೊರತೆಯುಳ್ಳವರಿಗಿಂತ, ಸಂತೋಷ ಅಥವಾ ಸದ್ಗುಣವನ್ನು ಅಥವಾ ಎರಡನ್ನೂ ಹೊಂದಿದವರನ್ನು ಉನ್ನತ ಮನಸ್ಸು ಮತ್ತು ನಡವಳಿಕೆಗಳ ಜೊತೆಗೆ ತಕ್ಕಮಟ್ಟಿಗಿನ ಬಾಹ್ಯ ಸೌಕರ್ಯಗಳನ್ನುಳ್ಳವರಲ್ಲಿ ಹೆಚ್ಚಾಗಿ ಕಾಣಬಹುದು' (೧೩೨೩ಎ ಮತ್ತು ಬಿ). ಹೀಗಾಗಿ ಅತ್ಯುತ್ತಮರ ಆಳ್ವಿಕೆ (ಶ್ರೀಮಂತಪ್ರಭುತ್ವ) ಮತ್ತು ಹಣವಂತರ (ಅಲ್ಪಜನಾಧಿಪತ್ಯ) ಇವುಗಳ ನಡುವೆ ವ್ಯತ್ತಾಸವಿದೆ, ಯಾಕೆಂದರೆ ಅತ್ಯುತ್ತಮರಿಗೆ ತಕ್ಕಮಟ್ಟಿಗಿನ ಹಣವಿರುತ್ತದೆ ಅಷ್ಟೆ. ಹಾಗೆಯೇ ಪ್ರಜಾಪ್ರಭುತ್ವ ಮತ್ತು ರಾಜ್ಯವ್ಯವಸ್ಥೆಯ ನಡುವೆಯೂ ವ್ಯತ್ಯಾಸವಿದೆ; ಸರ್ಕಾರಗಳ ನಡುವಣ ನೈತಿಕ ವ್ಯತ್ಯಾಸಗಳ ಜೊತೆಗೆ, ಅರಿಸ್ಟಾಟಲ್ 'ರಾಜ್ಯವ್ಯವಸ್ಥೆ' ಎಂದು ಕರೆಯುವುದರಲ್ಲಿ ಒಂದಷ್ಟು ಅಲ್ಪಜನಾಧಿಪತ್ಯದ ಅಂಶಗಳು ಉಳಿದಿರುತ್ತವೆ (೧೨೯೩ಬಿ). ಆದರೆ ರಾಜಪ್ರಭುತ್ವ ಮತ್ತು ನಿರಂಕುಶಾಧಿಪತ್ಯದ ನಡುವೆ ಇರುವ ಒಂದೇ ವ್ಯತ್ಯಾಸವೆಂದರೆ ನೈತಿಕತೆ.

ಆಳುವ ವರ್ಗದ ಆರ್ಥಿಕ ಸ್ಥಿತಿಗತಿಗಳ ಮೇಲೆ ಅಲ್ಪಜನಾಧಿಪತ್ಯ ಮತ್ತು ಪ್ರಜಾಪ್ರಭುತ್ವಗಳಲ್ಲಿ ವ್ಯತ್ಯಾಸ ಮಾಡುವುದನ್ನು ಅವನು ಒತ್ತಿ ಹೇಳುತ್ತಾನೆ: ಬಡವರ ಬಗ್ಗೆ ಕಾಳಜಿಯಿಲ್ಲದೆ ಹಣವಂತರು ಆಳ್ವಿಕೆ ನಡೆಸಿದರೆ ಅದು ಅಲ್ಪಜನಾಧಿಪತ್ಯ, ಬಡವರ ಕೈಯಲ್ಲಿ ಅಧಿಕಾರವಿದ್ದು ಅವರು ಹಣವಂತರನ್ನು ಲೆಕ್ಕಿಸದಿರುವಾಗ ಪ್ರಜಾಪ್ರಭುತ್ವ.

ರಾಜಪ್ರಭುತ್ವವು ಶ್ರೀಮಂತಪ್ರಭುತ್ವಕ್ಕಿಂತ ಉತ್ತಮವಾದುದು, ಶ್ರೀಮಂತಪ್ರಭುತ್ವವು ರಾಜ್ಯವ್ಯವಸ್ಥೆಗಿಂತ ಉತ್ತಮವಾದುದು. ಆದರೆ ಅತ್ಯುತ್ತಮವಾದವರ ಲಂಚಗುಳಿತನವು ಅತ್ಯಂತ ಹೀನವಾದದ್ದು: ಹೀಗಾಗಿ ನಿರಂಕುಶಾಧಿಪತ್ಯವು ಅಲ್ಪಜನಾಧಿಪತ್ಯಕ್ಕಿಂತ, ಅಲ್ಪಜನಾಧಿಪತ್ಯವು ಪ್ರಜಾಪ್ರಭುತ್ವಕ್ಕಿಂತ ಹೀನವಾದುದು. ಈ ರೀತಿಯಲ್ಲಿ ಅರಿಸ್ಟಾಟಲ್ ಪ್ರಜಾಪ್ರಭುತ್ವದ ಪರವಾಗಿ ವಿಶಿಷ್ಟ ಸಮರ್ಥನೆಯತ್ತ ಧಾವಿಸುತ್ತಾನೆ. ಯಾಕೆಂದರೆ ಬಹುತೇಕ ವಾಸ್ತವ ಸರ್ಕಾರಗಳು ಕೆಟ್ಟವು, ಹೀಗಾಗಿ ವಾಸ್ತವ ಸರ್ಕಾರಗಳ ಪೈಕಿ

ಪ್ರಜಾಪ್ರಭುತ್ವಗಳು ಅತ್ಯುತ್ತಮವಾದುದೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಪ್ರಜಾಪ್ರಭುತ್ವದ ಬಗೆಗಿನ ಗ್ರೀಕ್ ಪರಿಕಲ್ಪನೆಗಳು ಹಲವು ವಿಧಗಳಲ್ಲಿ ನಮ್ಮದಕ್ಕಿಂತ ಹೆಚ್ಚು ಅತಿರೇಕವಾದವು; ನಿದರ್ಶನಕ್ಕೆ, ದಂಡಾಧಿಕಾರಿಗಳನ್ನು (ಮ್ಯಾಜಿಸ್ಟ್ರೇಟ್)ಗಳನ್ನು ಚುನಾಯಿಸುವುದು ಅಲ್ಪಜನಾಧಿಪತ್ಯದಲ್ಲಿ, ಆದರೆ ಅವರನ್ನು ಲಾಟರಿ ಮೂಲಕ ಆಯ್ಕೆ ಮಾಡುವುದು ಪ್ರಜಾಸತ್ತಾತ್ಮಕ ಎಂದು ಅರಿಸ್ಟಾಟಲ್ ಹೇಳುತ್ತಾನೆ. ಅತಿರೇಕ ಪ್ರಜಾಪ್ರಭುತ್ವಗಳಲ್ಲಿ, ಪ್ರಜಾಪರಿಷತ್ತುಗಳು ಕಾನೂನಿಗೆ ಅತೀತವಾದವು, ಪ್ರತಿ ವಿಷಯುವನ್ನೂ ಸ್ವತಂತ್ರವಾಗಿ ನಿರ್ಧರಿಸಲಾಗುತ್ತಿತ್ತು. ಅಥೀನಿಯನ್ ನ್ಯಾಯಾಲಯಗಳು ಲಾಟರಿ ಮೂಲಕ ಆಯ್ಕೆ ಮಾಡಿದ ಅಧಿಕ ಸಂಖ್ಯೆಯ ಪ್ರಜೆಗಳಿಂದ ತುಂಬಿರುತ್ತಿದ್ದವು, ಅವರಿಗೆ ಸಹಾಯ ಮಾಡಲು ನ್ಯಾಯಮಂಡಲಿಯೂ (ಜ್ಯೂರಿ) ಇರುತ್ತಿರಲಿಲ್ಲ. ಅವರು ಮಾತುಗಾರಿಕೆಯ ಮೂಲಕ ಪಕ್ಷದ ರಾಗಭಾವಗಳಿಗೆ ಒಳಗಾಗುತ್ತಿದ್ದರು. ಪ್ರಜಾಪ್ರಭುತ್ವವನ್ನು ಟೀಕಿಸಿದರೆ, ಅದು ಇಂತಹ ಕಾರಣಗಳಿಂದ ಎಂದು ಅರ್ಥಮಾಡಿಕೊಳ್ಳಬೇಕು.

ಕ್ರಾಂತಿಯ ಬಗ್ಗೆ ದೀರ್ಘ ಚರ್ಚೆಯೊಂದಿದೆ. ಗ್ರೀಸ್‌ನಲ್ಲಿ ಹಿಂದಿನ ಲ್ಯಾಟಿನ್ ಅಮೆರಿಕದಲ್ಲಿದ್ದಂತೆ ಕ್ರಾಂತಿಗಳು ಆಗಾಗ ನಡೆಯುತ್ತಿದ್ದವು, ಹೀಗಾಗಿ ಈ ಕುರಿತು ವಿಚಾರಗಳನ್ನು ಮಂಡಿಸಲು ಅರಿಸ್ಟಾಟಲ್‌ಗೆ ಬೇಕಾದಷ್ಟು ಅನುಭವವಿತ್ತು. ಅದಕ್ಕೆ ಮುಖ್ಯ ಕಾರಣ ಅಲ್ಪಜನಾಧಿಪತಿಗಳು ಮತ್ತು ಪ್ರಜಾಪ್ರಭುತ್ವವಾದಿಗಳ ನಡುವಣ ಘರ್ಷಣೆ. ಪ್ರಜಾಪ್ರಭುತ್ವವು ಉದಯಿಸುವುದು ಸಮಾನ ಸ್ವತಂತ್ರರಾದವರು ಎಲ್ಲ ವಿಧಗಳಲ್ಲೂ ಸ್ವತಂತ್ರರಾಗಿರಬೇಕೆಂಬ ಶ್ರದ್ಧೆಯಿಂದಾಗಿ; ಅಲ್ಪಜನಾಧಿಪತ್ಯ ಉಂಟಾಗುವುದು ಮೇಲುವರ್ಗದ ಜನರು ಎಲ್ಲ ವಿಧಗಳಲ್ಲೂ ಅತೀವ ಗೌರವವನ್ನು ನಿರೀಕ್ಷಿಸುವುದರಿಂದ ಎಂದವನು ಹೇಳುತ್ತಾನೆ. ಎರಡರಲ್ಲೂ ಒಂದು ಬಗೆಯ ನ್ಯಾಯವಿದೆ, ಆದರೆ ಅದು ಅತ್ಯುತ್ತಮವಾದುದಲ್ಲ. 'ಹೀಗಾಗಿ ಎರಡೂ ಪಕ್ಷಗಳು, ಸರ್ಕಾರಗಳಲ್ಲಿ ತಮ್ಮ ಪೂರ್ವಕಲ್ಪಿತಗಳಿಗೆ ಅನುಗುಣವಾದ ರೀತಿಯಲ್ಲಿ ಪಾಲನ್ನು ಪಡೆಯುವುದಿಲ್ಲವೋ ಆಗ ಕ್ರಾಂತಿಯುಂಟಾಗುತ್ತದೆ' (೧೩೦೧[a]). ಪ್ರಜಾಪ್ರಭುತ್ವಗಳಲ್ಲಿ ಅಲ್ಪಜನಾಧಿತ್ಯಗಳಿಗಿಂತ ಕ್ರಾಂತಿಯಾಗುವ ಸಂಭವಗಳು ಕಡಿಮೆ, ಯಾಕೆಂದರೆ ಅಲ್ಪಜನಾಧಿಪತ್ಯಗಳು ಪರಸ್ಪರ ಜಗಳ ಮಾಡಿಕೊಳ್ಳಬಹುದು. ಅಲ್ಪಜನಾಧಿಪತಿಗಳು ವೀರ್ಯವಂತರಾಗಿದ್ದಂತೆ ಕಾಣುತ್ತದೆ. ಕೆಲವು ನಗರಗಳಲ್ಲಿ ಅವರು ಈ ರೀತಿ ಪ್ರಮಾಣ ಮಾಡುತ್ತಿದ್ದರೆಂದು ಹೇಳುತ್ತಾರೆ: 'ನಾನು ಜನತೆಯ ಶತ್ರುವಾಗಿರುತ್ತೇನೆ, ನನಗೆ ಸಾಧ್ಯವಾದ ಮಟ್ಟಿಗೆ ಅವರಿಗೆ ಕೇಡು ಮಾಡಲು ಯೋಜನೆಗಳನ್ನು ರೂಪಿಸುತ್ತೇನೆ.' ಈಗಿನ ಕಾಲದ ಪ್ರತಿಗಾಮಿಗಳು ಇಷ್ಟು ಮನಸ್ಸು ಬಿಚ್ಚಿ ಹೇಳುವವರಲ್ಲ.

ಕ್ರಾಂತಿಯನ್ನು ತಪ್ಪಿಸಲು ಆವಶ್ಯಕವಾದವು ಮೂರು ಅಂಶಗಳು: ಶಿಕ್ಷಣದ ಮೂಲಕ ಸರ್ಕಾರದ ಬಗ್ಗೆ ಪ್ರಚಾರ, ಸಣ್ಣ ಪುಟ್ಟ ವಿಚಾರಗಳಲ್ಲೂ ಕಾನೂನಿಗೆ

ಗೌರವ ತೋರುವುದು, ಮತ್ತು ಕಾನೂನು ಮತ್ತು ಆಡಳಿತ ಯಂತ್ರಗಳು ನ್ಯಾಯಬದ್ಧವಾಗಿರುವುದು, ಅಂದರೆ 'ಪ್ರಮಾಣಾನುಗುಣವಾದ ಸಮಾನತೆ, ಮತ್ತು ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಪಾಡಿಗೆ ಸಂತೋಷವಾಗಿರುವ ಅವಕಾಶ' (೧೩೦೭ಎ, ೧೩೦೭ಬಿ, ೧೩೧೦ಎ). 'ಪ್ರಮಾಣಾನುಗುಣವಾದ ಸಮಾನತೆ'ಯ ಬಗೆಗಿನ ತೊಂದರೆಗಳನ್ನು ಅರಿಸ್ಟಾಟಲ್ ಅರ್ಥಮಾಡಿಕೊಂಡಂತೆಯೇ ಕಾಣುವುದಿಲ್ಲ. ಇದು ಸಮಂಜಸವಾದ ನ್ಯಾಯವಾದರೆ, ಪ್ರಮಾಣವು ಸದ್ಗುಣಗಳಿಗೆ ಸಂಬಂಧಿಸಿರಬೇಕು. ಸದ್ಗುಣವನ್ನು ಅಳೆಯುವುದು ಸುಲಭವಲ್ಲ, ಅದು ಪಕ್ಷ ವಿವಾದದ ವಿಚಾರ. ಹೀಗಾಗಿ ರಾಜಕೀಯ ಅನುಷ್ಠಾನಗಳಲ್ಲಿ ಸದ್ಗುಣವನ್ನು ಆದಾಯದ ಆಧಾರದ ಮೇಲೆ ಅಳೆಯಬಹುದಾಗಿದೆ. ಅರಿಸ್ಟಾಟಲ್ ತೋರಿಸಲು ಪ್ರಯತ್ನಿಸುವ ಶ್ರೀಮಂತಪ್ರಭುತ್ವ ಮತ್ತು ಅಲ್ಪಜನಾಧಿಪತ್ಯಗಳ ನಡುವಣ ವ್ಯತ್ಯಾಸವು ಸುಸ್ಥಾಪಿತ ಕುಲೀನತೆಯಿದ್ದ ಕಡೆ ಮಾತ್ರ ಸಾಧ್ಯವಾಗುವಂತಹುದು. ಆಗಲೂ ಕುಲೀನರಲ್ಲದ ಅಧಿಕ ಮಂದಿ ಹಣವಂತರಿದ್ದರೆ, ಅವರನ್ನು ಅಧಿಕಾರದ ಭಾಗವಾಗಿಸಬೇಕು, ಇಲ್ಲದಿದ್ದರೆ ಕ್ರಾಂತಿಯಾಗಬಹುದು. ಭೂಮಿಯು ಮಾತ್ರ ಏಕೈಕ ಆದಾಯಮೂಲವಾದ ಸಂದರ್ಭಗಳ ಹೊರತು ವಂಶಪಾರಂಪರ್ಯವಾದ ಶ್ರೀಮಂತಪ್ರಭುತ್ವಗಳು ತಮ್ಮ ಅಧಿಕಾರವನ್ನು ದೀರ್ಘಕಾಲ ಉಳಿಸಿಕೊಳ್ಳಲಾರವು. ಎಲ್ಲ ಬಗೆಯ ಸಾಮಾಜಿಕ ಅಸಮಾನತೆಯು ಕಾಲಕ್ರಮೇಣ ಆದಾಯದ ಅಸಮಾನತೆಯಾಗಿ ಪರಿಣಮಿಸುತ್ತದೆ. ಅದರೆ ಪ್ರಜಾಪ್ರಭುತ್ವಪರವಾದ ವಾದದ ಒಂದು ಅಂಶ: 'ಪ್ರಮಾಣಾನುಗುಣವಾದ ನ್ಯಾಯ'ವನ್ನು ಹೊಂದುವ ಪ್ರಯತ್ನವು ಹಣವಂತಿಕೆಯನ್ನು ಮಾತ್ರ ಆಧರಿಸದಿದ್ದರೆ ಅದು ವಿಫಲವಾಗುವುದು ನಿಶ್ಚಿತ. ಅಲ್ಪಜನಾಧಿಪತ್ಯದ ಸಮರ್ಥಕರು ಹಣವು ಸದ್ಗುಣಗಳಿಗೆ ಅನುಗುಣವಾದುದು ಎಂದು ಹೇಳಬಹುದು. ಸದಾಚಾರಿಯಾದವನು ಅನ್ನಕ್ಕಾಗಿ ಭಿಕ್ಷೆ ಬೇಡುವುದನ್ನು ತಾನೆಂದೂ ಕಂಡಿಲ್ಲ ಎಂದು ಸ್ತುತಿಕಾರನು (ಸಾಮಿಸ್ಟ್) ಹೇಳಿದರೆ, ಒಳ್ಳೆಯ ಜನರು ಕಡಿಮೆಯೂ ಅಲ್ಲದ ಹೆಚ್ಚೂ ಅಲ್ಲದ ತನ್ನಷ್ಟೇ ಆದಾಯವನ್ನು ಪಡೆಯುತ್ತಾನೆ ಎಂದು ಅರಿಸ್ಟಾಟಲ್ ಹೇಳುತ್ತಾನೆ. ಆದರೆ ಇಂತಹ ಅಭಿಪ್ರಾಯಗಳು ಅಸಂಬದ್ಧವಾದವು. ಆತ್ಯಂತಿಕ ಸಮಾನೆಯ ಹೊರತು 'ನ್ಯಾಯ' ಪ್ರತಿ ವಿಧವೂ ಆಚರಣೆಯಲ್ಲಿ ಸದ್ಗುಣವನ್ನಲ್ಲದ ಬೇರಾವುದೋ ಗುಣಕ್ಕೆ ಪ್ರತಿಫಲ ನೀಡುತ್ತದೆ, ಹೀಗಾಗಿ ಅದು ಖಂಡನೀಯ.

ನಿರಂಕುಶಾಧಿಕಾಧಿಪತ್ಯದ ಬಗ್ಗೆ ಇದರಲ್ಲೊಂದು ಕೌತುಕಪೂರ್ಣ ಭಾಗವಿದೆ. ನಿರಂಕುಶಾಧಿಪತಿಗೆ ಹಣಕ್ಕಾಗಿ ಕೆಲಸ ಮಾಡುವ ಅಂಗರಕ್ಷಕರಿರುತ್ತಾರೆ, ಆದರೆ ರಾಜನಿಗೆ ಪ್ರಜೆಗಳಲ್ಲಿನವರೇ ಅಂಗರಕ್ಷಕರಾಗಿರುತ್ತಾರೆ. ನಿರಂಕುಶಾಧಿಪತಿಗಳು ಸಾಮಾನ್ಯವಾಗಿ ಭಾವನೆಗಳನ್ನು ಕೆರಳಿಸುವವರು, ಸುಪ್ರಸಿದ್ಧ ವ್ಯಕ್ತಿಗಳಿಂದ ಜನರನ್ನು ರಕ್ಷಿಸುವುದಾಗಿ ಹೇಳಿ ಅಧಿಕಾರ ಹೊಂದುವವರು. ವ್ಯಂಗ್ಯಪೂರ್ಣ

ಮೆಕಿಯವೆಲಿಯನ್ ದಾಟಿಯಲ್ಲಿ ಅರಿಸ್ಟಾಟಲ್ ನಿರಂಕುಶಾಧಿಪತಿಯು ತನ್ನ ಅಧಿಕಾರವನ್ನುಳಿಸಿಕೊಳ್ಳಲು ಏನು ಮಾಡಬೇಕೆಂದು ವಿವರಿಸುತ್ತಾನೆ. ಆವಶ್ಯಕವೆನಿಸಿದರೆ ಮರಣದಂಡನೆ ಅಥವಾ ಕೊಲೆಯ ಮೂಲಕ ಅಸಾಧಾರಣ ಸದ್ಗುಣಗಳುಳ್ಳವರು ಯಾರೂ ಮೇಲೆ ಬಾರದಂತೆ ನೋಡಿಕೊಳ್ಳಬೇಕು. ಸಮುದಾಯ ಭೋಜನ, ಸಂಘಟನೆ, ಹಾಗೂ ತನ್ನ ಬಗ್ಗೆ ಕೆಟ್ಟ ಅಭಿಪ್ರಾಯ ಉಂಟುಮಾಡಬಹುದಾದ ಶಿಕ್ಷಣವನ್ನವನು ನಿಷೇಧಿಸಬೇಕು. ಯಾವುದೇ ಸಾಹಿತ್ಯಕ ಸಮಾವೇಶ ಅಥವಾ ಚರ್ಚೆಗಳಿಗೆ ಅವಕಾಶ ನೀಡಬಾರದು. ಜನರು ಪರಸ್ಪರ ಚೆನ್ನಾಗಿ ತಿಳಿಯುವ ಅವಕಾಶಗಳನ್ನು ತಪ್ಪಿಸಬೇಕು, ಅವರು ತನ್ನ ಮನೆಯ ಬಾಗಿಲ ಬಳಿ ಬಯಲಿನಲ್ಲಿ ವಾಸಮಾಡಲು ಒತ್ತಾಯಿಸಬೇಕು. ಸಿರಾಕ್ಯೂಸ್‌ನ ಸ್ತ್ರೀಪತ್ತೇದಾರಿಣಿಯಂತಹ ಗೂಢಚಾರರನ್ನು ನೇಮಿಸಿಕೊಳ್ಳಬೇಕು. ತನ್ನ ಪ್ರಜೆಗಳಲ್ಲಿ ಜಗಳ ತಂದಿಟ್ಟು ಅವರನ್ನು ಬಡಕಲಾಗಿಸಬೇಕು. ಪಿರಮಿಡ್ಡುಗಳನ್ನು ಕಟ್ಟಲು ಈಜಿಪ್ಟ್‌ನ ದೊರೆ ತೊಡಗಿಸಿಕೊಂಡಂತೆ ಜನರು ದೊಡ್ಡ ಕೆಲಸಗಳಲ್ಲಿ ತೊಡಗಿಕೊಂಡಿರುವಂತೆ ನೋಡಿಕೊಳ್ಳಬೇಕು. ಹೆಂಗಸರು ಮತ್ತು ಗುಲಾಮರಿಗೆ ಅಧಿಕಾರ ನೀಡಿ ಮಾಹಿತಿದಾರರನ್ನಾಗಿ ಮಾಡಿಕೊಳ್ಳಬೇಕು. ಜನರಿಗೆ ಏನಾದರೂ ಮಾಡಲು ಅಣಿಮಾಡಿ ಅವರಿಗೆ ಒಬ್ಬ ನಾಯಕ ಆವಶ್ಯಕವಾಗಿರುವಂತೆ ಯುದ್ಧವನ್ನು ಹೊತ್ತಿಸಬೇಕು (೧೩೧೩ᵃ ಮತ್ತು ᵇ).

ಈ ಭಾಗವು ಇಡೀ ಗ್ರಂಥದ ಬಗೆಗಿನ ವಿಷಾದಭರಿತ ಚಿಂತನೆಯಾಗಿದೆ, ಇವತ್ತಿನ ಸಂದರ್ಭಕ್ಕೆ ಹೇಳಿ ಮಾಡಿಸಿದಂತಿದೆ. ನಿರಂಕುಶಾಧಿಕಾರಿಗೆ ಅತಿ ಕೆಡುಕಾದುದು ಎಂಬ ಯಾವುದು ಇಲ್ಲ ಎಂಬ ಷರಾದೊಂದಿಗೆ ಅರಿಸ್ಟಾಟಲ್ ಮುಕ್ತಾಯಮಾಡುತ್ತಾನೆ. ಆದರೆ, ನಿರಂಕುಶಾಧಿಪತ್ಯವನ್ನು ಉಳಿಸಿಕೊಳ್ಳುವ ಮತ್ತೊಂದು ಮಾರ್ಗವೂ ಇದೆಯೆಂದು ಹೇಳುತ್ತಾನೆ, ಅದೆಂದರೆ ನಿಧಾನಗತಿ ಮತ್ತು ತೋರಿಕೆಯ ಧಾರ್ಮಿಕತೆಗಳು. ಇವೆರಡರಲ್ಲಿ ಯಾವುದು ಹೆಚ್ಚು ಪರಿಣಾಮಕಾರಿ ಎಂಬುದರ ಬಗ್ಗೆ ಯಾವುದೇ ತೀರ್ಮಾನ ಇಲ್ಲ.

ವಿದೇಶೀ ಆಕ್ರಮಣವೇ ಸರ್ಕಾರದ ಉದ್ದೇಶವಲ್ಲ ಎಂದು ತೋರಿಸಲು ದೀರ್ಘವಾದ ಒಂದು ವಾದವಿಲ್ಲಿದೆ, ಇದು ಅನೇಕರು ಸಾಮ್ರಾಜ್ಯಶಾಹಿ ದೃಷ್ಟಿಕೋನದವರಾಗಿದ್ದರೆಂಬುದನ್ನು ತೋರಿಸುತ್ತದೆ. ಇದಕ್ಕೊಂದು ಅಪವಾದವಿರುವುದೂ ಸತ್ಯ: 'ಸಹಜ ಗುಲಾಮರ'ನ್ನು ಗೆಲ್ಲುವುದು ನ್ಯಾಯಯುತವೂ ಹೌದು, ಸಮಂಜಸವೂ ಹೌದು. ಅರಿಸ್ಟಾಟಲ್‌ನ ದೃಷ್ಟಿಯಲ್ಲಿ ಇದು ಬಾರ್ಬೇನಿಯನ್ನರ ವಿರುದ್ಧದ ಯುದ್ಧಗಳನ್ನು ಸಮರ್ಥಿಸುತ್ತದೆ, ಆದರೆ ಗ್ರೀಕರ ವಿರುದ್ಧದ ಯುದ್ಧವನ್ನಲ್ಲ, ಯಕೆಂದರೆ ಯಾವ ಗ್ರೀಕನೂ 'ಸಹಜ ಗುಲಾಮ'ನಲ್ಲ. ಒಟ್ಟಾರೆ, ಯುದ್ಧವು ಸಾಧನವೇ ಹೊರತು ಗುರಿಯಲ್ಲ; ಬಿಡಿಯಾದ ಸಂದರ್ಭದಲ್ಲಿ, ಗೆಲ್ಲಲಸಾಧ್ಯವಾದ

ನಗರವು ಸುಖವಾಗಿರಬಹುದು. ಹೊರಚ್ಚಾಗಿರುವ ದೇಶಗಳು ನಿಷ್ಕ್ರಿಯವಾಗಿರಬಾರದು; ವಿದೇಶೀ ಆಕ್ರಮಣದ ಭೀತಿಯಿರದಿದ್ದರೂ ದೇವರು ಮತ್ತು ವಿಶ್ವಗಳು ಕ್ರಿಯಾಶೀಲವಾಗಿವೆ. ಹೀಗಾಗಿ ದೇಶವು ಬಯಸಬೇಕಾದ ಸುಖವೆಂದರೆ, ಕೆಲವು ಸಂದರ್ಭಗಳಲ್ಲಿ ಯುದ್ಧ ಅನಿವಾರ್ಯ ಸಾಧನವೆನಿಸಿದರೂ, ಯುದ್ಧವಲ್ಲ, ಶಾಂತಿ ಪ್ರಯತ್ನಗಳು.

ಇದು ಎಡೆಮಾಡಿಕೊಡುವ ಮುಂದಿನ ಪ್ರಶ್ನೆಯೆಂದರೆ ದೇಶವೊಂದು ಎಷ್ಟು ದೊಡ್ಡದಾಗಿರಬಹುದು ಎಂಬುದು. ದೊಡ್ಡ ನಗರಗಳ ಆಡಳಿತ ಸರಿಯಾಗಿರಲಿಲ್ಲ ಎಂದು ಹೇಳುತ್ತಾರೆ, ಅದಕ್ಕೆ ಕಾರಣ ದೊಡ್ಡ ಜನಸಮೂಹವು ವ್ಯವಸ್ಥಿತವಾಗಿರುವುದಿಲ್ಲ ಎಂಬುದು. ಹೆಚ್ಚು ಕಡಿಮೆ ಸ್ವಯಂಪೂರ್ಣವಾಗಿರುವಷ್ಟು ದೊಡ್ಡದಾಗಿ ಒಂದು ದೇಶವಿರಬಹುದು, ಆದರೆ ಸಾಂವಿಧಾನಿಕ ಸರ್ಕಾರಕ್ಕೆ ಸಿಗದಷ್ಟು ದೊಡ್ಡದಾಗಿರಬಾರದು. ಪ್ರಜೆಗಳು ಒಬ್ಬರೊಬ್ಬರ ನಡತೆಯ ಬಗ್ಗೆ ತಿಳಿದುಕೊಂಡಿರಬಹುದಾದ ಮಟ್ಟಿಗೆ ಅದು ಚಿಕ್ಕದಾಗಿರಬೇಕು, ಇಲ್ಲದಿದ್ದರೆ ಚುನಾವಣೆ ಮತ್ತು ಕಾನೂನು ದಾವೆಗಳನ್ನು ಸರಿಯಾಗಿ ನಿರ್ವಹಿಸಲಾಗುವುದಿಲ್ಲ. ಒಂದು ಬೆಟ್ಟದ ಮೇಲೆ ನಿಂತುಕೊಂಡು ಇಡೀ ನಗರವನ್ನು ಪರಿವೀಕ್ಷಣೆ ಮಾಡಬಹುದಾದಷ್ಟು ಅದರ ವ್ಯಾಪ್ತಿ ಚಿಕ್ಕದಾಗಿರಬೇಕು. ಅದು ಸ್ವಯಂಪೂರ್ಣವೂ (೧೩೨೬[ಬಿ]) ಮತ್ತು ಅದು ಆಮದು–ರಫ್ತು ವಹಿವಾಟನ್ನು ಹೊಂದಿರಬೇಕು (೧೩೨೭[ಎ]); ಇದಂತೂ ಅಸಂಗತವೆನಿಸುತ್ತದೆ.

ತಮ್ಮ ಜೀವನೋಪಾಯಕ್ಕಾಗಿ ಕೆಲಸ ಮಾಡಬೇಕಾದವರಿಗೆ ನಾಗರಿಕ ಹಕ್ಕು ನೀಡಬಾರದು. 'ಪ್ರಜೆಗಳು ಯಂತ್ರಜ್ಞರೂ ವ್ಯಾಪಾರಿಗಳೂ ಆಗಿ ಜೀವಿಸುತ್ತಿರಬಾರದು, ಯಾಕೆಂದರೆ ಅಂಥ ಬದುಕು ಅನುದಾತ್ತವಾಗಿದ್ದು ಸದ್ಗುಣಗಳಿಗೆ ವಿರೋಧಿಯಾಗಿರುತ್ತದೆ.' ಅವರು ಬೇಸಾಯಗಾರರೂ ಆಗಿರಬಾರದು, ಯಾಕೆಂದರೆ ಅವರಿಗೆ ವಿಶ್ರಾಂತಿಯ ಆವಶ್ಯಕತೆಯಿರುತ್ತದೆ. ಪ್ರಜೆಗಳು ಆಸ್ತಿಯನ್ನು ಹೊಂದಿರಬೇಕು, ಆದರೆ ಬೇಸಾಯಗಾರರು ಇತರ ಜನಾಂಗದವರ ಗುಲಾಮರಾಗಿರುತ್ತಾರೆ (೧೩೩೦[ಎ]). ಉತ್ತರದ ಜನಾಂಗಗಳು ವೀರ್ಯವಂತರು, ದಕ್ಷಿಣ ಜನಾಂಗಗಳು ಬುದ್ಧಿವಂತರು; ಹೀಗಾಗಿ ಗುಲಾಮರು ದಕ್ಷಿಣ ಜನಾಂಗಗಳವರಾಗಿರಬೇಕು, ಯಾಕೆಂದರೆ ಅವರು ವೀರ್ಯವಂತರಾಗಿದ್ದರೆ ಅನನುಕೂಲವೆನಿಸುತ್ತದೆ. ಗ್ರೀಕರು ಮಾತ್ರವೇ ವೀರ್ಯವಂತರೂ ಬುದ್ಧಿವಂತರೂ ಆದವರು; ಅವರನ್ನು ಆಳುವುದು ಬಾರ್ಬೇರಿಯನ್ನರನ್ನು ಆಳುವುದಕ್ಕಿಂತ ಸುಲಭ. ಅವರು ಒಗ್ಗಟ್ಟಿನಿಂದ ಕೂಡಿದ್ದರೆ ಇಡೀ ಜಗತ್ತನ್ನೇ ಆಳಬಹುದು (೧೩೨೭[ಬಿ]). ಇಲ್ಲಿ ಅಲೆಕ್ಸಾಂಡರ್ ಬಗ್ಗೆ ಉಲ್ಲೇಖವನ್ನು ನಿರೀಕ್ಷಿಸಬಹುದಾದರೂ, ಅಂತಹದು ಯಾವುದೂ ಇಲ್ಲ.

ದೇಶಗಳ ಗಾತ್ರದ ಬಗ್ಗೆ, ಆಧುನಿಕ ಉದಾರವಾದಿಗಳು ಮಾಡುವ ತಪ್ಪನ್ನೇ ಅರಿಸ್ಟಾಟಲ್‌ನೂ ಭಿನ್ನ ನೆಲೆಯಲ್ಲಿ ಮಾಡುತ್ತಾನೆ. ದೇಶವು ತನ್ನನ್ನು ತಾನು ಯುದ್ಧದಲ್ಲಿ

ರಕ್ಷಿಸಿಕೊಳ್ಳುವ ಸಾಮರ್ಥ್ಯ ಹೊಂದಿರಬೇಕು; ಯಾವುದೇ ಉದಾರ ಸಂಸ್ಕೃತಿಯು ಉಳಿಯಬೇಕಾದರೆ, ಹೆಚ್ಚು ಕಷ್ಟವಿಲ್ಲದೆ ಅದು ತನ್ನನ್ನು ತಾನು ರಕ್ಷಿಸಿಕೊಳ್ಳುವಂತಿರಬೇಕು. ಇದಕ್ಕೆ ದೇಶದ ಗಾತ್ರವು ಎಷ್ಟಿರಬೇಕು ಎಂಬುದು ಯುದ್ಧತಂತ್ರ ಮತ್ತು ಕೈಗಾರಿಕೆಗಳನ್ನು ಅವಲಂಬಿಸುತ್ತದೆ. ಅರಿಸ್ಟಾಟಲ್‌ನ ಕಾಲದಲ್ಲಿ, ನಗರ ದೇಶಗಳು ನಿಷ್ಪ್ರಯೋಜಕವಾಗಿದ್ದವು, ಯಾಕೆಂದರೆ ಅವು ತಮ್ಮನ್ನು ಮ್ಯಾಸಿಡೋನಿಯದಿಂದ ರಕ್ಷಿಸಿಕೊಳ್ಳುವುದು ಕಷ್ಟಕರವಾಗಿತ್ತು. ನಮ್ಮ ಕಾಲದಲ್ಲಾದರೆ, ಮ್ಯಾಸಿಡೋನಿಯವನ್ನೂ ಒಳಗೊಂಡಂತೆ ಇಡೀ ಗ್ರೀಸ್ ಈ ಅರ್ಥದಲ್ಲಿ ನಿಷ್ಪ್ರಯೋಜಕ, ಇದು ಈಚೆಗೆ ಸಾಬೀತಾಗಿದೆ.[೨೬] ಗ್ರೀಸ್‌ಗೆ, ಅಥವಾ ಯಾವುದೇ ಸಣ್ಣ ದೇಶಕ್ಕೆ, ಸಂಪೂರ್ಣ ಸ್ವಾತಂತ್ರ್ಯ ನೀಡುವುದನ್ನು ಬೆಂಬಲಿಸುವುದು ಒಂದು ದಿಣ್ಣೆಯ ಮೇಲಿಂದ ನೋಡಬಹುದಾದಷ್ಟು ಗಾತ್ರದ ಒಂದು ನಗರಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದನ್ನು ಬೆಂಬಲಿಸುವಷ್ಟೇ ನಿಷ್ಫಲವಾದದ್ದು. ಪರಾಕ್ರಮಣದ ಪ್ರಯತ್ನಗಳನ್ನೆಲ್ಲ ವಿಫಲಗೊಳಿಸುವಷ್ಟು ತನ್ನಷ್ಟಕ್ಕೇ ಸಮರ್ಥವಾದ ದೇಶ ಅಥವಾ ಮೈತ್ರಿಕೂಟದ ಹೊರತು ಬೇರಾವುದಕ್ಕೂ ನಿಜವಾದ ಸ್ವಾತಂತ್ರ್ಯ ಇರಲು ಸಾಧ್ಯವಿಲ್ಲ. ಅಮೆರಿಕ ಮತ್ತು ಬ್ರಿಟಿಷ್ ಸಾಮ್ರಾಜ್ಯಗಳು ಸೇರಿ ಆಗುವುದಕ್ಕಿಂತ ಚಿಕ್ಕದಾದ ಯಾವುದೇ ದೇಶ ಈ ಅಗತ್ಯವನ್ನು ನೆರವೇರಿಸಲಾರದು; ಪ್ರಾಯಶಃ ಇದು ಕೂಡ ತೀರ ಚಿಕ್ಕ ಘಟಕವೆನಿಸಬಹುದು.

ನಮಗೆ ಸಿಕ್ಕಿರುವ ರೂಪದಲ್ಲಿ ಈ ಪುಸ್ತಕವು ಅಪೂರ್ಣವಾಗಿದೆಯೆನಿಸುತ್ತದೆ, ಅದರ ಕೊನೆಗೆ ಶಿಕ್ಷಣದ ಬಗೆಗಿನ ಒಂದು ಚರ್ಚೆಯಿದೆ. ಶಿಕ್ಷಣವು ಮುಂದೆ ಪ್ರಜೆಗಳಾಗಬೇಕಾದ ಮಕ್ಕಳಿಗೆ ಮಾತ್ರ ಸಂಬಂಧಿಸಿದ್ದು ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಗುಲಾಮರಿಗೆ ಉಪಯುಕ್ತ ಕುಶಲಕಲೆಗಳಾದ ಅಡುಗೆಯಂತಹುದನ್ನು ಕಲಿಸಬಹುದು, ಆದರೆ ಇವು ಶಿಕ್ಷಣದ ಭಾಗವಲ್ಲ. ಪ್ರಜೆಯನ್ನು ರೂಪಿಸಬೇಕಾದುದು ಅವನು ಯಾವ ಸರ್ಕಾರದ ಅಡಿಯಲ್ಲಿದ್ದಾನೆ ಎಂಬುದನ್ನವಲಂಬಿಸುತ್ತದೆ; ಹೀಗಾಗಿ ಅವನಿರುವ ನಗರವು ಅಲ್ಪಜನಾಧಿಪತ್ಯದ್ದೋ ಪ್ರಜಾಪ್ರಭುತ್ವಾತ್ಮಕವಾದದ್ದೋ ಎಂಬುದಕ್ಕನುಗುಣವಾಗಿ ಇದು ವ್ಯತ್ಯಾಸವಾಗುತ್ತದೆ. ಈ ಚರ್ಚೆಯಲ್ಲಿ ಅರಿಸ್ಟಾಟಲ್ ಪ್ರಜೆಗಳು ರಾಜಕೀಯ ಅಧಿಕಾರದಲ್ಲಿ ಪಾಲು ಹೊಂದಿರುತ್ತಾರೆಂದು ಹೇಳುತ್ತಾನೆ. ಮಕ್ಕಳು ತಮಗೆ ಉಪಯುಕ್ತವಾದುದನ್ನು ಕಲಿಯಬೇಕು, ಆದರೆ ಅದು ಕೀಳುಮಟ್ಟದ್ದಾಗಿರಬಾರದು. ನಿದರ್ಶನಕ್ಕೆ, ದೇಹವನ್ನು ವಿರೂಪಗೊಳಿಸುವ ಅಥವಾ ಅವರು ಹಣಸಂಪಾದನೆ ಮಾಡುಬಹುದಾದ ಯಾವುದನ್ನೂ ಅವರಿಗೆ ಹೇಳಿಕೊಡಬಾರದು. ಅವರು ಕ್ರೀಡೆಗಳಲ್ಲಿ ತಕ್ಕಮಟ್ಟಿಗಿನ

---

೨೬. ಇದನ್ನು ಬರೆದದ್ದು, ೧೯೪೧ ರ ಮೇನಲ್ಲಿ.

ಅಭ್ಯಾಸ ಹೊಂದಬೇಕು, ಆದರೆ ವೃತ್ತಿಪರವೆನಿಸುವಷ್ಟು ಪರಿಣತಿಯನ್ನಲ್ಲ. ಒಲಿಂಪಿಕ್ ಕ್ರೀಡೆಗಳಿಗೆ ತರಬೇತು ಹೊಂದುವ ಮಕ್ಕಳು ಆರೋಗ್ಯ ಕಳೆದುಕೊಳ್ಳುತ್ತಾರೆ; ಹುಡುಗರಾಗಿ ಜಯಶೀಲರಾದವರು ಗಂಡಸರಾಗಿ ಯಶಸ್ವಿಗಳಾಗಿರುವುದು ಅಪರೂಪ. ಮಾನವ ಆಕಾರವನ್ನು ಮೆಚ್ಚಿಕೊಳ್ಳಲು ಸಾಧ್ಯವಾಗುವ ಮಟ್ಟಿಗೆ ಮಕ್ಕಳು ಚಿತ್ರ ಬರೆಯುವುದನ್ನು ಕಲಿಯಬೇಕು; ನೀತಿಪರ ಆದರ್ಶವನ್ನು ಎತ್ತಿ ಹಿಡಿಯುವಂತಹ ವರ್ಣಚಿತ್ರ ಅಥವಾ ಶಿಲ್ಪವನ್ನವರು ಮೆಚ್ಚಿಕೊಳ್ಳುವುದನ್ನು ಕಲಿಸಬೇಕು. ಸಂಗೀತವನ್ನು ವಿಮರ್ಶಾತ್ಮಕವಾಗಿ ಮೆಚ್ಚಿಕೊಳ್ಳುವ ಮಟ್ಟಿಗೆ ಅವರು ಹಾಡುವುದನ್ನು ಮತ್ತು ವಾದ್ಯ ನುಡಿಸುವುದನ್ನು ಕಲಿಯಬಹುದು, ಆದರೆ ಅವುಗಳನ್ನು ಪ್ರದರ್ಶಿಸುವ ಮಟ್ಟದಲ್ಲಲ್ಲ. ಯಾಕೆಂದರೆ ಕುಡಿದಿರುವ ಹೊರತು ಯಾವನೂ ವಾದ್ಯ ನುಡಿಸುವುದನ್ನಾಗಲೀ ಹಾಡುವುದನ್ನಾಗಲೀ ಮಾಡಲಾರ. ಈ ಕಲೆಗಳ ಹೊರತಾಗಿ ಅವರು ಓದುಬರಹಗಳನ್ನು ಕಲಿಯಬೇಕೆಂಬುದು ಸುಸ್ಪಷ್ಟ. ಆದರೆ ಶಿಕ್ಷಣದ ಉದ್ದೇಶವು 'ಸದ್ಗುಣ'ವೇ ಹೊರತು ಉಪಯುಕ್ತತೆಯಲ್ಲ. ಅರಿಸ್ಟಾಟಲ್‌ನ ಅರ್ಥದಲ್ಲಿ ಸದ್ಗುಣ ಯಾವುದು ಎಂಬುದನ್ನವನು 'ಎಥಿಕ್ಸ್'ನಲ್ಲಿ ಹೇಳಿದ್ದಾನೆ, ಅದರತ್ತ ಈ ಪುಸ್ತಕವೂ ಬೆರಳು ಮಾಡುತ್ತದೆ.

ಅವನ 'ಪಾಲಿಟಿಕ್ಸ್'ನ ಮೂಲಭೂತ ಕಲ್ಪನೆಗಳು ಯಾವುದೇ ಆಧುನಿಕ ಬರಹಗಾರನದಕ್ಕಿಂತ ಭಿನ್ನವಾದುವು. ಅವನ ದೃಷ್ಟಿಯಲ್ಲಿ, ದೇಶದ ಉದ್ದೇಶವೆಂದರೆ – ಶ್ರೀಮಂತರ ಮನಃಸ್ಥಿತಿ ಮತ್ತು ವಿದ್ಯೆ ಮತ್ತು ಕಲೆಗಳ ಬಗೆಗಿನ ಪ್ರೀತಿ ಇವುಗಳನ್ನು ಒಗ್ಗೂಡಿಸಿಕೊಂಡ – ಸುಸಂಸ್ಕೃತ ನಾಗರಿಕರನ್ನು ಸೃಷ್ಟಿಸುವುದು. ಈ ಬಗೆಯ ಗರಿಷ್ಠ ಒಗ್ಗೂಡುವಿಕೆಯು ಪೆರಿಕ್ಲೀಸ್‌ನ ಕಾಲದ ಅಥೆನ್ಸ್‌ನಲ್ಲಿತ್ತು, ಇಡೀ ಜನಸಮುದಾಯದಲ್ಲಲ್ಲ, ಸ್ಥಿತಿವಂತರಲ್ಲಿ. ಪೆರಿಕ್ಲೀಸ್‌ನ ಕೊನೆಗಾಲದಲ್ಲಿ ಇದು ಸಡಿಲಗೊಂಡಿತು. ಸಂಸ್ಕೃತಿಹೀನ ಜನಸಮುದಾಯವು ಪೆರಿಕ್ಲೀಸ್‌ನ ಗೆಳೆಯರ ವಿರುದ್ಧ ಬಂಡೆದ್ದು ಅವರು ಮೋಸ, ಕೊಲೆ, ಕಾನೂನುಬಾಹಿರ ದೌರ್ಜನ್ಯ ಮತ್ತಿತರ ಅಸಂಸ್ಕೃತ ಮಾರ್ಗಗಳಿಂದ ಗಳಿಸಿದ ಹಣವಂತರ ಸವಲತ್ತುಗಳನ್ನು ಸಮರ್ಥಿಸುವಂತೆ ಮಾಡಿತು. ಸಾಕ್ರಟೀಸ್‌ನ ಮರಣಾನಂತರ ಅಥೆನ್ಸ್‌ನ ಪ್ರಜಾಪ್ರಭುತ್ವದ ಅಸಹನೆ ಕಡಿಮೆಯಾಯಿತು, ಅದು ಪ್ರಾಚೀನ ಸಂಸ್ಕೃತಿಯ ಕೇಂದ್ರವಾಯಿತು, ಆದರೆ ರಾಜಕೀಯಾಧಿಕಾರವು ಬೇರೆಲ್ಲಿಗೋ ಹೋಯಿತು. ಆಮೇಲಿನ ಪ್ರಾಚೀನ ಯುಗದಾದ್ಯಂತ ಅಧಿಕಾರ ಮತ್ತು ಸಂಸ್ಕೃತಿಗಳು ಸಾಮಾನ್ಯವಾಗಿ ಬೇರೆ ಬೇರೆ ಎನಿಸಿದವು. ಅಧಿಕಾರವು ಒರಟು ಸೈನಿಕರ ಕೈಯಲ್ಲಿದ್ದರೆ, ಸಂಸ್ಕೃತಿಯು ಅಧಿಕಾರರಹಿತ ಗ್ರೀಕರಲ್ಲಿ, ಎಷ್ಟೋ ಸಂದರ್ಭಗಳಲ್ಲಿ ಗುಲಾಮರಲ್ಲಿ ಉಳಿಯಿತು. ತನ್ನ ಯಶಸ್ವೀ ದಿನಗಳಲ್ಲಿ ರೋಮ್‌ನ ಬಗ್ಗೆ ಇದು ಭಾಗಶಃ ಮಾತ್ರ ಸತ್ಯ. ಆದರೆ ಸಿಸೆರೋ ಮತ್ತು ಮಾರ್ಕಸ್ ಔರೀಲಿಯಸ್‌ರ ನಂತರ ಇದು ಖಂಡಿತ ಸತ್ಯ. (ಅನ್ಯದೇಶೀಯ)

ಬಾರ್ಬೇರಿಯನ್ ಆಕ್ರಮಣದ ನಂತರ 'ಸಭ್ಯರು' ಎಂದರೆ ಉತ್ತರ ಬಾರ್ಬೇರಿಯನ್ನರು, ಸುಸಂಸ್ಕೃತರು ದಕ್ಷಿಣದ ಸೂಕ್ಷ್ಮ ಧರ್ಮಬೋಧಕರು. ಈ ಪರಿಸ್ಥಿತಿಯು ಹೆಚ್ಚು ಕಡಿಮೆ, ಸಾಮಾನ್ಯ ಜನತೆಯು ಸಂಸ್ಕೃತಿಯನ್ನು ಹೊಂದಲಾರಂಭಿಸಿದ ಕಾಲವರೆಗೂ ಮುಂದುವರಿಯಿತು. ಮತಧರ್ಮಸುಧಾರಣೆಯ ನಂತರ ಸುಸಂಸ್ಕೃತ ಜನಗಳಿಂದ ಕೂಡಿದ ಸರ್ಕಾರದ ಗ್ರೀಕ್ ಪರಿಕಲ್ಪನೆಯು ಹೆಚ್ಚು ಹೆಚ್ಚಾಗಿ ಮೇಲುಗೈ ಪಡೆದು ತನ್ನ ಉತ್ತುಂಗವನ್ನು ಹದಿನೆಂಟನೆಯ ಶತಮಾನದಲ್ಲಿ ತಲುಪಿತು.

ಈ ಪರಿಸ್ಥಿತಿಯನ್ನು ಅನೇಕ ಶಕ್ತಿಗಳು ಕೊನೆಗೊಳಿಸಿದವು. ಮೊದಲಿಗೆ, ಫ್ರೆಂಚ್ ಕ್ರಾಂತಿ ಮತ್ತದರ ಪರಿಣಾಮಗಳಲ್ಲಿ ಸೇರಿರುವ ಪ್ರಜಾಪ್ರಭುತ್ವ. ಪೆರಿಕ್ಲೀಸ್‌ನ ಅನಂತರದದಲ್ಲಿನಂತೆ ಸುಸಂಸ್ಕೃತ ಸಭ್ಯರು ತಮ್ಮ ಸವಲತ್ತುಗಳನ್ನು ಜನಸಮುದಾಯದಿಂದ ರಕ್ಷಿಸಿಕೊಳ್ಳಬೇಕಾಯಿತು, ಈ ಪ್ರಕ್ರಿಯೆಯಲ್ಲಿ ಅದು ಸುಸಂಸ್ಕೃತವಾಗಿಯೂ ಉಳಿಯಲಿಲ್ಲ, ಸಭ್ಯವಾಗಿಯೂ ಉಳಿಯಲಿಲ್ಲ. ಎರಡನೆಯ ಕಾರಣವೆಂದರೆ ಸಾಂಪ್ರದಾಯಿಕ ಸಂಸ್ಕೃತಿಗಿಂತ ಭಿನ್ನವಾದ ವೈಜ್ಞಾನಿಕ ತಂತ್ರಗಳಿಂದ ರೂಪುಗೊಂಡ ಕೈಗಾರಿಕೋದ್ಯಮ. ಮೂರನೆಯ ಕಾರಣ, ಜನಸಾಮಾನ್ಯರ ಶಿಕ್ಷಣ, ಅದರಿಂದ ಓದುಬರಹಗಳ ಅಧಿಕಾರವೊದಗಿತು, ಆದರೆ ಸಂಸ್ಕೃತಿ ದಕ್ಕಲಿಲ್ಲ; ಇದರಿಂದ ಸರ್ವಾಧಿಕಾರದಲ್ಲಿ ಕಾಣಬಹುದಾದ ಹೊಸ ಬಗೆಯ ಪ್ರಚಾರ ಕೈಗೊಳ್ಳುವ ಹೊಸ ಬಗೆಯ ರಾಜಕಾರಣಿಗಳು ಮುನ್ನೆಲೆಗೆ ಬಂದರು.

ಒಳ್ಳೆಯದು ಮತ್ತು ಕೆಟ್ಟದ್ದು, ಎರಡರ ದೃಷ್ಟಿಯಿಂದಲೂ, ಸುಸಂಸ್ಕೃತ ಸಭ್ಯರ ಕಾಲ ಹಿಂದೆ ಹೋಯಿತು.

○

೨೨
ಅರಿಸ್ಟಾಟಲ್‌ನ ತರ್ಕಶಾಸ್ತ್ರ (ಲಾಜಿಕ್)

ಅರಿಸ್ಟಾಟಲ್‌ನ ಪ್ರಭಾವವು ಅನೇಕ ಕ್ಷೇತ್ರಗಳಲ್ಲಾಗಿದ್ದರೂ, ಅವುಗಳಲ್ಲಿ ಅತ್ಯಂತ ಹೆಚ್ಚಿನದೆಂದರೆ ತರ್ಕಶಾಸ್ತ್ರದಲ್ಲಿ. ಆನಂತರದ ಪ್ರಾಚೀನ ಕಾಲದಲ್ಲಿ, ಪ್ಲೇಟೋ ತತ್ವಜಿಜ್ಞಾಸೆಯಲ್ಲಿ ಅತ್ಯಂತ ಶ್ರೇಷ್ಠನೆನಿಸಿದ್ದಾಗ, ಅರಿಸ್ಟಾಟಲ್ ತರ್ಕಶಾಸ್ತ್ರದಲ್ಲಿ ಅಧಿಕಾರಯುತ ಎಂದು ಮಾನ್ಯನಾಗಿದ್ದ; ಆ ಸ್ಥಾನವನ್ನವನು ಮಧ್ಯಯುಗದುದ್ದಕ್ಕೂ ಉಳಿಸಿಕೊಂಡೇ ಬಂದ. ಹದಿಮೂರನೆಯ ಶತಮಾನದವರೆಗೂ ಕ್ರಿಶ್ಚಿಯನ್ ತತ್ವಜ್ಞಾನಿಗಳು ತತ್ವಜಿಜ್ಞಾಸೆಯ ಕ್ಷೇತ್ರದಲ್ಲಿ ಅವನಿಗೆ ಅತ್ಯಂತ ಉನ್ನತ ಸ್ಥಾನವನ್ನು ನೀಡಿರಲಿಲ್ಲ. ಈ ಉನ್ನತ ಸ್ಥಾನವು ಬಹುಮಟ್ಟಿಗೆ ಮತಧರ್ಮಸುಧಾರಣೆಯ ನಂತರ ಅವನಿಗೆ ತಪ್ಪಿತು, ಆದರೆ ತರ್ಕಶಾಸ್ತ್ರ ಕ್ಷೇತ್ರದ ಅವನ ಔನ್ನತ್ಯವು ಉಳಿದು ಬಂತು. ಕೆಥೋಲಿಕ್ ತತ್ವಶಾಸ್ತ್ರ ಬೋಧಕರು ಮತ್ತಿತರ ಹಲವರು ಈಗಲೂ ತರ್ಕಶಾಸ್ತ್ರದಲ್ಲಿನ ಆಧುನಿಕ ಪರಿಷ್ಕರಣೆಗಳನ್ನು ಹಟತೊಟ್ಟವರಂತೆ ತಿರಸ್ಕರಿಸಿ, ವಿಶಿಷ್ಟ ಬಿಗುವಿನಿಂದ ನಿಶ್ಚಿತವಾಗಿಯೂ ಟಾಲೆಮಿಯ ಖಗೋಳವಿಜ್ಞಾನದಂತೆ ಹಳೆಯದಾದ ಪದ್ಧತಿಯೊಂದಕ್ಕೆ ಜೋತುಬೀಳುತ್ತಾರೆ. ಇದರಿಂದಾಗಿ ಅರಿಸ್ಟಾಟಲ್‌ಗೆ ಚಾರಿತ್ರಿಕ ನ್ಯಾಯವನ್ನೊದಗಿಸುವುದು ಕಷ್ಟಕರವಾಗುತ್ತದೆ. ಅವನ ಇಂದಿನ ಪ್ರಭಾವವು ಖಚಿತ ಚಿಂತನೆಗೆ ಎಷ್ಟು ತೊಡಕಾಗಿದೆಯೆಂದರೆ, ಅವನ ಹಿರಿಯ ಮುನ್ನಡೆಯು (ಪ್ಲೇಟೋನನ್ನೂ ಒಳಗೊಂಡಂತೆ) ಹಿಂದಿನೆಲ್ಲ ಚಿಂತಕರನ್ನೂ ಹಿಂದೆ ಸರಿಸಿದುದನ್ನು, ಅಥವಾ ಅವನ ತರ್ಕಶಾಸ್ತ್ರೀಯ ಕಾರ್ಯವು ಎರಡು ಸಾವಿರ ವರ್ಷಗಳ ಕಾಲ ನಿಂತ ನೀರಾಗಿ ಕೊಟ್ಟ ಕೊನೆಯೆಂಬಂತೆ (ಅದು ನಿಜವೂ ಹೌದು) ಆಗುವುದರ ಬದಲು, ನಿರಂತರ ಪ್ರಗತಿಪಥದಲ್ಲಿ ಅದೊಂದು ಹಂತವಾಗಿ ಎಷ್ಟು ಪ್ರಶಂಸನೀಯವಾಗಿ ತೋರುವುದೆಂಬುದನ್ನು ನೆನೆಸಿಕೊಳ್ಳುವುದು ಕಷ್ಟ. ಅರಿಸ್ಟಾಟಲ್‌ನಿಗಿಂತ ಹಿಂದಿನವರ ಬಗ್ಗೆ ಚಿಂತಿಸುವಾಗ, ಅವರೆಲ್ಲರಿಂದ ಅವನು ಅಕ್ಷರಶಃ ಸ್ಫೂರ್ತಿಗೊಂಡವನಲ್ಲ ಎಂಬುದನ್ನೇನೂ ಹೇಳುವ ಅಗತ್ಯವಿಲ್ಲ. ಹೀಗಾಗಿ ಅವರನ್ನು ಹೊಗಳಬೇಕಾಗಿರುವುದು ಅವರೆಲ್ಲ ಅವನ ಸಿದ್ಧಾಂತಗಳಿಗೆ ನೇರವಾಗಿ ಕೊಡುಗೆ ನೀಡಿರದಿದ್ದರೂ ಅವರ

ಯೋಗ್ಯತೆಗಾಗಿ. ಅದಕ್ಕೆ ವ್ಯತಿರಿಕ್ತವಾಗಿ, ಅರಿಸ್ಟಾಟಲ್ ಈಗಲೂ, ವಿಶೇಷತಃ ತರ್ಕಶಾಸ್ತ್ರದಲ್ಲಿ – ಒಂದು ಕದನಕ್ಷೇತ್ರ – ಹೀಗಾಗಿ ಅವನ ಬಗ್ಗೆ ಶುದ್ಧ ಐತಿಹಾಸಿಕ ನೆಲೆಯಲ್ಲಿ ಪರಿಶೀಲಿಸಲಾಗುವುದಿಲ್ಲ.

ತರ್ಕಶಾಸ್ತ್ರದಲ್ಲಿ ಅರಿಸ್ಟಾಟಲ್‌ನ ಅತ್ಯಂತ ಮುಖ್ಯ ಕೆಲಸವೆಂದರೆ ನಿಗಮನಸಿದ್ಧಾಂತ (ಸಿಲ್ಲಜಿಸಂ). ನಿಗಮನದಲ್ಲಿ ಮೂರು ಭಾಗಗಳಿರುತ್ತವೆ: ಒಂದು ಮುಖ್ಯ ಆಧಾರವಾಕ್ಯ, ಒಂದು ಅಮುಖ್ಯ ಆಧಾರವಾಕ್ಯ ಮತ್ತು ಒಂದು ನಿರ್ಣಯ. ನಿಗಮನವು ಅನೇಕ ವಿಧವಾದುದು, ಅವುಗಳಲ್ಲಿ ಪ್ರತಿಯೊಂದಕ್ಕೂ ಪಂಡಿತರು ನೀಡಿದ ಒಂದು ಹೆಸರಿದೆ. ಅವುಗಳಲ್ಲಿ ಅತ್ಯಂತ ಜನಜನಿತವಾದುದೆಂದರೆ 'ಬಾರ್ಬರ':

ಎಲ್ಲ ಮನುಷ್ಯರೂ ಮರ್ತ್ಯರು (ಮುಖ್ಯ ಆಧಾರವಾಕ್ಯ).

ಸಾಕ್ರಟೀಸ್ ಒಬ್ಬ ಮನುಷ್ಯ (ಅಮುಖ್ಯ ಆಧಾರವಾಕ್ಯ).

ಹೀಗಾಗಿ ಸಾಕ್ರಟೀಸ್ ಒಬ್ಬ ಮರ್ತ್ಯ (ನಿರ್ಣಯ).

ಅಥವಾ:

ಎಲ್ಲ ಮನುಷ್ಯರೂ ಮರ್ತ್ಯರು.

ಎಲ್ಲ ಗ್ರೀಕರೂ ಮನುಷ್ಯರು.

ಹೀಗಾಗಿ, ಎಲ್ಲ ಗ್ರೀಕರೂ ಮರ್ತ್ಯರು.

(ಅರಿಸ್ಟಾಟಲ್ ಈ ಎರಡು ವಿಧಗಳಲ್ಲಿ ಯಾವುದೇ ವ್ಯತ್ಯಾಸ ಮಾಡುವುದಿಲ್ಲ; ಇದು ಒಂದು ದೋಷವೆಂಬುದನ್ನು ನಾವು ಮುಂದೆ ನೋಡಲಿದ್ದೇವೆ.)

ಇತರ ವಿಧಗಳೆಂದರೆ: ಯಾವ ಜಲಚರವೂ ವೈಚಾರಿಕವಲ್ಲ, ಎಲ್ಲ ಷಾರ್ಕ್‌ಗಳೂ ಜಲಚರಗಳು, ಹೀಗಾಗಿ ಯಾವ ಷಾರ್ಕೂ ವೈಚಾರಿಕವಲ್ಲ. (ಇದನ್ನು 'ಸೆಲರೆಂಟ್' ಎಂದು ಕರೆಯುತ್ತಾರೆ.)

ಎಲ್ಲ ಮನುಷ್ಯರೂ ವೈಚಾರಿಕರು, ಕೆಲವು ಪ್ರಾಣಿಗಳು ಮನುಷ್ಯರು, ಹೀಗಾಗಿ ಕೆಲವು ಪ್ರಾಣಿಗಳು ವೈಚಾರಿಕವಾದವು. (ಇದನ್ನು 'ದಾರಿಯೈ' ಎನ್ನುತ್ತಾರೆ.)

ಯಾವ ಗ್ರೀಕರೂ ಕಪ್ಪಲ್ಲ, ಕೆಲವು ಮನುಷ್ಯರು ಗ್ರೀಕರು, ಹೀಗಾಗಿ ಕೆಲವು ಮನುಷ್ಯರು ಕಪ್ಪು' (ಇದನ್ನು 'ಫೆರಿಯೋ' ಎನ್ನುತ್ತಾರೆ.)

ಈ ನಾಲ್ಕೂ 'ಪ್ರಥಮ ರೂಪ' (ಫಸ್ಟ್ ಫಿಗರ್); ಅರಿಸ್ಟಾಟಲ್ ಎರಡನೆಯ ಮತ್ತು ಮೂರನೆಯ ರೂಪಗಳನ್ನೂ ಸೇರಿಸುತ್ತಾನೆ, ಶಾಲಾಜನರು ನಾಲ್ಕನೆಯದನ್ನು ಸೇರಿಸಿದರು. ಮುಂದಿನ ಮೂರು ರೂಪಗಳನ್ನು ಹಲವಾರು ಬಗೆಗಳಿಂದ ಮೊದಲನೆಯದನ್ನಾಗಿ ಮಾಡಬಹುದು.

ಒಂದೇ ಆಧಾರವಾಕ್ಯದಿಂದ ಕೆಲವು ಊಹನೆಗಳನ್ನು ಮಾಡಬಹುದು. 'ಕೆಲವು ಮನುಷ್ಯರು ಮರ್ತ್ಯರು' ಎಂಬುದರಿಂದ 'ಕೆಲವು ಮರ್ತ್ಯರು ಮನುಷ್ಯರು' ಎಂಬ ಊಹನೆಯನ್ನು ಮಾಡಬಹುದು. ಅರಿಸ್ಟಾಟಲ್‌ನ ಪ್ರಕಾರ, ಇದನ್ನು 'ಎಲ್ಲ ಮನುಷ್ಯರೂ

ಮರ್ತ್ಯರು' ಎಂಬುದರಿಂದಲೂ ಊಹನೆ ಮಾಡಬಹುದು. 'ಯಾವ ದೇವತೆಯೂ ಮರ್ತ್ಯನಲ್ಲ' ಎಂಬುದರಿಂದ 'ಯಾವ ಮರ್ತ್ಯರೂ ದೇವತೆಗಳಲ್ಲ' ಎಂಬ ಊಹನೆ ಮಾಡಬಹುದು. ಆದರೆ 'ಕೆಲವು ಮನುಷ್ಯರು ಗ್ರೀಕರಲ್ಲ' ಎಂಬುದರಿಂದ 'ಕೆಲವು ಗ್ರೀಕರು ಮನುಷ್ಯರಲ್ಲ' ಎಂಬುದನ್ನು ಸಾಧಿಸಲಾಗುವುದಿಲ್ಲ.

ಮೇಲಿನವುಗಳಂತಹ ಊಹನೆಗಳಲ್ಲದೆ, ಎಲ್ಲ ನಿಗಮನಾತ್ಮಕ ಊಹನೆಗಳು, ನಿಷ್ಕೃಷ್ಟವಾಗಿ ಮಂಡಿತವಾದಾಗ, ನಿಗಮನಾತ್ಮಕವಾಗುತ್ತವೆ ಎಂದು ಅರಿಸ್ಟಾಟಲ್ ಮತ್ತವನ ಅನುಯಾಯಿಗಳು ಭಾವಿಸಿದರು; ನಿಗಮನದ ಎಲ್ಲ ಸಮಂಜಸ ವಿಧಗಳನ್ನು ಮಂಡಿಸಿದ ಮೇಲೆ, ನಿಗಮನ ವಿಧಾನದಲ್ಲಿನ ಯಾವುದೇ ಸೂಚಿತ ವಾದವನ್ನು ಗಮನಿಸಿದ ನಂತರ, ಎಲ್ಲ ತರ್ಕದೋಷಗಳನ್ನೂ ನಿವಾರಿಸುವುದು ಸಾಧ್ಯವಾಗಬೇಕು.

ಈ ಪದ್ಧತಿಯು ಶಾಸ್ತ್ರೋಕ್ತ ತರ್ಕದ ಆರಂಭ; ಅಲ್ಲದೆ, ಇದರಿಂದಾಗಿ ಅದು ಮುಖ್ಯವೂ ಶ್ರೇಷ್ಠವೂ ಆಯಿತು. ಆದರೆ ಆರಂಭದಲ್ಲಲ್ಲದೆ, ಶಾಸ್ತ್ರೋಕ್ತ ತರ್ಕದ ಕೊನೆಯಲ್ಲಿ ಪರಿಶೀಲಿಸಿದಾಗ, ಅದರ ಬಗ್ಗೆ ಮೂರು ಟೀಕೆಗಳು ಬರುವುದಕ್ಕೆ ಅವಕಾಶವಿದೆ:

೧. ಪದ್ಧತಿಯಲ್ಲಿಯೇ ಅಂತರ್ಗತವಾದ ಶಾಸ್ತ್ರೋಕ್ತ ದೋಷಗಳು.

೨. ಇತರ ಅನುಗಮನಾತ್ಮಕ ವಾದಗಳಿಗಿಂತ ನಿಗಮನ ತರ್ಕದ ಬಗೆಗೆ ನೀಡಿದ ಅತಿಪ್ರಾಮುಖ್ಯತೆ.

೩. ಒಂದು ವಾದವಿಧಾನವಾಗಿ ಅನುಮಾನ ತರ್ಕದ ಬಗೆಗಿನ ಅತಿ ಅಂದಾಜು.

ಈ ಎಲ್ಲ ಅಂಶಗಳ ಕುರಿತು ಒಂದಷ್ಟು ಹೇಳಬೇಕು.

೧. *ಶಾಸ್ತ್ರೋಕ್ತ ದೋಷಗಳು:* ನಾವು ಎರಡು ಹೇಳಿಕೆಗಳ ಮೂಲಕ ಆರಂಭಿಸೋಣ: 'ಸಾಕ್ರಟೀಸ್ ಒಬ್ಬ ಮನುಷ್ಯ' ಮತ್ತು 'ಎಲ್ಲ ಗ್ರೀಕರೂ ಮನುಷ್ಯರು.' ಇವುಗಳೆರಡರಲ್ಲಿನ ವ್ಯತ್ಯಾಸವನ್ನು ನಾವು ನಿಖರವಾಗಿ ಗುರುತಿಸಬೇಕು, ಅರಿಸ್ಟಾಟಲ್‌ಪ್ರಣೀತ ತರ್ಕ ಇದನ್ನು ಮಾಡುವುದಿಲ್ಲ. 'ಎಲ್ಲ ಗ್ರೀಕರೂ ಮನುಷ್ಯರು' ಎಂಬ ಹೇಳಿಕೆಯು ಗ್ರೀಕರು ಇದ್ದಾರೆ ಎಂದು ಸೂಚಿಸುತ್ತದೆಂದು ಸಾಮಾನ್ಯವಾಗಿ ವ್ಯಾಖ್ಯಾನಿಸಲಾಗುತ್ತದೆ. ಈ ಸೂಚನೆಯಿಲ್ಲದಿದ್ದರೆ, ಅರಿಸ್ಟಾಟಲ್‌ನ ನಿಗಮನತರ್ಕವು ಸಮಂಜಸವಾಗುವುದಿಲ್ಲ. ಉದಾಹರಣೆಯೊಂದನ್ನು ತೆಗೆದುಕೊಳ್ಳಿ:

'ಎಲ್ಲ ಗ್ರೀಕರೂ ಮನುಷ್ಯರು, ಎಲ್ಲ ಗ್ರೀಕರೂ ಬಿಳಿಯರು, ಹೀಗಾಗಿ ಕೆಲವು ಮನುಷ್ಯರು ಬಿಳಿಯರು' ಎಂಬುದು ಸಮಂಜಸವಾಗುವುದು ಗ್ರೀಕರು ಇದ್ದಾಗ, ಇಲ್ಲದಿದ್ದಾಗ ಅಲ್ಲ. ನಾನೇನಾದರೂ,

'ಎಲ್ಲ ಚಿನ್ನದ ಪರ್ವತಗಳೂ ಪರ್ವತಗಳು, ಎಲ್ಲ ಚಿನ್ನದ ಪರ್ವತಗಳು ಚಿನ್ನದವು, ಹೀಗಾಗಿ ಕೆಲವು ಪರ್ವತಗಳು ಚಿನ್ನದವು' ಎಂಬ ನನ್ನ ನಿರ್ಣಯವು, ನನ್ನ ಆಧಾರವಾಕ್ಯವು ಒಂದರ್ಥದಲ್ಲಿ ನಿಜವಾದರೂ, ತಪ್ಪಾಗುತ್ತದೆ. ನಾವು

ಸುಸ್ಪಷ್ಟವಾಗಿರಬೇಕಾದರೆ, 'ಎಲ್ಲ ಗ್ರೀಕರೂ ಮನುಷ್ಯರು' ಎಂಬ ಹೇಳಿಕೆಯನ್ನು ಇಬ್ಭಾಗ ಮಾಡಬೇಕು, ಅದರಲ್ಲೊಂದು 'ಗ್ರೀಕರು ಇದ್ದಾರೆ' ಎಂಬುದಾಗಿರಬೇಕು, ಮತ್ತೊಂದು 'ಯಾವುದಾದರೂ ಗ್ರೀಕ್ ಆಗಿದ್ದರೆ, ಅದು ಮನುಷ್ಯ'. ಎರಡನೆಯ ಹೇಳಿಕೆಯು ಶುದ್ಧಾಂಗವಾಗಿ ಕಲ್ಪಿತವಾದುದು, ಅದು ಗ್ರೀಕರು ಇದ್ದಾರೆ ಎನ್ನುವುದನ್ನು ಸೂಚಿಸುವುದಿಲ್ಲ.

'ಎಲ್ಲ ಗ್ರೀಕರೂ ಮನುಷ್ಯರು' ಎಂಬ ಹೇಳಿಕೆಯು 'ಸಾಕ್ರಟೀಸ್ ಒಬ್ಬ ಮನುಷ್ಯ' ಎಂಬ ಹೇಳಿಕೆಗಿಂತ ತುಂಬ ಸಂಕೀರ್ಣವಾದುದು. 'ಸಾಕ್ರಟೀಸ್ ಒಬ್ಬ ಮನುಷ್ಯ' ಎಂಬುದರಲ್ಲಿ ಸಾಕ್ರಟೀಸ್ ಕರ್ತೃಪದ, ಆದರೆ 'ಎಲ್ಲ ಗ್ರೀಕರೂ ಮನುಷ್ಯರು' ಎಂಬುದರಲ್ಲಿನ 'ಎಲ್ಲ ಗ್ರೀಕರೂ' ಕರ್ತೃಪದವಾಗುವುದಿಲ್ಲ; ಯಾಕೆಂದರೆ, 'ಗ್ರೀಕರು ಇದ್ದಾರೆ' ಎಂಬ ಹೇಳಿಕೆಯಲ್ಲಾಗಲೀ, 'ಯಾವುದಾದರೂ ಗ್ರೀಕ್ ಆಗಿದ್ದರೆ, ಅದು ಮನುಷ್ಯ' ಎಂಬುದರಲ್ಲಾಗಲೀ 'ಎಲ್ಲ ಗ್ರೀಕರೂ' ಎಂಬುದರ ಬಗ್ಗೆ ಏನೂ ಇಲ್ಲ.

ಈ ಶುದ್ಧಾಂಗ ಶಾಸ್ತ್ರೋಕ್ತ ದೋಷವು ತತ್ವಜಿಜ್ಞಾಸೆಯಲ್ಲಿಯೂ ಜ್ಞಾನಮೀಮಾಂಸೆಯಲ್ಲಿಯೂ ದೋಷಗಳ ಮೂಲವಾಯಿತು. 'ಸಾಕ್ರಟೀಸ್ ಒಬ್ಬ ಮರ್ತ್ಯ' ಮತ್ತು 'ಎಲ್ಲ ಮನುಷ್ಯರೂ ಮರ್ತ್ಯರು' ಎಂಬ ಎರಡು ಪ್ರತಿಪಾದನೆಗಳಲ್ಲಿನ ನಮ್ಮ ಜ್ಞಾನಸ್ವರೂಪವನ್ನು ಪರಿಶೀಲಿಸಿ. 'ಸಾಕ್ರಟೀಸ್ ಒಬ್ಬ ಮರ್ತ್ಯ' ಎಂಬ ಹೇಳಿಕೆಯ ಸತ್ಯಾಂಶವನ್ನು ತಿಳಿಯಲು, ನಮ್ಮಲ್ಲಿ ಬಹುತೇಕರು ಸಾಕ್ಷ್ಯವನ್ನವಲಂಬಿಸುತ್ತೇವೆ; ಆದರೆ ಆ ಸಾಕ್ಷ್ಯವು ನಂಬಲರ್ಹವಾಗಿರಬೇಕಾದರೆ, ಸಾಕ್ರಟೀಸ್‌ನನ್ನು ತಿಳಿದವರು ಯಾರಾದರೂ ಇದ್ದು ಅವನು ಸತ್ತದ್ದನ್ನು ಕಂಡಿರಬೇಕು. ಕಣ್ಣಾರೆ ಕಂಡ ವಾಸ್ತವ – ಸಾಕ್ರಟೀಸ್‌ನ ಮೃತದೇಹ – ಮತ್ತು ಇದ್ದಾಗ ಅದನ್ನು 'ಸಾಕ್ರಟೀಸ್' ಎಂದು ಕರೆಯುತ್ತಿದ್ದರು ಎಂಬುದು ಸಾಕ್ರಟೀಸ್‌ನ ಮರ್ತ್ಯತ್ವವನ್ನು ಖಚಿತಪಡಿಸಲು ಸಾಕಾಗುತ್ತಿತ್ತು. ಆದರೆ 'ಎಲ್ಲ ಮನುಷ್ಯರೂ ಮರ್ತ್ಯರು' ಎಂಬ ಹೇಳಿಕೆಗೆ ಬಂದಾಗ, ಪರಿಸ್ಥಿತಿ ಭಿನ್ನವಾಗುತ್ತದೆ. ಅಂತಹ ಸಾಮಾನ್ಯ ಪ್ರತಿಪಾದನೆಯ ಬಗೆಗಿನ ನಮ್ಮ ಜ್ಞಾನಸ್ವರೂಪದ ಸಮಸ್ಯೆಯು ತುಂಬ ಕಷ್ಟಕರವಾದುದು. ಕೆಲವು ವೇಳೆ ಅವು ಬರೀ ಮಾತುಗಳು: 'ಎಲ್ಲ ಗ್ರೀಕರೂ ಮನುಷ್ಯರು' ಎಂಬುದು ತಿಳಿದಿರುವುದು, ಮನುಷ್ಯನಾಗಿರದಿದ್ದರೆ ಯಾರನ್ನೂ ಗ್ರೀಕ್ ಎಂದು ಕರೆಯುತ್ತಿರಲಿಲ್ಲ. ಅಂಥ ಸಾಮಾನ್ಯ ಹೇಳಿಕೆಗಳನ್ನು ನಿಘಂಟಿನ ನೆರವಿನಿಂದ ಖಚಿತಪಡಿಸಿಕೊಳ್ಳಬಹುದು; ಪದಗಳು ಹೇಗೆ ಬಳಕೆಗೊಳ್ಳುತ್ತವೆ ಎಂಬುದನ್ನು ಬಿಟ್ಟು ಅವು ಜಗತ್ತಿನ ಬಗ್ಗೆ ಏನನ್ನೂ ಹೇಳಲಾರವು. ಆದರೆ 'ಎಲ್ಲ ಮನುಷ್ಯರೂ ಮರ್ತ್ಯರು' ಎಂಬುದು ಈ ಬಗೆಯದಲ್ಲ; ಒಬ್ಬ ಅಮರ ಮನುಷ್ಯನ ಬಗ್ಗೆ ತಾರ್ಕಿಕವಾಗಿ ಯಾವುದೇ ಸ್ವವಿರೋಧವಿಲ್ಲ. ನಾವು ಈ ಹೇಳಿಕೆಯನ್ನು ನಂಬುವುದು ನಿಗಮನದ (ಇಂಡಕ್ಷನ್) ಆಧಾರದ ಮೇಲೆ, ಯಾಕೆಂದರೆ ಯಾವೊಬ್ಬನೂ ಉದಾಹರಣೆಗೆ ೧೫೦ ಕ್ಕೂ

ಹೆಚ್ಚು ವರ್ಷಗಳ ಕಾಲ ಬದುಕಿದ್ದ ಆಧಿಕೃತ ಮಾಹಿತಿಯಿಲ್ಲ; ಆದರೆ ಇದರಿಂದ ಹೇಳಿಕೆಯು ಸಂಭವನೀಯವಾಗುತ್ತದೆಯೇ ವಿನಾ ನಿಶ್ಚಿತವಾಗುವುದಿಲ್ಲ. ಎಲ್ಲಿಯವರೆಗೂ ಬದುಕಿರುವ ಮನುಷ್ಯನು ಅಸ್ತಿತ್ವದಲ್ಲಿರುತ್ತಾನೋ ಅಲ್ಲಿಯವರೆಗೆ ಇದು ನಿಶ್ಚಿತವಾಗಲಾರದು.

ತತ್ವಜಿಜ್ಞಾಸೆಯ ದೋಷಗಳು ಉಂಟಾದದ್ದು, 'ಸಾಕ್ರಟೀಸ್ ಮರ್ತ್ಯ' ಎಂಬುದರಲ್ಲಿ 'ಸಾಕ್ರಟೀಸ್' ಕರ್ತೃಪದ ಎಂಬಂತೆಯೇ 'ಎಲ್ಲ ಮನುಷ್ಯರು' ಎಂಬುದನ್ನು 'ಎಲ್ಲ ಮನುಷ್ಯರೂ ಮರ್ತ್ಯರು' ಎಂಬುದರಲ್ಲಿನ ಕರ್ತೃಪದ ಎಂದು ತಿಳಿದಿದ್ದರಿಂದ. 'ಸಾಕ್ರಟೀಸ್' ಸೂಚಿಸಿದ ಒಂದು ಘಟಕವೆಂಬಂತೆಯೇ 'ಎಲ್ಲ ಮನುಷ್ಯರೂ' ಒಂದು ಘಟಕ ಎಂಬುದರಿಂದಾಗಿ, ಒಂದರ್ಥದಲ್ಲಿ, ಇದು ಸಾಧ್ಯವಾಯಿತು. ಇದರಿಂದ ಅರಿಸ್ಟಾಟಲ್ ಜೀವಜಾತವು ಒಂದು ಸತ್ವ (ಸಬ್‌ಸ್ಟೆನ್ಸ್) ಎಂದು ಹೇಳುವ ಹಾಗಾಯಿತು. ಈ ಹೇಳಿಕೆಯನ್ನವನು ಎಚ್ಚರಿಕೆಯಿಂದ ವಿಶೇಷಿಸಿದ್ದಾನಾದರೂ, ಅವನ ಅನುಯಾಯಿಗಳು, ಅದರಲ್ಲೂ ಪಾರ್ಫೈರಿ, ಅಷ್ಟು ಎಚ್ಚರಿಕೆಯನ್ನು ವಹಿಸಲಿಲ್ಲ.

ಈ ತಪ್ಪಿನಿಂದಾಗಿ ಅರಿಸ್ಟಾಟಲ್ ಮಾಡುವಂತಾದ ಮತ್ತೊಂದು ದೋಷವೆಂದರೆ ಒಂದು ವಿಧೇಯದ (ಪ್ರೆಡಿಕೇಟ್) ವಿಧೇಯವು ಮೂಲ ಕರ್ತೃಪದದ ವಿಧೇಯವಾಗಬಹುದು ಎಂಬ ತಪ್ಪು ತಿಳಿವಳಿಕೆಯ ಕಾರಣದಿಂದಾಗಿ. 'ಸಾಕ್ರಟೀಸ್ ಒಬ್ಬ ಗ್ರೀಕ್, ಎಲ್ಲ ಗ್ರೀಕರೂ ಮನುಷ್ಯರು' ಎಂದು ನಾನು ಹೇಳಿದರೆ, ಅದರಲ್ಲಿನ 'ಮನುಷ್ಯ' ಎಂಬುದು 'ಗ್ರೀಕ್' ಎಂಬುದರ ವಿಧೇಯ, 'ಗ್ರೀಕ್' ಎಂಬುದು 'ಸಾಕ್ರಟೀಸ್' ಎಂಬುದರ ವಿಧೇಯ, ಮತ್ತು 'ಮನುಷ್ಯ' ಎಂಬುದು 'ಸಾಕ್ರಟೀಸ್' ಎಂಬುದರ ವಿಧೇಯ ಎಂದು ಅರಿಸ್ಟಾಟಲ್ ತಿಳಿಯುತ್ತಾನೆ. ವಾಸ್ತವವಾಗಿ 'ಮನುಷ್ಯ' ಎಂಬುದು 'ಗ್ರೀಕ್' ಎಂಬುದರ ವಿಧೇಯವಲ್ಲ. ಹೆಸರುಗಳು ಮತ್ತು ವಿಧೇಯಗಳ ನಡುವಣ ವ್ಯತ್ಯಾಸ, ಅಥವಾ ತತ್ವಜಿಜ್ಞಾಸೆಯ ಪರಿಭಾಷೆಯಲ್ಲಿ ಹೇಳುವುದಾದರೆ, ನಿರ್ದಿಷ್ಟಗಳ ಮತ್ತು ವೈಶ್ವಿಕಗಳ (ಪರ್ಟಿಕ್ಯುಲರ್ಸ್ ಅಡ್ ಯೂನಿವರ್ಸಲ್ಸ್) ನಡುವಣ ವ್ಯತ್ಯಾಸವನ್ನು ಮಸುಕುಗೊಳಿಸಲಾಗಿದೆ. ಇದರಿಂದಾಗಿ ತತ್ವಜ್ಞಾನದ ಮೇಲೆ ವಿನಾಶಕಾರಿ ಪರಿಣಾಮವಾಯಿತು. ಇದರಿಂದುಂಟಾದ ಗೊಂದಲಗಳಲ್ಲಿ ಒಂದೆಂದರೆ, ಒಂದೇ ಇರುವ ವರ್ಗ ಮತ್ತು ಆ 'ಒಂದು' ಇವೆರಡೂ ಅನನ್ಯವಾದವು ಎಂಬುದು. ಇದರಿಂದಾಗಿ ಒಂದು ಎಂಬ ಸಂಖ್ಯೆಯ ಬಗೆಗೆ ಸಮಂಜಸವಾದ ಸಿದ್ಧಾಂತವನ್ನು ಮಂಡಿಸುವುದು ಅಸಾಧ್ಯವಾಯಿತು, ಮತ್ತು ಇದು ಐಕ್ಯದ ಬಗೆಗಿನ ಕೊನೆಯಿಲ್ಲದ ತಪ್ಪು ತತ್ವಜಿಜ್ಞಾಸೆಗೆ ಕಾರಣವಾಯಿತು.

೨. ನಿಗಮನತರ್ಕದ ಬಗ್ಗೆ ನಮ್ಮ ಮೌಲ್ಯಮಾಪನ: ನಿಗಮನವು ಅನುಗಮನಾತ್ಮಕ ವಾದಗಳಲ್ಲಿ ಒಂದು ಬಗೆ ಅಷ್ಟೆ. ಪೂರ್ತಿ ಅನುಗಮನಾತ್ಮಕವಾದ ಗಣಿತದಲ್ಲಿ ನಿಗಮನವು ಬಹುತೇಕ ಕಾಣಿಸಿಕೊಳ್ಳುವುದಿಲ್ಲ. ಗಣಿತಾತ್ಮಕ ವಾದಗಳನ್ನು

ನಿಗಮನದ ಮೂಲಕ ಪುನಾರಚಿಸಲು ಸಾಧ್ಯವೇನೋ ಇದೆ, ಆದರೆ ಇದು ಕೃತಕವಾದುದಾಗುವುದಲ್ಲದೆ, ಅದರಿಂದ ಹೆಚ್ಚೇನೂ ಸಮಂಜಸವಾಗುವುದಿಲ್ಲ. ನಿದರ್ಶನಕ್ಕೆ ಅಂಕಗಣಿತವನ್ನು ತೆಗೆದುಕೊಳ್ಳಿ. ನಾನು ೧೬ ಷಿಲಿಂಗ್ ೩ ಪೆನ್ನಿಗಳ ಸಾಮಾನು ತೆಗೆದುಕೊಂಡು ೧ ಪೌಂಡ್ ಕೊಟ್ಟರೆ, ನನಗೆ ವಾಪಸು ಬರಬೇಕಾದ ಚಿಲ್ಲರೆಯೆಷ್ಟು? ಈ ಸರಳ ಲೆಕ್ಕವನ್ನು ನಿಗಮನಾತ್ಮಕವಾಗಿ ಹೇಳುವುದು ಅಸಂಬದ್ಧವೆನಿಸುತ್ತದೆ, ಅಲ್ಲದೆ ನಿಜವಾದ ವಾದವನ್ನು ಮರೆಮಾಚಿಬಿಡುತ್ತದೆ. ಮತ್ತೆ, ತರ್ಕದಲ್ಲಿಯೇ ಅನಿಗಮನಾತ್ಮಕ ಊಹನೆಗಳಿವೆ: 'ಕುದುರೆಯು ಒಂದು ಪ್ರಾಣಿ, ಹೀಗಾಗಿ ಕುದುರೆಯ ತಲೆಯು ಪ್ರಾಣಿಯ ತಲೆ.' ಸಮಂಜಸ ನಿಗಮನವು ಸಮಂಜಸ ಅನುಗಮನಾತ್ಮಕ ವಾದಗಳಲ್ಲಿ ಕೇವಲ ಕೆಲವು, ಅವಕ್ಕೆ ಬೇರೆಯವಕ್ಕಿಂತ ಹೆಚ್ಚಿನ ತಾರ್ಕಿಕ ಮಹತ್ವವಿಲ್ಲ. ಅನುಗಮನದಲ್ಲಿ ನಿಗಮನಕ್ಕೆ ವಿಶೇಷ ಮಹತ್ವ ನೀಡುವ ಪ್ರಯತ್ನದಿಂದ ತತ್ವಜ್ಞಾನಿಗಳನ್ನು ಗಣಿತಾತ್ಮಕ ವೈಚಾರಿಕತೆಯ ಸ್ವರೂಪಕ್ಕೆ ದೂಡಿತು. ಗಣಿತವು ನಿಗಮನಾತ್ಮಕವಲ್ಲ ಎಂದು ತಿಳಿದ ಕ್ಯಾಂಟ್, ಅದು ತರ್ಕಾತೀತ ತತ್ವಗಳನ್ನು ಬಳಸುತ್ತದೆಂದು ಊಹಿಸಿದ; ಅಲ್ಲದೆ, ಅವು ತರ್ಕದಷ್ಟೇ ನಿಖರವಾದವು ಎಂದು ಭಾವಿಸಿದ. ತನಗಿಂತ ಹಿಂದಿನವರಂತೆಯೇ ಅವನೂ, ಬೇರೆಯ ರೀತಿಯಲ್ಲಿ ಎಂದಿಟ್ಟುಕೊಳ್ಳಿ, ಅರಿಸ್ಟಾಟಲ್‌ನ ಬಗೆಗಿನ ಗೌರವದಿಂದ ದಾರಿತಪ್ಪಿದ.

೩. *ಅನುಗಮನದ ಬಗೆಗಿನ ಅತಿ ಅಂದಾಜು:* ಗ್ರೀಕರು ಜ್ಞಾನದ ಆಕರವೆಂದು ಆಧುನಿಕ ತತ್ವಜ್ಞಾನಿಗಳಿಗಿಂತ ಹೆಚ್ಚಿನ ಮಹತ್ವವನ್ನು ಅನುಗಮನಕ್ಕೆ ನೀಡಿದರು. ಈ ವಿಷಯದಲ್ಲಿ, ಅರಿಸ್ಟಾಟಲ್ ಪ್ಲೇಟೋನಿಗಿಂತ ಕಡಿಮೆ ತಪ್ಪಿತಸ್ಥ. ಅವನು ಮತ್ತೆ ಮತ್ತೆ ನಿಗಮನದ ಪ್ರಾಮುಖ್ಯವನ್ನು ಒಪ್ಪಿಕೊಂಡ, ಅಲ್ಲದೆ ಅನುಗಮನವು ಆರಂಭವಾಗಬೇಕಾದ ಮೊದಲ ಆಧಾರವಾಕ್ಯವು ಯಾವುದಾಗಬೇಕೆಂದು ತಿಳಿಯುವುದು ಹೇಗೆ ಎಂಬ ಪ್ರಶ್ನೆಗೆ ಸಾಕಷ್ಟು ಗಮನವನ್ನು ಹರಿಸಿದ, ಆದರೂ, ಇತರ ಗ್ರೀಕರಂತೆಯೇ ಅವನೂ ತನ್ನ ಜ್ಞಾನಸಿದ್ಧಾಂತದಲ್ಲಿ ಅನುಗಮನಕ್ಕೆ ಅನಪೇಕ್ಷಿತ ಮಹತ್ವವನ್ನು ನೀಡಿದ. ಮಿ. ಸ್ಮಿತ್ ಮರ್ತ್ಯ ಎಂದು ಒಪ್ಪಿಕೊಳ್ಳೋಣ, ಜೊತೆಗೆ, ಸಡಿಲವಾಗಿ, ಇದು ನಮಗೆ ತಿಳಿದಿರುವುದು ಎಲ್ಲ ಮಾನವರೂ ಮರ್ತ್ಯರು ಎಂಬುದರಿಂದಾಗಿ ಎನ್ನೋಣ. ಆದರೆ ನಮಗೆ ನಿಜವಾಗಿ ತಿಳಿದಿರುವುದು 'ಎಲ್ಲ ಮನುಷ್ಯರೂ ಮರ್ತ್ಯರು' ಎಂಬುದಲ್ಲ; ಬದಲಿಗೆ, ತಿಳಿದಿರುವುದು 'ನೂರೈವತ್ತು ವರ್ಷಗಳ ಹಿಂದೆ ಹುಟ್ಟಿದವರೆಲ್ಲ ಮರ್ತ್ಯರು, ಹೀಗಾಗಿ ನೂರು ವರ್ಷಕ್ಕಿಂತ ಹಿಂದೆ ಹುಟ್ಟಿದವರಲ್ಲಿ ಬಹುಪಾಲು ಮರ್ತ್ಯರು' ಎನ್ನುವಂತಹುದು. ಮಿ. ಸ್ಮಿತ್ ಸಾಯುತ್ತಾನೆ ಎಂದು ನಮಗೆ ತಿಳಿದಿರುವುದು ಈ ಕಾರಣದಿಂದಾಗಿ. ಆದರೆ ಈ ವಾದವು ನಿಗಮನಾತ್ಮಕವೇ ಹೊರತು ಅನುಗಮನಾತ್ಮಕವಲ್ಲ. ಅದು ಅನುಗಮನಕ್ಕಿಂತ ಕಡಿಮೆ ಸುಸಾಂಗತ್ಯವನ್ನು ಹೊಂದಿದೆ. ಅದರಿಂದ ಸಂಭವನೀಯತೆಯು

ಹೊಮ್ಮುತ್ತದೆಯೇ ವಿನಾ ನಿಶ್ಚಿತತೆಯಲ್ಲ; ಆದರೆ ಮತ್ತೊಂದೆಡೆ, ಅದರಿಂದ ಹೊಸ ಜ್ಞಾನ ಸಿದ್ಧಿಸುತ್ತದೆ, ಆದರೆ ಅನುಗಮನದಿಂದಲ್ಲ. ತರ್ಕದಿಂದ ಹೊರಗಿನ ಎಲ್ಲ ಪ್ರಮುಖ ಊಹನೆಗಳೂ ಮತ್ತು ಶುದ್ಧ ಗಣಿತವೂ ನಿಗಮನಾತ್ಮಕವೇ ಹೊರತು ಅನುಗಮನಾತ್ಮಕವಲ್ಲ. ಏಕೈಕ ಅಪವಾದಗಳೆಂದರೆ ಕಾನೂನು ಮತ್ತು ಮತಧರ್ಮಶಾಸ್ತ್ರ; ಇವೆರಡೂ ತಮ್ಮ ಮೊದಲ ತತ್ವಗಳನ್ನು ಸಾಧಿಸಿಕೊಳ್ಳುವುದು ಪ್ರಶ್ನಾತೀತವಾದ ಪಠ್ಯದಿಂದ, ಅಂದರೆ ಆಗಮಗಳು ಅಥವಾ ಧರ್ಮಗ್ರಂಥಗಳು.

ನಿಗಮನತರ್ಕದ ಕುರಿತಾದ 'ದ ಪ್ರಿಯರ್ ಅನಾಲಿಟಿಕ್ಸ್' ಅಲ್ಲದೆ ಅರಿಸ್ಟಾಟಲ್‌ನ ಇತರ ಬರಹಗಳಿವೆ, ಅವಕ್ಕೆ ತತ್ವಜ್ಞಾನದ ಇತಿಹಾಸದಲ್ಲಿ ಪ್ರಮುಖ ಸ್ಥಾನವಿದೆ. ಇವುಗಳಲ್ಲಿ ಒಂದು ಎಂದರೆ ಮೂಲತತ್ವಗಳ ('ದ ಕ್ಯಾಟೆಗೊರೀಸ್') ಬಗೆಗಿನ ಕಿರು ಹೊತ್ತಗೆ. ನವಪ್ಲೇಟೋಪಂಥೀಯನಾದ ಪಾರ್ಫೈರಿ ಈ ಗ್ರಂಥದ ಬಗೆಗೆ ಒಂದು ವ್ಯಾಖ್ಯಾನವನ್ನು ರಚಿಸಿದ್ದಾನೆ, ಅದು ಮಧ್ಯಕಾಲೀನ ತತ್ವಜ್ಞಾನದ ಮೇಲೆ ಗಮನಾರ್ಹ ಪ್ರಭಾವವನ್ನು ಬೀರಿತು. ಆದರೆ ಸದ್ಯಕ್ಕೆ ಪಾರ್ಫೈರಿಯನ್ನು ಕಡೆಗಣಿಸಿ ನಮ್ಮ ಗಮನವನ್ನು ಅರಿಸ್ಟಾಟಲ್ ಕಡೆ ಹರಿಸೋಣ.

ಅರಿಸ್ಟಾಟಲ್, ಅಥವಾ ಕ್ಯಾಂಟ್ ಅಥವಾ ಹೆಗೆಲ್‌ರ ಪ್ರಕಾರ ಮೂಲತತ್ವ ಎಂಬ ಪದಕ್ಕಿರುವ ನಿಖರ ಅರ್ಥವೇನು ಎಂಬುದನ್ನು ನಾನು ಅರಿತುಕೊಳ್ಳಲು ಸಾಧ್ಯವಾಗಿಯೇ ಇಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ಮೂಲತತ್ವ ಎಂಬುದು ಸ್ಪಷ್ಟ ವಿಚಾರವನ್ನು ಪ್ರತಿನಿಧಿಸುವ ಬಗೆಯಲ್ಲಿ ತತ್ವಜ್ಞಾನದಲ್ಲಿ ಯಾವುದೇ ರೀತಿಯಲ್ಲಿ ಉಪಯೋಗಕ್ಕೆ ಬರುವುದೇ ಇಲ್ಲ ಎಂಬುದು ನಮ್ಮ ಶ್ರದ್ಧೆ. ಅರಿಸ್ಟಾಟಲ್‌ನಲ್ಲಿ ಹತ್ತು ಮೂಲತತ್ವಗಳಿವೆ: ಸತ್ವ (ಸಬ್‌ಸ್ಟೆನ್ಸ್), ಗುಣಮಟ್ಟ (ಕ್ವಾಲಿಟಿ), ಸಂಬಂಧ (ರಿಲೇಷನ್), ಸ್ಥಳ (ಪ್ಲೇಸ್), ಕಾಲ (ಟೈಂ), ಸ್ಥಾನ (ಪೊಸಿಷನ್), ಸ್ಥಿತಿ (ಸ್ಟೇಟ್), ಕ್ರಿಯೆ (ಆಕ್ಷನ್), ಮತ್ತು ಚಿತ್ತವೃತ್ತಿ (ಅಫೆಕ್ಷನ್). ಮೂಲತತ್ವ ಎಂಬುದಕ್ಕೆ ನೀಡಿರುವ ಏಕೈಕ ವ್ಯಾಖ್ಯೆಯೆಂದರೆ: 'ಮೇಳೈಕೆಯಲ್ಲಿ ಏನನ್ನೂ ಸೂಚಿಸದ ಅಭಿವ್ಯಕ್ತಿಗಳು', ಆನಂತರ ಮೇಲಿನ ಪಟ್ಟಿ ಬರುತ್ತದೆ. ಸತ್ವ ಅಥವಾ ಗುಣಮಟ್ಟ ಇತ್ಯಾದಿ ಇತರ ಪದಗಳ ಅರ್ಥಗಳ ಸೇರುವಿಕೆಯಿಂದ ಸೂಚಿತವಾಗದ ರೀತಿಯಲ್ಲಿ ಪ್ರತಿ ಪದವೂ ಅರ್ಥವನ್ನು ಹೊಂದಿರುತ್ತದೆ ಎಂಬುದು ಇದರ ಆಶಯವಿರಬಹುದು. ಈ ಹತ್ತು ಮೂಲತತ್ವಗಳ ಪಟ್ಟಿಯ ಸಿದ್ಧತೆಯಲ್ಲಿ ಯಾವ ತತ್ವವು ಹಿನ್ನೆಲೆಗಿದೆ ಎಂಬುದರ ಬಗ್ಗೆ ಯಾವುದೇ ಸುಳುಹು ಇಲ್ಲ.

'ಸತ್ವ' ಎಂಬುದು ಮೂಲತಃ ಒಂದು ವಸ್ತುವಿನ ಬಗ್ಗೆ ಅಥವಾ ವಸ್ತುವಿನಲ್ಲಿ ಇರುವುದರ ಬಗ್ಗೆ ಏನನ್ನೂ ಹೇಳಲಾಗದ್ದು. ಯಾವುದೋ ಒಂದು 'ವಸ್ತುವಿನಲ್ಲಿ ಇದೆ' ಎಂದರೆ, ಅದರ ಭಾಗವಾಗಿರದಿದ್ದರೂ, ಅದು ವಸ್ತುವಿಲ್ಲದೆ ಇರಲಾರದು. ಹೇಳಿರುವ ನಿದರ್ಶನಗಳು ಮನಸ್ಸಿನಲ್ಲಿರುವ ವ್ಯಾಕರಣಜ್ಞಾನದ ತುಣುಕುಗಳು

ಮತ್ತು ದೇಹದಲ್ಲಿನ ಒಂದು ಬಗೆಯ ಬಿಳಿಪು. ಈ ಮೂಲಾರ್ಥದಲ್ಲಿ ಸತ್ವ ಎಂಬುದು ಒಬ್ಬ ವ್ಯಕ್ತಿಯಲ್ಲಿ ಅಥವಾ ಪ್ರಾಣಿಯಲ್ಲಿ ಇರುವ ಒಂದು ಪದಾರ್ಥ. ಆದರೆ ಎರಡನೆಯ ಅರ್ಥದಲ್ಲಿ, ಒಂದು ಜೀವಜಾತ ಅಥವಾ ವರ್ಗ – ಉದಾಹರಣೆಗೆ, 'ಮನುಷ್ಯ' ಅಥವಾ 'ಪ್ರಾಣಿ' – ಸತ್ವ ಎನಿಸಿಕೊಳ್ಳುತ್ತದೆ. ಈ ಎರಡನೆಯ ಅರ್ಥ ಅಸಮರ್ಥನೀಯವೆಂಬಂತೆ ತೋರುತ್ತದೆ. ಇದು ಮುಂದಿನ ಲೇಖಕರಿಗೆ ಕೆಟ್ಟ ತತ್ವಜಿಜ್ಞಾಸೆಗೆ ಬಾಗಿಲು ತೆರೆದು ಸ್ವತಂತ್ರಗೊಳಿಸಿತು.

'ದ ಪೋಸ್ಟೀರಿಯರ್ ಅನಾಲಿಟಿಕ್ಸ್' ಯಾವುದೇ ಅನುಗಮನ ಸಿದ್ಧಾಂತವನ್ನು ತೊಂದರೆಗೀಡುಮಾಡುವ ಪ್ರಶ್ನೆಗೆ ವಿಶೇಷವಾಗಿ ಸಂಬಂಧಿಸಿದ ಗ್ರಂಥ. ಅದೆಂದರೆ: ಮೊದಲ ಆಧಾರವಾಕ್ಯವನ್ನು ಪಡೆಯುವುದು ಹೇಗೆ? ಅನುಗಮನವು ಎಲ್ಲಿಂದಲಾದರೂ ಆರಂಭವಾಗಬೇಕಾದ್ದರಿಂದ, ಈಗಾಗಲೇ ಸಿದ್ಧಗೊಂಡಿಲ್ಲದ್ದರಿಂದ ಆರಂಭಿಸಬೇಕು, ಅದು ತಾರ್ಕಿಕ ಸಮರ್ಥನೆಯಿಲ್ಲದೆ ತಿಳಿಯುವಂತಿರಬೇಕು. ನಾನಿಲ್ಲಿ ಅರಿಸ್ಟಾಟಲ್‌ನ ಸಿದ್ಧಾಂತವನ್ನು ವಿವರವಾಗಿ ಮಂಡಿಸುವುದಿಲ್ಲ, ಯಾಕೆಂದರೆ ಅದು ಸತ್ವದ ಕಲ್ಪನೆಯನ್ನು ಆಧರಿಸುತ್ತದೆ. ಅವನ ಪ್ರಕಾರ, ವ್ಯಾಖ್ಯೆ ಎಂದರೆ ಹೇಳಿಕೆಯೆಂಬುದು ಒಂದು ವಸ್ತುವಿನ ಮೂಲ ಸ್ವಭಾವ. ಅರಿಸ್ಟಾಟಲ್‌ನ ನಂತರದ ಪ್ರತಿ ತಾತ್ವಿಕತೆಯಲ್ಲಿಯೂ ಸತ್ವದ ಕಲ್ಪನೆಯು ಅದರ ಒಂದು ನಿಕಟ ಭಾಗವಾಗಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಅದು ತಿಕ್ಕಲು ಕಲ್ಪನೆ, ಆದರೆ ಅದರ ಐತಿಹಾಸಿಕ ಮಹತ್ವದಿಂದಾಗಿ ಅದರ ಬಗ್ಗೆ ಒಂದಷ್ಟನ್ನಾದರೂ ಹೇಳಬೇಕಾಗುತ್ತದೆ.

ಒಂದು ವಸ್ತುವಿನ 'ಸತ್ವ' ಎಂದರೆ 'ತನ್ನ ಅನನ್ಯತೆಯನ್ನು ಕಳೆದುಕೊಳ್ಳದೆ ಬದಲಾಗಲಾರದ ಅದರ ಗುಣಲಕ್ಷಣಗಳು' ಎಂಬ ಅರ್ಥ ನೀಡಿದಂತೆ ಕಾಣುತ್ತದೆ. ಸಾಕ್ರಟೀಸ್ ಕೆಲವು ಸಂದರ್ಭಗಳಲ್ಲಿ ಸಂತೋಷವಾಗಿರಬಹುದು, ಕೆಲವು ವೇಳೆ ದುಃಖಗೊಂಡಿರಬಹುದು, ಕೆಲವು ವೇಳೆ ಚೆನ್ನಾಗಿರಬಹುದು, ಕೆಲವು ವೇಳೆ ಕಾಯಿಲೆ ಮಲಗಿರಬಹುದು. ಸಾಕ್ರಟೀಸ್‌ತನವನ್ನು ಕಳೆದುಕೊಳ್ಳದೆ ಅವನು ಈ ಗುಣಗಳನ್ನು ಬದಲಾಯಿಸಬಹುದಾದ್ದರಿಂದ ಅವು ಅವನ ಸತ್ವದ ಭಾಗಗಳಲ್ಲ. ಆದರೆ ಜನ್ಮಾಂತರದಲ್ಲಿ ಶ್ರದ್ಧೆಯಿರಿಸಿಕೊಂಡಿದ್ದ ಪೈಥಾಗೊರಾಸ್‌ಪಂಥೀಯನಾಗಿದ್ದರೂ ಅದನ್ನೊಪ್ಪದ ಸಾಕ್ರಟೀಸ್ ಒಬ್ಬ ಮನುಷ್ಯ ಎಂಬುದು ಅವನ ಸತ್ವ, ಹಾಗೆ ನೋಡಿದರೆ, ಸತ್ವದ ಸಮಸ್ಯೆಯು ಪದಗಳ ಬಳಕೆಗೆ ಸೇರಿದ್ದು. ಈ ಪದವನ್ನು ನಾವು ಒಂದೇ 'ವಸ್ತು' ಅಥವಾ 'ವ್ಯಕ್ತಿ'ಯು ಕಾಣಿಸಿಕೊಳ್ಳುವ ವಿವಿಧ ಸಂದರ್ಭಗಳಲ್ಲಿ ಮತ್ತು ವಿವಿಧ ಘಟನೆಗಳಲ್ಲಿ ಬಳಸುತ್ತೇವೆ; ಆದರೆ ಇದು ಶಬ್ದಸೌಕರ್ಯ. ಹೀಗೆ ಸಾಕ್ರಟೀಸ್‌ನ 'ಸತ್ವ'ವು ಯಾವ ಗುಣಲಕ್ಷಣಗಳಿಲ್ಲದಾಗ ನಾವು 'ಸಾಕ್ರಟೀಸ್' ಎಂಬ ಹೆಸರನ್ನು ಬಳಸಬಾರದೋ ಅಂತಹ ಗುಣಲಕ್ಷಣಗಳು. ಈ ಪ್ರಶ್ನೆಯು ಪೂರ್ತಿ ಭಾಷಿಕವಾದುದು; ಒಂದು ಪದಕ್ಕೆ ಸಾರವಿರಬಹುದು, ಆದರೆ ಒಂದು ವಸ್ತುವಿಗಲ್ಲ.

'ಸತ್ವ'ದ ಪರಿಕಲ್ಪನೆಯು, 'ಸಾರ'ದರಂತೆಯೇ, ಯಾವುದು ಭಾಷಿಕ ಸೌಕರ್ಯವೋ ಅದನ್ನು ತತ್ವಜಿಜ್ಞಾಸೆಗೆ ಮಾಡಿದ ವರ್ಗಾವಣೆ ಅಷ್ಟೆ. ಜಗತ್ತನ್ನು ವರ್ಣಿಸುವಲ್ಲಿ, ಕೆಲವು ಸಂಖ್ಯೆಯ ಘಟನೆಗಳನ್ನು 'ಸಾಕ್ರಟೀಸ್'ನ ಜೀವನ ಎಂದು ವರ್ಣಿಸಲು, ಮತ್ತೆ ಕೆಲವು ಘಟನೆಗಳು ಮಿ. ಸ್ಮಿತ್‌ನ ಬದುಕು ಎಂದು ವರ್ಣಿಸಲು ಸುಲಭವೆಂದು ನಮಗನ್ನಿಸುತ್ತದೆ. ಇದರಿಂದ ನಾವು ಸಾಕ್ರಟೀಸ್ ಅಥವಾ ಮಿ. ಸ್ಮಿತ್ ಅವರ ಬದುಕು ಎನ್ನುವುದು ಹಲವಾರು ವರ್ಷಗಳುದ್ದಕ್ಕೂ ಉಳಿದು ಬಂದಿರುವುದು ಎಂದು, ಒಂದು ರೀತಿಯಲ್ಲಿ ಅವನಿಗೆ ಘಟಿಸುವ ಘಟನೆಗಳಿಗಿಂತ ಹೆಚ್ಚು 'ಗಟ್ಟಿ ಹಾಗೂ ಸತ್ಯ' ಎಂದು ಆಲೋಚಿಸುವಂತೆ ಮಾಡುತ್ತದೆ. ಸಾಕ್ರಟೀಸ್ ಕಾಯಿಲೆ ಮಲಗಿದರೆ, ಇತರ ವೇಳೆಗಳಲ್ಲಿ ಸಾಕ್ರಟೀಸ್ ಆರೋಗ್ಯದಿಂದಿದ್ದಾನೆ, ಹೀಗಾಗಿ ಸಾಕ್ರಟೀಸ್‌ನ ಬದುಕು ಅವನ ಇರುವಿಕೆಗಿಂತ ಭಿನ್ನವಾದುದು ಎಂದು ಆಲೋಚಿಸುತ್ತೇವೆ; ಮತ್ತೊಂದೆಡೆ, ಕಾಯಿಲೆಯು ತನ್ನ ಇರುವಿಕೆಗಾಗಿ ಮತ್ತಾರೋ ಕಾಯಿಲೆ ಬೀಳಬೇಕಾಗುತ್ತದೆ. ಸಾಕ್ರಟೀಸ್ ಕಾಯಿಲೆ ಬೀಳಬೇಕಾದ್ದಿಲ್ಲವಾದರೂ, ಅವನು ಅಸ್ತಿತ್ವದಲ್ಲಿರುವನೆಂದು ಹೇಳಲು ಮತ್ತೇನೋ ಸಂಭವಿಸುತ್ತಲೇ ಇರಬೇಕು. ಹೀಗಾಗಿ ಅವನು ವಾಸ್ತವವಾಗಿ ಅವನಿಗೆ ಸಂಭವಿಸುವ ಘಟನೆಗಳಿಗಿಂತ ಹೆಚ್ಚು 'ಗಟ್ಟಿ'.

ಗಂಭೀರವಾಗಿ ಪರಿಗಣಿಸಿದಾಗ, 'ಸತ್ವ'ವು ತೊಂದರೆಗಳಿಂದ ಸ್ವತಂತ್ರವಾಗಲು ಅಸಾಧ್ಯವಾದ ಒಂದು ಕಲ್ಪನೆ. ಸತ್ವವು ಗುಣಲಕ್ಷಣಗಳ ಉದ್ದೇಶ, ಆ ಎಲ್ಲ ಗುಣಲಕ್ಷಣಗಳಿಂದ ಒಂದಷ್ಟು ಭಿನ್ನವಾದುದು ಎಂದು ಭಾವಿಸಲಾಗಿದೆ. ಆದರೆ ನಾವು ಗುಣಲಕ್ಷಣಗಳನ್ನು ಬಿಟ್ಟುಬಿಟ್ಟು ಸತ್ವವನ್ನಷ್ಟೇ ಕಲ್ಪಿಸಿಕೊಳ್ಳಲು ಪ್ರಯತ್ನಿಸಿದರೆ, ಏನೂ ಉಳಿದಿರುವುದಿಲ್ಲವೆಂಬ ಅರಿವಾಗುತ್ತದೆ. ಇದನ್ನು ಮತ್ತೊಂದು ವಿಧದಲ್ಲಿ ಮಂಡಿಸಬೇಕೆಂದರೆ: ಒಂದನ್ನು ಮತ್ತೊಂದು ಸತ್ವದಿಂದ ಭಿನ್ನವಾಗಿಸುವುದು ಯಾವುದು? ಗುಣಲಕ್ಷಣಗಳ ಭಿನ್ನತೆಯಲ್ಲ, ಯಾಕೆಂದರೆ ಸತ್ವದ ತರ್ಕದ ಪ್ರಕಾರ ಗುಣಲಕ್ಷಣಗಳ ಭಿನ್ನತೆಯು ಆ ಸತ್ವಗಳ ನಡುವಣ ಸಾಂಖ್ಯಿಕ ವೈವಿಧ್ಯವನ್ನು ಊಹಿಸಿಕೊಂಡಿರುತ್ತದೆ. ಹೀಗಾಗಿ ಎರಡು ಸತ್ವಗಳು, ತಮ್ಮಲ್ಲಿಯೇ ಯಾವ ಬಗೆಯಲ್ಲಿಯೂ ಭಿನ್ನತೆಯನ್ನು ಹೊಂದಿರದ ಎರಡೇ ಆಗಿರಬೇಕು. ಆಗ, ಅವು ಎರಡು ಎಂದು ನಾವು ಕಂಡುಕೊಳ್ಳುವುದು ಹೇಗೆ?

'ಸತ್ವ' ಎಂದರೆ ವಾಸ್ತವದಲ್ಲಿ ವಿವಿಧ ಘಟನೆಗಳನ್ನು ರಾಶಿಯಾಗಿ ಕಲೆಹಾಕುವ ಸುಲಭ ವಿಧಾನ. ಮಿ. ಸ್ಮಿತ್‌ನ ಬಗ್ಗೆ ನಮಗೇನು ತಿಳಿಯುತ್ತದೆ? ಅವನನ್ನು ನೋಡಿದಾಗ, ಒಂದು ವರ್ಣವಿನ್ಯಾಸ ಕಾಣುತ್ತದೆ; ಅವನು ಮಾತನಾಡುವುದನ್ನು ಕೇಳಿದಾಗ, ನಮಗೆ ಶಬ್ದಸಮೂಹವು ಕೇಳಿಸುತ್ತದೆ. ನಮ್ಮಂತೆಯೇ ಅವನಿಗೂ ಆಲೋಚನೆಗಳೂ ಭಾವನೆಗಳೂ ಇವೆ ಎಂದು ಭಾವಿಸುತ್ತೇವೆ. ಆದರೆ ಈ ಎಲ್ಲಕ್ಕಿಂತ

ಭಿನ್ನವಾದ ಮಿ. ಸ್ಮಿತ್ ಅಂದರೆ ಏನು? ಘಟನೆಗಳು ಜೋತುಬಿದ್ದಿರುವ ಕೇವಲ ಒಂದು ಕಲ್ಪನಾತ್ಮಕ ಕೊಕ್ಕೆ. ಆನೆಯೊಂದಕ್ಕೆ ಮಲಗಲು ಬೇಕಾದ ನೆಲಕ್ಕಿಂತ ಹೆಚ್ಚಿನ ಕೊಕ್ಕೆಯ ಆವಶ್ಯಕತೆಯೇ ಇಲ್ಲ. ಇದನ್ನು ಹೋಲುವ ಭೌಗೋಳಿಕ ಪ್ರದೇಶದ ವಿಷಯದಲ್ಲಿ ಹೇಳಬೇಕಾದರೆ, 'ಫ್ರಾನ್ಸ್' (ಉದಾಹರಣೆಗೆ) ಒಂದು ಅನುಕೂಲಕರ ಭಾಷಿಕ ವಲಯ, ಅದರ ವಿವಿಧ ಭಾಗಗಳಲ್ಲದೆ 'ಫ್ರಾನ್ಸ್' ಎಂಬ ವಸ್ತು ಇಲ್ಲವೇ ಇಲ್ಲ. ಇದು 'ಮಿ. ಸ್ಮಿತ್'ನ ವಿಷಯಕ್ಕೂ ಅನ್ವಯಿಸುತ್ತದೆ; ಅದು ಬಗೆಬಗೆಯ ಘಟನೆಗಳಿಗೆ ಅನ್ವಯಿಸುವ ಒಂದು ಸಮೂಹವಾಚಕ. ಅದಕ್ಕೂ ಹೆಚ್ಚಿನದೆಂದು ಭಾವಿಸಿದರೆ, ಏನೇನೂ ಗೊತ್ತಿಲ್ಲದ ಯಾವುದನ್ನೋ ಅದು ಸೂಚಿಸುತ್ತದೆ, ಹೀಗಾಗಿ ನಮಗೆ ತಿಳಿದಿರುವುದನ್ನು ಸೂಚಿಸಲು ಅದರ ಆವಶ್ಯಕತೆಯೇ ಇರುವುದಿಲ್ಲ.

'ಸತ್ವ' ಎಂಬುದು, ಒಂದು ಪದದಲ್ಲಿ ಹೇಳಬೇಕೆಂದರೆ, ಕರ್ತೃ ಮತ್ತು ವಿಧೇಯಗಳನ್ನುಳ್ಳ ವಾಕ್ಯರಚನೆಯ ಪದವಿನ್ಯಾಸವನ್ನು ವರ್ಗಾವಣೆ ಮಾಡಿಕೊಂಡದ್ದರಿಂದಾದ ಒಂದು ತತ್ವಜಿಜ್ಞಾಸಾತ್ಮಕ ತಪ್ಪು.

ಈ ಅಧ್ಯಾಯದಲ್ಲಿ ಚರ್ಚಿಸಿದ ಅರಿಸ್ಟಾಟಲ್‌ಪ್ರಣೀತ ಸಿದ್ಧಾಂತಗಳು, ಮುಖ್ಯವಾದ ಶಾಸ್ತ್ರೋಕ್ತ ನಿಗಮನಸಿದ್ಧಾಂತದ ಹೊರತಾಗಿ, ಸಂಪೂರ್ಣವಾಗಿ ತಪ್ಪು ಎಂಬುದು ನನ್ನ ತೀರ್ಮಾನ. ಈಗ ಯಾರಾದರೂ ತರ್ಕಶಾಸ್ತ್ರವನ್ನು ಕಲಿಯಲು ಬಯಸಿದರೆ ಅರಿಸ್ಟಾಟಲ್‌ನನ್ನೋ ಅವನ ಶಿಷ್ಯರನ್ನೋ ಓದುತ್ತ ಕೂರುವುದು ಸಮಯವನ್ನು ವ್ಯರ್ಥಮಾಡಿದಂತೆ. ಇಷ್ಟಾದರೂ ಅರಿಸ್ಟಾಟಲ್‌ನ ತರ್ಕಶಾಸ್ತ್ರ ಬರಹಗಳು ಮಹಾ ಸಾಮರ್ಥ್ಯವನ್ನು ಹೊಂದಿರುವಂತಹವು, ಬೌದ್ಧಿಕ ಸ್ವಂತಿಕೆ ಇನ್ನೂ ಕ್ರಿಯಾಶೀಲವಾಗಿದ್ದಾಗ ಅವು ಬಂದಿದ್ದರೆ ಮಾನವಸಂಕುಲಕ್ಕೆ ಉಪಯುಕ್ತವಾಗುತ್ತಿದ್ದವು. ದುರದೃಷ್ಟವಶಾತ್, ಅವು ಗ್ರೀಕ್ ಚಿಂತನೆಯ ಕ್ರಿಯಾಶೀಲತೆಯ ಅಂತಿಮ ಘಟ್ಟದಲ್ಲಿ ಬಂದುವು, ಹೀಗಾಗಿ ಅವನ್ನು ಅಧಿಕಾರಪ್ರಮಾಣ ಎಂದು ಭಾವಿಸಲಾಯಿತು. ತಾರ್ಕಿಕ ಸ್ವಂತಿಕೆಯ ಪುನರುಜ್ಜೀವನಗೊಂಡ ಹೊತ್ತಿನಲ್ಲಿ, ಎರಡು ಸಾವಿರ ವರ್ಷಗಳ ಆಳ್ವಿಕೆಯಿಂದ ಅರಿಸ್ಟಾಟಲ್‌ನನ್ನು ಕೆಳಗಿಳಿಸಲು ಕಷ್ಟವೆನಿಸಿತು. ಆಧುನಿಕ ಕಾಲದುದ್ದಕ್ಕೂ, ವಿಜ್ಞಾನ, ತತ್ವಜ್ಞಾನ ಅಥವಾ ತರ್ಕದ ಪ್ರತಿ ಮುನ್ನಡೆಯೂ ಅರಿಸ್ಟಾಟಲ್‌ನ ಶಿಷ್ಯರ ವಿರೋಧದ ನಡುವೆಯೇ ನಡೆಯಬೇಕಾಯಿತು.

○

೨೩
ಅರಿಸ್ಟಾಟಲ್‌ನ ಭೌತವಿಜ್ಞಾನ (ಫಿಸಿಕ್ಸ್)

ಈ ಅಧ್ಯಾಯದಲ್ಲಿ ನಾನು ಅರಿಸ್ಟಾಟಲ್‌ನ ಎರಡು ಗ್ರಂಥಗಳ ಬಗ್ಗೆ ವಿವೇಚಿಸಲು ಇಚ್ಛಿಸುತ್ತೇನೆ: ಅದರಲ್ಲಿ ಒಂದು 'ಫಿಸಿಕ್ಸ್' ಎಂಬ ಹೆಸರಿನದು, ಮತ್ತೊಂದು 'ಹೆವನ್ಸ್' ಎಂಬ ಹೆಸರಿನದು. ಈ ಪುಸ್ತಕಗಳ ನಡುವೆ ನಿಕಟ ಸಂಬಂಧವಿದೆ; ಮೊದಲಿನದರ ಕೊನೆಯಲ್ಲಿನ ವಾದದ ಬಿಂದುವನ್ನು ಎರಡನೆಯದು ಕೈಗೆತ್ತಿಕೊಳ್ಳುತ್ತದೆ. ಎರಡೂ ತುಂಬ ಪ್ರಭಾವಶಾಲಿಯಾಗಿದ್ದವು, ಗೆಲಿಲಿಯೋನ ಕಾಲದವರೆಗೂ ವಿಜ್ಞಾನ ಕ್ಷೇತ್ರದಲ್ಲಿ ಪ್ರಮುಖವೆನಿಸಿದ್ದವು. 'ಸಾರತತ್ವ' (ಕ್ವಿಂಟೆಸೆನ್ಸ್) ಮತ್ತು 'ಚಂದ್ರನಡಿಯ' (ಸಬ್‌ಲೂನರಿ) ಈ ಗ್ರಂಥಗಳಲ್ಲಿ ನಿರೂಪಿತವಾದ ಸಿದ್ಧಾಂತಗಳಿಂದ ರೂಪಿತವಾದುವು. ಅದರಂತೆಯೇ, ಅವೆರಡರಲ್ಲಿರುವ ಒಂದು ಸಾಲನ್ನೂ ಆಧುನಿಕ ವಿಜ್ಞಾನದ ಬೆಳಕಿನಲ್ಲಿ ಅಂಗೀಕರಿಸಲು ಸಾಧ್ಯವಾಗದಿದ್ದರೂ, ತತ್ವಜ್ಞಾನದ ಇತಿಹಾಸಕಾರನು ಅವುಗಳನ್ನೋದಬೇಕು.

ಭೌತವಿಜ್ಞಾನಕ್ಕೆ ಸಂಬಂಧಿಸಿದಂತೆ ಬಹುತೇಕ ಗ್ರೀಕ್‌ರದಂತೆಯೇ ಅರಿಸ್ಟಾಟಲ್‌ನ ದೃಷ್ಟಿಯನ್ನರ್ಥಮಾಡಿಕೊಳ್ಳಲು, ಅವುಗಳ ಕಲ್ಪನಾತ್ಮಕ ಹಿನ್ನೆಲೆಯನ್ನು ಗ್ರಹಿಸುವುದು ಅವಶ್ಯಕ. ಪ್ರತಿ ತತ್ವಜ್ಞಾನಿಯೂ, ಜಗತ್ತಿಗೆ ನೀಡುವ ಶಾಸ್ತ್ರೋಕ್ತ ರೂಪದ ಜೊತೆಗೆ ತನಗೇ ಗೊತ್ತಿಲ್ಲದ ಬಹು ಸರಳವಾದ ಮತ್ತೊಂದು ಕೊಡುಗೆಯನ್ನು ನೀಡುತ್ತಾನೆ. ಅವನಿಗೆ ಅದರ ಅರಿವಿದ್ದರೆ, ಅದು ಸಮರ್ಪಕವಲ್ಲವೆಂಬ ತಿಳಿವಳಿಕೆ ಪ್ರಾಯಶಃ ಅವನಿಗುಂಟಾಗುತ್ತದೆ; ಹೀಗಾಗಿ ಅದನ್ನವನು ಮುಚ್ಚಿಟ್ಟು, ಹೆಚ್ಚು ದಾರಿತಪ್ಪಿಸುವುದನ್ನು ಮುಂದಿಡುತ್ತಾನೆ. ತನ್ನ ಒರಟು ಪದ್ಧತಿಗೆ ಅದು ಅನುಗುಣವಾಗಿದೆ ಎಂಬುದರಿಂದಾಗಿ ಅದನ್ನವನು ನಂಬುತ್ತಾನೆ. ನಿರಾಕರಿಸಲು ಸಾಧ್ಯವೇ ಇಲ್ಲದಂತಹ ರೀತಿಯಲ್ಲಿ ಅದನ್ನು ರೂಪಿಸಿರುವುದರಿಂದ ಇತರರೂ ಅದನ್ನೊಪ್ಪಿಕೊಳ್ಳಬೇಕೆಂದು ಹೇಳುತ್ತಾನೆ. ಈ ದಾರಿತಪ್ಪಿಸುವಿಕೆಯುಂಟಾಗುವುದು ನಿರಾಕರಣೆಯ ಮೂಲಕ; ಆದರೆ ಇದಷ್ಟೇ ಸಕಾರಾತ್ಮಕ ಫಲಿತಾಂಶವನ್ನು ನೀಡಲಾರದು. ಹೆಚ್ಚೆಂದರೆ, ಸಿದ್ಧಾಂತವೊಂದು ಸರಿಯಾಗಿರಬಹುದು, ಆದರೆ ಆಗಿರಲೇಬೇಕು

ಎಂದಲ್ಲ ಎಂಬುದನ್ನಿದು ತೋರಿಸುತ್ತದೆ. ತತ್ವಜ್ಞಾನಿಯು ಎಷ್ಟೇ ಕನಿಷ್ಠವಾಗಿ ಅರಿಯಲಿ ಸಕಾರಾತ್ಮಕ ಫಲಿತಾಂಶಕ್ಕೆ ಕಾರಣ ಅವನ ಭಾವನಾತ್ಮಕ ಪೂರ್ವಕಲ್ಪಿತಗಳು ಅಥವಾ ಸಾಂತಾಯನ ಹೇಳುವ 'ಪ್ರಾಣಿಶ್ರದ್ಧೆ'.

ಭೌತವಿಜ್ಞಾನಕ್ಕೆ ಸಂಬಂಧಿಸಿದಂತೆ, ಅರಿಸ್ಟಾಟಲ್‌ನ ಭಾವನಾತ್ಮಕ ಹಿನ್ನೆಲೆಯು ಆಧುನಿಕ ವಿದ್ಯಾರ್ಥಿಯದಕ್ಕಿಂತ ತುಂಬ ಭಿನ್ನವಾದುದು. ಈಚೆಗೆ, ಹುಡುಗನೊಬ್ಬ ಯಂತ್ರವಿಜ್ಞಾನ (ಮೆಕಾನಿಕ್ಸ್) ಆರಂಭಿಸುತ್ತಾನೆ, ಅದು ತನ್ನ ಹೆಸರಿನಲ್ಲಿಯೇ ಯಂತ್ರವನ್ನು ಸೂಚಿಸುತ್ತದೆ. ಅವನಿಗೆ ಮೋಟರ್‌ಕಾರುಗಳೂ ವಿಮಾನಗಳೂ ಸುಪರಿಚಿತ; ತನ್ನ ಆಳದಾಳದ ಭಾವನಾತ್ಮಕತೆಯಲ್ಲಿ ಕೂಡ ಅವನು ಮೋಟರ್‌ಕಾರಿನಲ್ಲಿ ಎಂಥದೋ ಕುದುರೆಯಿದೆ ಎಂದಾಗಲೀ, ವಿಮಾನವು ಹಾರುವುದು ಅದಕ್ಕೆ ಮಾಂತ್ರಿಕ ಸಾಮರ್ಥ್ಯವುಳ್ಳ ಪಕ್ಷಿಯೊಂದರ ರೆಕ್ಕೆಗಳಿವೆಯೆಂದಾಗಲೀ ತಿಳಿಯುವುದಿಲ್ಲ. ನಮ್ಮ ಭಾವನಾತ್ಮಕ ಚಿತ್ರಗಳಲ್ಲಿ ಪ್ರಾಣಿಗಳು ತಮ್ಮ ಪ್ರಾಮುಖ್ಯವನ್ನು ಕಳೆದುಕೊಂಡಿವೆ, ಮಾನವನು ಪ್ರಧಾನವಾಗಿ ಜೀವರಹಿತ ಮತ್ತು ಬಹುತೇಕ ಸಾಧನರೂಪವಾದ ವಸ್ತು ಪರಿಸರದ ಹೆಚ್ಚು ಕಡಿಮೆ ಏಕಾಂಗಿ ಒಡೆಯನಾಗಿದ್ದಾನೆ.

ಚಲನೆಯ ವೈಜ್ಞಾನಿಕ ವಿವರಣೆಯನ್ನು ನೀಡುವ ಪ್ರಯತ್ನದಲ್ಲಿ ಗ್ರೀಕರಿಗೆ, ಶುದ್ಧ ಯಾಂತ್ರಿಕ ದೃಷ್ಟಿಯು ಸೂಚಿತವಾಗುವುದು, ಡೆಮಾಕ್ರಿಟಸ್ ಮತ್ತು ಆರ್ಕಿಮಿಡೀಸ್‌ರಂತಹ ಅಸಾಧಾರಣ ಪ್ರತಿಭಾವಂತರಿಗಲ್ಲದೆ, ಸಾಧ್ಯವಿರಲಿಲ್ಲ. ಎರಡು ವರ್ಗಗಳ ಸಂಗತಿಗಳು ಮುಖ್ಯವೆನಿಸಿದ್ದವು: ಪ್ರಾಣಿಗಳ ಓಡಾಟ, ಮತ್ತು ಆಕಾಶಕಾಯಗಳ ಚಲನೆ. ಆಧುನಿಕ ವಿಜ್ಞಾನಿಗೆ, ಪ್ರಾಣಿಯೊಂದರ ದೇಹವು ಜಟಿಲವಾದ ಒಂದು ಯಂತ್ರ, ಅದರಲ್ಲಿ ಸಂಕೀರ್ಣವಾದ ಅಗಾಧ ದೈಹಿಕ-ರಾಸಾಯನಿಕ ಸಂರಚನೆಯಿರುತ್ತದೆ, ಮತ್ತು ಪ್ರತಿ ಹೊಸ ಅನಾವರಣವೂ (ಡಿಸ್ಕವರಿ) ಪ್ರಾಣಿಗಳು ಮತ್ತು ಯಂತ್ರಗಳ ನಡುವಣ ವ್ಯತ್ಯಾಸದ ತೋರಿಕೆಯ ಕಂದಕವನ್ನು ಕಡಿಮೆಮಾಡುತ್ತದೆ. ಗ್ರೀಕರಿಗಾದರೋ, ತೋರಿಕೆಯ ನಿರ್ಜೀವ ಚಲನೆಯು ಪ್ರಾಣಿಚಲನೆಗಿಂತ ಹೆಚ್ಚು ಸಹಜವಾಗಿ ಅರ್ಥಮಾಡಿಕೊಳ್ಳಬಹುದಾದವು.

ಆದರೆ ಆಕಾಶಕಾಯಗಳ ಬಗೆ ಹೇಗೆ? ತಮ್ಮ ನಿಯತ ಚಲನೆಯಿಂದಾಗಿ ಅವು ಪ್ರಾಣಿಗಳಿಗಿಂತ ಭಿನ್ನವಾದವು, ಆದರೆ ಇದು ಅವುಗಳ ಮೇಲ್ತರದ ಪರಿಪೂರ್ಣತೆಯಿಂದಾಗಿ ಉಂಟಾಗಿರಬಹುದು. ಪ್ರತಿ ಗ್ರೀಕ್ ತತ್ವಜ್ಞಾನಿಯೂ, ಜೀವದ ಬಗ್ಗೆ ಯಾವುದೇ ವಿಧದ ಭಾವನೆಯಿಂದ ಕೂಡಿರಲಿ, ಚಂದ್ರಸೂರ್ಯರನ್ನು ದೇವರುಗಳೆಂದು ತಿಳಿಯುವಂತೆ ಚಿಕ್ಕಂದಿನಿಂದಲೇ ಕಲಿಸಿರುತ್ತಿದ್ದರು. ಅವುಗಳಿಗೆ ಜೀವವಿಲ್ಲವೆಂದು ಹೇಳಿದ ಅನಾಕ್ಸಾಗೊರಾಸ್‌ನನ್ನು ಧರ್ಮವಿರೋಧಿ ನಿಲವಿಗಾಗಿ ಶಿಕ್ಷಿಸಲಾಯಿತು. ಆಕಾಶಕಾಯಗಳು ದೈವಿಕವಾದವು ಎಂಬ ತಿಳಿವಳಿಕೆಯನ್ನು ಹೊಂದಿರದ ಗ್ರೀಕ್ ತತ್ವಜ್ಞಾನಿಯು ಅವುಗಳ ಚಲನೆಗೆ ಕಾರಣ, ಗ್ರೀಕ್ ಕ್ರಮಬದ್ಧತೆ

ಮತ್ತು ಜ್ಯಾಮಿತೀಯ ಸರಳತೆಗಳಿಂದ ಕೂಡಿರುವ ದೈವಿಕ ಇಚ್ಛಾಶಕ್ತಿಯೆಂದು ತಿಳಿಯಬೇಕಾಗಿತ್ತು. ಹೀಗೆ ಎಲ್ಲ ಚಲನೆಗಳ ಆತ್ಯಂತಿಕ ಆಕರವೆಂದರೆ ಇಚ್ಛಾಶಕ್ತಿ: ಭೂಮಿಯ ಮೇಲಾದರೆ ಮನುಷ್ಯ ಮತ್ತು ಪ್ರಾಣಿಗಳ ಸ್ವ–ಇಚ್ಛಾಶಕ್ತಿ, ಸ್ವರ್ಗದಲ್ಲಾದರೆ ಪರಮೋಚ್ಚ ನಿರ್ಮಾಪಕನ ಬದಲಾಗದ ಇಚ್ಛಾಶಕ್ತಿ.

ಅರಿಸ್ಟಾಟಲ್ ಹೇಳುವ ಎಲ್ಲ ವಿವರಗಳಿಗೂ ಇದು ಅನ್ವಯಿಸುತ್ತದೆಂದು ನಾನು ಹೇಳುತ್ತಿಲ್ಲ. ನಾನು ಹೇಳುತ್ತಿರುವುದೆಂದರೆ, ಅದು ಅವನ ಭಾವನಾತ್ಮಕ ಹಿನ್ನೆಲೆಯನ್ನೊದಗಿಸಿ ತನ್ನ ಅನ್ವೇಷಣೆಗಳು ನಿಜವೆಂದು ತಿಳಿಯಲು ಸಾಧಕವಾದ ಬಗೆಯನ್ನು ಎಂಬುದನ್ನು.

ಈ ಪೂರ್ವಪೀಠಿಕೆಯ ಬಳಿಕ, ಅವನೇನು ಹೇಳುತ್ತಾನೆಂಬುದನ್ನು ನಾವೀಗ ನೋಡೋಣ.

ಅರಿಸ್ಟಾಟಲ್‌ನಲ್ಲಿ ಭೌತವಿಜ್ಞಾನವು ಗ್ರೀಕರ 'ಫೂಸಿಸ್', ಆ ಪದದ ಅರ್ಥ 'ಪ್ರಕೃತಿ' ಎಂದು, ನಾವೀಗ ಆ ಪದಕ್ಕೆ ನೀಡಿರುವ ಅರ್ಥವಲ್ಲ. ನಾವು 'ಪ್ರಕೃತಿ ವಿಜ್ಞಾನ' ಎಂದೂ, 'ಪ್ರಕೃತಿ ಇತಿಹಾಸ' ಎಂದೂ ಹೇಳುತ್ತೇವೆ. ಆದರೆ ಪ್ರಕೃತಿ ತನ್ನಲ್ಲಿಯೇ 'ಫೂಸಿಸ್' ಎಂಬ ನಿಖರ ಅರ್ಥವನ್ನು ಪಡೆದಿಲ್ಲ, ಅದರರ್ಥವೂ ಅಸ್ಪಷ್ಟವಾದುದು. 'ಫೂಸಿಸ್' ಬೆಳವಣಿಗೆಗೆ ಸಂಬಂಧಿಸಿದ್ದು, ಅದು ಅಕಾರ್ನ್ ಹಣ್ಣಿನ ಬೀಜವು ಓಕ್ ಮರವಾಗಿ ಬೆಳೆಯುವಂತಹ ಪ್ರಕೃತಿ (ಸ್ವಭಾವ), ಹೀಗಾದರೆ ಅದನ್ನು ಅರಿಸ್ಟಾಟಲ್‌ನ ಅರ್ಥದಲ್ಲಿ ಪದವನ್ನು ಬಳಸಿದಂತಾಗುತ್ತದೆ. ವಸ್ತುವೊಂದರ 'ಪ್ರಕೃತಿ'ಯು ಅದರ ಗುರಿ, ಅದು ಅಸ್ತಿತ್ವದಲ್ಲಿರುವುದು ಅದಕ್ಕಾಗಿಯೇ ಎಂದು ಅರಿಸ್ಟಾಟಲ್ ಹೇಳುತ್ತಾನೆ. ಹೀಗಾಗಿ ಈ ಪದಕ್ಕೆ ಮೂಲಸಂಕಲ್ಪಾತ್ಮಕ ಅರ್ಥ ಉಂಟಾಗುತ್ತದೆ. ಕೆಲವು ವಸ್ತುಗಳು ಪ್ರಕೃತಿಬದ್ಧವಾಗಿ ಅಸ್ತಿತ್ವದಲ್ಲಿದ್ದರೆ, ಮತ್ತೆ ಕೆಲವು ಕಾರಣಾತ್ಮಕವಾಗಿ. ಪ್ರಾಣಿಗಳು, ಸಸ್ಯಗಳು, ಮತ್ತು ಸರಳ ಕಾಯಗಳು (ಮೂಲತತ್ವಗಳು) ಪ್ರಕೃತಿಯಿಂದ ಅಸ್ತಿತ್ವದಲ್ಲಿದ್ದು, ಅವಕ್ಕೆ ಆಂತರಿಕ ಚಲನತತ್ವವಿರುತ್ತದೆ ('ಚಲನೆ' 'ಸಾಗುವಿಕೆ' – ಮೋಷನ್ ಮತ್ತು ಮೂವ್‌ಮೆಂಟ್ – ಎಂದು ಭಾಷಾಂತರಗೊಂಡ ಪದವು 'ಕ್ರಮಣ' – ಲೋಕೋಮೋಷನ್ – ಎಂಬುದಕ್ಕಿಂತ ವಿಶಾಲ ಅರ್ಥವುಳ್ಳದ್ದು; ಕ್ರಮಣದ ಜೊತೆಗೆ ಗುಣ ಅಥವಾ ಗಾತ್ರದ ಬದಲಾವಣೆ ಎಂಬುದೂ ಸೇರುತ್ತದೆ). ಪ್ರಕೃತಿಯು ಚಲನೆ ಅಥವಾ ಸ್ಥಿರತೆಯ ಮೂಲ ಆಕರ. ವಸ್ತುಗಳಿಗೆ ಈ ಬಗೆಯ ಆಂತರಿಕ ತತ್ವವಿದ್ದರೆ ಅವಕ್ಕೆ ಪ್ರಕೃತಿಯಿರುತ್ತದೆ. 'ಪ್ರಕೃತಿಗನುಸಾರವಾಗಿ' ಎಂಬ ಪದಗುಚ್ಛವು ಈ ವಸ್ತುಗಳಿಗೂ ಅವುಗಳ ಸಾರಭೂತ ಗುಣಗಳಿಗೂ ಅನ್ವಯಿಸುತ್ತದೆ. (ಈ ಆಂಶದಿಂದಾಗಿಯೇ 'ಅಸ್ವಾಭಾವಿಕವಾದ' – ಅನ್‌ನ್ಯಾಚುರಲ್ – ಎಂಬುದು ಬೈಗುಳವಾಗುತ್ತದೆ). ಪ್ರಕೃತಿಯು ರೂಪದಲ್ಲಿರುತ್ತದೆಯೇ ವಿನಾ ಪದಾರ್ಥದಲ್ಲಲ್ಲ; ಮಾಂಸ ಅಥವಾ ಮೂಳೆಯ

ಸಂಭಾವ್ಯತೆ ಹೊಂದಿರುವುದು ಇನ್ನೂ ತನ್ನ ಪ್ರಕೃತಿಯನ್ನು ಗಳಿಸಿರುವುದಿಲ್ಲ. ವಸ್ತು ಎಂಬುದು ತನ್ನ ಪೂರ್ಣತೆಯನ್ನು ಗಳಿಸಿರುವ ಅದರ ಸ್ಥಿತಿ. ಈ ಅಂಶವು ಇಡಿಯಾಗಿ ಜೀವವಿಜ್ಞಾನದಲ್ಲಿ ಸೂಚಿತವಾಗುತ್ತದೆ; ಅಕಾರ್ನ್ ಓಕ್‌ನ ಸಂಭಾವ್ಯತೆಯನ್ನು ಹೊಂದಿರುವಂತಹುದು.

ಯಾವುದಕ್ಕಾಗಿಯೋ ಕ್ರಿಯಾಶೀಲವಾಗಿರುವ ಕಾರಣವರ್ಗಕ್ಕೆ ಪ್ರಕೃತಿಯು ಸೇರುತ್ತದೆ. ಪ್ರಕೃತಿಯು ಆವಶ್ಯಕತೆಯಿಂದಾಗಿ ಉದ್ದೇಶರಹಿತವಾಗಿ ಕಾರ್ಯ ನಿರ್ವಹಿಸುತ್ತದೆ ಎಂಬ ದೃಷ್ಟಿಕೋನದ ಬಗೆಗಿನ ಚರ್ಚೆಗೆ ಇದು ಎಡೆಮಾಡಿಕೊಡುತ್ತದೆ. ಇದಕ್ಕೆ ಸಂಬಂಧಿಸಿದಂತೆಯೇ ಅರಿಸ್ಟಾಟಲ್, ಎಂಪೆಡೋಕ್ಲೀಸ್ ಬೋಧಿಸಿದ ರೂಪದಲ್ಲಿ, ಅರ್ಹತಮದ ಉಳಿವು (ಸರ್‌ವೈವಲ್ ಆಫ್ ದ ಫಿಟೆಸ್ಟ್) ಕುರಿತು ಚರ್ಚಿಸುತ್ತಾನೆ. ವಸ್ತುಗಳು ನಿಯಮಿತ ರೂಪದಲ್ಲಿಯೇ ಸಂಭವಿಸುತ್ತವೆ, ಒಂದು ಸರಣಿಯು ಪೂರ್ಣಗೊಂಡಾಗ, ಹಿಂದಿನ ಎಲ್ಲ ಹಂತಗಳೂ ಅದಕ್ಕೋಸ್ಕರವಾಗಿಯೇ ನಡೆಯುವ, ಅಂದರೆ ಒಂದು ಅಂತರ್ಗತ ತತ್ವದಿಂದ ಆರಂಭಗೊಂಡು ತನ್ನ ಪೂರ್ಣತೆಯನ್ನು ಪಡೆಯುವ ಕಾರಣದಿಂದಾಗಿ, ಇದು ಸರಿಯಾಗಲಾರದು ಎಂದು ಅವನೆನ್ನುತ್ತಾನೆ' (೧೯೯ಬಿ).

'ಪ್ರಕೃತಿ' ಎಂಬ ಇಡೀ ಪರಿಕಲ್ಪನೆಯು, ಪ್ರಾಣಿಗಳು ಮತ್ತು ಸಸ್ಯಗಳ ಬೆಳವಣಿಗೆಯನ್ನು ವಿವರಿಸುವಲ್ಲಿ ಸಮಂಜಸವೆನಿಸಿದರೂ, ವಿಜ್ಞಾನದ ಪ್ರಗತಿಯಲ್ಲಿ ದೊಡ್ಡ ಅಡ್ಡಿಯಾಯಿತು ಹಾಗೂ ನೀತಿಶಾಸ್ತ್ರದಲ್ಲಿನ ದೋಷದ ಆಕರವಾಯಿತು. ಎರಡನೆಯ ಸನ್ನಿವೇಶದಲ್ಲಿ ಅದು ಮತ್ತಷ್ಟು ಹಾನಿಕಾರಕವಾಯಿತು.

ಸಂಭಾವ್ಯವಾಗಿ ಅಸ್ತಿತ್ವದಲ್ಲಿರುವುದರ ಪೂರ್ಣತೆಯೇ ಚಲನೆ ಎಂದು ಹೇಳಲಾಗುತ್ತದೆ. ಈ ದೃಷ್ಟಿಕೋನವು, ಇತರ ದೋಷಗಳಲ್ಲದೆ, ಕ್ರಮಣದ ಸಾಪೇಕ್ಷತೆಯೊಂದಿಗೆ ತಾಳಿಕೆಯಾಗಲಾರದು. ಎ ಸಾಪೇಕ್ಷವಾಗಿ ಬಿ ಕಡೆಗೆ ಚಲಿಸಿದಾಗ, ಬಿ ಸಾಪೇಕ್ಷವಾಗಿ ಎ ಕಡೆಗೆ ಚಲಿಸುತ್ತದೆ; ಹೀಗಾಗಿ ಎರಡರಲ್ಲಿ ಒಂದು ಚಲನೆಯಲ್ಲಿದೆ ಮತ್ತೊಂದು ಸ್ಥಿರವಾಗಿದೆ ಎಂದು ಹೇಳುವುದಕ್ಕೆ ಅರ್ಥವಿಲ್ಲ. ನಾಯಿಯೊಂದು ಮೂಳೆಯ ತುಂಡೊಂದನ್ನು ಹಿಡಿಯುವಾಗ, ನಾಯಿಯು ಚಲಿಸುತ್ತದೆ ಮತ್ತು ಮೂಳೆಯು ಸ್ಥಿರವಾಗಿರುತ್ತದೆ (ಹಿಡಿದುಕೊಳ್ಳುವವರೆಗೂ) ಎನ್ನುವುದರಲ್ಲಿ ಸಾಮಾನ್ಯ ಜ್ಞಾನ ಎನಿಸುತ್ತದೆ. ಆ ಚಲನೆಗೊಂದು ಉದ್ದೇಶವಿದೆ, ಅದೆಂದರೆ ನಾಯಿಯ 'ಪ್ರಕೃತಿ'ಯನ್ನು ನೆರವೇರಿಸುವುದು. ಆದರೆ ಈ ದೃಷ್ಟಿಕೋನವನ್ನು ನಿರ್ಜೀವ ವಸ್ತುವಿಗೆ ಅನ್ವಯಿಸಲಾಗದೆಂಬುದಾಯಿತು. ಆಧುನಿಕ ಭೌತವಿಜ್ಞಾನದ ಉದ್ದೇಶಕ್ಕೆ 'ಗುರಿ' ಎಂಬುದರ ಪರಿಕಲ್ಪನೆ ಉಪಯುಕ್ತವಾಗಲಾರದು; ವೈಜ್ಞಾನಿಕ ನಿಖರತೆಯಲ್ಲಿ ಯಾವುದೇ ಚಲನೆಯನ್ನು ಸಾಪೇಕ್ಷವಾದದ್ದಲ್ಲದ ರೀತಿಯಲ್ಲಿ ಅನ್ವಯಿಸಲಾಗದು.

ಅರಿಸ್ಟಾಟಲನೂ ಲೆಸಿಪ್ಪಸ್ ಮತ್ತು ಡೆಮಾಕ್ರಿಟಸ್‌ರಂತೆಯೇ ಶೂನ್ಯ (ವಾಯ್ಡ್)ವನ್ನು ನಿರಾಕರಿಸುತ್ತಾನೆ. ಆನಂತರ ಅವನು ಕುತೂಹಲಕರವಾದ ಕಾಲದ ಬಗೆಗಿನ ಚರ್ಚೆಗೆ ಕೈಯಿಕ್ಕುತ್ತಾನೆ. ಈಗ ಅಸ್ತಿತ್ವದಲ್ಲಿಲ್ಲದ ಒಂದು ಹಾಗೂ ಇನ್ನೂ ಅಸ್ತಿತ್ವಕ್ಕೆ ಬಾರದ ಮತ್ತೊಂದು ಭೂತ ಮತ್ತು ಭವಿಷ್ಯತ್ತುಗಳನ್ನೊಳಗೊಂಡಿರುವುದರಿಂದ, ಕಾಲವೆಂಬುದು ಅಸ್ತಿತ್ವದಲ್ಲಿಲ್ಲವೆಂದು ಹೇಳಬಹುದಾದರೂ ಅದನ್ನವನು ಅಲ್ಲಗಳೆಯುತ್ತಾನೆ. ಅವನ ಪ್ರಕಾರ ಕಾಲವೆಂಬುದು ಎಣಿಕೆಯನ್ನು ಒಳಗೊಳ್ಳುವ ಚಲನೆ. (ಆದರೆ ಎಣಿಕೆ ಯಾಕೆ ಆವಶ್ಯಕ ಎಂದವನು ಯೋಚಿಸುತ್ತಾನೆಯೋ ಸ್ಪಷ್ಟವಾಗುವುದಿಲ್ಲ.) ಕಾಲವೆಂಬುದು ಆತ್ಮವಿಲ್ಲದೆ ಇರಬಲ್ಲುದೇ ಎಂದು ಸಮಂಜಸವಾಗಿಯೇ ಕೇಳಬಹುದೆಂಬುದು ಅವನ ಪ್ರಶ್ನೆ, ಯಾಕೆಂದರೆ ಎಣಿಸಲು ಯಾರಾದರೂ ಇಲ್ಲದಿದ್ದರೆ ಎಣಿಕೆಗೆ ಬರುವಂತಹುದಾವುದೂ ಇರಲಾರದು, ಮತ್ತು ಕಾಲ ಎಣಿಕೆಯನ್ನೊಳಗೊಂಡುದು. ಕಾಲವನ್ನು ಇಂತಿಷ್ಟು ಗಂಟೆಗಳು ಅಥವಾ ದಿವಸಗಳು ಅಥವಾ ವರ್ಷಗಳು ಎಂದು ಅವನು ಯೋಚಿಸುವಂತೆ ತೋರುತ್ತದೆ. ಕೆಲವು ವಸ್ತುಗಳು ಕಾಲಬದ್ಧವಾಗಿಲ್ಲದಿರುವುದು ಎಂಬರ್ಥದಲ್ಲಿ ಚಿರಂತನವಾದವು ಎಂದೂ ಸೇರಿಸುತ್ತಾನೆ; ಸಂಖ್ಯೆಗಳಂತಹ ವಸ್ತುಗಳ ಬಗ್ಗೆ ಪ್ರಾಯಶಃ ಅವನು ಯೋಚಿಸುತ್ತಿರಬಹುದು.

ಚಲನೆಯಿಲ್ಲದೆ ಕಾಲವಿರಲು ಸಾಧ್ಯವಿಲ್ಲದ್ದರಿಂದ, ಚಲನೆ ಸದಾ ಇತ್ತು ಮತ್ತು ಸದಾ ಇರುತ್ತದೆ, ಪ್ಲೇಟೋ ಹೊರತಾಗಿ ಮಿಕ್ಕವರೆಲ್ಲ ಕಾಲ ಸೃಷ್ಟಿತವಾದದ್ದಲ್ಲ ಎಂದು ಒಪ್ಪುತ್ತಾರೆ. ಈ ಅಂಶದಲ್ಲಿ, ಅರಿಸ್ಟಾಟಲ್‌ನ ಕ್ರಿಶ್ಚಿಯನ್ ಅನುಯಾಯಿಗಳು ಅವನಿಂದ ಭಿನ್ನ ಅಭಿಪ್ರಾಯವನ್ನು ಹೊಂದಿರಬೇಕಾಯಿತು, ಯಾಕೆಂದರೆ ವಿಶ್ವಕ್ಕೆ ಒಂದು ಆರಂಭವಿತ್ತು ಎಂದು ಬೈಬಲ್ ಹೇಳುತ್ತದೆ.

'ಮೆಟಫಿಸಿಕ್ಸ್' ಕುರಿತಂತೆ ನಾವು ನೋಡಿದ ಚಲನರಹಿತ ಚಲನಕಾರಕ (ಅನ್‌ಮೂವ್ಡ್ ಮೂವರ್)ನ ಪರವಾದ ವಾದದೊಂದಿಗೆ 'ಫಿಸಿಕ್ಸ್' ಮುಗಿಯುತ್ತದೆ. ನೇರವಾಗಿ ವರ್ತುಲಾಕಾರದ ಚಲನೆಯನ್ನುಂಟುಮಾಡುವ ಚಲನರಹಿತ ಚಲನಕಾರಕನೊಬ್ಬನಿದ್ದಾನೆ. ವರ್ತುಲ ಚಲನೆಯು ಪ್ರಾಥಮಿಕ ರೂಪದ್ದು, ಅದು ಮಾತ್ರವೇ ಸತತವಾಗಿಯೂ ನಿರಂತರವಾಗಿಯೂ ಇರಬಲ್ಲುದು. ಮೊದಲ ಚಾಲಕನಿಗೆ ಭಾಗಗಳಿಲ್ಲ (ಅಖಂಡ) ಮತ್ತು ಆಯಾಮಗಳಿಲ್ಲ ಮತ್ತವನು ಜಗತ್ತಿನ ಪರಿಧಿಯಲ್ಲಿದ್ದಾನೆ.

ಈ ಮುಕ್ತಾಯವನ್ನು ತಲುಪಿದ ಬಳಿಕ, ನಾವು ಸ್ವರ್ಗಗಳ ಕಡೆಗೆ ಹೋಗೋಣ.

'ಆನ್ ದ ಹೆವನ್ಸ್' ಎಂಬ ಉದ್ಗ್ರಂಥವು ಸರಳವೂ ಸಂತೋಷದಾಯಕವೂ ಆದ ಸಿದ್ಧಾಂತವೊಂದನ್ನು ಮುಂದಿಡುತ್ತದೆ. ಚಂದ್ರನ ಕೆಳಗಿರುವ ವಸ್ತುಗಳು ಮೊದಲು ಮತ್ತು ಕೊನೆಗಳಿಗೆ ಒಳಪಡುತ್ತವೆ; ಚಂದ್ರ ಮೇಲೆ ಇರುವುದೆಲ್ಲ ಆರಂಭ ಮತ್ತು

ಅಂತ್ಯಗಳಿಲ್ಲದಿರುವಂತಹುವು. ಗೋಲಾಕಾರದ ಭೂಮಿಯು ವಿಶ್ವದ ಮಧ್ಯಭಾಗದಲ್ಲಿದೆ. ಚಂದ್ರನಡಿಯ ಗೋಲದಲ್ಲಿ, ಪ್ರತಿಯೊಂದು ವಸ್ತುವೂ ಮಣ್ಣು, ನೀರು, ಗಾಳಿ ಮತ್ತು ಬೆಂಕಿಗಳೆಂಬ ಚತುರ್ಭೂತಗಳಿಂದಾದುವು; ಆದರೆ ಐದನೆಯ ಮೂಲವಸ್ತುವೊಂದಿದೆ, ಅದರಿಂದ ಆಕಾಶಕಾಯಗಳು ಆಗಿವೆ. ಭೂಮಿಯಲ್ಲಿನ ಚತುರ್ಭೂತಗಳು ಸರಳರೇಖಾಕೃತಿಯ ಸಹಜ ಚಲನೆಯನ್ನು ಹೊಂದಿದವು, ಆದರೆ ಐದನೆಯ ಮೂಲವಸ್ತುವಿನದು ವರ್ತುಲ ಚಲನೆ. ಸ್ವರ್ಗಗಳು ಪರಿಪೂರ್ಣ ಗೋಲಗಳು, ಮೇಲಿನವುಗಳು ಕೆಳಗಿನವುಗಳಿಗಿಂತ ಹೆಚ್ಚು ದೈವಿಕವಾದವು. ನಕ್ಷತ್ರಗಳೂ ಗ್ರಹಗಳು ಬೆಂಕಿಯಿಂದಾದವಲ್ಲ, ಐದನೆಯ ಮೂಲವಸ್ತುವಿನಿಂದಾದವು; ಅವುಗಳ ಚಲನೆಗೆ ಕಾರಣ ಅವು ಸಂಯೋಜನೆಗೊಂಡಿರುವ ಗೋಲಗಳ ಚಲನೆ (ಇವೆಲ್ಲ ಡಾಂಟೆಯ 'ಪ್ಯಾರಡೈಸೋ'ದಲ್ಲಿ ಕಾವ್ಯರೂಪದಲ್ಲಿ ಕಾಣಬರುತ್ತವೆ).

ಭೂಮಿಯ ನಾಲ್ಕು ಮೂಲವಸ್ತುಗಳು ಚಿರಂತನವಲ್ಲ, ಪರಸ್ಪರ ಹುಟ್ಟಿದವು – ಬೆಂಕಿಯು ಸಂಪೂರ್ಣ ಹಗುರ, ಅದರ ಸಹಜ ಚಲನೆಯು ಮೇಲ್ಮುಖಿಯಾದುದು; ಭೂಮಿ ಸಂಪೂರ್ಣ ಭಾರ. ಗಾಳಿ ಸಾಪೇಕ್ಷವಾಗಿ ಹಗುರ, ಮತ್ತು ನೀರು ಸಾಪೇಕ್ಷವಾಗಿ ಭಾರವಾದುದು.

ಮುಂದಿನ ಯುಗಗಳಿಗೆ ಈ ಸಿದ್ಧಾಂತವು ಅನೇಕ ತೊಡಕುಗಳನ್ನು ಉಂಟುಮಾಡಿತು. ನಾಶಹೊಂದುವಂತಹವೆಂದು ಗುರುತಿಸಲಾದ ಧೂಮಕೇತುಗಳನ್ನು ಚಂದ್ರನಡಿಯ ವಲಯಕ್ಕೆ ಸೇರಿಸಬೇಕಾಯಿತು: ಆದರೆ ಹದಿನೇಳನೆಯ ಶತಮಾನದಲ್ಲಿ ಅವುಗಳು ಸೂರ್ಯನ ಸುತ್ತ ಕಕ್ಷೆಯಲ್ಲಿ(ಆರ್ಬಿಟ್)ವೆ ಹಾಗೂ ಅವು ಚಂದ್ರನಷ್ಟು ಹತ್ತಿರದವಲ್ಲ ಎಂದು ಕಂಡುಕೊಳ್ಳಲಾಯಿತು. ಭೂಕಾಯಗಳ ಸಹಜ ಚಲನೆಯು ಸರಳರೇಖಾಕೃತಿಯದಾದ್ದರಿಂದ, ಸಮತಲದಲ್ಲಿ ಹಾರಿಸಿದ ಕ್ಷಿಪಣಿಯು ಸಮತಲದಲ್ಲಿಯೇ ಸ್ವಲ್ಪ ಕಾಲ ಚಲಿಸುತ್ತದೆ, ಆನಂತರ ತಟಕ್ಕನೆ ಲಂಬ ಚಲನೆಗೆ ಬೀಳುತ್ತದೆ ಎಂದು ಹೇಳಲಾಯಿತು. ಕ್ಷಿಪಣಿಯು ಪರವಲಯ (ಪ್ಯಾರಾಬೊಲ) ದಲ್ಲಿ ಚಲಿಸುತ್ತದೆ ಎಂಬ ಗೆಲಿಲಿಯೋನ ಅನಾವರಣವು ಅರಿಸ್ಟಾಟಲ್‌ಪಂಥೀಯರನ್ನು ದಿಗ್ಭ್ರಮೆಗೊಳಿಸಿತು. ಕೊಪರ್ನಿಕಸ್, ಕೆಪ್ಲರ್, ಮತ್ತು ಗೆಲಿಲಿಯೋ ಇವರುಗಳು ಭೂಮಿಯು ವಿಶ್ವದ ಕೇಂದ್ರವಲ್ಲ, ಆದರೆ ತನ್ನ ಅಕ್ಷದ ಸುತ್ತ ದಿನಕ್ಕೊಂದು ಬಾರಿ ಹಾಗೂ ಸೂರ್ಯನ ಸುತ್ತ ಕಕ್ಷೆಯಲ್ಲಿ ಒಂದು ಬಾರಿ ಸುತ್ತುವುದೆಂಬ ಸಿದ್ಧಾಂತವನ್ನು ಸ್ಥಾಪಿಸಿ ಒಂದು ಕಡೆ ಅರಿಸ್ಟಾಟಲ್ ಅನ್ನೂ ಮತ್ತೊಂದು ಕಡೆ ಬೈಬಲ್ ಅನ್ನೂ ಎದುರಿಸಬೇಕಾಯಿತು.

ಮತ್ತಷ್ಟು ಸಾಮಾನ್ಯ ವಿಷಯದತ್ತ ಬರಬೇಕೆಂದರೆ: ಅರಿಸ್ಟಾಟಲೀಯ ಭೌತವಿಜ್ಞಾನವು, ಮೂಲತಃ ಗೆಲಿಲಿಯೋ ಮಂಡಿಸಿದ, ನ್ಯೂಟನ್‌ನ 'ಚಲನೆಯ ಮೊದಲ ನಿಯಮ'ಕ್ಕೆ ಹೊಂದುವುದಿಲ್ಲ. ಈ ನಿಯಮದ ಪ್ರಕಾರ, ತನ್ನಷ್ಟಕ್ಕೇ

ಬಿಟ್ಟರೆ ಪ್ರತಿ ವಸ್ತುವೂ, ಈಗಾಗಲೇ ಚಲನೆಯಲ್ಲಿದ್ದರೆ, ಸರಳರಾಖಾಕೃತಿಯಲ್ಲಿ ಸಮ ವೇಗದಲ್ಲಿ ಚಲಿಸುತ್ತಿರುತ್ತದೆ. ಹೀಗೆ ಚಲನೆಗಲ್ಲ, ಚಲನೆಯ ಬದಲಾವಣೆಗೆ, ವೇಗದಲ್ಲಿಯೋ ದಿಕ್ಕಿನಲ್ಲಿಯೋ, ಬಾಹ್ಯ ಕಾರಣಗಳು ಆವಶ್ಯಕ. ಅರಿಸ್ಟಾಟಲ್ ಸ್ವರ್ಗಕಾಯಗಳಿಗೆ ಸಹಜವೆಂದು ಭಾವಿಸಿದ ವರ್ತುಲ ಚಲನೆಯಲ್ಲಿ ಸತತವಾದ ದಿಕ್ಕಿನ ಬದಲಾವಣೆಯಿರುತ್ತದೆ, ಹೀಗಾಗಿ ಅದಕ್ಕೆ ಕೇಂದ್ರಮುಖಿಯಾದ, ನ್ಯೂಟನ್‌ನ ಗುರುತ್ವಾಕರ್ಷಣ ನಿಯಮದಲ್ಲಿನಂತೆ, ಬಲವೊಂದು ಬೇಕಾಗುತ್ತದೆ.

ಕೊನೆಗೆ: ಸ್ವರ್ಗಕಾಯಗಳು ಚಿರಂತನ ಮತ್ತು ಪ್ರಭಾವಾತೀತ ಎಂಬುದನ್ನು ಕೈಬಿಡಬೇಕಾಯಿತು. ಸೂರ್ಯ ಮತ್ತು ನಕ್ಷತ್ರಗಳಿಗೆ ದೀರ್ಘಾಯುಸ್ಸು, ಆದರೂ ಚಿರಂತನವಾಗಿ ಇರಲಾರವು. ಅವು ಹುಟ್ಟಿರುವುದು ಒಂದು ನೀಹಾರಿಕೆ (ನೆಬ್ಯುಲ)ಯಿಂದ, ಕೊನೆಯಲ್ಲಿ ಅವು ಸಿಡಿಯುತ್ತವೆ ಅಥವಾ ಶೈತ್ಯದಿಂದಾಗಿ ಸಾಯುತ್ತವೆ. ಕಣ್ಣಿಗೆ ಕಾಣುವ ಜಗತ್ತಿನಲ್ಲಿರುವ ಎಲ್ಲವೂ ಬದಲಾವಣೆ ಮತ್ತು ಅಂತ್ಯಕ್ಕೊಳಪಟ್ಟಿರುವಂತಹವು; ಇದಕ್ಕೆ ವ್ಯತಿರಿಕ್ತವಾದ ಅರಿಸ್ಟಾಟಲ್ ದೃಷ್ಟಿಕೋನವು, ಮಧ್ಯಯುಗೀನ ಕ್ರಿಶ್ಚಿಯನ್ನರ ಅನುಮೋದನೆಯನ್ನು ಪಡೆದರೂ, ಅದು ಪ್ಯಾಗನ್‌ರ ಸೂರ್ಯ ಚಂದ್ರ ಮತ್ತು ಗ್ರಹಗಳ ಆರಾಧನೆಯ ಉತ್ಪಾದನೆ.

○

೨೪

ಆರಂಭಿಕ ಗ್ರೀಕ್ ಗಣಿತ ಮತ್ತು ಖಗೋಳವಿಜ್ಞಾನ

ಈ ಅಧ್ಯಾಯದಲ್ಲಿ ನನ್ನ ಗಮನವಿರುವುದು ಗಣಿತದ ಬಗ್ಗೆ, ತನ್ನದೇ ಆದ ಸ್ವರೂಪದಲ್ಲಲ್ಲ, ಗ್ರೀಕ್ ತತ್ವಜ್ಞಾನಕ್ಕೆ ಅದು ಸಂಬಂಧಪಟ್ಟಿದ್ದ ಸ್ವರೂಪದಲ್ಲಿ; ಈ ಸಂಬಂಧವು, ಅದರಲ್ಲೂ ಪ್ಲೇಟೋನಲ್ಲಿ ತುಂಬ ನಿಕಟವಾದುದಾಗಿತ್ತು. ಗ್ರೀಕ್‌ರ ಉತ್ಕೃಷ್ಟತೆಯು ಬೇರೆಲ್ಲದಕ್ಕಿಂತ ಬಹು ಸ್ಪಷ್ಟವಾಗಿ ಗಣಿತ ಮತ್ತು ಖಗೋಳವಿಜ್ಞಾನದಲ್ಲಿ ಎದ್ದು ಕಾಣುತ್ತದೆ. ಕಲೆ, ಸಾಹಿತ್ಯ ಮತ್ತು ತತ್ವಜ್ಞಾನಗಳಲ್ಲಿ ಅವರು ಮಾಡಿದುದರ ಶ್ರೇಷ್ಠತೆಯನ್ನು ಅಭಿರುಚಿಗನುಗುಣವಾಗಿ ತೀರ್ಮಾನಿಸಬಹುದು, ಆದರೆ ಜ್ಯಾಮಿತಿಯಲ್ಲಿ ಅವರು ಮಾಡಿದುದು ಪೂರ್ತಿ ಪ್ರಶ್ನಾತೀತವಾದದ್ದು. ಅವರು ಈಜಿಪ್ಟ್‌ನಿಂದ ಒಂದಷ್ಟನ್ನು ಪಡೆದರು, ಅದಕ್ಕಿಂತ ಕಡಿಮೆ ಬ್ಯಾಬಿಲೋನಿಯದಿಂದ; ಆದರೆ ಈ ಮೂಲಗಳಿಂದ ಪಡೆದುದು ಗಣಿತದಲ್ಲಿ, ಅದರಲ್ಲೂ ಸರಳ ಸೂತ್ರಗಳ ಬಗ್ಗೆ, ಮತ್ತು ಖಗೋಳವಿಜ್ಞಾನದಲ್ಲಿ ಬಹು ದೀರ್ಘ ಕಾಲ ಹರವಿಕೊಂಡಿದ್ದ ಪರಿವೀಕ್ಷಣೆಗಳ ದಾಖಲೆಗಳನ್ನು. ಗಣಿತಾತ್ಮಕ ಸಮರ್ಥನೆಗಳು ಬಹುತೇಕ ಪೂರ್ತಿಯಾಗಿ ಗ್ರೀಕ್ ಮೂಲದ್ದು. ಎಂಥ ಸಮಸ್ಯೆಗಳು ಗಣಿತಾತ್ಮಕ ಅನ್ವೇಷಣೆಗೆ ಪ್ರಚೋದನೆ ನೀಡಿದುವು ಎಂಬ ಬಗ್ಗೆ ಅನೇಕ ಆಶ್ಚರ್ಯಕರ ಕತೆಗಳಿವೆ, ಪ್ರಾಯಶಃ ಅವು ಐತಿಹಾಸಿಕವಲ್ಲ. ಅತ್ಯಂತ ಪ್ರಾಚೀನವಾದದ್ದೂ ಮತ್ತು ಅತ್ಯಂತ ಸರಳವಾದದ್ದೂ ಆದುದೆಂದರೆ ಥೇಲೀಸ್‌ಗೆ ಸಂಬಂಧಿಸಿದ್ದು, ಅವನು ಈಜಿಪ್ಟ್‌ನಲ್ಲಿದ್ದಾಗ ರಾಜನು ಪಿರಮಿಡ್ಡೊಂದರ ಎತ್ತರವನ್ನು ಕಂಡುಹಿಡಿಯಲು ಅವನಿಗೆ ಹೇಳಿದಾಗ. ತನ್ನ ಎತ್ತರದಷ್ಟೇ ಉದ್ದವಾದ ಬಿಸಿಲ ನೆರಳು ಬರುವುದನ್ನೇ ಅವನು ಕಾದುಕೊಂಡಿದ್ದು, ಪಿರಮಿಡ್‌ನ ನೆರಳಿನ ಉದ್ದವನ್ನು ಅಳೆದನಂತೆ, ಅದು ಸರಿಯಾಗಿ ಅದರ ಎತ್ತರದಷ್ಟೇ ಇತ್ತು. ಈಸ್ಕಿಲಸ್‌ನ ನಾಟಕಗಳಿಗೆ ದೃಶ್ಯಗಳನ್ನು ಬರೆಯುವುದಕ್ಕೆಂದು ಜ್ಯಾಮಿತಿಜ್ಞನಾದ ಅಥಾರ್ಕಸ್ ಪರಿಪ್ರೇಕ್ಷ್ಯ (ಪರ್ಸ್‌ಪೆಕ್ಟಿವ್) ನಿಯಮಗಳನ್ನು ಮೊದಲು ಅಧ್ಯಯನ ಮಾಡಿದ ಎಂದು ಹೇಳುತ್ತಾರೆ. ಸಮುದ್ರದಲ್ಲಿನ ಹಡಗೊಂದು ಎಷ್ಟು ದೂರದಲ್ಲಿದೆ

ಎಂಬುದನ್ನು ಕಂಡುಕೊಳ್ಳುವ ಸಮಸ್ಯೆಯ ಬಗ್ಗೆಯೂ ಥೇಲೀಸ್ ಅಧ್ಯಯನ ಮಾಡಿದನಂತೆ, ಬಹು ಬೇಗನೆ ಅದಕ್ಕೆ ಸರಿಯದ ಉತ್ತರವನ್ನು ಕಂಡುಹಿಡಿದನಂತೆ. ಗ್ರೀಕ್ ಜ್ಯಾಮಿತಿಜ್ಞರನ್ನು ಕಾಡಿದ ಮಹಾ ಸಮಸ್ಯೆಯೊಂದೆಂದರೆ ಘನದ ನಕಲುಮಾಡುವಿಕೆ; ಅದನ್ನು ಸೃಷ್ಟಿಸಿದವರು ಯಾವುದೋ ದೇವಸ್ಥಾನವೊಂದರ ಪೂಜಾರಿಗಳಂತೆ, ದೇವವಾಣಿಯು ಅವರಿಗೆ ವಿಗ್ರಹವೊಂದರ ಎರಡರಷ್ಟು ಅಳತೆಯ ವಿಗ್ರಹವೊಂದನ್ನು ನಿರ್ಮಿಸಲು ಆದೇಶಿಸಿತಂತೆ. ಮೊದಲು ಅವರಿಗೆ ಹೊಳೆದದ್ದು ಮೂಲವಿಗ್ರಹದ ಎಲ್ಲ ಅಳತೆಗಳನ್ನೂ ಎರಡರಷ್ಟು ಮಾಡುವುದು, ಆದರೆ ಹಾಗೆ ಮಾಡಿದರೆ ಹೊಸವಿಗ್ರಹವು ಮೂಲದ ಎಂಟರನ್ನು ದೊಡ್ಡದಾಗುವುದೆಂದು ತಿಳಿಯಿತಂತೆ, ಅದು ದೇವತೆಯು ಬಯಸಿದ ವಿಗ್ರಹನಿರ್ಮಾಣಕ್ಕಿಂತ ಹೆಚ್ಚಿನ ಹಣ ಬಯಸುವಂತಹುದು. ಹೀಗಾಗಿ ಪ್ಲೇಟೋಗೆ ನಿಯೋಗವೊಂದನ್ನು ಕಳಿಸಿ ಅವನ ಅಕೆಡೆಮಿಯಲ್ಲಿ ಈ ಸಮಸ್ಯೆಗೆ ಸಮಂಜಸ ಪರಿಹಾರ ಸೂಚಿಸಬಲ್ಲ ಯಾರಾದರೂ ಇದ್ದಾರೆಯೇ ಎಂದು ಕೇಳಿದರಂತೆ. ಜ್ಯಾಮಿತಿಜ್ಞರು ಈ ಸಮಸ್ಯೆಯನ್ನು ಕೈಗೆತ್ತಿಕೊಂಡರು, ಶತಮಾನಗಟ್ಟಲೆ ತಲೆ ಕೆಡಿಸಿಕೊಂಡರು, ಈ ಮಧ್ಯೆ ಅವರು ಪ್ರಾಸಂಗಿಕವಾಗಿ ಹೆಚ್ಚು ಪ್ರಶಂಸಾರ್ಹ ಕೆಲಸವನ್ನು ಮಾಡಿದರು. ಅದೆಂದರೆ ಎರಡರ ಘನಮೂಲವನ್ನು ಕಂಡುಹಿಡಿಯುವ ಸಮಸ್ಯೆ. ಕಂಡುಹಿಡಿದ ಮೊದಲ ಅಭಾಗಲಬ್ಧವೆಂದರೆ (ಇರ್‍ರಾಷನಲ್) ೨ ರ ವರ್ಗಮೂಲ, ಅದು ಪ್ರಾಚೀನ ಪೈಥಾಗೊರೀಯನ್ನರಿಗೆ ತಿಳಿದಿತ್ತು; ಜಾಣ್ಮೆಯ ವಿಧಾನಗಳಿಂದ ಅದರ ಮೌಲ್ಯಕ್ಕೆ ಸಮೀಪವಾದುದನ್ನು ಕಂಡುಹಿಡಿಯುವ ಬಗೆಯನ್ನು ಅನಾವರಣಗೊಳಿಸಿದರು. ಅದರಲ್ಲಿ ಅತ್ಯುತ್ತಮವಾದದ್ದು ಇದು: ಸಂಖ್ಯೆಗಳ ಎರಡು ಅಂಕಣಗಳನ್ನು ನಿರ್ಮಿಸಿ, ಅದರ ಸಂಖ್ಯೆಗಳನ್ನು 'ಏ' ಗಳು ಮತ್ತು 'ಬಿ' ಗಳು ಎಂದು ಕರೆಯಿರಿ; ಎರಡೂ ೧ ಎಂದು ಆರಂಭಗೊಳ್ಳುತ್ತದೆ. ಮುಂದಿನ 'ಏ', ಪ್ರತಿಹಂತದಲ್ಲೂ, ಈಗಾಗಲೇ ಗೊತ್ತಿರುವ ಕೊನೆಯ 'ಏ' ಮತ್ತು 'ಬಿ' ಗಳೆರಡನ್ನೂ ಕೂಡಿಸಿ ರೂಪಿಸಿ; ಆನಂತರದ ಹಂತವೆಂದರೆ, ಮುಂದಿನ 'ಬಿ' ಯನ್ನು ರೂಪಿಸುವಾಗ ಹಿಂದಿನ 'ಏ' ರ ಎರಡರಷ್ಟಕ್ಕೆ ಹಿಂದಿನ 'ಬಿ' ಯ ಎರಡರಷ್ಟನ್ನು ಸೇರಿಸಬೇಕು. ಹೀಗೆ ರೂಪಿಸಿದ ಮೊದಲ ಆರು ಯುಗ್ಮಗಳು ಎಂದರೆ: (೧, ೧), (೨, ೩), (೫, ೭), (೧೨, ೧೭), (೨೯, ೪೧), (೭೦, ೯೯). ಪ್ರತಿ ಯುಗ್ಮಯಲ್ಲಿಯೂ, ೨ಏ^{೨}– ಬಿ^{೨} ೧ ಅಥವಾ – ೧ ಆಗಿರುತ್ತದೆ. ಹೀಗೆ ಬಿ/ಏ ೨ ರ ವರ್ಗಮೂಲಕ್ಕೆ ಹತ್ತಿರವಾದುದು, ಮತ್ತು ಪ್ರತಿ ಹಂತವೂ ಮತ್ತಷ್ಟು ಹತ್ತಿರವಾಗುತ್ತ ಸಾಗುತ್ತದೆ. ಉದಾಹರಣೆಗೆ, ೯೯/೭೦ ೨ಕ್ಕೆ ತೀರ ಸಮೀಪವಾದುದು ಎಂದು ಓದುಗ ಭಾವಿಸಬಹುದು.

ಸದಾ ಮಸುಕಾದ ವ್ಯಕ್ತಿ ಎನಿಸಿದ ಪೈಥಾಗೊರಾಸ್ ಅನ್ನು ಜ್ಯಾಮಿತಿಯನ್ನು ಉದಾರ ಶಿಕ್ಷಣವನ್ನಾಗಿಸಿದವನೆಂದು ಪ್ರೊಕ್ಲಸ್ ಬಣ್ಣಿಸುತ್ತಾನೆ. ಸರ್ ಥಾಮಸ್

ಹೀತ್[೭೭] ಅನ್ನು ಒಳಗೊಂಡಂತೆ, ಅನೇಕ ಪರಿಣತರು, ಪ್ರಾಯಶಃ ಅವನು ಅವನ ಹೆಸರಿನ ಪ್ರಮೇಯವನ್ನು ಅನಾವರಣಗೊಳಿಸಿದವನೆಂದು ಭಾವಿಸುತ್ತಾರೆ. ಅದರ ಪ್ರಕಾರ, ಸಮಕೋನ ತ್ರಿಭುಜದಲ್ಲಿನ ಸಮಕೋನಕ್ಕೆ ಎದುರಾದ ಬಾಹುವಿನ ಮೇಲಣ ವರ್ಗವು ಉಳಿದೆರಡು ಬಾಹುಗಳ ಮೇಲಣ ವರ್ಗಗಳ ಮೊತ್ತಕ್ಕೆ ಸಮ. ಏನೇ ಆಗಲಿ, ಬಹು ಹಿಂದೆಯೇ ಪೈಥಾಗೊರಿಯನ್ನರಿಗೆ ಈ ಪ್ರಮೇಯ ತಿಳಿದಿತ್ತು. ಮತ್ತು ಅವರಿಗೆ ತ್ರಿಭುಜದ ಎಲ್ಲ ಕೋನಗಳ ಮೊತ್ತವು ಎರಡು ಸಮಕೋನಗಳು ಎಂಬುದೂ ತಿಳಿದಿತ್ತು.

೨ ರ ವರ್ಗಮೂಲದ ಹೊರತಾದ ಅಭಾಗಲಬ್ಧಗಳನ್ನು ಕುರಿತೂ ಅಧ್ಯಯನ ನಡೆಸಿದರು. ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಈ ಅಧ್ಯಯನ ನಡೆಸಿದವರು, ಸಾಕ್ರಟೀಸ್‌ನ ಸಮಕಾಲೀನನಾಗಿದ್ದ ಥಿಯೋಡರಸ್, ಮತ್ತು ಹೆಚ್ಚು ವ್ಯಾಪಕವಾಗಿ, ಪ್ಲೇಟೋನ ಸರಿಸುಮಾರು ಹಿರಿಯ ಸಮಕಾಲೀನನಾಗಿದ್ದ ಥಿಯೇಟೆಟಸ್. ಡೆಮಾಕ್ರಿಟಸ್ ಅಭಾಗಲಬ್ಧಗಳ ಬಗ್ಗೆ ಒಂದು ಗ್ರಂಥವನ್ನೇ ಬರೆದ, ಆದರೆ ಅದರೊಳಗೇನಿತ್ತು ಎಂಬುದರ ಬಗ್ಗೆ ನಮಗೆ ತಿಳಿದಿರುವುದು ಬಹು ಅಲ್ಪ. ಪ್ಲೇಟೋಗೆ ಕೂಡ ಈ ವಿಷಯದ ಬಗ್ಗೆ ಗಾಢ ಆಸಕ್ತಿಯಿತ್ತು; ಥಿಯೇಟೆಟಸ್‌ನ ಹೆಸರಿನಲ್ಲಿರುವ ಸಂವಾದದಲ್ಲಿ ಥಿಯೋಡರಸ್ ಮತ್ತು ಥಿಯೇಟೆಟಸ್‌ರ ಕಾರ್ಯವನ್ನು ಉಲ್ಲೇಖಿಸುತ್ತಾನೆ. 'ಲಾಸ್'ನಲ್ಲಿ (೮೧೯–೨೦), ಈ ವಿಷಯ ಕುರಿತ ಸಾಮಾನ್ಯ ಅಜ್ಞಾನವು ಅವಮಾನಕಾರಿಯಾದುದು, ತಾನೇ ಈ ವಿಷಯವನ್ನು ಕುರಿತು ಅರಿತದ್ದು ತನ್ನ ಬದುಕಿನಲ್ಲಿ ತಡವಾಗಿಯೇ ಎಂದು ಹೇಳುತ್ತಾನೆ. ಅದು ಪೈಥಾಗೊರಾಸ್‌ನ ತತ್ವಜ್ಞಾನದ ಮೇಲೆ ಬಹು ಪ್ರಮುಖ ಪ್ರಭಾವವನ್ನು ಹೊಂದಿತ್ತು ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ.

ಅಭಾಗಲಬ್ಧಗಳ ಅನಾವರಣದ ಅತ್ಯಂತ ಪ್ರಮುಖ ಪರಿಣಾಮವೆಂದರೆ, ಯೂಡಾಕ್ಸಸ್ (ಕ್ರಿಪೂ ೪೦೮–೩೫೫) ಕಂಡುಹಿಡಿದ ಪ್ರಮಾಣಗಳ ಜ್ಯಾಮಿತೀಯ ಸಿದ್ಧಾಂತ. ಅವನಿಗಿಂತ ಮುಂಚೆ ಇದ್ದುದು ಪ್ರಮಾಣದ ಕೇವಲ ಅಂಕಗಣಿತಾತ್ಮಕ ಸಿದ್ಧಾಂತ. ಈ ಸಿದ್ಧಾಂತದ ಪ್ರಕಾರ, 'ಎ' ರಷ್ಟು 'ಡಿ'ಯು 'ಬಿ' ಯಷ್ಟು 'ಸಿ'ಗೆ ಸಮನಾಗಿದ್ದರೆ, 'ಎ' ಮತ್ತು 'ಬಿ'ಗಳ ಅನುಪಾತವು 'ಸಿ ಮತ್ತು 'ಡಿ'ಗಳ ಅನುಪಾತಕ್ಕೆ ಸಮನಾಗಿರುತ್ತದೆ. ಅಭಾಗಲಬ್ಧಗಳ ಬಗೆಗಿನ ಅಂಕಗಣಿತಾತ್ಮಕ ಸಿದ್ಧಾಂತವಿಲ್ಲದಾಗ, ಈ ಸೂತ್ರವು ಅಕರಣಿ (ರ್‍ಯಾಷನಲ್)ಗಳ ವಿಷಯಕ್ಕೆ ಮಾತ್ರ ಅನ್ವಯವಾಗುತ್ತದೆ. ಆದರೆ ಯೂಡಾಕ್ಸಸ್, ಈ ನಿಬಂಧನೆಗೊಳಗಾಗದ ಹೊಸ ಸೂತ್ರವೊಂದನ್ನಿತ್ತ, ಅದು ರೂಪಿತವಾದ ಬಗೆಯು ಆಧುನಿಕ ವಿಶ್ಲೇಷಣೆಯ ವಿಧಾನಗಳನ್ನು ಸೂಚಿಸುತ್ತದೆ.

---

೭೭. 'ಗ್ರೀಕ್ ಮ್ಯಾಥಮಾಟಿಕ್ಸ್', ಸಂಪುಟ ೧, ಪು. ೧೪೫.

ಈ ಸಿದ್ಧಾಂತವನ್ನು ಯೂಕ್ಲಿಡ್ ಬೆಳೆಸಿದ, ಅದಕ್ಕೊಂದು ತಾರ್ಕಿಕ ಚೆಲುವಿದೆ.

ಯೂಡಾಕ್ಸಸ್ 'ಆದ್ಯಂತ ಶೋಧನೆಯ ವಿಧಾನ'ವನ್ನು ಕಂಡುಹಿಡಿದ ಅಥವಾ ಅದನ್ನು ಪರಿಪೂರ್ಣಗೊಳಿಸಿದ, ಅದನ್ನು ಮುಂದೆ ಬಹು ಯಶಸ್ವಿಯಾಗಿ ಆರ್ಕಿಮಿಡೀಸ್ ಬಳಸಿಕೊಂಡ. ಈ ವಿಧಾನವು ಕಲನಶಾಸ್ತ್ರ (ಕ್ಯಾಲ್ಕ್ಯುಲಸ್)ದ ಒಂದು ಮುನ್‌ಸೂಚನೆಯಾಗಿದೆ. ಒಂದು ಉದಾಹರಣೆಯನ್ನು ನೀಡಬಹುದಾದರೆ, ವೃತ್ತವೊಂದರ ವಿಸ್ತೀರ್ಣದ ಪ್ರಶ್ನೆ. ಒಂದು ವೃತ್ತದಲ್ಲಿ ಷಟ್ಕೋನ (ಹೆಕ್ಸಗನ್)ವೊಂದನ್ನು ಅಥವಾ ದ್ವಾದಶಕೋನ (ಡೊಡೆಕಗನ್) ಅನ್ನು ಅಥವಾ ಸಾವಿರವೋ ದಶಲಕ್ಷವೋ ಬಾಹುಗಳುಳ್ಳ ಬಹುಕೋನ (ಪಾಲಿಗನ್)ವನ್ನು ಅಳವಡಿಸಬಹುದು. ಎಷ್ಟೇ ಸಂಖ್ಯೆಯ ಬಾಹುಗಳಿರಲಿ, ಅಂಥ ಬಹುಕೋನದ ವಿಸ್ತೀರ್ಣವು ವೃತ್ತದ ವ್ಯಾಸದ ಮೇಲಣ ವರ್ಗಕ್ಕೆ ಸಮನಾಗಿರುತ್ತದೆ. ಬಹುಕೋನದ ಬಾಹುಗಳ ಸಂಖ್ಯೆಯು ಹೆಚ್ಚಿದಷ್ಟೂ ಅದು ವೃತ್ತದ ವಿಸ್ತೀರ್ಣಕ್ಕೆ ಹೆಚ್ಚೆಚ್ಚು ಹತ್ತಿರವಾಗುತ್ತ ಹೋಗುತ್ತದೆ. ಬಹುಕೋನದಲ್ಲಿ ಸಾಕಷ್ಟು ಬಾಹುಗಳಿದ್ದರೆ, ಅದರ ವಿಸ್ತೀರ್ಣವು ವೃತ್ತದ ವಿಸ್ತೀರ್ಣಕ್ಕಿಂತ, ಎಷ್ಟೇ ಸಣ್ಣದಾಗಿರಲಿ, ಹಿಂದಿನ ನಿಗದಿತ ವಿಸ್ತೀರ್ಣಕ್ಕಿಂತ ಕಡಿಮೆಯಾಗಿರುತ್ತದೆ ಎಂಬುದನ್ನು ಸಾಧಿಸಬಹುದು. ಈ ಉದ್ದೇಶಕ್ಕಾಗಿ 'ಆರ್ಕಿಮಿಡೀಸ್‌ನ ಸೂತ್ರ'ವನ್ನು ಬಳಸುತ್ತಾರೆ. ಎರಡು ಪರಿಮಾಣ (ಕ್ವಾಂಟಿಟಿ)ಗಳಲ್ಲಿ ದೊಡ್ಡದನ್ನು ಅರ್ಧಭಾಗ ಮಾಡಿದರೆ, ಮತ್ತೆ ಆರ್ಧವನ್ನು ಆರ್ಧಭಾಗ ಮಾಡಿದರೆ, ಮತ್ತು ಹೀಗೇ ಮಾಡುತ್ತ ಹೋದರೆ, ಕೊನೆಗೆ ಮೂಲದ ಪರಿಮಾಣಗಳಲ್ಲಿನ ಚಿಕ್ಕದಕ್ಕಿಂತ ಚಿಕ್ಕದಾದ ಪರಿಮಾಣವನ್ನು ತಲುಪುತ್ತೇವೆ ಎಂದು ಇದು (ಸರಳೀಕರಿಸಿ) ಸೂಚಿಸುತ್ತದೆ. ಅಂದರೆ, 'ಎ'ಯು 'ಬಿ'ಗಿಂತ ದೊಡ್ಡದಾಗಿದ್ದರೆ, 'ಎನ್' ಎಂಬ ಪೂರ್ಣ ಸಂಖ್ಯೆಯೊಂದಿದ್ದರೆ, ಆಗ 'ಬಿ'ಯ ೨$^{ಎನ್}$ ರಷ್ಟು 'ಎ'ಗಿಂತ ದೊಡ್ಡದಾಗಿರುತ್ತದೆ.

'ಆದ್ಯಂತ ಶೋಧನೆಯ ವಿಧಾನ'ವು ಕೆಲವು ವೇಳೆ, ಪರವಲಯದ ವರ್ಗದಲ್ಲಿರುವಂತೆ, ನಿಖರ ಫಲಿತಾಂಶವನ್ನು ನೀಡುತ್ತದೆ: ಇದನ್ನು ಆರ್ಕಿಮಿಡೀಸ್ ಮಾಡಿದ. ಕೆಲವು ವೇಳೆ, ವೃತ್ತವೊಂದರ ವರ್ಗವನ್ನು ಮಾಡುವ ಪ್ರಯತ್ನದಲ್ಲಿ, ಅದು ಯಶಸ್ವೀ ಅಂದಾಜನ್ನು ಮಾತ್ರವೇ ನೀಡಬಹುದು. ವೃತ್ತದ ಮೇಲಣ ವರ್ಗವೆಂದರೆ ಆ ವೃತ್ತದ ಪರಿಧಿ ಮತ್ತು ವ್ಯಾಸಗಳ ಅನುಪಾತವನ್ನು ನಿರ್ಧರಿಸುವ ಪ್ರಶ್ನೆ, ಅದನ್ನು π ಎನ್ನುತ್ತಾರೆ. ಆರ್ಕಿಮಿಡೀಸ್ ಇದರ ಅಂದಾಜು $^{೨೨}/_{೭}$ ಎಂಬುದನ್ನು ಲೆಕ್ಕಾಚಾರಗಳಿಂದ ಬಳಸಿಕೊಂಡ; ೯೬ ಬಾಹುಗಳ ಬಹುಕೋನವೊಂದನ್ನು ರಚಿಸಿ (ಇನ್‌ಸ್ಕ್ರೈಬ್) ಪರಿವರ್ತಿಸುವುದರ (ಸರ್ಕಮ್‌ಸ್ಕ್ರೈಬ್) ಮೂಲಕ ಅವನು π ಎಂಬುದು ೩$^{೧}/_{೭}$ ಕ್ಕಿಂತ ಚಿಕ್ಕದು ಮತ್ತು ೩$^{೧೦}/_{೭೧}$ ಕ್ಕಿಂತ ದೊಡ್ಡದು ಎಂದು ಸಾಧಿಸಿದ. ಈ ವಿಧಾನವನ್ನು ಅನುಸರಿಸಿ ಅಂದಾಜಿನ ಬೇಕಾದ ಹಂತವನ್ನು ಪಡೆಯಬಹುದು. ಈ ಸಮಸ್ಯೆಯ ವಿಷಯದಲ್ಲಿ ಯಾವುದೇ ವಿಧಾನವು

ಮಾಡಬಹುದಾದುದು ಇಷ್ಟೇ. ರಿ ವರೆಗಿನ ಅಂದಾಜಿಗಾಗಿ ಬಹುಕೋನಗಳ ರಚನೆ ಮತ್ತು ಪರಿವರ್ತನೆಯ ಬಳಕೆಯು ಆಂಟಿಫೋನ್‌ನಷ್ಟು ಹಿಂದೆ ಹೋಗುತ್ತದೆ, ಅವನೂ ಸಾಕ್ರಟೀಸ್‌ನ ಒಬ್ಬ ಸಮಕಾಲೀನ.

ನಾನು ಚಿಕ್ಕವನಾಗಿದ್ದಾಗಲೂ ವಿದ್ಯಾರ್ಥಿಗಳ ಮಟ್ಟಿಗೆ ಜ್ಯಾಮಿತಿಯ ಏಕೈಕ ಪಠ್ಯಪುಸ್ತಕವೆಂದು ಪರಿಗಣಿತವಾಗಿದ್ದ ಯೂಕ್ಲಿಡ್ ಅಲೆಕ್ಸಾಂಡ್ರಿಯದಲ್ಲಿ, ಅಲೆಕ್ಸಾಂಡರ್ ಮತ್ತು ಅರಿಸ್ಟಾಟಲ್‌ರ ಮರಣದ ಕೆಲ ವರ್ಷಗಳ ನಂತರ, ಸುಮಾರು ಕ್ರಿಪೂ ೩೦೦ರಲ್ಲಿ ವಾಸವಾಗಿದ್ದ. ಅವನ 'ಎಲಿಮೆಂಟ್ಸ್'ನ ಬಹುಭಾಗ ಸ್ವಂತದ್ದಲ್ಲ, ಆದರೆ ಪ್ರತಿಪಾದನೆಯ ಕ್ರಮ ಮತ್ತು ತಾರ್ಕಿಕ ಸಂರಚನೆಗಳು ಬಹುಪಾಲು ಅವನವೇ. ಜ್ಯಾಮಿತಿಯನ್ನು ಹೆಚ್ಚು ಅಧ್ಯಯನ ಮಾಡಿದಷ್ಟೂ, ಇವು ಹೆಚ್ಚು ಮೆಚ್ಚಿನವಾಗಿ ಕಾಣಿಸುತ್ತವೆ. ಸಮಾನಾಂತರಗಳ ಪ್ರಖ್ಯಾತ ಆಧಾರಸೂತ್ರದ ಮೂಲಕ ಸಮಾನಾಂತರಗಳ ಪ್ರತಿಪಾದನೆಗೆ ಎರಡು ಗುಣಗಳಿವೆ – ನಿಷ್ಕೃಷ್ಟ ತಾರ್ಕಿಕತೆ ಮತ್ತು ಆರಂಭಿಕ ಊಹೆಗಳ ಅವಿಶ್ವಸನೀಯತೆಯ ಮರೆಮಾಚದಿರುವಿಕೆ. ಯೂಡಾಕ್ಸಸ್ ಅನ್ನು ಅನುಸರಿಸುವ ಅನುಪಾತಸಿದ್ಧಾಂತವು ಅಭಾಗಲಬ್ಧಗಳಿಗೆ ಸಂಬಂಧಿಸಿದ ಎಲ್ಲ ತೊಂದರೆಗಳನ್ನೂ, ವಿಯೆರ್‌ಸ್ಟ್ರಾಸ್ ಹತ್ತೊಂಬತ್ತನೆಯ ಶತಮಾನದ ವಿಶ್ಲೇಷಣೆಯಲ್ಲಿ ಪರಿಚಯಿಸಿದುದನ್ನು ಹೋಲುವ ವಿಧಾನಗಳಿಂದ ನಿವಾರಿಸುತ್ತದೆ. ಆನಂತರ ಯೂಕ್ಲಿಡ್ ಒಂದು ಬಗೆಯ ಜ್ಯಾಮಿತೀಯ ಬೀಜಗಣಿತಕ್ಕೆ ಸಾಗುತ್ತಾನೆ, ಭಾಗ ಹತ್ತರಲ್ಲಿ, ಅಭಾಗಲಬ್ಧಗಳ ವಿಷಯವನ್ನು ವಿವರಿಸುತ್ತಾನೆ. ಆನಂತರ ಅವನು ಮೂರು ಆಯಾಮಗಳ ಜ್ಯಾಮಿತಿಯೆಡೆಗೆ ಮುಂದುವರಿಯುತ್ತಾನೆ, ಆ ಬಳಿಕ, ಥಿಯೋಟೆಟಸ್‌ನಿಂದ ಪರಿಪೂರ್ಣಗೊಂಡ ಮತ್ತು ಪ್ಲೇಟೋ 'ಟೈಮೇಯಸ್'ನಲ್ಲಿ ಸ್ವೀಕರಿಸಿದ, ಮೂರು ಆಯಾಮಗಳ ರಚನೆಯಿಂದ ಗ್ರಂಥವನ್ನು ಮುಕ್ತಾಯಮಾಡುತ್ತಾನೆ.

ಯೂಕ್ಲಿಡ್‌ನ 'ಎಲಿಮೆಂಟ್ಸ್' ಯಾವ ಕಾಲಕ್ಕೂ ರಚಿತವಾದ ಶ್ರೇಷ್ಠ ಗ್ರಂಥಗಳಲ್ಲಿ ಒಂದೆಂಬುದು ನಿಸ್ಸಂಶಯ, ಅದು ಗ್ರೀಕ್ ಬುದ್ಧಿಶಕ್ತಿಯ ಪರಿಪೂರ್ಣ ಸ್ಮಾರಕ. ಅದರಲ್ಲಿ ವಿಶಿಷ್ಟ ಗ್ರೀಕ್ ಪರಿಮಿತಿಗಳಿವೆಯೆಂಬುದು ನಿಜವೇ: ವಿಧಾನವು ಸಂಪೂರ್ಣವಾಗಿ ನಿಗಮನಾತ್ಮಕ, ಮತ್ತು ಅದರಲ್ಲಿ ಮೂಲ ಊಹೆಗಳನ್ನು ಪರೀಕ್ಷಿಸುವ ಮಾರ್ಗ ಯಾವುದೂ ಇಲ್ಲ. ಈ ಊಹೆಗಳನ್ನು ಪ್ರಶ್ನಾತೀತವೆಂದು ಭಾವಿಸಲಾಗಿತ್ತು, ಆದರೆ ಹತ್ತೊಂಬತ್ತನೆಯ ಶತಮಾನದಲ್ಲಿ, ಅವು ಭಾಗಶಃ ತಪ್ಪಾಗಿರಬಹುದು, ಮತ್ತು ಪರಿವೀಕ್ಷಣೆಗಳಿಂದ ಮಾತ್ರವೇ ಅವು ಹಾಗಿವೆಯೇ ಎಂದು ತೀರ್ಮಾನಿಸಲು ಸಾಧ್ಯ ಎಂದು ಯೂಕ್ಲಿಡೇತರ ಜ್ಯಾಮಿತಿಯು ತೋರಿಸಿಕೊಟ್ಟಿತು.

ಪ್ಲೇಟೋ ಹೇಳಿಕೊಟ್ಟ ವ್ಯಾವಹಾರಿಕ ಉಪಯುಕ್ತತೆಯು ಯೂಕ್ಲಿಡ್‌ನಲ್ಲಿದೆ. ಒಂದು ವಿವರಣೆಯನ್ನು ಕೇಳಿದ ಬಳಿಕ ಒಬ್ಬ ವಿದ್ಯಾರ್ಥಿಯು ಜ್ಯಾಮಿತಿಯನ್ನು

ಕಲಿಯುವುದರಿಂದ ಏನು ಉಪಯೋಗ ಎಂದು ಕೇಳಿದನಂತೆ. ಆಗ ಯೂಕ್ಲಿಡ್ ಒಬ್ಬ ಗುಲಾಮನನ್ನು ಕರೆದು, 'ಈ ಹುಡುಗನಿಗೆ ಮೂರು ಪೆನ್ನಿಗಳನ್ನು ಕೊಡು, ಯಾಕೆಂದರೆ ಅವನಿಗೆ ಕಲಿತದ್ದರಿಂದ ಲಾಭವಾಗಬೇಕಂತೆ' ಎಂದು ಹೇಳಿದನಂತೆ. ವ್ಯಾವಹಾರಿಕತೆಯ ಬಗೆಗಿನ ತಿರಸ್ಕಾರ ವಾಸ್ತವ ನೆಲೆಯಲ್ಲಿ ಸಮರ್ಥನೆಗೊಂಡಿತು. ಗ್ರೀಕ್ ಕಾಲದಲ್ಲಿ, ಶಂಕಾಕೃತಿಯ ಛೇದನ (ಸೆಕ್ಷನ್)ಗಳಿಂದ ಯಾವುದೇ ಉಪಯೋಗವಿಲ್ಲ ಎಂದು ಜನ ಭಾವಿಸಿದ್ದರು; ಕೊನೆಗೆ, ಹದಿನೇಳನೇ ಶತಮಾನದಲ್ಲಿ, ಕ್ಷಿಪಣಿಗಳು ಪರವಲಯದಲ್ಲಿ ಚಲಿಸುತ್ತವೆ ಎಂದು ಗೆಲಿಲಿಯೋ ಅನಾವರಣಗೊಳಿಸಿದರೆ, ಕೆಪ್ಲರ್ ಗ್ರಹಗಳು ಅಂಡಾಕೃತಿ (ಎಲಿಪ್ಸ್) ಯಲ್ಲಿ ಚಲಿಸುತ್ತವೆಂದು ಕಂಡುಕೊಂಡ. ಗ್ರೀಕ್‌ರು ಸಿದ್ಧಾಂತಗಳ ಬಗೆಗಿನ ಶುದ್ಧ ಪ್ರೀತಿಯಿಂದ ಮಾಡಿದ್ದ ಕೆಲಸವು ಇದ್ದಕ್ಕಿದ್ದಂತೆ ಯುದ್ಧಕೌಶಲ ಮತ್ತು ಖಗೋಳವಿಜ್ಞಾನಗಳಲ್ಲಿ ಮೂಲಾಧಾರವಾಯಿತು.

ರೋಮನ್‌ರು ಯೂಕ್ಲಿಡ್‌ನ ಬಗ್ಗೆ ಮೆಚ್ಚಿಕೆ ವ್ಯಕ್ತಪಡಿಸಲಾಗದಷ್ಟು ವ್ಯವಹಾರಬುದ್ಧಿಯನ್ನು ಹೊಂದಿದವರಾಗಿದ್ದರು. ಅವನ ಬಗ್ಗೆ ಉಲ್ಲೇಖಿಸುವವರ ಪೈಕಿ ಸಿಸೆರೊ ಮೊದಲನೆಯವನು, ಪ್ರಾಯಶಃ ಅವನ ಕಾಲದಲ್ಲಿ ಅದರ ಲ್ಯಾಟಿನ್ ಭಾಷಾಂತರವಿರಲಿಲ್ಲ; ವಾಸ್ತವವಾಗಿ ಬೊತೆಥಿಯಸ್ (ಸು. ಕ್ರಿಶ ೪೮೦) ಕ್ಕಿಂತ ಮುಂಚೆ ಯಾವುದೇ ಲ್ಯಾಟಿನ್ ಭಾಷಾಂತರವಿದ್ದ ದಾಖಲೆಯಿಲ್ಲ. ಆದರೆ ಅರಬ್ಬರು ಆ ಬಗ್ಗೆ ಹೆಚ್ಚು ಮೆಚ್ಚಿಕೆಯುಳ್ಳವರು: ಕ್ರಿಶ ೭೬೦ ರ ಹೊತ್ತಿಗೆ ಬೈಜ಼ಾಂಟಿಯದ ಚಕ್ರವರ್ತಿಯು ಕಲೀಫನಿಗೆ ಒಂದು ಪ್ರತಿಯನ್ನು ನೀಡಿದ, ಅದರಿಂದ ಅರಬ್ಬಿಯಲ್ಲಿ ಅದರ ಒಂದು ಭಾಷಾಂತರವು ಕ್ರಿಶ ೮೦೦ರಲ್ಲಿ ಹರುನ್ ಅಲ್ ರಶೀದ್‌ನ ನೇತೃತ್ವದಲ್ಲಿ ಸಿದ್ಧವಾಯಿತು. ಈಗ ಉಪಲಬ್ಧವಾಗಿರುವ ಅರಬ್ಬಿಯಿಂದ ಮಾಡಿದ ಅತ್ಯಂತ ಪ್ರಾಚೀನ ಲ್ಯಾಟಿನ್ ಭಾಷಾಂತರವು ಕ್ರಿಶ. ೧೧೨೦ ರಲ್ಲಿ ಬಾತ್‌ನ ಆಡೆಲಾರ್ಡ್‌ನಿಂದ ಆದುದು. ಆ ಕಾಲದಿಂದ ಈಚೆಗೆ, ಪಶ್ಚಿಮದಲ್ಲಿ ಜ್ಯಾಮಿತಿಯ ಅಧ್ಯಯನವು ಕ್ರಮಕ್ರಮೇಣ ಪುನರುಜ್ಜೀವನಗೊಂಡಿತಾದರೂ, ಆ ಕುರಿತ ಪ್ರಮುಖ ಮುನ್ನಡೆಗಳು ನವೋದಯ ಕಾಲದ ಕೊನೆಯಲ್ಲಿ ಆದುದು.

ಗ್ರೀಕ್ ಸಾಧನೆಗಳು ಜ್ಯಾಮಿತಿಯಂತೆಯೇ ಸಾಧಾರಣವಾಗಿದ್ದ ಖಗೋಳವಿಜ್ಞಾನಕ್ಕೆ ನಾನೀಗ ಬರುತ್ತೇನೆ. ಅವರ ಕಾಲಕ್ಕೆ ಮುಂಚೆ, ಬ್ಯಾಬಿಲೋನಿಯನ್ನರು ಮತ್ತು ಈಜಿಪ್ಷಿಯನ್ನರಲ್ಲಿ ಹಲವಾರು ಶತಮಾನಗಳ ಕಾಲದ ಪರಿವೀಕ್ಷಣೆಗಳು ಬುನಾದಿಯನ್ನು ಹಾಕಿದ್ದವು. ಕಾಣುವ ಗ್ರಹಗಳ ಚಲನೆಯ ಬಗ್ಗೆ ದಾಖಲೆಗಳಾಗಿದ್ದವು, ಆದರೆ ಬೆಳಗಿನ ಮತ್ತು ಸಂಜೆಯ ನಕ್ಷತ್ರ ಒಂದೇ ಎಂಬುದು ಅವರಿಗೆ ತಿಳಿದಿರಲಿಲ್ಲ. ಬ್ಯಾಬಿಲೋನಿಯದಲ್ಲಿ ಖಚಿತವಾಗಿಯೂ, ಪ್ರಾಯಶಃ ಈಜಿಪ್ಟ್‌ನಲ್ಲಿಯೂ ಗ್ರಹಣಗಳ ಆವರ್ತಗಳನ್ನು ಗುರುತಿಸಿದ್ದರು. ಇದರಿಂದಾಗಿ

ಗ್ರಹಣಗಳನ್ನು ಮುನ್ನುಡಿಯುವುದು ಸುಮಾರು ಸರಿಯಾಗಿತ್ತು, ಆದರೆ ಈ ಮಾತು ಸೂರ್ಯಗ್ರಹಣಗಳಿಗೆ ಅನ್ವಯವಾಗುವುದಿಲ್ಲ, ಯಾಕೆಂದರೆ ಅವು ನಿರ್ದಿಷ್ಟ ಜಾಗದಲ್ಲಿ ಕಾಣುತ್ತಿರಲಿಲ್ಲ. ಸಮಕೋನವನ್ನು ತೊಂಬತ್ತು ಡಿಗ್ರಿಗಳಾಗಿ ಮತ್ತು ಡಿಗ್ರಿಯನ್ನು ಅರುವತ್ತು ಮಿನಿಟ್ಟುಗಳಾಗಿ ವಿಭಜಿಸಿದ ಶ್ರೇಯಸ್ಸು ಬ್ಯಾಬಿಲೋನಿಯನ್ನರದು. ಅರುವತ್ತು ಎಂಬ ಸಂಖ್ಯೆಯ ಬಗ್ಗೆ ಮತ್ತು ಅದನ್ನಾಧರಿಸಿದ ಎಣಿಕೆಯ ಬಗ್ಗೆ ಅವರಿಗೆ ಅಕ್ಕರೆ. ತಮ್ಮ ಅನ್ವೇಷಕರ ವಿವೇಚನಾಸಾಮರ್ಥ್ಯಕ್ಕೆ ಅವರು ಈಜಿಪ್ಟ್‌ನಲ್ಲಿ ಕೈಗೊಂಡ ಪ್ರವಾಸಗಳೇ ಕಾರಣವೆಂದು ಗ್ರೀಕ್‌ರು ಹೆಮ್ಮೆ ತಾಳಿದ್ದರು. ಆದರೆ ಅವರು ಮಾಡಿದ ಸಾಧನೆ ಗ್ರೀಕರದಕ್ಕಿಂತ ಅತ್ಯಲ್ಪ. ಥೇಲೀಸ್ ಗ್ರಹಣಗಳ ಬಗ್ಗೆ ಮಾಡಿದ ಮುನ್ನುಡಿಗಳು (ಪ್ರಿಡಿಕ್ಷನ್) ವಿದೇಶೀ ಪ್ರಭಾವದ ಒಂದು ಉದಾಹರಣೆ. ಬ್ಯಾಬಿಲೋನಿಯನ್ ಮತ್ತು ಈಜಿಪ್ಷಿಯನ್ ಮೂಲಗಳಿಂದ ಕಲಿತದ್ದಕ್ಕೆ ಅವನೇನಾದರೂ ಸೇರಿಸಿದನೆಂದು ಭಾವಿಸುವುದಕ್ಕೆ ಕಾರಣವಿಲ್ಲ. ಅವನ ಮುನ್ನುಡಿಗಳನ್ನು ಪ್ರಮಾಣೀಕರಿಸಿದ್ದು ಅವನ ಅದೃಷ್ಟ.

ಕೆಲವು ಅತ್ಯಂತ ಪ್ರಾಚೀನ ಅನಾವರಣಗಳು ಮತ್ತು ಊಹಾಕಲ್ಪನೆಗಳಿಂದ ಆರಂಭಿಸೋಣ. ಭೂಮಿಯು ಯಾವುದೇ ಆಧಾರವಿಲ್ಲದೆ ಸ್ವತಂತ್ರವಾಗಿ ತೇಲುತ್ತದೆ ಎಂದು ಅನಾಕ್ಸಿಮ್ಯಾಂಡರ್ ಭಾವಿಸಿದ್ದ. ತನ್ನ ಕಾಲದ ಅತ್ಯುನ್ನತ ಊಹಾಕಲ್ಪನೆಗಳನ್ನು ಸಾಕಷ್ಟು ತಿರಸ್ಕರಿಸಿದ್ದ ಅರಿಸ್ಟಾಟಲ್[೭೮], ಭೂಮಿಯು ಕೇಂದ್ರದಲ್ಲಿದ್ದು, ಚಲನೆಯಿಲ್ಲದೆ ಇದೆ, ಅದು ಒಂದು ದಿಕ್ಕಿನಲ್ಲಿಯೋ ಮತ್ತೊಂದು ದಿಕ್ಕಿನಲ್ಲಿಯೋ ಚಲಿಸುತ್ತಿದೆ ಎಂದು ಭಾವಿಸಲು ಕಾರಣಗಳಿಲ್ಲ ಎಂದು ಅನಾಕ್ಸಿಮ್ಯಾಂಡರ್‌ನ ಸಿದ್ಧಾಂತವನ್ನು ಅಲ್ಲಗಳೆದ. ಆ ಸಿದ್ಧಾಂತವು ಸರಿಯಾಗಿದ್ದರೆ, ವೃತ್ತದ ಮಧ್ಯದಲ್ಲಿರುವ ವ್ಯಕ್ತಿಯೊಬ್ಬನ ಸುತ್ತ ವೃತ್ತದ ಪರಿಧಿಯ ಬೇರೆ ಬೇರೆ ಬಿಂದುಗಳಲ್ಲಿ ಆಹಾರವನ್ನಿಟ್ಟರೆ, ಅವನು ಯಾವ ಬಿಂದುವಿನ ಆಹಾರವನ್ನು ಆರಿಸಿಕೊಳ್ಳಬೇಕು ಎಂಬುದಕ್ಕೆ ಕಾರಣ ತಿಳಿಯದೆ ಉಪವಾಸ ಸಾಯುವ ಪ್ರಸಂಗವುಂಟಾಗುತ್ತದೆ ಎಂದು ಹೇಳಿದ. ಈ ವಾದವು ಪ್ರೌಢ ತತ್ವಜ್ಞಾನದಲ್ಲಿಯೂ ಪುನರಾವರ್ತನೆಯಾಗುತ್ತದೆ, ಖಗೋಳವಿಜ್ಞಾನದ ಬಗ್ಗೆಯಲ್ಲ, ಸ್ವತಂತ್ರಇಚ್ಛಾಶಕ್ತಿಯ ಬಗ್ಗೆ. ಅದು ಮತ್ತೆ 'ಬ್ಯುರಿಡಾನ್‌ನ ಕತ್ತೆ' ರೂಪದಲ್ಲಿ ಕಾಣಿಸಿಕೊಳ್ಳುತ್ತದೆ: ಆ ಕತ್ತೆಯ ಮುಂದೆ ಒಂದೇ ದೂರದಲ್ಲಿ ಎರಡು ಹುಲ್ಲಿನ ಮೆದೆಗಳನ್ನಿಟ್ಟಾಗ ಯಾವುದನ್ನು ತಿನ್ನಬೇಕೆಂದು ತಿಳಿಯದೆ ಅದು ಉಪವಾಸದಿಂದ ಸತ್ತಿತಂತೆ.

ಭೂಮಿಯು ಗೋಲಾಕಾರವಾದದ್ದು ಎಂದು ಪೈಥಾಗೊರಾಸ್ ಮೊದಲು ಭಾವಿಸಿದನೆಂಬುದು ತುಂಬ ಸಂಭವನೀಯವಾದುದು; ಆದರೆ ಅದಕ್ಕೆ ಕಾರಣ

೭೮. 'ಡಿ ಕ್ಯಾಲೋ', ೨೯೫ಬಿ

(ನಾವು ಊಹಿಸಿಕೊಳ್ಳಬೇಕು) ಸೌಂದರ್ಯಾತ್ಮಕವೇ ಹೊರತು ವೈಜ್ಞಾನಿಕವಲ್ಲ. ಅದಕ್ಕೆ ವೈಜ್ಞಾನಿಕ ತಾರ್ಕಿಕತೆಯನ್ನು ಬೇಗನೇ ಕಂಡುಕೊಳ್ಳಲಾಯಿತು. ಚಂದ್ರನು ಬೆಳಗುವುದು ಪ್ರತಿಫಲಿತ ಬೆಳಕಿನ ಕಾರಣದಿಂದ ಎಂದು ಅನಾಕ್ಸಾಗೊರಾಸ್ ಅನಾವರಣಗೊಳಿಸಿ, ಗ್ರಹಣಗಳ ಬಗ್ಗೆ ಸರಿಯಾದ ಸಿದ್ಧಾಂತವನ್ನು ಮಂಡಿಸಿದ. ಭೂಮಿಯು ಚಪ್ಪಟೆಯಾಗಿದೆಯೆಂದೇ ಅವನು ಭಾವಿಸಿದ್ದ, ಆದರೆ ಚಂದ್ರಗ್ರಹಣಗಳಲ್ಲಿನ ಭೂಮಿಯ ನೆರಳಿನ ಆಕಾರವು ಭೂಮಿಯು ಗೋಲಾಕಾರದ್ದು ಎಂಬ ಪೈಥಾಗೊರಾಸ್‌ನ ವಾದಕ್ಕೆ ನಿಶ್ಚಿತತೆಯನ್ನು ನೀಡಿತು. ಅವರು ಇನ್ನೂ ಮುಂದುವರಿದು, ಭೂಮಿಯು ಒಂದು ಗ್ರಹವೆಂದು ಹೇಳಿದರು. ಅವರಿಗೆ – ಪೈಥಾಗೊರಾಸ್‌ನಿಂದಲೇ ಎಂದು ಹೇಳುತ್ತಾರೆ – ಬೆಳಗಿನ ನಕ್ಷತ್ರ ಮತ್ತು ಸಂಜೆಯ ನಕ್ಷತ್ರಗಳು ಒಂದೇ ಬಗೆಯವು ಎಂದೂ, ಭೂಮಿಯನ್ನೊಳಗೊಂಡಂತೆ ಎಲ್ಲ ಗ್ರಹಗಳೂ ವರ್ತುಲ ಚಲನೆಯನ್ನು ಹೊಂದಿವೆಯೆಂದೂ, ಆದರೆ ಅವು ಸುತ್ತುವುದು ಸೂರ್ಯನ ಸುತ್ತಲಲ್ಲದೆ 'ಕೇಂದ್ರ ಅಗ್ನಿ'ಯ ಸುತ್ತ ಎಂದೂ ಭಾವಿಸಿದ್ದರು. ಚಂದ್ರನು ಭೂಮಿಯ ಕಡೆ ಒಂದೇ ಮುಖಮಾಡಿರುತ್ತದೆಂದೂ, ಭೂಮಿಯು ಕೇಂದ್ರ ಅಗ್ನಿಯ ಕಡೆ ಒಂದೇ ಮುಖ ಮಾಡಿರುತ್ತದೆಂದೂ ಅವರು ಅನಾವರಣಗೊಳಿಸಿದ್ದರು. ಮೆಡಿಟರೇನಿಯನ್ ಪ್ರದೇಶಗಳು ಸದಾಕಾಲ ಕೇಂದ್ರ ಅಗ್ನಿಯಿಂದ ವಿಮುಖವಾಗಿರುತ್ತವೆ, ಹೀಗಾಗಿ ಅವು ಸದಾ ಕಾಣುವುದಿಲ್ಲ. ಈ ಕೇಂದ್ರ ಅಗ್ನಿಯನ್ನವರು 'ಸ್ಯೂಸ್ ಮನೆ' ಅಥವಾ 'ದೇವತೆಗಳ ತಾಯಿ' ಎಂದು ಕರೆಯುತ್ತಿದ್ದರು. ಕೇಂದ್ರ ಅಗ್ನಿಯ ಬೆಳಕಿನ ಪ್ರತಿಫಲನದಿಂದಲೇ ಸೂರ್ಯ ಬೆಳಗುವನೆಂದು ಭಾವಿಸಿದ್ದರು. ಭೂಮಿಯಲ್ಲದೆ, ಕೇಂದ್ರ ಅಗ್ನಿಯಿಂದ ಸಮಾನ ದೂರದಲ್ಲಿ ಪ್ರತಿ–ಭೂಮಿಯೊಂದಿದೆ. ಇದಕ್ಕೆ ಅವರು ಎರಡು ಕಾರಣಗಳನ್ನು ನೀಡಿದರು: ಒಂದು ವೈಜ್ಞಾನಿಕವಾದುದಾದರೆ, ಮತ್ತೊಂದು ತಮ್ಮ ಅಂಕಗಣಿತಾತ್ಮಕ ಅನುಭಾವಿಕತೆಯಿಂದ ಸಾಧಿತವಾದುದು. ಚಂದ್ರಗ್ರಹಣವು ಕೆಲವು ವೇಳೆ ಸಂಭವಿಸುವುದು ಸೂರ್ಯ ಮತ್ತು ಚಂದ್ರರಿಬ್ಬರೂ ಕ್ಷಿತಿಜದಿಂದ ಮೇಲೆ ಇದ್ದಾಗ ಎಂಬ ಅವರ ವೀಕ್ಷಣೆಯು ವೈಜ್ಞಾನಿಕವಾಗಿ ಸರಿಯಾದುದು. ಈ ಸಂಗತಿಯ ಕಾರಣವಾದ ವಕ್ರೀಭವನದ (ರಿಫ್ರಾಕ್ಷನ್) ಬಗ್ಗೆ ಅವರಿಗೆ ಗೊತ್ತಿರಲಿಲ್ಲ; ಹೀಗಾಗಿ ಅಂತಹ ಪರಿಸ್ಥಿತಿಗಳಲ್ಲಿ, ಗ್ರಹಣವು ಭೂಮಿಯಲ್ಲದ ಬೇರಾವುದೋ ಕಾಯದ ನೆರಳಿನಿಂದ ಸಂಭವಿಸುತ್ತದೆ ಎಂದವರು ಭಾವಿಸಿದ್ದರು. ಮತ್ತೊಂದು ಕಾರಣವೆಂದರೆ, ಸೂರ್ಯ ಮತ್ತು ಚಂದ್ರರು, ಐದು ಗ್ರಹಗಳು, ಭೂಮಿ ಮತ್ತು ಪ್ರತಿಭೂಮಿ, ಮತ್ತು ಕೇಂದ್ರ ಅಗ್ನಿ – ಹೀಗೆ ಹತ್ತು ಆಕಾಶಕಾಯಗಳಾಗುತ್ತವೆ; ಹತ್ತು ಎಂಬುದು ಪೈಥಾಗೊರಿಯನ್ನರ ಅನುಭಾವಿಕ ಸಂಖ್ಯೆ.

ಪೈಥಾಗೊರಿಯನ್ ಸಿದ್ಧಾಂತವನ್ನು ಕ್ರಿಪೂ ಐದನೆಯ ಶತಮಾನದ ಕೊನೆಯಲ್ಲಿದ್ದ ಫಿಲೋಲಾಸ್‌ಗೆ ಆರೋಪಿಸಲಾಗುತ್ತದೆ. ಅದು ಕಲ್ಪನಾತ್ಮಕವಾಗಿದ್ದು, ಭಾಗಶಃ ಅವೈಜ್ಞಾನಿಕವಾಗಿದ್ದರೂ, ಅದು ಮುಖ್ಯ: ಯಾಕೆಂದರೆ, ಕೊಪರ್ನಿಕಸ್‌ನ ಊಹಾಕಲ್ಪನೆಯನ್ನು ಪರಿಭಾವಿಸಲು ಆವಶ್ಯಕವಾದ ಊಹಾತ್ಮಕ ಪ್ರಯತ್ನದ ಬಹುಭಾಗವನ್ನು ಅದು ತೊಡಗಿಸಿಕೊಳ್ಳುತ್ತದೆ. ವಿಶ್ವದ ಕೇಂದ್ರವಲ್ಲದ, ಅದೂ ಯಾವಾಗಲೂ ಸ್ಥಿರವಾಗಿರದೆ ಆಕಾಶದಲ್ಲಿ ತೊಳಲಾಡುವ ಒಂದು ಗ್ರಹವೆಂದು ಭೂಮಿಯನ್ನು ಕಲ್ಪಿಸಿಕೊಳ್ಳುವುದು ಮಾನವಕೇಂದ್ರಿತ ಚಿಂತನೆಯಿಂದ ಹೊಂದಿದ ಅಸಾಧಾರಣ ಬಿಡುಗಡೆ ಎಂಬುದನ್ನು ತೋರಿಸುತ್ತದೆ. ವಿಶ್ವದ ಬಗೆಗಿನ ಮಾನವ ಕಲ್ಪಿಸಿಕೊಂಡ ಸಹಜ ಚಿತ್ರಕ್ಕೆ ಒಮ್ಮೆ ಧಕ್ಕೆಯುಂಟಾದ ಮೇಲೆ, ಹೆಚ್ಚು ನಿಖರವಾದ ಸಿದ್ಧಾಂತಗಳೆಡೆ ವೈಜ್ಞಾನಿಕ ವಾದಗಳ ಮೂಲಕ ಸಾಗುವುದು ಕಷ್ಟವಾಗುವುದಿಲ್ಲ.

ಇದಕ್ಕೆ ಅನೇಕ ಪರಿವೀಕ್ಷಣೆಗಳು ಕೊಡುಗೆಯನ್ನು ನೀಡಿದುವು. ಅನಾಕ್ಸಾಗೊರಾಸ್‌ಗಿಂತ ಕೊಂಚ ಈಚಿನವನಾದ ಈನಾಫೈಡೀಸ್ ಗ್ರಹಣದಲ್ಲಿನ ಬಾಗುವಿಕೆ (ಆಬ್ಲಿಕಿಟಿ) ಯನ್ನು ಅನಾವರಣಗೊಳಿಸಿದ. ಇದರಿಂದ ಸೂರ್ಯನು ಭೂಮಿಗಿಂತ ತೀರ ದೊಡ್ಡದೆಂಬುದು ಸ್ಪಷ್ಟವಾಯಿತು, ಈ ವಾಸ್ತವತೆಯು ಭೂಮಿಯು ವಿಶ್ವದ ಕೇಂದ್ರವಲ್ಲವೆಂದು ವಾದಿಸಿದವರನ್ನು ಬೆಂಬಲಿಸಿತು. ಪ್ಲೇಟೋನ ನಂತರ ಅನತಿ ಕಾಲದಲ್ಲಿಯೇ ಕೇಂದ್ರ ಅಗ್ನಿ ಮತ್ತು ಪ್ರತಿಭೂಮಿಗಳನ್ನು ಪೈಥಾಗೊರಿಯನ್‌ರು ಕೈಬಿಟ್ಟರು. ಪಾಂಟಸ್‌ನ ಹೆರಾಕ್ಲೈಡೀಸ್ (ಅವನ ಕಾಲ ಸುಮಾರು ಕ್ರಿಪೂ ೩೮೮–೩೧೫, ಅರಿಸ್ಟಾಟಲ್‌ನ ಸಮಕಾಲೀನ) ಶುಕ್ರ ಮತ್ತು ಬುಧ ಗ್ರಹಗಳು ಸೂರ್ಯನ ಸುತ್ತ ಸುತ್ತುತ್ತವೆಂಬುದನ್ನು ಅನಾವರಣಗೊಳಿಸಿದ್ದಲ್ಲದೆ, ಭೂಮಿಯು ತನ್ನ ಅಕ್ಷದ ಸುತ್ತ ಇಪ್ಪತ್ತನಾಲ್ಕು ಗಂಟೆಗಳಿಗೊಮ್ಮೆ ಒಂದು ಸುತ್ತು ಬರುವುದೆಂಬ ದೃಷ್ಟಿಕೋನವನ್ನು ತಾಳಿದ. ಇದು ಬಹು ಮುಖ್ಯವಾದ ಹೆಜ್ಜೆ, ಹಿಂದೆ ಯಾರೂ ಈ ದೃಷ್ಟಿಕೋನವನ್ನು ಹೊಂದಿರಲಿಲ್ಲ. ಹೆರಾಕ್ಲೈಡೀಸ್ ಪ್ಲೇಟೋ ಪಂಥಕ್ಕೆ ಸೇರಿದವನು, ಅವನೊಬ್ಬ ಶ್ರೇಷ್ಠ ಪುರುಷನಾಗಿದ್ದಿರಬೇಕು, ಆದರೆ ಅವನನ್ನು ನಿರೀಕ್ಷೆಯಂತೆ ಜನ ಹೆಚ್ಚಾಗಿ ಗೌರವಿಸಲಿಲ್ಲ; ಅವನನ್ನು ಡೊಳ್ಳುಹೊಟ್ಟೆಯ ಸೊಗಸುಗಾರ ಪುಟ್ಟಶಾಮಿ ಎಂದು ಬಣ್ಣಿಸುತ್ತಿದ್ದರು.

ಸ್ಯಾಮಾಸ್‌ನ ಅರಿಸ್ಟಾರ್ಕಸ್ ಕ್ರಿಪೂ ೩೧೦–೨೩೦ ರ ಅವಧಿಯಲ್ಲಿದ್ದವನು, ಹೀಗಾಗಿ ಅವನು ಆರ್ಕಿಮಿಡೀಸ್‌ಗಿಂತ ಇಪ್ಪತ್ತೈದು ವರ್ಷ ದೊಡ್ಡವನು. ಪ್ರಾಚೀನ ಖಗೋಳವಿಜ್ಞಾನಿಗಳಲ್ಲೆಲ್ಲ ಅವನು ತುಂಬ ಕುತೂಹಲದಾಯಕ ವ್ಯಕ್ತಿ. ಭೂಮಿಯನ್ನೊಳಗೊಂಡಂತೆ ಎಲ್ಲ ಗ್ರಹಗಳೂ ಸೂರ್ಯನ ಸುತ್ತ ತಿರುಗುವುದಲ್ಲದೆ, ಇಪ್ಪತ್ತುನಾಲ್ಕು ಗಂಟೆಗೊಮ್ಮೆ ತಮ್ಮ ಅಕ್ಷದ ಸುತ್ತ ಒಂದು ಸುತ್ತು ಬರುವುದೆಂಬ ಸಂಪೂರ್ಣ ಕೊಪರ್ನಿಕನ್ ಸಿದ್ಧಾಂತವನ್ನವನು ಮುನ್ನಡೆಸಿದ. ಅರಿಸ್ಟಾರ್ಕಸ್‌ನ

ಏಕೈಕ ಉಪಲಬ್ಧ ಕೃತಿ 'ಆನ್ ದ ಸೈಜ಼ಸ್ ಅಂಡ್ ಡಿಸ್ಟೆನ್ಸಸ್ ಆಫ್ ದ ಸನ್ ಅಂಡ್ ದ ಮೂನ್' ಭೂಕೇಂದ್ರಿತ ದೃಷ್ಟಿಕೋನಕ್ಕೆ ಅಂಟಿಕೊಂಡಿದೆಯೆಂಬುದು ಕೊಂಚ ನಿರಾಸೆಯಯನ್ನುಂಟುಮಾಡುತ್ತದೆ. ಈ ಪುಸ್ತಕವು ಚರ್ಚಿಸುವ ಸಮಸ್ಯೆಗಳಿಗಾಗಿ, ಅದು ಯಾವ ಸಿದ್ಧಾಂತಕ್ಕೆ ಅಂಟಿಕೊಂಡಿದೆ ಎಂಬುದು ವ್ಯತ್ಯಾಸವನ್ನೇನೂ ಉಂಟುಮಾಡಲಾರದು, ಹೀಗಾಗಿ ತನ್ನ ಲೆಕ್ಕಾಚಾರಗಳನ್ನು ಖಗೋಳವಿಜ್ಞಾನಿಗಳಲ್ಲಿ ಸಾಮಾನ್ಯವಾಗಿದ್ದ ಅಭಿಪ್ರಾಯದ ವಿರೋಧದಿಂದ ಭಾರಗೊಳಿಸುವುದು ವಿವೇಕವಲ್ಲವೆಂದು ಅವನು ಭಾವಿಸಿದ್ದಿರಬಹುದೆಂಬುದು ನಿಜ; ಆಥವಾ ಈ ಪುಸ್ತಕವನ್ನು ರಚಿಸಿದ ನಂತರ ಕೊಪರ್ನಿಕಸ್ ಆಧಾರಕಲ್ಪನೆಯನ್ನು ಅಂಗೀಕರಿಸಿರಬಹುದು. ಅರಿಸ್ಟಾರ್ಕಸ್[೭೯] ಕುರಿತು ತಮ್ಮ ಪುಸ್ತಕದಲ್ಲಿ ಸರ್ ಥಾಮಸ್ ಹೀತ್ ಅವರು ಅವನ ಪುಸ್ತಕದ ಪಠ್ಯ ಮತ್ತದರ ಭಾಷಾಂತರವನ್ನು ನೀಡುತ್ತಾರಲ್ಲದೆ, ಎರಡನೆಯ ದೃಷ್ಟಿಕೋನದ ಬಗ್ಗೆ ಒಲವನ್ನು ವ್ಯಕ್ತಪಡಿಸುತ್ತಾರೆ. ಅದೇನಾದರೂ ಇರಲಿ, ಅರಿಸ್ಟಾರ್ಕಸ್ ಕೊಪರ್ನಿಕಸ್‌ನ ದೃಷ್ಟಿಕೋನವನ್ನು ಮುನ್‌ಸೂಚಿಸಿದ್ದ ಎಂಬುದರ ನಿದರ್ಶನವು ಸಾಕಷ್ಟು ನಿರ್ಣಾಯಕವಾದುದು.

ಮೊದಲ ಮತ್ತು ಅತ್ಯುತ್ತಮ ಆಧಾರವೆಂದರೆ ಆರ್ಕಿಮಿಡೀಸ್, ನಾವೀಗ ನೋಡಿದಂತೆ ಅವನು ಅರಿಸ್ಟಾರ್ಕಸ್‌ನ ಕಿರಿಯ ಸಮಕಾಲೀನ. ಸಿರಾಕ್ಯೂಸ್‌ನ ದೊರೆ ಗೆಲಾನ್ ಬಗ್ಗೆ ಬರೆಯುತ್ತ, ಅರಿಸ್ಟಾರ್ಕಸ್ 'ಕೆಲವು ಆಧಾರಕಲ್ಪನೆಗಳನ್ನು ಹೊಂದಿರುವ ಪುಸ್ತಕವೊಂದನ್ನು ಹೊರತಂದಿದ್ದಾನೆ' ಎಂದು ಹೇಳಿ ಹೀಗೆನ್ನುತ್ತಾನೆ: ಅವನ ಆಧಾರಕಲ್ಪನೆಗಳೆಂದರೆ 'ಸ್ಥಿರ ನಕ್ಷತ್ರಗಳೂ ಸೂರ್ಯನೂ ಚಲನೆಯಿಲ್ಲದವು, ಭೂಮಿಯು ಸೂರ್ಯನ ಸುತ್ತ ಒಂದು ವೃತ್ತಪರಿಧಿಯಲ್ಲಿ ಸುತ್ತುತ್ತದೆ, ಸೂರ್ಯ ಕಕ್ಷೆಯ ನಡುವೆ ಇರುತ್ತಾನೆ ಎಂಬಿವು.' ಪ್ಲೂಟಾರ್ಕ್‌ನಲ್ಲಿನ ಒಂದು ಭಾಗದಲ್ಲಿ ಕ್ಲಿಯಾನ್ಥೀಸ್, 'ಗ್ರೀಕರ ಕರ್ತವ್ಯವೆಂದರೆ ಅವನ ಮೇಲೆ ಧರ್ಮಬಾಹಿರತೆಯ ಕಾನೂನು ಕ್ರಮಕೈಗೊಳ್ಳುವುದು; ಯಾಕೆಂದರೆ ಅವನು ವಿಶ್ವದ ಅಗ್ಗಿಷ್ಟಿಕೆ (ಅಂದರೆ ಭೂಮಿ)ಗೆ ಚಲನೆಯಿದೆ ಎನ್ನುತ್ತಾನೆ, ಇದು ಸ್ವರ್ಗವು ಸ್ಥಿರವಾಗಿದೆ, ಭೂಮಿಯು ಪ್ರವಣ ಕಕ್ಷೆಯಲ್ಲಿ ಸುತ್ತುತ್ತದೆ, ಹಾಗೆ ಸುತ್ತುವಾಗ ತನ್ನ ಅಕ್ಷದ ಸುತ್ತ ಸುತ್ತುತ್ತದೆ ಎಂಬ ತನ್ನ ಭಾವನೆಯ ಸಂಗತಿಯನ್ನು ರಕ್ಷಿಸುವ ಪ್ರಯತ್ನ' ಎನ್ನುತ್ತಾನೆ. ಕ್ಲಿಯಾನ್ಥೀಸ್ ಅರಿಸ್ಟಾರ್ಕಸ್‌ನ ಸಮಕಾಲೀನ, ಅವನು ಸತ್ತದ್ದು ಕ್ರಿಪೂ ೨೩೨ ರ ಸುಮಾರಿನಲ್ಲಿ. ಮತ್ತೊಂದು ಭಾಗದಲ್ಲಿ ಪ್ಲೂಟಾರ್ಕ್, ಈ ದೃಷ್ಟಿಕೋನವನ್ನು ಅರಿಸ್ಟಾರ್ಕಸ್ ಒಂದು ಆಧಾರಕಲ್ಪನೆಯಾಗಿ ಮಾತ್ರ ಮಂಡಿಸುತ್ತಾನೆ, ಆದರೆ ಅವನ ನಂತರ ಬಂದ

---

೭೯. 'ಅರಿಸ್ಟಾರ್ಕಸ್ ಆಫ್ ಸ್ಯಾಮಾಸ್, ದ ಏನ್ಷಿಯಂಟ್ ಕೊಪರ್ನಿಕಸ್', ಸರ್ ಥಾಮಸ್ ಹೀತ್, ಆಕ್ಸ್‌ಫರ್ಡ್, ೧೯೧೩. ಮುಂದೆ ಹೇಳಿರುವುದು ಈ ಪುಸ್ತಕವನ್ನಾಧರಿಸಿದ್ದು.

ಸೆಲ್ಯೂಕಸ್ ಅದನ್ನು ಖಚಿತ ಅಭಿಪ್ರಾಯ ಎನ್ನುತ್ತಾನೆ (ಸೆಲ್ಯೂಕಸ್ ಪ್ರವರ್ಧಮಾನನಾಗಿದ್ದುದು ಕ್ರಿಪೂ ೧೫೦ ರಲ್ಲಿ). ಎಇಟಿಯಸ್ ಮತ್ತು ಸೆಕ್ಸ್‌ಟಸ್ ಎಂಪಿರಿಕಸ್ ಅವರುಗಳು ಕೂಡ ಅರಿಸ್ಟಾರ್ಕಸ್ ಸೂರ್ಯಕೇಂದ್ರಿತ (ಹೀಲಿಯೋಸೆಂಟ್ರಿಕ್) ಆಧಾರಕಲ್ಪನೆಯನ್ನು ಮುಂದಿರಿಸಿದನಾದರೂ, ಅದನ್ನವನು ಕೇವಲ ಒಂದು ಆಧಾರಕಲ್ಪನೆಯಂತೆ ಮಾತ್ರ ಎಂದು ಹೇಳಲಿಲ್ಲ ಎಂದು ಒತ್ತಿ ನುಡಿಯುತ್ತಾರೆ. ಅವನು ಹಾಗೆ ಮಾಡಿದ್ದರೂ, ಎರಡು ಸಾವಿರ ವರ್ಷಗಳ ಬಳಿಕ ಬಂದ ಗೆಲಿಲಿಯೊನಂತೆ ಅವನಿಗೂ ತಾನು ಮತಧಾರ್ಮಿಕ ಪೂರ್ವಕಲ್ಪನೆಗಳನ್ನು ಆಘಾತಗೊಳಿಸುವ ಭಯವಿದ್ದು ಹಾಗೆಮಾಡಿದ್ದಿರಬಹುದಾದುದು ಅಸಂಭವವಲ್ಲ. ಇಂತಹ ಭಯಕ್ಕೆ ಕ್ಲಿಯಾನ್ಥೀಸ್‌ನಂತಹವರ ಮನೋಭಾವ (ಮೇಲೆ ಉಕ್ತವಾದ) ಕಾರಣವಿರಬಹುದು.

ಕೊಪರ್ನಿಕಸ್‌ನ ಆಧಾರಕಲ್ಪನೆಯನ್ನು ಅಂಟಾರ್ಕಸ್ ಖಚಿತವಾಗಿಯೋ ತಾತ್ಕಾಲಿಕವಾಗಿಯೋ, ಮುಂದಿರಿಸಿದ ಬಳಿಕ ಸೆಲ್ಯೂಕಸ್ ಅದನ್ನು ಖಚಿತವಾಗಿ ಅಳವಡಿಸಿಕೊಂಡ, ಆದರೆ ಬೇರಾವ ಪ್ರಾಚೀನ ಖಗೋಳವಿಜ್ಞಾನಿಯೂ ಹಾಗೆ ಮಾಡಲಿಲ್ಲ. ಸಾಮಾನ್ಯವಾಗಿ ಇದನ್ನು ತಿರಸ್ಕರಿಸಿದ್ದು ಮುಖ್ಯವಾಗಿ (ಕ್ರಿಪೂ ೧೬೧–೧೨೬ ರ ಅವಧಿಯಲ್ಲಿ ಪ್ರವರ್ಧಮಾನನಾಗಿದ್ದ) ಹಿಪಾರ್ಕಸ್‌ನ ಕಾರಣದಿಂದಾಗಿ. ಅವನನ್ನು ಹೀತ್ ಅವರು, 'ಪ್ರಾಚೀನ ಕಾಲದ ಅತ್ಯಂತ ಶ್ರೇಷ್ಠ ಖಗೋಳವಿಜ್ಞಾನಿ'[೮೦] ಎನ್ನುತ್ತಾರೆ. ತ್ರಿಕೋನಮಿತಿ (ಟ್ರಿಗನಾಮೆಟ್ರಿ) ಯ ಬಗ್ಗೆ ವ್ಯವಸ್ಥಿತವಾಗಿ ಮೊದಲು ಬರೆದವನು ಅವನೇ. ಅವನು ವಿಷುವತ್ಸಂಕ್ರಾಂತಿಗಳ (ಈಕ್ವಿನಾಕ್ಸ್) ಅಕ್ಷಭ್ರಮಣ (ಪ್ರಿಸೆಷನ್) ವನ್ನು ಅನಾವರಣಗೊಳಿಸಿದ; ಚಾಂದ್ರಮಾನ ತಿಂಗಳ ದೀರ್ಘತೆಯ ಬಗೆಗಿನ ಅವನ ಅಂದಾಜು ಒಂದು ಸೆಕೆಂಡ್‌ಗಿಂತ ಕಡಿಮೆ ಮಾತ್ರ ವ್ಯತ್ಯಾಸವುಳ್ಳದ್ದು; ಅವನು ಎಂಟುನೂರೈವತ್ತು ಸ್ಥಿರ ನಕ್ಷತ್ರಗಳ ಪಟ್ಟಿ ಮಾಡಿ, ಅವುಗಳ ಅಕ್ಷಾಂಶ (ಲ್ಯಾಟಿಟ್ಯೂಡ್) ಮತ್ತು ರೇಖಾಂಶ (ಲಾಂಜಿಟ್ಯೂಡ್)ಗಳನ್ನು ನೀಡಿದ. ಅರಿಸ್ಟಾರ್ಕಸ್‌ನ ಸೂರ್ಯಕೇಂದ್ರಿತ ಆಧಾರಕಲ್ಪನೆಯ ಬದಲಾಗಿ ಅವನು, ಕ್ರಿಪೂ ೨೨೦ ರಲ್ಲಿ ಪ್ರವರ್ಧಿಸಿದ್ದ ಅಪಾಲೋನಿಯಸ್ ಆವಿಷ್ಕರಿಸಿದ್ದ ಅಧಿವರ್ತುಲ (ಎಪಿಸೈಕಲ್) ಸಿದ್ಧಾಂತವನ್ನು ಅಳವಡಿಸಿಕೊಂಡು ಹೆಚ್ಚು ನಿಖರಗೊಳಿಸಿದ. ಮುಂದೆ ಈ ಸಿದ್ಧಾಂತವು ಊರ್ಜಿತಗೊಂಡು ಕ್ರಿಶ ಎರಡನೆಯ ಶತಮಾನದಲ್ಲಿ ಕಾರ್ಯಶೀಲನಾಗಿದ್ದ ಟಾಲೆಮಿಯ ಹೆಸರನ್ನು ಹೊತ್ತು ಟಾಲೆಮೀಯ ವ್ಯವಸ್ಥೆ ಎನಿಸಿಕೊಂಡಿತು.

---

೮೦. 'ಗ್ರೀಕ್ ಮ್ಯಾಥಮಾಟಿಕ್ಸ್'. ಸಂಪುಟ ೨, ಪು. ೨೫೩.

ಬಹುತೇಕ ಮರೆವಿಗೊಳಗಾಗಿದ್ದ ಅರಿಸ್ಟಾರ್ಕಸ್‌ನ ಆಧಾರಕಲ್ಪನೆಯ ಬಗ್ಗೆ ಕೊಪರ್ನಿಕಸ್ ಹೆಚ್ಚಲ್ಲದಿದ್ದರೂ ಸ್ವಲ್ಪಮಟ್ಟಿಗೆ ತಿಳಿದುಕೊಂಡಿದ್ದ; ತನ್ನ ನವೀನ ಕಲ್ಪನೆಗೆ ಪ್ರಾಚೀನ ಆಧಾರ ದೊರೆತು ಪ್ರೋತ್ಸಾಹಿತನಾಗಿದ್ದ. ಉಳಿದಂತೆ, ಆ ಮುಂದಿನ ಖಗೋಳವಿಜ್ಞಾನದ ಮೇಲೆ ಈ ಆಧಾರಕಲ್ಪನೆ ಮಾಡಿದ ಪರಿಣಾಮವು ಹೆಚ್ಚು ಕಡಿಮೆ ಇಲ್ಲವೇ ಇಲ್ಲ.

ಭೂಮಿ, ಚಂದ್ರ ಮತ್ತು ಸೂರ್ಯರ ಗಾತ್ರವನ್ನು ಹಾಗೂ ಚಂದ್ರ-ಸೂರ್ಯರಿರುವ ದೂರವನ್ನು ಅಂದಾಜಿಸುವಾಗ ಪ್ರಾಚೀನ ಖಗೋಳವಿಜ್ಞಾನಿಗಳು ಅನುಸರಿಸಿದ ವಿಧಾನಗಳು ಸೈದ್ಧಾಂತಿಕವಾಗಿ ಸರಿಯಾದವಾದರೂ, ನಿಖರತೆಯ ಸಲಕರಣೆಗಳಿಲ್ಲದೆ ಕುಂಠಿತಗೊಂಡುವು. ಈ ತೊಂದರೆಗಳಿದ್ದರೂ ಅನೇಕ ಫಲಿತಾಂಶಗಳು ಅಶ್ಚರ್ಯಕರವಾಗಿ ಸಮರ್ಪಕವಾಗಿದ್ದವು. ಎರಾಟೋಸ್ತೆನೀಸ್ ಭೂಮಿಯ ವ್ಯಾಸವು ೭೮೫೦ ಮೈಲಿಗಳು ಎಂದು ಅಂದಾಜಿಸಿದ, ಇದು ನಿಖರತೆಗಿಂತ ಕೇವಲ ಐವತ್ತು ಮೈಲಿಗಳಷ್ಟು ಮಾತ್ರ ಕಡಿಮೆ. ಚಂದ್ರನ ಸರಾಸರಿ ದೂರವು ಭೂಮಿಯ ವ್ಯಾಸದ ಇಪ್ಪತ್ತೊಂದೂತ್ತೂವರೆಯಷ್ಟು ಎಂದು ಟಾಲೆಮಿ ಅಂದಾಜು ಮಾಡಿದ, ನಿಖರವಾದ ಸಂಖ್ಯೆಯೆಂದರೆ ಸುಮಾರು ೩೦.೨. ಅವರಾರಿಗೂ ಸೂರ್ಯನ ದೂರದ ಹತ್ತಿರ ಹೋಗಲೂ ಸಾಧ್ಯವಾಗಲಿಲ್ಲ, ಅವೆಲ್ಲ ತೀರ ಅಪಅಂದಾಜುಗಳು. ಭೂಮಿಯ ವ್ಯಾಸದ ಹಿನ್ನೆಲೆಯ ಅವರ ಅಂದಾಜುಗಳು ಎಂದರೆ:

ಅರಿಸ್ಟಾರ್ಕಸ್, ೧೮೦:

ಹಿಪಾರ್ಕಸ್, ೧೨೪೫;

ಪೊಸೈಡೋನಿಯಸ್, ೬೫೪೫.

ನಿಖರವಾದ ಸಂಖ್ಯೆಯೆಂದರೆ ೧೧೭೨೬. ಈ ಅಂದಾಜುಗಳು ಬರಬರುತ್ತ ಉತ್ತಮಗೊಂಡುವು (ಆದರೆ ಟಾಲೆಮಿಯದು ಹಿನ್ನಡೆಯನ್ನು ತೋರಿಸಿತು); ಮತ್ತು ಪೊಸೈಡೋನಿಯಸ್[೮೧]ನದು ಸರಿಯಾದ ಸಂಖ್ಯೆಯ ಸುಮಾರು ಅರ್ಧದಷ್ಟು. ಒಟ್ಟಾರೆ, ಸೌರವ್ಯೂಹದ ಬಗೆಗಿನ ಅವರ ಚಿತ್ರವು ವಾಸ್ತವಕ್ಕಿಂತ ತೀರ ದೂರವಾಗಿತ್ತು.

ಗ್ರೀಕ್ ಖಗೋಳವಿಜ್ಞಾನವು ಜ್ಯಾಮಿತೀಯವಾಗಿತ್ತೇ ಹೊರತು ಚುರುಕಾಗಿರಲಿಲ್ಲ. ಪ್ರಾಚೀನರು ಆಕಾಶಕಾಯಗಳ ಚಲನೆಗಳು ಸಮವೇಗದವೂ ವರ್ತುಲಾಕಾರದವೂ ಅಥವಾ ವರ್ತುಲಕಾರ ಸಂಯೋಜಿತವೂ ಆದುವೆಂದು ಭಾವಿಸಿದ್ದರು. ಅವರಿಗೆ ಬಲದ (ಫೋರ್ಸ್) ಪರಿಕಲ್ಪನೆ ಇರಲಿಲ್ಲ. ಒಟ್ಟಿಗೇ ಚಲಿಸುವ ಗೋಲಾಕಾರಗಳಿದ್ದವು,

---

೮೧. ಪೊಸೈಡೋನಿಯಸ್ ಸಿಸೆರೋನ ಉಪಾಧ್ಯಾಯ. ಅವನಿದ್ದುದು ಕ್ರಿಪೂ ಎರಡನೆಯ ಶತಮಾನದ ಉತ್ತರಾರ್ಧದಲ್ಲಿ.

ಅದರ ಮೇಲೆ ವಿವಿಧ ಆಕಾಶಕಾಯಗಳು ಸ್ಥಿರವಾಗಿದ್ದವು. ನ್ಯೂಟನ್ ಮತ್ತು ಗುರುತ್ವಾಕರ್ಷಣೆಗಳಿಂದ, ಕಡಿಮೆ ಜ್ಯಾಮಿತೀಯವಾದ ಹೊಸ ದೃಷ್ಟಿಕೋನವು ಮೂಡಿತು. ಆದರೆ ಐನ್‌ಸ್ಟೈನ್‌ರ ಸಾಮಾನ್ಯ ಸಾಪೇಕ್ಷ ಸಿದ್ಧಾಂತದಲ್ಲಿ ನ್ಯೂಟನ್ ಅರ್ಥದ ಬಲದ ಪರಿಕಲ್ಪನೆಯು ಹೊರದೂಡಲ್ಪಟ್ಟು, ಮತ್ತೆ ಜ್ಯಾಮಿತೀಯ ದೃಷ್ಟಿಕೋನಕ್ಕೆ ಮರಳಿರುವುದು ಕುತೂಹಲಕಾರಿಯಾಗಿದೆ.

ಖಗೋಳವಿಜ್ಞಾನಿಗಳ ಸಮಸ್ಯೆಯೆಂದರೆ ಇದು: ಖಗೋಳದಲ್ಲಿನ ಆಕಾಶಕಾಯಗಳ ಸ್ಪಷ್ಟ ಚಲನೆಗಳ ಹಿನ್ನೆಲೆಯಲ್ಲಿ, ಆಧಾರಕಲ್ಪನೆಗಳಿಂದ ಮೂರನೆಯ ನಿರ್ದೇಶಾಂಕ (ಕೋಆರ್ಡಿನೇಟ್) ವಾದ ಆಳವನ್ನು ಸೇರಿಸಿ ವರ್ಣನೆಯನ್ನು ಆದಷ್ಟೂ ಸರಳಗೊಳಿಸುವ ಪರಿ. ಕೊಪರ್ನಿಕಸ್ ಆಧಾರಕಲ್ಪನೆಯ ಅರ್ಹತೆಯು ಸತ್ಯವಲ್ಲ, ಆದರೆ ಸರಳತೆ. ಚಲನೆಯ ಸಾಪೇಕ್ಷತೆಯ ದೃಷ್ಟಿಯಿಂದ, ಅದು ಯಾವುದೇ ಸತ್ಯದ ಪ್ರಶ್ನೆಯನ್ನು ಒಳಗೊಳ್ಳುವುದಿಲ್ಲ. ಗ್ರೀಕರು 'ಪ್ರತ್ಯಕ್ಷ ವಿದ್ಯಮಾನಗಳ ಉಳಿವಿ'ಗಾಗಿನ ಆಧಾರಕಲ್ಪನೆಗಳ ಹುಡುಕಾಟದ ಪರಿಣಾಮದಲ್ಲಿ, ಪೂರ್ತಿ ಅಪೇಕ್ಷೆಯಿಂದಲ್ಲವಾದರೂ, ಸಮಸ್ಯೆಯನ್ನು ವೈಜ್ಞಾನಿಕವಾಗಿ ಸಮಂಜಸವಾದ ಮಾರ್ಗದಲ್ಲಿ ಎದುರಿಸಿದರು. ಅವರ ಹಿಂದಿನವರು ಮತ್ತು ಕೊಪರ್ನಿಕಸ್‌ನವರೆಗೆ ಮುಂದಿನವರೊಂದಿಗಿನ ಸಾದೃಶ್ಯವು ಅವರ ನಿಜವಾದ ಪ್ರತಿಭಾಸಂಪತ್ತಿನ ಬಗ್ಗೆ ಮನದಟ್ಟು ಉಂಟುಮಾಡುತ್ತದೆ.

ಕ್ರಿಪೂ ಮೂರನೆಯ ಶತಮಾನದಲ್ಲಿದ್ದ ಆರ್ಕಿಮಿಡೀಸ್ ಮತ್ತು ಅಪಾಲೋನಿಯಸ್ ಎಂಬ ಇಬ್ಬರು ಮಹನೀಯರನ್ನು ಸೇರಿಸಿದರೆ ಮೊದಲ ದರ್ಜೆಯ ಗ್ರೀಕ್ ಗಣಿತಜ್ಞರ ಪಟ್ಟಿಯು ಪೂರ್ಣಗೊಳ್ಳುತ್ತದೆ. ಆರ್ಕಿಮಿಡೀಸ್ ಸಿರಾಕ್ಯೂಸ್‌ನ ದೊರೆಯ ಸ್ನೇಹಿತ, ಪ್ರಾಯಶಃ ಸಂಬಂಧಿ; ಆ ನಗರವನ್ನು ಕ್ರಿಪೂ ೨೧೨ ರಲ್ಲಿ ರೋಮನ್ನರು ವಶಪಡಿಸಿಕೊಂಡಾಗ ಅವನು ಸತ್ತ. ಅಪಾಲೋನಿಯಸ್ ತನ್ನ ತಾರುಣ್ಯದಿಂದಲೂ ಅಲೆಕ್ಸಾಂಡ್ರಿಯದಲ್ಲಿ ವಾಸಿಸುತ್ತಿದ್ದ. ಆರ್ಕಿಮಿಡೀಸ್ ಕೇವಲ ಗಣಿತಜ್ಞನಲ್ಲ, ಜೊತೆಗೆ ಭೌತವಿಜ್ಞಾನಿಯಾಗಿದ್ದು ದ್ರವಸ್ಥಿತಿವಿಜ್ಞಾನದ (ಹೈಡ್ರೋಸ್ಟಾಟಿಕ್ಸ್) ಅಭ್ಯಾಸಿಯಾಗಿದ್ದ. ಅಪಾಲೋನಿಯಸ್‌ನನ್ನು ಗುರುತಿಸುವುದು ಮುಖ್ಯವಾಗಿ ಶಂಕುಚ್ಛೇದ (ಕಾನಿಕ್ ಸೆಕ್ಷನ್)ದ ಅಧ್ಯಯನಕ್ಕಾಗಿ. ಅವರ ಬಗ್ಗೆ ನಾನು ಹೆಚ್ಚಿಗೇನೂ ಹೇಳಲಾರೆ, ಯಾಕೆಂದರೆ ತತ್ವಜ್ಞಾನದ ಮೇಲೆ ಪ್ರಭಾವ ಬೀರಲು ಅವರು ಬಂದುದು ತೀರ ತಡವಾಗಿ.

ಈ ಇಬ್ಬರು ಮಹನೀಯರಾದ ಬಳಿಕ ಅಲೆಕ್ಸಾಂಡ್ರಿಯದಲ್ಲಿ ಗಮನಾರ್ಹ ಕಾರ್ಯವು ಮುಂದುವರಿದರೂ, ಮಹಾಯುಗವು ಮುಕ್ತಾಯಗೊಂಡಿತು. ರೋಮನ್ ಮೇಲುಗೈಯಲ್ಲಿ, ಗ್ರೀಕರು ರಾಜಕೀಯ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ್ದ ತಮ್ಮ ಆತ್ಮವಿಶ್ವಾಸವನ್ನು ಕಳೆದುಕೊಂಡರು; ಅದನ್ನು ಕಳೆದುಕೊಂಡ ಬಳಿಕ ತಮ್ಮ ಪೂರ್ವಿಕರ

ಬಗೆಗಿನ ಗೌರವವೂ ಕುಂಠಿತಗೊಂಡಿತು. ಆರ್ಕಿಮಿಡೀಸ್‌ನನ್ನು ಕೊಂದ ರೋಮನ್ ಸೈನಿಕನು ಚಿಂತನಾ ಸ್ವಂತಿಕೆಯ ಸಾವಿನ ಸಂಕೇತ, ಇದು ಇಡೀ ಗ್ರೀಕ್ ಜಗತ್ತಿನ ಮೇಲೆ ರೋಮ್ ಮಾಡಿದ ದಾಂಧಲೆ.

ಭಾಗ ೩

ಅರಿಸ್ಟಾಟಲ್ ನಂತರದ ಪ್ರಾಚೀನ ತತ್ವಜ್ಞಾನ

೨೫
ಹೆಲೆನಿಸ್ಟಿಕ್ ಜಗತ್ತು

ಗ್ರೀಕ್ ಭಾಷಿಕ ಜಗತ್ತಿನ ಇತಿಹಾಸದ ಪ್ರಾಚೀನತೆಯನ್ನು ಮೂರು ಅವಧಿಗಳಾಗಿ ವಿಭಾಗಿಸಬಹುದು: ಫಿಲಿಪ್ ಮತ್ತು ಅಲೆಕ್ಸಾಂಡರ್‌ಗಳು ಕೊನೆಗೊಳಿಸಿದ ನಗರ ಪ್ರಭುತ್ವಗಳ ಕಾಲ; ಕ್ಲಿಯೋಪಾತ್ರಳ ಸಾವಿನ ನಂತರ ಈಜಿಪ್ಟ್ ಅನ್ನು ರೋಮ್ ವಶಪಡಿಸಿಕೊಂಡಾಗ ಉಳಿಕೆಗಳೆಲ್ಲ ನಂದಿಹೋದ ಮ್ಯಾಸಿಡೋನಿಯ ಪ್ರಾಬಲ್ಯದ ಕಾಲ; ಮತ್ತು ಕೊನೆಯದಾಗಿ, ರೋಮನ್ ಚಕ್ರಾಧಿಪತ್ಯ. ಈ ಮೂರು ಅವಧಿಗಳಲ್ಲಿ, ಮೊದಲನೆಯದರ ಮುಖ್ಯ ಲಕ್ಷಣ ಸ್ವಾತಂತ್ರ್ಯ ಮತ್ತು ಅವ್ಯವಸ್ಥೆಗಳಾದರೆ, ಎರಡನೆಯದರದು ಪರಾಧೀನತೆ ಮತ್ತು ಅವ್ಯವಸ್ಥೆ, ಮೂರನೆಯದರದು ಪರಾಧೀನತೆ ಮತ್ತು ಸುವ್ಯವಸ್ಥೆ.

ಈ ಅವಧಿಗಳಲ್ಲಿ ಎರಡನೆಯದನ್ನು ಹೆಲೆನಿಸ್ಟಿಕ್ ಯುಗವೆಂದು ಕರೆಯುತ್ತಾರೆ. ವಿಜ್ಞಾನ ಮತ್ತು ಗಣಿತ ಕ್ಷೇತ್ರಗಳಲ್ಲಿ, ಈ ಕಾಲದಲ್ಲಾದ ಕಾರ್ಯವು ಗ್ರೀಕ್‌ರ ಸಾಧನೆಗಳಲ್ಲಿಯೇ ಅತ್ಯುತ್ತಮವಾದದ್ದು. ತತ್ವಜ್ಞಾನದಲ್ಲಿ ಸುಖೈಕವಾದಿಗಳು ಮತ್ತು ಸಂಯಮವಾದಿ ಪಂಥಗಳ ಹಾಗೂ ನಿರ್ದಿಷ್ಟವಾಗಿ ರೂಪುಗೊಂಡ ಸಂದೇಹವಾದ (ಸ್ಕೆಪ್ಟಿಸಿಸಂ) ಸಿದ್ಧಾಂತದ ಸ್ಥಾಪನೆಗಳು ಸೇರುತ್ತವೆ; ಹೀಗಾಗಿ ಅದು ತತ್ವಜ್ಞಾನಾತ್ಮಕವಾಗಿ, ಪ್ಲೇಟೋ ಮತ್ತು ಅರಿಸ್ಟಾಟಲ್‌ರ ಕಾಲಕ್ಕಿಂತ ಕಡಿಮೆಯದಾದರೂ, ಇನ್ನೂ ಮುಖ್ಯವಾದುದೇ. ಕ್ರಿಪೂ ಮೂರನೆಯ ಶತಮಾನಾನಂತರ, ಗ್ರೀಕ್ ತತ್ವಜ್ಞಾನದಲ್ಲಿ ಮೂರನೆಯ ಶತಮಾನದ ನವಪ್ಲೇಟೋವಾದಿಗಳವರೆಗಿನ ಯಾವುದೂ ವಾಸ್ತವವಾಗಿ ಹೊಸತಾದುದಲ್ಲ. ಆದರೆ ಈ ಮಧ್ಯೆ ರೋಮನ್ ಜಗತ್ತು ಕ್ರೈಸ್ತಮತಧರ್ಮದ ಗೆಲವಿಗಾಗಿ ಸಿದ್ಧಗೊಳ್ಳುತ್ತಿತ್ತು.

ಅಲೆಕ್ಸಾಂಡರ್‌ನ ಕಿರು ಇರುವಿಕೆಯು ಗ್ರೀಕ್ ಜಗತ್ತನ್ನು ಇದ್ದಕ್ಕಿದ್ದಂತೆಯೇ ಮಾರ್ಪಡಿಸಿತು. ಕ್ರಿಪೂ ೩೩೪–೩೨೪ ರ ನಡುವಣ ಹತ್ತು ವರ್ಷಗಳಲ್ಲಿ ಅವನು ಏಷಯಾ ಮೈನರ್, ಸಿರಿಯ, ಈಜಿಪ್ಟ್, ಬ್ಯಾಬಿಲೋನಿಯ, ಪರ್ಷಿಯ, ಸಮರ್ಕಂಡ್, ಬ್ಯಾಕ್ಟ್ರಿಯ ಮತ್ತು ಪಂಜಾಬ್‌ಗಳನ್ನು ಗೆದ್ದ. ಜಗತ್ತು ಕಂಡಿದ್ದ ಅತ್ಯಂತ ದೊಡ್ಡದಾದ

ಪರ್ಷಿಯನ್ ಚಕ್ರಾಧಿಪತ್ಯವು ಮೂರು ಯುದ್ಧಗಳಿಂದಾಗಿ ನಾಶಗೊಂಡಿತು. ಪ್ರಾಚೀನ ಬ್ಯಾಬಿಲೋನಿಯನ್ನರ ಜ್ಞಾನವು, ಅವರ ಹಳೆಯ ಮೂಢಶ್ರದ್ಧೆಗಳೊಂದಿಗೆ, ಗ್ರೀಕ್‌ರ ಕುತೂಹಲದಿಂದಾಗಿ ಜನಜನಿತವಾಯಿತು; ಹಾಗೆಯೇ ಝರೋಸ್ಟ್ರಿಯನ್ ದ್ವೈತವು ಮತ್ತು (ಕಡಿಮೆ ಪ್ರಮಾಣದಲ್ಲಿ) ಬೌದ್ಧಮತವು ವ್ಯಾಪಕಗೊಳ್ಳುತ್ತಿದ್ದ ಇಂಡಿಯದ ಮತಧರ್ಮವು ಕೂಡ. ಅಲೆಕ್ಸಾಂಡರ್ ನುಗ್ಗಿದ ಕಡೆಗಳಲ್ಲೆಲ್ಲ, ಆಫ್‌ಘನಿಸ್ತಾನದ ಪರ್ವತಪಂಕ್ತಿಗಳಲ್ಲಿ, ಜಕ್ಸಾರ್ಟಿಸ್‌ನ ದಡಗಳಲ್ಲಿ, ಸಿಂಧೂ ನದಿಯ ಉಪನದಿಗಳ ತಟಗಳಲ್ಲಿ ಗ್ರೀಕ್ ನಗರಗಳನ್ನು ಸ್ಥಾಪಿಸಿದ; ಅವುಗಳಲ್ಲಿ ಸ್ವಲ್ಪಮಟ್ಟಿಗಿನ ಸ್ಥಳೀಯ ಆಡಳಿತದೊಡನೆ ಗ್ರೀಕ್ ಸಂಪ್ರದಾಯಗಳನ್ನು ನೆಲೆಗೊಳಿಸುವ ಪ್ರಯತ್ನಮಾಡಿದ. ಅವನ ಸೈನ್ಯದಲ್ಲಿ ಪ್ರಮುಖವಾಗಿ ಮ್ಯಾಸಿಡೋನಿಯನ್ನರಿದ್ದರೂ, ಬಹುತೇಕ ಯೂರೋಪಿಯನ್ ಗ್ರೀಕರು ಅವನ ಇರಾದೆಗೆ ವಿಧೇಯವಾಗಿದ್ದರೂ, ಮೊದಮೊದಲು ತಾನು ಹೆಲೆನಿಸಂನ ಪ್ರಚಾರಕನೆಂಬಂತೆ ನಡೆದುಕೊಂಡ. ಆದರೆ, ಕ್ರಮೇಣ, ಅವನ ದಾಳಿಗಳು ಹೆಚ್ಚಾದಷ್ಟೂ ಅವನು ಗ್ರೀಕರು ಮತ್ತು ಬಾರ್ಬೇನಿಯನ್ನರ ನಡುವೆ ಸ್ನೇಹಪರ ಹೊಂದಾಣಿಕೆಯನ್ನು ಸ್ಥಾಪಿಸುವ ಧೋರಣೆಯನ್ನಳವಡಿಸಿಕೊಂಡ.

ಇದಕ್ಕಾಗಿ ಅವನಿಗೆ ಅನೇಕ ಪ್ರೇರಣೆಗಳಿದ್ದವು. ಒಂದೆಡೆ, ತುಂಬ ದೊಡ್ಡದಾಗಿರದ ಅವನ ಸೈನ್ಯಗಳು ಅಷ್ಟು ವಿಶಾಲ ಚಕ್ರಾಧಿಪತ್ಯವನ್ನು ಬಲಪ್ರಯೋಗದಿಂದ ಶಾಶ್ವತವಾಗಿ ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗದ್ದು, ಆದರೆ ಕಾಲಕ್ರಮೇಣ ತಾನು ಗೆದ್ದ ಜನರೊಂದಿಗೆ ಹೊಂದಿಕೊಳ್ಳುವ ಆವಶ್ಯಕತೆ. ಮತ್ತೊಂದೆಡೆ, ಪೌರ್ವಾತ್ಯ ದೇಶಗಳು ದೈವಾಂಶಸಂಭೂತನಾದ ರಾಜನಲ್ಲದೆ ಬೇರೆ ಬಗೆಯ ಆಳ್ವಿಕೆಗಳನ್ನು ಹೊಂದುವ ಪರಿಪಾಟವಿಲ್ಲದೆ, ತಾನು ಆ ಪಾತ್ರವವನ್ನು ನಿರ್ವಹಿಸಲು ಸೂಕ್ತನಾಗಿದ್ದದ್ದು. ತಾನು ದೈವಾಂಶಸಂಭೂತನೇ ಎಂಬುದನ್ನವನು ನಂಬಿದ್ದನೋ ಇಲ್ಲವೋ, ಧೋರಣೆಗಳ ಪ್ರೇರಣೆಯಿಂದಾಗಿ ಅಂತಹ ದೈವಗುಣಗಳನ್ನು ಆರೋಪಿಸಿಕೊಳ್ಳುತ್ತಿದ್ದನೇನೋ ಎಂಬುದು ಮನಃಶಾಸ್ತ್ರಜ್ಞನ ಸಮಸ್ಯೆ, ಯಾಕೆಂದರೆ ಆ ಬಗ್ಗೆ ಯಾವ ಐತಿಹಾಸಿಕ ಪುರಾವೆಯೂ ಇಲ್ಲ. ಏನೇ ಆಗಲಿ, ಫೇರೋಗಳ ಉತ್ತರಾಧಿಕಾರಿಯಾಗಿ, ಹಾಗೂ ಪರ್ಷಿಯದಲ್ಲಿ ಮಹಾ ದೊರೆ ಎಂದು ಪಡೆಯುತ್ತಿದ್ದ ಹೊಗಳಿಕೆಯನ್ನವನು ಆಸ್ವಾದಿಸುತ್ತಿದ್ದನೆಂಬುದು ಸ್ಪಷ್ಟ. ಅವನ ಮ್ಯಾಸಿಡೋನಿಯನ್ ಕಪ್ತಾನರು – ಅವರನ್ನು 'ಕಂಪಾನಿಯನ್ಸ್' ಎನ್ನುತ್ತಿದ್ದರು – ತಮ್ಮ ಸಾಂವಿಧಾನಿಕ ಸಾರ್ವಭೌಮನಿಗೆ ಪಶ್ಚಿಮದ ನೋಬಲ್‌ಗಳು ಹೊಂದಿದ್ದ ಮನೋಭಾವವನ್ನು ಅವನ ಬಗ್ಗೆ ತಾಳಿದ್ದರು: ಅವನು ಮುಂದೆ ಸಾಷ್ಟಾಂಗವೆರಗಲು ಅವರು ನಿರಾಕರಿಸಿದರು, ತಮ್ಮ ಜೀವನವನ್ನೊತ್ತೆಯಿಟ್ಟು ಅವರು ಅವನಿಗೆ ಪುರಾವೆಗಳನ್ನು ನೀಡುವುದು ಮತ್ತು ಟೀಕೆಮಾಡುವುದು ಮಾಡುತ್ತಿದ್ದರು; ಸಂದಿಗ್ಧ ಪರಿಸ್ಥಿತಿಗಳಲ್ಲಿ ಅವರು ಅವನನ್ನು ನಿಯಂತ್ರಿಸುತ್ತಿದ್ದರು ಕೂಡ, ಹೀಗಾಗಿ ಗಂಗಾತಟಗಳ ಕಡೆ

ಮುನ್ನುಗ್ಗುವುದನ್ನು ಬಿಟ್ಟು ಸಿಂಧುತಟದಿಂದ ಮನೆಯ ಕಡೆ ಮರಳುವುದು ಅವನಿಗೆ ಅನಿವಾರ್ಯವೆನಿಸಿತು. ತಮ್ಮ ಧಾರ್ಮಿಕ ಭಾವನೆಗಳನ್ನು ಗೌರವಿಸಿದರೆ ಪೌರ್ವಾತ್ಯರು ಹೆಚ್ಚು ಹೊಂದಿಕೊಳ್ಳುತ್ತಿದ್ದರು. ಇದರಿಂದ ಅಲೆಕ್ಸಾಂಡರ್‌ಗೆ ಕಷ್ಟವೇನಾಗಲಿಲ್ಲ; ಆಮಾನ್ ಮತ್ತು ಬೇಲ್‌ರನ್ನು ಜ್ಯೂಸ್ ಜೊತೆ ಸಮೀಕರಿಸಿ, ತಾನು ದೇವಪುತ್ರನೆಂದು ಹೇಳಿಕೊಂಡಿದ್ದರೆ ಸಾಕಾಗಿತ್ತು. ಅಲೆಕ್ಸಾಂಡರ್ ಫಿಲಿಪ್‌ನನ್ನು ದ್ವೇಷಿಸುತ್ತಿದ್ದ, ಅವನ ಕೊಲೆಯ ಸಂಚಿನಲ್ಲಿ ಭಾಗಿಯಾಗಿದ್ದ; ತನ್ನ ತಾಯಿ ಒಲಿಂಪಿಯಾಸ್, ಗ್ರೀಕ್ ಪುರಾಣದ ಯಾವುದೋ ಮಹಿಳೆಯಂತೆ ದೇವನೊಬ್ಬನ ಪ್ರೇಯಸಿಯಾಗಿದ್ದಳೆಂದವನು ನಂಬಲು ಇಷ್ಟಪಡುತ್ತಿದ್ದ ಎಂದು ಮನಃಶಾಸ್ತ್ರಜ್ಞರು ಹೇಳುತ್ತಾರೆ. ಅಲೆಕ್ಸಾಂಡರ್‌ನ ಜೀವನಪಥವು ಎಷ್ಟು ಅದ್ಭುತವೆಂದರೆ ತನ್ನ ವಿಸ್ಮಯಕಾರಕ ಯಶಸ್ಸಿಗೆ ತನ್ನ ಪವಾಡಾತ್ಮಕ ಮೂಲವನ್ನು ಹೇಳುವುದು ಸರಿಯೆಂದು ಭಾವಿಸಿದ್ದಿರಬಹುದು.

ಬಾರ್ಬೇರಿಯನ್ನರಿಗಿಂತ ತಾವು ಉತ್ತಮರು ಎಂಬ ದೃಢ ಭಾವನೆ ಗ್ರೀಕರಲ್ಲಿತ್ತು; ಉತ್ತರದ ಜನಾಂಗಗಳು ವೀರ್ಯವಂತವಾದವು, ದಕ್ಷಿಣ ಜನಾಂಗಗಳು ನಾಗರಿಕವಾದವು, ಆದರೆ ಗ್ರೀಕರು ಮಾತ್ರ ಅವೆರಡೂ ಎಂಬ ವ್ಯಾಪಕ ದೃಷ್ಟಿಯನ್ನು ಅರಿಸ್ಟಾಟಲ್ ವ್ಯಕ್ತಪಡಿಸುವುದರಲ್ಲಿ ಸಂಶಯವಿಲ್ಲ. ಪ್ಲೇಟೋ ಮತ್ತು ಅರಿಸ್ಟಾಟಲ್‌ರು ಗ್ರೀಕರನ್ನು ಗುಲಾಮರನ್ನಾಗಿ ಮಾಡುವುದು ತಪ್ಪೇ ಹೊರತು ಬಾರ್ಬೇರಿಯನ್ನರನ್ನಲ್ಲ ಎಂದು ಭಾವಿಸಿದ್ದರು. ಪೂರ್ತಿ ಗ್ರೀಕನಲ್ಲದ ಅಲೆಕ್ಸಾಂಡರ್ ಈ ಉತ್ತಮಿಕೆಯ ಮನೋಭಾವವನ್ನು ಒಡೆಯಲು ಪ್ರಯತ್ನಿಸಿದ. ತಾನೇ ಇಬ್ಬರು ಬಾರ್ಬೇರಿಯನ್ ರಾಜಕುಮಾರಿಯರನ್ನು ಮದುವೆಯಾದ, ಅಲ್ಲದೆ ತನ್ನ ಪ್ರಮುಖ ಮ್ಯಾಸಿಡೋನಿಯನ್ನರು ಸತ್ಕುಲಜರಾದ ಪರ್ಷಿಯನ್ ಮಹಿಳೆಯರನ್ನು ಮದುವೆಯಾಗಲು ಒತ್ತಾಯಿಸಿದ. ಅವನ ಅಸಂಖ್ಯಾತ ಗ್ರೀಕ್ ನಗರಗಳಲ್ಲಿ ಹೆಂಗಸರಗಿಂತ ಹೆಚ್ಚು ಸಂಖ್ಯೆಯ ಗಂಡಸರು ವಾಸವಾಗಿದ್ದರು, ಹೀಗಾಗಿ ಅಲ್ಲಿನ ಗಂಡಸರು ಸ್ಥಳೀಯ ಹೆಂಗಸರನ್ನು ಮದುವೆಯಾಗುವ ಅವನ ಮೇಲ್ಪಂಕ್ತಿಯನ್ನು ಅನುಸರಿಸಿದರು ಎಂದು ಭಾವಿಸಬಹುದು. ಈ ಮನೋಭಾವದಿಂದಾಗಿ ಮಾನವಸಂಕುಲ ಒಂದೇ ಎಂಬ ಭಾವನೆಯನ್ನು ವಿಚಾರವಂತ ವ್ಯಕ್ತಿಗಳಲ್ಲಿ ಬಿತ್ತುವ ಹಾಗಾಗಲಿ ಎಂಬ ಆಶಯವಿತ್ತು; ನಗರ ಪ್ರಭುತ್ವಗಳ ಮತ್ತು (ಸ್ವಲ್ಪ ಕಡಿಮೆ ಪ್ರಮಾಣದಲ್ಲಿ) ಗ್ರೀಕ್ ಜನಾಂಗದ ಬಗೆಗಿನ ಹಳೆಯ ನಿಷ್ಠೆ ಸಾಕು ಎಂದು ತೋರಲಿಲ್ಲ. ತತ್ವಜ್ಞಾನದಲ್ಲಿ, ವಿಶ್ವಮಾನವ ಪ್ರಜ್ಞೆಯು ಸಂಯಮವಾದಿಗಳಿಂದ ಆರಂಭಗೊಳ್ಳುತ್ತದೆ, ಆದರೆ ಅನುಷ್ಠಾನದಲ್ಲಿ ಅದು ಇನ್ನೂ ಮುಂಚಿನದು, ಅಲೆಕ್ಸಾಂಡರ್‌ನಲ್ಲಿ. ಇದರ ಪರಿಣಾಮವೆಂದರೆ ಗ್ರೀಕ್ ಮತ್ತು ಬಾರ್ಬೇರಿಯನ್ನರ ನಡುವಣ ಕೊಳುಕೊಡುಗೆಗಳು ಪರಸ್ಪರವಾದುವು: ಬಾರ್ಬೇರಿಯನ್ನರು ಕೊಂಚ

ಗ್ರೀಕ್ ವಿಜ್ಞಾನವನ್ನು ಕಲಿತರೆ, ಗ್ರೀಕರು ಬಾರ್ಬೇರಿಯನ್ನರ ಬಹುಪಾಲು ಮೂಢಶ್ರದ್ಧೆಗಳನ್ನು ಕಲಿತರು. ವಿಶಾಲ ಪ್ರದೇಶಗಳಣ್ನು ವ್ಯಾಪಿಸಿದ ಗ್ರೀಕ್ ನಾಗರಿಕತೆಯು ಕಡಿಮೆ ಗ್ರೀಕ್‌ತನವನ್ನು ಹೊಂದಿತು.

ಗ್ರೀಕ್ ನಾಗರಿಕತೆಯು ಮೂಲತಃ ನಗರಕೇಂದ್ರಿತ. ಬೇಸಾಯದಲ್ಲಿ ತೊಡಗಿದ್ದ ಅನೇಕ ಗ್ರೀಕರಿದ್ದುದು ನಿಜ; ಆದರೆ ಹೆಲೆನಿಕ್ ಸಂಸ್ಕೃತಿಯಲ್ಲಿ ವಿಶಿಷ್ಟವಾದುದಕ್ಕೆ ನೀಡಿದ ಕೊಡುಗೆ ಏನೂ ಇಲ್ಲ. ಮೈಲೇಸಿಯನ್ ಪಂಥದ ಆನಂತರ ವಿಜ್ಞಾನ, ಸಾಹಿತ್ಯ ಮತ್ತು ತತ್ವಜ್ಞಾನಗಳಲ್ಲಿ ಸಾರ್ವಭೌಮರಾಗಿದ್ದ ಗ್ರೀಕರು, ಎಷ್ಟೋ ವೇಳೆ ಬಾರ್ಬೇರಿಯನ್ನರಿಂದ ಸುತ್ತುವರಿದಿದ್ದ, ಶ್ರೀಮಂತ ನಗರಗಳಿಗೆ ಸಂಬಂಧಿಸಿದವರು. ಈ ಬಗೆಯ ನಾಗರಿಕತೆಯು ಆರಂಭವಾದುದು ಗ್ರೀಕರಿಂದಲ್ಲ, ಫಿನೀಷಿಯನ್ನರಿಂದ. ಟೈರ್ ಮತ್ತು ಸೈಡಾನ್ ಮತ್ತು ಕಾರ್ಥೆಜ್‌ರು ತಮ್ಮ ಮನೆಗೆಲಸಗಳಿಗೆ ಗುಲಾಮರನ್ನು, ಯುದ್ಧ ಮಾಡಬೇಕಾದರೆ ಬಾಡಿಗೆಗೆ ಕರೆತಂದ ಜನಗಳನ್ನು ಆಶ್ರಯಿಸಿದ್ದರು. ಆಧುನಿಕ ರಾಜಧಾನಿ ನಗರಗಳಂತೆ ಅವರು ತಮ್ಮ ಜನಾಂಗದವರೇ ಆದ ಮತ್ತು ತಮ್ಮಂತೆಯೇ ರಾಜಕೀಯ ಹಕ್ಕುಗಳನ್ನು ಹೊಂದಿದ ಹೆಚ್ಚು ಜನಸಂಖ್ಯೆಯ ಹಳ್ಳಿಗರನ್ನು ಆಶ್ರಯಿಸಿರಲಿಲ್ಲ. ಇದರ ಅತ್ಯಂತ ಹತ್ತಿರದ ಆಧುನಿಕ ಸಾಮ್ಯವನ್ನು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದ ದೂರಪ್ರಾಚ್ಯದಲ್ಲಿ ನೋಡಬಹುದು. ಸಿಂಗಪುರ, ಹಾಂಗ್‌ಕಾಂಗ್, ಶಾಂಘೈ ಮತ್ತಿತರ ಚೈನಾದ ಕರಾರು ರೇವುಪಟ್ಟಣಗಳು (ಟ್ರೀಟಿ ಪೋರ್ಟ್) ಸಣ್ಣ ಸಣ್ಣ ಯೂರೋಪಿಯನ್ ದ್ವೀಪಗಳು, ಅಲ್ಲೆಲ್ಲ ಯೂರೋಪಿಯನ್ ವ್ಯಾಪಾರಿಗಳ ಶ್ರೀಮಂತವರ್ಗವು ಕೂಲಿಗಾರರ ದುಡಿಮೆಯನ್ನು ಅವಲಂಬಿಸಿತ್ತು. ಉತ್ತರ ಅಮೆರಿಕದಲ್ಲಿ, ಮೇಸನ್–ಡಿಕ್ಸನ್ ರೇಖೆಗಿಂತ ಉತ್ತರದಲ್ಲಿ, ಅಂಥ ದುಡಿಮೆಗಾರರು ಸಿಕ್ಕುತ್ತಿರಲಿಲ್ಲವಾದ್ದರಿಂದ ಬಿಳಿಯ ಜನರು ಬೇಸಾಯವನ್ನು ಅವಲಂಬಿಸುವುದು ಅನಿವಾರ್ಯವಾಯಿತು. ಈ ಕಾರಣದಿಂದಾಗಿ ಉತ್ತರ ಅಮೆರಿಕದ ಮೇಲಣ ಬಿಳಿಯರ ಹಿಡಿತವು ಸುಭದ್ರವಾಗಿದೆ, ಆದರೆ ದೂರಪ್ರಾಚ್ಯದ ಮೇಲಣ ಅವರ ಹಿಡಿತವು ಈಗಾಗಲೇ ಕುಗ್ಗಿದೆ, ಅದು ಬೇಗ ಪೂರ್ತಿ ಕಣ್ಮರೆಯಾಗಬಹುದು. ಇಂತಹ ಸಂಸ್ಕೃತಿಯ ಬಹುಭಾಗವು, ಅದರಲ್ಲೂ ಕೈಗಾರಿಕೋದ್ಯಮದಲ್ಲಿ, ಉಳಿಯುತ್ತದೆ. ಅಲೆಕ್ಸಾಂಡರ್‌ನ ಚಕ್ರಾಧಿಪತ್ಯದ ಪೂರ್ವ ಭಾಗಗಳಲ್ಲಿನ ಗ್ರೀಕರ ಸ್ಥಾನವನ್ನು ಅರ್ಥಮಾಡಿಕೊಳ್ಳಲು ಈ ಸಾದೃಶ್ಯವು ಸಹಾಯಕವಾಗುತ್ತದೆ.

ಏಷ್ಯಾದ ಮನಸ್ಸಿನ ಮೇಲಾದ ಅಲೆಕ್ಸಾಂಡರ್‌ನ ಪರಿಣಾಮವು ಆಳವೂ ದೀರ್ಘಕಾಲೀನವೂ ಆದುದು. ಅವನು ಸತ್ತ ಹಲವು ಶತಮಾನಗಳ ನಂತರ ರಚಿತವಾದ 'ಫಸ್ಟ್ ಬುಕ್ ಆಫ್ ದ ಮಕಾಬೀಸ್' ಅವನ ಜೀವನಪಥದ ಬಗೆಗಿನ ವಿವರಣೆಯಿಂದ ಆರಂಭಗೊಳ್ಳುತ್ತದೆ:

'ಏನಾಯಿತೆಂದರೆ, ಆನಂತರ ಮ್ಯಾಸಿಡೋನಿಯನ್ ಆದ ಫಿಲಿಪ್‌ನ ಮಗ

ಅಲೆಕ್ಸಾಂಡರ್, ಚೆಟ್ಟಿಯಿಮ್ ಪ್ರದೇಶದಿಂದ ಹೊರಬಂದು ಪರ್ಷಿಯನ್ನರು ಮತ್ತು ಮೀಡಿಗಳ ದೊರೆಯಾದ ಡೇರಿಯಸ್‌ನನ್ನು ಸದೆಬಡಿದು, ಅವನ ಬದಲು ಮೊತ್ತ ಮೊದಲ ಗ್ರೀಕ್‌ನಾಗಿ ತಾನೇ ಆಳ್ವಿಕೆ ನಡೆಸಿ ಅನೇಕ ಯುದ್ಧಗಳನ್ನು ಮಾಡಿದ, ಅನೇಕ ಭದ್ರನೆಲೆಗಳನ್ನು ಗೆದ್ದ, ಭೂಮಿಯ ಮೇಲಣ ರಾಜರುಗಳನ್ನೆಲ್ಲ ಕೊಂದ, ಭೂಮಿಯ ಆಚೆಯ ಕೊನೆಯವರೆಗೂ ಸಾಗಿದ, ತಾನು ಬರುವ ಮುಂಚೆ ಪ್ರಶಾಂತವಾಗಿದ್ದ ಅನೇಕ ರಾಷ್ಟ್ರಗಳನ್ನು ಹಾಳುಗೆಡವಿದ - ಇದರಿಂದ ಆನಂದತುಂದಿಲನಾಗಿ ಅವನ ಹೃದಯವು ಉಬ್ಬಿಹೋಯಿತು. ಆಮೇಲೆ ಒಬ್ಬ ಬಲಿಷ್ಠ ಆತಿಥೇಯನನ್ನು ಕರೆದು, ದೇಶಗಳನ್ನೂ ರಾಷ್ಟ್ರಗಳನ್ನೂ ರಾಜರನ್ನೂ ಅಡಿಯಾಳಾಗಿಸಿಕೊಂಡು ಅವರು ತನ್ನ ಉಪನದಿಗಳಾಗುವಂತೆ ಮಾಡಿಕೊಂಡ. ಇವೆಲ್ಲ ಆದ ಮೇಲೆ ಅವನು ಕಾಯಿಲೆ ಬಿದ್ದ, ತಾನು ಸಾಯುವ ಕಾಲ ಬಂತೆಂದು ಭಾವಿಸಿದ. ಆಗ ತನ್ನ ಗೌರವಸ್ಥರೆನಿಸಿದ್ದ ಮತ್ತು ತನ್ನ ಹರೆಯದಿಂದ ಬೆಳೆಸಿದ್ದ ಸೇವಕರನ್ನು ಕರೆದು, ತಾನಿನ್ನೂ ಜೀವಂತವಾಗಿರುವಾಗಲೇ ತನ್ನ ಚಕ್ರಾಧಿಪತ್ಯವನ್ನೆಲ್ಲ ಅವರಿಗೆ ಹಂಚಿಕೊಟ್ಟ.[೮೨] ಹೀಗೆ ಅಲೆಕ್ಸಾಂಡರ್ ಹನ್ನೆರಡು ವರ್ಷ ಆಳಿ ಆನಂತರ ಸತ್ತ.'

ಮಹಮದೀಯ ಮತಧರ್ಮದಲ್ಲಿ ಅವನು ದಂತಕತೆಯಾಗಿ ಉಳಿದು ಬಂದ; ಈಗಲೂ ಹಿಮಾಲಯದಲ್ಲಿನ ಸಣ್ಣ ಪುಟ್ಟ ದಳವಾಯಿಗಳು ತಾವು ಅವನ ಸಂತತಿಯವರೆಂದು ಹೇಳಿಕೊಳ್ಳುತ್ತಾರೆ.[೮೩] ಮಿಕ್ಕ ಯಾವನೇ ಪೂರ್ತಿ ಐತಿಹಾಸಿಕನಾದ ನಾಯಕನೂ ಇಂತಹ ಪಕ್ಕಾ ಸಾಮಗ್ರಿಯನ್ನೊದಗಿಸಿಲ್ಲ.

ಅಲೆಕ್ಸಾಂಡರ್‌ನ ಸಾವಿನಲ್ಲಿ, ಅವನ ಚಕ್ರಾಧಿಪತ್ಯದ ವೈಶಾಲ್ಯವನ್ನು ಬಣ್ಣಿಸುವ ಪ್ರಯತ್ನವಿದೆ. ಆದರೆ ಅವನ ಇಬ್ಬರು ಮಕ್ಕಳ ಪೈಕಿ ಒಬ್ಬನು ಇನ್ನೂ ಶಿಶುವಾಗಿದ್ದ, ಮತ್ತೊಬ್ಬ ಇನ್ನೂ ಹುಟ್ಟೇ ಇರಲಿಲ್ಲ. ಇಬ್ಬರಿಗೂ ಬೆಂಬಲಿಗರಿದ್ದರು, ಆದರೆ ಇದರಿಂದಾದ ಅಂತರ್ಯುದ್ಧದಲ್ಲಿ ಇಬ್ಬರನ್ನೂ ತಳ್ಳಿಹಾಕಲಾಯಿತು. ಕೊನೆಯಲ್ಲಿ, ಅವನ ಸಾಮ್ರಾಜ್ಯವನ್ನು ಮೂವರು ಸೇನಾಧಿಪತಿಗಳ ಕುಟುಂಬಗಳಲ್ಲಿ ಹಂಚಿಕೆ ಮಾಡಲಾಯಿತು; ಅವರಲ್ಲಿ ಒಬ್ಬ ಅಲೆಕ್ಸಾಂಡರ್‌ನ ಸ್ವತ್ತುಗಳ ಯೂರೋಪಿಯನ್ ಭಾಗ, ಮತ್ತೊಬ್ಬ ಆಫ್ರಿಕನ್ ಭಾಗ, ಮಗುದೊಬ್ಬ ಏಷ್ಯಾಟಿಕ್ ಭಾಗವನ್ನು ಪಡೆದರು. ಯೂರೋಪಿಯನ್ ಭಾಗವು ಕೊನೆಯಲ್ಲಿ ಅಂಟಿಗೊನಾಸ್‌ನ ವಂಶಜರ ಕೈಗೆ ಹೋಯಿತು; ಈಜಿಪ್ಟ್‌ನ ಅನ್ನು ಪಡೆದ ಟಾಲೆಮಿಯು ಅಲೆಕ್ಸಾಂಡ್ರಿಯವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ; ಅನೇಕ ಯುದ್ಧಗಳ ಬಳಿಕ ಏಷಿಯಾ ಭಾಗವನ್ನು

---

೮೨. ಇದೆಲ್ಲ ಐತಿಹಾಸಿಕವಾಗಿ ಸತ್ಯವಲ್ಲ.

೮೩. ಪ್ರಾಯಶಃ ಇದು ಈಗಲೂ ಸತ್ಯವಲ್ಲ, ಯಾಕೆಂದರೆ ಈ ಶ್ರದ್ಧೆಯನ್ನು ಹೊಂದಿದ್ದವರ ಗಂಡುಮಕ್ಕಳು ಈಟನ್‌ನಲ್ಲಿ ಓದಿದವರು.

ಪಡೆದ ಸೆಲ್ಯೂಕಸ್ ಒಂದು ಸ್ಥಿರ ರಾಜಧಾನಿಯನ್ನರಸುತ್ತ ಅನೇಕ ಸೈನಿಕ ಕಾರ್ಯಾಚರಣೆಗಳನ್ನು ನಡೆಸಿದ, ಆದರೆ ಮುಂದೆ ಆ ವಂಶದ ಮುಖ್ಯ ನಗರವಾಗಿ ಆಂಟಿಯೋಕ್ ಆಯಿತು. ಟಾಲೆಮಿಗಳೂ ಸೆಲ್ಯೂಸಿಡ್‌ಗಳೂ (ಸೆಲ್ಯೂಕ್‌ಸ್‌ನ ವಂಶವನ್ನು ಹೀಗೆ ಕರೆಯುತ್ತಾರೆ) ಗ್ರೀಕರು ಮತ್ತು ಬಾರ್ಬೇರಿಯನ್ನರನ್ನು ಬೆಸೆಯುವ ಪ್ರಯತ್ನವನ್ನು ಕೈಬಿಟ್ಟು, ಮೊದಲು ಮ್ಯಾಸಿಡೋನಿಯನ್ ಸೈನ್ಯದ ಮೇಲೆ ಸೈನಿಕ ನಿರಂಕುಶಾಧಿಕಾರವನ್ನು ಸ್ಥಾಪಿಸಿ ಗ್ರೀಕ್ ಹಣಕ್ಕಾಗಿ ಸೈನ್ಯ ಸೇರುವವರಿಂದ ಅದನ್ನು ಬಲಗೊಳಿಸಿದರು. ಟಾಲೆಮಿಗಳು ಈಜಿಪ್ಟ್ ಅನ್ನು ಸಾಕಷ್ಟು ಸುಭದ್ರಗೊಳಿಸಿದರು, ಆದರೆ ಏಷ್ಯಾದಲ್ಲಿ, ಇನ್ನೂರು ವರ್ಷಗಳ ಗೊಂದಲಪೂರ್ಣ ವಾಂಶಿಕ ಯುದ್ಧಗಳು ರೋಮನ್‌ರ ವಿಜಯದಿಂದ ಕೊನೆಗೊಂಡಿತು. ಈ ಶತಮಾನಗಳಲ್ಲಿ ಪರ್ಷಿಯವನ್ನು ಪಾರ್ಥಿಯನ್ನರು ಸೋಲಿಸಿದರು, ಮತ್ತು ಬ್ಯಾಕ್ಟ್ರಿಯನ್ ಗ್ರೀಕರನ್ನು ಹೆಚ್ಚು ಹೆಚ್ಚಾಗಿ ದೂರೀಕರಿಸಲಾಯಿತು.

ಕ್ರಿಪೂ ಎರಡನೆಯ ಶತಮಾನದಲ್ಲಿ (ಇದಾದ ಬಳಿಕ ಅವರು ಬಹುಬೇಗ ಪತನ ಹೊಂದಿದರು) ಅವರ ದೊರೆ ಮೆನಾಂಡರ್, ಅವನ ಇಂಡಿಯದ ಚಕ್ರಾಧಿಪತ್ಯವು ಬಹು ವಿಶಾಲವಾಗಿತ್ತು. ಅವನು ಮತ್ತು ಒಬ್ಬ ಬೌದ್ಧ ಸನ್ಯಾಸಿಯ ಜೊತೆಗಿನ ಒಂದೆರಡು ಸಂವಾದಗಳು ಪಾಲಿ ಭಾಷೆಯಲ್ಲಿ, ಮತ್ತು ಭಾಗಶಃ ಒಂದು ಚೈನೀ ಭಾಷಾಂತರದಲ್ಲಿ ಉಳಿದಿವೆ. ಇವುಗಳಲ್ಲಿ ಮೊದಲನೆಯದು ಗ್ರೀಕ್ ಮೂಲವೊಂದನ್ನು ಆಧರಿಸಿದೆಯೆಂದೂ; ಮೆನಾಂಡರ್ ರಾಜ್ಯತ್ಯಾಗ ಮಾಡಿ ಬೌದ್ಧ ಸಂತನಾಗುವುದರಿಂದ ಕೊನೆಯಾಗುವ ಎರಡನೆಯದು ಖಂಡಿತ ಇಲ್ಲವೆಂದೂ ಡಾ. ಟಾರ್ನ್ ಹೇಳುತ್ತಾರೆ.

ಈ ಕಾಲದಲ್ಲಿ ಬೌದ್ಧಮತವು ಬಹು ರಭಸದಿಂದ ಮತಾಂತರಗೊಳಿಸುತ್ತಿದ್ದ ಮತಧರ್ಮವಾಗಿತ್ತು. ಸಂತನಂತಿದ್ದ ಬೌದ್ಧ ದೊರೆ ಅಶೋಕ (ಕ್ರಿಪೂ ೨೬೪–೨೨೮) ಎಲ್ಲ ಉಪಲಬ್ಧ ಶಾಸನಗಳಲ್ಲಿ ತಾನು ಎಲ್ಲ ಮೆಡಿಟರೇನಿಯನ್ ದೊರೆಗಳ ಬಳಿ ಧರ್ಮಬೋಧಕರನ್ನು ಕಳಿಸಿದೆನೆಂದು ದಾಖಲಿಸುತ್ತಾನೆ. 'ಮಹಾಪ್ರಭುಗಳ ಅಭಿಪ್ರಾಯದಲ್ಲಿ ಇದು ಅತ್ಯಂತ ಮುಖ್ಯ ಗೆಲವು – ಕಾನೂನಾತ್ಮಕ ಗೆಲವು; ಅಲ್ಲದೆ ಇದು ಮಹಾಪ್ರಭುಗಳು ತಮ್ಮ ಆಡಳಿತಭಾಗದಲ್ಲಲ್ಲದೆ ಆರುನೂರು ಲೀಗ್‌ಗಳವರೆಗಿನ ನೆರೆಯ ಚಕ್ರಾಧಿಪತ್ಯಗಳಲ್ಲೂ – ಗ್ರೀಕ್ ದೊರೆ ಆಂಟಿಯೋಕಸ್ ವಾಸಿಸುತ್ತಿದ್ದ, ಮತ್ತು ಅಲ್ಲಿಂದಾಚೆಗೆ ಬೇರೆ ಬೇರೆ ಹೆಸರುಗಳ ಟಾಲೆಮಿ, ಆಂಟಿಗೋನಸ್, ಮಗಾಸ್ ಮತ್ತು ಅಲೆಕ್ಸಾಂಡರ್‌ಗಳ ಸ್ಥಳದವರೆಗೂ .. .. ಹಾಗೆಯೇ, ಯೋನಾಸ್‌ಗಳಲ್ಲಿನ ದೊರೆಯ ಆಡಳಿತಭಾಗದವರೆಗೂ – ಪ್ರಭಾವ ಬೀರಿತು.'[೮೪]

---

೮೪. ಬೇವನ್ ಅವರ 'ಹೌಸ್ ಆಫ್ ಸೆಲ್ಯೂಕಸ್'ನಲ್ಲಿ ಉದ್ಧೃತ, ಸಂಪುಟ ೧, ಪು. ೨೯೮ ಟಿಪ್ಪಣಿ.

(ಅಂದರೆ ಪಂಜಾಬ್‌ನ ಗ್ರೀಕರು). ದುರದೃಷ್ಟವೆಂದರೆ, ಈ ಧರ್ಮಬೋಧನೆಯ ಪಾಶ್ಚಿಮಾತ್ಯ ವಿವರಗಳು ಉಳಿದುಬಂದಿಲ್ಲ.

ಬ್ಯಾಬಿಲೋನಿಯವು ಹೆಲೆನಿಸಂನಿಂದ ಮತ್ತಷ್ಟು ಗಾಢವಾಗಿ ಪ್ರಭಾವ ಹೊಂದಿತು. ನಾವಾಗಲೇ ನೋಡಿದಂತೆ, ಕೊಪರ್ನಿಕನ್ ವ್ಯವಸ್ಥೆಯನ್ನು ಉಳಿಸಿದ ಸಾಮಾಸ್‌ನ ಅರಿಸ್ಟಾರ್ಕಸ್‌ನನ್ನು ಅನುಸರಿಸಿದ ಏಕೈಕ ಪ್ರಾಚೀನನೆಂದರೆ ಟೈಗ್ರಿಸ್ ತಟದ ಸೆಲ್ಯೂಸಿಯದ ಸೆಲ್ಯೂಕಸ್ (ಅವನ ಕಾಲ ಸುಮಾರು ಕ್ರಿಪೂ ೧೫೦). ಕ್ರಿಶ ಮೊದಲ ಶತಮಾನದಲ್ಲಿ ಸೆಲ್ಯೂಸಿಯವು 'ಪಾರ್ಥಿಯನ್ನರ ಬರ್ಬರ ಬಳಕೆಗೆ ಜಾರಿಯಲ್ಲಿರಲಿಲ್ಲವಾದರೂ, ಇನ್ನೂ ಸೆಲ್ಯೂಕಸ್‌ನ (ಅದರ ಗ್ರೀಕ್ ಸ್ಥಾಪಕ) ವ್ಯವಸ್ಥೆಗಳನ್ನು ಉಳಿಸಿಕೊಂಡಿತ್ತು.[೮೫] ಹಣದ ಅಥವಾ ಬುದ್ಧಿಶಕ್ತಿಯ ಆಧಾರದ ಮೇಲೆ ಆಯ್ದ ಮುನ್ನೂರು ಮಂದಿ ಪ್ರಜೆಗಳಿಂದ ಸೆನೇಟ್ ರೂಪಿತವಾಗಿತ್ತು; ಜನರಿಗೂ ಅಧಿಕಾರದಲ್ಲಿ ಪಾಲಿತ್ತು'[೮೬] ಮತ್ತೂ ಪಶ್ಚಿಮದ ಮೆಸೊಪೊಟಾಮಿಯದುದ್ದಕ್ಕೂ ಮಹಮ್ಮದೀಯ ವಿಜಯದವರೆಗೂ ಗ್ರೀಕ್ ಸಾಹಿತ್ಯ ಮತ್ತು ಸಂಸ್ಕೃತಿಗಳ ಭಾಷೆಯಾಗಿತ್ತು..

ಭಾಷೆ ಮತ್ತು ಸಾಹಿತ್ಯಗಳಿಗೆ ಸಂಬಂಧಿಸಿದಂತೆ, ಸಿರಿಯ (ಜೂಡಿಯ ಹೊರತಾಗಿ) ನಗರಗಳು ಸಂಪೂರ್ಣವಾಗಿ ಹೆಲೆನೀಯವಾದವು. ಆದರೆ ಹೆಚ್ಚು ಸಂಪ್ರದಾಯನಿಷ್ಠರಾದ ಹಳ್ಳಿಗಳ ಜನರು ತಮಗೆ ಪರಿಚಿತವಾಗಿದ್ದ ಮತಧರ್ಮ ಮತ್ತು ಭಾಷೆಗಳನ್ನುಳಿಸಿಕೊಂಡರು.[೮೭] ಏಷ್ಯಾ ಮೈನರ್‌ನಲ್ಲಿ ಕರಾವಳಿಯ ಗ್ರೀಕ್ ನಗರಗಳು ಶತಮಾನಗಳ ಕಾಲ ತಮ್ಮ ನೆರೆಯ ಬಾರ್ಬೇರಿಯನ್‌ರ ಮೇಲೆ ಪ್ರಭಾವ ಬೀರಿರಲಿಲ್ಲ. ಇದು ಮ್ಯಾಸಿಡೋನಿಯನ್ ವಿಜಯದಿಂದ ತೀವ್ರವಾಯಿತು. ಯೆಹೂದಿಗಳ ಜೊತೆಗಿನ ಹೆಲೆನಿಸಂನ ಮೊದಲ ಸಂಘರ್ಷವು 'ಬುಕ್ಸ್ ಆಫ್ ದ ಮ್ಯಾಕಬ್ಬೀಸ್'ನಲ್ಲಿ ನಿರೂಪಿತವಾಗಿದೆ. ಮ್ಯಾಸೆಡೋನಿಯನ್ ಚಕ್ರಾಧಿಪತ್ಯದ ಇತರ ವಿಷಯಗಳಂತಲ್ಲದೆ, ಇದು ಅತ್ಯಂತ ಆಸಕ್ತಿದಾಯಕ ಕತೆ. ಆ ಕುರಿತು ನಾನು ಮುಂದೆ, ಕ್ರೈಸ್ತಮತಧರ್ಮದ ಮೂಲ ಮತ್ತು ಬೆಳವಣಿಗೆಗಳ ಕುರಿತು ಬರೆಯುವಾಗ, ಹೇಳುತ್ತೇನೆ. ಬೇರೆಡೆಗಳಲ್ಲಿ ಗ್ರೀಕ್ ಪ್ರಭಾವವು ಅಂತಹ ಪ್ರಬಲ ವಿರೋಧವನ್ನೆದುರಿಸಲಿಲ್ಲ.

ಹೆಲೆನಿಸ್ಟಿಕ್ ಸಂಸ್ಕೃತಿಯ ದೃಷ್ಟಿಯಿಂದ, ಕ್ರಿಪೂ ಮೂರನೆಯ ಶತಮಾನದ ಅತ್ಯಂತ ಉಜ್ವಲ ಯಶಸ್ಸು ಎಂದರೆ ಅಲೆಕ್ಸಾಂಡ್ರಿಯ ನಗರ. ಮ್ಯಾಸಿಡೋನಿಯನ್‌ನ

---

೮೫. ದೊರೆ, ಖಗೋಳವಿಜ್ಞಾನಿಯಲ್ಲ.

೮೬. 'ಆನಲ್ಸ್', ಭಾಗ ೬, ಪು. ೪೨.

೮೭. ನೋಡಿ, 'ಕೇಂಬ್ರಿಜ್ ಏನ್ಷಿಯಂಟ್ ಹಿಸ್ಟರಿ', ಸಂಪುಟ ೭, ಪು. ೧೯೪-೫.

ಆಡಳಿತವಲಯದಲ್ಲಿ ಯೂರೋಪ್ ಮತ್ತು ಏಷ್ಯಾ ವಲಯಗಳಲ್ಲಿಗಿಂತ ಈಜಿಪ್ಟ್ ಕಡಿಮೆ ಪ್ರಮಾಣದಲ್ಲಿ ಯುದ್ಧಗಳನ್ನೆದುರಿಸಿತು; ಅಲೆಕ್ಸಾಂಡ್ರಿಯವು ವ್ಯಾಪಾರದ ವಿಷಯದಲ್ಲಿ ಅತ್ಯಂತ ಅಚ್ಚುಮೆಚ್ಚಿನ ಸ್ಥಾನದಲ್ಲಿತ್ತು. ಟಾಲೆಮೀಯರು ವಿದ್ಯೆಯ ಪೋಷಕರಾಗಿದ್ದರು, ಆ ಕಾಲದ ಅತ್ಯುನ್ನತ ವ್ಯಕ್ತಿಗಳನ್ನದು ತನ್ನ ರಾಜಧಾನಿಯೆಡೆ ಸೆಳೆಯಿತು. ಗಣಿತವು ಮುಖ್ಯವಾಗಿ ಅಲೆಕ್ಸಾಂಡ್ರಿಯದಲ್ಲಿ ಬೆಳೆಯಿತಲ್ಲದೆ ರೋಮ್‌ನ ಪತನದವರೆಗೂ ಹಾಗೆಯೇ ಉಳಿದಿತ್ತು. ಆರ್ಕಿಮಿಡೀಸ್ ಸಿಸೆಲಿಯವನಾಗಿದ್ದು, ಗ್ರೀಕ್ ನಗರ ಪ್ರಭುತ್ವಗಳು (ಅವನ ಮರಣಕಾಲವಾದ ಕ್ರಿಪೂ ೨೧೨ ರವರೆಗೂ) ಸ್ವತಂತ್ರವಾಗಿದ್ದ ಜಗತ್ತಿನ ಭಾಗದಲ್ಲಿದ್ದ ಎಂಬುದು ನಿಜವೇ. ಆದರೆ ಅವನೂ ಅಲೆಕ್ಸಾಂಡ್ರಿಯದಲ್ಲಿ ಕಲಿತವನು. ಎರಾಟೋಸ್ಥನೀಸ್ ಅಲೆಕ್ಸಾಂಡ್ರಿಯದ ಪ್ರಸಿದ್ಧ ಗ್ರಂಥಾಲಯದ ಮುಖ್ಯ ಗ್ರಂಥಪಾಲಕನಾಗಿದ್ದ. ಕ್ರಿಪೂ ಮೂರನೆಯ ಶತಮಾನದಲ್ಲಿ ಅಲೆಕ್ಸಾಂಡ್ರಿಯದೊಡನೆ ನಿಕಟ ಸಂಪರ್ಕವಿರಿಸಿಕೊಂಡಿದ್ದ ಗಣಿತಜ್ಞರೂ ವಿಜ್ಞಾನಿಗಳೂ ಹಿಂದಿನ ಶತಮಾನಗಳ ಯಾವುದೇ ಗ್ರೀಕರಷ್ಟೇ ಸಮರ್ಥರಾಗಿದ್ದರು, ಅವರಷ್ಟೇ ಮುಖ್ಯವಾದ ಕೆಲಸಗಳನ್ನು ಮಾಡಿದರು. ಆದರೆ ತಮ್ಮ ಹಿಂದಿನವರಂತೆ ಅವರು ವಿದ್ಯೆಯನ್ನೆಲ್ಲ ತಮ್ಮ ಪ್ರಾಂತಕ್ಕೆ ತೆಗೆದುಕೊಂಡು ಹೋಗಿ ವೈಶ್ವಿಕ ತತ್ತ್ವಜ್ಞಾನವನ್ನು ಸ್ಥಾಪಿಸಲಿಲ್ಲ. ಆಧುನಿಕ ಅರ್ಥದಲ್ಲಿ ಅವರು ತಜ್ಞರು. ಯೂಕ್ಲಿಡ್, ಅರಿಸ್ಟಾರ್ಕಸ್, ಆರ್ಕಿಮಿಡೀಸ್ ಮತ್ತು ಅಪಾಲೋನಿಯಸ್ ಗಣಿತಜ್ಞರಾಗಿರುವುದಷ್ಟಕ್ಕೇ ತೃಪ್ತಿಪಟ್ಟರು, ತತ್ತ್ವಜ್ಞಾನದಲ್ಲಿ ಸ್ವಂತಿಕೆಯನ್ನು ತೋರಿಸಲು ಉತ್ಸುಕರಾಗಿರಲಿಲ್ಲ.

ಈ ಕಾಲದಲ್ಲಿ ತಜ್ಞತೆಯು ವಿದ್ಯೆಗಷ್ಟೇ ಸೀಮಿತವಾಗದೇ ಎಲ್ಲ ವಿಭಾಗಗಳಲ್ಲಿನ ಲಕ್ಷಣವಾಗಿತ್ತು. ಕ್ರಿಪೂ ಐದನೆಯ ಮತ್ತು ನಾಲ್ಕನೆಯ ಶತಮಾನಗಳಲ್ಲಿನ ಸ್ವಯಮಾಡಳಿತ ಹೊಂದಿದ ಗ್ರೀಕ್ ನಗರಗಳಲ್ಲಿ ಸಮರ್ಥನೆನಿಸಿಕೊಂಡ ಒಬ್ಬನು ಎಲ್ಲದರಲ್ಲೂ ಸಮರ್ಥನೆಂದು ಭಾವಿಸುತ್ತಿದ್ದರು. ಸಮಯ ಬಂದಾಗ ಅವನು ಸೈನಿಕನೂ ಆಗುತ್ತಿದ್ದ, ರಾಜಕಾರಣಿಯೂ ಆಗುತ್ತಿದ್ದ, ಶಾಸಕನೂ ಆಗಿರುತ್ತಿದ್ದ ಮತ್ತು ತತ್ತ್ವಜ್ಞಾನಿಯೂ ಆಗಿರುತ್ತಿದ್ದ. ತನಗೆ ಇಷ್ಟವಿಲ್ಲದಿದ್ದರೂ ಸಾಕ್ರಟೀಸ್ ರಾಜಕೀಯ ವಿವಾದಗಳಲ್ಲಿ ತೊಡಗಿಕೊಳ್ಳುವುದರಿಂದ ದೂರವಿರಲು ಸಾಧ್ಯವಾಗಲಿಲ್ಲ. ತಾರುಣ್ಯದಲ್ಲವನು ಸೈನಿಕ ಮತ್ತು ತನ್ನ 'ಅಪಾಲಜಿ'ಯಲ್ಲಿ ಅಲ್ಲಗಳೆದಿದ್ದರೂ, ಭೌತವಿಜ್ಞಾನದ ಅಭ್ಯಾಸಿಯಾಗಿದ್ದ. ಇತ್ತೀಚಿನ ವಿಷಯದಲ್ಲಿ ಆಸಕ್ತರಾಗಿದ್ದ ಶ್ರೀಮಂತ ಯುವಕರಿಗೆ ಸಂದೇಹವಾದ (ಸ್ಕೆಪ್ಟಿಸಿಸಂ) ಅನ್ನು ಬೋಧಿಸುವುದರಲ್ಲಿ ಸಮಯವೇ ಸಿಕ್ಕದಿದ್ದರೂ ಪ್ರೋಟಾಗೊರಾಸ್ ಥೂರಿಯೈಗಾಗಿ ಅವನು ಕಾನೂನು ರಚನೆಯಲ್ಲಿ ತೊಡಗಿದ್ದ. ಪ್ಲೇಟೋ ಯಶಸ್ಸು ಗಳಿಸದಿದ್ದರೂ ರಾಜಕಾರಣದಲ್ಲಿ ಕೈಯಾಡಿಸಿದ. ಸಾಕ್ರಟೀಸ್ ಬಗ್ಗೆ ಬರೆಯದಿರುವಾಗಲೂ ಹಳ್ಳಿಯ ಶ್ರೀಮಂತನಾಗಿರದಿದ್ದಾಗಲೂ ಕ್ಸೆನೋಫೋನ್ ತನ್ನ ಬಿಡುವಿನ ವೇಳೆಯಲ್ಲಿ ಒಬ್ಬ ಸೇನಾಧಿಕಾರಿಯಾಗಿದ್ದ.

ಪೈಥಾಗೊರಿಯನ್ ಪಂಥದ ಗಣಿತಜ್ಞರು ನಗರಗಳ ಆಡಳಿತವನ್ನು ವಶಪಡಿಸಿಕೊಳ್ಳುವ ಪ್ರಯತ್ನ ಮಾಡಿದರು. ಪ್ರತಿಯೊಬ್ಬನೂ ನ್ಯಾಯಮಂಡಳಿಯಲ್ಲಿ ಸೇವೆ ಸಲ್ಲಿಸಬೇಕಾಗಿತ್ತು ಹಾಗೂ ಇತರ ಕೆಲವು ಸಾರ್ವಜನಿಕ ಕಾರ್ಯಗಳನ್ನು ನಿರ್ವಹಿಸಬೇಕಾಗಿತ್ತು. ಕ್ರಿಪೂ ಮೂರನೆಯ ಶತಮಾನದಲ್ಲಿ ಇವೆಲ್ಲ ಬದಲಾಯಿತು. ಹಳೆಯ ನಗರ ಪ್ರಭುತ್ವಗಳಲ್ಲಿ ರಾಜಕೀಯ ಮುಂದುವರಿದದ್ದು ನಿಜವಾದರೂ, ಅವು ಹಳೆಯವೂ ಅಮುಖ್ಯವೂ ಅನಿಸಿಕೊಂಡಿದ್ದವು, ಯಾಕೆಂದರೆ ಆಗ ಗ್ರೀಸ್ ಮ್ಯಾಸೆಡೋನಿಯನ್ ಸೈನ್ಯದ ಕೃಪಾಶ್ರಯದಲ್ಲಿತ್ತು. ಅಧಿಕಾರದ ದೊಡ್ಡ ತಿಕ್ಕಾಟಗಳು ಮ್ಯಾಸಿಡೋನಿಯನ್ ಸೈನಿಕರ ನಡುವೆ ನಡೆಯುತ್ತಿದ್ದವು; ಅವರು ತತ್ವಗಳ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ, ಪ್ರತಿಸ್ಪರ್ಧಿಗಳ ನಡುವೆ ಪ್ರದೇಶಗಳನ್ನು ಹಂಚುವುದರಲ್ಲಿ ತೊಡಗಿದ್ದರು. ಆಡಳಿತಾತ್ಮಕ ಮತ್ತು ತಾಂತ್ರಿಕ ವಿಷಯಗಳಲ್ಲಿ ಹೆಚ್ಚು ಕಡಿಮೆ ವಿದ್ಯಾವಂತರಾಗಿದ್ದ ಈ ಸೈನಿಕರು ಗ್ರೀಕರನ್ನು ತಜ್ಞರನ್ನಾಗಿ ನೇಮಿಸಿಕೊಳ್ಳುತ್ತಿದ್ದರು. ಉದಾಹರಣೆಗೆ, ಈಜಿಪ್ಟ್‌ನಲ್ಲಿ ನೀರಾವರಿ ಮತ್ತು ಚರಂಡಿಗಳ ವಿಷಯದಲ್ಲಿ ಶ್ರೇಷ್ಠ ಕೆಲಸಗಳಾದುವು. ಸೈನಿಕರು, ಆಡಳಿತಗಾರರು, ವೈದ್ಯರು, ಗಣಿತಜ್ಞರು, ತತ್ವಜ್ಞಾನಿಗಳು ಇದ್ದರೂ ಅವರಾರೂ ಒಮ್ಮೆಗೇ ಈ ಎಲ್ಲವೂ ಆಗಿರಲಿಲ್ಲ.

ಹಣವಿದ್ದೂ ಅಧಿಕಾರದಲ್ಲಿ ಆಸಕ್ತಿಯಿಲ್ಲದ ವ್ಯಕ್ತಿಯು, ತನ್ನ ದಾರಿಯಲ್ಲಿ ಯಾವ ಲೂಟಿಕೋರ ಸೈನ್ಯವೂ ಬರಲಾರದೆಂದು ಭಾವಿಸಿ ಬಹು ಸಂತೋಷಕರವಾಗಿ ಜೀವನ ಮಾಡಬಹುದಾಗಿದ್ದ ಕಾಲವದು. ಯಾರಾದರೂ ರಾಜಕುಮಾರನ ಒಲವು ಪಡೆದಿದ್ದ ಪಂಡಿತರು, ಪರಿಣತ ಹೊಗಳುಭಟ್ಟರಾಗಿದ್ದು ಮೂರ್ಖ ರಾಜಭಾಷಿತಗಳನ್ನು ಗಮನಿಸದವರಾಗಿದ್ದರೆ, ಉನ್ನತ ಸೌಕರ್ಯಗಳ ಬದುಕನ್ನು ಸಾಗಿಸಬಹುದಾಗಿತ್ತು. ಆದರೆ ಸುರಕ್ಷೆ ಎಂಬುದು ಮಾತ್ರ ಇರಲಿಲ್ಲ. ಅರಮನೆಯ ಕ್ರಾಂತಿಯು ಸಂತನ ಶಿಷ್ಯನ ಪೋಷಕನನ್ನು ಬದಲಾಯಿಸಬಹುದಾಗಿತ್ತು; ಗಲಾಶಿಯನ್ನರು ಶ್ರೀಮಂತರ ಭವನಗಳನ್ನು ನಾಶಗೊಳಿಸಬಹುದಾಗಿತ್ತು; ವಂಶ ಸಂಘರ್ಷದಲ್ಲಿ ಇಡೀ ಒಂದು ನಗರವೇ ಸೂರೆಯಾಗಬಹುದಿತ್ತು. ಅಂಥ ಪರಿಸ್ಥಿತಿಗಳಲ್ಲಿ, ಜನರು ಅದೃಷ್ಟಲಕ್ಷ್ಮಿಯನ್ನು (ಫಾರ್ಚೂನ್) ಪೂಜಿಸತೊಡಗುವುದರಲ್ಲಿ ಆಶ್ಚರ್ಯವೇನಿದೆ? ಮಾನವ ವ್ಯವಹಾರಗಳಲ್ಲಿನ ಸುವ್ಯವಸ್ಥೆಯಲ್ಲಿ ಅವರಿಗೆ ಯಾವ ವೈಚಾರಿಕತೆಯೂ ಕಾಣುತ್ತಿರಲಿಲ್ಲ. ಹಟತೊಟ್ಟು ವೈಚಾರಿಕತೆಯನ್ನು ನಿರೀಕ್ಷಿಸುವವರು ತಮ್ಮಲ್ಲಿಯೇ ಆಮೆಚಿಪ್ಪಾಗಿಬಿಡುತ್ತಿದ್ದರು, ಮಿಲ್ಟನ್‌ನ ಸ್ಯಾಟನ್‌ನಂತೆ ಹೀಗೆ ನಿರ್ಧರಿಸುತ್ತಿದ್ದರು:

> **ಮನಸ್ಸಿಗೆ ಅದೇ ತನ್ನ ಜಾಗ, ತನ್ನಲ್ಲಿಯೇ ಅದು**
> **ನರಕವನ್ನು ಸ್ವರ್ಗವಾಗಿ, ಸ್ವರ್ಗವನ್ನು ನರಕವಾಗಿ ಮಾಡಬಹುದು.**

ಸಾಹಸಪೂರ್ಣ ಸಮಯಸಾಧಕರ ಹೊರತು, ಸಾರ್ವಜನಿಕ ವ್ಯವಹಾರಗಳಲ್ಲಿ

ಆಸಕ್ತರಾದವರಿಗೆ ಯಾವುದೇ ಉತ್ತೇಜನ ಇರಲಿಲ್ಲ. ಅಲೆಕ್ಸಾಂಡರ್‌ನ ವಿಜಯಗಳ ಉಜ್ವಲ ಘಟನೆಗಳ ಬಳಿಕ, ಹೆಲೆನಿಸ್ಟಿಕ್ ಜಗತ್ತು ಅಯೋಮಯದ ಕೆಸರಿನಲ್ಲಿ ಹೂತುಹೋಗುತ್ತಿತ್ತು; ಅದಕ್ಕೆ ಕಾರಣ ಸ್ಥಿರ ಸಾರ್ವಭೌಮತ್ವವನ್ನು ಸ್ಥಾಪಸಬಲ್ಲ ನಿರಂಕುಶಪ್ರಭುವಿನ, ಅಥವಾ ಸಾಮಾಜಿಕ ಐಕ್ಯವನ್ನು ತರಬಲ್ಲ ಪ್ರಬಲ ತತ್ವಗಳ ಕೊರತೆ. ಹೊಸ ರಾಜಕೀಯ ಸಮಸ್ಯೆಗಳನ್ನೆದುರಿಸಿದ ಗ್ರೀಕ್ ಬುದ್ಧಿಶಕ್ತಿಯು ಪೂರ್ತಿ ಅಸಮರ್ಥತೆಯನ್ನು ತೋರಿಸಿತು. ಗ್ರೀಕರಿಗೆ ಹೋಲಿಸಿದರೆ ರೋಮನ್ನರು ಮೂರ್ಖರೂ ಕ್ರೂರಿಗಳು ಎಂಬುದು ನಿಜವಾದರೂ, ಕೊನೆಯ ಪಕ್ಷ ಅವರು ಸುವ್ಯಸ್ಥೆಯನ್ನು ಸ್ಥಾಪಿಸಿದರು. ಸ್ವಾತಂತ್ರ್ಯವಿದ್ದ ಹಿಂದಿನ ಕಾಲದ ಅವ್ಯವಸ್ಥೆಯು ತಾಳಿಕೊಳ್ಳಬಲ್ಲಂತಹುದು, ಯಾಕೆಂದರೆ ಅದರಲ್ಲಿ ಪ್ರತಿ ಪ್ರಜೆಯ ಪಾಲೂ ಇರುತ್ತಿತ್ತು; ಆದರೆ ನಾಲಾಯಕ್ ಆಳ್ವಿಕೆದಾರರು ಬಲವಂತವಾಗಿ ಹೇರಿದ್ದ ಹೊಸ ಮ್ಯಾಸಿಡೋನಿಯನ್ ಅವ್ಯವಸ್ಥೆಯು ತೀರ ಸಹಿಸಿಕೊಳ್ಳಲಾರದ್ದಾಗಿತ್ತು, ಆ ಮುಂದಿನ ರೋಮ್‌ಗೆ ಅಡಿಯಾಳಾಗಿದ್ದ ಕಾಲದಲ್ಲಿದ್ದುದಕ್ಕಿಂತ ಮಿಗಿಲಾಗಿ.

ಕ್ರಾಂತಿಯ ಬಗ್ಗೆ ವ್ಯಾಪಕವಾದ ಭಯ ಮತ್ತು ಅತೃಪ್ತಿ ತುಂಬಿಕೊಂಡಿತ್ತು. ಸ್ವತಂತ್ರ ಶ್ರಮದ ಕೂಲಿ ಕಡಿಮೆಯಾಯಿತು, ಇದಕ್ಕೆ ಕಾರಣ ಪೌರ್ವಾತ್ಯ ದುಡಿಮೆಗಾರರ ಸ್ಪರ್ಧೆ ಎನಿಸುತ್ತದೆ; ಈ ಮಧ್ಯೆ ಆವಶ್ಯಕ ಸಾಮಗ್ರಗಳ ಬೆಲೆ ಹೆಚ್ಚಾಯಿತು. ತನ್ನ ಸಾಹಸದ ಆರಂಭದಲ್ಲಿ ಅಲೆಕ್ಸಾಂಡರ್, ಸಂಧಾನಗಳನ್ನು ಮಾಡಲು ಸಮಯವಿದ್ದುದರಿಂದಾಗಿ ಬಡವರನ್ನು ಅವರ ಸ್ಥಿತಿಯಲ್ಲೇ ಉಳಿಸಿದ್ದ. 'ಕ್ರಿಪೂ ೩೩೫ ರಲ್ಲಿ ಅಲೆಕ್ಸಾಂಡರ್ ಕಾರಿಂಥ್ ಒಕ್ಕೂಟದ ರಾಜ್ಯಗಳೊಂದಿಗೆ ಮಾಡಿಕೊಂಡ ಸಂಧಾನಗಳಲ್ಲಿ, ಒಕ್ಕೂಟದ ಪರಿಷತ್ತು ಮತ್ತು ಅಲೆಕ್ಸಾಂಡರ್‌ನ ಪ್ರತಿನಿಧಿಗಳು – ಒಕ್ಕೂಟದ ಯಾವುದೇ ನಗರದಲ್ಲಿ ಖಾಸಗಿ ಆಸ್ತಿಯ ಮುಟ್ಟುಗೋಲಾಗಲೀ, ಭೂಮಿಯ ವಿಭಜನೆಯಾಗಲೀ, ಸಾಲದ ರದ್ದತಿಯಾಗಲೀ, ಕ್ರಾಂತಿಯ ಉದ್ದೇಶದಿಂದ ಗುಲಾಮರ ಬಿಡುಗಡೆಯಾಗಲೀ – ನಡೆಯದಂತೆ ನಿಗಾ ವಹಿಸುವುದಕ್ಕೆ ಅವಕಾಶ ನೀಡಲಾಗಿತ್ತು.[೮೮] ಹೆಲೆನಿಸ್ಟಿಕ್ ಜಗತ್ತಿನ ದೇವಸ್ಥಾನಗಳು ಬ್ಯಾಂಕುಗಳಾಗಿದ್ದವು; ಅವುಗಳಲ್ಲಿ ಚಿನ್ನದ ದಾಸ್ತಾನು ಗೋಲ್ಡ್ ರಿಸರ್ವ್)ಗಳಿದ್ದು ಸಾಲವನ್ನು ನಿಯಂತ್ರಿಸುತ್ತಿದ್ದವು. ಕ್ರಿಪೂ ಮೂರನೆಯ ಶತಮಾನದ ಪ್ರಥಮಾರ್ಧದಲ್ಲಿ, ಡೇಲಾಸ್‌ನ ಅಪಾಲೋ ದೇವಸ್ಥಾನದಲ್ಲಿ ಶೇಕಡ ಹತ್ತರಷ್ಟು ಬಡ್ಡಿಯಂತೆ ಸಾಲ ನೀಡಲಾಗುತ್ತಿತ್ತು; ಮೊದಲಾದರೆ, ಬಡ್ಡಿ ದರವು ಹೆಚ್ಚಾಗಿತ್ತು.[೮೯]

---

೮೮. 'ದ ಸೋಷಿಯಲ್ ಕ್ವೆಶ್ಚನ್ ಇನ್ ದ ಥರ್ಡ್ ಸೆಂಚುರಿ', ಡಬ್ಲ್ಯು. ಟಿ. ಟಾರ್ನ್ ಸಂಪಾದಿತ ವಿವಿಧ ಲೇಖಕರ 'ದ ಹೆಲೆನಿಸ್ಟಿಕ್ ಏಜ್', ಕೇಂಬ್ರಿಜ್, ೧೯೨೩. ಈ ಲೇಖನವು ತುಂಬ ಕುತೂಹಲಕಾರಿಯಾಗಿದೆ, ಬೇರೆ ಕಡೆಗಳಲ್ಲಿ ತಕ್ಷಣ ಸಿಕ್ಕದ ಅನೇಕ ವಿಷಯಗಳು ಇದರಲ್ಲಿವೆ.

೮೯. ಅದೇ.

ಆವಶ್ಯಕ ವಸ್ತುಗಳನ್ನು ಕೊಳ್ಳಲೂ ಕೂಲಿಯು ಕಡಿಮೆಯಾಗಿದ್ದುದರಿಂದ, ಯುವಕರೂ ಬಲಿಷ್ಠರೂ ಆದ ಸ್ವತಂತ್ರ ಶ್ರಮಿಕರು ಕೂಲಿಗಾಗಿ ಕೆಲಸ ಪಡೆಯಲು ಅವಕಾಶವಿತ್ತು. ದುಡ್ಡಿಗಾಗಿ ದುಡಿಯುವವನ ಬದುಕು ಕಷ್ಟಗಳಿಂದಲೂ ಅಪಾಯಗಳಿಂದಲೂ ತುಂಬಿತ್ತು ಎಂಬುದರಲ್ಲಿ ಸಂದೇಹವಿಲ್ಲ, ಆದರೆ ಅದರಿಂದ ಹಲವಾರು ಸಾಧ್ಯತೆಗಳು ತೆರೆದುಕೊಂಡಿದ್ದವು. ಪೂರ್ವದ ಯಾವುದಾದರೂ ಶ್ರೀಮಂತ ನಗರದಲ್ಲಿ ಲೂಟಿಯಾಗಬಹುದಾಗಿತ್ತು; ಹಣವಿತ್ತು ದಂಗೆಯೇಳಿಸುವ ಅವಕಾಶವೂ ಇತ್ತು. ತನ್ನ ಸೈನ್ಯವನ್ನು ವಿಸರ್ಜಿಸುವ ಪ್ರಯತ್ನವು ದಳಪತಿಗೆ ಅಪಾಯಕಾರಿಯಾಗಿತ್ತು; ಪ್ರಾಯಶಃ ಈ ಕಾರಣಕ್ಕಾಗಿಯೇ ಯುದ್ಧಗಳು ಹೆಚ್ಚು ಕಡಿಮೆ ನಿರಂತರವಾಗಿ ನಡೆಯುತ್ತಲೇ ಇದ್ದವು.

ಹಳೆಯ ಗ್ರೀಕ್ ನಗರಗಳಲ್ಲಿ ಹಿಂದಿನ ನಾಗರಿಕ ಭಾವನೆಯು ಉಳಿದುಕೊಂಡಿತ್ತು, ಆದರೆ ಅಲೆಕ್ಸಾಂಡರ್ ಸ್ಥಾಪಿಸಿದ ಅಲೆಕ್ಸಾಂಡ್ರಿಯವನ್ನೂ ಒಳಗೊಂಡಂತೆ ಹೊಸ ನಗರಗಳಲ್ಲಲ್ಲ. ಹಿಂದೆಯಾದರೆ ಹೊಸ ನಗರಗಳು ಯಾವುದೋ ಹಳೆಯ ನಗರದಿಂದ ವಲಸೆ ಬಂದವರಿಂದ ಕೂಡಿದ್ದ ವಸಾಹತುಗಳಾಗಿರುತ್ತಿದ್ದವು, ತಮ್ಮ ಮೂಲ ನಗರಗಳೊಡನೆ ಅವರು ಭಾವನಾತ್ಮಕ ಸಂಬಂಧವನ್ನು ಮುಂದುವರಿಸುತ್ತಿದ್ದರು. ಇಂತಹ ಭಾವನಾತ್ಮಕತೆಯು ದೀರ್ಘಕಾಲಿಕ; ನಿದರ್ಶನಕ್ಕೆ ಕ್ರಿಪೂ ೧೯೬ ರಲ್ಲಿ ಹೆಲೆಸ್ಪಾಂಟ್ ಮೇಲೆ ಲಂಪಾಸ್ಕಸ್‌ನಲ್ಲಿ ನಡೆದ ರಾಜತಾಂತ್ರಿಕ ಚಟುವಟಿಕೆಗಳಿಂದ ಉಂಟಾದವು. ಆ ನಗರಕ್ಕೆ ಸೆಲ್ಯೂಸಿಡ್ ದೊರೆ ಮೂರನೆಯ ಅಂಟಿಯೋಕಸ್ ವಶಪಡಿಸಿಕೊಳ್ಳಬಹುದಾದ ಭಯವಿತ್ತು, ಆದ್ದರಿಂದ ಅದು ರಕ್ಷಣೆಗಾಗಿ ರೋಮ್‌ನಲ್ಲಿ ಮನವಿಮಾಡಿಕೊಂಡಿತು. ನಿಯೋಗವೊಂದನ್ನು ಕಳುಹಿಸಲಾಯಿತು, ಆದರೆ ಅದು ನೇರವಾಗಿ ಹೋಗಲಿಲ್ಲ; ಮೊದಲು ಅದು ಹೋದದ್ದು ಬಹಳ ದೂರವಿದ್ದರೂ ಮಾರ್ಸಿಯೆಲೆಸ್‌ಗೆ; ಅದೂ ಲಂಪಾಸ್ಕಸ್‌ನಂತೆ ಫೊಕಾಕಿಯದ ಒಂದು ವಸಾಹತು, ಅದಕ್ಕಿಂತ ಮಿಗಿಲಾಗಿ ರೋಮನ್‌ರು ಅದನ್ನು ಸ್ನೇಹದೃಷ್ಟಿಯಿಂದ ಕಾಣುತ್ತಿದ್ದರು. ಮಾರ್ಸಿಯೆಲೆಸ್‌ನ ಪ್ರಜೆಗಳು ನಿಯೋಗದ ಮಾತುಗಳನ್ನು ಕೇಳಿದ ಬಳಿಕ, ತಮ್ಮ ಸೋದರ ನಗರವನ್ನು ರಕ್ಷಿಸಲು ಮನವಿ ಮಾಡಲು ತಮ್ಮದೇ ಒಂದು ನಿಯೋಗವನ್ನು ರೋಮ್‌ಗೆ ಕಳಿಸಲು ತಕ್ಷಣವೇ ತೀರ್ಮಾನಿಸಿದರು. ಮಾರ್ಸಿಯೆಲೆಸ್‌ನಿಂದ ಒಳನಾಡಿನಲ್ಲಿ ವಾಸಿಸುತ್ತಿದ್ದ ಗಾಲ್ಸ್ ಜನರು ಏಷ್ಯಾ ಮೈನರ್‌ನ ತಮ್ಮ ಗೆಲಾಷಿಯನ್ ಬಂಧುಗಳಿಗೆ ಲಂಪಾಸ್ಕಸ್ ಅನ್ನು ಸ್ನೇಹದಿಂದ ಕಾಣುವಂತೆ ಬಿನ್ನೈಸಿಕೊಂಡು ಬರೆದ ಒಂದು ಪತ್ರದೊಂದಿಗೆ ಅವರೊಡನೆ ಸೇರಿಕೊಂಡರು. ಏಷ್ಯಾ ಮೈನರ್‌ನ ವ್ಯವಹಾರಗಳಲ್ಲಿ ಮೂಗು ತೂರಿಸುವ ಈ ಒಂದು ನೆಪಕ್ಕಾಗಿ ರೋಮ್ ಸಹಜವಾಗಿ ಸಂತಸಗೊಂಡಿತು; ಹೀಗೆ ರೋಮ್‌ನ ಮಧ್ಯಸ್ಥಿಕೆಯಿಂದಾಗಿ ಲಂಪಾಸ್ಕಸ್, ರೋಮ್‌ಗೆ ಅದು

ಇರಿಸುಮುರಿಸು ಉಂಟುಮಾಡುವ ತನಕ ತನ್ನ ಸ್ವಾತಂತ್ರ್ಯವನ್ನುಳಿಸಿಕೊಂಡಿತು.[೯೦]

ಒಟ್ಟಾರೆ, ಏಷ್ಯಾದ ರಾಜರು ತಮ್ಮನ್ನು ಗ್ರೀಕ್-ಪ್ರೀತಿಯವರು ('ಫಿಲ್-ಹೆಲೀನ್') ಎಂದು ಬಣ್ಣಿಸಿಕೊಂಡರು, ಧೋರಣೆ ಮತ್ತು ಸೈನಿಕ ಆವಶ್ಯಕತೆಗಳಿಗೆ ಸಾಧ್ಯವಾಗುವ ಮಟ್ಟಿಗೆ ಹಳೆಯ ಗ್ರೀಕ್ ನಗರಗಳೊಡನೆ ಸ್ನೇಹವನ್ನುಳಿಸಿಕೊಂಡವು. ಈ ನಗರಗಳು (ತಮಗೆ ಸಾಧ್ಯವೆನಿಸಿದಾಗ), ಕಪ್ಪವಿಲ್ಲದೆ ಹಾಗೂ ರಾಜಠಾಣ್ಯವಿಲ್ಲದ ಪ್ರಜಾಪ್ರಭುತ್ವಾತ್ಮಕ ಸರ್ಕಾರವನ್ನು ಹಕ್ಕಿನಿಂದೆಂಬಂತೆ ಪಡೆಯಲು ಬಯಸಿದುವು. ಅವು ಶ್ರೀಮಂತವಾಗಿದ್ದವು, ದುಡ್ಡಿಗೆ ದುಡಿಯುವ ಕೂಲಿಗಳನ್ನು ಕಳಿಸುವ ಸಾಮರ್ಥ್ಯವುಳ್ಳವಾಗಿದ್ದವು, ಅವುಗಳಲ್ಲಿನ ಕೆಲವದರಲ್ಲಿ ಮುಖ್ಯ ರೇವುಗಳಿದ್ದವು, ಹೀಗಾಗಿ ಅವುಗಳನ್ನು ಸಮಾಧಾನಪಡಿಸುವುದು ಸೂಕ್ತವಾಗಿತ್ತು. ಆದರೆ ಅವರೇನಾದರೂ ಅಂತರ್ಯುದ್ಧದಲ್ಲಿ ತಪ್ಪು ಪಕ್ಷವನ್ನು ಬೆಂಬಲಿಸಿದರೆ, ಅವರನ್ನು ಗೆಲ್ಲುವುದು ಸುಲಭವಾಗಿತ್ತು. ಒಟ್ಟಾರೆ, ಕ್ರಮೇಣ ಉಚ್ಛ್ರಾಯಕ್ಕೆ ಬಂದಿದ್ದ ಸೆಲ್ಯೂಸಿಡ್ ಮತ್ತಿತರ ರಾಜವಂಶಗಳು ಅವರೊಡನೆ ತಾಳ್ಮೆಯಿಂದ ವರ್ತಿಸಿದುವು, ಆದರೆ ಇದಕ್ಕೂ ಅಪವಾದಗಳಿದ್ದವು.

ಹೊಸ ನಗರಗಳು, ತಮ್ಮಲ್ಲಿ ತಕ್ಕಮಟ್ಟಿಗಿನ ಸ್ವಯಮಾಡಳಿತವಿದ್ದರೂ, ಹಳೆಯ ನಗರಗಳ ಸಂಪ್ರದಾಯಗಳನ್ನು ಹೊಂದಿರಲಿಲ್ಲ. ಅವುಗಳ ಪ್ರಜೆಗಳು ಒಂದೇ ಮೂಲದವರಾಗಿರಲಿಲ್ಲ, ಗ್ರೀಸ್‌ನ ಎಲ್ಲ ಭಾಗಗಳಿಂದ ಬಂದವರಾಗಿದ್ದರು. ಅವರು ಕಾಂಕ್ವೆಸ್ಟಡೋರೆಸ್‌ಗಳಂತೆ ಅಥವಾ ಜೊಹಾನ್ಸ್‌ಬರ್ಗ್‌ನ ನೆಲಸಿಗರಂತೆ ಮುಖ್ಯವಾಗಿ ಸಾಹಸಿಗರಾಗಿದ್ದರೇ ಹೊರತು, ಹಿಂದಿನ ಗ್ರೀಕ್ ವಲಸಿಗರಂತೆಯೋ ನ್ಯೂ ಇಂಗ್ಲಂಡ್‌ನ ಅನ್ವೇಷಕರಂತೆಯೋ ಧರ್ಮನಿಷ್ಠ ಯಾತ್ರಿಕರಾಗಿರಲಿಲ್ಲ. ಇದರಿಂದಾಗಿ ಅಲೆಕ್ಸಾಂಡರ್‌ನ ನಗರಗಳಲ್ಲಿ ಒಂದಾದರೂ ಬಲಿಷ್ಠ ರಾಜಕೀಯ ಘಟಕವಾಗಿರಲಿಲ್ಲ. ರಾಜನ ಸರ್ಕಾರದ ದೃಷ್ಟಿಯಿಂದ ಇದು ಅನುಕೂಲಕರವಾಗಿತ್ತು, ಆದರೆ ಹೆಲೆನಿಸಂನ ಹರಡುವಿಕೆಯ ದೃಷ್ಟಿಯಿಂದ ದೌರ್ಬಲ್ಯವಾಗಿತ್ತು.

ಹೆಲೆನಿಸ್ಟಿಕ್ ಜಗತ್ತಿನಲ್ಲಿ ಗ್ರೀಕೇತರ ಮತಧರ್ಮ ಮತ್ತು ಕಂದಾಚಾರಗಳ ಪ್ರಭಾವವು ಪೂರ್ತಿಯಾಗಲ್ಲದಿದ್ದರೂ ಮುಖ್ಯವಾಗಿ ಕಡಿಮೆಯದಾಗಿರಲಿಲ್ಲ. ಇವು ಜನಜನಿತವಾದ ಗ್ರೀಕ್ ಬಹುದೇವತಾರಾಧನೆಗಿಂತ ಉತ್ತಮವಾದ ಮತಧರ್ಮಗಳಾಗಿದ್ದರೂ ಯೆಹೂದಿ, ಪರ್ಷಿಯನ್ ಮತ್ತು ಬೌದ್ಧ ಇವರ ವಿಷಯದಲ್ಲಿ ಹೀಗಿದ್ದಿರಲಾರದು, ಇವುಗಳನ್ನು ಅತ್ಯುತ್ತಮ ತತ್ವಜ್ಞಾನಿಗಳು ಅಧ್ಯಯನ ಮಾಡಿ ಲಾಭ ಪಡೆಯಬಹುದಾಗಿತ್ತು. ದುರದೃಷ್ಟವಶಾತ್, ಗ್ರೀಕ್‌ರ ಮನಸ್ಸಿನ ಮೇಲೆ ಬಹುವಾಗಿ ಪ್ರಭಾವ ಬೀರಿದವರು ಬ್ಯಾಬಿಲೋನಿಯನ್ನರು, ಅಥವಾ

---

೯೦. ಬೇವನ್, 'ಹೌಸ್ ಆಫ್ ಸೆಲ್ಯೂಕಸ್', ಸಂಪುಟ ೨, ಪು. ೪೫-೬.

ಕ್ಯಾಲ್ಡಿಯನ್ನರು. ಅದಕ್ಕೆ ಕಾರಣ, ಮೊದಲಿಗೆ, ಅವರ ಅದ್ಭುತ ಪ್ರಾಚೀನತೆ; ಪುರೋಹಿತ ದಾಖಲೆಗಳು ಸಾವಿರಾರು ವರ್ಷಗಳಷ್ಟು ಪ್ರಾಚೀನವಾದವು, ಇನ್ನೂ ಹಲವು ಸಾವಿರ ವರ್ಷಗಳಷ್ಟು ಹಿಂದಿನವು ಎಂದೂ ಹೇಳಿಕೊಳ್ಳುತ್ತಿದ್ದರು. ಆನಂತರ, ಅವರಲ್ಲಿ ಒಂದಷ್ಟು ಸ್ವಂತ ಬುದ್ಧಿಶಕ್ತಿಯಿತ್ತು: ಬ್ಯಾಬಿಲೋನಿಯನ್ನರು ಗ್ರೀಕರಿಗಿಂತ ಮುಂಚಿನಿಂದಲೂ ಹೆಚ್ಚು ಕಡಿಮೆ ಗ್ರಹಣಗಳ ಬಗ್ಗೆ ಮುನ್ನುಡಿಯಬಲ್ಲವರಾಗಿದ್ದರು. ಆದರೆ ಇವು ಕೇವಲ ಗ್ರಹಿಕೆಯ ಕಾರಣಗಳು, ಅಷ್ಟೆ; ಅವರು ಪಡೆದುದು ಮುಖ್ಯವಾಗಿ ಜ್ಯೋತಿಷ್ಯ ಮತ್ತು ಇಂದ್ರಜಾಲಗಳನ್ನು. ಪ್ರೊಫೆಸರ್ ಗಿಲ್‌ಬರ್ಟ್ ಮರ್ರೆ ಹೀಗೆ ಹೇಳುತ್ತಾರೆ: 'ಯಾವುದೋ ದೂರದ ದ್ವೀಪವೊಂದರ ಜನಗಳಲ್ಲಿ ಹೊಸ ರೋಗವೊಂದು ಕಾಣಿಸಿಕೊಂಡಂತೆ ಜ್ಯೋತಿಷ್ಯವು ಹೆಲೆನಿಸ್ಟಿಕ್ ಮನಸ್ಸಿನಲ್ಲಿ ಮೂಡಿತು. ಡಿಯೋಡರಸ್ ವರ್ಣಿಸಿದ ಹಾಗೆ, ಓಝಿಮಾಂಡಿಯಾಸ್‌ನ ಗೋರಿಯನ್ನು ಜ್ಯೋತಿಷ್ಯಸಂಬಂಧೀ ಸಂಕೇತಗಳಿಂತ ಮುಚ್ಚಿಬಿಟ್ಟರು, ಕಾಮೆಜೀನ್‌ನಲ್ಲಿ ಪತ್ತೆ ಮಾಡಲಾದ ಮೊದಲ ಆಂಟಿಯೋಕಸ್‌ನ ಗೋರಿಯೂ ಇದೇ ಬಗೆಯದು. ತಮ್ಮನ್ನು ನಕ್ಷತ್ರಗಳು ಮೇಲಿನಿಂದ ಗಮನಿಸುತ್ತಿವೆ ಎಂಬುದು ರಾಜರುಗಳ ಶ್ರದ್ಧೆಯಾಗಿತ್ತು. ಆದರೆ ಪ್ರತಿಯೊಬ್ಬನದರ ಮೇಲೂ ಮೊಳಕೆಯೊಡೆಯಲು ಸಿದ್ಧವಾಯಿತು.'[೯೧] ಗ್ರೀಕರಿಗೆ ಜ್ಯೋತಿಷ್ಯವನ್ನು ಮೊದಲು ಕಲಿಸಿದ್ದು ಬೆರೋಸಸ್ ಎಂಬ ಒಬ್ಬ ಕ್ಯಾಲ್ಡಿಯದವನು, ಆದು ಆದದ್ದು ಅಲೆಕ್ಸಾಂಡರ್‌ನ ಕಾಲದಲ್ಲೆಂದು ಕಾಣುತ್ತದೆ, ಅವನು, ಸೆನೆಕನ ಪ್ರಕಾರ, ಕಾಸ್‌ನಲ್ಲಿ ಬೋಧಿಸಿದ ಮತ್ತು ಬೇಲ್ ಅನ್ನು ವ್ಯಾಖ್ಯಾನಿಸಿದ. ಪ್ರೊಫೆಸರ್ ಮರ್ರೆ ಹೇಳುವಂತೆ, ಇದರ ಅರ್ಥ ಅವನು 'ಐ ಆಫ್ ಬೇಲ್' ಅನ್ನು ಗ್ರೀಕ್‌ಗೆ ಭಾಷಾಂತರಿಸಿದ ಎಂದಿರಬೇಕು; ಇದು ಎಪ್ಪತ್ತು ಹಲಗೆಗಳ ಮೇಲೆ ಬರೆಯಲಾದ ಒಂದು ಗ್ರಂಥ, ಆಸುರ್‌ಬನ್‌-ಪಾಲ್‌ನ (ಕ್ರಿಪೂ ೬೮೬–೬೨೬) ಗ್ರಂಥಾಲಯದಲ್ಲಿ ದೊರೆತದ್ದು, ಆದರೆ ಇದನ್ನು ಬರೆದದ್ದು ಕ್ರಿಪೂ ಮೂರನೆಯ ಸಹಸ್ರಮಾನದಲ್ಲಿದ್ದ ಮೊದಲನೆಯ ಸಾರ್ಗನ್‌ಗಾಗಿ ಬರೆಯಲಾದದ್ದು. (ಅದೇ: ಪು. ೧೭೬).

ನಾವು ಮುಂದೆ ನೋಡುವಂತೆ, ಅತ್ಯುತ್ತಮ ತತ್ವಜ್ಞಾನಿಗಳಲ್ಲಿ ಕೂಡ ಬಹುಸಂಖ್ಯಾತರು ಜ್ಯೋತಿಷ್ಯದಲ್ಲಿನ ಶ್ರದ್ಧೆಗೆ ಬಲಿಯಾದರು. ಭವಿಷ್ಯವನ್ನು ತಿಳಿಯಬಹುದು ಎಂಬ ಶ್ರದ್ಧೆಯಿಂದಾಗಿ, ವಿಧಿಯ ಅನಿವಾರ್ಯತೆಯನ್ನು ಅದು ಒಳಗೊಂಡಿತು, ಅದನ್ನು ಪ್ರಚಲಿತವಾದ ಅದೃಷ್ಟದೊಡನೆ ತಳುಕು ಹಾಕಲಾಯಿತು. ಬಹುತೇಕ ಜನರು ಎರಡನ್ನೂ ನಂಬಿದ್ದುದರಲ್ಲಿ ಸಂದೇಹವಿಲ್ಲ, ಅವರೆಂದಿಗೂ ಅವುಗಳ ಅಸಾಂಗತ್ಯವನ್ನು ಗಮನಿಸಲಿಲ್ಲ.

---

೯೧. 'ಫೈವ್ ಸ್ಟೇಜಸ್ ಆಫ್ ಗ್ರೀಕ್ ರಿಲಿಜನ್', ಪು. ೧೭೭–೮.

ಈ ಸಾಮಾನ್ಯ ಗೊಂದಲವು, ಬೌದ್ಧಿಕ ದೌರ್ಬಲ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನೈತಿಕ ಪತನಕ್ಕೆ ಕಾರಣವಾಯಿತು. ದೀರ್ಘಕಾಲೀನ ಅನಿಶ್ಚಿತತೆಯ ಯುಗಗಳು, ಅದು ಕೆಲವರಲ್ಲಿನ ಅತ್ಯುನ್ನತ ಸಂತ ಸ್ವಭಾವಕ್ಕೆ ಅನುಗುಣವಾಗಿದ್ದರೂ, ಗೌರವಸ್ಥ ನಾಗರಿಕರ ನೀರಸ ದೈನಂದಿನ ಸದ್ಗುಣಗಳಿಗೆ ವಿರೋಧವೆನಿಸಿತು. ನಾಳೆ ನಿಮ್ಮ ಉಳಿತಾಯವೆಲ್ಲ ಮಣ್ಣುಪಾಲಾಗುವುದಾದರೆ ಮಿತವ್ಯಯದ ಉಪಯೋಗವೇನು; ನೀವು ಯಾರ ಎದುರಿಗೆ ಪ್ರಾಮಾಣಿಕರಾಗಿರುತ್ತೀರೋ ಅವರು ನಿಮಗೆ ಟೋಪಿ ಹಾಕುವುದು ಖಚಿತವಾದರೆ ಅದಕ್ಕೆ ಬೆಲೆಯೆಲ್ಲಿ; ಯಾವ ಉದಾತ್ತ ಕಾರಣವೂ ಮುಖ್ಯವಲ್ಲದಿರುವಾಗ ಅಥವಾ ಅದಕ್ಕೆ ಸ್ಥಿರ ಗೆಲವಿನ ಸಾಧ್ಯತೆಯಿಲ್ಲದಿರುವಾಗ ಸದಾ ಅಂಥ ಉದಾತ್ತ ಕಾರಣವೊಂದಕ್ಕಾಗಿ ತುಡಿಯುವುದಕ್ಕೆ ಅರ್ಥವೇ ಇಲ್ಲ; ಕಪಟ ಪಕ್ಷಾಂತರವು ಬದುಕನ್ನುಳಿಸಲು ಮತ್ತು ಅದೃಷ್ಟ ಖುಲಾಯಿಸಲು ಕಾರಣವಾಗುವುದಾದರೆ ಸತ್ಯವಂತಿಕೆಯ ಪರವಾದ ನಿಲವಿಗೆ ಜಾಗವೆಲ್ಲಿ. ವ್ಯಕ್ತಿಯ ಸದ್ಗುಣದ ಮೂಲವು ಶುದ್ಧ ಪ್ರಾಪಂಚಿಕ ವ್ಯವಹಾರಜ್ಞಾನವಾಗಿರುವಾಗ, ಅಂಥ ಜಗತ್ತಿನಲ್ಲಿ ವ್ಯಕ್ತಿಗೆ ಧೈರ್ಯವಿದ್ದರೆ ಸಾಹಸಿಗನಾಗುತ್ತಾನೆ, ಇಲ್ಲದಿದ್ದರೆ ಪುಕ್ಕಲು ಸಮಯಸಾಧಕನಾಗಿ ಅಡಗಿಕೊಳ್ಳುತ್ತಾನೆ.

ಈ ಕಾಲದಲ್ಲಿ ಮೆನಾಂಡರ್ ಹೀಗೆನ್ನುತ್ತಾನೆ:

ಸ್ವಭಾವತಃ ಲೂಟಿಕೋರರಲ್ಲದಿದ್ದರೂ ಹಾಗಾಗುವ ಜನರು
ದುರದೃಷ್ಟ ಮತ್ತು ಒತ್ತಡಗಳಿಂದಾಗಿ ಹಾಗಾದ
ಅದೆಷ್ಟೋ ಪ್ರಸಂಗಗಳನ್ನು ನೋಡಿದ್ದೇನೆ.

ಇದು ಕ್ರಿಪೂ ಮೂರನೆಯ ಶತಮಾನದ ನೈತಿಕ ಸ್ವರೂಪವನ್ನು ಸಂಗ್ರಹವಾಗಿ ಹೇಳುತ್ತದೆ, ಆದರೆ ಇದಕ್ಕೆ ಅಪವಾದವೆನಿಸಿದ್ದವರು ಕೆಲವರು ಆಗಲೂ ಇದ್ದರು. ಅಂತಹ ಕೆಲವರಲ್ಲಿಯೂ, ಭರವಸೆಯ ಸ್ಥಾನವನ್ನು ಭಯ ಆವರಿಸಿತ್ತು; ಬದುಕಿನ ಉದ್ದೇಶವು ಯಾವುದೇ ಇತ್ಯಾತ್ಮಕ ಕಾರ್ಯವನ್ನು ಮಾಡುವುದರ ಬದಲು ದುರದೃಷ್ಟ ನಿವಾರಣೆಎನಿಸಿತು. 'ತತ್ವಜಿಜ್ಞಾಸೆಯು ಹಿನ್ನೆಲೆಗೆ ಸರಿಯಿತು, ಈಗ ವೈಯಕ್ತಿಕವಗಿದ ನೈತಿಕತೆಯು ಮೊದಲ ಆದ್ಯತೆಯೆನಿಸಿತು. ಕೆಲವು ಮಂದಿ ಧೈರ್ಯಸ್ಥ ಸತ್ಯಾನ್ವೇಷಕರ ಬೆಂಕಿಯ ಕಂಬವಾಗಿ ಉಳಿಯಲಿಲ್ಲ: ಅದರ ಬದಲು ಉಳಿವಿನ ಹೋರಾಟದ ಹಿನ್ನೆಲೆಯಲ್ಲಿ ಅನುಸರಿಸಿ ದುರ್ಬಲರು ಮತ್ತು ಗಾಯಗೊಂಡವರನ್ನು ಹೊತ್ತೊಯ್ಯುವ ರೋಗಿಗಾಡಿಯಾಯಿತು.'[೬೨]

೦

೬೨. ಸಿ.ಎಫ್. ಆಂಗಸ್, 'ಕೇಂಬ್ರಿಜ್ ಏನ್ಷಿಯಂಟ್ ಹಿಸ್ಟರಿ', ಸಂಪುಟ ೭, ಪು. ೨೩೧. ಈ ಮೇಲಿನ ಮೆನಾಂಡರ್‌ನಿಂದ ಮಾಡಿದ ಉದ್ಧರಣವನ್ನೂ ಅದೇ ಅಧ್ಯಾಯದಿಂದ ತೆಗೆದುಕೊಳ್ಳಲಾಗಿದೆ.

೨೬
ಸಿನಿಕರು ಮತ್ತು ಸಂದೇಹವಾದಿಗಳು (ಸಿನಿಕ್ಸ್ ಅಂಡ್ ಸ್ಕೆಪ್ಟಿಕ್ಸ್)

ಬೌದ್ಧಿಕವಾಗಿ ಉನ್ನತರಾದ ವ್ಯಕ್ತಿಗಳಿಗೂ ಆಯಾ ಸಮಕಾಲೀನ ಸಮಾಜಕ್ಕೂ ಇರುವ ಸಂಬಂಧವು ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆಯಾಗಿತ್ತು. ಅದೃಷ್ಟವಂತ ಯುಗಗಳಲ್ಲಿ ಅವರು ತಮ್ಮ ಸುತ್ತಣ ಪರಿಸ್ಥಿತಿಯೊಂದಿಗೆ ಒಟ್ಟಾರೆ ಸಾಮರಸ್ಯದಿಂದ ಕೂಡಿದ್ದರು; ಎಂದರೆ ಅವರಿಗೆ ಆವಶ್ಯಕವೆನಿಸಿದ ಸುಧಾರಣೆಗಳನ್ನು ತಮ್ಮ ಕಾಲದ ಜನರು ಸೂಕ್ತವಾಗಿ ಒಪ್ಪುತ್ತಿದ್ದರು, ಅಥವಾ ಸುಧಾರಣೆಗೊಳ್ಳದಿದ್ದರೂ ತಾವಿದ್ದ ಜಗತ್ತನ್ನವರು ದ್ವೇಷಿಸುತ್ತಿರಲಿಲ್ಲ ಎಂಬುದರಲ್ಲಿ ಸಂಶಯವಿಲ್ಲ. ಮತ್ತೆ ಕೆಲವು ಬೇರೆ ಕಾಲಗಳಲ್ಲವರು ಕ್ರಾಂತಿಕಾರಿಗಳಾಗಿದ್ದರು, ಮೂಲಭೂತ ಬದಲಾವಣೆಗಳಾಗಬೇಕು ಎಂದು ಬಯಸುತ್ತಿದ್ದರು, ತಮ್ಮ ಸಮರ್ಥನೆಯೂ ಕಾರಣವಾಗಿ ಅನತಿ ಭವಿಷ್ಯದಲ್ಲಿ ಈ ಬದಲಾವಣೆಗಳಾಗುತ್ತವೆ ಎಂದವರು ನಿರೀಕ್ಷಿಸುತ್ತಿದ್ದರು. ಮತ್ತೂ ಕೆಲವು ಕಾಲಗಳಲ್ಲಿ, ಅವರಿಗೆ ಜಗತ್ತಿನ ಬಗ್ಗೆಯೇ ಹೇಸಿಕೆಯಾಗುತ್ತಿತ್ತು, ಎಂತಹ ಬದಲಾವಣೆಗಳು ಆವಶ್ಯಕ ಎಂಬುದು ತಿಳಿದಿದ್ದರೂ, ಅದು ನೆರವೇರುವ ಯಾವುದೇ ಭರವಸೆಯೂ ಅವರಲ್ಲಿರುತ್ತಿರಲಿಲ್ಲ. ಈ ಮನೋಭಾವವು ಬಹುಬೇಗ ಹತಾಶೆಯಾಗುತ್ತಿತ್ತು, ಇದರಿಂದಾಗಿ ಭೂಮಿಯು ಮೂಲಭೂತವಾಗಿಯೇ ಕ್ಷುಲ್ಲಕವೆಂಬ ಭಾವನೆಯುಂಟಾಗುತ್ತಿತ್ತು, ಒಳ್ಳೆಯದು ಮುಂದಿನ ಜನ್ಮದಲ್ಲೋ ಅದ್ಭುತ ರೀತಿಯ ರೂಪಾಂತರದಿಂದಲೋ ಆಗಬಹುದೆಂದು ಎದುರು ನೋಡುತ್ತಿದ್ದರು.

ಮತ್ತೂ ಕೆಲವು ಕಾಲಗಳಲ್ಲಿ, ಈ ಎಲ್ಲ ಮನೋಭಾವಗಳೂ ವಿವಿಧ ಜನಗಳಲ್ಲಿರುತ್ತಿದ್ದವು. ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧವನ್ನು ಗಮನಿಸಿ. ಗಯಟೆ ಸಮಾಧಾನದಿಂದಿದ್ದ, ಬೆಂಥಮ್ ಸುಧಾರಕನಾಗಿದ್ದ, ಶೆಲ್ಲಿ ಕ್ರಾಂತಿಕಾರಿಯಾಗಿದ್ದ, ಲಿಯೊಪರ್ಡ್ ನಿರಾಶವಾದಿಯಾಗಿದ್ದ. ಆದರೆ ಬಹುತೇಕ ಕಾಲಗಳಲ್ಲಿ, ಮಹಾ ಲೇಖಕರಲ್ಲಿ ಆ ಕಾಲದ ಪಸ್ತುತ ಮನೋಭಾವ ಬಿಂಬಿತವಾಗುತ್ತದೆ. ಇಂಗ್ಲಂಡ್‌ನಲ್ಲಿ ಅವರು ಎಲಿಜ಼ಬೆತ್ ಆಳ್ವಿಕೆಯಲ್ಲಿ

ಸಮಾಧಾನದಿಂದಿದ್ದರು, ಹದಿನೆಂಟನೆಯ ಶತಮಾನದಲ್ಲಿ ಅವರು ಫ್ರಾನ್ಸ್‌ನಲ್ಲಿ ಕ್ರಿಶ ೧೭೮೦ ರ ಹೊತ್ತಿಗೆ ಕ್ರಾಂತಿಕಾರಿಗಳಾದರು, ಜರ್ಮನಿಯಲ್ಲವರು ೧೮೧೩ ರಿಂದ ರಾಷ್ಟ್ರೀಯವಾದಿಗಳಾದರು.

ಪಾದ್ರಿಗಳು ಮೇಲುಗೈಯಾಗಿದ್ದ ಕಾಲದಲ್ಲಿ, ಅಂದರೆ ಐದರಿಂದ ಹದಿನೈದನೆಯ ಶತಮಾನದವರೆಗೆ, ಸೈದ್ಧಾಂತಿಕ ಶ್ರದ್ಧೆ ಹಾಗೂ ವಾಸ್ತವ ಅನಿಸಿಕೆಗಳ ನಡುವಣ ಒಂದು ಬಗೆಯ ತಿಕ್ಕಾಟವಿತ್ತು. ಸೈದ್ಧಾಂತಿಕವಾಗಿ, ಈ ಜಗತ್ತು ಒಂದು ಕಣ್ಣೀರ ಕಣಿವೆ, ಮುಂದೆ ಬರುವ ಜಗತ್ತಿಗಾಗಿ ಯಾತನಾಮಯ ಸಿದ್ಧತೆ. ಆದರೆ ವಾಸ್ತವದಲ್ಲಿ, ಬಹುತೇಕ ಪಾದ್ರಿಗಳಾಗಿದ್ದ ಗ್ರಂಥರಚಯಿತರು, ಚರ್ಚ್‌ನ ಅಧಿಕಾರದಿಂದ ಉಲ್ಲಸಿತರಾಗಿದ್ದರು, ತಾವು ಉಪಯುಕ್ತವೆಂದು ಭಾವಿಸಿದ್ದ ಚಟುವಟಿಕೆಗಳಲ್ಲಿ ತೊಡಗಲು ಅಪಾರ ಅವಕಾಶಗಳಿದ್ದುದಾಗಿ ಭಾವಿಸಿದ್ದರು. ಹೀಗಾಗಿ ಅವರಿಗಿದ್ದುದು ಆಡಳಿತವರ್ಗದ ಮನೋಭಾವ, ಅನ್ಯ ಜಗತ್ತಿನಲ್ಲಿ ತಾವು ದೇಶಭ್ರಷ್ಟರಾಗಿದ್ದೇವೆ ಎಂಬ ಭಾವವಲ್ಲ. ಮಧ್ಯಯುಗದಾದ್ಯಂತ ಹರಿಯುತ್ತಿದ್ದ ಕುತೂಹಲಕಾರಿ ದ್ವೈಧೀಭಾವದ ಒಂದು ಭಾಗವಿದು. ಇದಕ್ಕೆ ಕಾರಣ ಪರಲೋಕದ ಶ್ರದ್ಧೆಗಳನ್ನು ಆಧರಿಸಿದ ಚರ್ಚ್ ದೈನಂದಿನ ಬದುಕಿನಲ್ಲಿ ಬಹುಮುಖ್ಯ ಸಂಸ್ಥೆಯಾಗಿದ್ದುದು.

ಪರಲೋಕಕ್ಕೆ ಸಿದ್ಧವಾಗಬೇಕಾದ ಕ್ರೈಸ್ತಮತಧರ್ಮದ ಮನಃಸಿದ್ಧತೆಯು ಹೆಲೆನಿಸ್ಟಿಕ್ ಯುಗದಲ್ಲಿ ಮತ್ತು ನಗರಪ್ರಭುತ್ವಕ್ಕೆ ಹಿಡಿದ ಗ್ರಹಣದಿಂದ ಆರಂಭಗೊಳ್ಳುತ್ತದೆ. ಅರಿಸ್ಟಾಟಲ್‌ನವರೆಗಿನ ಗ್ರೀಕ್ ತತ್ವಜ್ಞಾನಿಗಳು, ಇದೋ ಅದೋ ಯಾವುದರದೋ ಬಗ್ಗೆ ದೂರುತ್ತಿದ್ದರಾದರೂ, ಮುಖ್ಯವಾಗಿ ವ್ಯಾಪಕ ಹತಾಶಸ್ಥಿತಿಯಿಂದ ಕೂಡಿರಲಿಲ್ಲ, ರಾಜಕೀಯವಾಗಿಯೂ ತಾವು ಕೆಲಸಕ್ಕೆ ಬಾರದವರೆಂದು ಭಾವಿಸಿರಲಿಲ್ಲ. ಕೆಲವು ಸಂದರ್ಭಗಳಲ್ಲಿ ಅವರು ಸೋತ ಪಕ್ಷಕ್ಕೆ ಸೇರಿದವರಾಗಿರುತ್ತಿದ್ದರೂ, ಹೀಗಾಗಿ ಸಂಘರ್ಷದ ಕಾರಣದಿಂದ ತಮ್ಮ ಸೋಲು ಸಂಭವಿಸಿರಬಹುದಾದರೂ, ಅದು ಬುದ್ಧಿವಂತರ ಅನಿವಾರ್ಯ ಅಸಾಮರ್ಥ್ಯದ ಕಾರಣದಿಂದಲ್ಲ. ಪೈಥಾಗೊರಾಸ್ ಮತ್ತು ಕೆಲವು ಸಂದರ್ಭಗಳಲ್ಲಿನ ಪ್ಲೇಟೋನಂತೆ ತೋರಿಕೆಯ ಜಗತ್ತನ್ನು ಖಂಡಿಸಿ ಆನುಭಾವಿಕತೆಯನ್ನು ಮರೆಹೊಕ್ಕವರೂ ಕೂಡ ಆಡಳಿತವರ್ಗವನ್ನು ಸಂತರು ಮತ್ತು ಋಷಿಗಳನ್ನಾಗಿಸುವ ವ್ಯಾವಹಾರಿಕ ಯೋಜನೆಗಳನ್ನು ಹೊಂದಿದ್ದರು. ರಾಜಕೀಯ ಅಧಿಕಾರವು ಮ್ಯಾಸಿಡೋನಿಯನ್ನರ ಕೈಗೆ ಹೋದಾಗ, ಗ್ರೀಕ್ ತತ್ವಜ್ಞಾನಿಗಳು ಸಹಜವಾಗಿಯೇ ರಾಜಕೀಯದಿಂದ ವಿಮುಖವಾಗಿ ವೈಯಕ್ತಿಕ ಸದ್ಗುಣ ಅಥವಾ ಬಿಡುಗಡೆಯ ಸಮಸ್ಯೆಯ ಕಡೆಗೆ ಹೆಚ್ಚು ಗಮನ ಹರಿಸಿದರು. ಜನರು ಹೇಗೆ ತಾನೇ ಒಳ್ಳೆಯ ದೇಶವನ್ನು ಮಾಡಬಹುದು ಎಂದವರು ಪ್ರಶ್ನಿಸಲಿಲ್ಲ. ಅದರ ಬದಲು ಅವರು ಕೇಳಿದ್ದು: ಕೆಡುಕಿನ ಜಗತ್ತಿನಲ್ಲಿ ವ್ಯಕ್ತಿಗಳು ಹೇಗೆ ಸದ್ಗುಣಿಗಳಾಗಬಹುದು, ಅಥವಾ ಸಂಕಟದ ಜಗತ್ತಿನಲ್ಲಿ ಹೇಗೆ

ಸುಖಿಗಳಾಗಿರಬಹುದು ಎಂದು. ಈ ಬದಲಾವಣೆಯು ಒಂದು ಪ್ರಮಾಣದಲ್ಲಾಯಿತು ಎಂಬುದು ನಿಜ. ಇಂತಹ ಪ್ರಶ್ನೆಗಳು ಹಿಂದೆಯೂ ಇದ್ದುವು, ಆನಂತರ ಸಂಯಮವಾದಿಗಳು ಸ್ವಲ್ಪ ಕಾಲ ಮತ್ತೆ ರಾಜಕೀಯದಲ್ಲಿ ಆಸಕ್ತರಾದರು – ರೋಮ್‌ನ ರಾಜಕೀಯದಲ್ಲಿ, ಗ್ರೀಕ್ ರಾಜಕೀಯದಲ್ಲಲ್ಲ. ಆದರೆ ಬದಲಾವಣೆಯು ಮಾತ್ರ ನಿಜವಾದುದು. ರೋಮನ್ ಯುಗದಲ್ಲಿ ಸೀಮಿತ ಪ್ರಮಾಣದಲಿದ್ದ ಸಂಯಮವಾದ (ಸ್ಟಾಯಿಸಿಸಂ) ದಲ್ಲಿ, ಗಂಭೀರವಾದ ಆಲೋಚನೆ ಮತ್ತು ಅನಿಸಿಕೆಗಳನ್ನು ಹೊಂದಿದ್ದವರು ಹೆಚ್ಚು ಹೆಚ್ಚಾಗಿ ವ್ಯಕ್ತಿನಿಷ್ಠತೆ ಮತ್ತು ವೈಯಕ್ತಿಕತೆಗಳನ್ನು ಹೊಂದಿದರು. ವ್ಯಕ್ತಿ ಬಿಡುಗಡೆಗಾಗಿ ಕ್ರೈಸ್ತಮತಧರ್ಮದ ದೇವವಾಣಿಯೊಂದನ್ನು ಸಿದ್ಧಪಡಿಸಿ, ಅದರಿಂದ ಮತಪ್ರಚಾರದ ಉತ್ಸಾಹವುಂಟಾಗಿ ಕೊನೆಯಲ್ಲಿ ಚರ್ಚ್ ಅನ್ನು ಸೃಷ್ಟಿಸುವುದರಲ್ಲಿ ಇದು ಪರ್ಯವಸಾನವಾಯಿತು. ಇದು ಆಗುವವರೆಗೂ, ತತ್ವಜ್ಞಾನಿಗಳು ತಮ್ಮನ್ನು ಮನಃಪೂರ್ವಕವಾಗಿ ಅರ್ಪಿಸಿಕೊಳ್ಳಬಹುದಾದ ಯಾವುದೇ ಸಂಸ್ಥೆಯಿರಲಿಲ್ಲ, ಹೀಗಾಗಿ ತಮ್ಮ ಅಧಿಕಾರಪ್ರೇಮವನ್ನು ವಿಧಿಯುಕ್ತವಾಗಿ ತೋರ್ಪಡಿಸುವ ದಾರಿ ಇರಲಿಲ್ಲ. ಈ ಕಾರಣದಿಂದಾಗಿ, ನಗರಪ್ರಭುತ್ವಗಳು ಹೊಂದಾಣಿಕೆಯನ್ನು ಬೆಂಬಲಿಸುವ ಪರಿಸ್ಥಿತಿಯಿದ್ದಾಗ ಜೀವಿಸಿದ್ದವರಿಗಿಂತ ಹೆಲೆನಿಸ್ಟಿಕ್ ಯುಗದ ತತ್ವಜ್ಞಾನಿಗಳು ಮಾನವಜೀವಿಗಳಾಗಿ ಹೆಚ್ಚು ಸೀಮಿತಗೊಂಡರು. ಅವರು ಇನ್ನೂ ಚಿಂತನೆಯಲ್ಲಿ ತೊಡಗಿದ್ದರು, ಯಾಕೆಂದರೆ ಚಿಂತನೆಯನ್ನವರು ಬಿಡಲಾರರು ಅದರಿಂದ; ಆದರೆ ತಮ್ಮ ಆಲೋಚನೆಗಳು ವ್ಯವಹಾರ ಜಗತ್ತಿನಲ್ಲಿ ಫಲಪ್ರದವಾಗುವುದೇ ಎಂಬ ಬಗ್ಗೆ ಅವರಿಗೆ ಅಂಥ ಭರವಸೆಯೇನೂ ಇರಲಿಲ್ಲ.

ಅಲೆಕ್ಸಾಂಡರ್‌ನ ಕಾಲದಲ್ಲಿ ನಾಲ್ಕು ತತ್ವಜ್ಞಾನ ಪಂಥಗಳು ಸ್ಥಾಪಿತವಾದವು: ಅವುಗಳಲ್ಲಿ ಎರಡು ತುಂಬ ಪ್ರಸಿದ್ಧ, ಸಂದೇಹವಾದಿಗಳು ಮತ್ತು ಸುಖೈಕವಾದಿಗಳು (ಎಪಿಕ್ಯೂರಿಯನ್ಸ್), ಇವರ ಕುರಿತ ವಿವೇಚನೆ ಮುಂದಿನ ಒಂದು ಅಧ್ಯಾಯದ ವಸ್ತು; ಪ್ರಸ್ತುತ ಅಧ್ಯಾಯದಲ್ಲಿ ನಾವು ಸಿನಿಕ್‌ರು ಮತ್ತು ಸಂದೇಹವಾದಿಗಳ ಬಗ್ಗೆ ನೋಡೋಣ.

ಇವುಗಳಲ್ಲಿ ಮೊದಲನೆಯದು ತನ್ನ ಸ್ಥಾಪಕಬಾದ ಡಯೋಜಿನೀಸ್‌ನ ಮೂಲಕ – ಪ್ಲೇಟೋಗಿಂತ ಸುಮಾರು ಇಪ್ಪತ್ತು ವರ್ಷ ಹಿರಿಯನಾಗಿದ್ದ ಮತ್ತು ಸಾಕ್ರಟೀಸ್‌ನ ಶಿಷ್ಯನಾಗಿದ್ದ – ಆಂಟಿಸ್ಥೆನೀಸ್‌ನಿಂದ ಸಾಧಿತವಾಯಿತು. ಆಂಟಿಸ್ಥೆನೀಸ್‌ನದು ಅದ್ಭುತ ವ್ಯಕ್ತಿತ್ವ, ಕೆಲವು ರೀತಿಗಳಲ್ಲಿ ಟಾಲ್‌ಸ್ಟಾಯ್‌ನಂತೆ. ಸಾಕ್ರಟೀಸ್‌ನ ಮರಣದವರೆಗೂ ಅವನು ತನ್ನ ಶ್ರೀಮಂತ ಶಿಷ್ಯರ ವಲಯದಲ್ಲಿ ಬದುಕಿದ್ದ, ಅವನು ಯಾವುದೇ ಬಗೆಯ ಸಾಂಪ್ರದಾಯಿಕತೆಯನ್ನು ಹೊಂದಿರಲಿಲ್ಲ. ಆದರೆ ಯಾವುದೋ – ಅಥೆನ್ಸ್‌ನ ಸೋಲೋ, ಸಾಕ್ರಟೀಸ್‌ನ ಸಾವೋ, ತಾತ್ವಿಕ ದ್ವಂದ್ವಾರ್ಥಗಳ ದೂರವೋ – ಅವನೇನೂ ಚಿಕ್ಕವನಾಗಿರದಿದ್ದ ಕಾಲದಲ್ಲಿ, ತಾನು ಇದುವರೆಗೂ ಅಮೂಲ್ಯವೆಂದು

ಭಾವಿಸಿದ್ದ ವಸ್ತು-ವಿಷಯಗಳ ಬಗ್ಗೆ ಜಿಹಾಸೆ ತಾಳಿದ. ಅವನಿಗೆ ಸರಳತೆಯ ಒಳ್ಳೆಯತನಕ್ಕಿಂತ ಹೆಚ್ಚಿಗೇನೂ ಬೇಕೆನಿಸಲಿಲ್ಲ. ಅವನು ದುಡಿಮೆಗಾರರ ಜೊತೆ ಸಂಪರ್ಕವಿರಿಸಿಕೊಂಡಿದ್ದ, ತಾನೂ ಅವರಂತೆಯೇ ಉಡುಪು ಧರಿಸುತ್ತಿದ್ದ. ಅವನು ಸ್ವತಂತ್ರ ಬೋಧನೆಯಲ್ಲಿ ತೊಡಗಿದ, ಅದೂ ಅವಿದ್ಯಾವಂತರೂ ಅರ್ಥಮಾಡಿಕೊಳ್ಳುವ ಬಗೆಯಲ್ಲಿ. ಎಲ್ಲ ಸುಧಾರಿತ ತತ್ವಜ್ಞಾನವನ್ನೂ ಅವನು ಕೆಲಸಕ್ಕೆ ಬಾರದವೆಂದು ಪರಿಗಣಿಸಿದ; ಯಾವುದನ್ನು ಅರ್ಥಮಾಡಿಕೊಳ್ಳಬಹುದೋ ಅದನ್ನು ಸರಳ ಜನರೂ ಅರ್ಥಮಾಡಿಕೊಳ್ಳುತ್ತಾರೆ. ಅವನಿಗೆ 'ಮರಳಿ ನಿಸರ್ಗಕ್ಕೆ' ಎಂಬುದರಲ್ಲಿ ಶ್ರದ್ಧೆ, ಇದನ್ನವನು ಬಹು ದೂರ ಒಯ್ದ. ಯಾವ ಸರ್ಕಾರವೂ ಇರಬಾರದು, ಖಾಸಗಿ ಆಸ್ತಿಯಿರಬಾರದು, ಮದುವೆಯಿರಬಾರದು, ಯಾವುದೇ ಸಾಂಸ್ಥಿಕ ಮತಧರ್ಮವಿರಬಾರದು. ಅವನೇ ಅಲ್ಲದಿದ್ದರೂ ಅವನ ಅನುಯಾಯಿಗಳು ಗುಲಾಮಪದ್ಧತಿಯನ್ನು ಖಂಡಿಸಿದರು. ಅವನೇನೂ ವಿರಕ್ತನೆನ್ನುವಂತಿರಲಿಲ್ಲ, ಆದರೆ ಅವನಿಗೆ ಭೋಗವಿಲಾಸ, ಇಂದ್ರಿಯಗಳ ಕೃತಕ ಸುಖವೆಂದರೆ ಆಗದು. 'ಆನಂದತುಂದಿಲನಾಗುವುದಕ್ಕಿಂತ ನಾನು ಹುಚ್ಚನಾಗುವುದು ಲೇಸು' ಎಂದ.[೯೩]

ಆಂಟಿಸ್ಥೆನೀಸ್‌ನ ಕೀರ್ತಿಯು ತನ್ನ ಶಿಷ್ಯನಾಗಿದ್ದ ಡಯೋಜಿನೀಸ್‌ನದನ್ನು ಮೀರಿಸಿತು. ಡಯೋಜಿನೀಸ್ 'ಯೂಕ್ಸೈನ್ ದಡದಲ್ಲಿದ್ದ ಸಿನೋಪಿಯದ ಯುವಕ, ಅವನನ್ನು ಅವನು (ಆಂಟಿಯೋಸ್ಥೆನೀಸ್) ಮೊದಮೊದಲು ಗಮನಿಸಲಿಲ್ಲ; ಕೆಟ್ಟ ಹೆಸರಿನ ಮತ್ತು ನಾಣ್ಯವನ್ನು ವಿರೂಪಗೊಳಿಸಿ ಸೆರೆಮನೆಗೆ ಹೋಗಿದ್ದ ಒಬ್ಬ ಬಡ್ಡಿ ವ್ಯವಹಾರಿಯ ಮಗ. ಆ ಹುಡುಗನನ್ನು ಹೋಗುವಂತೆ ಆಂಟಿಯೋಸ್ಥೆನೀಸ್ ಕಳಿಸಿದ್ದ, ಆದರೆ ಅವನು ಅದನ್ನು ಗಮನಿಸದಿದ್ದುದರಿಂದ ಕೋಲಿನಿಂದ ಹೊಡೆದೂ ಇದ್ದ, ಆದರೂ ಅವನು ಮಿಸುಕಾಡಲಿಲ್ಲ. ಅವನಿಗೆ "ವಿವೇಕ" ಬೇಕಾಗಿತ್ತು, ಆಂಟಿಯೋಕಸ್ ತನಗದನ್ನು ನೀಡಬಲ್ಲನೆಂದು ತಿಳಿದಿದ್ದ. ಜೀವನದಲ್ಲಿನ ಅವನ ಗುರಿಯೆಂದರೆ ತನ್ನ ತಂದೆ ಮಾಡಿದ ಹಾಗೇ ತಾನೂ "ನಾಣ್ಯವನ್ನು ವಿರೂಪಗೊಳಿಸುವುದು", ಆದರೆ ಇನ್ನೂ ದೊಡ್ಡ ಮಟ್ಟದಲ್ಲಿ. ಅವನಿಗೆ ಜಗತ್ತಿನಲ್ಲಿನ ಎಲ್ಲ ನಾಣ್ಯಗಳನ್ನೂ ವಿರೂಪಗೊಳಿಸುವ ಬಯಕೆ. ಸಾಂಪ್ರದಾಯಿಕ ಮುದ್ರೆಯೆಲ್ಲವೂ ಸುಳ್ಳು. ದಂಡನಾಯಕರೆಂದೂ ರಾಜರುಗಳೆಂದೂ ಜನ ಮುದ್ರೆಯೊತ್ತುತ್ತಿದ್ದರು; ಗೌರವ, ವಿವೇಕ, ಸುಖ, ಸಂಪತ್ತು ಎಂದು ಮುದ್ರೆ ಒತ್ತುತ್ತಿದ್ದರು; ಎಲ್ಲವೂ ಮೇಲ್ಬರಹಗಳಿಂದ ಕೂಡಿದ ಕ್ಷುದ್ರ ಲೋಹಗಳಿಂದಾದುದು.[೯೪]

---

೯೩. ಬೆನ್, ಸಂಪುಟ ೨, ಪು. ೪, ೫: ಮರ್‍ರೆ, 'ಫೈವ್ ಸೇಜಸ್', ಪು. ೧೧೩-೧೪.
೯೪. ಅದೇ, ಪು. ೧೧೭.

ಒಂದು ನಾಯಿಯಂತೆ ಬದುಕಲು ಅವನು ನಿರ್ಧರಿಸಿದ, ಹೀಗಾಗಿ ಅವನನ್ನು 'ಸಿನಿಕ'ನೆಂದು ಜನ ಕರೆದರು, ಅಂದರೆ ನಾಯಿ ಎಂದೇ ಅರ್ಥ. ಅವನು ಎಲ್ಲ ರೂಢಿಗಳನ್ನೂ ಅಲ್ಲಗಳೆದ – ಮತಧರ್ಮಗಳದಾಗಿರಬಹುದು, ನಡವಳಿಕೆಯದಾಗಿರಬಹುದು, ಉಡುಪಿನದಾಗಿರಬಹುದು, ಮನೆಯದಾಗಿರಬಹುದು, ಆಹಾರದ್ದಾಗಿರಬಹುದು ಅಥವಾ ಸಭ್ಯತೆಯದಾಗಿರಬಹುದು. ಅವನು ಒಂದು ನೀರಿನ ತೊಟ್ಟಿಯಲ್ಲಿ ಜೀವಿಸಿದ್ದನೆಂದು ಹೇಳುತ್ತಾರೆ, ಆದರೆ ಗಿಲ್ಬರ್ಟ್ ಮರ್ರೆಯವರು ಈ ಭಾವನೆ ತಪ್ಪು ಎನ್ನುತ್ತಾರೆ; ಅದೊಂದು ದೊಡ್ಡ ಗಡಿಗೆ, ಹಿಂದಿನ ಕಾಲದಲ್ಲಿ ಹೆಣಗಳನ್ನು ಹೂಳಲು ಬಳಸಿತ್ತಿದ್ದ ಪೀಪಾಯಿಯಂತಹದು.[೯೫]

ಅವನು ಇಂಡಿಯದ ಒಬ್ಬ ಫಕೀರನಂತೆ ಭಿಕ್ಷೆಯನ್ನೆತ್ತುತ್ತ ಬಾಳಿದ. ತಾನು ಮಾನವರೆಲ್ಲರ ಮಾತ್ರವಲ್ಲ, ಪ್ರಾಣಿಗಳ ಸೋದರನೆಂದೂ ಹೇಳಿಕೊಂಡ. ಅವನ ಬಗ್ಗೆ ಕತೆಗಳು ಹುಟ್ಟಿಕೊಂಡವು, ಅವನು ಜೀವಿಸಿದ್ದ ಕಾಲದಲ್ಲೂ. ಅಲೆಕ್ಸಾಂಡರ್ ಅವನನ್ನು ಹೇಗೆ ಭೇಟಿಯಾದ ಎಂಬುದು ಎಲ್ಲರಿಗೂ ತಿಳಿದ ವಿಷಯ, 'ಏನಾದರೂ ಸಹಾಯ ಬೇಕೇ' ಎಂದು ಕೇಳಿದನಂತೆ, ಅದಕ್ಕವನು 'ನನ್ನ ಬೆಳಕಿನಿಂದ ದೂರವಿರಿ ಎಂಬುದನ್ನು ಮಾತ್ರ' ಎಂದು ಉತ್ತರಿಸಿದನಂತೆ.

ಡಯೋಜಿನೀಸ್‌ನ ಬೋಧನೆಗಳು ನಾವೀಗ 'ಸಿನಿಕತನದ' ಎನ್ನುತ್ತೇವಲ್ಲ ಅಂತಹುದಲ್ಲ, ಅದಕ್ಕೆ ವ್ಯತಿರಿಕ್ತವಾದದ್ದು. ಪ್ರಾಪಂಚಿಕ ವಸ್ತುಗಳ ಬಗ್ಗೆ ಅವನಿಗಿದ್ದ ತಿರಸ್ಕಾರದೊಡನೆ ಹೋಲಿಸಿದರೆ, ಅವನಿಗೆ 'ಸದ್ಗುಣ'ದ ಬಗ್ಗೆ ಅತೀವ ಮಮತೆ. ಬಯಕೆಯಿಂದ ಸ್ವತಂತ್ರವಾದ ಸದ್ಗುಣ ಮತ್ತು ನೈತಿಕ ಸ್ವಾತಂತ್ರ್ಯವನ್ನವನು ಅರಸಿದ: ಅದೃಷ್ಟವು ತರಬಹುದಾದ ವಸ್ತುಗಳ ಬಗೆಗಿನ ಅನಾದರ ಬೆಳೆಸಿಕೊಂಡರೆ ಭಯದಿಂದ ಸ್ವತಂತ್ರರಾಗಬಹುದು. ಈ ವಿಷಯದಲ್ಲಿ, ಮುಂದೆ ನೋಡುವಂತೆ, ಅವನ ಸಿದ್ಧಾಂತವನ್ನು ಸಂಯಮವಾದಿಗಳು ಕೈಗೆತ್ತಿಕೊಂಡರು, ಆದರೆ ಅವರು ನಾಗರಿಕತೆಯ ಸವಲತ್ತುಗಳನ್ನು ತಿರಸ್ಕರಿಸಲಿಲ್ಲ. ಆಧುನಿಕ ಬದುಕಿಗೆ ಸಂಕೀರ್ಣತೆ ಮತ್ತು ಕೃತಕತೆಗಳನ್ನು ಮಾನವನಿಗುಂಟುಮಾಡಿದ ಕಾರಣದಿಂದ ಪ್ರೊಮಿಥಿಯಸ್‌ಗೆ ಆದ ಶಿಕ್ಷೆಯು ಸಮಂಜಸವಾದುದೆಂದು ಅವನು ಭಾವಿಸಿದ್ದ. ಈ ವಿಷಯದಲ್ಲಿ ಅವನು ಟಾವೋಯಿಸ್ಟರು, ರೂಸೋ ಮತ್ತು ಟಾಲ್‌ಸ್ಟಾಯ್‌ರನ್ನು ಹೋಲುತ್ತಿದ್ದ, ಆದರೆ ಅವರಿಗಿಂತ ಹೆಚ್ಚು ದೃಢತೆಯಿಂದಿದ್ದ.

ಅವನು ಅರಿಸ್ಟಾಟಲ್‌ನ ಸಮಕಾಲೀನನಾದರೂ, ಅವನ ಸಿದ್ಧಾಂತವು ಗುಣದಲ್ಲಿ ಹೆಲೆನಿಸ್ಟಿಕ್ ಯುಗಕ್ಕೆ ಸೇರಿದ್ದು. ಜಗತ್ತನ್ನು ಉಲ್ಲಾಸದಿಂದ ಎದುರಿಸಿದ ಗ್ರೀಕ್ ತತ್ವಜ್ಞಾನಿಗಳಲ್ಲಿ ಅರಿಸ್ಟಾಟಲ್ ಕೊನೆಯವನು; ಅವನ ನಂತರ ಎಲ್ಲರೂ, ಒಂದಲ್ಲ

---

೯೫. ಅದೇ, ಪು. ೧೧೯.

ಒಂದು ರೀತಿಯಲ್ಲಿ, ಹಿಂಜರಿಕೆಯ ತಾತ್ವಿಕತೆಯವರು. ಜಗತ್ತು ಕೆಟ್ಟುದು; ಅದರಿಂದ ದೂರವಾಗುವುದನ್ನು ನಾವು ಕಲಿಯೋಣ. ಬಾಹ್ಯ ವಸ್ತುಗಳು ಅನಿಶ್ಚಿತವಾದವು, ಅವು ಅದೃಷ್ಟದ ಕೊಡುಗೆಗಳು, ನಮ್ಮ ಪ್ರಯತ್ನಗಳಿಗೆ ದೊರಕುವ ಫಲಗಳಲ್ಲ. ಕೇವಲ ವೈಯಕ್ತಿಕ ವಸ್ತುಗಳು – ಸದ್ಗುಣಗಳು, ತ್ಯಾಗದ ಮೂಲಕ ತೃಪ್ತಿ ಹೊಂದುವುದು – ಇವು ಮಾತ್ರ ಸುರಕ್ಷಿತವಾದವು; ಹೀಗಾಗಿ ವಿವೇಕಿಯಾದವನು ಇವುಗಳಿಗೆ ಮಾತ್ರವೇ ಬೆಲೆಯೀಯುತ್ತಾನೆ. ಡಯೋಜಿನೀಸ್ ವ್ಯಕ್ತಿಶಃ ತುಂಬ ವೀರ್ಯವಂತ, ಆದರೆ ಹೆಲೆನಿಸ್ಟಿಕ್ ಯುಗದ ಬೇರೆಲ್ಲ ಸಿದ್ಧಾಂತಗಳಂತೆ ಅವನದೂ, ಯಾರಲ್ಲಿ ನಿರಾಶೆಯು ಸಹಜ ಉತ್ಸಾಹವನ್ನು ನಾಶಪಡಿಸಿದೆಯೋ ಅಂತಹ ಬೇಸತ್ತವರಿಗೆ ರುಚಿಸುವಂತಹುದು. ಕಲೆ, ವಿಜ್ಞಾನ ಅಥವಾ ಮುತ್ಸದ್ದಿತನಗಳನ್ನಾಗಲೀ ಬಲಿಷ್ಠ ಕೆಡುಕನ್ನು ಪ್ರತಿಭಟಿಸುವುದರ ಹೊರತು ಮಿಕ್ಕಾವುದೇ ಉಪಯುಕ್ತ ಚಟುವಟಿಕೆಯನ್ನು ಉತ್ತೇಜಿಸುವ ಸಿದ್ಧಾಂತವಂತೂ ಖಂಡಿತ ಆಗಿರಲಿಲ್ಲ.

ಅದು ಜನಪ್ರಿಯವಾದಾಗ ಅದರ ಬೋಧನೆಯು ಆರಂಭವಾಯಿತೆನ್ನುವುದು ಕುತೂಹಲಕಾರಿಯಾಗಿದೆ. ಕ್ರಿಪೂ ಮೂರನೆಯ ಶತಮಾನದ ಪೂರ್ವಾರ್ಧದಲ್ಲಿ, ಸಿನಿಕರು ಫ್ಯಾಷನ್‌ನಂತಾಗಿಬಿಟ್ಟಿದ್ದರು, ಅದರಲ್ಲೂ ಅಲೆಕ್ಸಾಂಡ್ರಿಯದಲ್ಲಿ. ಐಹಿಕ ವಸ್ತುಗಳಿಲ್ಲದೆ ಬದುಕುವುದು ಹೇಗೆ ಸುಲಭವೆಂದೂ, ಸರಳ ಆಹಾರದಿಂದ ಹೇಗೆ ಸುಖವಾಗಿರಬಹುದೆಂದೂ, ಚಳಿಗಾಲದಲ್ಲಿ ದುಬಾರಿ ಉಡುಪಿಲ್ಲದೆ ಹೇಗೆ ಬೆಚ್ಚಗಿರಬಹುದೆಂದೂ (ಇದು ಈಜಿಪ್ಟ್‌ನಲ್ಲಿ ಸರಿಯೂ ಆಗಿರಬಹುದು), ಸ್ವದೇಶದ ಬಗ್ಗೆ ಅಭಿಮಾನ ಹೊಂದುವುದು, ಮಕ್ಕಳೋ ಸ್ನೇಹಿತರೋ ಸತ್ತರೆ ದುಃಖಪಡುವುದು ಹೇಗೆ ಮೂರ್ಖತನದ್ದೆಂದೂ ಬೋಧಿಸುವ ಸಣ್ಣ ಸಣ್ಣ ಉಪದೇಶವಾಕ್ಕುಗಳನ್ನು ಪ್ರಕಟಿಸಿದರು. ಜನಪ್ರಿಯ ಸಿನಿಕರಲ್ಲಿ ಒಬ್ಬನಾಗಿದ್ದ ಟೆಲೀಸ್, 'ನನ್ನ ಹೆಂಡತಿಯೋ ಮಗನೋ ಸತ್ತನೆಂಬುದು ಇನ್ನೂ ಬದುಕಿರುವ ನನ್ನನ್ನು ನಾನು ಕಡೆಗಣಿಸಿ ಆಸ್ತಿಪಾಸ್ತಿಗಳನ್ನು ರಕ್ಷಿಸುವುದನ್ನು ನಿಲ್ಲಿಸಲು ಕಾರಣವೇ?'[೯೬] ಎಂದು ಕೇಳುತ್ತಾನೆ. ಈ ಸಮಯದಲ್ಲಿ, ಪೂರ್ತಿ ಸರಳಗೊಂಡಿರುವ ಸರಳ ಜೀವನದ ಬಗ್ಗೆ ಸಹಾನುಭೂತಿ ಹೊಂದುವುದು ಕಷ್ಟವೆನಿಸುತ್ತದೆ. ಈ ಬೋಧನೆಗಳಿಂದ ಯಾರಿಗೆ ಸಂತೋಷವಾಯಿತೋ ಎಂದು ಅಚ್ಚರಿಯೆನಿಸುತ್ತದೆ. ಬಡವರ ಯಾತನೆಗಳು ಕೇವಲ ಕಾಲ್ಪನಿಕವೆಂದು ಯೋಚಿಸಲು ಬಯಸಿದ ಶ್ರೀಮಂತರೇ? ಅಥವಾ ಯಶಸ್ವೀ ವ್ಯಾಪಾರಿಯನ್ನು ತಿರಸ್ಕಾರದಿಂದ ನೋಡಲು ಪ್ರಯತ್ನಿಸುತ್ತಿದ್ದ ಹೊಸ ಬಡವರೇ? ಅಥವಾ ತಾವು ಪಡೆದ ಕೊಡುಗೆಯು ಮುಖ್ಯವಲ್ಲವೆಂದು ತಮ್ಮಲ್ಲೇ ಸಮಾಧಾನ ಹೊಂದುತ್ತಿದ್ದ ಹೊಗಳುಭಟ್ಟರೇ? ಟೆಲೀಸ್ ಒಬ್ಬ ಶ್ರೀಮಂತನಿಗೆ ಹೀಗೆ ಹೇಳುತ್ತಾನಂತೆ:

---

೯೬. 'ದ ಹೆಲೆನಿಸ್ಟಿಕ್ ಏಜ್', (ಕೇಂಬ್ರಿಜ್, ೧೯೨೩), ಪು. ೮೪ ಅಡಿಟಿಪ್ಪಣಿ.

'ನೀವು ಉದಾರವಾಗಿ ಕೊಟ್ಟುದನ್ನು ನಾನು, ದೈನ್ಯವಿಲ್ಲದೆ ಮತ್ತು ನನ್ನನ್ನು ನಿಕೃಷ್ಟನೆಂದು ಭಾವಿಸಿಕೊಳ್ಳದೆ ಅಥವಾ ಗೊಣಗಾಟವಿಲ್ಲದೆ ಧೀರನಂತೆ ಪಡೆಯುತ್ತೇನೆ.'[೯೭] ತುಂಬ ಅನುಕೂಲಕರ ಸಿದ್ಧಾಂತ. ಜನಪ್ರಿಯ ಸಿನಿಕತನವು ಜಗತ್ತಿನ ಒಳ್ಳೆಯ ವಸ್ತುಗಳಿಂದ ದೂರವಿರಲಿಲ್ಲವಾದರೂ ಅವುಗಳ ಬಗ್ಗೆ ಕೊಂಚ ಅನಾದರದಿಂದ ಕೂಡಿತು, ಅಷ್ಟೆ. ಒಬ್ಬ ಸಾಲಗಾರನ ವಿಷಯದಲ್ಲಿ ಈ ಮನೋಭಾವವನ್ನು ಸಾಲಿಗನ ಬಗೆಗಿನ ಕೃತಜ್ಞತೆಯನ್ನು ಕನಿಷ್ಠಗೊಳಿಸುತ್ತಿದ್ದಿರಹುದು. 'ಸಿನಿಕ್' ಎಂಬ ಪದಕ್ಕೆ ಈಗಿನ ದಿನಬಳಕೆಯ ಅರ್ಥವು ಹೇಗೆ ಬಂತೆಂದು ತಿಳಿಯಬಹುದು.

ಸಿನಿಸಿಸಂನ ಸಿದ್ಧಾಂತದಲ್ಲಿನ ಅತ್ಯುತ್ತಮವಾದುದು ಸಂಯಮವಾದಕ್ಕೆ (ಸ್ಟಾಯಿಸಿಸಂ) ದಾಟಿತು; ಅದು ಇನ್ನೂ ಹೆಚ್ಚು ಸಮರ್ಥವೂ ಪೂರ್ಣವೂ ಆದ ತತ್ವಜ್ಞಾನ.

ಒಂದು ಪಂಥದ ತತ್ವಜ್ಞಾನವಾದ ಸಂದೇಹವಾದವನ್ನು ಮೊದಲು ಮಂಡಿಸಿದವನು ಅಲೆಕ್ಸಾಂಡ್ರಿಯದ ಸೈನ್ಯದಲ್ಲಿದ್ದು ಅದರೊಡನೆ ಇಂಡಿಯದಷ್ಟು ದೂರ ಹೋಗಿದ್ದ ಪೈರೋ. ಇದರಿಂದಾಗಿ ಅವನಿಗೆ ಪ್ರವಾಸದ ರುಚಿ ಹತ್ತಿರಬೇಕು, ಉಳಿದ ತನ್ನ ಬದುಕನ್ನೆಲ್ಲ ಅವನು ಸ್ವಂತ ಊರಾದ ಎಲಿಸ್‌ಲ್ಲಿ ಕಳೆದು ಕ್ರಿಪೂ ೨೭೫ ರಲ್ಲಿ ಸತ್ತ. ಹಳೆಯ ಸಂಶಯಗಳನ್ನು ವ್ಯವಸ್ಥೆಗೊಳಿಸಿ ಅವಕ್ಕೊಂದು ಸ್ವರೂಪವೀಯುವುದಕ್ಕೂ ಹೆಚ್ಚಿನ ಹೊಸತೇನೂ ಅವನ ಸಿದ್ಧಾಂತದಲ್ಲಿರಲಿಲ್ಲ. ಬಹು ಹಿಂದಿನ ಕಾಲದಿಂದಲೂ ಗ್ರೀಕ್ ತತ್ವಜ್ಞಾನಿಗಳನ್ನು ಇಂದ್ರಿಯಗಳಿಗೆ ಸಂಬಂಧಿಸಿದಂತೆ ಕಾಡಿತ್ತು; ಇದಕ್ಕೆ ಹೊರತಾಗಿದ್ದವರೆಂದರೆ, ಪಾರ್ಮನೈಡೀಸ್ ಮತ್ತು ಪ್ಲೇಟೋ ಅವರಂತೆ ಪರಿಕಲ್ಪನೆಯ ಗ್ರಹಿಕೆಯ ಮೌಲ್ಯವನ್ನು ನಿರಾಕರಿಸಿ, ಅದನ್ನು ಬೌದ್ಧಿಕ ಪ್ರಾಮಾಣ್ಯವಾಗಿಸುವ ಅವಕಾಶವಾಗಿಸಿಕೊಂಡಿದ್ದವರು. ಸಂಯಮವಾದಿಗಳು (ಸೂಫಿಸ್ಟರು), ಅವರಲ್ಲಿಯೂ ಬಹು ಮುಖ್ಯವಾಗಿ ಪ್ರೋಟಾಗೊರಾಸ್ ಮತ್ತು ಗೋರ್ಗಿಯಾಸ್, ಇಂದ್ರಿಯಗ್ರಹಿಕೆಯ ಸಂದಿಗ್ಧಗಳು ಮತ್ತು ತೋರಿಕೆಯ ವಿರೋಧಗಳಿಂದಾಗಿ ಹ್ಯೂಮ್‌ನದರಂತಹುದಲ್ಲದ ಒಂದು ವ್ಯಕ್ತಿನಿಷ್ಠತೆಯ ಒಲವು ಬೆಳೆಸಿಕೊಂಡರು. ಪೈರೋ (ಬುದ್ಧಿವಂತನಾಗಿ ಯಾವುದೇ ಪುಸ್ತಕಗಳನ್ನು ಬರೆಯದ ಬುದ್ಧಿವಂತ ಅವನು) ಇಂದ್ರಿಯಸಂಬಂಧೀ ಸಂದೇಹಗಳಿಗೆ ನೈತಿಕ ಹಾಗೂ ತಾರ್ಕಿಕ ಸಂಶಯಗಳನ್ನು ಸೇರಿಸಿದನೆಂಬಂತೆ ತೋರುತ್ತದೆ. ಒಂದು ಕಾರ್ಯವಿಧಾನದ ಬದಲು ಮತ್ತೊಂದನ್ನು ಇಷ್ಟಪಡಲು ಯಾವುದೇ ವೈಚಾರಿಕ ನೆಲೆಗಟ್ಟು ಇರಲಾರದು ಎಂಬುದು ಅವನ ವಾದ ಎಂದು ಹೇಳುತ್ತಾರೆ, ವ್ಯಾವಹಾರಿಕವಾಗಿ ಈ ವಾದದ ಅರ್ಥ ವ್ಯಕ್ತಿಯೊಬ್ಬನು ತಾನು ವಾಸಿಸುವ ಅವಕಾಶದ

---

೯೭. ಅದೇ: ಪು. ೮೬

ಪದ್ಧತಿಗಳಿಗೆ ಹೊಂದಿಕೊಂಡಿರುತ್ತಾನೆ ಎಂಬುದು. ತನ್ನ ಕಾರ್ಯಕ್ಕೆ ಪ್ರೇರಕವೆಂದು ಭಾವಿಸುವ ಯಾವುದೇ ಮತಧಾರ್ಮಿಕ ಶ್ರದ್ಧೆಗಳಿಲ್ಲದೆಯೇ ಆಧುನಿಕ ಅನುಯಾಯಿಯು ಭಾನುವಾರಗಳಂದು ಚರ್ಚ್‌ಗೆ ಹೋಗಿ ಮಂಡಿಯೂರಿ ಪ್ರಾರ್ಥಿಸುತ್ತಾನೆ. ಪ್ರಾಚೀನ ಸಂದೇಹವಾದಿಗಳು ಪೂರ್ತಿ ಕ್ರೈಸ್ತೇತರ ಆಚರಣೆಗಳನ್ನು ಮಾಡುತ್ತಿದ್ದರು, ಅವರಲ್ಲಿ ಕೆಲವರು ಪುರೋಹಿತರೂ ಆಗಿದ್ದರು; ಈ ನಡಾವಳಿಯನ್ನು ತಪ್ಪೆಂದು ಸಾಧಿಸಲು ಸಾಧ್ಯವಿಲ್ಲವೆಂಬುದು ಅವರ ಸಂದೇಹವಾದವು ಒಪ್ಪಿಕೊಂಡಿತ್ತು. ಅವರ ವ್ಯವಹಾರಜ್ಞಾನವು (ಅವರ ತಾತ್ವಿಕತೆಯನ್ನು ಮೀರಿ) ಅನುಕೂಲಕರವೆಂದು ಸಮಾಧಾನಪಡಿಸಿತ್ತು.

ಸಂದೇಹವಾದವು ಅನೇಕ ಅತಾತ್ವಿಕ ಮನಸ್ಸುಗಳನ್ನು ಸಹಜವಾಗಿಯೇ ಆಕರ್ಷಿಸಿತು. ಅವರ ಪಂಥಗಳ ವೈವಿಧ್ಯವನ್ನೂ ವಾದಗಳ ನಿಷ್ಠುರತೆಯನ್ನೂ ಜನರು ನೋಡಿ, ವಾಸ್ತವದಲ್ಲಿ ಗಳಿಸಲು ಸಾಧ್ಯವೇ ಇಲ್ಲದ ಜ್ಞಾನವು ತಮಗಿದೆಯೆಂದು ಎಲ್ಲರೂ ತೋರಿಸಿಕೊಳ್ಳುವವರೇ ಎಂದು ಜನರು ತೀರ್ಮಾನಿಸಿದ್ದರು. ಇದರಿಂದಾಗಿ ತಿಳಿಯದವನೂ ಪ್ರಸಿದ್ಧ ವ್ಯಕ್ತಿಯಷ್ಟೇ ತಾನೂ ಬುದ್ಧಿವಂತನೆಂದು ತೋರಿಸಿಕೊಟ್ಟಿದ್ದರಿಂದ ಅದು ಸಂದೇಹವಾದವು ಸೋವಾರಿಯು ಸಮಾಧಾನವೆನಿಸಿತು. ಸ್ವಭಾವತಃ ದೈವವಾಣಿಯ ಅವಲಂಬನೆಯ ಆವಶ್ಯಕತೆಯಿದ್ದ ಜನರಿಗೆ ಅದು ತೃಪ್ತಿಕರವಲ್ಲವೆಂದು ಕಾಣಿಸಿದ್ದಿರಬೇಕು; ಆದರೆ ಹೆಲೆನಿಸ್ಟಿಕ್ ಯುಗದ ಪ್ರತಿ ಸಿದ್ಧಾಂತದಂತೆಯೇ ಅದು ಕಷ್ಟಗಳಿಗೆ ಪರಿಹಾರವೆಂದು ತೋರಿಸಿಕೊಂಡಿತು. ಭವಿಷ್ಯದ ಬಗ್ಗೆ ಯೋಚನೆಯೇಕೆ? ಅದು ಪೂರ್ತಿ ಅನಿಶ್ಚಿತ. ಅದರ ಬದಲು ಈಗ ಇರುವುದರಿಂದ ಸುಖಪಡು, 'ಬರುವುದು ಮತ್ತಷ್ಟು ಅನಿಶ್ಚಿತವಾದುದು.' ಈ ಕಾರಣಗಳಿಂದಾಗಿ, ಸಂದೇಹವಾದವು ತಕ್ಕಮಟ್ಟಿಗಿನ ಜನಪ್ರಿಯತೆಯನ್ನು ಗಳಿಸಿಕೊಂಡಿತ್ತು.

ಒಂದು ತತ್ವಜ್ಞಾನವಾಗಿ ಸಂದೇಹವಾದವು ಕೇವಲ ಅನುಮಾನವಲ್ಲ, ಅದು ತತ್ವಾತ್ಮಕ (ಡಾಗ್ಮಾಟಿಕ್) ಅನುಮಾನ ಎಂಬುದನ್ನು ನೆನಪಿನಲ್ಲಿಡಬೇಕು. ವಿಜ್ಞಾನಿಯು 'ಅವರು ಇಂತಹವರು, ಆದರೆ ನನಗೆ ಆ ಬಗ್ಗೆ ಖಚಿತತೆಯಿಲ್ಲ' ಎನ್ನಬಹುದು. ಬೌದ್ಧಿಕ ಕುತೂಹಲವುಳ್ಳವನು 'ಅದು ಹೇಗೋ ನನಗೆ ತಿಳಿಯದು, ಆದರೆ ಅದನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತೇನೆ' ಎನ್ನಬಹುದು. ತಾತ್ವಿಕ ಸಂದೇಹವಾದಿಯು 'ಯಾರಿಗೂ ತಿಳಿಯದು, ಯಾರೂ ಎಂದೂ ತಿಳಿಯಲಾರರು' ಎನ್ನುವವನು. ಈ ಬಗೆಯ ತತ್ವಾತ್ಮಕತೆಯಿಂದಾಗಿ ಈ ಪಂಥವು ಖಂಡನೆಗೆ ನಿಲುಕುವಂತಹುದ್ದಾಯಿತು. ಜ್ಞಾನಾರ್ಜನೆಯ ಅಸಾಧ್ಯತೆಯನ್ನು ಸಂದೇಹವಾದಿಗಳು ತತ್ವಾತ್ಮಕವಾಗಿ ಅಲ್ಲಗಳೆಯುವುದಿಲ್ಲ, ಆದರೆ ಅವರ ನಿರಾಕರಣೆಯು ಅಷ್ಟೊಂದು ಮನಗಾಣಿಸುವಂತಹುದಲ್ಲ.

ಆದರೆ ಪೈರೋನ ಶಿಷ್ಯನಾದ ಟೈಮನ್ ಗ್ರೀಕ್ ತರ್ಕಶಾಸ್ತ್ರಕ್ಕನುಗುಣವಾದ ಕೆಲವು ವಾದಗಳನ್ನು ಮುಂದಿಟ್ಟ, ಅವುಗಳಿಗೆ ಉತ್ತರಿಸುವುದು ಕಷ್ಟಕರವಾಗಿತ್ತು. ಗ್ರೀಕ್‌ರು ಒಪ್ಪಿದ್ದ ಒಂದೇ ತರ್ಕವೆಂದರೆ ನಿಗಮನಾತ್ಮಕವಾದದ್ದು; ಅಲ್ಲದೆ ಯೂಕ್ಲಿಡ್‌ನಂತೆ ಎಲ್ಲ ನಿಗಮನವೂ ಸ್ವಯಂಸಿದ್ಧವೆಂದು ಪರಿಗಣಿತವಾದ ಸಾಮಾನ್ಯ ತತ್ವಗಳಿಂದ ಆರಂಭಗೊಳ್ಳಬೇಕಾಗಿತ್ತು. ಟೈಮನ್ ಅಂಥ ತತ್ವಗಳನ್ನು ಕಂಡುಕೊಳ್ಳುವ ಸಾಧ್ಯತೆಯನ್ನು ಅಲ್ಲಗಳೆದ. ಹೀಗಾಗಿ ಪ್ರತಿಯೊಂದನ್ನೂ ಬೇರೆ ರೀತಿಯಲ್ಲಿ ಸಾಧಿಸಬೇಕಾಗಿತ್ತು, ಎಲ್ಲ ವಾದಗಳೂ ಚಕ್ರೀಯವಾಗಿಯೋ ಯಾವುದಕ್ಕೂ ಜೋತುಬೀಳದ ಕೊನೆಯಿಲ್ಲದ ಸರಪಳಿಯೋ ಆಗಬೇಕಾಗಿತ್ತು. ಈ ಎರಡೂ ಬಗೆಗಳಲ್ಲಿ ಏನನ್ನೂ ಸಾಧಿಸಲು ಸಾಧ್ಯವಿರಲಿಲ್ಲ. ಈ ವಾದವು ಮಧ್ಯಯುಗದಲ್ಲಿ ವ್ಯಾಪಕವಾಗಿದ್ದ ಅರಿಸ್ಟಾಟಲ್‌ಪಂಥೀಯ ತತ್ವಜ್ಞಾನದ ಬುಡವನ್ನೇ ಕತ್ತರಿಸಿತು.

ಕೆಲವು ಬಗೆಯ ಸಂದೇಹವಾದವನ್ನು ನಮ್ಮ ಕಾಲದಲ್ಲಿಯೇ ಕೆಲವರು ಮುಂದಿಟ್ಟರೂ ಅವರೇನೂ ಪೂರ್ತಿ ಸಂದೇಹವಾದಿಗಳಲ್ಲ; ಅವು ಪ್ರಾಚೀನ ಸಂದೇಹವಾದಿಗಳಲ್ಲಿ ಉದಯಿಸಲಿಲ್ಲ. ಅವರು ಇಂದ್ರಿಯಗ್ರಾಹ್ಯ ಸಂಗತಿಗಳನ್ನು ಅಲ್ಲಗಳೆಯಲಿಲ್ಲ, ಅಥವಾ ಇಂದ್ರಿಯಗ್ರಾಹ್ಯ ಸಂಗತಿಗಳಿಗೆ ನೇರವಾಗಿ ಸಂಬಂಧಿಸಿದ್ದೆಂದು ಅವರು ಭಾವಿಸಿದ ಪ್ರತಿಪಾದನೆಗಳನ್ನವರು ಪ್ರಶ್ನಿಸಲಿಲ್ಲ. ಟೈಮನ್‌ನ ಬಹುತೇಕ ಬರಹಗಳು ಸಿಕ್ಕುವುದಿಲ್ಲ, ಆದರೆ ಉಳಿದಿರುವ ಎರಡು ತುಣುಕುಗಳು ಈ ದೃಷ್ಟಿಕೋನವನ್ನು ವ್ಯಕ್ತಪಡಿಸುತ್ತವೆ. ಒಂದು 'ಇಂದ್ರಿಯಗ್ರಾಹ್ಯ ಸಂಗತಿ ಎಲ್ಲ ಕಾಲಕ್ಕೂ ಸಮಂಜಸ' ಎನ್ನುತ್ತದೆ. ಮತ್ತೊಂದು 'ಜೇನುತುಪ್ಪ ಸಿಹಿಯಾಗಿದೆ ಎನ್ನುವುದನ್ನು ಸಮರ್ಥಿಸಲು ನಾನು ಸಿದ್ಧನಿಲ್ಲ, ಆದರೆ ಅದು ಸಿಹಿಯಾಗಿರುವಂತೆ ತೋರುತ್ತದೆ ಎಂಬುದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ' ಎನ್ನುತ್ತದೆ.[೯೮] ಆದರೆ ಆಧುನಿಕ ಸಂದೇಹವಾದಿಯು ತೋರಿಸುವುದು ಇಂದ್ರಿಯಗ್ರಾಹ್ಯ ಸಂಗತಿಗಳು ಕೇವಲ 'ಸಂಭವಿಸುತ್ತವೆ', ಹೀಗಾಗಿ ಅವು ಸಮಂಜಸವೂ ಅಲ್ಲ ಅಸಮಂಜಸವೂ ಅಲ್ಲ ಎಂದು. ಯಾವುದು ಸಮಂಜಸವೋ ಅಲ್ಲವೋ ಎಂಬುದು ಒಂದು ಹೇಳಿಕೆಯಾಗಿರಬೇಕು, ಆದರೆ ಯಾವುದೇ ಹೇಳಿಕೆಯು ಇಂದ್ರಿಯಗ್ರಾಹ್ಯ ಸಂಗತಿಯು ಸುಳ್ಳು ಎಂದು ಸಾಧಿಸಲು ಸಾಧ್ಯವಾಗುವಷ್ಟು ನಿಕಟವಾಗಿರಲಾರದು. ಅದೇ ಕಾರಣದಿಂದಾಗಿ ಅವನು 'ಜೇನುತುಪ್ಪ ಸಿಹಿಯಾಗಿರುವಂತೆ ತೋರುತ್ತದೆ' ಎಂಬ ಹೇಳಿಕೆಯು ಕೇವಲ ತುಂಬ ಸಂಭವನೀಯವೇ ಹೊರತು ಆತ್ಯಂತಿಕವಾಗಿ ಖಚಿತವಲ್ಲ ಎನ್ನುತ್ತಾನೆ.

---

೯೮. ಎಡ್ವಿನ್ ಬೆವನ್ ಅವರಿಂದ ಉದ್ಧೃತ, 'ಸ್ಟಾಯಿಕ್ಸ್ ಅಂಡ್ ಸ್ಕೆಪ್ಟಿಕ್ಸ್', ಪು. ೧೨೬.

ಕೆಲವು ವಿಷಯಗಳಲ್ಲಿ, ಟೈಮೊನ್‌ನ ಸಿದ್ಧಾಂತವು ಹ್ಯೂಮ್‌ನದಕ್ಕೆ ತೀರ ಹತ್ತಿರವಾದುದು. ಅವನ ಪ್ರಕಾರ, ಯಾವುದನ್ನು ಎಂದಿಗೂ ನೋಡಿಯೇ ಇಲ್ಲವೋ – ನಿದರ್ಶನಕ್ಕೆ, ಪರಮಾಣುಗಳು – ಅಂಥವನ್ನು ಸಮಂಜಸವಾಗಿ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ; ಆದರೆ ಎರಡು ಇಂದ್ರಿಯಗ್ರಾಹ್ಯ ಸಂಗತಿಗಳು ಕೂಡಿ ಸಂಭವಿಸುವುದನ್ನು ನೋಡಿದಾಗ ಒಂದನ್ನು ಮತ್ತೊಂದರಿಂದ ಕಲ್ಪಿಸಿಕೊಳ್ಳಬಹುದು.

ಟೈಮೊನ್ ತನ್ನ ಬಾಳಿನ ಉತ್ತರಾರ್ಧವನ್ನೆಲ್ಲ ಅಥೆನ್ಸ್‌ನಲ್ಲಿ ಕಳೆದು ಕ್ರಿಪೂ ೨೩೫ ರಲ್ಲಿ ಸತ್ತ. ಅವನ ಸಾವಿನೊಡನೆ ಪೈರೋ ಪಂಥವು ಒಂದು ಪಂಥವಾಗಿ ಕೊನೆಗೊಂಡಿತು, ಆದರೆ ಸಿದ್ಧಾಂತವಾಗಿ, ಸ್ವಲ್ಪಮಟ್ಟಿಗೆ ಪರಿಷ್ಕೃತಗೊಂಡ, ಅದನ್ನು ವಿಚಿತ್ರವೆನಿಸಿದರೂ, ಪ್ಲೇಟೋ ಸಂಪ್ರದಾಯವನ್ನು ಪ್ರತಿನಿಧಿಸುತ್ತಿದ್ದ ಅಕೆಡೆಮಿ ಕೈಗೆತ್ತಿಕೊಂಡಿತು.

ಈ ಆಶ್ಚರ್ಯಕರ ತತ್ವಜ್ಞಾನ ಕ್ರಾಂತಿಯನ್ನು ಮಾಡಿದವನೆಂದರೆ ತನ್ನ ಇಳಿವಯಸ್ಸಿನಲ್ಲಿ ಕ್ರಿಪೂ ೨೪೧ ರಲ್ಲಿ ಸತ್ತ ಆರ್ಸೆಸಿಲಾಸ್; ಅವನು ಟೈಮೋನ್‌ನ ಸಮಕಾಲೀನ. ಪ್ಲೇಟೋನಿಂದ ಬಹುತೇಕ ಜನರು ಸ್ವೀಕರಿಸಿರುವುದೆಂದರೆ ಅತ್ಯಂತ ಸೂಕ್ಷ್ಮ ಬೌದ್ಧಿಕ ಜಗತ್ತು ಮತ್ತು ನಶ್ವರ ದೇಹದಲ್ಲಿನ ಶಾಶ್ವತ ಆತ್ಮದ ಶ್ರೇಷ್ಠತೆ ಇವುಗಳಲ್ಲಿನ ಶ್ರದ್ಧೆಯನ್ನು. ಆದರೆ ಪ್ಲೇಟೋ ಬಹುಮುಖಿ, ಒಂದರ್ಥದಲ್ಲಿ ಸಂದೇಹವಾದವನ್ನು ಬೋಧಿಸುತ್ತಿದ್ದವನು ಎಂದು ಅವನನ್ನು ಪರಿಗಣಿಸಬಹುದು. ಪ್ಲೇಟೋ ಚಿತ್ರಿಸುವ ಸಾಕ್ರಟೀಸ್ ತನಗೇನೂ ತಿಳಿಯದೆಂದು ಹೇಳುತ್ತಿದ್ದ; ಸಹಜವಾಗಿಯೇ ನಾವಿದನ್ನು ವ್ಯಂಗ್ಯವೆಂದು ಭಾವಿಸುತ್ತೇವೆ, ಆದರೆ ಇದನ್ನು ಗಂಭಿರವಾಗಿಯೂ ಪರಿಗಣಿಸಬಹುದು. ಅನೇಕ ಸಂವಾದಗಳು ಇತ್ಯಾತ್ಮಕ ತೀರ್ಮಾನಗಳಿಂದ ಕೊನೆಗೊಳ್ಳುವುದಿಲ್ಲ, ಓದುಗರನ್ನವು ಸಂಶಯದಲ್ಲಿಯೇ ನಿಲ್ಲಿಸುತ್ತವೆ. ಕೆಲವಕ್ಕೆ – ಉದಾಹರಣೆಗೆ, 'ಪಾರ್ಮನೈಡೀಸ್' ಉತ್ತರಾರ್ಧ – ಒಂದು ಸಮಸ್ಯೆಯ ಎರಡೂ ಪಕ್ಷಗಳು ಸಮಾನವಾಗಿ ಸರಿಯೆಂದು ವಾದಿಸಬಹುದು ಎಂದು ಹೇಳುವುದರ ಹೊರತಾದ ಉದ್ದೇಶವಾವುದೂ ಇದ್ದಂತೆ ಕಾಣಿಸುವುದಿಲ್ಲ. ಪ್ಲೇಟೋನ ದ್ವಂದ್ವಾತ್ಮಕತೆಯನ್ನು ಒಂದು ಸಾಧನವಾಗಿಯಲ್ಲದೆ ಅದರ ಉದ್ದೇಶವೆಂದೇ ಪರಿಗಣಿಸಬಹುದು; ಹೀಗೆ ಪರಿಗಣಿಸಿದಾಗ ಅದು ಸಮರ್ಥವಾಗಿ ಸಂದೇಹವಾದವನ್ನು ಬೆಂಬಲಿಸುತ್ತದೆ ಎನ್ನಬಹುದು. ತಾನು ಯಾರ ಅನುಯಾಯಿಯೆಂದು ಹೇಳಿಕೊಳ್ಳುತ್ತಿದ್ದನೋ ಅವನನ್ನು ಆರ್ಸೆಸಿಲಾಸ್ ಈ ಬಗೆಯಲ್ಲಿ ಅರ್ಥವಿಸುವ ರೀತಿಯೆಂಬಂತೆ ತೋರುತ್ತದೆ. ಅವನು ಪ್ಲೇಟೋನ ಶಿರಚ್ಛೇದ ಮಾಡಿದ್ದ, ಆದರೆ ಉಳಿದ ಮುಂಡವು ಯಥಾರ್ಥವಾದುದು.

ಆರ್ಸೆಸಿಲಾಸ್‌ನಿಂದ ಕಲಿತ ಜನರು ಅದರಿಂದಲೇ ಕುಂಠಿತಗೊಳ್ಳುವುದರಿಂದ ತಪ್ಪಿಸಿಕೊಂಡಿದ್ದರೆ ಅವನು ಬೋಧಿಸಿದ ವಿಧಾನವು ಸರಿಯಾಗಿರುತ್ತಿತ್ತು. ಅವನು

ಯಾವುದೇ ಸಿದ್ಧಾಂತವನ್ನು ಪ್ರತಿಪಾದಿಸಲಿಲ್ಲ, ಆದರೆ ವಿದ್ಯಾರ್ಥಿಯು ಮಂಡಿಸಿದ ಯಾವುದೇ ಸಿದ್ಧಾಂತವನ್ನು ತಿರಸ್ಕರಿಸುತ್ತಿದ್ದ. ಕೆಲವು ವೇಳೆ ತಾನೇ ಪರಸ್ಪರ ವಿರೋಧವಾದ ಎರಡು ಸಿದ್ಧಾಂತಗಳನ್ನು, ಒಂದಾದನಂತರ ಮತ್ತೊಂದನ್ನು, ಮುಂದಿಟ್ಟು ಎರಡರ ಬಗ್ಗೆಯೂ ಮನವೊಲಿಸುವಂತೆ ಹೇಗೆ ವಾದಿಸಬಹುದು ಎಂದು ತೋರಿಸುತ್ತಿದ್ದ. ವಿರೋಧಿಸುವ ಸಾಮರ್ಥ್ಯವಿದ್ದ ವಿದ್ಯಾರ್ಥಿಯೊಬ್ಬ ಇದರಿಂದಾಗಿ ಕೌಶಲ ಮತ್ತು ತರ್ಕದೋಷವನ್ನು ನಿವಾರಿಸಿಕೊಳ್ಳುವುದನ್ನು ಕಲಿಯಬಹುದಿತ್ತು. ಆದರೆ ಯಾರೂ ಜಾಣ್ಮೆ ಮತ್ತು ಸತ್ಯದ ಬಗೆಗಿನ ಅನಾದರಗಳ ಹೊರತಾಗಿ ಬೇರೇನನ್ನೂ ಕಲಿತಂತೆ ಕಾಣುವುದಿಲ್ಲ. ಆರ್ಸೆಸಿಲಾಸ್‌ನ ಪ್ರಭಾವವೂ ಎಷ್ಟು ಹಿರಿದಾದುದೆಂದರೆ ಅಕೆಡೆಮಿಯು ಸುಮಾರು ಇನ್ನೂರು ವರ್ಷಗಳ ಕಾಲ ಸಂದೇಹವಾದಿಯಾಗಿಯೇ ಉಳಿಯಿತು.

ಸಂದೇಹವಾದದ ನಡುವಿನಲ್ಲಿ ಒಂದು ತಮಾಷೆಯ ಪ್ರಸಂಗ ನಡೆಯಿತು. ಅಕೆಡೆಮಿಯ ಸಮರ್ಥ ಮುಖ್ಯಸ್ಥನಾಗಿ ಆರ್ಸೆಸಿಲಾಸ್ ನಂತರ ಬಂದ ಕಾರ್ನಿಯಾಡೀಸ್, ಕ್ರಿಪೂ ೧೫೬ ನೇ ಇಸವಿಯಲ್ಲಿ ರೋಮ್‌ಗೆ ಅಥೆನ್ಸ್ ಕಳಿಸಿದ ರಾಜತಾಂತ್ರಿಕ ನಿಯೋಗದಲ್ಲಿದ್ದ ಮೂವರು ತತ್ವಜ್ಞಾನಿಗಳ ಪೈಕಿ ಒಬ್ಬನಾಗಿದ್ದ. ತನ್ನ ರಾಜತಾಂತ್ರಿಕ ಗೌರವವು ಪ್ರಮುಖ ಅವಕಾಶದಲ್ಲಿ ಮಧ್ಯಪ್ರವೇಶ ಮಾಡಬಹುದಾದ ಕಾರಣವಾವುದೂ ಅವನಿಗೆ ಕಾಣಿಸಲಿಲ್ಲ; ಹೀಗಾಗಿ ಅವನು ರೋಮ್‌ನಲ್ಲಿ ಒಂದು ಉಪನ್ಯಾಸಸರಣಿಯನ್ನು ಆಯೋಜಿಸಿದ. ಗ್ರೀಕ್ ನಡಾವಳಿಯನ್ನು ಅನುಕರಿಸಲೂ ಗ್ರೀಕ್ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಲೂ ತವಕಿಸುತ್ತಿದ್ದ ಆಗಿನ ಯುವಕರು ಅವನ ಮಾತುಗಳನ್ನು ಕೇಳಲು ಕಿಕ್ಕಿರಿದರು. ಮೊದಲ ಉಪನ್ಯಾಸದಲ್ಲವನು ನ್ಯಾಯವನ್ನು ಕುರಿತ ಅರಿಸ್ಟಾಟಲ್ ಮತ್ತು ಪ್ಲೇಟೋ ಅವರ ದೃಷ್ಟಿಕೋನವನ್ನು ಮಂಡಿಸಿದ, ಅದು ಸಂಪೂರ್ಣ ಬೋಧಪ್ರದವಾಗಿತ್ತು. ಎರಡನೆಯ ಉಪನ್ಯಾಸದಲ್ಲಿ ಅವನು ಮೊದಲ ಉಪನ್ಯಾಸದಲ್ಲಿ ತಾನು ಮಂಡಿಸಿದ್ದನ್ನೆಲ್ಲ ಅಲ್ಲಗಳೆಯುವ ಕಾರ್ಯದಲ್ಲಿ ತೊಡಗಿದ, ಅದಕ್ಕೆ ವಿರುದ್ಧವಾದ ತೀರ್ಮಾನವನ್ನು ನೀಡುವ ಉದ್ದೇಶದಿಂದಲ್ಲ, ಹೇಗೆ ಪ್ರತಿ ತೀರ್ಮಾನವೂ ಅಂತಿಮವಾಗಿರಲಾರದು ಎಂದು ತೋರಿಸಲು. ಅನ್ಯಾಯ ಮಾಡುವವವನಿಗೇ ಅನುಭವಿಸುವವನಿಗಿಂತ ಹೆಚ್ಚು ಕೆಡುಕು ಎಂದು ಪ್ಲೇಟೋನ ಸಾಕ್ರಟೀಸ್ ವಾದಿಸಿದ್ದ. ತನ್ನ ಎರಡನೆಯ ಉಪನ್ಯಾಸದಲ್ಲಿ ಕಾರ್ನಿಯಾಡೀಸ್ ಈ ವಾದವನ್ನು ತಿರಸ್ಕಾರದಿಂದ ಅಲ್ಲಗಳೆದ. ದೊಡ್ಡ ದೇಶಗಳು ತಮ್ಮ ಸಣ್ಣ ನೆರೆಹೊರೆಯ ದುರ್ಬಲ ದೇಶಗಳ ವಿರುದ್ಧ ಅನ್ಯಾಯವಾಗಿ ಆಕ್ರಮಣ ಮಾಡಿ ಹೇಗೆ ದೊಡ್ಡವಾಗುತ್ತವೆ ಎಂದವನು ತೋರಿಸಿದ. ರೋಮ್‌ನಲ್ಲಿ ಇದನ್ನು ಅಲ್ಲಗಳೆಯಲು ಸಾಧ್ಯವಿರಲಿಲ್ಲ. ನೌಕಾಘಾತವಾದಲ್ಲಿ ನೀವು ದುರ್ಬಲರ ಜೀವ ತೆತ್ತು ನಿಮ್ಮ ಜೀವವನ್ನುಳಿಸಿಕೊಳ್ಳಲು ಸಾಧ್ಯ, ಹಾಗೆ ಮಾಡದಿದ್ದರೆ ನೀವು

ಮೂರ್ಖರಾಗುತ್ತೀರಿ. ತಾನು ಬದುಕಬೇಕಾದಾಗ 'ಮಕ್ಕಳು ಮರಿಗಳು ಮೊದಲು' ಎಂಬ ಸೂತ್ರವು ಸರಿಯಾಗಲಾರದು ಎಂದವನು ಭಾವಿಸಿದಂತೆ ತೋರುತ್ತದೆ. ಜಯಶಾಲಿಯಾದ ಶತ್ರುವಿನಿಂದ ತಪ್ಪಿಸಿಕೊಳ್ಳಲು ಓಡುತ್ತಿರುವಾಗ ನಿಮ್ಮ ಕುದುರೆಯು ಸತ್ತು, ಮುಂದೆ ಕುದುರೆಯ ಮೇಲೆ ಕುಳಿತ ಗಾಯಗೊಂಡ ಸೈನಿಕನೊಬ್ಬನನ್ನು ಕಂಡರೆ ಏನು ಮಾಡುತ್ತೀರಿ? ನ್ಯಾಯವು ಯಾವುದೇ ಆಗಿದ್ದರೂ, ಬುದ್ಧಿಯಿದ್ದರೆ, ಹೋಗಿ ಅವನನ್ನು ಕುದುರೆಯಿಂದ ಕೆಳಗೆಳೆದು ಅವನ ಕುದುರೆಯನ್ನು ನೀವು ಏರುತ್ತೀರಿ. ಪ್ಲೇಟೋನ ನಾಮಮಾತ್ರ ಅನುಯಾಯಿಗಳಲ್ಲಿ ಇಂತಹ ಬೋಧನೆ ಇರಲು ಸಾಧ್ಯವಿಲ್ಲ, ಆದರೆ ಈ ವಾದವು ಆಧುನಿಕ ಮನಸ್ಸಿದ್ದ ರೋಮನ್ ಯುವಕರನ್ನು ಸಂತಸಗೊಳಿಸಿರಬೇಕು.

ಆದರೆ ಸಂತಸವಾಗದಿದ್ದವನೂ ಒಬ್ಬನಿದ್ದ, ಅವನು ಹಿರಿಯನಾದ ಕೇಟೋ, ಯಾವ ನಿಷ್ಠುರವೂ ಬಿಗಿಯಾದುದೂ ಮೂರ್ಖತನದ್ದೂ ಮತ್ತು ಕ್ರೂರವಾದುದೂ ಅದ ನೀತಿಸಹಿತೆಯಿಂದ ರೋಮ್ ಕಾರ್ಥೇಜ್ ಅನ್ನು ಸೋಲಿಸಿತ್ತೋ ಅದರ ಪ್ರತಿನಿಧಿಯಂತಿದ್ದವನು. ತಾರುಣ್ಯದಿಂದ ವಾರ್ಧಕ್ಯದವರೆಗೆ ಅವನು ಸರಳವಾಗಿ ಬದುಕಿದ್ದ; ಬೇಗ ಎದ್ದು, ಅನೇಕ ಬಗೆಯ ದೈಹಿಕ ಶ್ರಮಗಳನ್ನು ಅನುಸರಿಸಿ, ಒರಟು ಆಹಾರವನ್ನು ಸೇವಿಸುತ್ತ, ಎಂದೂ ನೂರು ಪೆನ್ನಿಗಳಿಗಿಂತ ದುಬಾರಿಯಾದ ನಿಲುವಂಗಿಯನ್ನು ಧರಿಸದಿದ್ದವನು ಅವನು. ದೇಶದ ಬಗ್ಗೆ ಅವನದು ಕಡುತರ ಪ್ರಾಮಾಣಿಕತೆ, ಎಲ್ಲ ಬಗೆಯ ಲಂಚರುಷುವತ್ತುಗಳಿಂದ ದೂರವಿದ್ದವನು. ತಾನು ಅನುಸರಿಸುತ್ತಿದ್ದ ಈ ಎಲ್ಲ ಸದ್ಗುಣಗಳನ್ನೂ ಇತರ ರೋಮನ್ನರೂ ಅನುಸರಿಸಬೇಕೆಂದು ಒತ್ತಾಯಿಸುತ್ತಿದ್ದ; ಪ್ರಾಮಾಣಿಕ ವ್ಯಕ್ತಿಯು ಮಾಡಬಹುದಾದ ಅತ್ಯುತ್ತಮ ಕಾರ್ಯವೆಂದರೆ ಕೆಡುಕು ವ್ಯಕ್ತಿಯ ಮೇಲೆ ಆರೋಪ ಹೊರಿಸಿ ಅವನಿಗೆ ಶಿಕ್ಷೆಯಾಗುವಂತೆ ಮಾಡುವುದೇ ಎಂದು ನಂಬಿದ್ದ. ತನಗೆ ಸಾಧ್ಯವಿರುವಷ್ಟರ ಮಟ್ಟಿಗೆ ಅವನು ಹಳೆಯ ರೋಮನ್ ನಡಾವಳಿಯ ನಿಷ್ಠುರತೆಯನ್ನು ಹೇರುತ್ತಿದ್ದ.

'ಮಾರನೆಯ ವರ್ಷ ಕಾನ್ಸಲ್ ಆಗುವ ಸಾಧ್ಯತೆಯಿದ್ದ ಮ್ಯಾನಿಲಿಯಸ್ ಹಗಲು ಹೊತ್ತಿನಲ್ಲಿ ತನ್ನ ಹೆಂಡತಿಯನ್ನು ಅಕ್ಕರೆಯಿಂದ ಮುತ್ತಿಟ್ಟ, ಅದೂ ತನ್ನ ಮಗಳ ಮುಂದೆ ಎಂಬ ಕಾರಣಕ್ಕಾಗಿ ಅವನ ಮೇಲೆ ಆಪಾದನೆ ಹೊರಿಸಿ, ತನ್ನ ಹೆಂಡತಿ ಗುಡುಗಿನ ಹೊತ್ತಿನಲ್ಲಿ ಬಿಟ್ಟು ಎಂದೂ ಮುತ್ತಿಡಲಿಲ್ಲವೆಂದು ಹೇಳಿ ಅವನನ್ನು ಕೇಟೋ ಸೆನೇಟ್‌ನಿಂದ ಹೊರಹಾಕಿಸಿದ.'[೯]

ತಾನು ಅಧಿಕಾರದಲ್ಲಿದ್ದಾಗ ಅವನು ವೈಭವವನ್ನೂ ಹಬ್ಬಗಳನ್ನೂ ದೂರವಿಟ್ಟಿದ್ದ.

---

೯. ನಾರ್ತ್‌ನ ಪ್ಲೂಟಾರ್ಕ್, 'ಲೈವ್ಸ್', ಕೇಟೋ.

ತನ್ನ ಮಕ್ಕಳಿಗೆ ಮಾತ್ರವಲ್ಲದೆ ತನ್ನ ಗುಲಾಮರ ಮಕ್ಕಳಿಗೂ ತನ್ನ ಹೆಂಡತಿ ಮೊಲೆಯೂಡುವಂತೆ ಮಾಡಿದ, ಅದಕ್ಕೆ ಕಾರಣ ಒಂದೇ ಹಾಲಿನಿಂದ ಬೆಳೆದ ಆ ಮಕ್ಕಳು ತನ್ನ ಮಕ್ಕಳನ್ನು ಪ್ರೀತಿಸಬಹುದು ಎಂಬುದು. ತನ್ನ ಗುಲಾಮರು ತೀರ ವಯಸ್ಸಾಗಿ ದುಡಿಯಲಾರವರಾದಾಗ ಅವರನ್ನು ಕರುಣೆಯಿಲ್ಲದೆ ಮಾರಿದ. ತನ್ನ ಗುಲಾಮರು ಸದಾ ಕೆಲಸ ಮಾಡುತ್ತಿರಬೇಕು ಇಲ್ಲವೇ ನಿದ್ದೆ ಮಾಡುತ್ತಿರಬೇಕು ಎಂದು ಒತ್ತಾಯಿಸುತ್ತಿದ್ದ. ಗುಲಾಮರು ತಮ್ಮತಮ್ಮಲ್ಲಿ ಜಗಳವಾಡುವಂತೆ ಅವನು ಪ್ರೇರೇಪಿಸುತ್ತಿದ್ದ, ಯಾಕೆಂದರೆ 'ಅವರು ಸ್ನೇಹದಿಂದಿರುವುದನ್ನು ಅವನು ಒಪ್ಪುತ್ತಿರಲಿಲ್ಲ.' ಗುಲಾಮನೊಬ್ಬನು ಮಹಾ ಅಪರಾಧವೊಂದನ್ನು ಮಾಡಿದಾಗ, ಅವನನ್ನು ಮರಣದಂಡನೆಗೆ ಗುರಿಪಡಿಸಬೇಕೆಂದು ಒತ್ತಾಯಿಸಲು ಅವರನ್ನು ಪ್ರೇರೇಪಿಸಿದ; ಉಳಿದವರ ಮುಂದೆ ಅವನಿಗೆ ತನ್ನ ಕೈಗಳಿಂದಲೇ ಮರಣದಂಡನೆಯನ್ನು ನೀಡಿದ.

ಕೇಟೋ ಮತ್ತು ಕಾರ್ನಿಯಾಡೀಸ್ ಇವರ ನಡುವಣ ವೈದೃಶ್ಯವು ಸಂಪೂರ್ಣವಾದುದು: ಒಬ್ಬನು ತೀರ ನಿಷ್ಠುರವೂ ಕಟ್ಟುನಿಟ್ಟಿನದೂ ಆದ ನೀತಿಸಂಹಿತೆಯಿಂದಾಗಿ ಕ್ರೂರಿಯಾಗಿದ್ದರೆ, ಮತ್ತೊಬ್ಬ ತೀರ ಸಡಿಲವಾದ ಹಾಗೂ ಹೆಲೆನಿಸ್ಟಿಕ್ ಜಗತ್ತಿನ ಸಾಮಾಜಿಕ ವಿಘಟನೆಯಿಂದ ಕಲುಷಿತಗೊಂಡ ನೀತಿಸಂಹಿತೆಯಿಂದಾಗಿ ಅಗೌರವಕ್ಕೆ ಪಾತ್ರನಾದ.

'ಮಾರ್ಕಸ್ ಕೇಟೋ, ಯುವಕರು ಗ್ರೀಕ್ ಭಾಷೆಯನ್ನು ಮಾತನಾಡಿ, ಅದಕ್ಕೆ ರೋಮ್‌ನಲ್ಲಿ ಗೌರವ ಹೆಚ್ಚಾಗುತ್ತ ಹೋಗಬೇಕು ಎನ್ನುತ್ತಿದ್ದರೂ ಅದನ್ನವನು ಇಷ್ಟಪಡುತ್ತಿರಲಿಲ್ಲ; ಅದಕ್ಕೆ ಕಾರಣ ವಿದ್ವತ್ತು ಮತ್ತು ಮಾತುಗಾರಿಕೆಯ ಬಗ್ಗೆ ಒಲವಿದ್ದ ರೋಮ್ ಯುವಕರು ಶಸ್ತ್ರಾಸ್ತ್ರಗಳ ಬಗೆಗಿನ ಗೌರವ ಮತ್ತು ವೈಭವಗಳನ್ನು ಮರೆತುಬಿಡಬಹುದೆಂಬುದು .. .. ಇದರಿಂದ ಅವನು, ರಾಯಭಾರಿಗಳು ಅಲ್ಲಿ ಬಹುದಿನಗಳಿಂದ ಇರುವರೆಂದೂ, ಅವರನ್ನು ಸಾಗಹಾಕಬೇಕೆಂದೂ ಅವನೊಂದು ದಿನ ಸೆನೇಟ್‌ನಲ್ಲಿ ಬಹಿರಂಗವಾಗಿ ತಪ್ಪು ಹುಡುಕಿದ; ಅವರು ಕುಟಿಲ ಜನರೆಂದೂ, ತಾವು ಮಾಡುವುದು ಸರಿಯೆಂದು ಜನರನ್ನು ಮನವೊಲಿಸುವವರೆಂದೂ ಆಪಾದಿಸಿದ. ಬೇರಾವುದೇ ಗೌರವವಿಲ್ಲದಿದ್ದರೆ, ಅದರಿಂದ ಅವರು ಅವಕ್ಕೆ ಕೆಲವು ಉತ್ತರಗಳನ್ನು ನಿರ್ಧರಿಸಬಹುದೆಂದೂ, ಆದ್ದರಿಂದ ಅವರನ್ನು ಹಿಂದಕ್ಕೆ ಕಳುಹಿಸಿ ಮತ್ತೆ ಶಾಲೆಗೆ ಹೋಗಿ, ಗ್ರೀಸ್‌ನಲ್ಲಿನ ತಮ್ಮ ಮಕ್ಕಳಿಗೆ ಪಾಠ ಹೇಳುವಂತೆ ಮಾಡಲಿ, ಮತ್ತು ಇದರಿಂದ ರೋಮ್‌ನ ಮಕ್ಕಳು ಹಿಂದಿನಂತೆಯೇ ಕಾನೂನುಗಳನ್ನು ಮತ್ತು ಸೆನೇಟ್ ಅನ್ನು ಗೌರವಿಸುವುದನ್ನು ಕಲಿಯುಂತಾಗುವುದೆಂದು ವಿವರಿಸಿದ. ಅವನು ಈ ರೀತಿ ಸೆನೇಟ್‌ಗೆ ಹೇಳಿದ್ದು, ಕೆಲವರು ಭಾವಿಸುವಂತೆ, ಕಾರ್ನಿಯಾಡೀಸ್ ಬಗೆಗಿನ ಯಾವುದೇ ವೈಯಕ್ತಿಕ ದ್ವೇಷದಿಂದಾಗಲೀ ವೈಷಮ್ಯದಿಂದಾಗಲೀ ಅಲ್ಲ;

ಅದಕ್ಕೆ ಕಾರಣ ಅವನಿಗೆ ಒಟ್ಟಾರೆ ತತ್ವಜ್ಞಾನದ ಬಗ್ಗೆ ದ್ವೇಷವಿದ್ದುದು.'[೧೦೦]

ಕೇಟೋನ ದೃಷ್ಟಿಯಲ್ಲಿ ಅಥೇನಿಯನ್ನರು ನಿಯಮ ನಿಬಂಧನೆಗಳಿಲ್ಲದ ಕೀಳು ಜನಾಂಗ; ಕುತರ್ಕದ ಬುದ್ಧಿಜೀವಿಗಳಿಂದಾಗಿ ಅವರು ಕೀಳುಮಟ್ಟಕ್ಕಿಳಿದರೂ ಪರವಾಯಿಲ್ಲ, ಆದರೆ ರೋಮನ್ನರು ಮಾತ್ರ ಕಟ್ಟುನಿಟ್ಟಿನವರೂ ಚಕ್ರಾಧಿಪತ್ಯವಾದಿಗಳು ದಯಾಹೀನರೂ ಮೂರ್ಖರೂ ಆಗಿರಬೇಕು. ಆದರೆ ಅದರಲ್ಲಿ ಅವನು ವಿಫಲನಾದ; ಆನಂತರದ ರೋಮನ್ನರು, ಅವನ ಕೆಲವು ದುರ್ಗುಣಗಳನ್ನು ಮೈಗೂಡಿಸಿಕೊಂಡರೂ, ಕಾರ್ನಿಯಾಡೀಸ್‌ನ ಗುಣಗಳನ್ನೂ ಅಳವಡಿಸಿಕೊಂಡರು.

ಕಾರ್ನಿಯಾಡೀಸ್‌ನ (ಕ್ರಿಪೂ ಸು. ೧೮೦ ರಿಂದ ೧೧೦) ನಂತರ ಅಕೆಡೆಮಿಯ ಮುಂದಿನ ಮುಖ್ಯಸ್ಥನಾದವನು ಒಬ್ಬ ಕಾರ್ಥೇಜಿನಿಯನ್, ಅವನ ನಿಜವಾದ ಹೆಸರು ಹ್ಯಾಸ್‌ಡುಬ್ರಾಲ್ ಎಂದು, ಆದರೆ ಅವನು ಗ್ರೀಕರೊಡನೆಯ ವ್ಯವಹಾರದಲ್ಲಿ ತನ್ನ ಹೆಸರನ್ನು ಕ್ಲೈಟೋಮ್ಯಾಕಸ್ ಎಂದು ಬದಲಿಸಿಕೊಂಡ. ಕೇವಲ ಉಪನ್ಯಾಸ ನೀಡುವುದಕ್ಕೆ ತನ್ನನ್ನು ಸೀಮಿತಗೊಳಿಸಿಕೊಂಡ ಕಾರ್ನಿಯಾಡೀಸ್‌ನಂತಲ್ಲದೆ, ಕ್ಲೈಟೋಮ್ಯಾಕಸ್ ನಾನ್ನೂರಕ್ಕೂ ಹೆಚ್ಚು ಸಂಖ್ಯೆಯ ಪುಸ್ತಕಗಳನ್ನು ಬರೆದ, ಅವುಗಳಲ್ಲಿ ಕೆಲವು ಫಿನೀಷಿಯನ್ ಭಾಷೆಯವೂ ಇದ್ದವು. ಅವನ ನಿಲವುಗಳು ಕಾರ್ನಿಯಾಡೀಸ್‌ನದರಂತೆಯೇ ಇದ್ದಂತೆ ತೋರುತ್ತದೆ. ಕೆಲವು ವಿಷಯಗಳಲ್ಲಿ ಅವು ಉಪಯುಕ್ತವಾಗಿದ್ದವು. ಈ ಇಬ್ಬರೂ ಸಂದೇಹವಾದಿಗಳೂ ವ್ಯಾಪಕವಾಗುತ್ತಿದ್ದ ದೈವಿಕತೆ, ಮಾಂತ್ರಿಕತೆ ಮತ್ತು ಜ್ಯೋತಿಷ್ಯಗಳ ವಿರುದ್ಧವಾಗಿದ್ದರು. ಸಂಭವನೀಯತೆಯ ಹಂತಗಳ ಕುರಿತು ಅವರೊಂದು ರಚನಾತ್ಮಕ ಸಿದ್ಧಾಂತವನ್ನು ರೂಪಿಸಿದರು; ಖಚಿತತೆಯನ್ನು ನಾವೆಂದೂ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲದಿದ್ದರೂ, ಕೆಲವು ಮಿಕ್ಕ ಕೆಲವಕ್ಕಿಂತ ಹೆಚ್ಚು ಸತ್ಯವಾಗಿರುವ ಸಾಧ್ಯತೆಯಿರುತ್ತದೆ. ವ್ಯಾವಹಾರಿಕವಾಗಿ ಸಂಭವನೀಯತೆಯು ನಮಗೆ ಮಾರ್ಗದರ್ಶಕವಾಗಬೇಕು, ಸಾಧ್ಯ ಆಧಾರಕಲ್ಪನೆಗಳಲ್ಲಿ ಯಾವುದು ಹೆಚ್ಚು ಸಂಭವನೀಯವೋ ಅದಕ್ಕನುಗುಣವಾಗಿ ನಡೆದುಕೊಳ್ಳುವುದು ಸಕಾರಣವಾದುದು. ಈ ದೃಷ್ಟಿಯನ್ನು ಬಹುತೇಕ ಆಧುನಿಕ ತತ್ವಜ್ಞಾನಿಗಳು ಒಪ್ಪುತ್ತಾರೆ. ಆದರೆ ಅದನ್ನು ನಿರೂಪಿಸಿರುವ ಗ್ರಂಥಗಳು ದುರದೃಷ್ಟವಶಾತ್ ಈಗ ಉಪಲಬ್ಧವಿಲ್ಲ, ಉಳಿದ ಸೂಚನೆಗಳನ್ನಾಧರಿಸಿ ಆ ಸಿದ್ಧಾಂತವನ್ನು ಪುನಾರಚಿಸುವುದು ಕಷ್ಟಸಾಧ್ಯವೇ ಸರಿ.

ಕಾರ್ನಿಯಾಡೀಸ್‌ನ ನಂತರ ಅಕೆಡೆಮಿಯು ಸಂದೇಹವಾದದಿಂದ ದೂರಸರಿಯಿತು; ಅಲ್ಲದೆ ಆಂಟಿಯೋಕಸ್‌ನ ಕಾಲದಿಂದ (ಅವನು ಸತ್ತದ್ದು ಕ್ರಿಪೂ.೬೯) ಅನೇಕ ಶತಮಾನಗಳ ಕಾಲ ಅದರ ಸಿದ್ಧಾಂತಗಳು ಸಂಯಮವಾದಕ್ಕಿಂತ ಹೇಗೆ ಭಿನ್ನವೆಂದು ಗುರುತಿಸಲೂ ಸಾಧ್ಯವಾಗದಂತಾಯಿತು.

೧೦೦. ಅದೇ.

ಆದರೆ ಸಂದೇಹವಾದವು ಕಣ್ಮರೆಯಾಗಲಿಲ್ಲ. ಅದನ್ನು ನಾಸಾಸ್‌ನಿಂದ ಬಂದ (ಆದರೆ ಯಾಕೆ ಬಂದನೋ ತಿಳಿಯದು) ಕ್ರೀಟ್‌ನ ಈನೀಸಿಡೇಮಸ್‌ನಿಂದ ಪುನರುಜ್ಜೀವನಗೊಂಡಿತು; ಸಂದೇಹವಾದಿಗಳು ಆ ಮುಂಚಿನ ಎರಡು ಸಾವಿರ ವರ್ಷಗಳಿಂದಲೂ, ಪ್ರಾಣಿಗಳ ಒಡತಿಯ ಬಗೆಗಿನ ದೈವಿಕತೆಯನ್ನು ಪ್ರಶ್ನಿಸುತ್ತ ನೀತಿಗೆಟ್ಟ ಆಸ್ಥಾನಿಕರನ್ನು ಮನರಂಜಿಸುತ್ತ ಇದ್ದಿರಬಹುದು. ಈನೀಸಿಡೇಮಸ್‌ನ ಕಾಲದ ಬಗ್ಗೆ ನಿಖರತೆಯಿಲ್ಲ. ಕಾರ್ನಿಯಾಡೀಸ್ ಪ್ರತಿಪಾದಿಸಿದ್ದ ಸಂಭವನೀಯತೆಯ ಸಿದ್ಧಾಂತಗಳನ್ನು ಕೈಬಿಟ್ಟು ಹಿಂದಿನ ಸಂದೇಹವಾದವನ್ನು ಪುರಸ್ಕರಿಸಿದ ಅವನು ತಕ್ಕಮಟ್ಟಿಗಿನ ಪ್ರಭಾವವನ್ನು ಬೀರಿದ. ಅವನನ್ನು ಕ್ರಿಶ ಎರಡನೆಯ ಶತಮಾನದಲ್ಲಿದ್ದ ವಿಡಂಬಕ ಲ್ಯೂಸಿಯನ್, ಜೊತೆಗೆ ಸ್ವಲ್ಪ ಕಾಲದ ಬಳಿಕ ಅನುಸರಿಸಿದವನು ಸೆಕ್ಸ್‌ಟಸ್ ಎಂಪಿರಿಕಸ್, ಪ್ರಾಚೀನ ಸಂದೇಹವಾದಿ ತತ್ವಜ್ಞಾನಿಗಳಲ್ಲಿ ಉಳಿದು ಬಂದಿರುವ ಕೃತಿಗಳು ಅವನವು ಮಾತ್ರ. ನಿದರ್ಶನಕ್ಕೆ, '*ಆರ್ಗ್ಯುಮೆಂಟ್ಸ್ ಎಗೇನ್ಸ್ಟ್ ಬಿಲೀಫ್ ಇನ್ ಗಾಡ್*' ಎಂಬ ಒಂದು ಸಣ್ಣ ಗ್ರಂಥವಿದೆ, ಇದನ್ನು ಎಡ್ವಿನ್ ಬೇವನ್ ತಮ್ಮ '*ಲೇಟರ್ ಗ್ರೀಕ್ ರಿಲಿಜನ್*' ನಲ್ಲಿ (ಪು. ೫೨-೫೬) ಅನುವಾದಿಸಿದ್ದಾರೆ; ಇದನ್ನು ಕ್ಲೈಟೋಮ್ಯಾಕಸ್ ನಿರೂಪಿಸಿದಂತೆ ಸೆಕ್ಸಟಸ್ ಎಂಪಿರಿಕಸ್‌ನಿಂದ ಪ್ರಾಯಶಃ ತೆಗೆದುಕೊಂಡಿರಬಹುದೆಂದು ಅವರು ಹೇಳುತ್ತಾರೆ.

ಈ ಗ್ರಂಥವು 'ನಡವಳಿಕೆ'ಯಲ್ಲಿ ಸಂದೇಹವಾದಿಗಳು ಸಂಪ್ರದಾಯವಾದಿಗಳು ಎಂದು ಆರಂಭಗೊಳ್ಳುತ್ತದೆ: 'ಸಂದೇಹವಾದಿಗಳಾದ ನಾವು ಜಗತ್ತಿನ ಮಾರ್ಗವನ್ನೇ ಅನುಸರಿಸುತ್ತೇವೆ, ಆದರೆ ಆ ಬಗ್ಗೆ ಯಾವುದೇ ಅಭಿಪ್ರಾಯವನ್ನು ಹೊಂದಿದವರಲ್ಲ. ನಾವು ದೇವರುಗಳ ಅಸ್ತಿತ್ವದ ಬಗ್ಗೆ ಮಾತನಾಡುತ್ತೇವೆ ಮತ್ತು ದೇವರುಗಳ ಪೂಜೆಯನ್ನೂ ಮಾಡುತ್ತೇವೆ, ಅವರು ಅನುಗ್ರಹ ಮಾಡುತ್ತಾರೆನ್ನುತ್ತೇವೆ, ಆದರೆ ಹೀಗೆ ಹೇಳುವಾಗ ನಾವು ಯಾವುದೇ ಶ್ರದ್ಧೆಯನ್ನು ತೋರ್ಪಡಿಸುವುದಿಲ್ಲ, ಆದರೆ ತತ್ವಸಿದ್ಧಾಂತಿಗಳ ಒರಟುತನದಿಂದ ದೂರ ಉಳಿಯುತ್ತೇವೆ.'

ದೇವರ ಸ್ವರೂಪವನ್ನು ಜನರು ವಿವಿಧ ಬಗೆಯಲ್ಲಿ ವಿವರಿಸುತ್ತಾರೆ ಎಂದವನು ಆನಂತರ ವಾದಿಸುತ್ತಾನೆ; ಉದಾಹರಣೆಗೆ, ಅವನನ್ನು ದೇಹಸಹಿತನೆಂದು ಭಾವಿಸುತ್ತಾರೆ, ಮತ್ತೆ ಕೆಲವರು ಅವನು ದೇಹರಹಿತನೆನ್ನುತ್ತಾರೆ. ನಮಗೆ ಅವನ ಅನುಭವವೇ ಇಲ್ಲದ್ದರಿಂದ ಅವನ ಸ್ವರೂಪವನ್ನು ನಾವು ತಿಳಿಯಲು ಸಾಧ್ಯವೇ ಇಲ್ಲ. ದೇವರ ಅಸ್ತಿತ್ವವು ಸ್ವಯಂಸಿದ್ಧವಲ್ಲ, ಹೀಗಾಗಿ ಅದಕ್ಕೆ ಸಾಕ್ಷ್ಯ ಬೇಕು. ಅಂತಹ ಯಾವುದೇ ಸಾಕ್ಷ್ಯ ಇಲ್ಲವೆಂಬ ವಾದಗಳ ಬಗ್ಗೆಯೂ ಗೊಂದಲಗಳಿವೆ. ಆನಂತರ ಅವನು ಕೆಡುಕಿನ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಂಡು ಈ ಮುಂದಣ ವಾದದಿಂದ ಕೊನೆಗೊಳಿಸುತ್ತಾನೆ:

'ದೇವರು ಇದ್ದಾನೆ ಎಂದು ಇತ್ಯಾತ್ಮಕವಾಗಿ ವಾದಿಸುವ ಜನರು ಭಕ್ತಿರಾಹಿತ್ಯಕ್ಕೊಳಗಾಗುವುದನ್ನು ತಪ್ಪಿಸಿಕೊಳ್ಳಲಾರರು. ಯಾಕೆಂದರೆ, ದೇವರು ಎಲ್ಲವನ್ನೂ ನಿಯಂತ್ರಿಸುತ್ತಾನೆ ಎಂದವರು ವಾದಿಸಿದರೆ, ಅವನನ್ನು ಕೆಟ್ಟ ಕೃತ್ಯಗಳ ಕರ್ತೃವೆಂದು ವಾದಿಸಿದಂತಾಗುತ್ತದೆ; ಅದಲ್ಲದೆ, ಅವನು ಕೆಲವು ವಸ್ತುಗಳ್ನು ಮಾತ್ರ ನಿಯಂತ್ರಿಸುತ್ತಾನೆ ಎಂದೋ ಅಥವಾ ಅವನು ಏನನ್ನೂ ನಿಯಂತ್ರಿಸುವುದೇ ಇಲ್ಲವೆಂದೋ ಹೇಳಿದರೆ, ಹಾಗೆ ಹೇಳುವುದೂ ಭಕ್ತಿರಾಹಿತ್ಯವೇ ಆಗುತ್ತದೆ.'

ಸಂದೇಹವಾದವು ಕ್ರಿಶ ಮೂರನೆಯ ಶತಮಾನದವರೆಗೂ ಕೆಲವು ಮಂದಿ ಸುಸಂಸ್ಕೃತರ ಮೇಲೆ ಪ್ರಭಾವ ಬೀರಿದರೂ, ಆದು ತತ್ವಸೈದ್ಧಾಂತಿಕ ಮತಧರ್ಮ ಹಾಗೂ ಮೋಕ್ಷ ಸಿದ್ಧಾಂತಗಳ ಕಡೆಗೆ ಹೆಚ್ಚು ಹೆಚ್ಚಾಗಿ ವಾಲುತ್ತಿದ್ದ ಆ ಕಾಲದ ಒಟ್ಟು ಮನೋಭಾವಕ್ಕೆ ವಿರೋಧವಾದುದಾಗಿತ್ತು. ಸಂದೇಹವಾದವು ಶಿಕ್ಷಿತರು ಮತಧರ್ಮಗಳ ಸ್ವರೂಪದ ಬಗ್ಗೆ ಅಸಂತೃಪ್ತರಾಗುವಂತೆ ಮಾಡುವುದರಲ್ಲಿ ಸಾಕಷ್ಟು ಪ್ರಭಾವಶಾಲಿಯಾಗಿದ್ದರೂ, ಅದರಲ್ಲಿ ಶುದ್ಧ ಬೌದ್ಧಿಕ ವಲಯದಲ್ಲಿಯೂ ಇತ್ಯಾತ್ಮಕವಾದುದು ಏನೂ ಇರಲಿಲ್ಲವಾದ್ದರಿಂದ ಪರ್ಯಾಯಗಳನ್ನೇನೂ ನೀಡುವಂತಿರಲಿಲ್ಲ. ಮತಧರ್ಮಸುಧಾರಣೆಯ ನಂತರ ಅದರ ಸಮರ್ಥಕರಿಗೆ ತತ್ವಜಿಜ್ಞಾಸಾ ಸಂದೇಹವಾದವು ವಿಜ್ಞಾನದ ಬಗೆಗಿನ ಉತ್ಸಾಹಪೂರ್ಣ ಶ್ರದ್ಧೆಯಿಂದಾಗಿ ಅದಕ್ಕೆ ಪೂರಕವಾಗಿ ಬಂತು, ಆದರೆ ಅದಕ್ಕೂ ಮುಂಚೆ ಅಂತಹ ಪೂರಕವಾದುದು ಯಾವುದೂ ಇರಲಿಲ್ಲ. ಸಂದೇಹವಾದಿಗಳ ಸಂಶಯಗಳನ್ನು ನಿವಾರಿಸದೆ ಪ್ರಾಚೀನ ಜಗತ್ತು ಅದನ್ನು ಕಡೆಗಣಿಸಿತು. ದೇವತಾಪುರುಷರ ಅಪಖ್ಯಾತಿಯಿಂದಾಗಿ, ಪೌರಸ್ತ್ಯ ಮತಧರ್ಮಗಳ ದಾಳಿಗೆ ದಾರಿ ಸುಗಮವಾಯಿತು, ಅದು ತನ್ನ ಬಗ್ಗೆ ಒಲವನ್ನು ಬೆಳೆಸಿಕೊಳ್ಳಲು ಕಂದಾಚಾರಗಳೊಡನೆ ಕ್ರೈಸ್ತಧರ್ಮದ ಗೆಲವಿನವರೆಗೂ ಸೆಣಸಿತು.

೨೭
ಸುಖೈಕವಾದಿಗಳು (ದ ಎಪಿಕ್ಯೂರಿಯನ್ಸ್)

ಹೆಲೆನಿಸ್ಟಿಕ್ ಯುಗದ ಎರಡು ಮಹಾ ಪಂಥಗಳೆಂದರೆ ಸಂಯಮವಾದಿಪಂಥ ಮತ್ತು ಸುಖೈಕವಾದಿಪಂಥಗಳು, ಅವೆರಡೂ ಒಂದೇ ಕಾಲದಲ್ಲಿ ಸ್ಥಾಪಿತಗೊಂಡವು. ಅವುಗಳ ಸ್ಥಾಪಕರಾದ ಝೇನೋ ಮತ್ತು ಎಪಿಕ್ಯೂರಸ್‌ರು ಸರಿಸುಮಾರು ಒಂದೇ ಕಾಲದಲ್ಲಿ ಹುಟ್ಟಿದರು, ಕೆಲವು ವರ್ಷಗಳ ಅಂತರದಲ್ಲಿ ಅವರಿಬ್ಬರೂ ಅಥೆನ್ಸ್‌ನಲ್ಲಿ ನೆಲಸಿ ತಮ್ಮ ಪಂಥಗಳನ್ನು ಸ್ಥಾಪಿಸಿದರು. ಹೀಗಾಗಿ ಮೊದಲು ನಾವು ಪರಿಗಣಿಸಬೇಕಾಗಿರುವುದು ಅವುಗಳ ಅಭಿರುಚಿಯ ಬಗ್ಗೆ. ನಾನು ಎಪಿಕ್ಯೂರಸ್ ಪಂಥದಿಂದ ಆರಂಭಿಸುತ್ತೇನೆ; ಇದಕ್ಕೆ ಕಾರಣ, ಅವುಗಳ ಸಿದ್ಧಾಂತಗಳು ತಮ್ಮ ಸ್ಥಾಪಕರಿಂದ ಒಮ್ಮೆಗೇ ಖಚಿತಗೊಂಡದ್ದು, ಸಂಯಮವಾದಕ್ಕೆ (ಸ್ಟಾಯಿಸಿಸಂ) ಕ್ರಿಶ ೧೮೦ ರಲ್ಲಿ ಸತ್ತ ಚಕ್ರವರ್ತಿ ಮಾರ್ಕಸ್ ಔರೀಲಿಯಸ್ ಕಾಲದವರೆಗೂ ದೀರ್ಘ ಬೆಳವಣಿಗೆಯಿದ್ದುದು.

ಎಪಿಕ್ಯೂರಸ್‌ನ ಜೀವನದ ಬಗೆಗಿನ ಮುಖ್ಯ ಅಧಿಕೃತ ದಾಖಲೆಯೆಂದರೆ ಕ್ರಿಶ ಮೂರನೆಯ ಶತಮಾನದಲ್ಲಿದ್ದ ಡಯೋಜಿನೀಸ್ ಲಯೆರ್ಟಿಯಸ್. ಆದರೆ ಇದರಲ್ಲಿ ಎರಡು ತೊಂದರೆಗಳಿವೆ; ಮೊದಲನೆಯದು, ಡಯೋಜಿನೀಸ್ ಲಯೆರ್ಟಿಯಸ್‌ನೇ ಐತಿಹಾಸಿಕ ಮೌಲ್ಯವೇ ಇಲ್ಲದ ದಂತಕತೆಗಳನ್ನು ಒಪ್ಪಿಕೊಳ್ಳುವುದು; ಮತ್ತು ಎರಡನೆಯದು, ಅವನ 'ಲೈಫ್' ಭಾಗಶಃ ಸಂಯಮವಾದಿಗಳು ಎಪಿಕ್ಯೂರಸ್ ವಿರುದ್ಧ ಮಾಡಿದ ನಾಚಿಕೆಗೇಡಿನ ಆರೋಪಗಳನ್ನು ವರದಿ ಮಾಡುವುದು, ಅವುಗಳನ್ನವನು ಒಪ್ಪುತ್ತಿದ್ದಾನೆಯೋ ಅಥವಾ ಅವುಗಳನ್ನು ಕೇವಲ ದಾಖಲು ಮಾಡುತ್ತಿದ್ದಾನೆಯೋ ತಿಳಿಯದು. ಸಂಯಮವಾದಿಗಳು ಅವನ ವಿರುದ್ಧ ಸೃಷ್ಟಿಸಿದ ಲಜ್ಜಾಹೀನ ಸಂಗತಿಗಳು ಅವುಗಳ ಬಗೆಗಿನ ವಾಸ್ತವಗಳು, ಅವುಗಳ ಉನ್ನತ ನೈತಿಕತೆಯನ್ನು ಹೊಗಳಿದಾಗ ನೆನಪಿರಿಸಿಕೊಳ್ಳಬೇಕಾದವು; ಆದರೆ ಅವು ಎಪಿಕ್ಯೂರಸ್ ಬಗೆಗಿನ ವಾಸ್ತವ ಸಂಗತಿಗಳಲ್ಲ. ಉದಾಹರಣೆಗೆ, ಅವನ ತಾಯಿಯು ಒಬ್ಬ ಕಪಟ ಪೂಜಾರಿಣಿ, ಆ ಬಗ್ಗೆ ಡಯೋಜಿನೀಸ್ ಹೇಳುವುದಿದು:

'ಅವರು (ಅಂದರೆ ಸಂಯಮವಾದಿಗಳು) ಹೇಳುವುದೆಂದರೆ ಅವನು ತನ್ನ ತಾಯಿಯೊಡನೆ ಶುದ್ಧೀಕರಣ ಪ್ರಾರ್ಥನೆಗಳನ್ನು ಹೇಳುತ್ತ ಮನೆ ಮನಗೆ ಹೋಗಿ ಅವನ ತಂದೆ ಮಾಡುತ್ತಿದ್ದ ಅಧ್ಯಾಪನಕ್ಕೆ ಪುಡಿಗಾಸು ಸಹಾಯ ಮಾಡುತ್ತಿದ್ದ.'

ಈ ಬಗ್ಗೆ ಬೈಲಿ[೧೦೧] ಹೇಳುತ್ತಾರೆ: 'ಈ ಕತೆಯಲ್ಲಿ ಏನಾದರೂ ಸತ್ಯಾಂಶವಿದ್ದರೆ, ತನ್ನ ತಾಯಿಯೊಡನೆ ಅವನು ಸಹಾಯಕನಂತೆ ಅವಳ ಅವತಾರಗಳ ಬಗ್ಗೆ ಮಂತ್ರ ಹೇಳುತ್ತ ಹೋಗುತ್ತಿದ್ದರೆ, ಚಿಕ್ಕ ವಯಸ್ಸಿನಲ್ಲಿಯೇ ಅವನು ಮೂಢಶ್ರದ್ಧೆಗಳ ವಿರುದ್ಧದ ಮನೋಭಾವವನ್ನು ಬೆಳೆಸಿಕೊಳ್ಳಲು ಕಾರಣವಾಗಿರಬಹುದು, ಅದು ಮುಂದೆ ಅವನ ಬೋಧನೆಗಳಲ್ಲಿ ಪ್ರಧಾನ ಪಾತ್ರ ವಹಿಸಿದ್ದಿರಬಹುದು.' ಈ ವಾದವು ಆಕರ್ಷಕವಾಗಿದೆಯಾದರೂ, ಆನಂತರ ಪ್ರಾಚೀನ ಕಾಲದಲ್ಲಿ ಅವನ ಬಗ್ಗೆ ಪುಕಾರ ಹುಟ್ಟಿಸುವ ಈ ಅತಿರೇಕದ ದೃಷ್ಟಿಯಿಂದ ಅದಕ್ಕೆ ಏನಾದರೂ ಸಮರ್ಥನೆಯಿದೆಯೆಂದು ನನಗನ್ನಿಸುವುದಿಲ್ಲ.[೧೦೨] ಅದಕ್ಕೆ ವಿರುದ್ಧವಾಗಿ, ಅವನಿಗೆ ತನ್ನ ತಾಯಿಯ ಬಗ್ಗೆ ಅಪರೂಪವೆನಿಸುವ ಪ್ರೀತಿಯಿತ್ತು ಎಂಬುದು ವಾಸ್ತವವಾಗಿರಬಹುದು.[೧೦೩]

ಆದರೆ ಎಪಿಕ್ಯೂರಸ್‌ನ ಜೀವನದ ಮುಖ್ಯ ಸಂಗತಿಗಳು ಸತ್ಯವಾದವು. ಅವನ ತಂದೆ ಸಮೋಸ್‌ನಲ್ಲಿನ ಬಡವನಾದ ಒಬ್ಬ ಅಥೆನ್ಸ್ ವಲಸೆಗಾರ. ಎಪಿಕ್ಯೂರಸ್ ಕ್ರಿಪೂ ೩೪೨–೧ ರಲ್ಲಿ ಹುಟ್ಟಿದ, ಆದರೆ ಸಮೋಸ್‌ನಲ್ಲಿಯೋ ಆಟಿಕದಲ್ಲಿಯೋ ತಿಳಿಯದು. ಏನಾದರಾಗಲಿ, ಅವನ ಬಾಲ್ಯ ಸಮೋಸ್‌ನಲ್ಲಿ ಕಳೆಯಿತು. ತಾನು ತತ್ವಜ್ಞಾನದ ಅಧ್ಯಯನದಲ್ಲಿ ಹದಿನಾಲ್ಕನೆಯ ವಯಸ್ಸಿಗೇ ತೊಡಗಿದೆ ಎಂದವನು ಹೇಳುತ್ತಾನೆ. ಹದಿನೆಂಟನೆಯ ವಯಸ್ಸಿನಲ್ಲಿ, ಅಲೆಕ್ಸಾಂಡರ್‌ನ ಸಾವಿನ ಹೊತ್ತಿನಲ್ಲಿ, ಅವನು ಅಥೆನ್ಸ್‌ಗೆ ಹೋದ, ಸಹಜವಾಗಿಯೇ ಒಬ್ಬ ಪ್ರಜೆಯಾಗಿ ನೆಲೆಸಲು. ಆದರೆ ಅವನು ಅಲ್ಲಿರುವಾಗ ಅಥೆನ್ಸ್‌ನ ವಲಸೆಗಾರರನ್ನು ಸಮೋಸ್‌ನಿಂದ ಹೊರಗಟ್ಟಲಾಯಿತು (ಕ್ರಿಪೂ ೩೨೨). ಎಪಿಕ್ಯೂರಸ್‌ನ ಕುಟುಂಬವು ಏಷ್ಯಾ ಮೈನರ್‌ನಲ್ಲಿ ನಿರಾಶ್ರಿತವಾಯಿತು, ಅಲ್ಲಿ ಅವನು ಅವರನ್ನು ಸೇರಿಕೊಂಡ. ಈ ಹೊತ್ತಿನಲ್ಲಿಯೋ ಅಥವಾ ಸ್ವಲ್ಪ ಮುಂಚೆಯೋ ಟಾಓಸ್‌ನಲ್ಲಿ ಅವನಿಗೆ ಡೆಮಾಕ್ರಿಟಸ್‌ನ ಅನುಯಾಯಿಯಾದ ನೌಸಿಫೆನೀಸ್ ಎಂಬೊಬ್ಬ ತತ್ವಜ್ಞಾನವನ್ನು ಬೋಧಿಸಿದ.

---

೧೦೧. ಸಿರಿಲ್ ಬೈಲಿ ಅವರ 'ದ ಗ್ರೀಕ್ ಆಟಮಿಸ್ಟ್ಸ್ ಅಂಡ್ ಎಪಿಕ್ಯೂರಸ್' , ಆಕ್ಸ್‌ಫರ್ಡ್, ೧೯೧೮, ಪು. ೨೨೧. ಶ್ರೀ ಬೈಲಿ ಅವರು ಎಪಿಕ್ಯೂರಸ್ ಬಗೆಗೆ ವಿಶೇಷ ಅಧ್ಯಯನ ನಡೆಸಿದವರು, ಈ ದೃಷ್ಟಿಯಿಂದ ಅವರ ಕೃತಿಯು ಅಮೂಲ್ಯವಾದುದು.

೧೦೨. ಸಂಯಮವಾದಿಗಳು ಎಪಿಕ್ಯೂರಸ್ ಬಗ್ಗೆ ತೀರ ಅನ್ಯಾಯವೆಸಗಿದ್ದಾರೆ: ಉದಾಹರಣೆಗೆ, ಅವನನ್ನು ಕುರಿತು ಹೇಳುತ್ತಾರೆ: 'ಇದು ಶ್ರೇಷ್ಠವಾದುದು ಎಂದು ನೀನು ಹೇಳುತ್ತಿರುವುದು ಈ ಬದುಕನ್ನು ಕುರಿತು: ತಿನ್ನುವುದು, ಕುಡಿಯುವುದು, ಸಂಭೋಗಿಸುವುದು, ಮತ್ತು ಗೊರಕೆ ಹೊಡೆಯುವುದು', ಭಾಗ ೨, ಅಧ್ಯಾಯ ೨೦, 'ಡಿಸ್ಕೋರ್ಸಸ್ ಆಫ್ ಎಪಿಕ್ಟಟಸ್'

೧೦೩. ಗಿಲ್ಬರ್ಟ್ ಮರ್ರೆ, 'ಫೈವ್ ಸ್ಟೇಜಸ್', ಪು. ೧೩೦.

ಅವನ ಪ್ರೌಢ ತತ್ವಜ್ಞಾನವು ಮಿಕ್ಕಾವುದೇ ತತ್ವಜ್ಞಾನಿಗಿಂತ ಡೆಮಾಕ್ರಿಟಸ್‌ಗೆ ಋಣಿಯಾಗಿರುವುದಾದರೂ, ಅವನು ನೌಸಿಫೆನೀಸ್ ಬಗ್ಗೆ ತಿರಸ್ಕಾರ ಹೊಂದಿದ್ದ, ಅವನನ್ನು ಬಸವನ ಹುಳು ಎನ್ನುತ್ತಿದ್ದ.

ತನ್ನ ಪಂಥವನ್ನವನು ಕ್ರಿಪೂ ೩೧೧ರಲ್ಲಿ ಮಿಟೈಲೀನ್‌ನಲ್ಲಿ, ಆನಂತರ ಲಂಪಾಸ್ಕಸ್‌ನಲ್ಲಿ, ಕ್ರಿಪೂ ೩೦೭ರ ನಂತರ ಅಥೆನ್ಸ್‌ನಲ್ಲಿ ಸ್ಥಾಪಿಸಿದ; ಅವನು ಸತ್ತದ್ದು ಕ್ರಿಪೂ ೨೭೦-೧ ರಲ್ಲಿ.

ತನ್ನ ಯೌವನದ ಕಷ್ಟಕಾಲದ ಬಳಿಕ ಅಥೆನ್ಸ್‌ನಲ್ಲಿನ ಅವನ ಬದುಕು ಪ್ರಶಾಂತವಾಗಿತ್ತು, ಆದರೆ ಕಾಯಿಲೆ ಅವನಿಗೆ ತೊಂದರೆ ಕೊಡುತ್ತಿತ್ತು. ಅವನಿಗೆ ಒಂದು ಮನೆ ಮತ್ತು ಒಂದು ತೋಟವಿದ್ದವು (ಬೇರೆ ಬೇರೆಯಾಗಿ), ತನ್ನ ತೋಟದಲ್ಲವನು ಬೋಧಿಸುತ್ತಿದ್ದ. ಮೊದಲಿಗೆ, ಅವನ ಮೂವರು ಸೋದರರು ಮತ್ತೆ ಇತರ ಕೆಲವರು ಅವನ ಪಂಥದ ಅನುಯಾಯಿಗಳು, ಆದರೆ ಅಥೆನ್ಸ್‌ನಲ್ಲಿ ಅವನ ಬೆಂಬಲಿಗರು ಹೆಚ್ಚಾದರು, ಅವರಲ್ಲಿ ತತ್ವಜ್ಞಾನದ ಶಿಷ್ಯರು ಮಾತ್ರವಲ್ಲದೆ, ಸ್ನೇಹಿತರು ಅವನ ಮಕ್ಕಳು ಹಾಗೂ ಗುಲಾಮರು ಮತ್ತು ಬೆಲೆವೆಣ್ಣುಗಳೂ (ಹೆಟಯೆರೆ) ಇದ್ದರು. ಈ ಕೊನೆಯವರಿಂದಾಗಿ ಅವನ ಶತ್ರುಗಳು ಅವನ ವಿರುದ್ಧ ಪುಕಾರು ಎಬ್ಬಿಸಿದರು, ಆದರೆ ಅದಕ್ಕೆ ಯಾವ ಸಮರ್ಥನೆಯೂ ಇರಲಿಲ್ಲ. ಪರಿಶುದ್ಧ ಮಾನವ ಸ್ನೇಹದ ವಿಶಿಷ್ಟ ಸ್ವಭಾವ ಅವನದು, ತನ್ನ ಸಮುದಾಯದ ಸದಸ್ಯರ ಚಿಕ್ಕ ಮಕ್ಕಳಿಗೆ ಲವಲವಿಕೆಯ ಪತ್ರಗಳನ್ನು ಬರೆಯುತ್ತಿದ್ದ. ತನ್ನ ಭಾವನೆಗಳ ಅಭಿವ್ಯಕ್ತಿಯಲ್ಲಿ ಹಿಂದಿನ ತತ್ವಜ್ಞಾನಿಗಳು ನಿರೀಕ್ಷಿಸುತ್ತಿದ್ದ ಯಾವುದೇ ಬಿಗುಮಾನವಾಗಲೀ ಸಂಕೋಚವಾಗಲೀ ಅವನಿಗಿರಲಿಲ್ಲ. ಅವನ ಪತ್ರಗಳಂತೂ ಆಶ್ಚರ್ಯ ಹುಟ್ಟಿಸುವಷ್ಟು ಸಹಜವೂ ಪ್ರಾಮಾಣಿಕವೂ ಆದವು.

ಸಮುದಾಯದ ಜೀವನವು ಸರಳವಾಗಿತ್ತು, ಭಾಗಶಃ ತತ್ವಗಳ ಕಾರಣದಿಂದ, ಮತ್ತು ಭಾಗಶಃ ಹಣದ ಕೊರತೆಯಿಂದಾಗಿ. ಅವರು ತಿಂದು ಕುಡಿಯುತ್ತಿದ್ದುದು ಮುಖ್ಯವಾಗಿ ಬ್ರೆಡ್ ಮತ್ತು ನೀರನ್ನು. ಅಷ್ಟರಲ್ಲಿಯೇ ಎಪಿಕ್ಯೂರಸ್‌ಗೆ ತೃಪ್ತಿ. 'ಬ್ರೆಡ್ ಮತ್ತು ನೀರುಗಳಿಂದ ಬದುಕುವುದರಲ್ಲಿ, ಅವುಗಳಿಗಾಗಿ ಅಲ್ಲ, ಅವುಗಳ ಹಿಂದೆಯೇ ಬರುವ ಅನನುಕೂಲಗಳಿಂದಾಗಿ – ವೈಭವೋಪೇತವಾದುದನ್ನು ಕಡೆಗಣಿಸುವುದರಲ್ಲಿ ಆಗುವ ದೇಹದ ಸುಖದಿಂದಾದ ಸಂತೋಷದಿಂದ – ನನಗೆ ಮೈ ಜುಮ್ಮೆನಿಸುತ್ತದೆ' ಎಂದವನು ಹೇಳುತ್ತಾನೆ. ಆರ್ಥಿಕವಾಗಿ ಅವನ ಸಮುದಾಯವು, ಕನಿಷ್ಠ ಪಕ್ಷ, ಸ್ವಲ್ಪ ಮಟ್ಟಿಗೆ ಸದಸ್ಯರು ನೀಡುತ್ತಿದ್ದ ಕಾಣಿಕೆಯ ಮೇಲೆ ಅವಲಂಬಿಸಿತ್ತು. 'ಉಳಿಸಿದ್ದ ಒಂದಷ್ಟು ಚೀಸ್ ಅನ್ನು ಕಳಿಸಿಕೊಡಿ, ಅದರಿಂದ ಹಬ್ಬದೂಟ ಮಾಡುತ್ತೇನೆ' ಎನ್ನುತ್ತಿದ್ದ ಅವನು. ಮತ್ತೊಬ್ಬ ಸ್ನೇಹಿತನಿಗೆ, 'ನನ್ನ ಈ ಪರಿಶುದ್ಧ ದೇಹವನ್ನು ಕಾಪಾಡಿಕೊಳ್ಳಲು ನಿಮ್ಮ ಮತ್ತು ನಿಮ್ಮ ಮಕ್ಕಳ ಪರವಾಗಿ ಸ್ವಲ್ಪ ಕೊಡುಗೆಯನ್ನು

ಕಳಿಸಿಕೊಡಿ' ಎಂದು ಹೇಳಿದ. ಮತ್ತೆ, 'ನನಗೆ ಬೇಕಾದುದು, ಅಪಾಲೋ ಪೂಜಕರಾದರೂ (ಹೈಪರ್‌ಬೊರಿಯನ್) ಪರವಾಯಿಲ್ಲ, ನನ್ನ ಶಿಷ್ಯರು ಕೊಡುವ ಕೊಡುಗೆ ಮಾತ್ರ. ನಿಮ್ಮಲ್ಲಿನ ಪ್ರತಿಯೊಬ್ಬರೂ ನನಗೆ ವರ್ಷಕ್ಕೆ ಇನ್ನೂರಿಪ್ಪತ್ತು ದ್ರಕ್ಮ[೧೦೪]ಗಳನ್ನು ಕೊಡಬೇಕೆಂಬುದು ನನ್ನ ಆಸೆ.'

ಎಪಿಕ್ಯೂರಸ್‌ನನ್ನು ಜೀವನದುದ್ದಕ್ಕೂ ರೋಗರುಜಿನಗಳು ಕಾಡಿದವು, ಆದರೆ ಅದರಿಂದ ಎಲ್ಲವನ್ನೂ ಸಹಿಸಿಕೊಳ್ಳುವ ತಾಳ್ಮೆಯನ್ನವನು ಕಲಿತ. ವ್ಯಕ್ತಿಯು ಚಿತ್ರಹಿಂಸೆಯ ಮಂಚದ ಮೇಲೆಯೂ ಸುಖವಾಗಿರಬಲ್ಲ ಎಂದು ಮೊದಲು ಹೇಳಿದ್ದು ಅವನೇ ಹೊರತು ಒಬ್ಬ ಸಂಯಮವಾದಿ ಅಲ್ಲ. ತನ್ನ ಸಾವಿಗೆ ಕೆಲವು ದಿನಗಳ ಹಿಂದೆ ಮತ್ತು ಸಾವಿನ ದಿನವೇ ಬರೆದ ಅವನ ಎರಡು ಪತ್ರಗಳು ಈ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅರ್ಹನಾಗಿದ್ದ ಎಂಬುದನ್ನು ತೋರಿಸುತ್ತವೆ. ಮೊದಲ ಪತ್ರದಲ್ಲಿ, 'ಇದನ್ನು ಬರೆಯುವ ಏಳು ದಿನಗಳ ಮುಂಚೆ ಅಂಗಾಂಗಳ ಕ್ರಿಯೆ ಪೂರ್ತಿಯಾಗಿ ನಿಂತು ವ್ಯಕ್ತಿಯನ್ನು ಸಾವಿಗೆ ತಂದು ನಿಲ್ಲುಸುವಂತಹ ನೋವನ್ನು ಅನುಭವಿಸಿದೆ. ನನಗೇನಾದರೂ ಆದರೆ, ನೀನು ಮೆಟ್ರೊಡೋರಸ್‌ನ ಮಕ್ಕಳನ್ನು ನಾಲ್ಕೈದು ವರ್ಷಗಳ ಕಾಲ ನೋಡಿಕೊಳ್ಳುತ್ತೀಯಾ, ಆದರೆ ನನಗಾಗಿ ಈಗ ಎಷ್ಟು ಮಾಡುತ್ತಿದ್ದೀಯೋ ಅದಕ್ಕಿಂತ ಹೆಚ್ಚೇನನ್ನೂ ಖರ್ಚು ಮಾಡಬೇಕಾದ್ದಿಲ್ಲ' ಎನ್ನುತ್ತದೆ. ಎರಡನೆಯ ಪತ್ರ, 'ಸಾವಿನ ಬಿಂದುವಿನಲ್ಲಿ ನಿಂತಿರುವ ನನ್ನ ಬದುಕಿನ ನಿಜವಾದ ಸಂತೋಷದ ದಿನವಾದ ಇಂದು ನಾನಿದನ್ನು ಬರೆಯುತ್ತಿದ್ದೇನೆ. ನನ್ನ ಮೂತ್ರಕೋಶ ಮತ್ತು ಹೊಟ್ಟೆಗಳಿಗೆ ಸಂಬಂಧಿಸಿದ ರೋಗವು ತನ್ನ ದಾರಿಯಲ್ಲೇ ಮುನ್ನಡೆಯುತ್ತಿದೆ, ಅದರ ತೀವ್ರತೆಯಲ್ಲೇನೂ ಕೊರತೆಯಿಲ್ಲ; ಇದಕ್ಕೆ ವಿರುದ್ಧವಾಗಿ ನಾನು ನಿನ್ನೊಡನೆ ಆಡಿದ ಮಾತುಗಳ ಸಂತೋಷ ನನ್ನ ಮನಸ್ಸನ್ನು ತುಂಬಿದೆ. ನನ್ನ ಬಗ್ಗೆಯೂ ತತ್ವಜ್ಞಾನದ ಬಗ್ಗೆಯೂ ಚಿಕ್ಕಂದಿನಿಂದ ನೀನು ತೋರ್ಪಡಿಸುತ್ತಿರುವ ಅರ್ಪಣಭಾವವನ್ನು ನೆನಪಿಸಿಕೊಂಡು, ಮೆಟ್ರೋಡೊರಸ್‌ನ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುವೆ ಎಂದು ನಿರೀಕ್ಷಿಸುತ್ತೇನೆ' ಎನ್ನುತ್ತದೆ. ಅವನ ಶಿಷ್ಯರಲ್ಲೊಬ್ಬನಾದ ಮೆಟ್ರೋಡೊರಸ್ ಸತ್ತಿದ್ದ; ಎಪಿಕ್ಯೂರಸ್ ತನ್ನ ಉಯಿಲಿನಲ್ಲಿ ಅವನ ಮಕ್ಕಳಿಗೆ ಜೀವನಾವಶ್ಯಕತೆಗಳನ್ನು ಒದಗಿಸಿದ್ದ.

ಎಪಿಕ್ಯೂರಸ್ ಬಹುತೇಕ ಜನರ ಬಗ್ಗೆ ಸೌಜನ್ಯದಿಂದಲೂ ಮಮತೆಯಿಂದಲೂ ನಡೆದುಕೊಳ್ಳುತ್ತಿದ್ದರೂ ತತ್ವಜ್ಞಾನಿಗಳ, ಅದರಲ್ಲೂ ತಾನು ಯಾರಿಂದ ಉಪಕೃತನಾಗಿದ್ದನೋ ಅವರ ಜೊತೆಗಿನ ಸಂಬಂಧಗಳಲ್ಲಿ ಅವನ ಭಿನ್ನ ನಡವಳಿಕೆ ಕಾಣುತ್ತದೆ. 'ಈ ಗೊಣಗಾಡುವವರು ನನ್ನನ್ನು ಬಸವನ ಹುಳುವಿನ ಶಿಷ್ಯನೆಂದೂ

---

೧೦೪. ಸುಮಾರು ಐದು ಪೌಂಡ್‌ಗಳು

(ನೌಸಿಫೆನೀಸ್) ಅವನ ಬೋಧನೆಗಳನ್ನು ಕೆಲವು ಕುಡುಕು ಚಾಳಿಯ ಯುವಕರೊಡನೆ ಕೇಳಿದೆವೆಂದೂ ನಂಬುತ್ತಾರೆ. ಆ ವ್ಯಕ್ತಿ ನಿಜವಾಗಿಯೂ ಕೆಟ್ಟವನು, ಅವನ ಅಭ್ಯಾಸಗಳು ಎಂದಿಗೂ ವಿವೇಕವನ್ನು ಹೊಂದಲು ಬಿಡಲಾರವು.'[೧೦೫] ಡೆಮಾಕ್ರಿಟಸ್‌ನಿಂದ ಅವನು ಹೊಂದಿದ ಉಪಕಾರಗಳ ಬಗ್ಗೆ ಅವನೆಂದೂ ಸ್ಮರಣೆ ಮಾಡಲಿಲ್ಲ; ಅಂಥ ತತ್ವಜ್ಞಾನಿಯೇ ಇರಲಿಲ್ಲವೆಂದು ಲ್ಯೂಸಿಪ್ಪಸ್ ಬಗ್ಗೆ ಹೇಳುತ್ತಾನೆ – ಅಂಥ ತತ್ವಜ್ಞಾನಿಯೇ ಇರಲಿಲ್ಲ ಎಂಬ ಅಕ್ಷರಶಃ ಅರ್ಥದಲ್ಲಲ್ಲ, ಆದರೆ ಅವನು ತತ್ವಜ್ಞಾನಿಯಲ್ಲ ಎಂಬರ್ಥದಲ್ಲಿ ಎಂಬುದರಲ್ಲಿ ಸಂದೇಹವಿಲ್ಲ. ತನ್ನ ಪೂರ್ವಿಕರಲ್ಲಿನ ಅತ್ಯಂತ ಶ್ರೇಷ್ಠ ವ್ಯಕ್ತಿಯ ಬಗ್ಗೆ ಡಯೋಜಿನೀಸ್ ಲಯೆರ್ಟಿಯಸ್ ಬೈಗುಳಗಳ ಒಂದು ಪಟ್ಟಿಯನ್ನೇ ಕೊಡುತ್ತಾನೆ. ಈ ಔದಾರ್ಯದ ಕೊರತೆಯಿಂದಾಗಿ, ಇತರ ತತ್ವಜ್ಞಾನಿಗಳು ಮತ್ತೊಂದು ಘೋರ ತಪ್ಪಿನೆಡೆಗೆ ಸಾಗುತ್ತಾರೆ, ಅದೆಂದರೆ ನಿರಂಕುಶ ಸಿದ್ಧಾಂತಾಂಧತೆ. ಅವನ ಅನುಯಾಯಿಗಳು ಅವನ ಸಿದ್ಧಾಂತಗಳನ್ನೊಳಗೊಂಡ ಒಂದು ತತ್ವಸೂತ್ರವನ್ನು (ಕ್ರೀಡ್) ಕಲಿಯಬೇಕಾಗಿತ್ತು, ಅದನ್ನವರು ಪ್ರಶ್ನೆಮಾಡುವಂತಿರಲಿಲ್ಲ. ಕೊನೆಯಲ್ಲಿ ಅವರಾರೂ ಅದಕ್ಕೆ ಹೊಸದನ್ನು ಸೇರಿಸುವುದಾಗಲೀ ಅದನ್ನು ಪರಿಷ್ಕರಿಸುವುದಾಗಲೀ ಮಾಡಲಿಲ್ಲ. ಇನ್ನೂರು ವರ್ಷಗಳ ಬಳಿಕ ಲ್ಯೂಕ್ರೀಷಸ್ ಸುಖೈಕವಾದಿ ತತ್ವಜ್ಞಾನವನ್ನು ಕಾವ್ಯರೂಪಕ್ಕೆ ತಿರುಗಿಸಿದ, ಆದರೆ ತನ್ನ ಗುರುವಿನ ಬೋಧನೆಗೆ ಅವನು ಹೊಸದೇನನ್ನೂ ಸೇರಿಸಲಿಲ್ಲ ಎಂದು ತೀರ್ಮಾನಿಸಬಹುದು. ಹೋಲಿಸಲು ಸಾಧ್ಯವಿರುವ ಕಡೆಗಳಲ್ಲೆಲ್ಲ, ಅವನು ಮೂಲಕ್ಕೆ ಆದಷ್ಟೂ ಹತ್ತಿರವಾಗಿದ್ದಾನೆ. ಹೀಗಾಗಿ ನಷ್ಟವಾಗಿರುವ ಎಪಿಕ್ಯೂರಸ್‌ನ ಮುನ್ನೂರು ಗ್ರಂಥಗಳಿಂದ ಉಂಟಾಗಿರುವ ಜ್ಞಾನದ ಕೊರತೆಯನ್ನು ನೀಗಿಸಲು ಅದನ್ನು ಬಳಸಿಕೊಳ್ಳಬಹುದು ಎಂದು ಭಾವಿಸಲಾಗಿದೆ. ಕೆಲವು ಪತ್ರಗಳು ಹಾಗೂ 'ಪ್ರಿನ್ಸಿಪಲ್ ಡಾಕ್ಟ್ರೀನ್ಸ್' ಹೊರತು ಅವನ ಯಾವ ಬರಹವೂ ಉಳಿದಿಲ್ಲ.

ಅವನ ಕಾಲದ ಎಲ್ಲ ತತ್ವಜ್ಞಾನಗಳಲ್ಲಿನಂತೆ (ಭಾಗಶಃ ಸಂದೇಹವಾದಕ್ಕೆ ಹೊರತಾಗಿ) ಎಪಿಕ್ಯೂರಸ್‌ನ ತತ್ವಜ್ಞಾನವು ಮೂಲತಃ ಪ್ರಶಾಂತತೆಯನ್ನು ಹೊಂದಲು ಸಾಧ್ಯವಾಗುವಂತೆ ರೂಪಿಸಲಾಗಿತ್ತು. ಸುಖವನ್ನವನು ಸರಿಯೆಂದೇ ಪರಿಗಣಿಸಿದ್ದನಲ್ಲದೆ, ಈ ದೃಷ್ಟಿಕೋನದ ಎಲ್ಲ ಪರಿಣಾಮಗಳ ಬಗ್ಗೆ ಒಂದೇ ಬಗೆಯ ಬದ್ಧತೆಯನ್ನು ತೋರಿಸಿದ. 'ಸುಖವು ಪರಿಶುದ್ಧ ಜೀವನದ ಆರಂಭ ಮತ್ತು ಅಂತ್ಯ' ಎಂದವನು ಹೇಳಿದ. 'ದ ಎಂಡ್ ಆಫ್ ಲೈಫ್' ಕೃತಿಯ ಬಗ್ಗೆ ಬರೆಯುತ್ತ ಡಯೋಜಿನೀಸ್ ಲಯೆರ್ಟಿಯಸ್ ಅವನು ಹೇಳಿದನೆಂದು ಈ ರೀತಿ

---

೧೦೫. ಡಬ್ಲ್ಯು.ಜೆ. ಕೇಟ್ಸ್ ಅವರ 'ದ ಸ್ಟೇಟ್ ಆಫ್ ಎಪಿಕ್ಯೂರಿಯನ್ ಫಿಲಾಸಫರ್ಸ್', ಪು. ೪೭. ಸಾಧ್ಯವಾದೆಡೆಗಳಲ್ಲಿ ನಾನು ಕೇಟ್ಸ್ ಅವರ ಅನುವಾದಗಳ ನೆರವನ್ನು ಪಡೆದಿದ್ದೇನೆ.

ಬರೆಯುತ್ತಾನೆ: 'ರುಚಿಗಳ ಸುಖವನ್ನಾಗಲೀ ಪ್ರೀತಿಯ ಸುಖವನ್ನಾಗಲೀ ಕೇಳುವುದು ಮತ್ತು ನೋಡುವುದರ ಸುಖವನ್ನಾಗಲೀ ಬಿಟ್ಟುಬಿಟ್ಟರೆ, ಒಳ್ಳೆಯದು ಎಂಬುದನ್ನು ಹೇಗೆ ಕಲ್ಪಿಸಿಕೊಳ್ಳಬೇಕು ಎಂಬುದೇ ನನಗೆ ತಿಳಿಯದು.' ಮತ್ತೆ, 'ಎಲ್ಲ ಒಳ್ಳೆಯದರ ಆರಂಭ ಮತ್ತು ಮೂಲ ಎಂದರೆ ಹೊಟ್ಟೆಯ ಸುಖ; ವಿವೇಕ ಮತ್ತು ಸಂಸ್ಕೃತಿಗಳನ್ನೂ ಇದಕ್ಕೆ ಅನ್ವಯಿಸಬೇಕು.' ಮನಸ್ಸಿನ ಸುಖವೆಂದರೆ ದೇಹದ ಸುಖಗಳ ಬಗೆಗಿನ ಚಿಂತನೆ ಎಂದು ಹೇಳುತ್ತಾರೆ. ದೈಹಿಕ ಸುಖಗಳಿಗಿಂತ ಅದರಿಂದಾಗುವ ಹೆಚ್ಚಿನ ಅನುಕೂಲವೆಂದರೆ, ಅದರಿಂದ ನೋವಿನ ಬದಲು ಸುಖದ ಬಗ್ಗೆ ಚಿಂತಿಸುವುದನ್ನು, ಇದರಿಂದ ದೈಹಿಕ ಸುಖಗಳಿಗಿಂತ ಮಾನಸಿಕವಾದವುಗಳ ಬಗ್ಗೆ ಹೆಚ್ಚು ಹತೋಟಿಯನ್ನು ಸಾಧಿಸುವುದನ್ನು ಕಲಿಯಬಹುದು. 'ಸುಖಾನ್ವೇಷಣೆಯಲ್ಲಿ ತೋರಿಸುವ ವಿವೇಚನೆಯೇ ಸದ್ಗುಣ' ಎಂದಲ್ಲವಾದರೆ ಅದೊಂದು ಬರಿದಾದ ಹೆಸರು. ಉದಾಹರಣೆಗೆ, ಇತರರ ಅಸಮಾಧಾನದ ಬಗ್ಗೆ ಭಯಪಡುವ ಅವಕಾಶವಿಲ್ಲದಂತೆ ನಡೆದುಕೊಳ್ಳುವುದೇ ನ್ಯಾಯ ಎಂಬ ದೃಷ್ಟಿಯು, ಸಾಮಾಜಿಕ ಒಪ್ಪಂದ (ಸೋಷಿಯಲ್ ಕಾಂಟ್ರಾಕ್ಟ್) ಸಿದ್ಧಾಂತಕ್ಕೆ ಭಿನ್ನವಾದುದಲ್ಲದ ಸಮಾಜದ ಉಗಮದ ಬಗೆಗಿನ ಸಿದ್ಧಾಂತಕ್ಕೆ ದಾರಿ ಮಾಡಿಕೊಡುತ್ತದೆ.

ಕ್ರಿಯಾತ್ಮಕ ಮತ್ತು ಕ್ರಿಯಾಹೀನ ಅಥವಾ ಸಕ್ರಿಯ ಮತ್ತು ನಿಷ್ಕ್ರಿಯ ಸುಖಗಳ ಬಗೆಗೆ ವ್ಯತ್ಯಾಸ ಮಾಡುವುದರಲ್ಲಿ ಎಪಿಕ್ಯೂರಸ್ ತನ್ನ ಹಿಂದಿನ ಕೆಲವು ಭೋಗೈಕವಾದಿ (ಹೆಡನಿಸ್ಟ್)ಗಳೊಡನೆ ಭಿನ್ನಮತ ಹೊಂದಿದ್ದಾನೆ. ಹಿಂದಿನ ಬಯಕೆಯು ನೋವಿನಿಂದ ಕೂಡಿದ್ದು, ಬಯಸಿದ ಗುರಿಯನ್ನು ಹೊಂದುವುದರಲ್ಲಿ ಕ್ರಿಯಾತ್ಮಕ ಸುಖವಿದೆ. ನಿಷ್ಕ್ರಿಯ ಸುಖವು ಒಂದು ಬಗೆಯ ಸಮತೋಲನವನ್ನು ಹೊಂದಿರುತ್ತದೆ; ಯಾವುದು ಇಲ್ಲದಿದ್ದರೆ ಅದು ಇರಬೇಕೆಂದು ಬಯಸುತ್ತೇವೆಯೋ ಅಂಥ ಪರಿಸ್ಥಿತಿಯು ಉಂಟಾಗುವುದೇ ಸಮತೋಲನ. ಹಸಿವನ್ನು ಅನುಭವಿಸುತ್ತಿರುವಾಗ ಅದನ್ನು ನೀಗಿಸಿಕೊಳ್ಳುತ್ತಿರುವ ಪ್ರಕ್ರಿಯೆಯನ್ನು ಕ್ರಿಯಾತ್ಮಕ ಸುಖ ಎಂದೂ, ಹಸಿವು ಸಂಪೂರ್ಣವಾಗಿ ನೀಗಿದ ನಂತರ ಉಂಟಾಗುವ ನಿಶ್ಚಲತೆಯು ನಿಷ್ಕ್ರಿಯ ಸುಖ ಎಂದೂ ಹೇಳಬಹುದು. ಈ ಎರಡು ಬಗೆಗಳಲ್ಲಿ, ಎರಡನೆಯದನ್ನು ಬಯಸುವುದು ಹೆಚ್ಚು ವಿವೇಕಯುತವಾದುದು ಎಂದು ಎಪಿಕ್ಯೂರಸ್ ಹೇಳುತ್ತಾನೆ; ಯಾಕೆಂದರೆ, ಅದು ಶುದ್ಧವಾದುದು ಮತ್ತು ನೋವಿರುವ ಸ್ಥಿತಿಯು ಬಯಕೆಯನ್ನು ಪ್ರೇರಿಸುವುದನ್ನು ಅವಲಂಬಿಸುವುದಲ್ಲ. ದೇಹವು ಸಮತೋಲಿತ ಸ್ಥಿತಿಯಲ್ಲಿರುವಾಗ ನೋವಿರುವುದಿಲ್ಲ, ಹೀಗಾಗಿ ನಾವು ಸಮತೋಲನವನ್ನು, ಬಿರುಸು ಸುಖಗಳಿಗಿಂತ ಪ್ರಶಾಂತ ಸುಖಗಳನ್ನು ನಮ್ಮ ಗುರಿಯಾಗಿರಿಸಿಕೊಳ್ಳಬೇಕು. ಸಾಧ್ಯವಾಗುವುದಾದರೆ, ಹಾಳತವಾಗಿ ತಿಂದು ಗಬಗಬನೆ ತಿನ್ನಬೇಕೆಂಬ ಬಯಕೆಯನ್ನು ಹೊಂದದಿರುವುದನ್ನು ಎಪಿಕ್ಯೂರಸ್ ಇಷ್ಟಪಡುವಂತೆ ತೋರುತ್ತದೆ.

ಅಂದರೆ ನೋವಿಲ್ಲದ ಸ್ಥಿತಿಯು ಸುಖದ ಇರುವಿಕೆಗಿಂತ ಹೆಚ್ಚಿನ ಗುರಿಯಾಗಿ ಹೊಂದಿರುವುದನ್ನು ಎಪಿಕ್ಯೂರಸ್ ರೂಢಿಯಾಗಿಸಿಕೊಳ್ಳುವುದನ್ನು ಬೋಧಿಸುತ್ತಾನೆ.[೧೦೬] ಎಲ್ಲ ವಿಷಯಗಳಿಗೂ ಹೊಟ್ಟೆಯೇ ಮೂಲವಾಗಿರಬಹುದು, ಆದರೆ ಗಬಗಬನೆ ತಿನ್ನುವ ಸುಖಕ್ಕಿಂತ ಹೊಟ್ಟೆನೋವಿನ ಸಂಕಟ ಹೆಚ್ಚುಮಾಡುತ್ತದೆ; ಅಕ್ಕನುಗುಣವಾಗಿ ಎಪಿಕ್ಯೂರಸ್ ಬ್ರೆಡ್ ತಿನ್ನುತ್ತಿದ್ದ, ಹಬ್ಬಗಳಂದಾದರೆ ಅದಕ್ಕೊಂದಷ್ಟು ಎಣ್ಣೆ ಸವರಿ ತಿನ್ನುತ್ತಿದ್ದ. ಹಣ ಮತ್ತು ಗೌರವಗಳ ಬಗೆಗಿನ ಹಂಬಲ ವ್ಯರ್ಥವಾದುದು, ತೃಪ್ತನಾಗಿರಬಹುದಾದುದರ ಬದಲು ಅದು ವ್ಯಕ್ತಿಯನ್ನು ತಳಮಳಕ್ಕೀಡುಮಾಡುತ್ತದೆ. 'ಅತ್ಯಂತ ಶ್ರೇಷ್ಠ ಒಳಿತು ಎಂದರೆ ವಿವೇಚನೆ; ಅದು ತತ್ವಜ್ಞಾನಕ್ಕಿಂತ ಮಿಗಿಲಾದುದು.' ಅವನು ಅರ್ಥಮಾಡಿಕೊಂಡಂತೆ ತತ್ವಜ್ಞಾನವೆಂದರೆ ಸುಖಕರ ಜೀವನವನ್ನು ಪಡೆಯಲೆಂದು ರೂಪಿಸಿಕೊಂಡಿರುವ ಒಂದು ವ್ಯಾವಹಾರಿಕ ವಿಧಾನ; ಅದಕ್ಕೆ ಬೇಕಾದುದು ವ್ಯವಹಾರಜ್ಞಾನವಷ್ಟೆ; ಪ್ಲೇಟೋ ನಿಗದಿಪಡಿಸುವ ತರ್ಕ, ಗಣಿತ ಅಥವಾ ಯಾವುದೇ ಬಗೆಯ ಸುದೀರ್ಘ ತರಬೇತಿಯಲ್ಲ. ತನ್ನ ಯುವ ಸ್ನೇಹಿತ ಹಾಗೂ ಶಿಷ್ಯನಾದ ಪೈಥೊಕ್ಲೀಸ್‌ಗೆ ಹೇಳುವುದೆಂದರೆ 'ಎಲ್ಲ ಬಗೆಯ ಸಂಸ್ಕೃತಿಯಿಂದ ದೂರ ಓಡು' ಎಂದು. ಅವನು ಬೋಧಿಸಿದ ಸಾರ್ವಜನಿಕ ಜೀವನದಿಂದ ದೂರವಾಗುವ ತತ್ವದ ಸಹಜ ಪರಿಣಾಮವಿದು; ಯಾಕೆಂದರೆ ವ್ಯಕ್ತಿಯೊಬ್ಬ ಅಧಿಕಾರ ಪಡೆದಷ್ಟೂ ಅವನನ್ನು ಕಂಡು ಅಸೂಯೆಪಡುವವರ ಸಂಖ್ಯೆಯನ್ನು ಹೆಚ್ಚು ಮಾಡುತ್ತಿರುತ್ತಾನೆ, ಇದರಿಂದಾಗಿ ಅವರು ಇವನಿಗೆ ಗಾಸಿಮಾಡಲು ಕಾಯುತ್ತಿರುತ್ತಾರೆ. ಬಾಹ್ಯ ದುರದೃಷ್ಟಗಳಿಂದ ಅವನು ಪಾರಾದರೂ, ಅಂಥ ಸನ್ನಿವೇಶದಲ್ಲಿ ಮನಶ್ಶಾಂತಿ ಅಸಾಧ್ಯ. ಬುದ್ಧಿವಂತನೆಂದರೆ ಯಾರ ಕಣ್ಣಿಗೂ ಬೀಳದೆ ತನ್ನ ಪಾಡಿಗೆ ತಾನು ಬದುಕುವವನು, ಅಂಥವನಿಗೆ ಶತ್ರುಗಳೇ ಇರುವುದಿಲ್ಲ.

ಅತ್ಯಂತ 'ಸಕ್ರಿಯ' ಸುಖಗಳಲ್ಲಿ ಒಂದಾದ ಲೈಂಗಿಕಸುಖವು ಸಹಜವಾಗಿ ನಿಷೇಧಕ್ಕೊಳಗಾಗುತ್ತದೆ. ಈ ತತ್ವಜ್ಞಾನಿಯು ಹೇಳುವುದೆಂದರೆ, 'ಸಂಭೋಗವು ವ್ಯಕ್ತಿಗೆ ಯಾವತ್ತೂ ಒಳಿತನ್ನು ಮಾಡಿಲ್ಲ, ಅದು ಅವನಿಗೇನೂ ತೊಂದರೆ ಮಾಡದಿದ್ದರೆ ಅಂತಹವನು ಅದೃಷ್ಟವಂತನೇ ಸರಿ.' ಅವನಿಗೆ ಮಕ್ಕಳೆಂದರೆ (ಇತರರ ಮಕ್ಕಳು) ತುಂಬ ಅಕ್ಕರೆ; ತನ್ನ ಈ ಬಯಕೆಯನ್ನು ಪೂರೈಸಿಕೊಳ್ಳಲು ಇತರರು ತನ್ನ ಈ ಬೋಧನೆಯನ್ನು ಪಾಲಿಸದಂತೆ ಹೇಳುತ್ತಾನೆ. ತನ್ನ ಸರಿ ತೀರ್ಮಾನಕ್ಕಿಂತ ಹೆಚ್ಚಾಗಿ ಅವನು ಮಕ್ಕಳನ್ನು ಪ್ರೀತಿಸುತ್ತಿದ್ದಂತೆ ತೋರುತ್ತದೆ. ಅವನ ದೃಷ್ಟಿಯಲ್ಲಿ ಮದುವೆ ಮತ್ತು ಮಕ್ಕಳು ಬದುಕಿನ ಇತರ ಹೆಚ್ಚು ಗಂಭೀರ ಅನ್ವೇಷಣೆಗಳಿಂದ ವ್ಯಕ್ತಿಯನ್ನು

---

೧೦೬. ಎಪಿಕ್ಯೂರಸ್‌ನಿಗೆ 'ನೋವಿಲ್ಲದ ಸ್ಥಿತಿ ತನ್ನಲ್ಲಿ ತಾನೇ ಸುಖ, ಅವನ ಅಂತಿಮ ವಿಶ್ಲೇಷಣೆಯ ಪ್ರಕಾರ ಅದೇ ನಿಜವಾದ ಸುಖ', ಬೈಲಿ, ಪೂರ್ವೋಕ್ತ, ಪು. ೨೪೯.

ದೂರಮಾಡುತ್ತದೆ. ಲೈಂಗಿಕತೆಯನ್ನು ಖಂಡಿಸುವುದರಲ್ಲಿ ಅವನನ್ನು ಅನುಸರಿಸಿದ ಲ್ಯೂಕ್ರೇಷಿಯಸ್‌ಗೆ ಭಾವತೀವ್ರತೆಯಿಂದ ದೂರವಾದ ಸಂಭೋಗವು ಹಾನಿಕರವಲ್ಲವೆಂದು ಅನ್ನಿಸುತ್ತದೆ.

ಎಪಿಕ್ಯೂರಸ್‌ನ ಪ್ರಕಾರ ಸಾಮಾಜಿಕ ಸುಖಗಳಲ್ಲಿ ಅತ್ಯಂತ ಸುರಕ್ಷಿತವಾದುದೆಂದರೆ ಸ್ನೇಹ. ಬೆಂಥಮ್‌ನಂತೆ ಎಪಿಕ್ಯೂರಸ್ ಕೂಡ ಎಲ್ಲರೂ ಎಲ್ಲ ಕಾಲದಲ್ಲೂ ಜನರು ತಮ್ಮ ಸುಖದ ಬಗ್ಗೆಯೇ, ಕೆಲವು ವೇಳೆ ಬುದ್ಧಿಶಕ್ತಿಯಿಂದ, ಮತ್ತೆ ಕೆಲವು ವೇಳೆ ದಡ್ಡತನದಿಂದ, ಆಲೋಚಿಸುವವರು ಎಂದು ಭಾವಿಸುತ್ತಾನೆ; ಮತ್ತೆ, ಬೆಂಥಮ್‌ನಂತೆಯೇ, ಅವನೂ ತನ್ನ ಸೌಜನ್ಯಪೂರ್ಣವೂ ವಿಶ್ವಾಸಪೂರ್ಣವೂ ಆದ ಸ್ವಭಾವದಿಂದಾಗಿ, ತನ್ನದೇ ಸಿದ್ಧಾಂತಗಳಿಂದ, ಅವನು ದೂರವಿರಬೇಕಾದ ರೀತಿಯಲ್ಲಿ ನಡೆದುಕೊಳ್ಳಬೇಕಾಯಿತು. ತನಗೇನು ಪ್ರಯೋಜನವಿದೆಯೆಂದು ಎಂದೂ ಯೋಚಿಸದ ರೀತಿಯಲ್ಲಿ ಅವನು ಸ್ನೇಹಿತರನ್ನು ಇಷ್ಟಪಡುತ್ತಿದ್ದ, ಆದರೆ ತನ್ನ ತಾತ್ವಿಕ ನಿಲವಿನಷ್ಟೇ ತಾನೂ ಇತರರಂತೆ ಸ್ವಾರ್ಥಿಯಾಗಿದ್ದೇನೆ ಎಂದು ಅಂದುಕೊಳ್ಳುತ್ತಿದ್ದ. ಸಿಸೆರೋ ಪ್ರಕಾರ, 'ಸ್ನೇಹವು ಸುಖದಿಂದ ಹೊರತಾಗಿರಲಾರದು, ಆ ಕಾರಣದಿಂದಲೇ ಸ್ನೇಹಪರತೆಯನ್ನು ಬೆಳೆಸಿಕೊಳ್ಳಬೇಕು, ಯಾಕೆಂದರೆ ಅದಿಲ್ಲದಿದ್ದರೆ ನಾವು ಸುರಕ್ಷಿತವಾಗಿಯೂ ಭಯರಹಿತವಾಗಿಯೂ ಅಥವಾ ಉಲ್ಲಾಸದಿಂದಲೂ ಇರಲು ಸಾಧ್ಯವಿಲ್ಲ.' ಆದರೆ ಆಗಾಗ, ಅವನು ತನ್ನ ಸಿದ್ಧಾಂತಗಳನ್ನು ತಾನೇ ಮರೆತುಬಿಡುತ್ತಿದ್ದ: 'ಎಲ್ಲ ಸ್ನೇಹವೂ, ಅದು ಸಹಾಯದ ಆವಶ್ಯಕತೆಯಿಂದ ಆರಂಭಗೊಂಡರೂ, ತನಗೆ ತಾನೇ ಅಪೇಕ್ಷಣೀಯವಾದುದು' ಎನ್ನುತ್ತಾನೆ ಅವನು.[೧೦೭]

ಬೇರೆಯವರ ದೃಷ್ಟಿಯಲ್ಲಿ ಅವನ ನೀತಿಯು ಅಸಹ್ಯಕರವಾಗಿಯೂ ನೈತಿಕ ಔನ್ನತ್ಯವಿಲ್ಲದ್ದು ಎಂದೂ ಅನ್ನಿಸಿದರೂ, ತುಂಬ ಪ್ರಾಮಾಣಿಕವಾದುದು. ನಾವಾಗಲೇ ಗಮನಿಸಿದಂತೆ, ತೋಟದಲ್ಲಿನ ಸಮುದಾಯವನ್ನು 'ನಮ್ಮ ಪರಿಶುದ್ಧ ದೇಹ' ಎಂದು ಕರೆಯುತ್ತಾನೆ; ಪಾವಿತ್ರ್ಯದ ಬಗ್ಗೆ ಅವನು 'ಹೋಲಿನೆಸ್' ಎಂಬ ಪುಸ್ತಕವನ್ನು ಬರೆದ. ಅವನಲ್ಲಿ ಎಲ್ಲ ಬಗೆಯ ಮತಧಾರ್ಮಿಕ ಸುಧಾರಣೆಯ ಉತ್ಸಾಹವು ತುಂಬಿತ್ತು. ಮನುಷ್ಯರ ಸಂಕಟದ ಬಗ್ಗೆ ಅವನಲ್ಲಿ ಗಾಢವಾದ ಕಾರುಣ್ಯಭಾವ ತುಂಬಿತ್ತು, ತನ್ನ ತಾತ್ವಿಕತೆಯನ್ನು ಅನುಸರಿಸಿದರೆ ಅವರ ಸಂಕಟವು ಬಹುವಾಗಿ ಕಡಿಮೆಯಾಗುತ್ತದೆ ಎಂದವನು ನಂಬಿದ್ದ. ಅದು ರೋಗಗ್ರಸ್ತರ ಒಂದು ತತ್ತ್ವಜ್ಞಾನ, ಸಾಹಸಮಯ ಸುಖವು ಅಸಂಭವವೆಂದು ಭಾವಿಸಿದ್ದ ಜಗತ್ತಿಗೆಂದೇ

---

೧೦೭. ಸ್ನೇಹ ಮತ್ತು ಸ್ನೇಹಪರತೆಯ ಬಗೆಗೆ ಎಪಿಕ್ಯೂರಸ್‌ನ ಅಸಾಂಗತ್ಯದ ಬಗ್ಗೆ ನೋಡಿ, ಬೈಲಿ, ಪೂರ್ವೋಕ್ತ, ಪು. ೫೧೭–೨೦.

ರೂಪುಗೊಂಡದ್ದು. ಅಜೀರ್ಣದ ಭಯದಿಂದ ಕಡಿಮೆ ತಿನ್ನು; ನಾಳೆ ಬೆಳಗಿನ ಭಯದಿಂದ ಕಡಿಮೆ ಕುಡಿ; ರಾಜಕೀಯ, ಪ್ರೇಮ ಮತ್ತು ಎಲ್ಲ ಬಗೆಯ ತೀವ್ರ ಭಾವಾವೇಶದ ಚಟುವಟಿಕೆಗಳಿಂದ ದೂರವಿರು; ಅದೃಷ್ಟಕ್ಕೆ ಒತ್ತೆಯಿರಿಸಿ ಮದುವೆಯಾಗಿ ಮಕ್ಕಳನ್ನು ಪಡೆಯಬೇಡ; ಮಾನಸಿಕ ಬದುಕಿನಲ್ಲಿ ನೋವನ್ನು ಬದಿಗಿರಿಸಿ ಕೇವಲ ಸುಖದ ಬಗ್ಗೆ ಚಿಂತನೆ ಮಾಡುವುದನ್ನು ಕಲಿ. ದೈಹಿಕ ಯಾತನೆ ಖಂಡಿತವಾಗಿ ಭಾರಿ ಕೆಡುಕು ನಿಜ, ತೀವ್ರವಾಗಿದ್ದರೆ ಅದು ಅಲ್ಪಕಾಲದ್ದೂ ಆಗಿರುತ್ತದೆ, ದೀರ್ಘವಾದುದಾದರೆ ಪರಸ್ಪರ ಶಿಸ್ತಿನಿಂದ ಅದನ್ನು ಸಹಿಸಿಕೊಳ್ಳಬಹುದು, ಮತ್ತು ಅದಿದ್ದಾಗಲೂ ಸುಖದ ಬಗ್ಗೆ ಚಿಂತನೆ ನಡೆಸುವ ಅಭ್ಯಾಸ ಮಾಡಿಕೊ. ಎಲ್ಲಕ್ಕೂ ಮಿಗಿಲಾಗಿ, ಭಯವನ್ನು ದೂರಗೊಳಿಸುವ ರೀತಿಯಲ್ಲಿ ಬದುಕು.

ಭಯದಿಂದ ದೂರವಿರುವ ಸಲುವಾಗಿನ ಕಾರಣಕ್ಕಾಗಿ ಎಪಿಕ್ಯೂರಸ್ ಸೈದ್ಧಾಂತಿಕ ತತ್ವಜ್ಞಾನದ ಕಡೆ ಹೊರಳಿದ. ಭಯದ ಎರಡು ಪ್ರಮುಖ ಮೂಲಗಳೆಂದರೆ ಮತಧರ್ಮ ಮತ್ತು ಸಾವು; ಅವೆರಡಕ್ಕೂ ಸಂಬಂಧವಿದೆ, ಯಾಕೆಂದರೆ ಸತ್ತವರು ಸುಖವಾಗಿರಲಾರರು ಎಂಬುದನ್ನು ಮತಧರ್ಮ ಪ್ರೋತ್ಸಾಹಿಸುತ್ತದೆ. ದೇವತೆಗಳು ಮಾನವನ ವ್ಯವಹಾರಗಳಲ್ಲಿ ಮೂಗು ತೂರಿಸುವುದಿಲ್ಲ ಹಾಗೂ ಆತ್ಮವು ದೇಹದೊಡನೆ ನಾಶವಾಗುತ್ತದೆ ಎಂದು ಸಾಧಿಸುವ ತತ್ವಸಿದ್ಧಾಂತವನ್ನು ಅರಸಿದ. ಬಹುತೇಕ ಆಧುನಿಕ ಜನರು ಮತಧರ್ಮವನ್ನು ಒಂದು ಬಗೆಯ ಸಮಾಧಾನದ ಮಾರ್ಗ ಎಂದು ಭಾವಿಸುತ್ತಾರೆ, ಆದರೆ ಎಪಿಕ್ಯೂರಸ್‌ಗೆ ಅದು ವಿಲೋಮವಾದುದು. ಪ್ರಾಕೃತಿಕ ವಿದ್ಯಮಾನಗಳಲ್ಲಿ ಅತಿಮಾನುಷ ಹಸ್ತಕ್ಷೇಪವು ಅವನಿಗೆ ಭಯದ ಒಂದು ಕಾರಣವೆಂದೂ, ಅಮರತ್ವವು ನೋವಿನಿಂದ ಪಾರಾಗುವ ಭರವಸೆಗೆ ಮಾರಕವೆಂದೂ ಅವನಿಗೆ ಭಾಸವಾಯಿತು. ಅದಕ್ಕನುಗುಣವಾಗಿ ಭಯವನ್ನು ಬಿತ್ತುವ ಶ್ರದ್ಧೆಗಳನ್ನು ಹೋಗಲಾಡಿಸುವ ಸಿದ್ಧಾಂತವನ್ನು ರೂಪಿಸಲು ಅವನಿಗೆ ಪ್ರೇರಣೆಯಿತ್ತಿತು.

ಎಪಿಕ್ಯೂರಸ್ ಒಬ್ಬ ಭೌತವಾದಿಯಾಗಿದ್ದ, ಆದರೆ ನಿಯತಿವಾದಿ (ಡಿಟರ್‌ಮಿನಿಸ್ಟ್) ಅಲ್ಲ. ಜಗತ್ತು ಪರಮಾಣುಗಳು ಮತ್ತು ಶೂನ್ಯತೆಯಿಂದ ಕೂಡಿದೆ ಎಂಬ ತಿಳಿವಳಿಕೆಯಲ್ಲಿ ಡೆಮಾಕ್ರಿಟಸ್‌ನನ್ನು ಅನುಸರಿಸಿದ, ಆದರೆ ಡೆಮಾಕ್ರಿಟಸ್‌ನಂತೆ ಅವನು ಪರಮಾಣುಗಳನ್ನು ಸದಾ ಕಾಲ ಪ್ರಕೃತಿ ನಿಯಮಗಳು ನಿಯಂತ್ರಿಸುತ್ತವೆ ಎಂದು ನಂಬಲಿಲ್ಲ. ಗ್ರೀಸ್‌ನಲ್ಲಿ ಆವಶ್ಯಕತೆಯ ಪರಿಕಲ್ಪನೆಯು, ನಾವಾಗಲೇ ನೋಡಿರುವಂತೆ, ಮೂಲದಲ್ಲಿ ಮತಧಾರ್ಮಿಕ; ಆವಶ್ಯಕತೆಯು ಉಳಿಯುವುದಕ್ಕೆ ಅವಕಾಶವೀಯುವುದಾದರೆ ಮತಧರ್ಮದ ವಿರುದ್ಧದ ಟೀಕೆ ಪೂರ್ಣವಾಗುವುದಿಲ್ಲ ಎಂದವನು ಭಾವಿಸಿದ್ದು ಪ್ರಾಯಶಃ ಸಮಂಜಸವಾಗಿತ್ತು. ಅವನ ಪರಮಾಣುಗಳಿಗೆ ತೂಕವಿದೆ, ನಿರಂತರವಾಗಿ ಬೀಳುತ್ತಿರುತ್ತವೆ; ಭೂಮಿಯ ಕೇಂದ್ರದ ಕಡೆಗಲ್ಲ, ಆತ್ಯಂತಿಕವಾದ ಅರ್ಥದಲ್ಲಿ ಕೆಳಗಡೆಗೆ. ಆಗಾಗ್ಗೆ, ಪರಮಾಣುವು,

ಸ್ವತಂತ್ರಇಚ್ಛಾಶಕಿಯಂತಹ ಯಾವುದರಿಂದಲೋ ಪ್ರೇರಿತವಾಗಿ, ನೇರವಾದ ಮಾರ್ಗದಿಂದ ಇದ್ದಕ್ಕಿದ್ದಂತೆ ಪಥ ಬದಲಾಯಿಸುತ್ತದೆ,[೧೦೮] ಮತ್ತು ಮತ್ತೊಂದು ಪರಮಾಣುವಿಗೆ ಡಿಕ್ಕಿ ಹೊಡೆಯುತ್ತದೆ. ಈ ಬಿಂದುವಿನಿಂದಾಚೆಗೆ, ಆವರ್ತ (ವೋರ್ಟೆಕ್ಸ್)ಗಳ ಬೆಳವಣಿಗೆ ಮುಂತಾದವುಗಳಲ್ಲಿ, ಬಹುತೇಕ ಡೆಮಾಕ್ರಿಟಸ್‌ನ ಮಾರ್ಗವನ್ನೇ ಅನುಸರಿಸಿದ. ಆತ್ಮವೂ ಭೌತಿಕವಾದುದು, ಉಸಿರು ಮತ್ತು ಬೆಂಕಿಗಳದರಂತಹ ದ್ರವ್ಯಗಳಿಂದಾದುದು. (ಉಸಿರು ಮತ್ತು ಗಾಳಿ ತನ್ನ ದ್ರವ್ಯದಲ್ಲಿ ವಾಯುವಿನಿಂದ ಭಿನ್ನವಾದುದು; ಅವು ಚಲಿಸುವ ಗಾಳಿಯಷ್ಟೇ ಅಲ್ಲ.) ಆತ್ಮ-ಪರಮಾಣುಗಳು ದೇಹಾದ್ಯಂತ ಹಂಚಿಕೆಯಾಗಿವೆ. ಸಂವೇದನೆಗೆ ಕಾರಣ ದೇಹಗಳು ಹೊರಹಾಕಿ ಆತ್ಮ-ಪರಮಾಣುಗಳನ್ನು ಮುಟ್ಟುವವರೆಗೆ ಹಾರಾಡುವಂತಹ ತೆಳುವಾದ ಪೊರೆಗಳು ಕಾರಣ. ತಮ್ಮನ್ನು ಮೂಲತಃ ಹೊಮ್ಮಿದ ದೇಹಗಳು ಕರಗಿಹೋಗುವವರೆಗೂ ಈ ಪೊರೆಗಳು ಅಸ್ತಿತ್ವದಲ್ಲಿರುತ್ತವೆ; ಕನಸುಗಳಿಗೆ ಇದೇ ಕಾರಣ. ಸಾವಿನಲ್ಲಿ ಆತ್ಮವು ಚದುರಿಹೋಗುತ್ತದೆ, ಉಳಿದುಕೊಂಡು ಬಂದ ಪರಮಾಣುಗಳು ಸಂವೇದನೆಯನ್ನುಂಟುಮಾಡಲಾರವು, ಯಾಕೆಂದರೆ ಅವುಗಳಿಗೂ ದೇಹಕ್ಕೂ ಸಂಪರ್ಕವಿರುವುದಿಲ್ಲ. ಎಪಿಕ್ಯೂರಸ್‌ನ ಮಾತುಗಳು ಹೀಗೆ ಸಾಗುತ್ತವೆ: 'ಸಾವು ನಮಗೆ ಏನೂ ಅಲ್ಲ, ಯಾಕೆಂದರೆ ಕರಗಿಹೋಗುವುದು ಸಂವೇದನಾರಹಿತವಾದದ್ದು, ಸಂವೇದನೆಯಿಲ್ಲದುದು ನಮಗೆ ಏನೂ ಅಲ್ಲ.'

ದೇವತೆಗಳ ಅಸ್ತಿತ್ವದಲ್ಲಿ ಎಪಿಕ್ಯೂರಸ್‌ಗೆ ಬಲವಾದ ಶ್ರದ್ಧೆ, ಯಾಕೆಂದರೆ ವ್ಯಾಪಕವಾಗಿರುವ ಅವರುಗಳ ಅಸ್ತಿತ್ವವನ್ನು ಅಲ್ಲಗಳೆಯಲು ತನಗೆ ಯಾವುದೇ ಕಾರಣವಿಲ್ಲ ಎಂಬುದು. ಆದರೆ ಅವರುಗಳು ಮನುಷ್ಯ ಜಗತ್ತಿನ ಉಸಾಬರಿಗೆ ಬರುವುದಿಲ್ಲ ಎಂಬುದರ ಬಗ್ಗೆ ಅವನಿಗೆ ಖಾತರಿಯಿದೆ. ಅವರು ವೈಚಾರಿಕ ಭೋಗೈಕವಾದಿಗಳು (ಹೆಡನಿಸ್ಟ್), ಅವರು ಅವನ ದೇಶವನ್ನು ಪಾಲಿಸುತ್ತ ಸಾರ್ವಜನಿಕ ಜೀವನದಿಂದ ದೂರವಿರುತ್ತಾರೆ; ಆಡಳಿತವು ಸಂಪೂರ್ಣವಾಗಿ ಅನವಶ್ಯಕ ಕೆಲಸ, ಅವರ ಸಂಪೂರ್ಣ ಸುಖಮಯ ಜೀವನದಲ್ಲಿ ಯಾವುದೇ ಆಮಿಷಗಳಿರುವುದಿಲ್ಲ. ದೈವಿಕತೆ, ಶಕುನಗಳು ಮತ್ತು ಅಂಥ ಆಚರಣೆಗಳು ಮೂಢಶ್ರದ್ಧೆಗಳು, ಅಂತೆಯೇ ದೈವಾನುಗ್ರಹದಲ್ಲಿನ ಶ್ರದ್ಧೆ.

ಹೀಗಾಗಿ, ದೇವರ ಕೋಪಕ್ಕೆ ತುತ್ತಾಗಿಬಿಡಬಹುದೆಂಬ ಭಯಕ್ಕೆ ಅಥವಾ ಸಾವಿನ ನಂತರ ಅಧೋಲೋಕದಲ್ಲಿ ನರಳಬೇಕಾಗುತ್ತದೆಂಬುದಕ್ಕೆ ಯಾವುದೇ ಕಾರಣವಿಲ್ಲ. ವೈಜ್ಞಾನಿಕವಾಗಿ ಅಧ್ಯಯನ ಮಾಡಬಹುದಾದ ಪ್ರಕೃತಿಯ

---

೧೦೮. ನಮ್ಮ ಕಾಲದಲ್ಲಿ, ಅನಿಶ್ಚಿತತೆಯ ತತ್ವವನ್ನು (ಪ್ರಿನ್ಸಿಪಲ್ ಆಫ್ ಇನ್‌ಡಿಟರ್ಮಿನೆಸಿ) ವ್ಯಾಖ್ಯಾನಿಸುವಾಗ, ಇದನ್ನು ಹೋಲುವ ದೃಷ್ಟಿಕೋನವನ್ನು ಎಡಿಂಗ್ಟನ್ ಪ್ರತಿಪಾದಿಸಿದರು

ಸಾಮರ್ಥ್ಯಕ್ಕೊಳಗಾಗಿದ್ದರೂ, ನಮಗೆ ಸ್ವತಂತ್ರಇಚ್ಛಾಶಕಿಯಿದೆ, ಮತ್ತು ಪರಿಮಿತಿಗೊಳಗಾದಂತೆ ನಾವೇ ನಮ್ಮ ಭವಿಷ್ಯತ್ತಿನ ರೂವಾರಿಗಳು. ನಾವು ಸಾವನ್ನು ನಿವಾರಿಸಿಕೊಳ್ಳಲು ಸಾಧ್ಯವಿಲ್ಲ; ಸರಿಯಾಗಿ ಅರ್ಥಮಾಡಿಕೊಂಡರೆ ಸಾವು ಕೆಡುಕಲ್ಲ. ಎಪಿಕ್ಯೂರಸ್‌ನ ಸೂತ್ರದ ಪ್ರಕಾರ, ವಿವೇಚನೆಯಿಂದ ಬದುಕಿದರೆ ನಾವು ನೋವಿನಿಂದ ಒಂದು ಹಂತದವರೆಗೆ ಪಾರಾಗಲು ಸಾಧ್ಯ. ಇದು ಸೌಮ್ಯ ಬೋಧನೆ, ಆದರೆ ಮಾನವನ ಯಾತನೆಯ ಅರಿವಿರುವ ಯಾರಿಗಾದರೂ ಇದು ತಕ್ಕಮಟ್ಟಿಗಿನ ಗೆಲವನ್ನು ತರಬಲ್ಲದು.

ಎಪಿಕ್ಯೂರಸ್‌ಗೆ ತನ್ನದೇ ಕಾರಣಕ್ಕಾಗಿ ವಿಜ್ಞಾನದಲ್ಲಿ ಆಸಕ್ತಿಯಿಲ್ಲ; ದೇವತೆಗಳ ಮಧ್ಯಸ್ಥಿಕೆಯಿಂದಾಗುವುದೆಂದು ನಂಬಲಾದ ಪ್ರಾಕೃತಿಕ ಸಂಗತಿಗಳಿಗೆ ಅದು ಸ್ವಾಭಾವಿಕ ವಿವರಣೆ ನೀಡಬಲ್ಲುದೆಂದು ಅದಕ್ಕವನು ಬೆಲೆ ನೀಡುತ್ತಾನೆ. ಅನೇಕ ಸ್ವಾಭಾವಿಕ ವಿವರಣೆಗಳ ಸಾಧ್ಯತೆಯಿದ್ದಾಗ, ಅವುಗಳಲ್ಲಿ ಯಾವುದು ಸರಿ ಎಂದು ನಿರ್ಧರಿಸ ಹೊರಡುವುದರಿಂದ ಪ್ರಯೋಜನವಿಲ್ಲ ಎಂದವನ ಭಾವನೆ. ನಿದರ್ಶನಕ್ಕೆ, ಚಂದ್ರನ ವಿವಿಧ ಹಂತಗಳನ್ನು ನಾನಾ ರೀತಿಯಿಂದ ವಿವರಿಸಲಾಗಿದೆ; ಎಲ್ಲಿಯವರೆಗೆ ದೇವತೆಗಳನ್ನು ಎಳೆದು ತರುವುದಿಲ್ಲವೋ ಅಲ್ಲಿಯತನಕ ಎಲ್ಲವೂ ಸಮಾನವಾಗಿ ಸಮಂಜಸವಾದವು; ಅವುಗಳಲ್ಲಿ ಯಾವುದು ಸರಿ ಎಂದು ತಲೆಕೆಡಿಸಿಕೊಳ್ಳುವುದು ಕೆಲಸವಲ್ಲದ ಕೆಲಸ. ಹೀಗಾಗಿ ಸುಖೈಕವಾದಿಗಳು ಪ್ರಕೃತಿಯ ಬಗೆಗಿನ ತಿಳಿವಳಿಕೆಗೆ ನೀಡಿರುವ ಕೊಡುಗೆ ಶೂನ್ಯ. ಈಚಿನ ಪ್ಯಾಗನ್‌ರು ಮಾಟಮಂತ್ರ, ಜ್ಯೋತಿಷ್ಯ, ಮತ್ತು ಭವಿಷ್ಯಜ್ಞಾನಗಳಿಗೆ ನೀಡಿದ ಪ್ರಾಮುಖ್ಯಕ್ಕೆ ಕಡಿವಾಣ ಹಾಕಲು ಈ ಪ್ರತಿಭಟನೆಯೂ ಉಪಯುಕ್ತವಾಯಿತು; ಆದರೆ ತನ್ನ ಸ್ಥಾಪಕನಂತೆಯೇ, ಅವೂ ಶಾಸ್ತ್ರಪ್ರಾಮಾಣ್ಯ, ಸೀಮಿತತೆ, ಮತ್ತು ವೈಯಕ್ತಿಕ ಸುಖದಾಚೆಗಿನ ಯಾವುದರಲ್ಲೂ ತೋರಿಸದ ಸಹಜ ಆಸಕ್ತಿ ಇವುಗಳೂ ಉಳಿದುಕೊಂಡವು. ಅವರು ಎಪಿಕ್ಯೂರಸ್‌ನ ಸೂತ್ರಗಳನ್ನು ಗಟ್ಟಿಮಾಡಿಕೊಂಡಿದ್ದರು, ಅದು ಉಳಿದು ಬಂದ ಅನೇಕ ಶತಮಾನಗಳುದ್ದಕ್ಕೂ ಹೊಸದೇನನ್ನೂ ಸೇರಿಸಿಕೊಳ್ಳದೆ ಹೋಯಿತು.

ಎಪಿಕ್ಯೂರಸ್‌ನ ಒಬ್ಬನೇ ಶ್ರೇಷ್ಠ ಶಿಷ್ಯನೆಂದರೆ ಕವಿ ಲ್ಯೂಕ್ರೇಷಿಯಸ್ (ಕ್ರಿಪೂ ೯೯–೯೫), ಅವನು ಜ್ಯೂಲಿಯಸ್ ಸೀಸರ್‌ನ ಸಮಕಾಲೀನ. ರೋಮ್ ಗಣರಾಜ್ಯದ ಕೊನೆಯ ದಿನಗಳಲ್ಲಿ, ಸ್ವತಂತ್ರ ಚಿಂತನೆ ಒಂದು ಫ್ಯಾಷನ್ ಆಗಿತ್ತು, ಎಪಿಕ್ಯೂರಸ್‌ನ ಸಿದ್ಧಾಂತವು ವಿದ್ಯಾವಂತ ಜನರಲ್ಲಿ ತುಂಬ ಜನಪ್ರಿಯವಾಗಿತ್ತು. ಚಕ್ರವರ್ತಿ ಆಗಸ್ಟಸ್ ಪ್ರಾಚೀನ ರೂಪದ ಸದ್ಗುಣಗಳು ಮತ್ತು ಮತಧರ್ಮಗಳನ್ನು ಪುನರುಜ್ಜೀವನಗೊಳಿಸುವ ಪ್ರಯತ್ನ ಮಾಡಿದ, ಅದರ ಫಲವಾಗಿ ಲ್ಯೂಕ್ರೇಷಿಯಸ್‌ನ ಕಾವ್ಯ 'ಆನ್ ದ ನೇಚರ್ ಆಫ್ ಥಿಂಗ್ಸ್' ಮತಧರ್ಮಸುಧಾರಣೆಯ ಕಾಲದವರೆಗೆ ಅಪಖ್ಯಾತಿಗೀಡಾಗಿತ್ತು. ಮಧ್ಯಯುಗದಲ್ಲಿ ಅದರ ಒಂದೇ ಒಂದು ಹಸ್ತಪ್ರತಿ ಉಳಿದು

ಬಂತು, ಅದೂ ಮತಾಂಧರ ಕೈಯಿಂದ ನಾಶವಾಗದೆ ಸ್ವಲ್ಪದರಲ್ಲಿ ಉಳಿಯಿತು. ಅವನಂತೆ ಯಾವ ದೊಡ್ಡ ಕವಿಯ ಯೋಗ್ಯತೆಯನ್ನು ಗುರುತಿಸುವಲ್ಲಿಯೂ ಇಷ್ಟು ತಡವಾಗಲಿಲ್ಲ, ಆದರೆ ಆಧುನಿಕ ಯುಗದಲ್ಲಿ ಅವನ ಯೋಗ್ಯತೆಯನ್ನು ಬಹುತೇಕ ಎಲ್ಲರೂ ಮೆಚ್ಚಿಕೊಳ್ಳುತ್ತಾರೆ. ಉದಾಹರಣೆಗೆ, ಅವನು ಮತ್ತು ಬೆಂಜಮಿನ್ ಫ್ರಾಂಕ್ಲಿನ್ ಅವರುಗಳು ಶೆಲ್ಲಿಯ ಬಹು ಇಷ್ಟದ ಲೇಖಕರು.

ಅವನ ಕಾವ್ಯವು ಎಪಿಕ್ಯೂರಸ್‌ನ ತತ್ವಜ್ಞಾನವನ್ನು ಪದ್ಯರೂಪದಲ್ಲಿ ನಿರೂಪಿಸುತ್ತದೆ. ಇಬ್ಬರೂ ಒಂದೆ ಸಿದ್ಧಾಂತವನ್ನು ನಂಬಿದ್ದರೂ, ಅವರ ಮನೋಧರ್ಮಗಳು ವಿಭಿನ್ನ. ಲ್ಯೂಕ್ರೇಷಿಯಸ್ ಭಾವಾವೇಶದ ವ್ಯಕ್ತಿ, ಅವನಿಗೆ ವಿವೇಚನೆಯನ್ನು ಉದ್ದೀಪಿಸುವುದು ಎಪಿಕ್ಯೂರಸ್‌ಗಿಂತ ಹೆಚ್ಚು ಆವಶ್ಯಕವಾಗಿತ್ತು. ಅವನು ಆತ್ಮಹತ್ಯೆ ಮಾಡಿಕೊಂಡ, ಆಗಾಗ ಮನೋನ್ಮಾದಕ್ಕೊಳಗಾಗುತ್ತಿದ್ದ – ಕೆಲವರ ಪ್ರಕಾರ, ಅವನು ಪ್ರೇಮಭಗ್ನತೆಯಿಂದಲೋ ಅಥವಾ ಪ್ರೇಮಪೇಯದ (ಫಿಲ್ಟರ್) ಅನಿರೀಕ್ಷಿತ ಪರಿಣಾಮಗಳಿಂದಲೋ ಹೀಗೆ ಆಯಿತು. ಅವನು ಎಪಿಕ್ಯೂರಸ್‌ನನ್ನು ತನ್ನ ರಕ್ಷಕನೆಂಬಂತೆ ಕಾಣುತ್ತಾನೆ, ಮತಧರ್ಮಧ್ವಂಸಿಯೆಂದು ತಾನು ಪರಿಗಣಿಸಿದ್ದ ವ್ಯಕ್ತಿಯ ಬಗ್ಗೆ ಭಕ್ತಿಯ ಭಾಷೆಯನ್ನವನು ಬಳಸುತ್ತಾನೆ:[೧೯೯]

ಭೂಮಿಯ ಮೇಲೆ ಮಾನವ ಬದುಕು ಸಾಷ್ಟಾಂಗವೆರಗಿದ್ದಾಗ,
ಕಾಣುವಂತೆಯೇ ಮತಧರ್ಮದ ಕ್ರೌರ್ಯವು ಕಾಲಡಿಯಲ್ಲಿ ಸಿಕ್ಕಿಸಿ
ಘೋರವಾಗಿ ತುಳಿತುಳಿದು ಅದನ್ನು ನಲುಗಿಸಿರುವಾಗ,
ಮೇಲಿನ ಸ್ವರ್ಗದ ವಲಯದಿಂದ ಹೊರಚಾಚಿ
ಕೆಳಗಿನ ಮನುಜರ ಕಡೆಗೆ ತನ್ನ ಭಯಾನಕತೆಯ
ಮುಖ ತೋರಿಸಿರುವಾಗ, ಗ್ರೀಸ್ ದೇಶದ ವ್ಯಕ್ತಿಯೊಬ್ಬ
ಅವಳನ್ನು ಮಾನವಮುಖದಿಂದ ಎದುರಿಸುವ ಧೈರ್ಯ ತೋರಿದ;
ರಕ್ಕಸಿಯನ್ನೆದುರಿಸಿ ಅವಳನ್ನು ಧಿಕ್ಕರಿಸಿದ ಮೊದಲಿಗ.
ದೇವತೆಗಳ ಬಗೆಗಿನ ಕಟ್ಟುಕತೆ, ಮಿಂಚುಗುಡುಗುಗಳು,
ಗೊಣಗುವ ಬೆದರಿಕೆಗಳ ಸ್ವರ್ಗ ಅವನನ್ನಡಗಿಸಲಾಗಲಿಲ್ಲ;
ಬದಲಿಗೆ, ಅವನ ಆತ್ಮದ ಶೌರ್ಯವನ್ನು ಬಡಿದೆಬ್ಬಿಸಿ
ಪ್ರಕೃತಿಯ ಗಟ್ಟಿ ಚಿಲುಕದ ಕದವನ್ನೊಡೆಯಲು ಪ್ರೇರಿಸಿತು.
ಹೀಗಾಗಿ ಅವನ ಜ್ವಲಂತ ಮನೋಬಲದ ಕೈಮೇಲಾಗಿ,
ಜಗತ್ತಿನ ಉರಿವ ಕೋಟೆಗಳನ್ನು ದಾಟಿ ಮುಂದಕ್ಕೆ ನುಗ್ಗಿ

---

೧೯೯. ನಾನು ಉದ್ಧರಿಸುತ್ತಿರುವುದು ಶ್ರೀ ಆರ್.ಸಿ. ಟ್ರೆವೆಲ್ಯಾನ್ ಅವರ ಅನುವಾದವನ್ನು, ಭಾಗ ೧, ಪು. ೬೯–೭೦.

ಮನಸ್ಸು-ಆತ್ಮಗಳನ್ನು ಅಳೆತೆಗೆ ಸಿಗದ ವಿಶ್ವದ ಉದ್ದಗಲ ಹರಡಿದ;
ಆ ಬಳಿಕ ನಮ್ಮೆಡೆಗೆ ಜಯಶಾಲಿಯಾಗಿ ಮರಳಿ ಬಂದ:
ಮನುಷ್ಯನಂತೆ ಬಾಳುವ ಎತ್ತರಕ್ಕೆ ಏರುವುದು
ಯಾರಿಗೆ ಸಾಧ್ಯ ಯಾರಿಗಸಾಧ್ಯ ಎಂಬ ತಿಳಿವನ್ನು,
ಪ್ರತಿಯೊಂದಕೂ ತನ್ನದೇ ಸೀಮಿತ ಶಕ್ತಿ ಇದೆಯೆಂಬ
ಮತ್ತದರ ಆಳವಾಗಿ ಹೂತಿರುವ ಗಡಿಗಲ್ಲುಗಳ ಬಗ್ಗೆ.
ಅದರಿಂದಾಗಿ ಈಗ ಮತಧರ್ಮ ಅಂಗಾತ ಬಿದ್ದಿದೆ
ಮನುಜನ ಪಾದಗಳ ಕೆಳಗೆ, ತುಳಿಸಿಕೊಳ್ಳುತ್ತಿದೆ ಈಗ
ಸ್ವರ್ಗದೆತ್ತರಕ್ಕೇರಿರುವ ನಮಗೆ ಅವನ ಗೆಲವು ಮುದ ನೀಡಿದೆ.

ಗ್ರೀಕ್ ಮತಧರ್ಮ ಮತ್ತು ಆಚರಣೆಗಳ ಲವವಲಿಕೆಯ ಸಾಂಪ್ರದಾಯಿಕ ವಿವರಣೆಯನ್ನು ಒಪ್ಪಿದವರಿಗೆ, ಎಪಿಕ್ಯೂರಸ್ ಮತ್ತು ಲ್ಯೂಕ್ರೇಷಿಯಸ್‌ರು ಮತಧರ್ಮದ ಬಗ್ಗೆ ಹೊಂದಿದ್ದ ದ್ವೇಷವನ್ನು ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವೇನಲ್ಲ. ಉದಾಹರಣೆಗೆ, ಕೀಟ್ಸ್‌ನ 'ಓಡ್ ಆನ್ *ಗ್ರೀಷಿಯನ್* ಅರ್ನ್' ಒಂದು ಮತಧಾರ್ಮಿಕ ಆಚರಣೆಯನ್ನು ಸಂಭ್ರಮಿಸುತ್ತದೆಯಾದರೂ ಮನುಷ್ಯನ ಮನಸ್ಸಿನಲ್ಲಿ ವಿಷಾದ ಮತ್ತು ಭಯಾನಕತೆಗಳನ್ನು ತುಂಬುವ ಆಚರಣೆಯನ್ನಲ್ಲ. ಜನಜನಿತ ಶ್ರದ್ಧೆಗಳು ಅಷ್ಟು ವ್ಯಾಪಕವಾಗಿ ಈ ಬಗೆಯಲ್ಲಿ ಉಲ್ಲಾಸಕರವಾಗಿದ್ದವೆಂದು ನನಗನ್ನಿಸುವುದಿಲ್ಲ. ಒಲಿಂಪಿಯನ್ ದೇವತಾರಾಧನೆಯಲ್ಲಿ ಗ್ರೀಕ್ ಮತಧರ್ಮದ ಇತರ ಆರಾಧನೆಗಳಲ್ಲಿನ ಕಂದಾಚಾರ ಮತ್ತು ಕ್ರೌರ್ಯಗಳು ಕಡಿಮೆ ಪ್ರಮಾಣದಲ್ಲಿದ್ದವು. ಆದರೆ ಒಲಿಂಪಿಯನ್ ದೇವತೆಗಳೂ ಕ್ರಿಪೂ ಏಳನೆಯ ಅಥವಾ ಆರನೆಯ ಶತಮಾನದವರೆಗೆ ಆಗಾಗ ನರಬಲಿಯನ್ನು ನಿರೀಕ್ಷಿಸುತ್ತಿದ್ದರು; ಈ ಪದ್ಧತಿಯನ್ನು ಪೌರಾಣಿಕತೆ ಮತ್ತು ನಾಟಕಗಳು ದಾಖಲಿಸುತ್ತವೆ.[೧೧೦] ಎಪಿಕ್ಯೂರಸ್‌ನ ಕಾಲದಲ್ಲಿ, ರೋಮನ್ ವಿಜಯದವರೆಗೂ, ಅನ್ಯದೇಶೀಯ ಜಗತ್ತಿನಾದ್ಯಂತ ನರಬಲಿಯನ್ನು ಮಾನ್ಯಮಾಡುತ್ತಿದ್ದರು; ಪ್ಯೂನಿಕ್ ಯುದ್ಧಗಳಂತಹ ಸಂದಿಗ್ಧ ಸನ್ನಿವೇಶಗಳಲ್ಲಿ ಬಹು ನಾಗರಿಕ ಅನ್ಯದೇಶೀಯ ಜನರೂ ನರಬಲಿ ಕೊಡುತ್ತಿದ್ದರು.

ಜೇನ್ ಹ್ಯಾರಿಸನ್ ಅವರು ಆಳವಾಗಿ ಮನದಟ್ಟಾಗುವ ರೀತಿಯಲ್ಲಿ ತೋರಿಸಿರುವಂತೆ, ಸ್ಯೂಸ್ ಮತ್ತವನ ಕುಟುಂಬದ ಅಧಿಕೃತ ಆರಾಧನಾ ಪಂಥಗಳು ಮತ್ತು ಬಾರ್ಬೇರಿಯನ್‌ರಿಗೆ ಸಂಬಂಧಿಸಿದ ಇನ್ನೂ ಪ್ರಾಚೀನವಾದ ಆಚರಣೆಗಳನ್ನು ಗ್ರೀಕರು ಅನುಸರಿಸುತ್ತಿದ್ದರು. ಸ್ವಲ್ಪಮಟ್ಟಿಗೆ ಇವೆಲ್ಲ ಆರ್ಫಿಸಂನಲ್ಲಿ ಅಳವಟ್ಟಿದೆ,

---

೧೧೦. ಮತಧರ್ಮ ಮಾಡುತ್ತಿದ್ದ ಹಾನಿಯ ಉದಾಹರಣೆಯಾಗಿ ಲ್ಯೂಕ್ರೇಷಿಯಸ್ ಐಫಿಜೇನಿಯಳ ಬಲಿಯನ್ನು ಹೇಳುತ್ತಾನೆ, ಭಾಗ ೧, ೮೫-೧೦೦

ಇದು ಮತಧಾರ್ಮಿಕ ಮನೋಭಾವದ ಜನರಲ್ಲಿ ಜನಜನಿತ ಶ್ರದ್ಧೆಯಾಗಿತ್ತು. ನರಕ ಎಂಬುದು ಕ್ರಿಶ್ಚಿಯನ್ ಪರಿಕಲ್ಪನೆ ಎಂದು ಕೆಲವೇಳೆ ಭಾವಿಸಲಾಗುತ್ತದೆ, ಆದರೆ ಇದು ಸರಿಯಲ್ಲ. ಈ ವಿಷಯದಲ್ಲಿ ಕ್ರೈಸ್ತಮತಧರ್ಮವು ಮಾಡಿದ್ದೆಂದರೆ, ಹಿಂದಿನ ಜನಜನಿತ ಶ್ರದ್ಧೆಗಳನ್ನು ವ್ಯವಸ್ಥೆಗೊಳಪಡಿಸಿದ್ದು. ಸತ್ತ ನಂತರದ ಶಿಕ್ಷೆಯ ಬಗೆಗಿನ ಭಯವು ಪ್ಲೇಟೋನ 'ರಿಪಬ್ಲಿಕ್' ಕಾಲದಿಂದ ಮೊದಲುಗೊಂಡು ಕ್ರಿಪೂ ಐದನೆಯ ಶತಮಾನದ ಅಥೆನ್ಸ್‌ನಲ್ಲಿ ಸಾಮಾನ್ಯವಾಗಿತ್ತು. ಸಾಕ್ರಟೀಸ್ ಮತ್ತು ಎಪಿಕ್ಯೂರಸ್‌ರ ನಡುವಣ ಅವಧಿಯಲ್ಲಿ ಇದು ಕಡಿಮೆಯಾಗಿತ್ತು ಎಂಬುದು ಅಸಂಭವನೀಯ. (ನಾನು ಹೇಳುತ್ತಿರುವುದು ಅಲ್ಪಸಂಖ್ಯಾತ ವಿದ್ಯಾವಂತರ ಬಗ್ಗೆಯಲ್ಲ, ಜನಸಾಮಾನ್ಯರ ಬಗ್ಗೆ). ಅಲ್ಲದೆ, ಪ್ಲೇಗ್, ಭೂಕಂಪ, ಯುದ್ಧದಲ್ಲಿ ಸೋಲು, ಮತ್ತಿತರ ವಿಕೋಪಗಳು ದೇವರ ಕೋಪದಿಂದಲೋ ಶಕುನಗಳನ್ನು ಗೌರವಿಸದಿದ್ದುದರಿಂದಲೋ ಆದುದು ಎಂದು ಭಾವಿಸುವುದು ಸಾಮಾನ್ಯವಾಗಿತ್ತು. ಗ್ರೀಕ್ ಸಾಹಿತ್ಯ ಮತ್ತು ಕಲೆಗಳು ಜನಜನಿತ ಶ್ರದ್ಧೆಗಳ ವಿಷಯದಲ್ಲಿ ದಾರಿತಪ್ಪಿಸುತ್ತವೆ ಎಂಬುದು ನನ್ನ ಭಾವನೆ. ಶ್ರೀಮಂತಪ್ರಭುತ್ವಕ್ಕೆ ಸಂಬಂಧಿಸಿದ ಪುಸ್ತಕಗಳು ಮತ್ತು ವರ್ಣಚಿತ್ರಗಳ ಹೊರತಾಗಿ ಆ ಕಾಲದ ಯಾವುದೇ ದಾಖಲೆಯು ಹದಿನೆಂಟನೆಯ ಶತಮಾನದ ಉತ್ತರಾರ್ಧದ ವಿಧಾನವಾದ ಬಗ್ಗೆ ಏನನ್ನೂ ಒಳಗೊಳ್ಳದಿದ್ದರೆ ಅದರ ಕುರಿತು ನಾವು ಏನೆಂದು ತಿಳಿಯಬೇಕು? ಹೆಲೆನಿಸ್ಟಿಕ್ ಯುಗದಲ್ಲಿ ಮತಧಾರ್ಮಿಕತೆಯಂತೆಯೇ ವಿಧಾನವಾದದ ಪ್ರಭಾವವು ಕೆಳಗಿನಿಂದ ಮೇಲೆ ಹರಡಿತು; ಬಾಸ್‌ವೆಲ್ ಮತ್ತು ಸರ್ ಜೋಷುಅ ರೇನಾಲ್ಡ್‌ಸ್‌ರ ಹೊತ್ತಿಗೆ ಅದಾಗಲೇ ಪ್ರಬಲವಾಗಿತ್ತು. ಅವರು ಆ ಕುರಿತು ನೀಡುವ ಸೂಚನೆಗಳಿಂದ ಅದು ಮಾಡಿದ್ದ ಪ್ರಭಾವದ ಬಗ್ಗೆ ನಮಗೆ ಸ್ಪಷ್ಟ ಚಿತ್ರ ದೊರೆಯುವುದಿಲ್ಲ. ಹೀಗಾಗಿ, ಗ್ರೀಸ್‌ನಲ್ಲಿ ಜನಪ್ರಿಯವಾಗಿದ್ದ ಧರ್ಮದ ಬಗ್ಗೆ 'ಗ್ರೀಷಿಯನ್ ಅರ್ನ್' ಅಥವಾ ಕವಿಗಳ ಮತ್ತು ಶ್ರೀಮಂತಪ್ರಭುತ್ವವಾದಿ ತತ್ತ್ವಜ್ಞಾನಿಗಳ ಕೃತಿಗಳಿಂದ ತೀರ್ಮಾನ ಕೈಗೊಳ್ಳಲಾಗದು. ಹುಟ್ಟಿನಿಂದಾಗಲೀ ಜೊತೆಗಾರರ ಕಾರಣದಿಂದಾಗಲೀ ಎಪಿಕ್ಯೂರಸ್ ಶ್ರೀಮಂತಪ್ರಭುತ್ವವಾದಿಯಾಗಿರಲಿಲ್ಲ; ಪ್ರಾಯಶಃ ಇದು ಅವನು ಅಷ್ಟರ ಮಟ್ಟಿಗೆ ಮತಧರ್ಮವಿರೋಧಿಯಾಗಿದ್ದುದನ್ನು ವಿವರಿಸುತ್ತದೆ.

ಲ್ಯೂಕ್ರೇಷಿಯಸ್‌ನ ಕಾವ್ಯದಿಂದಾಗಿ ಎಪಿಕ್ಯೂರಸ್‌ನ ತತ್ತ್ವಜ್ಞಾನವು ಮತಧರ್ಮಸುಧಾರಣೆಯ ಕಾಲದಿಂದಲೂ ಓದುಗರಿಗೆ ಪರಿಚಿತವಾಯಿತು. ವೃತ್ತಿಪರ ತತ್ತ್ವಜ್ಞಾನಿಗಳಾಗಿರದಿದ್ದ ಅವರ ಮನಸ್ಸಿನಲ್ಲಿ ಹೆಚ್ಚಿನ ಪರಿಣಾಮ ಬೀರಿದ್ದೆಂದರೆ, ಭೌತವಾದ (ಮೆಟೀರಿಯಲಿಸಂ), ದೈವಾನುಗ್ರಹದ ನಿರಾಕರಣೆ, ಅಮರತ್ವದ ಅಲ್ಲಗಳೆಯುವಿಕೆಯಂತಹ ವಿಷಯಗಳಿಗೂ ಕ್ರಿಶ್ಚಿಯನ್ ಶ್ರದ್ಧೆಗಳಿಗೂ ಇರುವ ವಿರೋಧ. ಓದುಗರಿಗೆ ವಿಶೇಷವೆನಿಸಿದ್ದು ಈ ದೃಷ್ಟಿಕೋನಗಳು – ಈಚೆಗೆ ಇದನ್ನು

ಸಾಮಾನ್ಯವಾಗಿ ವಿಷಾದ ಮತ್ತು ಖೇದಕರ ಎಂದು ಭಾವಿಸಲಾಗುತ್ತದೆ – ಭಯದ ಹೊರೆಯಿಂದ ಸ್ವತಂತ್ರಗೊಳಿಸುವ ದೈವವಾಕ್ಕುಗಳೆಂದು ಬಿಂಬಿಸಿದುದು. ಮತಧರ್ಮಕ್ಕೆ ಸಂಬಂಧಿಸಿದ ಯಾವುದೇ ನಿಜವಾದ ಶ್ರದ್ಧೆಯ ಬಗ್ಗೆ ಯಾವುದೇ ಕ್ರಿಶ್ಚಿಯನ್‌ಗೆ ಇರುವಂತೆಯೇ ಲ್ಯೂಕ್ರೇಷಿಯಸ್‌ಗೂ ಮನದಟ್ಟಾಗಿದೆ. ಆಂತರಿಕ ಸಂಘರ್ಷಕ್ಕೆ ಪಕ್ಕಾಗಿ ಅದರಿಂದ ಪಾರಾಗುವುದರ ಕುರಿತು ಮತ್ತು ಸ್ಥಳ ಬದಲಾವಣೆ ಮಾಡಿ ಸಾಂತ್ವನವನ್ನು ಹೊಂದುವ ವ್ಯರ್ಥ ಪ್ರಯತ್ನದಲ್ಲಿರುವಾಗಿನ ಜನರ ಭಾವನೆಯನ್ನು ವರ್ಣಿಸಿದ ಬಳಿಕ, ಅವನೆನ್ನುತ್ತಾನೆ:[೧೧೧]

ಪ್ರತಿಯೊಬ್ಬನೂ ಸ್ವಂತಬಲದಿಂದ ಹಾರುತ್ತಾನೆ;
ಆದರೂ ಆ ಸ್ವಂತಿಕೆಯಿಂದ ಪಾರಾಗಲು ಅವನಿಗೆ ಬಲವಿರದು:
ತನ್ನ ಬಗಗಿನ ಅಪಚಾರದಿಂದ ಅದಕ್ಕೆ ಜೋತುಬೀಳುತ್ತಾನೆ
ಆದರೂ ಅದರ ಬಗ್ಗೆ ಅಸಹ್ಯ, ಯಾಕೆಂದರೆ, ರೋಗಿಷ್ಟನಾದರೂ
ತನ್ನ ರೋಗದ ಕಾರಣವನ್ನವನು ಕಾಣಲಾರ;
ಅದನ್ನವನು ಸರಿಯಾಗಿ ಗ್ರಹಿಸಿದರೆ
ಮಿಕ್ಕೆಲ್ಲವನ್ನೂ ಬದಿಗಿರಿಸಿ ಜಗತ್ತಿನ ಪ್ರತಿಯೊಂದರ
ಸ್ವಭಾವ ತಿಳಿಯಲು ಗಮನ ಹರಿಸಿದರೆ,
ಅದು ಚಿರಂತನ ಕಾಲದಲ್ಲಿನ ನಮ್ಮ ಸ್ಥಿತಿಯಾಗಿದ್ದು,
ಒಂದು ಗಂಟೆಯ ಮಟ್ಟಿಗೆ ಮಾತ್ರವಲ್ಲ, ಅದು ಸಂಶಯಾಸ್ಪದ,
ಮರ್ತ್ಯರು ಮುಂದೆ ಸಾಗಬೇಕಾಗಿರುವ ಸ್ಥಿತಿ ಅದು.
ಸಾವಿನ ಬಳಿಕ ಇಡೀ ಕಾಲ ಅವರಿಗಾಗಿ ಕಾಯುತ್ತದೆ.

ಎಪಿಕ್ಯೂರಸ್‌ನ ಕಾಲವು ದಣಿವಿನ ಕಾಲ, ಆತ್ಮದ ಬವಣೆಗಳಿಂದ ಪಾರಾಗಲು ನಾಶಗೊಳ್ಳುವುದನ್ನೇ ಸ್ವಾಗತಿಸುತ್ತಿದ್ದ ಕಾಲ. ಇದಕ್ಕೆ ವ್ಯತಿರಿಕ್ತವಾಗಿ, ಗಣರಾಜ್ಯದ ಕೊನೆಯ ಘಟ್ಟವು ಬಹುಪಾಲು ರೋಮನ್‌ರಿಗೆ ಭ್ರಮನಿರಸನ ಕಾಲ: ದೈತ್ಯ ಸಾಮರ್ಥ್ಯದ ಜನರು, ಮ್ಯಾಸಿಡೋನಿಯನ್ನರು ಸೋತಿದ್ದೆಡೆಯಲ್ಲಿ, ಅನಾಯಕತ್ವದಿಂದಲೇ ಒಂದು ಹೊಸ ವ್ಯವಸ್ಥೆಯೊಂದನ್ನು ಸೃಷ್ಟಿಸುತ್ತಿದ್ದರು. ಆದರೆ ರಾಜಕೀಯದಿಂದ ದೂರವಿದ್ದು ಅಧಿಕಾರ ಮತ್ತು ಲೂಟಿಗಳ ಬಗ್ಗೆ ಯೋಚಿಸದ ರೋಮನ್ ಶ್ರೀಮಂತರಿಗೆ ಪರಿಸ್ಥಿತಿಯು ತೀರ ನಿರುತ್ತೇಜಕವಾಗಿದ್ದಿರಬೇಕು. ಇವುಗಳೊಡನೆ ಆಗಿನ ಹುಚ್ಚುತನವು ಬೆರೆತಿರುವಾಗ, ಅಸ್ತಿತ್ವದಲ್ಲಿಲ್ಲದಿರುವುದೇ ಬಿಡುಗಡೆಯ ಭರವಸೆಯೆಂದು ಲ್ಯೂಕ್ರೇಷಿಯಸ್ ಭಾವಿಸಿದ್ದು ಆಶ್ಚರ್ಯಕರವೇನಲ್ಲ.

---

೧೧೧. ಭಾಗ ೩, ೧೦೬೮–೭೬. ನಾನು ಮತ್ತೆ ಶ್ರೀ. ಆರ್.ಸಿ. ಟ್ರವೆಲ್ಯಾನ್ ಅವರನ್ನು ಉದ್ಧರಿಸುತ್ತೇನೆ.

ಆದರೆ ಸಾವಿನ ಭಯವು ಸ್ವಭಾವದಲ್ಲಿಯೇ ಆಳವಾಗಿರುವುದರಿಂದ, ಎಪಿಕ್ಯೂರಸ್‌ನ ವಾಕ್ಕುಗಳು ಯಾವ ಕಾಲಕ್ಕೂ ವ್ಯಾಪಕವಾಗಿ ಜನರ ಮನಮುಟ್ಟಲು ಸಾಧ್ಯವಾಗಲಿಲ್ಲ; ಅದನ್ನು ರೂಢಿಸಿಕೊಂಡ ಅಲ್ಪಸಂಖ್ಯಾತರಿಗೆ ಮಾತ್ರ ಅದೊಂದು ಪಂಥವಾಗುಳಿಯಿತು. ಆಗಸ್ಟಸ್‌ನ ಕಾಲದ ಬಳಿಕ, ತತ್ವಜ್ಞಾನಗಳಲ್ಲಿ ಸಹ, ಅದನ್ನು ತಿರಸ್ಕರಿಸಿ ಅದಕ್ಕಿಂತ ಸಂಯಮವಾದವೇ (ಸ್ಟಾಯಿಸಿಸಂ) ಉತ್ತಮವೆಂದು ಪರಿಗಣಿತವಾಯಿತು. ಎಪಿಕ್ಯೂರಸ್‌ನ ಸಾವಿನ ಬಳಿಕ ಅದು ಆರುನೂರು ವರ್ಷಗಳ ಕಾಲ – ಅದರ ವೀರ್ಯವಂತಿಕೆ ಕುಂದುತ್ತ – ಉಳಿದು ಬಂತು ಎಂಬುದೇನೋ ನಿಜ. ಆದರೆ ಈ ಭೂಮಿಯ ಮೇಲಣ ಅಸ್ತಿತ್ವದ ಕಾರಣದಿಂದಾಗಿ ಯಾತನೆಗಳು ಜನರನ್ನು ಹೆಚ್ಚೆಚ್ಚು ದಮನಗೊಳಿಸುತ್ತಿದ್ದು, ಅವರು ಮತಧರ್ಮ ಅಥವಾ ತತ್ವಜ್ಞಾನದಿಂದ ಅದಕ್ಕೆ ಪರಿಣಾಮಕಾರಿಯಾದ ಔಷಧವನ್ನು ಹೊಂದಲು ಸದಾ ಪರಿತಪಿಸಿದರು. ಕೆಲವು ಅಪವಾದಗಳನ್ನು ಬಿಟ್ಟರೆ ತತ್ವಜ್ಞಾನಿಗಳು ನವಪ್ಲೇಟಾನಿಕ್‌ವಾದದ ಆಶ್ರಯ ಪಡೆದರು; ಅಶಿಕ್ಷಿತರು ನಾನಾ ಬಗೆಯ ಪೌರಸ್ತ್ಯ ಮೂಢಶ್ರದ್ಧೆಗಳ ಕಡೆ ಮುಖ ಮಾಡಿದರು; ಮತ್ತು ಹೆಚ್ಚೆಚ್ಚು ಸಂಖ್ಯೆಯಲ್ಲಿ ನಿರಂತರವಾಗಿ ಕ್ರೈಸ್ತಮತಧರ್ಮವನ್ನು ಮೊರೆಹೊಕ್ಕರು. ಅದು ತನ್ನ ಪೂರ್ವರೂಪದಲ್ಲಿ ಬದುಕಿನ ಎಲ್ಲ ಒಳ್ಳೆಯದನ್ನೂ ಗೋರಿಯಿಂದ ದೂರವಾಗಿರಿಸಿತ್ತು, ಹೀಗಾಗಿ ಅದು ಎಪಿಕ್ಯೂರಸ್‌ಗೆ ನೇರವಾಗಿ ವಿರುದ್ಧವಾದ ವಾಕ್ಕುಗಳನ್ನು ಜನರಿಗೆ ನೀಡಿತು. ಆದರೆ ಅವನ ಸಿದ್ಧಾಂತಗಳಿಗೆ ತುಂಬ ಸನಿಹವಾಗಿದ್ದವುಗಳನ್ನು ಹದಿನೆಂಟನೆಯ ಶತಮಾನದ ಕೊನೆಯ ವೇಳೆಗೆ ಫ್ರೆಂಚ್ ತಾತ್ವಿಕರು (ಫಿಲಾಸಫೀಸ್) ಪುನರುಜ್ಜೀವನಗೊಳಿಸಿದರು. ಬೆಂಥಮ್ ಮತ್ತವನ ಅನುಯಾಯಿಗಳು ಅದನ್ನು ಅಲ್ಲಿಂದ ಇಂಗ್ಲಂಡ್‌ಗೆ ತಂದರು. ಹೀಗೆ ಮಾಡಿದ್ದು ಕ್ರೈಸ್ತಮತಧರ್ಮದ ಬಗೆಗಿನ ಪ್ರಜ್ಞಾಪೂರ್ವಕ ವಿರೋಧದಿಂದ; ಎಪಿಕ್ಯೂರಸ್ ತನ್ನ ಕಾಲದ ಮತಧರ್ಮವನ್ನು ವಿರೋಧಿಸುತ್ತಿದ್ದ ಬಗೆಯಲ್ಲಿಯೇ ಇವರು ಕ್ರೈಸ್ತಮತಧರ್ಮಕ್ಕೆ ವಿರುದ್ಧವಾಗಿದ್ದರು.

೨೮
ಸಂಯಮವಾದ (ಸ್ಟಾಯಿಸಿಸಂ)

ಸುಖೈಕವಾದದ ಕಾಲದಲ್ಲೇ ಹುಟ್ಟಿದ ಸಂಯಮವಾದವು (ಸ್ಟಾಯಿಸಿಸಂ) ಅದಕ್ಕಿಂತ ಹೆಚ್ಚು ದೀರ್ಘ ಇತಿಹಾಸವನ್ನೂ ಸೈದ್ಧಾಂತಿಕ ಸ್ಥಿರತೆಯನ್ನೂ ಹೊಂದಿರುವಂತಹುದು. ಕ್ರಿಪೂ ಮೂರನೆಯ ಶತಮಾನದ ಮೊದಲ ಅರ್ಧದಲ್ಲಿ ಅದರ ಸ್ಥಾಪಕನಾದ ಝೀನೋನ ಬೋಧನೆಗಳು ಯಾವ ರೀತಿಯಲ್ಲಿಯೂ ಕ್ರಿಶ ಎರಡನೆಯ ಶತಮಾನದಲ್ಲಿದ್ದ ಮಾರ್ಕಸ್ ಔರೀಲಿಯಸ್‌ನದನ್ನು ಹೋಲುವುದಿಲ್ಲ. ಝೀನೋ ಒಬ್ಬ ಭೌತವಾದಿ, ಅವನ ಸಿದ್ಧಾಂತವು ಮುಖ್ಯವಾಗಿ ಸಿನಿಸಿಸಂ ಮತ್ತು ಹೆರಾಕ್ಲಿಟಸ್‌ನ ಸಮ್ಮೇಳ; ಆದರೆ ಪ್ಲೇಟೋಪಂಥದ ಕಾರಣದಿಂದ ನಿಧಾನವಾಗಿ ಸಂಯಮವಾದಿಗಳು ಭೌತವಾದವನ್ನು ಕೈಬಿಟ್ಟರು, ಆದರೆ ಅಂತಿಮವಾಗಿ ಅದರ ಅಂಶವೊಂದು ಉಳಿದು ಬಂತು. ಅವರ ನೈತಿಕ ಸಿದ್ಧಾಂತವು, ಮತ್ತು ಯಾವುದನ್ನು ಬಹು ಮುಖ್ಯವಾದುದೆಂದು ಅವರಲ್ಲಿ ಬಹುಮಂದಿ ಪರಿಗಣಿಸಿದ್ದರೋ, ಅದು ಹೆಚ್ಚು ಬದಲಾಗಲಿಲ್ಲ ಎಂಬುದು ನಿಜ. ಆದರೆ ಈ ವಿಷಯದಲ್ಲಿಯೂ, ಅದರ ಒತ್ತು ಸ್ವಲ್ಪ ಬದಲಾಯಿತು. ಕಾಲಕ್ರಮೇಣ ಸಂಯಮವಾದದ ಇತರ ಅಂಶಗಳ ಬಗ್ಗೆ ಕಡಿಮೆ ಹೇಳಿ, ಹೆಚ್ಚಾಗಿ ನೈತಿಕತೆ ಮತ್ತು ಅದಕ್ಕೆ ಸಮಂಜಸವೆನಿಸುವ ಮತಧರ್ಮಶಾಸ್ತ್ರದ ಅಂಶಗಳಿಗೆ ಹೆಚ್ಚು ವಿಶೇಷವಾದ ಒತ್ತು ನೀಡಲಾಯಿತು. ಹಿಂದಿನ ಸಂಯಮವಾದಿಗಳಿಗೆ ಸಂಬಂಧಿಸಿದಂತೆ, ನಮಗಿರುವ ಅಡ್ಡಿಯೆಂದರೆ ಕೇವಲ ಕೆಲವು ತುಣುಕುಗಳಲ್ಲಲ್ಲದೆ ಅವರ ಕೃತಿಗಳು ಉಳಿದುಬಂದಿಲ್ಲದಿರುವುದು. ಕ್ರಿಶ ಮೊದಲ ಶತಮಾನಕ್ಕೆ ಸೇರಿದ ಸೆನಕ, ಎಪಿಕ್ಟೆಟಸ್, ಮತ್ತು ಮಾರ್ಕಸ್ ಔರೀಲಿಯಸ್ ಅವರದು ಮಾತ್ರ ಸಂಪೂರ್ಣವಾಗಿ ಉಳಿದುಬಂದಿವೆ.

ಸಂಯಮವಾದವು ಈವರೆಗೆ ನಾವು ಪರಿಶೀಲಿಸಿದ ಮಿಕ್ಕೆಲ್ಲ ತತ್ವಜ್ಞಾನ ಪಂಥಗಳಿಗಿಂತ ಕಡಿಮೆ ಗ್ರೀಕ್‌ತನದ್ದು. ಸಂಯಮವಾದಿಗಳಲ್ಲಿನ ಪೂರ್ವಸೂರಿಗಳು ಬಹುತೇಕ ಸಿರಿಯನ್ನರು, ಆನಂತರದವರಲ್ಲಿ ಬಹುತೇಕ ರೋಮನ್ನರು. ಟಾರ್ನ್ (ಹೆಲೆನಿಸ್ಟಿಕ್ ಸಿವಿಲೈಜೇಷನ್', ಪು. ೨೮೭) ಸಂಯಮವಾದದಲ್ಲಿ ಕ್ಯಾಲ್ಡಿಯನ್

ಪ್ರಭಾವವಿದೆಯೆಂದು ಸಂದೇಹಿಸುತ್ತಾರೆ. ಅನ್ಯದೇಶೀಯ ಜಗತ್ತನ್ನು ಹೆಲೆನೀಯವಾಗಿಸುವಾಗ ಗ್ರೀಕ್‌ರು ತಮಗೆ ಬೇಕಾದುದನ್ನು ಮಾತ್ರ ಉಳಿಸಿಕೊಳ್ಳುತ್ತಾರೆ ಎಂಬ ಯೂಬೆರ್‌ವೆಗ್ ಅವರ ಅಭಿಪ್ರಾಯವು ಸರಿಯಾಗಿದೆ. ಹಿಂದಿನ ಶುದ್ಧ ಗ್ರೀಕ್ ತತ್ವಜ್ಞಾನಗಳಿಗಿಂತ ಭಿನ್ನವಾಗಿ ಸಂಯಮವಾದವು ಭಾವನಾತ್ಮಕವಾಗಿ ಸಂಕುಚಿತವಾದುದು, ಮತ್ತು ಕೆಲವಂಶಗಳಲ್ಲಿ ಅದು ಮತಾಂಧತೆಯದು; ಆದರೆ ಅದರಲ್ಲಿ ಜಗತ್ತಿಗೆ ಬೇಕಾದ, ಗ್ರೀಕ್‌ರು ನೀಡಲು ಅಸಮರ್ಥವೆನಿಸಿದ ಕೆಲವು ಮತಧಾರ್ಮಿಕ ಅಂಶಗಳೂ ಇವೆ, ಅದರಲ್ಲೂ, ಅದು ರಾಜರಿಗೆ ಪ್ರಿಯವಾಯಿತು: 'ಅಲೆಕ್ಸಾಂಡರ್‌ನ ನಂತರ ಬಹುತೇಕ ಎಲ್ಲರೂ – ಝೀನೋನಂತರದ ಪೀಳಿಗೆಗಳಲ್ಲಿದ್ದು ಆಗಿಹೋದ ಮುಖ್ಯ ರಾಜರುಗಳೆಲ್ಲ ಎನ್ನಬಹುದು – ತಮ್ಮನ್ನು ಸಂಯಮವಾದಿಗಳೆಂದು ಕರೆದುಕೊಂಡರು', ಎಂದು ಪ್ರೊಫೆಸರ್ ಗಿಲ್ಬರ್ಟ್ ಮರ್ರೆ ಹೇಳುತ್ತಾರೆ.

ಝೀನೋ ಒಬ್ಬ ಫಿನೀಷಿಯನ್, ಕ್ರಿಪೂ ನಾಲ್ಕನೆಯ ಶತಮಾನದ ಸುಮಾರಿನಲ್ಲಿ ಸೈಪ್ರಸ್‌ನ ಕಿಟಿಯಮ್‌ನಲ್ಲಿ ಹುಟ್ಟಿದ. ಪ್ರಾಯಶಃ ಅವನ ಕುಟುಂಬವು ವ್ಯಾಪಾರದಲ್ಲಿ ತೊಡಗಿತ್ತು, ಆ ವ್ಯವಹಾರಿಕ ಆಸಕ್ತಿಯೇ ಅವನನ್ನು ಮೊದಲಿಗೆ ಅಥೆನ್ಸ್‌ಗೆ ಕರೆದೊಯ್ದದ್ದು. ಆದರೆ ಅಲ್ಲಿದ್ದಾಗ ಅವನಿಗೆ ತತ್ವಜ್ಞಾನವನ್ನು ಕಲಿಯಬೇಕೆಂಬ ಆಕಾಂಕ್ಷೆಯುಂಟಾಯಿತು. ಬೇರೆ ಯಾವ ಪಂಥಕ್ಕಿಂತಲೂ ಅವನಿಗೆ ಸಿನಿಕ್‌ರ ದೃಷ್ಟಿಯು ಹೆಚ್ಚು ಸಮಂಜಸವೆನಿಸಿತು, ಆದರೆ ಅವನು ಒಂದು ಬಗೆಯ ಗುಣಪಕ್ಷಪಾತಿ. ಪ್ಲೇಟೋನ ಅನುಯಾಯಿಗಳು ಅವನನ್ನು ಅಕೆಡೆಮಿಯಿಂದ ಕೃತಿಚೌರ್ಯ ಮಾಡಿದವನು ಎಂದು ಆರೋಪಿಸುತ್ತಾರೆ. ಅವರ ಇತಿಹಾಸದಲ್ಲಿ ಸಾಕ್ರಟೀಸ್‌ನೇ ಸಂಯಮವಾದಿಗಳಲ್ಲಿ ಪ್ರಮುಖ ಸಂತ; ವಿಚಾರಣೆಯ ಸಂದರ್ಭದಲ್ಲಿನ ಅವನ ಮನೋಭಾವ, ಪಲಾಯನ ಮಾಡಲು ಒಪ್ಪದಿದ್ದುದು, ಸಾವಿನೆದುರು ಅವನು ತೋರಿದ ದೃಢತೆ ಮತ್ತು ಅನ್ಯಾಯವನ್ನೆಸಗಿದವನು ಅನ್ಯಾಯಕ್ಕೊಳಗಾದವನಿಗಿಂತ ಹೆಚ್ಚಿನ ಹಾನಿಗೊಳಗಾಗುತ್ತಾನೆಂಬ ವಾದ – ಇವೆಲ್ಲ ಸಂಯಮವಾದಕ್ಕೆ ಹೇಳಿಮಾಡಿಸಿದಂತೆ ಒಪ್ಪುತ್ತವೆ. ಹಾಗೆಯೇ ಶೀತ ಮತ್ತು ಉಷ್ಣಗಳ ಬಗೆಗಿನ ಅವಜ್ಞೆ, ಆಹಾರ ಮತ್ತು ಉಡುಪುಗಳ ಬಗೆಗಿನ ಸರಳತೆ, ದೈಹಿಕ ಸೌಕರ್ಯಗಳ ಬಗೆಗಿನ ಸಂಪೂರ್ಣ ಸ್ವತಂತ್ರತೆಗಳು. ಆದರೆ ಸಂಯಮವಾದಿಗಳು ಎಂದೂ ಪ್ಲೇಟೋನ ಆಲೋಚನಾ ಸಿದ್ಧಾಂತವನ್ನು, ಮತ್ತು ಅವರಲ್ಲಿ ಬಹುಪಾಲು ಅವನ ಅಮರತ್ವಪರವಾದ ವಾದವನ್ನು ಒಪ್ಪಲಿಲ್ಲ. ಆತ್ಮವು ಭೌತದ್ರವ್ಯದಿಂದಾದುದಲ್ಲ ಎಂಬ ಅವನ ವಾದವನ್ನು ಮುಂದಿನ ಸಂಯಮವಾದಿಗಳಷ್ಟೇ ಒಪ್ಪಿಕೊಂಡರು; ಆತ್ಮವು ಬೆಂಕಿಯ ಕಣಗಳಿಂದಾದುದು ಎಂಬ ಹೆರಾಕ್ಲಿಟಸ್ ಮಂಡಿಸಿದ್ದ ವಾದವನ್ನು ಹಿಂದಿನ ಸಂಯಮವಾದಿಗಳು ಒಪ್ಪಿದ್ದರು. ಈ ಸಿದ್ಧಾಂತವನ್ನು ಎಪಿಕ್ಟೆಟಸ್ ಮತ್ತು

ಮಾರ್ಕಸ್ ಔರೀಲಿಯಸ್‌ರಲ್ಲಿ ಮಾತುಗಳ ರೂಪದಲ್ಲಿ ಕಾಣಬಹುದು; ಆದರೆ ಬೆಂಕಿಯನ್ನು ಭೌತದ್ರವ್ಯಗಳ ಸಂರಚನೆಯಲ್ಲಿರುವ ನಾಲ್ಕು ಮೂಲವಸ್ತುಗಳಲ್ಲಿನ ಒಂದೆಂದು ಅಕ್ಷರಶಃ ಭಾವಿಸಬಾರದೆಂಬುದು ಅವರ ಅಭಿಪ್ರಾಯವಾಗಿತ್ತು.

ಝೇನೋಗೆ ತತ್ವಜಿಜ್ಞಾಸೆಯ ಸೂಕ್ಷ್ಮಗಳ ಬಗ್ಗೆ ಸಹನೆಯಿರಲಿಲ್ಲ. ಸದ್ಗುಣವಷ್ಟೇ ಮುಖ್ಯವಾದುದೆಂದವನು ತಿಳಿದಿದ್ದ, ಸದ್ಗುಣಕ್ಕೆ ಕೊಡುಗೆ ನೀಡಿದ ವಿಷಯದಲ್ಲಿ ಮಾತ್ರ ಅವನು ಭೌತವಿಜ್ಞಾನ ಮತ್ತು ತತ್ವಜಿಜ್ಞಾಸೆಗಳಿಗೆ ಬೆಲೆ ಕೊಡುತ್ತಿದ್ದ. ತನ್ನ ಕಾಲದ ತತ್ವಜಿಜ್ಞಾಸೆಯ ಪ್ರವೃತ್ತಿಯನ್ನವನು ವ್ಯವಹಾರಜ್ಞಾನದ ಮೂಲಕವೇ ಎದುರಿಸಲು ಪ್ರಯತ್ನಿಸಿದ, ಅದಕ್ಕೆ ಗ್ರೀಸ್‌ನಲ್ಲಿ ಭೌತವಾದವೆಂದೇ ಅರ್ಥ. ಇಂದ್ರಿಯಗಳ ವಿಶ್ವಾಸಾರ್ಹತೆಯ ಬಗೆಗಿನ ಸಂದೇಹಗಳು ಅವನಿಗೆ ಇರಿಸುಮುರಿಸು ಉಂಟುಮಾಡುತ್ತಿದ್ದವು, ಅವುಗಳನ್ನವನು ಅತಿರೇಕಕ್ಕೆ ದೂಡಿದ.

'ಝೇನೋ ಆರಂಭಿಸಿದ್ದು ವಾಸ್ತವ ಜಗತ್ತಿನ ಅಸ್ತಿತ್ವವನ್ನು ಒಪ್ಪುವುದರ ಮೂಲಕ. "ವಾಸ್ತವ ಎಂದರೆ ಏನು?" ಎಂದು ಸಂದೇಹವಾದಿ ಕೇಳಿದ. "ಅಂದರೆ ಘನವೂ ಭೌತದ್ರವ್ಯವೂ ಆದುದು ಎಂದು. ಈ ಮೇಜು ಘನ ಭೌತದ್ರವ್ಯ ಎಂಬುದು ನನ್ನ ಅಭಿಮತ." "ಹಾಗಾದರೆ ದೇವರು?" ಎಂದು ಪ್ರಶ್ನಿಸಿದ ಸಂದೇಹವಾದಿ. "ಮತ್ತು ಆತ್ಮ?" "ಪರಿಪೂರ್ಣ ಘನವಸ್ತು" ಎಂದ ಝೇನೋ. "ಮೇಜಿಗಿಂತ ಹೆಚ್ಚು ಘನವಸ್ತು." "ಸದ್ಗುಣ ಅಥವಾ ನ್ಯಾಯ ಅಥವಾ ತ್ರೈರಾಶಿ: ಇವೂ ಘನವಸ್ತುಗಳೇ?" "ಖಂಡಿತ, ಘನವಸ್ತುಗಳೇ" ಎಂದ ಝೇನೋ.'[೧೧೨]

ಈ ಹಂತದಲ್ಲಿ, ಇತರ ಅನೇಕರಂತೆಯೇ ಝೇನೋ ಕೂಡ ತತ್ವಜಿಜ್ಞಾಸೆಯ ಬಗೆಗಿನ ವಿರೋಧದಿಂದ ತನ್ನದೇ ತತ್ವಜಿಜ್ಞಾಸೆಗೆ ಧಾವಿಸಿದ.

ಕೊನೆಯವರೆಗೂ ಈ ಪಂಥವು ಬದ್ಧವಾಗಿದ್ದ ಮುಖ್ಯ ಸಿದ್ಧಾಂತವು ವೈಶ್ವಿಕ ನಿಯತಿವಾದ ಮತ್ತು ಮಾನವ ಸ್ವಾತಂತ್ರ್ಯಗಳಿಗೆ ಸಂಬಂಧಿಸಿದಂತಹುದು. ಅಕಸ್ಮಿಕತೆ ಎಂಬಂಥದು ಯಾವುದೂ ಇಲ್ಲ, ಪ್ರಕೃತಿಯ ಆಗುಹೋಗುಗಳು ಪ್ರಾಕೃತಿಕ ನಿಯಮಗಳಿಂದ ನಿರ್ಧಾರಿತವಾಗುತ್ತವೆ ಎಂದು ಝೇನೋ ನಂಬಿದ್ದ. ಆದಿಯಲ್ಲಿದ್ದುದು ಬೆಂಕಿ ಮಾತ್ರ; ಆನಂತರ ಇತರ ಮೂಲವಸ್ತುಗಳಾದ ಗಾಳಿ, ನೀರು ಮತ್ತು ಮಣ್ಣುಗಳು ಕಾಲಕ್ರಮೇಣ – ಅದೇ ಕ್ರಮದಲ್ಲಿ – ಮೂಡಿದವು. ಈಗಲೋ ಆಗಲೋ ವೈಶ್ವಿಕ ದಳ್ಳುರಿ ಉಂಟಾಗುತ್ತದೆ, ಮತ್ತೆ ಎಲ್ಲವೂ ಬೆಂಕಿಯೇ ಆಗಿಬಿಡುತ್ತವೆ. ಬಹುತೇಕ ಸಂಯಮವಾದಿಗಳ ಪ್ರಕಾರ ಇದು, ಕ್ರಿಶ್ಚಿಯನ್ ಸಿದ್ಧಾಂತದ ಪ್ರಕಾರದ ಜಗತ್ತಿನ ಕೊನೆಯಂತಹ ಪರಾಕಾಷ್ಠೆಯಲ್ಲ, ಒಂದು ಮಂಡಲದ ಮುಗಿವು ಅಷ್ಟೆ; ಇಡೀ ಈ ಪ್ರಕ್ರಿಯೆಯು ಕೊನೆಯಿಲ್ಲದಂತೆ ನಡೆಯುತ್ತಲೇ ಇರುತ್ತದೆ.

---

೧೧೨. ಗಿಲ್ಬರ್ಟ್ ಮರ್ರೆ, 'ದ ಸ್ಟಾಯಿಕ್ ಫಿಲಾಸಫಿ', (೧೯೧೫), ಪು. ೨೫.

ನಡೆಯುವುದೆಲ್ಲವೂ ಹಿಂದೆ ನಡೆದವು, ಮುಂದೆ ನಡೆಯುವಂತಹುವು, ಒಮ್ಮೆ ಮಾತ್ರವಲ್ಲ, ಕೊನೆಯಿಲ್ಲದ ರೀತಿಯಲ್ಲಿ.

ಇಲ್ಲಿಯವರೆಗಿನ ಸಿದ್ಧಾಂತವು ಲವಲವಿಕೆಯಿಲ್ಲದ್ದು ಎಂದು ಹಾಗೂ ಡೆಮಾಕ್ರಿಟಸ್‌ನ ಸಾಮಾನ್ಯ ಭೌತವಾದಕ್ಕಿಂತ ಹೆಚ್ಚೇನೂ ಸಾಂತ್ವನಕಾರಿಯಲ್ಲದ್ದು ಅನ್ನಿಸಬಹುದು. ಆದರೆ ಇದು ಅದರ ಒಂದು ಮುಖ ಮಾತ್ರ. ಸಂಯಮವಾದದಲ್ಲಿನ ಪ್ರಕೃತಿಯ ಮಾರ್ಗವು, ಹದಿನೆಂಟನೆಯ ಶತಮಾನದ ಮತಧರ್ಮಶಾಸ್ತ್ರದಲ್ಲಿನಂತೆ, ಉಪಕಾರೀ ಅನುಗ್ರಹಿಯಾದ ನಿಯಮಕರ್ತೃವಿನಿಂದ ನಿಗದಿತವಾದುದು, ತೀರ ಸಣ್ಣ ವಿವರಗಳವರೆಗೂ ಪ್ರಕೃತಿಯ ಉದ್ದೇಶಸಾಧನೆಗಾಗಿ ಇಡಿಯಾಗಿ ವಿನ್ಯಾಸಗೊಂಡದ್ದು. ದೇವತೆಗಳು ಮತ್ತು ಪಾಪದೇವತೆಗಳಿಗೆ ಸಂಬಂಧಿಸಿದಂಥವುಗಳನ್ನು ಹೊರತುಪಡಿಸಿದಂತೆ, ಈ ಉದ್ದೇಶಗಳನ್ನು ಮಾನವನ ಬದುಕಿನಲ್ಲಿ ಕಾಣಬಹುದು. ತಿನ್ನಲು ಕೆಲವು ಪ್ರಾಣಿಗಳು ಒಳ್ಳೆಯವು, ಕೆಲವು ಧೈರ್ಯವನ್ನು ಬೇಡುವಂತಹುವು; ತಿಗಣೆಗಳು ಕೂಡ ಉಪಯುಕ್ತವೇ; ನಾವು ತೀರ ಹೆಚ್ಚು ಮಲಗದೆ ಬೆಳಿಗ್ಗೆ ಬೇಗ ಏಳುವಲ್ಲಿ ಸಹಾಯ ಮಾಡುತ್ತವೆ. ಈ ಪರಮಶಕ್ತಿಯನ್ನು ಕೆಲವೇಳೆ ದೇವರು ಎಂದೂ ಮತ್ತೆ ಕೆಲವೊಮ್ಮೆ ಝ್ಯೂಸ್ ಎಂದೂ ಕರೆಯುತ್ತೇವೆ. ಈ ಝ್ಯೂಸ್ ಜನಪ್ರಿಯ ದೇವತೆಯ ರೂಪಕ್ಕಿಂತ ಭಿನ್ನವಾದುದೆಂದು ಸೆನೆಕ ಹೇಳಿದ, ಅವನು ವಾಸ್ತವವಾದರೂ ನಿಯಮಬದ್ಧ.

ದೇವರು ಜಗತ್ತಿಗಿಂತ ಬೇರೆಯಲ್ಲ; ಅವನು ಜಗತ್ತಿನ ಆತ್ಮ, ನಾವೆಲ್ಲರೂ ದೈವಾಗ್ನಿಯ ಒಂದಂಶದಿಂದ ಆದವರು. ಎಲ್ಲ ವಸ್ತುಗಳೂ ಒಂದು ವ್ಯವಸ್ಥೆಯ ಭಾಗಗಳು, ಅದನ್ನೇ ಪ್ರಕೃತಿ ಎನ್ನುವುದು. ಒಂದರ್ಥದಲ್ಲಿ, ಪ್ರತಿಯೊಬ್ಬ ವ್ಯಕ್ತಿಯೂ ಪ್ರಕೃತಿಯೊಂದಿಗೆ ಸಾಮರಸ್ಯ ಹೊಂದಿರುತ್ತಾನೆ; ಯಾಕೆಂದರೆ ಆ ಪ್ರಕೃತಿಯ ನಿಯಮಗಳೇ ಎಲ್ಲಕ್ಕೂ ಕಾರಣವಾಗಿರುವುದು. ಆದರೆ ಇನ್ನೊಂದರ್ಥದಲ್ಲಿ, ವ್ಯಕ್ತಿಯ ಇಚ್ಛಾಶಕ್ತಿಯು ಪ್ರಕೃತಿಯ ಉದ್ದೇಶಗಳ ಕಡೆಗೆ ಎಲ್ಲಿಯವರೆಗೆ ತುಡಿಯುತ್ತದೆಯೋ ಅಲ್ಲಿಯವರೆಗೆ ಅಂಥ ಮಾನವ ಬದುಕು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಕೂಡಿರುತ್ತದೆ. ಸದ್ಗುಣ ಎಂದರೆ ಪ್ರಕೃತಿಗನುಗುಣವಾಗಿರುವ ಇಚ್ಛಾಶಕ್ತಿಯನ್ನು ಹೊಂದಿರುವುದು. ಕೆಡುಕರು, ದೈವನಿಯಮಗಳನ್ನು ಅನಿವಾರ್ಯವಾಗಿ ಅನುಸರಿಸಿದರೂ, ಹಾಗೆ ರೂಢಿಗತವಾಗಿ ಮಾಡುತ್ತಿರುತ್ತಾರೆ. ಕ್ಲಿಯಾಂಥೀಸ್‌ನ ಸಾದೃಶ್ಯದಂತೆ, ಅವರು ಗಾಡಿಯೊಂದಕ್ಕೆ ಕಟ್ಟಿಹಾಕಿರುವ ನಾಯಿಯಂತೆ, ಗಾಡಿ ಎಲ್ಲಿಗೆ ಹೋಗುತ್ತದೆಯೊ ಅಲ್ಲಿಗೇ ಹೋಗುವುದು ಅನಿವಾರ್ಯವಾಗಿರುತ್ತದೆ.

ವ್ಯಕ್ತಿಯ ಬದುಕಿನಲ್ಲಿ ಸದ್ಗುಣವೇ ಪರಮ ಒಳಿತು; ಸುಖ, ಆರೋಗ್ಯ, ಆಸ್ತಿಪಾಸ್ತಿ, ಯಾವುದೂ ಮುಖ್ಯವಲ್ಲ. ಸದ್ಗುಣವು ಇಚ್ಛಾಶಕಿಯಲ್ಲಿರುವುದರಿಂದ, ಒಬ್ಬ ವ್ಯಕ್ತಿ ಬದುಕಿನ ನಿಜವಾಗಿ ಒಳ್ಳೆಯದಾದುದೂ ಕೆಟ್ಟುದಾದುದೂ ವಾಸ್ತವದಲ್ಲಿ

ಅವನನ್ನೇ ಅವಲಂಬಿಸಿರುತ್ತದೆ. ಅವನು ಬಡವನಾಗಬಹುದು, ಅದರಿಂದೇನು? ಅವನು ಒಳ್ಳೆಯವನೇ ಆಗಿರಬಹುದು. ನಿರಂಕುಶಾಧಿಕಾರಿಯು ಅವನನ್ನು ಸೆರೆಯಲ್ಲಿರಿಸಿಬಹುದು, ಆಗಲೂ ಪ್ರಕೃತಿಯೊಡನೆ ಸಾಮರಸ್ಯದಿಂದ ಬಾಳುವುದನ್ನು ಅವನು ಮುಂದುವರಿಸಬಹುದು. ಅವನಿಗೆ ಮರಣದಂಡನೆ ವಿಧಿಸಬಹುದು, ಆಗ ಅವನು ಸಾಕ್ರಟೀಸ್‌ನಂತೆ ಉದಾತ್ತನಾಗಿಯೇ ಸಾಯಬಹುದಲ್ಲ! ಇತರರಿಗೆ ಬಾಹ್ಯ ವಸ್ತುಗಳ ಮೇಲೆ ಅಧಿಕಾರವಿರುತ್ತದೆ; ಏಕಮಾತ್ರ ಒಳಿತಾದ ಸದ್ಗುಣವು ವ್ಯಕ್ತಿಯನ್ನು ಮಾತ್ರ ಅವಲಂಬಿಸಿರುತ್ತದೆ. ಹೀಗಾಗಿ ಪ್ರತಿ ವ್ಯಕ್ತಿಗೂ, ಅವನು ಐಹಿಕ ಬಯಕೆಗಳಿಂದ ಸ್ವತಂತ್ರನಾಗಿದ್ದರೆ, ಪರಿಪೂರ್ಣ ಸ್ವಾತಂತ್ರ್ಯವಿದೆ. ತಪ್ಪು ತೀರ್ಮಾನಗಳಿಂದ ಅಂತಹ ಬಯಕೆಗಳು ಉಂಟಾಗುತ್ತವೆ. ಸಮಂಜಸ ತೀರ್ಮಾನಗಳನ್ನು ಮಾಡುವ ಸಂತನು ತಾನು ಬೆಲೆಗೊಡುವ ಎಲ್ಲದಕ್ಕೂ ನಿಜವಾದ ಒಡೆಯನಾಗಿರುತ್ತಾನೆ. ಯಾಕೆಂದರೆ ಯಾವುದೇ ಬಾಹ್ಯ ಶಕ್ತಿಯೂ ಅವನ ಸದ್ಗುಣಗಳನ್ನು ಕಸಿದುಕೊಳ್ಳಲಾರದು.

ಈ ಸಿದ್ಧಾಂತದ ಬಗ್ಗೆ ಕೆಲವು ಸ್ಪಷ್ಟ ತಾರ್ಕಿಕ ತೊಂದರೆಗಳು ಎದುರಾಗುತ್ತವೆ. ಸದ್ಗುಣವೇ ಏಕೈಕ ಒಳಿತಾದರೆ, ಒಂದು ಸಹಾಯಕಾರಿ ದೈವಾನುಗ್ರಹವು ಸದ್ಗುಣವನ್ನುಂಟುಮಾಡುವ ಏಕೈಕ ಶಕ್ತಿಯಾಗಿರಬೇಕಾಗಿತ್ತು, ಆದರೆ ನಿಸರ್ಗನಿಯಮಗಳು ಅಸಂಖ್ಯ ಪಾಪಿಗಳನ್ನು ಸೃಷ್ಟಿಸಿದೆಯಲ್ಲ! ಸದ್ಗುಣವೇ ಏಕೈಕ ಒಳಿತಾದರೆ, ಕ್ರೌರ್ಯ ಮತ್ತು ಅನ್ಯಾಯಗಳ ವಿರುದ್ಧ ಯಾವುದೇ ಕಾರಣವಿರುತ್ತಿರಲಿಲ್ಲ, ಯಾಕೆಂದರೆ, ಕ್ರೌರ್ಯ ಮತ್ತು ಅನ್ಯಾಯಗಳು ಯಾತನೆಯನ್ನು ಅನುಭವಿಸುವವರಿಗೆ ಸದ್ಗುಣವನ್ನು ತೋರಿಸಲು ಅತ್ಯುತ್ತಮ ಅವಕಾಶವನ್ನೊದಗಿಸುತ್ತದೆ ಎಂದು ಸಂಯಮವಾದಿಗಳು ಹೇಳುತ್ತಾರೆ. ಜಗತ್ತು ಸಂಪೂರ್ಣವಾಗಿ ಪೂರ್ವನಿಯತಿಗೊಳಗಾಗಿದ್ದರೆ, ನಾನು ಸದ್ಗುಣಿಯಾಗುತ್ತೇನೋ ಇಲ್ಲವೋ ಎಂಬುದನ್ನು ನಿಸರ್ಗನಿಯಮಗಳೇ ನಿರ್ಧರಿಸುತ್ತವೆ. ನಾನು ಕೆಡುಕನಾದರೆ, ನಿಸರ್ಗವು ನನ್ನನ್ನು ಕೆಡುಕನಾಗಲು ಒತ್ತಾಯಿಸುತ್ತದೆ, ಆಗ ಸದ್ಗುಣವು ನನಗೆ ನೀಡುತ್ತದೆನ್ನಲಾದ ಸ್ವಾತಂತ್ರ್ಯವು ಅಸಾಧ್ಯ.

ಸದ್ಗುಣದಿಂದ ಏನೂ ಸಾಧಿಸಲು ಸಾಧ್ಯವಿಲ್ಲವಾದರೆ ಅದನ್ನು ಪಡೆದು ಜೀವಿಸುವ ಬಗ್ಗೆ ಯಾವುದೇ ಉತ್ಸಾಹವಿರಲಾರದು ಎಂದು ಆಧುನಿಕ ಮನಸ್ಸಿಗೆ ಅನ್ನಿಸುತ್ತದೆ. ಪ್ಲೇಗ್‌ನಂತಹ ಸಾಂಕ್ರಾಮಿಕ ರೋಗ ಬಂದಾಗ ತನ್ನ ಜೀವನವನ್ನೇ ಒತ್ತೆಯಿಡುವ ವೈದ್ಯನ ಬಗ್ಗೆ ನಮಗೆ ಮೆಚ್ಚಿಕೆಯುಂಟಾಗುತ್ತದೆ, ಯಾಕೆಂದರೆ ರೋಗ ಕೆಡುಕು, ಅದು ಕ್ರಮೇಣ ಕಡಿಮೆಯಾಗಬೇಕೆಂದು ನಾವು ಬಯಸುತ್ತೇವೆ. ಆದರೆ ರೋಗವು ಕೆಡುಕಲ್ಲವೆಂದರೆ ವೈದ್ಯನು ಆರಾಮವಾಗಿ ಮನೆಯಲ್ಲೇ ಇರಬಹುದು. ಸಂಯಮವಾದಿಗೆ ಸದ್ಗುಣ ತನ್ನಲ್ಲಿ ತಾನು ಸ್ವಯಂಪೂರ್ಣವೇ ಹೊರತು ಒಳಿತನ್ನು ಮಾಡುವ ಸಾಧನವಲ್ಲ. ಇನ್ನಷ್ಟು ಯೋಚಿಸಿದರೆ, ಇದರ ಅಂತಿಮ ಫಲವೇನು?

ಇಂದಿನ ಜಗತ್ತು ಬೆಂಕಿಯಿಂದ ನಾಶವಾಗುವುದು, ಮತ್ತು ಇಡೀ ಪ್ರಕ್ರಿಯೆ ಚಕ್ರಗತಿಯಲ್ಲಿ ಪುನರಾವರ್ತನೆಯಾಗುವುದು. ಇದಕ್ಕಿಂತಲೂ ಫಲರಹಿತವಾದುದು ಬೇರಾವುದಾದರೂ ಉಂಟೆ? ಅಲ್ಲೊಂದು ಕಡೆ ಇಲ್ಲೊಂದು ಕಡೆ ಸ್ವಲ್ಪ ಕಾಲ ಪ್ರಗತಿಯಿರಬಹುದು, ಆದರೆ ಅಂತಿಮವಾಗಿರುವುದು ಬರಿಯ ಪುನರಾವರ್ತನೆ. ಸಹಿಸಲಸಾಧ್ಯವಾದ ನೋವು ಕಾಣಿಸಿಕೊಂಡರೆ ಅಂತಹದು ಕಾಲಕ್ರಮೇಣ ಇಲ್ಲವಾಗಬಹುದೆಂದು ನಾವು ಆಶಿಸುತ್ತೇವೆ; ಆದರೆ ಸಂಯಮವಾದಿಯು ಹೇಳುವುದು ಈಗ ನಡೆಯುತ್ತಿರುವುದು ಮತ್ತೆ ಮತ್ತೆ ನಡೆಯುತ್ತಲೇ ಇರುತ್ತದೆಂದು. ಎಲ್ಲವನ್ನೂ ನೋಡಬಲ್ಲ ದೈವಾನುಗ್ರಹವು ಕೊನೆಯಲ್ಲಿ ಹತಾಶೆಯಿಂದ ನಶಿಸಬಹುದು.

ಸಂಯಮವಾದಿಗಳ ಸದ್ಗುಣದ ಈ ಪರಿಕಲ್ಪನೆಯಲ್ಲಿ ಸ್ವಲ್ಪಮಟ್ಟಿಗಿನ ನಿರುತ್ಸಾಹ ಕಾಣಿಸುತ್ತದೆ. ಕೆಟ್ಟ ಭಾವಾವೇಶವನ್ನು ಮಾತ್ರವಲ್ಲ, ಎಲ್ಲ ಭಾವಾವೇಶಗಳನ್ನೂ ಅದು ಖಂಡಿಸುತ್ತದೆ. ಸಂತನಿಗೂ ಸಹಾನುಭೂತಿಯಿರಲಾರದು; ತನ್ನ ಹೆಂಡತಿಯೋ ಮಗನೋ ಸತ್ತಾಗ ಅವನು ತನ್ನ ಸದ್ಗುಣಕ್ಕೆ ಇವು ಅಡ್ಡಿಗಳೇ ಅಲ್ಲ ಎಂದವನು ಭಾವಿಸುತ್ತಾನೆ, ಹೀಗಾಗಿ ಅವನಿಗೆ ಗಾಢ ದುಃಖವುಂಟಾಗುವುದಿಲ್ಲ. ಎಪಿಕ್ಯೂರಸ್ ಅಷ್ಟೊಂದು ಹೊಗಳುವ ಸ್ನೇಹವು ಒಳ್ಳೆಯದೇ, ಆದರೆ ನಿಮ್ಮ ಸ್ನೇಹಿತನ ದುಃಸ್ಥಿತಿಯು ನಿಮ್ಮ ಮನಶ್ಶಾಂತಿಯನ್ನು ಹಾಳುಗೆಡವಬಹುದು ಎಂಬಷ್ಟು ದೂರ ಅದನ್ನು ಒಯ್ಯಬಾರದು. ಸಾರ್ವಜನಿಕ ಜೀವನದ ಬಗ್ಗೆ, ನ್ಯಾಯ, ಕ್ಷಮೆ ಮುಂತಾದುವನ್ನು ಒದಗಿಸಲು ಅವಕಾಶಗಳನ್ನುಂಟುಮಾಡುವುದರಿಂದ ಅದರಲ್ಲಿ ತೊಡಗಿಕೊಳ್ಳುವುದು ನಿಮ್ಮ ಕರ್ತವ್ಯವಾಗಿರಬಹುದು, ಆದರೆ ಮನುಸಂಕುಲಕ್ಕೆ ಒಳಿತನ್ನು ಮಾಡುವ ಬಯಕೆ ನಿಮ್ಮಲ್ಲಿರಬಾರದು, ಯಾಕೆಂದರೆ ನೀವು ಉಂಟುಮಾಡುವ ಅನುಕೂಲತೆಗಳು – ಶಾಂತಿ, ಉತ್ತಮ ಆಹಾರಪೂರೈಕೆಯಂಥ – ನಿಜವಾದ ಅನುಕೂಲಗಳಲ್ಲ, ಏನಾದರಾಗಲಿ, ನಿಮ್ಮ ಸದ್ಗುಣದ ಹೊರತು ಬೇರೆ ಯೋಚನೆಯೇ ನಿಮಗೆ ಬರಬಾರದು. ಸಂಯಮವಾದಿಯು ಸದ್ಗುಣಿಯಾಗಬೇಕಾದುದು ಒಳ್ಳೆಯದನ್ನು ಮಾಡುವುದಕ್ಕಲ್ಲ, ತನ್ನಷ್ಟೇ ತನ್ನ ನೆರೆಯವನನ್ನೂ ಪ್ರೀತಿಸಬೇಕೆಂದು ಅವನಿಗನ್ನಿಸುವುದಿಲ್ಲ; ಸದ್ಗುಣಿಯಾಗುವುದು ತನಗೇ ಒಳ್ಳೆಯದೆಂಬುದರಿಂದ. ಮೇಲುಮೇಲಿನ ಅರ್ಥದ ಹೊರತಾದ ಪ್ರೀತಿಯು ಅವನ ಸದ್ಗುಣದ ಪರಿಕಲ್ಪನೆಯ ಪರಿಧಿಯಿಂದ ಹೊರಗೇ ಉಳಿಯುತ್ತದೆ.

ಇದನ್ನು ಹೇಳುವಾಗ ನಾನು ಯೋಚಿಸುತ್ತಿರುವುದು ಪ್ರೀತಿಯನ್ನು ಒಂದು ಭಾವವಾಗಿ, ಒಂದು ತತ್ವವನ್ನಾಗಿಯಲ್ಲ. ಒಂದು ತತ್ವವಾಗಿ, ಸಂಯಮವಾದಿಗಳು ವೈಶ್ವಿಕ ಪ್ರೀತಿಯನ್ನು ಬೋಧಿಸಿದರು; ಈ ತತ್ವವು ಸೆನೆಕ ಮತ್ತವನ ಮುಂದಿನವರಲ್ಲಿ ಕಾಣಬಹುದು, ಪ್ರಾಯಶಃ ಅದನ್ನವರು ಸಂಯಮವಾದಿಗಳಿಂದಲೇ ಪಡೆದಿರಬಹುದು. ಈ ಪಂಥದ ತರ್ಕವು ಅದರ ಅನುಯಾಯಿಗಳ ಮಾನವೀಯತೆಯಿಂದಾಗಿ

ಮಿದುಗೊಳ್ಳುವಂತೆ ಆಯಿತು, ಅವರೂ ಹಿಂದಿನದಕ್ಕೇ ಜೋತುಬಿದ್ದಿದ್ದರೆ ಹೇಗಿರುತ್ತಿದ್ದರೋ ಅದಕ್ಕಿಂತ ಉತ್ತಮ ವ್ಯಕ್ತಿಗಳಾದರು. ನೀವು ನಿಮ್ಮ ಅಣ್ಣತಮ್ಮಂದಿರ ಬಗ್ಗೆ ವಿಶ್ವಾಸದಿಂದಿರಬೇಕು, ಅವರು ನಿಮಗೆ ಇಷ್ಟ ಎಂಬ ಕಾರಣದಿಂದಲ್ಲ, ನೈತಿಕ ನಿಯಮದಲ್ಲಿ ವಿಶ್ವಾಸವೂ ಸೇರಿದೆ ಎಂಬುದರಿಂದ ಎಂದು ಅವರನ್ನು ಹೋಲುವ ಕ್ಯಾಂಟ್ ನುಡಿಯುತ್ತಾನೆ. ಆದರೆ ಅವನು ತನ್ನ ವೈಯಕ್ತಿಕ ಜೀವನದಲ್ಲಿ ಇದಕ್ಕನುಗುಣವಾಗಿದ್ದನೇ ಎಂಬುದರ ಬಗ್ಗೆ ನನಗೆ ಅನುಮಾನ.

ಈ ಸಾಮಾನ್ಯಾಂಶಗಳನ್ನು ಬಿಟ್ಟು ಸಂಯಮವಾದದ ಇತಿಹಾಸದತ್ತ ನಾವು ಗಮನ ಹರಿಸೋಣ.

ಝೀನೋನ[೧೧೩] ಕೆಲವು ತುಣುಕುಗಳು ಮಾತ್ರ ದೊರೆಯುತ್ತವೆ. ಇದರಿಂದ ತಿಳಿಯುವುದೆಂದರೆ, ಅವನ ಪ್ರಕಾರ ದೇವರನ್ನು ಜಗತ್ತಿನ ಬೆಂಕಿಯಂತಹ ಮನಸ್ಸು ಎಂದು ಸೂತ್ರೀಕರಿಸಿದ್ದು, ದೇವರು ದೇಹಸಹಿತನಾದ ಭೌತದ್ರವ್ಯ, ಇಡೀ ವಿಶ್ವವೇ ದೇವರ ಸತ್ವವಾಗಿದೆ ಎಂಬುದು. ಝೀನೋನ ಪ್ರಕಾರ, ಜೇನುಗೂಡಿನಲ್ಲಿ ಜೇನು ಹರಿಯುವ ರೀತಿಯಲ್ಲಿ ದೇವರು ಭೌತದ್ರವ್ಯದಲ್ಲಿ ಹರಿದಾಡುತ್ತಾನೆ ಎಂದು ಟರ್ಟುಲಿಯನ್ ಹೇಳುತ್ತಾನೆ. ಡಯೋಜಿನೀಸ್ ಲಯೆರ್ಟಸ್‌ನ ಪ್ರಕಾರ, ಸಮರ್ಪಕ ಕಾರಣವಾದ ಎಲ್ಲೆಡೆ ಪಸರಿಸಿರುವ ಸಾಮಾನ್ಯ ನಿಯಮವು ವಿಶ್ವ ಆಡಳಿತದ ಪರಮಾಧಿಕಾರಿಯಾದ ಸ್ಯೂಸ್‌ನಂತೆಯೇ; ದೇವರು, ವಿಧಿ, ಮನಸ್ಸು, ಸ್ಯೂಸ್ ಎಲ್ಲವೂ ಒಂದೇ. ವಿಧಿಯು ಭೌತದ್ರವ್ಯವನ್ನು ಚಲಿಸುವಂತೆ ಮಾಡುವ ಸಾಮರ್ಥ್ಯ; 'ದೈವಾನುಗ್ರಹ' ಮತ್ತು 'ನಿಸರ್ಗ' ಎಂಬಿವು ಅದಕ್ಕಿರುವ ಇತರ ಹೆಸರುಗಳು. ದೇವರುಗಳಿಗೆ ದೇವಸ್ಥಾನಗಳಿರಬೇಕೆಂದು ಝೀನೋ ನಂಬುವುದಿಲ್ಲ; 'ದೇವಸ್ಥಾನಗಳನ್ನು ಕಟ್ಟುವ ಅಗತ್ಯವಿಲ್ಲ; ದೇವಸ್ಥಾನವನ್ನು ಬಹು ಮೌಲ್ಯಯುತವಾದದ್ದೆಂದಾಗಲೀ ಪರಿಶುದ್ಧವೆಂದಾಗಲೀ ಭಾವಿಸಬೇಕಾದ್ದಿಲ್ಲ. ಕಟ್ಟಡ ಕಟ್ಟುವವರು ಮತ್ತು ಯಂತ್ರಶಿಲ್ಪಿಗಳಿಂದಾದುದು ಹೆಚ್ಚೇನೂ ಬೆಲೆ ಬಾಳುವಂತಹುದಲ್ಲ.' ಆನಂತರದ ಸಂಯಮವಾದಿಗಳಂತೆಯೇ ಅವನೂ ಜ್ಯೋತಿಷ್ಯ ಮತ್ತು ಭವಿಷ್ಯಜ್ಞಾನಗಳಲ್ಲಿ ಶ್ರದ್ಧೆಯಿರಿಸಿಕೊಂಡಿದ್ದಂತೆ ಕಾಣುತ್ತದೆ. ನಕ್ಷತ್ರಗಳಲ್ಲಿ ದೈವಿಕ ಸಾಮರ್ಥ್ಯವಿದೆಯೆಂದು ಅವನು ಹೇಳುವುದನ್ನು ಸೆಸೆರೋ ನೆನಪಿಸಿಕೊಳ್ಳುತ್ತಾನೆ. 'ಎಲ್ಲ ಬಗೆಯ ಭವಿಷ್ಯಜ್ಞಾನವನ್ನೂ ಸಂಯಮವಾದಿಗಳು ಸಮಂಜಸವೆನ್ನುತ್ತಾರೆ. ದೈವಾನುಗ್ರಹ ಎಂಬುದೊಂದು ಇರುವುದಾದರೆ ಭವಿಷ್ಯಜ್ಞಾನವೂ ಇರಬೇಕು. ಝೀನೋ ಸಮರ್ಥಿಸುವಂತೆ ಅನೇಕ ಸಂದರ್ಭಗಳ ಭವಿಷ್ಯಜ್ಞಾನವು ಸತ್ಯವಾದುದರ

---

೧೧೩. ಮುಂದೆ ಹೇಳಿರುವ ಸಂಗತಿಗಳಿಗೆ ನೋಡಿ, ಬೇವನ್, 'ಲೇಟರ್ ಗ್ರೀಕ್ ರಿಲಿಜನ್', ಪು. ೧ ಅಡಿಟಿಪ್ಪಣಿ.

ಮೂಲಕ ಅವರು ಭವಿಷ್ಯಜ್ಞಾನದ ಕಲೆಯ ಸತ್ಯತೆಯನ್ನು ಸಾಧಿಸಿ ತೋರಿಸಿದ್ದಾರೆ' ಎಂದು ಡಯೋಜಿನೀಸ್ ಲಯೆರ್ಟಸ್ ಹೇಳುತ್ತಾನೆ. ಈ ಕುರಿತು ಕ್ರೈಸಿಪ್ಪಸ್ ನೇರವಾಗಿ ಸ್ಪಷ್ಟವಾಗಿದ್ದಾನೆ.

ಉಳಿದು ಬಂದ ಝೇನೋನ ತುಣುಕುಗಳಲ್ಲಿ ಸದ್ಗುಣದ ಬಗೆಗಿನ ಸಂಯಮವಾದಿಗಳ ಸಿದ್ಧಾಂತವು ಕಂಡುಬರುವುದಿಲ್ಲ, ಆದರೆ ಅದನ್ನು ಅವನು ನಂಬಿದ್ದಂತೆ ಕಾಣುತ್ತದೆ.

ಝೇನೋನ ನೇರ ವಾರಸುದಾರನಾದ ಅಸಾಸ್‌ನ ಕ್ಲಿಯಾಂಥೀಸ್ ಎರಡು ಕಾರಣಗಳಿಂದ ಗಮನಾರ್ಹನಾಗಿದ್ದಾನೆ: ಮೊದಲನೆಯದು, ಈಗಾಗಲೇ ಗಮನಿಸಿರುವಂತೆ, ವಿಶ್ವದ ಕೇಂದ್ರವನ್ನು ಭೂಮಿಯ ಬದಲು ಸೂರ್ಯ ಎಂದು ಹೇಳಿದ ಅಪರಿಶುದ್ಧ ಕಾರ್ಯಕ್ಕಾಗಿ ಅಸಾಸ್‌ನ ಅರಿಸ್ಟಾರ್ಕಸ್‌ನ ಮೇಲೆ ಕ್ರಮಕೈಗೊಳ್ಳಬೇಕು ಎಂದವನು ಒತ್ತಾಯಿಸಿದ. ಎರಡನೆಯದು, ಅವನ 'ಹಿಮ್‌ಸ್ ಟು ಸ್ಯೂಸ್'; ಅದರ ಬಹುಪಾಲನ್ನು ಪೋಪ್‌ನೋ ನ್ಯೂಟನ್‌ನಂತರದ ಯಾರೋ ಸುಶಿಕ್ಷಿತ ಕ್ರಿಶ್ಚಿಯನ್‌ನೋ ರಚಿಸಿರಬೇಕು. ಕ್ಲಿಯಾಂಥೀಸ್‌ನ ಒಂದು ಸಣ್ಣ ಪ್ರಾರ್ಥನೆಯು ಮತ್ತಷ್ಟು ಕ್ರಿಶ್ಚಿಯನ್ ಆಗಿದೆ:

ಓ ಸ್ಯೂಸ್‌ನೇ, ಓ ವಿಧಿಯೇ, ನಡೆಸು ನನ್ನ,
ನನ್ನ ಮುನ್ನಡೆಸು.
ನೀನು ನನ್ನನ್ನ ಯಾವುದೇ ಕೆಲಸಕ್ಕೆ ಕಳುಹಿದರೂ,
ನನ್ನ ಮುನ್ನಡೆಸು.
ಭಯವಿಲ್ಲದೆ ಮುನ್ನಡೆವೆ, ಆಥವಾ ಅಪಶ್ರದ್ಧೆಯಿದ್ದರೆ,
ಹಿಂದೆ ಬೀಳುವೆ, ಆದರೂ ಮುನ್ನಡೆಯಬೇಕು.

ಕ್ಲಿಯಾಂಥೀಸ್‌ನ ನಂತರ ಬಂದ ಕ್ರೈಸಿಪ್ಪಸ್ (ಕ್ರಿಪೂ ೨೮೦-೨೦೭) ಅನೇಕ ಪುಸ್ತಕಗಳ ಲೇಖಕ, ಏಳುನೂರ ಐದು ಪುಸ್ತಕಗಳನ್ನವನು ಬರೆದಂತೆ ಹೇಳುತ್ತಾರೆ. ಅವನು ಸಂಯಮವಾದವನ್ನು ಸುವ್ಯವಸ್ಥಿತವಾಗಿಯೂ ಪ್ರೌಢವಾಗಿಯೂ ಮಾಡಿದ್ದಾನೆ. ಪರಮಾಗ್ನಿಯಾದ ಝೇನೋ ಮಾತ್ರವೇ ಅಮರನೆಂದು ಅವನು ಹೇಳುತ್ತಾನೆ; ಸೂರ್ಯ ಚಂದ್ರರನ್ನೊಳಗೊಂಡಂತೆ ಇತರ ದೇವತೆಗಳು ಹುಟ್ಟಿ ಸತ್ತವರು. ಕೆಡುಕಿನ ಕಾರಣಭೂತವಾದುದರಲ್ಲಿ ದೇವರ ಪಾತ್ರವೇನೂ ಇಲ್ಲವೆಂಬುದು ಅವನ ಅಭಿಪ್ರಾಯ, ಆದರೆ ಇದನ್ನವನು ನಿಯತಿವಾದದೊಂದಿಗೆ ಹೇಗೆ ಸರಿಹೊಂದಿಸುತ್ತಾನೋ ತಿಳಿಯದು. ಬೇರೆಡೆಯಲ್ಲಿ, ಕೆಡುಕಿನ ಬಗ್ಗೆ ಹೇಳುವಾಗ ಅವನು ಹೆರಾಕ್ಲಿಟಸ್ ಮಾದರಿಯನ್ನು ಅನುಸರಿಸುತ್ತಾನೆ; ಅದೆಂದರೆ, ವಿರೋಧಗಳು ಪರಸ್ಪರವನ್ನು ಸೂಚಿಸುತ್ತವೆ, ಕೆಡುಕಿಲ್ಲದೆ ಒಳಿತು ಇರಲಾರದು: 'ಕೆಡುಕಿಲ್ಲದೆ ಒಳಿತು ಮಾತ್ರವೇ ಇತ್ತೆಂದು ಭಾವಿಸುವವರದು ಅಸಂಗತ ಕಲ್ಪನೆ. ಒಳಿತು ಮತ್ತು

ಕೆಡುಕುಗಳು ವಿರೋಧಾತ್ಮಕವಾದುದರಿಂದ, ಎರಡೂ ವಿರೋಧದಲ್ಲಿಯೇ ಉಳಿದಿರಬೇಕು.' ಈ ಸಿದ್ಧಾಂತದ ಸಮರ್ಥನೆಗೆ ಅವನು ನೋಡುವುದು ಪ್ಲೇಟೋನನ್ನು, ಹೆರಾಕ್ಲಿಟಸ್‌ನನ್ನಲ್ಲ.

ಒಳ್ಳೆಯವನು ಸದಾ ಸುಖವಾಗಿಯೂ ಕೆಟ್ಟವನು ಸದಾ ಅಸುಖಿಯಾಗಿಯೂ ಇರುತ್ತಾನೆಂದೂ, ಒಳ್ಳೆಯವನ ಸುಖವು ದೇವರ ಸುಖಕ್ಕಿಂತ ಭಿನ್ನವಾದುದಲ್ಲ ಎಂಬಂತೆ ಇರುತ್ತದೆಂದೂ ಕ್ರೈಸಿಪ್ಪಸ್ ಹೇಳುತ್ತಾನೆ. ಸಾವಿನ ನಂತರವೂ ಆತ್ಮವು ಇರುತ್ತದೆಯೇ ಎಂಬ ಪ್ರಶ್ನೆಯ ಬಗ್ಗೆ ಪರಸ್ಪರ ವಿರೋಧವಾದ ಅಭಿಪ್ರಾಯಗಳಿದ್ದವು. ಎಲ್ಲ ಆತ್ಮಗಳು ಮುಂದಿನ ವೈಶ್ವಿಕ ದಳ್ಳುರಿಯವರೆಗೂ (ಆಗ ಸಕಲವನ್ನೂ ದೇವರು ತನ್ನಲ್ಲಿ ಅಡಗಿಸಿಕೊಳ್ಳುತ್ತಾನೆ) ಉಳಿದಿರುತ್ತವೆ ಎಂದು ಕ್ಲಿಯಾಂಥೀಸ್ ಹೇಳಿದರೆ, ಇದು ಬುದ್ಧಿವಂತರ ಆತ್ಮಗಳಿಗೆ ಮಾತ್ರ ಅನ್ವಯುಸುತ್ತದೆಂದು ಕ್ರೈಸಿಪ್ಪಸ್ ಅಭಿಪ್ರಾಯಪಟ್ಟ. ಆನಂತರದ ಸಂಯಮವಾದಿಗಳಿಗಿಂತ ಅವನು ಹೆಚ್ಚಾಗಿ ನೈತಿಕತೆಯ ಬಗೆಗೆ ಆಸಕ್ತಿಯನ್ನು ತೋರಿಸಿದ; ವಾಸ್ತವದಲ್ಲಿ ಅವನು ತರ್ಕವನ್ನು ಮೂಲಭೂತವನ್ನಾಗಿಸಿದ. ಆಧಾರಕಲ್ಪನಾತ್ಮಕ (ಹೈಪಾಥೆಟಿಕಲ್) ಮತ್ತು ವಿಕಲ್ಪಾತ್ಮಕ (ಡಿಸ್‌ಜಂಕ್ಟಿವ್) ತರ್ಕವಿಧಾನಗಳು ಮತ್ತು 'ವಿಕಲ್ಪಾತ್ಮಕ' ಎಂಬ ಪದವೂ ಸಂಯಮವಾದಿಗಳ ಕೊಡುಗೆ; ಅಂತೆಯೇ ವ್ಯಾಕರಣದ ಅಧ್ಯಯನ ಮತ್ತು ವಿಭಕ್ತಿರೂಪದ ನಡೆಯಲ್ಲಿ ವಿಭಕ್ತಿಗಳ ಸೃಷ್ಟಿಯ ಬಗ್ಗೆಯೂ.[೧೧೪] ಅವನ ಕೃತಿಗಳಿಂದ ಪ್ರೇರಿತರಾದ ಕ್ರೈಸಿಪ್ಪಸ್ ಮತ್ತು ಇತರ ಸಂಯಮವಾದಿಗಳು ಜ್ಞಾನಮೀಮಾಂಸೆಯ ಬಗೆಗಿನ ಗಾಢ ಸಿದ್ಧಾಂತವನ್ನು ಹೊಂದಿದ್ದರು; ಅದು ಮುಖ್ಯವಾಗಿ ಅನುಭವೈಕವಾಗಿದ್ದು ಗ್ರಹಿಕೆಯನ್ನಾಧರಿಸಿತ್ತು; ಆದರೆ ಜನರ ಒಮ್ಮತಾಭಿಪ್ರಾಯ (ಕಾನ್‌ಸೆನ್ಸ್ ಜೆಂಟಿಯಮ್)ಗಳಿಂದ ಸಾಬೀತಾದ ಕೆಲವು ಆಲೋಚನೆಗಳು ಮತ್ತು ತತ್ವಗಳಿಗೂ ಅವಕಾಶವಿತ್ತರು. ಎಲ್ಲ ಸೈದ್ಧಾಂತಿಕ ಅಧ್ಯಯನಗಳೂ ನೈತಿಕತೆಗೊಳಪಟ್ಟಿರುತ್ತವೆಂದು ಜ಼ೀನೋ ಮತ್ತು ರೋಮನ್ ಸಂಯಮವಾದಿಗಳು ವಾದಿಸಿದರು; ತತ್ವಜ್ಞಾನವೆಂಬುದು ಒಂದು ಹಣ್ಣಿನ ತೋಟದಂತೆ, ಅದರ ಗೋಡೆಗಳೆಂದರೆ ತರ್ಕ, ಭೌತವಿಜ್ಞಾನ ಮರಗಳು, ಮತ್ತು ನೈತಿಕತೆ ಹಣ್ಣು; ಅಥವಾ ಒಂದು ಮೊಟ್ಟೆಯಂತೆ, ಅದರ ಚಿಪ್ಪು ಗೋಡೆ, ಭೌತವಿಜ್ಞಾನ ಬಿಳಿಯ ಭಾಗ, ಮತ್ತು ನೈತಿಕತೆ ಹಳದಿ ಲೋಳೆ.[೧೧೫] ಕ್ರೈಸಿಪ್ಪಸ್ ಸೈದ್ಧಾಂತಿಕ ಅಧ್ಯಯನಗಳಿಗೆ ಹೆಚ್ಚು ಬೆಲೆ ಕೊಟ್ಟಂತೆ ಕಾಣುತ್ತದೆ. ಪ್ರಾಯಶಃ ಅವನ ಪ್ರಭಾವದಿಂದಾಗಿಯೇ ಸಂಯುಮವಾದಿಗಳಲ್ಲಿ ಅನೇಕರು ಗಣಿತ ಮತ್ತಿತರ ವಿಜ್ಞಾನಗಳಲ್ಲಿ ಸಾಧನೆಯನ್ನು ಮಾಡಿದರು.

---

೧೧೪. ನೋಡಿ, ಬಾರ್ತ್, 'ಡೈ ಸ್ಟೋಅ', ನಾಲ್ಕನೆಯ ಆವೃತ್ತಿ, ೧೯೨೨.
೧೧೫. ಅದೇ.

ಕ್ರೈಸಿಪ್ಪಸ್‌ನ ನಂತರ ಸಂಯಮವಾದವು ಇಬ್ಬರಿಂದ ಗಣನೀಯವಾಗಿ ಪರಿಷ್ಕೃತಗೊಂಡಿತು: ಪೆನೇಷಿಯಸ್ ಮತ್ತು ಪಾಸಿಡೋನಿಯಸ್. ಪೆನೇಷಿಯಸ್ ಭೌತವಾದವನ್ನು ತಿರಸ್ಕರಿಸಿ ಸ್ವಲ್ಪಮಟ್ಟಿಗಿನ ಪ್ಲೇಟೋವಾದವನ್ನು ಸೇರಿಸಿದ. ಅವನು ಕಿರಿ ಸಿಪಿಯೋನ ಸ್ನೇಹಿತನಾಗಿದ್ದು ಸಿಸೆರೋನ ಮೇಲೆ ಪ್ರಭಾವ ಬೀರಿದ; ಸಿಸೆರೋನ ಮೂಲಕವೇ ಸಂಯಮವಾದವು ಮುಖ್ಯವಾಗಿ ರೋಮನ್‌ರಲ್ಲಿ ಪರಿಚಯಗೊಂಡಿತು. ರೋಡ್ಸ್‌ನಲ್ಲಿ ಪಾಸಿಡೋನಿಯಸ್‌ಗೆ ಪಾಠ ಹೇಳಿದ್ದ ಸಿಸೆರೋ, ಅವನ ಮೇಲೆ ಮತ್ತಷ್ಟು ಪ್ರಭಾವ ಬೀರಿದ. ಪಾಸಿಡೋನಿಯಸ್‌ನ ಗುರು ಪೆನೇಷಿಯಸ್, ಅವನು ಸತ್ತದ್ದು ಕ್ರಿಪೂ ಸು. ೧೧೦ ರಲ್ಲಿ.

ಪಾಸಿಡೋನಿಯಸ್ (ಕ್ರಿಪೂ ಸು. ೧೩೫–೫೧) ಒಬ್ಬ ಸಿರಿಯನ್ ಗ್ರೀಕ್, ಸೆಲ್ಯೂಸಿಡ್ ಚಕ್ರಾಧಿಪತ್ಯವು ಕೊನೆಗೊಂಡಾಗ ಅವನಿನ್ನೂ ಮಗು. ಪ್ರಾಯಶಃ ಸಿರಿಯದ ಅನಾಯಕತ್ವವೇ ಪಶ್ಚಿಮದತ್ತ ತೆರಳಲು ಅವನನ್ನು ಪ್ರೇರಿಸಿರಬೇಕು, ಅವನು ಮೊದಲು ಬಂದದ್ದು ಅಥೆನ್ಸ್‌ಗೆ, ಅಲ್ಲಿಯೇ ಅವನು ಸಂಯಮವಾದವನ್ನು ಅಳವಡಿಸಿಕೊಂಡದ್ದು. ಆನಂತರ ಅವನು ಹೋದದ್ದು ರೋಮನ್ ಚಕ್ರಾಧಿಪತ್ಯದ ಪಶ್ಚಿಮ ಭಾಗಗಳಿಗೆ. 'ಕಾಣುವ ಜಗತ್ತಿನ ಅಂಚಿನ ಆಚೆ ಅಟ್ಲಾಂಟಿಕ್‌ನಲ್ಲಿ ಸೂರ್ಯಾಸ್ತವನ್ನವನು ಕಣ್ಣಾರೆ ಕಂಡ, ಸ್ಪೆಯಿನ್‌ನ ಎದುರಿನ ಆಫ್ರಿಕದ ಕರಾವಳಿಯನ್ನು ಕಂಡ. ಅಲ್ಲಿ ಮರಗಳಲ್ಲಿ ಮಾನವಮಂಗಗಳು ತುಂಬಿದ್ದವು, ಮಾರ್ಸೆಲ್ಲಸ್‌ನಿಂದ ಇನ್ನೂ ಒಳಗೆ ಬರ್ಬರ ಜನರಿದ್ದ ಹಳ್ಳಿಗಳನ್ನೂ ಕಂಡ. ಅಲ್ಲಿನ ಮನೆಗಳ ಬಾಗಿಲುಗಳ ಮುಂದೆ ಬಹುಮಾನಕ್ಕಾಗಿ ಮನುಷ್ಯರ ತಲೆಗಳು ಜೋತಾಡುತ್ತಿದ್ದುದು ದಿನನಿತ್ಯದ ದೃಶ್ಯವಾಗಿತ್ತು.'[೧೧೬] ಅವನು ವಿಪುಲವಾಗಿ ಬರೆದದ್ದು ವೈಜ್ಞಾನಿಕ ವಿಷಯಗಳ ಬಗ್ಗೆ, ಅವನ ಪ್ರವಾಸದ ಒಂದು ಉದ್ದೇಶವೆಂದರೆ ಅಲೆಗಳ ಕುರಿತು ಅಧ್ಯಯನ ಮಾಡುವ ಬಯಕೆ, ಆ ಕೆಲಸವನ್ನವನು ಮೆಡಿಟರೇನಿಯನ್‌ನಲ್ಲಿ ಕೈಗೊಳ್ಳಲು ಸಾಧ್ಯವಿರಲಿಲ್ಲ. ಅವನು ಖಗೋಳವಿಜ್ಞಾನ ಕ್ಷೇತ್ರದಲ್ಲಿ ಉತ್ಕೃಷ್ಟ ಸಾಧನೆ ಮಾಡಿದ; ೨೪ ನೇ ಅಧ್ಯಾಯದಲ್ಲಿ ನೋಡಿದಂತೆ, ಸೂರ್ಯನ ದೂರದ ಬಗೆಗಿನ ಅವನ ಅಂದಾಜು ಹಿಂದಿನವರೆಲ್ಲರದಕ್ಕಿಂತ ನಿಖರತೆಗೆ ಅತ್ಯಂತ ಹತ್ತಿರವಾದುದಾಗಿತ್ತು.[೧೧೭] ಅವನು ಹೆಸರಾಂತ ಇತಿಹಾಸಕಾರನೂ ಆಗಿದ್ದು ಪಾಲಿಬಿಯಸ್‌ನ ಕೆಲಸವನ್ನು ಮುಂದುವರಿಸಿದ. ಆದರೆ ಬಹು ಮುಖ್ಯವಾಗಿ ವಿಶಾಲ ಮನೋಭಾವದ

---

೧೧೬. ಬೇವನ್, 'ಸ್ಟಾಯಿಕ್ಸ್ ಅಂಡ್ ಸ್ಕೆಪ್ಟಿಕ್ಸ್', ಪು. ೮೮.

೧೧೭. ಕಾಡಿಜ್‌ನಿಂದ ಪಶ್ಚಿಮಾಭಿಮುಖವಾಗಿ ಹಡಗಿನಲ್ಲಿ ಪ್ರಯಾಣ ಬೆಳೆಸಿದರೆ ೭೦೦೦೦ ಸ್ಟೇಡ್ಸ್‌ಗಳ ನಂತರ ಇಂಡಿಯವನ್ನು ತಲುಪಬಹುದು ಎಂದವನು ಅಂದಾಜು ಮಾಡಿದ. 'ಈ ಅಭಿಪ್ರಾಯವು ಕೊಲಂಬಸ್‌ನ ಆತ್ಮವಿಶ್ವಾಸಕ್ಕೆ ಆತ್ಯಂತಿಕವಾದ ಬುನಾದಿಯನ್ನು ಹಾಕಿತು.' ಟಾರ್ನ್, 'ಹೆಲೆನಿಸ್ಟಿಕ್ ಸಿವಿಲೈಜೇಷನ್', ಪು. ೨೪೯.

ತತ್ವಜ್ಞಾನಿಯಾಗಿ ಅವನು ಹೆಸರುಗೊಂಡಿದ್ದಾನೆ. ಸಂಯಮವಾದದೊಡನೆ ಅವನು, ಅಕೆಡೆಮಿ ತನ್ನ ಸಂಶಯ ಹಂತದಲ್ಲಿ ಮರೆತಿದ್ದ, ಪ್ಲೇಟೋನ ಹೆಚ್ಚಿನ ಬೋಧನೆಗಳನ್ನೂ ಸಂಯೋಜಿಸಿದ.

ಆತ್ಮ ಮತ್ತು ಸಾವಿನ ನಂತರದ ಬದುಕಿನ ಬಗ್ಗೆ ಬೋಧಿಸುವಾಗ ಅವನು ಪ್ಲೇಟೋ ಬಗ್ಗೆ ಈ ಒಲವನ್ನು ತೋರಿಸಿದ. ಬಹುತೇಕ ಸಂಯಮವಾದಿಗಳು ಮಾಡಿದಂತೆ ಪೆನೇಷಿಯಾ ಕೂಡ ದೇಹದೊಡನೆ ಆತ್ಮವೂ ನಾಶಗೊಳ್ಳುತ್ತದೆಂದು ಹೇಳಿದ. ಪಾಸಿಡೋನಿಯಸ್ ಅದಕ್ಕೆ ವ್ಯತಿರಿಕ್ತವಾಗಿ ಆತ್ಮವು ಗಾಳಿಯೊಡನೆ ತನ್ನ ಇರವನ್ನು ಮುಂದುವರಿಸುತ್ತದೆಂದೂ, ಬಹುತೇಕ ಸಂದರ್ಭಗಳಲ್ಲಿ ಅದು ಮುಂದಿನ ದಳ್ಳುರಿಯವರೆಗೂ ಬದಲಾಗದೆ ಇರುತ್ತದೆಂದೂ ಹೇಳಿದ. ನರಕವೆಂಬುದಿಲ್ಲ, ಆದರೆ ಕೆಡುಕರು ಸಾವಿನ ಬಳಿಕ ಒಳ್ಳೆಯವರಂತೆ ಅದೃಷ್ಟವಂತರಾಗದೆ ಅವರ ಆತ್ಮಗಳು ಆವಿಯಾಗದೆ ಕೆಸರಿನಂತಾಗಿ ಒಳ್ಳೆಯವರ ಆತ್ಮಗಳು ಏರುವಷ್ಟು ಮೇಲಕ್ಕೇರದಂತಾಗುತ್ತವೆಂದು ನುಡಿದ. ಬಹು ಕೆಡುಕರು ಭೂಮಿಯ ಬಳಿಯೇ ಉಳಿದು ಪುನರ್ಜನ್ಮ ತಾಳುವರೆಂದ; ನಿಜವಾಗಿ ಸದ್ಗುಣಿಗಳಾದವರು ನಕ್ಷತ್ರಗೋಲಕ್ಕೇರಿ ನಕ್ಷತ್ರಗಳ ಸುತ್ತುವಿಕೆಯನ್ನು ತಮ್ಮ ಇರವಿನಾದ್ಯಂತ ನೋಡುತ್ತಿರುತ್ತಾರೆಂದು ನುಡಿದ. ಅವು ಇತರ ಆತ್ಮಗಳಿಗೆ ಸಹಾಯ ಮಾಡಬಲ್ಲವು; ಇದು ಜ್ಯೋತಿಷ್ಯದ ಸತ್ಯ ಎಂದವನು ನಂಬಿದ್ದ. ಈ ಆರ್ಫಿಕ್ ಕಲ್ಪನೆಗಳು ಮತ್ತು ನವಪೈಥಾಗೊರಿಯನ್ ಶ್ರದ್ಧೆಗಳ ಪುನರುಜ್ಜೀವನದಿಂದ ಪಾಸಿಡೋನಿಯಸ್ ಅಧ್ಯಾತ್ಮ ರಹಸ್ಯವಾದಕ್ಕೆ (ನಾಸ್ಟಿಸಿಸಂ) ದಾರಿ ಮಾಡಿಕೊಟ್ಟಿರಬಹುದೆಂದು ಬೇವನ್ ಹೇಳುತ್ತಾರೆ. ಅಂತಹ ತತ್ವಜ್ಞಾನಗಳಿಗೆ ಮಾರಕವಾಗಿದ್ದುದು ಕ್ರೈಸ್ತಮತಧರ್ಮವಲ್ಲ, ಅದು ಕೊಪರ್ನಿಕನ್ ಸಿದ್ಧಾಂತ ಎಂದು ಸರಿಯಾಗಿಯೇ ಅಭಿಪ್ರಾಯಪಡುತ್ತಾರೆ.[೧೧೮] ಸಾಮೋಸ್‌ನ ಅರಿಸ್ಟಾರ್ಕಸ್‌ನನ್ನು ಅಪಾಯಕಾರಿ ಶತ್ರುವೆಂದು ಕ್ಲಿಯಾಂಥೀಸ್ ಭಾವಿಸಿದುದು ಸರಿಯಾಗಿಯೇ ಇದೆ.

ಇದಕ್ಕಿಂತ ಐತಿಹಾಸಿಕವಾಗಿ ಇನ್ನೂ ಹೆಚ್ಚು ಮುಖ್ಯವಾದುದೆಂದರೆ (ತತ್ವಜ್ಞಾನದ ದೃಷ್ಟಿಯಿಂದಲ್ಲದಿದ್ದರೂ), ಈ ಹಿಂದಿನ ಸಂಯಮವಾದಿಗಳಲ್ಲಿನ ಮೂವರು – ಸೆನೆಕ, ಎಪಿಕ್ಟೆಟಸ್ ಮತ್ತು ಮಾರ್ಕಸ್ ಔರೀಲಿಯಸ್ – ಕ್ರಮವಾಗಿ ಅವರಲ್ಲೊಬ್ಬ ಮಂತ್ರಿ, ಒಬ್ಬ ಗುಲಾಮ ಮತ್ತೊಬ್ಬ ಚಕ್ರವರ್ತಿ – ರೋಮ್‌ಗೆ ಸಂಬಂಧಪಟ್ಟವರು ಎಂಬುದು.

---

೧೧೮. ಪಾಸಿಡೋನಿಯಸ್ ಕುರಿತ ಮೇಲಿನ ವಿವರಣೆಯೆಲ್ಲವೂ ಎಡ್ವಿನ್ ಬೇವನ್ ಅವರ 'ಸ್ಟಾಯಿಕ್ಸ್ ಅಂಡ್ ಸ್ಕೆಪ್ಟಿಕ್ಸ್'ನ ಮೂರನೆಯ ಅಧ್ಯಾಯವನ್ನು ಪ್ರಮುಖವಾಗಿ ಆಧರಿಸಿದೆ.

ಸೆನೆಕ (ಕ್ರಿಪೂ ಸು. ೩ – ಕ್ರಿಶ ೬೫) ಸ್ಪೈಯಿನ್‌ನವನು, ಅವನ ತಂದೆ ರೋಮ್‌ನಲ್ಲಿ ವಾಸಿಸುತ್ತಿದ್ದ ಒಬ್ಬ ನಾಗರಿಕ ವ್ಯಕ್ತಿ. ಸೆನೆಕ ರಾಜಕೀಯ ಮಾರ್ಗವನ್ನಾರಿಸಿಕೊಂಡು ತಕ್ಕಮಟ್ಟಿಗಿನ ಯಶಸ್ಸನ್ನೂ ಕಂಡ; ಕೊನೆಗೆ ಸಮ್ರಾಜ್ಞಿ ಮೆಸ್ಸಲೀನಳ ಮಾತ್ಸರ್ಯದಿಂದಾಗಿ ಅವನನ್ನು ಚಕ್ರವರ್ತಿ ಕ್ಲಾಡಿಯಸ್ ಕೋರ್ಸಿಕಕ್ಕೆ (ಕ್ರಿಶ ೪೧) ಗಡೀಪಾರು ಮಾಡಿದ. ಕ್ಲಾಡಿಯಸ್‌ನ ಎರಡನೆಯ ಹೆಂಡತಿ ಅಗ್ರಿಪ್ಪಿನ ಕ್ರಿಶ ೪೮ ರಲ್ಲಿ ಸೆನೆಕನನ್ನು ಗಡೀಪಾರಿನಿಂದ ಅವನು ಹಿಂದಕ್ಕೆ ಬರುವಂತೆ ಮಾಡಿ, ಹನ್ನೊಂದು ವರ್ಷದ ತನ್ನ ಮಗನ ಶಿಕ್ಷಕನನ್ನಾಗಿಸಿಕೊಂಡಳು. ಚಕ್ರವರ್ತಿ ನೀರೋನನ್ನು ತನ್ನ ವಿದ್ಯಾರ್ಥಿಯನ್ನಾಗಿ ಪಡೆಯುವಲ್ಲಿ ಸೆನೆಕ ಅರಿಸ್ಟಾಟಲ್‌ಗಿಂತ ಕಡಿಮೆ ಅದೃಷ್ಟವಂತ. ಒಬ್ಬ ಸಂಯಮವಾದಿಯಾದ ಸೆನೆಕ ಐಶ್ವರ್ಯವನ್ನು ದ್ವೇಷಿಸುತ್ತಿದ್ದರೂ ಅವನು ಭಾರಿ ಶ್ರೀಮಂತನಾದ; ಅವನ ಆಸ್ತಿಯ ಮೌಲ್ಯ ಮುನ್ನೂರು ದಶಲಕ್ಷ ಸೆಸ್ಟೆರ್ಸೆಸ್ (ಸುಮಾರು ಮೂರು ದಶಲಕ್ಷ ಪೌಂಡ್‌ಗಳು). ಇದರ ಬಹುಪಾಲನ್ನವನು ಬ್ರಿಟನ್‌ಗೆ ಸಾಲ ಕೊಟ್ಟು ಸಂಪಾದಿಸಿದ; ಡಿಯೋನ ಪ್ರಕಾರ, ಅವನು ವಸೂಲಿಮಾಡುತ್ತಿದ್ದ ದುಬಾರಿ ಬಡ್ಡಿದರವು ಆ ದೇಶದ ದಂಗೆಗೆ ಕಾರಣವಾಯಿತು. ವೀರ ಮಹಾರಾಣಿ ಬೊಯಡೀಸಿಯ, ಇದು ನಿಜವಾದರೆ, ಮಿತವ್ಯಯದ ತಾತ್ವಿಕ ಪ್ರಚಾರಕನಾದ ಬಂಡವಾಳಶಾಹಿಯ ವಿರುದ್ಧ ಬಂಡಾಯದ ನಾಯಕಿಯಾಗಿದ್ದಳು.

ನೀರೋನ ಅತಿರೇಕಗಳು ಹತೋಟಿ ಮೀರಿ ಹೆಚ್ಚಾಗುತ್ತಿದ್ದಂತೆ, ಸೆನೆಕ ಅವನ ಉಪಕಾರವಲಯದಿಂದ ದೂರವಾದ. ಕೊನೆಯಲ್ಲಿ ಅವನ ಮೇಲೆ, ನ್ಯಾಯಯುತವಾಗಿಯೋ ಅನ್ಯಾಯವಾಗಿಯೋ, ನೀರೋನನ್ನು ಕೊಲೆ ಮಾಡಿ ಬೇರೊಬ್ಬ ಚಕ್ರವರ್ತಿಯನ್ನು – ತನ್ನನ್ನೇ ಎಂದು ಕೆಲವರ ಹೇಳಿಕೆ – ಸ್ಥಾಪಿಸಬೇಕೆಂಬ ವ್ಯಾಪಕ ಸಂಚಿನಲ್ಲಿ ಭಾಗಿಯಾದವನೆಂದು ಆರೋಪ ಮಾಡಲಾಯಿತು. ಅವನ ಹಿಂದಿನ ಸೇವೆಗಳ ಹಿನ್ನೆಲೆಯಲ್ಲಿ ಅವನು ಆತ್ಮಹತ್ಯೆ ಮಾಡಿಕೊಳ್ಳಲು ಉದಾರವಾಗಿ ಅನುಮತಿ ನೀಡಲಾಯಿತು (ಕ್ರಿಶ ೬೫).

ಅವನ ಅಂತ್ಯವು ಉದ್ಬೋಧಕವಾಗಿತ್ತು. ಮೊದಲಿಗೆ, ಚಕ್ರವರ್ತಿಯ ನಿರ್ಧಾರವನ್ನು ಕೇಳಿದ ಮೇಲೆ ಅವನು ಒಂದು ಉಯಿಲನ್ನು ಸಿದ್ಧಪಡಿಸಲು ತೊಡಗಿದ. ಅಂಥ ದೀರ್ಘ ಪ್ರಕ್ರಿಯೆಯಲ್ಲಿ ತೊಡಗುವಷ್ಟು ಕಾಲ ಅವನಿಗಿಲ್ಲವೆಂದು ಸೂಚಿಸಿದಾಗ, ತನ್ನ ದುಃಖತಪ್ತ ಕುಟುಂಬದ ಕಡೆ ನೋಡಿ ಹೀಗೆಂದ: 'ಯೋಚಿಸಬೇಡಿ, ಕ್ರೂರ ಐಶ್ವರ್ಯಕ್ಕಿಂತ ತುಂಬ ಬೆಲೆಬಾಳುವುದನ್ನೂ ನಿಮಗೆ ಬಿಟ್ಟುಹೋಗುತ್ತಿದ್ದೇನೆ, ಅದೆಂದರೆ ಸದ್ಗುಣಭರಿತ ಬದುಕಿನ ನಿದರ್ಶನ' – ಅಥವಾ ಅಂಥದೇ ಮಾತುಗಳು. ಆನಂತರ ತನ್ನ ರಕ್ತನಾಳಗಳನ್ನು ಸೀಳಿಕೊಂಡು, ಮರಣಶಯ್ಯೆಯ ಮಾತುಗಳನ್ನು ಬರೆದುಕೊಳ್ಳುವಂತೆ ತನ್ನ ಕಾರ್ಯದರ್ಶಿಗಳಿಗೆ

ಸೂಚಿಸಿದ. ಟ್ಯಾಸಿಟಸ್‌ನ ಪ್ರಕಾರ, ಕೊನೆಯವರೆಗೂ ಅವನ ಮಾತುಗಳು ಮುಂದುವರಿದುವಂತೆ. ಅವನ ಸೋದರಿಕೆಯ ಸಂಬಂಧಿಯಾದ ಕವಿ ಲ್ಯೂಕಾನ್ ಅದೇ ಹೊತ್ತಿನಲ್ಲಿ ಅವನಂಥದೇ ಸ್ಥಿತಿಗೊಳಗಾಗಿ ತನ್ನ ಪದ್ಯಗಳನ್ನೋದುತ್ತಲೇ ಕೊನೆಯುಸಿರೆಳೆದನಂತೆ. ಮುಂದಿನ ವರ್ಷಗಳಲ್ಲಿ ಸೆನೆಕನನ್ನು ನೆನಪಿಸಿಕೊಂಡದ್ದು ಅವನ ಉದಾತ್ತ ಬೋಧನೆಗಳಿಗಾಗಿಯೇ ಹೊರತು ಸಂಶಯಾಸ್ಪದ ನಡವಳಿಕೆಗಳಿಗಲ್ಲ. ಅನೇಕ ಮಂದಿ ಪಾದ್ರಿಗಳು ಅವನನ್ನು ಕ್ರಿಶ್ಚಿಯನ್ ಎಂದು ಪರಿಗಣಿಸಿದರು, ಅವನ ಮತ್ತು ಸಂತ ಪೌಲ್‌ನ ನಡುವಣ ಪತ್ರವ್ಯವಹಾರವನ್ನು ಅಸಲಿಯಾದುದೆಂದು ಸಂತ ಜಿರೋಮ್‌ನಂತಹವರೂ ಭಾವಿಸಿದರು.

ಎಪಿಕ್ಟೆಟಸ್ (ಹುಟ್ಟು: ಕ್ರಿಶ ಸು. ೬೦, ಮರಣ: ಕ್ರಿಶ ಸು. ೧೦೦) ತೀರ ವಿಭಿನ್ನ ವ್ಯಕ್ತಿಯಾದರೂ ಹತ್ತಿರ ಹತ್ತಿರ ಒಬ್ಬ ತತ್ವಜ್ಞಾನಿಯಾಗಿದ್ದ. ಅವನೊಬ್ಬ ಗ್ರೀಕ್, ಮೂಲತಃ ನೀರೋನ ಆನಂತರ ಅವನ ಮಂತ್ರಿಯ ಬಿಡುಗಡೆಗೊಂಡ ಗುಲಾಮನಾದ ಎಪಾಫ್ರೋಡೈಟಸ್‌ನ ಗುಲಾಮ. ಅವನೊಬ್ಬ ಕುಂಟ, ಇದಕ್ಕೆ ಕಾರಣ ಅವನ ಗುಲಾಮ ದಿನಗಳಲ್ಲಿ ಅನುಭವಿಸಿದ ಕ್ರೂರ ಶಿಕ್ಷೆ. ಅವನು ಕ್ರಿಶ. ೯೦ ರವರೆಗೂ ರೋಮ್‌ನಲ್ಲಿ ಬದುಕಿ ಬೋಧೆಯಲ್ಲಿ ತೊಡಗಿದ್ದವನು, ಆನಂತರ ಬುದ್ಧಿಜೀವಿಗಳಿಂದ ಯಾವುದೇ ಉಪಯೋಗವಿಲ್ಲವೆಂದು ಚಕ್ರವರ್ತಿ ಡಾಮಿನಿಷಿಯನ್ ಎಲ್ಲ ತತ್ವಜ್ಞಾನಿಗಳನ್ನೂ ದೇಶದಿಂದ ಹೊರಗಟ್ಟಿದ್ದನಂತೆ. ಆನಂತರ ಎಪಿಕ್ಟೆಟಸ್ ಎಪಿರಸ್‌ನ ನಿಕೋಪಾಲಿಸ್‌ನಲ್ಲಿ ನೆಲೆಸಿದ, ಕೆಲವರ್ಷಗಳ ಕಾಲ ಬರವಣಿಗೆ ಮತ್ತು ಬೋಧನೆಗಳಲ್ಲಿ ತೊಡಗಿದ್ದು ಬಳಿಕ ಸತ್ತ.

ಮಾರ್ಕಸ್ ಔರೀಲಿಯಸ್ (ಕ್ರಿಶ ೧೨೧-೧೮೦) ಸಾಮಾಜಿಕ ಶ್ರೇಣಿಯ ಮತ್ತೊಂದು ತುದಿಯಲ್ಲಿದ್ದವನು. ಅವನು ತನ್ನ ಸೋದರ ಮಾವ ಮತ್ತು ಮಗಳು ಕೊಟ್ಟ ಮಾವನಾಗಿದ್ದ ಒಳ್ಳೆಯ ಚಕ್ರವರ್ತಿ ಎನಿಸಿದ್ದ ಆಂಟೋನಿಯಸ್ ಪಯಸ್‌ನ ದತ್ತುಪುತ್ರ, ಅವನ ನಂತರ ಕ್ರಿಶ ೧೬೧ ರಲ್ಲಿ ಪಟ್ಟಕ್ಕೆ ಬಂದು ಮಾವನನ್ನು ಗೌರವದಿಂದ ನೆನೆಸುತ್ತಿದ್ದ. ಚಕ್ರವರ್ತಿಯಾದ ಅವನು ಸಂಯಮವಾದಕ್ಕೆ ತನ್ನನ್ನು ಅರ್ಪಿಸಿಕೊಂಡಿದ್ದ. ಅವನಿಗೆ ಸ್ಥೈರ್ಯದ ಆವಶ್ಯಕತೆ ಹೆಚ್ಚಾಗಿತ್ತು, ಅವನ ಕಾಲವು ಭೂಕಂಪಗಳು, ರೋಗರುಜಿನಗಳು, ದೀರ್ಘವೂ ಕಡುತರವೂ ಆದ ಯುದ್ಧಗಳು, ಸೈನಿಕ ದಾಳಿಗಳು ಮುಂತಾದ ದುರ್ಘಟನೆಗಳಿಂದ ತುಂಬಿಹೋಗಿತ್ತು. ಅವನ 'ಮೆಡಿಟೇಷನ್' ತನ್ನನ್ನೇ ಕುರಿತಂತಹುದು, ಪ್ರಕಟಣೆಯ ಉದ್ದೇಶವಿಲ್ಲದ್ದು; ಅದರಿಂದ ಅವನಿಗೆ ಸಾರ್ವಜನಿಕ ಜವಾಬ್ದಾರಿಗಳು ಹೊರೆಯೆನಿಸಿದ್ದು ತೀರ ದಣಿವನ್ನುಂಟುಮಾಡಿದ್ದುದು ತಿಳಿಯುತ್ತದೆ. ಅವನ ಒಬ್ಬನೇ ಮಗ ಕಮೋಡಸ್ ಅವನನಂತರ ಪಟ್ಟಕ್ಕೆ ಬಂದ, ಆದರೆ ಅನೇಕ ಚಕ್ರವರ್ತಿಗಳಲ್ಲಿ ಅತ್ಯಂತ ನೀಚನೆನಿಸಿಕೊಂಡ. ಆದರೂ ತನ್ನ ತಂದೆ ಬದುಕಿರುವವರೆಗೂ ತನ್ನ ನೀಚತನವನ್ನು

ಯಶಸ್ವಿಯಾಗಿ ಮರೆಮಾಚಿಕೊಂಡಿದ್ದ. ಈ ತತ್ವಜ್ಞಾನಿಯ ಹೆಂಡತಿ ಫೌಸ್ಟಿನಳ ಮೇಲೆ, ಪ್ರಾಯಶಃ ಅನ್ಯಾಯವಾಗಿ, ಹೀನ ನೀತಿಬಾಹಿರತೆಯನ್ನು ಆರೋಪಿಸಲಾಯಿತು, ಆದರೆ ಅವನು ಮಾತ್ರ ಅವಳ ಬಗ್ಗೆ ಸಂಶಯ ತಾಳಲಿಲ್ಲ; ಅವಳ ಮರಣಾನಂತರ ಅವಳ ದೈವೀಕರಣಕ್ಕೆ (ಡೀಯಿಫಿಕೇಷನ್) ಶ್ರಮವಹಿಸಿದ. ಅವನು ಕ್ರಿಶ್ಚಿಯನ್ನರಿಗೆ ಕಿರುಕುಳ ಕೊಟ್ಟ, ಅದರ ಕಾರಣ ಅವರು ತಾನು ರಾಜಕೀಯವಾಗಿ ಆವಶ್ಯಕವೆಂದು ಭಾವಿಸಿದ್ದ ದೇಶದ ಮತಧರ್ಮವನ್ನು ತಿರಸ್ಕರಿಸಿದ್ದು. ತನ್ನೆಲ್ಲ ಕ್ರಿಯೆಗಳಲ್ಲೂ ಅವನು ನ್ಯಾಯನಿಷ್ಠನಾಗಿದ್ದ, ಆದರೆ ಅವುಗಳಲ್ಲಿ ಬಹುತೇಕ ಯಶಸ್ಸು ಗಳಿಸಲಿಲ್ಲ. ಅವನೊಬ್ಬ ಕರುಣಾಜನಕ ವ್ಯಕ್ತಿ; ಪ್ರತಿರೋಧಿಸಬೇಕಾದ ಐಹಿಕ ಬಯಕೆಗಳ ಪಟ್ಟಿಯಲ್ಲಿ ಅವನಿಗೆ ಅತ್ಯಂತ ಪ್ರಲೋಭಕರವಾದದ್ದು ಪ್ರಶಾಂತ ಗ್ರಾಮೀಣ ಬದುಕಿಗೆ ಮೊರೆಹೋಗಬೇಕೆಂಬುದು. ಆದರೆ ಇದಕ್ಕೆ ಅವಕಾಶ ಒದಗಿಬರಲಿಲ್ಲ. ಅವನ ಕೆಲವು ಚಿಂತನೆಗಳು ದೀರ್ಘ ದಂಡಯಾತ್ರೆಯ ದೂರದ ಶಿಬಿರಗಳಲ್ಲಿ ಮೂಡಿದವು. ದಂಡಯಾತ್ರೆಗಳ ಕಷ್ಟನಿಷ್ಠುರಗಳೇ ಅವನ ಸಾವಿಗೆ ಕಾರಣವಾದವು.

ಎಲ್ಲ ತಾತ್ವಿಕ ಪ್ರಶ್ನೆಗಳ ಕುರಿತಂತೆ ಎಪಿಕ್ಟೆಟಸ್ ಮತ್ತು ಮಾರ್ಕಸ್ ಔರೀಲಿಯಸ್ ಅವರಿಬ್ಬರೂ ಒಮ್ಮತವನ್ನು ಹೊಂದಿದ್ದುದು ಅಪೂರ್ವವಾದುದು. ಒಂದು ಕಾಲದ ತತ್ವಜ್ಞಾನವನ್ನು ಆ ಕಾಲದ ಸಾಮಾಜಿಕ ಪರಿಸ್ಥಿತಿಗಳು ನಿರ್ಧರಿಸಿದರೂ, ವ್ಯಕ್ತಿಯೊಬ್ಬ ತತ್ವಜ್ಞಾನಿಯ ನಿಲವಿನ ಮೇಲೆ ಅವನ ಸ್ವಂತ ಪರಿಸ್ಥಿತಿಯು ಕಡಿಮೆ ಪ್ರಭಾವವನ್ನು ಬೀರುತ್ತದೆ ಎಂಬುದನ್ನಿದು ಸೂಚಿಸುತ್ತದೆ. ತತ್ವಜ್ಞಾನಿಗಳು ಸಾಮಾನ್ಯವಾಗಿ ಒಂದು ಮಟ್ಟದ ಮನೋವೈಶಾಲ್ಯವುಳ್ಳವರು, ಅವರು ತಮ್ಮ ಖಾಸಗಿ ಬದುಕಿನ ಆಕಸ್ಮಿಕಗಳನ್ನು ಅಷ್ಟಾಗಿ ಗಮನಿಸುವವರಲ್ಲ; ಆದರೆ ಅವರು ಕೂಡ ತಮ್ಮ ಕಾಲದ ವ್ಯಾಪಕ ಒಳಿತು ಕೆಡುಕುಗಳಿಂದ ದೂರವಾದವರಲ್ಲ. ಕೆಟ್ಟ ಸಮಯಗಳಲ್ಲವರು ಸಾಂತ್ವನವನ್ನು ಕಾಣುತ್ತಾರೆ; ಒಳ್ಳೆಯ ಸಮಯಗಳಲ್ಲಿ ಅವರ ಆಸಕ್ತಿಗಳು ಹೆಚ್ಚು ಬೌದ್ಧಿಕವಾದವು.

ಗಿಬ್ಬನ್‌ನ ವಿವರವಾದ ಇತಿಹಾಸವು ಕಮೋಡಸ್‌ನ ಕೆಡುಕುಗಳಿಂದ ಆರಂಭಗೊಳ್ಳುತ್ತದೆ; ಆಂಟೊನೈನೀಸ್‌ನ ಕಾಲವು ಸುವರ್ಣಯುಗವಾಗಿತ್ತು ಎಂಬ ಹದಿನೆಂಟನೆಯ ಶತಮಾನದ ಬಹುತೇಕ ಬರಹಗಾರರ ಅಭಿಪ್ರಾಯವನ್ನು ಅವರೂ ಒಪ್ಪುತ್ತಾರೆ. 'ಮಾನವ ಜನಾಂಗವು ಇತಿಹಾಸದ ಯಾವ ಕಾಲದಲ್ಲಿ ಅತ್ಯಂತ ಸುಖಸಮೃದ್ಧಿಗಳಿಂದ ಕೂಡಿತ್ತು ಎಂಬುದನ್ನು ನಿರ್ಧರಿಸಲು ಯಾರನ್ನಾದರೂ ಕೇಳಿದರೆ, ಅವನು ನಿಸ್ಸಂಶಯವಾಗಿ ಡೊಮಿಷಿಯನ್‌ನ ಸಾವು ಮತ್ತು ಕಮೋಡಸ್‌ನ ಆಳ್ವಿಕೆಗಳ ನಡುವಣ ಕಾಲ ಎನ್ನುತ್ತಾನೆ.' ಆದರೆ ಈ ತೀರ್ಮಾನವನ್ನು ಸಂಪೂರ್ಣವಾಗಿ ಒಪ್ಪಲು ಸಾಧ್ಯವಿಲ್ಲ. ಗುಲಾಮಪದ್ಧತಿಯ ಕೆಡುಕಿನಿಂದ ಹೇಳಲಾರದ ಯಾತನೆ ಉಂಟಾಯಿತು, ಅದರಿಂದಾಗಿ ಪ್ರಾಚೀನ ಕಾಲದ ವೀರ್ಯವಂತಿಕೆ

ಕಮರಿತು. ಕತ್ತಿ ಹಿಡಿದು ಕಾಡುಪ್ರಾಣಿಗಳೊಡನೆ ಹೋರಾಟದಲ್ಲೋ ಅಣುಕುಯುದ್ಧದಲ್ಲೋ ತೊಡಗಿಸಿಕೊಳ್ಳಬೇಕಾದ ಪರಿಸ್ಥಿತಿ ಆಗಿತ್ತು, ಅವು ಅಸಹನೀಯವಾಗಿ ಕ್ರೂರವೆನಿಸಿದ್ದುವು, ನೋಡಿ ಸಂತಸಪಡುತ್ತಿದ್ದ ಜನರ ಮನೋಭಾವವನ್ನು ಅದು ಹೀನಾಯಗೊಳಿಸಿತ್ತು. ಕತ್ತಿಮಲ್ಲರು ಮೊಂಡು ಕತ್ತಿಗಳನ್ನು ಹಿಡಿದು ಹೋರಾಡಬೇಕೆದು ಮಾರ್ಕಸ್ ಔರೀಲಿಯಸ್ ಏನೋ ಹೇಳಿದ, ನಿಜ; ಆದರೆ ಈ ತೀರ್ಮಾನವು ಅಲ್ಪಾಯುಷಿಯಾಯಿತು. ಕಾಡುಪ್ರಾಣಿಗಳೊಂದಿಗಿನ ಹೋರಾಟದ ವಿಷಯದಲ್ಲಿ ಅವನೇನೂ ಮಾಡಲಿಲ್ಲ. ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು; ಇಟಲಿಯಲ್ಲಿ ಕೃಷಿ ಕಣ್ಮರೆಯಾಗುತ್ತಿತ್ತು, ರೋಮ್ ಜನರು ಪ್ರಾಂತಗಳ ಪುಕ್ಕಟೆ ಆಹಾರಧಾನ್ಯ ಪೂರೈಕೆಯನ್ನು ಅವಲಂಬಿಸಿದ್ದರು. ಎಲ್ಲವೂ ಚಕ್ರವರ್ತಿಯಲ್ಲೋ ಅವನ ಮಂತ್ರಿಗಳಲ್ಲೋ ಕೇಂದ್ರೀಕೃತವಾಗಿದ್ದವು; ವಿಶಾಲ ಚಕ್ರಾಧಿಪತ್ಯದಾದ್ಯಂತ, ಅಪರೂಪದ ಬಂಡಾಯಗಾರ ನಾಯಕನ ಹೊರತಾಗಿ ಬೇರಾರೂ ಏನೂ ಮಾಡದೆ ಹೇಳಿದ್ದನ್ನು ಕೇಳಿಕೊಂಡಿರಬೇಕಾಗಿತ್ತು. ಅತ್ಯುತ್ತಮವಾದುದಕ್ಕಾಗಿ ಜನರು ಭೂತಕಾಲವನ್ನು ನೆನಪಿಸಿಕೊಳ್ಳಬೇಕಾಗಿತ್ತು; ಭವಿಷ್ಯವಂತೂ ತೀರ ದಣಿವುಂಟುಮಾಡುವಂತಹುದ್ದೂ ಭಯಾನಕವಾದದ್ದೂ ಆಗಿರುವುದೆಂದು ತಲ್ಲಣಗೊಂಡಿದ್ದರು. ಮಾರ್ಕಸ್ ಔರೀಲಿಯಸ್‌ನ ಧಾಟಿಯನ್ನು ಬೇಕನ್ ಅಥವಾ ಲಾಕ್ ಅಥವಾ ಕಂಡಾರ್ಸೆಟ್‌ರದರ ಜೊತೆ ಹೋಲಿಸಿದರೆ ನಮಗೆ ದಣಿವು ಮತ್ತು ಭರವಸೆಯ ಬದುಕಿನ ನಡುವಣ ವ್ಯತ್ಯಾಸ ಗೊತ್ತಾಗುತ್ತದೆ. ಭರವಸೆಯ ಯುಗದಲ್ಲಿ, ಆ ಕಾಲದ ಕೆಡುಕುಗಳನ್ನು ಸಹಿಸಿಕೊಳ್ಳಬಹುದು, ಯಾಕೆಂದರೆ ಅವು ಕೊನೆಗೊಳ್ಳುತ್ತವೆ ಎಂಬ ಭಾವನೆಯಿರುತ್ತದೆ; ಆದರೆ ದಣಿವಿನ ಕಾಲದಲ್ಲಿ ಒಳ್ಳೆಯವರೂ ತಮ್ಮ ಸಂರಕ್ಷಕರನ್ನು ಕಳೆದುಕೊಳ್ಳುತ್ತಾರೆ. ಎಪಿಕ್ಟೆಟಸ್ ಮತ್ತು ಮಾರ್ಕಸ್ ಔರೀಲಿಯಸ್‌ರ ಕಾಲಗಳಿಗೆ ಸಂಯಮವಾದವು ಸೂಕ್ತವಾಗಿ ಹೊಂದಿಕೊಳ್ಳುತ್ತದೆ, ಯಾಕೆಂದರೆ ಅದರ ಬೋಧನೆ ಭರವಸೆಗಿಂತ ಹೆಚ್ಚಾಗಿ ಸಹನೆಯದು.

ಮತಧರ್ಮಸುಧಾರಣೆಯ ಕಾಲದವರೆಗೆ ಆಂಟೋನೈನೀಸ್ ಯುಗವು ಆನಂತರದವುಗಳಿಗಿಂತ ಸಾಮಾನ್ಯ ಸುಖಸಮೃದ್ಧಿಗಳ ದೃಷ್ಟಿಯಿಂದ ತುಂಬ ಉತ್ತಮವಾದುದಾಗಿತ್ತು ಎಂಬುದು ನಿಸ್ಸಂಶಯ. ಆದರೆ ಅದರ ವಾಸ್ತುಶಿಲ್ಪ ಸ್ಮಾರಕಗಳನ್ನು ನೋಡಿ ಅಂದುಕೊಳ್ಳುವಷ್ಟು ಸಮೃದ್ಧಿಯಿಂದ ಆ ಕಾಲವೂ ಕೂಡಿರಲಿಲ್ಲ ಎಂಬುದು ಸೂಕ್ಷ್ಮ ಅಧ್ಯಯನಗಳಿಂದ ತಿಳಿಯುತ್ತದೆ. ಗ್ರೀಕ್–ಜರ್ಮನ್ ನಾಗರಿಕತೆಯು ಬೇಸಾಯಪ್ರದೇಶಗಳ ಮೇಲೆ ಮಾಡಿದ ಪ್ರಭಾವವು ತೀರ ಕಡಿಮೆ ಪ್ರಮಾಣದ್ದು; ಅದು ವಾಸ್ತವವಾಗಿ ನಗರಗಳಗೆ ಸೀಮಿತವಾಗಿತ್ತು. ನಗರಗಳಲ್ಲಿ ಕೂಡ, ತೀರ ಬಡತನದಿಂದ ಬಸವಳಿಯುತ್ತಿದ್ದ ದೊಡ್ಡ ಜನಸಮುದಾಯವಿತ್ತು, ಅಲ್ಲದೆ ದೊಡ್ಡದಾದ ಗುಲಾಮವರ್ಗವಿತ್ತು. ನಗರಗಳಲ್ಲಿನ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳ ಕುರಿತ

ತಮ್ಮ ಚರ್ಚೆಯನ್ನು ರಾಸ್ಟಾವ್‌ಸ್ಟೆಫ್ ಈ ರೀತಿ ಮುಗಿಸುತ್ತಾರೆ:[೧೯೯]

'ಅವರ ಸಾಮಾಜಿಕ ಸ್ಥಿತಿಗತಿಗಳ ಈ ಚಿತ್ರವು ಹೊರಗೆ ತೋರುವಷ್ಟು ಆಕರ್ಷಕವಾಗಿಲ್ಲ. ನಮ್ಮ ಆಕರಗಳು ಮೂಡಿಸಿರುವ ಚಿತ್ರವೆಂದರೆ: ನಗರಗಳ ವೈಭವವು ಜನಸಂಖ್ಯೆಯ ಬಹು ಕಡಿಮೆ ಸಂಖ್ಯೆಯ ಭಾಗಕ್ಕಾಗಿ ನಿರ್ಮಿತವಾಗಿ ಅವರಿಗೆ ಮಾತ್ರ ಸೀಮಿತವಾಗಿತ್ತು, ಅಲ್ಲದೆ ಈ ಅಲ್ಪಸಂಖ್ಯಾತರ ಯೋಗಕ್ಷೇಮವೂ ದುರ್ಬಲ ಬುನಾದಿಯ ಮೇಲೆ ನಿರ್ಮಿತವಾದುದು ಎಂಬುದು; ನಗರಗಳಲ್ಲಿನ ಬಹುಸಂಖ್ಯಾತರು ಅಷ್ಟೋ ಇಷ್ಟೋ ಸಂಪಾದನೆ ಹೊಂದಿರುತ್ತಿದ್ದರು ಇಲ್ಲವೇ ಕಡುಬಡತನದಲ್ಲಿ ಬದುಕುತ್ತಿದ್ದರು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ನಗರಗಳ ಶ್ರೀಮಂತಿಕೆಯನ್ನು ಉತ್ಪ್ರೇಕ್ಷೆಗೊಳಿಸಬಾರದು: ಅವುಗಳ ಹೊರನೋಟ ದಾರಿತಪ್ಪಿಸುವಂತಹುದ್ದು.'

ನಾವು ಈ ಭೂಮಿಯಲ್ಲಿ ಮೃಣ್ಮಯ ದೇಹದ ಸೆರೆಯಾಳುಗಳು ಎಂದು ಎಪಿಕ್ಟೆಟಸ್ ಹೇಳುತ್ತಾನೆ. ಮಾರ್ಕಸ್ ಔರೀಲಿಯಸ್ ಪ್ರಕಾರ, ಅವನೆನ್ನುತ್ತಿದ್ದುದೆಂದರೆ, 'ಹೆಣವೊಂದನ್ನು ಹೊತ್ತ ಸಣ್ಣ ಆತ್ಮ ನೀನು' ಎಂದು. ಸ್ಯೂಸ್ ದೇಹವನ್ನು ಸ್ವತಂತ್ರವಾಗಿ ಮಾಡಲಾಗಲಿಲ್ಲ, ಆದರೆ ಅದಕ್ಕೆ ತನ್ನ ದೈವಿಕತೆಯ ಒಂದಂಶವನ್ನು ಕೊಟ್ಟ. ದೇವರು ಮನುಷ್ಯರ ತಂದೆ, ನಾವೆಲ್ಲ ಸೋದರರು. 'ನಾನು ಅಥೆನ್ಸ್‌ನವನು' ಅಥವಾ 'ನಾನು ರೋಮನ್' ಎಂದು ಹೇಳಬಾರದು, 'ನಾನು ವಿಶ್ವದ ಒಬ್ಬ ಪ್ರಜೆ' ಎಂದು ಹೇಳಬೇಕು. ನೀವೇನಾದರೂ ಸೀಸರ್‌ನ ನಂಟನಾಗಿದ್ದರೆ ನೀವು ಕ್ಷೇಮವಾಗಿರುತ್ತೀರಿ; ದೇವರ ನಂಟನಾಗಿದ್ದರೆ ಇನ್ನೆಷ್ಟು ಕ್ಷೇಮದಿಂದಿರಬಹುದು. ಸದ್ಗುಣ ಮಾತ್ರವೇ ನಿಜವಾದ ಒಳಿತು ಎಂದು ಅರ್ಥಮಾಡಿಕೊಂಡರೆ, ನಮಗೆ ಯಾವುದೇ ಕೆಡುಕು ಉಂಟಾಗಲಾರದು.

> 'ನಾನು ಸಾಯಲೇಬೇಕು. ಆದರೆ ಕೊರಗುತ್ತ ಸಾಯಬೇಕೆ? ನಾನು ಸೆರೆಯಾಗಬೇಕು, ಆದರೆ ಕುಂಯ್‌ಗುಡುತ್ತ ಇರಬೇಕೆ? ನಾನು ದೇಶಭ್ರಷ್ಟತೆಯನ್ನು ಎದುರಿಸಬೇಕು, ನಗುನಗುತ್ತ, ಧೈರ್ಯದಿಂದ, ಪ್ರಶಾಂತ ಮನಸ್ಸಿನಿಂದ ಹೋಗುವುದನ್ನು ಯಾರಾದರೂ ತಪ್ಪಿಸಬಲ್ಲರೇ? 'ರಹಸ್ಯವನ್ನು ಹೇಳು.' ಉಹ್ಞೂ, ನಾನು ಹೇಳುವುದಿಲ್ಲ, ಯಾಕೆಂದರೆ ಅದು ಸಾಮರ್ಥ್ಯಕ್ಕಳವಟ್ಟದ್ದು. 'ನಿನಗೆ ಕೋಳ ಹಾಕಿಸುತ್ತೇನೆ.' 'ಏನು ಹೇಳುತ್ತಿದ್ದೀಯಾ? ಬೇಡಿ ತೊಡಿಸುತ್ತೀಯಾ? ನನಗೆ ಕಾಲಿಗೆ ಕೋಳ ಹಾಕಿಸಬಹುದು – ನಿಜ, ಆದರೆ ನನ್ನ ಇಚ್ಛಾಶಕ್ತಿಗೆ – ಇಲ್ಲ, ಸ್ಯೂಸ್ ಕೂಡ ಗೆಲ್ಲಲಾರ. 'ನಿನ್ನನ್ನು ಸೆರೆಮನೆಗೆ ದೂಡುತ್ತೇನೆ.' ಅಂದರೆ

---

೧೯೯. ರಾಸ್ಟಾವ್‌ಸ್ಟೆಫ್, 'ದ ಸೋಷಿಯಲ್ ಅಂಡ್ ಇಕಾನಮಿಕ್ ಹಿಸ್ಟರಿ ಆಫ್ ದ ರೋಮನ್ ಎಂಪೈರ್', ಪು. ೧೭೯.

ನನ್ನ ದೇಹಭಾಗವನ್ನು ತಾನೇ? 'ನಿನ್ನ ಶಿರಚ್ಛೇದನ ಮಾಡಿಸುತ್ತೇನೆ' ಯಾಕೆ? ಈ ಜಗತ್ತಿನಲ್ಲಿ ನನ್ನ ಶಿರಚ್ಛೇದನ ಮಾಡಲು ಮಾತ್ರ ಸಾಧ್ಯವಿಲ್ಲ ಎಂದು ಎಂದಾದರೂ ಹೇಳಿದ್ದೇನೆಯೇ?

ತತ್ವಜ್ಞಾನವನ್ನು ಅನ್ವೇಷಿಸುವವರು ಯೋಚಿಸಬೇಕಾದ ಚಿಂತನೆಗಳಿವು, ಪ್ರತಿದಿನವೂ ಅವರು ಬರೆದಿಡಬೇಕಾದ ಪಾಠಗಳಿವು, ಅವರು ಇದರಲ್ಲಿ ತೊಡಗಬೇಕು.[೧೨೦]

ಗುಲಾಮರು ಇತರ ಜನಗಳಿಗೆ ಸಮಾನರು, ಯಾಕೆಂದರೆ ಎಲ್ಲರೂ ಒಂದೇ ಬಗೆಯಲ್ಲಿ ದೇವರ ಮಕ್ಕಳು.

ಒಳ್ಳೆಯ ಪ್ರಜೆಯು ನಿಯಮಗಳಿಗೊಳಪಡುವಂತೆ ನಾವು ನಮ್ಮನ್ನು ದೇವರಿಗೆ ಅರ್ಪಿಸಿಕೊಳ್ಳಬೇಕು. 'ಸೈನಿಕನು ಸೀಸರ್‌ಗಿಂತ ಹೆಚ್ಚಾಗಿ ಯಾರಿಗೂ ಗೌರವ ನೀಡುವುದಿಲ್ಲವೆಂದು ಪ್ರತಿಜ್ಞೆಮಾಡುತ್ತಾನೆ, ಆದರೆ ನಾವು ಮೊದಲಿಗೆ ನಮ್ಮನ್ನು ಗೌರವಿಸಿಕೊಳ್ಳಬೇಕು.'[೧೨೧] ಭೂಮಿಯ ಮೇಲೆ ಬಲಿಷ್ಠರನ್ನು ಕಂಡರೆ, ಇಲ್ಲಿ ಏನು ನಡೆಯುತ್ತಿದೆಯೆಂಬುದನ್ನು ಮೇಲಿನಿಂದ ಮತ್ತೊಬ್ಬನು ನೋಡುತ್ತಿದ್ದಾನೆ, ನೀನು ಅವನನ್ನು ಸಂತಸಗೊಳಿಸಬೇಕೇ ಹೊರತು ಈ ವ್ಯಕ್ತಿಯನ್ನಲ್ಲ.'[೧೨೨]

ಹಾಗಾದರೆ ಸಂಯಮವಾದಿ ಎಂದರೆ ಯಾರು?

ತಾನು ನೀಡುವ ತೀರ್ಮಾನಗಳಿಗೆ ಅನುಗುಣವಾಗಿ ತನ್ನನ್ನು ರೂಪಿಸಿಕೊಂಡಿರುವವನನ್ನು ತೋರಿಸು, ಅಂತೆಯೇ ಫೈಡಿಯಸ್‌ನ ಕಲೆಗನುಗುಣವಾಗಿ ರೂಪಿತವಾದ ವಿಗ್ರಹವನ್ನು ನಾವು ಫೈಡಿಯನ್ ಎನ್ನುತ್ತೇವೆ. ರೋಗಿಯಾದರೂ ಸುಖಿಯಾದ, ದೇಶಭ್ರಷ್ಟನಾದರೂ ಸುಖಿಯಾದ, ಅವಮಾನಕ್ಕೊಳಗಾದರೂ ಸುಖಿಯಾದವನನ್ನು ತೋರಿಸು. ನನ್ನನ್ನು ಅವನಿಗೆ ತೋರಿಸು. ದೇವರಾಣೆ, ನಾನು ಸಂಯಮವಾದಿಯನ್ನು ನೋಡುತ್ತೇನೆ. ಉಹ್ಞೂ, ನೀನು ಸಂಪೂರ್ಣಗೊಂಡ ಸಂಯಮವಾದಿಯನ್ನು ತೋರಿಸಲಾರೆಯಾ; ಹಾಗಾದರೆ ಹಾಗೆ ರೂಪುಗೊಳ್ಳುತ್ತಿರುವವನನ್ನು, ಆ ದಾರಿಯಲ್ಲಿ ನಡೆಯುತ್ತಿರುವವನನ್ನು ತೋರಿಸು. ನನ್ನ ಮೇಲೆ ಕರುಣೆಯಿಡು, ಇದುವರೆಗೂ ನಾನು ನೋಡಿರದ ನೋಟವನ್ನು ತೋರಿಸಿ ನನ್ನಂತಹ ಮುದುಕನಿಗೆ ಗಾಸಿ ಮಾಡಬೇಡ. ಏನು? ಫೈಡಿಯಸ್‌ನ ಸ್ಯೂಸ್ ಅಥವಾ ಅವನ ಅಥೇನಳನ್ನು ತೋರಿಸುತ್ತೀಯಾ, ಅದೇ ಆ ಚಿನ್ನ-ದಂತಗಳ ಕೆತ್ತನೆಯನ್ನು? ನನಗೆ ಬೇಕಾಗಿರುವುದು ಆತ್ಮ; ದೇವರೊಡನೆ ಐಕ್ಯವಾಗಬಯಸುವ ವ್ಯಕ್ತಿಯೊಬ್ಬನ

೧೨೦. ಓಟ್ಸ್‌ರಿಂದ ಉದ್ಧೃತ, ಪೂರ್ವೋಕ್ತ, ಪು. ೨೨೫–೬.
೧೨೧. ಅದೇ, ಪು. ೨೫೧.
೧೨೨. ಅದೇ. ಪು. ೨೮೦.

ಆತ್ಮ – ಇನ್ನು ಮುಂದೆ ದೇವರನ್ನಾಗಲೀ ಮನುಷ್ಯನನ್ನಾಗಲೀ ತೆಗಳದ, ಯಾವುದನ್ನೂ ಬಯಸದ, ಯಾವುದೇ ದುರದೃಷ್ಟವನ್ನು ಮನಸ್ಸಿಗೆ ತಂದುಕೊಳ್ಳದ, ಕೋಪ ಕರುಬು ಮತ್ಸರಗಳಿಲ್ಲದ, ತನ್ನ ಮನುಷ್ಯತ್ವವನ್ನು ದೈವತ್ವವಾಗಿ ಮಾರ್ಪಡಿಸಿಕೊಳ್ಳಲಾಶಿಸುವ, ತನ್ನ ಬಡಪಾಯಿ ದೇಹದಲ್ಲಿ ದೇವರೊಂದಿಗೆ ಸಾಹಚರ್ಯ ಹೊಂದಬಯಸುವವನ – ಆತ್ಮ. ಅವನನ್ನು ತೋರಿಸು, ಉಹ್ಞೂ ನೀನು ತೋರಿಸಲಾರೆ.

ದುರದೃಷ್ಟಗಳೆಂದು ಪರಿಗಣಿತವಾದವುಗಳನ್ನು ಹೇಗೆ ಎದುರಿಸಬೇಕೆಂಬ ಬಗ್ಗೆ ಹೇಳುವುದರಲ್ಲಿ ಎಪಿಕ್ಟೆಟಸ್‌ಗೆ ದಣಿವೆಂಬುದೇ ಇಲ್ಲ, ಅನೇಕ ವೇಳೆ ಅದನ್ನವನು ಲವಲವಿಕೆಯ ಸಂಭಾಷಣೆಗಳ ಮೂಲಕ ತಿಳಿಸುತ್ತಾನೆ.

ಕ್ರಿಶ್ಚಿಯನ್ನರಂತೆಯೇ, ನಮ್ಮ ಶತ್ರುಗಳನ್ನೂ ಪ್ರೀತಿಸಬೇಕೆಂದು ಅವನು ಹೇಳುತ್ತಾನೆ. ಒಟ್ಟಾರೆ, ಸಂಯಮವಾದಿಗಳೊಡನೆ ಅವನು ಸಂತಸವನ್ನು ದ್ವೇಷಿಸುತ್ತಾನಾದರೂ, ನಾವು ದ್ವೇಷಿಸಬಾರದ ಒಂದು ಬಗೆಯ ಸಂತೋಷವೂ ಇದೆ. 'ಅಥೆನ್ಸ್ ಸುಂದರವಾಗಿದೆ. ಹೌದು, ಸಂತೋಷ ಎಂಬುದು ಇನ್ನೂ ಸುಂದರವಾದುದು–ರಾಗಾವೇಶಗಳಿಂದಲೂ ತಲ್ಲಣಗಳಿಂದಲೂ ದೂರವಾದ ಸ್ವಾತಂತ್ರ್ಯ, ನಿಮ್ಮ ಚಟುವಟಿಕೆಗಳು ಬೇರಾರನ್ನೂ ಆಶ್ರಯಿಸಲಾರದ ಅರ್ಥದಲ್ಲಿ' (ಪು. ೪೨೮). ಪ್ರತಿ ವ್ಯಕ್ತಿಯೂ ನಾಟಕದಲ್ಲಿನ ಪಾತ್ರಧಾರಿ, ಅದರಲ್ಲಿ ದೇವರು ನಮ್ಮ ಪಾತ್ರಗಳನ್ನು ಹಂಚಿಕೊಟ್ಟಿರುತ್ತಾನೆ; ಅದು ಯಾವುದಾದರೂ ಆಗಿರಲಿ ನಮ್ಮ ಪಾತ್ರವನ್ನು ಸರಿಯಾಗಿ ಅಭಿನಯಿಸುವುದು ನಮ್ಮ ಕರ್ತವ್ಯ.

ಎಪಿಕ್ಟೆಟಸ್‌ನ ಬೋಧನೆಯನ್ನು ದಾಖಲಿಸುವ ಬರವಣಿಗೆಗಳಲ್ಲಿ ಗಾಢ ಪ್ರಾಮಾಣಿಕತೆ ಮತ್ತು ಸರಳತೆಗಳಿವೆ. (ಟಿಪ್ಪಣಿಗಳನ್ನಾಧರಿಸಿ ಅವನ ಶಿಷ್ಯ ಆರಿಯನ್ ಅವುಗಳನ್ನು ಬರೆದಿಟ್ಟಿದ್ದಾನೆ). ಅವನ ನೈತಿಕತೆಯು ಉದಾತ್ತವಾದುದು, ಇಹದೂರವಾದುದು. ನಿರಂಕುಶಪ್ರಭುತ್ವವನ್ನು ವಿರೋಧಿಸುವುದೇ ಮುಖ್ಯ ಕರ್ತವ್ಯವಾಗಿರುವ ಸನ್ನಿವೇಶದಲ್ಲಿ, ಇದಕ್ಕಿಂತ ಹೆಚ್ಚು ಉಪಯುಕ್ತವಾದುದನ್ನು ಕಾಣುವುದು ಕಷ್ಟ ಕೆಲವು ವಿಷಯಗಳಲ್ಲಿ, ಉದಾಹರಣೆಗೆ ಮನುಷ್ಯನ ಭ್ರಾತೃತ್ವವನ್ನು ಗುರುತಿಸುವಲ್ಲಿ, ಗುಲಾಮರು ಸಮಾನರೆಂದು ಬೋಧಿಸುವಲ್ಲಿ, ನಗರ ಪ್ರಭುತ್ವದಿಂದ ಸ್ಫೂರ್ತಿಗೊಂಡ ಚಿಂತನೆಗಳ ಪ್ಲೇಟೋ ಅಥವಾ ಅರಿಸ್ಟಾಟಲ್ ಅಥವಾ ಬೇರಾವುದೇ ತತ್ತ್ವಜ್ಞಾನಿಗಳಲ್ಲಿ ಕಾಣುವುದಕ್ಕಿಂತ ಉನ್ನತವಾದುದು. ಎಪಿಕ್ಟೆಟಸ್‌ನ ಕಾಲದ ವಾಸ್ತವ ಜಗತ್ತು ಪೆರಿಕ್ಲೀಸ್ ಕಾಲ ಅಥೆನ್ಸ್‌ನದಕ್ಕಿಂತ ತುಂಬ ಕೀಳುಮಟ್ಟದ್ದಾಗಿತ್ತು; ಆದರೆ ಆ ವಾಸ್ತವದಲ್ಲಿನ ಕೆಡುಕುಗಳೆ ಅವನ ಆಕಾಂಕ್ಷೆಗಳನ್ನು ಬಡಿದೆಬ್ಬಿಸಿದ್ದು, ಅವನ ವಾಸ್ತವ ಜಗತ್ತು ಐದನೆಯ ಶತಮಾನದ ಅಥೆನ್ಸ್‌ನದಕ್ಕಿಂತ ಕೆಳಮಟ್ಟದ್ದಾಗಿದ್ದಷ್ಟೇ ಅವನ ಆದರ್ಶ ಜಗತ್ತು ಮಾತ್ರ ಪ್ಲೇಟೋ ಮತ್ತವನ ಜಗತ್ತಿನಷ್ಟೇ ಉನ್ನತವಾದುದು.

ಮಾರ್ಕಸ್ ಔರೀಲಿಯಸ್‌ನ 'ಮೆಡಿಟೇಷನ್ಸ್' ಪ್ರಾರಂಭವಾಗುವುದು ತನ್ನ ಅಜ್ಜ, ತಂದೆ, ಸಾಕು ತಂದೆ, ಗುರುಗಳು ಮತ್ತು ದೇವರಿಗೆ ಕೃತಜ್ಞತೆಯನ್ನರ್ಪಿಸುವುದರ ಮೂಲಕ. ಅವನು ಋಣಿಯೆಂದು ಹೇಳುವ ಕೆಲವಂತೂ ತುಂಬ ಕುತೂಹಲಕರವಾದವು. ತಾನು ಡಯೋಜೆನೆಟಸ್‌ನಿಂದ ಕಲಿತದ್ದು ಪವಾಡಪುರುಷರ ಮಾತುಗಳನ್ನು ಕೇಳಬಾರದೆಂಬುದು (ಎಂದವನು ಹೇಳುತ್ತಾನೆ); ರಸ್ಟಿಕಸ್‌ನಿಂದ ಕಲಿತದ್ದು ಕಾವ್ಯರಚನೆ ಮಾಡಬಾರದೆಂಬುದು; ಸೆಕ್ಸ್‌ಟಸ್‌ನಿಂದ ಕಲಿತದ್ದು ಅಕೃತಕ ಗಾಂಭೀರ್ಯವನ್ನು; ವೈಯಾಕರಣಿಯಾದ ಅಲೆಕ್ಸಾಂಡರ್‌ನಿಂದ ಕಲಿತದ್ದು ಇತರರ ಕೆಟ್ಟ ವ್ಯಾಕರಣವನ್ನು ತಿದ್ದಬಾರದು, ಅದರ ಬದಲು ಅವನ ಮಾತಾದ ಮೇಲೆ ಸರಿಯಾದ ರೀತಿಯಿಂದ ಮಾತನಾಡಬೇಕೆಂಬುದನ್ನು; ಪ್ಲೇಟೋವಾದಿ ಅಲೆಕ್ಸಾಂಡರ್‌ನಿಂದ ಕಲಿತದ್ದು ಕೆಲಸದ ಒತ್ತಡದ ನೆಪ ಹೇಳಿ ಸೋಮಾರಿತನದಿಂದ ಬಂದ ಪತ್ರಕ್ಕೆ ಉತ್ತರಿಸದಿರಬಾರದೆಂಬುದನ್ನು; ತನ್ನ ಸಾಕುತಂದೆಯಿಂದ ಕಲಿತದ್ದು ಹುಡುಗರೊಡನೆ ಪ್ರೇಮ ಹೊಂದಬಾರದೆಂಬುದನ್ನು. (ಮುಂದುವರಿದು) ಹೇಳುವುದು, ತಾನು ತನ್ನ ತಾತನ ವೇಶ್ಯೆಯೊಡನೆ ದೀರ್ಘಕಾಲ ಬೆಳೆಯಲಿಲ್ಲ, ತೀರ ಬೇಗ ತನ್ನ ವೀರ್ಯವಂತಿಕೆಯನ್ನು ಸಾಬೀತುಪಡಿಸಲಿಲ್ಲ; ತನ್ನ ಮಕ್ಕಳು ಮೂರ್ಖರೂ ಅಲ್ಲ ದೈಹಿಕ ಐಬುಳ್ಳವರೂ ಅಲ್ಲ; ತನ್ನ ಹೆಂಡತಿ ವಿಧೇಯಳು, ಪ್ರೀತಿ ಹೊಂದಿದವಳು ಮತ್ತು ಸರಳವಾದವಳು; ತಾನು ತತ್ವಜ್ಞಾನದ ಅಧ್ಯಯನದಲ್ಲಿ ತೊಡಗಿದಾಗ ಇತಿಹಾಸ, ಅನುಗಮನ ತರ್ಕಮತ್ತು ಖಗೋಳವಿಜ್ಞಾನಗಳ ಅಭ್ಯಾಸದಲ್ಲಿ ಕಾಲ ವ್ಯರ್ಥ ಮಾಡಲಿಲ್ಲ ಎನ್ನುತ್ತಾನೆ.

'ಮೆಡಿಟೇಷನ್ಸ್'ನಲ್ಲಿರುವ ವ್ಯಕ್ತ್ಯತೀತವಾದುದು ಎಪಿಕ್ಟೆಟಸ್‌ನದರೊಡನೆ ಸಮೀಪ ಸಾಮ್ಯ ಹೊಂದಿದೆ. ಮಾರ್ಕಸ್ ಔರೀಲಿಯಸ್‌ಗೆ ಅಮರತ್ವದ ಬಗ್ಗೆ ಅನುಮಾನ, ಆದರೆ ಕ್ರಿಶ್ಚಿಯನ್ ಹೇಳಬಹುದಾದಂತೆ ಹೀಗೆನ್ನುತ್ತಾನೆ: 'ಈ ಕ್ಷಣದಲ್ಲಿಯೇ ನೀನು ಹೋಗಿಬಿಡುವುದು ಸಾಧ್ಯವಾದರೂ, ನಿನ್ನ ಕ್ರಿಯೆ ಮತ್ತು ಚಿಂತನೆಗಳನ್ನು ಅದಕ್ಕನುಗುಣವಾಗಿಸಿಕೊ.' ನಿಸರ್ಗದೊಡನೆ ಸಮರಸವಾಗಿರುವುದೇ ಒಳಿತು; ವಿಶ್ವದೊಡನೆ ಸಾಮರಸ್ಯದಿಂದಿರುವುದೇ ದೇವರ ಇಚ್ಛಾಶಕ್ತಿಗೆ ತೋರುವ ವಿಧೇಯತೆ.

"ಓ ವಿಶ್ವವೇ, ನಿನ್ನೊಡನೆ ಸಮರಸದಿಂದಿರುವುದೆಲ್ಲವೂ ನನ್ನೊಡನೆ ಸಾಮರಸ್ಯದಿಂದಿರುತ್ತವೆ. ನನ್ನ ಮಟ್ಟಿಗೆ ನಿನಗೆ ಸರಿಯಾದ ಸಮಯಕ್ಕೆ ಸಲ್ಲಬೇಕಾದುದು ನನಗೆ ಯಾವುದೂ ತೀರ ಬೇಗವೂ ಅಲ್ಲ ತೀರ ತಡವೂ ಅಲ್ಲ. ಓ ನಿಸರ್ಗವೇ, ನಿನ್ನ ಋತುಮಾನಗಳು ತರುವಂತಹುದೆಲ್ಲವೂ ನನಗೆ ಫಲಪ್ರದವೇ; ಎಲ್ಲವೂ ನಿನ್ನಿಂದಲೇ, ಎಲ್ಲವೂ ನಿನ್ನಲ್ಲಿಯೇ, ಎಲ್ಲವೂ ನಿನಗೇ ಸಮರ್ಪಿತವಾಗುತ್ತವೆ. ಪ್ರಿಯ ಸೆಕ್ರೋಪ್ ನಗರವೇ, ಎಂದು ಕವಿ ಹೇಳುತ್ತಾನೆ; ಸ್ಯೂಸ್‌ನ ಪ್ರಿಯ ನಗರವೇ ಎಂದು ನೀನು ಹೇಳಲಾರೆಯಾ?'

ಸಂತ ಆಗಸ್ಟೈನ್‌ನ ದೇವನಗರಿಯನ್ನು ಸ್ವಲ್ಪಮಟ್ಟಿಗೆ ಕ್ರೈಸ್ತೇತರ ಚಕ್ರವರ್ತಿ ತೆಗೆದುಕೊಂಡುಬಿಡುತ್ತಾನೆಂಬುದು ಕಾಣುತ್ತದೆ.

ದೇವರು ಪ್ರತಿಯೊಬ್ಬನಿಗೂ ಮಾರ್ಗದರ್ಶಿಯಾಗಿ ವಿಶೇಷ ಅತಿಮಾನುಷ ಶಕ್ತಿಯನ್ನು ನೀಡುತ್ತಾನೆಂಬುದು ಮಾರ್ಕಸ್ ಔರೀಲಿಯಸ್‌ನ ಮನೀಷೆ–ಈ ಶ್ರದ್ಧೆಯು ಕ್ರಿಶ್ಚಿಯನ್ ರಕ್ಷಕ ದೇವತೆಯಲ್ಲಿ ಪುನರವತರಿಸಿತು. ವಿಶ್ವವನ್ನು ತೀರ ನಿಕಟವಾಗಿ ಹೆಣೆದ ಇಡಿಯಾಗಿ ಕಾಣುವುದರಲ್ಲಿ ಅವನಿಗೆ ಸಮಾಧಾನ; ಅದೂ ಒಂದು ಜೀವಂತ ವಸ್ತು, ಅದಕ್ಕೂ ಒಂದು ಸತ್ವ ಒಂದು ಆತ್ಮ ಇದೆ ಎಂದವನು ಹೇಳುತ್ತಾನೆ. ಅವನ ಒಂದು ಧ್ಯೇಯವಾಕ್ಯವೆಂದರೆ: 'ಸಕಲ ವಸ್ತುಗಳೂ ವಿಶ್ವದೊಡನೆ ಹೊಂದಿರುವ ಸಂಬಂಧವನ್ನು ಮತ್ತೆ ಮತ್ತೆ ಆಲೋಚಿಸು.' 'ನಿನಗೆ ಏನೇ ಸಂಭವಿಸಿದರೂ, ಅದು ಚಿರಂತನತೆಯು ನಿನಗಾಗಿಯೇ ಸಿದ್ಧಪಡಿಸಿದುದು; ಕಾರಣಗಳ ಎಲ್ಲ ಸೂಚನೆಗಳೂ ನಿನ್ನ ಇರುವಿಕೆಯ ಸೂತ್ರವನ್ನು ನೂತ ಚಿರಂತನತೆಯಿಂದಲೇ ಬಂದವು.' ಇದರೊಡನೆಯೇ, ರೋಮ್ ದೇಶದಲ್ಲಿನ ತನ್ನ ಸ್ಥಾನಮಾನಗಳ ಹೊರತಾಗಿ, ಇಡೀ ಮಾನವಸಂಕುಲವು ಒಂದು ಸಮುದಾಯ ಎಂಬ ಸಂಯಮವಾದೀ ಶ್ರದ್ಧೆ.' ಎಲ್ಲಿಯವರೆಗೆ ನಾನು ಆಂಟೋನಿನಸ್ ಆಗಿರುವೆನೋ ಅಲ್ಲಿಯವರೆಗೆ ನನ್ನ ನಗರ ಮತ್ತ ದೇಶ ರೋಮ್ ಆಗಿರುತ್ತದೆ, ಆದರೆ ನಾನು ಮನುಷ್ಯನೆಂದಾಗ ಅದು ಜಗತ್ತು.' ಇಚ್ಛಾಶಕ್ತಿಯ ಸ್ವಾತಂತ್ರ್ಯದೊಡನೆ ನಿಯತಿವಾದವನ್ನು ಜೋಡಿಸುವುದು ಎಲ್ಲ ಸಂಯಮವಾದಿಗಳಲ್ಲಿನ ತೊಡಕು. ಆಳುವವನಾಗಿ ತನ್ನ ಕರ್ತವ್ಯದ ಬಗ್ಗೆ ಆಲೋಚಿಸುವಾಗ ಅವನು 'ಮನುಷ್ಯರು ಬದುಕಿರುವುದು ಪರಸ್ಪರರಿಗಾಗಿ' ಎಂದು ಹೇಳುತ್ತಾನೆ. ಅದೇ ಪುಟದಲ್ಲಿಯೇ, ಸದ್ಗುಣಿಯೇ ಒಳ್ಳೆಯವನು ಎಂಬ ಸಿದ್ಧಾಂತದ ಬಗ್ಗೆ ಯೋಚಿಸುವಾಗ 'ಒಬ್ಬನ ಕೆಟ್ಟತನ ಮತ್ತೊಬ್ಬನಿಗೆ ಯಾವುದೇ ಹಾನಿ ಮಾಡಲಾರದು' ಎನ್ನುತ್ತಾನೆ. ಒಬ್ಬನ ಒಳ್ಳೆಯತನವು ಮತ್ತೊಬ್ಬನಿಗೆ ಒಳ್ಳೆಯದನ್ನು ಮಾಡಲಾರದು, ಚಕ್ರವರ್ತಿ ನೀರೋನಂತೆ ಕೆಟ್ಟವನಾಗದಿದ್ದರೆ ಅವನು ತನಗಲ್ಲದೆ ಬೇರೆಯವರಿಗೆ ಹಾನಿಯನ್ನು ಉಂಟುಮಾಡಲಾರ ಎಂದವನು ಕಲ್ಪಿಸಿಕೊಳ್ಳುವುದೇ ಇಲ್ಲ: ಆದರೂ ಈ ತೀರ್ಮಾನಕ್ಕೆ ಬರುತ್ತಾನೆ.

'ತಪ್ಪು ಮಾಡುವವನನ್ನು ಕೂಡ ಪ್ರೀತಿಸುವುದು ಮನುಷ್ಯನಿಗೆ ಮಾತ್ರ ವಿಶಿಷ್ಟವಾದುದು. ಅವರು ತಪ್ಪು ಮಾಡಿದಾಗ, ಅವರು ನಿನ್ನ ಸಂಬಂಧಿಗಳು ಎಂದು ಗೊತ್ತಾದಾಗ ಮತ್ತು ಅವರು ತಪ್ಪು ಮಾಡುವುದು ತಮ್ಮ ಅಜ್ಞಾನ ಮತ್ತು ಉದ್ದೇಶರಹಿತವಾಗಿ ಹಾಗೂ ಬೇಗನೇ ನಾವಿಬ್ಬರೂ ಸಾಯುತ್ತೇವೆ, ಮತ್ತು ಎಲ್ಲಕ್ಕಿಂತ ಮಿಗಿಲಾಗಿ, ತಪ್ಪೆಸಗಿದವನು ನಿನಗೇನೂ ಹಾನಿ ಮಾಡಿಲ್ಲ, ಅವನೇನೂ ಹಿಂದಿಗಿಂತ ಆಳ್ವಿಕೆಯನ್ನು ಕೆಟ್ಟದ್ದಾಗಿ ಮಾಡಿಲ್ಲ ಎನ್ನಿಸಿದಾಗ ಹೀಗಾಗುತ್ತದೆ.'

ಮತ್ತೆ, 'ಮನುಷ್ಯಸಂಕುಲವನ್ನು ಪ್ರೀತಿಸು, ದೇವರನ್ನು ಹಿಂಬಾಲಿಸು....

ನಿಯಮಗಳು ಎಲ್ಲವನ್ನೂ ನಿಯಂತ್ರಿಸುತ್ತವೆ ಎಂಬುದನ್ನು ನೆನಪಿನಲ್ಲಿಟ್ಟುಕೊಂಡರೆ ಸಾಕು.'

ಈ ಭಾಗಗಳು ಸಂಯಮವಾದ ಮತ್ತು ಮತಧರ್ಮದಲ್ಲಿನ ವಿರೋಧಗಳನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತವೆ. ಒಂದೆಡೆ, ವಿಶ್ವವು ನಿಷ್ಠುರ ನಿಯತವಾದಿಯಾದ ಏಕೈಕ ಇಡಿ, ಅದರಲ್ಲಿನ ಸಂಭವಿಸುವುದೆಲ್ಲವೂ ಪೂರ್ವನಿಶ್ಚಿತ ಕಾರಣಗಳಿಂದಾದವು. ಮತ್ತೊಂದೆಡೆ, ವ್ಯಕ್ತಿಯ ಇಚ್ಛಾಶಕ್ತಿಯು ಸಂಪೂರ್ಣವಾಗಿ ಸ್ವತಂತ್ರವಾದುದು, ಯಾವುದೇ ಬಾಹ್ಯ ಕಾರಣಗಳು ಅವನನ್ನು ಪಾಪಕಾರ್ಯಕ್ಕೆ ದೂಡಲಾರದು. ಇದೊಂದು ವಿರೋಧ, ಅದರೊಡನೆ ನಿಕಟವಾಗಿ ಸಂಬಂಧಿಸಿರುವ ಮತ್ತೊಂದೂ ಇದೆ. ಇಚ್ಛಾಶಕ್ತಿಯು ಸ್ವತಂತ್ರವಾದುದರಿಂದ ಮತ್ತು ಸದ್ಗುಣಿ ಮಾತ್ರವೇ ಒಳ್ಳೆಯವನಾದುದರಿಂದ ಒಬ್ಬನು ಮತ್ತೊಬ್ಬನಿಗೆ ಒಳ್ಳೆಯದನ್ನಾಗಲೀ ಹಾನಿಯನ್ನಾಗಲೀ ಮಾಡಲಾರ; ಹೀಗಾಗಿ ಉಪಕಾರಬುದ್ಧಿಯೆಂಬುದು ಒಂದು ಭ್ರಮೆ. ಈ ಒಂದೊಂದೂ ವಿರೋಧದ ಬಗ್ಗೆ ಸ್ವಲ್ಪ ಹೇಳಬೇಕಾದುದು ಇದೆ.

ಸ್ವತಂತ್ರಇಚ್ಛಾಶಕಿ ಮತ್ತು ನಿಯತಿವಾದದ ನಡುವಣ ವೈರುಧ್ಯವು ತತ್ವಜ್ಞಾನದ ಆದಿಕಾಲದಿಂದ ಇಲ್ಲಿಯವರೆಗೂ ಮುಂದುವರಿದಿರುವವುಗಳಲ್ಲಿ ಒಂದು, ಆದರೆ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ರೂಪಗಳನ್ನು ಧರಿಸಿದೆ. ಸದ್ಯಕ್ಕೆ ನಮಗೆ ಪ್ರಸ್ತುತವಾದುದು ಸಂಯಮವಾದದ ರೂಪ.

ಸಂಯಮವಾದಿಯನ್ನು ಸಾಕ್ರಟೀಸ್ ರೀತಿಯ ವಿಚಾರಣೆಗೆ ಒಳಪಡಿಸಲು ಸಾಧ್ಯವಾಗುವುದಾದರೆ, ಅವನು ತನ್ನ ವಾದವನ್ನು ಸಮರ್ಥಿಸಿಕೊಳ್ಳುವ ರೀತಿ ಸರಿಸುಮಾರು ಹೀಗಿರುತ್ತದೆ: ವಿಶ್ವವು ಏಕೈಕ ಜೀವಂತ ವಸ್ತು. ಇರುವಿಕೆ, ಆತ್ಮವೊಂದನ್ನು ಹೊಂದಿರುವುದು – ಅದನ್ನು ದೇವರು ಎಂದಾಗಲೀ ವೈಚಾರಿಕತೆ ಎಂದಾಗಲೀ ಕರೆಯಬಹುದು. ಇಡಿಯಾಗಿ ಈ ಅಸ್ತಿತ್ವವು ಸ್ವತಂತ್ರವಾದುದು. ತಾನು ನಿರ್ದಿಷ್ಟ ನಿಯಮಗಳಿಗನುಗುಣವಾಗಿ ಕಾರ್ಯನಿರ್ವಹಿಸುವೆನೆಂದು ದೇವರು ಮೊದಲಿನಿಂದಲೇ ನಿರ್ಧರಿಸಿದ್ದಾನೆ, ಆದರೆ ಅವನು ಆರಿಸಿಕೊಂಡದ್ದು ಅತ್ಯುತ್ಕೃಷ್ಟ ಪರಿಣಾಮವುಳ್ಳವುಗಳನ್ನು. ಕೆಲವು ವೇಳೆ, ನಿರ್ದಿಷ್ಟ ಸನ್ನಿವೇಶಗಳಲ್ಲಿ, ಆಗುವ ಪರಿಣಾಮಗಳು ಸಂಪೂರ್ಣವಾಗಿ ಅಪೇಕ್ಷಣೀಯವಾದವುಗಳೇ ಆಗಿರುವುದಿಲ್ಲ, ಆದರೆ ಈ ಅನನುಕೂಲವನ್ನು, ಶಾಸನಸ್ಥಿರತೆಯ ಅನುಕೂಲಕ್ಕಾಗಿ, ಮಾನವ ನಿಯಮಸಂಹಿತೆಯಂತೆ ತಾಳಿಕೊಳ್ಳುವುದು ಸೂಕ್ತ. ಮಾನವಜೀವಿಯು ಭಾಗಶಃ ಬೆಂಕಿ, ಉಳಿದಂತೆ ಕೆಳಮಟ್ಟದ ಜೇಡಿಮಣ್ಣು; ಅವನು ಬೆಂಕಿಯಾಗಿರುವಷ್ಟರಮಟ್ಟಿಗೆ (ಅತ್ಯುತ್ಕೃಷ್ಟ ಗುಣಮಟ್ಟದ್ದಾಗಿದ್ದರೆ) ಅವನು ದೇವರ ಭಾಗವಾಗಿರುತ್ತಾನೆ. ಮಾನವನ ದೈವಿಕ ಅಂಶವು ತನ್ನ ಇಚ್ಛಾಶಕ್ತಿಯನ್ನು ಸದ್ಗುಣಿಯಾಗಿ ಬಳಸಿಕೊಂಡಾಗ, ಅದು ಭಾಗಶಃ ದೇವರ ಇಚ್ಛಾಶಕ್ತಿಯೂ ಆಗಿರುತ್ತದೆ, ಅದು ಸ್ವತಂತ್ರವಾದದ್ದು. ಹೀಗಾಗಿ

ಈ ಪರಿಸ್ಥಿತಿಗಳಲ್ಲಿ ಮಾನವ ಇಚ್ಛಾಶಕ್ತಿಯೂ ಸ್ವತಂತ್ರವಾದುದು.

ಒಂದು ಹಂತದವರೆಗೆ ಇದು ಸಮಂಜಸವಾದ ಉತ್ತರವಾದರೂ, ನಮ್ಮ ಇಚ್ಛಾಶಕ್ತಿಯ ಕಾರಣಗಳನ್ನು ಪರಿಗಣಿಸಿದಾಗ ಇದು ಕುಸಿದುಬೀಳುತ್ತದೆ. ಉದಾಹರಣೆಗೆ ಅಜೀರ್ಣವು ಮನುಷ್ಯನ ಸದ್ಗುಣದ ಮೇಲೆ ಕೆಟ್ಟ ಪರಿಣಾಮ ಬೀರಬಲ್ಲುದು ಹಾಗೂ ಬಲವಂತವಾಗಿ ಸೂಕ್ತ ಔಷಧಗಳನ್ನು ತೆಗೆದುಕೊಂಡರೆ ಇಚ್ಛಾಶಕ್ತಿಯನ್ನು ಹಾಳುಮಾಡಬಹುದೆಂಬ ಆನುಭವಿಕ ಸತ್ಯವನ್ನು ಎಲ್ಲರೂ ಬಲ್ಲರು. ನಿರಂಕುಶಪ್ರಭುವು ಒಬ್ಬನನ್ನು ಅನ್ಯಾಯದಿಂದ ಸೆರೆಯಲ್ಲಿಡುವ ಎಪಿಕ್ಟೆಟಸ್‌ನ ಪ್ರಿಯವಾದ ಉದಾಹರಣೆಯನ್ನು ತೆಗೆದುಕೊಳ್ಳಿ; ಮಾನವನ ಇತಿಹಾಸದ ಯಾವುದೇ ಕಾಲಕ್ಕಿಂತಲೂ ಈಗ ಇಂತಹ ಉದಾಹರಣೆಗಳು ಹೆಚ್ಚಿವೆ. ಈ ಕೆಲವು ವ್ಯಕ್ತಿಗಳು ಸಂಯಮವೀರತ್ವದಿಂದ ನಡದುಕೊಂಡಿದ್ದಾರೆ, ಕೆಲವರು ಆನುಭಾವಿಕವಾಗಿ ಹಾಗೆ ನಡೆದುಕೊಂಡಿಲ್ಲ. ಸಾಕಷ್ಟು ಚಿತ್ರಹಿಂಸೆಯು ಯಾವುದೇ ವ್ಯಕ್ತಿಯ ದೃಢತೆಯನ್ನು ಮುರಿಯಬಹುದೆಂಬುದೂ, ಆದರೆ ಮಾರ್ಫೀನ್ ಅಥವಾ ಕೊಕೇನ್ ವ್ಯಕ್ತಿಯ ನೋವನ್ನು ಕಡಿಮ ಮಾಡಬಹುದೆಂಬುದೂ ತಿಳಿದಿದೆ. ವಾಸ್ತವವಾಗಿ, ನಿರಂಕುಶಪ್ರಭುವು ಅವೈಜ್ಞಾನಿಕವಾಗಿರುವ ಮಟ್ಟಿಗೆ ಈ ಇಚ್ಛಾಶಕ್ತಿಯು ಅವನಿಂದ ಸ್ವತಂತ್ರವಾಗಿರಬಹುದು. ಇದೊಂದು ಅತಿರೇಕದ ನಿದರ್ಶನ; ಆದರೆ ಜೀವರಹಿತ ಜಗತ್ತಿನಲ್ಲಿನ ನಿಯತಿವಾದದ ಪರವಾಗಿರುವ ವಾದಗಳೇ ಸಾಮಾನ್ಯವಾಗಿ ಮಾನವ ಇಚ್ಛಾಶಕ್ತಿಯಲಯಕ್ಕೂ ಅನ್ವಯಿಸುತ್ತವೆ. ಈ ವಾದಗಳು ಅಂತಿಮವಾದವು ಎಂದು ನಾನು ಹೇಳುವುದಿಲ್ಲ, ಹಾಗೆ ಭಾವಿಸುವುದೂ ಇಲ್ಲ. ಎರಡೂ ವಲಯಗಳಲ್ಲಿ ಅವು ಒಂದೇ ಬಗೆಯ ಸಾಮರ್ಥ್ಯವುಳ್ಳವು, ಒಂದು ವಲಯಕ್ಕೆ ಅನ್ವಯವಾಗುವುದೆಂದು ಒಪ್ಪುವುದು, ಇನ್ನೊಂದು ವಲಯಕ್ಕೆ ಅದನ್ನು ಅನ್ವಯಿಸಲಾಗದು ಎನ್ನಲು ಯಾವ ಸಮರ್ಥನೆಯೂ ಇಲ್ಲ ಎಂದಷ್ಟೇ ನಾನು ಹೇಳುತ್ತಿರುವುದು. ಪಾಪಿಗಳಿಗೆ ತಾಳ್ಮೆಯ ಬೋಧನೆಯನ್ನು ಮಾಡುವ ಸಂಯಮವಾದಿಯು ಪಾಪಿಷ್ಟ ಇಚ್ಛಾಶಕ್ತಿಗೆ ಪೂರ್ವ ಕಾರಣಗಳೇ ಪ್ರೇರಕ ಎನ್ನುತ್ತಾನೆ. ಸದ್ಗುಣಭರಿತ ಇಚ್ಛಾಶಕ್ತಿ ಮಾತ್ರವೇ ಸ್ವತಂತ್ರವಾದುದು ಎಂದವನು ಕಾಣುತ್ತಾನೆ. ಆದರೆ ಇದು ಅಸಂಗತವಾದುದು. ತನ್ನ ಸದ್ಗುಣಗಳಿಗೆ ತಂದೆತಾಯಿಗಳು, ಅಜ್ಜಅಜ್ಜಿಯರು, ಮತ್ತು ಗುರುಗಳ ಪ್ರಭಾವವೇ ಕಾರಣವೆಂದು ಮಾರ್ಕಸ್ ಔರೀಲಿಯಸ್ ಹೇಳಿಕೊಳ್ಳುತ್ತಾನೆ. ಒಳ್ಳೆಯ ಇಚ್ಛಾಶಕ್ತಿಯೂ ಕೆಟ್ಟ ಇಚ್ಛಾಶಕ್ತಿಯಷ್ಟೇ ಹಿಂದಿನ ಕಾರಣಗಳ ಫಲಿತವೇ ಆಗಿರುತ್ತದೆ. ಅದನ್ನು ಅನುಸರಿಸುವವರ ಸದ್ಗುಣಕ್ಕೆ ತನ್ನ ತತ್ವಜ್ಞಾನವೇ ಕಾರಣವೆಂದು ಸರಿಯಾಗಿಯೇ ಸಂಯಮವಾದಿಯು ಹೇಳುತ್ತಾನೆ, ಆದರೆ ಒಂದಷ್ಟು ಮಟ್ಟಿಗೆ ಬೌದ್ಧಿಕ ದೋಷವು ಸಂಮಿಶ್ರಣಗೊಳ್ಳದಿದ್ದರೆ ಅದು ಅಪೇಕ್ಷಣೀಯ ಫಲಿತವನ್ನುಂಟುಮಾಡದೆಂದು ತೋರುತ್ತದೆ. ಸದ್ಗುಣ-

ದುರ್ಗುಣಗಳೆರಡೂ ಪೂರ್ವನಿರ್ಧಾರಿತ ಕಾರಣಗಳ ಅನಿವಾರ್ಯ ಫಲಿತವಾಗಿರುತ್ತವೆ ಎಂಬ ತಿಳಿವಳಿಕೆಯು (ಸಂಯಮವಾದಿಗಳು ಹೇಳಬೇಕಾಗಿದ್ದಂತೆ) ನೈತಿಕ ಪ್ರಯತ್ನಗಳ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ.

ಈಗ ನಾನು ಅದರ ಎರಡನೆಯ ವೈರುಧ್ಯಕ್ಕೆ ಬರುತ್ತೇನೆ. ಉಪಕಾರವನ್ನು ಬೋಧಿಸುವ ಸಂಯಮವಾದಿಯು, ಸದ್ಗುಣಭರಿತ ಇಚ್ಛಾಶಕ್ತಿಯು ಮಾತ್ರ ಒಳ್ಳೆಯದು ಮತ್ತು ಬಾಹ್ಯ ಕಾರಣಗಳಿಗೆ ಹೊರತಾದುದರಿಂದ, ಯಾರೂ ಇತರರಿಗೆ ಒಳ್ಳೆಯದನ್ನಾಗಲೀ ಕೆಟ್ಟುದನ್ನಾಗಲೀ ಮಾಡಲು ಸಾಧ್ಯವಿಲ್ಲವೆಂದು ತನ್ನ ಸೈದ್ಧಾಂತಿಕ ನಿಲವಿನಲ್ಲಿ ಹೇಳುತ್ತಾನೆ. ಈ ವೈರುಧ್ಯವು ಮತ್ತೊಂದಕ್ಕಿಂತ ಹೆಚ್ಚು ಸುವ್ಯಕ್ತವಾದುದು ಹಾಗೂ ಸಂಯಮವಾದಿಗಳಿಗೇ (ಜೊತೆಗೆ ಕೆಲವರು ಕ್ರಿಶ್ಚಿಯನ್ ನೈತಿಕವಾದಿಗಳಿಗೂ) ವಿಶಿಷ್ಟವಾದುದು. ಇದನ್ನವರು ಗಮನಿಸದೇ ಇರುವ ವಿವರಣೆಯೆಂದರೆ, ಬೇರೆ ಇತರರಂತೆಯೇ ಅವರಿಗೆ ಇಬ್ಬಗೆಯ ನೀತಿಸಂಹಿತೆಯಿತ್ತು: ಸುಸಂಸ್ಕೃತವಾದುದು ತಮಗೆ, ಕೆಳಮಟ್ಟದ್ದು 'ನಿಯಮಬಾಹಿರರಾದ ಕೆಳಹುಟ್ಟಿನವರಿಗೆ'. ಸಂಯಮವಾದಿಯು ತನ್ನ ಬಗ್ಗೆ ಯೋಚಿಸುವಾಗ, ಸುಖ ಮತ್ತಿತರ ಬೇರೆಲ್ಲ ಐಹಿಕ ಒಳಿತುಗಳು ಬೆಲೆಯಿಲ್ಲದವು; ಸುಖವನ್ನು ಬಯಸುವುದು ನಿಸರ್ಗವಿರೋಧಿ ಎಂದೂ ಅವನು ಹೇಳುತ್ತಾನೆ, ಅಂದರೆ ದೈವಿಕ ಇಚ್ಛಾಶಕ್ತಿಗೆ ಬದ್ಧನಾಗದಿರುವುದೇ ಅದಕ್ಕೆ ಕಾರಣ. ಆದರೆ ರೋಮನ್ ಚಕ್ರಾಧಿಪತ್ಯವನ್ನು ಆಳುವ ಕಾರ್ಯದಲ್ಲಿ ತೊಡಗಿದ್ದ ಮಾರ್ಕಸ್ ಔರೀಲಿಯಸ್‌ನಿಗೆ ಇದು ಸಮಂಜಸವಲ್ಲವೆಂಬ ಅರಿವಿತ್ತು. ಆಫ್ರಿಕದಿಂದ ಆಹಾರಧಾನ್ಯವನ್ನು ಹೊತ್ತು ತರುವ ಹಡಗು ರೋಮ್‌ಗೆ ತಲುಪಬೇಕು, ರೋಗದ ಯಾತನೆಯನ್ನು ನಿವಾರಿಸುವ ಮಾರ್ಗಗಳನ್ನು ಅನುಸರಿಸಬೇಕು, ಬಾರ್ಬೇರಿಯನ್ ಶತ್ರುಗಳು ತನ್ನ ದೇಶದ ಗಡಿಯೊಳಗೆ ಕಾಲಿಡದಂತೆ ನೋಡಿಕೊಳ್ಳಬೇಕು – ಇವೆಲ್ಲವೂ ತನ್ನ ಕರ್ತವ್ಯ ಎಂದೇ ಭಾವಿಸಿದ್ದ. ಅಂದರೆ, ವಾಸ್ತವರೋ ಸಂಭಾವ್ಯರೋ ಆದ ಸಂಯಮವಾದಿ ತತ್ವಜ್ಞಾನಿಗಳೆಂದು ತಾನು ಪರಿಗಣಿಸದ ತನ್ನ ಪ್ರಜೆಗಳ ಆಳ್ವಿಕೆಯಲ್ಲವನು ಯಾವುದು ಸರಿ ಯಾವುದು ತಪ್ಪು ಎಂಬ ಸಾಮಾನ್ಯ ಐಹಿಕ ಮಾನದಂಡಗಳನ್ನೇ ಗಮನಿಸುತ್ತಾನೆ. ಈ ಮಾನದಂಡಗಳನ್ನು ಅಳವಡಿಸಿಕೊಂಡೇ ಅವನು ಆಡಳಿತಗಾರನಾಗಿ ಕಾರ್ಯನಿರ್ವಹಣೆ ಮಾಡುತ್ತಾನೆ. ವಿಚಿತ್ರವಾದುದೆಂದರೆ, ಈ ಅವನ ಕರ್ತವ್ಯವೇ ಸಂಯಮವಾದಿ ಸಂತನು ಮಾಡಬೇಕಾದುದಕ್ಕಿಂತ ಉನ್ನತ ವಲಯಕ್ಕೆ ಸೇರಿದುದು, ಆದರೆ ಸಂಯಮವಾದಿ ಸಂತನು ಮೂಲಭೂತ ದೋಷ ಎಂದು ಪರಿಗಣಿಸುವ ನೀತಿಯಿಂದಲೇ ಸಾಧಿತವಾದುದು.

ಈ ತೊಂದರೆಗೆ ಉತ್ತರವೆಂದರೆ ನನಗೆ ಹೊಳೆಯುವುದು, ಪ್ರಾಯಶಃ ತಾರ್ಕಿಕವಾಗಿ ಅಲ್ಲಗಳೆಯಲಾಗದ್ದು, ಆದರೆ ಸಮಂಜಸವೆನಿಸದ್ದು. ಸಂಯಮವಾದಿಗಳದರಂತಹುದೇ ನೀತಿಸಂಹಿತೆಯನ್ನು ಪ್ರತಿಪಾದಿಸುತ್ತಿದ್ದ ಕ್ಯಾಂಟ್

ಹೀಗೆ ಹೇಳಬಹುದಾಗಿತ್ತು. ಒಳ್ಳೆಯ ಇಚ್ಛಾಶಕ್ತಿಗಿಂತ ಒಳ್ಳೆಯದು ಯಾವುದೂ ಇಲ್ಲ ಎಂದು ಅವನು ಹೇಳುತ್ತಿದ್ದುದು ನಿಜ, ಆದರೆ ಇಚ್ಛಾಶಕ್ತಿಯು ಒಳ್ಳೆಯದಾಗುವುದು ಅದನ್ನು ಸರಿಯಾದ ದಿಕ್ಕಿನತ್ತ ಹರಿಸಿದಾಗ ಮಾತ್ರ, ಅಂದರೆ ತನ್ನಷ್ಟಕ್ಕೇ ಅದು ತಟಸ್ಥವಾದುದು. 'ಎ' ಅನ್ನುವವನು ಸುಖಿಯೋ ಅಸುಖಿಯೋ ಎನ್ನುವುದು ಮುಖ್ಯವಲ್ಲ, ಆದರೆ ನಾನು ಸದ್ಗುಣಿಯಾದರೆ ಅವನು ಸುಖವಾಗಿರುವಂತೆ ಮಾಡುತ್ತೇನೆ, ಯಾಕೆಂದರೆ ನೈತಿಕ ನಿಯಮವು ಹೇಳುವುದೂ ಅದನ್ನೇ. ಆದರೆ ನಾನು 'ಎ' ಸದ್ಗುಣಿಯಾಗುವಂತೆ ಮಾಡಲಾರೆ, ಯಾಕೆಂದರೆ ಅದು ಅವನನ್ನು ಮಾತ್ರ ಅವಲಂಬಿಸಿರುವಂತಹುದು; ಆದರೆ ಅವನು ಸುಖಿಯೋ, ಶ್ರೀಮಂತನೋ, ಸುಶಿಕ್ಷಿತನೋ, ಆರೋಗ್ಯವಂತನೋ ಆಗಿರುವಂತೆ ಏನಾದರೂ ನಾನು ಮಾಡಬಹುದು. ಹೀಗಾಗಿ ಸಂಯಮವಾದಿ ನೈತಿಕತೆಯನ್ನು ಹೀಗೆ ಮಂಡಿಸಬಹುದು: ಕೆಲವು ಸಾಮಗ್ರಿಗಳು ಕ್ಷುಲ್ಲಕವೆಂದು ಪರಿಗಣಿತವಾದವು, ಆದರೆ ಅದು ಸರಿಯಲ್ಲ; ಈ ಅಪಸಾಮಗ್ರಿಗಳನ್ನು ಇತರರಿಗೆಂದು ಸಂಗ್ರಹಿಸಲು ಪ್ರಚೋದಿಸುವ ಇಚ್ಛಾಶಕ್ತಿಯು ಒಳ್ಳೆಯದು. ಈ ಸಿದ್ಧಾಂತದಲ್ಲಿ ಯಾವುದೇ ತಾರ್ಕಿಕ ವೈರುಧ್ಯವಿಲ್ಲ, ಆದರೆ ಯಾವುದನ್ನು ಸಾಮಾನ್ಯವಾಗಿ ಸಾಮಗ್ರಿಗಳು ಎಂದು ಕರೆಯುತ್ತೇವೋ ಅವು ಬೆಲೆಯಿಲ್ಲದವು ಎಂದು ನಾವೇನಾದರೂ ನಿಜವಾಗಿ ಶ್ರದ್ಧೆ ಇಟ್ಟುಕೊಂಡರೆ ತನ್ನ ಸಮಂಜಸತೆಯನ್ನದು ಕಳೆದುಕೊಳ್ಳುತ್ತದೆ, ಯಾಕೆಂದರೆ ಹಾಗಾದಾಗ ಸದ್ಗುಣಭರಿತ ಇಚ್ಛಾಶಕ್ತಿಯು ಬೇರಾವುದೋ ಗುರಿಸಾಧನೆಯತ್ತ ಕಾರ್ಯಶೀಲವಾಗುತ್ತದೆ.

ಸಂಯಮವಾದಕ್ಕೆ ಒಂದು ಮಟ್ಟಿಗಿನ ಹುಳಿದ್ರಾಕ್ಷಿಯ ಕತೆ ಅನ್ವಯಿಸುತ್ತದೆ. ನಾವು ಸುಖಿಗಳಾಗಲು ಸಾಧ್ಯವಿಲ್ಲ; ಆದರೆ ಒಳ್ಳೆಯವರಾಗಬಹುದು; ಹೀಗಾಗಿ ನಾವು ಎಲ್ಲಿಯುವರೆಗೆ ಒಳ್ಳೆಯವರಾಗಿರುತ್ತೇವೆಯೋ ಅಲ್ಲಿಯುವರೆಗೆ ಸುಖವಾಗಿರುವುದು ಮುಖ್ಯವೇ ಅಲ್ಲ ಎಂದು ನಟಿಸಬಹುದು. ಇದೇನೋ ವೀರಸಿದ್ಧಾಂತವೇ, ಮತ್ತು ಕೆಟ್ಟ ಜಗತ್ತಿನಲ್ಲಿ ಉಪಯುಕ್ತವಾದುದು; ಆದರೆ ಇದು ಅಷ್ಟು ನಿಜವೂ ಅಲ್ಲ, ಮೂಲಭೂತ ಅರ್ಥದಲ್ಲಿ, ಪ್ರಾಮಾಣಿಕವೂ ಅಲ್ಲ.

ಸಂಯಮವಾದಿಗಳ ಪ್ರಮುಖ ಮಹತ್ವವು ಅವರ ನೈತಿಕತೆಯಲ್ಲಿದ್ದರೂ, ಬೇರೆ ವಲಯಗಳಲ್ಲಿ ಅವರ ಬೋಧನೆಯು ಫಲ ನೀಡಿದ ಎರಡು ಅಂಶಗಳಿವೆ. ಇವುಗಳಲ್ಲಿ ಒಂದು, ಜ್ಞಾನವಲಯ, ಇನ್ನೊಂದು ನಿಯಮಸಿದ್ಧಾಂತ ಮತ್ತು ನಿಸರ್ಗದತ್ತ ಹಕ್ಕುಗಳು.

ಪ್ಲೇಟೋ ಇದ್ದರೂ, ಜ್ಞಾನದ ವಲಯದಲ್ಲಿ, ಅವರು ಗ್ರಹಿಕೆಯನ್ನು ಒಪ್ಪಿಕೊಂಡರು; ಇಂದ್ರಿಯಗಳ ವಂಚಕತೆಯೇ ತಪ್ಪು ತೀರ್ಮಾನಕ್ಕೆ ಕಾರಣವೆಂದರು, ಕೊಂಚ ಎಚ್ಚರ ವಹಿಸಿ ಅದನ್ನು ನಿವಾರಿಸಿಕೊಳ್ಳಬಹುದೆಂದರು. ಜೇನೋನ ನೇರ ಶಿಷ್ಯನಾದ ಒಬ್ಬ ಸಂಯಮವಾದಿ ತತ್ವಜ್ಞಾನಿ ಸ್ಫೇರಸ್‌ನ ಸಿದ್ಧಾಂತದ ಬಗ್ಗೆ ಕೇಳಿದ್ದ

ದೊರೆ ಟಾಲೆಮಿ ಅವನನ್ನು ಒಮ್ಮೆ ಔತಣಕ್ಕೆ ಆಹ್ವಾನಿಸುತ್ತಾನೆ, ಅವನಿಗೆ ಮೇಣದ ಒಂದು ದಾಳಿಂಬೆ ಹಣ್ಣನ್ನು ನೀಡುತ್ತಾನೆ. ಈ ತತ್ವಜ್ಞಾನಿಯು ಅದನ್ನು ತಿನ್ನಲು ಪ್ರಯತ್ನಿಸುತ್ತಾನೆ, ಅದನ್ನು ಕಂಡ ದೊರೆ ನಗುತ್ತಾನೆ. ಅದು ನಿಜವಾದ ದಾಳಿಂಬೆ ಎನ್ನುವ ಖಾತ್ರಿ ತನಗೆ ಇಲ್ಲ, ಆದರೆ ದೊರೆಯ ಔತಣದಲ್ಲಿ ತಿನ್ನಲಾರದ್ದು ಯಾವುದನ್ನೂ ನೀಡುವುದಿಲ್ಲವೆಂದು ಭಾವಿಸಿದ್ದೆ ಎನ್ನುತ್ತಾನಂತೆ.[೧೨೩] ಈ ಉತ್ತರದಲ್ಲಿ ಅವನು, ಗ್ರಹಿಕೆಯ ಮುಖಾಂತರ ಖಾತ್ರಿಯಾದುದು ಎಂದು ತಿಳಿಯುವ ವಿಷಯಗಳು ಹಾಗೂ ಈ ಆಧಾರದ ಮೇಲೆ ಕೇವಲ ಸಂಭಾವ್ಯವಾದವು. ಒಟ್ಟಾರೆ, ಈ ಸಿದ್ಧಾಂತವು ಸಮಂಜಸವೂ ವೈಜ್ಞಾನಿಕವೂ ಆಗಿತ್ತು.

ಅವರ ಮತ್ತೊಂದು ಸಿದ್ಧಾಂತವೆಂದರೆ ಜ್ಞಾನಮೀಮಾಂಸೆಗೆ ಸಂಬಂಧಿಸಿದ್ದು; ಅದು ಹೆಚ್ಚು ಪ್ರಭಾವಶಾಲಿಯಾಯಿತು, ಆದರೆ ಅಷ್ಟೇ ಪ್ರಶ್ನಾರ್ಹವೂ ಆದುದು. ಅದೆಂದರೆ ಅವರು ಆಂತರಿಕ ಗ್ರಹಿಕೆ ಮತ್ತು ತತ್ವಗಳದ್ದು. ಗ್ರೀಕ್ ತರ್ಕವೆಲ್ಲ ನಿಗಮನಾತ್ಮಕವಾದುದು, ಇದು ಮೊದಲ ಆಧಾರವಾಕ್ಯದ ಪ್ರಶ್ನೆಯನ್ನೆತ್ತಿತು. ಈ ಮೊದಲ ಆಧಾರವಾಕ್ಯವು, ಕನಿಷ್ಠ ಪಕ್ಷ ಭಾಗಶಃ, ಸಾಮಾನ್ಯವಾದುದಾಗಿರಬೇಕಾಗಿತ್ತು, ಅಲ್ಲದೆ ಅವುಗಳನ್ನು ಸಾಧಿಸುವ ಯಾವುದೇ ವಿಧಾನವಿರಲಿಲ್ಲ. ಕೆಲವು ತತ್ವಗಳು ಬೆಳಕಿನಂತೆ ಸ್ಪಷ್ಟವಾದವು, ಎಲ್ಲರೂ ಒಪ್ಪಿರುವಂತಹುವು; ಇವುಗಳನ್ನು, ಯೂಕ್ಲಿಡ್‌ನ 'ಎಲಿಮೆಂಟ್ಸ್'ನಲ್ಲಿನಂತೆ, ನಿಮಗಮನದ ಬುನಾದಿಯಾಗಿ ಪರಿಗಣಿಸಬಹುದೆಂದು ಸಂಯಮವಾದಿಗಳು ವಾದಿಸಿದರು. ಹಾಗೆಯೇ ಅಂತರ್ಗತ ಗ್ರಹಿಕೆಗಳನ್ನು ಸೂತ್ರವಾಕ್ಯಗಳ ಆರಂಭ ಬಿಂದುವಾಗಿ ಪರಿಗಣಿಸಬೇಕೆಂದು ಹೇಳಿದರು. ಈ ವಾದವನ್ನು ಮಧ್ಯಯುಗದಾದ್ಯಂತ ಒಪ್ಪಿಕೊಳ್ಳಲಾಯಿತು, ಡೆಕಾರ್ಟೆ ಕೂಡ ಅದನ್ನೊಪ್ಪಿಕೊಂಡ.

ಹದಿನಾರು ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ 'ನೈಸರ್ಗಿಕ ನಿಯಮ' ಸಿದ್ಧಾಂತವು ಕಾಣಿಸಿಕೊಳ್ಳುವುದು ಸಂಯಮವಾದದ ಪುನರುಜ್ಜೀವನವಾಗಿ, ಆದರೆ ಕೆಲವು ಮುಖ್ಯ ಪರಿಷ್ಕರಣೆಗಳೊಂದಿಗೆ. 'ನೈಸರ್ಗಿಕ ನಿಯಮ' (ಜೂಸ್ ನಾಚುರಾಲ್)ಮತ್ತು 'ಅವಕಾಶಗಳ ನಿಯಮ' (ಜೂಸ್ ಜೆಂಟಿಯಮ್) – ಇವುಗಳ ನಡುವೆ ವ್ಯತ್ಯಾಸ ಮಾಡಿದವರು ಸಂಯಮವಾದಿಗಳೇ. ನೈಸರ್ಗಿಕನಿಯಮವು ರೂಪಿತವಾದುದು ವ್ಯವಹಾರಜ್ಞಾನದಲ್ಲಿಯೇ ಅಡಕವಾದ ತತ್ವಗಳನ್ನು ಆಧಾರವಾಕ್ಯಗಳಾಗಿ ಹೊಂದುವ ಮೂಲಕ. ನೈಸರ್ಗಿಕವಾಗಿ ಎಲ್ಲ ಮಾನವರೂ ಸಮಾನರು ಎಂಬುದು ಸಂಯಮವಾದಿಗಳ ನಿಲವು. ಮಾರ್ಕಸ್ ಔರೀಲಿಯಸ್ ತನ್ನ 'ಮೆಡಿಟೇಷನ್ಸ್'ನಲ್ಲಿ' ಒಪ್ಪುವುದು 'ಎಲ್ಲರಿಗೂ ಸಮಾನ ಕಾನೂನುಗಳಿರುವ,

---

೧೨೩. *'ಡಯೋಜೆನೀಸ್ ಲಯೆರ್ಟಸ್'*, ಭಾಗ. ೭, ಪು. ೧೭೭.

ಸಮಾನ ಹಕ್ಕುಗಳು ಮತ್ತು ಸಮಾನ ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ಹೊಂದಿರುವ ಪ್ರಭುತ್ವವನ್ನು, ಪ್ರಜೆಗಳೆಲ್ಲರ ಸ್ವಾತಂತ್ರ್ಯವನ್ನು ಗೌರವಿಸುವ ರಾಜಪ್ರಭುತ್ವವನ್ನು.' ಈ ಆದರ್ಶವನ್ನು ಒಂದೇ ಬಗೆಯಲ್ಲಿ ರೋಮನ್ ಚಕ್ರಾಧಿಪತ್ಯದಲ್ಲಿ ಜಾರಿಗೊಳಿಸಲಾಗಲಿಲ್ಲವಾದರೂ ಅದು ಕಾನೂನುಗಳ ಮೇಲೆ ಪ್ರಭಾವ ಬೀರಿತು, ಅದರಲ್ಲಿಯೂ ಹೆಂಗಸರು ಮತ್ತು ಗುಲಾಮರ ಸ್ಥಿತಿಗಳ ಸುಧಾರಣೆಗೆ ಸಂಬಂಧಿಸಿದಂತೆ. ಸಂಯಮವಾದದ ಈ ನಿಲವನ್ನು ಭಾಗಶಃ ಮತ್ತು ಮಿಕ್ಕೆಲ್ಲದರ ಬಹುಭಾಗವನ್ನು ಕ್ರೈಸ್ತಮತಧರ್ಮವು ಸ್ವೀಕರಿಸಿತು. ಕೊನೆಗೆ, ಹದಿನೇಳನೆಯ ಶತಮಾನದಲ್ಲಿ, ನಿರಂಕುಶಾಧಿಕಾರವನ್ನು ಪರಿಣಾಮಕಾರಿಯಾಗಿ ವಿರೋಧಿಸುವ ಸಂದರ್ಭದಲ್ಲಿ, ಸಂಯಮವಾದಿಗಳ ನೈಸರ್ಗಿಕ ನಿಯಮ ಮತ್ತು ನೈಸರ್ಗಿಕ ಸಮಾನತೆಗಳು ಕ್ರಿಶ್ಚಿಯನ್ ವೇಷದಲ್ಲಿ ವ್ಯಾವಹಾರಿಕ ಶಕ್ತಿಯನ್ನು ಪಡೆಯಿತು, ಹಿಂದೆ ಅದನ್ನು ಚಕ್ರವರ್ತಿಯು ಕೂಡ ನೀಡಲು ಸಾಧ್ಯವಿರಲಿಲ್ಲ.

❍

೨೯
ಸಂಸ್ಕೃತಿಗೆ ಸಂಬಂಧಿಸಿದಂತೆ ರೋಮನ್ ಚಕ್ರಾಧಿಪತ್ಯ

ರೋಮನ್ ಚಕ್ರಾಧಿಪತ್ಯವು ಸಂಸ್ಕೃತಿಯ ಇತಿಹಾಸದ ಮೇಲೆ ನಾನಾ ವಿಧವಾಗಿ ಹೆಚ್ಚು ಕಡಿಮೆ ಬೇರೆ ಬೇರೆ ರೀತಿಗಳಲ್ಲಿ ಪ್ರಭಾವಿಸಿತು.

ಮೊದಲನೆಯದಾಗಿ: ಹೆಲೆನಿಸ್ಟಿಕ್ ಚಿಂತನೆಯ ಮೇಲೆ ರೋಮ್‌ನ ನೇರ ಪ್ರಭಾವವಿದೆ. ಇದು ಅಷ್ಟು ಮುಖ್ಯವೂ ಅಲ್ಲ, ಗಾಢವೂ ಅಲ್ಲ.

ಎರಡನೆಯದಾಗಿ: ಚಕ್ರಾಧಿಪತ್ಯದ ಪಶ್ಚಿಮಾರ್ಧದ ಮೇಲೆ ಗ್ರೀಸ್ ಮತ್ತು ಪೌರಸ್ತ್ಯಗಳು ಮಾಡಿದ ಪ್ರಭಾವ. ಇದು ಗಾಢವಾದುದೂ ಹೌದು, ದೀರ್ಘಕಾಲಿಕವಾದುದೂ ಹೌದು, ಯಾಕೆಂದರೆ ಅದರಲ್ಲಿ ಕ್ರಿಶ್ಚಿಯನ್ ಮತಧರ್ಮವೂ ಸೇರುತ್ತದೆ.

ಮೂರನೆಯದಾಗಿ: ಸಂಸ್ಕೃತಿ ಪ್ರಸರಣದಲ್ಲಿ ಮತ್ತು ಒಂದು ಪ್ರಭುತ್ವಕ್ಕೆ ಸಂಬಂಧಿಸಿದಂತೆ ಒಂದು ನಾಗರಿಕತೆ ಎಂಬ ಭಾವನೆಯನ್ನು ಜನಗಳಲ್ಲಿ ಬಿತ್ತುವಲ್ಲಿ ದೀರ್ಘಕಾಲದ ರೋಮನ್ ಶಾಂತಿಕಾಲದ ಪ್ರಾಮುಖ್ಯ.

ನಾಲ್ಕನೆಯದಾಗಿ: ಹೆಲೆನಿಸ್ಟಿಕ್ ನಾಗರಿಕತೆಯನ್ನು ಮಹಮ್ಮದೀಯರು ಮತ್ತು ಆನಂತರ ಕೊನೆಗೆ ಪಶ್ಚಿಮ ಯೂರೋಪ್‌ನಲ್ಲಿ ವ್ಯಾಪಕಗೊಳಿಸಿದುದು.

ರೋಮ್‌ನ ಈ ಪ್ರಭಾವಗಳ ಕುರಿತು ವಿಶ್ಲೇಷಿಸುವ ಮುನ್ನ, ರಾಜಕೀಯ ಇತಿಹಾಸದ ಸಂಕ್ಷಿಪ್ತ ವಿವರಣೆಯು ಉಪಯುಕ್ತವಾಗುತ್ತದೆ.

ಅಲೆಕ್ಸಾಂಡರ್‌ನ ವಿಜಯಯಾತ್ರೆಯು ಪಶ್ಚಿಮ ಮೆಡಿಟರೇನಿಯನ್ ಪ್ರದೇಶವನ್ನು ಬಹುತೇಕ ಮುಟ್ಟೇ ಇರಲಿಲ್ಲ; ಕ್ರಿಪೂ ಮೂರನೆಯ ಶತಮಾನದಲ್ಲಿ ಅದು ಎರಡು ಬಲಿಷ್ಠ ನಗರಪ್ರಭುತ್ವಗಳ – ಕಾರ್ಥೇಜ್ ಮತ್ತು ಸಿರಾಕ್ಯೂಸ್ – ಪ್ರಾಬಲ್ಯಕ್ಕೊಳಗಾಗಿತ್ತು. ಮೊದಲ ಮತ್ತು ಎರಡನೇ ಪ್ಯೂನಿಕ್ ಯುದ್ಧಗಳಲ್ಲಿ (ಕ್ರಿಪೂ ೨೬೪–೨೪೧ ಮತ್ತು ೨೧೮–೨೦೧) ರೋಮ್ ಸಿರಾಕ್ಯೂಸ್ ಅನ್ನು ಗೆದ್ದಿತು ಹಾಗೂ ಕಾರ್ಥೇಜ್ ಅನ್ನು ನಗಣ್ಯವಾಗಿಸಿತು. ಕ್ರಿಪೂ ಎರಡನೆಯ ಶತಮಾನದಲ್ಲಿ, ರೋಮ್ ಮ್ಯಾಸೆಡೋನಿಯದ ರಾಜತ್ವಗಳನ್ನು ಗೆದ್ದಿತು – ಕ್ಲಿಯೋಪಾತ್ರಳ ಸಾವಿನ ತನಕ

(ಕ್ರಿಪೂ ೩೦) ಈಜಿಪ್ಟ್ ಒಂದು ಸಾಮಂತಪ್ರಭುತ್ವವಾಗಿ ಕಾಲ ದೂಡಿತು ಎಂಬುದು ನಿಜವೇ. ಸ್ಪೆಯಿನ್ ಅನ್ನು ಗೆದ್ದುದು ಹ್ಯಾನಿಬಾಲ್‌ನೊಂದಿಗಿನ ಯುದ್ಧದಲ್ಲಿನ ಒಂದು ಘಟನೆ; ಕ್ರಿಪೂ ಮೊದಲ ಶತಮಾನದ ಮಧ್ಯಭಾಗದಲ್ಲಿ ಸೀಸರ್ ಫ್ರಾನ್ಸ್ ಅನ್ನು ಗೆದ್ದ, ಮತ್ತು ಒಂದು ನೂರು ವರ್ಷಗಳ ಬಳಿಕ ಇಂಗ್ಲಂಡ್ ಅನ್ನು ಗೆದ್ದುದು. ತನ್ನ ಉಚ್ಛ್ರಾಯ ಕಾಲದಲ್ಲಿ ಚಕ್ರಾಧಿಪತ್ಯದ ಗಡಿಗಳೆಂದರೆ ರೈನ್ ಮತ್ತು ಡೆನ್ಯೂಬ್‌ಗಳು, ಏಷ್ಯದಲ್ಲಿ ಯೂಫ್ರಟೀಸ್ ಮತ್ತು ಉತ್ತರ ಆಫ್ರಿಕದಲ್ಲಿನ ಮರಳುಗಾಡು ಇವುಗಳು. ಪ್ರಾಯಶಃ ರೋಮನ್ ಸಾಮ್ರಾಜ್ಯಶಾಹಿ ಯು ಉತ್ತರ ಆಫ್ರಿಕದಲ್ಲಿ ಅತ್ಯುತ್ತಮವಾದುದಾಗಿತ್ತು (ಸಂತ ಸೈಪ್ರಿಯನ್ ಮತ್ತು ಸಂತ ಆಗಸ್ಟೈನ್‌ರ ಸ್ಥಳವಾಗಿ ಕ್ರಿಶ್ಚಿಯನ್ ಇತಿಹಾಸದಲ್ಲಿ ಮುಖ್ಯವಾದುದು), ರೋಮನ್ ಕಾಲಕ್ಕೆ ಮುಂಚೆ ಮತ್ತು ಆನಂತರ ಬೇಸಾಯಗೊಳ್ಳದ ವಿಶಾಲ ಪ್ರದೇಶಗಳನ್ನು ಫಲವತ್ತನ್ನಾಗಿಸಿ ಜನಭರಿತ ನಗರಗಳನ್ನು ಪೋಷಿಸಿತು. ಒಟ್ಟಾರೆ ರೋಮನ್ ಚಕ್ರಾಧಿಪತ್ಯವು ಇನ್ನೂರು ವರ್ಷಗಳಿಗಿಂತಲೂ ದೀರ್ಘ ಕಾಲ. ಆಗಸ್ಟಸ್‌ನ ಕಿರೀಟಧಾರಣೆಯ ಕಾಲ (ಕ್ರಿಪೂ ೩೦)ರಿಂದ ಮೂರನೆಯ ಶತಮಾನದ ವಿನಾಶದವರೆಗೆ ಸ್ಥಿರವೂ ಶಾಂತಿಯುತವೂ ಆಗಿತ್ತು.

ಈ ಮಧ್ಯೆ, ರೋಮನ್ ಸಂವಿಧಾನವು ಪ್ರಮುಖ ಬದಲಾವಣೆಗಳಿಗೊಳಗಾಗಿತ್ತು. ಮೂಲತಃ ರೋಮ್ ಒಂದು ಸಣ್ಣ ನಗರಪ್ರಭುತ್ವ – ಗ್ರೀಸ್‌ನವುಗಳಿಗಿಂತ ತೀರ ಭಿನ್ನವೇನಲ್ಲ, ಅದರಲ್ಲಿಯೂ, ಸ್ಪಾರ್ಟಾ – ಅದು ವಿದೇಶೀ ವ್ಯಾಪಾರವನ್ನು ಅವಲಂಬಿಸಿರಲಿಲ್ಲ. ಹೋಮರ್ ಕಾಲದ ಗ್ರೀಸ್‌ನಂತೆ ರಾಜರುಗಳ ಜಾಗವನ್ನು ಶ್ರೀಮಂತ ಗಣರಾಜ್ಯಗಳು ಆಕ್ರಮಿಸಿದ್ದುವು. ಕ್ರಮೇಣ, ಸೆನೇಟ್‌ನಲ್ಲಿ ಕೇಂದ್ರೀಕೃತವಾಗಿದ್ದ ಶ್ರೀಮಂತಪ್ರಭುತ್ವಾತ್ಮಕ ಅಂಶಗಳು, ಬಲಿಷ್ಠವಾಗುಳಿದವು, ಜೊತೆಗೆ ಪ್ರಜಾಪ್ರಭುತ್ವಾತ್ಮಕ ಅಂಶಗಳು ಸೇರಿಕೊಂಡವು; ಈ ಹೊಂದಾಣಿಕೆಯನ್ನು ಸಂಯಮವಾದಿಯಾದ ಪ್ಯಾನೇಷಿಯಸ್ (ಅವನ ದೃಷ್ಟಿಕೋನವನ್ನು ಪಾಲಿಬಸ್ ಮತ್ತು ಸಿಸೆರೋ ಮತ್ತೆ ಮಂಡಿಸಿದರು) ರಾಜಪ್ರಭುತ್ವ, ಶ್ರೀಮಂತಪ್ರಭುತ್ವ ಮತ್ತು ಪ್ರಜಾಪ್ರಭುತ್ವಾತ್ಮಕ ಅಂಶಗಳ ಆದರ್ಶ ಸಂಯೋಜನೆ ಎಂದು ಬಣ್ಣಿಸಿದ. ಆದರೆ ಈ ನವಿರಾದ ಸಮತೋಲನವನ್ನು ವಿಜಯಗಳು ಏರುಪೇರು ಮಾಡಿತು; ಅದು ಸೆನೇಟ್ ವರ್ಗಕ್ಕೆ ಅಪಾರ ಐಶ್ವರ್ಯವನ್ನು, ಮತ್ತು ಕೊಂಚ ಉತ್ತಮ ಪ್ರಮಾಣದಲ್ಲಿ – ಮೇಲ್ವರ್ಗದವರನ್ನು ಕರೆಯುತ್ತಿದ್ದ ರೀತಿಯಾದ – 'ನೈಟ್'ಗಳಿಗೆ ನೀಡಿತು. ತಮ್ಮ ಮತ್ತು ತಮ್ಮ ಕುಟುಂಬವರ್ಗದವರ ಶ್ರಮದಿಂದ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದ ಸಣ್ಣ ರೈತರ ಕೈನಲ್ಲಿದ್ದ ಬೇಸಾಯವು ರೋಮನ್ ಶ್ರೀಮಂತವರ್ಗದವರ ಸ್ವಾಧೀನಕ್ಕೊಳಗಾದ ಭಾರಿ ಹಿಡುವಳಿಗಳಾದವು; ಅವುಗಳಲ್ಲಿ ಗುಲಾಮರ ದುಡಿಮೆಯಿಂದ ದ್ರಾಕ್ಷಿ ಮತ್ತು ಆಲಿವ್‌ಗಳನ್ನು ಬೆಳೆಯಲಾಗುತ್ತಿತ್ತು.

ಇದರಿಂದಾಗಿ ಸೆನೇಟ್ ಅಕ್ಷರಶಃ ಸರ್ವಶಕ್ತವೆನಿಸಿದವು, ದೇಶದ ಹಿತದ ಬಗ್ಗೆಯಾಗಲೀ ಸಾಮಾನ್ಯರ ಯೋಗಕ್ಷೇಮದ ಬಗ್ಗೆಯಾಗಲೀ ಯೋಚಿಸದೆ ಅದನ್ನು ವ್ಯಕ್ತಿಗಳ ಐಶ್ವರ್ಯವೃದ್ಧಿಗೆ ನಾಚಿಕೆಯಿಲ್ಲದೆ ಬಳಸಿಕೊಳ್ಳಲಾಯಿತು.

ಕ್ರಿಪೂ ಎರಡನೆಯ ಶತಮಾನದ ಉತ್ತರಾರ್ಧದಲ್ಲಿ ಗ್ರ್ಯಾಶಿಯಿಂದ ಆರಂಭಗೊಂಡ ಪ್ರಜಾಪ್ರಭುತ್ವಪರವಾದ ಚಳವಳಿಯು ಅಂತಯುರ್ದ್ಧ ಸರಣಿಗೆ ಕಾರಣವಾಯಿತು, ಮತ್ತು ಕೊನೆಗೆ – ಗ್ರೀಸ್‌ನಲ್ಲಿ ಆಗಾಗ ಆದಂತೆ – 'ನಿರಂಕುಶಾಧಿಕಾರ' ಕ್ಕೆ ಎಡೆ ಮಾಡಿಕೊಟ್ಟಿತು. ಗ್ರೀಸ್‌ನಲ್ಲಿ ಮುಂಚೆ ಸಣ್ಣ ಪ್ರದೇಶಗಳಿಗೆ ಸೀಮಿತವಾಗಿದ್ದ ಬೆಳವಣಿಗೆಗಳು, ಅಷ್ಟೊಂದು ವ್ಯಾಪಕವಾಗಿ, ಪುನರಾವರ್ತನೆಗೊಂಡುದು ಆಶ್ಚರ್ಯಕರವೇ ಸರಿ. ಜ್ಯೂಲಿಯಸ್ ಸೀಸರ್‌ನ ದತ್ತು ಮಗ ಮತ್ತು ಉತ್ತರಾಧಿಕಾರಿಯಾದ ಆಗಸ್ಟಸ್ ಕ್ರಿಪೂ ೩೦ ರಿಂದ ಕ್ರಿಶ ೧೪ ರವರೆಗೆ ಆಳಿದ. ಅವನು ಈ ಅಂತಯುರ್ದ್ಧಕ್ಕೆ ಮತ್ತು (ಕೆಲವು ಅಪವಾದಗಳೊಡನೆ) ಬಾಹ್ಯ ದಿಗ್ವಿಜಯಯಾತ್ರೆಗಳಿಗೆ ಕೊನೆ ಹಾಡಿದ. ಗ್ರೀಕ್ ನಾಗರಿಕತೆಯ ಆರಂಭದಿಂದ ಮೊದಲ ಬಾರಿಗೆ ಪ್ರಾಚೀನ ಜಗತ್ತು ಶಾಂತಿ ಮತ್ತು ಸುರಕ್ಷೆಯನ್ನು ಅನುಭವಿಸಿತು.

ಗ್ರೀಕ್ ರಾಜಕೀಯ ವ್ಯವಸ್ಥೆಯನ್ನು ಎರಡು ವಿಷಯಗಳು ಹಾಳುಗೆಡವಿದ್ದವು; ಮೊದಲನೆಯದಾಗಿ, ಪ್ರತಿ ನಗರವೂ ಸಾರ್ವಭೌಮತೆಯನ್ನು ಸಾರಿದುದು; ಎರಡನೆಯದು, ಬಹುತೇಕ ನಗರಗಳಲ್ಲಿನ ಶ್ರೀಮಂತ–ಬಡವರ ನಡುವಣ ಹಿಂಸಾತ್ಮಕ ಸಂಘರ್ಷಗಳು. ಕಾರ್ಥೇಜ್ ಮತ್ತು ಹೆಲೆನಿಸ್ಟಿಕ್ ಚಕ್ರಾಧಿಪತ್ಯಗಳನ್ನು ಗೆದ್ದ ಬಳಿಕ, ಮೊದಲನೆಯದು ಜಗತ್ತಿನ ಮೇಲೆ ಯಾವ ಪ್ರಭಾವವನ್ನೂ ಬೀರಲಿಲ್ಲ, ಅದಕ್ಕೆ ಕಾರಣ ರೋಮ್ ವಿರುದ್ಧ ಪರಿಣಾಮಕಾರಿ ಪ್ರತಿರೋಧ ಸಾಧ್ಯವಾಗದಿದ್ದುದು. ಆದರೆ ಎರಡನೆಯ ಕಾರಣ ಉಳಿಯಿತು. ಅಂತಯುರ್ದ್ಧಗಳಲ್ಲಿ ಒಬ್ಬ ದಳಪತಿಯು ತಾನೇ ಸೆನೇಟ್‌ನ ಯಜಮಾನ ಎಂದು ಘೋಷಿಸಿಕೊಳ್ಳುತ್ತಿದ್ದೆ, ಮತ್ತೊಬ್ಬ ತಾನು ಜನರ ನಾಯಕ ಎಂದು ಹೇಳಿಕೊಳ್ಳುತ್ತಿದ್ದ. ಸೈನಿಕರಿಗೆ ಯಾರು ಹೆಚ್ಚಿನ ಸವಲತ್ತುಗಳನ್ನು ನೀಡುತ್ತಾನೆಯೋ ಅವನಿಗೆ ಗೆಲವು ದೊರೆಯುತ್ತಿತ್ತು, ಸೈನಿಕರಿಗೆ ಬೇಕಾಗಿದ್ದುದು ಸಂಬಳ ಮತ್ತು ದಾಳಿಯ ಆಸ್ತಿ ಮಾತ್ರವಲ್ಲ, ಜಮೀನಿನ ಉಂಬಳಿ ಕೂಡ. ಹೀಗಾಗಿ ಪ್ರತಿ ಅಂತಯುರ್ದ್ಧವೂ, ಗೆದ್ದವನ ಸೈನಿಕರಿಗೆ ಅವಕಾಶ ನೀಡುವುದಕ್ಕೆಂದು, ದೇಶದ ನಾಮಮಾತ್ರ ಗೇಣಿದಾರರಾಗಿ, ಸದ್ಯದಲ್ಲಿ ಜಮೀನಿನ ಒಡೆಯರಾಗಿದ್ದವರನ್ನು ಒಕ್ಕಲೆಬ್ಬಿಸುವ ಕಾರ್ಯದಲ್ಲಿ ಪರ್ಯವಸಾನವಾಗುತ್ತಿತ್ತು. ಯುದ್ಧ ನಡೆಯುತ್ತಿರುವಾಗಿನ ವೆಚ್ಚಗಳನ್ನು ಶ್ರೀಮಂತರನ್ನು ಮರಣಕ್ಕೆ ಗುರಿಪಡಿಸಿ ಅವರ ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಳ್ಳುವ ಮೂಲಕ ಭರಿಸಲಾಗುತ್ತಿತ್ತು. ಬಹು ವಿನಾಶಕಾರಿಯಾದ ಈ ಪದ್ಧತಿಯನ್ನು ಅಷ್ಟು ಸುಲಭವಾಗಿ

ಕೊನೆಗೊಳಿಸಲಾಗುತ್ತಿರಲಿಲ್ಲ. ಕೊನೆಗೆ, ಎಲ್ಲರನ್ನೂ ಆಶ್ಚರ್ಯಗೊಳಿಸುವಂತೆ, ತನ್ನ ಅಧಿಕಾರವನ್ನು ಯಾರೂ ಪ್ರಶ್ನಿಸಲಾಗದಂತೆ ಆಗಸ್ಟಸ್ ಸಂಪೂರ್ಣವಾಗಿ ಗೆಲವು ಸಾಧಿಸಿದ.

ರೋಮ್ ಜಗತ್ತಿಗೆ ಅಂತರ್ಯುದ್ಧಗಳ ಕಾಲ ಮುಗಿಯಿತು ಎಂದು ತಿಳಿದದ್ದು ಆಶ್ಚರ್ಯಕರವೆನಿಸಿತು, ಅದು ಒಂದು ಸಣ್ಣ ಸೆನೇಟ್ ಗುಂಪಿನ ಹೊರತು ಮಿಕ್ಕೆಲ್ಲರಲ್ಲಿ ಸಂತಸವುಂಟುಮಾಡಿತು. ಮಿಕ್ಕೆಲ್ಲರಿಗೂ, ಆಗಸ್ಟಸ್‌ಗಿಂತ ಮುಂಚೆ ಗ್ರೀಕರೂ ಮ್ಯಾಸಿಡೋನಿಯನ್ನರೂ ಕಾಣುವಲ್ಲಿ ವಿಫಲರಾಗಿದ್ದ ಮತ್ತು ರೋಮ್ ಕೂಡ ಆ ಮುಂಚೆ ಕಾಣದಿದ್ದ ಸ್ಥಿರತೆ ಮತ್ತು ಸುವ್ಯಸ್ಥೆಗಳನ್ನು ಆಗಸ್ಟಸ್‌ನ ಆಳ್ವಿಕೆಯಲ್ಲಿ ಕೊನೆಗೂ ಕಂಡದ್ದು ಸಮಾಧಾನ ತಂದಿತ್ತು. ರೋಸ್‌ಟೋವ್‌ಸ್ಟೆಫ್ ಅವರ ಪ್ರಕಾರ, ಗ್ರೀಸ್‌ನಲ್ಲಿ ಗಣರಾಜ್ಯವಾದ ರೋಮ್ 'ದಿವಾಳಿತನ, ರಿಕ್ತತೆ ಮತ್ತು ಎಲ್ಲ ಸ್ವತಂತ್ರ ರಾಜಕೀಯ ಚಟುವಟಿಕೆಗಳ ಸ್ಥಗಿತತೆಗಳನ್ನು ಬಿಟ್ಟು ಹೊಸದೇನನ್ನೂ ತರಲಿಲ್ಲ.'[೧೨೪]

ಆಗಸ್ಟಸ್‌ನ ಆಳ್ವಿಕೆಯ ಅವಧಿ ರೋಮ್ ಚಕ್ರಾಧಿಪತ್ಯದ ಸುಖಸಮೃದ್ಧಿಯ ಕಾಲ. ಕೊನೆಗೂ ಪ್ರಾಂತಗಳ ಆಡಳಿತವನ್ನು ಜನರ ಕಲ್ಯಾಣವನ್ನು ಕೊಂಚ ಗಮನದಲ್ಲಿರಿಸಿಕೊಂಡು ವ್ಯವಸ್ಥೆಗೊಳಪಡಿಸಲಾಯಿತೇ ಹೊರತು ಕೇವಲ ಸಾಂಪ್ರದಾಯಿಕ ಪದ್ಧತಿಯಿಂದಲ್ಲ. ಅವನ ಸಾವಿನ ನಂತರ ಅವನನ್ನು ಅಧಿಕೃತವಾಗಿ ದೈವೀಕರಿಸುವುದರ ಜೊತೆಗೆ ಹಲವಾರು ಪ್ರಾಂತೀಯ ನಗರಗಳಲ್ಲಿ ಸ್ವಯಂಪ್ರೇರಣೆಯಿಂದ ದೇವರೆಂದು ಭಾವಿಸಲಾಯಿತು. ಕವಿಗಳು ಅವನನ್ನು ಹೊಗಳಿದರು, ವಾಣಿಜ್ಯವರ್ಗವು ವ್ಯಾಪಕ ಶಾಂತ ಪರಿಸ್ಥಿತಿಯನ್ನು ಕಂಡಿತು, ಎಲ್ಲ ಹೊರ ರೂಪಗಳ ಗೌರವಗಳಿಂದ ಅವನು ಕಂಡಿದ್ದ ಸೆನೇಟ್ ಕೂಡ ಅವನ ಮೇಲೇ ಗೌರವ ಮತ್ತು ಪದವಿಗಳನ್ನು ಪೇರಿಸುವುದರಲ್ಲಿ ಹಿಂದೆ ಬೀಳಲಿಲ್ಲ.

ಜಗತ್ತು ಸುಖದಿಂದಿದ್ದರೂ, ಜೀವನದ ರುಚಿ ಸ್ವಲ್ಪ ಕಡಿಮೆಯಾಗಿತ್ತು; ಯಾಕೆಂದರೆ ಸಾಹಸಮಯತೆಗಿಂತ ಸುರಕ್ಷೆಗೆ ಹೆಚ್ಚು ಪ್ರಾಧಾನ್ಯ ನೀಡಲಾಯಿತು. ಈ ಪರಿಸ್ಥಿತಿಗೆ ಫಿಲಿಪ್ ಮತ್ತು ಅಲೆಕ್ಸಾಂಡರ್ ಕೊನೆಯನ್ನು ತಂದರು, ಹೆಲೆನಿಸ್ಟಿಕ್ ಜಗತ್ತಿನಲ್ಲಿ ಮ್ಯಾಸಿಡೋನಿಯನ್ ರಾಜವಂಶಗಳು ಮಾತ್ರ ಬೇಕಾಬಿಟ್ಟಿ ಸ್ವಾತಂತ್ರ್ಯವನ್ನು ಹೊಂದಿದ್ದವು. ಗ್ರೀಕ್ ಜಗತ್ತು ತನ್ನ ಯೌವನವನ್ನು ಕಳೆದುಕೊಂಡು ಸಿನಿಕತನದಿಂದ ಕೂಡಿತು ಅಥವಾ ಮತಧಾರ್ಮಿಕತೆಯಿಂದ ಕೂಡಿತು. ಐಹಿಕ ಸಂಸ್ಥೆಗಳಲ್ಲಿ ಆದರ್ಶಗಳನ್ನು ತರುವ ಭರವಸೆಯು ಮಸುಕಾಯಿತು, ಅದರಿಂದಾಗಿ ಅತ್ಯುತ್ತಮ ವ್ಯಕ್ತಿಗಳು ತಮ್ಮ ಉತ್ಸಾಹವನ್ನು ಕಳೆದುಕೊಂಡರು. ಸಾಕ್ರಟೀಸ್‌ಗೆ ಸ್ವರ್ಗ ಎಂಬುದು ಎಷ್ಟು ಬೇಕಾದರೂ ತಾನು ವಾದವನ್ನು ಮುಂದುವರಿಸಬಹುದಾದ ಸ್ಥಳ;

---

೧೨೪. 'ಹಿಸ್ಟರಿ ಆಫ್ ದ ಏನ್ಷಿಯಂಟ್ ವರ್ಲ್ಡ್', ಭಾಗ ೨, ಪು. ೨೫೫.

ಅಲೆಕ್ಸಾಂಡರ್‌ನ ನಂತರದ ತತ್ವಜ್ಞಾನಿಗಳು ಅದು ತಮ್ಮ ಇಲ್ಲಿನ ಬದುಕಿಗಿಂತ ಹೆಚ್ಚು ವ್ಯತ್ಯಾಸವುಳ್ಳದಾಯಿತು.

ರೋಮ್‌ನಲ್ಲಿ ಆನಂತರ ಇಂತಹದೇ ಬೆಳವಣಿಗೆಗಳುಂಟಾದವು, ಆದರೆ ಕಡಿಮೆ ನೋವಿನೊಡನೆ. ಗ್ರೀಸ್‌ನಂತೆ ರೋಮ್ ಅನ್ನು ಯಾರೂ ಗೆಲ್ಲಲಿಲ್ಲ, ಅದರ ಬದಲು, ಯಶಸ್ವೀ ಸಾಮ್ರಾಜ್ಯಶಾಹಿ ಗೆದ್ದಿತು. ಅಂತರ್ಯುದ್ಧಗಳ ಇಡೀ ಅವಧಿಯಲ್ಲಿ ಅವ್ಯವಸ್ಥೆಗಳಿಗೆ ರೋಮನ್ನರೇ ಕಾರಣರಾಗಿದ್ದರು. ಮ್ಯಾಸಿಡೋನಿಯನ್ನರಿಗೆ ಅಧೀನರಾಗಿ ಗ್ರೀಕರು ಶಾಂತಿ–ಸುವ್ಯವಸ್ಥೆಗಳನ್ನು ಕಂಡಿರಲಿಲ್ಲ; ಆದರೆ ಆಗಸ್ಟಸ್‌ಗೆ ಅಧೀನರಾಗಿ ಗ್ರೀಕರೂ ರೋಮನ್ನರೂ ಇವೆರಡನ್ನೂ ಪಡೆದರು. ಆಗಸ್ಟಸ್ ಒಬ್ಬ ರೋಮನ್, ಅವನಿಗೆ ಬಹುತೇಕ ರೋಮ್ ಸ್ವಯಂಪ್ರೇರಿತವಾಗಿ ವಿಧೇಯವಾಯಿತು, ಅವನ ಪರಮಾಧಿಕಾರದ ಕಾರಣದಿಂದ ಮಾತ್ರವೇ ಅಲ್ಲ. ಮಿಗಿಲಾಗಿ, ತನ್ನ ಸರ್ಕಾರದ ಸೈನಿಕ ಮೂಲವನ್ನು ಮರೆಮಾಚುವುದಕ್ಕೆ ಅವನ ಶ್ರಮಪಟ್ಟ, ಅದನ್ನು ಸೆನೇಟ್‌ನ ತೀರ್ಮಾನಗಳಿಗೆ ಬದ್ಧವಾಗಿಸಿದ. ಸೆನೇಟ್‌ನ ಭಟ್ಟಂಗಿತನ ಬಹುತೇಕ ಅಪ್ರಾಮಾಣಿಕತೆಯಿಂದ ಕೂಡಿತ್ತು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಸೆನೇಟ್‌ವರ್ಗದವರಲ್ಲದ ಉಳಿದವರು ಯಾರೂ ಅವಮಾನಿತರಾಗಲಿಲ್ಲ. ಸಾಮ್ರಾಜ್ಯಶಾಹಿ ರೋಮನ್ ಮನೋಭಾವವು ಹತ್ತೊಂಬತ್ತನೆಯ ಶತಮಾನದ ಫ್ರಾನ್ಸ್‌ನಲ್ಲಿನ, ವಿಲಾಸಿ ಸಾಹಸಗಳ ಬದುಕಿನ ನಂತರ ವಿಚಾರ ಮಾಡಿ ವೈವಾಹಿಕ ಬದುಕಿಗೆ ಒಳಗಾಗುವ, ಯುವಕ(ಝೂನ್ ಹಾಮ್)ನದರಂತಿತ್ತು. ಈ ಮನೋಭಾವವು ತೃಪ್ತಿಯಿಂದ ಕೂಡಿದ್ದರೂ, ಕ್ರಿಯಾಶೀಲವಾಗಿರಲಿಲ್ಲ. ಆಗಸ್ಟಸ್ ಕಾಲ ದೊಡ್ಡ ಕವಿಗಳು ಹೆಚ್ಚು ಕಷ್ಟದ ದಿನಗಳಲ್ಲಿ ರೂಪುಗೊಂಡವರು; ಹೊರೇಸ್ ಫಿಲಿಪಿಗೆ ಓಡಿಹೋದ, ಅವನೂ ವರ್ಜಿಲ್‌ನೂ ಗೆದ್ದ ಸೈನಿಕರ ಅನುಕೂಲಕ್ಕೆಂದು ಮುಟ್ಟುಗೋಲು ಹಾಕಿಕೊಂಡದ್ದರಿಂತ ತಮ್ಮ ಭೂಮಿಯನ್ನು ಕಳೆದುಕೊಂಡರು. ಸ್ಥಿರತೆಯ ಕಾರಣದಿಂದ ಪ್ರಾಚೀನ ಧರ್ಮನಿಷ್ಠೆಯನ್ನು ಪುನರುಜ್ಜೀವನಕಾರ್ಯದಲ್ಲಿ, ಕೊಂಚ ಅಪ್ರಾಮಾಣಿಕನಾಗಿಯೇ, ಆಗಸ್ಟಸ್ ತೊಡಗಿದ, ಹಾಗಾಗಿ ಅವನು ವಿಧಿಯಿಲ್ಲದೆ ಸ್ವತಂತ್ರ ಚಿಂತನೆಗೆ ಒಂದಷ್ಟು ನಿರ್ಬಂಧ ಹೇರಿದ. ರೋಮನ್ ಜಗತ್ತು ರೂಢಮಾದರಿ (ಸ್ಟೀರಿಯೋಟೈಪ್)ಯದಾಗತೊಡಗಿತು, ಈ ಪ್ರಕ್ರಿಯೆಯು ಮುಂದಿನ ಚಕ್ರವರ್ತಿಗಳ ಕಾಲದಲ್ಲಿಯೂ ಮುಂದುವರಿಯಿತು.

ಆಗಸ್ಟಸ್‌ನ ನಂತರ ತಕ್ಷಣ ಬಂದವರು ಸೆನೇಟರ್‌ಗಳ ವಿರುದ್ಧವೂ, ಚಕ್ರವರ್ತಿ ಉಡುಪಿಗೆ (ಪರ್ಪಲ್) ಪ್ರತಿಸ್ಪರ್ಧಿಗಳಂತಿದ್ದವರ ವಿರುದ್ಧವೂ ಭಯಾನಕ ಕ್ರೌರ್ಯದಿಂದ ನಡೆದುಕೊಂಡರು. ಈ ಕಾಲದ ದುರಾಡಳಿತವು ಸ್ವಲ್ಪಮಟ್ಟಿಗೆ ಪ್ರಾಂತಗಳಿಗೂ ವ್ಯಾಪಿಸಿತು; ಆದರೆ ಆಗಸ್ಟಸ್ ಸ್ಥಾಪಿಸಿದ್ದ ಆಡಳಿತಯಂತ್ರವು ಸಾಕಷ್ಟು ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿತ್ತು.

ಕ್ರಿ.ಶ. ೯೮ರಲ್ಲಿ ಟ್ರಾಜನ್ ಅಧಿಕಾರಕ್ಕೆ ಬಂದಂದಿನಿಂದ ಉತ್ತಮ ಕಾಲವು ಆರಂಭಗೊಂಡು ಮಾರ್ಕಸ್ ಔರೀಲಿಯಸ್‌ನ ಸಾವಿನವರೆಗೂ (ಕ್ರಿಶ೧೮೦) ಮುಂದುವರಿಯಿತು. ಈ ಅವಧಿಯಲ್ಲಿ ಚಕ್ರಾಧಿಪತ್ಯದ ಸರ್ಕಾರವು ಯಾವುದೇ ದಬ್ಬಾಳಿಕೆಯಲ್ಲಿನದರಂತೆಯೇ ಇದ್ದುದಕ್ಕೆ ವ್ಯತಿರಿಕ್ತವಾಗಿ, ಕ್ರಿಶ ಮೂರನೆಯ ಶತಮಾನವು ಭಯಭರಿತ ವಿನಾಶವನ್ನು ಕಂಡಿತು. ಸೈನ್ಯವು ತನ್ನ ಅಧಿಕಾರವನ್ನು ಮರಳಿ ಪಡೆಯಿತು, ಹಣಕ್ಕಾಗಿ ಮತ್ತು ಯುದ್ಧರಹಿತ ಬದುಕಿಗಾಗಿ ಚಕ್ರವರ್ತಿಗಳನ್ನು ಬದಲಾಯಿಸಿತು; ಇದರ ಪರಿಣಾಮವಾಗಿ ಪರಿಣಾಮಕಾರಿಯಾದ ಹೋರಾಟದಳವಾಗಿರುವುದು ಕೊನೆಯಾಯಿತು. ಉತ್ತರ ಮತ್ತು ಪೂರ್ವದಿಂದ ಬಾರ್ಬೇರಿಯನ್ನರು ಆಕ್ರಮಣ ನಡೆಸಿ ರೋಮ್ ಪ್ರದೇಶವನ್ನು ಲೂಟಿ ಮಾಡಿದರು. ಖಾಸಗಿ ಲಾಭದಲ್ಲಿ ಮತ್ತು ನಾಗರಿಕ ವಿರೋಧದಲ್ಲಿ ತೊಡಗಿದ್ದ ಸೈನ್ಯವು ರಕ್ಷಣೆ ಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಸಂಪನ್ಮೂಲಗಳ ಅಪಾರ ಕೊರತೆಯಿಂದ ಆರ್ಥಿಕ ಪರಿಸ್ಥಿತಿ ಸಂಪೂರ್ಣವಾಗಿ ಕುಸಿಯಿತು, ಅಲ್ಲದೆ ಅದೇ ಹೊತ್ತಿನಲ್ಲಿ, ಅಯಶಸ್ವೀ ಯುದ್ಧಗಳು ಮತ್ತು ಸೈನ್ಯದ ಲಂಚಕೋರತನದಿಂದ ವೆಚ್ಚ ಹೆಚ್ಚಾಗಿತ್ತು. ಯುದ್ಧದ ಜೊತೆಗೆ, ಸಾಂಕ್ರಾಮಿಕ ರೋಗಗಳು ಜನಸಂಖ್ಯೆಯನ್ನು ಗಣನೀಯವಾಗಿ ಕಡಿಮೆಗೊಳಿಸಿತು. ಚಕ್ರಾಧಿಪತ್ಯವು ಪತನದ ಅಂಚಿನಲ್ಲಿದ್ದಂತೆ ತೋರಿತು.

ಈ ಪರಿಸ್ಥಿತಿಯು ಇಬ್ಬರು ಸಮರ್ಥರಿಂದ ತಪ್ಪಿತು, ಡಯೋಕ್ಲೀಷಿಯನ್ (ಕ್ರಿಶ ೨೮೬-೩೦೫) ಮತ್ತು ಕ್ರಿಶ ೩೧೨ ರಿಂದ ೩೩೭ ನಿರಾತಂಕದಿಂದ ಆಳ್ವಿಕೆ ನಡೆಸಿದ ಕಾನ್‌ಸ್ಟಾಂಟೈನ್. ಅವರಿಂದಾಗಿ ಚಕ್ರಾಧಿಪತ್ಯವು ಪೂರ್ವ ಮತ್ತು ಪಶ್ಚಿಮ ಅರ್ಧಗಳಾಗಿ ವಿಭಜನೆಗೊಂಡಿತು; ಇದು ಸ್ಥೂಲವಾಗಿ ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಿಗನುಗುಣವಾಗಿತ್ತು. ಪೂರ್ವಾರ್ಧದ ರಾಜಧಾನಿಯಾಗಿ ಬೈಜಾಂಟಿಯಮ್ ಅನ್ನು ಕಾನ್‌ಸ್ಟಾಂಟೈನ್ ಸ್ಥಾಪಿಸಿದ, ಅದಕ್ಕವನು ಕಾನ್‌ಸ್ಟಾಂಟಿನೋಪಲ್ ಎಂಬ ಹೊಸ ಹೆಸರನ್ನಿತ್ತ. ಡಯೋಕ್ಲೀಷಿಯನ್ ಸ್ವರೂಪವನ್ನು ಬದಲಾಯಿಸುವುದರ ಮೂಲಕ ಸೈನ್ಯವನ್ನು ಸ್ವಲ್ಪ ಕಾಲ ಹತೋಟಿಗೆ ತಂದ; ಅವನ ಕಾಲದಿಂದ ಅತ್ಯಂತ ಪರಿಣಾಮಕಾರಿ ಸೈನ್ಯವು ಬಾರ್ಬೇರಿಯನ್ನರಿಂದ ಕೂಡಿತು, ಅದರಲ್ಲಿಯೂ ಜರ್ಮನರು, ಅವರಿಗೆ ಅತ್ಯಂತ ಹಿರಿಯ ತುಕಡಿಗಳು ತೆರೆದಿದ್ದವು. ಇದು ನಿಜವಾಗಿಯೂ ಅಪಾಯಕಾರಿ ಸಾಹಸ, ಐದನೆಯ ಶತಮಾನದ ಮೊದಲಲ್ಲಿ ಇದರ ಸಹಜ ಫಲ ಉಂಟಾಯಿತು. ರೋಮನ್ನರ ಪರವಾಗಿ ಹೋರಾಡುವುದಕ್ಕಿಂತ ತಮಗಾಗಿಯೇ ಹೋರಾಡುವುದು ಹೆಚ್ಚು ಲಾಭದಾಯಕವೆಂದು ಬಾರ್ಬೇರಿಯನ್ನರು ನಿರ್ಧರಿಸಿದರು. ಆದರೂ ಒಂದು ಶತಮಾನಕ್ಕಿಂತ ಹೆಚ್ಚಿನ ಕಾಲ ತನ್ನ ಕೆಲಸವನ್ನದು ಮಾಡಿತ್ತು. ಡಯೋಕ್ಲೀಷಿಯನ್‌ನ ಆಡಳಿತ ಸುಧಾರಣೆಗಳು ಸ್ವಲ್ಪ ಕಾಲವಷ್ಟೇ ಯಶಸ್ಸು ಕಂಡಿತು, ಆದರೆ ಕೊನೆಯಲ್ಲಿ ಅಷ್ಟೇ ವಿನಾಶಕಾರಿಯಾಗಿಯೂ

ಪರಿಣಮಿಸಿತು. ರೋಮನ್ ವ್ಯವಸ್ಥೆಯು ಪಟ್ಟಣಗಳಿಗೆ ಸ್ವಯಮಾಡಳಿತವನ್ನು ನೀಡುವುದರ ಮತ್ತು ಸ್ಥಳೀಯ ನೌಕರರಿಗೆ ತೆರಿಗೆ ಸಂಗ್ರಹಣೆಯ ಕೆಲಸವನ್ನು ಒಪ್ಪಿಸುವ ಪರವಾಗಿತ್ತು, ಇದಕ್ಕಾಗಿ ಪ್ರತಿ ಪಟ್ಟಣದಿಂದ ಎಷ್ಟು ಹಣ ಬಾಕಿಯಿದೆಯೆಂಬುದನ್ನು ಕೇಂದ್ರ ಅಧಿಕಾರಿಗಳು ನಿರ್ಧರಿಸುತ್ತಿದ್ದರು. ಈ ವ್ಯವಸ್ಥೆಯು ಸಮೃದ್ಧಿಯ ಕಾಲದಲ್ಲಿ ಚೆನ್ನಾಗಿ ನಡೆಯಿತು, ಆದರೆ ಚಕ್ರಾಧಿಪತ್ಯವು ದಣಿದ ಸ್ಥಿತಿಯಲ್ಲಿರುವ ಈಗ ಕೇಳಿದ ಹೆಚ್ಚಾದ ಹಣವನ್ನು ಸಲ್ಲಿಸುವುದು ಕಷ್ಟಪಡದೆ ಆಗುವಂತಿರಲಿಲ್ಲ. ನಗರಸಭೆಗಳ ಅಧಿಕಾರಿಗಳು ತೆರಿಗೆಗಳಿಗೆ ವೈಯಕ್ತಿಕವಾಗಿ ಹೊಣೆಗಾರರಾಗಿದ್ದರು, ಹೀಗಾಗಿ ಅವರು ಹಣಸಂದಾಯವನ್ನು ತಪ್ಪಿಸಿಕೊಳ್ಳಲು ಓಡಿ ಹೋದರು. ನಗರಸಭೆಗಳ ಕಚೇರಿಗಳನ್ನು ವಹಿಸಿಕೊಳ್ಳಲು ಒಪ್ಪಿಕೊಳ್ಳುವಂತೆ ಹಣವಂತರನ್ನು ಡಯೋಕ್ಲೀಷಿಯನ್ ಒತ್ತಾಯಿಸಿದ, ಓಡಿಹೋಗುವುದು ಕಾನೂನುಬಾಹಿರವೆಂದು ಸಾರಿದ. ಇದೇ ಉದ್ದೇಶದಿಂದ ಅವನು ಹಳ್ಳಿಯ ಜನರನ್ನು ಮಣ್ಣಿಗೆ ಕಟ್ಟಿ ಹಾಕಿ ವಲಸೆ ಹೋಗುವುದನ್ನು ತಪ್ಪಿಸಿ ಗುಲಾಮತನಕ್ಕೆ ದೂಡಿದ. ಆನಂತರದ ಚಕ್ರವರ್ತಿಗಳೂ ಈ ವ್ಯವಸ್ಥೆಯನ್ನು ಮುಂದುವರಿಸಿದರು.

ಡಯೋಕ್ಲೀಷಿಯನ್ ಇಟ್ಟ ಪ್ರಮುಖ ಹೆಜ್ಜೆಯೆಂದರೆ ಕ್ರಿಶ್ಚಿಯಾನಿಟಿಯನ್ನು ದೇಶದ ಮತಧರ್ಮವನ್ನಾಗಿ ಸ್ವೀಕರಿಸಿದ್ದು, ಇದಕ್ಕೆ ಕಾರಣ ಬಹು ಪಾಲು ಸೈನಿಕರು ಕ್ರಿಶ್ಚಿಯನ್‌ರಾಗಿದ್ದುದೇ ಆಗಿತ್ತು.[೧೨೫] ಇದರ ಪರಿಣಾಮವೆಂದರೆ, ಐದನೆಯ ಶತಮಾನದಲ್ಲಿ ಜರ್ಮನರು ಪಶ್ಚಿಮ ಚಕ್ರಾಧಿಪತ್ಯವನ್ನು ನಾಶಪಡಿಸಿದಾಗ, ಅದರ ಘನತೆಯಿಂದಾಗಿ ಅವರು ಕ್ರೈಸ್ತಮತಧರ್ಮವನ್ನು ಸ್ವೀಕರಿಸುವಂತೆ ಮಾಡಿತು, ಇದರಿಂದಾಗಿ ಪಶ್ಚಿಮ ಯುರೋಪ್ ಚರ್ಚ್ ಸ್ವೀಕರಿಸಿದ್ದ ಪ್ರಾಚೀನ ನಾಗರಿಕತೆಯನ್ನುಉಳಿಸುವಂತಾಯಿತು.

ಪೂರ್ವ ಭಾಗಕ್ಕೆ ನಿಗದಿಯಾಗಿದ್ದ ಪ್ರದೇಶದ ಅಭಿವೃದ್ಧಿಯು ವಿಭಿನ್ನ ಬಗೆಯದು. ಒಂದೇ ಸಮನೆ ವ್ಯಾಪ್ತಿಯಲ್ಲಿ ಕಿರಿದಾಗುತ್ತ (ಆರನೆಯ ಶತಮಾನದಲ್ಲಿ ಜಸ್ಟಿನಿಯನ್‌ನ ಅಲ್ಪಕಾಲದ ವಿಜಯಗಳನ್ನು ಹೊರತುಪಡಿಸಿ) ಸಾಗಿದ್ದ ಪೂರ್ವ ಚಕ್ರಾಧಿಪತ್ಯವು ಕ್ರಿ.ಶ.೧೪೫೩ ರವರೆಗೂ ಉಳಿದುಬಂತು, ಆಗ ಕಾನ್‌ಸ್ಟಾಂಟಿನೋಪಲ್ ಅನ್ನು ಟರ್ಕರು ಗೆದ್ದರು. ಆದರೆ ಪೂರ್ವದಲ್ಲಿ, ಆಫ್ರಿಕ ಮತ್ತು ಪಶ್ಚಿಮದಲ್ಲಿ ಸ್ಪೆಯಿನ್‌ಗಳನ್ನೊಳಗೊಂಡಂತೆ, ರೋಮನ್ ಪ್ರಾಂತಗಳಾಗಿದ್ದ ಬಹುಭಾಗವು ಮಹಮ್ಮದೀಯವಾಯಿತು. ಜರ್ಮನರಿಗೆ ಭಿನ್ನವಾಗಿ ಅರಬ್ಬರು ತಾವು ಗೆದ್ದಿದ್ದ ಭಾಗಗಳ ಮತಧರ್ಮವನ್ನು ತಿರಸ್ಕರಿಸಿದರು, ಆದರೆ ನಾಗರಿಕತೆಯನ್ನು ಸ್ವೀಕರಿಸಿದರು.

---

೧೨೫. ನೋಡಿ, ರೋಸ್‌ಟೋವ್‌ಸ್ಟೆಫ್, 'ಹಿಸ್ಟರಿ ಆಫ್ ದ ಏನ್ಷಿಯಂಟ್ ವರ್ಲ್ಡ್' ಭಾಗ ೨, ಪು. ೩೩೨.

ಪೂರ್ವ ಚಕ್ರಾಧಿಪತ್ಯವು ತನ್ನ ನಾಗರಿಕತೆಯಲ್ಲಿ ಗ್ರೀಕ್ ಆಗಿತ್ತೇ ಹೊರತು ಲ್ಯಾಟಿನ್ ಅಲ್ಲ, ಅದಕ್ಕನುಗುಣವಾಗಿ, ಏಳರಿಂದ ಹನ್ನೊಂದನೆಯ ಶತಮಾನದವರೆಗೆ, ಅದು ಅದೇ ಆಗಿದ್ದು, ಆರಬ್ಬರು ಗ್ರೀಕ್ ಸಾಹಿತ್ಯ ಮತ್ತು ಉಳಿದಿದ್ದ ಗ್ರೀಕ್ ಎಲ್ಲವನ್ನೂ ರಕ್ಷಿಸಿದರೇ ವಿನಾ ಲ್ಯಾಟಿನ್ ನಾಗರಿಕತೆಯನ್ನಲ್ಲ. ಹನ್ನೊಂದನೆಯ ಶತಮಾನಾನಂತರ, ಮೊದಲಿಗೆ ಮೂರ್‌ರ ಪ್ರಭಾವದಿಂದಾಗಿ ಪಶ್ಚಿಮವು ತಾನು ಕಳೆದುಕೊಂಡಿದ್ದ ಗ್ರೀಕ್ ಪರಂಪರೆಯನ್ನು ನಿಧಾನವಾಗಿ ಮತ್ತೆ ಪಡೆಯಿತು.

ಈಗ ನಾನು ರೋಮನ್ ಚಕ್ರಾಧಿಪತ್ಯವು ಸಂಸ್ಕೃತಿಯ ಇತಿಹಾಸದ ಮೇಲೆ ಬೀರಿದ ಪ್ರಭಾವವನ್ನು ಕುರಿತ ನಾಲ್ಕು ಅಂಶಗಳ ಕಡೆ ಗಮನಹರಿಸುತ್ತೇನೆ.

೧. ಗ್ರೀಕ್ ಚಿಂತನೆಯ ಮೇಲೆ ರೋಮ್ ಬೀರಿದ ನೇರ ಪ್ರಭಾವ: ಇದು ಆರಂಭಗೊಳ್ಳುವುದು ಕ್ರಿಪೂ ಎರಡನೆಯ ಶತಮಾನದಲ್ಲಿ, ಇಬ್ಬರಿಂದ, ಇತಿಹಾಸಕಾರ ಪಾಲಿಬಿಯಸ್ ಮತ್ತು ಸಂಯಮವಾದಿ ತತ್ವಜ್ಞಾನಿ ಪೆನೇಷಿಯಸ್. ರೋಮನ್‌ರ ಬಗೆಗಿನ ಸಹಜ ಗ್ರೀಕ್ ಧೋರಣೆಯೆಂದರೆ ಭಯಮಿಶ್ರಿತ ತಿರಸ್ಕಾರದ್ದು. ಗ್ರೀಕ್ ತಾನು ಹೆಚ್ಚು ನಾಗರಿಕನೆಂದು ಭಾವಿಸಿದ್ದ, ಆದರೆ ರಾಜಕೀಯವಾಗಿ ಕಡಿಮೆ ಅಧಿಕಾರ ಹೊಂದಿದವನು; ಇದರಲ್ಲಿ ರಾಜಕೀಯವು ಗೌರವನೀಯವಲ್ಲದ ಅನ್ವೇಷಣೆ ಎಂಬ ಭಾವನೆಯಿದೆ. ಕ್ರಿಪೂ ಎರಡನೆಯ ಶತಮಾನದ ಸಾಮಾನ್ಯ ಗ್ರೀಕ್ ಪ್ರಜೆಯು ಸುಖಪ್ರವೃತ್ತಿಯವನು, ವಾಕ್ಚತುರ, ವ್ಯವಹಾರಕುಶಲ ಮತ್ತು ಎಲ್ಲದರಲ್ಲೂ ಸ್ವೇಚ್ಛಾಚಾರಿ. ಆದರೆ ತಾತ್ವಿಕ ಸಾಮರ್ಥ್ಯದ ಜನರು ಇನ್ನೂ ಉಳಿದಿದ್ದರು. ಇವರಲ್ಲಿನ ಕೆಲವರು – ಅದರಲ್ಲೂ ಕಾರ್ನಿಯಾಡೀಸ್‌ನಂತಹ ಸಂದೇಹವಾದಿಗಳು – ಜಾಣ್ಮೆಯು ಗಾಂಭೀರ್ಯವನ್ನು ಹಾಳುಮಾಡಲು ಅವಕಾಶ ನೀಡಿರಲಿಲ್ಲ. ಎಪಿಕ್ಯೂರಿಯನ್ ಪಂಥದವರು ಮತ್ತು ಸಂಯಮವಾದಿಗಳಲ್ಲಿನ ಕೆಲವರು ವಿಚಿತ್ರವಾಗಿ ತಮ್ಮ ಪ್ರಶಾಂತ ವೈಯಕ್ತಿಕ ಬದುಕಿನ ಚಿಪ್ಪಿನಲ್ಲಿ ಹುದುಗಿಕೊಂಡಿದ್ದರು. ಆದರೆ ಅಲೆಕ್ಸಾಂಡರ್‌ನ ಬಗ್ಗೆ ಅರಿಸ್ಟಾಟಲ್ ತೋರಿಸಿದ್ದುದಕ್ಕಿಂತ ಹೆಚ್ಚಾದ ಒಳನೋಟವಿದ್ದ ಕೆಲವರು ರೋಮ್‌ನ ಹಿರಿತನಕ್ಕೆ ಕಾರಣ ಗ್ರೀಕ್‌ರಲ್ಲಿಲ್ಲದ ಹಲವು ಯೋಗ್ಯತೆಗಳಿಂದಾಗಿ ಎಂಬುದನ್ನು ಅರ್ಥಮಾಡಿಕೊಂಡಿದ್ದರು.

ಸುಮಾರು ಕ್ರಿಪೂ ೨೦೦ ರಲ್ಲಿ ಆರ್ಕೇಡಿಯದಲ್ಲಿ ಹುಟ್ಟಿದ ಇತಿಹಾಸಕಾರ ಪಾಲಿಬಿಯಸ್ ಅನ್ನು ಸೆರೆಯಾಳಾಗಿ ರೋಮ್‌ಗೆ ಕಳಿಸಲಾಯಿತು, ಅಲ್ಲಿ ಅವನ ಅದೃಷ್ಟಕ್ಕೆ ಕಿರಿಯ ಸ್ಕೈಪಿಯೋನ ಸ್ನೇಹ ದೊರೆಯಿತು, ಅವನೊಡನೆ ಇವನೂ ಅನೇಕ ದಂಡಯಾತ್ರೆಗಳಲ್ಲಿ ಭಾಗವಹಿಸಿದ. ಗ್ರೀಕ್ ಒಬ್ಬನಿಗೆ ಲ್ಯಾಟಿನ್ ತಿಳಿದಿರುತ್ತಿದ್ದದ್ದು ಅಪರೂಪ, ಆದರೆ ಬಹುಪಾಲು ಸುಶಿಕ್ಷಿತ ರೋಮನ್ನರಿಗೆ ಗ್ರೀಕ್ ಗೊತ್ತಿರುತ್ತಿತ್ತು. ಆದರೆ ಪಾಲಿಬಿಯಸ್‌ನ ಪರಿಸ್ಥಿತಿಗಳು ಅವನು ಲ್ಯಾಟಿನ್ ಅನ್ನು ಕರಗತಮಾಡಿಕೊಳ್ಳುವಂತೆ ಮಾಡಿದ್ದವು. ಗ್ರೀಕರ ಉಪಯೋಗಕ್ಕಾಗಿ ಅವನು, ಆನಂತರ

ರೋಮನ್ನರು ಜಗತ್ತನ್ನು ಗೆಲ್ಲುವಂತೆ ಮಾಡಿದ್ದ, ಪ್ಯೂನಿಕ್ ಯುದ್ಧಗಳ ಇತಿಹಾಸವನ್ನು ಬರೆದ. ಅವನು ಬರೆದಾಗ ರೋಮನ್ ಸಂವಿಧಾನದ ಬಗೆಗಿನ ಮೆಚ್ಚಿಕೆ ಹಳೆಯದಾಗುತ್ತಿತ್ತು, ಆದರೆ ಅವನ ಕಾಲದವರೆಗೂ ಅದು ಸ್ಥಿರತೆ ಮತ್ತು ಪರಿಣಾಮಕಾರಿಕತೆಯಲ್ಲಿ ಒಂದೇ ಸಮನೆ ಬದಲಾಗುತ್ತಿದ್ದ ಗ್ರೀಕ್ ನಗರಗಳ ಸಂವಿಧಾನಗಳಿಗೆ ಹೋಲಿಸಿದರೆ ಉತ್ತಮವೆನ್ನಿಸಿಕೊಂಡಿತ್ತು. ಅವನ ಇತಿಹಾಸವನ್ನು ಸಹಜವಾಗಿಯೇ ರೋಮನ್ನರು ಸಂತೋಷದಿಂದ ಓದಿದರು; ಆದರೆ ಗ್ರೀಕರು ಹಾಗೆ ಮಾಡಿದರೆ ಎನ್ನುವುದು ಸಂದೇಹಾಸ್ಪದ.

ಸಂಯಮವಾದಿ ಪೆನೇಷಿಯಸ್ ಬಗ್ಗೆ ಹಿಂದಿನ ಅಧ್ಯಾಯದಲ್ಲಿಯೇ ತಿಳಿದಿದ್ದೇವೆ. ಅವನು ಲಾಲಿಬಿಯಸ್‌ನ ಸ್ನೇಹಿತ, ಮತ್ತು ಅವನಂತೆಯೇ ಕಿರಿಯ ಸ್ಕಿಪಿಯೋನ ಆಶ್ರಿತನಾಗಿದ್ದ. ಸ್ಕಿಪಿಯೋ ಬದುಕಿದ್ದಾಗ ಅವನು ಮತ್ತೆ ಮತ್ತೆ ರೋಮ್‌ಗೆ ಹೋಗುತ್ತಿದ್ದ, ಆದರೆ ಕ್ರಿಪೂ ೧೨೯ರಲ್ಲಾದ ಅವನ ಸಾವಿನನಂತರ ಅವನು ಅಥೆನ್ಸ್‌ನಲ್ಲಿಯೇ ಸಂಯಮವಾದಿಪಂಥದ ಮುಂದಾಳಾಗಿ ಬದುಕಿದ್ದ. ರಾಜಕೀಯ ಚಟುವಟಿಕೆಗಳ ಅವಕಾಶಕ್ಕೆ ಸಂಬಂಧಿಸಿದಂತೆ ರೋಮ್ ಇನ್ನೂ ಭರವಸೆಯನ್ನುಳಿಸಿಕೊಂಡಿತ್ತು, ಆದರೆ ಗ್ರೀಸ್ ಅದನ್ನು ಕಳೆದುಕೊಂಡಿತ್ತು. ಅದಕ್ಕನುಗುಣವಾಗಿ ಪೆನೇಷಿಯಸ್‌ನ ಸಿದ್ಧಾಂತಗಳು, ಸಿನಿಕರದಕ್ಕಿಂತ ಹಾಗೂ ಹಿಂದಿನ ಸಂಯಮವಾದಿಗಳದಕ್ಕಿಂತ ಹೆಚ್ಚು ರಾಜಕೀಯವಾದವು. ಪ್ರಾಯಶಃ ಸುಸಂಸ್ಕೃತ ರೋಮನ್ನರು ಪ್ಲೇಟೋ ಬಗ್ಗೆ ಬೆಳೆಸಿಕೊಂಡಿದ್ದ ಮೆಚ್ಚಿಕೆಯು ಅವನ ಮೇಲೆ ಪ್ರಭಾವ ಬೀರಿ ತನ್ನ ಹಿಂದಿನ ಸಂಯಮವಾದಿಗಳ ಸಂಕುಚಿತ ದೃಷ್ಟಿಯನ್ನು ತ್ಯಜಿಸುವಂತೆ ಮಾಡಿತು. ಅದಕ್ಕವನು ಮತ್ತವನ ಉತ್ತರಾಧಿಕಾರಿ ಪಾಸಿಡೋನಿಯಸ್ ನೀಡಿದ ವಿಶಾಲ ರೂಪದಿಂದಾಗಿ ಹೆಚ್ಚು ಗಂಭೀರರಾದ ರೋಮನ್‌ರ ಮೇಲೆ ಅದು ಪರಿಣಾಮಕಾರಿಯಾಯಿತು.

ಆನಂತರದ ಕಾಲದಲ್ಲಿ, ಗ್ರೀಕನಾದರೂ ಎಪಿಕ್ಟೆಟಸ್ ಹೆಚ್ಚು ಕಾಲ ರೋಮ್‌ನಲ್ಲಿಯೇ ಬಾಳಿದ. ಅವನ ದೃಷ್ಟಾಂತಗಳು ಬಹುವಾಗಿ ರೋಮ್‌ಗೆ ಸಂಬಂಧಿಸಿದವು. ಚಕ್ರವರ್ತಿಯ ಮುಂದೆ ನಡುಗುತ್ತ ನಿಲ್ಲಬೇಡ ಎಂಬುದೇ ಬುದ್ಧಿವಂತರಿಗೆ ಅವನು ಸದಾ ಹೇಳುತ್ತಿದ್ದುದು. ಮಾರ್ಕಸ್ ಔರೀಲಿಯಸ್‌ನ ಮೇಲೆ ಎಪಿಕ್ಟೆಟಸ್ ಬೀರಿದ ಪ್ರಭಾವ ನಮಗೆ ತಿಳಿದದ್ದೇ, ಆದರೆ ಗ್ರೀಕರ ಮೇಲೆ ಆದ ಅವನ ಪ್ರಭಾವ ಇಲ್ಲವೇ ಇಲ್ಲ.

ಪ್ಲೂಟಾರ್ಕ್ (ಕ್ರಿಶ ಸು. ೪೬–೧೨೦) ತನ್ನ 'ಲೈವ್ಸ್ ಆಫ್ ದ ನೋಬಲ್ ಗ್ರೀಷಿಯನ್ಸ್ ಅಂಡ್ ರೋಮನ್ಸ್' ಕೃತಿಯಲ್ಲಿ ಎರಡೂ ಅವಕಾಶಗಳ ಶ್ರೇಷ್ಠ ವ್ಯಕ್ತಿಗಳ ನಡುವಣ ಸಮಾನತೆಯನ್ನು ಗುರುತಿಸುತ್ತಾನೆ. ಅವನು ರೋಮ್‌ನಲ್ಲಿ ಸಾಕಷ್ಟು ಸಮಯ ಕಳೆದವನು, ಚಕ್ರವರ್ತಿ ಹ್ಯಾಡ್ರಿಯನ್ ಮತ್ತು ಟ್ರಾಜನ್‌ರಿಂದ

ಗೌರವಿಸಲ್ಪಟ್ಟವನು. ಈ ಕೃತಿಯ ಜೊತೆಗೆ ಅವನು ತತ್ವಜ್ಞಾನ, ಮತಧರ್ಮ, ನಿಸರ್ಗೇತಿಹಾಸ ಮತ್ತು ನೀತಿಗಳ ಕುರಿತ ಅನೇಕ ಕೃತಿಗಳನ್ನು ರಚಿಸಿದ. ಗ್ರೀಸ್ ಮತ್ತು ರೋಮ್‌ಗಳ ಜನರ ಚಿಂತನೆಗಳಲ್ಲಿನ ಹೊಂದಾಣಿಕೆಯನ್ನು ತೋರಿಸುವುದು ಅವನ 'ಲೈವ್ಸ್'ನ ಮುಖ್ಯ ಕಾಳಜಿ.

ಒಟ್ಟಾರೆ, ಅಂಥ ಅಸಾಧಾರಣ ವ್ಯಕ್ತಿಗಳ ಹೊರತಾಗಿ, ಗ್ರೀಕ್ ನುಡಿಯನ್ನಾಡುವ ಚಕ್ರಾಧಿಪತ್ಯ ಭಾಗದ ಮೇಲೆ ರೋಮ್ ಬೂಷ್ಟಿನಂತಹ ರೀತಿಯಲ್ಲಿ ಕೆಲಸ ಮಾಡಿತು. ಚಿಂತನೆ ಮತ್ತು ಕಲೆಗಳು ಏಕರೀತಿಯಲ್ಲಿ ಇಳಿಮುಖವಾದವು. ಕ್ರಿಶ ಎರಡನೆಯ ಶತಮಾನದ ಕೊನೆಯವರೆಗೂ, ಹಣವಂತರಿಗೆ ಸುಖ ಮತ್ತು ವಿಶ್ರಾಂತಿಗಳಿದ್ದವು; ಶ್ರಮಕ್ಕೆ ಯಾವುದೇ ಪ್ರೋತ್ಸಾಹವಿರಲಿಲ್ಲ, ದೊಡ್ಡ ಸಾಧನೆಗೂ ಹೆಚ್ಚು ಅವಕಾಶವಿರಲಿಲ್ಲ. ತತ್ವಜ್ಞಾನದ ಪ್ರಖ್ಯಾತ ಪಂಥಗಳಾದ ಅಕೆಡೆಮಿ, ಪೆರಿಪ್ಯಾಟೆಟಿಕ್, ಎಪಿಕ್ಯೂರಿಯನ್, ಮತ್ತು ಸಂಯಮವಾದಗಳು ಜಸ್ಟಿನಿಯನ್ ಮುಚ್ಚುವವರೆಗೂ ಕಾರ್ಯನಿರ್ವಹಿಸಿದವು. ಆದರೆ ಇವಾವುವೂ ಮಾರ್ಕಸ್ ಔರೀಲಿಯಸ್‌ನ ನಂತರ ಪೂರ್ತಿ ಯಾವುದೇ ಸತ್ವವನ್ನು ಹೊಂದಿರಲಿಲ್ಲ. ಇದಕ್ಕೆ ಅಪವಾದವೆಂದರೆ ಕ್ರಿಶ ಮೂರನೆಯ ಶತಮಾನದ ನವಪ್ಲೇಟೋವಾದ, ಈ ಕುರಿತು ನಾವು ಮುಂದಿನ ಅಧ್ಯಾಯದಲ್ಲಿ ನೋಡೋಣ. ಆದರೆ ಇವರು ರೋಮ್‌ನಿಂದ ಪ್ರಭಾವಕ್ಕೊಳಗಾದುದು ಇಲ್ಲವೇ ಇಲ್ಲ. ಚಕ್ರಾಧಿಪತ್ಯದ ಲ್ಯಾಟಿನ್ ಮತ್ತು ಗ್ರೀಕ್ ಅರ್ಧಭಾಗಗಳು ಹೆಚ್ಚು ಹೆಚ್ಚು ಬದಲಾಗತೊಡಗಿದವು. ಗ್ರೀಕ್ ಭಾಷೆಯ ಜ್ಞಾನವು ಪಶ್ಚಿಮದಲ್ಲಿ ಅಪರೂಪವಾಯಿತು, ಕಾನ್‌ಸ್ಟಾಂಟೈನ್‌ನ ನಂತರ ಪೂರ್ವದಲ್ಲಿ ಲ್ಯಾಟಿನ್ ಕಾನೂನು ಮತ್ತು ಸೈನ್ಯಕ್ಕೆ ಸೀಮಿತವಾಯಿತು.

೨. ಗ್ರೀಸ್ ಮತ್ತು ಪೂರ್ವಭಾಗಗಳು ರೋಮ್ ಮೇಲೆ ಮಾಡಿದ ಪ್ರಭಾವ: ಇಲ್ಲಿ ಎರಡು ತೀರ ವಿಭಿನ್ನ ಸಂಗತಿಗಳನ್ನು ನಾವು ಗಮನಿಸಬೇಕು; ಮೊದಲಿಗೆ ಹೆಲೆನಿಕ್ ಕಲೆ ಮತ್ತು ಸಾಹಿತ್ಯ ಹಾಗೂ ತತ್ವಜ್ಞಾನಗಳು ತುಂಬ ಸಂಸ್ಕೃತಿವಂತರಾದ ರೋಮನ್ನರ ಮೇಲೆ ಮಾಡಿದ ಪ್ರಭಾವ; ಮತ್ತು ಎರಡನೆಯದು, ಹೆಲೆನಿಕೇಥರ ಮತಧರ್ಮಗಳು ಮತ್ತು ಕಂದಾಚಾರಗಳು ಇಡೀ ಪಶ್ಚಿಮ ಭಾಗದಾದ್ಯಂತ ಮಾಡಿದ ಪ್ರಭಾವ.

(ಅ) ರೋಮನ್ನರು ಮೊದಲ ಬಾರಿಗೆ ಗ್ರೀಕ್‌ರೊಡನೆ ಸಂಪರ್ಕಕ್ಕೆ ಬಂದಾಗ, ತಾವು ಅವರಿಗೆ ಹೋಲಿಸಿದರೆ ಬರ್ಬರರು ಮತ್ತು ಅಸಂಸ್ಕೃತರು ಎಂಬುದನ್ನು ಅರಿತುಕೊಂಡರು. ಗ್ರೀಕರು ಅನೇಕ ವಿಧಗಳಲ್ಲಿ ತಮಗಿಂತ ಅತ್ಯಂತ ಉನ್ನತರ; ತಯಾರಿಕೆ ಮತ್ತು ಕೃಷಿತಂತ್ರ; ಒಳ್ಳೆಯ ನೌಕರಶಾಹಿಗೆ ಬೇಕಾದ ಜ್ಞಾನದ ಬಗೆಗಳು; ಸಂಭಾಷಣ ಚತುರತೆ ಮತ್ತು ಸಂತೋಷವಾಗಿ ಬದುಕುವ ಕಲೆ; ಕಲೆ ಸಾಹಿತ್ಯ ಹಾಗೂ ತತ್ವಜ್ಞಾನಗಳು. ರೋಮನ್ನರು ಉತ್ತಮರಾಗಿದ್ದುದೆಂದರೆ ಯುದ್ಧತಂತ್ರಗಳು

ಮತ್ತು ಸಾಮಾಜಿಕ ಐಕ್ಯಗಳಲ್ಲಿ ಮಾತ್ರ. ರೋಮನ್‌ರು ಮತ್ತು ಗ್ರೀಕರ ಸಂಬಂಧವು ಕ್ರಿಶ ೧೮೮೧೪-೧೫ ರಲ್ಲಿನ ಪ್ರಷ್ಯನ್ ಮತ್ತು ಫ್ರೆಂಚ್ ಸಂಬಂಧದಂತಿತ್ತು, ಆದರೆ ಇದು ತಾತ್ಕಾಲಿಕವಾದುದು, ಆದರೆ ಮೊದಲಿನದು ದೀರ್ಘ ಕಾಲ ಇದ್ದುದು. ಪ್ಯೂನಿಕ್ ಯುದ್ಧಗಳ ಬಳಿಕ, ಯುವ ರೋಮನ್ನರು ಗ್ರೀಕರ ಬಗ್ಗೆ ಮೆಚ್ಚಿಕೆಯನ್ನು ರೂಢಿಸಿಕೊಂಡರು. ಅವರು ಗ್ರೀಕ್ ಭಾಷೆಯನ್ನು ಕಲಿತರು, ಗ್ರೀಕ್ ವಾಸ್ತುವನ್ನು ಅನುಕರಿಸಿದರು, ಗ್ರೀಕ್ ಶಿಲ್ಪಿಗಳನ್ನು ನೇಮಿಸಿಕೊಂಡರು. ರೋಮನ್ ದೇವತೆಗಳನ್ನು ಗ್ರೀಕ್ ದೇವತೆಗಳೊಂದಿಗೆ ಸಮೀಕರಿಸಿಕೊಂಡರು. ಹೋಮರ್ ಪೌರಾಣಿಕತೆಯೊಂದಿಗೆ ಸಂಬಂಧವನ್ನು ಕಲ್ಪಿಸಲೋಸುಗ ರೋಮನ್ನರ ಟ್ರೋಜನ್ ಮೂಲವನ್ನು ಸೃಷ್ಟಿಸಿದರು. ಲ್ಯಾಟಿನ್ ಕವಿಗಳು ಗ್ರೀಕ್ ಛಂದೋರೂಪಗಳನ್ನು ಅಳವಡಿಸಿಕೊಂಡರು, ಲ್ಯಾಟಿನ್ ತತ್ವಜ್ಞಾನಿಗಳು ಗ್ರೀಕ್ ಸಿದ್ಧಾಂತಗಳನ್ನು ಸ್ವೀಕರಿಸಿದರು. ಕೊನೆಯಲ್ಲಿ, ರೋಮ್ ಗ್ರೀಕ್ ಸಂಸ್ಕೃತಿಯ ಬಂದಳಿಕೆಯಾಗಿತ್ತು. ರೋಮನ್ನರು ಯಾವ ಕಲಾರೂಪವನ್ನೂ ಸೃಷ್ಟಿಸಲಿಲ್ಲ, ಸ್ವಂತ ತತ್ವಜ್ಞಾನ ಪಂಥಗಳನ್ನು ರೂಪಿಸಲಿಲ್ಲ, ಯಾವುದೇ ವೈಜ್ಞಾನಿಕ ಅನಾವರಣಗಳನ್ನು ನಡೆಸಲಿಲ್ಲ. ಅವರು ಒಳ್ಳೆಯ ರಸ್ತೆಗಳನ್ನು ಮಾಡಿದರು, ಸುವ್ಯವಸ್ಥಿತವಾದ ಕಾನೂನುಪದ್ಧತಿಯನ್ನು ರೂಪಿಸಿದರು ಮತ್ತು ಸಮರ್ಥ ಸೈನ್ಯವನ್ನು ಕಟ್ಟಿದರು; ಮಿಕ್ಕೆಲ್ಲಕ್ಕೂ ಗ್ರೀಸ್ ಕಡೆ ನೋಡಿದರು.

ರೋಮ್‌ನ ಹೆಲೆನೀಕರಣವು ತನ್ನೊಂದಿಗೆ ಹಿರಿಯ ಕೇಟೋ ದ್ವೇಷಿಸುತ್ತಿದ್ದ ನಡಾವಳಿಯ ನಯವಂತಿಕೆಯನ್ನು ತಂದಿತು. ಪ್ಯೂನಿಕ್ ಯುದ್ಧಗಳವರೆಗೂ ರೋಮನ್ನರು ರೈತರ ಗುಣಾವಗುಣಗಳನ್ನು ಹೊಂದಿದ ಹಳ್ಳಿಗರಾಗಿದ್ದರು: ನಿಷ್ಠುರತೆ, ಶ್ರಮಜೀವನ ಮತ್ತು ಮೂರ್ಖತನ. ಅವರ ಕುಟುಂಬ ಜೀವನವು ಸ್ಥಿರವಾಗಿತ್ತು; ಪಿತೃಪ್ರಾಧಾನ್ಯ (ಪೇಟ್ರಿಯ ಪ್ರೊಟೆಸ್ಪ)ವಾದುದಾಗಿತ್ತು; ಹೆಂಗಸರು-ಮಕ್ಕಳು ಸಂಪೂರ್ಣ ಅಧೀನರಾಗಿದ್ದರು. ಇದ್ದಕ್ಕಿದ್ದಂತೆ ಬಂದ ಶ್ರೀಮಂತಿಕೆಯಿಂದಾಗಿ ಇವೆಲ್ಲ ಬದಲಾದವು. ಸಣ್ಣ ಹಿಡುವಳಿಗಳು ಕಣ್ಮರೆಯಾದವು, ಅವುಗಳ ಜಾಗದಲ್ಲಿ ನಿಧಾನವಾಗಿ ವಿಶಾಲ ಎಸ್ಟೇಟುಗಳು ಬಂದು, ಹೊಸ ವೈಜ್ಞಾನಿಕ ಕೃಷಿಗಾಗಿ ಗುಲಾಮರನ್ನು ದುಡಿಮೆಗಾಗಿ ನೇಮಿಸಿಕೊಳ್ಳುವ ಪರಿಪಾಟವುಂಟಾಯಿತು. ವ್ಯಾಪಾರಿಗಳ ದೊಡ್ಡ ತಂಡ ನಿರ್ಮಿತವಾಯಿತು, ಬಹಳ ಜನರು ಹದಿನೆಂಟನೆಯ ಶತಮಾನದ ಇಂಗ್ಲಂಡ್‌ನ ನವಾಬ (ನೆಬೋಬ್)ರಂತೆ ಸುಲಿಗೆಯಿಂದ ಸಿರಿವಂತರಾದರರು. ಸಜ್ಜನ ಗುಲಾಮರಾಗಿದ್ದ ಹೆಂಗಸರು ಸ್ವತಂತ್ರರೂ ಲಂಪಟಿಗರೂ ಆದರು; ವಿವಾಹ ವಿಚ್ಛೇದನ ಸಾಮಾನ್ಯವಾಯಿತು; ಸಾಹುಕಾರರು ಮಕ್ಕಳನ್ನು ಪಡೆಯುವುದನ್ನು ನಿಲ್ಲಿಸಿದರು. ಎಷ್ಟೋ ಶತಮಾನಗಳ ಹಿಂದೆ ಈ ಎಲ್ಲ ಹಂತಗಳನ್ನೂ ಹಾದು ಬಂದಿದ್ದ ಗ್ರೀಕರು ಅವರಿಂದ ಪ್ರೇರಿತರಾಗಿ ನೈತಿಕಪತನಕ್ಕೊಳಗಾದರು. ಚಕ್ರಾಧಿಪತ್ಯದ ಅತ್ಯಂತ ಲಾಂಪಟ್ಯದ ಸಂದರ್ಭದಲ್ಲೂ ಗ್ರೀಸ್‌ನ ಲಂಚಕೋರತನದ ಮುಂದೆ

ರೋಮನ್‌ರು ಪರಿಶುದ್ಧ ನೈತಿಕ ಮಟ್ಟವನ್ನು ಹೊಂದಿದವರೆಂಬ ಭಾವನೆ ಸಾಮಾನ್ಯ ರೋಮನ್‌ನಲ್ಲಿ ಮೂಡಿತ್ತು.

ಪಶ್ಚಿಮ ಚಕ್ರಾಧಿಪತ್ಯಭಾಗದ ಮೇಲಿನ ಗ್ರೀಸ್ ಸಾಂಸ್ಕೃತಿಕ ಪ್ರಭಾವವು ಕ್ರಿಶ ಮೂರನೆಯ ಶತಮಾನಾನಂತರ ವೇಗವಾಗಿ ಇಳಿಮುಖವಾಯಿತು, ಇದಕ್ಕೆ ಕಾರಣ ಸಂಸ್ಕೃತಿಯು ವ್ಯಾಪಕವಾಗಿ ಕ್ಷೀಣವಾದುದು. ಇದಕ್ಕೆ ಅನೇಕ ಕಾರಣಗಳಿದ್ದವು, ಅವುಗಳಲ್ಲೊಂದನ್ನು ವಿಶೇಷವಾಗಿ ಹೇಳಬೇಕು. ಪಶ್ಚಿಮ ಚಕ್ರಾಧಿಪತ್ಯ ಭಾಗದ ಕೊನೆಯ ದಿನಗಳಲ್ಲಿ, ಸರ್ಕಾರವು ಮೊದಲಿಗಿಂತ ಹೆಚ್ಚು ಸೈನಿಕ ದುಂಡಾವರ್ತಿಯನ್ನು ನೇರವಾಗಿಯೇ ಅಳವಡಿಸಿಕೊಂಡಿತ್ತು, ಸೈನ್ಯವು ಸಾಮಾನ್ಯವಾಗಿ ಯಶಸ್ವೀ ಸೇನಾಧಿಪತಿಯೊಬ್ಬನನ್ನು ಚಕ್ರವರ್ತಿಯಾಗಿ ಆಯ್ಕೆ ಮಾಡುತ್ತಿತ್ತು; ಆದರೆ ಸೈನ್ಯವು ತನ್ನ ಅತ್ಯಂತ ಉನ್ನತ ಶ್ರೇಣಿಗಳಲ್ಲೂ ಸುಸಂಸ್ಕೃತ ರೋಮನ್‌ರನ್ನು ಹೊಂದಿರಲಿಲ್ಲ, ಅದರ ಬದಲು ಇದ್ದವರು ಗಡಿಭಾಗಗಳ ಅರೆಬರ್ಬರರು. ಇಂತಹ ಒರಟು ಸೈನಿಕರಿಗೆ ಸಂಸ್ಕೃತಿಯಿಂದ ಉಪಯೋಗವಿರಲಿಲ್ಲ, ಸುಸಂಸ್ಕೃತ ಪ್ರಜೆಗಳನ್ನವರು ಆದಾಯಮೂಲಗಳೆಂದು ಮಾತ್ರ ಪರಿಗಣಿಸಿದ್ದರು. ಮಕ್ಕಳಿಗೆ ಶಿಕ್ಷಣ ಕೊಡಿಸುವ ವಿಷಯದಲ್ಲಿ ಸಾಮಾನ್ಯ ಜನರು ತೀರ ಬಡವರಾಗಿದ್ದರು, ಸರ್ಕಾರವೂ ಶಿಕ್ಷಣವು ಅನವಶ್ಯಕವೆಂದೇ ಪರಿಗಣಿಸಿತ್ತು. ಇದರ ಪರಿಣಾಮವಾಗಿ, ಪಶ್ಚಿಮ ಭಾಗದಲ್ಲಿ ಅತ್ಯಂತ ಸುಶಿಕ್ಷಿತರಾಗಿದ್ದ ಕೆಲವರು ಮಾತ್ರ ಗ್ರೀಕ್ ಓದನ್ನು ಮುಂದುವರಿಸಿದ್ದರು.

(ಆ) ಇದಕ್ಕೆ ವ್ಯತಿರಿಕ್ತವಾಗಿ, ಹೆಲೆನಿಕೇತರ ಮತಧರ್ಮ ಮತ್ತು ಕಂದಾಚಾರಗಳು ಕ್ರಮೇಣ ಪಶ್ಚಿಮಭಾಗದ ಮೇಲೆ ಹೆಚ್ಚೆಚ್ಚು ಗಟ್ಟಿಯಾದ ಹಿಡಿತವನ್ನು ಸಾಧಿಸತೊಡಗಿದ್ದವು. ಅಲೆಕ್ಸಾಂಡರ್‌ನ ವಿಜಯಗಳು ಗ್ರೀಕ್ ಜಗತ್ತಿನ ಮೇಲೆ ಬ್ಯಾಬಿಲೋನಿಯನ್ನರು, ಪರ್ಷಿಯನ್ನರು ಮತ್ತು ಈಜಿಪ್ಷಿಯನ್ನರ ಶ್ರದ್ಧೆಗಳನ್ನು ಹೇಗೆ ತುರುಕುತ್ತಿದ್ದವು ಎಂಬುದನ್ನಾಗಲೇ ನೋಡಿದ್ದೇವೆ. ಹಾಗೆಯೇ ರೋಮನ್ ವಿಜಯಗಳು ಪಶ್ಚಿಮಭಾಗವು ಇವುಗಳ ಜೊತೆಗೆ ಯೆಹೂದಿ ಮತ್ತು ಕ್ರಿಶ್ಚಿಯನ್ ಈ ಸಿದ್ಧಾಂತಗಳನ್ನೂ ಅಳವಡಿಸಿಕೊಳ್ಳುವಂತೆ ಮಾಡಿದವು. ಯೆಹೂದಿಗಳು ಮತ್ತು ಕ್ರಿಶ್ಚಿಯನ್‌ರ ವಿಷಯಕ್ಕೆ ಆಮೇಲೆ ಬರುತ್ತೇನೆ. ಸದ್ಯಕ್ಕೆ, ಸಾಧ್ಯವಾದ ಮಟ್ಟಿಗೂ ನಾನು ಕ್ರೈಸ್ತೇತರ ಕಂದಾಚಾರಗಳಿಗೆ ಸೀಮಿತಗೊಳ್ಳುತ್ತೇನೆ.[೧೨೬]

ರೋಮ್‌ನಲ್ಲಿ ಎಲ್ಲ ಪಂಥ ಪ್ರವಾದಿಗಳಿಗೂ ಸ್ಥಾನವುಂಟಾಯಿತು, ಎಷ್ಟೋ ವೇಳೆ ಸರ್ಕಾರದ ಉನ್ನತ ವಲಯಗಳಲ್ಲೂ ಒಲವನ್ನು ಸಂಪಾದಿಸಿದ್ದವು. ತನ್ನ ಕಾಲದ ಭೋಳೇತನದ ನಡುವೆಯೂ ಸಂದೇಹವಾದವನ್ನು ಬೆಂಬಲಿಸಿದ ಲ್ಯೂಸಿಯನ್ ತಮಾಷೆಯ ಕತೆಯೊಂದನ್ನು ಹೇಳುತ್ತಾನೆ. ಇದನ್ನು ಸಾಮಾನ್ಯವಾಗಿ ಒಟ್ಟಾರೆ

---

೧೨೬. ನೋಡಿ, ಕ್ಯೂಮಾಂಟ್, 'ಓರಿಯಂಟಲ್ ರಿಲಿಜನ್ಸ್ ಇನ್ ರೋಮನ್ ಪ್ಯಾಗನಿಸಂ'

ನಂಬಲರ್ಹವೆಂದು ಭಾವಿಸಲಾಗುತ್ತದೆ. ಅದು ಅಲೆಕ್ಸಾಂಡರ್ ಪ್ಯಾಫ್ಲಗೋನಿಯನ್ ಎಂಬ ಪ್ರವಾದಿ ಹಾಗೂ ಪವಾಡಪುರುಷ ಎನಿಸಿಕೊಂಡವನ ಬಗ್ಗೆ. ಅವನು ಮಾಟಮಂತ್ರಗಳ ಮೂಲಕ ಕಾಯಿಲೆಗಳನ್ನು ವಾಸಿಮಾಡುತ್ತಿದ್ದನಂತೆ, ಹಾಗೂ ಭವಿಷ್ಯ ನುಡಿಯುತ್ತಿದ್ದನಂತೆ. ಅವನ ಹೆಸರು ಡ್ಯಾನ್ಯೂಬ್ ದಡದಲ್ಲಿ ಮ್ಯಾರ್ಕೊಮನಿಯೊಡನೆ ಹೋರಾಡುತ್ತಿದ್ದ ಮಾರ್ಕಸ್ ಔರೀಲಿಯಸ್‌ನ ಕಿವಿಗೂ ಬಿತ್ತು. ಯುದ್ಧವನ್ನು ಗೆಲ್ಲವುದು ಹೇಗೆ ಎಂದು ಚಕ್ರವರ್ತಿ ಅವನನ್ನು ಕೇಳಿದನಂತೆ; ಎರಡು ಸಿಂಹಗಳನ್ನು ಡ್ಯಾನ್ಯೂಬ್ ನದಿಗೆ ಎಸೆದರೆ ಅವನಿಗೆ ಅಭೂತಪೂರ್ವ ಗೆಲವು ಸಿಕ್ಕುತ್ತದೆ ಎಂದು ನುಡಿದನಂತೆ. ಆ ಋಷಿಯ ಸಲಹೆಯಂತೆ ಚಕ್ರವರ್ತಿ ನಡೆದುಕೊಂಡ, ಆದರೆ ಗೆದ್ದುದು ಮಾತ್ರ ಮ್ಯಾರ್ಕೊಮನಿ. ಈ ಆಘಾತವಾದರೂ, ಅಲೆಕ್ಸಾಂಡರ್‌ನ ಕೀರ್ತಿ ಬೆಳೆಯುತ್ತ ಹೋಯಿತು. ರಾಯಭಾರಿ ಮಟ್ಟದ ಪ್ರಮುಖ ರೋಮನ್ ವ್ಯಕ್ತಿಯಾದ ರೂಟಿಲಿಯಾನಸ್ ಅನೇಕ ವಿಷಯಗಳ ಬಗ್ಗೆ ಅವನ ಸಲಹೆ ಪಡೆದ ಮೇಲೆ, ಕೊನೆಗೆ ಹೆಂಡತಿಯ ಆಯ್ಕೆಯ ಬಗ್ಗೆ ಕೇಳಿದನಂತೆ. ಎಂಡಿಮಿಯಾನ್‌ನಂತೆ ಅಲೆಕ್ಸಾಂಡರ್ ಚಂದ್ರನ ಒಲವನ್ನು ಸಂಪಾದಿಸಿ ಒಬ್ಬ ಮಗಳನ್ನು ಪಡೆದಿದ್ದನಂತೆ, ಅವಳನ್ನೇ ವಧುವಾಗಿ ಆಯ್ಕೆಮಾಡಿಕೊಳ್ಳುವಂತೆ ರೂಟಿಲಿಯಾನಸ್‌ಗೆ ದೇವವಾಣಿ ಹೇಳಿತು. 'ಅಷ್ಟು ಹೊತ್ತಿಗೆ ಅರುವತ್ತು ವರ್ಷದವನಾಗಿದ್ದ ರೂಟಿಲಿಯಾನಸ್ ಈ ದೇವವಾಣಿಯನ್ನು ತಕ್ಷಣವೇ ಒಪ್ಪಿಕೊಂಡು, ದೈವಿಕ ಅತ್ತೆಗೆ ಎಲ್ಲವನ್ನೂ ಮಹಾಬಲಿಯಲ್ಲಿ (ಹೆಕಟೂಮ್) ಬಲಿಕೊಟ್ಟು ಅವಳೊಂದಿಗೆ ಮದುವೆಯಾದನಂತೆ.'[೧೨೭]

ಅಲೆಕ್ಸಾಂಡರ್ ಪ್ಯಾಫ್ಲಗೋನಿಯನ್‌ನ ಜೀವನಕ್ಕಿಂತ ಮುಖ್ಯವಾದುದು ಚಕ್ರವರ್ತಿ ಎಲಗಾಬಲೂಸ್ ಅಥವಾ ಹೀಲಿಯೋಗಾಬಲೂಸ್ (ಕ್ರಿಶ ೨೧೮-೨೨)ನ ಆಳ್ವಿಕೆ, ತನ್ನನ್ನು ಸೈನ್ಯವು ಆಯ್ಕೆ ಮಾಡುವವರೆಗೆ ಅವನು ಸಿರಿಯನ್ ಸೂರ್ಯ ಪೂಜಾರಿಯಾಗಿದ್ದ. ಅವನು ನಿಧಾನವಾಗಿ ಸಿರಿಯದಿಂದ ರೋಮ್‌ಗೆ ಬರುತ್ತಿರುವಾಗ, ಅವನಿಗಿಂತ ಮುಂಚೆ ಸೆನೇಟ್‌ಗೆ ಬಳುವಳಿಯಾಗಿ ಅವನ ಚಿತ್ರ ಬಂತಂತೆ. 'ರೇಷ್ಮೆ ಮತ್ತು ಚಿನ್ನಗಳಿಂದ ಕೂಡಿದ ನೀಳವಾಗಿ ಜೋತಾಡುವಂತೆ ಮೇಡೀಸ್ ಮತ್ತು ಫಿನೀಷಿಯನ್ನರದಂತಹ ಪುರೋಹಿತನ ಉಡುಪಿನಲ್ಲಿ ಅವನನ್ನು ಚಿತ್ರಿಸಿದ್ದರು; ತಲೆಯ ಮೇಲೆ ದೊಡ್ಡ ಶಿರೋವೇಷ್ಟನ, ಅವನ ವಿವಿಧ ಕಾಲರ್‌ಗಳು ಮತ್ತು ತೋಳುಗಳು ಬೆಲೆಬಾಳುವ ಹರಳುಗಳಿಂದ ಅಲಂಕೃತವಾಗಿದ್ದವಂತೆ. ಅವನ ರೆಪ್ಪೆಗಳಿಗೆ ಕಪ್ಪು ಬಣ್ಣ ಬಳಿದಿದ್ದರು; ಕೆನ್ನೆಗಳ ಮೇಲೆ ಕೃತಕವಾದ ಕೆಂಪು-ಬಿಳಿ ಬಣ್ಣ ಬಳಿಯಲಾಗಿತ್ತು. ದೀರ್ಘಕಾಲ ತಮ್ಮ ದೇಶದವರ ನಿಷ್ಠುರ ದಬ್ಬಾಳಿಕೆಯನ್ನು

---

೧೨೭. ಬೆನ್, 'ದ ಗ್ರೀಕ್ ಫಿಲಾಸಫರ್ಸ್', ಭಾಗ ೨, ಪು.೨೨೬.

ಸಹಿಸಿದ ಬಳಿಕ ದುರ್ಬಲ ಪೌರಸ್ತ್ಯ ನಿರಂಕುಪ್ರಭುತ್ವದಡಿಯಲ್ಲಿ ಕೊನೆಗೂ ವಿನೀತವಾಯಿತೆಂದು ಗಂಭಿರ ಸೆನೇಟರ್‌ಗಳು ನಿಟ್ಟುಸಿರುಬಿಟ್ಟರಂತೆ.'[೧೨೮] ಸೈನ್ಯದ ದೊಡ್ಡ ಭಾಗದ ಬೆಂಬಲದಿಂದ ಅವನು ದುರಭಿಮಾನೀ ಉತ್ಸಾಹದಿಂದ ಪೂರ್ವದ ಮತಧಾರ್ಮಿಕ ಆಚರಣೆಗಳನ್ನು ರೋಮ್‌ನಲ್ಲಿ ಜಾರಿಗೊಳಿಸಲು ಮುಂದಾದ. ಅವನ ಹೆಸರು ತಾವು ಮುಖ್ಯ ಪೂಜಾರಿಯಾಗಿ ಎಲೆಸದಲ್ಲಿ ಆರಾಧಿಸುತ್ತಿದ್ದ ಸೂರ್ಯದೇವನದು. ವಾಸ್ತವದಲ್ಲಿ ಆಳ್ವಿಕೆ ನಡೆಸುತ್ತಿದ್ದ ಅವನ ತಾಯಿಯೋ ಅಜ್ಜಿಯೋ ಅವನು ತೀರ ಮುಂದುವರಿದನೆಂದು ಅರಿತು ಅವನನ್ನು ಕೆಳಗಿಳಿಸಿ ತನ್ನ ಅಣ್ಣನ ಮಗ ಅಲೆಕ್ಸಾಂಡರ್ (೨೨೨-೩೫)ನನ್ನು ಸಿಂಹಾಸನವೇರಿಸಿದಳು. ಅವನ ಪೌರಸ್ತ್ಯ ದುರಭ್ಯಾಸಗಳು ಹಿಡಿತದಲ್ಲಿದ್ದವು. ಅವನ ಕಾಲದಲ್ಲಿ ಸಾಧ್ಯವಾದ ಮತಪಂಥಗಳ ಮಿಶ್ರಣವು ತನ್ನ ಖಾಸಗೀ ಪೂಜಾಮಂದಿರದಲ್ಲಿ ಅವನು ಇಟ್ಟುಕೊಂಡಿದ್ದ ಏಬ್ರಹಾಂ, ಆರ್ಫಿಯಸ್, ತ್ಯಾನಾದ ಅಪೊಲೋನಿಯಸ್ ಮತ್ತು ಕ್ರಿಸ್ತನ ವಿಗ್ರಹಗಳಲ್ಲಿ ವ್ಯಕ್ತವಾಯಿತು.

ಮಿತ್ರರ ಮತಧರ್ಮವು ಪರ್ಷಿಯನ್ ಮೂಲದ್ದು, ಅದು ಕ್ರೈಸ್ತಮತಧರ್ಮದ ಪ್ರಮುಖ ಪ್ರತಿಸ್ಪರ್ಧಿಯಾಗಿತ್ತು, ವಿಶೇಷವಾಗಿ ಕ್ರಿಶ ಮೂರನೆಯ ಶತಮಾನದ ಉತ್ತರಾರ್ಧದಲ್ಲಿ. ಸೈನ್ಯವನ್ನು ಹತೋಟಿಯಲ್ಲಿಟ್ಟುಕೊಳ್ಳಲು ಹೆಣಗುತ್ತಿದ್ದ ಚಕ್ರವರ್ತಿಗಳು ಮತಧರ್ಮದಿಂದ ಅತ್ಯವಶ್ಯಕವಾದ ಸ್ಥಿರತೆಯು ಬರಬಹುದೆಂದು ಭಾವಿಸಿದರು. ಆದರೆ ಅದು ಒಂದು ಹೊಸ ಮತಧರ್ಮವಾಗಬೇಕಾಗಿತ್ತು, ಯಾಕಂದರೆ ಇಂತಹವನ್ನೇ ಸೈನಿಕರು ಇಷ್ಟಪಡುತ್ತಿದ್ದುದು. ಈ ಮತಪಂಥವನ್ನು ರೋಮ್‌ನಲ್ಲಿ ಜಾರಿಗೊಳಿಸಲಾಯಿತು, ಸೈನಿಕ ಮನಸ್ಸಿಗೆ ಅದರಲ್ಲಿ ಯೋಗ್ಯವಾದುದು ಬಹಳಷ್ಟಿದೆ ಎನಿಸಿತು. ಮಿತ್ರಸ್ ಒಬ್ಬ ಸೂರ್ಯದೇವತೆ ಆದರೆ ತನ್ನ ಸಿರಿಯನ್ ಸಹದೇವತೆಯಂತೆ ಮಿದುವಲ್ಲ. ಅವನು ಯುದ್ಧದ ಬಗ್ಗೆ ಆಸಕ್ತಿಯಿದ್ದ ದೇವರು, ಅದು ಝೊರೋಸ್ಟರ್‌ನಂತರ ಪರ್ಷಿಯನ್ ಪಂಥದ ಭಾಗವಾಗಿದ್ದ ಒಳಿತು-ಕೆಡುಕುಗಳ ನಡುವಣ ಮಹಾಯುದ್ಧ. ರಾಟೋವ್‌ಸ್ಟೆಲ್ಫ್[೧೨೯] ಅವರು ಅವನ ಪೂಜೆಯನ್ನು ತೋರಿಸುವ ಒಂದು ಅರೆಉಬ್ಬು ಶಿಲ್ಪದ ಚಿತ್ರವನ್ನು ಕೊಡುತ್ತಾರೆ, ಅದು ಜರ್ಮನಿಯ ಹೆಡೆರ್ನ್‌ಹೀಮ್‌ನ ನೆಲದಡಿಯ ಗರ್ಭಗುಡಿಯಲ್ಲಿ ಸಿಕ್ಕಿದ್ದಂತೆ. ಅವನ ಆರಾಧಕರಲ್ಲಿ ಹೆಚ್ಚು ಮಂದಿ ಸೈನಿಕರಿದ್ದಾರೆ, ಕೇವಲ ಪೂರ್ವದೇಶದವರಲ್ಲ, ಪಶ್ಚಿಮದವರು ಕೂಡ ಎಂಬುದು ಅದರಿಂದ ತಿಳಿಯುತ್ತದೆ.

---

೧೨೮. ಗಿಬ್ಬನ್, ಅಧ್ಯಾಯ ೬.
೧೨೯. 'ಹಿಸ್ಟರಿ ಆಫ್ ದ ಏನ್ಷಿಯಂಟ್ ವರ್ಲ್ಡ್', ಭಾಗ ೨, ಪು. ೩೪೩.

ಕಾನ್‌ಸ್ಟಾಂಟೈನ್ ಕ್ರೈಸ್ತಮತಧರ್ಮವನ್ನು ಸ್ವೀಕರಿಸಿದ್ದು ರಾಜಕೀಯವಾಗಿ ಯಶಸ್ವಿಯಾಯಿತು, ಆದರೆ ಹೊಸ ಮತಧರ್ಮವನ್ನು ಜಾರಿಗೆ ತರುವ ಹಿಂದಿನ ಪ್ರಯತ್ನಗಳು ವಿಫಲಗೊಂಡಿದ್ದವು. ಆದರೆ ಸರ್ಕಾರದ ದೃಷ್ಟಿಯಲ್ಲಿ ಹಿಂದಿನ ಪ್ರಯತ್ನಗಳು ಅವನ ರೀತಿಯವೇ ಆಗಿದ್ದವು. ರೋಮನ್ ಜಗತ್ತಿನ ದುರದೃಷ್ಟಗಳು ಮತ್ತು ದಣಿವುಗಳು ಎಲ್ಲವೂ ತಮ್ಮ ಸಾಧ್ಯತೆಗಳನ್ನು ಒಂದೇ ಬಗೆಯಲ್ಲಿ ಕಂಡುಕೊಂಡವು. ಗ್ರೀಸ್ ಮತ್ತು ರೋಮ್‌ಗಳ ಪಾರಂಪರಿಕ ಮತಧರ್ಮಗಳು ಐಹಿಕ ಜಗತ್ತಿನಲ್ಲಿ ಆಸಕ್ತರಾಗಿ ಇಲ್ಲಿಯೇ ಸುಖವನ್ನು ಹೊಂದುವ ಭರವಸೆಯಿದ್ದ ಜನರಿಗೆ ಸೂಕ್ತವಾಗಿದ್ದವು. ಮತ್ತಷ್ಟು ದೀರ್ಘ ಹತಾಶೆಯನ್ನನುಭವಿಸಿದ್ದ ಏಷ್ಯಾ ಮತ್ತೊಂದು ಲೋಕದ ಬಗೆಗಿನ ಭರವಸೆಗಳಲ್ಲಿ ಸಫಲ ಪರಿಹಾರಗಳನ್ನು ಕಂಡುಕೊಂಡಿತ್ತು. ಇವುಗಳಲ್ಲೆಲ್ಲ ಕ್ರೈಸ್ತಮತಧರ್ಮವು ಸಾಂತ್ವನ ತರುವಲ್ಲಿ ಬಹು ಪರಿಣಾಮಕಾರಿಯಿತು. ಆದರೆ ದೇಶದ ಮತಧರ್ಮವಾಗುಷ್ಟರ ಹೊತ್ತಿಗೆ ಕ್ರೈಸ್ತಮತಧರ್ಮವು ಸಾಕಷ್ಟನ್ನು ಗ್ರೀಸ್‌ನಿಂದ ಸ್ವೀಕರಿಸಿತ್ತು, ಇದನ್ನು ಯೆಹೂದಿ ಅಂಶಗಳೊಂದಿಗೆ ಸೇರಿಸಿ ಪಶ್ಚಿಮದ ಮುಂದಿನ ಪೀಳಿಗೆಗಳಿಗೆ ರವಾನಿಸಿತು.

೩. *ಸರ್ಕಾರ ಮತ್ತು ಸಂಸ್ಕೃತಿಗಳ ಐಕ್ಯ;* ಗ್ರೀಸ್‌ನ ಮಹಾಯುಗದ ಸಾಧನೆಗಳು ಮಿನೋವನ್ ಯುಗದವುಗಳಂತೆ ಜಗತ್ತಿನಲ್ಲಿ ಕಣ್ಮರೆಯಾಗದ ಹಾಗೆ ಮಾಡುವುದರಲ್ಲಿ ಅಲೆಕ್ಸಾಂಡರ್ ಮತ್ತು ರೋಮ್‌ಗಳ ಪಾತ್ರವನ್ನು ಮೊದಲಿಗೆ ಹೆಸರಿಸಬೇಕು. ಕ್ರಿಪೂ ಐದನೆಯ ಶತಮಾನದಲ್ಲಿ, ಚೆಂಗಿಝ್‌ಖಾನ್ ಅಂಥವನು ಬಂದಿದ್ದರೆ ಹೆಲೆನಿಕ್ ಜಗತ್ತಿನಲ್ಲಿ ಮುಖ್ಯವೆನಿಸಿದವುಗಳನ್ನೆಲ್ಲ ತೊಡೆದುಹಾಕಿಬಿಡುತ್ತಿದ್ದ. ಒಂದಷ್ಟು ಹೆಚ್ಚಿನ ತೀವ್ರತೆಯಿಂದ ಕ್ಸರ್‌ಕ್ಸಸ್ ಗ್ರೀಕ್ ನಾಗರಿಕತೆಯನ್ನು, ಅವನನ್ನು ಹಿಮ್ಮೆಟ್ಟಿಸಿದ ಬಳಿಕ ಆಗಿದ್ದುದಕ್ಕಿಂತ, ಬಹು ಕೆಳಮಟ್ಟದ್ದಾಗಿ ಮಾಡಿಬಿಡುತ್ತಿದ್ದ. ಈಸ್ಕಿಲಸ್‌ನಿಂದ ಪ್ಲೇಟೋನವರೆಗಿನ ಕಾಲವನ್ನು ನೋಡಿ: ಈ ಕಾಲದಲ್ಲಿ ಮಾಡಿದುದೆಲ್ಲ ಕೆಲವೇ ವಾಣಿಜ್ಯ ನಗರಗಳ ಅಲ್ಪಸಂಖ್ಯೆಯ ಜನರಿಂದ ಆದುದು. ಮುಂದಿನ ದಿನಗಳು ತೋರಿಸಿದಂತೆ, ಈ ನಗರಗಳಿಗೆ ಪರಕೀಯ ದಾಳಿಗಳನ್ನೆದುರಿಸುವ ಶಕ್ತಿಯಿರಲಿಲ್ಲ; ಆದರೆ ಅಸಾಧಾರಣ ಆಕಸ್ಮಿಕವೆಂಬಂತೆ ಅವುಗಳ ಮ್ಯಾಸಿಡೋನಿಯನ್ ಮತ್ತು ರೋಮನ್ ಆಕ್ರಮಣಕಾರರು ಗ್ರೀಕ್ ಸಂಸ್ಕೃತಿಯ ಅಭಿಮಾನಿಗಳಾಗಿದ್ದರು, ಹೀಗಾಗಿ ಅವರು ತಾವು ಗೆದ್ದುದನ್ನು ಕ್ಸರ್‌ಕ್ಸಸ್ ಅಥವಾ ಕಾರ್ಥೇಜ್ ಮಾಡಬಹುದಾಗಿದ್ದಂತೆ ಹಾಳುಗೆಡವಲಿಲ್ಲ. ಕಲೆ ಮತ್ತು ಸಾಹಿತ್ಯಗಳಲ್ಲಿ ಹಾಗೂ ತತ್ವಜ್ಞಾನ ಮತ್ತು ವಿಜ್ಞಾನಗಳಲ್ಲಿ ಗ್ರೀಕ್‌ರು ಮಾಡಿದ ಸಾಧನೆಯ ಬಗ್ಗೆ ನಮಗೆ ಗೊತ್ತಿರುವುದು ಪಶ್ಚಿಮ ಆಕ್ರಮಣಕಾರರು ಸ್ಥಾಪಿಸಿದ ಸ್ಥಿರತೆಯಿಂದಾಗಿ; ಅವರಿಗೆ ತಾವು ಆಳುತ್ತಿದ್ದ ಜನರ ನಾಗರಿಕತೆಯ ಬಗ್ಗೆ ಮೆಚ್ಚಿಕೆಯಿದ್ದು ಅದನ್ನು ರಕ್ಷಿಸಲು ತಮ್ಮ ಕೈಲಾದುದನ್ನೆಲ್ಲ ಅವರು ಮಾಡಿದರು.

ಕೆಲವು ರಾಜಕೀಯ ಮತ್ತು ನೈತಿಕ ವಿಷಯಗಳಲ್ಲಿ, ತಮ್ಮ ಸ್ವತಂತ್ರ ದಿನಗಳಲ್ಲಿ ಹೇಳಿಕೊಳ್ಳುತ್ತಿದ್ದುದಕ್ಕಿಂತ ಉತ್ತಮವಾದ ತತ್ವಜ್ಞಾನಕ್ಕೆ ಅಲೆಕ್ಸಾಂಡರ್ ಮತ್ತು ರೋಮನ್ನರು ಕಾರಣರಾದರು. ಈಗಾಗಲೇ ನೋಡಿರುವಂತೆ, ಸಂಯಮವಾದಿಗಳು ಮಾನವಭ್ರಾತೃತ್ವದಲ್ಲಿ ಶ್ರದ್ಧೆಯಿಟ್ಟಿದ್ದರು, ಕೇವಲ ಗ್ರೀಕರ ಬಗ್ಗೆ ಮಾತ್ರ ಸಹಾನುಭೂತಿಯುಳ್ಳವರಾಗಿರಲಿಲ್ಲ. ರೋಮ್‌ನ ದೀರ್ಘ ಆಳ್ವಿಕೆಯಿಂದಾಗಿ ಜನರು ಒಂದು ಸರ್ಕಾರದಡಿಯಲ್ಲಿನ ಏಕರೂಪ ನಾಗರಿಕತೆಗೆ ಹೊಂದಿಕೊಂಡಿದ್ದರು. ಜಗತ್ತಿನ ಮುಖ್ಯ ಭಾಗಗಳು, ವಿಶೇಷವಾಗಿ, ಇಂಡಿಯ ಮತ್ತು ಚೈನಾ ರೋಮ್‌ನ ಆಧಿಪತ್ಯಕ್ಕೊಳಗಾಗಿರಲಿಲ್ಲ ಎಂಬುದು ನಮಗೆ ತಿಳಿದಿದೆ. ಆದರೆ ತಮ್ಮ ಚಕ್ರಾಧಿಪತ್ಯದ ಹೊರಗಡೆ ಹೆಚ್ಚು ಕಡಿಮೆ ಬರ್ಬರರಾದ ಬುಡಕಟ್ಟು ಜನಗಳಿರುವರೆಂದೂ ಅವರನ್ನು ತಮಗಿಷ್ಟ ಬಂದಾಗ ಗೆಲ್ಲಬಹುದೆಂದೂ ರೋಮನ್ನರು ಭಾವಿಸಿದ್ದರು. ಸತ್ವತಃ ಮತ್ತು ಚಿಂತನೆಯಲ್ಲಿ ರೋಮನ್ನರ ಮನಸ್ಸಿನಲ್ಲಿದ್ದ ಚಕ್ರಾಧಿಪತ್ಯವು ಜಗದಾದ್ಯಂತವಿತ್ತು. ಈ ಕಲ್ಪನೆಯು ಚರ್ಚ್‌ಗೂ ಇಳಿದು ಬಂತು: ಬೌದ್ಧರು, ಕನ್‌ಫ್ಯೂಷಿಯನ್‌ರು (ಆನಂತರ) ಮಹಮ್ಮದೀಯರು ಇದ್ದರೂ 'ಕ್ಯಾಥೋಲಿಕ್' ಮಾತ್ರ ಇರುವುದೆಂಬ ಭಾವನೆ. ಆನಂತರದ ಸಂಯಮವಾದಿಗಳು ಅಳವಡಿಸಿಕೊಂಡ ಸಂತ ಆಗಸ್ಟೈನ್‌ನ ಸೂತ್ರವಾಕ್ಯವೆಂದರೆ 'ಜಗತ್ತಿನ ನಿರ್ಣಯವು ಸಮಂಜಸವಾದುದು' (ಸೆಕ್ಯೂರಸ್ ಜ್ಯೂಡಿಕಾಟ್ ಆರ್ಬಿಸ್ ಟೆರಾನಮ್) ಎಂಬುದು; ಅದು ರೋಮನ್ ಚಕ್ರಾಧಿಪತ್ಯದ ಜಗದ್ವ್ಯಾಪಕತೆಯನ್ನು ಸೂಚಿಸುವಂತಹುದು. ಮಧ್ಯಯುಗದಾದ್ಯಂತ, ಶಾರ್ಲಮೇನ್‌ನ ನಂತರ, ಚರ್ಚ್ ಮತ್ತು ಪರಿಶುದ್ಧ ರೋಮ್ ಚಕ್ರಾಧಿಪತ್ಯವು ಭಾವನೆಯಲ್ಲಿ ಜಗದಾದ್ಯಂತವಾಗಿದ್ದವು, ಆದರಿದು ವಾಸ್ತವವಲ್ಲ ಎಂಬುದು ಎಲ್ಲರಿಗೂ ತಿಳಿದಿತ್ತು. ರೋಮ್ ಸುಮಾರಾಗಿ ಸಾಧಿಸಿದ ಬಳಿಕ ಏಕೈಕ ಮಾನವ ಕುಟುಂಬ, ಏಕೈಕ ಕ್ಯಾಥೋಲಿಕ್ ಮತಧರ್ಮ, ಏಕೈಕ ವೈಶ್ವಿಕ ಸಂಸ್ಕೃತಿ ಮತ್ತು ಜಗದ್ವ್ಯಾಪಕ ಸರ್ಕಾರ ಎಂಬ ಕಲ್ಪನೆಯು ಜನರ ಮನಸ್ಸನ್ನು ಕಾಡಿದೆ.

ನಾಗರಿಕತೆಯ ಭೌಗೋಳಿಕ ವ್ಯಾಪ್ತಿಯನ್ನು ಹೆಚ್ಚಿಸುವಲ್ಲಿ ರೋಮ್ ವಹಿಸಿದ ಪಾತ್ರವು ಬಹು ಮುಖ್ಯವಾದುದು. ಉತ್ತರ ಇಟಲಿ, ಸ್ಪೆಯಿನ್, ಫ್ರಾನ್ಸ್ ಮತ್ತು ಪಶ್ಚಿಮ ಜರ್ಮನಿಯ ಭಾಗಗಳು ನಾಗರಿಕವಾದುದು ಬಲವಂತದ ರೋಮನ್ ಆಕ್ರಮಣಗಳಿಂದಾಗಿ. ಈ ಎಲ್ಲ ಭಾಗಗಳು ತಾವೂ ರೋಮ್‌ನಷ್ಟೇ ಉನ್ನತ ಮಟ್ಟದ ಸಂಸ್ಕೃತಿಯನ್ನು ಹೊಂದುವಲ್ಲಿ ತಮ್ಮ ಸಾಮರ್ಥ್ಯವನ್ನು ತೋರಿದವು. ಪಶ್ಚಿಮ ಚಕ್ರಾಧಿಪತ್ಯದ ಆನಂತರದ ದಿನಗಳಲ್ಲಿ ಗಾಲ್ ಪ್ರದೇಶವು ಹಳೆಯ ನಾಗರಿಕತೆಯ ಪ್ರದೇಶಗಳಲ್ಲಿದ್ದ ತಮ್ಮ ಸಮಕಾಲೀನರಿಗೆ ಕನಿಷ್ಠ ಪಕ್ಷ ಸಮಾನರಾದ ಜನರನ್ನು ಸೃಷ್ಟಿಸಿತು. ರೋಮನ್ನರು ಮಾಡಿದ ಸಂಸ್ಕೃತಿವಿಸ್ತರಣ ಕಾರ್ಯದಿಂದಾಗಿ ಬರ್ಬರರು ತಾತ್ಕಾಲಿಕ ಗ್ರಹಣವನ್ನುಂಟುಮಾಡಿದರೇ ವಿನಾ ಶಾಶ್ವತ ಗ್ರಹಣವನ್ನಲ್ಲ.

ನಾಗರಿಕತೆಯ ಗುಣಮಟ್ಟವು ಪೆರಿಕ್ಲೀಸ್ ಕಾಲದ ಅಥೆನ್ಸ್‌ನದರಷ್ಟು ಮತ್ತೆಂದೂ ಇರಲಿಲ್ಲ ಎಂದು ವಾದಿಸಬಹುದು, ಆದರೆ ಯುದ್ಧ ಮತ್ತು ವಿನಾಶಗಳ ಜಗತ್ತಿನಲ್ಲಿ, ಗಾತ್ರವು ದೀರ್ಘಕಾಲದಲ್ಲಿ ಗುಣಮಟ್ಟದಷ್ಟೇ ಮುಖ್ಯವಾದುದು, ಆ ಗಾತ್ರವುಂಟಾದುದು ರೋಮ್‌ನಿಂದಾಗಿ.

೪. ಹೆಲೆನಿಸಂನ ವಾಹಕರಾಗಿ ಮಹಮ್ಮದೀಯರು: ಏಳನೆಯ ಶತಮಾನದಲ್ಲಿ, ಪ್ರವಾದಿಯ ಶಿಷ್ಯರುಗಳು ಸಿರಿಯ, ಈಜಿಪ್ಟ್, ಮತ್ತು ಉತ್ತರ ಆಫ್ರಿಕಗಳನ್ನು ಗೆದ್ದರು; ಆ ಮುಂದಿನ ಶತಮಾನದಲ್ಲಿ, ಅವರು ಸ್ಪೆಯಿನ್ ಅನ್ನು ಗೆದ್ದರು. ಅವರ ವಿಜಯಗಳು ಸುಲಭವಾಗಿದ್ದುವು, ಹೋರಾಟ ಕಡಿಮೆ. ಮೊದಲ ಕೆಲವು ವರ್ಷಗಳನ್ನು ಬಿಟ್ಟರೆ ಪ್ರಾಯಶಃ ಅವರು ಅಂಧಾಭಿಮಾನಿಗಳಾಗಿರಲಿಲ್ಲ. ಗೌರವವನ್ನು ತೋರಿಸುವವರೆಗೆ ಕ್ರಿಶ್ಚಿಯನ್ನರು ಮತ್ತು ಯೆಹೂದಿಗಳನ್ನವರು ಹಿಂಸಿಸಲಿಲ್ಲ. ಬಹುಬೇಗ ಅರಬ್ಬರು ಪೂರ್ವ ಚಕ್ರಾಧಿಪತ್ಯದ ನಾಗರಿಕತೆಯನ್ನು ಅಳವಡಿಸಿಕೊಂಡರು, ಆದರೆ ಅದಕ್ಕೆ ಕಾರಣ ಪತನದ ದಣಿವಿಗಿಂತ ರಾಜ್ಯವ್ಯವಸ್ಥೆಯ ಉದಯದ ಭರವಸೆ. ಅವರಲ್ಲಿನ ವಿದ್ವಾಂಸರು ಗ್ರೀಕ್ ಗ್ರಂಥಗಳ ಅನುವಾದಗಳನ್ನೋದಿದರು, ಅವುಗಳಿಗೆ ಟೀಕೆಗಳನ್ನು ರಚಿಸಿದರು. ಅರಿಸ್ಟಾಟಲ್‌ನ ಕೀರ್ತಿಗೆ ಮುಖ್ಯವಾಗಿ ಅವರೇ ಕಾರಣ; ಪ್ರಾಚೀನ ಕಾಲದಲ್ಲಿ ಅವನನ್ನು ಪ್ಲೇಟೋಗೆ ಸಮಾನನೆಂದು ಭಾವಿಸಿರಲಿಲ್ಲ.

ಅರೇಬಿಕ್‌ನಿಂದ ನಾವು ಸಾಧಿಸಿಕೊಂಡಿರುವ ಕೆಲವು ಪದಗಳನ್ನು ಕುರಿತು ಯೋಚಿಸುವುದು ಲಾಭದಾಯಕ: ಆಲ್ಜೀಬ್ರ, ಆಲ್ಕೆಮಿ, ಅಲೆಂಬಿಕ್, ಆಲ್ಕಲಿ, ಅಝೀಮತ್, ಝೆನಿತ್, – ಆಲ್ಕೋಹಾಲ್ ಎಂಬುದನ್ನು ಬಿಟ್ಟರೆ, ಅದರ ಮೂಲಾರ್ಥ ಪೇಯವೆಂದಲ್ಲ, ರಸಾಯನವಿಜ್ಞಾನದಲ್ಲಿ ಬಳಸಲಾಗುವ ಒಂದು ವಸ್ತು ಎಂದು – ಈ ಪದಗಳು ನಾವು ಅರಬ್ಬರಿಗೆ ಯಾವ ವಿಷಯಗಳಲ್ಲಿ ಋಣಿಗಳು ಎಂಬುದು ತಿಳಿಯುತ್ತದೆ. ಬೀಜಗಣಿತವನ್ನು (ಆಲ್‌ಜೀಬ್ರ) ಕಂಡುಹಿಡಿದವರು ಅಲೆಕ್ಸಾಂಡ್ರಿಯನ್ ಗ್ರೀಕರು, ಆದರೆ ಅದನ್ನು ಮುಂದುವರಿಸಿದವರು ಮಹಮ್ಮದೀಯರು. 'ಆಲ್ಕೆಮಿ', 'ಅಲೆಂಬಿಕ್', 'ಆಲ್ಕಲಿ' – ಇವುಗಳು ಮೂಲಲೋಹಗಳನ್ನು ಚಿನ್ನವನ್ನಾಗಿಸುವ ಪ್ರಯತ್ನಕ್ಕೆ ಸಂಬಂಧಿಸಿದವು; ಅರಬ್ಬರು ಇದನ್ನು ಗ್ರೀಕರಿಂದ ಪಡೆದರು, ಅದರ ಅನ್ವೇಷಣೆಯಲ್ಲಿ ಗ್ರೀಕ್ ತತ್ವಜ್ಞಾನವನ್ನು ಮೊರೆಹೊಕ್ಕರು.[೧೩೦] 'ಅಝೀಮತ್' ಮತ್ತು 'ಝೆನಿತ್'ಗಳು ಖಗೋಳವಿಜ್ಞಾನಕ್ಕೆ ಸಂಬಂಧಿಸಿದ ಪರಿಭಾಷೆ, ಅರಬ್ಬರಿಗೆ ಅದು ಮುಖ್ಯವಾಗಿ ಜ್ಯೋತಿಷ್ಯಕ್ಕೆ ಸಂಬಂಧಿಸಿದುದು.

---

೧೩೦. ನೋಡಿ, 'ಆಲ್ಕೆಮಿ, ಚೈಲ್ಡ್ ಆಫ್ ಗ್ರೀಕ್ ಫಿಲಾಸಫಿ', ಆರ್ಥರ್ ಜಾನ್ ಹಾಪ್‌ಕಿನ್ಸ್, ಕೊಲಂಬಿಯ, ೧೯೩೪.

ಗ್ರೀಕ್ ತತ್ವಜ್ಞಾನಕ್ಕೆ ಸಂಬಂಧಿಸಿದ ತಿಳಿವಳಿಕೆಯ ವಿಷಯದಲ್ಲಿ ನಾವು ಅರಬ್ಬರಿಗೆ ಎಷ್ಟು ಋಣಿಗಳು ಎಂಬುದನ್ನು ಶಬ್ದನಿರುಕ್ತ ವಿಧಾನವು ಮರೆಮಾಚುತ್ತದೆ, ಯಾಕೆಂದರೆ ಮತ್ತೆ ಅದನ್ನು ಯೂರೋಪ್‌ನಲ್ಲಿ ಅಧ್ಯಯನ ಮಾಡಿದಾಗ, ಆವಶ್ಯಕವಾದ ಪರಿಭಾಷೆಯನ್ನು ಗ್ರೀಕ್ ಮತ್ತು ಲ್ಯಾಟಿನ್‌ಗಳಿಂದ ಪಡೆಯಲಾಯಿತು. ತತ್ವಜ್ಞಾನದ ವಿಷಯದಲ್ಲಿ, ಅರಬ್ಬರು ಸ್ವತಂತ್ರ ಕೃತಿಕಾರರಾಗಿದ್ದುದಕ್ಕಿಂತ ಉತ್ತಮ ಟೀಕಾಕಾರರಾಗಿದ್ದರು. ನಮ್ಮ ಮಟ್ಟಿಗೆ ಅವರ ಪ್ರಾಮುಖ್ಯವು ಯಾವುದರ ವಿಷಯವೆಂದರೆ, ಪೂರ್ವ ಚಕ್ರಾಧಿಪತ್ಯವು ಉಳಿಸಿಕೊಂಡು ಬಂದಿದ್ದ ಗ್ರೀಕ್ ಪರಂಪರೆಯ ತಕ್ಷಣದ ಉತ್ತರಾಧಿಕಾರಿಗಳು ಅವರೇ ಹೊರತು ಕ್ರಿಶ್ಚಿಯನ್ನರಲ್ಲ ಎಂಬುದು. ಸ್ಪೈಯಿನ್ ಮತ್ತು ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಸಿಸಿಲಿಗಳು, ಪಶ್ಚಿಮ ದೇಶಗಳು ಅರಿಸ್ಟಾಟಲ್‌ನ ಬಗ್ಗೆ ಮತ್ತು ಅರೇಬಿಕ್ ಸಂಖ್ಯೆಗಳು, ಬೀಜಗಣಿತ ಮತ್ತು ರಸಾಯನವಿಜ್ಞಾನಗಳನ್ನು ಅರಿಯಲು, ಸಹಾಯಕವಾದವು. ಈ ಸಂಪರ್ಕವೇ ಹನ್ನೊಂದನೆಯ ಶತಮಾನದಲ್ಲಿ ಕಲಿಕೆಯ ಪುನರುಜ್ಜೀವನವನ್ನು ಆರಂಭಿಸಿದ್ದು, ಇದು ಪ್ರೌಢ ತತ್ವಜ್ಞಾನಕ್ಕೆ ಬುನಾದಿ ಹಾಕಿತು. ಆನಂತರ, ಹದಿಮೂರನೆಯ ಶತಮಾನದಿಂದ ಮುಂದಕ್ಕೆ, ಗ್ರೀಕ್ ಅಧ್ಯಯನವು ಪ್ಲೇಟೋ ಮತ್ತು ಅರಿಸ್ಟಾಟಲ್ ಮತ್ತಿತರ ಪ್ರಾಚೀನ ಗ್ರೀಕ್ ಲೇಖಕರನ್ನು ವಿದ್ವಾಂಸರು ನೇರವಾಗಿ ಪರಿಚಯ ಮಾಡಿಕೊಳ್ಳಲು ನೆರವಾಯಿತು. ಅರಬ್ಬರು ಪರಂಪರೆಯನ್ನು ಉಳಿಸಿಕೊಂಡು ಬಂದಿರದಿದ್ದರೆ, ಮತಧರ್ಮಸುಧಾರಣೆಯ ಜನರಿಗೆ ಪುರಾತನಾಧ್ಯಯನದ ಪುನರುಜ್ಜೀವನವು ಎಷ್ಟು ಲಾಭದಾಯಕವೆಂಬ ಅರಿವು ಉಂಟಾಗುತ್ತಿರಲಿಲ್ಲ.

೦

೩೦
ಪ್ಲಾಟಿನಸ್

ನವಪ್ಲೇಟೋಪಂಥವನ್ನು ಸ್ಥಾಪಿಸಿದ ಪ್ಲಾಟಿನಸ್ (ಕ್ರಿಶ ೨೦೪-೭೦) ಮಹತ್ವದ ಪ್ರಾಚೀನ ತತ್ವಜ್ಞಾನಿಗಳಲ್ಲಿ ಕೊನೆಯವನು. ಅವನ ಬದುಕು ರೋಮನ್ ಇತಿಹಾಸದ ಅತ್ಯಂತ ದುರ್ಭರ ಕಾಲದೊಂದಿಗೆ ಸಮೀಕೃತವಾದುದು. ತಾನು ಹುಟ್ಟುವುದಕ್ಕಿಂತ ಸ್ವಲ್ಪ ಮುಂಚೆ, ಸೈನ್ಯಕ್ಕೆ ತನ್ನ ಶಕ್ತಿಯ ಬಗ್ಗೆ ಅರಿವು ಮೂಡಿ, ಹಣಕ್ಕಾಗಿ ಚಕ್ರವರ್ತಿಗಳನ್ನು ಆಯ್ಕೆ ಮಾಡುವ ಮತ್ತು ಆನಂತರ ಅವರನ್ನು ಕೊಲೆ ಮಾಡಿ ಮತ್ತೊಮ್ಮೆ ಚಕ್ರಾಧಿಪತ್ಯವನ್ನು ಮಾರಾಟಮಾಡುವ ಸಂದರ್ಭವುಂಟುಮಾಡಿಕೊಳ್ಳುವ ಪರಿಪಾಟವನ್ನು ಬೆಳೆಸಿಕೊಂಡಿತ್ತು. ಇದರಿಂದಾಗಿ ಸೈನಿಕರು ಗಡಿ ಕಾಯುವುದಕ್ಕೆ ಯೋಗ್ಯರಾಗಿರಲಿಲ್ಲ, ಇದು ಉತ್ತರದಿಂದ ಜರ್ಮನರೂ ಪೂರ್ವದಿಂದ ಪರ್ಷಿಯನ್ನರೂ ಆಕ್ರಮಣ ಮಾಡಲು ಅವಕಾಶವಿತ್ತಿತು. ಯುದ್ಧ ಮತ್ತು ರೋಗದಿಂದ ಚಕ್ರಾಧಿಪತ್ಯದ ಜನಸಂಖ್ಯೆಯು ಮೂರನೆಯ ಒಂದು ಭಾಗದಷ್ಟು ಇಳಿದಿತ್ತು, ಮತ್ತು ತೆರಿಗೆಗಳು ಹೆಚ್ಚಾಗಿ ಸಂಪನ್ಮೂಲಗಳ ಕೊರತೆಯಿಂದ ಶತ್ರುಗಳು ಪ್ರವೇಶ ಮಾಡದಿದ್ದ ಪ್ರಾಂತಗಳಲ್ಲೂ ಆರ್ಥಿಕ ಮುಗ್ಗಟ್ಟು ಎದುರಾಗಿತ್ತು. ಸಂಸ್ಕೃತಿಯ ಆವಾಸಗಳಾದ ನಗರಗಳು ತೀರ ಸಂಕಷ್ಟಕ್ಕೆ ಸಿಲುಕಿದವು; ಮಹತ್ವಪೂರ್ಣ ಪ್ರಜೆಗಳು ತೆರಿಗೆ ಅಧಿಕಾರಿಯನ್ನೆದುರಿಸಲಾರದೆ ದೊಡ್ಡ ಸಂಖ್ಯೆಯಲ್ಲಿ ಓಡಿ ಹೋದರು. ಪ್ಲಾಟಿನಸ್ ಸಾಯುವ ಕಾಲದವರೆಗೂ ಸುವ್ಯವಸ್ಥೆಯನ್ನು ಮರಳಿ ಸ್ಥಾಪಿಸಲಾಗಲಿಲ್ಲ; ಡಯಾಕ್ಲೀಷಿಯನ್ ಮತ್ತು ಕಾನ್‌ಸ್ಟಾಂಟೈನ್‌ರು ಚಕ್ರಾಧಿಪತ್ಯವನ್ನು ಕಠಿಣ ಕ್ರಮಗಳ ಮೂಲಕ ತಾತ್ಕಾಲಿಕವಾಗಿ ಕಾಪಾಡಿದರು.

ಇವೆಲ್ಲದರ ಬಗ್ಗೆ ಪ್ಲಾಟಿನಸ್‌ನ ಕೃತಿಗಳಲ್ಲಿ ಉಲ್ಲೇಖಗಳಿವೆ. ವಾಸ್ತವ ಜಗತ್ತಿನ ವಿನಾಶ ಮತ್ತು ಸಂಕಷ್ಟಗಳನ್ನು ಕಡೆಗಣಿಸಿ ಅವನು ಒಳ್ಳೆಯತನ ಮತ್ತು ಚೆಲುವುಗಳ ಚಿರಂತನ ಜಗತ್ತಿನ ಕಡೆಗೆ ಗಮನವನ್ನು ಹರಿಸಿದ. ಈ ಕಾರ್ಯದಲ್ಲವನು ತನ್ನ ಸಮಕಾಲೀನ ಗಂಭಿರ ವ್ಯಕ್ತಿಗಳ ಜೊತೆ ಕೈಗೂಡಿಸಿದ. ಅವರೆಲ್ಲರಿಗೂ, ಕ್ರಿಶ್ಚಿಯನ್ನರು ಮತ್ತು ಪ್ಯಾಗನ್ನರಿಗೆ ಒಂದೇ ಬಗೆಯಲ್ಲಿ, ವ್ಯವಹಾರ ಜಗತ್ತು ಯಾವ ಭರವಸೆಯನ್ನೂ

ಉಂಟುಮಾಡುವಂತಿರಲಿಲ್ಲ, ಹೀಗಾಗಿ ಬೇರೆ ಲೋಕದ ಬಗ್ಗೆ ಚಿಂತಿಸುವುದು ಕ್ಷೇಮಂಕರವಾಗಿ ತೋರಿತು. ಕ್ರಿಶ್ಚಿಯನ್ನರಿಗೆ, ಬೇರೆ ಲೋಕವೆಂದರೆ ಸ್ವರ್ಗಚಕ್ರಾಧಿಪತ್ಯ, ಸಾವಿನ ಬಳಿಕ ಸಿಗುವಂತಹದು; ಪ್ಲೇಟೋಪಂಥದವರಿಗೆ ಭ್ರಮಾತ್ಮಕ ತೋರಿಕೆಯದಕ್ಕಿಂತ ಚಿಂತನೆಗಳ ಚಿರಂತನಲೋಕ. ಕ್ರಿಶ್ಚಿಯನ್ ಮತಧರ್ಮಶಾಸ್ತ್ರಜ್ಞರು ಇವೆರಡೂ ದೃಷ್ಟಿಕೋನಗಳನ್ನು ಸೇರಿಸಿ ಪ್ಲಾಟಿನಸ್‌ನ ತತ್ವಜ್ಞಾನವನ್ನು ಯಥೇಚ್ಛವಾಗಿ ಒಳಗೊಂಡರು. ಪ್ಲಾಟಿನಸ್ ಕುರಿತ ತನ್ನ ಅತ್ಯಮೂಲ್ಯ ಕೃತಿಯಲ್ಲಿ ಡೀನ್ ಇಂಜ್ ಅವರ ಕ್ರೈಸ್ತಮತಧರ್ಮ ಅವನಿಗೆ ಯಾವ ರೀತಿ ಋಣಿ ಎಂಬುದನ್ನು ಸರಿಯಾಗಿ ಗುರುತಿಸುತ್ತದೆ. 'ಪ್ಲಾಟಿನಸ್ ಕ್ರಿಶ್ಚಿಯನ್ ಮತಧರ್ಮಶಾಸ್ತ್ರದ ರಚನೆಯ ತಿರುಳು, ಅದು ಬೇರಾವ ತತ್ವಜ್ಞಾನದೊಂದಿಗೂ ಘರ್ಷಣೆಯಿಲ್ಲದೆ ಕಾರ್ಯಶೀಲವಾಗಲಾರದು' ಎನ್ನುತ್ತಾರೆ ಅವರು. 'ಕ್ರೈಸ್ತಮತಧರ್ಮವನ್ನು ಚಿಂದಿ ಚಿಂದಿ ಮಾಡದೆ ಕ್ರೈಸ್ತಮತಧರ್ಮದಿಂದ ಪ್ಲೇಟೋವಾದವನ್ನು ಬೇರ್ಪಡಿಸುವುದು ತೀರ ಅಸಾಧ್ಯ' ಎಂದೂ ಹೇಳುತ್ತಾರೆ. ಸಂತ ಆಗಸ್ಟೈನ್ ಪ್ಲೇಟೋನ ಪದ್ಧತಿಯನ್ನು ಕುರಿತು 'ಎಲ್ಲ ತತ್ವಜ್ಞಾನಗಳಲ್ಲೂ ಅತ್ಯಂತ ಪರಿಶುದ್ಧವೂ ತೇಜಸ್ವಿಯೂ ಆದುದು' ಎಂದೂ, ಪ್ಲಾಟಿನಸ್‌ನ ಬಗ್ಗೆ ಹೇಳುತ್ತ 'ಅವನಲ್ಲಿ ಪ್ಲೇಟೋ ಮತ್ತೆ ಜನ್ಮತಾಳಿದ್ದಾನೆ' ಎಂದೂ, ಸ್ವಲ್ಪ ತಡವಾಗಿ ಬದುಕಿದ್ದಿದ್ದರೆ ಅವನು 'ಕೆಲವು ಪದಗಳನ್ನೂ ಪದಗುಚ್ಛಗಳನ್ನೂ ಬದಲಾಯಿಸಿ ಕ್ರಿಶ್ಚಿಯನ್ ಆಗಿಬಿಡುತ್ತಿದ್ದ' ಎಂದೂ ಹೇಳುವುದರತ್ತ ನಮ್ಮ ಗಮನ ಸೆಳೆಯುತ್ತಾರೆ. ಡೀನ್ ಇಂಜ್ ಪ್ರಕಾರ ಸಂತ ಥಾಮಸ್ ಆಕ್ವಿನಾಸ್ 'ವಾಸ್ತವ ಅರಿಸ್ಟಾಟಲ್‌ಗಿಂತ ಪ್ಲಾಟಿನಸ್‌ಗೆ ಹೆಚ್ಚು ಹತ್ತಿರ.'

ಅದರಂತೆ ಪ್ಲಾಟಿನಸ್ ಮಧ್ಯಯುಗದ ಕ್ರೈಸ್ತಮತಧರ್ಮ ಮತ್ತು ಕ್ಯಾಥೋಲಿಕ್ ಮತಧರ್ಮಶಾಸ್ತ್ರಗಳನ್ನು ರೂಪಿಸುವಲ್ಲಿ ಪ್ರಭಾವ ಬೀರಿದವನೆಂಬುದು ಐತಿಹಾಸಿಕವಾಗಿ ಮುಖ್ಯವಾದುದು. ಕ್ರೈಸ್ತಮತಧರ್ಮದ ಬಗ್ಗೆ ಮಾತನಾಡುವ ಇತಿಹಾಸಕಾರರು ಅದು ಒಳಗಾಗಿರುವ ದೊಡ್ಡ ಬದಲಾವಣೆಗಳು ಮತ್ತು ಅದು ಒಂದೇ ಯುಗದಲ್ಲಿ ಏನೆಲ್ಲ ರೂಪಗಳನ್ನು ತಾಳಬಹುದಾದ ಸಾಧ್ಯತೆಗಳನ್ನು ಗುರುತಿಸುವಲ್ಲಿ ತುಂಬ ಎಚ್ಚರಿಕೆ ವಹಿಸಬೇಕಾಗುತ್ತದೆ. ಸಮಾನಾಂತರ ದೃಷ್ಟಿಯ ಸುವಾರ್ತೆಗಳ (ಸಿನಾಪ್ಟಿಕ್ ಗಾಸ್ಪೆಲ್) ಕ್ರೈಸ್ತಮತಧರ್ಮವು ತತ್ವಜಿಜ್ಞಾಸೆಯಿಲ್ಲದಿರುವಂತಹುದು. ಆಧುನಿಕ ಅಮೆರಿಕದ ಕ್ರೈಸ್ತಮತಧರ್ಮವು, ಈ ದೃಷ್ಟಿಯಲ್ಲಿ, ಅದರ ಪೂರ್ವಸ್ಥಿತಿಯದು; ಸಂಯುಕ್ತ ಸಂಸ್ಥಾನಗಳಲ್ಲಿ ಪ್ಲೇಟೋವಾದವು ಜನಜನಿತ ಚಿಂತನೆ ಮತ್ತು ಭಾವನೆಗಳಿಂದ ಪರಕೀಯವಾದುದು, ಐಹಿಕವಾದ ಎಲ್ಲವೂ ಹತಾಶೆಯನ್ನುಂಟುಮಾಡುವ ಪರಿಸ್ಥಿತಿಯಲ್ಲಿ ಪರಕೀಯ ಭರವಸೆಗಳು ಸಾಂತ್ವನವುಂಟುಮಾಡುವ ರೀತಿಗಿಂತ ಹೆಚ್ಚಾಗಿ ಬಹುತೇಕ ಅಮೆರಿಕದ ಕ್ರಿಶ್ಚಿಯನ್ನರು ಇಹಲೋಕದ ಕರ್ತವ್ಯಗಳ ಬಗ್ಗೆ ಹಾಗೂ ನಿತ್ಯಜಗತ್ತಿನ ಸಾಮಾಜಿಕ

ಪ್ರಗತಿಯ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದವರು. ನಾನು ಯಾವುದೇ ಮತಧರ್ಮದ ಬದಲಾವಣೆಯ ಬಗ್ಗೆ ಮಾತನಾಡುತ್ತಿಲ್ಲ, ಹೇಳುತ್ತಿರುವುದು ಪ್ರಾಶಸ್ತ್ಯಗಳ ಬದಲಾವಣೆ ಮತ್ತು ವಿಭಿನ್ನ ಆಸಕ್ತಿಗಳನ್ನು ಕುರಿತು. ಬದಲಾವಣೆಯು ಎಷ್ಟು ದೊಡ್ಡದು ಎಂಬುದನ್ನು ಅರ್ಥಮಾಡಿಕೊಳ್ಳದ ಆಧುನಿಕ ಕ್ರಿಶ್ಚಿಯನ್ ಹಿಂದಿನ ಕ್ರೈಸ್ತಮತಧರ್ಮವನ್ನು ಅರ್ಥವಾಡಿಕೊಳ್ಳುವಲ್ಲಿ ವಿಫಲನಾಗುತ್ತಾನೆ. ನಮ್ಮ ಅಧ್ಯಯನವು ಐತಿಹಾಸಿಕವಾದುದರಿಂದ ನಮಗೆ ಹಿಂದಿನ ಶತಮಾನಗಳ ಪರಿಣಾಮಕಾರಿ ಶ್ರದ್ಧೆಗಳ ಬಗ್ಗೆ ಆಸಕ್ತಿ, ಮತ್ತು ಈ ವಿಷಯದಲ್ಲಿ ಪ್ಲೇಟೋ ಮತ್ತು ಪ್ಲಾಟಿನಸ್‌ರ ಪ್ರಭಾವಗಳ ಬಗ್ಗೆ ಡೀನ್ ಇಂಜ್‌ರ ಅಭಿಪ್ರಾಯಗಳನ್ನು ಒಪ್ಪದಿರುವುದು ಅಸಾಧ್ಯ.

ಆದರೆ ಪ್ಲಾಟಿನಸ್ ಐತಿಹಾಸಿಕವಾಗಿ ಮಾತ್ರ ಮುಖ್ಯನಲ್ಲ. ಬೇರೆ ಯಾವ ತತ್ವಜ್ಞಾನಿಗಿಂತ ಮಿಗಿಲಾಗಿ ಅವನು ಒಂದು ವಿಧದ ಸಿದ್ಧಾಂತದ ಪ್ರತಿನಿಧಿಯಾಗುತ್ತಾನೆ. ನಾನಾ ವಿಭಿನ್ನ ಬಗೆಯ ಕಾರಣಗಳಿಂದಾಗಿ ಅವನು ಒಂದು ತತ್ವಜ್ಞಾನಪದ್ಧತಿಯನ್ನು ಕುರಿತು ಮುಖ್ಯ ಎಂದು ತೀರ್ಮಾನಿಸಬಹುದು. ನಾವು ಆಲೋಚಿಸುವ ಮೊದಲ ಮತ್ತು ತೀರ ನೇರವಾದ ಬಗೆಯೆಂದರೆ ಅದು ನಿಜವಾಗಿರಬಹುದೆಂಬುದು. ಈ ಕಾಲದ ತತ್ವಜ್ಞಾನ ಅಭ್ಯಾಸಿಗಳಲ್ಲಿ ಅನೇಕರಿಗೆ ಪ್ಲಾಟಿನಸ್ ಬಗ್ಗೆ ಈ ರೀತಿ ಅನ್ನಿಸದಿರಬಹುದು; ಈ ದೃಷ್ಟಿಯಲ್ಲಿ ಡೀನ್ ಇಂಜ್ ಅಪರೂಪದ ಉದಾಹರಣೆ. ಆದರೆ ಒಬ್ಬ ತತ್ವಜಿಜ್ಞಾಸುವು ಪಡೆದಿರುವಂತಹುದು ಸತ್ಯಾಂಶ ಮಾತ್ರವೇ ಅಲ್ಲ; ಅದರಲ್ಲಿ ಸೌಂದರ್ಯವಿರಬಹುದು, ಇದನ್ನು ಖಂಡಿತವಾಗಿ ಪ್ಲಾಟಿನಸ್‌ನಲ್ಲಿ ಕಾಣಬಹುದು. ಅವುಗಳಲ್ಲಿನ ಎಷ್ಟೋ ಭಾಗಗಳು, ಸಾಹಿತ್ಯದ ಬೇರಾವುದನ್ನೂ ಅಲ್ಲದೆ ಡಾಂಟೆಯ 'ಪ್ಯಾರಡೈಸೋ'ನ ಆನಂತರದ ಸಂಧಿಗಳನ್ನು ನೆನಪಿಸುವಂತಹುವು. ಮತ್ತೆ ಮತ್ತೆ ಚಿರಂತನ ಉಜ್ವಲ ಲೋಕದ ಅವನ ವರ್ಣನೆಗಳಲ್ಲಿ

ಉನ್ನತತರಚನೆಯ ನಮ್ಮ ಕಲ್ಪನೆಯು
ಆ ಶಾಂತಿಗೆಡದ ಪರಿಶುದ್ಧ ಸಾಮರಸ್ಯದ ಹಾಡು
ಅವನು ಕುಳಿತಿರುವ ಪಚ್ಚೆಬಣ್ಣದ ಸಿಂಹಾಸನದೆದುರು
ಅವನಿಗಾಗಿ ಸದಾ ಹಾಡುವ ಹಾಡು.

ಜನರು ಕೆಲವು ಮನಃಸ್ಥಿತಿಗಳಲ್ಲಿಯೋ ಸನ್ನಿವೇಶಗಳಲ್ಲಿಯೋ ತೋರುವ ಶ್ರದ್ಧೆಗಳನ್ನು ಚೆನ್ನಾಗಿ ವ್ಯಕ್ತಪಡಿಸುವುದರಿಂದಾಗಿ ತತ್ವಜ್ಞಾನವು ಮುಖ್ಯವೆನಿಸಬಹುದು. ಗೊಂದಲವಿಲ್ಲದ ಸಂತೋಷವೋ ದುಃಖವೋ ತತ್ವಜ್ಞಾನದ ವಿಷಯವಲ್ಲ, ಅವು ಸರಳ ಕಾವ್ಯಕ್ಕೋ ಸಂಗೀತಕ್ಕೋ ವಸ್ತುವಾಗಬಹುದು. ವಿಶ್ವದ ಬಗೆಗಿನ ಚಿಂತನೆಗಳಿಂದೊಡಗೂಡಿದ ಸಂತೋಷ-ದುಃಖಗಳು ತಾತ್ವಿಕ ಸಿದ್ಧಾಂತಗಳಿಗೆ ಜನ್ಮ ನೀಡುತ್ತವೆ. ವ್ಯಕ್ತಿಯೊಬ್ಬನು ಉಲ್ಲಾಸದಿಂದ ಕೂಡಿದ ನಿರಾಶವಾದಿಯಾಗಿರಬಹುದು ಅಥವಾ ದುಃಖಭರಿತ ಆಶಾವಾದಿಯಾಗಿರಬಹುದು.

ಪ್ರಾಯಶಃ ಮೊದಲನೆಯದಕ್ಕೆ ಸಾಮ್ಯುಯಲ್ ಬಟ್ಲರ್ ಉದಾಹರಣೆಯಾಗಬಹುದು; ಎರಡನೆಯದರ ಅಮೋಘ ಉದಾಹರಣೆಯೆಂದರೆ ಪ್ಲಾಟಿನಸ್. ಅವನು ಬದುಕಿದ್ದಂತಹ ಕಾಲದಲ್ಲಿ ದುಃಖವು ಆವರಿಸಿತ್ತು, ಕತ್ತು ಹಿಸುಕುತ್ತಿತ್ತು; ಸಾಧ್ಯವಾಗುವುದಾದರೆ, ಸುಖವನ್ನು ಇಂದ್ರಿಯದೂರ ಚಿಂತನೆಗಳ ಮೂಲಕ ಕಂಡುಕೊಳ್ಳಬೇಕಾಗಿತ್ತು. ಅಂಥ ಸುಖದಲ್ಲಿ ಯಾವಾಗಲೂ ದಣಿವಿನ ಒಂದು ಎಳೆ ಇದ್ದೇ ಇರುತ್ತದೆ; ಅದು ಮಗುವಿನ ಸರಳ ಸುಖವಾಗಿರುವ ಸಂಭವವಿಲ್ಲ. ಅದನ್ನು ದಿನನಿತ್ಯದ ಜಗತ್ತಿನಲ್ಲಿ ಕಾಣಲಾರೆವಾದ್ದರಿಂದ, ಇಂದ್ರಿಯಸಂವೇದನೆಯ ಬದುಕನ್ನು ಕಡೆಗಣಿಸುವ ಅಥವಾ ತಿರಸ್ಕರಿಸುವ ಸಾಮರ್ಥ್ಯವನ್ನು ಬೇಡುವ ಚಿಂತನೆ ಮತ್ತು ಕಲ್ಪನೆಗಳ ಮೂಲಕ ಅದನ್ನು ಕಂಡುಕೊಳ್ಳಬಹುದು. ಹೀಗಾಗಿ ಸಹಜ ಸುಖವನ್ನು ಅನುಭವಿಸುವವರು ಇಂದ್ರಿಯಾತೀತ ಜಗತ್ತಿನ ವಾಸ್ತವತೆಯಲ್ಲಿ ಶ್ರದ್ಧೆಯನ್ನಾಧರಿಸಿದ ತತ್ವಜಿಜ್ಞಾಸೆಯ ಆಶಾವಾದವನ್ನು ಸೃಷ್ಟಿಸಲಾರರು. ಐಹಿಕ ಅರ್ಥದಲ್ಲಿ ದುಃಖದಲ್ಲಿದ್ದೂ ಸಿದ್ಧಾಂತಗಳಲ್ಲಿ ಆಳವಾದ ಸಂತೋಷವನ್ನು ಕಾಣುವ ನಿರ್ಧಾರವಿದ್ದ ಅನೇಕರಲ್ಲಿ ಪ್ಲಾಟಿನಸ್‌ನಿಗೆ ಬಹು ಉನ್ನತ ಸ್ಥಾನವಿದೆ.

ಅವನ ಪರಿಶುದ್ಧ ಬೌದ್ಧಿಕ ಗುಣಗಳನ್ನೂ ಕಡೆಗಣಿಸುವಂತಿಲ್ಲ. ಅನೇಕ ವಿಷಯಗಳಲ್ಲಿ ಅವನು ಪ್ಲೇಟೋ ಬೋಧನೆಗಳನ್ನು ಸ್ಫುಟಗೊಳಿಸಿದ; ಇತರರರೊಡನೆ ಅವನು ಸಮರ್ಥಿಸಿದ್ದ ಸಿದ್ಧಾಂತಗಳನ್ನು ಸಾಧ್ಯವಾದಷ್ಟೂ ಸುಸಾಂಗತ್ಯದಿಂದ ಬೆಳೆಸಿದ. ಭೌತವಾದದ ವಿರುದ್ಧವಾದ ಅವನ ವಾದಗಳು ಚೆನ್ನಾಗಿವೆ. ಆತ್ಮ-ದೇಹಗಳ ಸಂಬಂಧದ ಬಗೆಗಿನ ಅವನ ಇಡೀ ಕಲ್ಪನೆಯು ಪ್ಲೇಟೋ ಅಥವಾ ಅರಿಸ್ಟಾಟಲ್‌ನದಕ್ಕಿಂತ ಹೆಚ್ಚು ಸ್ಪಷ್ಟವಾಗಿದೆ.

ಸ್ಪಿನೋಜಾನಂತೆ ಅವನಲ್ಲಿ ಒಂದು ಬಗೆಯ ನೈತಿಕ ಪರಿಶುದ್ಧತೆ ಹಾಗೂ ಉದಾತತ್ತೆಯಿದೆ, ಅದು ಬಹು ಪರಿಣಾಮಕಾರಿಯಾಗಿಯೂ ಇದೆ. ಅವನು ಸದಾ ಪ್ರಾಮಾಣಿಕ, ಅವನೆಂದೂ ಕರ್ಕಶನೂ ಅಲ್ಲ, ದೋಷಾನ್ವೇಷಿಯೂ ಅಲ್ಲ; ತಾನು ಮುಖ್ಯವೆಂದು ಭಾವಿಸಿದುದನ್ನು ಆದಷ್ಟೂ ಸರಳವಾಗಿ ಹೇಳಲು ಸದಾ ತವಕಿಸುವವನು. ಸೈದ್ಧಾಂತಿಕ ತತ್ವಜ್ಞಾನಿಯಾಗಿ ಅವನ ಬಗ್ಗೆ ಯಾರು ಏನೇ ಹೇಳಲಿ, ಅವನನ್ನು ವ್ಯಕ್ತಿಯಾಗಿ ಪ್ರೀತಿಸದಿರಲು ಸಾಧ್ಯವೇ ಇಲ್ಲ.

ಪ್ಲಾಟಿನಸ್‌ನ ಬದುಕಿನ ಬಗ್ಗೆ ತಿಳಿದಿರುವುದೆಲ್ಲ ಅವನ ಸ್ನೇಹಿತನೂ ಶಿಷ್ಯನೂ ಆದ ಪಾರ್ಫೈರಿ ಬರೆದಿರುವ ಅವನ ಜೀವನಚರಿತ್ರೆಯಲ್ಲಿ ಹೇಳಿರುವಂತಹುದು. ಪಾರ್ಫೈರಿ ಒಬ್ಬ ಯೆಹೂದಿ, ಅವನ ನಿಜವಾದ ಹೆಸರು ಮಾಲ್ಕಸ್. ಅವನು ನೀಡುವ ಜೀವನ ವಿವರಗಳಲ್ಲಿ ಅನೇಕವು ಅದ್ಭುತ ಸನ್ನಿವೇಶಗಳು, ಇದರಿಂದಾಗಿ ಅವನು ಹೇಳುವುದರಲ್ಲಿ ಯಾವುದು ನಂಬಲರ್ಹವಾದವು ಯಾವುದು ಅಲ್ಲ ಎಂದು ತೀರ್ಮಾನಿಸುವುದು ಕಷ್ಟ.

ತನ್ನ ಅವಕಾಶ-ಕಾಲಗಳು ಮುಖ್ಯವಲ್ಲವೆಂದು ಪ್ಲಾಟಿನಸ್ ಭಾವಿಸಿದ್ದ, ತನ್ನ ಚಾರಿತ್ರಿಕ ಘಟನೆಗಳ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತಿರಲಿಲ್ಲ. ಅವನು ಈಜಿಪ್ಟ್‌ನಲ್ಲಿ ಹುಟ್ಟಿದ ವಿಷಯದಿಂದ ಅವನು ಆರಂಭಿಸುತ್ತಾನೆ, ಯುವಕನಾಗಿದ್ದಾಗ ಅವನು ಅಲೆಕ್ಸಾಂಡ್ರಿಯದಲ್ಲಿ ಓದಿದ, ಅಲ್ಲಿಯೇ ತನ್ನ ಮೂವತ್ತೊಂಬತ್ತನೆಯ ವರ್ಷದವರೆಗೂ ಇದ್ದ; ಅಲ್ಲಿ ಅವನ ಗುರು ಆಮೋನಿಯಸ್ ಸಾಕ್ಕಾಸ್, ಹಲವಾರು ವೇಳೆ ಅವನನ್ನೇ ನವಪ್ಲೇಟೋಪಂಥದ ಸ್ಥಾಪಕನೆಂದು ಭಾವಿಸಲಾಗುತ್ತದೆ. ಆನಂತರ ಅವನು ಚಕ್ರವರ್ತಿ ಮೂರನೆಯ ಗೋರ್ಡಿಯನ್ ಪರ್ಷಿಯನ್ನರ ವಿರುದ್ಧ ಕೈಗೊಂಡ ದಂಡಯಾತ್ರೆಯನ್ನು ಸೇರಿಕೊಂಡ, ಅದಕ್ಕೆ ಕಾರಣ ಅವನಿಗೆ ಆ ಮೂಲಕ ಪೌರಸ್ತ್ಯ ಮತಧರ್ಮಗಳ ಅಧ್ಯಯನ ಮಾಡಬಹುದೆಂಬ ಆಸೆಯಿದ್ದುದೆಂದು ಹೇಳುತ್ತಾರೆ. ಚಕ್ರವರ್ತಿ ಇನ್ನೂ ಯುವಕನಗಿದ್ದ, ಅವನನ್ನು ಶತ್ರುಗಳು ಕೊಂದು ಹಾಕಿದರು, ಅದು ಆಗಿನ ರೂಢಿ. ಅವನು ಮೆಸೊಪೊಟೇಮಿಯದಲ್ಲಿದ್ದಾಗ ಕ್ರಿಶ ೨೪೪ ರಲ್ಲಿ ಇದು ಸಂಭವಿಸಿತು. ಆನಂತರ ಪ್ಲಾಟಿನಸ್ ತನ್ನ ಪೌರಸ್ತ್ಯ ಯೋಜನೆಗಳನ್ನು ಕೈಬಿಟ್ಟು ರೋಮ್‌ನಲ್ಲಿ ನೆಲೆಸಿ ಬೇಗ ಬೋಧನೆಯನ್ನು ಆರಂಭಿಸಿದ. ಅವನ ಕೇಳುಗರಲ್ಲಿ ಅನೇಕರು ಪ್ರಭಾವಶಾಲಿಗಳಿದ್ದರು, ಅವನು ಚಕ್ರವರ್ತಿ ಗ್ಯಾಲಿಯೇನಸ್‌ಗೆ ಇಷ್ಟವಾದ.[೧೩೧] ಒಂದು ಕಾಲದಲ್ಲಿ ಅವನು ಕ್ಯಾಂಪೇನಿಯದಲ್ಲಿ ಪ್ಲೇಟೋನ ಗಣರಾಜ್ಯವನ್ನು ಸ್ಥಾಪಿಸುವ ಹಾಗೂ ಪ್ಲೇಟೆನೋಪಾಲಿಸ್ ಎಂಬ ಹೆಸರಿನ ಹೊಸ ನಗರವೊಂದನ್ನು ನಿರ್ಮಿಸುವ ಯೋಜನೆಯೊಂದನ್ನು ಸಿದ್ಧಪಡಿಸಿದ್ದ. ಮೊದಲಿಗೆ ಚಕ್ರವರ್ತಿ ಆ ಬಗ್ಗೆ ಒಲವು ತೋರಿಸಿದರೂ ಆನಂತರ ತನ್ನ ಒಪ್ಪಿಗೆಯನ್ನು ಹಿಂಪಡೆದ. ರೋಮ್‌ನ ಸನಿಹದಲ್ಲಿಯೇ ಮತ್ತೊಂದು ಹೊಸ ನಗರ ನಿರ್ಮಾಣದ ಅವಕಾಶವು ವಿಚಿತ್ರವೆನಿಸಿದರೂ, ಪ್ರಾಯಶಃ ಈಗಿನಂತೆಯೇ ಆ ಕಾಲಕ್ಕೆ ಆ ಪ್ರದೇಶವು ಮಲೇರಿಯ ಪೀಡಿತವಾಗಿತ್ತು, ಆದರೆ ಆ ಮುಂಚೆ ಹಾಗಿರಲಿಲ್ಲ. ಅವನು ನಲವತ್ತೊಂಬತ್ತನೆಯ ವಯಸ್ಸಿನವರೆಗೂ ಏನನ್ನೂ ಬರೆಯಲಿಲ್ಲ; ಆನಂತರ ಅವನು ಹೆಚ್ಚನ್ನೇ ಬರೆದ. ಅವನ ಕೃತಿಗಳನ್ನು ಪ್ಲಾಟಿನಸ್‌ಗಿಂತ ಹೆಚ್ಚು ಪೈಥಾಗೊರಿಯನ್ ಆಗಿದ್ದ ಪಾರ್ಫೈರಿ ಸಂಪಾದಿಸಿ ಕ್ರಮಬದ್ಧಗೊಳಿಸಿ,

---

೧೩೧. ಗ್ಯಾಲಿಯೇನಸ್ ಬಗ್ಗೆ ಗಿಬ್ಬನ್ ಹೀಗೆನ್ನುತ್ತಾನೆ: 'ಅವನು ಅನೇಕ ಕುತೂಹಲದಾಯಕ, ಆದರೆ ಅನುಪಯುಕ್ತ ವಿಜ್ಞಾನಗಳ ಪ್ರಭುತ್ವ ಸಂಪಾದಿಸಿದ್ದ, ಅವನೊಬ್ಬ ವಾಗ್ಮಿ ಮತ್ತು ಸದಭಿರುಚಿಯ ಕವಿ, ಕುಶಲ ತೋಟಗಾರ, ಅತ್ಯುತ್ತಮ ಬಾಣಸಿಗ, ಆದರೆ ಅತ್ಯಂತ ನಿಕೃಷ್ಟ ರಾಜ. ಅವಕಾಶದ ದೊಡ್ಡ ತುರ್ತು ಸನ್ನಿವೇಶಗಳಲ್ಲಿ ಅವನ ಇರುವಿಕೆ ಮತ್ತು ಸೌಲಭ್ಯಗಳು ಆವಶ್ಯಕವಾದರೂ, ಅವನು ತತ್ವಜ್ಞಾನಿ ಪ್ಲಾಟಿನಸ್ ಜೊತೆಯಲ್ಲಿ ಸಂಭಾಷಣೆಯಲ್ಲಿ ತೊಡಗಿರುತ್ತಿದ್ದ, ಈ ರೀತಿ ಸಣ್ಣ ಹಾಗೂ ಸ್ವೇಚ್ಛೆಯ ಸಂತೋಷಗಳಲ್ಲಿ ತೊಡಗಿರುತ್ತಿದ್ದ, ಗ್ರೀಕ್ ಅನುಭಾವಿಕ ದೀಕ್ಷಾಸ್ನಾನದ ಬಗ್ಗೆ ಸಿದ್ಧತೆ ಮಾಡಿಕೊಳ್ಳುತ್ತಲೋ ಅಥವಾ ಅಥೆನ್ಸ್‌ನ ಎಯಿರೋಪೇಗಸ್‌ನಲ್ಲಿ ಸ್ಥಳವೊಂದಕ್ಕಾಗಿ ಪ್ರಯತ್ನಿಸುತ್ತಲೋ ಇರುತ್ತಿದ್ದ.' (ಅಧ್ಯಾಯ ೧೦).

ನವಪ್ಲೇಟೋಪಂಥವು ಪ್ಲಾಟಿನಸ್ ಅನ್ನು ಅನುಸರಿಸಿದ್ದರೆ ಆಗಿರುತ್ತಿದ್ದುದಕ್ಕಿಂತಲೂ ಹೆಚ್ಚು ಅತಿಮಾನುಷವೆನಿಸಿದ.

ಪ್ಲಾಟಿನಸ್ ಪ್ಲೇಟೋ ಬಗ್ಗೆ ಹೊಂದಿದ್ದ ಗೌರವವು ಅಪರಿಮಿತವಾದುದು; 'ಸಾಮಾನ್ಯವಾಗಿ ಅವನು ಪ್ಲೇಟೋನನ್ನು 'ಅವರು' (He) ಎಂದು ಸೂಚಿಸುತ್ತಿದ್ದ. ಒಟ್ಟಾರೆ, 'ಪೂಜ್ಯ ಪುರಾತನರ' ಬಗ್ಗೆ ಅವನಿಗೆ ಭಕ್ತಿ, ಆದರೆ ಈ ಭಕ್ತಿಯು ಪರಮಾಣುವಾದಿಗಳವರೆಗೆ ವಿಸ್ತಾರಗೊಳ್ಳಲಿಲ್ಲ. ಇನ್ನೂ ಕ್ರಿಯಾಶೀಲರಾಗಿದ್ದ ಸಂಯಮವಾದಿಗಳು ಮತ್ತು ಎಪಿಕ್ಯೂರಿಯನ್ನರನ್ನು ಅಲ್ಲಗಳೆಯುತ್ತಿದ್ದರು: ಸಂಯಮವಾದಿಗಳನ್ನು ಅವರ ಭೌತವಾದಕ್ಕಾಗಿ ಮಾತ್ರವಾದರೆ, ಎಪಿಕ್ಯೂರಿಯನ್ನರನ್ನು ಭಾಗಶಃ ಅವರ ತತ್ವಜ್ಞಾನಕ್ಕಾಗಿ. ಕಾಣಿಸುವುದಕ್ಕಿಂತಲೂ ಅರಿಸ್ಟಾಟಲ್‌ನ ಪಾತ್ರ ದೊಡ್ಡದಾಗಿತ್ತು, ಯಾಕೆಂದರೆ ಎಷ್ಟೋ ಬಾರಿ ಅವನಿಂದ ಪಡೆದುದರ ಬಗ್ಗೆ ಹೇಳುತ್ತಲೇ ಇರಲಿಲ್ಲ. ಅನೇಕ ಬಿಂದುಗಳಲ್ಲಿ ಪಾರ್ಮನೈಡೀಸ್‌ನ ಪ್ರಭಾವ ಕಾಣಿಸುತ್ತದೆ.

ಪ್ಲಾಟಿನಸ್‌ನ ಪ್ಲೇಟೋ ನಿಜವಾದ ಪ್ಲೇಟೋನಷ್ಟು ಲವಲವಿಕೆಯವನಲ್ಲ. ಚಿಂತನ ಸಿದ್ಧಾಂತ, 'ಫೇಡೋ'ದ ಮತ್ತು 'ರಿಪಬ್ಲಿಕ್'ನ ೬ ನೆಯ ಭಾಗದ ಅನುಭಾವಿಕ ಸಿದ್ಧಾಂತಗಳು, ಮತ್ತು 'ಸಿಂಪೋಸಿಯಮ್'ನ ಪ್ರೇಮದ ಬಗೆಗಿನ ಚರ್ಚೆ – ಇಷ್ಟೇ 'ಎನಿಯೆಡ್ಸ್'ನಲ್ಲಿ (ಪ್ಲಾಟಿನಸ್‌ನ ಗ್ರಂಥಗಳನ್ನು ಈ ಹೆಸರಿನಿಂದ ಕರೆಯುತ್ತಾರೆ) ಕಾಣಿಸಿಕೊಳ್ಳುವ ಪ್ಲೇಟೋನ ಇಡೀ ಚಿತ್ರ. ರಾಜಕೀಯ ಆಸಕ್ತಿಗಳು, ವಿವಿಧ ಸದ್ಗುಣಗಳ ಸೂತ್ರಗಳ ಹುಡುಕಾಟ, ಗಣಿತದಲ್ಲಿನ ಸಂತೋಷ, ವ್ಯಕ್ತಿಗಳ ನಾಟಕೀಯ ಹಾಗೂ ವಿಶ್ವಾಸಪೂರ್ವಕ ಮೆಚ್ಚಿಕೆ, ಮತ್ತು ಎಲ್ಲಕ್ಕಿಂತ ಮಿಗಿಲಾಗಿ, ಪ್ಲೇಟೋನ ಹುಡುಗಾಟಗಳು – ಇವೆಲ್ಲ ಪ್ಲಾಟಿನಸ್‌ನಲ್ಲಿ ಸಂಪೂರ್ಣವಾಗಿ ಕಣ್ಮರೆಯಾಗಿವೆ. ಕಾರ್ಲೈಲ್ ಹೇಳಿದಂತೆ ಪ್ಲೇಟೋ 'ಸೈಯಾನ್‌ನಲ್ಲಿ ತೀರ ಸಲಿಗೆಯಿಂದಿದ್ದ; ಪ್ಲಾಟಿನಸ್, ಇದಕ್ಕೆ ವ್ಯತಿರಿಕ್ತವಾಗಿ, ಸದಾ ಅತ್ಯುತ್ತಮ ನಡವಳಿಕೆಯನ್ನೇ ಚಿತ್ರಿಸುತ್ತಾನೆ'.

ಪ್ಲಾಟಿನಸ್‌ನ ತತ್ವಜಿಜ್ಞಾಸೆಯು ಪರಿಶುದ್ಧ ತ್ರಿಮೂರ್ತಿತ್ವ (ಹೋಲಿ ಟ್ರಿನಿಟಿ)ದಿಂದ ಆರಂಭಗೊಳ್ಳುತ್ತದೆ: ಏಕ, ಸತ್ವ ಮತ್ತು ಆತ್ಮ. ಕ್ರಿಶ್ಚಿಯನ್ ತ್ರಿಮೂರ್ತಿತ್ವದ ವ್ಯಕ್ತಿಗಳಂತೆ ಇವು ಮೂರೂ ಸಮಾನವಾದವುಗಳಲ್ಲ; ಏಕ ಅಂದರೆ ದೇವರು, ಸತ್ವ ಆನಂತರ ಬರುತ್ತದೆ, ಆತ್ಮ ಕೊನೆಗೆ.[೧೩೨]

೧೩೨. ಪ್ಲಾಟಿನಸ್ ಮತ್ತವನ ಸಮಕಾಲೀನನಾದ ಆರಿಜೆನ್ ಇಬ್ಬರಿಗೂ ತತ್ವಜ್ಞಾನದಲ್ಲಿ ಒಬ್ಬನೇ ಗುರು, ಅವನು ಮೊದಲ ವ್ಯಕ್ತಿಯು ಎರಡನೆಯವನಿಗಿಂತ ಮೇಲ್ಮಟ್ಟದವನು, ಹಾಗೆಯೇ ಎರಡನೆಯವನು ಮೂರನೆಯವನಿಗಿಂತ ಮೇಲ್ಮಟ್ಟದವನು ಎಂದು ಬೋಧಿಸಿದ್ದ, ಅವನೂ ಈ ವಿಷಯದಲ್ಲಿ ಪ್ಲಾಟಿನಸ್‌ನ ವಾದವನ್ನು ಒಪ್ಪಿದ್ದ. ಆದರೆ ಆರಿಜೆನ್‌ನ ದೃಷ್ಟಿಕೋನವನ್ನು ಆನಂತರ ಧರ್ಮವಿರೋಧಿಯೆಂದು ಸಾರಲಾಯಿತು.

ಏಕ ಒಂದು ರೀತಿಯಲ್ಲಿ ಅಸ್ಪಷ್ಟ. ಅದನ್ನು ಕೆಲವು ವೇಳೆ ದೇವರು ಎನ್ನಲಾಗುತ್ತದೆ, ಕೆಲವು ವೇಳೆ ಒಳ್ಳೆಯದು ಎನ್ನಲಾಗುತ್ತದೆ.; ಅದು ಅದರ ಆನಂತರದ ಜೀವವನ್ನು ಮೀರಿದುದು. ಅದಕ್ಕೆ ನಾವು ಯಾವುದೇ ವಿಧೇಯಗಳನ್ನು ಆರೋಪಿಸಬಾರದು, 'ಅದು ಆಗಿದೆ' ಎಂದಷ್ಟೇ ಹೇಳಬೇಕು (ಇದು ಪಾರ್ಮನೈಡೀಸ್‌ನನ್ನು ನೆನಪಿಸುತ್ತದೆ). ದೇವರ ಬಗ್ಗೆ 'ಸಕಲ' (ದ ಆಲ್) ಎಂದು ಹೇಳುವುದು ತಪ್ಪು, ಯಾಕೆಂದರೆ ದೇವರು 'ಸಕಲ'ವನ್ನೂ ಮೀರಿದುದು. ದೇವರು ಎಲ್ಲದರಲ್ಲೂ ಇದ್ದಾನೆ. ಏಕವು ಬರದೆಯೇ ಇರಬಲ್ಲದು: 'ಅದು ಎಲ್ಲಿಯೂ ಇಲ್ಲದಿದ್ದರೂ, ಎಲ್ಲೂ ಇಲ್ಲದೆ ಇಲ್ಲ. 'ಏಕ'ವನ್ನು ಹಲವೊಮ್ಮೆ ದೇವರು ಎಂದು ಕರೆಯುವರಾದರೂ, ಅದು ಒಳ್ಳೆಯದು ಮತ್ತು ಸುಂದರವಾದುದಕ್ಕೂ ಹಿಂದಿನದು ಎಂದು ಹೇಳುತ್ತಾರೆ.[೧೩೩] ಕೆಲವು ವೇಳೆ ಏಕವು ಅರಿಸ್ಟಾಟಲ್‌ನ ದೇವರನ್ನು ಹೋಲುತ್ತದೆ; ದೇವರಿಗೆ ನಿಷ್ಪತ್ತಿಯ ಆವಶ್ಯಕತೆಯಿಲ್ಲ, ತಾನು ಸೃಷ್ಟಿಸಿದ ಜಗತ್ತನ್ನವನು ಕಡೆಗಣಿಸುತ್ತಾನೆ ಎಂದೂ ಹೇಳುತ್ತಾರೆ. ಏಕ ಯಾವುದೇ ವ್ಯಾಖ್ಯೆಗೆ ನಿಲುಕಲಾರದ್ದು, ಅದಕ್ಕೆ ಸಂಬಂಧಿಸಿದಂತೆ ಮೌನದಲ್ಲಿ ಹೆಚ್ಚು ಸತ್ಯವಿದೆಯೇ ಹೊರತು ಪದಗಳಲ್ಲಲ್ಲ.

ನಾವೀಗ ಎರಡನೆಯ ವ್ಯಕ್ತಿಯತ್ತ ಬರೋಣ, ಅದನ್ನು ಪ್ಲಾಟಿನಸ್ 'ನೌಸ್' ಎನ್ನುತ್ತಾನೆ. ಇದಕ್ಕೆ ಸಂವಾದಿಯಾದ ಇಂಗ್ಲಿಷ್ ಪದವನ್ನು ಹುಡುಕುವುದು ಕಷ್ಟ. ಉತ್ತಮ ನಿಘಂಟು ಕೊಡುವ ಅರ್ಥ 'ಮನಸ್ಸು' ಎಂದು, ಆದರೆ ಇದು, ಅದರಲ್ಲೂ ಮತಧಾರ್ಮಿಕ ತತ್ವಜ್ಞಾನದಲ್ಲಿ ಈ ಪದವನ್ನು ಬಳಸಿದಾಗ, ಮೂಲದ ಎಲ್ಲ ಅರ್ಥವನ್ನೂ ಸಂವಹಿಸಲಾರದು. ಪ್ಲಾಟಿನಸ್ ಮನಸ್ಸನ್ನು ಆತ್ಮಕ್ಕೂ ಉನ್ನತ ಸ್ಥಾನದಲ್ಲಿರಿಸಿದನೆಂದು ಹೇಳಿದರೆ, ನಾವು ಸಂಪೂರ್ಣವಾಗಿ ತಪ್ಪನ್ನು ಹೇಳುತ್ತಿರುತ್ತೇವೆ. ಪ್ಲಾಟಿನಸ್‌ನ ಅನುವಾದಕರಾದ ಮ್ಯಾಕ್‌ಕೆನ 'ಬೌದ್ಧಿಕ ತತ್ವ' (ಇಂಟಲೆಕ್ಚುವಲ್ ಪ್ರಿನ್ಸಿಪಲ್) ಎಂದು ಅನುವಾದಿಸುತ್ತಾರೆ. ಆದರೆ ಇದು ವಿಚಿತ್ರವಾಗಿದೆ, ಅಲ್ಲದೆ ಮತಧಾರ್ಮಿಕ ಭಕ್ತಿಯನ್ನು ಉಂಟುಮಾಡಬಲ್ಲ ವಸ್ತುವನ್ನಿದು ಸೂಚಿಸಲಾರದು. ಡೀನ್ ಇಂಜ್ 'ಸತ್ವ' (ಸ್ಪಿರಿಟ್) ಎನ್ನುವ ಪದವನ್ನು ಬಳಸುತ್ತಾರೆ, ಪ್ರಾಯಶಃ ಎಲ್ಲಕ್ಕೂ ಉತ್ತಮವಾದುದು ಇದೇ. ಆದರೆ ಪೈಥಾಗೊರಾಸ್‌ನ ನಂತರದ ಗ್ರೀಕ್ ಮತಧಾರ್ಮಿಕ ತತ್ವಜ್ಞಾನದಲ್ಲಿ ಮುಖ್ಯವಾದ ಬೌದ್ಧಿಕ ಅಂಶವನ್ನಿದು ಬಿಟ್ಟು ಬಿಟ್ಟಿದೆ. ಚಿಂತನೆಗಳ ಮತ್ತು ಇಂದ್ರಿಯಗ್ರಾಹ್ಯವಲ್ಲದ ಎಲ್ಲ ಆಲೋಚನೆಗಳ ಜಗತ್ತಾದ ಗಣಿತವು ಪೈಥಾಗೊರಾಸ್, ಪ್ಲೇಟೋ ಮತ್ತು ಪ್ಲಾಟಿನಸ್‌ರಿಗೆ ಒಂದರ್ಥದಲ್ಲಿ ದೈವಿಕವಾದುದು. ಅವರು 'ನೌಸ್' ಚಟುವಟಿಕೆಗಳನ್ನು ಆವರಿಸಿರುವವರು, ಅಥವಾ ನಾವು ಕಲ್ಪಿಸಿಕೊಳ್ಳಬಹುದಾದ ಹತ್ತಿರದ ಎಲ್ಲ ಚಟುವಟಿಕೆಗಳ ಅತ್ಯಂತ ಹತ್ತಿರದ ಮಾರ್ಗ

---

೧೩೩. 'ಫಿಫ್ತ್ ಎನಿಯೆಡ್ಸ್', ಐದನೆಯ ಗ್ರಂಥ, ಅಧ್ಯಾಯ, ೧೨.

ಅದು. ಪ್ಲೇಟೋನ ಮತಧರ್ಮದಲ್ಲಿನ ಈ ಬೌದ್ಧಿಕ ಅಂಶವೇ ಕ್ರಿಶ್ಚಿಯನ್‌ರಿಗೆ – ಅದರಲ್ಲೂ, ವಿಶೇಷವಾಗಿ ಸಂತ ಜಾನ್‌ನ ಸುವಾರ್ತೆಗಳನ್ನು – ಕ್ರಿಸ್ತನನ್ನು ದೇವವಾಕ್ಕುಗಳ (ಲಾಗಸ್) ಜೊತೆ ಸಮೀಕರಿಸುವುದರಲ್ಲಿ ಮಾರ್ಗದರ್ಶಕವಾದುದು. ಲಾಗಸ್ ಅನ್ನು ಈ ಸಂದರ್ಭದಲ್ಲಿ ವೈಚಾರಿಕತೆ (ರೀಸನ್) ಎಂದು ಅನುವಾದಿಸಬೇಕು. ಇದು ನಾವು ರೀಸನ್ ಅನ್ನು 'ನೌಸ್'ನ ಅನುವಾದಪದವಾಗಿ ಬಳಸುವುದನ್ನು ತಪ್ಪಿಸುತ್ತದೆ. ನಾನು ಡೀನ್ ಇಂಜ್ ಅವರ 'ಸತ್ವ' ಎಂಬುದನ್ನೇ ಬಳಸುತ್ತೇನೆ; ಆದರೆ 'ಸತ್ವ' ಎಂಬುದರಲ್ಲಿ ಸೇರಿಲ್ಲದ 'ನೌಸ್'ನಲ್ಲಿರುವ ಬೌದ್ಧಿಕ ಅಂಶವನ್ನೊಳಗೊಂಡಂತೆ. ಆದರೆ ಕೆಲವೇಳೆ 'ನೌಸ್' ಎಂಬ ಮೂಲಪದವನ್ನೇ ಅನುವಾದ ಪದದ ಬದಲು ಬಳಸುತ್ತೇನೆ.

'ನೌಸ್' ಎಂಬುದು ಏಕದ ಪ್ರತಿರೂಪ ಎನ್ನುತ್ತಾರೆ; ಅದನ್ನು ಸೃಷ್ಟಿಸಿರುವುದಕ್ಕೆ ಕಾರಣ ಅದು ಸ್ವಾನ್ವೇಷಣೆಯಲ್ಲಿ ದರ್ಶನವುಳ್ಳದ್ದು; ಹೀಗೆ ಕಾಣುವುದೇ 'ನೌಸ್'. ಇದನ್ನು ಕಲ್ಪಿಸಿಕೊಳ್ಳುವುದು ಕಷ್ಟ. ಅಂಗಗಳಿಲ್ಲದ ಜೀವಾಳವು (ಬೀಯಿಂಗ್) ತನ್ನನ್ನು ತಾನು ಅರಿಯಬಲ್ಲದು ಎಂದು ಪ್ಲಾಟಿನಸ್ ಹೇಳುತ್ತಾನೆ. ಈ ಸಂದರ್ಭದಲ್ಲಿ ನೋಡುಗ ಮತ್ತು ನೋಡಿದ್ದು ಎರಡೂ ಒಂದೇ. ಸೂರ್ಯನ ಸಾದೃಶ್ಯದ ಮೇಲೆ ಪ್ಲೇಟೋ ಕಲ್ಪಿಸಿಕೊಂಡ ದೇವರಲ್ಲಿ ಬೆಳಕು ನೀಡುವವನು ಮತ್ತು ಬೆಳಗುತ್ತಿರುವುದು ಎರಡೂ ಒಂದೇ. ಈ ಸಾದೃಶ್ಯವನ್ನೇ ಮುಂದುವರಿಸಿ, 'ನೌಸ್' ಎಂಬುದು ತನ್ನನ್ನು ತಾನು ಕಾಣುವ ಬೆಳಕು ಎಂದು ಪರಿಗಣಿಸಬಹುದು. ದೈವಿಕ ಮನಸ್ಸನ್ನು ನಾವು ಅರಿಯುವುದು ಸಾಧ್ಯ, ಆದರೆ ಸ್ವಇಚ್ಛಾಶಕ್ತಿಯಿಂದ ಅದನ್ನು ಮರೆತಿರುತ್ತೇವೆ. ದೈವಿಕ ಮನಸ್ಸನ್ನು ಅರಿಯಲು ಅತ್ಯಂತ ಹೆಚ್ಚಾಗಿ ದೇವರಂತಿರುವಾಗ ನಮ್ಮ ಆತ್ಮವನ್ನೇ ನಾವು, ದೇಹ, ದೇಹವನ್ನು ರೂಪಿಸಿದ ಆತ್ಮದ ಭಾಗ, ಮತ್ತು 'ಬಯಕೆಯಿಂದ ಕೂಡಿದ ಇಂದ್ರಿಯ ಮತ್ತು ಅಂತಃಪ್ರೇರಣೆಯಂತಹ ಎಲ್ಲ ವ್ಯರ್ಥವಸ್ತುಗಳನ್ನು' ಬದಿಗಿರಿಸಿ ಗಮನಿಸಬೇಕು; ಆಗ ಉಳಿಯುವುದೆಂದರೆ ದೈವಿಕ ಬುದ್ಧಿಶಕ್ತಿಯ ಒಂದು ಪ್ರತೀಕ.

'ದೈವಿಕತೆಯಿಂದ ತುಂಬಿರುವವರು ಮತ್ತು ಸ್ಫೂರ್ತರಾದವರು ತಮ್ಮಲ್ಲಿ ಒಂದು ದೊಡ್ಡ ವಸ್ತು ಅಡಗಿದೆಯೆಂಬ ತಿಳಿವಳಿಕೆಯನ್ನಾದರೂ ಪಡೆದಿರುತ್ತಾರೆ, ಆದರೆ ಅದು ಏನೆಂದು ಅವರು ಹೇಳಲಾರರು; ಅವರನ್ನು ಕದಡುವ ಚಲನೆಗಳು ಮತ್ತು ಅವರಿಂದ ಹೊಮ್ಮುವ ಮಾತುಗಳಿಂದಾಗಿ ಅವರು ಅವಕ್ಕೆ ಕಾರಣವಾದ ತಮ್ಮಲ್ಲಿನ ಶಕ್ತಿಯ ಬಗ್ಗೆ ಕಲ್ಪಿಸಿಕೊಳ್ಳಬಲ್ಲರು. ಅದೇ ಬಗೆಯಲ್ಲಿ, ನಮ್ಮಲ್ಲಿ ಪರಿಶುದ್ಧ 'ನೌಸ್' ಇದ್ದಾಗ ಪರಮಶಕ್ತಿಯ ಮುಂದೆ ನಿಂತಾಗಲೂ ಹೀಗೇ ಆಗುತ್ತದೆ. ನಮ್ಮೊಳಗೆ, ಇರುವಿಕೆಯನ್ನೂ ವ್ಯವಸ್ಥೆಯ ಮಿಕ್ಕೆಲ್ಲವನ್ನೂ ನೀಡುವ ದೈವಿಕ ಮನಸ್ಸು ಅರಿವಿಗೆ ಬರುತ್ತದೆ. ಆದರೆ ಇದಾವುದೂ ಅಲ್ಲದ ಇರುವಿಕೆಯೆಂದು ತಿಳಿದಿರುವ

ಬೇರಾವುದಕ್ಕಿಂತಲೂ ಉದಾತ್ತವಾದ ತತ್ವದ ಬಗೆಗೂ ತಿಳಿಯುತ್ತದೆ. ಮತ್ತಷ್ಟು ಪರಿಪೂರ್ಣವಾದ, ಮತ್ತು ಹಿರಿದಾದ – ತರ್ಕ, ಮನಸ್ಸು ಮತ್ತು ಭಾವಗಳಿಗಿಂತ ಮಿಗಿಲಾದುದು – ಆದರೆ ಇವೆಲ್ಲವನ್ನೂ ಅವೇ ಎಂಬ ಗೊಂದಲಕ್ಕೊಳಗಾಗಬಾರದು.'[೧೩೪]

ಹೀಗೆ 'ದೈವಿಕತೆಯಿಂದ ತುಂಬಿರುವವರು ಮತ್ತು ಸ್ಫೂರ್ತರಾದವರು' ಆಗಿರುವಾಗ ನಾವು ಕಾಣುವುದು 'ನೌಸ್' ಮಾತ್ರವನ್ನಲ್ಲ, 'ಏಕ'ವನ್ನೂ. ಹೀಗೆ ದೈವಿಕತೆಯೊಡನೆ ಸಂಪರ್ಕದಲ್ಲಿರುವಾಗ ನಾವು ತರ್ಕ ಅಥವಾ ಮಾತುಗಳಲ್ಲಿ ಇದನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ; ಇದು ಆನಂತರ ಬರುತ್ತದೆ. 'ಸ್ಪರ್ಶ'ದ ಕ್ಷಣದಲ್ಲಿ ಯಾವುದೇ ಮಾತುಗಳನ್ನಾಡುವ ಸಾಮರ್ಥ್ಯ ಇರುವುದಿಲ್ಲ; ವಿಶ್ರಾಂತಿಯಿರುವುದಿಲ್ಲ; ದರ್ಶನದ ಬಗೆಗಿನ ತರ್ಕ ಅನಂತರದ್ದು. ಆತ್ಮವು ಇದ್ದಕ್ಕಿದಂತೆ ದೀಪ್ತಿಯನ್ನು ಪಡೆದಾಗ ನಮಗೆ ದರ್ಶನವಾಗಿತ್ತೆಂಬುದು ತಿಳಿಯಬಹುದು. ಈ ದೀಪ್ತಿ ಬರುವುದು ಪರಮೋಚ್ಚ ಶಕ್ತಿಯಿಂದ ಮತ್ತು ಅದೇ ಪರಮೋಚ್ಚವಾದುದು; ಬೇರೆ ದೇವರು ಯಾವುದೋ ವ್ಯಕ್ತಿಯನ್ನು ಕಂಡಾಗಿನಂತೆ 'ಸಾನ್ನಿಧ್ಯ'ದಲ್ಲಿ ಶ್ರದ್ಧೆಯುಂಟಾಗಬಹುದು. ಅವನು ದೀಪ್ತಿಯನ್ನು ಜೊತೆಗೆ ತಂದಿರುತ್ತಾನೆ; ಈ ದೀಪ್ತಿಯೇ ಆಗಮನದ ಸಾಕ್ಷ್ಯ. ಹೀಗೆ ದೀಪ್ತಿರಹಿತ ಆತ್ಮವು ದರ್ಶನರಹಿತವಾಗಿರುತ್ತದೆ; ದೀಪ್ತಗೊಂಡಾಗ ಅದು ಕಾಣಬಯಸಿದುದನ್ನು ಪಡೆಯುತ್ತದೆ. ಇದೇ ಆತ್ಮದ ಎದುರಿಗಿರುವ ನಿಜವಾದ ಗುರಿ, ಆ ದೀಪ್ತಿಯನ್ನು ಹೊಂದುವುದು, ಪರಮೋಚ್ಚವನ್ನು ಪರಮೋಚ್ಚದಿಂದಲೇ ಕಾಣುವುದು – ಬೇರಾವುದೇ ತತ್ವದ ದೀಪ್ತಿಯಿಂದಲ್ಲ – ಪರಮೋಚ್ಚವನ್ನು ಕಾಣುವುದು, ದರ್ಶನ ಮಾರ್ಗವೂ ಅದೇ; ಯಾಕೆಂದರೆ ಯಾವುದು ಆತ್ಮವನ್ನು ಬೆಳಗುತ್ತದೋ ಅದನ್ನು ಕಾಣುವುದೆಂದರೆ ಸೂರ್ಯನನ್ನು ಸೂರ್ಯನದೇ ಬೆಳಕಿನಲ್ಲಿ ಕಾಣುವಂತಹುದೇ.

> **ಆದರಿದನ್ನು ಸಾಧಿಸುವುದು ಹೇಗೆ?**
>
> **ಎಲ್ಲದರಿಂದ ಪಾರಾಗುವುದು.**[೧೩೫]

ಈ ಆನಂದಪರವಶತೆಯು (ಎಕ್‌ಸ್ಟೆಸಿ) (ತನ್ನ ದೇಹದಿಂದ ಹೊರಗಿರುವುದು) ಪ್ಲಾಟಿನಸ್‌ಗೆ ಮತ್ತೆ ಮತ್ತೆ ಆಗುತ್ತಿತ್ತು.:

> **ಅನೇಕ ಬಾರಿ ಇದು ನಡೆಯಿತು. ದೇಹದೊಳಗಿನಿಂದ ಹೊರಗೆತ್ತಿ ನನ್ನಲ್ಲಿಯೇ; ಬೇರೆಲ್ಲದವುಗಳಿಗೆ ಬಾಹ್ಯವಾಗಿ ಹಾಗೂ ಆತ್ಮಕೇಂದ್ರಿತವಾಗಿ; ಮಹೋನ್ನತ ಚೆಲುವನ್ನು ನೋಡುತ್ತ; ಆಗ, ಎಂದಿಗಿಂತ ಮಿಗಿಲಾಗಿ ಅತ್ಯುದಾತ್ತ ವ್ಯವಸ್ಥೆಯೊಡನೆ**

---

೧೩೪. 'ಎನಿಯೆಡ್ಸ್', ೫. ೩, ೧೪, ಮ್ಯಾಕ್‌ಕೆನ ರ ಅನುವಾದ

೧೩೫. 'ಎನಿಯೆಡ್ಸ್', ೫. ೩, ೧೭.

ಸಮಾಗಮದ ಭರವಸೆ ಹೊಂದಿ; ಅತ್ಯಂತ ಉದಾತ್ತ ಬದುಕನ್ನು ನಟಿಸುತ್ತ, ದೈವಿಕತೆಯೊಂದಿಗೆ ಅನನ್ಯತೆಯನ್ನು ಹೊಂದಿ; ಈ ಕ್ರಿಯೆಯನ್ನು ಸಾಧಿಸಿ ಅದರಲ್ಲೇ ಸ್ಥಾಪಿತವಾಗಿ; ಬುದ್ಧಿಶಕ್ತಿಯಲ್ಲಿ ಪರಮೋಚ್ಚವಾದುದಕ್ಕಿಂತ ಹೀನವಾದುದಕ್ಕೆ ಮೇಲ್ಮಟ್ಟದಲ್ಲಿ; ಆದರೂ ಬರುತ್ತದೆ ಬುದ್ಧಿಗ್ರಹಿಕೆಯಿಂದ ತರ್ಕದ ಮಟ್ಟಕ್ಕಿಳಿಯುವ ಕ್ಷಣ, ಮತ್ತು ದೈವಿಕತೆಯ ಜೊತೆಗಿದ್ದ ಆನಂತರ, ಕೆಳಗಿಳಿಯುತ್ತ ಇದೆಲ್ಲ ಹೇಗಾಯಿತೆಂದು, ಆತ್ಮವು ನನ್ನ ದೇಹದಲ್ಲಿ ಹೇಗೆ ಹೊಕ್ಕಿತೆಂದು, ಆತ್ಮವು ದೇಹದೊಳಗಿದ್ದರೂ ತಾನು ಹೇಗೆ ಮಿಗಿಲಾದ ಉನ್ನತ ವಸ್ತುವೆಂದು ತೋರಿಸಿಕೊಂಡಿತೆಂದು ನನಗೆ ನಾನೇ ಕೇಳಿಕೊಳ್ಳುತ್ತೇನೆ.[೧೩೬]

ಇದು ನಮ್ಮನ್ನು ತ್ರಿಮೂರ್ತಿತ್ವದ ಅತ್ಯಂತ ಕೆಳಗಿನ ಸದಸ್ಯನಾದ ಆತ್ಮದತ್ತ ಕೊಂಡೊಯ್ಯುತ್ತದೆ. ನೌಸ್‌ಗಿತ ಕೆಳಗಿನದಾದರೂ ಆತ್ಮವು ಜೀವಿಗಳೆಲ್ಲದರ ಕರ್ತೃ; ಅದೇ ಸೂರ್ಯ ಚಂದ್ರ ಮತ್ತು ನಕ್ಷತ್ರಗಳನ್ನು ಹಾಗೂ ಇಡೀ ದೃಷ್ಟಿಗೋಚರ ಜಗತ್ತನ್ನು ಮಾಡಿದ್ದು. ಅದು ದೈವಿಕ ಬುದ್ಧಿಯ ಶಿಶು. ಅದು ದ್ವಿಮುಖಿ: ನೌಸ್ ಬಗ್ಗೆ ಚಿಂತಿಸುವ ಅಂತರಾತ್ಮವೊಂದಿದೆ, ಮತ್ತೊಂದು ಬಾಹ್ಯಕ್ಕೆ ಮುಖಾಮುಖಿಯಾಗುವುದು. ಎರಡನೆಯದು ಕೆಳಮುಖಿ ಚಲನೆಗೆ ಸಂಬಂಧಿಸಿದ್ದು, ಅದರಲ್ಲಿ ಆತ್ಮವು ತನ್ನದೇ ಪ್ರತೀಕವನ್ನು ನಿರ್ಮಿಸುತ್ತದೆ, ಅದೆಂದರೆ ನಿಸರ್ಗ ಮತ್ತು ಇಂದ್ರಿಯ ಜಗತ್ತು. ಸಂಯಮವಾದಿಗಳು ನಿಸರ್ಗವನ್ನು ದೇವರೊಂದಿಗೆ ಸಮೀಕರಿಸಿದ್ದರು, ಆದರೆ ಪ್ಲಾಟಿನಸ್ ಅದನ್ನು – ಆತ್ಮವು ಮೇಲಿನ ನೌಸ್ ಕಡೆ ನೋಡುವುದನ್ನು ಮರೆತಾಗ ಅದರಿಂದ ಹೊಮ್ಮುವ – ಅತ್ಯಂತ ಕೆಳಗಿನ ಗೋಲವೆಂದು ಪರಿಭಾವಿಸುತ್ತಾನೆ. ದೃಗ್ಗೋಚರ ಜಗತ್ತು ಕೆಡುಕು ಎಂಬ ರಹಸ್ಯಜ್ಞಾನ (ನಾಸ್ಟಿಕ್) ದೃಷ್ಟಿಕೋನವನ್ನು ಸೂಚಿಸುತ್ತದೆ, ಆದರೆ ಪ್ಲಾಟಿನಸ್ ಈ ದೃಷ್ಟಿಕೋನದವನಲ್ಲ. ದೃಗ್ಗೋಚರ ಜಗತ್ತು ಸುಂದರವಾದುದು, ಅದು ಪರಿಶುದ್ಧ ಸತ್ವಗಳ ನಿವಾಸ; ಅದು ಬೌದ್ಧಿಕ ಜಗತ್ತಿಗಿಂತ ಮಾತ್ರವೇ ಕೆಳಗಿನದು. ಬ್ರಹ್ಮಾಂಡ (ಕಾಸ್ಮಾಸ್) ಮತ್ತದರ ಸೃಷ್ಟಿಕರ್ತನು ಕೆಡುಕು ಎಂಬ ರಹಸ್ಯಜ್ಞಾನದೃಷ್ಟಿಯ ಬಗೆಗಿನ ತುಂಬ ಕುತೂಹಲಕಾರಿ ವಿವಾದಾತ್ಮಕ ಚರ್ಚೆಯಲ್ಲಿ ಅವನು – ಇದಕ್ಕೆ ಕಾರಣವಿರಬಹುದಾದ – ಭೌತದ್ರವ್ಯದ ಬಗೆಗಿನ ದ್ವೇಷದಂತಹ ಪ್ಲೇಟೋನ ರಹಸ್ಯಜ್ಞಾನ ಸಿದ್ಧಾಂತದ ಕೆಲವಂಶಗಳನ್ನು ಒಪ್ಪುತ್ತಾನೆ. ಆದರೆ ಪ್ಲೇಟೋನಿಂದ ಬರದ ಇತರ ಅಂಶಗಳು ಸತ್ಯವಲ್ಲವೆಂದು ಪ್ರತಿಪಾದಿಸುತ್ತಾನೆ.

ರಹಸ್ಯಜ್ಞಾನಪಂಥದ ಬಗೆಗೆ ಅವನದು ಇಬ್ಬಗೆಯ ಆಕ್ಷೇಪಣೆ: ಒಂದೆಡೆ, ಆತ್ಮವು ಭೌತಜಗತ್ತನ್ನು ಸೃಷ್ಟಿಸುವಾಗ ದೈವಿಕ ನೆನಹಿನಿಂದ ಹಾಗೆ ಮಾಡುತ್ತದೆಯೇ

---

೧೩೬. ೪, ೮. ೧.

ವಿನಾ ಅದು ಪತನಗೊಂಡಾಗ ಅಲ್ಲ ಎಂಬುದು ಅವನ ತರ್ಕ. ಇಂದ್ರಿಯ ಜಗತ್ತು ವಿವೇಚನಾಯುತ ಜಗತ್ತಿನಷ್ಟೇ ಒಳ್ಳೆಯದು ಎಂದವನ ಭಾವನೆ. ಇಂದ್ರಿಯಗಳು ಗ್ರಹಿಸುವ ವಸ್ತುಸೌಂದರ್ಯದ ಚೆಲುವಿನ ಬಗ್ಗೆ ಅವನದು ಗಾಢ ಸಂವೇದನೆ:

> **ಬೌದ್ಧಿಕ ವಲಯದ ಸಾಮರಸ್ಯವನ್ನು ಅರಿತ ಯಾರು ತಾನೇ, ಅವನಿಗೆ ಸಂಗೀತದ ಬಗ್ಗೆ ಸ್ವಲ್ಪ ಒಲವಿದ್ದರೆ, ವಿವೇಚನಾಯುತ ಶಬ್ದಗಳ ಸಾಮರಸ್ಯಕ್ಕೆ ಸ್ಪಂದಿಸದೇ ಇರಬಲ್ಲ? ದೃಗ್ಗೋಚರ ಜಗತ್ತಿನ ಹೊಂದಿಕೆಗಳು ಮತ್ತು ತತ್ವಗಳ ವ್ಯವಸ್ಥೆಯ ಪ್ರಮಾಣಬದ್ಧತೆಯ ಬಗ್ಗೆ ಸಂತೋಷಗೊಳ್ಳದವನು ಎಂತಹ ಜ್ಯಾಮಿತಿಜ್ಞ, ಎಂತಹ ಅಂಕಗಣಿತಜ್ಞ! ಚಿತ್ರಗಳ ಬಗೆಯನ್ನೇ ತೆಗೆದುಕೊಳ್ಳಿ: ವರ್ಣಚಿತ್ರಕಲೆಯ ನಿರ್ಮಿತಿಯನ್ನು ಭೌತಿಕ ದೃಷ್ಟಿಯಿಂದ ಮಾತ್ರ ನೋಡುವವರೂ ಒಂದೇ ರೀತಿಯಲ್ಲಿ ವಸ್ತುವನ್ನು ನೋಡುವುದಿಲ್ಲ; ಚಿತ್ರಣಗೊಂಡ ವಸ್ತುಗಳನ್ನು ಗಮನಿಸುವಲ್ಲಿ ಅಂತರ್ಗತವಾದ ಚಿಂತನೆಯನ್ನು ಗುರುತಿಸಿದಾಗ ಅವರನ್ನು ಗಾಢವಾಗಿ ಕಲಕುತ್ತದೆ, ಹಾಗೆಯೇ ಸತ್ಯದ ನೆನಹು – ಪ್ರೀತಿಯು ಉದಯಿಸುವ ಅನುಭವ. ಈಗ, ಮುಖವೊಂದರಲ್ಲಿ ಅದ್ಭುತವಾಗಿ ಪುನಾರಚಿತವಾದ ಸೌಂದರ್ಯದ ನೋಟವು ಆ ಇನ್ನೊಂದು ಗೋಲದ ಕಡೆಗೆ ಮನಸ್ಸನ್ನು ದೂಡಿದರೆ, ಚೆಲುವನ್ನು ಕಾಣುವ ಯಾವನೂ ಇಂದ್ರಿಯ ಜಗತ್ತಿನಲ್ಲಿ ಲೋಲುಪನಾಗಲಾರ –ದೂರದಲ್ಲಿಯೂ ನಕ್ಷತ್ರಗಳು ಪ್ರದರ್ಶಿಸುವ ರೂಪಗಳ ವಿಶಾಲ ವ್ಯವಸ್ಥೆಯನ್ನು ಕಂಡಾಗ ಇದನ್ನೆಲ್ಲ ನೆನಪಿಸಿಕೊಳ್ಳದಂತೆ ಮತ್ತು ಇವುಗಳ ಬಗೆಗಿನ ಯೋಚನೆಯಿಂದ ಗೌರವಪೂರ್ವಕ ಅಚ್ಚರಿಯನ್ನು ವ್ಯಕಪಡಿಸದಂತೆ ಯಾವನೂ ಜಡವಾಗಿ ಉಳಿಯಲಾರ, ಅಚಲಿತನಾಗಿರಲಾರ. ಹಿರಿಯದರಿಂದ ಉಂಟಾಗುವ ಭಾವ ಅಷ್ಟು ಹಿರಿದು. ಹೀಗೆ ಸ್ಪಂದಿಸದಿರುವುದಕ್ಕೆ ಕಾರಣ ಈ ಜಗತ್ತಿನ ಆಳವನ್ನು ಗುರುತಿಸದಿರುವುದು ಅಥವಾ ಇನ್ನೊಂದರ ಕಾಣ್ಕೆಯನ್ನು ಹೊಂದಿಲ್ಲದಿರುವುದು. (೨, ೯. ೧೬).**

ರಹಸ್ಯಜ್ಞಾನಪಂಥವನ್ನು ತಿರಸ್ಕರಿಸಲು ಮತ್ತೊಂದು ಕಾರಣವೂ ಇದೆ. ಸೂರ್ಯ ಚಂದ್ರ ಮತ್ತು ನಕ್ಷತ್ರಗಳಿಗೆ ದೈವಿಕವಾದುದರ ಸಂಬಂಧವೇ ಇಲ್ಲ; ಅವುಗಳನ್ನು ಸೃಷ್ಟಿಸಿದ್ದು ಕೆಡು ಸತ್ವ ಎಂಬುದು ರಹಸ್ಯಜ್ಞಾನಪಂಥೀಯರ ಭಾವನೆ. ಗ್ರಹಿಸಬಹುದಾದ ವಸ್ತುಗಳಲ್ಲಿ ಮನುಷ್ಯನ ಆತ್ಮ ಮಾತ್ರವೇ ಒಂದಷ್ಟು ಒಳ್ಳೆಯತನದಿಂದ ಕೂಡಿರುವುದು. ಆದರೆ ಆಕಾಶಕಾಯಗಳು ದೇವರಂತಹ ವಸ್ತುಗಳು, ಮನುಷ್ಯನಿಗಿಂತ ಅಪರಿಮಿತ ಶ್ರೇಷ್ಠತೆಯನ್ನು ಹೊಂದಿದವು ಎಂಬುದು ಪ್ಲಾಟಿನಸ್‌ನ ಖಚಿತ ಶ್ರದ್ಧೆ. ರಹಸ್ಯಜ್ಞಾನಪಂಥೀಯರ ಪ್ರಕಾರ, 'ಅವರ ಆತ್ಮಗಳು, ಮನುಷ್ಯಸಂಕುಲದ ಅತ್ಯಂತ ಕನಿಷ್ಠನ ಆತ್ಮವೂ ಸಾವಿಲ್ಲದ್ದು, ದೈವಿಕವಾದುದು; ಆದರೆ ಇಡೀ ಸ್ವರ್ಗ ಮತ್ತು ಸ್ವರ್ಗದಲ್ಲಿನ ನಕ್ಷತ್ರಗಳು, ತಮ್ಮ ಆತ್ಮಗಳು ಇವಕ್ಕಿಂತ ಎಷ್ಟೋ ಪರಿಶುದ್ಧವಾಗಿದ್ದರೂ,

ಸುಂದರವಾದವುಗಳಾದರೂ, ಅಮರತ್ವ ತತ್ವದೊಡನೆ ಯಾವುದೇ ಸಮಾಗಮ ಹೊಂದುವುದಿಲ್ಲ' (೨, ೯. ೫). ಪ್ಲಾಟಿನಸ್‌ನ ದೃಷ್ಟಿಕೋನಕ್ಕೆ 'ಟೈಮೇಯಸ್'ನಲ್ಲಿ ಪ್ರಮಾಣವಿದೆ. ಅದನ್ನು ಕೆಲವು ಮಂದಿ ಕ್ರಿಶ್ಚಿಯನ್ ಪಾದ್ರಿಗಳೂ ಅಳವಡಿಸಿಕೊಂಡಿದ್ದಾರೆ; ಉದಾಹರಣೆಗೆ, ಆರಿಜೆನ್. ಅದು ಕಲ್ಪನಾತ್ಮಕವಾಗಿ ಅದ್ಭುತವಾದುದು; ಆಕಾಶಕಾಯಗಳ ಸಹಜವಾಗಿ ಉದ್ದೀಪಿಸುವ ಭಾವನೆಗಳನ್ನೂ, ಭೌತವಿಶ್ವದಲ್ಲಿ ತಾನು ಒಂಟಿಯಲ್ಲವೆಂಬ ಭಾವನೆಯನ್ನೂ ಅದು ವ್ಯಕ್ತಪಡಿಸುತ್ತದೆ.

ಪ್ಲಾಟಿನಸ್‌ನ ಅನುಭಾವಿಕತೆಯಲ್ಲಿ ಚೆಲುವಿಗೆ ವಿರುದ್ಧವಾದುದಾಗಲೀ ವಿಷಾದವಾಗಲೀ ಇಲ್ಲ. ಆದರೆ ಅನೇಕ ಶತಮಾನಗಳ ಕಾಲ ಈ ಮಾತನ್ನು ಆಡಬಹುದಾದ ಕೊನೆಯ ಮತಧಾರ್ಮಿಕ ವ್ಯಕ್ತಿ ಅವನು. ಸೌಂದರ್ಯ ಮತ್ತು ಅದರೊಡನೆ ಸಂಬಂಧಿಸಬಹುದಾದ ಎಲ್ಲ ಸಂತೋಷಗಳೂ ಪೈಶಾಚಿಕವೆಂದು ಭಾವಿಸಲಾಯಿತು; ಪ್ಯಾಗನ್ನರು ಮತ್ತು ಕ್ರಿಶ್ಚಿಯನ್ನರು ಕುರೂಪ ಮತ್ತು ಕೊಳಕುಗಳನ್ನೇ ವೈಭವೀಕರಿಸುವ ಮಟ್ಟ ತಲುಪಿದರು. ಮತಭ್ರಷ್ಟ ಜೂಲಿಯನ್, ತನ್ನ ಸಮಕಾಲೀನ ಸಂತರಂತೆ, ತನ್ನ ಗಡ್ಡದ ನಿಬಿಡತೆಯ ಬಗ್ಗೆ ಹೆಮ್ಮೆಪಟ್ಟ. ಇವಾವುವೂ ಪ್ಲಾಟಿನಸ್‌ನಲ್ಲಿ ಇಲ್ಲ.

ಭೌತದ್ರವ್ಯವನ್ನು ಆತ್ಮವು ಸೃಷ್ಟಿಸಿದೆ, ಅದಕ್ಕೆ ಸ್ವತಂತ್ರ ವಾಸ್ತವತೆಯಿಲ್ಲ. ಪ್ರತಿ ಆತ್ಮಕ್ಕೂ ತನ್ನದೇ ಕಾಲವಿದೆ; ಅದು ಮುಗಿದಾಗ ಅದು ಕೆಳಗಿಳಿಯುತ್ತದೆ, ಆನಂತರ ತನಗೆ ಸೂಕ್ತವಾದ ದೇಹವನ್ನು ಹೊಗುತ್ತದೆ. ಇದಕ್ಕೆ ಕಾರಣ ವೈಚಾರಿಕತೆಯಲ್ಲ; ಲೈಂಗಿಕ ಬಯಕೆಯಂತಹ ಬೇರೇನೋ. ಆತ್ಮವು ದೇಹವನ್ನು ಬಿಟ್ಟಾಗ, ಅದು ಪಾಪಪೂರಿತವಾಗಿದ್ದರೆ ಬೇರೊಂದು ಆತ್ಮವನ್ನು ಹೊಗಬೇಕು, ಯಾಕೆಂದರೆ ನ್ಯಾಯಕ್ಕೆ ಅನುಗುಣವಾಗಿ ಅದಕ್ಕೆ ಶಿಕ್ಷೆಯಾಗಬೇಕು. ಈ ಜನ್ಮದಲ್ಲಿ ನೀನು ನಿನ್ನ ತಾಯಿಯನ್ನು ಕೊಲೆಮಾಡಿದ್ದರೆ, ಮುಂದಿನ ಜನ್ಮದಲ್ಲಿ ನೀನು ಹೆಂಗಸಾಗಿ ಹುಟ್ಟುತ್ತೀಯ, ಆಗ ನಿನ್ನನ್ನು ನಿನ್ನ ಮಗ ಕೊಲೆಗೈಯುತ್ತಾನೆ. (೩, ೨. ೧೩). ಪಾಪಕ್ಕೆ ಶಿಕ್ಷೆಯಾಗಬೇಕು, ಆದರೆ ಈ ಶಿಕ್ಷೆಯು ಸಹಜವಾಗಿ ನಡೆಯುತ್ತದೆ, ಪಾಪಿಯ ತಪ್ಪುಗಳ ತಲ್ಲಣಗಳ ಮೂಲಕ.

ಸತ್ತ ಮೇಲೆ ನಮಗೆ ಈ ಜನ್ಮದ ನೆನಪು ಉಳಿದಿರುತ್ತದೆಯೇ? ಇದಕ್ಕೆ ಉತ್ತರ ಸಂಪೂರ್ಣ ತಾರ್ಕಿಕ, ಆದರೆ ಬಹುತೇಕ ಆಧುನಿಕ ಮತಧರ್ಮಶಾಸ್ತ್ರಜ್ಞರು ಒಪ್ಪದಿರುವಂತಹುದು. ನೆನಪು ಎಂಬುದು ನಮ್ಮ ಜೀವಮಾನಕ್ಕೆ ಸಂಬಂಧಿಸಿದ್ದು, ಆದರೆ ನಮ್ಮ ಅತ್ಯುತ್ತಮ ಮತ್ತು ಅತ್ಯಂತ ಸತ್ಯವಂತಿಕೆಯ ಜೀವನವು ಚಿರಂತನವಾದುದು. ಹೀಗಾಗಿ ಆತ್ಮವು ಚಿರಂತನ ಬದುಕಿನ ಕಡೆಗೆ ಹೋಗುವಾಗ, ಅದಕ್ಕೆ ಬರಬರುತ್ತ ಸ್ನೇಹಿತರು, ಹೆಂಡತಿ–ಮಕ್ಕಳು ಕ್ರಮೇಣ ಮರೆತುಹೋಗುತ್ತಾರೆ; ಕೊನೆಗೆ ನಮಗೆ ಈ ಜಗತ್ತಿನ ಯಾವುದೂ ನೆನಪಿನಲ್ಲಿರುವುದಿಲ್ಲ, ಕೇವಲ ಬೌದ್ಧಿಕ

ವಲಯದತ್ತ ದೃಷ್ಟಿ ನಟ್ಟಿರುತ್ತದೆ. ವ್ಯಕ್ತಿತ್ವದ ಯಾವುದೇ ನೆನಪಿರುವುದಿಲ್ಲ, ಅದು ಧ್ಯಾನಾತ್ಮಕ ದರ್ಶನದಲ್ಲಿ ತನ್ನನ್ನೇ ಮರೆಯುತ್ತದೆ. ಆತ್ಮವು ನೌಸ್ ಜೊತೆಗೆ ಒಗ್ಗೂಡುತ್ತದೆ, ಆದರೆ ತಾನು ನಾಶವಾಗಿ ಅಲ್ಲ: ನೌಸ್ ಮತ್ತು ವ್ಯಕ್ತಿಗತ ಆತ್ಮಗಳು ಸಮಾನಾಂತರವಾಗಿ ಎರಡೂ ಆಗಿರುತ್ತವೆ, ಭಿನ್ನವಾದವೂ ಆಗಿರುತ್ತವೆ (೪, ೪. ೨).

ಆತ್ಮದ ಬಗೆಗೆ ಇರುವ 'ಫೋರ್ತ್ ಎನ್ನುಯಡ್' ನಲ್ಲಿ ಒಂದು ಭಾಗ, ಏಳನೆಯ ಟ್ರಾಕ್ಟೇಟ್, ಅಮರತ್ವದ ಚರ್ಚೆಗೆ ಮೀಸಲಾಗಿದೆ. ಸಂಯುಕ್ತವಾಗಿರುವ ದೇಹವು ಸ್ಪಷ್ಟವಾಗಿಯೇ ಅಮರವಲ್ಲ: ಹಾಗಾದರೆ, ಅದು ನಮ್ಮ ಭಾಗ, ಹೀಗಾಗಿ ನಾವು ಪೂರ್ಣ ಅಮರರರಲ್ಲ. ಆದರೆ ಆತ್ಮ ಮತ್ತು ದೇಹಗಳ ಸಂಬಂಧದ ಸ್ವರೂಪವಾವುದು? ಅರಿಸ್ಟಾಟಲ್ (ಅವನನ್ನು ಸ್ಪಷ್ಟವಾಗಿ ಉಲ್ಲೇಖಿಸದಿದ್ದರೂ) ಆತ್ಮವು ದೇಹದ ರೂಪ, ಆದರೆ ಪ್ಲಾಟಿನಸ್ ಈ ದೃಷ್ಟಿಯನ್ನು ಅಲ್ಲಗಳೆಯುತ್ತಾನೆ; ಅದಕ್ಕೆ ಕಾರಣ, ಆತ್ಮವು ದೇಹದ ಯಾವುದೇ ರೂಪವಾಗಿದ್ದರೆ ಬೌದ್ಧಿಕ ಕ್ರಿಯೆ ಸಾಧ್ಯವಾಗುತ್ತಿರಲಿಲ್ಲ. ಆತ್ಮವು ಭೌತವಸ್ತು ಎಂದೇ ಸಂಯಮವಾದಿಗಳು ಭಾವಿಸಿದ್ದರು, ಆದರೆ ಆತ್ಮದ ಐಕ್ಯವು ಇದು ಅಸಾಧ್ಯವೆಂದು ತೋರಿಸುತ್ತದೆ. ಮಿಗಿಲಾಗಿ, ಭೌತದ್ರವ್ಯವು ಜಡವಾದ್ದರಿಂದ ಅದು ತನ್ನನ್ನು ತಾನು ಸೃಷ್ಟಿಸಿಕೊಂಡಿರಲಾರದು; ಆತ್ಮವು ಅದನ್ನು ಸೃಷ್ಟಿಸಿರದಿದ್ದರೆ ಭೌತದ್ರವ್ಯವು ಇರುತ್ತಿರಲಿಲ್ಲ, ಅಲ್ಲದೆ. ಆತ್ಮವು ಇಲ್ಲದಿದ್ದರೆ, ಮಿಂಚು ಕಣ್ಮರೆಯಾಗಿರುತ್ತಿತ್ತು. ಆತ್ಮವು ಭೌತದ್ರವ್ಯವೂ ಅಲ್ಲ, ದೇಹದ ರೂಪವೂ ಅಲ್ಲ. ಆದರೆ ಸತ್ವ, ಸತ್ವವು ಚಿರಂತನವಾದುದು. ಈ ದೃಷ್ಟಿಕೋನವು, ಆತ್ಮವು ಚಿರಂತನ, ಅದಕ್ಕೆ ಕಾರಣ ಚಿಂತನೆಗಳು ಚಿರಂತನ ಎಂಬ ಪ್ಲೇಟೋನ ವಾದದಲ್ಲಿ ಸೂಚ್ಯವಾಗಿದೆ, ಆದರೆ ಪ್ಲಾಟನಸ್‌ನಲ್ಲಿ ನಿಚ್ಚಳವಾಗಿದೆ.

ಬೌದ್ಧಿಕ ಜಗತ್ತಿನ ಪ್ರತ್ಯೇಕತೆಯ ನಡುವೆಯೂ ಆತ್ಮವು ದೇಹವನ್ನು ಹೇಗೆ ಹೊಗುತ್ತದೆ? ಇದಕ್ಕೆ ಉತ್ತರವೆಂದರೆ, ಹಸಿವಿನಿಂದ. ಹಸಿವು ಕೆಲವೇಳೆ ಅನುದಾತ್ತವಾದುದಾದರೂ, ಸಾಪೇಕ್ಷವಾಗಿ ಉದಾತ್ತವೂ ಆಗಬಹುದು. ಹೆಚ್ಚೆಂದರೆ, ಆತ್ಮಕ್ಕೆ 'ತಾನು ಬೌದ್ಧಿಕ ತತ್ವದಲ್ಲಿ (ನೌಸ್) ಕಂಡ ಮಾದರಿಯಲ್ಲಿ ವ್ಯವಸ್ಥೆಯನ್ನು ವಿಕಾಸಗೊಳಿಸುವ ಬಯಕೆ ಇರುತ್ತದೆ.' ಅಂದರೆ, ಆತ್ಮವು ಸತ್ವದ ಅಂತರ್ವಲಯದ ಬಗ್ಗೆ ಧ್ಯಾನಿಸುತ್ತದೆ, ಮತ್ತು ತನಗೆ ಸಾಧ್ಯವಾದ ಮಟ್ಟಿಗೂ, ಒಳನೋಟಕ್ಕಿಂತ ಹೆಚ್ಚಾಗಿ ಹೊರನೋಟಕ್ಕೆ ಕಾಣುವಂತಹುದನ್ನೇನಾದರೂ ನಿರ್ಮಿಸಬೇಕೆಂದು ಬಯಸುತ್ತದೆ – ತನ್ನ ಸಂಗೀತಸ್ವರೂಪವನ್ನು ಕಲ್ಪಿಸಿಕೊಂಡು ಆನಂತರ ಸ್ವರಮೇಳದಲ್ಲಿ ಪ್ರದರ್ಶಿಸುವ ಸಂಗೀತಸಂಯೋಜಕನಂತೆ (ಎನ್ನಬಹುದು).

ಆದರೆ ಆತ್ಮದ ಈ ನಿರ್ಮಿತಿಯ ಬಯಕೆಗೆ ದುರದೃಷ್ಟಕರ ಫಲಿತಗಳಿರುತ್ತವೆ. ಆತ್ಮವು ಸತ್ವದ ಪರಿಶುದ್ಧ ಜಗತ್ತಿನಲ್ಲಿರುವವರೆಗೆ, ಅದನ್ನು ಅದೇ ಜಗತ್ತಿನಲ್ಲಿನ ಬೇರೆಯ ಆತ್ಮಗಳಿಂದ ದೂರ ಮಾಡುವುದಿಲ್ಲ; ಆದರೆ ಅದು ಒಂದು ದೇಹದೊಳಗೆ

ಸೇರಿಹೋದಾಗ ಅದು ತನಗಿಂತ ಕೆಳಮಟ್ಟದ್ದನ್ನು ನಿಭಾಯಿಸುವ ಕರ್ತವ್ಯ ಉಂಟಾಗುತ್ತದೆ, ಈ ಕರ್ತವ್ಯದಿಂದಾಗಿ ಬೇರೆ ದೇಹಗಳನ್ನು ಹೊಂದಿದ ಇತರ ಆತ್ಮಗಳಿಂದ ಅದು ಬೇರ್ಪಡುತ್ತದೆ. ಕೆಲವು ಜನರಲ್ಲಿ ಮತ್ತು ಕೆಲವು ಕ್ಷಣಗಳಲ್ಲಿ, ಆತ್ಮವು ದೇಹದಲ್ಲಿ ಬಿಗಿದುಕೊಂಡಿರುತ್ತದೆ. 'ದೇಹವು ಸತ್ಯವನ್ನು ಮಸುಕುಗೊಳಸುತ್ತದೆ, ಆದರೆ ಎಲ್ಲವೂ ಸ್ಪಷ್ಟವೂ ಬಿಡಿಯಾಗಿಯೂ ಅಲ್ಲಿ[೧೩೭] ನಿಲ್ಲುತ್ತವೆ.' (೪, ೯. ೫).

ಪ್ಲೇಟೋನದರಂತೆಯೇ ಈ ಸಿದ್ಧಾಂತವೂ ಸೃಷ್ಟಿಯು ಒಂದು ತಪ್ಪು ಎಂಬ ದೃಷ್ಟಿಯನ್ನು ನಿವಾರಿಸುವಲ್ಲಿ ಕಷ್ಟವೆನಿಸುತ್ತದೆ. ತನ್ನ ಅತ್ಯುಚ್ಚ ಸ್ಥಿತಿಯಲ್ಲಿ ಆತ್ಮವು ಸತ್ವದ ಜಗತ್ತಾದ ನೌಸ್‌ನಿಂದ ತೃಪ್ತವಾಗುತ್ತದೆ; ಅದು ಸದಾ ಅತ್ಯುಚ್ಚ ಸ್ಥಿತಿಯಲ್ಲಿದ್ದರೆ, ಅದು ಸೃಷ್ಟಿಸುವುದಿಲ್ಲ, ಕೇವಲ ಧ್ಯಾನಿಸುತ್ತದೆ. ಸೃಷ್ಟಿತ ಜಗತ್ತು ತನ್ನ ಮುಖ್ಯವಾಹಿನಿಯಲ್ಲಿ ತಾರ್ಕಿಕವಾಗಿ ಸಾಧ್ಯವಾಗುವ ಅತ್ಯುನ್ನತ ಸ್ತರದ್ದು ಎಂಬ ಕಾರಣದಿಂದ ಸೃಷ್ಟಿಕ್ರಿಯೆಯನ್ನು ಕ್ಷಮಿಸಬೇಕು; ಆದರಿದು ಚಿರಂತನ ಜಗತ್ತಿನ ಒಂದು ನಕಲು, ಹೀಗಾಗಿ ನಕಲಿಗೆ ಸಾಧ್ಯವಾಗುವ ಚೆಲುವನ್ನು ಹೊಂದಿರುತ್ತದೆ. ರಹಸ್ಯಜ್ಞಾನವಾದಿಗಳ ಬಗೆಗಿನ ಟ್ರಾಕ್ಟೇಟ್‌ನಲ್ಲಿನ (೨, ೯. ೮) ಬಹು ನಿಖರವಾದ ಹೇಳಿಕೆಯಿದು:

> ಆತ್ಮವು ಬ್ರಹ್ಮಾಂಡವನ್ನೇಕೆ ಸೃಷ್ಟಿಸಿತು ಎಂಬ ಪ್ರಶ್ನೆಯು, ಆತ್ಮವು ಯಾಕೆ ಇದೆ ಮತ್ತು ಸೃಷ್ಟಿಕರ್ತ ಏಕೆ ಸೃಷ್ಟಿಸುತ್ತಾನೆ ಎಂದು ಕೇಳಿದಂತೆಯೇ ಸರಿ. ಈ ಪ್ರಶ್ನೆಯು ಚಿರಂತನತೆಯ ಆರಂಭವನ್ನು ಸೂಚಿಸುವುದಲ್ಲದೆ, ಮುಂದೆ, ಒಂದು ಹೋಗಿ ಇನ್ನೊಂದಾಗುವ ಬದಲಾಗುವ ಜೀವಿಯ ಕ್ರಿಯೆ ಎಂದೂ ಹೇಳುತ್ತದೆ.
>
> ಹೀಗೆ ಆಲೋಚಿಸುವವರಿಗೆ ದಿವ್ಯವಾದವುಗಳ ಸ್ವರೂಪದ ಬಗ್ಗೆ ತಿಳಿಯ ಹೇಳಬೇಕು – ಅವರು ತಪ್ಪು ತಿದ್ದಿಕೊಳ್ಳಲು ತಯಾರಿದ್ದರೆ – ಮತ್ತು ಅವರಿಗೆ ಗೌರವಯುತ ಸಂಯಮವಿರಬೇಕಾದ ಕಡೆಗಳಲ್ಲಿ ಸುಲಭವಾಗಿ ಬರುವ ಭವ್ಯ ಶಕ್ತಿಗಳ ನಿಂದೆಯನ್ನು ನಿಲ್ಲಿಸುವಂತೆ ಮಾಡಬೇಕು.
>
> ವಿಶ್ವದ ನಿರ್ವಹಣೆಯಲ್ಲಿ ಕೂಡ ಅಂಥ ಟೀಕೆಗೆ ಅವಕಾಶವಿಲ್ಲ, ಯಾಕೆಂದರೆ ಬೌದ್ಧಿಕ ಬಗೆಯ ಹಿರಿತನದ ಬಗ್ಗೆ ಸಾಕ್ಷ್ಯಗಳು ಕಾಣಸಿಗುತ್ತವೆ.
>
> ಜೀವವಾಗಿ ಹೊಮ್ಮಿರುವ ಈ ಸಕಲವು, ಅದರಲ್ಲಿನ ವೀರ್ಯವಂತಿಕೆಯ ಸಮೃದ್ಧಿಯಿಂದ ಹಗಲುರಾತ್ರಿ ಹುಟ್ಟಿದ ಕೆಳಹಂತದ ರೂಪಗಳಂತೆ ರೂಪವಿಲ್ಲದ ಸಂರಚನೆಯಲ್ಲ; ವಿಶ್ವವು ಸುಸಂಘಟಿತ, ಪರಿಣಾಮಕಾರಿ, ಸಂಕೀರ್ಣ, ಸರ್ವವ್ಯಾಪಿ, ಇಳಿಯಲಾರದ ಆಳವನ್ನು ಹೊಂದಿದ ಜೀವಿ. ಹಾಗಾದರೆ,

---

೧೩೭. ಪ್ಲಾಟಿನಸ್ ಕ್ರಿಶ್ಚಿಯನ್ನನಂತೆ 'ಅಲ್ಲಿ' (ದೇರ್) ಅನ್ನು ಕೆಳಗಿನ ಸಾಲುಗಳಲ್ಲಿನಂತೆ ಬಳಸುತ್ತಾನೆ.
ಕೊನೆಯೇ ಕಾಣದು ಈ ಬದುಕಲ್ಲಿ,
ಕಣ್ಣ ಹನಿಯಿಲ್ಲದ ಬದುಕಿದೆ ಅಲ್ಲಿ.

ಅದೊಂದು ಸುಸ್ಪಷ್ಟ ಪ್ರತಿಮೆ, ಬೌದ್ಧಿಕ ದೈವಿಕತೆಗಳಿಂದ ಸುಂದರವಾಗಿ ರೂಪಿತವಾದುದು ಎಂಬುದನ್ನು ಹೇಗೆ ತಾನೇ ನಿರಾಕರಿಸಲಾದೀತು? ಅದು ನಕಲು ಎಂಬುದರಲ್ಲಿ ಸಂಶಯವಿಲ್ಲ, ಆದರೆ ಅದು ಅದರ ಸಹಜ ಸ್ವರೂಪ; ಅದು ಒಮ್ಮೆಗೇ ಸಂಕೇತವೂ ವಾಸ್ತವವೂ ಆಗಿರಲಾರದು. ಆದರೆ ಅದು ಅಸಮಂಜಸ ನಕಲು ಎಂದು ಹೇಳುವುದು ತಪ್ಪು, ಭೌತಿಕ ವ್ಯವಸ್ಥೆಯು ಒಳಗೊಳ್ಳಬಹುದಾದ ಯಾವ ಸುಂದರ ಪ್ರತೀಕವನ್ನೂ ಅದು ಬಿಟ್ಟಿಲ್ಲ.

ಅಂಥದೊಂದು ಪುನರಾವೃತ್ತಿಯು – ಪ್ರಯತ್ನ ಮತ್ತು ಕುತಂತ್ರದಿಂದ ಚಿಂತಿತವಾಗದ – ಆವಶ್ಯಕವಾಗಿ ಇರಬೇಕು; ಯಾಕಂದರೆ ಮೇಧಾವಿಯು ಎಲ್ಲ ವಸ್ತುಗಳಲ್ಲಿ ಕೊನೆಯದಾಗಿರಲಾರ, ಅವನಿಗೆ ದುಪ್ಪಟ್ಟು ಕ್ರಿಯೆ ಇರಬೇಕು, ಒಂದು ತನ್ನಲ್ಲಿ ತಾನಾಗಿರುವುದು, ಮತ್ತೊಂದು ಹೊರಹೋಗುವುದು; ಹೀಗಾಗಿ, ಅದು ದಿವ್ಯವಾದುದಕ್ಕಿಂತ ಈಚಿನದಾಗಿರಬೇಕು; ಯಾಕಂದರೆ ಯಾವುದರಲ್ಲಿ ಎಲ್ಲ ಸಾಮರ್ಥ್ಯಗಳು ಕೊನೆಗೊಳ್ಳುತ್ತವೋ ಅಂಥ ವಸ್ತುವು ಮಾತ್ರ ತನಗೆ ತಾನೇ ಕೆಳಮುಖಿಯಾಗಿ ಹೋಗಲಾರದು.

ರಹಸ್ಯಜ್ಞಾನವಾದಿಗಳಿಗೆ ನೀಡಲು ಪ್ಲಾಟಿನಸ್‌ನ ತತ್ವಗಳು ಸಾಧ್ಯವಾಗಿಸುವ ಅತ್ಯುತ್ತಮ ಉತ್ತರವೆಂದರೆ ಪ್ರಾಯಶಃ ಇದು. ಈ ಸಮಸ್ಯೆಯು, ಸ್ವಲ್ಪ ಭಿನ್ನ ಭಾಷೆಯಲ್ಲಿ, ಕ್ರಿಶ್ಚಿಯನ್ ಮತಧರ್ಮಶಾಸ್ತ್ರಜ್ಞರನ್ನು ಕಾಡಿತು; ಸೃಷ್ಟಿಗೂ ಮುನ್ನ ಸೃಷ್ಟಿಕರ್ತನಿಗೆ ಯಾವುದೋ ಕೊರತೆಯಿತ್ತು ಎಂಬ ಧರ್ಮನಿಂದೆಯ ತೀರ್ಮಾನಕ್ಕೆ ಅವಕಾಶವಾಗದಂತೆ ಸೃಷ್ಟಿಯ ಬಗೆಗೆ ವಿವರಿಸಲು ಅವರಿಗೂ ಕಷ್ಟಕರವೆನಿಸಿತ್ತು. ಅವರ ತೊಂದರೆಯು ಪ್ಲಾಟಿನಸ್‌ನದಕ್ಕಿಂತ ಖಂಡಿತ ದೊಡ್ಡದು; ಯಾಕೆಂದರೆ ಅವನೇನೋ ಮನಸ್ಸಿನ ಸ್ವಭಾವಕ್ಕೆ ಸೃಷ್ಟಿ ಅನಿವಾರ್ಯ ಎಂದು ಹೇಳಬಹುದು, ಆದರೆ ಕ್ರಿಶ್ಚಿಯನ್ನನಿಗೆ ದೇವರ ಸ್ವತಂತ್ರಇಚ್ಛಾಶಕಿಯ ಅನಿರ್ಬಾಧಿತ ಪ್ರಯತ್ನದಿಂದ ಜಗತ್ತು ಮೂಡಿತು.

ಪ್ಲಾಟಿನಸ್‌ಗೆ ಅಮೂರ್ತ ಸೌಂದರ್ಯದ ಬಗ್ಗೆ ಸ್ಪಷ್ಟವಾದ ಪರಿಕಲ್ಪನೆಯಿತ್ತು. ಏಕ ಮತ್ತು ಆತ್ಮಗಳ ನಡುವಣ ಸ್ಥಿತಿಯ ಮೇಧಾವಿಯನ್ನು ವರ್ಣಿಸುವಾಗ ಅವನು ತಕ್ಷಣವೇ ಅಪರೂಪದ ವಾಗ್ವಿಲಾಸವನ್ನು ತೋರ್ಪಡಿಸುತ್ತಾನೆ:

ತನ್ನ ಪ್ರಗತಿಯಲ್ಲಿ ಪರಮೋಚ್ಚವು ಯಾವುದೋ ಆತ್ಮರಹಿತ ವಾಹನವೊಂದನ್ನೋ ನೇರವಾಗಿ ಆತ್ಮವನ್ನೋ ಅವಲಂಬಿಸಲಾಗಲಿಲ್ಲ; ಅದನ್ನು ಯಾವುದೋ ಅವರ್ಣನೀಯ ಸೌಂದರ್ಯವು ಎತ್ತಿ ಹಿಡಿಯಿತು; ತನ್ನ ಪ್ರಗತಿಯಲ್ಲಿ ಮಹಾಪ್ರಭುವಿನ ಎದುರಿನಲ್ಲಿ ಮೊದಲು ಬರುವುದು ಸಣ್ಣ ತೋಕೆ, ಆನಂತರ ಹಂತಹಂತವಾಗಿ ಹಿರಿದಾದುದು ಹಾಗೂ ಹೆಚ್ಚು ಉದಾತ್ತವಾದುದು, ಮಹಾಪ್ರಭುವಿಗೆ ಸನಿಹದಲ್ಲಿ ಮಹಾಪ್ರಭುತೇಜದ್ದು; ಆನಂತರ ಅವನದೇ

> **ಗೌರವನೀಯ ಪರಿವಾರ, ಕೊನೆಗೆ ಈ ವೈಭವಗಳೆಲ್ಲದರ ನಡುವೆ ಇದ್ದಕ್ಕಿದ್ದಂತೆ ಪರಮೋಚ್ಚ ಪ್ರಭುವೇ ಸಾಕ್ಷಾತ್ತಾಗುತ್ತಾನೆ; ಎಲ್ಲರೂ – ಅವನಿಗಿಂತ ಮುಂಚಿನ ಮತ್ತು ಅವನಾದ ಬಳಿಕದ ದೃಶ್ಯದಿಂದಲೇ ತೃಪ್ತರಾಗದಿದ್ದರೆ – ಅವನಿಗೆ ಸಾಷ್ಟಾಂಗ ನಮಿಸಿ ಸ್ತುತಿಸುತ್ತಾರೆ (೫, ೫.೩).**

ಬೌದ್ಧಿಕ ಸೌಂದರ್ಯದ ಬಗ್ಗೆಯೇ ಒಂದು ಟ್ರಾಕ್ಟೇಟ್ ಇದೆ, ಅಲ್ಲೂ ಅಂತಹುದೇ ಭಾವನೆ ವ್ಯಕ್ತವಾಗುತ್ತದೆ (೫. ೮):

> **ಖಂಡಿತವಾಗಿ ಎಲ್ಲ ದೇವರುಗಳೂ ಮಹಿಮಾನ್ವಿತರು ಹಾಗೂ ಅವರ್ಣನೀಯ ಸೌಂದರ್ಯವುಳ್ಳವರು. ಅವರನ್ನು ಹಾಗೆ ಮಾಡಿರುವುದಾದರೂ ಯಾವುದು? ಮೇಧಾವಿತನ, ವಿಶೇಷವಾಗಿ ಅವರಲ್ಲಿಯೇ ಕ್ರಿಯಾಶೀಲವಾಗಿ ಗೋಚರಿಸುವ (ದಿವ್ಯ ಸೂರ್ಯ ಮತ್ತು ನಕ್ಷತ್ರಗಳು) ಮೇಧಾವಂತಿಕೆ .. ..**
>
> **'ಹಾಯಾಗಿರುವುದು' ಅಲ್ಲಿದೆ; ಈ ದಿವ್ಯ ಜೀವಿಗಳಿಗೆ ಸತ್ಯತೆಯೇ ತಾಯಿ ಹಾಗೂ ದಾದಿ, ಅಸ್ತಿತ್ವ ಮತ್ತು ಬದುಕು; ಪ್ರಕ್ರಿಯೆಯ ಭಾಗವಲ್ಲದ ತಮ್ಮೊಳಗೆಯೇ ಅಧಿಕೃತವಾದ ಜೀವಿಗಳನ್ನವರು ಕಾಣುತ್ತಾರೆ; ಯಾಕೆಂದರೆ ಎಲ್ಲವೂ ಪಾರದರ್ಶಕ, ಮಬ್ಬೂ ಇಲ್ಲ, ತಡೆಯೂ ಇಲ್ಲ; ಪ್ರತಿ ಜೀವಿಯೂ ಪ್ರತಿ ಬೇರೆಯದಕ್ಕೂ ಆಳಗಲಗಳಲ್ಲಿ ಸ್ಪಷ್ಟಗೋಚರ; ಬೆಳಕು ಬೆಳಕಿನ ಮೂಲಕವಾಗಿಯೇ ಸಾಗುತ್ತದೆ. ಅವುಗಳಲ್ಲಿ ಪ್ರತಿಯೊಂದೂ ತನ್ನಲ್ಲಿ ಎಲ್ಲವನ್ನೂ ಒಳಗೊಂಡಿರುತ್ತದೆ, ಮತ್ತು ಅದೇ ಸಮಯದಲ್ಲಿ, ಬೇರೆ ಪ್ರತಿಯೊಂದರಲ್ಲೂ ಎಲ್ಲವನ್ನೂ ಕಾಣುತ್ತಾರೆ, ಹೀಗಾಗಿ ಎಲ್ಲೆಡೆಯೂ ಎಲ್ಲವೂ, ಎಲ್ಲವೂ ಎಲ್ಲ ಮತ್ತು ಪ್ರತಿಯೊಂದೂ ಎಲ್ಲ, ವೈಭವವು ಅನಂತ. ಅವುಗಳಲ್ಲಿ ಪ್ರತಿಯೊಂದೂ ಶ್ರೇಷ್ಠ; ಸಣ್ಣದೂ ಶ್ರೇಷ್ಠ; ಸೂರ್ಯನೇ. ಅಲ್ಲಿಯೇ ಎಲ್ಲ ನಕ್ಷತ್ರಗಳೂ ಇವೆ; ಮತ್ತು ಪ್ರತಿಯೊಂದು ನಕ್ಷತ್ರವೂ, ಮತ್ತೆ, ಎಲ್ಲ ನಕ್ಷತ್ರಗಳು ಮತ್ತು ಸೂರ್ಯ. ಅವುಗಳಲ್ಲಿ ಕೆಲವು ಬಗೆಯವು ಪ್ರತಿಯೊಂದರಲ್ಲೂ ಎದ್ದು ಕಾಣುವಂತಿದ್ದರೆ, ಎಲ್ಲರೂ ಪ್ರತಿಯೊಂದು ಬೇರೆಯದರಲ್ಲೂ ಪ್ರತಿಬಿಂಬಿಸುವವರೇ.**

ಜಗತ್ತು ಒಂದು ನಕಲಾಗಿರುವುದರಿಂದ ಅನಿವಾರ್ಯವಾಗಿ ಒಳಗೊಂಡಿರುವ ಅಪರಿಪೂರ್ಣತೆಯ ಜೊತೆಗೆ, ಕ್ರಿಶ್ಚಿಯನ್ನರಂತೆ, ಪ್ಲಾಟಿನಸ್‌ನಿಗೂ ಪಾಪದ ಫಲವಾದ ಹೆಚ್ಚಿನ ಸಕಾರಾತ್ಮಕ ಕೆಡುಕೂ ಅದರಲ್ಲಿದೆ. ಪಾಪ ಎಂಬುದು ಸ್ವತಂತ್ರಇಚ್ಛಾಶಕಿಯ ಪರಿಣಾಮ; ಇದನ್ನು ನಿಯತಿವಾದಿಗಳ, ಅದರಲ್ಲೂ ಜ್ಯೋತಿಷಿಗಳ, ವಿರುದ್ಧವಾಗಿ ಪ್ಲಾಟಿನಸ್ ಎತ್ತಿ ಹಿಡಿಯುತ್ತಾನೆ. ಅವನೇನೂ ಪೂರ್ತಿಯಾಗಿ ಜ್ಯೋತಿಷ್ಯದ ಸಮಂಜಸತೆಯನ್ನು ಅಲ್ಲಗಳೆಯ ಹೋಗುವುದಿಲ್ಲ, ಅದರ ಬದಲು, ಸ್ವತಂತ್ರಇಚ್ಛಾಶಕಿಗೆ ಹೊಂದಿಕೆಯಾಗುವ ಬಗೆಯಲ್ಲಿ ಅದರ ಮಿತಿಗಳನ್ನು ಗುರುತಿಸುತ್ತಾನೆ. ಇಂದ್ರಜಾಲದ ಬಗ್ಗೆಯೂ ಅವನು ಮಾಡುವುದು ಇದನ್ನೇ; ಋಷಿಯು ಐಂದ್ರಜಾಲಿಕನ

ಸಾಮರ್ಥ್ಯಕ್ಕೊಳಗಾಗುವುದಿಲ್ಲ ಎಂದವನು ಹೇಳುತ್ತಾನೆ. ಪ್ರತಿಸ್ಪರ್ಧಿಯಾದ ತತ್ವಜ್ಞಾನಿಯೊಬ್ಬ ಪ್ಲಾಟಿನಸ್ ವಿರುದ್ಧ ಕೆಡುಕು ಮಂತ್ರಗಳನ್ನು ಪಠಿಸಿದನಂತೆ, ಆದರೆ ಅವನ ಪಾವಿತ್ರ್ಯ ಮತ್ತು ವಿವೇಕಗಳ ಕಾರಣದಿಂದಾಗಿ ಅದು ಪ್ರತಿಸ್ಪರ್ಧಿಗೇ ತಿರುಗುಬಾಣವಾಯಿತೆಂದು ಪಾರ್ಫೈರಿ ಹೇಳುತ್ತಾನೆ. ಪಾರ್ಫೈರಿ ಮತ್ತಿತರ ಪ್ಲಾಟಿನಸ್‌ನ ಎಲ್ಲ ಅನುಯಾಯಿಗಳು ಅವನಿಗಿಂತ ಹೆಚ್ಚು ಮೂಢಶ್ರದ್ಧೆ ಹೊಂದಿದ್ದವರು. ಅವನಲ್ಲಿನ ಮೂಢಶ್ರದ್ಧೆಯು ಆ ಕಾಲದಲ್ಲಿ ಎಷ್ಟು ಸಾಧ್ಯವೋ ಅಷ್ಟು ಕನಿಷ್ಠ ಪ್ರಮಾಣದ್ದಾಗಿತ್ತು. ಈಗ ನಾವು ಪ್ಲಾಟಿನಸ್ ಬೋಧಿಸಿದ, ಅದರಲ್ಲಿಯೂ ಸುವ್ಯವಸ್ಥಿತವೂ ಮತ್ತು ಬೌದ್ಧಿಕವೂ ಆಗಿದ್ದ ಮಟ್ಟಿಗಿನ ಕ್ರಿಶ್ಚಿಯನ್ ಮತಧರ್ಮಶಾಸ್ತ್ರವು ಒಪ್ಪಿದುದರಲ್ಲಿನ, ಸಿದ್ಧಾಂತಗಳ ಗುಣಾವಗುಣಗಳನ್ನು ಪರಿಶೀಲಿಸೋಣ.

ಮೊದಲನೆಯದಾಗಿ ಹಾಗೂ ಬಹು ಮುಖ್ಯವಾಗಿ, ಆದರ್ಶ ಮತ್ತು ಭರವಸೆಗಳ ಸುರಕ್ಷಿತ ಆವಾಸವೆಂದು, ಜೊತೆಗೆ ನೈತಿಕ ಹಾಗೂ ಬೌದ್ಧಿಕ ಪ್ರಯತ್ನವನ್ನು ಒಳಗೊಂಡಂತಹ ಪ್ಲಾಟಿನಸ್ ನಂಬಿದ್ದ ರಚನೆಯ ಕುರಿತು. ಕ್ರಿಶ. ಮೂರನೆಯ ಶತಮಾನದಲ್ಲಿ ಹಾಗೂ ಬಾರ್ಬೇರಿಯನ್ನರ ದಾಳಿಯ ನಂತರದ ಶತಮಾನಗಳಲ್ಲಿ ಪಾಶ್ಚಿಮಾತ್ಯ ನಾಗರಿಕತೆಯು ಅಳಿವಿನ ಅಂಚಿಗೆ ಬಂದಿತ್ತು. ಆದರೆ ಅದೃಷ್ಟವಶಾತ್, ಮತಧರ್ಮಶಾಸ್ತ್ರ ಮಾತ್ರವೇ ಬಹುತೇಕ ಏಕೈಕ ಬೌದ್ಧಿಕ ಕ್ರಿಯೆಯಾಗಿದ್ದ ಕಾಲದಲ್ಲಿ ಒಪ್ಪಿಕೊಂಡ ವ್ಯವಸ್ಥೆಯು ಸಂಪೂರ್ಣವಾಗಿ ಮೂಢಶ್ರದ್ಧೆಯದಾಗಿರದೆ, ಕಾಪಿಟ್ಟ ಹಾಗೂ ಕೆಲವೇಳೆ ಆಳದಲ್ಲಿ ಹೂತಿದ್ದ ಗ್ರೀಕ್ ಬುದ್ಧಿಶಕ್ತಿಯ ಕಾರ್ಯವನ್ನೊಳಗೊಂಡ ಹಾಗೂ ಸಂಯಮವಾದಿಗಳಿಗೂ ನವಪ್ಲೇಟೋವಾದಿಗಳಿಗೂ ಸಮಾನವಾಗಿದ್ದ ಹೆಚ್ಚಿನ ನೈತಿಕ ಸಮರ್ಪಣೆ ಮತ್ತು ಸಿದ್ಧಾಂತಗಳನ್ನು ಆಧರಿಸಿದುದಾಗಿತ್ತು. ಇದು ಪ್ರೌಢ ತತ್ವಜ್ಞಾನದ ಉದಯಕ್ಕೆ, ಆನಂತರ ಮತಧರ್ಮಸುಧಾರಣೆಯ ಕಾಲದಲ್ಲಿ, ಪ್ಲೇಟೋನ ಆ ಬಳಿಕ ಇತರ ಪ್ರಾಚೀನರ ಪುನರಧ್ಯಯನದಿಂದ ಸಾಧಿತವಾದ ಪ್ರಚೋದನೆಗೆ ಕಾರಣವಾಯಿತು.

ಮತ್ತೊಂದೆಡೆ, ಪ್ಲಾಟಿನಸ್‌ನ ತತ್ವಜ್ಞಾನದಲ್ಲಿ ಮನುಷ್ಯನನ್ನು ಹೊರಗೆ ನೋಡುವ ಬದಲು ಅಂತರ್ಮುಖಿಯಾಗಿಸುವುದನ್ನು ಪ್ರೋತ್ಸಾಹಿಸುವ ದೋಷವಿದೆ; ನಮ್ಮೊಳಗೆ ನೋಡಿಕೊಂಡಾಗ ನಮಗೆ ಕಾಣುವುದು ನೌಸ್, ಅದು ದೈವಿಕವಾದದ್ದು, ಆದರೆ ಹೊರಗೆ ನೋಡಿದಾಗ ಕಾಣುವುದು ಇಂದ್ರಿಯಗ್ರಾಹ್ಯ ಜಗತ್ತಿನ ಅಪರಿಪೂರ್ಣತೆಗಳನ್ನು. ಈ ಬಗೆಯ ವ್ಯಕ್ತಿನಿಷ್ಠತೆಯು ಕ್ರಮೇಣ ಆದ ಬೆಳವಣಿಗೆ: ಇದನ್ನು ಪ್ರೋಟಾಗೊರಾಸ್, ಸಾಕ್ರಟೀಸ್ ಮತ್ತು ಪ್ಲೇಟೋರ ಸಿದ್ಧಾಂತಗಳಲ್ಲಿಯೂ, ಸಂಯಮವಾದಿಗಳು ಮತ್ತು ಎಪಿಕ್ಯೂರಿಯನ್ನರಲ್ಲಿಯೂ ಕಾಣಬಹುದು. ಆದರೆ ಅದು ಮೊದಲಿಗೆ ಸಿದ್ಧಾಂತಸೀಮಿತವಾಗಿತ್ತು, ಮನೋಭಾವದ್ದಾಗಿರಲಿಲ್ಲ, ಅದರಿಂದ ದೀರ್ಘಕಾಲ ವೈಜ್ಞಾನಿಕ ಕುತೂಹಲವನ್ನು ಸಾಯಿಸುವುದಾಗಲಿಲ್ಲ. ಕ್ರಿಪೂ ಸು.

೧೦೦೦ದಲ್ಲಿ ಅಲೆಗಳ ಕುರಿತು ಅಧ್ಯಯನ ಮಾಡಲು ಸ್ಪೆಯಿನ್, ಮತ್ತು ಆಫ್ರಿಕದ ಅಟ್ಲಾಂಟಿಕ್ ಕರಾವಳಿಯಲ್ಲಿ ಪಾಸಿಡೋನಿಯಸ್ ಹೇಗೆ ಸುತ್ತಾಡಿದನೆಂಬುದನ್ನು ನೋಡಿದ್ದೇವೆ. ಆದರೆ ಕಾಲಕ್ರಮೇಣ, ಮನುಷ್ಯರ ಭಾವನೆಗಳ ಹಾಗೂ ಅವರ ಸಿದ್ಧಾಂತಗಳ ಮೇಲೆ ವ್ಯಕ್ತಿನಿಷ್ಠತೆಯು ಆಕ್ರಮಣ ನಡೆಸಿತು. ವಿಜ್ಞಾನವನ್ನು ಬೆಳೆಸುವ ಗೋಜಿಗೇ ಹೋಗದೆ, ಸದ್ಗುಣ ಮಾತ್ರವೇ ಮುಖ್ಯವೆಂದು ಭಾವಿಸಲಾಯಿತು. ಪ್ಲೇಟೋ ಪರಿಭಾವಿಸಿದಂತೆ ಸದ್ಗುಣವು ಆ ಕಾಲದಲ್ಲಿ ಸಾಧ್ಯವಾದ ಮಾನಸಿಕ ಸಾಧನೆಗಳೆಲ್ಲವನ್ನೂ ಒಳಗೊಂಡಂತಹುದಾಗಿತ್ತು, ಆದರೆ ಅನಂತರದ ಶತಮಾನಗಳಲ್ಲಿ, ಅದು ಕೇವಲ ಸದ್ಗುಣಭರಿತ ಇಚ್ಛಾಶಕ್ತಿ ಮಾತ್ರ, ಭೌತಜಗತ್ತನ್ನು ಅರ್ಥಮಾಡಿಕೊಳ್ಳುವ ಅಥವಾ ಮಾನವ ಸಂಸ್ಥೆಗಳನ್ನು ಉತ್ತಮಪಡಿಸುವ ಬಯಕೆಯಲ್ಲ ಎಂಬಂಥ ಆಲೋಚನೆ ಹೆಚ್ಚಾಯಿತು. ತನ್ನ ನೈತಿಕ ಸಿದ್ಧಾಂತಗಳಲ್ಲಿ ಕ್ರೈಸ್ತಮತಧರ್ಮವು ಈ ದೋಷದಿಂದ ಸ್ವತಂತ್ರವಾಗಿರಲಿಲ್ಲ, ಆದರೆ ವಾಸ್ತವದಲ್ಲಿ ಕ್ರಿಶ್ಚಿಯನ್ ಶ್ರದ್ಧೆಯನ್ನು ಪ್ರಸಾರ ಮಾಡುವ ಪ್ರಾಧಾನ್ಯವು ನೈತಿಕ ಕ್ರಿಯೆಯ ಕ್ರಿಯಾತ್ಮಕ ಗುರಿಯಾಯಿತು, ಆತ್ಮದ ಪರಿಪೂರ್ಣತೆಗೇ ಅದು ಸೀಮಿತವಾಗಲಿಲ್ಲ.

ಪ್ಲಾಟಿನಸ್ ಆರಂಭವೂ ಹೌದು, ಕೊನೆಯೂ ಹೌದು: ಗ್ರೀಕ್‌ರಿಗೆ ಸಂಬಂಧಿಸಿದಂತೆ ಕೊನೆ, ಕ್ರಿಶ್ಚಿಯನ್ ಚಕ್ರಾಧಿಪತ್ಯಕ್ಕೆ ಸಂಬಂಧಿಸಿದಂತೆ ಆರಂಭ. ಶತಮಾನಗಳ ಕಾಲ ನಿರಾಶೆಯಿಂದ ಬೆಂದು ಹತಾಶೆಯಿಂದ ದಣಿದಿದ್ದ ಪ್ರಾಚೀನ ಜಗತ್ತಿಗೆ, ಅವನ ಸಿದ್ಧಾಂತವು ಒಪ್ಪಿತವಾಗಿದ್ದಿರಬಹುದು, ಆದರೆ ಅದು ಪ್ರಚೋದಕವಾಗಿರಲಿಲ್ಲ. ಮಹಾ ಸಮೃದ್ಧ ಶಕ್ತಿಯನ್ನು ನಿಯಂತ್ರಿಸುವ ಹಾಗೂ ಕ್ರಮಬದ್ಧಗೊಳಿಸುವ ಆವಶ್ಯಕತೆಯಿದ್ದ ಒರಟು ಅನ್ಯದೇಶೀಯ ಜಗತ್ತಿಗೆ, ಅವನ ಬೋಧನೆಯು ಒಳಹೊಗುವ ಮಟ್ಟಿಗೆ ಉಪಯುಕ್ತವಾಯಿತು, ಯಾಕೆಂದರೆ ಆಗ ಹೋರಾಡಬೇಕಾಗಿದ್ದುದು ಜಡತೆ ಹಾಗೂ ಕ್ರೌರ್ಯಗಳ ವಿರುದ್ಧ. ಅವನ ತತ್ವಜ್ಞಾನದಲ್ಲಿ ಉಳಿಯಬಹುದಾದುದನ್ನು ಪ್ರಸಾರ ಮಾಡುವ ಕೆಲಸವನ್ನು ಕ್ರಿಶ್ಚಿಯನ್ ತತ್ವಜ್ಞಾನಿಗಳು ರೋಮ್‌ನ ಅಂತಿಮ ಯುಗದಲ್ಲಿ ಮಾಡಿದರು.

೦

ಸಂಪುಟ ೨

ಕ್ಯಾಥೋಲಿಕ್ ತತ್ವಜ್ಞಾನ

ಪೀಠಿಕೆ

ನಾನು ಆ ಶಬ್ದವನ್ನು ಬಳಸುವ ಅರ್ಥದಲ್ಲಿ ಕ್ಯಾಥೋಲಿಕ್ ತತ್ವಜ್ಞಾನವೆಂದರೆ ಆಗಸ್ಟೈನ್‌ನಿಂದ ಮತಧರ್ಮಸುಧಾರಣೆಯವರೆಗೂ ಯೂರೋಪ್‌ನಲ್ಲಿ ವ್ಯಾಪಕವಾಗಿದ್ದ ಚಿಂತನೆ. ಈ ಅವಧಿಯ ಹತ್ತು ಶತಮಾನಗಳ ಹಿಂದೆಯೂ ಮುಂದೆಯೂ ಅದೇ ಪಂಥಕ್ಕೆ ಸೇರಿದ ಅನೇಕ ತತ್ವಜ್ಞಾನಿಗಳು ಆಗಿಹೋಗಿದ್ದಾರೆ. ಆಗಸ್ಟೈನ್‌ನಿಗಿಂತ ಮುಂಚೆ ಮೊದಮೊದಲ ಪಾದ್ರಿಗಳಿದ್ದರು, ಅದರಲ್ಲೂ ಆರಿಜೆನ್; ಮತಧರ್ಮಸುಧಾರಣೆಯ ಬಳಿಕ, ಈ ಕಾಲದ ಎಲ್ಲ ಸಂಪ್ರದಾಯನಿಷ್ಠ ಕ್ಯಾಥೋಲಿಕ್ ತತ್ವಶಾಸ್ತ್ರ ಬೋಧಕರನ್ನೊಳಗೊಂಡಂತೆ ಅನೇಕರಿದ್ದರು, ಅವರು ಮಧ್ಯಯುಗೀನ ವ್ಯವಸ್ಥೆಗೆ ಅಂಟಿಕೊಂಡವರು, ಅದರಲ್ಲಿಯೂ ಸಂತ ಥಾಮಸ್ ಆಕ್ವಿನಾಸ್‌ನದು. ಆದರೆ ಆಗಸ್ಟೈನ್‌ನಿಂದ ಮತಧರ್ಮಸುಧಾರಣೆಯವರೆಗಿನ ಅವಧಿಯ ಅತ್ಯಂತ ಶ್ರೇಷ್ಠ ತತ್ವಜ್ಞಾನಿಗಳು ಕ್ಯಾಥೋಲಿಕ್ ಸಂರಚನೆ ಅಥವಾ ಸಂಶ್ಲೇಷಣೆಯ ಬಗ್ಗೆ ಆಸಕ್ತರಾಗಿದ್ದರು. ಆಗಸ್ಟೈನ್‌ಗಿಂತ ಮುಂಚಿನ ಕ್ರಿಶ್ಚಿಯನ್ ಶತಮಾನಗಳಲ್ಲಿ ಸಂಯಮವಾದಿಗಳು ಮತ್ತು ನವಪ್ಲೇಟೋವಾದಿಗಳು ತಾತ್ವಿಕ ಸಾಮರ್ಥ್ಯದಲ್ಲಿ ಪಾದ್ರಿಗಳನ್ನು ಮೀರಿಸಿದ್ದರು. ಮತಧರ್ಮಸುಧಾರಣೆಯ ಬಳಿಕ, ಯಾವುದೇ ಶ್ರೇಷ್ಠ ತತ್ವಜ್ಞಾನಿಯೂ, ಸಂಪ್ರದಾಯನಿಷ್ಠ ಕ್ಯಾಥೋಲಿಕ್‌ರನ್ನೂ ಒಳಗೊಂಡಂತೆ, ಪ್ರೌಢವಾದ ಅಥವಾ ಆಗಸ್ಟೀನಿಯನ್ ಪರಂಪರೆಯನ್ನು ಮುಂದುವರಿಸುವುದರಲ್ಲಿ ಆಸಕ್ತರಾಗಲಿಲ್ಲ.

ಈ ಗ್ರಂಥದಲ್ಲಿ ನಾವು ಚರ್ಚಿಸುವ ಅವಧಿಯು ಅದರ ಹಿಂದಿನ ಮತ್ತು ಮುಂದಿನ ಅವಧಿಗಳಿಗಿಂತ ಭಿನ್ನವಾದುದು, ತತ್ವಜ್ಞಾನದ ದೃಷ್ಟಿಯಿಂದ ಮಾತ್ರವಲ್ಲದೆ, ಇನ್ನಿತರ ವಿಷಯಗಳಲ್ಲಿಯೂ. ಇವುಗಳಲ್ಲಿ ಬಹು ಮುಖ್ಯವಾದುದು ಚರ್ಚ್‌ನ ಶಕ್ತಿ. ಚರ್ಚ್ ತಾತ್ವಿಕ ಶ್ರದ್ಧೆಗಳನ್ನು, ಮಧ್ಯಯುಗದ ಹಿಂದೆ ಮತ್ತು ಮುಂದಿನ ಕಾಲಗಳಲ್ಲಿ – ಇದನ್ನು ಕ್ರಿಶ ೪೦೦ ರಿಂದ ಸುಮಾರು ಕ್ರಿಶ ೧೪೦೦ ರವರೆಗಿನ ಅವಧಿ ಎಂದು ಭಾವಿಸಬಹುದು – ಇರದಿದ್ದ ಬಗೆಯಲ್ಲಿ, ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗಳ ಹತ್ತಿರಕ್ಕೆ ತಂದಿತು. ಚರ್ಚ್ ಎಂಬುದು ಭಾಗಶಃ ತಾತ್ವಿಕವಾದ

ಮತ್ತು ಭಾಗಶಃ ಪರಿಶುದ್ಧ ಇತಿಹಾಸಕ್ಕೆ ಸಂಬಂಧಿಸಿದ ಮತಧರ್ಮಸೂತ್ರದ ಆಧಾರದ ಮೇಲೆ ನಿರ್ಮಿತವಾದ ಒಂದು ಸಾಮಾಜಿಕ ಸಂಸ್ಥೆ. ತನ್ನ ಮತಧರ್ಮಸೂತ್ರದ ಕಾರಣದಿಂದಾಗಿ ಅದು ಶಕ್ತಿ ಮತ್ತು ಸಂಪತ್ತುಗಳನ್ನು ಗಳಿಸಿತು. ಅದರೊಡನೆ ನಿರಂತರ ಘರ್ಷಣೆಯಲ್ಲಿ ತೊಡಗಿದ್ದ ಸಾಮಾನ್ಯ ರಾಜರನ್ನು ಸೋಲಿಸಲು ಸಾಧ್ಯವಾದದ್ದು ಅನೇಕ ಸಾಮಾನ್ಯ ರಾಜರನ್ನೂ ಒಳಗೊಂಡಂತೆ ಬಹುಸಂಖ್ಯಾತ ಜನರು ಕ್ಯಾಥೋಲಿಕ್ ಶ್ರದ್ಧೆಯ ಬಗೆಗಿನ ಗಾಢವಾದ ಮನವರಿಕೆಯಿಂದಾಗಿ. ಜೊತೆಗೆ ಚರ್ಚ್ ಹೋರಾಡಬೇಕಾಗಿದ್ದ ರೋಮನ್ ಮತ್ತು ಜರ್ಮಾನಿಕ್ ಪರಂಪರೆಗಳು ಬೇರೆ ಇದ್ದವು. ರೋಮನ್ ಪರಂಪರೆಯು ಇಟಲಿಯಲ್ಲಿ ಅತ್ಯಂತ ಹೆಚ್ಚು ಬಲಿಷ್ಠವಾಗಿತ್ತು, ಅದರಲ್ಲೂ ವಕೀಲರಲ್ಲಿ; ಜರ್ಮನ್ ಪರಂಪರೆಯು ಅತ್ಯಂತ ಹೆಚ್ಚು ಬಲಿಷ್ಠವಾಗಿದ್ದುದು ಬಾರ್ಬೇರಿಯನ್ ಗೆಲವುಗಳಿಂದ ಉಂಟಾಗಿದ್ದ ಊಳಿಗಮಾನ್ಯ ಶ್ರೀಮಂತಪ್ರಭುತ್ವಗಳಲ್ಲಿ. ಆದರೆ ಅನೇಕ ಶತಮಾನಗಳ ಕಾಲ ಈ ಎರಡೂ ಪರಂಪರೆಗಳು ಚರ್ಚ್‌ಗೆ ಯಶಸ್ವೀ ವಿರೋಧವನ್ನು ಒಡ್ಡಲು ಸಮರ್ಥವಾಗಿರಲಿಲ್ಲ. ಜೊತೆಗೆ ಇದಕ್ಕೆ ಮುಖ್ಯ ಕಾರಣ ಅವುಗಳು ಯಾವುದೇ ಪ್ರಬಲ ತತ್ತ್ವಜ್ಞಾನಗಳಲ್ಲಿ ಅಡಕಗೊಳ್ಳದಿದ್ದುದು.

ನಾವು ತೊಡಗಿರುವ ಬಗೆಯ ಚಿಂತನೆಯ ಇತಿಹಾಸವು ಮಧ್ಯಯುಗದ ವಿವೇಚನೆಯಲ್ಲಿ ಅನಿವಾರ್ಯವಾಗಿ ಏಕಪಕ್ಷೀಯವಾದುದು. ಕೆಲವು ಅಪವಾದಗಳನ್ನು ಬಿಟ್ಟರೆ, ಬೌದ್ಧಿಕ ಬದುಕಿಗೆ ಕೊಡುಗೆಯಿತ್ತ ಈ ಅವಧಿಯ ಜನರೆಲ್ಲ ಚರ್ಚ್‌ನವರೇ ಆಗಿದ್ದರು. ಮಧ್ಯಯುಗದ ಸಾಮಾನ್ಯ ಜನತೆಯು ನಿಧಾನವಾಗಿ ಒಂದು ಬಲಿಷ್ಠ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯನ್ನು ನಿರ್ಮಿಸಿತು, ಆದರೆ ಅವುಗಳ ಚಟುವಟಿಕೆಗಳೆಲ್ಲ ಒಂದು ಬಗೆಯಲ್ಲಿ ಕುರುಡಾದವು. ಆನಂತರದ ಮಧ್ಯಯುಗದಲ್ಲಿ ಮುಖ್ಯವಾದ ಜಾನಪದ ಸಾಹಿತ್ಯವಿತ್ತು, ಅದು ಚರ್ಚ್‌ನದಕ್ಕಿಂತ ತುಂಬ ಭಿನ್ನವಾದುದು. ಸಾಮಾನ್ಯ ಇತಿಹಾಸದಲ್ಲಿ, ತಾತ್ವಿಕ ಚಿಂತನೆಯ ಇತಿಹಾಸಕ್ಕೆ ಆವಶ್ಯಕವೆನಿಸಿದುದಕ್ಕಿಂತ ಹೆಚ್ಚಿನ ಪ್ರಾಮುಖ್ಯವನ್ನು ಈ ಸಾಹಿತ್ಯಕ್ಕೆ ನೀಡಬೇಕಾಗುತ್ತದೆ. ಡಾಂಟೆ ಬರುವವರೆಗೂ ತನ್ನ ಕಾಲದ ಮತಪ್ರಚಾರಕ ತತ್ತ್ವಜ್ಞಾನದ ಬಗ್ಗೆ ಸಂಪೂರ್ಣ ಅರಿವಿದ್ದ ಮತ್ತೊಬ್ಬ ಸಾಮಾನ್ಯನೊಬ್ಬನನ್ನು ಕಾಣಲಾರೆವು. ಹದಿನಾಲ್ಕನೆಯ ಶತಮಾನದವರೆಗೂ, ಮತಪ್ರಚಾರಕರು ತತ್ತ್ವಜ್ಞಾನದ ಏಕೈಕ ವಾರಸುದಾರರಾಗಿದ್ದರು, ಮತ್ತು ಅದರಂತೆ ತತ್ತ್ವಜ್ಞಾನವನ್ನು ಚರ್ಚ್ ದೃಷ್ಟಿಕೋನಕ್ಕನುಗುಣವಾಗಿ ರಚಿಸಲಾಗುತ್ತಿತ್ತು. ಈ ಕಾರಣದಿಂದಾಗಿ, ಮತಪ್ರಚಾರಕ ಸಂಸ್ಥೆಗಳ ಬೆಳವಣಿಗೆಯ, ಅದರಲ್ಲೂ ಪೋಪ್‌ಪ್ರಭುತ್ವದ ಬಗೆಗಿನದು, ವಿವರವಾದ ವಿಶ್ಲೇಷಣೆಯಿಲ್ಲದೆ ಮಧ್ಯಯುಗೀನ ಚಿಂತನೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದು.

ಪ್ರಾಚೀನ ಜಗತ್ತಿನಗೆ ವಿದೃಶವಾಗಿ ಮಧ್ಯಯುಗೀನ ಜಗತ್ತು ನಾನಾ ಬಗೆಯ ದ್ವೈವಿಧ್ಯದಿಂದ ತುಂಬಿದೆ. ಪುರೋಹಿತ–ಸಾಮಾನ್ಯಜನ, ಲ್ಯಾಟಿನ್–ಟ್ಯೂಟನ್, ದೇವಚಕ್ರಾಧಿಪತ್ಯ–ಜಗತ್‌ಚಕ್ರಾಧಿಪತ್ಯ, ಸತ್ವ–ಮಾಂಸ – ಇಂತಹ ದ್ವೈವಿಧ್ಯಗಳು. ಈ ಎಲ್ಲವೂ ಪೋಪ್ ಮತ್ತು ಚಕ್ರವರ್ತಿ ದ್ವೈವಿಧ್ಯದಲ್ಲಿ ಸೇರಿಹೋಗುತ್ತವೆ. ಲ್ಯಾಟಿನ್–ಟ್ಯೂಟನ್ ದ್ವೈವಿಧ್ಯವು ಅನ್ಯದೇಶೀಯ ಆಕ್ರಮಣದ ಫಲ, ಆದರೆ ಮಿಕ್ಕವು ಹಿಂದಿನ ಕಾರಣಗಳಿಂದಾದವು. ಪುರೋಹಿತ–ಸಾಮಾನ್ಯಜನ ದ್ವೈವಿಧ್ಯವು, ಮಧ್ಯಯುಗದ ಮಟ್ಟಿಗೆ, ಸಾಮ್ಯುಯಲ್ ಮತ್ತು ಸಾಲ್‌ರ ಸಂಬಂಧದ ಮಾದರಿಯವು; ಪುರೋಹಿತ ಸಾರ್ವಭೌಮತ್ವವು ಆರಂಭವಾದದ್ದು ಏರಿಯನ್ ಅಥವಾ ಅರೆ–ಏರಿಯನ್ ಚಕ್ರವರ್ತಿಗಳು ಮತ್ತು ರಾಜರುಗಳಿಂದ. ದೇವಚಕ್ರಾಧಿಪತ್ಯ–ಜಗತ್‌ಚಕ್ರಾಧಿಪತ್ಯದ ದ್ವೈವಿಧ್ಯವು ಹೊಸ ಒಡಂಬಡಿಕೆಯಲ್ಲಿ ಕಾಣುತ್ತದೆ, ಆದರೆ ಅದು ವ್ಯವಸ್ಥಿತಗೊಂಡದ್ದು ಸಂತ ಆಗಸ್ಟೈನ್‌ನ *'ಸಿಟಿ ಆಫ್ ಗಾಡ್'*ನಲ್ಲಿ. ಸತ್ವ–ಮಾಂಸಗಳ ದ್ವೈವಿಧ್ಯವು ಪ್ಲೇಟೋನಲ್ಲಿಯೇ ಇದೆ, ಅದಕ್ಕೆ ನವಪ್ಲೇಟೋವಾದಿಗಳು ಪ್ರಾಮುಖ್ಯ ನೀಡಿದರು, ಸಂತ ಪೌಲ್‌ನ ಬೋಧನೆಯಲ್ಲಿ ಅದು ಪ್ರಮುಖವಾಗಿದೆ, ನಾಲ್ಕು ಮತ್ತು ಐದನೆಯ ಶತಮಾನಗಳ ಕ್ರಿಶ್ಚಿಯನ್ ಸನ್ಯಾಸತತ್ವದಲ್ಲಿ (ಅಸೆಟಿಸಿಸಂ) ಎದ್ದು ತೋರುತ್ತದೆ.

ಕ್ಯಾಥೋಲಿಕ್ ತತ್ವಜ್ಞಾನವು ಕತ್ತಲ ಯುಗದ (ಡಾರ್ಕ್ ಏಜಸ್) ಎರಡು ಅವಧಿಗಳಲ್ಲಿ ವಿಭಾಗಗೊಂಡಿದೆ, ಈ ಕಾಲದಲ್ಲಿ ಪಶ್ಚಿಮ ಯೂರೋಪ್‌ನಲ್ಲಿ ಬೌದ್ಧಿಕ ಚಟುವಟಿಕೆಯು ಬಹುತೇಕ ಸ್ಥಗಿತವಾಗಿತ್ತು. ಕಾನ್‌ಸ್ಟಾಂಟೈನ್‌ನ ಮತಾಂತರದಿಂದ ಮೊದಲಾಗಿ ಬೋಯೆಥಿಯಸ್‌ನ ಮರಣದವರೆಗೆ, ಕ್ರಿಶ್ಚಿಯನ್ ತತ್ವಜ್ಞಾನಿಗಳ ಚಿಂತನೆಯು ಇನ್ನೂ ರೋಮನ್ ಚಕ್ರಾಧಿಪತ್ಯದಿಂದಲೇ, ವಾಸ್ತವವಾಗಿ ಇಲ್ಲವೇ ನೆನಪಿನ ರೂಪದಲ್ಲಿ, ಪ್ರಭಾವಿತವಾಗಿದ್ದವು. ಈ ಕಾಲದಲ್ಲಿ ಬಾರ್ಬೇರಿಯನ್ನರನ್ನು ಒಂದು ಕಿರಿಕಿರಿಯೆಂದು ಭಾವಿಸಲಾಗಿತ್ತೇ ಹೊರತು ಕ್ರೈಸ್ತಚಕ್ರಾಧಿಪತ್ಯದ ಸ್ವತಂತ್ರ ಭಾಗವಾಗಿಯಲ್ಲ. ಆಗ ಇನ್ನೂ ಎಲ್ಲ ಹಣವಂತರೂ ಓದಿ ಬರೆದು ಮಾಡಬಹುದಾಗಿದ್ದ ಮತ್ತು ಸಾಮಾನ್ಯರಿಗೂ ಮತಪ್ರಚಾರಕರಿಗೂ ತಲುಪಬಹುದಾದ ತತ್ವಜ್ಞಾನಿಗೂ ಅವಕಾಶವಿದ್ದ ಒಂದು ನಾಗರಿಕ ಸಮುದಾಯವಿತ್ತು. ಈ ಅವಧಿ ಮತ್ತು ಆರನೆಯ ಶತಮಾನದ ಕೊನೆಯವರೆಗಿನ ಕತ್ತಲ ಯುಗಗಳ ನಡುವೆ ಗ್ರೆಗರಿ ಮಹಾಶಯ (ದ ಗ್ರೇಟ್) ಇದ್ದ, ತನ್ನನ್ನು ಬೈಜ಼ಾಂಟಿಯನ್ ಚಕ್ರವರ್ತಿಯ ಪ್ರಜೆಯೆಂದು ಹೇಳಿಕೊಳ್ಳುತ್ತಿದ್ದರೂ ಅನ್ಯದೇಶೀಯ ರಾಜರುಗಳ ವಿಷಯದಲ್ಲಿ ಪ್ರಭುವಿನಂತಿದ್ದ. ಅವನ ಕಾಲಾನಂತರ, ಪಶ್ಚಿಮ ಕ್ರೈಸ್ತ ಚಕ್ರಾಧಿಪತ್ಯದಾದ್ಯಂತ, ಪುರೋಹಿತ ಮತ್ತು ಸಾಮಾನ್ಯರ ನಡುವಣ ವಿಭಜನೆಯು ಹೆಚ್ಚು ಹೆಚ್ಚು ತೀಕ್ಷ್ಣವಾಯಿತು. ಸಾಮಾನ್ಯ ಶ್ರೀಮಂತಪ್ರಭುತ್ವವು ಊಳಿಗಮಾನ್ಯ ಪದ್ಧತಿಯನ್ನು ಸೃಷ್ಟಿಸುತ್ತದೆ, ಅದು ಸ್ವಲ್ಪ ಮಟ್ಟಿಗೆ ಆಗಿನ ಪ್ರಕ್ಷುಬ್ಧ ಅನಾಯಕತ್ವವನ್ನು ತಹಬಂದಿಗೆ

ತರುತ್ತದೆ. ಕ್ರಿಶ್ಚಿಯನ್ ಮಾನವೀಯತೆಯನ್ನು ಪುರೋಹಿತರು ತಿಳಿಹೇಳುತ್ತಾರೆ, ಆದರೆ ಅದನ್ನು ಅನುಸರಿಸುವವರು ಕೆಳವರ್ಗದ ಜನರು; ಮಲ್ಲಯುದ್ಧ, ಯುದ್ಧಪ್ರಯತ್ನ, ಕ್ರೀಡಾಸ್ಪರ್ಧೆ ಮತ್ತು ಖಾಸಗಿ ಪ್ರತೀಕಾರಗಳಲ್ಲಿ ಕ್ರೈಸ್ತೇತರ ಹೆಮ್ಮೆಯು ಅಡಕವಾಗಿರುತ್ತಿತ್ತು, ಇದೆಲ್ಲ ಚರ್ಚ್‌ಗೆ ಇಷ್ಟವಿಲ್ಲದಿದ್ದರೂ ಅದಕ್ಕೆ ಅದನ್ನು ತಡೆಯಲಾಗುತ್ತಿರಲಿಲ್ಲ. ಹನ್ನೊಂದನೆಯ ಶತಮಾನದಿಂದ ಮೊದಲಾಗಿ ಚರ್ಚ್ ಬಹಳ ಕಷ್ಟಪಟ್ಟು ಊಳಿಗಮಾನ್ಯ ಶ್ರೀಮಂತಪ್ರಭುತ್ವದಿಂದ ತನ್ನನ್ನು ಬಿಡುಗಡೆಗೊಳಿಸಿಕೊಳ್ಳುವುದರಲ್ಲಿ ಯಶಸ್ವಿಯಾಯಿತು. ಈ ಬಿಡುಗಡೆಯೇ ಯೂರೋಪ್ ಕತ್ತಲ ಯುಗದಿಂದ ಹೊರಬರುವ ಒಂದು ಕಾರಣವಾಯಿತು.

ಕ್ಯಾಥೋಲಿಕ್ ತತ್ತ್ವಜ್ಞಾನದ ಮೊದಲ ಮಹಾಯುಗವು ಸಂತ ಆಗಸ್ಟೈನ್ ಮತ್ತು ಪ್ಯಾಗನ್‌ರಲ್ಲಿ ಪ್ಲೇಟೋನಿಂದ ಪ್ರಭಾವಿತವಾಗಿತ್ತು. ಎರಡನೆಯ ಯುಗವು ಸಂತ ಥಾಮಸ್ ಆಕ್ವಿನಾಸ್‌ನಲ್ಲಿ ಉತ್ತುಂಗಕ್ಕೇರಿತು, ಅವನಿಗೂ ಅವನ ಅನುಯಾಯಿಗಳಿಗೂ ಪ್ಲೇಟೋಗಿಂತ ಅರಿಸ್ಟಾಟಲ್ ಹೆಚ್ಚು ಆರಾಧ್ಯನಾಗಿದ್ದ. ಆದರೆ 'ಸಿಟಿ ಆಫ್ ಗಾಡ್'ನ ದ್ವೈವಿಧ್ಯವು ಬಹು ಪ್ರಬಲವಾಗಿ ಉಳಿದುಬಂದಿತ್ತು. ಚರ್ಚ್ 'ಸಿಟಿ ಆಫ್ ಗಾಡ್'ನ ಪ್ರತಿನಿಧಿ, ಮತ್ತು ರಾಜಕೀಯವಾಗಿ ತತ್ತ್ವಜ್ಞಾನಿಗಳು ಚರ್ಚ್‌ನ ಹಿತಾಸಕ್ತಿಗಳ ಪರವಾಗಿದ್ದರು. ತತ್ತ್ವಜ್ಞಾನವು ಶ್ರದ್ಧೆಯನ್ನು ಸಮರ್ಥಿಸುವ ಕಾರ್ಯದಲ್ಲಿ ಲೀನವಾಗಿತ್ತು, ಅದು ತರ್ಕವನ್ನು ಮುಂದುಮಾಡುತ್ತಿದ್ದುದೆಂದರೆ, ಮಹಮ್ಮದೀಯರಂತೆ ಕ್ರಿಶ್ಚಿಯನ್ ದಿವ್ಯಜ್ಞಾನದಲ್ಲಿ ಶ್ರದ್ಧೆಯಿಲ್ಲದವರೊಡನೆ ವಾದ ಮಾಡಬೇಕಾದ ಸಂದರ್ಭಗಳಲ್ಲಿ ಮಾತ್ರ. ತರ್ಕವನ್ನು ಹೀಗೆ ಮುಂದೆಮಾಡಿ ತತ್ತ್ವಜ್ಞಾನಿಗಳು ಟೀಕೆಯನ್ನೆದುರಿಸಿದರು, ಮತಧರ್ಮಶಾಸ್ತ್ರಜ್ಞರಂತೆ ಮಾತ್ರವಲ್ಲದೆ ಯಾವುದೇ ಮತಧರ್ಮಸೂತ್ರದವರಾಗಲೀ ಅವರನ್ನೊಲಿಸುವ ವ್ಯವಸ್ಥೆಯೊಂದರ ಸ್ಥಾಪಕರಾಗಿ. ದೀರ್ಘ ಕಾಲದಲ್ಲಿ, ವೈಚಾರಿಕತೆಗೆ ಮಹತ್ವವಿತ್ತದ್ದು ಪ್ರಾಯಶಃ ತಪ್ಪೆನಿಸಿರಬೇಕು, ಆದರೆ ಹದಿಮೂರನೆಯ ಶತಮಾನದಲ್ಲಿ ಅದು ತುಂಬ ಯಶಸ್ವಿಯಾಯಿತು.

ಒಂದು ಬಗೆಯ ಪೂರ್ಣತೆ ಮತ್ತು ಅಂತಿಮತೆಯಂತೆ ತೋರುತ್ತಿದ್ದ ಹದಿಮೂರನೆಯ ಶತಮಾನದ ಸಂಶ್ಲೇಷಣೆಯು ನಾನಾ ಕಾರಣಗಳಿಂದಾಗಿ ನಾಶವಾಯಿತು. ಪ್ರಾಯಶಃ ಅವುಗಳಲ್ಲಿ ಬಹು ಮುಖ್ಯವಾದುದೆಂದರೆ ಶ್ರೀಮಂತ ವ್ಯಾಪಾರಿವರ್ಗದ ಬೆಳವಣಿಗೆ, ಮೊದಲು ಇಟಲಿಯಲ್ಲಿ, ಆನಂತರ ಇತರೆಡೆ. ಊಳಿಗಮಾನ್ಯ ಶ್ರೀಮಂತಪ್ರಭುತ್ವವು ಪ್ರಮುಖವಾಗಿ ತಿಳಿವಳಿಕೆಯಿಲ್ಲದ್ದು, ಮೂರ್ಖತನದ್ದು ಮತ್ತು ಅನಾಗರಿಕವಾದದ್ದು; ಸಾಮಾನ್ಯ ಜನತೆಯು ಬುದ್ಧಿಶಕ್ತಿ, ನೈತಿಕತೆ, ಅನಾಯಕತ್ವದ ವಿರುದ್ಧದ ಹೋರಾಟ ಇವುಗಳಲ್ಲಿ ಮಿಗಿಲೆನಿಸಿದ ಚರ್ಚ್ ಅನ್ನು ಬೆಂಬಲಿಸಿತು. ಆದರೆ ಹೊಸ ವ್ಯಾಪಾರಿವರ್ಗವು ಪುರೋಹಿತವರ್ಗದಷ್ಟೇ ಜಾಣ್ಮೆಯುಳ್ಳದ್ದಾಗಿತ್ತು, ಐಹಿಕ ವಿಷಯಗಳಲ್ಲಿ ಅದರಷ್ಟೇ ತಿಳಿವಳಿಕೆಯುಳ್ಳದ್ದಾಗಿತ್ತು,

ಶ್ರೀಮಂತಪ್ರಭುಗಳೊಡನೆ ಚೆನ್ನಾಗಿ ಹೊಂದಿಕೊಳ್ಳಬಲ್ಲುದಾಗಿತ್ತು, ನಾಗರಿಕ ಸ್ವಾತಂತ್ರ್ಯದ ಪ್ರತಿಪಾದಕರಾಗಿ ನಗರದ ಕೆಳವರ್ಗದವರ ಒಲವನ್ನು ಗಳಿಸಿದುದಾಗಿತ್ತು. ಪ್ರಜಾಪ್ರಭುತ್ವಾತ್ಮಕ ಪ್ರವೃತ್ತಿ ಮುಂಚೂಣಿಗೆ ಬಂತು, ಚಕ್ರವರ್ತಿಯನ್ನು ಸೋಲಿಸಲು ಪೋಪ್‌ಗೆ ಸಹಾಯ ಮಾಡಿದ ಮೇಲೆ ಅದು ಪುರೋಹಿತರ ಹಿಡಿತದಿಂದ ಆರ್ಥಿಕ ಬದುಕನ್ನು ಬಿಡುಗಡೆಗೊಳಿಸುವತ್ತ ಗಮನ ಹರಿಸಿತು.

ಮಧ್ಯಯುಗ ಕೊನೆಗೊಳ್ಳುವುದಕ್ಕೆ ಮತ್ತೊಂದು ಕಾರಣವೆಂದರೆ ಫ್ರಾನ್ಸ್, ಇಂಗ್ಲಂಡ್ ಮತ್ತು ಸ್ಪೆಯಿನ್‌ಗಳಲ್ಲಿ ಬಲಿಷ್ಠ ರಾಷ್ಟ್ರೀಯ ಮಹಾರಾಜರು ಪ್ರವರ್ಧಮಾನಕ್ಕೆ ಬಂದುದು. ಆಂತರಿಕ ಅನಾಯಕತ್ವವನ್ನು ದಮನಗೊಳಿಸಿದ ಬಳಿಕ, ಹದಿನೈದನೆಯ ಶತಮಾನದ ಮಧ್ಯಭಾಗದಲ್ಲಿ ಶ್ರೀಮಂತಪ್ರಭುತ್ವ ಮತ್ತು ರಾಜರು – ಇವರ ವಿರುದ್ಧ ಹಣವಂತ ವ್ಯಾಪಾರಿಗಳೊಡನೆ ಕೈಜೋಡಿಸಿದರು, ರಾಷ್ಟ್ರದ ಹಿತದೃಷ್ಟಿಯಿಂದ ಪೋಪ್ ವಿರುದ್ಧ ಹೋರಾಟ ನಡೆಸುವಷ್ಟು ಬಲಿಷ್ಠರಾಗಿದ್ದರು.

ಈ ಮಧ್ಯೆ ಪೋಪ್ ಅಧಿಕಾರವು ಹನ್ನೊಂದು, ಹನ್ನೆರಡು ಮತ್ತು ಹದಿಮೂರನೆಯ ಶತಮಾನಗಳಲ್ಲಿ ಹೊಂದಿದ್ದ ನೈತಿಕ ಘನತೆಯನ್ನು ಕಳೆದುಕೊಂಡಿತ್ತು. ಪೋಪ್‌ರು ಆವಿಗ್ನಾನ್‌ನಲ್ಲಿ ಬದುಕಿದ್ದ ಅವಧಿಯಲ್ಲಿ ಮೊದಲು ಫ್ರಾನ್ಸ್‌ನಲ್ಲಿ ಶರಣಾದ ಕಾರಣದಿಂದಾಗಿ, ಆನಂತರ ಮಹಾ ವಿಭಜನೆಯ (ಗ್ರೇಟ್ ಸ್ಕಿಸಂ) ಕಾರಣದಿಂದಾಗಿ, ಅನಿರ್ಬಂಧಿತ ಪೋಪ್ ನಿರಂಕುಶಪ್ರಭುತ್ವವು ಸಾಧ್ಯವೂ ಅಲ್ಲ ಸಾಧುವೂ ಅಲ್ಲ ಎಂದು ಪಶ್ಚಿಮ ಜಗತ್ತಿಗೆ ಮನದಟ್ಟಾಗಿದ್ದ ಕಾರಣದಿಂದಾಗಿ. ಹದಿನೈದನೆಯ ಶತಮಾನದಲ್ಲಿ ಕ್ರೈಸ್ತಚಕ್ರಾಧಿಪತ್ಯದ ಪ್ರಭುಗಳಾದ ಅವರ ಸ್ಥಾನವು ವಾಸ್ತವದಲ್ಲಿ ಇಟಾಲಿಯನ್ ರಾಜರುಗಳಿಗೆ ಅಧೀನರಾದ ಇಟಾಲಿಯನ್ ಅಧಿಕಾರ ರಾಜಕೀಯದಲ್ಲಿ ತೊಡಗಿಕೊಂಡರು.

ಹೀಗೆ ಮತಧರ್ಮಸುಧಾರಣೆ ಮತ್ತು ನವೋದಯಗಳು ಮಧ್ಯಯುಗೀನ ಸಂಶ್ಲೇಷಣೆಯನ್ನು ಛಿದ್ರಗೊಳಿಸಿದವು, ಅದಿನ್ನೂ ಹೊರನೋಟಕ್ಕಾದರೂ ಸಂಪೂರ್ಣವೆಂಬಂತೆ ಕಾಣುವಷ್ಟೂ ಅಚ್ಚುಕಟ್ಟಾಗುವಲ್ಲಿ ಯಶಸ್ಸು ಕಂಡಿರಲಿಲ್ಲ. ಸಂಶ್ಲೇಷಣೆಯ ಬೆಳವಣಿಗೆ ಮತ್ತು ಪತನಗಳು ಸಂಪುಟ ೨ ರ ಚರ್ಚೆಯ ವಿಷಯ.

ಈ ಯುಗದಾದ್ಯಂತ ಚಿಂತನಶೀಲ ವ್ಯಕ್ತಿಗಳ ಮನೋಭಾವವು ಜಗತ್ತಿನ ಆಗುಹೋಗುಗಳ ಬಗೆಗಿನ ಗಾಢ ಅಸಂತೋಷ, ಮುಂದಿನ ಜಗತ್ತು ಉತ್ತಮವಾಗಿರುವುದೆಂಬ ಭರವಸೆಯಷ್ಟೇ ಅದನ್ನು ತಾಳಿಕೊಳ್ಳುವಂತೆ ಮಾಡಿತ್ತು. ಈ ಅಸಂತೋಷವು ಇಡೀ ಪಶ್ಚಿಮ ಯೂರೋಪ್‌ನಲ್ಲಿ ನಡೆಯುತ್ತಿದ್ದುದರ ಪ್ರತಿಬಿಂಬವಾಗಿತ್ತು. ಮೂರನೆಯ ಶತಮಾನವು ವಿಪತ್ತುಗಳ ಕಾಲ, ಆಗ ಬದುಕಿನ ಸಾಮಾನ್ಯಮಟ್ಟವು ತೀರ ಕೆಳಮಟ್ಟದಲ್ಲಿತ್ತು. ನಾಲ್ಕನೆಯ ಶತಮಾನದ ಮೌನದ

ನಂತರ ಐದನೆಯ ಶತಮಾನವು ಪಶ್ಚಿಮ ಚಕ್ರಾಧಿಪತ್ಯದ ವಿನಾಶವನ್ನು ತಂದು ಅದರ ಹಿಂದಿನ ಪ್ರದೇಶಗಳಲ್ಲೆಲ್ಲ ಬಾರ್ಬೇರಿಯನ್ನರನ್ನು ಸ್ಥಾಪಿಸಿತು. ಆನಂತರದ ರೋಮನ್ ನಾಗರಿಕತೆ ಅವಲಂಬಿಸಿದ್ದ ನಗರದ ಅಂಥ ಸುಸಂಸ್ಕೃತ ಹಣವಂತರು ಬಡವ ನಿರಾಶ್ರಿತರ ನೆಲೆಯನ್ನು ತಲುಪಿದರು, ಮಿಕ್ಕವರು ತಮ್ಮ ಹಳ್ಳಿಗಳ ಜಮೀನುಗಳಲ್ಲಿ ವಾಸಿಸತೊಡಗಿದರು. ಕ್ರಿಶ ೧೦೦೦ದವರೆಗೂ ಸುಧಾರಿಸಿಕೊಳ್ಳಲು ಉಸಿರಾಡುವ ಅವಕಾಶವನ್ನೂ ನೀಡದಂತೆ ಹೊಸ ಆಘಾತಗಳು ಮುಂದುವರಿದವು. ಬೈಝಾಂಟಿಯನ್ನರು ಮತ್ತು ಲಂಬಾರ್ಡ್‌ಗಳ ನಡುವಣ ಯುದ್ಧಗಳು ಇಟಲಿಯ ಅಳಿದುಳಿದ ನಾಗರಿಕತೆಯನ್ನು ಮಣ್ಣುಗೂಡಿಸಿದವು. ಪೂರ್ವ ಚಕ್ರಾಧಿಪತ್ಯದ ಬಹುಭಾಗವನ್ನು ಅರಬ್ಬರು ಗೆದ್ದುಕೊಂಡು ತಾವು ಆಫ್ರಿಕ ಮತ್ತು ಸ್ಪೈಯಿನ್‌ಗಳಲ್ಲಿ ನೆಲಸಿದರು; ಫ್ರಾನ್ಸ್ ಅನ್ನು ಬೆದರಿಸಿದರು, ಮತ್ತು ಒಂದು ಬಾರಿ ಇಟಲಿಯನ್ನು ಲೂಟಿಹೊಡೆದರು. ಡೇನರು ಮತ್ತು ನಾರ್ಮನ್ನರು ಫ್ರಾನ್ಸ್ ಮತ್ತು ಇಂಗ್ಲಂಡ್‌ಗಳಲ್ಲಿ ಹಾಗೂ ಸಿಸಿಲಿ ಮತ್ತು ದಕ್ಷಿಣ ಇಟಲಿಗಳಲ್ಲಿ ದಾಂಧಲೆ ಎಬ್ಬಿಸಿದರು. ಈ ಶತಮಾನಗಳು ಪೂರ್ತಿ ಜೀವನವು ಪರಾಶ್ರಯ ಮತ್ತು ಕಷ್ಟಗಳಿಂದ ಕೂಡಿತ್ತು. ವಾಸ್ತವದಲ್ಲಿ ಕೆಟ್ಟುದಾಗಿದ್ದುದರ ಜೊತೆಗೆ ನಿರಾಶಾದಾಯಕ ಮೂಢಶ್ರದ್ಧೆಗಳು ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದವು. ಕ್ರಿಶ್ಚಿಯನ್ನರಲ್ಲಿಯೂ ಅಧಿಕಸಂಖ್ಯಾತರು ಕೂಡ ನರಕಕ್ಕೆ ಹೋಗುವರೆಂದು ಚಿಂತಿಸಿದರು. ಪ್ರತಿ ಕ್ಷಣದಲ್ಲೂ ಜನರು ತಮ್ಮ ಸುತ್ತ ಕ್ಷುದ್ರ ಸತ್ವಗಳು ಆವರಿಸಿವೆಯೆಂದೂ ತಾವು ಮಾಟಗಾರರ ಮಂತ್ರಗಾತಿಯರ ಕುತಂತ್ರಗಳಿಗೆ ಬಲಿಯಾಗುವೆವೆಂದೂ ಭಯಗೊಂಡರು. ಬದುಕಿನಲ್ಲಿ, ಅದೃಷ್ಟದ ಗಳಿಗೆಯಲ್ಲಿ ತಮ್ಮಲ್ಲಿನ್ನೂ ಚಿಂತೆಗಳಿಲ್ಲದ ಮಕ್ಕಳ ಮುಗ್ಧತೆಯನ್ನು ಉಳಿಸಿಕೊಂಡಿದ್ದವರ ಹೊರತು, ಯಾವುದೇ ಸಂತೋಷಕ್ಕೆ ಆಸ್ಪದವಿರಲಿಲ್ಲ. ಈ ವ್ಯಾಪಕ ನರಳಿಕೆಯು ಮತಧಾರ್ಮಿಕ ಶ್ರದ್ಧೆಗಳನ್ನು ಆಳವಾಗಿಸಿತು. ಈ ಕೆಳಲೋಕದಲ್ಲಿನ ಒಳ್ಳೆಯವರ ಬದುಕು ಸ್ವರ್ಗಲೋಕಕ್ಕೆ ಹೋಗುವ ಯಾತ್ರೆ ಎಂದುಕೊಂಡರು; ಚಂದ್ರನ ಕೆಳಗಿನ ಈ ಲೋಕದಲ್ಲಿ ಯಾವುದೇ ಬೆಲೆಬಾಳುವ ಸಂಗತಿ ಸಾಧ್ಯವಿಲ್ಲ, ತಮ್ಮ ಸದ್ಗುಣಭರಿತ ನಡವಳಿಕೆಯು ಚಿರಂತನ ಸಂತೋಷಕ್ಕೆ ಕೊಂಡೊಯ್ಯುವ ದಾರಿಯೆಂದು ಭಾವಿಸಿದರು. ತಮ್ಮ ಸುದಿನಗಳಲ್ಲಿ ಗ್ರೀಕರು ದಿನನಿತ್ಯದ ಬದುಕಿನಲ್ಲಿ ಸಂತೋಷ–ಸೌಂದರ್ಯಗಳನ್ನು ಕಂಡಿದ್ದರು. ಎಂಪೆಡೋಕ್ಲೀಸ್ ತನ್ನ ಸಹಜೀವಿಗಳನ್ನು ಕುರಿತು ಹೀಗೆನ್ನುತ್ತಾನೆ: 'ಗೆಳೆಯರೇ, ಆಕ್ರಗಾಸ್‌ನ ಮೇಲಿನಿಂದ ಕೆಳಗೆ ನೋಡುತ್ತಿರುವ ಮಹಾನಗರದಲ್ಲಿ ವಾಸಿಸುವವರು, ಪೀಠಗಳಲ್ಲಿ ಕುಳಿತಿರುವವರು, ಒಳ್ಳೆಯ ಕೆಲಸಗಳಲ್ಲಿ ತೊಡಗಿರುವವರು, ಅಪರಿಚಿತರಿಗೆ ಗೌರವಾಶ್ರಯ ನೀಡುವವರು, ಕ್ಷುದ್ರತೆಯಲ್ಲಿ ಪರಿಣತರಲ್ಲದವರು, ಎಲ್ಲರಿಗೂ ಗೆಲುವಾಗಲಿ.' ಆನಂತರದ ಸಮಯಗಳಲ್ಲಿ, ನವೋದಯದವರೆಗೂ, ಜನರಿಗೆ ಈ ಕಣ್ಣೆದುರಗಿನ ಲೋಕದಲ್ಲಿ ಇಂತಹ ಸರಳ ಸುಖ ದೊರೆಯಲಿಲ್ಲ, ಅವರೆಲ್ಲ

ಸಂತೋಷಕ್ಕಾಗಿ ಕಾಣದುದರತ್ತ ಕಣ್ಣು ನೆಟ್ಟರು. ಆಕ್ರಗಾಸ್‌ನ ಬಗೆಗಿನ ಅವರ ಪ್ರೀತಿಯ ಸ್ಥಾನವನ್ನು ಸುವರ್ಣ ಜೆರೂಸಲೆಂ ಆಕ್ರಮಿಸಿತು. ಮತ್ತೆ ಐಹಿಕ ಸಂತೋಷಗಳು ಮರಳಿದಾಗ, ಪರಲೋಕದ ಬಗೆಗಿನ ಹಂಬಲದ ತೀವ್ರತೆ ಕ್ರಮೇಣ ಕಡಿಮೆಯಾಗತೊಡಗಿತು. ಜನರೇನೋ ಅದೇ ಮಾತುಗಳನ್ನಾಡುತ್ತಿದ್ದರು, ಆದರೆ ಕಡಿಮೆ ಪ್ರಾಮಾಣಿಕತೆಯಿಂದ.

ಕ್ಯಾಥೋಲಿಕ್ ತತ್ವಜ್ಞಾನದ ಮೂಲ ಮತ್ತು ಮಹತ್ವಗಳನ್ನು ಶ್ರುತಪಡಿಸಲೋಸುಗ ನಾನು ಪ್ರಾಚೀನ ಅಥವಾ ಆಧುನಿಕ ತತ್ವಜ್ಞಾನಕ್ಕೆ ನೀಡಬೇಕಾದುದಕ್ಕಿಂತಲೂ ಹೆಚ್ಚು ಸಮಯವನ್ನು ಸಾಮಾನ್ಯ ಚರಿತ್ರೆಗೆ ವಿನಿಯೋಗಿಸುತ್ತಿದ್ದೇನೆ. ಕ್ಯಾಥೋಲಿಕ್ ತತ್ವಜ್ಞಾನವು ಮುಖ್ಯವಾಗಿ ಒಂದು ಸಾಂಸ್ಥಿಕ ತತ್ವಜ್ಞಾನ, ಅಂದರೆ ಕ್ಯಾಥೋಲಿಕ್ ಚರ್ಚ್‌ಗೆ ಸಂಬಂಧಿಸಿದ್ದು. ಆಧುನಿಕ ತತ್ವಜ್ಞಾನವು, ಸಂಪ್ರದಾಯದೂರವಾಗಿರುವಾಗಲೂ, ವಿಶೇಷವಾಗಿ ನೈತಿಕ ನಿಯಮಗಳು ಹಾಗೂ ಚರ್ಚ್ ಮತ್ತು ಸರ್ಕಾರಗಳ ನಡುವಣ ಸಂಬಂಧಕ್ಕೆ ಸಂಬಂಧಿಸಿದ ಕ್ಯಾಥೋಲಿಕ್ ಸಿದ್ಧಾಂತಗಳ ದೃಷ್ಟಿಕೋನದಿಂದ ಸಾಧಿತವಾದ ನೈತಿಕ ಹಾಗೂ ರಾಜಕೀಯ ಸಮಸ್ಯೆಗಳ ಕಡೆಗೆ ಹೆಚ್ಚು ಗಮನ ಹರಿಸುವಂತಹುದು. ಗ್ರೀಕೋ-ರೋಮನ್ ಕ್ರೈಸ್ತೇತರ ದೃಷ್ಟಿಯಲ್ಲಿ ಮೊದಲಿನಿಂದಲೂ ಕ್ರಿಶ್ಚಿಯನ್ ದೃಷ್ಟಿಕೋನದಲ್ಲಿನ ದ್ವೈವಿಧ್ಯವನ್ನು ಕಾಣುವುದಿಲ್ಲ, ಅದು ಋಣಿಯಾಗಿರುವುದು ದೇವರು ಮತ್ತು ಸೀಸರ್‌ಗಳಿಗೆ, ಅಥವಾ ರಾಜಕೀಯ ಪರಿಭಾಷೆಯಲ್ಲಿ ಹೇಳಬೇಕಾದರೆ ಚರ್ಚ್ ಮತ್ತು ಸರ್ಕಾರಗಳ ನಡುವಣ ಸಂಬಂಧಕ್ಕೆ.

ಈ ದ್ವೈವಿಧ್ಯ ನಿಷ್ಠೆಯು ಎತ್ತಿದ ಸಮಸ್ಯೆಗಳು ಬಹುಭಾಗದಲ್ಲಿ ತತ್ವಜ್ಞಾನಿಗಳು ಸೂಕ್ತ ಸಿದ್ಧಾಂತಗಳನ್ನು ಪ್ರತಿಪಾದಿಸುವುದಕ್ಕೂ ಮುಂಚಿನಿಂದಲೇ ವ್ಯಾವಹಾರಿಕವಾಗಿ ಪರಿಹಾರಗಳನ್ನು ಕಂಡಿದ್ದವು. ಈ ಪ್ರಕ್ರಿಯೆಯಲ್ಲಿ ಎರಡು ವಿಭಿನ್ನ ಹಂತಗಳಿವೆ: ಪಶ್ಚಿಮ ಚಕ್ರಾಧಿಪತ್ಯದ ಪತನಕ್ಕೂ ಮುಂಚಿನದು ಒಂದಾದರೆ, ಮತ್ತೊಂದು ಆನಂತರದ್ದು. ಸಂತ ಆಂಬ್ರೋಸ್‌ನಲ್ಲಿ ತುದಿ ಕಂಡ ಬಿಷಪ್ಪರ ನೀಳಸರಣಿಯು ಸಂತ ಆಗಸ್ಟೈನ್‌ನ ರಾಜಕೀಯ ತಾತ್ವಿಕತೆಗೆ ಬುನಾದಿಯನ್ನೊದಗಿಸಿತು. ಆನಂತರ ಅನ್ಯದೇಶೀಯ ಆಕ್ರಮಣವು ಬಂತು, ಆನಂತರ ದೀರ್ಘಕಾಲದ ಗೊಂದಲ ಮತ್ತು ಹೆಚ್ಚುತ್ತಿದ್ದ ಮೌಢ್ಯಗಳು. ಬೊಯೆಥಿಯಸ್ ಮತ್ತು ಸಂತ ಆನ್‌ಸೆಲ್ಮ್ ನಡುವಣ ಐದು ಶತಮಾನಗಳಿಗೂ ಹೆಚ್ಚಿನ ಅವಧಿಯು ಒಬ್ಬನೇ ಒಬ್ಬ ಗಣ್ಯ ತತ್ವಜ್ಞಾನಿಯಿದ್ದ, ಅವನೇ ಜಾನ್ ಸ್ಕಾಟ್; ಐರಿಶ್ ವ್ಯಕ್ತಿಯಾಗಿದ್ದ ಅವನು ಪಶ್ಚಿಮ ಜಗತ್ತನ್ನು ರೂಪಿಸುತ್ತಿದ್ದ ವಿವಿಧ ಪ್ರಕ್ರಿಯೆಗಳಿಂದ ಬಹುವಾಗಿ ಪಾರಾಗಿದ್ದ. ಆದರೆ ಈ ಅವಧಿಯು, ತತ್ವಜ್ಞಾನಿಗಳಿಲ್ಲದಿದ್ದರೂ, ಬೌದ್ಧಿಕ ಬೆಳವಣಿಗೆಯಿಲ್ಲದಿದ್ದ ಅವಧಿಯೇನಾಗಿರಲಿಲ್ಲ. ಅವ್ಯವಸ್ಥೆಯು ಜರೂರು ವ್ಯಾವಹಾರಿಕ ಪರಿಹಾರಗಳನ್ನು ಕಾಣಲು ಪ್ರೇರಿಸಿತು. ಇದನ್ನು ಸಂಸ್ಥೆಗಳಲ್ಲಿ ಹಾಗೂ ಪ್ರೌಢ ತತ್ವಜ್ಞಾನದಲ್ಲಿ

ಪ್ರಮುಖವಾಗಿದ್ದ ಮತ್ತು ಈಗಲೂ ಬಹುವಾಗಿ ಪ್ರಮುಖವಾದ ಚಿಂತನೆಗಳಿಂದ ಎದುರಿಸಲಾಯಿತು. ಈ ಸಂಸ್ಥೆಗಳು ಮತ್ತು ಚಿಂತನಾ ಬಗೆಗಳನ್ನು ಸಿದ್ಧಾಂತಿಗಳು ಜಗತ್ತಿಗೆ ಪರಿಚಯಿಸಲಿಲ್ಲ, ಆದರೆ ಹಾಗೆ ಮಾಡಿದವರು ಸಂಘರ್ಷದ ಒತ್ತಡದಲ್ಲಿ ಸಿಲುಕಿದ್ದ ವ್ಯಾವಹಾರಿಕ ಜನರು. ಪ್ರೌಢ ತತ್ತ್ವಜ್ಞಾನದ ನಿಕಟಪೂರ್ವದ ಹನ್ನೊಂದನೆಯ ಶತಮಾನದ ಚರ್ಚ್‌ನ ನೈತಿಕ ಸುಧಾರಣೆಗಳು ಊಳಿಗಮಾನ್ಯ ವ್ಯವಸ್ಥೆಯಲ್ಲಿ ಚರ್ಚ್ ಹೆಚ್ಚು ಹೆಚ್ಚು ಕರಗುತ್ತಿದ್ದುದರ ವಿರುದ್ಧದ ಪ್ರತಿಕ್ರಿಯೆ. ಪ್ರೌಢತೆಯನ್ನು ಅರ್ಥಮಾಡಿಕೊಳ್ಳಲು ನಾವು ಹಿಲ್ಡರ್‌ಬ್ರಾಂಡ್‌ನನ್ನು ಅರ್ಥಮಾಡಿಕೊಳ್ಳಬೇಕು, ಮತ್ತು ಹಿಲ್ಡರ್‌ಬ್ರಾಂಡ್‌ನನ್ನು ಅರ್ಥಮಾಡಿಕೊಳ್ಳಲು ಅವನು ವಿರೋಧಿಸುತ್ತಿದ್ದ ಕೆಡುಕುಗಳ ಬಗ್ಗೆ ಒಂದಷ್ಟು ತಿಳಿಯಬೇಕು. ಪವಿತ್ರ ರೋಮನ್ ಚಕ್ರಾಧಿಪತ್ಯದ ಅಸ್ತಿವಾರ ಮತ್ತು ಯೂರೋಪ್‌ನ ಚಿಂತನೆಗಳ ಮೇಲೆ ಅದು ಮಾಡಿದ ಪ್ರಭಾವ ಇವುಗಳನ್ನು ಕಡೆಗಣಿಸುವಂತಿಲ್ಲ.

ಈ ಕಾರಣಗಳಿಂದಾಗಿ, ಮುಂದಿನ ಪುಟಗಳಲ್ಲಿ ತಾತ್ವಿಕ ಚಿಂತನೆಯ ಬೆಳವಣಿಗೆಯಲ್ಲಿ ಸಂಗತವೆನಿಸುವ ಮತಪ್ರಸಾರಸಂಬಂಧಿಯಾದ ಹಾಗೂ ರಾಜಕೀಯ ಇತಿಹಾಸವೇ ಹೆಚ್ಚಿರುವುದು ತಕ್ಷಣವೇ ಕಣ್ಣಿಗೆ ಬೀಳಲಾರವೇನೋ. ಸಂಬಂಧಿಸಿದ ಅವಧಿಯು ಮಸುಕಾಗಿರುವುದರಿಂದಲೂ ಪ್ರಾಚೀನ ಹಾಗೂ ಆಧುನಿಕ ಇತಿಹಾಸವನ್ನು ಕರಗತ ಮಾಡಿಕೊಂಡವರಿಗೆ ಅಪರಿಚಿತವಾದುದರಿಂದಲೂ ಈ ಕಾಲದ ಇತಿಹಾಸದ ಬಗ್ಗೆ ಒಂದಷ್ಟು ವಿವರಿಸುವುದು ಆವಶ್ಯಕವೆನಿಸುತ್ತದೆ. ಸಂತ ಆಂಬ್ರೋಸ್, ಶಾರ್ಲಮೇನ್, ಮತ್ತು ಹಿಲ್ಡರ್‌ಬ್ರಾಂಡ್‌ರ ಚಿಂತನೆಗಳು ಮಾಡಿರುವಷ್ಟು ಪ್ರಭಾವವನ್ನು ತಾಂತ್ರಿಕ ತತ್ತ್ವಜ್ಞಾನಿಗಳು ಮಾಡಿರುವುದು ಅಪರೂಪ. ಈ ವ್ಯಕ್ತಿಗಳಿಗೆ ಹಾಗೂ ಆ ಕಾಲಕ್ಕೆ ಸಂಬಂಧಿಸಿದ ಅಗತ್ಯ ವಿಚಾರಗಳನ್ನು ವಿವರಿಸುವುದು ನಮ್ಮ ವಿಷಯದ ಸಮಂಜಸ ನಿರೂಪಣೆಗೆ ಅತ್ಯಗತ್ಯವಾದುದು.

ಭಾಗ ೧

ಪಾದ್ರಿಗಳು

೧
ಯೆಹೂದಿಗಳ ಮತಧಾರ್ಮಿಕ ಬೆಳವಣಿಗೆ

ಬಾರ್ಬೇರಿಯನ್ನರಿಗೆ ರೋಮನ್ ಚಕ್ರಾಧಿಪತ್ಯವು ವಹಿಸಿಕೊಟ್ಟ ಕ್ರಿಶ್ಚಿಯನ್ ಮತಧರ್ಮವು ಮೂರು ಅಂಶಗಳಿಂದ ಕೂಡಿತ್ತು: ಮೊದಲನೆಯದು, ಪ್ಲೇಟೋ ಮತ್ತು ನವಪ್ಲೇಟೋವಾದಿಗಳಿಂದ ಹಾಗೂ ಭಾಗಶಃ ಸಂಯಮವಾದಿಗಳಿಂದ ಸಾಧಿತವಾದ ಕೆಲವು ತಾತ್ವಿಕ ಶ್ರದ್ಧೆಗಳು; ಎರಡನೆಯದು, ಯೆಹೂದಿಗಳಿಂದ ಪಡೆದಿದ್ದ ನೀತಿ ಮತ್ತು ಇತಿಹಾಸದ ಪರಿಕಲ್ಪನೆ; ಮತ್ತು ಮೂರನೆಯದು, ಒಟ್ಟಾರೆ ಕ್ರೈಸ್ತಮತಧರ್ಮಕ್ಕೆ ಹೊಸತಾದ, ಆದರೆ ಕೆಲವು ಭಾಗಗಳಲ್ಲಿ ಹಾಗೂ ಸಮೀಪ ಪ್ರಾಚ್ಯದ ಹತ್ತಿರದ ಆರಾಧನಾ ಪಂಥಗಳಲ್ಲಿಯೂ ಆರ್ಫಿಸಂನಲ್ಲಿಯೂ ಗುರುತಿಸಬಹುದಾದ, ವಿಶೇಷವಾಗಿ ಮೋಕ್ಷಕ್ಕೆ ಸಂಬಂಧಿಸಿದ, ಕೆಲವು ಸಿದ್ಧಾಂತಗಳು.

ಕ್ರೈಸ್ತಮತಧರ್ಮದಲ್ಲಿನ ಬಹು ಪ್ರಮುಖವಾದ ಯೆಹೂದಿ ಅಂಶಗಳು ಈ ಕೆಳಕಂಡವುಗಳೆಂದು ನನಗೆ ತೋರುತ್ತದೆ:

೧. ಸೃಷ್ಟಿಯಿಂದ ಆರಂಭಗೊಂಡು, ಭವಿಷ್ಯದೊಂದಿಗೆ ಸೇರುವ ಮತ್ತು ಒಳ್ಳೆಯ ವ್ಯಕ್ತಿಯ ನಡತೆಯನ್ನು ಸಮರ್ಥಿಸುವ ಪರಿಶುದ್ಧ ಇತಿಹಾಸ.

೨. ದೇವರು ವಿಶೇಷವಾಗಿ ಪ್ರೀತಿಸುವ ಮನುಷ್ಯಸಂಕುಲದ ಒಂದು ಸಣ್ಣ ವಲಯ. ಯೆಹೂದಿಗಳಿಗೆ ಇದು ಆಯ್ದ ವ್ಯಕ್ತಿಗಳು (ಚೋಸನ್ ಪೀಪಲ್), ಆಯ್ಕೆಯಾದವರು.

೩. 'ಧರ್ಮಿಷ್ಠತೆ'ಯ ಹೊಸ ಪರಿಕಲ್ಪನೆ. ದಾನ ನೀಡುವ ಸದ್ಗುಣವನ್ನು, ಉದಾಹರಣೆಗೆ, ಕ್ರೈಸ್ತಮತಧರ್ಮವು ಆನಂತರ ಯೆಹೂದಿ ಮತಧರ್ಮದಿಂದ ಪಡೆಯಿತು. ದೀಕ್ಷಾಸ್ನಾನಕ್ಕೆ (ಬ್ಯಾಪ್ಟಿಸಂ) ನೀಡಿರುವ ಪ್ರಾಮುಖ್ಯವು ಆರ್ಫಿಸಂನಿಂದ ಇಲ್ಲವೇ ಕ್ರೈಸ್ತೇತರ ಅನುಭಾವಿಕ ಮತಧರ್ಮಗಳಿಂದ ಪಡೆಯಲಾದುದು, ಆದರೆ ಕ್ರೈಸ್ತಮತ ಧರ್ಮೀಯ ಸದ್ಗುಣ ಪರಿಕಲ್ಪನೆಯ ಅಂಶವಾದ ವ್ಯಾವಹಾರಿಕ ದಾನಕ್ರಿಯೆಯು ಯೆಹೂದಿಗಳಿಂದ ಬಂದಂತೆ ತೋರುತ್ತದೆ.

೪. ನಿಯಮಸಂಹಿತೆ (ಲಾ). ಕ್ರೈಸ್ತರು ಭಾಗಶಃ ಹೀಬ್ರೂ ನಿಮಯಗಳನ್ನು ಉಳಿಸಿಕೊಂಡರು, ಉದಾಹರಣೆಗೆ ದಶಸೂತ್ರಗಳು (ಡೆಕಾಲೋಗ್), ಆದರೆ ಅದರ ಕರ್ಮಾಚರಣೆಯ ಭಾಗಗಳನ್ನು ಬಿಟ್ಟು. ಆದರೆ ಅನುಸರಣೆಯಲ್ಲಿ ಅವರು ಸೂತ್ರಸಂಗ್ರಹಕ್ಕೆ (ಕ್ರೀಡ್) – ಯೆಹೂದಿಗಳು ನಿಯಮಸಂಹಿತೆಗೆ ನೀಡಿದ – ಪ್ರಾಮುಖ್ಯವನ್ನೇ ನೀಡಿದರು. ಸಮಂಜಸ ಶ್ರದ್ಧೆಯು ಸದ್ಗುಣಭರಿತ ಕ್ರಿಯೆಯಷ್ಟೇ ಮುಖ್ಯ ಎಂಬ ಸಿದ್ಧಾಂತವನ್ನೊಳಗೊಂಡುದು; ಇದು ಮೂಲತಃ ಹೆಲೆನಿಕ್ ಆದುದು. ಮೂಲತಃ ಯೆಹೂದಿಯಾಗಿರುವುದು ಆಯ್ಕೆಯಾದವರ ವೈಶಿಷ್ಟ್ಯ.

೫. ಉದ್ಧಾರಕ (ದ ಮೆಸಯ). ಉದ್ಧಾರಕನು ತಮಗೆ ತಾತ್ಕಾಲಿಕ ಸಮೃದ್ಧಿಯನ್ನುಂಟುಮಾಡುವನೆಂದೂ ಈ ಭೂಮಿಯ ಮೇಲಣ ತಮ್ಮ ಶತ್ರುಗಳ ವಿರುದ್ಧ ಗೆಲವನ್ನೂ ತರುವನೆಂದೂ ನಂಬಿದ್ದರು; ಅದಕ್ಕೂ ಮಿಗಿಲಾಗಿ, ಅವನು ಭವಿಷ್ಯದಲ್ಲೂ ಉಳಿದಿರುತ್ತಿದ್ದ. ಕ್ರೈಸ್ತಮತಧರ್ಮೀಯರಿಗೆ ಉದ್ಧಾರಕನೆಂದರೆ ಐತಿಹಾಸಿಕ ವ್ಯಕ್ತಿಯಾದ ಜೀಸಸ್, ಅವನನ್ನು ಗ್ರೀಕ್ ತತ್ವಜ್ಞಾನದ ಲಾಗಸ್ ಜೊತೆ ಸಮೀಕರಿಸಲಾಗಿತ್ತು, ಆದರೆ ಅವನು ಭೂಮಿಯ ಮೇಲಿರದೆ ಸ್ವರ್ಗದಲ್ಲಿದ್ದು ತನ್ನ ಅನುಯಾಯಿಗಳು ತಮ್ಮ ಶತ್ರುಗಳ ಮೇಲೆ ಗೆಲವು ಸಾಧಿಸುವುದಕ್ಕೆ ಶಕ್ತಿ ನೀಡುತ್ತಿದ್ದ.

೬. ಸ್ವರ್ಗಚಕ್ರಾಧಿಪತ್ಯ (ದ ಕಿಂಗ್‌ಡಂ ಆಫ್ ಹೆವನ್). ಪರಲೋಕಭರವಸೆಯ ಪರಿಕಲ್ಪನೆಯು ಕ್ರೈಸ್ತಮತಧರ್ಮೀಯರು ಮತ್ತು ಯೆಹೂದಿಗಳು ಒಂದರ್ಥದಲ್ಲಿ ಆನಂತರ ಪ್ಲೇಟೋವಾದದಿಂದ ಸಮಾನವಾಗಿ ಹಂಚಿಕೊಂಡುದು, ಆದರೆ ಅದು ಗ್ರೀಕ್ ತತ್ವಜ್ಞಾನಿಗಳಿಂದ ಹೆಚ್ಚು ಮೂರ್ತತೆಯನ್ನು ಗಳಿಸಿತು. ಗ್ರೀಕ್ ಸಿದ್ಧಾಂತವು – ಇದನ್ನು ಹೆಚ್ಚಿನ ಕ್ರೈಸ್ತ ತಾತ್ವಿಕತೆಯಲ್ಲಿ ಕಾಣಬಹುದು, ಆದರೆ ಅನುಸರಣೆಯ ಕ್ರೈಸ್ತಮತಧರ್ಮದಲ್ಲಲ್ಲ – ಕಾಲ–ಅವಕಾಶಬದ್ಧವಾದ ಇಂದ್ರಿಯಜಗತ್ತು ಭ್ರಮೆ, ಆದರೆ ಬೌದ್ಧಿಕ ಹಾಗೂ ನೈತಿಕ ಶಿಸ್ತಿನಿಂದ ವ್ಯಕ್ತಿಯು ಚಿರಂತನ ಜಗತ್ತಿನಲ್ಲಿ ಬಾಳುವುದನ್ನು ಸಾಧಿಸಬಹುದು, ಅದೇ ಸತ್ಯವಾದುದು. ಯೆಹೂದಿ ಮತ್ತು ಕ್ರೈಸ್ತ ಸಿದ್ಧಾಂತವು, ಮತ್ತೊಂದೆಡೆ, ಪರಲೋಕವು ತತ್ವಮೀಮಾಂಸಕವಾಗಿ ಈ ಜಗತ್ತಿಗಿಂತ ಭಿನ್ನವಲ್ಲವಾದರೂ ಭವಿಷ್ಯದಲ್ಲಿ ಸದ್ಗುಣಭರಿತ ವ್ಯಕ್ತಿಯು ಆನಂದದಲ್ಲಿಯೂ, ಕೆಡುಕು ವ್ಯಕ್ತಿಯು ನಿತ್ಯಯಾತನೆಯನ್ನು ಅನುಭವಿಸುವಂತಹುದೂ ಆದುದು ಎಂಬ ಪರಿಕಲ್ಪನೆಯದು. ಇದು ಸೇಡಿನ ಮನೋಭಾವದಿಂದ ಕೂಡಿದುದು, ಸಾಮಾನ್ಯ ಜನರಿಗೂ ತಿಳಿಯುವಂತಹುದು, ಆದರೆ ಗ್ರೀಕ್ ಸಿದ್ಧಾಂತವು ಅಂತಹುದಲ್ಲ.

ಈ ಶ್ರದ್ಧೆಗಳ ಮೂಲವನ್ನು ತಿಳಿಯಲು ನಾವು ಯೆಹೂದಿ ಇತಿಹಾಸದ ಕೆಲವಂಶಗಳನ್ನು ಗಮನಿಸಬೇಕು, ಆ ಎಡೆಗೆ ನಮ್ಮ ಗಮನವನ್ನೀಗ ಹರಿಸೋಣ.

ಇಸ್ರೇಲಿಗರ ಪೂರ್ವ ಚರಿತ್ರೆಯನ್ನು ಹಳೆಯ ಒಡಂಬಡಿಕೆಯ ಹೊರತಾದ ಬೇರೆ ಯಾವುದೇ ಆಕರದಿಂದ ಸಮರ್ಥಿಸಲು ಆಗುವುದಿಲ್ಲ; ಹಾಗೂ ಯಾವ

ಹಂತದಲ್ಲಿ ಅದರ ಪೌರಾಣಿಕತೆ ಕೊನೆಗೊಳ್ಳುತ್ತದೆ ಎಂದು ಹೇಳಲು ಬರುವುದಿಲ್ಲ. ಡೇವಿಡ್ ಮತ್ತು ಸಾಲೋಮನ್ ಅವರನ್ನು ವಾಸ್ತವ ಅಸ್ತಿತ್ವವಿದ್ದ ದೊರೆಗಳೆಂದು ಒಪ್ಪಬಹುದು, ಆದರೆ ಅತ್ಯಂತ ಪೂರ್ವ ಹಂತಗಳಲ್ಲಿ ನಾವು ತಲುಪುವ ಖಚಿತ ಐತಿಹಾಸಿಕ ಸಂಗತಿಗಳು ಯಾವುವು ಎಂಬುವ ಹೊತ್ತಿಗೆ ನಾವು ಇಸ್ರೇಲ್ ಮತ್ತು ಜೂದಾಹ್ ಎಂಬ ಎರಡು ಚಕ್ರಾಧಿಪತ್ಯಗಳನ್ನು ಕಾಣುತ್ತೇವೆ. ಹಳೆಯ ಒಡಂಬಡಿಕೆಯಲ್ಲಿ ಉಕ್ತನಾದ ಮೊದಲ ವ್ಯಕ್ತಿಯ ಬಗ್ಗೆ ಇಸ್ರೇಲ್‌ನ ದೊರೆ ಆಹಹ್‌ನಲ್ಲಿ, ಅಸಿರಿಯನ್ ಭಾಷೆಯ ಕ್ರಿಪೂ ೮೫೩ ರ ಪತ್ರವೊಂದರಲ್ಲಿ, ಸ್ವತಂತ್ರವಾದ ದಾಖಲೆ ದೊರೆಯುತ್ತದೆ. ಅಸಿರಿಯನ್ನರು ಅಂತಿಮವಾಗಿ ಉತ್ತರ ಚಕ್ರಾಧಿಪತ್ಯವನ್ನು ಕ್ರಿಪೂ ೭೨೨ ರಲ್ಲಿ ಗೆದ್ದು ಜನಸಂಖ್ಯೆಯ ಬಹುಭಾಗವನ್ನು ಕಬಳಿಸಿದರು. ಈ ಕಾಲದ ಬಳಿಕ, ಜೂದಾಹ್ ಚಕ್ರಾಧಿಪತ್ಯವು ತಾನೇ ಇಸ್ರೇಲಿ ಮತಧರ್ಮ ಮತ್ತು ಪರಂಪರೆಗಳನ್ನು ಉಳಿಸಿತು. ಜೂದಾಹ್ ಚಕ್ರಾಧಿಪತ್ಯವು ಅಸಿರಿಯನ್ನರಿಂದ ಪಾರಾಯಿತು; ಬ್ಯಾಬಿಲೋನಿಯನ್ನರೂ ಮೇಡೀಸ್‌ರೂ ಕ್ರಿಪೂ ೬೦೬ ರಲ್ಲಿ ನಿನೆವೆಹ್ ಅನ್ನು ಗೆದ್ದಾಗ ಅಸಿರಿಯನ್ನರ ಆಳ್ವಿಕೆ ಕೊನೆಗೊಂಡಿತು. ಆದರೆ ಕ್ರಿಪೂ ೫೮೬ ರಲ್ಲಿ ನೆಬುಚಂದ್ರೆಜ್ಜರ್ ಜೆರೂಸಲೆಂ ಅನ್ನು ವಶಪಡಿಸಿಕೊಂಡು, ದೇವಾಲಯವನ್ನು ನಾಶಪಡಿಸಿ, ಜನಸಂಖ್ಯೆಯ ಬಹುಭಾಗವನ್ನು ಬ್ಯಾಬಿಲೋನ್‌ಗೆ ಕಳಿಸಿದ. ಬ್ಯಾಬಿಲೋನಿಯನ್ ಚಕ್ರಾಧಿಪತ್ಯವು ಕ್ರಿಪೂ ೫೩೮ ರಲ್ಲಿ ಪತನಗೊಂಡಿತು, ಬ್ಯಾಬಿಲೋನ್ ಮೀಡೀಸ್‌ನ ದೊರೆ ಸೈರಸ್‌ನ ದಾಳಿಗೊಳಗಾಯಿತು. ಕ್ರಿಪೂ ೫೩೭ ರಲ್ಲಿ ಸೈರಸ್ ಯೆಹೂದಿಗಳು ಪಾಲಿಸ್ಟೈನ್‌ಗೆ ಮರಳಬಹುದೆಂದು ಶಾಸನವೊಂದನ್ನು ಹೊರಡಿಸಿದ. ಅವರಲ್ಲಿ ಅನೇಕರು ನೆಹೆಮಿಯ ಮತು ಎಜ್ರರ ನೇತೃತ್ವದಲ್ಲಿ ಹಾಗೆಯೇ ಮಾಡಿದರು, ದೇವಾಲಯವನ್ನು ಪುನರ್ನಿರ್ಮಾಣ ಮಾಡಲಾಯಿತು, ಯೆಹೂದಿ ಸಂಪ್ರದಾಯನಿಷ್ಠರು ಒಗ್ಗೂಡತೊಡಗಿದರು.

ದಾಳಿಗೊಳಗಾಗಿದ್ದ ಈ ಅವಧಿಯಲ್ಲಿ, ಹಾಗೂ ಅದಕ್ಕೆ ಸ್ವಲ್ಪ ಮುಂಚೆ ಮತ್ತು ಆನಂತರದಲ್ಲಿ, ಜೆಹೂದಿ ಮತಧರ್ಮವು ಬಹು ಮುಖ್ಯ ಬೆಳವಣಿಗೆಯನ್ನು ಕಂಡಿತು. ಮತಧರ್ಮದ ದೃಷ್ಟಿಯಿಂದ ಇಸ್ರೇಲಿಗರಿಗೂ ಸುತ್ತಮುತ್ತಲ ಬುಡಕಟ್ಟು ಜನರಿಗೂ ಮೂಲತಃ ಹೆಚ್ಚೇನೂ ವ್ಯತ್ಯಾಸವಿದ್ದಂತೆ ಕಾಣುವುದಿಲ್ಲ. ಮೊದಲಿಗೆ ಯಹ್ವೆಹ್ ಇಸ್ರೇಲ್ ಜನರಿಗೆ ಸಹಾಯಕನಾದ ಒಬ್ಬ ಬುಡಕಟ್ಟು ದೇವತೆ ಮಾತ್ರವಾಗಿದ್ದ, ಆದರೆ ಇತರ ದೇವತೆಗಳೂ ಇದ್ದುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಅವರೆಲ್ಲರನ್ನೂ ಜನ ಪೂಜಿಸುತ್ತಿದ್ದ ಪರಿಪಾಟವಿತ್ತು. 'ನನ್ನ ಹೊರತು ಬೇರಾವ ದೇವತೆಯೂ ನಿನಗೆ ಇಲ್ಲ' ಎಂದು ಮೊದಲನೆಯ ಸೂತ್ರವು (ಕಮಾಂಡ್‌ಮೆಂಟ್) ಹೇಳಿದರೆ, ವಶವಾಗುವ ಮುಂಚೆ ಪ್ರಚಲಿತವಾಗಿದ್ದುದನ್ನು ಬದಲಾಯಿಸಿ ಹೇಳುವ ಹೊಸ ಸೂತ್ರ ಅದು. ಹಿಂದಿನ ಪ್ರವಾದಿಗಳ ವಿವಿಧ ಬರಹಗಳು ಇದನ್ನು

ಸ್ಪಷ್ಟಪಡಿಸುತ್ತವೆ. ಈ ಕಾಲದಲ್ಲಿಯೇ ಪ್ರವಾದಿಗಳು ಮೊದಲ ಬಾರಿಗೆ ಕ್ಷುದ್ರ ದೇವತಾಪೂಜೆಯು ಪಾಪವೆಂದು ಬೋಧಿಸಿದರು. ಆ ಕಾಲದ ನಿರಂತರ ಯುದ್ಧಗಳಲ್ಲಿ ಗೆಲವು ಪಡೆಯಲು ಎಹ್ವೆಹ್‌ನ ಕರುಣೆ ಆವಶ್ಯಕವೆಂದೂ, ಅವನೊಡನೆ ಇತರ ದೇವತೆಗಳನ್ನೂ ಪೂಜಿಸಿದರೆ ಎಹ್ವೆಹ್ ಕರುಣೆಯನ್ನು ತೋರುವುದಿಲ್ಲವೆಂದೂ ಅವರು ಹೇಳಿದರು. ವಿಶೇಷವಾಗಿ, ಜೆರೆಮಿಯ ಮತ್ತು ಎಝೆಕೀಲ್ ಅವರು ಒಂದನ್ನುಳಿದು ಮಿಕ್ಕ ಮತಧರ್ಮಗಳೆಲ್ಲ ಸುಳ್ಳೆಂದೂ, ವಿಗ್ರಹಾರಾಧನೆಯನ್ನು ಮಹಾಪ್ರಭುವು ಶಿಕ್ಷಿಸುವನೆಂದೂ ಶ್ರದ್ಧೆಯನ್ನು ಹುಟ್ಟುಹಾಕಿದರು.

ಕೆಲವು ಉದ್ಧೃತಗಳು ಅವರ ಬೋಧನೆಯ ಸ್ವರೂಪವನ್ನೂ ಹಾಗೂ ಆಗ ಪ್ರಚಲಿತವಾಗಿದ್ದ ಕ್ಷುದ್ರ ದೈವಾರಾಧನೆಯ ಸ್ವರೂಪವನ್ನೂ ತೋರಿಸುತ್ತವೆ. 'ಜೂದಾಹ ನಗರಗಳಲ್ಲಿಯೂ ಜೆರೂಸಲೆಂನ ಬೀದಿಗಳಲ್ಲಿಯೂ ಅವರೇನು ಮಾಡುತ್ತಾರೆಂಬುದನ್ನು ನೀವು ನೋಡಿಲ್ಲವೇ? ಸ್ವರ್ಗಸಮ್ರಾಜ್ಞಿಗಾಗಿ (ಇಷ್ತರ್) ಕೇಕ್‌ಗಳನ್ನು ತಯಾರಿಸಲೆಂದು ಮಕ್ಕಳು ಕಟ್ಟಿಗೆ ಕಲೆಹಾಕುತ್ತಾರೆ, ತಂದೆಯರು ಬೆಂಕಿ ಹೊತ್ತಿಸುತ್ತಾರೆ, ಹೆಂಗಸರು ಕಣಕವನ್ನು ನಾದುತ್ತಾರೆ; ನನ್ನನ್ನು ಕೋಪಗೊಳಿಸದಿರಲೆಂದು ಬೇರೆ ದೇವತೆಗಳಿಗೂ ಅದನ್ನು ಅರ್ಪಿಸುತ್ತಾರೆ.'[೧೩೮] ಆ ಬಗ್ಗೆ ದೇವರಿಗೆ ಕೋಪ. 'ಅವರು ತಮ್ಮ ಗಂಡು ಹೆಣ್ಣು ಮಕ್ಕಳನ್ನು ಬೆಂಕಿಯಲ್ಲಿ ಸುಡಲೆಂದು ನರಕ (ಟೋಫೆಟ್)ದ ಎತ್ತರ ಸ್ಥಳಗಳನ್ನು ಕಟ್ಟಿದ್ದಾರೆ, ಅದು ಹಿನಾಮ್‌ನ ಮಗನ ಕಣಿವೆಯಲ್ಲಿದೆ, ಹಾಗೆ ಮಾಡದಿರಲು ನಾನವರಿಗೆ ಆಜ್ಞೆಯಿತ್ತೆ, ಅದು ನನ್ನ ಹೃದಯಕ್ಕೆ ಬಂದಿರಲೇ ಇಲ್ಲ.'[೧೩೯]

ಜೆರೆಮಿಯದಲ್ಲಿ ಒಂದು ಆಸಕ್ತಿದಾಯಕ ಭಾಗವಿದೆ; ಅದರಲ್ಲಿ ವಿಗ್ರಹಾರಾಧನೆಯನ್ನು ಮಾಡುವ ಈಜಿಪ್ಟ್‌ನ ಯೆಹೂದಿಗಳನ್ನು ಖಂಡಿಸಲಾಗಿದೆ. ಸ್ವಲ್ಪ ಕಾಲ ತಾನೇ ಅವರ ಜೊತೆ ಬಾಳಿದ್ದ. ಹೆಂಡತಿಯರು ಇತರ ದೇವತೆಗಳಿಗೆ ಧೂಪವನ್ನರ್ಪಿಸಿದ್ದರಿಂದ ಎಹ್ವೆಹ್ ಅವರನ್ನು ನಾಶಮಾಡುವನೆಂದು ಈ ಪ್ರವಾದಿಯು ಈಜಿಪ್ಟ್‌ನ ನಿರಾಶ್ರಿತರಿಗೆ ಹೇಳಿದ. ಆದರೆ ಅವನ ಮಾತನ್ನು ಕೇಳದೆ ಅವರೆಂದರು: 'ನಮ್ಮ ಬಾಯಲ್ಲಿ ಏನು ಬರುತ್ತದೋ ಅದನ್ನು ಖಂಡಿತವಾಗಿ ನಾವು ಮಾಡುವವರೇ: ಹಿಂದೆ ನಾವು, ನಮ್ಮ ತಂದೆಯರು, ನಮ್ಮ ರಾಜಮಹಾರಾಜರು ಜೂದಾಹ್ ನಗರಲ್ಲಿಯೂ ಜೆರೂಸಲೆಂನ ಬೀದಿಗಳಲ್ಲಿಯೂ ಮಾಡಿದಂತೆಯೇ ಮುಂದೆಯೂ ಸ್ವರ್ಗಸಮ್ರಾಜ್ಞಿಗೆ ಧೂಪವನ್ನರ್ಪಿಸುವವರೇ, ಅವಳಿಗಾಗಿ ಪೇಯಗಳನ್ನು ಸುರಿಯುವವರೇ. ಯಾಕೆಂದರೆ ಆಗ ನಮಗೆ ಸಮೃದ್ಧವಾಗಿ ಆಹಾರ ದೊರೆಯುತ್ತಿತ್ತು,

---

೧೩೮. ಜೆರೆಮಿಯ, ೮. ೧೭–೧೮.
೧೩೯. ಅದೇ, ೭. ೩೧.

ಒಳ್ಳೆಯದಾಯಿತೇ ವಿನಾ ಕೆಟ್ಟುದಲ್ಲ.' ಆದರೆ ಈ ವಿಗ್ರಹಾರಾಧನಾ ಪದ್ಧತಿಗಳನ್ನು ಎಹ್ವೆಹ್ ಗಮನಿದ್ದಾನೆ, ಅವುಗಳಿಂದಾಗಿಯೇ ದುರದೃಷ್ಟಗಳು ಸಂಭವಿಸಿವೆ ಎಂದು ಜೆರೆಮಿಯ ಸಮಾಧಾನ ಹೇಳುತ್ತಾನೆ. 'ನೋಡಿ, ನಾನು ನನ್ನ ಹಿರಿ ಹೆಸರಿನಲ್ಲಿಯೇ ಪ್ರಮಾಣ ಮಾಡಿದ್ದೇನೆ. ಈಜಿಪ್ಟ್‌ನ ಪ್ರದೇಶದಾದ್ಯಂತ ಜೂದಾಹ್‌ನ ಯಾರ ಬಾಯಲ್ಲಿಯೂ ನನ್ನ ಹೆಸರು ಬಾರದಿರಲಿ .. .. ಕೆಡುಕು ಮಾಡುತ್ತಾರೇನೋ ಎಂದು ನಾನು ಗಮನಿಸುತ್ತೇನೆಯೇ ಹೊರತು ಒಳಿತು ಮಾಡುವುದನ್ನಲ್ಲ; ಈಜಿಪ್ಟ್ ದೇಶದಲ್ಲಿರುವ ಜೂದಾಹ್‌ನ ಎಲ್ಲ ಜನರೂ ಕತ್ತಿಯಿಂದಲೂ ಬರದಿಂದಲೂ ಯಾರೂ ಉಳಿಯದಂತೆ ಎಲ್ಲರನ್ನೂ ಕಬಳಿಸುತ್ತೇನೆ ಎಂದು ಮಹಾಪ್ರಭು ಹೇಳಿದ್ದಾನೆ.'[೧೪೦]

ಯೆಹೂದಿಗಳ ವಿಗ್ರಹಾರಾಧನೆಯ ಪದ್ಧತಿಯಿಂದ ಎಝೆಕೀಲ್ ಕೂಡ ಆಘಾತಗೊಳ್ಳುತ್ತಾನೆ. ದೇವಾಲಯದ ಉತ್ತರ ದ್ವಾರದ ಬಳಿ ತಮುಜ್ (ಒಬ್ಬ ಬ್ಯಾಬಿಲೋನಿಯನ್ ದೇವತೆ)ಗಾಗಿ ಹೆಂಗಸರು ಅಳುತ್ತಿರುವುದನ್ನು ದರ್ಶನವೊಂದರ ಮೂಲಕ ಮಹಾಪ್ರಭು ತೋರಿಸುತ್ತಾನೆ; ಆನಂತರ ಅವನಿಗೆ 'ಮತ್ತೂ ಹೆಚ್ಚು ಅಸಹ್ಯಕರವಾದವನ್ನು' ತೋರಿಸುತ್ತಾನೆ, ಅದೆಂದರೆ ಇಪ್ಪತ್ತೈದು ಮಂದಿ ದೇವಾಲಯದ ದ್ವಾರದ ಬಳಿ ಸೂರ್ಯನ ಪೂಜೆಯಲ್ಲಿ ತೊಡಗಿರುವುದನ್ನು. ಆಗ ಮಹಾಪ್ರಭು ಘೋಷಿಸುತ್ತಾನೆ: 'ಹೀಗಾಗಿ ನಾನು ಕೋಪೋದ್ರಿಕ್ತನಾಗಿ ಹೀಗೆ ಮಾಡುತ್ತೇನೆ; ನನ್ನ ಕಣ್ಣಿನಿಂದ ಯಾವುದೂ ತಪ್ಪಿಸಿಕೊಳ್ಳಲಾರದು, ನನಗೆ ಕರುಣೆಯೆಂಬುದಿರುವುದಿಲ್ಲ; ಅವರ ಜೋರಾದ ಅಳು ನನ್ನ ಕಿವಿಗೆ ಬೀಳುತ್ತಿದ್ದರೂ ಅದನ್ನು ನಾನು ಕೇಳಿಸಿಕೊಳ್ಳುವುದಿಲ್ಲ.'[೧೪೧]

ಒಂದನ್ನುಳಿದು ಮಿಕ್ಕ ಮತಧರ್ಮಗಳೆಲ್ಲ ಕೆಟ್ಟವು ಎಂಬ, ದೇವರು ವಿಗ್ರಹಾರಾಧನೆಯನ್ನು ಶಿಕ್ಷಿಸುತ್ತಾನೆಂಬ ಭಾವನೆ ಪ್ರವಾದಿಗಳ ಸೃಷ್ಟಿ. ಒಟ್ಟಾರೆ ಪ್ರವಾದಿಗಳೆಲ್ಲ ತೀವ್ರ ರಾಷ್ಟ್ರೀಯವಾದಿಗಳು, ಪ್ರಭುವು ಯೆಹೂದ್ಯೇತರರನ್ನೆಲ್ಲ ಸಂಪೂರ್ಣವಾಗಿ ನಾಶ ಮಾಡಿಬಿಡುವ ದಿನಕ್ಕಾಗಿ ಎದುರು ನೋಡುತ್ತಿದ್ದವರು.

ಪ್ರವಾದಿಗಳ ಖಂಡನೆಯನ್ನು ಸಮರ್ಥಿಸುವಂತೆ ಆಕ್ರಮಣಗಳನ್ನು ನಡೆಸಲಾಯಿತು. ಯೆಹ್ವೆಹ್ ಸರ್ವಶಕ್ತನಾಗಿದ್ದಿದ್ದರೆ ಹಾಗೂ ಯೆಹೂದಿಗಳು ಅವನ ಆಯ್ಕೆಯ ಜನರಾಗಿದ್ದಿದ್ದರೆ ಅವರ ಯಾತನೆಗಳಿಗೆ ಅವರ ಕೆಡುಕುತನವೇ ಕಾರಣವೆಂದು ವಿವರಿಸಬೇಕು. ಈ ಮನೋಧರ್ಮವು ಪಿತೃಶಿಕ್ಷೆಯ ರೂಪದ್ದು; ಯೆಹೂದಿಗಳನ್ನು ಶಿಕ್ಷೆಯ ಮೂಲಕ ಶುದ್ಧಗೊಳಿಸಬೇಕು. ಈ ಶ್ರದ್ಧೆಯ

---

೧೪೦. ಅದೇ, ೪೪, ೧ ೧ – ಕೊನೆ

೧೪೧. ಎಝೆಕೀಲ್, ೭. ೧ ೧ – ಕೊನೆ.

ಪ್ರಭಾವದಿಂದಾಗಿ ದೇಶಭ್ರಷ್ಟರಾಗಿದ್ದಾಗ, ಅವರು ಸ್ವತಂತ್ರರಾಗಿದ್ದಾಗಿಗಿಂತಲೂ ತೀಕ್ಷ್ಣವಾದ ಸಂಪ್ರದಾಯನಿಷ್ಠೆ ಮತ್ತು ಹೆಚ್ಚಿನ ರಾಷ್ಟ್ರೀಯ ಪ್ರತ್ಯೇಕತೆಗಳನ್ನು ಬೆಳೆಸಿಕೊಂಡರು. ಬ್ಯಾಬಿಲೋನ್‌ಗೆ ಕಳುಹಿಸದೆ ಅಲ್ಲಿಯೇ ಉಳಿದಿದ್ದ ಯೆಹೂದಿಗಳು ಈ ಪ್ರತ್ಯೇಕ ಭಾವನೆಯನ್ನು ಇಷ್ಟರ ಮಟ್ಟಿಗೆ ಬೆಳೆಸಿಕೊಳ್ಳಲಿಲ್ಲ. ಎಜ್ರಾ ಮತ್ತು ನೆಹೆಮಿಯರು ದಾಳಿಯಾದ ಬಳಿಕ ಮತ್ತೆ ಜೆರೂಸಲೆಂಗೆ ವಾಪಸು ಬಂದಾಗ ಅವರಿಗೆ ಆಘಾತ ತಂದ ವಿಷಯವೆಂದರೆ ಮಿಶ್ರವಿವಾಹಗಳು ಸಾಮಾನ್ಯವಾಗಿದ್ದುದು, ಅವರು ಅಂಥ ಎಲ್ಲ ಮದುವೆಗಳನ್ನೂ ರದ್ದುಗೊಳಿಸಿದರು.[೧೪೨]

ಯೆಹೂದಿಗಳು ಇತರ ಪ್ರಾಚೀನ ರಾಷ್ಟ್ರಗಳವರಿಗಿಂತ ತಮ್ಮ ಕಡುವಾದ ರಾಷ್ಟ್ರೀಯ ಹೆಮ್ಮೆಯಿಂದ ಬೇರೆ ಎನಿಸಿದ್ದರು. ಮಿಕ್ಕವರೆಲ್ಲ, ಸೋತಿರುವಾಗ, ಒಳಗೆ ಮತ್ತು ಹೊರಗೆ ಹೊಂದಿಕೊಂಡರು; ಆದರೆ ಯೆಹೂದಿಗಳು ಮಾತ್ರ ತಮ್ಮ ಶ್ರೇಷ್ಠತೆಯಲ್ಲಿನ ಶ್ರದ್ಧೆಯಿಂದ ಹಾಗೂ ತಮ್ಮ ದುರದೃಷ್ಟಗಳಿಗೆಲ್ಲ ತಮ್ಮ ಪರಿಶುದ್ಧತೆ ಮತ್ತು ಮತಶ್ರದ್ಧೆ ಆಚರಣೆಗಳನ್ನು ಕಾಪಾಡಿಕೊಳ್ಳದಿದ್ದುದರ ಫಲವಾದ ದೇವರ ಕೋಪದಿಂದ ಉಂಟಾದುದು ಎಂದು ಮನದಟ್ಟು ಮಾಡಿಕೊಂಡಿದ್ದರು. ಹಳೆಯ ಒಡಂಬಡಿಕೆಯ ಐತಿಹಾಸಿಕ ಭಾಗಗಳು, ಈ ಬಂಧನಸ್ಥಿತಿಯ ನಂತರ ತಪ್ಪು ಭಾವನೆಯನ್ನುಂಟುಮಾಡುತ್ತವೆ; ಯಾಕೆಂದರೆ ಪ್ರವಾದಿಗಳು ಖಂಡಿಸಿದ ವಿಗ್ರಹಾರಾಧನೆಯು ಪರಿಪಾಟವು ಹಿಂದಿನ ಕಟ್ಟುನಿಟ್ಟು ಕಡಿಮೆಯಾದುದರಿಂದ ಬಂತೆಂದು ಅವು ಸೂಚಿಸುತ್ತವೆ, ಆದರೆ ವಾಸ್ತವವಾಗಿ ಹಿಂದಿನ ಕಟ್ಟುನಿಟ್ಟು ಉಳಿದಿರಲೇ ಇಲ್ಲ. ಐತಿಹಾಸಿಕತೆಯ ಪ್ರಜ್ಞೆಯಿಲ್ಲದೆ ಬೈಬಲ್ ಅನ್ನು ಓದಿದಾಗ ಅದರಲ್ಲಿ ಕಾಣುವುದಕ್ಕಿಂತ ಬಹು ಹೆಚ್ಚಿನ ರೀತಿಯಲ್ಲಿ ಪ್ರವಾದಿಗಳು ಪರಿವರ್ತನಕಾರರಾಗಿದ್ದರೆಂಬುದು ತಿಳಿಯುತ್ತದೆ.

ಆನಂತರ ಯೆಹೂದಿ ಮತಧರ್ಮದ ವಿಶಿಷ್ಟ ಲಕ್ಷಣಗಳೆನಿಸಿದ ಕೆಲವು ವಿಚಾರಗಳು, ಹಿಂದೆ ಪ್ರಚಲಿತವಾಗಿದ್ದ ಆಕರಗಳ ಭಾಗವಾಗಿದ್ದರೂ, ಬಂಧನಸ್ಥಿತಿಯ ಕಾಲದಲ್ಲಿ ಬೆಳೆದಂತಹವು. ಬಲಿಗಳನ್ನು ಕೊಡಬಹುದಾದ ಏಕೈಕ ಸ್ಥಳವಾಗಿದ್ದ ದೇವಾಲಯದ ನಾಶದಿಂದಾಗಿ ಆಚರಣೆಯು ಬಲಿಹೀನವಾಗುವುದು ಅನಿವಾರ್ಯವಾಯಿತು. ಸಿನಗಾಗ್‌ಗಳು ಈ ಕಾಲದಲ್ಲಿಯೇ ಆರಂಭಗೊಂಡುದು, ಆಷ್ಟು ಹೊತ್ತಿಗೆ ಇದ್ದ ಧರ್ಮಗ್ರಂಥಗಳ ಭಾಗಗಳ ಅಧ್ಯಯನದಿಂದ ತಿಳಿದುಬರುತ್ತದೆ. ಈ ಕಾಲದಲ್ಲಿಯೇ ಸಬ್ಬತ್‌ನ ಪ್ರಾಮುಖ್ಯಕ್ಕೆ ಮೊದಲ ಬಾರಿಗೆ ಒತ್ತು ನೀಡಲಾಯಿತು, ಅಂತೆಯೇ ಯೆಹೂದಿಯ ಕುರುಹಾಗಿ ಸುತ್ತುಕರ್ತನ (ಸರ್‌ಕಂಸಿಷನ್). ಈಗಾಗಲೇ ನಾವು ನೋಡಿರುವಂತೆ, ದೇಶಭ್ರಷ್ಟರಾದ ಕಾಲದಲ್ಲಿಯೇ ಯೆಹೂದ್ಯೇತರರ ಜೊತೆಗಿನ

---

೧೪೨. ಎಝೆಕೀಲ್, ೭, ೧೧ – ಕೊನೆ.

ಮದುವೆಗೆ ನಿಷೇಧ ಹೇರಲಾಯಿತು. ಪ್ರತಿ ವಿಷಯದಲ್ಲಿಯೂ ಪ್ರತ್ಯೇಕತೆ ಬೆಳೆಯಿತು. 'ನಾನು ನಿಮ್ಮ ದೇವರಾದ ಪ್ರಭು, ನಿಮ್ಮನ್ನು ಇತರರಿಂದ ಬೇರೆ ಮಾಡಿದವನು'[೧೪೩] 'ನೀವು ಪರಿಶುದ್ಧರಾಗಿರಬೇಕು, ಯಾಕೆಂದರೆ ನಿಮ್ಮ ಪ್ರಭುವಾದ ನಾನು ಪರಿಶುದ್ಧನಾದವನು'[೧೪೪] ನಿಯಮಸಂಹಿತೆಯು ಈ ಕಾಲದ ಉತ್ಪನ್ನ. ರಾಷ್ಟ್ರೀಯ ಐಕ್ಯವನ್ನು ಉಳಿಸಿಕೊಂಡು ಬರುವಲ್ಲಿ ಅದು ಪ್ರಮುಖ ಶಕ್ತಿಯಾಗಿತ್ತು.

ಇಸಾಯ ಸಂಪುಟ (ಬುಕ್ ಆಫ್ ಇಸಾಯ) ಎಂದು ಉಳಿದಿರುವ ಭಾಗವು ಇಬ್ಬರು ಪ್ರವಾದಿಗಳ ರಚನೆ, ಒಬ್ಬನು ಬಂಧನಸ್ಥಿತಿಯ ಹಿಂದಿನವನಾದರೆ, ಮತ್ತೊಬ್ಬ ಆನಂತರದವನು. ಈ ಇಬ್ಬರಲ್ಲಿ ಎರಡನೆಯವನನ್ನು ಬೈಬಲ್ ಅಧ್ಯಯನಕಾರರು ಡ್ಯೂಟ್ರೋ-ಇಸಾಯ ಎನ್ನುತ್ತಾರೆ; ಅವನು ಪ್ರವಾದಿಗಳಲ್ಲೆಲ್ಲ ಅದ್ಭುತನಾದವನು. ಪ್ರಭುವು 'ನನ್ನ ಹೊರತು ಬೇರೆ ದೇವರಿಲ್ಲ' ಎಂದು ಹೇಳಿದನೆಂದು ವರದಿಯಿತ್ತ ಮೊದಲಿಗೆ ಅವನೇ. ಅವನು ದೇಹದ ಪುನರುತ್ಥಾನದಲ್ಲಿ ಶ್ರದ್ಧೆಯಿದ್ದವನು, ಪ್ರಾಯಶಃ ಪರ್ಷಿಯನ್ ಪ್ರಭಾವದಿಂದಾಗಿ. ಆನಂತರದಲ್ಲಿ ಪ್ರಮುಖ ಹಳೆ ಒಡಂಬಡಿಕೆಯ ಪಠ್ಯಭಾಗಗಳಲ್ಲಿನ ಅವನ ಉದ್ಧಾರಕ ವಾಕ್ಯಗಳು ಪ್ರವಾದಿಗಳಿಗೆ ಕ್ರಿಸ್ತನ ಆಗಮನದ ಮುನ್‌ಸೂಚನೆಯಿತ್ತು ಎಂದು ತೋರಿಸುತ್ತವೆ.

ಕ್ರೈಸ್ತೇತರರು ಮತ್ತು ಯೆಹೂದಿಗಳ ಜೊತೆಗಿನ ಕ್ರೈಸ್ತ ವಾದಗಳಲ್ಲಿ ಡ್ಯೂಟ್ರೋ-ಇಸಾಯನಲ್ಲಿನ ಈ ಪಠ್ಯಭಾಗಗಳು ಬಹು ಮುಖ್ಯ ಪಾತ್ರವನ್ನು ವಹಿಸಿದವು, ಈ ಕಾರಣಕ್ಕಾಗಿ ನಾನು ಅವುಗಳಲ್ಲಿನ ಅತ್ಯಂತ ಮುಖ್ಯವಾದುದನ್ನು ಉದ್ಧೃತಗೊಳಿಸುತ್ತೇನೆ: 'ತಮ್ಮ ಕತ್ತಿಗಳನ್ನವರು ನೇಗಿಲ ಕೋಶಗಳಲ್ಲಿ ಅಡಗಿಸಲಿ, ತಮ್ಮ ಈಟಿಗಳನ್ನು ಗ್ರಂಥಗಳನ್ನು ಕತ್ತರಿಸಲು ಬಳಸಲಿ: ಅವಕಾಶವು ಮತ್ತೊಂದು ದೇಶದ ವಿರುದ್ಧ ಕತ್ತಿಗಳನ್ನು ಝುಳಪಿಸದಿರಲಿ, ಜೊತೆಗೆ ಯುದ್ಧಕಲೆಯನ್ನೂ ಮುಂದೆ ಕಲಿಯುವುದು ಬೇಡ' (ಇಸಾಯ, ೨. ೪): 'ನೋಡಿ, ಕನ್ಯೆಯು ಗರ್ಭ ಧರಿಸಿ ಮಗುವನ್ನು ಹಡೆಯಲಿ, ಆ ಮಗುವಿಗೆ ಇಮ್ಮಾನ್ಯುಯಲ್ ಎಂದು ಹೆಸರಿಡಲಿ.'[೧೪೫] (ಈ ಪಠ್ಯಭಾಗದ ವಿಷಯದಲ್ಲಿ ಕ್ರೈಸ್ತರು ಮತ್ತು ಯೆಹೂದಿಗಳ ನಡುವೆ ಒಂದು ವಿವಾದ ನಡೆಯಿತು: ಸರಿಯಾದ ಭಾಷಾಂತರವು 'ಒಬ್ಬ ಚಿಕ್ಕ ಹೆಂಗಸು ಗರ್ಭ ಧರಿಸಲಿ' ಎಂದು ಯೆಹೂದಿಗಳು ವಾದಿಸಿದರು; ಆದರೆ ಯೆಹೂದಿಗಳು ಸುಳ್ಳು ಹೇಳುತ್ತಿರುವರೆಂದು ಕ್ರೈಸ್ತರು ಭಾವಿಸಿದರು). 'ಕತ್ತಲಲ್ಲಿ ಓಡಾಡಿದ ಜನರು ಅಪ್ರತಿಮ ಬೆಳಕನ್ನು ಕಂಡಿದ್ದಾರೆ; ಸಾವಿನ ನೆರಳಿನ ಪ್ರದೇಶದಲ್ಲಿ ಬದುಕಿರುವ ಜನರ ಮೇಲೆ ಬೆಳಕು ಬೆಳಗುತ್ತಿದೆ .. .. ಯಾಕೆಂದರೆ ನಮಗಾಗಿ ಒಂದು ಮಗುವು ಜನಿಸಿದೆ,

---

೧೪೩. ಲೆವಿಟಿಕಸ್, ೨೦, ೨೪.
೧೪೪. ಅದೆ, ೧೯, ೨.
೧೪೫. ಇಸಾಯ, ೭. ೧೪.

ನಮಗಾಗಿ ಮಗನೊಬ್ಬನನ್ನು ಕರುಣಿಸಲಾಗಿದೆ: ನಿರ್ವಹಣೆಯೆಲ್ಲ ಅವನ ಭುಜಗಳ ಮೇಲಿರುತ್ತದೆ: ಅವನ ಹೆಸರು ಅದ್ಭುತ (ವಂಡರ್‌ಫುಲ್), ಸಲಹೆಗಾರನಾದ ಸರ್ವಶಕ್ತ ದೇವರು, ಚಿರಂತನನಾದ ತಂದೆ, ಶಾಂತಿಯ ರಾಜ ಎಂದಾಗಿರುತ್ತದೆ.'[೧೪೬] ಈ ಭಾಗಗಳಲ್ಲಿನ ಐವತ್ತಮೂರನೇ ಅಧ್ಯಾಯವು ಅತ್ಯಂತ ಸ್ಫುಟವಾದ ಭವಿಷ್ಯವಾಕ್ಕು, ಅದರಲ್ಲಿ ಚಿರಪರಿಚಿತ ಪಠ್ಯವಿದೆ: 'ಅವನನ್ನು ಜನರು ದ್ವೇಷಿಸುತ್ತಾರೆ, ತಿರಸ್ಕರಿಸುತ್ತಾರೆ; ದುಃಖಗಳ ವ್ಯಕ್ತಿ ಮತ್ತು ಯಾತನೆಯಿಂದ ಕೂಡಿದವನು .. .. ಖಂಡಿತವಾಗಿ ಅವನು ನಮ್ಮ ಯಾತನೆಗಳನ್ನು ಹೊತ್ತಿದ್ದಾನೆ, ನಮ್ಮ ಸಂಕಟಗಳನ್ನು ಭರಿಸಿದ್ದಾನೆ .. .. ಆದರೆ ನಮ್ಮ ನಿಯಮೋಲ್ಲಂಘನೆಗಾಗಿ ಅವನನ್ನು ಗಾಸಿಗೊಳಿಸಲಾಗಿದೆ, ನಮ್ಮ ಅನ್ಯಾಯಗಳಿಗಾಗಿ ಅವನನ್ನು ಗಾಯಗೊಳಿಸಲಾಗಿದೆ; ನಮ್ಮ ಶಾಂತಿಯ ಹೊಡೆತದಿಂದ ಅವನ ಮೇಲೆ ಪರಿಣಾಮವಾಗಿದೆ; ಅವನ ಮೈಮೇಲಿನ ಈ ಬರೆಯಿಂದ ನಮ್ಮ ನೋವು ವಾಸಿಯಾಗಿದೆ .. .. ಅವನು ದಮನಕ್ಕೊಳಗಾದ, ಅವನಿಗೆ ಹಿಂಸೆ ನೀಡಲಾಯಿತು, ಆದರೂ ಅವನು ತನ್ನ ಬಾಯಿ ಬಿಡಲಿಲ್ಲ, ಅವನನ್ನು ಕುರಿಮರಿಯಂತೆ ಬಲಿಗಂಬದತ್ತ ಕರೆತರಲಾಯಿತು, ಕೊಲ್ಲುವವರ ಮುಂದೆ ನಿಂತ ಕುರಿಯಂತೆ ಅವನು ಮೂಕನಾಗಿದ್ದ, ಹೀಗಾಗಿ ತನ್ನ ಬಾಯಿ ತೆರೆಯಲಿಲ್ಲ..' ಯೇಹೂದ್ಯೇತರರನ್ನು ಅಂತಿಮ ಮೋಕ್ಷದಲ್ಲಿ ಸೇರಿಸಿಕೊಂಡಿರುವುದು ಸ್ಪಷ್ಟವಾಗಿದೆ: 'ಯೇಹೂದ್ಯೇತರರು ನಿನ್ನ ಬೆಳಕಿನಡಿ ಬರಲಿ, ನಿನ್ನ ಉದಯದ ಬೆಳಗಿನಡಿ ದೊರೆಗಳು ಬರಲಿ.'[೧೪೭]

ಎಜ್ರಾ ಮತ್ತು ನೆಹೇಮಿಯರ ಬಳಿಕ ಕೊಂಚ ಕಾಲ ಯೆಹೂದಿಗಳು ಇತಿಹಾಸದಿಂದ ಮರೆಯಾಗುತ್ತಾರೆ. ಯೆಹೂದಿ ರಾಜ್ಯವು ಒಂದು ಮತಧಾರ್ಮಿಕ ಪ್ರಭುತ್ವವಾಗಿ ಉಳಿಯಿತು, ಆದರೆ ಅದರ ವೈಶಾಲ್ಯವು ಈ. ಬೇವನ್‌ರ ಪ್ರಕಾರ[೧೪೮] ತುಂಬ ಕಡಿಮೆಯಾಗಿತ್ತು, ಜೆರೂಸಲೆಂನ ಸುತ್ತಮುತ್ತಲ ಹತ್ತು ಹದಿನೈದು ಮೈಲಿಗಳ ಫಾಸಲೆ. ಅಲೆಕ್ಸಾಂಡರ್‌ನ ನಂತರ ಅದು ಟಾಲಿಮಿ ಪಂಥ ಮತ್ತು ಸೆಲ್ಯೂಸಿಡ್ ಪಂಥದವರ ನಡುವಣ ವಿವಾದಿತ ಕ್ಷೇತ್ರವಾಯಿತು. ಇದು ಯೆಹೂದಿ ಪ್ರದೇಶದಲ್ಲಿ ಪ್ರತ್ಯಕ್ಷ ಯುದ್ಧವನ್ನೇನೂ ಉಂಟುಮಾಡಲಿಲ್ಲ, ಇದರಿಂದ ದೀರ್ಘ ಕಾಲ ಯೆಹೂದಿಗಳಿಗೆ ತಮ್ಮ ಮತಧಾರ್ಮಿಕ ಅನುಷ್ಠಾನಕ್ಕೆ ಅವಕಾಶವಾಯಿತು.

---

೧೪೬. ಅದೇ, ೧೦, ೨. ೬.
೧೪೭. ಅದೇ, ೬೦, ३.
೧೪೮. 'ಜೆರೂಸಲೇಂ ಅಂಡರ್ ದ ಹೈ ಪ್ರೀಸ್ಟ್ಸ್', ಪು. ೧೨.

ಈ ಕಾಲದ ನೈತಿಕ ಸೂತ್ರಗಳನ್ನು ಎಕ್ಲೆಸಿಯಾಸ್ಟಿಕಸ್‌ನಲ್ಲಿ ಕಾಣಬಹುದು, ಇದು ರಚಿತವಾದುದು ಪ್ರಾಯಶಃ ಕ್ರಿಪೂ ೨೦೦ ರಲ್ಲಿ. ಇತ್ತೀಚಿನವರೆಗೂ ಅದು ಗ್ರೀಕ್ ಆವೃತ್ತಿಯಲ್ಲಿ ಮಾತ್ರ ದೊರಕುತ್ತಿತ್ತು; ಅಪೋಕ್ರಿಫದಲ್ಲಿ ಅದನ್ನು ನಿಷೇಧಿಸಲು ಇದೇ ಕಾರಣ. ಆದರೆ ಅದರ ಹೀಬ್ರೂ ಆವೃತ್ತಿಯನ್ನು ಅನಂತರ ಕಂಡುಹಿಡಿಯಲಾಯಿತು, ಅದು ಗ್ರೀಕ್ ಆವೃತ್ತಿಯ ಭಾಷಾಂತರವಾಗಿರುವ ನಮ್ಮ ಅಪೋಕ್ರಿಫ ಆವೃತ್ತಿಯಿಂದ ಕೆಲವು ವಿಷಯಗಳಲ್ಲಿ ಭಿನ್ನವಾಗಿದೆ. ಬೋಧಿಸಲಾಗಿರುವ ನೀತಿಗಳು ತೀರ ಐಹಿಕ ಸ್ವರೂಪದವು. ನೆರೆಹೊರೆಯವರ ನಡುವಣ ಜನಪ್ರಿಯತೆಗೆ ತುಂಬ ಬೆಲೆ ನೀಡಲಾಗಿದೆ. ಪ್ರಾಮಾಣಿಕತೆ ಅತ್ಯಂತ ಶ್ರೇಷ್ಠ ನಡತೆ, ಯಾಕೆಂದರೆ ಯೆಹ್ವೆಹ್‌ನ ಬಳಿಯಿರಲು ಅದು ಸಹಾಯಕ. ದಾನಪ್ರವೃತ್ತಿ ಶ್ರೇಷ್ಠವೆಂದಿದೆ. ವೈದ್ಯದ ಬಗೆಗಿನ ಪ್ರಶಂಸೆಯು ಮಾತ್ರ ಗ್ರೀಕ್ ಪ್ರಭಾವದ ಸಂಕೇತ.

ಗುಲಾಮರನ್ನು ತೀರ ಕರುಣೆಯಿಂದ ಕಾಣಬಾರದು. 'ಮೇವು, ಕೋಲು ಮತ್ತು ಹೊರೆ ಕತ್ತೆಗಾದರೆ, ಅನ್ನ ತಿದ್ದುವಿಕೆ ಮತ್ತು ಕೆಲಸ ಆಳಿಗೆ .. .. ಅವನನ್ನು ಕೆಲಸದಲ್ಲಿ ತೊಡಗಿಸಿ, ಅದೇ ಅವನಿಗೆ ಸೂಕ್ತ; ಅವನು ವಿಧೇಯನಾಗಿರದಿದ್ದರೆ ಅವನಿಗೆ ಇನ್ನಷ್ಟು ಭಾರವಾದ ಕೋಳವನ್ನು ತೊಡಿಸಿ' (೨೩, ೯–೧೧). ಅದೇ ವೇಳೆ ನೀವು ಅವನಿಗೆ ಬೆಲೆ ತೆತ್ತಿದ್ದೀರಿ ಎಂಬುದು ನೆನಪಿರಲಿ, ಅವನೇನಾದರೂ ಓಡಿಹೋದರೆ ನೀವು ಹಣ ಕಳೆದುಕೊಳ್ಳುತ್ತೀರಿ; ಇದು ನಿಮ್ಮ ಲಾಭಕ್ಕೆ ಮಿತಿ ಹಾಕುತ್ತದೆ (ಅದೇ, ೩೦, ೩೧). ಹೆಣ್ಣುಮಕ್ಕಳು ಆತಂಕದ ಕಾರಣ; ಬರಹಗಾರನ ದಿನದಲ್ಲಿ ಅವರು ಹೆಚ್ಚಿನ ಅನೈತಿಕತೆಗೊಳಗಾಗಿದ್ದರು ಎಂಬುದು ಸ್ಪಷ್ಟ (೪೨, ೯–೧೧). ಅವನಿಗೆ ಹೆಂಗಸರ ಬಗ್ಗೆ ಅನಾದರ: 'ಉಡುಪುಗಳಿಂದ ಮಿಡತೆ ಬರುತ್ತದೆ, ಹೆಂಗಸರಿಂದ ಕೆಡುಕುತನ' (ಅದೇ, ೧೩). ನಿಮ್ಮ ಮಕ್ಕಳೊಡನೆ ಸಲಿಗೆಯಿಂದಿರುವುದು ತಪ್ಪು, ಸರಿಯಾದ ರೀತಿಯೆಂದರೆ 'ಅವರ ಯೌವನದ ತಲೆಯನ್ನು ಬಾಗಿಸಿರಿ' (೭. ೨೩, ೨೪).

ಒಟ್ಟಾರೆ, ಹಿರಿಯ ಕೇಟೋನಂತೆಯೇ, ಅವನು ಸದ್ಗುಣಿಯಾದ ವ್ಯಾಪಾರಿಯ ನೈತಿಕತೆಯನ್ನು ಅನಾಕರ್ಷಕ ಬೆಳಕಿನಲ್ಲಿ ನಿರೂಪಿಸಲಾಗಿದೆ.

ಈ ಸುಲಭವಾದ ಸ್ವಸದ್ಗುಣಭರಿತ ಪ್ರಶಾಂತ ಬದುಕಿಗೆ ಸೆಲ್ಯೂಸಿಡ್ ದೊರೆ ನಾಲ್ಕನೆಯ ಆಂಟಿಯೋಕಸ್‌ನಿಂದ ಅಡ್ಡಿಯಾಯಿತು; ಅವನು ತನ್ನೆಲ್ಲ ಪ್ರದೇಶಗಳನ್ನು ಹೆಲೆನೀಕರಣಗೊಳಸಲು ಕಟಿಬದ್ಧನಾಗಿದ್ದ. ಕ್ರಿಪೂ ೧೭೫ ರಲ್ಲಿ ಅವನು ಜೆರೂಸಲೆಂನಲ್ಲಿ ಒಂದು ತರಬೇತಿ ಶಾಲೆಯನ್ನು ನಿರ್ಮಿಸಿ, ಯುವಕರು ಗ್ರೀಕ್ ಹ್ಯಾಟ್ ಧರಿಸಿ ವ್ಯಾಯಾಮ ಮಾಡುವ ಏರ್ಪಾಟು ಮಾಡಿದ. ಈ ಕಾರ್ಯದಲ್ಲಿ ಅವನಿಗೆ ಸಹಾಯ ಮಾಡಿದವನು ಹೆಲೆನೀಕರಣಗೊಳಿಸುವ ಯೆಹೂದಿ ಜೇಸನ್, ಅವನನ್ನೇ ಪ್ರಧಾನ ಪುರೋಹಿತನನ್ನಾಗಿ ನೇಮಿಸಲಾಯಿತು. ಪುರೋಹಿತ

ಶ್ರೀಮಂತವರ್ಗವು ಸಡಿಲಗೊಂಡಿತ್ತು, ಗ್ರೀಕ್ ನಾಗರಿಕೆಯ ಆಕರ್ಷಣೆಗೊಳಗಾಗಿತ್ತು. ಆದರೂ ಅವರನ್ನು 'ಹ್ಯಾಸಿಡಿಮ್' (ಅಂದರೆ ಪರಿಶುದ್ಧ) ಎಂಬ, ಹಳ್ಳಿಗಳಲ್ಲಿ[೧೮೯] ಬಲಿಷ್ಠವಾಗಿದ್ದ, ಪಕ್ಷವು ತೀವ್ರವಾಗಿ ವಿರೋಧಿಸುತ್ತಿತ್ತು. ಕ್ರಿಪೂ ೧೭೦ ರಲ್ಲಿ ಆಂಟಿಯೋಕಸ್ ಈಜಿಪ್ಟ್ ಜೊತೆ ಯುದ್ಧದಲ್ಲಿ ತೊಡಗಿರುವಾಗ ಯೆಹೂದಿಗಳು ತಿರುಗಿಬಿದ್ದರು. ಆನಂತರ ಅವನು ಪರಿಶುದ್ಧ ದೇವಾಲಯದಿಂದ ಪಾವನ ಪಾತ್ರೆಗಳನ್ನು ವಶಪಡಿಸಿಕೊಂಡು ಅದರಲ್ಲಿ ದೇವರ ಪ್ರತಿಮೆಯನ್ನಿಟ್ಟ. ಅವನು ಯಹ್ವೆಹ್‌ನನ್ನು ಸ್ಯೂಸ್ ಜೊತೆ ಸಮೀಕರಿಸಿದ, ಇದಾಗಲೇ ಬೇರೆಡೆಯಲ್ಲೆಲ್ಲ ಯಶಸ್ಸು ಕಂಡಿದ್ದ ಪದ್ಧತಿಯಾಗಿ ಬೆಳೆದಿತ್ತು.[೧೯೦] ಅವನು ಯೆಹೂದಿ ಮತಧರ್ಮವನ್ನು ಕಿತ್ತೊಗೆಯಲು, ಸುತ್ತುಕರ್ತನ ಪದ್ಧತಿ ಹಾಗೂ ಆಹಾರಕ್ಕೆ ಸಂಬಂಧಿಸಿದ ನಿಯಮಗಳನ್ನು ನಿಲ್ಲಿಸಲು ನಿರ್ಧರಿಸಿದ್ದ. ಇವೆಲ್ಲಕ್ಕೂ ಜೆರೂಸಲೆಂ ಮಣಿಯಿತು, ಆದರೆ ಜೆರೂಸಲೆಂ ಹೊರಗೆ ಯೆಹೂದಿಗಳು ತಮ್ಮೆಲ್ಲ ಶಕ್ತಿಯೊಡನೆ ಇದನ್ನು ಪ್ರತಿಭಟಿಸಿದರು.

ಈ ಕಾಲದ ಇತಿಹಾಸವನ್ನು ಮೆಕಬೀಸ್‌ನ ಮೊದಲ ಭಾಗದಲ್ಲಿ ಹೇಳಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ, ತನ್ನ ಚಕ್ರಾಧಿಪತ್ಯದ ಎಲ್ಲ ಜನರೂ ಒಂದೇ ಪಂಗಡದವರಾಗಿರಬೇಕೆಂದೂ ತಮ್ಮ ಭಿನ್ನ ನಿಯಮಗಳನ್ನು ಕೈಬಿಡಬೇಕೆಂದೂ ಆಂಟಿಯೋಕಸ್ ಮಾಡಿದ ಘೋಷಣೆಯನ್ನೊಳಗೊಂಡಿದೆ. ಸಬ್ಬತ್‌ನ ಪಾವಿತ್ರ್ಯವನ್ನು ಕೈಬಿಡಬೇಕೆಂದೂ, ಹಂದಿಮಾಂಸವನ್ನು ವರ್ಜಿಸಬೇಕೆಂದೂ, ತಮ್ಮ ಮಕ್ಕಳಿಗೆ ಸುತ್ತುಕರ್ತನ ಮಾಡಿಸಬಾರದೆಂದೂ ಮಾಡಿದ ದೊರೆಯ ಆಜ್ಞೆಯನ್ನು ಯೆಹೂದ್ಯೇತರರೆಲ್ಲರೂ ಮತ್ತು ಇಸ್ರೇಲ್‌ನ ಕೆಲವರೂ ಒಪ್ಪಿಕೊಂಡರು. ಇದನ್ನು ಮೀರಿದವರಿಗೆ ಮರಣ ದಂಡನೆ ವಿಧಿಸಲಾಗುತ್ತಿತ್ತು. 'ತಮ್ಮ ಮಕ್ಕಳು ಸುತ್ತುಕರ್ತನಕ್ಕೊಳಗಾಗುವುದಕ್ಕೆ ಒಪ್ಪಿಗೆಯಿತ್ತ ಕೆಲವು ಮಹಿಳೆಯರನ್ನು ಅವರು ಕೊಂದರು. ಕೆಲವು ಶಿಶುಗಳನ್ನು ಕತ್ತು ಹಿಸುಕಿ ಕೊಂದರು, ಅವರ ಮನೆಗಳನ್ನು ದೋಚಿದರು, ಸುತ್ತುಕರ್ತನ ಮಾಡಿದವರನ್ನು ಕೊಚ್ಚಿ ಹಾಕಿದರು. ಆದರೂ ಇಸ್ರೇಲ್‌ನ ಕೆಲವರು ಯಾವುದೇ ಕೊಳಕು ಪದಾರ್ಥವನ್ನು ತಿನ್ನಬಾರದೆಂದು ಗಟ್ಟಿಯಾಗಿ ನಿರ್ಧಾರ ಮಾಡಿಕೊಂಡರು. ಹೀಗಾಗಿ ಅವರು ಸಾಯಲೂ ಸಿದ್ಧರಾಗಿ ಮಾಂಸದಿಂದ ತಾವು ಕೊಳಕುಗೊಳ್ಳಬಾರದೆಂದೂ, ಪರಿಶುದ್ಧ ಒಡಂಬಡಿಕೆಯನ್ನು

---

೧೮೯. ಪ್ರಾಯಶಃ ಅವರಿಂದಲೇ ಎಸೆನೀಸ್ ಆರಾಧನಾಪಂಥವು ಬೆಳೆಯಿತು, ಅದರ ಸಿದ್ಧಾಂತಗಳು ಪ್ರಾಚೀನ ಕ್ರೈಸ್ತಮತಧರ್ಮದ ಮೇಲೆ ಪ್ರಭಾವ ಬೀರಿರುವಂತೆ ತೋರುತ್ತದೆ. ನೋಡಿ, ಈಸ್ಟರ್ಲಿ ಮತ್ತು ರಾಬಿನ್‌ಸನ್, 'ಹಿಸ್ಟರಿ ಆಫ್ ಇಸ್ರೇಲ್' ಸಂಪುಟ ೨, ಪು. ೩೨೩ ಅಡಿಟಿಪ್ಪಣಿ. ಫ್ಯಾರಿಸೀ ಪಂಗಡವೂ ಅವರಿಂದಲೇ ಉದಯಗೊಂಡಿತು.

೧೯೦. ಅಲೆಕ್ಸಾಂಡ್ರಿಯದ ಕೆಲವು ಯೆಹೂದಿಗಳು ಈ ಸಮೀಕರಣವನ್ನು ವಿರೋಧಿಸಲಿಲ್ಲ. ನೋಡಿ, 'ಲೆಟರ್ ಆಫ್ ಅರಿಸ್ಟಿಯಸ್', ೧೫, ೧೬.

ಅವಿತ್ರಗೊಳಿಸಬಾರದೆಂದೂ ನಿರ್ಧರಿಸಿದರು; ಹೀಗಾಗಿ ಸತ್ತರು.'[೧೫೧]

ಈ ಕಾಲದಲ್ಲಿಯೇ ಅಮರತೆಯ ಸಿದ್ಧಾಂತದಲ್ಲಿ ಯೆಹೂದಿಗಳು ವ್ಯಾಪಕ ಶ್ರದ್ಧೆಯನ್ನು ತಾಳಿದ್ದು. ಮೊದಲಿಗೆ ತಮ್ಮ ಸದ್ಗುಣಗಳಿಗೆ ಭೂಮಿಯಲ್ಲೇ ಪ್ರತಿಫಲ ದೊರೆಯುವುದೆಂದು ಭಾವಿಸಲಾಗಿತ್ತು; ಆದರೆ ಅತ್ಯಂತ ಸದ್ಗುಣಿಗಳನ್ನು ಬಲಿ ತೆಗೆದುಕೊಂಡ ಹಿಂಸಾಚಾರವು ಇದು ಸರಿಯಲ್ಲವೆಂದು ಸಾರಿತು. ದೈವಿಕ ನ್ಯಾಯವನ್ನು ಸಂರಕ್ಷಿಸುವ ಉದ್ದೇಶದಿಂದ ಇಹಲೋಕದ ಕರ್ಮಗಳಿಗೆ ಪರಲೋಕದಲ್ಲಿ ದೊರೆಯುವ ಶಿಕ್ಷೆ ಮತ್ತು ಪ್ರತಿಫಲದ ಶ್ರದ್ಧೆ ಹೊಂದುವುದು ಆವಶ್ಯಕವಾಯಿತು. ಈ ಸಿದ್ಧಾಂತವನ್ನು ಯೆಹೂದಿಗಳು ಸಾರ್ವತ್ರಿಕವಾಗಿ ಒಪ್ಪಲಿಲ್ಲ; ಕ್ರಿಸ್ತನ ಕಾಲದಲ್ಲಿ ಮತ್ತು ಆನಂತರ ಕಾಲದಲ್ಲಿ ಯೆಹೂದಿಗಳೆಲ್ಲ ಅಮರತ್ವದಲ್ಲಿ ಶ್ರದ್ಧೆ ಹೊಂದಿದ್ದವರು.

ಆಂಟಿಯೋಕಸ್ ವಿರುದ್ಧದ ಬಂಡಾಯದ ನೇತೃತ್ವ ವಹಿಸಿದ್ದವನು ಜೂದಾಸ್ ಮೆಕಬಿಯಸ್, ಅವನೊಬ್ಬ ಸಮರ್ಥ ದಳಪತಿ, ಮೊದಲು ಅವನು ಜೆರೂಸಲೆಂ ಅನ್ನು ಪುನರ್ವಶಮಾಡಿಕೊಂಡ (ಕ್ರಿಪೂ ೧೬೪), ಆನಂತರ ಆಕ್ರಮಣಗಳಲ್ಲಿ ತೊಡಗಿದ. ಕೆಲವೇಳೆ ಎಲ್ಲ ಗಂಡಸರನ್ನೂ ಅವನು ಕೊಂದು ಹಾಕಿದ, ಕೆಲವೊಮ್ಮೆ ಅವರಿಗೆ ಬಲವಂತವಾಗಿ ಸುತ್ತುಕರ್ತನ ಮಾಡಿಸಿದ. ಅವನ ಸೋದರ ಜೊನಾಥನ್ ಅನ್ನು ಪ್ರಧಾನ ಪುರೋಹಿತನನ್ನಾಗಿ ಮಾಡಿ, ಒಂದು ತುಕಡಿಯೊಡನೆ ಜೆರೂಸಲೆಂನಲ್ಲಿ ನೆಲೆಸಲು ಅವಕಾಶ ನೀಡಲಾಯಿತು. ಆನಂತರ ಸಮಾರಿಯದ ಭಾಗಗಳನ್ನು ಗೆದ್ದು, ಜೊಪ್ಪ ಮತ್ತು ಆಕ್ರಗಳನ್ನು ವಶಪಡಿಸಿಕೊಂಡ. ರೋಮ್ ಜೊತೆ ಸಂಧಾನ ಮಾಡಿಕೊಂಡು ಸಂಪೂರ್ಣ ಸ್ವಾಯತ್ತತೆಯನ್ನು ಪಡೆಯುವಲ್ಲಿ ಸಫಲನಾದ. ಹೀರಾಡ್‌ನವರೆಗೆ ಅವನ ಕುಟುಂಬವರ್ಗದವರೇ ಪ್ರಧಾನ ಪುರೋಹಿತರಾಗಿದ್ದರು, ಅವರು ಹ್ಯಾಮೋನಿಯ ವಂಶದವರೆಂದು ಖ್ಯಾತರಾಗಿದ್ದಾರೆ.

ಅವರು ಉಳಿಸಿಕೊಳ್ಳಲು ಪ್ರಯತ್ನಿಸಿದ ಸುತ್ತುಕರ್ತನ ಮತ್ತು ಹಂದಿಮಾಂಸ ತಿನ್ನುವ ಕೆಡುಕುತನದಂಥ ವಿಷಯಗಳು ನಮಗೆ ಪ್ರಮುಖವೆನ್ನಿಸುವುದಿಲ್ಲವಾದರೂ, ಹಿಂಸಾಚಾರವನ್ನು ವಿರೋಧಿಸುವಲ್ಲಿ ಹಾಗೂ ಅದನ್ನು ತಡೆದುಕೊಳ್ಳುವಲ್ಲಿ ಈ ಕಾಲದ ಯೆಹೂದಿಗಳು ಅಪೂರ್ವ ಸ್ಥೈರ್ಯವನ್ನು ತೋರಿಸಿದರು.

ನಾಲ್ಕನೆಯ ಆಂಟಿಯೋಕಸ್‌ನ ಹಿಂಸಾಚಾರ ನಡೆದ ಕಾಲವು ಯೆಹೂದಿ ಇತಿಹಾಸದಲ್ಲಿ ಬಹು ಮುಖ್ಯವಾದುದು. ಚೆದುರಿ ಹೋದ ಈ ಕಾಲದ ಯೆಹೂದಿಗಳು ಹೆಚ್ಚು ಹೆಚ್ಚು ಹೆಲೆನೀಕರಣಕ್ಕೊಳಗಾದರು, ಜೂಡಿಯ ಯೆಹೂದಿಗಳು ಕೆಲವರು ಮಾತ್ರ. ಅವರಲ್ಲಿಯೂ ಹಣವಂತರೂ ಪ್ರಭಾವಶಾಲಿಗಳೂ ಆಗಿದ್ದವರು ಗ್ರೀಕ್ ಹೊಸತನದೊಂದಿಗೆ ಹೊಂದಿಕೊಳ್ಳಲು ಇಚ್ಛಿಸಿದರು. ಆದರೆ ಹ್ಯಾಸಿಡಿಯಂನ

---

೧೫೧. ಮೊದಲ ಮೆಕಬೀಸ್, ೧. ೬೦–೩.

ವೀರ ವಿರೋಧವಿಲ್ಲದಿದ್ದರೆ ಯೆಹೂದಿ ಮತಧರ್ಮವು ಸುಲಭವಾಗಿ ಕಣ್ಮರೆಯಾಗಿ ಬಿಡುತ್ತಿತ್ತು. ಹೀಗೇನಾದರೂ ಆಗಿದ್ದರೆ, ಕ್ರೈಸ್ತಮತಧರ್ಮವಾಗಲೀ ಇಸ್ಲಾಂ ಆಗಲೀ ತಾವು ಹೊಂದಿದ ಸ್ವರೂಪದಲ್ಲಿ ಅಸ್ತಿತ್ವದಲ್ಲಿ ಉಳಿಯುತ್ತಿರಲಿಲ್ಲ. ಮೆಕಬಿಯಸ್‌ನ ನಾಲ್ಕನೆಯ ಭಾಗದ ಅನುವಾದಕರಾದ ಟೌನ್‌ಸೆಂಡ್ ಪೀಠಿಕೆಯಲ್ಲಿ ಹೀಗೆ ಹೇಳುತ್ತಾರೆ:

'ಆಂಟಿಯೋಕಸ್‌ನಿಂದಾಗಿ ಯೆಹೂದ್ಯ ಮತಧರ್ಮವು ನಾಶವಾಗಿಬಿಟ್ಟಿದ್ದರೆ, ಕ್ರೈಸ್ತಮತಧರ್ಮದ ಬೀಜಾಂಕುರಕ್ಕೆ ಆಸ್ಪದವೇ ಇರುತ್ತಿರಲಿಲ್ಲ; ಹೀಗಾಗಿ ಯೆಹೂದಿ ಮತಧರ್ಮವನ್ನು ರಕ್ಷಿಸಿದ ಮೆಕಬಿಯದ ಹುತಾತ್ಮರ ರಕ್ತವು ಅಂತಿಮವಾಗಿ ಚರ್ಚ್‌ನ ಬೀಜರೂಪವಾಯಿತು ಎಂದು ಹೇಳಿರುವುದು ಸಮಂಜಸವಾಗಿಯೇ ಇದೆ. ಇದರಿಂದ ಕ್ರೈಸ್ತಜಗತ್ತು ಮಾತ್ರವಲ್ಲ ಇಸ್ಲಾಂ ಕೂಡ ತಮ್ಮ ಏಕದೇವೋಪಾಸನೆಯನ್ನು ಯೆಹೂದಿ ಮೂಲದಿಂದಲೇ ಪಡೆದಿದೆ. ಇಷ್ಟೇ ಅಲ್ಲದೆ ಜಗತ್ತಿನ ಪೂರ್ವ ಮತ್ತು ಪಶ್ಚಿಮದಲ್ಲಿನ ಏಕದೇವೋಪಾಸನೆಯ ಅಸ್ತಿತ್ವಕ್ಕೆ ಮೆಕಬಿಯರಿಗೆ ಜಗತ್ತು ಋಣಿಯಾಗಿದೆ ಎಂದರೂ ತಪ್ಪಲ್ಲ.'[೧೫೨]

ಆದರೆ ಆನಂತರದ ಯೆಹೂದಿಗಳು ಮೆಕಬಿಯರ ಬಗ್ಗೆಯೇ ಮೆಚ್ಚಿಕೆ ತೋರಲಿಲ್ಲ; ಯಾಕೆಂದರೆ ಪ್ರಧಾನ ಪುರೋಹಿತರಾಗಿದ್ದ ಅವರ ಕುಟುಂಬವು, ಯಶಸ್ಸುಗಳ ನಂತರ, ಐಹಿಕವೂ ಸಮಯಾನುವರ್ತಿಯೂ ಆದ ಧೋರಣೆಯನ್ನು ತಳೆದದ್ದು. ಅವರ ಮೆಚ್ಚಿಕೆಯಿದ್ದದ್ದು ಹುತಾತ್ಮರ ಕುರಿತು. ಪ್ರಾಯಶಃ ಕ್ರಿಸ್ತನ ಕಾಲದಲ್ಲಿ ಅಲೆಕ್ಸಾಂಡ್ರಿಯದಲ್ಲಿ ರಚಿತವಾದ ಮೆಕಬಿಯಸ್‌ನ ನಾಲ್ಕನೆಯ ಭಾಗವು ಇದನ್ನೂ ಇತರ ಕೆಲವು ಕುತೂಹಲಕರ ಅಂಶಗಳನ್ನೂ ನಿರೂಪಿಸುತ್ತದೆ. ತನ್ನ ಶಿಕ್ಷೆಯ ಹೊರತಾಗಿಯೂ, ಎಲ್ಲಿಯೂ ಅದು ಮೆಕಬೀಯರ ಹೆಸರನ್ನು ಉಲ್ಲೇಖಿಸುವುದಿಲ್ಲ, ಆದರೆ ಮೊದಲಿಗೆ ಒಬ್ಬ ಮುದುಕನ, ಆನಂತರ ಏಳು ಮಂದಿ ಸಹೋದರರ ಆಶ್ಚರ್ಯಕಾರಕ ಸಹಿಷ್ಣುತೆಯನ್ನು ನಿರೂಪಿಸುತ್ತದೆ; ಆಂಟಿಯೋಕಸ್ ಅವರಿಗೆ ಆರಂಭದಲ್ಲಿ ಚಿತ್ರಹಿಂಸೆ ನೀಡಿ ಆನಂತರ ಸುಟ್ಟುಹಾಕಿದ, ಅಲ್ಲಿಯೇ ಇದ್ದ ಅವರ ತಾಯಿ ಅವರಿಗೆ ಸ್ಥಿರವಾಗಿರುವಂತೆ ಹೇಳುತ್ತಿದ್ದಳಂತೆ. ಅವರು ಹಂದಿಮಾಂಸವನ್ನು ತಿನ್ನಲು ಒಪ್ಪಿದರೆ ಅವರಿಗೆ ಕ್ಷಮೆ ನೀಡಿ ಒಳ್ಳೆಯ ಹುದ್ದೆಗಳನ್ನು ಕೊಡುವುದಾಗಿ ಆಸೆ ತೋರಿಸಿ ಅವರನ್ನು ಸ್ನೇಹಪರತೆಯಿಂದ ಗೆಲ್ಲಲು ರಾಜ ಮೊದಲಿಗೆ ಪ್ರಯತ್ನಿಸಿದ. ಅವರು ಅದನ್ನು ತಿರಸ್ಕರಿಸಿದಾಗ ಅವರಿಗೆ ಚಿತ್ರಹಿಂಸೆ ನೀಡಲು ತಂದಿದ್ದ ಉಪಕರಣಗಳನ್ನು ತೋರಿಸಿದನಂತೆ. ಆದರೆ ಅವರು ಸ್ಥಿರತೆಯಿಂದ

---

೧೫೨. 'ದ ಅಪೊಕ್ರಿಫ ಅಂಡ್ ಸ್ಯೂಡೆಪಿಗ್ರಾಫ ಆಫ್ ದ ಓಲ್ಡ್ ಟೆಸ್ಟಮೆಂಟ್ ಇನ್ ಇಂಗ್ಲಿಷ್', ಸಂಪಾದಕರು: ಆರ್. ಎಮ್. ಚಾರ್ಲ್ಸ್, ಸಂಪುಟ ೨, ಪು. ೬೫೯.

ನಿಂತಿದ್ದರು, ಸತ್ತ ಬಳಿಕ ಇದಕ್ಕಾಗಿ ಅವನು ಅನಂತ ಹಿಂಸೆಯನ್ನು ಅನುಭವಿಸಬೇಕಾಗುವುದಾಗಿಯೂ ತಮಗೆ ಚಿರಂತನ ಸಂತೋಷ ಲಭಿಸುವುದಾಗಿಯೂ ಹೇಳಿದರು. ಅವರ ಮತ್ತು ಅವರ ತಾಯಿಯ ಸಮಕ್ಷಮದಲ್ಲಿಯೇ ಒಬ್ಬೊಬ್ಬರನ್ನೂ ಹಂದಿಮಾಂಸ ತಿನ್ನುವಂತೆ ಬಲವಂತಪಡಿಸಲಾಯಿತು; ಅವರದನ್ನು ತಿರಸ್ಕರಿಸಿದಾಗ, ಚಿತ್ರಹಿಂಸೆ ನೀಡಿ ಕೊಲ್ಲಲಾಯಿತು. ಕೊನೆಗೆ, ತನ್ನ ಸೈನಿಕರ ಕಡೆ ತಿರುಗಿ ಅಂಥ ಧೈರ್ಯದಿಂದ ಅವರಿಗೆ ಲಾಭವಿದೆಯೆಂದು ಹೇಳಿದನಂತೆ. ಈ ನಿರೂಪಣೆಯಲ್ಲಿ ಪೌರಾಣಿಕತೆಯು ಸೇರಿಕೊಂಡಿದೆ ಎಂಬುದರಲ್ಲಿ ಸಂಶಯವಿಲ್ಲ, ಆದರೆ ಚಿತ್ರಹಿಂಸೆ ಹಾಗೂ ಅದನ್ನೆದುರಿಸಿದ ಪರಿ ಅಪಾರ ಸ್ಥೈರ್ಯದ್ದು ಎಂಬುದಂತೂ ಐತಿಹಾಸಿಕ ಸತ್ಯ; ಅಲ್ಲದೆ ಮುಖ್ಯಾಂಶಗಳು ಸುತ್ತುಕರ್ತನ ಮತ್ತು ಹಂದಿಮಾಂಸ ತಿನ್ನುವುದು ಎಂಬುದೂ ಸತ್ಯ.

ಈ ಭಾಗವು ಮತ್ತೊಂದು ದೃಷ್ಟಿಯಿಂದಲೂ ಕುತೂಹಲಭರಿತವಾದುದು. ಇದರ ಕರ್ತೃವು ಸಂಪ್ರದಾಯನಿಷ್ಠ ಯೆಹೂದಿ ಎಂಬುದು ನಿಜವಾದರೂ, ಅವನು ಬಳಸುವುದು ಸಂಯಮದಿಂದ ಕೂಡಿದ ತತ್ವಜ್ಞಾನದ ಭಾಷೆಯನ್ನು; ಜೊತೆಗೆ ಯೆಹೂದಿಗಳು ತಮ್ಮ ತತ್ವಗಳಿಗೆ ಸಂಪೂರ್ಣ ಬದ್ಧವಾಗಿ ಬದುಕುವವರೆಂದು ಸಾಬೀತುಪಡಿಸುವುದು. ಆ ಭಾಗವು ಈ ಕೆಳಗಿನ ವಾಕ್ಯದಿಂದ ಆರಂಭಗೊಳ್ಳುತ್ತದೆ:

'ನಾನು ಚರ್ಚಿಸಬಯಸುವುದು ಉನ್ನತ ಮಟ್ಟದ ತಾತ್ವಿಕತೆಯ ಪ್ರಶ್ನೆಯ ಬಗ್ಗೆ, ಅದೆಂದರೆ ಸ್ಫೂರ್ತಿಗೊಂಡ ವೈಚಾರಿಕತೆಯು ರಾಗಭಾವಗಳನ್ನಾಳುವಂತಹ ಸಾರ್ವಭೌಮವೇ; ಅದರ ತಾತ್ವಿಕತೆಯಲ್ಲಿ ನಿಮ್ಮ ಪ್ರಾಮಾಣಿಕ ತೊಡಗುವಿಕೆಯನ್ನು ಗಂಭಿರವಾಗಿ ಕೇಳಿಕೊಳ್ಳುತ್ತೇನೆ.'

ಅಲೆಕ್ಸಾಂಡ್ರಿಯದ ಯೆಹೂದಿಗಳು ತತ್ವಜ್ಞಾನವನ್ನು ಗ್ರೀಕ್‌ರಿಂದ ಕಲಿತುಕೊಳ್ಳಲು ಇಚ್ಛಿಸಿದರು, ಆದರೆ ನಿಯಮಸಂಹಿತೆಗೆ ಬಲವಾಗಿ ಅಂಟಿಕೊಂಡಿದ್ದರು, ಅದರಲ್ಲೂ ಸುತ್ತುಕರ್ತನ, ಸಬ್ಬತ್ ಪಾಲನೆ ಮತ್ತು ಹಂದಿಮಾಂಸ ಮತ್ತಿತರ ಕೊಳಕು ಆಹಾರವರ್ಜನೆಯ ವಿಷಯದಲ್ಲಿ. ನೆಹೆಮಿಯನ ಕಾಲದಿಂದ ಕ್ರಿಶ ೭೦ ರಲ್ಲಿ ಜೆರೂಸಲೆಂ ಪತನಗೊಳ್ಳುವವರೆಗೆ ಅವರು ನಿಯಮಸಂಹಿತೆಗೆ ಕೊಟ್ಟ ಪ್ರಾಮುಖ್ಯವು ಕಾಲಕ್ರಮದಲ್ಲಿ ಹೆಚ್ಚಾಯಿತು. ಹೊಸತೇನನ್ನಾದರೂ ಬೋಧಿಸುವ ಪ್ರವಾದಿಗಳ ವಿಷಯದಲ್ಲವರು ಅಸಹಿಷ್ಣುಗಳಾದರು. ಪ್ರವಾದಿಗಳ ಶೈಲಿಯಲ್ಲಿ ಬರೆಯಬೇಕೆಂಬ ಒಳ ಒತ್ತಡಕ್ಕೊಳಗಾದವರೂ ತಾವು ಡೇನಿಯಲ್‌ನದೋ ಸಾಲೋಮನ್‌ನದೋ ಅಥವಾ ನಿರ್ಮಲ ಕೀರ್ತಿ ಪಡೆದ ಪ್ರಾಚೀನರದೋ ಹಳೆಯ ಗ್ರಂಥವೊಂದನ್ನು ಕಂಡೆವೆಂದು ಹೇಳಿಕೊಳ್ಳುತ್ತಿದ್ದರು. ಅವರ ವಿಶಿಷ್ಟ ಆಚರಣೆಗಳು ಅವರನ್ನು ಒಂದು ರಾಷ್ಟ್ರವಾಗಿ ಒಗ್ಗೂಡಿಸಿದ್ದವು, ಆದರೆ ಕ್ರಮೇಣ ಈ ನೀತಿಸಂಹಿತೆಯು ಸ್ವಂತಿಕೆಯನ್ನು ನಾಶಮಾಡಿ ಅವರನ್ನು ಕಡು ಸಂಪ್ರದಾಯವಾದಿಗಳನ್ನಾಗಿಸಿತು. ಹೀಗಾಗಿ ಈ

ನಿಯಮಸಂಹಿತೆಯ ಕಟ್ಟುಪಾಡುಗಳ ವಿರುದ್ಧದ ಸಂತ ಪೌಲ್‌ನ ಬಂಡಾಯವು ಮಹತ್ವದ್ದೆನಿಸುತ್ತದೆ.

ಆದರೆ ಕ್ರಿಸ್ತನ ಹುಟ್ಟಿಗೂ ಮುಂಚಿನ ಕಾಲದ ಯೆಹೂದಿ ಸಾಹಿತ್ಯದ ಅರಿವಿಲ್ಲದವರಿಗೆ ಕಾಣುವಂತೆ ಹೊಸ ಒಡಂಬಡಿಕೆಯು ಅಂಥ ಹೊಚ್ಚ ಹೊಸ ಆರಂಭವೇನೂ ಆಗಿರಲಿಲ್ಲ. ಪ್ರವಾದಿ ಉತ್ಸಾಹವೇನೂ ಬತ್ತಿಹೋಗಿರಲಿಲ್ಲ, ಆದರೆ ಅದನ್ನು ಕೇಳುವವರಿಗಾಗಿ ಕಲ್ಪಿತನಾಮವನ್ನು (ಸೂಡಾನಿಮಿಟಿ) ಅಳವಡಿಸಿಕೊಳ್ಳುವುದು ಅನಿವಾರ್ಯವಾಯಿತು. ಈ ವಿಷಯದಲ್ಲಿ, ಅತ್ಯಂತ ಕುತೂಹಲಕರವಾದದ್ದೆಂದರೆ 'ದ ಬುಕ್ ಆಫ್ ಈನೋಖ್.'[೧೫೩] ಅದನ್ನು ಬರೆದವರು ವಿವಿಧ ಲೇಖಕರು, ಅವರಲ್ಲಿ ಅತ್ಯಂತ ಹಿಂದಿನವನು ಮೆಕಬೀಸ್‌ನ ಕಾಲಕ್ಕಿಂತ ಸ್ವಲ್ಪ ಹಿಂದಿನವನು ಹಾಗೂ ಇತ್ತೀಚಿನವನು ಕ್ರಿಪೂ ೬೪ ಕ್ಕೆ ಸೇರಿದವನು. ಅದರಲ್ಲಿರುವುದು ಬಹುತೇಕ ಪ್ರವರ್ತಕ (ಪೇಟ್ರಿಯಾರ್ಕ್) ಈನೋಖ್‌ನ ಭವಿಷ್ಯದ್ದರ್ಶನಗಳು. ಕ್ರೈಸ್ತಮತಧರ್ಮಕ್ಕೆ ತಿರುಗಿದ ಯೆಹೂದ್ಯ ಮತಧರ್ಮದ ದೃಷ್ಟಿಯಿಂದ ಇದು ತುಂಬ ಪ್ರಮುಖವಾದುದು. ಹೊಸ ಒಡಂಬಡಿಕೆಯ ರಚಯಿತರು ಅದರ ಪರಿಚಯವುಳ್ಳವರು; ಅದು ಈನೋಖ್‌ನದೆಂದೇ ಸಂತ ಜೂಡ್ ಭಾವಿಸುತ್ತಾನೆ. ಆರಂಭಿಕ ಕ್ರೈಸ್ತ ಪಾದ್ರಿಗಳು, ಉದಾಹರಣೆಗೆ ಅಲೆಕ್ಸಾಂಡ್ರಿಯದ ಕ್ಲೆಮೆಂಟ್ ಮತ್ತು ಟೆರ್ಟುಲಿಯನ್, ಅದನ್ನು ಶಾಸ್ತ್ರಸಮ್ಮತವೆಂದು ಪರಿಗಣಿಸಿದರು, ಆದರೆ ಜೆರೋಮ್ ಮತ್ತು ಆಗಸ್ಟೈನ್‌ರು ತಿರಸ್ಕರಿಸಿದರು. ಆನಂತರ ಹತ್ತೊಂಬತ್ತನೆಯ ಶತಮಾನದ ಮೊದಲರ್ಧದಲ್ಲಿ ಅದರ ಎಥಿಯೋಪಿಕ್‌ನ ಮೂರು ಹಸ್ತಪ್ರತಿಗಳು ಅಬಿಸಿನಿಯದಲ್ಲಿ ದೊರೆಯುವವರೆಗೆ ಅದು ಕಣ್ಮರೆಯಾಯಿತು. ಆನಂತರದಲ್ಲಿ ಗ್ರೀಕ್ ಮತ್ತು ಲ್ಯಾಟಿನ್ ಅನುವಾದಗಳಲ್ಲಿ ಅದರ ಕೆಲವು ಭಾಗಗಳ ಹಸ್ತಪ್ರತಿಗಳು ಸಿಕ್ಕಿವೆ. ಭಾಗಶಃ ಮೂಲದಲ್ಲಿ ಅದನ್ನು ಹೀಬ್ರೂನಲ್ಲಿ, ಭಾಗಶಃ ಅರೆಮೈಕ್‌ನಲ್ಲಿ ಬರೆದಿದ್ದಂತೆ ಕಾಣುತ್ತದೆ. ಅದರ ಲೇಖಕರು ಹ್ಯಾಸಿಡಿಮ್‌ನ ಸದಸ್ಯರು, ಅವರ ಉತ್ತರಾಧಿಕಾರಿಗಳು ಫಾರಿಸೀಗಳು. ಅದು ರಾಜರನ್ನೂ ರಾಜಕುಮಾರರನ್ನೂ ಮೂದಲಿಸುತ್ತದೆ, ಅದು ಹ್ಯಾಸ್ಮೀನಿಯನ್ ಮತ್ತು ಸದ್ದ್ಯೂಸೀ ರಾಜವಂಶಗಳನ್ನು ತಿರಸ್ಕರಿಸುತ್ತದೆ. ಅದು ಹೊಸ ಒಡಂಬಡಿಕೆಯ ಸಿದ್ಧಾಂತವನ್ನು ಬೆಂಬಲಿಸಿದೆ, ಅದರಲ್ಲೂ ಧರ್ಮೋದ್ಧಾರಕ, ನರಕ, ಅಂತಿಮ ತೀರ್ಪು, ಮುಂತಾದವುಗಳು. 'ಪಾರಡೈಸ್ ಲಾಸ್ಟ್'ನ ಮೊದಲೆರಡು ಭಾಗಗಳು ನೆನಪಾಗುತ್ತವೆ, ಅಲ್ಲಿನ ಸಾಹಿತ್ಯಕ ಗುಣ ಉನ್ನತ ಮಟ್ಟದ್ದು; ಬ್ಲೇಕ್‌ನ ಪ್ರವಾದಿ ಭಾಗಗಳು ಕೂಡ, ಆದರೆ ಅಲ್ಲಿನದು ಕೆಳಮಟ್ಟದ್ದು.

---

೧೫೩. ಈ ಗ್ರಂಥದ ಇಂಗ್ಲಿಷ್ ಪಠ್ಯಕ್ಕಾಗಿ ನೋಡಿ, ಚಾರ್ಲ್ಸ್, ಪೂರ್ವೋಕ್ತ, ಅದರಲ್ಲಿ ಅವರ ಪೀಠಿಕೆಯೂ ಇದೆ.

ಜೆನೆಸಿಸ್ ೬, ೨. ೪ ರ ವಿವರಣೆ ಅದರಲ್ಲಿದೆ, ಕುತೂಹಲಕಾರಿಯೂ ಹೌದು, ಸಾಹಸಪ್ರವೃತ್ತಿ (ಪ್ರೊಮೀಥಿಯನ್) ಕೂಡ ಹೌದು. ದೇವದೂತರು ಮನುಷ್ಯರಿಗೆ ಲೋಹವಿಜ್ಞಾನವನ್ನು ಹೇಳಿಕೊಟ್ಟರು, ಮತ್ತು 'ಚಿರಂತನ ರಹಸ್ಯ'ಗಳನ್ನು ಬಯಲುಮಾಡಿದ್ದಕ್ಕಾಗಿ ಶಿಕ್ಷೆಗೊಳಗಾದರು. ಅವರು ನರಭಕ್ಷಕರೂ ಹೌದು. ಪಾಪ ಮಾಡಿದ ದೇವದೂತರು ಕ್ರೈಸ್ತೇತರ ದೇವತೆಗಳಾದರು, ಅವರ ಹೆಂಗಸರು ಜಲದೇವತೆಯರಾದರು, ಆದರೆ ಕೊನೆಯಲ್ಲಿ, ಅವರು ಕೊನೆಯಿಲ್ಲದ ಚಿತ್ರಹಿಂಸೆಯ ಶಿಕ್ಷೆಗೊಳಗಾದರು.

ಅದರಲ್ಲಿ ತಕ್ಕಮಟ್ಟಿಗಿನ ಸಾಹಿತ್ಯ ಗುಣಗಳುಳ್ಳ ಸ್ವರ್ಗ ಮತ್ತು ನರಕಗಳ ವರ್ಣನೆಯೂ ಇದೆ. ಅಂತಿಮ ತೀರ್ಪನ್ನು ನಡೆಸುವವನು 'ಮಾನವನ ಮಗ, ಸದ್ಗುಣಭರಿತ', ಅವನು ಘನ ದೇವನ ಸಿಂಹಾಸನದಲ್ಲಿ ಕೂತಿರುತ್ತಾನೆ. ಕೆಲವು ಮಂದಿ ಯೆಹೂದ್ಯೇತರರು ಕೊನೆಗೆ ಪಶ್ಚಾತ್ತಾಪ ಪಟ್ಟು ಕ್ಷಮೆ ಪಡೆಯುತ್ತಾರೆ; ಅದರೆ ಬಹುತೇಕ ಯೆಹೂದ್ಯೇತರರು ಮತ್ತು ಹೆಲೆನೀಕರಣಗೊಳಿಸುವ ಯೆಹೂದಿಗಳು ಚಿರಂತನ ಪಾಪಕೂಪದಲ್ಲಿ ಕೊಳೆಯುತ್ತಾರೆ; ಸದ್ಗುಣಶೀಲರು ಪ್ರತೀಕಾರಕ್ಕಾಗಿ ಮೊರೆಯಿಡುತ್ತಾರೆ ಮತ್ತು ಅವರ ಪ್ರಾರ್ಥನೆಯನ್ನು ಮನ್ನಿಸಲಾಗುತ್ತದೆ.

ಅದರಲ್ಲೊಂದು ಭಾಗ ಖಗೋಳವಿಜ್ಞಾನಕ್ಕೆ ಸಂಬಂಧಿಸಿದ್ದು, ಸೂರ್ಯ ಮತ್ತು ಚಂದ್ರರಿಗೆ ವಾಯುವು ನಡೆಸುವ ರಥಗಳಿರುವುದೆಂದೂ ಮತ್ತು ಒಂದು ವರ್ಷದಲ್ಲಿ ೩೬೪ ದಿನಗಳಿರುವುದೆಂದೂ, ಮನುಷ್ಯರ ಪಾಪಕರ್ಮಗಳು ಅವು ತಮ್ಮ ದಾರಿಯನ್ನು ಬದಲಿಸುವಂತೆ ಮಾಡುತ್ತವೆಂದೂ ಮತ್ತು ಸದ್ಗುಣಿಯು ಮಾತ್ರವೇ ಖಗೋಳವಿಜ್ಞಾನವನ್ನು ತಿಳಿಯುವನೆಂದೂ ಹೇಳಲಾಗಿದೆ. ಬೀಳುವ ನಕ್ಷತ್ರಗಳು ಬೀಳುವ ದೇವದೂತರು, ಅವರಿಗೆ ಪ್ರಧಾನ ದೇವದೂತರು ಶಿಕ್ಷೆ ನೀಡಿರುತ್ತಾರೆ.

ಆನಂತರ ಬರುವುದು ಪರಿಶುದ್ಧ ಇತಿಹಾಸ. ಮೆಕಬೀಸ್‌ವರೆಗಿನದು ಪೂರ್ವಸ್ವರೂಪದ ಬೈಬಲ್‌ನ ರೀತಿಯನ್ನು, ಆನಂತರ ಇತಿಹಾಸವನ್ನು ಅನುಸರಿಸುತ್ತದೆ. ಆನಂತರ ಲೇಖಕನು ಭವಿಷ್ಯವನ್ನು ಪ್ರವೇಶಿಸುತ್ತಾನೆ: ನವ ಜೆರೂಸಲೆಂ, ಉಳಿದ ಯೆಹೂದ್ಯೇತರರ ಮತಾಂತರ, ಸದ್ಗುಣಿಗಳ ಪುನರುತ್ಥಾನ ಮತ್ತು ಮತಧರ್ಮೋದ್ಧಾರಕರು.

ಪಾಪಿಗಳಿಗೆ ನೀಡುವ ಶಿಕ್ಷೆ ಹಾಗೂ ಪುಣ್ಯವಂತರಿಗೆ ನೀಡುವ ಪ್ರತಿಫಲ ಇವುಗಳನ್ನು ಕುರಿತ ಸಾಕಷ್ಟು ವಿವರ ಆನಂತರದ್ದು. ಇದರಲ್ಲಿ ಪಾಪಿಗಳ ವಿಚಾರದಲ್ಲಿ ಕ್ರೈಸ್ತ ಕ್ಷಮೆಯ ಕಿಂಚಿತ್ತೂ ಇಲ್ಲ. 'ಪಾಪಿಗಳೇ, ತೀರ್ಪಿನ ದಿನದಂದು, ಪುಣ್ಯವಂತರ ಪ್ರಾರ್ಥನೆಯ ಧ್ವನಿ ಕೇಳುತ್ತಿರುವಾಗ ನೀವೇನು ಮಾಡುತ್ತೀರಿ, ಎಲ್ಲಿಗೆ ಓಡಿಹೋಗುತ್ತೀರಿ?' 'ಪಾಪವನ್ನು ಭೂಮಿಗೆ ಕಳಿಸಲಿಲ್ಲ, ಮನುಷ್ಯನು ತಾನೇ

ಅದನ್ನು ಸೃಷ್ಟಿಸಿಕೊಂಡಿದ್ದಾನೆ.' ಪಾಪಗಳ ಲೆಕ್ಕ ದೇವಲೋಕದಲ್ಲಿ ದಾಖಲಾಗುತ್ತದೆ. 'ಪಾಪಿಗಳೇ, ನೀವು ಎಂದೆಂದಿಗೂ ಶಪಿತರಾಗುತ್ತೀರಿ, ನಿಮಗೆಂದೂ ಶಾಂತಿ ದೊರೆಯುವುದಿಲ್ಲ.' ಪಾಪಿಗಳು ತಮ್ಮ ಜೀವಮಾನಪೂರ್ತಿ ಸಂತೋಷದಿಂದಿರಬಹುದು, ಸಾವಿನಲ್ಲಿಯೂ; ಆದರೆ ಅವರ ಆತ್ಮಗಳು ಅಧೋಲೋಕದಲ್ಲಿ ಬೀಳುತ್ತವೆ, ಅಲ್ಲಿ ಅವರು 'ಕತ್ತಲು, ಕೈಕೋಳಗಳು ಮತ್ತು ಉರಿಯುವ ಜ್ವಾಲೆ' ಇವುಗಳ ಯಾತನೆ ಅನುಭವಿಸುತ್ತಾರೆ. ಆದರೆ ಪುಣ್ಯವಂತರ ವಿಷಯದಲ್ಲಿ, 'ನಾನು ಮತ್ತು ನನ್ನ ಪುತ್ರ ಅವರೊಂದಿಗೆ ಎಂದೆಂದಿಗೂ ಒಂದಾಗಿರುತ್ತೇವೆ.'

ಈ ಗ್ರಂಥದ ಕೊನೆಯ ಮಾತುಗಳೆಂದರೆ; 'ಶ್ರದ್ಧೆಯಿಟ್ಟವರಿಗೆ ಋಜು ಮಾರ್ಗದಲ್ಲಿನ ಮನೆಯಲ್ಲಿ ಶ್ರದ್ಧೆಯನ್ನು ಅವನು ಕರುಣಿಸುತ್ತಾನೆ. ಅವರು ಕತ್ತಲಲ್ಲಿ ಹುಟ್ಟಿ ಕತ್ತಲನ್ನು ಸೇರಿದವರನ್ನು ಕಾಣುತ್ತಾರೆ, ಅದೇ ಹೊತ್ತಿನಲ್ಲಿ ಸದ್ಗುಣಿಗಳು ಕಾಂತಿಯುಕ್ತರಾಗಿರುತ್ತಾರೆ. ಪಾಪಿಗಳು ಜೋರಾಗಿ ಕೂಗುತ್ತಾರೆ ಮತ್ತು ಕಾಂತಿಯುಕ್ತರಾದವರನ್ನು ಕಾಣುತ್ತಾರೆ, ಅವರು ಅವರಿಗೆ ನಿಗದಿಪಡಿಸಿರುವ ದಿನಗಳು ಮತ್ತು ಋತುಮಾನಗಳ ವಶವಾಗುತ್ತಾರೆ.'

ಕ್ರೈಸ್ತರಂತೆಯೇ ಯೆಹೂದಿಗಳೂ ಪಾಪದ ಬಗ್ಗೆ ತುಂಬ ಆಲೋಚನೆ ಮಾಡಿದರು, ಆದರೆ ಅವರಲ್ಲಿ ಕೆಲವರು ತಮ್ಮನ್ನೇ ಪಾಪಿಗಳೆಂದು ತಿಳಿದರು. ಇದು ಮುಖ್ಯವಾಗಿ ಒಂದು ಕ್ರೈಸ್ತ ಕಲ್ಪನೆ, ಫಾರಿಸೀ ಮತ್ತು ಪಬ್ಲಿಕನ್ ಕತೆಯಲ್ಲಿ ಹೇಳಿರುವಂತಹುದು, ಕ್ರಿಸ್ತನು ಯೆಹೂದಿ ಶಾಸ್ತ್ರಕಾರರು ಮತ್ತು ಫಾರಿಸೀಗಳ ಖಂಡನೆಯಲ್ಲಿ ಬೋಧಿಸಲಾಗಿರುವುದು. ಕ್ರೈಸ್ತಮತಧರ್ಮೀಯರು ಕ್ರೈಸ್ತ ವಿನಯವಂತಿಕೆಯನ್ನು ಅನುಸರಿಸಲು ಪ್ರಯತ್ನಿಸಿದರು; ಯೆಹೂದಿಗಳು ಒಟ್ಟಾರೆ ಹಾಗೆ ಮಾಡಲಿಲ್ಲ.

ಆದರೆ ಕ್ರಿಸ್ತನ ಕಾಲಕ್ಕೂ ಮುಂಚೆ ಸಂಪ್ರದಾಯನಿಷ್ಠ ಯೆಹೂದಿಗಳಲ್ಲೂ ಕೆಲವು ಅಪವಾದಗಳಿದ್ದುವು. ಉದಾಹರಣೆಗೆ, 'ಹನ್ನೆರಡು ಮಂದಿ ಪ್ರವರ್ತಕರ ಒಡಂಬಡಿಕೆಗಳ'ನ್ನು ತೆಗೆದುಕೊಳ್ಳಿ; ಇದು ಕ್ರಿಪೂ ೧೦೯-೧೦೭ ಅವಧಿಯಲ್ಲಿ ಹ್ಯಾಸ್ಮೋನಿಯನ್ ವಂಶದ ಪ್ರಧಾನ ಪುರೋಹಿತನಾದ ಹೈರ್ಕಾನಸ್‌ನನ್ನು ಮೆಚ್ಚಿಕೊಂಡಿದ್ದ ಫಾರಿಸೀ ಒಬ್ಬನಿಂದ ರಚಿತವಾಯಿತು. ಇಂದು ನಮ್ಮೆದುರಿಗಿರುವ ಈ ಭಾಗದಲ್ಲಿ ಕ್ರೈಸ್ತ ಪ್ರಕ್ಷೇಪಗಳಿವೆ, ಆದರೆ ಇವೆಲ್ಲ ಶಾಸ್ತ್ರಪ್ರಾಮಾಣ್ಯಗಳಿಗೆ ಸಂಬಂಧಿಸಿದವು. ಆದರೆ ಅವುಗಳನ್ನು ಕೈಬಿಟ್ಟಾಗ ಉಳಿಯುವ ನೈತಿಕ ಬೋಧನೆಗಳು ಸುವಾರ್ತೆಗಳದಕ್ಕೆ ಹತ್ತಿರವಾಗುತ್ತವೆ. ರೆವೆರೆಂಡ್ ಆರ್.ಎಚ್. ಚಾರ್ಲ್ಸ್ ಹೀಗೆನ್ನುತ್ತಾರೆ: 'ಪರ್ವತೋಪದೇಶ ಪ್ರಸಂಗ'ವು (ಸೆರ್ಮನ್ ಆನ್ ದ ಮೌಂಟ್) ಅನೇಕ ಕಡೆಗಳಲ್ಲಿ ನಮ್ಮ ಪಠ್ಯದ ಸತ್ವವನ್ನು ಪ್ರತಿಬಿಂಬಿಸುತ್ತದೆ, ಅಷ್ಟೇಕೆ ಅದರ ಕೆಲವು ನುಡಿಗುಚ್ಛಗಳನ್ನೂ

ಪುನರುಕ್ತಿ ಮಾಡುತ್ತವೆ: ಅನೇಕ ಸುವಾರ್ತೆಗಳಲ್ಲಿ ಅನೇಕ ಭಾಗಗಳು ಕೂಡ ಅದರ ಕುರುಹುಗಳನ್ನು ಉಳಿಸಿಕೊಂಡಿದೆ; ಸಂತ ಪೌಲ್ ಅದನ್ನು ಒಂದು ಕೈಪಿಡಿ (ವಾಡಿ ಮೇಕಮ್)ಯ ಹಾಗೆ ಬಳಸುತ್ತಿದ್ದಂತೆ ತೋರುತ್ತದೆ' (ಪೂರ್ವೋಕ್ತ, ಪು. ೨೯೧-೨). ಈ ಭಾಗದಲ್ಲಿ ಈ ಕೆಳಕಂಡಂತಹ ಸೂತ್ರಗಳನ್ನು ಕಾಣುತ್ತೇವೆ:

'ಪರಸ್ಪರರನ್ನು ಹೃದಯಪೂರ್ವಕವಾಗಿ ಪ್ರೀತಿಸಿ, ಯಾರಾದರೂ ನಿನ್ನ ವಿರುದ್ಧ ಪಾಪಕೃತ್ಯವೆಸಗಿದರೆ ಅವನಿಗೆ ಶಾಂತವಾಗಿ ಹೇಳಿ, ನಿಮ್ಮ ಮನಸ್ಸಿನಲ್ಲಿ ಕಹಿ ಉಳಿಯದಿರಲಿ; ಅವನು ತಪ್ಪೊಪ್ಪಿಕೊಂಡು ಪಶ್ಚಾತ್ತಾಪಪಟ್ಟರೆ ಅವನನ್ನು ಕ್ಷಮಿಸಿರಿ. ಆದರೆ ಅವನು ಒಪ್ಪದಿದ್ದರೆ, ಅವನ ಬಗ್ಗೆ ತೀವ್ರ ಭಾವನೆಗಳನ್ನಿಟ್ಟುಕೊಳ್ಳಬೇಡಿ, ಯಾಕೆಂದರೆ ನಿಮ್ಮಿಂದ ವಿಷಯವನ್ನು ಗ್ರಹಿಸಿ ಅವನು ಆಣೆ ಮಾಡುತ್ತಾನೆ, ಮತ್ತಷ್ಟು ಪಾಪಕೃತ್ಯವನ್ನೂ ಎಸಗಬಹುದು .. .. ಅವನು ನಾಚಿಕೆಯಿಲ್ಲದೆ ಪಾಪಕೃತ್ಯಗಳನ್ನು ಪುನರಾವರ್ತಿಸಿದರೂ ಅವನನ್ನು ಹೃತ್ಪೂರ್ವಕವಾಗಿ ಕ್ಷಮಿಸಿರಿ, ಪ್ರತೀಕಾರದ ವಿಷಯವನ್ನು ದೇವರಿಗೆ ಬಿಟ್ಟುಬಿಡಿ.'

ಕ್ರಿಸ್ತನು ಈ ಭಾಗವನ್ನು ಚೆನ್ನಾಗಿ ತಿಳಿದಿದ್ದಿರಬೇಕು ಎಂದು ಡಾ. ಚಾರ್ಲ್ಸ್ ಅಭಿಪ್ರಾಯಪಡುತ್ತಾರೆ. ಮತ್ತೆ ಇವೂ ಇವೆ:

'ದೇವರನ್ನೂ ನಿಮ್ಮ ನೆರೆಹೊರೆಯರನ್ನೂ ಪ್ರೀತಿಸಿ.'

'ದೇವರನ್ನು ಜೀವಮಾನದುದ್ದಕ್ಕೂ, ಹಾಗೂ ಪರಸ್ಪರರನ್ನು ಹೃತ್ಪೂರ್ವಕವಾಗಿಯೂ ಪ್ರೀತಿಸಿರಿ.'

'ನಾನು ದೇವರನ್ನು ಪ್ರೀತಿಸುತ್ತೇನೆ, ಹಾಗೆಯೇ ಪ್ರತಿಯೊಬ್ಬನನ್ನೂ, ಹೃತ್ಪೂರ್ವಕವಾಗಿ.'

ಇವುಗಳನ್ನು ಮ್ಯಾಥ್ಯೂ ೨೨, ೩೭-೩೯ ರೊಡನೆ ಹೋಲಿಸಬಹುದು. 'ಹನ್ನೆರಡು ಮಂದಿ ಪ್ರವರ್ತಕರ ಒಡಂಬಡಿಕೆಗಳ'ಲ್ಲಿ ಎಲ್ಲ ಬಗೆಯ ದ್ವೇಷಭಾವನೆಯನ್ನು ಖಂಡಿಸಲಾಗಿದೆ; ಉದಾಹರಣೆಗೆ,

'ಕೋಪವು ಕುರುಡಾದದ್ದು, ಯಾವ ವ್ಯಕ್ತಿಯ ಮುಖವನ್ನು ನೋಡುವುದಕ್ಕೂ ಅದಕ್ಕೆ ಸಾಧ್ಯವಾಗದು.'

'ಹೀಗಾಗಿ ದ್ವೇಷವು ಕೆಟ್ಟುದು; ಯಾಕೆಂದರೆ ಅದು ಸದಾ ಸುಳ್ಳಿನೊಡನೆ ಕೂಡಿರುತ್ತದೆ.' ಈ ಭಾಗದ ಕರ್ತೃವಿನ ದೃಷ್ಟಿಯಲ್ಲಿ ಯೆಹೂದಿಗಳು ಮಾತ್ರವಲ್ಲ, ಎಲ್ಲ ಯೆಹೂದ್ಯೇತರರರನ್ನೂ ಉಳಿಸಬಹುದು ಎನ್ನುವಂತಹವನು ಎಂದು ಊಹಿಸಬಹುದು.

ಕ್ರೈಸ್ತರು ಸುವಾರ್ತೆಗಳಿಂದ ಫಾರಿಸೀಗಳ ಬಗ್ಗೆ ಕೆಟ್ಟುದಾಗಿ ಯೋಚಿಸುವುದನ್ನು ಕಲಿತರು, ಆದರೂ ಈ ಭಾಗದ ಕರ್ತೃವು ಒಬ್ಬ ಫಾರಿಸೀ, ನಾವಾಗಲೇ ನೋಡಿದಂತೆ, ಅವನು ನಾವು ವಿಶಿಷ್ಟವಾಗಿ ಕ್ರಿಸ್ತನ ಬೋಧನೆ ಎಂದು ಭಾವಿಸುವ ನೈತಿಕ ಸೂತ್ರಗಳನ್ನು

ಬೋಧಿಸಿದ. ಇದರ ಕಾರಣವನ್ನು ವಿವರಿಸುವುದೇನೂ ಕಷ್ಟವಲ್ಲ. ಮೊದಲನೆಯದಾಗಿ, ತನ್ನ ಕಾಲದಲ್ಲಿಯೇ ಅವನು ಒಬ್ಬ ಅಸಾಧಾರಣ ಫಾರಿಸಿಯಾಗಿರಬೇಕು; ಆಗಿನ ಹೆಚ್ಚು ಸಾಮಾನ್ಯವಾದ ಸಿದ್ಧಾಂತವೆಂದರೆ ಈನೋಖ್‌ನ ಭಾಗ ಎಂಬುದರಲ್ಲಿ ಸಂಶಯವಿಲ್ಲ. ಎರಡನೆಯದಾಗಿ, ಎಲ್ಲ ಚಳವಳಿಗಳೂ ಜಡವಾಗಿಬಿಡುವತ್ತ ಸಾಗುತ್ತವೆ; ಜೆಫರ್‌ಸನ್ ತತ್ವಗಳು ಅಮೆರಿಕನ್ ಕ್ರಾಂತಿಯ ಮಗಳಂದಿರಿಂದ (ಡಾಟರ್ಸ್ ಆಫ್ ದ ಅಮೆರಿಕನ್ ರೆವಲ್ಯೂಷನ್) ಬಂದವು ಎಂದು ಯಾರು ತಾನೇ ಊಹಿಸಬಲ್ಲರು? ಮೂರನೆಯದಾಗಿ, ನಿಯಮಸಂಹಿತೆಯು ಆತ್ಯಂತಿಕವಾದ ಅಂತಿಮ ಸತ್ಯವೆಂದು ಅದಕ್ಕೆ ಬದ್ಧರಾಗಿದ್ದ ಹಾಗು ತಮ್ಮಲ್ಲಿನ ಹೊಸವೂ ಜೀವಂತವೂ ಆದ ಆಲೋಚನೆ ಮತ್ತು ಭಾವನೆಗಳಿಗೆ ಕೊನೆ ಹಾಡಿದ ಫಾರಿಸಿಗಳ ವಿಷಯ ನಮಗೆ ತಿಳಿದದ್ದೇ. ಡಾ. ಚಾರ್ಲ್ಸ್ ಹೇಳುತ್ತಾರೆ:

'ಪಾರಿಸೀ ಪಂಥವು ತನ್ನ ಪಕ್ಷದ ಪ್ರಾಚೀನ ಆದರ್ಶಗಳಿಂದ ದೂರವಾದಾಗ ಅದು ರಾಜಕೀಯ ಆಸಕ್ತಿಗಳಿಗೂ ಚಳವಳಿಗಳಿಗೂ ಬದ್ಧವಾದವು, ಆನಂತರ ನಿರಂತರವಾಗಿ ನಿಯಮಸಂಹಿತೆಯ ಅಕ್ಷರಶಃ ಪಾಲನೆಗೆ ತೊಡಗಿದರು; ಇದರಿಂದಾಗಿ ಬಹುಬೇಗ (ಪ್ರವರ್ತಕರ) ಒಡಂಬಡಿಕೆಯ ಘನವಾದ ನಿಯಮಸಂಹಿತೆಯ ಬೆಳವಣಿಗೆಗೆ ಕೊನೆಯಾಯಿತು. ಇದರಿಂದಾಗಿ ಹಿಂದಿನ ಹಾಸಿದ್‌ರ ಮತ್ತವರ ಉಪದೇಶಗಳು ಯೆಹೂದಿ ಮತಧರ್ಮದಿಂದ ದೂರವಾಗಿ ಪ್ರಾಚೀನ ಕ್ರೈಸ್ತಮತಧರ್ಮದಲ್ಲಿ ತಮ್ಮ ಸಹಜ ನೆಲೆಯನ್ನು ಕಂಡುಕೊಂಡವು.'

ಪ್ರಧಾನ ಪುರೋಹಿತರ ಆಳ್ವಿಕೆಯ ಕಾಲವಾದ ಬಳಿಕ, ಮಾರ್ಕ್ ಆಂಟೋನಿಯು ತನ್ನ ಸ್ನೇಹಿತನಾದ ಹೆರಾದ್‌ನನ್ನು ಯೆಹೂದಿ ರಾಜನನ್ನಾಗಿ ಮಾಡಿದ. ಹೆರಾದ್ ಒಬ್ಬ ಸಾಹಸಪ್ರೇಮಿ, ಇದರಿಂದಾಗಿ ಹಲವೊಮ್ಮೆ ದಿವಾಳಿಯ ಅಂಚಿಗೆ ಬಂದಿದ್ದವನು, ರೋಮನ್ ಸಮಾಜಕ್ಕೆ ಒಗ್ಗಿಕೊಂಡಿದ್ದವನು, ಯೆಹೂದಿ ಪಾವಿತ್ರ್ಯದಿಂದ ತುಂಬವೇ ದೂರವಾಗಿದ್ದವನು. ಅವನ ಹೆಂಡತಿಯು ಪ್ರಧಾನ ಪುರೋಹಿತರ ಕುಟುಂಬಕ್ಕೆ ಸೇರಿದವಳು, ಆದರೆ ಅವನು ಇದುಮಿಯದವನು; ಅವನ ಬಗ್ಗೆ ಯೆಹೂದಿಗಳು ಸಂಶಯಪಡಲು ಇಷ್ಟೇ ಸಾಕಾಗಿತ್ತು. ಅವನೊಬ್ಬ ಕುಶಲ ಅವಕಾಶವಾದಿ, ಆಕ್ಟೇವಿಯಸ್ ಗೆಲ್ಲುತ್ತಾನೆಂಬುದು ವಿದಿತವಾದಾಗ ಸುಲಭವಾಗಿ ಅವನು ಆಂಟೋನಿಯನ್ನು ಕೈಬಿಟ್ಟ. ಆದರೆ ಯೆಹೂದಿಗಳನ್ನು ತನ್ನ ಆಳ್ವಿಕೆಗೆ ಹೊಂದಿಕೊಳ್ಳುವಂತೆ ಮಾಡಲು ಪ್ರಯತ್ನಗಳನ್ನೇನೋ ಮಾಡಿದ. ದೇವಾಲಯವನ್ನವನು ಪುನರ್ನಿರ್ಮಿಸಿದ, ಆದರೆ ಕಾರಿಂಥ್ ಬಗೆಯ ಸ್ತಂಭಗಳಿರುವ ಹೆಲೆನಿಕ್ ಶೈಲಿಯಲ್ಲಿ; ಅಲ್ಲದೆ ದೇವಾಲಯದ ಮುಖ್ಯದ್ವಾರದ ಮೇಲೆ ಚಿನ್ನದ ಹದ್ದಿನ ಪ್ರತಿಮೆಯನ್ನು ಸ್ಥಾಪಿಸಿದ, ಹೀಗೆ ಎರಡನೆಯ ಆಜ್ಞೆಯನ್ನು ಮೀರಿದ. ಅವನು ಸಾಯುತ್ತಿರುವನೆಂಬ ವದಂತಿ ಹಬ್ಬಿದಾಗ ಫಾರಿಸಿಗಳು ಹದ್ದನ್ನು ಕಿತ್ತು

ಹಾಕಿದರು, ಆದರೆ ಅವನು ಸೇಡಿನಿಂದ ಅವರಲ್ಲಿ ಅನೇಕ ಮಂದಿಯನ್ನು ಮರಣಕ್ಕೆ ಗುರಿಪಡಿಸಿದ. ಅವನು ಕ್ರಿಪೂ ೪ ರಲ್ಲಿ ಸತ್ತ, ಅವನ ಸಾವಿನ ಬಳಿಕ ಬಹು ಬೇಗ ರೋಮನ್‌ರು ರಾಜತ್ವವನ್ನು ರದ್ದು ಮಾಡಿ, ಜೂಡಿಯವನ್ನು ಒಬ್ಬ ದಂಡಾಧಿಕಾರಿಯ ಆಡಳಿತದಲ್ಲಿರಿಸಿದರು. ಕ್ರಿಶ ೨೬ ರಲ್ಲಿ ದಂಡಾಧಿಕಾರಿಯಾದ ಪಾಂಟಿಯಸ್ ಪೈಲೇತ್ ತಂತ್ರಗಾರನಾದದ್ದರಿಂದ ಬೇಗ ಅವನನ್ನು ತೆಗೆದುಹಾಕಲಾಯಿತು.

ಕ್ರಿಶ ೬೬ ರಲ್ಲಿ, ಜ಼ೀಲಟ್‌ರ ಪಕ್ಷದ ನೇತೃತ್ವದಲ್ಲಿ ಯೆಹೂದಿಗಳು ರೋಮ್ ವಿರುದ್ಧ ಬಂಡೆದ್ದರು. ಅವರನ್ನು ಸೋಲಿಸಿ ಜೆರೂಸಲೆಂ ಅನ್ನು ಕ್ರಿಶ ೭೦ ರಲ್ಲಿ ವಶಪಡಿಸಿಕೊಳ್ಳಲಾಯಿತು, ದೇವಾಲಯವನ್ನು ಧ್ವಂಸಮಾಡಲಾಯಿತು; ಕೆಲವು ಯೆಹೂದಿಗಳು ಜೂಡಿಯವನ್ನು ಬಿಟ್ಟು ಹೋದರು.

ಈ ಕಾಲಕ್ಕಿಂತ ಅನೇಕ ಶತಮಾನಗಳ ಮುಂಚೆಯೇ ಈ ಚೆದುರಿಕೆಯ ಯೆಹೂದಿಗಳು ಮುಖ್ಯರಾದರು. ಯೆಹೂದಿಗಳಲ್ಲಿ ಬಹುತೇಕ ಎಲ್ಲರೂ ಮೂಲತಃ ಬೇಸಾಯಗಾರರು; ಆದರೆ ಬಂಧನಸ್ಥಿತಿಯಲ್ಲಿದ್ದಾಗ ಅವರು ಬ್ಯಾಬಿಲೋನಿಯನ್ನರಿಂದ ವ್ಯಾಪಾರ ವೃತ್ತಿಯಲ್ಲಿ ಪಳಗಿದರು. ಅವರಲ್ಲಿ ಅನೇಕರು ಎಜ಼್ರಾ ಮತ್ತು ನೆಹೇಮಿಯರ ಕಾಲದ ನಂತರ ಬ್ಯಾಬಿಲೋನ್‌ನಲ್ಲಿಯೇ ಉಳಿದುಕೊಂಡರು; ಇವರಲ್ಲಿ ಹಲವರು ತುಂಬ ಹಣವಂತರಾಗಿದ್ದರು. ಅಲೆಕ್ಸಾಂಡ್ರಿಯ ಸ್ಥಾಪನೆಗೊಂಡ ಬಳಿಕ ಸಾಕಷ್ಟು ಮಂದಿ ಯೆಹೂದಿಗಳು ಆ ನಗರದಲ್ಲಿಯೇ ನೆಲಸಿದರು; ಅವರಿಗೆ ವಿಶೇಷ ಜಾಗವನ್ನು ಗುರುತಿಸಿ ಕೊಡಲಾಯಿತು, ಕೊಳೆಗೇರಿಯಂತಲ್ಲ, ಆದರೆ ಯೆಹೂದ್ಯೇತರರ ಸಂಪರ್ಕದಿಂದಾಗಿ ಮೈಲಿಗೆಗೊಳ್ಳುವ ಅಪಾಯದಿಂದ ದೂರಮಾಡಲು. ಅಲೆಕ್ಸಾಂಡ್ರಿಯದ ಯೆಹೂದಿಗಳು ಜೂಡಿಯದವರಿಗಿಂತ ಹೆಚ್ಚು ಹೆಲೇನೀಕರಣಕ್ಕೊಳಗಾಗಿ ಹೀಬ್ರೂ ಭಾಷೆಯನ್ನು ಮರೆತರು. ಈ ಕಾರಣದಿಂದಾಗಿ ಹಳೆ ಒಡಂಬಡಿಕೆಯನ್ನು ಗ್ರೀಕ್‌ಗೆ ಅನುವಾದಿಸುವ ಅನಿವಾರ್ಯವುಂಟಾಯಿತು, ಇದರ ಫಲವೇ ಸೆಪ್ಟ್ಯುಯಜಿಂಟ್; ಪೆಂಟಟ್ಯೂಕ್ ಅನ್ನು ಕ್ರಿಶ ಮೂರನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಅನುವಾದಿಸಲಾಯಿತು; ಉಳಿದ ಭಾಗಗಳು ಆನಂತರ ಬಂದವು.

ಸೆಪ್ಟ್ಯುಯಜಿಂಟ್ ಬಗ್ಗೆ ಅನೇಕ ದಂತಕತೆಗಳು ಹುಟ್ಟಿಕೊಂಡವು, ಅದಕ್ಕೆ ಮೂಲ ಕಾರಣ ಅದನ್ನು ಅನುವಾದಿಸಿದ್ದು ಎಪ್ಪತ್ತು ಮಂದಿ. ಎಪ್ಪತ್ತು ಮಂದಿಯೂ ಇಡಿಯಾಗಿ ಅದನ್ನು ಬೇರೆ ಬೇರೆಯಾಗಿ ಅನುವಾದಿಸಿದರು, ಅವುಗಳನ್ನು ಹೋಲಿಸಿ ನೋಡಿದಾಗ ಅತ್ಯಂತ ಸಣ್ಣ ವಿವರದಲ್ಲಿಯೂ ಅವು ಒಂದೇ ಬಗೆಯಾಗಿದ್ದವು, ಎಲ್ಲವೂ ದೈವಿಕ ಸ್ಫೂರ್ತಿಯಿಂದ ಹೊಮ್ಮಿದಂತಹವು ಎಂಬ ಕತೆ ಹುಟ್ಟಿತು. ಆದರೆ ಸೆಪ್ಟ್ಯುಯಜಿಂಟ್ ಬಹಳ ತಪ್ಪುಗಳಿಂದ ಕೂಡಿದೆ ಎಂದು ಆನಂತರ ವಿದ್ವಾಂಸರು ಕಂಡುಹಿಡಿದರು. ಕ್ರೈಸ್ತಮತಧರ್ಮದ ಬಳಿಕ ಯೆಹೂದಿಗಳು ಅದರ ಬಳಕೆ

ಮಾಡಿಕೊಂಡದ್ದು ಕಡಿಮೆಯಾದರೂ ಹೀಬ್ರೂದ ಹಳೆ ಒಡಂಬಡಿಕೆಯ ಬಗ್ಗೆ ಗೌರವಭಾವ ತಾಳಿದ್ದರು. ಇದಕ್ಕೆ ವ್ಯತಿರಿಕ್ತವಾಗಿ, ಪ್ರಾಚೀನ ಕ್ರೈಸ್ತರಲ್ಲಿ ಹೀಬ್ರೂ ತಿಳಿದಿದ್ದ ಕೆಲವರು ಸೆಪ್ಟ್ಯೂಯಜಿಂಟ್ ಅನ್ನೇ ಅವಲಂಬಿಸಿದರು, ಅಥವಾ ಅದರ ಲ್ಯಾಟಿನ್ ಅನುವಾದವನ್ನು. ಮೂರನೆಯ ಶತಮಾನದಲ್ಲಿ ಅದಕ್ಕಿಂತ ಉತ್ತಮವಾದ ಪಠ್ಯವನ್ನು ಓರಿಜೆನ್‌ನ ಶ್ರಮದಿಂದ ಹೊರಬಂತು; ಆದರೆ ಕ್ರಿಶ ಐದನೆಯ ಶತಮಾನದಲ್ಲಿ ಜೆರೋಮ್ ವಲ್ಗೇಟ್ ಅನ್ನು ಹೊರತರುವವರೆಗೂ ಲ್ಯಾಟಿನ್ ತಿಳಿದಿದ್ದವರು ದೋಷಯುಕ್ತವಾದ ಆವೃತ್ತಿಯನ್ನೇ ಅವಲಂಬಿಸಿದರು. ಇದನ್ನು ಮೊದಲಿಗೆ ಟೀಕೆಯಿಂದಲೇ ಬರಮಾಡಿಕೊಳ್ಳಲು ಕಾರಣ ಪಠ್ಯನಿರ್ಣಯದಲ್ಲಿ ಅವನಿಗೆ ಯೆಹೂದಿಗಳು ಸಹಾಯ ಮಾಡಿದ್ದರೆಂಬುದು, ಹೀಗಾಗಿ ಯೆಹೂದಿಗಳು ಉದ್ದೇಶಪೂರ್ವವಾಗಿಯೇ ಕ್ರಿಸ್ತನ ಬರುವಿಕೆಯ ಪೂರ್ವಸೂಚನೆಯಿಲ್ಲದ ಹಾಗೆ ಪ್ರವಾದಿ ವಾಕ್ಕುಗಳಲ್ಲಿ ಕೈಯಾಡಿಸಿರುವರೆಂದು ಅನೇಕ ಕ್ರೈಸ್ತರು ಭಾವಿಸಿದರು. ಆದರೆ ಕಾಲಕ್ರಮೇಣ ಸಂತ ಜೆರೋಮ್‌ನ ಕೃತಿಯನ್ನು ಒಪ್ಪಿಕೊಳ್ಳಲಾಯಿತು, ಇಂದೂ ಸಹ ಕ್ಯಾಥೋಲಿಕ್ ಚರ್ಚ್‌ಗಳಲ್ಲಿ ಅದೇ ಅಧಿಕೃತವಾಗಿ ಉಳಿದಿದೆ.

ಚಿಂತನೆಯ ವಲಯದಲ್ಲಿ ಯೆಹೂದಿಗಳ ಮೇಲೆ ಗ್ರೀಕ್ ಪ್ರಭಾವವಾಗಿದ್ದುದರ ಅತ್ಯಂತ ಉತ್ತಮ ನಿದರ್ಶನವೆಂದರೆ ಕ್ರಿಸ್ತನ ಸಮಕಾಲೀನನಾಗಿದ್ದ ತತ್ವಜ್ಞಾನಿ ಫೈಲೋನೇ. ಮತಧರ್ಮದ ವಿಷಯದಲ್ಲಿ ಸಾಂಪ್ರದಾಯಿಕನಾಗಿದ್ದರೂ, ತತ್ವಜ್ಞಾನದ ಮಟ್ಟಿಗೆ ಮಾತ್ರ ಮೂಲತಃ ಒಬ್ಬ ಪ್ಲೇಟೋವಾದಿ; ಆದ ಇತರ ಪ್ರಭಾವಗಳೆಂದರೆ ಸಂಯಮವಾದಿಗಳದು ಮತ್ತು ನವಪೈಥಾಗೊರಾಸ್‌ವಾದಿಗಳದು. ಜೆರೂಸಲೆಂ ಪತನಗೊಂಡ ಬಳಿಕ ಅವನ ಪ್ರಭಾವವು ಇಳಿಮುಖವಾದರೂ ಗ್ರೀಕ್ ತತ್ವಜ್ಞಾನ ಮತ್ತು ಹೀಬ್ರೂ ಧರ್ಮಗ್ರಂಥಗಳನ್ನು ಒಪ್ಪಿಕೊಳ್ಳುವ ಸಂಯೋಜಕ ಮಾರ್ಗವನ್ನು ತೋರಿಸಿದನೆಂದು ಕ್ರೈಸ್ತ ಪಾದ್ರಿಗಳು ಕಂಡುಕೊಂಡರು.

ಪ್ರಾಚೀನ ಕಾಲದ ಪ್ರತಿ ಮುಖ್ಯ ನಗರದಲ್ಲಿಯೂ ಯೆಹೂದಿ ವಸಾಹತು ಸೃಷ್ಟಿಯಾಯಿತು. ಸಂದೇಹವಾದ ಅಥವಾ ಗ್ರೀಸ್ ಮತ್ತು ರೋಮ್‌ಗಳ ಅಧಿಕೃತ ಮತಧರ್ಮಗಳಿಂದ ತೃಪ್ತಗೊಳ್ಳದ ಜನರ ಮೇಲಾಗಿದ್ದ ಪ್ರಭಾವಗಳನ್ನು ಅವರು ಇತರ ಪೌರಸ್ತ್ಯ ಮತಧರ್ಮಗಳ ಪ್ರತಿನಿಧಿಗಳೊಂದಿಗೆ ಹಂಚಿಕೊಂಡರು. ಆ ಚಕ್ರಾಧಿಪತ್ಯದಲ್ಲಿ ಮಾತ್ರವಲ್ಲದೆ ದಕ್ಷಿಣ ರಷ್ಯಾದಲ್ಲಿಯೂ ಅನೇಕರನ್ನು ಜೂದಾಯಿಸಂಗೆ ಮತಾಂತರಗೊಳಿಸಲಾಯಿತು. ಕ್ರೈಸ್ತಮತಧರ್ಮವು ಮೊದಲು ರುಚಿಸಿದ್ದು ಪ್ರಾಯಶಃ ಯೆಹೂದಿ ಮತ್ತು ಅರೆಯೆಹೂದಿ ವಲಯಗಳಲ್ಲಿ. ಆದರೆ ಸಾಂಪ್ರದಾಯಿಕ ಜೂದಾಯಿಸಂ ಹೆಚ್ಚು ಸಂಪ್ರದಾಯನಿಷ್ಠವಾಯಿತು ಹಾಗೂ ಹಿಂದೆ ನೆಬೂಛದ್ರೆಜ್ಜಾರ್‌ನ ಕಾರಣದಿಂದ ಪತನಗೊಂಡಿದ್ದಾಗಿನಂತೆಯೇ ಜೆರೂಸಲೆಂನ ಪತನದ ನಂತರ ಸಂಕುಚಿತವಾಯಿತು. ಕ್ರಿಶ ಮೊದಲ ಶತಮಾನದ ಬಳಿಕ,

ಕ್ರೈಸ್ತಮತಧರ್ಮವೂ ಹರಳುಗಟ್ಟಿತು; ಜೂದಾಯಿಸಂ ಮತ್ತು ಕ್ರೈಸ್ತಮತಧರ್ಮಗಳ ಸಂಬಂಧವು ಸಂಪೂರ್ಣವಾಗಿ ದ್ವೇಷಪೂರಿತವೂ ಬಾಹ್ಯವೂ ಆಯಿತು. ಮುಂದೆ ನೋಡುವಂತೆ, ಕ್ರೈಸ್ತಮತಧರ್ಮವು ಬಹು ತೀವ್ರವಾಗಿ ಯೆಹೂದಿವಿರೋಧವನ್ನು ಪ್ರೇರಿಸಿತು. ಮಧ್ಯಯುಗದಾದ್ಯಂತ ಕ್ರೈಸ್ತ ದೇಶಗಳ ಸಂಸ್ಕೃತಿಯಲ್ಲಿ ಯೆಹೂದಿಗಳ ಯಾವುದೇ ಪಾತ್ರವಿರಲಿಲ್ಲ; ಕ್ಯಾಥೆಡ್ರಲ್‌ಗಳ ಕಟ್ಟುವಿಕೆ ಮತ್ತು ಅಂತಹ ಕಾರ್ಯಗಳಿಗೆ ಬಂಡವಾಳ ಒದಗುವುದರ ಹೊರತಾಗಿ ನಾಗರಿಕತೆಗೆ ಯಾವುದೇ ಕೊಡುಗೆಯನ್ನು ನೀಡುವುದು ಸಾಧ್ಯವಾಗದಿರುವಂತೆ ಅವರಿಗೆ ಕಿರುಕುಳ ನೀಡಲಾಯಿತು. ಆ ಕಾಲದಲ್ಲಿ ಮಹಮ್ಮದೀಯರಲ್ಲಿ ಮಾತ್ರವೇ ಯೆಹೂದಿಗಳನ್ನು ಮಾನವೀಯತೆಯಿಂದ ನಡೆಸಿಕೊಳ್ಳಲಾಯಿತು; ಹಾಗಾಗಿ ಅವರು ತತ್ವಜ್ಞಾನ ಮತ್ತು ಪ್ರೌಢ ಚಿಂತನೆಗಳ ಕ್ಷೇತ್ರಗಳಲ್ಲಿ ವ್ಯಾಸಂಗ ನಡೆಸಲು ಸಾಧ್ಯವಾಯಿತು.

ಮಧ್ಯಯುಗದಾದ್ಯಂತ, ಮಹಮ್ಮದೀಯರು ಕ್ರೈಸ್ತರಿಗಿಂತ ಹೆಚ್ಚು ಸುಸಂಸ್ಕೃತರೂ ಮತ್ತು ಮಾನವೀಯತಾವಾದಿಗಳೂ ಆಗಿದ್ದರು. ಕ್ರೈಸ್ತರು ಯೆಹೂದಿಗಳಿಗೆ, ಅದರಲ್ಲಿಯೂ ಮತಧಾರ್ಮಿಕ ಆವೇಶದ ಸಂದರ್ಭಗಳಲ್ಲಿ, ಕಿರುಕುಳವಿತ್ತರು; ಧರ್ಮಯುದ್ಧಗಳು ಭಯಾನಕ ಹತ್ಯಾಕಾಂಡಗಳಿಂದ ಕೂಡಿದ್ದವು. ಮಹಮ್ಮದೀಯ ದೇಶಗಳಲ್ಲಿ, ಅದಕ್ಕೆ ವಿರುದ್ಧವಾಗಿ ಯೆಹೂದಿಗಳನ್ನು ಬಹು ಕಾಲಗಳಲ್ಲಿ ಕೆಟ್ಟದಾಗಿ ನಡೆಸಿಕೊಳ್ಳಲಿಲ್ಲ. ಅದರಲ್ಲಿಯೂ ಮೂರ್ ಜನಾಂಗದ ಸ್ಪೈಯಿನ್‌ನಲ್ಲಿ ಅವರು ವಿದ್ಯೆಗೆ ಕೊಡುಗೆಯಿತ್ತರು; ಕಾರ್ಡೋವಾದಲ್ಲಿ ಹುಟ್ಟಿದ ಮೈಮೊನೈಡೀಸ್‌ನನ್ನು (೧೧೩೫–೧೨೦೪) ಕೆಲವರು ಸ್ಪಿನೋಜ಼ನ ತತ್ವಜ್ಞಾನದ ಮೂಲವೆಂದು ಪರಿಗಣಿಸುತ್ತಾರೆ. ಕ್ರೈಸ್ತರು ಸ್ಪೈಯಿನ್ ಅನ್ನು ಮತ್ತೆ ಗೆದ್ದಾಗ ಅವರಿಗೆ ಮೂರ್ ಜನಾಂಗದವರ ವಿದ್ಯೆಯನ್ನು ಕಲಿಸಿದವರು ಯೆಹೂದಿಗಳು. ಹೀಬ್ರೂ, ಗ್ರೀಕ್ ಮತ್ತು ಅರೆಬಿಕ್‌ಗಳನ್ನು ತಿಳಿದಿದ್ದ ಹಾಗೂ ಅರಿಸ್ಟಾಟಲ್‌ನ ತತ್ವಜ್ಞಾನದ ಪರಿಜ್ಞಾನವಿದ್ದ ವಿದ್ವಾಂಸರಾದ ಯೆಹೂದಿಗಳು ಕಡಿಮೆ ವಿದ್ಯಾಮಟ್ಟದ ಜನರಿಗೆ ತಮ್ಮ ವಿದ್ಯೆಯನ್ನು ಧಾರೆಯೆರೆದರು. ಅವರು ಕಡಿಮೆ ಅಪೇಕ್ಷಣೀಯವಾದ ರಸವಾದ ಮತ್ತು ಜ್ಯೋತಿಷಗಳನ್ನೂ ವಿಷಯಗಳನ್ನೂ ಕಲಿಸಿದರೆಂಬುದು ನಿಜ.

ಮಧ್ಯಯುಗವಾದ ಬಳಿಕ, ಯೆಹೂದಿಗಳು ವೈಯಕ್ತಿಕ ಮಟ್ಟದಲ್ಲಿ ನಾಗರಿಕತೆಗೆ ಕೊಡುಗೆಯನ್ನು ನೀಡುವುದನ್ನು ಮುಂದುವರಿಸಿದರೂ ಒಂದು ಜನಾಂಗವಾಗಿ ಅಲ್ಲ.

೦

೨

ಮೊದಲ ನಾಲ್ಕು ಶತಮಾನಗಳಲ್ಲಿನ ಕ್ರೈಸ್ತಮತಧರ್ಮ

ಕ್ರೈಸ್ತಮತಧರ್ಮವನ್ನು ಪರಿಸ್ಕೃತ ಜೂದಾಯಿಸಂ ರೂಪದಲ್ಲಿ ಮೊದಲಿಗೆ ಯೆಹೂದಿಗಳು ಯೆಹೂದಿಗಳಿಗೆ ಬೋಧಿಸಿದರು. ಸಂತ ಜೇಮ್ಸ್, ಸ್ವಲ್ಪ ಕಡಿಮೆ ಪ್ರಮಾಣದಲ್ಲಿ, ಸಂತ ಪೀಟರ್ ಇದಕ್ಕಿಂತ ಹೆಚ್ಚಿನದಾಗುಳಿಯಲು ಇಷ್ಟಪಡಲಿಲ್ಲ, ಅವರು ಮೇಲುಗೈಯಾಗುತ್ತಿದ್ದರೇನೋ, ಆದರೆ ಸುತ್ತುಕರ್ತನ ಮತ್ತು ಮೋಸಸ್ ಸಂಹಿತೆಯನ್ನು ಒಪ್ಪಬೇಕೆಂಬ ನಿಯಮಗಳಿಲ್ಲದೆ ಯೆಹೂದ್ಯೇತರರನ್ನು ಒಳಗೊಳ್ಳಬೇಕೆಂದು ಸಂತ ಪೌಲ್ ನಿರ್ಧರಿಸಿದ. ಈ ಎರಡು ಗುಂಪುಗಳ ನಡುವಣ ವಿವಾದವು ಪ್ರವರ್ತಕರ ವಿಧಿಯಲ್ಲಿ (ಆಕ್ಟ್ ಆಫ್ ದ ಅಪಾಸಲ್ಸ್) ಪೌಲ್ ದೃಷ್ಟಿಕೋನದಿಂದ ನಿರೂಪಿತವಾಗಿದೆ. ಸಂತ ಪೌಲ್ ಅನೇಕ ಸ್ಥಳಗಳಲ್ಲಿ ಸ್ಥಾಪಿಸಿದ ಕ್ರೈಸ್ತ ಸಮುದಾಯಗಳು ಭಾಗಶಃ ಮತಾಂತರಗೊಂಡಿದ್ದ ಯೆಹೂದಿಗಳಿಂದ, ಭಾಗಶಃ ಹೊಸ ಮತಧರ್ಮದ ಹುಡುಕಾಟದಲ್ಲಿದ್ದ ಯೆಹೂದ್ಯೇತರರಿಂದ ಕೂಡಿದ್ದುದರಲ್ಲಿ ಸಂಶಯವಿಲ್ಲ. ಜೂದಾಯಿಸಂನ ಖಚಿತತೆಗಳು ಕರಗುವ ಮತಧರ್ಮಗಳಿಂದ ಕೂಡಿದ್ದ ಆ ಕಾಲದಲ್ಲಿ ಆಕರ್ಷಕವೆನಿಸಿತಾದರೂ, ಸುತ್ತುಕರ್ತನವು ಮತಾಂತರ ಪ್ರಕ್ರಿಯೆಯ ಒಂದು ದೊಡ್ಡ ತೊಡಕಾಗಿತ್ತು. ಆಹಾರಕ್ಕೆ ಸಂಬಂಧಿಸಿದ ಆಚರಣಾವಿಧಿಗಳು ಕೂಡ ಅನುಕೂಲಕರವಾಗಿರಲಿಲ್ಲ. ಬೇರಾವುವು ಇಲ್ಲದಿದ್ದರೂ, ಈ ಎರಡು ತೊಡಕುಗಳು ಹೀಬ್ರೂ ಮತಧರ್ಮವು ಸಾರ್ವತ್ರಿಕವಾಗುವುದನ್ನು ಅಸಾಧ್ಯವಾಗಿಸಿದವು. ಸಂತ ಪೌಲ್‌ನ ಕಾರಣದಿಂದಾಗಿ ಕ್ರೈಸ್ತಮತಧರ್ಮವು ಯೆಹೂದ್ಯೇತರರು ಅರಗಿಸಿಕೊಳ್ಳಲು ಕಷ್ಟಕರವಾದ ಲಕ್ಷಣಗಳನ್ನು ಹೊರತುಪಡಿಸಿದಂತೆ ಯೆಹೂದಿಗಳ ಸಿದ್ಧಾಂತಗಳಲ್ಲಿನ ಆಕರ್ಷಕ ಅಂಶಗಳನ್ನುಳಿಸಿಕೊಂಡಿತು.

ಯೆಹೂದಿಗಳು ಆಯ್ಕೆಯಾದ ಜನಾಂಗ ಎಂಬ ಶ್ರದ್ಧೆ ಉಳಿದುಕೊಂಡೇ ಬಂತು; ಆದರೆ ಅದು ಗ್ರೀಕ್ ಹೆಮ್ಮೆಗೆ ಅಸಹ್ಯಕರವೆನಿಸಿತು. ಈ ದೃಷ್ಟಿಯನ್ನು ಕಾಲಕ್ರಮೇಣ ಅಧ್ಯಾತ್ಮರಹಸ್ಯಪಂಥದವರು ತಿರಸ್ಕರಿಸಿದರು. ಅವರು, ಕನಿಷ್ಠ ಪಕ್ಷ

ಅವರಲ್ಲಿ ಕೆಲವರು, ಇಂದ್ರಿಯಗ್ರಾಹ್ಯ ಜಗತ್ತನ್ನು ಸೋಫಿಯಳ (ದೈವಿಕವಿವೇಕ) ಬಂಡಾಯಗಾರ ಮಗನಾದ ಕ್ಷುದ್ರ ದೇವತೆಯಾದ ಇಯಲ್ದಬವಾತ್ ನಿರ್ಮಿಸಿದನೆಂದು ಭಾವಿಸಿದ್ದರು. ಅವನು ಹಳೆ ಒಡಂಬಡಿಕೆಯ ಯೆಹ್ವೆಹ್ ಎಂದು ಹೇಳಿದರು, ಆದರೆ ಸರ್ಪವು ಕೆಟ್ಟುದಾಗಿರುವುದರ ಬದಲಿಗೆ ಮೋಸದ ವಿರುದ್ಧ ಈವ್‌ಗೆ ಎಚ್ಚರಿಕೆಗಳನ್ನು ಕೊಡುತ್ತಿತ್ತು. ದೀರ್ಘ ಕಾಲ ಪರಮೋಚ್ಚ ದೈವವು ಇಯಲ್ದಬವಾತ್ ಅನ್ನು ಸ್ವೇಚ್ಛೆಯಾಗಿ ಬಿಟ್ಟಿತ್ತು. ಕೊನೆಗೆ ಅವನು ತನ್ನ ಮಗನನ್ನು ಜೀಸಸ್‌ನ ಮಾನವದೇಹವನ್ನು ತಾತ್ಕಾಲಿಕವಾಗಿ ಹೊಕ್ಕು ಮೋಸೆಸ್‌ನ ಸುಳ್ಳು ಬೋಧನೆಗಳಿಂದ ಜಗತ್ತನ್ನು ಬಿಡುಗಡೆಗೊಳಿಸಲು ಕಳಿಸಿದ. ಈ ದೃಷ್ಟಿಯನ್ನು ಅಥವಾ ಇಂತಹುದನ್ನು ಹೊಂದಿದ್ದವರು ಅದನ್ನು ಪ್ಲೇಟೋ ತತ್ವಜ್ಞಾನದೊಡನೆ ನಿಯಮವೆಂಬಂತೆ ಸೇರಿಸಿದರು. ನಾವು ಹಿಂದೆಯೇ ನೋಡಿದಂತೆ ಪ್ಲಾಟಿನಸ್‌ಗೆ ಅದನ್ನು ತಿರಸ್ಕರಿಸುವುದು ಕಷ್ಟವೆನಿಸಿತು. ತಾತ್ವಿಕ ಪ್ಯಾಗನ್‌ವಾದ ಮತ್ತು ಕ್ರೈಸ್ತಮತಧರ್ಮಗಳ ನಡುವೆ ಅಧ್ಯಾತ್ಮರಹಸ್ಯಪಂಥವು ಒಂದು ನೆಲೆಯನ್ನು ಕಂಡಿತು, ಯಾಕೆಂದರೆ ಅದು ಕ್ರಿಸ್ತನನ್ನು ಗೌರವಿಸಿತ್ತು ಮತ್ತು ಯೆಹೂದ್ಯರ ಬಗ್ಗೆ ದ್ವೇಷ ಹೊಂದಿತ್ತು. ಆನಂತರ ಇದು ಮ್ಯಾನಿಖೀಯಿಸಂ ವಿಚಾರದಲ್ಲಿಯೂ ನಿಜವಾಯಿತು, ಈ ಮೂಲಕವಾಗಿಯೇ ಸಂತ ಆಗಸ್ಟೈನ್ ಕ್ಯಾಥೋಲಿಕ್ ಪಂಥಕ್ಕೆ ಬಂದುದು. ಮ್ಯಾನಿಖೀಯಿಸಂನಲ್ಲಿ ಕ್ರೈಸ್ತ ಹಾಗೂ ಜೊರೋಸ್ಟ್ರಿಯನ್ ಅಂಶಗಳು ಸೇರಿವೆ; ಕೆಡುಕು ಒಂದು ಇತ್ಯಾತ್ಮಕ ತತ್ವ, ಅದು ಭೌತದ್ರವ್ಯದಲ್ಲಿರುವಂತಹುದು, ಅದೇ ಒಳಿತು ತತ್ವವು ಸತ್ವದಲ್ಲಿ ಸೇರಿರುತ್ತದೆ ಎಂದು ಅದು ಬೋಧಿಸಿತು. ಅದು ಮಾಂಸಸೇವನೆಯನ್ನು ಮತ್ತು ಮದುವೆಯನ್ನೊಳಗೊಂಡಂತೆ ಎಲ್ಲ ಬಗೆಯ ಲೈಂಗಿಕತೆಯನ್ನು ಖಂಡಿಸಿತು. ಈ ಮಧ್ಯವರ್ತಿ ಸಿದ್ಧಾಂತಗಳು ಗ್ರೀಕ್ ಭಾಷಿಕ ಸುಸಂಸ್ಕೃತ ಜನರನ್ನು ಕ್ರಮೇಣವಾಗಿ ಮತಾಂತರಿಸಲು ತುಂಬ ಸಹಾಯಕವಾಯಿತು; ಆದರೆ ಆ ಕುರಿತು ಹೊಸ ಒಡಂಬಡಿಕೆಯು ನೈಜ ಮತಧಾರ್ಮಿಕರನ್ನು ಎಚ್ಚರಿಸುತ್ತದೆ. 'ಓ, ತಿಮೋತಿ, ನಿನ್ನ ಶ್ರದ್ಧೆಯಲ್ಲಿರುವುದನ್ನು ಇಟ್ಟುಕೊ, ಕ್ರೈಸ್ತೇತರ ಹಾಗೂ ವ್ಯರ್ಥ ಪ್ರಲಾಪಗಳಿಂದಲೂ, ವಿಜ್ಞಾನ (ಅಧ್ಯಾತ್ಮರಹಸ್ಯ)ಕ್ಕೆ ವಿರೋಧವೆನ್ನುವುದರಿಂದ ದೂರವಿರು; ಅದನ್ನು ಬಲ್ಲೆವೆಂದು ಹೇಳುವವರು ಮತಧರ್ಮಕ್ಕೆ ಸಂಬಂಧಿಸಿದಂತೆ ತಪ್ಪುಗೈದಿದ್ದಾರೆ.'

ಸರ್ಕಾರವು ಕ್ರೈಸ್ತವಾಗುವವರೆಗೂ ಅಧ್ಯಾತ್ಮರಹಸ್ಯವಾದ ಮತ್ತು ಮ್ಯಾನಿಖೀಯನ್‌ವಾದಗಳು ಉಚ್ಛ್ರಾಯಸ್ಥಿತಿಯಲ್ಲಿದ್ದವು. ಆ ಕಾಲದ ಬಳಿಕ ಅವರು ತಮ್ಮ ಶ್ರದ್ಧೆಗಳನ್ನು ಮರೆಮಾಚುವ ಪರಿಸ್ಥಿತಿಯೊದಗಿತು, ಆದರೆ ಅದರ ಪ್ರಭಾವ ಅಂತರ್ಗಾಮಿನಿಯಾಗಿತ್ತು. ಅಧ್ಯಾತ್ಮರಹಸ್ಯವಾದದ ಒಂದು ವಲಯದ ಸಿದ್ಧಾಂತವೊಂದನ್ನು ಮಹಮ್ಮದ್ ಅಳವಡಿಸಿಕೊಂಡ. ಜೀಸಸ್ ಬರಿ ಮನುಷ್ಯ,

ದೀಕ್ಷಾಸ್ನಾನದ ಸಮಯದಲ್ಲಿ ದೇವಪುತ್ರನು ಅವನ ಬಳಿ ಇಳಿದು ಬಂದ, ಭಾವೋದ್ರೇಕದ ಸನ್ನಿವೇಶದಲ್ಲಿ ತೊರೆದು ಹೋದ ಎಂದವರು ಬೋಧಿಸಿದರು. ಈ ದೃಷ್ಟಿಗೆ ಸಮರ್ಥನೆಯಾಗಿ ಅವರು ಪಠ್ಯದ ಮೊರೆಹೊಕ್ಕರು: 'ನನ್ನ ದೇವರೇ, ನನ್ನ ದೇವರೇ, ನೀನೇಕೆ ನನ್ನನ್ನು ತೊರೆದುಹೋದೆ?'[೧೫೪] ಈ ಭಾಗವನ್ನು ವ್ಯಾಖ್ಯಾನಿಸಲು ಕ್ರೈಸ್ತರು ಕಷ್ಟಪಡುತ್ತಾರೆಂಬುದು ನಿಜವೆಂದು ಒಪ್ಪಬೇಕು. ಇದು ದೇವಪುತ್ರನಾಗಿ ಜನಿಸಲಿರುವವನಿಗೆ, ಶಿಶುವಾಗಿರುವವನಿಗೆ ಮತ್ತು, ಎಲ್ಲಕ್ಕೂ ಮಿಗಿಲಾಗಿ, ಶಿಲುಬೆಯ ಮೇಲೆ ಸಾಯುವವನಿಗೆ ತಕ್ಕ ಮಾತಲ್ಲ ಎಂದು ಅಧ್ಯಾತ್ಮರಹಸ್ಯವಾದಿಗಳು ಪರಿಗಣಿಸಿದರು. ಆದರೆ ಇವೆಲ್ಲ ಮನುಷ್ಯನಾದ ಜೀಸಸ್‌ಗೆ, ದೇವಪುತ್ರನಿಗಲ್ಲ, ಸಂಭವಿಸಿದವು. ಜೀಸಸ್ ಅನ್ನು ಒಬ್ಬ ಪ್ರವಾದಿ, ಆದರೆ ದೈವಿಕವಾದವನಲ್ಲ, ಎಂದು ಗುರುತಿಸಿದ ಮಹಮದ್‌ಗೆ ಪ್ರವಾದಿಗಳಿಗೆ ಕೆಟ್ಟ ಅಂತ್ಯವು ಸಂಭವಿಸಬಾರದೆಂಬ ಬಲವಾದ ಭಾವನೆಯಿತ್ತು. ಹೀಗಾಗಿ ಅವನು ಡೋಸೆಟಿಕ್‌ರ (ಅಧ್ಯಾತ್ಮರಹಸ್ಯವಾದದ ಒಂದು ಗುಂಪು) ಸಿದ್ಧಾಂತವೊಂದನ್ನು ಅಳವಡಿಸಿಕೊಂಡ, ಅದರ ಪ್ರಕಾರ ಶಿಲುಬೆಯ ಮೇಲೆ ತೂಗಿದ್ದು ಬರೀ ಒಂದು ಭ್ರಮೆ ಮಾತ್ರ, ಅದರ ಮೇಲೆಯೇ ಯೆಹೂದಿಗಳೂ ರೋಮನ್ನರೂ ಅಶಕ್ತ ಹಾಗೂ ಮೌಢ್ಯದಿಂದ ಕೂಡಿದ ತಮ್ಮ ಪ್ರತೀಕಾರವನ್ನು ತೀರಿಸಿಕೊಂಡರು. ಈ ರೀತಿಯಲ್ಲಿ, ಅಧ್ಯಾತ್ಮರಹಸ್ಯವಾದದ ಒಂದಷ್ಟು ಅಂಶ ಸಾಂಪ್ರದಾಯಿಕ ಇಸ್ಲಾಂ ಸಿದ್ಧಾಂತದಲ್ಲಿ ನುಸುಳಿತು.

ಸಮಕಾಲೀನ ಯೆಹೂದಿಗಳ ಬಗೆಗಿನ ಕ್ರೈಸ್ತರ ಮನೋಭಾವವು ಮುಂಚೆಯೇ ದ್ವೇಷಯುಕ್ತವಾಯಿತು. ಅವರು ನಂಬಿದ್ದ ದೃಷ್ಟಿಯೆಂದರೆ ದೇವರು ಪರಿಶುದ್ಧ ಜೀವಿಗಳಾದ ಹಾಗೂ ಕ್ರಿಸ್ತನ ಬರುವಿಕೆಯ ಬಗ್ಗೆ ಭವಿಷ್ಯ ನುಡಿದಿದ್ದ ಪ್ರವರ್ತಕರು ಹಾಗೂ ಪ್ರವಾದಿಗಳ ಜೊತೆ ಮಾತನಾಡಿದ್ದ ಎಂಬುದಾಗಿತ್ತು. ಆದರೆ ಕ್ರಿಸ್ತನು ಬಂದ ಮೇಲೆ, ಯೆಹೂದಿಗಳು ಅವನನ್ನು ಗುರುತಿಸುವಲ್ಲಿ ವಿಫಲರಾದರು, ಹಾಗೂ ಆ ಮುಂದೆ ಅವನನ್ನು ಕೆಡುಕನೆಂದೇ ಪರಿಗಣಿಸಿದರು. ಅದಲ್ಲದೆ, ಕ್ರಿಸ್ತನು ಮೋಸಸ್ ನಿಯಮಸಂಹಿತೆಯನ್ನು ತಿರಸ್ಕರಿಸಿ ಅದರ ಬದಲು ದೇವರನ್ನೂ ನೆರೆಹೊರೆಯವರನ್ನೂ ಪ್ರೀತಿಸಬೇಕೆಂಬ ಎರಡು ದಿವ್ಯಾಜ್ಞೆಗಳನ್ನು(ಕಮಾಂಡ್‌ಮೆಂಟ್) ಸೇರಿಸಿದ್ದ; ಇದನ್ನು ಗುರುತಿಸುವುದರಲ್ಲಿ ದುರಾಗ್ರಹದಿಂದ ಯೆಹೂದಿಗಳು ವಿಫಲರಾದರು. ದೇಶವು ಕ್ರೈಸ್ತವಾದ ತಕ್ಷಣವೇ ಯೆಹೂದಿವಿರೋಧವು ತನ್ನ ಮಧ್ಯಯುಗೀನ ರೂಪದಲ್ಲಿ, ಅಂದರೆ ಕ್ರೈಸ್ತಶ್ರದ್ಧೆಯ ರೂಪದಲ್ಲಿ ಆರಂಭವಾಯಿತು. ಆನಂತರದ ಕಾಲದಲ್ಲಿ ಎಷ್ಟರ ಮಟ್ಟಿಗೆ ಆರ್ಥಿಕ ಪ್ರೇರಣೆಗಳಿಂದ

೧೫೪. ೧ ತಿಮೋತಿ ೬. ೨೦, ೨೧.

ಅದು ಪುಷ್ಟಿಗೊಂಡು ಕ್ರೈಸ್ತ ಚಕ್ರಾಧಿಪತ್ಯದಲ್ಲಿ ಕಾರ್ಯಶೀಲವಾಯಿತು ಎಂಬುದನ್ನು ಹೇಳುವುದು ಅಸಾಧ್ಯ.

ಕ್ರೈಸ್ತಮತಧರ್ಮವು ಹೆಲೆನೀಕರಣಗೊಂಡ ಪ್ರಮಾಣನುಗುಣವಾಗಿ ಅದು ಮತಧರ್ಮಶಾಸ್ತ್ರೀಯ (ಥಿಯೋಲಾಕಜಿಕಲ್) ವಾಯಿತು. ಯೆಹೂದಿ ಮತಧರ್ಮಶಾಸ್ತ್ರವು ಯಾವಾಗಲೂ ಸರಳವಾಗಿತ್ತು. ಒಬ್ಬ ಬುಡಕಟ್ಟು ದೇವತೆಯನ್ನು ಸ್ವರ್ಗ ಮರ್ತ್ಯಗಳನ್ನು ಸೃಷ್ಟಿಸಿದ ಒಬ್ಬ ಏಕೈಕ ಸರ್ವಶಕ್ತ ದೇವರಾಗಿ ಯೆಹ್ವೆಹ್ ರೂಪುಗೊಳಿಸಿದ್ದ. ಸದ್ಗುಣಿಗಳಿಗೆ ಐಹಿಕ ಸಮೃದ್ಧಿಯನ್ನು ದಯಪಾಲಿಸದ ದೈವನ್ಯಾಯವನ್ನು ಸ್ವರ್ಗಕ್ಕೆ ವರ್ಗಾಯಿಸಲಾಯಿತು, ಅದರಿಂದ ಅಮರತ್ವದ ಕಲ್ಪನೆ ಉಂಟಾಯಿತು. ಆದರೆ ತನ್ನ ವಿಕಾಸ ಪೂರ್ತಿ ಯೆಹೂದಿ ಧರ್ಮಸೂತ್ರವು ಯಾವುದೇ ಸಂಕೀರ್ಣ ಹಾಗೂ ತತ್ವಜಿಜ್ಞಾಸಾತ್ಮಕ ಅಂಶಗಳನ್ನೊಳಗೊಳ್ಳಲಿಲ್ಲ. ಅದರಲ್ಲಿ ರಹಸ್ಯಗಳಿಲ್ಲ, ಪ್ರತಿಯೊಬ್ಬ ಯೆಹೂದಿಯೂ ಅದನ್ನು ಅರ್ಥಮಾಡಿಕೊಳ್ಳಬಹುದಾಗಿತ್ತು.

ಈ ಯೆಹೂದಿ ಸರಳತೆಯು ಒಟ್ಟಾರೆ ಈಗಲೂ ಸಮಾನದೃಷ್ಟಿಯ ಸುವಾರ್ತೆ (ಸಿನಾಪ್ಟಿಕ್ ಗಾಸ್ಪೆಲ್)ಗಳ (ಮ್ಯಾಥ್ಯೂ, ಮಾರ್ಕ್ ಮತ್ತು ಲ್ಯೂಕ್) ಲಕ್ಷಣಗಳಾಗಿವೆ. ಆದರೆ ಅದು ಸಂತ ಜಾನ್‌ನಲ್ಲಾಗಲೇ ಕಣ್ಮರೆಯಾಗಿದೆ, ಅಲ್ಲಿ ಕ್ರಿಸ್ತನನ್ನು ಪ್ಲೇಟೋವಾದಿ–ಸಂಯಮವಾದಿ ದೇವವಾಕ್ಕುಗಳ ಜೊತೆ ಸಮೀಕರಿಸಲಾಗಿದೆ. ನಾಲ್ಕನೆಯ ಸುವಾರ್ತಬೋಧಕನಲ್ಲಿ ಆಸಕ್ತಿ ಹುಟ್ಟಿಸಿದ ಮತಧರ್ಮಶಾಸ್ತ್ರದ ಕ್ರಿಸ್ತನಿಗಿಂತ ಅದು ಕಡಿಮೆ ಮಾನವ ಕ್ರಿಸ್ತತನದಿಂದ ಕೂಡಿದೆ. ಇದು ಪಾದ್ರಿಗಳ ವಿಷಯದಲ್ಲಿ ಮತ್ತೂ ನಿಜ; ಅವರ ಬರವಣಿಗೆಗಳಲ್ಲಿ ಮಿಕ್ಕ ಮೂರೂ ಸುವಾರ್ತೆಗಳ ಒಟ್ಟಾರೆಗಿಂತ ಹೆಚ್ಚಾಗಿ ಸಂತ ಜಾನ್‌ನ ಉಲ್ಲೇಖ ಬರುತ್ತದೆ. ಪೌಲನ ಪ್ರವರ್ತಕಪತ್ರ (ಎಪಿಸಲ್) ಗಳಲ್ಲಿಯೂ ಮತಧರ್ಮಶಾಸ್ತ್ರವು ಹೆಚ್ಚು ತುಂಬಿದೆ, ಅದರಲ್ಲೂ ಮೋಕ್ಷಕ್ಕೆ ಸಂಬಂಧಿಸಿದಂತೆ. ಅದೇ ವೇಳೆಯಲ್ಲಿ ಅದು ಗ್ರೀಕ್ ಸಂಸ್ಕೃತಿಯ ಸಾಕಷ್ಟು ಮಟ್ಟಿಗಿನ ಅರಿವನ್ನೂ ಹೊಂದಿದೆ – ಮೆನ್ಯಾಂಡರ್‌ನ ಉದ್ಧೃತಭಾಗ, ಎಲ್ಲ ಕ್ರೇಟನ್ನರೂ ಸುಳ್ಳುಗಾರರು ಎಂದ ಕ್ರೇಟನನೇ ಆದ ಎಪಿಮೆನೈಡೀಸ್‌ನ ಹೆಸರಿನ ಉಲ್ಲೇಖ ಮುಂತಾದವು. ಆದರೂ ಸಂತ ಪೌಲ್[೧೫೫] ಹೀಗೆನ್ನುತ್ತಾನೆ: 'ಎಚ್ಚರದಿಂದಿರಿ, ಯಾವನಾದರೂ ತನ್ನ ತತ್ವಜ್ಞಾನ ಮತ್ತು ವ್ಯರ್ಥ ವಂಚಕತನದಿಂದ ನಿಮ್ಮನ್ನು ಮೋಸಗೊಳಿಸಿಯಾನು.'

ಗ್ರೀಕ್ ಹೆಲೆನಿಕ್ ತತ್ವಜ್ಞಾನ ಮತ್ತು ಹೀಬ್ರೂ ಧರ್ಮಗ್ರಂಥಗಳ ಒಗ್ಗೂಡುವಿಕೆಯು ಹೆಚ್ಚಾಗಿ ಅಸ್ತವ್ಯಸ್ತವಾಗಿಯೂ ತುಣುಕುಗಳಾಗಿಯೂ ಆರಿಜೆನ್‌ನ (ಕ್ರಿಶ ೧೮೫–

೧೫೫. ಅಥವಾ ಸಂತ ಪೌಲನದೆಂದು ಹೇಳುವ ಯಾವನೋ ಲೇಖಕ–ಕೊಲೋಸಿಯನ್ಸ್, ೨.೮

೨೫೪) ಕಾಲದವರೆಗೂ ಮುಂದುವರಿಯಿತು. ಆರಿಜೆನ್ ಫೈಲೋನಂತೆಯೇ ಅಲೆಕ್ಸಾಂಡ್ರಿಯದಲ್ಲಿ ವಾಸವಾಗಿದ್ದ; ಆ ನಗರವು ವ್ಯಾಪಾರ ಮತ್ತು ವಿಶ್ವವಿದ್ಯಾನಿಲಯದ ಕಾರಣದಿಂದಾಗಿ, ಸ್ಥಾಪನೆಯಿಂದ ಪತನದವರೆಗೂ, ಪ್ರೌಢ ಸಮನ್ವಯದ ಒಂದು ಮುಖ್ಯ ಕೇಂದ್ರವಾಗಿತ್ತು. ತನ್ನ ಸಮಕಾಲೀನನಾದ ಪ್ಲಾಟಿನಸ್‌ನಂತೆಯೇ ಅವನು, ನವಪ್ಲೇಟೋವಾದದ ಸ್ಥಾಪಕನೆಂದು ಕೆಲವರು ಪರಿಗಣಿಸುವ, ಅಮೋನಿಯಸ್ ಸಾಕಾಸ್‌ನ ವಿದ್ಯಾರ್ಥಿಯಾಗಿದ್ದವನು. ಅವನ ಕೃತಿಯಾದ 'ದ ಪ್ರಿನ್‌ಸ್ಸಿಪಿಲಿಸ್'ನಲ್ಲಿ ಮಂಡಿತವಾಗಿರುವ ಸಿದ್ಧಾಂತಗಳು ಪ್ಲಾಟಿನಸ್‌ನವುಗಳಿಗೆ, ವಾಸ್ತವದಲ್ಲಿ ಸಂಪ್ರದಾಯನಿಷ್ಠೆಗಿಂತ ತೀರ ಸಮೀಪವಾದವು.

ಆರಿಜೆನ್‌ನ ಪ್ರಕಾರ, ದೇವರ ಹೊರತು ಸಂಪೂರ್ಣವಾಗಿ ಅಭೌತಿಕವಾದುದು – ತಂದೆ, ಮಗ ಮತ್ತು ಪವಿತ್ರಾತ್ಮ – ಯಾವುದೂ ಇಲ್ಲ. ನಕ್ಷತ್ರಗಳು ವೈಚಾರಿಕ ಜೀವಿಗಳು, ಅವಕ್ಕೆ ದೇವರು ಈಗಾಗಲೇ ಅಸ್ತಿತ್ವದಲ್ಲಿದ್ದ ಆತ್ಮಗಳನ್ನು ನೀಡಿದ್ದಾನೆ. ಸೂರ್ಯನೂ ಪಾಪ ಮಾಡಬಲ್ಲ ಎಂದವನ ಅಭಿಪ್ರಾಯ. ಸೃಷ್ಟಿಯ ಆದಿಯಿಂದಲೂ ಅಸ್ತಿತ್ವದಲ್ಲಿರುವ ಆತ್ಮಗಳು, ಪ್ಲೇಟೋ ಬೋಧಿಸಿದಂತೆ, ಮನುಷ್ಯರ ಹುಟ್ಟಿನ ಹೊತ್ತಿಗೆ ಬೇರೆಡೆಯಿಂದ ಬಂದು ಸೇರುತ್ತವೆ. ನೌಸ್ ಮತ್ತು ಆತ್ಮಗಳ ವ್ಯತ್ಯಾಸವನ್ನು ಹೆಚ್ಚು ಕಡಿಮೆ ಪ್ಲಾಟಿನಸ್‌ನಂತೆಯೇ ಸೂಚಿಸಿದೆ. ನೌಸ್ ಕಳಚಿ ಹೋದಾಗ ಅದು ಆತ್ಮವಾಗುತ್ತದೆ; ಸದ್ಗುಣಭರಿತವಾದಾದ ಆತ್ಮವೇ ನೌಸ್ ಆಗುತ್ತದೆ. ಅಂತಿಮವಾಗಿ ಎಲ್ಲ ಆತ್ಮಗಳೂ ಕ್ರಿಸ್ತನಿಗೆ ಸಂಪೂರ್ಣವಾಗಿ ಶರಣಾಗುತ್ತವೆ, ಆಮೇಲೆ ದೇಹರಹಿತವಾಗುತ್ತವೆ. ಕೊನೆಯಲ್ಲಿ ದೆವ್ವವನ್ನೂ ರಕ್ಷಿಸಲಾಗುತ್ತದೆ.

ಪಾದ್ರಿಗಳಲ್ಲೊಬ್ಬನೆಂದು ಪರಿಗಣಿತನಾಗಿದ್ದರೂ ಆರಿಜೆನ್, ಆನಂತರದ ಕಾಲದಲ್ಲಿ, ನಾಲ್ಕು ಧರ್ಮದ್ರೋಹಗಳ ಕಾರಣದಿಂದ ಖಂಡನೆಗೊಳಗಾದವನು:

೧. ಪ್ಲೇಟೋ ಹೇಳಿದಂತಹ ಆತ್ಮಗಳ ಪೂರ್ವ-ಅಸ್ತಿತ್ವ
೨. ಅವನ ದೈವಿಕ ಸ್ವಭಾವವಲ್ಲದೆ, ಮಾನವ ಸ್ವಭಾವವು ಅವತಾರಕ್ಕಿಂತ ಮುಂಚೆಯೇ ಕ್ರಿಸ್ತನಲ್ಲಿತ್ತು.
೩. ಪುನರುತ್ಥಾನದಲ್ಲಿ ನಮ್ಮ ದೇಹಗಳು ಕೇವಲ ಅಭೌತವಾಗುತ್ತವೆ.
೪. ಅಂತಿಮವಾಗಿ, ಮಾನವರು ಮಾತ್ರವಲ್ಲದೆ ಪಾಪದೇವತೆಗಳು ಕೂಡ ಸಂರಕ್ಷಿಸಲ್ಪಡುತ್ತಾರೆ.

ಹಳೆ ಒಡಂಬಡಿಕೆಯ ಪಠ್ಯವನ್ನು ನಿರ್ಧರಿಸುವ ಕಾರ್ಯಕ್ಕಾಗಿ ಆರಿಜೆನ್ ಬಗ್ಗೆ ಒಂದು ರೀತಿಯ ಸ್ವತಂತ್ರ ಅಭಿಮಾನವನ್ನು ವ್ಯಕ್ತಪಡಿಸಿದ್ದ ಸಂತ ಜೆರೋಮ್ ಮೊದಲಿಗೆ ಅದು ಸಮಂಜಸವೆಂದು ಪರಿಗಣಿಸಿದರೂ, ಆನಂತರ, ಅವನ ಮತಧರ್ಮಶಾಸ್ತ್ರಸಂಬಂಧಿ ದೋಷಗಳನ್ನು ತೀವ್ರವಾಗಿ ತಿರಸ್ಕರಿಸಲು ಸಾಕಷ್ಟು ವೇಳೆಯನ್ನು ವ್ಯಯಮಾಡಿದ.

ಆರಿಜೆನ್‌ನ ಉಲ್ಲಂಘನೆಯು ಮತಧರ್ಮಶಾಸ್ತ್ರಸಂಬಂಧಿಯಾದವು ಮಾತ್ರವಲ್ಲ, ಅವನು ತನ್ನ ಯೌವನದಲ್ಲಿ ತೀರ ವಾಚ್ಯರೂಪದಲ್ಲಿ ಪಠ್ಯದ ವ್ಯಾಖ್ಯಾನವನ್ನು ಮಾಡಿ ಸರಿಪಡಿಸಲಾರದ ತಪ್ಪುಗಳನ್ನು ಮಾಡಿದ ಆರೋಪಕ್ಕೊಳಗಾಗಿದ್ದ. 'ನಪುಂಸಕರಾಗಿರಲಿ, ಸ್ವರ್ಗಚಕ್ರಾಧಿಪತ್ಯದ ಕಾರಣಕ್ಕಾಗಿ ತಮ್ಮನ್ನವರು ನಪುಂಸಕರನ್ನಾಗಿಸಿಕೊಂಡಿದ್ದಾರೆ.'[೧೫೭] ದೈಹಿಕ ಆಮಿಷದಿಂದ ಪಲಾಯನಗೊಳ್ಳುವ ಈ ಪರಿಯನ್ನು ದುಡುಕಿನಿಂದ ಅಳವಡಿಸಿಕೊಂಡ ಆರಿಜೆನ್‌ನನ್ನು ಚರ್ಚ್ ಖಂಡಿಸಿತು; ಅದಕ್ಕೂ ಮಿಗಿಲಾಗಿ, ಅವನನ್ನು ಪಾದ್ರಿ ಹುದ್ದೆಗಳಿಗೆ (ಹೋಲಿ ಆರ್ಡರ್ಸ್) ಅನರ್ಹನನ್ನಾಗಿಸಲಾಯಿತು; ಕೆಲವರು ಮತಬೋಧಕರು ಇದಕ್ಕೆ ವ್ಯತಿರಿಕ್ತ ಅಭಿಪ್ರಾಯವುಳ್ಳವರಾಗಿ ಬೋಧಪ್ರದವಲ್ಲದ ವಿವಾದಗಳಿಗೆ ಒಳಗಾದರು.

ಆರಿಜೆನ್‌ನ ಅತ್ಯಂತ ದೀರ್ಘ ಕೃತಿಯೆಂದರೆ 'ಅಗೇನ್ಸ್ಟ್ ಸೆಲ್ಸಸ್' ಎಂಬುದು. ಸೆಲ್ಸಸ್ (ಈಗ ಲುಪ್ತವಾಗಿರುವ) ಕ್ರೈಸ್ತಮತಧರ್ಮದ ವಿರುದ್ಧವಾದ ಗ್ರಂಥವೊಂದರ ಲೇಖಕ, ಆರಿಜೆನ್ ಅವನ ವಾದದ ಪ್ರತಿಯೊಂದು ಅಂಶಕ್ಕೂ ಉತ್ತರಿಸುವ ಕೆಲಸವನ್ನಿದರಲ್ಲಿ ಮಾಡುತ್ತಾನೆ. ಕಾನೂನುಬಾಹಿರ ಸಂಬಂಧಗಳಿಗಾಗಿ ಕ್ರೈಸ್ತರನ್ನು ವಿರೋಧಿಸುವುದರೊಂದಿಗೆ ಸೆಲ್ಸಸ್ ಆರಂಭಿಸುತ್ತಾನೆ. ಅದನ್ನೇನೂ ಆರಿಜೆನ್ ನಿರಾಕರಿಸುವುದಿಲ್ಲ, ಅದನ್ನೊಂದು ನಿರಂಕುಶಪ್ರಭುಹತ್ಯೆಯಂತಹ ಸದ್ಗುಣವೆಂದೇ ಪರಿಗಣಿಸುತ್ತಾನೆ. ಕ್ರೈಸ್ತಮತಧರ್ಮವನ್ನು ಮೆಚ್ಚದುದಕ್ಕೆ ನಿಜವಾದ ಕಾರಣವಾದುದರ ಕಡೆಗೆ ಆನಂತರ ಬರುತ್ತಾನೆ: ಕ್ರೈಸ್ತಮತಧರ್ಮವು ಬರ್ಬರರಾದ ಯೆಹೂದಿಗಳಿಂದ ಬಂದುದು; ಅವರ ಬೋಧನೆಯಿಂದ ಗ್ರೀಕರು ಮಾತ್ರ ಅರ್ಥವನ್ನು ಹೊರಡಿಸಬಲ್ಲರೆಂದು ಸೆಲ್ಸಸ್ ಹೇಳುತ್ತಾನೆ. ಇದಕ್ಕೆ ಆರಿಜೆನ್, ಗ್ರೀಕ್ ತಾತ್ವಿಕತೆಯಿಂದ ಸುವಾರ್ತೆಗಳವರೆಗೆ ಬಂದ ಯಾರೇ ಆಗಲಿ ಅದನ್ನು ನಿಜವೆಂದು ನಿರ್ಧರಿಸಿ, ಗ್ರೀಕ್ ಬುದ್ಧಿಶಕ್ತಿಗೆ ಒಪ್ಪುವ ಸಾಕ್ಷ್ಯಗಳನ್ನೊದಗಿಸುತ್ತಾರೆ ಎಂದು ಉತ್ತರಿಸುತ್ತಾನೆ. ಆದರೆ ಮುಂದೆ, 'ಸುವಾರ್ತೆಗೆ ಗ್ರೀಕ್ ತಾರ್ಕಿಕತೆಯು ನೀಡಬಹುದಾದ ಸಾಕ್ಷ್ಯಕ್ಕಿಂತ ಹೆಚ್ಚು ದೈವಿಕವಾದ ತನ್ನದೇ ಸಾಕ್ಷ್ಯವಿದೆ, ಈ ಹೆಚ್ಚು ದೈವಿಕ ರೀತಿಯನ್ನು ಪ್ರವರ್ತಕನು "ಸತ್ವ ಮತ್ತು ಸಾಮರ್ಥ್ಯಗಳ ರುಜುವಾತು"; ಭವಿಷ್ಯವಾಕ್ಕುಗಳ ಕಾರಣದಿಂದ ಅವುಗಳನ್ನೋದುವ ಯಾರಲ್ಲಾದರೂ ಶ್ರದ್ಧೆಯನ್ನು, ಅದರಲ್ಲಿಯೂ ಕ್ರಿಸ್ತನಿಗೆ ಸಂಬಂಧಿಸಿದಂತೆ, ಮೂಡಿಸುವ "ಸತ್ವ"; ಮತ್ತು ಕುರುಹುಗಳು ಮತ್ತು ಚಿಹ್ನೆಗಳಿಂದಾಗಿ ನಡೆದುವೆಂದು, ಇತರ ಕಾರಣಗಳು ಮತ್ತು ಈ ಕಾರಣಗಳಿಂದಾಗಿ, ನಾವು ನಂಬಬೇಕಾದ "ಸಾಮರ್ಥ್ಯ"ದ ಬಗೆಗಿನ ಗುರುತುಗಳು ಈಗಲೂ ತಮ್ಮ ಬದುಕನ್ನು

---

೧೫೭ ಮ್ಯಾಥ್ಯೂ, ೧೯. ೧೨.

ಸುವಾರ್ತೆಗಳ ಆಚಾರಸೂತ್ರಗಳಿಂದಾಗಿ ನೇರ್ಪಡಿಸಿಕೊಳ್ಳುವವರಲ್ಲಿ ಉಳಿದುಕೊಂಡಿವೆ.'[೧೫೭]

ಕ್ರೈಸ್ತ ತಾತ್ವಿಕತೆಗೆ ವಿಶಿಷ್ಟವಾದ ಶ್ರದ್ಧೆಯನ್ನು ಸಮರ್ಥಿಸುವ ಇಬ್ಬಗೆಯ ವಾದವನ್ನು ಸೂಚಿಸುತ್ತಿರುವುದರಿಂದಾಗಿ ಈ ಭಾಗವು ಕುತೂಹಲಕಾರಿಯಾಗಿದೆ. ಒಂದು ಕಡೆ, ಸಮರ್ಪಕವಾಗಿ ಬಳಸಿಕೊಂಡರೆ ಶುದ್ಧ ತರ್ಕವು, ಕ್ರೈಸ್ತ ಶ್ರದ್ಧೆಯ ಸಾರವನ್ನು, ವಿಶೇಷವಾಗಿ ದೇವರು, ಅಮರತ್ವ, ಮತ್ತು ಸ್ವತಂತ್ರಇಚ್ಛಾಶಕಿಗಳನ್ನು, ಸಮರ್ಥಿಸಲು ಸಾಕಾಗುತ್ತದೆ. ಆದರೆ ಮತ್ತೊಂದು ಕಡೆ, ಧರ್ಮಗ್ರಂಥಗಳು ಈ ಸಾರವನ್ನಷ್ಟೇ ಅಲ್ಲದೆ ಅದಕ್ಕಿಂತ ಹೆಚ್ಚಿನದನ್ನು ರುಜುವಾತುಪಡಿಸುತ್ತವೆ; ಪ್ರವಾದಿಗಳು ದೇವದೂತನ ಆಗಮನದ ಬಗ್ಗೆ ಭವಿಷ್ಯ ನುಡಿದುದು, ಪವಾಡಗಳು, ನಂಬಿದವರ ಜೀವನದಲ್ಲಿ ಶ್ರದ್ಧೆಗಳು ತಂದಿತ್ತ ಅನುಕೂಲಕರ ಪರಿಣಾಮಗಳು – ಈ ಮೂಲಕ ಧರ್ಮಗ್ರಂಥಗಳ ದೈವಿಕಸ್ಫೂರ್ತಿಯನ್ನೂ ರುಜುವಾತುಗೊಳಿಸುತ್ತವೆ. ಇಂತಹ ಹಲವು ವಾದಗಳನ್ನೀಗ ಓಬೀರಾಯನ ಕಾಲದವೆಂದು ಪರಿಗಣಿಸಲಾಗಿದೆ, ಆದರೆ ಅದರಲ್ಲಿನ ಕೊನೆಯದನ್ನು ವಿಲಿಯಂ ಜೇಮ್ಸ್ ಬಳಸಿಕೊಳ್ಳುತ್ತಾನೆ. ಮತಧರ್ಮಸುಧಾರಣೆಯವರೆಗೆ ಅವೆಲ್ಲವನ್ನೂ ಪ್ರತಿಯೊಬ್ಬ ಕ್ರೈಸ್ತ ತತ್ವಜ್ಞಾನಿಯೂ ಒಪ್ಪಿಕೊಂಡಿದ್ದ.

ಆರಿಜೆನ್‌ನ ಕೆಲವು ವಾದಗಳು ಕುತೂಹಲದಿಂದ ಕೂಡಿವೆ. ಮಾಟಗಾರರು, ಎಷ್ಟೋ ಬಾರಿ ಅವನಾರೆಂದೂ ತಿಳಿಯದೆ, 'ಏಬ್ರಹಾಂ ದೇವರ'ನ್ನು ಆವಾಹಿಸುತ್ತಾರೆ; ಆದರೆ ಈ ಆವಾಹನೆಯು ವಿಶಿಷ್ಟ ಶಕ್ತಿಯುಳ್ಳದ್ದು ಎಂದು ಹೇಳುತ್ತಾನೆ. ಮಾಟದಲ್ಲಿ ಹೆಸರುಗಳು ಮುಖ್ಯ, ಅವನನ್ನು ಯಾರು ಆವಾಹಿಸುತ್ತಾರೆ – ಯೆಹೂದಿ, ಈಜಿಪ್ಷಿಯನ್, ಬ್ಯಾಬಿಲೋನಿಯನ್, ಗ್ರೀಕ್, ಅಥವಾ ಬ್ರಹ್ಮನ್ ಹೆಸರಿನವನಾದರೂ ಸರಿ – ಎನ್ನುವುದು ಮುಖ್ಯವಲ್ಲ. ಮಾಟದ ಶಕ್ತಿಯು ಮಂತ್ರಗಳನ್ನು ಭಾಷಾಂತರಿಸಿದಾಗ ಹೊರಟುಹೋಗುತ್ತದೆ. ಆ ಕಾಲದ ಮಾಟಗಾರನು ತನಗೆ ಗೊತ್ತಿದ್ದ ಎಲ್ಲ ಮತಧರ್ಮಗಳ ಮಂತ್ರಗಳನ್ನು ಉಪಯೋಗಿಸುತ್ತಿದ್ದ ಎಂದು ನಂಬುತ್ತಾರೆ. ಆದರೆ, ಆರಿಜೆನ್ ಹೇಳುವುದು ಸರಿಯಾದರೆ, ಹೀಬ್ರೂ ಮೂಲದವು ತುಂಬ ಪ್ರಭಾವಶಾಲಿಯಾದವು. ಮೋಸಸ್ ಮಾಟವನ್ನು ನಿಷೇಧಿಸಿದನೆಂದು ಅವನು ಹೇಳಿದಾಗಲಂತೂ ಅವನ ವಾದ ಮತ್ತಷ್ಟು ಕುತೂಹಲ ಹುಟ್ಟಿಸುತ್ತದೆ.[೧೫೮]

'ದೈವಿಕ ರಾಷ್ಟ್ರ'ದ ಹೊರತು, ಅಂದರೆ ಚರ್ಚ್ ಆಡಳಿತದಲ್ಲಿ ಕ್ರೈಸ್ತರು ಭಾಗಿಗಳಾಗಬಾರದೆಂದು ಹೇಳುತ್ತಾರೆ.[೧೫೯] ಈ ಸಿದ್ಧಾಂತವನ್ನೇನೋ ಕಾನ್‌ಸ್ಟಾಂಟೈನ್‌ನ

---

೧೫೭. ಆರಿಜೆನ್, 'ಕಾಂಟ್ರಾ ಸೆಲ್ಸಂ', ಭಾಗ ೧. ಅಧ್ಯಾಯ.೨.
೧೫೮. ಅದೇ , ಭಾಗ ೧, ಅಧ್ಯಾಯ ೨೮.
೧೫೯. ಅದೇ, ಭಾಗ ೮, ಅಧ್ಯಾಯ, ೭೫.

ಬಳಿಕ ಪರಿಷ್ಕರಿಸಲಾಯಿತಾದರೂ, ಅದರ ಏನೋ ಇನ್ನೂ ಒಂದಷ್ಟು ಉಳಿಯಿತು. ಅದು ಸಂತ ಆಗಸ್ಟೈನ್‌ನ ದೇವರ ನಗರಿಯಲ್ಲಿ ಸೂಚಿತವಾಗಿದೆ. ಪಶ್ಚಿಮ ಚಕ್ರಾಧಿಪತ್ಯದ ಪತನದ ಹೊತ್ತಿಗೆ ಚರ್ಚ್ ಮಂದಿಯನ್ನು, ಅವರು ಚರ್ಚ್‌ನ ಶಿಸ್ತಿನ ಬಗ್ಗೆ, ಮತಧರ್ಮಶಾಸ್ತ್ರದ ಬಗ್ಗೆ ಹಾಗೂ ಮತಪದ್ಧತಿಯ ಪ್ರಸಾರದ ಬಗ್ಗೆ ಅಸಾಧಾರಣ ಕೌಶಲವನ್ನು ತೋರಿಸಿದರೂ, ಲೌಕಿಕ ವಿನಾಶಗಳೆಡೆ ನಿಷ್ಕ್ರಿಯತೆಯಿಂದ ನೋಡುವಂತೆ ಮಾಡಿತು. ಅದರ ಕುರುಹುಗಳು ಇನ್ನೂ ಉಳಿದಿವೆ: ಬಹುತೇಕ ಜನರು ರಾಜಕೀಯವನ್ನು 'ಲೌಕಿಕ'ವೆಂದೂ ಯಾವುದೇ ದೈವಿಕ ವ್ಯಕ್ತಿಗೆ ಅದು ಸರಿಯಲ್ಲವೆಂದೂ ಭಾವಿಸುತ್ತಾರೆ.

ಮೊದಲ ಮೂರು ಶತಮಾನಗಳಲ್ಲಿ ಚರ್ಚ್‌ನ ಆಡಳಿತವು ನಿಧಾನವಾಗಿ, ಹಾಗೂ ಕಾನ್‌ಸ್ಟಾಂಟೈನ್‌ನ ಪರಿವರ್ತನೆಯ ಬಳಿಕ ವೇಗವಾಗಿ, ಬೆಳೆಯಿತು. ಬಿಷಪ್ಪರನ್ನು ಜನರೇ ಆಯ್ಕೆ ಮಾಡುತ್ತಿದ್ದರು, ಕ್ರಮೇಣ ಅವರು ತಮ್ಮ ತಮ್ಮ ಆಡಳಿತ ಪ್ರಾಂತಗಳಲ್ಲಿ ಕ್ರೈಸ್ತರ ಮೇಲಿನ ಅಧಿಕಾರವನ್ನು ಮೈಗೂಡಿಸಿಕೊಂಡರು: ಆದರೆ ಕಾನ್‌ಸ್ಟಾಂಟೈನ್‌ಗಿಂತ ಮುಂಚೆ ಇಡೀ ಚರ್ಚ್ ಮೇಲೆ ಯಾವುದೇ ರೀತಿಯ ಕೇಂದ್ರೀಕೃತ ಆಡಳಿತವಿರಲಿಲ್ಲ. ದೊಡ್ಡ ನಗರಗಳಲ್ಲಿನ ಬಿಷಪ್‌ರ ಅಧಿಕಾರವು ದಾನಪದ್ಧತಿಯಿಂದ ಹೆಚ್ಚಾಯಿತು: ಭಾವುಕರು ನೀಡಿದ ಕೊಡುಗೆಗಳನ್ನು ಬಿಷಪ್ಪರು ನಿರ್ವಹಿಸುತ್ತಿದ್ದರು, ಅವರು ಬಡವರಿಗೆ ಸಹಾಯ ಮಾಡಬಹುದಾಗಿತ್ತು, ಬಿಡಬಹುದಾಗಿತ್ತು. ಇದರಿಂದಾಗಿ ಬಿಷಪ್ಪರಿಗೆ ಬೇಕಾದುದನ್ನು ಮಾಡುವ ನಿರ್ಗತಿಕರ ಒಂದು ದೊಡ್ಡ ದಂಡೇ ಬೆಳೆಯಿತು. ಇಡೀ ಆಡಳಿತವು ಕ್ರೈಸ್ತವಾದಾಗ ಬಿಷಪ್ಪರಿಗೆ ನ್ಯಾಯಾಧಿಕಾರ ಹಾಗೂ ಆಡಳಿತಾಧಿಕಾರವನ್ನು ವಹಿಸಲಾಯಿತು. ಅಲ್ಲದೆ ಕನಿಷ್ಠ ಪಕ್ಷ, ಸಿದ್ಧಾಂತ ವಿಷಯಗಳಿಗೆ ಸಂಬಂಧಿಸಿದಂತೆ, ಕೇಂದ್ರಾಡಳಿತವೊಂದೂ ಉಂಟಾಯಿತು. ಕ್ಯಾಥೋಲಿಕ್ ಮತ್ತು ಏರಿಯನ್‌ರ ನಡುವಣ ಜಗಳದಿಂದ ಕಾನ್‌ಸ್ಟಾಂಟೈನ್ ಮುಜುಗರಕ್ಕೊಳಗಾದ; ಕ್ರೈಸ್ತರಿಗೆ ಎಲ್ಲವನ್ನೂ ಸಮರ್ಪಿಸಿದ್ದ ಅವನು ಅವರೆಲ್ಲ ಒಂದು ಪಕ್ಷದಂತಿರಬೇಕೆಂದು ಬಯಸಿದ. ವೈಷಮ್ಯಗಳನ್ನು ನಿವಾರಿಸುವ ಸಲುವಾಗಿ ನೈಸಿಯದ ಈಕ್ಯುಮೆನಿಕಲ್ ಪರಿಷತ್ತಿನ ಸಮಾವೇಶವನ್ನು ಏರ್ಪಡಿಸುವಂತೆ ಮಾಡಿದ, ಇದು ನೈಸಿಯ ಕ್ರೈಸ್ತಸೂತ್ರವನ್ನು ರಚಿಸಿತು.[೧೬೦] ಜೊತೆಗೆ, ಏರಿಯನ್ ವಿವಾದಕ್ಕೆ ಸಂಬಂಧಿಸಿದಂತೆ ಎಲ್ಲ ಕಾಲಕ್ಕೂ ಸಲ್ಲುವ ಸಂಪ್ರದಾಯನಿಷ್ಠೆಯ ಸ್ವರೂಪವನ್ನು ನಿರ್ಧರಿಸಲಾಯಿತು. ಆನಂತರದ ವಿವಾದಗಳನ್ನು, ಪೂರ್ವ ಮತ್ತು ಪಶ್ಚಿಮಗಳ ವಿಭಾಗೀಕರಣದವರೆಗೂ, ಈಕ್ಯುಮೆನಿಕಲ್ ಪರಿಷತ್ತಿನ ಸಮಾವೇಶಗಳು

೧೬೦. ಈಗಿನ ಸ್ವರೂಪದಲ್ಲಿಯೇ ಅಲ್ಲ, ಅದು ನಿರ್ಧರಿತವಾದುದು ೩೬೨ ರಲ್ಲಿ.

ಬಗೆಹರಿಸಿದವು. ಆನಂತರ ಪೂರ್ವ ವಿಭಾಗವು ಪೋಪ್ ಅಧಿಕಾರವನ್ನು ಒಪ್ಪಿಕೊಳ್ಳಲಿಲ್ಲ.

ಪೋಪ್ ಅಧಿಕೃತವಾಗಿ ಚರ್ಚ್‌ನ ಅತ್ಯಂತ ಮುಖ್ಯ ವ್ಯಕ್ತಿಯಾದರೂ, ತುಂಬ ಆನಂತರದವರೆಗೆ ಅವನಿಗೆ ಇಡೀ ಚರ್ಚ್ ಮೇಲೆ ಅಧಿಕಾರವಿರಲಿಲ್ಲ. ಕಾಲಕ್ರಮೇಣ ಪೋಪ್ ಅಧಿಕಾರವು ಹೆಚ್ಚಾದ ಬಗೆ ತುಂಬ ಕುತೂಹಲದಾಯಕವಾದುದು, ಈ ಕುರಿತು ನಾನು ಮುಂದಿನ ಅಧ್ಯಾಯಗಳಲ್ಲಿ ಮಾತನಾಡುತ್ತೇನೆ.

ಕಾನ್‌ಸ್ಟಾಂಟೈನ್‌ಗಿಂತ ಮುಂಚಿನ ಕ್ರೈಸ್ತಮತಧರ್ಮದ ಬೆಳವಣಿಗೆ ಹಾಗೂ ಅವನ ಮತಾಂತರವನ್ನು ಕುರಿತ ಉದ್ದೇಶಗಳನ್ನು ಕುರಿತು ಬೇರೆ ಬೇರೆ ಲೇಖಕರು ಬೇರೆ ಬೇರೆ ರೀತಿಗಳಲ್ಲಿ ನಿರೂಪಿಸಿದ್ದಾರೆ. ಇದಕ್ಕೆ ಗಿಬ್ಬನ್ ಐದು ಕಾರಣಗಳನ್ನು ಮಂಡಿಸುತ್ತಾರೆ:[೧೬೧]

೧. ನಾವು ಆ ಶಬ್ದವನ್ನು ಬಳಸಬಹುದಾದರೆ, ಕ್ರೈಸ್ತರ ಅಸಹಿಷ್ಣು ಉತ್ಸಾಹದಿಂದ ಹಾಗೂ, ಬದಲಾಗದ ಸಂಕುಚಿತವೂ ಅಸಾಮಾಜಿಕವೂ ಆದ ಸತ್ವದಿಂದ ಶುದ್ಧಿಗೊಂಡು, ಕ್ರೈಸ್ತೇತರರನ್ನು ಬರಮಾಡಿಕೊಳ್ಳುವುದರ ಬದಲು ಮೋಸಸ್‌ನ ನಿಯಮಸಂಹಿತೆಯನ್ನು ಅಪ್ಪಿಕೊಳ್ಳದಂತೆ ಅವರನ್ನು ಬೆದರಿಸಿದ ಬಗೆಯನ್ನು ಯೆಹೂದಿ ಮತಧರ್ಮದಿಂದ ಸಾಧಿಸಿಕೊಂಡಿತೆಂಬುದು ನಿಜ.

೨. ಭವಿಷ್ಯ ಬದುಕಿನ ಸಿದ್ಧಾಂತವು, ಪ್ರಮುಖ ಸತ್ಯಕ್ಕೆ ತೂಕವನ್ನೂ ಪರಿಣಾಮಕಾರಿಕತೆಯನ್ನೂ ತಂದುಕೊಟ್ಟ ಪ್ರತಿ ಹೊಸ ಪರಿಸ್ಥಿತಿಯಿಂದ ಉತ್ತಮಗೊಂಡಿತು.

೩. ಪ್ರಾಚೀನ ಚರ್ಚ್‌ಗೆ ಆರೋಪಿಸಿದ ಅದ್ಭುತ ಅಧಿಕಾರ.

೪. ಕ್ರೈಸ್ತರ ಶುದ್ಧ ಹಾಗೂ ನಿಷ್ಠುರ ನೈತಿಕತೆ

೫. ಕ್ರೈಸ್ತ ಗಣರಾಜ್ಯದ ಒಗ್ಗಟ್ಟು ಮತ್ತು ಶಿಸ್ತುಗಳ ಸಂಯೋಗವು ರೋಮನ್ ಚಕ್ರಾಧಿಪತ್ಯದ ಎದೆಯಲ್ಲಿ ಕ್ರಮೇಣ ಒಂದು ಸ್ವತಂತ್ರವೂ ವಿಸ್ತೃತಗೊಳ್ಳುವಂಥದೂ ಆದ ರಾಜ್ಯವನ್ನು ರೂಪಿಸಿತು.

ಸ್ಥೂಲವಾಗಿ ಹೇಳುವುದಾದರೆ, ಈ ವಿಶ್ಲೇಷಣೆಯನ್ನು ಒಪ್ಪಿಕೊಳ್ಳಬಹುದಾದರೂ, ಸ್ವಲ್ಪ ವಿವೇಚನೆಯೊಂದಿಗೆ. ಮೊದಲ ಕಾರಣ – ಯೆಹೂದಿಗಳಿಂದ ಕಲಿತ ಕ್ರೈಸ್ತರ ಬದಲಾಗದ ಹಾಗೂ ಅಸಹಿಷ್ಣು ಉತ್ಸಾಹ – ಇದನ್ನು ಸಂಪೂರ್ಣವಾಗಿ ಒಪ್ಪಬಹುದು. ಪ್ರಚಾರದಲ್ಲಿ ಅಸಹಿಷ್ಣುತೆಯ ಅನುಕೂಲಗಳನ್ನು ನಾವು ನಮ್ಮ

---

೧೬೧. 'ದ ಡಿಕ್ಲೈನ್ ಅಂಡ್ ಫಾಲ್ ಆಫ್ ದ ರೋಮನ್ ಎಂಪೈರ್', ಅಧ್ಯಾಯ ೧೫.

ಕಾಲದಲ್ಲಿಯೇ ಕಂಡಿದ್ದೇವೆ. ತಾವು ಮಾತ್ರ ಸ್ವರ್ಗಕ್ಕೆ ಹೋಗುವುದಾಗಿಯೂ, ಅತ್ಯಂತ ಭಯಾನಕ ಶಿಕ್ಷೆಗಳು ಪರಲೋಕದಲ್ಲಿ ಕ್ರೈಸ್ತೇತರರಿಗೆ ಒದಗುವುದೆಂದೂ ಬಹುತೇಕ ಕ್ರೈಸ್ತರು ನಂಬಿದ್ದರು. ಮೂರನೆಯ ಶತಮಾನದಲ್ಲಿ ಬೆಂಬಲಕ್ಕಾಗಿ ಸ್ಪರ್ಧಿಸಿದ ಇತರ ಮತಧರ್ಮಗಳು ಈ ಭಯಂಕರ ಲಕ್ಷಣವನ್ನು ಹೊಂದಿರಲಿಲ್ಲ. ನಿದರ್ಶನಕ್ಕೆ ಮಹಾಮಾತೆಯ ಆರಾಧಕರು, ಒಂದು ವಿಧ್ಯುಕ್ತ ರೀತಿಯೊಡನೆ – ಟಾರ್ಬೋಲಿಯಂ – ದೀಕ್ಷಾಸ್ನಾನವನ್ನು ಹೋಲುವಂತಹುದು, ಅದನ್ನು ಬಿಟ್ಟರೆ ನರಕಕ್ಕೆ ಹೋಗುತ್ತಾರೆ ಎಂದು ಬೋಧಿಸಲಾಯಿತು. ಪ್ರಾಸಂಗಿಕವಾಗಿ, ಟಾರ್ಬೋಲಿಯಂ ತುಂಬ ದುಬಾರಿಯಾದುದು ಎಂದು ಹೇಳಬಹುದು: ಹೋರಿಯೊಂದನ್ನು ಬಲಿಕೊಟ್ಟು ಅದರ ರಕ್ತವನ್ನು ಮತಾಂತರಗೊಂಡವರ ಮೇಲೆ ಪ್ರೋಕ್ಷಿಸಬೇಕಾಗಿತ್ತು, ಇಂತಹ ಆಚರಣೆಯು ಶ್ರೀಮಂತಿಕೆಯದು, ಬಡವರಾಗಲೀ ಬಲ್ಲಿದರಾಗಲೀ, ಸ್ವತಂತ್ರರಾಗಲೀ ಗುಲಾಮರಾಗಲಿ, ಬಹುಜನರನ್ನು ಒಳಗೊಳ್ಳಬೇಕಾದ ಮತಧರ್ಮದ ಬುನಾದಿಯಾಗಿರಬಾರದು. ಈ ವಿಷಯಗಳಲ್ಲಿ, ಕ್ರೈಸ್ತಮತಧರ್ಮವು ಬೇರೆಲ್ಲದವುಗಳಿಗಿಂತ ಹೆಚ್ಚು ಅನುಕೂಲಕರ ಸ್ಥಾನದಲ್ಲಿತ್ತು.

ಭವಿಷ್ಯದ ಬದುಕಿನ ಬಗ್ಗೆ. ಪಶ್ಚಿಮದಲ್ಲಿ ಅದನ್ನು ಬೋಧಿಸಿದವರು ಆರ್ಫಿಕ್‌ರು, ಆನಂತರ ಗ್ರೀಕ್ ತತ್ವಜ್ಞಾನಿಗಳು ಅದನ್ನು ಅಳವಡಿಸಿಕೊಂಡರು. ಹೀಬ್ರೂ ಪ್ರವಾದಿಗಳಲ್ಲಿ ಕೆಲವರು ದೇಹದ ಪುನರುತ್ಥಾನವನ್ನು ಬೋಧಿಸಿದರು, ಆದರೆ ಸತ್ತವರ ಪುನರುತ್ಥಾನದಲ್ಲಿ ಯೆಹೂದಿಗಳ ಶ್ರದ್ಧೆ ಪ್ರಾಯಶಃ ಗ್ರೀಕ್‌ರಿಂದ ಬಂದಿತು.[೧೬೨] ಅಮರತ್ವ ಸಿದ್ಧಾಂತವು ಗ್ರೀಸ್‌ನಲ್ಲಿ ಆರ್ಫಿಸಂನಲ್ಲಿ ಜನಪ್ರಿಯ ರೂಪದಲ್ಲಿತ್ತು ಮತ್ತು ಪ್ಲೇಟೋವಾದದಲ್ಲಿ ಪ್ರೌಢ ರೂಪದಲ್ಲಿತ್ತು. ಕಠಿಣ ವಾದಗಳ ತಳಹದಿಯನ್ನು ಹೊಂದಿದ್ದುದರಿಂದಾಗಿ ಇದು ಹೆಚ್ಚು ಜನಪ್ರಿಯವಾಗಲು ಸಾಧ್ಯವಾಗಲಿಲ್ಲ; ಆದರೆ ಆರ್ಫಿಕ್ ರೂಪವು ಪ್ರಾಯಶಃ ಈಚಿನ ಪ್ರಾಚೀನ ಕಾಲದಲ್ಲಿ ಜನಾಭಿಪ್ರಾಯದ ಮೇಲೆ ಹೆಚ್ಚು ಪ್ರಭಾವಶಾಲಿಯಾಗಿತ್ತು, ಹೀಗಾದದ್ದು ಬರೀ ಪ್ಯಾಗನ್‌ರ ಮೇಲಲ್ಲ, ಯೆಹೂದಿಗಳು ಮತ್ತು ಕ್ರೈಸ್ತರ ಮೇಲೂ. ಆರ್ಫಿಕ್ ಮತ್ತು ಏಷ್ಯಾಟಿಕ್ ಎರಡೂ ಆಗಿದ್ದ ಅನುಭಾವಿಕ ಮತಧರ್ಮಗಳ ಮೂಲಾಂಶಗಳು ವಿಶೇಷವಾಗಿ ಕ್ರೈಸ್ತ ಮತಧರ್ಮಶಾಸ್ತ್ರವನ್ನು ಪ್ರವೇಶಿಸಿತು; ಅವೆಲ್ಲದರಲ್ಲೂ, ಸಾಯುವ ದೇವರು ಮತ್ತೆ ಮೇಲೇಳುವುದು ಕೇಂದ್ರ ಪೌರಾಣಿಕಾಂಶವಾಯಿತು.[೧೬೩] ಹೀಗಾಗಿ, ಅಮರತ್ವ ಸಿದ್ಧಾಂತವು ಕ್ರೈಸ್ತಮತಧರ್ಮದ ಪ್ರಸಾರದಲ್ಲಿ ಗಿಬ್ಬನ್ ಭಾವಿಸುವುದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಪ್ರಭಾವಿಸಿತು ಎಂಬುದು ನನ್ನ ಅನಿಸಿಕೆ.

---

೧೬೨. ನೋಡಿ, ಈಸ್ಟರ್ಲಿ ಮತ್ತು ರಾಬಿನ್‌ಸನ್, *'ಹೀಬ್ರೂ ರಿಲಿಜನ್'*.
೧೬೩. ನೋಡಿ, ಆಂಗಸ್, *'ದ ಮಿಸ್ಟರಿ ರಿಲಿಜನ್ಸ್ ಅಂಡ್ ಕ್ರಿಶ್ಚಿಯಾನಿಟಿ.'*

ಕ್ರೈಸ್ತ ಪ್ರಸಾರದಲ್ಲಿ ಪವಾಡಗಳು ಬಹು ದೊಡ್ಡ ಪಾತ್ರವನ್ನು ವಹಿಸಿದವು ಎಂಬುದು ನಿಶ್ಚಿತ. ಆದರೆ ಈಚಿನ ಪ್ರಾಚೀನ ಕಾಲದಲ್ಲಿ ಪೌರಾಣಿಕತೆಗಳು ಬಹು ಸಾಮಾನ್ಯವಾದವು, ಯಾವುದೇ ಮತಧರ್ಮಕ್ಕೆ ವಿಶೇಷವಾದುದಾಗಿರಲಿಲ್ಲ. ಈ ಸ್ಪರ್ಧೆಯಲ್ಲಿ ಕ್ರೈಸ್ತ ಪೌರಾಣಿಕತೆಗಳನ್ನು ಮಿಕ್ಕ ಪಂಥಗಳಿಗಿಂತ ಹೆಚ್ಚಾಗಿ ಜನ ನಂಬುವುದಕ್ಕೆ ಕಾರಣವೇನು ಎಂದು ಹೇಳುವುದು ಅಷ್ಟೇನೂ ಸುಲಭವಲ್ಲ. ಗಿಬ್ಬನ್ ಬಹು ಮುಖ್ಯ ವಿಷಯವೊಂದನ್ನು ಕೈಬಿಟ್ಟಿದ್ದಾರೆ ಎಂಬುದು ನನ್ನ ಭಾವನೆ: ಅದೆಂದರೆ ಒಂದು ಧರ್ಮಗ್ರಂಥವನ್ನು ಹೊಂದಿರುವುದು. ಕ್ರೈಸ್ತರು ಹೇಳುತ್ತಿದ್ದ ಪವಾಡಗಳು, ಪ್ರಾಚೀನರು ಆನುಭಾವಿಕವೆಂದು ಭಾವಿಸಿದ್ದ ರಾಷ್ಟ್ರಗಳಲ್ಲಿ, ಬಹು ಪ್ರಾಚೀನ ಕಾಲದಲ್ಲಿಯೇ ಆರಂಭವಾದವು. ಸೃಷ್ಟಿಯಿಂದ ಮೊದಲಾಗುವ ನಿರಂತರ ಇತಿಹಾಸವೊಂದಿದೆ, ಅದಕ್ಕನುಗುಣವಾಗಿ ದೈವಾನುಗ್ರಹವು ಸದಾ ಅದ್ಭುತಗಳಿಗೆ ಕಾರಣವಾಯಿತು, ಮೊದಲು ಯೆಹೂದಿಗಳಲ್ಲಿ, ಆನಂತರ ಕ್ರೈಸ್ತರಲ್ಲಿ. ಆಧುನಿಕ ಇತಿಹಾಸ ವಿದ್ಯಾರ್ಥಿಗೆ ಇಸ್ರೇಲಿಗಳ ಪ್ರಾಚೀನ ಇತಿಹಾಸವು ಮುಖ್ಯವಾಗಿ ಪೌರಾಣಿಕವಾದುದು ಎಂಬುದು ಸ್ಪಷ್ಟವಾದರೂ ಪ್ರಾಚೀನರಿಗಲ್ಲ. ಅವರು ಹೋಮರ್ ವರ್ಣನೆಯ ಟ್ರಾಯ್ ಆಕ್ರಮಣ, ರೊಮ್ಯುಲಸ್ ಮತ್ತು ರೇಮಸ್ ಮುಂತಾದವುಗಳನ್ನು ನಂಬಿದ್ದರು. ಈ ಪರಂಪರೆಯನ್ನು ನಂಬಿ ಯೆಹೂದಿಗಳು ಅದನ್ನೇಕೆ ಒಪ್ಪಬಾರದು ಎಂದು ಆರಿಜೆನ್ ಕೇಳಿದ. ಈ ವಾದಕ್ಕೆ ತಾರ್ಕಿಕವಾದ ಯಾವುದೇ ಉತ್ತರವಿಲ್ಲ. ಹೀಗಾಗಿ ಹಳೆ ಒಡಂಬಡಿಕೆಯ ಪವಾಡಗಳನ್ನು ನಂಬುವುದು ಸಹಜವೆನಿಸಿತು; ಹೀಗೆ ಒಪ್ಪಿಕೊಂಡ ಬಳಿಕ, ಆಮೇಲಿನವೂ ನಂಬಲರ್ಹವಾದವು, ಅದರಲ್ಲೂ ಪ್ರವಾದಿಗಳನ್ನು ಕ್ರೈಸ್ತರು ವ್ಯಾಖ್ಯಾನಿಸಿದ ಪರಿಯಲ್ಲಿ.

ಕಾನ್‌ಸ್ಟಾಂಟೈನ್‌ನಿಗಿಂತ ಮುಂಚಿನ ಕ್ರೈಸ್ತರ ನೈತಿಕತೆಯು ಸಾಮಾನ್ಯ ಪ್ಯಾಗನ್ನರದಕ್ಕಿಂತ ನಿಸ್ಸಂಶಯವಾಗಿ ಉತ್ತಮವಾದುದಾಗಿತ್ತು. ಕೆಲವೇಳೆ ಕ್ರೈಸ್ತರನ್ನು ಹಿಂಸಾಚಾರಕ್ಕೊಳಪಡಿಸಲಾಗುತ್ತಿತ್ತು, ಪ್ಯಾಗನ್‌ರೊಡನೆ ಸ್ಪರ್ಧಿಸುವುದು ಎಲ್ಲ ಕಾಲಗಳಲ್ಲೂ ಬಹುತೇಕ ಅನನುಕೂಲಕರವೆನಿಸಿತ್ತು. ಸದ್ಗುಣಕ್ಕೆ ಸ್ವರ್ಗದಲ್ಲಿ ಬೆಲೆಯಿದೆ ಹಾಗೆಯೇ ಪಾಪಕ್ಕೆ ನರಕದಲ್ಲಿ ಶಿಕ್ಷೆಯಿದೆ ಎಂದವರು ಬಲವಾಗಿ ನಂಬಿದ್ದರು. ಅವರ ಲೈಂಗಿಕ ನೀತಿಯ ಕಟ್ಟುನಿಟ್ಟು ಪ್ರಾಚೀನ ಕಾಲದಲ್ಲಿ ಅಪರೂಪವಾದುದು. ಅವರನ್ನು ಶಿಕ್ಷೆಗೆ ಗುರಿಪಡಿಸುವ ಅಧಿಕೃತ ಅಧಿಕಾರ ಹೊಂದಿದ್ದ ಪ್ಲೈನಿಯು ಅವರ ಉನ್ನತ ನೈತಿಕ ಮೌಲ್ಯವನ್ನು ಒಪ್ಪಿಕೊಳ್ಳುತ್ತಾನೆ. ಕಾನ್‌ಸ್ಟಾಂಟೈನ್‌ನ ಮತಾಂತರದ ಬಳಿಕ, ಕ್ರೈಸ್ತರಲ್ಲಿ ಅವಕಾಶವಾದಿಗಳಿದ್ದರೆಂಬುದು ನಿಜ: ಆದರೆ ಪ್ರಮುಖ ಧರ್ಮಬೋಧಕರು, ಕೆಲವು ಅಪವಾದಗಳನ್ನು ಹೊರತುಪಡಿಸಿ, ಸಡಿಲಗೊಳ್ಳದ ನೈತಿಕ ತತ್ವಗಳನ್ನು ಅನುಸರಿಸುವವರಾಗಿದ್ದರು. ಕ್ರೈಸ್ತಮತಧರ್ಮದ ಪ್ರಸಾರಕ್ಕೆ ಉನ್ನತ ನೈತಿಕ ಮಟ್ಟವೇ ಪ್ರಮುಖ ಕಾರಣ ಎಂಬ ಗಿಬ್ಬನ್ ಅವರ ಅಭಿಪ್ರಾಯವು

ಸಾಧುವಾದುದು ಎಂಬುದು ನನ್ನ ಭಾವನೆ.

'ಕ್ರೈಸ್ತ ಗಣರಾಜ್ಯದ ಒಗ್ಗಟ್ಟು ಮತ್ತು ಶಿಸ್ತುಗಳ ಸಂಯೋಗ'ವನ್ನು ಗಿಬ್ಬನ್ ಕೊನೆಯಲ್ಲಿಡುತ್ತಾರೆ. ರಾಜಕೀಯ ದೃಷ್ಟಿಕೋನದಿಂದ ಇದು ಅವರು ನೀಡುವ ಐದು ಕಾರಣಗಳಲ್ಲಿ ಅತ್ಯಂತ ಪ್ರಮುಖವಾದುದು ಎಂದು ನನ್ನ ಅನಿಸಿಕೆ. ಆಧುನಿಕ ಕಾಲದಲ್ಲಿ ನಾವು ರಾಜಕೀಯ ಸಂಘಟನೆಗೆ ಹೊಂದಿಕೊಂಡಿದ್ದೇವೆ, ಪ್ರತಿಯೊಬ್ಬ ರಾಜಕಾರಣಿಯೂ ಕ್ಯಾಥೋಲಿಕ್ ಮತವನ್ನು ಪರಿಗಣಿಸಬೇಕು, ಆದರೆ ಅದು ಇತರ ಸುಸಂಘಟಿತ ಗುಂಪುಗಳ ಮತಗಳೊಡನೆ ಸಮತೋಲನ ಹೊಂದಿರಬೇಕು. ಒಬ್ಬ ಕ್ಯಾಥೋಲಿಕ್ ಅಭ್ಯರ್ಥಿಗೆ ಅಮೆರಿಕದ ಅಧ್ಯಕ್ಷ ಸ್ಥಾನ ಹೊಂದುವುದು ಅನುಕೂಲಕರವಲ್ಲ, ಅದಕ್ಕೆ ಕಾರಣ ಅಲ್ಲಿನ ಪ್ರಾಟೆಸ್ಟೆಂಟ್ ಪಕ್ಷಪಾತ. ಆದರೆ ಪ್ರಾಟೆಸ್ಟೆಂಟ್ ಪಕ್ಷಪಾತವೆಂಬುದಿಲ್ಲದಿದ್ದರೆ, ಕ್ಯಾಥೋಲಿಕ್ ಅಭ್ಯರ್ಥಿ ಬೇರೆಯವನಿಗಿಂತ ಹೆಚ್ಚು ಅನುಕೂಲಕರ ಸ್ಥಿತಿಯಲ್ಲಿರುತ್ತಾನೆ. ಇದೇ ಕಾನ್‌ಸ್ಟಾಂಟೈನ್‌ನ ಲೆಕ್ಕಾಚಾರವೂ ಆಗಿದ್ದಿತೆನಿಸುತ್ತದೆ. ಸುಸಂಘಟಿತ ಘಟಕವಾದ ಕ್ರೈಸ್ತ ಬೆಂಬಲವನ್ನು ಅವರ ಬಗ್ಗೆ ಪಕ್ಷಪಾತ ತೋರಿಸುವುದರಿಂದ ಪಡೆಯಬಹುದು. ಕ್ರೈಸ್ತವಿರೋಧವು ಸುಸಂಘಟಿತವಾದುದಾಗಿರಲಿಲ್ಲ, ಹೀಗಾಗಿ ರಾಜಕೀಯವಾಗಿ ಪ್ರಭಾವಶಾಲಿಯಾದುದಲ್ಲ. ಸೈನ್ಯದ ಬಹುಭಾಗ ಕ್ರೈಸ್ತರಿಂದ ಕೂಡಿದ್ದು ಇದೇ ಕಾನ್‌ಸ್ಟಾಂಟೈನ್‌ನನ್ನು ಪ್ರಭಾವಿಸಿದ್ದು ಎಂದು ಹೇಳಿದ ರಾಸ್ಟೋವ್‌ಟ್ಸೆಲ್ಫ್ ಬಹುಶಃ ಸರಿ. ಅದು ಏನಾದರಾಗಲಿ, ಇನ್ನೂ ಅಲ್ಪಸಂಖ್ಯಾತರಾಗಿದ್ದ ಕ್ರೈಸ್ತರು, ಈಗ ಸಾಮಾನ್ಯವೆನಿಸಿರುವ, ಆದರೆ ಆಗ ಹೊಸತೆನಿಸಿದ್ದ ಒಂದು ಬಗೆಯ ಸಂಘಟನೆಯನ್ನು ಹೊಂದಿದ್ದರು. ಇದರಿಂದ ಒಂದು ಒತ್ತಡದ ಪಂಗಡವಾದ ಅವರಿಗೆ ರಾಜಕೀಯ ಪ್ರಭಾವ ಒದಗಿತ್ತು ಮತ್ತು ಇದಕ್ಕೆ ಬೇರೆ ಯಾವ ಒತ್ತಡ ಪಂಗಡವೂ ವಿರೋಧವಾಗಿರಲಿಲ್ಲ. ಅವರು ವಿಶೇಷ ಉತ್ಸಾಹಶೀಲರಾಗಿದ್ದುದಕ್ಕೆ ಇದು ಸಹಜ ಕಾರಣವಾಗಿತ್ತು. ಈ ಉತ್ಸಾಹಶೀಲತೆಯನ್ನವರು ಯೆಹೂದಿಗಳಿಂದ ಪಡೆದಿದ್ದರು.

ದುರದೃಷ್ಟವಶಾತ್, ಕ್ರೈಸ್ತರು ರಾಜಕೀಯ ಅಧಿಕಾರವನ್ನು ಹೊಂದಿದ ತಕ್ಷಣವೇ, ಅವರು ಪರಸ್ಪರ ವಿರುದ್ಧವಾದ ಉತ್ಸಾಹಶೀಲತೆಯನ್ನು ತೋರಿಸಿದರು. ಕಾನ್‌ಸ್ಟಾಂಟೈನ್‌ನಿಗಿಂತ ಮುಂಚೆ, ಕೆಲವು ಮಾತ್ರವಲ್ಲ, ಅನೇಕ ಧರ್ಮದ್ರೋಹ ಕೃತ್ಯಗಳಾದುವು, ಆದರೆ ಸಂಪ್ರದಾಯನಿಷ್ಠರು ಅವರನ್ನು ಶಿಕ್ಷಿಸುವ ಸ್ಥಿತಿಯಲ್ಲಿರಲಿಲ್ಲ. ಆದರೆ ಅವಕಾಶವೇ ಕ್ರೈಸ್ತವಾದ ಬಳಿಕ, ಅಧಿಕಾರ ಮತ್ತು ಹಣದ ರೂಪದಲ್ಲಿನ ಭಾರಿ ಬಹುಮಾನಗಳು ಧರ್ಮಬೋಧಕರ ಪಾಲಾದವು; ವಿವಾದಾಸ್ಪದ ಚುನಾವಣೆಗಳಾದವು, ಐಹಿಕ ಅನುಕೂಲಗಳಿಗಾಗಿ ಮತಧರ್ಮಶಾಸ್ತ್ರಸಂಬಂಧಿ ಜಗಳಗಳೂ ಅದವು. ಮತಧರ್ಮಶಾಸ್ತ್ರಜ್ಞರ ವಿವಾದಗಳಲ್ಲಿ ಕಾನ್‌ಸ್ಟಾಂಟೈನ್ ಒಂದು ಮಟ್ಟದ ತಾಟಸ್ಥ್ಯವನ್ನು ಹೊಂದಿದ್ದನಾದರೂ ಅವನ ಮರಣಾನಂತರ (೩೩೭),

ಅವನ ಉತ್ತರಾಧಿಕಾರಿಗಳು (ಮತಭ್ರಷ್ಟನಾಗಿದ್ದ ಜೂಲಿಯನ್‌ನ ಹೊರತಾಗಿ) ಹೆಚ್ಚೋ ಕಡಿಮೆಯೋ, ಥಿಯೋಡಾಸಿಯಸ್ ೩೭೯ ರಲ್ಲಿ ಬರುವವರೆಗೂ, ಏರಿಯನ್‌ರಿಗೆ ಬೆಂಬಲಿಗರಾಗಿದ್ದರು.

ಈ ಕಾಲದ ನಾಯಕಮಣಿ ಎಂದರೆ ಅಥಾನೇಸಿಯಸ್ (ಸು. ೨೯೭–೩೭೩), ಅವನು ತನ್ನ ದೀರ್ಘ ಜೀವಮಾನದುದ್ದಕ್ಕೂ ನೈಸಿಯನ್ ಸಂಪ್ರದಾನಿಷ್ಠೆಯ ಧೈರ್ಯವಂತ ಬೆಂಬಲಿಗನಾಗಿದ್ದ.

ಕಾನ್‌ಸ್ಟಾಂಟೈನ್‌ನಿಂದ ಚಾಲ್ಸೆಡಾನ್ ಪರಿಷತ್ತಿನವರೆಗಿನ (೪೫೧) ಅವಧಿಯು ವಿಚಿತ್ರವಾದುದಾಗಲು ಕಾರಣ ಮತಧರ್ಮಶಾಸ್ತ್ರದ ರಾಜಕೀಯ ಪ್ರಾಮುಖ್ಯ. ಕ್ರೈಸ್ತ ಜಗತ್ತನ್ನು ಎರಡು ಪ್ರಶ್ನೆಗಳು ಒಂದಾದ ಮೇಲೊಂದರಂತೆ ಸತತವಾಗಿ ಕಾಡಿದವು: ತ್ರಿಮೂರ್ತಿತ್ವದ ಸ್ವರೂಪ ಮತ್ತು ಆಗಿನ ಅವತಾರ ಸಿದ್ಧಾಂತ. ಅಥನೇಸಿಯಸ್‌ನ ಕಾಲದಲ್ಲಿ ಇವೆರಡರಲ್ಲಿ ಮೊದಲಿನದು ಮಾತ್ರ ಮುನ್ನೆಲೆಯಲ್ಲಿತ್ತು. ಅಲೆಕ್ಸಾಂಡ್ರಿಯದ ಸುಸಂಸ್ಕೃತ ಪುರೋಹಿತನಾದ ಏರಿಯಸ್‌ನ ಮಗನು ತಂದೆಯಷ್ಟು ಮುಖ್ಯನಲ್ಲ, ಆದರೆ ಅವನಿಂದ ಸೃಷ್ಟಿತನಾದವನೆಂಬ ನಿಲವು ತಾಳಿದ್ದ. ಈ ಹಿಂದಿನ ಕಾಲದಲ್ಲಾಗಿದ್ದರೆ ಈ ಭಾವನೆಯು ಹೆಚ್ಚು ವಿರೋಧವನ್ನು ಕಾಣುತ್ತಿರಲಿಲ್ಲವೆನಿಸುತ್ತದೆ, ಆದರೆ ನಾಲ್ಕನೆಯ ಶತಮಾನದಲ್ಲಿ ಬಹುತೇಕ ಮತಧರ್ಮಶಾಸ್ತ್ರಜ್ಞರು ಅದನ್ನು ತಿರಸ್ಕರಿಸಿದರು. ಕೊನೆಗೂ ಮೇಲುಗೈಯಾದ ದೃಷ್ಟಿಕೋನವೆಂದರೆ ತಂದೆ–ಮಗ ಇಬ್ಬರೂ ಸಮಾನರು, ಒಂದೇ ಸತ್ವವುಳ್ಳವರು; ಆದರೆ ಅವರು ವಿಭಿನ್ನ ವ್ಯಕ್ತಿಗಳು ಎಂಬುದು. ಅವರು ವಿಭಿನ್ನರಾದವರಾದರೂ ಒಂದೇ ಇರುವಿಕೆಯ ವಿಭಿನ್ನ ಮುಖಗಳೆಂಬ ದೃಷ್ಟಿಯು ಸಾಬೆಲ್ ಸಂಪ್ರದಾಯ ವಿರೋಧಿಯಾದುದು, ಅದಕ್ಕೆ ಆ ಹೆಸರು ಬರಲು ಕಾರಣ ಅದರ ಸ್ಥಾಪಕನಾದ ಸಾಬೆಲಿಯಸ್. ಹೀಗಾಗಿ ಸಂಪ್ರದಾನಿಷ್ಠೆಯು ಇಕ್ಕಟ್ಟು ದಾರಿಯಲ್ಲಿ ಸಾಗಬೇಕಾಗಿತ್ತು; ತಂದೆ–ಮಗ ಇಬ್ಬರ ಭಿನ್ನತೆಗೆ ಅನವಶ್ಯಕವಾಗಿ ಒತ್ತು ನೀಡಿದವರು ಏರಿಯನ್ ವಿರೋಧಿಗಳಾಗುವ ಅಪಾಯವಿತ್ತು, ಅವರಿಬ್ಬರೂ ಅಭಿನ್ನರು ಎಂಬ ದೃಷ್ಟಿಕೋನವನ್ನು ತೀವ್ರವಾಗಿ ಎತ್ತಿಹಿಡಿದವರು ಸಾಬೆಲ್ ವಿರೋಧದ ಅಪಾಯದಲ್ಲಿದ್ದರು.

ಏರಿಯಸ್‌ನ ಸಿದ್ಧಾಂತಗಳನ್ನು ನೈಸಿಯ ಪರಿಷತ್ತು (೩೨೫) ಹೆಚ್ಚು ಬಹುಮತದಿಂದ ಖಂಡಿಸಿತು. ಬೇರೆ ಬೇರೆ ಮತಧರ್ಮಶಾಸ್ತ್ರಜ್ಞರು ಚಕ್ರವರ್ತಿಗಳು ಬೆಂಬಲಿಸಿದ ಬೇರೆ ಬೇರೆ ಪರಿಷ್ಕರಣೆಗಳನ್ನು ಸೂಚಿಸಿದರು. ೩೨೮ ರಿಂದ ತನ್ನ ಕೊನೆಯವರೆಗೂ ಅಲೇಕ್ಸಾಂಡ್ರಿಯದ ಬಿಷಪ್ ಆಗಿದ್ದ ಅಥನೇಸಿಯಸ್ ತನ್ನ ನೈಸೀಯ ಸಂಪ್ರದಾಯನಿಷ್ಠೆಯ ಕಾರಣದಿಂದ ನಿರಂತರವಾಗಿ ದೇಶಭ್ರಷ್ಟನಾಗಬೇಕಾಯಿತು. ಈಜಿಪ್ಟ್‌ನಲ್ಲಿ ಅವನು ತುಂಬ ಜನಪ್ರಿಯನಾಗಿದ್ದ; ಈ ಮತಧರ್ಮಶಾಸ್ತ್ರದ ವಿವಾದದುದ್ದಕ್ಕೂ ಅವನಿಗೆ ಆ ದೇಶ ಒಂದೇ ರೀತಿಯ

ಬೆಂಬಲವನ್ನು ತೋರಿಸಿತು. ಮತಧರ್ಮಶಾಸ್ತ್ರದ ವಿವಾದದುದ್ದಕ್ಕೂ, ರೋಮನ್ ವಿಜಯ ಕಾಲದಿಂದ ಕಣ್ಮರೆಯಾಗಿದ್ದ ರಾಷ್ಟ್ರೀಯ (ಅಥವಾ ಕನಿಷ್ಠ ಪಕ್ಷ ಪ್ರಾಂತೀಯ) ಭಾವನೆಯು ಮರುಕಳಿಸಿತು. ಕಾನ್‌ಸ್ಟಾಂಟಿನೋಪಲ್ ಮತ್ತು ಏಷಿಯಾಗಳು ಏರಿಯನಿಸಂಗೆ ಒಲವು ತೋರಿಸಿದರೆ, ಈಜಿಪ್ಟ್ ತೀವ್ರವಾಗಿ ಅಥನೇಸಿಯಪರವಾಗಿತ್ತು; ಪಶ್ಚಿಮವಂತೂ ನೈಸಿಯ ಪರಿಷತ್ತಿನ ತೀರ್ಮಾನಗಳಿಗೆ ಒಂದೇ ಬಗೆಯಲ್ಲಿ ಬದ್ಧವಾಯಿತು. ಏರಿಯನ್ ವಿವಾದ ಕೊನೆಗೊಂಡ ಬಳಿಕ, ಹೆಚ್ಚು ಕಡಿಮೆ ಅಂತಹುದೇ ಬಗೆಯ ವಿವಾದವೆದ್ದಿತು; ಅದರಲ್ಲಿ ಈಜಿಪ್ಟ್ ಒಂದು ಬಗೆಯಲ್ಲಿ, ಸಿರಿಯ ಮತ್ತೊಂದು ಬಗೆಯಲ್ಲಿ ಧರ್ಮವಿರೋಧಿಯಾಗಿತ್ತು. ಸಂಪ್ರದಾಯವು ಖಂಡಿಸಿದ ಈ ಧರ್ಮವಿರೋಧಗಳು ಪೂರ್ವ ಚಕ್ರಾಧಿಪತ್ಯದ ಐಕ್ಯಕ್ಕೇ ಧಕ್ಕೆಯುಂಟುಮಾಡಿ, ಮಹಮದೀಯ ವಿಜಯಕ್ಕೆ ಎಡೆ ಮಾಡಿಕೊಟ್ಟಿತು. ಪ್ರತ್ಯೇಕತಾವಾದಿ ಚಳವಳಿಗಳು ತಮ್ಮಲ್ಲಿ ತಾವೇ ಆಶ್ಚರ್ಯಜನಕವಲ್ಲದಿದ್ದರೂ, ಅವುಗಳು ಅತ್ಯಂತ ಸೂಕ್ಷ್ಮವೂ ಗಹನವೂ ಆದ ಮತಧರ್ಮಶಾಸ್ತ್ರಸಂಬಂಧೀ ಪ್ರಶ್ನೆಗಳೊಡನೆ ತಳುಕಿಹಾಕಿಕೊಂಡಿದ್ದವು.

೩೩೫ ರಿಂದ ೩೭೮ ರವರೆಗೆ ಚಕ್ರವರ್ತಿಗಳು ತಮಗೆ ಸಾಧ್ಯವಾದ ಮಟ್ಟಿಗೆ ಏರಿಯನ್ ಅಭಿಪ್ರಾಯವನ್ನು ಅನುಮೋದಿಸಿದರು; ಆದರೆ ಜೂಲಿಯನ್ ಮತ್ತು ಪ್ಯಾಗನ್ ಆಗಿ ಕ್ರೈಸ್ತ ಆಂತರಿಕ ವಿವಾದಗಳ ಬಗ್ಗೆ ತಟಸ್ಥ ಧೋರಣೆ ತಾಳಿದ್ದ ಅಪಾಟೇಟ್ (೩೬೧–೩೬೩) ಇದಕ್ಕೆ ಅಪವಾದಗಳು. ಕೊನೆಗೆ ೩೭೯ರಲ್ಲಿ ಚಕ್ರವರ್ತಿ ಥಿಯೋಡೋರಸ್ ಕ್ಯಾಥೋಲಿಕ್‌ರಿಗೆ ತನ್ನ ಸಂಪೂರ್ಣ ಬೆಂಬಲವನ್ನು ನೀಡಿದ, ಹೀಗಾಗಿ ಚಕ್ರಾಧಿಪತ್ಯದಾದ್ಯಂತ ಅವರ ಗೆಲವು ಪೂರ್ಣಗೊಂಡಂತಾಯಿತು. ಸಂತ ಆಂಬ್ರೋಸ್, ಸಂತ ಜೆರೋಮ್, ಮತ್ತು ಸಂತ ಆಗಸ್ಟೈನ್ (ಇವನ ಬಗ್ಗೆ ಮುಂದಿನ ಅಧ್ಯಾಯದಲ್ಲಿ ನೋಡೋಣ) ತಮ್ಮ ಇಡೀ ಜೀವಮಾನವನ್ನು ಈ ಕ್ಯಾಥೋಲಿಕ್ ವಿಜಯಗಳ ಕಾಲದಲ್ಲಿ ಕಳೆದರು. ಆದರೆ ಅದು ಪಶ್ಚಿಮದಲ್ಲಿ ಯಶಸ್ಸು ಗಳಿಸಿದ್ದು ಮತ್ತೊಬ್ಬ ಏರಿಯನ್‌ನ ಪ್ರಾಬಲ್ಯದಿಂದಾಗಿ, ಅದೆಂದರೆ ಗಾಥ್ ಮತ್ತು ವ್ಯಾಂಡಲ್‌ರದು, ಅವರಿಬ್ಬರಲ್ಲಿ ಒಬ್ಬರ ತಪ್ಪ ಒಬ್ಬರು ಬಹುತೇಕ ಪಶ್ಚಿಮ ಚಕ್ರಾಧಿಪತ್ಯವನ್ನು ಗೆದ್ದರು. ಅವರ ಅಧಿಕಾರವು ಒಂದು ಶತಮಾನದಷ್ಟು ಕಾಲ ಉಳಿಯಿತು, ಕೊನೆಯಲ್ಲಿ ಜಸ್ಟಿನಿಯನ್‌ರು, ಲಂಬಾರ್ಡ್‌ರು ಮತ್ತು ಫ್ರಾಂಕ್‌ರು ಅದನ್ನು ನಾಶಗೊಳಿಸಿದರು; ಇವರಲ್ಲಿ ಜಸ್ಟಿನಿಯನ್‌ರು, ಲಂಬಾರ್ಡ್‌ರು ಕೂಡ ಸಂಪ್ರದಾಯನಿಷ್ಠರು. ಹೀಗಾಗಿ ಕೊನೆಗೂ ಕ್ಯಾಥೋಲಿಕ್ ಮತವು ಖಚಿತ ಗೆಲವನ್ನು ಸಾಧಿಸಿತು.

○

೩

ಚರ್ಚ್‌ನ ಮೂವರು ಬೋಧಕರು (ಡಾಕ್ಟರ್‌ಗಳು)

ನಾಲ್ಕು ಜನರನ್ನು ಪಶ್ಚಿಮ ಭಾಗದ ಚರ್ಚ್‌ನ ಬೋಧಕರು (ಡಾಕ್ಟರ್‌ಗಳು) ಎಂದು ಕರೆಯುತ್ತಾರೆ: ಸಂತ ಆಂಬ್ರೋಸ್, ಸಂತ ಜೆರೋಮ್, ಸಂತ ಆಗಸ್ಟೈನ್ ಮತ್ತು ಪೋಪ್ ಗ್ರೆಗರಿ ಮಹಾಶಯ. ಇವರಲ್ಲಿ ಮೊದಲ ಮೂವರು ಸಮಕಾಲೀನರು, ನಾಲ್ಕನೆಯವನು ಆನಂತರ ಕಾಲದವನು. ಈ ಅಧ್ಯಾಯದಲ್ಲಿ ನಾನು ಇವರಲ್ಲಿ ಮೂವರ ಬದುಕು ಬೋಧನೆಗಳನ್ನು ಕುರಿತಂತೆ ಕೆಲವು ವಿಷಯಗಳನ್ನು ಪ್ರಸ್ತಾಪಿಸುತ್ತೇನೆ, ಆನಂತರದ ಮತ್ತೊಂದು ಅಧ್ಯಾಯವನ್ನು ಸಂತ ಆಗಸ್ಟೈನ್‌ಗೆ ಮೀಸಲಿಡುತ್ತೇನೆ. ಮೂವರಲ್ಲಿ ನಮ್ಮ ಮಟ್ಟಿಗೆ ಅವನು ತುಂಬ ಮುಖ್ಯ.

ಆಂಬ್ರೋಸ್, ಜೆರೋಮ್ ಮತ್ತು ಆಗಸ್ಟೈನ್ ಎಲ್ಲರೂ ರೋಮನ್ ಚಕ್ರಾಧಿಪತ್ಯದಲ್ಲಿ ಕ್ಯಾಥೋಲಿಕ್ ಚರ್ಚ್ ಪಡೆದ ಗೆಲವು ಮತ್ತು ಅನ್ಯದೇಶೀಯ ಆಕ್ರಮಣಗಳ ನಡುವಣ ಸಂಕ್ಷಿಪ್ತ ಅವಧಿಯಲ್ಲಿ ಕ್ರಿಯಾಶೀಲರಾಗಿದ್ದವರು. ಮತಭ್ರಷ್ಟನಾಗಿದ್ದ ಜೂಲಿಯನ್‌ನ ಆಡಳಿತ ಕಾಲದಲ್ಲಿ ಈ ಮೂವರೂ ಚಿಕ್ಕ ವಯಸ್ಸಿನವರು; ಗಾಥ್‌ರು ಅಲೆರಿಕ್‌ನ ನಾಯಕತ್ವದಲ್ಲಿ ರೋಮ್ ಅನ್ನು ಲೂಟಿಮಾಡಿದ ನಂತರ ಹತ್ತು ವರ್ಷಗಳ ಕಾಲ ಬದುಕಿದ್ದ; ಆಗಸ್ಟೈನ್ ಆಫ್ರಿಕದಲ್ಲಿ ಕೊಳ್ಳೆಯು ಆರಂಭವಾಗುವವರೆಗೆ ಬದುಕಿದ್ದು, ತಾನು ಬಿಷಪ್ ಆಗಿದ್ದ ಹಿಪೋವನ್ನು ಮುತ್ತಿಗೆ ಹಾಕುವಾಗ ಸತ್ತವನು; ಅವರ ಕಾಲವಾದ ತಕ್ಷಣವೇ ಇಟಲಿ, ಸ್ಪೆಯಿನ್ ಮತ್ತು ಆಫ್ರಿಕಗಳ ಯಜಮಾನರು ಬಾರ್ಬೇರಿಯನ್ನರು ಮಾತ್ರ ಆಗಿರದೆ ಏರಿಯನ್ ಧರ್ಮದ್ರೋಹಿಗಳು ಕೂಡ ಆಗಿದ್ದರು. ಶತಮಾನಗಳ ಕಾಲ ನಾಗರಿಕತೆ ಅಧೋಮುಖಿಯಾಗಿತ್ತು, ಆನಂತರ ಸುಮಾರು ಒಂದು ಸಾವಿರ ವರ್ಷಗಳ ನಂತರವಷ್ಟೇ ಕ್ರೈಸ್ತಚಕ್ರಾಧಿಪತ್ಯದಲ್ಲಿ ಅವರ ವಿದ್ಯೆ ಮತ್ತು ನಾಗರಿಕತೆಗಳಲ್ಲಿ ತಮ್ಮ ಸಮಾನರಾದವರು ಹುಟ್ಟಿ ಬಂದದ್ದು. ಕತ್ತಲ ಅವಧಿ ಮತ್ತು ಮಧ್ಯಯುಗದುದ್ದಕ್ಕೂ ಅವರ ಅಧಿಕಾರವನ್ನು ಮಾನ್ಯ ಮಾಡಿದ್ದರು; ಅವರೂ ಮಿಕ್ಕೆಲ್ಲರಿಗಿಂತ ಚರ್ಚ್ ರೂಪುಗೊಂಡಿದ್ದ ಬಗೆಯನ್ನು ಕಾಪಾಡಿಕೊಂಡು ಬಂದರು. ಸ್ಥೂಲವಾಗಿ

ಹೇಳುವುದಾದರೆ, ಸಂತ ಆಂಬ್ರೋಸ್ ಚರ್ಚ್ ಮತ್ತು ಸರ್ಕಾರಗಳ ಸಂಬಂಧದ ಮತಧಾರ್ಮಿಕ ಪರಿಕಲ್ಪನೆಯನ್ನು ನಿರ್ಧರಿಸಿದ; ಸಂತ ಜೆರೋಮ್ ಪಶ್ಚಿಮದ ಚರ್ಚ್‌ಗೆ ಲ್ಯಾಟಿನ್ ಬೈಬಲ್ ಅನ್ನು ನೀಡಿದನಲ್ಲದೆ ಮಠಪದ್ಧತಿಗೆ ಒತ್ತು ಕೊಟ್ಟ; ಅದೇ ಸಂತ ಆಗಸ್ಟೈನ್ ಚರ್ಚ್‌ನ ಮತಧರ್ಮಸುಧಾರಣೆಯವರೆಗಿನ ಮತಧರ್ಮಶಾಸ್ತ್ರವನ್ನು ನಿಗದಿಗೊಳಿಸಿದ, ಆನಂತರ ಲೂಥರ್ ಮತ್ತು ಕಾಲ್ವಿನ್‌ರ ಸಿದ್ಧಾಂತಗಳ ಬಹುಭಾಗಗಳು ಚಾಲತಿಗೆ ಬಂದವು. ಇತಿಹಾಸಪಥದ ಮೇಲೆ ಈ ಮೂವರಷ್ಟು ಪ್ರಭಾವಬೀರಿದವರು ಬೇರೆ ಇಲ್ಲ. ಲೌಕಿಕ ಸರ್ಕಾರದ ಹಿನ್ನೆಲೆಯಲ್ಲಿ ಚರ್ಚ್‌ನ ಸ್ವಾತಂತ್ರ್ಯವನ್ನು ಸಂತ ಆಂಬ್ರೋಸ್ ಯಶಸ್ವಿಯಾಗಿ ನಿಭಾಯಿಸಿದ, ಅದು ಹೊಸತೂ ಕ್ರಾಂತಿಕಾರಿಯಾದುದೂ ಆದ ಸಿದ್ಧಾಂತವಾಗಿದ್ದು ಮತಧರ್ಮಸುಧಾರಣೆಯ ಕಾಲದವರೆಗೂ ಮುಂದುವರಿಯಿತು; ಆಗ ಹಾಬ್ಸ್ ಅದರ ವಿರುದ್ಧ ಹದಿನೇಳನೇ ಶತಮಾನದಲ್ಲಿ ಹೋರಾಡಿದಾಗ, ಅವನು ಮುಖ್ಯವಾಗಿ ವಾದಿಸಿದ್ದು ಸಂತ ಆಂಬ್ರೋಸ್ ವಿರುದ್ಧವೇ. ಸಂತ ಆಗಸ್ಟೈನ್ ಹದಿನಾರು ಹದಿನೇಳನೇ ಶತಮಾನಗಳಲ್ಲಿನ ಮತಧರ್ಮಶಾಸ್ತ್ರಸಂಬಂಧಿ ವಿವಾದಗಳಲ್ಲಿ ಮುಂಚೂಣಿಯಲ್ಲಿದ್ದವನು; ಪ್ರಾಟೆಸ್ಟಂಟರೂ ಜೇನ್‌ಸೆನಿಸ್ಟರೂ ಅವನ ಪರವಾಗಿದ್ದರೆ, ಸಂಪ್ರದಾಯವಾದಿ ಕ್ಯಾಥೋಲಿಕ್‌ರು ಅವನ ವಿರುದ್ಧವಾಗಿದ್ದರು.

ನಾಲ್ಕನೆಯ ಶತಮಾನದ ಕೊನೆಯ ಹೊತ್ತಿಗೆ ಪಶ್ಚಿಮ ಯೂರೋಪ್‌ನ ರಾಜಧಾನಿಯು ಮಿಲಾನ್ ಆಗಿತ್ತು, ಅದರ ಬಿಷಪ್ ಆಂಬ್ರೋಸ್. ತನ್ನ ಕರ್ತವ್ಯಗಳಿಂದಾಗಿ ಅವನು ನಿರಂತರವಾಗಿ ಚಕ್ರವರ್ತಿಗಳ ಸಂಪರ್ಕದಲ್ಲಿರಬೇಕಾಗಿತ್ತು. ಅವರೊಡನೆ ಸಮಾನನೆಂಬಂತೆ, ಕೆಲವು ಸಂದರ್ಭಗಳಲ್ಲಿ ಅವರಿಗಿಂತ ಮೇಲು ಎಂಬಂತೆ ಮಾತಾಡುವುದು ಅವನ ರೂಢಿ. ಚಕ್ರಾಧಿಪತ್ಯದ ನ್ಯಾಯಾಲಯಗಳೊಂದಿಗಿನ ಅವನ ವ್ಯವಹಾರಗಳು ಆ ಕಾಲದಲ್ಲಿ ಸಾಮಾನ್ಯವೆನಿಸಿದ ವಿರುದ್ಧ ಲಕ್ಷಣಗಳನ್ನು ತೋರಿಸುತ್ತವೆ: ಸರ್ಕಾರವು ದುರ್ಬಲವೂ ಅಸಮರ್ಥವೂ ಅಗಿದ್ದು ತತ್ವಹೀನ ಸ್ವಾರ್ಥಿಗಳು ತಾತ್ಕಾಲಿಕ ತುರ್ತಿನ ಹೊರತಾಗಿ ಯಾವುದೇ ಧೋರಣೆಯಿಲ್ಲದೆ ಅನಿರ್ಬಂಧಿತ ರೀತಿಯಲ್ಲಿ ಆಡಳಿತ ನಡೆಸುತ್ತಿದ್ದರೆ, ಅದರ ಒಳಿತಿಗಾಗಿ ಸ್ವಹಿತಾಸಕ್ತಿಗಳನ್ನು ಬಲಿ ಕೊಡುವವರು ಮಾರ್ಗದರ್ಶನ ಮಾಡುತ್ತಿದ್ದರೆ ಚರ್ಚ್ ಪ್ರಬಲವೂ ಸಮರ್ಥವೂ ಆಗಿರುತ್ತಿತ್ತು; ಚರ್ಚ್‌ನ ಈ ಧೋರಣೆಯಿಂದಾಗಿ ಅದು ಆ ಮುಂದಿನ ಸಾವಿರ ವರ್ಷಗಳ ಕಾಲ ಗೆಲವು ಸಾಧಿಸುತ್ತಿತ್ತು. ಈ ಗುಣಗಳನ್ನು ಮತಾಂಧತೆ ಹಾಗೂ ಮೂಢಶ್ರದ್ಧೆಗಳು ಮಸುಕುಗೊಳಿಸಿದವು ಎಂಬುದು ನಿಜ, ಆದರೆ ಇವುಗಳಿಲ್ಲದೆ ಆ ಕಾಲದ ಯಾವುದೇ ಸುಧಾರಣಾ ಚಳವಳಿಯೂ ಯಶಸ್ಸು ಗಳಿಸಲು ಸಾಧ್ಯವಾಗುತ್ತಿರಲಿಲ್ಲ.

ಸರ್ಕಾರದ ಸೇವೆಯಲ್ಲಿ ಸದಾ ಯಶಸ್ಸು ಗಳಿಸಲು ಸಂತ ಆಂಬ್ರೋಸ್ ಪ್ರತಿ ಸಂದರ್ಭವನ್ನೂ ಬಳಸಿಕೊಳ್ಳುತ್ತಿದ್ದ. ಅವನ ತಂದೆಯ ಹೆಸರೂ ಆಂಬ್ರೋಸ್, ಅವನು ಹಿರಿಯ ಅಧಿಕಾರಿಯಾಗಿದ್ದವನು – ಗಾಲ್‌ರಿಗೆ ಸೂಕ್ತನಾಗಿದ್ದವನು. ಸಂತನು ಹುಟ್ಟಿದ್ದು ಪ್ರಾಯಶಃ ಟ್ರೀವ್‌ಸ್‌ನಲ್ಲಿ, ಅದು ಜರ್ಮನ್‌ರನ್ನು ದೂರವಿರಿಸಲು ರೋಮನ್ ತುಕಡಿಗಳು ಬೀಡುಬಿಟ್ಟಿದ್ದ ಒಂದು ಗಡಿನಾಡ ದಂಡುಪ್ರದೇಶ. ಹದಿಮೂರನೆಯ ವಯಸ್ಸಿಗೆ ಅವನನ್ನು ರೋಮ್‌ಗೆ ಕರೆದೊಯ್ಯಲಾಯಿತು, ಅಲ್ಲಿ ಅವನಿಗೆ ಒಳ್ಳೆಯ ಶಿಕ್ಷಣ ದೊರೆಯಿತು, ಗ್ರೀಕ್ ಭಾಷೆಯ ತಲಸ್ಪರ್ಶಿ ಪರಿಚಯವೂ ಆಯಿತು. ಬೆಳೆದ ಮೇಲೆ ಅವನು ಕಾನೂನು ಕಲಿಯಲು ತೊಡಗಿದ, ಅದರಲ್ಲಿ ಯಶಸ್ಸು ಗಳಿಸಿದ ಅವನನ್ನು ತನ್ನ ಮೂವತ್ತನೇ ವಯಸ್ಸಿನಲ್ಲಿ ಲಿಗೂರಿಯ ಮತ್ತು ಅಮೀಲಿಯಗಳ ಗವರ್ನರ್ ಆಗಿ ಮಾಡಲಾಯಿತು. ಆದರೆ ನಾಲ್ಕು ವರ್ಷಗಳ ಬಳಿಕ ಅವನು ಲೌಕಿಕ ಸರ್ಕಾರದಿಂದ ವಿಮುಖನಾಗಿಯೂ ಸಾರ್ವಜನಿಕ ಉತ್ತೇಜನದಿಂದಲೂ, ಒಬ್ಬ ಏರಿಯನ್ ಅಭ್ಯರ್ಥಿಯ ವಿರುದ್ಧವಾಗಿ ಮಿಲಾನ್‌ನ ಬಿಷಪ್ ಆದ. ತನ್ನ ಲೌಕಿಕ ಆಸ್ತಿಯನ್ನೆಲ್ಲ ಬಡಬಗ್ಗರಿಗೆ ನೀಡಿದ, ತನ್ನ ಬದುಕಿನ ಉಳಿದ ಭಾಗವನ್ನೆಲ್ಲ ಚರ್ಚ್‌ನ ಸೇವೆಗಾಗಿ ಮುಡುಪಿಟ್ಟ, ಎಷ್ಟೋ ವೇಳೆ ಅಪಾಯುಗಳನ್ನೆದುರಿಸಿ. ಇದರ ಹಿಂದೆ ಲೌಕಿಕ ಉದ್ದೇಶಗಳಾವುವೂ ಇರಲಿಲ್ಲವಾದರೂ, ಆಗ ಅದು ಬುದ್ಧಿಶಕ್ತಿಯದಾಗಿರುತ್ತಿತ್ತು. ತನ್ನ ಬಿಷಪ್ ಚರ್ಚ್ ಕರ್ತವ್ಯ ನಿರ್ವಹಣೆಯಲ್ಲಿ ತೋರಿಸಿದ ಆಡಳಿತಾತ್ಮಕ ಮುತ್ಸದ್ದಿತನದಿಂದಾಗಿ ಅವನು ದೇಶದ ಚಕ್ರವರ್ತಿಯಾಗಿದ್ದರೂ ಅದು ಉಪಯುಕ್ತವಾಗುತ್ತಿತ್ತು.

ಆಂಬ್ರೋಸ್‌ನ ಬಿಷಪ್ ಚರ್ಚ್ ಆಡಳಿತದ ಮೊದಲ ಒಂಬತ್ತು ವರ್ಷಗಳು ಪಶ್ಚಿಮದ ಚಕ್ರವರ್ತಿ ಕ್ಯಾಥೋಲಿಕ್ ಆಗಿದ್ದ ಗ್ರೇಷಿಯನ್, ಅವನು ಸದ್ಗುಣಿ ಮತ್ತು ಅಸಡ್ಡೆಯ ಮನೋಭಾವದವನು. ಸದಾ ಮೃಗಯಾವಿಹಾರದಲ್ಲಿ ತೊಡಗಿದ್ದು ತನ್ನ ಆಡಳಿತವನ್ನು ಕಡೆಗಣಿಸಿದ್ದ, ಕೊನೆಗೆ ಅವನು ಹತ್ಯೆಗೀಡಾದ. ಇಡೀ ಪಶ್ಚಿಮ ಚಕ್ರಾಧಿಪತ್ಯದಾದ್ಯಂತ ಅವನ ಉತ್ತರಾಧಿಯಾದವನು ದುರಾಕ್ರಮಣಕಾರನಾದ ಮ್ಯಾಕ್ಸಿಮಸ್ ಎನ್ನುವವನು; ಆದರೆ ಇಟಲಿಯಲ್ಲಿ ಉತ್ತರಾಧಿಕಾರಿತ್ವವು ಗ್ರೇಷಿಯನ್‌ನ ತಮ್ಮ ಎರಡನೆ ವ್ಯಾಲಂಟೈನ್ ಪಾಲಾಯಿತು, ಆಗ ಅವನಿನ್ನೂ ಹುಡುಗ. ಮೊದಲಿಗೆ, ಸಾಮ್ರಾಜ್ಯಾಧಿಕಾರವನ್ನು ಅವನ ತಾಯಿ – ದೊರೆ ಮೊದಲನೆಯ ವ್ಯಾಲೆಂಟಿನಿಯನ್‌ನ ವಿಧವೆ – ಜಸ್ಟಿನ ನೋಡಿಕೊಳ್ಳುತ್ತಿದ್ದಳು. ಆದರೆ ಅವರು ಏರಿಯನ್ ಆದ್ದರಿದಾಗಿ ಅವಳಿಗೂ ಸಂತ ಆಂಬ್ರೋಸ್‌ನಿಗೂ ನಡುವೆ ಸಂಘರ್ಷಗಳುಂಟಾಗುತ್ತಿದ್ದುದು ಅನಿವಾರ್ಯವಾಯಿತು.

ಈ ಅಧ್ಯಾಯದಲ್ಲಿ ನಾವು ಪ್ರಸ್ತಾಪಿಸುತ್ತಿರುವ ಮೂವರೂ ಸಂತರು ಅಸಂಖ್ಯ ಪತ್ರಗಳನ್ನು ಬರೆದವರು, ಅವುಗಳಲ್ಲಿ ಕೆಲವು ಉಳಿದು ಬಂದಿವೆ; ಅದರ

ಪರಿಣಾಮವೆಂದರೆ ನಾವು ಬೇರಾವುದೇ ಕ್ರೈಸ್ತೇತರ ತತ್ವಜ್ಞಾನಿಗಳು ಹಾಗೂ ಮಧ್ಯಯುಗದ ಬೇರಾವುದೇ ಧರ್ಮಬೋಧಕರುಗಳಿಗಿಂತಲೂ ಹೆಚ್ಚು ವಿಷಯವನ್ನು ಅವರ ಬಗ್ಗೆ ತಿಳಿಯುವಂತಾದುದು. ಸಂತ ಆಗಸ್ಟೈನ್‌ನಂತೂ ಎಲ್ಲ ಹಂತದವರಿಗೂ ಪತ್ರಗಳನ್ನು ಬರೆದ, ಬಹುತೇಕ ಸಿದ್ಧಾಂತಗಳ ಕುರಿತು ಅಥವಾ ಚರ್ಚ್ ಶಿಸ್ತನ್ನು ಕುರಿತು. ಸಂತ ಜೆರೋಮ್‌ನ ಪತ್ರಗಳು ಬಹುತೇಕವಾದವು ಮಹಿಳೆಯರನ್ನುದ್ದೇಶಿಸಿ ಬರೆದವು, ಕನ್ಯತ್ವವನ್ನು ಉಳಿಸಿಕೊಂಡುಬರಬೇಕಾದ ರೀತಿ ಯಾವುದು ಎಂಬುದರ ಕುರಿತು; ಆದರೆ ಸಂತ ಆಂಬ್ರೋಸ್‌ನ ಬಹು ಮುಖ್ಯವೂ ಕುತೂಹಲದಾಯಕವೂ ಆದ ಪತ್ರಗಳೆಂದರೆ ಚಕ್ರವರ್ತಿಗಳಿಗೆ ಬರೆದವು, ಯಾವ ವಿಷಯಗಳಲ್ಲವರು ಕರ್ತವ್ಯಚ್ಯುತರಾಗಿದ್ದಾರೆ ಎಂಬುದರ ಬಗ್ಗೆ ಅಥವಾ, ಕೆಲವು ಸಂದರ್ಭಗಳಲ್ಲಿ ತಮ್ಮ ಕರ್ತವ್ಯ ನಿಭಾಯಿಸಿದ ಬಗೆಯನ್ನು ಹೊಗಳಿ.

ಆಂಬ್ರೋಸ್ ಎದುರಿಸಬೇಕಾಗಿ ಬಂದ ಮೊದಲನೆಯ ಸಾರ್ವಜನಿಕ ಪ್ರಶ್ನೆಯೆಂದರೆ ರೋಮ್‌ನಲ್ಲಿನ ಬಲಿಪೀಠ ಮತ್ತು ವಿಕ್ಟರಿ ಪ್ರತಿಮೆಯನ್ನು ಕುರಿತು. ಬೇರೆಡೆಗಳಿಗಿಂತಲೂ ರಾಜಧಾನಿಯ ಸೆನೇಟರ್‌ಗಳ ಕುಟುಂಬಗಳಲ್ಲಿ ಪ್ಯಾಗನಿಸಂ ದೀರ್ಘ ಕಾಲ ಉಳಿದಿತ್ತು; ಅಧಿಕೃತ ಮತಧರ್ಮವು ಒಬ್ಬ ಶ್ರೀಮಂತ ಪುರೋಹಿತಶಾಹಿಯ ಕೈಯಲ್ಲಿತ್ತು, ಅವನಿಗೆ ಜಗತ್ತನ್ನೇ ಗೆದ್ದ ರಾಜಹೆಮ್ಮೆ. ಕಾನಸ್‌ಸ್ಟಾಂಟೈನ್‌ನ ಮಗ ಕಾನ್‌ಸ್ಟಾಂಟಿಯಸ್ ತೆಗೆಸಿ ಹಾಕಿದ್ದ ಸೆನೇಟ್ ಭವನದಲ್ಲಿನ ವಿಕ್ಟರಿ ಪ್ರತಿಮೆಯು ಮತಭ್ರಷ್ಟ ಜೂಲಿಯನ್‌ನಿಂದ ಪುನಃಸ್ಥಾಪನೆಗೊಂಡಿತ್ತು. ಚಕ್ರವರ್ತಿ ಗ್ರೇಷಿಯನ್ ಅದನ್ನು ಮತ್ತೆ ತೆಗೆಸಿ ಹಾಕಿಸಿದ; ಇದರಿಂದಾಗಿ ಸೆನೇಟ್‌ನ ಒಂದು ನಿಯೋಗವು ನಗರದ ಮುಖ್ಯಸ್ಥನಾಗಿದ್ದ ಸಿಮ್ಯಾಕಸ್‌ನ ನೇತೃತ್ವದಲ್ಲಿ ಹೋಗಿ ಅದರ ಪುನಃಸ್ಥಾಪನೆ ಮಾಡಬೇಕೆಂದು ಕೇಳಿಕೊಂಡಿತು.

ಆಗಸ್ಟೈನ್‌ನ ಬದುಕಿನಲ್ಲಿಯೂ ಪಾತ್ರವಿದ್ದ ಸಿಮ್ಯಾಕಸ್ ಒಂದು ಗೌರವಾನ್ವಿತ ಕುಟುಂಬದ ಗೌರವಾನ್ವಿತ ಸದಸ್ಯ. ಅವನು ಹಣವಂತ, ಶ್ರೀಮಂತಿಕೆಯವನು, ಸುಸಂಸ್ಕೃತ ಮತ್ತು ಪ್ಯಾಗನ್. ವಿಕ್ಟರಿ ಪ್ರತಿಮೆಯನ್ನು ತೆಗೆಸಿದುದರ ವಿರುದ್ಧ ಪ್ರತಿಭಟಿಸಿದ್ದ ಅವನನ್ನು ಗ್ರೇಷಿಯನ್ ೩೮೨ ರಲ್ಲಿ ರೋಮ್‌ನಿಂದ ದೇಶಭ್ರಷ್ಟನನ್ನಾಗಿ ಮಾಡಿದ್ದ, ಆದರೆ ದೀರ್ಘ ಕಾಲವೇನಲ್ಲ, ಅವನು ೩೮೪ ರಲ್ಲಿ ನಗರದ ಮುಖ್ಯಸ್ಥನಾಗಿದ್ದ. ಅವನು ಸಿಮ್ಯಾಕಸ್‌ನ ತಾತ, ಅವನು ಬೋಥಿಯಸ್‌ನ ಮಾವ, ಅವನು ಥಿಯೋಡೋರಿಕ್ ಆಡಳಿತದಲ್ಲಿ ಪ್ರಮುಖನೆನಿಸಿದ್ದವನು.

ಇದಕ್ಕೆ ಕ್ರಿಶ್ಚಿಯನ್ ಸೆನೇಟರ್‌ಗಳು ಅಡ್ಡಿಪಡಿಸಿದರು, ಅದಕ್ಕಾಗಿ ಆಂಬ್ರೋಸ್ ಮತ್ತು ಪೋಪ್ (ಡಮಾಸ್ಕಸ್)ನ ಸಹಾಯದಿಂದ ಅವರ ಮನವಿಯನ್ನು ಚಕ್ರವರ್ತಿ ಪುರಸ್ಕರಿಸುವಂತೆ ಆಯಿತು. ಎರಡನೆಯ ಗ್ರೇಷಿಯನ್‌ನ ಮರಣಾನಂತರ, ಸಿಮ್ಯಾಕಸ್ ಮತ್ತು ಪ್ಯಾಗನ್ ಸೆನೇಟರ್‌ಗಳು ಹೊಸ ಚಕ್ರವರ್ತಿಯಾದ ಎರಡನೆಯ

ವ್ಯಾಲೆಂಟೈನ್‌ಗೆ ಕ್ರಿಶ ೩೮೪ ರಲ್ಲಿ ಮನವಿ ಸಲ್ಲಿಸಿದರು. ಮತ್ತೆ ಮಾಡಿಕೊಂಡ ಈ ಮನವಿಯ ವಿರುದ್ಧವಾಗಿ ಆಂಬ್ರೋಸ್ ಚಕ್ರವರ್ತಿಗೆ ಪತ್ರವೊಂದನ್ನು ಬರೆದ; ಅದರಲ್ಲಿ, ರೋಮನ್‌ರೆಲ್ಲ ಸೈನ್ಯ ಸೇವೆಗಾಗಿ ತಮ್ಮ ಸಾರ್ವಭೌಮನಿಗೆ ಋಣಿಗಳು, ಹೀಗಾಗಿ ಚಕ್ರವರ್ತಿಯು ದೇವರಿಗಾಗಿ ಕೃತಜ್ಞನಾಗಿರಬೇಕು ಎಂಬ ವಾದವೊಂದನ್ನು ಮಂಡಿಸಿದ.[೧೬೪] 'ಯಾರೂ ನಿಮ್ಮ ಯೌವನದ ದುರುಪಯೋಗ ಮಾಡಿಕೊಳ್ಳದಿರಲಿ; ಇದನ್ನು ಬಯಸುವವನು ಕ್ರೈಸ್ತೇತರನಾಗಿರಲಿ, ತನ್ನ ಮೂಢಶ್ರದ್ಧೆಗಳಿಂದ ನಿಮ್ಮ ಮನಸ್ಸನ್ನು ಚೌಕಟ್ಟಿನಲ್ಲಿರಿಸುವುದು ತಕ್ಕುದಲ್ಲ, ಆದರೆ ತನ್ನ ಉತ್ಸಾಹದಿಂದವನು ನಿಜವಾದ ಶ್ರದ್ಧೆಗೆ ಹೇಗೆ ಬದ್ಧನಾಗಿರಬೇಕೆಂದು ಉಪದೇಶಿಸಲಿ ಅಥವಾ ಬುದ್ಧಿ ಹೇಳಲಿ; ಯಾಕೆಂದರೆ ಅವನು ಸತ್ಯದ ತೀವ್ರತೆಯಿಂದ ವ್ಯರ್ಥ ವಿಷಯಗಳನ್ನು ಸಮರ್ಥಿಸುತ್ತಿರುತ್ತಾನೆ.' ಬಲಿಪೀಠದೆದುರು ಆಣೆ ಮಾಡುವಂತೆ ಬಲವಂತಪಡಿಸಿವುದು ಕ್ರೈಸ್ತನಾದವನನ್ನು ಚಿತ್ರಹಿಂಸೆಗೆ ಗುರಿಪಡಿಸಿದಂತೆ. 'ಅದು ನಾಗರಿಕ ಉದ್ದೇಶವಾಗಿದ್ದರೆ ಉತ್ತರ ಕೊಡುವ ಅಧಿಕಾರವು ವಿರೋಧ ಪಕ್ಷದವನಿಗಿರುತ್ತಿತ್ತು; ಆದರೆ ಇದು ಮತಧಾರ್ಮಿಕ ಉದ್ದೇಶದ್ದು, ಬಿಷಪ್‌ನಾದ ನಾನು ಒಂದು ಬೇಡಿಕೆ ಮುಂದಿಡುತ್ತೇನೆ .. .. ಖಂಡಿತವಾಗಿ ಬೇರೇನಾದರೂ ತೀರ್ಮಾನ ಬಂದರೆ ಅದನ್ನು ಬಿಷಪ್‌ರಾದ ನಾವು ನಿರಂತರವಾಗಿ ಸಹಿಸಿಕೊಳ್ಳಲಾರೆವು ಅಥವಾ ಅದನ್ನು ಗಮನಿಸದೆ ಇರಲಾರೆವು. ನೀವು ಚರ್ಚ್‌ಗೆ ಬರಬಹುದು, ಆಗ ಯಾವುದೇ ಪುರೋಹಿತನಾಗಲೀ ನಿಮ್ಮನ್ನು ತಡೆಯುವವನಾಗಲೀ ಅಲ್ಲಿರುವುದಿಲ್ಲ.'[೧೬೫]

ಮುಂದಿನ ಎಪಿಸಲ್ ಹೇಳುವುದೇನೆಂದರೆ, ಚರ್ಚ್‌ನ ದತ್ತಿಗಳು ಹಣವಂತ ಕ್ರೈಸ್ತೇತರ ದೇವಾಲಯಗಳು ಯಾವತ್ತೂ ಮಾಡದಿದ್ದ ಬಡವರ ಏಳಿಗೆಗಾಗಿ ವೆಚ್ಚಿಸುವ ಕೆಲಸ ಮಾಡುತ್ತವೆ ಎನ್ನುವುದನ್ನು. 'ಚರ್ಚ್‌ನ ಆಸ್ತಿ ಬಡವರನ್ನು ಪೋಷಿಸಲು ಇರುವಂತಹುದು, ತಾವೆಷ್ಟು ಜನ ಬಂಧಿತರನ್ನು ಬಿಡಿಸಲು ಹಣ ಕೊಟ್ಟು ನೆರವಾಗಿದ್ದೇವೆ ಎಂಬುದನ್ನು, ಬಡವರಿಗೆ ಎಷ್ಟು ಆಹಾರವಿತ್ತಿದ್ದೇವೆ ಎಂಬುದನ್ನು ಕುರಿತು, ಎಷ್ಟು ಮಂದಿ ದೇಶಭ್ರಷ್ಟರ ಬದುಕನ್ನು ನೇರಗೊಳಿಸಲು ಹಣ ನೀಡಿದ್ದೇವೆಂಬುದನ್ನು ಲೆಕ್ಕಹಾಕಲಿ.' ಇದು ಮನಂಬುಗುವ ವಾದ, ಕ್ರೈಸ್ತ ನಡಾವಳಿಯಿಂದ ಸಮಂಜಸವಾಗಿ ಸಮರ್ಥಿತವಾದ ವಾದ.

ಸಂತ ಆಂಬ್ರೋಸ್ ತನ್ನ ವಾದದಲ್ಲಿ ಜಯಶಾಲಿಯಾದ, ಆದರೆ ಆನಂತರ ಬಂದ ಕ್ರೈಸ್ತೇತರರ ಪರವಾಗಿದ್ದ ಆಕ್ರಮಣಕಾರನಾದ ಯೂಜೀನಿಯಸ್ ಬಲಿಪೀಠ ಹಾಗೂ ವಿಗ್ರಹಗಳನ್ನು ಪುನಃಸ್ಥಾಪಿಸಿದ. ಥಿಯೋಡೋಸಿಯಸ್ ೩೯೪ ರಲ್ಲಿ

---

೧೬೪. ಈ ವಾದದಲ್ಲಿ ಊಳಿಗಮಾನ್ಯ ಪದ್ಧತಿಯ ದೃಷ್ಟಿಕೋನವನ್ನು ಮುನ್‌ಸೂಚಿಸಲಾಗಿದೆ
೧೬೫. ಎಪಿಸಲ್, ೧೭.

ಯೂಜೀನಿಯಸ್‌ನನ್ನು ಸೋಲಿಸಿದ ಮೇಲಷ್ಟೇ ಕ್ರೈಸ್ತರ ಪರವಾಗಿ ಈ ಪ್ರಶ್ನೆಯನ್ನು ಇತ್ಯರ್ಥಪಡಿಸಲಾದುದು.

ಮೊದಲು, ಬಿಷಪ್ ಚಕ್ರಾಧಿಪತ್ಯದ ನ್ಯಾಯಾಲಯದೊಡನೆ ಸ್ನೇಹಪರವಾಗಿಯೇ ಇದ್ದ, ಇಟಲಿಯನ್ನೂ ಆಕ್ರಮಿಸಬಹುದೆಂಬ ಹೆದರಿಕೆಯಿಂದ ಆಕ್ರಮಣಕಾರನಾದ ಮ್ಯಾಕ್ಸಿಮಸ್ ಬಳಿಗೆ ಅವನನ್ನು ರಾಯಭಾರ ಕಾರ್ಯಕ್ಕಾಗಿ ನಿಯೋಜಿಸಲಾಗಿತ್ತು. ಆದರೆ ಬಹು ಬೇಗ ಗಂಭೀರ ರೂಪದ ಒಂದು ವಿವಾದ ಮೇಲೆದ್ದಿತು. ಸಮ್ರಾಜ್ಞಿ ಜಸ್ಟಿನ ಒಬ್ಬ ಏರಿಯನ್‌ಳಾಗಿ ಮಿಲಾನ್‌ನ ಒಂದು ಚರ್ಚ್ ಅನ್ನು ಏರಿಯನ್‌ರಿಗೆ ಬಿಟ್ಟುಕೊಡಬೇಕೆಂದು ಮನವಿ ಮಾಡಿಕೊಂಡಳು, ಆದರಿದನ್ನು ಆಂಬ್ರೋಸ್ ಒಪ್ಪಲಿಲ್ಲ. ಜನ ಅವನ ಪರವಾಗಿದ್ದರು, ದೊಡ್ಡ ಸಂಖ್ಯೆಯಲ್ಲಿ ಬೆಸಿಲಿಕದಲ್ಲಿ ಜಮಾವಣೆಯಾದರು. ಏರಿಯನ್‌ರೇ ಆಗಿದ್ದ ಗಾಥಿಕ್ ಸೈನಿಕರನ್ನು ಅಲ್ಲಿನ ಆಸ್ತಿಯನ್ನು ವಶಪಡಿಸಿಕೊಳ್ಳಲು ಕಳಿಸಲಾಯಿತು, ಆದರೆ ಅವರು ಜನರೊಂದಿಗೇ ಕೈಜೋಡಿಸಿದರು. 'ಕೌಂಟ್‌ಗಳೂ ಟ್ರಿಬ್ಯೂನ್‌ಗಳೂ ಬಂದು ಎಲ್ಲವೂ ಚಕ್ರವರ್ತಿಯ ಅಧೀನದಲ್ಲಿರುವುದರಿಂದ ಅವನು ತನ್ನ ಅಧಿಕಾರವನ್ನು ಚಲಾಯಿಸುತ್ತಿದ್ದಾನೆ, ಹೀಗಾಗಿ ಬೇಗ ಬೆಸಿಲಿಕವನ್ನು ಶರಣಾಗಿ ಒಪ್ಪಿಸಬೇಕೆಂದು ಹೇಳಿದರು. ಅವರೇನಾದರೂ ಅದು ನನ್ನ ಜಾಗ, ನನ್ನ ಹಣ, ಅಥವಾ ಅಂತಹ ಎಲ್ಲವೂ ನನ್ನವೇ ಎಂದು ಹೇಳಿದರೆ ಅವೆಲ್ಲ ಬಡವರಿಗೆ ಸೇರಿದ್ದರೂ, ನಾನು ವಿರೋಧಿಸುವುದಿಲ್ಲ. ಆದರೆ ದೇವರಿಗೆ ಸೇರಿದ್ದ ಸಾಮ್ರಾಜ್ಯಾಧಿಕಾರದ ವ್ಯಾಪ್ತಿಗೆ ಬರುವುದಿಲ್ಲ. "ನನ್ನ ಪಿತ್ರಾರ್ಜಿತ ಆಸ್ತಿಯನ್ನು ಬೇಕಾದರೆ ವಶಪಡಿಸಿಕೊಳ್ಳಲಿ; ನನ್ನ ದೇಹ ಬೇಕಾದರೆ ನಾನು ತಕ್ಷಣ ಹೋಗುತ್ತೇನೆ. ನನಗೆ ಕೋಳ ತೊಡಿಸಬೇಕೆಂದರೆ ಅಥವಾ ಮರಣದಂಡನೆ ವಿಧಿಸಬೇಕೆಂದಿದ್ದರೆ ಅದು ನನಗೂ ಸಂತೋಷದ ವಿಷಯವೇ. ನಾನು ಜನಗಳೊಡನೆ ಸೇರಿ ರಕ್ಷಿಸಿಕೊಳ್ಳ ಹೊರಡುವುದಿಲ್ಲ ಅಥವಾ ಬಲಿಪೀಠವನ್ನಾಶ್ರಯಿಸಿ ನನ್ನನ್ನು ರಕ್ಷಿಸಲು ಬೇಡಿಕೊಳ್ಳುವುದಿಲ್ಲ, ಅದರ ಬದಲು ಅದೇ ಬಲಿಪೀಠದಲ್ಲಿ ಕೊಂದರೆ ನನಗೆ ಸಂತೋಷ." ಬೆಸಿಲಿಕವನ್ನು ವಶಪಡಿಸಿಕೊಳ್ಳಲು ಸಶಸ್ತ್ರಪಡೆಯನ್ನು ಕಳಿಸಿದ ವಿಷಯ ಕೇಳಿ, ಜನರು ಅದನ್ನು ರಕ್ಷಿಸುವ ಭರದಲ್ಲಿ ಆಗಬಹುದಾದ ಸಾವುನೋವುಗಳನ್ನು ಹಾಗೂ ಅದರಿಂದಾಗಿ ಇಡೀ ನಗರವನ್ನು ವಿಚಾರಣೆಗೊಳಪಡಿಸಬಹುದಾದ ಸಂಭವವನ್ನು ಕಲ್ಪಿಸಿಕೊಂಡು ನಾನು ದಿಗ್ಭ್ರಮೆಗೊಂಡೆ. ಇಂತಹ ದೊಡ್ಡ ನಗರದ ಅಥವಾ ಇಡೀ ಇಟಲಿಯ ವಿನಾಶವನ್ನು ನಾನು ತಡೆದುಕೊಳ್ಳಲಾರೆ'[೧೬೬] ಎಂದು ತನ್ನ ಸೋದರಿಗೆ ಅವನು ಭಾವೋದ್ವೇಗದ ಪತ್ರವೊಂದನ್ನು ಬರೆದ.

---

೧೬೬ ಅದೇ, ೨೦.

ಈ ಭಯವೇನೂ ಉತ್ಪ್ರೇಕ್ಷೆಯದಾಗಿರಲಿಲ್ಲ, ಗಾಥಿಕ್ ಸೈನಿಕರು ಬರ್ಬರತೆಗೆ ಇಳಿಯುವ ಸಾಧ್ಯತೆಯಿತ್ತು, ಅವರಿದನ್ನು ಇಪ್ಪತ್ತೈದು ವರ್ಷಗಳ ನಂತರ ಇಟಲಿಯ ಆಕ್ರಮಣಕಾಲದಲ್ಲಿ ನಡೆಸಿದರು.

ಆಂಬ್ರೋಸ್‌ನ ಶಕ್ತಿ ಇದ್ದುದು ಜನರ ಬೆಂಬಲದಲ್ಲಿ. ಅವರನ್ನು ಎತ್ತಿಕಟ್ಟುತ್ತಾನೆಂಬ ಆರೋಪ ಅವನ ಮೇಲೆ ಬಂತು, ಆದರೆ 'ಅವರನ್ನು ಉದ್ರೇಕಗೊಳ್ಳದಂತೆ ಮಾಡುವ ಸಾಮರ್ಥ್ಯವೇನೋ ನನ್ನ ವ್ಯಾಪ್ತಿಯಲ್ಲಿತ್ತು, ಆದರೆ ಅವರನ್ನು ಸುಮ್ಮನಾಗಿಸುವ ಶಕ್ತಿ ದೇವರಿಗೆ ಮಾತ್ರ ಇದ್ದುದು.' ಪ್ರಜೆಗಳಲ್ಲಿ ಒಬ್ಬನಾದರೂ ಏರಿಯನ್ ಇರದಿದ್ದುದರಿಂದ ಯಾವ ಏರಿಯನ್ನರೂ ಮುಂದೆ ಹೋಗುವ ಧೈರ್ಯ ತೋರಿಸಲಿಲ್ಲ, ವಿಧ್ಯುಕ್ತವಾಗೇನೋ ಬೆಸೆಲಿಕವನ್ನು ಬಿಟ್ಟುಕೊಡುವಂತೆ ಅವನಿಗೆ ಆಜ್ಞಾಪಿಸಲಾಯಿತು, ಆವಶ್ಯಕವಾದರೆ ಸೈನಿಕರು ಬಲಪ್ರಯೋಗ ಮಾಡಬಹುದೆಂದೂ ಸೂಚಿಸಲಾಗಿತ್ತು. ಕೊನೆಗೆ ಹಿಂಸಾಚಾರಕ್ಕಿಳಿಯಲು ಅವರೇ ಒಪ್ಪಲಿಲ್ಲ, ಹೀಗಾಗಿ ಚಕ್ರವರ್ತಿ ಸುಮ್ಮನಾಗಲೇಬೇಕಾಯಿತು. ಕ್ರೈಸ್ತಮತಧರ್ಮದ ಸ್ವಾತಂತ್ರ್ಯಕ್ಕಾಗಿ ಮಾಡಿದ ದೊಡ್ಡ ಹೋರಾಟವನ್ನು ಗೆದ್ದಂತಾಯಿತು; ಸರ್ಕಾರವು ಚರ್ಚ್‌ಗೆ ಅನುವರ್ತಿಯಾಗಿ ವರ್ತಿಸಬೇಕಾದ ಕ್ಷೇತ್ರಗಳಿವೆ ಎಂದು ಆಂಬ್ರೋಸ್ ತೋರಿಸಿದ್ದ, ಇವತ್ತಿಗೂ ಅದರ ಪ್ರಾಮುಖ್ಯ ಉಳಿದು ಬಂದಿದೆ.

ಅವನ ಮುಂದಿನ ಸಂಘರ್ಷವೆಂದರೆ ಚಕ್ರವರ್ತಿ ಥಿಯೊಡೋಸಿಯಸ್ ಜೊತೆಗಿನದು. ಒಂದು ಸಿನಗಾಗ್ ಅನ್ನು ಸುಡಲಾಗಿತ್ತು, ಇದು ಒಬ್ಬ ಸ್ಥಳೀಯ ಬಿಷಪ್‌ನ ಚಿತಾವಣೆಯಿಂದ ನಡೆದುದು ಎಂದು ಪೂರ್ವದ ಕೌಂಟ್ ವರದಿ ಮಾಡಿದ. ನಿಜವಾಗಿ ಬೆಂಕಿ ಹಚ್ಚಿದವರನ್ನು ಶಿಕ್ಷಿಸಬೇಕೆಂದೂ, ತಪ್ಪಿತಸ್ಥ ಬಿಷಪ್ ಸಿನಗಾಗ್ ಅನ್ನು ಪುನರ್ನಿರ್ಮಿಸಬೇಕೆಂದೂ ಚಕ್ರವರ್ತಿ ಆಜ್ಞಾಪಿಸಿದ. ಸಂತ ಆಂಬ್ರೋಸ್ ಆ ಬಿಷಪ್‌ನ ಸರಳತೆಯನ್ನು ಒಪ್ಪುವುದೂ ಇಲ್ಲ, ನಿರಾಕರಿಸುವುದೂ ಇಲ್ಲ, ಆದರೆ ಚಕ್ರವರ್ತಿಯು ಯೆಹೂದಿಗಳ ಪರವಾಗಿ ಕ್ರೈಸ್ತರನ್ನು ವಿರೋಧಿಸುವುದನ್ನು ನೋಡಿ ಕೆಂಡಾಮಂಡಲನಾದ. ಬಿಷಪ್ ಏನಾದರೂ ಈ ಆಜ್ಞೆಯನ್ನು ಉಲ್ಲಂಘಿಸಿದರೆ? ಚಕ್ರವರ್ತಿಯ ಒತ್ತಾಯದಿಂದಾಗಿ ಅವನು ಹುತಾತ್ಮನಾಗಬೇಕಾದೀತು ಅಥವಾ ಒಪ್ಪದಿದ್ದರೆ ಮತಭ್ರಷ್ಟನಾಗಬೇಕಾದೀತು. ಬಿಷಪ್ ಏನಾದರೂ ಸಿನಗಾಗ್ ಅನ್ನು ಕ್ರೈಸ್ತರ ಹಣದಿಂದ ಪುನರ್ನಿರ್ಮಿಸಲು ಒಪ್ಪಿಕೊಂಡರೆ? ಆಗ ಚಕ್ರವರ್ತಿಗೆ ಒಬ್ಬ ಮತಭ್ರಷ್ಟ ಕೌಂಟ್ ಸಿಗುತ್ತಾನೆ, ಕ್ರೈಸ್ತರ ಹಣವನ್ನು ಅಪಶ್ರದ್ಧೆಯನ್ನು ಬೆಂಬಲಿಸಲು ಬಳಸಿಕೊಂಡಂತಾಗುತ್ತದೆ. 'ಅಂದರೆ ಚರ್ಚ್‌ನ ಅವಶೇಷಗಳ ಮೇಲೆ ಯೆಹೂದಿಗಳ ಅಪಶ್ರದ್ಧೆಯ ಸ್ಥಳವನ್ನಾಗಿ ಮಾಡಬೇಕೇ, ಕ್ರಿಸ್ತನ ಮೇಲಿನ ಶ್ರದ್ಧೆಯಿಂದಾಗಿ ಕ್ರೈಸ್ತರು ಹೊಂದಿದ ಪಾರಂಪರಿಕ ಆಸ್ತಿಯನ್ನು ಅಪನಂಬಿಕೆಯವರ ತಿಜೋರಿಗಳಿಗೆ ವರ್ಗಾಯಿಸಬೇಕೇ?' ಮುಂದುವರಿದು,

'ಚಕ್ರವರ್ತಿಗಳೇ, ಪ್ರಾಯಶಃ ಶಿಸ್ತಿನ ಉದ್ದೇಶ ನಿಮ್ಮನ್ನು ಈ ರೀತಿ ಪ್ರೇರೇಪಿಸಿದೆ. ಯಾವುದು ಹೆಚ್ಚು ಮುಖ್ಯ, ಶಿಸ್ತಿನ ಪ್ರದರ್ಶನವೋ ಮತಧರ್ಮದ ಉದ್ದೇಶವೋ? ನಿಮ್ಮ ತೀರ್ಪು ಮತಧರ್ಮದ ಪರವಾಗಿರಬೇಕಾದುದು ಆವಶ್ಯಕ. ಓ ಚಕ್ರವರ್ತಿಗಳೇ, ಜೆರೂಸಲೆಂನ ದೇವಾಲಯವನ್ನು ಪುನರ್ನಿರ್ಮಿಸಬೇಕೆಂದು ಜೂಲಿಯನ್ ಆಜ್ಞಾಪಿಸಿದಾಗ ಅದನ್ನು ಶುಚಿಗೊಳಿಸುತ್ತಿದ್ದವರು ಬೆಂಕಿಗೆ ಆಹುತಿಯಾದುದನ್ನು ನೀವು ಕೇಳಿಲ್ಲವೇ?' ಎಂದು ಪ್ರಶ್ನಿಸುತ್ತಾನೆ.

ಸಂತನ ಅಭಿಪ್ರಾಯದಲ್ಲಿ, ಸಿನಗಾಗ್‌ಗಳನ್ನು ನಾಶಗೊಳಿಸುವವರನ್ನು ಯಾವ ರೀತಿಯಲ್ಲಿಯೂ ಶಿಕ್ಷಿಸಬಾರದೆಂಬುದು ಸ್ಪಷ್ಟವಾಗುತ್ತದೆ. ಚರ್ಚ್ ಅಧಿಕಾರವನ್ನು ಪಡೆದುಕೊಂಡ ತಕ್ಷಣವೇ ಅದು ಯೆಹೂದಿವಿರೋಧಿ ಭಾವನೆಯನ್ನು ಪ್ರೇರಿಸುವುದು ಶುರುವಾಯಿತು ಎಂಬುದರ ನಿದರ್ಶನವಾಗಿದೆ.

ಚಕ್ರವರ್ತಿ ಮತ್ತು ಸಂತರ ನಡುವಣ ಇನ್ನೊಂದು ಸಂಘರ್ಷವೆಂದರೆ ಸಂತನಿಗೆ ಹೆಚ್ಚು ಗೌರವ ತರುವಂತಹುದಾಗಿದೆ. ಕ್ರಿಶ ೩೯೦ ರಲ್ಲಿ ಥಿಯೊಡೋಸಿಯಸ್ ಮಿಲಾನ್‌ನಲ್ಲಿದ್ದಾಗ, ಥೆಸಲೋನಿಕದಲ್ಲಿ ಜನರ ಗುಂಪೊಂದು ದಂಡುಪ್ರದೇಶದ ಕ್ಯಾಪ್ಟನ್ ಒಬ್ಬನನ್ನು ಕೊಂದು ಹಾಕಿತು. ಈ ವಿಷಯ ತಿಳಿದಾಗ ಥಿಯೊಡೋಸಿಯಸ್‌ನಿಗೆ ತಡೆಯಲಾರದಷ್ಟು ಕೋಪ ಉಕ್ಕಿತು, ಹೀಗಾಗಿ ಕ್ಷುದ್ರ ಬಗೆಯ ಸೇಡಿಗೆ ಆಜ್ಞಾಪಿಸಿದ. ಸರ್ಕಸ್ ಒಂದರಲ್ಲಿ ಜನರು ಸೇರಿದ್ದಾಗ ಸೈನಿಕರು ಅವರ ಮೇಲೆ ಬಿದ್ದು ಯದ್ವಾತದ್ವಾ ಹಿಂಸಾಚಾರ ನಡೆಸಿ ಅವರಲ್ಲಿ ಕನಿಷ್ಠ ಪಕ್ಷ ಏಳು ಸಾವಿರ ಮಂದಿಯನ್ನು ಕೊಂದುಹಾಕಿದರು. ಇದರಿಂದ ಆಂಬ್ರೋಸ್ ಮುಂದಾಗಿಯೇ ಚಕ್ರವರ್ತಿಗೆ ನಿಯಂತ್ರಿಸಿಕೊಳ್ಳಲು ಪ್ರಯತ್ನಿಸಿ ವಿಫಲನಾಗಿದ್ದ, ಆನಂತರ ಅದ್ಭುತ ಧೈರ್ಯವನ್ನು ತೋರಿಸುವ ಪತ್ರವೊಂದನ್ನು ಬರೆದ. ಇದು ಶುದ್ಧ ನೈತಿಕ ಪ್ರಶ್ನೆ, ಮತಧರ್ಮಶಾಸ್ತ್ರ ಅಥವಾ ಅಧಿಕಾರ ಅಥವಾ ಚರ್ಚ್‌ಗೆಸಂಬಂಧಿಸದ ಏಕೈಕ ಪ್ರಶ್ನೆ.

'ಥೆಸಲೋನಿಯನ್ ನಗರದಲ್ಲಿ ನಡೆಸಲಾದಂತಹುದು ಬೇರೆಲ್ಲಾದರೂ ಆಗಿರುವ ದಾಖಲೆ ಇಲ್ಲ. ಅದು ನಡೆಯದಂತೆ ನೋಡಿಕೊಳ್ಳಲು ನಾನು ಅಸಮರ್ಥನಾಗಿದ್ದೆ, ಅದು, ನಾನು ಹಿಂದೆಯೇ ಹೇಳಿದಂತೆ, ಅತ್ಯಂತ ನೀಚ ಕೃತ್ಯ, ಅಂತಹುದು ಆಗಬಾರದೆಂದು ಅನೇಕ ಸಲ ನಾನು ಮನವಿಮಾಡಿಕೊಂಡಿದ್ದೆ.'

ಡೇವಿಡ್ ಮತ್ತೆ ಮತ್ತೆ ಪಾಪ ಮಾಡಿದ, ತನ್ನ ಪಾಪವನ್ನು ಪಶ್ಚಾತ್ತಾಪದೊಂದಿಗೆ ತಪ್ಪೊಪ್ಪಿಕೊಂಡ.[೧೬೭] ಥಿಯೋಡಾಸಿಯಸ್ ಹಾಗೆಯೇ ಮಾಡುತ್ತಾನೆಯೇ? 'ನೀನು

೧೬೭. ಸಾಮ್ಯುಯಲ್‌ನ ಭಾಗಗಳಿಗಿನ ಈ ಸೂಚನೆಯು ರಾಜರ ವಿರೋಧವಾದ ವಾದದ ಒಂದು ಸಾಲಿನಿಂದ ಆರಂಭಗೊಳ್ಳುತ್ತದೆ, ಇದು ಮಧ್ಯಯುಗದಾದ್ಯಂತವೂ, ಸ್ಟೂಯರ್ಟ್‌ರ ಜೊತೆಗಿನ ಪ್ಯೂರಿಟನ್ನರ ಸಂಘರ್ಷದವರೆಗೂ ಉಳಿದು ಬಂತು; ಉದಾಹರಣೆಗೆ ಅದು ಮಿಲ್ಟನ್‌ನಲ್ಲಿ ಕಾಣಿಸುತ್ತದೆ.

ಇರಲು ಬಯಸುವುದಾದರೆ ನಾನು ಬಲಿಕೊಡಲು ಇಷ್ಟಪಡುವುದಿಲ್ಲ. ಒಬ್ಬ ಅಮಾಯಕ ವ್ಯಕ್ತಿಯ ರಕ್ತ ಸುರಿಸಿದ ಬಳಿಕ ಅವಕಾಶ ನೀಡದುದನ್ನು ಅನೇಕರ ರಕ್ತ ಸುರಿಸಿದ ಬಳಿಕ ನೀಡುವುದು ಇದೇನು? ನನಗೆ ಹಾಗನ್ನಿಸುವುದಿಲ್ಲ' ಎಂದು ಆಂಬ್ರೋಸ್ ಹೇಳುತ್ತಾನೆ.

ಚಕ್ರವರ್ತಿ ಪಶ್ಚಾತ್ತಾಪಪಟ್ಟ, ಜನರನ್ನು ಮೊದಲು ಕೈಬಿಟ್ಟು ಆನಂತರ ಮಿಲಾನ್‌ನ ಕ್ಯಾಥಿಡ್ರಲ್‌ನಲ್ಲಿ ತಪಸ್ಸು ಮಾಡಿದ. ಆ ಹೊತ್ತಿನಿಂದ ೩೯೫ ರಲ್ಲಿ ತಾನು ಸಾಯುವವರೆಗೆ ಅವನು ಆಂಬ್ರೋಸ್‌ನೊಡನೆ ಯಾವ ಸಂಘರ್ಷಕ್ಕೂ ಇಳಿಯಲಿಲ್ಲ.

ಒಬ್ಬ ಮುತ್ಸದ್ದಿಯಾಗಿ ಗಣ್ಯನಾಗಿದ್ದ ಆಂಬ್ರೋಸ್ ಇತರ ವಿಷಯಗಳಲ್ಲಿ ತನ್ನ ಕಾಲಕ್ಕೆ ಅನುಗುಣವಾಗಿಯೇ ಬದುಕಿದ್ದವನು. ಇತರ ಧರ್ಮಬೋಧಕ ಲೇಖಕರಂತೆಯೇ ಅವನೂ ಕನ್ಯತ್ವವನ್ನು ಹೊಗಳಿ ಒಂದು ಗ್ರಂಥವನ್ನು, ಹಾಗೇ ವಿಧವೆಯರ ಪುನರ್‌ವಿವಾಹವನ್ನು ಖಂಡಿಸಿ ಮತ್ತೊಂದನ್ನು ಬರೆದ. ತನ್ನ ಹೊಸ ಕ್ಯಾಥಿಡ್ರಲ್‌ಗೆ ನಿವೇಶನವನ್ನು ನಿಗದಿಪಡಿಸಿದ ಬಳಿಕ ಎರಡು ಅಸ್ಥಿಪಂಜರಗಳು (ದರ್ಶನವೊಂದರಲ್ಲಿ ಕಾಣಿಸಿಕೊಂಡವಂತೆ) ಆ ಜಾಗದಲ್ಲಿ ಅನುಕೂಲಕರವಾಗಿ ಸಿಕ್ಕಿ ಅವು ಪವಾಡಗಳನ್ನು ಮಾಡುವುದು ಗೋಚರಿಸಿತಂತೆ, ಅವು ಇಬ್ಬರು ಹುತಾತ್ಮರವು ಎಂದವನು ಘೋಷಿಸಿದನಂತೆ. ಅವನ ಪತ್ರಗಳಿಗೆ ಸಂಬಂಧಿಸಿದಂತೆ, ಆ ಕಾಲಕ್ಕೆ ಅನುಗುಣವಾದ ರೀತಿಯಲ್ಲಿ, ಇತರ ಪವಾಡಗಳನ್ನು ಹೇಳುತ್ತಾರೆ. ಒಬ್ಬ ವಿದ್ವಾಂಸನಾಗಿ ಅವನು ಜೆರೋಮ್‌ಗಿಂತ ಮತ್ತು ತತ್ವಜ್ಞಾನಿಯಾಗಿ ಆಗಸ್ಟೈನ್‌ಗಿಂತ, ಕೆಳ ಮಟ್ಟದವನು. ಅದರೆ ಒಬ್ಬ ಮುತ್ಸದ್ದಿಯಾಗಿ ಕೌಶಲಯುಕ್ತವಾಗಿಯೂ ಧೈರ್ಯದಿಂದಲೂ ಚರ್ಚ್‌ನ ಅಧಿಕಾರವನ್ನು ಕ್ರೋಡೀಕರಿಸಿಕೊಂಡು ಮೊದಲ ದರ್ಜೆಯ ವ್ಯಕ್ತಿಯಾಗಿ ಕಂಗೊಳಿಸುತ್ತಾನೆ.

ಜೆರೋಮ್ ಮುಖ್ಯವಾಗಿ, ಈಗಲೂ ಅಧಿಕೃತ ಕ್ಯಾಥೋಲಿಕ್ ಆವೃತ್ತಿಯಾಗಿ ಉಳಿದುಬಂದಿರುವ, ವಲ್ಗೇಟ್ ಅನ್ನು ಸಿದ್ಧಪಡಿಸಿದ ಭಾಷಾಂತರಕಾರನಾಗಿ ಹೆಸರಾದವನು. ಅವನ ಕಾಲದವರೆಗೂ ಪಶ್ಚಿಮ ಚರ್ಚ್, ಹಳೆ ಒಡಂಬಡಿಕೆಯ ದೃಷ್ಟಿಯಿಂದ ಸೆಪ್ಟೂಯಜಿಂಟ್ ಅನ್ನು ಅವಲಂಬಿಸಿತ್ತು; ಆದರೆ ಅದು ಮುಖ್ಯ ರೀತಿಗಳಲ್ಲಿ ಹೀಬ್ರೂ ಮೂಲಕ್ಕಿಂತ ಭಿನ್ನವಾದುದು. ಈಗಾಗಲೇ ನೋಡಿದಂತೆ, ಕ್ರೈಸ್ತಮತಧರ್ಮದ ಉದಯಕಾಲದಿಂದ ಉದ್ಧಾರಕನೊಬ್ಬನ ಬರವಿನ ಮುನ್‌ಸೂಚನೆಯನ್ನು ಕುರಿತಂತೆ ಯೆಹೂದಿಗಳು ಹೀಬ್ರೂ ಪಠ್ಯವನ್ನು ಸುಳ್ಳುಗಳಿಂದ ತುಂಬಿದ್ದರು ಎಂದು ಕ್ರೈಸ್ತರು ವಾದಿಸುತ್ತ ಬಂದಿದ್ದರು. ತರ್ಕಪಂಡಿತರು ಇದನ್ನು ಒಪ್ಪತಕ್ಕದ್ದಲ್ಲ ಎಂದು ಭಾವಿಸಿದ್ದರು, ಅದನ್ನು ಜೆರೋಮ್ ಖಂಡಿತವಾಗಿ ನಿರಾಕರಿಸಿದ. ಯೆಹೂದಿಗಳ ಭಯದಿಂದ ತನಗೆ ಯೆಹೂದ್ಯ ರ್‍ಯಾಬೈಗಳು ನೀಡಿದ ರಹಸ್ಯ ನೆರವನ್ನವನು ಒಪ್ಪಿಕೊಂಡ. ತನ್ನ ವಿರುದ್ಧದ ಕ್ರೈಸ್ತ ಟೀಕೆಗಳ ಬಗ್ಗೆ ಬರೆಯುತ್ತ:

'ಈ ಭಾಷಾಂತರಗಳ ಬಗ್ಗೆ ಸವಾಲನ್ನೊಡ್ಡುವವನು ಯೆಹೂದಿಗಳನ್ನೇ ಕೇಳಲಿ.' ಯೆಹೂದಿಗಳು ಸರಿಯಾದುದೆಂದು ಪರಿಗಣಿಸಿದ್ದ ಹೀಬ್ರೂ ಭಾಷಾಂತರವನ್ನು ಅವನು ಒಪ್ಪಿಕೊಂಡದ್ದರಿಂದಾಗಿ ಅವನ ಭಾಷಾಂತರವು ಮೊದಲಿಗೆ ವಿರುದ್ಧವನ್ನೆದುರಿಸಬೇಕಾಯಿತು; ಆದರೆ ಮುಂದೆ ಅದರ ದಾರಿ ಸುಗಮವಾಯಿತು, ಅದಕ್ಕೆ ಕಾರಣ ಒಟ್ಟಾರೆಯಾಗಿ ಸಂತ ಆಗಸ್ಟೈನ್ ಅದನ್ನು ಸಮರ್ಥಿಸಿದ್ದು. ಅದೊಂದು ಮಹಾ ಸಾಧನೆ, ಸಾಕಷ್ಟು ಗ್ರಂಥಶೋಧನೆಯನ್ನೊಳಗೊಂಡದ್ದು.

ಜೆರೋಮ್ ಹುಟ್ಟಿದ್ದು ೩೪೫ ರಲ್ಲಿ, ಆಂಬ್ರೋಸ್‌ನ ಹುಟ್ಟಿದ ಐದು ವರ್ಷಗಳ ನಂತರ. ಹುಟ್ಟಿದ್ದು ಅಕ್ವಿಲಿಯದಿಂದ ಬಹು ದೂರವೇನಲ್ಲ, ಸ್ಟ್ರೈಡನ್ ಎಂಬ ಪಟ್ಟಣದಲ್ಲಿ, ಅದನ್ನು ೩೭೭ ರಲ್ಲಿ ಗಾಥ್‌ರು ನಾಶಮಾಡಿದರು. ಅವರ ಕುಟುಂಬ ಅನುಕೂಲಗಳಿಂದ ಕೂಡಿದ್ದರೂ ಶ್ರೀಮಂತವಾದುದಲ್ಲ. ೩೬೩ ರಲ್ಲಿ ಅವನು ರೋಮ್‌ಗೆ ಹೋದ; ಅವನು ಅಲ್ಲಿ ಭಾಷಣಕಲೆಯನ್ನು ಅಭ್ಯಾಸ ಮಾಡಿದ, ಪಾಪಗೈದ. ಗಾಲ್‌ಗೆ ಪ್ರಯಾಣ ಬೆಳೆಸಿ ಅವನು ಅಕ್ವಿಲಿಯದಲ್ಲಿ ನೆಲಸಿದ, ಒಬ್ಬ ವಿರಕ್ತನಾದ. ಆ ಮುಂದಿನ ಐದು ವರ್ಷಗಳು ಸಿರಿಯದ ಮರಳುಗಾಡಿನಲ್ಲಿ ಒಬ್ಬ ಆಶ್ರಮವಾಸಿಯಂತೆ ಬದುಕಿದ. 'ಮರಳುಗಾಡಿನಲ್ಲಿನ ಅವನ ಜೀವನವು ಕಠಿಣ ತಪಸ್ಸಿನಿಂದ ಕೂಡಿತ್ತು, ಆಧ್ಯಾತ್ಮಿಕ ಸಂತೋಷದೊಡನೆ ಕಣ್ಣೀರು ಮತ್ತು ನರಳಿಕೆಗಳಿಂದಲೂ ರೋಮ್‌ನಲ್ಲಿ ಕಳೆದಿದ್ದ ದಿನಗಳ ನೆನಪುಗಳ ಆಕರ್ಷಣೆಯ ಕಾಡುವಿಕೆಯಿಂದಲೂ ಕೂಡಿರುತ್ತಿದ್ದವು. ಅವನೊಂದು ಗುಹೆಯಲ್ಲಿಯೋ ಮಠದಲ್ಲಿಯೋ ವಾಸಿಸಿ, ತನ್ನ ಆಹಾರವನ್ನು ದುಡಿದು ಸಂಪಾದಿಸುತ್ತಿದ್ದ, ಗೋಣಿತಟ್ಟಿನ ಉಡುಪು ಧರಿಸುತ್ತಿದ್ದ.'[೧೬೮] ಈ ಅವಧಿಯ ಬಳಿಕ ಅವನು ಕಾನ್‌ಸ್ಟಾಂಟಿನೋಪಲ್‌ಗೆ ಬಂದು ರೋಮ್‌ನಲ್ಲಿ ಮೂರು ವರ್ಷವಿದ್ದ, ಅವನು ಪೋಪ್ ಡಮಾಸ್ಕಸ್‌ನ ಗೆಳೆಯ ಹಾಗೂ ಸಲಹೆಗಾರನಾಗಿದ್ದ; ಅವನ ಪ್ರೋತ್ಸಾಹದಿಂದಾಗಿಯೇ ಅಲ್ಲಿ ಅವನು ಬೈಬಲ್‌ನ ಭಾಷಾಂತರಕಾರ್ಯಕ್ಕೆ ಕೈಹಾಕಿದ್ದು.

ಸಂತ ಜೆರೋಮ್ ಅನೇಕ ಜಗಳಗಳ ವ್ಯಕ್ತಿ. ಗೆಲೇರಿಯನ್ಸ್ ೨ ರಲ್ಲಿ ಸಂತ ಪೌಲ್ ನಿರೂಪಿಸಿದ ಸಂತ ಪೀಟರ್‌ನ ಪ್ರಶ್ನಾರ್ಹ ನಡವಳಿಕೆಯ ಬಗ್ಗೆ ಅವನು ಸಂತ ಆಗಸ್ಟೈನ್‌ನೊಡನೆ ಜಗಳವಾಡಿದ; ಆರಿಜೆನ್‌ಗೆ ಸಂಬಂಧಪಟ್ಟಂತೆ ತನ್ನ ಸ್ನೇಹಿತ ರೂಫೀನಸ್ ಜೊತೆ ಜಗಳ ಕಾದ; ಅವನು ಪೆಲಾಜಿಯಸ್ ಬಗ್ಗೆ ಎಷ್ಟು ಕಟುವಾಗಿದ್ದನೆಂದರೆ ಪೆಲಾಜಿಯದ ಜನದ ಗುಂಪೊಂದು ಅವನ ಆಶ್ರಮವನ್ನು

---

೧೬೮. 'ಸೆಲೆಕ್ಟ್ ಲೈಬ್ರರಿ ಆಫ್ ನೈಸೀನ್ ಅಂಡ್ ಪೋಸ್ಟ್-ನೈಸೀನ್ ಫಾದರ್ಸ್', ಭಾಗ ೬, ಪು.೧೭.

ನಾಶವಾಡಿತು. ಡಮಾಸ್ಕಸ್‌ನ ಮರಣಾನಂತರ ಅವನು ಹೊಸ ಪೋಪ್‌ನೊಡನೆಯೂ ಜಗಳವಾಡಿದಂತೆ ತೋರುತ್ತದೆ. ರೋಮ್‌ನಲ್ಲಿದ್ದಾಗ ಅವನು ಶ್ರೀಮಂತರೂ ಧಾರ್ಮಿಕರೂ ಆಗಿದ್ದ ಅನೇಕ ಮಹಿಳೆಯರ ಪರಿಚಯ ಹೊಂದಿದ್ದ, ಅವರಲ್ಲಿ ಕೆಲವರನ್ನು ವಿರಕ್ತ ಜೀವನ ನಡೆಸಲು ಅವನು ಪ್ರೇರೇಪಿಸಿದ. ಹೊಸ ಪೋಪ್ ರೋಮ್‌ನ ಇತರ ಅನೇಕರೊಡನೆ ಸೇರಿ ಈ ಕಾರ್ಯವನ್ನು ಇಷ್ಟಪಡಲಿಲ್ಲ. ಮಿಕ್ಕವುಗಳ ಜೊತೆಗೆ ಈ ಕಾರಣದಿಂದಾಗಿಯೂ ಜೆರೋಮ್ ರೋಮ್ ಬಿಟ್ಟು ಬೆತ್ಲೆಹೆಮ್‌ಗೆ ಹೋದ, ಅಲ್ಲಿಯೇ ೩೮೬ ರಿಂದ ೪೨೦ ರಲ್ಲಿ ಸಾಯುವವರೆಗೂ ಇದ್ದ.

ಅವನು ಮತಾಂತರಗೊಳಿಸಿದ ಅಸಾಧಾರಣ ಮಹಿಳೆಯರಲ್ಲಿ ಇಬ್ಬರನ್ನು ವಿಶೇಷವಾಗಿ ಉಲ್ಲೇಖಿಸಬೇಕು: ವಿಧವೆ ಪೌಲ ಮತ್ತವಳ ಮಗಳು ಯೂಸ್ಟೋಶಿಯಮ್. ಈ ಇಬ್ಬರು ಮಹಿಳೆಯರೂ ಅವನೊಡನೆ ಅವನು ಬೆತ್ಲೆಹೆಮ್‌ಗೆ ಕೈಗೊಂಡ ಕುತೂಹಲಕರ ಪಯಣದಲ್ಲಿ ಜೊತೆಯಾಗಿದ್ದರು. ಅವರು ಅತ್ಯಂತ ಕುಲೀನವಂಶಸ್ಥರು, ಅವರ ಬಗ್ಗೆ ಈ ಸಂತನ ಮನೋಭಾವದಲ್ಲಿ ಯಾರಿಗಾದರೂ ಒಂದು ದೊಡ್ಡಸ್ತಿಕೆಯ ಛಾಯೆ ಕಾಣಿಸುತ್ತದೆ. ಪೌಲ ಸತ್ತಾಗ ಅವಳನ್ನು ಬೆತ್ಲೆಹೆಮ್‌ನಲ್ಲಿ ಸಮಾಧಿ ಮಾಡಲಾಯಿತು; ಜೆರೋಮ್ ಅವಳ ಬಗ್ಗೆ ಸಮಾಧಿಬರಹವೊಂದನ್ನು ರಚಿಸಿದ:

ಈ ಸಮಾಧಿಯಲ್ಲಿ ಸಿಪಿಯೋ ಕೂಸೊಂದು ಮಲಗಿದೆ,
ಬಹುಪ್ರಖ್ಯಾತ ಪೌಲೀನ್ ಮನೆತನದ ಮಗಳು,
ಸುಪ್ರಸಿದ್ಧ ಗ್ರಾಖಿಯೋನ ಕುಡಿ,
ಆಗಮೆಮ್ನಾನ್ ಆತ್ಮದ ಗುಂಪಿನ ಮಹಿಳಾಮಣಿ ಪೌಲ
ಇಲ್ಲಿ ಮಲಗಿದ್ದಾಳೆ, ತಂದೆತಾಯಿಯರ
ಮುದ್ದಿನ ಮಗಳು, ಜೊತೆಗೆ ಮಗಳು
ಯೂಸ್ಟೋಶಿಯಮ್; ಕಷ್ಟಗಳನ್ನಾಯ್ದುಕೊಂಡ
ರೋಮನ್ ಮಹಿಳೆಯರಲ್ಲಿ ಮೊದಲಿಗಳು, ಕ್ರಿಸ್ತನಿಗಾಗಿ
ಕಷ್ಟಗಳನ್ನೂ ಬೆತ್ಲೆಹೆಮ್ ಅನ್ನೂ ಆಯ್ದುಕೊಂಡವಳು.[೧೬]

ಯೂಸ್ಟೋಶಿಯಮ್‌ಗೆ ಜೆರೋಮ್ ಬರೆದ ಕೆಲವು ಪತ್ರಗಳು ಕುತೂಹಲಕರವಾಗಿವೆ. ಕನ್ಯತ್ವವನ್ನುಳಿಸಿಕೊಳ್ಳುವಂತೆ ಅವಳಿಗೆ ಹಿತವಚನ ಹೇಳುತ್ತಾನೆ, ಅವು ದೀರ್ಘವಾಗಿಯೂ ಸ್ವತಂತ್ರವಾಗಿಯೂ ಇವೆ; ಹಳೆ ಒಡಂಬಡಿಕೆಯ ಕೆಲವು ನಯನುಡಿಗಳ ಖಚಿತ ದೇಹರಚನಾತ್ಮಕ ಅರ್ಥಗಳನ್ನು ವಿವರಿಸುತ್ತಾನೆ,

---

೧೬. ಅದೇ, ಪು. ೨೧೨.

ಬ್ರಹ್ಮಚರ್ಯಪಾಲನೆಯ ಕೆಲವು ಶೃಂಗಾರ–ಅನುಭಾವಿಕತೆಗಳನ್ನು ಇದಕ್ಕಾಗಿ ಬಳಸಿಕೊಳ್ಳುತ್ತಾನೆ. ಸನ್ಯಾಸಿನಿಯು ಕ್ರಿಸ್ತನ ಮಡದಿ: ಈ ಮದುವೆಯನ್ನು ಸಾಲೋಮನ್‌ನ ಹಾಡಿನಲ್ಲಿ ಸ್ತುತಿಸಲಾಗಿದೆ. ಅವಳು ವ್ರತವನ್ನು ತೆಗೆದುಕೊಂಡ ಸಮಯದಲ್ಲಿ ಬರೆದ ದೀರ್ಘ ಪತ್ರವೊಂದರಲ್ಲಿ ಅವಳ ತಾಯಿಗೆ ಅವನು ಅಮೋಘ ಸಂದೇಶವೊಂದನ್ನು ನೀಡುತ್ತಾನೆ: 'ಅವಳು ಸೈನಿಕನೊಬ್ಬನ ಕೈಹಿಡಿಯುವ ಬದಲು ದೊರೆಯ (ಕ್ರಿಸ್ತನ) ಮಡದಿಯಾಗುವುದನ್ನು ಆಯ್ದುದರಿಂದ ನಿಮಗೆ ಕೋಪ ಉಂಟಾಯಿತೇ? ಇದರಿಂದ ನಿಮ್ಮ ಮೇಲಾಕೆ ದೊಡ್ಡ ಸವಲತ್ತೊಂದನ್ನು ಹೊರಿಸಿದಂತಾಗಿದೆ; ನೀವೀಗ ದೇವರ ಅತ್ತೆ.'[೧೭೦]

ಅದೇ ಪತ್ರದಲ್ಲಿ (೨೨) ಅವನು ಯೂಸ್ಟೋಶಿಯಮ್‌ಗೆ ಹೀಗೆ ಬರೆದಿದ್ದಾನೆ:

'ನಿಮ್ಮ ಕೊಠಡಿಯ ಖಾಸಗಿತನವು ನಿಮ್ಮನ್ನು ಸದಾ ಕಾಪಾಡಲಿ; ನಿಮ್ಮೊಳಗಿನ ಪರಮಾತ್ಮನು ನಿಮ್ಮೊಡನೆ ಕ್ರೀಡಿಸುತ್ತಿರಲಿ; ನೀವು ಪ್ರಾರ್ಥಿಸುವಿರಾ? ಯಜಮಾನನೊಡನೆ ಮಾತನಾಡಿ, ಓದುತ್ತೀರಾ? ಅವನೇ ನಿಮ್ಮೊಡನೆ ಮಾತನಾಡುತ್ತಾನೆ. ನಿಮ್ಮ ನಿದ್ದೆಯ ವಶವಾದಾಗ ಅವನು ಹಿಂದೆಯೇ ಬಂದು ಬಾಗಿಲ ಕಿಂಡಿಯಲ್ಲಿ ಕೈಹಾಕಿದಾಗ ನಿಮ್ಮ ಹೃದಯವು ಅವನಿಗಾಗಿ ಹಂಬಲಿಸುತ್ತದೆ; ಆಗ ಎಚ್ಚರಗೊಂಡು ಹೇಳುತ್ತೀರಿ: "ನಾನು ಪ್ರೇಮಪೀಡಿತಳಾಗಿದ್ದೇನೆ." ಆ ಬಳಿಕ ಇದಕ್ಕೆ ಅವನೆನ್ನುತ್ತಾನೆ: "ಸುತ್ತಲಿನ ಉದ್ಯಾನ ನನ್ನ ಸೋದರಿ, ನನ್ನ ವಧು; ವಸಂತ ಕೊನೆಗಂಡಿದೆ, ಚಿಲುಮೆಗಳು ಮುಚ್ಚಿಹೋಗಿವೆ."

ತನ್ನ ಸ್ನೇಹಿತರು ಮತ್ತು ಸಂಬಂಧಿಕರೊಂದಿಗಿನ – 'ಮತ್ತು ನಾನು ಅಭ್ಯಾಸ ಮಾಡಿಕೊಂಡಿದ್ದ ರಸಗವಳದಿಂದ' –ತನ್ನ ಸಂಬಂಧವನ್ನು ಹರಿದುಕೊಂಡ ಬಳಿಕ ತಾನು ತನ್ನ ಗ್ರಂಥಾಲಯದಿಂದ ಬಿಡುಗಡೆ ಹೊಂದಲು ಸಹಿಸಲಾಗದೆ ಅದನ್ನು ಮರಳುಗಾಡಿಗೂ ಹೊತ್ತೊಯ್ದುದನ್ನು ಅದೇ ಪತ್ರದಲ್ಲಿಯೇ ನಿರೂಪಿಸುತ್ತಾನೆ. 'ಹೀಗಾಗಿ, ನಾನೊಬ್ಬ ಬಡಪಾಯಿಯೆನಿಸಿದೆ, ನಾನು ಉಪವಾಸವಿದ್ದುದು ಆನಂತರ ಸಿಸೆರೋನನ್ನು ಓದಲು ಸಾಧ್ಯವಾಗುವುದೆಂದು.' ಅನೇಕ ಹಗಲುರಾತ್ರಿಗಳ ಪರಿತಾಪದ ನಂತರ ಮತ್ತೆ ಸೋತು ಪ್ಲೌಟಸ್‌ನನ್ನು ಓದುತ್ತಾನೆ. ಇಂತಹ ಕಾರ್ಯಗಳಲ್ಲಿ ಮಗ್ನನಾಗಿ ಅವನಿಗೆ ಪ್ರವಾದಿಗಳ ಬದುಕು 'ಒರಟಾದುದು ಮತ್ತು ಅಸಹನೀಯವಾದುದು' ಎನಿಸುತ್ತದೆ. ಕೊನೆಗೆ ಜ್ವರತಪ್ತನಾಗಿದ್ದಾಗ, ಅವನಿಗೊಂದು ಕನಸು ಬೀಳುತ್ತದೆ: ಅಂತಿಮ ತೀರ್ಪಿನ ದಿನ ನೀನು ಯಾರೆಂದು ಅ ಕ್ರಿಸ್ತ ಪ್ರಶ್ನಿಸುತ್ತಾನೆ, ಅದಕ್ಕೆ ತಾನೊಬ್ಬ ಕ್ರೈಸ್ತಮತೀಯ ಎನ್ನುತ್ತಾನೆ. ಆಗ ಬರುವ ಉತ್ತರ: "ನೀನು ಸುಳ್ಳು ಹೇಳುತ್ತೀಯೆ, ನೀನು ಸಿಸೆರೋನನ್ನು ಹಿಂಬಾಲಿಸುವೆಯೇ ಹೊರತು

---

೧೭೦. ಅದೇ, ಪು. ೩೦.

ಕ್ರೈಸ್ತನನ್ನಲ್ಲ." ಆನಂತರ ಅವನಿಗೆ ದಂಡನೆ ಕೊಡುವಂತೆ ಆಜ್ಞಾಪಿಸಲಾಗುತ್ತದೆ. ಬಹಳ ಹೊತ್ತಿನ ಈ ಕನಸಿನ ಕೊನೆಯಲ್ಲಿ ಜೆರೋಮ್ ಕಿರುಚಿಕೊಳ್ಳುತ್ತಾನೆ: 'ದೇವರೇ, ಮತ್ತೆ ಯಾವತ್ತಾದರೂ ನಾನು ಐಹಿಕ ಪುಸ್ತಕಗಳ ಓದಿನಲ್ಲಿ ಮಗ್ನನಾದರೆ ನಾನು ನಿನ್ನನ್ನು ತಿರಸ್ಕರಿಸಿದಂತೆಯೇ.' 'ಇದು ನಿದ್ದೆಯಲ್ಲ, ಅಥವಾ ಕೆಲಸಕ್ಕೆ ಬಾರದ ಕನಸಲ್ಲ' ಎಂದೂ ಸೇರಿಸುತ್ತಾನೆ.[೧೭೧]

ಇದಾದ ಬಳಿಕ, ಕೆಲವು ವರ್ಷಗಳ ಕಾಲ ಅವನ ಪತ್ರಗಳಲ್ಲಿ ಹಿಂದಿನ ಉದ್ಧೃತಗಳು ಬಹಳ ಕಡಿಮೆ. ಆದರೆ ಸ್ವಲ್ಪ ಕಾಲವಾದ ಬಳಿಕ ಮತ್ತೆ ಅವನು – ವರ್ಜಿಲ್, ಹೊರೇಸ್ ಮತ್ತು ಓವಿಡ್‌ನದು ಕೂಡ – ಪದ್ಯಗಳ ಉಲ್ಲೇಖಕ್ಕೆ ತೊಡಗುತ್ತಾನೆ. ಆದರೆ ಅವು ನೆನಪಿನಿಂದ ಬಂದವೆನಿಸುತ್ತದೆ, ಯಾಕೆಂದರೆ ಅವುಗಳಲ್ಲಿ ಕೆಲವು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ.

ಜೆರೋಮ್‌ನ ಪತ್ರಗಳು ರೋಮನ್ ಚಕ್ರಾಧಿಪತ್ಯದ ಪತನದಿಂದಾದ ಭಾವನೆಗಳನ್ನು ನನಗೆ ಗೊತ್ತಿರುವ ಬೇರೆ ಯಾವುದಕ್ಕಿಂತಲೂ ತುಂಬ ಸ್ಪಷ್ಟವಾಗಿ ವ್ಯಕ್ತಪಡಿಸುತ್ತವೆ. ೩೯೬ ರಲ್ಲಿ ಅವನೆನ್ನುತ್ತಾನೆ:[೧೭೨]

'ನಮ್ಮ ಹೊಸ ಕಾಲದ ಅವಗಢಗಳ ಬಗ್ಗೆ ಯೋಚಿಸಿದಾಗ ನನಗೆ ನಡುಕವುಂಟಾಗುತ್ತದೆ. ಇಪ್ಪತ್ತು ವರ್ಷಗಳಿಗೂ ಹೆಚ್ಚಿನ ಕಾಲ ರೋಮನ್‌ರ ರಕ್ತವನ್ನು ಪ್ರತಿದಿನವೂ ಕಾನ್‌ಸ್ಟಾಂಟಿನೋಪಲ್‌ನಿಂದ ಜೂಲಿಯನ್ ಆಲ್‌ಪ್ಸ್‌ವರೆಗೂ ಸುರಿಸಲಾಗುತ್ತಿದೆ. ಸಿಥಿಯ, ಥ್ರೇಸ್, ಮ್ಯಾಸೆಡೋನಿಯ, ಡೇಸಿಯ, ಥೆಸಲಿ, ಆಖಿಯ, ಎಪಿರಸ್, ಡಾಲ್ಮೇರಿಯ, ಪನ್ನೋನಿಯಸ್ – ಇವುಗಳ ಪ್ರತಿಯೊಂದನ್ನೂ ಹಾಗೂ ಎಲ್ಲವನ್ನೂ ಗಾಥ್‌ರು ಮತ್ತು ಸರ್ಮಾಷಿಯನ್‌ರು, ಕ್ವಾದಿ ಮತ್ತು ಆಲನ್‌ರು ಹಾಗೂ ಹೂಣರು ಮತ್ತು ವ್ಯಾಂಡಲ್‌ಗಳು ಮತ್ತು ಗಡಿನಾಡ ಜನರು ಆಕ್ರಮಿಸಿ ಲೂಟಿಮಾಡಿ ಕೊಳ್ಳೆ ಹೊಡೆದರು .. .. ರೋಮನ್ ಜಗತ್ತು ಬೀಳುತ್ತಿದೆ; ಆದರೂ, ನಾವು ಬಾಗದೆ ನಮ್ಮ ತಲೆಗಳನ್ನು ಮೇಲೆತ್ತಿ ನಡೆಯುತ್ತಿದ್ದೇವೆ. ಬಾರ್ಬೇರಿಯನ್ನರು ತಲ್ಲಣಗೊಳಿಸಿದ ಕಾರಿಂಥಿಯನ್ನರು, ಆಥೀನಿಯನ್ನರು, ಲ್ಯಾಸೆಡೇಮೋನಿಯನ್ನರು ಆರ್ಕೇಡಿಯನ್ನರು ಅಥವಾ ಇನ್ನಾರಾದರೂ ಗ್ರೀಕರು ಇಂತಹ ಧೈರ್ಯವನ್ನು ತೋರಿಸಿದರೇ? ನಾನು ಕೆಲವೇ ನಗರಗಳನ್ನು ಹೆಸರಿಸಿದ್ದೇನೆ, ಆದರೆ ಇವು ಒಮ್ಮೆ ರಾಜಧಾನಿಗಳಾಗಿದ್ದುದು ಯಃಕಶ್ಚಿತ್ ದೇಶಗಳಿಗಲ್ಲ.'

---

೧೭೧. ಕ್ರೈಸ್ತೇತರ ಸಾಹಿತ್ಯ ಕುರಿತ ಈ ವಿದ್ವೇಷವು ಹನ್ನೊಂದನೆಯ ಶತಮಾನದವರೆಗೂ ಚರ್ಚ್‌ನಲ್ಲಿ ಮುಂದುವರಿಯಿತು, ಐರ್ಲಂಡ್ ಇದಕ್ಕೆ ಹೊರತು, ಅಲ್ಲಿ ಒಲಿಂಪಿಯನ್ ದೇವತೆಗಳನ್ನು ಯಾವತ್ತೂ ಪೂಜಿಸಲಿಲ್ಲ, ಹೀಗಾಗಿ ಅವರು ಚರ್ಚ್‌ಗೆ ಹೆದರಲಿಲ್ಲ.

೧೭೨. ಪತ್ರ ೯.

ಮುಂದೆ ಅವನು ಪೂರ್ವದಲ್ಲಿ ಹೂಣರು ಮಾಡಿದ ದಾಂಧಲೆಗಳನ್ನು ನಿರೂಪಿಸಿ, ಕೊನೆಯಲ್ಲಿ ಈ ಚಿಂತನೆಯಿಂದ ಮುಗಿಸುತ್ತಾನೆ: 'ಅವುಗಳನ್ನು ಸಮರ್ಪಕವಾಗಿ ವರ್ಣಿಸುವಲ್ಲಿ ಥ್ಯೂಸಿಡೈಡೀಸ್ ಮತ್ತು ಸ್ಯಾಲಸ್ಟ್ ಮೂಕರಂತಾಗುತ್ತಾರೆ.'

ಹದಿನೇಳು ವರ್ಷಗಳ ಬಳಿಕ, ಅಂದರೆ ರೋಮ್ ವಶವಾದ ಮೂರು ವರ್ಷಗಳ ನಂತರ, ಅವನು ಬರೆಯುತ್ತಾನೆ:[೧೭೩]

'ಜಗತ್ತು ವಿನಾಶದಲ್ಲಿ ಮುಳುಗುತ್ತಿದೆ: ಹೌದು, ಆದರೆ ನಮ್ಮ ಪಾಪಗಳು ಇನ್ನೂ ಉಳಿದಿವೆ ಮತ್ತು ಬೆಳಯುತ್ತಿವೆಯೆಂಬುದೇ ನಾಚಿಕೆಗೇಡಿನ ವಿಷಯ. ರೋಮನ್ ಚಕ್ರಾಧಿಪತ್ಯದ ರಾಜಧಾನಿಯಾದ ಸುಪ್ರಸಿದ್ಧ ನಗರವನ್ನು ಭಾರಿ ಬೆಂಕಿ ಅನಾಹುತವು ನುಂಗಿ ನೊಣೆದಿದೆ; ರೋಮನ್ ನಿರಾಶ್ರಿತರು ಇಲ್ಲದಿರುವ ಭೂಭಾಗವೇ ಇಲ್ಲ. ಹಿಂದೊಮ್ಮೆ ಪರಿಶುದ್ಧವೆಂದು ಭಾವಿಸಲಾಗಿದ್ದ ಚರ್ಚ್‌ಗಳು ಈಗ ಕಸ ಮತ್ತು ಬೂದಿಯ ರಾಶಿಗಳು; ಇಷ್ಟಾದರೂ ನಾವು ನಮ್ಮ ಮನಸ್ಸುಗಳು ಗೆಲ್ಲುವ ಬಗ್ಗೆ ಯೋಚಿಸುತ್ತೇವೆ. ನಾಳೆಯೇ ನಾವು ಸಾಯಬಹುದೆಂಬ ರೀತಿಯಲ್ಲಿ ಬದುಕುತ್ತಿದ್ದೇವೆ; ಆದರೂ ಈ ಜಗತ್ತಿನಲ್ಲಿ ಸದಾ ಕಾಲ ಉಳಿಯುವವರು ಎಂಬಂತೆ ಕಟ್ಟುವುದರಲ್ಲಿ ತೊಡಗಿದ್ದೇವೆ. ನಮ್ಮ ಗೋಡೆಗಳು ಚಿನ್ನದಿಂದ ಹೊಳೆಯುತ್ತಿವೆ, ನಮ್ಮ ಸೂರುಗಳು ಹಾಗೂ ನಮ್ಮ ರಾಜಧಾನಿಗಳ ಕಂಬಗಳು ಕೂಡ; ಆದರೂ ಕ್ರಿಸ್ತನು ಬರಿಮೈಯಿಂದ ಮತ್ತು ಬಡವರ ರೂಪದಲ್ಲಿ ನಮ್ಮ ಮನೆಯ ಮುಂದೆಯೇ ಸಾಯುತ್ತಾನೆ.'

ಈ ಭಾಗವು ತನ್ನ ಮಗಳನ್ನು ಚಿರಂತನ ಕನ್ಯೆಯಾಗಿಸಲು ನಿರ್ಧರಿಸಿದ್ದ ಸ್ನೇಹಿತನೊಬ್ಬನಿಗೆ ಅವನು ಬರೆದ ಪತ್ರವೊಂದರಲ್ಲಿ ಪ್ರಾಸಂಗಿಕವಾಗಿ ಕಾಣಿಸಿಕೊಳ್ಳುತ್ತದೆ; ಜೊತೆಗೆ ಅದರ ಬಹುಭಾಗ ಹೀಗೆ ಅರ್ಪಣೆಗೊಂಡ ಹೆಣ್ಣು ಮಕ್ಕಳು ಅನುಸರಿಸಬೇಕಾದ ಕಟ್ಟುನಿಟ್ಟುಗಳನ್ನು ಹೇಳಲು ತೊಡಗುತ್ತದೆ. ಪ್ರಾಚೀನ ಜಗತ್ತಿನ ಪತನದ ಬಗೆಗಿನ ಜೆರೋಮ್‌ನ ಗಾಢ ಭಾವನೆಗಳೊಡನೆ, ಹೂಣರು ವ್ಯಾಂಡಲ್‌ಗಳು ಮತ್ತು ಗಾಥ್‌ರನ್ನು ಗೆಲ್ಲುವುದಕ್ಕಿಂತ ಕನ್ಯತ್ವವನ್ನು ಕಾಪಾಡಿಕೊಳ್ಳಬೇಕಾದುದರ ಬಗ್ಗೆ ಆಲೋಚಿಸುವ ಬಗೆಯು ವಿಚಿತ್ರವಾಗಿ ತೋರುತ್ತದೆ. ಅವನ ಆಲೋಚನೆಗಳು ಎಂದಿಗೂ ಮುತ್ಸದ್ದಿತನದ ವ್ಯಾವಹಾರಿಕ ಸಾಧ್ಯತೆಗಳ ಬಗ್ಗೆ ಹರಿಯುವುದೇ ಇಲ್ಲ; ಆರ್ಥಿಕ ವ್ಯವಸ್ಥೆಯ ದುಸ್ಥಿತಿಯತ್ತ ಮತ್ತು ಬಾರ್ಬೇರಿಯನ್ನರಿಂದ ಕೂಡಿದ ಸೈನ್ಯವನ್ನು ಅವಲಂಬಿಸುವುದರತ್ತ ಒಮ್ಮೆಯಾದರೂ ಬೆರಳು ತೋರಿಸುವುದಿಲ್ಲ. ಇದು ಆಂಬ್ರೋಸ್ ಮತ್ತು ಆಗಸ್ಟೈನ್‌ರಿಗೂ

---

೧೭೩. ಪತ್ರ, ೧೨೮.

ಅನ್ವಯಿಸುತ್ತದೆ; ಆಂಬ್ರೋಸ್ ಒಬ್ಬ ಮುತ್ಸದ್ದಿಯಾಗಿದ್ದನೆಂಬುದು ನಿಜ, ಆದರೆ ಅದು ಚರ್ಚ್‌ನ ಪರವಾಗಿ ಮಾತ್ರ. ಆ ಕಾಲದ ಶ್ರೇಷ್ಠವೂ ವೀರ್ಯವಂತವೂ ಆದ ಮನಸಸ್ಸುಗಳು ಲೌಕಿಕ ವಿಷಯಗಳ ಬಗ್ಗೆ ಸಂಪೂರ್ಣವಾಗಿ ವಿಮುಖಗೊಂಡಿದ್ದರಿಂದಾಗಿ ಚಕ್ರಾಧಿಪತ್ಯವು ವಿನಾಶವನ್ನು ಕಂಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಮತ್ತೊಂದೆಡೆ, ವಿನಾಶವು ಅನಿವಾರ್ಯವೇ ಆಗಿದ್ದರೂ, ಕ್ರೈಸ್ತ ಮನೋಭಾವವು ಕ್ಷಮಾದಾನ ನೀಡಿ ಲೌಕಿಕ ಭರವಸೆಗಳು ವ್ಯರ್ಥವಾಗುವಂತೆ ತೋರಿದಾಗ ತಮ್ಮ ಮತಧಾರ್ಮಿಕ ಭರವಸೆಗಳನ್ನು ಉಳಿಸಿಕೊಳ್ಳುವ ಬಗ್ಗೆ ನಟ್ಟಿದ್ದುದು ಪ್ರಶಂಸಾರ್ಹವಾದುದು. ದೇವರ ನಗರದ ಬಗೆಗಿನ ಈ ದೃಷ್ಟಿಕೋನದ ಅಭಿವ್ಯಕ್ತಿಯು ಸಂತ ಆಗಸ್ಟೈನ್‌ನ ಅತ್ಯಂತ ಶ್ರೇಷ್ಠ ಗುಣವಾಗಿದೆ.

ಈ ಅಧ್ಯಾಯದಲ್ಲಿ ನಾನು ಸಂತ ಆಗಸ್ಟೈನ್‌ನ ಬಗ್ಗೆ ಮಾತನಾಡುವುದು ವ್ಯಕ್ತಿಯಾಗಿ ಮಾತ್ರ; ಮತಧರ್ಮಶಾಸ್ತ್ರಜ್ಞ ಹಾಗೂ ತತ್ವಜ್ಞಾನಿಯಾಗಿ ಅವನ ಬಗ್ಗೆ ಮುಂದಿನ ಆಧ್ಯಾಯದಲ್ಲಿ ವಿವೇಚಿಸುತ್ತೇನೆ.

ಅವನು ಹುಟ್ಟಿದ್ದು ೩೫೪ ರಲ್ಲಿ, ಜೆರೋಮ್ ಹುಟ್ಟಿದ ಒಂಬತ್ತು ವರ್ಷಗಳು ಹಾಗೂ ಆಂಬ್ರೋಸ್ ಹುಟ್ಟಿದ ಹದಿನಾಲ್ಕು ವರ್ಷಗಳ ನಂತರ. ಅವನು ಆಫ್ರಿಕ ಮೂಲದವನು, ತನ್ನ ಬಹುಭಾಗವನ್ನವನು ಅಲ್ಲಿಯೇ ಕಳೆದ. ಅವನ ತಾಯಿ ಕ್ರೈಸ್ತಳು, ಆದರೆ ಅವನ ತಂದೆ ಅಲ್ಲ. ಮ್ಯಾನಿಖಿಯನ್ ಆಗಿದ್ದ ಅವಧಿಯ ನಂತರ, ಅವನು ಕ್ಯಾಥೋಲಿಕ್ ಆದ, ಅವನಿಗೆ ಮಿಲಾನ್‌ನಲ್ಲಿ ಆಂಬ್ರೋಸ್ ದೀಕ್ಷಾಸ್ನಾನವಿತ್ತ. ಅವನು ೩೯೬ ರಲ್ಲಿ ಹಿಪ್ಪೋದ ಬಿಷಪ್ ಆದ, ಅದೇನೂ ಕಾರ್ಥೇಜ್‌ನಿಂದ ಬಹು ದೂರದ ಊರಲ್ಲ. ೪೩೦ ರಲ್ಲಿ ಸಾಯುವವರೆಗೂ ಅವನು ಅಲ್ಲಿಯೇ ನೆಲಸಿದ್ದ.

ಬಹು ಮಂದಿ ಧರ್ಮಬೋಧಕರ ಬಗ್ಗೆ ತಿಳಿದಿರುವುದಕ್ಕಿಂತ ಹೆಚ್ಚಾಗಿ ಅವನ ಪೂರ್ವಾಶ್ರಮದ ವಿವರಗಳು ಸಿಗುತ್ತವೆ, ಅದಕ್ಕೆ ಕಾರಣ ಅದರ ಬಹುಭಾಗವನ್ನು ತನ್ನ 'ಕನ್‌ಫೆಶನ್ಸ್'ನಲ್ಲಿ ಹೇಳಿಕೊಂಡಿರುವುದು. ಈ ಪುಸ್ತಕವನ್ನು ಬಹು ಪ್ರಖ್ಯಾತ ಲೇಖಕರು ಅನುಕರಿಸಿದರು, ಮುಖ್ಯವಾಗಿ ರೂಸೋ ಮತ್ತು ಟಾಲ್‌ಸ್ಟಾಯ್; ಆದರೆ ಅದಕ್ಕೂ ಮುಂಚೆ ಅಂತಹುದು ಬೇರಾವುದೇ ಇದ್ದುದು ನನಗೆ ತಿಳಿದಿಲ್ಲ. ಸಂತ ಆಗಸ್ಟೈನ್ ಕೆಲವು ವಿಷಯಗಳಲ್ಲಿ ಟಾಲ್‌ಸ್ಟಾಯ್‌ನನ್ನು ಹೋಲುವವನು, ಆದರೆ ಬುದ್ಧಿಶಕ್ತಿಯಲ್ಲಿ ಅವನಿಗಿಂತ ಮೇಲುಮಟ್ಟದವನು. ಅವನೊಬ್ಬ ರಾಗೋದ್ರೇಕ ಜೀವಿ, ಚಿಕ್ಕ ವಯಸ್ಸಿನಲ್ಲಿ ಸದ್ಗುಣಗಳಿಂದ ತುಂಬ ದೂರ, ಆದರೆ ಆನಂತರ ಮತಧಾರ್ಮಿಕತೆ ಮತ್ತು ಸತ್ಯಾನ್ವೇಷಣೆಗಳ ಒಳ ಒತ್ತಡ ಅವನನ್ನು ಬದಲಿಸಿತು. ಟಾಲ್‌ಸ್ಟಾಯ್‌ನಂತೆಯೇ ಅವನು ಗೀಳಿನ ಮನುಷ್ಯ, ಆನಂತರದ ಕಾಲದಲ್ಲಿ, ತನ್ನ ಪಾಪಕೃತ್ಯಗಳ ಬಗ್ಗೆ. ಇದು ಅವನನ್ನು ನಿಷ್ಠುರನನ್ನಾಗಿಸಿತು, ಅವನ ತಾತ್ವಿಕತೆಯನ್ನು

ಮನುಷ್ಯದೂರವಾಗಿಸಿತು. ಅವನು ಧರ್ಮದ್ರೋಹಗಳನ್ನು ಕೆಚ್ಚಿನಿಂದ ಎದುರಿಸಿದ, ಆದರೆ ಅವನ ಕೆಲವು ಅಭಿಪ್ರಾಯಗಳು, ಹದಿನೇಳನೆಯ ಶತಮಾನದಲ್ಲಿ ಜೇನ್ಸೆನಿಯಸ್ ಮತ್ತೆ ವ್ಯಕ್ತಪಡಿಸಿದಾಗ, ಅವನ್ನು ಧರ್ಮದ್ರೋಹವೆಂಬಂತೆ ಕಾಣಲಾಯಿತು. ಅವನ ಅಭಿಪ್ರಾಯಗಳನ್ನು ಪ್ರಾಟೆಸ್ಟೆಂಟರು ಸ್ವೀಕರಿಸುವವರೆಗೂ, ಕ್ಯಾಥೋಲಿಕ್ ಚರ್ಚ್ ತಮ್ಮ ಸಂಪ್ರದಾಯಬದ್ಧತೆಯನ್ನು ಪ್ರಶ್ನಿಸಿಕೊಳ್ಳಲಿಲ್ಲ.

ಅವನು 'ಕನ್‌ಫೆಶನ್ಸ್'ನಲ್ಲಿ ಹೇಳಿಕೊಂಡಿರುವ ತನ್ನ ಜೀವನದ ಮೊದಮೊದಲಿನ ಒಂದು ಘಟನೆಯು ಅವನು ಬಾಲಕನಾಗಿದ್ದಾಗ ನಡೆದುದು; ಅದೇನೂ ಇತರ ಹುಡುಗರಿಂದ ಅವನು ಶ್ರೇಷ್ಠನೆಂದು ಹೇಳಬರುವಂತಹುದಲ್ಲ. ತನ್ನ ಓರಗೆಯ ಕೆಲವು ಹುಡುಗರೊಂಡನೆ, ತನಗೆ ಹಸಿವಾಗಿರದಿದ್ದರೂ, ಜೊತೆಗೆ ತಮ್ಮ ಮನೆಯ ಬಳಿಯೇ ಇನ್ನೂ ಉತ್ತಮ ಪೇರ್ ಮರಗಳಿದ್ದರೂ, ನೆರೆಯವನೊಬ್ಬನ ಪೇರ್ ಮರದ ಹಣ್ಣುಗಳನ್ನು ಕಿತ್ತು ನಾಶಮಾಡಿದ. ಇದು ಊಹಾತೀತವಾದ ಕೆಡುಕುಕೃತ್ಯವೆಂದು ಅವನು ತನ್ನ ಜೀವಮಾನದುದ್ದಕ್ಕೂ ಪರಿತಪಿಸಿದ. ತನಗೆ ಹಸಿವಾಗಿದ್ದಿದ್ದರೆ ಅಥವಾ ಪೇರ್ ಹಣ್ಣುಗಳನ್ನು ತಿನ್ನಲು ಬೇರೆ ಮಾರ್ಗಗಳೇ ಇಲ್ಲದಿದ್ದರೆ ಅದೇನೂ ಅಷ್ಟು ದೊಡ್ಡ ತಪ್ಪಾಗುತ್ತಿರಲಿಲ್ಲ; ಆದರೆ ಆ ಕೃತ್ಯವು ಬರಿ ಚೇಷ್ಟೆಯ ಬುದ್ಧಿಯಿಂದಾದುದು, ಕೆಡುಕುತನದ ಒಲವನ್ನು ತೋರಿಸುವಂತಹುದು. ಇದೇ ಈ ಘಟನೆಯು ಅನಿರ್ವಚನೀಯ ಕಪ್ಪುಚುಕ್ಕೆಯಾಯಿತು. ಅದಕ್ಕಾಗಿ ತನ್ನನ್ನು ಕ್ಷಮಿಸುವಂತೆ ದೇವರಲ್ಲಿ ಮೊರೆಯಿಟ್ಟ.

'ಓ ದೇವರೇ, ನನ್ನ ಹೃದಯದತ್ತ ನೋಡು, ಹೃದಯದತ್ತ ನೋಡು, ಅದರ ಆಳ ಕಂದಕದ ಬಗ್ಗೆ ನಿನಗೆ ಕರುಣೆ ಮೂಡುತ್ತದೆ. ಈಗ, ನೋಡು, ನನ್ನ ಹೃದಯ ಹೇಳುತ್ತದೆ, ಅದರಲ್ಲಿ ಕಾಣಬಯಸಿದ್ದು ನಾನು ನಿಷ್ಕಾರಣವಾಗಿ ಕೆಡುಕು ಮಾಡಿದೆ, ಆದರೆ ಯಾವುದೇ ಕೆಡುಕು ಮಾಡುವುದಲ್ಲದೆ ಬೇರಾವುದೇ ಉದ್ದೇಶವಿಲ್ಲದೆ ಮಾಡಿದುದು ಎಂಬುದನ್ನು. ಅದು ತಪ್ಪು, ಆದರೆ ನಾನದನ್ನು ಇಷ್ಟಪಟ್ಟು ಮಾಡಿದೆ; ನಾನು ನಾಶಹೊಂದಲು ಬಯಸಿದೆ, ನಾನು ತಪ್ಪನ್ನೇ ಪ್ರೀತಿಸಿದೆ, ಯಾವ ಕಾರಣಕ್ಕಾಗಿ ಅದನ್ನು ಮಾಡಿದೆ ಎಂಬುದಕ್ಕಲ್ಲ, ಆದರೆ ತಪ್ಪನ್ನೇ ನಾನು ಪ್ರೀತಿಸಿದೆ. ದೋಷಯುಕ್ತ ಆತ್ಮ, ಆಕಾಶದಿಂದ ಹೊರದಬ್ಬಿದವನಾಗಿ ಕೆಳಗೆ ಬಿದ್ದೆ. ನಿನ್ನ ಇರುವಿಕೆ, ಅವಮಾನಕರವಾದ ಏನನ್ನೂ ಪಡೆಯುವ ಉದ್ದೇಶವಿಲ್ಲದೆ, ಅವಮಾನಕರವಾದುದನ್ನು ಬಯಸಿದೆ.'[೧೭೪]

ಹೀಗೆ ಅವನು ಏಳು ಅಧ್ಯಾಯಗಳಲ್ಲಿ ಮುಂದುವರಿಯುತ್ತಾನೆ, ಹುಡುಗುಬುದ್ಧಿಯಿಂದ ಚಿಕ್ಕಂದಿನಲ್ಲಿ ಒಂದು ಮರದಿಂದ ಕೆಲವು ಪೇರ್ ಹಣ್ಣುಗಳನ್ನು

೧೭೪. 'ಕನ್‌ಫೆಶನ್ಸ್', ಭಾಗ ೨, ಅಧ್ಯಾಯ ೬.

ಕಿತ್ತುದಕ್ಕಾಗಿ. ಆಧುನಿಕ ಮನಸ್ಸಿಗೆ ಇದು ಅಸ್ವಸ್ಥತೆಯಿಂದ ಕೂಡಿದ್ದು ಎನಿಸುತ್ತದೆ;[೧೭೫] ಅವನ ಕಾಲದಲ್ಲಿ ಅದು ಸರಿಯೆಂದೂ ಪಾವಿತ್ರ್ಯದ ಕುರುಹೆಂದೂ ಕಾಣಿಸಿತ್ತು. ಅವನ ಕಾಲದಲ್ಲಿ ತುಂಬ ತೀವ್ರವಾಗಿದ್ದ ಪಾಪಪ್ರಜ್ಞೆಯು ಯೆಹೂದಿಗಳಿಗೆ ಆತ್ಮಪ್ರಾಮುಖ್ಯದಿಂದ ಬಾಹ್ಯ ಸೋಲುಗಳೊಡನೆ ಪರಿಹರಿಸಿಕೊಳ್ಳುವ ಮಾರ್ಗವಾಗಿತ್ತು. ಯೆಹ್ವೆಹ್ ಸರ್ವಶಕ್ತ, ಯೆಹ್ವೆಹ್‌ಗೆ ಯೆಹೂದಿಗಳ ಬಗ್ಗೆ ವಿಶೇಷ ಆಸಕ್ತಿ; ಹೀಗಾದರೂ ಅವರೇಕೆ ಏಳಿಗೆಯಾಗಲಿಲ್ಲ? ಯಾಕೆಂದರೆ ಅವರು ಕೆಡುಕರಾಗಿದ್ದರು; ಅವರು ವಿಗ್ರಹಾರಾಧಕರಾಗಿದ್ದರು, ಯೆಹೂದ್ಯೇತರರನ್ನು ಮದುವೆಯಾಗುತ್ತಿದ್ದರು; ದೇವರ ಉದ್ದೇಶವು ಯೆಹೂದಿಗಳಲ್ಲಿ ಕೇಂದ್ರೀಕೃತವಾಗಿದೆ ಎಂಬುದನ್ನು ಕಂಡುಕೊಳ್ಳಲಾರದಾದರು; ಆದರೆ ಮತನಿಷ್ಠೆಯು ಅತ್ಯಂತ ಶ್ರೇಷ್ಠ ಕೃತ್ಯವಾದುದರಿಂದಲೂ ಅದನ್ನು ಯಾತನೆಯ ಮೂಲಕ ಸಾಧಿಸಬಹುದಾದ್ದರಿಂದಲೂ, ಅವರನ್ನು ಮೊದಲು ಶಿಕ್ಷಿಸಬೇಕು, ಆ ಯಾತನೆಯನ್ನು ದೇವರ ಪಿತೃಪ್ರೇಮದ ಕುರುಹೆಂಬಂತೆ ಪರಿಗಣಿಸಬೇಕು.

ಕ್ರೈಸ್ತರು ಆಯ್ಕೆಗೊಂಡ ಜನಗಳ ಸ್ಥಾನದಲ್ಲಿ ಚರ್ಚ್ ಅನ್ನು ಸ್ಥಾಪಿಸುತ್ತಾರೆ, ಒಂದು ಅಂಶದ ಹೊರತು; ಇದರಿಂದ ಪಾಪ್ರಜ್ಞೆಯಲ್ಲಿ ಅಲ್ಪ ವ್ಯತ್ಯಾಸವಾಯಿತು. ಯೆಹೂದಿಗಳಂತೆಯೇ ಚರ್ಚ್ ಕೂಡ ಯಾತನೆಯನ್ನು ಅನುಭವಿಸಿತು, ಚರ್ಚ್ ಧರ್ಮದ್ರೋಹದಿಂದ ತೊಂದರೆ ಅನುಭವಿಸಿತು, ವ್ಯಕ್ತಿಶಃ ಕ್ರೈಸ್ತರು ಚಿತ್ರಹಿಂಸೆಯ ಒತ್ತಡದಿಂದಾಗಿ ಸ್ವಧರ್ಮತ್ಯಾಗ (ಅಪಾಸ್ಟಸಿ) ಕ್ಕೊಳಗಾದರು. ಆದರೆ ಒಂದು ಮುಖ್ಯ ಬೆಳವಣಿಗೆಯಾಯಿತು; ಇದನ್ನಾಗಲೇ ಬಹುತೇಕ ಯೆಹೂದಿಗಳು ಮಾಡಿದ್ದರು, ಅದೆಂದರೆ ಸಾಮುದಾಯಿಕ ಪಾಪದ ಸ್ಥಾನದಲ್ಲಿ ವೈಯಕ್ತಿಕ ಪಾಪವನ್ನು ನಿಲ್ಲಿಸಿದ್ದು. ಮೂಲತಃ, ಪಾಪಗೈದಿದ್ದು ಯೆಹೂದಿ ರಾಷ್ಟ್ರ, ಅದನ್ನು ಸಾಮೂಹಿಕವಾಗಿ ಶಿಕ್ಷಿಸಲಾಯಿತು, ಆದರೆ ಮುಂದಿನ ಪಾಪಗಳು ಹೆಚ್ಚಾಗಿ ವೈಯಕ್ತಿಕವಾದವು, ಹೀಗಾಗಿ ಅದರ ರಾಜಕೀಯ ಲೇಪ ಹೋಯಿತು. ಯೆಹೂದಿ ರಾಷ್ಟ್ರದ ಸ್ಥಾನದಲ್ಲಿ ಚರ್ಚ್ ಅನ್ನು ನಿಲ್ಲಿಸಿದ್ದರಿಂದಾಗಿ ಬದಲಾವಣೆ ಅನಿವಾರ್ಯವಾಯಿತು, ಯಾಕೆಂದರೆ ಒಂದು ಆಧ್ಯಾತ್ಮಿಕ ಘಟಕವಾಗಿ ಚರ್ಚ್ ಪಾಪ ಮಾಡಲಾರದು, ಆದರೆ ಪಾಪಗೈದ ವ್ಯಕ್ತಿಯು ಚರ್ಚ್‌ನೊಡನೆ ಸಂಬಂಧವನ್ನು ಕಳಚಿಕೊಳ್ಳಬಹುದಾಗಿತ್ತು. ಈಗ ತಾನೇ ಹೇಳಿದಂತೆ, ಪಾಪವು ಸ್ವಪ್ರಾಮುಖ್ಯಕ್ಕೆ ಸಂಬಂಧಪಟ್ಟುದು. ಮೂಲತಃ ಪ್ರಾಮುಖ್ಯವು ಯೆಹೂದಿ ರಾಷ್ಟ್ರದ್ದು, ಆದರೆ ಕಾಲಕ್ರಮೇಣ ಅದು ವ್ಯಕ್ತಿಗೆ ಸಂಬಂಧಿಸಿದ್ದಾಯಿತು, ಚರ್ಚ್‌ಗಲ್ಲ, ಯಾಕೆಂದರೆ ಚರ್ಚ್ ಎಂದೂ ಪಾಪಗೈಯಲಾರದು. ಹೀಗೆ ಕ್ರೈಸ್ತ

---

೧೭೫. ನಾನು ಮಹಾತ್ಮಾ ಗಾಂಧಿಯನ್ನು ಹೊರತುಪಡಿಸಬೇಕು, ಅವರ ಆತ್ಮಚರಿತ್ರೆಯಲ್ಲಿ ಇದಕ್ಕೆ ತುಂಬ ಸನಿಹವಾದ ಭಾಗಗಳಿವೆ.

ಮತಧರ್ಮಶಾಸ್ತ್ರವು ಎರಡು ಭಾಗಗಳನ್ನು ಹೊಂದಿತು: ಒಂದು ಚರ್ಚ್‌ಗೆ ಸಂಬಂಧಿಸಿದ್ದು, ಮತ್ತೊಂದು ವ್ಯಕ್ತಿಯ ಆತ್ಮಕ್ಕೆ ಸಂಬಂಧಿಸಿದ್ದು. ಮುಂದಿನ ದಿನಗಳಲ್ಲಿ, ಕ್ಯಾಥೋಲಿಕ್‌ರು ಇವುಗಳಲ್ಲಿ ಮೊದಲನೆಯದಕ್ಕೆ ಹೆಚ್ಚು ಪ್ರಾಮುಖ್ಯವಿತ್ತರು, ಹಾಗೂ ಎರಡನೆಯದಕ್ಕೆ ಪ್ರಾಟೆಸ್ಟೆಂಟರು; ಆದರೆ ಸಂತ ಆಗಸ್ಟೈನ್‌ನಲ್ಲಿ ಎರಡಕ್ಕೂ ಪ್ರಾಮುಖ್ಯ, ಅವನಿಗೆ ಅದರಲ್ಲಿ ಅಸಮಂಜಸತೆಯೇನೂ ಕಾಣಿಸಲಿಲ್ಲ. ರಕ್ಷಿತರಾದವರು ದೇವರ ಪೂರ್ವನಿಶ್ಚಿತ ದೃಷ್ಟಿಯಲ್ಲಿ ಮೋಕ್ಷಾರ್ಹರು. ಇದು ಆತ್ಮ ಮತ್ತು ದೇವರ ನೇರ ಸಂಬಂಧ. ಆದರೆ ದೀಕ್ಷಾಸ್ನಾನ ಹೊಂದದ ಯಾರೂ, ಹೀಗಾಗಿ ಚರ್ಚ್‌ನ ಸದಸ್ಯನಲ್ಲದ್ದರಿಂದ, ರಕ್ಷಿತನಾಗಲಾರ. ಇದರಿಂದ ಚರ್ಚ್ ಆತ್ಮ ಮತ್ತು ದೇವರ ನಡುವಣ ಮಧ್ಯವರ್ತಿಯಾಯಿತು.

ಈ ನೇರ ಸಂಬಂಧದಲ್ಲಿ ಪಾಪವು ಆವಶ್ಯಕ ಅಂಶ, ಒಬ್ಬ ಸಹಾಯಕ ದೇವತೆಯು ವ್ಯಕ್ತಿ ಯಾತನೆ ಅನುಭವಿಸುವಂತೆ ಮಾಡಬಹುದು, ಇಷ್ಟಾದರೂ ವ್ಯಕ್ತಿಯ ಆತ್ಮವು ಸೃಷ್ಟಿತ ಜಗತ್ತಿನಲ್ಲಿ ಅತ್ಯಂತ ಪ್ರಮುಖವಾಗಬಹುದು. ಹೀಗಾಗಿ ಮತಧರ್ಮಸುಧಾರಣೆಯು ಅವಲಂಬಿಸಿದ್ದ ಮತಧರ್ಮಶಾಸ್ತ್ರವು ಪಾಪದ ಬಗ್ಗೆ ಅಪಸಾಮಾನ್ಯ ಪ್ರಜ್ಞೆಯುಳ್ಳವನಿಂದಾದುದು.

ಇಷ್ಟು, ಪೇರ್ ಹಣ್ಣುಗಳ ವಿಷಯವಾಯಿತು. 'ಕನ್‌ಫೆಶನ್ಸ್' ಕೆಲವು ಇತರ ವಿಷಯಗಳ ಕುರಿತು ಏನು ಹೇಳುವುದೆಂದು ನೋಡಬಹುದು.

ತಾನು ಕಷ್ಟಪಡದೆಯೇ ತಾಯಿಯ ತೊಡೆಯ ಮೇಲೆ ಲ್ಯಾಟಿನ್ ಕಲಿತದ್ದು ಹೇಗೆ, ಶಾಲೆಯಲ್ಲಿ ಶಿಕ್ಷಕರು ಕಲಿಸಲು ಪ್ರಯತ್ನಪಟ್ಟ ಗ್ರೀಕ್ ದ್ವೇಷಕ್ಕೆ ಕಾರಣ 'ಅವನನ್ನು ಕ್ರೂರ ಶಿಕ್ಷೆಯ ಹೆಸರಿನಿಂದ ಭಯಪಡಿಸಿದುದು' – ಇವುಗಳನ್ನು ಆಗಸ್ಟೈನ್ ವಿವರಿಸುತ್ತಾನೆ. ತನ್ನ ಬದುಕಿನ ಕೊನೆಗಾಲದಲ್ಲಿಯೂ ಅವನ ಗ್ರೀಕ್ ಜ್ಞಾನವು ಕ್ವಚಿತ್ತಾದುದು. ಈ ವೈದೃಶ್ಯದಿಂದ ಅವನು ಶಿಕ್ಷಣದಲ್ಲಿ ನಯವಾದ ಮಾರ್ಗ ಹೇಗೆ ತಕ್ಕುದು ಎಂದು ಹೇಳಬಹುದಾಗಿತ್ತು. ಆದರೆ ಅವನು ಹೇಳುವುದು ಇದನ್ನು:

'ಹೀಗಾಗಿ, ಕಲಿಯುವಂತೆ ಮಾಡಲು ಸ್ವತಂತ್ರ ಕುತೂಹಲವು ಭಯ ಹುಟ್ಟಿಸುವ ಬೆದರಿಕೆಗಳಗಿಂತಲೂ ಹೆಚ್ಚು ಸಾಮರ್ಥ್ಯವನ್ನು ನಿಡುತ್ತದೆ, ಇದರಿಂದ ನಿನ್ನ ನಿಯಮಗಳನ್ನು ಮೀರುವ ಮುಕ್ತತೆಯನ್ನು, ಓ ದೇವರೇ, ನಿನ್ನ ನಿಯಮಗಳು, ಶಿಕ್ಷಕನ ದೊಣ್ಣೆಯಿಂದ ಹುತಾತ್ಮನ ವಿಚಾರಣೆಯವರೆಗೂ ನಿಯಂತ್ರಿಸುತ್ತದೆ. ಯಾಕೆಂದರೆ ನಿನ್ನ ನಿಯಮಗಳು ನಮಗಾಗಿ ಕೆಲವು ಆರೋಗ್ಯಕರ ಕಹಿಗಳನ್ನೂ, ನಿನ್ನಿಂದ ದೂರ ಸೆಳೆಯುವ ದುಷ್ಟ ಸಂತೋಷಗಳನ್ನೂ ಪರಿಣಾಮಕಾರಿಯಾಗಿ ಬೆರೆಸುತ್ತವೆ.'

ಶಾಲಾಮಾಸ್ತರರ ಏಟುಗಳು ಅವನನ್ನು ಗ್ರೀಕ್ ಕಲಿಯುವುದರಿಂದ ವಿಮುಖಗೊಳಿಸಿದರೂ, ದುಷ್ಟ ಸಂತೋಷ ಹೊಂದುವುದರಿಂದ ದೂರ

ಮಾಡಿದರೂ, ಅದು ಈ ಕಾರಣದಿಂದಲೇ ಶಿಕ್ಷಣದ ಅಪೇಕ್ಷಣೀಯ ಭಾಗ. ಎಲ್ಲ ಮಾನವ ಪ್ರಯತ್ನಗಳಲ್ಲಿ ಪಾಪವನ್ನು ಅತ್ಯಂತ ಮುಖ್ಯವಾಗಿ ಮಾಡುವವರಿಗೆ ಇದು ತಾರ್ಕಿಕವಾದುದು. ಮುಂದುವರಿದು, ತಾನು ಶಾಲಾ ಬಾಲಕನಾಗಿ ಸುಳ್ಳು ಹೇಳಿ ಹಣ್ಣು ಕದ್ದು ಮಾತ್ರ ಪಾಪಗೈಯಲಿಲ್ಲ, ಆ ಮೊದಲೂ ಮಾಡಿದ್ದೆ ಎಂಬುದನ್ನು ನಿರೂಪಿಸಲು ಇಡೀ ಒಂದು ಅಧ್ಯಾಯವನ್ನೇ ಮೀಸಲಿಡುತ್ತಾನೆ (ಭಾಗ ೧, ಅಧ್ಯಾಯ ೭); ಅದರಲ್ಲಿ ಮೊಲೆಯುಣ್ಣುವ ಕೂಸುಗಳು ಕೂಡ ಪಾಪಗೈಯುತ್ತವೆ– ಹೊಟ್ಟೆಬಾಕತನ, ಮತ್ಸರ, ಮತ್ತಿತರ ಭಯಾನಕ ತಪ್ಪುಗಳಿಂದ – ಎಂದು ವಿವರಿಸುತ್ತಾನೆ.

ಅವನು ತಾರುಣ್ಯಪೂರ್ವವನ್ನು ತಲುಪಿದಾಗ ದೈಹಿಕ ಕಾಮನೆಗಳು ಆವರಿಸಿದವು. 'ನನ್ನ ದೇಹದ ಹದಿನಾರನೆಯ ವಯಸ್ಸಿನಲ್ಲಿ ನಾನು ಎಲ್ಲಿದ್ದೆ, ನಿನ್ನ ಮನೆಯ ಆನಂದದಿಂದ ಎಷ್ಟು ಕಾಲ ದೂರನಾಗಿದ್ದೆ; ಆಗ ಮನುಷ್ಯನ ವಿಷಮತೆಯಿಂದಾಗಿ ಕಾಮನೆಗಳ ಹುಚ್ಚು ಕುದುರೆಯು, ನಿನ್ನ ನಿಯಮಗಳ ನಿಷೇಧವಿದ್ದರೂ, ನನ್ನಲ್ಲಿ ಮೇಲುಗೈಯಾಗಿ ನಾನು ಅವುಗಳ ವಶವಾದೆ.'[೧೭೬]

ಈ ತಪ್ಪುಗಳಿಂದ ದೂರಮಾಡಲು ಅವರ ತಂದೆ ಯಾವುದೇ ಕ್ರಮ ಕೈಗೊಳ್ಳದೆ, ಆಗಸ್ಟೈನ್‌ನ ಅಧ್ಯಯನಕ್ಕೆ ಸಹಾಯ ಮಾಡುವುದಕ್ಕೆ ಸೀಮಿತವಾದ. ಅವನ ತಾಯಿ ಸಂತ ಮೋನಿಕ, ಅದಕ್ಕೆ ವ್ಯತಿರಿಕ್ತವಾಗಿ, ಅವನನ್ನು ಬ್ರಹ್ಮಚರ್ಯಪಾಲನೆಗೆ ಪ್ರೇರೇಪಿಸಿದಳು, ಆದರೆ ವ್ಯರ್ಥವಾಗಿ. ಆದರೆ ಅವಳು ಕೂಡ ಆಗ ಮದುವೆಯ ಪ್ರಸ್ತಾಪ ಮಾಡಲಿಲ್ಲ, 'ಹೆಂಡತಿಯ ಅಡ್ಡಿಯಿಂದಾಗಿ ತನ್ನ ಭವಿಷ್ಯಕ್ಕೆ ತೊಂದರೆಯಾಗಬಹುದು ಎಂದು.'

ತನ್ನ ಹದಿನಾರನೆಯ ವಯಸ್ಸಿನಲ್ಲವನು ಕಾರ್ಥೇಜ್‌ಗೆ ಹೋದ, 'ಅಲ್ಲಿ ನನ್ನ ಸುತ್ತ ಹಂಡೆ ತುಂಬ ನಿಯಮಬಾಹಿರವಾದ ಪ್ರಣಯಗಳು ತುಂಬಿ ಹೋಗಿದ್ದವು. ನಾನಿನ್ನೂ ಪ್ರಣಯಕ್ಕೊಳಗಾಗಿರಲಿಲ್ಲ, ಆದರೆ ಪ್ರಣಯದ ಬಗ್ಗೆ ಒಲವಿತ್ತು, ಹೀಗಾಗಿ ಮನದಾಳದಲ್ಲಿದ್ದ ಬಯಕೆಯಿಂದಾಗಿ ಬಯಸದ ಕಾರಣದಿಂದ ನನ್ನನ್ನೇ ದ್ವೇಷಿಸತೊಡಗಿದೆ. ನಾನು ಏನನ್ನು ಪ್ರೇಮಿಸಬಹುದೆಂದು ಹುಡುಕಾಡಿದೆ, ಪ್ರಣಯದ ಪರವಾದ ಒಲವಿನಿಂದ, ರಕ್ಷಣೆಯನ್ನು ದ್ವೇಷಿಸಿದೆ .. .. ಪ್ರೇಮಿಸುವುದು ಮತ್ತು ಪ್ರೇಮಕ್ಕೊಳಗಾಗುವುದು ನನಗೆ ಮಧುರವಾಗಿತ್ತು, ಆದರೆ ನಾನು ಪ್ರೇಮಿಸಿದ ವ್ಯಕ್ತಿ ಸಿಕ್ಕಾಗ ಅದು ಹೆಚ್ಚಾಯಿತು. ಹೀಗಾಗಿ ಸ್ನೇಹದ ಚಿಲುಮೆಯನ್ನು ಕಾಮುಕತೆಯ ಕೊಳೆಯಿಂದ ಮೈಲಿಗೆ ಮಾಡಿದೆ, ಅದರ ದೀಪ್ತಿಯನ್ನು ನನ್ನ ಕಾಮುಕತೆಯ ನರಕದಿಂದ ಮಸುಕುಗೊಳಿಸಿದೆ.'[೧೭೭] ಈ ಪದಗಳಲ್ಲಿ ತಾನು ಒಬ್ಬ ಹುಡುಗಿಯನ್ನು

---

೧೭೬. 'ಕನ್‌ಫೆಶನ್ಸ್', ಭಾಗ ೨, ಅಧ್ಯಾಯ ೨.
೧೭೭. ಅದೇ, ಭಾಗ ೩, ಅಧ್ಯಾಯ ೧.

ಪ್ರಾಮಾಣಿಕವಾಗಿ ಹಲವಾರು ವರ್ಷಗಳ ಕಾಲ ಪ್ರೀತಿಸಿದ ಪರಿಯನ್ನು ವರ್ಣಿಸುತ್ತಾನೆ.[೧೭೮] ಅವಳಲ್ಲಿ ಅವನಿಗೊಂದು ಗಂಡುಮಗುವೂ ಆಗುತ್ತದೆ, ಅದರ ಬಗ್ಗೆಯೂ ಅವನಿಗೆ ಪ್ರೀತಿ, ತನ್ನ ಮತಾಂತರದ ಬಳಿಕ, ಅವನ ಮತಧಾರ್ಮಿಕ ಶಿಕ್ಷಣದ ಬಗ್ಗೆ ತುಂಬ ನಿಗಾ ವಹಿಸುತ್ತಾನೆ.

ಅವನೂ ಅವನ ತಾಯಿಯೂ ತನ್ನ ಮದುವೆಯ ಬಗ್ಗೆ ಯೋಚಿಸುವ ಕಾಲ ಬರುತ್ತದೆ. ಅವನು ಒಪ್ಪಿದ ಹುಡುಗಿಯೊಂದಿಗೆ ನಿಶ್ಚಿತಾರ್ಥವೂ ನಡೆಯುತ್ತದೆ, ಆಗ ಅವನು ತನ್ನ ಹಿಂದಿನ ಪ್ರೇಯಸಿಯ ಸಂಬಂಧವನ್ನು ಬಿಡುವುದು ಅನಿವಾರ್ಯವೆನಿಸುತ್ತದೆ. 'ನನ್ನ ಪ್ರೇಯಸಿಯು ನನ್ನ ಮದುವೆಗೆ ಅಡ್ಡಿಯೆಂಬ ಕಾರಣದಿಂದ ಸಂಬಂಧ ಹರಿದುಕೊಂಡುದಲ್ಲದೆ, ಅವಳಿಂದ ದೂರ ಬಂದ ನನಗೂ ನೋವುಂಟಾಗಿ ಹೃದಯ ಹಿಂಡಿತು. ಅವಳು ಆಫ್ರಿಕಕ್ಕೆ ಮರಳಿದಳು [ಆಗ ಆಗಸ್ಟೈನ್ ಮಿಲಾನ್‌ನಲ್ಲಿದ್ದ], ಬೇರೆ ಗಂಡಸಿನ ಜೊತೆ ಸಂಬಂಧವಿರಿಸಿಕೊಳ್ಳುವುದಿಲ್ಲವೆಂದು ನನ್ನ ಮೇಲಾಣೆಯಿಟ್ಟು ನನ್ನ ಬಳಿಯೆ ಮಗುವನ್ನು ಬಿಟ್ಟು ಹೋದಳು.'[೧೭೯] ಆದರೆ ಅವನ ಮದುವೆ ಎರಡು ವರ್ಷ ನಡೆಯಲಾಗಲಿಲ್ಲ, ಅದಕ್ಕೆ ಕಾರಣ ಹುಡುಗಿಯ ವಯಸ್ಸು, ಈ ಮಧ್ಯೆ ಅವನು ಮತ್ತೊಬ್ಬ ಪ್ರೇಯಸಿಯತ್ತ ತಿರುಗಿದ; ಅದು ಕಡಿಮೆ ಅಧಿಕೃತವೂ ಗೊತ್ತಾಗದುದೂ ಆಗಿತ್ತು. ಅವನ ಪ್ರಜ್ಞೆ ವಿಪರೀತ ಕಾಡಿತು; ಹೀಗಾಗಿ ಅವನು ಪ್ರಾರ್ಥಿಸಿದ: 'ನನಗೆ ಬ್ರಹ್ಮಚರ್ಯೆ ಹಾಗೂ ಇಂದ್ರಿಯನಿಗ್ರಹವನ್ನು ದಯಪಾಲಿಸು, ಆದರೆ ಈಗಲ್ಲ.'[೧೮೦] ಕೊನೆಗೆ, ಅವನ ಮದುವೆಯ ಹೊತ್ತು ಬರುವ ಮುಂಚೆಯೇ, ಮತಧಾರ್ಮಿಕತೆಯು ಅವನನ್ನು ಸಂಪೂರ್ಣ ಗೆದ್ದಿತು, ತನ್ನ ಉಳಿದ ಬದುಕನ್ನೆಲ್ಲ ನಿಗ್ರಹಕ್ಕೆ ಮೀಸಲಿಟ್ಟ.

ಈಗ ಅದಕ್ಕೂ ಹಿಂದಿನ ಕಾಲದತ್ತ ಮರಳೋಣ: ಅವನ ಹತ್ತೊಂಬತ್ತನೇ ವಯಸ್ಸಿನಲ್ಲಿ, ಭಾಷಣಕಲೆಯಲ್ಲಿ ಪರಿಣತಿ ಹೊಂದಿದ, ಅವನನ್ನು ಸಿಸೆರೋ ಮತ್ತೆ ತತ್ವಜ್ಞಾನದತ್ತ ಸೆಳೆದ. ಅವನು ಬೈಬಲ್ ಓದಲು ಪ್ರಯತ್ನಿಸಿದ, ಆದರೆ ಅದರಲ್ಲಿ ಸಿಸೆರೋನ ಘನತೆ ಕಂಡುಬರಲಿಲ್ಲ. ಈ ಕಾಲದಲ್ಲಿಯೇ ಅವನು ಮ್ಯಾನಿಖಿಯನ್ ಆದುದು. ಇದರಿಂದ ಅವನ ತಾಯಿಗೆ ನೋವಾಯಿತು. ವೃತ್ತಿಯಿಂದ ಅವನೊಬ್ಬ ಭಾಷಣಕಲೆಯ ಅಧ್ಯಾಪಕ; ಜೊತೆಗೆ ಅವನಿಗೆ ಜ್ಯೋತಿಷ್ಯದ ಹುಚ್ಚು, ಯಾಕೆಂದರೆ 'ನಿನ್ನ ಪಾಪದ ಅನಿವಾರ್ಯ ಕಾರಣ ಆಕಾಶದಲ್ಲಿದೆ'[೧೮೧] ಎಂಬ ಉಪದೇಶ; ಆದರೆ ಆನಂತರದ ಬದುಕಿನಲ್ಲಿ ಅದರ ಬಗ್ಗೆ ತಿರಸ್ಕಾರ ಬಂತು. ಲ್ಯಾಟಿನ್‌ನಲ್ಲಿ

---

೧೭೮. ಅದೇ, ಭಾಗ ೪, ಅಧ್ಯಾಯ ೨.
೧೭೯. ಅದೇ, ಭಾಗ ೬, ಅಧ್ಯಾಯ ೧೫
೧೮೦. ಅದೇ, ಭಾಗ ೮, ಅಧ್ಯಾಯ ೭.
೧೮೧. ಅದೇ, ಭಾಗ, ಅಧ್ಯಾಯ ೩.

ಓದಬಹುದಾದಷ್ಟು ತತ್ವಜ್ಞಾನವನ್ನು ಅವನು ಅಭ್ಯಾಸ ಮಾಡಿದ; ಅವನು ವಿಶೇಷವಾಗಿ ಅರಿಸ್ಟಾಟಲ್‌ನ 'ಟೆನ್ ಕ್ಯಾಟೆಗೊರೀಸ್' ಅನ್ನು ಉಲ್ಲೇಖಿಸುತ್ತಾನೆ; ಅದನ್ನು ಅಧ್ಯಾಪಕನ ನೆರವಿಲ್ಲದೆ ಅರ್ಥಮಾಡಿಕೊಂಡನಂತೆ. 'ಕೆಡುಕು ಭಾವಗಳ ಅತ್ಯಂತ ಪಾಪಿಷ್ಠ ಗುಲಾಮನಾದ ನಾನು ಮಾನವಿಕ ಶಾಸ್ತ್ರಗಳನ್ನು ನನ್ನ ಪಾಡಿಗೆ ಓದಿಕೊಂಡು, ಗೊತ್ತಾದಷ್ಟು ಅರ್ಥಮಾಡಿಕೊಂಡ ನನಗೆ ಅದೆಷ್ಟು ಲಾಭಕರವಾಯಿತು? .. .. ಯಾಕೆಂದರೆ ನಾನು ಬೆಳಕಿಗೆ ಬೆನ್ನು ತಿರುಗಿಸಿದ್ದೆ, ನನ್ನ ಮುಖ ಬೆಳಗಿದ ವಸ್ತುಗಳ ಕಡೆಗಿತ್ತು.. .. ಆದರೆ ಅದೇ ಬೆಳಗಿರಲಿಲ್ಲ.'[೧೮೨] ಈ ಹೊತ್ತಿನಲ್ಲಿ, ಅವನಿಗೆ ದೇವರೆಂದರೆ ವಿಶಾಲವೂ ದೇದೀಪ್ಯಮಾನವೂ ಆದ ದೇಹ, ತಾನು ಆ ದೇಹದ ಒಂದು ಭಾಗ ಎಂಬ ಶ್ರದ್ಧೆಯಿತ್ತು. ಅವು ದೋಷಪೂರಿತವೆಂದಷ್ಟೇ ಹೇಳುವುದರ ಬದಲು ಅವನು ಮ್ಯಾನಿಖಿಯನ್‌ರ ಸೂತ್ರಸಂಹಿತೆಯ ಬಗ್ಗೆ ವಿವರವಾಗಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು.

ಮ್ಯಾನಿಖಿಯನ್ ಸಿದ್ಧಾಂತಗಳನ್ನು ತಾನೇಕೆ ತಿರಸ್ಕರಿಸುವೆನೆಂದು ಸಂತ ಆಗಸ್ಟೈನ್ ನೀಡುವ, ಅವು ಅವೈಜ್ಞಾನಿಕ ಎಂಬ, ಮೊದಲನೆಯ ಕಾರಣವು ಆಸಕ್ತಿಯನ್ನು ಕೆರಳಿಸುತ್ತದೆ. ಅವನಿಗೆ ನೆನಪಿಗೆ ಬಂದುದು – ಹಾಗೆಂದು ಹೇಳಿಕೊಳ್ಳುತ್ತಾನೆ[೧೮೩] – ತಾನು ಉತ್ಕೃಷ್ಟ ಖಗೋಳವಿಜ್ಞಾನಿಗಳ ಬರಹಗಳಿಂದ ಕಲಿತ ಖಗೋಳವಿಜ್ಞಾನವನ್ನೆಲ್ಲ 'ನಾನು ಮ್ಯಾನಿಖಿಯಾಸ್‌ನ ಹೇಳಿಕೆಗಳೊಡನೆ ಹೋಲಿಸಿದೆ, ಅವನು ಈ ವಿಷಯಗಳ ಬಗ್ಗೆ ತನ್ನ ತಿಕ್ಕಲುತನದಿಂದ ದೋಷಪೂರಿತವಾದುದನ್ನು ದಂಡಿಯಾಗಿ ಬರೆದು ಹಾಕಿದ್ದಾನೆ; ಆದರೆ ಸಂಕ್ರಮಣಗಳ, ವಿಷುವತ್ಸಂಕ್ರಾಂತಿಗಳ ಮತ್ತು ಗ್ರಹಣಗಳ ಬಗ್ಗೆ ಅಥವಾ ನಾನು ಧರ್ಮನಿರಪೇಕ್ಷಕ ತತ್ವಜ್ಞಾನಗಳಿಗೆ ಸಂಬಂಧಿಸಿದ ಪುಸ್ತಕಗಳನ್ನೋದಿ ತಿಳಿದ ಯಾವುದೇ ವಿಷಯದ ಬಗ್ಗೆ ಅವನು ನೀಡಿದ ಯಾವ ಕಾರಣಗಳೂ ನನಗೆ ತೃಪ್ತಿದಾಯಕವಾಗಿ ಕಾಣಲಿಲ್ಲ. ಆದರೆ ಅದನ್ನೆಲ್ಲ ನಂಬುವಂತೆ ನನ್ನ ಮೇಲೆ ಒತ್ತಾಯ ಹೇರಲಾಯಿತು, ಆದರೆ ಅವು ಲೆಕ್ಕಾಚಾರಗಳಿಂದ ಮತ್ತು ನನ್ನವೇ ವೀಕ್ಷಣೆಗಳಿಂದ ಪಡೆದ ತರ್ಕಗಳೊಡನೆ ಹೊಂದಿಕೆಯಾಗದಿರುವುದು ಮಾತ್ರವಲ್ಲ, ಅವಕ್ಕೆ ವಿರುದ್ಧವಾಗಿಯೇ ಇದ್ದವು.' ವೈಜ್ಞಾನಿಕ ದೋಷಗಳು ತಮ್ಮಲ್ಲಿ ತಾವು ಶ್ರದ್ಧೆಯ ದೋಷಗಳಾಗುವುದಿಲ್ಲವಾದರೂ ದೈವಕ ಸ್ಫೂರ್ತಿಯಿಂದ ಹೊಮ್ಮಿದಂತೆ ಅಧಿಕಾರಯುತ ಧೋರಣೆಯಿಂದ ಹೇಳಿದಾಗ ಮಾತ್ರ ಹಾಗಾಗುತ್ತವೆ ಎಂಬುದನ್ನು ತೋರಿಸುವಲ್ಲಿ ಅವನು ಎಚ್ಚರಿದಿಂದಿದ್ದಾನೆ. ಅವನೇನಾದರೂ ಗೆಲಿಲಿಯೋ ಕಾಲದಲ್ಲಿದ್ದಿದ್ದರೆ ಅವನು ಹೇಗೆ ಯೋಚಿಸುತ್ತಿದ್ದನೋ ಎಂದು ಆಲೋಚಿಸುವಂತಾಗುತ್ತದೆ.

---

೧೮೨. ಅದೇ, ಭಾಗ ೪, ಅಧ್ಯಾಯ, ೧೬.

೧೮೩. ಅದೇ, ಭಾಗ ೫, ಅಧ್ಯಾಯ ೩.

ತನ್ನ ಸಂದೇಹಗಳನ್ನು ಪರಿಹರಿಸಿಕೊಳ್ಳುವ ಭರವಸೆಯಿಂದ, ಫೌಸ್ಟಸ್ ಎಂಬ ಆ ಪಂಥದ ಶ್ರೇಷ್ಠ ವಿದ್ವಾಂಸನೆಂದು ಹೆಸರಾದ ಮ್ಯಾನಿಖಿಯನ್ ಬಿಷಪ್ ಒಬ್ಬನನ್ನು ನೋಡಿ ಅವನೊಡನೆ ಚರ್ಚೆ ಮಾಡಿದನಂತೆ. ಆದರೆ 'ಅವನಿಗೆ, ವ್ಯಾಕರಣವಿರಲಿ, ಮಾನವಿಕ ಶಾಸ್ತ್ರಗಳ ಬಗ್ಗೆ ಸಾಮಾನ್ಯವಾದ ರೀತಿಯ ಹೊರತು ಏನೇನೂ ಗೊತ್ತಿಲ್ಲ ಎಂಬುದು ತಿಳಿಯಿತು. ಆದರೆ ಅವನು ಟುಲಿಯ ಕೆಲವು ಭಾಷಣಗಳು, ಸೆನೆಕನ ಕೆಲವು ಪುಸ್ತಕಗಳು, ಕೆಲವು ಕವಿಗಳ ಕೃತಿಗಳು ಹಾಗೂ ತನ್ನ ಪಂಥದ ಬಗ್ಗೆ ಲ್ಯಾಟಿನ್‌ನಲ್ಲಿ ತರ್ಕಬದ್ಧವಾದ ರೀತಿಯಲ್ಲಿ ಬರೆದಿದ್ದ ಕೆಲವು ಗ್ರಂಥಗಳನ್ನು ಓದಿದ್ದರಿಂದಲೂ, ಪ್ರತಿದಿನ ಭಾಷಣ ಮಾಡುವಾಗ ಅವುಗಳನ್ನು ಉಲ್ಲೇಖಿಸುತ್ತಿದ್ದುದರಿಂದಲೂ ಅವನಿಗೆ ಒಂದಷ್ಟು ವಾಕ್ಪಟುತ್ವವೇನೋ ಇತ್ತು, ಮತ್ತು ಅದು ಆಹ್ಲಾದಕಾರಿಯಾಗಿಯೂ ತನ್ನ ವಿವೇಕ ಮತ್ತು ಸಹಜ ಗಾಭೀರ್ಯದಿಂದಾಗಿ ತಪ್ಪುದಾರಿಗೆಳೆಯುವಂತಹದೂ ಆಗಿತ್ತು.'[೧೮೪]

ತನ್ನ ಖಗೋಳವೈಜ್ಞಾನಿಕ ಸಂದೇಹಗಳನ್ನು ಫೌಸ್ಟಸ್ ಬಗೆಹರಿಸಲಾರ ಎಂಬುದು ಅವನಿಗೆ ಗೊತ್ತಾಯಿತು. ಮ್ಯಾನಿಖಿಯನ್‌ರ ಗ್ರಂಥಗಳು, ಅವನ ಪ್ರಕಾರ, 'ದೀರ್ಘ ಕಲ್ಪಿತ ಕತೆಗಳು, ಸ್ವರ್ಗ ಮತ್ತು ನಕ್ಷತ್ರಗಳು, ಸೂರ್ಯ ಮತ್ತು ಚಂದ್ರರುಗಳಿಂದ ಕೂಡಿದವು,' ಅವು ಯಾವುವೂ ಖಗೋಳವಿಜ್ಞಾನಿಗಳು ಕಂಡುಹಿಡಿದವುಗಳಿಗೆ ಹೊಂದಿಕೆಯಾಗುವುದಿಲ್ಲ; ಆದರೆ ತಾನು ಈ ವಿಷಯಗಳ ಬಗ್ಗೆ ಫೌಸ್ಟಸ್ ಅನ್ನು ವಿಚಾರಿಸಿದಾಗ ತನಗೆ ಆ ಬಗ್ಗೆ ಏನೂ ಗೊತ್ತಿಲ್ಲವೆಂದು ಅವನು ಒಪ್ಪಿಕೊಂಡನಂತೆ. 'ಈ ಕಾರಣದಿಂದಾಗಿಯೂ ನನಗೆ ಅವನ ಬಗ್ಗೆ ಆದರವುಂಟಾಯಿತು. ಅವನ ಸರಳ ಮನಸ್ಸಿನ ಸ್ವತಂತ್ರತೆಯು ನಾನು ಅವನಿಂದ ತಿಳಿಯಬಯಸಿದ್ದ ವಿಷಯಗಳ ಜ್ಞಾನಕ್ಕಿಂತಲೂ ಹೆಚ್ಚು ಆಕರ್ಷಕವೆನಿಸಿತು; ಮತ್ತಷ್ಟು ಕಷ್ಟಕರವಾದ ಹಾಗೂ ಸೂಕ್ಷ್ಮ ವಿಚಾರಗಳ ಬಗ್ಗೆಯಂತೂ ಇದು ಮತ್ತಷ್ಟು ಸ್ಪಷ್ಟವಾಯಿತು.'[೧೮೫]

ಈ ಮನೋಭಾವವು ಆಶ್ಚರ್ಯಕರವೆನಿಸುವಷ್ಟು ಉದಾತ್ತವಾಗಿದೆ; ಆ ಕಾಲದಲ್ಲಿ ಇದನ್ನು ಯಾರೂ ನಿರೀಕ್ಷಿಸಲು ಸಾಧ್ಯವಿರಲಿಲ್ಲ. ಆದರೆ ಸಂತ ಆಗಸ್ಟೈನ್ ಧರ್ಮವಿದ್ರೋಹಿಗಳ ಬಗ್ಗೆ ಆನಂತರ ಹೊಂದಿದ್ದ ಮನೋಭಾವದೊಡನೆ ಇದು ತಾಳಿಕೆಯಾಗುವುದೂ ಇಲ್ಲ.

ಈ ಹೊತ್ತಿನಲ್ಲಿ ಅವನು ರೋಮ್‌ಗೆ ಹೋಗಲು ನಿರ್ಧರಿಸಿದ, ಅಲ್ಲಿ ಕಾರ್ಥೇಜ್‌ಗಿಂತಲೂ ಅಧ್ಯಾಪಕನಿಗೆ ಹೆಚ್ಚಿನ ಸಂಬಳ ಬರುತ್ತಿತ್ತೆಂಬ ಕಾರಣದಿಂದ ಅಲ್ಲ, ಅದರ ಬದಲು ಅಲ್ಲಿನ ತರಗತಿಗಳು ಹೆಚ್ಚು ವ್ಯವಸ್ಥಿತವಾದವು ಎಂಬುದರಿಂದಾಗಿ

---

೧೮೪. ಅದೇ, ಭಾಗ ೫, ಅಧ್ಯಾಯ, ೬.
೧೮೫. ಅದೇ, ಭಾಗ ೨, ಅಧ್ಯಾಯ ೭.

ಎಂದವನು ಹೇಳುತ್ತಾನೆ. ಕಾರ್ಥೇಜ್‌ನಲ್ಲಿ ವಿದ್ಯಾರ್ಥಿಗಳು ತೋರುತ್ತಿದ್ದ ಅವ್ಯವಸ್ಥೆಯು ಪಾಠ ಹೇಳುವುದೇ ಅಸಾಧ್ಯವೆಂಬ ಭಾವನೆಯನ್ನುಂಟುಮಾಡುವಂತಹುದ್ದಾಗಿತ್ತು; ಆದರೆ ರೋಮ್‌ನಲ್ಲಿ ಕಡಿಮೆ ಅವ್ಯವಸ್ಥೆಯಿತ್ತು, ಆದರೆ ವಿದ್ಯಾರ್ಥಿಗಳು ಶುಲ್ಕ ಕೊಡುವುದನ್ನು ವಂಚನೆಯ ಮಾರ್ಗದಿಂದ ತಪ್ಪಿಸಿಕೊಳ್ಳುತ್ತಿದ್ದರು.

ರೋಮ್‌ನಲ್ಲಿಯೂ ಅವನು ಮ್ಯಾನಿಖಿಯನ್ನರ ಜೊತೆ ಸಂಬಂಧವಿರಿಸಿಕೊಂಡಿದ್ದ, ಆದರೆ ಅವರ ಸಾಮಂಜಸ್ಯದಲ್ಲಿ ಕಡಿಮೆ ಶ್ರದ್ಧೆಯಿಂದ. ಜ್ಞಾನಪಿಪಾಸುಗಳು ಎಲ್ಲ ವಿಷಯಗಳ ಬಗ್ಗೆಯೂ ಸಂಶಯವನ್ನಿರಿಸಿಕೊಳ್ಳಬೇಕೆಂಬುದು ಸರಿ ಎಂದವನು ಯೋಚಿಸತೊಡಗಿದ್ದ.[೧೮೬] ಆದರೂ ಅವನು 'ನಾವು ಮಾತ್ರ ಪಾಪಗೈಯುವವರು, ಬೇರೆ ನಿಸರ್ಗವೂ (ಅಂದರೇನೆಂದು ನನಗೆ ಗೊತ್ತಿಲ್ಲ) ನಮ್ಮಲ್ಲಿ ಪಾಪಗೈಯುತ್ತದೆ' ಎಂಬ ಮ್ಯಾನಿಖಿಯನ್‌ರ ಆಲೋಚನೆಯನ್ನು ಒಪ್ಪಿಕೊಂಡಿದ್ದ. ಅಲ್ಲದೆ ಕೆಡುಕು ಎಂಬುದು ಒಂದು ಬಗೆಯ ಮೂಲದ್ರವ್ಯ. ಇದರಿಂದ, ಮತಾಂತರಕ್ಕೆ ಮೊದಲಿನಂತೆಯೇ ಆನಂತರವೂ, ಅವನ ಮನಸ್ಸಿನಲ್ಲಿ ಪಾಪದ ಪ್ರಶ್ನೆ ತುಂಬಿಕೊಂಡಿದ್ದುದು ತಿಳಿಯುತ್ತದೆ.

ರೋಮ್‌ನಲ್ಲಿ ಹತ್ತು ವರ್ಷ ಕಳೆದ ಬಳಿಕ, ಭಾಷಣಕಲೆಯ ಅಧ್ಯಾಪಕನೊಬ್ಬನನ್ನು ಕಳಿಸಿಕೊಡುವಂತೆ ಆ ನಗರದಿಂದ ಕೋರಿಕೆ ಬರಲು, ಅವನನ್ನು ಪ್ರಾಂತಾಧಿಪತಿ ಸಿಮ್ಯಾಕಸ್ ಮಿಲಾನ್‌ಗೆ ಕಳಿಸಿದ. ಮಿಲಾನ್‌ನಲ್ಲಿ ಅವನಿಗೆ ಆಂಬರೋಸ್‌ನ ಪರಿಚಯವಾಯಿತು, ಅವನು 'ಇಡೀ ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ವ್ಯಕ್ತಿಯೆಂದು ತಿಳಿಯಲಾಗುತ್ತಿತ್ತು.' ಅವನ ಸಜ್ಜನಿಕೆಯ ಕಾರಣ ಆಂಬ್ರೋಸ್‌ನನ್ನು ಪ್ರೀತಿಸಿದ, ಮ್ಯಾನಿಖಿಯನ್‌ನದರ ಬದಲು ಕ್ಯಾಥೋಲಿಕ್ ಸಿದ್ಧಾಂತವನ್ನು ಮೆಚ್ಚಿಕೊಂಡ; ಆದರೆ ಜ್ಞಾನವೇತ್ತರಿಂದ ಕಲಿತಿದ್ದ, 'ಕ್ರಿಸ್ತನೆಂಬ ರಕ್ಷಕನ ಹೆಸರಿಲ್ಲದ ತತ್ವಜ್ಞಾನಿಗಳನ್ನೂ ಬಿಡದಂತಹ ಸಂಶಯಪ್ರವೃತ್ತಿಯಿಂದಾಗಿ, ನನ್ನ ರೋಗಿಷ್ಠ ಆತ್ಮದ ಯೋಗಕ್ಷೇಮವನ್ನು ಪೂರ್ತಿ ನಿರಾಕರಿಸಿ'[೧೮೭] ಒಂದಷ್ಟು ಕಾಲ ತಡೆದ.

ಮಿಲಾನ್‌ನಲ್ಲಿ ಅವನ ಜೊತೆಗಿರಲು ತಾಯಿ ಬಂದಳು, ಅವಳು ಅವನ ಮತಾಂತರದ ಕೊನೆಯ ಹೆಜ್ಜೆಗಳನ್ನು ತೀವ್ರಗೊಳಿಸಲು ಬಲವಾಗಿ ಪ್ರಭಾವ ಬೀರಿದಳು. ಅವಳೊಬ್ಬ ಗಾಢ ಶ್ರದ್ಧೆಯ ಕ್ಯಾಥೋಲಿಕ್, ಅವಳ ಬಗ್ಗೆ ಅವನು ಯಾವಾಗಲೂ ಭಕ್ತಿಯಿಂದಲೇ ಬರೆಯುತ್ತಾನೆ. ಆಂಬ್ರೋಸ್‌ಗೆ ಅವನೊಡನೆ ಖಾಸಗಿಯಾಗಿ ಮಾತಾಡುವುದಕ್ಕೆ ಬಿಡುವಿಲ್ಲದಷ್ಟು ಕೆಲಸಗಳಲ್ಲಿದ್ದುದರಿಂದ, ಅವನಿಗೆ ಆ ಹೊತ್ತಿನಲ್ಲಿ ಅವಳೇ ಅತ್ಯಂತ ಪ್ರಮುಖ ವ್ಯಕ್ತಿಯಾಗಿದ್ದಳು.

---

೧೮೬. ಅದೇ, ಭಾಗ, ೫. ಅಧ್ಯಾಯ, ೧೦.
೧೮೭. ಅದೇ, ಭಾಗ ೫, ಅಧ್ಯಾಯ ೧೪.

ಇದರಲ್ಲಿ ತುಂಬ ಕುತೂಹಲದಾಯಕವಾದ ಅಧ್ಯಾಯವೊಂದಿದೆ,[೧೮೮] ಅದರಲ್ಲವನು ಕ್ರೈಸ್ತ ಸಿದ್ಧಾಂತದೊಡನೆ ಪ್ಲೇಟೋ ತತ್ವಜ್ಞಾನವನ್ನು ಹೋಲಿಕೆ ಮಾಡುತ್ತಾನೆ. ಈ ಹೊತ್ತಿಗೆ 'ಗ್ರೀಕ್‌ನಿಂದ ಲ್ಯಾಟಿನ್‌ಗೆ ಅನುವಾದಗೊಂಡ ಪ್ಲೇಟೋವಾದಿಗಳ ಕೆಲವು ಪುಸ್ತಕಗಳನ್ನು' ದೇವರೇ ಅವನಿಗೆ ಒದಗಿಸಿದನಂತೆ. 'ಅವುಗಳಲ್ಲಿ ಓದಿದ್ದು ಇದೇ ಪದಗಳನ್ನಲ್ಲ, ಆದರೆ ಅದೇ ಉದ್ದೇಶದಿಂದ, ವಿವಿಧ ಕಾರಣಗಳಿಂದಾಗಿ ಬೇರೆ ಬೇರೆಯವರು ಅನುಷ್ಠಾನಗೊಳಿಸಿದ್ದ, "ಮೊದಲಲ್ಲಿ ಪದವಿತ್ತು; ಮತ್ತು ಆ ಪದ ದೇವರೊಂದಿಗಿತ್ತು; ಮತ್ತು ಪದವೇ ದೇವರಾಗಿತ್ತು; ಮೊದಲಲ್ಲಿ ದೇವರೊಂದಿಗಿದ್ದದ್ದು ಅದೇ; ಎಲ್ಲ ವಸ್ತುಗಳು ದೇವರಿಂದಲೇ ಅದವು; ಅವನಿಲ್ಲದೆ ಯಾವುದೂ ಆಗಲಿಲ್ಲ: ಅವನಿಂದ ಆದುದೇ ಜೀವ, ಮತ್ತು ಜೀವವು ಮನುಷ್ಯನ ಬೆಳಕಾಗಿತ್ತು, ಅಲ್ಲದೆ ಬೆಳಕು ಕತ್ತಲಲ್ಲಿ ಬೆಳಗುವಂತಹುದು, ಅದನ್ನು ಕತ್ತಲು ಗ್ರಹಿಸಲಿಲ್ಲ. ಮತ್ತು ಮನುಷ್ಯನ ಆತ್ಮವು, ಅದು "ಬೆಳಕಿನ ಸಾಕ್ಷಿಯಾಗಿದ್ದರೂ", ಅದೇ "ಆ ಬೆಳಕಲ್ಲ", ಆದರೆ ದೇವರು, ದೇವರ ಪದ, "ಜಗತ್ತಿಗೆ ಬರುವ ಪ್ರತಿ ಮನುಷ್ಯನನ್ನು ಬೆಳಗಿಸುವ ನಿಜವಾದ ಬೆಳಕು." ಮತ್ತು "ಅವನು ಜಗತ್ತಿನಲ್ಲಿದ್ದ, ಮತ್ತು ಜಗತ್ತು ಅವನಿಂದಲೇ ಆದದ್ದು, ಆದರೆ ಜಗತ್ತು ಅವನನ್ನು ತಿಳಿದಿರಲಿಲ್ಲ." ಆದರೆ "ಅವನು ತಾನಾಗಿ ಅವತರಿಸಿದ, ಆದರೆ ಅವನದೇ ಅವನನ್ನು ಬರಮಾಡಿಕೊಳ್ಳಲಿಲ್ಲ; ಆದರೆ ಅವನನ್ನು ಬರಮಾಡಿಕೊಂಡವರೆಲ್ಲ, ಅವರಿಗೆ ದೇವರ ಆತ್ಮವಾಗುವ ಸಾಮರ್ಥ್ಯವನ್ನು ಕರುಣಿಸಿದ, ಅವನ ಹೆಸರಿನಲ್ಲಿ ಶ್ರದ್ಧೆಯಿಟ್ಟವರಿಗೆ ಕೂಡ." ನಾನು ಇದನ್ನಲ್ಲಿ ಓದಲಿಲ್ಲ.' ಜೊತೆಗೆ 'ಪದವನ್ನು ಮಾಂಸಲವಾಗಿಸಿದ, ನಮ್ಮೊಡನೆಯೇ ವಾಸಿಸಿದ' ಎಂಬುದನ್ನೂ, ಅಥವಾ 'ತನ್ನನ್ನೇ ಅವನು ವಿನೀತಗೊಳಿಸಿಕೊಂಡ, ಮತ್ತು ಸಾವಿಗೆ ವಿಧೇಯನಾದ, ಮತ್ತು ಶಿಲುಬೆಯ ಸಾವು ಕೂಡ' ಎಂಬುದನ್ನೂ, 'ಕ್ರಿಸ್ತನ ಹೆಸರಿಗೆ ಪ್ರತಿ ಮಂಡಿಯೂ ಊರಬೇಕು' ಎಂಬುದನ್ನೂ ಅವನು ಅಲ್ಲಿ ಓದಲಿಲ್ಲ.

ಸ್ಥೂಲವಾಗಿ ಹೇಳುವುದಾದರೆ, ಪ್ಲೇಟೋವಾದಿಗಳಲ್ಲಿ ಅವನು ಲಾಗಸ್ ಬಗೆಗಿನ ತತ್ವಜಿಜ್ಞಾಸಾತ್ಮಕ ಸಿದ್ಧಾಂತವನ್ನು ಕಂಡನೇ ಹೊರತು ಅವತಾರದ ಮತ್ತು ಆನಂತರದ ಮಾನವ ಬಿಡುಗಡೆಯ ಸಿದ್ಧಾಂತವನ್ನಾಗಲೀ ಕಾಣಲಿಲ್ಲ. ಇವುಗಳಿಗೆ ಭಿನ್ನವಾಗಿಲ್ಲದಿದ್ದ ಒಂದಷ್ಟು ಸಿದ್ಧಾಂತಗಳು ಅರ್ಫಿಸಂನಲ್ಲಿ ಮತ್ತು ಕೆಲವು ಆನುಭಾವಿಕ ಮತಧರ್ಮಗಳಲ್ಲಿ ಇದ್ದವು; ಆದರೆ ಇದರ ಬಗ್ಗೆ ಸಂತ ಆಗಸ್ಟೈನ್‌ಗೆ ಗೊತ್ತಿರಲಿಲ್ಲ. ಏನೇ ಆಗಲಿ, ಕ್ರೈಸ್ತಮತಧರ್ಮದಂತಹ ಈಚಿನ ಯಾವುದೇ ಐತಿಹಾಸಿಕ ಸಂಗತಿಯೊಂದಿಗೆ ಈ ಯಾವುದನ್ನೂ ಹೋಲಿಸುವ ಗೋಜಿಗೆ ಹೋಗಲಿಲ್ಲ..

---

೧೮೮. ಅದೇ, ಭಾಗ ೭, ಅಧ್ಯಾಯ ೯.

ದ್ವೈವಿಧವಾದಿಯರಾಗಿದ್ದ ಮ್ಯಾನಿಖಿಯನ್‌ರಿಗೆ ವ್ಯತಿರಿಕ್ತವಾಗಿ, ಆಗಸ್ಟೈನ್‌ಗೆ ಗೊತ್ತಾದದ್ದು ಕೆಡುಕು ಎಂಬುದು ಬೇರಾವುದೋ ವಸ್ತುವಿನಿಂದಲ್ಲ, ಇಚ್ಛಾಶಕ್ತಿಯ ವಿಕೃತಿಯಿಂದ ಎನ್ನುವುದು.

ಅವನಿಗೆ ಸಂತ ಪೌಲ್‌ನ ಬರಹಗಳು ವಿಶೇಷ ಪ್ರಸನ್ನತೆಯನ್ನುಂಟು ಮಾಡಿದುವು.[೧೪೯]

ಭಾವೋತ್ಕರ್ಷದ ಆಂತರಿಕ ಹೋರಾಟಗಳ ಬಳಿಕ, ಅವನು ಮತಾಂತರಗೊಂಡ (೩೮೬); ತನ್ನ ಪ್ರಾಧ್ಯಾಪಕ ಹುದ್ದೆಯನ್ನೂ, ಪ್ರೇಯಸಿಯನ್ನೂ, ತನ್ನ ವಧುವನ್ನೂ ತೊರೆದ, ಆನಂತರ ಏಕಾಂತದಲ್ಲಿ ಒಂದಷ್ಟು ಕಾಲದ ಧ್ಯಾನದ ನಂತರ, ಸಂತ ಆಂಬ್ರೋಸ್‌ನಿಂದ ದೀಕ್ಷಾಸ್ನಾನ ಪಡೆದ. ಇದರಿಂದ ಅವನ ತಾಯಿ ಸಂತೋಷಗೊಂಡಳು, ಆದರೆ ಆನಂತರ ತುಂಬ ದಿನ ಬದುಕಿರಲಿಲ್ಲ. ೩೮೮ ರಲ್ಲಿ ಅವನು ಆಫ್ರಿಕಕ್ಕೆ ಮರಳಿ ಉಳಿದ ತನ್ನ ಬದುಕನ್ನೆಲ್ಲ ಬಿಷಪ್‌ನ ಕರ್ತವ್ಯ ನಿರ್ವಹಣೆಯಲ್ಲಿಯೂ, ಡೊನಾಟಿಸ್ಟರು ಮ್ಯಾನಿಖಿಯನ್‌ರು ಮತ್ತು ಪೆಲಾಜಿಯನ್‌ರು ಮುಂತಾದ ಕ್ರೈಸ್ತೇತರರ ವಿರುದ್ಧ ಬರವಣಿಗೆ ಮಾಡುತ್ತಲೂ ಅಲ್ಲಿಯೇ ಕಳೆದ.

೧೪೯. ಅದೇ, ಭಾಗ ೭, ಅಧ್ಯಾಯ ೨೧.

೪

ಸಂತ ಆಗಸ್ಟೈನ್‌ನ ತಾತ್ವಿಕತೆ ಮತ್ತು ಮತಧರ್ಮಶಾಸ್ತ್ರ

ಸಂತ ಆಗಸ್ಟೈನ್ ಬಹಳಷ್ಟು ಬರೆದ ಲೇಖಕ, ಬಹುತೇಕ ಮತಧರ್ಮಶಾಸ್ತ್ರಸಂಬಂಧಿ ವಿಷಯಗಳ ಬಗ್ಗೆ. ಅವನ ಕೆಲವು ವಿವಾದಾತ್ಮಕ ಬರಹಗಳು ಪ್ರಾಕರಣಿಕವಾದವು (ಟಾಪಿಕಲ್), ತಮ್ಮ ಗೆಲವಿನಿಂದಾಗಿಯೇ ಆಸಕ್ತಿಯನ್ನು ಕಳೆದುಕೊಂಡವು; ಆದರೆ ಅದರಲ್ಲಿನ ಕೆಲವು, ಅದರಲ್ಲೂ ಪೆಲಾಜಿಯನ್‌ರಿಗೆ ಸಂಬಂಧಪಟ್ಟವು, ಆಧುನಿಕ ಕಾಲದವರೆಗೂ ವ್ಯಾವಹಾರಿಕ ನೆಲೆಯಲ್ಲಿ ಪ್ರಭಾವಶಾಲಿಯಾಗಿ ಉಳಿದು ಬಂದುವು. ಅವನ ಕೃತಿಗಳೆಲ್ಲವನ್ನೂ ನಾನು ಆಮೂಲಾಗ್ರವಾಗಿ ಪರಿಶೀಲಿಸ ಹೊರಡುವುದಿಲ್ಲ, ನನಗೆ ಯಾವುದು ಸ್ವಮೌಲ್ಯದಿಂದಾಗಿಯೋ ಐತಿಹಾಸಿಕವಾಗಿಯೋ ಮುಖ್ಯವೆನಿಸುತ್ತವೋ ಅಂಥವನ್ನು ಮಾತ್ರ ಕುರಿತು ಚರ್ಚಿಸುತ್ತೇನೆ. ನಾನು ಪರಿಗಣಿಸುವುದು

ಮೊದಲನೆಯದಾಗಿ, ಅವನ ಶುದ್ಧ ತತ್ವಜ್ಞಾನ, ಅದರಲ್ಲಿಯೂ ಕಾಲದ ಬಗೆಗಿನ ಅವನ ಸಿದ್ದಾಂತ;

ಎರಡನೆಯದಾಗಿ, '*ಇನ್ ದ ಸಿಟಿ ಆಫ್ ಗಾಡ್*'ನಲ್ಲಿ ಮಂಡಿಸಿದ ಇತಿಹಾಸ ಕುರಿತ ಅವನ ತಾತ್ವಿಕತೆ;

ಮೂರನೆಯದಾಗಿ, ಪೆಲಾಜಿಯನ್‌ರ ವಿರುದ್ಧ ಮಂಡಿಸಿದ ಮೋಕ್ಷದ ಬಗೆಗಿನ ಅವನ ಸಿದ್ಧಾಂತ.

೧. ಶುದ್ಧ ತತ್ವಜ್ಞಾನ

ಸಂತ ಆಗಸ್ಟೈನ್‌ನ ಬರವಣಿಗೆಗೆಳಲ್ಲಿ ಅತ್ಯುತ್ಕೃಷ್ಟವೆನಿಸಿದ ಶುದ್ಧ ತತ್ವಜ್ಞಾನದ ಕೃತಿಯೆಂದರೆ ಅವನ 'ಕನ್‌ಫೆಶನ್ಸ್'ನ ಹನ್ನೊಂದನೆಯ ಅಧ್ಯಾಯ. 'ಕನ್‌ಫೆಶನ್ಸ್'ನ ಜನಪ್ರಿಯ ಆವೃತ್ತಿಗಳು ಹತ್ತನೇ ಅಧ್ಯಾಯದೊಡನೆ ಮುಗಿಯುತ್ತವೆ, ಅದಕ್ಕೆ ಕಾರಣ ಆ ಮುಂದಿನದು ಆಸಕ್ತಿದಾಯವಲ್ಲ ಎಂಬುದು. ಅದು ಆಸಕ್ತಿದಾಯವಲ್ಲದುದಕ್ಕೆ ಕಾರಣ ಅದು ಒಳ್ಳೆಯ ತತ್ವಜ್ಞಾನದಿಂದ ಕೂಡಿದೆ, ಆತ್ಮಚರಿತ್ರೆಯಲ್ಲ, ಎನ್ನುವುದೇ

ಆಗಿದೆ. ಹನ್ನೊಂದನೆಯ ಅಧ್ಯಾಯವು ಸಮಸ್ಯೆಯನ್ನು ಕುರಿತದ್ದು. 'ಸೃಷ್ಟಿಪರ್ವ'ದ (ಜೆನೆಸಿಸ್) ಮೊದಲ ಅಧ್ಯಾಯವು ನಿರೂಪಿಸುವಂತೆ, ಸೃಷ್ಟಿ ಆಗಿ ಮತ್ತು ಮ್ಯಾನಿಖಿಯನ್‌ರಿಗೆ ವಿರುದ್ಧವಾಗಿ ಸಂತ ಆಗಸ್ಟೈನ್ ಅದು ಆದಷ್ಟೂ ಬೇಗ ಆಗಿರಬೇಕು ಎನ್ನುತ್ತಾನೆ. ಹೀಗಾಗಿ ಪ್ರತಿಸ್ಪರ್ಧಿಯೊಬ್ಬ ಆಕ್ಷೇಪಣೆಯೆತ್ತುತ್ತಿದ್ದಾನೆ ಎಂಬಂತೆ ಕಲ್ಪಿಸಿಕೊಳ್ಳುತ್ತಾನೆ.

ಅವನ ಉತ್ತರವನ್ನು ಅರ್ಥಮಾಡಿಕೊಳ್ಳಬೇಕಾದರೆ ನಾವು ತಿಳಿಯಬೇಕಾದ ಮೊದಲ ಅಂಶವೆಂದರೆ, ಹಳೆ ಒಡಂಬಡಿಕೆಯು ಬೋಧಿಸುವಂತೆ ಸೃಷ್ಟಿಯು ಶೂನ್ಯದಿಂದ ಹೊಮ್ಮಿತು ಎಂಬುದು ಗ್ರೀಕ್ ತತ್ವಜ್ಞಾನಕ್ಕೆ ಸಂಪೂರ್ಣ ಹೊರಗಿನದಾಗಿತ್ತು ಎಂಬುದನ್ನು. ಪ್ಲೇಟೋ ಸೃಷ್ಟಿಯ ಬಗ್ಗೆ ಮಾತನಾಡುವಾಗ ದೇವರು ರೂಪುಕೊಟ್ಟ ಯಾವುದೋ ಆದಿಮ ಮೂಲದ್ರವ್ಯ ಮೊದಲಿಗೇ ಇತ್ತು ಎಂದು ಅವನು ಕಲ್ಪಿಸಿಕೊಳ್ಳುತ್ತಾನೆ; ಅರಿಸ್ಟಾಟಲ್ ವಿಷಯವೂ ಇದೇ. ಅವರ ದೇವರು ಒಬ್ಬ ಕುಶಲಕರ್ಮಿ ಅಥವಾ ವಾಸ್ತುತಜ್ಞನೇ ವಿನಾ ಸೃಷ್ಟಿಕರ್ತನಲ್ಲ. ಈ ಮೂಲದ್ರವ್ಯವು ಚಿರಂತವಾದುದೆಂದೂ ಸೃಷ್ಟಿಗೊಳ್ಳದುದೆಂದೂ ಅವರು ಭಾವಿಸಿದ್ದರು; ಬರಿ ರೂಪು ಮಾತ್ರ ದೇವರ ಇಚ್ಛೆಯಿಂದಾದುದು. ಈ ದೃಷ್ಟಿಕೋನಕ್ಕೆ ವಿರುದ್ಧವಾಗಿ ಸಂತ ಆಗಸ್ಟೈನ್, ಇತರ ಎಲ್ಲ ಸಂಪ್ರದಾಯವಾದಿ ಕ್ರೈಸ್ತರು ಮಾಡಬೇಕಾದಂತೆ, ಜಗತ್ತು ಯಾವುದೋ ವಸ್ತುವೊಂದರಿಂದ ಸೃಷ್ಟಿಗೊಳ್ಳಲಿಲ್ಲ, ದೇವರು ಶೂನ್ಯದಿಂದ ದ್ರವ್ಯವನ್ನು ಸೃಷ್ಟಿಸಿದ, ಕೇವಲ ವ್ಯವಸ್ಥೆ ಮತ್ತು ಕ್ರಮಬದ್ಧತೆಗಳನ್ನಷ್ಟೇ ತರಲಿಲ್ಲ ಎಂದು ವಾದಿಸುತ್ತಾನೆ.

ಶೂನ್ಯದಿಂದ ಸೃಷ್ಟಿ ಅಸಾಧ್ಯ ಎಂಬ ಗ್ರೀಕ್ ದೃಷ್ಟಿಕೋನವು ಕ್ರೈಸ್ತಯುಗದಲ್ಲಿಯೂ ಆಗಾಗ್ಗೆ ಕಾಣಿಸಿಕೊಂಡಿದೆ, ಇದರಿಂದಾಗಿ ಸರ್ವದೇವಾತ್ಮಕವಾದವು (ಪ್ಯಾಂಥೀಯಿಸಂ) ಉದಯಿಸಿತು. ದೇವರು ಮತ್ತು ಜಗತ್ತು ಬೇರೆ ಬೇರೆಯಲ್ಲ, ಜಗತ್ತಿನಲ್ಲಿನ ಪ್ರತಿಯೊಂದೂ ದೇವರ ಭಾಗ ಎಂದು ಸರ್ವದೇವಾತ್ಮಕವಾದವು ಹೇಳುತ್ತದೆ. ಈ ದೃಷ್ಟಿಕೋನವು ಸ್ಪಿನೋಜ಼ನಲ್ಲಿ ಸಂಪೂರ್ಣ ರೂಪು ತಳೆಯಿತಾದರೂ ಬಹುತೇಕ ಅನುಭಾವಿಗಳು ಇದರಿಂದ ಆಕರ್ಷಿತರಾಗಿದ್ದಾರೆ. ಇದು ಕ್ರೈಸ್ತ ಶತಮಾನಗಳಾದ್ಯಂತ ನಡೆದಿದೆ, ಹೀಗಾಗಿ ಅನುಭಾವಿಗಳು ಸಂಪ್ರದಾಯನಿಷ್ಠರಾಗಿ ಉಳಿಯುವುದು ಕಷ್ಟಕರವಾಯಿತು; ಜಗತ್ತು ದೇವರಿಂದ ಹೊರಗಿದೆ ಎಂದು ನಂಬುವುದು ಅವರಿಗೆ ದುಸ್ತರವೆನಿಸಿತು. ಆದರೆ ಆಗಸ್ಟೈನ್ ಈ ಅಂಶ ಕುರಿತು ಯಾವ ಕಷ್ಟವನ್ನೂ ಅನುಭವಿಸಲಿಲ್ಲ. ಸೃಷ್ಟಿಪರ್ವವು ನಿಚ್ಚಳವಾಗಿದೆ, ಅವನಿಗೆ ಅಷ್ಟೇ ಸಾಕು. ಈ ವಿಷಯ ಕುರಿತ ಅವನ ದೃಷ್ಟಿಕೋನವು ಕಾಲದ ಬಗೆಗಿನ ಅವನ ದೃಷ್ಟಿಕೋನಕ್ಕೆ ತುಂಬ ಮುಖ್ಯವಾದುದು.

ಜಗತ್ತು ಈ ಮುಂಚೆಯೇ ಏಕೆ ಸೃಷ್ಟಿಗೊಳ್ಳಲಿಲ್ಲ? ಯಾಕೆಂದರೆ 'ಮುಂಚೆ' ಎಂಬುದೇ ಇರಲಿಲ್ಲ. ಕಾಲ ಸೃಷ್ಟಿಯಾದುದು ಜಗತ್ತು ಸೃಷ್ಟಿಯಾದಾಗಲೇ. ದೇವರು ಚಿರಂತನ, ಅಂದರೆ ಅವನು ಕಾಲಾತೀತ; ದೇವರ ಚಿರಂತನತೆಯು ಕಾಲಬದ್ಧತೆಯಿಂದ ಹೊರತಾದುದು; ಎಲ್ಲ ಕಾಲವೂ ಅವನಿಗೆ ಸದ್ಯಃಕಾಲವಾಗಿಯೇ ಇರುತ್ತದೆ. ಅವನು ತನ್ನ ಸೃಷ್ಟಿಯಾದ ಕಾಲಕ್ಕೆ 'ಮುಂಚೆ' ಇರಲಿಲ್ಲ, ಯಾಕೆಂದರೆ ಅವನು ಕಾಲಪ್ರವಾಹದಿಂದ ಸದಾ ಹೊರಗೇ ನಿಂತಿರುವವನು. ಇದರಿಂದಾಗಿ ಸಂತ ಆಗಸ್ಟೈನ್ ಪ್ರಶಂಸಾರ್ಹವಾದ ಸಾಪೇಕ್ಷಸಿದ್ಧಾಂತದ ಕಾಲಸಿದ್ಧಾಂತದೆಡೆಗೆ ಸಾಗುತ್ತಾನೆ.

'ಹಾಗಾದರೆ ಕಾಲ ಎಂದರೇನು?' ಎಂದು ಕೇಳುತ್ತಾನೆ. 'ಯಾರೂ ನನ್ನನ್ನು ಕೇಳದಿದ್ದರೆ ನನಗೆ ಗೊತ್ತು; ಅವನಿಗೆ ನಾನು ವಿವರಿಸಬೇಕೆಂದು ಬಯಸಿದರೆ, ನನಗೆ ತಿಳಿಯದು. ನಾನಾ ಬಗೆಯ ತೊಂದರೆಗಳು ಅವನನ್ನು ಗೊಂದಲಗೊಳಿಸುತ್ತವೆ. ಭೂತವಾಗಲೀ ಭವಿಷ್ಯತ್ತಾಗಲೀ ಅಲ್ಲ, ಇರುವುದು ವರ್ತಮಾನ ಮಾತ್ರ; ವರ್ತಮಾನ ಎನ್ನುವುದು ಒಂದು ಕ್ಷಣ ಮಾತ್ರ, ಮತ್ತು ಕಾಲವು ಮುಂದುವರಿಯುತ್ತಿದ್ದಾಗ ಮಾತ್ರ ಅದನ್ನು ಅಳೆಯಬಹುದು. ಆದರೂ, ನಿಜವಾಗಿಯೂ ಭೂತ ಮತ್ತು ಭವಿಷ್ಯತ್ತುಗಳು ಇವೆ. ಇಲ್ಲಿ ನಮಗೆ ವಿರೋಧ ಕಾಣಿಸುತ್ತದೆ. ಈ ವಿರೋಧಗಳನ್ನು ನಿವಾರಿಸಿಕೊಳ್ಳುವಲ್ಲಿ ಸಂತ ಆಗಸ್ಟೈನ್‌ನಿಗೆ ತೋಚುವ ಏಕೈಕ ಮಾರ್ಗವೆಂದರೆ ಭೂತ ಮತ್ತು ಭವಿಷ್ಯಗಳನ್ನು ವರ್ತಮಾನವೆಂದು ಆಲೋಚಿಸುವುದರಿಂದ ಮಾತ್ರ ಸಾಧ್ಯ: 'ಭೂತ'ವನ್ನು ನೆನಪಿನಿಂದ ಗುರುತಿಸಬಹುದು, ಮತ್ತು 'ಭವಿಷ್ಯ'ವನ್ನು ನಿರೀಕ್ಷೆಯ ಮೂಲಕ ಗುರುತಿಸಬಹುದು, ಮತ್ತು ಅವೆರಡೂ ವರ್ತಮಾನದ ವಾಸ್ತವಗಳು. ಮೂರು ಕಾಲಗಳಿವೆ: 'ಭೂತಕಾಲದ ವಾಸ್ತವಗಳ ವರ್ತಮಾನ, ಭವಿಷ್ಯದ ವಾಸ್ತವಗಳ ವರ್ತಮಾನ' ಎನ್ನುತ್ತಾನೆ. 'ಭೂತದ ವರ್ತಮಾನವೆಂದರೆ ನೆನಪು, ವರ್ತಮಾನದ ವಾಸ್ತವಗಳೆಂದರೆ ನೋಟ; ಮತ್ತು ಭವಿಷ್ಯ ವಾಸ್ತವಗಳ ವರ್ತಮಾನವೆಂದರೆ ನಿರೀಕ್ಷೆ.'[೧೯೦] ಇವುಗಳನ್ನು ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳೆಂಬ ಮೂರು ಕಾಲಗಳೆಂದು ಹೇಳುವುದು ಸ್ಥೂಲವಾದ ಮಾತು.

ತನ್ನ ಸಿದ್ಧಾಂತದ ಮೂಲಕ ಎಲ್ಲ ತೊಂದರೆಗಳನ್ನೂ ಪರಿಹರಿಸಿಲ್ಲವೆಂಬುದರ ಅರಿವು ಅವನಿಗಿದೆ. 'ಈ ಅತ್ಯಂತ ಸಂಕೀರ್ಣ ರಹಸ್ಯವನ್ನು ತಿಳಿಯುವುದಕ್ಕೆ ನನ್ನ ಆತ್ಮವು ಹಾತೊರೆಯುತ್ತಿದೆ' ಎನ್ನುವ ಅವನು ತನಗೆ ಆ ಬಗ್ಗೆ ಬೆಳಕು ಚೆಲ್ಲುವಂತೆ ದೇವರಲ್ಲಿ ಮೊರೆಯಿಡುತ್ತಾನೆ; ತನ್ನ ಆಸಕ್ತಿಯು ಕುತೂಹಲದಿಂದ ಮಾತ್ರ ಉದ್ಭವಿಸಿದ್ದಲ್ಲವೆಂದು ಆಶ್ವಾಸನೆಯೀಯುತ್ತಾನೆ. 'ದೇವರೇ, ನಾನು ಕಾಲ ಎಂದರೇನೆಂಬ ಬಗ್ಗೆ ಇನ್ನೂ ಅಜ್ಞಾನಿಯಾಗಿಯೇ ಇದ್ದೇನೆ' ಎಂದು ನಿನ್ನ ಮುಂದೆ

---

೧೯೦. 'ಕನ್‌ಫೆಶನ್ಸ್', ಭಾಗ ೧೧, ಅಧ್ಯಾಯ ೨೦.

ಒಪ್ಪಿಕೊಳ್ಳುತ್ತೇನೆ. ಆದರೆ ಅವನು ನೀಡುವ ಪರಿಹಾರದ ತಾತ್ಪರ್ಯವೆಂದರೆ ಕಾಲ ಎನ್ನುವುದು ವ್ಯಕ್ತಿನಿಷ್ಠ ಎಂದು: ಕಾಲ ಎಂಬುದು ಮನುಷ್ಯನ ಮನಸ್ಸಿನಲ್ಲಿದೆ, ಅದು ನಿರೀಕ್ಷಿಸುತ್ತದೆ, ನೋಡುತ್ತದೆ ಮತ್ತು ನೆನಪಿಸಿಕೊಳ್ಳುತ್ತದೆ.[೯೧] ಮತ್ತು ಸೃಷ್ಟಿಗಿಂತ ಮೊದಲಿನ ಕಾಲದ ಬಗ್ಗೆ ಮಾತನಾಡುವುದು ಅರ್ಥಹೀನವಾದುದು.[೯೨]

ಕಾಲ ಎಂಬುದನ್ನು ಮಾನಸಿಕವಾದುದು ಎಂದು ಹೇಳುವ ಮಟ್ಟಿಗೆ ನಾನು ಈ ಸಿದ್ಧಾಂತವನ್ನು ಒಪ್ಪುತ್ತೇನೆ. ಆದರೆ ಸ್ಪಷ್ಟವಾಗಿಯೇ ಅದೊಂದು ಪರಿಗಣನಾರ್ಹವಾದ ಸಮರ್ಥ ಸಿದ್ಧಾಂತವೆಂಬುದು ಗೋಚರಿಸುತ್ತದೆ. ಅಲ್ಲದೆ, ಗ್ರೀಕ್ ತತ್ವಜ್ಞಾನದಲ್ಲಿ ಆ ಕುರಿತು ಕಾಣುವ ಬೇರಾವುದಕ್ಕಿಂತಲೂ ಅದು ಮುಂದಿಟ್ಟ ದಾಪುಗಾಲು ಎಂದೂ ನಾನು ಹೇಳುತ್ತೇನೆ. ಕ್ಯಾಂಟ್‌ನ ವ್ಯಕ್ತಿನಿಷ್ಠ ಕಾಲಸಿದ್ಧಾಂತಕ್ಕಿಂತಲೂ ಅದು ಮತ್ತಷ್ಟು ಸ್ಪಷ್ಟವಾದ ಹಾಗೂ ಉತ್ತಮವಾದ ಹೇಳಿಕೆಯಿಂದ ಕೂಡಿದೆ – ಕ್ಯಾಂಟ್‌ನ ಕಾಲದಿಂದಲೂ, ಈ ಸಿದ್ಧಾಂತವನ್ನು ತತ್ವಜ್ಞಾನಿಗಳು ವ್ಯಾಪಕವಾಗಿ ಒಪ್ಪಿಕೊಂಡಿದ್ದಾರೆ.

ಕಾಲ ಎಂಬುದು ನಮ್ಮ ಆಲೋಚನೆಗಳ ಒಂದು ಅಂಶ ಎಂಬ ಸಿದ್ಧಾಂತವು ವ್ಯಕ್ತಿನಿಷ್ಠತೆಯ ಅತ್ಯಂತ ಅತಿರೇಕದ ರೂಪಗಳಲ್ಲಿ ಒಂದು, ಇದು ಪೈಥಾಗೊರಾಸ್ ಮತ್ತು ಸಾಕ್ರಟೀಸ್‌ರ ಕಾಲದಿಂದ ಮುಂದಿನ ಪ್ರಾಚೀನರಲ್ಲಿ ಕ್ರಮೇಣ ಹೆಚ್ಚಿದೆ. ಭಾವನಾತ್ಮಕತೆಯಲ್ಲಿ ಅದು ಪಾಪದೊಂದಿಗಿನ ಗೀಳಾಗಿದೆ, ಅದು ಬೌದ್ಧಿಕ ಅಂಶಗಳ ನಂತರ ಬಂದುದು. ಸಂತ ಆಗಸ್ಟೈನ್ ಎರಡೂ ಬಗೆಯ ವ್ಯಕ್ತಿನಿಷ್ಠತೆಯನ್ನು ತೋರಿಸುತ್ತಾನೆ. ವ್ಯಕ್ತಿನಿಷ್ಠತೆಯು ಅವನನ್ನು ಕ್ಯಾಂಟ್‌ನ ಸಿದ್ಧಾಂತವನ್ನು ಮಾತ್ರವಲ್ಲದೆ ಡೆಕಾರ್ಟೆಯ 'ಕೊಜಿಟೊ'ವನ್ನೂ ಮುನ್‌ನೋಡಲು ಸಾಧ್ಯಮಾಡಿದೆ. ತನ್ನ 'ಸಾಲಿಲೋಕ್ವಿಯ'ದಲ್ಲಿ ಅವನು ಹೀಗೆನ್ನುತ್ತಾನೆ: 'ತಿಳಿಯಬೇಕೆಂದು ಬಯಸುವ ನೀನು, ನೀನು ಯಾರೆಂದು ಬಲ್ಲೆಯಾ? ಅದು ನನಗೆ ಗೊತ್ತು. ನೀನು ಎಲ್ಲಿಂದ ಬಂದೆ? ನನಗೆ ತಿಳಿಯದು. ನೀನು ಏಕವೋ ಅನೇಕವೋ ಎಂಬುದನ್ನು ಕಾಣಬಲ್ಲೆಯಾ? ನನಗೆ ತಿಳಿಯದು. ನೀನು ಚಲಿಸುವುದನ್ನು ಕಾಣಬಲ್ಲೆಯಾ? ನನಗೆ ತಿಳಿಯದು. ನೀನು ಯೋಚಿಸುವೆಯೆಂಬುದು ತಿಳಿದಿದೆಯೇ? ಹೌದು, ಗೊತ್ತು.' ಇದರಲ್ಲಿ ಡೆಕಾರ್ಟೆಯ 'ಕೊಜಿಟೊ' ಮಾತ್ರವಲ್ಲದೆ, ಅವನಿಗೆ ಉತ್ತರವಿತ್ತ ಗಾಸೆಂಡಿಯ 'ಆಂಬ್ಯುಲೋ ಎರ್ಗೋ ಸಂ' (ನಾನು ನಡೆಯುತ್ತೇನೆ, ಆದ್ದರಿಂದ ನಾನಿದ್ದೇನೆ) ಎಂಬುದೂ ಸೇರಿದೆ. ಹೀಗಾಗಿ ಒಬ್ಬ ತತ್ವಜ್ಞಾನಿಯಾಗಿ ಸಂತ ಆಗಸ್ಟೈನ್ ಉನ್ನತ ಸ್ಥಾನಕ್ಕೆ ಅರ್ಹನಾಗಿದ್ದಾನೆ.

---

೯೧. ಅದೇ, ಅಧ್ಯಾಯ, ೨೮.
೯೨. ಅದೇ, ಅಧ್ಯಾಯ ೩೦.

೨. ದೇವರ ನಗರ (ದ ಸಿಟಿ ಆಫ್ ಗಾಡ್)

ಗಾಥ್‌ರು, ಪ್ಯಾಗನ್‌ರು ರೋಮ್ ಅನ್ನು ೪೧೦ ರಲ್ಲಿ ವಶಪಡಿಸಿಕೊಂಡಾಗ, ಈ ದುರಂತಕ್ಕೆ ಪ್ರಾಚೀನ ದೇವತೆಗಳನ್ನು ಕೈಬಿಟ್ಟುದೇ ಕಾರಣವೆಂದು ಆರೋಪಿಸಿದುದು ಅಸಹಜವೇನಾಗಿರಲಿಲ್ಲ. ದೇವರಾಜನಾದ ಜ್ಯೂಪಿಟರ್‌ನನ್ನು ಪೂಜಿಸುತ್ತಿದ್ದವರೆಗೂ, ರೋಮ್ ಬಲಿಷ್ಠವಾಗಿಯೇ ಉಳಿದಿತ್ತು; ಈಗ ಚಕ್ರವರ್ತಿಗಳು ಅವನಿಂದ ವಿಮುಖವಾಗಿರುವುದರಿಂದ ಅವನು ರೋಮ್ ಅನ್ನು ರಕ್ಷಿಸುತ್ತಿಲ್ಲ. ಈ ಪ್ಯಾಗನ್ ವಾದಕ್ಕೆ ಒಂದು ಉತ್ತರ ಬೇಕಾಗಿತ್ತು. ೪೧೨ ರಿಂದ ೪೨೭ ರವರೆಗೆ ಕ್ರಮೇಣ ರಚಿತವಾದ *'ದ ಸಿಟಿ ಆಫ್ ಗಾಡ್'* ಸಂತ ಆಗಸ್ಟೈನ್ ಅದಕ್ಕಿತ್ತ ಉತ್ತರವಾಗಿತ್ತು. ಕ್ರೈಸ್ತ ಇತಿಹಾಸದ ಭೂತ, ವರ್ತಮಾನ, ಭವಿಷ್ಯತ್ತುಗಳ ಸಂಪೂರ್ಣ ಹರಹನ್ನು ಒಳಗೊಂಡುದರಿಂದ ಅದು ವ್ಯಾಪಕವಾಗಿ ಬೆಳೆಯಿತು. ಮಧ್ಯಯುಗದಾದ್ಯಂತ ಅದು ಅತೀವ ಪ್ರಭಾವಶಾಲಿಯಾದ ಗ್ರಂಥವಾಗಿತ್ತು, ಅದರಲ್ಲೂ ಚರ್ಚ್ ಮತ್ತು ಧರ್ಮನಿರಪೇಕ್ಷಕ ರಾಜರುಗಳ ನಡುವಣ ಸಂಘರ್ಷದ ವಿಷಯದಲ್ಲಿ.

ಮಿಕ್ಕ ಕೆಲವು ಮಹಾಗ್ರಂಥಗಳಂತೆ, ಅದನ್ನೋದಿದವರ ನೆನಪಿನಲ್ಲಿ, ಮೊದಲು ಓದಿದುದಕ್ಕಿಂತ ಅದು ಉತ್ತಮವಾದ ರಚನೆಯೆನಿಸುತ್ತದೆ. ಅದರಲ್ಲಿರುವ ಹೆಚ್ಚಿನ ವಿಷಯಗಳನ್ನು ಈಗಿನವರು ಒಪ್ಪಿಕೊಳ್ಳುವಂತಹುದು ಏನೂ ಇಲ್ಲ., ಅದರಲ್ಲಿನ ಕೇಂದ್ರ ಪ್ರಮೇಯವು ಅವನ ಕಾಲಕ್ಕೆ ಸೇರಿದ ಬೊಬ್ಬೆಗಳಿಂದ ಅಸ್ಪಷ್ಟವಾಗಿದೆ. ಆದರೆ ಈ ಲೋಕದ ನಗರ ಮತ್ತು ದೇವರ ನಗರಗಳ ನಡುವಣ ಹರಹಾದ ವ್ಯತ್ಯಾಸದ ಪರಿಕಲ್ಪನೆಯು ಇವತ್ತಿಗೂ ಕೆಲವರ ಸ್ಫೂರ್ತಿಕೇಂದ್ರವಾಗಿದೆ, ಮತಧಾರ್ಮಿಕವಲ್ಲದ ಮಾತುಗಳಲ್ಲಿ ಈಗಲೂ ಪುನರುಕ್ತಿಗೊಳಿಸಬಹುದು.

ಒಂದು ಪುಸ್ತಕದ ಬಗ್ಗೆ ಬರೆಯುವಾಗ ಅದರ ವಿವರಗಳನ್ನು ಕೈಬಿಟ್ಟು ಅದರ ಕೇಂದ್ರ ವಿಚಾರದತ್ತ ಗಮನಹರಿಸುವುದರಿಂದ ಅದರ ಬಗ್ಗೆ ಅನವಶ್ಯಕವಾದ ಒಲವನ್ನು ತೋರಿಸಿದಂತಾಗುತ್ತದೆ. ಮತ್ತೊಂದೆಡೆ, ವಿವರಗಳನ್ನು ಗಮನಿಸುವುದೆಂದರೆ ಅದರ ಅತ್ಯುತ್ತಮವೂ ಶ್ರೇಷ್ಠವೂ ಆದ ಭಾಗವನ್ನು ಕೈಬಿಟ್ಟಂತೆ. ಈ ಎರಡೂ ದೋಷಗಳನ್ನು ನಿವಾರಿಸಿಕೊಳ್ಳುವತ್ತ ನಾನು ಪ್ರಯತ್ನಿಸುತ್ತೇನೆ; ಅದಕ್ಕಾಗಿ ಮೊದಲಿಗೆ ಅದರ ವಿವರವನ್ನು ಸ್ವಲ್ಪ ಕೊಡುವುದು, ಆನಂತರ ಐತಿಹಾಸಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅದರ ಕೇಂದ್ರ ವಿಚಾರದತ್ತ ಗಮನ ಹರಿಸುವುದು.

ಗ್ರಂಥ ಆರಂಭಗೊಳ್ಳುವುದು ರೋಮ್‌ನ ದಾಳಿಯಿಂದ ಉದ್ಭವಿಸಿದ ಸಂಗತಿಗಳಿಂದ, ಆನಂತರ ಕ್ರೈಸ್ತಪೂರ್ವ ಕಾಲದಲ್ಲಿ ಅದಕ್ಕಿಂತಲೂ ಕೆಟ್ಟುದಾದ ಪರಿಣಾಮಗಳಾದುವು ಎಂದು ತೋರಿಸುವ ರೀತಿಯಲ್ಲಿ ಅದು ವಿನ್ಯಾಸಗೊಂಡಿದೆ. ಕ್ರೈಸ್ತಮತಧರ್ಮಕ್ಕೆ ಅದರ ವಿನಾಶದ ಕಾರಣವನ್ನು ಹೇಳುವ ಪ್ಯಾಗನ್‌ರ ದಾಳಿಯ ಕಾಲದಲ್ಲಿ ಚರ್ಚ್‌ಗಳಲ್ಲಿ ಆಶ್ರಯವನ್ನು ಪಡೆದರು ಎಂದು ಸಂತನು ಹೇಳುತ್ತಾನೆ.

ಇದನ್ನು ಕ್ರೈಸ್ತರಾಗಿದ್ದ ಗಾಥ್‌ರು ಗೌರವಿಸಿದರು. ಅದಕ್ಕೆ ವ್ಯತಿರಿಕ್ತವಾಗಿ, ಟ್ರಾಯ್ ದಾಳಿಗೊಳಗಾದಾಗ ಜೂನೋ ದೇವಾಲಯಕ್ಕೆ ಯಾವ ರಕ್ಷಣೆಯೂ ಸಿಕ್ಕಲಿಲ್ಲ, ದೇವತೆಗಳೂ ನಗರದ ವಿನಾಶವನ್ನು ತಡೆಯಲಿಲ್ಲ. ತಾವು ಗೆದ್ದ ನಗರಗಳಲ್ಲಿನ ದೇವಾಲಯಗಳನ್ನು ರೋಮನ್‌ರು ಒಂದೂ ಬಿಡದಂತೆ ನಾಶಮಾಡಿದರು. ಈ ದೃಷ್ಟಿಯಲ್ಲಿ ರೋಮ್‌ನ ದಾಳಿಯು ಮಿಕ್ಕವುಗಳಿಗಿಂತ ಹೆಚ್ಚು ಮಿದುವಾದುದು, ಮತ್ತು ಅದರ ಉಪಶಮನವು ಕ್ರೈಸ್ತಮತಧರ್ಮದಿಂದಾದುದು.

ದಾಳಿಗೆ ಒಳಗಾದ ಕ್ರೈಸ್ತರಿಗೆ ಕೆಲವು ಕಾರಣಗಳಿಂದಾಗಿ ದೂರಲು ಯಾವುದೇ ಹಕ್ಕಿಲ್ಲ. ಕೆಲವು ಮಂದಿ ಕುಡುಕು ಗಾಥ್‌ರು ಅವರ ಕಷ್ಟದಿದಲೇ ತಾವು ಏಳಿಗೆ ಹೊಂದಿರಬಹುದಾದರೂ ಮುಂದೆ ಅವರು ಯಾತನೆಗೊಳಗಾಗುತ್ತಾರೆ: ಎಲ್ಲ ಪಾಪಗಳಿಗೂ ಈ ಜಗತ್ತಿನಲ್ಲೇ ಶಿಕ್ಷೆಯಿರುವುದಾದರೆ, ಅಂತಿಮ ತೀರ್ಪಿನ ಆವಶ್ಯಕತೆಯೇ ಇರುವುದಿಲ್ಲ. ಕ್ರೈಸ್ತರು ಏನನ್ನು ಸಹಿಸಿಕೊಂಡರೋ ಅದು, ಅವರು ಸದ್ಗುಣಿಗಳಾಗಿದ್ದರೆ, ತಮ್ಮ ಆತ್ಮೋನ್ನತಿಗೆ ಸಂತರ ಕಡೆ ನೋಡುತ್ತಾರೆ, ಐಹಿಕ ನಷ್ಟಗಳಲ್ಲಿ ಯಾವುದೇ ಮೌಲ್ಯಯುತವಾದುದು ನಷ್ಟವಾಗುವುದಿಲ್ಲ. ಅವರ ದೇಹಗಳನ್ನು ಹೂಳದಿದ್ದರೆ ಪರವಾಯಿಲ್ಲ, ಯಾಕೆಂದರೆ ಲೂಟಿಕೋರ ಪಶುಗಳು ದೇಹಗಳ ಪುನರುತ್ಥಾನದಲ್ಲಿ ಮೂಗು ತೂರಿಸಲಾರವು.

ಈ ದಾಳಿಯಲ್ಲಿ ಮಾನಭಂಗಕ್ಕೊಳಗಾದ ಧರ್ಮನಿಷ್ಠ ಸದ್ಗುಣಿಗಳಾದ ಕನ್ಯೆಯರ ಕುರಿತು ಮುಂದಿನ ಪ್ರಶ್ನೆಯೇಳುತ್ತದೆ. ತಮ್ಮ ಯಾವು ತಪ್ಪೂ ಇಲ್ಲದೆ ತಮ್ಮ ಕನ್ಯತ್ವದ ಕಿರೀಟವನ್ನು ಕಳೆದುಕೊಂಡವರು ಕೆಲವರು ಎಂಬುದು ಸ್ಪಷ್ಟ. ಈ ದೃಷ್ಟಿಕೋನವನ್ನು ಸಂತ ಬಹು ವಿವೇಕಯುತವಾಗಿ ವಿರೋಧಿಸುತ್ತಾನೆ. 'ಹ್ಞು, ಮತ್ತೊಬ್ಬನ ಕಾಮುಕತೆ ನಿನ್ನನ್ನು ಮೈಲಿಗೆಗೊಳಿಸಲಾರದು.' ಶೌಚವೆಂಬುದು ಮನಸ್ಸಿನ ಒಂದು ಸದ್ಗುಣ, ಅದು ಮಾನಭಂಗದಿಂದ ನಾಶವಾಗುವುದಿಲ್ಲ, ಆದರೆ ಅದು ನಾಶವಾಗುವುದು, ಕ್ರಿಯೆಗೆ ಇಳಿಯದಿದ್ದರೂ, ಪಾಪದ ಬಯಕೆಯಿಂದ. ಮಾನಭಂಗಕ್ಕೊಳಗಾದವರು ತಮ್ಮ ಬ್ರಹ್ಮಚರ್ಯದ ಬಗ್ಗೆ ತೀರ ಹೆಮ್ಮೆಪಡುತ್ತಿದ್ದುದರಿಂದ ದೇವರು ಮಾನಭಂಗಕ್ಕೆ ಅನುಮತಿಯಿತ್ತನೆಂಬ ಸೂಚನೆಯಿದೆ. ಮಾನಭಂಗದ ಭಯದಿಂದ ಆತ್ಮಹತ್ಯೆ ಮಾಡಿಕೊಳ್ಳುವುದು ಕೆಡುಕು ಕೃತ್ಯ; ಇದು ಲ್ಯೂಕ್ರೀಷಿಯ ಬಗೆಗಿನ ದೀರ್ಘ ಚರ್ಚೆಗೆ ಕಾರಣವಾಗುತ್ತದೆ, ಅವಳು ಆತ್ಮಹತ್ಯೆ ಮಾಡಿಕೊಳ್ಳಬಾರದಾಗಿತ್ತು, ಯಾಕೆಂದರೆ ಆತ್ಮಹತ್ಯೆ ಯಾವತ್ತೂ ಪಾಪಕರ.

ಮಾನಭಂಗಕ್ಕೊಳಗಾದ ಸದ್ಗುಣಿ ಹೆಂಗಸರ ದೋಷನಿವಾರಣೆಗೆಂದು ಒಂದು ವಿಧಿಯಿದೆ; ಅವರದರಿಂದ ಸಂತಸಗೊಳ್ಳಬಾರದು. ಹಾಗೆ ಮಾಡಿದರೆ ಅವರು ಪಾಪಿಗಳಾಗುತ್ತಾರೆ.

ಅವನು ಆ ಮುಂದೆ ವಿಧರ್ಮೀಯ ದೇವರುಗಳ ಕೆಡುಕುತನದ ಕಡೆಗೆ ಬರುತ್ತಾನೆ. ಉದಾಹರಣೆಗೆ, 'ನಿಮ್ಮ ರಂಗನಾಟಕಗಳು, ಆ ಕೊಳಕಿನ ದೃಶ್ಯಗಳು, ಆ ಸ್ವೇಚ್ಛೆಯ ಬಡಿವಾರಗಳು, ಮೊದಲು ರೋಮ್‌ನಲ್ಲಿ ಜನರ ಭ್ರಷ್ಟತೆಯಿಂದ ಬೆಳೆದವಲ್ಲ, ಅವು ಬೆಳೆದದ್ದು ನಿಮ್ಮ ದೇವರುಗಳ ನೇರ ಆಜ್ಞೆಯಿಂದಾಗಿ.[೧೯೩] ಈ ನೀತಿರಹಿತ ದೇವತೆಗಳಿಗಿಂತ ಸೈಪಿಯೋ ಅಂತಹ ಸದ್ಗುಣಿಯಾದ ಮನುಷ್ಯನನ್ನು ಪೂಜಿಸುವುದು ಒಳ್ಳೆಯದು. ಆದರೆ ರೋಮ್ ದಾಳಿಗೆ ಸಂಬಂಧಿಸಿದಂತೆ, ಅದು ಕ್ರೈಸ್ತರನ್ನು ಬಾಧಿಸಬಾರದು, ಅವರಿಗೆ ದೇವರ ನಗರಕ್ಕೆ ಯಾತ್ರೆ ಮಾಡುವ ರಕ್ಷಣೆಯಿದೆ.

ಈ ಜಗತ್ತಿನಲ್ಲಿನ ಎರಡು ನಗರಗಳು – ಐಹಿಕ ಮತ್ತು ಸ್ವರ್ಗೀಯ – ಹೆಣೆದುಕೊಂಡಿವೆ; ಆದರೆ ಇನ್ನು ಮುಂದಕ್ಕೆ ಪೂರ್ವನಿಶ್ಚಿತ ಮತ್ತು ನಿರಾಕೃತರನ್ನು ಬೇರ್ಪಡಿಸಲಾಗುತ್ತದೆ. ಈ ಬದುಕಿನಲ್ಲಿ, ನಮ್ಮ ಶತ್ರುಗಳೆಂಬಂತೆ ಕಾಣುವವರಲ್ಲಿಯೂ, ಯಾರು ಕೊನೆಗೆ ಆಯ್ಕೆಗೊಂಡವರಲ್ಲಿ ಸೇರುತ್ತಾರೆಂಬುದನ್ನು ನಾವು ತಿಳಿಯಲಾರೆವು.

ಈ ಕೃತಿಯ ಅತ್ಯಂತ ಕ್ಲಿಷ್ಟ ಭಾಗವೆಂದರೆ, ತತ್ವಜ್ಞಾನಿಗಳ – ಅಮರತ್ವ ಮತ್ತು ದೇವರ ಸೃಷ್ಟಿಗಳಿಗೆ ಸಂಬಂಧಿಸಿದಂತಹ ವಿಷಯಗಳಲ್ಲಿ ಕ್ರೈಸ್ತರು ಬಹುತೇಕ ಒಪ್ಪುವ ಉತ್ಕೃಷ್ಟರೆನಿಸಿದವರನ್ನೂ ಒಳಗೊಂಡಂತೆ – ಖಂಡನೆ.[೧೯೪]

ವಿಧರ್ಮೀಯ ದೇವರ ಪೂಜೆಯನ್ನು ತತ್ವಜ್ಞಾನಿಗಳು ತೊರೆಯಲಿಲ್ಲ, ಅವರ ನೈತಿಕ ಬೋಧನೆಗಳು ದುರ್ಬಲವಾಗಲು ಕಾರಣ ಆ ದೇವರುಗಳು ಕೆಡುಕರಾಗಿದ್ದುದು. ದೇವತೆಗಳು ಮನುಷ್ಯಕಲ್ಪಿತರು ಎಂಬುದನ್ನೇನೂ ಅದು ಸೂಚಿಸುವುದಿಲ್ಲ; ಅವರು ಇರುವುದನ್ನು ಸಂತ ಆಗಸ್ಟೈನ್ ಒಪ್ಪುತ್ತಾನೆ, ಆದರೆ ಪಾಪದೇವತೆಗಳಿಗೆ ಸಮಾನರೆಂಬಂತೆ. ತಮ್ಮ ಬಗ್ಗೆ ಕೊಳಕು ಕತೆಗಳನ್ನು ಹೇಳುವುದನ್ನವರು ಇಷ್ಟಪಡುತ್ತಾರೆ, ಯಾಕೆಂದರೆ ಜನರಿಗೆ ಗಾಸಿಯುಂಟುಮಾಡುವುದು ಅವರಿಗೆ ಇಷ್ಟ ಅದಕ್ಕೆ. ಬಹುತೇಕ ಪ್ಯಾಗನ್‌ರಲ್ಲಿ ಪ್ಲೇಟೋನ ಸಿದ್ಧಾಂತಗಳು ಮತ್ತು ಕೇಟೋನ ಅಭಿಪ್ರಾಯಗಳಿಗಿಂತ ದೇವರಾಜ ಜ್ಯೂಪಿಟರ್‌ನ ಕಾರ್ಯಗಳಿಗೆ ಹೆಚ್ಚು ಬೆಲೆಯಿದೆ. 'ಸಮರ್ಥ ಆಡಳಿತದ ನಗರದಲ್ಲಿ ಕವಿಗಳಿಗೆ ಅವಕಾಶ ನೀಡದ ಪ್ಲೇಟೋ ರಂಗನಾಟಕಗಳ ಮೂಲಕ ತಮಗೆ ಗೌರವ ತೋರಿಸಬೇಕೆಂದು ಇಷ್ಟಪಡುವ ಆ ದೇವತೆಗಳಿಗಿಂತ ತನ್ನ ಪಾದದ ಬೆಲೆಯೇ ಹೆಚ್ಚು ಎಂದು ತೋರಿಸಿದ.'[೧೯೫]

ಸ್ಯಾಬೈನ್‌ನ ಹೆಂಗಸರ ಮಾನಭಂಗದ ನಂತರದಲ್ಲಿ ರೋಮ್ ಸದಾ ಕೆಡುಕಿನದಾಗಿತ್ತು. ರೋಮನ್ ಸಾಮ್ರಾಜ್ಯಶಾಹಿಯ ಪಾತಕಗಳ ಬಗ್ಗೆ ಅನೇಕ ಅಧ್ಯಾಯಗಳಿವೆ. ಕ್ರೈಸ್ತವಾಗುವುದಕ್ಕೆ ಮುಂಚೆ ರೋಮ್ ಕಷ್ಟವನ್ನನುಭವಿಸಲಿಲ್ಲ

---

೧೯೩. 'ದ ಸಿಟಿ ಆಫ್ ಗಾಡ್', ೧, ೩೧.
೧೯೪. ಅದೇ, ೧. ೩೩.
೧೯೫. ಅದೇ, ೨. ೧೪.

ಎಂಬುದು ನಿಜವಲ್ಲ; ಗಾಲ್‌ರು ಮತ್ತು ಅಂತರ್ಯುದ್ಧಗಳಿಂದಾಗಿ ಅವರು ಗಾಥ್‌ರಿಂದಾದಂತಹುದೇ ಅಥವಾ ಇನ್ನೂ ಹೆಚ್ಚಿನ ಸಂಕಷ್ಟಕ್ಕೊಳಗಾದರು.

ಜ್ಯೋತಿಷ್ಯವು ಕೆಟ್ಟುದು ಮಾತ್ರವಲ್ಲ, ಅದು ಸುಳ್ಳೂ ಹೌದು; ಇದನ್ನು ಒಂದೇ ಜಾತಕ ಹೊಂದಿದ ಅವಳಿಜವಳಿ ಮಕ್ಕಳ[೧೯೬] ಬದುಕಿನ ಆಗುಹೋಗುಗಳಿಂದ ನಿರ್ಧರಿಸಬಹುದು. (ಜ್ಯೋತಿಷ್ಯಕ್ಕೆ ಸಂಬಂಧಿಸಿದ) ವಿಧಿಯ ಬಗೆಗಿನ ಸಂಯಮವಾದಿ ಪರಿಕಲ್ಪನೆಯು ತಪ್ಪು ತಿಳಿವಳಿಕೆಯಿಂದಾದುದು, ಯಾಕೆಂದರೆ ದೇವದೂತರಿಗೂ ಮನುಷ್ಯರಿಗೂ ಸ್ವತಂತ್ರಇಚ್ಛಾಶಕಿಯಿದೆ. ನಮ್ಮ ಪಾಪಗಳ ಬಗ್ಗೆ ದೇವರಿಗೆ ಪೂರ್ವಕಲ್ಪನೆಯಿದೆ ಎಂಬುದು ಸತ್ಯ, ಆದರೆ ಅವನ ಪೂರ್ವಜ್ಞಾನದ ಕಾರಣದಿಂದ ನಮಗದು ತಿಳಿಯುವುದಿಲ್ಲ. ಸದ್ಗುಣವು ಲೋಕದಲ್ಲಿ ಕೂಡ ಅಸುಖವನ್ನು ತರುತ್ತದೆ ಎಂಬುದು ಸರಿಯಲ್ಲ: ಕ್ರೈಸ್ತ ಚಕ್ರವರ್ತಿಗಳು ಸದ್ಗುಣಭರಿತರಾಗಿದ್ದರೆ ಅದೃಷ್ಟವಂತರಲ್ಲದಿದ್ದರೂ ಸುಖವಾಗಿದ್ದಾರೆ, ಹಾಗೆಯೇ ಮಾನ್‌ಸ್ಟಾಂಟೈನ್ ಮತ್ತು ಥಿಯೋಡೋಸಿಯಸ್ ಅದೃಷ್ಟವಂತರು ಕೂಡ; ಅಲ್ಲದೆ, ಯೆಹೂದಿಗಳು ಎಲ್ಲಿಯವರೆಗೆ ಮತಧರ್ಮದ ಸತ್ಯಕ್ಕೆ ಬದ್ಧವಾಗಿದ್ದರೋ ಅಲ್ಲಿಯವರೆಗೆ ಯೆಹೂದಿ ಚಕ್ರಾಧಿಪತ್ಯವೂ ಉಳಿದಿತ್ತು.

ಮಿಕ್ಕೆಲ್ಲ ತತ್ವಜ್ಞಾನಿಗಳಿಂತಲೂ ತಾನು ಉನ್ನತ ಸ್ಥಾನದಲ್ಲಿರಿಸುವ ಪ್ಲೇಟೋ ಬಗ್ಗೆ ತುಂಬ ಸಹಾನುಭೂತಿಪರವಾದ ವಿವರಣೆಯಿದೆ. ಮಿಕ್ಕೆಲ್ಲರೂ ಅವನಿಗೆ ಗೌರವ ನೀಡಬೇಕು. 'ಥೇಲೀಸ್ ತನ್ನ ನೀರಿನೊಂದಿಗೆ, ಅನಾಕ್ಸಿಮೆನೀಸ್ ತನ್ನ ಗಾಳಿಯೊಡನೆ, ಸಂಯಮವಾದಿಗಳು ತಮ್ಮ ಬೆಂಕಿಯೊಂದಿಗೆ, ಎಪಿಕ್ಯೂರಸ್ ತನ್ನ ಪರಮಾಣುಗಳೊಂದಿಗೆ ನಿರ್ಗಮಿಸಲಿ.'[೧೯೭] ಇವರೆಲ್ಲರೂ ಭೌತವಾದಿಗಳು, ಅದರೆ ಪ್ಲೇಟೋ ಅಲ್ಲ. ದೇವರು ಎಂದರೆ ದೈಹಿಕ ಅಸ್ತಿತ್ವ ಹೊಂದಿದವನಲ್ಲ, ಆದರೆ ಎಲ್ಲ ವಸ್ತುಗಳೂ ಅಪರಿವರ್ತನೀಯವಾದ ಯಾವುದರಿಂದಲೋ ದೇವರಿಂದಾದವುಗಳು ಎಂಬುದು ಪ್ಲೇಟೋ ಅಭಿಪ್ರಾಯ. ಅಲ್ಲದೆ, ಗ್ರಹಿಕೆಯು ಸತ್ಯದ ಆಕರವಲ್ಲ ಎಂದು ಅವನು ಹೇಳಿದುದೂ ಸಮಂಜಸವಾದುದು. ಪ್ಲೇಟೋವಾದಿಗಳು ತರ್ಕ ಮತ್ತು ನೀತಿಸಂಹಿತೆಗಳ ವಿಷಯದಲ್ಲಿ ಅತ್ಯುತ್ತಮರು, ಕ್ರೈಸ್ತಮತಧರ್ಮಕ್ಕೆ ಅತ್ಯಂತ ಸಮೀಪರಾದವರು. 'ಆನಂತರದಲ್ಲಿ ಬದುಕಿದ್ದ ಪ್ಲಾಟಿನಸ್ ಎಲ್ಲರಿಗಿಂತಲೂ ಚೆನ್ನಾಗಿ ಅರ್ಥಮಾಡಿಕೊಂಡವನು ಎನ್ನುತ್ತಾರೆ.' ಅರಿಸ್ಟಾಟಲ್ ಕುರಿತು, ಅವನು ಪ್ಲೇಟೋಗಿಂತ ಕೆಳಗಿನವನು, ಆದರೆ ಮಿಕ್ಕವರಿಗಿಂತ ಉನ್ನತನಾದವನು. ಆದರೆ ಅವರಿಬ್ಬರೂ

---

೧೯೬. ಈ ತೀರ್ಮಾನವೇನೂ ಸ್ವಂತದ್ದಲ್ಲ: ಅದನ್ನು ಅಕೆಡೆಮಿಕ್ ಸಂದೇಹವಾದಿಯಾದ ಕಾರ್ನಿಯಾಡೀಸ್‌ನಿಂದ ಪಡೆದಂತಹುದು, ನೋಡಿ, ಕ್ಯೂಮಂಟ್, 'ಓರಿಯಂಟಲ್ ರಿಲಿಜನ್ಸ್ ಇನ ರೋಮನ್ ಪ್ಯಾಗನಿಸಂ', ಪು. ೧೬೬.

೧೯೭. 'ದ ಸಿಟಿ ಆಫ್ ಗಾಡ್', ೮. ೫.

ಹೇಳಿದುದೆಂದರೆ ಎಲ್ಲ ದೇವರುಗಳು ಒಳ್ಳೆಯವರು, ಅವರನ್ನೆಲ್ಲ ಪೂಜಿಸಬೇಕು ಎಂದು.

ಎಲ್ಲ ರಾಗಭಾವಗಳನ್ನು ಖಂಡಿಸಿದ ಸಂಯಮವಾದಿಗಳ ವಿರುದ್ಧವಾಗಿ ಸಂತ ಆಗಸ್ಟೈನ್‌ನ ನಿಲವೆಂದರೆ ಕ್ರೈಸ್ತರ ರಾಗಭಾವಗಳು ಸದ್ಗುಣದ ಕಾರಣಗಳಾಗಿರಬಹುದು ಎಂಬುದು: ಕೋಪ, ಕರುಣೆ, ಅವನ್ನೇ ಖಂಡಿಸಬಾರದು, ಅವುಗಳ ಕಾರಣಗಳ ಬಗ್ಗೆ ಪರೀಕ್ಷಿಸಬೇಕು.

ಪ್ಲೇಟೋವಾದಿಗಳು ದೇವರ ಕುರಿತು ಸರಿ ನಿಲವನ್ನು, ಆದರೆ ದೇವರ ಬಗ್ಗೆ ತಪ್ಪು ನಿಲವನ್ನು ತಾಳಿದವರು. ಅವತಾರವನ್ನು ಗಮನಿಸದ ಅವರು ತಪ್ಪು ನಿಲವಿನವರು.

ದೇವದೂತರನ್ನೂ ಪಾಪದೇವತೆಗಳನ್ನೂ ಕುರಿತ ದೀರ್ಘ ಚರ್ಚೆಯಿದೆ, ಅದು ನವಪ್ಲೇಟೋವಾದಿಗಳ ಬಗ್ಗೆ ಸಂಬಂಧ ಹೊಂದಿದೆ. ದೇವದೂತರು ಒಳ್ಳೆಯವರೂ ಕೆಟ್ಟವರೂ ಆಗಿರಬಹುದು, ಆದರೆ ಪಾಪದೇವತೆಗಳು ಸದಾ ಕೆಟ್ಟವರು. ದೇವದೂತರಿಗೆ ಐಹಿಕ ವಸ್ತುಗಳು (ಅವರು ಅವುಗಳನ್ನು ಹೊಂದಿದ್ದರೂ) ಹೇಯವಾದವು. ಇಂದ್ರಿಯಗ್ರಾಹ್ಯ ಜಗತ್ತು ಚಿರಂತನ ಜಗತ್ತಿಗಿಂತ ಕೀಳು ಎಂಬ ಭಾವನೆಯನ್ನು ಸಂತ ಆಗಸ್ಟೈನ್ ಪ್ಲೇಟೋನೊಡನೆ ಹಂಚಿಕೊಳ್ಳುತ್ತಾನೆ.

೧೧ ನೆಯ ಭಾಗವು ದೇವನಗರದ ಸ್ವರೂಪ ನಿರೂಪಣೆಯೊಂದಿಗೆ ಆರಂಭವಾಗುತ್ತದೆ. ದೇವ ನಗರವು ಆಯ್ಕೆಗೊಂಡವರ ಸಮುದಾಯ. ದೇವರ ಜ್ಞಾನವನ್ನು ಕ್ರಿಸ್ತನೊಂದಿಗೆ ಮಾತ್ರ ಗಳಿಸಬಹುದು. ತರ್ಕದಿಂದ ಕಂಡುಹಿಡಿಯಬಹುದಾದ ಕೆಲವು ವಿಷಯಗಳಿವೆ (ತತ್ವಜ್ಞಾನದಲ್ಲಿರುವಂತೆ), ಆದರೆ ಆನಂತರದ ಎಲ್ಲ ಮತಧಾರ್ಮಿಕ ಜ್ಞಾನಕ್ಕೆ ನಾವು ಧರ್ಮಗ್ರಂಥಗಳಿಗೆ ಮೊರೆಹೋಗಬೇಕು. ಜಗತ್ತು ನಿರ್ಮಾಣಗೊಳ್ಳುವ ಮುಂಚಿನ ಕಾಲ ಅವಕಾಶಗಳ (ಟೈಮ್ ಅಂಡ್ ಸ್ಪೇಸ್) ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಬಾರದು; ಸೃಷ್ಟಿಗೆ ಮೊದಲು ಕಾಲವೇ ಇರಲಿಲ್ಲ, ಮತ್ತು ಜಗತ್ತು ಇಲ್ಲದ ಜಾಗವೇ ಇಲ್ಲ.

ದೈವಾನುಗ್ರಹಕ್ಕೊಳಗಾದುದೆಲ್ಲ ಚಿರಂತನವಾದುದು – ಉದಾಹರಣೆಗೆ, ನರಕ ಮತ್ತು ಸೈತಾನ. ದೇವರಿಗೆ ಪಾಪದೇವತೆಗಳ ಕೆಡುಕಿನ ಬಗ್ಗೆ ಮಾತ್ರವಲ್ಲದೆ, ಇಡೀ ವಿಶ್ವವನ್ನು ಉತ್ತಮಪಡಿಸುವ ಅವರ ಉಪಯುಕ್ತತೆಯ ಬಗ್ಗೆ ಪೂರ್ವಜ್ಞಾನವಿದೆ; ಇದು ಭಾಷಣಕಲೆಯ ಪ್ರತಿವಾದವನ್ನು (ಆಂಟಿಥೀಸಿಸ್) ಹೋಲುತ್ತದೆ.

ಆತ್ಮಗಳಿಗೆ ಶಿಕ್ಷೆಯ ರೂಪದಲ್ಲಿ ದೇಹಗಳನ್ನು ನೀಡಲಾಗಿದೆ ಎಂಬ ಆರಿಜೆನ್‌ನದು ತಪ್ಪು ತಿಳಿವಳಿಕೆ. ಇದು ನಿಜವಾಗಿದ್ದರೆ, ಕೆಟ್ಟ ಆತ್ಮಗಳಿಗೆ ಕೆಟ್ಟ ದೇಹಗಳಿರುತ್ತಿದ್ದವು; ಆದರೆ ಪಾಪದೇವತೆಗಳು, ಅವರಲ್ಲಿ ಅತ್ಯಂತ ಕೆಟ್ಟವನೂ, ಸೂಕ್ಷ್ಮಶರೀರವನ್ನು ಹೊಂದಿರುತ್ತಾನೆ, ಅವು ನಮ್ಮದಕ್ಕಿಂತ ಉತ್ತಮವಾದುವು.

ಆರು ದಿನಗಳಲ್ಲಿ ಜಗತ್ತು ಸೃಷ್ಟಿಯಾಗಿರುವುದರ ಹಿಂದಿನ ಕಾರಣವೆಂದರೆ ಆರು ಪರಿಪೂರ್ಣ ಸಂಖ್ಯೆ (ಅಂದರೆ ಅದರ ಅಪವರ್ತನಗಳ-ಫ್ಯಾಕ್ಟರ್ಸ್‌-ಮೊತ್ತಕ್ಕೆ ಸಮ).

ಒಳ್ಳೆಯ ಹಾಗೂ ಕೆಟ್ಟ ದೇವದೂತರು ಇರುತ್ತಾರೆ, ಆದರೆ ಕೆಟ್ಟ ದೇವದೂತರು ಕೂಡ ದೇವರಿಗೆ ವಿರುದ್ಧವಾದ ಸತ್ವವನ್ನು ಹೊಂದಿರುವುದಿಲ್ಲ. ದೇವರ ಶತ್ರುಗಳಲ್ಲಿ ಯಾರೂ ಸಹಜವಾಗಿ ಹಾಗಿರುವುದಿಲ್ಲ, ಇಚ್ಛಾಶಕ್ತಿಯಿಂದ ಹಾಗಾಗುತ್ತಾರೆ. ವಿಷಯ ಇಚ್ಛಾಶಕ್ತಿಗೆ ನಿಮಿತ್ತಕಾರಣ (ಎಫಿಷಿಯಂಟ್ ಕಾಸ್) ವಿರುವುದಿಲ್ಲ, ಆದರೆ ನ್ಯೂನ (ಡಿಫಿಷಿಯಂಟ್) ಕಾರಣವಿರುತ್ತದೆ: ಅದು ಪರಿಣಾಮವಲ್ಲ, ನ್ಯೂನತೆ.

ಜಗತ್ತಿಗೆ ಆರು ಸಾವಿರ ವರ್ಷಗಳಿಗಿಂತ ಕಡಿಮೆ ವಯಸ್ಸು. ಇತಿಹಾಸವೆಂಬುದು, ಕೆಲವು ತತ್ವಜ್ಞಾನಿಗಳು ಹೇಳುವಂತೆ, ಚಕ್ರನೇಮಿ ಗತಿಯದಲ್ಲ: 'ಕ್ರಿಸ್ತನು ನಮ್ಮ ಪಾಪಗಳಿಗಾಗಿ ಒಂದೇ ಸಾರಿ ಸತ್ತ.'[೧೯೮]

ನಮ್ಮ ಆದಿಮ ತಂದೆತಾಯ್ಗಳು ಪಾಪ ಮಾಡಿರದಿದ್ದರೆ, ಅವರು ಸಾಯುತ್ತಿರಲಿಲ್ಲ, ಆದರೆ ಅವರು ಪಾಪಗೈದಿದ್ದರಿಂದಾಗಿ ಅವರ ಮುಂದಿನ ಪೀಳಿಗೆಗಳೆಲ್ಲ ಸಾಯುತ್ತಾರೆ. ಸೇಬನ್ನು ತಿಂದದ್ದು ಸಹಜ ಸಾವನ್ನು ಮಾತ್ರವಲ್ಲ, ಚಿರಂತನ ಸಾವನ್ನೂ, ಅಂದರೆ ನಿತ್ಯನರಕವನ್ನು (ಡ್ಯಾಮ್ನೇಷನ್) ತಂದಿತು.

ಸ್ವರ್ಗದಲ್ಲಿರುವ ಸಂತರಿಗೆ ದೇಹಗಳಿರುವುದಿಲ್ಲ ಎಂಬ ಪಾರ್ಫೈರಿ ಹೇಳಿಕೆ ಸರಿಯಲ್ಲ. ಆಡಮ್ ಪತನಕ್ಕೆ ಮುಂಚೆ ಹೊಂದಿದ್ದ ದೇಹಕ್ಕಿಂತ ಉತ್ತಮ ದೇಹಗಳನ್ನವರು ಹೊಂದುತ್ತಾರೆ; ಅವರ ದೇಹಗಳು ಅಭೌತಿಕವಾಗಿರುತ್ತವೆ, ಅವಕ್ಕೆ ತೂಕವಿರುವುದಿಲ್ಲ. ಗಂಡಸರಿಗೆ ಗಂಡು ದೇಹಗಳು ಮತ್ತು ಹೆಂಗಸರಿಗೆ ಹೆಣ್ಣು ದೇಹಗಳಿರುತ್ತವೆ, ಬಾಲ್ಯದಲ್ಲಿಯೇ ಸತ್ತವರು ಯುವದೇಹಗಳೊಂದಿಗೆ ಮತ್ತೆ ಜನ್ಮ ತಳೆಯುತ್ತಾರೆ.

ಆಡಮ್‌ನ ಪಾಪವು ಇಡೀ ಮನುಷ್ಯ ಸಂಕುಲವನ್ನು ಚಿರಂತನ ಸಾವಿಗೆ (ಅಂದರೆ ನಿತ್ಯನರಕಕ್ಕೆ) ತಳ್ಳಬಹುದಾಗಿತ್ತು, ಆದರೆ ದೇವರ ಕೃಪೆ ಅನೇಕರನ್ನು ಅದರಿಂದ ಸ್ವತಂತ್ರರನ್ನಾಗಿಸಿದೆ. ಪಾಪ ಬಂದದ್ದು ಆತ್ಮದಿಂದ, ಮಾಂಸದಿಂದಲ್ಲ. ಪ್ಲೇಟೋವಾದಿಗಳು ಮತ್ತು ಮ್ಯಾನಿಖಿಯನ್ನರು ಪಾಪವನ್ನು ಮಾಂಸದ ಸ್ವಭಾವದೊಂದಿಗೆ ತಳುಕುಹಾಕುವುದು ತಪ್ಪು, ಆದರೆ ಪ್ಲೇಟೋವಾದಿಗಳು ಮ್ಯಾನಿಖಿಯನ್ನರಷ್ಟು ಕೆಟ್ಟವರಲ್ಲ. ಆಡಮ್‌ನ ಪಾಪಕ್ಕಾಗಿ ಇಡೀ ಮನುಸಂಕುಲವನ್ನು ಶಿಕ್ಷಿಸಿದ್ದು ನ್ಯಾಯಯುತವಾದದ್ದು; ದೇಹದಲ್ಲಿ ಅಭೌತಿಕತೆಯಿರಬಹುದು, ಮನಸ್ಸಿನಲ್ಲಿ ಕಾಮುಕತೆ ತುಂಬಿಕೊಂಡಿತು.[೧೯೯]

---

೧೯೮. ರೋಮನ್ಸ್ ೬, ೧೦; ಹೀಬ್ರೂಸ್, ೭. ೨೭.
೧೯೯. 'ದ ಸಿಟಿ ಆಫ್ ಗಾಡ್', ೧೪, ೧೫.

ಇದು ಲೈಂಗಿಕ ಲಾಂಪಟ್ಯದೆಡೆಯ ದೀರ್ಘವೂ ಸೂಕ್ಷ್ಮವೂ ಆದ ಚರ್ಚೆಗೆ ಆಸ್ಪದವೀಯುತ್ತದೆ; ಆಡಮ್‌ನ ಪಾಪಕ್ಕೆ ನೀಡಿದ ಶಿಕ್ಷೆಯ ಭಾಗವಾಗಿ ನಮಗೆ ಲಾಂಪಟ್ಯವುಂಟಾಗಿದೆ. ವಿರಕ್ತಿಯ ಬಗೆಗಿನ ಅವನ ಮನೋಭಾವವನ್ನು ತಿಳಿಯುವುದರಲ್ಲಿ ಇದು ಪ್ರಮುಖವಾಗುತ್ತದೆ, ಹೀಗಾಗಿ, ಇದನ್ನು ಸಂತನು ನಿರ್ಲಜ್ಜೆಯ ವಿಷಯವೆಂದು ಕರೆಯುತ್ತಾನಾದರೂ ಅದನ್ನು ನಾವು ವಿವರವಾಗಿ ನೋಡಬೇಕು.

ಮದುವೆಯಲ್ಲಿನ ಸಂಭೋಗವು ಪಾಪಕರವಲ್ಲವೆಂದು ಒಪ್ಪಬೇಕು, ಆದರೆ ಅದು ಸಂತಾನಪ್ರಾಪ್ತಿಗಾಗಿ ಎಂದು ಭಾವಿಸಬೇಕು. ಆದರೂ ಸದ್ಗುಣಿಯಾದವನು ಮದುವೆಯಲ್ಲಿಯೂ ಅದನ್ನು ತಾನು ಕಾಮುಕತೆಯಿಲ್ಲದೆ ನಿಭಾಯಿಸಬಹುದೆಂದು ಭಾವಿಸುತ್ತಾನೆ. ಮದುವೆಯಲ್ಲಿಯೂ, ಏಕಾಂತದ ಬಯಕೆ ತೋರಿಸುವಂತೆ, ಸಂಭೋಗವು ನಾಚಿಕೆಗೇಡಿನದೆಂದು ಭಾವಿಸುತ್ತಾರೆ. ಯಾಕೆಂದರೆ 'ನಿಸರ್ಗದ ಈ ನಿಯಮಾನುಸಾರದ ಈ ಕ್ರಿಯೆಯು (ನಮ್ಮ ಆದಿಮ ತಾಯ್ತಂದೆಯರಿಂದ) ದಂಡನಾರ್ಹ ನಿರ್ಲಜ್ಜೆಯೊಂದಿಗೆ ಸಮಾಹಿತವಾಗಿದೆ.' ಲಜ್ಜೆಯಿಲ್ಲದೆ ಇರಬೇಕೆಂದು ಸಿನಿಕರು ಭಾವಿಸಿದರು, ಮತ್ತು ಡಯೋಜಿನೀಸ್‌ಗೆ ಅಂಥದ್ದೇನು ಇಲ್ಲದಿದ್ದರೂ, ಎಲ್ಲದರಲ್ಲಿಯೂ ನಾಯಿಯಂತಿರಬೇಕೆಂದು ಆಶಿಸಿದ ಅವನು ಸಹ, ಒಂದು ಪ್ರಯತ್ನದ ಬಳಿಕ, ಈ ಅತಿರೇಕದ ನಾಚಿಕೆಗೇಡಿತನವನ್ನು ಅನುಷ್ಠಾನದಲ್ಲಿ ಕೈಬಿಟ್ಟ. ಕಾಮುಕತೆಯ ಬಗೆಗಿನ ನಾಚಿಕೆಗೇಡಿನ ಅಂಶವೆಂದರೆ ಅದರಲ್ಲಿನ ಇಚ್ಛಾಶಕ್ತಿಹೀನತೆ. ಪತನದ ಮೊದಲು ಆಡಮ್ ಮತ್ತು ಈವ್ ಕಾಮುಕರಾಗಿರದೆಯೇ ಸಂಭೋಗದಲ್ಲಿ ತೊಡಗುತ್ತಿದ್ದಿರಬೇಕು, ಆದರೆ ವಾಸ್ತವವಾಗಿ ಹಾಗೆ ಮಾಡಲಿಲ್ಲ. ಕುಶಲಕರ್ಮಿಗಳು ತಮ್ಮ ವೃತ್ತಿಯ ನಿರ್ವಹಣೆಯಲ್ಲಿ ಕಾಮುಕತೆಯಿಲ್ಲದೆ ತಮ್ಮ ಕೈಗಳನ್ನು ಆಡಿಸುತ್ತಾರೆ; ಹಾಗೆಯೇ ಆಡಮ್, ಸೇಬಿನ ಮರದಿಂದ ಅವನು ದೂರವಿದ್ದಿದ್ದರೆ, ಲೈಂಗಿಕತೆಯನ್ನು ಈಗ ಆವಶ್ಯಕವೆನಿಸುವ ಭಾವನಾತ್ಮಕತೆಯಿಲ್ಲದೆ ನಿರ್ವಹಿಸಬಹುದಾಗಿತ್ತು. ಲೈಂಗಿಕ ಅಂಗಗಳು, ದೇಹದ ಮಿಕ್ಕೆಲ್ಲದರ ಹಾಗೆ, ಇಚ್ಛಾಶಕ್ತಿಗೆ ವಿಧೇಯವಾಗಿರುತ್ತಿದ್ದವು. ಸಂಭೋಗದಲ್ಲಿನ ಭಾವನಾತ್ಮಕತೆಯ ಆವಶ್ಯಕತೆಯು ಆಡಮ್‌ನ ಪಾಪಕ್ಕೆ ನೀಡಿದ ಶಿಕ್ಷೆ, ಆದರೆ ಅದಿಲ್ಲದೆ ಲೈಂಗಿಕತೆಯು ಸಂತಸವನ್ನೊಳಗೊಳ್ಳುತ್ತಿರಲಿಲ್ಲವೇನೋ. ಮೂಲ ಲ್ಯಾಟಿನ್ ಆವೃತ್ತಿಯಲ್ಲಿನ ಮನೋವ್ಯಾಪಾರಗಳ ಕೆಲವು ವಿವರಗಳನ್ನು ಭಾಷಾಂತರಕಾರನು ಸಭ್ಯತೆಯ ದೃಷ್ಟಿಯಿಂದ ಕೈಬಿಟ್ಟುದು ಸಮರ್ಪಕವಾಗಿದೆ. ಇದಿಷ್ಟೂ ಲೈಂಗಿಕತೆಯ ಬಗೆಗಿನ ಸಂತ ಆಗಸ್ಟೈನ್‌ನ ಸಿದ್ಧಾಂತ.

ಮೇಲಿನದರಿಂದ ಸ್ಪಷ್ಟವಾಗುವುದೆಂದರೆ, ಲೈಂಗಿಕತೆಯು ಇಚ್ಛಾಶಕ್ತಿಯಿಂದ ಹೊರತಾಗಿರುವುದೇ ವಿರಕ್ತನು ಅದನ್ನು ಇಷ್ಟಪಡದಿರುವ ಕಾರಣ. ಸದ್ಗುಣವೆಂದರೆ ದೇಹದ ಮೇಲೆ ಇಚ್ಛಾಶಕ್ತಿಯು ಸಂಪೂರ್ಣ ನಿಯಂತ್ರಣವನ್ನು ಹೊಂದಿರುವುದು, ಆದರೆ ಲೈಂಗಿಕ ಕ್ರಿಯೆಯನ್ನು ಸಾಧ್ಯವಾಗಿಸುವಲ್ಲಿ ಅಂಥ ನಿಯಂತ್ರಣವಷ್ಟೇ ಸಾಲದು

ಎಂದು ಪ್ರತಿಪಾದಿಸಲಾಗಿದೆ. ಹೀಗಾಗಿ ಲೈಂಗಿಕ ಕ್ರಿಯೆಯು ಪರಿಪೂರ್ಣ ಸದ್ಗುಣದೊಂದಿಗೆ ತಾಳಿಕೆಯಾಗಲಾರದು.

ಪತನದ ನಂತರ ಜಗತ್ತು ಎರಡು ನಗರಗಳಾಗಿ ವಿಭಜನೆಗೊಡಿದೆ: ಅವುಗಳಲ್ಲಿ ಒಂದು ದೇವರ ಆಳ್ವಿಕೆಗೆ ಚಿರಂತನವಾಗಿ ಒಳಗಾಗಿರುವುದು, ಮತ್ತು ಇನ್ನೊಂದು, ಸೈತಾನನೊಂದಿಗೆ ಸತತವಾಗಿ ಯಾತನೆಯಲ್ಲಿ ಸಿಲುಕಿರುವುದು. ಕೇನ್ ಪಾಪದೇವತೆಯ ನಗರಕ್ಕೆ ಸೇರಿದವನು, ಅಬೆಲ್ ದೇವರ ನಗರಕ್ಕೆ ಸೇರಿದವನು. ದೈವಕೃಪೆಯಿಂದಾಗಿಯೂ ಪೂರ್ವನಿಶ್ಚಿತತೆಯ ಕಾರಣದಿಂದಾಗಿಯೂ ಅಬೆಲ್ ಭೂಮಿಯ ಮೇಲಿನ ಒಬ್ಬ ಯಾತ್ರಿಕನಾಗಿದ್ದ ಮತ್ತು ಸ್ವರ್ಗದ ಪ್ರಜೆಯಾಗಿದ್ದ. ಪ್ರವರ್ತಕರು (ಪೇಟ್ರಿಯಾರ್ಕ್) ದೇವರ ನಗರಕ್ಕೆ ಸೇರಿದವರು. ಮೆಥೂಸೆಲಹ್‌ನ ಸಾವಿನ ಬಗೆಗಿನ ಚರ್ಚೆಯು ಸಂತ ಆಗಸ್ಟೈನ್‌ನನ್ನು ಸೆಪ್ಟೂಯಜಿಂಟ್ ಮತ್ತು ವಲ್ಗೇಟ್‌ಗಳ ಕಠಿಣ ಸಾದೃಶ್ಯದ ಕಡೆ ಕರೆದೊಯ್ಯುತ್ತದೆ. ಸೆಪ್ಟೂಯಜಿಂಟ್‌ನಲ್ಲಿ ದೊರೆಯುವ ಮಾಹಿತಿಯು ಮೆಥೂಸೆಲಹ್ ಪ್ರವಾಹವನ್ನು ಹದಿನಾಲ್ಕು ವರ್ಷಗಳ ಕಾಲ ತಾಳಿಕೊಂಡ ಎಂಬ ತೀರ್ಮಾನಕ್ಕೆ ಬರುತ್ತದೆ, ಇದು ಅಸಾಧ್ಯ, ಯಾಕೆಂದರೆ ಅವನು ಆರ್ಕ್‌ನಲ್ಲಿರಲಿಲ್ಲ. ಹೀಬ್ರೂ ಹಸ್ತಪ್ರತಿಗಳನ್ನಾಧರಿಸುವ ವಲ್ಗೇಟ್ ಕೊಡುವ ಮಾಹಿತಿಯ ಪ್ರಕಾರ, ಅವನು ಪ್ರವಾಹದ ವರ್ಷವೇ ಸತ್ತ. ಈ ಅಂಶದ ಬಗ್ಗೆ ಸಂತ ಆಗಸ್ಟೈನ್ ತೀರ್ಮಾನಿಸುವುದೆಂದರೆ ಸಂತ ಜೆರೋಮ್ ಮತ್ತು ಹೀಬ್ರೂ ಹಸ್ತಪ್ರತಿಗಳು ಸರಿಯಾಗಿರಬೇಕು ಎಂದು. ಕ್ರೈಸ್ತರ ಬಗೆಗಿನ ದ್ವೇಷದಿಂದಾಗಿ ಯೆಹೂದಿಗಳು ಉದ್ದೇಶಪೂರ್ವಕವಾಗಿಯೇ ಹೀಬ್ರೂ ಹಸ್ತಪ್ರತಿಗಳಲ್ಲಿ ಕೈಯಾಡಿಸಿದ್ದಾರೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ: ಆದರೆ ಈ ಊಹೆ ತಿರಸ್ಕೃತವಾಗಿದೆ. ಮತ್ತೊಂದೆಡೆಯಲ್ಲಿ, ಸೆಪ್ಟೂಯಜಿಂಟ್ ದೈವಪ್ರೇರಣೆಯಿಂದ ಮೂಡಿರಬೇಕು ಎನ್ನುತ್ತಾರೆ. ಟಾಲೆಮಿಯ ಪ್ರತಿಕಾರರು ಸೆಪ್ಟೂಯಜಿಂಟ್‌ನ ಪ್ರತಿಮಾಡುವಾಗ ತಪ್ಪು ಮಾಡಿದ್ದಾರೆಂಬುದು ನಾವು ಮಾಡಬಹುದಾದ ತೀರ್ಮಾನ. ಹಳೆ ಒಡಂಬಡಿಕೆಯ ಭಾಷಾಂತರದ ಬಗ್ಗೆ ಮಾತನಾಡುತ್ತ ಅವನೆನ್ನುತ್ತಾನೆ: 'ಇದನ್ನು ಪೂರ್ತಿಯಾಗಿ ಬಳಸುತ್ತಿದ್ದ ಬೇರೆ ಅನೇಕ ಗ್ರೀಕ್ ಕ್ರೈಸ್ತರಲ್ಲಿ ಒಬ್ಬರು ಅಥವಾ ಯಾರು ಇರಲಿಲ್ಲವೆಂಬಂತೆ, ಚರ್ಚ್ ಎಪ್ಪತ್ತು ಮಂದಿಯನ್ನು ಆಹ್ವಾನಿಸಿತಂತೆ. ನಮ್ಮ ಲ್ಯಾಟಿನ್ ಭಾಷಾಂತರವೂ ಇದರಿಂದಲೇ ಆದುದು. ವಿದ್ವಾಂಸ ಪಾದ್ರಿ ಹಾಗೂ ಪರಿಣತ ಭಾಷಾವಿದನಾಗಿದ್ದ ಒಬ್ಬ ಜೆರೋಮ್ ಈ ಪರಿಶುದ್ಧ ಗ್ರಂಥಗಳನ್ನು ಹೀಬ್ರೂವಿನಿಂದ ಲ್ಯಾಟಿನ್‌ಗೆ ಭಾಷಾಂತರಿಸಿದ್ದಾನೆ. ಯೆಹೂದಿಗಳು ಅವನ ವಿದ್ವತ್ ಶ್ರಮವು ನಿಜವಾದುದೆಂದು ಒಪ್ಪಿದರೂ, ಎಪ್ಪತ್ತು ಮಂದಿ ಹಲವೊಮ್ಮೆ ತಪ್ಪೆಸಗಿರುವರೆಂದು ದೃಢಪಡಿಸಿದರೂ, ಕ್ರಿಸ್ತ ಚರ್ಚ್‌ಗಳು ಯಾರೋ ಒಬ್ಬನ ಬದಲು ಈ ಕೆಲಸಕ್ಕಾಗಿ, ಅದೂ ಪ್ರಧಾನ ಪುರೋಹಿತರು ಆರಿಸಿದ, ಈ ಎಪ್ಪತ್ತು

ಮಂದಿಯ ಬಗ್ಗೆ ಒಲವು ತೋರಿಸಲು ನಿರ್ಧರಿಸಿದರು.' ಎಪ್ಪತ್ತು ಸ್ವತಂತ್ರ ಭಾಷಾಂತರಗಳ ಅದ್ಭುತ ಕತೆಯನ್ನು ಅವನು ಒಪ್ಪುತ್ತಾನೆ, ಮತ್ತು ಇದನ್ನು ಈ ಎಪ್ಪತ್ತು ಮಂದಿ ದೈವಪ್ರೇರಣೆಗೊಳಗಾದವರು ಎಂಬುದಕ್ಕೆ ಸಾಕ್ಷ್ಯವೆಂದು ಹೇಳುತ್ತಾನೆ. ಆದರೆ ಹೀಬ್ರೂ ಕೂಡ ಅದೇ ರೀತಿ ದೈವಪ್ರೇರಣೆಗೊಳಗಾದುದು ತಾನೇ. ಆದರೆ ಜೆರೋಮ್‌ನ ಭಾಷಾಂತರದ ಅಧಿಕೃತತೆಯ ಬಗ್ಗೆ ಯಾವುದೇ ತೀರ್ಮಾನವಿಲ್ಲಿಲ್ಲ. ಇಬ್ಬರೂ ಸಂತರು ಸಂತ ಪೀಟರ್‌ನ ಕಾಲಹರಣಪ್ರವೃತ್ತಿಯ ಬಗ್ಗೆ ಬಗೆಗಿನ ಜಗಳವಾಡಿರದಿದ್ದರೆ ಪ್ರಾಯಶಃ ಅವನು ಜೆರೋಮ್ ಪರವಾಗಿರಲು ನಿರ್ಧರಿಸುತ್ತಿದ್ದನೇನೋ.[೨೦೦]

ಪರಿಶುದ್ಧ ಹಾಗೂ ಲೌಕಿಕ ಇತಿಹಾಸಗಳ ಒಂದು ಸಮನ್ವಯವನ್ನವನು ಮಾಡುತ್ತಾನೆ. ಆಬ್ಡನ್[೨೦೧] ಇಸ್ರೇಲ್‌ನಲ್ಲಿ ನ್ಯಾಯಾಧೀಶನಾಗಿದ್ದಾಗ ಈನಾಸ್ ಇಟಲಿಗೆ ಬಂದನೆಂದು ಹಾಗೂ ಅಂತಿಮ ತೀರ್ಪು ಕ್ರಿಸ್ತವಿರುದ್ಧ (ಆಂಟಿಕ್ರೈಸ್ಟ್) ದಿಂದ ಎಂದೂ, ಆದರೆ ಅದರ ತೇದಿ ತಿಳಿಯದೆಂದೂ ಹೇಳಲಾಗಿದೆ.

ನ್ಯಾಯಯಾಧಿಕರಣದ ಯಾತನೆಯ ಬಳಿಕ ಇರುವ ಅಮೋಘವಾದ ಅಧ್ಯಾಯವೊಂದರ ನಂತರ, ಸಂತ ಆಗಸ್ಟೈನ್ ಎಲ್ಲ ವಿಷಯಗಳೂ ಸಂಶಯಾಸ್ಪದವೆನ್ನುವ ಹೊಸ ಅಕೆಡೆಮಿಷಿಯನ್ನರ ವಿರುದ್ಧ ವಾದ ಮಂಡಿಸಲು ತೊಡಗುತ್ತಾನೆ. 'ತಾನು ಗ್ರಹಿಸಿರುವ ವಿಷಯಗಳ ಬಗ್ಗೆ ಖಚಿತ ತಿಳಿವಳಿಕೆ ಹೊಂದಿದ ಈ ಸಂಶಯಗಳನ್ನು ಕ್ರಿಸ್ತ ಚರ್ಚ್‌ಗಳು ಹುಚ್ಚುತನದವು ಎಂದು ಪರಿಗಣಿಸುತ್ತವೆ.' ಧರ್ಮಗ್ರಂಥಗಳ ಸತ್ಯತೆಯ ಬಗ್ಗೆ ನಮಗೆ ಶ್ರದ್ಧೆಯಿರಬೇಕು. ನಿಜವಾದ ಮತಧರ್ಮಕ್ಕಿಂತ ಹೆಚ್ಚಿನ ನಿಜವಾದ ಸದ್ಗುಣವಿಲ್ಲ ಎಂದವನು ವಿವರಿಸುತ್ತಾನೆ. ಪ್ಯಾಗನ್ ಸದ್ಗುಣವು 'ಅಶ್ಲೀಲವೂ ಕೊಳಕುತನದ್ದೂ ಆದ ಪಾಪದೇವತೆಗಳಿಂದ ಉಂಟಾದದ್ದು.' ಕ್ರೈಸ್ತರಲ್ಲಿ ಸದ್ಗುಣಗಳೆನ್ನಿಸಿಕೊಳ್ಳುವಂತಹುವು ಪ್ಯಾಗನ್‌ರಲ್ಲಿ ಅನೀತಿಗಳಾಗುತ್ತವೆ. 'ಆತ್ಮವು ಸದ್ಗುಣಗಳೆಂದು ಪರಿಗಣಿಸಿ ಅದರ ಒಲವನ್ನು ಗಳಿಸುವಂತೆ ತೋರುವ, ದೇವರನ್ನುದ್ದೇಶಿಸುವವುಗಳಾಗಿರದ, ವಿಷಯಗಳು ಸದ್ಗುಣಗಳ ಬದಲಾಗಿ ಅನೀತಿಗಳೇ ಸರಿ.' ಸಮುದಾಯದವಲ್ಲ, ಅವು (ಅಂದರೆ ಚರ್ಚ್) ಸತತವಾಗಿ ಸಂಕಷ್ಟಕ್ಕೊಳಗಾಗುತ್ತವೆ. 'ಭೂಮಿಯ ಮೇಲಣ ನಮ್ಮ ಸಂಘರ್ಷಗಳಲ್ಲಿ ಯಾತನೆ ಗೆದ್ದು ಸಾವು ಅದರ ಅನುಭವವನ್ನು ದೂರಗೊಳಿಸುತ್ತದೆ,

---

೨೦೦. ಗೆಲೇಷಿಯನ್ಸ್, ೨, ೧೧–೧೪.

೨೦೧. ಆಬ್ಡನ್ ಬಗ್ಗೆ ನಮಗೆ ತಿಳಿದಿರುವುದು ಅವನಿಗೆ ನಲವತ್ತು ಮಂದಿ ಮಕ್ಕಳೂ ಮತ್ತು ಮೂವತ್ತು ಮಂದಿ ಅಣ್ಣ–ತಮ್ಮ ಅಕ್ಕ–ತಂಗಿಯರ ಮಕ್ಕಳಿದ್ದರೆಂಬುದು ಮತ್ತು ಈ ಎಪ್ಪತ್ತು ಮಂದಿಯೂ ಕತ್ತೆಸವಾರಿ ಮಾಡುತ್ತಿದ್ದರೆಂಬುದು ಎಂಬುದಷ್ಟೇ (ಜಡ್ಜಸ್, ೧೨, ೧೪).

ಇಲ್ಲವೇ ನಿಸರ್ಗ ಗೆದ್ದು ಯಾತನೆಯನ್ನು ಹೊರದೂಡುತ್ತದೆ. ಆದರೆ ಯಾತನೆಯು ಚಿರಂತನವಾಗಿ ಸಂಕಟಕ್ಕೊಳಗುಮಾಡುತ್ತದೆ, ನಿಸರ್ಗವು ಚಿರಂತನವಾಗಿ ನರಳುತ್ತದೆ, ಎರಡೂ ನೀಡಿದ ಶಿಕ್ಷೆಯು ಮುಂದುವರಿಯಲು ಸಹಿಸಿಕೊಳ್ಳುತ್ತವೆ.'

ಎರಡು ಬಗೆಯ ಪುನರುತ್ಥಾನಗಳಿವೆ: ಸಾವಿನಲ್ಲಿ ಆತ್ಮ ಮತ್ತು ಅಂತಿಮ ತೀರ್ಪಿನಲ್ಲಿ ದೇಹ. ಸ್ವರ್ಣಯುಗದ ಅನೇಕ ತೊಂದರೆಗಳ, ಮತ್ತು ಗಾಗ್ ಮತ್ತು ಮಗಾಗ್‌ರ ಕೃತ್ಯಗಳ ಬಗ್ಗೆ ಚರ್ಚಿಸಿದ ಬಳಿಕ ಅವನು ಎರಡನೆಯ ಥೆಸ್ಸಲೋನಿಯನ್‌ರ (೨, ೧೧, ೧೨): 'ದೇವರು ಅವರೆಡೆಗೆ ಪ್ರಬಲವಾದ ಭ್ರಮೆಗಳನ್ನುಂಟುಮಾಡಿ ಅವರು ಸುಳ್ಳನ್ನು ನಂಬುವಂತೆಯೂ, ಸತ್ಯವನ್ನು ನಂಬದೆ ಅನೀತಿಯಲ್ಲಿಯೇ ಸಂತಸವನ್ನು ಕಾಣುವವರೆಲ್ಲರನ್ನೂ ನರಕಕ್ಕೆ ದೂಡುತ್ತಾನೆ.' ಸರ್ವಶಕ್ತನು ತಮ್ಮನ್ನು ಮೋಸಗೊಳಿಸಿ ಮೋಸಕ್ಕೊಳಗಾದುದರಿಂದ ಶಿಕ್ಷಿಸುವುದನ್ನು ಕೆಲವರು ಅನ್ಯಾಯವೆಂದು ಬಗೆದರೂ, ಸಂತ ಆಗಸ್ಟೈನ್‌ನಿಗೆ ಮಾತ್ರ ಇದು ಸಮಂಜಸವೆಂದೇ ತೋರುತ್ತದೆ. 'ನರಕಕ್ಕೆ ದೂಡಲ್ಪಟ್ಟು ಅವರು ಅಪಮಾರ್ಗವನ್ನು ತುಳಿಯುತ್ತಾರೆ, ಅಪಮಾರ್ಗವನ್ನನುಸರಿಸಿದ್ದರಿಂದ ನರಕಕ್ಕೆ ದೂಡಲ್ಪಡುತ್ತಾರೆ. ಆದರೆ ಅವರನ್ನು ಅಪಮಾರ್ಗಕ್ಕೆ ತಳ್ಳುವುದು ದೇವರ ರಹಸ್ಯ ತೀರ್ಪಿನ ಕಾರಣದಿಂದಾಗಿ, ನ್ಯಾಯಯುತವಾಗಿಯೇ ರಹಸ್ಯಪೂರ್ಣವಾದುದು, ಮತ್ತು ರಹಸ್ಯಮಯವಾಗಿ ನ್ಯಾಯಯುತವಾದುದು; ಜಗತ್ತು ಆರಂಭಗೊಂಡಾಗಿನಿಂದಲೂ ಸತತವಾಗಿ ತೀರ್ಪುಗಳಿಗೊಳಪಡಿಸುವ ಅವನದೂ.' ದೇವರು ಮನುಷ್ಯರನ್ನು ಆಯ್ದವರು ಮತ್ತು ಪರಿತ್ಯಕ್ತರು ಎಂದು ಎರಡಾಗಿ ವಿಭಜಿಸಿದ್ದಾನೆ, ಇದಕ್ಕೆ ಕಾರಣ ಅವರ ಗುಣಾವಗುಣಗಳಿಂದಲ್ಲ, ಆದರೆ ಯಾದೃಚ್ಛಿಕವಾಗಿ: ಎಲ್ಲರೂ ನರಕಕ್ಕೆ ಹೋಗಬೇಕಾದವರೇ, ಹೀಗಾಗಿ ಪರಿತ್ಯಕ್ತರಿಗೆ ಗೊಣಗಾಡಲು ಅವಕಾಶವೇ ಇಲ್ಲ. ಸಂತ ಪೌಲ್‌ನ ಮೇಲಿನ ಉದ್ಧೃತಭಾಗದಿಂದ ತಿಳಿಯುವುದೆಂದರೆ ಅವರು ಕೆಡುಕರಾಗಿರುವುದು ಪರಿತ್ಯಕ್ತರಾಗಿರುವುದರಿಂದಲೇ ಹೊರತು ಪರಿತ್ಯಕ್ತರಾಗಿರುವುದು ಕೆಡುಕರಾಗಿರುವುದರಿಂದಲ್ಲ.

ದೇಹದ ಪುನರುತ್ಥಾನದ ಬಳಿಕ, ನರಕದಲ್ಲಿನ ದೇಹಗಳು ನಾಶ ಹೊಂದದೆಯೇ ಸತತವಾಗಿ ಬೇಯುತ್ತವೆ. ಇದರಲ್ಲಿ ಆಶ್ಚರ್ಯಜನಕವಾದುದೇನೂ ಇಲ್ಲ; ಅದು ಸಲಮ್ಯಾಂಡರ್ ಮತ್ತು ಮೌಂಟ್ ಎಟ್ನ ಪಾಪದೇವತೆಗಳಿಗೂ, ಶರೀರರಹಿತವಾಗಿ, ಭೌತಿಕ ಅಗ್ನಿಯಿಂದ ಸಂಭವಿಸುತ್ತದೆ. ನರಕದ ಯಾತನೆಗಳು ಶುದ್ಧೀಕರಣಗಳಲ್ಲ, ಸಂತರ ಮಧ್ಯಸ್ಥಿಕೆಯಿಂದ ಕಡಿಮೆಯಾಗುವುದೂ ಇಲ್ಲ. ನರಕವು ಚಿರಂತನವಲ್ಲವೆಂದು ಭಾವಿಸುವಲ್ಲಿ ಆರಿಜೆನ್ ತಪ್ಪೆಸಗಿದ್ದಾನೆ. ಧರ್ಮದ್ರೋಹಿಗಳೂ ಪಾಪಿಷ್ಠ ಕ್ಯಾಥೋಲಿಕ್‌ರೂ ನರಕಕ್ಕೆ ಹೋಗುತ್ತಾರೆ.

ಸ್ವರ್ಗದಲ್ಲಿನ ದೇವರ ದರ್ಶನ ಹೊಂದಿದ ಸಂತ ಮತ್ತು ದೇವರ ನಗರದ

ಚಿರಂತನ ಆನಂದದ ವರ್ಣನೆಯಿಂದ ಈ ಭಾಗವು ಕೊನೆಗೊಳ್ಳುತ್ತದೆ.

ಈ ಮೇಲಿನ ತಾತ್ಪರ್ಯದಿಂದ, ಈ ಗ್ರಂಥದ ಪ್ರಾಮುಖ್ಯವು ಸ್ಪಷ್ಟವಾಗದೇ ಹೋಗಬಹುದು. ಪ್ರಭಾವಶಾಲಿಯಾದುದು ಚರ್ಚ್ ಮತ್ತು ಸರ್ಕಾರಗಳ ಬೇರ್ಪಡಿಸುವಿಕೆ; ಅದರಲ್ಲಿ ಸರ್ಕಾರವು ಎಲ್ಲ ಮತಧಾರ್ಮಿಕ ವಿಷಯಗಳಲ್ಲಿ ಚರ್ಚ್‌ಗೆ ವಿಧೇಯವಾಗಿರುವುದರ ಮೂಲಕ ದೇವರ ನಗರದ ಭಾಗವಾಗಿರಲು ಸಾಧ್ಯ ಎಂಬ ಅಂಶ ಸ್ಪಷ್ಟವಾಗಿದೆ. ಆಗಿನಿಂದಲೂ ಚರ್ಚ್‌ನ ಸಿದ್ಧಾಂತವು ಇದೇ ಆಗಿದೆ. ಮಧ್ಯಯುಗದಾದ್ಯಂತ, ಪೋಪ್‌ನ ಅಧಿಕಾರವು ಹೆಚ್ಚಾಗುತ್ತ ಹೋದಂತೆ, ಮತ್ತು ಚರ್ಚ್ ಮತ್ತು ಚಕ್ರವರ್ತಿಯ ನಡುವಣ ಸಂಘರ್ಷದಲ್ಲಿ ತನ್ನ ಧೋರಣೆಯ ಬಗ್ಗೆ ಪಶ್ಚಿಮ ಚರ್ಚ್‌ಗೆ ಸಂತ ಆಗಸ್ಟೈನ್ ಸೈದ್ಧಾಂತಿಕ ಸಮರ್ಥನೆಯನ್ನೊದಗಿಸುತ್ತ ಬಂದಿದ್ದಾನೆ. ನ್ಯಾಯಾಧಿಪತಿಗಳ ಪೌರಾಣಿಕ ಕಾಲದಲ್ಲಿ ಹಾಗೂ ಬ್ಯಾಬಿಲೋನಿಯ ಆಕ್ರಮಣದಿಂದ ಸ್ವತಂತ್ರವಾದ ಮೇಲೆ ಯೆಹೂದಿ ಅವಕಾಶವು ಒಂದು ದೇವಪ್ರಭುತ್ವ (ಥಿಯೋಕ್ರಸಿ) ವಾಗಿದೆ; ಕ್ರೈಸ್ತ ಸರ್ಕಾರವು ಈ ವಿಷಯದಲ್ಲಿ ಅದನ್ನು ಅನುಸರಿಸಬೇಕು. ಚಕ್ರವರ್ತಿ ಹಾಗೂ ಮಧ್ಯಯುಗದ ಬಹುತೇಕ ರಾಜರುಗಳ ದೌರ್ಬಲ್ಯವು ದೇವರ ನಗರದ ಆದರ್ಶವನ್ನು ನನಸಾಗಿಸಿಕೊಳ್ಳುವುದರಲ್ಲಿ ಚರ್ಚ್‌ಗೆ ಬಹುವಾಗಿ ಬಲನೀಡಿದೆ. ಚಕ್ರವರ್ತಿ ಬಲಿಷ್ಠನಾಗಿದ್ದ ಪೂರ್ವದಲ್ಲಿ, ಇದು ಎಂದೂ ಆಗಲೇ ಇಲ್ಲ, ಚರ್ಚ್ ಪಶ್ಚಿಮದಲ್ಲಿಗಿಂತ ಹೆಚ್ಚು ಹೆಚ್ಚಾಗಿ ಸರ್ಕಾರಕ್ಕೆ ಅಧೀನವಾಗಿಯೇ ಇತ್ತು.

ಸಂತ ಆಗಸ್ಟೈನ್‌ನ ಮೋಕ್ಷಸಿದ್ಧಾಂತವನ್ನು ಪುನರುಜ್ಜೀವನಗೊಳಿಸಿದ ಮತಧರ್ಮಸುಧಾರಣೆಯು ಅವನ ದೇವಪ್ರಭುತ್ವದ ಸಿದ್ಧಾಂತದ ಬೋಧನೆಯನ್ನು ಗಾಳಿಗೆ ತೂರಿ ಇರಾಸ್ಟಿಯನ್[೨೦೨] ಆಯಿತು, ಇದಕ್ಕೆ ಮುಖ್ಯ ಕಾರಣ ಕ್ಯಾಥೋಲಿಕ್‌ರ ಜೊತೆಗಿನ ಹೋರಾಟದ ವ್ಯಾವಹಾರಿಕ ತುರ್ತುಗಳು. ಆದರೆ ಪ್ರಾಟೆಸ್ಟಂಟ್ ಇರಾಸ್ಟಿಯನಿಸಂ ಅರೆಮನಸ್ಸಿನದು, ಪ್ರಾಟೆಸ್ಟಂಟರಲ್ಲಿಯೂ ಅತೀವ ಮತ ಧಾರ್ಮಿಕರಾದವರು ಸಂತ ಆಗಸ್ಟೈನ್‌ನ ಪ್ರಭಾವಕ್ಕೆ ಒಳಗಾಗಿದ್ದರು. ಅನಾಬ್ಯಾಪ್ಟಿಸ್ಟರು, ಫಿಫ್ತ್ ಮಾನಾರ್ಕಿ ಮೆನ್, ಮತ್ತು ಕ್ವಾಕರ್‌ಗಳು ಅವನ ಸಿದ್ಧಾಂತದ ಭಾಗವನ್ನು ತೆಗೆದುಕೊಂಡರೂ ಚರ್ಚ್‌ಗೆ ಕಡಿಮೆ ಒತ್ತು ನೀಡಿದರು. ಅವನು ಪೂರ್ವನಿಶ್ಚಿತತೆಯ ಶ್ರದ್ಧೆಯವನು, ಜೊತೆಗೆ ಮೋಕ್ಷಕ್ಕೆ ದೀಕ್ಷಾಸ್ನಾನ ಅನಿವಾರ್ಯವೆಂದವನು; ಈ ಎರಡೂ ಸಿದ್ಧಾಂತಗಳು ಚೆನ್ನಾಗಿ ಸಮರಸಗೊಳ್ಳಲಾರವು, ಹೀಗಾಗಿ ಅತಿರೇಕ ಪ್ರಾಟೆಸ್ಟಂಟ್‌ರು ಎರಡನೆಯದನ್ನು ಕೈಬಿಟ್ಟರು. ಆದರೆ ಅವರ ಅಂತಿಮಗತಿಶಾಸ್ತ್ರ (ಎಸ್ಕಟಾಲಜಿ)[೨೦೩] ಆಗಸ್ಟೈನ್‌ದೇ ಆಗಿ ಉಳಿಯಿತು.

---

೨೦೨. ಮತೀಯ ಅಧಿಕಾರವನ್ನು ಲೌಕಿಕ ಅಧಿಕಾರಕ್ಕೆ ಒಳಪಡಿಸಬೇಕೆಂಬ ಹೀಡಲ್‌ಬರ್ಗ್ ನಗರದ ಇರಾಸ್ಟಸ್ (೧೫೨೪-೮೩) ಎಂಬುವವನ ಪಂಥದ ಅನುಯಾಯಿ.

೨೦೩. ಸಾವು, ತೀರ್ಪು, ಸ್ವರ್ಗ, ನರಕ ಎಂಬ ನಾಲ್ಕು ಅಂತಿಮಗತಿಗಳಿಗೆ ಸಂಬಂಧಿಸಿದ ಶಾಸ್ತ್ರ.

'ದ ಸಿಟಿ ಆಫ್ ಗಾಡ್' ನಲ್ಲಿ ಸ್ವಂತದ್ದಿರುವುದು ಕಡಿಮೆ. ಅಂತಿಮಗತಿಶಾಸ್ತ್ರವು (ಎಸ್ಕಟಾಲಜಿ) ಮೂಲತಃ ಯೆಹೂದಿಗಳದು, ಕ್ರೈಸ್ತಮತಧರ್ಮದೊಳಗೆ ಪ್ರವೇಶಿಸಿದ್ದು ಮುಖ್ಯವಾಗಿ ದಿವ್ಯಜ್ಞಾನದ ಭಾಗದಿಂದ. ಪೂರ್ವನಿಶ್ಚಿತತೆಯ ಸಿದ್ಧಾಂತ ಮತ್ತು ಆಯ್ಕೆ ಸಂತ ಪೌಲ್‌ನದು, ಆದರೆ ಪತ್ರಕವಿತೆ (ಎಪಿಸಲ್)ಗಳಲ್ಲಿ ಕಾಣುವುದಕ್ಕಿಂತ ಹೆಚ್ಚಿನ ಪೂರ್ಣತೆಯನ್ನೂ ತಾರ್ಕಿಕತೆಯನ್ನೂ ಸಂತ ಆಗಸ್ಟೈನ್ ಅದಕ್ಕೆ ನೀಡಿದ. ಅಲೌಕಿಕ ಹಾಗೂ ಲೌಕಿಕ ಇತಿಹಾಸಗಳ ನಡುವಣ ವ್ಯತ್ಯಾಸವನ್ನು ಸ್ಪಷ್ಟವಾಗಿಯೇ ಹಳೆ ಒಡಂಬಡಿಕೆಯು ಶ್ರುತಪಡಿಸುತ್ತದೆ. ಸಂತ ಆಗಸ್ಟೈನ್ ಮಾಡಿದ್ದೆಂದರೆ, ಪಶ್ಚಿಮ ಚಕ್ರಾಧಿಪತ್ಯದ ಪತನ, ಆನಂತರದ ಗೊಂದಲ ಸ್ಥಿತಿಗಳನ್ನು ಕ್ರೈಸ್ತರು ತಮ್ಮ ಶ್ರದ್ಧೆಯನ್ನು ಒತ್ತೆಯಿಡದೆ ಅರಗಿಸಿಕೊಂಡ ರೀತಿ – ಈ ಎಲ್ಲ ಅಂಶಗಳನ್ನು ಒಗ್ಗೂಡಿಸಿ ತನ್ನ ಕಾಲದ ಇತಿಹಾಸಕ್ಕೆ ಜೋಡಿಸಿದ್ದು.

ಯೆಹೂದಿ ಮಾದರಿಯ ಭೂತ-ಭವಿಷ್ಯಗಳ ಇತಿಹಾಸವು ಎಲ್ಲ ಕಾಲದ ದಮನಿತರು ಮತ್ತು ದುರದೃಷ್ಟವಂತರ ಮನಮುಟ್ಟುವಂತೆ ಮಾಡುವ ಸಾಮರ್ಥ್ಯವುಳ್ಳದ್ದು. ಸಂತ ಆಗಸ್ಟೈನ್ ಕ್ರಿಸ್ತ, ಮಾರ್ಕ್ಸ್ ಮತ್ತು ಸಮಾಜವಾದದವರೆಗಿನ ಮಾದರಿಯನ್ನು ಅನುಸರಿಸಿದ. ಮನೋವೈಜ್ಞಾನಿಕವಾಗಿ ಮಾರ್ಕ್ಸ್‌ನನ್ನು ಅರ್ಥಮಾಡಿಕೊಳ್ಳಬೇಕಾದರೆ ಈ ಕೆಳಗಣ ನಿಘಂಟನ್ನು ಅನುಸರಿಸಬೇಕು:

ಯಹ್ವೆಹ್ = ದ್ವಂದ್ವಾತ್ಮಕ ಭೌತವಾದ
ವಿಮೋಚಕ (ಮೆಸಯ) = ಮಾರ್ಕ್ಸ್
ಆಯ್ಕೆಗೊಂಡವರು = ಪಾಮರವರ್ಗ (ಪ್ರಾಲೆಟೇರಿಯಟ್)
ಚರ್ಚ್ = ಕಮ್ಯೂನಿಸ್ಟ್ ಪಕ್ಷ
ದ್ವಿತೀಯಾಗಮನ (ದ ಸೆಕೆಂಟ್ ಕಮಿಂಗ್) = ಕ್ರಾಂತಿ
ನರಕ = ಬಂಡವಾಳಶಾಹಿಗಳಿಗೆ ಆಗುವ ಶಿಕ್ಷೆ
ಸ್ವರ್ಣಯುಗ = ಕಮ್ಯೂನಿಸ್ಟ್ ಕಾಮನ್‌ವೆಲ್ತ್

ಎಡಗಡೆಯಲ್ಲಿನ ಶಬ್ದಗಳು ಬಲಗಡೆಯ ಶಬ್ದಗಳ ಭಾವನಾತ್ಮಕ ಅರ್ಥವನ್ನು ನೀಡುತ್ತವೆ; ಈ ಭಾವನಾತ್ಮಕತೆಯು ಕ್ರೈಸ್ತ ಅಥವಾ ಯೆಹೂದಿ ಪರಿಸರದಲ್ಲಿ ಬೆಳೆದವರಿಗೆ ಪರಿಚಿತವಾದದ್ದು, ಅದು ಮಾರ್ಕ್ಸ್‌ನ ಅಂತಿಮಗತಿಶಾಸ್ತ್ರವನ್ನು ನಂಬುವಂತೆ ಮಾಡುತ್ತದೆ. ನಾಜಿಗಳಿಗೂ ಇಂತಹದೇ ನಿಘಂಟನ್ನು ತಯಾರಿಸಬಹುದು, ಆದರೆ ಅವು ಮಾರ್ಕ್ಸ್‌ನದಕ್ಕಿಂತ ಹೆಚ್ಚು ಹಳೆಯ ಒಡಂಬಡಿಕೆಯದು ಮತ್ತು ಕಡಿಮೆ ಕ್ರೈಸ್ತರದು; ಅವರ ವಿಮೋಚಕನು ಕ್ರಿಸ್ತನಿಗಿಂತ ಮೆಕಾಬೀಸ್‌ನನ್ನು ಹೆಚ್ಚು ಹೋಲುವಂತಹವನು.

೩. ಪೆಲೇಜಿಯನ್ ವಿವಾದ[೨೦೪]

ಸಂತ ಆಗಸ್ಟೈನ್‌ನ ಸಿದ್ಧಾಂತದ ಅತ್ಯಂತ ಪ್ರಭಾವಶಾಲಿ ಭಾಗವು ಪೆಲೇಜಿಯನ್ ಧರ್ಮದ್ರೋಹದ ವಿರುದ್ಧದ ಹೋರಾಟಕ್ಕೆ ಸಂಬಂಧಿಸಿದ್ದು. ಪೆಲೇಜಿಯಸ್ ವೇಲ್ಸ್‌ನವನು, ಅವನ ನಿಜವಾದ ಹೆಸರು ಮಾರ್ಗನ್ ಎಂದು, ಅಂದರೆ ಗ್ರೀಕ್‌ನಲ್ಲಿ 'ಸಮುದ್ರದ ಮನುಷ್ಯ'. ಅವನು ಸುಸಂಸ್ಕೃತನಾದ ಹಿತಕರ ಮತಪ್ರಚಾರಕ, ತನ್ನ ಇತರ ಸಮಕಾಲೀನರಿಗಿಂತ ಕಡಿಮೆ ದುರಭಿಮಾನಿ. ಅವನಿಗೆ ಸ್ವತಂತ್ರಇಚ್ಛಾಶಕಿಯಲ್ಲಿ ಶ್ರದ್ಧೆ, ಮೂಲಪಾಪವನ್ನು ಪ್ರಶ್ನೆ ಮಾಡಿದವನು, ಮನುಷ್ಯರು ಸದ್ಗುಣಿಗಳಾಗಿ ಬಾಳಿದರೆ ಅದಕ್ಕೆ ಕಾರಣ ಅವರ ನೈತಿಕತೆಯ ಪರಿಣಾಮ. ಅವರು ಸರಿಯಾಗಿ ನಡೆದುಕೊಂಡರೆ, ಮತ್ತು ಅವರು ಸಂಪ್ರದಾಯಬದ್ಧರಾಗಿದ್ದರೆ, ಅವರ ಸದ್ಗುಣಗಳ ಕಾರಣದಿಂದಾಗಿ ಅವರು ಸ್ವರ್ಗಕ್ಕೆ ಹೋಗುತ್ತಾರೆ

ಈ ಅಭಿಪ್ರಾಯಗಳು, ಈಗ ಇದೆಲ್ಲ ಸಾಮಾನ್ಯವಾದುದೆನಿಸಿದರೂ, ಆ ಕಾಲದಲ್ಲಿ ಭಾರಿ ವಿವಾದವನ್ನುಂಟುಮಾಡಿತು, ಸಂತ ಆಗಸ್ಟೈನ್‌ನ ಪ್ರಯತ್ನಗಳಿಂದಾಗಿ, ಅದನ್ನು ಧರ್ಮದ್ರೋಹವೆಂದು ಪರಿಗಣಿಸಲಾಯಿತು. ಅದಕ್ಕೆ ಮಿತವಾದ ಯಶಸ್ಸಷ್ಟೇ ಸಿಕ್ಕಿತು. ಪಾಷಂಡಿತನಕ್ಕಾಗಿ ಅವನಿಗೆ ಎಚ್ಚರಿಕೆ ನೀಡಲು ಸಂತ ಆಗಸ್ಟೈನ್ ಜೆರೂಸಲೆಂನ ಪೇಟ್ರಿಯಾರ್ಕ್‌ಗೆ ಬರೆಯಬೇಕಾಯಿತು ಅವನಾಗಲೇ ಈ ಹೊತ್ತಿಗೆ ಪೌರ್ವಾತ್ಯ ಮತಧರ್ಮಶಾಸ್ತ್ರಜ್ಞರನ್ನು ಈ ಕುರಿತು ಒಪ್ಪಿಸಿದ್ದ. ಅವನ ಖಂಡನೆಯ ನಂತರವೂ, ಅರೆಪೆಲೇಜಿಯನ್‌ರು ಎನಿಸಿಕೊಂಡಿದ್ದ ಇತರ ಪೆಲೇಜಿಯನ್‌ರು ಅವನ ಅಭಿಪ್ರಾಯದ ದುರ್ಬಲ ರೂಪವನ್ನು ಸಮರ್ಥಿಸಿದ್ದರು. ಸಂತನ ಪರಿಶುದ್ಧ ಬೋಧನೆಯು ಸಂಪೂರ್ಣ ಯಶಸ್ವಿಯಾಗುವುದಕ್ಕೂ ಬಹು ಮುಂಚೆಯೇ, ವಿಶೇಷವಾಗಿ ಫ್ರಾನ್ಸ್‌ನಲ್ಲಿ, ೫೨೯ ರಲ್ಲಿ ಅರೆಪೆಲೇಜಿಯನ್‌ರ ಖಂಡನೆಯನ್ನು ಆರೆಂಜ್‌ನ ಪರಿಷತ್ತು ಕೈಗೊಂಡಿತು.

ಪತನದ ಮುಂಚೆ ಆಡಮ್ ಸ್ವತಂತ್ರಇಚ್ಛಾಶಕಿಯನ್ನು ಹೊಂದಿದ್ದು ಪಾಪ ಮಾಡದೆಯೇ ಇರಬಹುದಾಗಿತ್ತು ಎಂದು ಸಂತ ಆಗಸ್ಟೈನ್ ಬೋಧಿಸಿದ. ಆದರೆ ಅವನು ಮತ್ತು ಈವ್ ಸೇಬನ್ನು ತಿಂದದ್ದರಿಂದಾಗಿ ಅವನಲ್ಲಿ ಭ್ರಷ್ಟತೆಯು ಹೊಕ್ಕಿತು, ಮುಂದಿನ ಅವನ ಎಲ್ಲ ಪೀಳಿಗೆಗಳಲ್ಲಿಯೂ ಇಳಿದು ಬಂತು, ಹೀಗಾಗಿ ಯಾರೂ ಸ್ವಸಾಮರ್ಥ್ಯದಿಂದ ಪಾಪ ಮಾಡದೆ ಇರಲಾರದಾದರು. ದೇವರ ಕೃಪೆ ಮಾತ್ರವೇ ಮನುಷ್ಯರನ್ನು ಸದ್ಗುಣಿಗಳನ್ನಾಗಿ ಮಾಡುವುದು. ನಾವೆಲ್ಲರೂ ಆಡಮ್‌ನ ಪಾಪವನ್ನು ವಂಶಪಾರಂಪರ್ಯದಿದ ಪಡೆದಿರುವುದರಿಂದಾಗಿ ನಾವೆಲ್ಲರೂ ನಿರಂತರ ನರಕವಾಸಕ್ಕೆ

---

೨೦೪. ಆದಿಮಪಾತಕದ ಸಿದ್ಧಾಂತವನ್ನು ನಿರಾಕರಿಸಿದ ಬ್ರಿಟಿಷ್ ಸನ್ಯಾಸಿ ಪೆಲೇಜಿಯಸ್ (ಕ್ರಿಶ ೪–೫ ನೆಯ ಶತಮಾನ) ಅನುಯಾಯಿ

ಬಾಧ್ಯರು. ಯಾರು, ಶಿಶುಗಳು ಕೂಡ, ದೀಕ್ಷಾಸ್ನಾನ ಪಡೆಯದೆ ಸಾಯುತ್ತಾರೆಯೋ ಅವರು ನರಕಕ್ಕೆ ಹೋಗಿ ಕೊನೆಯಿಲ್ಲದ ಯಾತನೆಗೊಳಗಾಗುತ್ತಾರೆ. ಈ ಕುರಿತು ನಾವಾರಿಗೂ ದೂರಲು ಸಾಧ್ಯವಿಲ್ಲ, ಯಾಕೆಂದರೆ ನಾವೆಲ್ಲ ಕೆಡುಕರೇ. ('ಕನ್‌ಫೆಶನ್ಸ್'ನಲ್ಲಿ ತೊಟ್ಟಿಲಲ್ಲಿಯೇ ತಾನು ಪಾಪಕ್ಕೆ ಪಕ್ಕಾದುದನ್ನು ವಿವರಿಸುತ್ತಾನೆ). ಆದರೆ ದೇವರ ಕೃಪೆಯಿಂದ, ದೀಕ್ಷಾಸ್ನಾನ ಹೊಂದಿದವರಲ್ಲಿನ ಕೆಲವರು ಸ್ವರ್ಗಕ್ಕೆ ಹೋಗಲು ಅರ್ಹತೆ ಪಡೆಯುತ್ತಾರೆ, ಇವರು ಆಯ್ಕೆಗೊಂಡವರು. ಅವರು ಒಳ್ಳೆಯವರೆಂಬ ಕಾರಣದಿಂದಾಗಿ ಸ್ವರ್ಗಕ್ಕೆ ಹೋಗುವುದಿಲ್ಲ; ನಾವೆಲ್ಲ ಸಂಪೂರ್ಣವಾಗಿ ನೀತಿಭ್ರಷ್ಟರು, ದೇವರ ಕೃಪೆಯು ಆಯ್ಕೆಗೊಂಡವರಿಗೆ ಮಾತ್ರ ಕರುಣಿಸಲ್ಪಡುತ್ತದೆ, ನಾವು ಬೇರೆಯ ರೀತಿಯಲ್ಲಿರುವಂತೆ ಮಾಡುತ್ತದೆ. ಕೆಲವರು ಮಾತ್ರ ವಿಮೋಚನೆಗೊಳ್ಳುವುದು, ಉಳಿದವರು ನರಕಕ್ಕೊಳಗಾಗುವುದು ಯಾಕೆ ಎಂಬುದಕ್ಕೆ ಯಾವ ಕಾರಣವನ್ನೂ ನೀಡಲಾಗುವುದಿಲ್ಲ; ಅದು ದೇವರ ಗೋಚರವಾಗದ ಆಯ್ಕೆಯ ಫಲ. ನಿತ್ಯನರಕವು ದೇವರ ನ್ಯಾಯಕ್ಕೆ ಸಾಕ್ಷಿ; ವಿಮೋಚನೆಯು ಅವನ ಕೃಪೆ. ಎರಡೂ ಅವನ ಒಳ್ಳೆಯತನವನ್ನು ತೋರಿಸುತ್ತದೆ.

ಈ ತೀಕ್ಷ್ಣ ಸಿದ್ಧಾಂತವನ್ನು ಸಮರ್ಥಿಸುವ ವಾದಗಳನ್ನು – ಇದನ್ನು ಮತ್ತೆ ಕಾಲ್ವಿನ್ ಪುನಶ್ಚೇತನಗೊಳಿಸಿದ, ಆನಂತರ ಕ್ಯಾಥೋಲಿಕ್ ಚರ್ಚ್ ಎತ್ತಿ ಹಿಡಿಯಲಿಲ್ಲ – ಸಂತ ಪೌಲ್‌ನ ಬರವಣಿಗೆಯಲ್ಲಿ ಕಾಣಬಹುದು, ಅದರಲ್ಲಿಯೂ ರೋಮನ್‌ರಿಗೆ ಬರೆದ ಪ್ರವರ್ತಕಪತ್ರದಲ್ಲಿ. ಒಬ್ಬ ವಕೀಲ ಕಾನೂನನ್ನು ನೋಡುವ ದೃಷ್ಟಿಯಿಂದ ಆಗಸ್ಟೈನ್ ಇದನ್ನು ನೋಡುತ್ತಾನೆ: ವ್ಯಾಖ್ಯಾನ ಸಮರ್ಥವಾಗಿದೆ, ಪಠ್ಯಗಳಿಂದ ಬೇಕಾದಷ್ಟು ಅರ್ಥವನ್ನು ಹೊರಗೆಳೆಯಲಾಗಿದೆ. ಕೊನೆಯಲ್ಲಿ, ಆಗಸ್ಟೈನ್ ಸಾಧಿಸಿದ ಸಂತ ಪೌಲ್‌ನ ಶ್ರದ್ಧೆಗಳನ್ನಲ್ಲ, ಕೆಲವು ಭಾಗಗಳನ್ನು ಪ್ರತ್ಯೇಕವಾಗಿ ಪರಿಗಣಿಸಿ ತಾನು ಹೇಳುವ ಅರ್ಥವೇ ಅಲ್ಲಿದೆ ಎಂದು ನಂಬುವಂತೆ ಬಿಂಬಿಸಲಾಗಿದೆ. ದೀಕ್ಷಾಸ್ನಾನಕ್ಕೊಳಗಾಗದ ಶಿಶುಗಳೂ ನಿತ್ಯನರಕಕ್ಕೆ ಹೋಗುತ್ತಾರೆಂಬುದನ್ನು ಆಘಾತಕರ ಎಂದು ಭಾವಿಸಿದಂತೆ ತೋರಬಹುದು, ಆದರೆ ಅದನ್ನು ಒಳ್ಳೆಯ ದೇವರದೆಂದು ಹೇಳಲಾಗಿದೆ. ಆದರೆ ಪಾಪದ ಬಗೆಗಿನ ಮನವರಿಕೆ ಅವನನ್ನು ಎಷ್ಟು ಆವರಿಸಿತ್ತೆಂದರೆ ಅವನು ನವಜಾತ ಶಿಶುಗಳನ್ನು ಸೈತಾನನ ಅಂಗಗಳಂತೆ ಭಾವಿಸುತ್ತಾನೆ. ಮಧ್ಯಯುಗದ ಚರ್ಚ್‌ನಲ್ಲಿ ಬಹುತೇಕ ಅತ್ಯಂತ ಉಗ್ರವಾದುದರ ಮೂಲವನ್ನು ಅವನ ವೈಶ್ವಿಕ ಅಪರಾಧಪ್ರಜ್ಞೆಯಲ್ಲಿ ಗುರುತಿಸಬಹುದು.

ಸಂತ ಆಗಸ್ಟೈನ್‌ನನ್ನು ಕಾಡುವ ಒಂದೇ ಒಂದು ಬೌದ್ಧಿಕ ತೊಂದರೆಯಿದೆ. ಮನುಷ್ಯನನ್ನು ಸೃಷ್ಟಿಸಿದುದರ ಬಗೆಗಿನ ವಿಷಾದವೆಂಬಂತೆ ತೋರುವುದಲ್ಲ, ಮನುಷ್ಯಸಂಕುಲದ ಬಹುತೇಕರು ನಿತ್ಯನರಕಯಾತನೆಗೊಳಗಾಗುವ ಪೂರ್ವನಿರ್ಧಾರದ ಬಗ್ಗೆ. ಅವನನ್ನು ಕಾಡುವುದೆಂದರೆ, ಸಂತ ಪೌಲ್ ಬೋಧಿಸುವ

ಹಾಗೆ ಆದಿಮ ಪಾಪವನ್ನು ಆಡಮ್‌ನಿಂದ ಪಾರಂಪರಿಕವಾಗಿ ಪಡೆದಿರುವುದಾದರೆ, ಆತ್ಮ ಹಾಗೂ ದೇಹಗಳು ತಾಯ್ತಂದೆಯರಿಂದ ಇಳಿದುಬಂದಿರಬೇಕು, ಯಾಕೆಂದರೆ ಪಾಪವು ಆತ್ಮಕ್ಕೆ ಸಂಬಂಧಿಸಿದ್ದು, ದೇಹಕ್ಕಲ್ಲ. ಈ ಸಿದ್ಧಾಂತದಲ್ಲಿ ಅವನಿಗೆ ತೊಡಕುಗಳು ಕಾಣಿಸಿಕೊಳ್ಳುತ್ತವೆಂಬುದಾದರೂ ಧರ್ಮಗ್ರಂಥಗಳು ಈ ಕುರಿತು ಮೌನವಾಗಿರುವುದರಿಂದ, ಒಂದು ಅಭಿಪ್ರಾಯದ ಮೇಲೆ ಮೋಕ್ಷದ ಬಗೆಗೆ ನಿರ್ಧರಿಸುವ ಆವಶ್ಯಕತೆಯಿಲ್ಲ.

ಕತ್ತಲ ಯುಗದ ಹಿಂದಿನ ಬೌದ್ಧಿಕ ಪಾರಮ್ಯದ ಬುದ್ಧಿಜೀವಿಗಳು ನಾಗರಿಕತೆಯನ್ನುಳಿಸುವ ಅಥವಾ ಬಾರ್ಬೇರಿಯನ್ನರನ್ನು ಹೊಡೆದೋಡಿಸುವ ಅಥವಾ ಆಡಳಿತದ ದುರುಪಯೋಗವನ್ನು ಸುಧಾರಿಸುವ ಕಡೆಗೆ ಗಮನ ಹರಿಸದೆ, ಕನ್ಯತ್ವದ ಗುಣಗಳು, ದೀಕ್ಷಾಸ್ನಾನಕ್ಕೊಳಗಾಗದ ಶಿಶುಗಳ ನಿತ್ಯನರಕಯಾತನೆಯ ಬಗ್ಗೆ ಯೋಚಿಸಿದುದು ವಿಚಿತ್ರವೆನಿಸುತ್ತದೆ. ಇವೆಲ್ಲ ಮತಾಂತರಗೊಂಡ ಬಾರ್ಬೇರಿಯನ್ನರಿಗೆ ಚರ್ಚ್ ಕೊಡಮಾಡಿದ ಪೂರ್ವಾಗ್ರಹಗಳೆಂಬುದನ್ನು ನೋಡಿದರೆ, ಮುಂದಿನ ಪೀಳಿಗೆಯೂ ಕ್ರೌರ್ಯದಲ್ಲಿಯೂ ಮೂಢಶ್ರದ್ಧೆಯಲ್ಲಿಯೂ ಹಿಂದಿನ ಎಲ್ಲ ಕಾಲಗಳನ್ನೂ ಮೀರಿಸಿದುದರಲ್ಲಿ ಆಶ್ಚರ್ಯಕರವಾದುದೇನೂ ಕಾಣಿಸುವುದಿಲ್ಲ.

○

೫

ಐದು ಮತ್ತು ಆರನೆಯ ಶತಮಾನಗಳು

ಐದನೆಯ ಶತಮಾನವು ಅನ್ಯದೇಶೀಯ ದಾಳಿ ಮತ್ತು ಪಶ್ಚಿಮ ಚಕ್ರಾಧಿಪತ್ಯದ ಪತನದ ಕಾಲ. ೪೩೦ ರಲ್ಲಿ ಆಗಸ್ಟೈನ್‌ನ ಮರಣಾನಂತರ, ಇದ್ದ ತತ್ವಜ್ಞಾನ ಅಲ್ಪ: ಅದು ವಿನಾಶಕೃತ್ಯಗಳ ಶತಮಾನ, ಆದರೆ ಅದು ಮುಂದೆ ಯೂರೋಪ್ ಯಾವ ಹಾದಿಯಲ್ಲಿ ಮುನ್ನಡೆಯಬೇಕು ಎಂಬುದನ್ನು ನಿರ್ಧರಿಸುವ ಕಾಲವೂ ಹೌದು. ಈ ಶತಮಾನದಲ್ಲಿಯೇ ಇಂಗ್ಲಿಷ್‌ರು ಬ್ರಿಟನ್ ಅನ್ನು ಆಕ್ರಮಿಸಿದ್ದು, ಹಾಗಾಗಿ ಅದು ಇಂಗ್ಲಂಡ್ ಆಯಿತು. ಈ ಶತಮಾನದಲ್ಲಿಯೇ ಫ್ರಾಂಕ್ಲಿನ್ ಆಕ್ರಮಣವು ಗಾಲ್‌ರನ್ನು ಫ್ರಾನ್ಸ್‌ಗೆ ಓಡಿಸಿದ್ದು, ಮತ್ತು ವ್ಯಾಂಡಲ್‌ರು ಸ್ಪೈಯಿನ್ ಅನ್ನು ಆಕ್ರಮಿಸಿ, ತಮ್ಮ ಹೆಸರನ್ನು ಆಂಡಲೂಸಿಯಕ್ಕೆ ನೀಡಿದ್ದು. ಈ ಶತಮಾನದ ಮಧ್ಯದ ಅವಧಿಯಲ್ಲಿ ಸಂತ ಪ್ಯಾಟ್ರಿಕ್ ಐರಿಶ್ ಜನರನ್ನು ಕ್ರೈಸ್ತಮತಕ್ಕೆ ಮತಾಂತರಿಸಿದ್ದು. ಪಶ್ಚಿಮ ಜಗತ್ತಿನದಾದ್ಯಂತ ಒರಟು ಜರ್ಮಾನಿಕ್ ಪ್ರಭುತ್ವವು ಚಕ್ರಾಧಿಪತ್ಯದ ಕೇಂದ್ರೀಕೃತ ಆಡಳಿತಕ್ಕೆ ಒಳಗುಮಾಡುವುದರಲ್ಲಿ ಯಶಸ್ವಿಯಾದದ್ದು. ಸಮ್ರಾಟಸ್ತಂಭವು ಕೊನೆಗಂಡಿತು, ಮಹಾ ದಾರಿಗಳು ನಾಶ ಹೊಂದಿದವು, ವ್ಯಾಪಕ ವ್ಯಾಪಾರಕ್ಕೆ ಯುದ್ಧಗಳು ತಡೆಯೊಡ್ಡಿದವು, ಹೀಗಾಗಿ ಜೀವನವು ರಾಜಕೀಯವಾಗಿಯೂ ಆರ್ಥಿಕವಾಗಿಯೂ ಮತ್ತೆ ಸ್ಥಳೀಯವಾದವು. ಕೇಂದ್ರೀಕೃತ ಅಧಿಕಾರವು ಚರ್ಚ್‌ಗೆ ಮಾತ್ರ ಮೀಸಲಾಯಿತು, ಅಲ್ಲೂ ತುಂಬ ಕಷ್ಟಗಳ ನಡುವೆ.

ಐದನೆಯ ಶತಮಾನದಲ್ಲಿ ಚಕ್ರಾಧಿಪತ್ಯವನ್ನು ಆಕ್ರಮಿಸಿದ ಜರ್ಮಾನಿಕ್ ಬುಡಕಟ್ಟುಗಳಲ್ಲಿ ಬಹು ಮುಖ್ಯರಾದವರು ಗಾಥ್‌ರು. ಪೂರ್ವದ ಕಡೆಯಿಂದ ಆಕ್ರಮಣ ನಡೆಸಿದ ಹೂಣರು ಅವರನ್ನು ಪಶ್ಚಿಮದ ಕಡೆಗೆ ತರುಮಿದರು. ಮೊದಲು ಅವರು ಬಯಸಿದ್ದು ಪೂರ್ವ ಸಾಮಾಜ್ಯವನ್ನು ವಶಪಡಿಸಿಕೊಳ್ಳುವುದನ್ನು, ಆದರೆ ಸೋತರು; ಆನಂತರ ಅವರು ಇಟಲಿಯ ಕಡೆ ತಿರುಗಿದರು. ಡಯೋಕ್ಲೀಸಿಯನ್ನರ ಕಾಲದಿಂದ ಅವರನ್ನು ರೋಮನ್ ಸಂಬಳದಾರರಾಗಿ ನೇಮಿಸಿಕೊಳ್ಳಲಾಗಿತ್ತು; ಇದು ಅವರಿಗೆ ಯುದ್ಧಕಲೆಯ ಬಗ್ಗೆ ಬಾರ್ಬೇರಿಯನ್ನರು ತಿಳಿಯಬಹುದಾದುದಕ್ಕಿಂತ

ಹೆಚ್ಚಿನ ತಿಳಿವಳಿಕೆಯನ್ನು ತಂದಿತ್ತು. ಗಾಥ್‌ರ ದೊರೆಯಾದ ಅಲ್ಯಾರಿಕ್ ೪೧೦ ರಲ್ಲಿ ರೋಮ್ ಅನ್ನು ವಶಪಡಿಸಿಕೊಂಡ, ಆದರೆ ಅದೇ ವರ್ಷ ಸತ್ತ. ಓಸ್ಟ್ರೋಗಾಥ್‌ರ ದೊರೆ ಒಡೋವಕೆರ್ ೪೭೬ ರಲ್ಲಿ ಪಶ್ಚಿಮ ಚಕ್ರಾಧಿಪತ್ಯಕ್ಕೆ ಮಂಗಳ ಹಾಡಿ ೪೯೩ ರವರೆಗೂ ಆಳಿದ, ಆಗಲೇ ೫೨೬ ರವರೆಗೆ ಮತ್ತೊಬ್ಬ ಓಸ್ಟ್ರೋಗಾಥ್ ಆದ ಇಟಲಿಯ ದೊರೆ ಥಿಯೋಡೊರಿಕ್ ಅವನನ್ನು ದ್ರೋಹದಿಂದ ಕೊಲೆಗೈದ. ಸ್ವಲ್ಪ ಕಾಲದಲ್ಲಿಯೇ ನಾನು ಅವನ ಬಗ್ಗೆ ಹೆಚ್ಚು ಹೇಳುತ್ತೇನೆ. ಅವನು ಇತಿಹಾಸ ಪುರಾಣಗಳ ದೃಷ್ಟಿಯಿಂದ ಮುಖ್ಯನಾದವನು; ನೀಬನ್‌ಲುಂಗೆನ್‌ಲೈಡ್‌ನಲ್ಲಿ ಅವನು 'ಡಯೆಟ್ರಿಕ್ ವಾನ್ ಬೆರ್ನ್' (ಬೆರ್ನ್ ಅಂದರೆ ವೆರೋನ) ಆಗಿ ಕಾಣಿಸಿಕೊಳ್ಳುತ್ತಾನೆ.

ಈ ಮಧ್ಯೆ, ವ್ಯಾಂಡಲ್‌ರು ಆಫ್ರಿಕದಲ್ಲಿಯೂ, ವಿಸಿಗಾಥ್‌ರು ದಕ್ಷಿಣ ಫ್ರಾನ್ಸ್‌ನಲ್ಲಿಯೂ ಮತ್ತು ಫ್ರಾಂಕ್‌ರು ಉತ್ತರದಲ್ಲಿಯೂ ನೆಲೆಸಿದರು.

ಜರ್ಮ್ಯಾನಿಕ್ ಆಕ್ರಮಣದ ನಡುವೆ ಆಟ್ಟಿಲ ನಾಯಕತ್ವದಲ್ಲಿ ಹೂಣರ ದುರಾಕ್ರಮಣ ನಡೆಯಿತು. ಹೂಣರು ಮೊಂಗಲ್ ಬುಡಕಟ್ಟಿನವರು, ಆದರೆ ಅವರನ್ನು ಎಷ್ಟೋ ವೇಳೆ ಗಾಥ್‌ರೊಡನೆ ಸಮೀಕರಿಸುತ್ತಾರೆ. ಆದರೆ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಗಾಲ್ ಅನ್ನು ೪೫೧ ರಲ್ಲಿ ಆಕ್ರಮಿಸಿಕೊಂಡಾಗ ಅವರು ಗಾಥ್‌ರೊಡನೆ ಜಗಳವಾಡಿದರು; ಗಾಥ್‌ರೂ ರೋಮನ್‌ರೂ ಅವರನ್ನು ಅದೇ ವರ್ಷ ಶಲಾನ್ಸ್‌ನಲ್ಲಿ ಸೋಲಿಸಿದರು. ಆಟ್ಟಿಲ ಆಗ ಇಟಲಿಯ ವಿರುದ್ಧ ತಿರುಗಿ ರೋಮ್ ಕಡೆ ನಡೆಯುವ ಆಲೋಚನೆ ಮಾಡಿದರೂ, ರೋಮ್ ಅನ್ನು ವಶಪಡಿಸಿಕೊಂಡ ಮೇಲೆಯೇ ಆಟ್ಟಿಲ ಸತ್ತದ್ದು ಎಂದು ನೆನಪಿಸಿ ಪೋಪ್ ಲಿಯೋ ಅವನನ್ನು ಅದರಿಂದ ವಿಮುಖಗೊಳಿಸಿದ. ಅವನ ತಾಳ್ಮೆ ಯಾವ ಫಲವನ್ನೂ ನೀಡಲಿಲ್ಲ, ಮಾರನೆಯ ವರ್ಷವೇ ಸತ್ತ. ಅವನ ಮರಣಾನಂತರ ಹೂಣರ ಅಧಿಕಾರ ಕುಸಿಯಿತು.

ಈ ಗೊಂದಲಮಯ ಅವಧಿಯಲ್ಲಿ ಚರ್ಚ್ ಅವತಾರದ ಬಗೆಗಿನ ಒಂದು ಸಂಕೀರ್ಣ ವಿವಾದದಲ್ಲಿ ಸಿಲುಕಿತು. ಚರ್ಚೆಯಲ್ಲಿ ಮುಖ್ಯರಾದ ಇಬ್ಬರು ಮತಪ್ರಚಾರಕರಾದ ಸಿರಿಲ್ ಮತ್ತು ನೆಸ್ಟೋರಿಯಸ್ ಇದ್ದರು; ಮುಂದೆ ಅವರಲ್ಲಿ ಒಬ್ಬನನ್ನು ಆಕಸ್ಮಿಕವಾಗಿ ಸಂತನೆಂದೂ, ಇನ್ನೊಬ್ಬನನ್ನು ಧರ್ಮದ್ರೋಹಿಯೆಂದೂ ಘೋಷಿಸಲಾಯಿತು. ಸಂತ ಸಿರಿಲ್ ಸುಮಾರು ೪೧೨ ರಿಂದ ತಾನು ಸತ್ತ ೪೪೪ ರವರೆಗೂ ಅಲೆಕ್ಸಾಂಡ್ರಿಯದ ಪೇಟ್ರಿಯಾರ್ಕ್ ಆಗಿದ್ದ; ನೆಸ್ಟೋರಿಯಸ್ ಕಾನ್‌ಸ್ಟಾಂಟಿನೋಪಲ್‌ನ ಪೇಟ್ರಿಯಾರ್ಕ್ ಆಗಿದ್ದ. ಚರ್ಚೆಯ ಮುಖ್ಯ ಅಂಶವಾಗಿದ್ದುದು ಕ್ರಿಸ್ತನ ದೈವಿಕತೆ ಮಾನವತೆಗಳ ಸಂಬಂಧ. ಒಬ್ಬ ಮಾನವ ಇನ್ನೊಬ್ಬ ದೈವಿಕನಾದ ಇಬ್ಬರು ಇದ್ದರೆ? ಇದು ನೆಸ್ಟೋರಿಯಸ್‌ನ ಅಭಿಪ್ರಾಯ. ಇಲ್ಲದಿದ್ದರೆ, ಇದ್ದುದು ಮಾನವ ಸ್ವಭಾವ ಮತ್ತು ದೈವಿಕ ಸ್ವಭಾವಗಳೆರಡೂ ಇದ್ದ ಒಬ್ಬ ವ್ಯಕ್ತಿಯೇ ಅಥವಾ ಒಂದೊಂದೇ ಸ್ವಭಾವ ಹೊಂದಿದ್ದ ಇಬ್ಬರು ವ್ಯಕ್ತಿಗಳೇ?

ಐದನೆಯ ಶತಮಾನದಲ್ಲಿ ಈ ಪ್ರಶ್ನೆಗಳು ಅನೂಹ್ಯ ಪ್ರಮಾಣದ ಕೋಪೋದ್ರೇಕಗಳನ್ನು ಎಬ್ಬಿಸಿದವು. 'ದಿಗ್ಭ್ರಮೆಗೊಳಗಾದವರು ಮತ್ತು ಕ್ರಿಸ್ತನನ್ನು ದೈವಿಕತೆ ಮತ್ತು ಮಾನವತೆಗಳಿದ್ದ ಇಬ್ಬರೆಂದು ಪರಿಗಣಿಸಲು ಭಯಪಡುತ್ತಿದ್ದವರು ಇವರ ನಡುವೆ ಒಳಗೊಳಗೇ ಬಗೆಹರಿಸಲಾಗದ ಭಿನ್ನಾಭಿಪ್ರಾಯಗಳು ಮನೆಮಾಡಿದ್ದವು.'[೨೦೫]

ಒಬ್ಬನೇ ಎಂದು ಭಾವಿಸಿದ್ದ ಸಂತ ಸಿರಿಲ್ ಒಬ್ಬ ಅತ್ಯುತ್ಸಾಹದ ಅಂಧಾಭಿಮಾನಿ, ಅಲೆಕ್ಸಾಂಡ್ರಿಯದ ಭಾರಿ ಯೆಹೂದಿ ವಸಾಹತುಗಳಲ್ಲಿನ ಜನರ ಹತ್ಯಾಕಾಂಡಕ್ಕೆ ಚಿತಾವಣೆ ಮಾಡಲು ತನ್ನ ಪೇಟ್ರಿಯಾರ್ಕ್ ಸ್ಥಾನವನ್ನವನು ದುರುಪಯೋಗಪಡಿಸಿಕೊಂಡ. ಅವನು ಹೆಸರುಗಳಿಸಲು ಮುಖ್ಯ ಕಾರಣ ಹೈಪೇಷಿಯಳನ್ನು ಗಲ್ಲಿಗೇರಿಸಿದ್ದು; ಮತಾಂಧತೆಯ ಕಾಲದಲ್ಲಿದ್ದ ಆಕೆಯಾದರೋ ನವಪ್ಲೇಟೋವಾದದ ತತ್ವಜ್ಞಾನಕ್ಕೆ ಬದ್ಧಳಾಗಿದ್ದ ಹಾಗೂ ತನ್ನ ಪ್ರತಿಭೆಯನ್ನು ಗಣಿತಕ್ಕೆ ಮೀಸಲಾಗಿರಿಸಿದ್ದ ಗಣ್ಯ ಮಹಿಳೆ. 'ಅವಳ ಗಾಡಿಯಿಂದ ಅವಳನ್ನೆಳೆದು, ಬತ್ತಲೆಗೊಳಿಸಿ, ಚರ್ಚ್‌ಗೆ ಎಳೆದುಕೊಂಡು ಹೋಗಿ ಪೀಟರ್ ದ ರೀಡರ್ ಹಾಗೂ ಅನಾಗರಿಕ ಕ್ರೂರಿಗಳ ಗುಂಪು ತಮ್ಮ ಕೈಯಿಂದಲೇ ಅಮಾನವೀಯವಾಗಿ ಕೊಚ್ಚಿಹಾಕಿದರು; ಅವಳ ಮಾಂಸವನ್ನು ಮೂಳೆಗಳಿಂದ ಚೂಪಾದ ಆಯ್‌ಸ್ಟರ್ ಚಿಪ್ಪಿನಿಂದ ಹೆರೆದು ಅವಳ ಒದ್ದಾಡುವ ಅಂಗಗಳನ್ನು ಬೆಂಕಿಗೆಸೆದರು. ಈ ಕುರಿತ ನ್ಯಾಯಯುತ ವಿಚಾರಣೆ ಹಾಗೂ ಶಿಕ್ಷೆಗಳನ್ನು ಕಾಲಕಾಲದ ಕೊಡುಗೆಗಳಿಂದ ನಿಲ್ಲಿಸಲಾಯಿತು.'[೨೦೬] ಇದಾದ ನಂತರ, ಅಲೆಕ್ಸಾಂಡ್ರಿಯದಲ್ಲಿ ತತ್ವಜ್ಞಾನಿಗಳ ಕಾಟ ಉಳಿಯಲಿಲ್ಲ.

ಕಾನ್‌ಸ್ಟಾಂಟಿನೋಪಲ್ ಅನ್ನು ಅದರ ಪೇಟ್ರಿಯಾರ್ಕ್ ನೆಸ್ಟೋರಿಯಸ್ ಕ್ರಿಸ್ತನು ಮಾನವ ಸ್ವಭಾವ ಮತ್ತು ದೈವಿಕ ಸ್ವಭಾವಗಳ ಇಬ್ಬರು ವ್ಯಕ್ತಿಗಳೆಂಬ ತನ್ನ ನಿಲವಿನಿಂದ ತಪ್ಪುದಾರಿಗೆಳೆದಿದ್ದಾನೆಂದು ತಿಳಿದ ಸಂತ ಸಿರಿಲ್ ದುಃಖಿತನಾದ. ಈ ಕಾರಣದಿಂದ ಸಂತ ಸಿರಿಲ್ ವರ್ಜಿನ್ ಅನ್ನು 'ದೇವರ ತಾಯಿ' ಎಂದು ಕರೆಯುವ ಹೊಸ ಪದ್ಧತಿಯನ್ನು ವಿರೋಧಿಸುತ್ತಿದ್ದ; ಅವಳು ಮಾನವನಾಗಿದ್ದ ವ್ಯಕ್ತಿಯ ತಾಯಿ ಅಷ್ಟೇ, ಆದರೆ ದೇವರೇ ಆದ ದೈವಿಕ ವ್ಯಕ್ತಿಗೆ ತಾಯಿಯೇ ಇಲ್ಲ. ಈ ಪ್ರಶ್ನೆಯ ಬಗ್ಗೆ ಚರ್ಚ್ ಎರಡು ಭಾಗವಾಗಿತ್ತು; ಸ್ಥೂಲವಾಗಿ ಹೇಳಬೇಕೆಂದರೆ, ಸೂಯೆಜ್‌ನ ಪೂರ್ವಭಾಗದಲ್ಲಿದ್ದ ಬಿಷಪ್‌ರು ನೆಸ್ಟೋರಿಯಸ್ ಬೆಂಬಲಿಗರಾಗಿದ್ದರು, ಅದೇ ಸೂಯೆಜ್‌ನ ಪೂರ್ವಭಾಗದಲ್ಲಿದ್ದವರು ಸಂತ ಸಿರಿಲ್ ಪರವಾಗಿದ್ದರು. ಈ ಸಮಸ್ಯೆಯನ್ನು ಬಗೆಹರಿಸಲು ೪೩೧ ರಲ್ಲಿ ಪರಿಷತ್ತಿನ ಸಮಾವೇಶವೊಂದನ್ನು ಕರೆಯಲಾಯಿತು. ಪಶ್ಚಿಮ ಭಾಗದ ಬಿಷಪ್‌ರು ಮೊದಲು ಬಂದರು, ತಡವಾಗಿ

---

೨೦೫. ಗಿಬ್ಬನ್, ಪೂರ್ವೋಕ್ತ, ಅಧ್ಯಾಯ, ೪೭.

೨೦೬. ಅದೇ.

ಬರುವವರನ್ನು ತಡೆಯಲು ಬಾಗಿಲಿಗೆ ಬೀಗ ಹಾಕಿ ಅವಸರವಸರದಲ್ಲಿ ಅಧ್ಯಕ್ಷತೆ ವಹಿಸಿದ್ದ ಸಂತ ಸಿರಿಲ್ ಪರವಾಗಿ ನಿರ್ಧಾರ ಕೈಗೊಳ್ಳಲು ಮುಂದಾದರು. 'ಹದಿಮೂರು ಶತಮಾನಗಳ ದೂರದಲ್ಲಿ ನಿಂತು ಈ ಬಿಷಪ್‌ರ ಗಲಭೆಯನ್ನು ನೋಡಿದರೆ, ಮೂರನೆಯ ವಿಶ್ವಕ್ರೈಸ್ತ ಪರಿಷತ್ತಿನ (ಈಕ್ಯೂಮೆನಿಕಲ್ ಕೌನ್ಸಿಲ್) ಪೂಜ್ಯತೆಯ ಸ್ವರೂಪ ತಿಳಿಯುತ್ತದೆ.'[೨೦೭]

ಈ ಪರಿಷತ್ತಿನ ಪರಿಣಾಮವಾಗಿ, ನೆಸ್ಟೋರಿಯಸ್‌ನನ್ನು ಧರ್ಮದ್ರೋಹಿಯೆಂದು ಖಂಡಿಸಲಾಯಿತು. ಆದರೆ ಅವನು ತನ್ನ ಅಭಿಪ್ರಾಯ ಬದಲಿಸಲಿಲ್ಲ; ಆದರೆ ನೆಸ್ಟೋರಿಯನ್ ಪಂಥದ ಸ್ಥಾಪಕನೆನಿಸಿದ, ಅದಕ್ಕೆ ಸಿರಿಯದಲ್ಲಿಯೂ ಪೂರ್ವಭಾಗದಾದ್ಯಂತವೂ ಭಾರಿ ಪ್ರಮಾಣದ ಅನುಯಾಯಿಗಳಿದ್ದರು. ಕೆಲವು ಶತಮಾನಗಳ ಬಳಿಕ, ನೆಸ್ಟೋರಿಯನಿಸಂ ಚೈನಾದಲ್ಲಿ ಎಷ್ಟು ಪ್ರಬಲವಾಗುತ್ತೆಂದರೆ, ಅದೇ ಸ್ಥಾಪಿತ ಮತಧರ್ಮವೆನಿಸುವ ಸ್ಥಿತಿಯಲ್ಲಿತ್ತು. ಹದಿನಾರನೆಯ ಶತಮಾನದಲ್ಲಿ ಸ್ಪಾನಿಶ್ ಮತ್ತು ಪೋರ್ಚುಗೀಸ್ ಮತಪ್ರಚಾರಕರಿಂದಾಗಿ ಅದಕ್ಕೆ ಇಂಡಿಯದಲ್ಲಿಯೂ ಅನುಯಾಯಿಗಳಾದರು. ಕಾನ್‌ಸ್ಟಾಂಟಿನೋಪಲ್‌ನ ಕ್ಯಾಥೋಲಿಕ್ ಆಡಳಿತವು ನೆಸ್ಟೋರಿಯನಿಸಂ ಅನ್ನು ಖಂಡಿಸಿದ್ದದಿಂದಾಗಿ ಅಸಂತೋಷವುಂಟಾಗಿ ಮಹಮ್ಮದೀಯರು ಸಿರಿಯವನ್ನು ವಶಪಡಿಸಿಕೊಳ್ಳುವಲ್ಲಿ ಸಹಾಯಕವಾಯಿತು.

ತನ್ನ ವಾಗ್ಮಿತೆಯಿಂದಾಗಿ ನೆಸ್ಟೋರಿಯಸ್‌ನ ನಾಲಗೆಯು ಎಷ್ಟೋ ಜನರನ್ನು ಸೆಳೆದಿತ್ತು, ಆದರೆ ಅದನ್ನು ಹುಳುಗಳು ತಿಂದುಹಾಕಿದವು – ಇಷ್ಟಂತೂ ಖಚಿತ.

ಆರ್ಟೆಮಿಸ್ ಸ್ಥಾನದಲ್ಲಿ ವರ್ಜಿನ್ ಅನ್ನು ತರಲು ಎಫೆಸಸ್ ಕಲಿತಿದ್ದ, ಆದರೆ ಆಗಲೂ ಸಂತ ಪೌಲ್‌ನ ಕಾಲದಲ್ಲಿದ್ದಂತೆಯೇ, ತಮ್ಮ ದೇವತೆಯ ಬಗ್ಗೆ ಅಸಹಿಷ್ಣು ಕೆಚ್ಚು ಉಳಿದಿತ್ತು. ವರ್ಜಿನ್ ಅನ್ನು ಅಲ್ಲಿಯೇ ಹೂಳಿದ್ದರೆಂದು ಹೇಳುತ್ತಾರೆ. ೪೪೯ ರಲ್ಲಿ, ಸಂತ ಸಿರಿಲ್‌ನ ಮರಣಾನಂತರ, ಎಫೆಸಸ್‌ನಲ್ಲಿ ಧರ್ಮಪರಿಷತ್ತು (ಸಿನಡ್) ಈ ಗೆಲವನ್ನು ಮುಂದುವರಿಸಲು ಪ್ರಯತ್ನಿಸಿತು, ಹೀಗಾಗಿ ನೆಸ್ಟೋರಿಯಸ್‌ನದಕ್ಕೆ ವಿರೋಧಿಯಾದ ಧರ್ಮದ್ರೋಹವೆನಿಸಿತು; ಇದನ್ನು ಏಕಪ್ರಕೃತಿವಾದಿ ಧರ್ಮದ್ರೋಹ (ಮಾನೋಫಿಸೈಟ್ ಹೆರೆಸಿ) ಎನ್ನುತ್ತಾರೆ; ಕ್ರಿಸ್ತನಿಗೆ ಒಂದೇ ಸ್ವಭಾವವಿತ್ತು ಎಂದು ನಂಬುವವರು ಅವರು. ಸಂತ ಸಿರಿಲ್ ಏನಾದರೂ ಇನ್ನೂ ಬದುಕಿದ್ದಿದ್ದರೆ, ಅವನು ಖಂಡಿತ ಈ ಶ್ರದ್ಧೆಯನ್ನು ಬೆಂಬಲಿಸುತ್ತಿದ್ದ, ಹಾಗೂ ಅವನೇ ಧರ್ಮದ್ರೋಹಿ ಎನಿಸುತ್ತಿದ್ದ. ಚಕ್ರವರ್ತಿಯು ಧರ್ಮಪರಿಷತ್ತನ್ನು ಬೆಂಬಲಿಸಿದ, ಆದರೆ ಪೋಪ್ ಅದನ್ನು ಅಲ್ಲಗಳೆದ. ಕೊನೆಗೆ ಪೋಪ್ ಲಿಯೋ

---

೨೦೭. ಅದೇ, ಅಧ್ಯಾಯ, ೪೭.

– ಶೆಲಾನ್ ಯುದ್ಧ ಕಾಲದಲ್ಲಿ ಆಟ್ಟಿಲ ರೋಮ್ ಮೇಲೆ ಆಕ್ರಮಣ ಮಾಡುವುದರಿಂದ ತಪ್ಪಿಸಿದವನು ಇವನೇ – ವಿಶ್ವಕ್ರೈಸ್ತ ಪರಿಷತ್ತಿನ ವಿಚಾರಣಾ ಕರೆಯನ್ನು ೪೫೧ ರಲ್ಲಿ ಶಾಲ್ಸೆಡಾನ್‌ನಲ್ಲಿ ಸ್ವೀಕರಿಸಬೇಕಾಯಿತು; ಅದರಲ್ಲಿ ಏಕಪ್ರಕೃತಿವಾದವನ್ನು ಖಂಡಿಸಿ ಅಂತಿಮವಾಗಿ ಅವತಾರದ ಬಗೆಗಿನ ಸಾಂಪ್ರದಾಯಿಕ ಸಿದ್ಧಾಂತವನ್ನು ಒಪ್ಪಲಾಯಿತು. ಎಫೆಸಸ್‌ನ ಪರಿಷತ್ತು ಕ್ರಿಸ್ತನ ಒಂದು ವ್ಯಕ್ತಿತ್ವವನ್ನು ಮಾತ್ರ ಒಪ್ಪಿತಾದರೂ, ಶಾಲ್ಸೆಡಾನ್ ಪರಿಷತ್ತು ಅವನು ಎರಡು ಸ್ವಭಾವಗಳಲ್ಲಿ – ದೈವಿಕತೆಯದು ಒಂದು, ಮಾನವತೆಯದು ಮತ್ತೊಂದು – ಅಸ್ತಿತ್ವದಲ್ಲಿರುವನೆಂದು ನಿರ್ಧರಿಸಿತು. ಈ ನಿರ್ಧಾರಕ್ಕೆ ಬರಲು ಪೋಪ್ ಬೀರಿದ ಪ್ರಭಾವ ಅತ್ಯುಚ್ಚವಾದುದು.

ನೆಸ್ಟೋರಿಯನ್ನರಂತೆ ಏಕಪ್ರಕೃತಿವಾದಿಗಳಾಗಿದ್ದವರು ಶರಣಾಗಲು ನಿರಾಕರಿಸಿದರು. ಈಜಿಪ್ಟ್ ಒಬ್ಬನೇ ವ್ಯಕ್ತಿಯೆಂಬಂತೆ ಅವರ ಧರ್ಮದ್ರೋಹವನ್ನು ಅಂಗೀಕರಿಸಿತು, ಅದು ನೈಲ್‌ವರೆಗೆ ಮತ್ತು ಅಬಿಸ್ಸೀನಿಯವರೆಗೆ ಹಬ್ಬಿತು. ತಾವು ಅವರನ್ನು ಗೆಲ್ಲಲು ನೀಡಿದ ಕಾರಣಗಳಲ್ಲಿ ಒಂದೆಂದು ಮುಸ್ಸೋಲಿನಿ ಹೇಳಿದುದರಲ್ಲಿ ಅಬಿಸೀನಿಯನ್ನರ ಧರ್ಮದ್ರೋಹವೂ ಒಂದು. ಈಜಿಪ್ಟ್‌ನ ಧರ್ಮದ್ರೋಹವು, ಅದರ ವಿರುದ್ಧವಾದ ಸಿರಿಯದರಂತೆ, ಅರಬ್ ಗೆಲವು ಸಾಧಿಸಲು ಸುಲಭವಾಯಿತು.

ಸಾಂಸ್ಕೃತಿಕ ಚರಿತ್ರೆಯಲ್ಲಿ ಬಹು ಮುಖ್ಯರಾದ ನಾಲ್ವರು ಆರನೆಯ ಶತಮಾನದಲ್ಲಿದ್ದರು: ಬೊಯೆಥಿಯಸ್, ಜಸ್ಟಿನಿಯನ್, ಬೆನೆಡಿಕ್ಟ್ ಮತ್ತು ಗ್ರೆಗೊರಿ ಮಹಾಶಯ. ಈ ಅಧ್ಯಾಯದ ಉಳಿದ ಭಾಗ ಮತ್ತು ಮುಂದಿನ ಅಧ್ಯಾಯದ ವಿಷಯ ಇವರ ಕುರಿತೇ ಆಗಿರುತ್ತದೆ.

ಇಟಲಿಯನ್ನು ಸೋಲಿಸಿದ ಗಾಥಿಕ್ ಗೆಲವು ರೋಮನ್ ನಾಗರಿಕತೆಯನ್ನು ಕೊನೆಗೊಳಿಸಲಿಲ್ಲ. ಇಟಲಿಯ ದೊರೆ ಥಿಯೋಡೆರಿಕ್ ಮತ್ತು ಗಾಥ್‌ರ ಆಡಳಿತದಲ್ಲಿ ಇಟಲಿಯ ನಾಗರಿಕ ಆಡಳಿತವು ಸಂಪೂರ್ಣವಾಗಿ ರೋಮನ್ ಆಗಿತ್ತು; ಇಟಲಿಯಲ್ಲಿ ಶಾಂತಿ ಮತ್ತು ಮತಧಾರ್ಮಿಕ ಸಾಮರಸ್ಯ (ಕೊನೆಯವರೆಗೂ) ನೆಲೆಗೊಂಡಿತ್ತು; ದೊರೆಯು ಬುದ್ಧಿವಂತನೂ ಆಗಿದ್ದ, ಬಲಿಷ್ಠನೂ ಆಗಿದ್ದ. ಅವನು ದಂಡಾಧಿಕಾರಿ (ಕಾನ್ಸಲ್)ರನ್ನು ನೇಮಿಸಿ ರೋಮನ್ ಕಾನೂನನ್ನು ಸಂರಕ್ಷಿಸಿದ, ಹಾಗೂ ಸೆನೇಟ್ ಅನ್ನು ಜೀವಂತಗೊಳಿಸಿದ: ರೋಮ್‌ನಲ್ಲಿದ್ದಾಗ, ಅವನು ಮೊದಲು ಭೇಟಿ ನೀಡಿದ್ದು ಸೆನೇಟ್ ಭವನಕ್ಕೆ.

ಏರಿಯನ್ ಆಗಿದ್ದರೂ, ಥಿಯೋಡೆರಿಕ್ ಚರ್ಚ್ ಜೊತೆ ಕೊನೆಯ ವರ್ಷಗಳವರೆಗೂ ಮಧುರ ಸಂಬಂಧವಿರಿಸಿಕೊಂಡಿದ್ದ. ೫೨೩ ರಲ್ಲಿ ಚಕ್ರವರ್ತಿ ಜಸ್ಟಿನಿಯನ್ ಏರಿಯನಿಸಂ ಅನ್ನು ನಿಷೇಧಿಸಿದ, ಇದು ಥಿಯೋಡೆರಿಕ್ ಅನ್ನು ಕೆರಳಿಸಿತು. ಅವನು ಹೆದರಲು ಕಾರಣವಿತ್ತು, ಯಾಕೆಂದರೆ ಇಟಲಿ ಕ್ಯಾಥೋಲಿಕ್ ಆಗಿತ್ತು, ಅದು ಮತಧರ್ಮಶಾಸ್ತ್ರದ ಸಹಾನುಭೂತಿಯಿಂದ ಚಕ್ರವರ್ತಿಯ ಕಡೆ

ವಾಲಿತ್ತು. ಸರಿಯೋ ತಪ್ಪೋ ತನ್ನ ಸರ್ಕಾರದಲ್ಲಿನವರೇ ಸಂಚಿನಲ್ಲಿ ಭಾಗಿಗಳು ಎಂಬ ಶ್ರದ್ಧೆ ಅವನದು. ಇದು ಅವನನ್ನು ತನ್ನ ಮಂತ್ರಿ ಸೆನೇಟರ್ ಬೊಯೆಥಿಯಸ್ ಅನ್ನು ಸೆರೆಯುಲ್ಲಿರಿಸಿ ಮರಣದಂಡನೆ ವಿಧಿಸಲು ಕಾರಣವಾಯಿತು. ಸೆರೆಯಲ್ಲಿರುವಾಗಲೇ ಬೊಯೆಥಿಯಸ್ 'ಕಾನ್ಸೊಲೇಷನ್ಸ್ ಆಫ್ ಫಿಲಾಸಫಿ' ಬರೆದ.

ಬೊಯೆಥಿಯಸ್ ಒಬ್ಬ ವಿಶಿಷ್ಟ ವ್ಯಕ್ತಿ. ಮಧ್ಯಯುಗದಾದ್ಯಂತ ಅವನನ್ನು ಓದಿ ಜನ ಮೆಚ್ಚಿಕೊಂಡರು, ಅವನನ್ನು ನಿಷ್ಠಾವಂತ ಕ್ರೈಸ್ತ ಎಂದು ಪರಿಗಣಿಸಿದ್ದರು, ಒಬ್ಬ ಪಾದ್ರಿಯೇನೋ ಎಂಬಂತಹ ರೀತಿಯಲ್ಲಿ ಅವನನ್ನು ಗೌರವಿಸಿದರು. ಆದರೂ ೫೨೪ ರಲ್ಲಿ ಮರಣದಂಡನೆಯ ಜಾರಿಯನ್ನು ನಿರೀಕ್ಷಿಸುತ್ತ ಬರೆದ ಅವನ 'ಕಾನ್ಸೊಲೇಷನ್ಸ್ ಆಫ್ ಫಿಲಾಸಫಿ' ಶುದ್ಧ ಪ್ಲೇಟೋವಾದದಿಂದ ಕೂಡಿದೆ; ಅವನು ಕ್ರೈಸ್ತನಲ್ಲವೆಂದು ಅದೇನೂ ಸಾಬೀತುಪಡಿಸುವುದಿಲ್ಲ, ಆದರೂ ಪ್ಯಾಗನ್ ತತ್ವಜ್ಞಾನವು ಕ್ರೈಸ್ತ ಮತಧರ್ಮಶಾಸ್ತ್ರಕ್ಕಿಂತ ಅವನ ಮೇಲೆ ಹೆಚ್ಚಿನ ಪ್ರಭಾವ ಬೀರಿದೆಯೆಂಬುದನ್ನು ತೋರಿಸುತ್ತದೆ. ಕೆಲವು ಮತಧರ್ಮಶಾಸ್ತ್ರ ಗ್ರಂಥಗಳು, ಅದರಲ್ಲಿಯೂ ಅವನದೆಂದು ಭಾವಿಸಲಾದ ತ್ರಿಮೂರ್ತಿತತ್ವದ (ಟ್ರಿನಿಟಿ) ಬಗೆಗಿನ ಒಂದು ಕೃತಿ, ಖೋಟಾ ಎಂದು ಹಲವರು ಭಾವಿಸುತ್ತಾರೆ. ಆದರೆ ಮಧ್ಯಯುಗವು ಅವನನ್ನು ಸಂಪ್ರದಾಯನಿಷ್ಠನೆಂದು ಪರಿಗಣಿಸಿ, ಬೇರೆಯವರದಾಗಿದ್ದರೆ ಸಂಶಯದಿಂದ ನೋಡುತ್ತಿದ್ದ ಪ್ಲೇಟೋವಾದದಿಂದ ಸಾಕಷ್ಟನ್ನು ಅನುಸರಿಸಲು ಕಾರಣ ಈ ಕೃತಿಗಳೇ.

ಈ ಕೃತಿಯು ಗದ್ಯ ಪದ್ಯಗಳ ಪರ್ಯಾಯ ಬಳಕೆಯದು: ಬೊಯೆಥಿಯಸ್ ಉತ್ತಮ ಪುರುಷ ನಿರೂಪಣೆಯಲ್ಲಿ ಗದ್ಯವನ್ನು ಬಳಸುತ್ತಾನೆ, ಅದಕ್ಕೆ ತತ್ವಜ್ಞಾನ ಕೊಡುವ ಉತ್ತರಗಳು ಪದ್ಯರೂಪದಲ್ಲಿವೆ. ಇದರಲ್ಲಿ ಡಾಂಟೆಯನ್ನು ಹೋಲುವ ಅಂಶಗಳಿವೆ, ಡಾಂಟೆ ತನ್ನ ನವಜೀವನ ('ವೈಟಾ ನುವೊವ')ದಲ್ಲಿ ಅವನಿಂದ ಪ್ರಭಾವಿತನಾಗಿರುವುದರಲ್ಲಿ ಸಂಶಯವೇ ಇಲ್ಲ,

ಅವನ 'ಕಾನ್ಸೊಲೇಷನ್ಸ್ ಆಫ್ ಫಿಲಾಸಫಿ'ಯನ್ನು ಗಿಬ್ಬನ್ ಸರಿಯಾಗಿಯೇ ಸುವರ್ಣ ಸಂಪುಟವೆಂದು ಕರೆಯುತ್ತಾರೆ; ಅದು ಆರಂಭಗೊಳ್ಳುವುದು ಸಾಕ್ರಟೀಸ್, ಪ್ಲೇಟೋ, ಮತ್ತು ಅರಿಸ್ಟಾಟಲ್‌ರು ನಿಜವಾದ ತತ್ವಜ್ಞಾನಿಗಳು ಎಂಬ ಹೇಳಿಕೆಯೊಡನೆ.. ಸಂಯಮವಾದಿಗಳು, ಎಪಿಕ್ಯೂರಿಯನ್‌ರು ಮತ್ತು ಉಳಿದವರು ಅತಿಕ್ರಮಣಕಾರರು, ಲೌಕಿಕ ಜನತೆ ತತ್ವಜ್ಞಾನಿಗಳೆಂದು ತಪ್ಪು ಭಾವಿಸಿತು. ತಾನು ಪೈಥಾಗೊರಿಯನ್‌ನ 'ದೇವರನ್ನು ಅನುಸರಿಸು' ಎಂಬ (ಕ್ರೈಸ್ತವಲ್ಲದ) ಆಜ್ಞೆಗೆ ವಿಧೇಯನಾಗಿದ್ದೆ ಎಂದು ಬೊಯೆಥಿಯಸ್ ಹೇಳುತ್ತಾನೆ. ದೈವಕೃಪೆಗೆ ಸಮಾನವಾದ ಸುಖ, ಒಳ್ಳೆಯದೇ ಹೊರತು ಸಂತೋಷವಲ್ಲ. ಸ್ನೇಹ ಎಂಬುದು 'ಅತ್ಯಂತ ಪರಿಶುದ್ಧವಾದುದು'. ಸಂಯಮವಾದಿ ಸಿದ್ಧಾಂತಕ್ಕೆ ತೀರ ಸನಿಹವಾದ ಅನೇಕ ಅಂಶಗಳು ಅದರಲ್ಲಿವೆ, ಹಾಗೆ ನೋಡಿದರೆ ಅವುಗಳನ್ನು ಹೆಚ್ಚಾಗಿ ಸೆನೆಕನಿಂದ ತೆಗೆದುಕೊಂಡಿರುವುದು

ಕಾಣುತ್ತದೆ. 'ಟೈಮೇಯಸ್' ಆರಂಭದಲ್ಲಿ ತಾತ್ಪರ್ಯರೂಪದ ಒಂದು ಪದ್ಯವಿದೆ. ಇದರ ನಂತರ ಶುದ್ಧ ಪ್ಲೇಟೋ ತತ್ತ್ವಜಿಜ್ಞಾಸೆ ಸಾಕಷ್ಟಿದೆ. ಅಪರಿಪೂರ್ಣತೆ ಒಂದು ಕೊರತೆ, ಅದು ಪರಿಪೂರ್ಣ ಮಾದರಿಯೊಂದರ ಇರುವಿಕೆಯನ್ನು ಸೂಚಿಸುತ್ತದೆ. ಅವನು ಕೆಡುಕಿನ ಬಗ್ಗೆ ಖಾಸಗಿ ಸಿದ್ಧಾಂತವನ್ನು ಅಳವಡಿಸಿಕೊಳ್ಳುತ್ತಾನೆ. ಆನಂತರ ಅವನು ಸರ್ವದೇವಾತ್ಮಕವಾದದೆಡೆಗೆ ಸಾಗುತ್ತಾನೆ, ಇದು ಕ್ರೈಸ್ತರಿಗೆ ಆಘಾತಕಾರಿ ಎನ್ನಿಸಬೇಕಾಗಿತ್ತು, ಆದರೆ ಯಾವುದೋ ಕಾರಣದಿಂದಾಗಿ ಹಾಗೆ ಆಗಲಿಲ್ಲ. ದೈವಕೃಪೆ ಮತ್ತು ದೇವರು ಎರಡೂ ಅತ್ಯಂತ ಪ್ರಮುಖ ಒಳಿತುಗಳು, ಹೀಗಾಗಿ ಅನನ್ಯವಾದವು. 'ದೈವಿಕತೆಯನ್ನು ಪಡೆಯುವುದರ ಮೂಲಕ ಮನುಷ್ಯರು ಸುಖಿಗಳಾಗುತ್ತಾರೆ.' 'ದೈವಿಕತೆಯನ್ನು ಹೊಂದಿದವರು ದೇವರುಗಳಾಗುತ್ತಾರೆ. ಹೀಗಾಗಿ ಸುಖವಾಗಿರುವ ಪ್ರತಿಯೊಬ್ಬನೂ ದೇವರೇ. ಆದರೆ ಮೂಲತಃ ಇರುವುದು ಒಬ್ಬನೇ ದೇವರು, ಆದರೆ ಪಾಲ್ಗೊಳ್ಳುವಿಕೆಯ ಅನೇಕ ದೇವರುಗಳಿರಬಹುದು.' 'ಅನ್ವೇಷಿಸುವ ಎಲ್ಲದರ ಸಾಕಲ್ಯ, ಮೂಲ, ಮತ್ತು ಕಾರಣಗಳಣ್ನು ಒಳಿತು ಎಂದು ಪರಿಗಣಿಸುವುದು ಸಮಂಜಸವಾಗಿದೆ.' 'ದೇವರ ಸತ್ವವು ಒಳಿತಿನ ಹೊರತಾದ ಬೇರಾವುದರಲ್ಲಿಯೂ ಇಲ್ಲ.' ದೇವರು ಕೆಡುಕು ಮಾಡಬಲ್ಲನೇ? ಉಹ್ಞೂ, ಕೆಡುಕು ಎಂಬುದು ಇಲ್ಲ, ಯಾಕೆಂದರೆ ದೇವರು ಎಲ್ಲವನ್ನೂ ಮಾಡಬಲ್ಲ. ಸದ್ಗುಣಿಗಳು ಯಾವಾಗಲೂ ಬಲಿಷ್ಠರು, ಕೆಟ್ಟವರು ಸದಾ ದುರ್ಬಲರು; ಯಾಕೆಂದರೆ ಇಬ್ಬರೂ ಒಳಿತನ್ನೇ ಬಯಸುತ್ತಾರೆ, ಆದರೆ ಸದ್ಗುಣಿ ಮಾತ್ರ ಅದನ್ನು ಪಡೆಯುತ್ತಾನೆ. ಕೆಡುಕರು ಶಿಕ್ಷೆಯನ್ನು ತಪ್ಪಿಸಿಕೊಂಡರೆ ಅದನ್ನು ಅನುಭವಿಸುವುದಕ್ಕಿಂತ ಹೆಚ್ಚು ದುರದೃಷ್ಟವಂತರಾಗುತ್ತಾರೆ. 'ವಿವೇಕಿಗಳಲ್ಲಿ ದ್ವೇಷಕ್ಕೆ ಆಸ್ಪದವೇ ಇರುವುದಿಲ್ಲ.'

ಪುಸ್ತಕದ ಧಾಟಿಯು ಪ್ಲೇಟೋನದಕ್ಕಿಂತ ಪ್ಲಾಟಿನಸ್‌ನದನ್ನು ಹೋಲುತ್ತದೆ. ಇದರಲ್ಲಿ ಆ ಕಾಲದ ಮೂಢಶ್ರದ್ಧೆಗಳ ಅಥವಾ ವಿಕೃತಿಗಳ ಸುಳಿವೇ ಇಲ್ಲ, ಪಾಪದ ಗೀಳು ಇಲ್ಲ, ಅಪ್ರಾಪ್ಯವಾದುದರ ಬಗ್ಗೆ ಅತಿರೇಕದ ತುಯ್ತವಿಲ್ಲ. ಇಲ್ಲಿರುವುದು ಶುದ್ಧ ತಾತ್ವಿಕ ಪ್ರಶಾಂತತೆ. ಈ ಪುಸ್ತಕವನ್ನು ಸಮೃದ್ಧಿಯ ಕಾಲದಲ್ಲಿ ಬರೆದಿದ್ದರೆ, ಅದನ್ನು ಆತ್ಮತೃಪ್ತ ಎನ್ನಬಹುದಾಗಿತ್ತು. ಸೆರೆಯಲ್ಲಿ ಮತ್ತು ಸಾವಿನ ನಿರೀಕ್ಷೆಯಲ್ಲಿ ಬರೆದ ಇಲ್ಲಿಯದು ಪ್ಲೇಟೋನ ಸಾಕ್ರಟೀಸ್‌ನ ಕೊನೆಯ ದಿನಗಳಷ್ಟೇ ಪ್ರಶಂಸಾರ್ಹವಾದುದು.

ನ್ಯೂಟನ್‌ನಂತರದವರೆಗೂ ಇಂತಹ ದೃಷ್ಟಿಕೋನವನ್ನು ಕಾಣಲಾರೆವು. ನಾನಿಲ್ಲಿ ಅವನ ಗ್ರಂಥದಲ್ಲಿನ ಒಂದು ಕವನವನ್ನು ಇಡಿಯಾಗಿ ಉಲ್ಲೇಖಿಸುತ್ತೇನೆ, ಅದರಲ್ಲಿನ ತಾತ್ವಿಕತೆಯು ಪೋಪ್‌ನ 'ಎಸ್ಸೇ ಆನ್ ಮ್ಯಾನ್'ನದಕ್ಕಿಂತ ಭಿನ್ನವೆನಿಸುವುದಿಲ್ಲ:

ದೇವರ ನಿಯಮಗಳನ್ನು ನೀನು
ಶುದ್ಧ ಮನಸ್ಸಿನಿಂದ ನೋಡಬಲ್ಲೆಯಾದರೆ,

ನಿನ್ನ ನೋಟ ಸ್ವರ್ಗದ ಮೇಲೆ ನಟ್ಟಿರಬೇಕು,
ಅದರ ನಿಶ್ಚಿತ ಮಾರ್ಗವನ್ನು ಮನಸ್ಸಿನ ಪ್ರಶಾಂತ ತಾರೆಗಳು ನೆಲೆಗೊಳಿಸುತ್ತವೆ,
ಸೂರ್ಯನ ಅತ್ಯುಜ್ವಲ ಬೆಳಕು
ಅವನ ಸೋದರಿಯರ ತಂಡವನ್ನು ತಡೆಯುವುದಿಲ್ಲ,
ಅಥವಾ ಸಾಗರದ ಅಲೆಗಳಲ್ಲಿನ ಉತ್ತರದ ಕರಡಿ ಬಯಕೆ
ಅವಳ ಕಿರಣಗಳನ್ನು ಬಚ್ಚಿಡಲು ಬಯಸುವುದಿಲ್ಲ
ಇತರ ತಾರೆಗಳು ಅಲ್ಲೆಲ್ಲೋ ಮುದುಡಿಕೊಳ್ಳುವುದನ್ನು
ಅವಳು ನೋಡುವವಳಾದರೂ, ಸಾಗರವನ್ನು ಮುಟ್ಟದೆಯೇ
ಅವಳು ನಿರಂತರವಾಗಿ ಸುಳಿಯುತ್ತಾಳೆ.
ಸಂಜೆಯ ಬೆಳಕು
ನಿರ್ದಿಷ್ಟ ಹಾದಿಯಲ್ಲಿ ತೋರುತ್ತದೆ
ಹಗಲು ಹೋಗುವ ಮುನ್ನ ಕತ್ತಲ ರಾತ್ರಿ
ಬೆಳ್ಳಿಚುಕ್ಕಿಗಳು ಮುಂಬರುವುದನ್ನು.
ಈ ಪರಸ್ಪರ ಒಲವು
ಹಾದಿಯನ್ನು ನಿರಂತರವಾಗಿಸುವುದು,
ಮೇಲಿನ ತಾರೆಗಳಿರುವ ಗೋಲದಿಂದ
ಮತ್ತೆಲ್ಲ ದುರಂತಮಯ ವೈಷಮ್ಯದ ಕಾರಣ ಯುದ್ಧ ಹುಟ್ಟುತ್ತದೆ.
ಸಮಾನ ಸಂಕೋಲೆಗಳು ಕಟ್ಟುತ್ತವೆ
ಮಧುರ ಒಪ್ಪಿಗೆಯನ್ನು
ಪ್ರತಿವಸ್ತುವಿನ ಸ್ವಭಾವವನ್ನು
ಹೀಗಾಗಿ ತೇವದವು ಒಣಗಿ ಹೋಗುತ್ತವೆ;
ಕೊರೆಯುವ ಚಳಿ
ಸ್ನೇಹದ ಬಿಸುಪು ಜ್ವಾಲೆಗಳೊಡನೆ
ನಡುಗುವ ಉರಿಯು ಅತ್ಯುನ್ನತ ತಾಣವನ್ನು ತರುತ್ತದೆ,
ಸ್ಥೂಲ ಐಹಿಕತೆ ಆಳದಲ್ಲಿ ಹುದುಗಿಹೋಗುತ್ತದೆ.
ಹೂಗಳ ವರುಷ
ಚೈತ್ರದಲ್ಲಿ ಕಂಪು ಸೂಸುತ್ತದೆ,
ಬೇಸಗೆಯ ಬಿಸಲ ಬೇಗೆ ಕಾಳುಗಳನ್ನು ತುಂಬುತ್ತದೆ,
ಮಾಗುವ ಕಾಲಮರಗಳಲ್ಲಿ ಹಣ್ಣುಗಳನ್ನು ಜೋತಾಡಿಸುತ್ತವೆ.
ಬೀಳುವ ಮಳೆ
ಚಳಿಗಾಲ ಕುಳಿರನ್ನು ತರುತ್ತದೆ.

ಹೀಗೆ ಈ ನಿಯಮಗಳು ಪೋಷಿಸಿ
ಭೂಮಿಯ ಮೇಲಿರುವ ಎಲ್ಲ ಜೀವಿಗಳನ್ನು ಪೊರೆಯುತ್ತವೆ .
ಅವುಗಳು ಸತ್ತಾಗ
ಇವೆಲ್ಲ ಅವೆಲ್ಲ ಅವರಿಗೆ ಕೊನೆಯಾಗುತ್ತವೆ,
ಮೇಲುಗಡೆ ಕುಳಿತ ಅವೆಲ್ಲದರ ಸೃಷ್ಟಿಕರ್ತನ ಕೈ
ಇಡೀ ಜಗತ್ತನ್ನಾಳುತ್ತ ಎಲ್ಲವನ್ನೂ ಬಾಗಿಸುತ್ತದೆ.
ಅವರ ರಾಜನಾಗಿ ಅವನು
ತನ್ನ ಬಲಿಷ್ಠ ಅಧಿಕಾರದಿಂದ ಅವರನ್ನೆಲ್ಲ ಆಳುತ್ತಾನೆ.
ಅವನಿಂದಾಗಿ ಅವರ ಮೊಳಕೆ, ಬೆಳವಣಿಗೆ, ಏಳ್ಗೆ.
ನಿಯಮವು ಅವನೇ, ನ್ಯಾಯಪತಿಯೂ ಆಗಿ ಅವರ ಹಕ್ಕನ್ನು ನಿರ್ಧರಿಸುವಾತ.
ಯಾವುವು ಹಾದಿಯನ್ನು ಬೇಗ ಸವೆಸುತ್ತವೋ
ಅವು ಜಾರಿ ಹೋಗುತ್ತವೆ.
ಅವನ ಶಕ್ತಿ ಕೆಲವೊಮ್ಮೆ ಹಿಮ್ಮುಖದ ಚಲನೆ,
ಇದ್ದಕಿದ್ದಂತೆಯೇ ಅವರ ಅಲೆದಾಟ ನಿಲ್ಲುತ್ತದೆ.
ಅವನ ಶಕ್ತಿ ಅವರ ಹಿಂಸೆ
ಒಂದಕ್ಕೊಂದು ಹೆಣೆದುಕೊಳ್ಳದ ಹೊರತು,
ಅನ್ಯತಃ ನೀಳವಾಗಿರುವ ಹಾದಿಯಲ್ಲಿರುವ ಅವರು
ವರ್ತುಲದ ಪರಿಧಿಯೊಳಗಡೆ ಬರಲೇ ಬೇಕು.
ಎಲ್ಲರೂ ಇದರಿಂದ ಬದ್ಧರಾಗಿಸುವ
ಈ ದೃಢ ತೀರ್ಪು
ಬಹು ಬೇಗ ನಾಶ ಹೊಂದಿ ಒಡೆಯುತ್ತದೆ,
ಆರಂಭದ ತಮ್ಮ ಮನೆಗಳಿಂದು ಬಹು ದೂರವಾಗಿ.
ಈ ಸಶಕ್ತ ಒಲವು
ಎಲ್ಲರಿಗೂ ಒಂದೇ ಬಗೆ,
ಎಲ್ಲವೂ ಒಳಿತರ ಆಸೆಯಿಂದ ಚಲಿಸುತ್ತವೆ,
ತಾವು ಮೊದಲು ಬಿದ್ದಾಗಿನ ಚೈತ್ರದೆಡೆಗೆ ಮರಳಿ ಸಾಗುತ್ತವೆ.
ಮೊದಲಿಗೆ ಸತ್ತ್ವವನ್ನಿತ್ತಿದ್ದ ಕಾರಣವು
ಒಲವು ಮರಳಿ ತಾರದಿದ್ದರೆ
ಯಾವ ಐಹಿಕ ವಸ್ತುವೂ
ನಿರಂತರವಾಗುಳಿಯಲಾರದು.
ಕೊನೆಯವರೆಗೂ ಬೊಯೆಥಿಯಸ್ ಥಿಯೋಡೆರಿಕ್‌ನ ಗೆಳೆಯನಾಗಿದ್ದ.

ಅವನ ತಂದೆ ದಂಡಾಧಿಪತಿ, ಅವನೂ ದಂಡಾಧಿಪತಿಯೇ, ಅಂತೆಯೇ ಅವನ ಇಬ್ಬರು ಗಂಡುಮಕ್ಕಳೂ. ಅವನ ಮಾವನಾದ ಸಿಮ್ಯಾಕಸ್ (ಪ್ರಾಯಶಃ ವಿಕ್ಟರಿ ಪ್ರತಿಮೆಯ ಬಗೆಗೆ ಆಂಬ್ರೋಸ್‌ನೊಡನೆ ವಿವಾದಕ್ಕಿಳಿದಿದ್ದವನ ಮೊಮ್ಮಗ) ಗಾಥಿಕ್ ರಾಜನ ಆಸ್ಥಾನದಲ್ಲಿ ಬಹು ಮುಖ್ಯನಾಗಿದ್ದವನು. ನಾಣ್ಯವಿಧಾನದ ಪರಿಷ್ಕರಣೆ ಮಾಡಲು ಹಾಗೂ ನೆರಳು ಗಡಿಯಾರ ಮತ್ತು ಜಲಗಡಿಯಾರಗಳಿಂದ ಕಡಿಮೆ ನಾಗರಿಕರಾಗಿದ್ದ ಅನ್ಯದೇಶೀಯ ರಾಜರನ್ನು ಅಚ್ಚರಿಗೊಳಿಸಲೆಂದು ಥಿಯೋಡೆರಿಕ್ ಬೊಯೆಥಿಯಸ್‌ನನ್ನು ನೇಮಿಸಿಕೊಂಡ. ಇತರೆಡೆಯ ರೋಮನ್ ಶ್ರೀಮಂತ ಕುಟುಂಬಗಳಲ್ಲಿ ಅವನ ಕಂದಾಚಾರವಿಹೀನತೆಯು ಅಷ್ಟೇನೂ ಅಪರೂಪವಾಗಿರಲಿಲ್ಲ: ಆದರೆ ಅದನ್ನೂ ಒಳಗೊಂಡಂತೆ ಹೆಚ್ಚಿನ ಶಿಕ್ಷಣ ಮತ್ತು ಉತ್ಸಾಹಗಳಿಂದ ಸಾರ್ವಜನಿಕ ಹಿತಕ್ಕಾಗಿ ಬಳಸಿಕೊಳ್ಳುವ ಪ್ರವೃತ್ತಿ ಆ ಕಾಲದ ವಿಶೇಷವಾಗಿತ್ತು. ಅವನ ಕಾಲಕ್ಕೆ ಮುಂಚಿನ ಎರಡು ಶತಮಾನಗಳಲ್ಲಿ ಮತ್ತು ಆನಂತರದ ಹತ್ತು ಶತಮಾನಗಳಲ್ಲಿ ಯಾವುದೇ ವಿದ್ಯಾವಂತ ಯೂರೋಪಿಯನ್ ವ್ಯಕ್ತಿಯೂ ಅವನಂತೆ ಕಂದಾಚಾರಗಳಿಂದಲೂ ಅಂಧಾಭಿಮಾನದಿಂದಲೂ ಸ್ವತಂತ್ರನಾಗಿದ್ದಂತೆ ನನಗೆ ತೋರದು. ಅವನ ಗುಣಗಳು ನೇತ್ಯಾತ್ಮಕವಾದವೂ ಅಲ್ಲ; ಅವನ ಸರ್ವೇಕ್ಷಣವು ಉದಾತ್ತವೂ, ನಿರ್ಭಾವುಕವೂ ಮತ್ತು ಅಮೋಘವೂ ಆಗಿತ್ತು. ಅವನು ಯಾವುದೇ ಕಾಲದಲ್ಲಿ ಗಣ್ಯನೆನಿಸಿಕೊಳ್ಳುತ್ತಿದ್ದ; ತಾನು ಬದುಕಿದ್ದ ಕಾಲದಲ್ಲಂತೂ ಅವನು ಅದ್ಭುತನಾಗಿದ್ದ.

ಬೊಯೆಥಿಯಸ್‌ನ ಮಧ್ಯಕಾಲೀನ ಕೀರ್ತಿಗೆ ಭಾಗಶಃ ಕಾರಣವಾದುದು ಅವನು ಏರಿಯನ್ ಹಿಂಸಾಚಾರದಿಂದಾಗಿ ಹುತಾತ್ಮನಾದ ಎಂಬುದು – ಈ ದೃಷ್ಟಿಯು ಅವನ ಮರಣದ ಎರಡು ಮೂರು ಶತಮಾನಗಳ ನಂತರ ಆರಂಭವಾಯಿತು. ಪಾವಿಯದಲ್ಲಿ ಅವನನ್ನು ಒಬ್ಬ ಸಂತನೆಂದು ಪರಿಗಣಿಸಿದ್ದರು, ಆದರೆ ಅವನನ್ನು ಸಂತನನ್ನಾಗಿಸಲಿಲ್ಲ. ಸಿರಿಲ್ ಸಂತನಾಗಿದ್ದರೂ, ಬೊಯೆಥಿಯಸ್ ಅಲ್ಲ.

ಬೊಯೆಥಿಯಸ್‌ನನ್ನು ಗಲ್ಲಿಗೇರಿಸಿದ ಎರಡು ವರ್ಷಗಳ ಬಳಿಕ ಥಿಯೋಡೊರಸ್ ಸತ್ತ. ಆ ಮಾರನೆಯ ವರ್ಷ ಜಸ್ಟಿನಿಯನ್ ಚಕ್ರವರ್ತಿಯಾದ, ೫೬೫ ರವರೆಗೂ ಆಳಿದ. ಈ ದೀರ್ಘ ಆಳಿಕೆಯಲ್ಲವನು ಸಾಕಷ್ಟು ಹಾನಿ ಮಾಡಿದ, ಒಂದಷ್ಟು ಒಳ್ಳೆಯುದನ್ನೂ ಮಾಡಿದ. ಅವನು ಬಹು ಮುಖ್ಯವಾಗಿ ಪ್ರಖ್ಯಾತನಾಗಿರುವುದು ತನ್ನ 'ಡೈಜೆಸ್ಟ್'ಗಾಗಿಯಾದರೂ, ನಾನು ಈ ಕುರಿತು ಮಾತನಾಡುವ ಸಾಹಸ ಮಾಡುವುದಿಲ್ಲ, ಅದು ವಕೀಲರಿಗೆ ಸಂಬಂಧಿಸಿದ ವಿಷಯ. ಅವನದು ಆಳವಾದ ಧರ್ಮನಿಷ್ಠೆ, ಅದು ಅವನ ಪಟ್ಟಾಭಿಷೇಕದ ಎರಡು ವರ್ಷಗಳ ತರುವಾಯ ಎದ್ದು ತೋರಿತು, ಪ್ಯಾಗನಿಸಂ ಪ್ರಬಲವಾಗಿದ್ದ ಅಥೆನ್ಸ್‌ನಲ್ಲಿನ ತತ್ವಜ್ಞಾನದ

ಶಾಲೆಗಳನ್ನು ಅವನು ಮುಚ್ಚಿಸಿದಾಗ ನೆಲೆ ಕಳೆದುಕೊಂಡ ತತ್ವಜ್ಞಾನಿಗಳು ಪರ್ಷಿಯ ಕಡೆ ಹೊರಟರು, ಅಲ್ಲಿನ ದೊರೆ ಅವರನ್ನು ಆದರದಿಂದ ಬರಮಾಡಿಕೊಂಡ. ಆದರೆ ಅವರಿಗೆ ಆಘಾತವೆನಿಸಿತು – ಇದಕ್ಕೆ ಕಾರಣ, ತತತ್ವಜ್ಞಾನಿಗಳಾದುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ, ಎಂದು ಗಿಬ್ಬನ್ ಹೇಳುತ್ತಾರೆ – ಪರ್ಷಿಯದಲ್ಲಿ ಪ್ರಚಲಿತವಾಗಿದ್ದ ಬಹುಪತ್ನಿತ್ವ ಮತ್ತು ಧರ್ಮವಿರುದ್ಧ ಲೈಂಗಿಕತೆ. ಹೀಗಾಗಿ ಅವರೆಲ್ಲ ಮನೆಗೆ ಮರಳಿ, ಅಜ್ಞಾತದಲ್ಲಿ ಸೇರಿಹೋದರು. ಇದಾದ ಮೂರು ವರ್ಷಗಳ ನಂತರ (೫೩೨), ಜಸ್ಟಿನಿಯನ್ ಹೆಚ್ಚು ಪ್ರಶಂಸಾರ್ಹವಾದ ಮತ್ತೊಂದು ಸಾಹಸಕ್ಕೆ ಕೈಹಾಕಿದ – ಸಂತ ಸೋಫಿಯದ ಕಟ್ಟಡ. ನಾನೆಂದೂ ಸಂತ ಸೋಫಿಯವನ್ನು ನೋಡಿಲ್ಲವಾದರೂ, ಅದರ ಸಮಕಾಲೀನ ರವೆನ್ನದಲ್ಲಿ ಸುಂದರವಾದ ಮೊಸೆಯಿಕ್ ಕಲೆಯನ್ನು ನೋಡಿದ್ದೇನೆ, ಅವುಗಳಲ್ಲಿ ಜಸ್ಟಿನಿಯನ್ ಮತ್ತು ಸಮ್ರಾಜ್ಞಿ ಥಿಯೋಡೆರಳ ಚಿತ್ರಗಳು ಇವೆ. ಥಿಯೋಡೆರ ಸಡಿಲ ನಡವಳಿಕೆಯವಳಾದರೂ (ಅವಳನ್ನು ಚಕ್ರವರ್ತಿ ಸರ್ಕಸ್ ಒಂದರಲ್ಲಿ ಕಂಡು ಕರೆತಂದಿದ್ದನಂತೆ) ಇಬ್ಬರೂ ಧರ್ಮನಿಷ್ಠರು. ಅದಕ್ಕಿಂತ ಕೆಡುಕೆನಿಸುವುದು ಅವಳು ಏಕಪ್ರಕೃತಿವಾದದ ಬಗ್ಗೆ ಒಲವಿದ್ದಳೆನ್ನುವುದು.

ಆದರೆ ಈ ಹಗರಣಗಳ ಕುರಿತು ಸಾಕು. ಚಕ್ರವರ್ತಿಯು ನಿಷ್ಕಳಂಕ ಸಂಪ್ರದಾಯನಿಷ್ಠ, 'ಮೂರು ಅಧ್ಯಾಯಗಳ' ವಿಚಾರದಲ್ಲಿಯೂ ಎನ್ನುವುದು ಸಂತಸದ ವಿಷಯ. ಇದೊಂದು ಕ್ಲೇಶಕರ ವಿವಾದ. ನೆಸ್ಟೋರಿಯನಿಸಂ ಪಂಥದವರೆಂಬ ಸಂಶಯವಿದ್ದರೂ ಮೂವರು ಪಾದ್ರಿಗಳನ್ನು ಸಂಪ್ರದಾಯನಿಷ್ಠರು ಎಂದು ಶಾಲ್ಸೆಡಾನ್‌ನ ಪರಿಷತ್ತು ಘೋಷಿಸಿತ್ತು; ಮಿಕ್ಕ ಅನೇಕರೊಡನೆ ಥಿಯೋಡೆರ ಪರಿಷತ್ತಿನ ಇತರ ಎಲ್ಲ ತೀರ್ಪುಗಳನ್ನೂ ಒಪ್ಪಿದರೂ ಇದನ್ನು ಮಾತ್ರ ಒಪ್ಪಲಿಲ್ಲ. ಪಶ್ಚಿಮ ಚರ್ಚ್ ಪರಿಷತ್ತಿನ ಎಲ್ಲ ತೀರ್ಮಾನಗಳ ಪರವಾಗಿತ್ತು, ಸಮ್ರಾಜ್ಞಿಯು ಪೋಪ್‌ನನ್ನು ಹಿಂಸಿಸಿದಳು. ಜಸ್ಟಿಯನ್ ಅವಳ ಆರಾಧಕನಾಗಿದ್ದವನು; ೫೪೮ ರಲ್ಲಿ ಅವಳಿ ಸತ್ತ ಬಳಿಕ, ರಾಣಿ ವಿಕ್ಟೋರಿಯಗೆ ಸತ್ತ ತನ್ನ ಗಂಡ (ಪ್ರಿನ್ಸ್ ಕನ್ಸಾರ್ಟ್) ಏನಾಗಿದ್ದನೋ ಅವಳು ಅವನಿಗೆ ಹಾಗಾದಳು. ಹೀಗಾಗಿ ಕೊನೆಯಲ್ಲಿ ಅವನು ಅಫ್ಥಾರ್ಟೋಡಾಸೆಟಿಸಂ ಬೆಂಬಲಿಸಿ ಪಾಷಂಡಿಯಾದ. ಸಮಕಾಲೀನ ಇತಿಹಾಸಕರನೊಬ್ಬನು (ಎವಾಗ್ರಿಯಸ್) ಹೀಗೆ ಬರೆಯುತ್ತಾನೆ: 'ತನ್ನ ಬದುಕಿನ ಕೊನೆಯಲ್ಲಿ ತನ್ನ ಕುಕೃತ್ಯಗಳ ಫಲವಾಗಿ, ತನಗೆ ಸಲ್ಲಬೇಕಾದ ನ್ಯಾಯಕ್ಕಾಗಿ ಹಂಬಲಿಸುವುದರ ಬದಲು ನರಕ ಪೀಠದ ಎದುರು ನಿಂತ.'

ಜಸ್ಟಿನಿಯನ್‌ಗೆ ಆದಷ್ಟೂ ಪಶ್ಚಿಮ ಚಕ್ರಾಧಿಪತ್ಯವನ್ನು ಸಾಧ್ಯವಾದ ಮಟ್ಟಿಗೂ ಮತ್ತೆ ಗೆಲ್ಲುವ ಆಸೆಯಿತ್ತು. ೫೩೫ ರಲ್ಲಿ ಅವನು ಇಟಲಿಯ ಮೇಲೆ ಆಕ್ರಮಣ ಮಾಡಿದ, ಮೊದಲಿಗೆ ಗಾಥ್‌ರ ವಿರುದ್ಧ ಬೇಗ ಗೆಲವು ಸಿಕ್ಕಿತು. ಕ್ಯಾಥೋಲಿಕ್ ಸಮುದಾಯವು ಅವನನ್ನು ಸ್ವಾಗತಿಸಿತು, ಅವನು ಬಾರ್ಬೇರಿಯನ್‌ರ ವಿರುದ್ಧದ

ರೋಮ್ ಪ್ರತಿನಿಧಿಯೆಂಬಂತೆ ಕಾಣಿಸಿದ. ಆದರೆ ಗಾಥ್‌ರು ಒಗ್ಗೂಡಿದರು, ಯುದ್ಧವು ಹದಿನೆಂಟು ವರ್ಷಗಳ ಕಾಲ ನಡೆಯಿತು, ಈ ಅವಧಿಯಲ್ಲಿ ರೋಮ್ ಮತ್ತು ಒಟ್ಟಾರೆ ಇಟಲಿ, ಅನ್ಯದೇಶೀಯ ಆಕ್ರಮಣಕಾಲಕ್ಕಿಂತ ಹೆಚ್ಚಿನ ಕಷ್ಟ ಅನುಭವಿಸಿದವು.

ರೋಮ್ ಅನ್ನು ಐದು ಬಾರಿ ಗೆಲ್ಲಲಾಗಿತ್ತು, ಅವುಗಳಲ್ಲಿ ಮೂರು ಬಾರಿ ಬೈಜ಼ಾಂಟಿಯನ್‌ರಿಂದ, ಎರಡು ಸಲ ಗಾಥ್‌ರಿಂದ, ಮತ್ತು ಅದು ಸಣ್ಣ ಪಟ್ಟಣದ ಗಾತ್ರಕ್ಕಿಳಿಯಿತು. ಇಂತಹದೇ ಪರಿಸ್ಥಿತಿ ಆಫ್ರಿಕದಲ್ಲಿಯೂ ಉಂಟಾಯಿತು, ಅದನ್ನೂ ಜಸ್ಟಿನಿಯನ್ ಹೆಚ್ಚು ಕಡಿಮೆ ಗೆದ್ದಿದ್ದ. ಮೊದಲಿಗೆ ಅವನ ಸೈನ್ಯವನ್ನು ಸ್ವಾಗತಿಸಲಾಯಿತಾದರೂ, ಆಮೇಲೆ ಬೈಜ಼ಾಂಟಿಯನ್ ಆಡಳಿತವು ಭ್ರಷ್ಟವಾದುದೆಂದೂ ಬೈಜ಼ಾಂಟಿಯನ್ ತೆರಿಗೆಪದ್ಧತಿಯು ವಿನಾಶಕಾರಿಯೆಂದೂ ಕಂಡುಕೊಳ್ಳಲಾಯಿತು. ಕೊನೆಯಲ್ಲಿ, ಅನೇಕರು ಮತ್ತೆ ಗಾಥ್‌ರೂ ವ್ಯಾಂಡಲ್‌ರೂ ಬರುವಂತಾಗಲಿ ಎಂದು ಹಾರೈಸಿದರು. ಆದರೆ ಚರ್ಚ್ ಮಾತ್ರ, ಅವನ ಕೊನೆಗಾಲದವರೆಗೂ, ದೃಢವಾಗಿ ಚಕ್ರವರ್ತಿಯ ಪರವಾಗಿ ನಿಂತಿತು; ಅದಕ್ಕೆ ಕಾರಣ ಅವನ ಸಂಪ್ರದಾಯನಿಷ್ಠೆ. ಗಾಲ್ ಅನ್ನು ಮತ್ತೆ ಗೆಲ್ಲಲು ಅವನು ಮತ್ತೆ ಪ್ರಯತ್ನಿಸಲಿಲ್ಲ, ಅದಕ್ಕೆ ಸ್ವಲ್ಪ ಮಟ್ಟಿಗೆ ಕಾರಣ ದೂರವಾದರೆ ಫ್ರಾಂಕ್‌ರೂ ಸಂಪ್ರದಾಯವಾದಿಗಳಾಗಿದ್ದುದೂ ಭಾಗಶಃ ಕಾರಣವಾಗಿತ್ತು.

ಜಸ್ಟಿನಿಯನ್ ಸತ್ತ ಮೂರು ವರ್ಷಗಳ ಬಳಿಕ ೫೬೮ ರಲ್ಲಿ ಇಟಲಿಯನ್ನು ಹೊಸತೊಂದು ಉಗ್ರ ಜರ್ಮ್ಯಾನಿಕ್ ಬುಡಕಟ್ಟಾದ ಲಂಬಾರ್ಡ್‌ರು ಆಕ್ರಮಿಸಿಕೊಂಡರು. ಅವರಿಗೂ ಬೈಜ಼ಾಂಟಿಯನ್‌ರಿಗೂ ನಡೆದ ಯುದ್ಧವು ಬಿಟ್ಟು ಬಿಟ್ಟು ಇನ್ನೂರು ವರ್ಷಗಳವರೆಗೆ, ಅಂದರೆ ಸುಮಾರು ಶಾರ್ಲಮೇನ್‌ನ ಕಾಲದವರೆಗೂ, ಮುಂದುವರಿಯಿತು. ಬೈಜ಼ಾಂಟಿಯನ್‌ರು ಇಟಲಿಯನ್ನು ಬರಬರುತ್ತ ಕಡಿಮೆ ಕಡಿಮೆ ಗಾತ್ರದಲ್ಲಿ ಉಳಿಸಿಕೊಂಡರು, ದಕ್ಷಿಣದಲ್ಲಿ ಅವರು ಸಾರಸೆನ್‌ರನ್ನೂ ಎದುರಿಸಬೇಕಾಗಿತ್ತು. ರೋಮ್ ಹೆಸರಿಗೆ ಮಾತ್ರ ಅವರ ಅಧಿಕಾರದಡಿಯಲ್ಲಿತ್ತು, ಅಲ್ಲದೆ ಪೋಪ್‌ರು ಪೂರ್ವದ ಸಮ್ರಾಟರನ್ನು ಗೌರವದಿಂದ ಕಾಣುತ್ತಿದ್ದರು. ಆದರೆ ಇಟಲಿಯ ಬಹು ಭಾಗಗಳಲ್ಲಿ ಚಕ್ರವರ್ತಿಗಳು, ಲಂಬಾರ್ಡ್‌ರ ಬರುವಿಕೆಯ ನಂತರ, ಬಹು ಕಡಿಮೆ ಅಧಿಕಾರವನ್ನು ಹೊಂದಿದ್ದರು, ಅಥವಾ ಇಲ್ಲವೇ ಇಲ್ಲ. ಇದೇ ಕಾಲದಲ್ಲಿಯೇ ಇಟಾಲಿಯನ್ ನಾಗರಿಕತೆಯು ನಾಶವಾದದ್ದು. ಆಟ್ಟಿಲದಿಂದ ಪಲಾಯನ ಮಾಡಿ ಬಂದ ಲಂಬಾರ್ಡ್‌ನ ನಿರಾಶ್ರಿತರು ವೆನಿಸ್‌ಅನ್ನು ಸ್ಥಾಪಿಸಿದರು, ಸಾಂಪ್ರದಾಯಿಕವಾಗಿ ಶ್ರದ್ಧೆಯಂತೆ ಅಲ್ಲ.

○

೬

ಸಂತ ಬೆನೆಡಿಕ್ಟ್ ಮತ್ತು ಗ್ರೆಗರಿ ಮಹಾಶಯ

ಆರನೆಯ ಮತ್ತು ಆನಂತರದ ಶತಮಾನಗಳ ನಿರಂತರ ಯುದ್ಧಗಳಿಂದಾಗಿ ನಾಗರಿಕತೆಯು ಸಾಮಾನ್ಯವಾಗಿ ಕ್ಷೀಣಿಸುತ್ತಿರುವಾಗ, ರೋಮ್‌ನ ಅಳಿದುಳಿದ ಸಂಸ್ಕೃತಿಯ ರಕ್ಷಣೆಮಾಡಿದ್ದು ಎಲ್ಲಕ್ಕಿಂತ ಮಿಗಿಲಾಗಿ ಚರ್ಚ್. ಆದರೆ ಚರ್ಚ್ ಈ ಸಂರಕ್ಷಣಕಾರ್ಯವನ್ನು ತೀರ ಅಪರಿಪೂರ್ಣವಾಗಿ ಮಾಡಿತು, ಅದಕ್ಕೆ ಕಾರಣ ಆ ಕಾಲದ ಅತ್ಯಂತ ಶ್ರೇಷ್ಠ ಧರ್ಮಬೋಧಕರಲ್ಲಿಯೂ ಮತಾಂಧತೆ ಮತ್ತು ಕಂದಾಚಾರಗಳು ಮೇಲುಗೈಯಾಗಿದ್ದುದು, ಹಾಗೂ ಧರ್ಮನಿರಪೇಕ್ಷಕ ಜ್ಞಾನವು ಕೆಟ್ಟದ್ದು ಎಂಬ ಭಾವನೆ. ಆದರೂ, ಧರ್ಮಬೋಧಕ ಸಂಸ್ಥೆಗಳು ಒಂದು ಗಟ್ಟಿಯಾದ ಚೌಕಟ್ಟನ್ನು ನಿರ್ಮಿಸಿದವು, ಅದರಲ್ಲಿಯೇ ಆ ಮುಂದಿನ ಕಾಲಗಳಲ್ಲಿ ವಿದ್ಯೆಯ ಮತ್ತು ನಾಗರಿಕ ಕಲೆಗಳ ಪುನರುಜ್ಜೀವನ ಸಾಧ್ಯವಾದುದು.

ನಮಗೀಗ ಸಂಬಂಧಪಟ್ಟ ಅವಧಿಯಲ್ಲಿ ಚರ್ಚ್‌ನ ಮೂರು ಚಟುವಟಿಕೆಗಳು ವಿಶೇಷ ಗಮನಕ್ಕೆ ಅರ್ಹವಾದವು; ಮೊದಲನೆಯದು, ಆಶ್ರಮವಾಸ ಚಳವಳಿ; ಎರಡನೆದು, ಪೋಪ್‌ಗಳ ಪ್ರಭಾವ, ಅದರಲ್ಲಿಯೂ ಗ್ರೆಗರಿ ಮಹಾಶಯನದು; ಮೂರನೆಯದು, ಪ್ರಚಾರಕ ತಂಡದಿಂದಾದ ಕ್ರೈಸ್ತೇತರ ಬಾರ್ಬೇರಿಯನ್‌ರ ಮತಾಂತರ.

ಆಶ್ರಮ (ಮೊನಾಸ್ಟರಿ) ಚಳವಳಿಯು ಈಜಿಪ್ಟ್ ಮತ್ತು ಸಿರಿಯಗಳಲ್ಲಿ ನಾಲ್ಕನೆಯ ಶತಮಾನದ ಆದಿಭಾಗದಲ್ಲಿ ಏಕಕಾಲಕ್ಕೆ ಆರಂಭವಾದವು. ಅದರಲ್ಲಿ ಎರಡು ರೂಪಗಳಿದ್ದುವು, ಏಕವಾಸ ಆಶ್ರಮಗಳು, ಮತ್ತು ಬಹುವಾಸ ಆಶ್ರಮಗಳು. ಮೊದಲನೆಯ ವಿರಕ್ತವಾಸಿಯಾದ ಸಂತ ಆಂಥೋನಿಯು ಈಜಿಪ್ಟ್‌ನಲ್ಲಿ ಸುಮಾರು ೨೫೦ ರಲ್ಲಿ ಹುಟ್ಟಿದ, ಮತ್ತು ಸುಮಾರು ೨೭೦ ರಲ್ಲಿ ಐಹಿಕತೆಯಿಂದ ದೂರವಾದ. ಹದಿನೈದು ವರ್ಷಗಳ ಕಾಲ ತನ್ನ ಮನೆಯ ಹತ್ತಿರದ ಒಂದು ಗುಡಿಸಿಲಿನಲ್ಲಿ ವಾಸವಾಗಿದ್ದ; ಆನಂತರ ಮರಳುಗಾಡಿನಲ್ಲಿ ಏಕಾಂತವಾಸ ಮಾಡಿದ. ಆದರೆ ಅವನ ಕೀರ್ತಿ ಹಬ್ಬಿತು, ಅವನ ಬೋಧನೆಯನ್ನು ಕೇಳಲು ಜನಸಂದಣಿ

ನೆರೆಯುತೊಡಗಿತು. ಹೀಗಾಗಿ ೩೦೫ ರಲ್ಲಿ ಅವನು ವಿರಕ್ತವಾಸವನ್ನು ಪ್ರೋತ್ಸಾಹಿಸಲೆಂದು ಬೋಧನೆಯ ಕಡೆ ಗಮನ ಹರಿಸಿದ. ಅವನು ನಿಷ್ಠುರ ಜೀವನ ಕ್ರಮವನ್ನು ಅನುಸರಿಸಿ, ಕ್ಲುಪ್ತ ಆಹಾರಸೇವನೆ, ನೀರು, ಮತ್ತು ನಿದ್ದೆಗಳನ್ನು ಅಳವಡಿಸಿಕೊಂಡ. ಕಾಮದೆವ್ವವು ಪದೇ ಪದೇ ಅವನ ಮನಸ್ಸಿನಲ್ಲಿ ಆಕ್ರಮಣ ನಡೆಸಿತು, ಆದರೆ ಪ್ರಯತ್ನಪೂರ್ವಕವಾಗಿ ಸೈತಾನನ ದುಷ್ಟ ಪ್ರಯತ್ನಗಳನ್ನವನು ದೃಢವಾಗಿ ಎದುರಿಸಿದ. ಕೊನೆಗಾಲದಲ್ಲಿ ಥೀಬೆಯ್ಡ್[೨೦೮] ಅವನ ನಿದರ್ಶನ ಮತ್ತು ಬೋಧನೆಗಳಿಂದ ಪ್ರೇರಿತರಾದ ವಿರಕ್ತರಿಂದ ತುಂಬಿತ್ತು.

ಕೆಲವು ವರ್ಷಗಳ ಬಳಿಕ – ಸುಮಾರು ೩೧೦–೩೧೫ ರಲ್ಲಿ – ಮತ್ತೊಬ್ಬ ಈಜಿಪ್ಷಿಯನ್ ಆದ ಪಾಕೋನಿಯಸ್ ಮೊದಲ ಆಶ್ರಮವನ್ನು ಸ್ಥಾಪಿಸಿದ. ಇಲ್ಲಿ ಸನ್ಯಾಸಿಗಳಿಗೆ, ವೈಯಕ್ತಿಕ ಬಡತನವಿಲ್ಲದ, ಸಮಾನವಾದ ಜೀವನಕ್ರಮವಿತ್ತು, ಸಹಭೋಜನ ಮತ್ತು ಒಂದೇ ಬಗೆಯ ಮತಧಾರ್ಮಿಕ ಆಚರಣೆಗಳು. ಸಂತ ಆಂಥೋನಿಯ ಮಾದರಿಯ ಬದಲು ಈ ರೂಪದಲ್ಲಿಯೇ ವಿರಕ್ತವಾಸವು ಕ್ರೈಸ್ತ ಗತ್ತನ್ನು ಗೆದ್ದಿತು. ಪಾಕೋನಿಯಸ್ ಮಾದರಿಯ ಆಶ್ರಮಗಳಲ್ಲಿ ಸನ್ಯಾಸಿಗಳು ಕಾಮವನ್ನೆಲ್ಲ ಮಾಂಸಲ ಆಮಿಷಗಳನ್ನು ನಿಗ್ರಹಿಸಲು ಕಳೆಯುವ ಬದಲು ತುಂಬ ಕೆಲಸ ಮಾಡುತ್ತಿದ್ದರು, ಮುಖ್ಯವಾಗಿ ಬೇಸಾಯಸಂಬಂಧಿ.

ಸುಮಾರು ಇದೇ ಕಾಲದಲ್ಲಿ, ಆಶ್ರಮಗಳು ಸಿರಿಯ ಮತ್ತು ಮೆಸೊಪೊಟಾಮಿಯಗಳಲ್ಲಿ ತಲೆ ಎತ್ತಿದುವು. ಇಲ್ಲಿ ಈಜಿಪ್ಟ್‌ಗಿಂತ ಹೆಚ್ಚು ನಿಷ್ಠುರ ವಿರಕ್ತಿಯನ್ನು ಅನುಸರಿಸಲಾಗುತ್ತಿತ್ತು. ಸಂತ ಸಿಮಿಯೋನ್ ಸ್ಟೈಲೈಟ್ಸ್ ಮತ್ತಿತರ ಆಧಾರಭೂತ ವಿರಕ್ತಿವಾಸಿಗಳು ಸಿರಿಯನ್‌ರಾಗಿದ್ದರು. ಪೂರ್ವ ಭಾಗದಿಂದಲೇ ಆಶ್ರಮವು ಗ್ರೀಕ್ ಮಾತನಾಡುವ ಅವಕಾಶಗಳಿಗೆ ಹಬ್ಬಿದುದು, ಮುಖ್ಯವಾಗಿ ಸಂತ ಬೇಸಿಲ್ (ಸುಮಾರು ೩೬೦) ಪ್ರಯತ್ನದಿಂದಾಗಿ. ಅವನ ಆಶ್ರಮಗಳು ಕಡಿಮೆ ವಿರಕ್ತಿಯವು; ಅವುಗಳಲ್ಲಿ ಅನಾಥಾಶ್ರಮಗಳಿದ್ದವು, ಬಾಲಕರಿಗಾಗಿ ಶಾಲೆಗಳಿದ್ದವು (ಸನ್ಯಾಸಿಗಳಾಗಬೇಕೆಂದು ಹಂಬಲಿಸುವವರಿಗೆ ಮಾತ್ರವಲ್ಲ).

ಮೊದಮೊದಲು ಆಶ್ರಮವಾಸವು ಸ್ವಯಂಸ್ಫೂರ್ತ ಚಳವಳಿಯಾಗಿತ್ತು, ಹಾಗೂ ಚರ್ಚ್‌ನ ವ್ಯಾಪ್ತಿಯಿಂದ ದೂರವಿತ್ತು. ಧರ್ಮಬೋಧಕರು ಅದಕ್ಕನುಗುಣವಾಗಿರುವಂತೆ ಮಾಡಿದವನು ಸಂತ ಅಥನೇಸಿಯಸ್. ಸ್ವಲ್ಪ ಮಟ್ಟಿಗೆ ಅವನ ಪ್ರಭಾವದಿಂದಾಗಿ ಸನ್ಯಾಸಿಗಳು ಪುರೋಹಿತರಾಗಿರಬೇಕು ಎಂಬ ನಿಯಮ ರೂಪಿತವಾಯಿತು. ರೋಮ್‌ನಲ್ಲಿದ್ದಾಗ ೩೩೯ ರಲ್ಲಿ ಪಶ್ಚಿಮದಲ್ಲೂ ಅದನ್ನು ಪರಿಚಯಿಸಿದವನು ಅವನೇ. ಸಂತ ಜೆರೋಮ್ ಅದನ್ನು ಪ್ರಸಾರಮಾಡುವುದಕ್ಕೆ

---

೨೦೮. ಈಜಿಪ್ಟ್‌ನ ಥೀಬ್ಸ್ ಬಳಿಯ ಮರಳುಗಾಡು.

ಸಾಕಷ್ಟು ಶ್ರಮಪಟ್ಟ, ಸಂತ ಆಗಸ್ಟೈನ್ ಅದನ್ನು ಆಫ್ರಿಕದಲ್ಲಿ ಜಾರಿಗೆ ತಂದ. ಟೂರ್ಸ್‌ ಸಂತ ಮಾರ್ಟಿನ್ ಗಾಲ್‌ನಲ್ಲಿ ಆಶ್ರಮಗಳನ್ನು ಸ್ಥಾಪಿಸಿದರೆ, ಸಂತ ಪ್ಯಾಟ್ರಿಕ್ ಐರ್ಲಂಡ್‌ನಲ್ಲಿ ಹಾಗೆ ಮಾಡಿದ. ಅಯೋನ ಆಶ್ರಮವನ್ನು ಸಂತ ಕೊಲಂಬನಿಂದ ೫೬೬ ರಲ್ಲಿ ಸ್ಥಾಪಿಸಿದ. ಮೊದಮೊದಲಲ್ಲಿ, ಅಂದರೆ ಸನ್ಯಾಸಿಗಳನ್ನು ಧರ್ಮಬೋಧನೆಯ ವ್ಯವಸ್ಥೆಗೆ ಅಳವಡಿಸುವ ಮುಂಚೆ, ಅವರು ಅವ್ಯವಸ್ಥೆಯ ಆಕರವಾಗಿದ್ದರು. ಮೊದಲಿಗೆ, ನಿಜವಾದ ವಿರಕ್ತರು ಮತ್ತು ನಿರ್ಗತಿಕರಾಗಿದ್ದು ಆಶ್ರಮವ್ಯವಸ್ಥೆಯು ಹೆಚ್ಚು ಸುಖಕರವೆಂದು ಭಾವಿಸಿದವರ ನಡುವೆ ವಾಸಮಾಡುವುದು ಕಷ್ಟಕರವಾಗಿತ್ತು. ಆಗಲೂ ಸನ್ಯಾಸಿಗಳು ತಮ್ಮ ಮೆಚ್ಚಿನ ಬಿಷಪ್‌ಗೆ ಬೆಂಬಲ ನೀಡಿ, ಧರ್ಮಪರಿಷತ್ತುಗಳಿಗೆ (ಪರಿಷತ್ತುಗಳಿಗೆ ಕಾರಣವಾಗಿ) ಧರ್ಮಭ್ರಷ್ಟತೆಗೆ ಎಡೆಮಾಡುವ ಕಷ್ಟವೂ ಎದುರಾಯಿತು. ಏಕಪ್ರಕೃತಿವಾದಿಗಳ ಪರವಾಗಿ ನಿಂತ ಎಫೆಸಸ್‌ನ ಧರ್ಮಪರಿಷತ್ತು (ಪರಿಷತ್ತು ಅಲ್ಲ) ಸನ್ಯಾಸಿಗಳ ಭಯೋತ್ಪಾದಕ ಆಡಳಿತದಲ್ಲಿತ್ತು. ಪೋಪ್‌ನ ವಿರೋಧವಿಲ್ಲದಿದ್ದರೆ, ಏಕಪ್ರಕೃತಿವಾದಿಗಳ ಗೆಲವು ಶಾಶ್ವತವಾಗಿಬಿಡುತ್ತಿತ್ತೇನೋ. ಆನಂತರದ ಕಾಲದಲ್ಲಿ, ಅಂಥ ಅವ್ಯವಸ್ಥೆ ಮರುಕಳಿಸಲಿಲ್ಲ.

ಸನ್ಯಾಸಿಗಳಿಗಿಂತ ಮುಂಚೆಯೆ – ಮೂರನೆಯ ಶತಮಾನದ ಹೊತ್ತಿಗೇ – ಸನ್ಯಾಸಿನಿಯರು ಇದ್ದಂತೆ ತೋರುತ್ತದೆ.

ಶುಭ್ರತೆಯನ್ನು ಹೇಸಿಕೆಯಿಂದ ನೋಡಲಾಗುತ್ತಿತ್ತು. ಹೇನುಗಳನ್ನು 'ದೇವರ ಮುತ್ತುಗಳು' ಎನ್ನುತ್ತಿದ್ದರು, ಅದು ಸಂತತನದ ಪ್ರತೀಕವೆನಿಸಿತ್ತು. ಹೆಣ್ಣಾಗಲೀ ಗಂಡಾಗಲೀ ಸಂತರು ನದಿಗಳನ್ನು ದಾಟುವ ಹೊತ್ತಿನಲ್ಲಿ ಬಿಟ್ಟರೆ ತಮ್ಮ ಕಾಲಿಗೆ ಎಂದೂ ನೀರೇ ಬಿದ್ದಿಲ್ಲ ಎಂದು ಹೆಮ್ಮೆ ಪಡುತ್ತಿದ್ದರು. ಆನಂತರದ ಶತಮಾನಗಳಲ್ಲಿ, ಸನ್ಯಾಸಿಗಳು ಅನೇಕ ಉಪಯುಕ್ತ ಕೆಲಸಗಳಲ್ಲಿ ತೊಡಗಿದ್ದರು; ಅವರು ಕುಶಲಿಗಳಾದ ಬೇಸಾಯಗಾರರು, ಅವರಲ್ಲಿ ಕೆಲವರು ಕಲಿಕೆಯನ್ನು ಮುಂದುವರಿಸಿದರು ಅಥವಾ ಉಳಿಸಿಕೊಂಡರು. ಆದರೆ ಆರಂಭದಲ್ಲಿ, ಅದರಲ್ಲಿಯೂ ಆಶ್ರಮವಾಸಿಗಳ ವಿಭಾಗದಲ್ಲಿ, ಇಂತಹದಾವುದೂ ಇರಲಿಲ್ಲ. ಬಹುತೇಕ ಸನ್ಯಾಸಿಗಳು ಕೆಲಸ ಮಾಡುತ್ತಿರಲಿಲ್ಲ, ನಿಗದಿತ ಧರ್ಮಗ್ರಂಥಗಳ ಹೊರತು ಮತ್ತೇನನ್ನೂ ಓದುತ್ತಿರಲಿಲ್ಲ, ಹೀಗೆ ಸಂಪೂರ್ಣವಾಗಿ ನೇತ್ಯಾತ್ಮಕ ದೃಷ್ಟಿಯಿಂದಲೇ ಸದ್ಗುಣವನ್ನು ಕಲ್ಪಿಸಿಕೊಂಡರು, ಅದೇ ಪಾಪದೂರವಾಗುವ, ಅದರಲ್ಲೂ ಮಾಂಸಲ ಆಮಿಷದಿಂದ ಮುಕ್ತವಾಗುವ ರೀತಿ ಎಂದು ಭಾವಿಸಿದರು. ಸಂತ ಜೆರೋಮ್ ತನ್ನ ಗ್ರಂಥಭಂಡಾರವನ್ನು ಮರಳುಗಾಡಿಗೆ ತೆಗೆದುಕೊಂಡು ಹೋದುದು ನಿಜ, ಆದರೆ ಮುಂದೆ ಅವನೇ ಇದನ್ನು ಪಾಪಕೃತ್ಯವೆಂದು ಭಾವಿಸಿದ.

ಪಶ್ಚಿಮ ಆಶ್ರಮವಾಸಪದ್ಧತಿಯಲ್ಲಿ ಅತ್ಯಂತ ಪ್ರಮುಖವಾದ ಹೆಸರೆಂದರೆ ಸಂತ ಬೆನೆಡಿಕ್ಟೈನ್ ದಳದ ಬೆನೆಡಿಕ್ಟ್‌ನದು. ಅವನು ಸ್ಪೋಲೆಟೋ ಹತ್ತಿರದ ಊರಲ್ಲಿ

೪೮೦ ರಲ್ಲಿ ಗೌರವನೀಯ ಅಂಬ್ರೈನ್ ಕುಟುಂಬದಲ್ಲಿ ಹುಟ್ಟಿದ. ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ರೋಮ್‌ನ ಸೌಕರ್ಯ–ಸುಖಗಳಿಂದ ದೂರ ಓಡಿ ಗುಹೆಯೊಂದರ ಏಕಾಂತವನ್ನು ಸೇರಿ ಅಲ್ಲಿಯೇ ಮೂರು ವರ್ಷಗಳಿದ್ದ. ಈ ಅವಧಿಯ ಬಳಿಕ ಅವನ ಬದುಕು ಕಡಿಮೆ ಏಕಾಂತವಾಯಿತು. ಸುಮಾರು ೫೨೦ ರಲ್ಲಿ ಮೌಂಟ್ ಕ್ಯಾಸಿನೋ ಆಶ್ರಮವನ್ನು ಸ್ಥಾಪಿಸಿದ, ಅದರಲ್ಲಿ ಬೆನೆಡಿಕ್ಟೈನ್ ನಿಯಮವನ್ನು ಜಾರಿಗೆ ತಂದ. ಇದು ಪಶ್ಚಿಮದ ಹವಾಗುಣಕ್ಕೆ ಒಗ್ಗುವಂತಹುದಾಗಿತ್ತು, ಹೀಗಾಗಿ ಈಜಿಪ್ಟ್ ಮತ್ತು ಸಿರಿಯದ ಸನ್ಯಾಸಿಗಳಲ್ಲಿ ಸಾಮಾನ್ಯವೆನಿಸಿದ್ದ ಕಟ್ಟುಪಾಡುಗಳನ್ನು ಕಡಿಮೆ ನಿಷ್ಠುರಗೊಳಿಸಿದ, ವಿರಕ್ತ ದುಂದುವೆಚ್ಚವು ಅನೈತಿಕವಾಗಿ ಸ್ಪರ್ಧಾತ್ಮಕವಾಯಿತು, ಅತಿರೇಕದ ಅನುಷ್ಠಾನ ಮಾಡಿದವನೇ ಅತ್ಯಂತ ಪರಿಶುದ್ಧ ಎಂಬ ಭಾವನೆ ಬೆಳೆಯಿತು. ಇದಕ್ಕೆ ಬೆನೆಡಿಕ್ಟ್ ಮಂಗಳ ಹಾಡಿದ, ಆಶ್ರಮಮುಖ್ಯಸ್ಥನ (ಆಬ್ಬಟ್) ಅನುಮತಿಯ ಬಳಿಕವೇ ಕಟ್ಟುಪಾಡುಗಳನ್ನು ಮೀರಿದ ವೆಚ್ಚ ಮಾಡುವ ನೀತಿ ಜಾರಿ ಮಾಡಿದ. ಆಶ್ರಮ ಮುಖ್ಯಸ್ಥನಿಗೆ ಹೆಚ್ಚಿನ ಅಧಿಕಾರ ನೀಡಲಾಯಿತು; ಅವನನ್ನು ಆಜೀವ ಅವಧಿಗೆ ಚುನಾಯಿಸಲಾಗುತ್ತಿತ್ತು, ಅವನಿಗೆ (ಸಂಪ್ರದಾಯನಿಷ್ಠೆಗನುಗುಣವಾದ ನಿಯಮಗಳು ಮತ್ತು ಮಿತಿಗಳನ್ನು ಹೊಂದಿದ) ಸನ್ಯಾಸಿಗಳ ಮೇಲಣ ದೌರ್ಜನ್ಯಕಾರಕ ಎನ್ನಬಹುದಾದಷ್ಟು ನಿಯಂತ್ರಣವಿತ್ತು, ಸನ್ಯಾಸಿಗಳು ಹಿಂದಿನಂತೆ ಇದನ್ನು ಬಿಟ್ಟು ಬೇರೊಂದು ಆಶ್ರಮವನ್ನು ಸೇರಬಹುದಾದ ಅವಕಾಶವನ್ನು ನೀಡುತ್ತಿರಲಿಲ್ಲ. ಆನಂತರದಲ್ಲಿ, ಬೆನೆಡಿಕ್ಟೈನ್ ಆಶ್ರಮವಾಸಿಗಳು ಕಲಿಕೆಯಲ್ಲಿ ಶ್ರದ್ಧೆ ಹೊಂದಿದವರಾಗಿದ್ದಾರೆ; ಆದರೆ ಮೊದಲಿಗೆ ಅದು ಭಕ್ತಿಸಂಬಂಧಿಯಾದುದಾಗಿತ್ತು.

ಸಂಘಟನೆಗಳಿಗೂ ಅವುಗಳ ಸ್ಥಾಪಕರ ಇಚ್ಛೆಗಳಿಗೆ ಹೊರತಾದ ತಮ್ಮದೇ ಆದ ಆಯುಸ್ಸು ಇರುತ್ತದೆ. ಅವುಗಳಲ್ಲಿ ಮೇಲೆದ್ದು ಕಾಣುವ ನಿದರ್ಶನವೆಂದರೆ ಕ್ಯಾಥೋಲಿಕ್ ಚರ್ಚ್. ಅದು ಜೀಸಸ್ ಅನ್ನೇ, ಅಷ್ಟೇಕೆ ಸಂತ ಪೌಲ್‌ನನ್ನೇ ಅಚ್ಚರಿಗೊಳಿಸುವಂತಹುದು. ಬೆನೆಡಿಕ್ಟೈನ್ ದಳವು ಕಡಿಮೆ ಎದ್ದು ಕಾಣುವ ನಿದರ್ಶನ. ಸನ್ಯಾಸಿಗಳು ಬಡತನ, ವಿಧೇಯತೆ ಮತ್ತು ಬ್ರಹ್ಮಚರ್ಯಗಳ ವ್ರತ ತೊಡುತ್ತಾರೆ. ಈ ಕುರಿತು ಗುಬ್ಬನ್ ಹೇಳುವುದೆಂದರೆ: 'ಒಬ್ಬ ಬೆನೆಡಿಕ್ಟೈನ್ ಆಶ್ರಮ ಮುಖ್ಯಸ್ಥನು ಮನಬಿಚ್ಚಿ ಮಾಡಿಕೊಂಡ ಈ ತಪ್ಪೊಪ್ಪಿಗೆಯನ್ನು ನಾನೆಲ್ಲೋ ಕೇಳಿದ್ದೇನೆ ಅಥವಾ ಓದಿದ್ದೇನೆ: "ನನ್ನ ಬಡತನದ ವ್ರತವು ನನಗೆ ವರ್ಷಕ್ಕೆ ಒಂದು ಲಕ್ಷ ಕ್ರೌನ್‌ಗಳನ್ನು ಕೊಟ್ಟಿದೆ, ನನ್ನ ವಿಧೇಯತೆಯ ವ್ರತವು ನನ್ನನ್ನು ಒಬ್ಬ ರಾಜಕುಮಾರನ ಮಟ್ಟಕ್ಕೆ ಏರಿಸಿದೆ." ಅವನ ಬ್ರಹ್ಮಚರ್ಯದ ಪರಿಣಾಮವೇನು ಎಂಬುದು ನನಗೆ ನೆನಪಿಲ್ಲ.'[೨೯] ಸ್ಥಾಪಕನ ಉದ್ದೇಶದಿಂದ ದೂರವಾದ ಈ ಬಗೆಯು ಪೂರ್ತಿ

---

೨೯. ಪೂರ್ವೋಕ್ತ, ೩೭, ಟಿಪ್ಪಣಿ ೫೭.

ವಿಷಾದಕರವಾದುದೇನೂ ಅಲ್ಲ. ಇದು ಕಲಿಕೆಗೆ ಸಂಬಂಧಿಸಿದಂತೆ ನಿಜ. ಮಾಂಟೆ ಕ್ಯಾಸಿನೋನ ಗ್ರಂಥಭಂಡಾರವು ಬಹು ಹೆಸರುವಾಸಿಯಾಗಿತ್ತು, ಹಾಗೂ ಹಲವಾರು ವಿಧಗಳಲ್ಲಿ ಆನಂತರ ಕಾಲದ ಬೆನೆಡಿಕ್ಟೈನ್‌ರ ವಿದ್ವತ್ ಅಭಿರುಚಿಗೆ ಜಗತ್ತು ಆಭಾರಿಯಾಗಿದೆ.

ಸ್ಥಾಪನೆಯ ಕಾಲದಿಂದಲೂ ಸಂತ ಬೆನೆಡಿಕ್ಟ್ ಮಾಂಟೆ ಕ್ಯಾಸಿನೋನಲ್ಲಿಯೇ ತಾನು ಸತ್ತ ೫೪೩ ರವರೆಗೂ ವಾಸಿಸಿದ್ದ. ಒಬ್ಬ ಬೆನೆಡಿಕ್ಟೈನ್‌ನೇ ಆದ ಗ್ರೆಗರಿ ಮಹಾಶಯನು ಪೋಪ್ ಆಗುವುದಕ್ಕೂ ಮುಂಚೆ ಆ ಆಶ್ರಮವನ್ನು ಲಂಬಾರ್ಡ್‌ರು ವಶಪಡಿಸಿಕೊಂಡರು. ಸನ್ಯಾಸಿಗಳು ರೋಮ್‌ಗೆ ಪಲಾಯನ ಮಾಡಿದರು, ಆದರೆ ಲಂಬಾರ್ಡ್‌ರ ಕೋಪ ಅಡಗಿದ ಮೇಲೆ ಅವರು ಮತ್ತೆ ಮಾಂಟೆ ಕ್ಯಾಸಿನೋಗೆ ಮರಳಿದರು.

೫೯೩ ರಲ್ಲಿ ಬರೆದ ಗ್ರೆಗರಿ ಮಹಾಶಯನ ಸಂವಾದಗಳಿಂದ ಸಂತ ಬೆನೆಡಿಕ್ಟ್‌ನ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ತಿಳಿಯುತ್ತದೆ. ಅವನನ್ನು 'ರೋಮ್‌ನಲ್ಲಿ ಮಾನವಿಕಶಾಸ್ತ್ರಗಳ ಅಧ್ಯಯನಗಳಲ್ಲಿ ತೊಡಗಿಸಲಾಯಿತು. ಆದರೆ ಅಂಥ ವಿದ್ಯೆಯು ಬದುಕು ಲಂಪಟತೆ ಮತ್ತು ಅಸಭ್ಯತೆಗಳಿಗೆ ಬಲಿಯಾಗಿ ಹೇಗೋ ಜಗತ್ತಿನಲ್ಲಿ ನೆಲೆನಿಲ್ಲುವ ಸ್ಥಿತಿ ಬಂದೀತೆಂದು ಬಗೆದು, ತಾನು ಅಲ್ಲಿಯೇ ಮುಂದುವರಿದರೆ ಅದರಲ್ಲಿ ತುಂಬ ದೂರ ಹೋಗಿ ದೇವರಿಲ್ಲದ ಕಂದಕಕ್ಕೆ ಬೀಳುವ ಸಾಧ್ಯತೆಯಿರುವುದೆಂದು ಅರಿತು, ಅವನು ಅಲ್ಲಿಂದ ಕಾಲ್ತೆಗೆದ. ಹೀಗಾಗಿ ತನ್ನ ಪುಸ್ತಕವನ್ನು ಬಿಟ್ಟು, ತಂದೆಯ ಶ್ರೀಮಂತ ಮನೆಯನ್ನು ತೊರೆದು, ದೇವರ ಸೇವೆಗೆ ಬದುಕನ್ನು ಮುಡಿಪಾಗಿಡುವ ನಿರ್ಧಾರದಿಂದ ತನ್ನ ಉದ್ದೇಶ ಸಾಧನೆಗೆ ಅನುಕೂಲಕರವಾದ ಸೂಕ್ತ ಸ್ಥಳಕ್ಕಾಗಿ ಹುಡುಕಾಡಿದ; ಹೀಗೆ ತನ್ನ ವಿದ್ಯೆಯ ಅವಿದ್ಯೆಯಿಂದ ಬೋಧಿತನಾಗಿ ಹಾಗೂ ವಿವೇಕವನ್ನು ಕಲಿಯದೆ ಮನೆಯಿಂದ ಹೊರಟ.'

ಅವನಿಗೆ ಬಹು ಬೇಗ ಪವಾಡಗಳನ್ನೆಸಗುವ ಶಕ್ತಿ ಪ್ರಾಪ್ತವಾಯಿತು. ಇದರಲ್ಲಿ ಮೊದಲನೆಯದು ಮುರಿದ ಜರಡಿಯೊಂದನ್ನು ತನ್ನ ಪ್ರಾರ್ಥನೆಯಿಂದಲೇ ಸರಿಪಡಿಸಿದುದು. ಊರ ಜನರು ಆ ಜರಡಿಯನ್ನು ಚರ್ಚ್‌ನ ದ್ವಾರದಲ್ಲಿ ತೂಗುಹಾಕಿದರು, ಅದು 'ಆಮೇಲೆ ಅನೇಕ ವರ್ಷಗಳು, ಲಂಬಾರ್ಡ್‌ರ ಅನೇಕ ಅಡ್ಡಿಗಳ ನಡುವೆಯೂ, ಅಲ್ಲೇ ತೂಗಾಡುತ್ತಿತ್ತು.' ಜರಡಿಯನ್ನು ಬಿಟ್ಟು, ಅವನು ತನ್ನ ಗುಹೆಗೆ ಹೋದ, ಅದು ಒಬ್ಬ ಸ್ನೇಹಿತನ ಹೊರತಾಗಿ ಬೇರಾರಿಗೂ ತಿಳಿಯದ ಸ್ಥಳ; ಆ ಸ್ನೇಹಿತ ಗುಟ್ಟಾಗಿ ಕೆಳಗೆ ತೂಗುಬಿಟ್ಟ ಹಗ್ಗದ ಮೂಲಕ ಅವನಿಗೆ ಆಹಾರ ಸರಬರಾಜು ಮಾಡುತ್ತಿದ್ದ, ಆ ಹಗ್ಗಕ್ಕೆ ಒಂದು ಗಂಟೆ ಕಟ್ಟಿದ್ದರಿಂದ ಅದರಿಂದಾಗಿ ಸಂತನಿಗೆ ಊಟ ಬಂದುದು ತಿಳಿಯುತ್ತಿತ್ತಂತೆ. ಆದರೆ ಸೈತಾನನು

ಆ ಹಗ್ಗಕ್ಕೊಂದು ಕಲ್ಲು ಬೀಸಿದ, ಅದರಿಂದ ಹಗ್ಗ ಹಾಗೂ ಗಂಟೆ ಹರಿದುಬಿದ್ದವು. ಆದರೆ ಮಾನವದ್ವೇಷಿಯ ಈ ಪ್ರಯತ್ನವು ಸಂತನ ಆಹಾರ ಸರಬರಾಜನ್ನು ನಿಲ್ಲಿಸಲು ಸಫಲವಾಗಲಿಲ್ಲ.

ದೇವರ ಉದ್ದೇಶಕ್ಕೆ ಬೇಕಾದಷ್ಟು ಹೊತ್ತು ಬೆನೆಡಿಕ್ಟ್ ಗುಹೆಯಲ್ಲಿಯೇ ಇರುತ್ತಿದ್ದ; ನಮ್ಮ ದೇವರು ಒಬ್ಬ ಪುರೋಹಿತನಿಗೆ ಈಸ್ಟರ್ ಭಾನುವಾರ ಕಾಣಿಸಿಕೊಂಡು, ಸಂತನ ಇರುವಿಕೆಯ ಸ್ಥಳವನ್ನು ಬಹಿರಂಗಪಡಿಸಿ, ಈಸ್ಟರ್ ಹಬ್ಬದೌತಣವನ್ನು ಸಂತನೊಡನೆ ಹಂಚಿಕೊಳ್ಳಲು ಸೂಚಿಸಿದನಂತೆ. ಅದೇ ಹೊತ್ತಿಗೆ ಕೆಲವು ಕುರಿಗಾಹಿಗಳು ಅವನನ್ನು ನೋಡಿದರು. 'ಮೊದಲಿಗೆ, ಪೊದೆಗಳ ಹಿಂದೆ ನಿಂತು ಅವನ ಇರುವಿಕೆಯನ್ನು ಕಂಡುಹಿಡಿದು ಅವನು ಚರ್ಮದ ಉಡುಗೆಗಳನ್ನು ತೊಟ್ಟುದನ್ನು ನೋಡಿ, ಅವನನ್ನು ಒಂದು ಪ್ರಾಣಿಯೆಂದು ತಪ್ಪು ತಿಳಿದರಂತೆ: ಆದರೆ ಅವನು ದೇವರ ಸೇವಕನೆಂದು ಅರಿತಾಗ ಅವರಲ್ಲಿ ಅನೇಕರು ತಮ್ಮ ಪಶುಜೀವನದಿಂದ ಮತಾಂತರಗೊಂಡು ದೈವಕೃಪೆ, ಧರ್ಮಪರತೆ ಮತ್ತು ಭಕ್ತಿಗಳಿಂದ ಕೂಡಿದರಂತೆ.'

ಇತರ ಆಶ್ರಮವಾಸಿಗಳಂತೆ ಬೆನೆಡಿಕ್ಟ್ ಕೂಡ ಮಾಂಸಲ ಆಮಿಷಕ್ಕೊಳಗಾದನಂತೆ. 'ಅವನು ಅನೇಕ ಬಾರಿ ನೋಡಿದ್ದ ಅಲ್ಲಿನ ಒಬ್ಬ ಹೆಂಗಸಿನ ಬಗೆಗಿನ ನೆನಪನ್ನು ಕೆಡುಕು ದೈವವು ಅವನ ಮನದಲ್ಲಿ ಬಿತ್ತಿದಾಗ, ಅವಳ ನೆನಪು ದೇವರ ಸೇವಕನ ಆತ್ಮದಲ್ಲಿ ಕಾಮಾಸಕ್ತಿಯನ್ನು ಎಷ್ಟು ತೀವ್ರಗೊಳಿಸಿತೆಂದರೆ, ಅದು ಹೆಚ್ಚುತ್ತ ಹೋಗಿ ಅವನಲ್ಲಿ ಸಂತಸ ತುಂಬಿ ಅವನು ಕಾಡನ್ನು ತೊರೆಯಲು ನಿರ್ಧರಿಸುವಂತಾಯಿತಂತೆ. ಆದರೆ ದೈವಕೃಪೆಯಿಂದಾಗಿ ಇದ್ದಕ್ಕಿದ್ದಂತೆಯೇ ಅವನು ಉಡುಪುಗಳನೆಲ್ಲ ಕಿತ್ತೆಸೆದು, ಅವುಗಳ ಮಧ್ಯಕ್ಕೆ ಹಾರಿ ಬಹು ಹೊತ್ತು ಹೊರಳಾಡಿದನಂತೆ; ಅಲ್ಲಿಂದ ಮೇಲೆದ್ದಾಗ ಅವನ ಚರ್ಮವೆಲ್ಲ ಚಿಂದಿಚಿಂದಿಯಾಗಿತ್ತಂತೆ; ಹೀಗೆ ಅವನು ದೇಹಕ್ಕಾದ ಗಾಯಗಳಿಂದ ತನ್ನ ಆತ್ಮದ ಗಾಯವನ್ನು ವಾಸಿಮಾಡಿಕೊಂಡನಂತೆ.'

ಅವನ ಕೀರ್ತಿ ಎಲ್ಲೆಡೆ ಹಬ್ಬಿದ ಮೇಲೆ, ಯಾವುದೋ ಒಂದು ಆಶ್ರಮದ ಸನ್ಯಾಸಿಗಳು, ಸ್ವಲ್ಪ ಕಾಲದ ಹಿಂದಷ್ಟೇ ಆಶ್ರಮ ಮುಖ್ಯಸ್ಥರು ಸತ್ತಿದ್ದರಿಂದಾಗಿ, ಆ ಸ್ಥಾನವನ್ನು ಅಲಂಕರಿಸುವಂತೆ ಅವನನ್ನು ಕೇಳಿಕೊಂಡರಂತೆ. ಅವನು ಒಪ್ಪಿದ, ಅವರೂ ನಿಷ್ಠುರ ಸದ್ಗುಣಗಳನ್ನು ಅಳವಡಿಸಿಕೊಳ್ಳುವಂತೆ ಒತ್ತಾಯಿಸಿದ, ಆದರೆ ಇದರಿಂದ ಕ್ರುದ್ಧರಾದ ಸನ್ಯಾಸಿಗಳು ಅವನಿಗೆ ವೈನ್ ತುಂಬಿದ ಗಾಜಿನ ಲೋಟಕ್ಕೆ ವಿಷ ಬೆರೆಸಿ ಕೊಲ್ಲುವ ಸಂಚು ಮಾಡಿದರಂತೆ. ಆದರೆ ಅವನು ಆ ಲೋಟದ ಮೇಲೆ ಶಿಲುಬೆಯಾಕಾರ ರಚಿಸಿದಾಗ ಅದು ಚೂರು ಚೂರಾಗಿ ಒಡೆದು ಬಿತ್ತಂತೆ. ಹೀಗಾಗಿ ಅವನು ಮತ್ತೆ ಕಾಡಿಗೇ ಮರಳಿದನಂತೆ.

ಸಂತ ಬೆನೆಡಿಕ್ಟ್ ಎಸಗಿದ್ದ ಜರಡಿಯ ಪವಾಡ ಮಾತ್ರವೇ ವ್ಯಾವಹಾರಿಕವಾಗಿ ಉಪಯುಕ್ತವಾದುದಾಗಿರಲಿಲ್ಲ. ಒಂದು ದಿನ, ಒಬ್ಬ ಸದ್ಗುಣಿಯಾದ ಗಾಥ್ ಪೊದೆಗಳನ್ನು ಕತ್ತರಿಸಲು ಈಟಿಗತ್ತಿಯನ್ನು ಬಳಸುತ್ತಿರುವಾಗ ಅದರ ತಲೆಯು ಸಿಡಿದು ಹೋಗಿ ಆಳವಾದ ನೀರಿನಲ್ಲಿ ಬಿದ್ದಿತಂತೆ. ಆಗ ಸಂತನು, ಆ ವಿಷಯ ತಿಳಿದು ನೀರಿನಲ್ಲಿ ಕೈ ನೀಡಲು ಆ ಈಟಿಗತ್ತಿಯ ತಲೆಯು ಮೇಲೆದ್ದು ಹಿಡಿಕೆಗೆ ತಾನಾಗಿ ಅಳವಡಿಸಿಕೊಂಡಿತಂತೆ.

ಈ ಪರಿಶುದ್ಧಜೀವನದ ಕೀರ್ತಿಯಿಂದ ಹೊಟ್ಟೆಕಿಚ್ಚುಪಟ್ಟು ಯಾರೋ ನೆರೆಹೊರೆಯ ಪುರೋಹಿತನೊಬ್ಬ ಅವನಿಗೆ ವಿಷ ಬೆರೆಸಿದ ಬ್ರೆಡ್ ತುಂಡೊಂದನ್ನು ಕಳಿಸಿಕೊಟ್ಟನಂತೆ, ಆದರೆ ಅದ್ಭುತವಾಗಿ ಅದು ವಿಷಯುಕ್ತವಾದುದು ಎಂದು ಬೆನೆಡಿಕ್ಟ್‌ಗೆ ತಿಳಿಯಿತಂತೆ. ಅವನಿಗೆ ಕಾಗೆಯೊಂದಕ್ಕೆ ಬ್ರೆಡ್ ತುಣುಕನ್ನು ನೀಡುವ ಅಭ್ಯಾಸವಿತ್ತು, ಆ ಕಾಗೆ ಆ ದಿನ ಬಂದಾಗ, ಸಂತ ಅದಕ್ಕೆ ಹೀಗೆ ಹೇಳಿದನಂತೆ: 'ನಮ್ಮ ಪ್ರಭುವಾದ ಯೇಸು ಕ್ರಿಸ್ತನ ಹೆಸರಲ್ಲಿ, ಇದನ್ನು ತೆಗೆದುಕೊಂಡು ಹೋಗಿ ಯಾವ ಮನುಷ್ಯನೂ ಕಾಣದ ತಾಣದಲ್ಲಿ ಇರಿಸು.' ಕಾಗೆ ಆ ಮಾತಿನಂತೆಯೇ ನಡೆಯಿತು, ಅದು ವಾಪಸು ಬಂದಾಗ ಅದಕ್ಕೆ ಎಂದಿನಂತೆ ಉಣಿಸನ್ನು ನೀಡಿದ. ಆ ಕೆಟ್ಟ ಪುರೋಹಿತ ಬೆನೆಡಿಕ್ಟ್‌ನ ದೇಹವನ್ನು ಕೊಲ್ಲಲು ಸಾಧ್ಯವಾಗದುದನ್ನು ಕಂಡು ಅವನ ಆತ್ಮವನ್ನು ಕೊಲ್ಲಲು ನಿರ್ಧರಿಸಿ, ಏಳು ಮಂದಿ ಬೆತ್ತಲೆ ಹೆಂಗಸರನ್ನು ಅವನ ಆಶ್ರಮಕ್ಕೆ ಕಳಿಸಿದ. ಯಾರಾದರೂ ಕಿರಿಯ ಸನ್ಯಾಸಿಯು ಅದರಿಂದ ಪಾಪಗ್ರೈಯಬಹುದೆಂದು ಹೆದರಿ, ಪುರೋಹಿತನಿಗೆ ಅಂತಹ ಆಲೋಚನೆ ಮತ್ತೆ ಬರಬಾರದೆಂದು ಬಯಸಿ, ತಾನೇ ಹೊರ ನಡೆದ. ಆದರೆ ಆ ಪುರೋಹಿತನ ಕೊಠಡಿಯ ಛಾವಣಿ ಕುಸಿದು ಅವನು ಸತ್ತನಂತೆ. ಈ ಸುದ್ದಿ ತಿಳಿದು ಒಬ್ಬ ಸನ್ಯಾಸಿ ಸಂತೋಷದಿಂದ ಬೆನೆಡಿಕ್ಟ್‌ನನ್ನು ಹುಡುಕಿ ವಾಪಸಾಗಲು ಕೇಳಿಕೊಂಡನಂತೆ. ಪಾಪಿಯ ಸಾವಿಗಾಗಿ ಬೆನೆಡಿಕ್ಟ್ ಮರುಗಿದ, ಅವನ ಸಾವಿನಿಂದ ಸಂತೋಷಗೊಂಡ ಸನ್ಯಾಸಿಗೆ ತಪಸ್ಸನ್ನು ವಿಧಿಸಿದನಂತೆ.

ಗ್ರೆಗರಿ ಕೇವಲ ಪವಾಡಗಳನ್ನಷ್ಟೇ ನಿರೂಪಿಸುವುದಿಲ್ಲ, ಆಗೀಗ ಸಂತ ಬೆನೆಡಿಕ್ಟ್‌ನ ವೃತ್ತಿಜೀವನದ ಬಗೆಗಿನ ವಿವರಗಳನ್ನು ನೀಡುವುದರೆಡೆ ಕಣ್ಣು ಹಾಯಿಸುತ್ತಾನೆ. ಹನ್ನೆರಡು ಆಶ್ರಮಗಳನ್ನು ಸ್ಥಾಪಿಸಿದ ಮೇಲೆ, ಅವನು ಕೊನೆಗೆ ಮಾಂಟೆ ಕ್ಯಾಸಿನೋಗೆ ಮರಳುತ್ತಾನೆ. ಅಲ್ಲಿ ಕ್ರೈಸ್ತೇತರರು ಪೂಜಿಸುತ್ತಿದ್ದ ಅಪಾಲೋ ದೇವತೆಯ ಗುಡಿಯಿತ್ತು. 'ಆ ಕಾಲಕ್ಕೂ ಹಳ್ಳಿಯ ಮರುಳು ಜನರು ಅತ್ಯಂತ ಕ್ಷುದ್ರ ಬಲಿಗಳನ್ನು ಕೊಡುವುದರಲ್ಲಿ ನಿರತರಾಗಿದ್ದರು.' ಬೆನೆಡಿಕ್ಟ್ ಬಲಿಪೀಠವನ್ನು ನಾಶಗೊಳಿಸಿದ, ಅಲ್ಲಿ ಚರ್ಚ್ ಒಂದನ್ನು ಸ್ಥಾಪಿಸಿ ನೆರೆಹೊರೆಯ ಕ್ರೈಸ್ತೇತರರನ್ನು ಮತಾಂತರಗೊಳಿಸಿದ. ಇದರಿಂದ ಸೈತಾನನಿಗೆ ಇರಿಸುಮುರಿಸಾಯಿತು.

'ಈ ಪ್ರಾಚೀನ ಮಾನವದ್ವೇಷಿ ಇದನ್ನು ಸರಿಯಾಗಿ ತಿಳಿಯದೆ, ಗೊತ್ತಿಲ್ಲದ ಹಾಗೆಯೋ ಕನಸಿನಲ್ಲಿಯೋ ಅಲ್ಲ, ಹಗಲು ಬೆಳಕಿನಲ್ಲಿ ಆ ಪರಿಶುದ್ಧ ಪಾದ್ರಿಯ ಎದುರಿಗೆ ಕಾಣಿಸಿಕೊಂಡು ಗೋಳಾಡುತ್ತ ಅವನು ತನಗೆ ಹಿಂಸೆಯನ್ನು ನೀಡಿದ್ದಾನೆಂದು ಕಿರಿಚಾಡಿದ. ಅವನು ಮಾಡಿದ ಗದ್ದಲ ಸನ್ಯಾಸಿಗಳಿಗೆ ಕೇಳಿಸಿತು, ಆದರೆ ಅವನು ಮಾತ್ರ ಕಾಣಿಸುತ್ತಿರಲಿಲ್ಲ; ತನ್ನ ಕಣ್ಣುಗಳಿಗೆ ಅವನು ಅತ್ಯಂತ ಕ್ರೂರ ರೂಪದಲ್ಲಿ ಕಾಣಿಸಿದನೆಂದೂ, ಅಲ್ಲದೆ ಬೈಗುಳದ ಬಾಯಿ ಹಾಗೂ ಉರಿಯುವ ಕಣ್ಣುಗಳಿಂದ ತನ್ನನ್ನು ಚಿಂದಿ ಮಾಡುವವನಂತೆ ಇದ್ದನೆಂದೂ ವಂದನೀಯ ಪಾದ್ರಿ ಅವರಿಗೆ ತಿಳಿಸಿದ; ಆ ಪಿಶಾಚಿ ತನಗೆ ಹೇಳಿದ್ದನ್ನು ಸನ್ಯಾಸಿಗಳೆಲ್ಲ ಕೇಳಿಸಿಕೊಂಡಿದ್ದರು; ಮೊದಲು ಅವನು ಅವನನ್ನು ಬೈಯುವುದು, ಆದರೆ ಆ ದೇವಪುತ್ರನು ಯಾವ ಉತ್ತರವನ್ನೂ ನೀಡದೆ ಮೌನವಾಗಿರಲು ನಿರ್ಧರಿಸಿದ್ದನ್ನು ಕಂಡು ಅವನ ಮೇಲೆ ನಿಂದನೆಯ ಮಳೆ ಸುರಿಸುತ್ತ ಸುಳಿದಾಡಿದ: "ದೈವಕೃಪೆಯ ಬೆನೆಟ್" ಎಂದು ಅವನನ್ನು ಕರೆದರೂ ಅವನು ಏನೂ ಹೇಳದುದನ್ನು ನೋಡಿ ನೇರವಾಗಿ ತನ್ನ ದನಿಯನ್ನು ಅವನತ್ತ ತಿರುಗಿಸಿ "ಶಪಿತ ಬೆನೆಟ್, ದೈವಕೃಪೆ ಪಡೆದವನಲ್ಲ, ನೀನು ನನಗೇನು ಮಾಡಬಲ್ಲೆ? ನನ್ನನ್ನೇಕೆ ಹೀಗೆ ಹಿಂಸಿಸುತ್ತೀಯೆ?"' ಎಂದನಂತೆ. ಇಲ್ಲಿಗೆ ಕತೆ ಮುಗಿಯುತ್ತದೆ: ಸೈತಾನ್ ತನ್ನ ಪ್ರಯತ್ನವನ್ನು ಹತಾಶೆಯಿಂದ ಕೈಬಿಟ್ಟನೆಂದು ಇದರಿಂದ ಅರ್ಥವಾಗುತ್ತದೆ.

ಈ ಸಂವಾದಗಳಿಂದ ನಾನು ಸಾಕಷ್ಟು ದೀರ್ಘವಾಗಿಯೇ ಉಲ್ಲೇಖಗಳನ್ನು ಮಾಡಿದ್ದೇನೆ, ಅದಕ್ಕೆ ಕಾರಣ ಅವುಗಳಿಗಿರುವ ಮೂಬಗೆಯ ಪ್ರಾಮುಖ್ಯ: ಮೊದಲನೆಯದು, ಐರಿಶ್ ಜನರಿಂದ ಸ್ಥಾಪಿತವಾದ ಐರ್ಲಂಡ್‌ನಲ್ಲಿನವುಗಳನ್ನು ಬಿಟ್ಟರೆ ಪಶ್ಚಿಮದ ಆಶ್ರಮಗಳಿಗೆಲ್ಲ ಮಾದರಿಯಾದ ನಿಯಮಗಳನ್ನು ವಿಧಿಸಿದ ಸಂತ ಬೆನೆಡಿಕ್ಟ್‌ನ ಬದುಕಿನ ಬಗೆಗಿನ ಪ್ರಮುಖ ಆಕರ ಎಂಬುದು. ಎರಡನೆಯದಾಗಿ, ಅವು ಆರನೆಯ ಶತಮಾನದ ಕೊನೆಯಲ್ಲಿನ ಅತ್ಯಂತ ನಾಗರಿಕ ಜನರ ಮಾನಸಿಕ ಪರಿಸರದ ಬಗ್ಗೆ ಸ್ಪಷ್ಟವಾದ ಚಿತ್ರಣ ನೀಡುತ್ತವೆಂಬುದು. ಮೂರನೆಯದಾಗಿ, ಅದನ್ನು ಬರೆದವನು ಪಶ್ಚಿಮ ಚರ್ಚ್‌ನ ನಾಲ್ಕು ಮಂದಿ ಪಾದ್ರಿಗಳಲ್ಲಿ ಕೊನೆಯವನಾದ ಹಾಗೂ ರಾಜಕೀಯವಾಗಿ ಅತ್ಯಂತ ಗಣ್ಯನೆನಿಸಿದವರಲ್ಲಿ ಒಬ್ಬನಾದ ಪೋಪ್ ಗ್ರೆಗರಿ ಮಹಾಶಯ ಎಂಬುದು. ಈಗ ಅವನ ಕಡೆಗೇ ನಮ್ಮ ಗಮನವನ್ನು ಹರಿಸೋಣ. ನಾರ್ಥಂಪ್ಟನ್‌ನ ಅರ್ಚ್‌ಡೀಕನ್‌ನಾದ ವಂದನೀಯ ಡಬ್ಲ್ಯು. ಎಚ್. ಹಟನ್[೨೧೦] ಗ್ರೆಗರಿಯನ್ನು ಆರನೆಯ ಶತಮಾನದ ಅತ್ಯಂತ ಶ್ರೇಷ್ಠ ವ್ಯಕ್ತಿಯೆಂದು ಬಣ್ಣಿಸುತ್ತಾನೆ; ಅವನ ಪ್ರತಿಸ್ಪರ್ಧಿಗಳಾದವರೆಂದರೆ ಜಸ್ಟಿನಿಯನ್ ಮತ್ತು ಸಂತ

---

೨೧೦. 'ಕೇಂಬ್ರಿಜ್ ಮಿಡೈವಲ್ ಹಿಸ್ಟರಿ', ೨. ಅಧ್ಯಾಯ ೮.

ಬೆನೆಡಿಕ್ಟ್ ಮಾತ್ರ ಎನ್ನುತ್ತಾನೆ. ಈ ಮೂವರೂ ಮುಂದಿನ ಯುಗಗಳ ಮೇಲೆ ಆಳವಾದ ಪ್ರಭಾವ ಬೀರಿದುದರಲ್ಲಿ ಅನುಮಾನವೇ ಇಲ್ಲ; ಜಸ್ಟಿನಿಯನ್ ತನ್ನ ನಿಯಮಗಳಿಂದ (ತಾತ್ಕಾಲಿಕವಾದ ತನ್ನ ಗೆಲವುಗಳಿಂದಲ್ಲ); ಬೆನೆಡಿಕ್ಟ್ ತನ್ನ ಆಶ್ರಮವಾಸಪದ್ಧತಿಯಿಂದ; ಮತ್ತು ಗ್ರೆಗರಿ ಅವನು ಆಗುಮಾಡಿಸಿದ ಪೋಪ್ ಅಧಿಕಾರದ ಹೆಚ್ಚಳದಿಂದ. ನಾನು ಈಗ ತಾನೇ ಉಲ್ಲೇಖಿಸಿದ ಸಂವಾದಗಳಿಂದ ಅವನು ಬಾಲಿಶವೆಂಬತೆಯೂ ವಿಚಾರಶೂನ್ಯನೆಂಬಂತೆಯೂ ಕಾಣಿಸುತ್ತಾನಾದರೂ, ಒಬ್ಬ ಮುತ್ಸದ್ದಿಯಾಗಿ ಅವನು ಚತುರನೂ, ತನ್ನ ಕಾಲದ ಸಂಕೀರ್ಣವೂ ಬದಲಾಗುತ್ತಿರುವುದೂ ಆದ ಸನ್ನಿವೇಶದಲ್ಲಿ ತಾನೇನನ್ನು ಸಾಧಿಸಬಹುದು ಎಂಬುದನ್ನು ಸ್ಪಷ್ಟವಾಗಿ ಅರಿತವನೂ ಆಗಿದ್ದ. ಈ ವೈರುಧ್ಯ ಆಶ್ಚರ್ಯಕರವಾದುದು, ಆದರೆ ಅತ್ಯಂತ ಪ್ರಭಾವಶಾಲಿಗಳು ಎಷ್ಟೋ ವೇಳೆ ಎರಡನೆ ದರ್ಜೆಯ ಬುದ್ಧಿಶಕ್ತಿಯವರಾಗಿರುತ್ತಾರೆ.

ಆ ಹೆಸರಿನ ಮೊದಲನೆಯವನಾದ ಗ್ರೆಗರಿ ಮಹಾಶಯನು ರೋಮ್‌ನಲ್ಲಿ ೫೪೦ ರಲ್ಲಿ ಶ್ರೀಮಂತವೂ ಕುಲೀನವೂ ಆದ ಕುಟುಂಬದಲ್ಲಿ ಹುಟ್ಟಿದ. ಅವನ ತಾತನು ವಿಧುರನಾದ ಮೇಲೆ ಪೋಪ್ ಆಗಿದ್ದಂತೆ ಕಾಣುತ್ತದೆ. ಚಿಕ್ಕವನಾಗಿದ್ದಾಗ ಅವನಿಗೆ ತನ್ನದೇ ಆದ ಅರಮನೆಯಿತ್ತು, ಅಪಾರ ಐಶ್ವರ್ಯವಿತ್ತು. ಅವನಿಗೆ ಒಳ್ಳೆಯ ಶಿಕ್ಷಣವೆಂದು ಭಾವಿಸಿದುದು ಲಭಿಸಿತ್ತು, ಆದರೆ ಅದರಲ್ಲಿ ಗ್ರೀಕ್ ಜ್ಞಾನ ಸೇರಿರಲಿಲ್ಲ; ಅವನು ಕಾನ್‌ಸ್ಟಾಂಟಿನೋಪಲ್‌ನಲ್ಲಿ ಆರು ವರ್ಷ ವಾಸವಿದ್ದರೂ ಅದನ್ನೆಂದೂ ಅವನು ಗಳಿಸಲಿಲ್ಲ. ೫೭೩ ರಲ್ಲಿ ಅವನು ರೋಮ್ ನಗರದ ಪ್ರಾಂತಾಧಿಪತಿಯಾದ. ಆದರೆ ಮತಧರ್ಮವು ಅವನನ್ನು ತನಗೆ ಬೇಕೆಂದಿತು; ತನ್ನ ಸ್ಥಾನಕ್ಕೆ ರಾಜೀನಾಮೆಯಿತ್ತು, ತನ್ನ ಐಶ್ವರ್ಯವನ್ನೆಲ್ಲ ಆಶ್ರಮ ಸ್ಥಾಪನೆಗೂ ಧರ್ಮಕಾರ್ಯಕ್ಕೂ ನೀಡಿ, ತನ್ನ ಅರಮನೆಯನ್ನೇ ಸನ್ಯಾಸಿಗಳ ಆಶ್ರಯತಾಣವಾಗಿಸಿದ, ತಾನೂ ಬೆನೆಡಿಕ್ಟೈನ್ ಆದ. ಧ್ಯಾನದಲ್ಲಿ ಕಾಲವನ್ನು ವಿನಿಯೋಗಿಸಿ ನಿಷ್ಠುರ ಕಟ್ಟುಪಾಡುಗಳನ್ನು ಪಾಲಿಸಿ ಶಾಶ್ವತ ಅನಾರೋಗ್ಯಕ್ಕೀಡಾದ. ಆದರೆ ಎರಡನೆಯ ಪೋಪ್ ಪೆಲೇಜಿಯಸ್ ಅವನ ರಾಜಕೀಯ ಸಾಮರ್ಥ್ಯವನ್ನು ಬಲ್ಲವನಾಗಿ ಜಸ್ಟಿನಿಯನ್‌ನ ಕಾಲದಿಂದ ಹೆಸರಿಗೆ ರೋಮ್ ಅಧೀನವಾಗಿದ್ದ ಕಾನ್‌ಸ್ಟಾಂಟಿನೋಪಲ್‌ಗೆ ಅವನನ್ನು ತನ್ನ ಪ್ರತಿನಿಧಿಯಾಗಿ ಕಳಿಸಿದ. ಗ್ರೆಗರಿ ಅಲ್ಲಿ ೫೭೯ ರಿಂದ ೫೮೫ ರವರೆಗೂ ಚಕ್ರವರ್ತಿಯ ಆಸ್ಥಾನದಲ್ಲಿ ಪೋಪ್ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತ, (ಪಶ್ಚಿಮದವರಿಗಿಂತ ಹೆಚ್ಚು ಧರ್ಮಭ್ರಷ್ಟತೆಗೆ ವಾಲುತ್ತಿದ್ದ) ಪೂರ್ವದ ಧರ್ಮಬೋಧಕರೊಡನೆ ಪೋಪ್ ಮತಧರ್ಮಶಾಸ್ತ್ರದ ಬಗ್ಗೆ ಚರ್ಚಿಸುತ್ತ ಇದ್ದ. ಈ ಹೊತ್ತಿನಲ್ಲಿ ಕಾನ್‌ಸ್ಟಾಂಟಿನೋಪಲ್‌ನ ಪೇಟ್ರಿಯಾರ್ಕ್ ತಮ್ಮ ಪುನರುತ್ಥಾನ ಸಂಸ್ಥೆಗಳು ಅಗ್ರಾಹ್ಯವಾದವು ಎಂಬ ತಪ್ಪು ಅಭಿಪ್ರಾಯದವನಾಗಿದ್ದ, ಆದರೆ

ಚಕ್ರವರ್ತಿಯು ನಿಜವಾದ ಶ್ರದ್ಧೆಯಿಂದ ದೂರ ಸರಿಯದಂತೆ ಗ್ರೆಗರಿ ರಕ್ಷಿಸಿದ. ಆದರೆ ತನ್ನ ಪ್ರಾತಿನಿಧ್ಯದ ಪ್ರಮುಖ ಉದ್ದೇಶವಾದ ಲಂಬಾರ್ಡ್‌ರ ವಿರುದ್ಧ ಯುದ್ಧ ಸಾರುವಂತೆ ಒಪ್ಪಿಸುವುದರಲ್ಲಿ ಅವನು ವಿಫಲನಾದ.

೫೮೫ ರಿಂದ ೫೯೦ ರವರೆಗಿನ ಐದು ವರ್ಷಗಳ ಕಾಲ ಗ್ರೆಗರಿ ತನ್ನ ಆಶ್ರಮದ ಮುಖ್ಯಸ್ಥನಾಗಿದ್ದ. ಆನಂತರ ಪೋಪ್ ಸತ್ತ, ಗ್ರೆಗರಿ ಅವನ ಸ್ಥಾನಕ್ಕೆ ಬಂದ. ಆ ಕಾಲವು ಕಷ್ಟಕರವಾಗಿತ್ತಾದರೂ ಉದ್ಭವವಾಗಿದ್ದ ಗೊಂದಲಗಳೇ ಅವನ ಸಮರ್ಥ ಮುತ್ಸದ್ದಿತನಕ್ಕೆ ಒಳ್ಳೆಯ ಅವಕಾಶಗಳನ್ನು ತಂದಿತ್ತು. ಲಂಬಾರ್ಡ್‌ರು ಇಟಲಿಯಲ್ಲಿ ದಾಂಧಲೆ ನಡೆಸಿದ್ದರು; ಬೈಜ಼ಾಂಟಿಯನ್‌ರ ದೌರ್ಬಲ್ಯದ ಕಾರಣದಿಂದಲೂ, ವಿಸಿಗಾಥ್‌ರ ಕ್ಷೀಣತೆ ಮತ್ತು ಮೂರ್‌ರ ಕೊಳ್ಳೆಗಳಿಂದಲೂ ಸ್ಪೆಯಿನ್ ಮತ್ತು ಆಫ್ರಿಕಗಳಲ್ಲಿ ಅನಾಯಕತ್ವದ ಪರಿಸ್ಥಿತಿಯಿತ್ತು. ಫ್ರಾನ್ಸ್‌ನಲ್ಲಿ ಉತ್ತರ ಮತ್ತು ದಕ್ಷಿಣಗಳ ನಡುವೆ ಯುದ್ಧಗಳಾಗುತ್ತಿದ್ದವು. ರೋಮನ್‌ರ ಆಳ್ವಿಕೆಯಲ್ಲಿ ಕ್ರೈಸ್ತವಾಗಿದ್ದ ಬ್ರಿಟನ್ ಸ್ಯಾಕ್ಸನ್‌ರ ಆಕ್ರಮಣದಿಂದ ಪ್ಯಾಗನಿಸಂ ಕಡೆ ಮರಳುತ್ತಿತ್ತು. ಜೊತೆಗೆ ಏರಿಯನಿಸಂನ ಕುರುಹುಗಳೂ ಉಳಿದಿದ್ದುವು, ಮೂರು ವಿಭಜನೆಗಳ (ತ್ರೀ ಚಾಪ್ಟರ್ಸ್) ಧರ್ಮಭ್ರಷ್ಟತೆ ಇನ್ನೂ ಕಣ್ಮರೆಯಾಗಿರಲಿಲ್ಲ. ಈ ಪ್ರಕ್ಷುಬ್ಧ ಕಾಲವು ಬಿಷಪ್‌ರಿಗೂ ಬಿಸಿ ಮುಟ್ಟಿಸಿತ್ತು, ಅವರಲ್ಲಿ ಹಲವರು ಮಾದರಿ ಜೀವನದಿಂದ ಬಹು ದೂರವಾಗಿದ್ದರು. ಧರ್ಮಾಧಿಕಾರ ವ್ಯಾಪಾರ (ಸೈಮನಿ) ಎಗ್ಗಿಲ್ಲದೆ ನಡೆಯುತ್ತಿತ್ತು, ಹನ್ನೊಂದನೆಯ ಶತಮಾನದ ಉತ್ತರಾರ್ಧದವರೆಗೂ ಅದು ದೊಡ್ಡ ಹುಯಿಲಾಗಿತ್ತು.

ಈ ಎಲ್ಲ ತೊಂದರೆಗಳ ಮೂಲವನ್ನು ಗ್ರೆಗರಿ ಸಾಮರ್ಥ್ಯ ಮತ್ತು ಜಾಣ್ಮೆಯಿಂದ ಎದುರಿಸಿದ. ಪೋಪ್ ಆಗುವುದಕ್ಕೆ ಮುಂಚೆ, ಶ್ರೇಣಿವ್ಯವಸ್ಥೆಯಲ್ಲಿ ಅತ್ಯಂತ ಶ್ರೇಷ್ಠನೆಂದು ಪರಿಗಣಿತನಾಗಿದ್ದರೂ, ರೋಮ್‌ನ ಬಿಷಪ್ ಆಗಿದ್ದ ಅವನಿಗೆ ತನ್ನ ಡಯೋಸಿಸ್‌ನ ವ್ಯಾಪ್ತಿಯಿಂದ ಹೊರತಾಗಿ ಯಾವುದೇ ಅಧಿಕಾರವಿರಲಿಲ್ಲ. ಉದಾಹರಣೆಗೆ ಸಂತ ಆಂಬ್ರೋಸ್ ತನ್ನ ಕಾಲದ ಪೋಪ್ ಜೊತೆಗೆ ಸುಮಧುರ ಸಂಬಂಧವನ್ನು ಹೊಂದಿದ್ದರೂ, ತಾನೆಂದೂ ಅವನ ಅಧಿಕಾರದಡಿಯಲ್ಲಿ ಬರುವೆನೆಂದು ಭಾವಿಸಿರಲಿಲ್ಲ. ಸ್ವಲ್ಪ ಮಟ್ಟಿಗಿನ ವೈಯಕ್ತಿಕ ಗುಣಗಳು ಮತ್ತು ಸ್ವಲ್ಪ ಮಟ್ಟಿಗಿನ ಆಗಿನ ಅನಾಯಕತ್ವಗಳ ಕಾರಣದಿಂದಾಗಿ ಪಶ್ಚಿಮದಾದ್ಯಂತದ ಮತಧರ್ಮಬೋಧಕರು ಮಾತ್ರವಲ್ಲದೆ, ಸ್ವಲ್ಪ ಮಟ್ಟಗಿನ ಕಡಿಮೆ ಪ್ರಮಾಣದಲ್ಲಿ, ಪೂರ್ವದಲ್ಲಿಯೂ ಗ್ರೆಗರಿಯ ಅಧಿಕಾರವನ್ನು ಗೌರವಿಸುತ್ತಿದ್ದರು. ಮುಖ್ಯವಾಗಿ ತನ್ನ ಅಧಿಕಾರವನ್ನವನು ರೋಮನ್ ಜಗತ್ತಿನಲ್ಲಿನ ಬಿಷಪ್‌ರುಗಳಿಗೆ ಮತ್ತು ಮತಧರ್ಮೇತರ ಆಡಳಿತಗಾರರಿಗೆ ಬರೆದ ಪತ್ರಗಳ ಮೂಲಕ ಚಲಾಯಿಸುತ್ತಿದ್ದ. ಬಿಷಪ್‌ರಿಗೆ ನೀಡಿದ ಹಿತವಚನಗಳನ್ನೊಳಗೊಂಡ ಅವನ ಗ್ರಂಥ 'ಬುಕ್ ಆಫ್ ಪ್ಯಾಸ್ಟೋರಲ್ ರೂಲ್' ಮಧ್ಯಯುಗದಾದ್ಯಂತ

ಗಾಢಪ್ರಭಾವವನ್ನು ಹೊಂದಿತ್ತು. ಅದು ಬಿಷಪ್‌ರ ಕರ್ತವ್ಯಗಳ ಬಗೆಗಿನ ಒಂದು ಕೈಪಿಡಿಯಂತೆ ರಚಿತವಾಗಿ ಹಾಗೆಯೇ ಪರಿಗಣಿತವಾಗಿತ್ತು. ಅವನು ಅದನ್ನು ಮೊದಲು ಬರೆದದ್ದು ರಾವೆನ್ನಾದ ಬಿಷಪ್‌ನಿಗೆ, ಅದನ್ನೇ ಸೆವಿಲ್‌ನ ಬಿಷಪ್‌ಗೂ ಕಳಿಸಿದ. ಶಾರ್ಲಮೇನ್‌ನ ಅಡಿಯಲ್ಲಿ ಅದನ್ನು ಪ್ರತಿಷ್ಠಾಪನೆಯ ದಿನ ಬಿಷಪ್‌ರಿಗೆ ನೀಡಲಾಯಿತು. ಆಲ್‌ಫ್ರೆಡ್ ಮಹಾಶಯನು ಅದನ್ನು ಆಂಗ್ಲೋ–ಸ್ಯಾಕ್ಸನ್‌ಗೆ ಅನುವಾದಿಸಿದ. ಪೂರ್ವದಲ್ಲಿ ಅದನ್ನು ಗ್ರೀಕ್ ಭಾಷೆಯ ಆವೃತ್ತಿಯಲ್ಲಿ ವಿತರಿಸಲಾಯಿತು. ಅದು ಬಿಷಪ್‌ರಿಗೆ ಆಶ್ಚರ್ಯಕರವೆನಿಸದಿದ್ದರೂ ಸಮಂಜಸವಾದ ಬುದ್ಧಿವಾದಗಳನ್ನು ಒಳಗೊಂಡಿತ್ತು, ಹಾಗಾಗಿ ಅದನ್ನು ಕಡೆಗಣಿಸುವಂತಿರಲಿಲ್ಲ. ಆಡಳಿತಗಾರರನ್ನು ಟೀಕಿಸಬಾರದೆಂದೂ ಅದು ಬುದ್ಧಿ ಹೇಳುತ್ತದೆ, ಆದರೆ ಚರ್ಚ್‌ನ ಬೋಧನೆಯನ್ನು ಅನುಸರಿಸದಿದ್ದರೆ ಅವರು ಅನುಭವಿಸಬೇಕಾಗುವ ನರಕಾಗ್ನಿಯ ಅಪಾಯವನ್ನು ಅವರಲ್ಲಿ ಜ್ವಲಂತವಾಗಿರಿಸಬೇಕೆಂದು ಹೇಳುತ್ತದೆ.

ಗ್ರೆಗರಿಯ ಪತ್ರಗಳು ಅಸಾಧಾರಣ ಆಸಕ್ತಿಯನ್ನು ಕೆರಳಿಸುವಂತಹುವು; ಅದು ಅವನ ಸ್ವಭಾವವನ್ನು ತಿಳಿಸುವುದಲ್ಲದೆ, ತನ್ನ ಕಾಲದ ಚಿತ್ರಣವನ್ನೂ ಒಳಗೊಂಡಿದೆ. ಚಕ್ರವರ್ತಿ ಮತ್ತು ಬೈಝಾಂಟಯನ್ ಆಸ್ಥಾನ ಮಹಿಳೆಯರನ್ನು ಹೊರತುಪಡಿಸಿ– ಅದರ ಧಾಟಿಯು ಒಬ್ಬ ಶಾಲಾ ಮುಖ್ಯೋಪಾಧ್ಯಾಯನದು – ಕೆಲವು ವೇಳೆ ಹೊಗಳುವ, ಎಷ್ಟೋ ವೇಳೆ ಬುದ್ಧಿ ಹೇಳುವ, ಎಲ್ಲಿಯೂ ತನ್ನ ಅಧಿಕಾರದ ಬಗ್ಗೆ ಹಿಂಜರಿಕೆಯನ್ನು ತೋರಿಸದಂಥದು.

ಅವನ ೫೯೯ ನೇ ಇಸವಿಯ ಪತ್ರಗಳನ್ನು ಮಾದರಿಯಾಗಿ ಪರಿಶೀಲಿಸಬಹುದು. ಮೊದಲನೆಯದು ಸಾರ್ಡೀನಿಯದಲ್ಲಿನ ಕ್ಯಾಲಿಗರಿಯ ಬಿಷಪ್‌ಗೆ ಬರೆದ ಪತ್ರ; ಅವನು ವಯಸ್ಸಿನಲ್ಲಿ ಹಿರಿಯನಾದರೂ, ಕೆಟ್ಟವನಾಗಿದ್ದವನು. ಒಂದು ಕಡೆ ಅದರಲ್ಲಿ ಹೀಗೆ ಬರೆದಿದೆ: ಪ್ರಭುವಿನ ದಿನ, ಪ್ರಭುಭೋಜನದ ಪವಿತ್ರಾಚರಣೆಗಳನ್ನು ನಡೆಸುವ ಮೊದಲು, ನೀನು ಉಡುಗೊರೆಗಳನ್ನು ತಂದವರ ಫಸಲನ್ನು ಕಟಾವು ಮಾಡಲು ಹೋಗಿದ್ದೆಯೆಂಬುದು ನನ್ನ ಗಮನಕ್ಕೆ ಬಂದಿದೆ .. .. ಅಲ್ಲದೆ ಪ್ರಭುಭೋಜನದ ಪವಿತ್ರಾಚರಣೆಗಳ ನಂತರವೂ ಆ ಉಡುಗೊರೆಗಳ ಕುರುಹುಗಳನ್ನು ತೆಗೆದು ಹಾಕುವ ಅಳುಕು ತೋರಲಿಲ್ಲವಂತೆ .. .. ನಾವು ನಿನ್ನ ನರೆತ ಕೂದಲನ್ನು ನೋಡಿ ಕ್ಷಮಿಸಿಬಿಡುತ್ತೇವೆಂದು ಭಾವಿಸದೆ, ಮುದುಕನೇ, ಅಂಥ ಕ್ಷುಲ್ಲಕ ನಡತೆಯನ್ನು ಕೈಬಿಡಲು ಮತ್ತು ವಿಕೃತ ಕೆಲಸಗಳಿಂದ ದೂರವಿರಲು ಯೋಚಿಸು.' ಇದೇ ವಿಷಯದ ಬಗ್ಗೆ ಅದೇ ಸಮಯದಲ್ಲಿ ಅವನು ಸಾರ್ಡೀನಿಯದ ಮತಧರ್ಮೇತರ ಅಧಿಕಾರಿಗಳಿಗೂ ಬರೆಯುತ್ತಾನೆ. ಈ ಬಿಷಪ್‌ಗೆ ಮುಂದೆ ಛೀಮಾರಿ ಹಾಕಬೇಕು, ಯಾಕೆಂದರೆ ಅವನು ಅಪರಕರ್ಮಗಳನ್ನು ಮಾಡಿಸಲು ದಕ್ಷಿಣೆ ತೆಗೆದುಕೊಳ್ಳುತ್ತಾನೆ ಎಂಬ, ಮತ್ತು ಅವನ ಅನುಮತಿಯಿಂದ ಒಬ್ಬ ಮತಾಂತರಿತ ಯೆಹೂದಿಯು

ಶಿಲುಬೆ ಮತ್ತು ವರ್ಜಿನ್‌ಳ ವಿಗ್ರಹವನ್ನು ಸಿನಗಾಗ್‌ನಲ್ಲಿ ಪ್ರತಿಷ್ಠಾಪಿಸಿದ ಎಂಬ ಕಾರಣಕ್ಕೆ. ಅದಕ್ಕೂ ಮಿಗಿಲಾಗಿ, ಅವನೂ ಸಾರ್ಡೀನಿಯದ ಇತರ ಬಿಷಪ್‌ರುಗಳು ಪ್ರಧಾನ ಬಿಷಪ್‌ರ ಅನುಮತಿಯಿಲ್ಲದೆ ಪ್ರವಾಸ ಕೈಗೊಳ್ಳುತ್ತಾರೆಂದು ತಿಳಿದುಬಂದು, ಇದು ನಿಲ್ಲಬೇಕು ಎಂದು ಸೂಚಿಸಿ. ಆನಂತರದ್ದು ಡಾಲ್ಮೇಷಿಯದ ಪ್ರಾಂತಾಧಿಪತಿಗೆ ಬರೆದ ಒಂದು ಚುರುಕು ಪತ್ರ; ಅದರಲ್ಲಿ, ಇತರ ವಿಷಯಗಳೊಡನೆ: 'ದೇವರ ಬಗ್ಗೆಯಾಗಲೀ ಜನರ ಬಗ್ಗೆಯಾಗಲೀ ನಿಮಗಿರುವ ದೃಷ್ಟಿ ಎಂತಹುದೆಂಬುದು ನಮಗೆ ತಿಳಿಯುತ್ತಿಲ್ಲ'; ಮತ್ತೆ 'ನಮ್ಮ ಒಲವನ್ನು ನೀವು ಬಯಸುವ ಬಗ್ಗೆ, ಇಂತಹ ವಿಷಯಗಳ ಕುರಿತು ನೀವು ನಿಮ್ಮ ಹೃದಯ ಮತ್ತು ಮನಃಪೂರ್ವಕವಾಗಿ, ಕಣ್ಣೀರಿನೊಂದಿಗೆ, ನಿಮ್ಮ ವಿಮೋಚಕನಿಗೆ ಮನವರಿಕೆ ಮಾಡಿಕೊಡುವುದು ಸೂಕ್ತ.' ಆ ಕ್ಷುಲ್ಲಕ ವ್ಯಕ್ತಿ ಏನು ಮಾಡಿದ್ದನೆಂಬುದು ನನಗೆ ತಿಳಿಯದು.

ಮುಂದಿನ ಪತ್ರ ಇಟಲಿಯ ಹಿರಿಯ ಗುರು (ಎಕ್ಸಾರ್ಚ್) ಕ್ಯಾಲಿಂಕಸ್‌ಗೆ ಬರೆದದ್ದು, ಸ್ಲಾವ್‌ರ ಮೇಲೆ ಗೆಲವು ಸಾಧಿಸಿದ್ದನ್ನು ಕುರಿತ ಅಭಿನಂದನೆಯನ್ನೊಳಗೊಂಡುದು; ಮೂರು ವಿಭಜನೆಗಳ ಬಗ್ಗೆ ತಪ್ಪು ಮಾಡಿದ್ದ ಇಸ್ಟ್ರಿಯದ ಧರ್ಮಭ್ರಷ್ಟರ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮದ ಕುರಿತು. ಈ ವಿಷಯದ ಬಗ್ಗೆ ರಾವೆನ್ನಾದ ಬಿಷಪ್‌ಗೂ ಪತ್ರ ಬರೆಯುತ್ತಾನೆ. ಒಮ್ಮೆ ಅಪವಾದವೆಂಬಂತೆ, ಸಿರಾಕ್ಯೂಸ್‌ನ ಬಿಷಪ್‌ಗೆ ಬರೆದ ಪತ್ರವೊಂದಿದೆ, ಅದರಲ್ಲಿ ಇತರರ ಕುರಿತ ಆಕ್ಷೇಪದ ಬದಲು ತನ್ನನ್ನು ತಾನು ಸಮರ್ಥನೆ ಮಾಡಿಕೊಳ್ಳುತ್ತಾನೆ. ಇದರಲ್ಲಿನ ಪ್ರಶ್ನೆಯು ಗಾಢವಾದದ್ದು, ಅದೆಂದರೆ 'ಅಲ್ಯೂಇಯ' ಹೆಸರನ್ನು ಪವಿತ್ರಾಚರಣೆಯ ಒಂದು ನಿರ್ದಿಷ್ಟ ಸ್ಥಾನದಲ್ಲಿ ಹೇಳಬೇಕೇ ಎಂಬುದು. ಗ್ರೆಗರಿಯ ಬಳಕೆಯು ಸಿರಾಕ್ಯೂಸ್‌ನ ಸಲಹೆಯಂತೆ ಬೈಜಾಂಟಿಯನ್‌ಗೆ ಅನುಗುಣವಾಗಿಲ್ಲದೆ, ದೈವಕೃಪೆಯ ಜೆರೋಮ್‌ನ ಮೂಲಕ ಸಂತ ಜೇಮ್ಸ್ ಮೂಲಕ ಬಂದುದು ಎಂಬುದು ಅವನ ಆಕ್ಷೇಪಣೆ. ಹೀಗಾಗಿ ಗ್ರೀಕ್ ಬಳಕೆಗೆ ಅನವಶ್ಯಕವಾಗಿ ಅಧೀನನಾಗಿರುವನೆಂದು ಭಾವಿಸಿರುವವರದು ತಪ್ಪು ಕಲ್ಪನೆ. [ರಷ್ಯಾದ ಹಿಂದಿನ ಧರ್ಮವಂತರ (ಓಲ್ಡ್ ಬಿಲೀವರ್ಸ್) ಒಡಕಿಗೆ ಕಾರಣಗಳ ಬಗೆಗಿನದೂ ಇಂತಹುದೇ ಒಂದು ಪ್ರಶ್ನೆ.]

ಅನ್ಯದೇಶೀಯ ಸಾರ್ವಭೌಮರಿಗೆ – ಹೆಂಗಸರೂ ಗಂಡಸರೂ – ಬರೆದ ಅನೇಕ ಪತ್ರಗಳಿವೆ. ಫ್ರಾಂಕ್‌ರ ರಾಣಿ ಬ್ರೂನಿಚೈಲ್ಡ್ ಒಬ್ಬ ಫ್ರೆಂಚ್ ಬಿಷಪ್‌ನಿಗೆ ಪ್ಯಾಲಿಯಮ್ ನೀಡಲು ಬಯಸಿದ್ದಳು, ಅವಳ ಕೋರಿಕೆಯನ್ನು ಒಪ್ಪಲು ಗ್ರೆಗರಿ ಸಿದ್ಧನಾಗಿದ್ದ; ಆದರೆ ದುರದೃಷ್ಟವಶಾತ್ ಅವಳು ಕಳಿಸಿದ್ದ ಸಂದೇಶವಾಹಕ ಒಬ್ಬ ಒಡಕಿನ ಪರನಾಗಿದ್ದವನು. ಶಾಂತಿ ಸಂಧಾನಕ್ಕೆ ಕಾರಣನಾಗಿದ್ದ ಲಂಬಾರ್ಡ್ ರಾಜ ಅಗೀಲಲ್ಫ್‌ಗೆ ಅವನೊಂದು ಪತ್ರ ಬರೆಯುತ್ತಾನೆ. 'ಶಾಂತಿಸ್ಥಾಪನೆ ಮಾಡಿರಲಾಗದಿದ್ದರೆ,

ತಮ್ಮ ದುಡಿಮೆಯಿಂದ ಎರಡೂ ಪಡೆಯವರಿಗೆ ಲಾಭ ತರುವ ರೈತರ ರಕ್ತಪಾತಕ್ಕೆ ಕಾರಣವಾಗುವ ಪಾಪಕೃತ್ಯಗಳೂ ಅಪಾಯಗಳೂ ಎರಡೂ ಕಡೆಯಲ್ಲಿ ಆಗದೆ ಬೇರೇನು ಸಂಭವಿಸಬಹುದಾಗಿತ್ತು?' ಅದೇ ವೇಳೆಗೆ ಅವನು ಅಗೀಲಲ್ಫ್‌ನ ರಾಣಿ ಥಿಯೋಡೆಲಿಂಡಾಗೆ ಪತ್ರ ಬರೆದು ತನ್ನ ಗಂಡನು ಒಳ್ಳೆಯ ಹಾದಿಯಲ್ಲಿ ನಡೆಯಲು ಪ್ರೇರಿಸಬೇಕೆಂದು ಕೇಳಿಕೊಳ್ಳುತ್ತಾನೆ. ಮತ್ತೆ ಅವನು ಬ್ರೂನ್‌ಚೈಲ್ಡ್‌ಗೆ ಪತ್ರ ಬರೆದು, ಅವಳ ಆಳ್ವಿಕೆಯಲ್ಲಿನ ಎರಡು ದೋಷಗಳನ್ನು ಅವಳ ಗಮನಕ್ಕೆ ತರುತ್ತಾನೆ: ಸಾಧಾರಣ ಪುರೋಹಿತರಾಗಿ ಪೂರ್ವತರಬೇತಿ ಪಡೆಯದ ಸಾಮಾನ್ಯರನ್ನು ಒಮ್ಮೆಲೇ ಬಿಷಪ್‌ರನ್ನಾಗಿ ನೇಮಿಸಲಾಗುತ್ತಿದೆ, ಮತ್ತು ಯೆಹೂದಿಗಳು ಕ್ರೈಸ್ತ ಗುಲಾಮರನ್ನು ಹೊಂದಲು ಅವಕಾಶ ನೀಡಲಾಗುತ್ತಿದೆ. ಫ್ರಾಂಕ್ ದೊರೆಗಳಾದ ಥಿಯೋಡೆರಿಕ್ ಮತ್ತು ಥಿಯೋಡೆಬರ್ಟ್ ಅವರಿಗೆ, ಫ್ರಾಂಕ್‌ರ ಅನುಕರಣೀಯ ಮತಧರ್ಮನಿಷ್ಠೆಯಿಂದಾಗಿ ಕೇವಲ ಹಿತಕಾರಿಯಾದುದನ್ನು ತಿಳಿಸಲು ಬಯಸುತ್ತಾನಾದರೂ, ಅವರ ಚಕ್ರಾಧಿಪತ್ಯಗಳಲ್ಲಿ ಧರ್ಮಾಧಿಕಾರ ವ್ಯಾಪಾರ ನಡೆಯುತ್ತಿರುವ ಬಗ್ಗೆ ಹೇಳುವುದನ್ನು ಮರೆಯಲಾರೆನೆನ್ನುತ್ತಾನೆ. ಮತ್ತೆ ಅವರಿಗೆ ಬರೆದ ಪತ್ರದಲ್ಲಿ ಟ್ಯೂರಿನ್‌ನ ಬಿಷಪ್‌ಗೆ ಆದ ಅನ್ಯಾಯವನ್ನು ಕುರಿತು ಪ್ರಸ್ತಾಪಿಸುತ್ತಾನೆ. ಅನ್ಯದೇಶೀಯ ದೊರೆಯೊಬ್ಬನಿಗೆ ಬರೆದ ಪತ್ರವಂತೂ ಅಭಿನಂದನೆಗಳನ್ನು ಸಲ್ಲಿಸುತ್ತದೆ; ಏರಿಯನ್ ಆಗಿದ್ದು ೫೮೭ ರಲ್ಲಿ ಕ್ಯಾಥೋಲಿಕ್ ಆದ ವಿಸಿಗಾಥ್‌ರ ದೊರೆ ರಿಚರ್ಡ್‌ಗೆ ಬರೆದ ಪತ್ರ ಅದು. ಇದಕ್ಕಾಗಿ ಪೋಪ್ ಅವನನ್ನು ಅಭಿನಂದಿಸಿ, ಒಂದು ಉಡುಗೊರೆ ಕಳಿಸಿ, 'ದೈವಕೃಪೆಗೊಳಗಾದ ಪ್ರವರ್ತಕ ಪೀಟರ್‌ನ ಅತ್ಯಂತ ಪರಿಶುದ್ಧ ಸಂಸ್ಥೆಯಿಂದ, ನಿಮ್ಮನ್ನು ಎಲ್ಲ ಪಾಪಗಳಿಂದ ವಿಮುಕ್ತಿಗೊಳಿಸಲಿ ಎಂದು ಆಶೀರ್ವಾದಪೂರ್ವಕವಾಗಿ ಕಳಿಸಿದ, ಅವನ ಕೊರಳನ್ನು ಆವರಿಸಿ ಹುತಾತ್ಮನಾಗಲು ಕಾರಣವಾದ ಸರಪಳಿಯಲ್ಲಿನ ಒಂದು ಕಬ್ಬಿಣದ ಕೊಂಡಿ.' ಈ ಉಡುಗೊರೆಯಿಂದ ಮಹಾಪ್ರಭುಗಳು ಪ್ರಸನ್ನಗೊಂಡಿರಬೇಕು.

ಆಂಟಿಯೋಕ್‌ನ ಬಿಷಪ್‌ನಿಗೆ ಬರೆದ ಪತ್ರದಲ್ಲಿ ಎಫೆಸಸ್‌ನ ಮತಧರ್ಮಭ್ರಷ್ಟರ ಧರ್ಮಾಧಿಕಾರ ವ್ಯಾಪಾರದ ಬಗ್ಗೆ ಹೇಳಿ, 'ಪೂರ್ವದ ಚರ್ಚ್‌ಗಳಲ್ಲಿ ಲಂಚವಿಲ್ಲದೆ ಯಾರೂ ಪರಿಶುದ್ಧ ದಳವನ್ನು ಸೇರಲಾರರೆಂಬ ವಿಷಯ ನಮ್ಮ ಕಿವಿಗೂ ಬಿದ್ದಿದೆ' ಎಂದು ತಿಳಿಸಿ ಈ ಬಗ್ಗೆ ಬಿಷಪ್‌ರು ತಮಗೆ ದತ್ತವಾದ ಅಧಿಕಾರವನ್ನು ಸಾಧ್ಯವಾದೆಡೆಗಳಲ್ಲಿ ಬಳಸಿಕೊಂಡು ಸರಿಪಡಿಸಬೇಕೆಂದು ಸೂಚಿಸಲಾಗಿದೆ. ಪೂಜಿಸಲಾಗುತ್ತಿದ್ದ ಕೆಲವು ವಿಗ್ರಹಗಳನ್ನು ಒಡೆದುಹಾಕಿದುದಕ್ಕಾಗಿ ಮಾರ್ಸೆಲೀಸ್‌ನ ಬಿಷಪ್‌ಗೆ ಛೀಮಾರಿ ಹಾಕಲಾಗಿದೆ; ವಿಗ್ರಹಾರಾಧನೆಯು ತಪ್ಪು ಎಂಬುದು ಸರಿಯಾದರೂ, ವಿಗ್ರಹಗಳು ಉಪಯುಕ್ತವಾದವುಗಳಾದ್ದರಿಂದ ಅವಕ್ಕೆ ಗೌರವ ನೀಡಬೇಕೆಂದು ಹೇಳಲಾಗಿದೆ. ಸನ್ಯಾಸಿನಿಯಾಗಿದ್ದ ಒಬ್ಬ ಮಹಿಳೆಯನ್ನು ಆನಂತರ

ಮದುವೆಯಾಗುವಂತೆ ಒತ್ತಾಯಿಸಿದ್ದಕ್ಕಾಗಿ ಗಾಲ್‌ನ ಇಬ್ಬರು ಬಿಷಪ್‌ಗಳ ಕೃತ್ಯವನ್ನು ಖಂಡಿಸಲಾಗಿದೆ. 'ಇದು ನಿಜವೇ ಆದರೆ .. .. ನೀವು ದಳ್ಳಾಳಿಗಳ ಸ್ಥಾನ ಪಡೆಯಬೇಕೇ ಹೊರತು ಕುರಿಗಾಹಿಯ ಗುಣವನ್ನಲ್ಲ.'

ಮೇಲಿನವು ಒಂದೇ ವರ್ಷದಲ್ಲಿ ಬರೆದ ಪತ್ರಗಳಲ್ಲಿ ಕೆಲವು. ಅವನಿಗೆ ಧ್ಯಾನದಲ್ಲಿ ತೊಡಗಲು ಅವಕಾಶವೇ ಸಿಕ್ಕದಿದ್ದುದು ಆಶ್ಚರ್ಯಕರವೇನಲ್ಲ, ಅದೇ ವರ್ಷ ಬರೆದ ಪತ್ರವೊಂದರಲ್ಲಿ (೧೨೧) ಅವನು ಈ ಕುರಿತು ವಿಷಾದಿಸುತ್ತಾನೆ.

ಗ್ರೆಗರಿ ಮತಧರ್ಮೇತರ ಬರವಣಿಗೆಯಲ್ಲಿ ಆಸಕ್ತನಾಗಿರಲಿಲ್ಲ, ವಿಯೆನ್ನ ಬಿಷಪ್ ಡೆಸಿಡೆರಿಯಸ್‌ಗೆ ಬರೆದ ಪತ್ರವೊಂದರಲ್ಲಿ ಹೀಗೆನ್ನುತ್ತಾನೆ:

'ನಾಚಿಕೆಯಿಲ್ಲದೆ ಹೇಳಿಕೊಳ್ಳಲಾಗದ ವಿಷಯವೊಂದು ನಮ್ಮ ಕಿವಿಗೆ ಬಿದ್ದಿದೆ, ಅದೆಂದರೆ ನಿನ್ನ ಭ್ರಾತೃತ್ವವು (ಅಂದರೆ, ನೀನು) ವ್ಯಾಕರಣವನ್ನು ಕೆಲವರಿಗೆ ತಿಳಿಸಿಕೊಡುವ ಅಭ್ಯಾಸವನ್ನಿರಿಸಿಕೊಂಡಿದೆಯಂತೆ. ಇದನ್ನು ನಾವು ಅದೆಷ್ಟು ತಪ್ಪಾಗಿ ತಿಳಿದಿದ್ದೇವೆಂದರೆ, ನರಳಾಟ ಮತ್ತು ದುಃಖಗಳಿಗೆ ಮೊದಲೇ ನಾವು ಬದಲಾದೆವು, ಯಾಕೆಂದರೆ ಕ್ರಿಸ್ತ ಸ್ತುತಿಯು ದೇವರಾಜನಾದ ಜ್ಯೂಪಿಟರ್‌ನನ್ನು ಹೊಗಳುವ ಬಾಯಲ್ಲಿ ಬರಲಾರದು .. .. ಧರ್ಮಬೋಧಕನೊಬ್ಬನ ಬಗ್ಗೆ ಅದನ್ನು ಹೇಳುವುದೇ ಆ ಪ್ರಮಾಣದ ಹೇಯಕೃತ್ಯಕ್ಕೆ ಸಮಾನವಾದ್ದರಿಂದ, ಅದು ನಿಜವೋ ಅಲ್ಲವೋ ಎಂಬುದನ್ನು ದೃಢಪಡಿಸಿಕೊಳ್ಳುವುದು ಆವಶ್ಯಕ.'

ಮತಧರ್ಮೇತರ ಅಧ್ಯಯನದ ಬಗೆಗಿನ ಈ ದ್ವೇಷವು ಕನಿಷ್ಠ ಪಕ್ಷ ನಾಲ್ಕು ಶತಮಾನಗಳು, ಗರ್ಬರ್ಟ್‌ನ (ಎರಡನೆಯ ಸಿಲ್ವೆಸ್ಟರ್) ಕಾಲದವರೆಗೂ, ಮುಂದುವರಿಯಿತು. ಹನ್ನೊಂದನೆಯ ಶತಮಾನದ ನಂತರವೇ ಚರ್ಚ್ ವಿದ್ವತ್ತಿನ ಬಗ್ಗೆ ಆದರ ತಾಳಿದುದು.

ಚಕ್ರವರ್ತಿಯ ಬಗೆಗಿನ ಗ್ರೆಗರಿಯ ಮನೋಭಾವವು ಅನ್ಯದೇಶೀಯ ದೊರೆಗಳ ಬಗ್ಗೆ ಅವನಿರಿಸಿಕೊಂಡಿದ್ದ ಮನೋಭಾವಕ್ಕಿಂತ ಹೆಚ್ಚು ಗೌರವಯುತವಾದುದು. ಕಾನ್‌ಸ್ಟಾಂಟಿನೋಪಲ್‌ನ ಪ್ರತಿನಿಧಿಯೊಬ್ಬನಿಗೆ ಬರೆಯುತ್ತ ಅವನೆನ್ನುತ್ತಾನೆ: 'ಪರಿಶುದ್ಧ ಚಕ್ರವರ್ತಿಗಳಿಗೆ ಯಾವುದು ಪ್ರಿಯವೋ, ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಆಜ್ಞೆಯನ್ನು ಅವರು ಪಾಲಿಸಬೇಕು. ಅವರು ನಿರ್ಧರಿಸಿದಂತೆ ಮಾಡಲಿ. ಆದರೆ ಅದನ್ನು (ಸಂಪ್ರದಾಯನಿಷ್ಠ ಬಿಷಪ್‌ನ) ಕರ್ತವ್ಯಗಳಲ್ಲಿ ಬೆರೆಸಬಾರದು. ಆದರೂ, ಅವರು ಮಾಡುವ ಆಜ್ಞೆಯು ಶಾಸ್ತ್ರಸಮ್ಮತವಾಗಿದ್ದರೆ ನಾವು ಪಾಲಿಸುತ್ತೇವೆ. ಆದರೆ ಶಾಸ್ತ್ರವಿರೋಧವಾಗಿದ್ದರೆ ನಾವೇ ಪಾಪಗೈಯದ ರೀತಿಯಲ್ಲಿ ಅದನ್ನು ಸಹಿಸುವುದಿಲ್ಲ.' ಚಕ್ರವರ್ತಿ ಮಾರಿಸ್‌ನನ್ನು ಬಂಡಾಯವೊಂದರಲ್ಲಿ ಪದಚ್ಯುತಿಗೊಳಿಸಿ, ಅದರ ನಾಯಕತ್ವ ವಹಿಸಿದ್ದ ಶತಮಾನ ದಾಟಿದ ಅಜ್ಞಾತ ಹಿರಿಯ ಫೋಕಸ್ ಎಂಬುವನೊಬ್ಬನು ದಿಢೀರನೆ ಸಿಂಹಾಸನವೇರಿ, ಮಾರಿಸ್‌ನ ಐದು ಮಂದಿ

ಗಂಡುಮಕ್ಕಳನ್ನು ತಂದೆಯ ಕಣ್ಣೆದುರಿಗೇ ಹತ್ಯೆಮಾಡಲು ಮುಂದಾಗಿ, ಆ ಬಳಿಕ ವಯಸ್ಸಾದ ಚಕ್ರವರ್ತಿಗೇ ಮರಣದಂಡನೆಯಿತ್ತ. ಮರಣಕ್ಕೆ ಗುರಿಯಾಗಬೇಕಾದುದರ ಹೊರತು ಬೇರೆ ಶಿಕ್ಷೆಯಿಲ್ಲದ ಫೋಕಸ್‌ನಿಗೆ ಕಿರೀಟಧಾರಣೆ ಮಾಡಿಸಿದ್ದು ಕಾನ್‌ಸ್ಟಾಂಟಿನೋಪಲ್‌ನ (ಪ್ರವರ್ತಕ) ಪೇಟ್ರಿಯಾರ್ಕ್. ಅದಕ್ಕಿಂತ ಹೆಚ್ಚು ಆಶ್ಚರ್ಯಕರವಾದುದೆಂದರೆ, ದೂರದ ಸುರಕ್ಷಿತ ರೋಮ್‌ನಲ್ಲಿದ್ದ ಗ್ರೆಗರಿಯು ಅತೀವ ಭಟ್ಟಂಗಿತನದ ಪತ್ರ ಬರೆದು ಆಕ್ರಮಣಕಾರ ಮತ್ತವನ ಹೆಂಡತಿಯನ್ನು ಹೊಗಳಿದುದು: 'ರಾಷ್ಟ್ರಗಳ ದೊರೆಗಳಿಗೂ ಗಣರಾಜ್ಯಗಳ ಚಕ್ರವರ್ತಿಗಳಿಗೂ ಇರುವ ವ್ಯತ್ಯಾಸವೆಂದರೆ, ರಾಷ್ಟ್ರಗಳ ದೊರೆಗಳು ಗುಲಾಮರ ಪ್ರಭುಗಳು, ಆದರೆ ಗಣರಾಜ್ಯಗಳ ಚಕ್ರವರ್ತಿಗಳು ಸ್ವಾತಂತ್ರ್ಯದ ಪ್ರಭುಗಳು .. .. ತನ್ನೆಲ್ಲ ಆಲೋಚನೆ ಕ್ರಿಯೆಗಳ ಮೂಲಕ ದೇವರು ತಮ್ಮ ಪರಿಶುದ್ಧ ಹೃದಯವನ್ನು ಆತನ ಕೃಪೆಯಲ್ಲಿರಿಸಲಿ; ಯಾವ ಕೆಲಸಗಳನ್ನು ನ್ಯಾಯಯುತವಾಗಿ ಮಾಡಬೇಕೋ, ಯಾವುದಕ್ಕೆ ಕ್ಷಮೆ ನೀಡಬೇಕೋ, ಅವುಗಳನ್ನು ತಮ್ಮ ಎದೆಯಲ್ಲಿ ನೆಲೆಸಿರುವ ದೈವಸತ್ವವು ಮುನ್ನಡೆಸಲಿ.' ಜೊತೆಗೆ, ಫೋಕಸ್‌ನ ಹೆಂಡತಿ ಸಮ್ರಾಜ್ಞಿ ಲಿಯೋನ್ಷಿಯಳಿಗೆ ಹೀಗೆ ಬರೆಯುತ್ತಾನೆ: 'ತಮ್ಮ ಚಕ್ರಾಧಿಪತ್ಯದ ಶಾಂತಿಗಾಗಿ ಮಾತನಾಡುವುದಕ್ಕೆ ಯಾವ ನಾಲಗೆಗೆ ತಾನೇ ಸಾಧ್ಯವಾದೀತು, ಯಾವ ಮನಸ್ಸು ತಾನೇ ಯೋಚನೆಮಾಡೀತು, ಸರ್ವಶಕ್ತ ದೇವರಿಗೆ ಅರ್ಪಿಸಲು ಯಾವ ಕೃತಜ್ಞತೆ ತಾನೇ ಹಿರಿದಾದೀತು, ಯಾಕೆಂದರೆ ನಮ್ಮ ಕೊರಳ ಮೇಲಿದ್ದ ದೀರ್ಘಕಾಲದ ಭಾರವನ್ನು ತೆಗೆದುಹಾಕಿದ್ದೀರಿ, ಅದರ ಬದಲಿಗೆ ಸಮ್ರಾಟರ ನವಿರು ನೊಗ ಬಂದಿದೆ.' ಮಾರಿಸ್ ತೀರ ಕ್ರೂರಿಯಾಗಿದ್ದನೆಂದು ತಿಳಿಯಬೇಕೇನೋ; ವಾಸ್ತವವಾಗಿ, ಅವನು ಒಳ್ಳೆಯ ಮುದುಕನಾಗಿದ್ದ. ಫೋಕಸ್ ಎಂತಹ ದೌರ್ಜನ್ಯಗಳನ್ನೆಸಗಿದ ಎಂಬುದು ಗ್ರೆಗರಿಗೆ ತಿಳಿದಿರಲಿಲ್ಲ ಎಂದು ಸಮರ್ಥಕರು ಅವನನ್ನು ಕ್ಷಮಿಸುತ್ತಾರಾಗಲೀ, ಬೈಝಾಂಟಿಯನ್ ಚಕ್ರವರ್ತಿಯ ಸಾಮಾನ್ಯ ನಡವಳಿಕೆ ಅವನಿಗೆ ಖಂಡಿತ ತಿಳಿದಿತ್ತು, ಆದರೆ ಅದಕ್ಕೆ ಫೋಕಸ್ ಹೊರತೇ ಎಂಬುದನ್ನು ತಿಳಿಯುವ ಗೋಜಿಗೆ ಹೋಗಲಿಲ್ಲ.

ಚರ್ಚ್‌ನ ಹೆಚ್ಚುತ್ತಿದ್ದ ಪ್ರಭಾವಗಳಲ್ಲಿ ಕ್ರೈಸ್ತೇತರರನ್ನು ಮತಾಂತರಗೊಳಿಸುವುದು ಪ್ರಮುಖ ಭಾಗವಾಗಿತ್ತು. ನಾಲ್ಕನೆಯ ಶತಮಾನ ಮುಗಿಯುವ ಹೊತ್ತಿಗೆ ಗಾಥ್‌ರನ್ನು ಉಲ್ಫಿಲಾಗಳು ಮತಾಂತರಿಸಿದ್ದರು, ಆದರೆ ದುರದೃಷ್ಟವಶಾತ್ ವ್ಯಾಂಡಲ್‌ರ ಪಂಥವಾಗಿದ್ದ ಏರಿಯನಿಸಂಗೆ. ಆದರೆ ಥಿಯೋಡೆರಿಕ್‌ನ ಮರಣಾನಂತರ ಗಾಥ್‌ರು ಕ್ರಮಕ್ರಮವಾಗಿ ಕ್ಯಾಥೋಲಿಕ್‌ರಾದರು: ಆಗಲೇ ನೋಡಿದಂತೆ, ವಿಸಿಗಾಥ್‌ರ ದೊರೆ ಗ್ರೆಗರಿಯ ಕಾಲದಲ್ಲಿ ಸಂಪ್ರದಾಯನಿಷ್ಠೆಯನ್ನು ಅಳವಡಿಸಿಕೊಂಡ. ಫ್ರಾಂಕ್‌ರು ಕ್ಲೋವಿಸ್‌ನ ಕಾಲದಿಂದಲೂ ಕ್ಯಾಥೋಲಿಕ್‌ರಾಗಿದ್ದರು. ಪಶ್ಚಿಮ ಚಕ್ರಾಧಿಪತ್ಯದ ಪತನಕ್ಕೆ ಮುಂಚೆಯೇ ಐರಿಶ್ ಜನ ಸಂತ ಪ್ಯಾಟ್ರಿಕ್‌ನಿಂದ ಮತಾಂತರಗೊಂಡಿದ್ದರು;

ಅವನೊಬ್ಬ ಸಾಮರ್‌ಶೈರ್ ಹಳ್ಳಿಗಾಡಿನವನು[೨೧೧], ಅವನು ಅಲ್ಲಿ ೫೬೩ ರಿಂದ ೫೯೭ ರಲ್ಲಿ ಸಾಯುವವರೆಗೂ ಅವರೊಡನೆ ವಾಸಿಸುತ್ತಿದ್ದ. ಐರಿಶ್ ಜನರು ಸ್ಕಾಟ್‌ಲಂಡ್ ಮತ್ತು ಉತ್ತರ ಇಂಗ್ಲಂಡ್ ಅನ್ನು ಮತಾಂತರಿಸಲು ಸಾಕಷ್ಟು ಶ್ರಮವಹಿಸಿದರು. ಈ ಕೆಲಸದಲ್ಲಿ ಬಹು ಮುಖ್ಯ ಪಾತ್ರ ವಹಿಸಿದವನು ಸಂತ ಕೊಲಂಬ; ಮತ್ತೊಬ್ಬ ಸಂತ ಕೊಲಂಬನ್, ಸಂತ ಗ್ರೆಗರಿಗೆ ಈಸ್ಟರ್‌ನ ತೇದಿ ಮತ್ತಿತರ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ದೀರ್ಘ ಪತ್ರಗಳನ್ನು ಬರೆಯುತ್ತಿದ್ದವನು. ನಾರ್ತಂಬ್ರಿಯವಲ್ಲದೆ ಇಂಗ್ಲಂಡ್‌ನ ಮತಾಂತರವು ಗ್ರೆಗರಿಯ ವಿಶೇಷ ಗಮನದ್ದಾಗಿತ್ತು. ಪೋಪ್ ಆಗುವುದಕ್ಕೆ ಮುಂಚೆ ಅವನು ರೋಮ್‌ನ ಗುಲಾಮ ಮಾರುಕಟ್ಟೆಯಲ್ಲಿ ಇಬ್ಬರು ಸ್ವರ್ಣವರ್ಣದ ಕೂದಲು ಮತ್ತು ನೀಲ ಕಂಗಳ ಬಾಲಕರನ್ನು ಕಂಡಿದ್ದ, ಅವರು ದೇವದೂತರು ಎಂಬುದನ್ನು ಕೇಳಿ, 'ದೇವದೂತರಲ್ಲ' ಎಂದಿದ್ದ. ತಾನು ಪೋಪ್ ಆದ ಬಳಿಕ ಅವನು ಸಂತ ಆಗಸ್ಟೈನ್ ಅನ್ನು ಕೆಂಟ್‌ಗೆ ಕಳಿಸಿ ಅವರನ್ನು ಮತಾಂತರಿಸಲು ಹೇಳಿದ್ದ, ಅವನ ಪತ್ರವ್ಯವಹಾರದಲ್ಲಿ ಈ ವಿಚಾರ ಕುರಿತಂತೆ ಸಂತ ಆಗಸ್ಟೈನ್‌ನಿಗೆ, ಏಂಜೆಲ್ಸ್‌ನ ದೊರೆ ಎಡಿಲ್‌ಬರ್ಟ್‌ಗೆ, ಇತರ ಅನೇಕರಿಗೆ ಬರೆದ ಪತ್ರಗಳಿವೆ. ಇಂಗ್ಲಂಡ್‌ನಲ್ಲಿ ಕ್ರೈಸ್ತೇತರ ದೇವಾಲಯುಗಳನ್ನು ನಾಶಗೊಳಿಸಬಾರದು, ಆದರೆ ವಿಗ್ರಹಗಳನ್ನು ನಾಶಗೊಳಿಸಬಹುದೆಂದೂ, ದೇವಾಲಯಗಳನ್ನು ಚರ್ಚ್‌ಗಳಾಗಿ ಪರಿವರ್ತಿಸಬೇಕೆಂದೂ ಗ್ರೆಗರಿ ಆದೇಶಿಸಿದ್ದ. ಸಂತ ಆಗಸ್ಟೈನ್ ಪೋಪ್‌ಗೆ, ಅಣ್ಣತಮ್ಮಂದಿರ ಮಕ್ಕಳು ಮದುವೆಯಾಗಬಹುದೇ, ಹಿಂದಿನ ರಾತ್ರಿ ಸಂಭೋಗದಲ್ಲಿ ತೊಡಗಿದ್ದವರು ಚರ್ಚ್‌ಗೆ ಬರಬಹುದೇ, (ಅವರು ಸ್ನಾನ ಮಾಡಿದ್ದರೆ ಆಗಬಹುದು, ಎಂದಿದ್ದ ಗ್ರೆಗರಿ) ಮುಂತಾದ ಅನೇಕ ಪ್ರಶ್ನೆಗಳನ್ನು ಕೇಳಿದ್ದ. ನಾವಾಗಲೇ ನೋಡಿದಂತೆ, ಧರ್ಮಪ್ರಚಾರಕಾರ್ಯವು ನಿರಂತರವಾಗಿ ನಡೆಯಿತು, ಅದರಿಂದಲೇ ಈಗ ನಾವೆಲ್ಲ ಕ್ರೈಸ್ತರಾಗಿರುವುದು.

ಈಗ ಪರಿಶೀಲಿಸಿದ ಅವಧಿಯು ವಿಶಿಷ್ಟವಾದುದು, ಅದರ ಶ್ರೇಷ್ಠ ವ್ಯಕ್ತಿಗಳು ಹಿಂದಿನ ಯುಗಗಳ ಅನೇಕ ಮಂದಿ ಶ್ರೇಷ್ಠ ವ್ಯಕ್ತಿಗಳಿಗಿಂತ ಕೆಳಮಟ್ಟದವರಾದರೂ, ಮುಂದಿನ ಯುಗಗಳ ಮೇಲಾದ ಅವರ ಪ್ರಭಾವವು ಹೆಚ್ಚಾದುದು. ರೋಮನ್ ಕಾನೂನು, ಆಶ್ರಮಪದ್ಧತಿ, ಪೋಪ್‌ರು ಅನುಭವಿಸಿದ ವ್ಯಾಪಕವೂ ಆಳವೂ ಆದ ಪ್ರಭಾವ – ಇವುಗಳು ಜಸ್ಟಿನಿಯನ್, ಬೆನೆಡಿಕ್ಟ್, ಮತ್ತು ಗ್ರೆಗರಿಯರಿಂದಾಗಿ ಆದುದು. ಆರನೆಯ ಶತಮಾನದ ಜನರು, ತಮ್ಮ ಪೂರ್ವಿಕರಿಗಿಂತ ಕಡಿಮೆ ಸಂಸ್ಕೃತಿವಂತರಾದರೂ, ಮುಂದಿನ ನಾಲ್ಕು ಶತಮಾನಗಳ ಜನರಿಗಿಂತ ಬಹಳವೇ ಸುಸಂಸ್ಕೃತಿವಂತರಾಗಿದ್ದರು, ಅದಕ್ಕೆ ಕಾರಣ ಅವರು ಬಾರ್ಬೇರಿಯನ್

೨೧೧. ತನ್ನ 'ಲೈಫ್ ಆಫ್ ಸೆಯಿಂಟ್ಸ್' ನಲ್ಲಿ ಕನಿಷ್ಠ ಪಕ್ಷ ಬರಿ ಹಾಗೆ ಹೇಳುತ್ತಾನೆ.

ನಡವಳಿಕೆಯನ್ನು ಕಡಿಮೆಗೊಳಿಸಲು ರೂಪಿಸಿದ ಸಂಸ್ಥೆಗಳು. ಮೇಲಿನ ಮೂವರಲ್ಲಿ, ಇಬ್ಬರು ರೋಮ್‌ನ ಶ್ರೀಮಂತಪ್ರಭುತ್ವದಿಂದ ಬಂದವರು, ಮೂರನೆಯವನು ರೋಮನ್ ಚಕ್ರವರ್ತಿ. ಗ್ರೆಗರಿಯು ನಿಜವಾದ ಅರ್ಥದಲ್ಲಿ ಕೊಟ್ಟ ಕೊನೆಯ ರೋಮನ್. ಅವನ ಆಜ್ಞೆಯ ಧಾಟಿಯನ್ನು ಅವನ ಅಧಿಕಾರವು ಸಮರ್ಥಿಸಿದರೂ, ಅದು ರೋಮನ್ ಶ್ರೀಮಂತಪ್ರಭುತ್ವದ ಗತ್ತಿನಲ್ಲಿ ತನ್ನ ಮೂಲವನ್ನು ಹೊಂದಿದೆ. ಅವನ ಬಳಿಕ, ಅನೇಕ ಶತಮಾನಗಳ ಕಾಲ, ರೋಮ್ ನಗರವು ಶ್ರೇಷ್ಠ ವ್ಯಕ್ತಿಗಳನ್ನು ನೀಡುವುದರಲ್ಲಿ ವಿಫಲವಾಯಿತು. ಆದರೆ ತನ್ನ ಪತನದಲ್ಲಿಯೇ ಅದು ತನ್ನನ್ನು ಗೆದ್ದವರ ಆತ್ಮಗಳನ್ನು ಬಂಧಿಸುವುದರಲ್ಲಿ ಸಫಲವಾಯಿತು: ಅವರು ಸಂತ ಪೀಟರ್‌ನ ಪೀಠದ ಬಗ್ಗೆ ಹೊಂದಿದ್ದ ಗೌರವವು ಅವರು ಸೀಸರ್‌ಗಳ ಸಿಂಹಾಸನದ ಬಗ್ಗೆ ಹೊಂದಿದ್ದ ಭಯದ ಕಾರಣದಿಂದ ಮೂಡಿದ್ದು.

ಪೂರ್ವದಲ್ಲಿ, ಇತಿಹಾಸದ ಪಥವು ವಿಭಿನ್ನವಾದುದು. ಗ್ರೆಗರಿ ಸುಮಾರು ಮೂವತ್ತು ವರ್ಷದವನಾಗಿದ್ದಾಗ ಮಹಮ್ಮದ್ ಜನಿಸಿದ.

ಭಾಗ ೨

ಮತಧರ್ಮಶಾಸ್ತ್ರಜ್ಞರು (ದ ಸ್ಕೂಲ್‌ಮೆನ್)

೭
ಕತ್ತಲ ಯುಗದಲ್ಲಿನ ಪೋಪ್‌ಪ್ರಭುತ್ವ

ಗ್ರೆಗರಿ ಮಹಾಶಯನಿಂದ ಎರಡನೆಯ ಸಿಲ್ವೆಸ್ಟರ್‌ವರೆಗಿನ ನಾಲ್ಕು ಶತಮಾನಗಳಲ್ಲಿ ಪೋಪ್ ಅಧಿಕಾರವು ಆಶ್ಚರ್ಯಕಾರಕ ಬದಲಾವಣೆಗಳನ್ನು ಕಂಡಿತು. ಕೆಲ ವೇಳೆ ಅದು ಗ್ರೀಕ್ ಚಕ್ರವರ್ತಿಗೆ, ಮತ್ತೆ ಕೆಲವು ವೇಳೆ ಪಶ್ಚಿಮ ಭಾಗದ ಚಕ್ರವರ್ತಿಗೆ, ಮತ್ತೂ ಕೆಲವು ಸಮಯಗಳಲ್ಲಿ ರೋಮನ್ ಶ್ರೀಮಂತಪ್ರಭುತ್ವಕ್ಕೆ ಅಧೀನವಾಗಿತ್ತು. ಇಷ್ಟಾದರೂ, ದೃಢರಾದ ಪೋಪ್‌ಗಳು ಅನುಕೂಲಕರ ಸನ್ನಿವೇಶಗಳನ್ನು ಬಳಸಿಕೊಂಡು ಪೋಪ್ ಅಧಿಕಾರವನ್ನು ಗಟ್ಟಿಗೊಳಿಸಿದರು. ಕ್ರಿಶ ೬೦೦ ರಿಂದ ೧೦೦೦ ದವರೆಗಿನ ಅವಧಿಯು ಮಧ್ಯಯುಗದ ಚರ್ಚ್ ಅನ್ನು ಮತ್ತು ಸರ್ಕಾರದೊಂದಿಗಿನ ಅದರ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಬಹು ಮುಖ್ಯವಾದುದು.

ಪೋಪ್‌ರು ಗ್ರೀಕ್ ಚಕ್ರವರ್ತಿಗಳಿಂದ ಪಡೆದ ಸ್ವಾತಂತ್ರ್ಯವು ಅಷ್ಟೇನೂ ತಮ್ಮಿಂದಲೇ ಸಾಧಿತವಾದುದಲ್ಲ, ಲಂಬಾರ್ಡ್‌ರ ಸೈನಿಕರಿಂದಾದುದು; ಆದರೆ ಅವರಿಗೆ ಅವರ ಬಗ್ಗೆ ಯಾವುದೇ ಕೃತಜ್ಞತಾಭಾವವಿರಲಿಲ್ಲ. ಗ್ರೀಕ್ ಚರ್ಚ್ ಬಹುತೇಕ, ಮತಧರ್ಮಕ್ಕೆ ಸಂಬಂಧಿಸದ ವಿಷಯಗಳನ್ನು ನಿರ್ಧರಿಸುವುದರಲ್ಲಿ ತಾನೇ ಮುಖ್ಯ ಎಂದು, ಹಾಗೂ ಬಿಷಪ್‌ರ ಮಾತ್ರವಲ್ಲ ಪೇಟ್ರಿಯಾರ್ಕ್‌ರ ನೇಮಕ ರದ್ದತಿಗಳೂ ತನ್ನ ವ್ಯಾಪ್ತಿಯವು ಎಂದು ಭಾವಿಸಿದ್ದ ಚಕ್ರವರ್ತಿಗೆ ವಿಧೇಯವಾಗಿತ್ತು. ಸನ್ಯಾಸಿಗಳು ಚಕ್ರವರ್ತಿಯ ಅಧಿಕಾರದಿಂದ ಸ್ವತಂತ್ರರಾಗಲು ಹೆಣಗಿದರು, ಈ ಕಾರಣದಿಂದ ಕೆಲವೊಮ್ಮೆ ಅವರು ಪೋಪ್‌ಗಳ ಬೆಂಬಲಕ್ಕೆ ನಿಂತರು. ಆದರೆ ಕಾನ್‌ಸ್ಟಾಂಟಿನೋಪಲ್‌ನ ಪ್ರವರ್ತಕರು, ಚಕ್ರವರ್ತಿಗೆ ಅಧೀನರಾಗಲು ಬಯಸಿದರೂ, ಪೋಪ್ ತಮ್ಮನ್ನು ಆ ಅಧಿಕಾರಕ್ಕೆ ಒಳಗಾಗಲು ಬಯಸಲಿಲ್ಲ. ಕೆಲವು ಸಲ, ಚಕ್ರವರ್ತಿಗೆ ಇಟಲಿಯ ಬಾರ್ಬೇರಿಯನ್‌ರ ವಿರುದ್ಧ ಪೋಪ್‌ನ ಸಹಾಯ ಆವಶ್ಯಕವೆನಿಸಿ, ಅವನು ಕಾನ್‌ಸ್ಟಾಂಟಿನೋಪಲ್‌ನ ಪ್ರವರ್ತಕರಿಗಿಂತ ಪೋಪ್‌ನೊಡನೆ

ಹೆಚ್ಚು ಸಾಮರಸ್ಯ ಹೊಂದಿದ್ದ. ಪೂರ್ವ ಮತ್ತು ಪಶ್ಚಿಮ ಚರ್ಚ್‌ಗಳ ಅಂತಿಮ ವಿಭಜನೆಯ ಮುಖ್ಯ ಕಾರಣವು ಚಕ್ರವರ್ತಿಯು ಪೋಪ್ ಅಧಿಕಾರಕ್ಕೆ ಅಧೀನವಾಗಲು ನಿರಾಕರಿಸಿದ್ದು.

ಲಂಬಾರ್ಡ್‌ರಿಂದ ಬೈಝಾಂಟಿಯನ್‌ರು ಸೋಲಿಗೊಳಗಾದ ಬಳಿಕ, ಈ ವೀರ್ಯವಂತ ಬಾರ್ಬೇರಿಯನ್‌ರು ತಮ್ಮನ್ನೂ ಗೆದ್ದುಬಿಡಬಹುದೆಂದು ಹೆದರಿದರು. ಶಾರ್ಲಮೇನ್‌ನ ನಾಯಕತ್ವದಲ್ಲಿ ಇಟಲಿ ಮತ್ತು ಜರ್ಮನಿಗಳನ್ನು ವಶಪಡಿಸಿಕೊಂಡಿದ್ದ ಫ್ರಾಂಕ್‌ರೊಡನೆ ಸ್ನೇಹ ಬೆಳೆಸಿ ಅವರು ತಮ್ಮನ್ನು ರಕ್ಷಿಸಿಕೊಂಡರು. ಈ ಸ್ನೇಹವು ಪರಿಶುದ್ಧ ರೋಮನ್ ಚಕ್ರಾಧಿಪತ್ಯವನ್ನುಂಟುಮಾಡಿತು, ಅದರಲ್ಲಿ ಚರ್ಚ್ ಮತ್ತು ಪೋಪ್‌ಗಳ ನಡುವೆ ಸಾಮರಸ್ಯ ಸಾಧಿಸುವ ಸಂವಿಧಾನವು ಅಳವಟ್ಟಿತ್ತು. ಆದರೆ ಕಾರೋಲಿಂಗಿಯನ್ ರಾಜವಂಶದ ಅಧಿಕಾರವು ಕ್ರಮೇಣ ನಶಿಸಿತು. ಮೊದಲಲ್ಲಿ, ಆ ಪತನದ ಲಾಭ ಪಡೆದದ್ದು ಪೋಪ್; ಒಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಮೊದಲನೆಯ ನಿಕೋಲಾಸ್ ಪೋಪ್ ಅಧಿಕಾರವನ್ನು ಹಿಂದೆದ್ದೂ ಇರದಿದ್ದ ಮಟ್ಟಕ್ಕೆ ಎತ್ತರಿಸಿದ. ಸಾಮಾನ್ಯವಾಗಿದ್ದ ಅನಾಯಕತ್ವವು ವಸ್ತುತಃ ರೋಮನ್ ಶ್ರೀಮಂತಪ್ರಭುತ್ವದ ಸ್ವಾತಂತ್ರ್ಯಕ್ಕೆ ನಾಂದಿಯಾಯಿತು, ಅದು ಒಂಬತ್ತನೆಯ ಶತಮಾನದಲ್ಲಿ ವಿನಾಶಕಾರಕ ಪರಿಣಾಮವಿದ್ದ ಪೋಪ್ ಅಧಿಕಾರದ ನಿಯಂತ್ರಣದಲ್ಲಿತ್ತು. ಪೋಪ್ ಅಧಿಕಾರ, ಒಟ್ಟಾರೆ ಚರ್ಚ್, ಊಳಿಗಮಾನ್ಯ ಶ್ರೀಮಂತಪ್ರಭುತ್ವಕ್ಕೆ ಅಧೀನವಾಗುವುದನ್ನು ಮತಧರ್ಮಸುಧಾರಣೆಯ ಮಹಾ ಆಂದೋಲನವು ತಪ್ಪಿಸಿತು; ಇದು ಮುಂದಿನ ಅಧ್ಯಾಯವೊಂದರ ವಿಷಯ.

ಏಳನೆಯ ಶತಮಾನದಲ್ಲಿ ರೋಮ್ ಇನ್ನೂ ಚಕ್ರವರ್ತಿಗಳ ಸೈನ್ಯಾಧಿಕಾರದಡಿಯಲ್ಲಿತ್ತು, ಪೋಪ್‌ರು ಅದಕ್ಕೆ ವಿಧೇಯವಾಗಿರಬೇಕಾಗಿತ್ತು, ಇಲ್ಲವೇ ನರಳಬೇಕಾಗಿತ್ತು. ಹಾನಾರಿಯಸ್‌ನಂತಹ ಕೆಲವರು ಧರ್ಮಭ್ರಷ್ಟತೆಯನ್ನು ಸಹಿಸುವ ಹಂತದವರೆಗೂ ವಿಧೇಯರಾದರು; ಮೊದಲನೆಯ ಮಾರ್ಟಿನ್‌ನಂತಹ ಉಳಿದವರು ಪ್ರತಿಭಟಿಸಿದರು, ಅವರನ್ನು ಚಕ್ರವರ್ತಿಯು ಸೆರೆಯಲ್ಲಿರಿಸಿದ. ೬೮೫ ರಿಂದ ೭೫೨ ರವರೆಗೆ ಬಹುತೇಕ ಪೋಪ್‌ರು ಸಿರಿಯನ್‌ರೋ ಗ್ರೀಕ್‌ರೋ ಆಗಿದ್ದರು. ಆದರೆ ಕಾಲಕ್ರಮೇಣ, ಲಂಬಾರ್ಡ್‌ರು ಇಟಲಿಯನ್ನು ಹೆಚ್ಚುಹೆಚ್ಚಾಗಿ ಆಕ್ರಮಿಸಿಕೊಂಡಂತೆಲ್ಲ, ಬೈಝಾಂಟಿಯನ್ ಅಧಿಕಾರವು ಕುಂಠಿತಗೊಂಡಿತು. ಐಸೂರಿಯನ್‌ನ ಲಿಯೋ ಚಕ್ರವರ್ತಿಯು ೭೨೬ ರಲ್ಲಿ ತನ್ನ ಮೂರ್ತಿಭಂಜಕ ತೀರ್ಪು ನೀಡಿದ, ಪಶ್ಚಿಮದಾದ್ಯಂತ ಮಾತ್ರವಲ್ಲದೆ ಪೂರ್ವಭಾಗದ ಹೆಚ್ಚಿನ ಭಾಗದಲ್ಲಿ, ಅದನ್ನು ಧರ್ಮಬಾಹಿರತೆಯೆಂದು ಭಾವಿಸಲಾಯಿತು. ಇದನ್ನು ಪೋಪ್‌ರು ತೀವ್ರವಾಗಿ ವಿರೋಧಿಸಿ ಯಶಸ್ವಿಗಳಾದರು; ಕೊನೆಗೆ ೭೮೭ ರಲ್ಲಿ ಸಮ್ರಾಜ್ಞಿ (ಮೊದಲು ರಾಜಪ್ರತಿನಿಧಿಯಾಗಿದ್ದ) ಐರೀನ್ ನೇತೃತ್ವದಲ್ಲಿ ಪೂರ್ವವು ಮೂರ್ತಿಭಂಜಕ ಧರ್ಮಬಾಹಿರತೆಯನ್ನು ಕೈಬಿಟ್ಟಿತು;

ಆದರೆ ಪಶ್ಚಿಮವು ಈ ಮಧ್ಯೆ ಬೈಜ಼ಾಂಟಿಯನ್‌ರು ಪೋಪ್‌ಗಳನ್ನು ನಿಯಂತ್ರಿಸುವುದನ್ನು ಸಂಪೂರ್ಣವಾಗಿ ಕೊನೆಗೊಳಿಸಿತ್ತು.

೭೫೧ ರ ಹೊತ್ತಿಗೆ, ಲಂಬಾರ್ಡ್‌ರು ಬೈಜ಼ಾಂಟಿಯನ್ ಇಟಲಿಯ ರಾಜಧಾನಿ ರಾವೆನ್ನವನ್ನು ಆಕ್ರಮಿಸಿದರು. ಈ ಘಟನೆಯು ಗ್ರೀಕ್ ಚಕ್ರವರ್ತಿಗಳಿಂದ ಎಲ್ಲ ರೀತಿಯಲ್ಲೂ ಸ್ವತಂತ್ರಗೊಳಿಸಿ ಲಂಬಾರ್ಡ್‌ರು ಪೋಪ್‌ರನ್ನು ಅತೀವ ಅಪಾಯಕ್ಕೊಡ್ಡಿದರು. ಪೋಪ್‌ರಿಗೆ ಅನೇಕ ಕಾರಣಗಳಿಗಾಗಿ ಲಂಬಾರ್ಡ್‌ರಿಗಿಂತ ಗ್ರೀಕ್‌ರ ಬಗ್ಗೆ ಹೆಚ್ಚಿನ ಒಲವು. ಮೊದಲನೆಯದಾಗಿ, ಚಕ್ರವರ್ತಿಗಳ ಅಧಿಕಾರವು ಕಾನೂನಾತ್ಮಕವಾದುದು, ಆದರೆ ಅನ್ಯದೇಶೀಯ ದೊರೆಗಳನ್ನು, ಚಕ್ರವರ್ತಿಗಳು ಮಾನ್ಯಮಾಡದ ಹೊರತು, ಅತಿಕ್ರಮಣ ಮಾಡಿದವರೆಂದು ಪರಿಗಣಿಸಲಾಗುತ್ತಿತ್ತು. ಎರಡನೆಯದಾಗಿ, ಗ್ರೀಕ್‌ರು ನಾಗರಿಕರಾಗಿದ್ದವರು; ಮೂರನೆಯದಾಗಿ, ಲಂಬಾರ್ಡ್‌ರು ರಾಷ್ಟ್ರೀಯವಾದಿಗಳು, ಆದರೆ ಚರ್ಚ್ ರೋಮನ್ ಅಂತಾರಾಷ್ಟ್ರೀಯ ಸ್ವರೂಪವನ್ನುಳಿಸಿಕೊಂಡಿತ್ತು. ನಾಲ್ಕನೆಯದಾಗಿ, ಲಂಬಾರ್ಡ್‌ರು ಏರಿಯನ್‌ರು, ಮತಾಂತರಗೊಂಡ ಮೇಲೂ ಅವರ ಬಗ್ಗೆ ಸ್ವಲ್ಪಮಟ್ಟಿಗಿನ ಹೇವರಿಕೆಯು ಉಳಿದುಕೊಂಡಿತ್ತು.

ಲಿಯೂಟ್‌ಪ್ರಾಂಡ್‌ನ ನಾಯಕತ್ವದಲ್ಲಿ ಲಂಬಾರ್ಡ್‌ರು ೭೩೯ ರಲ್ಲಿ ರೋಮ್ ಅನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದರು, ಇದನ್ನು ಪೋಪ್ ಮೂರನೆಯ ಗ್ರೆಗರಿ ತೀವ್ರವಾಗಿ ವಿರೋಧಿಸಿ ಸಹಾಯಕ್ಕಾಗಿ ಫ್ರಾಂಕ್‌ರ ಕಡೆ ನೋಡಿದ. ಕ್ಲೋವಿಸ್‌ನ ವಂಶಸ್ಥರಾದ ಮೆರೋವಿಂಗಿಯದ ದೊರೆಗಳು ಫ್ರಾಂಕ್ಲಿನ್ ರಾಜ್ಯದಲ್ಲಿ ನಿಜವಾದ ಅಧಿಕಾರವನ್ನೆಲ್ಲ ಕಳೆದುಕೊಂಡಿದ್ದರು, ಅದರ ಆಡಳಿತ ನೋಡಿಕೊಳ್ಳುತ್ತಿದ್ದವರು 'ಅರಮನೆಯ ಅಧಿಕಾರಿಗಳು' (ಮೇಯರ್ಸ್ ಆಫ್ ದ ಪ್ಯಾಲೇಸ್). ಈ ಹೊತ್ತಿನಲ್ಲಿ ಅರಮನೆಯ ಅಧಿಕಾರಿಯಾಗಿದ್ದವನು ಅಸಾಧಾರಣ ಸಾಮರ್ಥ್ಯವಿದ್ದ ಚಾರ್ಲ್ಸ್ ಮಾರ್ಟೆಲ್, ಅವನು ಆಕ್ರಮಣಕಾರ ವಿಲಿಯಂನಂತೆಯೇ ಒಬ್ಬ ಜಾರಜ. ೭೩೨ ರಲ್ಲಿ ಅವನು ಮೂರ್‌ರ ವಿರುದ್ಧದ ಟೂರ್ಸ್‌ನ ಯುದ್ಧದಲ್ಲಿ ನಿರ್ಣಾಯಕ ಗೆಲವನ್ನು ಸಾಧಿಸಿ, ಈ ಮೂಲಕ ಫ್ರಾನ್ಸ್ ಅನ್ನು ಕ್ರೈಸ್ತಪರವಾಗಿಸಿದ್ದ. ಇದು ಅವನ ಬಗ್ಗೆ ಚರ್ಚ್‌ಗೆ ಆದರ ಭಾವವನ್ನು ಉಂಟುಮಾಡಬೇಕಾಗಿತ್ತು, ಆದರೆ ಆರ್ಥಿಕ ಬಿಕ್ಕಟ್ಟು ಅವನನ್ನು ಚರ್ಚ್‌ನ ಕೆಲವು ಭೂಭಾಗಗಳನ್ನು ವಶಪಡಿಸಿಕೊಳ್ಳುವಂತೆ ಮಾಡಿದ್ದರಿಂದಾಗಿ ಅವನ ಬಗೆಗಿನ ಧರ್ಮಬೋಧಕರ ಮೆಚ್ಚಿಕೆಯನ್ನು ಕಡಿಮೆ ಮಾಡಿತ್ತು. ಆದರೆ ಅವನು ಮತ್ತು ಮೂರನೆಯ ಗ್ರೆಗರಿ ಇಬ್ಬರೂ ೭೪೧ ರಲ್ಲಿ ಸತ್ತರು; ಅವನ ಉತ್ತರಾಧಿಕಾರಿ ಪೆಪಿನ್ ಸಂಪೂರ್ಣವಾಗಿ ಚರ್ಚ್‌ಪರವಾಗಿದ್ದ. ೭೫೪ ರಲ್ಲಿ ಪೋಪ್ ಮೂರನೆಯ ಸ್ಟೀಫನ್ ಲಂಬಾರ್ಡ್‌ರಿಂದ ತಪ್ಪಿಸಿಕೊಳ್ಳಲು ಆಲ್ಪ್ಸ್ ಅನ್ನು ದಾಟಿ ಪೆಪಿನ್ ಅನ್ನು ಭೇಟಿಯಾದ, ಅವರಿಬ್ಬರೂ

ಪರಸ್ಪರರಿಗೆ ಭಾರಿ ಅನುಕೂಲಕರವಾಗಿದ್ದ ಒಪ್ಪಂದವೊಂದಕ್ಕೆ ಬಂದರು. ಪೋಪ್‌ಗೆ ಸೈನಿಕ ರಕ್ಷಣೆಯ ಆವಶ್ಯಕತೆಯಿತ್ತು, ಆದರೆ ಪೆಪಿನ್‌ಗೆ ಪೋಪ್ ಮಾತ್ರ ನೀಡಬಹುದಾಗಿದ್ದ ಬೇರೇನೋ ಬೇಕಾಗಿತ್ತು: ಅದೆಂದರೆ ಮೆರೊವಿಂಗಿಯರ ಕೊನೆಯ ದೊರೆಯ ಜಾಗದಲ್ಲಿ ತಾನು ದೊರೆ ಎಂಬ ಪದವಿಯ ಶಾಸನಬದ್ಧತೆ. ಇದಕ್ಕೆ ಪ್ರತಿಯಾಗಿ ಪೆಪಿನ್ ಪೋಪ್ ರಾವೆನಾಗೆ ಇಟಲಿಯ ಮೊದಲಿನ ಪ್ರದೇಶಗಳ ಮೇಲಿನ ಅಧಿಕಾರವನ್ನು ನೀಡಿದ. ಕಾನ್‌ಸ್ಟಾಂಟಿನೋಪಲ್ ಇಂತಹ ಉಡುಗೊರೆಯನ್ನು ನೀಡಬಹುದೆಂದು ನಿರೀಕ್ಷಿಸಲಾಗದ್ದರಿಂದಾಗಿ ಇದು ಪೂರ್ವ ಯೂರೊಪ್‌ನಿಂದ ರಾಜಕೀಯವಾಗಿ ದೂರವಾಗಬೇಕಾಯಿತು.

ಪೋಪ್ ಏನಾದರೂ ಗ್ರೀಕ್ ಚಕ್ರವರ್ತಿಗಳ ಆಧೀನದಲ್ಲಿಯೇ ಇದ್ದಿದ್ದರೆ, ಕ್ಯಾಥೋಲಿಕ್ ಚರ್ಚ್ ಬೆಳವಣಿಗೆಯ ಬಗೆಯೇ ಬೇರೆಯಾಗಿ ಬಿಡುತ್ತಿತ್ತು. ಪೂರ್ವದ ಚರ್ಚ್‌ನಲ್ಲಿ ಕಾನ್‌ಸ್ಟಾಂಟಿನೋಪಲ್‌ನ ಪ್ರವರ್ತಕನು ಮತಧರ್ಮೇತರ ಅಧಿಕಾರದಿಂದ ಸ್ವತಂತ್ರವಾಗಿರುವ ಮಾನ್ಯತೆಯನ್ನಾಗಲೀ ಪೋಪ್ ಸಾಧಿಸಿದ್ದ ಇತರ ಬಿಷಪ್‌ರಿಗಿಂತ ಹೆಚ್ಚಿನ ಔನ್ನತ್ಯವನ್ನಾಗಲೀ ಪಡೆಯಲಾಗುತ್ತಿರಲಿಲ್ಲ. ಮೊದಲು ಎಲ್ಲ ಬಿಷಪ್‌ರನ್ನೂ ಸಮಾನವೆಂದು ಭಾವಿಸಲಾಗುತ್ತಿತ್ತು, ಈ ದೃಷ್ಟಿಕೋನವು ಗಣನೀಯ ಪ್ರಮಾಣದಲ್ಲಿ ಪೂರ್ವದಲ್ಲಿಯೂ ಉಳಿದಿತ್ತು. ಇದಕ್ಕೂ ಮಿಗಿಲಾಗಿ, ಅಲೆಕ್ಸಾಂಡ್ರಿಯ, ಆಂಟಿಯೋಕ್, ಮತ್ತು ಜೆರೂಸಲೆಂಗಳಲ್ಲಿ ಇತರ ಪೂರ್ವಭಾಗದ ಪ್ರವರ್ತಕರಿದ್ದರು, ಆದರೆ ಪಶ್ಚಿಮ ಭಾಗದಲ್ಲಿ ಪೋಪ್ ಮಾತ್ರವೇ ಪ್ರವರ್ತಕನಾಗಿದ್ದುದು. (ಈ ಸ್ಥಿತಿಯು ಮಹಮ್ಮದ್‌ನ ಗೆಲುವಿನಿಂದಾಗಿ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿತು.) ಪಶ್ಚಿಮದಲ್ಲಿ, ಆದರೆ ಪೂರ್ವದಲ್ಲಲ್ಲ, ಬಹುಪಾಲು ಸಾಮಾನ್ಯ ಜನತೆ ಅನೇಕ ಶತಮಾನಗಳ ಕಾಲ ಅನಕ್ಷರಸ್ಥರಾಗಿದ್ದರು, ಇದು ಪಶ್ಚಿಮಭಾಗದಲ್ಲಿ ಚರ್ಚ್‌ಗೆ ಪೂರ್ವಭಾಗದಲ್ಲಿಲ್ಲದ ಒಂದು ಅನುಕೂಲಕರ ಪರಿಸ್ಥಿತಿಯನ್ನೊದಗಿಸಿತ್ತು. ರೋಮ್‌ನ ಘನತೆ ಪೂರ್ವಭಾಗದ ಬೇರಾವುದೇ ನಗರಕ್ಕಿಂತ ಉನ್ನತವಾದುದಾಗಿತ್ತು, ಅದಕ್ಕೆ ಕಾರಣವೆಂದರೆ ತನ್ನ ಸಾಮ್ರಾಜ್ಯಶಾಹಿ ಪರಂಪರೆ ಮತ್ತು ಪೀಟರ್ ಮತ್ತು ಪೌಲ್‌ರ ಹುತಾತ್ಮತೆಯ ಕತೆಗಳು ಹಾಗೂ ಪೀಟರ್ ಮೊದಲ ಪೋಪ್ ಆಗಿದ್ದುದು ಮಿಳಿತವಾಗಿದ್ದುದು. ಚಕ್ರವರ್ತಿಯ ಘನತೆಯು ಪೋಪ್‌ನದನ್ನು ನಿಭಾಯಿಸಲು ಸಾಕಾಗಬಹುದಾಗಿತ್ತು, ಆದರೆ ಯಾವ ಪಶ್ಚಿಮದ ಚಕ್ರವರ್ತಿಯೂ ಅದನ್ನು ಮಾಡಲಾರದಾಗಿದ್ದ. ಪರಿಶುದ್ಧ ರೋಮ್‌ನ ಚಕ್ರವರ್ತಿಗಳು ಎಷ್ಟೋ ವೇಳೆ ವಾಸ್ತವ ಅಧಿಕಾರದಿಂದ ದೂರವೇ ಆಗಿದ್ದರು; ಅಲ್ಲದೆ, ಪೋಪ್ ಕಿರೀಟಧಾರಣೆ ಮಾಡಿಯೇ ಅವರು ಚಕ್ರವರ್ತಿಗಳೆನಿಸಿಕೊಳ್ಳಬೇಕಾಗಿತ್ತು. ಈ ಎಲ್ಲ ಕಾರಣಗಳಿಂದಾಗಿ, ಬೈಝಾಂಟಿಯನ್ ಪ್ರಾಬಲ್ಯದಿಂದ ಪೋಪ್‌ರನ್ನು ಸ್ವತಂತ್ರರಾಗಿಸುವುದು, ಮತಧರ್ಮೇತರ ಚಕ್ರವರ್ತಿಗಳಿಂದ ಚರ್ಚ್‌ನ ಸ್ವಾತಂತ್ರ್ಯವನ್ನುಳಿಸುವ

ದೃಷ್ಟಿಯಿಂದಲೂ, ಪಶ್ಚಿಮ ಚರ್ಚ್‌ನ ಆಡಳಿತವನ್ನು ಪೋಪ್ ಅಧಿಕಾರದಲ್ಲಿ ಅಂತಿಮವಾಗಿ ಸ್ಥಾಪಿಸುವ ದೃಷ್ಟಿಯಿಂದಲೂ ಆವಶ್ಯಕವಾಗಿತ್ತು.

ಬಹು ಪ್ರಮುಖವಾದ ಕೆಲವು ದಾಖಲೆಗಳು, ಕಾನ್‌ಸ್ಟಾಂಟೈನ್‌ನ ಕೊಡುಗೆ (ಡೊನೇಷನ್ ಆಫ್ ಕಾನ್‌ಸ್ಟಾಂಟೈನ್) ಮತ್ತು ಸುಳ್ಳು ಪೋಪ್ ಶಾಸನಸಂಗ್ರಹ (ಡೆಕ್ರೆಟಲ್) ಗಳು ಈ ಕಾಲಕ್ಕೆ ಸೇರಿದವು. ಸುಳ್ಳು ಪೋಪ್ ಶಾಸನಸಂಗ್ರಹಗಳ ಬಗ್ಗೆ ನಾವು ತಲೆಕೆಡಿಸಿಕೊಳ್ಳಬೇಕಾಗಿಲ್ಲ, ಆದರೆ ಕಾನ್‌ಸ್ಟಾಂಟೈನ್‌ನ ಕೊಡುಗೆಯ ಬಗ್ಗೆ ಕೊಂಚ ಹೇಳಬೇಕು. ಪೆಪಿನ್‌ನ ಉಡುಗೊರೆಗೆ ಪ್ರಾಚೀನ ಶಾಸನಬದ್ಧತೆಯ ಲೇಪವನ್ನು ನೀಡಲೋಸುಗ, ಚಕ್ರವರ್ತಿ ಕಾನ್‌ಸ್ಟಾಂಟೈನ್‌ನ ಕೊಡುಗೆಯೆಂದು ಸಾಬೀತು ಮಾಡಲು ಚರ್ಚ್ ಜನರು ದಾಖಲೆಯೊಂದನ್ನು ನಕಲು ಮಾಡಿ, ಈ ಮೂಲಕ ಹೊಸ ರೋಮ್ ಅನ್ನು ಅವನು ಸ್ಥಾಪಿಸಿದಾಗ, ಹಳೆಯ ರೋಮ್ ಅನ್ನೂ ಮತ್ತದರ ಪಶ್ಚಿಮ ಪ್ರದೇಶವನ್ನೆಲ್ಲ ಉಡುಗೊರೆಯಾಗಿತ್ತನೆಂದು ಸಾರಿದರು. ಪೋಪ್‌ನ ಭೂಮಿಯ ಅಧಿಕಾರದ ನೆಲೆಯಾದ ಈ ಉಯಿಲನ್ನು ಆ ಮುಂದಿನ ಮಧ್ಯಯುಗದಾದ್ಯಂತ ನಿಜವಾದುದೆಂದು ಒಪ್ಪಲಾಗಿತ್ತು. ಮೊದಲು ಮತಧರ್ಮಸುಧಾರಣೆಯ ಕಾಲದಲ್ಲಿ, ಲೊರೆಂಜೋ ವಲ್ಲಾ ೧೪೫೯ ರಲ್ಲಿ ಅದನ್ನು ನಕಲಿ ಎಂದು ತಿರಸ್ಕರಿಸಲಾಯಿತು. ಅವನು 'ಲ್ಯಾಟಿನ್ ಭಾಷೆಯ ಸೊಬಗಿನ ಬಗ್ಗೆ' ಪುಸ್ತಕವೊಂದನ್ನು ಬರೆದಿದ್ದ, ಅದು ಸಹಜವಾಗಿಯೆ ಎಂಟನೆಯ ಶತಮಾನದ ಆವೃತ್ತಿಯಲ್ಲಿ ಕಣ್ಮರೆಯಾಗಿತ್ತು. ವಿಚಿತ್ರವಾಗಿ, ಕಾನ್‌ಸ್ಟಾಂಟೈನ್‌ನ ಕೊಡುಗೆಯ ವಿರುದ್ಧವಾಗಿ ಅವನು ತನ್ನ ಪುಸ್ತಕವನ್ನು ಹಾಗೂ ಎಪಿಕ್ಯೂರಸ್‌ನ ಬಗೆಗಿನ ಮೆಚ್ಚಿಕೆಯ ಪುಸ್ತಕವನ್ನು ಪ್ರಕಟಿಸಿದಾಗ, ಅವನನ್ನು ಪೋಪ್ ಐದನೆಯ ನಿಕೊಲಸ್ ಧಾರ್ಮಿಕ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡ. ಅವನಿಗೆ ಚರ್ಚ್‌ಗಿಂತ ಲ್ಯಾಟಿನ್ ಬಗ್ಗೆ ಹೆಚ್ಚು ಒಲವುಗಳ ಬಗೆಗಿನ ಪೋಪ್‌ನ ಒಡೆತನವನ್ನು ಉಡುಗೊರೆಯೆನ್ನಲಾದುದರ ಆಧಾರದಿಂದ ನೀಡಲಾಗಿತ್ತಾದರೂ. ಐದನೆಯ ನಿಕೊಲಸ್ ಚರ್ಚ್ ಆಸ್ತಿಯನ್ನು ಬಿಟ್ಟುಕೊಡಲು ಸಿದ್ಧನಾಗಿರಲಿಲ್ಲ.

ಈ ಮಹತ್ವದ ದಾಖಲೆಯ ವಿವರಗಳನ್ನು ಸಿ. ಡೆಲಿಸ್ಲೆ ಹೀಗೆ ಸಂಕ್ಷೇಪಗೊಳಿಸುತ್ತಾರೆ:

> **ನೈಸಿನ್ ಪಂಥ, ಆಡಮ್‌ನ ಪತನ ಮತ್ತು ಕ್ರಿಸ್ತನ ಜನನದ ಬಗ್ಗೆ ಸಂಕ್ಷೇಪವಾಗಿ ಹೇಳಿದ ಬಳಿಕ ಕಾನ್‌ಸ್ಟಾಂಟೈನ್ ತಾನು ಕುಷ್ಠರೋಗದಿಂದ ಬಳಲುತ್ತಿದ್ದು ವೈದ್ಯರಿಂದ ಪ್ರಯೋಜನವಾಗಲಿಲ್ಲವಾದ್ದರಿಂದ ಜ್ಯೂಪಿಟರ್ ದೇವಾಲಯದ ಪುರೋಹಿತರ ಬಳಿ ಹೋಗಬೇಕಾಯಿತು. ಕೆಲವು ಶಿಶುಗಳನ್ನು ಹತ್ತೆಗೈದು ಅವರ ರಕ್ತದಿಂದ ಮೈತೊಳೆದುಕೊಳ್ಳಬೇಕೆಂದು ಹೇಳಿದರು, ಆದರೆ ತಾಯಂದಿರ ಆಕ್ರಂದನದಿಂದಾಗಿ ಅವರಿಗೆ ಜೀವದಾನ ಮಾಡಿದ. ಅ ರಾತ್ರಿ ಪೀಟರ್ ಮತ್ತು**

ಪೌಲ್ ತನ್ನ ಬಳಿ ಬಂದು, ಪೋಪ್ ಸಿಲ್ವೆಸ್ಟರ್ ಸಾಕ್ರೀಟ್‌ನ ಒಂದು ಗವಿಯಲ್ಲಿ ಅವಿತಿರುವುದಾಗಿಯೂ ಅವನು ರೋಗದಿಂದ ವಾಸಿಮಾಡಿರುವುದಾಗಿಯೂ ಹೇಳಿದನಂತೆ. ಅವನು ಸಾಕ್ರೀಟ್‌ಗೆ ಹೋದ, ಅಲ್ಲಿ 'ವಿಶ್ವದ ಪೋಪ್'ನು ಪೀಟರ್ ಮತ್ತು ಪೌಲ್ ಪ್ರವರ್ತಕರೇ ಹೊರತು ದೇವರುಗಳಲ್ಲ ಎಂದು ಹೇಳಿ ತನ್ನ ಕಾಣ್ಕೆಯಿಂದ ಅವರ ಚಿತ್ರಗಳನ್ನು ತೋರಿಸಿದಾಗ ಅವುಗಳನ್ನು ಗುರುತಿಸಿ ಅದನ್ನು ಎಲ್ಲ ಮಾಂಡಲಿಕರಿಗೆ ತೋರಿಸಿದನಂತೆ; ಆನಂತರ ಪೋಪ್ ಸಿಲ್ವೆಸ್ಟರ್ ಅವನಿಗೆ ಕೂದಲ ಅಂಗಿಯಲ್ಲಿ ಮಾಡುವ ಒಂದು ತಪಸ್ಸನ್ನು ಸೂಚಿಸಿದನಂತೆ; ಆನಂತರ ಅವನಿಗೆ ದೀಕ್ಷಾಸ್ನಾನವಿತ್ತಾಗ ಸ್ವರ್ಗದ ಕೈಯೊಂದು ತನ್ನನ್ನು ಮುಟ್ಟಿದ ಅನುಭವವಾಯಿತಂತೆ. ಅವನ ಕುಷ್ಠರೋಗ ವಾಸಿಯಾಗಿ ಅವನು ವಿಗ್ರಹಪೂಜೆಯನ್ನು ನಿಲ್ಲಿಸಿದನಂತೆ. ಆನಂತರ ತನ್ನೆಲ್ಲ ಸತ್ರಪರು, ಸೆನೇಟ್, ಕುಲೀನರು ಮತ್ತು ಇಡೀ ರೋಮ್‌ನ ಜನರ ಜೊತೆಯಲ್ಲಿ ಪೀಟರ್‌ನ ಪ್ರಾಂತಕ್ಕೆ ಸಾರ್ವಭೌಮ ಅಧಿಕಾರವನ್ನು ನೀಡಿ, ಆಂಟಿಯೋಕ್, ಅಲೆಕ್ಸಾಂಡ್ರಿಯ, ಜೆರೂಸಲೆಂ, ಮತ್ತು ಕಾನ್‌ಸ್ಟಾಂಟಿನೋಪಲ್‌ಗಳಿಗೂ ಮಿಗಿಲಾದ ಸ್ಥಾನ ನೀಡಿದನಂತೆ. ತನ್ನ ಲಾಟೆರಾನ್‌ನ ಅರಮನೆಯಲ್ಲಿ ಅವನಿಗಾಗಿ ಒಂದು ದೇವಾಲಯವನ್ನು ನಿರ್ಮಿಸಿದನಂತೆ. ಪೋಪ್‌ನಿಗೆ ತನ್ನ ಕಿರೀಟ, ಶಿರೋವೇಷ್ಟನ ಮತ್ತು ಚಕ್ರವರ್ತಿಯ ಉಡುಗೆಗಳನ್ನು ನೀಡಿದನಂತೆ. ಪೋಪ್‌ನ ತಲೆಯ ಮೇಲೆ ಶಿರೋವೇಷ್ಟನವೊಂದನ್ನಿಟ್ಟು ತನ್ನ ಕುದುರೆಯ ಕಡಿವಾಣವನ್ನು ಹಿಡಿದನಂತೆ. ಅವನು ಸಿಲ್ವೆಸ್ಟರ್ ಮತ್ತವನ ರೋಮ್ ಮತ್ತಿತರ ಎಲ್ಲ ಪ್ರಾಂತಗಳು ಜಿಲ್ಲೆಗಳು ಮತ್ತು ನಗರಗಳ ಉತ್ತರಾಧಿಕಾರಿಗಳ ಬಳಿಗೆ ಹೋಗಿ ಅವರೆಲ್ಲ ಎಂದೆಂದಿಗೂ ರೋಮನ್ ಚರ್ಚ್‌ಗೆ ವಿಧೇಯವಾಗಿರಬೇಕೆಂದು ಆಜ್ಞಾಪಿಸಿದನಂತೆ. ಆನಂತರ 'ಬಿಷಪ್‌ರ ಪ್ರಾಂತಗಳು ಮತ್ತು ಕ್ರೈಸ್ತ ಮತಧರ್ಮದ ಹಿರೇಮಾಣಿಗಳನ್ನು ಸ್ವರ್ಗದ ಚಕ್ರವರ್ತಿಯಿಂದ ಸ್ಥಾಪಿತವಾಗಿ, ಅಲ್ಲಿ ಕೇವಲ ಲೌಕಿಕ ಚಕ್ರವರ್ತಿಗೆ ಮಾತ್ರವೇ ಅಧಿಕಾರವಲ್ಲ' ಎನ್ನುವ ಪೂರ್ವದ ಕಡೆಗೆ ತಿರುಗಿದನಂತೆ.'[೨೧೨]

ಲಂಬಾರ್ಡ್‌ರು ಪೆಪಿನ್ ಮತ್ತು ಪೋಪ್‌ಗೆ ಸುಮ್ಮನೆ ಅಧೀನರಾಗಲಿಲ್ಲ, ಆದರೆ ಫ್ರಾಂಕ್‌ರೊಡನೆ ಮತ್ತೆ ಮತ್ತೆ ನಡೆದ ಯುದ್ಧಗಳಲ್ಲಿ ಸೋತದ್ದರಿಂದಷ್ಟೆ. ಕೊನೆಗೂ, ೭೭೪ ರಲ್ಲಿ ಪೆಪಿನ್‌ನ ಮಗ ಶಾರ್ಲಮೇನ್ ಇಟಲಿಗೆ ನುಗ್ಗಿ ಲಂಬಾರ್ಡ್‌ರನ್ನು ಸಂಪೂರ್ಣವಾಗಿ ಸೋಲಿಸಿ, ತನ್ನನ್ನು ರಾಜನೆಂದು ಗುರುತಿಸುವಂತೆ ಮಾಡಿ, ಆನಂತರ ರೋಮ್ ಅನ್ನು ವಶಪಡಿಸಿಕೊಂಡ; ಅಲ್ಲಿಯೇ ಅವನು

೨೧೨. ಈ ಭಾಗವನ್ನು ಇನ್ನೂ ಪ್ರಕಟವಾಗದ 'ದ ಫಸ್ಟ್ ಯೂರೋಪ್' ಗ್ರಂಥದಿಂದ ಉಲ್ಲೇಖಿಸಿದ್ದೇನೆ.

ಪೆಪಿನ್‌ನ ಕೊಡುಗೆಗಳನ್ನು ಸ್ಥಿರಗೊಳಿಸಿದ್ದು. ಅವನ ಕಾಲದ ಪೋಪ್‌ರಾದ ಹೇಡ್ರಿಯನ್ ಮತ್ತು ಮೂರನೆಯ ಲಿಯೋ ಅವನ ಎಲ್ಲ ಕಾರ್ಯಗಳಲ್ಲೂ ನೆರವಾಗುವುದು ತಮಗೆ ಅನುಕೂಲಕರವೆಂಬುದನ್ನು ಕಂಡುಕೊಂಡರು. ಬಹುಪಾಲು ಜರ್ಮನಿಯನ್ನವನು ಗೆದ್ದುಕೊಂಡ, ಸ್ಯಾಕ್ಸನ್‌ರನ್ನು ಕಠಿಣ ಹಿಂಸಾಚಾರದ ಮೂಲಕ ಮತಾಂತರಗೊಳಿಸಿ, ಕೊನೆಗೆ ತಾನಾಗಿ ಪಶ್ಚಿಮ ಚಕ್ರಾಧಿಪತ್ಯವನ್ನು ಪುನರುಜ್ಜೀವನಗೊಳಿಸಿದ. ಅವನನ್ನು ಕ್ರಿಶ ೮೦೦ ರ ಕ್ರಿಸ್ಮಸ್ ದಿನದಂದು ರೋಮ್‌ನಲ್ಲಿ ಪೋಪ್ ಅವನ ಕಿರೀಟಧಾರಣೆ ಮಾಡಿ ಚಕ್ರವರ್ತಿ ಎಂದು ಘೋಷಿಸಿದ.

ಪರಿಶುದ್ಧ ರೋಮನ್ ಚಕ್ರಾಧಿಪತ್ಯದ ಸ್ಥಾಪನೆಯು ಮಧ್ಯಯುಗೀನ ಸೈದ್ಧಾಂತಿಕತೆಯಲ್ಲಿ ಒಂದು ಹೊಸಯುಗವನ್ನು ನಿರ್ದೇಶಿಸುತ್ತದೆ, ಆದರೆ ಮಧ್ಯಯುಗದಲ್ಲಿ ಕಡಿಮೆ ಅನುಸರಣದಲ್ಲಿತ್ತು. ಮಧ್ಯಯುಗವು ವಿಶೇಷವಾಗಿ ಕಾನೂನಾತ್ಮಕ ಕಲ್ಪನೆಗಳ ಗೀಳಿನಿಂದ ಕೂಡಿದ್ದವು, ಇಲ್ಲಿಯವರೆಗೂ ಕಲ್ಪನೆಯು ಹಿಂದಿನ ರೋಮನ್ ಚಕ್ರಾಧಿಪತ್ಯದ ಪಶ್ಚಿಮ ಪ್ರಾಂತಗಳು ಕಾನೂನುರೀತ್ಯಾ ಕಾನ್‌ಸ್ಟಾಂಟಿನೋಪಲ್‌ನ ಚಕ್ರವರ್ತಿಯ ಅಧೀನದಲ್ಲಿದ್ದವು, ಅವನಿಗೇ ಸಂಪೂರ್ಣ ಕಾನೂನುಬದ್ಧ ಆಧಿಕಾರವಿದೆಯೆಂದು ಭಾವಿಸಲಾಗಿತ್ತು. ಕಾನೂನಾತ್ಮಕ ಕಲ್ಪನೆಗಳಲ್ಲಿ ಪರಿಣತನಾಗಿದ್ದ ಶಾರ್ಲಮೇನ್ ಚಕ್ರಾಧಿಪತ್ಯದ ಸಿಂಹಾಸನವು ಖಾಲಿಯಾಗಿದೆಯೆಂದು ಹೇಳುತ್ತಿದ್ದ, ಯಾಕೆಂದರೆ ಆಳುತ್ತಿದ್ದ ಪೂರ್ವ ಸಾರ್ವಭೌಮೆಯಾದ ಐರೀನ್ (ತನ್ನನ್ನವಳು ಚಕ್ರವರ್ತಿ ಎಂದೇ ಕರೆದುಕೊಳ್ಳುತ್ತಿದ್ದಳು, ಸಮ್ರಾಜ್ಞಿಯೆಂದಲ್ಲ) ಹೆಂಗಸು ಚಕ್ರವರ್ತಿಯಾಗಲು ಸಾಧ್ಯವಿಲ್ಲದ್ದರಿಂದ ಅವಳೊಬ್ಬ ದುರಾಕ್ರಮಣಕಾರಿ. ಚಾರ್ಲ್ಸ್ ತನ್ನ ಹಕ್ಕನ್ನು ಪೋಪ್ ಮೂಲಕ ಕಾನೂನಾತ್ಮಕವಾಗಿ ಸಾಧಿಸಿಕೊಂಡಿದ್ದ. ಹೀಗಾಗಿ, ಮೊದಲಿನಿಂದಲೂ ಚಕ್ರವರ್ತಿ ಮತ್ತು ಪೋಪ್‌ರ ನಡುವೆ ಕುತೂಹಲಕಾರಕ ಪರಸ್ಪರ ಅವಲಂಬನೆಯಿತ್ತು. ರೋಮ್‌ನಲ್ಲಿ ಪೋಪ್ ಕಿರೀಟಧಾರಣೆ ಮಾಡಿಸದೆ ಯಾರೂ ಚಕ್ರವರ್ತಿಯಾಗಲು ಸಾಧ್ಯವಿರಲಿಲ್ಲ; ಮತ್ತೊಂದೆಡೆಯಲ್ಲಿ, ಕೆಲವು ಶತಮಾನಗಳ ಕಾಲ, ಬಲಿಷ್ಠ ಚಕ್ರವರ್ತಿಯು ತನಗೆ ಪೋಪ್ ಅನ್ನು ನೇಮಿಸುವ ಮತ್ತು ತೆಗೆದುಹಾಕುವ ಹಕ್ಕಿದೆಯೆಂದು ಪ್ರತಿಪಾದಿಸುತ್ತಿದ್ದ. ಮಧ್ಯಯುಗದ ಕಾನೂನಾತ್ಮಕ ಅಧಿಕಾರ ಸಿದ್ಧಾಂತವು ಚಕ್ರವರ್ತಿ ಹಾಗೂ ಪೋಪ್ ಇಬ್ಬರ ಮೇಲೂ ಇತ್ತು; ಪರಸ್ಪರ ಅವಲಂಬನೆಯು ಇಬ್ಬರಲ್ಲಿಯೂ ಕಿರಿಕಿರಿಯುಂಟುಮಾಡುವ ವಿಷಯವಾಗಿತ್ತು, ಅನೇಕ ಶತಮಾನಗಳ ಕಾಲ ಅದರಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಇಬ್ಬರ ನಡುವೆ, ಒಂದೊಂದು ಬಾರಿ ಒಬ್ಬೊಬ್ಬರಿಗೆ ಅನುಕೂಲಕರವೆನಿಸುವಂತಹ, ನಿರಂತರ ಘರ್ಷಣೆ ನಡೆಯುತ್ತಿತ್ತು. ಕೊನೆಗೆ, ಹದಿಮೂರನೆಯ ಶತಮಾನದಲ್ಲಿ, ಈ ವಿವಾದವು ಬಗೆಹರಿಸಲಾಗದ ಸ್ಥಿತಿ ತಲುಪಿತು. ಪೋಪ್ ಜಯಶಾಲಿಯಾದರೂ ಸ್ವಲ್ಪ ಸಮಯದಲ್ಲಿಯೇ ನೈತಿಕ ಅಧಿಕಾರವನ್ನು ಕಳೆದುಕೊಂಡ. ಪೋಪ್ ಮತ್ತು

ಪರಿಶುದ್ಧ ರೋಮ್ ಸಮ್ರಾಟ ಇಬ್ಬರೂ ಉಳಿದರು – ಪೋಪ್ ಇವತ್ತಿನವರೆಗೂ, ಸಮ್ರಾಟ ನೆಪೋಲಿಯನ್ ಕಾಲದವರೆಗೂ. ಆದರೆ ಪರಸ್ಪರರ ಅಧಿಕಾರವನ್ನು ಕುರಿತು ರೂಪಿಸಿದ ವ್ಯಾಪಕ ಮಧ್ಯಯುಗೀನ ಸಿದ್ಧಾಂತವು ಹದಿನೈದನೆಯ ಶತಮಾನದಲ್ಲಿ ಪರಿಣಾಮಕಾರಿಯಾಗಿ ಉಳಿಯಲಿಲ್ಲ. ಇದೆಯೆಂದು ಭಾವಿಸಲಾದ ಕ್ರೈಸ್ತ ಚಕ್ರಾಧಿಪತ್ಯದ ಐಕ್ಯವು ಮತಧರ್ಮೇತರ ವಲಯದಲ್ಲಿ ಫ್ರೆಂಚ್, ಸ್ಪಾನಿಶ್ ಮತ್ತು ಇಂಗ್ಲಿಷ್ ರಾಜಪ್ರಭುತ್ವಗಳ ಅಧಿಕಾರದಿಂದಾಗಿಯೂ, ಮತಧಾರ್ಮಿಕ ವಲಯದಲ್ಲಿ ಮತಧರ್ಮಸುಧಾರಣೆಯಿಂದಲೂ ನಶಿಸಿ ಹೋಯಿತು.

ಚಾರ್ಲ್ಸ್ ಮಹಾಶಯ ಮತ್ತವನ ಪರಿವಾರದ ಸ್ವಭಾವವನ್ನು ಕುರಿತು ಡಾ। ಗೆರ್‌ಹಾರ್ಡ್ ಸೀಲಿಗೆರ್ ಹೀಗೆ ಸಂಕ್ಷಿಪ್ತಗೊಳಿಸಿ ಹೇಳುತ್ತಾರೆ:[೨೧೩]

> ಚಾರ್ಲ್ಸ್‌ನ ಆಸ್ಥಾನದಲ್ಲಿ ಬಲಿಷ್ಠವಾದ ಜೀವನವಿಧಾನವು ಬೆಳೆಯಿತು. ಅದರಲ್ಲಿ ಉಜ್ವಲತೆ ಮತ್ತು ಪ್ರತಿಭೆಗಳಿದ್ದವು, ಜೊತೆಗೆ ಅನೈತಿಕವಾಗಿ ಕೂಡ. ಇದಕ್ಕೆ ಕಾರಣ ತನ್ನ ಸುತ್ತಲಿನ ಜನರನ್ನು ಆಸ್ಥಾನದಲ್ಲಿ ನೇಮಿಸಿಕೊಳ್ಳುವಾಗ ಜನರ ಸ್ವಭಾವದ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಅವನೇ ಮಾದರಿ ವ್ಯಕ್ತಿಯಾಗಿರಲಿಲ್ಲ, ಅವನು ಇಷ್ಟಪಟ್ಟ ಮತ್ತು ಅವನಿಗೆ ಉಪಯುಕ್ತವೆಂದು ಕಂಡುಬಂದ ಜನರಲ್ಲಿ ಸ್ವಚ್ಛಂದವು ವ್ಯಾಪಕವಾಗಿತ್ತು. ಅವನನ್ನು 'ಪರಿಶುದ್ಧ ಚಕ್ರವರ್ತಿ'ಯೆಂದು ಕರೆಯುತ್ತಿದ್ದರು, ಆದರೆ ಅವನ ಬದುಕು ಅತ್ಯಲ್ಪ ಪಾವಿತ್ರ್ಯವನ್ನು ಹೊಂದಿತ್ತು. ಅವನನ್ನು ಅಲ್‌ಕ್ಯೂಇನ್ ಹಾಗೆ ಕರೆಯುತ್ತಿದ್ದ, ಅವನು ಚಕ್ರವರ್ತಿಯ ಚೆಲುವೆ ಮಗಳಾದ ರೋಟ್ರಡ್‌ಳನ್ನು ಸದ್ಗುಣದ ಸಾಕಾರ ಎನುತ್ತಿದ್ದ; ಆದರೆ ಅವಳು ಹೆಂಡತಿಯಲ್ಲದಿದ್ದರೂ ಮರೈನ್‌ನ ಕೌಂಟ್ ರೋಡೆರಿಕ್‌ನಿಂದ ಒಬ್ಬ ಮಗನನ್ನು ಹೆತ್ತಿದ್ದಳು. ಚಾರ್ಲ್ಸ್ ಅನ್ನು ಮಗಳಂದಿರಿಂದ ಬೇರೆ ಮಾಡಲಾಗುತ್ತಿರಲಿಲ್ಲ, ಅವರು ಮದುವೆಯಾಗಲು ಅವನು ಅವಕಾಶ ಕೊಡುತ್ತಿರಲಿಲ್ಲ, ಹೀಗಾಗಿ ಅದರ ಪರಿಣಾಮಗಳನ್ನು ತಾಳಿಕೊಳ್ಳಬೇಕಾಗಿತ್ತು. ಅವನ ಇನ್ನೊಬ್ಬ ಮಗಳಾದ ಬೆರ್ತಾ ಕೂಡ ಸೈಂಟ್ ರಿಕ್ವಿಯೆರ್‌ನ ಆಬ್ಬಟ್ ಆಂಜಿಲ್‌ಬರ್ಟ್‌ನಿಂದ ಇಬ್ಬರು ಗಂಡು ಮಕ್ಕಳನ್ನು ಪಡೆದಿದ್ದಳು. ಹಾಗೆ ನೋಡಿದರೆ ಚಾರ್ಲ್ಸ್‌ನ ಆಸ್ಥಾನವು ಅನೀತಿಯುತ ಬದುಕಿನ ಕೇಂದ್ರವಾಗಿತ್ತು.

ಶಾರ್ಲಮೇನ್ ಒಬ್ಬ ಬಲಿಷ್ಠ ಬಾರ್ಬೇರಿಯನ್, ರಾಜಕೀಯವಾಗಿ ಅವನು ಚರ್ಚ್ ಜೊತೆ ಸಮೀಕೃತನಾಗಿದ್ದ, ಆದರೆ ವೈಯಕ್ತಿಕ ಪಾವಿತ್ರ್ಯದ ಬಗ್ಗೆ ಅಷ್ಟೊಂದು ತಲೆಕೆಡಿಸಿಕೊಂಡವನಲ್ಲ. ಅವನಿಗೆ ಓದು ಬರಹ ಗೊತ್ತಿರಲಿಲ್ಲ, ಆದರೆ ಅವನು ಒಂದು ಸಾಹಿತ್ಯಕ ನವೋದಯವನ್ನು ಆರಂಭಿಸಿದ. ಅವನ ಬದುಕು ಲಂಪಟತೆಯಿಂದ

---

೨೧೩. 'ಕೇಂಬ್ರಿಜ್ ಮಿಡ್ಯೆವಲ್ ಹಿಸ್ಟರಿ', ೨. ೬೬೩.

ಕೂಡಿತ್ತು, ತನ್ನ ಮಗಳಂದಿರ ಬಗ್ಗೆ ಅಸಮಂಜಸ ಸಲಿಗೆಯಿಂದ ಕೂಡಿದ್ದ, ಆದರೆ ತನ್ನ ಪ್ರಜೆಗಳಲ್ಲಿ ಪರಿಶುದ್ಧ ಬದುಕು ನೆಲೆಗೊಳ್ಳಲು ಪ್ರಯತ್ನಿಸಿದ. ತನ್ನ ತಂದೆ ಪೆಪಿನ್‌ನಂತೆಯೇ ಅವನೂ ಜರ್ಮನಿಯಲ್ಲಿ ತನ್ನ ಪ್ರಭಾವವನ್ನು ಹರಡಲು ಮತಪ್ರಚಾರಕ ನೆರವನ್ನು ಕೌಶಲದಿಂದ ಬಳಸಿಕೊಂಡ, ಆದರೆ ಪೋಪ್‌ರು ತನ್ನ ಆಜ್ಞೆಗಳನ್ನು ಪರಿಪಾಲಿಸುವಂತೆಯೂ ಎಚ್ಚರ ವಹಿಸಿದ. ಅವರೂ ಸ್ವಇಚ್ಛೆಯಿಂದಲೇ ಇದನ್ನು ಮಾಡಿದರು. ಅದಕ್ಕೆ ಕಾರಣ ರೋಮ್ ಒಂದು ಬರ್ಬರ ನಗರವಾಗಿಬಿಟ್ಟಿತ್ತು, ಅದರಲ್ಲಿ ಪೋಪ್‌ನ ವ್ಯಕ್ತಿಗತ ಬದುಕು ಅಪಾಯವನ್ನೆದುರಿಸುತ್ತಿತ್ತು, ಅವನಿಗೆ ಬಾಹ್ಯ ರಕ್ಷಣೆಯ ಆವಶ್ಯಕತೆಯಿತ್ತು, ಪೋಪ್‌ನ ಚುನಾವಣೆಯು ವ್ಯವಸ್ಥಿತ ಗುಂಪು ಘರ್ಷಣೆಯ ಮಟ್ಟಕ್ಕಿಳಿದಿತ್ತು. ೭೯೯ ರಲ್ಲಿ, ಸ್ಥಳಿಯ ಶತ್ರುಗಳು ಪೋಪ್‌ನನ್ನು ಹಿಡಿದು ಬಂಧನದಲ್ಲಿರಿಸಿ, ಅವನನ್ನು ಕುರುಡಾಗಿಸುವುದಾಗಿ ಬೆದರಿಸಿದರು. ಚಾರ್ಲ್ಸ್‌ನ ಜೀವಮಾನದಲ್ಲಿ ಒಂದು ಹೊಸ ವ್ಯವಸ್ಥೆಯೊಂದು ನೆಲೆಗೊಳ್ಳಬಹುದೆಂದು ಆಶಿಸಲಾಗಿತ್ತು, ಆದರೆ ಅವನ ಮರಣಾನಂತರ ಸಿದ್ಧಾಂತದ ಹೊರತಾಗಿ ಬೇರೇನೂ ಉಳಿಯಲಿಲ್ಲ.

ಚರ್ಚ್‌ನ ಲಾಭಗಳು, ಅದರಲ್ಲೂ ಪೋಪ್‌ನದು, ಪಶ್ಚಿಮ ಚಕ್ರಾಧಿಪತ್ಯದಲ್ಲಿಗಿಂತ ಹೆಚ್ಚು ಗಟ್ಟಿಯಾದವು. ಗ್ರೆಗರಿ ಮಹಾಶಯನ ಆಜ್ಞೆಯ ಪ್ರಕಾರ ಮತಧರ್ಮಪ್ರಚಾರಕರು ಇಂಗ್ಲಂಡ್ ಅನ್ನು ಮತಾಂತರಗೊಳಿಸಿದ್ದರು; ಸ್ಥಳೀಯ ಸ್ವಾಯತ್ತತೆಗೆ ಹೊಂದಿಕೊಂಡಿದ್ದ ಬಿಷಪ್‌ರಿದ್ದ ಅವಕಾಶಗಳಿಗಿಂತ ಹೆಚ್ಚಾಗಿ ಅದು ರೋಮ್‌ನ ಅಧೀನಕ್ಕೊಳಗಾಗಿತ್ತು. ಜರ್ಮನಿಯ ಮತಾಂತರವು ಬಹುವಾಗಿ ಇಂಗ್ಲಿಷ್ ಮತಪ್ರಚಾರಕನಾಗಿದ್ದ ಸಂತ ಬೋನಿಫೇಸ್ (೬೮೦–೭೫೪)ನ ಪ್ರಯತ್ನದಿಂದಾದುದು; ಅವನು ಚಾರ್ಲ್ಸ್ ಮಾರ್ಟೆನ್ ಮತ್ತು ಪೆಪಿನ್‌ರ ಸ್ನೇಹಿತನಾಗಿದ್ದ ಮತ್ತು ಪೋಪ್‌ಗೆ ಸಂಪೂರ್ಣ ವಿಧೇಯನಾಗಿದ್ದ. ಬೋನಿಫೇಸ್ ಜರ್ಮನಿಯಲ್ಲಿ ಅನೇಕ ಆಶ್ರಮಗಳನ್ನು ಸ್ಥಾಪಿಸಿದ; ಅವನ ಸ್ನೇಹಿತನಾಗಿದ್ದ ಸಂತ ಗಾಲ್ ಸ್ವಿಸ್ ಆಶ್ರಮವನ್ನು ಸ್ಥಾಪಿಸಿದ, ಅದು ಅವನ ಹೆಸರನ್ನೇ ಹೊಂದಿತ್ತು. ಕೆಲವು ವಿದ್ವಾಂಸರ ಪ್ರಕಾರ, ಬೋನಿಫೇಸ್ ಪೆಪಿನ್ ಅನ್ನು 'ಫಸ್ಟ್ ಬುಕ್ ಆಫ್ ಕಿಂಗ್ಸ್' ಗ್ರಂಥದ ಪ್ರಕಾರ ಒಬ್ಬ ರಾಜನನ್ನಾಗಿ ನೇಮಿಸಿದ.

ಸಂತ ಬೋನಿಫೇಸ್ ಡೇವನ್‌ಶೈರ್‌ನವನು, ಎಕ್ಸೆಟರ್ ಮತ್ತು ವಿಂಚೆಸ್ಟರ್‌ಗಳಲ್ಲಿ ವಿದ್ಯಾಭ್ಯಾಸ ಮಾಡಿದವನು. ಅವನು ೭೧೬ ರಲ್ಲಿ ಫ್ರಿಸಿಯಕ್ಕೆ ಹೋದ, ಆದರೆ ಬೇಗ ವಾಪಸ್ಸಾಗಬೇಕಾಯಿತು. ೭೧೭ ರಲ್ಲಿ ಅವನು ರೋಮ್‌ಗೆ ಹೋದ, ಮತ್ತು ೭೧೯ ರಲ್ಲಿ ಪೋಪ್ ಎರಡನೆಯ ಗ್ರೆಗರಿ ಜರ್ಮನ್‌ರನ್ನು ಮತಾಂತರಗೊಳಿಸಲು ಮತ್ತು ಐರಿಶ್ ಮತಪ್ರಚಾರಕರನ್ನೆದುರಿಸಲು ಅವನನ್ನು ಜರ್ಮನಿಗೆ ಕಳಿಸಿದ (ಅವನು ಈಸ್ಟರ್ ತೇದಿಯ ಬಗ್ಗೆ ಮತ್ತು ಸನ್ಯಾಸಮುಂಡನದ ಸ್ವರೂಪದ ಬಗ್ಗೆ

ತಪ್ಪು ಮಾಡಿದ್ದನೆಂಬುದನ್ನು ನೆನಪಿಸಿಕೊಳ್ಳಬಹುದು). ಅದರಲ್ಲಿ ಸಾಕಷ್ಟು ಯಶಸ್ಸು ಪಡೆದ ಮೇಲೆ ೭೨೨ ರಲ್ಲಿ ಅವನು ರೋಮ್‌ಗೆ ಹಿಂದಿರುಗಿದ, ೭೨೨ ರಲ್ಲಿ ಎರಡನೆಯ ಗ್ರೆಗರಿಯು ಅವನನ್ನು ಬಿಷಪ್‌ನನ್ನಾಗಿ ನೇಮಿಸಿದ; ಪೋಪ್ ಬಗ್ಗೆ ಅವನು ವಿಧೇಯತೆಯ ಪ್ರತಿಜ್ಞೆಯನ್ನು ಕೈಗೊಂಡ. ಚಾರ್ಲ್ಸ್ ಮಾರ್ಟೆಲ್‌ಗೆ ಪೋಪ್ ಒಂದು ಪತ್ರವನ್ನು ನೀಡಿ, ಧರ್ಮಭ್ರಷ್ಟತೆಯನ್ನು ದಮನಗೊಳಿಸುವಂತೆಯೂ ಕ್ರೈಸ್ತೇತರರರನ್ನು ಮತಾಂತರಗೊಳಿಸುವಂತೆಯೂ ಅದರಲ್ಲಿ ಸೂಚಿಸಿದ್ದ. ೭೩೨ ರಲ್ಲಿ ಅವನು ಚರ್ಚ್‌ಬಿಷಪ್ ಆದ; ೭೩೮ ರಲ್ಲಿ ಅವನು ರೋಮ್ ಅನ್ನು ಮೂರನೆಯ ಬಾರಿಗೆ ಸಂದರ್ಶಿಸಿದ. ೭೪೧ ರಲ್ಲಿ ಪೋಪ್ ಝಕಾರಿಯಾಸ್ ಪೋಪ್ ಪ್ರತಿನಿಧಿಯಾಗಿ (ಲೆಗಟ್) ನೇಮಿಸಿ, ಫ್ರಾಂಕ್ಲಿನ್ ಚರ್ಚ್ ಅನ್ನು ಪರಿಷ್ಕರಿಸಲು ಹೇಳಿದ. ಅವನು ಫುಲ್ಡ್‌ನ ಸನ್ಯಾಸಿಮಠ (ಆಬೆ) ಸ್ಥಾಪಿಸಿ, ಅದಕ್ಕೆ ಬೆನೆಡಿಕ್ಟೈನ್‌ನದಕ್ಕಿಂತ ಹೆಚ್ಚು ನಿಷ್ಠುರ ನಿಯಮಗಳನ್ನು ವಿಧಿಸಿದ. ಆನಂತರ ಅವನು, ನಮ್ಮದಲ್ಲದೆ ಬೇರೆ ಜಗತ್ತುಗಳೂ ಇವೆ ಎಂಬ ಅಭಿಪ್ರಾಯ ಹೊಂದಿದ್ದ ವರ್ಜಿಲ್ ಎಂಬ ಐರಿಶ್ ಬಿಷಪ್‌ನೊಡನೆ ಒಂದು ವಿವಾದದಲ್ಲಿ ಸಿಲುಕಿಕೊಂಡ, ಆದರೂ ಆಮೇಲೆ ಅವನನ್ನು ಸಂತಪದವಿಗೇರಿಸಲಾಯಿತು. ೭೫೪ ರಲ್ಲಿ ಫ್ರಿಸಿಯಕ್ಕೆ ವಾಪಸ್ಸಾದ ಮೇಲೆ ಬೋನಫೇಸ್ ಮತ್ತು ಅವನ ಜೊತೆಗಾರರರನ್ನು ಕ್ರೈಸ್ತೇತರರು ಕೊಲೆಗೈದರು. ಅವನ ಪ್ರಯತ್ನದಿಂದಾಗಿಯೇ ಜರ್ಮನ್ ಕ್ರೈಸ್ತವು ಪೋಪ್ ಅಧೀನಕ್ಕೆ ಬಂತು, ಆದರೆ ಐರಿಶ್ ಅಲ್ಲ.

ಇಂಗ್ಲಿಷ್ ಆಶ್ರಮಗಳು, ಅದರಲ್ಲಿಯೂ ಯಾರ್ಕ್‌ಶೈರ್‌ನವು, ಆ ಕಾಲದಲ್ಲಿ ಬಹು ಪ್ರಾಮುಖ್ಯವನ್ನು ಹೊಂದಿದ್ದವು. ರೋಮನ್ ಬ್ರಿಟನ್‌ನಲ್ಲಿ ಇದ್ದ ನಾಗರಿಕತೆಯು ಕಣ್ಮರೆಯಾಗಿತ್ತು, ಕ್ರೈಸ್ತ ಮತಪ್ರಚಾರಕರು ಪರಿಚಯಿಸಿದ್ದ ಹೊಸ ನಾಗರಿಕತೆಯು ಬೆನೆಡಿಕ್ಟೈನ್ ಆಬೆಗಳ ಸುತ್ತ ಗಿರಕಿ ಹೊಡೆದವು, ಅವು ನೇರವಾಗಿ ಪ್ರತಿಯೊಂದಕ್ಕೂ ರೋಮ್ ಮೇಲೆ ಆಶ್ರಯಿಸಿದ್ದವು. ವಂದನೀಯ ಬೀಡೆ ಜಾರೋದ ಒಬ್ಬ ಸನ್ಯಾಸಿ. ಅವನ ಶಿಷ್ಯ ಯಾರ್ಕ್‌ನ ಮೊದಲ ಬಿಷಪ್ ಆದ ಎಕ್‌ಬರ್ಟ್ ಪ್ರಧಾನ ಚರ್ಚ್ (ಕ್ಯಾಥಿಡ್ರಲ್) ಶಾಲೆಯೊಂದನ್ನು ಸ್ಥಾಪಿಸಿದ, ಆಲ್ಯೂಸಿನ್ ಅಲ್ಲಿಯೇ ಶಿಕ್ಷಣ ಪಡೆದದ್ದು.

ಆ ಕಾಲದ ಸಂಸ್ಕೃತಿಯ ದೃಷ್ಟಿಯಿಂದ ಅಲ್ಯೂಸಿನ್ ಒಬ್ಬ ಮುಖ್ಯ ವ್ಯಕ್ತಿ. ೭೮೦ ರಲ್ಲಿ ಅವನು ರೋಮ್‌ಗೆ ಹೋದ, ತನ್ನ ಪ್ರಯಾಣಕಾಲದಲ್ಲಿ ಪಾರ್ನದಲ್ಲಿ ಶಾರ್ಲಮೇನ್ ಅನ್ನು ಭೇಟಿಯಾದ. ಫ್ರಾಂಕ್‌ರಿಗೆ ಲ್ಯಾಟಿನ್ ಕಲಿಸಲು ಹಾಗೂ ರಾಜಕುಟುಂಬದವರಗೆ ವಿದ್ಯೆ ಹೇಳಿಕೊಡಲೆಂದು ಅವನನ್ನು ಚಕ್ರವರ್ತಿ ನೇಮಿಸಿಕೊಂಡ. ಅವನು ತನ್ನ ಬದುಕಿನ ಸಾಕಷ್ಟು ಸಮಯವನ್ನು ಬೋಧನೆಯಲ್ಲಿಯೂ ಶಾಲೆಗಳ ಸ್ಥಾಪನೆಯಲ್ಲಿಯೂ ಶಾರ್ಲಮೇನ್‌ನ ಆಸ್ಥಾನದಲ್ಲಿ ಕಳೆದ. ತನ್ನ ಕೊನೆಗಾಲದಲ್ಲಿ ಅವನು ಟೂರ್ಸ್‌ನಲ್ಲಿ ಸಂತ ಮಾರ್ಟಿನ್

ಮಠಮುಖ್ಯಸ್ಥನಾಗಿದ್ದ. ಅವನು ಅನೇಕ ಪುಸ್ತಕಗಳನ್ನು ಬರೆದ; ಅವುಗಳಲ್ಲಿ ಯಾರ್ಕ್‌ನಲ್ಲಿ ಚರ್ಚ್ ಇತಿಹಾಸವನ್ನು ಪದ್ಯರೂಪದಲ್ಲಿ ಬರೆದದ್ದೂ ಸೇರಿದೆ. ಅವಿದ್ಯಾವಂತನಾಗಿದ್ದರೂ ಚಕ್ರವರ್ತಿಯು ಸಂಸ್ಕೃತಿಯ ಮಹತ್ವದ ಬಗ್ಗೆ ಸಾಕಷ್ಟು ಶ್ರದ್ಧೆಯಿಟ್ಟಿದ್ದವನು, ಸ್ವಲ್ಪ ಕಾಲ ಆ ಕಾಲದ ಕತ್ತಲೆಯನ್ನು ಕಡಿಮೆ ಮಾಡಿದ್ದ. ಆದರೆ ಈ ದಿಸೆಯಲ್ಲಿನ ಅವನ ಕೆಲಸ ಅಲ್ಪಾಯುಷ್ಯದ್ದು. ಯಾರ್ಕ್‌ಶೈರ್‌ನ ಸಂಸ್ಕೃತಿಯನ್ನು ಸ್ವಲ್ಪ ಕಾಲ ಡೇನ್‌ರು ನಾಶಗೊಳಿಸಿದ್ದರು, ಫ್ರಾನ್ಸ್‌ನದನ್ನು ನಾರ್ಮನ್‌ರು ಹಾಳುಗೆಡವಿದ್ದರು. ಸಾರಾಸೆನ್‌ರು ಇಟಲಿಯನ್ನು ಆಕ್ರಮಿಸಿಕೊಂಡರು, ಸಿಸಿಲಿಯನ್ನು ಗೆದ್ದರು, ಅಲ್ಲದೆ ೮೪೬ ರಲ್ಲಿ ರೋಮ್‌ನ ಮೇಲೆಯೂ ದಾಳಿ ನಡೆಸಿದರು. ಒಟ್ಟಾರೆ, ಪಶ್ಚಿಮ ಕ್ರೈಸ್ತಜಗತ್ತಿನಲ್ಲಿ ಹತ್ತನೆಯ ಶತಮಾನವು ಗಾಢಾಂಧಕಾರದ ಯುಗವಾಗಿತ್ತು; ಒಂಬತ್ತನೆಯದರಲ್ಲಿ ಇಂಗ್ಲಿಷ್ ಮತಧರ್ಮಪ್ರಚಾರಕರು ಮತ್ತು ಆಶ್ಚರ್ಯಕರ ವ್ಯಕ್ತಿಯಾಗಿದ್ದ ಜೊಹಾನ್ಸ್ ಸ್ಕಾಟಸ್ ವಿಮುಕ್ತಿಗೊಳಿಸಿದರು, ಅವರ ಬಗ್ಗೆ ಇಷ್ಟರಲ್ಲಿಯೇ ಮತ್ತಷ್ಟು ಹೇಳುತ್ತೇನೆ.

ಶಾರ್ಲಮೇನ್‌ನ ಸಾವು ಮತ್ತು ಅವನ ಚಕ್ರಾಧಿಪತ್ಯದ ವಿಭಜನೆಯ ಬಳಿಕ ಕಾರೋಲಿಂಗಿಯನ್ ಅಧಿಕಾರವು, ಮೊದಲಿಗೆ, ಪೋಪ್ ಅಧಿಕಾರಕ್ಕೆ ಅನುಕೂಲಕರವಾಗಿತ್ತು. ಪೋಪ್ ಮೊದಲನೆಯ ನಿಕೋಲಾಸ್ (೮೫೮–೬೭) ಹಿಂದೆಂದಿಗಿಂತಲೂ ಅತ್ಯಂತ ಹೆಚ್ಚಿನ ಅಧಿಕಾರವನ್ನು ಪಡೆಯುವಲ್ಲಿ ಯಶಸ್ವಿಯಾದ. ಪೂರ್ವ ಮತ್ತು ಪಶ್ಚಿಮ ಸಾಮ್ರಾಜ್ಯಗಳ ಚಕ್ರವರ್ತಿಗಳ ಮತ್ತು ಫ್ರಾನ್ಸ್‌ನ ಬಾಲ್ಡ್ ರಾಜ ಚಾರ್ಲ್ಸ್ ಹಾಗೂ ಲೊರೇನ್‌ನ ರಾಜ ಎರಡನೆಯ ಲೋಥಾರ್ ಮತ್ತು ಬಹುತೇಕ ಎಲ್ಲ ದೇಶಗಳ ಬಿಷಪ್‌ರ ಜೊತೆ ಜಗಳವಾಡಿದ; ತನ್ನ ಬಹುತೇಕ ಜಗಳಗಳಲ್ಲಿ ಅವನು ಗೆಲವು ಸಾಧಿಸಿದ. ಅನೇಕ ಪ್ರದೇಶಗಳ ಪುರೋಹಿತವರ್ಗವು ಸ್ಥಳಿಯ ರಾಜರುಗಳ ಅಧೀನದಲ್ಲಿದ್ದರು, ಈ ಪರಿಸ್ಥಿತಿಯನ್ನು ಹೋಗಲಾಡಿಸಲು ಅವನು ಪ್ರಯತ್ನಶೀಲನಾದ. ಅವನ ಎರಡು ಬಹು ದೊಡ್ಡ ವಿವಾದಗಳೆಂದರೆ ಎರಡನೆಯ ಲೋಥಾರ್‌ನ ವಿಚ್ಛೇದನ ಮತ್ತು ಕಾನ್‌ಸ್ಟಾಂಟಿನೋಪಲ್‌ನ ಪ್ರವರ್ತಕ ಇಗ್ನೇಷಿಯಸ್‌ನನ್ನು ಅಂಗೀಕಾರಾರ್ಹವಲ್ಲದ ರೀತಿಯಲ್ಲಿ ಪದಚ್ಯುತಿಗೊಳಿಸಿದ್ದು. ಮಧ್ಯಯುಗದಲ್ಲೆಲ್ಲ ಚರ್ಚ್‌ನ ಅಧಿಕಾರವು ರಾಜಕುಟುಂಬಗಳ ವಿಚ್ಛೇದನಕ್ಕೆ ಸಂಬಂಧಿಸಿತ್ತು. ರಾಜರುಗಳು ತಲೆಹೋಕ ರಾಗದ್ವೇಷಗಳ ವ್ಯಕ್ತಿಗಳಾಗಿದ್ದರು, ಅವಿಚ್ಛೇದ (ಇನ್‌ಡಿಸಲ್ಯುಬಿಲಿಟಿ) ಸಿದ್ಧಾಂತವು ಸಾಮಾನ್ಯ ಪ್ರಜೆಗಳಿಗೆ ಮಾತ್ರ ಅನ್ವಯಿಸುವಂತಹುದೆಂದು ಅವರು ಭಾವಿಸಿದ್ದರು. ಅದರೆ ಚರ್ಚ್ ಮಾತ್ರವೇ ಮದುವೆಯನ್ನು ಊರ್ಜಿತಗೊಳಿಸಬಲ್ಲದ್ದಾಗಿತ್ತು, ಚರ್ಚ್ ಏನಾದರೂ ಮದುವೆಯನ್ನು ಅನೂರ್ಜಿತಗೊಳಿಸಿದರೆ ಉತ್ತರಾಧಿಕಾರಿತ್ವದ ವಿವಾದ ಮತ್ತು ರಾಜವಂಶ ಕದನಗಳು ಉದ್ಭವಿಸುವ ಸಂದರ್ಭಗಳಿದ್ದುವು. ಹೀಗಾಗಿ

ರಾಜವಿವಾಹವಿಚ್ಛೇದನ ಮತ್ತು ಅಕ್ರಮ ಮದುವೆಗಳನ್ನು ವಿರೋಧಿಸುವಲ್ಲಿ ಚರ್ಚ್‌ನ ಸ್ಥಾನ ಗಟ್ಟಿಯಾಗಿತ್ತು. ಇಂಗ್ಲಂಡ್‌ನಲ್ಲಿ ಈ ಗಟ್ಟಿತನವನ್ನು ಕಳೆದುಕೊಂಡದ್ದು ಎಂಟನೆಯ ಹೆನ್ರಿ ಕಾಲದಲ್ಲಿಯಾದರೂ ಎಂಟನೆಯ ಎಡ್ವರ್ಡ್‌ನಿಂದ ಪುನಶ್ಚೇತನಗೊಂಡಿತು.

ಎರಡನೆಯ ಲೋಥಾರ್ ವಿಚ್ಛೇದನವನ್ನು ಬಯಸಿದಾಗ ಅವನ ರಾಜ್ಯದ ಪುರೋಹಿತವರ್ಗವು ಒಪ್ಪಿಕೊಂಡಿತು. ಆದರೆ ಪೋಪ್ ನಿಕೋಲಾಸ್ ಇದಕ್ಕೆ ಅನುಮತಿಸಿದ್ದ ಬಿಷಪ್‌ರನ್ನು ಪದಚ್ಯುತಗೊಳಿಸಿದ್ದಲ್ಲದೆ, ರಾಜನ ವಿಚ್ಛೇದನ ಮನವಿಯನ್ನು ಪೂರ್ಣವಾಗಿ ತಿರಸ್ಕರಿಸಿದ. ಲೋಥಾರ್‌ನ ಸೋದರ ಚಕ್ರವರ್ತಿ ಎರಡನೆಯ ಲೂಯಿಸ್ ಪೋಪ್‌ನನ್ನು ಬೆದರಿಸಲು ರೋಮ್ ಮೇಲೆ ಆಕ್ರಮಣ ಮಾಡಲು ನೋಡಿದ; ಆದರೆ ಕಂದಾಚಾರದ ಭಯ ಆವರಿಸಿ ವಾಪಸಾದ. ಕೊನೆಯಲ್ಲಿ, ಪೋಪ್‌ನ ನಿರ್ಧಾರ ಉಳಿಯಿತು.

ಪ್ರವರ್ತಕ ಇಗ್ನೇಷಿಯಸ್‌ನ ಕೆಲಸವು ಕುತೂಹಲದಾಯಕವಾದುದು, ಪೂರ್ವದಲ್ಲಿ ಪೋಪ್ ತನ್ನ ನಿರ್ಧಾರವನ್ನು ಬದಲಾಯಿಸಲಾರನೆಂಬುದು. ಈವರೆಗೆ ಸಾಮಾನ್ಯನೆನಿಸಿದ್ದ ಇಗ್ನೇಷಿಯಸ್‌ನಿಗೆ ಅವನ ಸ್ಥಾನಕ್ಕೆ ಪದೋನ್ನತಿ ನೀಡಲಾಯಿತು. ಬೈಝಾಂಟಿಯನ್ ಸರ್ಕಾರವು ಈ ಕ್ರಮಕ್ಕೆ ಅನುಮತಿ ನೀಡಬೇಕೆಂದು ಕೇಳಿಕೊಂಡಿತು. ಈ ಪ್ರಕ್ರಿಯೆಯ ಬಗ್ಗೆ ವಿಚಾರಿಸಲು ಅವನು ಇಬ್ಬರು ಪ್ರತಿನಿಧಿಗಳನ್ನು ಕಳಿಸಿಕೊಟ್ಟ; ಕಾನ್‌ಸ್ಟಾಂಟಿನೋಪಲ್‌ಗೆ ಬಂದಾಗ, ಅವರಿಗೆ ಬೆದರಿಕೆಯೊಡ್ಡಲಾಯಿತು, ಹೀಗಾಗಿ ಅವರು ಒಪ್ಪಿಗೆ ನೀಡಿದರು. ಸ್ವಲ್ಪ ಕಾಲ ಈ ವಿಷಯವನ್ನು ಪೋಪ್‌ನಿಂದ ಮರೆಮಾಚಿದರು, ಆದರೆ ಇದು ತಿಳಿದಾಗ ಅವನು ಕಠಿಣ ತೀರ್ಮಾನವನ್ನು ತೆಗೆದುಕೊಂಡ. ರೋಮ್‌ನಲ್ಲಿ ಪರಿಷತ್ತಿನ ಸಮಾವೇಶವನ್ನು ಕರೆದು ಈ ಪ್ರಶ್ನೆಯನ್ನು ಪರಿಶೀಲಿಸಲು ಕೇಳಿಕೊಂಡ. ತನ್ನ ಪ್ರತಿನಿಧಿಯೊಬ್ಬನನ್ನು ಬಿಷಪ್‌ಗಿರಿಯಿಂದ, ಜೊತೆಗೆ ಫೋಟಿಯಸ್‌ನನ್ನು ಸ್ಥಾಪಿಸಿದ್ದ ಸಿರಾಕ್ಯೂಸ್‌ನ ಆರ್ಚ್‌ಬಿಷಪ್‌ನನ್ನು ಪದಚ್ಯುತಿಗೊಳಿಸಿದ. ಫೋಟಿಯಸ್‌ಗೆ ಶಾಪವಿತ್ತ, ತನ್ನನ್ನು ವಿರೋಧಿಸಿದ್ದಕ್ಕಾಗಿ ಪಾದ್ರಿ ದೀಕ್ಷಾಸ್ನಾನ ಕೊಟ್ಟವರೆಲ್ಲರನ್ನೂ ಪದಚ್ಯುತಗೊಳಿಸಿದ. ಚಕ್ರವರ್ತಿ ಮೂರನೆಯ ಮೈಕೇಲ್ ಕೆಂಡಾಮಂಡಲನಾಗಿ ಪೋಪ್‌ಗೆ ಕೋಪೋದ್ರಿಕ್ತ ಪತ್ರವೊಂದನ್ನು ಬರೆದ, ಅದಕ್ಕೆ ಪೋಪ್ ಹೀಗೆ ಉತ್ತರಿಸಿದ: 'ರಾಜ ಪುರೋಹಿತರು ಮತ್ತು ಚಕ್ರವರ್ತಿ ಪೋಪ್‌ರ ಕಾಲ ಮುಗಿದುಹೋಯಿತು, ಕ್ರೈಸ್ತವು ಎರಡು ಕರ್ತವ್ಯಗಳನ್ನೂ ವಿಘಟನೆಗೊಳಿಸಿದೆ, ಕ್ರೈಸ್ತ ಚಕ್ರವರ್ತಿಗಳಿಗೆ ಚಿರಂತನ ಬದುಕಿನ ಕಾರಣ ಪೋಪ್‌ರ ನೆರವು ಬೇಕು, ಆದರೆ ಐಹಿಕ ವಿಷಯಗಳ ಹೊರತು ಪೋಪ್‌ರಿಗೆ ಚಕ್ರವರ್ತಿಯ ಹಂಗು ಇಲ್ಲ.' ಪೋಟಿಯಸ್ ಮತ್ತು ಚಕ್ರವರ್ತಿಯು ಸೇರಿ ಪರಿಷತ್ತಿನ ಸಮಾವೇಶವೊಂದನ್ನು ಕರೆದರು; ಅದು ಪೋಪ್‌ನನ್ನು ಬಹಿಷ್ಕರಿಸಿ ರೋಮನ್ ಚರ್ಚ್ ಧರ್ಮಭ್ರಷ್ಟವೆಂದು ಘೋಷಿಸಿತು. ಇದಾದ ಸ್ವಲ್ಪ ಕಾಲದಲ್ಲಿಯೇ ಮೂರನೆಯ

ಮೈಕೇಲ್‌ನನ್ನು ಕೊಲೆಗೈಯಲಾಯಿತು. ಅವನ ನಂತರ ಬಂದ ಬೇಸಿಲ್ ಇಗ್ನೇಷಿಯಸ್ ಅನ್ನು ಪುನಃಸ್ಥಾಪಿಸಿ ಈ ವಿಷಯದಲ್ಲಿನ ಪೋಪ್ ಅಧಿಕಾರದ ಸೀಮೆಯನ್ನು ಸ್ಪಷ್ಟಗೊಳಿಸಿದ. ಇದು ನಿಕೋಲಾಸ್‌ನ ಸಾವಿನ ಸ್ವಲ್ಪ ಸಮಯದಲ್ಲೇ ನಡೆಯಿತು; ಇದಕ್ಕೆಲ್ಲ ಕಾರಣ ಅರಮನೆ ಕ್ರಾಂತಿಗಳ ಆಕಸ್ಮಿಕವೆಂದು ಹೇಳಬಹುದು. ಇಗ್ನೀಷಿಯಸ್‌ನ ಮರಣಾನಂತರ ಫೋಟಿಯಸ್ ಮತ್ತೆ ಪ್ರವರ್ತಕನಾದ; ಇದರಿಂದ ಪೂರ್ವ ಮತ್ತು ಪಶ್ಚಿಮ ಚರ್ಚ್‌ಗಳ ನಡುವಣ ಕಂದಕ ಮತ್ತಷ್ಟು ಅಗಲವಾಯಿತು. ಹೀಗಾಗಿ ನಿಕೋಲಾಸ್‌ನ ಧೋರಣೆಯು ದೀರ್ಘಾವಧಿಯ ಗೆಲವೆಂದೇನೂ ಹೇಳಲಾಗುವುದಿಲ್ಲ.

ನಿಕೋಲಾಸ್ ತನ್ನ ನಿರ್ಧಾರವನ್ನು ರಾಜರ ಮೇಲೆ ಹೇರುವುದಕ್ಕಿಂತಲೂ ಹೆಚ್ಚಾಗಿ ಬಿಷಪ್‌ವರ್ಗದ ಮೇಲೆ ಹೇರುವುದರಲ್ಲಿ ಕಷ್ಟವನ್ನೆದುರಿಸಿದ. ಆರ್ಚ್‌ಬಿಷಪ್‌ರು ತಾವೇ ದೊಡ್ಡ ಮನುಷ್ಯರೆಂದು ತಿಳಿದಿದ್ದರು, ಹೀಗಾಗಿ ಅವರು ಮತಧಾರ್ಮಿಕ ದೊರೆಯ ಬಗ್ಗೆ ವಿಧೇಯತೆಯಿಂದ ನಡೆಯುವುದಕ್ಕೆ ಹಿಂದುಮುಂದು ನೋಡುತ್ತಿದ್ದರು. ಆದರೆ ಬಿಷಪ್‌ರು ತಮ್ಮ ಅಸ್ತಿತ್ವಕ್ಕಾಗಿ ಪೋಪ್‌ಗೆ ಆಭಾರಿಯಾಗಿರಬೇಕೆಂಬ ನಿಲವನ್ನು ತಾಳಿದ್ದ, ತಾನು ಬದುಕಿರುವವರೆಗೆ ಈ ನಿಲವು ವ್ಯಾಪಕವಾಗಿಸುವುದರಲ್ಲಿ ಯಶಸ್ವಿಯೂ ಆಗಿದ್ದ. ಈ ಶತಮಾನಗಳುದ್ದಕ್ಕೂ ಬಿಷಪ್‌ರನ್ನು ಹೇಗೆ ನೇಮಿಸಬೇಕು ಎಂಬ ಬಗ್ಗೆ ಸಂಶಯಗಳಿದ್ದವು. ಮೂಲತಃ ಕ್ಯಾಥಿಡ್ರಲ್ ನಗರದ ಮತಧಾರ್ಮಿಕರ ಅಭಿಪ್ರಾಯದ ಮೇರೆಗೆ ಅವರನ್ನು ಆಯ್ಕೆ ಮಾಡಲಾಗುತ್ತಿತ್ತು; ಆನಂತರ ನೆರೆಹೊರೆಯ ಬಿಷಪ್‌ರ ಮತಧಾರ್ಮಿಕ ಸದಸ್ಸು ಬಹುತೇಕ ತೀರ್ಮಾನಿಸುವಂತಾಯಿತು; ಆನಂತರ ಕೆಲವೊಮ್ಮೆ ರಾಜನೇ ಈ ಕೆಲಸ ಮಾಡುತ್ತಿದ್ದ; ಕೆಲವೊಮ್ಮೆ ಪೋಪ್ ನೇಮಿಸುತ್ತಿದ್ದ. ಗಂಭಿರ ಕಾರಣಗಳಿಗಾಗಿ ಬಿಷಪ್‌ರನ್ನು ಪದಚ್ಯುತಗೊಳಿಸಬಹುದಾಗಿತ್ತಾದರೂ ಪೋಪ್ ವಿಚಾರಣೆ ನಡೆಸಬೇಕೋ ಅಥವಾ ಪ್ರಾಂತೀಯ ಮತಧಾರ್ಮಿಕ ಸದಸ್ಸೋ ಎಂಬ ಬಗ್ಗೆ ಎಂಬದು ಸ್ಪಷ್ಟವಿಲ್ಲ. ಈ ಎಲ್ಲ ಅನಿಶ್ಚಿತತೆಗಳು ಒಂದು ಸ್ಥಾನದ ಅಧಿಕಾರವು ಅದನ್ನು ಹೊಂದಿದವರ ಸಾಮರ್ಥ್ಯ ಮತ್ತು ಕೌಶಲಗಳನ್ನು ಅವಲಂಬಿಸಿರುತ್ತಿತ್ತು. ನಿಕೋಲಾಸ್ ಪೋಪ್ ಅಧಿಕಾರವನ್ನು ಅತ್ಯಂತ ವಿಶಾಲಗೊಳಿಸಿದ, ಅದಕ್ಕೆ ಆಗ ಅವಕಾಶವಿತ್ತು, ಅವನ ಉತ್ತರಾಧಿಕಾರಿಗಳ ಕಾಲದಲ್ಲಿ ಮತ್ತೆ ಅದು ಪಾತಾಳಕ್ಕಿಳಿಯಿತು.

ಹತ್ತನೆಯ ಶತಮಾನದಲ್ಲಿ ಪೋಪ್ ಅಧಿಕಾರವು ಸಂಪೂರ್ಣವಾಗಿ ಸ್ಥಳೀಯ ರೋಮನ್ ಶ್ರೀಮಂತಪ್ರಭುತ್ವದ ನಿಯಂತ್ರಣದಲ್ಲಿತ್ತು. ಆಗಿನ್ನೂ ಪೋಪ್ ಚುನಾವಣೆಯ ಕುರಿತ ನಿಗದಿತ ನಿಯಮಗಳಿರಲಿಲ್ಲ; ಕೆಲವೊಮ್ಮೆ ಅವರ ಜನಪ್ರಿಯತೆಯನ್ನಾಧರಿಸಿ ಮತ್ತೆ ಕೆಲವೊಮ್ಮೆ ರಾಜರ ಅಥವಾ ಚಕ್ರವರ್ತಿಗಳ ಬೆಂಬಲದಿಂದ ಆ ಸ್ಥಾನಕ್ಕೇರುತ್ತಿದ್ದರು; ಹತ್ತನೆಯ ಶತಮಾನದಲ್ಲಿ ಕೆಲವೊಮ್ಮೆ

ರೋಮ್‌ನ ಸ್ಥಳೀಯ ನಾಗರಿಕ ಅಧಿಕಾರ ಹೊಂದಿದ್ದವರ ಬೆಂಬಲದಿಂದ. ಈ ಕಾಲದಲ್ಲಿ ರೋಮ್, ಗ್ರೆಗರಿ ಮಹಾಶಯನ ಕಾಲದಲ್ಲಿದ್ದಂತೆಯೇ ನಾಗರಿಕ ನಗರವಾಗಿರಲಿಲ್ಲ. ಕೆಲವು ಬಾರಿ ಗುಂಪುಘರ್ಷಣೆಗಳು ನಡೆಯುತ್ತಿದ್ದವು; ಮತ್ತೆ ಕೆಲವು ಸಲ ಶ್ರೀಮಂತ ಕುಟುಂಬವೊಂದು ಹಿಂಸೆ ಮತ್ತು ಲಂಚಗಳಿಂದ ನಿಯಂತ್ರಣವನ್ನು ಸಾಧಿಸಿಕೊಳ್ಳುತ್ತಿತ್ತು. ಆ ಕಾಲದ ಪಶ್ಚಿಮ ಯೂರೋಪ್‌ನ ಅವ್ಯವಸ್ಥೆ ಮತ್ತು ದೌರ್ಬಲ್ಯಗಳು ಎಷ್ಟು ತೀವ್ರವಾಗಿದ್ದುವೆಂದರೆ, ಕ್ರೈಸ್ತಜಗತ್ತು ಸಂಪೂರ್ಣ ವಿನಾಶ ಹೊಂದುವುದೆಂದು ತೋರಬಹುದಾಗಿತ್ತು. ಚಕ್ರವರ್ತಿ ಮತ್ತು ಫ್ರಾನ್ಸ್‌ನ ರಾಜರು – ತಮ್ಮ ಕಾಲದ ಹೆಸರಿಗೆ ಮಾತ್ರ ತಮ್ಮ ಆಶ್ರಿತರಾಗಿದ್ದ ಊಳಿಗಮಾನ್ಯ ಬಲಿಷ್ಠರಿಂದಾಗಿ – ತಮ್ಮ ಪ್ರದೇಶಗಳಲ್ಲಿ ನಿರ್ಮಿತವಾದ ಅನಾಯಕತ್ವವನ್ನು ಹತ್ತಿಕ್ಕುವ ಸಾಮರ್ಥ್ಯ ಹೊಂದಿರಲಿಲ್ಲ. ಹಂಗೇರಿಯನ್‌ರು ಉತ್ತರ ಇಟಲಿಯ ಮೇಲೆ ದಾಳಿ ಮಾಡಿದರು. ೯೨೨ ರಲ್ಲಿ ನಾರ್ಮಂಡಿಯನ್ನಿತ್ತು ಅವರನ್ನು ಕ್ರೈಸ್ತರನ್ನಾಗಿಸುವವರೆಗೂ ನಾರ್ಮನ್‌ರು ಫ್ರೆಂಚ್ ಕರಾವಳಿಯನ್ನು ಲೂಟಿ ಮಾಡಿದರು. ಆದರೆ ಇಟಲಿ ಮತ್ತು ದಕ್ಷಿಣ ಫ್ರಾನ್ಸ್‌ಗಳಲ್ಲಿದ್ದ ದೊಡ್ಡ ಅಪಾಯವೆಂದರೆ, ಮತಾತರಗೊಳಿಸಲಾಗದಿದ್ದ ಹಾಗೂ ಚರ್ಚ್ ಬಗ್ಗೆ ಗೌರವ ತರದಿದ್ದ ಸಾರಾಸೆನ್‌ರಿಂದಾದುದು. ಒಂಬತ್ತನೆಯ ಶತಮಾನದ ಕೊನೆಯ ಹೊತ್ತಿಗೆ ಅವರು ಸಿಸಿಲಿಯನ್ನು ಸಂಪೂರ್ಣವಾಗಿ ಗೆದ್ದರು; ಅವರನ್ನು ನೇಪಲ್ಸ್ ಬಳಿಯ ಗಾರಿಗ್ಲಿಯಾನೋ ನದಿಯ ದಡದಲ್ಲಿ ನೆಲೆಗೊಳಿಸಲಾಯಿತು. ಅವರು ಮಾಂಟೆ ಕ್ಯಾಸಿನೋ ಮತ್ತಿತರ ದೊಡ್ಡ ಆಸ್ರಮಗಳನ್ನು ನಾಶಮಾಡಿದರು; ಅವರು ಪ್ರಾವೆನ್ಸ್‌ನ ಕರಾವಳಿಯಲ್ಲಿ ಒಂದು ನೆಲೆಯನ್ನು ಹೊಂದಿದ್ದರು; ಅಲ್ಲಿಂದಲೇ ಅವರು ರೋಮ್ ಮತ್ತು ಉತ್ತರದ ನಡುವಣ ವಾಹನಗಳ ಓಡಾಟವನ್ನು ನಿಲ್ಲಿಸಿ ಇಟಲಿ ಮತ್ತು ಆಲ್ಪೈನ್ ಕಣವೆಗಳ ಮೇಲೆ ದಾಳಿ ಮಾಡಿದರು.

ಸಾರಾಸೆನ್‌ರು ಇಟಲಿಯನ್ನು ಗೆದ್ದದ್ದನ್ನು ಪೂರ್ವ ಚಕ್ರಾಧಿಪತ್ಯವು ತಡೆಯಿತು, ಅದು ಗಾರಿಗ್ಲಿಯಾನೋದ ಸಾರಾಸೆನ್‌ರನ್ನು ೯೧೫ ರಲ್ಲಿ ಹತ್ತಿಕ್ಕಿತು. ಆದರೆ ಅದು, ಜಸ್ಟಿನಿಯನ್ ವಿಜಯದಲ್ಲಿ ಮಾಡಿದಂತೆ, ರೋಮ್ ಅನ್ನು ಆಳುವಷ್ಟು ಬಲಿಷ್ಠವಾಗಿರಲಿಲ್ಲ; ಪೋಪ್ ಆಡಳಿತವು ಸುಮಾರು ಒಂದು ಶತಮಾನ ಕಾಲ ರೋಮನ್ ಶ್ರೀಮಂತಪ್ರಭುತ್ವಕ್ಕೋ ಟಸ್ಕ್ಯುಲಮ್ ಕೌಂಟ್‌ರಿಗೋ ಲಾಭದಾಯಕವಾಯಿತು. ಹತ್ತನೆಯ ಶತಮಶನದ ಆದಿಭಾಗದಲ್ಲಿ ಅತ್ಯಂತ ಬಲಿಷ್ಠ ರೋಮನ್‌ರು ಎಂದರೆ 'ಸೆನೇಟರ್' ಥಿಯೋಫೈಲಾಕ್ಟ್ ಮತ್ತವನ ಮಗಳು ಮರೋಜ಼ಿಯ, ಅವರ ಕುಟುಂಬದಲ್ಲಿ ಪೋಪ್ ಅಧಿಕಾರವು ಹೆಚ್ಚು ಕಡಿಮೆ ಆನುವಂಶಿಕವಾಯಿತು. ಮರೋಜ಼ಿಯ ಒಬ್ಬನಾದ ಮೇಲೊಬ್ಬನಂತೆ ಅನೇಕ ಗಂಡಂದಿರನ್ನು ಮತ್ತು ಲೆಕ್ಕವಿಲ್ಲದಷ್ಟು ಪ್ರೇಮಿಗಳನ್ನು ಹೊಂದಿದ್ದಳು. ಒಬ್ಬ

ಪ್ರೇಮಿಯನ್ನವಳು ಎರಡನೆಯ ಸರ್ಜಿಯಸ್ (೯೦೪-೧೧) ಹೆಸರಿನಲ್ಲಿ ಪೋಪ್ ಹುದ್ದೆಗೇರಿಸಿದಳು. ಹದಿನಾರನೆಯ ವಯಸ್ಸಿಗೇ ಪೋಪ್ ಆದ ಅವನು 'ತನ್ನ ವ್ಯಭಿಚಾರಗಳಿಂದಲೂ ಲಾಂಪಟ್ಯದಿಂದಲೂ ಬಹು ಬೇಗ ಲ್ಯಾಟೆರನ್ ಅರಮನೆಯ ನಿತ್ಯದೃಶ್ಯವಾಗಿ ಪೋಪ್ ಆಧಿಕಾರದ ಪತನವನ್ನು ಪೂರ್ಣಗೊಳಿಸಿದ.'[೨೧೪] ಮರೋಜ್ಜಿಯ ಪ್ರಾಯಶಃ ದಂತಕತೆಯಲ್ಲಿನ ಮಹಿಳಾ 'ಪೋಪ್ ಜೋನ್'ಗೆ ಆಧಾರವಿರಬೇಕು.

ಈ ಕಾಲದ ಪೋಪ್‌ರು ಪೂರ್ವದಲ್ಲಿ ಅವರ ಪೂರ್ವಿಕರು ಹೊಂದಿದ್ದ ಪ್ರಭಾವವವನ್ನು ಸಹಜವಾಗಿಯೇ ಕಳೆದುಕೊಂಡರು. ಮೊದಲನೆಯ ನಿಕೋಲಾಸ್ ಅಲ್ಪಸ್‌ನ ಉತ್ತರದ ಬಿಷಪ್‌ರ ಮೇಲೆ ಯಶಸ್ವಿಯಾಗಿ ಚಲಾಯಿಸಿದ್ದ ತಮ್ಮ ಅಧಿಕಾರವನ್ನೂ ಅವರು ಕಳೆದುಕೊಂಡರು. ಪ್ರಾಂತೀಯ ಪರಿಷತ್ತುಗಳು ಪೋಪ್‌ನಿಂದ ತಾವು ಸಂಪೂರ್ಣ ಸ್ವತಂತ್ರರೆಂಬುದನ್ನು ಖಚಿತಗೊಳಿಸಿದರು, ಆದರೆ ಸಾರ್ವಭೌಮರು ಮತ್ತು ಊಳಿಗಮಾನ್ಯ ಸಾಮಂತರ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಿಲ್ಲ. ಬಿಷಪ್‌ರು ಹೆಚ್ಚು ಹೆಚ್ಚಾಗಿ ಸಾಮಾನ್ಯ ಊಳಿಗಮಾನ್ಯ ಪ್ರಭಾವಶಾಲಿಗಳ ವಶವಾದರು. 'ಸಾಮಾನ್ಯ ಸಮಾಜವು ಮುಳುಗಿಹೋಗಿದ್ದ ಅನಾಯಕತ್ವಕ್ಕೇ ಚರ್ಚ್ ತಾನೂ ಬಲಿಯಾಯಿತು; ದುಷ್ಟ ತೃಷ್ಣೆಗಳು ಮಿತಿಯಿಲ್ಲದೆ ಹೆಚ್ಚಿದವು, ಎಂದಿಗಿಂತಲೂ ಹೆಚ್ಚಾಗಿ ಮತಧರ್ಮಗಳ ಬಗ್ಗೆ ಹಾಗೂ ಆತ್ಮಗಳ ಬಿಡುಗಡೆಯ ಬಗ್ಗೆ ಅಲ್ಪಸ್ವಲ್ಪ ಕಳಕಳಿ ಹೊಂದಿದ್ದ ಪುರೋಹಿತವಲಯವು ವ್ಯಾಪಕ ಅಧಃಪತನದ ಕುರಿತು ದುಃಖಿತಗೊಂಡು ಮತಧಾರ್ಮಿಕರ ಕಣ್ಣುಗಳು ಜಗತ್ತಿನ ವಿನಾಶ ಮತ್ತು ಅಂತಿಮ ತೀರ್ಪುಗಳನ್ನು ಎದುರು ನೋಡುವಂತೆ ಮಾಡಿತು.'[೨೧೫]

೧೦೦೦ ಇಸವಿಯಲ್ಲಿ ಜಗತ್ತು ಕೊನೆಗೊಳ್ಳುತ್ತದೆ ಎಂಬ ಭಯವು ಆ ಕಾಲದಲ್ಲಿ ಹರಡಿತ್ತು ಎಂಬುದಂತೂ ಸುಳ್ಳು. ಸಂತ ಪೌಲ್‌ನ ಕಾಲದಿಂದಲೂ ಜಗತ್ತಿನ ಪ್ರಳಯ ಹತ್ತಿರವೇ ಇದೆ ಎಂದು ಕ್ರೈಸ್ತರು ಭಾವಿಸಿದ್ದರೂ, ತಮ್ಮ ಕೆಲಸಕಾರ್ಯಗಳಲ್ಲಿ ಮಾತ್ರ ಎಂದಿನಂತೆಯೇ ತೊಡಗಿದ್ದರು.

೧೦೦೦ನೇ ಇಸವಿಯನ್ನು ಪಶ್ಚಿಮ ಯೂರೋಪ್‌ನ ನಾಗರಿಕತೆಯ ಮಟ್ಟವು ಪಾತಾಳಕ್ಕಿಳಿದಿದ್ದ ಅವಧಿಯ ಕೊನೆ ಎಂದು ಹೇಳಬಹುದು. ಈ ಹೊತ್ತಿನಿಂದ ಅದರ ಉಚ್ಛ್ರಾಯವು ಆರಂಭಗೊಂಡು ೧೯೧೪ ರವರೆಗೂ ಮುಂದುವರಿಯಿತು. ಮೊದಮೊದಲಿಗೆ ಪ್ರಗತಿಯು ಮುಖ್ಯವಾಗಿ ಆಶ್ರಮವಾಸಪದ್ಧತಿಯ ಸುಧಾರಣೆಯ ಕಾರಣದಿಂದಾಯಿತು. ಆಶ್ರಮವಾಸಪದ್ಧತಿಯ ಆಚೆಗೆ ಪುರೋಹಿತಶಾಹಿಯು

೨೧೪. *'ಕೇಂಬ್ರಿಜ್ ಮಿಡೈವಲ್ ಹಿಸ್ಟರಿ'*, ೩. ೪೫೫.
೨೧೫. *ಅದೇ*.

ಬಹುತೇಕವಾಗಿ ಹಿಂಸಾಪ್ರವೃತ್ತಿ, ಅನೈತಿಕತೆ ಮತ್ತು ಐಹಿಕತೆಗಳಲ್ಲಿ ತೊಡಗಿತ್ತು; ತಮ್ಮ ಐಶ್ವರ್ಯ ಮತ್ತು ಅಧಿಕಾರಗಳು ಅವರ ಲಂಚಕೋರತನಕ್ಕೆ ಕಾರಣ; ಆದರೆ ಅವರ ಸವಲತ್ತುಗಳು ಮತಧರ್ಮನಿಷ್ಠರಾದ ಜನರಿಂದ ಬಂದುದು. ಮತ್ತೆ ಮತ್ತೆ ಇದೇ ಸ್ಥಿತಿ ಮರುಕಳಿಸಿತು, ಆಶ್ರಮವಾಸಪದ್ಧತಿಗೂ ಸಹ; ಆದರೆ ಸುಧಾರಕರು, ಸ್ಥಿತಿಯು ಹದಗೆಟ್ಟಂತೆಲ್ಲ, ಹೊಸ ಹುಮ್ಮಸ್ಸಿನಿಂದ ತಮ್ಮ ನೈತಿಕ ಬಲವನ್ನು ಪುನರುಜ್ಜೀವನಗೊಳಿಸಿಕೊಂಡರು.

೧೦೦೦ ಇಸವಿಯು ಮತ್ತೊಂದು ಕಾರಣದಿಂದಲೂ ಸಂಧಿಕಾಲವಾಗಿತ್ತು; ಅದೆಂದರೆ, ಸುಮಾರು ಅದೇ ಕಾಲದಲ್ಲಿ, ಮಹಮ್ಮದೀಯರೂ ಉತ್ತರದ ಅನ್ಯದೇಶೀಯರ ಆಕ್ರಮಣಗಳೂ, ಕೊನೆಯ ಪಕ್ಷ ಪಶ್ಚಿಮ ಯೂರೋಪ್‌ನಲ್ಲಿ, ಕೊನೆಗಂಡದ್ದು. ಗಾಥ್‌ರು, ಲಂಬಾರ್ಡ್‌ರು, ಹಂಗೇರಿಯನ್‌ರು ಮತ್ತು ನಾರ್ಮನ್‌ರು ಒಬ್ಬರಾದ ಮೇಲೊಬ್ಬರು ಅಲೆಗಳಂತೆ ಬಂದರು; ಆದರೆ ಅವರನ್ನು ಕ್ರೈಸ್ತರನ್ನಾಗಿಸಲಾಯಿತು, ಅದರೆ ಪ್ರತಿ ಸಲವೂ ಅಂಥವರು ನಾಗರಿಕ ಪರಂಪರೆಯನ್ನು ದುರ್ಬಲಗೊಳಿಸಿದರು. ಪಶ್ಚಿಮ ಯೂರೋಪ್ ಅನೇಕ ಅನ್ಯದೇಶೀಯ ರಾಜ್ಯಗಳಾಗಿ ಒಡೆದವು; ರಾಜರುಗಳು ತಮ್ಮ ಸಾಮಂತರ ಮೇಲಿನ ಅಧಿಕಾರವನ್ನು ಕಳೆದುಕೊಂಡರು; ಎಲ್ಲ ಕಡೆ ಅನಾಯಕತ್ವವು ವ್ಯಾಪಕವಾಗಿ ಹಿಂಸಾಚಾರವು ಸಣ್ಣದೋ ದೊಡ್ಡದೋ ಆಗಿ ಬೆಳೆಯಿತು. ಕೊನೆಗೂ ಉತ್ತರದ ಬಲಿಷ್ಠ ವಿಜಯಿ ಬುಡಟ್ಟುಗಳವರನ್ನು ಕ್ರೈಸ್ತಮತಧರ್ಮಕ್ಕೆ ತಿರುಗಿಸಲಾಯಿತು, ಅವರೆಲ್ಲ ಅಲ್ಲಲ್ಲಿಯೇ ನೆಲೆ ನಿಲ್ಲುವಂತಾಯಿತು. ಕೊಟ್ಟ ಕೊನೆಗೆ ಬಂದವರು ನಾರ್ಮನ್‌ರು; ತಾವು ನಾಗರಿಕತೆಯ ಸಮರ್ಥ ನಿರ್ವಾಪಕರೆಂಬುದನ್ನು ವಿಶಿಷ್ಟವೆನಿಸುವಂತೆ ಸಾಬೀತುಗೊಳಿಸಿದರು. ಅವರು ಸಾರಾಸೆನ್‌ರಿಂದ ಸಿಸಿಲಿಯನ್ನು ವಶಪಡಿಸಿಕೊಂಡರು, ಇಟಲಿಯಿಂದ ಮಹಮ್ಮದೀಯರನ್ನು ದೂರವಿರಿಸಿದರು; ಡೇನ್‌ರು ಬಹಳವಾಗಿ ದೂರವಿರಿಸಿದ್ದ ಇಂಗ್ಲಂಡ್ ಅನ್ನು ಮತ್ತೆ ರೋಮನ್ ಜಗತ್ತಿಗೆ ಕರೆತಂದರು. ನಾರ್ಮಂಡಿಯಲ್ಲಿ ಒಮ್ಮೆ ನೆಲೆಗೊಂಡ ಮೇಲೆ, ಫ್ರಾನ್ಸ್‌ನ ಪುನರುಜ್ಜೀವನಕ್ಕೆ ಅವಕಾಶವಿತ್ತರು, ಈ ಪ್ರಕ್ರಿಯೆಯಲ್ಲಿ ಲೌಕಿಕವಾಗಿಯೂ ಅನುಕೂಲಕರವೆನಿಸಿದರು.

೬೦೦ ರಿಂದ ೧೦೦೦ ದವರೆಗಿನ ಅವಧಿಯನ್ನು ಸೂಚಿಸಲು 'ಕತ್ತಲ ಯುಗ' ಎಂದು ಬಳಸುವ ನಮ್ಮ ಪದಪುಂಜವು ಪಶ್ಚಿಮ ಯೂರೋಪ್ ಬಗ್ಗೆ ಅನವಶ್ಯಕವಾಗಿ ಹೆಚ್ಚು ಗಮನವಿತ್ತುದನ್ನು ತೋರಿಸುತ್ತದೆ. ಚೈನಾದಲ್ಲಿ ಈ ಅವಧಿಯು, ಕಾವ್ಯದ ಅತ್ಯಂತ ಮಹತ್ವದ ಯುಗವಾಗಿದ್ದ ಟಾನ್ ರಾಜವಂಶದ ಆಳ್ವಿಕೆಯ ಕಾಲವನ್ನೂ ಒಳಗೊಳ್ಳುತ್ತದೆ, ಅಲ್ಲದೆ ಇನ್ನಿತರ ದೃಷ್ಟಿಗಳಿಂದಲೂ ಅದು ಗಣನೀಯ ಕಾಲವೆನ್ನಿಸಿಕೊಳ್ಳುತ್ತದೆ. ಇಂಡಿಯದಿಂದ ಸ್ಪೆಯಿನ್‌ವರೆಗೆ ಇಸ್ಲಾಂ ಉಜ್ವಲ

ನಾಗರಿಕತೆಯು ಉತ್ತುಂಗದಲ್ಲಿತ್ತು. ಈ ಕಾಲದಲ್ಲಿ ಕ್ರೈಸ್ತಜಗತ್ತು ಕಳೆದುಕೊಂಡದ್ದು ನಾಗರಿಕತೆಯ ನಷ್ಟವೇನೂ ಆಗಿರದೆ ಅದಕ್ಕೆ ವ್ಯತಿರಿಕ್ತವಾದುದೇ ಆಗಿತ್ತು. ಅಧಿಕಾರ ಮತ್ತು ಸಂಸ್ಕೃತಿಗಳ ದೃಷ್ಟಿಯಿಂದ ಪಶ್ಚಿಮ ಯೂರೋಪ್ ಆಮೇಲೆ ಬಹು ಪ್ರಮುಖವಾಗುತ್ತದೆಂದು ಆಗ ಯಾರೂ ಊಹಿಸಿರಲಿಲ್ಲ. ಪಶ್ಚಿಮ ಯೂರೋಪ್ ನಾಗರಿಕತೆಯೇ ನಾಗರಿಕತೆ ಎಂದು ನಮಗನ್ನಿಸುತ್ತದೆಯಾದರೂ, ಅದು ಸಂಕುಚಿತ ದೃಷ್ಟಿ. ನಮ್ಮ ನಾಗರಿಕತೆಯ ಬಹುತೇಕ ಸಾಂಸ್ಕೃತಿಕ ಅಂಶಗಳು ಪೂರ್ವ ಮೆಡಿಟರೇನಿಯನ್ ಕಡೆಯಿಂದ, ಗ್ರೀಕ್ ಮತ್ತು ಯೆಹೂದಿಗಳಿಂದ ನಮಗೆ ಬಂದುದು. ಇನ್ನು ಅಧಿಕಾರದ ಬಗ್ಗೆ: ಪಶ್ಚಿಮ ಯೂರೋಪ್ ಪ್ಯೂನಿಕ್ ಯುದ್ಧಗಳಿಂದ ಹಿಡಿದು ರೋಮ್ ಪತನದವರೆಗೂ – ಸುಮಾರು ಕ್ರಿಪೂ ೨೦೦ ರಿಂದ ಕ್ರಿಶ ೪೦೦ ರವರೆಗಿನ ಆರು ಶತಮಾನಗಳು ಅವಧಿಯಲ್ಲಿ – ತುಂಬಿಹೋಗಿತ್ತು. ಈ ಕಾಲವಾದ ಬಳಿಕ, ಪಶ್ಚಿಮ ಯೂರೋಪ್‌ನ ಯಾವ ರಾಜ್ಯವೂ ಅಧಿಕಾರದ ದೃಷ್ಟಿಯಿಂದ ಚೈನಾ, ಜಪಾನ್ ಅಥವಾ ಕಲೀಫ್‌ರದಕ್ಕೆ ಸಾಟಿಯಾಗಿರಲಿಲ್ಲ.

ನವೋದಯದ ನಂತರದ ನಮ್ಮ ಹಿರಿಮೆಗೆ ಕಾರಣ ಭಾಗಶಃ ವಿಜ್ಞಾನ ಮತ್ತು ವೈಜ್ಞಾನಿಕ ತಂತ್ರಗಳು, ಮತ್ತು ಭಾಗಶಃ ಮಧ್ಯಯುಗದಲ್ಲಿ ನಿಧಾನವಾಗಿ ರೂಪುಗೊಂಡ ರಾಜಕೀಯ ಸಂಸ್ಥೆಗಳು. ಈ ಹಿರಿಮೆಯು ಏಕೆ ಮುಂದುವರಿಯಬೇಕು ಎಂಬುದಕ್ಕೆ ಸಹಜವಾದ ಯಾವ ಕಾರಣವೂ ಇಲ್ಲ. ಪ್ರಸ್ತುತ ಯುದ್ಧದಲ್ಲಿ, ಮಹಾ ಸೈನಿಕ ಸಾಮರ್ಥ್ಯವನ್ನು ರಷ್ಯಾ, ಚೈನಾ, ಮತ್ತು ಜಪಾನ್‌ಗಳು ತೋರಿಸಿವೆ. ಇವೆಲ್ಲ ಪಶ್ಚಿಮದ ತಂತ್ರಗಳು ಮತ್ತು – ಬೈಜ಼ಾಂಟಿಯನ್, ಕನ್‌ಫ್ಯೂಷಿಯನ್ ಅಥವಾ ಶಿಂಟೋ – ಪೌರ್ವಾತ್ಯ ಆದರ್ಶಗಳ ಸಮ್ಮಿಲನದಿಂದ ಕೂಡಿ ಆಗಿದೆ. ಸ್ವತಂತ್ರಗೊಂಡ ಬಳಿಕ ಇಂಡಿಯ ಇದಕ್ಕೆ ಮತ್ತೊಂದು ಪೌರ್ವಾತ್ಯ ಆಯಾಮವನ್ನು ಸೇರಿಸುತ್ತದೆ. ಮುಂದಿನ ಕೆಲವು ಶತಮಾನಗಳಲ್ಲಿ, ಉಳಿದದ್ದೇ ಆದರೆ, ನಾಗರಿಕತೆಯು ನವೋದಯ ಕಾಲದಿಂದಾದುದಕ್ಕಿಂತ ಹೆಚ್ಚಿನ ವೈವಿಧ್ಯದಿಂದ ಕೂಡಿರುತ್ತದೆಂಬುದು ಅಸಂಭವವೇನಲ್ಲ. ಸಾಂಸ್ಕೃತಿಕ ಸಾಮ್ರಾಜ್ಯಶಾಹಿಯು ಅಧಿಕಾರ ಸಾಮ್ರಾಜ್ಯಶಾಹಿಗಿಂತ ಹೆಚ್ಚು ಕಠಿಣವಾದದ್ದು, ಇದನ್ನು ಮೀರುವುದು ಕಷ್ಟವೇ ಸರಿ. ಪಶ್ಚಿಮ ಚಕ್ರಾಧಿಪತ್ಯದ ಪತನದ ಬಹು ಕಾಲದ ನಂತರ – ಮತಧರ್ಮಸುಧಾರಣೆಯವರೆಗೂ – ಎಲ್ಲ ಯೂರೋಪಿಯನ್ ಸಂಸ್ಕೃತಿಯೂ ರೋಮನ್ ಸಾಮ್ರಾಜ್ಯಶಾಹಿಯ ವಾಸನೆಯನ್ನು ಉಳಿಸಿಕೊಂಡಿದೆ. ನಮಗೆ ಪಶ್ಚಿಮ ಯೂರೋಪಿಯನ್ ಸಾಮ್ರಾಜ್ಯಶಾಹಿಯ ವಾಸನೆಯು ಈಗ ಬಂದಿದೆ. ಪ್ರಸ್ತುತ ಯುದ್ಧ ಮುಗಿದ ಬಳಿಕ, ಜಗತ್ತಿನಲ್ಲಿ ನಾವೆಲ್ಲ ಸಲೀಸಾಗಿ ಬದುಕಲು ಸಾಧ್ಯವಾಗಬೇಕಾದರೆ ನಾವು ಏಷ್ಯಾವನ್ನು ಚಿಂತನೆಗಳಲ್ಲಿ ನಮಗೆ ಸಮಾನ = ರಾಜಕೀಯವಾಗಿ ಮಾತ್ರವಲ್ಲ, ಸಾಂಸ್ಕೃತಿಕವಾಗಿಯೂ – ಎಂಬುದನ್ನು

ಒಪ್ಪಿಕೊಳ್ಳಬೇಕೆನಿಸುತ್ತದೆ. ಇದರಿಂದ ಆಗುವ ಬದಲಾವಣೆಗಳು ಎಂತಹವು ಎಂಬುದು ನನಗೆ ತಿಳಿಯದು, ಆದರೆ ಅವು ಮಹತ್ವದವೂ ಅತ್ಯಂತ ಪ್ರಮುಖವಾದವೂ ಆಗಿರುತ್ತವೆಂಬ ಬಗ್ಗೆ ನನಗೆ ಮನದಟ್ಟಾಗಿದೆ.

೮

ಜಾನ್ ದ ಸ್ಕಾಟ್

ಕೆಲವೊಮ್ಮೆ ಎರಿಯೂಜೆನ ಅಥವಾ ಎರಿಜೆನ[೨೧೬] ಎಂದು ಕರೆಯಲಾಗುತ್ತಿದ್ದ, ಜಾನ್ ದ ಸ್ಕಾಟ್ ಅಥವಾ ಜೊಹಾನ್ಸ್ ಸ್ಕಾಟಸ್, ಒಂಬತ್ತನೆಯ ಶತಮಾನದ ಅತ್ಯಂತ ಆಶ್ಚರ್ಯಜನಕ ವ್ಯಕ್ತಿ; ಅವನೇನಾದರೂ ಐದನೆಯ ಅಥವಾ ಹದಿನೈದನೆಯ ಶತಮಾನದಲ್ಲಿ ಬದುಕಿದ್ದರೆ ಕಡಿಮೆ ಆಶ್ಚರ್ಯಜನಕ ಎನಿಸಿಕೊಳ್ಳುತ್ತಿದ್ದ. ಅವನೊಬ್ಬ ಐರಿಶ್ ವ್ಯಕ್ತಿ, ನವಪ್ಲೇಟೋವಾದಿ, ಒಬ್ಬ ದೊಡ್ಡ ಗ್ರೀಕ್ ವಿದ್ವಾಂಸ, ಒಬ್ಬ ಪೆಲೇಜಿಯನ್, ಮತ್ತು ಸರ್ವದೇವಾತ್ಮಕವಾದಿ. ತನ್ನ ಬದುಕಿನ ಬಹುಭಾಗವನ್ನವನು ಫ್ರಾನ್ಸ್‌ನ ದೊರೆ ಬಾಲ್ಡ್‌ನ ಚಾರ್ಲ್ಸ್‌ನ ಆಶ್ರಯದಲ್ಲಿ ಕಳೆದ. ಅವನು ಸಂಪ್ರದಾಯನಿಷ್ಠೆಯಿಂದ ಸಾಕಷ್ಟು ದೂರವಿದ್ದರೂ, ನಮಗೆ ತಿಳಿದ ಮಟ್ಟಿಗೆ, ಹೇಗೋ ಹಿಂಸೆಯಿಂದ ಪಾರಾದ. ಶ್ರದ್ಧೆಗಿಂತ ಹೆಚ್ಚಿನ ಸ್ಥಾನವನ್ನು ವೈಚಾರಿಕತೆಗೆ ನೀಡಿದ್ದವನು, ಮತಧರ್ಮಬೋಧಕರ ಅಧಿಕಾರಕ್ಕೆ ಕಿಂಚಿತ್ತೂ ಬೆಲೆ ಕೊಡದವನು; ಆದರೂ ಅವರ ನಡುವಣ ವಿವಾದಗಳನ್ನು ಬಗೆಹರಿಸಲು ಅವನನ್ನು ಮಧ್ಯಸ್ಥಿಕೆ ಮಾಡಲು ಕರೆಯುತ್ತಿದ್ದರು.

ಅಂತಹ ಒಬ್ಬ ವ್ಯಕ್ತಿಯು ಬರುವ ಸನ್ನಿವೇಶವನ್ನು ಅರ್ಥಮಾಡಿಕೊಳ್ಳಲು ನಾವು ಮೊದಲು ಸಂತ ಪ್ಯಾಟ್ರಿಕ್‌ಗಿಂತ ಮೊದಲಿನ ಐರಿಶ್ ಸಂಸ್ಕೃತಿಯ ಕಡೆ ಗಮನ ಹರಿಸಬೇಕು. ಸಂತ ಪ್ಯಾಟ್ರಿಕ್ ಒಬ್ಬ ಇಂಗ್ಲಿಷ್‌ನವನು ಎಂಬ ಅತೀವ ನೋವಿನ ಸಂಗತಿಯಲ್ಲದೆ, ಕಡಿಮೆ ನೋವಿನ ಮತ್ತೆರಡು ಸಂಗತಿಗಳಿವೆ: ಮೊದಲನೆಯದು, ಅವನು ಅಲ್ಲಿಗೆ ಹೋಗುವ ಮುಂಚೆಯೂ ಕ್ರೈಸ್ತರಿದ್ದರು, ಎರಡನೆಯದು, ಐರಿಶ್ ಕ್ರೈಸ್ತಕ್ಕೆ ಅವನೇನಾದರೂ ಮಾಡಿರಲಿ, ಐರಿಶ್ ಸಂಸ್ಕೃತಿಗೆ ಅವನು ಕಾರಣನಲ್ಲ. ಮೊದಲು ಆಟ್ಟಿಲನಿಂದಾದ ಗಾಲ್‌ರ ಮತ್ತು ಆನಂತರದ

---

೨೧೬. ಈ ಸೇರಿಕೆ ತಲೆಶಿರೋಭಾರದ್ದು, ಅವನು ಹೆಸರು ಆಗ 'ಐರ್ಲಂಡ್ ಐರಿಶ್ ಜಾನ್' ಎಂದಾಗುತ್ತದೆ. ಒಂಬತ್ತನೆಯ ಶತಮಾನದಲ್ಲಿ 'ಸ್ಕಾಟಸ್' ಅಂದರೆ 'ಐರಿಶ್ ವ್ಯಕ್ತಿ' ಎಂದು.

ಗಾಥ್‌ರ, ಆಕ್ರಮಣದ ಹೊತ್ತಿನಲ್ಲಿ (ಹೀಗೆಂದು ಗಾಲ್ ಲೇಖಕ ಹೇಳುತ್ತಾನೆ) 'ಸಮುದ್ರದ ತಮ್ಮ ಕಡೆಯಲ್ಲಿದ್ದ ವಿದ್ವಾಂಸರೆಲ್ಲ ಸಮುದ್ರದಾಚೆಯ ದೇಶಕ್ಕೆ ಅಂದರೆ ಐರ್ಲಂಡ್‌ಗೆ ಮತ್ತು ಎಲ್ಲೆಲ್ಲಿ ಅವಕಾಶವಿತ್ತೋ ಅಲ್ಲೆಲ್ಲ ಓಡಿಹೋಗಿ ನೆಲೆಸಿದರು, ಹೀಗೆ ಆ ಪ್ರದೇಶಗಳಲ್ಲಿನ ನಿವಾಸಿಗಳಿಗೆ ವಿದ್ಯೆಯಲ್ಲಿ ಅಪಾರ ಮುನ್ನಡೆಯನ್ನುಂಟುಮಾಡಿದರು.'[೨೧೭] ಇವರಲ್ಲಿ ಯಾರಾದರೂ ಇಂಗ್ಲಂಡ್‌ನಲ್ಲಿ ಆಶ್ರಯ ಪಡೆದಿದ್ದರೆ, ಏಂಜಲ್‌ರು ಮತ್ತು ಸ್ಯಾಕ್ಸನ್‌ರು ಹಾಗೂ ಜೂಟ್‌ರು ಆ ವಿದ್ಯೆಯನ್ನು ಬಾಚಿಕೊಳ್ಳುತ್ತಿದ್ದರೇನೋ, ಆದರೆ ಐರ್ಲಂಡ್‌ಗೆ ಹೋದವರು, ಮತಧರ್ಮಪ್ರಚಾರಕರ ಜೊತೆ ಸೇರಿ, ಆ ಭೂಖಂಡದಲ್ಲಿ ಕಣ್ಮರೆಯಾಗುತ್ತಿದ್ದ ಅಪಾರ ವಿದ್ಯೆ ಮತ್ತು ನಾಗರಿಕತೆಗಳನ್ನು ಬಿತ್ತುವುದರಲ್ಲಿ ಯಶಸ್ವಿಗಳಾದರು. ಆರು, ಏಳು ಮತ್ತು ಎಂಟನೆಯ ಶತಮಾನಗಳಲ್ಲೆಲ್ಲ ಗ್ರೀಕ್‌ನ ತಿಳಿವಳಿಕೆ ಹಾಗೂ ಲ್ಯಾಟಿನ್ ಮಹಾಗ್ರಂಥಗಳ ಸಾಕಷ್ಟು ಪರಿಚಯವು ಐರಿಶ್ ಜನರಲ್ಲಿ ಉಳಿದುಬಂತು.[೨೧೮] ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ ಥಿಯೋಡೋರ್‌ನ (೬೬೯–೯೦) ಕಾಲದಿಂದಲೇ ಇಂಗ್ಲಂಡ್‌ನಲ್ಲಿ ಗ್ರೀಕ್ ತಿಳಿದಿತ್ತು, ಅವನೇ ಅಥೆನ್ಸ್‌ನಲ್ಲಿ ವಿದ್ಯಾಭ್ಯಾಸ ಮಾಡಿದ್ದ ಒಬ್ಬ ಗ್ರೀಕ್; ಐರಿಶ್ ಮತಧರ್ಮಪ್ರಚಾರಕರ ಮೂಲಕ ಅದು ಉತ್ತರದಲ್ಲಿ ತಿಳಿದಿದ್ದಿರಬೇಕು. 'ಏಳನೆಯ ಶತಮಾನದ ಉತ್ತರಾರ್ಧದಲ್ಲಿ ಜ್ಞಾನದ ಹಂಬಲವು ಐರ್ಲಂಡ್‌ನಲ್ಲಿ ತೀವ್ರವಾಗಿತ್ತು, ಹೀಗಾಗಿ ಬೋಧನೆಯ ಕಾರ್ಯವು ಸಕ್ರಿಯವಾಗಿ ಸಾಗುತ್ತಿತ್ತು. ಲ್ಯಾಟಿನ್ (ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಗ್ರೀಕ್) ಅನ್ನು ಅಲ್ಲಿ ವಿದ್ವತ್ ದೃಷ್ಟಿಕೋನದಿಂದ ಅಭ್ಯಾಸಮಾಡಲಾಗುತ್ತಿತ್ತು .. .. ಮತಧರ್ಮಬೋಧನೆಯ ಉತ್ಸಾಹವು ಮತ್ತು ಆನಂತರದಲ್ಲಿ, ಸ್ವಅವಕಾಶದ ಕಷ್ಟಕರ ಪರಿಸ್ಥಿತಿಯು, ಅದನ್ನು ಪ್ರಚೋದಿಸಿದರೂ, ಆ ಭೂಖಂಡದಲ್ಲಿ ದೊಡ್ಡ ಸಂಖ್ಯೆಯ ಜನರು ಅದನ್ನು ಉಪೇಕ್ಷಿಸಿದರೂ, ತಾವು ಈಗಾಗಲೇ ಮೌಲ್ಯಯುತವೆಂದು ತಿಳಿದಿದ್ದ ಸಾಹಿತ್ಯದ ತುಣುಕುಗಳನ್ನು ಸಂರಕ್ಷಿಸುವಲ್ಲಿ ಸಾಧನಗಳಾದರು.'[೨೧೯] ೮೭೬ ರಲ್ಲಿ ಆಕ್ಸಿಯರ್‌ನ ಹೆಯಿರಿಕ್ ಈ ಐರಿಶ್ ವಿದ್ವಾಂಸರ ಒಳಹರಿಯುವಿಕೆಯನ್ನು ವರ್ಣಿಸುತ್ತಾರೆ: 'ಸಮುದ್ರದ ಅಪಾಯಗಳನ್ನು ಉಪೇಕ್ಷಿಸಿ ಐರ್ಲಂಡ್ ತನ್ನ ತತ್ವಜ್ಞಾನಿಗಳ ದಂಡಿನ ಜೊತೆಗೆ ನಮ್ಮ ತೀರಗಳ ಕಡೆ ವಲಸೆ ಬರುತ್ತಿದ್ದಾರೆ, ಬಹುಶ್ರುತ ವಿದ್ವಾಂಸರೆಲ್ಲ ಜ್ಞಾನಿ ಸಾಲೋಮನ್‌ನ (ಅಂದರೆ ಬಾಲ್ಡ್‌ನ ದೊರೆ ಚಾರ್ಲ್ಸ್) ಕರೆಗೆ ಓಗೊಟ್ಟು ಸ್ವಇಚ್ಛೆಯ ದೇಶಭ್ರಷ್ಟತೆಗೆ ಒಳಗಾಗುತ್ತಿದ್ದಾರೆ.'[೨೨೦]

---

೨೧೭. 'ಕೇಂಬ್ರಿಜ್ ಮಿಡ್ವೈವಲ್ ಹಿಸ್ಟರಿ', ೩, ೫೦೧.

೨೧೮. ಈ ವಿಷಯವನ್ನು ಕುರಿತು 'ಕೇಂಬ್ರಿಜ್ ಮಿಡ್ವೈವಲ್ ಹಿಸ್ಟರಿ', ೩, ಅಧ್ಯಾಯ ೧೯ ರಲ್ಲಿ ತುಂಬ ಎಚ್ಚರಿಕೆಯಿಂದ ಚರ್ಚಿಸಲಾಗಿದೆ; ಐರಿಶ್ ಜನರ ಗ್ರೀಕ್ ತಿಳಿವಳಿಕೆಯ ಪರವಾಗಿಯೇ ಅಲ್ಲಿ ಹೇಳಲಾಗಿದೆ.

೨೧೯. ಪೂರ್ವೋಕ್ತ, ಪು. ೫೦೭–೮.

೨೨೦. ಪೂರ್ವೋಕ್ತ, ಪು. ೫೨೪.

ವಿದ್ವಾಂಸರ ಬದುಕು ಅನಿವಾರ್ಯವಾಗಿ ಅನೇಕ ವೇಳೆ ಅಲೆಮಾರಿಯದಾಗುತ್ತಿತ್ತು. ಗ್ರೀಕ್ ತತ್ವಜ್ಞಾನದ ಆರಂಭದಲ್ಲಿ ಅನೇಕ ತತ್ವಜ್ಞಾನಿಗಳು ಪರ್ಷಿಯದಿಂದ ಬಂದ ನಿರಾಶ್ರಿತರು; ಅದರ ಕೊನೆಯಲ್ಲಿ, ಜಸ್ಟಿನಿಯನ್‌ನ ಕಾಲದಲ್ಲಿ, ಅವರು ಪರ್ಷಿಯಕ್ಕೆ ನಿರಾಶ್ರಿತರಾಗಿ ಹೋದರು. ಐದನೆಯ ಶತಮಾನದಲ್ಲಿ, ಈಗ ತಾನೇ ನೋಡಿದಂತೆ, ವಿದ್ವಾಂಸರು ಗಾಲ್‌ನಿಂದ ಓಡಿ ಹೋಗಿ ಜರ್ಮನ್‌ರಿಂದ ಪಾರಾಗಲು ಪಶ್ಚಿಮ ದ್ವೀಪಗಳಿಗೆ ವಲಸೆ ಹೋದರು. ಒಂಬತ್ತನೆಯ ಶತಮಾನದಲ್ಲಿ ಅವರು ಇಂಗ್ಲಂಡ್‌ನಿಂದ ಮತ್ತೆ ಓಡಿ ಹೋಗಿ ಸ್ಕಾಂಡಿನೇಯವಿಯನ್‌ರಿಂದ ಪಾರಾಗಲು ಐರ್ಲಂಡ್‌ಗೆ ಬಂದರು. ನಮ್ಮ ಕಾಲದಲ್ಲಿಯೇ, ಜರ್ಮನ್ ತತ್ವಜ್ಞಾನಿಗಳು ತಮ್ಮ ದೇಶಿಯರಿಂದಲೇ ಪಾರಾಗಲು ಇನ್ನೂ ಪಶ್ಚಿಮಕ್ಕೆ ಹಾರಿ ಹೋಗುವ ಪರಿಸ್ಥಿತಿ ಒದಗಿದೆ. ಅಲ್ಲಿಂದ ವಾಪಸಾಗಲು ಅವರಿಗೆ ಅಷ್ಟೇ ಸಮಯ ಹಿಡಿಸುತ್ತದೇನೋ.

ಪ್ರಾಚೀನ ಸಾಂಸ್ಕೃತಿಕ ಪರಂಪರೆಯನ್ನು ಯೂರೋಪ್‌ನಲ್ಲಿ ಸಂರಕ್ಷಿಸಲು ಹೆಣಗುತ್ತಿದ್ದ ಕಾಲದಲ್ಲಿ ಐರಿಶ್‌ರ ಬಗ್ಗೆ ತಿಳಿದಿರುವುದು ಅತ್ಯಲ್ಪ. ವಿದ್ಯೆ ಆಶ್ರಮಕ್ಕೆ ಸಂಬಂಧಪಟ್ಟಿತ್ತು, ಹಾಗಾಗಿ, ಪ್ರಾಯಶ್ಚಿತ್ತ ಗೀತೆಗಳು (ಪೆನಿಟೆನ್ಷಿಯಲ್ಸ್) ತೋರಿಸುವಂತೆ, ತೀರ ಮತಧರ್ಮನಿಷ್ಠೆಯದಾಗಿತ್ತು. ಆದರೆ ಅವು ಅತೀವ ಮತಧರ್ಮಶಾಸ್ತ್ರಸಂಬಂಧಿಯಾದ ಸೂಕ್ಷ್ಮಗಳ ಕಳಕಳಿಯನ್ನು ಹೊಂದಿದ್ದಂತೆ ತೋರುವುದಿಲ್ಲ. ಬಿಷಪ್ ಸಂಬಂಧಕ್ಕಿಂತ ಆಶ್ರಮಸಂಬಂಧವಾಗಿದ್ದರಿಂದ ಅದರಲ್ಲಿ, ಗ್ರೆಗರಿ ಮಹಾಶಯನಿಂದಾಚೆಗಿನ ಭೂಖಂಡದ ಮತಧರ್ಮಬೋಧಕರ ಆಡಳಿತಾತ್ಮಕ ದೃಷ್ಟಿಕೋನವಿರಲಿಲ್ಲ. ರೋಮ್‌ನ ಸಂಬಂಧವನ್ನು ಬಹುತೇಕ ಕಡಿದುಕೊಂಡಿದ್ದ ಕಾರಣವಾಗಿ ಅದು ಪೋಪ್‌ನನ್ನು ಸಂತ ಆಂಬ್ರೋಸ್ ಕಾಲದಲ್ಲಿನಂತೆಯೇ ಗೌರವಿಸುತ್ತಿತ್ತು, ಆದರೆ ಇದು ಮುಂದೆ ಹಾಗೆಯೇ ಉಳಿಯಲಿಲ್ಲ. ಪ್ರಾಯಶಃ ಒಬ್ಬ ಬ್ರಿಟನ್ ಆಗಿದ್ದ ಪೆಲೇಜಿಯಸ್ ಅನ್ನು ಕೆಲವರು ಒಬ್ಬ ಐರಿಶ್ ಎಂದು ಭಾವಿಸುತ್ತಾರೆ. ಗಾಲ್‌ನಲ್ಲಿ ಕಷ್ಟಪಟ್ಟು ಹಾಗೆ ಮಾಡಿದ್ದಂತೆ ಅಧಿಕಾರಿಗಳು ತೊಡೆದುಹಾಕಲು ಸಾಧ್ಯವಿರದಿದ್ದುದರಿಂದ, ಐರ್ಲಂಡ್‌ನಲ್ಲಿ ಅದು ಉಳಿಯಿತೆಂದು ತೋರುತ್ತದೆ. ಈ ಪರಿಸ್ಥಿತಿಗಳು ಜಾನ್ ದ ಸ್ಕಾಟ್‌ನ ಚಿಂತನೆಗಳ ಅಸಾಧಾರಣ ಸ್ವಾತಂತ್ರ್ಯಕ್ಕೆ ಸ್ವಲ್ಪ ಮಟ್ಟಿಗೆ ಕಾರಣವಿರಬಹುದು.

ಜಾನ್ ದ ಸ್ಕಾಟ್‌ನ ಬದುಕಿನ ಆರಂಭ ಮತ್ತು ಅಂತ್ಯಗಳ ಬಗ್ಗೆ ನಮಗೇನೂ ತಿಳಿದಿಲ್ಲ: ನಮಗೆ ತಿಳಿದಿರುವುದು ಕೇವಲ ಮಧ್ಯಭಾಗದ್ದಷ್ಟೇ, ಆ ಕಾಲದಲ್ಲಿ ಅವನು ಫ್ರಾನ್ಸ್ ದೊರೆಯಿಂದ ನೇಮಿತನಾಗಿದ್ದ. ಅವನು ಸುಮಾರು ೮೦೦ ರಲ್ಲಿ ಹುಟ್ಟಿ ೮೭೭ ರಲ್ಲಿ ಸತ್ತನೆಂದು ಭಾವಿಸಲಾಗಿದೆ, ಆದರೆ ಈ ಎರಡೂ ತೇದಿಗಳು ಊಹೆಯವು ಮಾತ್ರ. ಮೊದಲನೆಯ ನಿಕೋಲಾಸ್ ಪೋಪ್ ಆಗಿದ್ದ ಕಾಲದಲ್ಲಿ ಅವನು

ಫ್ರಾನ್ಸ್‌ನಲ್ಲಿದ್ದ, ಅವನ ಬದುಕನ್ನು ಮತ್ತೆ ನೋಡುವುದು ಆ ಪೋಪ್‌ಗೆ ಸಂಬಂಧಿಸಿದ, ಬಾಲ್ಡ್‌ನ ಚಾರ್ಲ್ಸ್ ಚಕ್ರವರ್ತಿ ಮೈಕೇಲ್ ಅಂತಹ ವ್ಯಕ್ತಿಗಳ ಮತ್ತು ಪೋಪ್‌ನನ್ನೇ ನೋಡುವಾಗ ಮಾತ್ರ.

ಸುಮಾರು ೮೪೩ ರಲ್ಲಿ ಬಾಲ್ಡ್‌ನ ಚಾರ್ಲ್ಸ್ ಜಾನ್‌ನನ್ನು ಫ್ರಾನ್ಸ್‌ಗೆ ಆಹ್ವಾನಿಸಿ, ಅವನನ್ನು ಆಸ್ಥಾನದ ಶಾಲೆಯ ಮುಖ್ಯಸ್ಥನನ್ನಾಗಿ ನೇಮಿಸಿದ. ಒಬ್ಬ ಸನ್ಯಾಸಿಯಾಗಿದ್ದ ಗಾಟ್ಸ್‌ಸ್ಟಾಕ್ ಮತ್ತು ಮುಖ್ಯ ಮತಧರ್ಮಬೋಧಕನಾಗಿದ್ದ ರೆಯಿಮ್ಸ್‌ನ ಆರ್ಚ್‌ಬಿಷಪ್ ಹಿಂಕ್‌ಮರ್ ನಡುವೆ ಪೂರ್ವನಿಯತಿ (ಪ್ರಿಡೆಸ್ಟಿನೇಷನ್) ಮತ್ತು ಸ್ವತಂತ್ರಇಚ್ಛಾಶಕ್ತಿಗಳ ಬಗ್ಗೆ ವಿವಾದವೊಂದು ಹುಟ್ಟಿಕೊಂಡಿತ್ತು. ಸನ್ಯಾಸಿಯು ಪೂರ್ವನಿಯತಿವಾದಿಯಾಗಿದ್ದರೆ, ಆರ್ಚ್‌ಬಿಷಪ್ ಸ್ವತಂತ್ರಇಚ್ಛಾಶಕಿವಾದಿ. ಜಾನ್ ಆರ್ಚ್‌ಬಿಷಪ್‌ನನ್ನು 'ಆನ್ ಡಿವೈನ್ ಪ್ರಿಡೆಸ್ಟಿನೇಷನ್' ಎಂಬ ತನ್ನ ಪುಸ್ತಕದಲ್ಲಿ ಬೆಂಬಲಿಸಿದ, ಆದರೆ ಅವನ ಬೆಂಬಲವು ವಿವೇಕದಿಂದ ತುಂಬ ದೂರ ಹೋಯಿತು. ವಿಷಯವು ಮುಳ್ಳಿನದಾಗಿತ್ತು; ಆಗಸ್ಟೈನ್ ಪೆಲೇಜಿಯಸ್‌ನ ವಿರುದ್ಧದ ತನ್ನ ಬರೆಹದಲ್ಲಿ ಈ ವಿಷಯ ಚರ್ಚಿಸಿದ್ದನಾದರೂ, ಆಗಸ್ಟೈನ್‌ನನ್ನು ಒಪ್ಪುವುದು ತುಂಬ ಅಪಾಯಕಾರಿಯಾಗಿತ್ತು, ಹಾಗೆಯೇ ಸ್ಪಷ್ಟವಾಗಿ ಅವನನ್ನು ವಿರೋಧಿಸುವುದು ಮತ್ತಷ್ಟು ಅಪಾಯಕಾರಿಯಾಗಿತ್ತು. ಜಾನ್ ಸ್ವತಂತ್ರಇಚ್ಛಾಶಕ್ತಿಯನ್ನು ಬೆಂಬಲಿಸಿದ, ಇದು ಕತ್ತರಿಪ್ರಯೋಗಕ್ಕೊಳಗಾಗದೆ ಒಪ್ಪಿತವಾಗಬಹುದಿತ್ತು; ಆದರೆ ಕೋಪೋದ್ರೇಕವನ್ನುಂಟುಮಾಡಿದ್ದೆಂದರೆ ಬೆಂಬಲಿಗನ ಶುದ್ಧ ತಾತ್ವಿಕ ತರ್ಕದ ರೀತಿ. ಮತಧರ್ಮಶಾಸ್ತ್ರದಲ್ಲಿ ಹೇಳಿದ್ದೆಲ್ಲವನ್ನೂ ಬದಲಿಸುವ ಉದ್ದೇಶವೇನೂ ಅವನಿಗಿಲ್ಲದಿದ್ದರೂ, ತತ್ವಜ್ಞಾನವು ದಿವ್ಯಜ್ಞಾನದಿಂದ ಸ್ವತಂತ್ರವಾಗಿದ್ದು ಅದಕ್ಕೆ ಸಮಾನ ಅಥವಾ ಅದಕ್ಕೂ ಮಿಗಿಲು ಎಂಬ ಅವನ ನಿಲವು. ವೈಚಾರಿಕತೆ ಮತ್ತು ದಿವ್ಯಜ್ಞಾನಗಳೆರಡೂ ಸತ್ಯದ ಆಕರಗಳು, ಹೀಗಾಗಿ ಅವುಗಳಲ್ಲಿ ವಿರೋಧವಿಲ್ಲ, ಹಾಗೇನಾದರೂ ವಿರೋಧವೆಂದು ಕಾಣಿಸಿದರೆ, ವೈಚಾರಿಕತೆಯನ್ನು ಆಯ್ದುಕೊಳ್ಳಬೇಕು ಎಂದು ವಾದಿಸಿದ. ನಿಜವಾದ ಮತಧರ್ಮವು ನಿಜವಾದ ತತ್ವಜ್ಞಾನವೇ ಆಗಿದೆ, ಆದರೆ ಅದಕ್ಕೆ ವ್ಯತಿರಿಕ್ತವಾಗಿ, ನಿಜವಾದ ತತ್ವಜ್ಞಾನವೇ ನಿಜವಾದ ಮತಧರ್ಮ ಎಂದ. ಅವನು ಗ್ರಂಥವನ್ನು ೮೫೫ ಮತ್ತು ೮೫೯ ರಲ್ಲಿ ನಡೆದ ಎರಡು ಧರ್ಮಪರಿಷತ್ತುಗಳು ಖಂಡಿಸಿದವು; ಇವುಗಳಲ್ಲಿ ಮೊದಲನೆಯದು ಅವನನ್ನು 'ಸ್ಕಾಟ್‌ರ ಗಂಜಿ' ಎಂದು ಬಣ್ಣಿಸಿತು.

ಪ್ರಾಯಶಃ ಸಮಾನಾಭಿಪ್ರಾಯ ಹೊಂದಿದ್ದ ರಾಜನ ಬೆಂಬಲದಿಂದಾಗಿ ಅವನು ಶಿಕ್ಷೆಯಿಂದೇನೋ ತಪ್ಪಿಸಿಕೊಂಡ. ಮಾಮೆಸ್‌ಬರಿಯ ವಿಲಿಯಂಸ್‌ನನ್ನು ನಂಬಬಹುದಾದರೆ, ಜಾನ್ ತನ್ನೊಡನೆ ಊಟಮಾಡುತ್ತಿರುವಾಗ ರಾಜನು ಕೇಳಿದನಂತೆ: 'ಸ್ಕಾಟ್‌ನನ್ನು ಸಾಟ್‌ನಿಂದ (ಶಠ – ಪಾನಮತ್ತ) ಬೇರ್ಪಡಿಸುವುದು

ಹೇಗೆ?' ಅದಕ್ಕೆ 'ಊಟದ ಮೇಜಿನಿಂದ ಅಷ್ಟೆ' ಎಂದನಂತೆ. ರಾಜನು ೮೭೭ ರಲ್ಲಿ ಸತ್ತ, ಈ ತೇದಿಯ ನಂತರ ಜಾನ್ ಬಗ್ಗೆ ಏನೂ ತಿಳಿದುಬರುವುದಿಲ್ಲ. ಅವನೂ ಅದೇ ವರ್ಷ ಸತ್ತನೆಂದು ಕೆಲವರು ಹೇಳುತ್ತಾರೆ. ಅವನನ್ನು ಆಲ್‌ಫ್ರೆಡ್ ಮಹಾಶಯನು ಇಂಗ್ಲಂಡ್‌ಗೆ ಆಹ್ವಾನಿಸಿದನೆಂದೂ, ಅಲ್ಲಿ ಅವನು ಮ್ಹಾಮೆಸ್‌ಬರಿ ಅಥವಾ ಅಥೆಲ್‌ನ್ಯೆನ ಮಠಾಧಿಪತಿಯಾದನೆಂದೂ, ಅವನನ್ನು ಸನ್ಯಾಸಿಗಳು ಕೊಲೆ ಮಾಡಿದರೆಂದೂ ಕತೆಗಳಿವೆ. ಆದರೆ ಈ ದುರದೃಷ್ಟವು ಪ್ರಾಯಶಃ ಬೇರಾವುದೋ ಜಾನ್‌ಗೆ ಸಂಭವಿಸಿದ್ದಿರಬಹುದು.

ಜಾನ್‌ನ ಮುಂದಿನ ಪುಸ್ತಕ ಖೋಟಾ ಡಯೋನಿಸಿಯಸ್‌ನ ಗ್ರೀಕ್ ಕೃತಿಯೊಂದರ ಅನುವಾದ. ಈ ಕೃತಿಯು ಮಧ್ಯಯುಗದ ಆರಂಭದಲ್ಲಿ ಬಹು ಪ್ರಸಿದ್ಧವಾಗಿತ್ತು. ಸಂತ ಪೌಲ್ ಅಥೆನ್ಸ್‌ನಲ್ಲಿ ಬೋಧಿಸುತ್ತಿದ್ದಾಗ, 'ಅವನಿಗೆ ಅಂಟಿಕೊಂಡಿದ್ದ ಮತ್ತು ನಂಬಿದ್ದ ಕೆಲವರಲ್ಲಿ ನ್ಯಾಯಮಂಡಲಿಯ ಸದಸ್ಯ ಡಯೋನಿಸಿಯಸ್‌ನೂ ಒಬ್ಬ' (ವಿಧಿ ೧೮, ೩೪). ಈ ವ್ಯಕ್ತಿಯ ಬಗ್ಗೆ ಸದ್ಯಕ್ಕೆ ಬೇರೇನೂ ತಿಳಿದಿಲ್ಲವಾದರೂ ಮಧ್ಯಯುಗದಲ್ಲಿ ಹೆಚ್ಚಿನ ವಿಷಯ ತಿಳಿದಿತ್ತು. ಅವನು ಫ್ರಾನ್ಸ್‌ಗೆ ಹೋಗಿ ಅಲ್ಲಿ ಸಂತ ಡೆನಿಸ್‌ನ ಸನ್ಯಾಸಿನಿಮಠವನ್ನು ಸ್ಥಾಪಿಸಿದನಂತೆ; ಹೀಗೆಂದು ಕನಿಷ್ಠ ಪಕ್ಷ ಹಿಲ್‌ಡ್ಯುಯಿನ್ ಹೇಳುತ್ತಾನೆ, ಅವನು ಜಾನ್ ಫ್ರಾನ್ಸ್‌ಗೆ ಬರುವ ಮುಂಚೆಯಷ್ಟೇ ನ್ಯಾಯಮಂಡಳಿಯ ಸದಸ್ಯನಾಗಿದ್ದವನು. ಅದಕ್ಕೂ ಮಿಗಿಲಾಗಿ, ಅವನು ನವಪ್ಲೇಟೋವಾದ ಮತ್ತು ಕ್ರೈಸ್ತಮತಧರ್ಮಗಳ ಸಾಮರಸ್ಯವನ್ನು ಸಾಧಿಸಿದ ಒಂದು ಮುಖ್ಯ ಗ್ರಂಥದ ರಚಯಿತನೆಂಬ ಹೆಸರು ಪಡೆದಿದ್ದ. ಈ ಕೃತಿಯ ತೇದಿ ಗೊತ್ತಿಲ್ಲ; ಅದು ೫೦೦ ರ ನಂತರದ್ದೂ ಪ್ಲಾಟಿಸನ್‌ಗಿಂತ ಮುಂಚಿನದೂ ಆಗಿತ್ತೆಂಬುದು ಖಂಡಿತ. ಅದು ಪೂರ್ವಭಾಗದಲ್ಲಿ ಹೆಸರುವಾಸಿಯಾಗಿತ್ತು, ಜನಮೆಚ್ಚುಗೆಯನ್ನೂ ಗಳಿಸಿತ್ತು, ಆದರೆ ೮೨೭ ರಲ್ಲಿ ಗ್ರೀಕ್ ಚಕ್ರವರ್ತಿ ಮೈಕೇಲ್ ಅದರ ಪ್ರತಿಯೊಂದನ್ನು ಲೂಯಿಸ್ ದ ಪಯಸ್‌ಗೆ ಕಳಿಸಿಕೊಟ್ಟಾಗ ಅವನು ಅದನ್ನು ಮೇಲೆ ಹೇಳಿದ ಹಿಲ್‌ಡ್ಯುಯಿನ್‌ಗೆ ಕೊಡುವವರೆಗೆ ಪಶ್ಚಿಮದಲ್ಲಿ ಅದು ಸಾಮಾನ್ಯವಾಗಿ ಯಾರಿಗೂ ಗೊತ್ತಿರಲಿಲ್ಲ.. ಅದು ಸಂತ ಪೌಲ್‌ನ ಹೆಸರಿನ ಸನ್ಯಾನಿನಿಮಠದ ಸ್ಥಾಪಕನಾದ ಅವನ ಶಿಷ್ಯನೊಬ್ಬನು ಬರೆದದ್ದೆಂದು ಶ್ರದ್ಧೆಗೊಂಡು ಅದರಲ್ಲಿ ಏನೇನಿದೆಯೆಂದು ತಿಳಿಯಲು ಆಶಿಸಿದರೂ, ಜಾನ್ ಬರುವವರೆಗೂ ಅದನ್ನು ಯಾರೂ ಭಾಷಾಂತರಿಸಲಾಗಲಿಲ್ಲ. ಅವನು ಭಾಷಾಂತರಿಸಿದ, ಅದನ್ನವನು ಸಂತೋಷದಿಂದ ಮಾಡಿರಬೇಕು, ಯಾಕೆಂದರೆ ಅವನ ಅಭಿಪ್ರಾಯಗಳೂ ಖೋಟಾ ಡಯೋನಿಸಿಯಸ್‌ನವಕ್ಕೆ ತೀರ ಸನಿಹವಾದವುಗಳು; ಆನಂತರ ಅವನು ಪಶ್ಚಿಮದ ಕ್ಯಾಥೋಲಿಕ್ ತತ್ವಜ್ಞಾನದ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿದ.

ಜಾನ್‌ನ ಭಾಷಾಂತರವನ್ನು ಪೋಪ್ ನಿಕೋಲಾಸ್‌ಗೆ ೮೬೦ ರಲ್ಲಿ ಕಳಿಸಲಾಯಿತು. ಅದರ ಪ್ರಕಟಣೆಗೆ ತನ್ನ ಅನುಮತಿ ಪಡೆಯದೇ ಇದ್ದುದರಿಂದ ಪೋಪ್‌ಗೆ ಕೋಪ ಬಂತು, ಜಾನ್‌ನನ್ನು ರೋಮ್‌ಗೆ ರವಾನಿಸಬೇಕೆಂದು ಚಾರ್ಲ್ಸ್‌ಗೆ ಆಜ್ಞೆ ಮಾಡಿದ; ಆದರೆ ಆ ಆಜ್ಞೆಯನ್ನು ಗಮನಕ್ಕೇ ತೆಗೆದುಕೊಳ್ಳಲಿಲ್ಲ. ಅದರ ವಿಷಯದ ಬಗ್ಗೆ, ಅದರಲ್ಲೂ ಭಾಷಾಂತರಕಾರ್ಯದಲ್ಲಿನ ವಿದ್ವತ್ತಿನ ಬಗ್ಗೆ ಅವನಿಗೆ ಯಾವ ದೋಷವೂ ಕಂಡುಬರಲಿಲ್ಲ. ಉತ್ಕೃಷ್ಟ ಗ್ರೀಕ್‌ನಾಗಿದ್ದ ಅವನ ಗ್ರಂಥಪಾಲಕ ಅನಾಸ್ತೇಸಿಯಸ್‌ಗೆ ಅಭಿಪ್ರಾಯ ನೀಡಲು ಅದನ್ನು ಕೊಟ್ಟ. ದೂರದ ಕ್ರೈಸ್ತೇತರ ದೇಶದವನೊಬ್ಬ ಗ್ರೀಕ್ ಭಾಷೆಯ ಮೇಲೆ ಅಂಥ ಅಸಾಧಾರಣ ಪ್ರಭುತ್ವ ಹೊಂದಿದ್ದಕ್ಕಾಗಿ ಆಶ್ಚರ್ಯಪಟ್ಟ.

ಜಾನ್‌ನ ಬಹು ಮಹತ್ವದ ಕೃತಿ (ಗ್ರೀಕ್‌ನಲ್ಲಿ) 'ಆನ್ ದ ಡಿವಿಷನ್ ಆಫ್ ನೇಚರ್'. ಈ ಪುಸ್ತಕವನ್ನು ಪ್ರೌಢ ಕಾಲಗಳಲ್ಲಿ 'ವಾಸ್ತವಿಕ' ಎಂದು ಕರೆಯಬಹುದಾಗಿತ್ತು; ಅಂದರೆ ಪ್ಲೇಟೋನಂತೆಯೇ ವೈಶ್ವಿಕಗಳು ನಿರ್ದಿಷ್ಟಗಳಿಗೆ ಮೊದಲೇ ಆಗಿರುವಂತಹವು ಎನ್ನುತ್ತದೆ. 'ಪ್ರಕೃತಿ'ಯಲ್ಲಿ ಅವನು ಇರುವುದನ್ನಲ್ಲದೆ ಇಲ್ಲದಿರುವುದನ್ನೂ ಸೇರಿಸುತ್ತಾನೆ. ಇಡೀ ನಿಸರ್ಗವನ್ನು ನಾಲ್ಕು ವರ್ಗಗಳಾಗಿ ವಿಂಗಡಿಸುತ್ತಾನೆ: (೧) ಸೃಷ್ಟಿಸುವುದಾದರೂ ಸೃಷ್ಟಿತವಲ್ಲದವು; (೨) ಸೃಷ್ಟಿಸುವ ಮತ್ತು ತಾವೇ ಸೃಷ್ಟಿಯಾಗಿರುವಂತಹವು; (೩) ಸೃಷ್ಟಿತವಾಗಿದ್ದರೂ ಸೃಷ್ಟಿಸಲಾರದಂತಹವು: ಮತ್ತು (೪) ಸೃಷ್ಟಿತವೂ ಅಲ್ಲದ ಸೃಷ್ಟಿಸಲಾರದ್ದೂ ಆದಂತಹವು. ಮೊದಲನೆಯದು ದೇವರು ಎಂಬುದು ಸ್ಪಷ್ಟವಾಗಿಯೇ ಇದೆ. ಎರಡನೆಯದು (ಪ್ಲೇಟೋ ಮಾದರಿಯ) ಆದರ್ಶರೂಪಗಳು, ಮೂರನೆಯದು, ಕಾಲ-ಅವಕಾಶಬದ್ಧ ವಸ್ತುಗಳು. ನಾಲ್ಕನೆಯದು, ಆಶ್ಚರ್ಯವೆಂಬಂತೆ, ಮತ್ತೆ ದೇವರು, ಸೃಷ್ಟಿಕರ್ತನಲ್ಲದೆ ಎಲ್ಲ ವಸ್ತುಗಳ ಕೊನೆ ಮತ್ತು ಉದ್ದೇಶ. ದೇವರಿಂದ ಮೂಡಿದ ಎಲ್ಲವೂ ಅವನನ್ನು ಸೇರಲು ಹೆಣಗುತ್ತವೆ; ಹೀಗಾಗಿ ಎಲ್ಲದರ ಅಂತಿಮವೂ ಆರಂಭವೇ. ಏಕ ಮತ್ತು ಅನೇಕ ನಡುವಣ ಸೇತುವೆಯೆಂದರೆ ದೇವವಾಕ್ಕು (ದ ಲಾಗಸ್).

ಇಲ್ಲದವುಗಳ ವಲಯದಲ್ಲಿ ಅವನು ಅನೇಕ ವಸ್ತುಗಳು ಸೇರುತ್ತವೆ, ಉದಾಹರಣೆಗೆ, ಅರ್ಥಮಾಡಿಕೊಳ್ಳಬಹುದಾದ ಜಗತ್ತಿಗೆ ಸೇರದ ಭೌತ ಪದಾರ್ಥಗಳು, ಮತ್ತು ಪಾಪ, ಅಂದರೆ ದೈವಿಕ ವಿನ್ಯಾಸದ ನಷ್ಟ. ಸೃಷ್ಟಿಸುವುದು ಮತ್ತು ಸೃಷ್ಟಿತವಲ್ಲದ್ದು ಮಾತ್ರವೇ ಸತ್ವಭರಿತ ಅಸ್ತಿತ್ವವನ್ನು ಹೊಂದಿದವು; ಅದೇ ಎಲ್ಲದರ ಸತ್ವ, ದೇವರು ಎಲ್ಲ ವಸ್ತುಗಳ ಆರಂಭ, ಮಧ್ಯ ಮತ್ತು ಕೊನೆ. ದೇವರ ಸತ್ವವು ಮನುಷ್ಯರಿಗೆ ಮಾತ್ರವಲ್ಲ ದೇವದೂತರಿಗೂ ಅಜ್ಞೇಯವಾದುದು. ಅವನಿಗೂ ಅವನು, ಒಂದರ್ಥದಲ್ಲಿ, ಅಜ್ಞೇಯನೇ. 'ದೇವರಿಗೆ ತಾನಾರೆಂಬುದು, ತಾನು ಏನೆಂಬುದು ತಿಳಿಯದು, ಏಕೆಂದರೆ ಅವನಿಗೆ 'ಏನು' ಅಲ್ಲ; ಕೆಲವು ದೃಷ್ಟಿಗಳಲ್ಲಿ

ಅವನು ತನಗೇ ಮತ್ತು ಎಲ್ಲ ಬುದ್ಧಿಜೀವಿಗಳಿಗೆ ಅಗ್ರಾಹ್ಯ.'[೨೨೧] ವಸ್ತುಗಳ ಇರುವಿಕೆಯಲ್ಲಿ ದೇವರ ಇರುವಿಕೆಯನ್ನು ಕಾಣಬಹುದು; ಅವುಗಳ ವ್ಯವಸ್ಥೆಯಲ್ಲಿ ಅವನ ವಿವೇಚನೆಯು ಕಾಣಿಸುತ್ತದೆ; ಚಲನೆಯಲ್ಲಿ ಅವನ ಜೀವನ ಕಾಣಿಸುತ್ತದೆ. ಅವನ ಇರುವಿಕೆಯೇ ತಂದೆ, ವಿವೇಚನೆಯೇ ಮಗ. ಅವನ ಬದುಕು ಪರಿಶುದ್ಧ ಪ್ರೇತಾತ್ಮ. ದೇವರಿಗೆ ಯಾವ ಹೆಸರೂ ಸಮಂಜಸವಲ್ಲ ಎಂಬ ಡಯೋನಿಸಿಯಸ್‌ನ ಅಭಿಪ್ರಾಯ ಸರಿ. ಸಮರ್ಥಕ ಮತಧರ್ಮಶಾಸ್ತ್ರದಲ್ಲಿ (ಅಫರ್ಮೇಟಿವ್ ಥಿಯಾಲಜಿ) ಅವನನ್ನೇ ಸತ್ಯ, ಶಿವ, ಸಾರ ಎಂದೆಲ್ಲ ಕರೆಯಲಾಗುತ್ತದೆ; ಆದರೆ ಅಂಥ ಸಮರ್ಥನೆಗಳು ಸಾಂಕೇತಿಕವಾಗಿ ಮಾತ್ರ ಸತ್ಯ, ಯಾಕೆಂದರೆ ಅಂಥ ಆಖ್ಯಾನಗಳೆಲ್ಲ ವಿರೋಧಗಳನ್ನು ಹೊಂದಿದವು, ಆದರೆ ದೇವರಿಗೆ ವಿರೋಧವಾದುದು ಇಲ್ಲ.

ಸೃಷ್ಟಿಸುವ ಮತ್ತು ಸೃಷ್ಟಿತವಾದ ವರ್ಗದ ವಸ್ತುಗಳು ಮೂಲೋದ್ದೇಶಗಳು ಅಥವಾ ಮಾತೃಕೆ (ಪ್ರೋಟೋಟೈಪ್)ಗಳು, ಅಥವಾ ಪ್ಲೇಟೋನ ಆದರ್ಶರೂಪಗಳು. ಈ ಮೂಲೋದ್ದೇಶಗಳ ಒಟ್ಟಂದವೇ ದೇವವಾಕ್ಕು. ಆದರ್ಶರೂಪಗಳ ಜಗತ್ತು ಚಿರಂತನವಾದುದು, ಆದರೂ ಸೃಷ್ಟಿತವಾದುದು. ಪರಿಶುದ್ಧ ಪ್ರೇತಾತ್ಮದ ಪ್ರಭಾವದಿಂದ ಈ ಆದರ್ಶರೂಪಗಳು, ಭೌತಿಕತೆಯು ಭ್ರಮಾತ್ಮಕವಾದ ನಿರ್ದಿಷ್ಟ ವಸ್ತುಗಳಿಗೆ ಕಾರಣವಾಗುತ್ತವೆ. ದೇವರು 'ಶೂನ್ಯ'ದಿಂದ ಎಲ್ಲವನ್ನೂ ಸೃಷ್ಟಿಸಿದ ಎಂದರೆ, ಈ 'ಶೂನ್ಯ'ವು, ಎಲ್ಲ ಜ್ಞಾನಕ್ಕೂ ಅತೀತನಾದ ದೇವರೇ ಎಂದು ಅರ್ಥಮಾಡಿಕೊಳ್ಳಬೇಕು.

ಸೃಷ್ಟಿ ಎಂಬುದು ನಿರಂತರ ಪ್ರಕ್ರಿಯೆ; ಎಲ್ಲ ಸೀಮಿತ ವಸ್ತುಗಳ ಒಟ್ಟಂದವೇ ದೇವರು. ಸೃಷ್ಟವಸ್ತುವು (ಕ್ರಿಯೇಚರ್) ದೇವರಿಂದ ಭಿನ್ನವಾದ ಒಂದು ಇರುವಿಕೆಯಲ್ಲ. ಸೃಷ್ಟವಸ್ತುವು ದೇವರಲ್ಲಿ ಇರುತ್ತದೆ, ದೇವರು ಸೃಷ್ಟವಸ್ತುವಿನಲ್ಲಿ ಅವರ್ಣನಿಯ ರೀತಿಯಲ್ಲಿ ತೋರಿಸಿಕೊಳ್ಳುತ್ತಾನೆ. 'ಪರಿಶುದ್ಧ ತ್ರಿಮೂರ್ತಿತ್ವವು ನಮ್ಮಲ್ಲಿನ ಮತ್ತು ತನ್ನಲ್ಲಿನದನ್ನು ಪ್ರೀತಿಸುತ್ತದೆ;[೨೨೨] ಅದು ತನ್ನಲ್ಲಿಯೇ ಕಾಣುತ್ತದೆ ಮತ್ತು ಚಲಿಸುತ್ತದೆ.'

ಪಾಪದ ಆಕರ ಸ್ವಾತಂತ್ರ್ಯ: ಅದಕ್ಕೆ ಕಾರಣ ಮನುಷ್ಯನು ದೇವರ ಕಡೆ ತಿರುಗುವುದರ ಬದಲು ತನ್ನ ಕಡೆಯೇ ತಿರುಗಿದ್ದು. ಕೆಡುಕಿಗೆ ದೇವರಲ್ಲಿ ನೆಲೆಯಿಲ್ಲ, ಯಾಕೆಂದರೆ ದೇವರಲ್ಲಿ ಕೆಡುಕಿನ ಕಲ್ಪನೆಯಿಲ್ಲ. ಕೆಡುಕು ಇರುವಿಕೆಯಲ್ಲ, ಹಾಗಾಗಿ ಅದಕ್ಕೆ ನೆಲೆಯಿಲ್ಲ. ನೆಲೆಯಿದ್ದಿದ್ದರೆ ಅದು ಆವಶ್ಯಕವಾಗುತ್ತಿತ್ತು; ಕೆಡುಕೆ ದೇವರಾಹಿತ್ಯ.

ದೇವವಾಕ್ಕು ಅನೇಕವನ್ನು ಏಕದಲ್ಲಿಯೂ ಮಾನವನನ್ನು ದೇವರಲ್ಲಿಯೂ ಮತ್ತೆ ಸೇರಿಸುವ ಒಂದು ತತ್ವ; ಹೀಗಾಗಿ ಅದು ಜಗದ್ರಕ್ಷಕ ತತ್ವ. ದೇವರೊಂದಿಗೆ

---

೨೨೧. ನೋಡಿ, ಎಲ್ಲ ಗ್ರಹಿಕೆಯ (ಕಾಗ್ನಿಷನ್) ಅಭಾವದ ಬಗ್ಗೆ. ಅವನ ಪ್ರಕಾರ ಯಾವ ಸತ್ಯವೂ ಪೂರ್ತಿ ಸತ್ಯವಲ್ಲ, ಆದರೆ ಇರುವ ಆತ್ಯಂತಿಕ ಸತ್ಯವೂ 'ಬೌದ್ಧಿಕವಾಗಿ ತಿದ್ದಲಾಗದ್ದು.

೨೨೨. ನೋಡಿ ಸ್ಪಿನೋಜ.

ಮನುಷ್ಯನು ಐಕ್ಯಗೊಂಡಾಗ ಐಕ್ಯವನ್ನು ಆಗುಮಾಡುವ ಮಾನವಭಾಗವು ದೈವಿಕವಾಗುತ್ತದೆ.

ನಿರ್ದಿಷ್ಟ ವಸ್ತುಗಳನ್ನು ಒಟ್ಟಾರೆ ನಿರಾಕರಿಸುವುದರ ಮೂಲಕ ಜಾನ್ ಅರಿಸ್ಟಾಟಲಿಯನ್‌ರನ್ನು ಒಪ್ಪುವುದಿಲ್ಲ. ಪ್ಲೇಟೋನನ್ನು ಅವನು ತತ್ವಜ್ಞಾನಿಗಳ ಶಿಖರವೆನ್ನುತ್ತಾನೆ. ಆದರೆ ಅವನ ಇರುವಿಕೆಯ ಮೊದಲ ಮೂರುವಿಧಗಳು ಪರೋಕ್ಷವಾಗಿ ಅರಿಸ್ಟಾಟಲ್‌ನ ಚಲಿಸುವ-ಚಲಿತವಲ್ಲದ, ಚಲಿಸುವ-ಚಲಿತ ಮತ್ತು ಚಲಿತ ಆದರೆ ಚಲಿಸದ ತತ್ವಗಳಿಂದ ಸಾಧಿತವಾದವು. ಜಾನ್ ವ್ಯವಸ್ಥೆಯಲ್ಲಿನ, ಸೃಷ್ಟಿಸದ್ದೂ ಅಲ್ಲದ ಸೃಷ್ಟಿತವೂ ಅಲ್ಲದ, ಇರುವಿಕೆಯ ನಾಲ್ಕನೆಯ ಬಗೆಯು ಎಲ್ಲ ವಸ್ತುಗಳೂ ದೇವರಲ್ಲಿಗೆ ಮರಳುತ್ತವೆ ಎಂಬ ಡಯೋನಿಸಿಯಸ್‌ನ ಸಿದ್ಧಾಂತದಿಂದ ರೂಪಿತವಾದುದು.

ಜಾನ್ ದ ಸ್ಕಾಟ್‌ನ ಅಸಾಂಪ್ರದಾಯಿಕತೆಯು ಈ ಮೇಲಿನ ನಿರೂಪಣೆಯಿಂದ ವಿದಿತವಾಗುತ್ತದೆ. ಸೃಷ್ಟವಸ್ತುಗಳಿಗೆ ಸಾರಭೂತ ವಾಸ್ತವಿಕತೆಯನ್ನು ನಿರಾಕರಿಸುವ ಅವನ ಸರ್ವದೇವತಾತ್ಮಕವಾದವು ಕ್ರೈಸ್ತ ಸಿದ್ಧಾಂತಕ್ಕೆ ವಿರುದ್ಧವಾದುದು. 'ಶೂನ್ಯ'ದಿಂದ ಸೃಷ್ಟಿಯ ಬಗೆಗಿನ ಅವನ ವ್ಯಾಖ್ಯಾನವು ಯಾವನೇ ವಿವೇಕಿ ಮತಧರ್ಮಶಾಸ್ತ್ರಜ್ಞನೂ ಒಪ್ಪುವಂತಹುದಲ್ಲ. ಪ್ಲಾಟಿನಸ್‌ನದನ್ನು ಬಹುತೇಕ ಹೋಲುವ ಅವನ ತ್ರಿಮೂರ್ತಿತ್ವವು ಮೂವರು ವ್ಯಕ್ತಿಗಳ ಸಮಾನತೆಯನ್ನುಳಿಸಿಕೊಳ್ಳುವುದರಲ್ಲಿ ವಿಫಲವಾಗುತ್ತದೆ, ಆದರೆ ಈ ಅಂಶದಲ್ಲಿ ಅವನು ತನ್ನನ್ನು ಸುರಕ್ಷಿತವಾಗಿರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಈ ಮತಧರ್ಮವಿರುದ್ಧದ ಮೂಲಕ ಅವನ ಸ್ವತಂತ್ರ ಮನೋಭಾವವು ವ್ಯಕ್ತವಾಗುತ್ತದೆ; ಅದು ಒಂಬತ್ತನೆಯ ಶತಮಾನದಲ್ಲಿ ಆಶ್ಚರ್ಯಜನಕವಾಗಿತ್ತು. ಅವನ ನವಪ್ಲೇಟೋವಾದವು, ನಾಲ್ಕು ಮತ್ತು ಐದನೆಯ ಶತಮಾನಗಳಲ್ಲಿ ಗ್ರೀಕ್ ಪಾದ್ರಿಗಳಲ್ಲಿದ್ದಂತೆ, ಐರ್ಲಂಡ್‌ನಲ್ಲಿ ಸಾಮಾನ್ಯವಾಗಿದ್ದಿರಬೇಕು. ಐದರಿಂದ ಒಂಬತ್ತನೆಯ ಶತಮಾನಗಳವರೆಗೆಗಿನ ಐರಿಶ್ ಕ್ರೈಸ್ತಮತದ ಬಗ್ಗೆ ನಾವು ಹೆಚ್ಚು ತಿಳಿದಂತೆ, ಅವನು ಕಡಿಮೆ ಆಶ್ಚರ್ಯಜನಕನಾಗಿದ್ದಿರಬಹುದಾದ ಪರಿಸ್ಥಿತಿಯು ಸ್ಪಷ್ಟವಾಗಬಹುದು. ಮತ್ತೊಂದೆಡೆಯಲ್ಲಿ, ಅವನಲ್ಲಿನ ಬಹುತೇಕ ಮತಧರ್ಮವಿರೋಧವು, ಸಂತ ಪೌಲ್‌ನ ಜೊತೆ ಇತ್ತೆಂದು ಭಾವಿಸಲಾದ ಸಂಪರ್ಕದ ಕಾರಣದಿಂದಾಗಿ, ಸಂಪ್ರದಾಯನಿಷ್ಠನೆಂದು ಅವನು ತಪ್ಪಾಗಿ ತಿಳಿದ ಖೋಟಾ-ಡಯೋನಿಸಿಯಸ್‌ನ ಪ್ರಭಾವದಿಂದಾದುದೆಂದು ಹೇಳಬಹುದು.

ಸೃಷ್ಟಿಯು ಕಾಲಾತೀತವೆಂಬ ಅವನ ದೃಷ್ಟಿಯು ಕೂಡ ಮತಧರ್ಮವಿರೋಧಿಯಾದುದಾಗಿದ್ದು, ಜೆನೆಸಿಸ್ ನಿರೂಪಣೆಯು ಅನ್ಯೋಕ್ತಿಯದೆಂದು ಹೇಳಲು ಮತ್ತು ಸ್ವರ್ಗಗಮನ ಮತ್ತು ಪತನಗಳನ್ನು ವಾಚ್ಯರೂಪದಲ್ಲಿ ಅರ್ಥೈಸಬಾರದು ಎಂದು ಹೇಳಲು ಒತ್ತಾಯಿಸುವಂತದು. ಎಲ್ಲ

ಸರ್ವದೇವತಾತ್ಮಕವಾದಿಗಳಂತೆಯೇ ಅವನು ಪಾಪದ ಬಗ್ಗೆ ವಿವರಿಸಲು ಕಷ್ಟಪಡುತ್ತಾನೆ. ಮಾನವನು ಮೂಲತಃ ಪಾಪರಹಿತನೆಂಬುದು ಅವನ ನಿಲವು, ಅವನ ಪಾಪರಾಹಿತ್ಯವು ಲಿಂಗ ತಾರಮ್ಯವಿಲ್ಲದ್ದು. ಆದರೆ ಇದು 'ಹೆಣ್ಣು ಗಂಡುಗಳನ್ನು ಅವನು ಸೃಷ್ಟಿಸಿದ' ಎಂಬ ಹೇಳಿಕೆಗೆ ವಿರೋಧವಾದುದು. ಜಾನ್‌ನ ಪ್ರಕಾರ, ಪಾಪದ ಕಾರಣದಿಂದಾಗಿಯೇ ಮಾನವರು ಗಂಡು ಹೆಣ್ಣುಗಳೆಂದು ವಿಭಜನೆಗೊಂಡರು. ಹೆಣ್ಣು ಗಂಡಸಿನ ಲಾಂಪಟ್ಯ ಮತ್ತು ಪತಿತ ಸ್ವಭಾವವನ್ನೊಳಗೊಳ್ಳುತ್ತಾಳೆ. ಕೊನೆಯಲ್ಲಿ, ಲಿಂಗಭೇದವು ಕಣ್ಮರೆಯಾಗಿ ಶುದ್ಧ ಆತ್ಮಾತ್ಮಕ ದೇಹ ಬಂದುಬಿಡುತ್ತದೆ.[೨೨೩] ಪಾಪವಿರುವುದು ತಪ್ಪಾದ ಇಚ್ಛಾಶಕ್ತಿಯಲ್ಲಿ, ಹಾಗಿಲ್ಲದಿದ್ದರೂ ಒಳ್ಳೆಯದೆಂದು ತಪ್ಪು ತಿಳಿಯುವುದರಲ್ಲಿ. ಅದಕ್ಕೆ ಶಿಕ್ಷೆಯು ಸಹಜ; ಅದಿರುವುದು ಪಾಪಕರ ಬಯಕೆಗಳ ವ್ಯರ್ಥತೆಯನ್ನು ಕಂಡುಕೊಳ್ಳುವುದರಲ್ಲಿ. ಆದರೆ ಶಿಕ್ಷೆಯು ಚಿರಂತನವಲ್ಲ. ಅಂತಿಮವಾಗಿ ದೆವ್ವಗಳೂ ರಕ್ಷಿತವಾಗುತ್ತವೆ, ಆದರೆ ಇತರರಿಗಿಂತ ತಡವಾಗಿ, ಎಂದು ಆರಿಜೆನ್‌ನಂತೆ ಜಾನ್‌ನೂ ಭಾವಿಸುತ್ತಾನೆ.

ಖೋಟಾ-ಡಯೋನಿಸಿಯಸ್‌ನ ಜಾನ್‌ನ ಭಾಷಾಂತರವು ಮಧ್ಯಯುಗದ ಚಿಂತನೆಯ ಮೇಲೆ ಅಗಾಧ ಪ್ರಭಾವವನ್ನು ಬೀರಿತು; ಆದರೆ ನಿಸರ್ಗದ ವಿಭಜನೆಯ ಅವನ ಮಹಾನ್ ಚಿಂತನೆಯು ಅಲ್ಪ ಪ್ರಭಾವ ಬೀರಿತು. ಮತ್ತೆ ಮತ್ತೆ ಅದನ್ನು ಮತಧರ್ಮವಿರೋಧಿಯೆಂದು ಖಂಡಿಸಲಾಯಿತು; ಕೊನೆಗೆ, ೧೨೨೫ ರಲ್ಲಿ, ಪೋಪ್ ಮೂರನೆಯ ಆನರಿಯಸ್ ಅದರ ಎಲ್ಲ ಪ್ರತಿಗಳನ್ನೂ ಸುಟ್ಟುಹಾಕಬೇಕೆಂದು ಆಜ್ಞೆಯಿತ್ತ. ಅದೃಷ್ಟವಶಾತ್ ಈ ಆಜ್ಞೆಯನ್ನು ಸಮರ್ಥವಾಗಿ ಜಾರಿಗೊಳಿಸಲಿಲ್ಲ.

೨೨೩. ವೈದೃಶ್ಯಕ್ಕೆ ಸಂತ ಆಗಸ್ಟೈನ್

೯

ಹನ್ನೊಂದನೆಯ ಶತಮಾನದ ಮತಧರ್ಮಬೋಧನೆಯ ಸುಧಾರಣೆ

ಪಶ್ಚಿಮದ ಪತನದ ನಂತರ ಮೊಟ್ಟ ಮೊದಲನೆಯ ಸಲ ಯೂರೋಪ್ ಹನ್ನೊಂದನೆಯ ಶತಮಾನದಲ್ಲಿ ಮತ್ತೆ ಮತ್ತೆ ನಿಲ್ಲದಂತೆ ವೇಗವಾಗಿ ಪ್ರಗತಿ ಸಾಧಿಸಿತು. ಇಂತಹ ಪ್ರಗತಿಯು ಕ್ಯಾರೋಲಿಂಗಿಯನ್ ಮತಧರ್ಮಸುಧಾರಣೆಯ ಕಾಲದಲ್ಲಿ ಆಗಿತ್ತು, ಆದರೆ ಅದು ಗಟ್ಟಿಯಾದುದಾಗಿರಲಿಲ್ಲ. ಹನ್ನೊಂದನೆಯ ಶತಮಾನದಲ್ಲಿ ಆದ ಉತ್ತಮಿಕೆಯು ಶಾಶ್ವತವೂ ಬಹುಮುಖಿಯೂ ಆದುದಾಗಿತ್ತು. ಆಶ್ರಮವಾಸ ಸುಧಾರಣೆಯೊಂದಿಗೆ ಅದು ಆರಂಭವಾಯಿತು, ಆನಂತರ ಪೋಪ್ ಅಧಿಕಾರ ಮತ್ತು ಚರ್ಚ್ ಆಡಳಿತಗಳಿಗೆ ವಿಸ್ತಾರಗೊಂಡಿತು. ಆ ಶತಮಾನದ ಕೊನೆಯ ವೇಳೆಗೆ, ಪ್ರೌಢ ತತ್ವಜ್ಞಾನಿಗಳು ಉದಯಿಸಿದರು. ನಾರ್ಮನ್‌ರು ಸಾರಾಸೆನ್‌ರನ್ನು ಸಿಸಿಲಿಯಿಂದ ಹೊರಗಟ್ಟಿದರು; ಕ್ರೈಸ್ತರಾಗಿದ್ದ ಹಂಗೇರಿಯನ್‌ರು ಲೂಟಿ ಹೊಡೆಯುವುದನ್ನು ನಿಲ್ಲಿಸಿದರು; ಫ್ರಾನ್ಸ್ ಮತ್ತು ಇಂಗ್ಲಂಡ್‌ಗಳನ್ನು ನಾರ್ಮನ್‌ರು ಗೆದ್ದು ಆ ದೇಶಗಳನ್ನು ಸ್ಕಾಂಡಿನೇವಿಯನ್ ಆಕ್ರಮಗಳಿಂದ ಸ್ವತಂತ್ರಗೊಳಿಸಿದರು. ಬೈಝಾಂಟಿಯನ್ ಪ್ರಭಾವವು ಹೆಚ್ಚಾಗಿದ್ದ ಕಡೆಗಳನ್ನು ಬಿಟ್ಟಂತೆ ಒರಟಾಗಿದ್ದ ವಾಸ್ತುಶಿಲ್ಪವು ಇದ್ದಕ್ಕಿದ್ದಂತೆ ಉತ್ತುಂಗವನ್ನು ಸಾಧಿಸಿತು. ಶಿಕ್ಷಣದ ಮಟ್ಟವು ಪುರೋಹಿತವರ್ಗದಲ್ಲಿ ಅಪಾರವಾದ ಪ್ರಮಾಣದಲ್ಲಿಯೂ, ಸಾಮಾನ್ಯ ಶ್ರೀಮಂತವರ್ಗದವರಲ್ಲಿ ತಕ್ಕಮಟ್ಟಿಗೂ ಹೆಚ್ಚಾಯಿತು.

ಆರಂಭಿಕ ಹಂತಗಳಲ್ಲಿ ಮುಂದಾಳುಗಳ ಮನಸ್ಸಿನಲ್ಲಿ ಈ ಸುಧಾರಣೆಯ ಚಳವಳಿಯು ನೈತಿಕ ಮೌಲ್ಯಗಳಿಂದ ಪ್ರೇರಿತವಾಗಿತ್ತು. ಮತಧಾರ್ಮಿಕ ಹಾಗೂ ಮತಧರ್ಮೇತರ ಪುರೋಹಿತವರ್ಗವು ಕೆಟ್ಟ ಹಾದಿ ಹಿಡಿದಿತ್ತು, ಅದನ್ನು ತಮ್ಮ ಆದರ್ಶಗಳಿಗನುಗುಣವಾಗಿ ನಡೆಯುವಂತೆ ಮಾಡುವುದರಲ್ಲಿ ತೊಡಗಿತ್ತು. ಆದರೆ ಈ ಶುದ್ಧ ನೈತಿಕ ಪ್ರೇರಣೆಯ ಹಿಂದೆ, ಪ್ರಾಯಶಃ ಅರಿವಿಲ್ಲದಂತೆಯೇ, ಮತ್ತೊಂದು ಕ್ರಮೇಣ ತೋರಿಕೊಳ್ಳುತ್ತ ಹೋಯಿತು. ಈ ಪ್ರೇರಣೆಯು ಪುರೋಹಿತವರ್ಗ

ಮತ್ತು ಸಾಮಾನ್ಯ ಜನತೆಯನ್ನು ಸಂಪೂರ್ಣ ಬೇರೆಯಾಗುವಂತೆ ಮಾಡಿ ಆ ಮೂಲಕ ರೈತನ ಅಧಿಕಾರವನ್ನು ಹೆಚ್ಚಿಸುವುದಾಗಿತ್ತು. ಹೀಗಾಗಿ ಚರ್ಚ್ ಸುಧಾರಣೆಯ ಸಾಫಲ್ಯವು ಚಕ್ರವರ್ತಿ ಮತ್ತು ಪೋಪ್‌ರ ನಡುವಣ ಸಂಘರ್ಷವು ತೀವ್ರವಾಗುವುದರತ್ತ ನೇರವಾಗಿ ಸಾಗಿತು.

ಪುರೋಹಿತವರ್ಗವು ಈಜಿಪ್ಟ್, ಬ್ಯಾಬಿಲೋನಿಯ ಮತ್ತು ಪರ್ಷಿಯಗಳಲ್ಲಿ ಬೇರೊಂದು ಪ್ರಬಲ ಜಾತಿಯಾಗಿಬಿಟ್ಟಿತ್ತಾದರೂ, ಗ್ರೀಸ್ ಅಥವಾ ರೋಮ್‌ನಲ್ಲಿ ಹಾಗಾಗಲಿಲ್ಲ. ಪ್ರಾಚೀನ ಕ್ರೈಸ್ತ ಚರ್ಚ್‌ಗಳಲ್ಲಿ ಪುರೋಹಿತವರ್ಗ ಮತ್ತು ಸಾಮಾನ್ಯ ಜನತೆಯ ನಡುವಣ ಭೇದವು ಕ್ರಮೇಣ ಉದಯಿಸಿತು; ಹೊಸ ಒಡಂಬಡಿಕೆಯಲ್ಲಿ 'ಬಿಷಪ್'ರ ಬಗ್ಗೆ ಓದುವಾಗ ಈಗ ನಮಗೆ ತಿಳಿದ ಅರ್ಥದಲ್ಲಿ ಬಳಕೆಯಾಗಿಲ್ಲದಿರುವುದು ತಿಳಿಯುತ್ತದೆ. ಪುರೋಹಿತವರ್ಗವನ್ನು ಸಾಮಾನ್ಯ ಜನರಿಂದ ಬೇರ್ಪಡಿಸುವುದರಲ್ಲಿ ಎರಡು ಮುಖಗಳಿವೆ: ಒಂದು ಸೈದ್ಧಾಂತಿಕವಾದರೆ, ಮತ್ತೊಂದು ರಾಜಕೀಯವಾದುದು; ರಾಜಕೀಯ ಮುಖವು ಸೈದ್ಧಾಂತಿಕತೆಯನ್ನು ಆಧರಿಸಿದುದು. ಪುರೋಹಿತವರ್ಗಕ್ಕೆ ಕೆಲವು ಅದ್ಭುತ ಅಧಿಕಾರಗಳಿದ್ದವು, ವಿಶೇಷವಾಗಿ ಧಾರ್ಮಿಕಾಚರಣೆಗಳಿಗೆ – ಸಾಮಾನ್ಯರೂ ಮಾಡಬಹುದಾಗಿದ್ದ ದೀಕ್ಷಾಸ್ನಾನದ ಹೊರತು – ಪುರೋಹಿತವರ್ಗದ ಸಹಾಯವಿಲ್ಲದೆ, ಮದುವೆ, ನಿಷ್ಕೃತಿ (ಆಬ್ಸಲ್ಯೂಷನ್) ಮತ್ತು ತೀವ್ರ ಅಭ್ಯಂಜನ (ಅಂಕ್ಷನ್)ಗಳು ಅಸಾಧ್ಯವಾಗಿದ್ದವು. ಅದಕ್ಕೂ ಮಿಗಿಲಾಗಿ, ಮಧ್ಯಯುಗದಲ್ಲಿ ಸತ್ವಪರಿವರ್ತನ (ಟ್ರಾನ್ಸ್‌ಸಬ್‌ಸ್ಟಾನ್ಸಿಯೇಷನ್) ವನ್ನು ಪುರೋಹಿತನು ಮಾತ್ರವೇ ಸಾಮೂಹಿಕ ಪವಾಡವನ್ನು ಮಾಡಬಹುದಾಗಿತ್ತು. ಹನ್ನೊಂದನೆಯ ಶತಮಾನದಲ್ಲಿ, ೧೦೭೯ ರಲ್ಲಿ, ಸತ್ವಪರಿವರ್ತನ ಸಿದ್ಧಾಂತವು, ದೀರ್ಘಕಾಲದಿಂದಲೂ ಹಾಗೆಂದು ನಂಬಿದ್ದರೂ, ಶ್ರದ್ಧೆಯ ಒಂದು ಮೂಲಭೂತ ಅಂಶವಾಯಿತು.

ವ್ಯಕ್ತಿಯೊಬ್ಬನು ಚಿರಂತನವಾಗಿ ನೆಲೆಸಬೇಕಾದುದು ಸ್ವರ್ಗದಲ್ಲಿಯೋ ಅಥವಾ ನರಕದಲ್ಲಿಯೋ ಎಂಬುದನ್ನು ಅದ್ಭುತವೆನ್ನಲಾದ ತನ್ನ ಅಧಿಕಾರದಿಂದಾಗಿ ಪುರೋಹಿತನು ನಿರ್ಧರಿಸುತ್ತಿದ್ದ. ವ್ಯಕ್ತಿಯು ಬಹಿಷ್ಕೃತನಾಗಿರುವಾಗ ಸತ್ತರೆ, ಅವನು ನರಕಕ್ಕೆ ಹೋಗುತ್ತಿದ್ದ; ಪುರೋಹಿತನು ವಿಧ್ಯುಕ್ತ ಧಾರ್ಮಿಕಾಚರಣೆಗಳನ್ನು ನೆರವೇರಿಸಿದ ಬಳಿಕ ವ್ಯಕ್ತಿಯು ಸತ್ತರೆ ಮತ್ತು ಸೂಕ್ತ ರೀತಿಯಲ್ಲಿ ಪಶ್ಚಾತ್ತಾಪ ಪಟ್ಟಿದ್ದರೆ ಹಾಗೂ ತಪ್ಪೊಪ್ಪಿಕೊಂಡಿದ್ದರೆ, ಅವನು ಅಂತಿಮವಾಗಿ ಸ್ವರ್ಗವನ್ನು ಸೇರುತ್ತಿದ್ದ. ಆದರೆ ಸ್ವರ್ಗಕ್ಕೆ ಹೋಗುವ ಮುಂಚೆ ಅವನು ದೀರ್ಘ ಸಮಯ – ಶುದ್ಧೀಕರಣದ ಯಾತನೆಯನ್ನು ಅನುಭವಿಸುತ್ತ – ಕಾಯಬೇಕಾಗಿತ್ತು. ಪುರೋಹಿತರು ಅವನ ಆತ್ಮಕ್ಕೆ ವಿಶೇಷ ದಿವ್ಯಪೂಜೆ (ಮಾಸ್)ಯನ್ನು ಮಾಡಿ ಈ ಅವಧಿಯನ್ನು ಕಡಿಮೆಮಾಡಬಹುದಾಗಿತ್ತು, ಇದಕ್ಕೆ ತಕ್ಕ ದಕ್ಷಿಣೆಯನ್ನವರು ವಿಧಿಸುತ್ತಿದ್ದರು.

ಇವೆಲ್ಲವನ್ನೂ ಪುರೋಹಿತವರ್ಗ ಹಾಗೂ ಸಾಮಾನ್ಯ ಜನತೆಯು ಒಂದೇ ಬಗೆಯಲ್ಲಿ ಸರಿಯಾದುದೆಂದು ನಂಬಿದ್ದರು, ಅಧಿಕಾರಯುತವಾಗಿ ಚಲಾಯಿಸುತ್ತಿದ್ದ ಮತಸೂತ್ರವೆನಿಸಿತ್ತು. ಮತ್ತೆ ಮತ್ತೆ ಪುರೋಹಿತವರ್ಗದ ಅದ್ಭುತ ಅಧಿಕಾರವು ಸೈನ್ಯಬಲವನ್ನು ಹೊಂದಿದ್ದ ಬಲಿಷ್ಠ ರಾಜರುಗಳದನ್ನೂ ಮೀರಿಸುತ್ತಿತ್ತು. ಆದರೆ ಇದು ಎರಡು ಬಗೆಗಳಲ್ಲಿ ಸೀಮಿತವಾದುದಾಗಿತ್ತು: ಯಾವುದನ್ನೂ ಲೆಕ್ಕಿಸದ ಸಾಮಾನ್ಯ ಜನತೆಯ ಕೋಪೋದ್ರೇಕ ಮತ್ತು ಪುರೋಹಿತವರ್ಗದ ಒಡಕು. ರೋಮ್‌ನ ಜನರು, ಗ್ರೆಗರಿಯ ಕಾಲದವರೆಗೂ, ಪೋಪ್ ಆಗಿದ್ದ ವ್ಯಕ್ತಿಯ ಬಗ್ಗೆ ಅತ್ಯಲ್ಪವೆನ್ನಬಹುದಾದ ಗೌರವವನ್ನು ತೋರಿಸುತ್ತಿದ್ದರು. ಜನ ಅವನನ್ನು ಅಪಹರಿಸುತ್ತಿದ್ದರು, ಬಂಧನದಲ್ಲಿರಿಸುತ್ತಿದ್ದರು, ಅವನಿಗೆ ವಿಷ ಹಾಕುತ್ತಿದ್ದರು ಅಥವಾ ಅವರ ಕೋಪೋದ್ರೇಕವು ತೀವ್ರವಾದಾಗ ಅವನ ವಿರುದ್ಧ ಹೋರಾಡುತ್ತಿದ್ದರು. ಇವೆಲ್ಲ ಅವರ ನಂಬಿಕೆಗಳೊಡನೆ ಹೇಗೆ ಇರಬಹುದು? ಇದಕ್ಕೆ ಸ್ವನಿಯಂತ್ರಣದ ಕೊರತೆಯೂ ಕೆಲವೇಳೆ ಕಾರಣವಾಗಿ, ಅದಕ್ಕಾಗಿ ಮುಂದೆ ಸಾಯುವ ಕಾಲದಲ್ಲಿ ಪಶ್ಚಾತ್ತಾಪಪಡುತ್ತಿದ್ದರು. ಮತ್ತೊಂದು ಕಾರಣ, ಬೇರೆಡೆಗಿಂತ ರೋಮ್‌ನಲ್ಲಿ ಕಡಿಮೆ ನಡೆಯುತ್ತಿತ್ತು, ಕೆಲ ವೇಳೆ ರಾಜರುಗಳು ತಮ್ಮ ರಾಜ್ಯದಲ್ಲಿ ಬಿಷಪ್‌ರು ತಮ್ಮ ನೇರಕ್ಕೆ ಬಗ್ಗುವಂತೆ ಮಾಡಿ, ತಮ್ಮನ್ನು ನರಕದಿಂದ ಪಾರುಮಾಡಿಕೊಳ್ಳುತ್ತಿದ್ದುದು. ಹೀಗಾಗಿ ಚರ್ಚ್‌ನ ಶಿಸ್ತು ಮತ್ತು ಕೇಂದ್ರೀಕೃತ ಮತಧಾರ್ಮಿಕ ಆಡಳಿತ ಇವುಗಳು ಪುರೋಹಿತವರ್ಗದ ಅಧಿಕಾರಕ್ಕೆ ಆವಶ್ಯಕವಾಗಿದ್ದವು. ಹನ್ನೊಂದನೆಯ ಶತಮಾನದಲ್ಲಿ, ಪುರೋಹಿತ ವರ್ಗದ ಸುಧಾರಣೆಯ ಮೂಲಕ ಈ ಉದ್ದೇಶಗಳು ನೆರವೇರಿದವು.

ಒಟ್ಟಾರೆ ಪುರೋಹಿತವರ್ಗದ ಅಧಿಕಾರವು ತಕ್ಕಮಟ್ಟಿಗಿನ ಮತಧರ್ಮಬೋಧಕರ ವ್ಯಕ್ತಿಗತ ತ್ಯಾಗದ ಮೂಲಕ ನಡೆಯಬೇಕಾಗಿತ್ತು. ಪುರೋಹಿತ ಸುಧಾರಕರು ತಮ್ಮ ಶಕ್ತಿಯನ್ನು ಸಂಚಯಿಸಿಕೊಂಡದ್ದು ಆ ಎರಡು ಮಹಾ ದೋಷಗಳ ವಿರುದ್ಧ. ಇವೆರಡರ ಬಗ್ಗೆ ಒಂದಷ್ಟು ವಿವರಿಸಬೇಕು.

ಮತಧರ್ಮಾಭಿಮಾನಿಗಳ ಔದಾರ್ಯದಿಂದಾಗಿ ಚರ್ಚ್ ಶ್ರೀಮಂತವಾಗಿತ್ತು. ಅನೇಕ ಮಂದಿ ಬಿಷಪ್‌ರಿಗೆ ತೋಟಗಳಿದ್ದವು, ಕೆಲ ಮಂದಿ ಪ್ಯಾರಿಶ್ ಪುರೋಹಿತರಿಗೂ ನಿಯಮವೆಂಬಂತೆ ಆ ಕಾಲದಲಿ ಅನುಕೂಲಕರ ಬದುಕಿಗೆ ಬೇಕಾದಂತಹ ಆರ್ಥಿಕ ಆಕರಗಳಿದ್ದವು. ಸಾಮಾನ್ಯವಾಗಿ ಬಿಷಪ್‌ರ ನೇಮಕಾತಿಯು ವ್ಯಾವಹಾರಿಕವಾಗಿ ರಾಜರ ಕೈಯಲ್ಲಿತ್ತು, ಆದರೆ ಕೆಲವು ವೇಳೆ ಊಳಿಗಮಾನ್ಯ ಶ್ರೀಮಂತರ ಕೈಯಲ್ಲೂ ಇತ್ತು. ರಾಜರು ಬಿಷಪ್‌ಗಿರಿಯನ್ನು ಮಾರಾಟಮಾಡುವುದೂ ಇತ್ತು; ಹಾಗೆ ನೋಡಿದರೆ, ಇದರಿಂದ ಅವನಿಗೆ ಸಾಕಷ್ಟು ಆದಾಯವೂ ಇತ್ತು. ಬಿಷಪ್‌ರು, ಇದಕ್ಕೆ ಪ್ರತಿಯಾಗಿ, ತನ್ನ ಅಧಿಕಾರವ್ಯಾಪ್ತಿಯ ಮತಧಾರ್ಮಿಕ ಹುದ್ದೆಗಳನ್ನವರು ಮಾರಾಟಮಾಡುತ್ತಿದ್ದರು. ಇದು ರಹಸ್ಯ ವ್ಯವಹಾರವೇನೂ

ಆಗಿರಲಿಲ್ಲ. ಬಿಷಪ್‌ರ ಪರವಾಗಿ ಗೆರ್ಬರ್ಟ್ (ಎರಡನೆಯ ಸಿಲ್ವೆಸ್ಟರ್) ಹೀಗೆ ಹೇಳಿದನೆನ್ನುತ್ತಾರೆ: 'ನಾನು ಚಿನ್ನ ಕೊಟ್ಟು ಬಿಷಪ್ ಪದವಿಯನ್ನು ಪಡೆದೆ; ಅದನ್ನು ವಾಪಸ್ಸು ಗಳಿಸಲು ಏನು ಮಾಡಬೇಕೋ ಹಾಗೆ ಮಾಡುವುದಕ್ಕೆ ನನಗೆ ಭಯವೇನೂ ಆಗದು. ನಾನು ಪುರೋಹಿತನೊಬ್ಬನನ್ನು ಪಾದ್ರಿದೀಕ್ಷಾಸ್ನಾನ ಕೊಟ್ಟು ಚಿನ್ನ ಪಡೆಯುತ್ತೇನೆ; ಒಬ್ಬನಿಗೆ ಮತಧರ್ಮಾಧಿಕಾರವನ್ನು (ಡೀಕನ್) ನೀಡಿದರೆ ಅವನು ರಾಶಿ ಬೆಳ್ಳಿಯನ್ನು ಕೊಡುತ್ತಾನೆ. ನಾನು ಕೊಟ್ಟ ಚಿನ್ನವನ್ನು ನೋಡಿ, ಒಮ್ಮೆ ಕಡಿಮೆಮಾಡಿಕೊಂಡದ್ದನ್ನು ತುಂಬಿಕೊಂಡಿದ್ದೇನೆ.'[೨೨೪] ನಗರದಲ್ಲಿನ ಆರ್ಚ್‌ಬಿಷಪ್‌ನಿಂದ ಹಿಡಿದು ಕೆಳ ಹಂತದವರೆಗಿನ ಪ್ರತಿಯೊಬ್ಬ ಪಾದ್ರಿಯೂ ಮತಧರ್ಮಾಧಿಕಾರ ಮಾರಾಟದಲ್ಲಿ ತೊಡಗಿದ್ದವನೇ ಎಂಬುದನ್ನು ಮಿಲಾನ್‌ನಲ್ಲಿ ೧೦೫೯ ರಲ್ಲಿ ಪೀಟರ್ ಡಮೇನ್ ಕಂಡನಂತೆ. ಇದಕ್ಕೆ ಅಪವಾದಗಳೇ ಇಲ್ಲದಿದ್ದ ಸ್ಥಿತಿಯಿತ್ತು.

ಮತಧರ್ಮಾಧಿಕಾರ ಮಾರಾಟವು ಪಾಪಕರ ಎಂಬುದು ನಿಜವೇ, ಆದರೆ ಅದರ ಬಗೆಗಿನ ಆರೋಪ ಅದೊಂದೇ ಅಲ್ಲ. ಅದರಿಂದ ಪಾದ್ರಿ ದೀಕ್ಷಾಸ್ನಾನವು ಶ್ರೀಮಂತಿಕೆಗನುಗುಣವಾಗಿ ನಡೆಯುತ್ತಿತ್ತು, ಅರ್ಹತೆಯ ಮೇಲಲ್ಲ; ಇದರಿಂದ ಮತಧರ್ಮೇತರ ಆಳ್ವಿಕೆಯ ಮುಷ್ಟಿಯಲ್ಲಿ ಬಿಷಪ್‌ರ ನೇಮಕ ಮತ್ತು ಅವರ ಓಲೈಕೆಗಳ ಅಧಿಕಾರವಿರುವಂತಾಯಿತು; ಹೀಗಾಗಿ ಬಿಷಪ್‌ವರ್ಗವು ಊಳಿಗಮಾನ್ಯ ಶ್ರೀಮಂತರ ಭಾಗವಾಗಲು ಕಾರಣವಾಯಿತು. ಅದಕ್ಕೂ ಮಿಗಿಲಾಗಿ, ವ್ಯಕ್ತಿಯೊಬ್ಬ ಹಣ ಕೊಟ್ಟು ಮತಧಾರ್ಮಿಕ ಹುದ್ದೆಯನ್ನು ಕೊಂಡುಕೊಂಡಿದ್ದರೆ ಅದನ್ನು ವಾಪಸ್ಸು ಗಳಿಸುವ ಆತುರ ಅವನಲ್ಲಿರುವುದು ಸಹಜವಾದುದು, ಅದರಿಂದ ಅವನ ಕಾರ್ಯಗಳು ಆಧ್ಯಾತ್ಮಿಕ ಕಳಕಳಿಗಿಂತ ಐಹಿಕ ಕಳಕಳಿಯಿಂದ ಕೂಡಿರುತ್ತಿದ್ದವು. ಈ ಕಾರಣಗಳಿಗಾಗಿ, ಮತಧಾರ್ಮಿಕ ಅಧಿಕಾರದ ಹೋರಾಟದಲ್ಲಿ ಮತಧಾರ್ಮಿಕ ಹುದ್ದೆಗಳ ಮಾರಾಟದ ವಿರುದ್ಧದ ಕೂಗು ಆವಶ್ಯಕವಾಯಿತು.

ಇಂತಹುದೇ ಪರಿಸ್ಥಿತಿಗಳು ಪಾದ್ರಿಗಳ ಬ್ರಹ್ಮಚರ್ಯಕ್ಕೆ ಸಂಬಂಧಿಸಿದಂತೆಯೂ ಇದ್ದವು. ಹನ್ನೊಂದನೆಯ ಶತಮಾನದ ಸುಧಾರಕರು ಹಲವೊಮ್ಮೆ 'ಮದುವೆ'ಯ ಬಗ್ಗೆ ಮಾತನಾಡುವುದು ಹೆಚ್ಚು ಸೂಕ್ತವಾಗಿದ್ದರೂ 'ಇಟ್ಟುಕೊಳ್ಳುವುದರ' ಬಗ್ಗೆ ಮಾತನಾಡಬೇಕಾಯಿತು. ಸನ್ಯಾಸಿಗಳು ಬ್ರಹ್ಮಚರ್ಯ ವ್ರತದ ಕಾರಣದಿಂದಾಗಿ ಇದರಿಂದ ಹೊರತಾಗಿದ್ದರು; ಆದರೆ ಮತಧರ್ಮೇತರ ಪುರೋಹಿತವರ್ಗಕ್ಕೆ ಮದುವೆಯು ಸ್ಪಷ್ಟವಾಗೇನೂ ನಿಷಿದ್ಧವಾಗಿರಲಿಲ್ಲ. ಪೂರ್ವದ ಚರ್ಚ್‌ನಲ್ಲಿ ಪ್ಯಾರಿಶ್ ಪುರೋಹಿತರು ಮದುವೆಯಾಗಲು ಇವತ್ತಿಗೂ ಅವಕಾಶವಿದೆ. ಪಶ್ಚಿಮದಲ್ಲಿ,

---

೨೨೪. *'ಕೇಂಬ್ರಿಜ್ ಮಿಡೈವಲ್ ಹಿಸ್ಟರಿ' ೫*, ಅಧ್ಯಾಯ ೧೦.

ಹನ್ನೊಂದನೆಯ ಶತಮಾನದಲ್ಲಿ, ಬಹುತೇಕ ಪ್ಯಾರಿಶ್ ಪುರೋಹಿತರು ಮದುವೆಯಾಗಿದ್ದವರು. ಬಿಷಪ್‌ರು ಸಂತ ಪೌಲ್ ಘೋಷಣೆಗಾಗಿ ತಮ್ಮ ಪರವಾಗಿ ಹೀಗೆ ಮನವಿ ಮಾಡಿಕೊಂಡರು: 'ಹೀಗಾಗಿ ಬಿಷಪ್ ಕಳಂಕರಹಿತನಾಗಿರಬೇಕು, ಒಬ್ಬಳ ಗಂಡ ಮಾತ್ರ ಆಗಿರಬೇಕು.'[೨೨೫] ಆದರೆ ಮತಧರ್ಮಾಧಿಕಾರ ಮಾರಾಟದ ವಿಷಯದಲ್ಲಿ ಇಂತಹ ಸ್ಪಷ್ಟವಾದ ನಿಲವು ಇರಲಿಲ್ಲವಾದರೂ ಪುರೋಹಿತವರ್ಗದ ಬ್ರಹ್ಮಚರ್ಯದ ಮೇಲೆ ಒತ್ತಡವಿದ್ದುದರಲ್ಲಿ ಮತಧರ್ಮಾಧಿಕಾರ ಮಾರಾಟದ ವಿರುದ್ಧದ ಹೋರಾಟದಲ್ಲಿನಂತೆಯೇ ರಾಜಕೀಯ ಪ್ರಚೋದನೆಗಳಿದ್ದವು.

ಪುರೋಹಿತರು ಮದುವೆಯಾದಾಗ ಸಹಜವಾಗಿಯೇ ಅವರು ಚರ್ಚ್ ಆಸ್ತಿಯನ್ನು ತಮ್ಮ ಮಕ್ಕಳಿಗೆ ವರ್ಗಾಯಿಸಲು ಪ್ರಯತ್ನಿಸಿದರು. ಅವರ ಮಕ್ಕಳೂ ಪುರೋಹಿತರಾದರೆ ಹೀಗೆ ಮಾಡಲು ಕಾನೂನು ಬೆಂಬಲವೂ ಇತ್ತು, ಇದರಿಂದಾಗಿ ತನಗೆ ಅಧಿಕಾರ ಬಂದಾಗ ಮತಧರ್ಮಸುಧಾರಣೆಯಿಟ್ಟ ಮೊದಲ ಹೆಜ್ಜೆಗಳಲ್ಲಿ ಒಂದೆಂದರೆ ಪುರೋಹಿತರ ಮಕ್ಕಳಿಗೆ ದೀಕ್ಷಾಪ್ರದಾನ ಮಾಡುವುದನ್ನು ನಿಷೇಧಿಸುವುದು.[೨೨೬] ಆದರೆ ಆ ಕಾಲದ ಗೊಂದಲದಲ್ಲಿ, ಪುರೋಹಿತರಿಗೆ ಮಕ್ಕಳಿದ್ದರೆ ಚರ್ಚ್ ಆಸ್ತಿಯನ್ನು ಕಾನೂಬಾಹಿರವಾಗಿ ಅವರಿಗೆ ವರ್ಗಾಯಿಸುವ ಉಪಾಯಗಳನ್ನು ಹುಡುಕುವ ದೊಡ್ಡ ಅಪಾಯವೂ ಇತ್ತು. ಈ ಆರ್ಥಿಕ ಕಾರಣಗಳ ಜೊತೆಗೆ, ಪುರೋಹಿತನು ತನ್ನ ನೆರೆಯವರಂತೆಯೇ ಕುಟುಂಬಸ್ಥನಾಗಿದ್ದರೆ, ತಮ್ಮಿಂದ ಅವನು ಕಡಿಮೆ ಅಂತರದವನೆಂಬ ಭಾವನೆ ಅದರಿಂದ ಉಂಟಾಗುತ್ತಿದ್ದುದು. ಕನಿಷ್ಠ ಪಕ್ಷ ಐದನೆಯ ಶತಮಾನಾನಂತರ, ಬ್ರಹ್ಮಚರ್ಯದ ಬಗೆಗೆ ತೀವ್ರ ಮೆಚ್ಚಿಕೆಯಿತ್ತು; ತನ್ನ ಅಧಿಕಾರಕ್ಕೆ ಕಾರಣವಾದ ಗೌರವವನ್ನು ಜನರು ನೀಡಬೇಕಾದ್ದರಿಂದ, ಅವರು ತಮ್ಮ ಬ್ರಹ್ಮಚರ್ಯದ ಕಾರಣಕ್ಕಾಗಿ ಇತರ ಗಂಡಸರಿಂದ ಭಿನ್ನವಾಗಿ ನಿಲ್ಲಬೇಕಾಗಿತ್ತು. ಮದುವೆಯಾಗುವುದು ಪಾಪಕರವಲ್ಲವಾದರೂ ಅದು ಬ್ರಹ್ಮಚರ್ಯಪಾಲನೆಗಿಂತ ಕೆಳಮಟ್ಟದ್ದು, ದೈಹಿಕ ಕಾಮನೆಗಳಿಗೆ ಎಡೆಮಾಡಿಕೊಡುವಂತಹುದ್ದು ಎಂದು ಮತಧರ್ಮಸುಧಾರಕರೂ ಪ್ರಾಮಾಣಿಕವಾಗಿ ನಂಬಿದ್ದರು. ಸಂತ ಪೌಲ್ ಹೀಗೆನ್ನುತ್ತಾನೆ: 'ಅವರು ನಿಯಂತ್ರಿಸಿಕೊಳ್ಳಲಾಗದಿದ್ದರೆ, ಮದುವೆಯಾಗಲಿ.'[೨೨೭] ಆದರೆ ನಿಜವಾದ ಪರಿಶುದ್ಧಜೀವಿಯು ಇಂದ್ರಿಯನಿಗ್ರಹಿಯಾಗಿರಬೇಕು. ಹೀಗಾಗಿ ಪುರೋಹಿತವರ್ಗದ ಬ್ರಹ್ಮಚರ್ಯವು ಚರ್ಚ್‌ನ ನೈತಿಕ ಅಧಿಕಾರಕ್ಕೆ ಆವಶ್ಯಕ.

ಈ ಸಾಮಾನ್ಯ ಪೂರ್ವಪೀಠಿಕೆಯ ಬಳಿಕ, ಹನ್ನೊಂದನೆಯ ಶತಮಾನದ ಮತಧರ್ಮಸುಧಾರಣೆಯ ಇತಿಹಾಸದೆಡೆಗೆ ಕಣ್ಣು ಹಾಯಿಸೋಣ.

---

೨೨೫. ಮೊದಲನೆಯ ತಿಮೋತಿ, ೩. ೨.

೨೨೬. ನೋಡಿ, ಹೆನ್ರಿ ಸಿ ಲಿಯ, 'ದ ಹಿಸ್ಟರಿ ಆಫ್ ಸೇಕ್ರೋಡೆಟಲ್ ಸೆಲಿಬಸಿ.'

೨೨೭. ಮೊದಲ ಕೊರಿಂಥಿಯನ್ಸ್, ೭. ೯.

ಇದರ ಆರಂಭವು ಆಕ್ವಿಟೇನ್‌ನ ಡ್ಯೂಕ್ ಆಗಿದ್ದ ವಿಲಿಯಂ ದ ಪಯಸ್‌ನಿಂದ ೯೧೦ ರಲ್ಲಿ ಕ್ಲೂನಿಯಲ್ಲಿ ಸನ್ಯಾಸಿಮಠ ಸ್ಥಾಪನೆಯ ಕಾಲದಷ್ಟು ಹಿಂದೆ ಹೋಗುತ್ತದೆ. ಮೊದಲಿನಿಂದಲೂ ಈ ಸನ್ಯಾಸಿಮಠವು ಪೋಪ್ ಹೊರತಾಗಿ ಬೇರೆಲ್ಲ ಬಗೆಯ ಬಾಹ್ಯ ಅಧಿಕಾರಗಳಿಂದ ದೂರವಾಗಿತ್ತು; ಅಲ್ಲದೆ, ಅದರ ಮುಖ್ಯಸ್ಥನಿಗೆ ಆ ಮೂಲದಿಂದ ಸ್ಥಾಪಿತವಾದ ಆಶ್ರಮಗಳ ಮೇಲೂ ಅಧಿಕಾರವಿರುತ್ತಿತ್ತು. ಆ ಕಾಲದ ಬಹುತೇಕ ಆಶ್ರಮಗಳು ಶ್ರೀಮಂತವೂ ಬಿಗಿಯಿಲ್ಲದ್ದೂ ಆಗಿದ್ದವು. ಕ್ಲೂನಿಯೇನೋ ಅತಿರೇಕದ ವಿರಕ್ತಿಗೆ ವಿರೋಧಿಯಾಗಿದ್ದರೂ ಘನತೆ ಮತ್ತು ಸನ್ನಡತೆಗಳನ್ನು ಕಾಪಾಡುವುದರ ಬಗ್ಗೆ ಎಚ್ಚರಿಕೆ ವಹಿಸಿದ್ದ. ಎರಡನೆಯ ಮುಖ್ಯಸ್ಥನಾದ ಓಡೋ ಇಟಲಿಗೆ ಹೋದ, ಅವನಿಗೆ ಅನೇಕ ರೋಮನ್ ಆಶ್ರಮಗಳ ಹತೋಟಿಯನ್ನು ವಹಿಸಿಕೊಡಲಾಯಿತು. ಅವನು ಎಲ್ಲ ಕಾಲದಲ್ಲೂ ಯಶಸ್ವಿಯಾಗಲಿಲ್ಲ: 'ತಮ್ಮ ಹಿಂದಿನವರನ್ನು ಕೊಲೆಗೈದಿದ್ದ ಇಬ್ಬರು ಪ್ರತಿಸ್ಪರ್ಧಿ ಮುಖ್ಯಸ್ಥರಿಂದ ಬಿರುಕುಬಿಟ್ಟಿದ್ದ ಫಾರ್ಫಾ ಓಡೋ ಕ್ಲೂನಿಪರರಾದ ಸನ್ಯಾಸಿಗಳಿಗೆ ಅವಕಾಶ ನೀಡುವುದನ್ನು ತಡೆದರು, ಸೈನಿಕ ಬಲದಿಂದ ಆಲ್ಬೆರಿಕ್ ನೇಮಿಸಿದ್ದ ಮುಖ್ಯಸ್ಥನನ್ನು ವಿಷ ಹಾಕಿ ಕೊಂದರು.'[೨೨೮] (ಆಲ್ಬೆರಿಕ್ ರೋಮ್‌ನ ರಾಜ, ಅವನೇ ಓಡೋನನ್ನು ಆಹ್ವಾನಿಸಿದ್ದವನು). ಹನ್ನೆರಡನೆಯ ಶತಮಾನದಲ್ಲಿ, ಕ್ಲೂನಿಯ ಸುಧಾರಕ ಉತ್ಸಾಹವು ತಣ್ಣಗಾಯಿತು. ಅದರ ಸುಂದರ ಕಟ್ಟಡ ನಿರ್ಮಾಣವನ್ನು ಆ ಕಾಲದ ಪ್ರಾಮಾಣಿಕ ಜನರಂತೆಯೇ ಸಂತ ಬರ್ನಾರ್ಡ್ ವಿರೋಧಿಸಿದ; ಆಕರ್ಷಕ ಕಟ್ಟಡಗಳು ಪಾಪಕರ ಹೆಮ್ಮೆಯ ಸಂಕೇತಗಳೆಂದು ಅವನು ಬಗೆದ.

ಹನ್ನೊಂದನೆಯ ಶತಮಾನದಲ್ಲಿ ಮತಧರ್ಮಸುಧಾರಕರು ಇತರ ವಿವಿಧ ಮತಪಂಥಗಳನ್ನು ಸ್ಥಾಪಿಸಿದರು. ಒಬ್ಬ ವಿರಕ್ತ ಆಶ್ರಮವಾಸಿಯಾದ ರೊನಾಲ್ಡ್ ಕ್ಯಾಮಲ್ಡೊಲೀಸ್ ಪಂಥವನ್ನು ೧೦೧೨ ರಲ್ಲಿ ಸ್ಥಾಪಿಸಿದರೆ, ಪೀಟರ್ ಡಾಮಿಯನ್ (ಇವನ ಬಗ್ಗೆ ಮುಂದೆ ಹೇಳಲಾಗುವುದು) ಅವನ ಅನುಯಾಯಿ. ನಿಷ್ಠುರತೆಯನ್ನೆಂದೂ ಬಿಟ್ಟುಕೊಡದ ಕಾರ್ಥೂಸಿಯನ್ ಪಂಥವನ್ನು ಕೊಲೋನ್‌ನ ಬ್ರೂನೋ ೧೦೮೪ ರಲ್ಲಿ ಸ್ಥಾಪಿಸಿದ. ೧೦೯೮ ರಲ್ಲಿ ಸಿಸ್ಟರ್‌ಷಿಯನ್ ಪಂಥವು ಸ್ಥಾಪನೆಗೊಂಡರೆ, ೧೧೧೩ ರಲ್ಲಿ ಸಂತ ಬರ್ನಾರ್ಡ್ ಅದನ್ನು ಸೇರಿಕೊಂಡ. ಅದು ಬೆನೆಡಿಕ್ಟೈನ್ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುತ್ತಿತ್ತು. ಅದು ಬಣ್ಣದ ಗಾಜಿನ ಕಿಟಕಿಗಳನ್ನು ನಿಷೇಧಿಸಿತು. ದೈಹಿಕ ಶ್ರಮಕ್ಕೆ ಅದು ಸಾಮಾನ್ಯ ಸೋದರರ (ಕಾನ್ವರ್ಸ್ಯೆ)ನ್ನು ಬಳಸಿಕೊಂಡಿತು. ಅವರನ್ನು ಹೆಚ್ಚಾಗಿ ಕೃಷಿಕಾರ್ಯದ ಜೊತೆಗೆ ಇತರ ಕೆಲಸಗಳಿಗೂ ಬಳಸಿಕೊಳ್ಳಲಾಗುತ್ತಿತ್ತು. ಅವರು ಪ್ರತಿಜ್ಞೆಗಳನ್ನು ಕೈಗೊಂಡರು,

---

೨೨೮. 'ಕೇಂಬ್ರಿಜ್ ಮಿಡೈವಲ್ ಹಿಸ್ಟರಿ', ೫. ೬೬೨.

ಓದುಬರಹಗಳನ್ನು, ಜೊತೆಗೆ ವಾಸ್ತುವಿನಂತಹ ಇತರ ಕೆಲಸಗಳನ್ನೂ ನಿಷೇಧಿಸಿದರು. ಯಾರ್ಕ್‌ಶೈರ್‌ನ ಫೌಂಟನ್ ಅಬ್ಬೇ ಸಿಸ್ಟರ್‌ಷಿಯನ್ ಪಂಥದ್ದು – ದೆವ್ವದ ಎಲ್ಲ ಚೆಲುವನ್ನೂ ಆಲೋಚಿಸಿದ್ದ ಜನರ ಅಸಾಧಾರಣ ಕಾರ್ಯ.

ಯಾವ ರೀತಿಯಲ್ಲಿಯೂ ವಿಶೇಷವೆನಿಸದ ಫಾರ್ಫಾನ ಪ್ರಸಂಗದಿಂದ ತಿಳಿಯುವಂತೆ, ಆಶ್ರಮ ಸುಧಾರಣೆಗೆ ವಿಪರೀತ ಧೈರ್ಯ ಮತ್ತು ಸಾಮರ್ಥ್ಯಗಳು ಬೇಕಾಗಿದ್ದವು. ಅವರು ಯಶಸ್ಸು ಪಡೆದ ಕಡೆಗಳಲ್ಲಿ, ಅವರಿಗೆ ಮತಧರ್ಮೇತರ ಅಧಿಕಾರಿಗಳು ಬೆಂಬಲವಿತ್ತರು. ಇವರೂ ಮತ್ತು ಅವರ ಜನರು, ಮೊದಲು ಪೋಪ್‌ಗೆ ಆನಂತರ ಇಡೀ ಚರ್ಚ್‌ಗೆಸಂಬಂಧಿಸಿದಂತೆ ಮತಧರ್ಮಸುಧಾರಣೆಯನ್ನು ಆಗುಮಾಡಿದವರು.

ಪೋಪ್ ಅಧಿಕಾರದ ಸುಧಾರಣೆಯು ಮೊದಲಿಗೆ ಚಕ್ರವರ್ತಿಯ ಕೆಲಸವಾಗಿತ್ತು. ಕೊನೆಯ ವಂಶಾತ್ಮಕ ಪೋಪ್ ಎಂದರೆ ೧೦೧೨ ರಲ್ಲಿ ಆಯ್ಕೆಯಾದ ಒಂಬತ್ತನೇ ಬೆನೆಡಿಕ್ಟ್, ಆ ಹೊತ್ತಿಗೆ ಅವನಿಗೆ ಕೇವಲ ಹನ್ನೆರಡು ವರ್ಷಗಳಂತೆ. ಅವನ ಟಸ್ಕಲಮ್‌ನ ಆಲ್ಬೆರಿಕ್‌ನ (ಇವನ ಬಗ್ಗೆ ಈಗಾಗಲೇ ಮಠಮುಖ್ಯಸ್ಥ ಓಡೋ ವಿಷಯ ಬಂದಾಗ ಪ್ರಸ್ತಾಪವಾಗಿದೆ) ಮಗ. ವಯಸ್ಸಾದಂತೆಲ್ಲ ಅವನು ಹೆಚ್ಚು ಹೆಚ್ಚು ಹಾದರಿಗನಾದ, ರೋಮನ್‌ರಿಗೂ ಆಘಾತಕಾರಿಯೆನಿಸಿದ. ಕೊನೆಗೆ ಅವನ ಕೆಡುಕುತನ ಯಾವ ಮಟ್ಟಕ್ಕೇರಿತೆಂದರೆ, ಮದುವೆಯಾಗಲು ಅವನು ಪೋಪ್ ಹುದ್ದೆಗೆ ರಾಜೀನಾಮೆ ನೀಡಲು ಸಿದ್ಧನಾದ. ಅವನು ಅದನ್ನು ತನ್ನ ತಾತನಿಗೇ ಮಾರಿಕೊಂಡ, ಅವನೇ ಆರನೇ ಗ್ರೆಗರಿ ಆದ. ಹಣಕೊಟ್ಟು ಪೋಪ್ ಪದವಿಯನ್ನು ಗಳಿಸಿದರೂ ಇವನು ಸುಧಾರಕನಾಗಿದ್ದ; ಅವನು ಹಿಲ್ಡೆಬ್ರಾಂಡ್ (ಏಳನೆಯ ಗ್ರೆಗರಿ)ಯ ಸ್ನೇಹಿತ. ಅವನು ಪೋಪ್ ಪದವಿಯನ್ನು ಗಳಿಸಿಕೊಂಡ ಪರಿಯು ಕಡೆಗಣಿಸದಷ್ಟು ಸಣ್ಣ ವಿಷಯವಾಗಿರಲಿಲ್ಲ. ಕಿರಿಯ ಚಕ್ರವರ್ತಿ ಮೂರನೆಯ ಹೆನ್ರಿ (೧೦೩೯–೫೬)ಯು ಒಬ್ಬ ನಿಷ್ಠಾವಂತ ಸುಧಾರಕ; ತನ್ನ ಆದಾಯ ಸಾಕಷ್ಟು ಕುಂಠಿತಗೊಂಡರೂ ಅವನು ಮತಧರ್ಮಾಧಿಕಾರ ಮಾರಾಟವನ್ನು ನಿಷೇಧಿಸಿ ಬಿಷಪ್‌ರನ್ನು ನೇಮಕ ಮಾಡುವ ಅಧಿಕಾರವನ್ನುಳಿಸಿಕೊಂಡ. ತನ್ನ ಇಪ್ಪತ್ತೆರಡನೆಯ ವಯಸ್ಸಿಗೆ ೧೦೪೬ ರಲ್ಲಿ ಅವನು ಇಟಲಿಗೆ ಬಂದ, ಮತಧರ್ಮಾಧಿಕಾರ ಮಾರಾಟದ ಅಪರಾಧಿಯಾದ ಆರನೆಯ ಗ್ರೆಗರಿಯನ್ನು ಕಿತ್ತು ಹಾಕಿದ.

ಮೂರನೆಯ ಹೆನ್ರಿ ತನ್ನ ಆಡಳಿತಪೂರ್ತಿ ಪೋಪ್‌ರ ನೇಮಿಕಾತಿ ಮತ್ತು ರದ್ದತಿಗಳ ಅಧಿಕಾರವನ್ನುಳಿಸಿಕೊಂಡು, ಅದನ್ನು ವಿವೇಚನೆಯಿಂದ ಸುಧಾರಣೆಗೆ ಅನುಕೂಲಕರವಾಗುವಂತೆ ಬಳಸಿಕೊಂಡ. ಆರನೆಯ ಗ್ರೆಗರಿಯಿಂದ ಕೈತೊಳೆದುಕೊಂಡ ಬಳಿಕ, ಒಬ್ಬ ಜರ್ಮನ್ ಬಿಷಪ್ ಆದ ಬ್ಯಾಂಬರ್ಗ್‌ನ ಸುಯಿಡ್ಗರ್ ಅನ್ನು ನೇಮಿಸಿದ. ತಾವು ಪಡೆದು ಸಾಕಷ್ಟು ಕಾಲ, ಬಹುತೇಕ ಕೆಟ್ಟದಾಗಿ, ಚಲಾಯಿಸಿದ್ದ

ಆಯ್ಕೆಯ ಹಕ್ಕನ್ನು ರೋಮನ್‌ರು ಬಿಟ್ಟುಕೊಟ್ಟರು. ಹೊಸ ಪೋಪ್ ಮಾರನೆ ವರ್ಷವೇ ಸತ್ತ; ಚಕ್ರವರ್ತಿಯ ಆನಂತರ ನೇಮಿಸಿದವನೂ ತಕ್ಷಣದಲ್ಲಿಯೇ ಸತ್ತ – ವಿಷವೂಡಿಕೆಯಿಂದ ಎಂದು ವದಂತಿ. ಮೂರನೆಯ ಹೆನ್ರಿ ತನ್ನ ಸಂಬಂಧಿಕನೊಬ್ಬನನ್ನೇ, ಟೂಲ್‌ನ ಬ್ರೂನೋ, ಆಯ್ಕೆ ಮಾಡಿದ; ಅವನು ಒಂಬತ್ತನೇ ಲಿಯೋ (೧೦೪೯–೫೪) ಅನ್ನಿಸಿಕೊಂಡ. ಅವನೊಬ್ಬ ಪ್ರಾಮಾಣಿಕ ಸುಧಾರಕ, ಅನೇಕ ಪರಿಷತ್ತುಗಳ ಸಭೆ ಸೇರಿಸಿದ; ದಕ್ಷಿಣ ಇಟಲಿಯ ನಾರ್ಮನ್‌ರೊಡನೆ ಹೋರಾಡುವ ಹಂಬಲ ಅವನದು, ಆದರೆ ಅವನು ಇದರಲ್ಲಿ ಸಫಲನಾಗಲಿಲ್ಲ. ಹಿಲ್ಡೆಬ್ರಾಂಡ್ ಅವನ ಸ್ನೇಹಿತ, ಅವನ ವಿದ್ಯಾರ್ಥಿಯೆಂದೇ ಭಾವಿಸಬಹುದು. ಅವನು ಸತ್ತ ಮೇಲೆ ಚಕ್ರವರ್ತಿಯು ಎಯಸ್ಟೆಡ್‌ನ ಗೆರ್ಹಾರ್ಡ್‌ನನ್ನು ಮತ್ತೊಬ್ಬ ಪೋಪ್ ಆಗಿ ನೇಮಕ ಮಾಡಿದ; ಅವನು ೧೦೫೫ರಲ್ಲಿ ಏಳನೇ ವಿಕ್ಟರ್ ಎನ್ನಿಸಿಕೊಂಡ. ಆದರೆ ಮಾರನೇ ವರ್ಷ ಚಕ್ರವರ್ತಿಯೇ ಸತ್ತ, ಆ ಮಾರನೇ ವರ್ಷ ಪೋಪ್. ಈ ಹಂತದಿಂದ ಮುಂದಕ್ಕೆ, ಪೋಪ್ ಮತ್ತು ಚಕ್ರವರ್ತಿಗಳ ನಡುವಣ ಸಂಬಂಧವು ಕಡಿಮೆ ಆತ್ಮೀಯವಾಯಿತು. ಮೂರನೆಯ ಹೆನ್ರಿಯಿಂದ ನೈತಿಕ ಬೆಂಬಲ ಪಡೆದಿದ್ದ ಪೋಪ್ ಮೊದಲಿಗೇ ತಾನು ಚಕ್ರವರ್ತಿಯ ಸ್ವಂತ್ರಗೊಳ್ಳಲು, ಆನಂತರ ಅವನಿಗೂ ಮೇಲೆನಿಸಿಕೊಳ್ಳಲು ಹವಣಿಸಿದ. ಇನ್ನೂರು ವರ್ಷಗಳ ಕಾಲ ಉಳಿದಿದ್ದ ಈ ಸಂಘರ್ಷವು ಮೊದಲಾದದ್ದು ಹೀಗೆ, ಕೊನೆಗದು ಚಕ್ರವರ್ತಿಯ ಸೋಲಿನಲ್ಲಿ ಪರ್ಯವಸಾನವಾಯಿತು. ಹೀಗಾಗಿ ದೂರ ನಿಂತು ನೋಡಿದರೆ, ಮೂರನೆಯ ಹೆನ್ರಿಯ ಪೋಪ್ ಸುಧಾರಣೆಯು ಪ್ರಾಯಶಃ ಸಮೀಪದೃಷ್ಟಿಯದೆನ್ನಿಸುತ್ತದೆ.

ಮುಂದಿನ ಚಕ್ರವರ್ತಿಯಾದ ನಾಲ್ಕನೆಯ ಹೆನ್ರಿ ಐವತ್ತು ವರ್ಷಗಳ ಕಾಲ (೧೦೫೬–೧೧೦೬) ಆಳಿದ. ಮೊದಲಿಗೆ ಅವನು ಅಪ್ರಾಪ್ತವಯಸ್ಕ, ಅಧಿಕಾರವನ್ನೆಲ್ಲ ಅವನ ತಾಯಿ ಸಮ್ರಾಜ್ಞಿ ಆಗ್ನೀಸ್ ನೋಡಿಕೊಳ್ಳುತ್ತಿದ್ದಳು. ಒಂಬತ್ತನೇ ಸ್ಟೀಫನ್ ಒಂದು ವರ್ಷ ಕಾಲ ಪೋಪ್ ಆಗಿದ್ದ, ಅವನು ಸತ್ತಾಗ, ಪೋಪ್ ಸಚಿವರು (ಕಾರ್ಡಿನಲ್) ಪೋಪ್‌ನನ್ನು ಚುನಾಯಿಸಿದರು, ರೋಮನ್‌ರು ತಾವು ಬಿಟ್ಟುಕೊಟ್ಟಿದ್ದ ಹಕ್ಕನ್ನು ಮರಳಿ ಪಡೆದು ಮತ್ತೊಬ್ಬನನ್ನು ಆಯ್ಕೆ ಮಾಡಿದರು. ಸಮ್ರಾಜ್ಞಿಯು ಪೋಪ್ ಸಚಿವರ ಪರ ನಿಂತಳು, ಅವರ ಆಯ್ಕೆಯಾದವನು ಎರಡನೆಯ ನಿಕೋಲಾಸ್ ಎಂದು ಹೆಸರು ಪಡೆದ. ಅವನ ಆಳ್ವಿಕೆಯು ಕೇವಲ ಮೂರು ವರ್ಷ ಮಾತ್ರವಿದ್ದರೂ, ಮುಖ್ಯವಾದುದಾಗಿತ್ತು. ಅವನು ನಾರ್ಮನ್‌ರ ಜೊತೆ ಶಾಂತಿಸಂಧಾನ ಮಾಡಿಕೊಂಡ, ಆ ಮೂಲಕ ಪೋಪ್ ಪದವಿಯು ಚಕ್ರವರ್ತಿಗೆ ಕಡಿಮೆ ಅಧೀನವಾಗುವಂತೆ ಮಾಡಿದ. ಅವನ ಕಾಲದಲ್ಲಿ ಪೋಪ್‌ರು ಆಯ್ಕೆಗೊಳ್ಳುತ್ತಿದ್ದ ರೀತಿಯು ಒಂದು ತೀರ್ಮಾನದ ಮೂಲಕ ಆಗುತ್ತಿತ್ತು. ಅದರ

ಪ್ರಕಾರ ಮೊದಲು ಪೋಪ್ ಸಚಿವ ಬಿಷಪ್‌ರು ಆಯ್ಕೆ ಮಾಡುತ್ತಿದ್ದರು, ಆನಂತರ ಪೋಪ್ ಸಚಿವರು, ಮತ್ತು ಕೊನೆಗೆ ಪುರೋಹಿತವರ್ಗ ಮತ್ತು ರೋಮ್ ಜನತೆ, ಆದರೆ ಅವರ ಪಾಲ್ಗೊಳ್ಳುವಿಕೆ ಕೇವಲ ಔಪಚಾರಿಕ ಅನ್ನಬಹುದು. ಇದರ ಪರಿಣಾಮವಾಗಿ ಪೋಪ್ ಸಚಿವ ಬಿಷಪ್‌ರು ಪೋಪ್‌ನನ್ನು ಆಯ್ಕೆ ಮಾಡುವಂತಾಯಿತು. ಆಯ್ಕೆಯು ಸಾಧ್ಯವಾಗುವುದಾದರೆ ರೋಮ್‌ನಲ್ಲಿ ನಡೆಯುತ್ತಿತ್ತು, ರೋಮ್‌ನಲ್ಲಿ ಆಯ್ಕೆಮಾಡುವುದು ಕಷ್ಟಕರ ಅಥವಾ ಅನಪೇಕ್ಷಣೀಯವಾದರೆ ಬೇರೆಲ್ಲಾದರೂ ನಡೆಯಬಹುದಾಗಿತ್ತು. ಪೋಪ್ ಆಯ್ಕೆಯಲ್ಲಿ ಚಕ್ರವರ್ತಿಯ ಪಾತ್ರವೇ ಇರಲಿಲ್ಲ. ಒಂದಷ್ಟು ಹೋರಾಟದ ಬಳಿಕ ಒಪ್ಪಿತವಾದ ಈ ತೀರ್ಮಾನವು ಪೋಪ್‌ನ ಮೇಲಿನ ನಿಯಂತ್ರಣವನ್ನು ತೊಡೆದುಹಾಕುವಲ್ಲಿ ಒಂದು ಮುಖ್ಯ ಅಂಶವಾಯಿತು.

ಮುಂದೆ ಮತಧರ್ಮಾಧಿಕಾರ ಮಾರಾಟದ ಆರೋಪ ಹೊತ್ತವರ ನೇಮಕಾತಿಯು ಕ್ರಮಬದ್ಧವಾಗುವುದಿಲ್ಲ ಎಂಬ ತೀರ್ಪನ್ನು ಎರಡನೆಯ ನಿಕೋಲಾಸ್ ಪಡೆದುಕೊಂಡ. ಅದು ಪೂರ್ವಾನ್ವಯಗೊಳ್ಳಲಿಲ್ಲ, ಯಾಕೆಂದರೆ ಈಗಿರುವ ಪುರೋಹಿತರಲ್ಲಿ ಬಹುತೇಕರ ನೇಮಕಾತಿಯು ರದ್ದುಗೊಳ್ಳಬೇಕಾಗಿತ್ತು.

ಎರಡನೆಯ ನಿಕೋಲಾಸ್‌ನ ಅಧಿಕಾರಾವಧಿಯಲ್ಲಿ ಮಿಲಾನ್‌ನಲ್ಲಿ ಒಂದು ಕುತೂಹಲಕಾರಿ ಸಂಘರ್ಷ ನಡೆಯಿತು. ಆಂಬ್ರೋಸ್‌ಪ್ರಣೀತ ಸಂಪ್ರದಾಯವನ್ನು ಅನುಸರಿಸಿ ಆರ್ಚ್‌ಬಿಷಪ್ ಪೋಪ್‌ನಿಂದ ಒಂದಷ್ಟು ಸ್ವಾತಂತ್ರ್ಯವನ್ನು ಹೊಂದಬಯಸಿದವನು; ಅವನ ಪುರೋಹಿತವರ್ಗಕ್ಕೆ ಶ್ರೀಮಂತಾಧಿಕಾರಿಗಳ ಬೆಂಬಲವಿತ್ತು, ಅವರೆಲ್ಲ ಸುಧಾರಣೆಗೆ ಕಡುವಿರೋಧಿಗಳಾಗಿದ್ದವರು. ಮತ್ತೊಂದೆಡೆ, ಪುರೋಹಿತವರ್ಗವು ಬ್ರಹ್ಮಚಾರಿಗಳಾಗಿರಬೇಕೆಂದು ವ್ಯಾಪಾರೀವರ್ಗ ಮತ್ತು ಸಾಮಾನ್ಯ ಜನತೆಯು ನಿರೀಕ್ಷಿಸಿದವು; ಪುರೋಹಿತವರ್ಗದ ಬ್ರಹ್ಮಚರ್ಯೆಯನ್ನು ಬೆಂಬಲಿಸಿ ದಂಗೆಗಳಾದವು. ಅದು ಆರ್ಚ್‌ಬಿಷಪ್ ಮತ್ತವರ ಬೆಂಬಲಿಗರ ವಿರುದ್ಧದ, 'ಪ್ಯಾಟರೀನ್' ಎಂಬ ಹೆಸರಿನ, ಬಲಿಷ್ಠವಾದ ಸುಧಾರಣಾ ಚಳವಳಿಯಾಯಿತು. ೧೦೫೯ ರಲ್ಲಿ ಪೋಪ್ ಮತಧರ್ಮಸುಧಾರಣೆಗೆ ಬೆಂಬಲವಿತ್ತು ತನ್ನ ರಾಯಭಾರಿಯಾಗಿ ಗಣ್ಯನಾಗಿದ್ದ ಪೀಟರ್ ಡೇಮಿಯನ್ ಅನ್ನು ಮಿಲಾನ್‌ಗೆ ಕಳಿಸಿಕೊಟ್ಟ. ಅವನು 'ಆನ್ ಡಿವೈನ್ ಆಮ್ನಿಪೊಟೆನ್ಸ್' ಎಂಬ ಗ್ರಂಥದ ಲೇಖಕ; ಅದರಲ್ಲಿ ದೇವರು ವಿರೋಧನಿಯಮಕ್ಕೆ (ಲಾ ಆಫ್ ಕಾಂಟ್ರಡಿಕ್ಷನ್) ವಿರುದ್ಧವಾದುದನ್ನೂ ಮಾಡಬಲ್ಲ, ಹಿಂದಾದುದನ್ನು ಅಸಂಗತಗೊಳಿಸಬಲ್ಲ, ಎಂಬ ನಿಲವನ್ನು ತಾಳಿದ್ದ. (ಈ ನಿಲವನ್ನು ಸಂತ ಥಾಮಸ್ ವಿರೋಧಿಸಿದ, ಅವನ ಕಾಲದಿಂದೀಚೆಗೆ ಅದು ಸಂಪ್ರದಾಯವಿರುದ್ಧವಾದುದೆನಿಸಿದೆ.) ಅವನು ದ್ವಂದ್ವಾತ್ಮಕತೆಯನ್ನು ವಿರೋಧಿಸಿದ, ತತ್ವಜ್ಞಾನವು ಮತಧರ್ಮಶಾಸ್ತ್ರದ ಕೈಗೊಂಬೆ

ಎಂದ. ಆಗಲೇ ನೋಡಿದಂತೆ, ಅವನು ಆಶ್ರಮವಾಸಿ ರೋಮ್ಯುಲ್ಡ್‌ನ ಅನುಯಾಯಿ, ಅರೆಮನಸ್ಸಿನಿಂದಲೇ ವ್ಯವಹಾರಗಳಲ್ಲಿ ತೊಡಗಿದ್ದವನು. ಆ ಸನ್ಯಾಸಿಯು ಪೋಪ್‌ವರ್ಗಕ್ಕೆ ಎಂತಹ ಅಮೂಲ್ಯ ಆಸ್ತಿಯಾಗಿದ್ದವನೆಂದರೆ, ಸುಧಾರಣೆಗಳಿಗೆ ಬೆಂಬಲ ನೀಡುವಂತೆ ಅವನ ಮೇಲೆ ಭಾರಿ ಮನವೊಲಿಕೆಯ ಪ್ರಯತ್ನವನ್ನು ಮಾಡಲಾಯಿತು; ಪೋಪ್ ರಾಯಭಾರಕ್ಕೆ ಅದು ಮಣಿಯಿತು. ೧೦೫೯ ರಲ್ಲಿ ಮಿಲಾನ್‌ನಲ್ಲಿ ಸೇರಿದ್ದ ಪುರೋಹಿತವರ್ಗದ ಮುಂದೆ ಮತಧರ್ಮಾಧಿಕಾರ ಮಾರಾಟದ ವಿರುದ್ಧ ಭಾಷಣ ಮಾಡಿದ. ಮೊದಲಿಗೆ ಅವರೆಲ್ಲ ಅವನ ಮೇಲೆ ಎಷ್ಟು ಸಿಟ್ಟುಗೊಂಡರೆಂದರೆ, ಅವನ ಪ್ರಾಣವು ಅಪಾಯಕ್ಕೆ ಸಿಲುಕಿತು, ಆದರೆ ಕೊನೆಗೆ ಅವನ ಮಾತಿನ ರೀತಿ ಅವರನ್ನೊಲಿಸಿತು, ಕಣ್ಣೀರು ಸುರಿಸುತ್ತ ತಾವೆಲ್ಲ ಅಪರಾಧಿಗಳು ಎಂದು ಒಪ್ಪಿಕೊಂಡರು. ಅದಕ್ಕೂ ಮಿಗಿಲಾಗಿ, ಅವರೆಲ್ಲ ತಾವು ರೋಮ್‌ಗೆ ವಿಧೇಯರಾಗಿರುತ್ತೇವೆಂದು ಆಣೆ ಮಾಡಿದರು. ಮುಂದಿನ ಪೋಪ್‌ನ ನೇತೃತ್ವದಲ್ಲಿ, ಚಕ್ರವರ್ತಿಯೊಡನೆ ಮಿಲಾನ್‌ನ ಚರ್ಚ್‌ಕ್ಷೇತ್ರದ ಬಗ್ಗೆ ವಿವಾದವುಂಟಾಯಿತು; ಪ್ಯಾಟರೀನ್‌ರ ಸಹಾಯದಿಂದ ಅದರಲ್ಲಿ ಪೋಪ್ ಅಂತಿಮ ಗೆಲವನ್ನು ಸಾಧಿಸಿದ.

ಎರಡನೆಯ ನಿಕೋಲಾಸ್‌ನ ಸಾವಿನ ಹೊತ್ತಿಗೆ ನಾಲ್ಕನೆಯ ಹೆನ್ರಿ ಪ್ರಾಪ್ತವಯಸ್ಕನಾಗಿದ್ದ. ಪೋಪ್‌ಪದವಿಯ ಉತ್ತರಾಧಿಕಾರಿತ್ವದ ಬಗ್ಗೆ ಅವನಿಗೂ ಪೋಪ್‌ಸಚಿವರಿಗೂ ವಿವಾದವುಂಟಾಯಿತು. ಚಕ್ರವರ್ತಿಯು ಆಯ್ಕೆಯ ತೀರ್ಪನ್ನು ಒಪ್ಪಿರಲಿಲ್ಲ, ಪೋಪ್ ಆಯ್ಕೆಯಲ್ಲಿ ಚಕ್ರವರ್ತಿಯ ಹಕ್ಕನ್ನು ಕಳೆದುಕೊಳ್ಳಲು ಅವನು ಸಿದ್ಧನಿರಲಿಲ್ಲ. ಈ ವಿವಾದವು ಮೂರು ವರ್ಷಗಳ ಕಾಲ ಮುಂದುವರಿಯಿತಾದರೂ, ಕೊನೆಯಲ್ಲಿ, ಚಕ್ರವರ್ತಿ ಮತ್ತು ಪೋಪ್ ನ್ಯಾಯಾಸ್ಥಾನ (ಕ್ಯೂರಿಯ) ಗಳ ನಡುವೆ ಖಚಿತ ವಿಚಾರಣೆಯಿಲ್ಲದೆಯೇ, ಪೋಪ್‌ಸಚಿವರ ಆಯ್ಕೆಯು ಉಳಿಯುವಂತಾಯಿತು. ತಕ್ಕಡಿಯನ್ನು ಆ ಕಡೆ ವಾಲಿಸಿದ್ದು ಎಂದರೆ ಪೋಪ್‌ಸಚಿವರ ಆಯ್ಕೆಯ ಪೋಪ್‌ನ ಅರ್ಹತೆ, ಅವನಲ್ಲಿ ಸದ್ಗುಣ ಮತ್ತು ಅನುಭವಗಳು ಸೇರಿದ್ದು, ಅವನು ಲ್ಯಾನ್‌ಫ್ರಾಂಕ್‌ನ ವಿದ್ಯಾರ್ಥಿಯಾಗಿದ್ದದ್ದು. ಈ ಪೋಪ್, ಎರಡನೆಯ ಅಲೆಕ್ಸಾಂಡರ್ ೧೦೭೩ ರಲ್ಲಿ ನಿಧನ ಹೊಂದಿದ್ದು, ಹಿಲ್ಡೆಬ್ರಾಂಡ್ (ಏಳನೇ ಗ್ರೆಗರಿ)ನ ಆಯ್ಕೆ ನಡೆಯಿತು.

ಏಳನೇ ಗ್ರೆಗರಿಯು ಅತ್ಯಂತ ಶ್ರೇಷ್ಠ ಪೋಪ್‌ರಲ್ಲಿ ಒಬ್ಬನಾಗಿದ್ದ. ಬಹು ಕಾಲ ಅವನು ಗಣ್ಯನಾಗಿ ಮಾನ್ಯನಾಗಿದ್ದ, ಪೋಪ್ ಧೋರಣೆಯ ಮೇಲೆ ತುಂಬ ಪ್ರಭಾವ ಬೀರಬಲ್ಲವನಾಗಿದ್ದ. ಅವನಿಂದಾಗಿಯೇ ಪೋಪ್ ಎರಡನೆಯ ಅಲೆಕ್ಸಾಂಡರ್, ವಿಲಿಯಂ ದ ಕಾಂಕರರ್‌ನ ಇಂಗ್ಲಿಷ್ ಸಾಹಸಕ್ಕೆ ಆಶೀರ್ವಾದ ಮಾಡಿದ್ದು; ನಾರ್ಮನ್‌ರು ಮತ್ತೆ ಇಟಲಿ ಮತ್ತು ಉತ್ತರಗಳಲ್ಲಿರಬೇಕೆಂಬುದು ಅವನ

ಬಯಕೆಯಾಗಿತ್ತು. ಅವನು ಏಳನೆ ಗ್ರೆಗರಿಯ ಬೆಂಬಲಿಗನಾಗಿದ್ದ, ಅವನು ಮತಧರ್ಮಾಧಿಕಾರ ಮಾರಾಟದ ವಿರುದ್ಧ ಹೋರಾಡಲೆಂದೇ ಪೋಪ್ ಪದವಿಯನ್ನು ಕೊಂಡುಕೊಂಡಿದ್ದ. ಈ ಪೋಪ್‌ನ ರದ್ದತಿಯ ಬಳಿಕ, ಹಿಲ್ಡೆಬ್ರಾಂಡ್ ಎರಡು ವರ್ಷಗಳ ಕಾಲ ದೇಶಭ್ರಷ್ಟನಾಗಿದ್ದ. ಅವನ ಉಳಿದ ಬದುಕಿನ ಬಹುಭಾಗವೆಲ್ಲ ರೋಮ್‌ನಲ್ಲಿಯೇ ಕಳೆಯಿತು. ಅವನೇನೂ ವಿದ್ವಾಂಸನಲ್ಲ, ಆದರೆ ಸಂತ ಆಗಸ್ಟೈನನ್‌ನಿಂದ ಬಹಳವಾಗಿ ಪ್ರಭಾವಿತನಾಗಿದ್ದವನು, ಅವನ ಸಿದ್ಧಾಂತಗಳನ್ನು ಗ್ರೆಗರಿ ಮಹಾಶಯನ ಮೂಲಕ ತಿಳಿದವನು. ಪೋಪ್ ಆದ ಬಳಿಕ ಅವನು ತಾನು ಸಂತ ಪೀಟರ್‌ನ ಮುಖವಾಣಿ ಎಂದು ಭಾವಿಸಿದ. ಇದರಿಂದ ಅವನಿಗೆ ತಕ್ಕಮಟ್ಟಿಗಿನ ಆತ್ಮವಿಶ್ವಾಸ ಮೂಡಿತು; ಆದರೆ ಲೌಕಿಕ ಲೆಕ್ಕಾಚಾರದಲ್ಲಿ ಸಮರ್ಥನೀಯವೆನಿಸಲಿಲ್ಲ. ಚಕ್ರವರ್ತಿಯ ಅಧಿಕಾರಕ್ಕೂ ದೈವಿಕ ಮೂಲವೇ ಕಾರಣ ಎಂದವನು ಅಭಿಪ್ರಾಯಪಟ್ಟ; ಮೊದಲು ಪೋಪ್ ಮತ್ತು ಚಕ್ರವರ್ತಿ ಇಬ್ಬರೂ ಎರಡು ಕಣ್ಣುಗಳು ಎಂದಿದ್ದ; ಆನಂತರ, ಚಕ್ರವರ್ತಿಯೊಡನೆ ವಿವಾದಕ್ಕಿಳಿದಾಗ, ಸೂರ್ಯ ಚಂದ್ರರಿಗೆ ಹೋಲಿಕೆ ಮಾಡಿದ, ಪೋಪ್ ಸೂರ್ಯ. ನೈತಿಕತೆಯಲ್ಲಿ ಪೋಪ್ ಅತ್ಯುನ್ನತನಾಗಿರಬೇಕು, ಹೀಗಾಗಿ ಚಕ್ರವರ್ತಿಯು ಅನೈತಿಕನಾಗಿದ್ದರೆ ಅವನನ್ನು ಕೆಳಗಿಳಿಸುವ ಅಧಿಕಾರ ಪೋಪ್‌ಗಿರಬೇಕು ಎಂದು ವಾದಿಸಿದ. ಅಲ್ಲದೆ, ಪೋಪ್‌ನನ್ನು ವಿರೋಧಿಸುವುದಕ್ಕಿಂತ ಅನೈತಿಕವಾದುದು ಬೇರಾವುದೂ ಇಲ್ಲ. ಇದನ್ನೆಲ್ಲ ಗಾಢವಾಗಿಯೂ ಪ್ರಾಮಾಣಿಕವಾಗಿಯೂ ನಂಬಿದ್ದ.

ಪುರೋಹಿತವರ್ಗದ ಮೇಲೆ ಬ್ರಹ್ಮಚರ್ಯವನ್ನು ಜಾರಿಗೊಳಿಸುವ ವಿಷಯದಲ್ಲಿ ಏಳನೆಯ ಗ್ರೆಗರಿಯು ತನ್ನ ಹಿಂದಿನ ಬೇರಾವುದೇ ಪೋಪ್‌ಗಿಂತಲೂ ಹೆಚ್ಚಿನ ಶ್ರಮ ವಹಿಸಿದ. ಜರ್ಮನಿಯಲ್ಲಿ ಪುರೋಹಿತವರ್ಗವು ಇದನ್ನು ವಿರೋಧಿಸಿತು, ಇದು ಮತ್ತಿತರ ವಿಷಯಗಳಲ್ಲಿ ಅವರು ಚಕ್ರವರ್ತಿಯ ಜೊತೆ ನಿಲ್ಲುವುದರ ಬಗ್ಗೆ ಒಲವು ತಾಳಿದ್ದರು. ಆದರೆ ಎಲ್ಲೆಡೆಯೂ ಸಾಮಾನ್ಯ ಜನತೆಯು ಮಾತ್ರ ತಮ್ಮ ಪುರೋಹಿತರು ಬ್ರಹ್ಮಚರ್ಯವ್ರತ ಪಾಲಕರಾಗಿರಬೇಕೆಂದು ನಿರೀಕ್ಷಿಸಿದರು. ಗ್ರೆಗರಿಯು ಸಾಮಾನ್ಯ ಜನತೆಯ ಬುಡವನ್ನು ಅಲ್ಲಾಡಿಸಿ ಮದುವೆಯಾದ ಪುರೋಹಿತರ ಹಾಗೂ ಅವರ ಹೆಂಡಂದಿರ ವಿರುದ್ಧ ಪ್ರತಿಭಟಿಸುವಂತೆ ಪ್ರೇರಿಸಿದ; ಇದರಿಂದ ಎಷ್ಟೋ ವೇಳೆ ಇಬ್ಬರೂ ಕ್ರೂರ ಹಿಂಸೆಯನ್ನೆದುರಿಸಬೇಕಾಯ್ತು. ಇದನ್ನು ಧಿಕ್ಕರಿಸುವ ಪುರೋಹಿತನು ನೆರವೇರಿಸುವ ಮತಾಚರಣೆಗೆ ಹೋಗದಿರುವಂತೆ ಸಾಮಾನ್ಯರಿಗೆ ಅವನು ಕರೆ ಕೊಟ್ಟ. ಮದುವೆಯಾದ ಪುರೋಹಿತವರ್ಗವು ನೆರವೇರಿಸಿದ ಮತಾಚರಣೆಗಳು ಅಸಿಂಧುವೆಂದೂ, ಹಾಗೆ ಮಾಡಿದ ಪುರೋಹಿತರು ಚರ್ಚ್ ಪ್ರವೇಶಿಸಬಾರದೆಂದೂ ಘೋಷಿಸಿದ. ಇದೆಲ್ಲದರಿಂದ ಪುರೋಹಿತವರ್ಗ ಹಾಗೂ ಸಾಮಾನ್ಯರನ್ನು ಅವನು ಎದುರು ಹಾಕಿಕೊಳ್ಳುವಂತಾಯಿತು. ರೋಮ್‌ನಲ್ಲಿ ಕೂಡ

ಪೋಪ್‌ರು ಜೀವಭಯದಿಂದ ತಲ್ಲಣಗೊಳ್ಳುವಂತಾಯಿತು, ಆದರೆ ಅವನು ಸಾಮಾನ್ಯರಲ್ಲಿ ಜನಪ್ರಿಯನಾದ.

ಗ್ರೆಗರಿಯ ಕಾಲದಲ್ಲಿ 'ಅಧಿಷ್ಠಾಪನೆ'ಯ (ಇನ್‌ವೆಸ್ಟಿಚರ್) ಬಗ್ಗೆ ಒಂದು ದೊಡ್ಡ ವಿವಾದ ಸೃಷ್ಟಿಯಾಯಿತು. ಬಿಷಪ್ ಒಬ್ಬನನ್ನು ಅಧಿಷ್ಠಾಪಿಸಿದಾಗ ಅವನಿಗೆ ಅವನ ಅಧಿಕಾರ ಲಾಂಛನಗಳಾದ ಒಂದು ಉಂಗುರ ಹಾಗೂ ದಂಡವನ್ನು ನೀಡಲಾಗುತ್ತದೆ. ಇವುಗಳನ್ನು ಆಯಾ ಸ್ಥಳಕ್ಕೆ ಅನುಗುಣವಾಗಿ ಬಿಷಪ್‌ನ ಊಳಿಗಮಾನ್ಯ ಪ್ರಭುವಾಗಿ ಚಕ್ರವರ್ತಿಯೋ ರಾಜನೋ ಕೊಡುತ್ತಿದ್ದ. ಆದರೆ ಗ್ರೆಗರಿ ಅವುಗಳನ್ನು ಪೋಪ್ ನೀಡಬೇಕೆಂದು ಒತ್ತಾಯಿಸಿದ. ಈ ವಿವಾದವು ಕ್ರೈಸ್ತಮತಧರ್ಮವನ್ನು ಊಳಿಗಮಾನ್ಯ ಶ್ರೇಣಿಯಿಂದ ಸ್ವತಂತ್ರಗೊಳಿಸುವ ಕಾರ್ಯದ ಭಾಗವಾಗಿತ್ತು. ಅದು ದೀರ್ಘ ಕಾಲ ಉಳಿದುಬಂದಿತು, ಆದರೆ ಕೊನೆಗೆ ಪೋಪ್ ಅಧಿಕಾರವು ಸಂಪೂರ್ಣ ಗೆಲವನ್ನು ಸಾಧಿಸಿತು.

ಮಿಲಾನ್‌ನ ಆರ್ಚ್‌ಬಿಷಪ್‌ರಿಗೆ ಸಂಬಂಧಿಸಿದಂತೆ ಆರಂಭವಾದ ಈ ವಿವಾದವು ಕನೋಸವರೆಗೂ ಹೋಯಿತು. ೧೦೭೫ ರಲ್ಲಿ ಚಕ್ರವರ್ತಿಯು ಸಹಾಯಕ ಬಿಷಪ್ (ಸಫ್ರಾಗಾನ್)ರ ಒಪ್ಪಿಗೆಯೊಡನೆ ಆರ್ಚ್‌ಬಿಷಪ್ ಒಬ್ಬನನ್ನು ನೇಮಿಸಿದ; ಇದು ತನ್ನ ಅಧಿಕಾರದ ಮೇಲಿನ ಆಕ್ರಮಣ ಎಂದು ಪೋಪ್ ಭಾವಿಸಿ, ಚಕ್ರವರ್ತಿಗೆ ಬಹಿಷ್ಕಾರ ಹಾಗೂ ರದ್ದತಿಯ ಭಯ ತೋರಿಸಿದ. ಇದನ್ನು ಪ್ರತಿಭಟಿಸಲು ಚಕ್ರವರ್ತಿಯು ವರ್ಮ್ಸ್‌ನಲ್ಲಿ ಬಿಷಪ್‌ರ ಒಂದು ಸಮಾವೇಶವನ್ನು ಕರೆದ, ಅಲ್ಲಿ ಅವರೆಲ್ಲ ಪೋಪ್‌ರ ಜೊತೆಗಿನ ಸಂಬಂಧವನ್ನು ಕಳೆದುಕೊಂಡರು. ಅವನಿಗೆ ಕಾಗದವೊಂದನ್ನು ಬರೆದು ಹಾದರ ಹಾಗೂ ವಚನಭ್ರಷ್ಟತೆಯ ಹಾಗೂ (ಇವೆರಡಕ್ಕೂ ಹೆಚ್ಚು ಕ್ಷುಲ್ಲಕವೆನಿಸುವ) ಬಿಷಪ್‌ರನ್ನು ಅವಮಾನಿಸಿದ ಆರೋಪ ಹೊರಿಸಿದರು. ಚಕ್ರವರ್ತಿಯೂ ಒಂದು ಪತ್ರ ಬರೆದು ತಾನು ಎಲ್ಲ ಲೌಕಿಕ ಆಜ್ಞೆಗಳನ್ನೂ ಮೀರಿದವನು ಎಂದು ಘೋಷಿಸಿದ. ಚಕ್ರವರ್ತಿ ಹಾಗೂ ಬೆಂಬಲಿಗ ಬಿಷಪ್‌ರು ಗ್ರೆಗರಿಯ ನೇಮಕವನ್ನು ರದ್ದು ಮಾಡಿದರು; ಗ್ರೆಗರಿ ಚಕ್ರವರ್ತಿಯನ್ನೂ ಬಿಷಪ್‌ರನ್ನೂ ಬಹಿಷ್ಕರಿಸಿದ. ಹೀಗೆ ರಂಗ ಸಿದ್ಧವಾಯಿತು.

ಮೊದಲನೆಯ ಅಂಕದಲ್ಲಿ, ವಿಜಯವು ಪೋಪ್ ಕಡೆ ಹೋಯಿತು. ಹಿಂದೆ ನಾಲ್ಕನೆಯ ಹೆನ್ರಿ ವಿರುದ್ಧ ಬಂಡಾಯವೆದ್ದು ಆನಂತರ ಸಂಧಾನ ಮಾಡಿಕೊಂಡಿದ್ದ ಸ್ಯಾಕ್ಸನ್‌ರು, ಮತ್ತೆ ಬಂಡಾಯವೆದ್ದರು; ಜರ್ಮನ್‌ರು ಪೋಪ್‌ನೊಡನೆ ಸಂಧಾನ ಮಾಡಿಕೊಂಡರು. ಪೋಪ್‌ನನ್ನು ಅವಮಾನಿಸಿದ ಚಕ್ರವರ್ತಿಯ ರೀತಿಯಿಂದ ಜಗತ್ತೇ ಆಘಾತಗೊಂಡಿತು. ಅದಕ್ಕನುಗುಣವಾಗಿ, ಮಾರನೆಯ ವರ್ಷ (೧೦೭೭), ಹೆನ್ರಿಯು ಪೋಪ್‌ನಿಂದ ಕ್ಷಮೆ ಯಾಚಿಸಲು ನಿರ್ಧರಿಸಿದ. ಚಳಿಗಾಲದ ನಡುವಿನಲ್ಲಿ, ತನ್ನ ಹೆಂಡತಿ ಮತ್ತು ಮಗು ಮತ್ತು ಕೆಲವು ಸಹಾಯಕರೊಡನೆ ಅವನು ಮಾಂಟ್

ಸೆನಿಸ್ ಕಣಿವೆಯನ್ನು ದಾಟಿ, ಪೋಪ್ ಇದ್ದ ಕನೋಸದ ಕೋಟೆ ಬಾಗಿಲಿನಲ್ಲಿ ಕ್ಷಮಾಯಾಚಕನಾಗಿ ನಿಂತುಕೊಂಡ. ಪೋಪ್ ಅವನನ್ನು ಮೂರು ದಿನಗಳ ಕಾಲ ಬರಿಗಾಲು, ಪಶ್ಚಾತ್ತಾಪಗಳೊಡನೆ ಕಾಯುವಂತೆ ಮಾಡಿದ. ಕೊನೆಗೂ ಅವನನ್ನು ಒಳಗೆ ಬಿಟ್ಟರು. ಪಶ್ಚಾತ್ತಾಪವನ್ನು ಸೂಚಿಸಿ, ಮುಂದೆ ತನ್ನ ಜರ್ಮನ್ ವಿರೋಧಿಗಳ ಜೊತೆ ವ್ಯವಹರಿಸುವಾಗ ಪೋಪ್‌ನ ನಿರ್ದೇಶನದಂತೆ ನಡೆದುಕೊಳ್ಳುತ್ತೇನೆಂದು ಪ್ರತಿಜ್ಞೆ ಮಾಡಿದ ಮೇಲೆ, ಅವನನ್ನು ಕ್ಷಮಿಸಲಾಯಿತು, ಮತ್ತೆ ಕ್ರೈಸ್ತ ಸಮುದಾಯಕ್ಕೆ ಸೇರಿಸಿಕೊಳ್ಳಲಾಯಿತು.

ಆದರೆ ಪೋಪ್‌ನ ವಿಜಯವು ಭ್ರಮಾತ್ಮಕವಾಗಿತ್ತು. ಅವನನ್ನು ಅವನದೇ ಮತಧರ್ಮಶಾಸ್ತ್ರದಿಂದ ಕಟ್ಟಿಹಾಕಲಾಯಿತು. ಅದರಲ್ಲಿ ಒಂದೆಂದರೆ, ಪಶ್ಚಾತ್ತಾಪಪಡುವವರಿಗೆ ಕ್ಷಮೆ ನೀಡುವುದು. ವಿಚಿತ್ರವೆಂದರೆ, ಅವನ ಪಶ್ಚಾತ್ತಾಪ ಪ್ರಾಮಾಣಿಕವೆಂದು ತಿಳಿದು ಅವನು ಹೆನ್ರಿಯನ್ನು ಬರಮಾಡಿಕೊಂಡಿದ್ದ. ಅವನಿಗೆ ಬೇಗ ತನ್ನ ತಪ್ಪಿನ ಅರಿವಾಯಿತು. ಅವನು ಹೆನ್ರಿಯ ಜರ್ಮನ್ ಶತ್ರುಗಳನ್ನು ಇನ್ನು ಮೇಲೆ ಬೆಂಬಲಿಸಲಾರದಾದ, ತಮಗವನು ದ್ರೋಹ ಮಾಡಿದನೆಂದು ಅವರು ತಿಳಿದರು. ಆ ಕ್ಷಣದಿಂದ, ಎಲ್ಲವೂ ಅವನ ವಿರುದ್ಧವೇ ತಿರುಗಲಾರಂಬಿಸಿತು.

ಹೆನ್ರಿಯ ಜರ್ಮನ್ ಶತ್ರುಗಳು ಬೇರೊಬ್ಬ ಸ್ಪರ್ಧಿಯನ್ನು ಚಕ್ರವರ್ತಿಯಾಗಿ ಆಯ್ಕೆಮಾಡಿದರು. ಹೆನ್ರಿ ಮತ್ತು ರುಡಾಲ್ಫ್ ನಡುವೆ ಆಯ್ದುಕೊಳ್ಳುವುದು ತನಗೆ ಬಿಟ್ಟದ್ದು ಎಂದು ಮೊದಲು ತಿಳಿದಿದ್ದ ಪೋಪ್, ಒಂದು ನಿರ್ಧಾರಕ್ಕೆ ಬರಲು ಒಪ್ಪಲಿಲ್ಲ. ಕೊನೆಗೆ, ೧೦೮೦ ರಲ್ಲಿ, ಹೆನ್ರಿಯ ಪಶ್ಚಾತ್ತಾಪದ ಅಪ್ರಾಮಾಣಿಕತೆಯನ್ನು ಅನುಭವಿಸಿದ್ದ ಅವನು ರುಡಾಲ್ಫ್ ಪರವಾಗಿ ನಿಂತ. ಈ ಹೊತ್ತಿಗೆ, ಹೆನ್ರಿ ಜರ್ಮನಿಯ ತನ್ನ ಶತ್ರುಗಳಲ್ಲೆಲ್ಲ ಉತ್ತಮರಾದವರನ್ನು ಒಲಿಸಿಕೊಂಡಿದ್ದ, ತನ್ನ ಬೆಂಬಲಿಗ ಪುರೋಹಿತವರ್ಗದೊಡನೆ ಅವನು ಒಬ್ಬ ಪ್ರತಿಪೋಪ್‌ನನ್ನು ಆಯ್ಕೆ ಮಾಡಿ, ಅವನೊಡನೆ ೧೦೮೪ ರಲ್ಲಿ ಬೇಗ ರೋಮ್ ಪ್ರವೇಶಿಸಿದ. ಆ ಪ್ರತಿಪೋಪ್ ಅವನಿಗೆ ವಿಧ್ಯುಕ್ತವಾಗಿ ಕಿರೀಟಧಾರಣೆ ಮಾಡಿದ, ಆದರೆ ಅವರಿಬ್ಬರೂ ಹಿಂದೆ ಸರಿಯಬೇಕಾಯಿತು, ಗ್ರೆಗರಿಯ ಸಹಾಯಕ್ಕಾಗಿ ನಾರ್ಮನ್‌ರು ಅವರೆಡೆ ಹತ್ತಿರದಲ್ಲಿಯೇ ಬಂದಿದ್ದರು. ನಾರ್ಮನ್‌ರು ರೋಮ್‌ನ ಮೇಲೆ ಹೀನಾಯವಾಗಿ ದಾಳಿ ಮಾಡಿ, ಗ್ರೆಗರಿಯನ್ನು ತಮ್ಮೊಡನೆ ಕರೆದೊಯ್ದರು. ಮಾರನೆಯ ವರ್ಷ ಸಾಯುವವರೆಗೂ ಅವನು ಅವರ ಬಂದಿಯಂತೆ ಬದುಕಬೇಕಾಯಿತು.

ಹೀಗೆ ಅವನ ನಿಲವುಗಳು ದುರಂತದಲ್ಲಿ ಕೊನೆಗಂಡಂತೆ ತೋರುತ್ತದೆ. ಆದರೆ ಅದನ್ನು ಅವನ ಉತ್ತರಾಧಿಕಾರಿಗಳು ಹೆಚ್ಚಿನ ಪರಿಷ್ಕರಣೆಗಳೊಂದಿಗೆ ಮುಂದುವರಿಸಿದರು. ಆ ಕ್ಷಣಕ್ಕೆ ಪೋಪ್‌ಗೆ ಅನುಕೂಲಕರವೆಂಬಂತೆ ತೋರುತ್ತಿದ್ದ ಸಂಧಾನಸೂತ್ರವನ್ನು ಮಾಡಿದರು, ಆದರೆ ಈ ಸಂಘರ್ಷವು ಮೂಲತಃ

ಬಗೆಹರಿಯದ್ದಾಗಿತ್ತು. ಇದರ ಮುಂದಿನ ಬೆಳವಣಿಗೆಗಳ ಬಗ್ಗೆ ಮುಂಬರುವ ಅಧ್ಯಾಯಗಳಲ್ಲಿ ಚರ್ಚಿಸುತ್ತೇನೆ.

ಹನ್ನೊಂದನೆಯ ಶತಮಾನದಲ್ಲಾದ ಬೌದ್ಧಿಕ ಪುನರುಜ್ಜೀವನದ ಬಗ್ಗೆ ಒಂದಷ್ಟು ಹೇಳುವುದು ಉಳಿದಿದೆ. ಹತ್ತನೆಯ ಶತಮಾನದಲ್ಲಿ ತತ್ವಜ್ಞಾನಿಗಳ ಕೊರತೆಯಿತ್ತು, ಇದ್ದವನೊಬ್ಬನೇ ಗೆರ್ಬರ್ಟ್ (ಪೋಪ್ ಎರಡನೆಯ ಸಿಲ್ವೆಸ್ಟರ್, ೯೯೯–೧೦೦೩), ಅವನು ವಿಜ್ಞಾನಿಗಿಂತ ಹೆಚ್ಚಾಗಿ ಗಣಿತಜ್ಞನಾಗಿದ್ದವನು. ಆದರೆ ಹನ್ನೊಂದನೆಯ ಶತಮಾನ ಮುಂದುವರಿದಂತೆಲ್ಲ ಗಣ್ಯರೆನಿಸಿದ ತತ್ವಜ್ಞಾನಿಗಳು ಕಾಣಿಸತೊಡಗಿದರು. ಇವರಲ್ಲಿ ಅತ್ಯಂತ ಪ್ರಮುಖರಾದವರೆಂದರೆ ಆನ್‌ಸೆಲಿಮ್ ಮತ್ತು ರೋಸೆಲಿನ್; ಆದರೆ ಇನ್ನೂ ಕೆಲವರು ಉಲ್ಲೇಖನಾರ್ಹರಿದ್ದಾರೆ, ಇವರೆಲ್ಲ ಮತಧರ್ಮಸುಧಾರಣೆಗೆ ಸಂಬಂಧಿಸಿದ ಸನ್ಯಾಸಿಗಳೇ.

ಅವರಲ್ಲಿ ಅತ್ಯಂತ ಹಿರಿಯನಾಗಿದ್ದ ಪೀಟರ್ ಡೇಮಿಯನ್ ಬಗ್ಗೆ ಈಗಾಗಲೇ ಉಲ್ಲೇಖಿಸಲಾಗಿದೆ. ಟೂರ್ಸ್‌ನ ಬಿರೆಂಜರ್ (ಮರಣ, ೧೦೮೮) ಒಂದಷ್ಟು ವೈಚಾರಿಕನಾಗಿದ್ದರಿಂದ ಕುತೂಹಲದಾಯಕ. ಅಧಿಕಾರಕ್ಕಿಂತ ವೈಚಾರಿಕತೆಯೇ ಶ್ರೇಷ್ಠ ಎಂದವನು ಪ್ರತಿಪಾದಿಸಿದ, ಅದಕ್ಕನುಗುಣವಾಗಿ ಅವನು ಜಾನ್ ದ ಸ್ಕಾಟ್‌ನಿಗೆ ಬೇಕಾದವನಾದ, ಇದರಿಂದಾಗಿ ಅವನು ಮರಣಾನಂತರ ಖಂಡನೆಗೊಳಗಾದ. ಬಿರೆಂಜರ್ ಸತ್ವಪರಿವರ್ತನವಾದ (ಟ್ರಾನ್‌ಸಬ್ಸ್ಟಾನ್ಸಿಯೇಷನ್) ವನ್ನು ಅಲ್ಲಗಳೆದ, ಅದನ್ನು ಎರಡು ಬಾರಿ ವಾಪಸು ಪಡೆಯುವಂತೆ ಒತ್ತಾಯಿಸಲಾಯಿತು. ಅವನ ಪಾಷಂಡಿತನವನ್ನು ಲ್ಯಾನ್‌ಫ್ರಾಂಕ್ ತನ್ನ ಪುಸ್ತಕ 'ಡೆ ಕಾರ್ಪೊರ್ ಎತ್ ಸಾಂಗ್ವೈನ್ ಡಾಮಿನಿ' ಯಲ್ಲಿ ಖಂಡಿಸಿದ. ಲ್ಯಾನ್‌ಫ್ರಾಂಕ್ ಹುಟ್ಟಿದ್ದು ಪೇವಿಯದಲ್ಲಿ, ಬೊಲೋಗ್ನಾದಲ್ಲಿ ಕಾನೂನು ಅಧ್ಯಯನ ಮಾಡಿ, ಮೊದಲ ದರ್ಜೆಯ ತಾರ್ಕಿಕನೆನಿಸಿದ. ಆದರೆ ಅವನು ತರ್ಕವನ್ನು ಮತಧರ್ಮಶಾಸ್ತ್ರಕ್ಕಾಗಿ ಬಿಟ್ಟು ನಾರ್ಮಂಡಿಯಲ್ಲಿನ ಬೆಕ್‌ನ ಆಶ್ರಮವನ್ನು ಸೇರಿಕೊಂಡ, ಅಲ್ಲಿ ಅವನೊಂದು ಶಾಲೆಯನ್ನು ನಡೆಸುತ್ತಿದ್ದ. ವಿಲಿಯಂ ದ ಕಾಂಕರರ್ ಅವನನ್ನು ೧೦೭೦ ರಲ್ಲಿ ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್‌ನನ್ನಾಗಿ ನೇಮಿಸಿದ.

ಸಂತ ಆನ್ಸೆಲಿನ್ ಕೂಡ ಲ್ಯಾನ್‌ಫ್ರಾಂಕ್‌ನಂತಹವನೇ, ಅವನೊಬ್ಬ ಇಟಾಲಿಯನ್, ಬೆಕ್‌ನಲ್ಲಿ ಸನ್ಯಾಸಿಯಾಗಿದ್ದವನು, ಮತ್ತು ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ (೧೦೯೩–೧೧೦೯) ಆಗಿದ್ದವನು. ಆ ಹುದ್ದೆಯಲ್ಲಿ ಅವನು ಏಳನೆಯ ಗ್ರೆಗರಿಯನ್ನು ಅನುಸರಿಸಿ ರಾಜನೊಡನೆ ಜಗಳವಾಡಿದ. ಅವನು ಮುಖ್ಯನಾಗಿ ಖ್ಯಾತನಾಮನಾಗಿರುವುದು ದೇವರ ಅಸ್ತಿತ್ವದ ಪರವಾಗಿ ಮೂಲತತ್ವವಾದವನ್ನು (ಆಂಟೋಲಾಜಿಕಲ್ ಆರ್ಗ್ಯುಮೆಂಟ್) ಕಂಡುಕೊಂಡವನು. ಅವನು ಪ್ರತಿಪಾದಿಸಿದಂತೆ, ಅವನ ವಾದವು ಹೀಗಿದೆ: ದೇವರನ್ನು ನಾವು ನಮ್ಮ ಚಿಂತನೆಯ ಅತ್ಯಂತ ಸಾಧ್ಯ

ವಸ್ತು ಎಂದು ಸೂತ್ರೀಕರಿಸುತ್ತೇವೆ. ಚಿಂತನೆಯ ಒಂದು ವಸ್ತುವು ಅಸ್ತಿತ್ವದಲ್ಲಿಲ್ಲದಿದ್ದರೆ, ಅಸ್ತಿತ್ವದಲ್ಲಿರುವ ಅಂಥದೇ ಇನ್ನೊಂದು ಇನ್ನೂ ಹೆಚ್ಚು ಶ್ರೇಷ್ಠವಾಗಿರುತ್ತದೆ. ಹೀಗಾಗಿ ಚಿಂತನೆಯ ಎಲ್ಲ ವಸ್ತಗಳಲ್ಲಿನ ಅತ್ಯಂತ ಶ್ರೇಷ್ಠವಾದುದು ಅಸ್ತಿತ್ವದಲ್ಲಿರಬೇಕು, ಇಲ್ಲದಿದ್ದರೆ, ಅದಕ್ಕಿಂತ ಶ್ರೇಷ್ಠವಾದ ಮತ್ತೊಂದು ಸಾಧ್ಯವಾಗುತ್ತದೆ. ಹೀಗಾಗಿ ದೇವರು ಅಸ್ತಿತ್ವದಲ್ಲಿದ್ದಾನೆ.

ಮತಧರ್ಮಶಾಸ್ತ್ರಜ್ಞರು ಈ ವಾದವನ್ನು ಯಾವತ್ತೂ ಒಪ್ಪಲಿಲ್ಲ. ಕಾಲಕಾಲಕ್ಕೆ ಅದರ ವಿರುದ್ಧ ಟೀಕೆಗಳನ್ನು ಮಾಡಿದರು, ಅನಂತರ ಅದನ್ನು ಹದಿಮೂರನೆಯ ಶತಮಾನದ ಉತ್ತರಾರ್ಧದವರೆಗೂ ಮರೆತೇಬಿಟ್ಟರು. ಥಾಮಸ್ ಆಕ್ವಿನಾಸ್ ಅದನ್ನು ಅಲ್ಲಗಳೆದ, ಮತ್ತು ಮತಧರ್ಮಶಾಸ್ತ್ರಜ್ಞರಲ್ಲಿ ಅವನ ಮಾತೇ ಅಧಿಕಾರಯುತವೆನಿಸಿತು. ಆದರೆ ತತ್ವಶಾಸ್ತ್ರಜ್ಞರಲ್ಲಿ ಅದಕ್ಕೆ ಉತ್ತಮ ಸ್ಥಾನ ದೊರೆಯಿತು. ಡೆಕಾರ್ಟೆ ಅದನ್ನು ಪರಿಷ್ಕೃತರೂಪದಲ್ಲಿ ಮುಂದಿಟ್ಟ; ಅದಕ್ಕೆ ಆನುಷಂಗಿಕವಾಗಿ ದೇವರು ಸಾಧ್ಯ ಎಂಬ ಮತ್ತೊಂದು ವಾದವನ್ನು ಸೇರಿಸಿದರೆ ಅದು ಸ್ವೀಕೃತವಾಗುವಂತೆ ಮಾಡಬಹುದೆಂದು ಲೀಬ್‌ನಿಝ್, ತಾನದನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದೇನೆ ಎಂದು ಕ್ಯಾಂಟ್ ಭಾವಿಸಿದ. ಆದರೂ, ಒಂದು ಅರ್ಥದಲ್ಲಿ, ಅದು ಹೆಗೆಲ್ ಮತ್ತವನ ಅನುಯಾಯಿಗಳ ವ್ಯವಸ್ಥೆಯಲ್ಲಿ ಅಂತರ್ವಾಹಿನಿಯಾಗಿ ಉಳಿದು, ಬ್ರಾಡ್ಲೇಯ 'ಯಾವುದು ಇರಬಹುದೋ ಮತ್ತು ಇರಬೇಕೋ ಅದು, ಇರುತ್ತದೆ' (ವಾಟ್ ಮೇ ಬಿ ಅಂಡ್ ಮಸ್ಟ್‌ಬಿ, ಈಸ್) ಎಂಬ ತತ್ವದಲ್ಲಿ ಮತ್ತೆ ಕಾಣಿಸುತ್ತದೆ.

ಅಂಥ ವರ್ಣಮಯ ಇತಿಹಾಸವುಳ್ಳ ಒಂದು ಸಿದ್ಧಾಂತವನ್ನು, ಅದು ಸರಿಯೋ ತಪ್ಪೋ, ನಾವು ಗೌರವಿಸಬೇಕು. ಇರುವ ಪ್ರಶ್ನೆಯೆಂದರೆ: ನಾವು ಚಿಂತಿಸಬಲ್ಲ ಯಾವುದೋ, ನಾವು ಚಿಂತಿಸಬಲ್ಲೆವು ಎಂಬಷ್ಟರಿಂದಲೇ, ನಮ್ಮ ಚಿಂತನೆಯ ಹೊರಗೆ ಅಸ್ತಿತ್ವದಲ್ಲಿರಲು ಸಾಧ್ಯವೇ? ಪ್ರತಿಯೊಬ್ಬ ತತ್ವಜ್ಞಾನಿಯೂ ಹೌದು ಎಂದು ಹೇಳಲು ತವಕಿಸುತ್ತಾನೆ. ಯಾಕೆಂದರೆ ತತ್ವಜ್ಞಾನಿಯ ಕೆಲಸವೆಂದರೆ ಜಗತ್ತನ್ನು ಕುರಿತ ವಾಸ್ತವಗಳನ್ನು ಚಿಂತನೆಯ ಮೂಲಕ ಕಂಡುಕೊಳ್ಳುವುದೇ ಹೊರತು ಪರಿವೀಕ್ಷಿಸುವುದರಿಂದಲ್ಲವಲ್ಲ. ಹೌದು ಎಂಬುದು ಸರಿಯಾದ ಉತ್ತರವಾದರೆ, ಶುದ್ಧ ಚಿಂತನೆ ಹಾಗೂ ವಾಸ್ತವಗಳನ್ನು ಸೇರಿಸುವ ಸೇತುವೆಯಿದೆ; ಇಲ್ಲ ಎಂದಾದರೆ, ಇಲ್ಲ. ಈ ಸಾಮಾನ್ಯೀಕೃತ ರೂಪದಲ್ಲಿ, ಪ್ಲೇಟೋ ಆದರ್ಶರೂಪಗಳ ವಾಸ್ತವಿಕ ಸತ್ಯವನ್ನು ಸಾಧಿಸಲು ಒಂದು ಬಗೆಯ ಮೂಲತತ್ವವಾದವನ್ನು ಬಳಸುತ್ತಾನೆ. ಆದರೆ ಆನ್‌ಸೆಲ್ಮ್‌ಗೆ ಮುಂಚೆ ಬೇರಾರೂ ಅದನ್ನು ಕೇವಲ ತಾರ್ಕಿಕ ರೂಪದಲ್ಲಿ ಮುಂದಿಟ್ಟಿರಲಿಲ್ಲ. ಶುದ್ಧತೆಯನ್ನು ಸಾಧಿಸುವುದರಲ್ಲಿ, ಅದು ತನ್ನ ತರ್ಕಸಮ್ಮತೆಯನ್ನು ಕಳೆದುಕೊಳ್ಳುತ್ತದೆ; ಆದರೆ ಇದೂ ಆನ್‌ಸೆಲ್ಮ್‌ನ ಸಾಧನೆಯೇ.

ಮಿಕ್ಕವರಲ್ಲಿ, ಆನ್‌ಸೆಲ್ಮ್‌ನ ತಾತ್ವಿಕತೆಯು ಮುಖ್ಯವಾಗಿ ಸಂತ ಆಗಸ್ಟೈನ್‌ನಿಂದ

ಸಾಧಿತವಾದುದು, ಅವನಿಂದಾಗಿಯೇ ಅದಕ್ಕೆ ಅನೇಕ ಪ್ಲೇಟೋ ಅಂಶಗಳು ಸೇರಿಕೊಂಡುದು. ಅವನು ಪ್ಲೇಟೋ ಆದರ್ಶರೂಪಗಳಲ್ಲಿ ನಂಬಿಕೆಯಿಟ್ಟವನು, ಅದರಿಂದಾಗಿಯೇ ಅವನು ದೇವರ ಅಸ್ತಿತ್ವ ಕುರಿತ ಮತ್ತೊಂದು ಸಾಕ್ಷ್ಯವನ್ನು ಮುಂದಿಡುವಂತಾದುದು. ನವಪ್ಲೇಟೋವಾದದಿಂದ ಅವನು ದೇವರ ಅಸ್ತಿತ್ವ ಮಾತ್ರವಲ್ಲ, ತ್ರಿಮೂರ್ತಿತತ್ವದ ಅಸ್ತಿತ್ವವನ್ನೂ ಸಾಧಿಸಬಲ್ಲೆನೆಂದು ತೋರಿಸಿಕೊಳ್ಳುತ್ತಾನೆ. (ಪ್ಲಾಟಿನಸ್‌ನಲ್ಲಿಯೂ ಒಂದು ತ್ರಿಮೂರ್ತಿತತ್ವವಿದೆ, ಆದರೆ ಸಂಪ್ರದಾಯನಿಷ್ಠ ಕ್ರೈಸ್ತನು ಒಪ್ಪುವಂತಹ ಬಗೆಯದಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.) ಆನ್‌ಸೆಲ್ಮ್ ಪ್ರಕಾರ ವೈಚಾರಿಕತೆಯು ನಂಬಿಕೆಗೆ ಅಧೀನವಾದದ್ದು. 'ಅರ್ಥಮಾಡಿಕೊಳ್ಳುವುದಕ್ಕಾಗಿಯೇ ನಾನು ನಂಬುತ್ತೇನೆ,' ಎಂದು ಹೇಳುತ್ತಾನೆ, ಆಗಸ್ಟೈನ್‌ನನ್ನು ಅನುಸರಿಸಿ ನಂಬಿಕೆಯಿಲ್ಲದೆ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ ಎಂಬುದು ಅವನ ಅಭಿಪ್ರಾಯ. ದೇವರು ಬರಿ ಇರುವುದಲ್ಲ, ನ್ಯಾಯವೂ ಹೌದು. ಜಾನ್ ದ ಸ್ಕಾಟ್ ಅಂಥದೇ ಮಾತುಗಳನ್ನಾಡುತ್ತಾನೆಂಬುದನ್ನು ನೆನಪಿನಲ್ಲಿಡಬೇಕು. ಇಬ್ಬರ ಮೂಲಕವೂ ಪ್ಲೇಟೋನಲ್ಲಿದೆ.

ಸಂತ ತನ್ನ ಪೂರ್ವಿಕ ಕ್ರೈಸ್ತ ತತ್ವಜ್ಞಾನಿಗಳಂತೆಯೇ ಅರಿಸ್ಟಾಟಲ್ ಪಂಥಕ್ಕಿಂತ ಪ್ಲೇಟೋಪಂಥದವನು. ಈ ಕಾರಣಕ್ಕಾಗಿಯೇ, ಅವನ ತಾತ್ವಿಕತೆಯಲ್ಲಿ, ಥಾಮಸ್ ಆಕ್ವಿನಾಸ್‌ನಲ್ಲಿ ಉತ್ತುಂಗಕ್ಕೇರಿದ 'ಪ್ರೌಢ' ಎನ್ನಬಹುದಾದ ವಿಶಿಷ್ಟ ಲಕ್ಷಣಗಳಿಲ್ಲ. ಈ ಬಗೆಯ ತಾತ್ವಿಕತೆಯು ಆನ್‌ಸೆಲ್ಮ್‌ನ ಸಮಕಾಲೀನನಾಗಿ ಅವನಿಗಿಂತ ಹದಿನೇಳು ವರ್ಷಗಳಷ್ಟು ಚಿಕ್ಕವನಾಗಿದ್ದ ರೋಸೆಲಿನ್‌ನಿಂದ ಆರಂಭಗೊಂಡಿತೆಂದು ಪರಿಗಣಿಸಬಹುದು. ರೋಸೆಲಿನ್ ಒಂದು ಹೊಸ ಆರಂಭಕ್ಕೆ ನಾಂದಿ ಹಾಡಿದವನು, ಅವನ ಕುರಿತು ಮುಂದಿನ ಒಂದು ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಮಧ್ಯಯುಗದ ತತ್ವಜ್ಞಾನವು ಹದಿಮೂರನೆಯ ಶತಮಾನದವರೆಗೂ ಮುಖ್ಯವಾಗಿ ಪ್ಲೇಟೋಪಂಥವನ್ನು ಅನುಸರಿಸಿತ್ತು, 'ಟೈಮಿಯಸ್'ನ ಒಂದು ತುಣುಕನ್ನು ಹೊರತುಪಡಿಸಿದರೆ ಪ್ಲೇಟೋ ಎರಡನೆಯ ಅಥವಾ ಮೂರನೆಯ ಹಂತದಷ್ಟು ದೂರನಾಗಿದ್ದ. ಉದಾಹರಣೆಗೆ, ಜಾನ್ ದ ಸ್ಕಾಟ್ ಪ್ಲೇಟೋನ ದೃಷ್ಟಿಯೆಂದು ಹೇಳುವುದಾವುದೂ ಪ್ಲೇಟೋ ದೃಷ್ಟಿಯದಾಗಿರಲಿಲ್ಲ.; ಅವನಲ್ಲಿನ ಪ್ಲೇಟೋವಾದವೆಲ್ಲವೂ ಖೋಟಾ ಡಯೋನಿಸಿಯಸ್‌ನಿಂದ ಬಂದದ್ದು. ಈ ಲೇಖಕನ ಕಾಲವು ನಿಶ್ಚಿತವಾಗಿ ಗೊತ್ತಿಲ್ಲ, ಆದರೆ ಅವನು ನವಪ್ಲೇಟೋವಾದಿಯಾಗಿದ್ದ ಪ್ರಾಕ್ಲಸ್‌ನ ಶಿಷ್ಯನಾಗಿದ್ದಂತೆ ತೋರುತ್ತದೆ. ಹಾಗೆಯೇ ಜಾನ್ ದ ಸ್ಕಾಟ್ ಪ್ರಾಕ್ಲಸ್‌ನ ಹೆಸರು ಕೇಳಿದ್ದಂತೆಯೂ ಇಲ್ಲ, ಪ್ಲಾಟಿನಸ್‌ನ ಒಂದು ಸಾಲನ್ನೂ ಓದಿದ್ದಂತೆಯೂ ಇಲ್ಲ. ಖೋಟಾ ಡಯೋನಿಸಿಯಸ್ ಹೊರತಾಗಿ ಮಧ್ಯಯುಗದಲ್ಲಿ ಪ್ಲೇಟೋ ಬಗ್ಗೆ ತಿಳಿದಿದ್ದ ಇನ್ನೊಂದು ಆಕರ ಬೊಯೆಥಿಯಸ್. ಈ ಪ್ಲೇಟೋವಾದವು ಆಧುನಿಕ

ಆಭ್ಯಾಸಿಯು ಪ್ಲೇಟೋನನ್ನು ನೇರವಾಗಿ ಓದಿ ತಿಳಿಯುವುದಕ್ಕಿಂತ ತೀರ ಭಿನ್ನವಾದುದು. ಮತಧರ್ಮದ ಮೇಲೆ ಸ್ಪಷ್ಟ ಪ್ರಭಾವ ಹೊಂದಿಲ್ಲದಿರುವುದನ್ನೆಲ್ಲ ಅದು ಹೊರತುಪಡಿಸುತ್ತದೆ; ಮತಧರ್ಮ ತಾತ್ವಿಕತೆಯಲ್ಲಿ ಅದು ವಿಸ್ತೃತಗೊಂಡು ಮಿಕ್ಕವಕ್ಕಿಂತ ಕೆಲ ಅಂಶಗಳಿಗೆ ಹೆಚ್ಚು ಒತ್ತು ನೀಡುತ್ತದೆ. ಪ್ಲೇಟೋನ ಬಗೆಗಿನ ಪರಿಕಲ್ಪನೆಯ ಈ ವ್ಯತ್ಯಾಸವನ್ನು ಈಗಾಗಲೇ ಪ್ಲಾಟಿನಸ್ ಮಾಡಿಯಾಗಿತ್ತು. ಅರಿಸ್ಟಾಟಲ್‌ನನ್ನು ಕುರಿತ ವಿಷಯವೂ ಅಲ್ಪಸ್ವಲ್ಪ, ಆದರೆ ಅದು ವಿರುದ್ಧ ದಿಕ್ಕಿನದು. ಹನ್ನೆರಡನೆಯ ಶತಮಾನದವರೆಗೂ ಅವನ ಬಗ್ಗೆ ತಿಳಿದಿದ್ದ ಎಲ್ಲವೂ ಬೊಯೆಥಿಯಸ್‌ನ '*ಕ್ಯಾಟೆಗೊರೀಸ್*' ಮತ್ತು '*ಡೆ ಎಮೆಂಡೇಟಿಯೋನ್*'ಗಳ ಭಾಷಾಂತರದಿಂದ ತಿಳಿದದ್ದು. ಹೀಗಾಗಿ ಅರಿಸ್ಟಾಟಲ್‌ನನ್ನು ಒಬ್ಬ ತಾರ್ಕಿಕನಂತೆ ಮಾತ್ರ, ಮತ್ತು ಪ್ಲೇಟೋನನ್ನು ಮತಧಾರ್ಮಿಕ ತಾತ್ವಿಕನಂತೆಯೂ ಆದರ್ಶರೂಪಗಳ ಕರ್ತೃವಿನಂತೆಯೂ" ಪರಿಗಣಿಸಲಾಗಿತ್ತು. ಮಧ್ಯಯುಗದ ಉತ್ತರಾರ್ಧದಲ್ಲಿ ಈ ಪಾರ್ಶ್ವಿಕ ಪರಿಕಲ್ಪನೆಗಳು ಬದಲಾವಣೆಗೊಂಡವು, ಅದರಲ್ಲಿಯೂ ಅರಿಸ್ಟಾಟಲ್ ಬಗ್ಗೆ. ಆದರೆ ಈ ಪ್ರಕ್ರಿಯೆಯು ಪ್ಲೇಟೋ ವಿಷಯದಲ್ಲಿ ಮತಧರ್ಮಸುಧಾರಣೆಯ ಕಾಲದವರೆಗೂ ಆವಶ್ಯಕವೆನಿಸಲಿಲ್ಲ.

○

೧೦
ಮಹಮದೀಯ ಸಂಸ್ಕೃತಿ ಮತ್ತು ತಾತ್ವಿಕತೆ

ಪೂರ್ವ ಸಾಮ್ರಾಜ್ಯ, ಆಫ್ರಿಕ, ಮತ್ತು ಸ್ಪೆಯಿನ್‌ಗಳ ಮೇಲೆ ನಡೆದ ಆಕ್ರಮಣಗಳು ಪಶ್ಚಿಮದಲ್ಲಿನ ಉತ್ತರ ಬಾರ್ಬೇರಿಯನ್‌ರದಕ್ಕಿಂತ ಎರಡು ರೀತಿಗಳಲ್ಲಿ ಭಿನ್ನವಾದವು: ಮೊದಲನೆಯದು, ಪೂರ್ವ ಸಾಮ್ರಾಜ್ಯವು ೧೪೫೩ ರವರೆಗೂ ಉಳಿದಿತ್ತು, ಪಶ್ಚಿಮದಕ್ಕಿಂತ ಸುಮಾರು ಒಂದು ಸಾವಿರ ವರ್ಷಗಳಷ್ಟು ಹೆಚ್ಚು ಕಾಲ; ಎರಡನೆಯದು, ಪೂರ್ವ ಸಾಮ್ರಾಜ್ಯದ ಮೇಲಿನ ಆಕ್ರಮಣಗಳು ಮಹಮದೀಯರಿಂದಾದವು, ಗೆದ್ದ ಮೇಲೆ ಅವರು ಕ್ರೈಸ್ತರಾಗಲಿಲ್ಲ, ಆದರೆ ತಮ್ಮದೇ ಆದ ಪ್ರಮುಖ ನಾಗರಿಕತೆಯೊಂದನ್ನು ಬೆಳೆಸಿದರು.

ಮಹಮದೀಯ ಶಕೆ ಹೆಜಿರಾ[೨೨೯] ಕ್ರಿಶ ೬೨೨ ರಲ್ಲಿ ಆರಂಭವಾಯಿತು; ಮಹಮ್ಮದನು ಹತ್ತು ವರ್ಷಗಳ ಬಳಿಕ ಸತ್ತ.. ಅವನು ಸತ್ತ ತಕ್ಷಣವೇ ಅರಬ್‌ರ ಆಕ್ರಮಣಗಳು ಆರಂಭಗೊಂಡವು, ಅವರು ಅಸಾಧಾರಣ ವೇಗದಲ್ಲಿ ಮುನ್ನಡೆದರು. ಪೂರ್ವದಲ್ಲಿ ೬೩೪ ರಲ್ಲಿ ಸಿರಿಯ ಮೇಲೆ ಮೊದಲಿಗೆ ಆಕ್ರಮಣ ನಡೆಯಿತು, ಎರಡು ವರ್ಷಗಳಲ್ಲಿ ಸಂಪೂರ್ಣವಾಗಿ ಕೈವಶವಾಯಿತು. ೬೩೭ ರಲ್ಲಿ ಪರ್ಷಿಯ ಮೇಲೆ ಆಕ್ರಮಣವಾಯಿತು; ೬೫೦ ರಲ್ಲಿ ಅದರ ಮೇಲಿನ ಗೆಲವು ಸಂಪೂರ್ಣವಾಯಿತು. ೬೬೪ ರಲ್ಲಿ ಇಂಡಿಯ ಮೇಲೆ ದಾಳಿ ನಡೆಯಿತು; ಕಾನ್‌ಸ್ಟಾಂಟಿನೋಪಲ್ ಅನ್ನು ೬೬೯ ರಲ್ಲಿ ವಶಪಡಿಸಿಕೊಳ್ಳಲಾಯಿತು (ಮತ್ತೆ ೭೧೬-೧೭ ರಲ್ಲಿ). ಪಶ್ಚಿಮಾಭಿಮುಖಿ ಚಲನೆಯು ಅಷ್ಟು ತಕ್ಷಣದ್ದಾಗಿರಲಿಲ್ಲ. ಈಜಿಪ್ಟ್ ೬೪೨ ರಲ್ಲಿ ಕೈವಶವಾದರೆ, ಕಾರ್ಥೇಜ್ ೬೯೭ ರವರೆಗೂ ವಶವಾಗಲಿಲ್ಲ. ವಾಯುವ್ಯದ ಒಂದು ಸಣ್ಣ ಭಾಗದ ಹೊರತು ಸ್ಪೆಯಿನ್ ಅನ್ನು ೭೧೧-೧೨ ರಲ್ಲಿ ವಶಪಡಿಸಿಕೊಳ್ಳಲಾಯಿತು. ಪಶ್ಚಿಮಾಭಿಮುಖಿ ವಿಸ್ತರಣೆಯು (ಸಿಸಿಲಿ ಮತ್ತು ದಕ್ಷಿಣ ಇಟಲಿಗಳನ್ನು ಬಿಟ್ಟು), ಪ್ರವಾದಿ ಮಹಮ್ಮದನ ಸಾವಿನ ಬಳಿಕ ಸರಿಯಾಗಿ ಒಂದು

---

೨೨೯. ಹೆಜಿರಾ ಅಂದರೆ ಮಹಮ್ಮದನು ಮೆಕ್ಕದಿಂದ ಮದೀನಕ್ಕೆ ಹಾರಿದುದು.

ನೂರು ವರ್ಷದ ಬಳಿಕ ಟೂರ್ಸ್‌ ನಲ್ಲಿನ ೭೩೨ ರ ಯುದ್ಧದಲ್ಲಿ ಮಹಮದೀಯರಿಗೆ ಸೋಲಾದ ಕಾರಣ, ಸ್ಥಗಿತಗೊಂಡಿತು. (ಕಾನ್‌ಸ್ಟಾಂಟಿನೋಪಲ್ ಅನ್ನು ಅಂತಿಮವಾಗಿ ವಶಪಡಿಸಿಕೊಂಡ ಆಟ್ಟೋಮನ್ ಟರ್ಕ್‌ರು ನಾವೀಗ ಪರಿಶೀಲಿಸುತ್ತಿರುವ ಅವಧಿಗಿಂತ ತುಂಬ ಈಚಿನವರು).

ಈ ವಿಸ್ತರಣೆಯನ್ನು ಬಗೆಬಗೆಯ ಪರಿಸ್ಥಿತಿಗಳು ಸುಲಭಗೊಳಿಸಿದವು. ಪರ್ಷಿಯ ಮತ್ತು ಪೂರ್ವ ಸಾಮ್ರಾಜ್ಯಗಳು ದೀರ್ಘ ಯುದ್ಧಗಳ ಕಾರಣದಿಂದ ದಣಿದವು. ಬಹುತೇಕ ನೆಸ್ಟೋರಿಯನ್‌ರಾಗಿದ್ದ ಸಿರಿಯನ್‌ರು ಕ್ಯಾಥೋಲಿಕ್‌ರಿಂದ ಚಿತ್ರಹಿಂಸೆಗೊಳಗಾದರು, ಆದರೆ ಗೌರವಸೂಚನೆಯ ಬದಲು ಕ್ರೈಸ್ತರ ಎಲ್ಲ ಪಂಥಗಳನ್ನೂ ಸಹಿಸಿಕೊಂಡರು. ಹಾಗೆಯೇ ಈಜಿಪ್ಟ್‌ನಲ್ಲಿ ಬಹುಸಂಖ್ಯಾತರಾಗಿದ್ದ ಏಕಪ್ರಕೃತಿವಾದಿಗಳು (ಮಾನೋಫಿಸೈಟ್‌ರು) ಆಕ್ರಮಣಕಾರರನ್ನು ಸ್ವಾಗತಿಸಿದರು. ಆಫ್ರಿಕದಲ್ಲಿ ಅರಬ್‌ರು ರೋಮನ್‌ರು ಪೂರ್ತಿಯಾಗಿ ಎಂದೂ ವಶಪಡಿಸಿಕೊಂಡಿರದಿದ್ದ ಬೆರ್ಬರ್‌ರ ಜೊತೆ ಸ್ನೇಹ ಬೆಳೆಸಿಕೊಂಡರು. ಆರಬ್‌ರು ಮತ್ತು ಬೆರ್ಬರ್‌ರು ಸೇರಿ ಸ್ಪೆಯಿನ್ ಮೇಲೆ ಆಕ್ರಮಣ ಮಾಡಿದರು, ಅಲ್ಲಿ ಅವರಿಗೆ ವಿಸಿಗಾಥ್‌ರಿಂದ ತೀವ್ರವಾಗಿ ಹಿಂಸಾಚಾರಕ್ಕೊಳಗಾಗಿದ್ದ ಯೆಹೂದಿಗಳು ಸಹಾಯ ಮಾಡಿದರು.

ಪ್ರವಾದಿಯ ಮತಧರ್ಮವು ಸರಳ ಏಕದೇವತಾವಾದ, ಅದರಲ್ಲಿ ತ್ರಿಮೂರ್ತಿತತ್ತ್ವ ಮತ್ತು ಅವತಾರಗಳ ಮತಧರ್ಮಶಾಸ್ತ್ರ ಸೇರಿಕೊಂಡಿರಲಿಲ್ಲ. ಪ್ರವಾದಿಯು ತಾನು ದೈವಿಕವ್ಯಕ್ತಿಯೆಂದೇನೂ ಹೇಳಿಕೊಳ್ಳಲಿಲ್ಲ, ಅಥವಾ ಅವನ ಅನುಯಾಯಿಗಳು ಅವನ ಪರವಾಗಿ ಹಾಗೆ ಹೇಳಲೂ ಇಲ್ಲ. ಕೆತ್ತಿದ ವಿಗ್ರಹಪೂಜೆಯನ್ನು ನಿಷೇಧಿಸಿದ್ದ ಯೆಹೂದಿಗಳ ಆಜ್ಞೆಯನ್ನವರು ಮತ್ತೆ ಜಾರಿಗೆ ತಂದರು, ದ್ರಾಕ್ಷಾರಸವನ್ನು ನಿಷೇಧಿಸಿದರು. ಇಸ್ಲಾಂಗಾಗಿ ಜಗತ್ತಿನ ಆದಷ್ಟೂ ಭಾಗವನ್ನು ಗೆದ್ದುಕೊಳ್ಳುವುದು ಶ್ರದ್ಧಾವಂತರ ಕರ್ತವ್ಯವೆನಿಸಿತ್ತು; ಆದರೆ ಕ್ರೈಸ್ತರ, ಯೆಹೂದಿಗಳ, ಅಥವಾ ಜ಼ರೋಸ್ಟ್ರಿಯನ್‌ರ ಮೇಲೆ (ಅವರನ್ನು ಕೊರಾನ್ 'ಪುಸ್ತಕದ ಜನ', ಅಂದರೆ ಧಾರ್ಮಿಕಗ್ರಂಥದ ಬೋಧನೆಯನ್ನು ಅನುಸರಿಸುವವರು, ಎಂದು ಕರೆಯುತ್ತದೆ) ಹಿಂಸಾಚಾರ ನಡೆಸಬಾರದಾಗಿತ್ತು.

ಅರೇಬಿಯದ ಬಹುಭಾಗ ಮರಳುಗಾಡು, ಹೀಗಾಗಿ ಜನಸಂಖ್ಯೆಯನ್ನು ಕಾಪಿಡುವುದು ಬರಬರುತ್ತ ಕಷ್ಟಕರವೆನಿಸಿತ್ತು. ಅರಬ್‌ರ ಮೊದಲಿನ ಆಕ್ರಮಣಗಳು ನಡೆದುದು ಲೂಟಿಮಾಡುವ ಉದ್ದೇಶದಿಂದಷ್ಟೆ, ಆದರೆ ಶತ್ರುವಿನ ದೌರ್ಬಲ್ಯದ ಅರಿವಾದಂತೆ ಅದು ಶಾಶ್ವತ ವೃತ್ತಿಯಾಗಿಬಿಟ್ಟಿತು. ಇದಕ್ಕಿದ್ದಂತೆ, ಸುಮಾರು ಇಪ್ಪತ್ತು ವರ್ಷಗಳ ಅವಧಿಯಲ್ಲಿ, ಮರಳುಗಾಡಿನ ಅಲ್ಪಸ್ವಲ್ಪ ಉತ್ಪನ್ನಗಳನ್ನವಲಂಬಿಸಿ ಕಷ್ಟದಿಂದ ಬಾಳಲು ಹೊಂದಿಕೊಂಡಿದ್ದ ಜನರು ಜಗತ್ತಿನ ಕೆಲವು ಅತ್ಯಂತ ಶ್ರೀಮಂತ ಭಾಗಗಳ

ಒಡೆಯರಾಗಿಬಿಟ್ಟರು, ಎಲ್ಲ ಸುಖಭೋಗಗಳನ್ನು ಅನುಭವಿಸುವುದಕ್ಕೆ ಮತ್ತು ಪ್ರಾಚೀನ ನಾಗರಿಕತೆಗಳ ಪರಿಷ್ಕರಣೆಗಳಿಗೆ ಹೊಂದಿಕೊಂಡರು. ಬಹುತೇಕ ಉತ್ತರ ಬಾರ್ಬೇರಿಯನ್‌ರು ಮಾಡದಿದ್ದ ರೀತಿಯಲ್ಲಿ ಈ ಮಾರ್ಪಾಟುಗಳ ಆಮಿಷಗಳನ್ನವರು ಸಮರ್ಥವಾಗಿ ಮೆಟ್ಟಿ ನಿಂತರು. ಕಷ್ಟಕರವೆನಿಸದ ರೀತಿಯಲ್ಲಿ ಯುದ್ಧಗಳನ್ನು ಗೆದ್ದು ಸಾಮ್ರಾಜ್ಯವನ್ನು ಆಕ್ರಮಿಸಿಕೊಂಡುದರಿಂದ ಆದ ನಷ್ಟ ಕಡಿಮೆಯ ಪ್ರಮಾಣದ್ದಾಗಿತ್ತು, ನಾಗರಿಕ ಆಡಳಿತವನ್ನು ಬಹುತೇಕ ಯಥಾಪ್ರಕಾರ ಉಳಿಸಿಕೊಳ್ಳಲಾಯಿತು. ಪರ್ಷಿಯ ಮತ್ತು ಬೈಜಾಂಟಿಯನ್ ಸಾಮ್ರಾಜ್ಯ ಎರಡರಲ್ಲಿಯೂ ನಾಗರಿಕ ಆಡಳಿತವು ಬಹುವಾಗಿ ಸುಸಂಘಟಿತವಾಗಿತ್ತು. ಆರಬ್ ಬುಡಕಟ್ಟು ಜನರಿಗೆ ಆ ತೊಡಕುಗಳು ಮೊದಲಿಗೆ ಅರ್ಥವಾಗಲಿಲ್ಲ, ಹೀಗಾಗಿ ಆಡಳತವನ್ನು ನೋಡಿಕೊಳ್ಳುತ್ತಿದ್ದ ಅನುಭವಸ್ಥ ಜನರ ಸೇವೆಯನ್ನು ಒತ್ತಾಯವಿಲ್ಲದೆ ಒಪ್ಪಿಕೊಂಡರು. ಈ ಜನರು ತಮ್ಮ ಹೊಸಬ ಒಡೆಯರ ಸೇವೆಮಾಡಲು ಬಹುತೇಕವಾಗಿ ಹಿಂಜರಿಕೆಯಿಲ್ಲದೆ ಮುಂದಾದರು. ಹಾಗೆ ನೋಡಿದರೆ ಈ ಬದಲಾವಣೆಯು ಅವರ ಕೆಲಸವನ್ನು ಹಗುರ ಮಾಡಿತ್ತು, ಅದಕ್ಕೆ ಕಾರಣ ತೆರಿಗೆಗಳು ತುಂಬ ಕಡಿಮೆಯಾದುದು. ಅದಕ್ಕೂ ಮಿಗಿಲಾಗಿ ಜನರು ಗೌರವಸಮರ್ಪಣೆಯನ್ನು ತಪ್ಪಿಸಿಕೊಳ್ಳಲು ಕ್ರೈಸ್ತಮತದಿಂದ ಇಸ್ಲಾಂಗೆ ಮತಾಂತರಗೊಂಡರು.

ಆರಬ್ ಸಾಮ್ರಾಜ್ಯವು ಮಹಮ್ಮದನ ಉತ್ತರಾಧಿಕಾರಿಯಾಗಿ ಅವನ ಬಹುತೇಕ ಪಾವಿತ್ರ್ಯವನ್ನುಳಿಸಿಕೊಂಡಿದ್ದ ಕಲೀಫ್‌ನ ಅಡಿಯಲ್ಲಿ ಪೂರ್ಣ ರಾಜಪ್ರಭುತ್ವವಾಗಿತ್ತು. ಕಲೀಫ್‌ತನವು ನಾಮಮಾತ್ರಕ್ಕೆ ಆಯ್ಕೆಯದಾಗಿದ್ದು, ಬಹು ಬೇಗ ಆನುವಂಶೀಯವಾಯಿತು. ೭೫೦ ರವರೆಗೂ ಉಳಿದಿದ್ದ ಮೊದಲ ರಾಜ ಮನೆತನವಾದ ಉಮಯ್ಯಾಡ್‌ರನ್ನು ಸ್ಥಾಪಿಸಿದವರು ಮಹಮ್ಮದನನ್ನು ಶುದ್ಧ ರಾಜಕೀಯವಾಗಿ ಒಪ್ಪಿಕೊಂಡಿದ್ದ ಜನರು; ಅವರು ಸದಾಕಾಲ ಶ್ರದ್ಧಾವಂತರಲ್ಲಿನ ಮತಾಂಧತೆಯ ವಿರುದ್ಧವಾಗಿಯೇ ಉಳಿದರು. ಹೊಸ ಮತಧರ್ಮದ ಹೆಸರಿನಲ್ಲಿ ಜಗತ್ತಿನ ಬಹುಭಾಗವನ್ನು ಆಕ್ರಮಿಸಿಕೊಂಡಿದ್ದ ಅರಬ್‌ರು ಅಷ್ಟೇನೂ ಮತಧಾರ್ಮಿಕ ಸ್ವಭಾವದವರಲ್ಲ; ಅವರ ಗೆಲವುಗಳ ಹಿಂದಿದ್ದ ಪ್ರೇರಣೆಯೆಂದರೆ ಮತಧರ್ಮಕ್ಕಿಂತ ಹೆಚ್ಚಾಗಿ ಲೂಟಿ ಮತ್ತು ಹಣ. ಅವರು ದುರಭಿಮಾನಿಗಳಾಗಿರದಿದ್ದ ಕಾರಣದಿಂದಾಗಿಯೇ ಕೆಲವೇ ಮಂದಿ ಯೋಧರುಗಳು ಹೆಚ್ಚಿನ ಮಟ್ಟದ ನಾಗರಿಕತೆ ಮತ್ತು ಬೇರೆ ಮತಧರ್ಮದ ದೊಡ್ಡ ಜನಸಮುದಾಯವನ್ನು ಹೆಚ್ಚು ಶ್ರಮವಿಲ್ಲದೆ ಆಳಲು ಸಮರ್ಥರಾಗಿದ್ದರು.

ಇದಕ್ಕೆ ವ್ಯತಿರಿಕ್ತವಾಗಿ ಪರ್ಷಿಯನ್‌ರು ಅತ್ಯಂತ ಪ್ರಾಚೀನ ಕಾಲದಿಂದಲೂ ಆಳವಾದ ಮತಧಾರ್ಮಿಕರೂ ಊಹನಾತ್ಮಕರೂ ಆಗಿದ್ದರು. ಮತಾಂತರದ ಬಳಿಕ ಇಸ್ಲಾಂನಿಂದ ಪ್ರವಾದಿ ಮತ್ತವನ ಬಾಂಧವರು ಊಹಿಸಿಕೊಂಡದ್ದಕ್ಕಿಂತಲೂ ಹೆಚ್ಚು

ಕುತೂಹಲದಾಯಕವಾದುದೂ, ಮತಧಾರ್ಮಿಕವಾದುದೂ ಹೆಚ್ಚು ತಾತ್ವಿಕವಾದುದೂ ಆದುದನ್ನು ಮಾಡಿದರು. ೬೬೧ ರಲ್ಲಿ ಮಹಮ್ಮದನ ಅಳಿಯ ಆಲಿಯ ನಿಧನದ ಬಳಿಕ, ಮಹಮ್ಮದೀಯರು ಸುನ್ನಿ ಮತ್ತು ಷಿಯಾ ಎಂಬ ಎರಡು ಪಂಥಗಳಾಗಿ ಒಡೆದಿದ್ದರು. ಮೊದಲನೆಯುದು ಹೆಚ್ಚು ವ್ಯಾಪಕವಾದುದು; ಎರಡನೆಯದು ಆಲಿಯ ಅನುಯಾಯಿಗಳು, ಉಮಯ್ಯಾದ್ ರಾಜವಂಶವು ಆಕ್ರಮಣಕಾರಕವೆಂದು ಭಾವಿಸಿದ್ದವರು. ಪರ್ಷಿಯನ್‌ರು ಬಹಳ ಕಾಲ ಷಿಯಾ ಪಂಗಡದ ಹಿಂಬಾಲಕರಾಗಿದ್ದರು. ಪರ್ಷಿಯನ್‌ರ ವಿಶೇಷ ಪ್ರಭಾವದಿಂದಾಗಿ ಉಮಯ್ಯಾದ್‌ರನ್ನು ಕೊನೆಗೂ ಇಳಿಸಿ, ಪರ್ಷಿಯನ್ ಹಿತಾಸಕ್ತಿಗಳನ್ನು ಗಮನಿಸುತ್ತಿದ್ದ ಅಬ್ಬಾಸಿದ್‌ರನ್ನು ಮೇಲೇರಿಸಲಾಯಿತು. ಈ ಬದಲಾವಣೆಯು ರಾಜಧಾನಿಯನ್ನು ಡಮಾಸ್ಕಸ್‌ನಿಂದ ಬಾಗ್ದಾದ್‌ಗೆ ಬದಲಾಯಿಸುವ ಮೂಲಕ ಗುರುತಿಸಲಾಯಿತು.

ಅಬ್ಬಾಸಿದ್‌ರು ರಾಜಕೀಯವಾಗಿ ಉಮಯ್ಯಾದ್‌ರಿಗಿಂತ ಹೆಚ್ಚು ಮತಾಂಧತೆಯ ಪರವಾಗಿದ್ದವರು. ಆದರೆ ಅವರೇನೂ ಇಡೀ ಚಕ್ರಾಧಿಪತ್ಯವನ್ನು ವಶಪಡಿಸಿಕೊಳ್ಳಲಿಲ್ಲ. ಉಮಯ್ಯಾದ್ ವಂಶದ ಒಬ್ಬನು ಸಾಮೂಹಿಕ ಕೊಲೆಯಿಂದ ತಪ್ಪಿಸಿಕೊಂಡು ಸ್ಪೆಯಿನ್‌ಗೆ ಹೋಗಿ ಅಲ್ಲಿ ಕಾನೂನುಬದ್ಧ ರಾಜ ಎಂಬ ಮಾನ್ಯತೆ ಪಡೆದ. ಆ ಕಾಲದಿಂದ ಸ್ಪೆಯಿನ್ ಉಳಿದ ಮಹಮ್ಮದೀಯ ಜಗತ್ತಿನಿಂದ ಸ್ವತಂತ್ರವಾಯಿತು.

ಮೊದಮೊದಲ ಅಬ್ಬಾಸಿದ್‌ರ ಆಳ್ವಿಕೆಯಲ್ಲಿ ಕಲೀಫ್ ಆಡಳಿತವು ಹೆಚ್ಚು ವೈಭವವನ್ನು ಸಾಧಿಸಿತು. ಅವರಲ್ಲಿ ಅತ್ಯಂತ ಪ್ರಸಿದ್ಧನೆಂದರೆ ಹರುನ್ ಅಲ್ ರಶೀದ್ (ಮರಣ, ೮೦೯), ಅವನು ಶಾರ್ಲಮೇನ್ ಮತ್ತು ಸಮ್ರಾಜ್ಞಿ ಐರೀನ್‌ಳ ಸಮಕಾಲೀನನಾಗಿದ್ದು, 'ಅರೇಬಿಯನ್ ನೈಟ್ಸ್' ಮೂಲಕ ದಂತಕತೆಯ ರೂಪದಲ್ಲಿ ಪರಿಚಿತನಾಗಿದ್ದಾನೆ. ಅವನ ಆಸ್ಥಾನವು ಭೋಗ, ಕಾವ್ಯ, ಮತ್ತು ಪಾಂಡಿತ್ಯಗಳಿಂದ ಕಂಗೊಳಿಸುತ್ತಿತ್ತು. ಅವನ ಆದಾಯ ಅಪಾರ; ಅವನ ಚಕ್ರಾಧಿಪತ್ಯವು ಜಿಬ್ರಾಲ್ಟರ್‌ನಿಂದ ಸಿಂಧೂವರೆಗೆ ಹಬ್ಬಿತ್ತು. ಅವನ ನಿರ್ಧಾರ ಅಚಲವಾದುದು; ಅವನೊಡನೆ ಸಾಮಾನ್ಯವಾಗಿ ವಧಕಾರನೊಬ್ಬನಿರುತ್ತಿದ್ದ; ಅವನು ಕಲೀಫ್‌ನ ಸೂಚನೆಯಂತೆ ಕಾರ್ಯನಿರ್ವಹಿಸುತ್ತಿದ್ದ. ಆದರೆ ಈ ವೈಭವವು ಅಲ್ಪಾಯುಷಿಯಾಗಿತ್ತು. ಅವನ ನಂತರ ಬಂದವನು ತನ್ನ ಸೈನ್ಯದಲ್ಲಿ ಟರ್ಕ್‌ರನ್ನು ಸೇರಿಸಿಕೊಳ್ಳುವ ತಪ್ಪು ಮಾಡಿದ, ಅವರು ಅವಿಧೇಯರು. ಬಹು ಬೇಗ ಅವರು ಕಲೀಫ್‌ನನ್ನು ಶೂನ್ಯಕ್ಕಿಳಿಸಿ, ಸೈನಿಕ ದಳವು ಅವನಿಂದ ಬೇಸರಗೊಂಡಾಗ ಕುರುಡನನ್ನಾಗಿಸಿ ಅಥವಾ ಕೊಲೆಗೈದು ಕೈ ತೊಳೆದುಕೊಳ್ಳುತ್ತಿತ್ತು. ಆದರೆ ಕಲೀಫ್ ಅಧಿಕಾರವು ಮುಂದುವರಿಯಿತು; ಅಬ್ಬಾಸಿದ್ ವಂಶದ ಕೊನೆಯ ಕಲೀಫ್‌ನನ್ನು ೮೦೦,೦೦೦ ಮಂದಿ ಬಾಗ್ದಾದ್ ಜನರರೊಡನೆ ಮಂಗೋಲರು ೧೨೫೬ ರಲ್ಲಿ ಕೊಲೆ ಮಾಡಿದರು.

ಅರಬ್‌ರ ರಾಜಕೀಯ ಹಾಗೂ ಸಾಮಾಜಿಕ ವ್ಯವಸ್ಥೆಯು ರೋಮನ್

ಚಕ್ರಾಧಿಪತ್ಯದಂತೆಯೇ ದೋಷಗಳಿಂದಲೂ ಬೇರೆ ಮತ್ತಷ್ಟರಿಂದಲೂ ಕೂಡಿತ್ತು. ಸಂಪೂರ್ಣ ರಾಜಪ್ರಭುತ್ವದೊಡನೆ ಬಹುಪತ್ನಿತ್ವವು ಸೇರಿ, ಯಥಾಪ್ರಕಾರದಂತೆಯೇ, ರಾಜನೊಬ್ಬ ಸತ್ತಾಗ ಕೌಟುಂಬಿಕ ಕಲಹಗಳಿಂದ ಕೂಡಿ, ರಾಜನ ಮಗನೊಬ್ಬನ ಗೆಲವು ಮತ್ತು ಮಿಕ್ಕೆಲ್ಲ ಮಕ್ಕಳ ಕೊಲೆಯೊಂದಿಗೆ ಪರ್ಯವಸಾನವಾಗುತ್ತಿತ್ತು. ಸತತವಾದ ಯುದ್ಧಗಳನ್ನು ಗೆದ್ದುದರ ಫಲವಾಗಿ ಅಪಾರ ಸಂಖ್ಯೆಯ ಗುಲಾಮರೂ ಇರುತ್ತಿದ್ದರು; ಕೆಲವು ವೇಳೆ ಗುಲಾಮವರ್ಗದ ಅಪಾಯಕಾರಿಯಾದ ದಂಗೆಯೂ ನಡೆಯುತ್ತಿತ್ತು. ವ್ಯಾಪಾರವು ಯಥೇಚ್ಛವಾಗಿ ವೃದ್ಧಿಯಾಯಿತು, ಇದಕ್ಕೆ ಮುಖ್ಯ ಕಾರಣ ಕಲೀಫ್ ಅಧಿಕಾರವು ಪೂರ್ವ ಮತ್ತು ಪಶ್ಚಿಮಗಳ ನಡುವೆ ಸ್ಥಾಪಿತವಾಗಿದ್ದುದು. ಅಪಾರ ಪ್ರಮಾಣದ ಹಣದಿಂದಾಗಿ ಚೈನಾದ ರೇಷ್ಮೆ, ಉತ್ತರ ಯೂರೋಪ್‌ನ ಉಣ್ಣೆ ಮುಂತಾದ ಬೆಲೆಬಾಳುವ ವಸ್ತುಗಳ ಬೇಡಿಕೆ ಹೆಚ್ಚಾದುದರ ಜೊತೆಗೆ, ವ್ಯಾಪಾರವು, ಮುಸ್ಲಿಂ ಚಕ್ರಾಧಿಪತ್ಯದ ವಿಸ್ತಾರ, ಅರೆಬಿಕ್ ಜಗತ್ತಿನ ಭಾಷೆಯಾಗಿ ಬೆಳೆದದ್ದು, ಮುಸ್ಲಿಂ ನೀತಿಸಂಹಿತೆಯಲ್ಲಿನ ವ್ಯಾಪಾರೀವರ್ಗದ ಉನ್ನತ ಸ್ಥಾನ ಮುಂತಾದ ಕೆಲವು ವಿಶಿಷ್ಟ ಪರಿಸ್ಥಿತಿಗಳಿಂದಾಗಿ ಉತ್ತೇಜನ ಪಡೆಯುತ್ತಿತ್ತು; ಪ್ರವಾದಿಯೇ ಒಬ್ಬ ವ್ಯಾಪಾರಿಯಾಗಿದ್ದ ಹಾಗೂ ಮೆಕ್ಕಾಗೆ ಯಾತ್ರೆ ಹೋಗುವಾಗ ವ್ಯಾಪಾರವನ್ನು ಮೆಚ್ಚುತ್ತಿದ್ದ.'[೨೩೦] ಈ ವ್ಯಾಪಾರವು, ಸೈನಿಕ ಸಂಯೋಜನೆಯಂತೆ, ಅರಬ್‌ರು ರೋಮನ್‌ರು ಮತ್ತು ಪರ್ಷಿಯನ್‌ರಿಂದ ಬಳುವಳಿಯಾಗಿ ಪಡೆದಿದ್ದ (ಆದರೆ ಉತ್ತರದ ವಿಜಯಿಗಳಂತೆ ಹಾಳುಗೆಡವದೆ ಉಳಿಸಿಕೊಂಡಿದ್ದ) ಹೆದ್ದಾರಿಗಳನ್ನು ಅವಲಂಬಿಸಿತ್ತು. ಆದರೆ ಕ್ರಮೇಣ, ಚಕ್ರಾಧಿಪತ್ಯವು ಚೂರು ಚೂರಾಗಿ – ಸ್ಪೈಯಿನ್, ಪರ್ಷಿಯ, ಉತ್ತರ ಆಫ್ರಿಕ, ಮತ್ತು ಈಜಿಪ್ಟ್ – ಪೂರ್ಣ ಇಲ್ಲವೇ ಬಹುತೇಕ ಪೂರ್ಣ ಸ್ವಾತಂತ್ರ್ಯವನ್ನು ಗಳಿಸಿಕೊಂಡವು.

ಅರಬ್ ಆರ್ಥಿಕ ವ್ಯವಸ್ಥೆಯ ಅತ್ಯಂತ ಉತ್ತಮ ಲಕ್ಷಣಗಳಲ್ಲೊಂದೆಂದರೆ, ಬೇಸಾಯ, ಅದರಲ್ಲಿಯೂ ಕೌಶಲಪೂರ್ಣ ನೀರಾವರಿ ಪದ್ಧತಿ, ಇದಕ್ಕೆ ಕಾರಣ ಅವರು ನೀರಿನ ಕೊರತೆಯ ಜಾಗಗಳಲ್ಲಿ ಬದುಕಿದ್ದುದು. ಇವತ್ತಿಗೂ ಸ್ಪೈಯಿನ್‌ನ ಬೇಸಾಯವು ಅರಬ್ ನೀರಾವರಿ ಕೆಲಸಗಳ ಲಾಭ ಪಡೆಯುತ್ತಿದೆ.

ಮುಸ್ಲಿಂ ಜಗತ್ತಿನ ವಿಶಿಷ್ಟ ಲಕ್ಷಣವೆಂದರೆ, ಸಿರಿಯದಲ್ಲಿ ಅದು ಆರಂಭಗೊಂಡರೂ, ಬಹು ಬೇಗ ಪೂರ್ವ ಮತ್ತು ಪಶ್ಚಿಮ ತುದಿಗಳಾದ ಸ್ಪೈಯಿನ್ ಮತ್ತು ಪರ್ಷಿಯಗಳಲ್ಲಿಯೂ ಉಳಿದು ಬಂದಿದ್ದುದು. ಈ ಗೆಲವಿನ ಹೊತ್ತಿಗೆ ಸಿರಿಯನ್‌ರು ಅರಿಸ್ಟಾಟಲ್‌ನ ಅಭಿಮಾನಿಗಳಾಗಿದ್ದರು; ಅವನನ್ನು ನೆಸ್ಟೋರಿಯನ್‌ರು ಕ್ಯಾಥೋಲಿಕ್‌ರ ಮೆಚ್ಚಿಕೆಯ ಪ್ಲೇಟೋಗಿಂತ ಹೆಚ್ಚು ಮೆಚ್ಚುತ್ತಿದ್ದರು. ಗ್ರೀಕ್ ತತ್ವಜ್ಞಾನದ

---

೨೩೦. 'ಕೇಂಬ್ರಿಜ್ ಮಿಡ್ಲೈವಲ್ ಹಿಸ್ಟರಿ', ೪, ೨೮೬.

ತಿಳಿವಳಿಕೆಯನ್ನು ಅರಬ್‌ರು ಸಿರಿಯನ್‌ರಿಂದ ಪಡೆದರು, ಹೀಗೆ ಮೊದಲಿನಿಂದಲೂ, ಪ್ಲೇಟೋಗಿಂತ ಅರಿಸ್ಟಾಟಲ್‌ನೇ ಮೇಲೆಂದು ಭಾವಿಸಿದರು. ಆದರೆ ಅವರ ಅರಿಸ್ಟಾಟಲ್ ನವಪ್ಲೇಟೋವಾದದ ಉಡುಪು ಧರಿಸಿದವನು. ಅರೆಬಿಕ್‌ನಲ್ಲಿ ಮೊದಲು ತತ್ವಜ್ಞಾನವನ್ನು ರಚಿಸಿದ ಕಿಂಡಿ (ಮರಣ ಸು. ೮೭೩) ಪ್ಲಾಟಿನಸ್‌ನ 'ಎನ್ನಿಯೇಡ್ಸ್'ನ ತುಣುಕುಗಳನ್ನು ಭಾಷಾಂತರಿಸಿ, ಅದನ್ನು 'ದ ಥಿಯಾಲಜಿ ಆಫ್ ಅರಿಸ್ಟಾಟಲ್' ಎಂಬ ಹೆಸರಿನಲ್ಲಿ ಪ್ರಕಟಿಸಿದ. ಇದರಿಂದ ಅರಿಸ್ಟಾಟಲ್‌ನ ಬಗೆಗಿನ ಅರೆಬಿಕ್ ಕಲ್ಪನೆಗಳನ್ನು ಗೊಂದಲದಲ್ಲಿ ಕೆಡವಿತು, ಅದರಿಂದ ಮುಕ್ತವಾಗಲು ಶತಮಾನಗಳೇ ಬೇಕಾದವು.

ಈ ಮಧ್ಯೆ, ಪರ್ಷಿಯದಲ್ಲಿ ಮುಸ್ಲಿಮರು ಇಂಡಿಯದೊಂದಿಗಿನ ಸಂಪರ್ಕವನ್ನು ಹೊಂದಿದರು. ಎಂಟನೆಯ ಶತಮಾನದಲ್ಲಿ ಸಂಸ್ಕೃತ ಬರವಣಿಗೆಗಳ ಮೂಲಕ ಅವರು ಖಗೋಳವಿಜ್ಞಾನದ ಅರಿವನ್ನು ಮೊದಲ ಬಾರಿಗೆ ಪಡೆದರು. ೮೩೦ ರ ಸುಮಾರಿನಲ್ಲಿ ಗಣಿತ ಮತ್ತು ಖಗೋಳವಿಜ್ಞಾನ ವಿಷಯಗಳನ್ನು ಸಂಸ್ಕೃತದಿಂದ ಅನುವಾದಿಸಿದ ಮುಹಮ್ಮದ್ ಇಬ್ನ್ ಮೂಸ ಅಲ್-ಖ್ವರಾಜ್‌ಮಿ ಒಂದು ಪುಸ್ತಕವನ್ನು ಪ್ರಕಟಿಸಿದ, ಅದನ್ನು ಹನ್ನೆರಡನೆಯ ಶತಮಾನದಲ್ಲಿ, 'ಅಲ್ಗೋರಿಟ್‌ಮಿ ಡೆ ನ್ಯೂಮೆರೋ ಇಂಡ್ರಂ' ಎಂಬ ಹೆಸರಿನಲ್ಲಿ ಲ್ಯಾಟಿನ್ ಭಾಷೆಗೆ ಅನುವಾದಿಸಲಾಯಿತು. ಈ ಪುಸ್ತಕದ ಮೂಲಕವಾಗಿಯೇ ಪಶ್ಚಿಮವು ಮೊದಲು ನಾವು 'ಅರೆಬಿಕ್' ಅಂಕಿಗಳೆಂದು ಕರೆಯುವುದನ್ನು, ನ್ಯಾಯವಾಗಿ ಅದನ್ನು 'ಇಂಡಿಯನ್' ಎಂದು ಕರೆಯಬೇಕು-ಕಲಿತಿತು. ಅದೇ ಲೇಖಕನು ಬೀಜಗಣಿತದ ಬಗ್ಗೆಯೂ ಒಂದು ಗ್ರಂಥವನ್ನು ರಚಿಸಿದ, ಅದನ್ನು ಪಶ್ಚಿಮದಲ್ಲಿ ಹದಿನಾರನೆಯ ಶತಮಾನದವರೆಗೂ ಒಂದು ಪಠ್ಯಗ್ರಂಥವಾಗಿ ಬಳಸಲಾಗುತ್ತಿತ್ತು.

ಪರ್ಷಿಯನ್ ನಾಗರಿಕತೆಯು, ಹದಿಮೂರನೆಯ ಶತಮಾನದಲ್ಲಿ ಮಂಗೋಲ್‌ರು ದಾಳಿ ಮಾಡಿ ನುಚ್ಚುನೂರು ಮಾಡಿದ್ದರೂ, ಬೌದ್ಧಿಕವಾಗಿಯೂ ಕಲೆಯ ವಿಷಯದಲ್ಲಿಯೂ ಉನ್ನತಿಕೆಯನ್ನು ಉಳಿಸಿಕೊಂಡಿತ್ತು. ನನಗೆ ಗೊತ್ತಿರುವ ಕವಿಯೂ ಗಣಿತಜ್ಞನೂ ಆದ ಏಕೈಕ ವ್ಯಕ್ತಿ ಒಮರ್ ಖಯ್ಯಾಮ್ ೧೦೭೯ ರಲ್ಲಿ ಪಂಚಾಂಗ (ಕ್ಯಾಲೆಂಡರ್) ವನ್ನು ಪರಿಷ್ಕರಿಸಿದ. ಅವನ ಆಪ್ತ ಗೆಳೆಯ, ವಿಚಿತ್ರವೆಂದರೆ, ದಂತಕತೆಯಾಗಿ ಪ್ರಸಿದ್ಧನಾದ 'ಪರ್ವತದ ಮುದುಕ' (ಓಲ್ಡ್ ಮ್ಯಾನ್ ಆಫ್ ದ ಮೌಂಟನ್) ಅಸಾಸಿನ್ ಪಂಥವನ್ನು ಸ್ಥಾಪಿಸಿದ. ಪರ್ಷಿಯನ್ನರು ದೊಡ್ಡ ಕವಿಗಳು: 'ಷಹನಾಮಾ'ದ ಲೇಖಕ ಫಿರ್ದೂಸಿ (ಸು. ೯೪೧), ಅವನನ್ನು ಅಭ್ಯಾಸ ಮಾಡಿದವರ ಪ್ರಕಾರ ಹೋಮರ್‌ನೊಡನೆ ಹೋಲಿಕೆಗೆ ನಿಲ್ಲಬಲ್ಲವನು. ಅನುಭಾವಿಗಳಾಗಿಯೂ ಅವರು ಅಸಾಧಾರಣರೆನಿಸಿದ್ದರು, ಆದರೆ ಇತರ ಮಹಮ್ಮದೀಯರು ಹಾಗಿರಲಿಲ್ಲ. ಈಗಲೂ ಅಸ್ತಿತ್ವದಲ್ಲಿರುವ ಸೂಫಿ ಪಂಥವು ಸಂಪ್ರದಾಯಿಕ ಶಾಸ್ತ್ರಪ್ರಾಮಾಣ್ಯಗಳನ್ನು

ಅನುಭಾವಿಕವಾಗಿ ಹಾಗೂ ಅನ್ಯೋಕ್ತಿಯಾಗಿ ಉನ್ನತ ಸ್ತರದಲ್ಲಿ ವ್ಯಾಖ್ಯಾನಿಸಿತು; ಅದೆಲ್ಲ ನವಪ್ಲೇಟೋವಾದದವು.

ನೆಸ್ಟೋರಿಯನ್‌ರ ಮೂಲಕ ಮೊದಲಿಗೆ ಗ್ರೀಕ್ ಪ್ರಭಾವವು ಮುಸ್ಲಿಮ್ ಜಗತ್ತಿನ ಮೇಲಾದರೂ, ಅವರು ತಮ್ಮ ದೃಷ್ಟಿಕೋನದಲ್ಲಿ ಶುದ್ಧ ಗ್ರೀಕ್ ಆಗಿರಲಿಲ್ಲ. ಎಡಿಸ್ಸದಲ್ಲಿನ ಅವರ ಶಾಲೆಯನ್ನು ಚಕ್ರವರ್ತಿ ಝೀನೋ ೪೮೧ ರಲ್ಲಿ ಮುಚ್ಚಿಸಿದ್ದ; ಆನಂತರ ವಿದ್ವಾಂಸರು ಪರ್ಷಿಯಕ್ಕೆ ವಲಸೆ ಹೋಗಿ ಅಲ್ಲಿ ತಮ್ಮ ಕೆಲಸವನ್ನು ಮುಂದುವರಿಸಿದರು; ಆದರೆ ಪರ್ಷಿಯನ್ ಪ್ರಭಾವಕ್ಕೆ ಒಳಗಾಗದೇ ಏನಲ್ಲ. ನೆಸ್ಟೋರಿಯನ್‌ರು ಅರಿಸ್ಟಾಟಲ್‌ನಿಗೆ ಬೆಲೆ ಕೊಟ್ಟದ್ದು ಅವನ ತಾರ್ಕಿಕತೆಗಾಗಿ ಮಾತ್ರ, ಅವನ ತರ್ಕಕ್ಕೂ ಮಿಗಿಲಾಗಿ ಅರೇಬಿಕ್ ತತ್ವಜ್ಞಾನಿಗಳು ಅವನನ್ನು ಮುಖ್ಯವೆಂದು ಮೊದಲು ಭಾವಿಸಿದರು. ಆದರೆ ಆನಂತರದಲ್ಲಿ ಅವರು 'ಮೆಟಫಿಸಿಕ್ಸ್' ಅನ್ನೂ ಅವನ 'ಡೇ ಅನಿಮ'ವನ್ನೂ ಅಭ್ಯಾಸಮಾಡಿದರು. ಅರೇಬಿಕ್ ತತ್ವಜ್ಞಾನಿಗಳು ಸಾಮಾನ್ಯವಾಗಿ ವಿಶ್ವಕೋಶೀಯರು: ಅವರಿಗೆ ತಾತ್ವಿಕತೆಯಲ್ಲದೆ ರಸವಿದ್ಯೆ, ಜ್ಯೋತಿಷ್ಯ, ಮತ್ತು ಪ್ರಾಣಿವಿಜ್ಞಾನಗಳಲ್ಲಿಯೂ ಆಸಕ್ತಿಯಿತ್ತು. ದುರಭಿಮಾನಿಗಳೂ ಅಸಹಿಷ್ಣುಗಳೂ ಆಗಿದ್ದ ಜನಸಾಮಾನ್ಯರು ಅವರನ್ನು ಸಂಶಯದೃಷ್ಟಿಯಿಂದ ನೋಡುತ್ತಿದ್ದರು; (ತಾವು ಸುರಕ್ಷಿತರಾಗಿದ್ದಾಗ) ತಮ್ಮ ಸುರಕ್ಷೆಯು ಅವರು ಹೋಲಿಕೆಯಲ್ಲಿ ಹೆಚ್ಚು ಸ್ವತಂತ್ರಚಿಂತಕರಾದ ರಾಜರಿಂದಾಗಿತ್ತು.

ಇಬ್ಬರು ಮಹಮ್ಮದೀಯ ತತ್ವಜ್ಞಾನಿಗಳು, ಪರ್ಷಿಯದ ಒಬ್ಬ, ಸ್ಪೇಯಿನ್‌ನ ಒಬ್ಬ, ವಿಶೇಷ ಗಣನೆಗೆ ಅರ್ಹರು: ಅವರೆಂದರೆ, ಅವಿಸೆನ್ನ ಮತ್ತು ಅವೆರೋಸ್. ಇಬ್ಬರಲ್ಲಿ ಅವಿಸೆನ್ನ ಮಹಮ್ಮದೀಯರಲ್ಲಿ ಹೆಚ್ಚು ಹೆಸರುವಾಸಿಯಾಗಿದ್ದವನು, ಅವೆರೋಸ್ ಕ್ರೈಸ್ತರಲ್ಲಿ ಹೆಸರು ಪಡೆದವನು.

ಅವಿಸೆನ್ನ (ಇಬ್ನ ಸಿನ) (೯೮೦–೧೦೩೭) ಕಾವ್ಯದಲ್ಲಿ ಮಾತ್ರ ಇದೆಯೆಂದು ನಂಬಲಾಗುತ್ತಿದ್ದಂತಹ ಜಾಗಗಳಲ್ಲಿ ತನ್ನ ಬದುಕು ಕಳೆದವನು. ಅವನು ಹುಟ್ಟಿದ್ದು ಬೊಕ್ಕಾರ ಎಂಬ ಪ್ರಾಂತದಲ್ಲಿ; ತನ್ನ ಇಪ್ಪತ್ತನಾಲ್ಕನೆಯ ವಯಸ್ಸಿನಲ್ಲಿ ಅವನು ಖೀವಕ್ಕೆ – 'ಕಸದಲ್ಲಿನ ಏಕಾಕಿ ಖೀವಾ' – ಆನಂತರ ಖೊರಾಸನ್‌ಗೆ – 'ಏಕಾಕಿ ಖೊರಾಸಿಯನ್ ಕರಾವಳಿ' – ಹೋದ. ಸ್ವಲ್ಪ ಕಾಲ ಅವನು ವೈದ್ಯವಿದ್ಯೆ ಮತ್ತು ತತ್ವಜ್ಞಾನಗಳನ್ನು ಬೋಧಿಸುತ್ತಿದ್ದ, ಆದರೆ ಅವನು ವೈದ್ಯವಿಜ್ಞಾನಕ್ಕೆ ಕೊಟ್ಟ ಕೊಡುಗೆ ಅಲ್ಪ. ಹನ್ನೆರಡರಿಂದ ಹದಿನೇಳನೆಯ ಶತಮಾನದವರೆಗೆ, ಯೂರೋಪ್‌ನಲ್ಲಿ ಅವನನ್ನು ವೈದ್ಯದಲ್ಲಿ ಮಾರ್ಗದರ್ಶಕನೆಂದು ಅನುಸರಿಸಲಾಗುತ್ತಿತ್ತು. ಅವನದೇನೂ ಸಂತನ ಸ್ವಭಾವವಲ್ಲ, ಹಾಗೆ ನೋಡಿದರೆ ಅವನಿಗೆ ದ್ರಾಕ್ಷಾರಸ ಮತ್ತು ಹೆಣ್ಣಿನ ಹುಚ್ಚು. ಅವನನ್ನು ಸಂಪ್ರದಾಯನಿಷ್ಠರು ಶಂಕೆಯಿಂದ ಕಾಣುತ್ತಿದ್ದರು, ಆದರೆ ಅವನ ವೈದ್ಯವಿದ್ಯೆಯಿಂದ ರಾಜರುಗಳ ಸ್ನೇಹವನ್ನು ಸಂಪಾದಿಸಿಕೊಂಡಿದ್ದ. ಟರ್ಕಿಶ್

ಹಣದಾಹಿಗಳಿಂದ ಅವನು ಕೆಲವೇಳೆ ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತಿದ್ದ; ಕೆಲ ವೇಳೆ ಅವನು ತಲೆತಪ್ಪಿಸಿಕೊಂಡಿರುತ್ತಿದ್ದ; ಕೆಲ ವೇಳೆ ಸೆರೆಮನೆ ಸೇರಿರುತ್ತಿದ್ದ. ಅವನು ವಿಶ್ವಕೋಶವೊಂದರ ಲೇಖಕ, ಮತಧರ್ಮಶಾಸ್ತ್ರಜ್ಞರ ದ್ವೇಷದ ಕಾರಣದಿಂದಾಗಿ ಅದರ ಬಗ್ಗೆ ಪೂರ್ವದಲ್ಲಿ ಗೊತ್ತೇ ಇರಲಿಲ್ಲ, ಆದರೆ ಪಶ್ಚಿಮದಲ್ಲಿ ಲ್ಯಾಟಿನ್ ಭಾಷಾಂತರದ ಮೂಲಕ ಅದು ಪ್ರಭಾವಶಾಲಿಯಾಗಿತ್ತು. ಅವನ ಮನಸ್ಸು ಒಂದು ಬಗೆಯ ಸ್ವಾನುಭವ ಸ್ವರೂಪದ್ದು.

ಅವನ ತಾತ್ವಿಕತೆಯು ತನ್ನ ಮುಸ್ಲಿಂ ಪೂರ್ವಜರಿಗಿಂತ ಅರಿಸ್ಟಾಟಲ್ ಮತ್ತು ನವಪ್ಲೇಟೋವಾದಕ್ಕೆ ಹೆಚ್ಚು ಹತ್ತಿರವಾದುದು. ಆನಂತರದ ಕ್ರೈಸ್ತ ತರ್ಕಪಂಡಿತರಂತೆ ಅವನು ವೈಶ್ವಿಕಗಳ ಬಗ್ಗೆ ಚಿಂತನೆ ನಡೆಸಿದ್ದ. ಪ್ಲೇಟೋ ಪ್ರಕಾರ ಅವು ವಸ್ತುಗಳಿಗೆ ಮುಂಚಿನವು. ಅರಿಸ್ಟಾಟಲ್‌ಗೆ ಎರಡು ಅಭಿಪ್ರಾಯಗಳಿದ್ದವು: ಒಂದು, ಅವನು ಚಿಂತಿಸುತ್ತಿರುವಾಗ, ಮತ್ತೊಂದು, ಅವನು ಪ್ಲೇಟೋ ಜೊತೆ ಹೋರಾಡುತ್ತಿರುವಾಗ. ಇದು ವ್ಯಾಖ್ಯಾನಕಾರರಿಗೆ ಸೂಕ್ತ ವಿಷಯ.

ಅವೆಸೆನ್ನ ಸೂತ್ರವೊಂದನ್ನು ಕಂಡುಹಿಡಿದ, ಅದನ್ನು ಆವೆರೋಸ್ ಮತ್ತು ಆಲ್ಬರ್ಟಸ್ ಮ್ಯಾಗ್ನಸ್‌ರು ಪುನರುಚ್ಚಾರ ಮಾಡಿದರು. 'ಚಿಂತನೆಯು ಸಾಧಾರಣಗಳನ್ನು ವಸ್ತುರೂಪಕ್ಕೆ ತರುತ್ತವೆ.' ಇದರಿಂದ ತನ್ನ ಚಿಂತನೆಯ ಹೊರತಾಗಿ ಅವನು ವೈಶ್ವಿಕಗಳಲ್ಲಿ ನಂಬಿಕೆಯಿಟ್ಟವನಲ್ಲ ಎಂದು ಕಾಣಿಸಬಹುದು. ಆದರೆ ಇದು ತೀರ ಸರಳೀಕೃತವಾದ ನೋಟ. ಜೆನೆರ – ಅಂದರೆ ವೈಶ್ವಿಕಗಳು – ಅವನ ಪ್ರಕಾರ – ಒಮ್ಮೆಗೇ ವಸ್ತುಪೂರ್ವದ್ದೂ ಮತ್ತು ವಸ್ತ್ವನಂತರದ್ದೂ ಆಗಿರುತ್ತದೆ. ಅವನು ಇದನ್ನು ಹೀಗೆ ವಿವರಿಸುತ್ತಾನೆ: ಅವು ದೇವರ ಅರ್ಥದಲ್ಲಿ ವಸ್ತುಪೂರ್ವದವು. (ಉದಾಹರಣೆಗೆ ದೇವರು ಬೆಕ್ಕುಗಳನ್ನು ಸೃಷ್ಟಿಸಲು ಚಿಂತಿಸುತ್ತಾನೆಂದುಕೊಳ್ಳಿ. ಇದರ ಸ್ವರೂಪದ ಬಗ್ಗೆ ಅವನು ಆ ಮುಂಚೆಯೇ ಚಿಂತಿಸಿದ್ದಿರಬೇಕು, ಹೀಗೆ ಇದು ನಿರ್ದಿಷ್ಟ ಬೆಕ್ಕುಗಳಿಗೆ ಹಿಂದಿನವು.) ಜೆನೆರಬ ಎಂಬುದು ಸಹಜ ವಸ್ತುಸ್ವರೂಪದವು (ಬೆಕ್ಕುಗಳನ್ನು ಸೃಷ್ಟಿಸಿದ ಬಳಿಕ, ಅವುಗಳಲ್ಲಿನ ಪ್ರತಿಯೊಂದರಲ್ಲೂ ಬೆಕ್ಕುತನ ಇರಬೇಕು.) ಜೆನೆರ ಎಂಬುದು ನಮ್ಮ ಚಿಂತನೆಯ ಆನಂತರದವು. (ನಾವು ಅನೇಕ ಬೆಕ್ಕುಗಳನ್ನು ನೋಡಿದಾಗ ನಾವು ಅವುಗಳ ಸಾಮ್ಯವನ್ನು ಗುರುತಿಸಿ, 'ಬೆಕ್ಕು' ಬಗ್ಗೆ ಒಂದು ಸಾಮಾನ್ಯ ಸ್ವರೂಪದ ಅರಿವು ಪಡೆಯುತ್ತೇವೆ.) ಇದು ಸ್ಪಷ್ಟವಾಗಿ ವಿವಿಧ ಸಿದ್ಧಾಂತಗಳ ಸಮೀಕರಣ ಮಾಡಲು ಬಯಸಿದಂತಹುದು.

ಆವೆರೋಸ್ (ಇಬ್ನ ರಶೀದ್) (೧೧೨೬–೯೮) ಆವಿಸೆನ್ನ ಇದ್ದ ಮುಸ್ಲಿಂ ಜಗತ್ತಿನ ವಿರುದ್ಧ ತುದಿಯಲ್ಲಿ ಬಾಳಿದವನು. ಅವನು ಕಾರ್ಡೋವ ಆಗಿ ಹುಟ್ಟಿದ, ಅಲ್ಲಿಯೇ ಅವನ ತಂದೆ ಮತ್ತು ತಾತ, ನ್ಯಾಯಾಧೀಶ (ಕಾಡಿ)ಗಳಾಗಿದ್ದರು. ಅವನೂ ಕಾಡಿ ಆಗಿದ್ದವನೇ, ಮೊದಲು ಸೆಡವಿಲ್‌ನಲ್ಲಿ, ಆನಂತರ ಕಾರ್ಡೋವದಲ್ಲಿ.

ಮೊದಲು ಅವನು ಓದಿದ್ದು ಮತಧರ್ಮಶಾಸ್ತ್ರ ಮತ್ತು ನ್ಯಾಯಶಾಸ್ತ್ರಗಳನ್ನು, ಆನಂತರ ವೈದ್ಯವಿದ್ಯೆ, ಗಣಿತ ಮತ್ತು ತತ್ವಜ್ಞಾನಗಳನ್ನು ಅಭ್ಯಾಸ ಮಾಡಿದ. ಅವನು ಅರಿಸ್ಟಾಟಲ್‌ನ ಕೃತಿಗಳೆಲ್ಲವನ್ನೂ ವಿಶ್ಲೇಷಣೆ ಮಾಡುವ ಸಾಮರ್ಥ್ಯವುಳ್ಳವನೆಂದು ಕಲೀಫ್ ಆಗಿದ್ದ ಅಬು ಯಾಕೂಬ್ ಯೂಸುಫ್ ಬಳಿ ಶಿಫಾರಸು ಮಾಡಲಾಯಿತು. (ಆದರೆ ಅವನಿಗೆ ಗ್ರೀಕ್ ಭಾಷೆ ತಿಳಿದಿದ್ದಂತೆ ಕಾಣುವುದಿಲ್ಲ.) ಆ ದೊರೆ ಅವನನ್ನು ಬರಮಾಡಿಕೊಂಡು, ೧೧೮೪ ರಲ್ಲಿ ತನ್ನ ವೈದ್ಯನನ್ನಾಗಿ ಮಾಡಿಕೊಂಡ, ಆದರೆ ದುರದೃಷ್ಟವಶಾತ್ ರೋಗಿಯು ಎರಡು ವರ್ಷಗಳ ನಂತರದಲ್ಲಿ ಸತ್ತುಹೋದ. ಅವನ ನಂತರ ಬಂದ ಯಾಕೂಬ್ ಅಲ್-ಮನ್‌ಸೂರ್ ಅವನಿಗೆ ಹನ್ನೊಂದು ವರ್ಷಗಳ ಕಾಲ ತಂದೆಯಂತೆಯೇ ಆಶ್ರಯವಿತ್ತಿದ್ದ; ಆನಂತರ ಈ ತತ್ವಜ್ಞಾನಿಯ ಬಗೆಗಿನ ಸಂಪ್ರದಾಯನಿಷ್ಠರ ವಿರೋಧದಿಂದ ಗಾಬರಿಗೊಂಡು ಅವನನ್ನು ಅವನ ಹುದ್ದೆಯಿಂದ ಕಿತ್ತು ಹಾಕಿ ಗಡೀಪಾರು ಮಾಡಿದ, ಮೊದಲಿಗೆ ಕಾರ್ಡೋವ ಬಳಿಯ ಸಣ್ಣ ಊರಿಗೆ, ಆನಂತರ ಮೊರಾಕ್ಕೋಗೆ. ವಾಸ್ತವ ಸತ್ಯದ ಬದಲಿಗೆ ಪ್ರಾಚೀನರ ತತ್ವಜ್ಞಾನವನ್ನು ಹರಡುತ್ತಿರುವನೆಂಬ ಆರೋಪವನ್ನು ಅವನ ಮೇಲೆ ಹೊರಿಸಲಾಯಿತು. ಅಲ್-ಮನ್ಸೂರ್ ಒಂದು ಶಾಸನವನ್ನು ಬರೆಸಿ, ಆಧಾರವಿಲ್ಲದ ತರ್ಕದಿಂದ ಸತ್ಯದ ಬಗ್ಗೆ ಚಿಂತಿಸುವವರಿಗೆ ದೇವರು ನರಕಾಗ್ನಿಯನ್ನು ವಿಧಿಸುವನೆಂದು ಸಾರಿದ. ತರ್ಕ ಮತ್ತು ತತ್ವಜಿಜ್ಞಾಸೆಯ ಬಗೆಗಿನ ಕಂಡ ಕಂಡ ಪುಸ್ತಕಗಳನ್ನೆಲ್ಲ ಬೆಂಕಿಗೆ ಆಹುತಿ ಕೊಡಲಾಯಿತು.[೨೩೧]

ಇದಾದ ಸ್ವಲ್ಪ ಕಾಲದಲ್ಲಿಯೇ ಕ್ರೈಸ್ತ ವಿಜಯಗಳ ಕಾರಣದಿಂದಾಗಿ ಸ್ಪೈಯಿನ್‌ನ ಮೂರಿಶ್ ಪ್ರದೇಶವು ತೀರ ಕಿರಿದಾಯಿತು. ಸ್ಪೈಯಿನ್‌ನಲ್ಲಿ ಮುಸ್ಲಿಂ ತತ್ವಜ್ಞಾನವು ಅವೆರೋಸ್‌ನಿಂದ ಕೊನೆಗಂಡಿತು; ಉಳಿದ ಮುಸ್ಲಿಂ ಜಗತ್ತಿನಲ್ಲಿ ನಿಷ್ಠುರ ಸಂಪ್ರದಾಯವಾದವು ಊಹೆಗಳಿಗೆ ಒಂದು ಮುಕ್ತಾಯ ಹಾಡಿತು. ಆಶ್ಚರ್ಯಕರವಾಗಿ ಯೂಬೆರ್‌ವರ್ಗ್ ಆವೆರೋಸ್‌ನ ವಿರುದ್ಧ ಮಾಡಿದ್ದ ಸಂಪ್ರದಾಯವಿಹೀನತೆಯ ಆರೋಪವನ್ನೆದುರಿಸಲು ಸಿದ್ಧನಾದ - ಇದು ಮುಸ್ಲಿಮರು ನಿರ್ಧರಿಸಬೇಕಾದ ವಿಚಾರವೆಂದು ಯಾರಾದರೂ ಹೇಳಬಹುದು. ಅನುಭಾವಿಗಳ ಪ್ರಕಾರ, ಕುರಾನ್‌ನ ಪ್ರತಿ ಪಠ್ಯವೂ ೭ ರಿಂದ ೭೦೦ ಸ್ತರಗಳ ಅರ್ಥಗಳನ್ನು ಹೊಂದಿವೆ ಮತ್ತು ವಾಚ್ಯಾರ್ಥವು ಕೇವಲ ಕ್ಷುಲ್ಲಕವಾದುದು. ಹೀಗಾಗಿ ಒಬ್ಬ ತತ್ವಜ್ಞಾನಿಯು ಕುರಾನ್ ಅನ್ನು ಅರ್ಥಮಾಡಿಕೊಂಡ ರೀತಿಯು ಅದಕ್ಕೆ ವಿರುದ್ಧವಾಗಿರಲಾರದು, ಯಾಕೆಂದರೆ ಅದಕ್ಕಿರುವ ಏಳುನೂರು ಅರ್ಥಗಳಲ್ಲಿ ಒಂದಾದರೂ ತತ್ವಜ್ಞಾನಿಯ ಅರ್ಥವನ್ನು

---

೨೩೧. ಅವನು ಸಾಯುವ ಮುಂಚೆಯೇ ಆವೆರೋಸ್‌ನನ್ನು ಮರಳಿ ತನ್ನ ಆಶ್ರಯಕ್ಕೆ ವಾಪಸು ಬರಮಾಡಿಕೊಂಡನೆಂದೂ ಹೇಳುತ್ತಾರೆ.

ಸೂಚಿಸುತ್ತದೆಂದು ಖಂಡಿತವಾಗಿ ಹೇಳಬಹುದು. ಮಹಮ್ಮದೀಯ ಜಗತ್ತಿನಲ್ಲಿ, ಪರಿಶುದ್ಧ ಗ್ರಂಥದ ಯಾವುದೋ ಒಂದು ಹಂತದ ಅರ್ಥಕ್ಕೆ ಹೊರತಾದ ಮಿಕ್ಕೆಲ್ಲವನ್ನೂ ಅಜ್ಞಾನಿಗಳು ವಿರೋಧಿಸುತ್ತಿದ್ದರು; ಹೀಗಾಗಿ ಯಾವುದೇ ಬಗೆಯ ನಿರ್ದಿಷ್ಟ ಧರ್ಮವಿರೋಧವನ್ನು ಸಾಬೀತುಪಡಿಸಲಾಗಲಿಲ್ಲ. ಸಾಮಾನ್ಯ ಜನರು ಕುರಾನ್ ಅನ್ನು ವಾಚ್ಯದ ನೆಲೆಯಲ್ಲಿ ಸ್ವೀಕರಿಸಿದರೂ ಬದ್ಧಿವಂತರು ಹಾಗೆ ಮಾಡಬೇಕಾಗಿಲ್ಲ ಎಂಬ ಅನುಭಾವಿಗಳ ದೃಷ್ಟಿಕೋನವು ಸಾಮಾನ್ಯ ಜನರ ಒಪ್ಪಿಗೆಯನ್ನು ಪಡೆಯುವ ಸಾಧ್ಯತೆಯಿರಲಿಲ್ಲ.

ನವಪ್ಲೇಟೋವಾದದಿಂದ ಅನವಶ್ಯಕವಾಗಿ ಪ್ರಭಾವಿತವಾಗಿದ್ದ ಅರಿಸ್ಟಾಟಲ್‌ನ ಅರೇಬಿಕ್ ವ್ಯಾಖ್ಯಾನವನ್ನು ಉತ್ತಮಪಡಿಸುವ ಕೆಲಸದಲ್ಲಿ ಆವೆರೋಸ್ ತೊಡಗಿದ್ದ. ಒಬ್ಬ ಮತಧರ್ಮಸ್ಥಾಪಕನಿಗೆ ನೀಡಬೇಕಾದ ಗೌರವವನ್ನು – ಅವೆಸೆನ್ನಗಿಂತ ಬಹಳ ಹೆಚ್ಚಾಗಿ – ಆವೆರೋಸ್ ಅರಿಸ್ಟಾಟಲ್‌ಗೆ ನೀಡುತ್ತಿದ್ದ. ದೇವರ ಅಸ್ತಿತ್ವವನ್ನು ದೈವವಾಣಿಗೆ ಹೊರತಾದ ತರ್ಕದಿಂದಲೂ ಸ್ಥಾಪಿಸಬಹುದೆಂಬುದು ಅವನ ನಿಲವು, ಇದು ಥಾಮಸ್ ಆಕ್ವಿನಾಸ್‌ನ ನಿಲವೂ ಆಗಿತ್ತು. ಅಮರತೆಗೆ ಸಂಬಂಧಿಸಿದಂತೆ ಅವನು ಅರಿಸ್ಟಾಟಲ್‌ನ ಅಭಿಪ್ರಾಯಕ್ಕೆ ತೀರ ಸನಿಹನಾಗಿದ್ದಂತೆ ತೋರುತ್ತದೆ, ಅವನ ಪ್ರಕಾರ ಆತ್ಮವು ಶಾಶ್ವತವಲ್ಲವಾದರೂ ಬುದ್ಧಿಶಕ್ತಿಯು (ನೌಸ್) ಅಮರವಾದುದು. ಇದರಿಂದ ವೈಯಕ್ತಿಕ ಅಮರತ್ವ ಲಭಿಸಲಾರದೆಂಬುದು ವೇದ್ಯವೇ ಆಗಿದೆ, ಆದರೆ ಬುದ್ಧಿಶಕ್ತಿಯು ಬೇರೆ ಬೇರೆಯವರಲ್ಲಿ ಬೇರೆ ಬೇರೆ ರೀತಿಯಲ್ಲಿ ವ್ಯಕ್ತವಾದರೂ ಮೂಲತಃ ಒಂದೇ. ಸಹಜವಾಗಿಯೇ ಈ ಅಭಿಪ್ರಾಯವನ್ನು ಕ್ರೈಸ್ತ ತತ್ವಜ್ಞಾನಿಗಳು ವಿರೋಧಿಸಿದರು.

ಆನಂತರ ಬಹುತೇಕ ಮಹಮ್ಮದೀಯ ತತ್ವಜ್ಞಾನಿಗಳಂತೆಯೇ ಆವೆರೋಸ್, ಶ್ರದ್ಧಾವಂತನಾಗಿದ್ದರೂ, ನಿರ್ದಿಷ್ಟವಾಗಿ ಸಂಪ್ರದಾಯನಿಷ್ಠನೇನಲ್ಲ. ಸಂಪೂರ್ಣ ಸಂಪ್ರದಾಯನಿಷ್ಠ ಮತಧರ್ಮಶಾಸ್ತ್ರಜ್ಞರ ಗುಂಪೊಂದಿತ್ತು, ಎಲ್ಲ ತತ್ವಜ್ಞಾನವೂ ಶ್ರದ್ಧೆಗೆ ಮಾರಕವೆಂಬ ಭಾವನೆ ಅದರದು. ಇದರಲ್ಲಿ ಒಬ್ಬನ ಹೆಸರು ಆಲ್ಗಜೆಲ್ 'ಡಿಸ್ಟ್ರಕ್ಷನ್ಸ್ ಆಫ್ ಫಿಲಾಸಫಿ' ಎಂಬ ಗ್ರಂಥವನ್ನು ರಚಿಸಿ, ಅದರಲ್ಲಿ ಕುರಾನ್‌ನಲ್ಲಿ ಎಲ್ಲ ಸತ್ಯವೂ ಅಡಕವಾಗಿರುವುದರಿಂದ ಅದರ ಬಗ್ಗೆ ದೈವವಾಣಿಗೆ ಹೊರತಾದ ಯಾವ ವ್ಯಾಖ್ಯಾನವೂ ಅನವಶ್ಯಕ ಎಂದು ಪ್ರತಿಪಾದಿಸಿದ. ಅದಕ್ಕೆ ವಿರುದ್ಧವಾಗಿ ಆವೆರೋಸ್ 'ಡಿಸ್ಟ್ರಕ್ಷನ್ ಆಫ್ ದ ಡಿಸ್ಟ್ರಕ್ಷನ್' ಎಂಬ ಗ್ರಂಥವನ್ನು ಬರೆದ. ಆಲ್ಗಜೆಲ್ ತತ್ವಜ್ಞಾನಿಗಳ ವಿರುದ್ಧ ಎತ್ತಿ ಹಿಡಿದ ದೈವಿಕ ವೈಲಕ್ಷಣ್ಯಗಳು ಮತ್ತು ದೇಹದ ಪುನರುತ್ಥಾನದಂತಹ ವಿಶೇಷ ಶಾಸ್ತ್ರಪ್ರಾಮಾಣ್ಯಗಳಲ್ಲಿ ಯಾವುದೂ ಇಲ್ಲದಿದ್ದ ಕಾಲದಲ್ಲಿ ಜಗತ್ತು ಸೃಷ್ಟಿಸಿದವುಗಳು. ಮತಧರ್ಮವು ತಾತ್ವಿಕ ಸತ್ಯವನ್ನು ಅನ್ಯೋಕ್ತಿರೂಪದಲ್ಲಿ ಒಳಗೊಂಡಿರುತ್ತದೆಂಬುದು ಆವೆರೋಸ್‌ನ ನಿಲವು. ಇದು ಸೃಷ್ಟಿಕ್ರಿಯೆಗೆ ವಿಶೇಷವಾಗಿ

ಅನ್ವಯಿಸುತ್ತದೆ, ಇದನ್ನವನು ತನ್ನ ತಾತ್ವಿಕ ನೆಲೆಗಟ್ಟಿನಲ್ಲಿ ಅರಿಸ್ಟಾಟಲ್ ಮಾದರಿಯಲ್ಲಿ ವ್ಯಾಖ್ಯಾನಿಸುತ್ತಾನೆ.

ಆವೆರೋಸ್ ಮಹಮ್ಮದೀಯಕ್ಕಿಂತ ಹೆಚ್ಚಾಗಿ ಕ್ರೈಸ್ತ ತತ್ವಜ್ಞಾನದಲ್ಲಿ ಹೆಚ್ಚು ಮಹತ್ವವನ್ನು ಪಡೆಯುತ್ತಾನೆ. ಮಹಮ್ಮದೀಯರಲ್ಲಿ ಅವನು ಕೊಟ್ಟ ಕೊನೆಯಾದರೆ ಕ್ರೈಸ್ತರಲ್ಲಿ ಆರಂಭ. ಅವನ ಬರಹವನ್ನು ಮೈಕೇಲ್ ಸ್ಕಾಟ್ ಹದಿಮೂರನೆಯ ಶತಮಾನದಲ್ಲಿ ಲ್ಯಾಟಿನ್‌ಗೆ ಅನುವಾದಿಸಿದ; ಅವನ ಕೃತಿಗಳು ಹನ್ನೆರಡನೇ ಶತಮಾನದ ಕೊನೆಯವಾದ್ದರಿಂದ ಇದು ಅಚ್ಚರಿಯ ವಿಷಯ. ಯೂರೋಪ್‌ನಲ್ಲಾದ ಅವನ ಪ್ರಭಾವವು ಗಾಢವಾದುದು, ಪ್ರೌಢ ಚಿಂತನೆಯ ನೆಲೆಯಲ್ಲಿ ಮಾತ್ರವಲ್ಲದೆ, ಬಹಳ ಮಂದಿ ವೃತ್ತಿಪರರಲ್ಲದ ಸ್ವತಂತ್ರಚಿಂತಕರ ಮೇಲೆ ಕೂಡ. ಅವರು ಅಮರತ್ವವನ್ನು ನಿರಾಕರಿಸಿದ್ದರಿಂದಾಗಿ ಅವರನ್ನು ಆವೆರೋಸಿಸ್ಟರು ಎನ್ನುತ್ತಿದ್ದರು. ವೃತ್ತಿಪರ ತತ್ವಜ್ಞಾನಿಗಳಲ್ಲಿ ಅವನ ಮೊದಲ ಅಭಿಮಾನಿಗಳೆಂದರೆ ಫ್ರಾನ್ಸಿಸ್ಕನ್‌ರು ಮತ್ತು ಪ್ಯಾರಿಸ್ ವಿಶ್ವವಿದ್ಯಾನಿಲಯದವರು. ಈ ವಿಷಯವನ್ನು ಮುಂದಿನ ಅಧ್ಯಾಯವೊಂದರಲ್ಲಿ ಚರ್ಚಿಸಲಾಗುವುದು.

ಆರೇಬಿಕ್ ತತ್ವಜ್ಞಾನವು ಸ್ವಂತಿಕೆಯ ದೃಷ್ಟಿಯಿಂದ ಮುಖ್ಯವಲ್ಲ. ಅವೆಸೆನ್ನ ಮತ್ತು ಆವೆರೋಸ್‌ರಂತಹವರು ಮುಖ್ಯವಾಗಿ ವ್ಯಾಖ್ಯಾನಕಾರರು. ಸಾಮಾನ್ಯವಾಗಿ ಹೇಳುವುದಾದರೆ, ಹೆಚ್ಚು ವೈಜ್ಞಾನಿಕರಾಗಿದ್ದ ತತ್ವಜ್ಞಾನಿಗಳ ದೃಷ್ಟಿಕೋನವು ಅರಿಸ್ಟಾಟಲ್ ಮತ್ತು ನವಪ್ಲೇಟೋವಾದಿಗಳಿಂದ ತರ್ಕ ಮತ್ತು ತತ್ವಜಿಜ್ಞಾಸೆಯ ಮೂಲಕ, ವೈದ್ಯದಲ್ಲಿ ಗೇಲ್ಸ್‌ನ ಮೂಲಕ ಗಣಿತ ಮತ್ತು ಖಗೋಳವಿಜ್ಞಾನದಲ್ಲಿ ಗ್ರೀಕ್ ಮತ್ತು ಇಂಡಿಯ ಮೂಲದಿಂದ, ಬಂದುದು, ಅನುಭಾವಿಗಳಲ್ಲಿನ ಮತಧರ್ಮ ತಾತ್ವಿಕತೆಯು ಪ್ರಾಚೀನ ಪರ್ಷಿಯನ್ ನಂಬಿಕೆಗಳ ಮಿಶ್ರಣದಿಂದ ಕೂಡಿರುವಂತಹುದು. ಅರೇಬಿಕ್ ಲೇಖಕರು ಗಣಿತ ಮತ್ತು ರಸವಿದ್ಯೆಗಳಲ್ಲಿ ಸ್ವಲ್ಪ ಸ್ವಂತಿಕೆಯನ್ನು ತೋರಿಸಿದರು – ಈ ಎರಡನೆಯ ವಿಷಯದಲ್ಲಿ ರಸವಾದದ ಸಂಶೋಧನೆಯ ಆನುಷಂಗಿಕ ಫಲಿತಾಂಶಗಳಾಗಿ. ಮಹಮ್ಮದೀಯ ನಾಗರಿಕತೆಯು ತನ್ನ ಉತ್ತುಂಗ ಕಾಲದಲ್ಲಿ ಕಲೆಯಲ್ಲಿ ಮತ್ತು ಅನೇಕ ತಾಂತ್ರಿಕ ವಿಧಾನಗಳಲ್ಲಿ ಶ್ರೇಷ್ಠತೆಯನ್ನು ಮೆರೆದಿತ್ತು, ಆದರೆ ಸ್ವತಂತ್ರ ಸೈದ್ಧಾಂತಿಕ ಪರಿಕಲ್ಪನೆಗಳ ವಿಷಯಗಳಲ್ಲಿ ಯಾವುದೇ ಸಾಮರ್ಥ್ಯವನ್ನು ತೋರಿಸಲಿಲ್ಲ. ಆದರೆ ಇದನ್ನು ಕೀಳಂದಾಜಿಸಬಾರದು, ಒಂದು ಸಂವಾಹಕ ಸಾಧನವಾಗಿ ಅದು ಮುಖ್ಯವಾದುದು. ಪ್ರಾಚೀನ ಹಾಗೂ ಆಧುನಿಕ ಯೂರೋಪಿಯನ್ ನಾಗರಿಕತೆಯಲ್ಲಿ, ಮಧ್ಯೆ ಮಧ್ಯೆ ಕತ್ತಲ ಅವಧಿಗಳಿದ್ದವು. ಹೊಸತನ್ನು ಕಂಡುಹಿಡಿಯುವುದರಲ್ಲಿ ಮಹಮ್ಮದೀಯರೂ ಬೈಝಾಂಟಿಯನ್ನರೂ ಬೌದ್ಧಿಕ ಸಾಮರ್ಥ್ಯದಲ್ಲಿ ಹಿಂದಿದ್ದರೂ, ನಾಗರಿಕತೆಯ ಯಂತ್ರವನ್ನು ವಿದ್ಯೆ, ಗ್ರಂಥಗಳು, ಮತ್ತು ವಿದ್ವತ್ ಕಾಲಕ್ಷೇಪಗಳ ಮೂಲಕ ಕಾಪಾಡಿಕೊಂಡು ಬಂದರು. ಪಶ್ಚಿಮವು

ಬರ್ಬರತೆಯಿಂದ ಹೊರಬಂದಾಗ ಈ ಎರಡೂ ಪ್ರಚೋದಕ ಶಕ್ತಿಯಾಯಿತು – ಹದಿಮೂರನೆಯ ಶತಮಾನದಲ್ಲಿ ಮುಖ್ಯವಾಗಿ ಮಹಮ್ಮದೀಯರು, ಹದಿನೈದನೆಯ ಶತಮಾನದಲ್ಲಿ ಮುಖ್ಯವಾಗಿ ಬೈಜ಼ಾಂಟಿಯನ್ನರು. ಎರಡೂ ಸಂದರ್ಭಗಳು ಸಂವಾಹಕ ಸಾಧನಗಳು ಸಾಧಿಸಿದುದಕ್ಕಿಂತ ಉತ್ತಮ ರೀತಿಯಲ್ಲಿ ಹೊಸ ಚಿಂತನೆಗೆ ಪ್ರಚೋದನೆ ನೀಡಿದವು – ಒಂದು ಪ್ರೌಢ ಚಿಂತನೆಯಲ್ಲಾದರೆ, ಮತ್ತೊಂದು ಮತಧರ್ಮಸುಧಾರಣೆಯಲ್ಲಿ (ಇದಕ್ಕೆ ಬೇರೆ ಕಾರಣಗಳೂ ಇದ್ದುವೆನ್ನಿ).

ಸ್ಪೈಯಿನ್‌ನ ಮೂರರು ಮತ್ತು ಕ್ರೈಸ್ತರಲ್ಲಿ ಯೆಹೂದಿಗಳು ಒಂದು ಉಪಯುಕ್ತ ಕೊಂಡಿಯಾಗಿದ್ದರು. ಸ್ಪೈಯಿನ್‌ನಲ್ಲಿ ಅನೇಕ ಯೆಹೂದಿಗಳಿದ್ದರು, ಕ್ರೈಸ್ತರು ಮತ್ತೆ ಅದನ್ನು ವಶಪಡಿಸಿಕೊಂಡಾಗಲೂ ಅವರು ಅಲ್ಲಿ ಉಳಿದಿದ್ದರು. ಅವರಿಗೆ ಅರೇಬಿಕ್ ತಿಳಿದಿದ್ದುದರಿಂದ ಮತ್ತು ಅನಿವಾರ್ಯವಾಗಿ ಕ್ರೈಸ್ತರ ಭಾಷೆಯನ್ನು ಕಲಿಯಬೇಕಾಗಿದ್ದುದರಿಂದ ಅವರು ಭಾಷಾಂತರಗಳನ್ನೊದಗಿಸಲು ಸಮರ್ಥರಾಗಿದ್ದರು. ಹದಿಮೂರನೆಯ ಶತಮಾನದಲ್ಲಿ ಮಹಮ್ಮದೀಯರು ಅರಿಸ್ಟಾಟಲ್‌ವಾದಿಗಳಿಗೆ ನೀಡಿದ ಹಿಂಸೆಯಿಂದಾಗಿ ಮತ್ತೊಂದು ಬಗೆಯ ಸಂಯೋಜನೆಯೂ ಸಾಧ್ಯವಾಯಿತು, ಇದರಿಂದ ಮೂರಿಶ್ ತತ್ತ್ವಜ್ಞಾನಿಗಳು ಯೆಹೂದಿಗಳಲ್ಲಿ ಆಶ್ರಯಪಡೆಯಲು, ಅದರಲ್ಲೂ ಪ್ರಾವೆನ್ಸ್‌ನಲ್ಲಿ, ಕಾರಣವಾಯಿತು.

ಸ್ಪಾನಿಶ್ ಯೆಹೂದಿಗಳು ಒಬ್ಬ ಪ್ರಮುಖ ತತ್ತ್ವಜ್ಞಾನಿಯನ್ನು ಸೃಷ್ಟಿಸಿದರು, ಅವನೇ ಮೈಮೋನೈಡೀಸ್. ಅವನು ಕಾರ್ಡೋವದಲ್ಲಿ ೧೧೩೫ ರಲ್ಲಿ ಹುಟ್ಟಿದ, ಆದರೆ ತನ್ನ ಮೂವತ್ತನೆಯ ವಯಸ್ಸಿನಲ್ಲಿ ಕೈರೋಗೆ ಹೋಗಿ ಅಲ್ಲಿಯೇ ಕೊನೆಯವರೆಗೂ ಉಳಿದಿದ್ದ. ಅವನು ಅರೇಬಿಕ್‌ನಲ್ಲಿ ಬರೆದ, ಅದನ್ನು ತಕ್ಷಣವೇ ಹೀಬ್ರೂಗೆ ಅನುವಾದಿಸಲಾಯಿತು. ಅವನು ಸತ್ತ ಕೆಲವು ದಶಕಗಳಲ್ಲಿ ಅದನ್ನು ಲ್ಯಾಟಿನ್‌ಗೂ ಅನುವಾದಿಸಲಾಯಿತು, ಪ್ರಾಯಶಃ ಚಕ್ರವರ್ತಿ ಎರಡನೆಯ ಫ್ರೆಡೆರಿಕ್‌ನ ಪ್ರೇರಣೆಯಿಂದ. ಅವನು 'ಗೈಡ್ ಟು ವಾಂಡರರ್ಸ್' ಎಂಬ ಗ್ರಂಥವೊಂದನ್ನು ಬರೆದ, ಅದು ನಂಬಿಕೆಯನ್ನು ಕಳೆದುಕೊಂಡ ತತ್ತ್ವಜ್ಞಾನಿಗಳನ್ನು ಕುರಿತ ಪುಸ್ತಕ. ಅದರ ಉದ್ದೇಶವು ಅರಿಸ್ಟಾಟಲ್ ಮತ್ತು ಯೆಹೂದಿ ಮತಧರ್ಮಶಾಸ್ತ್ರಗಳ ಜೊತೆ ಹೊಂದಿಸುವುದು. ಅರಿಸ್ಟಾಟಲ್ ಚಂದ್ರನಡಿಯ ಜಗತ್ತಿನ ಬಗ್ಗೆ ಅಧಿಕಾರಯುತನೆನಿಸಿದ್ದವನು ಮತ್ತು ಸ್ವರ್ಗ ಕುರಿತು ದೈವವಾಣಿಯಲ್ಲಿ ನಂಬಿಕೆಯಿಟ್ಟಿದ್ದವನು. ಆದರೆ ದೇವರ ಬಗೆಗಿನ ತಿಳಿವಳಿಕೆಯಲ್ಲಿ ತಾತ್ವಿಕತೆ ಮತ್ತು ದೈವವಾಣಿಗಳೆರಡೂ ಬೆರೆತಿರುತ್ತವೆ. ಸತ್ಯಾನ್ವೇಷಣೆಯು ಒಂದು ಮತಧಾರ್ಮಿಕ ಕರ್ತವ್ಯ. ಜ್ಯೋತಿಷ್ಯವನ್ನು ತಿರಸ್ಕರಿಸಲಾಯಿತು. ಪ್ರಥಮ ಗ್ರಂಥ ಪಂಚಕ (ಪೆಂಟಾಟ್ಯೂಕ್) ವನ್ನು ಯಾವಾಗಲೂ ವಾಚ್ಯಾರ್ಥದಲ್ಲಿಯೇ ಸ್ವೀಕರಿಸಬಾರದು; ವಾಚ್ಯಾರ್ಥ ಮತ್ತು ವೈಚಾರಿಕತೆಗಳ ನಡುವೆ ತಿಕ್ಕಾಟವುಂಟಾದಾಗ ನಾವು ಅನ್ಯೋಕ್ತಿ

ವ್ಯಾಖ್ಯಾನದ ಮೊರೆಹೊಗಬೇಕು. ಅರಿಸ್ಟಾಟಲ್‌ಗೆ ವ್ಯತಿರಿಕ್ತವಾಗಿ ಅವನು ಹೇಳುವುದೆಂದರೆ, ದೇವರು ಕೇವಲ ಆಕಾರವನ್ನು ಸೃಷ್ಟಿಸಲಿಲ್ಲ, ಶೂನ್ಯದಿಂದ ಭೌತವಸ್ತುಗಳನ್ನೂ ಸೃಷ್ಟಿಸಿದ ಎಂಬುದು. ಕೆಲವಂಶಗಳಲ್ಲಿ ಅರಿಸ್ಟಾಟಲ್ ಅಭಿಪ್ರಾಯಕ್ಕಾಗಿ ಅವನು 'ಟೈಮೀಯಸ್‌'ನ (ಅದನ್ನವನು ಅರೇಬಿಕ್ ಭಾಷಾಂತರದಲ್ಲಿ ಓದಿದ್ದ) ತಾತ್ಪರ್ಯವನ್ನು ನೀಡುತ್ತಾನೆ. ದೇವರ ಸತ್ವವು ಅಮೇಯವಾದದ್ದು, ಎಲ್ಲ ಆಖ್ಯಾತಾತೀತ ಪರಿಪೂರ್ಣತೆಗಳನ್ನೂ ಮೀರಿದವನು. ಯೆಹೂದಿಗಳು ಅವನನ್ನು ಧರ್ಮವಿರೋಧಿಯೆಂದು ಪರಿಗಣಿಸಿ, ಅವನ ಮೇಲೆ ಕ್ರೈಸ್ತ ಮತಧರ್ಮಬೋಧಕ ಆಧಿಕಾರವನ್ನೂ ಚಲಾಯಿಸುವ ಮಟ್ಟಕ್ಕೆ ಹೋದರು. ಅವನು ಸ್ಪಿನೋಝನ ಮೇಲೆಯೂ ಪ್ರಭಾವವನ್ನು ಬೀರಿದನೆಂದು ಕೆಲವರ ಅಭಿಪ್ರಾಯವಾದರೂ, ಇದು ಪ್ರಶ್ನಾರ್ಹವಾಗಿದೆ.

೧೧
ಹನ್ನೆರಡನೆಯ ಶತಮಾನ

ಹನ್ನೆರಡನೆಯ ಶತಮಾನದಲ್ಲಿ ನಮ್ಮ ಆಸಕ್ತಿಯನ್ನು ಕೆರಳಿಸುವಂತಹುವು ನಾಲ್ಕು ಅಂಶಗಳು;

೧. ಚಕ್ರವರ್ತಿ ಮತ್ತು ಪೋಪ್ ಆಧಿಕಾರಗಳ ನಡುವಣ ಮುಂದುವರಿದ ಸಂಘರ್ಷ
೨. ಲಂಬಾರ್ಡ್ ನಗರಗಳ ಉಚ್ಛ್ರಾಯ
೩. ಮತಧಾರ್ಮಿಕ ಯುದ್ಧಗಳು (ಕ್ರೂಸೇಡ್)
೪. ಪ್ರೌಢ ವಿದ್ವತ್ತಿನ ಬೆಳವಣಿಗೆ

ಈ ನಾಲ್ಕೂ ಅಂಶಗಳು ಮುಂದಿನ ಶತಮಾನಕ್ಕೂ ಮುಂದುವರಿದುವು. ಮತಧಾರ್ಮಿಕ ಯುದ್ಧಗಳು ಕ್ರಮೇಣ ಲಜ್ಜಾಸ್ಪದವೆನ್ನಿಸುವ ಕೊನೆಯನ್ನು ಕಂಡವು; ಆದರೆ ಮಿಕ್ಕ ಮೂರು ಹನ್ನೆರಡನೆಯ ಶತಮಾನದಲ್ಲಿ ಸಂಕ್ರಮಣಸ್ಥಿತಿಯಿಂದ ಹದಿಮೂರನೆಯ ಶತಮಾನಕ್ಕೆ ಮುಂದುವರಿದು ತಮ್ಮ ಪರಾಕಾಷ್ಠೆಯನ್ನು ಮುಟ್ಟಿದುವು. ಹದಿಮೂರನೆಯ ಶತಮಾನದಲ್ಲಿ ಪೋಪ್ ಚಕ್ರವರ್ತಿಯ ಮೇಲೆ ಖಚಿತವಾದ ಗೆಲವನ್ನು ಸಾಧಿಸಿದ, ಲಂಬಾರ್ಡ್ ನಗರಗಳು ಸುರಕ್ಷಿತ ಸ್ವಾತಂತ್ರ್ಯವನ್ನು ಗಳಿಸಿದವು, ಮತ್ತು ಪ್ರೌಢ ವಿದ್ವತ್ತು ತನ್ನ ತುತ್ತ ತುದಿಯನ್ನು ಮುಟ್ಟಿತು. ಆದರೆ ಇವೆಲ್ಲವೂ ಹನ್ನೆರಡನೆಯ ಶತಮಾನವು ಸಿದ್ಧಗೊಳಿಸಿದ್ದುದರ ಪರಿಣಾಮವಾಗಿತ್ತು.

ಈ ನಾಲ್ಕು ಚಳವಳಿಗಳಲ್ಲಿ ಮೊದಲನೆಯದು ಮಾತ್ರವಲ್ಲದೆ, ಮಿಕ್ಕ ಮೂರೂ ಕೂಡ ಪೋಪ್ ಮತ್ತು ಮತಧರ್ಮಬೋಧಕರು ಗಳಿಸಿದ ಹೆಚ್ಚಿನ ಅಧಿಕಾರದೊಡನೆ ನಿಕಟ ಸಂಬಂಧವನ್ನು ಪಡೆದಿದ್ದವು. ಚಕ್ರವರ್ತಿಯ ವಿರುದ್ಧ ಲಂಬಾರ್ಡ್ ನಗರಗಳ ಜೊತೆ ಪೋಪ್ ಕೈಜೋಡಿಸಿದ್ದ; ಪೋಪ್ ಎರಡನೆಯ ಅರ್ಬನ್ ಮೊದಲನೆಯ ಮತಧಾರ್ಮಿಕ ಯುದ್ಧವನ್ನು ಉದ್ಘಾಟಿಸಿದ, ಆನಂತರದವುಗಳಿಗೆ ಪೋಪ್‌ಗಳು ಬಹು ಮುಖ್ಯ ಪ್ರೇರಕಶಕ್ತಿಗಳಾಗಿದ್ದರು. ತರ್ಕಪಂಡಿತರೆಲ್ಲ ಪುರೋಹಿತವರ್ಗದವರು, ಅಲ್ಲದೆ ಚರ್ಚ್ ಪರಿಷತ್ತುಗಳು ಅವರೆಲ್ಲ ಚರ್ಚ್‌ನ ಸಂಪ್ರದಾಯನಿಷ್ಠತೆಯ ಎಲ್ಲೆಯನ್ನು

ಮೀರದಂತೆ ಎಚ್ಚರ ವಹಿಸಿದ್ದವು, ಅವರು ತಪ್ಪೆಸಗಿದರೆ ಶಿಸ್ತುಕ್ರಮ ಕೈಗೊಳ್ಳುತ್ತಿದ್ದವು. ಚರ್ಚ್‌ನ ಗೆಲವಿನಲ್ಲಿ ತಾವೂ ಭಾಗಿಗಳು ಎಂಬ ಭಾವನೆಯು ನಿಸ್ಸಂಶಯವಾಗಿ ಅವರ ಬೌದ್ಧಿಕ ಕಾರ್ಯಗಳಿಗೆ ಪ್ರೇರಣೆಯೊದಗಿಸಿತು.

ಮಧ್ಯಯುಗಕ್ಕೆ ಸಂಬಂಧಿಸಿದ ಒಂದು ಕುತೂಹಲಕಾರೀ ಅಂಶವೆಂದರೆ, ತಮಗೆ ಗೊತ್ತಿಲ್ಲದಂತೆಯೇ ಅವು ಸ್ವಂತಿಕೆ ಮತ್ತು ಸೃಜನಶೀಲತೆಗಳನ್ನು ಹೊಂದಿದ್ದುದು. ಎಲ್ಲ ಪಕ್ಷಗಳವರೂ ತಮ್ಮ ನಿಲವುಗಳನ್ನು ಪ್ರಾಚೀನವೂ ಪುರಾತನವೂ ಆದ ವಾದಗಳಿಂದ ಸಮರ್ಥಿಸಿಕೊಳ್ಳುತ್ತಿದ್ದರು. ಜರ್ಮನಿಯಲ್ಲಿ ಚಕ್ರವರ್ತಿಯು ಶಾರ್ಲಮೇನ್‌ನ ಊಳಿಗಮಾನ್ಯ ತತ್ವಗಳಿಂದ ಪ್ರೇರಿತನಾಗಿದ್ದರೆ, ಇಟಲಿಯಲ್ಲಿ ರೋಮನ್ ನಿಯಮಗಳು ಮತ್ತು ಪ್ರಾಚೀನ ಚಕ್ರವರ್ತಿಗಳ ಅಧಿಕಾರವನ್ನು ಅವಲಂಬಿಸಿದ್ದರು. ಲಂಬಾರ್ಡ್ ನಗರಗಳು ಇನ್ನೂ ಹಿಂದಕ್ಕೆ – ಗಣತಾಂತ್ರಿಕ ರೋಮ್ ಕಾಲಕ್ಕೆ – ಹೋದವು. ಪೋಪ್‌ರ ಪಕ್ಷವು ತಮ್ಮ ಹಕ್ಕುಗಳಿಗಾಗಿ ಭಾಗಶಃ ಕಾನ್‌ಸ್ಟಾಂಟೈನ್‌ನ ಕಾಲ್ಪನಿಕ ಕೊಡುಗೆಯನ್ನೂ, ಭಾಗಶಃ ಹಳೆ ಒಡಂಬಡಿಕೆಯಲ್ಲಿ ನಿರೂಪಿತವಾದ ಸಾವುಲ್ ಮತ್ತು ಸಾಮ್ಯುಯಲ್‌ರ ಸಂಬಂಧವನ್ನೂ ಅಲಂಬಿಸಿತು. ತರ್ಕಪಂಡಿತರು ಮತಧರ್ಮಗ್ರಂಥಗಳು ಇಲ್ಲವೆ ಮೊದಲಿಗೆ ಪ್ಲೇಟೋ ಆನಂತರ ಅರಿಸ್ಟಾಟಲ್‌ನನ್ನು ಆಧರಿಸಿದರು; ಸ್ವಂತಿಕೆಯ ಸಂದರ್ಭದಲ್ಲಿ ವಸ್ತುಸ್ಥಿತಿಯನ್ನು ಮುಚ್ಚಿಟ್ಟರು. ಇಸ್ಲಾಂಗೆ ಮೊದಲು ಚಾಲತಿಯಲ್ಲಿದ್ದ ಸ್ಥಿತಿಯನ್ನು ಪುನಃಸ್ಥಾಪಿಸುವ ಪ್ರಯತ್ನವೇ ಮತಧರ್ಮಯುದ್ಧಗಳು.

ಸಾಹಿತ್ಯದ ಪ್ರಾಚೀನ ಶೈಲಿಯಿಂದ ನಾವು ಮೋಸಹೋಗಬಾರದು. ಚಕ್ರವರ್ತಿಯ ವಿಷಯದಲ್ಲಿ ಮಾತ್ರ ಅದು ವಾಸ್ತವದೊಡನೆ ತಾಳೆಯಾಗುತ್ತದೆ. ಊಳಿಗಮಾನ್ಯ ಪದ್ಧತಿಯು ನಶಿಸುತ್ತಿತ್ತು, ಅದರಲ್ಲೂ ಇಟಲಿಯಲ್ಲಿ; ರೋಮನ್ ಸಾಮ್ರಾಜ್ಯವೆಂಬುದು ಕೇವಲ ನೆನಪಾಗಿತ್ತು. ಅದರಂತೆಯೇ ಚಕ್ರವರ್ತಿ ಸೋತ. ಉತ್ತರ ಇಟಲಿಯ ನಗರಗಳು ಪಾರ್ಶ್ವಿಕ ಬೆಳವಣಿಗೆಯಲ್ಲಿ ಮಾತ್ರ ಪ್ರಾಚೀನ ಗ್ರೀಕ್ ನಗರಗಳನ್ನು ಹೋಲುತ್ತಿದ್ದವು, ವಿನ್ಯಾಸವನ್ನು ಪುನರಾವರ್ತಿಸಿತು, ಅನುಕರಣೆಯಿಂದಲ್ಲ, ಪರಿಸ್ಥಿತಿಗಳ ಸಾಮ್ಯದಿಂದ. ಸಣ್ಣ, ಶ್ರೀಮಂತ ಮತ್ತು ಅಧಿಕ ನಾಗರಿಕವಾದ ಗಣರಾಜ್ಯೀಯ ವ್ಯಾಪಾರೀ ಸಮುದಾಯಗಳನ್ನು ಕೆಳ ಹಂತದ ಸಂಸ್ಕೃತಿಯ ಮಟ್ಟದಿಂದ ಕೂಡಿದ್ದ ರಾಜಪ್ರಭುತ್ವಗಳು ಸುತ್ತುವರಿದಿದ್ದವು. ತರ್ಕಪಂಡಿತರು, ಅರಿಸ್ಟಾಟಲ್‌ನ ಬಗ್ಗೆ ಎಷ್ಟೇ ಗೌರವವನ್ನು ಹೊಂದಿದ್ದರೂ, ಅರಬ್‌ರಿಗಿಂತ – ಪ್ಲಾಟಿನಸ್ ಕಾಲದಿಂದ ಬೇರಾವ ಕಾಲದಲ್ಲೂ ಕಾಣದಿದ್ದಂತಹ, ಅಥವಾ ಕನಿಷ್ಠ ಪಕ್ಷ, ಆಗಸ್ಟೈನ್ ಕಾಲಕ್ಕಿಂತ – ಹೆಚ್ಚಿನ ಸ್ವಂತಿಕೆಯನ್ನು ತೋರಿಸಿದರು. ಚಿಂತನೆಯಲ್ಲಿನಂತೆಯೇ ರಾಜಕೀಯದಲ್ಲಿಯೂ ಅದೇ ಉನ್ನತ ಮಟ್ಟದ ಸ್ವಂತಿಕೆಯಿತ್ತು.

ಚಕ್ರವರ್ತಿ ಮತ್ತು ಪೋಪ್ ಅಧಿಕಾರದ ನಡುವಣ ಸಂಘರ್ಷ

ಏಳನೆಯ ಗ್ರೆಗರಿಯ ಕಾಲದಿಂದ ಹದಿಮೂರನೆಯ ಶತಮಾನದ ಮಧ್ಯಭಾಗದವರೆಗೂ ಯೂರೋಪ್‌ನ ಇತಿಹಾಸವು ಸಾಮಾನ್ಯ ರಾಜರು – ಮೊದಲಿಗೆ ಚಕ್ರವರ್ತಿಗಳು ಹಾಗೂ ಕೆಲವು ವೇಳೆ ಫ್ರಾನ್ಸ್ ಮತ್ತು ಇಂಗ್ಲಂಡ್‌ನ ರಾಜರುಗಳ – ಮತ್ತು ಪೋಪ್‌ರ ನಡುವಣ ಅಧಿಕಾರವು ಸಂಘರ್ಷದ ಸುತ್ತ ತಿರುಗುತ್ತದೆ. ಗ್ರೆಗರಿಯ ಪೋಪ್‌ತನವು ಒಂದು ಬಗೆಯ ದುರಂತದಿಂದ ಕೊನೆಗಂಡಿತು; ಆದರೆ ಎರಡನೆಯ ಅರ್ಬನ್‌ನಿಂದ ಅವನ ಧೋರಣೆಗಳು ಮುಂದುವರಿದುವು, ಆದರೆ ತುಂಬ ಪರಿಷ್ಕರಣೆಗಳೊಂದಿಗೆ. ಸಾಮಾನ್ಯ ದೀಕ್ಷಾಪ್ರದಾನದ ವಿರುದ್ಧದ ತೀರ್ಪುಗಳನ್ನು ಪುನರಾವರ್ತಿಸಿ, ಪುರೋಹಿತವರ್ಗ ಮತ್ತು ಜನರಿಂದ ಬಿಷಪ್‌ರ ಆಯ್ಕೆಯು ಸ್ವತಂತ್ರ ರೀತಿಯಲ್ಲಿ ನಡೆಯಬೇಕೆಂದು ಬಯಸಿದ. (ಇದರಲ್ಲಿನ ಜನತೆಯ ಪಾತ್ರವು ಕೇವಲ ಔಪಚಾರಿಕವಾದದ್ದೆಂಬುದರಲ್ಲಿ ಅನುಮಾನವಿಲ್ಲ.) ಆದರೆ, ಅನುಷ್ಠಾನದಲ್ಲಿ ಸಮಂಜಸವಾಗಿದ್ದ ಪಕ್ಷದಲ್ಲಿ ಅವನು ಸಾಮಾನ್ಯ ನೇಮಕಾತಿಗಳಿಗೆ ಅಡ್ಡಿಯುಂಟುಮಾಡಲಿಲ್ಲ.

ಮೊದಲಿಗೆ, ಅರ್ಬನ್ ನಾರ್ಮನ್ ಪ್ರದೇಶದಲ್ಲಿ ಮಾತ್ರ ಸುರಕ್ಷಿತವಾಗಿದ್ದ. ಆದರೆ ೧೦೯೩ ರಲ್ಲಿ, ನಾಲ್ಕನೆಯ ಹೆನ್ರಿಯ ಮಗ ಕಾನ್ರಾಡ್ ತನ್ನ ತಂದೆಯ ವಿರುದ್ಧವೇ ದಂಗೆಯೆದ್ದು, ಪೋಪ್‌ನ ಸಹಕಾರದೊಂದಿಗೆ ಉತ್ತರ ಇಟಲಿಯನ್ನು ವಶಪಡಿಸಿಕೊಂಡ, ಜೊತೆಗೆ ಅಲ್ಲಿ ಲಂಬಾರ್ಡ್ ಒಕ್ಕೂಟವು ಮಿಲಾನ್ ಕೇಂದ್ರವಾಗಿದ್ದ ನಗರಗಳೂ ಸೇರಿ ಪೋಪ್ ಪರವಾಗಿದ್ದವು. ೧೦೯೪ ರಲ್ಲಿ, ಉತ್ತರ ಇಟಲಿ ಮತ್ತು ಫ್ರಾನ್ಸ್‌ಗಳ ಮೂಲಕ ವಿಜಯಯಾತ್ರೆಯನ್ನು ನಡೆಸಿದ. ಅವನು ಫ್ರಾನ್ಸ್‌ನ ದೊರೆ ಫಿಲಿಪ್‌ನನ್ನು ಗೆದ್ದ. ಅವನು ವಿವಾಹವಿಚ್ಛೇದವನ್ನು ಬಯಸಿ ಪೋಪ್‌ನ ಬಹಿಷ್ಕಾರಕ್ಕೊಳಗಾಗಿದ್ದು ಶರಣಾಗತನಾಗಿದ್ದ. ೧೦೯೫ ರಲ್ಲಿ ನಡೆದ ಕ್ಲರ್‌ಮೌಂಟ್‌ನ ಮತಧರ್ಮ ಪರಿಷತ್ತಿನಲ್ಲಿ ಅರ್ಬನ್ ಮೊದಲ ಮತಧಾರ್ಮಿಕ ಯುದ್ಧವನ್ನು ಗೆದ್ದ. ಇದರಿಂದ ಒಂದು ಬಗೆಯ ಮತಧಾರ್ಮಿಕ ಅಲೆಯೆದ್ದು ಪೋಪ್ ಅಧಿಕಾರವು ಹೆಚ್ಚಾಗಲು ಕಾರಣವಾಯಿತು. ಜೊತೆಗೆ ಯೆಹೂದಿಗಳ ಬರ್ಬರ ಹತ್ಯಾಕಾಂಡಕ್ಕೂ. ಅರ್ಬನ್ ತನ್ನ ಬದುಕಿನ ಕೊನೆಯ ವರ್ಷವನ್ನು ರೋಮ್‌ನ ರಕ್ಷಣೆಯಲ್ಲಿ ಕಳೆದ, ಅಲ್ಲಿ ಪೋಪ್‌ರಿಗೆ ಅಷ್ಟೇನೂ ರಕ್ಷಣೆಯಿರಲಿಲ್ಲ.

ಮುಂದಿನ ಪೋಪ್ ಆದ ಎರಡನೆಯ ಪಾಶ್ಚಲ್ ಅರ್ಬನ್‌ನಂತೆಯೇ ಕ್ಲೂನಿಯಿಂದ ಬಂದಿದ್ದವನು. ಅವನೂ ದೀಕ್ಷಾಪ್ರದಾನದ ವಿಷಯದಲ್ಲಿ ತನ್ನ ಹೋರಾಟವನ್ನು ಮುಂದುವರಿಸಿ, ಫ್ರಾನ್ಸ್ ಮತ್ತು ಇಂಗ್ಲಂಡ್‌ಗಳಲ್ಲಿ ಸಫಲನೂ ಆದ. ಆದರೆ ೧೧೦೬ರಲ್ಲಿ ನಾಲ್ಕನೆಯ ಹೆನ್ರಿಯ ಮರಣಾನಂತರ, ಮುಂದಿನ ಚಕ್ರವರ್ತಿಯಾದ ಐದನೆಯ ಹೆನ್ರಿಯು ಪೋಪ್ ಜೊತೆ ಉತ್ತಮ ಬಾಂಧವ್ಯ

ಹೊಂದಿದ್ದ, ಅವನೋ ವ್ಯವಹಾರಜ್ಞಾನವಿಲ್ಲದವನು, ತನ್ನ ಸಂತತನಕ್ಕಿಂತ ರಾಜಕೀಯ ಪ್ರಶ್ನೆಗೆ ಹೆಚ್ಚು ಮಹತ್ವವಿತ್ತವನು. ಚಕ್ರವರ್ತಿಯು ದೀಕ್ಷಾಪ್ರದಾನವನ್ನು ಕೈಬಿಡಬೇಕೆಂದು ಪೋಪ್ ಹೇಳಿದ, ಅದಕ್ಕೆ ಬದಲಾಗಿ ಬಿಷಪ್‌ರೂ ಕ್ರೈಸ್ತ ಮಠಾಧಿಪತಿಗಳೂ ಐಹಿಕ ಆಸ್ತಿಗಳನ್ನು ತ್ಯಜಿಸಬೇಕೆಂದು ಸೂಚಿಸಿದ. ಚಕ್ರವರ್ತಿಯು ಇದಕ್ಕೆ ಒಪ್ಪಿಕೊಂಡಂತೆ ತೋರಿಸಿಕೊಂಡ, ಆದರೆ ಸೂಚಿತ ಸಂಧಾನಸೂತ್ರವು ಗೊತ್ತಾದಾಗ, ಧರ್ಮಬೋಧಕರು ಪೋಪ್‌ನ ವಿರುದ್ಧ ಕ್ರುದ್ಧರಾಗಿ ಬಂಡಾಯವೆದ್ದರು. ಆ ಹೊತ್ತಿಗೆ ರೋಮ್‌ನಲ್ಲಿದ್ದ ಚಕ್ರವರ್ತಿಯು ಈ ಸಮಯಕ್ಕಾಗಿಯೇ ಕಾದಿದ್ದು ಬೆದರಿಕೆಗಳಿಗೆ ಮಣಿದು ದೀಕ್ಷಾಪ್ರದಾನಗಳಿಗೆ ಅವಕಾಶವಿತ್ತಿದ್ದು, ಐದನೆಯ ಹೆನ್ರಿಗೆ ಕಿರೀಟಧಾರಣೆ ಮಾಡಿದ್ದ ಪೋಪ್‌ನನ್ನು ಬಂಧನದಲ್ಲಿರಿಸಿದ. ಹನ್ನೊಂದು ವರ್ಷಗಳ ಬಳಿಕ, ೧೧೧೨ ರಲ್ಲಿ ವರ್ಮ್ಸ್‌ನ ಒಪ್ಪಂದದಿಂದ, ಪೋಪ್ ಎರಡನೆಯ ಕ್ಯಾಲಿಕ್ಸ್ಟಸ್ ದೀಕ್ಷಾಪ್ರದಾನಗಳಿಗೆ ಅವಕಾಶವೀಯಬೇಕೆಂದೂ, ಬರ್ಗಂಡಿ ಮತ್ತು ಇಟಲಿಗಳಲ್ಲಿನ ಬಿಷಪ್ ಆಯ್ಕೆಯ ಮೇಲಿನ ಹತೋಟಿಯನ್ನು ಬಿಟ್ಟುಕೊಡುವಂತೆಯೂ ಐದನೆಯ ಹೆನ್ರಿಯನ್ನು ಒತ್ತಾಯಿಸಿದ.

ಇಲ್ಲಿಯವರೆಗೆ, ಈ ಹೋರಾಟದ ಒಟ್ಟು ಫಲಿತವೆಂದರೆ ಮೂರನೆಯ ಹೆನ್ರಿಗೆ ಅಧೀನನಾಗಿದ್ದ ಪೋಪ್ ಚಕ್ರವರ್ತಿಗೆ ಸಮಾನಸ್ಕಂದನೆನಿಸಿದ. ಅದೇ ಹೊತ್ತಿಗೆ, ಅವನು ಚರ್ಚ್‌ನ ಸಂಪೂರ್ಣ ಸಾರ್ವಭೌಮನೆನಿಸಿದ, ಅದನ್ನವನು ಸಹಾಯಕರ ನೆರವಿನಿಂದ ನಿಭಾಯಿಸಿದ. ಪೋಪ್ ಅಧಿಕಾರದ ಈ ಹೆಚ್ಚಳವು ಬಿಷಪ್‌ರ ಪ್ರಾಮುಖ್ಯವನ್ನು ಕಡಿಮೆ ಮಾಡಿತ್ತು. ಪೋಪ್ ಆಯ್ಕೆಯು ಸಾಮಾನ್ಯರ ಹತೋಟಿಯಿಂದ ಸ್ವತಂತ್ರವಾಗಿ ಮತಧರ್ಮಬೋಧಕರು ಮತಸುಧಾರಣೆಯ ಚಳವಳಿಗೆ ಹಿಂದಿದ್ದುದಕ್ಕಿಂತಲೂ ಹೆಚ್ಚು ಸಚ್ಚಾರಿತ್ರ್ಯವುಳ್ಳವರಾದರು.

ಲಂಬಾರ್ಡ್ ನಗರಗಳ ಉಚ್ಛ್ರಾಯ

ಮುಂದಿನ ಹಂತವು ಚಕ್ರವರ್ತಿಯಾಗಿದ್ದ ಫ್ರೆಡೆರಿಕ್ ಬಾರ್ಬರೋಸ (೧೧೫೨–೯೦) ನಿಗೆ ಸಂಬಂಧಿಸಿದ್ದು; ಅವನು ಸಮರ್ಥನೂ ಯುವಕನೂ ಆಗಿದ್ದ, ಯಶಸ್ಸು ಸಾಧ್ಯವಾದ ಎಲ್ಲ ಪ್ರಯತ್ನಗಳಲ್ಲೂ ಯಶಸ್ಸು ಸಾಧಿಸಬಲ್ಲವನಾಗಿದ್ದ. ಅವನು ಸುಶಿಕ್ಷಿತನಾಗಿದ್ದು, ಲ್ಯಾಟಿನ್ ಅನ್ನು ಸುಲಭವಾಗಿ ಓದಬಲ್ಲವನಾಗಿದ್ದರೂ ಆ ಭಾಷೆಯನ್ನು ಕಷ್ಟಪಟ್ಟು ಮಾತಾಡುತ್ತಿದ್ದ. ಅವನ ಪ್ರಾಚೀನ ಗ್ರಂಥಗಳ ಓದು ಅವನಿಗೆ ತಕ್ಕಮಟ್ಟಿನದಾಗಿತ್ತು, ಅವನು ರೋಮನ್ ಕಾನೂನಿನ ಅಭಿಮಾನಿ. ತಾನು ರೋಮನ್ ಚಕ್ರವರ್ತಿಗಳ ವಾರಸುದಾರ ಎಂಬ ಭಾವನೆ ಅವನಲ್ಲಿತ್ತು, ಅವರ ಅಧಿಕಾರವನ್ನು ಹೊಂದಲು ಬಯಸುತ್ತಿದ್ದ. ಆದರೆ ಒಬ್ಬ ಜರ್ಮನ್ ಆಗಿ ಅವನು ಇಟಲಿಯಲ್ಲಿ ಜನಪ್ರಿಯತೆಯಿಂದ ವಂಚಿತನಾಗಿದ್ದ. ಲಂಬಾರ್ಡ್ ನಗರಗಳು, ಅವನ

ಔಪಚಾರಿಕ ಯಜಮಾನಿಕೆಯನ್ನು ಒಪ್ಪಲು ಸಿದ್ಧವಿದ್ದರೂ, ತಮ್ಮ – ಮಿಲಾನ್ ಬಗ್ಗೆ ಭಯ ಹೊಂದಿದ್ದು ಅದರಿಂದ ರಕ್ಷಣೆ ಪಡೆಯಲು ಅವನ ಸಹಾಯ ಪಡೆದ್ದವರ ಹೊರತಾಗಿ – ವ್ಯವಹಾರಗಳಲ್ಲಿ ತಲೆ ಹಾಕಿದಾಗ ವಿರೋಧಿಸಿದರು. ಮಿಲಾನ್‌ನಲ್ಲಿ ಪಾಟರೀನ್ ಚಳವಳಿಯು ಮುಂದುವರಿಯಿತು, ಅದು ಹೆಚ್ಚು ಕಡಿಮೆ ಪ್ರಜಾಪ್ರಭುತ್ವಾತ್ಮಕ ಪ್ರವೃತ್ತಿಯ ಜೊತೆ ಸಂಬಂಧವಿರಿಸಿಕೊಂಡಿತ್ತು; ಎಲ್ಲವೂ ಅಲ್ಲದಿದ್ದರೂ ಬಹುತೇಕ ಉತ್ತರ ಇಟಲಿಯ ನಗರಗಳು ಮಿಲಾನ್ ಬಗ್ಗೆ ಸಹಾನುಭೂತಿಯನ್ನು ಹೊಂದಿದ್ದು ಚಕ್ರವರ್ತಿಯ ವಿರುದ್ಧದ ನಿಲವಿನಲ್ಲಿ ಒಂದಾಗಿದ್ದವು.

ನಾಲ್ಕನೆಯ ಹೇಡ್ರಿಯನ್ ನಾರ್ವೆಯಲ್ಲಿ ಪಾದ್ರಿಯಾಗಿದ್ದ ಸಾಮರ್ಥ್ಯಶಾಲೀ ಇಂಗ್ಲಿಷ್‌ನವನು, ಬಾರ್ಬರೋಸ ಪಟ್ಟಕ್ಕೆ ಬಂದ ಎರಡು ವರ್ಷಗಳ ತರುವಾಯ ಪೋಪ್ ಆದ; ಮೊದಲಿಗೆ ಅವನು ಚಕ್ರವರ್ತಿಯೊಡನೆ ಸ್ನೇಹದಿಂದಲೇ ಇದ್ದ. ಇಬ್ಬರಿಗೂ ಒಬ್ಬನೇ ಆದ ಶತ್ರುವಿನಿಂದಾಗಿ ಅವರಿಬ್ಬರೂ ಒಂದಾಗಿದ್ದರು, ಅಲ್ಲದೆ ಹೋರಾಟದಲ್ಲಿ ನೆರವಾಗಿ ಬ್ರೆಸಿಯದ ಆರ್ನಾಲ್ಡ್[೨೩೨] ಎಂಬ ಒಬ್ಬ ಸಂತನಂತಹ ಮತಧರ್ಮವಿರೋಧಿಯನ್ನು ಕರೆತಂದರು. ಅವನ ಮತಧರ್ಮವಿರೋಧವು ಗಂಭೀರ ಸ್ವರೂಪದ್ದು. 'ಜಮೀನುಳ್ಳ ಪುರೋಹಿತರು, ಕಾರ್ಯಕ್ಷೇತ್ರ ಹೊಂದಿದ್ದ ಬಿಷಪ್‌ರು, ಆಸ್ತಿಯುಳ್ಳ ಸನ್ಯಾಸಿಗಳು – ಇವರನ್ನುಳಿಸಬಾರದು' ಎಂಬುದು ಅವನ ನಿಲವಾಗಿತ್ತು. ಪುರೋಹಿತವರ್ಗವು ಸಂಪೂರ್ಣವಾಗಿ ಆಧ್ಯಾತ್ಮಿಕ ವಿಷಯಗಳಲ್ಲಿ ತೊಡಗಿರಬೇಕೆಂಬ ಅಭಿಪ್ರಾಯವುಳ್ಳವನಾದದ್ದರಿಂದ ಅವನು ಈ ಅಭಿಪ್ರಾಯ ಹೊಂದಿದ್ದ. ತನ್ನ ಮತಧರ್ಮವಿರೋಧಿ ನಿಲವಿನಿಂದಾಗಿ ಅವನನ್ನು ಕೆಟ್ಟವನೆಂದು ಪರಿಗಣಿಸಿದರೂ ಅವನ ನಿಷ್ಠುರ ಕಟ್ಟುಪಾಡುಗಳನ್ನಾರೂ ಪ್ರಶ್ನಿಸಲಿಲ್ಲ. ಅವನನ್ನು ತೀವ್ರವಾಗಿ ವಿರೋಧಿಸುತ್ತಿದ್ದ ಸಂತ ಬರ್ನಾರ್ಡ್ ಹೀಗೆಂದ: 'ಅವನು ತಿನ್ನುವುದೂ ಇಲ್ಲ, ಕುಡಿಯುವುದೂ ಇಲ್ಲ, ಆದರೆ ಆತ್ಮಗಳ ರಕ್ತಕ್ಕಾಗಿ ಪಿಶಾಚಿಯಂತೆ ಹಸಿದಿರುತ್ತಾನೆ, ಬಾಯಾರಿರುತ್ತಾನೆ.' ಒಂದು ನೂರು ಸೆನೇಟರ್‌ಗಳನ್ನೂ ಇಬ್ಬರು ನಿಯೋಗಿಗಳನ್ನು (ಕಾನ್ಸಲ್) ಆಯ್ಕೆಮಾಡಿ, ತಮ್ಮವನೇ ಆದ ಚಕ್ರವರ್ತಿಯನ್ನು ಪಡೆಯಬೇಕೆಂದು ಬಯಸಿದ್ದ ಜನಪ್ರಿಯ ಗುಂಪಿನ ಪರ ಆರ್ನಾಲ್ಡ್ ಒಲವು ಹೊಂದಿದ್ದಾನೆಂದೂ ಹೇಡ್ರಿಯನ್‌ಗಿಂತ ಮುಂಚೆ ಪೋಪ್ ಸ್ಥಾನದಲ್ಲಿದ್ದ ಬಾರ್ಬರೋಸಗೆ ದೂರೊಂದನ್ನು ಕೊಟ್ಟ, ಇಟಲಿಗೆ ಹೊರಟಿದ್ದ ಫ್ರೆಡೆರಿಕ್ ಸಹಜವಾಗಿಯೇ ವಿಚಲಿತನಾದ. ಆರ್ನಾಲ್ಡ್ ಪ್ರೋತ್ಸಾಹಿಸುತ್ತಿದ್ದ ರೋಮನ್‌ರ ಸಾಮುದಾಯಿಕ ಬಿಡುಗಡೆಯ ನಿರೀಕ್ಷೆಯಿಂದಾಗಿ ಭಾರಿ ದಂಗೆಯೆದ್ದು ಒಬ್ಬ ಕಾರ್ಡಿನಲ್ ಕೊಲೆಯಾದ. ಹೊಸದಾಗಿ ಚುನಾಯಿತನಾಗಿದ್ದ

---

೨೩೨. ಅವನು ಅಬೆಲಾರ್ಡ್‌ನ ವಿದ್ಯಾರ್ಥಿಯೆಂದು ಹೇಳುತ್ತಾರಾದರೂ ಇದು ಸಂಶಯಾಸ್ಪದ.

ಪೋಪ್ ಹೇಡ್ರಿಯನ್ ಆನಂತರ ರೋಮ್ ಅನ್ನು ನಿರ್ಬಂಧದಲ್ಲಿರಿಸಿದ. ಅದು ಪರಿಶುದ್ಧ ವಾರವಾಗಿದ್ದು, ರೋಮನ್‌ರನ್ನು ಮೂಢನಂಬಿಕೆಯು ಆವರಿಸಿತ್ತು; ಅವರು ಶರಣಾಗಿ ಆರ್ನಾಲ್ಡ್‌ನನ್ನು ಗಡೀಪಾರು ಮಾಡುವುದಾಗಿ ಹೇಳಿದರು. ಅವನು ಅಡಗಿಕೊಂಡನಾದರೂ ಅವನನ್ನು ಚಕ್ರವರ್ತಿಯ ಸೈನ್ಯವು ಸೆರೆಹಿಡಿಯಿತು. ಅವನನ್ನು ಸುಟ್ಟು, ಪರಿಶುದ್ಧ ಸ್ಮಾರಕವೆಂದು ರಕ್ಷಿಸಿಡಬಹುದೆಂಬ ಭಯದಿಂದ ಬೂದಿಯನ್ನು ಟೈಬರ್‌ಗೆ ಎಸೆಯಲಾಯಿತು. ಕೆಳಗಿಳಿಯುವಾಗ ಪೋಪ್‌ನ ಕಡಿವಾಣ ಮತ್ತು ರಿಕಾಪುಗಳನ್ನು ಹಿಡಿದುಕೊಳ್ಳಲು ಹಿಂದೆ ಮುಂದೆ ನೋಡುತ್ತಿದ್ದ ಫ್ರೆಡೆರಿಕ್‌ನಿಗೆ ಜನತೆಯ ವಿರೋಧದ ನಡುವೆಯೇ, ಅವರಲ್ಲಿನ ಹಲವರನ್ನು ಹತ್ಯೆಗೈದು ಪೋಪ್ ೧೧೫೫ ರಲ್ಲಿ ಚಕ್ರವರ್ತಿ ಕಿರೀಟಧಾರಣೆ ಮಾಡಿದ.

ಪ್ರಾಮಾಣಿಕ ವ್ಯಕ್ತಿಯನ್ನು ಹೀಗೆ ಇಲ್ಲವಾಗಿಸಿ ವ್ಯಾವಹಾರಿಕ ರಾಜಕಾರಣಿಗಳು ತಮ್ಮ ಜಗಳವನ್ನು ಮುಂದುವರಿಸಿ ಸ್ವಾತಂತ್ರ್ಯ ಪಡೆದರು.

ನಾರ್ಮನ್‌ರ ಜೊತೆ ಶಾಂತಿಸಂಧಾನ ಮಾಡಿಕೊಂಡ ಪೋಪ್ ೧೧೫೭ ರಲ್ಲಿ ಚಕ್ರವರ್ತಿಯ ಸಂಬಂಧ ಕಡಿದುಕೊಳ್ಳುವ ಸಾಹಸಕ್ಕೆ ಕೈಹಾಕಿದ. ಒಂದು ಕಡೆ ಚಕ್ರವರ್ತಿ ಮತ್ತು ಪೋಪ್ ಪರವಾದ ಲಂಬಾರ್ಡ್ ನಗರಗಳ ನಡುವೆ ಇಪ್ಪತ್ತು ವರ್ಷಗಳ ಕಾಲ ಯುದ್ಧ ಸಾಗಿತು. ನಾರ್ಮನ್‌ರು ಬಹುತೇಕವಾಗಿ ಪೋಪ್‌ನ ಪರವಾಗಿದ್ದರು. ಚಕ್ರವರ್ತಿಯ ವಿರುದ್ಧದ ಬಹುಭಾಗದ ಹೋರಾಟವನ್ನೆಲ್ಲ ಲಂಬಾರ್ಡ್ ಒಕ್ಕೂಟವು ನಡೆಸಿತು; ಜನರ ಭಾವನೆಯಿಂದ ಉತ್ತೇಜಿತರಾಗಿ ಅದು 'ಬಿಡುಗಡೆ'ಯ ಮಂತ್ರ ಜಪಿಸಿತು. ಚಕ್ರವರ್ತಿಯು ಅನೇಕ ನಗರಗಳನ್ನು, ೧೧೬೨ ರಲ್ಲಿ ಮಿಲಾನ್ ಅನ್ನು ಕೂಡ ವಶಪಡಿಸಿಕೊಂಡ. ಅದನ್ನು ಸಂಪೂರ್ಣವಾಗಿ ನೆಲಸಮ ಮಾಡಿ ಅಲ್ಲಿನ ಜನರು ಬೇರೆಡೆ ವಾಸಿಸುವಂತೆ ಮಾಡಿದ. ಆದರೆ ಐದು ವರ್ಷಗಳ ಬಳಿಕ ಒಕ್ಕೂಟವು ಮಿಲಾನ್ ಅನ್ನು ಮತ್ತೆ ನಿರ್ಮಿಸಿತು, ಹಿಂದಿದ್ದ ಜನ ವಾಪಸಾದರು. ಅದೇ ವರ್ಷ ಚಕ್ರವರ್ತಿಯು ಒಬ್ಬ ಬದಲಿ ಪೋಪ್ ಅನ್ನು ಒದಗಿಸಿದ[೨೩೩] ಮೇಲೆ ಭಾರಿ ಸೈನ್ಯದೊಂದಿಗೆ ರೋಮ್ ಮೇಲೆ ಯುದ್ಧ ಸಾರಿದ. ಪೋಪ್ ಓಡಿಹೋದ, ಅವನ ಉದ್ದೇಶ ಹತಾಶೆಯದಾಗಿತ್ತು, ಆದರೆ ಸಾಂಕ್ರಾಮಿಕ ರೋಗ ಫ್ರೆಡೆರಿಕ್‌ನ ಸೈನ್ಯವನ್ನು ನಾಶಮಾಡಿತು, ಅವನು ಏಕಾಂಗಿಯಾಗಿ ಜರ್ಮನಿಗೆ ಪರಾರಿಯಾದ. ಸಿಸಿಲಿ ಮಾತ್ರವಲ್ಲದೆ ಗ್ರೀಕ್ ಚಕ್ರವರ್ತಿ ಕೂಡ ಲಂಬಾರ್ಡ್

---

೨೩೩. ಈ ಕಾಲದಾದ್ಯಂತ ಒಬ್ಬ ಬದಲಿ ಪೋಪ್ ಇದ್ದ. ನಾಲ್ಕನೆಯ ಹೇಡ್ರಿಯನ್‌ನ ಸತ್ತಾಗ, ಆ ಸ್ಥಾನದ ಇಬ್ಬರು ಸ್ಪರ್ಧಿಗಳಾದ ಎರಡನೆಯ ಅಲೆಕ್ಸಾಂಡರ್ ಮತ್ತು ನಾಲ್ಕನೆಯ ವಿಕ್ಟರ್ ಪೋಪ್ ಹುದ್ದೆಗೆ ಹಗ್ಗಜಗ್ಗಾಟ ನಡೆಸಿದರು. ಬದಲಿ ಪೋಪ್ ಆಗಿದ್ದ ನಾಲ್ಕನೆಯ ವಿಕ್ಟರ್ ಕಡಿವಾಣವನ್ನು ಕಿತ್ತುಕೊಳ್ಳುವಲ್ಲಿ ವಿಫಲನಾಗಿ, ತಾನು ನಿಯೋಜಿಸಿದ್ದ ಪಕ್ಷಪಾತ ಹೊಂದಿದ ಒಬ್ಬ ಬದಲಿಯನ್ನು ಹೊಂದಿದನಾದರೂ, ತನ್ನ ಅವಸರದಲ್ಲಿ ಅದನ್ನು ಬಯಲುಮಾಡಿದ.

ಒಕ್ಕೂಟದೊಡನೆ ಕೈಜೋಡಿಸಿದ. ಬಾರ್ಬರೋಸ ಮತ್ತೊಂದು ಪ್ರಯತ್ನ ಮಾಡಿದ, ಅದು ೧೧೭೬ ರಲ್ಲಿ ಅವನ ಸೋಲಿನಲ್ಲಿ ಪರ್ಯವಸಾನವಾಯಿತು. ಇದಾದ ಮೇಲೆ ಅವನು ಶಾಂತಿಸಂಧಾನ ಮಾಡಿಕೊಳ್ಳಲೇಬೇಕಾಯಿತು, ಹೀಗಾಗಿ ನಗರಗಳಿಗೆ ಸಾಕಷ್ಟು ಸ್ವಾತಂತ್ರ್ಯವಿತ್ತ. ಚಕ್ರವರ್ತಿ ಮತ್ತು ಪೋಪ್‌ರ ನಡುವಣ ಸಂಘರ್ಷದಲ್ಲಿ ಶಾಂತಿ ಸೂತ್ರಗಳು ಯಾವ ಪಕ್ಷಕ್ಕೂ ಸಂಪೂರ್ಣ ಗೆಲವನ್ನು ತಂದುಕೊಡಲಿಲ್ಲ.

ಬಾರ್ಬರೋಸನ ಕೊನೆಯು ಘನತೆಯಿಂದ ಕೂಡಿತ್ತು. ೧೧೮೯ ರಲ್ಲಿ ಅವನು ಮೂರನೆಯ ಮತಧರ್ಮ ಯುದ್ಧಕ್ಕೆ ತೊಡಗಿದ, ಆ ಮಾರನೆಯ ವರ್ಷವೇ ಸತ್ತ.

ದೀರ್ಘ ಹೋರಾಟದಲ್ಲಿ ಅತ್ಯಂತ ಪ್ರಮುಖವಾಗಿ ಹೊಮ್ಮಿದ್ದೆಂದರೆ ಸ್ವತಂತ್ರ ನಗರಗಳು ತಲೆ ಎತ್ತಿದ್ದು. ಚಕ್ರವರ್ತಿಯ ಅಧಿಕಾರವು ನಶಿಸುತ್ತಿದ್ದ ಊಳಿಗಮಾನ್ಯ ಪದ್ಧತಿಯೊಂದಿಗೆ ತಳುಕು ಹಾಕಿಕೊಂಡಿತ್ತು; ಪೋಪ್ ಅಧಿಕಾರವು ಇನ್ನೂ ಹೆಚ್ಚಾಗುತ್ತಿದ್ದರೂ ಅವನು ಜಗತ್ತಿಗೆ ಬೇಕಾಗಿದ್ದುದು ಚಕ್ರವರ್ತಿಗೆ ವಿರುದ್ಧ ನಿಲ್ಲುವ ಕಾರಣದಿಂದ, ಹೀಗಾಗಿ ಚಕ್ರವರ್ತಿಯ ಆತಂಕ ಕುಂಠಿತಗೊಂಡಂತೆ ಅದು ಕ್ಷೀಣಿಸಿತು; ಆದರೆ ನಗರಗಳ ಅಧಿಕಾರವು ಹೊಸತು, ಆರ್ಥಿಕ ಸಮೃದ್ಧಿಯ ಫಲ, ಅದು ಹೊಸ ರಾಜಕೀಯ ರೂಪಗಳಿಗೆ ಎಡೆಮಾಡಿಕೊಟ್ಟಿತು. ಇದು ಹನ್ನೆರಡನೆಯ ಶತಮಾನದಲ್ಲಿ ಕಾಣಿಸದಿದ್ದರೂ, ಬೇಗನೇ ಇಟಲಿಯ ನಗರಗಳು ಪುರೋಹಿಶಾಹಿಯಿಂದ ಹೊರತಾದ ಒಂದು ಸಂಸ್ಕೃತಿಯನ್ನು ಸೃಷ್ಟಿಸಿತು, ಇದು ಅತ್ಯಂತ ಶ್ರೇಷ್ಠ ಫಲವನ್ನು ನೀಡಿದ್ದು ಸಾಹಿತ್ಯ, ಕಲೆ ಮತ್ತು ವಿಜ್ಞಾನದ ವಲಯಗಳಲ್ಲಿ. ಇದೆಲ್ಲ ಸಾಧ್ಯವಾದದ್ದು ಬಾರ್ಬರೋಸನಿಗೆ ಒಡ್ಡಿದ ಪ್ರಬಲ ವಿರೋಧದಿಂದಾಗಿ.

ಉತ್ತರ ಇಟಲಿಯ ದೊಡ್ಡ ನಗರಗಳೆಲ್ಲ ವ್ಯಾಪಾರವನ್ನವಲಂಬಿಸಿದ್ದವು; ಹನ್ನೆರಡನೆಯ ಶತಮಾನದಲ್ಲಿ ಪರಿಸ್ಥಿತಿಯು ನೆಲೆಗೊಂಡದ್ದರಿಂದಾಗಿ ವ್ಯಾಪಾರಿಗಳನ್ನು ಹಿಂದಿಗಿಂತ ಹೆಚ್ಚು ಯಶಸ್ವಿಗಳನ್ನಾಗಿಸಿತ್ತು. ಕಡಲ ವ್ಯಾಪಾರದ ನಗರಗಳಾದ ವೆನಿಸ್, ಜೆನೋಅ ಮತ್ತು ಪೀಸಾಗಳು ತಮ್ಮ ಸ್ವಾತಂತ್ರ್ಯಕ್ಕಾಗಿ ಎಂದೂ ಹೋರಾಡಲೇ ಬೇಕಾಗಿರಲಿಲ್ಲ; ಹೀಗಾಗಿ ಅವುಗಳ ಚಕ್ರವರ್ತಿಯ ವಿರುದ್ಧದ ಭಾವನೆಯು, ಇಟಲಿಗೆ ಹೋಗಬೇಕಾದ ದ್ವಾರಗಳಂತಿದ್ದ ಆಲ್ಪ್ಸ್ ಪರ್ವತ ತಪ್ಪಲಿನ ನಗರಗಳಂತೆ, ಅಷ್ಟು ತೀವ್ರವಾಗಿರಲಿಲ್ಲ. ಈ ಕಾರಣದಿಂದಾಗಿಯೇ ಮಿಲಾನ್ ಆ ಕಾಲದ ಬಹು ಮುಖ್ಯವೂ ಆಸಕ್ತಿದಾಯಕವೂ ಆದ ನಗರವಾಗಿತ್ತು.

ಮೂರನೆಯ ಹೆನ್ರಿಯ ಕಾಲದವರೆಗೆ ಮಿಲಾನ್‌ನ ಜನರು ಆರ್ಚ್‌ಬಿಷಪ್‌ನನ್ನು ಅನುಸರಿಸುವುದರಲ್ಲಿಯೇ ಒಟ್ಟಾರೆ ತೃಪ್ತಿಯನ್ನು ಕಂಡಿದ್ದರು. ಆದರೆ ಹಿಂದಿನ ಒಂದು ಅಧ್ಯಾಯದಲ್ಲಿ ಉಲ್ಲೇಖಗೊಂಡ ಪಾಟರೀನ್ ಚಳವಳಿಯು ಇದನ್ನು ಬದಲಾಯಿಸಿತು: ಆರ್ಚ್‌ಬಿಷಪ್ ಶ್ರೀಮಂತಪ್ರಭುಗಳೊಡನೆ ಕೈಜೋಡಿಸಿದ್ದ, ಒಂದು

ಬಲಿಷ್ಠ ಚಳವಳಿಯು ಅವನನ್ನೂ ಅವರನ್ನೂ ವಿರೋಧಿಸಿತು. ಇದರ ಫಲವೆಂದರೆ ಪ್ರಜಾಪ್ರಭುತ್ವದ ಆರಂಭಿಕ ಹೆಜ್ಜೆಗಳು, ಒಂದು ಸಂವಿಧಾನ ರೂಪಿತವಾಗಿ ನಗರದ ಪ್ರಜೆಗಳು ಆಡಳಿತಗಾರರನ್ನು ಚುನಾಯಿಸುವಂತಾಯಿತು. ಉತ್ತರದ ಅನೇಕ ನಗರಗಳಲ್ಲಿ, ಅದರಲ್ಲಿಯೂ ಬೊಲೋಗ್ನಾದಲ್ಲಿ, ತಿಳಿವಳಿಕಸ್ಥ ಸಾಮಾನ್ಯ ವಕೀಲರ ತಂಡವಿತ್ತು, ಅದಕ್ಕೆ ರೋಮನ್ ಕಾನೂನಿನ ಬಗ್ಗೆ ಒಳ್ಳೆಯ ತಿಳಿವಳಿಕೆಯಿತ್ತು; ಇದಕ್ಕೂ ಹೆಚ್ಚಾಗಿ, ಶ್ರೀಮಂತ ಇಟಲಿಯು ಹನ್ನೆರಡನೆಯ ಶತಮಾನದಿಂದ ಮೊದಲುಗೊಂಡು ಆಲ್ಪ್ಸ್‌ಗಿಂತ ಉತ್ತರದ ಶ್ರೀಮಂತಪ್ರಭುಗಳಿಗಿಂತ ಹೆಚ್ಚು ವಿದ್ಯಾವಂತವಾಗಿತ್ತು, ಅವರು ಚಕ್ರವರ್ತಿಗೆ ವಿರುದ್ಧವಾಗಿ ಪೋಪ್‌ನ ಪರವಾಗಿದ್ದರೂ, ಶ್ರೀಮಂತ ವ್ಯಾಪಾರೀ ನಗರಗಳು ತಮ್ಮ ದೃಷ್ಟಿಕೋನದಲ್ಲಿ ಅಷ್ಟೇನೂ ಮತಧರ್ಮಪರವಾಗಿರಲಿಲ್ಲ. ಹನ್ನೆರಡು ಮತ್ತು ಹದಿಮೂರನೆಯ ಶತಮಾನಗಳಲ್ಲಿ ಅವರಲ್ಲಿ ಅನೇಕರು ಮತಧರ್ಮಸುಧಾರಣೆಯ ನಂತರದ ಇಂಗ್ಲಂಡ್ ಮತ್ತು ಹಾಲಂಡ್‌ಗಳ ವ್ಯಾಪಾರಿಗಳಂತೆ, ಪ್ಯೂರಿಟನ್ ರೀತಿಯ ಮತಧರ್ಮವಿರೋಧಿ ನಿಲವನ್ನು ತಾಳಿದರು. ಆಮೇಲೆ, ಅವರು ಸ್ವತಂತ್ರ ಚಿಂತನೆಯ ಕಡೆಗೆ ವಾಲಿದರು, ಚರ್ಚ್ ಬಗ್ಗೆ ಬಾಯಿ ಮಾತಿನ ಸಹಾನುಭೂತಿ ತೋರಿಸಿದರೂ ಒಳಗೆ ಯಾವ ಮತಧರ್ಮನಿಷ್ಠೆಯೂ ಉಳಿದಿರಲಿಲ್ಲ. ಡಾಂಟೆಯು ಹಳೆಯ ರೀತಿಯಲ್ಲಿ ಕೊನೆಯವನಾದರೆ, ಬೊಕಾಶಿಯೋ ಹೊಸ ರೀತಿಯ ಮೊದಲಿಗನಾಗಿದ್ದ.

ಮತಧಾರ್ಮಿಕ ಯುದ್ಧಗಳು

ಮತಧಾರ್ಮಿಕ ಯುದ್ಧಗಳು ಮಿಕ್ಕ ಯುದ್ಧಗಳಂತೆ ನಮ್ಮ ತಲೆ ಕೆಡಿಸಬೇಕಾಗಿಲ್ಲವಾದರೂ ಅವಕ್ಕೆ ಸಂಸ್ಕೃತಿಯ ದೃಷ್ಟಿಯಿಂದ ಒಂದಷ್ಟು ಪ್ರಾಮುಖ್ಯವಿದೆ. ಮತಧಾರ್ಮಿಕ ಯುದ್ಧದ ಆರಂಭಕ್ಕೆ ಪೋಪ್‌ಗಳು ಮುಂದಾಳುತ್ವ ವಹಿಸುವುದು ಸಹಜವೇ ಆಗಿತ್ತು, ಯಾಕೆಂದರೆ ಅದರ ಮುಖ್ಯ ಉದ್ದೇಶ (ಕನಿಷ್ಠ ಪಕ್ಷ ತೋರಿಕೆಯಲ್ಲಾದರೂ) ಮತಧಾರ್ಮಿಕವಾದುದು. ಹೀಗಾಗಿ ಇದರಿಂದ ದೊರೆಯುತ್ತಿದ್ದ ಪ್ರಚಾರ ಮತ್ತದು ಉದ್ದೀಪಿಸುತ್ತಿದ್ದ ಮತಧಾರ್ಮಿಕ ಉತ್ಸಾಹಗಳಿಂದಾಗಿ ಪೋಪ್ ಅಧಿಕಾರ ಹೆಚ್ಚಾಗುತ್ತಿತ್ತು. ಮತ್ತೊಂದು ಪ್ರಮುಖ ಪರಿಣಾಮವೆಂದರೆ ಬಹು ಸಂಖ್ಯೆಯ ಯೆಹೂದಿಗಳ ಹನನ; ಹನನಕ್ಕೊಳಗಾಗದವರನ್ನು ಲೂಟಿಮಾಡಿ ಬಲವಂತವಾಗಿ ಕ್ರೈಸ್ತದೀಕ್ಷಾಸ್ನಾನ ನೀಡಲಾಗುತ್ತಿತ್ತು. ಮೊದಲ ಮತಧಾರ್ಮಿಕ ಯುದ್ಧ ದ ಕಾಲದಲ್ಲಿ, ರಿಚರ್ಡ್ ಕೂಯರ್ ಡಿ ಲಯನ್ ಸಿಂಹಾಸನವೇರಿದಾಗ, ಜರ್ಮನಿಯಲ್ಲಿ ಬಹುಸಂಖ್ಯೆಯ ಯೆಹೂದಿಗಳನ್ನು ಹತ್ಯೆಗೈಯಲಾಯಿತು. ಮೊದಲನೆಯ ಕ್ರೈಸ್ತ ಚಕ್ರವರ್ತಿಯು ತನ್ನ ಆಡಳಿತವನ್ನು ಆರಂಭಿಸಿದಾಗ ಯಾರ್ಕ್‌ನಲ್ಲಿ ಯೆಹೂದಿಗಳ ವಿರುದ್ಧ ಅತ್ಯಂತ

ಭಯಾನಕವೆನಿಸುವ ಸಾಮೂಹಿಕ ಕಗ್ಗೊಲೆಯನ್ನು ಮಾಡಲಾಯಿತು. ಮತಧಾರ್ಮಿಕ ಯುದ್ಧಗಳಿಗಿಂತ ಮುಂಚೆ ಯೆಹೂದಿಗಳು ಯೂರೋಪ್‌ನಾದ್ಯಂತ ಪೂರ್ವದ ಸಾಮಗ್ರಿಗಳ ವ್ಯಾಪಾರದ ಗುತ್ತಿಗೆಯನ್ನು ಪಡೆದಂತಿತ್ತು; ಮತಧಾರ್ಮಿಕ ಯುದ್ಧಗಳ ನಂತರ, ಯೆಹೂದಿಗಳ ಮೇಲಾದ ಹಿಂಸಾಚಾರದಿಂದಾಗಿ, ಈ ವ್ಯಾಪಾರವು ಬಹುತೇಕ ಕ್ರೈಸ್ತರ ಕೈಯಲ್ಲಿತ್ತು.

ಮತಧಾರ್ಮಿಕ ಯುದ್ಧಗಳ ಮತ್ತೊಂದು ಹಾಗೂ ವಿಭಿನ್ನ ರೀತಿಯ ಪರಿಣಾಮವೆಂದರೆ ಕಾನ್‌ಸ್ಟಾಂಟಿನೋಪಲ್ ಜೊತೆಗಿನ ಸಾಹಿತ್ಯಕ ಸಂಬಂಧಕ್ಕೆ ಚಾಲನೆ ದೊರೆತಿದ್ದು. ಹನ್ನೆರಡು ಮತ್ತು ಹದಿಮೂರನೆಯ ಶತಮಾನದ ಮೊದಲ ಭಾಗದಲ್ಲಿ ಈ ಸಂಬಂಧದ ಕಾರಣದಿಂದಾಗಿ ಅನೇಕ ಗ್ರೀಕ್ ಕೃತಿಗಳನ್ನು ಲ್ಯಾಟಿನ್‌ಗೆ ಅನುವಾದಿಸುವ ಕಾರ್ಯ ನಡೆಯಿತು. ಕಾನ್‌ಸ್ಟಾಂಟಿನೋಪಲ್ ಜೊತೆ ಯಾವಾಗಲೂ, ಅದರಲ್ಲೂ ವೆನಿಸ್‌ನವರೊಡನೆ ವ್ಯಾಪಾರ ವಹಿವಾಟು ಹೆಚ್ಚಾಗಿತ್ತು; ಆದರೆ ಇಟಲಿಯ ವ್ಯಾಪಾರಿಗಳು ಮಾತ್ರ ಇಂಗ್ಲಿಷ್ ಮತ್ತು ಅಮೆರಿಕದ ವ್ಯಾಪಾರಿಗಳು ಶಾಂಘೈನಲ್ಲಿದ್ದಾಗ ಚೈನಾ ಗ್ರಂಥಗಳ ಬಗ್ಗೆ ಆಸಕ್ತಿವಹಿಸಿದಷ್ಟರ ಮಟ್ಟಿಗೆ ಗ್ರೀಕ್ ಗ್ರಂಥಗಳ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. (ಚೈನೀ ಗ್ರಂಥಗಳ ಬಗ್ಗೆ ಯೂರೋಪ್ ಹೊಂದಿದ ಜ್ಞಾನವು ಮತಧರ್ಮಬೋಧಕರಿಂದ ಉಂಟಾದದ್ದು.)

ಸೂಕ್ಷ್ಮತರ್ಕದ ಬೆಳವಣಿಗೆ

ಸೂಕ್ಷ್ಮತರ್ಕ (ಸ್ಕೊಲಾಸ್ಟಿಸಿಸಂ) ತನ್ನ ಸೀಮಿತ ಅರ್ಥದಲ್ಲಿ ಹನ್ನೆರಡನೆಯ ಶತಮಾನದ ಮೊದಲ ಭಾಗದಲ್ಲಿ ಆರಂಭವಾಯಿತು. ಒಂದು ಪಂಥವಾಗಿ ತತ್ವಚಿಂತನೆಯು ಕೆಲವು ನಿರ್ದಿಷ್ಟ ಲಕ್ಷಣಗಳನ್ನು ಹೊಂದಿದೆ. ಮೊದಲನೆಯದು, ಲೇಖಕನಿಗೆ ಸಂಪ್ರದಾಯನಿಷ್ಠದ್ದೆಂದು ತೋರುವ ವಲಯಕ್ಕೆ ಅದು ಸೀಮಿತವಾದುದು; ಅವನ ಅಭಿಪ್ರಾಯಗಳ್ನು ಮತಧರ್ಮಪರಿಷತ್ತು ಖಂಡಿಸಿದರೆ, ಸಾಮಾನ್ಯವಾಗಿ ಅವನು ಹಿಂದೆ ಸರಿಯುತ್ತಾನೆ. ಇದನ್ನು ಸಂಪೂರ್ಣವಾಗಿ ಹೇಡಿತನವೆಂದು ಕರೆಯಲಾಗದು, ಒಂದು ನ್ಯಾಯಾಲಯದ ತೀರ್ಪಿಗೆ ಬದ್ಧನಾದ ನ್ಯಾಯಾಧಿಪತಿಯನ್ನು ಅದು ಹೋಲುತ್ತದೆ. ಎರಡನೆಯದು, ಸಂಪ್ರದಾಯನಿಷ್ಠೆಯ ಸೀಮಿತತೆಯಲ್ಲಿ, ಹನ್ನೆರಡು ಹದಿಮೂರನೆಯ ಶತಮಾನಗಳಲ್ಲಿ ಕ್ರಮೇಣವಾಗಿ ಹೆಚ್ಚು ಪರಿಚಿತನಾದ ಅರಿಸ್ಟಾಟಲ್ ಅನ್ನು ಹೆಚ್ಚಾಗಿ ಸರ್ವೋಚ್ಚ ಪರಿಣತನೆಂದು ಒಪ್ಪಲಾಗಿತ್ತು; ಈ ಸ್ಥಾನದಲ್ಲಿ ಪ್ಲೇಟೋ ಉಳಿಯಲಿಲ್ಲ. ಮೂರನೆಯದು, ವಾಕ್ಯಾರ್ಥ (ಡಯೆಲೆಕ್ಟಿಕ್)ದಲ್ಲಿ ಮತ್ತು ನಿಗಮನ ತರ್ಕದಲ್ಲಿ ಬಹುವಾದ ವಿಶ್ವಾಸ; ಸೂಕ್ಷ್ಮತಾರ್ಕಿಕರ ಸಾಮಾನ್ಯ ಮನೋಭಾವವೆಂದರೆ ಆನುಭಾವಿಕತೆಗಿಂತ ಹೆಚ್ಚಾಗಿ ಸೂಕ್ಷ್ಮ ವಾದದಲ್ಲಿ ತೊಡಗುವುದು. ನಾಲ್ಕನೆಯದು, ಅರಿಸ್ಟಾಟಲ್ ಮತ್ತು ಪ್ಲೇಟೋ ಅದನ್ನು

ಒಪ್ಪುವುದಿಲ್ಲವೆಂದು ಕಂಡುಕೊಂಡ ಬಳಿಕ ವೈಶ್ವಿಕಗಳನ್ನು ಪ್ರಧಾನ ನೆಲೆಗೆ ತರಲಾಯಿತು; ಆದರೆ ಈ ಕಾಲದ ತತ್ವಜ್ಞಾನಿಗಳ ಮುಖ್ಯ ಆಸಕ್ತಿಯೇ ವೈಶ್ವಿಕಗಳು ಎಂದು ತಪ್ಪು ತಿಳಿಯಬಾರದು.

ಈ ವಿಷಯದಲ್ಲಿ ಹಾಗೂ ಇನ್ನಿತರವುಗಳಲ್ಲಿ ಹನ್ನೆರಡನೆಯ ಶತಮಾನವು ಹದಿಮೂರನೆಯ ಶತಮಾನದ ಹಾದಿಯನ್ನು ಹಾಕಿಕೊಟ್ಟಿತು, ಇದರಲ್ಲಿ ದೊಡ್ಡ ಹೆಸರುಗಳು ಸೇರುತ್ತವೆ. ಈ ಮುಂಚಿನವರು ಹೇಗಾದರಾಗಲೀ ಮೊದಲಿಗರ ಆಸಕ್ತಿಯನ್ನು ತಾಳಿದ್ದರು. ಹೊಸ ಬೌದ್ಧಿಕ ಆತ್ಮವಿಶ್ವಾಸ ಮೂಡಿತು; ಅರಿಸ್ಟಾಟಲ್‌ನ ಬಗೆಗೆ ಗೌರವವಿದ್ದರೂ, ಶಾಸ್ತ್ರಪ್ರಾಮಾಣ್ಯಗಳ ಕಾರಣದಿಂದಾಗಿ ಚಿಂತನೆಗಳು ತೀರ ಅಪಾಯಕಾರಿಯಲ್ಲದ ಕಡೆಗಳಲ್ಲಿ ಸ್ವತಂತ್ರವೂ ತೀವ್ರವೂ ಆಗಿ ತರ್ಕವನ್ನು ಬಳಸಲಾಗುತ್ತಿತ್ತು. ಸೂಕ್ಷ್ಮತರ್ಕ ವಿಧಾನದ ದೋಷಗಳೆಂದರೆ 'ವಾಕ್ಯಾರ್ಥ'ಕ್ಕೆ ವಿಶೇಷ ಮಹತ್ವ ನೀಡಿದಾಗ ಅನಿವಾರ್ಯವಾಗಿ ಉಂಟಾಗುವಂತಹವೇ. ಈ ದೋಷಗಳೆಂದರೆ: ವಸ್ತುಸ್ಥಿತಿಗಳು ಮತ್ತು ವಿಜ್ಞಾನದ ಬಗೆಗಿನ ತಿರಸ್ಕಾರ, ಪರಿವೀಕ್ಷಣೆಯಿಂದ ಮಾತ್ರವೇ ನಿರ್ಧರಿಸಬಹುದಾದ ವಿಷಯಗಳಲ್ಲಿಯೂ ತರ್ಕಿಸಬೇಕೆಂಬ ನಂಬಿಕೆ, ಮಾತಿನ ಸೂಕ್ಷ್ಮತೆ ಮತ್ತು ಭಿನ್ನತೆಗಳ ಮೇಲಿನ ಅತೀವ ಒತ್ತು. ಪ್ಲೇಟೋಗೆ ಸಂಬಂಧಿಸಿದಂತೆಯೇ ಈ ದೋಷಗಳ ಬಗ್ಗೆ ವಿವೇಚಿಸಲು ಅವಕಾಶವಾಗಿತ್ತು, ಆದರೆ ಸೂಕ್ಷ್ಮತಾರ್ಕಿಕರಲ್ಲಿ ಅದನ್ನು ಮತ್ತಷ್ಟು ಹೆಚ್ಚಿನ ಪ್ರಮಾಣದಲ್ಲಿ ಕಾಣಬಹುದು.

ನಿಷ್ಕೃಷ್ಟವಾಗಿ ಮೊದಲ ಸೂಕ್ಷ್ಮತಾರ್ಕಿಕನೆಂದು ಹೇಳಬಹುದಾದವನೆಂದರೆ ರಾಸೆಲಿನ್. ಅವನ ಬಗ್ಗೆ ನಮಗೆ ಹೆಚ್ಚೇನೂ ತಿಳಿದಿಲ್ಲ. ಸುಮಾರು ೧೦೫೦ ರ ಹೊತ್ತಿಗೆ ಅವನು ಕಾಂಪ್ಲೇನ್‌ನಲ್ಲಿ ಹುಟ್ಟಿದ, ಬ್ರಿಟನಿಯ ಲಾಚೆಸ್‌ನಲ್ಲಿ ಬೋಧಿಸಿದ, ಅಲ್ಲಿಯೇ ಅಬೆಲಾರ್ಡ್ ಅವನ ವಿದ್ಯಾರ್ಥಿಯಾಗಿದ್ದುದು. ೧೦೯೨ ರಲ್ಲಿ ರೀಯಿಮ್ಸ್‌ನಲ್ಲಿ ನಡೆದ ಮತಧರ್ಮ ಪರಿಷತ್ತು ಅವನನ್ನು ಮತಧರ್ಮವಿದ್ರೋಹಿಯೆಂದು ಘೋಷಿಸಿತು, ಹಿಂಸಾರಭಸಮತಿಗಳಾದ ಮತಧರ್ಮಬೋಧಕರು ಕಲ್ಲು ಹೊಡೆದು ಸಾಯಿಸಬಹುದೆಂಬ ಭಯದಿಂದ ತನ್ನದು ತಪ್ಪೆಂದು ಹೇಳಿದ. ಇಂಗ್ಲಂಡ್‌ಗೆ ಓಡಿಹೋದ, ಆದರೆ ಅಲ್ಲಿ ಸಂತ ಆನ್‌ಸ್ಲೆಮ್‌ನನ್ನು ಟೀಕಿಸುವ ದುಡುಕು ತೋರಿಸಿದ. ಈ ಸಲ ಅವನು ರೋಮ್‌ಗೆ ಓಡಿಹೋದ, ಅಲ್ಲಿ ಚರ್ಚ್‌ನೊಂದಿಗೆ ಸಂಧಾನ ಮಾಡಿಕೊಂಡ. ೧೧೨೦ ರ ಹೊತ್ತಿಗೆ ಅವನು ಇತಹಾಸದಿಂದ ಕಣ್ಮರೆಯಾಗಿಬಿಡುತ್ತಾನೆ; ಅವನ ಸಾವಿನ ಕಾಲ ತೀರ ಕಾಲ್ಪನಿಕ.

ತ್ರಿಮೂರ್ತಿತ್ವದ ಬಗ್ಗೆ ಆಬೆಲಾರ್ಡ್‌ಗೆ ಬರೆದ ಪತ್ರವೊಂದರ ಹೊರತು ಅವನ ಬರಹಗಳಾವುವೂ ಉಳಿದಿಲ್ಲ. ತನ್ನ ಪತ್ರದಲ್ಲಿ ಅವನು ಆಬೆಲಾರ್ಡ್‌ನನ್ನು ತುಚ್ಛವಾಗಿ ಕಾಣುವುದಲ್ಲದೆ ಅವನ ನಿರ್ವೀರ್ಯತೆಯನ್ನು ಗೇಲಿ ಮಾಡುತ್ತಾನೆ.

ತನ್ನ ಭಾವನೆಗಳನ್ನು ಬಿಟ್ಟುಕೊಡದ ಯೂಬೆರ್‌ವರ್ಗ್ ಕೂಡ ಅವನು ಅಂಥ ಒಳ್ಳೆಯ ವ್ಯಕ್ತಿಯಲ್ಲವೆಂದು ಹೇಳುವಂತೆ ಈ ಪತ್ರವಿದೆ. ಈ ಪತ್ರವಲ್ಲದೆ, ರಾಸೆಲಿನ್‌ನ ಅಭಿಪ್ರಾಯಗಳು ಆನ್‌ಸೆಲ್ಮ್ ಮತ್ತು ಆಬೆಲಾರ್ಡ್‌ರ ವಿವಾದಾತ್ಮಕ ಬರಹಗಳ ಮೂಲಕ ಮುಖ್ಯವಾಗಿ ತಿಳಿಯುತ್ತವೆ. ಆನ್‌ಸ್ಲೆಮ್‌ನ ಪ್ರಕಾರ, ವೈಶ್ವಿಕಗಳು 'ಧ್ವನಿಯ ಉಸಿರು' (ಫ್ಲಾಟಸ್ ವೋಸಿಸ್). ಇದನ್ನು ವಾಚ್ಯಾರ್ಥದಲ್ಲಿ ಪರಿಗಣಿಸಿದರೆ, ವೈಶ್ವಿಕವು ಒಂದು ಭೌತಿಕ ಘಟನೆ, ಅಂದರೆ ನಾವು ಉಚ್ಚರಿಸಿದಾಗ ಪದವು ಹೊಮ್ಮುವಂತೆ. ಆದರೆ ರಾಸೆಲಿನ್ ಇಂತಹ ಮೂರ್ಖ ಅಭಿಪ್ರಾಯವನಾಗಿದ್ದನೆಂದು ತಿಳಿಯುವುದು ಕಷ್ಟ. ರಾಸೆಲಿನ್‌ನ ಪ್ರಕಾರ ಮಾನವನು ಒಂದು ಐಕ್ಯವಲ್ಲ, ಒಂದು ರೂಢನಾಮ ಅಷ್ಟೆ ಎಂದು ಆನ್‌ಸೆಲ್ಮ್ ಹೇಳುತ್ತಾನೆ. ಒಳ್ಳೆಯ ಪ್ಲೇಟೋವಾದಿಯಂತೆ ಈ ಅಭಿಪ್ರಾಯವನ್ನು ರಾಸೆಲಿನ್‌ನ ವಿವೇಕಯುತವಾದುದನ್ನು ಒಪ್ಪುವ ಏಕೈಕ ವಾದವೆನ್ನುತ್ತಾನೆ. ಸಾಮಾನ್ಯವಾಗಿ, ಭಾಗಗಳಿರುವ ಇಡಿಗೆ ತನ್ನದೇ ಆದ ವಸ್ತುಸ್ಥಿತಿ ಇಲ್ಲವೆಂದೂ ಅದೊಂದು ಶಬ್ದ ಅಷ್ಟೇ, ವಸ್ತುಸ್ಥಿತಿಯಿರುವುದು ಭಾಗಗಳಲ್ಲಿ ಎಂದೂ ಅವನು ಹೇಳುತ್ತಾನೆ. ಈ ಅಭಿಪ್ರಾಯವು ಅವನನ್ನು ಅತಿರೇಕದ ಪರಮಾಣುವಾದದತ್ತ ಕೊಂಡೊಯ್ದಿತೆನ್ನಿಸುತ್ತದೆ, ಆದದ್ದೂ ಅದೇ. ಏನೇ ಆಗಲಿ, ಅದು ಅವನನ್ನು ತ್ರಿಮೂರ್ತಿತ್ವದ ಬಗೆಗಿನ ತೊಂದರೆಗೆ ಸಿಲುಕಿಸಿತು. ಮೂವರು ವ್ಯಕ್ತಿಗಳು ವಿಭಿನ್ನ ಸತ್ವಗಳು, ಮೂವರು ದೇವತೆಯರಿದ್ದಾರೆಂದು ಹೇಳಲು ಈ ಬಳಕೆಯೇ ಅಡ್ಡಿ ಎಂದವನ ಅಭಿಪ್ರಾಯ. ಅವನ ಪ್ರಕಾರ, ಮಗ ಮಾತ್ರವಲ್ಲ, ತಂದೆ ಮತ್ತು ದಿವ್ಯಾತ್ಮವೂ ಅವತಾರಗಳೆಂಬ ಅದರ ಪರ್ಯಾಯವೂ ಒಪ್ಪತಕ್ಕದ್ದಲ್ಲ. ಮತಧರ್ಮವಿದ್ರೋಹಿಯೆಂದು ಪರಿಗಣಿತವಾದ ಈ ಎಲ್ಲ ಕಲ್ಪನೆಗಳನ್ನು ರೀಮ್ಸ್‌ನಲ್ಲಿ ೧೯೦೨ ರಲ್ಲಿ ಅವನು ಹಿಂಪಡೆದ. ವೈಶ್ವಿಕಗಳ ಬಗ್ಗೆ ಅವನ ನಿಲವೇನು ಎಂಬುದನ್ನು ಖಚಿತವಾಗಿ ತಿಳಿಯುವುದು ಅಸಾಧ್ಯ, ಏನೇ ಆದರೂ, ಅವನು ಒಂದು ರೀತಿಯ ನಾಮಮಾತ್ರವಾದಿ (ನಾಮಿನಲಿಸ್ಟ್) ಎನ್ನುವುದು ಸಮಂಜಸ.

ಅವನ ವಿದ್ಯಾರ್ಥಿ ಅಬೆಲಾರ್ಡ್ (ಅಥವಾ ಅಬ್ಬೈಲಾರ್ಡ್) ಹೆಚ್ಚು ಸಮರ್ಥ ಮತ್ತು ಗಣ್ಯ. ಅವನು ಹುಟ್ಟಿದ್ದು ನಾನ್‌ಟೀಸ್ ಹತ್ತಿರ ೧೧೦೭೯ ರಲ್ಲಿ, ಅವನು ಪ್ಯಾರಿಸ್‌ನಲ್ಲಿ ಶಾಂಪಿಯೂಸ್‌ನ ವಿಲಿಯಂ (ಒಬ್ಬ ಪ್ರಕೃತಿವಾದಿ)ನ ವಿದ್ಯಾರ್ಥಿ, ಆನಂತರ ಪ್ಯಾರಿಸ್‌ನ ಕ್ಯಾಥಿಡ್ರಲ್ ಶಾಲೆಯ ಅಧ್ಯಾಪಕ; ಅಲ್ಲಿಯೇ ಅವನು ವಿಲಿಯಂನ ಅಭಿಪ್ರಾಯಗಳನ್ನು ವಿರೋಧಿಸಿ ಅಭಿಪ್ರಾಯಗಳನ್ನು ಪರಿಷ್ಕರಿಸಿಕೊಳ್ಳುವಂತೆ ಮಾಡಿದ್ದು. ಲಾವೊನ್‌ನ ಆನ್‌ಸೆಲ್ಮ್ (ಆರ್ಚ್‌ಬಿಷಪ್ ಅಲ್ಲ) ಕೈಕೆಳಗೆ ಮತಧರ್ಮಶಾಸ್ತ್ರದ ಅಧ್ಯಯನದಲಿಲ್ಲಿ ಕೆಲವು ಕಾಲ ನಿರತನಾಗಿದ್ದು, ೧೧೧೩ ರಲ್ಲಿ ಪ್ಯಾರಿಸ್‌ಗೆ ವಾಪಸಾಗಿ, ಅಧ್ಯಾಪಕನಾಗಿ ಅಸಾಧಾರಣ ಜನಪ್ರಿಯತೆಯನ್ನು ಗಳಿಸಿದ. ಇದೇ ಕಾಲದಲ್ಲಿಯೇ ಅವನು ಕ್ಯಾನನ್ ಫುಲ್‌ಬರ್ಟ್‌ನ ಸೋದರ ಸೊಸೆ

ಹೆಲೋಯಿಸ್‌ಳಲ್ಲಿ ಅನುರಕ್ತನಾದದ್ದು. ಕ್ಯಾನನ್ ಅವನನ್ನು ಹಿಡಮಾಡಿಸಿಬಿಟ್ಟ., ಹೀಗಾಗಿ ಅವನೂ ಹೆಲೋಯಿಸ್‌ಳೂ ಐಹಿಕತೆಯಿಂದ ದೂರವಾಗಬೇಕಾಯಿತು; ಅವನು ಸಂತ ಡೆನಿಸ್‌ನಲ್ಲಿ ಆಶ್ರಮಕ್ಕೆ ಸೇರಿದರೆ, ಅವಳು ಅರ್ಕೆಂಟೂಯಿಲ್‌ನ ಸನ್ಯಾಸಿನಿಮಠವನ್ನು ಸೇರಿಕೊಂಡಳು. ಅವರ ಸುಪ್ರಸಿದ್ಧ ಪತ್ರವ್ಯವಹಾರವೂ ಆಬೆಲಾರ್ಡ್‌ನೇ ರಚಿಸಿದ ಕಲ್ಪನಾತ್ಮಕ ಸಾಹಿತ್ಯವೆಂದು ಪ್ರಸಿದ್ಧ ಜರ್ಮನ್ ವಿದ್ವಾಂಸ ಸ್ಕೀಡ್ಲರ್ ಹೇಳುತ್ತಾರೆ. ಇದರ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳುವ ಸಾಮರ್ಥ್ಯ ನನ್ನಲ್ಲಿಲ್ಲ, ಆದರೆ ಆಬೆಲಾರ್ಡ್‌ನ ವ್ಯಕ್ತಿತ್ವದಲ್ಲಿ ಅದು ಅಸಾಧ್ಯವೆಂದು ಹೇಳುವಂತಿಲ್ಲ. ಅವನು ಸದಾ ಟೊಳ್ಳು, ವಿವಾದಾತ್ಮಕ ವ್ಯಕ್ತಿ, ಮತ್ತು ಎಲ್ಲದರ ಬಗ್ಗೆ ತಿರಸ್ಕಾರಭಾವದವನು. ಬದುಕಿನ ದುರದೃಷ್ಟದ ಕಾರಣ ಹೆಲೋಯಿಸ್‌ಳ ಮೇಲೂ ಕೋಪಿಸಿಕೊಂಡ, ಅವಳ ಪತ್ರಗಳನ್ನು ಅವಮಾನಿಸಿದ. ಅವಳ ಪತ್ರಗಳು ಅವನವಕ್ಕಿಂತ ಹೆಚ್ಚು ಅರ್ಪಣಮನೋಭಾವದವು, ಅವುಗಳನ್ನವನು ತನ್ನ ಗಾಯಗೊಂಡ ಹೆಮ್ಮೆಗೆ ಬಳಿಯುವ ಮುಲಾಮಾಗಿ ಮಾಡಿಕೊಂಡ.

ಅವನ ಐಹಿಕ ವಿಮುಖತೆಯಲ್ಲೂ, ಅವನು ಬೋಧಕನಾಗಿ ತುಂಬ ಯಶಸ್ವಿಯೆನಿಸಿದ; ಕಿರಿಯರು ಅವನ ಬುದ್ಧಿಶಕ್ತಿ, ತರ್ಕನೈಪುಣ್ಯ ಮತ್ತು ಅವರ ಹಿರಿಯ ಬೋಧಕರ ಬಗೆಗಿನ ಅಗೌರವಗಳಿಂದಾಗಿ ಅವನನ್ನು ಮೆಚ್ಚಿಕೊಂಡರು. ಇದರ ವಿರುದ್ಧವಾಗಿ, ಹಿರಿಯರು ಅವನ ಬಗ್ಗೆ ಮೆಚ್ಚಿಕೆ ಹೊಂದಲಿಲ್ಲ. ೧೧೨೧ ರಲ್ಲಿ ತ್ರಿಮೂರ್ತಿತ್ವದ ಬಗೆಗಿನ ಗ್ರಂಥಕ್ಕಾಗಿ ಸಾಯಿಸಾನ್ಸ್‌ನಲ್ಲಿ ಪಾಷಂಡಿತನಕ್ಕಾಗಿ ಖಂಡಿಸಲಾಯಿತು. ತಪ್ಪೊಪ್ಪಿಗೆಯ ನಂತರ ಅವನು ಬ್ರಿಟನಿಯ ಸಂತ ಗಿಲ್ಡಾಸ್‌ನ ಆಬಟ್ ಆದ. ಅಲ್ಲಿನ ಸನ್ಯಾಸಿಗಳು ತೀರ ಅನಾಗರಿಕರಾಗಿದ್ದರು. ನಾಲ್ಕು ವರ್ಷಗಳ ಈ ಗಡೀಪಾರಿನ ನರಕವಾಸದ ಬಳಿಕ ಅವನು ಹೆಚ್ಚು ನಾಗರಿಕವಾದ ಪರಿಸರಕ್ಕೆ ವಾಪಸಾದ. ಸ್ಯಾಲಿಸ್‌ಬರಿಯ ಜಾನ್‌ನ ಹೇಳಿಕೆಯಂತೆ, ಅಲ್ಲಿಯೂ ಅವನು ತುಂಬ ಯಶಸ್ವಿ ಶಿಕ್ಷಕನಾಗಿದ್ದ ಎಂಬುದರ ಹೊರತು ಮುಂದಿನ ಅವನ ಇತಿಹಾಸವು ಅಸ್ಪಷ್ಟವಾಗಿದೆ. ೧೧೪೧ ರಲ್ಲಿ ಸಂತ ಬರ್ನಾರ್ಡ್‌ನ ಸೂಚನೆಯಂತೆ ಮತ್ತೆ ಅವನನ್ನು ಖಂಡನೆಗೊಳಪಡಿಸಲಾಯಿತು, ಈ ಬಾರಿ ಸೆನ್ಸ್‌ನಲ್ಲಿ. ಆಗ ಅವನು ಕ್ಲೂನಿಗೆ ಹೋದ, ಅಲ್ಲಿ ಮಾರನೆಯ ವರ್ಷ ಸತ್ತ.

ಆಬೆಲಾರ್ಡ್‌ನ ಅತ್ಯಂತ ಪ್ರಸಿದ್ಧ ಗ್ರಂಥವಾದ 'ಸಿಕ್ ಎಟ್ ನಾನ್' (ಹೌದು ಮತ್ತು ಅಲ್ಲ) ೧೧೨೧-೨೨ ರಲ್ಲಿ ರಚಿತವಾಯಿತು. ಇದರಲ್ಲವನು ವಿವಿಧ ಸಿದ್ಧಾಂತಗಳ ಪರವಾದ ಮತ್ತು ವಿರೋಧವಾದ ತಾರ್ಕಿಕ ವಾದಗಳನ್ನು ಮಂಡಿಸುತ್ತಾನೆ, ಆದರೆ ಎಷ್ಟೋ ವೇಳೆ ಯಾವುದೇ ನಿರ್ಧಾರಕ್ಕೆ ಬರದೆ. ಅವನಿಗೆ ವಾದವೆಂದರೆ ಇಷ್ಟವೆಂಬುದು ಸ್ಪಷ್ಟ, ಅದನ್ನವನು ತಾರ್ಕಿಕತೆಯನ್ನು ಮೊನಚುಗೊಳಿಸಿಕೊಳ್ಳುವುದಕ್ಕೆ ಸಹಕಾರಿಯೆಂದು ಭಾವಿಸುತ್ತಾನೆ. ಈ ಗ್ರಂಥವು ಜನರ ಶಾಸ್ತ್ರಪ್ರಾಮಾಣ್ಯಗಳ

ನಿದ್ರೆಯಿಂದ ಎಚ್ಚರಗೊಳಿಸುವಲ್ಲಿ ತುಂಬ ಪರಿಣಾಮಕಾರಿಯಾಯಿತು. (ಮತಧಾರ್ಮಿಕ ಗ್ರಂಥಗಳ ಹೊರತಾಗಿ) ದ್ವಂದ್ವಾತ್ಮಕ ತಾರ್ಕಿಕತೆಯೇ ಸತ್ಯಾನ್ವೇಷಣೆಯ ಏಕೈಕ ಹೆದ್ದಾರಿ ಎಂಬ ಆಬೆಲಾರ್ಡ್‌ನ ದೃಷ್ಟಿಕೋನವನ್ನು ಬೇರಾವ ಪ್ರಯೋಗಶೀಲರು ಒಪ್ಪದಿದ್ದರೂ, ಆ ಕಾಲದಲ್ಲಿ ಪೂರ್ವಾಗ್ರಹಗಳಿಗೆ ಒಂದು ದ್ರಾವಕವಾಗಿಯೂ ಬುದ್ಧಿಶಕ್ತಿಯ ನಿರ್ಭೀತ ಬಳಕೆಗೆ ಉತ್ತೇಜಕವಾಗಿಯೂ ಅಮೂಲ್ಯ ಪ್ರಭಾವ ಬೀರಿತು. ಮತಧಾರ್ಮಿಕ ಗ್ರಂಥಗಳ ಹೊರತಾದ ಯಾವುದೂ ದೋಷರಹಿತವಲ್ಲ; ಪ್ರವರ್ತಕರು ಮತ್ತು ಧರ್ಮಗುರುಗಳೂ ತಪ್ಪು ಮಾಡುವವರೇ.

ಅವನು ತರ್ಕಕ್ಕೆ ಕೊಟ್ಟ ಬೆಲೆಯು ಆಧುನಿಕ ದೃಷ್ಟಿಯಿಂದ ಅತಿಯಾದದ್ದು ಎನಿಸುತ್ತದೆ. ಅವನು ಅದನ್ನು ಸರ್ವೋತ್ಕೃಷ್ಟ 'ಕ್ರೈಸ್ತ ವಿಜ್ಞಾನ' ಎಂದು ಪರಿಗಣಿಸುತ್ತಾನೆ, ಅದು 'ಲೋಗೋಸ್'ನಿಂದ ಸಾಧಿತವಾದದ್ದರ ಮೇಲೆ ಆಟವಾಡುತ್ತಾನೆ. 'ಮೊದಲಲ್ಲಿ ಲೋಗೋಸ್ ಇತ್ತು' ಎನ್ನುತ್ತದೆ ಸಂತ ಜಾನ್‌ನ ಸುವಾರ್ತೆ, ಇದು ತರ್ಕದ ಘನತೆಯನ್ನು ತೋರಿಸುತ್ತದೆ ಎಂಬುದು ಅವನ ವಾದ.

ಅವನ ಪ್ರಧಾನ ಪ್ರಾಮುಖ್ಯವಿರುವುದು ತರ್ಕ ಮತ್ತು ಜ್ಞಾನಮೀಮಾಂಸೆಗಳಲ್ಲಿ. ಅವನ ತತ್ತ್ವಜ್ಞಾನವು ಒಂದು ವಿಮರ್ಶಾತ್ಮಕ ವಿಶ್ಲೇಷಣೆ, ಬಹುತೇಕ ಭಾಷಾತ್ಮಕ. ವೈಶ್ವಿಕಗಳ ಬಗ್ಗೆ, ಅಂದರೆ ಯಾವುದನ್ನು ಅನೇಕ ವಸ್ತುಗಳ ಆಖ್ಯಾತವನ್ನಾಗಿ ನೀಡಬಹುದೋ ಅಂಥ ವಸ್ತುವಿಗೆ ನಾವು ಆಖ್ಯಾತವನ್ನು ನೀಡದೆ ಒಂದು ಪದದಲ್ಲಿ ಸೂಚಿಸುತ್ತೇವೆ ಎನ್ನುತ್ತಾನೆ. ಈ ಅರ್ಥದಲ್ಲಿ ಅವನು ನಾಮಮಾತ್ರವಾದಿ. ಆದರೆ ರಾಸೆಲಿನ್‌ಗೆ ವ್ಯತಿರಿಕ್ತವಾಗಿ 'ಧ್ವನಿಯ ಉಸಿರು' (ಫ್ಲಾಟಸ್ ವೋಸಿಸ್) ಒಂದು ವಸ್ತು; ಒಂದು ಭೌತ ಸಂಭವಕ್ಕೆ ನೀಡುವ ಆಖ್ಯಾತವಾಗಿರದ ಒಂದು ಪದ ಮಾತ್ರ ಆಗಿದೆ, ಆ ಪದವೇ ಅದರ ಅರ್ಥ. ಇಲ್ಲಿ ಅವನು ಅರಿಸ್ಟಾಟಲ್ ಮೊರೆಹೋಗುತ್ತಾನೆ. ವಸ್ತುಗಳು ಒಂದನ್ನೊಂದು ಹೋಲುತ್ತವೆ, ಅಂತಹ ಸಾದೃಶ್ಯ ವೈಶ್ವಿಕಗಳ ಕಾರಣ ಎನ್ನುತ್ತಾನೆ. ಆದರೆ ಎರಡು ವಸ್ತುಗಳ ಸಾದೃಶ್ಯವು ತಾನೇ ಒಂದು ವಸ್ತುವಾಗುವುದಿಲ್ಲ; ಇದು ವಾಸ್ತವವಾದದ ಒಂದು ದೋಷ. ವಾಸ್ತವವಾದಕ್ಕೆ ಹೆಚ್ಚು ವಿರುದ್ಧವಾದ ಅನೇಕ ವಸ್ತುಗಳು, ಉದಾಹರಣೆಗೆ, ಸಾಮಾನ್ಯ ಪರಿಕಲ್ಪನೆಗಳು ವಸ್ತುಗಳ ಸ್ವಭಾವವನ್ನು ಆಧರಿಸಿರುವುದಿಲ್ಲ, ಆದರೆ ಅನೇಕ ವಸ್ತುಗಳ ಗೊಂದಲಪೂರ್ಣ ಪ್ರತಿಮೆಗಳು. ಆದರೆ ಅವನು ಪ್ಲೇಟೋನ ಆದರ್ಶರೂಪಕ್ಕೆ ಯಾವುದೇ ಸ್ಥಾನವಿಲ್ಲ ಎಂದೇನೂ ಹೇಳುವುದಿಲ್ಲ; ಸೃಷ್ಟಿಗೆ ಮಾದರಿಗಳಾಗಿ ಅವು ದೈವಿಕ ಮನಸ್ಸಿನಲ್ಲಿ ಅಸ್ತಿತ್ವದಲ್ಲಿರುತ್ತವೆ; ಹಾಗೆ ನೋಡಿದರೆ, ಅವು ದೇವರ ಪರಿಕಲ್ಪನೆಗಳು.

ಇದೆಲ್ಲವೂ, ಸರಿಯೋ ತಪ್ಪೋ, ತುಂಬ ಸಮರ್ಥವಾಗಿದೆ. ವೈಶ್ವಿಕಗಳ ಪ್ರಶ್ನೆ ಕುರಿತ ಅತ್ಯಾಧುನಿಕ ಚರ್ಚೆಗಳು ಇದಕ್ಕಿಂತಲೂ ಬಹು ಹೆಚ್ಚು ದೂರ ಸಾಗಿಬಂದಿಲ್ಲ.

ಸಂತ ಬರ್ನಾರ್ಡ್‌ನ ಸಂತತನವು ಅವನನ್ನು ಬುದ್ಧಿವಂತನನ್ನಾಗಿಸಲು

ಸಾಕಾಗದು[೨೩೪] ಎಂಬುದನ್ನು ಅಬೆಲಾರ್ಡ್ ಅರ್ಥಮಾಡಿಕೊಳ್ಳಲಾರದೆ ಹೋದ, ಹೀಗಾಗಿ ಅವನ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿದ. ಅಬೆಲಾರ್ಡ್ ತ್ರಿಮೂರ್ತಿತ್ವವನ್ನು ಒಬ್ಬ ಏರಿಯಸ್‌ವಾದಿಯಂತೆ ಪರಿಗಣಿಸುತ್ತಾನೆ, ಪೆಲೇಜಿಯನ್‌ನಂತೆ ದೈವಕೃಪೆಯೆದು ಭಾವಿಸುತ್ತಾನೆ, ಕ್ರಿಸ್ತನ ವ್ಯಕ್ತಿಯನ್ನು ನೆಸ್ಟೋರಿನ್‌ನಂತೆ ನೋಡುತ್ತಾನೆ; ಪ್ಲೇಟೋನನ್ನು ಒಬ್ಬ ಕ್ರೈಸ್ತನೆಂದು ಸಾಧಿಸಿ ಅವನು ಕ್ರೈಸ್ತೇತರನಾದ; ಅಲ್ಲದೆ, ದೇವರನ್ನು ಮಾನವ ತರ್ಕದ ಮೂಲಕ ಅರ್ಥಮಾಡಿಕೊಳ್ಳಬಹುದೆಂದು ಹೇಳಿ ಕ್ರೈಸ್ತ ನಂಬಿಕೆಯ ಶ್ರೇಷ್ಠತೆಯನ್ನೇ ನಾಶಮಾಡಿದ – ಎಂದವನು ಹೇಳಿದ. ಹಾಗೆ ನೋಡಿದರೆ ಈ ಕೊನೆಯ ಅಂಶವನ್ನು ಆಬೆಲಾರ್ಡ್ ಎಂದೂ ಹೇಳದೆ, ಹೆಚ್ಚಿನ ಭಾಗವನ್ನು ನಂಬಿಕೆಯ ವಲಯಕ್ಕೇ ಸೇರಿಸಿದ, ದಿವ್ಯಜ್ಞಾನದ ಸಹಾಯವಿಲ್ಲದೆ ತ್ರಿಮೂರ್ತಿತ್ವವನ್ನು ವೈಚಾರಿಕವಾಗಿ ತೋರಿಸಬಹುದು ಎಂಬ ದೈವಸಂತ ಆನ್‌ಸೆಲ್ಮ್‌ನಂತೆ ಅವನೂ ಆಲೋಚಿಸಿದ. ಒಂದು ಕಾಲದಲ್ಲಿ ಅವನು ದಿವ್ಯಾತ್ಮವನ್ನು ಪ್ಲೇಟೋನ ಜಗದಾತ್ಮಕ್ಕೆ ಹೋಲಿಸಿದ್ದ ಎಂಬುದು ನಿಜವಾದರೂ, ಅದರ ಮತಧರ್ಮವಿದ್ರೋಹಿ ಅಂಶವನ್ನು ಶ್ರುತಪಡಿಸಿದ ಮೇಲೆ ಈ ಭಾವನೆಯನ್ನವನು ತೊರೆದಿದ್ದ. ಅವನ ಚರ್ಚಾತ್ಮಕತೆಯೇ ಅವನ ಸಿದ್ಧಾಂತಗಳಿಗಿಂತ ಹೆಚ್ಚಾಗಿ ಪ್ರಾಯಶಃ ಅವನ ಪಾಷಂಡಿತನಕ್ಕೆ ಕಾರಣವಾಯಿತು; ಪಂಡಿತರನ್ನು ಟೀಕಿಸುವ ಅವನ ಪ್ರವೃತ್ತಿಯೇ ಎಲ್ಲ ಪ್ರಭಾವಿ ವ್ಯಕ್ತಿಗಳ ತೀವ್ರ ಅಸಮಾಧಾನಕ್ಕೆ ಕಾರಣವಾಯಿತು.

ಆ ಕಾಲದ ಬಹುತೇಕ ವಿದ್ವಾಂಸರು ಆಲೆಬಾರ್ಡ್‌ಗಿಂತ ಕಡಿಮೆ ಪ್ರಮಾಣದಲ್ಲಿ ತರ್ಕವನ್ನು ನಂಬಿಕೊಂಡಿದ್ದರು. ವಿಶೇಷವಾಗಿ ಪ್ರಾಚೀನತೆಯ ಕುರಿತ ಅಭಿಮಾನವಿರಿಸಿಕೊಂಡಿದ್ದ ಮತ್ತು ಪ್ಲೇಟೋ ಮತ್ತು ಬೊಯೆಥಿಯಸ್‌ರ ಅನುಯಾಯಿಗಳಿಂದ ಕೂಡಿದ ಒಂದು ಮಾನವೀಯತಾವಾದಿ ಚಳವಳಿಯಾದ ಚಾರ್ಟ್‌ರೆಸ್ ಪಂಥವಿತ್ತು. ಗಣಿತದಲ್ಲಿ ಮುಂದುವರಿದ ಆಸಕ್ತಿಯಿತ್ತು: ಬಾಥ್‌ನ ಅಡೆಲಾರ್ಡ್ ಹನ್ನೆರಡನೆಯ ಶತಮಾನದ ಆರಂಭದಲ್ಲಿ ಸ್ಪೇಯಿನ್‌ಗೆ ಹೋಗಿ ಅದರ ಪರಿಣಾಮವಾಗಿ ಯೂಕ್ಲಿಡ್‌ನನ್ನು ಅನುವಾದಿಸಿದ್ದ.

ಒಣ ಸೂಕ್ಷ್ಮ ತರ್ಕದ ಪದ್ಧತಿಗೆ ವ್ಯತಿರಿಕ್ತವಾಗಿ ಒಂದು ಬಲಿಷ್ಠ ಅನುಭಾವಿ ಚಳವಳಿಯಿತ್ತು, ಅದರ ಮುಂದಾಳಗಿದ್ದವನು ಸಂತ ಬರ್ನಾರ್ಡ್. ಅವನ ತಂದೆ ಒಬ್ಬ ಶ್ರೀಮಂತಪ್ರಭು, ಮೊದಲನೆಯ ಮತಧಾರ್ಮಿಕ ಯುದ್ಧದಲ್ಲಿ ಸತ್ತಿದ್ದ. ಅವನು ಒಬ್ಬ ಸಿಸ್ಟರ್ಷಿಯನ್ ಪಂಥದ ಸನ್ಯಾಸಿ, ೧೧೧೫ ರಲ್ಲಿ ಕ್ಲೈರ್ವಾಸ್‌ನಲ್ಲಿ ಹೊಸದಾಗಿ

೨೩೪. 'ಸಂತ ಬರ್ನಾರ್ಡ್‌ನ ಮಹತ್ವವು ಅವನ ಬುದ್ಧಿಶಕ್ತಿಯನ್ನು ಅವಲಂಬಿಸಿಲ್ಲ, ಅವನ ವ್ಯಕ್ತಿತ್ವದ ಮೇಲೆ ಅವಲಂಬಿಸಿದೆ' – ಎನ್‌ಸೈಕ್ಲೋಪೀಡಿಯ ಬ್ರಿಟಾನಿಕಾ.

ಸ್ಥಾಪಿತವಾದ ಕ್ರೈಸ್ತಮಠದ ಮುಖ್ಯಸ್ಥನಾದ. ಅವನು ಮತಧಾರ್ಮಿಕ ರಾಜಕೀಯದಲ್ಲಿ ತುಂಬ ಪ್ರಭಾವಶಾಲಿಯಾಗಿದ್ದ – ಪ್ರತಿಪೋಪ್‌ರ ವಿರುದ್ಧ ತಕ್ಕಡಿ ತೂಗುವಂತೆ ಮಾಡಿದ್ದವನು, ಉತ್ತರ ಇಟಲಿ ಮತ್ತು ದಕ್ಷಿಣ ಫ್ರಾನ್ಸ್‌ನಲ್ಲಿ ಪಾಷಂಡಿತನದ ವಿರುದ್ಧ ಹೋರಾಡಿದವನು, ಸಾಹಸಿಗ ತತ್ತ್ವಜ್ಞಾನಿಗಳ ವಿರುದ್ಧ ಸಂಪ್ರದಾಯನಿಷ್ಠತೆಗೆ ತೂಕ ತಂದಿತ್ತವನು, ಎರಡನೆಯ ಮತಧಾರ್ಮಿಕ ಯುದ್ಧಕ್ಕೆ ಪ್ರೇರಣೆಯಿತ್ತವನು. ತತ್ತ್ವಜ್ಞಾನಿಗಳ ವಿರುದ್ಧದ ಟೀಕೆಗಳಲ್ಲಿ ಅವನಿಗೆ ಸಾಮಾನ್ಯವಾಗಿ ವಿಜಯ ದೊರಕುತ್ತಿತ್ತು, ಆದರೆ ಅವನ ಮತಧಾರ್ಮಿಕ ಯುದ್ಧ ಕುಸಿದಾಗ ಅವನು ಸಂತರ ಪಾಷಂಡಿತನಕ್ಕಾಗಿ ಹುಡುಕಾಡುತ್ತಿದ್ದವರಿಗೆ ಅತಿರೇಕದ್ದೆನಿಸುವ ಬಗೆಯಲ್ಲಿ ಬೊಯೆಥಿಯಸ್‌ನನ್ನು ಒಪ್ಪಿಕೊಂಡಿದ್ದ ಗಿಲ್ಬರ್ಟ್ ಡಿ ಲ ಪಾರ್‍ರೀಗೆ ಶಿಕ್ಷೆ ಕೊಡಿಸಲು ವಿಫಲನಾಗಿದ್ದ. ಒಬ್ಬ ರಾಜಕಾರಣಿಯೂ ದುರಭಿಮಾನಿಯೂ ಆಗಿದ್ದ ಅವನು ಪ್ರಾಮಾಣಿಕವಾಗಿ ಮತಧಾರ್ಮಿಕ ಮನೋಭಾವದವನು, ಅವನ ಲ್ಯಾಟಿನ್ ಪ್ರಾರ್ಥನೆಗಳಲ್ಲಿ ಅಪೂರ್ವ ಸೌಂದರ್ಯವನ್ನು ಕಾಣಬುದು.[೨೩೫] ಅವನಿಂದ ಪ್ರಭಾವಿತರಾದವರಲ್ಲಿ ಅನುಭಾವಿಕತೆಯು ಹೆಚ್ಚಾಗಿ ಮುಖ್ಯವಾಗುತ್ತ ಹೋಯಿತು, ಕೊನೆಯಲ್ಲಿ ಅದು ಫ್ಲೋರಾದ ಜೋಖಿಮ್ (ಮರಣ, ೧೨೦೨)ಳದರಂತಹ ಪಾಷಂಡಿತನದ ಸ್ವರೂಪವನ್ನು ಪಡೆಯುವವರೆಗೂ ಬೆಳೆಯಿತು. ಆದರೆ ಈ ವ್ಯಕ್ತಿಯ ಪ್ರಭಾವವು ಆನಂತರ ಕಾಲಕ್ಕೆ ಸೇರಿದುದು. ಸಂತ ಬರ್ನಾರ್ಡ್ ಮತ್ತವನ ಅನುಯಾಯಿಗಳು ಮತಧಾರ್ಮಿಕ ಸತ್ಯವನ್ನು ಅನ್ವೇಷಿಸುವುದರಲ್ಲಿ ಮತ್ತು ವೈಯಕ್ತಿಕ ಅನುಭವ ಮತ್ತು ಧ್ಯಾನಗಳಲ್ಲಿ ಆಸಕ್ತಿಯಿದ್ದವರೇ ಹೊರತು ತರ್ಕದಲ್ಲಲ್ಲ. ಆಬೆಲಾರ್ಡ್ ಮತ್ತು ಬರ್ನಾರ್ಡ್ ಇಬ್ಬರೂ ಪ್ರಾಯಶಃ ಸಮಾನರಾಗಿ ಏಕಪಕ್ಷೀಯರು.

ಒಬ್ಬ ಮತಧಾರ್ಮಿಕ ಅನುಭಾವಿಯಾಗಿ ಬರ್ನಾರ್ಡ್ ಪೋಪ್ ಅಧಿಕಾರವನ್ನು ಐಹಿಕ ವಿಷಯಗಳಲ್ಲಿ ತೊಡಗಿಸುವುದನ್ನು ಕುರಿತು ವಿಷಾದದಿಂದಿದ್ದ, ಐಹಿಕ ಅಧಿಕಾರವನ್ನು ಇಷ್ಟಪಡಲಿಲ್ಲ. ಅವನು ಮತಧಾರ್ಮಿಕ ಯುದ್ಧಗಳ ಬಗ್ಗೆ ಬೋಧನೆ ಮಾಡಿದರೂ, ಯುದ್ಧವೆಂದರೆ ಸಂಘಟನೆಯನ್ನು ಬೇಡುತ್ತದೆ, ಅದಕ್ಕೆ ಮತಧಾರ್ಮಿಕ ಉತ್ಸಾಹವೊಂದೇ ಸಾಲದು ಎಂಬುದನ್ನು ಅರ್ಥಮಾಡಿಕೊಂಡಿದ್ದಂತೆ ಕಾಣಿಸುವುದಿಲ್ಲ. ಜನರ ಗಮನವನ್ನು ಸೆಳೆಯುವುದು 'ಜಸ್ಟಿನಿಯನ್ ನಿಯಮ, ಪ್ರಭುವಿನ ನಿಯಮವಲ್ಲ' ಎಂಬುದು ಅವನ ದೂರು. ಪೋಪ್ ತನ್ನ ಸಾಮ್ರಾಜ್ಯವನ್ನು ಸೈನಿಕ ಬಲದಿಂದ ರಕ್ಷಿಸಿಕೊಳ್ಳುವುದು ಅವನಿಗೆ ಆಘಾತಕಾರಿಯಾಗಿತ್ತು. ಪೋಪ್‌ನ ಕೆಲಸ ಆಧ್ಯಾತ್ಮಿಕವಾದುದು, ಹಾಗಾಗಿ ಅವನು ವಾಸ್ತವ ಆಡಳಿತವನ್ನು ಗಳಿಸಲು

೨೩೫. ಪ್ರಾಸಬದ್ಧವಾದ ಸ್ವರಘಾತೀಯ ಮಧ್ಯಕಾಲೀನ ಲ್ಯಾಟಿನ್ ಪ್ರಾರ್ಥನೆಗಳು ಕೆಲವೊಮ್ಮೆ ಭವ್ಯವಾದ, ಮತ್ತೆ ಕೆಲವೊಮ್ಮೆ ಮೃದುವೂ ವಿಷಾದಕರವೂ ಆಗಿದ್ದು ಆ ಕಾಲದ ಮತಧಾರ್ಮಿಕ ಭಾವನೆಗಳ ಉತ್ಕೃಷ್ಟ ಮುಖವನ್ನು ವ್ಯಕ್ತಪಡಿಸುತ್ತವೆ.

ಪ್ರಯತ್ನಿಸಬಾರದು. ಆದರೆ ಈ ದೃಷ್ಟಿಕೋನವು ಪೋಪ್‌ರ ಬಗ್ಗೆ ಅಪರಿಮಿತ ಭಕ್ತಿಭಾವದೊಡನೆ ಮಿಳಿತವಾಗಿದೆ. ಇದು ಅವನ 'ಬಿಷಪ್‌ರ ರಾಜ, ದೇವದೂತರ ಉತ್ತರಾಧಿಕಾರಿ, ಅಬೆಲ್‌ರನ ಪ್ರಾಧಾನ್ಯ ಹೊಂದಿದವನು, ನೋಹ್‌ನ ಪ್ರಭುತ್ವ, ಏಬ್ರಹಾಂನ ಕುಲಪತಿ, ಮೆಲ್ಷಿಸೆಡೆಕ್‌ನ ವ್ಯವಸ್ಥೆ, ಆರಾನ್‌ನ ಘನತೆ, ಮೋಸಸ್‌ನ ಅಧಿಕಾರ, ಸಾಮ್ಯುಯಲ್‌ನ ನ್ಯಾಯಾಧೀಶತ್ವ, ಅಧಿಕಾರದಲ್ಲಿ ಪೀಟರ್' ಎಂಬ ಬಣ್ಣನೆಯಲ್ಲಿ ಗೋಚರಿಸುತ್ತದೆ. ಸಂತ ಬರ್ನಾರ್ಡ್‌ನ ಕ್ರಿಯೆಗಳ ಒಟ್ಟು ಫಲಿತವೆಂದರೆ, ಮತಧರ್ಮೇತರ ವ್ಯವಹಾರಗಳಲ್ಲಿ ಪೋಪ್ ಅಧಿಕಾರವು ಬಹಳವಾಗಿ ಹೆಚ್ಚಿದ್ದು.

ಸ್ಯಾಲಿಸ್‌ಬರಿಯ ಜಾನ್ ಮುಖ್ಯ ಚಿಂತಕನಾಗಿರದಿದ್ದರೂ, ಅವನ ಕಾಲದ ಬಗ್ಗೆ ತಿಳಿಯಲು ನಮಗೆ ಅಮೂಲ್ಯವಾದುದು, ಆ ಕುರಿತು ಅವನು ಒಂದು ಹರಟೆಯಂತಹ ನಿರೂಪಣೆ ಮಾಡಿದ್ದಾನೆ. ಅವನು ಕ್ಯಾಂಟರ್‌ಬರಿಯ ಮೂವರು ಆರ್ಚ್‌ಬಿಷಪ್‌ರ ಕಾರ್ಯದರ್ಶಿಯಾಗಿದ್ದವನು, ಅವರಲ್ಲಿ ಒಬ್ಬ ಬೆಕೆಟ್. ಅವನು ನಾಲ್ಕನೆಯ ಹೇಡ್ರಿಯನ್‌ನ ಗೆಳೆಯ, ತನ್ನ ಬದುಕಿನ ಕೊನೆಯಲ್ಲಿ ಅವನು ಚಾರ್ಟ್‌ರೆಸ್‌ನ ಬಿಷಪ್ ಆಗಿದ್ದವನು, ಅಲ್ಲಿಯೇ ಅವನು ೧೧೮೦ ರಲ್ಲಿ ಸತ್ತ. ನಂಬಿಕೆಯ ಹೊರತಾದ ವಿಷಯಗಳಲ್ಲಿ ಅವನು ಸಂದೇಹವಾದಿ ಪ್ರವೃತ್ತಿಯವನು; ಅವನು ತನ್ನನ್ನು ಪ್ಲೇಟೋ ತಾತ್ವಿಕತೆಯವನು (ಅಕೆಡೆಮಿಕ್) ಎಂದು (ಈ ಶಬ್ದವನ್ನು ಸಂತ ಆಗಸ್ಟೈನ್ ಬಳಸಿದ ಅರ್ಥದಲ್ಲಿ) ಬಣ್ಣಿಸಿಕೊಂಡಿದ್ದ. ರಾಜರ ಬಗೆಗಿನ ಅವನ ಗೌರವವು ಸೀಮಿತವಾದದ್ದು; 'ಒಬ್ಬ ಅನಕ್ಷರಸ್ಥ ರಾಜನೆಂದರೆ ಕಿರೀಟ ಧರಿಸಿದ ಕತ್ತೆ'. ಸಂತ ಬರ್ನಾರ್ಡ್ ಬಗ್ಗೆ ಅವನಿಗೆ ಭಕ್ತಿಭಾವ, ಆದರೆ ಅವನು ಪ್ಲೇಟೋ ಮತ್ತು ಅರಿಸ್ಟಾಟಲ್‌ರನ್ನು ಹೊಂದಿಸುವುದರಲ್ಲಿ ವಿಫಲನಾಗುತ್ತಾನೆ ಎಂದು ಭಾವಿಸಿದ್ದ. ಅಬೆಲಾರ್ಡ್ ಬಗ್ಗೆ ಮೆಚ್ಚಿಕೆಯಿತ್ತು, ಆದರೆ ಅವನ ವೈಶ್ವಿಕ ಸಿದ್ಧಾಂತವನ್ನು ಗೇಲಿಮಾಡುತ್ತಿದ್ದ, ಅಂತೆಯೇ ರಾಸೆಲಿನ್ ಬಗ್ಗೆಯೂ. ಅವನ ಅಭಿಪ್ರಾಯದಲ್ಲಿ ತರ್ಕವು ಜ್ಞಾನಾರ್ಜನೆಯ ಮೊದಲ ಮೆಟ್ಟಿಲು, ಆದರೆ ತನ್ನಲ್ಲೇ ಅದು ರಕ್ತಹೀನ ಮತ್ತು ನಿರ್ವೀರ್ಯವಾದುದು. ಅವನ ಪ್ರಕಾರ, ಅರಿಸ್ಟಾಟಲ್ ಅನ್ನು ತರ್ಕದಲ್ಲಿಯೂ ಉತ್ತಮಿಸಬಹುದು; ಪ್ರಾಚೀನ ಲೇಖಕರ ಬಗೆಗಿನ ಗೌರವವು ವೈಚಾರಿಕ ವಿಮರ್ಶೆಗೆ ಅಡ್ಡಿಯಾಗಬಾರದು. ಅವನ ಮಟ್ಟಿಗೆ ಪ್ಲೇಟೋ 'ಇನ್ನೂ ತತ್ವಜ್ಞಾನಿಗಳ ರಾಜ.' ಅವನಿಗೆ ತನ್ನ ಕಾಲದ ಬಹುತೇಕ ಎಲ್ಲ ಪಂಡಿತರ ನೇರ ಪರಿಚಯವಿತ್ತು, ಪಾಂಡಿತ್ಯಪೂರ್ಣ ಚರ್ಚೆಗಳಲ್ಲಿ ಸ್ನೇಹಪೂರ್ವಕವಾಗಿ ಸೇರಿಕೊಳ್ಳುತ್ತಿದ್ದ. ಮೂವತ್ತು ವರ್ಷಗಳ ಬಳಿಕ ಒಂದು ತತ್ವಜ್ಞಾನ ಶಾಲೆಗೆ ಮತ್ತೆ ಭೇಟಿಯಿತ್ತಾಗ, ಅವರೆಲ್ಲ ಇನ್ನೂ ಹಳೆಯ ವಿಷಯಗಳನ್ನೇ ಚರ್ಚಿಸುತ್ತಿದ್ದುದನ್ನು ಕಂಡು ಮುಗುಳ್ನಕ್ಕಿದ್ದ. ಅವನು ಮತ್ತೆ ಮತ್ತೆ ನೋಡುತ್ತಿದ್ದ ಸಮಾಜವು ಮೂವತ್ತು ವರ್ಷಗಳ ಹಿಂದಿನ 'ಆಕ್ಸ್‌ಫರ್ಡ್ ಕಾಮನ್ ರೂಮ್' ತರಹದ್ದು. ತನ್ನ ಬದುಕಿನ ಕೊನೆಯಲ್ಲಿ ಕ್ಯಾಥೆಡ್ರಲ್

ಶಾಲೆಗಳು ವಿಶ್ವವಿದ್ಯಾನಿಲಯುಗಳಿಗೆ ಎಡೆ ಮಾಡಿಕೊಟ್ಟು, ಮತ್ತು ವಿಶ್ವವಿದ್ಯಾನಿಲಯಗಳು, ಕನಿಷ್ಠ ಪಕ್ಷ ಇಂಗ್ಲಂಡ್‌ನಲ್ಲಿ, ಅಂದಿನಿಂದ ಇಂದಿನವರೆಗೂ ಅಸಾಧಾರಣ ಸಾತತ್ಯವನ್ನುಳಿಸಿಕೊಂಡು ಬಂದಿವೆ.

ಹನ್ನೆರಡನೆಯ ಶತಮಾನದಲ್ಲಿ ಅನುವಾದಕರು ಗ್ರೀಕ್ ಗ್ರಂಥಗಳು ಪಾಶ್ಚಾತ್ಯ ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚು ದೊರಕುವಂತೆ ಮಾಡಿದರು. ಅಂತಹ ಅನುವಾದಗಳ ಮೂರು ಮುಖ್ಯ ಮೂಲಗಳಿದ್ದವು; ಕಾನ್‌ಸ್ಟಾಂಟಿನೋಪಲ್, ಪಾಲೆರ್ಮೋ ಮತ್ತು ಟೋಲೆಡೋ. ಇವುಗಳಲ್ಲಿ ಟೋಲೆಡೋ ಅತ್ಯಂತ ಮುಖ್ಯವಾದುದು, ಆದರೆ ಅಲ್ಲಿಂದ ಬಂದ ಅನುವಾದಗಳು ಎಷ್ಟೋ ವೇಳೆ ಅರೆಬಿಕ್‌ನಿಂದ ಬಂದವೇ ಹೊರತು ನೇರವಾಗಿ ಗ್ರೀಕ್‌ನಿಂದಲ್ಲ. ಹನ್ನೆರಡನೆಯ ಶತಮಾನದ ಮೊದಲರ್ಧದ ಕೊನೆಯ ವೇಳೆಗೆ ಟೋಲೆಡೋನ ಆರ್ಚ್‌ಬಿಷಪ್ ರೇಮಾಂಡ್ ಅನುವಾದಕರ ಒಂದು ಸಂಸ್ಥೆಯನ್ನು ಸ್ಥಾಪಿಸಿದ, ಅದು ತುಂಬ ಫಲಪ್ರದವಾಗಿತ್ತು. ೧೧೨೮ ರಲ್ಲಿ ವೆನಿಸ್‌ನ ಜೇಮ್ಸ್ ಅರಿಸ್ಟಾಟಲ್‌ನ 'ಅನಲಿಟಿಕ್ಸ್', 'ಟಾಪಿಕ್ಸ್', ಮತ್ತು 'ಸೋಫೋಸ್ಟಿಸ್ಟೆ ಎಲೆನ್‌ಸಿ'ಗಳನ್ನು ಅನುವಾದಿಸಿದ; 'ದ ಪೋಸ್ಟೀರಿಯರ್ ಅನಲಿಟಿಕ್ಸ್' ಪಾಶ್ಚಾತ್ಯ ತತ್ವಜ್ಞಾನಿಗಳಿಗೆ ಕಬ್ಬಿಣದ ಕಡಲೆಯಾಗಿತ್ತು. ಕ್ಯಾಟಾನಿಯದ ಹೆನ್ರಿ ಆರಿಸ್ಟಿಪಸ್ (ಮರಣ ೧೧೬೮) 'ಫಯೆಡೋ' ಮತ್ತು 'ಮೇನೋ'ಗಳನ್ನು ಅನುವಾದಿಸಿದನಾದರೂ ಅವನ ಅನುವಾದಗಳು ತಕ್ಷಣ ಪ್ರಭಾವ ಬೀರಲಿಲ್ಲ. ಹನ್ನೆರಡನೆಯ ಶತಮಾನದಲ್ಲಿನ ಗ್ರೀಕ್ ತತ್ವಜ್ಞಾನದ ಬಗೆಗಿನ ತಿಳಿವಳಿಕೆಯು ಭಾಗಶಃವಾಗಿದ್ದುದರಿಂದ, ಪಶ್ಚಿಮವು ಉಳಿದ ಅದರ ಸಾಕಷ್ಟನ್ನು ಕಂಡುಕೊಳ್ಳುವ ಆವಶ್ಯಕತೆಯನ್ನು ಪಂಡಿತರು ಮನಗಂಡರು, ಹೀಗಾಗಿ ಪ್ರಾಚೀನ ಜ್ಞಾನದ ಪೂರ್ಣ ಅರಿವು ಹೊಂದಲು ಕೌತುಕವು ಬೆಳೆಯಿತು. ಎಷ್ಟೋ ವೇಳೆ ತಿಳಿದಂತೆ ಆಗ ಸಂಪ್ರದಾಯನಿಷ್ಠೆಯ ನೊಗದ ಭಾರವು ಅಷ್ಟೊಂದು ತೀವ್ರವಾಗಿರಲಿಲ್ಲ; ವ್ಯಕ್ತಿಯೊಬ್ಬ ತನಗೆ ಬೇಕೆನಿಸಿದ ಗ್ರಂಥ ಬರೆಯುಬಹುದಾಗಿತ್ತು, ಪೂರ್ಣ ಚರ್ಚೆಯು ಬಳಿಕ ಅದರ ಮತಧರ್ಮವಿದ್ರೋಹಿ ಅಂಶಗಳನ್ನು ಹಿಂಪಡೆಯಬಹುದಾಗಿತ್ತು. ಅ ಕಾಲದ ಬಹುತೇಕ ತತ್ವಜ್ಞಾನಿಗಳು ಫ್ರೆಂಚರು; ಚಕ್ರಾಧಿಪತ್ಯದ ವಿರುದ್ಧ ತೂಕ ಪಡೆಯಲು ಫ್ರಾನ್ಸ್ ಚರ್ಚ್‌ಗೆ ಮುಖ್ಯವಾಗಿತ್ತು. ತಮ್ಮಲ್ಲಿ ಮತಧರ್ಮಶಾಸ್ತ್ರಸಂಬಂಧಿ ವಿದ್ರೋಹವುಂಟಾದರೆ ವಿದ್ವಾಂಸ ಧರ್ಮಬೋಧಕರು ಬಹುತೇಕ ರಾಜಕೀಯ ಸಂಪ್ರದಾಯವಾದಿಗಳಾಗಿದ್ದರು; ಇದರಿಂದ ಬ್ರೆಸಿಯದ ಆರ್ನಾಲ್ಡ್‌ನನ್ನು ವಿಚಿತ್ರ ಕೆಡುಕಿನಿಂದ ತುಂಬಿತ್ತು, ಅವನು ನಿಯಮಕ್ಕೆ ಅಪವಾದವೆನಿಸಿದ್ದ. ಅಧಿಕಾರಕ್ಕಾಗಿ ಚರ್ಚ್ ನಡೆಸಿದ ಹೋರಾಟದ ಉಪಭಾಗವಾಗಿದ್ದ ಹಿಂದಿನ ಸೂಕ್ಷ್ಮತರ್ಕವೆಲ್ಲವನ್ನೂ ರಾಜಕೀಯವಾಗಿ ವಿಶ್ಲೇಷಿಸಬಹುದು.

೦

೧೨
ಹದಿಮೂರನೆಯ ಶತಮಾನ

ಹದಿಮೂರನೆಯ ಶತಮಾನದಲ್ಲಿ ಮಧ್ಯಯುಗವು ಉತ್ತುಂಗ ಸ್ಥಿತಿಗೇರಿತು. ರೋಂ ಪತನಾನಂತರ ಕ್ರಮೇಣ ಒಡಂಬಡಿಸಿದ್ದ ಸಂಶ್ಲೇಷಣೆಯು ತನಗೆ ಸಾಧ್ಯವಾದ ಮಟ್ಟಿಗಿನ ಪರಿಪೂರ್ಣತೆಯನ್ನು ಸಾಧಿಸಿತು. ಹದಿನಾಲ್ಕನೆಯ ಶತಮಾನವು ಸಂಸ್ಥೆಗಳನ್ನು ಮತ್ತು ತಾತ್ವಿಕತೆಗಳನ್ನು ಕರಗಿಸಿದರೆ, ಹದಿನೈದನೆಯ ಶತಮಾನವು ಈಗಲೂ ನಾವು ಆಧುನಿಕವೆಂದು ತಿಳಿಯುವುದಕ್ಕೆ ನಾಂದಿ ಹಾಡಿತು. ಹದಿಮೂರನೆಯ ಶತಮಾನದ ಮಹನೀಯರು ನಿಜವಾಗಿ ದೊಡ್ಡವರು: ಮೂರನೆಯ ಇನ್ನೋಸೆಂಟ್, ಸಂತ ಫ್ರಾನ್ಸಿಸ್, ಎರಡನೆಯ ಫ್ರೆಡೆರಿಕ್ ಮತ್ತು ಥಾಮಸ್ ಆಕ್ವಿನಾಸ್ ಮುಂತಾದವರು, ವಿವಿಧ ರೀತಿಗಳಲ್ಲಿ, ತಮ್ಮ ಕ್ಷೇತ್ರಗಳ ಅತ್ಯಂತ ಶ್ರೇಷ್ಠ ಪ್ರತಿನಿಧಿಗಳು. ಅಲ್ಲದೆ, ದೊಡ್ಡ ಹೆಸರುಗಳೊಂದಿಗೆ ನಿರ್ದಿಷ್ಟವಾಗಿ ಸೇರದ ಅನೇಕ ದೊಡ್ಡ ಸಾಧನೆಗಳೂ ಇದ್ದವು: ಫ್ರಾನ್ಸ್‌ನ ಗಾಥಿಕ್ ಕ್ಯಾಥಿಡ್ರಲ್‌ಗಳು, ಶರ್ಲಮೇನ್‌ನ ರೊಮ್ಯಾಂಟಿಕ್ ಸಾಹಿತ್ಯ, ಆರ್ಥರ್ ಮತ್ತು ನೀಬುಲಿಂಜೆನ್, ಮ್ಯಾಗ್ನಾ ಕಾರ್ಟಾ ಮೂಲಕ ಸಾಂವಿಧಾನಿಕ ಸರ್ಕಾರದ ಮೊದಲ ಹೆಜ್ಜೆಗಳು, ಮತ್ತು ಪ್ರತಿನಿಧಿ ಸಭೆ (ಹೌಸ್ ಆಫ್ ಕಾಮನ್ಸ್). ನಮಗೆ ಅತ್ಯಂತ ನೇರವಾಗಿ ಸಂಬಂಧಿಸಿದ ವಿಷಯವೆಂದರೆ ಸೂಕ್ಷ್ಮತರ್ಕ ತಾತ್ವಿಕತೆ, ಅದರಲ್ಲೂ ಆಕ್ವಿನಾಸ್ ಆರಂಭಿಸಿದ ಬಗೆಯದು, ಆದರೆ ನಾನು ಈ ವಿಷಯವನ್ನು ಮುಂದಿನ ಆಧ್ಯಾಯಕ್ಕೆ ಮೀಸಲಿಡುತ್ತೇನೆ; ಆ ಕಾಲದ ಮನೋಪರಿಸರವನ್ನು ರೂಪಿಸುವಲ್ಲಿ ಮುಖ್ಯ ಕಾರಣಗಳಾದ ಘಟನೆಗಳ ರೂಪರೇಷೆಗಳನ್ನು ಕೊಡುವ ಪ್ರಯತ್ನವನ್ನಿಲ್ಲಿ ಮಾಡುತ್ತೇನೆ.

ಈ ಶತಮಾನದ ಮಧ್ಯಭಾಗದ ಕೇಂದ್ರವ್ಯಕ್ತಿಯೆಂದರೆ ಪೋಪ್ ಮೂರನೆಯ ಇನ್ನೋಸೆಂಟ್ (೧೧೯೮–೧೨೧೬). ಅವನೊಬ್ಬ ಕುಶಾಗ್ರ ರಾಜಕಾರಣಿ, ಅಪರಿಮಿತ ವೀರ್ಯವಂತಿಕೆಯ ವ್ಯಕ್ತಿ, ಪೋಪ್‌ನ ಗರಿಷ್ಠ ಆಧಿಕಾರದ ಪರವಾಗಿದ್ದವನು, ಆದರೆ ಅವನಲ್ಲಿ ಕ್ರೈಸ್ತ ವಿನೀತತೆಯಿರಲಿಲ್ಲ. ಅವನ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ಅವನು ಪಠ್ಯದ ಮೂಲಕ ಬೋಧಿಸಿದ: 'ನೋಡು, ಇಂದು ನಾನು ನಿನ್ನನ್ನು

ರಾಷ್ಟ್ರಗಳ ಮತ್ತು ಸಾಮ್ರಾಜ್ಯಗಳ ಮೇಲೆ ನಿಲ್ಲಿಸಿದ್ದೇನೆ, ಕೀಳಲು ಮತ್ತು ಒಡೆಯಲು, ನಾಶಪಡಿಸಲು ಮತ್ತು ಕಿತ್ತೆಸೆಯಲು, ಕಟ್ಟಲು ಮತ್ತು ನಾಟಿಮಾಡಲು.' ಅವನು ತನ್ನನ್ನು 'ರಾಜರ ರಾಜ, ಪ್ರಭುಗಳ ಪ್ರಭು, ಮೆಲ್ಕಿಝೆಡೆಕ್ ವ್ಯವಸ್ಥೆಯಂತೆ ನಾನು ಎಂದೆಂದೂ ಪುರೋಹಿತ, ಪುರೋಹಿತ' ಎಂದು ಬಣ್ಣಿಸಿಕೊಂಡ. ತನ್ನ ಈ ದೃಷ್ಟಿಕೋನವನ್ನು ಕಾರ್ಯರೂಪಕ್ಕೆ ತರಲು ಅವನು ಸದಾ ಅನುಕೂಲಕರ ಪರಿಸ್ಥಿತಿಯನ್ನು ಬಳಸಿಕೊಂಡ. ಇನ್ನೋಸೆಂಟ್‌ನ ಪ್ರತಿಷ್ಠಾಪನೆಯ ಹೊತ್ತಿನಲ್ಲಿ ಕೇವಲ ಮೂರು ವರ್ಷ ವಯಸ್ಸಿನ ಹೊಸ ರಾಜ ಫ್ರೆಡೆರಿಕ್, ನಾರ್ಮನ್ ರಾಜರ ಉತ್ತರಾಧಿಕಾರಣಿಯಾದ ಕಾನ್‌ಸ್ಟಾನ್ಸ್ ಅನ್ನು ಮದುವೆಯಾಗಿದ್ದ ಚಕ್ರವರ್ತಿ ಆರನೆಯ ಹೆನ್ರಿ (ಮರಣ, ೧೧೯೭) ಸಿಸಿಲಿಯನ್ನು ವಶಪಡಿಸಿಕೊಂಡಿದ್ದ. ಸಾಮ್ರಾಜ್ಯವು ಪ್ರಕ್ಷುಬ್ಧವಾಗಿತ್ತು, ಕಾನ್‌ಸ್ಟಾನ್ಸ್‌ಗೆ ಪೋಪ್ ನೆರವಿನ ಆವಶ್ಯಕತೆಯಿತ್ತು. ಅವನು ಅವಳನ್ನು ಫ್ರೆಡೆರಿಕ್‌ನ ಪೋಷಕನನ್ನಾಗಿಸಿದ, ಅವಳು ಪೋಪ್‌ನ ಸಾರ್ವಭೌಮತ್ವವನ್ನು ಮನ್ನಿಸಿ ತನ್ನ ಮಗನಿಗೆ ಸಿಸಿಲಿಯ ಮೇಲಿನ ಹಕ್ಕನ್ನು ಅವನು ಮನ್ನಿಸುವಂತೆ ಮಾಡಿದಳು. ಪೋರ್ಚುಗಲ್ ಮತ್ತು ಆರಗಾನ್ ಕೂಡ ಅದೇ ಬಗೆಯ ಮನ್ನಣೆ ನೀಡಿದವು. ಇಂಗ್ಲಂಡ್‌ನಲ್ಲಿ ರಾಜ ಜಾನ್ ತೀವ್ರ ಪ್ರತಿರೋಧದ ಬಳಿಕ ತನ್ನ ಸಾಮ್ರಾಜ್ಯವನ್ನು ಇನ್ನೋಸೆಂಟ್‌ಗೆ ಅಧೀನಗೊಳಿಸಿ ಅವನನ್ನು ತನ್ನ ಕ್ಷೇತ್ರದ ಪೋಪ್ ಆಗಿ ಬರಮಾಡಿಕೊಂಡ.

ನಾಲ್ಕನೆಯ ಮತಧಾರ್ಮಿಕ ಯುದ್ಧದ ವಿಷಯದಲ್ಲಿ ಅವನೊಡನೆ ವೆನಿಸ್ ಜನರು ಸ್ವಲ್ಪ ಮಟ್ಟಿಗೆ ಅನುಕೂಲಕರವಾಗಿದ್ದರು. ಶಿಲುಬೆ ಸೈನಿಕರು ವೆನಿಸ್‌ನಲ್ಲಿ ಸೇರಬೇಕಾಗಿತ್ತು, ಆದರೆ ಸಾಕಷ್ಟು ಸಂಖ್ಯೆಯ ಹಡಗುಗಳನ್ನು ಪಡೆಯುವುದರಲ್ಲಿ ತೊಂದರೆಗಳಿದ್ದವು. ವೆನಿಸ್‌ರ ಹೊರತಾಗಿ ಬೇರಾರಲ್ಲೂ ಸಾಕಷ್ಟು ಸಂಖ್ಯೆಯ ಹಡಗುಗಳಿರಲಿಲ್ಲ, ಅವರು (ಶುದ್ಧ ವ್ಯಾಪಾರೀ ದೃಷ್ಟಿಯಿಂದ) ಜೆರೂಸಲೆಂಗಿಂತ ಕಾನ್‌ಸ್ಟಾಂಟಿನೋಪಲ್ ಅನ್ನು ಗೆಲ್ಲುವುದು ಒಳಿತೆಂದು ಸಲಹೆಯಿತ್ತರು; ಏನೇ ಆಗಲಿ ಅದು ಉಪಯುಕ್ತ ಮೆಟ್ಟಿಲಾಗಿತ್ತು, ಅಲ್ಲದೆ ಪೂರ್ವ ಸಾಮ್ರಾಜ್ಯವು ಮತಧಾರ್ಮಿಕ ಸೈನಿಕರ ಜೊತೆ ಸ್ನೇಹಪರವಾಗಿರಲಿಲ್ಲ. ಹೀಗಾಗಿ ಅವರಿಗೆ ವೆನಿಸ್‌ನ ಸಲಹೆಗೆ ಒಪ್ಪಿಕೊಳ್ಳುವುದು ಒಳಿತಾಗಿ ಕಂಡಿತು. ಕಾನ್‌ಸ್ಟಾಂಟಿನೋಪಲ್ ಅನ್ನು ಗೆದ್ದರು, ಒಬ್ಬ ಲ್ಯಾಟಿನ್ ಚಕ್ರವರ್ತಿಯನ್ನು ಸ್ಥಾಪಿಸಿದರು. ಮೊದಲಿಗೆ ಇನ್ನೋಸೆಂಟ್‌ಗೆ ಇರುಸುಮುರಿಸುಂಟಾಯಿತಾದರೂ, ಇದರಿಂದ ಪೂರ್ವ-ಪಶ್ಚಿಮ ಚರ್ಚ್‌ಗಳನ್ನು ಒಂದು ಮಾಡುವುದು ಸಾಧ್ಯವಾದೀತೆಂದು ಅವನು ಯೋಚಿಸಿದ. (ಈ ನಿರೀಕ್ಷೆಯು ಹುಸಿಯಾಯಿತು.) ಈ ಸಂದರ್ಭದ ಹೊರತಾಗಿ, ಮೂರನೆಯ ಇನ್ನೋಸೆಂಟ್ ಜೊತೆಗೆ ಯಾರೇ ಆಗಲೀ ಯಾವುದೇ ವಿಷಯಕ್ಕಾಗಲೀ ಹೊಂದಿಕೊಂಡಿದ್ದುದು ನನಗೆ ಗೊತ್ತಿಲ್ಲ. ಆಲ್ಬಿಜೆನ್ಸಸ್ ವಿರುದ್ಧ ದೊಡ್ಡ ಮತಧಾರ್ಮಿಕ ಯುದ್ಧಕ್ಕೆ ಅವನು

ಕರೆಕೊಟ್ಟ. ಅದರಿಂದ ದಕ್ಷಿಣ ಫ್ರಾನ್ಸ್‌ನಲ್ಲಿ ಪಾಷಂಡಿತನ, ಸುಖ, ಸಮೃದ್ಧಿ ಮತ್ತು ಸಂಸ್ಕೃತಿಗಳೆಲ್ಲ ಮೂಲೋತ್ಪಾಟನೆಗೊಂಡವು. ಮತಧಾರ್ಮಿಕ ಯುದ್ಧದ ವಿಷಯದಲ್ಲಿ ಉಗುರು ಬೆಚ್ಚಗಿದ್ದ ಟೂಲೌಸ್‌ನ ಕೌಂಟ್ ರೇಮಂಡ್‌ನನ್ನು ಅವನು ಪದಚ್ಯುತಿಗೊಳಿಸಿ, ಆಲ್ಬಿಜೆನ್ಸಸ್‌ನ ಬಹುತೇಕ ಪ್ರದೇಶಗಳನ್ನು ಅದರ ನಾಯಕನಾದ ಸಂಸತ್‌ನ ಪಿತನ ಪಿತನಾದ ಸಿಮನ್ ಡಿ ಮಾಂಟ್‌ಫೋರ್ಟ್‌ಗಾಗಿ ಗೆದ್ದುಕೊಟ್ಟ. ಚಕ್ರವರ್ತಿ ಓಟ್ಟೋ ಜೊತೆ ಜಗಳವಾಡಿ, ಅವನನ್ನು ಪದಚ್ಯುತಿಗೊಳಿಸಲು ಜರ್ಮನ್‌ರಿಗೆ ಕರೆಕೊಟ್ಟ. ಅವರು ಅಂತೆಯೇ ಮಾಡಿ, ಅವನ ಸಲಹೆಯಂತೆ ಅವನ ಜಾಗದಲ್ಲಿ ಕೂರಲು ಆಗತಾನೇ ವಯಸ್ಸಿಗೆ ಬಂದಿದ್ದ ಎರಡನೇ ಫ್ರೆಡೆರಿಕ್‌ನನ್ನು ಆಯ್ಕೆಮಾಡಿದರು. ಫ್ರೆಡೆರಿಕ್‌ನ ಸಹಾಯಕ್ಕಾಗಿ ಅವನು ಭಯಾನಕ ಪ್ರತಿಫಲವನ್ನು ಪಡೆದ – ಆದರೆ ಇದನ್ನು ಆದಷ್ಟು ಬೇಗ ಕೊನೆಗೊಳಿಸಲು ಫ್ರೆಡೆರಿಕ್ ನಿರ್ಧರಿಸಿದ.

ಕಿಂಚಿತ್ತಾದರೂ ಪಾವಿತ್ರ್ಯವಿಲ್ಲದ ಮೊದಲ ದೊಡ್ಡ ಪೋಪ್ ಎಂದರೆ ಮೂರನೆಯ ಇನ್ನೋಸೆಂಟ್. ಚರ್ಚ್‌ನ ಸುಧಾರಣೆಯ ಶ್ರೇಣಿವ್ಯವಸ್ಥೆಯು ತನ್ನ ನೈತಿಕ ಘನತೆಗೆ ಕುಂದುಂಟಾಗದಂತಿರಲು ಸಹಾಯಕವಾಯಿತು, ಹೀಗಾಗಿ ಇನ್ನು ಮುಂದೆ ತಾನು ಪರಿಶುದ್ಧವಾಗಿರುವ ತೊಂದರೆಯನ್ನೇನೂ ತೆಗೆದುಕೊಳ್ಳಬಾರದೆಂಬುದರ ಬಗ್ಗೆ ಮನದಟ್ಟು ಮಾಡಿಕೊಟ್ಟಿತು. ಅವನ ಕಾಲದಿಂದಾಚೆಗೆ ಅಧಿಕಾರದ ಪ್ರೇರಣೆಯು ಪೋಪ್‌ತನವನ್ನು ಹೆಚ್ಚು ಹೆಚ್ಚಾಗಿ ಎದ್ದು ಕಾಣುವಂತಾಗಿ, ಅವನ ಕಾಲದಲ್ಲಿಯೇ ಕೆಲವು ಮತಧಾರ್ಮಿಕರು ಅವನನ್ನು ವಿರೋಧಿಸುವಂತಾಯಿತು. ಕ್ಯೂರಿಯದ ಅಧಿಕಾರವನ್ನು ಹೆಚ್ಚಿಸಲು ಅವನು ಪಾದ್ರಿನಿಯಮಗಳನ್ನು ಕ್ರೋಡೀಕರಿಸಿದ. ವಾಲ್ಟರ್ ವಾನ್ ದ ವೋಜೆಲ್‌ವೀಡ್ ಈ ಕ್ರೋಡೀಕರಣವನ್ನು 'ನರಕವು ಕೊಟ್ಟ ಕಡುಗಪ್ಪು ಗ್ರಂಥ' ಎಂದು ಕರೆದ. ಪೋಪ್‌ರ ಮುಂದೆ ಗೆಲ್ಲಬೇಕಾದ ಇನ್ನೂ ಮಹತ್ವದ ಗುರಿಗಳಿದ್ದರೂ, ಅದು ಮುಂದೆ ಕುಂಠಿತಗೊಳ್ಳುವ ಪರಿಯು ಈಗಾಗಲೇ ಮುಂಗಂಡಿತು.

ಮೂರನೆಯ ಇನ್ನೋಸೆಂಟ್‌ನ ಪೋಷಣೆಯಲ್ಲಿದ್ದ ಎರಡನೆಯ ಫ್ರೆಡೆರಿಕ್ ೧೨೧೨ ರಲ್ಲಿ ಜರ್ಮನಿಗೆ ಹೋದ, ಪೋಪ್‌ನ ನೆರವಿನಿಂದ ಓಟ್ಟೋನ ಸ್ಥಾನವನ್ನು ಆಕ್ರಮಿಸಲು ಆಯ್ಕೆಯಾದ. ಪೋಪ್ ವಿರುದ್ಧವಾಗಿ ಎಂತಹ ಶತ್ರುವನ್ನು ತಾನು ಪೊರೆದಿದ್ದೆ ಎಂಬುದನ್ನು ಕಾಣುವ ತನಕ ಇನ್ನೋಸೆಂಟ್ ಬದುಕಲಿಲ್ಲ.

ಇತಿಹಾಸದದಲ್ಲಿಯೇ ಅತ್ಯಂತ ಗಣನೀಯ ದೊರೆಗಳಲ್ಲಿ ಒಬ್ಬನಾಗಿದ್ದ ಫ್ರೆಡೆರಿಕ್ ತನ್ನ ಬಾಲ್ಯ ಮತ್ತು ಯೌವನಗಳನ್ನು ತುಂಬ ಸಂಕಷ್ಟಕರ ಪರಿಸ್ಥಿತಿಗಳಲ್ಲಿ ಕಳೆದಿದ್ದ. ಅವನ ತಂದೆ ಆರನೆಯ ಹೆನ್ರಿ (ಬಾರ್ಬರೋಸನ ಮಗ) ಸಿಸಿಲಿಯ ನಾರ್ಮನ್‌ರನ್ನು ಸೋಲಿಸಿದ್ದ, ಸಾಮ್ರಾಜ್ಯದ ಉತ್ತರಾಧಿಕಾರಿಣಿಯಾದ ಕಾನ್‌ಸ್ಟಾನ್ಸ್ ಅನ್ನು ಮದುವೆಯಾಗಿದ್ದ. ಅವನು ಜರ್ಮನ್ ರಕ್ಷಕದಳವೊಂದನ್ನು ಸ್ಥಾಪಿಸಿದ್ದ, ಅದನ್ನು

ಸಿಸಿಲಿಯನ್‌ರು ಇಷ್ಟಪಡಲಿಲ್ಲ; ಆದರೆ ಫ್ರೆಡೆರಿಕ್ ಇನ್ನೂ ಎರಡು ವರ್ಷದವನಾಗಿದ್ದಾಗ ೧೧೯೭ ರಲ್ಲಿ ಅವನು ಸತ್ತ. ಆನಂತರ ಕಾನ್‌ಸ್ಟಾನ್ಸ್ ಜರ್ಮನ್‌ರಿಗೆ ವಿರುದ್ಧವಾದಳು, ಅವರಿಲ್ಲದೆಯೇ ಪೋಪ್‌ನ ನೆರವಿನಿಂದ ಆಳಲು ಪ್ರಯತ್ನಪಟ್ಟಳು. ಇದರಿಂದ ಜರ್ಮನರು ಅಸಂತುಷ್ಟರಾದರು, ಓಟ್ಟೋ ಸಿಸಿಲಿಯನ್ನು ಗೆಲ್ಲಲು ಪ್ರಯತ್ನಿಸಿದ; ಇದೇ ಕಾರಣವಾಗಿ ಅವನು ಪೋಪ್‌ನೊಡನೆ ಜಗಳ ಕಾದ. ಫ್ರೆಡೆರಿಕ್ ತನ್ನ ಬಾಲ್ಯವನ್ನು ಕಳೆದಿದ್ದ ಪಾಲೆರ್ಮೋ ಇತರ ತೊಂದರೆಗಳಿಗೆ ಸಿಲುಕಿತ್ತು. ಅಲ್ಲಿ ಮುಸ್ಲಿಂ ದಂಗೆಗಳೆದ್ದುವು; ಪೀಸಾದವರೂ ಜಿನೋಈದವರೂ ಒಬ್ಬರೊಡನೊಬ್ಬರು ಮತ್ತು ಇತರರೂ ದ್ವೀಪದ ಒಡೆತನಕ್ಕಾಗಿ ಹೊಡೆದಾಡಿಕೊಂಡರು; ವಿಶ್ವಾಸಘಾತುಕತನಕ್ಕೆ ಯಾರು ಹೆಚ್ಚು ಲಂಚವೀಯುತ್ತಿದ್ದರೋ ಸಿಸಿಲಿಯ ಮುಖ್ಯ ಜನರು ಅವರ ಕಡೆಗೆ ಸದಾ ತಮ್ಮ ಪಕ್ಷವನ್ನು ಬದಲಿಸುತ್ತಲೇ ಇದ್ದರು. ಆದರೆ ಸಾಂಸ್ಕೃತಿಕವಾಗಿ ಸಿಸಿಲಿಯು ಅನೇಕ ಅನುಕೂಲಗಳನ್ನು ಪಡೆದಿತ್ತು. ಮುಸ್ಲಿಂ, ಬೈಝಾಂಟೈನ್, ಇಟಾಲಿಯನ್, ಮತ್ತು ಜರ್ಮನ್ ನಾಗರಿಕತೆಗಳು ಸೇರಿ ಮಿಕ್ಕೆಲ್ಲ ಜಾಗಗಳಿಗಿಂತ ಹೆಚ್ಚಾಗಿ ಅಲ್ಲಿ ಮಿಳಿತಗೊಂಡವು. ಗ್ರೀಕ್ ಮತ್ತು ಅರೇಬಿಕ್‌ಗಳು ಸಿಸಿಲಿಯಲ್ಲಿ ಇನ್ನೂ ಜೀವಂತ ಭಾಷೆಗಳಾಗಿದ್ದವು. ಫ್ರೆಡೆರಿಕ್ ಆರು ಭಾಷೆಗಳನ್ನು ಸಲೀಸಾಗಿ ಮಾತನಾಡಲು ಕಲಿತ, ಎಲ್ಲ ಭಾಷೆಗಳಲ್ಲೂ ವಾಕ್ಚತುರನೆನಿಸಿದ. ಅವನಿಗೆ ಅರೇಬಿಕ್ ತತ್ತ್ವಜ್ಞಾನದ ನಿಕಟ ಪರಿಚಯವಿತ್ತು, ಮಹಮ್ಮದೀಯರ ಜೊತೆ ಸ್ನೇಹಪೂರ್ಣ ಸಂಬಂಧ ಹೊಂದಿದ್ದ, ಇದು ಮಡಿವಂತ ಕ್ರೈಸ್ತರನ್ನು ಕೆರಳಿಸಿತು. ಅವನೊಬ್ಬ ಹೋಹೆನ್‌ಸ್ಟಾಫೆನ್, ಜರ್ಮನಿಯಲ್ಲಿ ಜರ್ಮನ್‌ನೆಂದು ಪರಿಗಣಿತನಾಗಬಹುದಾಗಿತ್ತು. ಆದರೆ ಸಂಸ್ಕೃತಿ ಮತ್ತು ಮನೋಭಾವಗಳಲ್ಲಿ ಅವನೊಬ್ಬ ಬೈಝಾಂಟೈನ್ ಮತ್ತು ಅರೇಬಿಕ್ ಲೇಪವಿದ್ದ ಇಟಾಲಿಯನ್. ಅವನ ಸಮಕಾಲೀನರು ಅವನನ್ನು ಆಶ್ಚರ್ಯದಿಂದ ನೋಡನೋಡುತ್ತ ಕ್ರಮೇಣ ಭಯಕ್ಕೆ ತಿರುಗಿದರು; ಅವನನ್ನು 'ಜಗತ್ತಿನ ಅದ್ಭುತ ಮತ್ತು ಮಹಾ ಪರಿವರ್ತನಕಾರ' ಎಂದು ಬಣ್ಣಿಸಿದರು. ಇನ್ನೂ ಬದುಕಿರುವಾಗಲೇ, ಅವನ ಬಗ್ಗೆ ದಂತಕತೆಗಳು ಹುಟ್ಟಿಕೊಂಡವು. ಅವನು 'ಡೆ ಟ್ರೈಬಸ್ ಇಂಪೋಸ್ಟೋರಿಬಸ್' ಎಂಬ ಗ್ರಂಥದ ಲೇಖಕ ಎನ್ನುತ್ತಾರೆ – ಮೂವರು ಆಷಾಢಭೂತಿಗಳೆಂದರೆ ಮೋಸೆಸ್, ಕ್ರಿಸ್ತ ಮತ್ತು ಮಹಮದ್. ಎಂದೂ ಇರದಿದ್ದ ಈ ಪುಸ್ತಕವು ಬರಬರುತ್ತ ಚರ್ಚ್‌ನ ಶತ್ರುಗಳಾಗಿದ್ದವರ ಅನೇಕರ ಹೆಸರಿನೊಡನೆ ತಳುಕು ಹಾಕಿಕೊಳ್ಳುತ್ತ ಹೋಯಿತು, ಅವರಲ್ಲಿ ಕೊನೆಯವನು ಸ್ಪಿನೋಜ಼.

'ಗುಯೆಲ್ಫ್' ಮತ್ತು 'ಘಿಬ್ಬಲೀನ್' ಎಂಬ ಶಬ್ದಗಳು ಚಕ್ರವರ್ತಿ ಓಟ್ಟೋ ಜೊತೆಗಿನ ಫ್ರೆಡೆರಿಕ್‌ನ ಸಂಘರ್ಷದ ಕಾಲದಿಂದ ಬಳಕೆಗೆ ಬಂದವು. ಅವು 'ವೆಲ್ಫ್' ಮತ್ತು 'ವೈಬ್ಲಿನ್‌ಜೆನ್'ಗಳ ಅಪಭ್ರಂಶರೂಪಗಳು, ಆ ಇಬ್ಬರೂ ಹೆಸರಾಂತ ಹೋರಾಟಗಾರರು. (ಒಬ್ಬನ ಸೋದರಳಿಯನು ಹಿಂದೆ ಬ್ರಿಟಿಶ್ ರಾಜ ಕುಟುಂಬಸ್ಥನಾಗಿದ್ದ.)

ಮೂರನೆಯ ಇನ್ನೋಸೆಂಟ್ ೧೨೧೬ ರಲ್ಲಿ ಮರಣಹೊಂದಿದ; ಫ್ರೆಡೆರಿಕ್ ಸೋಲಿಸಿದ್ದ ಓಟ್ಟೋ ಸತ್ತದ್ದು ೧೨೧೮ ರಲ್ಲಿ. ಹೊಸ ಪೋಪ್ ಆದ ಮೂರನೆಯ ಆನರಿಯಸ್ ಮೊದಮೊದಲು ಫ್ರೆಡೆರಿಕ್ ಜೊತೆ ಸೌಹಾರ್ದದಿಂದಿದ್ದನಾದರೂ ಬಹು ಬೇಗ ತೊಂದರೆಗಳು ಎದುರಾದವು. ಮೊದಲನೆಯದಾಗಿ, ಫ್ರೆಡೆರಿಕ್ ಮತಧಾರ್ಮಿಕ ಯುದ್ಧ ಮಾಡಲು ನಿರಾಕರಿಸಿದ; ಆನಂತರ ಅವನು ಲಂಬಾರ್ಡ್ ನಗರಗಳೊಡನೆ ತೊಂದರೆಗೆ ಸಿಲುಕಿದ, ಅವು ೧೨೨೬ ರಲ್ಲಿ ಇಪ್ಪತ್ತೈದು ವರ್ಷಗಳ ಕಾಲ ರಕ್ಷಣಾತ್ಮಕ ಮತ್ತು ಆಕ್ರಾಮಕ ಒಪ್ಪಂದಕ್ಕೆ ಬಂದವು. ಅವರು ಜರ್ಮನ್‌ರನ್ನು ದ್ವೇಷಿಸುತ್ತಿದ್ದರು; ಅವರ ವಿರುದ್ಧವಾದ ಏಳು ಪದ್ಯಗಳ ಕವನವೊಂದ್ನು ಒಬ್ಬ ಕವಿ ರಚಿಸಿದ. 'ಜರ್ಮನ್ ಜನರನ್ನು ಪ್ರೀತಿಸಬೇಡ; ಈ ಹುಚ್ಚು ನಾಯಿಗಳು ನಿನ್ನಿಂದ ಬಹು ದೂರವಿರಲಿ.' ಇದು ಲಂಬಾರ್ಡಿಯಲ್ಲಿನ ಸಾಮಾನ್ಯ ಮನೋಭಾವವನ್ನು ತೋರಿಸುವಂತಿವೆ. ನಗರಗಳ ಜೊತೆ ವ್ಯವಹರಿಸಲು ಫ್ರೆಡೆರಿಕ್ ಜರ್ಮನಿಯಲ್ಲಿ ಉಳಿದಿರಲು ಇಚ್ಛೆಪಟ್ಟ, ಆದರೆ ೧೨೨೭ ರಲ್ಲಿ ಆನರಿಯಸ್ ಮರಣಹೊಂದಿದ. ಅವನ ನಂತರ ಬಂದವನು ಒಂಬತ್ತನೆಯ ಜಾರ್ಜ್, ಅವನೊಬ್ಬ ಬೆಂಕಿಯಂತಿದ್ದ ಸನ್ಯಾಸಿ, ಅವನೂ ಸಂತ ಫ್ರಾನ್ಸಿಸ್ ಪರಸ್ಪರ ಪ್ರೀತಿಸುತ್ತಿದ್ದರು. (ಸಂತ ಫ್ರಾನ್ಸಿಸ್ ಸತ್ತ ಎರಡು ವರ್ಷಗಳ ತರುವಾಯು ಅವನಿಗೆ ಅವನು ಸಂತಪದವಿಗೇರಿಸಿದ.) ಗ್ರೆಗರಿಗೆ ಮತಧಾರ್ಮಿಕ ಯುದ್ಧದಷ್ಟು ಮುಖ್ಯವಾದುದು ಬೇರಾವುದೂ ಇಲ್ಲವೆಂಬ ಭಾವನೆಯಿತ್ತು, ಅದನ್ನು ಕೈಗೊಳ್ಳದಿದ್ದುದಕ್ಕಾಗಿ ಫ್ರೆಡೆರಿಕ್‌ಗೆ ಬಹಿಷ್ಕಾರ ಹಾಕಿದ. ಜೆರೂಸಲೆಂನ ರಾಜನ ಮಗಳು ಮತ್ತು ಉತ್ತರಾಧಿಕಾರಿಣಿಯನ್ನು ಮದುವೆಯಾಗಿದ್ದ ಫ್ರೆಡೆರಿಕ್ ಸಾಧ್ಯವಾದ ಕಾಲದಲ್ಲಿ ಹಾಗೆ ಮಾಡಲು ಸಿದ್ಧನಾಗಿದ್ದ, ಮತ್ತು ತನ್ನನ್ನವನು ಜೆರೂಸಲೆಂನ ರಾಜನೆಂದು ಕರೆದುಕೊಳ್ಳುತ್ತಿದ್ದ. ೧೨೨೮ ರಲ್ಲಿ ಇನ್ನೂ ಬಹಿಷ್ಕೃತನಾಗಿರುವಾಗಲೇ ಅವನು ಜರ್ಮನಿಗೆ ಹೋದ; ಮೊದಲೇ ಈ ಕೆಲಸ ಮಾಡದ್ದರಿಂದ ಇದು ಗ್ರೆಗರಿಗೆ ಮತ್ತಷ್ಟು ಕೋಪ ತಂದಿತು, ಪೋಪ್‌ನಿಂದಲೇ ಬಹಿಷ್ಕಾರಕ್ಕೊಳಗಾದವನ ನೇತೃತ್ವದಲ್ಲಿ ಮತಧಾರ್ಮಿಕ ಯುದ್ಧ ಹೇಗೆ ತಾನೇ ನಡೆದೀತು? ಪಾಲೆಸ್ಟೈನ್‌ಗೆ ಬಂದ ಫ್ರೆಡೆರಿಕ್ ಮಹಮ್ಮದೀಯರ ಜೊತೆ ಸ್ನೇಹ ಬೆಳೆಸಿ, ಕ್ರೈಸ್ತರು ಯಾವುದೇ ರಕ್ಷಣಾತ್ಮಕ ಮೌಲ್ಯವಿರದ ಜೆರೂಸಲೆಂಗೆ ಪ್ರಾಮುಖ್ಯವನ್ನು ನೀಡಿದ್ದಾರೆಂದು ಹೇಳಿ ಶಾಂತಿಯಿಂದಲೇ ತನಗೆ ನಗರವನ್ನು ವಹಿಸಿಕೊಡುವಂತೆ ಮಾಡಿಕೊಂಡ. ಇದರಿಂದ ಪೋಪ್ ಮತ್ತಷ್ಟು ಕ್ರುದ್ಧನಾದ; ನಿಷ್ಠಾಹೀನನ ಜೊತೆ ಹೋರಾಡಬೇಕೇ ಹೊರತು ಅವನೊಡನೆ ಸಂಧಾನ ಮಾಡಿಕೊಳ್ಳಕೂಡದು ಎಂದು ಯೋಚಿಸಿದ. ಆದರೆ ಫ್ರೆಡೆರಿಕ್‌ಗೆ ಜೆರೂಸಲೇಂನಲ್ಲಿ ವಿಧ್ಯುಕ್ತವಾಗಿ ಕಿರೀಟಧಾರಣೆಯಾಗಿತ್ತು, ಅವನ ಯಶಸ್ಸನ್ನು ಯಾರೂ ನಿರಾಕರಿಸುವಂತಿರಲಿಲ್ಲ. ಪೋಪ್‌ಮತ್ತು ಚಕ್ರವರ್ತಿಗಳ ನಡುವೆ ಮತ್ತೆ ೧೨೩೦ ರಲ್ಲಿ ಶಾಂತಿ ನೆಲೆಸಿತು.

ಆನಂತರದ ಸ್ವಲ್ಪ ಕಾಲದ ಶಾಂತಿಯ ಅವಧಿಯಲ್ಲಿ ಚಕ್ರವರ್ತಿಯು ಸಿಸಿಲಿಯ ವ್ಯವಹಾರಗಳ ಕಡೆಗೆ ಗಮನವೀಯತೊಡಗಿದ, ತನ್ನ ಪ್ರಧಾನಮಂತ್ರಿ ಪಿಯೆತ್ರೋ ಡೆಲ್ಲ ವೀಗ್ನಾನ ಸಹಾಯದಿಂದ ಅವನು ರೋಮನ್ ಕಾನೂನಿನಿಂದ ರೂಪಿಸಿದ ಹೊಸ ಕಾನೂನುಸಂಹಿತೆಯನ್ನು ಜಾರಿಗೊಳಿಸಿ, ತನ್ನ ಆಧಿಪತ್ಯದ ದಕ್ಷಿಣ ಭಾಗದಲ್ಲಿ ಹೆಚ್ಚಿನ ನಾಗರಿಕತೆಯನ್ನು ತೋರಿಸಿದ; ಗ್ರೀಕ್ ಭಾಷಿಕ ಪ್ರಜೆಗಳ ಅನುಕೂಲಕ್ಕಾಗಿ ಈ ಕಾನೂನುಸಂಹಿತೆಯನ್ನು ತಕ್ಷಣವೇ ಗ್ರೀಕ್‌ಗೆ ಅನುವಾದಿಸಲಾಯಿತು. ಅವನು ನೇಪಲ್ಸ್‌ನಲ್ಲಿ ಪ್ರಮುಖ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ. ಪಶ್ಚಿಮದಲ್ಲಿ ಅನೇಕ ಶತಮಾನಗಳಿಂದ ಇರದಿದ್ದ ಚಿನ್ನದ ನಾಣ್ಯಗಳನ್ನು 'ಅಗಸ್ಟಲ್' ಎಂಬ ಹೆಸರಿನಿಂದ ಹೊಸತಾಗಿ ಟಂಕಿಸಿದ. ಸ್ವತಂತ್ರ ವ್ಯಾಪಾರವನ್ನು ಜಾರಿ ಮಾಡಿ ಆಂತರಿಕ ಸುಂಕಗಳನ್ನು ರದ್ದು ಮಾಡಿದ. ನಗರಗಳ ಚುನಾಯಿತ ಪ್ರತಿನಿಧಿಗಳನ್ನವನು ತನ್ನ ಪರಿಷತ್ತಿಗೂ ಆಹ್ವಾನಿಸಿದ, ಆದರೆ ಅದಕ್ಕಿದ್ದುದು ಕೇವಲ ಸಲಹೆಯೀಯುವ ಅಧಿಕಾರ ಮಾತ್ರ.

ಆದರೆ ಈ ಶಾಂತಿಪರ್ವವು ಉಳಿದಿದ್ದುದು ಮತ್ತೆ ಫ್ರೆಡೆರಿಕ್ ಲಂಬಾರ್ಡ್ ಒಕ್ಕೂಟದೊಡನೆ ೧೨೩೭ ರಲ್ಲಿ ಕೈಜೋಡಿಸುವವರೆಗೆ ಮಾತ್ರ. ಪೋಪ್ ಅವರೊಡನೆ ತನ್ನ ಪರಿವಾರವನ್ನೆಲ್ಲ ತೊಡಗಿಸಿ ಮತ್ತೆ ಚಕ್ರವರ್ತಿಯನ್ನು ಬಹಿಷ್ಕರಿಸಿದ. ಈ ಹೊತ್ತಿನಿಂದ ಹಿಡಿದು ೧೨೫೦ ರಲ್ಲಿ ಫ್ರೆಡೆರಿಕ್‌ನ ಮರಣದವರೆಗೂ ಯುದ್ಧವು ವಾಸ್ತವವಾಗಿ ಎರಡೂ ಕಡೆಗಳಲ್ಲಿ ಮುಂದುವರಿದಿತ್ತು, ತೀವ್ರವಾಗುತ್ತಿತ್ತು, ಕ್ರೂರವಾಗುತ್ತಿತ್ತು. ಅದರೆ ಆ ಕಡೆ ಈ ಕಡೆ ಜೋರಾಗಿ ತೂಗಾಡುತ್ತಿತ್ತು, ಚಕ್ರವರ್ತಿ ಸತ್ತಾಗ ಅದಿನ್ನೂ ನಿರ್ಧಾರಗೊಂಡಿರಲಿಲ್ಲ. ಆದರೆ ಅವನ ಉತ್ತರಾಧಿಕಾರಿಗಳಾಗುವ ಆಕಾಂಕ್ಷೆ ಹೊತ್ತವರಿಗೆ ಅವನ ಅಧಿಕಾರವಿರಲಿಲ್ಲ, ಹೀಗಾಗಿ ಕ್ರಮೇಣ ಸೋತರು, ಹೀಗೆ ಇಟಲಿ ಒಡೆಯಿತು, ಪೋಪ್ ಗೆಲವು ಸಾಧಿಸಿದ.

ಪೋಪ್‌ರ ಸಾವು ಹೋರಾಟದಲ್ಲಿ ಏನೂ ವ್ಯತ್ಯಾಸ ತರಲಿಲ್ಲ; ಪ್ರತಿ ಹೊಸ ಪೋಪ್ ತನ್ನ ನಿಕಟಪೂರ್ವದವನ ಧೋರಣೆಯನ್ನೇ ತಾಳಿದನೇ ಹೊರತು ಬದಲಾಗಲಿಲ್ಲ. ಒಂಬತ್ತನೇ ಗ್ರೆಗರಿ ೧೨೪೧ ರಲ್ಲಿ ಸತ್ತ; ೧೨೪೩ ರಲ್ಲಿ ಫ್ರೆಡೆರಿಕ್‌ನ ಉಗ್ರ ಶತ್ರುವಾದ ನಾಲ್ಕನೆಯ ಇನ್ನೋಸೆಂಟ್ ಆಯ್ಕೆಯಾದ. ಒಂಬತ್ತನೇ ಲೂಯಿ ಕಳಂಕರಹಿತ ಸಂಪ್ರದಾಯನಿಷ್ಠನಾದರೂ ಗ್ರೆಗರಿ ಮತ್ತು ನಾಲ್ಕನೆಯ ಇನ್ನೋಸೆಂಟ್‌ನ ಕೋಪಶಮನ ಮಾಡುವುದರಲ್ಲಿ ಸಫಲನಾಗಲಿಲ್ಲ, ಬದಲಿಗೆ ಅವರು ಅವನ ವಿರುದ್ಧ ಹತೋಟಿಯಿಲ್ಲದ ಆರೋಪಗಳನ್ನು ಮಾಡಿದರು. ಅವನ ನೇಮಕಾತಿಯನ್ನು ರದ್ದುಮಾಡಿದ್ದಲ್ಲದೆ, ಅವನ ಬೆಂಬಲಿಗರನ್ನೆಲ್ಲ ಬಹಿಷ್ಕರಿಸಿದರು. ಕ್ರೈಸ್ತಭಿಕ್ಷುಗಳು (ಫ್ರಯರ್ಸ್) ಅವನ ವಿರುದ್ಧ ಬೋಧಿಸುತ್ತಿದ್ದರು, ಮುಸ್ಲಿಮರೂ ಮೇಲೆದ್ದರು, ಪ್ರಮುಖ ಬೆಂಗಲಿಗರ ಮೇಲೆಲ್ಲ ಸಂಚುಗಳು ನಡೆಯುತ್ತಿದ್ದವು. ಇವೆಲ್ಲ ಫ್ರೆಡೆರಿಕ್‌ನನ್ನು ಹೆಚ್ಚು ಹೆಚ್ಚು ಕ್ರೂರಿಯಾಗಿಸಿದವು; ಸಂಚುಕೋರರನ್ನು ನಿರ್ದಾಕ್ಷಿಣ್ಯವಾಗಿ

ಸದೆಬಡಿಯಲಾಯಿತು, ಬಂಧಿತರ ಬಲಗಣ್ಣು ಮತ್ತು ಬಲಗೈಗಳನ್ನು ಕತ್ತರಿಸಲಾಯಿತು.

ಈ ಭೀಕರ ಕದನದ ನಡುವೆ ಒಂದು ಹೊತ್ತಿಗೆ, ಫ್ರೆಡೆರಿಕ್ ಹೊಸ ಮತಧರ್ಮವೊಂದರ ಸ್ಥಾಪನೆಯ ಕುರಿತು ಆಲೋಚಿಸಿದ; ಅದರಲ್ಲಿ ಅವನೇ ವಿಮೋಚಕ, ಮತ್ತವನ ಪ್ರಧಾನಮಂತ್ರಿ ಪಿಯೆಟ್ರೋ ಡೆಲ್ಲ ವಿಗ್ನಾ ಸಂತ ಪೀಟರ್‌ನ ಸ್ಥಾನವನ್ನು ಪಡೆಯಬೇಕೆಂದಾಯಿತು.[೨೩೬] ಈ ಯೋಜನೆಗೆ ಅವನು ಸಾಕಷ್ಟು ಪ್ರಚಾರ ಕೊಡಲಿಲ್ಲ, ಅದರ ಕುರಿತು ಡೆಲ್ಲ ವಿಗ್ನಾಗೆ ಪತ್ರವೊಂದನ್ನು ಬರೆದ.. ಸರಿಯೋ ತಪ್ಪೋ ಅಂತೂ ಪಿಯೆಟ್ರೋ ತನ್ನ ವಿರುದ್ಧ ಸಂಚು ಮಾಡುತ್ತಿರುವನೆಂಬ ಅನುಮಾನ ಇದ್ದಕ್ಕಿದ್ದಂತೆ ಬಲವಾಗಿ, ಅವನ ಕಣ್ಣುಗಳನ್ನು ಕೀಳಿಸಿ, ಪಂಜರವೊಂದರಲ್ಲಿ ಅವನನ್ನು ಪ್ರದರ್ಶನಕ್ಕಿಟ್ಟ, ಆದರೆ ಹೆಚ್ಚಿನ ಯಾತನೆಯನ್ನು ತಡೆಯಲೆಂದು ಪಿಯೆಟ್ರೋ ಆತ್ಮಹತ್ಯೆಗೆ ಶರಣಾದ.

ತನಗೆ ಸಾಮರ್ಥ್ಯವಿದ್ದರೂ ಫ್ರೆಡೆರಿಕ್ ಯಶಸ್ಸು ಕಾಣಲಾಗಲಿಲ್ಲ, ಅದಕ್ಕೆ ಕಾರಣ ಅವನ ಕಾಲದಲ್ಲಿ ಪ್ರತಿಪೋಪ್‌ರ ಬೆಂಬಲಿಗರು ಮತಧರ್ಮನಿಷ್ಠರೂ ಪ್ರಜಾಪ್ರಭುತ್ವವಾದಿಗಳೂ ಆಗಿದ್ದುದು; ಆದರೆ ಅವನ ಆಕಾಂಕ್ಷೆಯು ಕ್ರೈಸ್ತೇತರ ರೋಮನ್ ಸಾಮ್ರಾಜ್ಯದ ಪುನರುತ್ಥಾನ. ಸಾಂಸ್ಕೃತಿಕವಾಗಿ ಅವನು ತಿಳಿವಳಿಕಸ್ಥನಾಗಿದ್ದ, ಆದರೆ ರಾಜಕೀಯವಾಗಿ ಪ್ರತಿಗಾಮಿಯಾದವನು. ಅವನ ಆಸ್ಥಾನವು ಹಳೆಯ ಕಾಲದ್ದು; ಅವನ ಅಂತಃಪುರದಲ್ಲಿ ನಪುಂಸಕರೂ ಇದ್ದರು. ಆದರೆ ಆ ಆಸ್ಥಾನದಲ್ಲಿಯೇ ಇಟಾಲಿಯನ್ ಕಾವ್ಯ ಆರಂಭವಾದುದು; ಅವನೂ ತಕ್ಕಮಟ್ಟಿಗಿನ ಒಳ್ಳೆಯ ಕವಿಯೇ. ಪೋಪ್‌ರ ಜೊತೆಗಿನ ಸಂಘರ್ಷದ ಕಾರಣದಿಂದಾಗಿ ಅವನು ಕ್ರೈಸ್ತ ಪಾದ್ರಿಗಳ ಪಾರಮ್ಯದ ಅಪಾಯಗಳ ಕುರಿತು ವಿವಾದಾತ್ಮಕ ಹೇಳಿಕೆಗಳನ್ನು ಪ್ರಕಟಿಸಿದ. ಅವುಗಳನ್ನು ಹದಿನಾರನೆಯ ಶತಮಾನದಲ್ಲಾಗಿದ್ದರೆ ಜನ ಮೆಚ್ಚಿಕೊಳ್ಳುತ್ತಿದ್ದರು, ಆದರೆ ತನ್ನ ಕಾಲದಲ್ಲಿ ಅವು ತಿರಸ್ಕೃತವಾದವು. ಅವನ ಜೊತೆ ಸೇರಿಕೊಳ್ಳಬೇಕಾಗಿದ್ದ ಮತಧರ್ಮವಿದ್ರೋಹಿಗಳು ಅವನಿಗೆ ಬರಿ ಬಂಡಾಯಗಾರರಂತೆ ಕಾಣಿಸಿದರು, ಪೋಪ್‌ನನ್ನು ಸಂತುಷ್ಟಗೊಳಿಸಲು ಅವನು ಅವರಿಗೆ ಹಿಂಸೆ ನೀಡಿದ. ಚಕ್ರವರ್ತಿಯಿಲ್ಲದಿದ್ದರೆ ಸ್ವತಂತ್ರ ನಗರಗಳು ಪೋಪ್‌ನ ವಿರುದ್ಧ ನಿಲ್ಲಬಹುದಾಗಿತ್ತು; ಆದರೆ ಅವನು ತನಗೆ ಶರಣಾಗುವುದನ್ನು ನಿರೀಕ್ಷಿಸಿದಾಗ ಅವು ಪೋಪ್‌ನ ನೆರವನ್ನು ಬಯಸಿದವು. ಹೀಗಾಗಿ ಅವನು ತನ್ನ ಕಾಲದ ಮೂಢನಂಬಿಕೆಗಳಿಂದ ಸ್ವತಂತ್ರನಾಗಿದ್ದರೂ, ಸಾಂಸ್ಕೃತಿಕವಾಗಿ ತನ್ನ ಕಾಲದ ಇತರ ರಾಜರಿಗಿಂತ ತುಂಬ ಉನ್ನತಸ್ಥಾನದಲ್ಲಿದ್ದರೂ, ತಾನು ಚಕ್ರವರ್ತಿಯಾಗಿದ್ದ ಕಾರಣದಿಂದಾಗಿ ಅವನು ರಾಜಕೀಯುವಾಗಿ ಉದಾರಿಗಳಾದವರನ್ನೆಲ್ಲ

---

೨೩೬. ಹರ್ಮನ್ ಕಾಂಟರೋವಿಜ್ ಅವರ ಎರಡನೆಯ ಫ್ರೆಡೆರಿಕ್‌ನ ಜೀವನಕಥನವನ್ನು ನೋಡಿ.

ವಿರೋಧಿಸುವಂತಾಯಿತು. ಹೀಗೆ ಅವನು ಅನಿವಾರ್ಯ ಸೋಲಿಗೊಳಗಾಗಬೇಕಾಯಿತು, ಆದರೆ ಎಲ್ಲ ವೈಫಲ್ಯಗಳ ಹೊರತಾಗಿಯೂ ಅವನು ಇತಿಹಾಸದಲ್ಲಿ ಅತ್ಯಂತ ಕುತೂಹಲಕಾರಿಗಳಾಗಿದ್ದವರಲ್ಲಿ ಒಬ್ಬನಾಗಿದ್ದಾನೆ.

ಮೂರನೆಯ ಇನ್ನೋಸೆಂಟ್ ಯಾರ ವಿರುದ್ಧ ಯುದ್ಧ ಹೂಡಿದ್ದನೋ ಮತ್ತು ಎಲ್ಲ ರಾಜರುಗಳೂ (ಫ್ರೆಡೆರಿಕ್‌ನೂ ಸೇರಿದಂತೆ) ಹಿಂಸಾಚಾರಕ್ಕೊಳಪಡಿಸಿದ್ದರೋ ಅಂಥ ಮತಧರ್ಮವಿದ್ರೋಹಿಗಳ ಬಗ್ಗೆ, ಅವರನ್ನೇ ಕುರಿತಂತೆಯೂ ಆ ಕಾಲದ ಜನಸಾಮಾನ್ಯರ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿಯೂ, ತಿಳಿವಳಿಕೆ ಆವಶ್ಯಕ. ಈ ಕುರಿತು ಆ ಕಾಲದ ಬರಹಗಳಲ್ಲಿ ಒಂದು ಸ್ಥೂಲ ನೋಟ ಮಾತ್ರ ಸಿಕ್ಕುತ್ತದೆ.

ಅತ್ಯಂತ ಕುತೂಹಲದಾಯಕವೂ ದೊಡ್ಡದೂ ಆದ ಮತಧರ್ಮವಿದ್ರೋಹಿಗಳ ಪಂಥವು ಕ್ಯಾಥರಿ ಆಗಿತ್ತು, ಅವರು ಫ್ರಾನ್ಸ್‌ನ ದಕ್ಷಿಣದಲ್ಲಿ ಆಬ್ಲಿಜೆನ್ಸೆಸ್ ಎಂದು ಹೆಚ್ಚು ಪರಿಚಿತರು. ಅವರ ಸಿದ್ಧಾಂತಗಳು ಬಾಲ್ಕನ್ ಮೂಲಕ ಏಷ್ಯಾದಿಂದ ಬಂದವು; ಅವರಿಗೆ ಉತ್ತರ ಇಟಲಿಯಲ್ಲಿ ವ್ಯಾಪಕ ಅನುಯಾಯಿಗಳಿದ್ದರೆ, ಫ್ರಾನ್ಸ್‌ನ ದಕ್ಷಿಣದಲ್ಲಿ ಅವರ ಅನುಯಾಯಿಗಳೇ ಬಹುಸಂಖ್ಯಾತರು, ಅವರಲ್ಲಿ ಶ್ರೀಮಂತಪ್ರಭುಗಳೂ ಸೇರಿದ್ದರು, ಅವರ ಆಲೋಚನೆ ಚರ್ಚ್ ಆಸ್ತಿಯನ್ನು ಕಬಳಿಸುವ ನೆಪವಾಗಿ. ಈ ವ್ಯಾಪಕ ಪಾಷಂಡಿತನದ ಕಾರಣ ಭಾಗಶಃ ಮತಧಾರ್ಮಿಕ ಯುದ್ಧದ ವೈಫಲ್ಯವಿರಬಹುದಾದರೂ, ಮುಖ್ಯವಾದುದೆಂದರೆ ಪುರೋಹಿತವರ್ಗದ ಹಣವಂತಿಕೆ ಮತ್ತು ಕೆಡುಕುತನಗಳಿಂದಾದ ನೈತಿಕ ಹತಾಶೆ. ಆನಂತರದ ಪ್ಯೂರಿಟಾನಿಸಂ ಅನ್ನು ಹೋಲುವಂತಹ ವೈಯಕ್ತಿಕ ಪಾವಿತ್ರ್ಯದ ಕಡೆಗಿನ ಒಲವು ಬಡತನ ಪಂಥದೊಂದಿಗೆ ಸಂಬಂಧಿಸಿದ ವ್ಯಾಪಕ ಭಾವನೆಯಿತ್ತು. ಚರ್ಚ್ ಶ್ರೀಮಂತವಾಗಿದ್ದುದರ ಜೊತೆಗೆ ಹೆಚ್ಚು ಐಹಿಕವಾಗಿತ್ತು, ಬಹಳ ಜನ ಪುರೋಹಿತರು ತೀರ ಅನೈತಿಕ ಬದುಕು ನಡೆಸುತ್ತಿದ್ದವರು. ಹಿಂದಿನ ವ್ಯವಸ್ಥೆಗಳ ಹಾಗೂ ಪ್ಯಾರಿಷ್ ಪುರೋಹಿತರ ವಿರುದ್ಧ ಭಿಕ್ಷುಪಂಥಗಳವರು, ತಪ್ಪೊಪ್ಪಿಗೆಯ ಸಂದರ್ಭಗಳನ್ನು ನೀತಿಭ್ರಷ್ಟತೆಗೆಳೆಯುವ ದುರುಪಯೋಗದಂತಹ ಅನೇಕ ಆರೋಪಗಳನ್ನು ಮಾಡಿದರು; ಭಿಕ್ಷುಪಂಥಗಳ ವಿರೋಧಿಗಳು ಈ ಆರೋಪಗಳನ್ನು ಅಲ್ಲಗಳೆದರು. ಇಂತಹ ಆರೋಪಗಳು ಬಹುಪಾಲು ಸಂದರ್ಭಗಳಲ್ಲಿ ನಿಜವಾಗಿರುತ್ತಿದ್ದವು ಎಂಬುದರಲ್ಲಿ ಸಂದೇಹವಿಲ್ಲ. ಮತಧಾರ್ಮಿಕ ನೆಲೆಯಿಂದಾಗಿ ಚರ್ಚ್ ಹೆಚ್ಚು ಅಧಿಕಾರಕ್ಕೆ ಹಕ್ಕುದಾರಿಕೆಯನ್ನು ಮುಂದಿಟ್ಟಂತೆ, ಸಾಮಾನ್ಯ ಜನತೆಯು ವೃತ್ತಿ ಮತ್ತು ಕಾರ್ಯಗಳ ತೀವ್ರ ವೈರುಧ್ಯದಿಂದ ಆಘಾತ ಹೊಂದುತ್ತಿದ್ದರು. ಅಂತಿಮವಾಗಿ ಮತಧರ್ಮಸುಧಾರಣೆಗೆ ಪ್ರೇರಕವಾದಂಥ ಪ್ರೇರಣೆಗಳೇ ಹದಿಮೂರನೆಯ ಶತಮಾನದಲ್ಲಿಯೂ ಕಾರ್ಯಶೀಲವಾಗಿದ್ದವು. ಪ್ರಮುಖವಾದ ವ್ಯತ್ಯಾಸವೆಂದರೆ ಮತಧರ್ಮೇತರ ರಾಜರುಗಳು

ಮತಧರ್ಮವಿದ್ರೋಹಿಗಳೊಡನೆ ಪೂರ್ತಿ ಸೇರಿಕೊಳ್ಳಲು ಸಿದ್ಧರಿರದಿರುವುದು; ಇದಕ್ಕೆ ಮುಖ್ಯ ಕಾರಣವೆಂದರೆ ಪಾಷಂಡಿತನ ಮತ್ತು ರಾಜರ ಪ್ರಾಧಾನ್ಯದ ನಡುವೆ ಹೊಂದಾಣಿಕೆ ಮಾಡಬಲ್ಲ ಯಾವುದೇ ತಾತ್ವಿಕತೆಯೂ ಆಗ ಪ್ರಚಲಿತವಿಲ್ಲದಿದ್ದುದು.

ಕ್ಯಾಥರಿಯ ತತ್ವಗಳು ಖಚಿತವಾಗಿ ತಿಳಿಯಲು ಸಾಧ್ಯವಿಲ್ಲದಂಥವು, ಯಾಕೆಂದರೆ ನಾವು ಆಧರಿಸಬೇಕಾಗಿರುವುದು ಸಂಪೂರ್ಣವಾಗಿ ವಿರೋಧಿಗಳ ಸಾಕ್ಷ್ಯಗಳ ಮೇಲೆ. ಅದಕ್ಕೂ ಮಿಗಿಲಾಗಿ, ಧರ್ಮಬೋಧಕರು ಪಾಷಂಡಿತನದ ಚರಿತ್ರೆಯನ್ನು ಚೆನ್ನಾಗಿ ಬಲ್ಲವರಾಗಿದ್ದು, ತಿಳಿದಿದ್ದ ಹೆಸರಿನ ಪಟ್ಟಿ ಅಂಟಿಸುವ ಹಾಗೂ ಹಿಂದಿನ ಪಂಥಗಳೆಲ್ಲದರರ ತತ್ವಗಳನ್ನೂ ಚಾಲತಿಯಲ್ಲಿದ್ದುದಕ್ಕೆ ಆರೋಪಿಸುವ ಪ್ರವೃತ್ತಿಯೂ ಇತ್ತು, ಎಷ್ಟೋ ವೇಳೆ ಇದು ಅಷ್ಟು ಹೋಲಿಕೆಯಿಲ್ಲದಿದ್ದವಕ್ಕೂ ಅನ್ವಯಿಸಿಬಿಡುವ ಸಂಭವವಿತ್ತು. ಆದರೂ, ಪ್ರಶ್ನಾತೀತವಾದಷ್ಟು ಮಾಹಿತಿಯೂ ಸಾಕಷ್ಟು ದೊರೆಯುತ್ತದೆ. ಕ್ಯಾಥರಿಗಳು ದ್ವಯತ್ವದವರಾಗಿದ್ದು, ಮತ್ತು ಅಧ್ಯಾತ್ಮರಹಸ್ಯಪಂಥದವರಂತೆ ಹಳೆ ಒಡಂಬಡಿಕೆಯ ಜೆಹೋವಾನನ್ನು ಕೆಡುಕು ಸೃಷ್ಟಿಕರ್ತನೆಂದು ಪರಿಗಣಿಸಿ, ನಿಜವಾದ ದೇವರು ಹೊಸ ಒಡಂಬಡಿಕೆಯಲ್ಲಿ ಕಾಣಿಸಿಕೊಳ್ಳುವವನೆಂದು ನಂಬಿದ್ದರು. ಅವರು ಭೌತವಸ್ತುವನ್ನು ಮೂಲತಃ ಕೆಡುಕೆಂದೂ, ನಿಜವಾದ ಸದ್ಗುಣಿಗಳಿಗೆ ದೇಹದ ಪುನರುತ್ಥಾನವಿಲ್ಲವೆಂದೂ ತಿಳಿದಿದ್ದವರು. ಆದರೆ ಕೆಡುಕರು ಇತರ ಪ್ರಾಣಿಗಳ ದೇಹವನ್ನು ಹೊಗುವರೆಂದು ನಂಬಿದ್ದರು. ಈ ಕಾರಣದಿಂದ ಅವರು ಮೊಟ್ಟೆ, ಗಿಣ್ಣು, ಮತ್ತು ಹಾಲುಗಳನ್ನೂ ಸೇವಿಸದ ಸಸ್ಯಾಹಾರಿಗಳಾಗಿದ್ದರು. ಆದರೆ ಅವರು ಮತ್ಸ್ಯಾಹಾರಿಗಳು, ಅದಕ್ಕೆ ಕಾರಣ ಮೀನುಗಳು ಯೋನಿಜಗಳಲ್ಲವೆಂಬ ನಂಬಿಕೆ. ಅವರಿಗೆ ಎಲ್ಲ ಬಗೆಯ ಲೈಂಗಿಕತೆ ಕ್ಷುಲ್ಲಕವಾಗಿತ್ತು; ಕೆಲವರ ಪ್ರಕಾರ, ಮದುವೆಯು ಹಾದರಕ್ಕಿಂತ ಕೆಟ್ಟುದು, ಯಾಕೆಂದರೆ ಅದು ಸತತವೂ ಸಂತೃಪ್ತವೂ ಆದುದು. ಮತ್ತೊಂದೆಡೆ, ಅವರು ಆತ್ಮಹತ್ಯೆಯನ್ನು ಕೆಡುಕೆಂದು ಭಾವಿಸಿರಲಿಲ್ಲ. ಅವರು ಹೊಸ ಒಡಂಬಡಿಕೆಯನ್ನು ಸಂಪ್ರದಾಯವಾದಿಗಳಿಗಿಂತ ಹೆಚ್ಚಾಗಿ ವಾಚ್ಯಾರ್ಥದಲ್ಲಿ ಸ್ವೀಕರಿಸಿದ್ದರು. ಅವರು ಆಣೆಪ್ರಮಾಣಗಳಿಂದ ದೂರರಾಗಿದ್ದರು, ಮತ್ತೊಂದು ಕೆನ್ನೆಯನ್ನೊಡ್ಡುತ್ತಿದ್ದರು. ಒಬ್ಬ ಪಾಷಂಡಿತನದ ಆರೋಪಿಯ ವಿಷಯವನ್ನು ಹಿಂಸೆಗೈಯುತ್ತಿದ್ದವರು ದಾಖಲಿಸಿದ್ದಾರೆ, ತಾನು ಮಾಂಸಾಹಾರಿ, ಸುಳ್ಳುಗಾರ ಮತ್ತು ಒಳ್ಳೆಯ ಕ್ಯಾಥೋಲಿಕ್ ಎಂದು ಹೇಳಿ ಅವನು ತನ್ನನ್ನು ಸಮರ್ಥಿಸಿಕೊಂಡಿದ್ದನಂತೆ.

ಆ ಪಂಥದ ಹೆಚ್ಚು ನಿಷ್ಠುರ ತತ್ವಗಳನ್ನು ಪರಿಪೂರ್ಣ ('ಪರ್ಫೆಕ್ಟೆಡ್') ಎಂಬ ಅತ್ಯಧಿಕ ಪರಿಶುದ್ಧ ಜನರು ಮಾತ್ರ ಪಾಲಿಸುತ್ತಿದ್ದರು; ಇತರರು ಮಾಂಸಾಹಾರಿಗಳೂ ಆಗಿದ್ದರೂ, ಮದುವೆಯೂ ಆಗುತ್ತಿದ್ದರು.

ಈ ಸಿದ್ಧಾಂತಗಳ ಮೂಲವನ್ನು ಹುಡುಕುವುದು ಕುತೂಹಲಕಾರಿ ವಿಷಯ. ಬಲ್ಗೇರಿಯದಲ್ಲಿ ಬೋಗೋಮೈಲೀಸ್ ಎಂಬ ಹೆಸರು ಪಡೆದಿದ್ದ ಅವರು ಮತಧಾರ್ಮಿಕ ಯುದ್ಧಗಳ ಮೂಲಕ ಇಟಲಿ ಮತ್ತು ಫ್ರಾನ್ಸ್‌ಗಳಿಗೆ ಬಂದರು; ೧೧೬೭ ರಲ್ಲಿ ಟೂಲೌಸ್ ಬಳಿ ಕ್ಯಾಥರಿಗಳು ಒಂದು ಧರ್ಮಪರಿಷತ್ತನ್ನು ನಡೆಸಿದಾಗ, ಬಲ್ಗೇರಿಯದ ಪ್ರತಿನಿಧಿಗಳೂ ಅದರಲ್ಲಿ ಪಾಲ್ಗೊಂಡಿದ್ದರು. ಅದಕ್ಕೆ ಪ್ರತಿಯಾಗಿ ಬೋಗೋಮೈಲೀಸ್‌ರು ಮ್ಯಾನಿಖಿಯನ್‌ರು ಮತ್ತು ಪೌಲೀಷಿಯನ್‌ರ ಮಿಶ್ರಣವಾಗಿದ್ದವರು. ಪೌಲೀಷಿಯನ್‌ರು ಶಿಶುದೀಕ್ಷಾಸ್ನಾನ, ಶುದ್ಧೀಕರಣ (ಪರ್ಗೇಟರಿ), ಸಂತಪ್ರಾರ್ಥನೆ ಮತ್ತು ತ್ರಿಮೂರ್ತಿತ್ವಗಳನ್ನು ವಿರೋಧಿಸಿದ ಆರ್ಮೀನಿಯನ್‌ರು; ಕ್ರಮೇಣ ಅವರು ಥ್ರೇಸ್ ಮತ್ತು ಆನಂತರ ಬಲ್ಗೇರಿಯದಲ್ಲಿ ಹೆಚ್ಚಾದರು. ಪೌಲೀಷಿಯನ್‌ರು ಮಾರ್ಸಿಯನ್ (ಸು. ಕ್ರಿಶ ೧೫೦) ಅನುಯಾಯಿಗಳು, ಅವನು ಕ್ರೈಸ್ತದಲ್ಲಿ ಯೆಹೂದಿ ಅಂಶಗಳನ್ನು ತಿರಸ್ಕರಿಸಿ ಸಂತ ಪೌಲ್‌ನನ್ನು ಅನುಸರಿಸುವೆನೆಂದು ಹೇಳಿಕೊಳ್ಳುತ್ತಿದ್ದ, ಅಲ್ಲದೆ ಅಧ್ಯಾತ್ಮರಹಸ್ಯಪಂಥಕ್ಕೆ ಸೇರದೆಯೂ ಅದರೊಡನೆ ಒಂದಷ್ಟು ಸಂಬಂಧವಿರಿಸಿಕೊಂಡಿದ್ದವನು.

ನಾನು ಪರಿಶೀಲಿಸಲಿರುವ ಮತ್ತೊಂದೇ ಜನಜನಿತ ಪಾಷಂಡಿಮತವೆಂದರೆ ವಾಲ್‌ಡೆನ್ಸ್‌ರದು. ಕ್ರೈಸ್ತನಿಯಮವನ್ನು ಪಾಲಿಸುವವರ ವಿರುದ್ಧ 'ಮತಧಾರ್ಮಿಕ ಯುದ್ಧ'ವನ್ನು ೧೧೭೦ ರಲ್ಲಿ ಆರಂಭಿಸಿದ ಪೀಟರ್ ವಾಲ್ಡೋನ ಅನುಯಾಯಿಗಳು ಅವರು. ಅವನು ತನ್ನ ಆಸ್ತಿಯನ್ನೆಲ್ಲ ಬಡವರಿಗೆ ದಾನವಿತ್ತು, 'ಲಯೊನ್ಸ್‌ನ ಬಡಜನತೆ' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ತಾನು ನಿಷ್ಠುರ ಬಡತನ ಮತ್ತು ಸದ್ಗುಣಭರಿತ ಜೀವನ ನಡೆಸಿದ. ಮೊದಲಿಗೆ ಅವರಿಗೆ ಪೋಪ್‌ನ ಒಪ್ಪಿಗೆಯಿತ್ತು, ಆದರೆ ಅವರು ಪುರೋಹಿತವರ್ಗದ ಅನೈತಿಕತೆಯ ಬಗ್ಗೆ ತೀವ್ರ ದಾಳಿ ನಡೆಸಿದ್ದರಿಂದಾಗಿ ಅವರು ೧೧೮೪ ರಲ್ಲಿ ವೆರೋನದಲ್ಲಿ ನಡೆದ ಧರ್ಮಪರಿಷತ್ತಿನಲ್ಲಿ ಖಂಡನೆಗೊಳಗಾದರು. ಆನಂತರ, ಪ್ರತಿಯೊಬ್ಬ ಒಳ್ಳೆಯ ವ್ಯಕ್ತಿಯೂ ಬೋಧಿಸುವ ಮತ್ತು ಧಾರ್ಮಿಕಗ್ರಂಥಗಳನ್ನು ವ್ಯಾಖ್ಯಾನಿಸುವ ಅರ್ಹತೆಯುಳ್ಳವನೆಂದು ಸಾರಿದರು; ಅವರು ತಮ್ಮ ಪುರೋಹಿತರನ್ನು ನೇಮಿಸಿಕೊಂಡು ಕ್ಯಾಥೋಲಿಕ್ ಪುರೋಹಿತವರ್ಗವನ್ನು ದೂರವಿಟ್ಟರು. ಅವರು ಲಂಬಾರ್ಡಿ ಬೊಹೆಮಿಯಗಳಿಗೂ ವ್ಯಾಪಿಸಿ, ಹಸ್ ಪಂಥವನ್ನು (ಹಸೈಟ್) ಸ್ಥಾಪಿಸಲು ಭೂಮಿಕೆಯೊದಗಿಸಿದರು. ಅವರನ್ನೂ ತಟ್ಟಿದ್ದ ಆಲ್ಬಿಜೆನ್ಸಿಯದ ಹಿಂಸಾಚಾರದಲ್ಲಿ ಅನೇಕರು ಪೀಡ್‌ಮಾಂಟ್‌ಗೆ ಓಡಿಹೋದರು. ಮಿಲ್ಟನ್ ಕಾಲದಲ್ಲಿ ಪೀಡ್‌ಮಾಂಟ್‌ನಲ್ಲಿ ಅವರ ಮೇಲಾದ ಹಿಂಸಾಚಾರವು ಅವನ ಸಾನೆಟ್ 'ದೇವರೇ, ನಿನ್ನ ಬಲಿಯಾದ ಸಂತರ ಸೇಡು ತೀರಿಸಿಕೊ' ಬಗ್ಗೆ ರಚಿತವಾದದ್ದು. ಅವರು ಇಂದಿಗೂ ದೂರದ ಆಲ್ಪೈನ್ ಕಣಿವೆಗಳಲ್ಲಿಯೂ ಸಂಯುಕ್ತ ಸಂಸ್ಥಾನಗಳಲ್ಲಿಯೂ ಇದ್ದಾರೆ.

ಈ ಪಾಷಂಡಿತನವು ಚರ್ಚ್ ಅನ್ನು ಗಾಬರಿಗೊಳಿಸಿದ್ದರಿಂದ ಅದನ್ನು ಮಣಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಲಾಯಿತು. ಕ್ರಿಸ್ತನಿಗೆ ದ್ರೋಹ ಬಗೆದ ಪಾಷಂಡಿಗಳಿಗೆ ಮರಣವೇ ಸರಿ ಎಂದು ಮೂರನೆಯ ಇನ್ನೋಸೆಂಟ್ ಭಾವಿಸಿದ್ದ. ಆಲ್ಬಿಜೆನ್ಸಿಸ್ ವಿರುದ್ಧ ಮತಧಾರ್ಮಿಕ ಯುದ್ಧ ಸಾರಲು ಅವನು ಫ್ರಾನ್ಸ್‌ನ ರಾಜನಿಗೆ ಮನವಿ ಮಾಡಿಕೊಂಡ, ಅದು ೧೨೦೯ ರಲ್ಲಿ ನಡೆಯಿತು. ಅನೂಹ್ಯ ತೀವ್ರತೆಯಿಂದ ಅದು ಸಾಗಿತು; ಕ್ಯಾರ್ಕಸ್ಸಾನ್ ಅನ್ನು ವಶಪಡಿಸಿಕೊಂಡು ಅದರಲ್ಲಿ ನಡುಕ ಹುಟ್ಟಿಸುವ ಹಿಂಸಾಚಾರ ನಡೆಸಲಾಯಿತು. ಪಾಷಂಡಿತನದ ನಿರ್ನಾಮವೇ ಬಿಷಪ್‌ರ ಉದ್ದೇಶವಾಯಿತು, ಆದರೆ ಬೇರೆ ಕೆಲಸಗಳಿದ್ದವರು ಅದರಲ್ಲಿ ಭಾಗಿಗಳಾಗಲು ಸಾಧ್ಯವಿರಲಿಲ್ಲ, ಹೀಗಾಗಿ ೧೨೩೩ ರಲ್ಲಿ ಬಿಷಪ್‌ರ ಹೊರೆಯನ್ನು ಇಳಿಸಲು ಒಂಬತ್ತನೇ ಗ್ರೆಗರಿ ಒಂದು ವಿಚಾರಣಾಧಿಕರಣವನ್ನು (ಇನ್‌ಕ್ವಿಸಿಷನ್) ನೇಮಿಸಿದ. ೧೨೫೪ ರ ನಂತರ, ವಿಚಾರಣಾಧಿಕರಣವು ಆರೋಪಿಗಳೆಂದು ಸಾರಿದವರಿಗೆ ಸಲಹೆಗಾರರನ್ನು ನೇಮಿಸಿಕೊಳ್ಳುವ ಅವಕಾಶ ನೀಡಲಿಲ್ಲ. ಖಂಡನೆಗೊಳಗಾದರೆ ಅವರ ಆಸ್ತಿಯನ್ನೆಲ್ಲ ಫ್ರಾನ್ಸ್‌ನ ರಾಜ ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದ. ಆರೋಪ ಸಾಬೀತಾದಾಗ ಅವನನ್ನು ಅವನಿಗೆ ಜೀವದಾನ ಮಾಡುವಂತೆ ಕೋರಿ ಮತಧರ್ಮೇತರ ಸೈನ್ಯದ ವಶಕ್ಕೆ ಒಪ್ಪಿಸಲಾಗುತ್ತಿತ್ತು; ಆದರೆ ಮತಧರ್ಮೇತರ ಅಧಿಕಾರಿಗಳು ಅಂಥವರನ್ನು ಸುಡಲಾಗದಿದ್ದರೆ ಅವರನ್ನೇ ವಿಚಾರಣೆಗೆ ಗುರಿಪಡಿಸಲಾಗುತ್ತಿತ್ತು. ಅದರಲ್ಲಿ ಸಾಮಾನ್ಯಾರ್ಥದ ಪಾಷಂಡಿತನದ ವಿಚಾರಣೆ ನಡೆಸುತ್ತಿದ್ದುದಲ್ಲದೆ, ಮಾಟಮಂತ್ರಗಳ ಆರೋಪವನ್ನೂ ವಿಚಾರಣೆ ಮಾಡಲಾಗುತ್ತಿತ್ತು. ಸ್ಪೆಯಿನ್‌ನಲ್ಲಿ, ಅದನ್ನು ಮುಖ್ಯವಾಗಿ ಗುಪ್ತ ಯೆಹೂದಿಗಳ ವಿರುದ್ಧ ಪ್ರಯೋಗಿಸಲಾಗುತ್ತಿತ್ತು. ಅದರ ಕಾರ್ಯಗಳನ್ನು ನೆರವೇರಿಸುತ್ತಿದ್ದವರು ಮುಖ್ಯವಾಗಿ ಡೊಮಿನಿಕನ್‌ರು ಮತ್ತು ಫ್ರಾನ್ಸಿಸ್‌ಕನ್‌ರು. ಅದೆಂದೂ ಸ್ಕಾಂಡಿನೇವಿಯ ಅಥವಾ ಇಂಗ್ಲಂಡ್‌ಗಳನ್ನು ಪ್ರವೇಶಿಸಲಿಲ್ಲ, ಆದರೆ ಇಂಗ್ಲಿಷ್ ಜನತೆ ಅದನ್ನು ಜೋನ್ ಆಫ್ ಆರ್ಕ್ ವಿರುದ್ದ ಪ್ರಯೋಗಿಸಲು ಸಿದ್ಧವಾಗೇ ಇದ್ದರು. ಒಟ್ಟಾರೆ, ಅದು ತುಂಬ ಯಶಸ್ವಿಯಾಯಿತು; ಮೊದಮೊದಲು, ಅದು ಆಲ್ಬಿಜೆನ್ಸಿಸ್ ಪಾಷಂಡಿತನವನ್ನು ಸಂಪೂರ್ಣವಾಗಿ ನಾಶಪಡಿಸಿತು.

ಹದಿಮೂರನೆಯ ಶತಮಾನದಲ್ಲಿ ಚರ್ಚ್ ಹದಿನಾರನೆಯ ಶತಮಾನದಲ್ಲಾದುದಕ್ಕಿಂತ ಕಡಿಮೆಯೇನೂ ಅಲ್ಲದ ಬಂಡಾಯವನ್ನು ಎದುರಿಸಬೇಕಾಗುವ ಅಪಾಯವಿತ್ತು. ಮುಖ್ಯವಾಗಿ ಬೈರಾಗಿಗಳ ಉದಯದಿಂದ ಅದರಿಂದ ಪಾರಾಯಿತು; ಅತ್ಯಂತ ವೀರ್ಯವಂತ ಪೋಪ್‌ರೂ ಮಾಡಲಾಗದಿದ್ದ ರೀತಿಯಲ್ಲಿ ಸಂಪ್ರದಾಯನಿಷ್ಠೆಯನ್ನುಳಿಸಲು ಸಂತ ಫ್ರಾನ್ಸಿಸ್ ಮತ್ತು ಸಂತ ಡಾಮಿನಿಕ್ ನೆರವಾದರು.

ಅಸಿಸಿಯ ಸಂತ ಫ್ರಾನ್ಸಿಸ್ (೧೧೮೧ ಅಥವಾ ೧೧೮೨-೧೨೨೬) ಇತಿಹಾಸದಲ್ಲಿ ಕಂಡುಬರುವ ಅತ್ಯಂತ ಶ್ರೇಷ್ಠ ವ್ಯಕ್ತಿ. ಅವನು ಶ್ರೀಮಂತ ಕುಟುಂಬದಿಂದ ಬಂದವನು, ತನ್ನ ಕಿರಿಯಂದಿನಲ್ಲಿ ಸಾಮಾನ್ಯ ಷೋಕಿಗಳಿಂದೇನೂ ಅವನು ದೂರವಾಗಿರಲಿಲ್ಲ. ಆದರೆ ಒಂದು ದಿನ, ಸವಾರಿ ಹೋಗುತ್ತ ಒಬ್ಬ ಕುಷ್ಠರೋಗಿಯನ್ನು ಕಂಡಾಗ ಅವನಲ್ಲಿ ಇದ್ದಕ್ಕಿದ್ದಂತೆಯೇ ಕರುಣೆಯುಕ್ಕಿ ಬಂದು ಕುದುರೆಯಿಂದ ಕೆಳಗಿಳಿದು ಆ ವ್ಯಕ್ತಿಗೆ ಮುತ್ತು ಕೊಟ್ಟ. ಆನಂತರ ಬಹುಬೇಗ, ಎಲ್ಲ ಐಹಿಕ ಭೋಗಗಳನ್ನು ತ್ಯಜಿಸಿ ತನ್ನ ಬದುಕನ್ನು ಬೋಧಿಸುವುದರಲ್ಲಿಯೂ ಒಳ್ಳೆಯ ಕೆಲಸಗಳಲ್ಲಿ ತೊಡಗಿಸಿಕೊಳ್ಳಲೂ ನಿರ್ಧರಿಸಿದ. ಗೌರವಸ್ಥ ವ್ಯಾಪಾರಿಯಾಗಿದ್ದ ಅವನ ತಂದೆ ಇದರಿಂದ ಕ್ರುದ್ಧಗೊಂಡ; ಆದರೆ ಅವನನ್ನು ಅದರಿಂದ ಹೆದರಿಸಲಾಗಲಿಲ್ಲ. ತಕ್ಷಣವೇ ತನ್ನ ಹಿಂಬಾಲಕ ತಂಡವನ್ನು ಸೇರಿಸಿ ಎಲ್ಲರೂ ಬಡತನವನ್ನು ಸ್ವೀಕರಿಸಲು ಪ್ರಮಾಣ ಮಾಡುವಂತೆ ಮಾಡಿದ. ಮೊದಲಲ್ಲಿ ಚರ್ಚ್ ಈ ಚಳವಳಿಯನ್ನು ಸಂಶಯದೃಷ್ಟಿಯಿಂದ ನೋಡಿತು; ಅದೂ 'ಲಯೊನ್ಸ್‌ನ ಬಡ ಜನತೆ'ಯಂತೆಯೇ ಇರುವುದು ಗೊತ್ತಾಯಿತು. ದೂರದೂರುಗಳಿಗೆ ಸಂತ ಫ್ರಾನ್ಸಿಸ್ ಕಳುಹಿಸಿದ ಮೊದಲ ತಂಡದ ಧರ್ಮಬೋಧಕರನ್ನು ಪಾಷಂಡಿಗಳೆಂದು ತಿಳಿಯಲಾಯಿತು, ಅದಕ್ಕೆ ಕಾರಣ ಅವರು ಬಡತನವನ್ನು ಅಪ್ಪಿಕೊಂಡದ್ದು ಆ ರೀತಿ ಪ್ರಮಾಣ ಮಾಡಿ ಅದನ್ನು ಆಮೇಲೆ ಗಂಭೀರವಾಗಿ ಪರಿಗಣಿಸದಿದ್ದ (ಸನ್ಯಾಸಿಗಳಂತೆ) ರೀತಿಯದಾಗಿರಲಿಲ್ಲ. ಆದರೆ ಮೂರನೆಯ ಇನ್ನೋಸೆಂಟ್ ಅದನ್ನು ಸಂಪ್ರದಾಯನಿಷ್ಠೆಯ ಎಲ್ಲೆಯಲ್ಲಿಯೇ ಇರಿಸಿದರೆ ಈ ಚಳವಳಿಯ ಮೌಲ್ಯವನ್ನು ಅಳೆಯುವ ಕುಶಾಗ್ರಮತಿಯವನಾಗಿದ್ದ, ಹೀಗಾಗಿ ೧೨೦೯ ರಲ್ಲಿಯೋ ೧೨೧೦ ರಲ್ಲಿಯೋ ಈ ಹೊಸ ಪಂಥಕ್ಕೆ ಮಾನ್ಯತೆಯನ್ನು ನೀಡಿದ. ಸಂತ ಫ್ರಾನ್ಸಿಸ್‌ನ ವೈಯಕ್ತಿಕ ಗೆಳೆಯನಾಗಿದ್ದ ಒಂಬತ್ತನೆಯ ಗ್ರೆಗರಿ ಅವನಿಗೆ ಪೂರಕವಾಗಿದ್ದರೂ, ಸಂತನ ಉತ್ಸಾಹಪೂರ್ಣವೂ ನಿರ್ಬಂಧರಹಿತವೂ ಆದ ಅನಿಸಿಕೆಗಳಿಗೆ ಮುಜುಗರವುಂಟುಮಾಡಿತು. ಫ್ರಾನ್ಸಿಸ್ ಬಡತನದ ಪ್ರತಿಜ್ಞೆಯನ್ನು ನಿಷ್ಠುರ ರೀತಿಯಲ್ಲಿ ವ್ಯಾಖ್ಯಾನಿಸಲು ಬಯಸಿದ; ಅದರ ಹಿಂಬಾಲಕರಿಗೆ ಮನೆಗಳನ್ನೂ ಚರ್ಚ್‌ಗಳನ್ನೂ ನಿಷೇಧಿಸಿದ. ತಮ್ಮ ಅನ್ನಕ್ಕಾಗಿ ಅವರು ಭಿಕ್ಷೆ ಬೇಡಬೇಕಾಯಿತು, ನಿಲ್ಲಲು ಸೂರಿಲ್ಲದೆ ಜನರ ಕರುಣೆಯನ್ನವಲಂಬಿಸಬೇಕಾಯಿತು. ೧೨೧೯ ರಲ್ಲಿ ಅವನು ಪೂರ್ವಕ್ಕೆ ಪ್ರಯಾಣ ಬೆಳೆಸಿ ಸುಲ್ತಾನನ ಮುಂದೆ ಧರ್ಮಬೋಧೆ ಮಾಡಿದ, ಅವನೇನೋ ಇವನನ್ನು ಗೌರವದಿಂದ ಕಂಡರೂ ಮಹಮ್ಮದೀಯನಾಗಿಯೇ ಉಳಿದ. ವಾಪಸು ಬರುವಾಗ, ಫ್ರಾನ್ಸಿಸ್ಕನ್‌ರು ತಮಗಾಗಿ ಮನೆಗಳನ್ನು ಕಟ್ಟಿಸಿಕೊಂಡಿದ್ದುದು ಕಂಡುಬಂತು; ಅವನಿಗೆ ತುಂಬ ನೋವಾಯಿತು; ಆದರೆ ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪೋಪ್ ಕೇಳಿಕೊಂಡ ಅಥವಾ

ಒತ್ತಡ ಹಾಕಿದ. ಅವನ ಮರಣಾನಂತರ ಗ್ರೆಗರಿ ಅವನಿಗೆ ಸಂತಪದವಿಯನ್ನಿತ್ತನಾದರೂ ಅವನ ಬಡತನದ ನಿಯಮವನ್ನು ಸಡಿಲಗೊಳಿಸಿದ.

ಸಂತತನದ ವಿಷಯದಲ್ಲಿ, ಫ್ರಾನ್ಸಿಸ್‌ಗೆ ಸಮಾನರಾದವರಿದ್ದರು, ಆದರೆ ಸಂತರಲ್ಲಿ ಅವನನ್ನು ಅಸಾಧಾರಣನೆನಿಸಿದ್ದು ಅವನ ಸಹಜ ಸುಖ, ಸಾರ್ವತ್ರಿಕ ಪ್ರೀತಿ, ಮತ್ತು ಕವಿಯಾಗಿ ಅವನು ಕೊಟ್ಟ ಕೊಡುಗೆಗಳು. ಅವನ ಒಳ್ಳೆಯತನ ತೊಡೆದುಕೊಳ್ಳಬೇಕಾದ ಕಲ್ಮಷಗಳಿಲ್ಲದೆ ಯಾವತ್ತಿಗೂ ಅಪ್ರಯತ್ನಕವಾಗಿರುತ್ತಿತ್ತು. ಎಲ್ಲ ಜೀವಗಳನ್ನೂ ಅವನು ಪ್ರೀತಿಸುತ್ತಿದ್ದ, ಕೇವಲ ಕ್ರೈಸ್ತ ಮತ್ತು ಉದಾರಿಯಾಗಿ ಮಾತ್ರವಲ್ಲ, ಒಬ್ಬ ಕವಿಯಾಗಿಯೂ. ತನ್ನ ಸಾವಿಗೆ ಸ್ವಲ್ಪ ಹಿಂದೆ ಅವನು ರಚಿಸಿದ ಸೂರ್ಯಸ್ತುತಿ ಸೂರ್ಯೋಪಾಸಕರಾದ ಇಕ್ನಟಾನ್‌ರು ರಚಿಸಬಹುದಾದ ರೀತಿಯಲ್ಲಿಯೇ ಇದೆ; ಕ್ರೈಸ್ತತತ್ವದಲ್ಲಿಯೂ ಅದು ಇದೆ, ಆದರೆ ಅಷ್ಟು ಸ್ಫುಟವಾಗಿಯಲ್ಲ. ಅನೇಕ ಕ್ರೈಸ್ತ ಸಂತರಿಗಿರದಿದ್ದ ರೀತಿಯಲ್ಲಿ ಕುಷ್ಠರೋಗಿಗಳ ಬಗ್ಗೆ, ಅವರಿಗಾಗಿಯೇ ತನಗಾಗಿಯಲ್ಲ, ಸೇವಾ ಮನೋಭಾವ ಅವನದ್ದು; ಅವನಿಗೆ ತನ್ನ ಮೋಕ್ಷಕ್ಕಿಂತ ಇತರರ ಸಂತೋಷವೇ ಮುಖ್ಯವಾಗಿತ್ತು. ದೀನರ ಎದುರು ಅಥವಾ ಕೆಡುಕರ ಎದುರಿಗೂ ತಾನೆಂದೂ ಮಿಗಿಲೆಂಬ ಭಾವನೆಯನ್ನು ಅವನು ತೋರಿಸಲಿಲ್ಲ. ಅವನು ಸಂತರ ನಡುವೆ ಸಂತನಿಗಿಂತ ಮಿಗಿಲು, ಪಾಪಿಗಳ ನಡುವೆ ತಾನೂ ಅವರಲ್ಲೊಬ್ಬ ಎಂಬ ಭಾವನೆ ಅವನದು ಎಂದು ಸೆಲೆನೋದ ಥಾಮಸ್ ಅವನ ಬಗ್ಗೆ ಹೇಳಿದ್ದಾನೆ.

ಸೈತಾನನು ಇದ್ದದ್ದೇ ಆದರೆ, ಸಂತ ಫ್ರಾನ್ಸಿಸ್ ಸ್ಥಾಪಿಸಿದ ಪಂಥದ ಭವಿಷ್ಯವು ಅವನಿಗೆ ಪುಷ್ಕಳವಾದ ಸಂತೃಪ್ತಿಯನ್ನು ನೀಡುತ್ತಿತ್ತು. ಸಂತನ ನಂತರದ ಆ ಪಂಥದ ಮುಖ್ಯಸ್ಥ ಉತ್ತರಾಧಿಕಾರಿಯಾದ ಬ್ರದರ್ ಎಲಿಯಾಸ್ ವೈಭವದಲ್ಲಿ ಮುಳುಗಿದ್ದ ಮತ್ತು ಬಡತನವನ್ನು ಸಂಪೂರ್ಣವಾಗಿ ತೊರೆಯುವ ಅವಕಾಶ ನೀಡಿದ್ದ. ಸ್ಥಾಪಕನ ಸಾವಿನ ನಂತರದ ವರ್ಷಗಳಲ್ಲಿ ಫ್ರಾನ್ಸಿಸ್ಕನ್ ಪಂಥದವರು ಮಾಡಿದ ಮುಖ್ಯ ಕೆಲಸವೆಂದರೆ ಗುಯೆಲ್ಫ್‌ರು ಮತ್ತು ಘಿಬೆಲೈನ್ಸ್‌ರ ತೀವ್ರ ಹಿಂಸಾತ್ಮಕ ಯುದ್ಧಗಳಿಗಾಗಿ ಸಾರ್ಜೆಂಟ್‌ಗಳನ್ನು ನೇಮಿಸಿದ್ದು. ಅವನು ಸತ್ತ ಏಳು ವರ್ಷಗಳ ನಂತರ ಸ್ಥಾಪಿತವಾದ ವಿಚಾರಣಾಧಿಕರಣವನ್ನು ಏಳು ದೇಶಗಳಲ್ಲಿ ಬಹು ಮುಖ್ಯವಾಗಿ ನಡೆಸಿದವರು ಫ್ರಾನ್ಸಿಸ್ಕನ್‌ರು. ಸ್ಪಿರಿಚುವಲ್ಸ್ ಎಂದು ಕರೆಸಿಕೊಳ್ಳುತ್ತಿದ್ದ ಒಂದು ಸಣ್ಣ ಗುಂಪು ಮಾತ್ರ ಅವನ ಬೋಧನೆಗಳನ್ನು ಅನುಸರಿಸಿತು. ಇವರಲ್ಲಿ ಅನೇಕರನ್ನು ಪಾಷಂಡಿತನಕ್ಕಾಗಿ ವಿಚಾರಣಾಧಿಕರಣದಿಂದ ಬೆಂಕಿಗೆ ಆಹುತಿಯಾದರು. ಕ್ರಿಸ್ತ ಮತ್ತು ಪ್ರವರ್ತಕರಿಗೆ ಯಾವ ಆಸ್ತಿಯೂ ಇರಲಿಲ್ಲ, ಅವರು ಧರಿಸಿದ್ದ ಬಟ್ಟೆಗಳೂ ಅವರವಲ್ಲ ಎಂದು ಇವರು ವಾದಿಸಿದರು; ಈ ಅಭಿಪ್ರಾಯವನ್ನು ೧೩೨೩ ರಲ್ಲಿ ಇಪ್ಪತ್ತೆರಡನೆಯ ಜಾನ್ ಪಾಷಂಡಿತನದ್ದೆಂದು ಅವರನ್ನು ಖಂಡನೆಗೊಳಪಡಿಸಿದ. ಸಂತ ಫ್ರಾನ್ಸಿಸ್‌ನ ಬದುಕಿನ ಒಟ್ಟಾರೆ ಫಲಿತವೆಂದರೆ

ಮತ್ತೊಂದು ಶ್ರೀಮಂತವೂ ಭ್ರಷ್ಟಾಚಾರದ್ದೂ ಆದ ವ್ಯವಸ್ಥೆಯನ್ನು ರೂಪಿಸಿದ್ದು, ಶ್ರೇಣೀಕರಣವನ್ನು ಬಲಪಡಿಸಿದ್ದು ಮತ್ತು ನೈತಿಕ ಪ್ರಾಮಾಣಿಕತೆಯನ್ನು ಮರೆದವರು ಮತ್ತು ಸ್ವತಂತ್ರಚಿಂತನೆಯನ್ನು ಮಾಡಿದವರನ್ನು ಹಿಂಸಾಚಾರಕ್ಕೆ ಗುರಿಪಡಿಸುವುದನ್ನು ಸುಲಭಗೊಳಿಸಿದ್ದು, ಅಷ್ಟೆ. ತನ್ನ ಗುರಿ ಮತ್ತು ನಡತೆಗಳ ದೃಷ್ಟಿಯಿಂದ ನೋಡಿದರೆ ಈ ಫಲಿತಕ್ಕಿಂತ ದುರಂತಮಯವಾದ ವ್ಯಂಗ್ಯವನ್ನು ಊಹಿಸಿಕೊಳ್ಳುವುದೂ ಕಷ್ಟ.

ಸಂತ ಡಾಮಿನಿಕ್ (೧೧೭೦-೧೨೨೧) ಸಂತ ಫ್ರಾನ್ಸಿಸ್‌ನಷ್ಟೇನೂ ಆಸಕ್ತಿದಾಯಕ ವ್ಯಕ್ತಿಯಲ್ಲ. ಅವನೊಬ್ಬ ಕ್ಯಾಸ್ಟಿಲಿಯನ್, ಮತ್ತು ಲೊಯೋಲನಂತೆ, ಸಂಪ್ರದಾಯನಿಷ್ಠತೆಯ ದುರಭಿಮಾನಿ ಆರಾಧಕ. ಅವನ ಮುಖ್ಯ ಉದ್ದೇಶವೇ ಪಾಷಂಡಿತನದ ವಿರುದ್ಧ ಹೋರಾಡುವುದು, ಈ ಉದ್ದೇಶ ಸಾಧನೆಗಾಗಿ ಅವನು ಬಡತನವನ್ನು ಸ್ವೀಕರಿಸಿದ. ಅವನು ಆಲ್ಬಿಜೆನ್ಸಿಯನ್ ಯುದ್ಧದಾದ್ಯಂತ ಇದ್ದ, ಆದರೆ ಅದರ ಹೆಚ್ಚು ತೀವ್ರ ದುರಾಚಾರಗಳ ಬಗ್ಗೆ ಅವನು ವಿಷಾದ ವ್ಯಕ್ತಪಡಿಸಿದ್ದನಂತೆ. ಡಾಮಿನಿಕನ್ ಪಂಥವು ಮೂರನೆಯ ಇನ್ನೋಸೆಂಟ್‌ನಿಂದ ೧೨೧೫ ರಲ್ಲಿ ಸ್ಥಾಪಿತವಾಯಿತು, ಬಹು ಬೇಗ ಯಶಸ್ಸು ಕಂಡಿತು. ಸಂತ ಡಾಮಿನಿಕ್‌ನಲ್ಲಿ ನನಗೆ ಕಾಣಿಸುವ ಏಕೈಕ ಮಾನವೀಯ ಗುಣವೆಂದರೆ, ಅವನು ಜೋರ್ಡನ್ ಆಫ್ ಸ್ಯಾಕ್ಸನೀಯ ಮುಂದೆ ಮಾಡಿಕೊಂಡ ತಪ್ಪೊಪ್ಪಿಗೆಯಲ್ಲಿ ತನಗೆ ಮುದುಕರಿಗಿಂತ ಹುಡುಗಿಯರ ಜೊತೆ ಮಾತನಾಡುವುದು ಇಷ್ಟ ಎಂದು ಹೇಳಿಕೊಂಡದ್ದು. ೧೨೪೨ ರಲ್ಲಿ ಪಂಥವು ಈ ಭಾಗವನ್ನು ಸ್ಥಾಪಕನ ಜೋರ್ಡನ್ ಬದುಕಿನಿಂದ ಕೈಬಿಡಬೇಕೆಂದು ತೀರ್ಪು ನೀಡಿದ್ದು.

ವಿಚಾರಣಾಧಿಕರಣದಲ್ಲಿ ಡಾಮಿನಿಕನ್‌ರು ಫ್ರಾನ್ಸಿಸ್ಕನ್‌ರಿಗಿಂತ ಹೆಚ್ಚು ಸಕ್ರಿಯರಾಗಿದ್ದರು. ಆದರೆ ಅವರು ಮನುಸಂಕುಲಕ್ಕೆ ಮಾಡಿದ ಬೆಲೆಬಾಳುವ ಸೇವೆಯೆಂದರೆ ತಮ್ಮ ವಿದ್ಯೆಯ ಬಗೆಗಿನ ಅರ್ಪಣಭಾವ. ಇದೇನೂ ಸಂತ ಡಾಮಿನಿಕ್‌ನ ಉದ್ದೇಶವಾಗಿರಲಿಲ್ಲ; ತನ್ನ ಪಂಥದ ಕ್ರೈಸ್ತಭಿಕ್ಷುಗಳು 'ಮತಧರ್ಮೇತರ ವಿಜ್ಞಾನಗಳನ್ನಾಗಲೀ ಮಾನವಿಕಗಳನ್ನಾಗಲೀ ನಿಭಾಯಿಸಕ್ಕದ್ದೇ ವಿನಾ ಕಲಿಯತಕ್ಕದ್ದಲ್ಲ' ಎಂದೇ ತೀರ್ಪಿತ್ತಿದ್ದ. ಈ ನಿಯಮವನ್ನು ೧೨೫೯ ರಲ್ಲಿ ಕೈಬಿಡಲಾಯಿತು, ಆನಂತರ ಡಾಮಿನಿಕನ್‌ರಿಗೆ ವಿದ್ಯೆಯ ಕಲಿಕೆಯು ಸುಲಭವಾಗುವಂತೆ ಮಾಡಲಾಯಿತು. ದೈಹಿಕಶ್ರಮವು ಅವರ ಕರ್ತವ್ಯದ ಭಾಗವಾಗಿರಲಿಲ್ಲ, ಅವರ ಆರಾಧನಾಸಮಯವನ್ನು ಮೊಟಕುಗೊಳಿಸಿ ಅಧ್ಯಯನಕ್ಕೆ ಹೆಚ್ಚು ಅವಕಾಶವೊದಗಿಸಲಾಯಿತು. ಅವರು ಕ್ರಿಸ್ತ ಮತ್ತು ಅರಿಸ್ಟಾಟಲ್‌ರನ್ನು ಹೊಂದಿಸಲು ಹೆಣಗಿದರು; ಸ್ವತಃ ಡಾಮಿನಿಕನ್‌ರಾದ ಆಲ್ಬರ್ಟಸ್ ಮ್ಯಾಗ್ನಸ್ ಮತ್ತು ಥಾಮಸ್ ಆಕ್ವಿನಾಸ್ ಅವರುಗಳು ಈ ಕಾರ್ಯವನ್ನು ತಮಗೆ ಸಾಧ್ಯವಾದ ಮಟ್ಟಿಗೂ ಸಾಧ್ಯವಾಗಿಸಿದರು. ಥಾಮಸ್ ಆಕ್ವಿನಾಸ್‌ನ ಪಾಂಡಿತ್ಯವು ಎಷ್ಟು ಆಳವಾದುದೆಂದರೆ ಆ ಮುಂದಿನ ಡಾಮನಿಕನ್‌ರು ತತ್ವಜ್ಞಾನದಲ್ಲಿ

ಅದಕ್ಕಿಂತ ಹೆಚ್ಚು ಸಾಧಿಸಲಾಗಲಿಲ್ಲ. ಫ್ರಾನ್ಸಿಸ್ಕನ್‌ರು ಡಾಮಿನಿಕ್‌ಗಿಂತ ಹೆಚ್ಚಾಗಿ ವಿದ್ಯೆಯನ್ನು ಇಷ್ಟಪಡದಿದ್ದರೂ, ಆ ಮುಂದಿನ ಅವಧಿಯ ಬಹು ದೊಡ್ಡ ಹೆಸರುಗಳು ಫ್ರಾನ್ಸಿಸ್ಕನ್‌ರೇ ಆಗಿದ್ದಾರೆ: ರೋಜರ್ ಬೇಕನ್, ಮತ್ತು ವಿಲಿಯಂ ಆಫ್ ಓಷನ್ ಫ್ರಾನ್ಸಿಸ್ಕನ್‌ರೇ ಆಗಿದ್ದರು. ಕ್ರೈಸ್ತಭಿಕ್ಷುಗಳ ತತ್ವಜ್ಞಾನಕ್ಕೆ ಏನು ಕೊಡುಗೆ ನೀಡಿದರು ಎಂಬುದು ಮುಂದಿನ ಅಧ್ಯಾಯಗಳ ವಿಷಯ.

○

೧೩

ಸಂತ ಥಾಮಸ್ ಆಕ್ವಿನಾಸ್

ಥಾಮಸ್ ಆಕ್ವಿನಾಸ್ (ಜನನ ೧೨೨೫ ಅಥವಾ ೧೨೨೬, ಮರಣ. ೧೨೭೪) ಅನ್ನು ಅತ್ಯಂತ ಶ್ರೇಷ್ಠ ಸೂಕ್ಷ್ಮತರ್ಕ ತತ್ವಜ್ಞಾನಿಯೆಂದು ಪರಿಗಣಿಸಲಾಗಿದೆ. ತತ್ವಜ್ಞಾನವನ್ನು ಬೋಧಿಸುವ ಎಲ್ಲ ಕ್ಯಾಥೋಲಿಕ್ ವಿದ್ಯಾಸಂಸ್ಥೆಗಳಲ್ಲಿ ಅವನ ಪದ್ಧತಿಯನ್ನು ಏಕೈಕ ಸಮಂಜಸ ಪದ್ಧತಿ ಎಂದು ಹೇಳಿಕೊಡಬೇಕು. ಇದು ಹದಿಮೂರನೆಯ ಲಿಯೋ ೧೮೭೯ ರಲ್ಲಿ ನೀಡಿದ ಲಿಖಿತ ತೀರ್ಪಿನ ಕಾಲದಿಂದ ಜಾರಿಯಲ್ಲಿದೆ. ಹೀಗಾಗಿ ಸಂತ ಥಾಮಸ್ ಆಕ್ವಿನಾಸ್ ಐತಿಹಾಸಿಕ ದೃಷ್ಟಿಯಿಂದ ಮಾತ್ರವಲ್ಲದೆ, ಪ್ಲೇಟೋ, ಅರಿಸ್ಟಾಟಲ್, ಕ್ಯಾಂಟ್ ಮತ್ತು ಹೆಗೆಲ್‌ರಂತೆ – ಹಾಗೆ ನೋಡಿದರೆ ಕೊನೆಯ ಇಬ್ಬರಿಗಿಂತ ಹೆಚ್ಚು – ಜೀವಂತ ಪ್ರಭಾವವಾಗಿದ್ದಾನೆ. ಬಹುತೇಕ ವಿಷಯಗಳಲ್ಲಿ ಅವನು ಅರಿಸ್ಟಾಟಲ್ ಅನ್ನು ಎಷ್ಟು ಸನಿಹದಿಂದ ಅನುಸರಿಸುತ್ತಾನೆಂದರೆ, ಕ್ಯಾಥೋಲಿಕ್‌ರಲ್ಲಿ ಸ್ಟಾಜಿರೈಟ್ ಮತಧರ್ಮಬೋಧಕರಲ್ಲಿ ಅತ್ಯಂತ ಅಧಿಕೃತನೆನಿಸಿದ್ದಾನೆ. ಅವನನ್ನು ಶುದ್ಧ ತತ್ವಜ್ಞಾನದ ವಿಷಯದಲ್ಲಿ ವಿಮರ್ಶೆಮಾಡುವುದು ಶ್ರದ್ಧಾಹೀನತೆಯೆಂದೇ ಪರಿಗಣಿತವಾಗುತ್ತದೆ.[೨೩೭] ಇದು ಯಾವಾಗಲೂ ಅಲ್ಲವೆಂಬುದೂ ನಿಜವೇ. ಆಕ್ವಿನಾಸ್‌ನ ಕಾಲದಲ್ಲಿ, ಪ್ಲೇಟೋ ವಿರುದ್ಧ ಅರಿಸ್ಟಾಟಲ್ ಪರವಾದ ಹೋರಾಟ ಇನ್ನೂ ಮುಗಿದಿರಲಿಲ್ಲ. ಅಕ್ವಿನಾಸ್‌ನ ಪ್ರಭಾವವು ಮತಧರ್ಮಸುಧಾರಣೆಯ ಕಾಲದವರೆಗೆ ಸುಸ್ಥಿರವಾಗಿತ್ತು; ಆನಂತರ ಮಧ್ಯಯುಗಕ್ಕಿಂತ ಈಗ ಹೆಚ್ಚು ಪರಿಚಿತನಾಗಿದ್ದ ಪ್ಲೇಟೋ, ಬಹುತೇಕ ತತ್ವಜ್ಞಾನಿಗಳ ಅಭಿಪ್ರಾಯದಲ್ಲಿ, ಮತ್ತೆ ಸರ್ವಶ್ರೇಷ್ಠನೆನಿಸಿದ. ಹದಿನೇಳನೆಯ ಶತಮಾನದಲ್ಲಿ ಸಂಪ್ರದಾಯನಿಷ್ಠನೂ ಕಾರ್ಟೀಸಿಯನ್‌ನೂ ಆಗಿರುವುದು ಸಾಧ್ಯವಾಯಿತು; ಪುರೋಹಿತನಾಗಿದ್ದರೂ ಮ್ಯಾಲೆಬ್ರಾಂಚೆಯನ್ನು ಯಾವಾಗಲೂ ಖಂಡಿಸಲಿಲ್ಲ.

---

೨೩೭. ನಾನು ಪ್ರಸಾರ ಭಾಷಣವೊಂದರಲ್ಲಿ ಹಾಗೆ ಮಾಡಿದಾಗ, ಅನೇಕ ಮಂದಿ ಕ್ಯಾಥೋಲಿಕ್‌ರು ಪ್ರತಿಭಟಿಸಿದರು.

ಆದರೆ ನಮ್ಮ ಕಾಲದಲ್ಲಿ ಅಂಥ ಸ್ವಾತಂತ್ರ್ಯವು ಗತಕಾಲದ್ದಾಗಿದೆ; ಕ್ಯಾಥೋಲಿಕ್ ಮತಧರ್ಮಬೋಧಕರಿಗೆ ತತ್ವಜ್ಞಾನದ ಬಗ್ಗೆ ಕಾಳಜಿಯಿರುವುದಾದರೆ ಅವರು ಸಂತ ಥಾಮಸ್ ಆಕ್ವಿನಾಸ್‌ನನ್ನು ಒಪ್ಪಿಕೊಳ್ಳಬೇಕು.

ಆಕ್ವಿನೋದ ಕೌಂಟ್‌ನ ಮಗ ಸಂತ ಥಾಮಸ್, ನೇಪಲ್ಸ್ ಸಾಮ್ರಾಜ್ಯದಲ್ಲಿ ಅಲ್ಲಿನ ಕೋಟೆಯು ಮಾಂಟೆ ಕ್ಯಾಸಿನೋಗೆ ಹತ್ತಿರವಾದುದಾಗಿತ್ತು, ಅಲ್ಲಿಯೇ 'ದೇವತಾಸಮಾನ ಡಾಕ್ಟರ್'ನ ವಿದ್ಯಾಭ್ಯಾಸವು ಆರಂಭವಾಯಿತು. ಅವನು ಆರು ವರ್ಷಗಳ ಕಾಲ ನೇಪಲ್ಸ್‌ನ ಎರಡನೆಯ ಫ್ರೆಡೆರಿಕ್ ವಿಶ್ವವಿದ್ಯಾನಿಲಯದಲ್ಲಿದ್ದ; ಆನಂತರ ಡಾಮಿನಿಕನ್ ಆಗಿ, ಆ ಕಾಲದ ತತ್ವಜ್ಞಾನಿಗಳಲ್ಲಿ ಪ್ರಮುಖ ಅರಿಸ್ಟಾಟೆಲಿಯನ್ ಎನಿಸಿದ್ದ ಆಲ್ಬರ್ಟಸ್ ಮ್ಯಾಗ್ನಸ್‌ನ ಬಳಿ ಕಲಿಯಲು ಕೊಲೋನ್‌ಗೆ ಹೋದ. ಕೊಲೋನ್ ಮತ್ತು ಪ್ಯಾರಿಸ್‌ಗಳಲ್ಲಿ ಕೆಲವು ಕಾಲ ಕಳೆದು, ೧೨೫೯ ರಲ್ಲಿ ಅವನಿ ಇಟಲಿಗೆ ವಾಪಸಾದ.; ಅಲ್ಲಿಯೇ ಅವನು, ೧೨೬೯–೭೨ ರ ನಡುವಣ ಅವಧಿಯ ಮೂರು ವರ್ಷಗಳ ಹೊರತಾಗಿ, ಕೊನೆಯವರೆಗೂ ಬದುಕಿದ. ಈ ಮೂರು ವರ್ಷಗಳು ಅವನು ಪ್ಯಾರಿಸ್‌ನಲ್ಲಿದ್ದ, ಅರಿಸ್ಟಾಟೆಲಿಯನ್‌ರಾಗಿದ್ದ ಕಾರಣದಿಂದಾಗಿ ಡಾಮಿನಿಕನ್‌ರು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಂದ ತೊಂದರೆಗೊಳಗಾಗಿದ್ದರು, ಅವರನ್ನು ಆಗ ವಿಶ್ವವಿದ್ಯಾನಿಲಯದಲ್ಲಿ ಪ್ರಬಲ ಪಕ್ಷವಾಗಿದ್ದ ಆವೆರಾಯಿಸ್ಟ್‌ರ ಪರವಾದ ಪಾಷಂಡಿಗಳು ಎಂಬ ಸಂಶಯದಿಂದ ಕಾಣುತ್ತಿದ್ದರು. ಆತ್ಮವು ವೈಯಕ್ತಿಕವಾದ್ದರಿಂದ ಮರ್ತ್ಯವಾದುದು ಎಂಬ ತಮ್ಮ ಅರಿಸ್ಟಾಟಲ್‌ನ ವ್ಯಾಖ್ಯಾನದ ಕಾರಣದಿಂದಾಗಿ ಆವೆರಾಯಿಸ್ಟ್‌ರು ನಂಬಿದ್ದರು; ಅಮರತ್ವವು ವ್ಯಕ್ತ್ಯತೀತವಾದ ಮತ್ತು ವಿವಿಧ ಬೌದ್ಧಿಕ ಜೀವಿಗಳಲ್ಲಿ ಸಮಾನವಾದ ಬುದ್ಧಿಗೆ ಮಾತ್ರ ಅನ್ವಯಿಸುವಂತಹುದ್ದು. ಈ ಸಿದ್ಧಾಂತವು ಕ್ಯಾಥೋಲಿಕ್ ಶ್ರದ್ಧೆಗೆ ವ್ಯತಿರಿಕ್ತವಾದದ್ದು ಎಂದು ಬಲವಂತವಾಗಿ ಹೇರಿದಾಗ, ಅವರು 'ದ್ವಿವಿಧ ಸತ್ಯ'ದ ಮೊರೆಹೊಕ್ಕರು; ಅದೆಂದರೆ ತತ್ವಶಾಸ್ತ್ರದಲ್ಲಿನ ತರ್ಕವನ್ನಾಧರಿಸಿದ ಒಂದು ಬಗೆ, ಮತ್ತು ಮತಧರ್ಮಶಾಸ್ತ್ರದಲ್ಲಿನ ದಿವ್ಯಜ್ಞಾನದ ಆಧಾರದ ಇನ್ನೊಂದು ಬಗೆ. ಇದರಿಂದ ಅರಿಸ್ಟಾಟಲ್ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡಿತು; ಪ್ಯಾರಿಸ್‌ನಲ್ಲಿದ್ದ ಸಂತ ಥಾಮಸ್, ಅರೇಬಿಯನ್ ಸಿದ್ಧಾಂತಗಳಿಗೆ ತೀರ ಸನಿಹವಾಗಿ ಅಂಟಿಕೊಂಡದ್ದರಿಂದ ಉಂಟಾದ ಹಾನಿಯನ್ನು ತೊಡೆದುಹಾಕುವ ಕಳಕಳಿ ತೋರಿದ. ತನ್ನ ಈ ಪ್ರಯತ್ನದಲ್ಲಿ ಅವನಿಗೆ ಅಭೂತಪೂರ್ವ ಯಶಸ್ಸು ದೊರೆಯಿತು.

ಆಕ್ವಿನಾಸ್‌ಗೆ ಅರಿಸ್ಟಾಟಲ್ ಬಗ್ಗೆ, ತನ್ನ ಹಿಂದಿನವರಿಗಿಂತ ಭಿನ್ನವಾಗಿ, ಸಂಪೂರ್ಣ ತಿಳಿವಳಿಕೆಯಿತ್ತು. ಅವನಿಗೆ ಗ್ರೀಕ್‌ನಿಂದ ಮಾಡಿದ ಭಾಷಾಂತರಗಳನ್ನು ಅವನ ಗೆಳೆಯ ವಿಲಿಯಂ ಮೊಯೆರ್‌ಬೇಕ್ ಒದಗಿಸಿದ, ಮತ್ತು ಅವುಗಳಿಗೆ ತಾನೇ ವ್ಯಾಖ್ಯಾನಗಳ್ಳೂ ಬರೆದ. ಅವನ ಕಾಲದವರೆಗೂ, ಅರಿಸ್ಟಾಟಲ್‌ನ ಬಗೆಗಿನ

ಕಲ್ಪನೆಯು ನವಪ್ಲೇಟೋವಾದಿಗಳಿಂದ ಮಸುಕಾಗಿತ್ತು. ಆದರೆ ಅವನು ಅಸಲಿ ಅರಿಸ್ಟಾಟಲ್ ಅನ್ನು ಅನುಸರಿಸಿದ, ಸಂತ ಆಗಸ್ಟೈನ್‌ನಲ್ಲಿ ಕಂಡುಬರುವಂತಹ ಪ್ಲೇಟೋವಾದವನ್ನೂ ಇಷ್ಟಪಡಲಿಲ್ಲ. ಕ್ರೈಸ್ತ ತಾತ್ವಿಕತೆಗೆ ನೆಲೆಯಾಗಿ ಪ್ಲೇಟೋಗಿಂತ ಅರಿಸ್ಟಾಟಲ್ ಪದ್ಧತಿಯನ್ನು ಅನುಸರಿಸಬೇಕೆನ್ನುವ ವಿಷಯದಲ್ಲಿ ಅವನು ಚರ್ಚ್ ಅನ್ನು, ಹಾಗೂ ಮಹಮ್ಮದೀಯರೂ ಕ್ರೈಸ್ತ ಆವೆರಾಯಿಸ್ಟರೂ ಅರಿಸ್ಟಾಟಲ್ ಅನ್ನು ಅಪವ್ಯಾಖ್ಯಾನಿಸಿರುವರೆಂಬ ಬಗ್ಗೆಯೂ ಮನವೊಲಿಸುವಲ್ಲಿ ಸಫಲನಾದ. ನನ್ನ ಮಟ್ಟಿಗೆ, 'ಡೆ ಅನಿಮ'ವು ಆವೆರಾಸ್ ಬಗ್ಗೆ ಆಕ್ವಿನಾಸ್‌ಗಿಂತ ತುಂಬ ಹೆಚ್ಚಿನ ಸಹಜ ದೃಷ್ಟಿಯನ್ನು ನೀಡುತ್ತದೆ. ಆದರೆ ಸಂತ ಥಾಮಸ್‌ನ ಕಾಲದಿಂದ ಚರ್ಚ್ ಬೇರೆ ರೀತಿಯೇ ಆಲೋಚಿಸಿದೆ. ಇನ್ನೂ ಹೇಳಬೇಕೆಂದರೆ, ತರ್ಕ ಮತ್ತು ತತ್ವಜ್ಞಾನದಲ್ಲಿನ ಬಹುತೇಕ ಪ್ರಶ್ನೆಗಳ ವಿಷಯದಲ್ಲಿ ಅರಿಸ್ಟಾಟಲ್‌ನ ಅಭಿಪ್ರಾಯಗಳು ಅಂತಿಮವಾಗಿರಲಿಲ್ಲ, ಆಗಿನಿಂದ ಅವುಗಳಲ್ಲಿ ಬಹುತೇಕ ದೋಷಪೂರ್ಣವಾದವು ಎಂಬುದು ಸಾಬೀತಾಗಿದೆ. ಈ ಅಭಿಪ್ರಾಯವನ್ನು ಕೂಡ ಕ್ಯಾಥೋಲಿಕ್ ತತ್ವಜ್ಞಾನಿಗಳಾಗಲೀ ಅಥವಾ ತತ್ವಜ್ಞಾನ ಬೋಧಕನಾಗಲೀ ಹೊಂದಲು ಅವಕಾಶವಿಲ್ಲ.

ಸಂತ ಥಾಮಸ್‌ನ ಬಹು ಮುಖ್ಯ ಕೃತಿ 'ಸುಮ್ಮ ಕಾಂಟ್ರಾ ಜೆನ್‌ಟೈಲ್ಸ್' ೧೨೫೯-೬೪ ರ ಅವಧಿಯಲ್ಲಿ ರಚಿತವಾಯಿತು. ಕ್ರೈಸ್ತಮತಧರ್ಮದ ಸತ್ಯತೆಯನ್ನು ಈಗಾಗಲೇ ಕ್ರೈಸ್ತನಲ್ಲದ ಓದುಗನಿಗೆ ಮನವರಿಕೆ ಮಾಡಿಸುವ ಬಗ್ಗೆ ಈ ಕೃತಿ ಕಾಳಜಿ ವಹಿಸುತ್ತದೆ. ಈ ಕಲ್ಪನೆಯ ಓದುಗನು ಅರಬ್‌ರ ತತ್ವಜ್ಞಾನದಲ್ಲಿ ಪರಿಣತಿ ಹೊಂದಿದ ವ್ಯಕ್ತಿಯಂತೆ ಕಾಣುತ್ತಾನೆ. ಅವನು ಮತ್ತೊಂದು ಪುಸ್ತಕವನ್ನೂ ರಚಿಸಿದ, 'ಸುಮ್ಮ ಥಿಯೋಲಜಿಯ', ಮೊದಲಿನದರಷ್ಟೇ ಮುಖ್ಯವಾದುದು, ಆದರೆ ಅದು ನಮಗೆ ಅಷ್ಟು ಆಸಕ್ತಿದಾಯಕವೆನಿಸದು, ಕಾರಣ ಕ್ರೈಸ್ತಮತಧರ್ಮದ ಸತ್ಯತೆಯ ಬಗ್ಗೆ ಮೊದಲೇ ಊಹಿಸಿರದ ವಾದಗಳನ್ನು ಅಷ್ಟು ಸಮಂಜಸವಾಗಿ ಸಿದ್ಧಪಡಿಸಿಲ್ಲದಿರುವುದು.

ಈ ಕೆಳಗೆ 'ಸುಮ್ಮ ಕಾಂಟ್ರಾ ಜೆನ್‌ಟೈಲ್ಸ್'ನ ಸಾರಸಂಗ್ರಹವನ್ನು ನೀಡಲಾಗಿದೆ:

'ವಿವೇಕ' (ವಿಸ್‌ಡಂ) ಎಂದರೇನೆಂಬುದನ್ನು ನಾವು ಮೊದಲು ಪರಿಶೀಲಿಸೋಣ. ವ್ಯಕ್ತಿಯೊಬ್ಬ ಯಾವುದೋ ಒಂದರ ಅನ್ವೇಷಣೆಯಲ್ಲಿ, ಉದಾಹರಣೆಗೆ ಕಟ್ಟಡ ನಿರ್ಮಾಣ, ವಿವೇಕಿಯಾಗಿರಬಹುದು, ಅಂದರೆ ಯಾವುದೋ ನಿರ್ದಿಷ್ಟ ಗುರಿಯನ್ನು ಸಾಧಿಸುವ ಮಾರ್ಗ ಅವನಿಗೆ ತಿಳಿದಿದೆ ಎಂಬುದು ಇದರ ಅರ್ಥ. ಆದರೆ ಎಲ್ಲ ನಿರ್ದಿಷ್ಟ ಗುರಿಗಳೂ ವಿಶ್ವದ ಉದ್ದೇಶದ ಭಾಗಗಳೇ, ಅಲ್ಲದೆ ವಿವೇಕ ಎಂದರೆ ವಿಶ್ವದ ಉದ್ದೇಶದ ಕಳಕಳಿ ಎಂದರ್ಥ. ವಿಶ್ವದ ಉದ್ದೇಶವು, ಅಂದರೆ ಸತ್ಯ, ಬುದ್ಧಿಗೆ ಒಳ್ಳೆಯದು. ಈ ಅರ್ಥದಲ್ಲಿ ವಿವೇಕದ ಅನ್ವೇಷಣೆಯು ಅತ್ಯಂತ ಪರಿಪೂರ್ಣವಾದದ್ದು, ಘನವಾದದ್ದು, ಲಾಭದಾಯಕವಾದದ್ದು ಮತ್ತು

ಅನ್ವೇಷಣೆಗಳಲ್ಲೆಲ್ಲ ಅತ್ಯಂತ ಸಂತೋಷಕರವಾದದ್ದು. ಈ ಎಲ್ಲವೂ 'ತತ್ವಜ್ಞಾನಿ' (ದ ಫಿಲಾಸಫರ್) ಯ, ಅಂದರೆ ಅರಿಸ್ಟಾಟಲ್‌ನ, ಅಧಿಕೃತತೆಗೆ ಮೊರೆಹೊಗುವಂತಹುದ್ದು.

ಕ್ಯಾಥೋಲಿಕ್ ಶ್ರದ್ಧೆಯು ಹೊಂದಿರುವ ಸತ್ಯತೆಯನ್ನು ಘೋಷಿಸುವುದೇ ನನ್ನ ಉದ್ದೇಶ ಎಂದವನು ಹೇಳುತ್ತಾನೆ. ಈ ಹಂತದಲ್ಲಿ ನಾನು ಸಹಜ ತರ್ಕದ ದಾರಿ ಹಿಡಿಯುತ್ತೇನೆ, ಯಾಕೆಂದರೆ ಮತಧರ್ಮೇತರರು ಮತಧರ್ಮಗ್ರಂಥಗಳ ಅಧಿಕಾರವಾಕ್ಕನ್ನು ಒಪ್ಪುವುದಿಲ್ಲ. ಆದರೆ ಸಹಜ ತರ್ಕವು ದೇವರ ವಿಷಯಗಳಿಗೆ ಸಂಬಂಧಿಸಿದಂತೆ ಕೊರತೆಯದು ಶ್ರದ್ಧೆಯ ಕೆಲವು ಭಾಗಗಳನ್ನಷ್ಟೇ ಅದು ಶ್ರುತಪಡಿಸಬಲ್ಲುದು, ಆದರೆ ದೇವರ ಅಸ್ತಿತ್ವ, ಆತ್ಮದ ಅವಿನಾಶತ್ವ, ಇವುಗಳನ್ನು ಸಾಬೀತುಗೊಳಿಸಬಹುದಾಗಲೀ, ತ್ರಿಮೂರ್ತಿತ್ವ, ಅಂತಿಮ ತೀರ್ಪು ಇಂತಹವುಗಳನ್ನಲ್ಲ. ಕ್ರೈಸ್ತ ಶ್ರದ್ಧೆಗನುಗುಣವಾಗಿ ತೋರಿಸಬಹುದಾದುದನ್ನೆಲ್ಲ, ಸಾಧ್ಯವಾದ ಮಟ್ಟಿಗೂ, ತೋರಿಸಬಹುದೇ ಹೊರತು ತರ್ಕವಿರುದ್ಧವಾದ ದೈವವಾಣಿಯ ಬಗೆಗಲ್ಲ. ಆದರೆ ತರ್ಕದ ಮೂಲಕ ಸಾಬಿತುಪಡಿಸಬಹುದಾದ ಮತ್ತು ಸಾಬೀತುಪಡಿಸಲಾಗದ ಶ್ರದ್ಧೆಯ ಭಾಗಗಳನ್ನು ವಿಂಗಡಿಸುವುದು ಮುಖ್ಯ. ಅದಕ್ಕನುಗುಣವಾಗಿ, ಸುಮ್ಮವನ್ನು ವಿಂಗಡಿಸಿರುವ ನಾಲ್ಕು ಭಾಗಗಳಲ್ಲಿನ ಮೊದಲು ಮೂರು, ತರ್ಕದ ಮೂಲಕ ಸಾಬೀತುಪಡಿಸುವ ತೀರ್ಮಾನಗಳು ದೈವವಾಣಿಗೆ ಅನುಗುಣವಾಗಿವೆ ಎಂಬುದರ ಹೊರತು, ದೈವವಾಣಿಗೇ ಮೊರೆಹೊಗುವಂತಹುವಲ್ಲ; ನಾಲ್ಕನೆಯ ಭಾಗವು ಮಾತ್ರವೇ ದೈವವಾಣಿಯ ಹೊರತಾಗಿ ಅನ್ಯತಃ ತಿಳಿಯಲು ಸಾಧ್ಯವಾಗದ ವಿಷಯಗಳಿಂದ ಕೂಡಿರುವಂತಹುದು.

ಮೊದಲನೆಯ ಹಂತವೆಂದರೆ, ದೇವರ ಅಸ್ತಿತ್ವವನ್ನು ಸಾಬೀತುಪಡಿಸುವುದು. ಕೆಲವರ ಪ್ರಕಾರ ಇದು ಅನವಶ್ಯಕ, ಯಾಕೆಂದರೆ (ಅವರ ಪ್ರಕಾರ) ಅದು ಸ್ವತಃಸಿದ್ಧವಾದುದು. ದೇವರ ಸಾರಸತ್ವ ನಮಗೆ ಅರ್ಥವಾದರೆ, ಇದು (ಮುಂದೆ ಸಾಬೀತುಪಡಿಸುವಂತೆ) ದೇವರಲ್ಲಿರುವುದು ನಿಜ, ಸಾರಸತ್ವ ಮತ್ತು ಅಸ್ತಿತ್ವ ಒಂದೇ. ಆದರೆ ನಮಗೆ 'ಅವನ' ಸಾರಸತ್ವ ಏನೆಂಬುದೇ ತಿಳಿಯದು, ತಿಳಿದಿರುವುದೆಲ್ಲ ಅಪರಿಪೂರ್ಣ. ದಡ್ಡರಿಗಿಂತ ವಿವೇಕಿಗಳಿಗೆ 'ಅವನ' ಸಾರಸತ್ವವು ಹೆಚ್ಚು ತಿಳಿದಿರುತ್ತದೆ, ಇವರಿಬ್ಬರಿಗಿಂತ ದೇವದೂತ(ಏಂಜಲ್)ನಿಗೆ ಹೆಚ್ಚು; ಆದರೆ ಯಾವನಿಗೂ ಅವನ ಸಾರಸತ್ವದ ಮೂಲಕ ಅವನ ಅಸ್ತಿತ್ವವನ್ನು ಸಾಬೀತುಪಡಿಸುವುದು ಮಾತ್ರ ಸಾಧ್ಯವಿಲ್ಲ. ಈ ಕಾರಣದಿಂದ, ಮೂಲತತ್ವಜ್ಞಾನದ (ಆಂಟೊಲಾಜಿಕಲ್) ಈ ವಾದ ತಿರಸ್ಕೃತವಾಗುತ್ತದೆ.

ಸಾಬೀತುಪಡಿಸಬಹುದಾದ ಮತಧಾರ್ಮಿಕ ಸತ್ಯಗಳನ್ನು ಶ್ರದ್ಧೆಯ ಮೂಲಕವೂ ತಿಳಿಯಲು ಸಾಧ್ಯ ಎಂಬುದನ್ನು ತಿಳಿದಿರುವುದು ಮುಖ್ಯ. ಸಾಕ್ಷ್ಯಗಳು (ಪ್ರೂಫ್ಸ್) ಕಷ್ಟಕರ, ಅವುಗಳನ್ನು ವಿದ್ಯಾವಂತ ಮಾತ್ರ ತಿಳಿಯಬಲ್ಲ, ಆದರೆ ದಡ್ಡ, ಹುಡುಗ,

ಮತ್ತು ವ್ಯಾವಹಾರಿಕ ಕಾರ್ಯದಿಂದಾಗಿ ತತ್ವಜ್ಞಾನವನ್ನು ಅಭ್ಯಾಸಮಾಡಲಾಗದವನಿಗೂ ಶ್ರದ್ಧೆ ಸಾಧ್ಯ. ಅಂತಹವರಿಗೆ ದೈವವಾಣಿ ಸಾಕು.

ದೇವರನ್ನು ಶ್ರದ್ಧೆಯಿಂದ ಮಾತ್ರ ತಿಳಿಯಲು ಸಾಧ್ಯ ಎಂಬುದು ಕೆಲವರ ಅಂಬೋಣ. ಅವರ ವಾದವೆಂದರೆ, ಸಾಬೀತುಗೊಳಿಸುವ ತತ್ವಗಳು ಇಂದ್ರಿಯಗಳ ಮೂಲಕ ಪಡೆಯುವ ಅನುಭವಗಳಿಂದ ತಿಳಿದಿದ್ದರೆ, 'ಪೋಸ್ಟೀರಿಯರ್ ಅನಲಿಟಿಕ್ಸ್'ನಲ್ಲಿ ಹೇಳಿದಂತೆ, ಇಂದ್ರಿಯಾತೀತವಾದವುಗಳನ್ನು ಸಾಬೀತುಗೊಳಿಸಲಾಗುವುದಿಲ್ಲ. ಆದರೆ ಇದು ಸಮಂಜಸವಲ್ಲ; ನಿಜವಾಗಿದ್ದರೂ, ದೇವರನ್ನು ಇಂದ್ರಿಯಗ್ರಾಹ್ಯ ಪರಿಣಾಮಗಳಿಂದಲೇ ತಿಳಿಯಬಹುದಾಗಿತ್ತು.

ಅರಿಸ್ಟಾಟಲ್‌ನಲ್ಲಿನಂತೆ ದೇವರ ಅಸ್ತಿತ್ವವನ್ನು *ಚಲಿತನಾಗದ ಚಲನಕಾರ*[೨೩೮] (ಅನ್‌ಮೂವ್ಡ್ ಮೂವರ್) ಎಂಬ ವಾದದ ಮೂಲಕ ಸಾಬೀತುಪಡಿಸಿದ್ದಾಯಿತು. ಚಲನೆಗೊಳಗಾಗುವ ಕೆಲವು ವಸ್ತುಗಳಿವೆ, ಮತ್ತೆ ಕೆಲವು ತಾವೂ ಚಲಿಸುತ್ತವೆ ಇತರವನ್ನೂ ಚಲಿಸುವಂತೆ ಮಾಡುತ್ತವೆ. ಚಲಿಸುವ ಪ್ರತಿಯೊಂದೂ ಬೇರೆಯದರಿಂದ ಚಲಿತಗೊಳ್ಳುತ್ತದೆ, ಮತ್ತು ಕೊನೆಯಿಲ್ಲದ ತಿರೋಗಮನವು (ರಿಗ್ರೆಸ್) ಅಸಾಧ್ಯವಾದುದರಿಂದ, ಎಲ್ಲಿಯೋ ಒಂದು ಕಡೆ, ತಾನೇ ಚಲಿಸದೆ ಇತರ ವಸ್ತುಗಳನ್ನು ಚಲಿಸುವಂತೆ ಮಾಡುವ ಯಾವುದೋ ಒಂದನ್ನು ತಲುಪುತ್ತೇವೆ. ಇಂತಹ ಚಲಿಸದೆ ಚಲಾಯಿಸುವುದೇ ದೇವರು. ಈ ವಾದವು ಚಲನೆಯ ನಿರಂತರತೆಯ ಆಧಾರಕಲ್ಪನೆಯನ್ನು ಹೊಂದಿದೆ ಎಂಬ ಆಕ್ಷೇಪಣೆಗೆ ಗುರಿಯಾಗಬಹುದು, ಆದರೆ ವಿರುದ್ಧ ಆಧಾರಕಲ್ಪನೆಯ ಮೂಲಕ ಇದನ್ನು ಪುಷ್ಟೀಕರಿಸಬಹುದು, ಅದರಲ್ಲಿ ಆರಂಭವಿದೆ, ಹಾಗಾಗಿ 'ಪ್ರಥಮ ಕಾರಣ' (ಫಸ್ಟ್ ಕಾಸ್) ವಿದೆ.

'ಸುಮ್ಮ ಥಿಯೋಲಜಿಯ'ದಲ್ಲಿ ದೇವರ ಅಸ್ತಿತ್ವದ ಕುರಿತು ಐದು ವಾದಗಳನ್ನು ಮಂಡಿಸಲಾಗಿದೆ. ಮೊದಲನೆಯದು, ಮೇಲೆ ಹೇಳಿದ *ಚಲಿತನಾಗದ ಚಲನಕಾರ* ವಾದ. ಎರಡನೆಯದು ಪ್ರಥಮ ಕಾರಣ ವಾದ, ಸತತ ತಿರೋಗಮನ ಅಸಾಧ್ಯವೆಂಬುದನ್ನು ಆಧರಿಸಿರುವಂತಹುದು. ಮೂರನೆಯದು, ಎಲ್ಲ ಆವಶ್ಯಕತೆಗಳ ಅಂತಿಮ ಮೂಲವೊಂದಿರಬೇಕು; ಇದು ಹೆಚ್ಚು ಕಡಿಮೆ ಎರಡನೆಯ ವಾದದಂತೆಯೇ ಇದೆ. ನಾಲ್ಕನೆಯದು, ಜಗತ್ತಿನಲ್ಲಿ ನಮಗೆ ಅನೇಕ ಪರಿಪೂರ್ಣತೆಗಳು ಕಾಣಿಸುತ್ತವೆ, ಇವಕ್ಕೆಲ್ಲ ಪರಿಪೂರ್ಣವಾದ ಯಾವುದೋ ಒಂದು ಮೂಲವಾಗಿರಬೇಕು. ಐದನೆಯದು, ನಿರ್ಜೀವ ವಸ್ತುಗಳಿಗೂ ಒಂದು ಉದ್ದೇಶವಿರುವುದು ಕಾಣುತ್ತದೆ, ಇದಕ್ಕೆ ಕಾರಣ ಅವುಗಳ ಹೊರತಾಗಿರುವ ಬೇರಾವುದೋ ಆಗಿರಬೇಕು, ಯಾಕೆಂದರೆ ಜೀವಂತ ವಸ್ತುಗಳಿಗೆ ಮಾತ್ರವೇ ಆಂತರಿಕ ಉದ್ದೇಶವಿರಬಲ್ಲದು.

---

೨೩೮. ಆದರೆ ಅರಿಸ್ಟಾಟಲ್‌ನಲ್ಲಿ ವಾದವು ೪೭ ಅಥವಾ ೫೫ ಮಂದಿ ದೇವರುಗಳೆಡೆ ಸಾಗುತ್ತದೆ.

ಈಗ 'ಸುಮ್ಮ ಕಾಂಟ್ರಾ ಜೆಂಟೈಲ್ಸ್' ಗೆ ಮರಳೋಣ. ದೇವರ ಅಸ್ತಿತ್ವವನ್ನು ಸಾಬೀತುಪಡಿಸಿದ ಬಳಿಕ, ನಾವೀಗ 'ಅವನ' ಬಗ್ಗೆ ಅನೇಕ ವಿಷಯಗಳನ್ನು ಹೇಳಬಹುದು; ಆದರೆ ಇವೆಲ್ಲವೂ, ಒಂದು ರೀತಿಯಲ್ಲಿ ನೇತ್ಯಾತ್ಮಕವಾದುವೇ: ದೇವರ ಸ್ವಭಾವವು ನಮಗೆ ತಿಳಿದಿರುವುದು ಯಾವುದಲ್ಲ ಎಂಬುದರ ಮೂಲಕ. ದೇವರು ಚಲಿತನಲ್ಲದ ಕಾರಣ ಚಿರಂತನ; ಅವನು ಬದಲಾಗದವನು, ಯಾಕೆಂದರೆ ಅವನಲ್ಲಿ ಕ್ರಿಯಾಹೀನ ಸಾಮರ್ಥ್ಯವಿಲ್ಲ. ಹದಿಮೂರನೆಯ ಶತಮಾನದ ಮೊದಲ ಭಾಗದಲ್ಲಿದ್ದ ಭೌತವಾದೀ ಸರ್ವದೇವತಾವಾದಿಯಾದ ದಿನಾಂತ್‌ದ ಡೇವಿಡ್ ದೇವರು ಅಂದರೆ ಮೂಲವಸ್ತುವೇ ಎಂದು 'ಅಬ್ಬರಿಸಿದ.' ಇದು ಅಸಂಬದ್ಧ, ಯಾಕೆಂದರೆ ಮೂಲವಸ್ತುವು ಶುದ್ಧ ನಿಷ್ಕ್ರಿಯ, ಆದರೆ ದೇವರು ಪರಿಶುದ್ಧ ಸಕ್ರಿಯ. ದೇವರಲ್ಲಿ ಯಾವುದೇ ಸಂರಚನೆಯಿಲ್ಲ, ಹೀಗಾಗಿ ಅವನು ವಸ್ತುವಲ್ಲ, ಯಾಕೆಂದರೆ ವಸ್ತುವಿಗೆ ಭಾಗಗಳಿರುತ್ತವೆ.

ದೇವರು ತನ್ನ ಸಾರಸತ್ವ, ಯಾಕೆಂದರೆ ಅನ್ಯತಃ ಅವನು ಸರಳನಲ್ಲ, ಅವನು ಸಾರಸತ್ವ ಮತ್ತು ಅಸ್ತಿತ್ವಗಳ ಸಂಯುಕ್ತ (ಈ ಅಂಶವು ಮುಖ್ಯವಾದುದು). ದೇವರಲ್ಲಿ ಸಾರಸತ್ವ ಮತ್ತು ಅಸ್ತಿತ್ವಗಳು ಅನ್ಯೋನ್ಯ. ದೇವರಲ್ಲಿ ಆಕಸ್ಮಿಕಗಳಿಲ್ಲ, ಅವನನ್ನು ಯಾವುದೇ ವಾಸ್ತವ ವ್ಯತ್ಯಾಸದ ಮೂಲಕ ನಿರ್ದಿಷ್ಟಪಡಿಸಲಾಗದು, ಅವನು ಯಾವುದೇ ಜೀವಜಾತದಲ್ಲಿ ಸೇರದವನು. ಅವನನ್ನು ವ್ಯಾಖ್ಯೆಯಲ್ಲಿ ಸೂತ್ರೀಕರಿಸಲಾಗುವುದಿಲ್ಲ; ಆದರೆ ಯಾವುದೇ ಜೀವಜಾತದ ಅದ್ಭುತತೆಯ ಕೊರತೆ ಅವನಲ್ಲಿಲ್ಲ. ವಸ್ತುಗಳು ಕೆಲವು ಬಗೆಗಳಲ್ಲಿ ದೇವರ ರೀತಿ, ಇತರ ರೀತಿಗಳಲ್ಲಿ ಅಲ್ಲ. ದೇವರು ವಸ್ತುಗಳ ಹಾಗಿದ್ದಾನೆ ಎನ್ನುವುದಕ್ಕಿಂತ ವಸ್ತುಗಳು ದೇವರ ಹಾಗಿರುತ್ತವೆ ಎನ್ನುವುದು ಹೆಚ್ಚು ಸೂಕ್ತ.

ದೇವರು ಒಳಿತು, ಅವನು ತನ್ನದೇ ಒಳ್ಳೆಯತನವಾಗಿದ್ದಾನೆ. ಅವನು ಎಲ್ಲ ಒಳ್ಳೆಯದರಲ್ಲಿನ ಒಳಿತು. ಅವನು ಬುದ್ಧಿವಂತ, ಅವನ ಬುದ್ಧಿಶಕ್ತಿಯ ಕಾರ್ಯವು ಅವನ ಸಾರಸತ್ವ. ತನ್ನ ಸಾರಸತ್ವದ ಮೂಲಕ ಅವನು ಅರ್ಥಮಾಡಿಕೊಳ್ಳುತ್ತಾನೆ, ತನ್ನನ್ನು ತಾನು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳುತ್ತಾನೆ. (ಜಾನ್ ದ ಸ್ಕಾಟ್ ಇದಕ್ಕೆ ಭಿನ್ನವಾದ ರೀತಿಯಲ್ಲಿ ಆಲೋಚಿಸಿದ ಎಂಬುದು ನೆನಪಾಗುತ್ತದೆ).

ದೈವಿಕ ಜ್ಞಾನ್ಮೆಯಲ್ಲಿ ಯಾವುದೇ ಸಂಯೋಜನೆಗಳಿಲ್ಲದಿದ್ದರೂ, ದೇವರು ಅನೇಕವನ್ನು ಅರ್ಥಮಾಡಿಕೊಳ್ಳಬಲ್ಲ. ಇದು ಕಷ್ಟಕರವೆಂದು ತೋರಬಹುದು, ಆದರೆ ಅವನು ಅರ್ಥಮಾಡಿಕೊಳ್ಳುವ ವಿಷಯಗಳು ಅವನ ಇರುವಿಕೆಯಿಂದ ಹೊರತಾದುವಲ್ಲ. ಪ್ಲೇಟೋ ಚಿಂತಿಸಿದಂತೆ, ಅವಕ್ಕೆ ತಮ್ಮದೇ ಅಸ್ತಿತ್ವವೂ ಇಲ್ಲ, ಯಾಕೆಂದರೆ ಸಹಜ ವಸ್ತುಗಳ ಸ್ವರೂಪವು ಭೌತವಸ್ತುವಿನ ಹೊರತಾಗಿ ಇರಲೂಲಾರವು ಮತ್ತು ಅವುಗಳನ್ನು ಅರ್ಥಮಾಡಿಕೊಳ್ಳಲೂ ಸಾಧ್ಯವಿಲ್ಲ. ಆದರೆ

ದೇವರು ಸೃಷ್ಟಿಗೆ ಮುಂಚೆ ರೂಪಗಳನ್ನು ಅರ್ಥಮಾಡಿಕೊಂಡಿರಬೇಕು. ಈ ತೊಡಕಿನ ಪರಿಹಾರ ಹೀಗಿದೆ: 'ದೈವಬುದ್ಧಿಯ ಪರಿಕಲ್ಪನೆಯು, ಅವನು ತನ್ನನ್ನು ತಾನು ಅರ್ಥಮಾಡಿಕೊಳ್ಳುವ ರೀತಿಯಲ್ಲಿ, ಆ ಪರಿಕಲ್ಪನೆಯು ಅವನದೇ ಶಬ್ದ, ದೇವರು ತನ್ನನ್ನು ತಾನು ಅರ್ಥಮಾಡಿಕೊಂಡ ಬಗೆಯು ತನ್ನದು ಮಾತ್ರವಾಗಿರದೆ, ದೈವಿಕವಾದ ಎಲ್ಲದರ ಸಾರಸತ್ವದ ರೀತಿಯೂ ಆಗಿರುತ್ತದೆ. ಹೀಗಾಗಿ, ದೈವಿಕ ಸಾರಸತ್ವ ಎಂಬ ಒಂದೇ ಜ್ಞೇಯ ಬಗೆಯಿಂದ ದೇವರು ಅನೇಕ ವಸ್ತುಗಳನ್ನು ಅರ್ಥಮಾಡಿಕೊಳ್ಳಬಲ್ಲ, ಮತ್ತು ಒಂದು ಅರ್ಥಮಾಡಿಕೊಂಡ ಇರಾದೆಯು ದೈವಿಕ ಶಬ್ದವೇ ಆಗಿರುತ್ತದೆ.'[೨೩೯] ಪ್ರತಿಯೊಂದು ರೂಪವೂ, ಅದು ಕ್ರಿಯಾತ್ಮಕವಾಗಿರುವುದೋ ಅಲ್ಲಿಯವರೆಗೆ, ಒಂದು ಪರಿಪೂರ್ಣತೆಯೇ: ದೇವರ ಬುದ್ಧಿಶಕ್ತಿಯು ಪ್ರತಿಯೊಂದಕ್ಕೂ ಯಾವುದು ಸೂಕ್ತ ಎಂಬ ಅವನ ಸಾರಸತ್ವವನ್ನು ಒಳಗೊಂಡಿರುತ್ತದೆ. ಅದು ಅವನಂತೆ ಎಲ್ಲಿದೆ, ಎಲ್ಲಿ ಇಲ್ಲ; ಉದಾಹರಣೆಗೆ, ಜೀವವು ಒಂದು ಸಸ್ಯದ ಸಾರಸತ್ವವೇ ಹೊರತು ಜ್ಞಾನವಲ್ಲ; ಪ್ರಾಣಿಯೊಂದರ ಸಾರಸತ್ವವು ಜ್ಞಾನವೇ ಹೊರತು ಬುದ್ಧಿಶಕ್ತಿಯಲ್ಲ. ಹೀಗೆ ಸಸ್ಯವು ಜೀವಂತವಾದುದರಿಂದಾಗಿ ದೇವರಂತೆ; ಆದರೆ ಬುದ್ಧಿಶಕ್ತಿ ಹೊಂದಿಲ್ಲದಿರುವುದರಿಂದ ಅವನಂತೆ ಅಲ್ಲ; ಪ್ರಾಣಿಯೊಂದು ಜ್ಞಾನವನ್ನು ಹೊಂದಿರುವುದರಿಂದ ದೇವರಂತೆ, ಆದರೆ ಬುದ್ಧಿಶಕ್ತಿಯನ್ನು ಹೊಂದಿಲ್ಲದಿರುವುದರಿಂದ ಅವನಂತೆ ಅಲ್ಲ. ಒಂದೊಂದು ಸೃಷ್ಟವೂ ಯಾವಾಗಲೂ ನೇತ್ಯಾತ್ಮಕತೆಯಿಂದ ದೇವರಿಗಿಂತ ಭಿನ್ನವಾಗುತ್ತದೆ.

ದೇವರು ಒಮ್ಮೆಗೇ ಎಲ್ಲ ವಸ್ತುಗಳನ್ನೂ ಅರಿಯಬಲ್ಲ. ಅವನ ಜ್ಞಾನ ರೂಢಿಯದಲ್ಲ, ಅದು ವಾದಾತ್ಮಕವೂ ಅಲ್ಲ ವಿವರಣಾತ್ಮಕವೂ ಅಲ್ಲ. ದೇವರು ಎಂದರೆ ಸತ್ಯ. (ಇದನ್ನು ವಾಚ್ಯದ ನೆಲೆಯಲ್ಲಿಯೇ ಅರ್ಥಮಾಡಿಕೊಳ್ಳಬೇಕು.)

ಈಗ ನಾವು ಪ್ಲೇಟೋ ಮತ್ತು ಅರಿಸ್ಟಾಟಲ್ ಇಬ್ಬರಿಗೂ ಕಾಟ ಕೊಟ್ಟಿದ್ದ ಪ್ರಶ್ನೆಯೊಂದರ ಕಡೆಗೆ ಬರುತ್ತೇವೆ. ದೇವರಿಗೆ ನಿರ್ದಿಷ್ಟ ವಸ್ತುಗಳ ತಿಳಿವಳಿಕೆ ಸಾಧ್ಯವೇ, ಅಥವಾ ಅವನಿಗೆ ವೈಶ್ವಿಕಗಳ ಜ್ಞಾನ ಮತ್ತು ಸಾಮಾನ್ಯ ಸತ್ಯಗಳು ಮಾತ್ರ ಗೊತ್ತೇ ಎಂಬುದು. ದೈವಾನುಗ್ರಹದಲ್ಲಿ ನಂಬಿಕೆಯಿರುವ ಕ್ರೈಸ್ತನು ದೇವರಿಗೆ ನಿರ್ದಿಷ್ಟ ವಸ್ತುಗಳೂ ಗೊತ್ತು ಎಂದು ನಂಬುತ್ತಾನೆ; ಆದರೆ ಇದರ ವಿರುದ್ಧ ತೂಕವಾದ ವಾದಗಳೂ ಇದ್ದವು. ಸಂತ ಥಾಮಸ್ ಅಂಥ ಏಳು ವಾದಗಳ ಪಟ್ಟಿ ನೀಡುತ್ತಾನೆ, ಆನಂತರ ಅವುಗಳನ್ನು ನಿರಾಕರಿಸುತ್ತಾನೆ. ಈ ಏಳು ವಾದಗಳು ಕೆಳಕಂಡಂತಿವೆ:

೨೩೯. 'ಸುಮ್ಮ ಕಾಂಟ್ರಾ ಜೆಂಟೈಲ್ಸ್', ಭಾಗ ೧, ಅಧ್ಯಾಯ ೪೩.

೧. ವೈಲಕ್ಷಣ್ಯ ಎಂಬುದು ಸಾಮೂಹಿಕವಾದದ್ದರಿಂದ (ಸಿಗ್ನೇಟ್ ಮ್ಯಾಟರ್) ಯಾವುದೇ ವಸ್ತ್ವೇತರವಾದುದು ಅದನ್ನು ತಿಳಿಯಲಾರದು

೨. ನಿರ್ದಿಷ್ಟಗಳು ಸದಾ ಇರುವಂತಹವಲ್ಲ, ಅವು ಅಸ್ತಿತ್ವದಲ್ಲಿಯೇ ಇಲ್ಲದಿರುವಾಗ ಅವುಗಳನ್ನು ತಿಳಿಯಲು ಸಾಧ್ಯವಿಲ್ಲ, ಹೀಗಾಗಿ ಅದನ್ನು ಬದಲಾಗದ ಅಸ್ತಿತ್ವವೊಂದು ತಿಳಿಯಲಾರದು.

೩. ನಿರ್ದಿಷ್ಟಗಳು ಅನಿಶ್ಚಿತವಾದದ್ದರಿಂದ ಆವಶ್ಯಕಗಳಲ್ಲ; ಹೀಗಾಗಿ, ಅಸ್ತಿತ್ವದಲ್ಲಿರುವಾಗ ಹೊರತು ಅವುಗಳ ಬಗ್ಗೆ ನಿಶ್ಚಿತ ತಿಳಿವಳಿಕೆ ಸಾಧ್ಯವಿಲ್ಲ

೪. ಕೆಲವು ನಿರ್ದಿಷ್ಟಗಳು ಇಚ್ಛಾಶಕ್ತಿಯಿಂದಾದವು, ಅವುಗಳನ್ನು ಬಯಸುವ ವ್ಯಕ್ತಿ ಮಾತ್ರವೇ ತಿಳಿಯಬಲ್ಲ.

೫. ನಿರ್ದಿಷ್ಟಗಳ ಸಂಖ್ಯೆ ಅನಿರ್ದಿಷ್ಟ, ಅನಿಶ್ಚಿತವಾದುವೇ ತಿಳಿಯಲಾರದವು.

೬. ನಿರ್ದಿಷ್ಟಗಳು ದೇವರ ಗಮನ ಸೆಳೆಯಲು ತೀರ ಕ್ಷುಲ್ಲಕಗಳು

೭. ಕೆಲವು ನಿರ್ದಿಷ್ಟಗಳಲ್ಲಿ ಕೆಡುಕು ಇರುತ್ತದೆ, ಆದರೆ ದೇವರು ಕೆಡುಕನ್ನು ತಿಳಿಯಲಾರ.

ದೇವರಿಗೆ ನಿರ್ದಿಷ್ಟಗಳನ್ನು ಅವುಗಳ ಕಾರಣವಾಗಿ ತಿಳಿದಿರುತ್ತದೆ; ಇನ್ನೂ ಅಸ್ತಿತ್ವಕ್ಕೆ ಬಾರದ ವಸ್ತುಗಳ ಬಗ್ಗೆ, ಕುಶಲಕರ್ಮಿಗೆ ತಾನು ಮಾಡಲಿರುವ ಯಾವುದರ ಬಗ್ಗೆಯೋ ಕಲ್ಪನೆಯಿರುವಂತೆ, ಅವನಿಗೆ ಅರಿವಿರುತ್ತದೆ; ಅವನು ಮುಂದಿನ ಸಂಭವನೀಯಗಳನ್ನು ಅರಿತಿರುತ್ತಾನೆ, ಯಾಕೆಂದರೆ ಅವನು ಪ್ರತಿಯೊಂದನ್ನೂ ಆ ಕಾಲದಲ್ಲಿ ಇದೆಯೆಂದೇ ತಿಳಿಯುತ್ತಾನೆ, ಆದರೆ ತಾನೇ ಆ ಕಾಲದಲ್ಲಿ ಇರುವುದಿಲ್ಲ; ಅವನಿಗೆ ನಮ್ಮ ಮನಸ್ಸುಗಳೂ ಮತ್ತು ರಹಸ್ಯ ಇಚ್ಛಾಶಕ್ತಿಗಳೂ ಗೊತ್ತು; ಅವನಿಗೆ ಅನಂತ ವಸ್ತುಗಳು ಗೊತ್ತಿರುತ್ತವೆ, ಅದು ನಮಗೆ ಸಾಧ್ಯವಿಲ್ಲ; ಅವನಿಗೆ ಕ್ಷುಲ್ಲಕ ವಿಷಯಗಳೂ ಗೊತ್ತು, ಯಾಕೆಂದರೆ ಯಾವುದೂ *ಸಂಪೂರ್ಣವಾಗಿ* ಕ್ಷುಲ್ಲಕವಲ್ಲ; ಅಲ್ಲದೆ ಪ್ರತಿಯೊಂದರಲ್ಲಿಯೂ ಒಂದು ಮಟ್ಟಿಗಿನ ಘನತೆಯಿರುತ್ತದೆ; ಇಲ್ಲದಿದ್ದರೆ ದೇವರಿಗೆ ತಾನು ಮಾತ್ರ ಗೊತ್ತಿರುತ್ತಿತ್ತು. ಅದಕ್ಕೂ ಮಿಗಿಲಾಗಿ, ವಿಶ್ವದ ವ್ಯವಸ್ಥೆಯು ಘನವಾದದ್ದು, ಕ್ಷುಲ್ಲಕ ಭಾಗದ ಅರಿವೇ ಇಲ್ಲದೆ ಇದನ್ನು ತಿಳಿಯಲು ಸಾಧ್ಯವಿಲ್ಲ. ಕೊನೆಯದಾಗಿ, ದೇವರಿಗೆ ಕೆಡುಕು ವಸ್ತುಗಳೂ ಗೊತ್ತು, ಯಾಕೆಂದರೆ ಒಳ್ಳೆಯದನ್ನು ತಿಳಿಯುವುದೆಂದರೆ ಅದರ ವಿರುದ್ಧವಾದ ಕೆಡುಕನ್ನೂ ತಿಳಿಯುವುದೇ ಆಗಿದೆ ಎಂದು ಆಕ್ವಿನಾಸ್ ಹೇಳುತ್ತಾನೆ.

ದೇವರಲ್ಲಿ ಇಚ್ಛಾಶಕ್ತಿಯಿದೆ, ಅವನ ಇಚ್ಛಾಶಕ್ತಿಯೇ ಅವನ ಸಾರಸತ್ವ, ಅದರ ಪ್ರಮುಖ ವಸ್ತುವೆಂದರೆ ದೈವಿಕ ಸಾರಸತ್ವ, ತನ್ನಲ್ಲಿಯೇ ಸಂಕಲ್ಪಿಸುತ್ತ ದೇವರು ಇತರ ವಸ್ತುಗಳನ್ನೂ ಸಂಕಲ್ಪಿಸುತ್ತಾನೆ, ಯಾಕೆಂದರೆ ಎಲ್ಲದರ ಗಮ್ಯವೂ ದೇವರೇ. ಇನ್ನೂ ಇಲ್ಲದವುಗಳನ್ನೂ ಅವನು ಸಂಕಲ್ಪಿಸುತ್ತಾನೆ, ಅವನು ತನ್ನ ಇರುವಿಕೆಯನ್ನು

ಮತ್ತು ಒಳ್ಳೆಯದನ್ನು ಸಂಕಲ್ಪಿಸುತ್ತಾನೆ, ಆದರೆ ಇತರ ವಸ್ತುಗಳು, ಅವನು ಸಂಕಲ್ಪಿಸಿದರೂ, ಅವನು ಅನಿವಾರ್ಯವಾಗಿ ಸಂಕಲ್ಪಿಸುವುದಿಲ್ಲ. ದೇವರಲ್ಲಿ ಸ್ವತಂತ್ರಇಚ್ಛಾಶಕ್ತಿಯಿದೆ; ಅವನ ಇಚ್ಛಾಶಕ್ತಿಗೆ ಕಾರಣವನ್ನು ಹುಡುಕಬಹುದು; ಆದರೆ ಉದ್ದೇಶವನ್ನಲ್ಲ. ತಮ್ಮಲ್ಲೇ ಅಸಾಧ್ಯದ ವಸ್ತುಗಳನ್ನವನು ಸಂಕಲ್ಪಿಸುವುದಿಲ್ಲ; ಉದಾಹರಣೆಗೆ, ಅವನು ವಿರೋಧಗಳನ್ನು ಸತ್ಯವಾಗಿ ಮಾಡಲಾರ. ದಿವ್ಯಸಾಮರ್ಥ್ಯವನ್ನೂ ಮೀರಿದ ಯಾವುದೋ ಒಂದರ ಉದಾಹರಣೆಯು ಸಂತನಲ್ಲಿ ಅಷ್ಟೇನೂ ಸಂತಸಕರವಲ್ಲ; ದೇವರು ಮನುಷ್ಯನನ್ನು ಕತ್ತೆಯಾಗಿ ಮಾಡಲಾರ ಎಂದವನು ಹೇಳುತ್ತಾನೆ.

ದೇವರಲ್ಲಿ ಆನಂದ ಸಂತೋಷ ಮತ್ತು ಪ್ರೇಮಗಳಿವೆ; ದೇವರು ಯಾವುದನ್ನೂ ದ್ವೇಷಿಸುವುದಿಲ್ಲ, ದೇವರಲ್ಲಿ ಧ್ಯಾನಾತ್ಮಕವೂ ಸಕ್ರಿಯವೂ ಆದ ಸದ್ಗುಣವಿದೆ. ಅವನು ಸಂತೋಷದಿಂದಿರುತ್ತಾನೆ, ಅವನೇ ಅವನ ಸಂತೋಷ.

ಈಗ ನಾವು (ಭಾಗ ೨) ಸೃಷ್ಟಗಳ ಬಗೆಗಿನ ಚರ್ಚೆಯ ಕಡೆ ಬರುತ್ತೇವೆ. ದೇವರ ವಿರುದ್ಧಧ ದೋಷಗಳನ್ನು ಅಲ್ಲಗಳೆಯುವುದಕ್ಕೆ ಇದು ತುಂಬ ಉಪಯುಕ್ತವಾಗುತ್ತವೆ. ದೇವರು ಶೂನ್ಯದಿಂದ ಜಗತ್ತನ್ನು ಸೃಷ್ಟಿಸಿದ, ಇದು ಪ್ರಾಚೀನರ ಅಭಿಪ್ರಾಯಗಳಿಗೆ ವಿರುದ್ಧವಾದುದು. ದೇವರು ಮಾಡಲಾರದ ವಸ್ತುಗಳ ವಿಷಯದ ಕಡೆಗೆ ಇದು ಮರಳುತ್ತದೆ. ಅವನು ಒಂದು ದೇಹವಾಗಿರಲಾರ, ಅಥವಾ ತನ್ನನ್ನು ಬದಲಾಯಿಸಿಕೊಳ್ಳಲಾರ, ಅವನು ವಿಫಲನಾಗುವುದಿಲ್ಲ; ಅವನಿಗೆ ದಣಿವಾಗುವುದಿಲ್ಲ; ಮರೆಯುವುದಿಲ್ಲ, ಅವನು ಪಶ್ಚಾತ್ತಾಪ ಪಡುವುದಿಲ್ಲ; ಅಥವಾ ಕೋಪಗೊಳ್ಳುವುದಿಲ್ಲ, ಮತ್ತು ದುಃಖಗೊಳ್ಳುವುದಿಲ್ಲ. ಅವನು ಆತ್ಮವಿಲ್ಲದ ಮನುಷ್ಯನನ್ನು ಮಾಡಲಾರ; ಅಥವಾ ತ್ರಿಭುಜದ ಕೋನಗಳ ಮೊತ್ತವು ಎರಡು ಸಮಕೋನಗಳ ಮೊತ್ತಕ್ಕೆ ಭಿನ್ನವಾಗಿಸಲಾರ. ಅವನು ಭೂತಕಾಲದಲ್ಲಾದುದನ್ನು ಇಲ್ಲವಾಗಿಸಲಾರ, ಪಾಪ ಮಾಡಲಾರ, ಮತ್ತೊಬ್ಬ ದೇವರನ್ನು ಸೃಷ್ಟಿಸಲಾರ ಅಥವಾ ತನ್ನನ್ನು ಅಸ್ತಿತ್ವರಹಿತನನ್ನಾಗಿ ಮಾಡಲಾರ.

ಭಾಗ ೨ ರಲ್ಲಿ ಮನುಷ್ಯನ ಆತ್ಮದ ಬಗೆಗಿನ ಚರ್ಚೆ ತುಂಬಿದೆ. ಎಲ್ಲ ಬೌದ್ಧಿಕ ದ್ರವ್ಯಗಳೂ ವಸ್ತ್ವತೀತವಾದವು ಮತ್ತು ಶಾಶ್ವತವಾದವು; ದೇವದೂತರಿಗೆ ದೇಹಗಳಿಲ್ಲ, ಆದರೆ ಮನುಷ್ಯನಲ್ಲಿ ಆತ್ಮವನ್ನು ದೇಹಕ್ಕೆ ಜೋಡಿಸಲಾಗಿದೆ. ಅದೇ ದೇಹದ ಸ್ವರೂಪ, ಅರಿಸ್ಟಾಟಲ್‌ನಲ್ಲಿಯಂತೆ. ಮನುಷ್ಯನಲ್ಲಿ ಮೂರು ಆತ್ಮಗಳಿಲ್ಲ, ಇರುವುದು ಒಂದೇ. ಆತ್ಮವು ಇಡಿಯಾಗಿ ದೇಹದ ಪ್ರತಿ ಭಾಗದಲ್ಲಿಯೂ ಇರುತ್ತದೆ. ಪ್ರಾಣಿಗಳ ಆತ್ಮಗಳು, ಮನುಷ್ಯನದಕ್ಕೆ ಭಿನ್ನವಾಗಿ, ಅಮರವಲ್ಲ. ಬುದ್ಧಿಶಕ್ತಿಯು ಪ್ರತಿಯೊಬ್ಬ ಮನುಷ್ಯನ ಆತ್ಮದ ಭಾಗ; ಆವೆರಾಸ್ ಹೇಳಿದಂತೆ, ವಿವಿಧ ವ್ಯಕ್ತಿಗಳು ಭಾಗವಹಿಸುವ ಒಂದೇ ಬುದ್ಧಿಯಲ್ಲ ಇರುವುದು. ಆತ್ಮವು ವೀರ್ಯದ ಮೂಲಕ

ಸ್ಥಳಾಂತರಗೊಳ್ಳುವುದಿಲ್ಲ, ಆದರೆ ಪ್ರತಿ ವ್ಯಕ್ತಿಯಲ್ಲಿಯೂ ಹೊಸತಾಗಿ ಸೃಷ್ಟಿತವಾಗುತ್ತದೆ. ಇದರಲ್ಲಿ ಒಂದು ತೊಡಕಿರುವುದು ನಿಜ: ಮದುವೆಯ ಕಾರಣವಾಗಿ ವ್ಯಕ್ತಿಯೊಬ್ಬ ಹುಟ್ಟಿದಾಗ, ದೇವರು ಹಾದರಕ್ಕೆ ಇಂಬುಗೊಟ್ಟಂತೆ ಕಾಣುತ್ತದೆ. ಆದರೆ ಈ ಆಕ್ಷೇಪಣೆಯು ಕೇವಲ ತೋರಿಕೆಯದು. (ಸಂತ ಆಗಸ್ಟೈನ್ ಅನ್ನು ಇಕ್ಕಟ್ಟಿಗೆ ಸಿಲುಕಿಸಿದ ಒಂದು ಗಂಭೀರ ಆಕ್ಷೇಪಣೆಯಿತ್ತು: ಅದು ಮೂಲ ಪಾಪದ ಜನ್ಮಾಂತರಕ್ಕೆ ಸಂಬಂಧಿಸಿದ್ದು. ಪಾಪಗೈಯುವುದು ಆತ್ಮ, ಆತ್ಮವು ಜನ್ಮಾಂತರಕ್ಕೊಳಗಾಗದಿದ್ದರೆ, ಹಾಗೂ ಹೊಸತಾಗಿ ಸೃಷ್ಟಿತವಾಗಿದ್ದರೆ, ಅದು ಆಡಮ್‌ನ ಪಾಪವನ್ನು ಹೇಗೆ ಹೊಂದಲು ಸಾಧ್ಯ? ಇದನ್ನಿಲ್ಲಿ ಚರ್ಚಿಸಿಲ್ಲ.)

ಬುದ್ಧಿಶಕ್ತಿಗೆ ಸಂಬಂಧಿಸಿದಂತೆ, ವೈಶ್ವಿಕತೆಯ ಸಮಸ್ಯೆಯನ್ನು ಚರ್ಚಿಸಲಾಗಿದೆ. ಸಂತ ಥಾಮಸ್‌ನ ನಿಲವು ಅರಿಸ್ಟಾಟಲ್‌ನದು. ವೈಶ್ವಿಕಗಳು ಆತ್ಮಕ್ಕೆ ಹೊರತಾಗಿ ಇರಲಾರವು, ಆದರೆ ವೈಶ್ವಿಕಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಬುದ್ಧಿಶಕ್ತಿಯು ಆತ್ಮಕ್ಕೆ ಹೊರತಾಗಿ ವಿಷಯಗಳನ್ನು ತಿಳಿಯಬಲ್ಲುದು.

ಮೂರನೆಯ ಭಾಗವು ಹೆಚ್ಚಾಗಿ ನೈತಿಕ ಪ್ರಶ್ನೆಗಳನ್ನು ಕುರಿತದ್ದಾಗಿದೆ. ಕೆಡುಕು ಬುದ್ಧಿಪೂರ್ವಕವಲ್ಲದ್ದು, ಅದೇನೂ ಸಾರಸತ್ವವಲ್ಲ, ಅದಕ್ಕೆ ಆಕಸ್ಮಿಕ ಕಾರಣವೊಂದಿದ್ದು ಅದು ಒಳ್ಳೆಯದು. ಎಲ್ಲ ವಸ್ತುಗಳೂ ಎಲ್ಲದರ ಗಮ್ಯಸ್ಥಾನವಾದ ದೇವರಂತೆಯೇ ಇರುವ ಪ್ರವೃತ್ತಿಯನ್ನು ಹೊಂದಿರುತ್ತವೆ. ಮಾನವ ಸೌಖ್ಯವು ಗೌರವ, ವೈಭವ, ಶ್ರೀಮಂತಿಕೆ, ಐಹಿಕ ಅಧಿಕಾರ, ದೇಹದ ವಸ್ತುಗಳ ಇಂದ್ರಿಯ ಸಂತೋಷವನ್ನು ಹೊಂದಿರುವುದಿಲ್ಲ; ಅದು ಇಂದ್ರಿಯಗಳಲ್ಲಿ ನೆಲಸಿರುವುದೂ ಇಲ್ಲ. ಮನುಷ್ಯನ ಆತ್ಯಂತಿಕ ಸೌಖ್ಯವು ಯಾವುದೇ ನೈತಿಕ ಸದ್ಗುಣದ ಕ್ರಿಯೆಗಳಲ್ಲಿರುವುದಿಲ್ಲ, ಯಾಕೆಂದರೆ ಅವು ಕೇವಲ ಸಾಧನಗಳು; ಅದು ಇರುವುದು ದೇವರ ಕುರಿತ ಧ್ಯಾನದಲ್ಲಿ. ಆದರೆ ಬಹುಜನರು ಹೊಂದಿರುವ ದೇವರ ಬಗೆಗಿನ ಜ್ಞಾನವು ಸಾಕಾಗದು; ಅಥವಾ ಅವನ ಕುರಿತ ಜ್ಞಾನಪ್ರದರ್ಶನದಲ್ಲಿರುವುದಿಲ್ಲ; ಅಥವಾ ಶ್ರದ್ಧೆಯ ಮೂಲಕ ಪಡೆದ ಜ್ಞಾನದಲ್ಲಿಯೂ ಇರದು. ಈ ಬದುಕಿನಲ್ಲಿ ನಾವು ದೇವರನ್ನು ಅವನ ಸಾರಸತ್ವದಲ್ಲಿ ಕಾಣಲಾರೆವು, ಅಥವಾ ಆತ್ಯಂತಿಕ ಸೌಖ್ಯವನ್ನು ಹೊಂದಲಾರೆವು; ಆದರೆ ಇಲ್ಲಿನ ನಂತರ ಅವನನ್ನು ಮುಖಾಮುಖಿಯಾಗಿ ನೋಡುತ್ತೇವೆ. (ಆದರೆ ಅಕ್ಷರಶಃ ಅಲ್ಲ, ಯಾಕೆಂದರೆ ದೇವರಿಗೆ ಮುಖ ಇಲ್ಲ ಎಂದು ಎಚ್ಚರಿಸಲಾಗಿದೆ.) ಇದು ಸಂಭವಿಸುವುದು ನಮ್ಮ ಸಹಜ ಸಾಮರ್ಥ್ಯದಿಂದಲ್ಲ, ಅದು ಸಾಧ್ಯವಾಗುವುದು ದೈವಿಕ ಪ್ರಭೆಯಿಂದ, ಆಗಲೂ ಸಹ, ನಾವು ಅವನ ಸಮಸ್ತವನ್ನೂ ಕಾಣಲಾರೆವು. ಈ ದರ್ಶನದಿಂದ ನಾವು ಚಿರಂತನ ಬದುಕಿನ, ಅಂದರೆ ಕಾಲಾತೀತ ಬದುಕಿನ, ಭಾಗವಾಗುತ್ತೇವೆ.

ದೈವಾನುಗ್ರಹವು ಕೆಡುಕು, ಆಕಸ್ಮಿಕತೆ, ಸ್ವತಂತ್ರಚಿಂತನೆ, ಅದೃಷ್ಟ ಅಥವಾ ಅನಿರೀಕ್ಷಿತತೆಗಳನ್ನು ಹೊರತುಪಡಿಸುವುದಿಲ್ಲ, ಕೆಡುಕು ಉಂಟಾಗುವುದು ಎರಡನೆಯ ಕಾರಣಗಳಿಂದ, ಒಳ್ಳೆಯ ಕಲೆಗಾರನಲ್ಲಿರುವ ಕೆಟ್ಟ ಸಾಧನಗಳಂತೆ.

ದೇವದೂತರೆಲ್ಲ ಸಮಾನರಲ್ಲ, ಅವರಲ್ಲಿಯೂ ಶ್ರೇಣೀಕರಣವಿದೆ. ಆದರೆ ದೇವದೂತನೆಂಬುವವನು ಅವನ ವರ್ಗದ ಒಂದು ಮಾದರಿ, ಯಾಕೆಂದರೆ ದೇವದೂತನಿಗೆ ದೇಹವಿಲ್ಲ, ಅವರು ನಿರ್ದಿಷ್ಟ ಭಿನ್ನತೆಗಳಿಂದ ಬೇರೆಯಾಗುತ್ತಾರೆಯೇ ಹೊರತು ಸ್ಥಾನ ಅಥವಾ ಅವಕಾಶದಿಂದಾಗಿ ಅಲ್ಲ

ಜ್ಯೋತಿಷ್ಯವನ್ನು ಯಥಾಪ್ರಕಾರದ ಕಾರಣಗಳಿಗಾಗಿ ತಿರಸ್ಕರಿಸಬೇಕು. "ವಿಧಿ ಎಂಬುದಿದೆಯೇ?" ಎಂಬ ಪ್ರಶ್ನೆಗೆ ಉತ್ತರವೀಯುತ್ತ ಆಕ್ವಿನಾಸ್, ದೈವಾನುಗ್ರಹದ ಪ್ರಭಾವದ ಮೇಲೆ 'ವಿಧಿ' ಎಂದು ಹೇಳಬಹುದು. ಆದರೆ ಹಾಗೆ ಮಾಡದಿರುವುದೇ ಉತ್ತಮ, ಯಾಕೆಂದರೆ 'ವಿಧಿ' ಒಂದು ಕ್ರೈಸ್ತೇತರ ಶಬ್ದ. ದೈವಾನುಗ್ರಹವು ಬದಲಾಗದುದಾದರೂ ಪ್ರಾರ್ಥನೆಯು ಉಪಯುಕ್ತವಾದುದು ಎಂಬ ವಾದದೆಡೆಗೆ ಇದು ಕೊಂಡೊಯ್ಯುತ್ತದೆ. (ನನಗೆ ಈ ವಾದವು ಅರ್ಥವಾಗಿಲ್ಲ.) ದೇವರು ಕೆಲವೊಮ್ಮೆ ಪವಾಡಗಳನ್ನೆಸಗುತ್ತಾನೆ, ಆದರೆ ಬೇರಾರೂ ಹಾಗೆ ಮಾಡಲಾರರು. ಆದರೆ ಮಾಟವನ್ನು ದೆವ್ವಗಳೊಡನೆ ಮಾಡಲು ಸಾಧ್ಯವಿದೆ, ಇದೇನೂ ಪವಾಡಗಳಲ್ಲ, ನಕ್ಷತ್ರಗಳ ಸಹಾಯದಿಂದ ಇವು ನಡೆಯುವುದಿಲ್ಲ.

'ದೈವ ನಿಯಮ'ವು ದೇವರನ್ನು ಪ್ರೀತಿಸುವಂತೆ ಮಾಡುತ್ತದೆ; ಜೊತೆಗೆ, ಕಡಿಮೆ ತೀವ್ರತೆಯಲ್ಲಿ, ನಮ್ಮ ನೆರೆಯವನನ್ನು. ಅದು ವ್ಯಭಿಚಾರವನ್ನು ನಿಷೇಧಿಸುತ್ತದೆ, ಯಾಕೆಂದರೆ ಮಕ್ಕಳನ್ನು ಬೆಳೆಸುವಾಗ ತಂದೆಯು ತಾಯಿಯ ಜೊತೆಯಲ್ಲಿ ವಾಸಿಸಬೇಕು. ಅದು ಸಂತಾನ ನಿಯಂತ್ರಣವನ್ನು ನಿಷೇಧಿಸುತ್ತದೆ, ಅದು ನಿಸರ್ಗವಿರುದ್ಧವೆಂಬ ಕಾರಣಕ್ಕಾಗಿ; ಆದರೆ ಅದು ಈ ಕಾರಣದಿಂದ ಜೀವಮಾನಪರ್ಯಂತದ ಬ್ರಹ್ಮಚರ್ಯವನ್ನು ನಿಷೇಧಿಸುವುದಿಲ್ಲ. ದಾಂಪತ್ಯವು ಅವಿಭಜನೀಯವಾಗಿರಬೇಕು, ಯಾಕೆಂದರೆ ಮಕ್ಕಳ ವಿದ್ಯಾಭ್ಯಾಸಕ್ಕೆ ತಂದೆಯಿರಬೇಕು, ಅದಕ್ಕೆ ಕಾರಣ ಅವನು ತಾಯಿಗಿಂತ ಹೆಚ್ಚು ವಿಚಾರವಂತ ಎನ್ನುವುದರೊಡನೆ, ಶಿಕ್ಷೆ ನೀಡುವುದು ಅನಿವಾರ್ಯವಾದಾಗ ಅವನಿಗೆ ದೈಹಿಕ ಶಕ್ತಿ ಹೆಚ್ಚು ಎಂಬ ಕಾರಣಕ್ಕಾಗಿ. ಎಲ್ಲ ಲೈಂಗಿಕ ಸಂಭೋಗವೂ ಪಾಪಕರವಲ್ಲ, ಯಾಕೆಂದರೆ ಅದು ಸಹಜವಾದುದು; ಆದರೆ ದಾಂಪತ್ಯಜೀವನವು ಬ್ರಹ್ಮಚರ್ಯದಷ್ಟೇ ಒಳ್ಳೆಯದು ಎಂದು ಯೋಚಿಸುವುದು ಜೋವಿನಿಯನ್ ಪಾಷಂಡಿತನ. ಕಟ್ಟುನಿಟ್ಟಾದ ಏಕದಾಂಪತ್ಯ (ಮಾನೋಗಮಿ) ಇರಬೇಕು; ಬಹುಪತಿತ್ವ ಹೆಂಗಸರಿಗೆ ಒಳ್ಳೆಯದಲ್ಲ; ಬಹುಪತಿತ್ವವು ಪಿತೃತ್ವವು ಅನಿಶ್ಚಿತವಾಗುವಂತೆ ಮಾಡುತ್ತದೆ. ಧರ್ಮವಿರೋಧಿ ಸಂಬಂಧವನ್ನು ನಿಷೇಧಿಸಬೇಕು, ಅದರಿಂದ ಕೌಟುಂಬಿಕ ಜೀವನವು ಗೊಂದಲಪೂರ್ಣವಾಗುತ್ತದೆ. ಸೋದರ-

ಸೋದರಿ ಸಂಬಂಧದ ವಿರುದ್ಧ ಕುತೂಹಲಕಾರೀ ವಾದವೊಂದಿದೆ: ಗಂಡಹೆಂಡಿರ ಪ್ರೇಮವು ಸೋದರ-ಸೋದರಿಯರ ಪ್ರೀತಿಯೊಡನೆ ಸೇರಿದರೆ, ಪರಸ್ಪರ ಆಕರ್ಷಣೆಯು ಎಷ್ಟು ತೀವ್ರವಾಗುತ್ತದೆಂದರೆ ಅದರಿಂದಾಗಿ ಬೇಕಾದುದಕ್ಕಿಂತ ಹೆಚ್ಚಿನ ಸಂಭೋಗಾಸಕ್ತಿಯುಂಟಾಗುತ್ತದೆ.

ಲೈಂಗಿಕ ನೈತಿಕತೆಯ ಬಗೆಗಿನ ಈ ಎಲ್ಲ ವಾದಗಳನ್ನು, ದೈವಾಜ್ಞೆ ಮತ್ತು ನಿಷೇಧಗಳಲ್ಲದೆ, ಶುದ್ಧ ವೈಚಾರಿಕ ಪರಿಗಣನೆಗೂ ಸಲ್ಲುವಂತಹವು. ಮೊದಲ ಮೂರು ಭಾಗಗಳಲ್ಲಿಯಂತೆಯೇ ಇಲ್ಲಿಯೂ, ವಾದವೊಂದರ ಕೊನೆಯಲ್ಲಿ ವೈಚಾರಿಕತೆಯು ತನ್ನನ್ನು ಮತಧರ್ಮಗ್ರಂಥಗಳ ತೀರ್ಮಾನಗಳಿಗೆ ಹೊಂದಿಕೆಯಾಗುವ ಭಾಗಗಳನ್ನು ಉದ್ಧೃತಗೊಳಿಸುವುದರಲ್ಲಿ ಆಕ್ವಿನಾಸ್ ಸಂತುಷ್ಟನಾಗುತ್ತಾನೆ. ಆದರೆ ತನ್ನ ತೀರ್ಮಾನವನ್ನು ತಲುಪುವ ಮುಂಚೆಯೇ ಅವನು ಮತಧರ್ಮಗ್ರಂಥಗಳನ್ನು ಉದ್ಧೃತಗೊಳಿಸ ಹೊರಡುವುದಿಲ್ಲ.

ಸ್ವಯಂ ಬಡತನದ ಚರ್ಚೆಯು ತುಂಬ ಲವಲವಿಕೆಯಿಂದಲೂ ಕುತೂಹಲಕಾರಿಯೂ ಆಗಿದೆ; ನಿರೀಕ್ಷೆಯಂತೆಯೇ, ಕೊನೆಗೆ ಬೈರಾಗಿ ಪದ್ಧತಿಯ ತತ್ವಗಳಿಗೆ ಹೊಂದಿಕೆಯಾಗುವ ತೀರ್ಮಾನಗಳಿಗೆ ಅವನು ಬಂದು ತಲುಪುತ್ತಾನೆ; ಆದರೆ ಅವನು ಮುಂದಿಡುವ ಆಕ್ಷೇಪಣೆಗಳು ಮತಧರ್ಮೇತರ ಪುರೋಹಿತವರ್ಗವು ಮುಂದಿಟ್ಟ ವಾಸ್ತವ ವಾದಗಳಂತೆಯೇ ತೀವ್ರವೂ ವಾಸ್ತವವೂ ಆಗಿವೆ.

ಆನಂತರ ಅವನು ಪಾಪ, ಪೂರ್ವನಿಶ್ಚಿತತೆ, ಮತ್ತು ಚುನಾವಣೆಗಳ ಕಡೆಗೆ ಸಾಗುತ್ತಾನೆ; ಅವುಗಳ ಬಗೆಗಿನ ಅವನ ನಿಲವು ಸ್ಥೂಲವಾಗಿ ಆಗಸ್ಟೈನ್‌ನವೇ ಆಗಿವೆ. ನೈತಿಕ ಪಾಪದಿಂದ ವ್ಯಕ್ತಿಯು ತನ್ನ ಅಂತಿಮ ಗುರಿಯಾದ ಚಿರಂತನವಾಗಿ ಕಳೆದುಕೊಳ್ಳುತ್ತಾನೆ, ಹೀಗಾಗಿ ಚಿರಂತನ ಶಿಕ್ಷೆ ಅವನಿಗೆ ಕಾದಿರುತ್ತದೆ. ಯಾರೂ ದೈವಕೃಪೆಯ ಹೊರತಾಗಿ ಪಾಪಸ್ವತಂತ್ರನಾಗಲು ಸಾಧ್ಯವಿಲ್ಲ, ಆದರೆ ಅವನು ಬದಲಾಗದಿದ್ದರೆ ಪಾಪಿಯನ್ನು ತೆಗಳಬೇಕು. ಒಳಿತನ್ನು ಬೆಂಬತ್ತಲು ಮಾನವನಿಗೆ ದೈವಕೃಪೆ ಬೇಕು, ಆದರೆ ಯಾರೂ ದೈವ ಸಹಾಯಕ್ಕೆ ಪಾತ್ರನಾಗಲಾರ. ಪಾಪಕೃತ್ಯಕ್ಕೆ ದೇವರು ಕಾರಣನಲ್ಲ, ಆದರೆ ಕೆಲವರನ್ನು ಅವನು ಪಾಪಕ್ಕೆ ಪಕ್ಕಾಗಿಸುತ್ತಾನೆ, ಮತ್ತೆ ಕೆಲವರನ್ನು ಅದರಿಂದ ಪಾರುಮಾಡುತ್ತಾನೆ. ಪೂರ್ವನಿಶ್ಚಿತತೆಯ ಕುರಿತು, ಸಂತ ಆಗಸ್ಟೈನ್‌ನ ಜೊತೆಗೆ ಆಕ್ವಿನಾಸ್ ಕೂಡ ಯಾಕೆ ಕೆಲವರು ಮಾತ್ರ ಸ್ವರ್ಗಕ್ಕೆ ಹೋಗಲು ಅರ್ಹತೆ ಪಡೆಯುತ್ತಾರೆ, ಮತ್ತೆ ಕೆಲವರು ನಿರಾಕೃತರಾಗಿ ನರಕ ಸೇರುತ್ತಾರೆ ಎಂಬುದಕ್ಕೆ ಕಾರಣ ನೀಡಲಾಗದು ಎನ್ನುವಂತೆ ತೋರುತ್ತದೆ. ವ್ಯಕ್ತಿಯೊಬ್ಬನು ದೀಕ್ಷಾಸ್ನಾನ ಹೊಂದದಿದ್ದರೆ ಅವನು ಸ್ವರ್ಗ ಸೇರಲಾರ ಎಂಬುದು ಅವನ ನಿಲವು. ಇದನ್ನು ಸ್ವತಂತ್ರ ತರ್ಕದಿಂದ ಸಾಬೀತುಪಡಿಸಲು ಸಾಧ್ಯವಿಲ್ಲ,

ಹಾಗೆಂದು ಜಾನ್, ೩. ೫ ರಲ್ಲಿ ದಿವ್ಯವಾಣಿ ಹೊಮ್ಮಿದೆ.[೨೪೦]

ನಾಲ್ಕನೆಯ ಭಾಗವು ತ್ರಿಮೂರ್ತಿತ್ವ, ಅವತಾರ, ಪೋಪ್ ಸಾರ್ವಭಮತ್ವ, ಮತಧಾರ್ಮಿಕ ಆಚರಣೆಗಳು, ದೇಹದ ಪುನರುತ್ಥಾನಗಳನ್ನು ಕುರಿತಿದೆ. ಮುಖ್ಯವಾಗಿ, ಅದು ತತ್ವಜ್ಞಾನಿಗಳಿಗಿಂತ ಮತಧರ್ಮಶಾಸ್ತ್ರಜ್ಞರನ್ನು ಉದ್ದೇಶಿಸಲಾಗಿದೆ; ಹೀಗಾಗಿ ನಾನದನ್ನು ಸಂಕ್ಷೇಪದಲ್ಲಿ ವಿಶ್ಲೇಷಿಸುತ್ತೇನೆ.

ದೇವರನ್ನು ಅರಿಯುವ ಅನೇಕ ಮಾರ್ಗಗಳಿವೆ: ವೈಚಾರಿಕತೆಯಿಂದ, ದಿವ್ಯಜ್ಞಾನದ ಮೂಲಕ, ಹಾಗೂ ದಿವ್ಯಜ್ಞಾನದ ಮೂಲಕ ಹಿಂದೆಯೇ ತಿಳಿದ ವಿಷಯಗಳ ಬಗೆಗಿನ ಪ್ರತಿಭನದಿಂದ. ಆದರೆ, ಮೂರನೆಯ ಮಾರ್ಗದ ಬಗ್ಗೆ ಅವನೇನೂ ಹೇಳುವುದೇ ಇಲ್ಲ. ಆನುಭಾವಿಕತೆಯ ಪರವಾಗಿರುವ ಲೇಖಕನಾಗಿದ್ದರೆ ಮಿಕ್ಕ ಎರಡಕ್ಕಿಂತ ಹೆಚ್ಚಾಗಿ ಇದರ ಬಗ್ಗೆ ವಿವರಿಸುತ್ತಿದ್ದ; ಆದರೆ ಆಕ್ವಿನಾಸ್‌ನ ಮನೋಭಾವವು ಆನುಭಾವಿಕತೆಗಿಂತ ತಾರ್ಕಿಕತೆಯ ಕಡೆಗೆ ವಾಲಿರುವಂತಹುದು.

ಪವಿತ್ರಾತ್ಮ ಮತ್ತು ಪೋಪ್‌ನ ಸಾರ್ವಭೌಮತ್ವದ ದ್ವಿಮುಖ ಉತ್ಸವವನ್ನು ನಿರಾಕರಿಸುವುದಕ್ಕೆ ಗ್ರೀಕ್ ಚರ್ಚ್ ಅನ್ನು ತೆಗಳಲಾಗುತ್ತದೆ. ಕ್ರಿಸ್ತನು ಪವಿತ್ರಾತ್ಮದ ಪರಿಕಲ್ಪನೆಯನ್ನು ಹೊಂದಿದ್ದರೂ, ಅವನು ಪವಿತ್ರಾತ್ಮದ ಮಾಂಸಲ ದೇಹದ ಮಗನಲ್ಲ ಎಂಬುದರ ಕುರಿತು ಅವನು ಎಚ್ಚರಿಸುತ್ತಾನೆ.

ಕೆಡುಕು ಗುರುಗಳು ನೆರವೇರಿಸಿದರೂ ಮತಧಾರ್ಮಿಕ ವಿಧಿಗಳು ಸಮಂಜಸವೇ. ಇದು ಚರ್ಚ್ ಸಿದ್ಧಾಂತದ ಮುಖ್ಯ ಅಂಶಗಳಲ್ಲೊಂದು. ಬೇಕಾದಷ್ಟು ಜನ ಪುರೋಹಿತರು ದೈಹಿಕ ಪಾಪ ಹೊತ್ತವರೇ, ಹಾಗಾಗಿ ಅಂಥವರು ಮತಧಾರ್ಮಿಕ ವಿಧಿಗಳನ್ನು ನೆರವೇರಿಸಬಾರದು ಎಂದು ಜನರು ಹೆದರಿದ್ದರು. ಇದು ಸರಿಯಲ್ಲ, ಅವನು ಮದುವೆಯಾಗಿದ್ದನೇ ಎಂಬುದನ್ನಾಗಲೀ ಅವನಿಗೆ ಪಾಪವಿಮೋಚನೆಯಾಗಿತ್ತೇ (ಆಬ್ಸಲ್ಯೂಷನ್) ಎಂಬುದನ್ನಾಗಲೀ ಯಾರೂ ಅರಿಯುವಂತಿರಲಿಲ್ಲ. ಇದು ವಿಭಜನೆಯ ಪಾಷಂಡಿತನಕ್ಕೆ ಕಾರಣವಾಯಿತು: ಪರಿಶುದ್ಧತಾಪರವಾದವರು ಹೆಚ್ಚು ಸದ್ಗುಣಿಗಳಾದ ಪುರೋಹಿತವರ್ಗವನ್ನು ಸ್ಥಾಪಿಸಲು ಹವಣಿಸಿದರು. ಇದರ ಪರಿಣಾಮವಾಗಿ ಚರ್ಚ್ ಪುರೋಹಿತನ ಪಾಪವು ತನ್ನ ಮತಧಾಮೀಕ ವಿಧಿಗಳನ್ನು ನೆರವೇರಿಸುವ ಕರ್ತವ್ಯಕ್ಕೆ ಚ್ಯುತಿ ತಾರದು ಎಂದು ಒತ್ತಿ ಹೇಳುವಂತಾಯಿತು.

ದೇಹದ ಪುನರುತ್ಥಾನವು ಇಲ್ಲಿ ಚರ್ಚಿತವಾದ ಕೊನೆಕೊನೆಯ ವಿಷಯಗಳಲ್ಲೊಂದು. ಬೇರೆಡೆಯಲ್ಲಿನಂತೆ ಇಲ್ಲಿಯೂ, ಸಂಪ್ರದಾಯನಿಷ್ಠತೆಯ

---

೨೪೦. 'ಜೀಸಸ್ ಉತ್ತರಿಸಿದ, ನಿಜವಾಗಿ, ನಿಜವಾಗಿ, ನಾನು ನಿನಗೆ ಹೇಳುತ್ತೇನೆ, ಜಲ ಮತ್ತು ಸತ್ವಗಳಿಂದ ಹುಟ್ಟಿದ ಮನುಷ್ಯನ ಹೊರತಾಗಿ, ಬೇರೆಯವನು ದೇವರ ಸಾಮ್ರಾಜ್ಯವನ್ನು ಹೊಗಲಾರ.'

ವಿರುದ್ಧವಾದ ವಾದಗಳನ್ನು ಆಕ್ವಿನಾಸ್ ತುಂಬ ನಿಷ್ಪಕ್ಷಪಾತ ದೃಷ್ಟಿಯಿಂದ ಮಂಡಿಸುತ್ತಾನೆ. ಇದರಲ್ಲಿ ಒಂದು ಎಂದರೆ, ಮೊದಲ ನೋಟಕ್ಕೆ, ತುಂಬ ತೊಡಕುಗಳನ್ನು ಸೃಷ್ಟಿಸುತ್ತದೆ. ತನ್ನ ಬದುಕಿನಾದ್ಯಂತವೂ ಮನುಷ್ಯ ಮಾಂಸವನ್ನಲ್ಲದೆ ಬೇರೇನನ್ನೂ ತಿನ್ನದವನ ಮತ್ತು ಅಂತಹವರೇ ಆದ ತಾಯ್ತಂದೆಗಳಿಗೆ ಏನಾಗುತ್ತದೆ ಎಂದು ಸಂತನು ಪ್ರಶ್ನೆಯನ್ನು ಹಾಕಿಕೊಳ್ಳುತ್ತಾನೆ. ಅವನಿಗಿಂತ ಅವನ ದುರಾಸೆಗೀಡಾಗಿ ತನ್ನ ಜೀವಮಾನದ ಕೊನೆಯನ್ನು ಕಾಣಲಾರದಂತಹ ಜೀವಿಗೆ ಹೆಚ್ಚಿನ ಅನ್ಯಾಯವಾಗಿದೆ ಎನಿಸುವುದು ಸಹಜ; ಹಾಗಿಲ್ಲದಿದ್ದರೂ, ಅವನ ದೇಹದ ಸ್ಥಾನವನ್ನು ತುಂಬಬಲ್ಲದು ಬೇರಾವುದು? ಮೊದಲ ನೋಟಕ್ಕೆ ಉತ್ತರಿಸಲಾಗದ್ದು ಎಂದು ತೋರುವ ಈ ತೊಡಕನ್ನು ಫಲಪ್ರದವಾಗಿ ನಿವಾರಿಸಬಹುದು ಎಂದು ಹೇಳಲು ನನಗೆ ಸಂತೋಷವಾಗುತ್ತದೆ. ದೇಹದ ಅನನ್ಯತೆಯು ಅವೇ ಭೌತದ್ರವ್ಯಗಳಿಂದಾದ ವಸ್ತುಗಳನ್ನವಲಂಬಿಸಿರುವುದಿಲ್ಲ; ಬದುಕಿರುವಾಗ, ತಿನ್ನುವುದು ಅರಗಿಸಿಕೊಳ್ಳುವುದರ ಮೂಲಕ ದೇಹದ ರಚನೆಯಲ್ಲಿನ ವಸ್ತುಗಳು ನಿರಂತರ ಬದಲಾವಣೆಗೊಳಗಾಗುತ್ತದೆ. ಹೀಗಾಗಿ ಪುನರುತ್ಥಾನದಲ್ಲಿ ನರಮಾಂಸಭಕ್ಷಕನು, ಅವನು ಸತ್ತಾಗ ಅವನ ದೇಹವು ಯಾವ ವಸ್ತುಗಳಿಂದ ರಚಿತವಾಗಿತ್ತೋ ಅದೇ ವಸ್ತುಗಳಿಂದ ಕೂಡಿರದಿದ್ದರೂ ಅದೇ ದೇಹವನ್ನು ಪಡೆಯಬಹುದು. ಈ ಸಮಾಧಾನಕರ ಆಲೋಚನೆಯಿಂದ ನಾವು 'ಸುಮ್ಮ ಕಾಂಟ್ರಾ ಜೆಂಟೈಲ್ಸ್'ನ ಸಂಕ್ಷಿಪ್ತ ವಿಶ್ಲೇಷಣೆಯನ್ನು ಕೊನೆಗೊಳಿಸಬಹುದು.

ಆಕ್ವಿನಾಸ್‌ನ ತತ್ವಜ್ಞಾನದ ರೂಪರೇಷೆಗಳು ಅರಿಸ್ಟಾಟಲ್‌ನದಕ್ಕೆ ತಾಳೆಯಾಗುತ್ತದೆ; ಓದುಗನೊಬ್ಬನು ಯಾವ ಪ್ರಮಾಣದಲ್ಲಿ ಅರಿಸ್ಟಾಟಲ್‌ನ ತತ್ವಜ್ಞಾನವನ್ನು ಒಪ್ಪುತ್ತಾನೋ ತಿರಸ್ಕರಿಸುತ್ತಾನೋ ಅದೇ ಪ್ರಮಾಣದಲ್ಲಿ ಇವನದನ್ನೂ ಮಾಡುತ್ತಾನೆ. ಆಕ್ವಿನಾಸ್‌ನ ಸ್ವಂತಿಕೆಯಿರುವುದು ಅವನು ಅರಿಸ್ಟಾಟಲ್‌ನನ್ನು ಕ್ರೈಸ್ತ ಶಾಸ್ತ್ರಪ್ರಾಮಾಣ್ಯಕ್ಕೆ, ಕನಿಷ್ಠ ವ್ಯತ್ಯಾಸಗಳೊಂದಿಗೆ, ಅಡಕಗೊಳಿಸುತ್ತಾನೆ ಎಂಬುವುದರಲ್ಲಿದೆ. ತನ್ನ ಕಾಲದಲ್ಲಿ ಅವನನ್ನು ಧೈರ್ಯವಂತ ಹೊಸತನದ ಪ್ರವರ್ತಕನೆಂದು ಪರಿಗಣಿಸಿದ್ದರು; ಅವನ ಸಾವಿನ ಬಳಿಕವೂ ಅವನ ಸಿದ್ಧಾಂತಗಳನ್ನು ಪ್ಯಾರಿಸ್ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯಗಳು ಖಂಡಿಸಿದವು. ಸ್ವಂತಿಕೆಗಿಂತ ವ್ಯವಸ್ಥಿತಗೊಳಿಸುವುದರಲ್ಲಿ ಅವನ ಹೆಚ್ಚುಗಾರಿಕೆಯಿದೆ. ಅವನ ಪ್ರತಿ ಸಿದ್ಧಾಂತವನ್ನೂ ಅಪವ್ಯಾಖ್ಯಾನಗೊಳಿಸಿದರೂ, 'ಸುಮ್ಮ' ಪ್ರಭಾವಶಾಲೀ ಬೌದ್ಧಿಕ ಸ್ಮಾರಕವಾಗುಳಿಯುತ್ತದೆ. ಯಾವುದಾದರೂ ಸಿದ್ಧಾಂತವನ್ನವನು ತಿರಸ್ಕರಿಸಬೇಕಾದರೆ, ಅದನ್ನು ಮೊದಲು ಮಂಡಿಸುತ್ತಾನೆ, ಎಷ್ಟೋ ವೇಳೆ ತುಂಬ ಪರಿಣಾಮಕಾರಿಯಾಗಿ, ಮತ್ತು ಬಹುತೇಕ ಅವನು ನಿಷ್ಪಕ್ಷಪಾತದಿಂದಿರುತ್ತಾನೆ. ವೈಚಾರಿಕತೆ ಮತ್ತು ತರ್ಕಗಳ ಮೂಲಕ ಸಾಧಿತವಾದ ವಾದಗಳಿಗೂ ದಿವ್ಯಜ್ಞಾನದಿಂದ ಸಾಧಿತವಾದ ವಾದಗಳಿಗೂ ಇರುವ ವ್ಯತ್ಯಾಸವನ್ನು ಅವನು ನಿಖರವಾಗಿಯೂ ಸ್ಪಷ್ಟವಾಗಿಯೂ ನಿರೂಪಿಸುವ ಬಗೆ ಮೆಚ್ಚುವಂತಹುದು.

ಅವನು ಅರಿಸ್ಟಾಟಲ್ ಅನ್ನು ಚೆನ್ನಾಗಿ ಬಲ್ಲ, ಅವನನ್ನು ತಲಸ್ಪರ್ಶಿಯಾಗಿ ಅರ್ಥಮಾಡಿಕೊಳ್ಳಬಲ್ಲ; ಹಿಂದಿನ ಕ್ಯಾಥೋಲಿಕ್ ತತ್ವಜ್ಞಾನಿಗಳ ಬಗ್ಗೆ ಈ ಮಾತನ್ನು ಹೇಳಲು ಸಾಧ್ಯವಿಲ್ಲ.

ಅವನ ಅಪಾರ ಕೀರ್ತಿಯನ್ನು ಸಮರ್ಥಿಸುವಷ್ಟು ಗುಣಗಳು ಅವನಲ್ಲಿದ್ದುವೇ ಎಂಬುದು ಮಾತ್ರ ಸಂದೇಹಾಸ್ಪದ. ಒಂದರ್ಥದಲ್ಲಿ ಅವನು ತರ್ಕದ ಮೊರೆಹೊಗುವುದರಲ್ಲಿ ಅಪ್ರಾಮಾಣಿಕತೆ ಕಾಣುತ್ತದೆ; ಯಾಕೆಂದರೆ ತಲುಪಬೇಕಾದ ಗುರಿ ಪೂರ್ವನಿಶ್ಚಿತವಾದದ್ದು. ಉದಾಹರಣೆಗೆ, ಮದುವೆಯ ವಿಚ್ಛೇದನಾತೀತತೆಯ ವಿಷಯವನ್ನು ತೆಗೆದುಕೊಳ್ಳೋಣ. ತಂದೆಯು ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗುತ್ತಾನೆ ಎಂದವನು ಇದಕ್ಕೆ ಸಮರ್ಥನೆಯಾಗಿ ನೀಡುತ್ತಾನೆ, ಯಾಕೆಂದರೆ (ಅ) ತಾಯಿಗಿಂತ ತಂದೆಯು ಹೆಚ್ಚು ವೈಚಾರಿಕ ವ್ಯಕ್ತಿ, (ಆ) ತಂದೆಯು ಹೆಚ್ಚು ಬಲಿಷ್ಠನಾದುದರಿಂದ, ದೈಹಿಕ ಶಿಕ್ಷೆ ನೀಡಲು ಅವನು ಸಮರ್ಥ. ಆಧುನಿಕ ಶಿಕ್ಷಕನೊಬ್ಬ (ಅ) ಗಂಡಸರು ಹೆಂಗಸರಿಗಿಂತ ಹೆಚ್ಚು ವಿಚಾರವಂತರು ಎಂದು ಹೇಳಲು ಯಾವುದೇ ಕಾರಣವಿಲ್ಲ, (ಆ) ಬಹಳ ದೈಹಿಕ ಶಕ್ತಿಯಿಂದ ನೀಡಬೇಕಾದ ಶಿಕ್ಷೆಯು ವಿದ್ಯಾಭ್ಯಾಸದಲ್ಲಿ ಆವಶ್ಯಕವೇ ಅಲ್ಲ; ಮುಂದುವರಿದು ಅವನು, ಆಧುನಿಕ ಜಗತ್ತಿನಲ್ಲಿ ವಿದ್ಯಾಭ್ಯಾಸದಲ್ಲಿ ತಂದೆಯ ಪಾತ್ರ ತೀರ ಅಲ್ಪ ಎಂದೂ ಹೇಳಬಹುದು. ಆದರೆ ಸಂತ ಥಾಮಸ್‌ನ ಯಾವ ಅನುಯಾಯಿಯೂ, ಆ ಕಾರಣಕ್ಕಾಗಿ, ಏಕದಾಂಪತ್ಯದಲ್ಲಿನ ನಂಬಿಕೆಯನ್ನು ಬಿಡಲಾರ, ಯಾಕೆಂದರೆ ನಂಬಿಕೆಯ ನಿಜವಾದ ಆಧಾರವು ಹೇಳಿದಂತಹುದಾಗಿರುವುದಿಲ್ಲ.

ಅಥವಾ ದೇವರ ಅಸ್ತಿತ್ವವನ್ನು ಸಾಬೀತುಪಡಿಸುವ ವಾದಗಳನ್ನು ತೆಗೆದುಕೊಳ್ಳೋಣ. ನಿರ್ಜೀವ ವಸ್ತುಗಳಲ್ಲಿ ಮೂಲಸಂಕಲ್ಪಸಿದ್ಧಾಂತ (ಟೇಲಿಯಾಲಜಿ) ದಿಂದ ತೆಗೆದುಕೊಂಡ ಒಂದನ್ನುಳಿದು ಮಿಕ್ಕವೆಲ್ಲ ಯಾವುದೇ ಅವಧಿಯಿರದ ಅಸಾಧ್ಯಗಳ ಸರಣಿಯನ್ನು ಆಧರಿಸುತ್ತವೆ. ಅಂಥ ಅಸಾಧ್ಯವೇ ಇಲ್ಲ ಎಂಬುದನ್ನು ಎಲ್ಲ ಗಣಿತಜ್ಞರೂ ಬಲ್ಲರು; ಮೈನಸ್ ಒಂದರಲ್ಲಿ ಕೊನೆಗೊಳ್ಳುವ ನೇತ್ಯಾತ್ಮಕ ಪೂರ್ಣಸಂಖ್ಯೆ (ಇಂಟೆಜರ್) ಗಳ ಸರಣಿಯು ಅದಕ್ಕೆ ವಿರುದ್ಧವಾದುದು. ಆದರೆ ಸಂತ ಥಾಮಸ್‌ನ ವಾದಗಳು ಸಮಂಜಸವಲ್ಲವೆಂದು ಒಪ್ಪುವ ಯಾವ ಕ್ಯಾಥೋಲಿಕ್‌ನೂ ದೇವರಲ್ಲಿನ ನಂಬಿಕೆಯನ್ನು ಬಿಟ್ಟುಬಿಡಲಾರ; ಅವನು ಹೊಸ ವಾದಗಳನ್ನು ಸೃಷ್ಟಿಸಬಹುದು ಅಥವಾ ದಿವ್ಯಜ್ಞಾನದ ಮೊರೆಹೊಗಬಹುದು.

ದೇವರ ಅಸ್ತಿತ್ವ ಮತ್ತು ಅವನ ಸಾರಸತ್ವಗಳು ಒಂದೇ ಎಂಬ, ದೇವರು ಎಂದರೆ ಅವನ ಒಳ್ಳೆಯತನ ಎಂಬ, ಅವನದೇ ಸಾಮರ್ಥ್ಯ ಮುಂತಾದ ವಾದಗಳು ಪ್ಲೇಟೋನಲ್ಲಿದ್ದ, ಆದರೆ ಅರಿಸ್ಟಾಟಲ್ ನುಣುಚಿಕೊಂಡ, ನಿರ್ದಿಷ್ಟಗಳ ಇರುವಿಕೆಯ ರೀತಿ ಮತ್ತು ವೈಶ್ವಿಕಗಳ ಇರುವಿಕೆಯ ರೀತಿ ಇವುಗಳ ನಡುವಣ ಗೊಂದಲವನ್ನೇ ತೋರಿಸುತ್ತವೆ. ದೇವರ ಸಾರಸತ್ವವು ವೈಶ್ವಿಕದ ರೂಪದ್ದು, ಆದರೆ ಅವನ ಅಸ್ತಿತ್ವವು

ಅಂತಹುದಲ್ಲ ಎಂದು ನಾವು ಊಹಿಸಿಕೊಳ್ಳಬೇಕು. ಈ ತೊಡಕನ್ನು ಸರಳವಾಗಿ ನಿರೂಪಿಸುವುದು ಕಷ್ಟಕರವಾದುದು, ಯಾಕೆಂದರೆ ಅದು ನಾವು ಒಪ್ಪಲಾರದ ತಾರ್ಕಿಕತೆಯ ವ್ಯಾಪ್ತಿಯಲ್ಲಿರುವಂತಹುದು. ಆದರೆ ಅದರಲ್ಲಿ ಯಾವುದೋ ವಾಕ್ಯರಚನಾತ್ಮಕ (ಸಿಂಟಾಕ್ಟಿಕಲ್) ಗೊಂದಲವಿರುವಂತೆ ತೋರುತ್ತದೆ. ಅದಿಲ್ಲದೆ ದೇವರ ಕುರಿತಾದ ಬಹುಪಾಲು ವಾದಗಳು ತಮ್ಮ ಸಿಂಧುತ್ವವನ್ನು ಕಳೆದುಕೊಳ್ಳುತ್ತವೆ.

ಆಕ್ವಿನಾಸ್‌ನಲ್ಲಿ ನಿಜವಾದ ತತ್ವಜಿಜ್ಞಾಸಾತ್ಮಕ ಮನೋಭಾವದ ಕೊರತೆ ಎದ್ದು ಕಾಣುತ್ತದೆ. ಪ್ಲೇಟೋನ ಅರಿಸ್ಟಾಟಲ್‌ನಂತೆ ಅವನು ವಾದವು ಎಲ್ಲಿಗೆ ಒಯ್ಯವುದೋ ಆ ಕಡೆ ಸಾಗುವುದಿಲ್ಲ. ಫಲಿತವನ್ನು ಮೊದಲೇ ಊಹಿಸಲಾಗದ ಅನ್ವೇಷಣೆಯನ್ನೇನೂ ಅವನು ಕೈಗೊಳ್ಳುವುದಿಲ್ಲ. ತಾತ್ವಿಕಗೊಳಿಸುವ ಮುಂಚೆಯೇ ಅವನಿಗೆ ಸತ್ಯವು ಗೋಚರಿಸಿರುತ್ತದೆ; ಅದು ಕ್ಯಾಥೋಲಿಕ್ ಶ್ರದ್ಧೆಯಲ್ಲಿ ಘೋಷಿತವಾಗಿರುವುದು. ನಂಬಿಕೆಯ ಕೆಲವು ಭಾಗಗಳಿಗೆ ತಾನು ತೋರಿಕೆಯ ತಾರ್ಕಿಕ ವಾದಗಳನ್ನು ಬಲ್ಲನಾದರೆ, ಅಷ್ಟರ ಮಟ್ಟಿಗೆ ಒಳ್ಳೆಯದೇ; ಅದು ಸಾಧ್ಯವಾಗದಿದ್ದರೆ, ಅವನು ದಿವ್ಯಜ್ಞಾನವನ್ನೇ ಆಶ್ರಯಿಸಬೇಕು. ಮುಂಚಿತವಾಗಿಯೇ ಫಲಿತಾಂಶವು ತಿಳಿದಿದ್ದು ಅದಕ್ಕೆ ವಾದಗಳನ್ನು ಹೆಣೆಯುವುದು ತತ್ವಜ್ಞಾನವಲ್ಲ, ಅದು ವಿಶಿಷ್ಟ ಬಗೆಯ ಸಮರ್ಥನೆ. ಹೀಗಾಗಿ ಗ್ರೀಸ್‌ನ ಅಥವಾ ಆಧುನಿಕ ಕಾಲದ ಅತ್ಯುತ್ತಮ ತತ್ವಜ್ಞಾನಿಗಳ ನೆಲೆಯಲ್ಲಿ ಇರಿಸುವ ಅರ್ಹತೆ ಅವನದಲ್ಲ ಎಂಬುದು ನನ್ನ ಅಭಿಪ್ರಾಯ.

೧೪
ಫ್ರಾನ್ಸಿಸ್ಕನ್ ದೇವತಾಶಾಸ್ತ್ರಜ್ಞರು (ಸ್ಕೂಲ್‌ಮೆನ್)

ಒಟ್ಟಾರೆ ಫ್ರಾನ್ಸಿಸ್ಕನ್‌ರು ಡಾಮಿನಿಕನ್‌ರಿಗಿಂತ ಕಡಿಮೆ ದೋಷರಹಿತರ ಸಂಪ್ರದಾಯನಿಷ್ಠರು. ಈ ಎರಡು ಪಂಥಗಳಲ್ಲಿ ತೀವ್ರ ಪೈಪೋಟಿಯಿತ್ತು, ಫ್ರಾನ್ಸಿಸ್ಕನ್‌ರು ಸಂತ ಥಾಮಸ್‌ನ ಪ್ರಾಮಾಣ್ಯವನ್ನು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಮೂವರು ಪ್ರಮುಖ ಫ್ರಾನ್ಸಿಸ್ಕನ್ ತತ್ವಜ್ಞಾನಿಗಳೆಂದರೆ ರೋಜರ್ ಬೇಕನ್, ಡನ್ಸ್ ಸ್ಕಾಟಸ್ ಮತ್ತು ಒಕ್ಕಾಮ್‌ನ ವಿಲಿಯಂ. ಸಂತ ಬೊನವೆಂಚುರ ಮತ್ತು ಆಕ್ವಾಸ್ಪಾರ್ಟಾದ ಮ್ಯಾಥ್ಯೂ ಅವರೂ ಗಣ್ಯರಲ್ಲಿ ಸೇರುತ್ತಾರೆ.

ರೋಜರ್ ಬೇಕನ್ (ಸು ೧೨೧೪-೧೨೯೪) ತನ್ನ ಕಾಲದಲ್ಲಿ ಅಷ್ಟೊಂದು ಮಾನ್ಯತೆಯನ್ನು ಪಡೆದಿರಲಿಲ್ಲ, ಆದರೆ ಆಧುನಿಕ ಕಾದಲ್ಲಿ ಅವನು ಮರಳುಗಾಡಿನ ಹೊರಗೂ ಮಾನ್ಯನಾಗಿದ್ದಾನೆ. ಅವನು ಸಂಕುಚಿತ ಅರ್ಥದಲ್ಲಿ ಅಂಥ ತತ್ವಜ್ಞಾನಿಯೇನೂ ಅಲ್ಲವೆಂದೂ ಸಾರ್ವತ್ರಿಕ ವಿದ್ಯೆ ಪಡೆದವನೆಂದೂ, ಗಣಿತ ಮತ್ತು ವಿಜ್ಞಾನಗಳಲ್ಲಿ ಆಸಕ್ತಿ ಹೊಂದಿವನೆಂದೂ ತನ್ನ ಕಾಲದಲ್ಲಿ ಪರಿಗಣಿತನಾಗಿದ್ದ. ಅವನ ವಿಜ್ಞಾನದಲ್ಲಿ ರಸವಿದ್ಯೆ ಬೆರೆತಿದ್ದಿತೆಂದೂ, ಆಲೋಚನೆಗಳಲ್ಲಿ ಮಾಟವು ಬೆರೆತಿದ್ದಿತೆಂದೂ ಹೇಳುತ್ತಿದ್ದರು. ಪಾಷಂಡಿತನ ಮತ್ತು ಮಾಟಗಳ ಆರೋಪದ ಮೇಲೆ ಬೇಕನ್ ಪದೇ ಪದೇ ತೊಂದರೆಗೆ ಸಿಲುಕಿಕೊಳ್ಳುತ್ತಿದ್ದ. ೧೨೫೭ ರಲ್ಲಿ ಫ್ರಾನ್ಸಿಸ್ಕನ್ ಪಂಥದ ಮುಖ್ಯಸ್ಥನಾಗಿದ್ದ ಸಂತ ಬೊನವೆಂಚುರ ಪ್ಯಾರಿಸ್‌ನಲ್ಲಿ ಅವನ ಮೇಲೆ ನಿಗಾ ಇರಿಸಿದ್ದ, ಅವನು ಏನನ್ನೂ ಪ್ರಕಟಿಸಬಾರದೆಂದು ವಿಧಿಸಿದ್ದ. ಆದರೆ, ಈ ನಿಷೇಧ ಚಾಲತಿಯಲ್ಲಿದ್ದರೂ, ಇಂಗ್ಲಂಡ್‌ನ ಪೋಪ್ ಪ್ರತಿನಿಧಿ (ಲೆಗಟ್) ಯಾಗಿದ್ದ ಗೈ ಡೆ ಫೋಲ್‌ಕ್ಸ್, ನಿಷೇಧಕ್ಕೆ ವಿರುದ್ಧವಾಗಿ ಪೋಪ್‌ನ ಅನುಕೂಲಕ್ಕಾಗಿ ತನ್ನ ತತ್ವಜ್ಞಾನವನ್ನು ಪ್ರಕಟಿಸುವಂತೆ ಆಜ್ಞಾಪಿಸಿದ. ಅದಕ್ಕನುಗುಣವಾಗಿ ಅವನು ಬಹು ಬೇಗ ಮೂರು ಪುಸ್ತಕಗಳನ್ನು ಬರೆದ, 'ಓಪಸ್ ಮಜೂಸ್', 'ಓಪಸ್ ಮೈನಸ್' ಮತ್ತು 'ಓಪಸ್ ಟರ್ಷಿಯಮ್'. ಇದು ಒಳ್ಳೆಯ ಪರಿಣಾಮವನ್ನುಂಟುಮಾಡಿದಂತೆ ತೋರುತ್ತದೆ; ೧೨೬೮ ರಲ್ಲಿ ಅವನು ಆಕ್ಸ್‌ಫರ್ಡ್‌ಗೆ

ಹಿಂತಿರುಗಲು ಅನುಮತಿ ನೀಡಲಾಯಿತು, ಅವನನ್ನು ಆವರೆಗೆ ಅಲ್ಲಿಂದ ಪ್ಯಾರಿಸ್‌ಗೆ ಒಂದು ಬಗೆಯ ಸೆರೆವಾಸದಂತೆ ಕಳಿಸಲಾಗಿತ್ತು. ಆದರೆ ಯಾವುದೂ ಅವನಿಗೆ ಎಚ್ಚರಿಕೆಯನ್ನು ಕಲಿಸಲಾಗಲಿಲ್ಲ. ತನ್ನ ಸಮಕಾಲೀನರಾದ ಹೆಚ್ಚು ಪ್ರಾಜ್ಞರನ್ನೂ, ಅದರಲ್ಲೂ ಗ್ರೀಕ್ ಮತ್ತು ಅರೇಬಿಕ್‌ರಿಂದ ಅನುವಾದ ಮಾಡಿದ್ದವರು ತೀರ ಅಸಮರ್ಥರೆಂದೂ ತಿರಸ್ಕಾರದಿಂದ ಟೀಕಿಸುವ ಪ್ರವೃತ್ತಿಯನ್ನು ಅವನು ಬೆಳೆಸಿಕೊಂಡಿದ್ದ. ೧೨೭೧ ರಲ್ಲಿ ಅವನು 'ಕಂಪೆಂಡಿಯಮ್ ಸ್ಟಡೈ ಫಿಲಾಸಫೀ' ಎಂಬ ಪುಸ್ತಕವನ್ನು ಬರೆದ, ಅದರಲ್ಲವನು ಪುರೋಹಿತವರ್ಗದ ಅಜ್ಞಾನದ ಬಗ್ಗೆ ಟೀಕೆ ಮಾಡಿದ್ದ. ಇದರಿಂದ ತನ್ನ ಸಹದ್ಯೋಗಿಗಳಲ್ಲಿ ಅವನ ಬಗೆಗಿನ ಮೆಚ್ಚಿಕೆಯೇನೂ ಹೆಚ್ಚಾಗಲಿಲ್ಲ; ೧೨೭೮ ರಲ್ಲಿ ಅವನ ಪುಸ್ತಕಗಳನ್ನು ಪಂಥದ ಮುಖ್ಯಸ್ಥ ನಿಷೇಧಿಸಿ, ಅವನನ್ನು ಹದಿನಾಲ್ಕು ವರ್ಷಗಳ ಕಾಲ ಸೆರೆಯಲ್ಲಿರಿಸಿದ. ೧೨೯೨ ರಲ್ಲಿ ಅವನನ್ನು ಬಿಡುಗಡೆ ಮಾಡಲಾಯಿತಾದರೂ, ಆನಂತರ ಅವನು ಹೆಚ್ಚು ಕಾಲ ಬದುಕಿರಲಿಲ್ಲ.

ತಿಳಿವಳಿಕೆಯಲ್ಲಿ ಅವನದು ವಿಶ್ವಕೋಶಸಮಾನ ವಿದ್ವತ್ತು, ಆದರೆ ಅದು ವ್ಯವಸ್ಥಿತವಲ್ಲ. ತನ್ನ ಕಾಲದ ಬಹುತೇಕ ತತ್ವಜ್ಞಾನಿಗಳಿಗೆ ವ್ಯತಿರಿಕ್ತವಾಗಿ ಅವನು ಪ್ರಯೋಗಗಳಿಗೆ ವಿಶೇಷ ಪ್ರಾಮುಖ್ಯ ನೀಡುತ್ತಿದ್ದ, ಅದರ ಪ್ರಾಮುಖ್ಯವನ್ನು ಕಾಮನಬಿಲ್ಲಿನ ಸಿದ್ಧಾಂತದ ಮೂಲಕ ತೋರಿಸಿಕೊಟ್ಟಿದ್ದ. ಭೂಗೋಳದ ಬಗೆಗಿನ ಅವನ ಬರವಣಿಗೆ ಚೆನ್ನಾಗಿದೆ; ಕೊಲಂಬಸ್ ಈ ಗ್ರಂಥದ ಸ್ವಲ್ಪ ಭಾಗವನ್ನು ಓದಿ ಪ್ರಭಾವಿತನಾಗಿದ್ದ. ಅವನು ಒಳ್ಳೆಯ ಗಣಿತಜ್ಞ; ಅವನು ಯೂಕ್ಲಿಡ್ ಗ್ರಂಥದ ಆರನೆಯ ಮತ್ತು ಒಂಬತ್ತನೆಯ ಭಾಗಗಳನ್ನು ಉಲ್ಲೇಖಿಸಿದ್ದ. ಅರೇಬಿಕ್ ಮೂಲವನ್ನು ಅನುಸರಿಸಿ ಅವನು ಪರಿಪ್ರೇಕ್ಷ್ಯವನ್ನು ಗಮನಿಸಿದ್ದ. ತರ್ಕ ನಿರುಪಯುಕ್ತವೆಂಬುದು ಅವನ ಭಾವನೆ; ಮತ್ತೊಂದೆಡೆ, ಅದರ ಬಗ್ಗೆ ಬರೆಯುವಷ್ಟು ಮಟ್ಟಿಗೆ ರಸವಿದ್ಯೆಯು ಅವನನ್ನು ಆಕರ್ಷಿಸಿತ್ತು.

ಅವನ ವ್ಯಾಪ್ತಿ ಮತ್ತು ಪದ್ಧತಿಗಳ ಬಗ್ಗೆ ಹೇಳಲು ನಾನಿಲ್ಲಿ ಅವನ 'ಓಪಸ್ ಮಜೂಸ್'ನ ಕೆಲವು ಭಾಗಗಳನ್ನು ಸಂಕ್ಷೇಪಿಸಿ ನೀಡುತ್ತೇನೆ.

ಅಜ್ಞಾನಕ್ಕೆ ನಾಲ್ಕು ಕಾರಣಗಳಿವೆಯೆಂದು ಅವನು ಹೇಳುತ್ತಾನೆ: ಮೊದಲನೆಯದು, ದುರ್ಬಲವೂ ಅಸೂಕ್ತವೂ ಆದ ಪ್ರಾಮಾಣ್ಯ. (ಇದನ್ನು ಪೋಪ್‌ನ ಉಪಯೋಗಕ್ಕಾಗಿ ಬರೆದದ್ದರಿಂದ, ಈ ಮಾತು ಚರ್ಚ್‌ಗೆ ಅನ್ವಯಿಸುವುದಿಲ್ಲವೆಂದು ಹೇಳುವ ಎಚ್ಚರಿಕೆ ವಹಿಸುತ್ತಾನೆ.) ಎರಡನೆಯದು, ರೂಢಿಗಳ ಪ್ರಭಾವ. ಮೂರನೆಯದು, ಅವಿದ್ಯಾವಂತ ಜನಸಂದಣಿಯ ಅಭಿಪ್ರಾಯ (ಪ್ರಾಯಶಃ ಇದು ತನ್ನನ್ನುಳಿದ ಮಿಕ್ಕೆಲ್ಲ ತನ್ನ ಸಮಕಾಲೀನರನ್ನೂ ಒಳಗೊಳ್ಳುತ್ತದೆ ಎನಿಸುತ್ತದೆ). ನಾಲ್ಕನೆಯದು, ತೋರ್ಕೆಯ ವಿವೇಕಪ್ರದರ್ಶನದ ಮೂಲಕ ತನ್ನ ಅಜ್ಞಾನವನ್ನು ಮುಚ್ಚಿಟ್ಟುಕೊಳ್ಳುವ ಪ್ರವೃತ್ತಿ. ಈ ನಾಲ್ಕು ಜಾಡ್ಯಗಳಿಂದಾಗಿ, ಅವುಗಳಲ್ಲಿಯೂ

ಅತ್ಯಂತ ಕೆಟ್ಟುದೆಂದರೆ ನಾಲ್ಕನೆಯದು, ಮಾನವನ ಎಲ್ಲ ಕೆಡುಕುಗಳು ಉಂಟಾಗುತ್ತವೆ.

ಒಂದು ಅಭಿಪ್ರಾಯವನ್ನು ಸಮರ್ಥಿಸಲೋಸುಗ ಹಿಂದಿನವರ ವಿವೇಕದ ಸಹಾಯದಿಂದಲೋ ರೂಢಿಗಳ ನೆರವಿನಿಂದಲೋ ಅಥವಾ ಸಾಮಾನ್ಯ ನಂಬಿಕೆಯಿಂದಲೋ ವಾದ ಮಾಡುವುದು ಸರಿಯಲ್ಲ. ತನ್ನ ಅಭಿಪ್ರಾಯದ ಸಮರ್ಥನೆಗಾಗಿ ಅವನು ಸೆನೆಕ, ಸಿಸೆರೋ, ಅರಿಸೆನ್ನ, ಆವೆರಾಸ್, ಮತ್ತು ಬಾರ್ಥನ ಆಡೆಲಾರ್ಡ್, ಸಂತ ಜೆರೋಮ್ ಮತ್ತು ಸಂತ ಕ್ರಿಸಾಸ್ಟಮ್‌ರನ್ನು ಉಲ್ಲೇಖಿಸುತ್ತಾನೆ. ಪ್ರಾಮಾಣ್ಯವನ್ನು ಗೌರವಿಸಬಾರದೆಂಬುದಕ್ಕೆ ಈ ಪರಿಣತರು ಸಾಕು ಎಂದವನು ಭಾವಿಸಿದಂತೆ ತೋರುತ್ತದೆ.

ಅರಿಸ್ಟಾಟಲ್ ಬಗೆಗಿನ ಅವನ ಗೌರವ ದೊಡ್ಡದು, ಆದರೆ ಅಪರಿಮಿತವಾದದ್ದಲ್ಲ. 'ಅರಿಸ್ಟಾಟಲ್ ಮಾತ್ರವೇ, ಅವನ ಅನುಯಾಯಿಗಳೊಡನೆ, ಎಲ್ಲ ವಿವೇಕಿಗಳ ತೀರ್ಮಾನದಲ್ಲಿ ತತ್ವಜ್ಞಾನಿಯೆಂದು ಪರಿಗಣಿತನಾಗಿದ್ದಾನೆ.' ತನ್ನ ಬಹುತೇಕ ಸಮಕಾಲೀನರಂತೆ ಅವನು ಅರಿಸ್ಟಾಟಲ್ ಬಗ್ಗೆ ಮಾತನಾಡುವಾಗ 'ತತ್ವಜ್ಞಾನಿ' (ದ ಫಿಲಾಸಫರ್) ಎಂಬ ಶಬ್ದವನ್ನು ಬಳಸುತ್ತಾನೆ. ಆದರೆ ಅರಿಸ್ಟಾಟಲ್ ಕೂಡ ಮಾನವ ವಿವೇಕದ ಪರಿಧಿ(ಸ್ಟೇಜಿರೈಟ್)ಯನ್ನು ಮುಟ್ಟಲಿಲ್ಲವೆನ್ನುತ್ತಾನೆ. ಅವನಾದ ಬಳಿಕ ಅವಿಸೆನ್ನ, ಅವನು ಕಾಮನಬಿಲ್ಲನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದಿದ್ದರೂ, ಅದರ ಅಂತಿಮ ಕಾರಣವನ್ನು ಗುರುತಿಸದಿದ್ದರೂ, (ಜೆನೆಸಿಸ್‌ನಲ್ಲಿ ನೀರಿನ ಆವಿಯ ಹರಡುವಿಕೆ) 'ತತ್ವಜ್ಞಾನದ ರಾಜ ಮತ್ತು ನಾಯಕ'ನಾಗಿದ್ದ. (ಆದರೆ ಕಾಮನಬಿಲ್ಲನ್ನು ಕುರಿತು ವಿಶ್ಲೇಷಿಸುವಾಗ ಬೇಕನ್ ಅವಿಸೆನ್ನ ಬಗ್ಗೆ ಬಹಳ ಗೌರವದಿಂದ ಮಾತನಾಡುತ್ತಾನೆ.) ಆಗಾಗ ಅವನು, ಪರಿಪೂರ್ಣ ಜ್ಞಾನವು ಚರ್ಚ್ ಕಟ್ಟಳೆ ಮತ್ತು ತತ್ವಜ್ಞಾನಗಳು ವಿವರಿಸುವಂತೆ ಮತಧರ್ಮಗ್ರಂಥಗಳಲ್ಲಿದೆ ಎಂಬಂತಹ, ಸಂಪ್ರದಾಯನಿಷ್ಠೆಯ ಛಾಯೆಯುಳ್ಳ ಏನಾದರೂ ಹೇಳುತ್ತಿರುತ್ತಾನೆ. ಆದರೆ ಕ್ರೈಸ್ತೇತರರಿಂದ ಜ್ಞಾನವನ್ನು ಪಡೆಯುವುದರಲ್ಲಿ ತಪ್ಪೇನಿಲ್ಲ ಎಂಬಂತಹ ಮಾತುಗಳಾಡುವಾಗ ಅವನು ಹೆಚ್ಚು ಪ್ರಾಮಾಣಿಕನಾಗಿರುತ್ತಾನೆ. ಅವಿಸೆನ್ನ ಮತ್ತು ಆವೆರಾಸ್‌ರಲ್ಲದೆ ಅವನು ಆಲ್‌ಫರ್‌ಬೈ[೨೪೧] ಅನ್ನು ಮತ್ತೆ ಮತ್ತೆಯೂ, ಆಲ್ಬುಮಜ಼ರ್[೨೪೨] ಅನ್ನೂ ಇತರರನ್ನು ಆಗೀಗಲೂ ಉಲ್ಲೇಖಿಸುತ್ತಾನೆ. ಮಹಾಪ್ರವಾಹದ ಹಿಂದೆಯೂ ನೋಹ್ ಮತ್ತವನ ಮಕ್ಕಳಿಗೆ ಗಣಿತವು ತಿಳಿದಿತ್ತೆಂದು ಸಾಧಿಸಲು ಅವನು ಆಲ್ಬುಮಜ಼ರ್ ಅನ್ನು ಉಲ್ಲೇಖಿಸುತ್ತಾನೆ; ಇದು ನಿರೀಶ್ವರವಾದಿಗಳಿಂದ ನಾವೇನು ಕಲಿಯಬಹುದೆಂಬುದರ ಒಂದು ಉದಾಹರಣೆ

---

೨೪೧. ಕಿಂಡೈನ ಅನುಯಾಯಿ, ಮರಣ. ೯೫೦.
೨೪೨. ಖಗೋಳವಿಜ್ಞಾನಿ, ೮೦೫–೮೮೫

ಎಂದು ನಾನು ಭಾವಿಸುತ್ತೇನೆ. ಗಣಿತವನ್ನು ಬೇಕನ್ ದೃಢನಿಶ್ಚಯದ ಏಕೈಕ (ಬಯಲಾಗದ) ಮೂಲವೆಂದೂ, ಖಗೋಳವಿಜ್ಞಾನ ಮತ್ತು ಜ್ಯೋತಿಷ್ಯಗಳಿಗೆ ಬೇಕಾದವುಗಳೆಂದೂ ಹೊಗಳುತ್ತಾನೆ.

ಕ್ರಿಯಾಶೀಲ ಬುದ್ಧಿಶಕ್ತಿಯು ಆತ್ಮದ ಸಾರಸತ್ವದಿಂದ ಬೇರೆಯಾದ ವಸ್ತುವೆಂದು ಬೇಕನ್ ಆವೆರಾಸ್‌ನನ್ನು ಅನುಸರಿಸಿ ಹೇಳುತ್ತಾನೆ. ಅವನು ಅನೇಕ ಮಂದಿ ದೇವತಾಶಾಸ್ತ್ರಜ್ಞರನ್ನು ಉಲ್ಲೇಖಿಸುತ್ತಾನೆ; ಅವರಲ್ಲಿ ಲಿಂಕನ್‌ನ ಬಿಷಪ್ ಆದ ಗ್ರಾಸೆಟೆಸ್ಟ್‌ನೂ, ಸಂತ ಥಾಮಸ್‌ನದಕ್ಕೆ ವಿರುದ್ಧವಾದ, ಈ ಅಭಿಪ್ರಾಯವನ್ನು ಸಮರ್ಥಿಸುವವನೆಂದು ಹೇಳುತ್ತಾನೆ. ಅರಿಸ್ಟಾಟಲ್‌ನಲ್ಲಿ ತೋರಿಕೆಯ ವಿರೋಧಗಳ ಭಾಗಗಳು ತಪ್ಪು ಭಾಷಾಂತರಗಳವು ಎನ್ನುತ್ತಾನೆ. ಅವನು ಪ್ಲೇಟೋನನ್ನು ನೇರವಾಗಿ ಉಲ್ಲೇಖಿಸುವುದಿಲ್ಲ, ಆದರೆ ಸಿಸೆರೋ ಮೂಲಕವೂ ಅರಬ್‌ರೋ ಪಾರ್ಫೈರಿಯೋ ಮೂಲಕ ಉಲ್ಲೇಖಿಸುತ್ತಾನೆ. ಅವನಿಗೆ ಪಾರ್ಫೈರಿಯ ಬಗ್ಗೆ ಬಹಳ ಗೌರವವಿದೆಯೆಂದೇನೂ ಅಲ್ಲ, ವೈಶ್ವಿಕಗಳ ಬಗೆಗಿನ ಅವನ ಸಿದ್ಧಾಂತವನ್ನವನು 'ಬಾಲಿಶ' ಎನ್ನುತ್ತಾನೆ.

ಆಧುನಿಕ ಕಾಲದಲ್ಲಿ ಬೇಕನ್‌ಗೆ ಮೆಚ್ಚಿಕೆ ದೊರೆತದ್ದಕ್ಕೆ ಕಾರಣ ಅವನು ವಾದಗಳಿಗಿಂತ ಪ್ರಯೋಗಗಳಿಗೆ ಜ್ಞಾನದ ಆಕರವೆಂದು ಬೆಲೆ ಕೊಡುತ್ತಿದ್ದ ಎಂಬುದು. ಅವನ ಆಸಕ್ತಿಗಳೂ ವಿಷಯಗಳನ್ನು ಕುರಿತು ಅವನು ವಿಶ್ಲೇಷಿಸುತ್ತಿದ್ದ ರೀತಿಯೂ ಖಂಡಿತವಾಗಿಯೂ ಸೂಕ್ಷ್ಮತಾರ್ಕಿಕರ ಮಾದರಿಗಿಂತಲೂ ತೀರ ಭಿನ್ನವಾದವು. ಅವನ ವಿಶ್ವಕೋಶೀಯ ಪ್ರವೃತ್ತಿಯು ಅರೇಬಿಕ್ ಲೇಖಕರದರಂತೆ, ಅವರು ಇತರ ಕ್ರೈಸ್ತ ತತ್ವಜ್ಞಾನಿಗಳ ಮೇಲೆ ಬೀರಿದ್ದಕ್ಕಿಂತ ಹೆಚ್ಚು ಗಾಢ ಪ್ರಭಾವವನ್ನು ಅವನ ಮೇಲೆ ಬೀರಿದ್ದರು. ಅವನಂತೆಯೇ ಅವರೂ ವಿಜ್ಞಾನದಲ್ಲಿ ಆಸಕ್ತಿ ತಾಳಿದ್ದವರು, ಮಾಟ ಮತ್ತು ಜ್ಯೋತಿಷ್ಯಗಳಲ್ಲಿ ನಂಬಿಕೆಯಿಟ್ಟಿದ್ದವರು, ಆದರೆ ಕ್ರೈಸ್ತರು ಮಾಟವನ್ನು ಕೆಟ್ಟುದೆಂದೂ ಜ್ಯೋತಿಷ್ಯವನ್ನು ಭ್ರಮೆಯೆಂದೂ ತಿಳಿದಿದ್ದವರು. ಅವನು ಅಚ್ಚರಿಯೆನಿಸುವುದಕ್ಕೆ ಕಾರಣ ಮಧ್ಯಯುಗದ ಕ್ರೈಸ್ತ ತತ್ವಜ್ಞಾನಿಗಳಿಗಿಂತ ಅಷ್ಟೊಂದು ಭಿನ್ನನಾಗಿರುವುದು. ಆದರೆ ತನ್ನ ಕಾಲದಲ್ಲಿ ಅವನು ಬೀರಿದ ಪ್ರಭಾವ ಅತ್ಯಲ್ಪ, ಮತ್ತು ಕೆಲವೇಳೆ ಭಾವಿಸುವಂತೆ ಅವನು ಅಷ್ಟೇನೂ ವೈಜ್ಞಾನಿಕವಾಗಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಇಂಗ್ಲಿಷ್ ಲೇಖಕರು ಅವನು ಸಿಡಿಮದ್ದನ್ನು (ಗನ್ ಪೌಡರ್) ಕಂಡುಹಿಡಿದನೆಂದು ಹೇಳುತ್ತಾರೆ, ಆದರೆ ಅದು ಸತ್ಯವಲ್ಲ.

ಸಂತ ಬೊನವೆಂಚುರ (೧೨೨೧-೧೨೭೪) ಫ್ರಾನ್ಸಿಸ್ಕನ್ ಪಂಥದ ಮುಖ್ಯಸ್ಥನಾಗಿ ಬೇಕನ್ ಅನ್ನು ಪ್ರಕಟಣೆ ಮಾಡದಂತೆ ನಿಷೇಧಿಸಿದ, ಅವನು ಬೇರೆಯೇ ರೀತಿಯ ವ್ಯಕ್ತಿ. ಅವನು ಸಂತ ಆನ್‌ಸೆಲ್ಮ್ ಸಂಪ್ರದಾಯಕ್ಕೆ ಸೇರಿದವನು, ಅವನ ಮೂಲತತ್ವಜ್ಞಾನದ ವಾದಗಳನ್ನು ಸಮರ್ಥಿಸಿದವನು.

ನವಅರಿಸ್ಟಾಟಲ್‌ವಾದದಲ್ಲಿ ಕ್ರೈಸ್ತಕ್ಕೆ ಮೂಲಭೂತ ವಿರೋಧವನ್ನು ಕಂಡವನು. ಅವನಿಗೆ ಪ್ಲೇಟೋನ ಆದರ್ಶರೂಪಗಳಲ್ಲಿ ನಂಬಿಕೆ, ಆದರೆ ಆ ಕುರಿತು ಪರಿಪೂರ್ಣವಾಗಿ ಬಲ್ಲವನು ದೇವರು ಮಾತ್ರವೇ ಎಂದು ನಂಬಿದ್ದ. ತನ್ನ ಬರವಣಿಗೆಗಳಲ್ಲಿ ಅವನು ಆಗಸ್ಟೈನ್ ಅನ್ನು ನಿರಂತರವಾಗಿ ಉಲ್ಲೇಖಿಸುತ್ತಾನೆ, ಆದರೆ ಅರಬ್‌ರ ಒಂದೂ ಉಲ್ಲೇಖ ಅವನಲ್ಲಿಲ್ಲ, ಪ್ರಾಚೀನ ಕ್ರೈಸ್ತೇತರರದು ಕೆಲವು ಮಾತ್ರ.

ಆಕ್ವಾಸ್ಪಾರ್ಟಾದ ಮ್ಯಾಥ್ಯೂ (ಸು. ೧೨೩೫–೧೩೦೨) ಬೊನವೆಂಚುರನ ಅನುಯಾಯಿ, ಆದರೆ ಹೊಸ ತತ್ತ್ವಜ್ಞಾನದಿಂದ ಅತ್ಯಲ್ಪ ಪರಿಗಣಿತನಾದವನು. ಅವನೊಬ್ಬ ಫ್ರಾನ್ಸಿಸ್ಕನ್, ಅವನು ಕಾರ್ಡಿನಲ್ ಆದ; ಆಗಸ್ಟೈನ್ ದೃಷ್ಟಿಕೋನದಿಂದ ಅವನು ಸಂತ ಥಾಮಸ್‌ನನ್ನು ವಿರೋಧಿಸಿದ. ಆದರೆ ಅವನಿಗೆ ಅರಿಸ್ಟಾಟಲ್ 'ತತ್ತ್ವಜ್ಞಾನಿ' (ದ ಫಿಲಾಸಫರ್); ಅವನನ್ನು ನಿರಂತರವಾಗಿ ಉಲ್ಲೇಖಿಸುತ್ತಾನೆ. ಅವೆಸೆನ್ನ ಬಗ್ಗೆ ಆಗಾಗ್ಗೆ ಉಲ್ಲೇಖಗಳನ್ನು ಮಾಡುತ್ತಾನೆ.; ಸಂತ ಆನ್‌ಸೆಲ್ಮ್ ಅನ್ನು ಗೌರವದಿಂದ ಉಲ್ಲೇಖಿಸುತ್ತಾನೆ, ಹಾಗೆಯೇ ನಕಲಿ ಡಯೋನೀಸಿಯಸ್ ಅನ್ನೂ. ಆದರೆ ಅವನ ಪ್ರಮುಖ ಪ್ರಮಾಣ ಸಂತ ಆಸ್ಟೈನ್. ಪ್ಲೇಟೋ ಮತ್ತು ಅರಿಸ್ಟಾಟಲ್‌ರ ನಡುವಣ ಮಾರ್ಗವನ್ನು ನಾವು ಕಂಡುಕೊಳ್ಳಬೇಕೆನ್ನುತ್ತಾನೆ. ಪ್ಲೇಟೋನ ಆದರ್ಶರೂಪಗಳು 'ಅತ್ಯಂತ ದೋಷಪೂರ್ಣ'; ಅವು ವಿವೇಕವನ್ನು ಸ್ಥಾಪಿಸುತ್ತವೆ, ಆದರೆ ಜ್ಞಾನವನ್ನಲ್ಲ. ಮತ್ತೊಂದೆಡೆ, ಅರಿಸ್ಟಾಟಲ್ ಕೂಡ ದೋಷಪೂರ್ಣನೇ; ಅವನು ಜ್ಞಾನವನ್ನು ಸ್ಥಾಪಿಸುತ್ತಾನೆ, ಆದರೆ ವಿವೇಕವನ್ನಲ್ಲ. ನಮ್ಮ ಜ್ಞಾನವು – ಹೀಗೆಂದು ತೀರ್ಮಾನಿಸಲಾಗಿದೆ – ಕೆಳಸ್ತರದ ಮತ್ತು ಮೇಲುಸ್ತರದ ವಿಷಯಗಳಿಂದ, ಬಾಹ್ಯ ವಸ್ತುಗಳಿಂದ ಮತ್ತು ಆದರ್ಶ ಕಾರಣಗಳಿಂದ ರೂಪಿತವಾಗಿದೆ.

ಡನ್ಸ್ ಸ್ಕಾಟಸ್ (ಸು. ೧೨೭೦–೧೩೦೮) ಆಕ್ವಿನಾಸ್‌ನೊಂದಿಗಿನ ಫ್ರಾನ್ಸಿಸ್ಕನ್ ವಿವಾದವನ್ನು ಮುಂದುವರಿಸಿದ. ಅವನು ಸ್ಕಾಟ್‌ಲಂಡ್‌ನ ಅಲ್‌ಸ್ಟರ್‌ನಲ್ಲಿ ಹುಟ್ಟಿದ, ಆಕ್ಸ್‌ಫರ್ಡ್‌ನಲ್ಲಿ ಫ್ರಾನ್ಸಿಸ್ಕನ್ ಆದ, ಆನಂತರದ ವರ್ಷಗಳನ್ನು ಪ್ಯಾರಿಸ್‌ನಲ್ಲಿ ಕಳೆದ. ಸಂತ ಥಾಮಸ್‌ನ ವಿರುದ್ಧವಾಗಿ ಅವನು ಇಮ್ಮಾಕ್ಯುಲೇಟ್ ಪರಿಕಲ್ಪನೆಯನ್ನು ಸಮರ್ಥಿಸಿದ, ಮತ್ತು ಈ ವಿಷಯದಲ್ಲಿ ಪ್ಯಾರಿಸ್ ವಿಶ್ವವಿದ್ಯಾನಿಲಯ ಮಾತ್ರವಲ್ಲದೆ ಇಡೀ ಕ್ಯಾಥೋಲಿಕ್ ಚರ್ಚ್ ಅವನೊಡನೆ ನಿಂತಿತು. ಅವನೊಬ್ಬ ಆಗಸ್ಟೈನಿಯನ್, ಆದರೆ ಬೋನವೆಂಚುರನಷ್ಟು, ಅಷ್ಟೇಕೆ ಆಕ್ವಾಸ್ಪಾರ್ಟಾದ ಮ್ಯಾಥ್ಯೂನಷ್ಟು ಅತಿರೇಕಕ್ಕೆ ಹೋಗಲಿಲ್ಲ. ಅವರದರಂತೆಯೇ ಸಂತ ಥಾಮಸ್‌ನ ಅವನ ತಾತ್ವಿಕ ವಿರೋಧವೂ ಪ್ಲೇಟೋವಾದ (ಆಗಸ್ಟೈನ್ ಮೂಲಕ ಬಂದ) ಮಿಶ್ರಣದಿಂದ ಕೂಡಿದುದು.

ಉದಾಹರಣೆಗೆ, ಅವನು 'ಯಾವುದೇ ಪರಿಶುದ್ಧವೂ ಖಚಿತವೂ ಆದ ಸತ್ಯವನ್ನು ಸಹಜವಾಗಿ ಅರ್ಥಮಾಡಿಕೊಂಡ ಒಬ್ಬ ದಾರಿಹೋಕನು ಸೃಷ್ಟಿತವಲ್ಲದ ಬೆಳಕಿನ

ದೀಪ್ತಿಯಿಂದಲ್ಲದೆ ತಿಳಿಯಬಲ್ಲನೇ?' ಎಂಬ ಪ್ರಶ್ನೆಯ ಕುರಿತು ಚರ್ಚಿಸುತ್ತಾನೆ. ಅದು ಸಾಧ್ಯವಿಲ್ಲ ಎಂದವನು ವಾದಿಸುತ್ತಾನೆ. ಆರಂಭದಲ್ಲಿ ಸಂತ ಆಗಸ್ಟೈನ್‌ನ ಭಾಗಗಳ ಉಲ್ಲೇಖಗಳ ಮೂಲಕವಾಗಿಯೇ ಅವನು ತನ್ನ ವಾದವನ್ನು ಮಂಡಿಸುತ್ತಾನೆ. ರೋಮನ್ಸ್, ೧, ೨೦ ರಲ್ಲಿ ಅವನು ಕಾಣುವ ಒಂದೇ ತೊಡಕೆಂದರೆ: 'ರೂಪಿತವಾದ ವಸ್ತುಗಳ ಮೂಲಕ ಅರ್ಥಮಾಡಿಕೊಂಡ ದೇವರ ಕಾಣದ ವಿಷಯುಗಳನ್ನು ಜಗತ್ತಿನ ಸೃಷ್ಟಿಯು ಆರಂಭದಿಂದ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲಾಗಿದೆ.'

ಡನ್ಸ್ ಸ್ಕಾಟಸ್ ಸೌಮ್ಯ ವಾಸ್ತವವಾದಿ. ಅವನು ಸ್ವತಂತ್ರಇಚ್ಛಾಶಕಿಯಲ್ಲಿ ನಂಬಿಕೆ ಹೊಂದಿದ್ದವನು ಹಾಗೂ ಪೆಲೇಜಿಯನಿಸಂ ಕಡೆ ಒಲವಿದ್ದವನು. ಅವನ ಪ್ರಕಾರ ಇರುವುದು ಸಾರಸತ್ವಕ್ಕಿಂತ ಭಿನ್ನವಾದುದಲ್ಲ. ಅವನು ಮುಖ್ಯವಾಗಿ ಆಸಕ್ತನಾಗಿದ್ದುದು ಸಾಕ್ಷ್ಯಗಳಲ್ಲಿ, ಅಂದರೆ ಆಧಾರವಿಲ್ಲದೆಯೇ ತಿಳಿಯಬಹುದಾದ ವಿಷಯಗಳಲ್ಲಿ. ಇದರಲ್ಲಿ ಮೂರು ವಿಧಗಳಿವೆ: (೧) ತಮಗೆ ತಾವೇ ಸುಸ್ಪಷ್ಟವಾದ ತತ್ವಗಳು; (೨) ಅನುಭವದಿಂದ ಸ್ಪಷ್ಟಗೊಳ್ಳುವ ವಿಷಯಗಳು; (೩) ನಮ್ಮವೇ ಕ್ರಿಯೆಗಳು. ಆದರೆ ದೈವಿಕ ದೀಪ್ತಿಯಿಲ್ಲದೆ ನಾವು ಏನನ್ನೂ ತಿಳಿಯಲಾರೆವು.

ಬಹುತೇಕ ಫ್ರಾನ್ಸಿಸ್ಕನ್‌ರು ಆಕ್ವಿನಾಸ್‌ಗಿಂತ ಡನ್ಸ್ ಸ್ಕಾಟಸ್‌ನನ್ನೇ ಅನುಸರಿಸಿದರು.

ಡನ್ಸ್ ಸ್ಕಾಟಸ್ ಇರುವುದು ಸಾರಸತ್ವಕ್ಕಿಂತ ಭಿನ್ನವಾದುದಲ್ಲವಾದ್ದರಿಂದ 'ವ್ಯಕ್ತೀಕರಣ ತತ್ವವು' (ಪ್ರಿನ್ಸಿಪಲ್ ಆಫ್ ಇಂಡಿವಿಜುವೇಷನ್) – ಅಂದರೆ ಒಂದು ಇನ್ನೊಂದರಂತಿಲ್ಲದಿರುವಂತೆ ಮಾಡುವುದು – ಆಕೃತಿಯದೇ ಹೊರತು ವಸ್ತುವಿನದಲ್ಲ. 'ವ್ಯಕ್ತೀಕರಣ ತತ್ವವು' ಸೂಕ್ಷ್ಮತರ್ಕ ತತ್ವಜ್ಞಾನದ ಒಂದು ಮುಖ್ಯ ಪ್ರಶ್ನೆಯಾಗಿತ್ತು. ವಿವಿಧ ರೂಪಗಳಲ್ಲಿ ಅದು ಇಂದಿಗೂ ಜೀವಂತವಾಗಿದೆ. ಯಾವನೇ ನಿರ್ದಿಷ್ಟ ಲೇಖಕನನ್ನು ಗಮನಿಸದೆ, ನಾವು ಆ ಪ್ರಶ್ನೆಯನ್ನು ಕೆಳಗಿನ ರೀತಿಯಲ್ಲಿ ನಿರೂಪಿಸಬಹುದು:

ಒಂದೊಂದು ವಸ್ತುವಿನ ಗುಣಲಕ್ಷಣಗಳಲ್ಲಿ, ಕೆಲವು ಮೂಲಭೂತವಾದವು, ಮಿಕ್ಕವು ಆನುಷಂಗಿಕವಾದವು; ಆನುಷಂಗಿಕ ಗುಣಲಕ್ಷಣಗಳು ಎಂದರೆ ತನ್ನ ಅನನ್ಯತೆಯನ್ನು ಕಳೆದುಕೊಳ್ಳದೆ ತೊರೆಯಬಹುದಾದಂಥವು, ಉದಾಹರಣೆಗೆ, ಗಂಡಸಾಗಿದ್ದರೆ ಟೋಪಿಯನ್ನು ಧರಿಸುವುದು. ಈಗ ಉದ್ಭವಿಸುವ ಪ್ರಶ್ನೆಯೆಂದರೆ: ಒಂದೇ ಜೀವಜಾತಕ್ಕೆ ಸಂಬಂಧಿಸಿದ ಎರಡು ವಸ್ತುಗಳಿದ್ದಾಗ, ಅವು ಯಾವಾಗಲೂ ತಮ್ಮ ಸಾರಸತ್ವದಲ್ಲಿ ಭಿನ್ನವಾಗಿರುತ್ತವೆಯೇ ಅಥವಾ ಸಾರಸತ್ವವು ಎರಡರಲ್ಲಿಯೂ ಒಂದೇ ಬಗೆಯಲ್ಲಿರುವುದು ಸಾಧ್ಯವೇ? ಭೌತದ್ರವ್ಯಕ್ಕೆ ಸಂಬಂಧಿಸಿದಂತೆ ಸಂತ ಥಾಮಸ್ ಎರಡನೆಯ ದೃಷ್ಟಿಕೋನವನ್ನು; ಭೌತದ್ರವ್ಯವಲ್ಲದವಕ್ಕೆ ಸಂಬಂಧಿಸಿದಂತೆ ಮೊದಲನೆಯ ದೃಷ್ಟಿಕೋನವನ್ನು ಹೊಂದಿದ್ದವನು. ಆದರೆ ಎರಡು ವಿಭಿನ್ನ

ವಸ್ತುಗಳಲ್ಲಿನ ಸಾರಸತ್ವವು ಯಾವಾಗಲೂ ಭಿನ್ನವಾಗಿಯೇ ಇರುತ್ತವೆಂಬುದು ಡನ್ಸ್ ಸ್ಕಾಟಸ್‌ನ ಅಭಿಪ್ರಾಯ. ಶುದ್ಧ ಭೌತದ್ರವ್ಯವು ಭೇದವಿಲ್ಲದ ಭಾಗಗಳಿಂದಾದವು, ಅವಕಾಶದಲ್ಲಿನ ಅವುಗಳ ಸ್ಥಾನದಿಂದಾಗಿ ಎರಡರ ವ್ಯತ್ಯಾಸವು ಗೋಚರಿಸುತ್ತದೆ ಎಂಬ ಸಿದ್ಧಾಂತದ ಮೇಲೆ ಸಂತ ಥಾಮಸ್ ತನ್ನ ವಾದವನ್ನಾಧರಿಸುತ್ತಾನೆ. ಹೀಗೆ ದೇಹ ಮತ್ತು ಆತ್ಮಗಳನ್ನುಳ್ಳ ಒಬ್ಬ ವ್ಯಕ್ತಿಯು ಮತ್ತೊಬ್ಬನಿಗಿಂತ ಅವಕಾಶದಲ್ಲಿನ ತನ್ನ ದೇಹದ ಸ್ಥಾನದಿಂದಾಗಿ ದೈಹಿಕವಾಗಿ ಮಾತ್ರ ಭಿನ್ನವಾಗಿರಬಹುದು. (ಸೈದ್ಧಾಂತಿಕವಾಗಿ, ಇದು ಸರ್ವಸಮ ಅವಳಿಜವಳಿಗಳ ವಿಷಯದಲ್ಲಿ ಸಂಭವಿಸಬಹುದು.) ಡನ್ಸ್ ಸ್ಕಾಟ್, ಅದಕ್ಕೆ ಭಿನ್ನವಾಗಿ, ವಸ್ತುಗಳು ಭಿನ್ನವಾಗಿದ್ದರೆ ಅವರನ್ನು ಯಾವುದಾದರೂ ಗುಣಾತ್ಮಕ ವ್ಯತ್ಯಾಸದಿಂದ ಬೇರ್ಪಡಿಸಬೇಕು ಎಂಬ ಅಭಿಪ್ರಾಯ ತಾಳುತ್ತಾನೆ. ಇದು ಸಂತ ಥಾಮಸ್‌ನದಕ್ಕಿಂತ ಪ್ಲೇಟೋವಾದಕ್ಕೆ ಹತ್ತಿರವಾಗಿರುವುದು ಸ್ಪಷ್ಟವಾಗಿದೆ.

ಆಧುನಿಕ ಸಂದರ್ಭದಲ್ಲಿ ಈ ಪ್ರಶ್ನೆಯನ್ನು ಅಂತಿಮರೂಪದಲ್ಲಿ ನಿರೂಪಿಸುವುದಕ್ಕೆ ಅನೇಕ ಹಂತಗಳನ್ನು ಹಾದು ಬರಬೇಕಾಗುವುದು. ಮೊದಲನೆಯ ಹಂತವೆಂದರೆ, ಲೀಬ್‌ನಿಝ್ ತಳೆದಂತಹುದು, ಮೂಲಭೂತ ಹಾಗೂ ಆನುಷಂಗಿಕ ಗುಣಲಕ್ಷಣಗಳ ವ್ಯತ್ಯಾಸವನ್ನು ಕೈಬಿಡುವುದು; ಸೂಕ್ಷ್ಮತಾರ್ಕಿಕರು ಅರಿಸ್ಟಾಟಲ್‌ನಿಂದ ಪಡೆದ ಅನೇಕವುಗಳಲ್ಲಿ ಒಂದಾದ ಇದನ್ನು ಎಚ್ಚರಿಕೆಯಿಂದ ಮಂಡಿಸಲು ಪ್ರಯತ್ನಿಸಿದ ತಕ್ಷಣವೇ ಅದು ಅವಾಸ್ತವವಾಗಿ ಬಿಡುತ್ತದೆ. ಹೀಗಾಗಿ 'ಸಾರಸತ್ವ'ದ ಬದಲಿಗೆ, 'ಪ್ರಸ್ತುತ ವಸ್ತುವಿಗೆ ಅನ್ವಯಿಸುವ ಎಲ್ಲ ಪ್ರತಿಪಾದನೆಗಳು' ಉಳಿಯುತ್ತವೆ. (ಆದರೆ ಒಟ್ಟಾರೆಯಾಗಿ, ಕಾಲ ಮತ್ತು ಅವಕಾಶಗಳ ಸ್ಥಾನವನ್ನು ಈಗಲೂ ಕೈಬಿಡಬಹುದು.) ಈ ಅರ್ಥದಲ್ಲಿ ಎರಡು ವಸ್ತುಗಳು ಸರ್ವಸಮನಾಗಿರಲು ಸಾಧ್ಯ ಎಂದು ಲೀಬ್‌ನಿಝ್ ಅಭಿಪ್ರಾಯಪಡುತ್ತಾನೆ; ಇದೇ ಅವನ 'ಅವಿವೇಚಿತಗಳ ಸರ್ವಸಮತೆ' (ಐಡೆಂಟಿಟಿ ಆಫ್ ಅನ್‌ಡಿಸರ್ನಿಬಲ್) ಸಿದ್ಧಾಂತ. ಈ ಸಿದ್ಧಾಂತವನ್ನು ಭೌತವಿಜ್ಞಾನಿಗಳು ಖಂಡಿಸಿದರು, ಅವರ ಪ್ರಕಾರ, ಭೌತವಸ್ತುವಿನ ಎರಡು ಕಣಗಳು ಕಾಲ-ಅವಕಾಶಗಳಲ್ಲಿನ ತಮ್ಮ ಸ್ಥಾನದಿಂದಾಗಿಯೇ ಭಿನ್ನವಾಗಿರಬಹುದು. ಆ ಅಭಿಪ್ರಾಯವು ಕಾಲ ಮತ್ತು ಅವಕಾಶಗಳನ್ನು ಕೇವಲ ಸಾಪೇಕ್ಷಗಳಿಗೆ ಸೀಮಿತಗೊಳಿಸುವ ಸಾಪೇಕ್ಷ ಸಿದ್ಧಾಂತದಿಂದಾಗಿ ಹೆಚ್ಚು ಕ್ಲಿಷ್ಟಕರವಾಗಿದೆ.

ಈ ಪ್ರಶ್ನೆಯ ಆಧುನಿಕ ರೂಪ ಮಂಡನೆಗೆ ಮತ್ತೊಂದು ಹಂತವೂ ಆವಶ್ಯಕವಾಗಿದೆ, ಅದೆಂದರೆ, 'ಸಾರಸತ್ವ'ದ ಪರಿಕಲ್ಪನೆಯನ್ನೇ ಕೈಬಿಡುವುದು. ಇದು ಆದರೆ, 'ವಸ್ತು' ಎಂಬುದು ಗುಣಗಳ ಕಂತೆ, ಯಾಕೆಂದರೆ ಶುದ್ಧ 'ವಸ್ತುತನ'ದ ತಿರುಳೇ ಇರುವುದಿಲ್ಲ. 'ಸಾರಸತ್ವ'ವನ್ನು ತಿರಸ್ಕರಿಸಿದರೆ, ನಾವು ಆಕ್ವಿನಾಸ್‌ನದಕ್ಕಿಂತ ಸ್ಕಾಟಸ್‌ನದಕ್ಕೆ ಹತ್ತಿರವಾದುದರ ಕಡೆಗೇ ನಮ್ಮ ದೃಷ್ಟಿಕೋನವನ್ನು ಹರಿಸಬೇಕಾಗುತ್ತದೆ.

ಆದರೆ ಇದು ಕಾಲ ಮತ್ತು ಅವಕಾಶಗಳಿಗೆ ಸಂಬಂಧಿಸಿದಂತೆ ಹೆಚ್ಚು ತೊಡಕುಗಳನ್ನು ಎದುರಿಸುವಂತಾಗುತ್ತದೆ. ನಾನು ಅರ್ಥಮಾಡಿಕೊಂಡಂತೆ ಈ ಪ್ರಶ್ನೆಯನ್ನು ನನ್ನ 'ಇನ್‌ಕ್ವಯರಿ ಇನ್‌ಟು ಮೀನಿಂಗ್ ಅಂಡ್ ಟ್ರೂತ್' ಪುಸ್ತಕದಲ್ಲಿನ 'ಅಂಕಿತನಾಮಗಳು' ಹೆಸರಿನ ಅಧ್ಯಾಯದಲ್ಲಿ ವಿವರಿಸಿದ್ದೇನೆ.

ಸಂತ ಥಾಮಸ್‌ನ ನಂತರ, ಒಕ್ಕಾಮ್‌ನ ವಿಲಿಯಂ ಅತ್ಯಂತ ಪ್ರಮುಖ ದೇವತಾಶಾಸ್ತ್ರಜ್ಞ. ಅವನ ಬದುಕಿನ ಪರಿಸ್ಥಿತಿಗಳ ಬಗ್ಗೆ ನಮಗೆ ಸ್ಪಷ್ಟ ಮಾಹಿತಿಯಿಲ್ಲ. ಅವನು ಪ್ರಾಯಶಃ ೧೨೯೦ ಅಥವಾ ೧೩೦೦ ರಲ್ಲಿ ಹುಟ್ಟಿದ; ಸತ್ತದ್ದು ಏಪ್ರಿಲ್ ೧೦ ರಂದು, ೧೩೪೯ ರಲ್ಲೋ ೧೩೫೦ ರಲ್ಲೋ ಎಂಬುದೂ ಅನಿಶ್ಚಿತ. (೧೩೪೯ ರಲ್ಲಿ ಪ್ಲೇಗ್ ಮಾರಿ – ದ ಬ್ಲಾಕ್ ಡೆತ್ – ತೀವ್ರವಾಗಿತ್ತು, ಹಾಗಾಗಿ ಇದು ಪ್ರಾಯಶಃ ಅವನು ಸತ್ತ ವರ್ಷವಿರಬೇಕು.) ಅವನು ಸರ್ರೇಯಲ್ಲಿನ ಒಕ್ಕಾಮ್‌ನಲ್ಲಿ ಹುಟ್ಟಿದ ಎಂದು ಬಹುಜನರು ಅಭಿಪ್ರಾಯಪಡುತ್ತಾರೆ, ಆದರೆ ಡೆಲಿಸ್ಲೇ ಬರ್ನ್ಸ್ ಅದು ಯಾರ್ಕ್‌ಷೈರ್‌ನ ಒಕ್ಕಾಮ್ ಎಂದು ಹೇಳುತ್ತಾರೆ. ಅವನು ಆಕ್ಸ್‌ಫರ್ಡ್‌ನಲ್ಲಿದ್ದ, ಆನಂತರ ಪ್ಯಾರಿಸ್‌ಗೆ ಹೋದ, ಅಲ್ಲಿಯೇ ಮೊದಲು ಡನ್ಸ್ ಸ್ಕಾಟಸ್‌ನ ವಿದ್ಯಾರ್ಥಿಯಾಗಿದ್ದು ಆನಂತರ ಅವನ ಪ್ರತಿಸ್ಪರ್ಧಿಯಾದ. ಬಡತನದ ವಿಷಯದಲ್ಲಿನ ಪೋಪ್ ಜೊತೆಗಿನ ಫ್ರಾನ್ಸಿಸ್ಕನ್ ಜಗಳದಲ್ಲಿ ಅವನೂ ಸೇರಿದ್ದ. ಪಂಥದ ಮುಖ್ಯಸ್ಥನಾಗಿದ್ದ ಸೆಸೆನದ ಮೈಕೇಲ್‌ನ ಸಹಾಯದಿಂದ ಪೋಪ್ ಆಧ್ಯಾತ್ಮಿಕರಿಗೆ (ಸ್ಪಿರಿಚುವಲ್ಸ್) ಹಿಂಸೆ ನೀಡಿದ್ದ. ಕ್ರೈಸ್ತಭಿಕ್ಷುಗಳಿಗೆಂದು ಬಿಟ್ಟಿದ್ದ ಆಸ್ತಿಯನ್ನವರು ಪೋಪ್‌ಗೆ ಮರಳಿ ನೀಡುವ ಒಂದು ವ್ಯವಸ್ಥೆ ಆಗ ಇತ್ತು, ಅದರಿಂದ ಒಡೆತನದ ಪಾಪವಿಲ್ಲದಂತೆ ಅದರ ಅನುಕೂಲಗಳನ್ನು ಪಡೆಯಲು ಪೋಪ್ ಅವರಿಗೆ ಅವಕಾಶ ನೀಡಿದ್ದ. ಈ ವ್ಯವಸ್ಥೆಯು ಇಪ್ಪತ್ತೆರಡನೆಯ ಜಾನ್‌ನಿಂದ ಕೊನೆಗಂಡಿತು, ಅವರು ಅವುಗಳ ಸಂಪೂರ್ಣ ಒಡೆತನವನ್ನು ಒಪ್ಪಬೇಕೆಂದು ಹೇಳಿದ. ಇದರಿಂದ ಸೆಸೆನದ ಮೈಕೇಲ್‌ನ ನಾಯಕತ್ವದಲ್ಲಿ ಪಂಥದ ಬಹುಸಂಖ್ಯಾತರು ಬಂಡಾಯವೆದ್ದರು. ಸತ್ವಪರಿವರ್ತನವಾದಕ್ಕೆ (ಟ್ರಾನ್ಸಬ್‌ಸ್ಟಾನ್ಷಿಯೇಷನ್ – 'ಪ್ರಭುಭೋಜನ ಸಂಸ್ಕಾರದಲ್ಲಿ ರೊಟ್ಟಿ ಮತ್ತು ಮದ್ಯಗಳು ದೇಹ ಮತ್ತು ರಕ್ತಗಳಾಗಿ ಪರಿವರ್ತನೆ ಹೊಂದುವುದೆಂಬ ವಾದ') ಸಂಬಂಧಿಸಿದ ಪಾಷಂಡಿತನದ ಆರೋಪಕ್ಕೆ ಉತ್ತರಿಸಲೆಂದು ಪೋಪ್ ಅವಿಗ್ನಾನ್‌ಗೆ ಕರೆಸಿಕೊಂಡಿದ್ದ ಒಕ್ಕಾಮ್ ಸೆಸೆನದ ಮೈಕೇಲ್‌ನನ್ನು ಬೆಂಬಲಿಸಿದ, ಅಂತೆಯೇ ಮತ್ತೊಬ್ಬ ಪ್ರಮುಖ ವ್ಯಕ್ತಿ ಪಡುಅದ ಮಾರ್ಸಿಗ್ಲಿಯೋ. ೧೩೨೮ ರಲ್ಲಿ ಈ ಮೂವರನ್ನೂ ಬಹಿಷ್ಕಾರಕ್ಕೆ ಗುರಿಪಡಿಸಲಾಯಿತು, ಆದರೆ ಅವರು ಅವಿಗ್ನಾನ್‌ನಿಂದ ತಪ್ಪಿಸಿಕೊಂಡು ಚಕ್ರವರ್ತಿ ಲೂಯಿಸ್‌ನಲ್ಲಿ ಆಶ್ರಯ ಪಡೆದರು. ಸಾಮ್ರಾಜ್ಯದ ಒಡೆತನದ ಇಬ್ಬರು ಹಕ್ಕುದಾರರಲ್ಲಿ ಲೂಯಿಸ್‌ನೂ ಒಬ್ಬ, ಜರ್ಮನಿಯೂ ಅವನ ಬೆಂಬಲಕ್ಕಿತ್ತು, ಆದರೆ ಪೋಪ್ ಮತ್ತೊಬ್ಬನನ್ನು ಬೆಂಬಲಿಸಿದ್ದ.

ಪೋಪ್ ಲೂಯಿಸ್‌ನನ್ನೂ ಬಹಿಷ್ಕಾರಕ್ಕೊಳಪಡಿಸಿದ, ಆದರೆ ಅವನು ಸಾಮಾನ್ಯ ಧರ್ಮಪರಿಷತ್ತಿಗೆ ಮನವಿ ನೀಡಿದ. ಪೋಪ್‌ನ ಮೇಲೆಯೇ ಪಾಷಂಡಿತನದ ಆರೋಪ ಹೊರಿಸಲಾಯಿತು.

ಚಕ್ರವರ್ತಿಯನ್ನು ಭೇಟಿಮಾಡಿದ ಒಕ್ಕಾಮ್ ಹೀಗೆ ಹೇಳಿದನೆನ್ನುತ್ತಾರೆ: 'ನೀವು ನನ್ನನ್ನು ಜನಸಂದಣಿಯಿಂದ ರಕ್ಷಿಸಿ, ನಾನು ನಿಮ್ಮನ್ನು ಲೇಖನಿಯಿಂದ ರಕ್ಷಿಸುತ್ತೇನೆ.' ಅದೇನೇ ಅಗಲಿ, ಪಡುಅದ ಮಾರ್ಸಿಗ್ಲೊಯೋ ಚಕ್ರವರ್ತಿಯ ರಕ್ಷಣೆಯಲ್ಲಿ ಮ್ಯೂನಿಕ್‌ನಲ್ಲಿ ನೆಲೆಗೊಂಡು, ಸಾಕಷ್ಟು ಮುಖ್ಯವೆನಿಸಿದ ರಾಜಕೀಯ ವಿಷಯಗಳ ಬಗ್ಗೆ ಪುಸ್ತಕಗಳನ್ನು ಬರೆದ. ೧೩೩೮ ರಲ್ಲಿ ಚಕ್ರವರ್ತಿ ಸತ್ತ ಬಳಿಕ ಒಕ್ಕಾಮ್‌ನ ಗತಿ ಏನಾಯಿತೆಂಬುದರ ಬಗ್ಗೆ ಸ್ಪಷ್ಟವಾಗಿ ಏನೂ ತಿಳಿಯದು. ಅವನು ಚರ್ಚ್ ಜೊತೆಗೆ ರಾಜಿಮಾಡಿಕೊಂಡ ಎಂದು ಕೆಲವರೆಂದರೂ, ಅದು ಸುಳ್ಳೆಂದು ತೋರುತ್ತದೆ.

ಸಾಮ್ರಾಜ್ಯವು ಹಾಹೆನ್‌ಸ್ಟಾಫೆನ್ ಕಾಲದಲ್ಲಿದ್ದಂತಿರಲಿಲ್ಲ. ಪೋಪ್ ಅಧಿಕಾರವು ತನ್ನ ದಬ್ಬಾಳಿಕೆಯಿಂದ ಹೆಚ್ಚು ಹೆಚ್ಚಾಗಿ ದೊಡ್ಡದಾಗಿ ಬೆಳೆದಿತ್ತು, ಆದರೆ ಹಿಂದಿನ ಗೌರವವನ್ನು ಉಳಿಸಿಕೊಂಡಿರಲಿಲ್ಲ. ಹದಿನಾಲ್ಕನೆಯ ಶತಮಾನದ ಆರಂಭದಲ್ಲಿ ಐದನೆಯ ಕ್ಲೆಮೆಂಟ್ ಅದನ್ನು ಆವಿಗ್ನಾನ್‌ಗೆ ವರ್ಗಾಯಿಸಿದ್ದ, ಪೋಪ್ ರಾಜಕೀಯವಾಗಿ ಫ್ರಾನ್ಸ್‌ನ ರಾಜನ ಅಧೀನನಾಗಿದ್ದ. ಸಾಮ್ರಾಜ್ಯವು ಮತ್ತಷ್ಟು ಕುಸಿದಿತ್ತು; ಇಂಗ್ಲಂಡ್ ಮತ್ತು ಫ್ರಾನ್ಸ್‌ಗಳ ಶಕ್ತಿಯಿಂದಾಗಿ ಅದರ ಸಾರ್ವತ್ರಿಕಾಡಳಿತವು ತೆಳು ನೆರಳಿನಷ್ಟೂ ಉಳಿದಿರಲಿಲ್ಲ. ಮತ್ತೊಂದೆಡೆ, ಫ್ರಾನ್ಸ್ ದೊರೆಗೆ ಅಧೀನನಾಗಿದ್ದ ಕಾರಣದಿಂದಾಗಿ ಪೋಪ್‌ನ ಐಹಿಕ ವಿಷಯಗಳಲ್ಲಿನ ಸಾರ್ವತ್ರಿಕತೆಯು ದುರ್ಬಲವಾಗಿತ್ತು. ಹೀಗಾಗಿ ಪೋಪ್ ಮತ್ತು ಚಕ್ರವರ್ತಿಗಳ ನಡುವಣ ಸಂಘರ್ಷವು ವಾಸ್ತವದಲ್ಲಿ ಫ್ರಾನ್ಸ್ ಮತ್ತು ಜರ್ಮನಿಗಳ ನಡುವಣ ಸಂಘರ್ಷವಾಗಿತ್ತು. ಮೂರನೆಯ ಎಡ್ವರ್ಡ್ ಆಡಳಿತದಲ್ಲಿದ್ದ ಇಂಗ್ಲಂಡ್ ಫ್ರಾನ್ಸ್‌ನೊಡನೆ ಯುದ್ಧದಲ್ಲಿ ತೊಡಗಿದ್ದ, ಹೀಗಾಗಿ ಅವನು ಜರ್ಮನಿಯೊಡನೆ ಸೇರಿಕೊಂಡಿದ್ದ; ಇದರಿಂದಾಗಿ ಇಂಗ್ಲಂಡ್ ಕೂಡ್ ಪೋಪ್ ವಿರುದ್ಧವೆನಿಸಿಕೊಂಡಿತು. ಪೋಪ್‌ನ ಶತ್ರುಗಳು ಧರ್ಮಪರಿಷತ್ತಿನ ಸಮಾವೇಶಕ್ಕೆ ಒತ್ತಾಯಿಸಿದರು – ಅದೊಂದೇ ಪೋಪ್‌ನ ಮೇಲಿದ್ದ ಏಕೈಕ ಮತಧರ್ಮಬೋಧಕ ಅಧಿಕಾರಮಂಡಲವಾಗಿತ್ತು.

ಪೋಪ್ ವಿರುದ್ಧದ ಸ್ವರೂಪವು ಈ ಕಾಲದಲ್ಲಿ ಬದಲಾವಣೆಗೊಂಡಿತು. ಚಕ್ರವರ್ತಿಯ ಪರವಾಗಿರುವುದಕ್ಕೆ ಸೀಮಿತವಾಗದೆ, ವಿಶೇಷವಾಗಿ ಚರ್ಚ್ ಆಡಳಿತಕ್ಕೆ ಸಂಬಂಧಿಸಿದಂತೆ, ಅದಕ್ಕೊಂದು ಪ್ರಜಾಪ್ರಭುತ್ವಾತ್ಮಕ ಧೋರಣೆ ಆವಶ್ಯಕವಾಗಿತ್ತು. ಇದರಿಂದಾಗಿ ಅದಕ್ಕೆ ಹೊಸತೊಂದು ಶಕ್ತಿ ಲಭಿಸಿತು, ಅದೇ ಅಂತಿಮವಾಗಿ ಮತಧರ್ಮಸುಧಾರಣೆಯೆಡೆಗೆ ಸಾಗಿತು.

ಕವಿಯಾಗಿ ಅವನು ನಾವೀನ್ಯವನ್ನು ತೋರ್ಪಡಿಸಿದರೂ, ಒಬ್ಬ ಚಿಂತಕನಾಗಿ

ಡಾಂಟೆ (೧೨೬೫-೧೩೨೧) ತನ್ನ ಕಾಲಕ್ಕಿಂತ ಹಿಂದಿದ್ದ. ಅವನ ಪುಸ್ತಕ 'ಡ ಮಾನಾರ್ಕಿಯ' ತನ್ನ ಧೋರಣೆಯಲ್ಲಿ ಗಿಬ್ಬಲೈನ್ ಸ್ವರೂಪದ್ದು, ಒಂದು ನೂರು ವರ್ಷಗಳ ಹಿಂದೆ ಅದು ಸಲ್ಲುವಂತಿತ್ತು. ಅವನ ಪ್ರಕಾರ ಪೋಪ್ ಮತ್ತು ಚಕ್ರವರ್ತಿಗಳು ಪರಸ್ಪರ ಸ್ವತಂತ್ರರು, ಇಬ್ಬರೂ ದೈವೀಇಚ್ಛಾಶಕ್ತಿಯಿಂದ ನೇಮಿತರಾದವರು. 'ಡಿವೈನ್ ಕಾಮಿಡಿ'ಯಲ್ಲಿನ ಅವನ ಸೈತಾನನಿಗೆ ಮೂರು ಬಾಯಿಗಳು, ಅದರಲ್ಲವನು ಸದಾ ಜೂಡಾಸ್ ಇಸ್ಕಾರಿಯಟ್, ಬ್ರೂಟಸ್ ಮತ್ತು ಕ್ಯಾಸಿಯಸ್‌ರನ್ನೇ ಅಗಿಯುತ್ತಿದ್ದ, ಅವರು ಮೂವರೂ ಸಮಾನ ದ್ರೋಹಿಗಳು, ಮೊದಲನೆಯವನು ಕ್ರಿಸ್ತನ ವಿರುದ್ಧ, ಉಳಿದಿಬ್ಬರು ಸೀಸರ್ ವಿರುದ್ಧ. ಡಾಂಟೆಯ ಆಲೋಚನೆ ಕುತೂಹಲಕಾರಿಯಾಗಿದೆ, ತನ್ನಲ್ಲೇ ಅಲ್ಲ, ಸಾಮಾನ್ಯನ ದೃಷ್ಟಿಯಲ್ಲೂ. ಆದರೆ ಅದು ಪ್ರಭಾವಶಾಲಿಯಾಗಿರಲಿಲ್ಲ, ತೀರ ಹಳೆಯಕಾಲದ್ದೆನಿಸಿತ್ತು.

ಇದಕ್ಕೆ ವ್ಯತಿರಿಕ್ತವಾಗಿ, ಪಡುಅದ ಮಾರ್ಸಿಗ್ಲಿಯೋ ಪೋಪ್ ವಿರುದ್ಧ ಹೊಸ ರೂಪಕ್ಕೆ ನಾಂದಿ ಹಾಡಿದ, ಅದರಲ್ಲಿ ಚಕ್ರವರ್ತಿಯದು ಅಲಂಕಾರದ ಘನತೆ. ಅವನು ಒಕ್ಕಾಮ್‌ನ ವಿಲಿಯಂನ ನಿಕಟ ಸ್ನೇಹಿತ, ಅವನ ರಾಜಕೀಯ ಅಭಿಪ್ರಾಯಗಳ ಪ್ರಭಾವಕ್ಕೊಳಗಾಗಿದ್ದ. ಅವನ ಪ್ರಕಾರ, ಶಾಸಕನೆಂದರೆ ಜನರಲ್ಲಿನ ಬಹುಸಂಖ್ಯಾತ, ಜನರ ಬಹುಸಂಖ್ಯೆಗೆ ರಾಜರನ್ನು ಶಿಕ್ಷಿಸುವ ಅಧಿಕಾರವಿದೆ. ಅವನು ಚರ್ಚ್‌ಗೂ ಜನಸಾರ್ವಭೌಮತೆಯನ್ನು ಅನ್ವಯಿಸುತ್ತಾನೆ, ಅದರಲ್ಲಿ ಇಟಲಿಯನ್ನೂ ಸೇರಿಸುತ್ತಾನೆ. ಸ್ಥಳೀಯ ಜನಪರಿಷತ್ತುಗಳಿರಬೇಕು, ಜನಸಾಮಾನ್ಯರನ್ನೂ ಅದು ಒಳಗೊಂಡಿರಬೇಕು, ಅವರು ಸಾಮಾನ್ಯ ಮತಧರ್ಮಪರಿಷತ್ತಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು. ಸಾಮಾನ್ಯ ಪರಿಷತ್ತಿಗೆ ಮಾತ್ರವೇ ಬಹಿಷ್ಕಾರದ ಅಧಿಕಾರವಿರತಕ್ಕದ್ದು, ಅದಕ್ಕೆ ಮಾತ್ರವೇ ಮತಧರ್ಮಗ್ರಂಥಗಳ ಆಧಿಕೃತ ವ್ಯಾಖ್ಯಾನವನ್ನು ನಿಗದಿಗೊಳಿಸತಕ್ಕದ್ದು. ಹೀಗೆ ಎಲ್ಲ ಶ್ರದ್ಧಾವಂತರಿಗೂ ಶಾಸ್ತ್ರಪ್ರಾಮಾಣ್ಯವನ್ನು ನಿರ್ಧರಿಸುವಲ್ಲಿ ಧ್ವನಿಯಿರುತ್ತದೆ. ಚರ್ಚ್‌ಗೆ ಮತಧರ್ಮೇತರ ಅಧಿಕಾರವಿರಬಾರದು, ನಾಗರಿಕ ಒಪ್ಪಿಗೆಯಿಲ್ಲದೆ ಬಹಿಷ್ಕಾರ ನಡೆಯಕೂಡದು, ಪೋಪ್‌ಗೆ ವಿಶೇಷ ಅಧಿಕಾರವೇನೂ ಇರಬಾರದು.

ಒಕ್ಕಾಮ್ ಮಾರ್ಸಿಗ್ಲಿಯೋನಷ್ಟು ದೂರವೇನೂ ಹೋಗಲಿಲ್ಲವಾದರೂ, ಸಾಮಾನ್ಯ ಮತಧರ್ಮಪರಿಷತ್ತಿಗೆ ಆಯ್ಕೆ ಮಾಡುವ ವಿಧಾನವನ್ನು ಸಂಪೂರ್ಣವಾಗಿ ಪ್ರಜಾಪ್ರಭುತ್ವಾತ್ಮಕವಾಗಿಸಿದ.

ಸಾಮಾನ್ಯ ಮತಧರ್ಮ ಪರಿಷತ್ತಿನ ಚಳವಳಿಯು ಹದಿನೈದನೆಯ ಶತಮಾನದ ಆರಂಭದಲ್ಲಿ ಪ್ರಾಮುಖ್ಯಕ್ಕೆ ಬಂತು, ಆಗ ಮಹಾ ವಿಭಜನೆಯ ಗಾಯವನ್ನು ನಿವಾರಿಸುವ ಆವಶ್ಯಕತೆಯಿತ್ತು. ಅದರೆ ಈ ಕಾರ್ಯವನ್ನು ಪೂರೈಸಿದ ಬಳಿಕ, ಅದು ಇಳಿಮುಖವಾಯಿತು. ಮಾರ್ಸಿಗ್ಲಿಯೋನಲ್ಲಿ ಈಗಾಗಲೇ ಕಾಣಿಸಿಕೊಂಡಿದ್ದ ಅದರ ದೃಷ್ಟಿಕೋನವು ಆನಂತರ ಪ್ರಾಟೆಸ್ಟೆಂಟರು ಸೈದ್ಧಾಂತಿಕವಾಗಿ

ಅಳವಡಿಸಿಕೊಂಡದ್ದಕ್ಕಿಂತ ಭಿನ್ನವಾಗಿತ್ತು. ಪ್ರಾಟೆಸ್ಟೆಂಟರು ಖಾಸಗಿ ತೀರ್ಪಿನ ಹಕ್ಕನ್ನು ಬಯಸಿದರು, ಸಾಮಾನ್ಯ ಮತಧರ್ಮ ಪರಿಷತ್ತಿನ ಅಧೀನವಾಗಲು ಸಿದ್ಧವಿರಲಿಲ್ಲ. ಮತಧಾರ್ಮಿಕ ಶ್ರದ್ಧೆಯನ್ನು ನಿರ್ಧರಿಸುವಲ್ಲಿ ಆಡಳಿತಯಂತ್ರದ ಪಾತ್ರವಿರಬಾರದು. ಇದಕ್ಕೆ ವ್ಯತಿರಿಕ್ತವಾಗಿ ಮಾರ್ಸಿಗ್ಲಿಯೋ ಕ್ಯಾಥೋಲಿಕ್ ಐಕ್ಯವನ್ನು ಉಳಿಸುವ ಗುರಿ ಹೊಂದಿದ್ದ, ಆದರೆ ಇದು ಪ್ರಜಾಪ್ರಭುತ್ವಾತ್ಮಕವಾಗಿ ನಡೆಯಬೇಕೇ ಹೊರತು ಪೋಪ್ ಪರಮಾಧಿಕಾರದ ಮೂಲಕವಲ್ಲ ಎಂದು ನಿರ್ಧರಿಸಿದ್ದ. ರೂಢಿಯಲ್ಲಿ ಬಹುತೇಕ ಪ್ರಾಟೆಸ್ಟೆಂಟರು, ಆಡಳಿತವನ್ನು ವಶಪಡಿಸಿಕೊಂಡಾಗ, ಪೋಪ್‌ಜಾಗದಲ್ಲಿ ರಾಜನನ್ನು ಕೂರಿಸಿದರು, ಅಷ್ಟೆ; ಹೀಗಾಗಿ ಖಾಸಗಿ ತೀರ್ಮಾನದ ಸ್ವಾತಂತ್ರ್ಯವೂ ಇಲ್ಲವಾಯಿತು, ಮತತಾತ್ವಿಕ ವಿಷಯಗಳ ನಿರ್ಧಾರದಲ್ಲಿ ಪ್ರಜಾಪ್ರಭುತ್ವಾತ್ಮಕ ವಿಧಾನವನ್ನು ಅಳವಡಿಸಿಕೊಂಡಂತೆಯೂ ಆಗಲಿಲ್ಲ. ಆದರೆ ತಮ್ಮ ಪೋಪ್ ವಿರೋಧದಲ್ಲಿ ಅವರು ಸಾಮಾನ್ಯ ಮತಧರ್ಮ ಪರಿಷತ್ತಿನ ಚಳವಳಿಯ ಸಿದ್ಧಾಂತಗಳಲ್ಲಿ ಬೆಂಬಲವನ್ನು ಕಂಡರು. ದೇವತಾಶಾಸ್ತ್ರಜ್ಞರಲ್ಲೆಲ್ಲ ಲೂಥರ್ ಬೆಂಬಲಿಸಿದ್ದು ಒಕ್ಕಾಮ್‌ನನ್ನು. ಪ್ರಾಟೆಸ್ಟೆಂಟರಲ್ಲಿನ ಸಾಕಷ್ಟು ಮಂದಿ, ಪ್ರಾಟೆಸ್ಟೆಂಟ್ ಆಡಳಿತವಿರುವ ಕಡೆಗಳಲ್ಲಿಯೂ, ಖಾಸಗಿ ತೀರ್ಮಾನದ ಪರವಾಗಿದ್ದರೆಂಬುದನ್ನಿಲ್ಲಿ ಹೇಳಬೇಕು. ಇಂಗ್ಲಿಷ್ ಅಂತರ್ಯುದ್ಧದಲ್ಲಿ ಸ್ವಾತಂತ್ರ್ಯವಾದಿಗಳು ಮತ್ತು ಪ್ರೆಸ್ಬಿಟೇರಿಯನ್‌ರಿಗೂ ಇದ್ದ ಪ್ರಮುಖ ಭಿನ್ನಾಭಿಪ್ರಾಯವು ಇದೇ ಆಗಿತ್ತು.

ಒಕ್ಕಾಮ್‌ನ ರಾಜಕೀಯ ಕೃತಿಗಳು[೨೪೩] ತತ್ವಜಿಜ್ಞಾಸಾತ್ಮಕ ವಾದಗಳ ಶೈಲಿಯಲ್ಲಿ ರಚಿತವಾಗಿವೆ, ಅದರಲ್ಲಿ ಅನೇಕ ಸಿದ್ಧಾಂತಗಳ ಪರ ಮತ್ತು ವಿರೋಧ ವಾದಗಳಿವೆ, ಕೆಲ ವೇಳೆ ಯಾವುದೇ ತೀರ್ಮಾನಕ್ಕೆ ಬರದೆ. ನಮಗೆ ಪರಿಚಿತವಾಗಿರುವುದು ನೇರವಾದ ರಾಜಕೀಯ ಪ್ರಚಾರ, ಆದರೆ ಅವನ ಕಾಲದಲ್ಲಿ ಅವನು ಆರಿಸಿಕೊಂಡ ಈ ವಿಧಾನವು ಪರಿಣಾಮಕಾರಿಯಾಗಿತ್ತೆನಿಸುತ್ತದೆ.

ಕೆಲವು ಮಾದರಿಗಳು ಅವನ ಶೈಲಿ ಮತ್ತು ಧೋರಣೆಗಳನ್ನು ಬಿಂಬಿಸುತ್ತವೆ:

'ಪೋಪ್‌ನ ಅಧಿಕಾರವನ್ನು ಕುರಿತ ಎಂಟು ಪ್ರಶ್ನೆಗಳು' ಎಂಬ ದೀರ್ಘ ಅಧ್ಯಾಯವೊಂದಿದೆ. ಮೊದಲನೆಯ ಪ್ರಶ್ನೆಯೆಂದರೆ, ಯಾರಾದರೂ ಒಬ್ಬನೇ ಚರ್ಚ್ ಮತ್ತು ಸರ್ಕಾರದಲ್ಲಿ ಒಂದೇ ಬಗೆಯ ಅಧಿಕಾರ ಹೊಂದುವ ಹಕ್ಕಿದೆಯೇ? ಎರಡನೆಯದು, ಮತಧರ್ಮೇತರ ಅಧಿಕಾರವು ನೇರವಾಗಿ ದೇವರಿಂದ ಪಡೆದಿರುವಂತಹುದೇ? ಮೂರನೆಯದು, ಪೋಪ್ ಚಕ್ರವರ್ತಿ ಅಥವಾ ರಾಜನಿಗೆ ಮತಧರ್ಮೇತರ ಅಧಿಕಾರ ವ್ಯಾಪ್ತಿಯನ್ನು ನೀಡುವ ಹಕ್ಕಿದೆಯೇ? ನಾಲ್ಕನೆಯದು,

---

೨೪೩. 'ಗಿಲೆಲ್‌ಮಿ ಡ ಒಕ್ಕಾಂ' 'ಆಪೆರಾ ಪೊಲಿಟಿಕ', ಮ್ಯಾಂಚೆಸ್ಟರ್ ಯೂನಿವರ್ಸಿಟಿ ಪ್ರೆಸ್, ೧೯೪೦ – ಇದನ್ನು ನೋಡಿ

ಚುನಾವಣೆಯ ಮೂಲಕ ನಡೆಯುವ ಆಯ್ಕೆಯು ಜರ್ಮನ್ ದೊರೆಗೆ ಸಂಪೂರ್ಣ ಅಧಿಕಾರವನ್ನು ನೀಡುತ್ತದೆಯೇ? ಐದು ಮತ್ತು ಆರನೆಯದು, ರಾಜರಿಗೆ ಪಟ್ಟಾಭಿಷೇಕ ಮಾಡಿಸುವ ಬಿಷಪ್‌ರ ಹಕ್ಕಿನ ಮೂಲಕ ಚರ್ಚ್ ಯಾವ ಅಧಿಕಾರವನ್ನು ಪಡೆಯುತ್ತದೆ? ಏಳನೆಯದು, ಅಸಮಂಜಸ ಆರ್ಚ್‌ಬಿಷಪ್ ನೆರವೇರಿಸಿದ ಕಿರೀಟಧಾರಣೆ ಸಮಾರಂಭವು ಸಿಂಧುವೇ? ಎಂಟನೆಯದು, ಮತದಾರರ ಆಯ್ಕೆಯು ಜರ್ಮನ್ ದೊರೆಗೆ ಚಕ್ರವರ್ತಿ ಎಂಬ ಬಿರುದನ್ನು ದಯಪಾಲಿಸುತ್ತದೆಯೇ? ಆ ಕಾಲದಲ್ಲಿ ಇವೆಲ್ಲ ರಾಜಕೀಯ ವ್ಯವಹಾರದ ಜ್ವಲಂತ ಪ್ರಶ್ನೆಗಳಾಗಿದ್ದವು.

ಮತ್ತೊಂದು ಕೃತಿಯು ಪೋಪ್‌ನ ಅನುಮತಿಯಿಲ್ಲದೆ ರಾಜನೊಬ್ಬನು ಚರ್ಚ್‌ನ ಸಾಮಾನುಗಳನ್ನು ವಶಪಡಿಸಿಕೊಳ್ಳುವ ಸಿಂಧುತ್ವಕ್ಕೆ ಸಂಬಂಧಿಸಿದ್ದು. ಮೂರನೆಯ ಎಡ್ವರ್ಡ್ ಫ್ರಾನ್ಸ್ ಜೊತೆಗಿನ ತನ್ನ ಯುದ್ಧಕ್ಕಾಗಿ ಪುರೋಹಿತವರ್ಗದ ಮೇಲೆ ತೆರಿಗೆ ವಿಧಿಸಿದ್ದನ್ನು ಸಮರ್ಥಿಸುವ ಉದ್ದೇಶ ಹೊಂದಿರುವಂತಹುದು. ಎಡ್ವರ್ಡ್ ಚಕ್ರವರ್ತಿಯ ಜೊತೆಗಿದ್ದ ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬಹುದು.

ಆನಂತರ ಬರುವುದು 'ಮದುವೆಯ ವಿಷಯಕ್ಕೆ ಸಂಬಂಧಿಸಿದ ಸಮಾಲೋಚನೆ'; ಚಕ್ರವರ್ತಿಯು ತನ್ನ ಚಿಕ್ಕಪ್ಪ-ದೊಡ್ಡಪ್ಪರ ಮಕ್ಕಳನ್ನು (ಕಸಿನ್ಸ್) ಮದುವೆಯಾಗುವುದು ಸಮರ್ಥನೀಯವೇ ಎಂಬ ಪ್ರಶ್ನೆಯನ್ನು ಕುರಿತದ್ದು.

ಚಕ್ರವರ್ತಿಯ ಕತ್ತಿಯನ್ನು ಕಾಪಾಡುವ ಕಾರ್ಯದಲ್ಲಿ ಒಕ್ಕಾಮ್ ತನ್ನ ಸಾಮರ್ಥ್ಯ ಮೀರಿ ಪ್ರಯತ್ನಿಸಿದ ಎಂಬುದು ಇದರಿಂದ ತಿಳಿಯುತ್ತದೆ.

ಈಗ ನಾವು ಒಕ್ಕಾಮ್‌ನ ಶುದ್ಧ ತಾತ್ವಿಕ ಸಿದ್ಧಾಂತಗಳ ಪರಿಶೀಲನೆಗೆ ತೊಡಗುವ ಸಮಯ. ಈ ವಿಷಯವನ್ನು ಕುರಿತಂತೆ ಅರ್ನೆಸ್ಟ್ ಈ. ಮೂಡಿ ಅವರ 'ದ ಲಾಜಿಕ್ ಆಫ್ ವಿಲಿಯಂ ಆಫ್ ಒಕ್ಕಾಮ್' ಎಂಬ ಒಂದು ಬಹು ಒಳ್ಳೆಯ ಪುಸ್ತಕವಿದೆ. ನಾನಿಲ್ಲಿ ಹೇಳುವುದೆಲ್ಲ ಈ ಪುಸ್ತಕವನ್ನಾಧರಿಸಿದುದೆ, ಅದರಲ್ಲಿರುವುದು ವಿಶಿಷ್ಟ ದೃಷ್ಟಿಕೋನವಾದರೂ ನನಗದು ಸಮಂಜಸವೆಂದು ತೋರುತ್ತದೆ. ತತ್ವಜ್ಞಾನದ ಇತಿಹಾಸವನ್ನು ಕುರಿತ ಲೇಖಕರಲ್ಲಿ ಒಂದು ಪ್ರವೃತ್ತಿಯಿದೆ; ವ್ಯಕ್ತಿಗಳನ್ನು ಅವರ ನಂತರದವರ ದೃಷ್ಟಿಕೋನದಿಂದ ಅಳೆಯುವುದು, ಆದರೆ ಇದು ಸಾಮಾನ್ಯವಾಗಿ ದೋಷವೇ. ಒಕ್ಕಾಮ್‌ನನ್ನು ಸೂಕ್ಷ್ಮತರ್ಕದ ಕುಸಿತವನ್ನು ಸರಿಪಡಿಸುವವನಂತೆಯೂ, ಡೆಕಾರ್ಟೆ ಅಥವಾ ಕ್ಯಾಂಟ್ ಅಥವಾ ಆಧುನಿಕ ತತ್ವಜ್ಞಾನಿಗಳ ಪ್ರಸಕ್ತ ಲೇಖಕನ ಅಚ್ಚುಮೆಚ್ಚಿನ ವ್ಯಾಖ್ಯಾನಕಾರ ಯಾರೇ ಆದರೂ ಅವನ ಪೂರ್ವವರ್ತಿಯೆಂದು ಕಾಣುತ್ತಾರೆ. ಮೂಡಿಯ ಪ್ರಕಾರ, ಇದೆಲ್ಲ ದೋಷವೇ, ನಾನು ಅವರನ್ನು ಒಪ್ಪುತ್ತೇನೆ. ಒಕ್ಕಾಮ್‌ನ ಮುಖ್ಯ ಕಾಳಜಿ ಅರಿಸ್ಟಾಟಲ್ ಅನ್ನು, ಅರೇಬಿಕ್ ಮತ್ತು ಆಗಸ್ಟೈನ್‌ವಾದದಿಂದ ಬಿಡುಗಡೆಗೊಳಿಸಿ, ಶುದ್ಧರೂಪದಲ್ಲಿ ಬಿಂಬಿಸುವುದು ಎಂದವರು ಹೇಳುತ್ತಾರೆ. ಇದೇ ಬಹುತೇಕವಾಗಿ ಸಂತ ಥಾಮಸ್‌ನ ಕಾಳಜಿಯೂ ಆಗಿತ್ತು.

ಆದರೆ ಫ್ರಾನ್ಸಿಸ್ಕನ್‌ರು, ನಾವಾಗಲೇ ನೋಡಿದಂತೆ, ಆಗಸ್ಟೈನ್‌ನನ್ನು ಅವನಿಗಿಂತ ಹೆಚ್ಚು ನಿಕಟವಾಗಿ ಹಿಂಬಾಲಿಸಿದವರು. ಆಧುನಿಕ ಇತಿಹಾಸಕಾರರು ಮಾಡಿರುವ ಒಕ್ಕಾಮ್‌ನ ವ್ಯಾಖ್ಯಾನಗಳು, ಮೂಡಿ ಅವರ ಪ್ರಕಾರ, ಸೂಕ್ಷ್ಮತರ್ಕದಿಂದ ಆಧುನಿಕ ತತ್ವಜ್ಞಾನದೆಡೆಗೆ ಸಾಗುವ ಕ್ರಮಬದ್ಧ ಸಂಕ್ರಮಣಸ್ಥಿತಿಯನ್ನು ಕಾಣುವ ಬಯಕೆಯಿಂದ ವಿಷಮಗೊಂಡಿದೆ. ಇದರಿಂದಾಗಿ ಜನ ಅವನಲ್ಲಿ ಆಧುನಿಕ ಸಿದ್ಧಾಂತಗಳನ್ನು ಕಾಣುವಂತಾಗಿಬಿಟ್ಟಿದೆ, ಆದರೆ ಅವನು ಮಾಡುತ್ತಿರುವುದು ಅರಿಸ್ಟಾಟಲ್ ಸಿದ್ಧಾಂತಗಳ ವ್ಯಾಖ್ಯಾನವನ್ನಷ್ಟೆ.

ಒಕ್ಕಾಮ್‌ನ ಹೆಸರು ಜನಜನಿತವಾಗಿರುವುದು ಅವನ ಕೃತಿಗಳಲ್ಲಿ ಸಿಗದ ಅವನ ಒಂದು ಸೂಕ್ತಿಯಿಂದ, ಅದೆಂದರೆ 'ಒಕ್ಕಾಮ್ ಅಲಗು' (ಒಕ್ಕಾಮ್ಸ್ ರೇಝರ್). ಈ ಸೂಕ್ತಿಯು ಹೇಳುವುದೆಂದರೆ: 'ಆವಶ್ಯಕತೆಯಿಲ್ಲದೆ ಘಟಕಗಳನ್ನು ವೃದ್ಧಿಗೊಳಿಸಬಾರದು.' ಇದನ್ನು ಅವನು ಹೇಳದಿದ್ದರೂ, ಇದೇ ಪರಿಣಾಮವನ್ನು ಹೊಂದಿದ ಮತ್ತೊಂದು ಮಾತು, ಅದೆಂದರೆ: 'ಕೆಲವದರಿಂದಲೇ ನೆರವೇರಿಸಬಹುದಾದುದಕ್ಕೆ ಹೆಚ್ಚಿನದನ್ನು ಬಳಸಿಕೊಳ್ಳುವುದು ವ್ಯರ್ಥ.' ಅಂದರೆ, ವಿಜ್ಞಾನದ ಆಂಶವೊಂದನ್ನು ಅದೋ ಇದೋ ಆಧಾರಕಲ್ಪನೆಯನ್ನು ಮಾಡಿಕೊಳ್ಳದೆ ವ್ಯಾಖ್ಯಾನಿಸಬಹುದಾದರೆ, ಹಾಗೆ ಮಾಡಿಕೊಳ್ಳುವುದಕ್ಕೆ ಆಧಾರವಿರುವುದಿಲ್ಲ. ತಾರ್ಕಿಕ ವಿಶ್ಲೇಷಣೆಯಲ್ಲಿ ಇದು ನನಗೆ ಅತ್ಯಂತ ಫಲಪ್ರದ ತತ್ವವೆನ್ನಿಸಿದೆ.

ತರ್ಕದಲ್ಲಿ, ಆದರೆ ತತ್ವಜಿಜ್ಞಾಸೆಯಲ್ಲಲ್ಲ, ಒಕ್ಕಾಮ್ ಒಬ್ಬ ನಾಮಮಾತ್ರವಾದಿ (ನಾಮಿನಲಿಸ್ಟ್). ಹದಿನೈದನೆಯ ಶತಮಾನದ ನಾಮಮಾತ್ರವಾದಿಗಳು[೨೪೪] ಅವನನ್ನು ತಮ್ಮ ಪಂಥದ ಸ್ಥಾಪಕನೆಂದು ಭಾವಿಸಿದ್ದರು. ಅರಿಸ್ಟಾಟಲ್ ಅನ್ನು ಸ್ಕಾಟಸ್‌ವಾದಿಗಳು ಅಪವ್ಯಾಖ್ಯಾನ ಮಾಡಿದರು, ಮತ್ತು ಈ ಅಪವ್ಯಾಖ್ಯಾನಕ್ಕೆ ಭಾಗಶಃ ಕಾರಣ ಆಗಸ್ಟೈನ್‌ನ ಪ್ರಭಾವ, ಭಾಗಶಃ ಅವೆಸೆನ್ನ ಮತ್ತು ಭಾಗಶಃ ಆ ಹಿಂದಿನ ಕಾರಣ ಅರಿಸ್ಟಾಟಲ್‌ನ 'ಕ್ಯಾಟೆಗೊರೀಸ್'ನ ಪಾರ್ಫೈರಿಯ ವಿವೇಚನೆ ಎಂದವನು ಭಾವಿಸಿದ್ದ. ಪಾರ್ಫೈರಿ ತನ್ನ ಕೃತಿಯಲ್ಲಿ ಮೂರು ಪ್ರಶ್ನೆಗಳನ್ನೆತ್ತಿದ್ದ: (೧) ಜೀವಕುಲ ಮತ್ತು ಜೀವಜಾತಿಗಳು ಭೌತದ್ರವ್ಯಗಳೇ? (೨) ಅವು ಮೂರ್ತವೇ ಅಮೂರ್ತವೇ? (೩) ಎರಡನೆಯದು ಸರಿಯಾದರೆ, ಅವು ಸಂವೇದಕ ವಸ್ತುಗಳೇ ಅಥವಾ ಅದರಿಂದ ಹೊರತಾದವೇ? ಈ ಪ್ರಶ್ನೆಗಳನ್ನವನ್ನು ಎತ್ತುವುದು ಅರಿಸ್ಟಾಟಲ್‌ನ ವರ್ಗಗಳಿಗೆ (ಕ್ಯಾಟೆಗೊರಿ) ಸಂಬಂಧಪಟ್ಟವೆಂಬಂತೆ; ಈ ಮೂಲಕ ಅವನು ಮಧ್ಯಯುಗವು 'ಆರ್ಗನಾನ್' ಅನ್ನು ತೀರ ತತ್ವಜಿಜ್ಞಾಸಾತ್ಮಕವಾಗಿ ವ್ಯಾಖ್ಯಾನಿಸಲು ಕಾರಣನಾದ. ಈ ದೋಷವನ್ನು ನಿವಾರಿಸಲು ಆಕ್ವಿನಾಸ್ ಪ್ರಯತ್ನಿಸಿದ್ದನಾದರೂ

---

೨೪೪. ಉದಾಹರಣೆಗೆ, ಸ್ವೈನ್ಸ್‌ಹೆಡ್, ಹೈಟೆಸ್‌ಬರಿ, ಗೆರ್ಸ್ಸ ಮತ್ತು ಡಿ'ಆಲ್ಲೈ.

ಡನ್ಸ್ ಸ್ಕಾಟಸ್ ಮತ್ತೆ ಅದನ್ನು ಚಾಲತಿಗೆ ತಂದ. ಇದರಿಂದಾದ ಪರಿಣಾಮವೆಂದರೆ ತರ್ಕ ಮತ್ತು ಜ್ಞಾನಮೀಮಾಂಸೆಗಳು ತತ್ವಜಿಜ್ಞಾಸೆ ಮತ್ತು ಮತಧರ್ಮಶಾಸ್ತ್ರಗಳನ್ನು ಆಶ್ರಯಿಸುವಂತಾದುದು. ಅವುಗಳನ್ನು ಮತ್ತೆ ಬೇರ್ಪಡಿಸುವುದರಲ್ಲಿ ಒಕ್ಕಾಮ್ ಪ್ರಯತ್ನಶೀಲನಾದ.

ಒಕ್ಕಾಮ್‌ಗೆ ತರ್ಕವು ನಿಸರ್ಗದ ತಾತ್ವಿಕತೆಯ ಒಂದು ಸಾಧನ, ಅದು ತತ್ವಜಿಜ್ಞಾಸೆಯಿಂದ ಸ್ವತಂತ್ರವಾಗಿರಬಲ್ಲದು. ತರ್ಕವು ವೈಚಾರಿಕವಾದ ವಿಜ್ಞಾನದ ವಿಶ್ಲೇಷಣೆ; ವಿಜ್ಞಾನವು ವಸ್ತುಗಳಿಗೆ ಸಂಬಂಧಿಸಿದ್ದು, ಆದರೆ ತರ್ಕವಲ್ಲ. ವಸ್ತುಗಳು ಬಿಡಿಬಿಡಿ, ಆದರೆ ಪದಗಳಲ್ಲಿ ವೈಶ್ವಿಕಗಳಿವೆ, ತರ್ಕವು ವೈಶ್ವಿಕಗಳನ್ನು ಕುರಿತಾದುದು, ಆದರೆ ವಿಜ್ಞಾನವು ಅವುಗಳನ್ನು ಚರ್ಚಿಸದೆಯೇ ಬಳಸುತ್ತದೆ. ತರ್ಕವು ಪದಗಳು ಅಥವಾ ಪರಿಕಲ್ಪನೆಗಳ ಬಗ್ಗೆ ಕಾಳಜಿ ಹೊಂದಿರುತ್ತದೆ, ಭೌತಿಕ ಸ್ಥಿತಿಗಳ ಬಗ್ಗೆಯಲ್ಲ, ಆದರೆ ಅರ್ಥವನ್ನು ಹೊಂದಿರುವ ರೀತಿಯಲ್ಲಿ. 'ಮನುಷ್ಯನದು ಒಂದು ಜೀವಜಾತಿ' ಎಂಬುದು ತರ್ಕದ ಪ್ರತಿಪಾದನೆಯಲ್ಲ, ಯಾಕೆಂದರೆ ಅದಕ್ಕೆ ಮನುಷ್ಯನ ಬಗೆಗಿನ ಜ್ಞಾನ ಆವಶ್ಯಕ. ತರ್ಕವು ಮನಸ್ಸು ತನ್ನಲ್ಲಿಯೇ ಹೆಣೆದ ವಿಷಯಗಳನ್ನು ಕುರಿತದ್ದು, ಅವುಗಳಿಗೆ ವೈಚಾರಿಕತೆಯ ಮೂಲಕವಲ್ಲದೆ ಅಸ್ತಿತ್ವವೇ ಇಲ್ಲ. ಪರಿಕಲ್ಪನೆಯು ಸಹಜ ಸಂಕೇತ, ಪದವು ಪಾರಂಪರಿಕ ಸಂಕೇತ. ಪದವನ್ನು ಒಂದು ವಸ್ತುವಾಗಿ, ಮತ್ತು ಅದಕ್ಕೊಂದು ಅರ್ಥವಿರುವ ರೀತಿಯಲ್ಲಿ ಬಳಸುವಾಗ ಈ ವ್ಯತ್ಯಾಸವನ್ನು ಗಮನಿಸಬೇಕು; ಇಲ್ಲದಿದ್ದರೆ ನಾವು, 'ಮನುಷ್ಯ ಎನ್ನುವುದು ಒಂದು ಜೀವಜಾತಿ, ಸಾಕ್ರಟೀಸ್ ಒಬ್ಬ ಮನುಷ್ಯ, ಹೀಗಾಗಿ ಸಾಕ್ರಟೀಸ್ ಒಂದು ಜೀವಜಾತಿ' ಎಂಬಂತಹ ಭ್ರಮೆಯಲ್ಲಿ ಸಿಲುಕಿಕೊಳ್ಳಬಹುದು.

ವಸ್ತುಗಳನ್ನು ನಿರ್ದೇಶಿಸುವ ಪದಗಳನ್ನು 'ನೇರ ಸಂಪರ್ಕದ ಪದಗಳು' (ಟರ್ಮ್ಸ್ ಆಫ್ ಫಸ್ಟ್ ಇನ್‌ಟೆನ್ಷನ್) ಎನ್ನುತ್ತೇವೆ; ಪದಗಳನ್ನು ನಿರ್ದೇಶಿಸುವ ಪದಗಳು 'ಪರೋಕ್ಷಸಂಪರ್ಕದ ಪದಗಳು (ಟರ್ಮ್ಸ್ ಆಫ್ ಸೆಕೆಂಡ್ ಇನ್‌ಟೆನ್ಷನ್) ಎನ್ನುತ್ತೇವೆ. ವಿಜ್ಞಾನದ ಪದಗಳು ನೇರ ಸಂಪರ್ಕದವು, ತರ್ಕದಲ್ಲಿ, ಎರಡನೆಯವು. ತತ್ವಜಿಜ್ಞಾಸೆಯ ಪದಗಳು ವಿಚಿತ್ರವಾದವು, ಯಾಕೆಂದರೆ ಮೊದಲ ಸಂಪರ್ಕಗಳು ಸೂಚಿಸುವ ಪದಗಳು ಹಾಗೂ ಪರೋಕ್ಷ ಸಂಪರ್ಕದ ಪದಗಳು ಸೂಚಿಸುವ ಪದಗಳು ಎರಡನ್ನೂ ಸಂಕೇತಿಸುತ್ತವೆ. ನಿರ್ದಿಷ್ಟವಾಗಿ ಆರು ತತ್ವಜಿಜ್ಞಾಸೆಯ ಪದಗಳಿವೆ; ಇರುವುದು, ವಸ್ತು, ಯಾವುದಾದರೂ, ಒಂದು, ನಿಜವಾದ, ಒಳ್ಳೆಯದು (ಬೀಯಿಂಗ್, ಥಿಂಗ್, ಸಮ್‌ಥಿಂಗ್, ಒನ್, ಟ್ರೂ, ಗುಡ್).[೨೪೫] ಈ ಪದಗಳು

೨೪೫. ಈ ಪದಗಳನ್ನು ಯಾವುದಕ್ಕಾಗಿ ಒಕ್ಕಾಮ್ ಬಳಸುತ್ತಾನೆ ಎಂಬುದರ ಕುರಿತು ನಾನಿಲ್ಲಿ ವಿಮರ್ಶಿಸಹೋಗುವುದಿಲ್ಲ.

ಪರಸ್ಪರಗಳ ವಿಧೇಯಗಳನ್ನಾಗಿ ಬಳಸಬಹುದಾದ ವಿಚಿತ್ರವನ್ನು ಹೊಂದಿವೆ. ಆದರೆ ತರ್ಕವು ಅವುಗಳಿಲ್ಲದೆಯೇ ಬಳಸಬಹುದಾದಂತಹುದು.

ಅರ್ಥವಿಸಿಕೊಳ್ಳುವುದು ವಸ್ತುಗಳಿಗೆ ಸಂಬಂಧಿಸಿದಂತೆಯೇ ವಿನಾ ಮನಸ್ಸು ಉತ್ಪಾದಿಸುವ ಆಕೃತಿಗಳ ಕುರಿತಲ್ಲ; ಇವುಗಳು ಅರ್ಥವಿಸಿಕೊಂಡವಲ್ಲ, ಅವುಗಳ ಮೂಲಕ ಅರ್ಥವಿಸಿಕೊಳ್ಳುವ ವಸ್ತುಗಳು. ತರ್ಕದಲ್ಲಿ ವೈಶ್ವಿಕಗಳು ಎಂದರೆ ಇನ್ನೂ ಅನೇಕ ಪದಗಳು ಮತ್ತು ಪರಿಕಲ್ಪನೆಗಳನ್ನು ಮುನ್ನುಡಿಯಬಹುದಾದ ಪದಗಳು ಅಥವಾ ಪರಿಕಲ್ಪನೆಗಳು. ವೈಶ್ವಿಕ, ಜೀವಕುಲ, ಜೀವಜಾತಿ ಇವು ಪರೋಕ್ಷ ಸಂಪರ್ಕದ ಪದಗಳು, ಹೀಗಾಗಿ ವಸ್ತುಗಳನ್ನು ಸೂಚಿಸಲಾರವು. ಒಂದು ಮತ್ತು ಇರುವುದು ಅಂತರ್‌ಪರಿವರ್ತನೀಯಗಳಾದ್ದರಿಂದ, ವೈಶ್ವಿಕವೊಂದು ಅಸ್ತಿತ್ವದಲ್ಲಿದ್ದುದೇ ಆದರೆ, ಅದು ಒಂದೇ ಆಗಿರುತ್ತದೆ, ಒಂದೇ ಬಿಡಿ ವಸ್ತುವಾಗಿರುತ್ತದೆ. ವೈಶ್ವಿಕವೆನ್ನುವುದು ಅನೇಕ ವಸ್ತುಗಳ ಸಂಕೇತ, ಅಷ್ಟೆ ಇದಕ್ಕೆ ಸಂಬಂಧಿಸಿದಂತೆ, ಒಕ್ಕಾಮ್ ಆಕ್ವಿನಾಸ್‌ನನ್ನು ಅನುಮೋದಿಸುತ್ತಾನೆ, ಆವೆರಾಸ್, ಅವಿಸೆನ್ನ ಮತ್ತು ಆಗಸ್ಟೈನ್‌ವಾದಿಗಳನ್ನಲ್ಲ. ಇರುವುದು ಬಿಡಿ ವಸ್ತುಗಳು, ಬಿಡಿ ಮನಸ್ಸುಗಳು, ಮತ್ತು ಅರ್ಥವಿಸಿಕೊಳ್ಳುವ ಕ್ರಿಯೆಗಳು ಮಾತ್ರ ಎಂಬುದನ್ನು ಇಬ್ಬರೂ ಒಪ್ಪುತ್ತಾರೆ. ಆಕ್ವಿನಾಸ್ ಮತ್ತು ಒಕ್ಕಾಮ್ ಇಬ್ಬರೂ ವೈಶ್ವಿಕಗಳು ನಿರ್ದಿಷ್ಟಪೂರ್ವ ಅಸ್ತಿತ್ವದವು (ಯೂನಿವರ್ಸೇಲ್ ಆನ್‌ಟಿ ರೆಮ್) ಎನ್ನುವುದನ್ನು ಒಪ್ಪುತ್ತಾರೆ, ಆದರೆ ಸೃಷ್ಟಿಯನ್ನು ವಿವರಿಸುವಾಗ ಮಾತ್ರ; ಸೃಷ್ಟಿಸುವ ಮುನ್ನವೇ ಅದು ದೇವರ ಮನಸ್ಸಿನಲ್ಲಿದ್ದಿರಬೇಕು. ಆದರೆ ಇದು ಮತಧರ್ಮಶಾಸ್ತ್ರಕ್ಕೆ ಸೇರಿದ್ದು, ಮನುಷ್ಯನ ಜ್ಞಾನದ ವಿವರಣೆಗಲ್ಲ, ವೈಶ್ವಿಕಗಳ ನಿರ್ದಿಷ್ಟಾನಂತರದ ಅಸ್ತಿತ್ವಕ್ಕೆ (ಯೂನಿವರ್ಸೇಲ್ ಪೋಸ್ಟ್ ರೆಮ್) ಸೇರಿದ್ದು. ಮನುಷ್ಯ ಜ್ಞಾನವನ್ನು ವಿವರಿಸುವಾಗ ಒಕ್ಕಾಮ್ ವೈಶ್ವಿಕಗಳನ್ನೆಂದೂ ವಸ್ತುಗಳೆಂದು ಬಳಸಿಕೊಳ್ಳುವುದಿಲ್ಲ. ಸಾಕ್ರಟೀಸ್ ಪ್ಲೇಟೋನಂತೆಯೇ, ಆದರೆ ಮೂರನೆಯ ವಸ್ತುವಾದ ಸಾಮ್ಯ ಎಂಬುದರಲ್ಲಲ್ಲ ಎನ್ನುತ್ತಾನೆ. ಸಾಮ್ಯ ಎನ್ನುವುದು ಪರೋಕ್ಷ ಸಂಪರ್ಕದ ಪದ, ಅದು ಮನಸ್ಸಿನಲ್ಲಿದೆ (ಇದೆಲ್ಲ ಒಳ್ಳೆಯದು.)

ಒಕ್ಕಾಮ್ ಪ್ರಕಾರ ಭವಿಷ್ಯದ ಸಂಭವನೀಯಗಳು ಇನ್ನೂ ಸತ್ಯವೂ ಅಲ್ಲ, ಸುಳ್ಳೂ ಅಲ್ಲ. ಇದನ್ನು ದೈವಿಕ ಸರ್ವಜ್ಞತ್ವದೊಡನೆ ಹೊಂದಿಸಲು ಅವನು ಪ್ರಯತ್ನಿಸುವುದೇ ಇಲ್ಲ. ಉಳಿದೆಡೆಯಂತೆ, ಇಲ್ಲಿಯೂ ಅವನು ತರ್ಕವನ್ನು ತತ್ವಜಿಜ್ಞಾಸೆ ಮತ್ತು ಮತಧರ್ಮಶಾಸ್ತ್ರದಿಂದ ಹೊರಗಿರಿಸುತ್ತಾನೆ.

ಒಕ್ಕಾಮ್‌ನ ಚರ್ಚೆಗಳ ಕೆಲವು ಮಾದರಿಗಳು ಉಪಯುಕ್ತವಾಗಬಹುದು:

ಅವನು ಕೇಳುತ್ತಾನೆ: 'ಪೀಳಿಗೆಯ ಪ್ರಾಧಾನ್ಯದಿಂದ ಮೊದಲು ಅರ್ಥಮಾಡಿಕೊಂಡದ್ದರಿಂದ ತಿಳಿದಂತಹುದು ವ್ಯಕ್ತಿಗತವೇ?'

ವಿರುದ್ಧ: ಅರ್ಥಮಾಡಿಕೊಳ್ಳಲು ವೈಶ್ವಿಕವೇ ಮೊದಲನೆಯ ಹಾಗೂ ಸೂಕ್ತ ವಸ್ತು.

ಪರ: ಇಂದ್ರಿಯಗ್ರಾಹ್ಯ ವಸ್ತು ಮತ್ತು ಅರ್ಥಮಾಡಿಕೊಂಡ ವಸ್ತು ಎರಡೂ ಒಂದೇ, ಆದರೆ ವ್ಯಕ್ತಿಯು ಇಂದ್ರಿಯದ ಮೊದಲ ವಿಷಯ.

ಅದಕ್ಕನುಗುಣವಾಗಿ: ಪ್ರಶ್ನೆಯ ಅರ್ಥವನ್ನು ನಿರೂಪಿಸಬೇಕು. (ಎರಡು ವಾದಗಳೂ ಪ್ರಬಲವಾಗಿ ತೋರುವುದರಿಂದ ಎಂದು ಕಾಣುತ್ತದೆ.)

ಅವನು ಮುಂದುವರಿಯುತ್ತಾನೆ: 'ಆತ್ಮದಿಂದ ಹೊರಗಿರುವ ಸಂಕೇತವಾಗಿರದ ವಸ್ತುವನ್ನು ಮೊದಲು ಜ್ಞಾನದಿಂದ ಅರ್ಥಮಾಡಿಕೊಳ್ಳುತ್ತೇವೆ (ಅಂದರೆ ವ್ಯಕ್ತಿಗತ ಜ್ಞಾನದಿಂದ), ಹೀಗಾಗಿ ವ್ಯಕ್ತಿಯನ್ನು ಮೊದಲು ತಿಳಿಯುತ್ತೇವೆ, ಯಾಕೆಂದರೆ ಆತ್ಮದ ಹೊರಗಿರುವ ಪ್ರತಿಯೊಂದೂ ವ್ಯಕ್ತಿಗತವೇ.'

ಮುಂದುವರಿದು ಹೇಳುತ್ತಾನೆ: ಅಮೂರ್ತ ಜ್ಞಾನವು ಎಲ್ಲ ಕಾಲಕ್ಕೂ 'ಪ್ರತಿಭಾನಾತ್ಮಕ'ವಾದ (ಅಂದರೆ ಪರಿಕಲ್ಪನೆಯ) ಜ್ಞಾನವನ್ನು ಒಳಗೊಳ್ಳುತ್ತದೆ, ಇದು ಬಿಡಿ ವಸ್ತುಗಳಿಂದ ಉಂಟಾಗುತ್ತದೆ.

ಆನಂತರ ಅವನು ಉದ್ಭವಿಸಬಹುದಾದ ನಾಲ್ಕು ಸಂಶಯಗಳನ್ನು ಹೆಸರಿಸಿ ಅವುಗಳನ್ನು ಪರಿಹರಿಸಲು ತೊಡಗುತ್ತಾನೆ.

ತನ್ನ ಮೂಲ ಪ್ರಶ್ನೆಗೆ ಅವನು ಒಂದು ಸ್ಪಷ್ಟವಾದ ಉತ್ತರದಿಂದ ವಾದವನ್ನು ಕೊನೆಗೊಳಿಸಿದರೂ, 'ವೈಶ್ವಿಕವು ಸಮಾನತೆಯ ಪ್ರಾಧಾನ್ಯದ ಮೊದಲ ವಸ್ತುವೇ ವಿನಾ, ಪೀಳಿಗೆಯ ಪ್ರಾಧಾನ್ಯವಲ್ಲ.'

ಇಲ್ಲಿ ಪರಿಗಣಿತವಾದ ಪ್ರಶ್ನೆಯೆಂದರೆ, ಗ್ರಹಿಕೆಯು ಜ್ಞಾನಮೂಲವೇ, ಹಾಗಿದ್ದರೆ ಎಷ್ಟರ ಮಟ್ಟಿಗೆ ಎಂಬುದು. ಪ್ಲೇಟೋ ತನ್ನ 'ಥಿಯೋಟೆಟಸ್'ನಲ್ಲಿ ಜ್ಞಾನವೆಂದರೆ ಗ್ರಹಿಕೆ ಎಂಬುದನ್ನು ತಿರಸ್ಕರಿಸುತ್ತಾನೆಂಬುದನ್ನು ನೆನಪಿಸಿಕೊಳ್ಳಬೇಕು. ಒಕ್ಕಾಮ್, ಸಾಕಷ್ಟು ಖಚಿತವಾಗಿ, 'ಥಿಯೋಟೆಟಸ್' ಬಗ್ಗೆ ತಿಳಿದಿದ್ದವನಲ್ಲ, ಅವನಿಗೆ ತಿಳಿದಿದ್ದರೆ ಅದನ್ನವನು ಒಪ್ಪುತ್ತಿರಲಿಲ್ಲ.

'ಸೂಕ್ಷ್ಮಸಂವೇದಿ ಆತ್ಮ ಮತ್ತು ಬೌದ್ಧಿಕ ಆತ್ಮಗಳು ಮನುಷ್ಯನಲ್ಲಿ ನಿಜವಾಗಿಯೂ ಭಿನ್ನವೇ?' ಎಂಬ ಪ್ರಶ್ನೆಗೆ ಅವನ ಉತ್ತರ 'ಹೌದು' ಎಂಬುದು; ಆದರೆ ಇದನ್ನು ಸಾಬೀತುಪಡಿಸುವುದು ಕಷ್ಟ. ಅವನ ಒಂದು ವಾದವೆಂದರೆ, ನಾವು ನಮ್ಮ ಅಪೇಕ್ಷೆಗಳಿಗನುಗುಣವಾಗಿ ಯಾವುದನ್ನೋ ಬಯಸಬಹುದಾದರೂ ನಮ್ಮ ತಿಳಿವಳಿಕೆಯಿಂದಾಗಿ ಅದನ್ನು ತಿರಸ್ಕರಿಸಬಹುದು; ಆದ್ದರಿಂದ ಅಪೇಕ್ಷೆ ಮತ್ತು ತಿಳಿವಳಿಕೆಗಳು ಭಿನ್ನ ವಿಷಯಗಳಿಗೆ ಸೇರಿದವು. ಮತ್ತೊಂದು ವಾದವೆಂದರೆ, ಸಂವೇದನೆಗಳು ವ್ಯಕ್ತಿಗತವಾಗಿ ಸೂಕ್ಷ್ಮಸಂವೇದಿ ಆತ್ಮದಲ್ಲಿರುತ್ತವೆಯೇ ವಿನಾ ವ್ಯಕ್ತಿಗತವಾಗಿ ಬೌದ್ಧಿಕ ಆತ್ಮದಲ್ಲಲ್ಲ. ಮತ್ತೆ: ಸೂಕ್ಷ್ಮಸಂವೇದಿ ಆತ್ಮವು ವಿಸ್ತೃತಗೊಂಡದ್ದು

ಮತ್ತು ಭೌತದ್ರವ್ಯದ್ದು, ಬೌದ್ಧಿಕ ಆತ್ಮವು ಈ ಎರಡೂ ಅಲ್ಲ. ನಾಲ್ಕು ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿದೆ, ಅವೆಲ್ಲ ಮತಧರ್ಮಶಾಸ್ತ್ರಸಂಬಂಧಿಯಾದವು.[೨೪೬] ಆದರೆ ಅವಕ್ಕೆ ಉತ್ತರಿಸಲಾಗಿದೆ. ಈ ಪ್ರಶ್ನೆಯನ್ನು ಕುರಿತಂತೆ ಒಕ್ಕಾಮ್‌ನ ದೃಷ್ಟಿಕೋನವು ಪ್ರಾಯಶಃ ನಾವು ನಿರೀಕ್ಷಿಸುವಂತಹುದಲ್ಲ. ಆದರೆ ಪ್ರತಿಯೊಬ್ಬನ ಬುದ್ಧಿಶಕ್ತಿಯು ಅವನದೇ, ಅದು ವ್ಯಕ್ತ್ಯತೀತವಾದುದಲ್ಲ ಎಂದು ಆಲೋಚಿಸುವುದರಲ್ಲಿ ಅವನು ಸಂತ ಥಾಮಸ್‌ನನ್ನು ಒಪ್ಪಿಕೊಳ್ಳುತ್ತಾನೆ, ಆವೆರಾಸ್ ಅನ್ನು ತಿರಸ್ಕರಿಸುತ್ತಾನೆ.

ತತ್ತ್ವಜಿಜ್ಞಾಸೆ ಮತ್ತು ಮತಧರ್ಮಶಾಸ್ತ್ರದ ಹಂಗಿಲ್ಲದಂತೆ ತರ್ಕ ಮತ್ತು ಮನುಷ್ಯ ಜ್ಞಾನವನ್ನು ಅಧ್ಯಯನ ಮಾಡಲು ಸಾಧ್ಯವೆನ್ನುವ ಒಕ್ಕಾಮ್‌ನ ಕಾರ್ಯವು ವೈಜ್ಞಾನಿಕ ಸಂಶೋಧನೆಯನ್ನು ಉತ್ತೇಜಿಸಿತು. ಅರ್ಥವಾಗದ ವಸ್ತುಗಳು ಮತ್ತು ಬುದ್ಧಿಹೀನ ಜನರನ್ನು ಮೊದಲು ಊಹಿಸಿಕೊಂಡು, ಆನಂತರ ಅನಂತದಿಂದ ಹೊಮ್ಮಿದ ಬೆಳಕಿನಿಂದಾಗಿ ಜ್ಞಾನವು ಸಾಧ್ಯವಾಯಿತು ಎಂದು ಹೇಳಿದ ಆಗಸ್ಟೈನ್‌ವಾದಿಗಳು ದೋಷಪೂರ್ಣ ಎಂದು ಸಾರಿದ. ಈ ವಿಷಯದಲ್ಲವನು ಆಕ್ವಿನಾಸ್‌ನನ್ನು ಅನುಮೋದಿಸಿದ, ಯಾಕೆಂದರೆ ಆಕ್ವಿನಾಸ್ ಮೂಲತಃ ಒಬ್ಬ ಮತಧರ್ಮಶಾಸ್ತ್ರಜ್ಞ, ಮತ್ತು ಒಕ್ಕಾಮ್, ತರ್ಕಕ್ಕೆ ಸಂಬಂಧಿಸಿದಂತೆ, ಮೂಲತಃ ಒಬ್ಬ ಮತಧರ್ಮೇತರ ತತ್ತ್ವಜ್ಞಾನಿ.

ಅವನ ಮನೋಭಾವವು ನಿರ್ದಿಷ್ಟ ಸಮಸ್ಯೆಗಳ ಅಭ್ಯಾಸಿಗಳಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿತು; ಉದಾಹರಣೆಗೆ, ಅವನ ತಕ್ಷಣದ ಅನುಯಾಯಿಯಾದ ಗ್ರಹಗಳ ಸಿದ್ಧಾಂತವನ್ನು ಅನ್ವೇಷಿಸಿದ ಓರೆಸ್ಮೆಯ ನಿಕೋಲಾಸ್ (ಮರಣ. ೧೩೮೨). ಒಂದಷ್ಟು ಮಟ್ಟಿಗೆ ಇವನು ಕೊಪರ್ನಿಕಸ್‌ನ ಪೂರ್ವವರ್ತಿಯಾಗಿದ್ದವನು; ಅವನು ಭೂಕೇಂದ್ರಿತ ಹಾಗೂ ಸೂರ್ಯಕೇಂದ್ರಿತ ಸಿದ್ಧಾಂತಗಳೆರಡನ್ನೂ ಮಂಡಿಸಿ, ತನ್ನ ಕಾಲದಲ್ಲಿ ತಿಳಿದಿದ್ದ ಎಲ್ಲ ಸಂಗತಿಗಳನ್ನೂ ವಿವರಿಸುವುದೆಂದೂ, ಹೀಗಾಗಿ ಅವುಗಳಲ್ಲಿ ನಿರ್ಧಾರ ಕೈಗೊಳ್ಳುವ ಮಾರ್ಗವಿರಲಿಲ್ಲವೆಂದೂ ಹೇಳಿದ.

ವಿಲಿಯಂ ಆಫ್ ಒಕ್ಕಾಮ್‌ನ ನಂತರ ಯಾವ ಬೇರೆ ಸೂಕ್ಷ್ಮತಾರ್ಕಿಕರೂ ಕಂಡುಬರುವುದಿಲ್ಲ. ದೊಡ್ಡ ತತ್ತ್ವಜ್ಞಾನಿಗಳ ಮುಂದಿನ ಕಾಲವು ಆರಂಭಗೊಳ್ಳುವುದು ಮತಧರ್ಮಸುಧಾರಣೆಯ ಕೊನೆಯ ಹೊತ್ತಿಗೆ.

೦

---

೨೪೬. ಉದಾಹರಣೆಗೆ, ಗುಡ್ ಫ್ರೈಡೆ ಮತ್ತು ಈಸ್ಟರ್‌ಗಳಲ್ಲಿ, ಕ್ರಿಸ್ತನ ಆತ್ಮವು ನರಕಕ್ಕಿಳಿಯಿತು, ಆದರೆ ಅವನ ದೇಹವು ಮಾತ್ರ ಅರಿಮೇಥಿಯದ ಜೋಸೆಫ್‌ನ ಸಮಾಧಿಯಲ್ಲಿ ಉಳಿಯಿತು. ಸೂಕ್ಷ್ಮಸಂವೇದಿ ಆತ್ಮವು ಬೌದ್ಧಿಕ ಆತ್ಮಕ್ಕಿಂತ ಭಿನ್ನವಾಗಿದ್ದರೆ, ಕ್ರಿಸ್ತನ ಸೂಕ್ಷ್ಮಸಂವೇದಿ ಆತ್ಮವು ಈ ಕಾಲವನ್ನು ನರಕದಲ್ಲಿ ಕಳೆಯಿತೇ ಅಥವಾ ಸಮಾಧಿಯಲ್ಲೇ?

೧೫
ಪೋಪ್ ಅಧಿಕಾರಕ್ಕೆ ಹಿಡಿದ ಗ್ರಹಣ

ಅನೇಕ ಅಂಶಗಳು ಸೇರಿಕೊಂಡು ನಿಧಾನವಾಗಿ ರೂಪುಗೊಳಿಸಿದ ತಾತ್ವಿಕ, ಮತಧಾರ್ಮಿಕ, ರಾಜಕೀಯ ಮತ್ತು ಸಾಮಾಜಿಕ ಸಂಶ್ಲೇಷಣೆಯು ಹದಿಮೂರನೆಯ ಸತಮಾನದಲ್ಲಿ ಪೂರ್ಣಗೊಂಡಿತು. ಮೊದಲ ಅಂಶವೆಂದರೆ ಶುದ್ಧ ಗ್ರೀಕ್ ತತ್ವಜ್ಞಾನ, ವಿಶೇಷವಾಗಿ ಪೈಥಾಗೊರಾಸ್, ಪಾರ್ಮನೈಡೀಸ್ , ಪ್ಲೇಟೋ ಮತ್ತು ಅರಿಸ್ಟಾಟಲ್‌ರ ತತ್ವಜ್ಞಾನಗಳು. ಆನಂತರ ಅಲೆಕ್ಸಾಂಡರ್‌ನ ದಿಗ್ವಿಜಯಗಳಿಂದಾಗಿ ಬಂದದ್ದು ಪೌರ್ವಾತ್ಯ ನಂಬಿಕೆಗಳ ಮಹಾಪೂರ.[೨೪೭] ಆನಂತರ, ಆರ್ಫಿಸಂ ಮತ್ತು ಅನುಭಾವಿಕತೆಗಳ ಅನುಕೂಲಗಳನ್ನು ಬಳಸಿಕೊಂಡು ಗ್ರೀಕ್-ಭಾಷಿಕ ಜಗತ್ತನ್ನು ಹಾಗೂ ಕೊನೆಗೆ ಲ್ಯಾಟಿನ್-ಭಾಷಿಕ ಜಗತ್ತನ್ನೂ ರೂಪಾಂತರಗೊಳಿಸಿದ್ದು. ಸಾಯುತ್ತಿದ್ದ ಮತ್ತು ಪುನರುದ್ಧಾರಗೊಂಡ ದೇವರು, ದೇವರ ಮಾಂಸವೆಂದು ನಂಬಲಾಗುತ್ತಿದ್ದ ವಿಧ್ಯುಕ್ತವಾದ ತಿನ್ನುವಿಕೆ, ದೀಕ್ಷಾಸ್ನಾನದಂತಹ ವಿಧಿಯ ಮೂಲಕ ಹೊಸ ಜೀವನದ ಎರಡನೆಯ ಹುಟ್ಟು - ಇವುಗಳು ಪ್ಯಾಗನ್ ರೋಮನ್ ಜಗತ್ತಿನ ದೊಡ್ಡ ಸಮೂಹದ ಮತಧರ್ಮಶಾಸ್ತ್ರದ ಭಾಗವಾಯಿತು. ಇವುಗಳೊಂದಿಗೆ ಮಾಂಸಲ ಬಂಧನದಿಂದ ಹೊಂದುವ, ನೈತಿಕ ಬಿಡುಗಡೆ ಅರ್ಥಾತ್ ಸೈದ್ಧಾಂತಿಕವಾಗಿಯಾದರೂ ವಿರಕ್ತಿ ಇವೂ ಸೇರಿದವು. ಸಿರಿಯ, ಈಜಿಪ್ಟ್, ಬ್ಯಾಬಿಲೋನಿಯ, ಮತ್ತು ಪರ್ಷಿಯಗಳಿಂದ ಸಾಮಾನ್ಯ ಜನತೆಯಿಂದ ದೂರವಾದ ಪುರೋಹಿತಶಾಹಿಯು ಬಂತು; ಅವರು ಹೆಚ್ಚು ಕಡಿಮೆ ಮಾಂತ್ರಿಕ ಸಾಮರ್ಥ್ಯದವರು, ತಕ್ಕಮಟ್ಟಿಗಿನ ರಾಜಕೀಯ ಪ್ರಭಾವವನ್ನೂ ಬೀರುವ ಸಮರ್ಥರು. ಈ ಜನ್ಮ ಮುಗಿದ ನಂತರದ ಬದುಕಿಗೆ ವಿಶೇಷವಾಗಿ ಸಂಬಂಧಿಸಿದ ಮನಸೆಳೆಯುವ ಸಮಾರಂಭಗಳು, ಅವೇ ಮೂಲಗಳಿಂದ ಬಂತು. ವಿಶೇಷವಾಗಿ, ಅಹುರ ಮಾಜ್ಡ ಮತ್ತು ಆಭಿರ್ಮನ್‌ರ ನೇತೃತ್ವದ ಒಳಿತು ಮತ್ತು ಕೆಡುಕುಗಳೆಂಬ ಬಣಗಳ ನಡುವಣ ಹೋರಾಟ

---

೨೪೭. ನೋಡಿ, ಮ್ಯೂಮಾಂಟ್, 'ಓರಿಯಂಟಲ್ ರಿಲಿಜನ್ಸ್ ಇನ್ ರೋಮನ್ ಪ್ಯಾಗನಿಸಂ'

ಭೂಮಿಕೆಯೇ ಈ ಜಗತ್ತು ಎಂಬ ದ್ವೈವಿಧ್ಯವು ಪರ್ಷಿಯದಿಂದ ಬಂತು. ಆಭಿರ್ಮನ್ ಮತ್ತು ಅಮೂರ್ತ ಚೇತನಗಳ ಜಗತ್ತಿನ ಅವನ ಅನುಯಾಯಿಗಳ ನೆರವಿನಿಂದ ನೆರವೇರಿಸಬಹುದಾದುದೇ ಮಾಟ. ಸೈತಾನನು ಆಭಿರ್ಮನ್ ಬೆಳೆದ ರೂಪ.

ಬಾರ್ಬೇರಿಯನ್ ಚಿಂತನೆಗಳ ಮತ್ತು ಆಚರಣೆಗಳ ಪೂರವು ನವಪ್ಲೇಟೋವಾದದ ತತ್ವಜ್ಞಾನದೊಡನೆ ಕೆಲವು ಹೆಲೆನಿಕ್ ಅಂಶಗಳೊಂದಿಗೆ ಮಿಳಿತವಾಯಿತು. ಆರ್ಫಿಸಂನಲ್ಲಿ ಪೈಥಾಗೊರಿಯನ್‌ವಾದ ಮತ್ತು ಪ್ಲೇಟೋನ ಕೆಲವು ಭಾಗಗಳು ಸೇರಿದಂತೆ ಗ್ರೀಕರು ದೃಷ್ಟಿಕೋನವೊಂದನ್ನು ರೂಪಿಸಿದ್ದರು, ಅದು ಪೌರ್ವಾತ್ಯದ ದೃಷ್ಟಿಕೋನಗಳೊಂದಿಗೆ ಸುಲಭವಾಗಿ ಹೊಂದಿಕೊಳ್ಳುತ್ತಿದ್ದವು. ಯಾಕೆಂದರೆ ಅವುಗಳು ಬಹು ಹಿಂದೆಯೇ ಪೂರ್ವದಿಂದಲೇ ಬರಮಾಡಿಕೊಂಡವು. ಪ್ಲಾಟಿನಸ್ ಮತ್ತು ಪಾರ್ಫೈರಿಗಳೊಂದಿಗೆ ಪ್ಯಾಗನ್ ತತ್ವಜ್ಞಾನದ ಬರೆಳವಣಿಗೆಯು ಸ್ಥಗಿತಗೊಂಡಿತು.

ಆದರೆ, ಇವರುಗಳ ಚಿಂತನೆಗಳು ಆಳದಲ್ಲಿ ಮತಧಾರ್ಮಿಕವಾಗಿದ್ದರೂ, ಹೆಚ್ಚು ಬದಲಾವಣೆಗಳಿಲ್ಲದೆಯೇ, ವಿಜೃಂಭಿಸುವ ಜನಜನಿತ ಮತಧರ್ಮವನ್ನು ಪ್ರಭಾವಿಸುವ ಸಾಮರ್ಥ್ಯ ಹೊಂದಿರಲಿಲ್ಲ. ಅವರ ತಾತ್ವಿಕತೆಗಳು ಕ್ಲಿಷ್ಟವಾಗಿದ್ದು ಸುಲಭವಾಗಿ ಅರ್ಥವಾಗುವಂತಹುದಾಗಿರಲಿಲ್ಲ; ಮೋಕ್ಷದ ಬಗೆಗಿನ ಅವರ ಮಾರ್ಗವು ಜನಸಾಮಾನ್ಯರಿಗೆ ತೀರ ಬೌದ್ಧಿಕವಾದುದಾಗಿತ್ತು. ಅವರ ಸಂಪ್ರದಾಯನಿಷ್ಠೆಯು ಅವರನ್ನು ಗ್ರೀಕ್‌ರ ಪಾರಂಪರಿಕ ಮತಧರ್ಮವನ್ನೇ ಬೆಂಬಲಿಸುವಂತಹುದಾಗಿತ್ತು, ಆದರೆ ಅದರ ಅನೈತಿಕ ಅಂಶಗಳನ್ನು ಸೌಮ್ಯಗೊಳಿಸಲು ಅದನ್ನು ಅನ್ಯೋಕ್ತಿರೂಪವಾಗಿ ವ್ಯಾಖ್ಯಾನಿಸಿ ಅವರ ತಾತ್ವಿಕ ಏಕದೇವೋಪಾಸನೆಯೊಂದಿಗೆ ಹೊಂದಿಸಬೇಕಾಗಿತ್ತು. ಗ್ರೀಕ್ ಮತಧರ್ಮವು ಅವನತಿಯ ಹಾದಿ ಹಿಡಿದಿತ್ತು, ಪೂರ್ವದ ಆಚರಣೆಗಳು ಮತ್ತು ಮತಧರ್ಮಶಾಸ್ತ್ರಗಳೊಡನೆ ಸ್ಪರ್ಧಿಸುವ ಸಾಮರ್ಥ್ಯ ಅದಕ್ಕಿರಲಿಲ್ಲ. ದೈವವಾಣಿಯು (ಒರಾಕಲ್) ಮೂಕವಾಗಿತ್ತು, ಪುರೋಹಿತವರ್ಗವು ಪ್ರಬಲವಾದ ಬೇರೊಂದು ಜಾತಿಯಾಗಿ ರೂಪುಗೊಂಡಿರಲಿಲ್ಲ. ಹೀಗಾಗಿ ಗ್ರೀಕ್ ಮತಧರ್ಮವನ್ನು ಪುನರುಜ್ಜೀವನಗೊಳಿಸುವುದು ಪ್ರಾಚೀನ ರೀತಿಯದಾಗಿ ಅದಕ್ಕೆ ದೌರ್ಬಲ್ಯವನ್ನೂ, ವಿಶೇಷವಾಗಿ ಚಕ್ರವರ್ತಿ ಜೂಲಿಯನ್‌ನಲ್ಲಿ ಕಾಣಿಸುವಂತಹ ಪಾಂಡಿತ್ಯಪೂರ್ಣತೆಯನ್ನೂ ತಂದಿತ್ತು. ಏಷ್ಯಾದ ಯಾವುದೋ ಮತಧರ್ಮವೊಂದು ರೋಮನ್ ಜಗತ್ತನ್ನು ಗೆಲ್ಲುವುದೆಂಬ ಮುನ್ಸೂಚನೆ ಮೂರನೆಯ ಶತಮಾನದಲ್ಲಾಗಲೇ ಕಾಣಿಸಿಕೊಂಡಿತ್ತು, ಆದರೆ ಆ ಕಾಲದಲ್ಲಿ ಇನ್ನೂ ಅನೇಕ ಸ್ಪರ್ಧಿಗಳಿದ್ದು ಅವುಗಳಲ್ಲಿ ಯಾವುದಾದರೂ ಗೆಲ್ಲಬಹುದಾಗಿತ್ತು.

ಕ್ರೈಸ್ತಮತಧರ್ಮವು ವಿವಿಧ ಆಕರಗಳಿಂದ ತನ್ನ ಸಾಮರ್ಥ್ಯದ ಅಂಶಗಳನ್ನು

ಒಗ್ಗೂಡಿಸಿಕೊಂಡಿತು. ಮತಧರ್ಮಗ್ರಂಥ ಮತ್ತು ತನ್ನದೊಂದು ಬಿಟ್ಟರೆ ಉಳಿದೆಲ್ಲ ಮತಧರ್ಮಗಳೂ ಸುಳ್ಳು ಮತ್ತು ಕೆಡುಕು ಎಂಬ ಸಿದ್ಧಾಂತವನ್ನು ಅದು ಯೆಹೂದಿಗಳಿಂದ ಬರಮಾಡಿಕೊಂಡಿತಾದರೂ, ಅದು ಯೆಹೂದಿಗಳ ಜಾನಾಂಗಿಕ ಪ್ರತ್ಯೇಕತೆಯುನ್ನೂ ಮೋಸಸ್ ನಿಯುಮಗಳ ಅನನುಕೂಲತೆಗಳನ್ನೂ ನಿವಾರಿಸಿಕೊಂಡಿತು. ಆನಂತರದ ಯೆಹೂದ್ಯವು ಸಾವಿನ ನಂತರದ ಬದುಕಿನ ಬಗ್ಗೆ ನಂಬಿಕೆಯನ್ನಾಗಲೇ ರೂಢಿಸಿಕೊಂಡಿತ್ತು; ಆದರೆ ಕ್ರೈಸ್ತರು ಸ್ವರ್ಗ ಮತ್ತು ನರಕಗಳ ಪರಿಕಲ್ಪನೆಗೆ ಹಾಗೂ ಒಂದನ್ನು ಹೊಂದುವ ಮತ್ತು ಮತ್ತೊಂದರಿಂದ ತಪ್ಪಿಸಿಕೊಳ್ಳುವ ಹೊಸತೊಂದು ನಿರ್ದಿಷ್ಟತೆಯನ್ನು ಕೊಟ್ಟಿತ್ತು. ಈಸ್ಟರ್‌ನಲ್ಲಿ ಯೆಹೂದ್ಯರ ವಿಮೋಚನಾ ಹಬ್ಬದ (ಪಾಸೋವರ್) ಜೊತೆಗೆ ಪ್ಯಾಗನ್‌ರ ದೇವರ ಪುನರುತ್ಥಾನದ ಅಚರಣೆಗಳು ಸೇರಿಕೊಂಡವು.. ಪರ್ಷಿಯನ್ ದ್ವೈವಿಧ್ಯವನ್ನು ಅರಗಿಸಿಕೊಳ್ಳಲಾಯಿತು, ಆದರೆ ಒಳ್ಳೆಯ ತತ್ವದ ಆತ್ಯಂತಿಕ ಸರ್ವಶಕ್ತಿತ್ವ ಮತ್ತು ಪ್ಯಾಗನ್ ದೇವರುಗಳು ಸೈತಾನನ ಅನುಯಾಯಿಗಳೆಂಬ ಬಗೆಗೆ ಹೆಚ್ಚು ಒತ್ತು ನೀಡಲಾಯಿತು. ಮೊದಲಿಗೆ ಕ್ರೈಸ್ತರು ತತ್ವಜ್ಞಾನದಲ್ಲಾಗಲೀ ಆಚರಣೆಗಳಲ್ಲಾಗಲೀ ಈ ಸ್ಪರ್ಧಿಗಳ ಸಮಾನರಾಗಿರಲಿಲ್ಲ, ಆದರೆ ಕ್ರಮೇಣ ಈ ಕೊರತೆ ನೀಗುತ್ತ ಬಂತು. ಮೊದಲಿಗೆ, ಅರೆಕ್ರೈಸ್ತ ರಹಸ್ಯಜ್ಞಾನದವರಲ್ಲಿ ಸಂಪ್ರದಾಯನಿಷ್ಠರಿಗಿಂತಲೂ ತತ್ವಜ್ಞಾನವು ಹೆಚ್ಚು ಮುಂದುವರಿದಿತ್ತು. ಆದರೆ ಆರಿಜೆನ್‌ನ ಕಾಲದ ನಂತರ, ಕ್ರೈಸ್ತರು ನವಪ್ಲೇಟೋವಾದವನ್ನು ಪರಿಷ್ಕರಿಸುವುದರ ಮೂಲಕ ಸಾಕಷ್ಟು ತತ್ವಜ್ಞಾನವನ್ನು ತಮ್ಮದಾಗಿಸಿಕೊಂಡರು. ಪ್ರಾಚೀನ ಕ್ರೈಸ್ತರ ಆಚರಣೆಗಳು ಸ್ವಲ್ಪ ಮಟ್ಟಿಗೆ ಸಂದಿಗ್ಧವಾಗಿವೆ, ಆದರೆ ಸಂತ ಆಂಬ್ರೋಸ್‌ನ ಕಾಲದ ಹೊತ್ತಿಗೆ ಅದು ಸಾಕಷ್ಟು ಆಕರ್ಷಕವೆನಿಸಿತು. ಪುರೋಹಿತವರ್ಗದ ಸಾಮರ್ಥ್ಯ ಮತ್ತು ಪ್ರತ್ಯೇಕತೆಯು ಪೂರ್ವದಿಂದ ಬಂದುದಾದರೂ, ಕ್ರಮೇಣ ಚರ್ಚ್‌ನ ಆಡಳಿತ ರೀತಿಯಿಂದ ಅದನ್ನು ಹೆಚ್ಚು ಬಲಿಷ್ಠಗೊಳಿಸಲಾಯಿತು, ಇದಕ್ಕಾಗಿ ಅದು ರೋಮನ್ ಚಕ್ರಾಧಿಪತ್ಯದ ಆಡಳಿತ ವ್ಯವಹಾರಗಳಿಗೆ ಋಣಿಯಾಗಿರಬೇಕು. ಹಳೆ ಒಡಂಬಡಿಕೆಯು, ಅನುಭಾವಿಕ ಮತಧರ್ಮಗಳು, ಗ್ರೀಕ್ ತತ್ವಜ್ಞಾನ, ಮತ್ತು ರೋಮನ್ ಆಡಳಿತಪದ್ಧತಿಗಳನ್ನೆಲ್ಲ ಕ್ಯಾಥೋಲಿಕ್ ಚರ್ಚ್‌ನಲ್ಲಿ ಮಿಳಿತಗೊಳಿಸಲಾಯಿತು; ಹೀಗೆ ಮಾಡಿ ಹಿಂದೆ ಯಾವುದೇ ಸಾಮಾಜಿಕ ಸಂಘಟನೆಗೆ ಇಲ್ಲದಿದ್ದಂತಹ ಅತ್ಯಧಿಕ ಶಕ್ತಿಯನ್ನು ಅದರಲ್ಲಿ ತುಂಬಲಾಯಿತು.

ಪ್ರಾಚೀನ ರೋಮ್‌ನಂತೆ, ಆದರೆ ಇನ್ನೂ ನಿಧಾನವಾಗಿ, ಪಶ್ಚಿಮ ಚರ್ಚ್ ಗಣರಾಜ್ಯಪದ್ಧತಿಯಿಂದ ರಾಜಪ್ರಭುತ್ವದೆಡೆಗೆ ಬೆಳೆಯಿತು. ಗ್ರೆಗರಿ ಮಹಾಶಯ, ಮೊದಲನೆಯ ನಿಕೋಲಾಸ್, ಏಳನೆಯ ಗ್ರೆಗರಿ ಮತ್ತು ಮೂರನೆಯ ಇನ್ನೋಸೆಂಟ್‌ನಿಂದ ಹಿಡಿದು ಗುಎಲ್ಫ್‌ರು ಮತ್ತು ಘಿಬೆಲೈನ್‌ರ ಯುದ್ಧಗಳಲ್ಲಿ,

ಹೋಹೆನ್‌ಸ್ಟಾಫೆನ್‌ನ ಅಂತಿಮ ಸೋಲಿನವರೆಗಿನ ಪೋಪ್ ಅಧಿಕಾರದ ಬೆಳವಣಿಗೆಯ ವಿವಿಧ ಹಂತಗಳನ್ನು ನಾವಾಗಲೇ ನೋಡಿದ್ದೇವೆ. ಅದೇ ವೇಳೆಗೆ, ಇದುವರೆಗೆ ಆಗಸ್ಟೈನಿಯನ್ ಮತ್ತು ಹೀಗಾಗಿ ಬಹುವಾಗಿ ಪ್ಲೇಟೋನದಾಗಿದ್ದ ಕ್ರೈಸ್ತ ತತ್ವಜ್ಞಾನವು ಕಾನ್‌ಸ್ಟಾಂಟಿನೋಪಲ್ ಮತ್ತು ಮಹಮ್ಮದೀಯರ ಸಂಪರ್ಕದಿಂದ ಪಡೆದ ಹೊಸ ಅಂಶಗಳನ್ನು ಮೈಗೂಡಿಸಿಕೊಂಡು ಶ್ರೀಮಂತವಾಯಿತು. ಹದಿಮೂರನೆಯ ಶತಮಾನದಲ್ಲಿ ಅರಿಸ್ಟಾಟಲ್ ಪಶ್ಚಿಮದಲ್ಲಿ ಸಾಕಷ್ಟು ಪರಿಪೂರ್ಣವೆಂಬಂತೆ ಪರಿಚಿತನಾಗಿದ್ದ, ಮತ್ತು ಆಲ್ಬರ್ಟಸ್ ಮ್ಯಾಗ್ನಸ್ ಮತ್ತು ಥಾಮಸ್ ಆಕ್ವಿನಾಸ್‌ರ ಪ್ರಭಾವದಿಂದಾಗಿ, ತಿಳಿವಳಿಕಸ್ಥ ಜನರ ಮನಸ್ಸಿನಲ್ಲಿ, ಮತಧರ್ಮಗ್ರಂಥಗಳು ಮತ್ತು ಚರ್ಚ್ ಬಿಟ್ಟರೆ ಸರ್ವೋಚ್ಚನೆಂದು ಮಾನ್ಯವಾದ. ಇಲ್ಲಿನವರೆಗೂ, ಅವನು ಕ್ಯಾಥೋಲಿಕ್ ತತ್ವಜ್ಞಾನಿಗಳಲ್ಲಿ ಅದೇ ಸ್ಥಾನವನ್ನುಳಿಸಿಕೊಂಡಿದ್ದಾನೆ. ನನ್ನ ದೃಷ್ಟಿಯಲ್ಲಿ, ಪ್ಲೇಟೋ ಮತ್ತು ಸಂತ ಆಗಸ್ಟೈನ್‌ರ ಜಾಗದಲ್ಲಿ ಅರಿಸ್ಟಾಟಲ್ ಅನ್ನು ಪ್ರತಿಷ್ಠಾಪಿಸಿದ್ದು ಕ್ರೈಸ್ತ ದೃಷ್ಟಿಕೋನದಲ್ಲಿಯೇ ಆದ ಒಂದು ತಪ್ಪು. ಪ್ಲೇಟೋನ ಮನೋಭಾವವು ಅರಿಸ್ಟಾಟಲ್‌ನದಕ್ಕಿಂತ ಹೆಚ್ಚು ಮತಧಾರ್ಮಿಕವಾದುದು; ಅಲ್ಲದೆ, ಕ್ರೈಸ್ತ ಮತಧರ್ಮಶಾಸ್ತ್ರವು ಹೆಚ್ಚು ಕಡಿಮೆ ಮೊದಲಿನಿಂದಲೂ ಪ್ಲೇಟೋವಾದವನ್ನು ಒಳಗೊಂಡಿತ್ತು. ಜ್ಞಾನ ಎಂಬುದು ಪರಿಕಲ್ಪನೆಯಲ್ಲ, ಅದೊಂದು ಬಗೆಯಾದ ನೆನಪಿನಂತಹ ದರ್ಶನ ಎಂದು ಪ್ಲೇಟೋ ಕಲಿಸಿದ್ದ; ಅರಿಸ್ಟಾಟಲ್ ಹೆಚ್ಚು ಅನುಭವೈಕವಾದಿ. ಸಂತ ಥಾಮಸ್, ಅವನಿಗೇ ಅರಿವಿಲ್ಲದಿದ್ದರೂ, ಪ್ಲೇಟೋ ಕನಸಿನಿಂದ ವೈಜ್ಞಾನಿಕ ಪರಿವೀಕ್ಷಣೆಯ ಕಡೆಗೆ ಹಿಂದಿರುಗಲು ಮಾರ್ಗವನ್ನು ಸಿದ್ಧಗೊಳಿಸಿದ.

ಹದಿನಾಲ್ಕನೆಯ ಶತಮಾನದಲ್ಲಿ ಆರಂಭವಾದ ಕ್ಯಾಥೋಲಿಕ್ ಸಂಯೋಜನೆಯ ವಿಘಟನೆಗೆ ತತ್ವಜ್ಞಾನಕ್ಕಿಂತಲೂ ಬಾಹ್ಯ ಘಟನೆಗಳು ಹೆಚ್ಚು ಕಾರಣವಾದವು. ಬೈಜ಼ಾಂಟಿಯನ್ ಚಕ್ರಾಧಿಪತ್ಯವನ್ನು ಲ್ಯಾಟಿನ್‌ರು ೧೨೦೪ ರಲ್ಲಿ ಗೆದ್ದುಕೊಂಡರು, ಅದು ಅವರ ಕೈಯಲ್ಲೇ ೧೨೬೧ ರವರೆಗೂ ಉಳಿದಿತ್ತು. ಕಾನ್‌ಸ್ಟಾಂಟಿನೋಪಲ್ ಪೋಪ್‌ನ ವಶವಾಗಿ, ೧೪೩೯ ರಲ್ಲಾದ ಫೆರಾರದೊಂದಿಗೆ ನಾಮಮಾತ್ರಕ್ಕೆ ಸೇರಿದರೂ, ಮುಂದೆಂದೂ ಚೇತರಿಸಿಕೊಳ್ಳಲಿಲ್ಲ. ಪೋಪ್‌ನೊಡನೆಯ ಹೋರಾಟದಲ್ಲಿ ಪಶ್ಚಿಮ ಯೂರೋಪ್ ಸೋತದ್ದು, ಫ್ರಾನ್ಸ್ ಮತ್ತು ಇಂಗ್ಲಂಡ್‌ಗಳಲ್ಲಿ ತಲೆಯೆತ್ತಿದ ರಾಷ್ಟ್ರೀಯ ರಾಜಪ್ರಭುತ್ವದಿಂದಾಗಿ, ಚರ್ಚ್‌ಗೆ ಉಪಯೋಗವೇನೂ ಆಗಲಿಲ್ಲ; ಹೆಚ್ಚು ಕಡಿಮೆ ಹದಿನಾಲ್ಕನೆಯ ಶತಮಾನದಾದ್ಯಂತ ಪೋಪ್ ರಾಜಕೀಯವಾಗಿ ಫ್ರಾನ್ಸ್ ರಾಜನ ಕೈಗೊಂಬೆಯಾದ. ಈ ಕಾರಣಗಳಿಗಿಂತ ಹೆಚ್ಚಾಗಿ, ಶ್ರೀಮಂತ ವ್ಯಾಪಾರೀವರ್ಗ ಮತ್ತು ಸಾಮಾನ್ಯ ಜನರ ತಿಳಿವಳಿಕೆ ಬೆಳೆದದ್ದು ಅದಕ್ಕೆ ಕಾರಣ. ಇವೆರಡೂ ಇಟಲಿಯಲ್ಲಿ ಆರಂಭವಾದವು; ಹಾಗೂ ಹದಿನಾರನೆಯ

ಶತಮಾನದ ಮಧ್ಯಭಾಗದವರೆಗೂ ಪಶ್ಚಿಮದ ಇತರ ಭಾಗಗಳಿಗಿಂತಲೂ ಅಲ್ಲಿಯೇ ಹೆಚ್ಚು ಆಧುನಿಕ ರೂಪದಲ್ಲಿ ಉಳಿಯಿತು. ಹದಿನಾಲ್ಕನೆಯ ಶತಮಾನದಲ್ಲಿ ಉತ್ತರ ಇಟಲಿಯ ನಗರಗಳು ಉತ್ತರಭಾಗದ ನಗರಗಳಿಗಿಂತಲೂ ಮತ್ತಷ್ಟು ಶ್ರೀಮಂತವಾಗಿದ್ದವು; ವಿದ್ಯಾವಂತ ಸಾಮಾನ್ಯರು, ವಿಶೇಷವಾಗಿ ಕಾನೂನು ಮತ್ತು ವೈದ್ಯಗಳನ್ನು ಬಲ್ಲವರು, ಸಂಖ್ಯೆಯಲ್ಲಿ ಹೆಚ್ಚಾಗುತ್ತಿದ್ದರು. ನಗರಗಳಲ್ಲಿ ಒಂದು ಬಗೆಯ ಸ್ವತಂತ್ರ ಮನೋವೃತ್ತಿ ನೆಲೆಸಿತ್ತು, ಈಗ ಚಕ್ರವರ್ತಿಯು ಪಿಡುಗು ಎನಿಸದಿದ್ದುದರಿಂದಾಗಿ, ಜನರು ಪೋಪ್ ವಿರುದ್ಧ ನಿಲ್ಲುವಂತಾಯಿತು. ಆದರೆ ಇದೇ ಚಳವಳಿಗಳು, ಕಡಿಮೆ ತೀವ್ರತೆಯಲ್ಲಾದರೂ, ಬೇರೆಡೆಯಲ್ಲಿಯೂ ಇತ್ತು. ಫ್ಲಾಂಡರ್ಸ್ ಬೆಳೆಯಿತು, ಹಾಗೆಯೇ ಹ್ಯಾನ್ಸ್ ಪಟ್ಟಣಗಳು. ಇಂಗ್ಲಂಡ್‌ನಲ್ಲಿ ಉಣ್ಣೆಯ ವ್ಯಾಪಾರವು ಹಣದ ಆಕರವೆನಿಸಿತು. ಈ ಕಾಲದಲ್ಲಿ ಪ್ರಜಾಪ್ರಭುತ್ವಾತ್ಮಕವೆನ್ನಬಹುದಾದ ಮನೋಭಾವವು ಬಲವಾಗಿತ್ತು, ರಾಷ್ಟ್ರೀಯ ಪ್ರವೃತ್ತಿಯಂತೂ ಇನ್ನೂ ಪ್ರಬಲವಾಗಿತ್ತು. ಪೋಪ್‌ಗಳು ಹೆಚ್ಚು ಲೌಕಿಕವಾದದ್ದರಿಂದ, ಬಹುತೇಕ ದೇಶಗಳು ತಮ್ಮ ಮನೆಗಳಲ್ಲಿಯೇ ಉಳಿಸಿಕೊಳ್ಳಲು ಬಯಸಿದ್ದ ಅಪಾರ ಆದಾಯವನ್ನು ಸೆಳೆಯುತ್ತ ವ್ಯಾಪಕವಾಗಿ ಸುಲಿಗೆಕೋರರಂತೆ ಕಾಣಿಸಿದರು. ಪೋಪ್‌ರಿಗೆ ಅಧಿಕಾರ ನೀಡಿದ್ದ ನೈತಿಕ ಬಲವು ಅವರಲ್ಲಿ ಉಳಿದಿರಲಿಲ್ಲ. ಸಂತ ಫ್ರಾನ್ಸಿಸ್ ಮೂರನೆಯ ಇನ್ನೋಸೆಂಟ್ ಮತ್ತು ಒಂಬತ್ತನೆಯ ಗ್ರೆಗರಿಯ ಜೊತೆ ಸಾಮರಸ್ಯದಿಂದ ಕಾರ್ಯನಿರ್ವಹಿಸಬಲ್ಲವನಾಗಿದ್ದ, ಆದರೆ ಹದಿನಾಲ್ಕನೆಯ ಶತಮಾನದ ಬಹುತೇಕ ಜನರು ಪೋಪ್ ಪ್ರಭುತ್ವದೊಡನೆ ಸಂಘರ್ಷಕ್ಕಿಳಿದರು.

ಆದರೆ ಈ ಶತಮಾನದ ಆರಂಭದಲ್ಲಿ ಪೋಪ್ ಅಧಿಕಾರದ ಈ ಪತನವು ಇನ್ನೂ ಎದ್ದು ಕಾಣುವಂತಿರಲಿಲ್ಲ. ಎಂಟನೆಯ ಬೋನಿಫೇಸ್ 'ಊನಮ್ ಸಾಂಕ್ಟಮ್' ಎಂಬ ತನ್ನ ಕೃತಿಯಲ್ಲಿ, ಹಿಂದೆ ಯಾವ ಪೋಪ್ ಕೂಡ ಮಾಡದಷ್ಟು ಹೆಚ್ಚಿನ ಅತಿರೇಕ ಅಧಿಕಾರವನ್ನು ಚಲಾಯಿಸಿದ. ೧೩೦೦ ರ ತನ್ನ ಬೆಳ್ಳಿಯ ಹಬ್ಬದಲ್ಲಿ ಅವನು ರೋಮ್‌ಗೆ ಭೇಟಿ ನೀಡಿ ಅಲ್ಲಿರುವಷ್ಟು ಕಾಲ ಕೆಲವು ನಿರ್ದಿಷ್ಟ ವಿಶೇಷ ಸಮಾರಂಭಗಳನ್ನು ನೆರವೇರಿಸಿದ ಕ್ಯಾಥೋಲಿಕ್‌ರಿಗೆ ಅನಿರ್ಬಂಧಿತ ಅವಕಾಶವನ್ನು ನೀಡಿದ. ಇದರಿಂದ ಪೂಜಾಸ್ಥಳಗಳಲ್ಲಿಯೂ (ಕ್ಯೂರಿಯ) ರೋಮನ್ ಜನರಲ್ಲಿಯೂ ಅಪಾರ ಹಣವು ಸಂಗ್ರಹಗೊಂಡಿತು. ಪ್ರತಿ ನೂರು ವರ್ಷಕ್ಕೊಮ್ಮೆ ಇಂತಹ ಹಬ್ಬವಿರುತ್ತಿತ್ತು, ಆದರೆ ಅದು ತಂದಿತ್ತ ಲಾಭ ಎಷ್ಟೆಂದರೆ, ಇದನ್ನು ಐವತ್ತು ವರ್ಷಕ್ಕಿಳಿಸಲಾಯಿತು, ಅನಂತರ ಇಪ್ಪತ್ತೈದಕ್ಕಿಳಿಯಿತು, ಇದು ಈಗಲೂ ಉಳಿದುಕೊಂಡು ಬಂದಿದೆ. ೧೩೦೦ ರ ಮೊದಲನೆಯ ಬೆಳ್ಳಿ ಹಬ್ಬವು ಪೋಪ್‌ನನ್ನು ಯಶಸ್ಸಿನ ತುತ್ತ ತುದಿಯಲ್ಲಿ ನಿಲ್ಲಿಸಿತು; ಮತ್ತು ಇದನ್ನು ಅದರ ಪತನದ ಆರಂಭ ಎಂದು ಖಚಿತವಾಗಿ ಪರಿಗಣಿಸಬಹುದು.

ಎಂಟನೆಯ ಬೋನಿಫೇಸ್ ಇಟಲಿಯವನು, ಅವನು ಹುಟ್ಟಿದ್ದು ಅನಗ್ನಿಯಲ್ಲಿ. ಪೋಪ್ ಪರವಾಗಿ ಬಂಡಾಯಗಾರ ನಾಯಕರ ವಿರುದ್ಧ ಮೂರನೆಯ ಹೆನ್ರಿಯನ್ನು ಬೆಂಬಲಿಸಲು ಇಂಗ್ಲಂಡ್‌ನಲ್ಲಿದ್ದಾಗ ಅವನಿಗೆ ಲಂಡನ್ ಗೋಪುರದಲ್ಲಿ ಮುತ್ತಿಗೆ ಹಾಕಲಾಗಿತ್ತು, ಆದರೆ ೧೨೬೭ ರಲ್ಲಿ ಅವನನ್ನು, ಮುಂದೆ ಮೊದಲನೆಯ ಎಡ್ವರ್ಡ್ ಎನ್ನಿಸಿಕೊಂಡ, ರಾಜಕುಮಾರನು ರಕ್ಷಿಸಿದ್ದ. ಅವನ ಕಾಲದಲ್ಲಾಗಲೇ ಚರ್ಚ್‌ನಲ್ಲಿ ಪ್ರಬಲವಾದೊಂದು ಫ್ರೆಂಚ್ ಪಕ್ಷವಿತ್ತು, ಅವನ ಆಯ್ಕೆಯನ್ನು ಫ್ರೆಂಚ್ ಕಾರ್ಡಿನಲ್‌ಗಳು ವಿರೋಧಿಸಿದ್ದರು. ಫ್ರೆಂಚ್ ಪುರೋಹಿತವರ್ಗದ ಮೇಲೆ ತೆರಿಗೆ ವಿಧಿಸುವ ಅಧಿಕಾರ ಅವನಿಗಿದೆಯೇ ಎಂಬ ವಿಷಯದಲ್ಲಿ ಅವನು ಫ್ರೆಂಚ್ ದೊರೆ ನಾಲ್ಕನೆಯ ಫಿಲಿಪ್‌ನೊಡನೆ ತೀವ್ರ ಸಂಘರ್ಷದಲ್ಲಿ ತೊಡಗಿದ್ದ. ಬೋನಿಫೇಸ್ ಪಕ್ಷಪಾತ ಮತ್ತು ವೈಭವಗಳ ದಾಸನಾಗಿದ್ದ; ಹೀಗಾಗಿ ಅವನು ಯಾವ ಯಾವ ಆದಾಯಮೂಲಗಳಿವೆಯೋ ಅವೆಲ್ಲದರ ಮೇಲೆ ಹತೋಟಿ ಸಾಧಿಸಲು ಪ್ರಯತ್ನಿಸಿದ. ಅವನ ಮೇಲೆ ಪಾಷಂಡಿತನದ ಆರೋಪ ಹೊರಿಸಲಾಯಿತು, ಪ್ರಾಯಶಃ ಸಮರ್ಥನೀಯವಾಗಿ; ಅವನು ಅವೆರಾಸ್‌ವಾದಿಯಾಗಿದ್ದ ಎನಿಸುತ್ತದೆ, ಅವನಿಗೆ ಅಮರತ್ವದಲ್ಲಿ ನಂಬಿಕೆಯಿರಲಿಲ್ಲ. ಫ್ರೆಂಚ್ ರಾಜನೊಡನೆ ಅವನ ಜಗಳವು ಎಷ್ಟು ಕಹಿಯಾಯಿತೆಂದರೆ, ಸಾಮಾನ್ಯ ಮತಧರ್ಮಪರಿಷತ್ತು ಅವನನ್ನು ಪದಚ್ಯುತಗೊಳಿಸಬಹುದೆಂದು, ಅವನನ್ನು ಸೆರೆ ಹಿಡಿಯಲು ರಾಜನು ಒಂದು ಸೈನ್ಯತುಕಡಿಯನ್ನೇ ಕಳಿಸಿದ. ಅವನನ್ನು ಅನಗ್ನಿಯಲ್ಲಿ ಸೆರೆಹಿಡಿಯಲಾಯಿತು, ಆದರೆ ಅವನು ರೋಮ್‌ಗೆ ಓಡಿಹೋದ, ಅಲ್ಲೇ ಸತ್ತ. ಇದಾದ ಬಳಿಕ, ದೀರ್ಘ ಕಾಲದವರೆಗೆ, ಯಾವ ಪೋಪ್ ಕೂಡ ಫ್ರೆಂಚ್ ರಾಜನ ವಿರೋಧವನ್ನು ಕಟ್ಟಿಕೊಳ್ಳುವ ಸಾಹಸ ಮಾಡಲಿಲ್ಲ.

ಅಲ್ಪಕಾಲದ ನಡುವಣ ಆಳ್ವಿಕೆಯಾದ ನಂತರ, ೧೩೦೫ ರಲ್ಲಿ ಕಾರ್ಡಿನಲ್‌ಗಳು ಬೋರ್ಡೋನ ಆರ್ಚ್‌ಬಿಷಪ್‌ನನ್ನು ಚುನಾಯಿಸಿದರು, ಅವನು ಐದನೆಯ ಕ್ಲೆಮೆಂಟ್ ಎಂಬ ಹೆಸರು ಪಡೆದ. ಅವನೊಬ್ಬ ಗ್ಯಾಸ್ಕನ್, ಚರ್ಚ್‌ನ ಫ್ರೆಂಚ್ ಪಕ್ಷವನ್ನು ನಿರಂತರವಾಗಿ ದಮನಿಸಿದ. ಅವನ ಪೋಪ್‌ಗಿರಿಯುದ್ದಕ್ಕೂ ಅವನು ಯಾವಾಗಲೂ ಇಟಲಿಗೆ ಹೋಗಲಿಲ್ಲ. ಅವನಿಗೆ ಲಯೋನ್ಸ್‌ನಲ್ಲಿ ಕಿರೀಟಧಾರಣೆಯಾಯಿತು; ೧೩೦೯ ರಲ್ಲಿ ಅವನು ಆವಿಗ್ನಾನ್‌ನಲ್ಲಿ ನೆಲೆಸಿದ, ಪೋಪ್‌ಗಳು ಎಪ್ಪತ್ತು ವರ್ಷಗಳ ಕಾಲ ಅಲ್ಲಿಯೇ ಇರುತ್ತಿದ್ದರು. ಐದನೆಯ ಕ್ಲೆಮೆಂಟ್ ಫ್ರಾನ್ಸ್ ರಾಜನ ಜೊತೆಗಿನ ಸ್ನೇಹಸಂಬಂಧವನ್ನು ಧರ್ಮಸೈನ್ಯದ (ಟೆಂಪ್ಲರ್ಸ್) ವಿರುದ್ಧ ಕಾರ್ಯಾಚರಣೆಯ ಮೂಲಕ ತೋರಿಸಿಕೊಂಡ. ಇಬ್ಬರಿಗೂ ಹಣ ಬೇಕಾಗಿತ್ತು, ಪಕ್ಷಪಾತ ಮತ್ತು ಲಂಚಗಳಿಗೆ ಬಲಿಬಿದ್ದಿದ್ದರಿಂದ ಪೋಪ್‌ಗೆ, ಇಂಗ್ಲಿಷ್ ಯುದ್ಧ, ಫ್ಲೆಮಿಶ್ ಬಂಡಾಯ ಮತ್ತು ಹೆಚ್ಚಾಗುತ್ತಿದ್ದ ಬಲಿಷ್ಠ ಸರ್ಕಾರಕ್ಕಾಗಿ ಫಿಲಿಪ್‌ಗೆ. ಲಂಬಾರ್ಡಿಯ

ಬ್ಯಾಂಕರ್‌ಗಳನ್ನು ಲೂಟಿಮಾಡಿದ ನಂತರ, ಯೆಹೂದಿಗಳನ್ನು ಮಿತಿಮೀರಿ ಚಿತ್ರಹಿಂಸೆಗೊಳಪಡಿಸಿದ; ಧರ್ಮಸೈನಿಕರು ಬ್ಯಾಂಕರ್‌ಗಳಾಗಿರುವುದರ ಜೊತೆಗೆ ಫ್ರಾನ್ಸ್‌ನಲ್ಲಿ ಅಪಾರ ಜಮೀನು ಹೊಂದಿದ್ದಾರೆಂಬುದನ್ನು ತಿಳಿದು, ಪೋಪ್‌ನ ನೆರವಿನಿಂದ, ಅದನ್ನೆಲ್ಲ ತಾನು ವಶಪಡಿಸಿಕೊಳ್ಳಬಹುದಾಗಿತ್ತು. ಹೀಗಾಗಿ ಧರ್ಮಸೈನಿಕರು ಪಾಷಂಡಿತನಕ್ಕೊಳಗಾದವರೆಂಬುದನ್ನು ಕಂಡುಹಿಡಿದು, ಪೋಪ್ ಮತ್ತು ರಾಜ ತಾವು ಹಂಚಿಕೊಳ್ಳುವುದೆಂಬ ವ್ಯವಸ್ಥೆಯನ್ನು ಮಾಡಿಕೊಳ್ಳಲಾಯಿತು. ೧೩೦೭ ರ ಒಂದು ನಿಗದಿತ ದಿನ, ಫ್ರಾನ್ಸ್‌ನಲ್ಲಿದ್ದ ಎಲ್ಲ ಮುಖ್ಯ ಧರ್ಮಸೈನಿಕರನ್ನು ಸೆರೆಹಿಡಿಯಲಾಯಿತು; ಮೊದಲೇ ಸಿದ್ಧಪಡಿಸಿಕೊಂಡಿದ್ದ ಮುಖ್ಯ ಪ್ರಶ್ನೆಗಳ ಪಟ್ಟಿಯೊಂದನ್ನು ಅವರ ಮುಂದಿರಿಸಲಾಯಿತು; ಚಿತ್ರಹಿಂಸೆಗೊಳಪಡಿಸಿ ತಾವು ಸೈತಾನನ ಸೇವೆ ಮಾಡಿದೆವೆಂದೂ ಇತರ ಅನೇಕ ಪಾಪಕೃತ್ಯಗಳಲ್ಲಿ ಭಾಗಿಗಳೆಂದೂ ಒಪ್ಪಿಕೊಳ್ಳುವಂತೆ ಬಲವಂತಮಾಡಲಾಯಿತು; ಕೊನೆಗೆ ೧೩೧೩ ರಲ್ಲಿ ಪೋಪ್ ಮತಧಾರ್ಮಿಕವ್ಯವಸ್ಥೆಯನ್ನು ದಮನಗೊಳಿಸಿ ಅವರ ಎಲ್ಲ ಆಸ್ತಿಯನ್ನೂ ವಶಪಡಿಸಿಕೊಂಡ. ಇದರ ಅತ್ಯುತ್ತಮ ನಿರೂಪಣೆಯು ಹೆನ್ರಿ ಸಿ. ಲಿಯ ಅವರ 'ಹಿಸ್ಟರಿ ಆಫ್ ಇನ್‌ಕ್ವಿಸಿಷನ್' ನಲ್ಲಿದೆ; ಇದರಲ್ಲಿ, ಸಂಪೂರ್ಣ ವಿಚಾರಣೆಯ ಬಳಿಕ ಬಂದಿರುವ ತೀರ್ಮಾನವೆಂದರೆ, ಧರ್ಮಸೈನಿಕರ ವಿರುದ್ಧದ ಎಲ್ಲ ಆಪಾದನೆಗಳು ಸುಳ್ಳು ಎಂಬುದಾಗಿದೆ.

ಧರ್ಮಸೈನಿಕರ ವಿಚಾರದಲ್ಲಿ, ಪೋಪ್ ಮತ್ತು ರಾಜರ ಆಸಕ್ತಿಗಳು ಒಂದೇ ಆಗಿದ್ದವು. ಆದರೆ ಕ್ರೈಸ್ತಸಾಮ್ರಾಜ್ಯದ ಬಹುತೇಕ ಸಂದರ್ಭಗಳಲ್ಲಿ ಅವರ ನಡುವೆ ತಿಕ್ಕಾಟ ನಡೆಯುತ್ತಿತ್ತು. ಏಳನೆಯ ಬೋನಿಫೇಸ್‌ನ ಕಾಲದಲ್ಲಿ ನಾಲ್ಕನೆಯ ಫಿಲಿಪ್ ತೆರಿಗೆ ವಿಧಿಸುವ ವಿಚಾರದಲ್ಲಿನ ಪೋಪ್ ಜೊತೆಗಿನ ತನ್ನ ಭಿನ್ನಾಪ್ರಾಯದಲ್ಲಿ ಅಧಿಕಾರವರ್ಗದ (ಎಸ್ಟೇಟ್), (ಚರ್ಚ್ ಅಧಿಕಾರವರ್ಗದ್ದು ಕೂಡ) ಬೆಂಬಲಪಡೆದ. ಪೋಪ್‌ರು ರಾಜಕೀಯ ವಿಚಾರಗಳಲ್ಲಿ ಫ್ರಾನ್ಸ್ ದೊರೆಗಳ ಅಧೀನಕ್ಕೆ ಬಂದ ಮೇಲೆ, ಫ್ರೆಂಚ್ ರಾಜರುಗಳ ಶತ್ರುಗಳು ಅನಿವಾರ್ಯತೆಯಿಂದ ಪೋಪ್‌ರ ಶತ್ರುಗಳೂ ಆದರು. ಇದು ವಿಲಿಯಂ ಆಫ್ ಒಕ್ಕಾಮ್ ಮತ್ತು ಪಡುಅದ ಮಾರ್ಸಿಗ್ಲಿಯೋಗ ಚಕ್ರವರ್ತಿ ರಕ್ಷಣೆಯೊದಗಿಸುವಂತಾಯಿತು. ಸ್ವಲ್ಪ ಕಾಲದ ನಂತರ, ಅದರಿಂದಾಗಿ ಗಾಂಟ್‌ನ ಜಾನ್‌ನಿಂದ ವೈಕ್ಲಿಫ್ ಅನ್ನು ರಕ್ಷಿಸುವಂತೆಯೂ ಆಯಿತು.

ಇಷ್ಟು ಹೊತ್ತಿಗೆ, ಬಿಷಪ್‌ರುಗಳು ಒಟ್ಟಾರೆ ಪೋಪ್‌ನಿಗೆ ಸಂಪೂರ್ಣ ಅಧೀನರಾಗಿದ್ದರು. ಹೆಚ್ಚಿನ ಪ್ರಮಾಣದಲ್ಲಿ, ಅವರನ್ನೆಲ್ಲ ಅವನೇ ನೇಮಕ ಮಾಡುತ್ತಿದ್ದ. ಆಶ್ರಮವಾಸಿಗಳೂ ಡಾಮಿನಿಕನ್‌ರೂ ಅಷ್ಟೇ ವಿಧೇಯರಾಗಿದ್ದರು; ಆದರೆ ಫ್ರಾನ್ಸಿಸ್ಕನ್‌ರು ಮಾತ್ರ ಇನ್ನೂ ಕೊಂಚಮಟ್ಟಿಗಿನ ಸ್ವಾತಂತ್ರ್ಯವನ್ನುಳಿಸಿಕೊಂಡಿದ್ದರು. ಇದರಿಂದ ಅವರು ಇಪ್ಪತ್ತೆರಡನೆಯ ಜಾನ್‌ನೊಡನೆ ಸಂಘರ್ಷಕ್ಕಿಳಿಯುವಂತಾಯಿತು,

ಈ ವಿಷಯವನ್ನು ವಿಲಿಯಂ ಆಫ್ ಒಕ್ಕಾಮ್‌ನ ಬಗೆಗಿನ ವಿವೇಚನೆಯಲ್ಲಿ ನೋಡಿದ್ದೇವೆ. ಈ ಸಂಘರ್ಷದಲ್ಲಿ ಮಾರ್ಸಿಗ್ಲಿಯೋ, ಚಕ್ರವರ್ತಿ ಸಿಂಹಾಸನವನ್ನು ಜನತೆಯೇ ನೀಡಿದ್ದ ಮತ್ತು ಇಪ್ಪತ್ತೆರಡನೆಯ ಜಾನ್‌ನ ನೇಮಕಾತಿಯನ್ನು ರದ್ದುಪಡಿಸಿದ ಮೇಲೆ ಜನರೇ ಆರಿಸಿದ್ದ ಫ್ರಾನ್ಸಿಸ್ಕನ್‌ನ ಪ್ರತಿಪೋಪ್ ಇದ್ದ ರೋಮ್ ಮೇಲೆ ಮುನ್ನುಗ್ಗುವಂತೆ ಚಕ್ರವರ್ತಿಯನ್ನು ಪ್ರೇರಿಸಿದ. ಆದರೆ ಪೋಪ್ ಬಗೆಗಿನ ಗೌರವವು ಹಾಳಾಗುವುದರ ಹೊರತಾಗಿ ಬೇರೇನನ್ನೂ ಸಾಧಿಸಲಾಗಲಿಲ್ಲ.

ಪೋಪ್‌ಪ್ರಾಧಾನ್ಯದ ವಿರುದ್ಧದ ಬಂಡಾಯವು ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ರೂಪಗಳನ್ನು ಪಡೆಯಿತು. ಕೆಲವು ವೇಳೆ ಅದು ರಾಜಪ್ರಭುತ್ವದ ರಾಷ್ಟ್ರೀಯತೆಯೊಡನೆ ಸೇರಿದ್ದರೆ, ಮತ್ತೆ ಕೆಲವು ವೇಳೆ ಪೋಪ್ ಸಭೆಯ ಲಂಚಗುಳಿತನ ಮತ್ತು ಐಹಿಕತೆಯ ವಿರುದ್ಧದ ಮಡಿವಂತರ ಭಯಾನಕತೆಯೊಡನೆ ಒಂದಾಗಿದ್ದಿತು. ರೋಮ್‌ನಲ್ಲಿಯೇ, ಬಂಡಾಯವು ಓಬೀರಾಯನ ಕಾಲದ ಪ್ರಜಾಪ್ರಭುತ್ವದ ಜೊತೆ ಸೇರಿತ್ತು. ಆರನೆಯ ಕ್ಲೆಮೆಂಟ್‌ನ (೧೩೪೨-೫೨) ಆಶ್ರಯದಲ್ಲಿ ಸ್ವಲ್ಪ ಕಾಲ ರೋಮ್, ಕೋಲ ದಿ ರೀಯೆಂಜಿ ಎಂಬ ಅಸಾಧಾರಣ ವ್ಯಕ್ತಿಯ ನಾಯಕತ್ವದಲ್ಲಿ ಇಲ್ಲದ ಪೋಪ್‌ನಿಂದ ಸ್ವತಂತ್ರವಾಗಲೂ ಹವಣಿಸಿತು. ಪೋಪ್‌ರ ಆಡಳಿತದಲ್ಲಿ ನರಳಿದುದರ ಜೊತೆಗೆ ರೋಮ್ ಸ್ಥಳೀಯ ಶ್ರೀಮಂತ ಆಡಳಿತದ ದೌರ್ಜನ್ಯಕ್ಕೂ ಒಳಗಾಗಿತ್ತು; ಇದು ಹತ್ತನೆಯ ಶತಮಾನದಲ್ಲಿ ಪೋಪ್‌ರ ಅಧಿಕಾರವನ್ನು ಕೀಳುಮಟ್ಟಕ್ಕಿಳಿಸಿದ್ದ ಪ್ರಕ್ಷುಬ್ಧತೆಯನ್ನು ಮುಂದುವರಿಸಿತು. ನಿಯಮಬಾಹಿರ ರೋಮನ್ ಶ್ರೀಮಂತಪ್ರಭುಗಳಿಂದ ತಪ್ಪಿಸಿಕೊಳ್ಳಲು ಸ್ವಲ್ಪ ಮಟ್ಟಿಗೆ ಕಾರಣವಾಗಿ ಪೋಪ್‌ರು ಆವಿಗ್ನಾನ್‌ಗೆ ಓಡಿಹೋಗಿದ್ದರು. ಮೊದಲಿಗೆ, ಪ್ರವಾಸಿಗೃಹ ನಡೆಸುತ್ತಿದ್ದವನ ಮಗನಾದ ರೀಯೆಂಜಿ ಶ್ರೀಮಂತಪ್ರಭುಗಳ ವಿರುದ್ಧ ಮಾತ್ರ ಬಂಡಾಯವೆದ್ದ, ಇದರಲ್ಲಿ ಅವನಿಗೆ ಪೋಪ್‌ರ ಬೆಂಬಲವೂ ಸಿಕ್ಕಿತ್ತು. ಅವನು ಜನರ ಉತ್ಸಾಹವನ್ನು ಎಷ್ಟು ಎಬ್ಬಿಸಿದ್ದನೆಂದರೆ, ಶ್ರೀಮಂತಪ್ರಭುಗಳು ಓಡಿಹೋದರು (೧೩೪೭). ಪೆಟ್ರಾರ್ಕ್ ಅವನನ್ನು ಮೆಚ್ಚಿಕೊಂಡು ಅವನ ಬಗ್ಗೆ ಪ್ರಗಾಥವೊಂದನ್ನೇ ಬರೆದು, ಅವನ ಮಹಾಕಾರ್ಯವನ್ನು ಮುಂದುವರೆಸಲು ಕೇಳಿಕೊಂಡ. ಅವನು ನ್ಯಾಯಾಧಿಕರಣದ ಸ್ಥಾನ ಪಡೆದು ಸಾಮ್ರಾಜ್ಯದ ಮೇಲೆ ರೋಮನ್ ಪ್ರಜೆಗಳ ಸಾರ್ವಭೌಮತೆಯನ್ನು ಘೋಷಿಸಿದ. ಆವನು ಈ ಸಾರ್ವಭೌಮತೆಯನ್ನು ಪ್ರಜಾಪ್ರಭುತ್ವಾತ್ಮಕ ನೆಲೆಯಲ್ಲಿ ಕಲ್ಪಿಸಿಕೊಂಡಿದ್ದನೆನಿಸುತ್ತದೆ, ಯಾಕೆಂದರೆ ಅವನು ಇಟಲಿಯ ನಗರಗಳ ಪ್ರತಿನಿಧಿಗಳನ್ನು ಒಂದು ಬಗೆಯ ಸಂಸತ್‌ಗೆ ಆಹ್ವಾನಿಸಿದ. ಆದರೆ ಯಶಸ್ಸು ಅವನಿಗೆ ವೈಭವದ ಭ್ರಮೆ ಹುಟ್ಟಿಸಿತು. ಈ ಹೊತ್ತಿಗೆ, ಮಿಕ್ಕ ಅನೇಕವುಗಳಂತೆ, ಸಾಮ್ರಾಜ್ಯದ ಹಕ್ಕುದಾರ ಪ್ರತಿಸ್ಪರ್ಧಿಗಳು ಹುಟ್ಟಿಕೊಂಡರು. ರೀಯೆಂಜಿ ಅವರಿಬ್ಬರನ್ನೂ ಕರೆಸಿದ, ವಿಷಯವನ್ನು ತೀರ್ಮಾನಿಸಲು ಚುನಾಯಿತ ಸದಸ್ಯರನ್ನು ಬರಲು ಕೇಳಿಕೊಂಡ. ಇದು

ಸಹಜವಾಗಿಯೇ ಇಬ್ಬರು ಸಾಮ್ರಾಜ್ಯದ ಹಕ್ಕುದಾರರು ಮತ್ತು ಇಂತಹ ವಿಷಯಗಳಲ್ಲಿ ತೀರ್ಪು ಕೊಡಲು ತನಗೆ ಮಾತ್ರ ಅಧಿಕಾರವಿದೆಯೆಂದು ಭಾವಿಸಿದ್ದ ಪೋಪ್ ಕೂಡ ಅವನಿಗೆ ವಿರೋಧವಾಗಲು ಕಾರಣವಾಯಿತು. ರಿಯೆಂಝಿಯನ್ನು ಪೋಪ್ (೧೩೫೨) ಸೆರೆ ಹಿಡಿಸಿ, ಆರನೆಯ ಕ್ಲೆಮೆಂಟ್‌ನ ಮರಣದವರೆಗೆ, ಎರಡು ವರ್ಷಗಳ ಕಾಲ ಸೆರೆಮನೆಯಲ್ಲಿರಿಸಿದ. ಆನಂತರ ಅವನನ್ನು ಬಿಡುಗಡೆಗೊಳಿಸಲಾಯಿತು, ಅವನು ರೋಮ್‌ಗೆ ಹಿಂದಿರುಗಿದ, ಅಲ್ಲಿ ಅವನು ಕೆಲವು ತಿಂಗಳ ಕಾಲ ಅಧಿಕಾರವನ್ನು ಪಡೆದಿದ್ದ. ಆದರೆ ಈ ಎರಡನೆಯ ಸಂದರ್ಭದಲ್ಲಿ, ಅವನ ಜನಪ್ರಿಯತೆಯು ಅಲ್ಪಕಾಲದ್ದಾಗಿತ್ತು, ಕೊನೆಗೆ ಅವನನ್ನು ಜನಸಂದಣಿಯೇ ಕೊಲೆಗೈದಿತು. ಬೈರನ್ ಮತ್ತು ಪೆಟ್ರಾರ್ಕ್ ಅವನನ್ನು ಹೊಗಳಿ ಪದ್ಯವೊಂದನ್ನು ಬರೆದರು.

ಪೋಪ್ ಅಧಿಕಾರವು ಪರಿಣಾಮಕಾರಿಯಾಗಿ ಇಡೀ ಕ್ಯಾಥೋಲಿಕ್ ಚರ್ಚ್ ಅನ್ನು ವ್ಯಾಪಿಸಬೇಕಾದರೆ ಅದು ಫ್ರಾನ್ಸ್ ಅಧೀನತೆಯಿಂದ ಬಿಡಿಸಿಕೊಂಡು ಮರಳಿ ರೋಮ್‌ಗೆ ಬರಬೇಕೆಂಬುದು ಸ್ಪಷ್ಟವಾಗಿತ್ತು. ಅದಕ್ಕೂ ಮಿಗಿಲಾಗಿ, ಫ್ರಾನ್ಸ್ ತೀವ್ರ ಸೋಲುಗಳನ್ನನುಭವಿಸುವಂತೆ ಮಾಡಿದ್ದ ಆಂಗ್ಲೋ-ಫ್ರೆಂಚ್ ಯುದ್ಧವು ಫ್ರಾನ್ಸ್ ಅನ್ನು ಅಸ್ಥಿರಗೊಳಿಸಿತ್ತು. ಹೀಗಾಗಿ ಐದನೆಯ ಅರ್ಬನ್ ೧೩೬೭ ರಲ್ಲಿ ರೋಮ್‌ಗೆ ಹೋದ, ಆದರೆ ಇಟಲಿಯ ರಾಜಕೀಯವು ಅವನಿಗೆ ಕಗ್ಗಂಟಾಯಿತು, ಹೀಗಾಗಿ ಅವನು ಸಾಯುವ ಸ್ವಲ್ಪ ಕಾಲದ ಮುಂಚೆ ಆವಿಗ್ನಾನ್‌ಗೆ ಮರಳಿದ. ಮುಂದಿನ ಪೋಪ್ ಆದ ಹನ್ನೊಂದನೆಯ ಗ್ರೆಗರಿಯು ಮತ್ತಷ್ಟು ದೃಢವಾಗಿದ್ದ. ಫ್ರೆಂಚ್ ಪೋಪ್ ನ್ಯಾಯಾಸ್ಥಾನದ ಬಗೆಗಿನ ದ್ವೇಷವು ಇಟಲಿಯ ಅನೇಕ ನಗರಗಳನ್ನು, ಅದರಲ್ಲೂ ಫ್ಲಾರೆನ್ಸ್ ಅನ್ನು, ಕಡು ಪೋಪ್‌ವಿರೋಧಿಗಳಾಗಿಸಿದ್ದವು, ಆದರೆ ರೋಮ್‌ಗೆ ಮರಳಿದ ಬಳಿಕ ಫ್ರೆಂಚ್ ಕಾರ್ಡಿನಲ್‌ಗಳನ್ನು ವಿರೋಧಿಸಿದ್ದ ಗ್ರೆಗರಿಯು ತನ್ನ ಅಧಿಕಾರ ವ್ಯಾಪ್ತಿಯ ಎಲ್ಲವನ್ನೂ ಮಾಡಿ ಸನ್ನಿವೇಶವನ್ನು ತಿಳಿಗೊಳಿಸಲು ಪ್ರಯತ್ನಿಸಿದ. ಆದರೆ, ಅವನು ಸತ್ತಾಗ ಕಾರ್ಡಿನಲ್‌ಗಳ ಕೂಟದ ಫ್ರೆಂಚ್ ಮತ್ತು ರೋಮನ್ ಪಕ್ಷಗಳು ಒಟ್ಟಾಗಲು ವಿಫಲವಾದವು. ರೋಮನ್ ಪಕ್ಷದ ಇಚ್ಛೆಯಂತೆ, ಬಾರ್ಟೋಲೋಮಿಯೋ ಪ್ರಿಗ್ನಾನೋ ಎಂಬ ಇಟಾಲಿಯನ್ ಚುನಾಯಿತನಾಗಿ ಆರನೆಯ ಅರ್ಬನ್ ಎಂಬ ಹೆಸರು ತಾಳಿದ. ಆದರೆ ಅನೇಕ ಮಂದಿ ಕಾರ್ಡಿನಲ್‌ಗಳು ಅವನ ಆಯ್ಕೆಯನ್ನು ಸಪ್ರಮಾಣವಲ್ಲವೆಂದು ಘೋಷಿಸಿ, ಫ್ರೆಂಚ್ ಪಕ್ಷಕ್ಕೆ ಸೇರಿದ್ದ ಜಿನೀವದ ರಾಬರ್ಟ್ ಅನ್ನು ಚುನಾಯಿಸಿಬಿಟ್ಟರು. ಅವನು ಏಳನೆಯ ಕ್ಲೆಮೆಂಟ್ ಹೆಸರನ್ನು ಹೊಂದಿ ಆವಿಗ್ನಾನ್‌ನಲ್ಲಿ ವಾಸಿಸಲು ತೊಡಗಿದ.

ಹೀಗೆ ಮಹಾ ಬಿರುಕು (ಗ್ರೇಟ್ ಸ್ಕಿಸ್ಮ್) ಮೂಡಿ ಸುಮಾರು ನಲವತ್ತು ವರ್ಷಗಳ ಕಾಲ ಮುಂದುವರಿಯಿತು. ಫ್ರಾನ್ಸ್ ಆವಿಗ್ನಾನ್ ಪೋಪ್ ಅನ್ನು

ಮಾನ್ಯಮಾಡಿತು, ಫ್ರೆಂಚ್ ಶತ್ರುಗಳು ರೋಮ್‌ನ ಪೋಪ್ ಅನ್ನು ಮಾನ್ಯಮಾಡಿದರು. ಸ್ಕಾಟ್ಲೆಂಡ್ ಇಂಗ್ಲೆಂಡ್‌ನ ಶತ್ರುವಾಗಿತ್ತು, ಹಾಗೆಯೇ ಇಂಗ್ಲೆಂಡ್ ಫ್ರಾನ್ಸ್‌ನ ಶತ್ರುವಾಗಿತ್ತು. ಹೀಗಾಗಿ ಸ್ಕಾಟ್ಲೆಂಡ್ ಆವಿಗ್ನಾನ್ ಪೋಪ್ ಅನ್ನು ಮಾಡಿತು. ಇಬ್ಬರೂ ಪೋಪ್‌ಗಳು ತಮ್ಮ ಪಕ್ಷಗಳಿಂದಲೇ ಕಾರ್ಡಿನಲ್‌ಗಳನ್ನು ಆಯ್ಕೆಮಾಡಿಕೊಂಡರು; ಇಬ್ಬರಲ್ಲಿ ಒಬ್ಬ ಸತ್ತರೆ ತಕ್ಷಣವೇ ಅವನ ಜಾಗಕ್ಕೆ ಮತ್ತೊಬ್ಬನನ್ನು ಆಯ್ಕೆಮಾಡಿಕೊಳ್ಳುತ್ತಿದ್ದರು. ಹೀಗೆ ಈ ಇಬ್ಬರೂ ಒಳಪಡುವ ಮತ್ತೊಂದು ಅಧಿಕಾರವನ್ನು ಸೃಷ್ಟಿಸುವ ಹೊರತು ಬಿರುಕನ್ನು ಮುಚ್ಚುವ ಬಗೆ ಕಾಣಲಿಲ್ಲ. ಆ ಇಬ್ಬರಲ್ಲಿ ಒಬ್ಬನು ಮಾತ್ರ ನಿಯಮಾನುಗುಣವಾಗಿದ್ದ ಎಂಬುದೇನೋ ಸ್ಪಷ್ಟವಾಗಿತ್ತು, ಹೀಗಾಗಿ ನಿಯಮಾನುಗುಣವಾದ ಪೋಪ್‌ಗಿಂತ ಮಿಗಿಲಾದ ಅಧಿಕಾರವನ್ನು ಕಂಡುಕೊಳ್ಳಬೇಕಾಗಿತ್ತು. ಇದಕ್ಕೆ ಪರಿಹಾರವನ್ನು ಸಾಮಾನ್ಯ ಧರ್ಮಪರಿಷತ್ತು ಮಾತ್ರವೇ ರೂಪಿಸಬಹುದಾಗಿತ್ತು. ಗೆರ್ಸನ್ ನಾಯಕತ್ವದ ಪ್ಯಾರಿಸ್ ವಿಶ್ವವಿದ್ಯಾನಿಲಯವು, ಈ ವಿಷಯದಲ್ಲಿ ತೀರ್ಮಾನ ಕೈಗೊಳ್ಳಲು ಪರಿಷತ್ತೊಂದಕ್ಕೆ ಅಧಿಕಾರ ವಹಿಸುವಂತೆ, ಹೊಸತೊಂದು ಸಿದ್ಧಾಂತವನ್ನು ರೂಪಿಸಿತು. ಪರಮಾಧಿಕಾರದ ಸಾಮಾನ್ಯ ಜನತೆಗೆ ಈ ಬಿರುಕು ಇರಿಸುಮುರಿಸಿನದಾಗಿ ಈ ಹೊಸ ಸಿದ್ಧಾಂತಕ್ಕೆ ಒಪ್ಪಿಗೆ ನೀಡಿತು. ಕೊನೆಗೆ ೧೪೦೯ ರಲ್ಲಿ, ಪರಿಷತ್ತೊಂದನ್ನು ಸಮಾವೇಶಗೊಳಿಸಲಾಯಿತು, ಅದು ಪೀಸಾದಲ್ಲಿ ಸೇರಿತು. ಆದರೆ ಅದು ವಿಚಿತ್ರ ಬಗೆಯಲ್ಲಿ ವೈಫಲ್ಯವನ್ನು ಕಂಡಿತು. ಬಿರುಕು ಮತ್ತು ಪಾಷಂಡಿತನದ ಆರೋಪದ ಮೇಲೆ ಇಬ್ಬರೂ ಪೋಪ್‌ರ ನೇಮಕಾತಿಯನ್ನು ರದ್ದುಮಾಡಿ ಮೂರನೆಯವನೊಬ್ಬನನ್ನು ಆಯ್ಕೆ ಮಾಡಿತು, ಅವನು ಸ್ವಲ್ಪ ಕಾಲದಲ್ಲೇ ಸತ್ತ; ಅವನ ಕಾರ್ಡಿನಲ್‌ಗಳು ಮಾಜಿ–ಕಡಲ್ಗಳ್ಳನಾದ ಬಾಲ್ಡಸ್ಸಾರ ಕೋಸ ಎಂಬುವನನ್ನು ಆಯ್ಕೆ ಮಾಡಿದರು, ಅವನು ಇಪ್ಪತ್ತಮೂರನೆಯ ಜಾನ್ ಎನ್ನಿಸಿಕೊಂಡ. ಅಂದರೆ ಇದರಿಂದಾದ ಒಟ್ಟು ಫಲವೆಂದರೆ ಇಬ್ಬರ ಬದಲು ಮೂವರು ಪೋಪ್‌ರು ಇರುವಂತಾದುದು, ಜೊತೆಗೆ ಈ ಮೂರನೆಯ ಪೋಪ್ ಕುಖ್ಯಾತ ಸುಲಿಗೆಕೋರನಾಗಿದ್ದು ಈ ಹಂತದಲ್ಲಿ ಸನ್ನಿವೇಶವು ಹಿಂದೆಂದಿಗಿಂತ ವಿಷಮವೆನಿಸಿತು.

ಆದರೆ ಸಂಧಾನ ಚಳವಳಿಯ ಬೆಂಬಲಿಗರು ಇದನ್ನಿಲ್ಲಿಗೇ ಬಿಡಲಿಲ್ಲ. ೧೪೧೪ ರಲ್ಲಿ, ಕಾನ್‌ಸ್ಟಾನ್ಸ್‌ನಲ್ಲಿ ಹೊಸ ಪರಿಷತ್ತೊಂದನ್ನು ಸಮಾವೇಶಗೊಳಿಸಿ, ತೀವ್ರ ಕಾರ್ಯಾಚರಣೆಗಿಳಿಯಿತು. ಅದರ ಮೊದಲ ತೀರ್ಮಾನವೆಂದರೆ ಪೋಪ್‌ಗಳು ಧರ್ಮಪರಿಷತ್ತುಗಳನ್ನು ರದ್ದುಪಡಿಸಲು ಸಾಧ್ಯವಿಲ್ಲ, ಬದಲಿಗೆ ಕೆಲವು ವಿಷಯಗಳಲ್ಲಿ ಅದಕ್ಕೆ ಬದ್ಧವಾಗಿರಬೇಕು ಎಂಬುದು; ಜೊತೆಗೆ, ಮುಂದಿನ ಪೋಪ್‌ರು ಸಾಮಾನ್ಯ ಪರಿಷತ್ತನ್ನು ಪ್ರತಿ ಏಳುವರ್ಷಗಳಿಗೊಮ್ಮೆ ಸಮಾವೇಶಗೊಳಿಸಬೇಕೆಂದೂ ನಿರ್ಣಯ ಮಾಡಿತು. ಅದು ಇಪ್ಪತ್ತಮೂರನೆಯ ಜಾನ್‌ನ ನೇಮಕವನ್ನು ರದ್ದುಪಡಿಸಿ, ರೋಮನ್

ಪೋಪ್ ಅನ್ನು ರಾಜೀನಾಮೆ ನೀಡುವಂತೆ ಒಲಿಸಲಾಯಿತು. ಆದರೆ ಆವಿಗ್ನಾನ್ ಪೋಪ್ ರಾಜೀನಾಮೆ ನೀಡಲು ನಿರಾಕರಿಸಿದ; ಅವನ ಮರಣಾನಂತರ ಆರಗಾನ್‌ನ ರಾಜನು ಅವನ ಉತ್ತರಾಧಿಕಾರಿಯನ್ನು ಆಯ್ಕೆಮಾಡುವ ಏರ್ಪಾಟು ಮಾಡಿದ. ಆದರೆ ಫ್ರಾನ್ಸ್, ಈ ಹೊತ್ತಿಗೆ ಇಂಗ್ಲಂಡ್‌ನ ಕೃಪಾಶ್ರಯದಲ್ಲಿದ್ದು, ಅವನನ್ನು ಮಾನ್ಯಮಾಡಲು ಒಪ್ಪಲಿಲ್ಲ, ಅವನ ಪಕ್ಷವು ಕುಗ್ಗುತ್ತ ಹೋಗಿ ಕೊನೆಗೆ ಇಲ್ಲವಾಯಿತು. ಹೀಗೆ ಧರ್ಮಪರಿಷತ್ತು ಆಯ್ಕೆಮಾಡಿದ್ದ ಪೋಪ್‌ಗೆ ಪ್ರತಿಸ್ಪರ್ಧಿ ಉಳಿಯಲಿಲ್ಲ, ಅವನನ್ನು ೧೪೧೭ ರಲ್ಲಿ ಆಯ್ಕೆಮಾಡಲಾಯಿತು, ಅವನು ಐದನೆಯ ಮಾರ್ಟಿನ್ ಎಂಬ ಹೆಸರನ್ನು ಪಡೆದ.

ಈ ನಡವಳಿಕೆಗಳು ಪ್ರಶಂಸಾರ್ಹವಾದವು, ಆದರೆ ವೈಕ್ಲಿಫ್‌ನ ಬೊಹೆಮಿಯನ್ ಶಿಷ್ಯನಾದ ಹೂಸ್‌ನ ನಡವಳಿಕೆ ಹಾಗಿರಲಿಲ್ಲ. ಅವನನ್ನು ಸುರಕ್ಷೆಯ ವಾಗ್ದಾನದ ಮೇಲೆ ಕಾನ್‌ಸ್ಟನ್ಸ್‌ಗೆ ಕರೆತಂದು, ಅಲ್ಲಿ ಅವನನ್ನು ಖಂಡನೆಗೆ ಗುರಿಪಡಿಸಲಾಯಿತು ಮತ್ತು ಅಲ್ಲಿ ಬಲಿಗಂಬಕ್ಕೆ ಆಹುತಿಯಾದ. ವೈಕ್ಲಿಫ್ ಏನೋ ಸುರಕ್ಷಿತವಾಗಿ ಸತ್ತ, ಆದರೆ ಅವನ ಮೂಳೆಗಳನ್ನು ಅಗೆದು ತೆಗೆದು ಸುಡಬೇಕೆಂದು ಧರ್ಮಪರಿಷತ್ತು ನಿರ್ಣಯಮಾಡಿತು. ಸಂಧಾನದ ಬೆಂಬಲಿಗರು ಸಂಶಯಪಿಶಾಚಿಗಳಾದ ಸಂಪ್ರದಾಯವಿರೋಧಿಗಳಿಂದ ಹೇಗೆ ಸ್ವತಂತ್ರರಾಗಬೇಕೆಂಬ ಬಗ್ಗೆ ಆತಂಕಕ್ಕೊಳಗಾದರು.

ಕಾನ್‌ಸ್ಟನ್ಸ್‌ನ ಧರ್ಮಪರಿಷತ್ತು ಬಿರುಕನ್ನೇನೋ ಸರಿಪಡಿಸಿತ್ತು, ಆದರೆ ಮತ್ತಷ್ಟನ್ನು ಮಾಡುವ ಮಹತ್ವಾಂಕ್ಷೆ ಹೊಂದಿತ್ತು, ಅದೆಂದರೆ ಪೋಪ್‌ನ ಪಾರಮ್ಯ ರಕ್ಷಣೆಗಾಗಿ ಸಂವಿಧಾನಬದ್ಧ ರಾಜಪ್ರಭುತ್ವವನ್ನು ಜಾರಿಗೊಳಿಸುವುದು. ತನ್ನ ಚುನಾವಣೆಗಿಂತ ಮುಂಚೆ ಐದನೆಯ ಮಾರ್ಟಿನ್ ಅನೇಕ ಆಶ್ವಾಸನೆಗಳನ್ನು ನೀಡಿದ್ದ; ಅವುಗಳಲ್ಲಿ ಕೆಲವನ್ನು ನೆರವೇರಿಸಿ, ಮತ್ತೆ ಕೆಲವದರಲ್ಲಿ ವಿಫಲನಾದ. ಪ್ರತಿ ಏಳು ವರ್ಷಕ್ಕೊಮ್ಮೆ ಧರ್ಮಪರಿಷತ್ತಿನ ಸಮಾವೇಶ ನಡೆಸಬೇಕೆಂಬ ಸಿದ್ಧಾಂತಕ್ಕೆ ಅವನು ಒಪ್ಪಿದ್ದ; ಅದರಂತೆಯೇ ನಡೆದುಕೊಂಡ. ಕಾನ್‌ಸ್ಟನ್ಸ್‌ನ ಧರ್ಮಪರಿಷತ್ತು ೧೪೧೭ ರಲ್ಲಿ ರದ್ದುಗೊಂಡು, ಮುಖ್ಯವೆನಿಸಿದ ಮತ್ತೊಂದು ಧರ್ಮಪರಿಷತ್ತು ೧೪೨೪ ರಲ್ಲಿಯೂ, ಆನಂತರ ೧೪೩೧ ರಲ್ಲಿ ಬಾಸೆಲ್‌ನಲ್ಲಿ ಸಮಾವೇಶಗೊಳ್ಳಲು ಸಿದ್ಧವಾಯಿತು. ಇದೇ ಹೊತ್ತಿನಲ್ಲಿಯೇ ಮಾರ್ಟಿನ್ ಮರಣಹೊಂದಿದ. ಅವನ ಉತ್ತರಾಧಿಕಾರಿ ನಾಲ್ಕನೇ ಯೂಜೀನಿಯಸ್ ತನ್ನ ಅವಧಿಪೂರ್ತಿ ಧರ್ಮಪರಿಷತ್ತನ್ನು ನಿಯಂತ್ರಿಸುತ್ತಿದ್ದ ಸುಧಾರಕರೊಂದಿಗೆ ನಿರಂತರ ತಿಕ್ಕಾಟದಲ್ಲಿ ತೊಡಗಿದ್ದ. ಅವನು ಧರ್ಮಪರಿಷತ್ತನ್ನು ರದ್ದುಪಡಿಸಿದ; ೧೪೩೩ ರಲ್ಲಿ ಸ್ವಲ್ಪ ಕಾಲ ಕಾದು, ೧೪೩೭ ರಲ್ಲಿ ಮತ್ತೆ ಅದನ್ನು ರದ್ದುಪಡಿಸಿದ. ಆದರೂ ಅದು ೧೪೪೮ ರವರೆಗೂ ಸಮಾವೇಶಗೊಳ್ಳುತ್ತಲೇ ಇತ್ತು. ಇಷ್ಟು ಹೊತ್ತಿಗೆ ಪೋಪ್ ಎಲ್ಲ ವಿಷಯದಲ್ಲಿಯೂ

ಸಂಪೂರ್ಣ ಗೆಲವನ್ನು ಸಾಧಿಸಿದ್ದುದು ಸ್ಪಷ್ಟವಾಗಿತ್ತು. ೧೪೩೯ ರಲ್ಲಿ ಧರ್ಮಪರಿಷತ್ತು ಸಹಾನುಭೂತಿಯನ್ನು ವರ್ಗಾಯಿಸಿ ಪೋಪ್ ನೇಮಕಾತಿಯನ್ನು ರದ್ದುಮಾಡಿ, ಒಬ್ಬ ಪ್ರತಿಪೋಪ್ ಅನ್ನು ಆಯ್ಕೆಮಾಡಿತು (ಇತಿಹಾಸದಲ್ಲಿ ಕೊನೆಯವನು). ಆದರೆ ಅವನು ತಕ್ಷಣವೇ ರಾಜೀನಾಮೆಯಿತ್ತ. ಅದೇ ವರ್ಷ ನಾಲ್ಕನೆ ಯೂಜೀನಿಯಸ್ ತಕ್ಷಣವೇ ತನ್ನದೇ ಧರ್ಮಪರಿಷತ್ತನ್ನು ಫೆರಾರದಲ್ಲಿ ಸಮಾವೇಶಗೊಳಿಸಿ ಗೌರವವನ್ನು ಪಡೆದುಕೊಂಡ. ಅದರಲ್ಲಿ, ಟರ್ಕ್‌ರ ಭಯದಲ್ಲಿದ್ದ ಗ್ರೀಕ್ ಚರ್ಚ್ ನಾಮಮಾತ್ರಕ್ಕೆ ರೋಮ್‌ಗೆ ಶರಣಾಯಿತು. ಹೀಗೆ ಪೋಪ್ ಅಧಿಕಾರವು ರಾಜಕೀಯ ಮೇಲುಗೈ ಪಡೆಯಿತಾದರೂ, ತನ್ನ ನೈತಿಕ ಗೌರವವನ್ನಂತೂ ಕಡಿಮೆಮಾಡಿಕೊಂಡಿತ್ತು.

ವೈಕ್ಲಿಫ್ (ಸು. ೧೩೨೦–೮೪) ತನ್ನ ಬದುಕು ಮತ್ತು ಸಿದ್ಧಾಂತಗಳಿಂದ ಹದಿನಾಲ್ಕನೆಯ ಶತಮಾನದಲ್ಲಿ ಪೋಪ್ ಅಧಿಕಾರವು ಮೊಟಕಾಗಿದ್ದುದರ ಉದಾಹರಣೆಯಗಿದ್ದಾನೆ. ತನಗಿಂತ ಹಿಂದಿನ ದೇವತಾಶಾಸ್ತ್ರಜ್ಞರಂತಲ್ಲದೆ ಅವನೊಬ್ಬ ಮತಧರ್ಮೇತರ ಪುರೋಹಿತನಾಗಿದ್ದನೇ ಹೊರತು ಕ್ರೈಸ್ತಭಿಕ್ಷುಮಾತ್ರವಾಗಿರಲಿಲ್ಲ. ಅವನಿಗೆ ಆಕ್ಸ್‌ಫರ್ಡ್‌ನಲ್ಲಿ ಹೆಚ್ಚು ಖ್ಯಾತಿಯಿತ್ತು, ಅಲ್ಲಿಯೇ ಅವನು ೧೩೭೨ ರಲ್ಲಿ ಡಾಕ್ಟರ್ ಆಫ್ ಥಿಯಾಲಜಿ ಆದದ್ದು. ಸ್ವಲ್ಪ ಕಾಲ ಅವನು ಬ್ಯಾಲಿಯೋಲ್ ಮಾಸ್ಟರ್ ಆಗಿದ್ದ. ಅವನು ಪ್ರಮುಖ ಆಕ್ಸ್‌ಫರ್ಡ್ ಸೂಕ್ಷ್ಮತಾರ್ಕಿಕರಲ್ಲಿ ಕೊನೆಯವನು. ಒಬ್ಬ ತತ್ವಜ್ಞಾನಿಯಾಗಿ ಅವನು ಪ್ರಗತಿಪರನೇನೂ ಆಗಿರಲಿಲ್ಲ, ಅವನೊಬ್ಬ ವಾಸ್ತವವಾದಿ, ಅರಿಸ್ಟಾಟಲ್‌ವಾದಿಗಿಂತ ಪ್ಲೇಟೋವಾದಿಯಾಗಿದ್ದವನು. ಅವನ ಪ್ರಕಾರ, ಕೆಲವರು ಹೇಳುವಂತೆ ದೇವರ ನಿರ್ಧಾರಗಳು ಯಾದೃಚ್ಛಿಕವಲ್ಲ, ವಾಸ್ತವ ಜಗತ್ತು ಸಾಧ್ಯ ಜಗತ್ತುಗಳಲ್ಲಿನ ಒಂದಲ್ಲ, ಏಕಮಾತ್ರ ವಾಸ್ತವ ಜಗತ್ತು, ಯಾಕೆಂದರೆ ದೇವರು ಅತ್ಯಂತ ಶ್ರೇಷ್ಠವಾದುದನ್ನೇ ಆಯ್ದುಕೊಳ್ಳುವವನು. ಇದಷ್ಟೇ ಅವನನ್ನು ಸ್ವಾರಸ್ಯಕರವಾಗಿ ಮಾಡುವುದಲ್ಲ, ಅಥವಾ ಇದೇ ಅವನಿಗೆ ಆಸಕ್ತಿದಾಯಕ ವಿಷಯವಾಗಿತ್ತು ಎಂಬುದೂ ಅಲ್ಲ; ಯಾಕೆಂದರೆ ಅವನು ಆಕ್ಸ್‌ಫರ್ಡ್‌ನಿಂದ ಹೊರಬಂದು ಹಳ್ಳಿಗಾಡಿನ ಪುರೋಹಿತನ ಬದುಕನ್ನು ಆಯ್ದುಕೊಂಡ. ತನ್ನ ಬದುಕಿನ ಕೊನೆಯ ಹತ್ತು ವರ್ಷಗಳು ಅವನು ಲೂಟೆರ್‌ವರ್ತ್‌ನ ರಾಜ ನೇಮಿಸಿದ್ದ ಪ್ಯಾರಿಷ್ ಪುರೋಹಿತನಾಗಿದ್ದ. ಆದರೆ ಅವನು ಆಕ್ಸ್‌ಫರ್ಡ್‌ನಲ್ಲಿ ಉಪನ್ಯಾಸಗಳನ್ನು ನೀಡುತ್ತಲೇ ಇದ್ದ.

ತನ್ನ ಬೆಳವಣಿಗೆಯ ತೀರ ಮಂದಗತಿಗೂ ವೈಕ್ಲಿಫ್ ಹೆಸರುವಾಸಿಯಾದವನು. ೧೩೭೨ ರಲ್ಲಿ ಅವನ ವಯಸ್ಸು ಐವತ್ತನ್ನು ಮೀರಿತ್ತು, ಆಗಲೂ ಅವನು ಸಂಪ್ರದಾಯನಿಷ್ಠನೇ ಆಗಿದ್ದ; ಇದರ ನಂತರವೇ ಅವನು ಪಾಷಂಡಿ ಅನ್ನಿಸಿಕೊಂಡದ್ದು. ಅವನ ಪಾಷಂಡಿತನಕ್ಕೆ ಏಕೈಕ ಕಾರಣ ಅವನ ನೈತಿಕ ಭಾವನೆಗಳು – ಬಡವರ

ಬಗೆಗಿನ ಅನುಕಂಪೆ ಮತ್ತು ಶ್ರೀಮಂತ ಧರ್ಮಬೋಧಕರನ್ನು ಕಂಡರೆ ಭಯಗಳು. ಮೊದಲಿಗೆ ಪೋಪ್ ಬಗೆಗಿನ ಅವನ ಟೀಕೆಗಳು ರಾಜಕೀಯವಾದವೂ ನೈತಿಕವೂ ಆದವು, ಸೈದ್ಧಾಂತಿಕವಾದವಲ್ಲ; ಕ್ರಮೇಣವಷ್ಟೇ ಅವನು ವ್ಯಾಪಕ ಬಂಡಾಯಗಾರನೆನಿಸಿದ್ದು.

ಸಂಪ್ರದಾಯನಿಷ್ಠೆಯಿಂದ ವೈಕ್ಲಿಫ್‌ನ ನಿರ್ಗಮನ ಆರಂಭಗೊಂಡದ್ದು ೧೩೭೬ ರಲ್ಲಿ, 'ನಾಗರಿಕ ಪರಮಾಧಿಕಾರ ಕುರಿತು' ಉಪನ್ಯಾಸಸರಣಿಯ ಮೂಲಕ. ಸದಾಚಾರ ಮಾತ್ರವೇ ಪರಮಾಧಿಕಾರ ಮತ್ತು ಆಸ್ತಿಗೆ ಒಡೆತನವನ್ನು ನೀಡುವಂತಹುದ್ದು; ಸದಾಚಾರಹೀನ ಪುರೋಹಿತವರ್ಗಕ್ಕೆ ಆ ಅಧಿಕಾರವಿಲ್ಲ; ಹಾಗೂ ಧರ್ಮಬೋಧಕವರ್ಗದ ಆಸ್ತಿಯ ಬಗ್ಗೆ ನಾಗರಿಕ ಅಧಿಕಾರವು ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂಬ ಸಿದ್ಧಾಂತವನ್ನವನು ಮುಂದಿಟ್ಟ. ಮುಂದುವರಿದು, ಆಸ್ತಿಯೆಂಬುದು ಪಾಪದ ಫಲ; ಕ್ರಿಸ್ತ ಮತ್ತು ಪ್ರವರ್ತಕರು ಆಸ್ತಿಯನ್ನು ಹೊಂದಿರಲಿಲ್ಲ, ಅಂತೆಯೇ ಪುರೋಹಿತವರ್ಗವೂ ಆಸ್ತಿಯನ್ನು ಹೊಂದಿರಬಾರದು ಎಂದು ಬೋಧಿಸಿದ. ಈ ಸಿದ್ಧಾಂತಗಳು ಕ್ರೈಸ್ತಭಿಕ್ಷುಗಳ ಹೊರತಾಗಿ ಮಿಕ್ಕೆಲ್ಲ ಪುರೋಹಿತವರ್ಗವನ್ನೂ ಕೆರಳಿಸಿದವು. ಆದರೆ ಇಂಗ್ಲಿಷ್ ಆಡಳಿತವು ಅವುಗಳ ಪರವಾಗಿತ್ತು, ಯಾಕೆಂದರೆ ಇಂಗ್ಲಂಡ್ ಅವನ ಬಗ್ಗೆ ಅಪಾರ ಗೌರವವನ್ನು ಹೊಂದಿತ್ತು, ಅಲ್ಲದೆ ಹಣವನ್ನು ಇಂಗ್ಲಂಡ್‌ನ ಹೊರಗೆ ಪೋಪ್‌ಗೆ ಕಳಿಸಬಾರದೆಂಬುದು ತನಗೆ ಅನುಕೂಲಕರವಾಗಿತ್ತು. ಪೋಪ್ ಫ್ರಾನ್ಸ್‌ಗೆ ಅಧೀನನಾಗಿದ್ದುದರಿಂದಲೂ ಇಂಗ್ಲಂಡ್ ಫ್ರಾನ್ಸ್ ಜೊತೆ ಯುದ್ಧ ಮಾಡುತ್ತಿದ್ದುದರಿಂದಲೂ ಇದಕ್ಕೆ ಬಲ ಬಂತು. ಎರಡನೇ ರಿಚರ್ಡ್ ಅಪ್ರಾಪ್ತನಾಗಿದ್ದ ಅವಧಿಯಲ್ಲಿ ಅಧಿಕಾರ ನಡೆಸುತ್ತಿದ್ದ ಗಾಂಟ್‌ನ ಜಾನ್ ವೈಕ್ಲಿಫ್‌ನ ಜೊತೆ ಸಾಧ್ಯವಾದಷ್ಟೂ ಕಾಲ ಸ್ನೇಹದಿಂದಿದ್ದ. ಮತ್ತೊಂದೆಡೆ, ಹನ್ನೊಂದನೆಯ ಗ್ರೆಗರಿಯು ವೈಕ್ಲಿಫ್‌ನ ಉಪನ್ಯಾಸಗಳಲ್ಲಿನ ಹದಿನೆಂಟು ಪ್ರಮೇಯಗಳನ್ನು ಖಂಡಿಸಿದ, ಅವೆಲ್ಲ ಪಡುಅದ ಮಾರ್ಸಿಗ್ಲಿಯೋನಿಂದ ಎರವಲು ಪಡೆದವೆಂದು ಹೇಳಿದ. ವೈಕ್ಲಿಫ್‌ನನ್ನು ಬಿಷಪ್‌ರ ನ್ಯಾಯಮಂಡಳಿಯ ಮುಂದೆ ವಿಚಾರಣೆಗೆ ಹಾಜರಾಗಲು ಆಜ್ಞಾಪಿಸಲಾಯಿತು, ಆದರೆ ಮಹಾರಾಣಿಯೂ ಜನಸಂದಣಿಯೂ ಅವನನ್ನು ರಕ್ಷಿಸಿತು, ಅದೇ ವೇಳೆಗೆ ತನ್ನ ಅಧ್ಯಾಪಕರ ಮೇಲೆ ಪೋಪ್ ಅಧಿಕಾರ ಚಲಾಯಿಸುವಂತಿಲ್ಲ ಎಂದು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವು ಸಾರಿತು. (ಅ ದಿನಗಳಲ್ಲಿಯೂ, ಇಂಗ್ಲಿಷ್ ವಿಶ್ವವಿದ್ಯಾನಿಲಯಗಳು ಅಕೆಡೆಮಿಕ್ ಸ್ವಾತಂತ್ರ್ಯದ ರಕ್ಷಣೆ ಮಾಡುತ್ತಿದ್ದವು.)

ಈ ಮಧ್ಯೆ, ವೈಕ್ಲಿಫ್ ೧೩೭೮ ಮತ್ತು ೧೩೭೯ ರಲ್ಲಿ ಉದ್ಗ್ರಂಥಗಳ ರಚನೆಯನ್ನು ಮುಂದುವರಿಸಿದ; ರಾಜನು ದೇವರ ಪ್ರತಿನಿಧಿ (ವಿಕರ್), ಹೀಗಾಗಿ ಬಿಷಪ್‌ರು ಅವನಿಗೆ ಅಧೀನರಾದವರು ಎಂದವನು ವಾದಿಸಿದ. ಮಹಾ ಬಿರುಕು ಉಂಟಾದಾಗ,

ಅವನು ಮುಂಚೆಗಿಂತಲೂ ಇನ್ನೂ ಮುಂದೆ ಸಾಗಿ, ಪೋಪ್ ಅನ್ನು ಕ್ರಿಸ್ತವಿರೋಧಿಯೆಂದೂ, ಕಾನ್‌ಸ್ಟಾಂಟೈನ್‌ನ ದೇಣಿಗೆಯನ್ನು ಸ್ವೀಕರಿಸಿದುದು ಮುಂದಿನೆಲ್ಲ ಪೋಪ್‌ರನ್ನೂ ಮತಭ್ರಷ್ಟಗೊಳಿಸಿವೆಯೆಂದೂ ಸಾರಿದ. ಅವನು ಬೈಬಲ್‌ನ ಲ್ಯಾಟಿನ್ ಪಾಠ (ವಲ್ಗೇಟ್) ವನ್ನು ಇಂಗ್ಲಿಷ್‌ಗೆ ಭಾಷಾಂತರಿಸಿದ, ಮತಧರ್ಮೇತರರಾದ 'ಬಡವ ಪುರೋಹಿತರು' ಸ್ಥಾಪಿಸಿದ. (ಈ ಕೆಲಸದಿಂದಾಗಿ ಕೊನೆಗೆ ಅವನು ಕ್ರೈಸ್ತಭಿಕ್ಷುಗಳನ್ನು ಇರಿಸುಮುರಿಸಿಗೊಳಗಾಗಿಸಿದ.) ಅವನು 'ಬಡವ ಪುರೋಹಿತರು' ಅನ್ನು ಜಂಗಮ ಬೋಧಕರನ್ನಾಗಿ ಮಾಡಿಕೊಂಡ, ಅವರ ಬೋಧನೆ ಬಡವರನ್ನುದ್ದೇಶಿಸಿದುದಾಗಿತ್ತು. ಕೊನೆಗೆ, ಪೌರೋಹಿತ್ಯಾಧಿಕಾರವನ್ನು (ಸಾಸೆರ್‌ಡೋಟಲ್) ಟೀಕಿಸಿದ ಅವನು ಸತ್ವಪರಿವರ್ತನವಾದವನ್ನು ಅಲ್ಲಗಳೆಯುವಂತಾಯಿತು. ಅವನು ಅದನ್ನು ವಂಚನೆಯ ಮತ್ತು ಪಾಷಂಡಿತನದ ದೋಷವೆಂದು ಕರೆದ. ಈ ಹಂತದಲ್ಲಿ, ಗಾಂಟ್‌ನ ಜಾನ್ ಅವನನ್ನು ಸುಮ್ಮನಿರುವಂತೆ ಆಜ್ಞಾಪಿಸಿದ.

ವ್ಯಾಟ್ ಟೈಲರ್ ನೇತೃತ್ವದಲ್ಲಿ ೧೩೮೧ ರಲ್ಲಿ ನಡೆದ ರೈತ ಬಂಡಾಯವು ವೈಕ್ಲಿಫ್‌ನ ಪರಿಸ್ಥಿತಿಯನ್ನು ಮತ್ತಷ್ಟು ಕ್ಲಿಷ್ಟಗೊಳಿಸಿತು. ಅವನು ಅದನ್ನು ಸಕ್ರಿಯವಾಗಿ ಬೆಂಬಲಿಸಿದ ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲವಾದರೂ, ಅಂತಹ ಪರಿಸ್ಥಿತಿಗಳಲ್ಲಿ, ಲೂಥರ್‌ಗೆ ಭಿನ್ನವಾಗಿ, ಅದನ್ನು ಖಂಡಿಸುವುದರಿಂದ ದೂರ ಉಳಿದ. ಅದರ ನಾಯಕರಲ್ಲೊಬ್ಬನಾಗಿದ್ದ ಫ್ರಾಕ್ ಇಲ್ಲದ ಮತಧರ್ಮೇತರ ಪುರೋಹಿತನಾದ ಜಾನ್ ಬಾಲ್ ವೈಕ್ಲಿಫ್‌ನನ್ನು ಹೊಗಳಿ ಅವನನ್ನು ಪೇಚಿಗೆ ಸಿಲುಕಿಸಿದ. ಆದರೆ ಅವನನ್ನು, ವೈಕ್ಲಿಫ್ ಇನ್ನೂ ಸಂಪ್ರದಾಯನಿಷ್ಠನಾಗಿಯೇ ಇದ್ದ, ೧೩೬೬ ರಲ್ಲಿ ಬಹಿಷ್ಕಾರಗೊಳಿಸಿದ್ದರಿಂದಾಗಿ, ಅವನು ಈ ತನ್ನ ಅಭಿಪ್ರಾಯವನ್ನು ಸ್ವತಂತ್ರವಾಗಿಯೇ ರೂಪುಗೊಳಿಸಿಕೊಂಡಿದ್ದಿರಬೇಕು. ವೈಕ್ಲಿಫ್‌ನ ಸಾಮ್ಯವಾದೀಯ (ಕಮ್ಯುನಿಸ್ಟಿಕ್) ಅಭಿಪ್ರಾಯಗಳು, 'ಬಡವ ಪುರೋಹಿತರು' ಅದನ್ನು ಪ್ರಚಾರಗೊಳಿಸಿದ್ದುದು ಸಂಶಯಾತೀತವಾದರೂ, ಅವನು ಅವುಗಳನ್ನು ಲ್ಯಾಟಿನ್‌ನಲ್ಲಿ ಮಂಡಿಸಿದ್ದ, ಹೀಗಾಗಿ ಅವು ನೇರವಾಗಿ ರೈತರಿಗೆ ತಲುಪುವಂತಹುದಾಗಿರಲಿಲ್ಲ.

ವೈಕ್ಲಿಫ್ ತನ್ನ ಅಭಿಪ್ರಾಯಗಳು ಮತ್ತು ಪ್ರಜಾಪ್ರಭುತ್ವಾತ್ಮಕ ಕಾರ್ಯಗಳಿಗಾಗಿ ಅನುಭವಿಸಿದ್ದಕ್ಕಿಂತ ಹೆಚ್ಚಿನದಕ್ಕೆ ಸಿಲುಕಿಕೊಳ್ಳಲಿಲ್ಲ ಎಂಬುದು ಆಶ್ಚರ್ಯಕರವೇ ಸರಿ. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವು ಸಾಧ್ಯವಾದ ಮಟ್ಟಗೂ ಅವನನ್ನು ಬಿಷಪ್‌ರಿಂದ ರಕ್ಷಿಸಿತು. ಸಂಸತ್ತಿನ ಮೇಲ್ಮನೆಯು (ಹೌಸ್ ಆಫ್ ಲಾರ್ಡ್ಸ್) ಜಂಗಮ ಧರ್ಮಬೋಧಕರ ಬಗ್ಗೆ ಖಂಡಿಸಿದಾಗ, ಪ್ರತಿನಿಧಿ ಸಭೆಯು (ಹೌಸ್ ಆಫ್ ಕಾಮನ್ಸ್) ಅದನ್ನೊಪ್ಪಲು ನಿರಾಕರಿಸಿತು. ಅವನು ದೀರ್ಘ ಕಾಲ ಬದುಕಿದ್ದರೆ ಅವನಿಗೆ ಕಷ್ಟಗಳು ಕೂಡಿಕೊಂಡು ಬರುತ್ತಿದ್ದುದರಲ್ಲಿ ಸಂಶಯವಿಲ್ಲ; ಆದರೆ ೧೩೮೪

ರಲ್ಲಿ ಅವನು ಸತ್ತಾಗ ಅವನನ್ನು ಔಪಚಾರಿಕವಾಗಿ ಖಂಡನೆಗೆ ಇನ್ನೂ ಗುರಿಪಡಿಸಿರಲಿಲ್ಲ. ಅವನನ್ನು ಅವನು ಸತ್ತ ಲುಟೆರ್‌ವರ್ತ್‌ನಲ್ಲಿಯೇ ಸಮಾಧಿ ಮಾಡಲಾಯಿತು, ಕಾನಸ್ಟೆನ್ಸ್‌ನ ಧರ್ಮಪರಿಷತ್ತು ಅಗೆದು ತೆಗೆದು ಸುಡಬೇಕೆಂದು ನಿರ್ಣಯಿಸುವವರೆಗೂ ಅವನ ಮೂಳೆಗಳು ಅಲ್ಲಿಯೇ ಶಾಂತಿಯನ್ನನುಭವಿಸಿದವು.

ಇಂಗ್ಲಂಡ್‌ನ ಅವನ ಅನುಯಾಯಿಗಳಾದ ಲೊಲ್ಲಾರ್ಡ್‌ರಿಗೆ ತೀವ್ರ ಚಿತ್ರಹಿಂಸೆಯನ್ನು ನೀಡಿದ್ದಲ್ಲದೆ ವಸ್ತುತಃ ಮೂಲೋತ್ಪಾಟನೆ ಮಾಡಲಾಯಿತು. ಆದರೆ ಎರಡನೆಯ ರಿಚರ್ಡ್‌ನ ಹೆಂಡತಿಯು ಒಬ್ಬ ಬೊಹೆಮಿಯನ್ ಆಗಿದ್ದುದರಿಂದ, ಅವನ ಸಿದ್ಧಾಂತಗಳು ಬೊಹೆಮಿಯದಲ್ಲಿ ಗೊತ್ತಾದವು, ಅಲ್ಲಿ ಹೂಸ್ ಅವನ ಶಿಷ್ಯನಾಗಿದ್ದ, ಮತ್ತು ಬೊಹೆಮಿಯದಲ್ಲಿ, ಚಿತ್ರಹಿಂಸೆ ನೀಡಿದರೂ, ಮತಧರ್ಮಸುಧಾರಣೆಯವರೆಗೂ ಅವರು ಉಳಿದಿದ್ದರು. ಇಂಗ್ಲಂಡ್‌ನಲ್ಲಿ ಅವರನ್ನು ಭೂಗತರನ್ನಾಗಿಸಿದ್ದರೂ ಪೋಪ್‌ವಿರುದ್ಧದ ಬಂಡಾಯವು ಜನರ ಮನಸ್ಸಿನಲ್ಲಿ ಉಳಿದು, ಪ್ರಾಟೆಸ್ಟಂಟ್‌ವಾದಕ್ಕೆ ಭೂಮಿಕೆಯನ್ನು ಸಿದ್ಧಪಡಿಸಿತು.

ಹದಿನೈದನೆಯ ಶತಮಾನದಲ್ಲಿ, ಪೋಪ್ ಅಧಿಕಾರವು ಕುಂಠಿತಗೊಳ್ಳಲು ಬೇರೆ ಅನೇಕ ಕಾರಣಗಳು ಸೇರಿಕೊಂಡು ಕ್ಷಿಪ್ರ ರಾಜಕೀಯ ಹಾಗೂ ಸಾಂಸ್ಕೃತಿಕ ಬದಲಾವಣೆಗಳನ್ನು ತಂದುವು. ಸಿಡಿಮದ್ದು ಊಳಿಗಮಾನ್ಯ ಶ್ರೀಮಂತಪ್ರಭುಗಳನ್ನು ಕುಂಠಿತಗೊಳಿಸಿ ಕೇಂದ್ರ ಸರ್ಕಾರಗಳನ್ನು ಬಲಿಷ್ಠಗೊಳಿಸಿತು. ಫ್ರಾನ್ಸ್ ಮತ್ತು ಇಂಗ್ಲಂಡ್‌ಗಳಲ್ಲಿ ಹನ್ನೊಂದನೆಯ ಲೂಯಿ ಮತ್ತು ನಾಲ್ಕನೆಯ ಎಡ್ವರ್ಡ್ ಶ್ರೀಮಂತ ಮಧ್ಯಮವರ್ಗಗಳೊಡನೆ ಸೇರಿಕೊಂಡು ಶ್ರೀಮಂತಪ್ರಭುತ್ವದ ಅನಾಯಕತ್ವವನ್ನು ಅಡಗಿಸಿದರು. ಈ ಶತಮಾನದ ಕೊನೆಯ ವರ್ಷಗಳವರೆಗೆ ಇಟಲಿಯು ಉತ್ತರದ ಸೈನ್ಯಗಳಿಂದ ಸಾಕಷ್ಟು ಮಟ್ಟಿಗೆ ಸ್ವತಂತ್ರವಾಗಿ, ಹಣ ಮತ್ತು ಸಂಸ್ಕೃತಿಗಳ ವಿಷಯದಲ್ಲಿ ಬಹು ಬೇಗ ಅಭಿವೃದ್ಧಿ ಹೊಂದಿತು. ಗ್ರೀಸ್ ಮತ್ತು ರೋಮ್‌ಗಳನ್ನು ಮೆಚ್ಚಿಕೊಂಡ ಹಾಗೂ ಮಧ್ಯಯುಗಗಳನ್ನು ತಿರಸ್ಕರಿಸಿದ್ದ ಹೊಸ ಸಂಸ್ಕೃತಿಯು ಮೂಲತಃ ಕ್ರೈಸ್ತೇತರವಾದುದು. ಹಳೆಯ ಮಾದರಿಗಳಿಗೆ ವಾಸ್ತುಶಿಲ್ಪ ಮತ್ತು ಸಾಹಿತ್ಯ ಶೈಲಿಗಳನ್ನು ಅಳವಡಿಸಿಕೊಳ್ಳಲಾಯಿತು. ಪ್ರಾಚೀನತೆಯ ಕೊನೆಯ ಕುರುಹಾದ ಕಾನ್‌ಸ್ಟಾಂಟಿನೋಪಲ್ ಅನ್ನು ಟರ್ಕ್‌ರು ವಶಪಡಿಸಿಕೊಂಡರು, ಇಟಲಿಯ ಗ್ರೀಕ್ ನಿರಾಶ್ರಿತರನ್ನು ಮಾನವೀಯತಾವಾದಿ ಜನರು ಸ್ವಾಗತಿಸಿದರು. ವಾಸ್ಕೋ ಡ ಗಾಮ ಮತ್ತು ಕೊಲಂಬಸ್ ಜಗತ್ತನ್ನು ವಿಸ್ತರಿಸಿದರೆ, ಕೊಪರ್ನಿಕಸ್ ಸ್ವರ್ಗಗಳನ್ನು ವಿಸ್ತರಿಸಿದ. ಕಾನ್‌ಸ್ಟಾಂಟೈನ್ ಕೊಡುಗೆಯನ್ನು ಕಟ್ಟುಕತೆಯೆಂದು ತಿರಸ್ಕರಿಸಿ, ಬದಲಿಗೆ ಪ್ರೌಢ ವಿಡಂಬನೆಯು ತುಂಬಿಕೊಂಡಿತು. ಬೈಜ಼ಾಂಟೈನ್‌ರ ನೆರವಿನಿಂದ, ನವಪ್ಲೇಟೋವಾದ ಮತ್ತು ಆಗಸ್ಟೈನಿಯನ್ ಆವೃತ್ತಿಗಳ ಜೊತೆಗೆ ಪ್ಲೇಟೋ ನೇರವಾಗಿ ಪರಿಚಯಕ್ಕೆ ಬಂದ. ಚಂದ್ರನಡಿಯ ಈ ಗೋಲವು ಕಣ್ಣೀರ ಕಣಿವೆಯಾಗಿ ಹಾಗೂ

ಮುಂದಿನ ಜಗತ್ತಿಗೆ ಹೋಗುವ ಯಾತನಾಮಯ ಯಾತ್ರೆ ಮಾಡುವ ಜಾಗವಾಗಿಯೂ ಉಳಿಯಲಿಲ್ಲ. ಅದರ ಬದಲಿಗೆ, ಅದು ಮತಧರ್ಮೇತರ ಸಂತೋಷಗಳ, ಕೀರ್ತಿಯ ಮತ್ತು ಚೆಲುವು ಹಾಗೂ ಸಾಹಸಗಳ ಕ್ಷೇತ್ರವಾಯಿತು. ಕಲೆ ಮತ್ತು ಕಾವ್ಯಗಳ ವಿಜೃಂಭಣೆಯಲ್ಲಿ ಹಿಂದಿನ ವಿರಕ್ತಿಯ ದೀರ್ಘ ಶತಮಾನಗಳೆಲ್ಲ ಮರೆತುಹೋದುವು. ಇಟಲಿಯಲ್ಲಿ ಕೂಡ, ಮಧ್ಯಯುಗಗಳು ಹೋರಾಟವಿಲ್ಲದೆ ಕೊನೆಗಾಣಲಿಲ್ಲವೆಂಬುದು ನಿಜವೇ; ಸವೋನರೋಲ ಮತ್ತು ಲಿಯನಾರ್ಡೋ ಒಂದೇ ವರ್ಷದಲ್ಲಿ ಹುಟ್ಟಿದರು. ಆದರೆ ಮುಖ್ಯವಾಗಿ, ಹಳೆಯ ಭಯಗಳು ಭಯಾನಕವಾಗಿ ಉಳಿಯಲಿಲ್ಲ, ಮತ್ತು ಸತ್ವದ ಹೊಸ ಬಿಡುಗಡೆಯು ಮಾದಕವೆನಿಸಿತು. ಈ ಮಾದಕತೆಯು ಹೆಚ್ಚು ಕಾಲ ಉಳಿಯಲಾಗಲಿಲ್ಲವಾದರೂ, ಅದು ಆ ಕ್ಷಣಕ್ಕೆ ಭಯವನ್ನು ಮುಚ್ಚಿಹಾಕಿತು. ಈ ಸಂತೋಷದಾಯಕ ಬಿಡುಗಡೆಯಲ್ಲಿ ಆಧುನಿಕ ಜಗತ್ತು ಹುಟ್ಟಿತು.

ಸಂಪುಟ ೨

ಆಧುನಿಕ ತತ್ವಜ್ಞಾನ

ಭಾಗ ೧

ನವೋದಯದಿಂದ ಹ್ಯೂಮ್‌ವರೆಗೆ

೧
ಸಾಮಾನ್ಯ ಲಕ್ಷಣಗಳು

'ಆಧುನಿಕ' ಎಂದು ಕರೆಯಲಾಗುವ ಇತಿಹಾಸದ ಅವಧಿಯ ಮನೋಭಾವವು ಮಧ್ಯಯುಗಕ್ಕಿಂತ ಅನೇಕ ವಿಧಗಳಲ್ಲಿ ಭಿನ್ನವಾದುದು. ಇವುಗಳಲ್ಲಿ, ಎರಡು ಮುಖ್ಯವಾದವುಗಳೆಂದರೆ: ಕ್ಷೀಣಿಸಿದ ಚರ್ಚ್ ಪ್ರಾಮಾಣ್ಯ, ಮತ್ತು ವೃದ್ಧಿಗೊಂಡ ವಿಜ್ಞಾನ ಪ್ರಾಮಾಣ್ಯ. ಈ ಎರಡಕ್ಕೆ ಇತರವೂ ಸಂಬಂಧಿಸಿವೆ. ಆಧುನಿಕ ಕಾಲದ ಸಂಸ್ಕೃತಿಯು ಮತಧರ್ಮಭೋಧಕರದಕ್ಕಿಂತ ಸಾಮಾನ್ಯ ನೆಲೆಯದು. ಸಂಸ್ಕೃತಿಯನ್ನು ನಿಯಂತ್ರಿಸುವ ವಿಷಯದಲ್ಲಿ ಸರ್ಕಾರಗಳು ಚರ್ಚ್‌ನ ಸ್ಥಾನವನ್ನು ಹೆಚ್ಚು ಹೆಚ್ಚಾಗಿ ಆಕ್ರಮಿಸಿಕೊಂಡವು. ರಾಷ್ಟ್ರಗಳ ಆಡಳಿತವು ಮೊದಲಿಗೆ ರಾಜರುಗಳ ಕೈಲಿತ್ತು; ಆನಂತರ ಪ್ರಾಚೀನ ಗ್ರೀಸ್‌ನಲ್ಲಿದ್ದಂತೆ, ಕ್ರಮೇಣ ರಾಜರ ಬದಲಿಗೆ ಪ್ರಜಾಪ್ರಭುತ್ವಗಳು ನಿರಂಕುಶಪ್ರಭುಗಳ ಕೈಗೆ ಬಂತು. ರಾಷ್ಟ್ರೀಯ ಸರ್ಕಾರದ ಅಧಿಕಾರ ಮತ್ತು ಅದು ನೆರವೇರಿಸುವ ಕಾರ್ಯಗಳು ಈ ಅವಧಿಯುದ್ದಕ್ಕೂ ಒಂದೇ ಸಮನೆ (ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ) ಬೆಳೆಯಿತು; ಆದರೆ ಬಹುತೇಕ ಸನ್ನಿವೇಶಗಳಲ್ಲಿ ಸರ್ಕಾರವು ತತ್ವಜ್ಞಾನಿಗಳ ಅಭಿಪ್ರಾಯದ ಮೇಲೆ, ಮಧ್ಯಯುಗಗಳಲ್ಲಿ ಚರ್ಚ್ ಹೊಂದಿದ್ದುದಕ್ಕಿಂತ, ಕಡಿಮೆ ಪ್ರಭಾವವನ್ನು ಹೊಂದಿತ್ತು. ಆಲ್ಪ್ಸ್‌ನ ಉತ್ತರಭಾಗದಲ್ಲಿ ಊಳಿಗಮಾನ್ಯ ಶ್ರೀಮಂತಪ್ರಭುತ್ವವು ಹದಿನೈದನೆಯ ಶತಮಾನದವರೆಗೂ ಕೇಂದ್ರ ಸರ್ಕಾರಗಳ ವಿರುದ್ಧ ಹೊಂದಿದ್ದ ಪ್ರಾಮುಖ್ಯದಲ್ಲಿ ಮೊದಲಿಗೆ ರಾಜಕೀಯ ಆನಂತರ ಆರ್ಥಿಕ ಸ್ವಾತಂತ್ರ್ಯವನ್ನು ಕಳೆದುಕೊಂಡವು. ಅದರ ಜಾಗದಲ್ಲಿ ಶ್ರೀಮಂತ ವ್ಯಾಪಾರಿಗಳ ಜೊತೆಗೂಡಿದ ರಾಜ ಬಂದ; ಈ ಎರಡೂ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ರೀತಿಯ ಪ್ರಮಾಣದಲ್ಲಿ ಅಧಿಕಾರವನ್ನು ಹಂಚಿಕೊಂಡಿದ್ದವು. ಶ್ರೀಮಂತ ವ್ಯಾಪಾರಿಗಳು ಶ್ರೀಮಂತಪ್ರಭುತ್ವದಲ್ಲಿ ಲೀನವಾಗುವ ಒಂದು ಪ್ರವೃತ್ತಿಯಿದೆ. ಅಮೆರಿಕ ಮತ್ತು ಫ್ರೆಂಚ್ ಕ್ರಾಂತಿಗಳ ಕಾಲದಿಂದಲೂ, ಆಧುನಿಕ ಅರ್ಥದಲ್ಲಿ ಪ್ರಜಾಪ್ರಭುತ್ವವು ಪ್ರಮುಖ ರಾಜಕೀಯ ಶಕ್ತಿಯಾಗಿ ಹೊಮ್ಮಿತು. ಖಾಸಗಿ ಆಸ್ತಿಯ ಆಧಾರದ ಮೇಲೆ ಪ್ರಜಾಪ್ರಭುತ್ವದ ವಿರುದ್ಧವಾಗಿ ಸಮಾಜವಾದವು ಸರ್ಕಾರದ ಅಧಿಕಾರ ಚುಕ್ಕಾಣಿಯನ್ನು

ಮೊದಲ ಬಾರಿಗೆ ೧೬೮೮ ರಲ್ಲಿ ಹಿಡಿಯಿತು. ಆದರೆ ಈ ಬಗೆಯ ಸರ್ಕಾರವು, ಬೆಳೆದುದೇ ಆದರೆ, ತನ್ನೊಂದಿಗೆ ಹೊಸ ಬಗೆಯ ಸಂಸ್ಕೃತಿಯನ್ನು ತರುತ್ತದೆ; ನಾವು ಪರಿಗಣಿಸುತ್ತಿರುವ ಸಂಸ್ಕೃತಿಯು ಮುಖ್ಯವಾಗಿ 'ಉದಾರ'ವಾದುದು, ಅಂದರೆ ವಾಣಿಜ್ಯದೊಂದಿಗೆ ಸಹಜವಾಗಿ ಸಂಬಂಧ ಹೊಂದಿರುವ ಬಗೆಯದು. ಇದಕ್ಕೆ ಮುಖ್ಯವಾದ ಅಪವಾದಗಳೂ ಇವೆ, ಅದರಲ್ಲಿಯೂ ಜರ್ಮನಿಯಲ್ಲಿ; ಫಿಷ್ತೆ ಮತ್ತು ಹೆಗೆಲ್, ಎರಡು ಉದಾಹರಣೆಗಳನ್ನು ತೆಗೆದುಕೊಳ್ಳುವುದಾದರೆ, ವಾಣಿಜ್ಯದಿಂದ ಸಂಪೂರ್ಣ ಹೊರತಾದ ಮನೋದೃಷ್ಟಿ ಹೊಂದಿದವರು. ಆದರೆ ಅಂತಹವು ಅವರ ಕಾಲದ ಮಾದರಿಗಳೇನಲ್ಲ.

ಆಧುನಿಕ ಯುಗದ ನೇತ್ಯಾತ್ಮಕ ಲಕ್ಷಣವಾದ ಮತಧರ್ಮಬೋಧಕ ಪ್ರಾಮಾಣ್ಯದ ತಿರಸ್ಕಾರವು, ಅದರ ಧನಾತ್ಮಕ ಲಕ್ಷಣವಾದ ವೈಜ್ಞಾನಿಕ ಪ್ರಾಮಾಣ್ಯವನ್ನು ಸ್ವೀಕರಿಸುವುದಕ್ಕೆ ಮೊದಲೇ ಆರಂಭವಾಯಿತು. ಇಟಲಿಯ ನವೋದಯದಲ್ಲಿ ವಿಜ್ಞಾನವು ವಹಿಸಿದ ಪಾತ್ರ ನಗಣ್ಯವಾದುದು; ಚರ್ಚ್‌ನ ವಿರೋಧವು ಜನರ ಮನಸ್ಸಿನಲ್ಲಿ ಪ್ರಾಚೀನತೆಯೊಂದಿಗೆ ಸಂಬಂಧವನ್ನು ಕಲ್ಪಿಸಿಕೊಂಡಿತ್ತು, ಅದು ಮತ್ತಷ್ಟು ಪ್ರಾಚೀನವಾದುದರ ಕಡೆಗೆ ನೋಡಿತು, ಪ್ರಾಚೀನ ಚರ್ಚ್ ಮತ್ತು ಮಧ್ಯಯುಗಗಳಿಗಿಂತ ಹಿಂದಿನದರತ್ತ ಅದರ ನೋಟ ಹರಿಯಿತು. ವಿಜ್ಞಾನದ ಮೊದಲ ಸ್ಫೋಟವಾದುದು ಕೊಪರ್ನಿಕಸ್‌ನ ಸಿದ್ಧಾಂತವು ೧೫೪೩ ರಲ್ಲಿ ಪ್ರಕಟವಾದಾಗ; ಆದರೆ ಆ ಸಿದ್ಧಾಂತವನ್ನು ಸ್ವೀಕರಿಸಿ ಕೆಪ್ಲರ್ ಮತ್ತು ಗೆಲಿಲಿಯೋ ಹದಿನೇಳನೆಯ ಶತಮಾನದಲ್ಲಿ ಪರಿಷ್ಕಾರಗೊಳಿಸುವವರೆಗೂ ಅದು ಪ್ರಭಾವಶಾಲಿಯಾಗಲಿಲ್ಲ. ಆನಂತರ ವಿಜ್ಞಾನ ಮತ್ತು ಶಾಸ್ತ್ರಪ್ರಾಮಾಣ್ಯಗಳ ಸುದೀರ್ಘ ಸಂಘರ್ಷ ಆರಂಭವಾಯಿತು, ಸಂಪ್ರದಾಯವಾದಿಗಳು ಹೊಸ ಜ್ಞಾನದ ವಿರೋಧದ ಹೋರಾಟದಲ್ಲಿ ಸೋಲು ಅನುಭವಿಸಿದರು.

ಆಧುನಿಕ ಯುಗದ ಬಹುತೇಕ ತತ್ತ್ವಜ್ಞಾನಿಗಳು ಒಪ್ಪಿರುವ ವಿಜ್ಞಾನ ಪ್ರಾಮಾಣ್ಯವು ಚರ್ಚ್ ಪ್ರಾಮಾಣ್ಯಕ್ಕಿಂತ ತುಂಬ ಭಿನ್ನವಾದುದು; ಅದು ಬೌದ್ಧಿಕವಾದುದೇ ಹೊರತು ಆಡಳಿತಾತ್ಮಕವಾದುದಲ್ಲ. ಅದನ್ನು ತಿರಸ್ಕರಿಸಿದರೆ ಯಾವ ಜುಲ್ಮಾನೆಯೂ ಬೀಳುತ್ತಿರಲಿಲ್ಲ; ಅದನ್ನು ಒಪ್ಪಿಕೊಂಡವರ ಮೇಲೆ ಯಾವುದೇ ವಾದವು ಪ್ರಭಾವ ಬೀರುತ್ತಿರಲಿಲ್ಲ. ಅದು ಉಳಿದುದು ತನ್ನ ಆಂತರಿಕ ವೈಚಾರಿಕ ಗುಣದಿಂದ. ಮೇಲಾಗಿ, ಅದು ಅಖಂಡವಲ್ಲದ ಆಂಶಿಕ ಪ್ರಾಮಾಣ್ಯ; ಕ್ಯಾಥೋಲಿಕ್ ಶಾಸ್ತ್ರಪ್ರಾಮಾಣ್ಯದಂತೆ ಅದು, ಮಾನವ ನೈತಿಕತೆ, ಮಾನವ ನಿರೀಕ್ಷೆಗಳು, ಮತ್ತು ವಿಶ್ವದ ಭೂತ ಮತ್ತು ಭವಿಷ್ಯತ್ತಿನ ಇತಿಹಾಸವನ್ನೊಳಗೊಂಡ, ಸಂಪೂರ್ಣ ವ್ಯವಸ್ಥೆಯನ್ನು ಹೇರುವುದಿಲ್ಲ. ಆಯಾ ಕಾಲಕ್ಕೆ ವೈಜ್ಞಾನಿಕವಾಗಿ ರುಜುವಾತುಗೊಂಡ, ಅಜ್ಞಾನಸಾಗರದಲ್ಲಿನ ಸಣ್ಣ ದ್ವೀಪದಂತಹ ವಿಷಯಗಳನ್ನಷ್ಟೇ ಅದು ಸತ್ಯವೆಂದು ಸಾರುವುದು.

ಮತಧರ್ಮಬೋಧಕ ಪ್ರಾಮಾಣ್ಯಕ್ಕಿಂತ ಭಿನ್ನವಾದ ಮತ್ತೊಂದು ವ್ಯತ್ಯಾಸವೂ ಇದೆ, ಅದು ಸಾರುವ ಸತ್ಯಗಳು ಸಂಪೂರ್ಣವಾಗಿ ಖಚಿತವಾದ ಹಾಗೂ ಸದಾ ಕಾಲಕ್ಕೂ ವ್ಯತ್ಯಾಸವಾಗದ ತೀರ್ಮಾನಗಳನ್ನು ಮಾತ್ರ: ವೈಜ್ಞಾನಿಕ ಸತ್ಯಗಳು ತಾತ್ಕಾಲಿಕವೆನಿಸಿದವು, ಸಂಭವನೀಯತೆಯ ಆಧಾರದ ಮೇಲೆ. ಹೀಗಾಗಿ ಅವು ಪರಿಷ್ಕಾರಗಳಿಗೊಳಗಾಗಬಹುದಾದವು. ಇದರಿಂದಾಗಿ ಮಧ್ಯಯುಗದ ಮತತತ್ವಾತ್ಮಕ ಮನೋಭಾವಕ್ಕಿಂತ ತುಂಬ ಭಿನ್ನವಾದ ಮನೋದೃಷ್ಟಿಯನ್ನಿದು ರೂಪಿಸುತ್ತದೆ.

ಇದುವರೆಗೆ ನಾನು ಹೇಳಿದುದು ಸೈದ್ಧಾಂತಿಕ ವಿಜ್ಞಾನದ ಬಗ್ಗೆ, ಅದು ಜಗತ್ತನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ. ಜಗತ್ತನ್ನು ಬದಲಾಯಿಸುವ ಪ್ರಯತ್ನವಾದ ಆನ್ವಯಿಕ ವಿಜ್ಞಾನವು ಮೊದಲಿನಿಂದಲೂ ಮುಖ್ಯವಾದುದಾಗಿದೆ, ನಿರಂತರವಾಗಿ ಅದರ ಪ್ರಾಮುಖ್ಯವೂ ಹೆಚ್ಚುತ್ತಿದೆ, ಎಷ್ಟೆಂದರೆ ಮನುಷ್ಯರ ಆಲೋಚನೆಗಳಿಂದ ಸೈದ್ಧಾಂತಿಕ ವಿಜ್ಞಾನವನ್ನು ಹೊರದೂಡುವಷ್ಟು ಮಟ್ಟಿಗೆ. ವಿಜ್ಞಾನದ ವ್ಯಾವಹಾರಿಕ ಪ್ರಾಮುಖ್ಯವನ್ನು ಮೊದಲು ಗಮನಿಸಿದ್ದು ಯುದ್ಧಕ್ಕೆ ಸಂಬಂಧಿಸಿದಂತೆ; ಗೆಲಿಲಿಯೋ ಮತ್ತು ಲಿಯೋನಾರ್ಡೋ ಸರ್ಕಾರದ ನೌಕರಿಯನ್ನು ಪಡೆದದ್ದು ಫಿರಂಗಿಗಳನ್ನೂ ದುರ್ಗನಿರ್ಮಾಣ ಕಲೆಯನ್ನು ಉತ್ತಮಪಡಿಸಬಲ್ಲೆವೆಂದು ಹೇಳಿಕೊಂಡದ್ದರಿಂದಾಗಿ. ಅವರ ಕಾಲದಿಂದೀಚೆಗೆ, ಯುದ್ಧದಲ್ಲಿನ ವಿಜ್ಞಾನಿಗಳ ಪಾತ್ರ ನಿರಂತರವಾಗಿ ಹೆಚ್ಚಾಗುತ್ತಲೇ ಬಂದಿದೆ. ಯಂತ್ರನಿರ್ಮಾಣ, ಅವುಗಳನ್ನು ಜನರು ಬಳಸುವುದು, ಮೊದಲು ಆವಿ, ಆನಂತರ ವಿದ್ಯುತ್ತು ಆನಂತರ ಬಂದವು ಇವುಗಳನ್ನು ಅಭಿವೃದ್ಧಿಪಡಿಸುವಲ್ಲಿನ ಅವರ ಪಾತ್ರವು ಹತ್ತೊಂಬತ್ತನೆಯ ಶತಮಾನದ ಕೊನೆಯವರೆಗೂ ರಾಜಕೀಯ ಪರಿಣಾಮಗಳನ್ನೇನೂ ಮಾಡಲಿಲ್ಲ. ವಿಜ್ಞಾನದ ವಿಷಯಕ್ಕೆ ಕಾರಣ ಅದರ ನಿತ್ಯಬಳಕೆಯ ಉಪಯುಕ್ತತೆ. ಈ ಮುಖವನ್ನು ಸಿದ್ಧಾಂತದಿಂದ ಬೇರ್ಪಡಿಸಲು ಪ್ರಯತ್ನಗಳು ನಡೆಯುತ್ತಿವೆ, ಹೀಗಾಗಿ ವಿಜ್ಞಾನವು ಹೆಚ್ಚು ಹೆಚ್ಚಾಗಿ ತಂತ್ರಜ್ಞಾನವಾಗುತ್ತ, ಜಗತ್ತಿನ ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಸಿದ್ಧಾಂತವಾಗುವುದು ಕಡಿಮೆಯಾಗುತ್ತಿದೆ. ತತ್ವಜ್ಞಾನದಲ್ಲಿ ಈ ಅಂಶವು ಒಳಹೊಗುತ್ತಿರುವುದು ಇತ್ತೀಚೆಗಷ್ಟೆ.

ಚರ್ಚ್ ಪ್ರಾಮಾಣ್ಯದಿಂದ ಆದ ಬಿಡುಗಡೆಯಿಂದಾಗಿ ವೈಯಕ್ತಿಕತೆ ಬೆಳೆಯುವಂತಾಯಿತು, ಅನಾಯಕತ್ವದವರೆಗೂ. ಬೌದ್ಧಿಕ, ನೈತಿಕ ಹಾಗೂ ರಾಜಕೀಯ ಶಿಸ್ತುಗಳು, ಸೂಕ್ಷ್ಮತಾರ್ಕಿಕ ತತ್ವಜ್ಞಾನ ಮತ್ತು ಮತಧರ್ಮಬೋಧಕ ಆಡಳಿತಗಳ ಜೊತೆಗೆ ನವೋದಯದ ಜನರ ಮನಸ್ಸಿನಲ್ಲಿ ಸೇರಿತ್ತು. ಮತಧರ್ಮಶಾಸ್ತ್ರಜ್ಞರ ಬಗೆಗಿನ ಆರಿಸ್ಟಾಟಲ್‌ವಾದದ ತರ್ಕವು ಸಂಕುಚಿತವಾದುದಾದರೂ ಸ್ವಲ್ಪ ಮಟ್ಟಿಗಿನ ನಿಖರತೆಯ ಕಲಿಕೆಯನ್ನು ಒಳಗೊಂಡಿತ್ತು. ತರ್ಕಮಾರ್ಗವು ಅನಾಕರ್ಷಕವೆನಿಸಿದಾಗ, ಮೊದಲಿಗೆ ಅದಕ್ಕಿಂತ ಉತ್ತಮವಾದುದೇನೂ ಬರಲಿಲ್ಲ, ಬಂದುದು ಪ್ರಾಚೀನ

ಮಾದರಿಗಳ ಸಾರಸಂಗಹ್ರದ ಅನುಕರಣೆ. ಹದಿನೇಳನೆಯ ಶತಮಾನದವರೆಗೂ, ತತ್ವಜ್ಞಾನದಲ್ಲಿ ಗಣನೀಯವಾದುದೇನೂ ಇರಲಿಲ್ಲ. ಹದಿನೈದನೆಯ ಶತಮಾನದ ಇಟಲಿಯು ನೈತಿಕ ಹಾಗೂ ರಾಜಕೀಯ ಅನಾಯಕತ್ವವು ಗಾಬರಿಗೊಳಿಸುವಂತಹುದಾಗಿ, ಮೆಕಿಯವೆಲ್ಲಿಯ ಸಿದ್ಧಾಂತಗಳಿಗೆ ಎಡೆಮಾಡಿಕೊಟ್ಟಿತು. ಅದೇ ಹೊತ್ತಿಗೆ, ಮಾನಸಿಕ ಸಂಕೋಲೆಗಳಿಂದ ಬಿಡುಗಡೆಯು ಕಲೆ ಮತ್ತು ಸಾಹಿತ್ಯಗಳಲ್ಲಿ ಆಶ್ಚರ್ಯಕರ ಪ್ರದರ್ಶನಕ್ಕೆ ಕಾರಣವಾಯಿತು. ಆದರೆ ಅಂಥ ಸಮಾಜವು ಅಸ್ಥಿರ. ಮತಧರ್ಮಸುಧಾರಣೆ ಮತ್ತು ಪ್ರತಿಸುಧಾರಣೆಗಳು ಇಟಲಿಯು ಸ್ಪೈಯಿನ್‌ಗೆ ಅಧೀನವಾದುದರ ಜೊತೆ ಸೇರಿ ಇಟಲಿಯ ನವೋದಯದ ಒಳಿತು ಮತ್ತು ಕೆಡುಕುಗಳೆರಡನ್ನೂ ಸ್ಥಗಿತಗೊಳಿಸಿದವು. ಚಳವಳಿಯು ಆಲ್ಪ್ಸ್‌ನ ಉತ್ತರಕ್ಕೆ ಹರಡಿದಾಗ ಅದಕ್ಕೆ ಹಿಂದಿನ ಅನಾಯಕತ್ವದ ಲಕ್ಷಣವಿರಲಿಲ್ಲ.

ಆದರೆ ಆಧುನಿಕ ತತ್ವಜ್ಞಾನವು ಬಹುತೇಕ ವ್ಯಕ್ತಿಗತವೂ ವ್ಯಕ್ತಿನಿಷ್ಠತೆಯದೂ ಆದ ಪ್ರವೃತ್ತಿಯನ್ನು ಉಳಿಸಿಕೊಂಡಿತು. ಇದು ಡೆಕಾರ್ಟೆಯಲ್ಲಿ ಎದ್ದು ಕಾಣುತ್ತದೆ, ಅವನು ತನ್ನ ಜ್ಞಾನವನ್ನೆಲ್ಲ ತನ್ನ ಅಸ್ತಿತ್ವದ ಖಚಿತತೆಯಿಂದಲೇ ನಿರ್ಮಿಸಿಕೊಳ್ಳುತ್ತಾನೆ, ಹಾಗೂ ಸ್ಪಷ್ಟತೆ ಮತ್ತು ಭಿನ್ನತೆಗಳನ್ನು (ಇವೂ ವ್ಯಕ್ತಿನಿಷ್ಠವಾದವು) ಸತ್ಯದ ಮಾನದಂಡಗಳೆಂದು ಒಪ್ಪುತ್ತಾನೆ. ಅದು ಸ್ಪಿನೋಜ಼ನಲ್ಲಿ ಎದ್ದು ಕಾಣುವುದಿಲ್ಲ, ಆದರೆ ಅದು ಲೀಬ್‌ನಿಜ಼್‌ನ ನ ಕಿಟಕಿಯಿಲ್ಲದ ಏಕತ್ವದಲ್ಲಿ (ವಿಂಡೋಲೆಸ್ ಮೊನಾಡ್ಸ್) ಮತ್ತೆ ಕಾಣಿಸಿಕೊಳ್ಳುತ್ತದೆ. ಸಂಪೂರ್ಣ ವಸ್ತುನಿಷ್ಠ ಮನೋಭಾವದ ಲಾಕ್, ಜ್ಞಾನವೆಂದರೆ ಚಿಂತನೆಗಳನ್ನು ಒಪ್ಪುವುದು ಅಥವಾ ಒಪ್ಪದಿರುವುದು ಎಂಬ ವ್ಯಕ್ತಿನಿಷ್ಠ ಸಿದ್ಧಾಂತವನ್ನು ಹಿಂಜರಿಕೆಯಿಂದಲೇ ಒಪ್ಪುವಂತೆ ಮಾಡುತ್ತದೆ – ಈ ದೃಷ್ಟಿಕೋನವು ಅವನಿಗೆ ಎಷ್ಟು ಹೇಸಿಕೆಯದೆಂದರೆ ಅದರಿಂದ ಪಾರಾಗಲೂ ತೀವ್ರ ಅಸಾಂಗತ್ಯಗಳನ್ನೊಡ್ಡುತ್ತಾನೆ. ಭೌತದ್ರವ್ಯವನ್ನು ನಿರಾಕರಿಸಿದ ಬಳಿಕ ಬರ್ಕ್ಲೇ ಸಂಪೂರ್ಣ ವ್ಯಕ್ತಿನಿಷ್ಠತೆಯಿಂದ ಪಾರಾಗಲು ದೇವರನ್ನು ಮಧ್ಯೆ ತರುತ್ತಾನೆ, ಮುಂದಿನ ಬಹುತೇಕ ತತ್ವಜ್ಞಾನಿಗಳು ಇದನ್ನು ಅಸಿಂಧುವೆಂದು ಪರಿಗಣಿಸುತ್ತಾರೆ. ಹ್ಯೂಮ್‌ನಲ್ಲಿ ಅನುಭವೈಕ ತತ್ವಜ್ಞಾನವು ಸಂದೇಹವಾದದಲ್ಲಿ ತುತ್ತ ತುದಿಗೇರಿತು, ಇದನ್ನು ಯಾರೂ ತಿರಸ್ಕರಿಸಲೂ ಆಗಲಿಲ್ಲ, ಒಪ್ಪಲೂ ಆಗಲಿಲ್ಲ. ಕ್ಯಾಂಟ್ ಮತ್ತು ಫ಼ಿಷ್ತೆ ಮನೋಭಾವದಲ್ಲಿ ಹಾಗೂ ಸಿದ್ಧಾಂತದಲ್ಲಿ ವ್ಯಕ್ತಿನಿಷ್ಠರಾಗಿದ್ದರು; ಹೆಗೆಲ್ ಸ್ಪಿನೋಜ಼ನ ಪ್ರಭಾವದಿಂದಾಗಿ ಉಳಿದುಕೊಂಡ. ರೂಸೋ ಮತ್ತು ರೊಮ್ಯಾಂಟಿಕ್ ಚಳುವಳಿಗಳು ವ್ಯಕ್ತಿನಿಷ್ಠತೆಯನ್ನು ಜ್ಞಾನಮೀಮಾಂಸೆಯಿಂದ ನೈತಿಕಸಂಹಿತೆ ಮತ್ತು ರಾಜಕೀಯಗಳಿಗೂ ವಿಸ್ತರಿಸಿದರು. ಅಂತಿಮವಾಗಿ ಅದು ತಾರ್ಕಿಕವಾಗಿ ಬ್ಯಾಕುನಿನ್‌ನದರಲ್ಲಿನ ಸಂಪೂರ್ಣ ಅನಾಯಕತ್ವದಲ್ಲಿ ಪರ್ಯವಸಾನವಾಯಿತು. ಈ ಅತಿರೇಕದ ವ್ಯಕ್ತಿನಿಷ್ಠತೆಯು ಒಂದು ಬಗೆಯ ಹುಚ್ಚು.

ಈ ಮಧ್ಯೆ ವಿಜ್ಞಾನವು ಒಂದು ತಂತ್ರವಾಗಿ ವ್ಯಾವಹಾರಿಕ ವ್ಯಕ್ತಿಗಳಲ್ಲಿ, ಯಾವುದೇ ಸೈದ್ಧಾಂತಿಕ ತತ್ವಜ್ಞಾನಿಗಳಲ್ಲಿ ಕಾಣಬಹುದಾಗಿದ್ದ ಮನೋಭಾವದಕ್ಕಿಂತ, ತುಂಬ ಭಿನ್ನವಾಗಿ ಬೆಳೆಯುತ್ತಿತ್ತು. ತಂತ್ರಗಾರಿಕೆಯು ಒಂದು ಬಗೆಯ ಅಧಿಕಾರವನ್ನು ತರುತ್ತಿತ್ತು: ಈಗ ಮನುಷ್ಯನು ಹಿಂದೆಂದಿಗಿಂತಲೂ ತೀರ ಕಡಿಮೆ ಪ್ರಮಾಣದಲ್ಲಿ ಪರಿಸರದ ಕೃಪೆಗೊಳಗಾಗಿದ್ದಾನೆ. ತಂತ್ರಗಾರಿಕೆಯು ತಂದಿತ್ತಿರುವ ಅಧಿಕಾರವು ಸಾಮಾಜಿಕವಾದುದೇ ಹೊರತು ವ್ಯಕ್ತಿಗತವಾದುದಲ್ಲ; ಒಬ್ಬ ಸಾಮಾನ್ಯ ವ್ಯಕ್ತಿಯು ಹಿಂದೆ ಮರಳುಗಾಡಾದ ದ್ವೀಪದಲ್ಲಿ ಹದಿನೇಳನೆಯ ಶತಮಾನದಲ್ಲಿ ಈಗಿಗಿಂತ ಹೆಚ್ಚು ಸಾಧಿಸಬಹುದಾಗಿತ್ತು. ವೈಜ್ಞಾನಿಕ ತಂತ್ರವು ಒಂದೇ ಉದ್ದೇಶದಿಂದ ಸಂಘಟಿತವಾದ ದೊಡ್ಡ ಸಂಖ್ಯೆಯ ಜನರ ಸಹಕಾರವನ್ನು ಅವಲಂಬಿಸಿರುತ್ತದೆ. ಹೀಗಾಗಿ ಅದು ಅನಾಯಕತ್ವಕ್ಕೆ, ಅಷ್ಟೇ ಅಲ್ಲ, ವ್ಯಕ್ತಿಪ್ರಾಧಾನ್ಯಕ್ಕೆ ವಿರುದ್ಧವಾದುದು, ಯಾಕೆಂದರೆ ಅದಕ್ಕೆ ಆವಶ್ಯಕವಾದುದು ಸುಸಂಘಟಿತ ಸಾಮಾಜಿಕ ಸಂರಚನೆ. ಮತಧರ್ಮದಂತಲ್ಲದೆ ಅದು ನೈತಿಕವಾಗಿ ತಟಸ್ಥವಾದುದು: ಅದ್ಭುತವಾದುದನ್ನು ಸಾಧಿಸಬಲ್ಲ ಭರವಸೆಯನ್ನದು ತಂದುಕೊಡುತ್ತದೆ, ಆದರೆ ಎಂತಹ ಅದ್ಭುತಗಳನ್ನು ಮಾಡಬೇಕೆಂಬುದನ್ನು ನಿರ್ದೇಶಿಸುವುದಿಲ್ಲ. ಈ ರೀತಿಯಲ್ಲಿ ಅದು ಅಸಂಪೂರ್ಣ. ಬಳಕೆಯಲ್ಲಿ, ಯಾವ ಉದ್ದೇಶಕ್ಕಾಗಿ ವೈಜ್ಞಾನಿಕ ಕೌಶಲವನ್ನು ಬಳಸಿಕೊಳ್ಳಬೇಕೆಂಬುದು ಬಹುತೇಕ ಸನ್ನಿವೇಶವನ್ನವಲಂಬಿಸಿರುತ್ತದೆ. ಆವಶ್ಯಕವಾದಷ್ಟು ವ್ಯಾಪಕವಾದ ಸಂಘಟನೆಯ ಮುಖ್ಯಸ್ಥರಾಗಿರುವ ಜನರು, ತಮ್ಮ ಮಿತಿಗೊಳಗಾಗಿ, ಅದನ್ನು ತಮಗೆ ಸರಿತೋರಿದಂತೆ ಆ ಕಡೆ ಈ ಕಡೆ ತಿರುಗಿಸಬಹುದು. ಹೀಗಾಗಿ ಅಧಿಕಾರಪ್ರವೃತ್ತಿಯು ಹಿಂದೆಂದೂ ಇರದಿದ್ದ ವ್ಯಾಪ್ತಿಯನ್ನು ಪಡೆದಿದೆ. ವೈಜ್ಞಾನಿಕ ತಂತ್ರಗಳಿಂದ ಪ್ರೇರಿತರಾದ ತತ್ವಜ್ಞಾನಗಳು ಅಧಿಕಾರ ತತ್ವಜ್ಞಾನಗಳು, ಅವು ಮಾನವೇತರ ವಸ್ತುಗಳನ್ನೆಲ್ಲ ಕೇವಲ ಭೌತದ್ರವ್ಯಗಳೆಂದು ಮಾತ್ರ ಪರಿಗಣಿಸುವ ಮನೋಭಾವವುಳ್ಳವು. ಉದ್ದೇಶಗಳನ್ನು ಪರಿಗಣಿಸದೆ, ಪ್ರಕ್ರಿಯೆಯ ಕೌಶಲಪೂರ್ಣತೆಗೆ ಮಾತ್ರ ಬೆಲೆ ಬರುತ್ತದೆ. ಇದೂ ಒಂದು ಬಗೆಯ ಹುಚ್ಚೇ ಸರಿ. ನಮ್ಮ ಕಾಲದಲ್ಲಿ ಅದು ಅತ್ಯಂತ ಭೀಕರ ರೂಪವನ್ನು ತಾಳಿದೆ, ಅದಕ್ಕೆ ವಿರುದ್ಧವಾದ ಪರಿಹಾರವನ್ನು ವಿವೇಕಯುತ ತತ್ವಜ್ಞಾನವು ನೀಡಬೇಕಾಗಿದೆ.

ಪ್ರಾಚೀನ ಜಗತ್ತು ರೋಮನ್ ಸಾಮ್ರಾಜ್ಯದಲ್ಲಿ ಅನಾಯಕತ್ವವು ಕೊನೆಯನ್ನು ಕಂಡಿತು, ಆದರೆ ರೋಮನ್ ಸಾಮ್ರಾಜ್ಯವು ಕ್ರೂರ ವಾಸ್ತವವೇ ಹೊರತು ಆದರ್ಶವಲ್ಲ. ಕ್ಯಾಥೋಲಿಕ್ ಜಗತ್ತು ಚರ್ಚ್‌ನಲ್ಲಿ ಅನಾಯಕತ್ವಕ್ಕೊಂದು ಕೊನೆಯನ್ನು ತರಬಯಸಿತು, ಅದೊಂದು ಆದರ್ಶವೇನೋ ಸರಿ, ಆದರೆ ಸಮಂಜಸವಾಗಿ ಅದು ವಾಸ್ತವವಾಗಿ ರೂಪಿತವಾಗಲಿಲ್ಲ. ಪ್ರಾಚೀನ ಹಾಗೂ ಮಧ್ಯಯುಗೀನ ಪರಿಹಾರವು ತೃಪ್ತಿಕರವಾಗಿತ್ತು – ಅದಕ್ಕೆ ಕಾರಣ, ಒಂದರಲ್ಲಿ ಅದನ್ನು ಆದರ್ಶವಾಗಿಸಲಾರದ್ದು, ಮತ್ತೊಂದರಲ್ಲಿ

ಅದನ್ನು ವಾಸ್ತವವಾಗಿಸಲಾರದ್ದು. ಆಧುನಿಕ ಜಗತ್ತು, ಸದ್ಯಕ್ಕೆ, ಪ್ರಾಚೀನ ಕಾಲದರಂತಹ ಪರಿಹಾರದ ಕಡೆಗೆ ಸಾಗುತ್ತಿರುವಂತೆ ತೋರುತ್ತದೆ: ಸಾಮಾನ್ಯ ಜನರದಕ್ಕಿಂತ ಅಧಿಕಾರಸ್ಥರ ಇರಾದೆಗನುಗುಣವಾಗಿ ಬಲದಿಂದ ಹೇರಲಾಗುವ ಒಂದು ಸಾಮಾಜಿಕ ವ್ಯವಸ್ಥೆ. ಸ್ಥಿರವೂ ತೃಪ್ತಿಕರವೂ ಆದ ಸಾಮಾಜಿಕ ವ್ಯವಸ್ಥೆಯ ಸಮಸ್ಯೆಯನ್ನು ರೋಮನ್ ಸಾಮ್ರಾಜ್ಯದ ದೃಢತೆ ಮತ್ತು ಸಂತ ಆಗಸ್ಟೈನ್‌ನ 'ದೇವರ ನಗರ'ದ ಆದರ್ಶಗಳನ್ನು ಒಗ್ಗೂಡಿಸುದರ ಮೂಲಕ ಮಾತ್ರ ಪರಿಹರಿಸಬಹುದು. ಇದನ್ನು ಸಾಧಿಸಲು ಹೊಸ ತತ್ವಜ್ಞಾನದ ಆವಶ್ಯಕತೆಯಿದೆ.

○

೨

ಇಟಲಿಯ ನವೋದಯ

ಮಧ್ಯಯುಗೀನವಾದುದಕ್ಕೆ ವಿರುದ್ಧವೆನಿಸುವ ಆಧುನಿಕ ದೃಷ್ಟಿಕೋನವು ಆರಂಭವಾದದ್ದು ಇಟಲಿಯಲ್ಲಿ, ನವೋದಯವೆಂದು ಕರೆಯಲಾಗುವ ಚಳುವಳಿಯೊಂದಿಗೆ. ಮೊದಲಿಗೆ, ಕೆಲವು ವ್ಯಕ್ತಿಗಳು, ಅವರಲ್ಲಿಯೂ ಪ್ರಮುಖನೆನಿಸಿದ್ದ ಪ್ಲೂಟಾರ್ಕ್ ಈ ದೃಷ್ಟಿಕೋನವನ್ನು ಹೊಂದಿದ್ದ, ಆದರೆ ಹದಿನೈದನೆಯ ಶತಮಾನದಲ್ಲಿ ಅದು ಇಟಲಿಯ ಸುಸಂಸ್ಕೃತ, ಸಾಮಾನ್ಯ ಹಾಗೂ ಮತಧರ್ಮಬೋಧಕ ಜನವರ್ಗದಲ್ಲಿ ವ್ಯಾಪಕವಾಯಿತು. ಕೆಲವು ವಿಷಯಗಳಲ್ಲಿ, ನವೋದಯದ ಇಟಾಲಿಯನ್‌ರು – ಲಿಯೋನಾರ್ಡೋ ಮತ್ತಿತರ ಕೆಲವರ ಹೊರತಾಗಿ – ಹದಿನೇಳನೆಯ ಶತಮಾನದಿಂದಲೂ ನವಪರಿವರ್ತಕ ಲಕ್ಷಣವಾಗಿದ್ದ ವಿಜ್ಞಾನದ ಬಗ್ಗೆ ಗೌರವಭಾವನನ್ನು ಹೊಂದಿರಲಿಲ್ಲ. ಈ ಕೊರತೆಯಿಂದಾಗಿ ಮೂಢನಂಬಿಕೆಯಿಂದ, ವಿಶೇಷವಾಗಿ ಜ್ಯೋತಿಷ್ಯದಿಂದ, ಹೊಂದಿದ ಅವರ ವಿಮೋಚನೆಯು ತೀರ ಆಂಶಿಕವಾಯಿತು. ಅವರಲ್ಲಿ ಅನೇಕರು ಮಧ್ಯಯುದ ತತ್ವಜ್ಞಾನಿಗಳು ಹೊಂದಿದ್ದ ಪ್ರಾಮಾಣ್ಯದ ಬಗೆಗಿನ ಭಕ್ತಿಯನ್ನು ಇನ್ನೂ ಹೊಂದಿದ್ದರು, ಆದರೆ ಅವರು ಚರ್ಚ್ ಪ್ರಾಮಾಣ್ಯದ ಸ್ಥಾನದಲ್ಲಿ ಪ್ರಾಚೀನರದನ್ನು ಇರಿಸಿಕೊಂಡಿದ್ದರು. ಇದು ವಿಮೋಚನೆಯತ್ತ ಇಟ್ಟ ಒಂದು ಹೆಜ್ಜೆ ಎಂಬುದರಲ್ಲಿ ಸಂಶಯವಿಲ್ಲ, ಯಾಕೆಂದರೆ ಪ್ರಾಚೀನರು ಪರಸ್ಪರರೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದರು, ಮತ್ತು ಅವರಲ್ಲಿ ಯಾರನ್ನು ಅನುಸರಿಸಬೇಕೆಂಬ ವಿಚಾರದಲ್ಲಿ ವ್ಯಕ್ತಿಗತ ತೀರ್ಮಾನವು ಆವಶ್ಯಕವಾಯಿತು. ಆದರೆ ಹದಿನೈದನೆಯ ಶತಮಾನದ ಇಟಾಲಿಯನ್‌ರಲ್ಲಿ ತೀರ ಕೆಲವರು ಮಾತ್ರ ಪ್ರಾಚೀನತೆಯಲ್ಲಾಗಲೀ ಚರ್ಚ್‌ನ ಬೋಧನೆಯಲ್ಲಾಗಲೀ ಯಾವ ಪ್ರಾಮಾಣ್ಯವೂ ಇಲ್ಲದ ಅಭಿಪ್ರಾಯವನ್ನು ತಾಳುವ ಧೈರ್ಯ ತೋರಿದರು.

ನವೋದಯವನ್ನು ಅರ್ಥಮಾಡಿಕೊಳ್ಳಲು ತೊಡಗುವ ಮುಂಚೆ ಇಟಲಿಯ ರಾಜಕೀಯ ಸ್ಥಿತಿಗತಿಗಳನ್ನು ಪರಿಶೀಲಿಸುವುದು ಆವಶ್ಯಕ. ೧೨೫೦ ರಲ್ಲಿ ಎರಡನೆಯ ಫ್ರೆಡೆರಿಕ್ ಸತ್ತ ಬಳಿಕ, ಇಟಲಿಯು, ೧೪೯೪ ರಲ್ಲಿ ಫ್ರೆಂಚ್ ರಾಜ ಎಂಟನೆಯ

ಚಾರ್ಲ್ಸ್ ಅವಕಾಶವನ್ನು ಆಕ್ರಮಿಸಿಕೊಳುವವರೆಗೆ, ಮುಖ್ಯವಾಗಿ ವಿದೇಶೀ ಮೂಗುತೂರಿಸುವಿಕೆಯಿಂದ ಸ್ವತಂತ್ರವಾಗಿತ್ತು. ಇಟಲಿಯಲ್ಲಿ ಐದು ಮುಖ್ಯ ಸಂಸ್ಥಾನಗಳಿದ್ದವು: ಮಿಲಾನ್, ವೆನಿಸ್, ಫ್ಲಾರೆನ್ಸ್, ಪೋಪ್ ಆಡಳಿತ ವಿಭಾಗ ಮತ್ತು ನೇಪಲ್ಸ್; ಇವುಗಳ ಜೊತೆಗೆ ಅನೇಕ ಸಂಸ್ಥಾನಗಳಿದ್ದುವು, ದೊಡ್ಡ ಸಂಸ್ಥಾನಗಳ ಜೊತೆಗೂಡಿದ್ದ ಅಥವಾ ಅದಕ್ಕೆ ಅಧೀನವಾಗಿದ್ದುದರಲ್ಲಿ ಅವುಗಳಲ್ಲಿ ಭಿನ್ನತೆಯಿತ್ತು. ೧೩೭೮ ರವರೆಗೆ ಜಿನೋವವು ವೆನಿಸ್ ಜೊತೆಗೆ ವಾಣಿಜ್ಯ ಮತ್ತು ಕಡಲ ಅಧಿಕಾರದಲ್ಲಿ ಪೈಪೋಟಿ ನಡೆಸಿತ್ತು, ಆದರೆ ಆ ವರ್ಷದ ನಂತರ ಜಿನೋವವು ಮಿಲಾನ್‌ನ ಸಾರ್ವಭೌಮತ್ವಕ್ಕೆ ಅಧೀನವಾಗಿತ್ತು.

ಹನ್ನೆರಡು-ಹದಿಮೂರನೆಯ ಶತಮಾನಗಳಲ್ಲಿ ಊಳಿಗಮಾನ್ಯಕ್ಕೆ ಪ್ರತಿರೋಧಿಯಾಗಿದ್ದ ಮಿಲಾನ್, ಹೋಹೆನ್‌ಸ್ಟಾಫೆನ್‌ನ ಅಂತಿಮ ಸೋಲಿನ ನಂತರ, ಊಳಿಗಮಾನ್ಯ ಆಡಳಿತವಾಗದೆ ಬಹುಪ್ರಭುತ್ವದ ಕುಟುಂಬವಾದ ವಿಸ್ಕಾಂಟಿಯ ಆಡಳಿತಕ್ಕೆ ಅಧೀನವಾಯಿತು. ಅವರು ೧೨೭೭ ರಿಂದ ೧೪೪೭ ರವರೆಗಿನ ೧೭೦ ವರ್ಷಗಳ ಕಾಲ ಆಳಿದರು; ಆಮೇಲೆ ಮೂರು ವರ್ಷಗಳ ಗಣರಾಜ್ಯಪ್ರಭುತ್ವದ ಪುನರುತ್ಥಾನದ ಬಳಿಕ, ಸ್ಫೋರ್‌ಝಾ ಎಂಬ ವಿಸ್ಕಾಂಟಿಯ ಸಂಬಂಧಪಟ್ಟಿದ್ದ ಹೊಸ ಕುಟುಂಬವೊಂದು ಆಡಳಿತವನ್ನು ವಹಿಸಿಕೊಂಡು ಮಿಲಾನ್ ಡ್ಯೂಕ್‌ರು ಎಂಬ ಅಭಿಧಾನವನ್ನು ಪಡೆದರು. ೧೪೯೪ ರಿಂದ ೧೫೩೫ ರವರೆಗೆ, ಮಿಲಾನ್ ಫ್ರೆಂಚ್‌ರು ಮತ್ತು ಸ್ಪಾನಿಯಾರ್ಡ್‌ಗಳ ನಡುವಣ ಯುದ್ಧರಂಗವಾಗಿತ್ತು; ಸ್ಫೋರ್‌ಝಾ ಕುಟುಂಬವು ಒಂದೊಂದು ಪಕ್ಷದೊಡನೆ ಒಮ್ಮೊಮ್ಮೆ ಸ್ವಲ್ಪ ಕಾಲ ಒಡನಾಟ ಹೊಂದಿದ್ದರು. ಈ ಅವಧಿಯಲ್ಲಿ ಅವರು ಸ್ವಲ್ಪ ಕಾಲ ದೇಶಭ್ರಷ್ಟರೂ ಆಗಬೇಕಾಯಿತು, ಕೆಲವೇಳೆ ನಾಮಮಾತ್ರಕ್ಕೆ ಅಧೀನರಾಗಿಯೂ ಇದ್ದರು. ಕೊನೆಗೆ ೧೫೩೫ ರಲ್ಲಿ ಮಿಲಾನ್ ಅನ್ನು ಚಕ್ರವರ್ತಿ ಐದನೆಯ ಚಾರ್ಲ್ಸ್ ವಶಪಡಿಸಿಕೊಂಡ.

ವೆನಿಸ್ ಗಣರಾಜ್ಯವು ಒಂದು ರೀತಿಯಲ್ಲಿ ಇಟಲಿಯ ರಾಜಕೀಯದಿಂದ ಹೊರಗುಳಿದಿತ್ತು, ಅದರಲ್ಲೂ ವಿಶೇಷವಾಗಿ ಹಿಂದಿನ ತನ್ನ ಹಿರಿಮೆಯ ಶತಮಾನಗಳಲ್ಲಿ. ಅದನ್ನು ಬಾರ್ಬೇರಿಯನ್‌ರು ಎಂದೂ ಗೆದ್ದುಕೊಳ್ಳಲಿಲ್ಲ, ಮತ್ತು ಮೊದಲಿಗೆ ತಾನು ಪೂರ್ವ ಚಕ್ರವರ್ತಿಗಳ ಅಧೀನವೆಂದು ಅದು ಭಾವಿಸಿತ್ತು. ಈ ಸಂಪ್ರದಾಯದ ಜೊತೆಗೆ ಅದರ ವ್ಯಾಪಾರವು ಪೂರ್ವದೊಡನೆ ಎಂಬುದೂ ಸೇರಿಕೊಂಡು ಅದಕ್ಕೆ ರೋಮ್‌ನಿಂದ ಸ್ವಾತಂತ್ರ್ಯವನ್ನು ತಂದು ಕೊಟ್ಟಿತ್ತು. ಅದು ಟ್ರೆಂಟ್‌ನ ಪರಿಷತ್ತಿನ ಕಾಲದವರೆಗೂ (೧೫೪೫) ಮುಂದುವರಿಯಿತು, ಆ ಕುರಿತು ವೆನೀಸಿಯನ್ ಪೌಲೋ ಸಾರ್ಪಿ ತುಂಬ ಪೋಪ್‌ವಿರೋಧಿಯಾದ ಚರಿತ್ರೆಯನ್ನು ಬರೆದ. ನಾಲ್ಕನೆಯ ಮತಧರ್ಮಯುದ್ಧ ಕಾಲದಲ್ಲಿ ವೆನಿಸ್ ಕಾನ್‌ಸ್ಟಾಂಟಿನೋಪಲ್ ಅನ್ನು ಗೆಲ್ಲಲು ತವಕಿಸುತ್ತಿತ್ತು ಎಂಬುದನ್ನು ನಾವು ಹಿಂದೆಯೇ ನೋಡಿದ್ದೇವೆ.

ಇದರಿಂದ ವೆನಿಸ್‌ನ ವ್ಯಾಪಾರವು ಏಳಿಗೆ ಹೊಂದಿತು, ಕಾನ್‌ಸ್ಟಾಂಟಿನೋಪಲ್ ಅನ್ನು ೧೪೫೩ ರಲ್ಲಿ ಟರ್ಕ್‌ರು ಗೆದ್ದಾಗ ಅದಕ್ಕೆ ವ್ಯತಿರಿಕ್ತವಾಯಿತು. ಅನೇಕ ಕಾರಣಗಳಿಂದಾಗಿ, ಭಾಗಶಃ ಆಹಾರ ಸರಬರಾಜಿಗೆ ಸಂಬಂಧಿಸಿದಂತೆ, ಹದಿನಾಲ್ಕು ಮತ್ತು ಹದಿನೈದನೆಯ ಶತಮಾನಗಳಲ್ಲಿ ವೆನೀಸಿಯನ್‌ರಿಗೆ ಇಟಲಿಯ ಮುಖ್ಯ ಭಾಗದ ಗಣನೀಯ ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಆವಶ್ಯಕತೆ ಕಂಡುಬಂತು. ಇದರಿಂದ ಶತ್ರುತ್ವ ಬೆಳೆಯಿತು, ಕೊನೆಗೆ ೧೫೦೮ರಲ್ಲಿ ಬಲಿಷ್ಠ ಸಂಸ್ಥಾನಗಳು ಸೇರಿಕೊಂಡು ಕಾಂಬ್ರೈ ಒಡಂಬಡಿಕೆಯನ್ನು ಹೊಂದುವುದರಲ್ಲಿ ಪರ್ಯವಸಾನವಾಯಿತು. ಇದರಿಂದ ವೆನಿಸ್‌ಗೆ ಸೋಲುಂಟಾಯಿತು. ಈ ದುರದೃಷ್ಟದಿಂದ ಪುನಶ್ಚೇತನಗೊಳ್ಳಲು ಸಾಧ್ಯವಿದ್ದಿತಾದರೂ, ವಾಸ್ಕೋ ಡ ಗಾಮ ಭೂಶಿರ ಮಾರ್ಗವಾಗಿ ಇಂಡಿಯಕ್ಕೆ ಮಾರ್ಗವನ್ನು ಕಂಡುಕೊಳ್ಳುವುದರಿಂದ (೧೪೯೭-೮) ಅಲ್ಲ. ಇದು ಟರ್ಕ್‌ರ ಸಾಮರ್ಥ್ಯವನ್ನು ಹೆಚ್ಚಿಸಿ ವೆನಿಸ್ ಅನ್ನು ನಾಶಪಡಿಸಿತು, ಆದರೆ ಇದು ನೆಪೋಲಿಯನ್‌ನಿಂದ ಸ್ವಾತಂತ್ರ್ಯಹರಣವಾಗುವವರೆಗೂ ಉಳಿಯಿತು.

ಮೂಲತಃ ಪ್ರಜಾಪ್ರಭುತ್ವಾತ್ಮಕವಾಗಿದ್ದ ವೆನಿಸ್ ಸಂವಿಧಾನವು ಕ್ರಮೇಣ ಅದರಿಂದ ದೂರ ಸರಿದು, ೧೨೯೭ ರಲ್ಲಿ, ಬದ್ಧ ಅಲ್ಪಜನಾಧಿಪತ್ಯದಲ್ಲಿ ಕೊನೆಯಾಯಿತು. ರಾಜಕೀಯ ಅಧಿಕಾರದ ಆಧಾರವು ಸಾಮಾನ್ಯ ಧರ್ಮಪರಿಷತ್ತು; ಆ ಕಾಲದ ಬಳಿಕ, ಅದರ ಸದಸ್ಯತ್ವವು ವಂಶಪಾರಂಪರ್ಯವಾಗಿ, ಪ್ರಮುಖ ಕುಟುಂಬಗಳಿಗೆ ಸೀಮಿತವಾಯಿತು. ಆಡಳಿತಾತ್ಮಕ ಅಧಿಕಾರವು 'ಹತ್ತರ ಪರಿಷತ್ತಿ'ಗೆ (ಕೌನ್ಸಿಲ್ ಆಫ್ ಟೆನ್) ಸೇರಿತು, ಇದನ್ನು ಸಾಮಾನ್ಯ ಧರ್ಮಪರಿಷತ್ತು ಆಯ್ಕೆಮಾಡುತ್ತಿತ್ತು. ಸಂಸ್ಥಾನದ ಔಪಚಾರಿಕ ಮುಖ್ಯಸ್ಥನಾದ ಡೋಜ್ ಅನ್ನು ಜೀವಮಾನಪರ್ಯಂತ ಆಯ್ಕೆಮಾಡಲಾಗುತ್ತಿತ್ತು; ಅವನ ಹೆಸರಿನ ಅಧಿಕಾರವು ಬಹು ಸೀಮಿತವಾದುದು, ಆದರೆ ಆಚರಣೆಯಲ್ಲಿ ಅವನ ಪ್ರಭಾವವು ಸಾಮಾನ್ಯವಾಗಿ ನಿರ್ಣಾಯಕವಾಗುತ್ತಿತ್ತು. ವೆನೀಸಿಯನ್ ರಾಜತಾಂತ್ರಿಕತೆಯು ಅತ್ಯಂತ ಕೌಶಲಪೂರ್ಣವೆಂಬ ಹೆಸರು ಪಡೆದಿತ್ತು; ವೆನೀಸಿಯನ್ ರಾಯಭಾರಿಗಳ ವರದಿಗಳು ಅತೀವ ಒಳನೋಟಗಳಿಂದ ಕೂಡಿರುತ್ತಿದ್ದವು. ರಾಂಕೆಯಿಂದೀಚೆಗೆ ತಾವು ಅಭ್ಯಸಿಸುವ ವಿಷಯಗಳ ಬಗೆಗಿನ ತಿಳಿವಳಿಕೆಗಾಗಿ ಇವನ್ನು ಅತ್ಯಂತ ಉತ್ತಮ ಆಕರಗಳೆಂದು ಚರಿತ್ರಕಾರರು ಭಾವಿಸುತ್ತಿದ್ದರು.

ಫ್ಲಾರೆನ್ಸ್ ಜಗತ್ತಿನ ಅತ್ಯಂತ ಸುಸಂಸ್ಕೃತ ನಗರವಾಗಿತ್ತು, ಅದು ನವೋದಯದ ಮುಖ್ಯ ಆಕರವೂ ಆಗಿತ್ತು. ಸಾಹಿತ್ಯದಲ್ಲಿನ ಬಹುತೇಕ ದೊಡ್ಡ ಹೆಸರುಗಳು ಹಾಗೂ ಕಲೆಯಲ್ಲಿನ ಹಿಂದಿನ ಮತ್ತು ಸ್ವಲ್ಪಮಟ್ಟಿಗೆ ಆನಂತರದ ದೊಡ್ಡ ಹೆಸರುಗಳು ಫ್ಲಾರೆನ್ಸ್‌ಗೆ ಸಂಬಂಧಿಸಿದವು; ಆದರೆ ಸದ್ಯಕ್ಕೆ ನಾವು ಆಸಕ್ತರಾಗಿರುವುದು ರಾಜಕೀಯದ

ಬಗ್ಗೆಯೇ ಹೊರತು ಸಂಸ್ಕೃತಿಯ ಬಗ್ಗೆಯಲ್ಲ. ಹದಿಮೂರನೆಯ ಶತಮಾನದಲ್ಲಿ, ಫ್ಲಾರೆನ್ಸ್‌ನಲ್ಲಿ ಮೂರು ವಿರೋಧಿ ವರ್ಗಗಳಿದ್ದವು: ಶ್ರೀಮಂತಪ್ರಭುಗಳು, ಹಣವಂತ ವ್ಯಾಪಾರಿಗಳು ಮತ್ತು ಸಾಮಾನ್ಯ ಜನರು. ಶ್ರೀಮಂತಪ್ರಭುಗಳು ಮುಖ್ಯವಾಗಿ ಘಿಬ್ಬಲೈನ್‌ಗಳು, ಉಳಿದ ಎರಡು ವರ್ಗಗಳು ಗುಯೆಲ್ಫ್. ಘಿಬ್ಬಲೈನ್‌ಗಳು ಅಂತಿಮವಾಗಿ ೧೨೬೬ ರಲ್ಲಿ ಸೋತರು, ಹದಿನಾಲ್ಕನೆಯ ಶತಮಾನದಲ್ಲಿ ಸಾಮಾನ್ಯ ಜನರ ಪಕ್ಷವು ಹಣವಂತ ವ್ಯಾಪಾರಿಗಳಿಗಿಂತ ಮೇಲುಗೈಯಾಯಿತು. ಆದರೆ ಈ ಸಂಘರ್ಷವು ಸ್ಥಿರ ಪ್ರಜಾಪ್ರಭುತ್ವಕ್ಕೇನೂ ಕಾರಣವಾಗಲಿಲ್ಲ, ಅದರ ಬದಲು ಗ್ರೀಕ್‌ರು 'ದೌರ್ಜನ್ಯಕಾರಕ' ಎಂದು ಕರೆಯಬಹುದಾಗಿದ್ದುದರ ಕ್ರಮಶಃ ಬೆಳವಣಿಗೆಗೆ ಎಡೆಮಾಡಿಕೊಟ್ಟಿತು. ಮೆಡಿಸೈ ಕುಟುಂಬವು ಕೊನೆಗೆ ವೆನಿಸ್‌ನ ಆಳ್ವಿಕೆದಾರವಾಯಿತು, ಪ್ರಜಾಪ್ರಭುತ್ವಾತ್ಮಕ ಪಕ್ಷದ ರಾಜಕೀಯ ಯಜಮಾನರಾಗಿ ಆರಂಭಗೊಂಡರು. ಸ್ಪಷ್ಟವಾದ ಸರ್ವೋಚ್ಚತೆಯನ್ನು ಗಳಿಸುವಲ್ಲಿ ಕುಟುಂಬದ ಮೊದಲಿಗನಾದ ಕಾಸಿಮೊ ಡೀಯಿ ಮೆಡಿಸೈ (೧೩೮೯–೧೪೬೪) ಗೆ ಇನ್ನೂ ಅಧಿಕೃತ ಸ್ಥಾನಮಾನವಿರಲಿಲ್ಲ; ಅವನ ಕೌಶಲವಿದ್ದುದು ಚುನಾವಣೆಗಳನ್ನು ನಿಯಂತ್ರಿಸುವುದರಲ್ಲಿ. ಅವನು ಚಾಣಾಕ್ಷನಾಗಿದ್ದ, ಸಾಧ್ಯವಾದಾಗ ಸಂಧಾನಶೀಲನಾಗುತ್ತಿದ್ದ, ಆವಶ್ಯಕವಾದಾಗ ದಯಾಹೀನನಾಗುತ್ತಿದ್ದ. ಅವನ ನಂತರ ಸ್ವಲ್ಪ ಕಾಲದ ಬಿಡುವಿನ ಬಳಿಕ ಅವನ ಮೊಮ್ಮಗ ಲೊರೆಂಜ಼ೋ ಮ್ಯಾಗ್ನಿಫಿಸೆಂಟ್ ಬಂದು ೧೪೬೯ ರಿಂದ ತಾನು ಸತ್ತ ವರುಷವಾದ ೧೪೯೨ ರವರೆಗೂ ಅಧಿಕಾರವನ್ನು ನಡೆಸಿದ. ಈ ಇಬ್ಬರೂ ತಮ್ಮ ಸ್ಥಾನವನ್ನು ಗಳಿಸಿದ್ದುದು ತಮ್ಮ ಹಣಬಲದಿಂದಾಗಿ, ಅವರು ಅದನ್ನು ಮುಖ್ಯವಾಗಿ ವ್ಯಾಪಾರದಿಂದಲೂ ಗಣಿಗಾರಿಕೆ ಮತ್ತಿತರ ಕೈಗಾರಿಕೆಗಳಿಂದಲೂ ಗಳಿಸಿದ್ದರು. ಫ್ಲಾರೆನ್ಸ್ ಅನ್ನು, ಜೊತೆಗೆ ತಮ್ಮನ್ನೂ, ಶ್ರೀಮಂತಗೊಳಿಸುವುದು ಹೇಗೆಂಬುದು ಅವರಿಬ್ಬರಿಗೂ ತಿಳಿದಿತ್ತು; ಅವರ ಆಡಳಿತದಲ್ಲಿ ನಗರವು ಏಳಿಗೆಯನ್ನು ಹೊಂದಿತು.

ಲೊರೆಂಜ಼ೋನ ಮಗ ಪಿಯೆಟ್ರೋಗೆ ತಂದೆಯ ಗುಣಗಳಿರಲಿಲ್ಲ, ಅಲ್ಲದೆ ಅವನನ್ನು ೧೪೯೪ ರಲ್ಲಿ ಗಡೀಪಾರು ಮಾಡಿದರು. ಆನಂತರ ಬಂದದ್ದು ನಾಲ್ಕು ವರ್ಷಗಳ ಸವೋನರೋಲಾನ ಪ್ರಭಾವ, ಆಗ ಪರಿಶುದ್ಧತಾ ಮನೋಭಾವವು ಮರುಕಳಿಸಿ ವೈಭವ ಮತ್ತು ಭೋಗಗಳ ವಿರುದ್ಧವಾಗಿ ಸ್ವತಂತ್ರಚಿಂತನೆ ಹೋಗಿ ಹೆಚ್ಚು ಸರಳ ಯುಗದಲ್ಲಿನ ಧರ್ಮಶ್ರದ್ಧೆ ಪ್ರಮುಖವಾಯಿತು. ಆದರೆ ಕೊನೆಯಲ್ಲಿ ಮುಖ್ಯವಾಗಿ ರಾಜಕೀಯ ಕಾರಣಗಳಿಂದಾಗಿ ಸವೋನರೋಲಾನ ಶತ್ರುಗಳು ಗೆದ್ದರು, ಅವನನ್ನು ಗಲ್ಲಿಗೇರಿಸಿ ಶವವನ್ನು ಸುಟ್ಟರು (೪೯೮). ಉದ್ದೇಶದಲ್ಲಿ ಪ್ರಜಾಪ್ರಭುತ್ವಾತ್ಮಕವಾದರೂ ವಾಸ್ತವದಲ್ಲಿ ಬಹುತ್ವದ್ದಾದ ಗಣರಾಜ್ಯವು ೧೫೧೨ ರವರೆಗೂ ಉಳಿಯಿತು, ಆನಂತರ ಮೆಡಿಸೈಗಳನ್ನು ಪುನಃಸ್ಥಾಪಿಸಲಾಯಿತು. ತನ್ನ ಹದಿನಾಲ್ಕನೆಯ ವಯಸ್ಸಿಗೇ ಕಾರ್ಡಿನಲ್ ಆಗಿದ್ದ ಲೊರೆಂಜ಼ೋನ ಒಬ್ಬ ಮಗ

೧೫೧೩ ರಲ್ಲಿ ಪೋಪ್ ಆಗಿ ಚುನಾಯಿತನಾಗಿ ಹತ್ತನೇ ಲಿಯೋ ಎನ್ನಿಸಿಕೊಂಡ. ಮೆಡಿಸ್ಸೈ ಕುಟುಂಬವು ಟಸ್ಕನಿಯ ಗ್ರಾಂಡ್ ಡ್ಯೂಕ್ ಎಂಬ ಹೆಸರಿನಲ್ಲಿ ಫ್ಲಾರೆನ್ಸ್ ಅನ್ನು ೧೭೩೭ ರವರೆಗೂ ಆಳಿತು; ಆದರೆ ಈ ಮಧ್ಯೆ ಫ್ಲಾರೆನ್ಸ್, ಇಟಲಿಯ ಉಳಿದ ಭಾಗದಂತೆಯೇ, ಬಡತನದ್ದೂ ಅಮುಖ್ಯವಾದುದೂ ಆಗಿತ್ತು.

ತನ್ನ ಉದಯಕ್ಕೆ ಪೆಪಿನ್‌ಗೂ ನಕಲಿ ಕಾನ್‌ಸ್ಟಾನ್‌ಟೈನ್ ಕೊಡುಗೆಗೂ ಋಣಿಯಾಗಿದ್ದ ಪೋಪ್‌ನ ಐಹಿಕ ಅಧಿಕಾರವು ನವೋದಯದ ಕಾಲದಲ್ಲಿ ಬಹಳವಾಗಿ ಹೆಚ್ಚಿತ್ತು: ಆದರೆ ಈ ವಿಷಯದಲ್ಲಿ ಪೋಪ್‌ಗಳು ಅನುಸರಿಸಿದ್ದ ವಿಧಾನಗಳು ಪೋಪ್‌ರಲ್ಲಿನ ಆಧ್ಯಾತ್ಮಿಕ ಅಧಿಕಾರವನ್ನು ಬರಿದುಗೊಳಿಸಿದ್ದವು. ಮತಧಾರ್ಮಿಕ ಮಂತ್ರಸಭೆಯ (ಕನ್ಸಿಲಿಯರ್) ಅಧಿಕಾರವು – ಬಾಸೆಲ್‌ನ ಧರ್ಮಪರಿಷತ್ತು ಮತ್ತು ಪೋಪ್ ನಾಲ್ಕನೆಯ ಯೂಜೀನಿಯಸ್‌ರ (೧೪೩೧–೪೭) ನಡುವಣ ಸಂಘರ್ಷದಲ್ಲಿ ಬಡಕಲಾಗಿದ್ದು – ಚರ್ಚ್‌ನ ಅತ್ಯಂತ ಪ್ರಾಮಾಣಿಕ ಜನರ ಪ್ರತಿನಿಧಿಯಾಗಿತ್ತು. ಅದಕ್ಕಿಂತಲೂ ಪ್ರಾಯಶಃ ಹೆಚ್ಚು ಮುಖ್ಯವಾದುದೆಂದರೆ, ಅದು ಆಲ್ಪ್ಸ್‌ನ ಉತ್ತರಭಾಗದ ಮತಧರ್ಮಬೋಧಕರ ಅಭಿಪ್ರಾಯವನ್ನು ಪ್ರತಿನಿಧಿಸುತ್ತಿತ್ತು. ಪೋಪ್‌ರ ಗೆಲವು ಇಟಲಿಯ ಗೆಲವಾಗಿತ್ತು, ಅಲ್ಲದೆ (ಕಡಿಮೆ ಪ್ರಮಾಣದಲ್ಲಿ) ಸ್ಪೆಯಿನ್‌ನದು ಕೂಡ. ಹದಿನೈದನೆಯ ಶತಮಾನದ ಉತ್ತರಾರ್ಧದಲ್ಲಿ ಇಟಲಿಯ ನಾಗರಿಕತೆಯು ಉತ್ತರ ದೇಶಗಳಿಗಿಂತ ಸಂಪೂರ್ಣವಾಗಿ ಭಿನ್ನವಾದುದಾಗಿತ್ತು., ಅದಿನ್ನೂ ಮಧ್ಯಯುಗದ್ದೇ ಆಗಿತ್ತು. ಇಟಾಲಿಯನ್‌ರು ಸಂಸ್ಕೃತಿಯ ಬಗ್ಗೆ ಪ್ರಾಮಾಣಿಕರಾಗಿದ್ದರೇ ವಿನಾ ಮತಧರ್ಮ ಮತ್ತು ನೈತಿಕತೆಯ ಬಗ್ಗೆಯಲ್ಲ.; ಮತಧರ್ಮಬೋಧಕರ ಮನಸ್ಸಿನಲ್ಲಿ ಕೂಡ ಪ್ರಖರ ಲ್ಯಾಟಿನ್ ಶೈಲಿಯು (ಲ್ಯಾಟಿನಿಟಿ) ಪಾಪರಾಶಿಯನ್ನು ಮುಚ್ಚಿಹಾಕಿತ್ತು. ಐದನೆಯ ಮಿಕ್ಕೆಲ್ಲವನ್ನು ಅವಗಣಿಸಿ ನಿಕೋಲಾಸ್ ವಿದ್ವತ್ತನ್ನು ಗೌರವಿಸಿದ; ಒಬ್ಬ ಎಪಿಕ್ಯೂರಿಯನ್ ಆಗಿದ್ದ ಹಾಗೂ ಕಾನ್‌ಸ್ಟಾನ್‌ಟೈನ್ ಕೊಡುಗೆಯು ನಕಲಿನದೆಂದು ಸಾಧಿಸಿದ್ದವನೂ ಮತ್ತು ವಲ್ಗೇಟ್‌ನ ಶೈಲಿಯನ್ನು ಗೇಲಿಮಾಡುತ್ತಿದ್ದವನೂ, ಸಂತ ಆಗಸ್ಟೈನ್‌ನನ್ನು ಪಾಷಂಡಿಯೆಂದು ಆರೋಪಿಸಿದವನೂ ಆದ ಲೊರೆಂಜ಼ೋ ವಾಲ್ಲಾನನನ್ನು ಏಸುದೂತ ಕಾರ್ಯದರ್ಶಿಯನ್ನಾಗಿ ಮಾಡಲಾಯಿತು. ಮತಧರ್ಮಶ್ರದ್ಧೆ ಅಥವಾ ಸಂಪ್ರದಾಯನಿಷ್ಠೆಗಿಂತ ಮಾನವೀಯತೆಯನ್ನು ಉತ್ತೇಜಿಸುವ ಧೋರಣೆಯು ೧೫೨೭ ರಲ್ಲಿ ರೋಮ್ ಅನ್ನು ಸೋಲಿನವರೆಗೂ ಮುಂದುವರಿಯಿತು.

ಮಾನವೀಯತೆಯ ಉತ್ತೇಜನವು ಉತ್ತರವನ್ನು ಆಘಾತಕ್ಕೊಳಗಾಗಿಸಿದರೂ, ನಮ್ಮ ಭಾವನೆಯಲ್ಲಿ ಪ್ರಾಯಶಃ ಒಂದು ಸಲ್ಲಕ್ಷಣವೆಂದು ಪರಿಗಣಿಸಬಹುದು. ಆದರೆ ಯುದ್ಧದಂತಹ ಧೋರಣೆ ಮತ್ತು ಕೆಲವು ಪೋಪ್‌ರ ಅನೈತಿಕ ಬದುಕನ್ನು, ನಗ್ನ ಅಧಿಕಾರ ರಾಜಕೀಯದ ಹೊರತು, ಯಾವುದೇ ದೃಷ್ಟಿಕೋನದಿಂದ

ಸಮರ್ಥಿಸುವಂತಿರಲಿಲ್ಲ. ಆರನೆಯ ಅಲೆಕ್ಸಾಂಡರ್ (೧೪೯೨–೧೫೦೩) ಪೋಪ್ ಆಗಿ ತನ್ನ ಮತ್ತು ತನ್ನ ಕುಟುಂಬದ ಬದುಕಿನ ವೈಭವೀಕರಣಕ್ಕೆ ಮೀಸಲಾಗಿರಿಸಿಕೊಂಡಿದ್ದ. ಅವನಿಗೆ ಇಬ್ಬರು ಗಂಡುಮಕ್ಕಳು, ಗಾಂಡಿಯದ ಡ್ಯೂಕ್ ಮತ್ತು ಸೀಸರ್ ಬೋರ್ಗಿಯ, ಅವರಿಬ್ಬರಲ್ಲಿ ಮೊದಲನೆಯವನ ಬಗ್ಗೆ ಅವನಿಗೆ ಹೆಚ್ಚು ವ್ಯಾಮೋಹ. ಆದರೆ ಡ್ಯೂಕ್ ಕೊಲೆಯಾದ, ಪ್ರಾಯಶಃ ತನ್ನ ತಮ್ಮನಿಂದಲೇ; ಹೀಗಾಗಿ ವಾಂಶಿಕ ಆಕಾಂಕ್ಷೆಗಳನ್ನು ಸೀಸರ್‌ನಲ್ಲಿಯೇ ಕ್ರೋಡೀಕರಿಸಬೇಕಾಯಿತು. ಅವರಿಬ್ಬರೂ ಸೇರಿ ರೊಮಾಂಗ್ನಾ ಮತ್ತು ಅಂಕೋನಗಳನ್ನು ಗೆದ್ದರು, ಅವೆರಡನ್ನೂ ಸೀಸರ್‌ನ ಪಾಳೆಯಪಟ್ಟನ್ನಾಗಿಸಲು ಉದ್ದೇಶಿಸಲಾಗಿತ್ತು. ಆದರೆ ಪೋಪ್ ಸತ್ತಾಗ ಸೀಸರ್ ರೋಗದಿಂದ ನರಳುತ್ತಿದ್ದ, ಹೀಗಾಗಿ ತಕ್ಷಣ ಕಾರ್ಯಶೀಲನಾಗಲಾಗಲಿಲ್ಲ. ಕಾಲಕ್ರಮೇಣ ಅವರ ಗೆಲವುಗಳು ತಿರುಗುಮುರುಗಾಗಿ ಸಂತ ಪೀಟರ್‌ನ ಪಾರಂಪರಿಕವಾಗಿಸಲಾಯಿತು. ಈ ಇಬ್ಬರ ಕೆಡುಕುತನವು ಬಹುಬೇಗ ದಂತಕತೆಯಾದವು; ಅವರು ಮಾಡಿದರೆನ್ನಲಾದ ಅಸಂಖ್ಯಾತ ಕೊಲೆಗಳಲ್ಲಿ ಎಷ್ಟು ಸತ್ಯ ಎಷ್ಟು ಸುಳ್ಳು ಎಂಬುದನ್ನು ಬೇರ್ಪಡಿಸುವುದೇ ಅಸಾಧ್ಯವಾಯಿತು. ಆದರೆ ಅವರು ಹಿಂದೆಂದಿಗಿಂತ ನಂಬಿಕೆದ್ರೋಹವನ್ನು ಯಥೇಚ್ಛವಾಗಿ ಮುಂದುವರಿಸಿದರೆನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಆರನೆಯ ಅಲೆಕ್ಸಾಂಡರ್‌ನ ನಂತರ ಬಂದ ಎರಡನೆಯ ಜೂಲಿಯಸ್ (೧೫೦೩–೧೩) ಧರ್ಮಶ್ರದ್ಧೆಗೇನೂ ಹೆಸರಾಗಿರಲಿಲ್ಲವಾದರೂ ತನ್ನ ಹಿಂದಿನವರಷ್ಟು ಹಗರಣಗಳಲ್ಲಿ ಸಿಲುಕಿಕೊಳ್ಳಲಿಲ್ಲ. ಪೋಪ್ ಆಳ್ವಿಕೆಯ ವ್ಯಾಪ್ತಿಯನ್ನು ಹಿಗ್ಗಲಿಸುವ ಪ್ರಕ್ರಿಯೆಯನ್ನು ಅವನೂ ಮುಂದುವರಿಸಿದ; ಒಬ್ಬ ಯೋಧನಾಗಿ ಅವನು ಪರಿಣತಿಯನ್ನು ಹೊಂದಿದ್ದವನೇ ಹೊರತು ಕ್ರೈಸ್ತ ಚರ್ಚ್‌ನ ಮುಖ್ಯಸ್ಥನಾಗಿ ಅಲ್ಲ. ಅವನ ಉತ್ತರಾಧಿಕಾರಿ ಹತ್ತನೆಯ ಲಿಯೋ (೧೫೧೧–೨೧) ಕಾಲದಲ್ಲಿ ಆರಂಭಗೊಂಡ ಮತಧರ್ಮಸುಧಾರಣೆಯು ನವೋದಯದ ಪೋಪ್‌ಗಳ ಮತಧರ್ಮೇತರ ಧೋರಣೆಯ ಸಹಜ ಪರಿಣಾಮವಾಗಿತ್ತು.

ಇಟಲಿಯ ದಕ್ಷಿಣ ತುದಿಯನ್ನು ನೇಪಲ್ಸ್ ಸಾಮ್ರಾಜ್ಯವು ಬಹುತೇಕ ಕಾಲಗಳಲ್ಲಿ ಆಕ್ರಮಿಸಿಕೊಂಡಿತ್ತು, ಸಿಸಿಲಿ ಅಖಂಡವಾಗಿತ್ತು. ನೇಪಲ್ಸ್ ಮತ್ತು ಸಿಸಿಲಿಗಳು ಚಕ್ರವರ್ತಿ ಎರಡನೆ ಫ್ರೆಡೆರಿಕ್‌ನ ವಿಶೇಷ ಖಾಸಗಿ ಸಾಮ್ರಾಜ್ಯವಾಗಿತ್ತು; ಅವನ ಮಹಮ್ಮದೀಯ ಮಾದರಿಯ ಗರಿಷ್ಠ ರಾಜಪ್ರಭುತ್ವವನ್ನು ಜಾರಿಗೊಳಿಸಿದ್ದು ಅದು ಅರಿವಿನದಾಗಿದ್ದರೂ ದಬ್ಬಾಳಿಕೆಯದಾಗಿದ್ದು, ಊಳಿಗಮಾನ್ಯಪ್ರಭುಗಳಿಗೆ ಯಾವುದೇ ಅಧಿಕಾರಕ್ಕೆ ಅವಕಾಶವಿರಲಿಲ್ಲ. ೧೨೫೦ ರಲ್ಲಿ ಅವನ ಮರಣಾನಂತರ ನೇಪಲ್ಸ್ ಮತ್ತು ಸಿಸಿಲಿಗಳು ಅವನ ಸ್ವಂತ ಮಗ ಮ್ಯಾನ್‌ಫ್ರೆಡ್‌ನ ಕೈಗೆ ಹೋದುವು. ಅವನೂ ಚರ್ಚ್ ಬಗೆಗಿನ ಹಿಂದಿನ ಅಸೀಮ ದ್ವೇಷವನ್ನು ತಾಳಿದ್ದು, ೧೨೬೬ ರಲ್ಲಿ

ಫ್ರೆಂಚ್‌ರಿಂದ ಪದಚ್ಯುತನಾದ. ಫ್ರೆಂಚರು ಜನಪ್ರಿಯತೆಯನ್ನು ಕಳೆದುಕೊಂಡರು, ಸಿಸಿಲಿಯನ್ ವೆಸ್ಪರ್ಸ್‌ನಲ್ಲಿ (೧೨೮೨) ಅವರು ಸಮೂಹಹತ್ಯೆಗೀಡಾದರು; ಆ ಬಳಿಕ ಸಾಮ್ರಾಜ್ಯವು ಆರಗಾನ್‌ನ ಮೂರನೆಯ ಪೀಟರ್ ಮತ್ತವನ ಉತ್ತಾಧಿಕಾರಿಗಳಿಗೆ ಸೇರಿತು. ಅನೇಕ ಗೊಂದಲಗಳ ಬಳಿಕ ಸಿಸಿಲಿ ಮತ್ತು ನೇಪಲ್ಸ್‌ಗಳು ತಾತ್ಕಾಲಿಕವಾಗಿ ಬೇರೆಯಾದವು, ಆದರೆ ಕೊನೆಯಲ್ಲಿ ೧೪೪೩ ರಲ್ಲಿ ಸಾಹಿತ್ಯದ ಮಹಾ ಪೋಷಕನಾಗಿದ್ದ ಆಲ್ಫಾನ್ಸೋ ಮ್ಯಾಗ್ನಾನಿಮಸ್‌ನ ಆಳ್ವಿಕೆಯಲ್ಲಿ ಪುನಃ ಒಂದಾದವು. ೧೪೯೫ ರ ನಂತರ ಮೂವರು ಫ್ರೆಂಚ್ ದೊರೆಗಳು ಇದನ್ನು ಗೆದ್ದುಕೊಳ್ಳಲು ಪ್ರಯತ್ನಿಸಿದರೂ ಕೊನೆಯಲ್ಲಿ ಈ ಸಾಮ್ರಾಜ್ಯವನ್ನು ಆರಗಾನ್‌ನ ಫರ್ಡಿನೆಂಡ್ ವಶಪಡಿಸಿಕೊಂಡ. ಫ್ರೆಂಚ್ ದೊರೆಗಳಾದ ಎಂಟನೆಯ ಚಾರ್ಲ್ಸ್, ಹನ್ನೆರಡನೇ ಲೂಯಿ ಮತ್ತು ಮೊದಲನೆಯ ಫ್ರಾನ್ಸಿಸ್ ಅವರು ಮಿಲಾನ್ ಮತ್ತು ನೇಪಲ್ಸ್ ಮೇಲೆ ಹಕ್ಕು ಚಲಾಯಿಸಿದರು (ಆದರೆ ಕಾನೂನಿನ ಬಲವಿಲ್ಲದೆ); ಎಲ್ಲರೂ ತಾತ್ಕಾಲಿಕ ಗೆಲವನ್ನೇನೋ ಪಡೆದರೂ ಕೊನೆಗೆ ಎಲ್ಲರೂ ಸ್ಪಾನಿಯಾರ್ಡ್‌ರಿಂದ ಸೋಲನ್ನನುಭವಿಸಿದರು. ಸ್ಪೆಯಿನ್‌ನ ವಿಜಯ ಹಾಗೂ ಪ್ರತಿ–ಮತಧರ್ಮಸುಧಾರಣೆಗಳು ಇಟಾಲಿಯನ್ ನವೋದಯಕ್ಕೆ ಅಂತ್ಯವನ್ನು ತಂದುವು. ಪೋಪ್ ಏಳನೆಯ ಕ್ಲೆಮೆಂಟ್ ಪ್ರತಿ–ಮತಧರ್ಮಸುಧಾರಣೆಗೆ ಅಡ್ಡಿಯಾಗಿ ಮತ್ತು ಒಬ್ಬ ಮೆಡಿಸ್ಸೆ ಆದ, ಫ್ರಾನ್ಸ್‌ನ ಸ್ನೇಹಿತನಾದ ಐದನೆಯ ಚಾರ್ಲ್ಸ್ ೧೫೨೭ ರಲ್ಲಿ ಬಹುತೇಕ ಪ್ರಾಟೆಸ್ಟೆಂಟ್ ಸೈನ್ಯದಿಂದ ರೋಮ್ ಸೋಲನ್ನನುಭವಿಸಿತು. ಇದಾದ ಬಳಿಕ, ಪೋಪ್‌ರು ಹೆಚ್ಚು ಮತಧಾರ್ಮಿಕ ಮನೋಭಾವದವರಾದರು, ಮತ್ತು ಇಟಾಲಿಯನ್ ನವೋದಯವು ಕೊನೆಗಂಡಿತು.

ಇಟಲಿಯಲ್ಲಿನ ಅಧಿಕಾರ ರಾಜಕೀಯವು ನಂಬಲಾರದಷ್ಟು ಗೊಂದಲಪೂರ್ಣವಾದುದು. ಸಣ್ಣ ಪುಟ್ಟ ರಾಜರುಗಳು, ಅವರೆಲ್ಲ ಬಹುತೇಕ ಸ್ವಯಂಘೋಷಿತ ನಿರಂಕುಶಾಧಿಕಾರಿಗಳು, ಒಮ್ಮೆ ಒಂದು ದೊಡ್ಡ ಸಂಸ್ಥಾನದ ಜೊತೆ ಮತ್ತೊಮ್ಮೆ ಇನ್ನೊಂದರ ಜೊತೆ ಒಟ್ಟುಗೂಡಿದರು; ಅವರೇನಾದರೂ ಅವಿವೇಕದಿಂದ ವರ್ತಿಸಿದರೆ ನಿರ್ಮೂಲನಗೊಳಿಸಲಾಗುತ್ತಿತ್ತು. ಹೀಗಾಗಿ ನಿರಂತರವಾಗಿ ಯುದ್ಧಗಳಾಗುತ್ತಿದ್ದವು, ಆದರೆ ಕೊನೆಗೆ ೧೪೯೪ ರಲ್ಲಿ ಫ್ರೆಂಚ್‌ರು ಬರುವ ಹೊತ್ತಿಗೆ ಅವರೆಲ್ಲ ರಕ್ತಹೀನರಾಗಿದ್ದರು; ಸೈನಿಕರು ಸಂಬಳಕ್ಕಾಗಿದ್ದವರು, ಅವರಿಗೆ ತಮ್ಮ ವೃತ್ತಿಯ ಅಪಾಯವನ್ನು ತಗ್ಗಿಸಿಕೊಳ್ಳುವ ಹವಣಿಕೆ. ಈ ಶುದ್ಧ ಇಟಾಲಿಯನ್ ಯುದ್ಧಗಳು ವ್ಯಾಪಾರವನ್ನು ಅಷ್ಟಾಗಿ ಅಡ್ಡಿಪಡಿಸಲಿಲ್ಲ, ಅಥವಾ ದೇಶದ ಸಂಪತ್ತು ಹೆಚ್ಚಾಗಲು ಅಡ್ಡಿಯಾಗಲೂ ಇಲ್ಲ. ಫ್ರೆಂಚರು ಬಂದಾಗ ಅವರಲ್ಲಿ ರಾಜ್ಯತಂತ್ರವೇನೋ ಸಾಕಷ್ಟಿತ್ತು, ಆದರೆ ವಿವೇಕಯುತ ಮುತ್ಸದ್ದಿತನವಿರಲಿಲ್ಲ, ಹೀಗಾಗಿ ದೇಶವು ಬಹುಮಟ್ಟಿಗೆ ಅರಕ್ಷಕವಾಗಿತ್ತು. ಫ್ರೆಂಚ್ ಸೈನ್ಯವು ಯುದ್ಧರಂಗದಲ್ಲಿ ಜನರನ್ನು

ಹತ್ಯೆಗೈಯುವ ಮೂಲಕ ಇಟಾಲಿಯನ್‌ರನ್ನು ಆಘಾತಗೊಳಿಸಿತು. ಆನಂತರ ನಡೆದ ಫ್ರೆಂಚ್‌ರು ಮತ್ತು ಸ್ಪಾನಿಯಾರ್ಡ್‌ಗಳ ನಡುವಣ ಯುದ್ಧಗಳು ಗಂಭೀರ ಯುದ್ಧಗಳಾಗಿದ್ದವು, ಅವು ನರಳಾಟ ಮತ್ತು ಕೊರತೆಗಳನ್ನುಂಟುಮಾಡಿದವು. ಆದರೆ ಇಟಲಿಯ ಸಂಸ್ಥಾನಗಳು, ಫ್ರೆಂಚ್‌ರ ಅಥವಾ ಸ್ಪಾನಿಯಾರ್ಡ್‌ಗಳ ಸಹಾಯವನ್ನು ನಿರೀಕ್ಷಿಸಿ, ತಮ್ಮ ಆಂತರಿಕ ಜಗಳಗಳಲ್ಲಿ ಯಾವುದೇ ರಾಷ್ಟ್ರೀಯ ಐಕ್ಯದ ಕಾಳಜಿಯಿಲ್ಲದೆ ಪರಸ್ಪರ ಪಿತೂರಿಗಳಲ್ಲಿ ತೊಡಗಿದ್ದವು. ಕೊನೆಯಲ್ಲಿ, ಎಲ್ಲರೂ ನಾಶ ಹೊಂದಿದರು. ಇಟಲಿಯು ತನ್ನ ಪ್ರಾಮುಖ್ಯವನ್ನು ಕಳೆದುಕೊಳ್ಳುವುದು ಅನಿವಾರ್ಯವೆನಿಸಿದರೂ, ಅಮೆರಿಕದ ಮತ್ತು ಪೂರ್ವಕ್ಕೆ ಭೂಶಿರ ಮಾರ್ಗವು ಅನಾವರಣದಿಂದಾಗಿ ಉಳಿಯಿತು; ಪತನವು ಕಡಿಮೆ ದುರಂತಪೂರ್ಣವೂ ಇಟಲಿಯ ನಾಗರಿಕತೆಯು ಕಡಿಮೆ ವಿನಾಶಕಾರಕವೂ ಆಯಿತು.

ನವೋದಯವು ತತ್ವಜ್ಞಾನ ಕ್ಷೇತ್ರದಲ್ಲಿ ದೊಡ್ಡ ಸಾಧನೆಯ ಕಾಲವೇನೂ ಆಗಲಿಲ್ಲ, ಆದರೆ ಅದರಿಂದ ಹದಿನೇಳನೆಯ ಶತಮಾನದ ಔನ್ನತ್ಯದ ಆವಶ್ಯಕ ಭೂಮಿಕೆಯನ್ನು ಹರಗು ಮಾಡುವ ಕೆಲವು ಸಂಗತಿಗಳು ಜರುಗಿದವು. ಮೊದಲಿಗೆ, ಅದು ಬೌದ್ಧಿಕ ಕವಚವಾಗಿದ್ದ ನಿಷ್ಠುರ ಸೂಕ್ಷ್ಮತರ್ಕ ಪದ್ಧತಿಯನ್ನು ಶಿಥಿಲಗೊಳಿಸಿತು; ಪ್ಲೇಟೋ ಅಧ್ಯಯನವನ್ನು ಪುನರಾರಂಭಿಸಿ, ಆ ಮೂಲಕ ಅವನು ಮತ್ತು ಅರಿಸ್ಟಾಟಲ್‌ರ ನಡುವೆ ಯಾರನ್ನು ಆಯ್ದುಕೊಳ್ಳಬೇಕೆಂದು ನಿರ್ಣಯಿಸಲು ಬೇಕೆಂಬಷ್ಟರ ಮಟ್ಟಿಗಿನ ಸ್ವತಂತ್ರ ಆಲೋಚನೆಯನ್ನು ಉದ್ದೀಪಿಸಿತು. ಇಬ್ಬರ ವಿಷಯದಲ್ಲಿಯೂ, ನವಪ್ಲೇಟೋವಾದ ಮತ್ತು ಅರೇಬಿಕ್ ವ್ಯಾಖ್ಯಾನಗಳೆಂಬ ಪಾಚಿಯನ್ನು ಸರಿಸಿ ಅದು ನೇರ ಜ್ಞಾನವನ್ನು ಹೊಂದುವ ರೀತಿಯನ್ನು ಉತ್ತೇಜಿಸಿತು. ಅದಕ್ಕೂ ಮಿಗಿಲಾಗಿ, ಅದು ಬೌದ್ಧಿಕ ಚಟುವಟಿಕೆಯನ್ನು, ಕೇವಲ ಪೂರ್ವನಿಶ್ಚಿತ ಸಂಪ್ರದಾಯನಿಷ್ಠೆಯನ್ನು ಕಾಪಿಡುವ ಚಿಂತನೆಯನ್ನಾಗಿಸದೆ, ಸಂತೋಷಕರವಾದ ಸಾಮಾಜಿಕ ಸಾಹಸವೆಂದು ಭಾವಿಸುವ ಅಭ್ಯಾಸವನ್ನು ರೂಢಿಸಿತು.

ವಿದ್ವತ್‌ಪೂರ್ಣ ಅರಿಸ್ಟಾಟಲ್ ಜಾಗದಲ್ಲಿ ಪ್ಲೇಟೋನನ್ನು ಸ್ಥಾಪಿಸುವ ಕಾರ್ಯವು ಬೈಜ಼ಾಂಟಿಯನ್ ವಿದ್ವತ್ತಿನೊಡನೆ ಸಂಪರ್ಕ ಹೊಂದುವ ಮೂಲಕ ತೀವ್ರವಾಯಿತು. ಪೂರ್ವ ಮತ್ತು ಪಶ್ಚಿಮ ಚರ್ಚ್‌ಗಳನ್ನು ನಾಮಮಾತ್ರಕ್ಕಾದರೂ ಮತ್ತೆ ಒಗ್ಗೂಡಿಸುವ ಬಗ್ಗೆ ಈಗಾಗಲೇ ಫೆರಾರದಲ್ಲಿನ ಧರ್ಮಪರಿಷತ್ತು (೧೪೩೮) ನಡೆಸಿದ ಚರ್ಚೆಯಲ್ಲಿ ಬೈಜ಼ಾಂಟಿಯನ್‌ರು ಅರಿಸ್ಟಾಟಲ್‌ಗಿಂತ ಪ್ಲೇಟೋ ಉನ್ನತನೆಂದು ವಾದಿಸಿದ್ದರು. ಸಂಪ್ರದಾಯನಿಷ್ಠತೆಗೆ ಹೆಸರಾಗಿರದಿದ್ದ ಉತ್ಕಟ ಗ್ರೀಕ್ ಪ್ಲೇಟೋವಾದಿಯಾಗಿದ್ದ ಗೆಮಿಸ್ಟಸ್ ಪ್ಲೀಹೋ ಇಟಲಿಯಲ್ಲಿ ಪ್ಲೇಟೋವಾದವು ನೆಲೆಯೂರಲು ಬಹಳ ಕೆಲಸ ಮಾಡಿದ; ಅಂತೆಯೇ ಮಾಡಿದವನು ಬೆಸ್ಸಾರಿಯೋಂ, ಕಾರ್ಡಿನಲ್ ಆದ ಒಬ್ಬ ಗ್ರೀಕ್ ವ್ಯಕ್ತಿ. ಕಾಸಿಮೊ ಮತ್ತು ಲೊರೆಂಜ಼ೋ ಡೇಯಿ

ಮೆಡಿಸ್ಸೈ ಇಬ್ಬರೂ ಪ್ಲೇಟೋ ಭಕ್ತರಾಗಿದ್ದರು. ಕಾಸಿಮೊ ಸ್ಥಾಪಿಸಿದ ಫ್ಲಾರೆನ್ಸ್ ಅಕಾಡೆಮಿಯನ್ನು ಲೊರೆಂಜೋ ಮುಂದುವರಿಸಿದ; ಅದು ಪ್ಲೇಟೋ ಅಧ್ಯಯನಕ್ಕೆ ಬಹುತೇಕ ಮುಡಿಪಾಯಿತು. ಕಾಸಿಮೊ ಸತ್ತದ್ದೇ ಪ್ಲೇಟೋನ ಯಾವುದೋ ಒಂದು ಸಂವಾದವನ್ನು ಕೇಳಿಸಿಕೊಳ್ಳುತ್ತ. ಆ ಕಾಲದ ಮಾನವೀಯತಾವಾದಿಗಳು ಪ್ರಾಚೀನ ವಿದ್ಯೆಯನ್ನು ಗಳಿಸಿ, ತತ್ವಜ್ಞಾನ ಕ್ಷೇತ್ರದಲ್ಲಿ ಸ್ವಂತವಾದುದೇನನ್ನಾದರೂ ಮಾಡುವ ಪ್ರಯತ್ನದಲ್ಲಿ ಮಗ್ನರಾಗಿದ್ದರು.

ನವೋದಯವೇನೂ ಜನಪ್ರಿಯ ಚಳುವಳಿಯಾಗಿರಲಿಲ್ಲ; ಅದು ಸಣ್ಣ ಸಂಖ್ಯೆಯ ವಿದ್ವಾಂಸರು ಮತ್ತು ಕಲೆಗಾರರ ಚಳುವಳಿಯಾಗಿತ್ತು, ಅವರಿಗೆ ಉದಾರಿ ಪೋಷಕರು, ಅದರಲ್ಲಿಯೂ ಮೆಡಿಸ್ಸೈಗಳು ಮತ್ತು ಮಾನವೀಯತಾವಾದಿ ಪೋಪ್‌ರು, ಉತ್ತೇಜನ ನೀಡುತ್ತಿದ್ದರು. ಈ ಪೋಷಕರಿಲ್ಲದಿದ್ದರೆ, ಆ ಚಳುವಳಿಗೆ ಅಷ್ಟು ಯಶಸ್ಸು ದೊರೆಯುತ್ತಿರಲಿಲ್ಲ. ಹದಿನಾಲ್ಕನೆಯ ಶತಮಾನದಲ್ಲಿದ್ದ ಪೆಟ್ರಾರ್ಕ್ ಮತ್ತು ಬೊಕ್ಕಾಶಿಯೋರು ಮಾನಸಿಕವಾಗಿ ನವೋದಯಕ್ಕೆ ಸೇರಿದವರಾಗಿದ್ದರು, ಆದರೆ ತಮ್ಮ ಕಾಲದಲ್ಲಿನ ವಿಭಿನ್ನ ರಾಜಕೀಯ ಪರಿಸ್ಥಿತಿಗಳಿಂದಾಗಿ ಅವರು ಬೀರಿದ ತಕ್ಷಣದ ಪ್ರಭಾವ ಹದಿನೈದನೆಯ ಶತಮಾನದ ಮಾನವೀಯತಾವಾದದಷ್ಟು ಗಣನೀಯವಾಗಿರಲಿಲ್ಲ.

ಚರ್ಚ್ ಬಗ್ಗೆ ನವೋದಯದ ವಿದ್ವಾಂಸರ ಮನೋಭಾವವನ್ನು ಸರಳವಾಗಿ ಹೇಳುವುದು ಕಷ್ಟ. ಕೆಲವರು ಕಟ್ಟಾ ಸ್ವತಂತ್ರಚಿಂತಕರು, ಆದರೆ ಇವರು ಕೂಡ ಸಾಮಾನ್ಯವಾಗಿ ಹೆಚ್ಚಿನ ಪ್ರೋತ್ಸಾಹವನ್ನೇನೂ ಪಡೆಯಲಿಲ್ಲ, ಸಾವು ಹತ್ತಿರ ಬಂದಾಗ ಅವರು ಚರ್ಚ್ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದರು. ಅವರಲ್ಲಿ ಬಹುತೇಕರು ಸಮಕಾಲೀನ ಪೋಪ್‌ರ ಕೆಡುಕುತನದ ಬಗ್ಗೆ ಅರಿವಿದ್ದವರೇ, ಆದರೆ ಅವರಿಗೆ ಸಹಾಯಕರಾಗಲು ಸಂತೋಷಗೊಳ್ಳುತ್ತಿದ್ದವರು. ೧೫೨೯ ರಲ್ಲಿ ಇತಿಹಾಸಕಾರನಾದ ಗಿಕ್ಸಿಯಾರ್ಡಿನಿ ಹೀಗೆ ಬರೆಯುತ್ತಾನೆ:

‘ಯಾವ ವ್ಯಕ್ತಿಯೂ ನನ್ನಷ್ಟು ಮಹತ್ವಾಕಾಂಕ್ಷೆ, ದುರಾಸೆ ಮತ್ತು ಪುರೋಹಿತ ಸ್ವೇಚ್ಛಾಚಾರಗಳ ವೇಷ ಹೊತ್ತವರಿಲ್ಲ, ಇದು ಪ್ರತಿಯೊಂದೂ ಹೀನವಾದುದು ಎಂಬ ಕಾರಣಕ್ಕಾಗಿ ಅಲ್ಲ, ಇವೆಲ್ಲ ಮತ್ತು ಅವುಗಳಲ್ಲಿ ಪ್ರತಿಯೊಂದೂ ದೇವರೊಡನೆ ವಿಶೇಷ ಸಂಬಂಧ ಹೊಂದಿರುವೆವೆಂದು ಘೋಷಿಸಿಕೊಳ್ಳುವವರಿಗೆ ಎಳ್ಳಷ್ಟೂ ತಕ್ಕದಲ್ಲ ಎಂಬುದರಿಂದ, ಅಲ್ಲದೆ ಅವಗಳಲ್ಲಿ ಪರಸ್ಪರ ವಿರೋಧಗಳಿರುವುದರಿಂದ, ಅವು ವಿಚಿತ್ರ ರೀತಿಗಳಲ್ಲಿ ಮಾತ್ರವೇ ಒಟ್ಟಿಗಿರಲು ಸಾಧ್ಯ. ಇಷ್ಟಾದರೂ, ಅನೇಕ ಮಂದಿ ಪೋಪ್‌ರು ಇದ್ದ ಸಭೆಯಲ್ಲಿನ ನನ್ನ ಸ್ಥಾನವು ಅವರ ಹಿರಿಮೆಯನ್ನು ನನ್ನ ಸ್ವಹಿತಕ್ಕಾಗಿಯೇ ಹೊಂದುವ ಬಯಕೆಯನ್ನು ನನ್ನಲ್ಲುಂಟುಮಾಡಿತು. ಮಾರ್ಟಿನ್ ಲೂಥರ್ ಅನ್ನು ನಾನು ನನ್ನಷ್ಟೇ ಪ್ರೀತಿಸಬೇಕಾಗಿತ್ತು, ನಮ್ಮ ಮೇಲೆ ಹೇರುವ

ಸಾಮಾನ್ಯವಾಗಿ ತಿಳಿದಿರುವ ಮತ್ತು ವಿವರಿಸುವ ಕ್ರೈಸ್ತಮತದ ನಿಯಮಗಳಿಂದ ನಾನು ಸ್ವತಂತ್ರನಾಗಬೇಕೆಂಬ ಕಾರಣಕ್ಕಲ್ಲ, ಆದರೆ ಈ ಪುಂಡರ ದಂಡನ್ನು ಅವರ ಸ್ಥಳಗಳಲ್ಲಿ ಇರಿಸಿ, ಅವರು ಅನೀತಿಯಿಲ್ಲದೆ ಅಥವಾ ಅಧಿಕಾರವಿಲ್ಲದೆ ಇರುವಂತೆ ನಿಗದಿಪಡಿಸುವ ಉದ್ದೇಶದಿಂದ.'[೨೪೮]

ಮನಬಿಚ್ಚಿ ಆಡಿರುವ ಈ ಮಾತುಗಳು ಉಲ್ಲಾಸದಾಯಕವಾಗಿರುವುದಷ್ಟೇ ಅಲ್ಲದೆ, ಮಾನವೀಯತಾವಾದಿಗಳು ಏಕೆ ಮತಧರ್ಮಸುಧಾರಣೆಯನ್ನು ಆರಂಭಿಸಲಾಗಲಿಲ್ಲ ಎಂಬುದನ್ನು ವಿವರಿಸುತ್ತದೆ. ಮೇಲಾಗಿ, ಅವರಲ್ಲಿ ಬಹುತೇಕ ಜನರು ಸಂಪ್ರದಾಯನಿಷ್ಠೆ ಮತ್ತು ಸ್ವತಂತ್ರಚಿಂತನೆಗಳ ನಡುವಣ ಸುವರ್ಣ ಮಾಧ್ಯಮವನ್ನು ಕಂಡುಕೊಳ್ಳಲಾಗಲಿಲ್ಲ; ಅವರಿಗೆ ಲೂಥರ್‌ನ ನಿಲವು ಅಸಾಧ್ಯವಾದುದಾಗಿತ್ತು, ಯಾಕೆಂದರೆ ಅವರಲ್ಲಿ ಮಧ್ಯಯುಗದಲ್ಲಿದ್ದ ಮತಧರ್ಮಶಾಸ್ತ್ರದ ಸೂಕ್ಷ್ಮಗಳ ಬಗೆಗಿನ ಭಾವನೆಯಿರಲಿಲ್ಲ. ಸನ್ಯಾಸಿ–ಸನ್ಯಾಸಿನಿಯರ ಹಾಗೂ ಕ್ರೈಸ್ತಭಿಕ್ಷುಗಳ ಕಪಟವನ್ನು ವಿವರಿಸಿದ ಬಳಿಕ ಮ್ಯಾಸುಕ್ಸಿಯೋ ಹೀಗೆನ್ನುತ್ತಾನೆ: 'ದೇವರು ಕೊಡಬಹುದಾದ ಅತ್ಯುತ್ತಮ ಶಿಕ್ಷೆಯೆಂದರೆ ಅವರಿಗೆ ಶುದ್ಧಿಲೋಕವನ್ನು ಇಲ್ಲವಾಗಿಸುವುದು; ಆನಂತರ ಅವರು ಇನ್ನಾವ ಭಿಕ್ಷೆಯನ್ನೂ ಪಡೆಯಲಾರರು, ಹೀಗಾಗಿ ಮತ್ತೆ ಅವರು ಗುದ್ದಲಿಯ ಕಡೆಗೇ ಹೋಗಬೇಕಾದ ಪರಿಸ್ಥಿತಿ ಉಂಟಾಗುತ್ತದೆ.'[೨೪೯] ಆದರೆ ಲೂಥರ್‌ಗೆ ಆದಂತೆ ಅವನಿಗೆ ಹೊಳೆಯದಿದ್ದುದೆಂದರೆ ಕ್ಯಾಥೋಲಿಕ್ ಚರ್ಚ್‌ನ ಬಹ್ವಂಶವನ್ನುಳಿಸಿಕೊಳ್ಳುವಾಗ ಶುದ್ಧಿಲೋಕವನ್ನು ರದ್ದುಗೊಳಿಸುವುದು.

ರೋಮ್‌ನ ಶ್ರೀಮಂತಿಕೆ ಪೋಪ್ ಪ್ರದೇಶಗಳಿಂದ ಬಂದ ಆದಾಯದ ಮೇಲೆ ಅತ್ಯಲ್ಪವಾಗಿ ಅವಲಂಬಿಸಿತ್ತು; ಮುಖ್ಯವಾಗಿ ಇಡೀ ಕ್ಯಾಥೋಲಿಕ್ ಜಗತ್ತಿನಿಂದ, ಪೋಪ್‌ಗಳು ಸ್ವರ್ಗದ ಕೀಲಿಕೈಗಳನ್ನು ಹೊಂದಿರುವವರೆಂಬ ಮತಧರ್ಮಶಾಸ್ತ್ರದ ಮೂಲಕ, ಪಡೆದ ಒಂದು ಗೌರವ. ಈ ವ್ಯವಸ್ಥೆಯನ್ನು ಜೋರಾಗಿ ಪ್ರಶ್ನಿಸುವ ಇಟಾಲಿಯನ್ ಅದನ್ನು ದರಿದ್ರಗೊಳಿಸುವ ಹಾಗೂ ಪಶ್ಚಿಮ ಜಗತ್ತಿನಲ್ಲಿನ ತನ್ನ ಸ್ಥಾನವನ್ನು ಕಳೆದುಕೊಳ್ಳುವ ಅಪಾಯಕ್ಕೆ ಈಡಾಗಲು ಕಾರಣವಾಗುತ್ತಿದ್ದ. ಇದರಿಂದಾಗಿ ನವೋದಯದಲ್ಲಿ ಇಟಾಲಿಯನ್ ಸಂಪ್ರದಾಯನಿಷ್ಠೆಯು ಕೇವಲ ಬೌದ್ಧಿಕವಾದುದಾಗಿ, ಬಿರುಕಿಗೆ ಅಥವಾ ಚರ್ಚ್‌ಗೆ ದೂರವಾಗುವ ಜನತಾ ಚಳುವಳಿಯನ್ನು ಸೃಷ್ಟಿಸಲು ಕಾರಣವಾಗದಂಥದ್ದಾಗಿತ್ತು. ಇದಕ್ಕಿರುವ ಏಕೈಕ ಅಪವಾದವೆಂದರೆ, ಅದೂ ಆಂಶಿಕವಾದುದು, ಮಾನಸಿಕವಾಗಿ ಮಧ್ಯಯುಗಕ್ಕೆ ಸೇರಿದ್ದ ಸವೋನರೋಲಾ.

---

೨೪೮. ಬರ್ಕಾರ್ಟ್ ಅವರ 'ರಿನೈಸಾನ್ಸ್ ಇನ್ ಇಟಲಿ', ಭಾಗ ೪, ಅಧ್ಯಾಯ ೨ ರಿಂದ ಉದ್ಧೃತ.
೨೪೯. ಅದೇ.

ಬಹುತೇಕ ಮಾನವೀಯತಾವಾದಿಗಳು ಪ್ರಾಚೀನಕಾಲದಲ್ಲಿ ಬೆಂಬಲ ದೊರೆಯುತ್ತಿದ್ದ ಮೂಢನಂಬಿಕೆಗಳನ್ನು ಉಳಿಸಿಕೊಂಡಿದ್ದರು. ಮಾಟ ಮತ್ತು ಮಂತ್ರಗಳು ಕೆಡುಕುತದ್ದಾಗಿರಬಹುದು, ಆದರೆ ಅವನ್ನು ಅಸಾಧ್ಯವೆಂದು ಭಾವಿಸಲಿಲ್ಲ. ಎಂಟನೆಯ ಇನ್ನೋಸೆಂಟ್ ೧೪೮೪ ರಲ್ಲಿ ಮಾಟದ ವಿರುದ್ಧ ರಾಯಸವೊಂದನ್ನು ಹೊರಡಿಸಿದ, ಇದರಿಂದ ಜರ್ಮನಿ ಮತ್ತು ಇತರೆಡೆಗಳಲ್ಲಿ ಮಾಟಗಾರರನ್ನು ಅಮಾನವೀಯವಾಗಿ ಹಿಂಸಿಸಲಾಯಿತು. ಜ್ಯೋತಿಷ್ಯಕ್ಕೆ ಬೆಲೆ ನೀಡಲಾಗುತ್ತಿತ್ತು, ಅದೂ ಸ್ವತಂತ್ರಚಿಂತಕರಿಂದ. ಪ್ರಾಚೀನ ಕಾಲದಿಂದಲೂ ಇಲ್ಲದಿದ್ದಂತಹ ಚಾಲನೆ ಅದಕ್ಕೆ ದೊರೆಯಿತು. ಚರ್ಚ್‌ನಿಂದ ಮೊದಲ ವಿಮೋಚನೆಯೆಂದರೆ, ಮನುಷ್ಯರನ್ನು ವೈಚಾರಿಕವಾಗಿ ಮಾಡುವುದಾಗಿರದೆ ಪ್ರಾಚೀನ ಅಸಂಬದ್ಧತೆಗಳನ್ನು ತುರುಕಲು ಜನರ ಮನಸ್ಸನ್ನು ತೆರೆದಿಡುವುದಾಯಿತು.

ನೈತಿಕವಾಗಿ, ವಿಮೋಚನೆಯ ಮೊದಲ ಪರಿಣಾಮವೂ ಅಷ್ಟೇ ಹಾನಿಕಾರಕವಾಗಿತ್ತು. ಹಳೆಯ ನೈತಿಕ ನಿಯಮಗಳು ಬೆಲೆಯನ್ನು ಕಳೆದುಕೊಂಡವು; ಸಂಸ್ಥಾನಗಳ ಬಹುತೇಕ ರಾಜರುಗಳು ತಮ್ಮ ಸ್ಥಾನವನ್ನು ವಿದ್ರೋಹದಿಂದಲೇ ಪಡೆದಿದ್ದರು ಹಾಗೂ ಅದನ್ನು ಕಾರುಣ್ಯರಹಿತ ಕ್ರೌರ್ಯದಿಂದ ಉಳಿಸಿಕೊಂಡಿದ್ದರು. ಪೋಪ್‌ನ ಕಿರೀಟಧಾರಣೆಯ ಸಂದರ್ಭದಲ್ಲಿ ಭೋಜನಕೂಟಕ್ಕೆ ಕಾರ್ಡಿನಲ್‌ಗಳನ್ನು ಆಹ್ವಾನಿಸಿದಾಗ ಅವರು, ವಿಷವುಣಿಸುವ ಭಯದಿಂದಾಗಿ, ತಮ್ಮದೇ ವೈನ್ ಹಾಗೂ ಬಟ್ಟಲು ಹಿಡಿಯುವ ಸೇವಕರನ್ನು ಕರೆತರುತ್ತಿದ್ದರು.[೨೫೦] ಸವೋನರೋಲಾನನ್ನು ಹೊರತುಪಡಿಸಿ, ಆ ಕಾಲದ ಯಾವ ಇಟಾಲಿಯನ್ ಕೂಡ ಸಾರ್ವಜನಿಕ ಉದ್ದೇಶಕ್ಕಾಗಿ ಅಪಾಯವೆದುರಿಸಲು ಸಿದ್ಧನಿರಲಿಲ್ಲ. ಪೋಪ್‌ರ ಲಂಚಗುಳಿತನವು ಎದ್ದು ಕಾಣುವಂತಿತ್ತು, ಆದರೆ ಅವರ ಮೇಲೆ ಯಾವ ಕ್ರಮವನ್ನೂ ಜರುಗಿಸಲಿಲ್ಲ. ಇಟಾಲಿಯನ್ ಐಕ್ಯದ ಅಪೇಕ್ಷಣೀಯತೆಯು ಸ್ಪಷ್ಟವಾಗಿತ್ತು, ಆದರೆ ರಾಜರು ಅದನ್ನು ಸಾಧಿಸುವ ಸಾಮರ್ಥ್ಯ ಹೊಂದಿರಲಿಲ್ಲ. ವಿದೇಶೀ ಆಕ್ರಮಣವು ಯಾವ ಕಾಲದಲ್ಲಾದರೂ ನಡೆಯಬಹುದಾಗಿತ್ತು, ಆದರೆ ಇತರ ಇಟಾಲಿಯನ್ ರಾಜರ ಜೊತೆಗಿನ ವಿವಾದದಲ್ಲಿ ಟರ್ಕ್‌ರ ಸಮೇತ ಬೇರಾವುದೇ ವಿದೇಶಿ ಶಕ್ತಿಯ ಬೆಂಬಲ ಪಡೆಯಲು ಪ್ರತಿ ಇಟಾಲಿಯನ್ ರಾಜನೂ ತವಕಿಸುತ್ತಿದ್ದ. ಪ್ರಾಚೀನ ಹಸ್ತಪ್ರತಿಗಳನ್ನು ನಾಶಪಡಿಸಿದ್ದರ ಹೊರತಾಗಿ ನನಗೆ ಬೇರಾವ ಅಪರಾಧವೂ ಮನಸ್ಸಿಗೆ ಬರುವುದಿಲ್ಲ, ಅಲ್ಲದೆ ನವೋದಯದ ಜನರು ಇದಕ್ಕೆ ಪದೇ ಪದೇ ಪಕ್ಕಾಗಲಿಲ್ಲ.

ನೈತಿಕತೆಯ ಪರಿಧಿಯ ಹೊರಗೆ, ನವೋದಯದಲ್ಲಿ ಅನೇಕ ಗುಣಗಳಿದ್ದವು. ವಾಸ್ತುಶಿಲ್ಪ, ವರ್ಣಚಿತ್ರಕಲೆ ಮತ್ತು ಕಾವ್ಯಗಳಲ್ಲಿ ಅದು ಪ್ರಸಿದ್ಧಿಯನ್ನು ಉಳಿಸಿಕೊಂಡಿದೆ.

---

೨೫೦. ಬರ್ಕಾರ್ಟ್ ಅವರ 'ರಿನೈಸಾನ್ಸ್ ಇನ್ ಇಟಲಿ', ಭಾಗ ೬, ಅಧ್ಯಾಯ ೧

ಅದರಲ್ಲಿ, ಲಿಯೊನಾರ್ಡೋ, ಮೈಕೇಲೇಂಜೆಲೋ ಮತ್ತು ಮೆಕಿಯವೆಲ್ಲಿಯಂತಹ ಬಹು ದೊಡ್ಡ ವ್ಯಕ್ತಿಗಳು ಹೊಮ್ಮಿದರು. ಅದು ಶಿಕ್ಷಿತ ಜನರನ್ನು ಮಧ್ಯಕಾಲೀನ ಸಂಸ್ಕೃತಿಯ ಸಂಕುಚಿತತೆಯಿಂದ ಪಾರುಮಾಡಿತು, ಮತ್ತು ಪ್ರಾಚೀನತೆಯ ಆರಾಧನೆಯ ಗುಲಾಮತನದ್ದಾಗಿದ್ದೂ, ಎಲ್ಲ ವಿಷಯಗಳಲ್ಲಿಯೂ ಪ್ರಸಿದ್ಧ ಪರಿಣತರು ವಿಭಿನ್ನ ಅಭಿಪ್ರಾಯಗಳನ್ನು ಹೊಂದಿದ್ದುದರ ಬಗ್ಗೆ ವಿದ್ವಾಂಸರಲ್ಲಿ ಅರಿವುಂಟುಮಾಡಿತು. ಗ್ರೀಕ್ ಜಗತ್ತಿನ ಜ್ಞಾನವನ್ನು ಪುನರುದ್ಧಾರ ಮಾಡುವುದರ ಮೂಲಕ ಅದು ಸೃಷ್ಟಿಸಿದ ಮಾನಸಿಕ ಪರಿಸರದಲ್ಲಿ ಹೆಲೆನಿಕ್ ಸಾಧನೆಗಳಿಗೆ ಪ್ರತಿಸ್ಪರ್ಧಿಯಾಗುವ ಮತ್ತು ಅಲೆಕ್ಸಾಂಡರ್‌ನ ಕಾಲದಿಂದಲೂ ಕಣ್ಮರೆಯಾಗಿದ್ದ ವೈಯಕ್ತಿಕ ಪ್ರತಿಭೆಯು ಸ್ವತಂತ್ರವಾಗಿ ಬೆಳಗುವ ಪರಿಸ್ಥಿತಿಯುಂಟಾಯಿತು. ನವೋದಯದ ರಾಜಕೀಯ ಪರಿಸ್ಥಿತಿಗಳು ವೈಯಕ್ತಿಕ ಬೆಳವಣಿಗೆಗೆ ಪೂರಕವಾಗಿದ್ದುವು, ಆದರೆ ಅವು ಅಸ್ಥಿರವಾದವು; ಅಸ್ಥಿರತೆ ಮತ್ತು ವೈಯಕ್ತಿಕತೆಗಳು ಪ್ರಾಚೀನ ಗ್ರೀಸ್‌ನಲ್ಲಿನಂತೆ ನಿಕಟವಾದವು. ಸ್ಥಿರ ಸಾಮಾಜಿಕ ವ್ಯವಸ್ಥೆಯು ಆವಶ್ಯಕ, ಆದರೆ ರೂಪುಗೊಂಡ ಪ್ರತಿ ಸ್ಥಿರ ವ್ಯವಸ್ಥೆಯೂ ಅಸಾಧಾರಣ ಕಲೆಗಾರಿಕೆ ಮತ್ತು ಬೌದ್ಧಿಕ ಉತ್ಕೃಷ್ಟತೆಗಳ ಬೆಳವಣಿಗೆಗೆ ಅಡ್ಡಿಗಳೇ ಆಗಿವೆ. ನವೋದಯವು ಮಾಡಿದಂತಹ ಹಿರಿಯ ಸಾಧನೆಗಳಿಗಾಗಿ ನಾವಿನ್ನೂ ಎಷ್ಟು ಅನಾಯಕತ್ವ ಮತ್ತು ಕೊಲೆಗಳನ್ನು ಸಹಿಸಿಕೊಳ್ಳಬೇಕಾಗಿದೆಯೋ ಏನೋ? ಹಿಂದಾದರೆ ಬಹಳ; ನಮ್ಮ ಕಾಲದಲ್ಲಿ ತುಂಬ ಕಡಿಮೆ. ಈ ಸಮಸ್ಯೆಗೆ ಇದುವರೆಗೆ ಯಾವುದೇ ಪರಿಹಾರವನ್ನು ಕಂಡುಕೊಳ್ಳಲಾಗಿಲ್ಲ, ಆದರೆ ಸಾಮಾಜಿಕ ಸಂಘಟನೆಯು ಹೆಚ್ಚುವುದೂ ಅಷ್ಟೇ ಮುಖ್ಯವಾದುದು.

○

೩

ಮೆಕಿಯವೆಲ್ಲಿ

ನವೋದಯವು ಯಾವನೇ ಪ್ರಮುಖ ಸೈದ್ಧಾಂತಿಕ ತತ್ವಜ್ಞಾನಿಯನ್ನು ಸೃಷ್ಟಿಸದಿದ್ದರೂ ರಾಜನೀತಿ ತತ್ವಜ್ಞಾನದಲ್ಲಿ (ಪೊಲಿಟಿಕಲ್ ಫಿಲಾಸಫಿ) ಅತ್ಯಂತ ಶ್ರೇಷ್ಠನಾದ ಒಬ್ಬನನ್ನು ಸೃಷ್ಟಿಸಿತು. ಅವನೇ ನಿಕೋಲಾಸ್ ಮೆಕಿಯವೆಲ್ಲಿ, ಅವನ ಹೆಸರು ಕೇಳಿದರೇ ಹೌಹಾರುವುದು ವಾಡಿಕೆ, ಅವನು ಸ್ವಲ್ಪ ಮಟ್ಟಿಗೆ ಆಘಾತಕಾರಿಯೂ ಹೌದು. ಆದರೆ ಇತರ ಅನೇಕರು ಹಾಗಿರುವುದು ಅವರು ಅಷ್ಟರಮಟ್ಟಿಗೆ ವಂಚಕತನದಿಂದ ಸ್ವತಂತ್ರವಾಗಿದ್ದರೆ, ಅವನ ರಾಜನೀತಿ ತತ್ವಜ್ಞಾನವು ವೈಜ್ಞಾನಿಕವಾಗಿ ಅನುಭವಾತ್ಮಕವಾದುದು, ಅದು ಅವನದೇ ಸ್ವಂತ ವಿಚಾರಗಳನ್ನು ಆಧರಿಸಿರುವಂತಹುದು; ಉದ್ದೇಶಗಳು ಒಳ್ಳೆಯವಾಗಿರಲಿ ಕೆಟ್ಟುದಾಗಿರಲಿ ಅಂತಹ ಉದ್ದೇಶಗಳನ್ನು ನೆರವೇರಿಸಲು ಸಾಧನಗಳನ್ನು ಗುರುತಿಸುವುಕ್ಕೆ ಸಂಬಂಧಿಸಿದ್ದು ಅದು. ಸಂದರ್ಭಾನುವಶಾತ್, ತಾನು ಅಪೇಕ್ಷಿಸುವ ಗುರಿಗಳನ್ನವನು ಉಲ್ಲೇಖಿಸಿದರೂ, ಅದು ನಾವೆಲ್ಲರೂ ಶ್ಲಾಘಿಸುವಂತಹುದೇ ಆಗಿರುತ್ತವೆ. ಅವನ ಹೆಸರಿಗೆ ಅಂಟಿಕೊಂಡಿರುವ ಲಾಗಾಯ್ತಿನ ತೆಗಳಿಕೆಗಳಿಗೆಲ್ಲ ಕಾರಣ ತಮ್ಮ ಕೆಡುಕುತನವನ್ನು ಧೈರ್ಯವಾಗಿ ಒಪ್ಪಿಕೊಳ್ಳುವುದನ್ನು ಇಚ್ಛಿಸದ ಆಷಾಢಭೂತಿಗಳ ಕೋಪ. ಆದರೆ ಪ್ರಾಮಾಣಿಕ ವಿಮರ್ಶೆ ಮಾಡಬೇಕಾದ ಅನೇಕ ವಿಷಯಗಳು ಅವನಲ್ಲಿ ಇರುವುದು ನಿಜ, ಆದರೆ ಈ ವಿಷಯಗಳಲ್ಲಿ ಅವನು ತನ್ನ ಕಾಲವನ್ನು ಪ್ರತಿನಿಧಿಸುತ್ತಾನೆ. ರಾಜಕೀಯ ಅಪ್ರಾಮಾಣಿಕತೆಯ ಬಗೆಗಿನ ಅಂತಹ ಬೌದ್ಧಿಕ ಪ್ರಾಮಾಣಿಕತೆಯು ಬೇರೆ ಕಾಲದಲ್ಲೋ ಬೇರೆ ಅವಕಾಶದಲ್ಲೋ ಆಗಿದ್ದರೆ ಸಾಧ್ಯವಾಗುವುದು ತುಂಬ ಕಷ್ಟಕರವಾಗುತ್ತಿತ್ತು; ಪ್ರಾಯಶಃ ಇದಕ್ಕೆ ಅಪವಾದ ಗ್ರೀಸ್‌ನ ಜನತೆ, ಯಾಕೆಂದರೆ ಅವರ ಸೈದ್ಧಾಂತಿಕ ತರಬೇತಿಯ ಕಾರಣ ಸೂಫಿಸ್ಟ್‌ರು ಹಾಗೂ ಸಣ್ಣಪುಟ್ಟ ರಾಜ್ಯಗಳ ಯುದ್ಧಗಳ ಅವರ ವ್ಯಾವಹಾರಿಕ ತರಬೇತಿಗೆ ಕಾರಣ, ನವೋದಯದ ಇಟಲಿಯಂತೆ ಪ್ರಾಚೀನ ಗ್ರೀಸ್‌ನಲ್ಲಿಯೂ, ವೈಯಕ್ತಿಕ ಪ್ರತಿಭೆಯ ರಾಜಕೀಯ ಸಾಹಚರ್ಯ.

ಮೆಕಿಯವೆಲ್ಲಿ (೧೪೬೭–೧೫೨೭) ಫ್ಲಾರೆನ್ಸ್‌ನವನು, ಅವನ ತಂದೆ ಒಬ್ಬ ವಕೀಲ, ಬಡವನೂ ಅಲ್ಲ, ಹಣವಂತನೂ ಅಲ್ಲ. ತನ್ನ ಇಪ್ಪತ್ತರ ವಯಸ್ಸಿನಲ್ಲಿದ್ದಾಗ ಸವನೋರಾಲ ಫ್ಲಾರೆನ್ಸ್‌ನಲ್ಲಿ ಪ್ರಬಲನಾಗಿದ್ದ; ಅವನ ದುರಂತಪೂರ್ಣ ಕೊನೆಯು ಮೆಕಿಯವೆಲ್ಲಿಯ ಮೇಲೆ ತುಂಬ ಪರಿಣಾಮವನ್ನು ಬೀರಿದ್ದುದು ಸ್ಪಷ್ಟವಾಗಿದೆ; 'ಎಲ್ಲ ಸಶಸ್ತ್ರ ಪ್ರವಾದಿಗಳೂ ಗೆದ್ದಿದ್ದಾರೆ ಮತ್ತು ನಿಶ್ಶಸ್ತ್ರರು ಸೋತಿದ್ದಾರೆ' ಎಂಬ ಅವನ ಮಾತು, ಮತ್ತು ಎರಡನೆಯದಕ್ಕೆ ಸಾಕ್ಷಿಯಾಗಿ ಅವನು ನೀಡುವ ಸವನೊರಾಲನ ಉದಾಹರಣೆ. ಇನ್ನೊಂದು ಕಡೆ, ಅವನು ಮೋಸಸ್, ಸೈರಸ್, ಥೇಸಿಯಸ್ ಮತ್ತು ರೋಮ್ಯುಲಸ್‌ರನ್ನು ಉಲ್ಲೇಖಿಸುತ್ತಾನೆ. ನವೋದಯದಲ್ಲಿ ಎದ್ದುಕಾಣುವುದೆಂದರೆ ಕ್ರಿಸ್ತನನ್ನು ಉಲ್ಲೇಖಿಸದಿರುವುದು.

ಸವನೊರಾಲನನ್ನು ಗಲ್ಲಿಗೇರಿಸಿದ ತಕ್ಷಣವೇ, ಮೆಕಿಯವೆಲ್ಲಿ ಫ್ಲಾರೆನ್ಸ್ ಸರ್ಕಾರದಲ್ಲಿ ಒಂದು ಸಣ್ಣ ನೌಕರಿಯನ್ನು ಪಡೆದ (೧೪೯೮). ೧೫೧೨ ರಲ್ಲಿ ಆದ ಮೆಡಿಸೈಗಳ ಪುನರುತ್ಥಾನದವರೆಗೂ, ಅವನು ಆ ಸೇವೆಯಲ್ಲೇ ಮುಂದುವರಿದ, ಕೆಲವು ವೇಳೆ ಮುಖ್ಯವಾದ ರಾಜತಾಂತ್ರಿಕ ಕಾರ್ಯದ ಮೇಲೆ; ಆನಂತರ ಅವನನ್ನು ಬಂಧಿಸಲಾಯಿತು, ಆದರೆ ಬಿಡುಗಡೆಗೊಂಡು ಫ್ಲಾರೆನ್ಸ್ ಹತ್ತಿರದ ಹಳ್ಳಿಯಲ್ಲಿ ವಾಸಿಸಲು ಅನುಮತಿ ಪಡೆದ. ಏನಾದರೂ ಮಾಡಬೇಕೆಂದು ಅವನ ಲೇಖನವೃತ್ತಿಯನ್ನು ಕೈಗೊಂಡ. ಅವನ ಅತ್ಯಂತ ಹೆಸರಾಂತ ಕೃತಿ 'ದ ಪ್ರಿನ್ಸ್' ಅನ್ನು ಬರೆದದ್ದು ೧೫೧೩ ರಲ್ಲಿ, ಮೆಡಿಸೈಗಳ ಕೃಪೆಗೊಳಗಾಗಲು (ಆದರೆ ಸಫಲನಾಗಲಿಲ್ಲ) ಅದನ್ನವನು ಎರಡನೆಯ ಲೊರೆಂಝೋಗೆ ಅರ್ಪಣೆ ಮಾಡಿದ. ಅದರ ಧಾಟಿಗೆ ಭಾಗಶಃ ಕಾರಣ ಈ ವ್ಯಾವಹಾರಿಕ ಉದ್ದೇಶ; ಅದೇ ಕಾಲಕ್ಕೇ ಅವನು ಬರೆಯುತ್ತಿದ್ದ ದೀರ್ಘ ಕೃತಿ 'ಡಿಸ್ಕೋರ್ಸಸ್' ಎದ್ದು ಕಾಣುವಂತೆಯೇ ಹೆಚ್ಚು ಗಣತಂತ್ರವಾದಿಯದೂ ಹೆಚ್ಚು ಉದಾರವಾದುದೂ ಆಗಿದೆ. ತನ್ನ ಪುಸ್ತಕದಲ್ಲಿ ಗಣತಂತ್ರಗಳ ಬಗ್ಗೆ ಮಾತನಾಡುವುದಿಲ್ಲವೆಂದೂ, ಅದನ್ನು ಬೇರೆಡೆ ಮಾಡುತ್ತೇನೆಂದೂ, 'ದ ಪ್ರಿನ್ಸ್'ನ ಆರಂಭದಲ್ಲಿಯೇ ಹೇಳಿಕೊಳ್ಳುತ್ತಾನೆ. 'ಡಿಸ್ಕೋರ್ಸಸ್' ಅನ್ನೂ ಓದದಿರುವವರು ಅವನ ಸಿದ್ಧಾಂತವನ್ನು ಅರ್ಧ ಮಾತ್ರ ಗ್ರಹಿಸಬಲ್ಲರು.

ಮೆಡಿಸೈಗಳೊಡನೆ ಸಂಧಾನ ಬೆಳೆಸುವಲ್ಲಿ ವಿಫಲನಾಗಿ ಮೆಕಿಯವೆಲ್ಲಿ ಬರಹವನ್ನೇ ಮುಂದುವರಿಸಬೇಕಾಯಿತು. ತನ್ನ ಮರಣವರ್ಷದವರೆಗೂ ಅವನು ಏಕಾಂಗಿಯಾಗಿಯೇ ಬದುಕಿದ, ಅದು ಐದನೆಯ ಚಾರ್ಲ್ಸ್‌ನ ಸೈನ್ಯದಿಂದ ರೋಮ್ ಪತನಗೊಂಡ ವರ್ಷ. ಇದೇ ವರ್ಷದಲ್ಲಿಯೇ ಇಟಲಿಯ ನವೋದಯವು ಕೊನೆಯುಸಿರೆಳೆದದ್ದು ಎಂದೂ ಪರಿಗಣಿಸಬಹುದು. ಸಂಸ್ಥಾನಗಳನ್ನು ಗೆಲ್ಲುವುದು ಹೇಗೆ, ಅವುಗಳನ್ನು ವಶಪಡಿಸಿಕೊಳ್ಳುವುದು ಹೇಗೆ ಮತ್ತು ಅವು ಕೈಬಿಟ್ಟುಹೋಗುವುದು ಹೇಗೆ ಎಂಬುದನ್ನು ಇತಿಹಾಸ ಮತ್ತು ಸಮಕಾಲೀನ ಸಂಗತಿಗಳ ಮೂಲಕ

ಕಂಡುಕೊಳ್ಳುವುದು 'ದ ಪ್ರಿನ್ಸ್'ನ ಉದ್ದೇಶ. ಹದಿನೈದನೆಯ ಶತಮಾನದ ಇಟಲಿಯು ಇದಕ್ಕೆ ಬೇಕಾದ ದೊಡ್ಡವೂ ಚಿಕ್ಕಪುಟ್ಟವೂ ಆದ ಅನೇಕ ಉದಾಹರಣೆಗಳನ್ನು ಹೊಂದಿತ್ತು. ನಿಯಮಬದ್ಧವಾಗಿ ರಾಜರಾಗಿದ್ದವರು ಕೆಲವರೇ, ಅನೇಕ ಸಂದರ್ಭಗಳಲ್ಲಿ ಪೋಪ್‌ಗಳು ಕೂಡ, ಲಂಚಗುಳಿತನದ ಮೂಲಕ ಚುನಾಯಿತರಾಗುತ್ತಿದ್ದರು. ಯಶಸ್ಸನ್ನು ಗಳಿಸುವ ನಿಯಮಗಳು ಆನಂತರ ಹೆಚ್ಚು ಸ್ಥಿರತೆಯನ್ನು ಹೊಂದಿದ ಮೇಲೆ ಆಗಿದ್ದಂತಹ ಕಾಲದವಾಗಿರಲಿಲ್ಲ. ಹದಿನೆಂಟು ಹತ್ತೊಂಬತ್ತನೆಯ ಶತಮಾನಗಳಲ್ಲಿ ವ್ಯಕ್ತಿಯೊಬ್ಬನನ್ನು ಅನರ್ಹವಾಗಿಸುತ್ತಿದ್ದ ಕ್ರೌರ್ಯವೋ ಮೋಸವೋ ಆಗ ಯಾರನ್ನೂ ಆಘಾತಗೊಳಿಸುತ್ತಿರಲಿಲ್ಲ. ಮತ್ತೆ, ನಮ್ಮ ಕಾಲವು ಪ್ರಾಯಶಃ ಮೆಕಿಯವೆಲ್ಲಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲದು, ಯಾಕೆಂದರೆ ನಮ್ಮ ಕಾಲದ ಕೆಲವು ಪ್ರಖ್ಯಾತ ಗೆಲವುಗಳು ಬಂದದ್ದು ನವೋದಯದ ಇಟಲಿಯಲ್ಲಿ ರೂಢಿಯಲ್ಲಿದ್ದ ವಿಧಾನಗಳ ಆಧಾರದ ಮೇಲೆಯೇ. ಹಿಟ್ಲರ್‌ನ ರೀಚ್‌ಸ್ಟ್ಯಾಗ್ ಬೆಂಕಿ, ೧೯೩೪ ರ ಅವನ ಪಕ್ಷದ ಶುದ್ಧೀಕರಣ, ಮ್ಯೂನಿಚ್ ಬಳಿಕದ ಅವನ ಉಲ್ಲಂಘನೆಗಳನ್ನು ಅವನು ರಾಜ್ಯತಂತ್ರಗಳ ಕಲಾರಸಿಕನಾಗಿ ಅವನು ಮೆಚ್ಚಿಕೊಳ್ಳುತ್ತಿದ್ದ.

ಆರನೆಯ ಅಲೆಕ್ಸಾಂಡರ್‌ನ ಮಗ ಸೀಸರ್ ಬೋರ್ಗಿಯನನ್ನು ಬಹುವಾಗಿ ಮೆಚ್ಚಿಕೊಳ್ಳಲಾಗಿದೆ. ಅವನ ಸಮಸ್ಯೆಗಳು ಕಠಿಣವಾದವು: ಮೊದಲಿಗೆ, ತನ್ನ ಸೋದರನ ಸಾವಿನಿಂದಾಗಿ ತನ್ನ ತಂದೆಯ ವಂಶಾತ್ಮಕ ಮಹತ್ವಾಕಾಂಕ್ಷೆಗಳ ಪ್ರಯೋಜನ ಪಡೆಯುವ ಏಕೈಕ ವ್ಯಕ್ತಿಯಾಗಿದ್ದುದು; ಎರಡನೆಯದು, ಅಲೆಕ್ಸಾಂಡರ್‌ನ ಮರಣಾನಂತರ ಪೋಪ್‌ಗೆ ಸೇರದೆ ತನಗೆ ಸೇರಬೇಕಾಗಿದ್ದ ಪ್ರದೇಶಗಳನ್ನು, ಪೋಪ್‌ನ ಹೆಸರಿನಲ್ಲಿ, ಸೈನಿಕಬಲದಿಂದ ವಶಪಡಿಸಿಕೊಳ್ಳಬೇಕಾಗಿದ್ದುದು; ಮೂರನೆಯದು, ಮುಂದಿನ ಪೋಪ್ ತನ್ನ ಸ್ನೇಹಿತನೇ ಆಗಿರುವಂತೆ ಖಚಿತಪಡಿಸಿಕೊಳ್ಳಲು ಕಾರ್ಡಿನಲ್‌ಗ:ಳ ಸಮುದಾಯವನ್ನು ನಿರ್ವಹಿಸುವುದು. ಈ ಕಠಿಣ ಗುರಿಗಳ ಸಾಧನೆಗೆ ಅವನು ಉನ್ನತ ಕೌಶಲಗಳಿಂದ ಪ್ರಯತ್ನಿಸಿದ; ತನ್ನ ವ್ಯಾವಹಾರಿಕತೆಯ ಕಾರಣದಿಂದ ಮೆಕಿಯವೆಲ್ಲಿ ಹೇಳುವುದೆಂದರೆ ಹೊಸ ರಾಜನು ತನ್ನದೇ ಸೂತ್ರಗಳನ್ನು ರೂಪಿಸಿಕೊಳ್ಳಬೇಕು ಎಂಬುದು. ಸೀಸರ್ ಸೋತ ನಿಜ, ಆದರೆ 'ಅದೃಷ್ಟದ ಅಸಾಧಾರಣ ಹೊಡೆತ'ದಿಂದ. ಅವನ ತಂದೆ ಸತ್ತಾಗ, ಅವನು ಮಾರಣಾಂತಿಕ ಕಾಯಿಲೆಗೊಳಗಾಗಿದ್ದ; ಗುಣಮುಖನಾಗುವ ಹೊತ್ತಿಗೆ ಅವನ ಶತ್ರುಗಳ ತಮ್ಮ ಬಲವನ್ನು ಕ್ರೋಡೀಕರಿಸಿಕೊಂಡಿದ್ದರು, ತನ್ನ ಕಡು ಶತ್ರು ಪೋಪ್ ಆಗಿ ಚುನಾಯಿತನಾಗಿದ್ದ. ಈ ಚುನಾವಣೆಯ ದಿನ ಸೀಸರ್ ಮೆಕಿಯವೆಲ್ಲಿಗೆ ಹೀಗೆ ಹೇಳಿದ್ದನಂತೆ: ಎಲ್ಲದಕ್ಕೂ ಅವಕಾಶ ಮಾಡಿದ್ದನಂತೆ 'ತನ್ನ ತಂದೆಯ ಸಾವಿನ ಹೊತ್ತಿಗೆ ತಾನೇ ಸಾಯುವ ಸ್ಥಿತಿಯಲ್ಲಿರುತ್ತೇನೆಂಬುದರ ಹೊರತಾಗಿ.'

ಕೊನೆಗೆ ಅವನ ದೌರಾತ್ಮ್ಯವನ್ನು ನಿಕಟವಾಗಿ ಬಲ್ಲ ಮೆಕಿಯವೆಲ್ಲಿ ಹೀಗೆ ಕೊನೆಗೊಳಿಸುತ್ತಾನೆ: 'ಡ್ಯೂಕ್ (ಸಿಸರ್)ನ ಎಲ್ಲ ಕಾರ್ಯಗಳನ್ನೂ ಪರಿಶೀಲಿಸಿದ ಬಳಿಕ, ಅವನಲ್ಲಿ ತೆಗಳಬೇಕಾದದ್ದು ಏನೂ ಇಲ್ಲ ಎನ್ನಿಸಿತು, ಅದಕ್ಕೆ ವ್ಯತಿರಿಕ್ತವಾಗಿ, ಅದೃಷ್ಟದಿಂದಲೂ ಇತರರ ಅಸ್ತ್ರಗಳ ಬಲದಿಂದಲೂ ಅಧಿಕಾರ ಪಡೆದಿರುವವರೆಲ್ಲರೂ ಅನುಸರಿಸಬೇಕಾದ ನಿದರ್ಶನವೆಂದು ನಾನು ಹೇಳಬೇಕು, ಹಾಗೆಯೇ ಹೇಳುತ್ತಿದ್ದೇನೆ.'

'ಚರ್ಚ್ ಸಂಸ್ಥಾನಗಳನ್ನು ಕುರಿತು' ಒಂದು ಕುತೂಹಲದಾಯಕ ಅಧ್ಯಾಯವೊಂದಿದೆ, 'ಡಿಸ್ಕೋರ್ಸಸ್'ನಲ್ಲಿ ಹೇಳಿರುವ ಮಾತುಗಳ ಹಿನ್ನೆಲೆಯಲ್ಲಿ, ಅದು ಮೆಕಿಯವೆಲ್ಲಿಯ ಚಿಂತನೆಗಳನ್ನು ಸ್ವಲ್ಪಮಟ್ಟಿಗೆ ಮರೆಮಾಡಿರುವುದು ಸ್ಪಷ್ಟವಾಗಿದೆ. ಈ ಮರೆಗೆ ಕಾರಣ, 'ದ ಪ್ರಿನ್ಸ್' ರಚಿತವಾದದ್ದು ಮೆಡಿಸ್ಯೈಗಳನ್ನು ಸುಪ್ರೀತಗೊಳಿಸುವ ಸಲುವಾಗಿ ಎಂಬುದರಲ್ಲಿ ಅನುಮಾನವಿಲ್ಲ, ಹಾಗೂ ಅದು ರಚಿತವಾದಾಗ ಒಬ್ಬ ಮೆಡಿಸ್ಯೆ ಆಗ ತಾನೆ ಪೋಪ್ ಆಗಿದ್ದ (ಹತ್ತನೆಯ ಲಿಯೋ). ಚರ್ಚ್ ಸಂಸ್ಥಾನಗಳನ್ನು ಕುರಿತಂತೆ, ಅವನು 'ದ ಪ್ರಿನ್ಸ್'ನಲ್ಲಿ ಹೇಳುವುದೇನೆಂದರೆ, ಅದನ್ನು ಪಡೆಯುವುದೇ ಕಷ್ಟಕರವಾದ ಕೆಲಸ, ಪಡೆದ ಮೇಲೆ ಅವು ಪ್ರಾಚೀನ ಮತಧಾರ್ಮಿಕ ರೂಢಿಗಳಿಂದ ಸಂರಕ್ಷಿತವಾಗುತ್ತವೆ, ಅವುಗಳ ಒಡೆಯರು ಹೇಗೇ ನಡೆದುಕೊಳ್ಳಲಿ ಅವರನ್ನು ಅಧಿಕಾರದಲ್ಲುಳಿಸುತ್ತವೆ. ಅವುಗಳ ಒಡೆಯರಿಗೆ ಸೈನ್ಯಗಳ ಆವಶ್ಯಕತೆಯಿಲ್ಲ (ಎಂದವನು ಹೇಳುತ್ತಾನೆ), ಯಾಕೆಂದರೆ 'ಅವರನ್ನು ಬೆಂಬಲಿಸುವುದು ಮಾನವ ಮನಸ್ಸು ಸಾಧಿಸಲಾಗದ ಉನ್ನತ ಉದ್ದೇಶಗಳು.' ಅವು 'ದೇವರಿಂದಲೇ ಔನ್ನತ್ಯ ಪಡೆಯುತ್ತವೆ ಮತ್ತು ನಿರ್ವಹಣೆಗೊಳಗಾಗುತ್ತವೆ' ಮತ್ತು 'ಅವುಗಳನ್ನು ಕುರಿತು ಚರ್ಚಿಸುವುದು 'ಸೊಕ್ಕಿನ ಮತ್ತು ಮೂರ್ಖತನದ ವ್ಯಕ್ತಿಯ ಕೆಲಸ, ಅಷ್ಟೆ.' ಆದರೆ, ಆರನೆಯ ಅಲೆಕ್ಸಾಂಡರ್ ಯಾವ ವಿಧಾನಗಳಿಂದ ಪೋಪ್‌ನ ಐಹಿಕ ಅಧಿಕಾರಗಳನ್ನು ಅಷ್ಟೊಂದು ಹೆಚ್ಚಿಸಲು ಸಾಧ್ಯವಾಯಿತು ಎಂದು ಅನ್ವೇಷಿಸುವುದು ಸಮಂಜಸ.

'ಡಿಸ್ಕೋರ್ಸಸ್'ನಲ್ಲಿನ ಪೋಪ್ ಅಧಿಕಾರದ ಚರ್ಚೆಯು ದೀರ್ಘವಾದುದು ಹಾಗೂ ಹೆಚ್ಚು ಪ್ರಾಮಾಣಿಕವಾದುದು. ತನ್ನ ಚರ್ಚೆಯನ್ನವನು ಆರಂಭಿಸುವುದು ಗಣ್ಯ ವ್ಯಕ್ತಿಗಳನ್ನು ನೈತಿಕ ಶ್ರೇಣಿಯಲ್ಲಿ ನಿಲ್ಲಿಸುವುದು. ಅತ್ಯಂತ ಶ್ರೇಷ್ಠರೆಂದರೆ ಮತಧರ್ಮಸ್ಥಾಪಕರು ಎನ್ನುತ್ತಾನೆ, ಆನಂತರ ಬರುವವರು ರಾಜಪ್ರಭುತ್ವ ಅಥವಾ ಗಣರಾಜ್ಯಗಳ ಸ್ಥಾಪಕರು, ಆಮೇಲೆ ಸಾಹಿತಿಗಳು. ಇವರೆಲ್ಲ ಒಳ್ಳೆಯವರು, ಆದರೆ ಮತಧರ್ಮಗಳ ವಿನಾಶಕರು, ಗಣರಾಜ್ಯಗಳು ಮತ್ತು ಸಾಮ್ರಾಜ್ಯಗಳನ್ನು ಬುಡಮೇಲು ಮಾಡುವವರು, ಸದ್ಗುಣಗಳ ಶತ್ರುಗಳು, ಕೆಟ್ಟವರು. ನಿರಂಕುಶಪ್ರಭುತ್ವ ಸ್ಥಾಪಕರು ಕೆಡುಕರು, ಜೂಲಿಯಸ್ ಸೀಸರ್ ಸಮೇತ. ಮತ್ತೊಂದೆಡೆ, ಬ್ರೂಟಸ್ ಒಳ್ಳೆಯವನು. (ಈ ದೃಷ್ಟಿಕೋನದ ವೈದೃಶ್ಯ ಮತ್ತು ಡಾಂಟೆಯದು ಪ್ರಾಚೀನ ಸಾಹಿತ್ಯದ ಪ್ರಭಾವವನ್ನು ತೋರಿಸುತ್ತದೆ.) ಅವನ ಪ್ರಕಾರ ಮತಧರ್ಮಕ್ಕೆ ರಾಜ್ಯದಲ್ಲಿ ಪ್ರಮುಖ ಸ್ಥಾನವಿರಬೇಕು,

ಸತ್ಯದ ಆಧಾರದ ಕಾರಣಕ್ಕಲ್ಲ, ಆದರೆ ಸಾಮಾಜಿಕ ಬಂಧದ ಕಾರಣಕ್ಕಾಗಿ: ಶಕುನಗಳನ್ನು ನಂಬಿದವರಂತೆ ತೋರಿಸಿಕೊಂಡದ್ದರಲ್ಲಿ ಹಾಗೂ ಅವಕ್ಕೆ ಗೌರವ ನೀಡದಿದ್ದವರನ್ನು ಶಿಕ್ಷಿಸುತ್ತಿದ್ದುದರಲ್ಲಿ ರೋಮನ್‌ರು ಸರಿಯಾಗಿದ್ದರು. ತನ್ನ ಕಾಲದ ಚರ್ಚ್ ಅನ್ನು ಅವನು ಟೀಕಿಸುವುದು ಎರಡು ಕಾರಣಗಳಿಗಾಗಿ: ತನ್ನ ಕೆಟ್ಟ ನಡವಳಿಕೆಯಿಂದ ಮತಧಾರ್ಮಿಕ ಶ್ರದ್ಧೆಯನ್ನದು ಅವಗಣಿಸುವುದು, ಮತ್ತು ಪೋಪ್‌ರ ಐಹಿಕ ಅಧಿಕಾರಗಳು, ಅದು ಉತ್ತೇಜಿಸುವ ಧೋರಣೆಗಳಿಗಾಗಿ, ಇಟಲಿಯ ಒಗ್ಗಟ್ಟಿಗೆ ಅಡ್ಡಿಯಾಗುವುದು. ಈ ಟೀಕೆಗಳನ್ನು ವೀರ್ಯವತ್ತಾಗಿ ಮಾಡುತ್ತಾನೆ. 'ನಮ್ಮ ಮತಧರ್ಮದ ಶಿಖರವಾದ ರೋಮ್‌ನ ಚರ್ಚ್‌ಗೆ ಹೆಚ್ಚು ಹತ್ತಿರವಾಗಿರುವವರು ಕಡಿಮೆ ಮತಧಾರ್ಮಿಕರಾಗಿದ್ದಾರೆ .. .. ಅದರ ವಿನಾಶ ಮತ್ತು ದಂಡನೆಗಳು ಇನ್ನೇನು ಸನ್ನಿಹಿತವಾಗಿ .. .. ಇಟಾಲಿಯನ್‌ರಾದ ನಾವು ಅಧಾರ್ಮಿಕರೂ ಕೆಟ್ಟವರೂ ಆಗಲು ಕಾರಣ ಚರ್ಚ್ ಮತ್ತದರ ಪುರೋಹಿತವರ್ಗ; ಆದರೆ ಅದರ ದೊಡ್ಡ ಋಣ ಇನ್ನೂ ನಮ್ಮ ಮೇಲಿದೆ, ಆ ಕಾರಣ ನಮ್ಮ ವಿನಾಶದ ಕಾರಣ ಅದೇ ಆಗುತ್ತದೆ, ಅದೆಂದರೆ ಚರ್ಚ್ ನಮ್ಮ ದೇಶವನ್ನು ಒಡೆದಿದೆ ಮತ್ತು ಇನ್ನೂ ಒಡೆಯುತ್ತಿದೆ.'[೨೫೧]

ಇಂತಹ ಭಾಗಗಳಿಂದಾಗಿ, ನಮಗೆ ತಿಳಿಯುವುದೆಂದರೆ ಮೆಕಿಯವೆಲ್ಲಿ ಸೀಸರ್ ಬೋರ್ಗಿಯನ ಬಗ್ಗೆ ತೋರಿಸುವ ಮೆಚ್ಚಿಗೆ ಅವನ ಕೌಶಲಗಳಿಂದಾಗಿ ಮಾತ್ರವೇ ಹೊರತು ಉದ್ದೇಶಗಳಿಗಾಗಿ ಅಲ್ಲ ಎನ್ನುವುದು. ಕೌಶಲ ಮತ್ತು ಕೀರ್ತಿಗೆ ಕಾರಣವಾಗುವ ಕಾರ್ಯಗಳು ನವೋದಯಕಾಲದಲ್ಲಿ ಬಹು ದೊಡ್ಡವಾಗಿದ್ದವು. ಈ ಬಗೆಯ ಭಾವನೆಯು ಯಾವಾಗಲೂ ಇದ್ದುವೇ; ನೆಪೋಲಿಯನ್‌ನ ಅನೇಕ ಶತ್ರುಗಳೂ ಅವನನ್ನು ದೊಡ್ಡ ಸಮರತಂತ್ರಗಾರನೆಂದು ಹೊಗಳುತ್ತಿದ್ದರು. ಆದರೆ ಮೆಕಿಯವೆಲ್ಲಿಯ ಕಾಲದ ಇಟಲಿಯಲ್ಲಿ ಕೌಶಲದ ಬಗೆಗಿನ ಅರೆಕಲಾತ್ಮಕ ಮೆಚ್ಚಿಕೆಯು ಹಿಂದಿನ ಮತ್ತು ಮುಂದಿನ ಶತಮಾನಗಳಲ್ಲಿದ್ದುದಕ್ಕಿಂತ ಹೆಚ್ಚಾಗಿತ್ತು. ಆದರೆ ಅವುಗಳನ್ನು ಮೆಕಿಯವೆಲ್ಲಿಯ ಪ್ರಕಾರದ ಉನ್ನತ ರಾಜಕೀಯ ಉದ್ದೇಶಗಳ ಜೊತೆಗೆ ತಳುಕು ಹಾಕಲು ಪ್ರಯತ್ನಿಸುವುದು ತಪ್ಪು. ಕೌಶಲದ ಬಗೆಗಿನ ಮೆಚ್ಚಿಕೆ ಮತ್ತು ಇಟಲಿಯ ಐಕಮತ್ಯದ ರಾಷ್ಟ್ರಪ್ರೇಮದ ಬಯಕೆ ಅವನ ಮನಸ್ಸಿನಲ್ಲಿ ಅಕ್ಕಪಕ್ಕದಲ್ಲಿದ್ದವೇ ಹೊರತು ಎಷ್ಟು ಮಟ್ಟಿಗೂ ಒಂದರೊಡನೊಂದು ಸೇರಿಕೊಂಡಿರಲಿಲ್ಲ. ಹೀಗಾಗಿಯೇ ಅವನು ಜಾಣತನಕ್ಕಾಗಿ ಸೀಸರ್ ಬೋರ್ಗಿಯನನ್ನು ಹೊಗಳಬಲ್ಲ, ಆದರೆ ಇಟಲಿಯ ಛಿದ್ರೀಕರಣಕ್ಕಾಗಿ ಬೈಯಬಲ್ಲ. ಅವನ ಅಭಿಪ್ರಾಯದಲ್ಲಿ ಪರಿಪೂರ್ಣ ನಡತೆಯೆಂದರೆ, ಸಾಧನಗಳಿಗೆ ಸಂಬಂಧಿಸಿದಂತೆ ಜಾಣತನ ಹಾಗೂ ಅನಿಯಂತ್ರಿತತೆಗಳ ಸೀಸರ್

---

೨೫೧. ಇದು ೧೮೭೦ ರವರೆಗೂ ನಿಜವಾಗಿ ಉಳಿದಿತ್ತು.

ಬೋರ್ಗಿಯನಂತಹ, ಆದರೆ ಉದ್ದೇಶ ಮಾತ್ರ ಬೇರೆಯಾಗಿರುವುದು. 'ದ ಪ್ರಿನ್ಸ್' ಕೊನೆಗೊಳ್ಳುವುದು ಇಟಲಿಯನ್ನು ಕೊಳೆತು ನಾರುವಂತೆ ಪ್ರಬಲರಾಗಿರುವ 'ಬಾರ್ಬೇರಿಯನ್'ರಿಂದ (ಅಂದರೆ ಫ್ರೆಂಚ್ ಮತ್ತು ಸ್ಪಾನಿಯಾರ್ಡ್‌ಗಳು) ಬಿಡುಗಡೆಗೊಳಿಸಲು ಮೆಡಿಸ್ಸೈಗಳಿಗೆ ಮಾಡುವ ಅನನ್ಯ ಮೊರೆಯಿಂದ. ಅಂತಹ ಕಾರ್ಯಗಳನ್ನು ಯಾರಾದರೂ ಸ್ವಾರ್ಥರಹಿತರಾಗಿ ಮಾಡುವರೆಂಬುದನ್ನು ಅವನು ನಿರೀಕ್ಷಿಸಲಾರ, ಹಾಗೆ ಮಾಡುವುದು ಅಧಿಕಾರಲಾಲಸೆಯಿಂದ, ಮತ್ತು ಇನ್ನೂ ಹೆಚ್ಚಾದ ಕೀರ್ತಿಕಾಮನೆಯಿಂದ.

'ದ ಪ್ರಿನ್ಸ್'ನಲ್ಲಿ ಆಳುವವರ ನಡತೆಗೆ ಸಂಬಂಧಿಸಿದಂತೆ ಪಡೆದ ನೈತಿಕತೆಯ ಖಂಡನೆ ಸ್ಪಷ್ಟವಾಗಿದೆ. ಎಲ್ಲ ಕಾಲದಕ್ಕೂ ಒಳ್ಳೆಯವನಾಗಿದ್ದರೆ ರಾಜ ನಾಶವಾಗುತ್ತಾನೆ; ಅವನು ನರಿಯಂತೆ ಕುತಂತ್ರಿಯಾಗಿರಬೇಕು, ಮತ್ತು ಸಿಂಹದಂತೆ ಉಗ್ರನಾಗಿರಬೇಕು. ಇದರಲ್ಲಿ ಒಂದು ಅಧ್ಯಾಯವಿದೆ (೧೮) 'ಯಾವ ಮಾರ್ಗದಲ್ಲಿ ರಾಜನು ಶ್ರದ್ಧೆಯಿರಿಸಿಕೊಳ್ಳಬೇಕು' ಎಂಬುದು. ಲಾಭಕರವಾಗಿದ್ದರೆ ಶ್ರದ್ಧೆಯನ್ನುಳಿಸಿಕೊಳ್ಳಬೇಕೇ ವಿನಾ ಅನ್ಯತಃ ಅಲ್ಲ. ಕೆಲವು ವೇಳೆ ಅವನು ಶ್ರದ್ಧಾರಹಿತನಾಗಿರಬೇಕು ಕೂಡ.

'ಈ ನಡತೆಯನ್ನವನು ಚೆನ್ನಾಗಿ ಮರೆಮಾಚಿಕೊಳ್ಳುವುದು ಆವಶ್ಯಕ, ಅವನು ದೊಡ್ಡ ಸೋಗುಗಾರ ಹಾಗೂ ಮೋಸಗಾರನಾಗಿರಬೇಕು; ಜನರು ಸದ್ಯದ ಆವಶ್ಯಕತೆಗಳಿಗೆ ತಕ್ಕಂತೆ ಮಾತ್ರ ನಡೆದುಕೊಳ್ಳಲು ತಯಾರಾಗಿರುವಷ್ಟು ಸರಳರು. ಯಾರು ವಂಚನೆಗೊಳಗಾಗುತ್ತಾರೆ ಎಂಬುದನ್ನು ವಂಚಕನು ಯಾವಾಗಲೂ ಕಂಡುಕೊಳ್ಳಬಲ್ಲ. ನಾನು ಒಂದೇ ಒಂದು ಆಧುನಿಕ ಉದಾಹರಣೆಯನ್ನು ನೀಡುತ್ತೇನೆ. ಆರನೆಯ ಅಲೆಕ್ಸಾಂಡರ್ ಜನರನ್ನು ವಂಚಿಸುವುದರ ಹೊರತು ಇನ್ನೇನೂ ಮಾಡಲಿಲ್ಲ, ಅವನು ಬೇರೆ ಏನನ್ನೂ ಯೋಚಿಸಲೇ ಇಲ್ಲ, ಅದಕ್ಕೆ ಸೂಕ್ತ ಸಂದರ್ಭವೂ ಅವನಿಗೆ ಕಾಣಿಸಲಿಲ್ಲ; ಅವನ ಹಾಗೆ ಆಶ್ವಾಸನೆಗಳನ್ನು ಕೊಡುವಂತಹವರೇ ಇರಲಿಲ್ಲ, ಅಥವಾ ದೊಡ್ಡ ಆಣೆ ಪ್ರಮಾಣಗಳಿಂದ ತನ್ನ ಮಾತನ್ನು ದೃಢಪಡಿಸುತ್ತಿದ್ದ, ಇವುಗಳನ್ನಾರೂ ಹೆಚ್ಚು ಗಮನಿಸಲೇ ಇಲ್ಲ; ಆದರೆ ಅವನು ಮಾತ್ರ ತನ್ನ ವಂಚನೆಯಲ್ಲಿ ಸದಾ ಗೆಲವು ಪಡೆಯುತ್ತಿದ್ದ, ಹೀಗೆ ಮಾಡುವುದರ ಉಪಯೋಗ ಅವನಿಗೆ ಚೆನ್ನಾಗಿ ತಿಳಿದಿತ್ತು. ಹೀಗಾಗಿ ರಾಜನೊಬ್ಬನಿಗೆ ಮೇಲೆ ಹೇಳಿದ ಗುಣಗಳೆಲ್ಲ (ಅಂದರೆ ಸಾಂಪ್ರದಾಯಿಕ ಗುಣಗಳು) ಇರಬೇಕಾದ ಆವಶ್ಯಕತೆಯಿಲ್ಲವಾದರೂ ಅವುಗಳನ್ನು ಹೊಂದಿರುವಂತೆ ತೋರಿಸಿಕೊಳ್ಳುವುದು ಮುಖ್ಯ.'

ಎಲ್ಲಕ್ಕೂ ಮಿಗಿಲಾಗಿ, ರಾಜನು ಮತಧಾರ್ಮಿಕನೆಂಬಂತೆ ತೋರಿಸಿಕೊಳ್ಳಬೇಕು ಎಂದೂ ಅವನು ಹೇಳುತ್ತಾನೆ.

ಸಾಮಾನ್ಯವಾಗಿ ಲಿವಿಯ ಬಗೆಗಿನ ವ್ಯಾಖ್ಯಾನಗಳಾಗಿರುವ 'ಡಿಸ್ಕೋರ್ಸಸ್'ನ ಧಾಟಿಯು ವಿಭಿನ್ನವಾದುದು. ಮಾಂಟೆಸ್ಕ್ಯೂ ಬರೆದಂತೆ ಕಾಣುವ ಅನೇಕ ಇಡಿಯಾದ

ಅಧ್ಯಾಯಗಳೇ ಇದರಲ್ಲಿವೆ; ಇದರಲ್ಲಿನ ಬಹ್ವಂಶವು ಹದಿನೆಂಟನೆಯ ಶತಮಾನದ ಉದಾರವಾದಿಗಳು ಓದಿ ಅದಕ್ಕೆ ಸಹಮತ ವ್ಯಕ್ತಪಡಿಸುವಂತಹವು. ಇತಿಮಿತಿಗಳ ಸಿದ್ಧಾಂತವನ್ನು ನೇರವಾಗಿ ನಿರೂಪಿಸಲಾಗಿದೆ. ರಾಜರು, ಶ್ರೀಮಂತಪ್ರಭುಗಳು, ಮತ್ತು ಜನರೆಲ್ಲರೂ ಸಂವಿಧಾನದಲ್ಲಿ ಭಾಗಿಗಳಾಗಬೇಕು: 'ಆಗ ಈ ಮೂರೂ ಅಧಿಕಾರಮೂಲಗಳು ಪರಸ್ಪರ ನಿಯಂತ್ರಕಗಳಾಗಿರುತ್ತಾರೆ.' ಲೈಕರ್ಗಸ್ ನಿಗದಿಗೊಳಿಸಿದ ಸ್ಪಾರ್ಟಾದ ಸಂವಿಧಾನವು ಅತ್ಯಂತ ಶ್ರೇಷ್ಠವಾದುದಾಗಿತ್ತು, ಯಾಕೆಂದರೆ ಅದರಲ್ಲಿ ಅತ್ಯಂತ ಪರಿಪೂರ್ಣ ಇತಿಮಿತಿಗಳಿದ್ದುವು; ಸಾಲೋನ್‌ದು ತೀರ ಪ್ರಜಾಪ್ರಭುತ್ವಾತ್ಮಕವಾದುದು, ಹೀಗಾಗಿ ಅದು ಪೀಯಿಸಿಸ್ಟ್ರಾಟಸ್‌ನ ನಿರಂಕುಶಾಧಿಕಾರಕ್ಕೆ ಎಡೆಮಾಡಿಕೊಟ್ಟಿತು. ರೋಮನ್ ಗಣತಂತ್ರದ ಸಂವಿಧಾನವು ಒಳ್ಳೆಯದು; ಅದಕ್ಕೆ ಕಾರಣ ಸೆನೇಟ್ ಮತ್ತು ಜನರ ನಡುವಣ ತಿಕ್ಕಾಟ.

ಸಿದ್ಧಾಂತ ಎಂಬ ಶಬ್ದವನ್ನು ಯಾವುದೋ ಅಮೂಲ್ಯವಾದುದನ್ನು ಸೂಚಿಸುವ ರೀತಿಯಲ್ಲಿ ಗ್ರಂಥದುದ್ದಕ್ಕೂ ಬಳಸಲಾಗಿದೆ, ಆದರೆ ಅದು ಏನನ್ನು ಸೂಚಿಸುತ್ತದೆ ಎಂಬುದು ಸ್ಪಷ್ಟವಾಗುವುದಿಲ್ಲ. ಈ ರೀತಿಯು ಹಿಂದಿನಿಂದಲೇ ಬಂದು ಮುಂದೆ ಹದಿನೆಂಟು ಹತ್ತೊಂಬತ್ತನೆಯ ಶತಮಾನಗಳವರೆಗೂ ಮುಂದುವರಿಯಿತು. ಟಸ್ಕನಿ ತನ್ನ ಸ್ವಾತಂತ್ರ್ಯವನ್ನುಳಿಸಿಕೊಂಡಿದೆ, ಅದಕ್ಕೆ ಕಾರಣ ಅದರಲ್ಲಿ ಯಾವುದೇ ಕೋಟೆಗಳಾಗಲೀ ಮಹನೀಯರಾಗಲೀ (ಜಂಟಲ್‌ಮೆನ್) ಇಲ್ಲದಿರುವುದು (ಜಂಟಲ್‌ಮೆನ್ ಎಂಬುದು ಅಪಭಾಷಾಂತರ, ಆದರೆ ಹಿತಕರವಾದದ್ದು). ರಾಜಕೀಯ ಬಿಡುಗಡೆಗೆ ಪ್ರಜೆಗಳಲ್ಲಿನ ಸ್ವಲ್ಪ ಮಟ್ಟಿಗಿನ ಸನ್ನಡತೆಯಿರಬೇಕಾಗುತ್ತದೆ ಎಂಬುದನ್ನು ಗಮನಿಸಬೇಕು. ಜರ್ಮನಿಯಲ್ಲಷ್ಟೇ, ಸತ್ಯವಂತಿಕೆ ಮತ್ತು ಮತಧರ್ಮಗಳ ಸಮಾನತೆಯಿರಬೇಕೆಂದಿದೆ, ಹಾಗಾಗಿಯೇ ಜರ್ಮನಿಯಲ್ಲಿ ಅನೇಕ ಗಣರಾಜ್ಯಗಳಿವೆ ಎಂದಿದೆ. ಒಟ್ಟಾರೆ, ಜನತೆಯು ರಾಜರುಗಳಿಗಿಂತಲೂ ಹೆಚ್ಚು ವಿವೇಕಶಾಲಿಗಳೂ ಮತ್ತು ಹೆಚ್ಚು ಸ್ಥಿರಮತಿಗಳೂ ಆಗಿರುವರಂತೆ, ಆದರೆ ಲಿವಿ ಮತ್ತಿತರ ಲೇಖಕರು ಇದಕ್ಕೆ ವಿರುದ್ಧವಾದ ಅಭಿಪ್ರಾಯವುಳ್ಳವರು. ಕಾರಣವಿಲ್ಲದೆ 'ಜನತೆಯ ಧ್ವನಿ ದೇವರ ಧ್ವನಿ' ಎಂದು ಹೇಳಲು ಸಾಧ್ಯವಿಲ್ಲ.

ಗಣತಾಂತ್ರಿಕ ಕಾಲಗಳಲ್ಲಿನ ಗ್ರೀಕ್ ಮತ್ತು ರೋಮನ್‌ರ ರಾಜಕೀಯ ಚಿಂತನೆಗಳು – ಅಲೆಕ್ಸಾಂಡರ್ ಕಾಲದಿಂದೀಚೆಗೆ ಗ್ರೀಸ್‌ನಲ್ಲಿ ಅಥವಾ ಆಗಸ್ಟಸ್‌ನ ಕಾಲದಿಂದೀಚೆಗೆ ರೋಮ್‌ನಲ್ಲಿ ಇಲ್ಲದಿದ್ದವು – ಹೇಗೆ ಹದಿನೈದನೆಯ ಶತಮಾನದಲ್ಲಿ ವಾಸ್ತವಗಳಾದುವು ಎಂಬುದನ್ನು ಗಮನಿಸುವುದು ಕುತೂಹಕಲಾರಕವಾಗಿದೆ. ನವಪ್ಲೇಟೋವಾದಿಗಳು, ಅರಬ್‌ರು ಮತ್ತು ಮತಧರ್ಮಶಾಸ್ತ್ರಜ್ಞರು ಪ್ಲೇಟೋ ಮತ್ತು ಅರಿಸ್ಟಾಟಲ್‌ರ ತತ್ವಜಿಜ್ಞಾಸೆಯಲ್ಲಿ ಗಾಢವಾದ ಆಸಕ್ತಿಯನ್ನು ತಾಳಿದ್ದರೇ ವಿನಾ ಅವರ ರಾಜಕೀಯ ಬರಹಗಳಲ್ಲಲ್ಲ, ಯಾಕೆಂದರೆ ನಗರ ಪ್ರಭುತ್ವಗಳ

ರಾಜಕೀಯ ವ್ಯವಸ್ಥೆಗಳು ಸಂಪೂರ್ಣವಾಗಿ ಮರೆಯಾಗಿದ್ದುದು. ಇಟಲಿಯ ನಗರ ಪ್ರಭುತ್ವಗಳ ಬೆಳವಣಿಗೆಯು ವಿದ್ಯೆಯ ಪುನರುಜ್ಜೀವನದೊಂದಿಗೆ ಹೆಣೆದುಕೊಂಡಿತ್ತು, ಹೀಗಾಗಿ ಮಾನವೀಯತಾವಾದಿಗಳು ಗಣತಾಂತ್ರಿಕ ಗ್ರೀಕ್ ಮತ್ತು ರೋಮನ್‌ರ ರಾಜಕೀಯ ಸಿದ್ಧಾಂತಗಳ ಉಪಯೋಗವನ್ನು ಪಡೆಯಲು ಸಾಧ್ಯವಾಯಿತು. 'ಸ್ವಾತಂತ್ರ್ಯ' ಪ್ರೀತಿ ಮತ್ತು ಇತಿಮಿತಿಗಳ ಸಿದ್ಧಾಂತಗಳು ನವೋದಯಕ್ಕೆ ಪ್ರಾಚೀನತೆಯಿಂದ ಬಂದವು, ಆಧುನಿಕ ಕಾಲದಲ್ಲಿ ನವೋದಯದಿಂದ ಬಂದಿತು, ಪ್ರಾಚೀನತೆಯಿಂದ ನೇರವಾಗಿ ಕೂಡ. ಮೆಕಿಯವೆಲ್ಲಿಯ ಈ ಮುಖವು 'ದ ಪ್ರಿನ್ಸ್'ನ ಹೆಚ್ಚು ಪ್ರಸಿದ್ಧವಾದ 'ಅನೈತಿಕ' ವಾದದಷ್ಟೇ ಮುಖ್ಯವಾದುದು.

ಮೆಕಿಯವೆಲ್ಲಿಯು ರಾಜಕೀಯ ವಾದವನ್ನೆಂದಿಗೂ ಕ್ರೈಸ್ತ ಅಥವಾ ಬೈಬಲ್‌ನ ಆಧಾರದ ಮೇಲೆ ನೆಲೆಗೊಳಿಸುವುದಿಲ್ಲವೆಂಬುದನ್ನು ಗಮನಿಸಬೇಕು. ಮಧ್ಯಯುಗದ ಲೇಖಕರಲ್ಲಿ, ಪೋಪ್ ಅಥವಾ ಚಕ್ರವರ್ತಿಗೆ ಸಂಬಂಧಿಸಿದಂತೆ ಅಥವಾ ಅವುಗಳಿಂದ ರೂಪಿಸಿಕೊಂಡಂತೆ, 'ನಿಯಮಾನುಸಾರವಾದ' ಅಧಿಕಾರದ ಒಂದು ಪರಿಕಲ್ಪನೆಯಿತ್ತು. ಉತ್ತರದ ಲೇಖಕರು, ಲಾಕ್‌ನಷ್ಟು ಈಚಿನ ಕಾಲದಲ್ಲಿಯೂ, ಈಡನ್ ಗಾರ್ಡನ್‌ನಲ್ಲಿ ಏನು ನಡೆಯಿತು ಎಂಬ ಬಗ್ಗೆಯೇ ವಾದ ನಡೆಸುವುದು, ಅದರಿಂದ ಕೆಲವು ಬಗೆಯ ಅಧಿಕಾರಗಳು 'ನಿಯಮಾನುಸಾರವಾದ'ವು ಎಂದು ಸಾಧಿಸಲು ಆಧಾರಗಳನ್ನು ಕಾಣುವುದು ರೂಢಿಯಾಗಿತ್ತು. ಮೆಕಿಯವೆಲ್ಲಿಯಲ್ಲಿ ಅಂಥ ಯಾವ ಪರಿಕಲ್ಪನೆಯೂ ಇಲ್ಲ. ಅಧಿಕಾರವೆಂಬುದು ಅದನ್ನು ಹಿಡಿಯುವ ಸ್ವತಂತ್ರ ಸ್ಪರ್ಧೆಯಲ್ಲಿ ಗೆಲ್ಲಲು ಯಾರು ಕೌಶಲಪೂರ್ಣರೋ ಅವರದು. ಜನಮನ್ನಣೆಯ ಸರ್ಕಾರವು ಯಾವುದೇ 'ಹಕ್ಕುಗಳ' ಪರಿಭಾವನೆಯಿಂದ ಸಾಧಿತವಾದುದಲ್ಲ, ಹಾಗಾಗಿರುವುದು ಜನಮನ್ನಣೆಯ ಸರ್ಕಾರಗಳು ಕಡಿಮೆ ಕ್ರೂರವಾದವು, ಕಡಿಮೆ ಲಂಚಕೋರವಾದುದು ಮತ್ತು ನಿರಂಕುಶಾಧಿಕಾರಕ್ಕಿಂತ ಕಡಿಮೆ ಅಸಂಗತವಾದುದು ಎಂಬ ಕಾರಣದಿಂದ.

ಅವನ ಸಿದ್ಧಾಂತದ 'ನೈತಿಕ' ಹಾಗೂ 'ಅನೈತಿಕ' ಭಾಗಗಳ (ಇದನ್ನು ಮೆಕಿಯವೆಲ್ಲಿ ತಾನೇ ಮಾಡಲಿಲ್ಲ) ಸಂಯೋಜನೆಯನ್ನು ಮಾಡಲು ಪ್ರಯತ್ನಿಸೋಣ. ಈ ಕೆಳಗಿನ ವಾದದಲ್ಲಿ, ನಾನು ನನ್ನ ಅಭಿಪ್ರಾಯಗಳನ್ನು ಮಂಡಿಸುತ್ತಿಲ್ಲ, ಬದಲಾಗಿ ನೇರವಾಗಿಯೋ ಪರೋಕ್ಷವಾಗಿಯೋ ಅವನ ಅಭಿಪ್ರಾಯಗಳನ್ನು.

ಕೆಲವು ರಾಜಕೀಯ ಸರಕುಗಳಿವೆ, ಅವುಗಳಲ್ಲಿ ಮೂರು ವಿಶೇಷವಾಗಿ ಪ್ರಮುಖವಾದವು: ರಾಷ್ಟ್ರೀಯ ಸ್ವಾತಂತ್ರ್ಯ, ಸುರಕ್ಷೆ ಮತ್ತು ಸುಸಂಬದ್ಧ ಸಂವಿಧಾನ. ಅತ್ಯಂತ ಉತ್ಕೃಷ್ಟ ಸಂವಿಧಾನವೆಂದರೆ ನಿಯಮಬದ್ಧ ಹಕ್ಕುಗಳನ್ನು ರಾಜ, ಶ್ರೀಮಂತಪ್ರಭುಗಳು, ಮತ್ತು ಜನರಲ್ಲಿ ಅವರ ನಿಜವಾದ ಹಕ್ಕುಗಳ ಅನುಪಾತದಲ್ಲಿ ಹಂಚುವುದು, ಯಾಕೆಂದರೆ ಅಂಥ ಸಂವಿಧಾನದಲ್ಲಿ ಯಶಸ್ವೀ ಕ್ರಾಂತಿಯು ಕಷ್ಟಕರ ಮತ್ತು ಹಾಗಾಗಿ ಸ್ಥಿರತೆಯು ಸಾಧ್ಯವಾಗುವುದು; ಸ್ಥಿರತೆಯ ಪರಿಗಣನೆಯ

ಕಾರಣದಿಂದಾಗಿ, ಜನರಿಗೆ ಹೆಚ್ಚು ಅಧಿಕಾರವನ್ನು ನೀಡುವುದು ವಿವೇಕಯುತವಾದದ್ದು. ಇದು ಉದ್ದೇಶಗಳಿಗೆ ಸಂಬಂಧಪಟ್ಟಂತಹವು.

ಆದರೆ ರಾಜಕೀಯದಲ್ಲಿ ಸಾಧನಗಳ ಪ್ರಶ್ನೆಯೂ ಇದೆ. ಸಫಲವಾಗದ ಮಾರ್ಗಗಳಿಂದ ರಾಜಕೀಯ ಉದ್ದೇಶಗಳನ್ನು ಅನ್ವೇಷಿಸ ಹೊರಡುವುದು ವ್ಯರ್ಥ. ಉದ್ದೇಶವು ಒಳ್ಳೆಯದೆಂದಾದರೆ ಅದರ ಸಾಧನೆಗೆ ನಾವು ಸೂಕ್ತವಾದ ಸಾಧನಗಳನ್ನು ಆಯ್ಕೆಮಾಡಿಕೊಳ್ಳಬೇಕು. ಸಾಧನಗಳ ಪ್ರಶ್ನೆಯನ್ನು ಶುದ್ಧ ವೈಜ್ಞಾನಿಕ ವಿಧಾನದಿಂದ ಪರಿಶೀಲಿಸಬಹುದು, ಅಂದರೆ ಉದ್ದೇಶಗಳು ಒಳ್ಳೆಯವೇ ಕೆಟ್ಟವೇ ಎಂಬುದನ್ನು ಪರಿಗಣಿಸದೆ. 'ಯಶಸ್ಸು' ಎಂದರೆ, ಅದು ಯಾವುದೇ ಆಗಿರಲಿ, ನಿಮ್ಮ ಉದ್ದೇಶದ ಸಾಧನೆ. ಯಶಸ್ಸಿನ ವಿಜ್ಞಾನವೊಂದಿದ್ದರೆ, ಕೆಡುಕು ಅಥವಾ ಒಳ್ಳೆಯದರ ಯಶಸ್ಸಿನ ಬಗ್ಗೆಯೂ ಅಧ್ಯಯನ ಮಾಡಬಹುದು – ಇನ್ನೂ ಉತ್ತಮವಾಗಿ, ಯಾಕೆಂದರೆ ಯಶಸ್ವೀ ಪಾಪಿಗಳ ಉದಾಹರಣೆಗಳು ಅಯಶಸ್ವೀ ಸಂತರದಕ್ಕಿಂತ ವಿಪುಲವಾದವು. ಆದರೆ ಒಮ್ಮೆ ಸ್ಥಿರಪಟ್ಟ ವಿಜ್ಞಾನವು ಪಾಪಿಗಳ ವಿಷಯದಲ್ಲಿ ಹೇಗೆಯೋ ಸಂತರ ವಿಷಯದಲ್ಲಿಯೂ ಹಾಗೆಯೇ ಉಪಯುಕ್ತವಾಗುತ್ತವೆ. ಸಂತನಿಗೆ, ಅವನಿಗೆ ರಾಜಕೀಯದಲ್ಲಿ ಆಸಕ್ತಿಯಿದ್ದರೆ, ಅವನು ಯಶಸ್ಸನ್ನು ಸಾಧಿಸಲು ಪಾಪಿಯು ಬಯಸುವಂತಹುದನ್ನೇ ಬಯಸಬೇಕು.

ಆತ್ಯಂತಿಕ ಪ್ರಶ್ನೆಯು ಅಧಿಕಾರದ್ದು. ರಾಜಕೀಯ ಉದ್ದೇಶವೊಂದರ ಸಾಧನೆಗಾಗಿ ಒಂದಲ್ಲ ಒಂದು ಬಗೆಯ ಅಧಿಕಾರವು ಆವಶ್ಯಕ. ಈ ಸರಳ ವಸ್ತುಸ್ಥಿತಿಯು, 'ಸತ್ಯವಾದುದಕ್ಕೇ ಗೆಲವು' ಅಥವಾ 'ಕೆಡುಕಿನ ಗೆಲವು ಅಲ್ಪಾಯುಷಿ' ಎಂಬಂತಹ ಘೋಷಣೆಗಳಲ್ಲಿ ಮರೆಯಾಗುತ್ತದೆ. ಯಾವ ಪಕ್ಷದಲ್ಲಿ ಸತ್ಯವಿದೆಯೆಂದು ನೀವು ಭಾವಿಸುತ್ತೀರೋ ಅದಕ್ಕೆ ಕಾರಣ ಅದಕ್ಕೆ ಹೆಚ್ಚಿನ ಅಧಿಕಾರವಿದೆ ಎಂದರ್ಥ. ಅಧಿಕಾರವು ಬಹು ವೇಳೆ ಅಭಿಪ್ರಾಯಗಳನ್ನವಂಬಿಸುತ್ತದೆ, ಅಭಿಪ್ರಾಯವು ಪ್ರಚಾರಾವಲಂಬಿ ಎಂಬುದು ನಿಜ; ಅಲ್ಲದೆ, ಪ್ರಚಾರದಲ್ಲಿ ನಿಮ್ಮ ಪ್ರತಿಸ್ಪರ್ಧಿಗಿಂತ ನೀವು ಹೆಚ್ಚು ಸನ್ನಡತೆಯುವರು ಎಂದು ತೋರಿಸಿಕೊಳ್ಳುವ ಮತ್ತು ತೋರಿಸಿಕೊಳ್ಳುವುದೇ ಸನ್ನಡತೆ ಹೊಂದುವುದೆನಿಸುವ ಅನುಕೂಲವೂ ಆಗಿರುತ್ತದೆ. ಈ ಕಾರಣದಿಂದಾಗಿ, ಜನತೆಯು ಯಾವುದನ್ನು ಸನ್ನಡತೆ ಎಂದು ಭಾವಿಸುತ್ತದೆಯೋ ಅಂಥದನ್ನು ಹೆಚ್ಚಾಗಿ ಹೊಂದಿರುವ ಪಕ್ಷಕ್ಕೆ ಎಷ್ಟೋ ವೇಳೆ ಗೆಲವು ದೊರೆಯುತ್ತದೆ. ಹನ್ನೊಂದು, ಹನ್ನೆರಡು ಮತ್ತು ಹದಿಮೂರನೆಯ ಶತಮಾನಗಳಲ್ಲಿ ಚರ್ಚ್ ಅಧಿಕಾರ ಹೆಚ್ಚಾಗುವಲ್ಲಿ ಮತ್ತು ಹದಿನಾರನೆಯ ಶತಮಾನದ ಮತಧರ್ಮಸುಧಾರಣೆಯ ಯಶಸ್ಸಿನಲ್ಲಿ ಇದು ಒಂದು ಮುಖ್ಯ ಅಂಶವಾಗಿತ್ತೆನ್ನುವ ವಿಷಯದಲ್ಲಿ ನಾವು ಮೆಕಿಯವೆಲ್ಲಿಯ ವಾದವನ್ನು ಒಪ್ಪಿಕೊಳ್ಳಬೇಕು. ಆದರೆ ಇದಕ್ಕೆ ಮುಖ್ಯ ಇತಿಮಿತಿಗಳೂ ಇವೆ. ಮೊದಲನೆಯದಾಗಿ, ಅಧಿಕಾರವನ್ನು ಹಿಡಿದವರು

ಪ್ರಚಾರವನ್ನು ನಿಯಂತ್ರಿಸಿ ತಮ್ಮ ಪಕ್ಷವು ಹೆಚ್ಚು ಒಳ್ಳೆಯದು ಎಂದು ತೋರಿಸಿಕೊಳ್ಳಬಹುದು. ನಿದರ್ಶನಕ್ಕೆ, ನ್ಯೂಯಾರ್ಕ್ ಅಥವಾ ಬಾಸ್ಟನ್‌ನ ಸಾರ್ವಜನಿಕ ಶಾಲೆಯಲ್ಲಿ ಆರನೆಯ ಅಲೆಕ್ಸಾಂಡರ್‌ನ ಪಾತಕಗಳನ್ನು ಹೇಳುವಂತಿರಲಿಲ್ಲ. ಎರಡನೆಯದಾಗಿ, ಸುಸ್ಪಷ್ಟ ವಂಚಕತನವೂ ಮತ್ತೆ ಮತ್ತೆ ಯಶಸ್ವಿಯಾಗುವ ಗೊಂದಲಪೂರ್ಣ ಅವಧಿಗಳು ಇವೆ ಎನ್ನುವುದು. ಮೆಕಿಯವೆಲ್ಲಿಯ ಕಾಲವೇ ಅದಕ್ಕೊಂದು ಉದಾಹರಣೆ. ಅಂಥ ಸಂದರ್ಭಗಳಲ್ಲಿ, ಸಿನಿಕತನವು ಬಹು ಬೇಗ ಹೆಚ್ಚಾಗುವ ಪ್ರವೃತ್ತಿಯಿರುತ್ತದೆ, ಆಗ ಪ್ರಯೋಜನಕಾರಿಯಾದ ಯಾವುದನ್ನಾದರೂ ಜನರು ಕ್ಷಮಿಸಿಬಿಡುವಂತಾಗುತ್ತದೆ. ಅಂಥ ಪರಿಸ್ಥಿತಿಗಳಲ್ಲೂ, ಮೆಕಿಯವೆಲ್ಲಿಯೇ ಹೇಳುವಂತೆ, ದಡ್ಡ ಜನತೆಯ ಮುಂದೆ ಸನ್ನಡತೆಯ ತೋರ್ಕೆಯನ್ನು ಬಿಂಬಿಸುವುದು ಅಪೇಕ್ಷಣೀಯವಾದುದು.

ಈ ಪ್ರಶ್ನೆಯನ್ನು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಕೊಂಡೊಯ್ಯಬಹುದು. ನಾಗರಿಕ ಜನರು ಅನಿರ್ಬಂಧಿತ ಅಹಂಕಾರವುಳ್ಳವನಾಗಿರುತ್ತಾರೆ ಎಂಬುದು ಬಹುತೇಕವಾಗಿ ನಿಶ್ಚಿತ. ಈ ದಿನಗಳಲ್ಲಿ ಯಾರಾದರೂ ಗಣರಾಜ್ಯವನ್ನು ಸ್ಥಾಪಿಸಲು ಬಯಸಿದರೆ, ಅದು ದೊಡ್ಡ ನಗರಗಳ ಜನರಿಂದ ಕೂಡಿರುವುದರ ಬದಲು ಪರ್ವತಾರೋಹಿಗಳಿರುವ ಕಡೆ ಹೆಚ್ಚು ಸುಲಭ, ಯಾಕೆಂದರೆ ಮೊದಲನೆಯದು ಈಗಾಗಲೇ ಭ್ರಷ್ಟವಾಗಿರುತ್ತದೆ ಎಂದು ಮೆಕಿಯವೆಲ್ಲಿ ಹೇಳುತ್ತಾನೆ.[೨೫೨] ವ್ಯಕ್ತಿಯೊಬ್ಬನು ಅನಿರ್ಬಂಧಿತ ಅಹಂಕಾರವುಳ್ಳವನಾಗಿದ್ದರೆ, ಅವನ ಅತ್ಯಂತ ವಿವೇಕಯುತ ನಡೆಯು ಅವನು ಏಗಬೇಕಾದ ಜನತೆಯ ರೀತಿಯನ್ನು ಅವಲಂಬಿಸುತ್ತದೆ. ನವೋದಯದ ಚರ್ಚ್ ಪ್ರತಿಯೊಬ್ಬರಿಗೂ ಆಘಾತವನ್ನುಂಟುಮಾಡಿತು, ಆದರೆ ಅದು ಮತಧರ್ಮಸುಧಾರಣೆಯನ್ನು ಉಂಟುಮಾಡುವಷ್ಟರ ಮಟ್ಟಿಗೆ ಆಘಾತಗೊಳಿಸಿದ್ದು ಆಲ್ಪ್ಸ್‌ನ ಉತ್ತರ ಭಾಗದ ಜನರನ್ನು ಮಾತ್ರ. ಲೂಥರ್ ಬಂಡಾಯವನ್ನು ಆರಂಭಿಸುವ ಹೊತ್ತಿಗೆ ಪೋಪ್ ಪ್ರಭುತ್ವದ ಆದಾಯವು ಆರನೆಯ ಅಲೆಕ್ಸಾಂಡರ್ ಮತ್ತು ಎರಡನೆಯ ಜೂಲಿಯಸ್‌ರು ಹೆಚ್ಚು ಸನ್ನಡತೆಯವರಾಗಿದ್ದರೆ ಬರುತ್ತಿದುದಕ್ಕಿಂತ ಪ್ರಾಯಶಃ ಹೆಚ್ಚಾಗಿತ್ತು; ಇದು ನಿಜವಾಗಿದ್ದರೆ, ಅದಕ್ಕೆ ನವೋದಯದ ಇಟಲಿಯ ಸಿನಿಕತನವೇ ಕಾರಣ. ಸನ್ನಡತೆಯ ಜನತೆಯ ಮೇಲೆ ಅವಲಂಬಿಸುವ ರಾಜಕಾರಣಿಗಳು ನೈತಿಕ ಪರಿಗಣನೆಯ ಬಗ್ಗೆ ಗಮನವನ್ನೇ ಕೊಡದ ಜನತೆಯ ಮೇಲೆ ಅವಲಂಬಿಸುವವರದಕ್ಕಿಂತ ಉತ್ತಮವಾಗಿರುತ್ತದೆ ಎಂಬುದನ್ನು ತೋರಿಸುತ್ತದೆ. ತಮ್ಮ ಅಪರಾಧಗಳ ಬಗ್ಗೆ, ಇರುವುದಾದರೆ, ವ್ಯಾಪಕವಾಗಿ ತಿಳಿಯಪಡಿಸುವ

---

೨೫೨. ರೂಸೋನ ನಿರೀಕ್ಷೆಯನ್ನು ಇಲ್ಲಿಯೇ ಕಾಣುವುದು ಕುತೂಹಲಕಾರಿಯಾಗಿದೆ. ಮೆಕಿಯವೆಲ್ಲಿಯನ್ನು ನಿರಾಶೆ ಹೊಂದಿದ ರೊಮ್ಯಾಂಟಿಕ್ ಎಂದು ವ್ಯಾಖ್ಯಾನಿಸುವುದು ತಮಾಷೆ ಎನಿಸಬಹುದಾದರೂ ಅದು ಪೂರ್ತಿ ಸುಳ್ಳೇನಲ್ಲ.

ಹಾಗಿದ್ದರೆ, ಅವರು ತಮ್ಮ ಹತೋಟಿಯಲ್ಲಿಯೇ ಇರುವ ನಿಷ್ಠುರ ನಿರೋಧವಿರುವ ಪರಿಸ್ಥಿತಿಗಳಿಗಿಂತ ಉತ್ತಮವಾಗಿ ನಡೆದುಕೊಳ್ಳುತ್ತಾರೆ. ಆದರೆ ವಂಚಕತನದಿಂದ ಒಂದಷ್ಟು ಮಟ್ಟಿಗೆ ಯಶಸ್ಸು ಗಳಿಸುವುದು ಸಾಧ್ಯ.

ಮೆಕಿಯವೆಲ್ಲಿಯ ರಾಜಕೀಯ ಚಿಂತನೆಗಳು, ಬಹುತೇಕ ಪ್ರಾಚೀನರದರಂತೆಯೇ, ಒಂದು ದೃಷ್ಟಿಯಿಂದ ಟೊಳ್ಳಾದದ್ದು ಎನಿಸುತ್ತದೆ. ಅವನ ಮನಸ್ಸಿನಲ್ಲಿ, ಹಿಂದೆ ಏನು ನಡೆದಿದೆ ಎಂಬುದನ್ನು ಪರಿಗಣಿಸದೆ ಒಂದೇ ಬಗೆಯದಾದ ಸಮುದಾಯವನ್ನು ಸೃಷ್ಟಿಸಬಲ್ಲವರೆಂದು ಭಾವಿಸಲಾದ ಲೈಕರ್ಗಸ್ ಮತ್ತು ಸಾಲೋನ್‌ರಂತಹ ದೊಡ್ಡ ಕಾನೂನುತಜ್ಞರೇ ತುಂಬಿದ್ದಾರೆ. ಮುತ್ಸದ್ದಿಗಳು ಸೀಮಿತ ಪರಿಧಿಯಲ್ಲಿ ಪ್ರಭಾವ ಬೀರುವ ಸಾವಯವ ಬೆಳೆವಣಿಗೆಯ ಒಂದು ಸಮುದಾಯದ ಪರಿಕಲ್ಪನೆಯು ಮುಖ್ಯವಾಗಿ ಆಧುನಿಕವಾದುದು, ಅದು ಬಹುವಾಗಿ ಪುಷ್ಟವಾಗಿರುವುದು ವಿಕಾಸ ಸಿದ್ಧಾಂತದಿಂದ ಪ್ರಭಾವಿತಗೊಂಡು. ಈ ಪರಿಕಲ್ಪನೆಯು ಮೆಕಿಯವೆಲ್ಲಿಯಲ್ಲಿ ಪ್ಲೇಟೋಗಿಂತ ಹೆಚ್ಚೇನೂ ಕಾಣಿಸುವುದಿಲ್ಲ.

ಆದರೆ ಸಮಾಜ ವಿಕಾಸದ ದೃಷ್ಟಿಕೋನವು, ಹಿಂದೆ ಸತ್ಯವೆನಿಸಿದ್ದರೂ, ಈಗ ಅನ್ವಯವಾಗುವುದಿಲ್ಲ ಮತ್ತು ಈಗಿನ ಮತ್ತು ಮುಂದಿನ ಕಾಲಗಳಲ್ಲಿ ಹೆಚ್ಚು ಯಾಂತ್ರಿಕ ದೃಷ್ಟಿಕೋನಕ್ಕೆ ಅದು ಎಡೆಕೊಡುತ್ತದೆ ಎಂಬುದನ್ನು ಒತ್ತಿ ಹೇಳಬೇಕು. ರಷ್ಯಾ ಮತ್ತು ಜರ್ಮನಿಗಳಲ್ಲಿ, ಪೌರಾಣಿಕ ಲೈಕರ್ಗಸ್ ಸ್ಪಾರ್ಟ ಆಡಳಿತ ವ್ಯವಸ್ಥೆಯನ್ನು ಸೃಷ್ಟಿಸಿದನೆಂದು ಭಾವಿಸಲಾಗುವಂತಹ ರೀತಿಯ ಹೊಸ ಸಮಾಜಗಳು ಸೃಷ್ಟಿಗೊಂಡಿವೆ. ಈ ಪುರಾತನ ಕಾನೂನು ನಿರ್ಮಾಪಕ ಒಬ್ಬ ಜನೋಪಕಾರಿ ಪೌರಾಣಿಕ ವ್ಯಕ್ತಿ, ಆದರೆ ಆಧುನಿಕ ಕಾನೂನು ನಿರ್ಮಾಪಕ ಭಯಾನಕ ವಾಸ್ತವ. ಜಗತ್ತು ಹಿಂದಿಗಿಂತ ಹೆಚ್ಚು ಮೆಕಿಯವೆಲ್ಲಿಯದರಂತಾಗಿದೆ, ಮತ್ತು ಅವನ ತಾತ್ವಿಕತೆಯನ್ನು ನಿರಾಕರಿಸಬಯಸುವ ಆಧುನಿಕ ವ್ಯಕ್ತಿಯು ಹತ್ತೊಂಬತ್ತನೆಯ ಶತಮಾನದಲ್ಲಿ ಆವಶ್ಯಕವಾದುದಕ್ಕಿಂತ ಹೆಚ್ಚು ಆಳವಾಗಿ ಯೋಚಿಸಬೇಕಾಗಿದೆ.

೪
ಎರಾಸ್ಮಸ್ ಮತ್ತು ಮೋರ್

ನವೋದಯವು ಉತ್ತರ ದೇಶಗಳಲ್ಲಿ ಇಟಲಿಗಿಂತ ತಡವಾಗಿ ಸಂಭವಿಸಿತು, ಅಲ್ಲದೆ ಮತಧರ್ಮಸುಧಾರಣೆಯೊಂದಿಗೆ ಬಹು ಬೇಗ ತಳುಕು ಹಾಕಿಕೊಂಡಿತು. ಆದರೆ, ಹದಿನಾರನೆಯ ಶತಮಾನದ ಮೊದಲ ಭಾಗದಲ್ಲಿ, ಫ್ರಾನ್ಸ್, ಇಂಗ್ಲಂಡ್ ಮತ್ತು ಜರ್ಮನಿಗಳಲ್ಲಿ ಹೊಸ ವಿದ್ಯೆಯನ್ನು ತೀವ್ರತರವಾಗಿ ಬಿತ್ತರಿಸುವ ಕಾರ್ಯವು ನಡೆದ ಒಂದು ಕಿರು ಅವಧಿಯಿತ್ತು, ಆದರೆ ಅದು ಮತಧರ್ಮಶಾಸ್ತ್ರಸಂಬಂಧಿತ ವಿವಾದಗಳಲ್ಲಿ ಸಿಲುಕಿಕೊಳ್ಳಲಿಲ್ಲ. ಈ ಉತ್ತರದ ನವೋದಯವು ಅನೇಕ ವಿಧಗಳಲ್ಲಿ ಇಟಲಿಯದಕ್ಕಿಂತ ಭಿನ್ನವಾದುದಾಗಿತ್ತು. ಅದು ಅನಾಯಕತ್ವದಿಂದಾಗಲೀ ಅನೀತಿಯಿಂದಾಗಲೀ ಕೂಡಿರಲಿಲ್ಲ; ಅದಕ್ಕೆ ಬದಲಾಗಿ, ಅದು ಧರ್ಮಶ್ರದ್ಧೆ ಮತ್ತು ಸಾರ್ವಜನಿಕ ಸನ್ನಡತೆಗಳಿಂದ ಕೂಡಿತ್ತು. ಅದು ಬೈಬಲ್‌ಗೆ ವಿದ್ವತ್ತಿನ ಮಾನದಂಡಗಳನ್ನು ಅನ್ವಯಿಸಿ ವಲ್ಗೇಟ್‌ನ ಹೆಚ್ಚು ನಿಖರವಾದ ಪಠ್ಯವನ್ನು ಹೊಂದುವುದರಲ್ಲಿ ಆಸಕ್ತಿಯನ್ನು ತೋರಿತು. ತನ್ನ ಇಟಲಿಯ ಮೂಲಮಾದರಿಗಿಂತ ಕಡಿಮೆ ಉಜ್ವಲವಾಗಿದ್ದರೂ ಅದಕ್ಕಿಂತ ಹೆಚ್ಚು ಸ್ಥಿರತೆಯಿಂದ ಕೂಡಿತ್ತು; ವೈಯಕ್ತಿಕ ವಿದ್ಯೆಯ ಪ್ರದರ್ಶನಕ್ಕಿಂತ ಹೆಚ್ಚಾಗಿ ವಿದ್ಯೆಯನ್ನು ಸಾಧ್ಯವಾದಷ್ಟೂ ವ್ಯಾಪಕವಾಗಿ ಹರಡುವ ಕಾಳಜಿ ಹೊಂದಿತ್ತು.

ಎರಾಸ್ಮಸ್ ಮತ್ತು ಥಾಮಸ್ ಮೋರ್ ಎಂಬ ಇಬ್ಬರು ಮಹನೀಯರು ಉತ್ತರ ನವೋದಯದ ಎರಡು ಮಾದರಿಗಳು. ಅವರಿಬ್ಬರೂ ನಿಕಟ ಸ್ನೇಹಿತರು, ಇಬ್ಬರಲ್ಲೂ ಸಮಾನ ಆಸಕ್ತಿಗಳಿದ್ದವು ಇಬ್ಬರೂ ವಿದ್ವಾಂಸರು, ಆದರೆ ಮೋರ್ ಎರಾಸ್ಮಸ್‌ನಷ್ಟು ದೊಡ್ಡ ವಿದ್ವಾಂಸನಲ್ಲ; ಇಬ್ಬರೂ ಸೂಕ್ಷ್ಮತರ್ಕದ ಬಗ್ಗೆ ಜಿಗುಪ್ಸೆ ಹೊಂದಿದ್ದರು; ಇಬ್ಬರಿಗೂ ಒಳಗಿನಿಂದ ಆಗಬೇಕಾದ ಮತಧಾರ್ಮಿಕ ಸುಧಾರಣೆಯೇ ಗುರಿಯಾಗಿತ್ತು, ಆದರೆ ಪ್ರಾಟೆಸ್ಟೆಂಟ್ ಬಿರುಕು ಉಂಟಾದಾಗ ಅದರ ಬಗ್ಗೆ ಇಬ್ಬರೂ ವಿಷಾದಪಟ್ಟರು; ಇಬ್ಬರೂ ವಾಕ್‌ಚತುರರು, ಹಾಸ್ಯಪ್ರಿಯರು ಮತ್ತು ಬಹು ಕುಶಲಿಗಳಾದ ಲೇಖಕರು. ಲೂಥರ್‌ನ ಬಂಡಾಯಕ್ಕೆ ಮುಂಚೆ ಅವರು ಚಿಂತನೆಯ

ಮುಂದಾಳುಗಳಾಗಿದ್ದರು, ಆದರೆ ಅದಾದ ಬಳಿಕ ಅವರಂತಹ ಜನರ ದೃಷ್ಟಿಯಲ್ಲಿ ಎರಡೂ ಕಡೆಗಳ ಜಗತ್ತು ಬಿರುಸಾಯಿತು. ಹೆಚ್ಚು ಮಂದಿ ಹುತಾತ್ಮರಾದರು, ಎರಾಸ್ಮಸ್ ಪರಿಣಾಮರಾಹಿತ್ಯದಿಂದ ಕುಸಿದುಹೋದ.

ಎರಾಸ್ಮಸ್ ಆಗಲೀ ಮೋರ್ ಆಗಲೀ ಆ ಶಬ್ದದ ನಿಖರ ಅರ್ಥದಲ್ಲಿ ತತ್ವಜ್ಞಾನಿಯಾಗಿರಲಿಲ್ಲ. ನಾನು ಅವರ ಬಗ್ಗೆ ಹೇಳಲು ಕಾರಣ ಅವರಿಬ್ಬರೂ ಕ್ರಾಂತಿಪೂರ್ವ ಕಾಲದ, ಸೌಮ್ಯ ಸುಧಾರಣೆಯ ಆವಶ್ಯಕತೆಯ ಬಗ್ಗೆ ವ್ಯಾಪಕ ಬೆಂಬಲವಿದ್ದಾಗ ಹಾಗೂ ಪುಕ್ಕಲರು ಅತಿರೇಕಿಗಳ ಭಯದಿಂದ ಪ್ರತಿಗಾಮಿಗಳಾಗದೇ ಇರುವಾಗ, ಮನೋಧರ್ಮದ ಸಂಕೇತಗಳಾಗಿದ್ದಾರೆ ಎಂಬುದರಿಂದಾಗಿ. ಸೂಕ್ಷ್ಮತರ್ಕದ ವಿರುದ್ಧವಾದ ಪ್ರತಿಕ್ರಿಯೆಗಳ ಲಕ್ಷಣಗಳಾದ ಮತಧರ್ಮಶಾಸ್ತ್ರ ಮತ್ತು ತಾತ್ವಿಕತೆಗಳಲ್ಲಿನ ತೀರ ವ್ಯವಸ್ಥಿತವಾದುದನ್ನು ಇಷ್ಟಪಡದ ಬಗೆಯ ಉದಾಹರಣೆಗಳೂ ಆಗಿದ್ದಾರೆ.

ಎರಾಸ್ಮಸ್ (೧೪೬೬–೧೫೩೬) ರಾಟೆರ್‌ಡಾಂನಲ್ಲಿ ಹುಟ್ಟಿದವನು.[೨೫೩] ಅವನು ವಿವಾಹೇತರ ಕೂಸು, ತನ್ನ ಹುಟ್ಟಿನ ಪರಿಸ್ಥಿತಿಗಳ ಕುರಿತ ಕಲ್ಪನಾತ್ಮಕ ಕಾರಣವನ್ನವನು ಸೃಷ್ಟಿಸಿಕೊಂಡಿದ್ದ. ವಾಸ್ತವವಾಗಿ, ಅವನ ತಂದೆ ಒಬ್ಬ ಪುರೋಹಿತ, ಸ್ವಲ್ಪ ಮಟ್ಟಿಗಿನ ವಿದ್ವಾಂಸ, ಅವನಿಗೆ ಗ್ರೀಕ್ ಜ್ಞಾನವೂ ಇತ್ತು. ಅವನು ದೊಡ್ಡವನಾಗುವ ಮುಂಚೆಯೇ ತಂದೆತಾಯಿಯರಿಬ್ಬರೂ ಸತ್ತರು, ಅವನ ಪೋಷಕರು (ಅವನ ಹಣವನ್ನು ದುರುಪಯೋಗಪಡಿಸಿಕೊಂಡಿದ್ದ ಕಾರಣದಿಂದಾಗಿ) ಸ್ಟೇಯರ್‌ನ ಆಶ್ರಮವೊಂದರಲ್ಲಿ ಸನ್ಯಾಸಿಯಾಗಲು ಅವನನ್ನು ಪುಸಲಾಯಿಸಿದರು, ಈ ಕುರಿತು ಅವನಿಗೆ ಜೀವಮಾನಪೂರ್ತಿ ಖೇದವಿತ್ತು. ಅವನ ಪೋಷಕರಲ್ಲೊಬ್ಬ ಶಾಲಾ ಉಪಾಧ್ಯಾಯನಾಗಿದ್ದವನು, ಆದರೆ ಇನ್ನೂ ವಿದ್ಯಾರ್ಥಿಯಾಗಿದ್ದ ಎರಾಸ್ಮಸ್‌ಗೆ ತಿಳಿದಿದ್ದಷ್ಟೂ ಲ್ಯಾಟಿನ್ ಗೊತ್ತಿರಲಿಲ್ಲ. ಹುಡುಗನ ಲ್ಯಾಟಿನ್ ಪ್ರಾರ್ಥನಾಪದ್ಯವೊಂದಕ್ಕೆ ಅವನು ಈ ರೀತಿ ಬರೆದ: 'ನೀನು ಇಂತಹ ಸುಂದರ ಪದ್ಯವನ್ನು ಮುಂದೆ ಬರೆದರೆ, ದಯವಿಟ್ಟು ಅದರ ಅರ್ಥವನ್ನೂ ವಿವರಿಸು.'

೧೪೯೩ ರಲ್ಲಿ ಅವನು, ಗೋಲ್ಡನ್ ಫ್ಲೀಸ್ ವರ್ಗದ ಕುಲಾಧಿಪತಿಯಾಗಿದ್ದ ಕ್ಯಾಂಬ್ರಾಯ್‌ನ ಬಿಷಪ್‌ನ ಕಾರ್ಯದರ್ಶಿಯಾದ. ಇದರಿಂದ ಅವನಿಗೆ ಆಶ್ರಮವನ್ನು ಬಿಟ್ಟು ಪ್ರವಾಸ ಕೈಗೊಳ್ಳುವ ಅವಕಾಶವೊದಗಿತು, ಆದರೆ ಅವನು ಬಯಸಿದಂತೆ ಇಟಲಿಗಲ್ಲ. ಅವನ ಗ್ರೀಕ್ ಜ್ಞಾನವಿನ್ನೂ ಪ್ರಬುದ್ಧವಾಗಿರಲಿಲ್ಲ, ಆದರೆ ಅವನ ಲ್ಯಾಟಿನ್ ಜ್ಞಾನ ಉನ್ನತ ಮಟ್ಟದ್ದಾಗಿತ್ತು; ಲ್ಯಾಟಿನ್ ಭಾಷೆಯ ಪನ್ನತಿಕೆಯ ಬಗ್ಗೆ

---

೨೫೩. ಎರಾಸ್ಮಸ್‌ನ ಜೀವನದ ಬಗ್ಗೆ ನಾನು ಮುಖ್ಯವಾಗಿ ಅನುಸರಿಸಿರುವುದು ಅವನ ಬಗೆಗಿನ ಹ್ಯೂಝಿಂಗನ ಸುಂದರ ಜೀವನಚರಿತ್ರೆಯನ್ನು

ಬರೆದಿದ್ದ ಪುಸ್ತಕದಿಂದಾಗಿ ಅವನಿಗೆ ಲೊರೆಂಝೋ ವಾಲ್ಲಾನ ಬಗ್ಗೆ ವಿಶೇಷ ಒಲವಿತ್ತು. ಲ್ಯಾಟಿನ್ ಜ್ಞಾನವೆಂದರೆ ನಿಜವಾದ ಭಕ್ತಿಯ ಪ್ರತೀಕ ಎಂದವನು ಭಾವಿಸಿದ್ದ, ಜೆರೋಂ ಮತ್ತು ಆಗಸ್ಟೈನ್‌ರನ್ನು ಮಾದರಿಯಾಗಿರಿಸಿಕೊಂಡಿದ್ದ - ಆದರೆ ಸಿಸೆರೋವನ್ನು ಓದಿದ್ದರಿಂದಾಗಿ ಜೆರೋಮ್‌ನನ್ನು ನಮ್ಮ ಪ್ರಭುವು ಖಂಡಿಸಿದ್ದ ಎಂಬುದನ್ನು ಅವನು ಮರೆತ.

ಅವನು ಸ್ವಲ್ಪ ಕಾಲ ಪ್ಯಾರಿಸ್ ವಿಶ್ವವಿದ್ಯಾನಿಲಯದಲ್ಲಿದ್ದ, ಆದರೆ ತನಗೆ ಲಾಭಕರವಾದದ್ದೇನನ್ನೂ ಅವನು ಅಲ್ಲಿ ಕಾಣಲಿಲ್ಲ. ಸೂಕ್ಷ್ಮತರ್ಕದ ಆರಂಭ ಕಾಲದಿಂದ ಗೆರ್ಸನ್ ಮತ್ತು ಮತಧಾರ್ಮಿಕ ಚಳವಳಿಯವರೆಗೆ ಆ ವಿಶ್ವವಿದ್ಯಾನಿಲಯವು ಹಿರಿಮೆಯ ದಿನಗಳನ್ನು ಕಂಡಿತ್ತು, ಆದರೆ ಈಗ ಹಳೆಯ ವಿವಾದಗಳು ಬತ್ತಿಹೋಗಿದ್ದವು. ಒಟ್ಟಿಗೇ ಪ್ರಾಚೀನರು (ಏನ್ಷಿಯಂಟ್ಸ್) ಎಂದು ಕರೆಸಿಕೊಳ್ಳುತ್ತಿದ್ದ ಥಾಮಸ್‌ವಾದಿಗಳು ಮತ್ತು ಸ್ಕಾಟ್‌ವಾದಿಗಳು, ಅವಧಿವಾದಿಗಳು (ಟರ್ಮಿನಿಸ್ಟ್ಸ್) ಅಥವಾ ಆಧುನಿಕರು ಎನಿಸಿಕೊಂಡಿದ್ದ ಒಕ್ಕಾಮ್‌ವಾದಿಗಳ ಜೊತೆ ವಿವಾದಕ್ಕಿಳಿದಿದ್ದರು. ಕೊನೆಗೆ ೧೪೮೨ ರಲ್ಲಿ, ಅವರಿಬ್ಬರೂ ಸಂಧಿಯಾದರು, ವಿಶ್ವವಿದ್ಯಾನಿಲಯ ವ್ಯಾಪ್ತಿಯ ಹೊರಗೆ ಪ್ಯಾರಿಸ್‌ನಲ್ಲಿ ಹಬ್ಬುತ್ತಿದ್ದ ಮಾನವತಾವಾದಿಗಳ (ಹ್ಯೂಮನಿಸ್ಟ್) ವಿರುದ್ಧ ಇಬ್ಬರೂ ಒಂದಾದರು. ಎರಾಸ್ಮಸ್ ಸೂಕ್ಷ್ಮತಾರ್ಕಿಕರನ್ನು ದ್ವೇಷಿಸುತ್ತಿದ್ದ, ಅವರನ್ನವನು ನಿಷ್ಪ್ರಯೋಜಕರು ಹಾಗೂ ಪುರಾತನರು ಎಂದು ಪರಿಗಣಿಸಿದ್ದ. ಡಾಕ್ಟರೇಟ್ ಪದವಿಯನ್ನು ಹೊಂದಲು ಬಯಸಿದ್ದ ತಾನು ಅವರ ಬಗ್ಗೆ ಹಿತಕರವಾದುದನ್ನಾಗಲೀ ಚತುರ ಮಾತುಗಾರಿಕೆಯನ್ನಾಗಲೀ ತೋರಿಸಿಕೊಳ್ಳಲು ಪ್ರಯತ್ನಿಸಲಿಲ್ಲವೆಂದು ಅವನು ಬರೆದ ಪತ್ರವೊಂದರಲ್ಲಿ ಹೇಳಿಕೊಂಡಿದ್ದಾನೆ. ಅವನಿಗೆ ಯಾವ ತತ್ತ್ವಜ್ಞಾನದಲ್ಲಿಯೂ ನಿಜವಾದ ಆಸಕ್ತಿಯಿರಲಿಲ್ಲ, ಪ್ಲೇಟೋ ಅಥವಾ ಅರಿಸ್ಟಾಟಲ್ ಬಗ್ಗೆ ಕೂಡ, ಆದರೆ ಅವರು ಪ್ರಾಚೀನರಾದ್ದರಿಂದ ಅವರ ಬಗ್ಗೆ ಗೌರವಯುತವಾಗಿ ಮಾತನಾಡಬೇಕಾಗಿತ್ತು.

೧೪೯೯ ರಲ್ಲಿ ಅವನು ಮೊದಲ ಬಾರಿಗೆ ಇಂಗ್ಲಂಡ್‌ಗೆ ಭೇಟಿ ನೀಡಿದ, ಅಲ್ಲಿ ಮುತ್ತಿಡುವ ಹುಡುಗಿಯರ ಫ್ಯಾಷನ್ ಅನ್ನು ಇಷ್ಟಪಟ್ಟ. ಅವನಿಗೆ ಇಂಗ್ಲಂಡ್‌ನಲ್ಲಿ ಕಾಲೆಟ್ ಮತ್ತು ಮೋರ್ ಗೆಳೆಯರಾದರು, ಲಘು ಸಾಹಿತ್ಯರಚನೆಯ ಬದಲು ಗಂಭೀರ ಅಧ್ಯಯನವನ್ನು ಕೈಗೊಳ್ಳಲು ಅವರು ಇವನನ್ನು ಉತ್ತೇಜಿಸಿದರು. ಕಾಲೆಟ್ ಗ್ರೀಕ್ ತಿಳಿಯದೆಯೇ ಬೈಬಲ್ ಬಗ್ಗೆ ಉಪನ್ಯಾಸಗಳನ್ನು ನೀಡುತ್ತಿದ್ದ; ತಾನು ಬೈಬಲ್ ಕುರಿತು ಅಧ್ಯಯನ ನಡೆಸಬೇಕೆಂದು ನಿರ್ಧರಿಸಿದ ಎರಾಸ್ಮಸ್‌ಗೆ ಗ್ರೀಕ್ ಜ್ಞಾನವು ಆವಶ್ಯಕವೆನ್ನಿಸಿತು. ೧೫೦೦ ರ ಆರಂಭದಲ್ಲಿ ಇಂಗ್ಲಂಡ್‌ನಿಂದ ಹೊರಟ ಅವನು ಗ್ರೀಕ್ ಭಾಷೆಯನ್ನು ಕಲಿಯಲು ತೊಡಗಿದ. ಆದರೆ ಅದಕ್ಕಾಗಿ ಅಧ್ಯಾಪಕನನ್ನು ನೇಮಿಸಿಕೊಳ್ಳುವಷ್ಟು ಅವನು ಹಣವಂತನಾಗಿರಲಿಲ್ಲ; ೧೫೦೨ ರ ಮಾಗಿಕಾಲದ ಹೊತ್ತಿಗೆ ಅದರಲ್ಲಿ ಪರಿಣತಿ ಹೊಂದಿದ; ೧೫೦೬ ರಲ್ಲಿ ಅವನು

ಇಟಲಿಗೆ ಹೋದಾಗ ಇಟಾಲಿಯನ್‌ರಿಂದ ತಾನು ಕಲಿಯಬೇಕಾದ್ದೇನೂ ಇಲ್ಲವೆಂಬುದನ್ನು ತಿಳಿದ. ಸಂತ ಜೆರೋಮ್‌ನನ್ನು ಸಂಪಾದಿಸಲು ಹಾಗೂ ಹೊಸ ಲ್ಯಾಟಿನ್ ಭಾಷಾಂತರದೊಡನೆ ಗ್ರೀಕ್ ಒಡಂಬಡಿಕೆಯನ್ನು ಪ್ರಕಟಿಸಲು ಅವನು ನಿರ್ಧರಿಸಿದ; ಎರಡೂ ೧೫೧೬ ರಲ್ಲಿ ಸಫಲವಾದುವು. ವಲ್ಗೇಟ್‌ನಲ್ಲಿ ನಿಖರರಾಹಿತ್ಯಗಳ ಅವನ ಗುರುತಿಸುವಿಕೆಯು ವಿವಾದದ ಕಾಲದಲ್ಲಿ ಪ್ರಾಟೆಸ್ಟೆಂಟರಿಗೆ ಮುಂದೆ ಉಪಯುಕ್ತವಾಯಿತು. ಅವನು ಹೀಬ್ರೂ ಕಲಿಯಲು ಪ್ರಯತ್ನಿಸಿದ, ಆದರೆ ಅದನ್ನು ಕೈಬಿಟ್ಟ.

ಇನ್ನೂ ಓದಲಾಗುವ ಎರಾಸ್ಮಸ್‌ನ ಏಕೈಕ ಪುಸ್ತಕವೆಂದರೆ 'ದ ಪ್ರೈಸ್ ಆಫ್ ಫಾಲಿ'. ೧೫೦೯ ರಲ್ಲಿ, ಇಟಲಿಯಿಂದ ಇಂಗ್ಲಂಡ್‌ಗೆ ಹೋಗುವ ದಾರಿಯಲ್ಲಿ ಆಲ್ಪ್ಸ್ ಅನ್ನು ದಾಟುವಾಗ ಈ ಪುಸ್ತಕದ ಕಲ್ಪನೆಯು ಅವನಲ್ಲಿ ಮೂಡಿತು. ಇಂಗ್ಲಂಡ್‌ನಲ್ಲಿ ಅವನು ಸರ್ ಥಾಮಸ್ ಮೋರ್‌ನ ಮನೆಯಲ್ಲಿ ಬಹು ಬೇಗ ಅದನ್ನು ಬರೆದು ಮುಗಿಸಿದ; 'ಮೋರೊಸ್' ಎಂದರೆ 'ಮೂರ್ಖ' ಎಂಬ ಅರ್ಥದ ಮೇಲೆ ಚಮತ್ಕಾರಯುತವಾಗಿ ಆಟವಾಡಿ, ಅದನ್ನವನಿಗೇ ಅರ್ಪಿಸಿದ್ದಾನೆ. ಪುಸ್ತಕದ ನಿರೂಪಣೆಯು ಫಾಲಿಯ ಉತ್ತಮಪುರುಷದಲ್ಲಿದೆ; ತನ್ನ ಹೊಗಳಿಕೆಯನ್ನವಳು ಗತ್ತಿನಿಂದ ಹಾಡುತ್ತಾಳೆ, ಅವಳ ನಿರೂಪಣೆಯು ಹಾಲ್‌ಬಿಯೆನ್‌ನ ದೃಷ್ಟಾಂತಗಳೊಂದಿಗೆ ಲವಲವಿಕೆಯಿಂದ ಕೂಡಿದೆ. ಮಾನವ ಬದುಕಿನ ಎಲ್ಲ ಮಗ್ಗುಲುಗಳು, ವರ್ಗಗಳು ಹಾಗೂ ವೃತ್ತಿಗಳ ಬಗ್ಗೆಯೂ ಅವಳು ನಿರೂಪಿಸುತ್ತಾಳೆ. ಅವಳಿಲ್ಲದಿದ್ದರೆ ಮನುಸಂಕುಲವೇ ನಾಶವಾಗಿಬಿಡುತ್ತದೆ, ಯಾಕೆಂದರೆ ಯಾರು ತಾನೇ ತಪ್ಪಿಲ್ಲದೆ (ಫಾಲಿ) ಮದುವೆಯಾಗಲು ಸಾಧ್ಯ? ವಿವೇಕಕ್ಕೆ ಪ್ರತಿಯಾಗಿ ಅವಳು, 'ಹಾನಿರಹಿತ ಹಾಗೂ ಮೂರ್ಖತನದ ಆದರೆ ಗಂಡಸರ ಗಡಸುತನ ಮತ್ತು ಮೂರ್ಖತನಗಳನ್ನು ಉಪಶಮನ ಮಾಡಿ ಮತ್ತು ಮೆತುವುಗೊಳಿಸುವಲ್ಲಿ ಅನುಕೂಲೆಯೂ ಉಪಯುಕ್ತೆಯೂ ಆದ ಜೀವಿ ಹೆಂಡತಿಯನ್ನು ಹೊಂದಬೇಕು' ಎಂದವಳು ಸಲಹೆ ಕೊಡುತ್ತಾಳೆ. ಯಾರು ತಾನೇ ಹೊಗಳಿಕೆಯಿಲ್ಲದೆ ಅಥವಾ ಸ್ವಾನುರಕ್ತಿಯಿಲ್ಲದೆ ಸುಖವಾಗಿರಬಲ್ಲರು? ಆದರೂ ಅಂಥ ಸುಖವು ಫಾಲಿಯೇ. ಅತ್ಯಂತ ಸುಖಿಗಳೆಂದರೆ ಒರಟರು ಮತ್ತು ವಿಚಾರಶೂನ್ಯರಿಗೆ ಹತ್ತಿರವಾಗಿರುವವರು. ಅತ್ಯಂತ ಉತ್ತಮ ಸುಖವೆಂದರೆ ಭ್ರಮೆಯಲ್ಲಿರುವುದು, ಯಾಕೆಂದರೆ ಅದು ಖರ್ಚೇ ಇಲ್ಲದ್ದು: ನಿಜವಾದ ರಾಜನಾಗುವ ಸತ್ಯಕ್ಕಿಂತ ನಾನು ರಾಜನೇ ಎಂದು ಕಲ್ಪಿಸಿಕೊಳ್ಳುವುದು ಸುಲಭ. ಮುಂದುವರಿದು ಎರಾಸ್ಮಸ್ ರಾಷ್ಟ್ರೀಯ ಹೆಮ್ಮೆ ಮತ್ತು ವೃತ್ತಿಯ ಅಹಂಕಾರಗಳ ಬಗ್ಗೆ ವಿಡಂಬನೆ ಮಾಡುತ್ತಾನೆ; ಕಲೆ ಮತ್ತು ವಿಜ್ಞಾನಗಳ ಬಹುತೇಕ ಪ್ರಾಧ್ಯಾಪಕರು ಅತಿಶಯ ಅಹಂಕಾರಿಗಳು, ಅವರು ಸುಖವನ್ನು ಹೊಂದುವುದು ಈ ಕಲ್ಪನೆಯಿಂದಲೇ.

ವಿಡಂಬನೆಯು ಖಂಡನೆಗೆ ಎಡೆ ಮಾಡಿಕೊಡುವ ಭಾಗಗಳು ಇದರಲ್ಲಿವೆ, ಎರಾಸ್ಮಸ್‌ನ ಗಂಭೀರ ಅಭಿಪ್ರಾಯಗಳನ್ನು ಫಾಲಿ ನುಡಿಯುತ್ತಾಳೆ; ಇವು ಮತಧರ್ಮಬೋಧಕ ದುರುಪಯೋಗಗಳಿಗೆ ಸಂಬಂಧಿಸಿದವು. 'ಪ್ರತಿ ಆತ್ಮವು ಶುದ್ಧೀಕರಣಲೋಕದಲ್ಲಿ ಕಾಲದ ಬಗ್ಗೆ ಲೆಕ್ಕ ಹಾಕುವ' ಪುರೋಹಿತವರ್ಗದ ಕ್ಷಮೆಗಳೂ ಮತ್ತು ಲೋಲುಪತೆಗಳು; ವರ್ಜಿನ್‌ಳದೂ ಸೇರಿದಂತೆ 'ಕುರುಡು ಭಕ್ತರು ತಾಯಿಯನ್ನು ಮಗನಿಗಿಂತ ಮುಂಚೆಯೇ ಕೂರಿಸುವುದು ಸಮಂಜಸವೆಂದು ಭಾವಿಸುವ ಸಂತರ ಆರಾಧನೆಗಳು'; ತ್ರಿಮೂರ್ತಿತ್ವ ಮತ್ತು ಅವತಾರಗಳ ಕುರಿತ ಮತಧರ್ಮಶಾಸ್ತ್ರಜ್ಞರ ವಿವಾದಗಳು; ಸತ್ವಪರಿವರ್ತನ ಸಿದ್ಧಾಂತ; ಸೂಕ್ಷ್ಮತಾರ್ಕಿಕ ಪಂಥಗಳು; ಪೋಪ್‌ರು, ಕಾರ್ಡಿನಲ್‌ಗಳು ಮತ್ತು ಬಿಷಪ್‌ರು – ಎಲ್ಲರೂ ಹರಿತ ವಿಡಂಬನೆಗೊಳಗಾಗಿದ್ದಾರೆ. ಅದರಲ್ಲೂ ಆಶ್ರಮವಾಸಿವರ್ಗದ ಬಗೆಗಿನ ವಿಡಂಬನೆ ಚುಚ್ಚುವ ಮೊನಚಿನಿಂದ ಕೂಡಿರುವಂತಹುದು: ಅವರು 'ಮೆದುಳುಜ್ವರಪೀಡಿತ ಮೂರ್ಖರು', ಅವರಲ್ಲಿನ ಮತಧರ್ಮವು ಸೊನ್ನೆ, ಆದರೂ ಅವರು 'ತಮ್ಮಲ್ಲಿಯೇ ಅತೀವ ಪ್ರೀತಿ ಹೊಂದಿರುವವರು, ತಮ್ಮ ಸುಖದ ಮಹಾ ಅಭಿಮಾನಿಗಳು.' ಸೂಕ್ಷ್ಮವಾದ ಕ್ಷುಲ್ಲಕ ಶಿಷ್ಟಾಚಾರದಲ್ಲಿಯೇ ಮತಧರ್ಮವೆಲ್ಲ ಅಡಗಿದೆ ಎಂದವರು ಭಾವಿಸುತ್ತಾರೆ: 'ತಮ್ಮ ಪಾದರಕ್ಷೆಗಳ ಬಿಗಿತದ ದಾರದ ಗಂಟುಗಳ ನಿಖರ ಸಂಖ್ಯೆ; ತಮ್ಮ ಒಲವಿನ ಬಣ್ಣಗಳು ಮತ್ತು ಅವುಗಳನ್ನು ಮಾಡಿರುವ ವಸ್ತುಗಳು; ತಮ್ಮ ನಡುಕಟ್ಟಿನ ಉದ್ದ ಮತ್ತು ಅಗಲ ಮುಂತಾದವು. 'ಮಹಾ ವಿಚಾರಣಾಧಿಕರಣದ ಮುಂದೆ ಅವರು ಮಾಡುವ ಮೊರೆಗಳು ಕೇಳಲು ಎಷ್ಟೊಂದು ಚೆಂದ; ತನ್ನ ಹೊಟ್ಟೆಯ ಹಸಿವನ್ನು ಹೇಗೆ ಬರೀ ಮೀನಿನಿಂದ ಇಂಗಿಸಿಕೊಂಡೆ ಎಂಬ ಒಬ್ಬನ ಬಡಾಯಿ; ತನ್ನ ಬಹುತೇಕ ಕಾಲವನ್ನು ದೈವಪ್ರಾರ್ಥನಾ ಗೀತೆಗಳ ಪಠಿಸುವಿಕೆಯಲ್ಲಿಯೇ ಕಳೆದಿರುವೆನೆಂಬ ಮತ್ತೊಬ್ಬನ ಕೊಚ್ಚಿಕೊಳ್ಳುವಿಕೆ .. .. ತನ್ನ ಅರುವತ್ತು ವರ್ಷಗಳ ಬದುಕಿನಲ್ಲಿ ದಪ್ಪ ಕೈಗವಸು ಹಾಕಿಕೊಂಡು ಆರಿಸಿದ್ದಲ್ಲದೆ ಚಿಕ್ಕಾಸನ್ನೂ ಎಂದೂ ಕೈಯಿಂದ ಮುಟ್ಟದ ತನ್ನ ಸತ್ಯವಂತಿಕೆಯ ಬಗೆಗಿನ ಮಗುದೊಬ್ಬನ ಪ್ರಲಾಪ.' ಆದರೆ ಕ್ರಿಸ್ತನು ಮಧ್ಯೆ ಪ್ರವೇಶಿಸಿ ಹೀಗೆನ್ನುತ್ತಾನೆ: 'ಪುರೋಹಿತರೇ, ಮಡಿವಂತರೇ ನಿಮ್ಮ ಗೋಳಾಟ ಸಾಕು .. .. ನಾನು ನಿಮಗೆ ಒಂದು ಸೂತ್ರ ಹೇಳಿದ್ದೆ, ಎಲ್ಲರನ್ನೂ ಪ್ರೀತಿಸುವುದು, ಅದನ್ನು ತಾನು ಪ್ರಾಮಾಣಿಕವಾಗಿ ನೆರವೇರಿಸಿದ್ದೇನೆ ಎಂದು ಯಾವನೊಬ್ಬನೂ ಹೇಳಿಕೊಳ್ಳಲಿಲ್ಲ.' ಆದರೂ ಲೋಕದಲ್ಲಿ ಇವರನ್ನು ಕಂಡರೆ ಜನಗಳಿಗೆ ಭಯ, ಯಾಕೆಂದರೆ ತಪ್ಪೊಪ್ಪಿಗೆಯ ಕಾರಣದಿಂದ ಅವರಿಗೆ ಅನೇಕ ರಹಸ್ಯಗಳು ಗೊತ್ತಾಗಿರುತ್ತವೆ, ಕುಡಿದ ಮತ್ತಿನಲ್ಲಿ ಎಷ್ಟೋ ವೇಳೆ ಒದರಿಬಿಡುತ್ತಾರೆ.

ಪೋಪ್‌ರನ್ನೂ ಬಿಟ್ಟಿಲ್ಲ. ಅವರು ವಿನೀತತೆ ಮತ್ತು ಬಡತನದ ಮೂಲಕ ತಮ್ಮ ಒಡೆಯನನ್ನು ಅನುಸರಿಸಬೇಕು. 'ಅವರ ಏಕೈಕ ಆಯುಧ ಸತ್ವವಾಗಿರಬೇಕು; ಇವುಗಳ ವಿಷಯದಲ್ಲಿ ಅವರು ಉದಾರತೆ ಹೊಂದಿದವರು, ತಾವು ವಿಧಿಸುವ ನಿಷೇಧಗಳಲ್ಲಿ, ತಮ್ಮ ನಿಲಂಬನಗಳಲ್ಲಿ, ತಮ್ಮ ಅಪರಾಧಗಳಲ್ಲಿ, ದೊಡ್ಡ ಸಣ್ಣ ಬಹಿಷ್ಕಾರಗಳಲ್ಲಿ, ತಾವು ಕೂಗು ಹಾಕುವವರ ವಿರುದ್ಧ ಡುರಕಿ ಹೊಡೆಯುತ್ತ ಮುನ್ನುಗ್ಗುವ ತಮ್ಮ ಹೋರಿಗಳಲ್ಲಿ; ಈ ಪಾವನ ಪಾದ್ರಿಗಳು ಪಿಶಾಚಿಯ ಪ್ರೇರಣೆಯಿಂದ, ತಮ್ಮ ಕಣ್ಣೆದುರಿಗೆ ದೇವರ ಭಯವನ್ನು ಹೊಂದಿಲ್ಲದೆ, ಪಾತಕತನದಿಂದಲೂ ಕಟುಕತನದಿಂದಲೂ ಸಂತ ಪೀಟರ್‌ನ ಪಾರಂಪರಿಕ ಆಸ್ತಿಯನ್ನು ಕುಗ್ಗಿಸುವ ಪ್ರಯತ್ನ ಮಾಡುವವರ ವಿರುದ್ಧ ಎಂದೂ ಅವುಗಳನ್ನು ಪ್ರಯೋಗಿಸುವವರೇ ಅಲ್ಲ.'

ಎರಾಸ್ಮಸ್ ಮತಧರ್ಮಸುಧಾರಣೆಯನ್ನು ಸ್ವಾಗತಿಸುತ್ತಿದ್ದ ಎಂದು ಇಂತಹ ಭಾಗಗಳಿಂದ ಅಂದುಕೊಳ್ಳಬಹುದಾದಾರೂ ಆದದ್ದು ಬೇರೆಯಾದದ್ದೇ.

ನಿಜವಾದ ಮತಧರ್ಮವೆಂದರೆ ಒಂದು ಬಗೆಯ ತಪ್ಪು (ಫಾಲಿ) ಎಂಬ ಸೂಚನೆಯೊಂದಿಗೆ ಪುಸ್ತಕ ಕೊನೆಯಾಗುತ್ತದೆ. ಉದ್ದಕ್ಕೂ, ಎರಡು ಬಗೆಯ ತಪ್ಪುಗಳು ಕಾಣಿಸಿಕೊಳ್ಳುತ್ತವೆ: ಒಂದು, ವ್ಯಂಗ್ಯಪೂರ್ಣ ಹೊಗಳಿಕೆಯದು, ಎರಡು, ಗಂಭೀರ ಬಗೆಯ ಹೊಗಳಿಕೆಯದು; ಗಂಭೀರ ಹೊಗಳಿಕೆಗೆ ಪಾತ್ರವಾದುದೆಂದರೆ ಕ್ರೈಸ್ತ ಸರಳತೆಯ ಬಗೆಗಿನದು. ಈ ಭಾಗವು ಎರಾಸ್ಮಸ್‌ನ ಸೂಕ್ಷ್ಮತಾರ್ಕಿಕ ತತ್ವಜ್ಞಾನ ಹಾಗೂ ತಪ್ಪುತಪ್ಪಾದ ಲ್ಯಾಟಿನ್‌ನಿಂದ ಕೂಡಿದ ವಿದ್ವತ್‌ಪೂರ್ಣರಾದ ಮತಧರ್ಮಬೋಧಕರ ಬಗೆಗಿನ ತಿರಸ್ಕಾರದಿಂದ ಕೂಡಿದೆ. ಆದರೆ ಅದರಲ್ಲಿ ಆಳವಾದ ಭಾಗವೂ ಇದೆ. ನನಗೆ ತಿಳಿದ ಮಟ್ಟಿಗೆ, ರೂಸೋನ 'ಸವೋಯಾರ್ಡ್ ವಿಕಾರ್' ನಲ್ಲಿ ಹೊರಹೊಮ್ಮಿರುವ ದೃಷ್ಟಿಕೋನವು ಸಾಹಿತ್ಯರೂಪದಲ್ಲಿ ಅದರಲ್ಲಿ ಮೊದಲನೆಯ ಬಾರಿಗೆ ಕಾಣಿಸಿಕೊಂಡಿದೆ. ಆ ದೃಷ್ಟಿಕೋನದ ಪ್ರಕಾರ, ನಿಜವಾದ ಮತಧರ್ಮ ಹೊಮ್ಮುವುದು ಹೃದಯದಿಂದಲೇ ಹೊರತು ತಲೆಯಿಂದಲ್ಲ, ಹೀಗಾಗಿ ಎಲ್ಲ ಮತಧರ್ಮಶಾಸ್ತ್ರವೂ ಅನವಶ್ಯಕವಾದುದು. ಈ ಅಭಿಪ್ರಾಯವು ಹೆಚ್ಚು ವ್ಯಾಪಕವಾಗುತ್ತಿದೆ, ಈಗ ಪ್ರಾಟೆಸ್ಟೆಂಟರು ಅದನ್ನು ಸಾಮಾನ್ಯವಾಗಿ ಒಪ್ಪಿಕೊಂಡಿದ್ದಾರೆ. ಮೂಲತಃ ಅದು ಉತ್ತರದ ಭಾವನಾತ್ಮಕತೆಯಿಂದಾದ ಹೆಲೆನಿಕ್ ಬೌದ್ಧಿಕತೆಯ ತಿರಸ್ಕಾರ.

ಎರಾಸ್ಮಸ್ ಎರಡನೆಯ ಬಾರಿ ಇಂಗ್ಲಂಡ್‌ಗೆ ಹೋದಾಗ ಅಲ್ಲಿ ಐದು ವರ್ಷಗಳ ಕಾಲ (೧೫೦೯–೧೪) ಇದ್ದ, ಸ್ವಲ್ಪ ಕಾಲ ಲಂಡನ್‌ನಲ್ಲಿ, ಸ್ವಲ್ಪ ಕಾಲ ಕೇಂಬ್ರಿಜ್‌ನಲ್ಲಿ. ಇಂಗ್ಲಿಷ್ ಮಾನವೀಯತಾವಾದವನ್ನು ಉದ್ದೀಪಿಸುವುದರಲ್ಲಿ ಅದು ಪ್ರಭಾವಶಾಲಿಯಾಗಿದೆ. ಇಂಗ್ಲಿಷ್ ಸಾರ್ವಜನಿಕ ಶಾಲೆಗಳ ವಿದ್ಯಾಭ್ಯಾಸವು

ಇತ್ತೀಚಿನವರೆಗೂ ಅವನು ಬಯಸಿದಂತೆಯೇ ಬಹುತೇಕ ಇತ್ತು, ಗ್ರೀಕ್ ಮತ್ತು ಲ್ಯಾಟಿನ್‌ಗಳನ್ನು ಅರೆದು ಕುಡಿಸುವುದರಲ್ಲಿ, ಕೇವಲ ಭಾಷಾಂತರಗಳ ಮೂಲಕವಲ್ಲ, ಗದ್ಯಪದ್ಯಗಳ ಸ್ವತಂತ್ರ ರಚನೆಗಳಿಂದ ಕೂಡಿದ ರೀತಿಯಲ್ಲಿ. ಹದಿನೇಳನೆಯ ಶತಮಾನದಿಂದೀಚೆಗೆ ವ್ಯಾಪಕವಾಗಿರುವ ವಿಜ್ಞಾನವು ಮಹನೀಯ ಅಥವಾ ದೈವಿಕಪುರುಷನ ಗಮನಕ್ಕೆ ಅರ್ಹವಲ್ಲದ್ದು ಎಂಬ ಭಾವನೆ ಆಗ ಇತ್ತು. ಪ್ಲೇಟೋನನ್ನು ಅಭ್ಯಸಿಸಬೇಕು, ಆದರೆ ಪ್ಲೇಟೋ ಆವಶ್ಯಕವೆಂದು ಹೇಳಿದ ವಿಷಯಗಳನ್ನಲ್ಲ. ಇದೆಲ್ಲ ಎರಾಸ್ಮಸ್ ಬೀರಿದ ಪ್ರಭಾವಕ್ಕನುಗುಣವಾದವು.

ನವೋದಯದ ಜನರು ಅಸೀಮ ಕುತೂಹಲವನ್ನು ಹೊಂದಿದ್ದರು; 'ಈ ಮನಸ್ಸುಗಳು ಎಂದೂ ಗಮನಾರ್ಹ ಘಟನೆಗಳು, ಕುತೂಹಲಕಾರಿ ವಿವರಗಳು, ಅಪರೂಪವಾದವು ಮತ್ತು ದೋಷಗಳಬಗ್ಗೆ ತಾವು ಬಯಸಿದ ಪಾಲು ಹೊಂದಿರಲಿಲ್ಲ' ಎಂದು ಹೂಯಿಝಿಂಗ್ ಹೇಳುತ್ತಾನೆ. ಮೊದಲು ಅವರು ಇಂತಹವುಗಳಿಗಾಗಿ ಹುಡುಕಿದರು, ಇಹಲೋಕದಲ್ಲಲ್ಲ, ಹಳೆಯ ಗ್ರಂಥಗಳಲ್ಲಿ. ಎರಾಸ್ಮಸ್‌ಗೆ ಈ ಪ್ರಪಂಚದಲ್ಲಿ ಆಸಕ್ತಿಯಿತ್ತು, ಆದರೆ ಅದನ್ನು ಇದ್ದ ಹಾಗೆಯೇ ಅವನಿಗೆ ಅರಗಿಸಿಕೊಳ್ಳಲಾಗಲಿಲ್ಲ; ಜೀರ್ಣಮಾಡಿಕೊಳ್ಳಲು ಅದನ್ನು ಲ್ಯಾಟಿನ್ ಅಥವಾ ಗ್ರೀಕ್‌ನಲ್ಲಿ ಸಿದ್ಧಪಡಿಸಿ ಕೊಡಬೇಕಾಗಿತ್ತು. ಪ್ರವಾಸಿಗರ ಕತೆಗಳನ್ನು ನಂಬುತ್ತಿರಲಿಲ್ಲ, ಆದರೆ ಪ್ಲಿನಿಯ ಯಾವುದೇ ಅದ್ಭುತವನ್ನು ನಂಬುತ್ತಿದ್ದ. ಆದರೆ ಕ್ರಮೇಣ, ಕುತೂಹಲವು ಪುಸ್ತಕಗಳಿಂದ ವಾಸ್ತವ ಜಗತ್ತಿಗೆ ವರ್ಗಾವಣೆಗೊಂಡವು; ವಾಸ್ತವವಾಗಿ ಕಂಡುಕೊಂಡ ವಿಚಿತ್ರ ಕಾಡು ಪ್ರಾಣಿಗಳ ಬಗ್ಗೆ ಜನರು ಕುತೂಹಲಗೊಂಡರೇ ವಿನಾ ಪ್ರಾಚೀನ ಲೇಖಕರು ಬಣ್ಣಿಸಿದ್ದವುಗಳಲ್ಲಲ್ಲ. ಕ್ಯಾಲಿಬನ್ ಮಾಂಟೇನ್‌ನಿಂದ, ಮಾಂಟೇನ್‌ನ ಕ್ಯಾಲಿಬನ್‌ಗಳು ಪ್ರವಾಸಿಗರಿಂದ ಬಂದವುಗಳು. 'ನರಭಕ್ಷಕ ಮತ್ತು ತಮ್ಮ ಭುಜಗಳ ಕೆಳಗೆ ತಲೆಗಳು ಬೆಳೆಯುವ ಜನರು' ಒಥೆಲ್ಲೋಗೆ ಕಾಣಿಸಿದ್ದವರೇ ಹೊರತು ಪ್ರಾಚೀನರಿಂದ ಬಂದದ್ದಲ್ಲ.

ಹೀಗೆ ಸಾಹಿತ್ಯರೂಪದಲ್ಲಿದ್ದ ನವೋದಯದ ಕುತೂಹಲವು ಬರಬರುತ್ತ ವೈಜ್ಞಾನಿಕವಾಯಿತು. ಹೊಸ ಸಂಗತಿಗಳ ಅಂಥ ಸುರಿಮಳೆಯು ಜನರನ್ನು ಆವರಿಸಿಕೊಂಡಿತು, ಮೊದಲು ಅದರ ಸೆಳೆತವು ಅವರನ್ನು ಕೊಚ್ಚಿಕೊಂಡು ಹೋಯಿತು. ಹಳೆಯ ಪದ್ಧತಿಗಳು ಹೊರನೋಟಕ್ಕೇ ತಪ್ಪಾದವು; ಅರಿಸ್ಟಾಟಲ್‌ನ ಭೌತವಿಜ್ಞಾನ ಮತ್ತು ಟಾಲೆಮಿಯ ಖಗೋಳವಿಜ್ಞಾನ ಮತ್ತು ಗೇಲನ್‌ನ ವೈದ್ಯವಿಜ್ಞಾನಗಳು ಕಂಡುಹಿಡಿಯಲಾಗಿದ್ದ ಹೊಸ ಸಂಗತಿಗಳನ್ನು ಒಳಗೊಳ್ಳುವಂತೆ ಹಿಗ್ಗಲಿಸಲು ಸಾಧ್ಯವಿರಲಿಲ್ಲ. ಮಾಂಟೇನ್ ಮತ್ತು ಷೇಕ್ಸ್‌ಪಿಯರ್‌ಗಳು ಗೊಂದಲದಲ್ಲಿಯೇ ತೃಪ್ತಿ ಕಂಡವರು; ಹೊಸ ಅನಾವರಣ ಸಂತೋಷದಾಯಕ, ಆದರೆ ಪದ್ಧತಿ ಅದರ ಶತ್ರು. ಹದಿನೇಳನೆಯ ಶತಮಾನದವರೆಗೂ ಪದ್ಧತಿನಿರ್ಮಿತಿ

ಸಾಮರ್ಥ್ಯವು ಹೊಸ ವಸ್ತುಸ್ಥಿತಿಗಳೊಡನೆ ಕೈಜೋಡಿಸಲು ಸಾಧ್ಯವಾಗಲಿಲ್ಲ. ಆದರೆ ಇವೆಲ್ಲವೂ ನಮ್ಮನ್ನು ಎರಾಸ್ಮಸ್‌ನಿಂದ ದೂರಕ್ಕೆ ಒಯ್ದಿದೆ, ಅವನಿಗೆ ಕೊಲಂಬಸ್ ಆಗಲೋರ್ ನಾವಿಕರಷ್ಟು ಕುತೂಹಲದಾಯಕನಾಗಿರಲಿಲ್ಲ.

ಎರಾಸ್ಮಸ್ ಸರಿಪಡಿಸಲಾಗದಷ್ಟರ ಮತ್ತು ಸಂಕೋಚವೇ ಇಲ್ಲದಷ್ಟು ಮಟ್ಟಿಗೆ ಸಾಹಿತ್ಯಕವಾಗಿದ್ದ ಅವನು ಬರೆದ ಪುಸ್ತಕ 'ಎನ್‌ಶ್ರಿಡಿಯನ್ ಮಿಲಿಟಸ್ ಕ್ರಿಶ್ಚಿಯಾನಿ'ಯು ಅನಕ್ಷರಸ್ಥ ಸೈನಿಕರಿಗೆ ಬೋಧನೆ ಮಾಡುತ್ತದೆ; ಅವರು ಬೈಬಲ್ ಓದಬೇಕು, ಜೊತೆಗೆ ಪ್ಲೇಟೋ, ಆಂಬ್ರೋಸ್, ಜೆರೋಮ್ ಮತ್ತು ಆಗಸ್ಟೈನ್‌ರನ್ನೂ ಓದಬೇಕು. ಅವನು ಲ್ಯಾಟಿನ್ ಗಾದೆಗಳ ದೊಡ್ಡ ಸಂಗ್ರಹವನ್ನು ಮಾಡಿದ್ದ, ಅದಕ್ಕೆ ಮುಂದಿನ ಮುದ್ರಣಗಳಲ್ಲಿ, ಅನೇಕ ಗ್ರೀಕ್ ಗಾದೆಗಳನ್ನೂ ಸೇರಿಸಿದ. ಅವನ ಮೂಲ ಉದ್ದೇಶ ಜನರು ನುಡಿಗಟ್ಟುಗಳನ್ನು ಬಳಸಿಕೊಂಡು ಲ್ಯಾಟಿನ್ ಬರೆಯುಂತಾಗಬೇಕೆಂಬುದು. ಅವನು ಮಹಾ ಯಶಸ್ಸು ಕಂಡ 'ಕಲೋಕ್ವೀಸ್' ಎಂಬ ಪುಸ್ತಕವನ್ನೂ ಬರೆದ, ಅದರ ಉದ್ದೇಶ ಬೋಗುಣಿಚೆಂಡಾಟ (ಬೌಲ್ಸ್) ದಂತಹ ದಿನನಿತ್ಯದ ವಿಷಯಗಳ ಬಗ್ಗೆ ಮಾತನಾಡುವುದನ್ನು ಕಲಿಸುವುದು. ಬಹುಶಃ ಇದು ಈಗಿಗಿಂತ ಹಿಂದೆ ಹೆಚ್ಚು ಉಪಯುಕ್ತವಾಗಿತ್ತು. ಲ್ಯಾಟಿನ್ ಮಾತ್ರವೇ ಅಂತಾರಾಷ್ಟ್ರೀಯ ಭಾಷೆ, ಪ್ಯಾರಿಸ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಪಶ್ಚಿಮ ಯೂರೋಪಿನ ಉದ್ದಗಲಗಳಿಂದ ಬಂದವರು. ಇಬ್ಬರು ವಿದ್ಯಾರ್ಥಿಗಳು ಪರಸ್ಪರ ಸಂಭಾಷಿಸಲು ಲ್ಯಾಟಿನ್ ಮಾತ್ರ ಬಳಕೆಯಲ್ಲಿದ್ದಿರಬಹುದಾದ ಸಾಧ್ಯತೆಯಿತ್ತು.

ಮತಧರ್ಮಸುಧಾರಣೆಯ ನಂತರ, ಎರಾಸ್ಮಸ್ ಮೊದಲು ಅದರಲ್ಲಿ ಪರಿಪೂರ್ಣ ಕ್ಯಾಥೋಲಿಕ್ ಸಾಂಪ್ರದಾಯಿಕತೆ ನೆಲೆಸಿದ್ದ ಲೂವೇನ್‌ನಲ್ಲಿ ವಾಸಿಸುತ್ತಿದ್ದ, ಆನಂತರ ಬಾಸೆಲ್‌ನಲ್ಲಿ, ಆದರೆ ಅದು ಮುಂದೆ ಪ್ರಾಟೆಸ್ಟೆಂಟ್ ಆಯಿತು. ಎರಡೂ ಪಕ್ಷಗಳು ಅವನ ಬೆಂಬಲ ಗಳಿಸಲು ದೀರ್ಘ ಕಾಲ ಪ್ರಯತ್ನಿಸಿದವು, ಆದರೆ ವ್ಯರ್ಥವಾಗಿ. ನಾವು ಈಗಾಗಲೇ ನೋಡಿರುವಂತೆ, ಅವನು ಮತಧರ್ಮಬೋಧಕರ ದುರುಪಯೋಗಗಳು ಮತ್ತು ಪೋಪ್‌ರ ಕೆಡುಕುತನದ ಬಗ್ಗೆ ಪ್ರಬಲವಾಗಿ ಬರೆದಿದ್ದ; ಲೂಥರ್‌ನ ಬಂಡಾಯದ ವರ್ಷವೇ ಆದ ೧೫೧೮ ರಲ್ಲಿ ಅವನೊಂದು ವಿಡಂಬನ ಕೃತಿಯನ್ನು ಪ್ರಕಟಿಸಿದ, ಅದರ ಹೆಸರು 'ಜ್ಯೂಲಿಯಸ್ ಎಕ್ಸ್‌ಕ್ಲೂಸಸ್' ಎಂದು, ಅದರಲ್ಲಿ ಎರಡನೆಯ ಜ್ಯೂಲಿಯಸ್ ಸ್ವರ್ಗವನ್ನು ಸೇರಲು ಹೇಗೆ ವಿಫಲನಾದ ಎಂಬುದನ್ನು ಬಣ್ಣಿಸಲಾಗಿತ್ತು. ಆದರೆ ಲೂಥರ್‌ನ ಹಿಂಸಾಚಾರದಿಂದ ಅವನು ಬೇಸರಪಟ್ಟ, ಅವನು ಯುದ್ಧವನ್ನು ದ್ವೇಷಿಸುತ್ತಿದ್ದ. ಕೊನೆಗೆ ಅವನು ಕ್ಯಾಥೋಲಿಕ್ ಪರವಾಗಿ ನಿಂತ. ೧೫೨೪ ರಲ್ಲಿ ಅವನು ಸ್ವತಂತ್ರಇಚ್ಛಾಶಕಿಯನ್ನು ಬೆಂಬಲಿಸಿ ಪುಸ್ತಕವೊಂದನ್ನು ಬರೆದ, ಆಗಸ್ಟೈನ್‌ನನ್ನು ಅನುಸರಿಸುತ್ತ ಅವನನ್ನು ಉತ್ಪ್ರೇಕ್ಷಿಸುತ್ತಿದ್ದ ಲೂಥರ್ ತಿರಸ್ಕರಿಸಿದ. ಲೂಥರ್‌ನ ಉತ್ತರ ಒರಟುತನದ್ದಾಗಿತ್ತು, ಇದು

ಎರಾಸ್ಮಸ್‌ನನ್ನು ಮತ್ತಷ್ಟು ಪ್ರತಿಕ್ರಿಯಿಸುವಂತೆ ಮಾಡಿತು. ಈ ಹೊತ್ತಿನಿಂದ ತನ್ನ ಮರಣದವರೆಗೂ ಅವನು ಬರಬರುತ್ತ ಹೆಚ್ಚು ಅಮುಖ್ಯನಾದ. ಅವನು ಯಾವತ್ತೂ ಪುಕ್ಕಲ, ಆದರೆ ಆ ಕಾಲವೂ ಪುಕ್ಕಲರಿಗೆ ಸೂಕ್ತವಾಗಿರಲಿಲ್ಲ. ಪ್ರಾಮಾಣಿಕರಿಗೆ ಇದ್ದ ಆಯ್ಕೆಗಳೆಂದರೆ ಇಲ್ಲ ಹುತಾತ್ಮರಾಗುವುದು ಅಥವಾ ಗೆಲವನ್ನು ಪಡೆಯುವುದು. ಅವನ ಸ್ನೇಹಿತನಾದ ಸರ್ ಥಾಮಸ್ ಮೋರ್ ಹುತಾತ್ಮನಾಗುವುದನ್ನು ಆರಿಸಿಕೊಳ್ಳುವಂತಾಯಿತು. ಆ ಕುರಿತು ಎರಾಸ್ಮಸ್ ಉದ್ಗರಿಸುತ್ತಾನೆ: 'ಆ ಅಪಾಯಕಾರಿ ವ್ಯವಹಾರದಲ್ಲಿ ಮೋರ್ ತೊಡಗಿಕೊಳ್ಳದಿದ್ದರೆ, ಮತಧರ್ಮಶಾಸ್ತ್ರದ ವಿಷಯವನ್ನು ಮತಧರ್ಮಶಾಸ್ತ್ರಜ್ಞರಿಗೇ ಬಿಟ್ಟಿದ್ದರೆ!' ಎರಾಸ್ಮಸ್ ತುಂಬ ದೀರ್ಘ ಕಾಲ ಹೊಸ ನಡತೆಗಳ ಮತ್ತು ಹೊಸ ಕೆಡುಕುಗಳ ಅವಧಿಯಲ್ಲಿ ಬದುಕಿದ್ದ - ಎರಡರಲ್ಲಿ ಅವನು ಯಾವುದನ್ನೂ ತನ್ನದಾಗಿ ಮಾಡಿಕೊಳ್ಳಲಿಲ್ಲ.

ಸರ್ ಥಾಮಸ್ ಮೋರ್ (೧೪೭೮-೧೫೧೫) ಎರಾಸ್ಮಸ್‌ಗಿಂತ ಹೆಚ್ಚು ಪ್ರಶಂಸಾರ್ಹ ವ್ಯಕ್ತಿಯಾಗಿದ್ದರೂ ಅವನಷ್ಟು ಪ್ರಭಾವಶಾಲಿಯಾಗಿರಲಿಲ್ಲ. ಅವನೊಬ್ಬ ಮಾನವತಾವಾದಿ, ಆದರೂ ಗಾಢ ಧರ್ಮನಿಷ್ಠೆಯ ವ್ಯಕ್ತಿ. ಆಕ್ಸ್‌ಫರ್ಡ್‌ನಲ್ಲಿ ಅವನು ಗ್ರೀಕ್ ಕಲಿಯಲು ತೊಡಗಿದ, ಆಗ ಅದು ಸಾಮಾನ್ಯವಾಗಿತ್ತು, ಅವನು ಇಟಾಲಿಯನ್ ಶ್ರದ್ಧಾಹೀನರ ಬಗ್ಗೆ ಸಹಾನುಭೂತಿ ಹೊಂದಿದವನೆಂದು ಭಾವಿಸಲಾಯಿತು. ಅಧಿಕಾರಿಗಳೂ ಅವನ ತಂದೆಯೂ ಇದನ್ನು ವಿರೋಧಿಸಿದರು, ಅವನನ್ನು ವಿಶ್ವವಿದ್ಯಾನಿಲಯದಿಂದ ಹೊರದಬ್ಬಲಾಯಿತು. ಆಮೇಲೆ ಅವನು ಕಾರ್ಥೂಸಿಯನ್‌ದಿಂದ ಆಕರ್ಷಿತನಾಗಿ ಅತಿ ನಿಷ್ಠುರ ಕಟ್ಟುಪಾಡುಗಳನ್ನು ಅನುಸರಿಸಿದ, ಮತಧರ್ಮಬೋಧಕನಾಗಲೂ ಆಲೋಚಿಸಿದ. ಆದರೆ ಅದನ್ನು ಕೈಬಿಟ್ಟ, ಎರಾಸ್ಮಸ್‌ನ ಪ್ರಭಾವದಿಂದಾಗಿ ಎಂಬುದು ಸ್ಪಷ್ಟ, ಇದೇ ವೇಳೆಯಲ್ಲೇ ಅವನನ್ನು ಅವನು ಮೊದಲು ಭೇಟಿಯಾದದ್ದು. ಅವನ ತಂದೆ ಒಬ್ಬ ವಕೀಲ, ತಾನೂ ತಂದೆಯ ವೃತ್ತಿಯನ್ನು ಕೈಗೊಳ್ಳಲು ನಿರ್ಧರಿಸಿದ. ೧೫೦೪ ರಲ್ಲಿ ಅವನು ಸಂಸತ್ತಿನ ಸದಸ್ಯನಾದ, ಏಳನೆಯ ಹೆನ್ರಿಯ ಹೊಸ ತೆರಿಗೆಗಳನ್ನು ವಿಧಿಸುವ ಪ್ರಯತ್ನವನ್ನು ವಿರೋಧಿಸುವವರ ಮುಂದಾಳುತ್ವ ವಹಿಸಿದವದರಲ್ಲಿ ಅವನು ಯಶಸ್ವಿಯೂ ಆದ, ಆದರೆ ರಾಜನು ಅವನ ಬಗ್ಗೆ ಕೆಂಡಾಮಂಡಲನಾದ. ಮೋರ್‌ನ ತಂದೆಯನ್ನು ಕೋಟೆಗೆ ರವಾನಿಸಿದ, ಆದರೆ ಅವನನ್ನು ಒಂದು ನೂರು ಪೌಂಡ್ ದಂಡ ಹಾಕಿ ಬಿಡುಗಡೆ ಮಾಡಿದ. ೧೫೦೯ ರಲ್ಲಿ ರಾಜ ಸತ್ತ ಮೇಲೆ, ಮೋರ್ ವಕೀಲಿವೃತ್ತಿಗೆ ಮರಳಿದ, ಎಂಟನೆಯ ಹೆನ್ರಿಯ ವಿಶ್ವಾಸವನ್ನೂ ಗಳಿಸಿದ. ೧೫೧೪ ರಲ್ಲಿ ಅವನಿಗೆ ನೈಟ್ ಪದವಿ ನೀಡಲಾಯಿತು, ಬೇರೆ ಬೇರೆ ರಾಯಭಾರ ಕಚೇರಿಗಳಿಗೆ ನೇಮಿಸಲಾಯಿತು. ರಾಜನು ಅವನನ್ನು ಆಸ್ಥಾನಕ್ಕೆ ಆಹ್ವಾನಿಸಿದನಾದರೂ ಮೋರ್ ಹೋಗಲಿಲ್ಲ; ಕೊನೆಗೆ ಆಹ್ವಾನವಿಲ್ಲದೆಯೇ ಅವನೊಡನೆ ಊಟಮಾಡಲು ರಾಜನೇ

ಚೆಲ್ಸಿಯದ ಅವನ ಮನೆಗೆ ಬಂದ. ಎಂಟನೆಯ ಹೆನ್ರಿಯ ಬಗ್ಗೆ ಮೋರ್‌ಗೆ ಭ್ರಮೆಗಳೇನೂ ಇರಲಿಲ್ಲ; ರಾಜನ ಈ ಸ್ನೇಹಪರ ನಡವಳಿಕೆಯ ಬಗ್ಗೆ ಅವನನ್ನು ಅಭಿನಂದಿಸಿದಾಗ ಅವನು ಕೊಟ್ಟ ಉತ್ತರ ಇದು: 'ನನ್ನ ತಲೆ ಫ್ರಾನ್ಸ್‌ನ ದುರ್ಗವನ್ನು ಅವನಿಗಾಗಿ ಗೆಲ್ಲಬೇಕಾದರೆ ಹೋಗದೆ ಇರಬಾರದಲ್ಲ!'

ವೋಲ್ಸೆ ಸೋತಾಗ ಅವನ ಜಾಗದಲ್ಲಿ ರಾಜನು ಮೋರ್ ಅನ್ನೇ ದಂಡಾಧಿಕಾರಿಯಾಗಿ ನೇಮಕ ಮಾಡಿದ. ರೂಢಿಗೆ ವಿರುದ್ಧವಾಗಿ, ಅವನು ಪ್ರತಿವಾದಿಗಳಿಂದ ಎಲ್ಲ ಕಾಣಿಕೆಗಳನ್ನೂ ತಿರಸ್ಕರಿಸಿದ. ಬಹು ಬೇಗ ಅವನು ಅಸಂತೋಷಕ್ಕೊಳಗಾದ, ಯಾಕೆಂದರೆ ಆರಗಾನ್‌ನ ಕ್ಯಾದರೀನ್ ಅನ್ನು ವಿಚ್ಛೇದಿಸಿ ಆನ್ ಬೋಲೆಯ್ನ್ ಅನ್ನು ಮದುವೆಯಾಗಲೂ ರಾಜನು ನಿರ್ಧರಿಸಿದ್ದ, ಆದರೆ ಮೋರ್ ವಿಚ್ಛೇದನಕ್ಕೆ ತೀವ್ರ ವಿರೋಧಿಯಾಗಿದ್ದ. ಹಾಗಾಗಿ ಅವನು ೧೫೩೨ ರಲ್ಲಿ ಹುದ್ದೆಗೆ ರಾಜೀನಾಮೆಯಿತ್ತ. ಅಧಿಕಾರದಲ್ಲಿದ್ದಾಗಿನ ಅವನ ಲಂಚವಿಹೀನತೆಯು ಎಂತಹುದೆಂಬುದು ಅವನ ರಾಜೀನಾಮೆಯ ಬಳಿಕ ಅವನಿಗೆ ವರ್ಷಕ್ಕೆ ಕೇವಲ ಒಂದು ನೂರು ಪೌಂಡ್ ನಿಗದಿಯಾಗಿತ್ತೆಂಬುದರಿಂದ ತಿಳಿಯುತ್ತದೆ. ಅವನ ಅಭಿಪ್ರಾಯಗಳ ಹೊರತಾಗಿಯೂ ಅವನನ್ನು ರಾಜನು ಆನ್ ಬೋಲೆಯ್ನ್‌ನ ಜೊತೆಗಿನ ತನ್ನ ಮದುವೆಗೆ ಆಹ್ವಾನಿಸಿದ, ಆದರೆ ಮೋರ್ ಅದನ್ನು ಸ್ವೀಕರಿಸಲಿಲ್ಲ. ೧೫೩೪ ರಲ್ಲಿ ಸಂಸತ್ತು ಸಾರ್ವಭೌಮತ್ವದ ವಿಧಿಯನ್ನು ಒಪ್ಪುವಂತೆ ರಾಜನು ಮಾಡಿದ, ಅದರ ಪ್ರಕಾರ ತಾನು, ಪೋಪ್ ಅಲ್ಲ, ಇಂಗ್ಲಂಡ್ ಚರ್ಚ್‌ನ ಮುಖ್ಯಸ್ಥನೆಂದು ಘೋಷಿಸಲಾಯಿತು. ಈ ವಿಧಿಯಡಿಯಲ್ಲಿ ಸಾರ್ವಭೌಮತೆಯ ಪ್ರತಿಜ್ಞಾವಿಧಿಯನ್ನು ನೆರವೇರಿಸಬೇಕಾಯಿತು, ಆದರೆ ಅದನ್ನು ಸ್ವೀಕರಿಸಲು ಮೋರ್ ಒಪ್ಪಲಿಲ್ಲ; ಅದು ರಾಜದ್ರೋಹದ ಕಾರ್ಯವೆನಿಸಿತ್ತು, ಆದರೆ ಅದಕ್ಕೆ ಮರಣದಂಡನೆ ವಿಧಿಸುವಂತಿರಲಿಲ್ಲ. ಸಂಶಯಾಸ್ಪದ ಸಾಕ್ಷ್ಯದಿಂದ, ಸಂಸತ್ತು ಹೆನ್ರಿಯನ್ನು ಚರ್ಚ್‌ನ ಮುಖ್ಯಸ್ಥನನ್ನಾಗಿ ಮಾಡುವ ಹಾಗಿಲ್ಲ ಎಂದು ಹೇಳಿದನೆಂದು ರುಜುವಾತುಪಡಿಸಲಾಯಿತು. ಈ ಆಧಾರದಿಂದ ಅವನನ್ನು ಮಹಾ ರಾಜದ್ರೋಹದ ಅಪರಾಧಿಯೆಂದು ಘೋಷಿಸಿ ಅವನಿಗೆ ಗಲ್ಲು ಶಿಕ್ಷೆ ವಿಧಿಸಲಾಯಿತು. ಅವನ ಆಸ್ತಿಯನ್ನೆಲ್ಲ ರಾಜಕುಮಾರಿ ಎಲಿಜ಼ಬೆತ್‌ಗೆ ಕೊಡಲಾಯಿತು, ಅವಳು ಅದನ್ನು ಸಾಯುವವರೆಗೂ ಪಡೆದಿದ್ದಳು.

ಮೋರ್ ಅನ್ನು ನೆನಪಿಸಿಕೊಳ್ಳುವುದು ಅವನ 'ಯುಟೋಪಿಯ' ದ ಕಾರಣದಿಂದಾಗಿ (೧೫೧೮). ಯುಟೋಪಿಯ ಎಂಬುದು ದಕ್ಷಿಣ ಗೋಲದಲ್ಲಿನ ಒಂದು ದ್ವೀಪ, ಅಲ್ಲಿ ಪ್ರತಿಯೊಂದನ್ನೂ ಅತ್ಯುಚ್ಚ ರೀತಿಯಲ್ಲಿ ಮಾಡಲಾಗುತ್ತಿತ್ತು. ಅದನ್ನು ರಫೇಲ್ ಹೈತ್ಲೊಡೆ ಎಂಬ ಒಬ್ಬ ನಾವಿಕನು ಆಕಸ್ಮಿಕವಾಗಿ ಸಂದರ್ಶಿಸುತ್ತಾನೆ, ಅಲ್ಲಿ ಅವನು ಐದು ವರ್ಷಗಳನ್ನು ಕಳೆಯುತ್ತಾನೆ, ಅಲ್ಲಿನ ವಿವೇಕಯುತ ಸಂಸ್ಥೆಗಳನ್ನು

ತಿಳಿಯಪಡಿಸುವ ಉದ್ದೇಶದಿಂದಲೇ ಯೂರೋಪ್‌ಗೆ ಮರಳುತ್ತಾನೆ.

ಯುಟೋಪಿಯದಲ್ಲಿ, ಪ್ಲೇಟೋನ ರಿಪಬ್ಲಿಕ್‌ನಲ್ಲಿರುವಂತೆಯೇ, ಎಲ್ಲ ವಸ್ತುಗಳು ಎಲ್ಲರಿಗೂ ಸೇರಿದವು, ಯಾಕೆಂದರೆ ಖಾಸಗಿ ಆಸ್ತಿಗೆ ಅವಕಾಶವಿರುವೆಡೆ ಸಾರ್ವತ್ರಿಕ ಒಳಿತನ್ನು ಸಾಧಿಸಲು ಸಾಧ್ಯವಿಲ್ಲ, ಸಾಮ್ಯವಾದವಿಲ್ಲದೆ ಸಮಾನತೆ ಇರಲು ಸಾಧ್ಯವಿಲ್ಲ. ಮೋರ್, ತನ್ನ ಈ ಸಂವಾದದಲ್ಲಿ, ಸಾಮ್ಯವಾದವು ಜನರನ್ನು ಸೋಮಾರಿಗಳನ್ನಾಗಿಸುತ್ತದೆ, ಹಾಗೂ ದಂಡಾಧಿಕಾರಿಗಳ ಬಗೆಗಿನ ಗೌರವವನ್ನು ಹಾಳುಮಾಡುತ್ತದೆ; ಇದಕ್ಕೆ ರಫೇಲ್ ಉತ್ತರಿಸುವುದೆಂದರೆ, ಯುಟೋಪಿಯದಲ್ಲಿ ವಾಸಿಸಿದವನಾವನೂ ಇದನ್ನು ಹೇಳಲಾರ ಎಂದು.

ಯುಟೋಪಿಯದಲ್ಲಿ ಐವತ್ತನಾಲ್ಕು ಪಟ್ಟಣಗಳಿವೆ, ಅದರಲ್ಲಿ ರಾಜಧಾನಿಯೊಂದನ್ನು ಹೊರತುಪಡಿಸಿ, ಮಿಕ್ಕವು ಒಂದೇ ನೆಲೆಯಲ್ಲಿವೆ. ಎಲ್ಲ ಬೀದಿಗಳು ಇಪ್ಪತ್ತು ಅಡಿಗಳಷ್ಟು ಅಗಲ, ಎಲ್ಲ ಖಾಸಗಿ ಮನೆಗಳು ಒಂದೇ ರೀತಿಯವಾಗಿವೆ, ಒಂದು ಬಾಗಿಲು ಬೀದಿಗೆ ಅಭಿಮುಖವಾಗಿ, ಮತ್ತೊಂದು ಹಿತ್ತಿಲಿಗೆ ಅಭಿಮುಖವಾಗಿ. ಎಲ್ಲರೂ ಯಾವ ಮನೆಯನ್ನು ಬೇಕಾದರೂ ಹೊಗಬಹುದು. ಸೂರುಗಳು ಮಟ್ಟಸವಾದವು. ಹತ್ತು ವರ್ಷಗಳಿಗೊಮ್ಮೆ ಜನರು ಮನೆಗಳನ್ನು ಬದಲಾಯಿಸುತ್ತಾರೆ, ಇದು ಖಾಸಗಿ ಒಡೆತನದ ಭಾವನೆ ಬರಬಾರದೆಂಬ ಕಾರಣಕ್ಕಾಗಿ ಎಂಬುದು ಸ್ಪಷ್ಟ. ಹಳ್ಳಿಗಳಲ್ಲಿ ತೋಟಗಳಿವೆ, ಪ್ರತಿಯೊಂದರಲ್ಲಿಯೂ ನಲವತ್ತಕ್ಕಿಂತ ಕಡಿಮೆ ಜನರಿರುತ್ತಾರೆ, ಅವರಲ್ಲಿ ಇಬ್ಬರು ಸೇವಕರು; ಪ್ರತಿ ತೋಟಕ್ಕೂ ಒಬ್ಬ ಯಜಮಾನ ಮತ್ತು ಒಬ್ಬಳು ಯಜಮಾನಿತಿ, ಅವರಿಬ್ಬರೂ ವಯಸ್ಸಾದವರೂ ಬುದ್ಧಿವಂತರೂ ಆದವರು. ಮರಿಗಳಿಗೆ ಕೋಳಿಗಳು ಕಾವು ಕೊಡುವುದಿಲ್ಲ, ಆದರೆ ಹಾಗೆ ಮಾಡುವುದು ಕಾವುಬುಟ್ಟಿಗಳು (ಇನ್‌ಕ್ಯುಬೇಟರ್ಸ್; ಆದರೆ ಇವು ಮೋರ್‌ನ ಕಾಲದಲ್ಲಿರಲಿಲ್ಲ.) ಎಲ್ಲರೂ ಒಂದೇ ಬಗೆಯ ಉಡುಪು ಧರಿಸುತ್ತಾರೆ, ಆದರೆ ಗಂಡಸರದು ಒಂದು ಬಗೆ, ಹೆಂಗಸರದು ಇನ್ನೊಂದು ಬಗೆ, ಹಾಗೆಯೇ ಮದುವೆಯಾದವರದು ಬೇರೆ, ಆಗದವರದು ಬೇರೆ. ಫ್ಯಾಷನ್‌ಗಳು ಬದಲಾಗುವುದೇ ಇಲ್ಲ, ಬೇಸಿಗೆ ಮತ್ತು ಚಳಿಗಾಲದ ಉಡುಪುಗಳಲ್ಲಿ ಯಾವ ಬದಲಾವಣೆಯೂ ಇಲ್ಲ. ಕೆಲಸದ ಹೊತ್ತಿನಲ್ಲಿ ಧರಿಸುವುದು ಚರ್ಮದ ಉಡುಪುಗಳನ್ನು; ಒಂದೊಂದು ಉಡುಪೂ ಏಳು ವರ್ಷ ಬಾಳಿಕೆ ಬರುತ್ತದೆ. ತಮ್ಮ ಕೆಲಸವನ್ನು ಮುಗಿಸಿದ ಮೇಲೆ ಅವರು ತಮ್ಮ ಕೆಲಸದ ಉಡುಪಿನ ಮೇಲೆ ಒಂದು ಉಣ್ಣೆ ನಿಲವಂಗಿಯನ್ನು ಹೊದೆಯುತ್ತಾರೆ. ಈ ನಿಲವಂಗಿಗಳೆಲ್ಲ ಒಂದೇ ರೀತಿಯವು, ಅವಕ್ಕೆ ಉಣ್ಣೆಯ ಸಹಜ ಬಣ್ಣವಿರುತ್ತದೆ. ಪ್ರತಿ ಕುಟುಂಬವೂ ತನ್ನ ಉಡುಪನ್ನು ತಾನೇ ತಯಾರಿಸಿಕೊಳ್ಳುತ್ತದೆ.

ಹೆಣ್ಣು ಗಂಡು ಭೇದವಿಲ್ಲದೆ ಎಲ್ಲರೂ ದಿನಕ್ಕೆ ಆರು ಗಂಟೆ ಕೆಲಸ ಮಾಡುತ್ತಿದ್ದರು, ಊಟಕ್ಕೆ ಮೊದಲು ಮೂರು ಗಂಟೆ, ಅದಾದ ಮೇಲೂ ಮೂರು

ಗಂಟೆ. ರಾತ್ರಿ ಎಂಟು ಗಂಟೆಗೇ ಎಲ್ಲ ಮಲಗುತ್ತಿದ್ದರು, ಎಂಟು ಗಂಟೆ ನಿದ್ದೆ ಮಾಡುತ್ತಿದ್ದರು. ಬೆಳಗಿನ ಜಾವ ಉಪನ್ಯಾಸಗಳಿರುತ್ತಿದ್ದವು, ಅದಕ್ಕೆ ಜನರು ಹಾಜರಾಗಬೇಕು, ಅದೇನೂ ಕಡ್ಡಾಯವಲ್ಲದಿದ್ದರೂ. ರಾತ್ರಿ ಊಟದ ಬಳಿಕ ಒಂದು ಗಂಟೆ ಆಟವಾಡುತ್ತಿದ್ದರು. ಆರು ಗಂಟೆಗಳ ದುಡಿಮೆ ಸಾಕು, ಯಾಕೆಂದರೆ ಅಲ್ಲಿ ಸೋಮಾರಿಗಳೂ ಇರಲಿಲ್ಲ, ಕೆಲಸಕ್ಕೆ ಬಾರದ ಕೆಲಸವೂ ಇರುತ್ತಿರಲಿಲ್ಲ. ನಮ್ಮಲ್ಲಿ ಹೆಂಗಸರು, ಪುರೋಹಿತರು, ಸೇವಕರು, ಮತ್ತು ಭಿಕ್ಷುಕರೆಲ್ಲರೂ ಉಪಯುಕ್ತವಾದುದೇನನ್ನೂ ಮಾಡುವುದಿಲ್ಲ, ಸಾಹುಕಾರರ ಕಾರಣದಿಂದ ಹೆಚ್ಚಿನ ದುಡಿಮೆಯೆಲ್ಲ ಅನವಶ್ಯಕ ಭೋಗಸಾಮಗ್ರಿಗಳ ತಯಾರಿಕೆಯಲ್ಲಿ ವ್ಯರ್ಥವಾಗುತ್ತದೆ. ಆದರೆ ಯುಟೋಪಿಯದಲ್ಲಿ ಇದು ಯಾವುದೂ ಇಲ್ಲ. ಕೆಲವು ವೇಳೆ ಹೆಚ್ಚಿನ ಉತ್ಪಾದನೆಯೂ ಇರುತ್ತಿತ್ತು, ಆಗ ದಂಡಾಧಿಕಾರಿಗಳು ಕಡಿಮೆ ದುಡಿಮೆಯ ಅವಧಿಯನ್ನು ಗೊತ್ತುಪಡಿಸುತ್ತಿದ್ದರು.

ಕೆಲವು ಗಂಡಸರನ್ನು ವಿದ್ಯೆ ಕಲಿಯಲು ಆಯ್ಕೆ ಮಾಡುತ್ತಿದ್ದರು, ಅವರ ಕಲಿಕೆ ತೃಪ್ತಿಕರವಾಗಿದೆಯೆನಿಸಿದಾಗ ಅವರು ಇತರ ಕೆಲಸಗಳನ್ನೇನೂ ಮಾಡಬೇಕಾಗಿರಲಿಲ್ಲ. ಆಡಳಿತಕ್ಕೆ ಸಂಬಂಧಿಸಿದವರೆಲ್ಲರನ್ನೂ ವಿದ್ಯಾವಂತರಲ್ಲಿಯೇ ಆಯ್ಕೆ ಮಾಡುತ್ತಿದ್ದರು. ಅಲ್ಲಿನ ಸರ್ಕಾರದ ಪದ್ಧತಿ ಪ್ರತಿನಿಧಿ ಪ್ರಜಾಪ್ರಭುತ್ವ, ಅಲ್ಲಿದ್ದುದು ಪರೋಕ್ಷ ಚುನಾವಣಾ ಪದ್ಧತಿ. ಎಲ್ಲರ ಮೇಲೊಬ್ಬ ರಾಜನಿರುತ್ತಿದ್ದ, ಅವನನ್ನು ಜೀವಮಾನಪೂರ್ತಿಯಾಗಿರಲು ಚುನಾಯಿಸಲಾಗುತ್ತಿತ್ತು, ಆದರೆ ನಿರಂಕುಶಾಧಿಕಾರ ನಡೆಸಿದರೆ ರಾಜತ್ವವನ್ನು ರದ್ದುಮಾಡಬಹುದಾಗಿತ್ತು.

ಅಲ್ಲಿನದು ಪಿತೃಯಾಜಮಾನ್ಯ ಕುಟುಂಬಪದ್ಧತಿ, ಮದುವೆಯಾದ ಗಂಡುಮಕ್ಕಳು ತಂದೆಯ ಮನೆಯಲ್ಲೇ ವಾಸಿಸುತ್ತಿದ್ದರು, ತೀರ ಮುಪ್ಪಿನವನಲ್ಲದಿದ್ದರೆ, ಅವರು ತಂದೆಯ ನಿಯಂತ್ರಣದಲ್ಲಿರುತ್ತಿದ್ದರು. ಯಾವುದೇ ಕುಟುಂಬವು ತೀರ ದೊಡ್ಡದಾಗಿ ಬೆಳೆದರೆ, ಹೆಚ್ಚಿನ ಮಕ್ಕಳನ್ನು ಬೇರೊಂದು ಕುಟುಂಬಕ್ಕೆ ವರ್ಗಾಯಿಸಲಾಗುತ್ತಿತ್ತು. ಎಲ್ಲ ಪಟ್ಟಣಗಳೂ ದೊಡ್ಡವಾದರೆ, ಬೀಳು ಜಾಗದಲ್ಲಿ ಹೊಸ ಪಟ್ಟಣವೊಂದನ್ನು ನಿರ್ಮಿಸಲಾಗುತ್ತಿತ್ತು. ಎಲ್ಲ ಬೀಳು ಭೂಮಿಯನ್ನೂ ಉಪಯೋಗಿಸಿಕೊಂಡ ಬಳಿಕ ಏನು ಮಾಡುತ್ತಿದ್ದರೆಂಬುದನ್ನು ಹೇಳಿಲ್ಲ. ಆಹಾರಕ್ಕಾಗಿ ಪ್ರಾಣಿಗಳನ್ನು ಕೊಲ್ಲುವುದನ್ನು ಜೀತದಾಳುಗಳು ಮಾಡುತ್ತಿದ್ದರು, ಸ್ವತಂತ್ರ ಪ್ರಜೆಗಳು ಕ್ರೌರ್ಯವನ್ನು ಕಲಿಯಬಾರದೆಂಬುದು ಇದರ ಹಿಂದಿನ ಉದ್ದೇಶ. ರೋಗಿಗಳಿಗೆ ಆಸ್ಪತ್ರೆಗಳಿರುತ್ತಿದ್ದವು, ಅವು ಎಷ್ಟು ಅನುಕೂಲಕರವಾಗಿರುತ್ತಿತ್ತೆಂದರೆ ರೋಗಿಗಳು ಅಲ್ಲೇ ಇರಲು ಬಯಸುತ್ತಿದ್ದರು. ಮನೆಯಲ್ಲೇ ಊಟಮಾಡುವುದಕ್ಕೆ ಅವಕಾಶವಿರುತ್ತಿತ್ತು, ಆದರೆ ಬಹುತೇಕ ಜನರು ಸಾಮುದಾಯಿಕ ಊಟದ ಮನೆಗಳಲ್ಲಿ ಊಟಮಾಡುತ್ತಿದ್ದರು. ಇಲ್ಲಿನ 'ಕೊಳಕು ಕೆಲಸ'ವನ್ನು ಜೀತದಾಳುಗಳು ಮಾಡುತ್ತಿದ್ದರು, ಆದರೆ ಅಡುಗೆ

ಮಾಡುತ್ತಿದ್ದವರು ಹೆಂಗಸರು, ಊಟ ಬಡಿಸುವವರು ದೊಡ್ಡ ಹುಡುಗ ಹುಡುಗಿಯರು. ಗಂಡಸರೆಲ್ಲ ಒಂದೇ ಪಂಕ್ತಿಯಲ್ಲಿ ಕೂರುತ್ತಿದ್ದರು, ಹೆಂಗಸರು ಮತ್ತೊಂದರಲ್ಲಿ; ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ತಾಯಂದಿರಿಗೆ ಪ್ರತ್ಯೇಕ ಕೋಣೆಯಿರುತ್ತಿತ್ತು. ತಾಯಂದಿರು ತಮ್ಮ ಮಕ್ಕಳನ್ನು ತಾವೇ ನೋಡಿಕೊಳ್ಳುತ್ತಿದ್ದರು. ಐದು ವರ್ಷಕ್ಕಿಂತ ದೊಡ್ಡವರಾದ ಮಕ್ಕಳು, ಬಡಿಸಲು ಆಗದಷ್ಟು ಕಿರಿಯರಾಗಿದ್ದರೆ, ಹಿರಿಯರು ಊಟಮಾಡುವಷ್ಟು ಕಾಲವೂ, 'ತುಟಿಪಿಟಕ್ಕೆನ್ನದೆ ಮೌನದಿಂದ ನಿಂತಿರ'ಬೇಕಾಗಿತ್ತು. ಅವರಿಗೆ ಬೇರೆ ಊಟವೇನೂ ಇರುತ್ತಿರಲಿಲ್ಲವಾದರೂ, ಉಳಿದುದನ್ನು ಅವರಿಗೆ ಬಡಿಸುತ್ತಿದ್ದರು.

ಮದುವೆಗೆ ಸಂಬಂಧಿಸಿದಂತೆ, ಮದುವೆಯಾಗುವ ಹೊತ್ತಿಗೆ ನಿಷ್ಕಳಂಕರಾಗಿರದಿದ್ದರೆ ಹುಡುಗ ಹುಡುಗಿಯರಿಬ್ಬರನ್ನೂ ತೀಕ್ಷ್ಣ ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು, ದುರ್ನಡತೆ ನಡೆದ ಮನೆಯ ಒಡೆಯನಿಗೆ ನಿರ್ಲಕ್ಷ್ಯದ ಕಾರಣದಿಂದ ಅಪಖ್ಯಾತಿ ಬರುತ್ತಿತ್ತು. ಮದುವೆಗೆ ಮುಂಚೆ ವಧುವರರಿಬ್ಬರೂ ಒಬ್ಬರನ್ನೊಬ್ಬರು ಬತ್ತಲೆಯಾಗಿ ನೋಡಬೇಕಾಗಿತ್ತು; ಕಡಿವಾಣ ಮತ್ತು ಜೀನುಗಳನ್ನು ತೆಗೆದುಹಾಕದೆ ಯಾರೂ ಕುದುರೆಯನ್ನು ಕೊಳ್ಳುವುದಿಲ್ಲ, ಹಾಗೆಯೇ ಮದುವೆಯ ವಿಷಯದಲ್ಲೂ. ಹಾದರದ ಅಥವಾ 'ಅಸಹನೀಯ ಹಟಮಾರಿತನ'ದ ಆಧಾರದ ಮೇಲೆ ವಿವಾಹವಿಚ್ಛೇದನಕ್ಕೆ ಅವಕಾಶವಿತ್ತು, ಇದು ಇಬ್ಬರಿಗೂ ಅನ್ವಯಿಸುತ್ತಿದ್ದ ನಿಯಮ, ಆದರೆ ತಪ್ಪಿತಸ್ಥ ವ್ಯಕ್ತಿಯು ಮರುಮದುವೆಯಾಗುವಂತಿರಲಿಲ್ಲ. ಕೆಲವೇಳೆ ಗಂಡಹೆಂಡಿರಿಬ್ಬರೂ ಬಯಸಿದರೆ ವಿಚ್ಛೇದನಕ್ಕೆ ಅವಕಾಶ ನೀಡಲಾಗುತ್ತಿತ್ತು. ಮದುವೆಯನ್ನು ಮುರಿದವರು ಜೀತದಾಳುಗಳಾಗಬೇಕಾಗಿತ್ತು.

ವಿದೇಶೀ ವ್ಯಾಪಾರಕ್ಕೆ ಅವಕಾಶವಿತ್ತು, ಮುಖ್ಯವಾಗಿ ಕಬ್ಬಿಣವನ್ನು ಪಡೆಯಲು, ಯಾಕೆಂದರೆ ಆ ದ್ವೀಪದಲ್ಲಿ ಕಬ್ಬಿಣವು ಸ್ವಲ್ಪವೂ ದೊರೆಯುತ್ತಿರಲಿಲ್ಲ. ಯುದ್ಧಸಂಬಂಧಿ ವಸ್ತುಗಳಿಗಾಗಿಯೂ ವ್ಯಾಪಾರವಹಿವಾಟು ನಡೆಯುತ್ತಿತ್ತು. ಯುಟೋಪಿಯನ್ನರಿಗೆ ಯುದ್ಧವಿದ್ಯೆಯ ಬಗ್ಗೆ ಅಂಥ ಭಾವನೆಯೇನೂ ಇರಲಿಲ್ಲ, ಆದರೆ ಎಲ್ಲರೂ, ಗಂಡು ಹೆಣ್ಣು ಭೇದವಿಲ್ಲದೆ, ಯುದ್ಧ ಮಾಡುವುದು ತಿಳಿದಿರುತ್ತಿತ್ತು. ಅವರು ಯುದ್ಧಕ್ಕಿಳಿಯುತ್ತಿದ್ದುದು ಮೂರು ಉದ್ದೇಶಗಳಿಂದಾಗಿ: ಪರ ಆಕ್ರಮಣದಿಂದ ತಮ್ಮ ನಾಡನ್ನು ರಕ್ಷಿಸಿಕೊಳ್ಳಲು, ಅನ್ಯಾಕ್ರಮಣಕ್ಕೆ ಸಿಲುಕದ ಸ್ನೇಹಿರಾಷ್ಟ್ರದ ಪ್ರದೇಶವನ್ನು ಹಿಂದಕ್ಕೆ ಕೊಡಿಸಲು, ಮತ್ತು ನಿರಂಕುಶಾಧಿಕಾರಕ್ಕೆ ಸಿಕ್ಕಿರುವ ಪರರಾಷ್ಟ್ರವನ್ನು ಬಿಡುಗಡೆಗೊಳಿಸಲು. ಸಾಧ್ಯವಾದಾಗ ಅವರು ಸಂಬಳದಾರ ಸೈನಿಕರನ್ನು ಯುದ್ಧೋದ್ದೇಶಕ್ಕಾಗಿ ನೇಮಿಸಿಕೊಳ್ಳುತ್ತಿದ್ದರು. ಇತರ ದೇಶಗಳನ್ನು ತಮ್ಮ ದೇಶಕ್ಕೆ ಋಣಿಯಾಗಿಸಿಕೊಳ್ಳುವುದು, ಮತ್ತು ಅದನ್ನು ತೀರಿಸಲು ಸಂಬಳದಾರ ಸೈನಿಕರನ್ನು ಒದಗಿಸುವಂತೆ ಮಾಡುವುದು ಅವರ ಗುರಿ. ಯುದ್ಧದ ಉದ್ದೇಶದಿಂದಲೇ ಚಿನ್ನ

ಬೆಳ್ಳಿಗಳ ಸಂಗ್ರಹವನ್ನವರು ಹೊಂದಿದ್ದರು, ಅದರಿಂದ ವಿದೇಶೀ ಸಂಬಳದಾರ ಸೈನಿಕರಿಗೆ ಹಣ ಕೊಡಬಹುದಾಗಿತ್ತು. ತಮಗಾಗಿ ಅವರು ಯಾವುದೇ ಹಣಸಂಗ್ರಹ ಮಾಡಿಕೊಳ್ಳುತ್ತಿರಲಿಲ್ಲ, ಚಿನ್ನದ ಬಗೆಗೆ ವಿದ್ವೇಷವನ್ನು ರೂಢಿಗೊಳಿಸಲು ಅವರು ಅದನ್ನು ಮೂತ್ರಪಾತ್ರೆ ಮತ್ತು ಜೀತದಾಳುಗಳ ಕೈಕೋಳಗಳನ್ನು ಮಾಡಲು ಬಳಸುತ್ತಿದ್ದರು. ಮುತ್ತುಗಳು ವಜ್ರಗಳನ್ನು ಮಕ್ಕಳ ಆಭರಣಗಳನ್ನು ಮಾಡಲು ಉಪಯೋಗಿಸುತ್ತಿದ್ದರು. ಆದರೆ ವಯಸ್ಕರಿಗಾಗಿ ಯಾವತ್ತೂ ಅಲ್ಲ. ಯುದ್ಧನಿರತರಾಗಿದ್ದಾಗ, ಶತ್ರುರಾಜ್ಯದ ರಾಜನನ್ನು ಕೊಂದವರಿಗೆ ದೊಡ್ಡ ಉಡುಗೊರೆಗಳನ್ನು ನೀಡುತ್ತಿದ್ದರು; ರಾಜನನ್ನು ಜೀವಂತವಾಗಿ ಸೆರೆಹಿಡಿದು ತಂದವರಿಗೆ ಅಥವಾ ಹಾಗೆ ಮಾಡುತ್ತ ಸತ್ತವನಿಗೆ ಇನ್ನೂ ಹೆಚ್ಚಿನ ಬಹುಮಾನಗಳಿರುತ್ತಿದ್ದವು. 'ರಾಜರ ಅಥವಾ ಮುಖ್ಯಸ್ಥರ ಹುಚ್ಚುತನದಿಂದ ಅವರ ಇಚ್ಛೆಗೆ ವಿರುದ್ಧವಾಗಿ ಅವರನ್ನು ಬಲವಂತವಾಗಿ ಯುದ್ಧನಿರತರನ್ನಾಗಿ ಮಾಡುವ ಸಂಭಾವ್ಯತೆಯಿರುವುದರಿಂದ', ಶತ್ರುಪಕ್ಷದ ಸಾಮಾನ್ಯ ಜನತೆಯ ಬಗ್ಗೆ ಅವರಿಗೆ ಅನುಕಂಪವಿರುತ್ತಿತ್ತು. ಹೆಂಗಸರೂ ಗಂಡಸರಂತೆ ಯುದ್ಧ ಮಾಡುತ್ತಿದ್ದರು, ಆದರೆ ಯಾರಿಗೂ ಬಲವಂತ ಮಾಡುತ್ತಿರಲಿಲ್ಲ. 'ಯುದ್ಧಯಂತ್ರಗಳನ್ನವರು ಸಜ್ಜುಗೊಳಿಸುತ್ತಿದ್ದರು ಮತ್ತು ಆಶ್ಚರ್ಯಕರವಾದುದನ್ನು ಅನ್ವೇಷಿಸುತ್ತಿದ್ದರು.' ಆವಶ್ಯಕವಾದಾಗ ಮಹಾ ಧೈರ್ಯವನ್ನು ಪ್ರದರ್ಶಿಸುತ್ತಿದ್ದರೂ ಯುದ್ಧದ ಬಗೆಗಿನ ಅವರ ಮನೋಭಾವವು ಉನ್ಮಾದದಿಂದ ಕೂಡದೆ ಹೆಚ್ಚು ವಿವೇಕಯುತವಾದುದೆಂಬುದು ಇದರಿಂದ ಗೊತ್ತಾಗುತ್ತದೆ.

ನೀತಿಸಂಹಿತೆಗೆ ಸಂಬಂಧಿಸಿದಂತೆ: ಸಂತೋಷವೇ ಸೌಭಾಗ್ಯ ಎಂದು ಭಾವಿಸುವವರು ಅವರು. ಆದರೆ ಈ ದೃಷ್ಟಿಕೋನದಿಂದ ಕೆಟ್ಟ ಪರಿಣಾಮಗಳಾವುವೂ ಇಲ್ಲ, ಯಾಕೆಂದರೆ ಮುಂದಿನ ಜನ್ಮದಲ್ಲಿ ಒಳ್ಳೆಯವರಿಗೆ ಸದ್ಗತಿಯಿದೆ ಮತ್ತು ಕೆಟ್ಟವರಿಗೆ ಶಿಕ್ಷೆಯಿದೆ ಎಂದವರು ನಂಬಿದ್ದರು. ಅವರೇನೂ ವಿರಕ್ತರಲ್ಲ, ಹಾಗಾಗಿ ಉಪವಾಸ ಮೂರ್ಖತನದ್ದು ಎಂದವರ ನಂಬಿಕೆ. ಅವರಲ್ಲಿಯೂ ಅನೇಕ ಮತಧರ್ಮಗಳಿವೆ, ಆದರೆ ಎಲ್ಲವನ್ನೂ ಅಲ್ಲಿನವರು ಸಹಿಸಿಕೊಳ್ಳುತ್ತಾರೆ. ಬಹುತೇಕ ಎಲ್ಲರೂ ದೇವರಲ್ಲಿ ಮತ್ತು ಅಮರತ್ವದಲ್ಲಿ ನಂಬಿಕೆಯಿರುವವರು; ಅವುಗಳಲ್ಲಿ ನಂಬಿಕೆಯಿಲ್ಲದವರನ್ನು ಪ್ರಜೆಗಳೆಂದು ಪರಿಗಣಿಸುತ್ತಿರಲಿಲ್ಲ, ಅವರಿಗೆ ರಾಜಕೀಯದಲ್ಲಿ ಯಾವ ಪಾತ್ರವೂ ಇರುತ್ತಿರಲಿಲ್ಲ, ಆದರೆ ಉಳಿದಂತೆ ಹಲ್ಲೆಗೊಳಗಾಗುತ್ತಿರಲಿಲ್ಲ. ಕೆಲವು ಮಂದಿ ಶ್ರದ್ಧಾವಂತರು ಮಾಂಸಾಹಾರ ಮತ್ತು ಮದುವೆಗಳನ್ನು ವರ್ಜಿಸಿದ್ದರು. ಅಂಥವರನ್ನು ಪವಿತ್ರರಾದವರೆಂದು ಜನ ಭಾವಿಸಿದ್ದರೇ ವಿನಾ ವಿವೇಕಿಗಳೆಂದಲ್ಲ. ವಿಧವೆಯರೂ ವಯಸ್ಸಾದವರೂ ಆಗಿದ್ದರೆ ಹೆಂಗಸರೂ ಪುರೋಹಿತರಾಗಬಹುದಾಗಿತ್ತು. ಪುರೋಹಿತರ ಸಂಖ್ಯೆ ಕಡಿಮೆ, ಅವರ ಬಗ್ಗೆ

ಗೌರವಿರುತ್ತಿತ್ತು, ಆದರೆ ಅವರಿಗೆ ಅಧಿಕಾರವಿರುತ್ತಿರಲಿಲ್ಲ.

ಹೀನ ಅಪರಾಧಗಳನ್ನು ಮಾಡಿದವರು, ಅಥವಾ ಹಾಗೆ ಸ್ವೀಕರಿಸಲು ಈ ದೇಶ ಸಿದ್ಧವಾಗಿದ್ದ ತಮ್ಮ ದೇಶಗಳಲ್ಲಿಯೇ ಮರಣದಂಡನೆಗೊಳಗಾದ ವಿದೇಶೀಯರೂ ಜೀತದಾಳುಗಳಾಗುತ್ತಿದ್ದರು.

ಯಾತನಾಮಯವೂ ವಾಸಿ ಮಾಡಲಾಗದ್ದೂ ಆದ ರೋಗವಿರುವವರಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರೇರಿಸಲಾಗುತ್ತಿತ್ತು, ಹಾಗೆ ಮಾಡಲು ಇಷ್ಟವಿಲ್ಲದವರಿಗೆ ಎಚ್ಚರಿಕೆಯಿಂದ ಶುಶ್ರೂಷೆ ಮಾಡಲಾಗುತ್ತಿತ್ತು.

ತಾನು ಯುಟೋಪಿಯನ್ನರಿಗೆ ಕ್ರೈಸ್ತಮತಧರ್ಮವನ್ನು ಬೋಧಿಸಿದ್ದಾಗಿಯೂ, ಕ್ರಿಸ್ತನು ಖಾಸಗಿ ಆಸ್ತಿ ಹೊಂದಲು ವಿರೋಧವಾಗಿದ್ದನೆಂದು ಅರಿತ ಅನೇಕರನ್ನು ಮತಾಂತರಗೊಳಿಸಿದ್ದಾಗಿಯೂ ರಫೇಲ್ ಹೈತ್ಲೋಡೇ ಹೇಳಿಕೊಳ್ಳುತ್ತಾನೆ. ಸಾಮ್ಯವಾದದ ಪ್ರಾಮುಖ್ಯವನ್ನು ಕುರಿತು ನಿರಂತರವಾಗಿ ಎತ್ತಿ ಹೇಳಲಾಗಿದೆ; ಮಿಕ್ಕೆಲ್ಲ ದೇಶಗಳಲ್ಲಿ 'ಸಾರ್ವತ್ರಿಕ ಒಳಿತು ಮಾಡುವ ಹೆಸರಿನಲ್ಲಿ ಹಣವಂತರು ತಮ್ಮದೇ ಆಸ್ತಿ ಮಾಡಿಕೊಳ್ಳಲು ಮಾಡುವ ಸಂಚುಗಳ ಹೊರತಾಗಿ ಬೇರೇನೂ ಕಾಣಿಸುವುದಿಲ್ಲ' ಎಂದು ಮುಕ್ತಾಯದ ಹಂತದಲ್ಲಿ ಹೇಳಲಾಗಿದೆ.

ಮೋರ್‌ನ 'ಯುಟೋಪಿಯ' ಅನೇಕ ವಿಧಗಳಿಂದ ಆಶ್ಚರ್ಯಕರವಾದ ಉದಾರನೀತಿಯನ್ನು ಪ್ರಕಟಿಸುತ್ತದೆ. ಸಾಮ್ಯವಾದವನ್ನು ಬೋಧಿಸುವುದರ ಬಗ್ಗೆ ...ು ಅಷ್ಟೇನೂ ಯೋಚಿಸುತ್ತಿಲ್ಲ, ಯಾಕೆಂದರೆ ಅದು ಅನೇಕ ಮತಧರ್ಮಗಳ ...ರಂಪರೆಯಲ್ಲಿಯೇ ಸೇರಿಕೊಂಡಿತ್ತು. ನಾನು ಯೋಚಿಸುವುದು ಯುದ್ಧದ ಬಗ್ಗೆ, ಮತಧರ್ಮ ಮತ್ತು ಮತಧರ್ಮಸಹಿಷ್ಣುತೆಗಳ ಬಗ್ಗೆ, ಮನಸೋಚ್ಛೆ ಪ್ರಾಣಿಗಳನ್ನು ಕೊಲ್ಲುವುದರ ವಿರೋಧದ ಬಗ್ಗೆ (ಅದರಲ್ಲಿ ಬೇಟೆಯ ವಿರುದ್ಧವಾದ ಉಜ್ವಲ ನಿರೂಪಣೆಯ ಭಾಗವೊಂದಿದೆ), ಮತ್ತು ಸೌಮ್ಯರೂಪದ ಅಪರಾಧಸಂಹಿತೆಯ ಬಗ್ಗೆ ಅಲ್ಲಿ ಹೇಳಿರುವುದರ ವಿಷಯವನ್ನು (ಪುಸ್ತಕವು ಆರಂಭವಾಗುವುದೇ ಕಳ್ಳತನಕ್ಕಾಗಿ ಮರಣದಂಡನೆಯ ನೀಡುವುದನ್ನು ವಿರೋಧಿಸುವ ವಾದದಿಂದ). ಆದರೆ, ಮೋರ್‌ನ ಯುಟೋಪಿಯದಲ್ಲಿನ ಜೀವನವು, ಮಿಕ್ಕೆಲ್ಲದರಲ್ಲಿನಂತೆಯೇ, ತೀರ ಉತ್ಸಾಹರಹಿತವಾದುದು. ಸಂತೋಷಕ್ಕೆ ವೈವಿಧ್ಯ ಆವಶ್ಯಕ, ಆದರೆ ಯುಟೋಪಿಯದಲ್ಲಿ ಅಂಥದ್ದಾವುದೂ ಇಲ್ಲ. ವಾಸ್ತವವಾಗಲಿ ಕಲ್ಪಿತವಾಗಿರಲಿ, ಎಲ್ಲ ಯೋಜಿತ ಪದ್ಧತಿಗಳ ದೋಷವೂ ಇದೇ.

○

೫

ಮತಧರ್ಮ ಸುಧಾರಣೆ ಮತ್ತು ಪ್ರತಿಮತಧರ್ಮ ಸುಧಾರಣೆ

ಮತಧರ್ಮಸುಧಾರಣೆ ಮತ್ತು ಪ್ರತಿಮತಧರ್ಮಸುಧಾರಣೆಗಳು ಎರಡೂ ಇಟಲಿಯಲ್ಲಿನ ಬೌದ್ಧಿಕತೆಯ ಪ್ರಾಬಲ್ಯದ ವಿರುದ್ಧ ಕಡಿಮೆ ನಾಗರಿಕ ಜನರು ಎದ್ದ ಬಂಡಾಯಗಳ ಪ್ರತೀಕಗಳು. ಮತಧರ್ಮಸುಧಾರಣೆಯ ವಿಷಯದಲ್ಲಿ, ಬಂಡಾಯವು ರಾಜಕೀಯವೂ ಹೌದು ಮತಧಾರ್ಮಿಕವೂ ಹೌದು; ಪೋಪ್ ಅಧಿಕಾರವನ್ನು ತಿರಸ್ಕರಿಸಲಾಯಿತು, ಆಧಿಕಾರಸೂತ್ರಗಳ ಮೂಲಕ ಅವನು ಗಳಿಸಿದ್ದ ಗೌರವವು ಕೊನೆಗಂಡಿತು. ಪ್ರತಿಮತಧರ್ಮಸುಧಾರಣೆಯ ವಿಷಯದಲ್ಲಿ, ನವೋದಯದಲ್ಲಿ ಇಟಲಿಯಲ್ಲಿನ ಬೌದ್ಧಿಕ ಮತ್ತು ನೈತಿಕ ಸ್ವಾತಂತ್ರ್ಯದ ವಿರುದ್ಧ ಮಾತ್ರ ಬಂಡಾಯವಿದ್ದುದು; ಪೋಪ್‌ನ ಅಧಿಕಾರವನ್ನು ಮೊಟಕುಗೊಳಿಸಲಿಲ್ಲ, ಬದಲಾಗಿ ಹೆಚ್ಚಿಸಿತು, ಆದರೆ ಅದೇ ಸಮಯದಲ್ಲಿ, ಬೋರ್ಗಿಯರ ಮತ್ತು ಮೆಡಿಸೈಗಳ ಸಲೀಸಾದ ಶೈಥಿಲ್ಯದೊಡನೆ ಅವನ ಅಧಿಕಾರವು ಹೊಂದುವಂತಹುದಾಗಿರಲಿಲ್ಲ. ಸ್ಥೂಲವಾಗಿ ಹೇಳಬಹುದಾದರೆ, ಮತಧರ್ಮಸುಧಾರಣೆಯು ಜರ್ಮನ್ ಆಗಿದ್ದರೆ, ಪ್ರತಿಮತಧರ್ಮಸುಧಾರಣೆಯು ಸ್ಪಾನಿಶ್ ಆಗಿತ್ತು; ಮತಧರ್ಮಗಳ ಯುದ್ಧವು ಅದೇ ವೇಳೆಗೆ ಸ್ಪೆಯಿನ್ ಮತ್ತು ಅದರ ಶತ್ರುಗಳ ನಡುವಣ ಯುದ್ಧಗಳಾಗಿದ್ದವು, ಅದು ಸ್ಪೆಯಿನ್ ಅಧಿಕಾರಪಾರಮ್ಯದ ಕಾಲಕ್ಕೆ ಹೊಂದಿಕೊಂಡಿತ್ತು.

ನವೋದಯ ಕಾಲದ ಇಟಲಿಯ ಬಗೆಗಿನ ಉತ್ತರ ದೇಶಗಳ ಜನಾಭಿಪ್ರಾಯದ ದೃಷ್ಟಿಕೋನವನ್ನು ಆ ಕಾಲದ ಇಂಗ್ಲಿಷ್ ಗಾದೆಯೊಂದು ಸೂಚಿಸುತ್ತದೆ: 'ಇಟಾಲಿಯನ್ ರೀತಿಯ ಇಂಗ್ಲಿಷ್ ವ್ಯಕ್ತಿ ಪಿಶಾಚಿಯ ಅವತಾರವೆ ಸೈ.' ಷೇಕ್ಸ್‌ಪಿಯರ್‌ನ ಎಷ್ಟು ಜನ ಖಳರು ಇಟಾಲಿಯನ್‌ರು ಎಂಬುದನ್ನು ಗಮನಿಸಬಹುದು. ಅವರಲ್ಲಿ ಅಯಾಗೋ ಢಾಳಾಗಿ ಎದ್ದು ಕಾಣುವವನು, ಆದರೆ ಅವನಿಗಿಂತ ಪ್ರಾನಿಧಿಕನಾದವನೆಂದರೆ 'ಸಿಂಬಲೀನ್'ನ ಅಯಾಖಿಮೊ, ಅವನು ಇಟಲಿಯಲ್ಲಿ ಪ್ರವಾಸ ಕೈಗೊಂಡಿದ್ದವನ ದಾರಿ ತಪ್ಪಿಸುತ್ತಾನೆ, ಜೊತೆಗೆ, ಮುಗ್ಧ ಸ್ಥಳೀಯರ ಮೇಲೆ ತನ್ನ ದುರಭ್ಯಾಸವನ್ನು ಪ್ರಯೋಗಿಸಲೆಂದು ಇಂಗ್ಲಂಡ್‌ಗೆ ಬರುತ್ತಾನೆ.

ಇಟಾಲಿಯನ್‌ನರ ಬಗೆಗಿನ ನೈತಿಕ ಸಿಟ್ಟಿಗೆ ಕಾರಣವು ಮತಧರ್ಮ ಸುಧಾರಣೆಯೊಂದಿಗೆ ತಳುಕುಹಾಕಿಕೊಂಡಿದೆ. ದುರದೃಷ್ಟವಶಾತ್, ನಾಗರಿಕತೆಗೆ ಇಟಲಿಯು ಕೊಟ್ಟ ಕೊಡುಗೆಯ ಬಗೆಗಿನ ಬೌದ್ಧಿಕ ತಿರಸ್ಕಾರವೂ ಅದರಲ್ಲಿ ಸೇರಿಕೊಂಡಿದೆ.

ಮತಧರ್ಮಸುಧಾರಣೆ ಮತ್ತು ಪ್ರತಿಮತಧರ್ಮಸುಧಾರಣೆಗಳ ಮೂವರು ಮಹಾ ಮುಂದಾಳುಗಳೆಂದರೆ, ಲೂಥರ್, ಕಾಲ್ವಿನ್ ಮತ್ತು ಲಯೋಲ. ಅವರಿಗಿಂತ ಹಿಂದೆಯಷ್ಟೇ ಇದ್ದ ಇಟಾಲಿಯನ್ನರಿಗಾಗಲೀ ಅಥವಾ ಎರಾಸ್ಮೆಸ್ ಅಥವಾ ಮೋರ್‌ಗಾಗಲೀ ಹೋಲಿಸಿದರೆ ಮೂವರೂ ಬೌದ್ಧಿಕವಾಗಿ ಮಧ್ಯಯುಗದವರು. ಮತಧರ್ಮಸುಧಾರಣೆಯು ಆರಂಭಗೊಂಡ ಶತಮಾನಕ್ಕೆ ಮುಂದಿನದು ತತ್ತ್ವಜ್ಞಾನದ ವಿಷಯದಲ್ಲಿ ಬರಡಾದುದು. ಲೂಥರ್ ಮತ್ತು ಕಾಲ್ವಿನ್‌ರು ಸಂತ ಆಗಸ್ಟೈನ್‌ಗೇ ಹಿಂದಿರುಗಿದರು, ಆದರೆ ಆತ್ಮ ಮತ್ತು ದೇವರ ಸಂಬಂಧ ಕುರಿತ ಅವನ ಬೋಧನೆಯನ್ನಷ್ಟೇ ಉಳಿಸಿಕೊಂಡರೇ ಹೊರತು ಚರ್ಚ್‌ಗೆ ಸಂಬಂಧಪಟ್ಟ ಭಾಗವನ್ನಲ್ಲ. ಅವರ ಮತಧರ್ಮಶಾಸ್ತ್ರವು ಚರ್ಚ್‌ನ ಅಧಿಕಾರವನ್ನು ಕಡಿಮೆಗೊಳಿಸುವಂತಹುದಾಗಿತ್ತು. ಸತ್ತವರ ಆತ್ಮಗಳನ್ನು ಜನಸಮೂಹದಿಂದ ಬಿಡುಗಡೆಗೊಳಿಸುವುದೆಂದು ಭಾವಿಸಲಾದ ಶುದ್ಧೀಕರಣಲೋಕವನ್ನವರು ನಿಷೇಧಿಸಿದರು. ಅವರು ಶೇಷಪಾಪಕ್ಷಮೆ (ಇಂಡಲ್‌ಜೆನ್ಸಸ್) ಯ ಸಿದ್ಧಾಂತವನ್ನು ತಿರಸ್ಕರಿಸಿದರು, ಇದರ ಮೇಲೆಯೇ ಪೋಪ್‌ರ ಅಪಾರ ಆದಾಯ ನಿಂತಿದ್ದುದು. ಪೂರ್ವನಿಶ್ಚಿತತೆಯ ಸಿದ್ಧಾಂತದಿಂದ ಸತ್ತ ನಂತರ ಆತ್ಮದ ಸ್ಥಿತಿಯು ಪುರೋಹಿತರ ಕ್ರಿಯೆಗಳಿಂದ ಸಂಪೂರ್ಣವಾಗಿ ಸ್ವತಂತ್ರಗೊಂಡಿತು. ಹೊಸ ನಡಾವಳಿಯು ಪೋಪ್ ಜೊತೆಗಿನ ಹೋರಾಟಕ್ಕೆ ಸಹಾಯಕವಾದುದರ ಜೊತೆಗೆ ಪ್ರಾಟೆಸ್ಟೆಂಟ್ ದೇಶಗಳಲ್ಲಿನ ಪ್ರಾಟೆಸ್ಟೆಂಟ್ ಚರ್ಚ್‌ಗಳು ಕ್ಯಾಥೋಲಿಕ್ ದೇಶಗಳಲ್ಲಿನ ಕ್ಯಾಥೋಲಿಕ್ ಚರ್ಚ್‌ಗಳಂತೆ ಪ್ರಬಲವಾಗಲು ಆಸ್ಪದವೀಯಲಿಲ್ಲ. ಪ್ರಾಟೆಸ್ಟೆಂಟ್ ದೇವತಾಶಾಸ್ತ್ರಜ್ಞರು, ಕನಿಷ್ಠ ಪಕ್ಷ ಮೊದಲಲ್ಲಿ, ಕ್ಯಾಥೋಲಿಕ್ ಮತಧರ್ಮಶಾಸ್ತ್ರಜ್ಞರಷ್ಟೇ ಮತಾಂಧರಾಗಿದ್ದರು, ಆದರೆ ಅವರಿಗಿದ್ದುದು ಕಡಿಮೆ ಅಧಿಕಾರ, ಹೀಗಾಗಿ ಅವರು ಮಾಡಬಹುದಾದ ಹಾನಿಯೂ ಕಡಿಮೆ ಪ್ರಮಾಣದ್ದಾಗಿತ್ತು.

ಬಹುತೇಕ ಆರಂಭದಿಂದಲೇ, ಮತಧಾರ್ಮಿಕ ವಿಷಯಗಳಲ್ಲಿನ ಸರ್ಕಾರದ ಅಧಿಕಾರದ ಬಗ್ಗೆ ಪ್ರಾಟೆಸ್ಟೆಂಟರಲ್ಲಿ ಭಿನ್ನಾಭಿಪ್ರಾಯವಿತ್ತು. ರಾಜರುಗಳೂ ಪ್ರಾಟೆಸ್ಟೆಂಟ್‌ರಾಗಿದ್ದ ಕಡೆಗಳಲ್ಲಿ ಅವರನ್ನು ತಮ್ಮ ದೇಶಗಳಲ್ಲಿನ ಚರ್ಚ್‌ಗಳ ಮುಖ್ಯಸ್ಥರೆಂದು ಪರಿಗಣಿಸುವ ಕಡೆಗೆ ಒಲವು ಹೊಂದಿದ್ದರು. ಇಂಗ್ಲಂಡ್‌ನಲ್ಲಿ ಎಂಟನೆಯ ಹೆನ್ರಿ ಮತ್ತು ಎಲಿಜ಼ಬೆತ್ ಈ ವಿಷಯದಲ್ಲಿ ತಮ್ಮ ಹಕ್ಕನ್ನು ಬಲವಾಗಿ ಪ್ರತಿಪಾದಿಸಿದರು, ಹಾಗೆಯೇ ಜರ್ಮನಿ, ಸ್ಕಾಂಡಿನೇವಿಯ ಮತ್ತು (ಸ್ಪೈಯಿನ್

ವಿರುದ್ಧದ ಬಂಡಾಯದ ನಂತರ) ಹಾಲಂಡ್‌ಗಳ ಪ್ರಾಟೆಸ್ಟೆಂಟ್ ರಾಜರೂ ಹಾಗೆಯೇ ಮಾಡಿದರು. ಇದರಿಂದ ಈಗಾಗಲೇ ರಾಜರ ಅಧಿಕಾರವನ್ನು ಹೆಚ್ಚಿಸುವ ಪ್ರವೃತ್ತಿಗೆ ಮತ್ತಷ್ಟು ತೇಜಿ ಬಂತು.

ಮತಧರ್ಮಸುಧಾರಣೆಯ ವ್ಯಕ್ತಿಗತ ಮಗ್ಗುಲನ್ನು ಗಂಭೀರವಾಗಿ ಪರಿಗಣಿಸಿದ್ದ ಪ್ರಾಟೆಸ್ಟೆಂಟ್‌ರು ಪೋಪ್‌ರಂತೆಯೇ ರಾಜರುಗಳಿಗೂ ಅಧೀನರಾಗಿರಲು ಸಿದ್ಧರಿರಲಿಲ್ಲ. ಜರ್ಮನಿಯಲ್ಲಿನ ಅನಾಬ್ಯಾಪ್ಟಿಸ್ಟ್‌ರನ್ನು ದಮನಗೊಳಿಸಲಾಯಿತು, ಆದರೆ ಅವರ ವಾದವು ಹಾಲಂಡ್ ಮತ್ತು ಇಂಗ್ಲಂಡ್‌ಗಳಲ್ಲಿ ವ್ಯಾಪಕವಾಯಿತು. ಕ್ರಾಮ್‌ವೆಲ್ ಮತ್ತು ದೀರ್ಘಾವಧಿಯ ಸಂಸತ್ತು (ದ ಲಾಂಗ್ ಪಾರ್ಲಿಮೆಂಟ್) ಗಳ ನಡುವಣ ತಿಕ್ಕಾಟಕ್ಕೆ ಅನೇಕ ಮಗ್ಗುಲುಗಳಿದ್ದವು; ಮತಧಾರ್ಮಿಕ ವಿಚಾರಗಳಲ್ಲಿ ಸರ್ಕಾರವು ನಿರ್ಧಾರಕವಾಗಬೇಕೆಂಬ ಪರ ಹಾಗೂ ವಿರುದ್ಧವಾಗಿದ್ದವರ ನಡುವಣ ಸಂಘರ್ಷದಲ್ಲಿ ಅದರ ಮತಧಾರ್ಮಿಕ ಮಗ್ಗುಲೂ ಒಂದು ಭಾಗವಾಗಿತ್ತು. ಮತಧಾರ್ಮಿಕ ಕದನಗಳ ಪರಿಣಾಮದಿಂದಾದ ಬೇಸರವು ಕ್ರಮೇಣ ಮತಧಾರ್ಮಿಕ ಸಹಿಷ್ಣುತೆಯ ನಂಬಿಕೆಯು ಹೆಚ್ಚಾಗಲು ಕಾರಣವಾಯಿತು. ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಬೆಳೆದ ಉದಾರವಾದ ಚಳುವಳಿಯ ಕಾರಣಗಳಲ್ಲಿ ಇದು ಒಂದಾಯಿತು.

ಮೊದಮೊದಲು ಆಶ್ಚರ್ಯಕರವಾಗಿ ವೇಗವಾಗಿದ್ದ ಪ್ರಾಟೆಸ್ಟೆಂಟ್ ಯಶಸ್ಸನ್ನು ತಡೆಗಟ್ಟಲು ಲಯೋಲ ಸ್ಥಾಪಿಸಿದ ಜೆಸ್ಯೂಟ್ ಪಂಥವು ಮುಖ್ಯ ಕಾರಣವಾಯಿತು. ಲಯೋಲ ಒಬ್ಬ ಸೈನಿಕನಾಗಿದ್ದವನು, ಅವನ ಪಂಥವು ಸೈನಿಕ ಮಾದರಿಯಲ್ಲೇ ಸ್ಥಾಪಿತವಾಗಿತ್ತು; ಮುಖ್ಯಸ್ಥನಿಗೆ ಪ್ರಶ್ನಾತೀತ ರೀತಿಯಲ್ಲಿ ವಿಧೇಯವಾಗಿರಬೇಕಾಗಿತ್ತು; ಪ್ರತಿ ಜೆಸ್ಯೂಟ್‌ನೂ ತಾನು ಪಾಷಂಡಿತನದ ವಿರುದ್ಧದ ಯುದ್ಧದಲ್ಲಿ ತೊಡಗಿರುವವನೆಂದು ಭಾವಿಸಬೇಕಾಗಿತ್ತು. ಟ್ರೆಂಟ್‌ನ ಧರ್ಮಪರಿಷತ್ತಿನಷ್ಟೇ ಮುಂಚೆಯೇ ಜೆಸ್ಯೂಟ್‌ರು ಪ್ರಭಾವಶಾಲಿಗಳಾಗಲು ತೊಡಗಿದ್ದರು. ಅವರು ಶಿಸ್ತುಬದ್ಧರು, ಸಮರ್ಥರು, ಉದ್ದೇಶಕ್ಕೆ ಹಾಗೂ ಕುಶಲ ಪ್ರಚಾರಕ್ಕೆ ಸಂಪೂರ್ಣ ಬದ್ಧರಾಗಿದ್ದವರು. ಅವರ ಮತಧರ್ಮಶಾಸ್ತ್ರವು ಪ್ರಾಟೆಸ್ಟೆಂಟ್‌ರದಕ್ಕೆ ವಿರುದ್ಧವಾದುದು, ಪ್ರಾಟೆಸ್ಟೆಂಟ್‌ರು ಬೆಲೆ ನೀಡುತ್ತಿದ್ದ ಸಂತ ಆಗಸ್ಟೈನ್‌ನ ಅಂಶಗಳನ್ನು ತಿರಸ್ಕರಿಸಿದರು. ಅವರಿಗೆ ಸ್ವತಂತ್ರಇಚ್ಛಾಶಕ್ತಿಯಲ್ಲಿ ನಂಬಿಕೆ, ಪೂರ್ವನಿಶ್ಚಿತತೆಯನ್ನವರು ವಿರೋಧಿಸಿದರು. ಮುಕ್ತಿ ದೊರೆಯುವುದು ಶ್ರದ್ಧೆಯಿಂದಷ್ಟೇ ಅಲ್ಲ, ಶ್ರದ್ಧೆ ಮತ್ತು ಕೆಲಸ ಎರಡರಿಂದಲೂ. ತಮ್ಮ ಮತಪ್ರಚಾರಕ ಉತ್ಸಾಹದಿಂದ ಜೆಸ್ಯೂಟ್‌ರು ಘನತೆಯನ್ನು ಸಂಪಾದಿಸಿದರು, ವಿಶೇಷವಾಗಿ ದೂರಪ್ರಾಚ್ಯದಲ್ಲಿ. ಪಾಪನಿವೇದನ ಪಾದ್ರಿಗಳಾಗಿ ಅವರು ತುಂಬ ಜನಪ್ರಿಯರಾದರು, ಯಾಕೆಂದರೆ (ಪಾಸ್ಕಲ್‌ನನ್ನು ನಂಬುವುದಾದರೆ) ಇತರ ಮತಧರ್ಮಬೋಧಕರಿಗಿಂತ ಅವರು, ಪಾಷಂಡಿತನದ

ಹೊರತಾಗಿ, ಹೆಚ್ಚು ದಯಾಪರರಾಗಿದ್ದರು. ಅವರು ಶಿಕ್ಷಣಕ್ಕೆ ಪ್ರಾಧಾನ್ಯವಿತ್ತರು, ಹಾಗಾಗಿ ಕಿರಿಯರ ಮನಸ್ಸಿನ ಮೇಲೆ ಬಲವಾದ ಪ್ರಭಾವ ಬೀರಿದರು. ಮತಧರ್ಮಶಾಸ್ತ್ರವು ಮಧ್ಯೆ ಬಾರದಿರುವಾಗ, ಅವರು ನೀಡುತ್ತಿದ್ದ ಶಿಕ್ಷಣವು ಆ ಕಾಲದಲ್ಲಿ ಅತ್ಯುತ್ಕೃಷ್ಟವಾದುದಾಗಿತ್ತು. ಬೇರೆಡೆ ಕಲಿಯಬಹುದಾದುದಕ್ಕಿಂತ ಹೆಚ್ಚಿನ ಗಣಿತವನ್ನು ಅವರು ಡೆಕಾರ್ಟೆಗೆ ಕಲಿಸಿದರು. ರಾಜಕೀಯವಾಗಿ ಅವರು ಒಂದೇ ಬಗೆಯ ಶಿಸ್ತಿನಿಂದ ಕೂಡಿದ ಒಗ್ಗಟ್ಟಿನಿಂದ ಕೂಡಿದವರು, ಅಪಾಯಗಳಿಂದಲೂ ಕಠಿಣಶ್ರಮದಿಂದಲೂ ಕುಗ್ಗದವರು. ಸ್ಪಾನಿಶ್ ಸೈನ್ಯಗಳನ್ನು ಗೆದ್ದಿದ್ದ, ಮತ್ತು ಒಂದು ಶತಮಾನದಷ್ಟು ಕಾಲ ಸ್ವತಂತ್ರ ಚಿಂತನೆಯ ನೆಲೆಯಾಗಿದ್ದ ಇಟಲಿಯಲ್ಲಿಯೂ ವಿಚಾರಣಾಧಿಕರಣದ ಭಯಾನಕತೆಯನ್ನು ಪುನಃಸ್ಥಾಪಿಸಿದ್ದ ಹಿನ್ನೆಲೆಯಲ್ಲಿ, ಅವರು ದಾಕ್ಷಿಣ್ಯರಹಿತ ಹಿಂಸೆಯನ್ನು ಅಭ್ಯಾಸಮಾಡಿಕೊಳ್ಳುವಂತೆ ಕ್ಯಾಥೋಲಿಕ್ ರಾಜರನ್ನು ಪ್ರೇರಿಸಿದರು.

ಬೌದ್ಧಿಕ ವಲಯಗಳಲ್ಲಿ, ಮತಧರ್ಮಸುಧಾರಣೆ ಮತ್ತು ಪ್ರತಿಮತಧರ್ಮಸುಧಾರಣೆಗಳ ಪರಿಣಾಮಗಳು, ಮೊದಲಿಗೆ ತೀರ ಕೆಟ್ಟವಾಗಿದ್ದವಾದರೂ ಕೊನೆಗೆ ಪ್ರಯೋಜನಕಾರಿ ಎನಿಸಿದವು. ಕ್ಯಾಥೋಲಿಕ್‌ರಾಗಲೀ ಪ್ರಾಟೆಸ್ಟೆಂಟ್‌ರಾಗಲೀ ಸಂಪೂರ್ಣವಾಗಿ ಗೆಲವು ಸಾಧಿಸಲು ಸಾಧ್ಯವಿಲ್ಲವೆಂಬುದನ್ನು ಮೂವತ್ತು ವರ್ಷಗಳ ಯುದ್ಧವು ಮನವರಿಕೆ ಮಾಡಿಕೊಟ್ಟಿತ್ತು. ಸೈದ್ಧಾಂತಿಕ ಐಕಮತ್ಯವೆಂಬ ಮಧ್ಯಕಾಲದ ಸಿದ್ಧಾಂತವನ್ನು ವರ್ಜಿಸುವುದು ಅನಿವಾರ್ಯವಾಯಿತು; ಇದರಿಂದಾಗಿ ಜನರು ಮೂಲಭೂತ ವಿಷಯಗಳ ಬಗ್ಗೆಯೂ ಸ್ವತಂತ್ರವಾಗಿ ಯೋಚಿಸುವ ಅವಕಾಶವು ಅಧಿಕವಾಯಿತು. ವಿವಿಧ ದೇಶಗಳಲ್ಲಿನ ಪಂಥಗಳ ವೈವಿಧ್ಯದಿಂದಾಗಿ ಬೇರೆ ದೇಶಗಳಲ್ಲಿ ವಾಸಿಸುವ ಮೂಲಕ ಚಿತ್ರಹಿಂಸೆಯಿಂದ ಪಾರಾಗುವ ಅವಕಾಶ ಒದಗಿತು. ಮತಧಾರ್ಮಿಕ ಯುದ್ಧದ ಬಗೆಗಿನ ಜಿಗುಪ್ಸೆಯು ಸಮರ್ಥ ಜನರ ಗಮನವು ಮತಧರ್ಮೇತರ ವಿದ್ಯೆಯ ಕಡೆಗೆ, ಅದರಲ್ಲೂ ಗಣಿತ ಮತ್ತು ವಿಜ್ಞಾನ, ಹೆಚ್ಚು ಹೆಚ್ಚಾಗಿ ಹರಿಯುವಂತಾಯಿತು. ಹದಿನಾರನೆಯ ಶತಮಾನದಲ್ಲಿ, ಲೂಥರ್ ಪ್ರಾಮುಖ್ಯಕ್ಕೆ ಬಂದ ಮೇಲೆ, ತತ್ತ್ವಜ್ಞಾನದ ವಿಷಯದಲ್ಲಿ ಬರಡಾಗಿದ್ದುದು, ಹದಿನೇಳನೆಯ ಶತಮಾನದಲ್ಲಿ ದೊಡ್ಡ ದೊಡ್ಡ ಹೆಸರುಗಳು ಕೇಳಿಬರುವುದರೊಂದಿಗೆ ಗ್ರೀಕ್ ಕಾಲವಾದ ನಂತರ ಅತ್ಯಂತ ಗಮನಾರ್ಹ ಮುನ್ನಡೆ ಸಾಧಿಸಲು ಕಾರಣವಾದವುಗಳಲ್ಲಿ ಮೇಲಿನವೂ ಸೇರುತ್ತವೆ. ವಿಜ್ಞಾನದಲ್ಲಿ ಮುನ್ನಡೆ ಆರಂಭವಾಯಿತು, ಆ ಕುರಿತು ನಾನು ಮುಂದಿನ ಅಧ್ಯಾಯದಲ್ಲಿ ವಿವರಿಸುತ್ತೇನೆ.

○

೬

ವಿಜ್ಞಾನದ ಉತ್ಕರ್ಷ

ಹಿಂದಿನ ಶತಮಾನಗಳಿಗಿಂತ ಆಧುನಿಕವು ಭಿನ್ನವಾದುದಕ್ಕೆ ವಿಜ್ಞಾನವೇ ಬಹುತೇಕ ಸಂಪೂರ್ಣವಾಗಿ ಕಾರಣವೆಂದು ಹೇಳಬಹುದು; ಅದು ತನ್ನ ಅದ್ಭುತ ಸಾಧನೆಯನ್ನು ಹದಿನೇಳನೆಯ ಶತಮಾನದಲ್ಲಿ ಮಾಡಿತು. ಇಟಾಲಿಯನ್ ನವೋದಯವು ಮಧ್ಯಕಾಲೀನವಾಗಿರದಿದ್ದರೂ ಆಧುನಿಕವೆನ್ನುವಂತಿರಲಿಲ್ಲ; ಅದು ಅತ್ಯುನ್ನತ ಗ್ರೀಕ್ ಕಾಲಕ್ಕೆ ಸಮೀಪವಾದುದಾಗಿತ್ತು. ಹದಿನಾರನೆಯ ಶತಮಾನದ ಮತಧರ್ಮಶಾಸ್ತ್ರವು ತನ್ನ ಹೀರಿಕೊಳ್ಳುವ ಪ್ರವೃತ್ತಿಯಿಂದ ಮೆಕಿಯವೆಲ್ಲಿಯ ಕಾಲಕ್ಕಿಂತ ಹೆಚ್ಚು ಮಧ್ಯಯುಗೀನವಾಗಿತ್ತು. ಮನೋದೃಷ್ಟಿಯ ವಿಷಯದಲ್ಲಿ ಆಧುನಿಕ ಜಗತ್ತು ಹದಿನೇಳನೆಯ ಶತಮಾನದಲ್ಲಿ ಆರಂಭವಾಯಿತು. ನವೋದಯದ ಯಾವನೇ ಇಟಾಲಿಯನ್ ಕೂಡ ಪ್ಲೇಟೋ ಮತ್ತು ಅರಿಸ್ಟಾಟಲ್‌ರಿಗೆ ತಿಳಿಯದವನಾಗಿರಲಿಲ್ಲ. ಥಾಮಸ್ ಆಕ್ವಿನಾಸ್‌ನಿಗೆ ಲೂಥರ್ ಆಘಾತಕಾರಿಯಾಗುತ್ತಿದ್ದ, ಆದರೆ ಅವನನ್ನು ಅರ್ಥಮಾಡಿಕೊಳ್ಳುವುದು ಅವನಿಗೆ ಕಷ್ಟಕರವಾಗುತ್ತಿರಲಿಲ್ಲ. ಹದಿನೇಳನೆಯ ಶತಮಾನದ ವಿಷಯ ಭಿನ್ನವಾದುದು: ಪ್ಲೇಟೋ ಮತ್ತು ಅರಿಸ್ಟಾಟಲ್‌ರು, ಆಕ್ವಿನಾಸ್ ಮತ್ತು ಒಕ್ಕಾಮ್‌ರಿಗೆ ನ್ಯೂಟನ್‌ನ ತಲೆಬುಡ ಅರ್ಥವಾಗುತ್ತಿರಲಿಲ್ಲ.

ವಿಜ್ಞಾನವು ಪರಿಚಯಿಸಿದ ಹೊಸ ಪರಿಕಲ್ಪನೆಗಳು ಆಧುನಿಕ ತತ್ವಜ್ಞಾನದ ಮೇಲೆ ಗಾಢ ಪರಿಣಾಮವನ್ನು ಬೀರಿತು. ಒಂದರ್ಥದಲ್ಲಿ ಆಧುನಿಕ ತತ್ವಜ್ಞಾನದ ಪಿತಾಮಹನಾದ ಡೆಕಾರ್ಟೆಯು ಸ್ವತಃ ಹದಿನೇಳನೆಯ ಶತಮಾನದ ವಿಜ್ಞಾನದ ಸೃಷ್ಟಿಕರ್ತರಲ್ಲೊಬ್ಬನಾಗಿದ್ದ. ಆಧುನಿಕ ತತ್ವಜ್ಞಾನವು ಆರಂಭಗೊಂಡ ಮಾನಸಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಮುಂಚೆ ಖಗೋಳವಿಜ್ಞಾನ ಮತ್ತು ಭೌತವಿಜ್ಞಾನಗಳ ವಿಧಾನಗಳು ಮತ್ತು ಫಲಿತಾಂಶಗಳನ್ನು ಕುರಿತ ಒಂದಷ್ಟು ಪರಿಚಯ ಅತ್ಯವಶ್ಯಕ.

ನಾಲ್ಕು ಜನ ಮಹನೀಯರು – ಕೊಪರ್ನಿಕಸ್, ಕೆಪ್ಲರ್, ಗೆಲಿಲಿಯೋ ಮತ್ತು ನ್ಯೂಟನ್ – ವಿಜ್ಞಾನದ ಸೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠ ವ್ಯಕ್ತಿಗಳಾಗಿದ್ದರು.

ಇವರಲ್ಲಿ ಕೊಪರ್ನಿಕಸ್ ಹದಿನೆಂಟನೆಯ ಶತಮಾನಕ್ಕೆ ಸೇರಿದವನು, ಅಂದರೆ ತನ್ನ ಕಾಲದಲ್ಲಿಯೇ ಅವನು ಬೀರಿದ ಪ್ರಭಾವ ಅತ್ಯಲ್ಪವಾದುದು.

ಕೊಪರ್ನಿಕಸ್ (೧೪೭೩–೧೫೪೩) ಒಬ್ಬ ಪೋಲಿಶ್ ಮತಧರ್ಮಬೋಧಕ, ಅವನದು ಕಡು ಸಂಪ್ರದಾಯನಿಷ್ಠೆ. ತನ್ನ ಯೌವನದಲ್ಲಿ ಅವನು ಇಟಲಿಯಲ್ಲಿ ಸಂಚರಿಸಿದ, ನವೋದಯದ ಪರಿಸರದ ಸ್ವರೂಪವನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಂಡ. ೧೫೦೦ ರಲ್ಲಿ ಅವನಿಗೆ ರೋಮ್‌ನಲ್ಲಿ ಗಣಿತವಿಷಯದಲ್ಲಿ ಉಪನ್ಯಾಸಕ ಅಥವ ಪ್ರಾಧ್ಯಾಪಕ ಹುದ್ದೆಯು ಲಭ್ಯವಾಯಿತು, ಆದರೆ ೧೫೦೩ ರಲ್ಲಿ ಅವನು ತನ್ನ ಸ್ವಂತ ದೇಶಕ್ಕೆ ಮರಳಿ ಫ್ರೌಯೆನ್‌ಬರ್ಗ್‌ನ ಪಾದ್ರಿಯಾದ. ಅವನ ಬಹುತೇಕ ವೇಳೆಯು ಜರ್ಮನ್‌ರ ಜೊತೆಗಿನ ಹೋರಾಟ ಮತ್ತು ನಾಣ್ಯಗಳ ಪರಿಷ್ಕರಣದಲ್ಲಿ ಕಳೆದಂತೆ ಕಾಣುತ್ತದೆ, ಆದರೆ ಬಿಡುವಿನ ವೇಳೆಯನ್ನು ಖಗೋಳವಿಜ್ಞಾನಕ್ಕೆ ಮೀಸಲಿಟ್ಟ. ಆರಂಭದಲ್ಲಿ ಅವನು ಸೂರ್ಯನು ವಿಶ್ವದ ಕೇಂದ್ರವೆಂದೂ, ಭೂಮಿಗೆ ಎರಡು ಬಗೆಯ – ಒಂದು ದೈನಿಕ, ಮತ್ತೊಂದು ಸೂರ್ಯನ ಸುತ್ತಣದ ವಾರ್ಷಿಕ – ಚಲನೆಯಿದೆಯೆಂದೂ ನಂಬಿದ. ಮತಧಾರ್ಮಿಕ ಖಂಡನೆಯ ಭಯದಿಂದ ಅವನು ತನ್ನ ದೃಷ್ಟಿಕೋನವನ್ನು ಪ್ರಕಟಿಸಲಿಲ್ಲವಾದರೂ ಅದನ್ನು ಇತರರಿಗೆ ತಿಳಿಸಿದ. ಅವನ ಪ್ರಮುಖ ಕೃತಿ 'ದ ರೆವಲ್ಯೂಷನಿಬಸ್ ಆರ್ಬಿಯಮ್ ಸೆಲೆಸ್ಟಿಯಮ್' ಅವನು ಸತ್ತ ವರ್ಷ (೧೫೪೩) ರಲ್ಲಿ ಪ್ರಕಟವಾಯಿತು, ಅದಕ್ಕೆ ಮುನ್ನುಡಿ ಬರೆದಿದ್ದ ಅವನ ಸ್ನೇಹಿತ ಓಸಿಯಾಂಡರ್ ಸೂರ್ಯಕೇಂದ್ರಿತ ಚಲನೆಯನ್ನು ಒಂದು ಆಧಾರಕಲ್ಪನೆಯಾಗಿಯಷ್ಟೇ ಮಂಡಿಸಲಾಗಿದೆ ಎಂದ. ಈ ಹೇಳಿಕೆಗೆ ಕೊಪರ್ನಿಕಸ್ ಎಷ್ಟರ ಮಟ್ಟಿಗೆ ಒಪ್ಪಿಗೆ ಕೊಟ್ಟಿದ್ದ ಎಂಬುದು ಅನಿಶ್ಚಿತವಾಗಿದೆ, ಆದರೆ ಈ ಪ್ರಶ್ನೆಯು ಅಷ್ಟು ಮುಖ್ಯವಾದುದಲ್ಲ, ಯಾಕೆಂದರೆ ತನ್ನ ಪುಸ್ತಕದ ಒಡಲಲ್ಲೇ ಅವನು ಇಂತಹ ಹೇಳಿಕೆಗಳನ್ನು ಮಾಡಿದ್ದ.[೨೫೪] ಈ ಪುಸ್ತಕವನ್ನವನು ಪೋಪ್‌ಗೆ ಅರ್ಪಣೆ ಮಾಡಿದ್ದ, ಹೀಗಾಗಿ ಗೆಲಿಲಿಯೋನ ಕಾಲದವರೆಗೂ ಅವನು ಅಧಿಕೃತ ಕ್ಯಾಥೋಲಿಕ್ ಖಂಡನೆಯಿಂದ ತಪ್ಪಿಸಿಕೊಂಡ. ಕೊಪರ್ನಿಕಸ್ ಬದುಕಿದ್ದ ಅವಧಿಯಲ್ಲಿ ಚರ್ಚ್ ಟ್ರೆಂಟ್‌ನ ಧರ್ಮಪರಿಷತ್ತು, ಜೆಸ್ಯೂಟ್‌ರು ಮತ್ತು ಪುನರುಜ್ಜೀವಿತ ಮತಧರ್ಮನ್ಯಾಯಾಧಿಕರಣಗಳೂ ತಮ್ಮ ಕಾರ್ಯ ಮಾಡಿದ ನಂತರ ಆದುದಕ್ಕಿಂತ ಹೆಚ್ಚು ಉದಾರವಾಗಿತ್ತು.

ಕೊಪರ್ನಿಕಸ್‌ನ ಕಾರ್ಯದ ಪರಿಸರವು ಆಧುನಿಕವಾದುದಾಗಿರಲಿಲ್ಲ, ಪ್ರಾಯಶಃ ಅದನ್ನು ಪೈಥಾಗೊರಿಯನ್ ಎಂದು ವರ್ಣಿಸಬಹುದು. ಎಲ್ಲ ಆಕಾಶಕಾಯಗಳ

---

೨೫೪. ನೋಡಿ, 'ತ್ರೀ ಕೊಪರ್ನಿಕನ್ ಟ್ರೀಟೈಸಸ್', ಎಡ್ವರ್ಡ್ ರಾಸೆನ್ ಅವರ ಅನುವಾದ, ಚಿಕಾಗೋ, ೧೯೩೯.

ಚಲನೆಯೂ ವರ್ತುಲಾಕಾರದ್ದೂ ಒಂದೇ ಬಗೆಯದೂ ಆಗಿರುವುದು ಸ್ವಯಂವೇದ್ಯವೆಂದವನು ಭಾವಿಸಿದ್ದ, ಅಲ್ಲದೆ ಗ್ರೀಕ್‌ರಂತೆ ಅವನೂ ಸೌಂದರ್ಯಾತ್ಮಕ ಉದ್ದೇಶದ ಪ್ರಭಾವಕ್ಕೂ ಒಳಗಾಗಿದ್ದವನು. ಅವನ ವ್ಯವಸ್ಥೆಯಲ್ಲಿನ್ನೂ ಅಧಿವರ್ತುಲ (ಎಪಿಸೈಕಲ್) ಗಳಿದ್ದವು, ಆದರೆ ಅವೆಲ್ಲದರ ಕೇಂದ್ರ ಸೂರ್ಯ ಅಥವಾ ಸೂರ್ಯನ ಹತ್ತಿರ. ಸೂರ್ಯನು ಕೇಂದ್ರವಲ್ಲವೆಂಬ ವಸ್ತುಸ್ಥಿತಿಯು ಈ ಸಿದ್ದಾಂತದ ಸರಳತೆಯನ್ನು ಕೆಡಿಸಿಬಿಡುತ್ತದೆ. ಅವನಿಗೆ ಪೈಥಾಗೊರಾಸ್‌ನ ಸಿದ್ಧಾಂತಗಳು ಪರಿಚಿತವಾಗಿದ್ದರೂ, ಅರಿಸ್ಟಾರ್ಕಸ್‌ನ ಸೂರ್ಯಕೇಂದ್ರಿತ ಸಿದ್ಧಾಂತವು ತಿಳಿದಿದ್ದಂತೆ ಕಾಣಿಸುವುದಿಲ್ಲ, ಆದರೆ ಗ್ರೀಕ್ ಖಗೋಳವಿಜ್ಞಾನಿಯು ಊಹೆ ಮಾಡಿಕೊಳ್ಳಲಾಗದಿದ್ದ ಯಾವುದೂ ಅವನದಲ್ಲ. ಅವನ ಕೃತಿಯ ಪ್ರಮುಖಾಂಶವೆಂದರೆ ಭೂಮಿಯನ್ನು ಅದರ ಜ್ಯಾಮಿತೀಯ ಪ್ರಾಮುಖ್ಯದಿಂದ ಕೆಳಗಿಳಿಸಿದ್ದು. ದೀರ್ಘಕಾಲೀನವಾಗಿ, ಕ್ರೈಸ್ತ ಮತಧರ್ಮಶಾಸ್ತ್ರದಲ್ಲಿ ಅವನಿಗೆ ನಿಗದಿಪಡಿಸಿದ್ದ ಮಹಾ ಪ್ರಾಮುಖ್ಯವನ್ನು ಅವನಿಗೆ ನೀಡುವುದು ಕಷ್ಟ. ಆದರೆ ತನ್ನ ಸಿದ್ಧಾಂತದ ಅಂತಹ ಪರಿಣಾಮಗಳನ್ನು ಕೊಪರ್ನಿಕಸ್ ಒಪ್ಪಿಕೊಳ್ಳುತ್ತಿರಲಿಲ್ಲ; ಯಾಕೆಂದರೆ ಅವನ ಸಂಪ್ರದಾಯನಿಷ್ಠೆಯು ಪ್ರಾಮಾಣಿಕವಾದುದು, ತನ್ನ ಸಿದ್ಧಾಂತವು ಬೈಬಲ್‌ಗೆ ವಿರುದ್ಧವಾದುದೆಂಬುದನ್ನು ಅವನು ನಿರಾಕರಿಸಿದ್ದ.

ಕೊಪರ್ನಿಕಸ್‌ನ ಸಿದ್ಧಾಂತದಲ್ಲಿ ನಿಜವಾದ ಕ್ಲಿಷ್ಟತೆಗಳಿವೆ. ಇವುಗಳಲ್ಲಿ ಅತ್ಯಂತ ದೊಡ್ಡದಾದುದೆಂದರೆ ನಕ್ಷತ್ರ ಸ್ಥಾನಾಭಾಸ (ಸ್ಟೆಲರ್ ಪ್ಯಾರಲ್ಲಾಕ್ಸ್) ಇಲ್ಲದಿರುವುದು. ತನ್ನ ಅಕ್ಷದ ಯಾವುದೇ ಬಿಂದುವಿನಿಂದ ಭೂಮಿಯು ಮುಂದಿನ ಆರು ತಿಂಗಳಲ್ಲಿ ಅದು ಇರುವ ಬಿಂದುವಿನಿಂದ ೧೮೬,೦೦೦,೦೦೦ ಮೈಲಿಗಳಾದರೆ, ಅದು ನಕ್ಷತ್ರಗಳ ತೋರ್ಕೆಯ ಸ್ಥಾನಗಳಲ್ಲಿ ವ್ಯತ್ಯಾಸವಾಗಲು ಕಾರಣವಾಗಬೇಕು; ಸಮುದ್ರದಲ್ಲಿ ಚಲಿಸುವ ಒಂದು ಹಡಗು ಹೇಗೆ ಒಂದು ಸ್ಥಾನದಲ್ಲಿ ಉತ್ತರಾಭಿಮುಖಿಯಾಗಿದ್ದರೆ ಮತ್ತೊಂದು ಸ್ಥಾನದಲ್ಲಿ ಅದು ಉತ್ತರಾಭಿಮುಖಿಯಾಗಿರುವುದಿಲ್ಲವೋ ಹಾಗೆ. ಯಾವುದೇ ಸ್ಥಾನಾಭಾಸವನ್ನೂ ಅದು ಗಮನಿಸುವುದಿಲ್ಲ, ಮತ್ತು ಸ್ಥಿರ ನಕ್ಷತ್ರಗಳು ಸೂರ್ಯನಿಂದ ಬಹು ದೂರದಲ್ಲಿರಬೇಕೆಂಬುದನ್ನು ಕೊಪರ್ನಿಕಸ್ ಸರಿಯಾಗಿಯೇ ಊಹಿಸಿದ. ನಕ್ಷತ್ರ ಸ್ಥಾನಾಭಾಸವನ್ನು ಗಮನಿಸಬಹುದಾದಷ್ಟು ಅಳತೆಯ ವಿಧಾನಗಳು ಹತ್ತೊಂಬತ್ತನೆಯ ಶತಮಾನದವರೆಗೂ ಸಾಕಷ್ಟು ನಿಖರವಾಗಲಿಲ್ಲ, ಆನಂತರವಷ್ಟೇ ಅದು ಹತ್ತಿರದ ನಕ್ಷತ್ರಗಳ ವಿಷಯದಲ್ಲಿ ನಿಖರವಾದದ್ದು.

ಕೆಳಗೆ ಬೀಳುವ ಆಕಾಶಕಾಯಗಳ ಬಗೆಗಿನ ಮತ್ತೊಂದು ಕ್ಲಿಷ್ಟತೆಯೂ ತಲೆದೋರಿತು. ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ನಿರಂತರವಾಗಿ ಸುತ್ತುತ್ತಿದ್ದರೆ ಎತ್ತರದಿಂದ ಕೆಳಕ್ಕೆಸೆದ ವಸ್ತುವೊಂದು ತನ್ನ ಮೂಲಸ್ಥಾನದಿಂದ ನೇರವಾಗಿ ಕೆಳಗೆ ಬೀಳದೆ, ಆ ವಸ್ತುವು ಬೀಳುವ ಅವಧಿಯಲ್ಲಿ ಭೂಮಿಯು ದೂರ ಜರುಗಿರುವುದರಿಂದ

ಮತ್ತಷ್ಟು ಪಶ್ಚಿಮದಲ್ಲಿ ಬೀಳಬೇಕು. ಈ ಕ್ಲಿಷ್ಟತೆಗೆ ಪರಿಹಾರವು ಗೆಲಿಲಿಯೋನ ಜಡತ್ವ ನಿಯಮ (ಲಾ ಆಫ್ ಇನರ್ಷಿಯ) ದಲ್ಲಿ ಉತ್ತರವಿದೆಯಾದರೂ ಕೊಪರ್ನಿಕಸ್ ಕಾಲದಲ್ಲಿ ಯಾವುದೇ ಪರಿಹಾರವಿರಲಿಲ್ಲ.

ಈ. ಎ. ಬರ್ಟ್ ಅವರ ಕುತೂಹಲಕಾರೀ ಪುಸ್ತಕವೊಂದಿದೆ, ಅದರ ಹೆಸರು 'ದ ಮೆಟಫಿಸಿಕಲ್ ಫೌಂಡೇಷನ್ಸ್ ಆಫ್ ಮಾಡರ್ನ್ ಫಿಸಿಕಲ್ ಸೈನ್ಸಸ್' (೧೯೨೫) ಎಂದು. ಆಧುನಿಕ ವಿಜ್ಞಾನದ ಸ್ಥಾಪಕರು ಮಾಡಿದ ಅಸಮರ್ಥನೀಯ ಊಹೆಗಳನ್ನು ಬಹು ತೀವ್ರವಾಗಿ ಅದರಲ್ಲಿ ನಿರೂಪಿಸಲಾಗಿದೆ. ಕೊಪರ್ನಿಕಸ್‌ನ ಕಾಲದಲ್ಲಿ ಅವನಿಗೆ ತನ್ನ ಪದ್ಧತಿಯನ್ನು ಅಳವಡಿಸಿಕೊಳ್ಳಲು ಯಾವುದೇ ವಸ್ತುಸ್ಥಿತಿಗಳ ಬೆಂಬಲವಿರಲಿಲ್ಲ, ಆದರೆ ತದ್ವಿರುದ್ಧವಾದವುಗಳಿದ್ದವು ಎಂಬುದನ್ನು ಅವರು ಸರಿಯಾಗಿಯೇ ತೋರಿಸುತ್ತಾರೆ. 'ಸಮಕಾಲೀನ ಪ್ರಯೋಗಶಿಲರು ಹದಿನಾರನೆಯ ಶತಮಾನದಲ್ಲಿ ಬದುಕಿದ್ದಿದ್ದರೆ ವಿಶ್ವದ ಬಗೆಗಿನ ಹೊಸ ತಾತ್ವಿಕತೆಯನ್ನು ಗೇಲಿಮಾಡುವವರಲ್ಲಿ ಅವರೇ ಮೊದಲಿಗರಾಗಿರುತ್ತಿದ್ದರು.' ಪುಸ್ತಕದ ಮೂಲ ಉದ್ದೇಶವೆಂದರೆ, ಆಧುನಿಕ ವಿಜ್ಞಾನದ ಅನಾವರಣಗಳೆಲ್ಲ ಅದೃಷ್ಟವಶಾತ್ ಆಕಸ್ಮಿಕವಾಗಿ ಮಧ್ಯಕಾಲದ ಕಡು ಮೂಢನಂಬಿಕೆಗಳಿಂದ ಹೊಮ್ಮಿದವುಗಳೆಂದು ಹೇಳಿ ಆಧುನಿಕ ವಿಜ್ಞಾನವನ್ನು ಅವಿಶ್ವಾಸದಿಂದ ನೋಡುವುದು. ಇದು ವೈಜ್ಞಾನಿಕ ಮನೋಭಾವದ ಅಪಕಲ್ಪನೆಯನ್ನು ತೋರಿಸುತ್ತದೆಂಬುದು ನನ್ನ ಅನಿಸಿಕೆ: ವಿಜ್ಞಾನಿಯೊಬ್ಬನನ್ನು ವಿಶಿಷ್ಟವೆನಿಸುವುದು ಅವನ ನಂಬಿಕೆಗಳಲ್ಲ, ಆದರೆ ಹೇಗೆ ಮತ್ತು ಯಾಕೆ ಅವುಗಳನ್ನು ನಂಬುತ್ತಾನೆ ಎಂಬುದು. ಅವನ ನಂಬಿಕೆಗಳು ತಾತ್ಕಾಲಿಕವಾದವು, ಮತತಾತ್ವಿಕವಲ್ಲ; ಅವು ಅವಲಂಬಿಸುವುದು ಆಧಾರಗಳನ್ನು, ಪ್ರಮಾಣ ಅಥವಾ ಸಹಜಸ್ಫೂರ್ತಿಯನ್ನಲ್ಲ. ತನ್ನ ಸಿದ್ಧಾಂತವನ್ನು ಕೊಪರ್ನಿಕಸ್ ಒಂದು ಆಧಾರಕಲ್ಪನೆಯೆನ್ನುವುದು ಸಮಂಜಸವಾಗಿಯೇ ಇದೆ; ಹೊಸ ಆಧಾರಕಲ್ಪನೆಗಳು ಅನಪೇಕ್ಷಣೀಯ ಎಂದು ಅವನ ವಿರೋಧಿಗಳು ಭಾವಿಸಿದ್ದು ತಪ್ಪು.

ಆಧುನಿಕ ವಿಜ್ಞಾವನ್ನು ನೆಲೆಗೊಳಿಸಿದವರು, ಒಟ್ಟಾಗಿಯೇ ಕಾಣಿಸಿಕೊಳ್ಳಬೇಕಾಗಿಲ್ಲದ, ಎರಡು ಲಕ್ಷಣಗಳನ್ನು ಹೊಂದಿದ್ದರು: ಪರಿವೀಕ್ಷಣೆಯಲ್ಲಿನ ಅಪರಿಮಿತ ತಾಳ್ಮೆ, ಮತ್ತು ಆಧಾರಕಲ್ಪನೆಗಳನ್ನು ರೂಪಿಸುವ ಧೈರ್ಯ. ಇವುಗಳಲ್ಲಿ ಎರಡನೆಯದನ್ನು ಅತ್ಯಂತ ಹಿಂದಿನ ಗ್ರೀಕ್ ತತ್ವಜ್ಞಾನಿಗಳಲ್ಲಿಯೇ ಕಾಣಬಹುದಾಗಿತ್ತು; ಮೊದಲನೆಯದನ್ನು, ಗಣನೀಯ ಪ್ರಮಾಣದಲ್ಲಿ, ಆನಂತರದ ಪ್ರಾಚೀನ ಖಗೋಳವಿಜ್ಞಾನಿಗಳಲ್ಲಿ ಕಾಣಬಹುದು. ಆದರೆ ಪ್ರಾಚೀನರಲ್ಲಿ ಯಾರೂ, ಪ್ರಾಯಶಃ ಅರಿಸ್ಟಾರ್ಕಸ್‌ನನ್ನು ಹೊರತುಪಡಿಸಿ, ಎರಡೂ ಲಕ್ಷಣಗಳನ್ನು ಹೊಂದಿರಲಿಲ್ಲ; ಅಲ್ಲದೆ ಮಧ್ಯಭಾಗದ ಯಾರೂ ಇವೆರಡರಲ್ಲಿ ಒಂದನ್ನೂ ಹೊಂದಿರಲಿಲ್ಲ. ತನ್ನ ಮಹಾ ಪೂರ್ವಿಕರಂತೆ ಕೊಪರ್ನಿಕಸ್ ಎರಡನ್ನೂ ಹೊಂದಿದ್ದ. ತನ್ನ ಕಾಲದಲ್ಲಿ

ಲಭ್ಯವಾಗಿದ್ದ ಸಲಕರಣೆಗಳ ಮೂಲಕ, ಆಕಾಶಕಾಯಗಳ ತೋರಿಕೆಯ ಆಕಾಶ ಚಲನೆಯ ಬಗ್ಗೆ, ತಿಳಿದುಕೊಳ್ಳಬಹುದಾದುದನ್ನೆಲ್ಲ ಅವನು ತಿಳಿದುಕೊಂಡಿದ್ದ; ಅಲ್ಲದೆ, ಭೂಮಿಯ ದೈನಿಕ ಚಲನೆಯು ಎಲ್ಲ ಆಕಾಶಕಾಯಗಳ ಪರಿಭ್ರಮಣೆಗಿಂತ ಹೆಚ್ಚು ಒಪ್ಪವಾದ ಆಧಾರಕಲ್ಪನೆಯೆಂಬುದನ್ನು ಕಂಡುಕೊಂಡಿದ್ದ. ಎಲ್ಲ ಚಲನೆಗಳೂ ಸಾಪೇಕ್ಷವೆಂದು ಪರಿಗಣಿಸುವ ಆಧುನಿಕ ದೃಷ್ಟಿಕೋನದಲ್ಲಿ, ಸರಳತೆಯೊಂದೇ ಅವನ ಆಧಾರಕಲ್ಪನೆಯಿಂದಾಗುವ ಲಾಭ, ಆದರೆ ಇದು ಅವನ ಅಥವಾ ಅವನ ಸಮಕಾಲೀನರ ದೃಷ್ಟಿಯಾಗಿರಲಿಲ್ಲ. ಭೂಮಿಯ ವಾರ್ಷಿಕ ಪರಿಭ್ರಮಣೆಯ ಕುರಿತಂತೆ, ಮತ್ತೆಯೂ ಸರಳೀಕರಣವಿತ್ತು, ಆದರೆ ದೈನಿಕ ಚಲನೆಯಲ್ಲಿದ್ದಷ್ಟು ಢಾಳಾದುದಲ್ಲ. ಕೊಪರ್ನಿಕಸ್‌ಗೆ ಇನ್ನೂ ಅಧಿವರ್ತುಲಗಳ ಆವಶ್ಯಕತೆಯಿತ್ತು, ಆದರೆ ಟಾಲೆಮಿಯ ವಿಧಾನದಲ್ಲಿ ಬೇಕಾದ್ದಕ್ಕಿಂತ ಕಡಿಮೆ, ಅಷ್ಟೆ. ಅವನ ಸಿದ್ಧಾಂತಗಳನ್ನು ಕಂಡುಕೊಂಡ ಕೆಪ್ಲರ್ ಬರುವವರೆಗೂ ಅವನ ಹೊಸ ಸಿದ್ಧಾಂತವು ತನ್ನ ಪೂರ್ಣ ಸರಳತೆಯನ್ನು ಗಳಿಸಿಕೊಳ್ಳಲಿಲ್ಲ.

ವಿಶ್ವದ ಬಗೆಗಿನ ಕಲ್ಪನೆಯ ಮೇಲೆ ಆದ ಕ್ರಾಂತಿಕಾರಕ ಪ್ರಭಾವವಲ್ಲದೆ, ಹೊಸ ಖಗೋಳವಿಜ್ಞಾನದ ಮಹಾ ಗುಣಗಳು ಎರಡು: ಮೊದಲನೆಯದು, ಪ್ರಾಚೀನ ಕಾಲದಿಂದ ಅನುಸರಿಸಿಕೊಂಡು ಬಂದ ನಂಬಿಕೆಗಳು ತಪ್ಪಾಗಿರಬಹುದೆಂಬುದನ್ನು ಗುರುತಿಸಿದ್ದು; ಎರಡನೆಯದು, ವೈಜ್ಞಾನಿಕ ವಸ್ತುಸ್ಥಿತಿಯ ಪರೀಕ್ಷೆಯೆಂದರೆ ತಾಳ್ಮೆಯಿಂದ ವಸ್ತುಸ್ಥಿತಿಗಳನ್ನು ಸಂಗ್ರಹಿಸುವುದು ಮತ್ತು ಈ ವಸ್ತುಸ್ಥಿತಿಗಳಲ್ಲಿ ಸಮಾನವಾಗಿರುವ ನಿಯಮಗಳನ್ನು ಧೈರ್ಯವಾಗಿ ಊಹಿಸುವುದು. ಅವನ ನಂತರದವರಲ್ಲಿನಂತೆ ಕೊಪರ್ನಿಕಸ್‌ನಲ್ಲಿ ಇವೆರಡೂ ಪೂರ್ಣಪ್ರಮಾಣದಲ್ಲಿ ಬೆಳೆದಿರಲಿಲ್ಲ, ಆದರೆ ಅವನ ಕಾರ್ಯಗಳಲ್ಲಿ ಈ ಎರಡೂ ದೊಡ್ಡ ಪ್ರಮಾಣದಲ್ಲಿ ಕಾಣಿಸಿಕೊಂಡಿದ್ದವು.

ಕೊಪರ್ನಿಕಸ್ ತನ್ನ ಸಿದ್ಧಾಂತದ ಬಗ್ಗೆ ಹೇಳಿದ್ದವರಲ್ಲಿ ಕೆಲವರು ಜರ್ಮನ್ ಲೂಥರನ್‌ರು, ಆದರೆ ಲೂಥರ್‌ಗೆ ಆ ವಿಷಯ ತಿಳಿದಾಗ, ಅವನು ಭಾರಿ ಆಘಾತಗೊಂಡ. 'ಭೂಮಿಯು ತಿರುಗುತ್ತದೆ ಎಂದು ಹೇಳುವ ತಲೆತಿರುಕ ಜ್ಯೋತಿಷಿಯ ಮಾತಿಗೆ ಕಿವಿಗೊಡುತ್ತಾರೆಯೇ ವಿನಾ, ಸ್ವರ್ಗ–ಆಕಾಶಗಳ ಕಡೆಗಲ್ಲ, ಸೂರ್ಯ–ಚಂದ್ರರ ಕಡೆಗಲ್ಲ. ಬುದ್ಧಿವಂತನೆಂದು ತೋರಿಸಿಕೊಳ್ಳಲಿಚ್ಛಿಸುವವನು ಏನಾದರೂ ಹೊಸದನ್ನು ಹೇಳಬೇಕಲ್ಲ, ಎಲ್ಲಕ್ಕಿಂತ ಉತ್ತಮವಾದುದೆಂದು ಕಾಣುವುದನ್ನು. ಈ ಮೂರ್ಖನು ಖಗೋಳವಿಜ್ಞಾನವನ್ನು ತಲೆಕೆಳಗು ಮಾಡ ಬಯಸುತ್ತಾನೆ; ಆದರೆ ನಮ್ಮ ಪವಿತ್ರ ಗ್ರಂಥವು ಹೇಳುವುದೇನೆಂದರೆ, ಒಂದೇ ಕಡೆ ನಿಲ್ಲುವಂತೆ ಜೋಶುಅ ಆಜ್ಞೆ ಮಾಡಿದನೇ ಹೊರತು ಭೂಮಿಯ ಮೇಲಲ್ಲ,' ಎಂದನಂತೆ. ಹಾಗೆಯೇ ಕಾಲ್ವಿನ್ ಕೂಡ, ಕೊಪರ್ನಿಕಸ್ ಸಿದ್ಧಾಂತವನ್ನು 'ಜಗತ್ತು

ಸೃಷ್ಟಿತವಾಯಿತು, ಆದರೆ ಅದೂ ಚಲಿಸಲಾರದಂತೆ' (ಸಾಮ್ಸ್, ೪೨. ೧) ಎಂಬ ಗ್ರಂಥಪ್ರಾಮಾಣ್ಯದಿಂದ ಕೆಡವಿ, ಹೇಳಿದನಂತೆ: 'ಯಾರು ತಾನೇ ಕೋಪರ್ನಿಕಸ್‌ನನ್ನು ಪವಿತ್ರಾತ್ಮಕ್ಕೂ ಮಿಗಿಲೆಂದು ಭಾವಿಸುತ್ತಾರೆ?' ಎಂದು ಉದ್ಗರಿಸಿದನಂತೆ. ಪ್ರಾಟೆಸ್ಟೆಂಟ್ ಪುರೋಹಿತಶಾಹಿಯೂ ಕ್ಯಾಥೋಲಿಕ್ ಮತಧರ್ಮಬೋಧಕರಷ್ಟೇ ಮತಾಂಧರಾಗಿದ್ದರು. ಆದರೆ ಕ್ಯಾಥೋಲಿಕ್ ದೇಶಗಳಲ್ಲಿಗಿಂತ ಪ್ರಾಟೆಸ್ಟೆಂಟ್‌ರಲ್ಲಿ ಬಹು ಬೇಗ ಹೆಚ್ಚಿನ ಊಹಾನಾ ಸ್ವಾತಂತ್ರ್ಯ ಲಭಿಸಿತು, ಯಾಕೆಂದರೆ ಪ್ರಾಟೆಸ್ಟೆಂಟ್ ದೇಶಗಳಲ್ಲಿನ ಪುರೋಹಿತವರ್ಗಕ್ಕೆ ಅಧಿಕಾರ ಕಡಿಮೆಯಿದ್ದುದು. ಪ್ರಾಟೆಸ್ಟೆಂಟ್‌ವಾದದ ಪ್ರಮುಖ ಅಂಶವೆಂದರೆ ಬಿರುಕು, ಪಾಷಂಡಿತನವಲ್ಲ, ಬಿರುಕಿಗೆ ರಾಷ್ಟ್ರೀಯ ಚರ್ಚ್‌ಗಳಿರಲಿಲ್ಲ, ಅಲ್ಲದೆ ರಾಷ್ಟ್ರೀಯ ಚರ್ಚ್‌ಗಳಿಗೆ ಸಾಮಾನ್ಯ ಸರ್ಕಾರವನ್ನು ನಿಯಂತ್ರಿಸುವ ಸಾಮರ್ಥ್ಯವಿರಲಿಲ್ಲ. ಇದು ಪೂರ್ತಿಯಾಗಿ ಲಾಭಕರವಾಯಿತು, ಯಾಕೆಂದರೆ ಎಲ್ಲ ಕಡೆಗಳಲ್ಲಿಯೂ ಚರ್ಚ್‌ಗಳು ತಮಗೆ ಸಾಧ್ಯವಾದ ಮಟ್ಟಿಗೂ ಸೌಖ್ಯವನ್ನು ಅಥವಾ ಇಲ್ಲಿನ ಜ್ಞಾನವನ್ನು ಹೆಚ್ಚಿಸುವ ಹೊಸ ಅನಾವರಣವನ್ನು ವಿರೋಧಿಸುತ್ತಲೇ ಬಂತು.

ಕೋಪರ್ನಿಕಸ್ ತನ್ನ ಆಧಾರಕಲ್ಪನೆಗಳಿಗೆ ಯಾವುದೇ ಅಂತಿಮ ಸಾಕ್ಷ್ಯವನ್ನು ನೀಡುವ ಸ್ಥಿತಿಯಲ್ಲಿರಲಿಲ್ಲ, ಹೀಗಾಗಿ ಅದನ್ನು ಖಗೋಳವಿಜ್ಞಾನಿಗಳು ಬಹಳ ಕಾಲ ತಿರಸ್ಕರಿಸಿದರು. ಮುಂದಿನ ಪ್ರಮುಖ ಖಗೋಳವಿಜ್ಞಾನಿಯೆಂದರೆ ಟೈಕೋ ಬ್ರಾಹೆ (೧೫೪೬–೧೬೦೧); ಅವನು ಒದು ಮಧ್ಯಸ್ಥ ನಿಲವನ್ನು ತಾಳಿದ: ಸೂರ್ಯ–ಚಂದ್ರರು ಭೂಮಿಯ ಸುತ್ತ ತಿರುಗುತ್ತಾರೆ, ಆದರೆ ಗ್ರಹಗಳು ಸೂರ್ಯನ ಸುತ್ತ ತಿರುಗುತ್ತವೆ ಎಂದು ಹೇಳಿದ. ತನ್ನ ಸಿದ್ಧಾಂತದಲ್ಲಿ ಅವನ ಸ್ವಂತದ್ದು ಅಷ್ಟೇನೂ ಇಲ್ಲ. ಆದರೆ ಚಂದ್ರನ ಮೇಲಿನವು ಯಾವುವೂ ಬದಲಾಗುವುದಿಲ್ಲ ಎಂಬ ಅರಿಸ್ಟಾಟಲ್‌ನ ಅಭಿಪ್ರಾಯದ ವಿರೋಧವಾಗಿ ಅವನು ಎರಡು ಒಳ್ಳೆಯ ಕಾರಣಗಳನ್ನು ನೀಡಿದ. ಇವುಗಳಲ್ಲಿ ಒಂದು ೧೫೭೨ ರಲ್ಲಿ ಹೊಸ ನಕ್ಷತ್ರವೊಂದು ಕಾಣಿಸಿಕೊಂಡದ್ದು, ಅದಕ್ಕೆ ಪ್ರತಿನಿತ್ಯದ ಸ್ಥಾನಭಾಸ ಕಾಣಿಸಿರಲಿಲ್ಲ, ಹೀಗಾಗಿ ಅದು ಚಂದ್ರನಿಗಿಂತ ತುಂಬ ದೂರದಲ್ಲಿರಬೇಕು. ಮತ್ತೊಂದು ಕಾರಣ ಉಲ್ಕೆಗಳ ಪರಿವೀಕ್ಷಣೆಯಿಂದ ಸಾಧಿತವಾದದ್ದು, ಅವು ಕೂಡ ದೂರದವಾಗಿದ್ದವು. ಬದಲಾವಣೆ ಮತ್ತು ಕ್ಷಯಗಳು ಚಂದ್ರನಡಿಯ ಗೋಲಕ್ಕೆ ಸೀಮಿತವಾದುದು ಎಂದು ಅರಿಸ್ಟಾಟಲ್ ಹೇಳಿದ್ದನೆಂಬುದನ್ನು ನೆನಪಿಸಿಕೊಳ್ಳಬಹುದು; ಇದು, ಅರಿಸ್ಟಾಟಲ್ ವೈಜ್ಞಾನಿಕ ವಿಷಯಗಳ ಕುರಿತು ಹೇಳಿದ್ದ ಎಲ್ಲದರಂತೆ, ಪ್ರಗತಿಯ ದಾರಿಯಲ್ಲಿ ಅಡ್ಡಿಯಾಗಿತ್ತು.

ಟೈಕೋ ಬ್ರಾಹೆಯ ಪ್ರಾಮುಖ್ಯ ಸೈದ್ಧಾಂತಿಕ ನೆಲೆಯಲ್ಲಲ್ಲ, ಆದರೆ ಪರಿವೀಕ್ಷಕನಾಗಿ. ಅವನು ಡೆನ್ಮಾರ್ಕ್‌ನ ರಾಜನ ಆಶ್ರಯದಲ್ಲಿದ್ದ, ಆನಂತರ ಚಕ್ರವರ್ತಿ ಎರಡನೆಯ ರುಡಾಲ್ಫ್ ಆಶ್ರಯದಲ್ಲಿ. ಅವನು ನಕ್ಷತ್ರಗಳ ಒಂದು ಪಟ್ಟಿಯನ್ನು

ಸಿದ್ಧಪಡಿಸಿದ, ಜೊತೆಗೆ ಅನೇಕ ವರ್ಷಗಳುದ್ದಕ್ಕೂ ಗ್ರಹಗಳ ಸ್ಥಾನಗಳನ್ನು ಗುರುತಿಸಿದ್ದ. ಅವನ ಆಯುಸ್ಸಿನ ಕೊನೆಯ ವೇಳೆಗೆ, ಆಗಿನ್ನೂ ಕಿರಿಯವನಾಗಿದ್ದ, ಕೆಪ್ಲರ್ ಅವನ ಸಹಾಯಕನಾದ. ಕೆಪ್ಲರ್‌ಗೆ ಅವನ ಪರಿವೀಕ್ಷಣೆಗಳು ಅಮೂಲ್ಯವೆನಿಸಿದವು.

ಪ್ರತಿಭೆಗಿಂತಲೂ ತಾಳ್ಮೆಯಿಂದ ಏನನ್ನು ಸಾಧಿಸಬಹುದು ಎಂಬುದಕ್ಕೆ ಕೆಪ್ಲರ್ (೧೫೭೧–೧೬೩೦) ಬಹು ಮುಖ್ಯ ನಿದರ್ಶನವಾಗಿದ್ದಾನೆ. ಸೂರ್ಯಕೇಂದ್ರಿತ ಸಿದ್ಧಾಂತವನ್ನು ಅಳವಡಿಸಿಕೊಳ್ಳುವುದರಲ್ಲಿ ಅವನು ಕೊಪರ್ನಿಕಸ್ ನಂತರದ ಮೊದಲ ಪ್ರಮುಖ ಖಗೋಳವಿಜ್ಞಾನಿಯಾಗಿದ್ದ.. ಆದರೆ ಟೈಕೋ ಬ್ರಾಹೆಯ ದತ್ತಾಂಶವು ಕೊಪರ್ನಿಕಸ್ ನೀಡಿದ್ದ ಸ್ವರೂಪದಲ್ಲಿ ಹೆಚ್ಚು ಸಮಂಜಸವಾಗಿಲ್ಲದಿರುವುದನ್ನು ತೋರಿಸಿಕೊಟ್ಟಿತು. ಅವನು ಪೈಥಾಗೊರಾಸ್‌ವಾದದಿಂದ ಪ್ರಭಾವಿತನಾಗಿದ್ದವನು, ಒಳ್ಳೆಯ ಪ್ರಾಟೆಸ್ಟೆಂಟ್‌ನಾಗಿದ್ದರೂ, ಹೆಚ್ಚು ಕಡಿಮೆ ಸೂರ್ಯೋಪಾಸನೆಯತ್ತ ಒಲವಿದ್ದವನು. ಈ ಉದ್ದೇಶಗಳು ಅವನು ಸೂರ್ಯಕೇಂದ್ರಿತ ಆಧಾರಕಲ್ಪನೆಗೆ ಅನುಕೂಲಕರವಾಯಿತು. ಅವನ ಪೈಥಾಗೊರಾಸ್‌ವಾದವೂ ಪ್ಲೇಟೋನ 'ಟೈಮಿಯಸ್'ನಲ್ಲಿನ ಐದು ಸಮಮುಖಿ ಘನಗಳಿಗೆ (ರೆಗ್ಯುಲರ್ ಸಾಲಿಡ್ಸ್) ಆಕಾಶದ ಅರ್ಥವಂತಿಕೆಯನ್ನು ಊಹಿಸುವುದನ್ನು ಅನುಸರಿಸುವಂತಾಯಿತು. ಅವುಗಳನ್ನವನು ಆಧಾರಕಲ್ಪನೆಗಳನ್ನು ಸೂಚಿಸಲು ಬಳಸಿಕೊಂಡ; ಕೊನೆಗೆ, ಇವುಗಳಲ್ಲಿ ಒಂದು ಅದೃಷ್ಟವಶಾತ್, ಸರಿಯಾಯಿತು.

ಕೆಪ್ಲರ್‌ನ ಮಹಾ ಸಾಧನೆಯೆಂದರೆ ಗ್ರಹಗಳ ಚಲನೆಯ ಮೂರು ನಿಯಮಗಳು. ಇವುಗಳಲ್ಲಿ ಎರಡನ್ನು ೧೬೦೯ ರಲ್ಲಿ, ಮೂರನೆಯದನ್ನು ೧೬೧೯ ರಲ್ಲಿ ಪ್ರಕಟಿಸಿದ. ಅವನ ಮೊದಲ ನಿಯಮ ಎಂದರೆ: ಗ್ರಹಗಳು ಅಂಡಾಕೃತಿಯ ಕಕ್ಷೆಯನ್ನು ಸೂಚಿಸುತ್ತವೆ, ಅವುಗಳಲ್ಲಿ ಸೂರ್ಯನು ಕೇಂದ್ರದಲ್ಲಿರುತ್ತಾನೆ. ಅವನ ಎರಡನೆಯ ನಿಯಮ ಹೀಗಿದೆ: ಗ್ರಹ ಮತ್ತು ಸೂರ್ಯರನ್ನು ಸೇರಿಸುವ ರೇಖೆಯು ಸಮ ಕ್ಷೇತ್ರಗಳನ್ನು ಸಮಾನ ಕಾಲದಲ್ಲಿ ಚಲಿಸುತ್ತದೆ. ಅವನ ಮೂರನೆಯ ನಿಯಮ ಹೀಗಿದೆ: ಗ್ರಹವೊಂದರ ಪರಿಭ್ರಮಣೆಯ ಅವಧಿಯ ಮೇಲಿನ ವರ್ಗವು, ಸೂರ್ಯನಿಂದ ಅದರ ದೂರದ ಸರಾಸರಿಯು ಘನಕ್ಕೆ ಪ್ರಮಾಣಾನುಗುಣವಾಗಿರುತ್ತದೆ.

ಈ ನಿಯಮಗಳ ಪ್ರಾಮುಖ್ಯದ ಬಗ್ಗೆ ಒಂದಿಷ್ಟು ವಿವರವಾಗಿ ಹೇಳಬೇಕಾದುದು ಆವಶ್ಯಕ.

ಮೊದಲೆರಡು ನಿಯಮಗಳು ಕೆಪ್ಲರ್‌ನ ಕಾಲದಲ್ಲಿ ಮಂಗಳಗ್ರಹದ ವಿಷಯದಲ್ಲಿ ಮಾತ್ರ ಸಾಧಿಸಲು ಅವಕಾಶವಿತ್ತು; ಇತರ ಗ್ರಹಗಳ ವಿಷಯದಲ್ಲಿ, ಪರಿವೀಕ್ಷಣೆಗಳು ಅವಕ್ಕೆ ಹೊಂದುವಂತಿದ್ದವು; ಆದರೆ ಖಚಿತವಾಗಿ ನಿರೂಪಿಸಲು ಸಾಧ್ಯವಾಗದ ರೀತಿಯಲ್ಲಿ. ಆದರೆ, ನಿಶ್ಚಿತವಾಗಿ ಖಚಿತಪಡಿಸಲು ಹೆಚ್ಚು ಕಾಲವೇನೂ ಬೇಕಾಗಲಿಲ್ಲ.

ಗ್ರಹಗಳು ಅಂಡಾಕೃತಿಯಲ್ಲಿ ಚಲಿಸುತ್ತವೆ ಎಂಬ ಮೊದಲನೆಯ ನಿಯಮದ ಅನಾವರಣವು ಆಧುನಿಕ ವ್ಯಕ್ತಿಯು ಸುಲಭವಾಗಿ ಅರ್ಥಮಾಡಿಕೊಳ್ಳಬಹುದಾದುದಕ್ಕಿಂತ ಹೆಚ್ಚಿನ ಪ್ರಯತ್ನವು ಸಂಪ್ರದಾಯದಿಂದ ಬಿಡಿಸಿಕೊಳ್ಳಲು ಆವಶ್ಯಕವಾಗಿತ್ತು. ಅಪವಾದವೇ ಇಲ್ಲವೆಂಬಂತೆ ಎಲ್ಲ ಖಗೋಳವಿಜ್ಞಾನಿಗಳು ಒಪ್ಪಿಕೊಂಡಿದ್ದ ಒಂದೇ ವಿಷಯವೆಂದರೆ, ಆಕಾಶಕಾಯಗಳ ಚಲನೆಯು ವರ್ತುಲಾಕೃತಿಯದು ಅಥವಾ ಸಂಯುಕ್ತಗೊಂಡ ವರ್ತುಲಾಕೃತಿಯ ಚಲನೆ ಎಂಬುದಾಗಿತ್ತು. ಗ್ರಹಗಳ ಚಲನೆಯನ್ನು ವಿವರಿಸಲು ವರ್ತುಲಗಳು ಅಸಮರ್ಪಕ ಎನಿಸಿದಾಗಲೆಲ್ಲ ಅಧಿವರ್ತುಲಗಳ ನೆರವನ್ನು ಪಡೆಯಲಾಗುತ್ತಿತ್ತು. ದೊಡ್ಡ ವರ್ತುಲವೊಂದರ ಪರಿಧಿಯ ಸುತ್ತ ತನ್ನ ಕೇಂದ್ರವಿರುವಂತೆ ಚಲಿಸುವ ಸಣ್ಣ ವರ್ತುಲವೇ ಅಧಿವರ್ತುಲ. ಉದಾಹರಣೆಗೆ: ದೊಡ್ಡದೊಂದು ಚಕ್ರವನ್ನು ತೆಗೆದುಕೊಳ್ಳಿ, ಅದನ್ನು ನೆಲದ ಮೇಲೆ ಸ್ಥಿರವಾಗಿ ನಿಲ್ಲಿಸಿ; (ನೆಲದ ಮೇಲೆ ಸ್ಥಿರವಾಗಿರುವ) ಅದರ ಮೂಲಕ ಮೊಳೆಯೊಂದಿರುವ ಸಣ್ಣದೊಂದು ಚಕ್ರವನ್ನು ತೆಗೆದುಕೊಂಡು ಅದನ್ನು ದೊಡ್ಡ ಚಕ್ರದ ಸುತ್ತ ಮೊಳೆಯು ನೆಲಕ್ಕೆ ತಾಕುವಂತೆ ಚಲಿಸಿ. ಆಗ ನೆಲದ ಮೇಲೆ ಮೂಡುವುದೇ ಅಧಿವರ್ತುಲವನ್ನು ತೋರಿಸುತ್ತದೆ. ಚಂದ್ರನ ಕಕ್ಷೆಯು, ಸೂರ್ಯನದರ ಹಿನ್ನೆಲೆಯಲ್ಲಿ, ಸ್ಥೂಲವಾಗಿ ಇಂತಹ ಸ್ವರೂಪದ್ದು: ಭೂಮಿಯು ಸೂರ್ಯನ ಸುತ್ತ ಹೆಚ್ಚು ಕಡಿಮೆ ಒಂದು ವರ್ತುಲವನ್ನು ರಚಿಸುತ್ತದೆ, ಹಾಗೆಯೇ ಚಂದ್ರನು ಭೂಮಿಯ ಸುತ್ತ ಒಂದು ವರ್ತುಲವನ್ನು ರಚಿಸುತ್ತದೆ. ಇದು ಸ್ಥೂಲ ವಿವರಣೆ, ಅಷ್ಟೆ. ಪರಿವೀಕ್ಷಣೆಯು ಹೆಚ್ಚು ಹೆಚ್ಚು ನಿಖರವಾಗುತ್ತ ಹೋದಂತೆ, ಅಧಿವರ್ತುಲದ ಯಾವುದೇ ರೂಪವೂ ವಸ್ತುಸ್ಥಿತಿಗೆ ನಿಖರವಾಗಿ ಹೊಂದುವುದಿಲ್ಲವೆಂಬುದು ಗೊತ್ತಾಯಿತು. ಕೆಪ್ಲರ್‌ನ ಆಧಾರಕಲ್ಪನೆಯು ಮಂಗಳನ ದಾಖಲಿತ ಸ್ಥಾನಗಳಿಗೆ ಟಾಲೆಮಿಯದಕ್ಕಿಂತ ಅಥವಾ ಕೊಪರ್ನಿಕಸ್‌ದಕ್ಕಿಂತಲೂ ತುಂಬ ನಿಕಟವಾಗಿ ಹೊಂದುತ್ತಿತ್ತು.

ವರ್ತುಲಗಳ ಬದಲಾಗಿ ಅಂಡಾಕೃತಿಯನ್ನು ತಂದದ್ದು ಸೌಂದರ್ಯಾತ್ಮಕ ಒಲವನ್ನು ಕೈಬಿಡುವಂತೆ ಮಾಡಿತು, ಇದು ಪೈಥಾಗೊರಾಸ್ ಕಾಲದಿಂದ ಖಗೋಳವಿಜ್ಞಾನವನ್ನು ನಿಯಂತ್ರಿಸಿತ್ತು. ವರ್ತುಲ ಎಂಬುದು ಪರಿಪೂರ್ಣ ಆಕೃತಿ, ಆಕಾಶಕಾಯಗಳ ಗೋಲಗಳೂ ಪರಿಪೂರ್ಣ ಆಕೃತಿಗಳು. ಮೂಲತಃ ದೇವರುಗಳು,\ – ಪ್ಲೇಟೋ ಮತ್ತು ಅರಿಸ್ಟಾಟಲ್‌ರಲ್ಲಿಯೂ – ದೇವರಿಗೆ ನಿಕಟವಾಗಿ ಸಂಬಂಧಿಸಿದವು. ಪರಿಪೂರ್ಣ ಆಕೃತಿಯೊಂದು ಪರಿಪೂರ್ಣ ಆಕೃತಿಯಾಗಿಯೇ ಚಲಿಸುವುದು ಖಂಡಿತವೆಂದೇ ಭಾವಿಸಲಾಗಿತ್ತು. ಮಿಗಿಲಾಗಿ, ಆಕಾಶಕಾಯಗಳು ಸ್ವತಂತ್ರವಾಗಿ ಚಲಿಸುವುದರಿಂದ, ಅವನ್ನು ಯಾವುದೂ ನೂಕುವುದೂ ಇಲ್ಲ ಎಳೆಯುವುದೂ ಇಲ್ಲ ಎಂಬುದರಿಂದಾಗಿ, ಅವುಗಳ ಚಲನೆಯು 'ಸಹಜ'ವೆಂದು

ಭಾವಿಸಲಾಗಿತ್ತು. ಈಗ ವರ್ತುಲವೊಂದರ ಬಗ್ಗೆ 'ಸಹಜ'ತೆಯನ್ನು ಕಲ್ಪಿಸಿಕೊಳ್ಳುವುದು ಸುಲಭ, ಆದರೆ ಅಂಡಾಕೃತಿಯ ಬಗ್ಗೆ ಅಲ್ಲ. ಹೀಗಾಗಿ ಕೆಪ್ಲರ್‌ನ ಮೊದಲ ನಿಯಮವನ್ನು ಒಪ್ಪಿಕೊಳ್ಳುವ ಮುಂಚೆ ಆಳದಲ್ಲಿ ಬೇರುಬಿಟ್ಟ ಅನೇಕ ಪೂರ್ವಾಗ್ರಹಗಳನ್ನು ತೊರೆಯಬೇಕಾಗಿತ್ತು. ಪ್ರಾಚೀನರಾರೂ, ಸಾಮೋಸ್‌ನ ಅರಿಸ್ಟಾರ್ಕಸ್ ಕೂಡ, ಅಂತಹ ಒಂದು ಆಧಾರಕಲ್ಪನೆಯನ್ನು ನಿರೀಕ್ಷಿಸಿರಲಿಲ್ಲ.

ಎರಡನೆಯ ನಿಯಮವು, ಗ್ರಹವೊಂದರ ಕಕ್ಷೆಯಲ್ಲಿನ ವಿವಿಧ ಬಿಂದುಗಳಲ್ಲಿನ ಅದರ ಚಲನೆಯ ಬದಲಾಗುವ ವೇಗವನ್ನು ಕುರಿತದ್ದು. 'ಎಸ್' ಸೂರ್ಯನಾದರೆ, ಮತ್ತು $ಪಿ_೧$, $ಪಿ_೨$, $ಪಿ_೩$, $ಪಿ_೪$, $ಪಿ_೫$ಗಳು ಗ್ರಹದಲ್ಲಿನ ಸಮಾನ ಕಾಲ ವಿರಾಮದಲ್ಲಿನ ಒಂದಾದ ಮೇಲೊಂದು ಬಿಂದುಗಳಾದರೆ – ಒಂದು ತಿಂಗಳ ವಿರಾಮ ಎಂದುಕೊಳ್ಳೋಣ – ಆಗ, ಕೆಪ್ಲರ್‌ನ ನಿಯಮದ ಪ್ರಕಾರ, ಪಿಎಸ್$ಪಿ_೧$, ಪಿಎಸ್$ಪಿ_೨$, ಪಿಎಸ್$ಪಿ_೩$, ಪಿಎಸ್$ಪಿ_೪$, ಪಿಎಸ್$ಪಿ_೫$ ಗಳ ಕ್ಷೇತ್ರಫಲಗಳೆಲ್ಲ (ಏರಿಯ) ಸಮಾನವಾಗಿರುತ್ತವೆ. ಹೀಗಾಗಿ ಗ್ರಹವು ಸೂರ್ಯನಿಗೆ ಅತ್ಯಂತ ಹತ್ತಿರವಾಗಿದ್ದಾಗ ಅತ್ಯಂತ ವೇಗದಿಂದ ಚಲಿಸುತ್ತದೆ, ಅತ್ಯಂತ ದೂರದಲ್ಲಿದ್ದಾಗ ಅತ್ಯಂತ ಕಡಿಮೆ ವೇಗವನ್ನು ಹೊಂದಿರುತ್ತದೆ. ಇದು ಮತ್ತೆ, ಗ್ರಹವು ತನ್ನ ಚಲನೆಯಲ್ಲಿ ಒಮ್ಮೆ ಆತುರದಿಂದಲೂ ಮತ್ತೊಮ್ಮೆ ಸೋಮಾರಿತನದಿಂದಲೂ ಇರುತ್ತದೆ ಎಂಬುದು, ಆಘಾತಕಾರಿಯಾಗಿತ್ತು.

ಮೂರನೆಯ ನಿಯಮವು ವಿವಿಧ ಗ್ರಹಗಳ ಚಲನೆಗಳನ್ನು ಹೋಲಿಸುವುದರಿಂದ ಮುಖ್ಯವೆನಿಸಿತು, ಆದರೆ ಮೊದಲೆರಡು ನಿಯಮಗಳು ವಿವಿಧ ಗ್ರಹಗಳನ್ನು ಒಟ್ಟಾರೆ ಪರಿಗಣಿಸಿದ್ದವು. ಮೂರನೆಯ ನಿಯಮವು ಹೇಳುವುದೇನೆಂದರೆ: ಗ್ರಹವೊಂದು ಸೂರ್ಯನಿಂದ ಇರುವ ಸರಾಸರಿ ದೂರ 'ಆರ್' ಆದರೆ, ಮತ್ತು 'ಟಿ' ಅದರ ವರ್ಷವೊಂದರ ದೂರವಾದರೆ, ಆಗ ಆರ್^{೩} ಅನ್ನು ಟಿ^{೨}ಯಿಂದ ಭಾಗಿಸಿದರೆ ಅದು ಎಲ್ಲ ಗ್ರಹಗಳಿಗೂ ಒಂದೇ ಆಗಿರುತ್ತದೆ. ಈ ನಿಯಮವು (ಸೂರ್ಯಮಂಡಲಕ್ಕೆ ಸಂಬಂಧಿಸಿದಂತೆ) ನ್ಯೂಟನ್‌ನ ಗುರುತ್ವಾಕರ್ಷಣಕ್ಕೆ ವಿಲೋಮವರ್ಗ ನಿಯಮದ ಆಧಾರವನ್ನು ಒದಗಿಸಿತು. ಆದರೆ ಈ ಕುರಿತು ಮುಂದೆ ನೋಡೋಣ.

ಗೆಲಿಲಿಯೋ (೧೫೬೪–೧೬೪೨) ಆಧುನಿಕ ವಿಜ್ಞಾನದ ಅತ್ಯುಚ್ಚ ಬುನಾದಿಕಾರ, ಅದಕ್ಕೆ ಅಪವಾದವೆಂದರೆ ಪ್ರಾಯಶಃ ನ್ಯೂಟನ್ ಮಾತ್ರ. ಅವನು ಹುಟ್ಟಿದ್ದು ಸರಿಸುಮಾರು ಮೈಕೇಲೇಂಜೆಲೋ ಸತ್ತ ಹಿಂಚುಮುಂಚಿನ ದಿನದಂದು, ಮತ್ತು ಸತ್ತದ್ದು ನ್ಯೂಟನ್ ಹುಟ್ಟಿದ ವರ್ಷ. ಈ ಸಂಗತಿಗಳನ್ನು ನಾನು ಹೇಳುತ್ತಿರುವುದು ಪರಕಾಯಪ್ರವೇಶ (ಮೆಟೆಂಪ್‌ಸೈಕಾಸಿಸ್) ದಲ್ಲಿ ಇನ್ನೂ ನಂಬಿಕೆಯಿಟ್ಟುಕೊಂಡಿದ್ದರೆ ಅಂಥವರಿಗಾಗಿ. ಅವನು ಒಬ್ಬ ಖಗೋಳವಿಜ್ಞಾನಿಯಾಗಿ ಮುಖ್ಯನಾದವನು,

ಪ್ರಾಯಶಃ ಬಲವಿಜ್ಞಾನ (ಡೈನಾಮಿಕ್ಸ್) ದ ಸ್ಥಾಪಕನಾಗಿ ಇನ್ನೂ ಹೆಚ್ಚು ಮುಖ್ಯ

ಗೆಲಿಲಿಯೋ ಮೊದಲು ಕಂಡಿಹಿಡಿದದ್ದು ಬಲವಿಜ್ಞಾನದಲ್ಲಿ ವೇಗೋತ್ಕರ್ಷ (ಆಕ್ಸೆಲರೇಷನ್)ದ ಪ್ರಾಮುಖ್ಯವನ್ನು. 'ವೇಗೋತ್ಕರ್ಷ'ವೆಂದರೆ ವೇಗದ ಬದಲಾವಣೆ, ಪ್ರಮಾಣದಲ್ಲಾಗಬಹುದು, ದಿಕ್ಕಿನಲ್ಲಾಗಬಹುದು. ಹೀಗೆ ವರ್ತುಲಾಕರವಾಗಿ ಸಮವೇಗದಲ್ಲಿ ಚಲಿಸುವ ಒಂದು ಕಾಯವು ಎಲ್ಲ ಕಾಲಗಳಲ್ಲಿಯೂ ವರ್ತುಲ ಕೇಂದ್ರದೆಡೆಗೆ ಒಂದೇ ವೇಗೋತ್ಕರ್ಷವನ್ನು ಹೊಂದಿರುತ್ತದೆ. ಈ ಕಾಲಕ್ಕೆ ಮುಂಚಿನ ಸಾಂಪ್ರದಾಯಿಕ ಪರಿಭಾಷೆಯಲ್ಲಿ ಹೇಳಬಹುದಾದರೆ, ಭೂಮಿಯ ಮೇಲಾಗಲೀ ಆಕಾಶದಲ್ಲಾಗಲೀ, ಸರಳರೇಖೆಯ ಸಮವೇಗ ಚಲನೆಯನ್ನು ಮಾತ್ರವೇ 'ಸಹಜ' ಎಂದು ಅವನು ಪರಿಗಣಿಸಿದ್ದ. ಆಕಾಶಕಾಯಗಳು ವರ್ತುಲಾಕಾರದಲ್ಲಿಯೂ ಮತ್ತು ಭೂತಲದ ಮೇಲಿನವು ಸರಳರೇಖೆಯಲ್ಲಿಯೂ ಚಲಿಸುವುದನ್ನು 'ಸಹಜ'ವೆಂದೇ ಆಗ ಭಾವಿಸಲಾಗಿತ್ತು: ಆದರೆ ಭೂತಲದಲ್ಲಿ ಚಲಿಸುವ ಕಾಯಗಳನ್ನು ಅವುಗಳಷ್ಟಕ್ಕೇ ಬಿಟ್ಟರೆ ಕ್ರಮೇಣ ತಮ್ಮ ಚಲನೆಯನ್ನು ನಿಲ್ಲಿಸುತ್ತವೆ ಎಂದೂ ಭಾವಿಸಲಾಗಿತ್ತು. ಇದಕ್ಕೆ ವ್ಯತಿರಿಕ್ತವಾಗಿ, ಗೆಲಿಲಿಯೋ ಹೇಳಿದ್ದೆಂದರೆ, ಅವುಗಳಷ್ಟಕ್ಕೇ ಬಿಟ್ಟರೆ ಪ್ರತಿ ಕಾಯವೂ ಅದೇ ದಿಕ್ಕಿನಲ್ಲಿ ಸಮವೇಗದಲ್ಲಿ ಚಲಿಸುತ್ತವೆ; ವೇಗ ಅಥವಾ ದಿಕ್ಕಿನಲ್ಲಿನ ಯಾವುದೇ ಬದಲಾವಣೆಯು 'ಬಲ' (ಫೋರ್ಸ್) ವೊಂದರ ಕಾರಣದಿಂದಾಗುತ್ತದೆ ಎಂದು ವಿವರಿಸಬೇಕು ಎಂದು. ಈ ತತ್ವವನ್ನು ನ್ಯೂಟನ್ 'ಚಲನೆಯ ಮೊದಲನೆಯ ನಿಯಮ'ದ ಮೂಲಕ ಸ್ಪಷ್ಟಪಡಿಸಿದ. ಅದನ್ನು 'ಜಡತ್ವನಿಯಮ' ಎಂದೂ ಕರೆಯುತ್ತಾರೆ. ಆ ವಿಷಯಕ್ಕೆ ನಾನು ಮುಂದೆ ಬರುತ್ತೇನೆ, ಆದರೆ ಗೆಲಿಲಿಯೋನ ಅನಾವರಣಗಳ ಬಗ್ಗೆ ಒಂದಷ್ಟು ವಿವರಣೆ ನೀಡಬೇಕಾದದ್ದು ಆವಶ್ಯಕ.

ಬೀಳುವ ಕಾಯಗಳ ನಿಯಮವನ್ನು ಸ್ಥಾಪಿಸಿದವರಲ್ಲಿ ಗೆಲಿಲಿಯೋನೇ ಮೊದಲಿಗ. ಈ ನಿಯಮವು, 'ವೇಗೋತ್ಕರ್ಷ' ಪರಿಕಲ್ಪನೆಯ ಹಿನ್ನೆಲೆಯಲ್ಲಿ, ಅತ್ಯಂತ ಸರಳವಾದುದು. ಅದು ಹೇಳುವುದೆಂದರೆ, ಕಾಯವೊಂದು ಸ್ವತಂತ್ರವಾಗಿ ಬೀಳುತ್ತಿದ್ದರೆ, ಅದರ ವೇಗೋತ್ಕರ್ಷವು, ಗಾಳಿಯ ಪ್ರತಿರೋಧ (ರೆಸಿಸ್ಟೆನ್ಸ್) ದ ಮಧ್ಯಪ್ರವೇಶದ ಹೊರತಾಗಿ, ಸ್ಥಿರವಾಗಿರುತ್ತದೆ; ಅಲ್ಲದೆ, ವೇಗೋತ್ಕರ್ಷವು ಎಲ್ಲ ಕಾಯಗಳಿಗೂ, ಭಾರವಾಗಿರಲಿ ಹಗುರವಾಗಿರಲಿ ಮತ್ತು ದೊಡ್ಡದಾಗಿರಲಿ ಚಿಕ್ಕದಾಗಿರಲಿ, ಸಮಾನವಾಗಿರುತ್ತದೆ. ಈ ನಿಯನಕ್ಕೆ ಸಂಪೂರ್ಣ ಆಧಾರವು ಗಾಳಿಪಂಪ್‌ನ ಅನ್ವೇಷಣೆಯ ಕಾಲದವರೆಗೂ, ಅಂದರೆ ೧೬೫೪ ರವರೆಗೆ, ಅಸಾಧ್ಯವಾಗಿತ್ತು. ಇದಾದ ಬಳಿಕ, ಕಾರ್ಯತಃ ನಿರ್ವಾತಪ್ರದೇಶ (ವ್ಯಾಕ್ಯೂಮ್) ದಲ್ಲಿ ಕಾಯಗಳು ಬೀಳುವುದನ್ನು ವೀಕ್ಷಿಸುವುದು ಸಾಧ್ಯವಾಯಿತು; ರೆಕ್ಕೆಪುಕ್ಕಗಳು ಸೀಸದಷ್ಟೆ ವೇಗವಾಗಿ ಬೀಳುವುದನ್ನು ವೀಕ್ಷಿಸಬಹುದಾಯಿತು. ಒಂದೇ ವಸ್ತುವಿನ ದೊಡ್ಡ ಮತ್ತು ಚಿಕ್ಕ ಗಟ್ಟಿಗಳಲ್ಲಿ ಯಾವುದೇ ಅಳೆಯಬಹುದಾದ ವ್ಯತ್ಯಾಸ ಇಲ್ಲ

ಎಂಬುದನ್ನು ಗೆಲಿಲಿಯೋ ಸಾಧಿಸಿ ತೋರಿಸಿದ. ಅವನ ಕಾಲದವರೆಗೂ, ಸೀಸದ ದೊಡ್ಡ ಗಟ್ಟಿಯು ಚಿಕ್ಕ ಗಟ್ಟಿಗಿಂತ ಬೇಗ ಬೀಳುವುದೆಂದು ತಿಳಿಯಲಾಗಿತ್ತು, ಆದರೆ ಗೆಲಿಲಿಯೋ ಪ್ರಯೋಗಗಳ ಮೂಲಕ ವಸ್ತುಸ್ಥಿತಿ ಅದಲ್ಲವೆಂದು ತೋರಿಸಿದ. ಅವನ ಕಾಲದಲ್ಲಿ ಅಳತೆಯು ಆನಂತರ ಸಾಧ್ಯವಾದಷ್ಟು ನಿಖರವಾಗಿರಲಿಲ್ಲ. ಆದರೂ ಅವನು ಬೀಳುವ ಕಾಯಗಳ ಬಗೆಗಿನ ನೈಜ ನಿಯಮವೊಂದನ್ನು ರೂಪಿಸಿದ. ಕಾಯವೊಂದು ನಿರ್ವಾತಪ್ರದೇಶದಲ್ಲಿ ಸ್ವತಂತ್ರವಾಗಿ ಬೀಳುತ್ತಿದ್ದರೆ, ಅದರ ವೇಗವು ಒಂದೇ ರೀತಿಯಲ್ಲಿ ಹೆಚ್ಚುತ್ತಿರುತ್ತದೆ. ಮೊದಲ ಸೆಕೆಂಡ್ ಕೊನೆಯಲ್ಲಿ ಅದರ ವೇಗವು ಸೆಕೆಂಡ್‌ಗೆ ೩೨ ಅಡಿಗಳು, ಮತ್ತೊಂದು ಸೆಕೆಂಡ್ ಕೊನೆಗೆ ಸೆಕೆಂಡ್‌ಗೆ ೬೪ ಅಡಿಗಳು, ಮೂರನೆಯದರ ಕೊನೆಯಲ್ಲಿ ಸೆಕೆಂಡ್‌ಗೆ ೯೬ ಅಡಿಗಳು; ಹೀಗೇ. ವೇಗೋತ್ಕರ್ಷವು, ಆಂದರೆ ವೇಗವು ಹೆಚ್ಚಾಗುದ ದರವು, ಯಾವಾಗಲೂ ಒಂದೇ; ಪ್ರತಿ ಸೆಕೆಂಡ್‌ನಲ್ಲಿಯೂ ವೇಗದ ಹೆಚ್ಚುವಿಕೆಯು ಸೆಕೆಂಡ್‌ಗೆ (ಸುಮಾರು) ೩೨ ಅಡಿಗಳಷ್ಟು.

ಗೆಲಿಲಿಯೋ ನೋದಕ ವಸ್ತುಗಳ (ಪ್ರೊಜೆಕ್ಟೈಲ್) ಬಗ್ಗೆಯೂ ಅಧ್ಯಯನ ನಡೆಸಿದ, ಅದು ಅವನ ಯಜಮಾನ ಟಸ್ಕನಿಯ ಡ್ಯೂಕ್‌ಗೆ ಮುಖ್ಯವಾದುದಾಗಿತ್ತು. ಸಮತಲದಲ್ಲಿ ಹಾರಿಸಿದ ಬಂದೂಕಿನ ಗುಂಡು ಸ್ವಲ್ಪ ಕಾಲ ನೇರವಾಗಿ ಚಲಿಸುತ್ತದೆ, ಆನಂತರ ಇದ್ದಕ್ಕಿದ್ದಂತೆ ಲಂಬತ್ವದಲ್ಲಿ ಬೀಳುತ್ತದೆ ಎಂದು ಭಾವಿಸಲಾಗಿತ್ತು. ಗಾಳಿಯ ನಿರೋಧದ ಹೊರತಾಗಿ, ಸಮತಲ ವೇಗವು, ಜಡತ್ವ ನಿಯಮಕ್ಕನುಗುಣವಾಗಿ ಸ್ಥಿರವಾಗಿದ್ದು, ಬೀಳುವ ಕಾಯಗಳ ನಿಯಮಕ್ಕನುಗುಣವಾದ ಲಂಬ ವೇಗವು, ಅದಕ್ಕೆ ಸೇರಿಕೊಳ್ಳುತ್ತದೆ ಎಂದು ಗೆಲಿಲಿಯೋ ತೋರಿಸಿದ. ಸಿಡಿಸಿದ ಗುಂಡು ಸ್ವಲ್ಪ ಕಾಲ, ಒಂದು ಸೆಕೆಂಡ್ ಎನ್ನೋಣ, ಹಾರಿದ ಮೇಲೆ ಹೇಗೆ ಸಮತಲದಲ್ಲಿ ಚಲಿಸುತ್ತದೆ ಎಂಬುದನ್ನು ಸಾಧಿಸಲು ಹೀಗೆ ಮುಂದುವರಿಯಬೇಕು: ಮೊದಲಿಗೆ, ಅದು ಬೀಳದಿರುತ್ತಿದ್ದರೆ, ಅದು ತನ್ನ ಹಾರಿಕೆಯ ಮೊದಲ ಸೆಕೆಂಡ್‌ನಲ್ಲಿ ಚಲಿಸಿದಷ್ಟೇ ದೂರಕ್ಕೆ ಸಮನಾದ ಸಮತಲ ದೂರವನ್ನು ಸ್ವಲ್ಪ ದೂರ ಕ್ರಮಿಸುತ್ತದೆ, ಎರಡನೆಯದು, ಅದು ಸಮತಲದಲ್ಲಿ ಚಲಿಸದೆ ಬರಿ ಕೆಳಗೆ ಬೀಳುತ್ತಿದ್ದರೆ, ಹಾರಿಕೆಯು ಆರಂಭವಾದ ಕಾಲಕ್ಕೆ ಪ್ರಮಾಣನುಗುಣವಾದ ವೇಗದಲ್ಲಿ ಅದು ಲಂಬತಲದಲ್ಲಿ ಚಲಿಸುತ್ತದೆ. ವಾಸ್ತವವಾಗಿ, ಆರಂಭಿಕ ವೇಗದಲ್ಲಿ ಸಮತಲದಲ್ಲಿ ಒಂದು ಸೆಕೆಂಡ್ ಚಲಿಸಿದ್ದರೆ, ಆನಂತರ ಹಾರಿಕೆಯು ಆರಂಭವಾದ ಕಾಲಕ್ಕೆ ಪ್ರಮಾಣನುಗುಣವಾದ ವೇಗದಲ್ಲಿ ಅದು ಲಂಬತಲದಲ್ಲಿ ಒಂದು ಸೆಕೆಂಡ್ ಚಲಿಸಿದ್ದರೆ ಯಾವುದೋ ಅದೇ ಅದರ ಸ್ಥಳಾಂತರ. ಸರಳ ಲೆಕ್ಕಾಚಾರವು ಆನಂತರ ಅದರ ಚಲನೆಯು ಪರವಲಯದಲ್ಲಿರುತ್ತದೆ ಎಂಬುದನ್ನು ಶ್ರುತಪಡಿಸುತ್ತದೆ. ಇದನ್ನು, ಗಾಳಿಯ ನಿರೋಧದ ಮಧ್ಯಪ್ರವೇಶದ ಹೊರತಾಗಿ, ಪರಿವೀಕ್ಷಣೆಯಿಂದ ನಿಶ್ಚಿತಗೊಳಿಸಬಹುದು.

ಚಲನವಿಜ್ಞಾನದಲ್ಲಿ ಅತ್ಯಂತ ಫಲಪ್ರದವಾಗಿರುವ ತತ್ವವೊಂದಕ್ಕೆ ಈ ಮೇಲಿನದು ಒಂದು ಉದಾಹರಣೆಯಾಗಿದೆ, ಆ ತತ್ವವೆಂದರೆ, ಹಲವು ಬಲಗಳು ಒಂದೇ ಕಾಲದಲ್ಲಿ ಕ್ರಿಯಾಶೀಲವಾಗಿರುವಾಗ, ಅದರ ಪರಿಣಾಮವು ಒಂದೊಂದೂ ಒಂದಾದ ಮೇಲೊಂದರಂತೆ ಕ್ರಿಯಾಶೀಲವಾಗಿರುವಂತೆ ತೋರುವುದು. ಇದು ಇನ್ನಷ್ಟು ಸಾಮಾನ್ಯ ತತ್ವವಾಗಿರುವ ಸಮಾನಾಂತರರೇಖಾ ನಿಯಮದ (ಪ್ಯಾರಲೆಲೋಗ್ರಂ ಲಾ) ಒಂದು ಭಾಗ. ನಿದರ್ಶನಕ್ಕೆ, ನೀವು ಚಲಿಸುತ್ತಿರುವ ಹಡಗೊಂದರ ಅಟ್ಟದ ಮೇಲಿದ್ದು ಅದರ ಉದ್ದಕ್ಕೂ ನೀವು ನಡೆದಾಡುತ್ತಿದ್ದೀರಿ ಎಂದುಕೊಳ್ಳಿ, ನೀವು ನಡೆದಾಡುವಾಗ ಹಡಗು ಚಲಿಸುತ್ತಿರುತ್ತದೆ, ಹೀಗಾಗಿ, ನೀರಿನ ಹಿನ್ನೆಲೆಯಲ್ಲಿ, ಹಡಗಿನ ಚಲನೆಯ ದಿಕ್ಕಿನ ಮುಂದಕ್ಕೂ ಅಗಲಕ್ಕೂ ನೀವು ಚಲಿಸಿದಿರಿ. ನೀರಿನ ಹಿನ್ನೆಲೆಯಲ್ಲಿ, ನೀವು ಎಲ್ಲಿರುವಿರಿ ಎಂದು ತಿಳಿಯ ಬಯಸಿದರೆ, ಹಡಗು ಚಲಿಸುವಾಗ ನೀವು ಮೊದಲು ಸ್ಥಿರವಾಗಿ ನಿಂತಿದ್ದಿರಿ, ಆನಂತರ, ಅಷ್ಟೇ ಕಾಲಾವಧಿಯಲ್ಲಿ, ನೀವು ಅಡ್ಡಾಡುವಾಗ ಹಡಗು ನಿಶ್ಚಲವಾಗಿತ್ತು. ಇದೇ ನಿಯಮವು ಬಲಗಳಿಗೂ ಅನ್ವಯಿಸುತ್ತದೆ. ಇದರಿಂದಾಗಿ ಅನೇಕ ಬಲಗಳ ಒಟ್ಟಾರೆ ಪರಿಣಾಮವನ್ನು ಲೆಕ್ಕಾಚಾರ ಮಾಡಲು ನಿಮಗೆ ಸಾಧ್ಯವಾಗುತ್ತದೆ. ಅದರಿಂದ, ಚಲಿಸುವ ವಸ್ತುಗಳು ಒಳಗಾಗಿರುವ ಅನೇಕ ಬಲಗಳನ್ನು ಬೆರೆ ಬೇರೆ ನಿಯಮಗಳನ್ನು ಕಂಡುಕೊಂಡು, ಭೌತಿಕ ವಿದ್ಯಮಾನಗಳ ವಿಶ್ಲೇಷಣೆ ಮಾಡುವುದನ್ನು ಸಾಧ್ಯವಾಗಿಸುತ್ತದೆ. ಈ ಅಪರಿಮಿತ ಉಪಯುಕ್ತತೆಯ ವಿಧಾನವನ್ನು ಮೊದಲು ಪರಿಚಯಿಸಿದವನು ಗೆಲಿಲಿಯೋ.

ನಾನು ಹೇಳುತ್ತಿರುವುದರಲ್ಲಿ, ಸಾಧ್ಯವಾದಷ್ಟೂ, ಹದಿನೇಳನೆಯ ಶತಮಾನದ ಭಾಷೆಯಲ್ಲಿ ಮಾತನಾಡಲು ಪ್ರಯತ್ನಿಸಿದ್ದೇನೆ. ಪ್ರಮುಖ ಅಂಶಗಳಲ್ಲಿ ಆಧುನಿಕ ಭಾಷೆಯು ವಿಭಿನ್ನವಾಗಿದೆ, ಆದರೆ ಹದಿನೇಳನೆಯ ಶತಮಾನವು ಏನನ್ನು ಸಾಧಿಸಿತು ಎಂದು ವಿವರಿಸಲು ಅದೇ ಕಾಲದ ಅಭಿವ್ಯಕ್ತಿ ಸ್ವರೂಪವನ್ನು ಅನುಸರಿಸುವುದು ಅಪೇಕ್ಷಣೀಯ.

ಗೆಲಿಲಿಯೋಗಿಂತ ಮುಂಚೆ, ಕೊಪರ್ನಿಕಸ್ ಮಾರ್ಗವು ವಿವರಿಸಲು ಸಾಧ್ಯವಾಗದಿದ್ದ ಸಮಸ್ಯೆಯನ್ನು ಜಡತ್ವ ನಿಯಮವು ವಿವರಿಸಿತು. ಮೇಲೆ ಗಮನಿಸಿದಂತೆ, ಗೋಪುರದ ಮೇಲಿನಿಂದ ಒಂದು ಕಲ್ಲನ್ನು ಕೆಳಗೆ ಹಾಕಿದರೆ, ಅದು ಗೋಪುರದ ಅಡಿಯಲ್ಲಿ ಬೀಳುತ್ತದೆ, ಅದರ ಪಶ್ಚಿಮ ದಿಸೆಯಲ್ಲಲ್ಲ; ಆದರೂ, ಭೂಮಿಯು ಪರಿಭ್ರಮಿಸುತ್ತಿದ್ದರೆ, ಕಲ್ಲು ಬೀಳುವ ಅವಧಿಯಲ್ಲಿ ಅದು ಒಂದಷ್ಟು ದೂರ ಹೋಗಿರಬೇಕಾಗಿತ್ತು. ಇದು ಆಗುವುದಿಲ್ಲ ಎಂಬುದಕ್ಕೆ ಕಾರಣ, ಕೆಳಕ್ಕೆ ಹಾಕುವ ಮುಂಚೆ ಭೂತಲದ ಮೇಲೆ ಅದು ಭಾಗಿಯಾಗಿದ್ದ ಎಲ್ಲದರ ಜೊತೆಗೆ ಕಲ್ಲು ಪರಿಭ್ರಮಣೆಯ ವೇಗವನ್ನೂ ಉಳಿಸಿಕೊಂಡಿರುತ್ತದೆ. ವಾಸ್ತವದಲ್ಲಿ, ಗೋಪುರವು ಸಾಕಷ್ಟು ಎತ್ತರವಾಗಿದ್ದರೆ, ಕೊಪರ್ನಿಕಸ್‌ನ ವಿರೋಧಿಗಳು ನಿರೀಕ್ಷಿಸಿದ್ದುದಕ್ಕೆ

ವಿರುದ್ಧವಾದ ಪರಿಣಾಮವಾಗಬೇಕಾಗಿತ್ತು. ಗೋಪುರದ ತುದಿಯು ಭೂಮಿಯ ಕೇಂದ್ರದಿಂದ ಭೂತಲಕ್ಕಿಂತಲೂ ಹೆಚ್ಚು ದೂರವಿರುವುದರಿಂದ, ಹೆಚ್ಚು ವೇಗವಾಗಿ ಚಲಿಸುತ್ತಿರಬೇಕು, ಹೀಗಾಗಿ ಕಲ್ಲು ಗೋಪುರದ ಅಡಿಯಿಂದ ಒಂದಷ್ಟು ದೂರ ಪೂರ್ವಕ್ಕೆ ಬೀಳಬೇಕು. ಈ ಪರಿಣಾಮವು, ನಮ್ಮ ಅಳತೆಗೆ ಸಿಕ್ಕದಷ್ಟು ಅಲ್ಪದ್ದು.

ಗೆಲಿಲಿಯೋ ಸೂರ್ಯಕೇಂದ್ರಿತ ವಿಧಾನವನ್ನು ಕಟ್ಟುನಿಟ್ಟಾಗಿ ಅನುಸರಿಸಿದ; ಅದರಲ್ಲಿ ಅವನು ಕೆಪ್ಲರ್‌ನನ್ನು ಅನುಸರಿಸಿದ, ಅವನ ಅನಾವರಣಗಳನ್ನು ಒಪ್ಪಿಕೊಂಡ. ಇತ್ತೀಚೆಗೆ ಡಚ್ ಜನರು ದೂರದರ್ಶಕವೊಂದನ್ನು ನಿರ್ಮಿಸಿದ್ದಾರೆಂಬುದನ್ನು ಕೇಳಿ, ತಾನೇ ಒಂದನ್ನು ನಿರ್ಮಿಸಿದ್ದಲ್ಲದೆ, ಅನೇಕ ಪ್ರಮುಖ ಅನಾವರಣಗಳನ್ನು ಮಾಡಿದ. ಕ್ಷೀರಪಥವು (ಮಿಲ್ಕಿ ವೇ) ಅಸಂಖ್ಯಾತ ಬಿಡಿ ನಕ್ಷತ್ರಗಳನ್ನು ಹೊಂದಿದೆಯೆಂಬುದನ್ನು ಕಂಡುಕೊಂಡ. ಅವನು ಶುಕ್ರದ (ವೀನಸ್) ವಿವಿಧ ಹಂತಗಳನ್ನು ಪರಿವೀಕ್ಷಿಸಿದ, ಇದು ಕೊಪರ್ನಿಕಸ್‌ಗೆ ತಿಳಿದಿದ್ದಂತೆ ಅವನ ಸಿದ್ಧಾಂತದಿಂದ ತಿಳಿಯುತ್ತದೆ. ಆದರೆ ಅದನ್ನು ಬರಿಗಣ್ಣಲ್ಲಿ ನೋಡುವುದು ಅಸಾಧ್ಯವಾಗಿತ್ತು. ಅವನು ಗುರುವಿನ (ಜ್ಯೂಪಿಟರ್) ಉಪಗ್ರಹಗಳನ್ನು ಕಂಡುಹಿಡಿದ, ತನ್ನ ಯಜಮಾನನ ಗೌರವ ಸಂಕೇತವಾಗಿ ಅವನ್ನು 'ಸಿಡೆರ ಮೆಡಿಸಿಯ' ಎಂದು ಕರೆದ. ಈ ಉಪಗ್ರಹಗಳು ಕೆಪ್ಲರ್‌ನ ನಿಯಮಗಳಿಗೆ ಅನುಸಾರವಾಗಿ ವರ್ತಿಸುತ್ತವೆ ಎಂದು ಕಂಡುಕೊಂಡ. ಆದರೆ, ಇದರಲ್ಲೊಂದು ತೊಂದರೆಯಿತ್ತು. ಎಲ್ಲ ಕಾಲದಲ್ಲೂ ಏಳು ಆಕಾಶ ಕಾಯಗಳಿದ್ದವು – ಐದು ಗ್ರಹಗಳು ಮತ್ತು ಸೂರ್ಯ–ಚಂದ್ರರು – ಈಗ ಏಳು ಪವಿತ್ರ ಸಂಖ್ಯೆಯಾಗಿತ್ತು. ಸಬ್ಬತ್ ಏಳನೆಯ ದಿನವಲ್ಲವೇ? ಏಳು ದಳದ ದೀಪಸ್ತಂಭ ಮತ್ತು ಏಷ್ಯಾದ ಏಳು ಚರ್ಚ್‌ಗಳಿರಲಿಲ್ಲವೇ? ಹೀಗಾಗಿ ಏಳು ಆಕಾಶ ಕಾಯಗಳಿರುವುದಕ್ಕಿಂತ ಹೆಚ್ಚು ಸೂಕ್ತವಾದದ್ದು ಯಾವುದಿದೆ? ನಾವೇನಾದರೂ ಗುರುವಿನ ನಾಲ್ಕು ಚಂದ್ರರುಗಳನ್ನು ಸೇರಿಸುವುದಾದರೆ, ಅದು ಹನ್ನೊಂದಾಗುತ್ತದೆ, ಆದರೆ ಅದರಲ್ಲಿ ಯಾವುದೇ ನಿಗೂಢ ಲಕ್ಷಣಗಳಿಲ್ಲ. ಈ ಕಾರಣದಿಂದ, ಸಂಪ್ರದಾಯವಾದಿಗಳು ದೂರದರ್ಶಕವನ್ನು ಖಂಡಿಸಿದರು, ಅದರ ಮೂಲಕ ನೋಡಲು ಒಪ್ಪಲಿಲ್ಲ, ಅದು ಕೇವಲ ಭ್ರಮೆಗಳನ್ನು ತೋರಿಸುತ್ತದೆ ಎಂದರು. 'ಈ ಜನರ' ಮೌಢ್ಯವನ್ನು ಕಂಡು ತಾವಿಬ್ಬರೂ ಒಟ್ಟಾಗಿ ಮನದುಂಬಿ ನಗಬಹುದೆಂದು ಗೆಲಿಲಿಯೋ ಕೆಪ್ಲರ್‌ಗೆ ಕಾಗದ ಬರೆದನಂತೆ. ಕಾಗದದ ಉಳಿದ ಭಾಗ 'ಈ ಜನರ'ಲ್ಲಿ ತತ್ವಜ್ಞಾನದ ಪ್ರಾಧ್ಯಾಪಕರೂ ಇದ್ದರೆಂಬುದನ್ನು ಸ್ಪಷ್ಟಪಡಿಸುತ್ತದೆ; ಅವರು ಗುರುವಿನ ಚಂದ್ರರುಗಳನ್ನು 'ತರ್ಕಛಿದ್ರಕಾರಕ ವಾದಗಳನ್ನು ಭೂಮಂತ್ರಂಗಾಳಿ ಎಂಬಂತೆ ಬಳಸಿ' ಕಣ್ಮರೆಮಾಡಲು, ಪ್ರಯತ್ನಿಸಿದರು.

ಎಲ್ಲರಿಗೂ ತಿಳಿದಿರುವಂತೆ, ಗೆಲಿಲಿಯೋ ಮತಧರ್ಮನ್ಯಾಯಾಧಿಕರಣದ ಖಂಡನೆಗೊಳಗಾದ, ಮೊದಲು ೧೬೧೬ ರಲ್ಲಿ ಖಾಸಗಿಯಾಗಿ, ಆನಂತರ ೧೬೩೩

ರಲ್ಲಿ ಸಾರ್ವಜನಿಕವಾಗಿ. ಎರಡನೆಯ ಸನ್ನಿವೇಶದಲ್ಲಿ ಅವನು ತನ್ನದು ತಪ್ಪೆಂದು ಹೇಳಿ, ಭೂಮಿಯು ಪರಿಭ್ರಮಿಸುವುದೆಂದು ಮುಂದೆ ಯಾವತ್ತೂ ಹೇಳುವುದಿಲ್ಲವೆಂದು ಪ್ರಮಾಣ ಮಾಡಿದ. ಹೀಗೆ ಮತಧರ್ಮನ್ಯಾಯಾಧಿಕರಣವು ಇಟಲಿಯಲ್ಲಿ ವಿಜ್ಞಾನವನ್ನು ಕೊನೆಗಾಣಿಸುವುದರಲ್ಲಿ ಯಶಸ್ವಿಯಾಯಿತು, ಅಲ್ಲಿ ಮುಂದಿನ ಮೂರು ಶತಮಾನಗಳ ಕಾಲ ವಿಜ್ಞಾನ ತಲೆ ಎತ್ತಲಿಲ್ಲ. ಆದರೆ ಸೂರ್ಯಕೇಂದ್ರಿತ ಸಿದ್ಧಾಂತವನ್ನು ವಿಜ್ಞಾನಿಗಳು ಕೈಬಿಡುವಂತೆ ಮಾಡುವುದರಲ್ಲಿ ವಿಫಲವಾಯಿತು, ಹಾಗೆಯೇ ತನ್ನ ಮೂರ್ಖತನದಿಂದ ಚರ್ಚ್‌ಗೆ ಗಮನಾರ್ಹ ಹಾನಿಯನ್ನೂ ಉಂಟುಮಾಡಿತು. ಅದೃಷ್ಟವಶಾತ್ ಕೆಲವು ದೇಶಗಳು ಪ್ರಾಟೆಸ್ಟೆಂಟ್ ಆಗಿದ್ದವು, ಅಲ್ಲಿ ಪುರೋಹಿತವರ್ಗವು, ವಿಜ್ಞಾನಕ್ಕೆ ಹಾನಿ ಮಾಡಲು ಎಷ್ಟೇ ತವಕಿಸಿದರೂ, ಸರ್ಕಾರದ ಮೇಲಿನ ಹಿಡಿತವನ್ನು ಸಾಧಿಸಲಾಗಲಿಲ್ಲ.

ಕೊಪರ್ನಿಕಸ್, ಕೆಪ್ಲರ್ ಮತ್ತು ಗೆಲಿಲಿಯೋ ಸಿದ್ಧಪಡಿಸಿದ್ದ ಮಾರ್ಗವನ್ನು ನ್ಯೂಟನ್ (೧೬೪೨-೧೭೨೭) ಪೂರ್ಣಗೊಳಿಸುವುದರಲ್ಲಿ ಅಂತಿಮ ವಿಜಯವನ್ನು ಸಾಧಿಸಿದ. ತನ್ನ ಚಲನೆಯ ನಿಯಮಗಳಿಂದ ಆರಂಭಿಸಿ – ಅವುಗಳಲ್ಲಿ ಮೊದಲಿನವರೆಡು ಗೆಲಿಲಿಯೋನಿಂದಾಗಿ ಸಾಧ್ಯವಾಯಿತು – ಕೆಪ್ಲರ್‌ನ ಮೂರು ನಿಯಮಗಳು, ಪ್ರತಿ ಗ್ರಹವೂ ಪ್ರತಿ ಕ್ಷಣವೂ ಸೂರ್ಯನ ಕಡೆ ವೇಗೋತ್ಕರ್ಷವನ್ನು ಹೊಂದಿದೆ ಮತ್ತು ಅದು ಸೂರ್ಯನಿಂದ ತನ್ನ ದೂರದ ಮೇಲಿನ ವರ್ಗಕ್ಕೆ ಸಮಾನವಾದ ವಿಲೋಮಾನುಪಾತದಲ್ಲಿ ವ್ಯತ್ಯಾಸವಾಗುತ್ತದೆ ಎಂಬ ಪ್ರತಿಪಾದನೆಗೆ ಅನುಗುಣವಾಗಿವೆ ಎಂಬುದನ್ನು ಸಾಧಿಸಿ ತೋರಿಸಿದ. ಭೂಮಿ ಮತ್ತು ಸೂರ್ಯನ ಕಡೆಗಿನ ವೇಗೋತ್ಕರ್ಷವು, ಅದೇ ಸೂತ್ರವನ್ನು ಅನುಸರಿಸಿ, ಚಂದ್ರನ ಚಲನೆಯನ್ನು, ಮತ್ತು ಭೂಮಿಯ ತಳಕ್ಕೆ ಬೀಳುವ ವಸ್ತುಗಳ ವೇಗೋತ್ಕರ್ಷವು ವಿಲೋಮಾನುಪಾತ ನಿಯಮದನ್ವಯ ಚಂದ್ರನದಕ್ಕೆ ಸಂಬಂಧಿಸಿದೆ ಎಂಬುದನ್ನು ವಿವರಿಸಿದ. ಚಲನೆಯ ಬದಲಾವಣೆಗೆ 'ಬಲ'ವೇ, ಅಂದರೆ ವೇಗೋತ್ಕರ್ಷವೇ, ಕಾರಣವೆಂಬುದನ್ನವನು ಸಿದ್ಧಪಡಿಸಿದ. ಹೀಗೆ ತನ್ನ ವಿಶ್ವಾತ್ಮಕ ಗುರುತ್ವಾಕರ್ಷಣ ನಿಯಮ ಪ್ರತಿಪಾದನೆ ಮಾಡಲು ಅವನಿಗೆ ಸಾಧ್ಯವಾಯಿತು. 'ಪ್ರತಿಯೊಂದೂ ಇತರ ಪ್ರತಿಯೊಂದನ್ನೂ ತಮ್ಮ ದ್ರವ್ಯರಾಶಿ (ಮಾಸ್) ಮತ್ತು ತಮ್ಮ ನಡುವಣ ಅಂತರದ ಮೇಲಿನ ವರ್ಗದ ವಿಲೋಮಾನುಪಾತ ಇವುಗಳ ಗುಣಲಬ್ಧಗಳ ಪ್ರಮಾಣಾನುಗುಣವಾದ ಬಲದಿಂದ ಆಕರ್ಷಿಸುತ್ತದೆ.' ಈ ಸೂತ್ರದ ಸಹಾಯದಿಂದ ತನ್ನ ಗ್ರಹ ಸಿದ್ಧಾಂತದಲ್ಲಿನ ಪ್ರತಿಯೊಂದನ್ನೂ – ಗ್ರಹಗಳ ಮತ್ತವುಗಳ ಉಪಗ್ರಹಗಳ ಚಲನೆಗಳು, ಉಲ್ಕೆಗಳ ಕಕ್ಷೆಗಳು, ಉಬ್ಬರವಿಳಿತಗಳು – ನಿರೂಪಿಸಲು ಸಾಧ್ಯವಾಯಿತು. ಆನಂತರದಲ್ಲಿ, ಗ್ರಹಗಳ ಅಂಡಾಕೃತಿ ಚಲನೆಯಲ್ಲಿನ ಸೂಕ್ಷ್ಮ ವ್ಯತ್ಯಾಸಗಳನ್ನೂ ನ್ಯೂಟನ್‌ನ ನಿಯಮದಂತೆ ವಿವರಿಸಲು ಸಾಧ್ಯವೆಂಬುದು ಗೋಚರಿಸಿತು. ಈ ವಿಜಯವು ಎಷ್ಟು ಪರಿಪೂರ್ಣವಾದುದಾಗಿತ್ತೆಂದರೆ, ನ್ಯೂಟನ್ ಮತ್ತೊಬ್ಬ ಅರಿಸ್ಟಾಟಲ್ ಆಗಿ,

ಪ್ರಗತಿಗೆ ಉಲ್ಲಂಘಿಸಲಾಗದ ಅಡ್ಡಿಯಾಗಿಬಿಡುವ ಅಪಾಯವಿತ್ತು. ಇಂಗ್ಲಂಡ್‌ನಲ್ಲಿ, ಅವನ ಸಾವಿನ ಒಂದು ಶತಮಾನದವರೆಗೂ, ಅವನು ಕೆಲಸ ಮಾಡಿದ ಕ್ಷೇತ್ರಗಳಲ್ಲಿ ಜನರು ಅವನ ಪ್ರಾಮಾಣ್ಯದಿಂದ ಬಿಡುಗಡೆಗೊಂಡು ಸ್ವತಂತ್ರವಾಗಿ ಪ್ರಮುಖ ಕೆಲಸ ಮಾಡಲು ಸಾಧ್ಯವಾಗಲಿಲ್ಲ.

ಹದಿನೇಳನೆಯ ಶತಮಾನವು ಖಗೋಳವಿಜ್ಞಾನ ಮತ್ತು ಚಲನವಿಜ್ಞಾನಗಳಲ್ಲಿ ಮಾತ್ರವಲ್ಲದೆ, ವಿಜ್ಞಾನಕ್ಕೆ ಸಂಬಂಧಿಸಿದ ಇತರ ಅನೇಕ ವಿಷಯಗಳಲ್ಲಿಯೂ ಅಸಾಧಾರಣವೆನಿಸಿತ್ತು.

ಮೊದಲಿಗೆ ವೈಜ್ಞಾನಿಕ ಸಲಕರಣೆಗಳ ವಿಷಯವನ್ನು ತೆಗೆದುಕೊಳ್ಳೋಣ.[೨೫೫] ಸಂಯುಕ್ತ ಸೂಕ್ಷ್ಮದರ್ಶಕವನ್ನು ಹದಿನೇಳನೆಯ ಶತಮಾನಕ್ಕೆ ಸ್ವಲ್ಪ ಮುಂಚೆಯಷ್ಟೇ, ೧೫೯೦ ರಲ್ಲಿ, ನಿರ್ಮಿಸಲಾಗಿತ್ತು. ದೂರದರ್ಶಕವನ್ನು ನಿರ್ಮಿಸಿದ್ದು ೧೬೦೮ ರಲ್ಲಿ ಲಿಪರ್‌ಶೇ ಎಂಬ ಒಬ್ಬ ಡಚ್ ವ್ಯಕ್ತಿ., ಆದರೆ ಅದನ್ನು ಗಂಭೀರ ವೈಜ್ಞಾನಿಕ ಉದ್ದೇಶಕ್ಕಾಗಿ ಮೊದಲು ಬಳಸಿಕೊಂಡದ್ದು ಗೆಲಿಲಿಯೋ. ಗೆಲಿಲಿಯೋ ಉಷ್ಣಮಾಪಕವನ್ನೂ ನಿರ್ಮಿಸಿದ, ಕನಿಷ್ಠ ಪಕ್ಷ, ಇದು ಸಾಧ್ಯವಾಯಿತೆಂದು ತೋರುತ್ತದೆ. ಅವನ ವಿದ್ಯಾರ್ಥಿ ಟಾರಿಸೆಲಿ ವಾಯುಭಾರಮಾಪಕವನ್ನು ನಿರ್ಮಿಸಿದ. ಗುಯೆರಿಕ್ (೧೬೦೨–೮೬) ಗಾಳಿಪಂಪನ್ನು ನಿರ್ಮಿಸಿದ, ಅದು ಹೊಸದಲ್ಲವಾದರೂ – ಹದಿನೇಳನೆಯ ಶತಮಾನದಲ್ಲಿ, ಗೆಲಿಯೋನ ಕಾರ್ಯಗಳಿಂದಾಗಿ – ಅದನ್ನು ತುಂಬ ಉತ್ತಮಪಡಿಸಲಾಯಿತು. ಈ ನಿರ್ಮಿತಿಗಳ ಕಾರಣದಿಂದಾಗಿ ವೈಜ್ಞಾನಿಕ ಪರಿವೀಕ್ಷಣೆಯು ಹಿಂದಿನ ಕಾಲಗಳಿಗಿಂತ ಅಪರಿಮಿತ ನಿಖರತೆ ಹೊಂದಿದುವಲ್ಲದೆ ಹೆಚ್ಚು ವ್ಯಾಪಕವಾದವು.

ಮುಂದೆ, ಖಗೋಳವಿಜ್ಞಾನ ಮತ್ತು ಚಲನವಿಜ್ಞಾನಗಳಲ್ಲದೆ, ಇತರ ವಿಜ್ಞಾನಗಳಲ್ಲಿಯೂ ಮುಖ್ಯ ಕೆಲಸಗಳಾದವು. ಗಿಲ್ಬರ್ಟ್ (೧೫೪೦–೧೬೦೩) ಅಯಸ್ಕಾಂತದ ಬಗೆಗಿನ ತನ್ನ ಮಹತ್ವದ ಕೃತಿಯನ್ನು ೧೬೦೦ ರಲ್ಲಿ ಪ್ರಕಟಿಸಿದ. ಹಾರ್ವೇ (೧೫೭೮–೧೬೫೭) ರಕ್ತಪರಿಚಲನೆಯನ್ನು ಕಂಡುಹಿಡಿದು ಅದನ್ನು ೧೬೨೮ ರಲ್ಲಿ ಪ್ರಕಟಿಸಿದ. ಲೀವೆನ್‌ಹೋಕ್ (೧೬೩೨–೧೭೨೩) ವೀರ್ಯಾಣು ಕಂಡುಹಿಡಿದ, ಆದರೆ ಸ್ಟೀಫನ್ ಹ್ಯಾಮ್ ಎಂಬ ಮತ್ತೊಬ್ಬ ಕೆಲವು ತಿಂಗಳುಗಳ ಹಿಂದಷ್ಟೇ ಅದನ್ನು ಕಂಡುಹಿಡಿದಿದ್ದ; ಲೀವೆನ್‌ಹೋಕ್ ಪ್ರೋಟೋಝೋವಾ ಅಥವಾ ಏಕಕೋಶ ಜೀವಿಗಳನ್ನೂ, ರೋಗಾಣು (ಬ್ಯಾಕ್ಟೀರಿಯ)ವನ್ನೂ ಕಂಡುಹಿಡಿದ. ರಾಬರ್ಟ್ ಬಾಯ್ಲ್ (೧೬೨೭–೯೧), ನಾನು ಹುಡುಗನಾಗಿದ್ದಾಗ ಮಕ್ಕಳಿಗೆ

೨೫೫. ಈ ವಿಷಯಕ್ಕೆ ಸಂಬಂಧಿಸಿದಂತೆ ನೋಡಿ, ಎ. ವುಲ್ಫ್ ಅವರ 'ಎ ಹಿಸ್ಟರಿ ಆಫ್ ಸೈನ್ಸ್, ಟೆಕ್ನಾಲಜಿ ಅಂಡ್ ಫಿಲಾಸಫಿ ಇನ್ ದ ಸೆವೆಂಟೀನ್ತ್ ಸೆಂಚುರಿ' ಪುಸ್ತಕದಲ್ಲಿನ 'ಸೈಂಟಿಫಿಕ್ ಇನ್‌ಸ್ಟ್ರುಮೆಂಟ್ಸ್' ಎಂಬ ಅಧ್ಯಾಯ.

ಹೇಳಿಕೊಡುತ್ತಿದ್ದ 'ರಸಾಯನವಿಜ್ಞಾನದ ಜನಕ ಮತ್ತು ಕಾರ್ಕ್‌ನ ಅರ್ಲ್'; ಅವನನ್ನು ಈಗ ನೆನಪಿಸಿಕೊಳ್ಳುವುದು ಮುಖ್ಯವಾಗಿ, ನಿರ್ದಿಷ್ಟ ಪ್ರಮಾಣದ ಅನಿಲವು ನಿರ್ದಿಷ್ಟ ಉಷ್ಣತೆಯುಲ್ಲಿದ್ದಾಗ ಅದರ ಒತ್ತಡವು ಅದರ ಗಾತ್ರದ (ವಾಲ್ಯೂಮ್) ವಿಲೋಮಾನುಪಾತದಲ್ಲಿರುತ್ತದೆ ಎಂಬ, ಬಾಯ್ಲ್ 'ನಿಯಮ'ದಿಂದಾಗಿ.

ನಾನು ಇದುವರೆಗೂ ಶುದ್ಧ ಗಣಿತದಲ್ಲಾದ ಮುನ್ನಡೆಯ ಬಗ್ಗೆ ಏನನ್ನೂ ಹೇಳಿಲ್ಲ, ಆದರೆ ಅವು ತುಂಬ ಮಹತ್ವದವು, ಭೌತವಿಜ್ಞಾನಗಳ ಕಾರ್ಯದಲ್ಲಿ ತೀರ ಅನಿವಾರ್ಯವೆನಿಸಿದವು. ನೇಪಿಯರ್ ತನ್ನ ಸೃಷ್ಟಿಯಾದ ಲಾಗರಿದಮ್ಸ್ ಅನ್ನು ೧೬೧೪ ರಲ್ಲಿ ಪ್ರಕಟಿಸಿದ. ಬೀಜಗಣಿತ ಜ್ಯಾಮಿತಿ (ಕೋ-ಆರ್ಡಿನೇಟ್ ಅಥವಾ ಅನಲಿಟಿಕಲ್ ಜ್ಯಾಮಿಟ್ರಿ) ಮೂಡಿಬಂದದ್ದು ಹದಿನೇಳನೆಯ ಶತಮಾನದ ಅನೇಕ ಗಣಿತಜ್ಞರಿಂದಾಗಿ, ಅವರಲ್ಲೂ ಅತ್ಯಂತ ಹೆಚ್ಚಿನ ಕೊಡುಗೆ ಡೇಕಾರ್ಟೆಯದು. ಅನುಕಲನವಿಜ್ಞಾನ ಮತ್ತು ಚರಕಲನವಿಜ್ಞಾನ (ಇಂಟೆಗ್ರಲ್ ಮತ್ತು ಡಿಫೆರೆನ್ಷಿಯಲ್ ಕ್ಯಾಲ್‌ಕ್ಯುಲಸ್) ಗಳನ್ನು ಸ್ವತಂತ್ರವಾಗಿ ನಿರ್ಮಿಸಿದವರು ನ್ಯೂಟನ್ ಮತ್ತು ಲೀಬ್‌ನಿಜ಼್; ಬಹುತೇಕ ಎಲ್ಲ ಉನ್ನತ ಗಣಿತಕ್ಕೂ ಅದೇ ಸಾಧನ. ಇವು ಶುದ್ಧ ಗಣಿತದಲ್ಲಿನ ಅತ್ಯುನ್ನತ ಸಾಧನೆಗಳು ಮಾತ್ರ, ಜೊತೆಗೆ ತುಂಬ ಪ್ರಮುಖವಾದ ಇನ್ನೂ ಅನೇಕವಿವೆ.

ನಾವು ಇದುವರೆಗೆ ಪರಿಶೀಲಿಸಿದ ವೈಜ್ಞಾನಿಕ ಕಾರ್ಯದ ಪರಿಣಾಮವಾಗಿ ವಿದ್ಯಾವಂತ ಜನಗಳ ದೃಷ್ಟಿಕೋನವು ಸಂಪೂರ್ಣವಾಗಿ ಬದಲಾಯಿತು. ಈ ಶತಮಾನದ ಆರಂಭದ ಹೊತ್ತಿಗೆ, ಸರ್ ಥಾಮಸ್ ಬ್ರೌನ್ ಮಾಟಗಳಲ್ಲಿ ಭಾಗಿಯಾದ; ಕೊನೆಯಲ್ಲಾಗಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಷೇಕ್ಸ್‌ಪಿಯರ್‌ನ ಕಾಲದಲ್ಲಿ ಉಲ್ಕೆಗಳು ಇನ್ನೂ ಶಕುನಗಳೆನಿಸಿದ್ದವು; ೧೬೮೭ ರಲ್ಲಿ ನ್ಯೂಟನ್‌ನ 'ಪ್ರಿನ್ಸಿಪಿಯ' ಪ್ರಕಟವಾದ ಮೇಲೆ, ಹ್ಯಾಲೆ ಕೆಲವು ಉಲ್ಕೆಗಳ ಕಕ್ಷೆಗಳನ್ನು ಲೆಕ್ಕ ಹಾಕಿದ್ದ ಹಾಗೂ ಅವು ಗ್ರಹಗಳಂತೆಯೇ ಗುರುತಾಕರ್ಷಣಕ್ಕೆ ಒಳಗಾದವೆಂಬ ವಿಷಯಗಳು ತಿಳಿದವು. ಕಲ್ಪಕ ವ್ಯಕ್ತಿಗಳ ಮನಸ್ಸಿನ ಮೇಲೆ ನಿಯಮಗಳ ಪರಿಣಾಮವು ಸ್ಥಾಪನೆಗೊಂಡು, ಮಾಟ ಮಂತ್ರಗಳನ್ನು ನಂಬಲರ್ಹವಲ್ಲವೆನ್ನುವಂತೆ ಮಾಡಿತ್ತು. ೧೭೦೦ ರಲ್ಲಿ ಶಿಕ್ಷಿತ ವರ್ಗದವರ ದೃಷ್ಟಿಕೋನವು ಸಂಪೂರ್ಣ ಆಧುನಿಕವಾಗಿತ್ತು; ೧೬೦೦ ರಲ್ಲಿ ಕೆಲವರ ಹೊರತಾಗಿ, ಅದಿನ್ನೂ ವ್ಯಾಪಕವಾಗಿ ಮಧ್ಯಕಾಲೀನವಾಗಿತ್ತು.

ಈ ಅಧ್ಯಾಯದ ಉಳಿದ ಭಾಗದಲ್ಲಿ ನಾನು, ತತ್ತ್ವಜ್ಞಾನದ ನಂಬಿಕೆಗಳು ಹದಿನೇಳನೆಯ ಶತಮಾದ ವಿಜ್ಞಾನವನ್ನು ಅನುಸರಿಸಿದ ಪರಿಯನ್ನು ಕುರಿತು ಹಾಗೂ ಆಧುನಿಕ ವಿಜ್ಞಾನವು ನ್ಯೂಟನ್‌ದಕ್ಕಿಂತ ಯಾವ ಬಗೆಯಲ್ಲಿ ಭಿನ್ನವಾಗಿದೆ ಎಂಬುದನ್ನು ವಿವರಿಸುತ್ತೇನೆ.

ನಾವು ಗಮನಿಸಬೇಕಾದ ಮೊದಲ ಅಂಶವೆಂದರೆ, ಭೌತವಿಜ್ಞಾನದ ನಿಯಮಗಳಲ್ಲಿ ಚೈತನ್ಯವಾದದ (ಆನಿಮಿಸಂ) ಬಹುತೇಕ ಕುರುಹುಗಳೆಲ್ಲ

ನಿರ್ಮೂಲಗೊಂಡದ್ದು. ಗ್ರೀಕ್‌ರು, ಹಾಗೆಂದು ನೇರವಾಗಿ ಹೇಳದಿದ್ದರೂ, ಚಲನಸಾಮರ್ಥ್ಯವು ಜೀವದ ಕುರುಹು ಎಂದು ಭಾವಿಸಿದ್ದರು. ಸಾಮಾನ್ಯ ನೋಟಕ್ಕೂ ಗೊತ್ತಾದುದೆಂದರೆ ಪ್ರಾಣಿಗಳು ತಮ್ಮಷ್ಟಕ್ಕೇ ಚಲಿಸುತ್ತವೆ, ಆದರೆ ಜಡವಸ್ತುಗಳು ಬಾಹ್ಯ ಬಲದಿಂದ ಮಾತ್ರವೇ ಚಲನೆಗೊಳಗಾಗುತ್ತವೆ ಎಂಬುದು. ಅರಿಸ್ಟಾಟಲ್‌ನ ಪ್ರಕಾರ, ಪ್ರಾಣಿಯ ಆತ್ಮಕ್ಕೆ ಹಲವು ಕಾರ್ಯಗಳಿವೆ, ಅವುಗಳಲ್ಲಿ ಒಂದು ಪ್ರಾಣಿಯ ದೇಹವನ್ನು ಚಲಿಸುವುದು. ಗ್ರೀಕ್‌ರ ಆಲೋಚನೆಯಂತೆ, ಸೂರ್ಯ ಮತ್ತು ಗ್ರಹಗಳು ದೇವರುಗಳೇ ಆಗುವ ಸಾಮರ್ಥ್ಯದವು, ಅಥವಾ ದೇವರುಗಳು ಕ್ರಮಬದ್ಧವಾಗಿಸಿರುವ ಚಲನೆಯುಳ್ಳವು. ಅನಾಕ್ಸಾಗೊರಾಸ್ ಅದಕ್ಕೆ ಭಿನ್ನವಾಗಿ ಆಲೋಚಿಸಿದ, ಆದರೆ ಅವನು ಧರ್ಮಶ್ರದ್ಧೆಯವನಾಗಿರಲಿಲ್ಲ. ಡೆಮಾಕ್ರಿಟಸ್‌ನೂ ಭಿನ್ನವಾಗಿ ಆಲೋಚಿಸಿದ, ಆದರೆ ಎಪಿಕ್ಯೂರಿಯನ್‌ರನ್ನು ಹೊರತುಪಡಿಸಿ, ಪ್ಲೇಟೋ ಮತ್ತು ಅರಿಸ್ಟಾಟಲ್‌ರ ಪರವಹಿಸಿ, ಅವನನ್ನು ಅವಗಣಿಸಿದರು. ಅರಿಸ್ಟಾಟಲ್‌ನ ನಲವತ್ತೇಳು ಅಥವಾ ಐವತ್ತೈದು ಚಲನೆಯಿಲ್ಲದ ಚಲನಕಾರರು ದೈವಿಕ ಸತ್ವಗಳು, ಆಕಾಶದಲ್ಲಿನ ಎಲ್ಲ ಚಲನೆಗಳ ಅಂತಿಮ ಕಾರಣ ಅವರೇ. ತಮ್ಮಷ್ಟಕ್ಕೇ ಬಿಟ್ಟರೆ, ನಿರ್ಜೀವ ವಸ್ತು ಸ್ವಲ್ಪಕಾಲದಲ್ಲಿಯೇ ಚಲನರಹಿತವಾಗುತ್ತದೆ; ಹೀಗಾಗಿ ಚಲನೆಯು ನಿಲ್ಲಬಾರದಾದರೆ ವಸ್ತುವಿನ ಆತ್ಮದ ಪ್ರೇರಣೆಯು ನಿರಂತರವಾಗಿರಬೇಕು.

ಇವೆಲ್ಲವೂ ಚಲನೆಯ ಮೊದಲ ನಿಯಮದಿಂದಾಗಿ ಬದಲಾದವು. ಒಮ್ಮೆ ಚಲನೆಯಲ್ಲಿರುವ ನಿರ್ಜೀವ ವಸ್ತುವು ಬಾಹ್ಯ ಬಲವೊಂದು ನಿಲ್ಲಿಸದಿದ್ದರೆ ನಿರಂತರವಾಗಿ ಚಲಿಸುತ್ತಲೇ ಇರುತ್ತದೆ. ಮಿಗಿಲಾಗಿ, ಚಲನೆಯ ಬದಲಾವಣೆಯ ಬಾಹ್ಯ ಕಾರಣಗಳು ಕೂಡ, ಅದನ್ನು ಖಚಿತಪಡಿಸಿಕೊಳ್ಳಬೇಕಾದರೆ, ಭೌತದ್ರವ್ಯವಾದವು. ಆದರೆ ಸೌರವ್ಯೂಹವು ತನ್ನದೇ ಆವೇಗದಿಂದ (ಮೊಮೆಂಟಮ್) ಮತ್ತು ತನ್ನದೇ ನಿಯಮಗಳ ಪ್ರಕಾರ ಚಲಿಸುವುದರಿಂದಾಗಿ ಬಾಹ್ಯ ಮಧ್ಯಪ್ರವೇಶವು ಆವಶ್ಯಕವಲ್ಲ. ಆದರೆ ಆವೇಗವು ಕಾರ್ಯಶೀಲವಾಗುವಂತೆ ಮಾಡಲು ದೇವರ ಆವಶ್ಯಕತೆ ಇತ್ತು; ನ್ಯೂಟನ್‌ನ ಪ್ರಕಾರ, ಗ್ರಹಗಳನ್ನು ದೇವರು ತನ್ನ ಕೈಯಿಂದಲೇ ಮೊದಲು ಎಸೆದ. ಹಾಗೆ ಮಾಡಿ ಗುರುತ್ವಾಕರ್ಷಣ ನಿಯಮವನ್ನು ಜಾರಿಗೊಳಿಸಿದ ಮೇಲೆ, ಮುಂದೆಂದೂ ದೈವಮಧ್ಯಪ್ರವೇಶದ ಆವಶ್ಯಕತೆಯಿಲ್ಲದಂತೆ, ಎಲ್ಲವೂ ತಾನಾಗಿ ನಡೆಯುತ್ತ ಹೋಯಿತು. ಈಗಲೂ ಕ್ರಿಯಾಶೀಲವಾಗಿರುವ ಅವೇ ಬಲಗಳು ಗ್ರಹಗಳು ಸೂರ್ಯನನ್ನು ಮೀರಿ ಬೆಳೆಯಲು ಕಾರಣವಾಗಿರಬಹುದೆಂದು ಲಾಪ್‌ಲಸ್ ಸೂಚಿಸಿದಾಗ, ಪ್ರಕೃತಿಯಲ್ಲಿನ ದೇವರ ಪಾತ್ರವನ್ನು ಮತ್ತಷ್ಟು ಹಿಂದಕ್ಕೆ ಸರಿಸಿತು. ಅವನು ಸೃಷ್ಟಿಕರ್ತನಾಗಿ ಉಳಿಯಬಹುದು, ಅದೂ ಸಂದೇಹಾಸ್ಪದವೇ, ಯಾಕೆಂದರೆ ಜಗತ್ತಿಗೆ ಕಾಲಗತಿಯಲ್ಲಿ ಆರಂಭ ಇದೆಯೇ ಎಂಬುದು ಇನ್ನೂ ಸ್ಪಷ್ಟವಾಗಿರಲಿಲ್ಲ. ಬಹುತೇಕ ವಿಜ್ಞಾನಿಗಳು ಧರ್ಮಶ್ರದ್ಧೆಯವರೇ ಆದರೂ, ಅವರ ಕಾರ್ಯಗಳು

ಸಂಪ್ರದಾಯನಿಷ್ಠೆಯನ್ನು ಪ್ರಕ್ಷುಬ್ಧಗೊಳಿಸಿತು, ಇದರಿಂದಾಗಿ ಮತಧರ್ಮಶಾಸ್ತ್ರಜ್ಞರು ಇರಿಸುಮುರಿಸು ಅನುಭವಿಸಿದರು.

ವಿಜ್ಞಾನದಿಂದಾದ ಮತ್ತೊಂದು ಪರಿಣಾಮವೆಂದರೆ, ವಿಶ್ವದಲ್ಲಿ ಮನುಷ್ಯನ ಸ್ಥಾನದ ಬಗೆಗಿನ ಪರಿಕಲ್ಪನೆ. ಮಧ್ಯಯುಗದಲ್ಲಿ, ಭೂಮಿಯು ವಿಶ್ವದ ಕೇಂದ್ರವಾಗಿತ್ತು, ಎಲ್ಲಕ್ಕೂ ಮನುಷ್ಯನಿಗೆ ಸಂಬಂಧಪಟ್ಟ ಉದ್ದೇಶವೇ ಇರುತ್ತಿತ್ತು. ನ್ಯೂಟನ್ ಜಗತ್ತಿನಲ್ಲಿ, ಭೂಮಿಯು ಅಂಥ ದೊಡ್ಡದೇನೂ ಅಲ್ಲದ ನಕ್ಷತ್ರವೊಂದರ ಸಣ್ಣ ಗ್ರಹ; ಖಗೋಳ ದೂರಗಳು ಎಷ್ಟು ಹರಹಾದುವೆಂದರೆ, ಹೋಲಿಸುವುದಾದರೆ, ಭೂಮಿಯು ಒಂದು ಸೂಜಿಯ ಮೊನೆಯಷ್ಟು ಗಾತ್ರದ್ದು. ಇಂತಹ ಸೂಜಿಯ ಮೊನೆಯಲ್ಲಿನ ಜೀವಿಗಳಿಗಾಗಿ ಅಂತಹ ಅಪರಿಮಿತ ಸಲಕರಣೆಯು ವಿನ್ಯಾಸಗೊಂಡಿದೆಯೆಂಬುದು ನಂಬುವಂತಹುದಲ್ಲ. ಅದಕ್ಕೂ ಮಿಗಿಲಾಗಿ, ಅರಿಸ್ಟಾಟಲ್ ಕಾಲದಿಂದ ವಿಜ್ಞಾನದ ಪರಿಕಲ್ಪನೆಯಲ್ಲಿನ ಒಂದು ನಿಕಟ ಭಾಗವಾಗಿದ್ದ ಉದ್ದೇಶವನ್ನು ಈಗ ವಿಜ್ಞಾನದ ಪ್ರಕ್ರಿಯೆಯಿಂದ ದೂರಕ್ಕೆ ನೂಕಲಾಗಿತ್ತು. ದೇವರ ವೈಭವವನ್ನು ತೋರಿಸಲು ಸ್ವರ್ಗವು ಇದೆ ಎಂದು ಈಗಲೂ ಕೆಲವರು ನಂಬಿದರೂ, ಇದು ಖಗೋಳವೈಜ್ಞಾನಿಕ ಲೆಕ್ಕಾಚಾರಗಳಲ್ಲಿ ಮೂಗು ತೂರಿಸಲು ಅವಕಾಶ ನೀಡಲಾರದು. ಜಗತ್ತಿಗೊಂದು ಉದ್ದೇಶವಿರಬಹುದು, ಆದರೆ ವೈಜ್ಞಾನಿಕ ವಿವರಣೆಗಳಲ್ಲಿ ಉದ್ದೇಶಗಳು ಪ್ರವೇಶಿಸಲಾರವು.

ಕೊಪರ್ನಿಕಸ್‌ನ ಸಿದ್ಧಾಂತವು ಮಾನವನ ಹೆಮ್ಮೆಯನ್ನು ಕುಗ್ಗಿಸುತ್ತಿದೆ, ಆದರೆ ವಾಸ್ತವದಲ್ಲಿ ಅದಕ್ಕೆ ವ್ಯತಿರಿಕ್ತವಾದ ಪರಿಣಾಮವುಂಟಾಯಿತು, ಯಾಕೆಂದರೆ ವಿಜ್ಞಾನದ ಜಯಭೇರಿಯು ಮಾನವನ ಹೆಮ್ಮೆಯನ್ನು ಪುನಃಸ್ಥಾಪಿಸಿದೆ. ಕೊನೆಯುಸಿರೆಳೆಯುತ್ತಿರುವ ಹಳೆಯ ಜಗತ್ತು ಪಾಪಪ್ರಜ್ಞೆಯಿಂದ ನರಳುತ್ತಿತ್ತು, ಇದು ಮಧ್ಯಯುಗದಲ್ಲಿನ ದಮನಕ್ಕೆ ಕಾರಣವಾಗಿತ್ತು. ದೇವರ ಮುಂದೆ ವಿನೀತನಾಗುವುದು ಸರಿಯೂ ವಿವೇಕಯುತವೂ ಆಗಿತ್ತು, ಯಾಕೆಂದರೆ ದೇವರು ಹೆಮ್ಮೆಯನ್ನು ಶಿಕ್ಷಿಸುತ್ತಿದ್ದ. ಸಾಂಕ್ರಾಮಿಕರೋಗಗಳು, ಪ್ರವಾಹಗಳು, ಭೂಕಂಪಗಳು, ಟರ್ಕ್‌ರು, ಟಾರ್ಟರ್‌ರು ಮತ್ತು ಉಲ್ಕೆಗಳ ಮಂಕು ಶತಮಾನಗಳನ್ನು ಗೊಂದಲಗೊಳಿಸಿದ್ದವು, ಇಂತಹ ವಾಸ್ತವವಾದ ಮತ್ತು ಭಯಪಡುತ್ತಿದ್ದ ಪ್ರಕೃತಿವಿಕೋಪಗಳಿಂದ ಪಾರಾಗಲು ಮನುಷ್ಯನು ಹೆಚ್ಚು ಹೆಚ್ಚು ವಿನೀತವಾಗಬೇಕೆಂದು ಭಾವಿಸಲಾಗಿತ್ತು. ಆದರೆ ಮನುಷ್ಯರು ಇಂತಹ ವಿಜಯಗಳನ್ನು ಸಾಧಿಸುತ್ತಿರಬೇಕಾದರೆ ವಿನೀತನಾಗಿರುವುದು ಅಸಾಧ್ಯವೆನಿಸಿತು.

ನಿಸರ್ಗ ಹಾಗೂ ನಿಸರ್ಗ ನಿಯಮಗಳು ಕತ್ತಲಲ್ಲಿ ಮುಚ್ಚಿಟ್ಟುಕೊಂಡವು.
ದೇವರು ಹೇಳಿದ: 'ನ್ಯೂಟನ್ ಹುಟ್ಟಲಿ', ಆಗ ಎಲ್ಲೆಡೆ ಬೆಳಕಾಯಿತು.

ಇನ್ನು ಖಂಡನೆಯ ಬಗ್ಗೆ, ಅಂತಹ ಅಪರಿಮಿತ ವಿಶ್ವದ ಸೃಷ್ಟಿಕರ್ತನಿಗೆ ಸಣ್ಣ

ಪುಟ್ಟ ಮತಧಾರ್ಮಿಕ ದೋಷದ ಕಾರಣದಿಂದ ಮನುಷ್ಯನನ್ನು ನರಕಕ್ಕೆ ಕಳಿಸುವುದಕ್ಕಿಂತಲೂ ಉತ್ತಮವಾದ ಆಲೋಚನೆ ಇದ್ದಿರಬೇಕು. ಜೂಡಾಸ್ ಇಸ್ಕಾರಿಯಟ್ ಖಂಡನೆಗೊಳಗಾಗಿರಬಹುದು, ಆದರೆ ಏರಿಯಸ್ ಪಂಥದವನಾಗಿದ್ದರೂ, ನ್ಯೂಟನ್ ಅಲ್ಲ.

ಆತ್ಮತೃಪ್ತಿಗೆ ಇನ್ನಿತರ ಅನೇಕ ಕಾರಣಗಳೂ ಇದ್ದುವು. ಟಾರ್ಟರರು ಏಷ್ಯಾಕ್ಕೆ ಸೀಮಿತರಾಗಿದ್ದರು, ಟರ್ಕ್‌ರು ಕಿರಿಕಿರಿ ಎನಿಸುವುದು ನಿಂತಿತ್ತು. ಹ್ಯಾಲಿ ಉಲ್ಕೆಗಳನ್ನು ನಿಸ್ಸತ್ವಗೊಳಿಸಿದ್ದ, ಭೂಕಂಪಗಳ ವಿಷಯ ತೆಗದುಕೊಂಡರೆ, ಅವು ಈಗಲೂ ಭಯಂಕರವೆನಿಸಿದ್ದರೂ, ವಿಜ್ಞಾನಿಗಳಿಗೆ ಅವುಗಳಲ್ಲಿನ ಆಸಕ್ತಿಯಿಂದಾಗಿ ಅವುಗಳ ಬಗೆ ವಿಷಾದಕರವೆನಿಸಲಿಲ್ಲ. ಪಶ್ಚಿಮ ಯೂರೋಪಿಯನ್‌ರು ಕ್ಷಿಪ್ರವಾಗಿ ಹೆಚ್ಚು ಹಣವಂತರಾಗುತ್ತಿದ್ದರು, ಇಡೀ ಜಗತ್ತಿನ ಒಡೆಯರಾಗುತ್ತಿದ್ದರು: ಅವರು ಉತ್ತರ ಮತ್ತು ದಕ್ಷಿಣ ಅಮೆರಿಕಗಳನ್ನು ಗೆದ್ದಿದ್ದರು, ಅವರು ಏಷ್ಯಾ ಮತ್ತು ಇಂಡಿಯಗಳಲ್ಲಿ ಬಲಿಷ್ಠರಾಗಿದ್ದರು, ಅವರ ಬಗ್ಗೆ ಚೈನಾದಲ್ಲಿ ಗೌರವಭಾವನೆಯಿತ್ತು, ಅವರ ಬಗ್ಗೆ ಜಪಾನ್‌ನಲ್ಲಿ ಭಯವಿತ್ತು. ಇವೆಲ್ಲದರ ಜೊತೆ ವಿಜ್ಞಾನದ ಗೆಲವುಗಳೂ ಸೇರಿ, ಹದಿನೇಳನೆಯ ಶತಮಾನದ ಜನರು ತಾವು ಶ್ರೇಷ್ಠರೆಂದು ಭಾವಿಸಿದರೇ ವಿನಾ ತಾವಿನ್ನೂ ಭಾನುವಾರಗಳಂದು ತಪ್ಪೊಪ್ಪಿಗೆಯ ಮೂಲಕ ಘೋಷಿಸಿಕೊಳ್ಳುವ ಪಾಪಿಗಳಾಗಿರಲಿಲ್ಲ.

ಆಧುನಿಕ ಸೈದ್ಧಾಂತಿಕ ಭೌತವಿಜ್ಞಾನವು ನ್ಯೂಟನ್ ಮಾದರಿಯ ವ್ಯವಸ್ಥೆಗಿಂತ ಭಿನ್ನವೆನಿಸುವ ಅನೇಕ ಅಂಶಗಳಿಂದ ಕೂಡಿದೆ. ಆರಂಭಕ್ಕೆ, ಹದಿನೇಳನೆಯ ಶತಮಾನದಲ್ಲಿ ಇನ್ನೂ ಪ್ರಮುಖವಾಗಿದ್ದ 'ಬಲ'ದ ಪರಿಕಲ್ಪನೆಯು ಅನವಶ್ಯಕವೆನಿಸಿಕೊಂಡಿತು. ನ್ಯೂಟನ್‌ನಲ್ಲಿ 'ಬಲ'ವು ಚಲನೆಯ, ಪ್ರಮಾಣ ಅಥವಾ ದಿಕ್ಕಿನ, ಬದಲಾವಣೆಯ ಕಾರಣ. ಕಾರಣದ ಕಲ್ಪನೆಯನ್ನು ಮುಖ್ಯವೆಂದು ಭಾವಿಸಲಾಗಿದೆ, ನಾವು ನೂಕುವಾಗ ಅಥವಾ ಎಳೆಯುವಾಗ ನಮ್ಮ ಅನುಭವಕ್ಕೆ ಬರುವಂತಹುದನ್ನು ಬಲ ಎಂದು ಊಹಿಸಿಕೊಳ್ಳಲಾಗಿದೆ. ಈ ಕಾರಣಕ್ಕಾಗಿ ಅದನ್ನು ದೂರದಲ್ಲಿ ಕ್ರಿಯಾಶೀಲವಾಗುವ ಗುರುತ್ವಾಕರ್ಷಣೆಯ ಒಂದು ಅಡ್ಡಿಯೆಂದು ಪರಿಗಣಿಸಲಾಗಿತ್ತು, ಅದನ್ನು ಸಂವಹಿಸಲು ಸಾಧುವಾಗುವ ಮಾಧ್ಯಮವೊಂದು ಇರಬೇಕೆಂದು ನ್ಯೂಟನ್‌ನೇ ಒಪ್ಪಿಕೊಂಡಿದ್ದ. ಎಲ್ಲ ಸಮೀಕರಣಗಳನ್ನೂ ಬಲವನ್ನು ಎಳೆದು ತರದೆಯೇ ಪುನಾರಚಿಸಬಹುದೆಂಬುದು ಕ್ರಮೇಣ ಗೋಚರವಾಯಿತು. ಗಮನಿಸಲು ಸಾಧ್ಯವಾದುದೆಂದರೆ ವೇಗೋತ್ಕರ್ಷ ಮತ್ತು ವಿನ್ಯಾಸ (ಕಾನ್‌ಫಿಗರೇಷನ್) ಗಳ ನಡುವಣ ಒಂದು ಸಂಬಂಧ: ಬಲದ ಮಧ್ಯಪ್ರವೇಶದಿಂದ ಈ ಸಂಬಂಧವು ಏರ್ಪಡುವುದೆಂದು ಹೇಳುವುದು ನಮ್ಮ ತಿಳಿವಳಿಕೆಗೆ ಹೊಸದೇನನ್ನೂ ಸೇರಿಸಲಾರದು. ಎಲ್ಲ ಸಮಯದಲ್ಲಿಯೂ ಗ್ರಹಗಳಿಗೆ ಸೂರ್ಯನೆಡೆಗೆ

ಗುರುತ್ವಾಕರ್ಷಣೆ ಇರುತ್ತದೆಂಬುದನ್ನೂ, ಅವುಗಳ ನಡುವಣ ಅಂತರದ ಮೇಲಿನ ವರ್ಗಕ್ಕೆ ವಿಲೋಮಾನುಪಾತದಲ್ಲಿ ಅದು ವ್ಯತ್ಯಾಸಗೊಳ್ಳುವುದೆಂಬುದನ್ನೂ ಪರಿವೀಕ್ಷಣೆಯು ತೋರಿಸಿತು. ಇದನ್ನು ಗುರುತ್ವಾಕರ್ಷಣೆಯ 'ಬಲ' ಎಂದು ಹೇಳುವುದು, ಅಫೀಮು ಜನರಿಗೆ ನಿದ್ದೆ ಬರಿಸುವುದರಿಂದಾಗಿ ಅದಕ್ಕೆ ನಿದ್ರಾಕಾರಕ ಗುಣವಿರುವುದರಿಂದ ಎಂದು ಹೇಳುವಂತಹುದೇ ಬಾಯಿಮಾತು, ಅಷ್ಟೆ. ಹೀಗಾಗಿ, ಆಧುನಿಕ ಭೌತವಿಜ್ಞಾನಿಯು ವೇಗೋತ್ಕರ್ಷವನ್ನು ನಿಷ್ಕರ್ಷಿಸುವ ಸೂತ್ರಗಳನ್ನು ಹೇಳುವಲ್ಲಿ 'ಬಲ' ಎಂಬ ಪದದ ಬಳಕೆಯನ್ನೇ ಸಂಪೂರ್ಣವಾಗಿ ಬಿಟ್ಟುಬಿಡುತ್ತಾನೆ. ಚಲನೆಗೆ ಕಾರಣವಾಗುವುದು 'ಬಲ' ಎಂಬುದು ಜೀವತತ್ತ್ವವಾದಿಯ (ವೈಟಲಿಸ್ಟ್) ಒಂದು ದುರ್ಬಲ ಪ್ರೇತ, ಮತ್ತು ಕ್ರಮೇಣ ಆ ಪ್ರೇತವನ್ನು ಓಡಿಸಲಾಗಿದೆ.

ಕ್ವಾಂಟಂ ಮೆಕಾನಿಕ್ಸ್ ಬರುವವರೆಗೆ, ಮೊದಲೆರಡು ಚಲನ ನಿಯಮಗಳ ಮುಖ್ಯ ಇಂಗಿತವನ್ನು ಪರಿಷ್ಕರಣೆ ಮಾಡುವ ಯಾವುದೂ ಯಾವುದೇ ಪ್ರಮಾಣದಲ್ಲಿ ನಡೆಯಲಿಲ್ಲ, ಅದೆಂದರೆ ಇದು: ಚಲನಶಾಸ್ತ್ರದ ನಿಯಮಗಳನ್ನು ವೇಗೋತ್ಕರ್ಷದ ಪರಿಭಾಷೆಯಲ್ಲಿ ಮಂಡಿಸಬೇಕು. ಈ ವಿಷಯದಲ್ಲಿ, ಕೊಪರ್ನಿಕಸ್ ಮತ್ತು ಕೆಪ್ಲರ್‌ಗಳನ್ನು ಇನ್ನೂ ಪ್ರಾಚೀನರ ಜೊತೆಯಲ್ಲೇ ಸೇರಿಸಬೇಕು; ಅವರು ಆಕಾಶಕಾಯಗಳ ಕಕ್ಷೆಗಳ ಆಕಾರವನ್ನು ಕುರಿತಂತೆ ವಿವರಿಸಲು ನಿಯಮಗಳನ್ನು ರೂಪಿಸಲು ಪ್ರಯತ್ನಿಸಿದರು. ಈ ರೂಪದಲ್ಲಿ ಮಂಡಿತವಾದ ನಿಯಮಗಳು ಎಂದಿಗೂ ಅಂದಾಜಿಗಿಂತ ಹೆಚ್ಚು ನಿಖರವಾಗಿರಲಾರವೆಂದು ನ್ಯೂಟನ್ ಹೇಳಿದ. ಗ್ರಹಗಳು ಒಂದೇ ನಿರ್ದಿಷ್ಟ ಅಂಡಾಕೃತಿಯಲ್ಲಿ ಚಲಿಸುವುದಿಲ್ಲ, ಅದಕ್ಕೆ ಕಾರಣ ಇತರ ಗ್ರಹಗಳ ಆಕರ್ಷಣೆಗಳು ಉಂಟುಮಾಡುವ ಕ್ಷೋಭೆಗಳು. ಅಥವಾ ಒಂದು ಗ್ರಹದ ಕಕ್ಷೆಯು ಪ್ರತಿ ಸಲವೂ ಒಂದೇ ರೀತಿಯಲ್ಲಿರುತ್ತದೆಂದೂ ಹೇಳಲಾಗದು, ಅದಕ್ಕೂ ಅದೇ ಕಾರಣ. ಆದರೆ ವೇಗೋತ್ಕರ್ಷವನ್ನು ಕುರಿತಾದ ಗುರುತ್ವಾಕರ್ಷಣ ನಿಯಮವು ಸರಳವಾಗಿತ್ತು. ಹೀಗಾಗಿ ನ್ಯೂಟನ್ ನಂತರದ ಇನ್ನೂರು ವರ್ಷಗಳ ಕಾಲ ಅದು ನಿಖರವಾದುದೆಂಬ ಭಾವನೆಯಿತ್ತು. ಅದನ್ನು ಐನ್‌ಸ್ಟೈನ್ ಪರಿಷ್ಕರಿಸಿದಾಗಲೂ, ಅದು ವೇಗೋತ್ಕರ್ಷವನ್ನು ಕುರಿತಾದ ನಿಯಮವಾಗಿಯೇ ಉಳಿಯಿತು.

ಶಕ್ತಿಸ್ಥಾಯಿತ್ವವು (ಕನ್ಸರ್ವೇಷನ್ ಆಫ್ ಎನರ್ಜಿ) ವೇಗಗಳ ಕುರಿತಾದ ನಿಯಮವೇ ಹೊರತು ವೇಗೋತ್ಕರ್ಷಗಳ ಕುರಿತಾದದ್ದಲ್ಲ ಎಂಬುದು ನಿಜ. ಆದರೆ ಈ ನಿಯಮವನ್ನು ಬಳಸುವ ಲೆಕ್ಕಾಚಾರಗಳಲ್ಲಿ ಬಳಸಿಕೊಳ್ಳಬೇಕಾದುದು ವೇಗೋತ್ಕರ್ಷವನ್ನೇ.

ಕ್ವಾಂಟಂ ಮೆಕಾನಿಕ್ಸ್ ಮಾಡಿದ ಬದಲಾವಣೆಗಳ ನಂತರ ಅವು ಗಾಢವಾಗಿವೆ, ಆದರೂ ಇನ್ನೂ ಕೊಂಚ ಪ್ರಮಾಣದಲ್ಲಿ, ವಿವಾದ ಮತ್ತು ಅನಿಶ್ಚಿತತೆಗಳ ವಿಷಯವಾಗಿ ಉಳಿದಿದೆ.

ನ್ಯೂಟನಿಯನ್ ತಾತ್ವಿಕತೆಯಿಂದಾಗಿ ಒಂದು ಬದಲಾವಣೆಯುಂಟಾಗಿದೆ, ಅದನ್ನೀಗ ಹೇಳಬೇಕು, ಅದೇಂದರೆ ಅವಕಾಶ ಮತ್ತು ಕಾಲಗಳ ಸಂಪೂರ್ಣ ವರ್ಜನೆ. ಡೆಮಾಕ್ರಿಟಸ್‌ನನ್ನು ಕುರಿತಂತೆ ಹೇಳುವಾಗ ಈ ಪ್ರಶ್ನೆಯನ್ನು ಉಲ್ಲೇಖಿಸಲಾಗಿತ್ತು ಎಂಬುದು ಓದುಗರ ನೆನಪಿನಲ್ಲಿರಬಹುದು. ಬಿಂದುಗಳನ್ನು ಹೊಂದಿದ ಅವಕಾಶದಲ್ಲಿ ಹಾಗೂ ಕ್ಷಣಗಳನ್ನು ಹೊಂದಿದ ಕಾಲದಲ್ಲಿ ನ್ಯೂಟನ್‌ಗೆ ನಂಬಿಕೆಯಿತ್ತು, ಅವುಗಳು ಅವುಗಳನ್ನು ಆಕ್ರಮಿಸಿರುವ ಕಾಯಗಳಿಂದ ಸ್ವತಂತ್ರವಾಗಿದ್ದವು. ಅವಕಾಶವನ್ನು ಕುರಿತಂತೆ, ತನ್ನ ದೃಷ್ಟಿಕೋನವನ್ನು ಬೆಂಬಲಿಸಲು ಅವನು ಪ್ರಯೋಗಾತ್ಮಕ ವಾದವೊಂದನ್ನು ಆಶ್ರಯಿಸಿದ್ದ, ಅದೇಂದರೆ ಭೌತಿಕ ವಿದ್ಯಮಾನಗಳು ಪರಿಪೂರ್ಣ ಪರಿಭ್ರಮಣೆಯನ್ನು ಬೇರ್ಪಡಿಸಬಲ್ಲವೆಂಬುದು. ಒಂದು ಬಕೆಟ್‌ನಲ್ಲಿರುವ ನೀರನ್ನು ಪರಿಭ್ರಮಿಸಿದರೆ, ಅದು ಸುತ್ತಲೂ ಮೇಲೆದ್ದು ಮಧ್ಯೆ ಕುಳಿಯುಂಟಾಗುತ್ತದೆ; ಆದರೆ ನೀರಿಲ್ಲದಾಗ ಬಕೆಟ್ ಅನ್ನು ಪರಿಭ್ರಮಿಸಿದರೆ ಹಾಗಾಗುವುದಿಲ್ಲ. ಅವನ ಕಾಲದ ಬಳಿಕ, ಫೌಕಾಲ್ಟ್‌ನ ಲೋಲಕ (ಪೆಂಡ್ಯುಲಮ್) ವನ್ನು ವಿನ್ಯಾಸಗೊಳಿಸಲಾಗಿದೆ, ಅದನ್ನು ಭೂಮಿಯ ಪರಿಭ್ರಮಣೆಯ ದೃಷ್ಟಾಂತವಾಗಿ ಪರಿಗಣಿಸಲಾಗಿದೆ. ಅತ್ಯಂತ ಆಧುನಿಕ ದೃಷ್ಟಿಕೋನದಿಂದಲೂ ಪರಿಪೂರ್ಣ ಪರಿಭ್ರಮಣೆಯ ಪ್ರಶ್ನೆಯು ತೊಡಕುಗಳಿಂದ ಕೂಡಿದೆ. ಎಲ್ಲ ಚಲನೆಯೂ ಸಾಪೇಕ್ಷವಾದರೆ, ಭೂಮಿಯು ಪರಿಭ್ರಮಿಸುವುದೆಂಬ ಆಧಾರಕಲ್ಪನೆಯೂ ಸ್ವರ್ಗಗಳು ಸುತ್ತುತ್ತವೆಂಬ ಆಧಾರಕಲ್ಪನೆಯೂ ಕೇವಲ ಭಾಷಿಕವಾಗುತ್ತದೆ; ಅವುಗಳ ವ್ಯತ್ಯಾಸವು 'ಜಾನ್ ಜೇಮ್ಸ್‌ನ ತಂದೆ' ಮತ್ತು 'ಜೇಮ್ಸ್ ಜಾನ್‌ನ ಮಗ' ಎಂಬುದಕ್ಕಿಂತ ಭಿನ್ನವಾಗಲಾರದು. ಆದರೆ ಸ್ವರ್ಗಗಳು ಸುತ್ತುವುದಾದರೆ, ನಕ್ಷತ್ರಗಳು ಬೆಳಕಿಗಿಂತ ವೇಗವಾಗಿ ಪರಿಭ್ರಮಿಸಬೇಕು, ಆದರೆ ಇದು ಅಸಾಧ್ಯ. ಈ ತೊಡಕಿಗೆ ನೀಡಿರುವ ಆಧುನಿಕ ಉತ್ತರಗಳು ಸಂಪೂರ್ಣ ತೃಪ್ತಿಕರವಲ್ಲ ಎಂದು ಹೇಳಲಾಗುವುದಿಲ್ಲ, ಆದರೆ ಅವು ತಕ್ಕ ಮಟ್ಟಿಗೆ ತೃಪ್ತಿಕರವಾಗಿದ್ದು, ಎಲ್ಲ ಭೌತವಿಜ್ಞಾನಿಗಳೂ ಚಲನೆ ಮತ್ತು ಅವಕಾಶಗಳು ಶುದ್ಧಾಂಗವಾಗಿ ಸಾಪೇಕ್ಷವಾದವು ಎಂದು ಒಪ್ಪುವಂತಾಗಿದೆ. ಇದು ಮತ್ತು ಅವಕಾಶ ಮತ್ತು ಕಾಲಗಳನ್ನು ಅವಕಾಶ-ಕಾಲ ಎಂದು ಒಗ್ಗೂಡಿಸಿರುವುದು ಗೆಲಿಲಿಯೋ ಮತ್ತು ನ್ಯೂಟನ್‌ರ ಕಾರ್ಯದ ಪರಿಣಾಮವಾದ ವಿಶ್ವದ ಬಗೆಗಿನ ನಮ್ಮ ದೃಷ್ಟಿಕೋನವನ್ನು ಸಾಕಷ್ಟು ಮಾರ್ಪಡಿಸಿದೆ. ಆದರೆ ಈ ಬಗ್ಗೆ, ಕ್ವಾಂಟಂ ಸಿದ್ಧಾಂತದ ಬಗ್ಗೆಯಂತೆಯೇ, ಈಗ ಹೆಚ್ಚು ಹೇಳುವುದಿಲ್ಲ.

○

೭
ಫ್ರಾನ್ಸಿಸ್ ಬೇಕನ್

ಫ್ರಾನ್ಸಿಸ್ ಬೇಕನ್ (೧೫೬೧-೧೬೨೬) ನ ತತ್ವಜ್ಞಾನವು ಅನೇಕ ರೀತಿಗಳಲ್ಲಿ ತೃಪ್ತಿಕರವಾಗಿಲ್ಲದಿದ್ದರೂ, ಆಧುನಿಕ ಅನುಗಮನ ವಿಧಾನದ ಸ್ಥಾಪಕನೆಂದೂ ವೈಜ್ಞಾನಿಕ ಕಾರ್ಯವಿಧಾನವನ್ನು ತಾರ್ಕಿಕ ವ್ಯವಸ್ಥೆಗೊಳಪಡಿಸುವ ಪ್ರಯತ್ನದ ಪ್ರವರ್ತಕನೆಂದೂ ಶಾಶ್ವತ ಗೌರವಕ್ಕೆ ಪಾತ್ರನಾಗುತ್ತಾನೆ.

ಅವನು ಲಾರ್ಡ್ ಕೀಪರ್ ಆಫ್ ದ ಗ್ರೇಟ್ ಸೀಲ್ ಸರ್ ನಿಕೋಲಾಸ್ ಬೇಕನ್‌ನ ಮಗ, ಅವನ ಸೋದರತ್ತೆಯು ಸರ್ ವಿಲಿಯಂ ಸೆಸಿಲ್ (ಆನಂತರ ಲಾರ್ಡ್ ಬರ್ಘ್ಲೇ) ನ ಹೆಂಡತಿ; ಹೀಗೆ ಅವನು ಬೆಳೆದದ್ದು ದೇಶದ ವ್ಯವಹಾರಗಳ ನಡುವೆ. ಅವನು ಇಪ್ಪತ್ತಮೂರನೆಯ ವರ್ಷಕ್ಕೇ ಸಂಸತ್ತನ್ನು ಪ್ರವೇಶಿಸಿದ, ಎಸೆಕ್ಸ್‌ನ ಸಲಹೆಗಾರನಾದ. ಇಷ್ಟಾದರೂ, ಎಸೆಕ್ಸ್ ಅವನನ್ನು ಬಯಸದಿದ್ದರೂ ತನ್ನ ನಿರ್ವಹಣೆಯನ್ನು ಮುಂದುವರಿಸಿದ. ಇದಕ್ಕಾಗಿ ಅವನು ತೀವ್ರ ಟೀಕೆಗೊಳಗಾದ. ನಿದರ್ಶನಕ್ಕೆ, ಲಿಟನ್ ಸ್ಟ್ರಾಚಿಯು ತನ್ನ 'ಎಲಿಜ಼ಬೆತ್ ಅಂಡ್ ಎಸೆಕ್ಸ್' ಕೃತಿಯಲ್ಲಿ ಬೇಕನ್ ಅನ್ನು ವಿಶ್ವಾಸಘಾತುಕತೆ ಮತ್ತು ಕೃತಘ್ನತೆಗಳ ಸಾಕಾರವೆಂದು ಚಿತ್ರಿಸುತ್ತಾನೆ. ಇದು ತೀರ ಅನ್ಯಾಯ. ಎಸೆಕ್ಸ್ ನಿಷ್ಠೆಯಿಂದಿರುವವರೆಗೂ ಅದರೊಡನೆ ಅವನು ಕಾರ್ಯನಿರ್ವಹಿಸಿದ, ಅವನ ಬಗ್ಗೆ ನಿಷ್ಠೆಯನ್ನು ಮುಂದುವರಿಸಿದರೆ ರಾಜದ್ರೋಹವಾಗುವುದೆಂದಾಗ ಅವನನ್ನು ತೊರೆಯಲಾಯಿತು. ಅವನ ಕಾಲದ ಕಡು ನೀತಿವಂತನೂ ಖಂಡಿಸಬಹುದಾದ ಯಾವ ತಪ್ಪೂ ಇದರಲ್ಲಿಲ್ಲ.

ಎಸೆಕ್ಸ್ ಅವನನ್ನು ತೊರೆದಾಗಲೂ, ಎಲಿಜ಼ಬೆತ್ ರಾಣಿಯು ಜೀವಿತಾವಧಿಯಲ್ಲಿ ಅವನು ಸಂಪೂರ್ಣವಾಗಿ ಅವಳ ಪರವಾಗಿರಲಿಲ್ಲ. ಆದರೆ ಜೇಮ್ಸ್ ಸಿಂಹಾಸನವೇರಿದಾಗ, ಅವನ ಅದೃಷ್ಟ ಉತ್ತಮವಾಯಿತು. ೧೬೧೭ ರಲ್ಲಿ ತನ್ನ ತಂದೆಯ ಕೀಪರ್ ಆಫ್ ಗ್ರೇಟ್ ಸೀಲ್ ಸ್ಥಾನವನ್ನು ಪಡೆದ, ೧೬೧೮ ರಲ್ಲಿ ಲಾರ್ಡ್ ಚಾನ್ಸೆಲರ್ ಆದ. ಈ ದೊಡ್ಡ ಹುದ್ದೆಯನ್ನು ಎರಡು ವರ್ಷಗಳ ಕಾಲವಷ್ಟೇ ನಿಭಾಯಿಸಿದ ಮೇಲೆ, ಅವನನ್ನು ಕಕ್ಷಿದಾರರಿಂದ ಲಂಚ ಸ್ವೀಕರಿಸಿದ ಆರೋಪದ

ಮೇಲೆ ಶಿಕ್ಷಿಸಲಾಯಿತು. ಅವನು ತಪ್ಪನ್ನೊಪ್ಪಿಕೊಂಡ, ಆದರೆ ಕೊಡುಗೆಗಳು ತನ್ನ ನಿರ್ಧಾರವನ್ನೆಂದೂ ಬದಲಿಸಲಿಲ್ಲವೆಂದು ನಿವೇದಿಸಿಕೊಂಡ. ಆ ಬಗ್ಗೆ, ಎಲ್ಲರೂ ತಮ್ಮವೇ ಅಭಿಪ್ರಾಯವನ್ನು ಹೊಂದಬಹುದು, ಯಾಕೆಂದರೆ ಇತರ ಸನ್ನಿವೇಶಗಳಲ್ಲಿ ಬೇಕನ್ ತೆಗೆದುಕೊಳ್ಳಬಹುದಾಗಿದ್ದ ನಿರ್ಧಾರಗಳ ಕುರಿತು ಯಾವುದೇ ಆಧಾರ ಸಿಕ್ಕಲಾರದು. ಅವನಿಗೆ ೪೦೦೦೦ ಪೌಂಡ್ ದಂಡ ವಿಧಿಸಲಾಯಿತು, ರಾಜ ಹೇಳಿದಷ್ಟು ಕಾಲ ಕೋಟೆಯಲ್ಲಿ ಬಂಧಿಯಾಗಿರಬೇಕು, ಅಲ್ಲದೆ ಶಾಶ್ವತವಾಗಿ ಆಸ್ಥಾನದಿಂದ ಬಹಿಷ್ಕೃತನಾಗಿ ಯಾವುದೇ ಅಧಿಕಾರವನ್ನು ಹೊಂದತಕ್ಕದ್ದಲ್ಲ. ಈ ತೀರ್ಪನ್ನು ಭಾಗಶಃ ಮಾತ್ರ ಜಾರಿಗೊಳಿಸಲಾಯಿತು. ಅವನನ್ನು ದಂಡ ತೆರುವಂತೆ ಬಲವಂತ ಮಾಡಲಿಲ್ಲ, ನಾಲ್ಕು ದಿನಗಳ ಕಾಲವಷ್ಟೇ ಬಂಧಿಯಾಗಿದ್ದ. ಆದರೆ ಸಾರ್ವಜನಿಕ ಹುದ್ದೆಯನ್ನು ಹೊಂದಲು ಶಾಶ್ವತವಾಗಿ ಸಾಧ್ಯವಿರಲಿಲ್ಲ. ಹೀಗಾಗಿ ಅವನು ತನ್ನ ಉಳಿದ ಜೀವಿತಾವಧಿಯನ್ನು ಮುಖ್ಯ ಕೃತಿಗಳನ್ನು ಬರೆಯಲು ಬಳಸಿಕೊಂಡ.

ಆ ಕಾಲದ ಕಾನೂನು ವೃತ್ತಿಯ ನೈತಿಕತೆಯು ಒಂದು ರೀತಿ ಸಡಿಲವಾದುದು. ಪ್ರತಿಯೊಬ್ಬ ನ್ಯಾಯಾಧೀಶನೂ ಉಡುಗೊರೆಗಳನ್ನು ಸ್ವೀಕರಿಸುತ್ತಿದ್ದ, ಸಾಮಾನ್ಯವಾಗಿ ಎರಡೂ ಪಕ್ಷಗಳಿಂದ. ನ್ಯಾಯಾಧೀಶರುಗಳು ಲಂಚ ಸ್ವೀಕರಿಸುವುದನ್ನು ಈಗ ನಾವು ಅನೈತಿಕವೆಂದು ಭಾವಿಸುತ್ತೇವೆ, ಅದರಲ್ಲೂ ಹೆಚ್ಚು ನೀಚವಾದುದೆಂದರೆ, ಅದನ್ನು ಪಡೆದ ಮೇಲೆ, ಅದನ್ನು ಕೊಟ್ಟವರ ವಿರುದ್ಧ ನಿರ್ಧರಿಸುವುದು. ಆ ಕಾಲದಲ್ಲಿ, ಉಡುಗೊರೆಗಳು ಮಾಮೂಲಾಗಿದ್ದವು, ಒಬ್ಬ ನ್ಯಾಯಾಧೀಶನು ತನ್ನ 'ಸದ್ಗುಣ'ವನ್ನು ಅವುಗಳಿಂದ ಪ್ರಭಾವಿತನಾಗದಿರುವುದರ ಮೂಲಕ ತೋರಿಸಿಕೊಳ್ಳುತ್ತಿದ್ದ. ಒಂದು ಪಕ್ಷದ ಜಗಳದಲ್ಲಿ ಬೇಕನ್ ಅನ್ನು ಖಂಡಿಸಲಾಯಿತು, ಅದಕ್ಕೆ ಕಾರಣ ಅವನು ಮಹಾ ಅಪರಾಧಿಯೆಂಬ ಕಾರಣಕ್ಕಲ್ಲ. ಅವನೇನೂ ಅವನ ನಂತರದವನಾದ ಸರ್ ಥಮಸ್ ಮೋರ್‌ನಂತೆ ಅಸಾಧಾರಣ ನೀತಿವಂತನೇನಲ್ಲ, ಹಾಗೆಯೇ ಅವನು ಮಹಾ ಕೆಡುಕನೂ ಅಲ್ಲ. ನೈತಿಕವಾಗಿ ಅವನೊಬ್ಬ ಸಾಮಾನ್ಯ ಮನುಷ್ಯ, ತನ್ನ ಸಮಕಾಲೀನರಲ್ಲಿನ ಬಹುಜನರಿಗಿಂತ ಉತ್ತಮನೂ ಅಲ್ಲ ನೀಚನೂ ಅಲ್ಲ.

ಐದು ವರ್ಷಗಳ ಕಾಲ ಏಕಾಂತ ಜೀವನ ನಡೆಸಿ, ಕೋಳಿಯೊಂದರಲ್ಲಿ ಹಿಮವನ್ನು ತುಂಬಿ ಶೀತಲೀಕರಣ ಕುರಿತು ಪ್ರಯೋಗ ನಡೆಸುವಾಗ ಶೀತಕ್ಕೊಳಗಾಗಿ ಸತ್ತ.

ಬೇಕನ್‌ನ ಅತ್ಯಂತ ಪ್ರಮುಖ ಕೃತಿ 'ದ ಅಡ್ವಾನ್ಸ್‌ಮೆಂಟ್ ಆಫ್ ಲರ್ನಿಂಗ್' ಅನೇಕ ವಿಧಗಳಲ್ಲಿ ಅಸಾಧಾರಣವಾಗಿ ಆಧುನಿಕವಾದುದು. ಅವನನ್ನು ಸಾಮಾನ್ಯವಾಗಿ 'ಜ್ಞಾನವೇ ಅಧಿಕಾರ' (ನಾಲೆಡ್ಜ್ ಈಸ್ ಪವರ್) ಎಂಬ ಉಕ್ತಿಯ ನಿರ್ಮಾತೃವೆಂದು

ಭಾವಿಸುತ್ತಾರೆ, ಅದನ್ನು ಹೇಳಿದ ಅವನ ಹಿರಿಯರಿದ್ದಿರಬಹುದಾದರೂ, ಅವನು ಅದನ್ನು ಒತ್ತಿ ಹೇಳಿದ. ಅವನ ತಾತ್ವಿಕತೆಯೇ ಇಡಿಯಾಗಿ ಕಾರ್ಯತಃವಾದದ್ದು: ವೈಜ್ಞಾನಿಕ ಅನಾವರಣ ಮತ್ತು ನಿರ್ಮಿತಿಗಳ ಮೂಲಕ ಮಾನವನಿಗೆ ಪ್ರಕೃತಿಯ ಮೇಲಣ ನಿಯಂತ್ರಣವನ್ನು ತಂದುಕೊಡುವಂತಹುದು. ಆ ತತ್ವಜ್ಞಾನವನ್ನು ಮತಧರ್ಮಶಾಸ್ತ್ರದಿಂದ, ಅಂದರೆ ಸೂಕ್ಷ್ಮತಾರ್ಕಿಕತೆಯಲ್ಲಿರುವಂತೆ ಅದಕ್ಕೆ ನಿಕಟವಾಗಿರುವುದರಿಂದ, ದೂರವಿರಿಸಬೇಕೆಂಬುದು ಅವನ ಅಭಿಪ್ರಾಯವಾಗಿತ್ತು. ಅವನು ಸಂಪ್ರದಾಯನಿಷ್ಠೆಯ ಮತಧರ್ಮವನ್ನು ಒಪ್ಪಿಕೊಂಡಿದ್ದ; ಅಂಥ ವಿಷಯಗಳಲ್ಲಿ ಸರ್ಕಾರದೊಂದಿಗೆ ಜಗಳ ಕಾಯುವ ಪ್ರವೃತ್ತಿಯವನಲ್ಲ. ದೇವರ ಅಸ್ತಿತ್ವದ ಬಗ್ಗೆ ವೈಚಾರಿಕತೆಯು ಸಮರ್ಥನೆಯನ್ನೊದಗಿಸಬಲ್ಲುದೆಂದು ಅವನು ಭಾವಿಸಿದ್ದರೂ, ಮತಧರ್ಮಶಾಸ್ತ್ರದಲ್ಲಿ ಉಳಿದೆಲ್ಲವೂ ದೈವವಾಣಿಯಿಂದಲೇ ಬಂದುದೆಂದು ಭಾವಿಸಿದ್ದ. ಸ್ವತಂತ್ರ ವೈಚಾರಿಕತೆಯು ಶಾಸ್ತ್ರಪ್ರಾಮಾಣ್ಯವನ್ನು ಅತ್ಯಂತ ಅಸಂಗತವೆಂದು ತೋರಿದರೂ ಶ್ರದ್ಧೆಯ ಗೆಲವು ಅತ್ಯಂತ ಹಿರಿದೆಂದು ತಿಳಿದಿದ್ದ. ಆದರೆ ತತ್ವಜ್ಞಾನವು ವೈಚಾರಿಕತೆಯನ್ನು ಮಾತ್ರ ಅವಲಂಬಿಸಬೇಕು. ಹೀಗೆ ಅವನು 'ದ್ವಿಮುಖ ಸತ್ಯ'ದ ಸಮರ್ಥಕನಾಗಿದ್ದ, ಅಂದರೆ ವೈಚಾರಿಕತೆ ಮತ್ತು ದೈವವಾಣಿ. ಈ ಸಿದ್ಧಾಂತವನ್ನು ಕೆಲವರು ಆವೆರಾಯಿಸ್ಟರು ಹದಿಮೂರನೆಯ ಶತಮಾನದಲ್ಲಿ ಪ್ರತಿಪಾದಿಸುತ್ತಿದ್ದರು, ಆದರೆ ಅದನ್ನು ಚರ್ಚ್ ಖಂಡಿಸಿತ್ತು. 'ಶ್ರದ್ಧೆಯ ಗೆಲವು' ಸಂಪ್ರದಾಯನಿಷ್ಠರ ದೃಷ್ಟಿಯಲ್ಲಿ ಒಂದು ಅಪಾಯಕಾರಿ ಸಾಧನ. ಹದಿನೇಳನೆಯ ಶತಮಾನದಲ್ಲಿ ಬಾಯ್ಲ್ ಅದನ್ನು ವ್ಯಂಗ್ಯಪೂರ್ಣವಾಗಿ ಬಳಸಿದ, ಯಾವುದೋ ಸಾಂಪ್ರದಾಯಿಕ ನಂಬಿಕೆಯ ವಿರುದ್ಧವಾದ ಎಲ್ಲ ವಿಚಾರಗಳನ್ನೂ ಮಂಡಿಸಿ, ಕೊನೆಗೆ 'ಆದರೂ ಅದನ್ನು ನಂಬುವುದೆಂದರೆ ಶ್ರದ್ಧೆಯ ಗೆಲವು ಮಹತ್ವದ್ದು ತಾನೇ' ಎನ್ನುತ್ತಿದ್ದ. ಬೇಕನ್‌ನ ಸಂಪ್ರದಾಯನಿಷ್ಠೆಯು ಎಷ್ಟು ಪ್ರಾಮಾಣಿಕವಾದುದು ಎಂದು ತಿಳಿಯುವುದು ಅಸಾಧ್ಯ.

ಅನುಗಮನಕ್ಕಿಂತ ನಿಗಮನದ ಪ್ರಾಮುಖ್ಯವನ್ನು ಒತ್ತಿ ಹೇಳಿದ ವೈಜ್ಞಾನಿಕ ಮನೋಭಾವದ ತತ್ವಜ್ಞಾನಿಗಳ ದೀರ್ಘ ಪಟ್ಟಿಯಲ್ಲಿ ಬೇಕನ್ ಮೊದಲನೆಯವನಾಗಿದ್ದ. ಅವನ ಬಹುತೇಕ ಉತ್ತರಾಧಿಕಾರಿಗಳಂತೆ, ಹಿಂದೆ ಹೇಳುತ್ತಿದ್ದ 'ಸರಳ ವಿವರಗಳ ನಿಗಮನ'ಕ್ಕಿಂತ ಉತ್ತಮ ರೀತಿಯ ನಿಗಮನವನ್ನು ಕಂಡುಹಿಡಿಯುವುದಕ್ಕೆ ಅವನು ಪ್ರಯತ್ನಿಸಿದ. ಸರಳ ವಿವರಗಳ ನಿಗಮನವನ್ನು ಒಂದು ಕತೆಯ ಮೂಲಕ ನಿದರ್ಶಿಸಬಹುದು. ಒಂದಾನೊಂದು ಕಾಲದಲ್ಲಿ ವೇಲ್ಸ್‌ನ ಹಳ್ಳಿಯೊಂದರಲ್ಲಿ ಎಲ್ಲ ಗೃಹಸ್ಥರ ಹೆಸರುಗಳನ್ನು ದಾಖಲು ಮಾಡುವ ಒಬ್ಬ ಅಧಿಕಾರಿಯಿದ್ದನಂತೆ. ಅವನು ಮೊದಲು ಪ್ರಶ್ನೆಮಾಡಿದ ವ್ಯಕ್ತಿಯೆಂದರೆ ವಿಲಿಯಂ ವಿಲಿಯಮ್ಸ್ ಎಂಬುವವನು, ಹೀಗೆಯೇ ಎರಡನೆಯವನು, ಮೂರನೆಯವನು, ನಾಲ್ಕನೆಯವನು ಇತ್ಯಾದಿ

.. .. ಕೊನೆಗೆ ಅವನು ಹೀಗೆಂದುಕೊಂಡನಂತೆ: 'ಇದು ಬೇಸರ ತರಿಸುವಂತಹುದ್ದು, ಎಲ್ಲರೂ ವಿಲಿಯಂ ವಿಲಿಯಮ್ಸ್‌ರು ಎಂಬುವುದು ಸ್ಪಷ್ಟ. ಹಾಗೆಯೇ ಎಲ್ಲರ ಹೆಸರುಗಳನ್ನೂ ನಮೂದಿಸಿ ಹಾಯಾಗಿರುತ್ತೇನೆ.' ಆದರೆ ಅವನು ತಪ್ಪು ಮಾಡಿದ್ದ: ಒಬ್ಬ ಮಾತ್ರ ಜಾನ್ ಜೋನ್ಸ್ ಎಂಬುವವನಿದ್ದ. ಸರಳ ವಿವರಗಳ ನಿಗಮನವನ್ನು ತೀರ ನಂಬಿದರೆ ನಾವು ದಾರಿ ತಪ್ಪಬಹುದು ಎಂಬುದನ್ನಿದು ತೋರಿಸುತ್ತದೆ.

ನಿಗಮನವನ್ನು ಇದಕ್ಕಿಂತಲೂ ಉತ್ತಮ ವಿಧಾನವಾಗಿ ಮಾಡಬಹುದೆಂದು ಬೇಕನ್ ನಂಬಿದ್ದ. ಉದಾಹರಣೆಗೆ, ಶಾಖದ ಸ್ವರೂಪವನ್ನು ಕಂಡುಹಿಡಿಯಲು, ಅದು ವಸ್ತುವಿನ ಸಣ್ಣ ಕಣಗಳ ವೇಗವಾದ ಕ್ರಮರಹಿತ ಚಲನೆಗಳನ್ನು ಹೊಂದಿರಬಹುದಲ್ಲವೇ ಎಂದವನು (ಸರಿಯಾಗಿಯೇ) ಅಂದುಕೊಂಡ. ಅವನ ವಿಧಾನವೆಂದರೆ, ಉಷ್ಣಕಾಯಗಳ ಪಟ್ಟಿಯನ್ನು ತಯಾರಿಸುವುದು, ಶೀತಕಾಯಗಳ ಪಟ್ಟಿಯನ್ನು ಮಾಡುವುದು ಮತ್ತು ವಿವಿಧ ಮಟ್ಟದ ಉಷ್ಣಕಾಯಗಳ ಪಟ್ಟಿಯನ್ನು ಮಾಡುವುದು. ಈ ವಿಧಾನದಿಂದ ಅವನು ಉಷ್ಣಕಾಯಗಳಲ್ಲಿ ಸದಾ ಇರುವ ಮತ್ತು ಶೀತಕಾಯಗಳಲ್ಲಿಲ್ಲದಿರುವ ಹಾಗೂ ವಿವಿಧ ಮಟ್ಟದ ಉಷ್ಣತೆಯಿರುವ ಉಷ್ಣಕಾಯಗಳಲ್ಲಿನ ಸಮಾನ ಲಕ್ಷಣಗಳನ್ನು ಗುರುತಿಸಬಹುದೆಂದು ನಿರೀಕ್ಷಿಸಿದ. ಈ ವಿಧಾನದಿಂದ ಹಲವಾರು ಸಾಮಾನ್ಯ ನಿಯಮಗಳನ್ನು, ಮೊದಲನೆಯದಾಗಿ, ಸಾಮಾನ್ಯತೆಯ ಕನಿಷ್ಠ ಮಟ್ಟ, ಗುರುತಿಸಬಹುದೆಂದು ನಿರೀಕ್ಷಿಸಿದ. ಇಂತಹ ಹಲವಾರು ನಿಯಮಗಳಿಂದ ಸಾಮಾನ್ಯತೆಯ ಎರಡನೆಯ ಮಟ್ಟವನ್ನು, ಮುಂದೆಯೂ ಹೀಗೆಯೇ ತಿಳಿಯಬಹುದೆಂದುಕೊಂಡ. ಒಂದು ನಿಯಮವನ್ನು ಬೇರೊಂದು ಸನ್ನಿವೇಶದಲ್ಲಿ ಪರೀಕ್ಷಿಸುವುದು, ಆಗಲೂ ಅದೇ ಫಲಿತಾಂಶಗಳು ಬಂದರೆ ಅದು ಅಷ್ಟರ ಮಟ್ಟಿಗೆ ನಿಶ್ಚಿತವಾದಂತೆ. ಕೆಲವು ನಿದರ್ಶನಗಳು ವಿಶೇಷ ಪ್ರಾಮುಖ್ಯವನ್ನು ಹೊಂದಿದಂತಹವು, ಯಾಕೆಂದರೆ ಹಿಂದಿನ ಪರಿವೀಕ್ಷಣೆಗಳಿಗೆ ಸಂಬಂಧಿಸಿದಂತೆ ಸಾಧ್ಯವೆನಿಸುವ ಎರಡು ಸಿದ್ಧಾಂತಗಳಲ್ಲಿ ನಾವು ಒಂದನ್ನು ಆಯ್ದುಕೊಳ್ಳಬಹುದು, ಅಂತಹ ನಿದರ್ಶನಗಳನ್ನು 'ವಿಶೇಷತೆ'ಯ ನಿದರ್ಶನಗಳೆನ್ನುತ್ತಾರೆ.

ಅಂಥ ತರ್ಕಗಳನ್ನು ಬೇಕನ್ ತಿರಸ್ಕರಿಸಿದ ಮಾತ್ರವಲ್ಲ, ಜೊತೆಗೆ ಗಣಿತವನ್ನು ಅವಗಣಿಸಿದ. ಅದನ್ನು ಪ್ರಾಯಶಃ ಅಷ್ಟು ಪ್ರಯೋಗಸಾಧ್ಯವಲ್ಲ ಎಂದು ಭಾವಿಸಿದ ಅವನು ಅರಿಸ್ಟಾಟಲ್‌ನ ತೀವ್ರ ವಿರೋಧಿ, ಆದರೆ ಡೆಮಾಕ್ರಿಟಸ್ ಬಗ್ಗೆ ಅವನಿಗೆ ಅಪಾರ ಗೌರವ. ನಿಸರ್ಗ ವ್ಯವಸ್ಥೆಯು ದೈವಿಕ ಉದ್ದೇಶಕ್ಕನುಗುಣವೆಂಬುದನ್ನು ಅವನು ಅಲ್ಲಗಳೆಯದಿದ್ದರೂ, ವಾಸ್ತವ ವಿದ್ಯಮಾನಗಳ ಅನ್ವೇಷಣೆಯಲ್ಲಿ ಮೂಲಸಂಕಲ್ಪಸಿದ್ಧಾಂತದ ವಿವರಣೆಗಳನ್ನು ಸೇರಿಸುವುದನ್ನು ವಿರೋಧಿಸಿದ; ಪ್ರತಿಯೊಂದೂ ನಿಮಿತ್ತ ಕಾರಣ (ಎಫಿಷಿಯಂಟ್ ಕಾಸ್) ಗಳನ್ನು ಅನುಸರಿಸುವ ರೀತಿಯಲ್ಲಿಯೇ ವಿವರಿಸಬೇಕು ಎಂದ.

ವಿಜ್ಞಾನವು ಆಧರಿಸಬೇಕಾದ ಪರಿವೀಕ್ಷಣ ದತ್ತಾಂಶಗಳನ್ನು ಯಾವ ರೀತಿ ಜೋಡಿಸಬೇಕೆಂಬ ಸಮಂಜಸತೆಯನ್ನು ತನ್ನ ವಿಧಾನವು ತೋರಿಸುವುದೆಂದು ಭಾವಿಸಿದ. ನಾವು, ತಮ್ಮ ಒಳಗಿನಿಂದಲೇ ಬಲೆಯನ್ನು ನೇಯುವ ಜೇಡರ ಹುಳುಗಳೂ ಆಗಬಾರದು, ಕೇವಲ ಸಂಗ್ರಹಣೆ ಮಾಡುವ ಇರುವೆಗಳೂ ಆಗಬಾರದು, ಆದರೆ ಸಂಗ್ರಹಿಸಿ ಕ್ರಮವಾಗಿ ಜೋಡಿಸುವ ದುಂಬಿಗಳಾಗಬೇಕು ಎಂದು ಅವನು ಪ್ರತಿಪಾದಿಸಿದ. ಇದು ಇರುವೆಗಳಿಗೆ ಮಾಡುವ ಅಪಚಾರ, ಆದರೆ ಅದು ಬೇಕನ್‌ನ ದೃಷ್ಟಿಕೋನವನ್ನು ಸ್ಪಷ್ಟಪಡಿಸುತ್ತದೆ.

ಬೇಕನ್‌ನ ತತ್ತ್ವಜ್ಞಾನದ ಅತ್ಯಂತ ಪ್ರಖ್ಯಾತ ಭಾಗವೆಂದರೆ, ಅವನು 'ಪ್ರತಿಮೆ'ಗಳೆಂದು ಕರೆಯುವ ಅವನ ನಮೂದನೆ, ಅಂದರೆ, ಮನಸ್ಸಿನ ಕೆಟ್ಟ ಅಭ್ಯಾಸಗಳು ಜನರನ್ನು ತಪ್ಪುಮಾಡಲು ಕಾರಣವಾಗುತ್ತವೆ. ಇವುಗಳನ್ನು ಅವನು ನಾಲ್ಕು ವಿಭಾಗ ಮಾಡುತ್ತಾನೆ: 'ಕುಲದ ಪ್ರತಿಮೆಗಳು', ಅಂದರೆ ಮಾನವ ಸ್ವಭಾವದಲ್ಲಿ ಅಂತರ್ಗತವಾಗಿರುವಂತಹವು; ವಿಶೇಷವಾಗಿ ಅವನು ಉಲ್ಲೇಖಿಸುವುದೆಂದರೆ, ನಿಸರ್ಗದ ವಿದ್ಯಮಾನಗಳಲ್ಲಿ ಕಾಣುವುದಕ್ಕಿಂತ ಹೆಚ್ಚಿನ ಕ್ರಮಬದ್ಧತೆಯಿರಬೇಕೆಂದು ಬಯಸುವ ಅಭ್ಯಾಸ; 'ಗುಹೆಯ ಪ್ರತಿಮೆಗಳು', ಅಂದರೆ ವೈಯಕ್ತಿಕ ಪೂರ್ವಾಗ್ರಹಗಳು, ಒಬ್ಬ ಅನ್ವೇಷಕನ ವಿಶಿಷ್ಟ ಗುಣಲಕ್ಷಣಗಳು; 'ಮಾರುಕಟ್ಟೆ ಪ್ರತಿಮೆಗಳು', ಅಂದರೆ ಶಬ್ದಗಳ ದೌರ್ಜನ್ಯಕ್ಕೆ ಸಂಬಂಧಿಸಿದವು; ಮತ್ತು 'ರಂಗಸ್ಥಳದ ಪ್ರತಿಮೆಗಳು', ಅಂದರೆ ಪಡೆದುಕೊಂಡ ಆಲೋಚನಾಕ್ರಗಳಿಗೆ ಸಂಬಂಧಿಸಿದವು, ಇವುಗಳಲ್ಲಿ ಸಹಜವಾಗಿಯೇ ಅವನು ಗಮನಾರ್ಹ ನಿದರ್ಶನಗಳೆಂದು ಪರಿಗಣಿಸುವ ಅರಿಸ್ಟಾಟಲ್ ಮತ್ತು ಸೂಕ್ಷ್ಮತಾರ್ಕಿಕರು ಸೇರುತ್ತಾರೆ.

ಬೇಕನ್‌ನ ಆಸಕ್ತಿಯ ವಿಷಯ ವಿಜ್ಞಾನವಾದರೂ, ಅವನ ಒಟ್ಟಾರೆ ಮನೋಧರ್ಮ ವೈಜ್ಞಾನಿಕವಾದರೂ, ಅವನು ತನ್ನ ಕಾಲದಲ್ಲಾಗುತ್ತಿದ್ದ ಬಹುತೇಕ ವೈಜ್ಞಾನಿಕ ಕೆಲಸಗಳಿಂದ ವಂಚಿತನಾದ. ಕೊಪರ್ನಿಕಸ್‌ನ ಸಿದ್ಧಾಂತವನ್ನು ಅವನು ತಿರಸ್ಕರಿಸಿದ; ಯಾವುದೇ ದೃಢವಾದ ವಾದಗಳನ್ನು ಮಂಡಿಸದ ಕೊಪರ್ನಿಕಸ್‌ಗೇ ಸಂಬಂಧಿಸಿರುವ ಮಟ್ಟಿಗೆ ಅದನ್ನು ಕಡೆಗಣಿಸಬಹುದು. ಆದರೆ ಕೆಪ್ಲರ್ ಅನ್ನು ಬೇಕನ್ ಒಪ್ಪಬಹುದಾಗಿತ್ತು, ಅವನ 'ಅಸ್ಟ್ರಾನಮಿ' ೧೬೦೯ ರಲ್ಲಿ ಪ್ರಕಟವಾಗಿತ್ತು. ನಿಗಮನ ವಿಧಾನವನ್ನು ಅಮೋಘವಾಗಿ ನಿದರ್ಶಿಸಿದ ಗಿಲ್ಬರ್ಟ್‌ನ ಅಯಸ್ಕಾಂತೀಯತೆಯ ಬಗೆಗಿನ ಕೆಲಸವು ಬೇಕನ್‌ಗೆ ಮೆಚ್ಚಿಕೆಯಾಗಿದ್ದರೂ, ಅವನಿಗೆ ಆಧುನಿಕ ದೇಹರಚನಾವಿಜ್ಞಾನದ ಪ್ರವರ್ತಕನಾದ ವೆಸೇಲಿಯಸ್ ಮಾಡಿದ ಕೆಲಸದ ಪರಿಚಯವೇ ಇರಲಿಕ್ಕಿಲ್ಲ. ಅಚ್ಚರಿಯೆಂದರೆ, ಹಾರ್ವೆ ಅವನ ವೈದ್ಯಕೀಯ ಸಲಹೆಗಾರನಾಗಿದ್ದರೂ, ಅವನಿಗೆ ಹಾರ್ವೆಯ ಕಾರ್ಯದ ಪರಿಚಯವೇ ಇದ್ದಿರಲಿಕ್ಕಿಲ್ಲ ಎಂಬುದು. ಆದರೆ ತನ್ನ ರಕ್ತಪರಿಚಲನೆಯ ಅನಾವರಣವನ್ನು ಹಾರ್ವೆಯು ಬೇಕನ್‌ನ

ಮರಣಾನಂತರ ಪ್ರಕಟಿಸಿದನಾದರೂ ಬೇಕನ್‌ಗೆ ಅವನ ಸಂಶೋಧನೆಗಳ ಬಗ್ಗೆ ಅರಿವು ಇದ್ದಿತೆಂದು ಭಾವಿಸಬಹುದು. 'ಅವರು ತತ್ವಜ್ಞಾನವನ್ನು ಮಂಡಿಸುವುದು ಲಾರ್ಡ್ ಛಾನ್ಸೆಲರ್ ರೀತಿಯಲ್ಲಿ' ಎಂದು ಬರೆಯುವುದರಿಂದ, ಹಾರ್ವೆಗೆ ಬೇಕನ್ ಬಗ್ಗೆ ಅಷ್ಟೊಂದು ಗೌರವಭಾವನೆ ಇರಲಿಲ್ಲ ಎನಿಸುತ್ತದೆ. ಐಹಿಕ ಯಶಸ್ಸಿನ ಬಗ್ಗೆ ಸ್ವಲ್ಪ ಕಡಿಮೆ ಗಮನ ಕೊಟ್ಟಿದ್ದರೆ ಬೇಕನ್ ಮತ್ತಷ್ಟು ಉನ್ನತವಾದುದನ್ನು ಸಾಧಿಸಬಹುದಾಗಿತ್ತು ಎಂಬುದರಲ್ಲಿ ಅನುಮಾನವಿಲ್ಲ.

ಆಧಾರಕಲ್ಪನೆಯ ಮೇಲಿನ ಒತ್ತು ಕಡಿಮೆಯಾದುದರಿಂದ ಬೇಕನ್‌ನ ನಿಗಮನ ವಿಧಾನವು ದೋಷದಿಂದ ಕೂಡಿದೆ. ದತ್ತಾಂಶದ ಕ್ರಮಬದ್ಧ ಜೋಡಣೆಯಷ್ಟೇ ಸಮಂಜಸ ಆಧಾರಕಲ್ಪನೆಯನ್ನು ಸ್ಪಷ್ಟವಾಗಿಸುತ್ತದೆ ಎಂದವನು ನಿರೀಕ್ಷಿಸಿದ, ಆದರೆ ಅದು ಅಷ್ಟು ಸರಿಯಲ್ಲ. ವೈಜ್ಞಾನಿಕ ಕಾರ್ಯದ ಅತ್ಯಂತ ಕ್ಲಿಷ್ಟ ಭಾಗವೆಂದರೆ ಆಧಾರಕಲ್ಪನೆಯ ರೂಪಣೆ ಎಂಬುದು ಸಾಮಾನ್ಯ ಅನುಭವ, ಅದಕ್ಕೆ ಬಹಳಷ್ಟು ಸಾಮರ್ಥ್ಯ ಅನಿವಾರ್ಯ. ಆಧಾರಕಲ್ಪನೆಯನ್ನು ರೂಪಿಸುವುದನ್ನು ಸಾಧ್ಯವಾಗಿಸುವ ಯಾವುದೇ ವಿಧಾನವನ್ನು ಇಲ್ಲಿಯವರೆಗೆ ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಸಾಧಾರಣವಾಗಿ ಆಧಾರಕಲ್ಪನೆಯು ದತ್ತಾಂಶ ಸಂಗ್ರಹಣೆಯ ಪೂರ್ವಭಾವಿ ಆವಶ್ಯಕತೆ, ಯಾಕೆಂದರೆ ವಸ್ತುಸ್ಥಿತಿಗಳ ಸಂಗ್ರಹಣೆಗೆ ನಿರ್ಧಾರಕ ಸಾಮಂಜಸ್ಯವಿರಬೇಕಾಗುತ್ತದೆ. ಇಂತಹದಾವುದೂ ಇಲ್ಲದಿದ್ದರೆ, ಬರೀ ವಸ್ತುಸ್ಥಿತಿಗಳ ಕಂತೆಯು ತಬ್ಬಿಬ್ಬು ಉಂಟುಮಾಡುತ್ತದೆ, ಅಷ್ಟೆ.

ವಿಜ್ಞಾನದಲ್ಲಿ ನಿಗಮನವು ವಹಿಸುವ ಪಾತ್ರವು ಬೇಕನ್ ಅಂದುಕೊಂಡದ್ದಕ್ಕಿಂತ ಹೆಚ್ಚಿನದು. ಆಧಾರಕಲ್ಪನೆಯೊಂದನ್ನು ಪರೀಕ್ಷಿಸುವಾಗ ಎಷ್ಟೋ ವೇಳೆ, ಆಧಾರಕಲ್ಪನೆಯಿಂದ ಹಿಡಿದು ಪರಿವೀಕ್ಷಣೆಯಿಂದ ಪರೀಕ್ಷಿಸಬಹುದಾದ ಪರಿಣಾಮದವರೆಗಿನ ದೀರ್ಘ ನಿಗಮನ ಯಾತ್ರೆಯಿರುತ್ತದೆ. ಸಾಮಾನ್ಯವಾಗಿ ನಿಗಮನವು ಗಣಿತಾತ್ಮಕವಾದುದು, ಆದರೆ ಈ ವಿಷಯದಲ್ಲಿ, ವೈಜ್ಞಾನಿಕ ಅನ್ವೇಷಣೆಯಲ್ಲಿನ ಗಣಿತದ ಪ್ರಾಮುಖ್ಯವನ್ನು ಬೇಕನ್ ಅಪಮೌಲ್ಯೀಕರಿಸಿದ.

ಸರಳ ವಿವರಗಳ ನಿಗಮನದ ಪ್ರಶ್ನೆಗೆ ಇವತ್ತಿಗೂ ಉತ್ತರ ದೊರೆತಿಲ್ಲ. ವಿವರವಾದ ವೈಜ್ಞಾನಿಕ ಅನ್ವೇಷಣೆಯಲ್ಲಿ ಸರಳ ವಿವರಗಳ ವಿಧಾನವನ್ನು ಬೇಕನ್ ತಿರಸ್ಕರಿಸಿದ್ದು ಸರಿಯಾಗಿಯೇ ಇದೆ; ಯಾಕೆಂದರೆ, ವಿವರಗಳ ಬಗ್ಗೆ ಆಲೋಚಿಸುವಾಗ ನಾವು ಸಾಮಾನ್ಯ ನಿಯಮಗಳನ್ನು ಊಹಿಸಿಕೊಂಡು, ಅವುಗಳ ಆಧಾರದ ಮೇಲೆ, ಅಂಥವುಗಳನ್ನು ಸಿಂಧುವೆಂದು ಭಾವಿಸಿ ಹೆಚ್ಚು ಕಡಿಮೆ ಸಮರ್ಥ ವಿಧಾನವನ್ನು ರೂಪಿಸಿಕೊಳ್ಳಬಹುದು. ಜಾನ್ ಸ್ಟೂಅರ್ಟ್ ಮಿಲ್ ನಿಗಮನ ವಿಧಾನದ ನಾಲ್ಕು ಮಾನದಂಡಗಳನ್ನು ರೂಪಿಸಿದ, ನಿಮಿತ್ತವಾದವನ್ನು (ಲಾ ಆಫ್ ಕಾಸಾಲಿಟಿ) ಒಪ್ಪಿಕೊಂಡಿರುವವರೆಗೆ ಸರಳ ವಿವರಗಳ ನಿಗಮನವನ್ನು

ಉಪಯುಕ್ತ ರೀತಿಯಲ್ಲಿ ಬಳಸಿಕೊಳ್ಳಬಹುದು; ಆದರೆ ಈ ವಾದವನ್ನು ಒಪ್ಪುವುದೇ ಸರಳ ವಿವರಗಳ ನಿಗಮನ ವಿಧಾನದ ಆಧಾರದ ಮೇಲೆ ಎಂದವನು ಹೇಳಿದ. ವಿಜ್ಞಾನದ ಸೈದ್ಧಾಂತಿಕ ಸಂಘಟನೆಯ ಮೂಲಕ ಸಾಧಿತವಾಗುವುದು ಎಂದರೆ ವ್ಯಾಪಕವಾದ ಕೆಲವದರಲ್ಲಿ – ಪ್ರಾಯಶಃ ಒಂದರಲ್ಲಿಯೇ – ಎಲ್ಲ ಅಧೀನ ನಿಗಮನಗಳ ಸಂಗ್ರಹಣೆ. ಅಂಥ ವ್ಯಾಪಕ ನಿಗಮನಗಳು ನಿಶ್ಚಿತಗೊಳ್ಳುವುದು ಅವುಗಳಿಗೆ ಸಂಬಂಧಿಸಿದ ಸರಳ ವಿವರಗಳ ನಿಗಮನದ ಮೂಲಕ ಮತ್ತು ಒಪ್ಪಿಕೊಳ್ಳಬಹುದಾದ ಹಲವಾರು ಸಮರ್ಪಕ ನಿದರ್ಶನಗಳ ಆಧಾರದ ಮೇಲೆ. ಈ ಪರಿಸ್ಥಿತಿಯು ತುಂಬ ಅತೃಪ್ತಿಕರವಾದುದು, ಆದರೆ ಬೇಕನ್ ಆಗಲೀ ಅವನ ನಂತರದವರಾಗಲೀ ಇದರಿಂದ ಪಾರಾಗುವ ಮಾರ್ಗವನ್ನು ಕಂಡುಕೊಳ್ಳಲಿಲ್ಲ.

೮
ಹಾಬ್ಸ್‌ನ 'ಲೀವಿಯಾಥನ್'

ಹಾಬ್ಸ್ (೧೫೮೮-೧೬೭೯) ವರ್ಗೀಕರಿಸಲು ಕಷ್ಟವೆನಿಸುವ ಒಬ್ಬ ತತ್ವಜ್ಞಾನಿ. ಲಾಕ್, ಬರ್ಕ್‌ಲೇ, ಮತ್ತು ಹ್ಯೂಮ್‌ರಂತೆಯೇ ಅವನೊಬ್ಬ ಅನುಭವೈಕವಾದಿ, ಆದರೆ ಅವರಿಗಿಂತ ಭಿನ್ನವಾಗಿ ಅವನು ಗಣಿತಾತ್ಮಕ ವಿಧಾನದ ಅಭಿಮಾನಿ, ಶುದ್ಧ ಗಣಿತದ ವಿಷಯಕ್ಕೆ ಮಾತ್ರವಲ್ಲದೆ, ಅದರ ಅನ್ವಯಗಳಲ್ಲಿ ಕೂಡ. ಅವನ ಒಟ್ಟಾರೆ ದೃಷ್ಟಿಕೋನವು ಬೇಕನ್‌ಗಿಂತ ಗೆಲಿಲಿಯೋನಿಂದ ಸ್ಫೂರ್ತಿಗೊಂಡದ್ದು. ಡೆಕಾರ್ಟೆಯಿಂದ ಕ್ಯಾಂಟ್‌ವರೆಗೆ ಯೂರೋಪ್ ತತ್ವಜ್ಞಾನವು ಮಾನವ ಜ್ಞಾನದ ಸ್ವರೂಪದ ಬಗೆಗಿನ ಕಲ್ಪನೆಯನ್ನು ಗಣಿತದಿಂದಲೇ ಸಾಧಿಸಿಕೊಂಡದ್ದು, ಆದರೆ ಅವರು ಗಣಿತವನ್ನು ಅನುಭವಕ್ಕೆ ಹೊರತಾದ ಜ್ಞಾನವೆಂದು ಭಾವಿಸಿದ್ದರು. ಹೀಗಾಗಿ ಅದು, ಪ್ಲೇಟೋವಾದದಂತೆಯೇ, ಶುದ್ಧ ಚಿಂತನೆಯ ಭಾಗದ ಪಾತ್ರವನ್ನು ಕನಿಷ್ಠಗೊಳಿಸಿಕೊಳ್ಳುವಂತೆ ಮಾಡಿತು. ಮತ್ತೊಂದು ಕಡೆ, ಇಂಗ್ಲಿಷ್ ಅನುಭವೈಕವಾದವು ಕನಿಷ್ಠ ಗಣಿತ ಪ್ರಭಾವಕ್ಕೊಳಗಾಯಿತು, ಅಲ್ಲದೆ ವೈಜ್ಞಾನಿಕ ವಿಧಾನದ ಬಗ್ಗೆ ತಪ್ಪು ಕಲ್ಪನೆಯನ್ನು ಹೊಂದುವಂತಾಯಿತು. ಹಾಬ್ಸ್‌ನಲ್ಲಿ ಈ ಎರಡೂ ದೋಷಗಳಿರಲಿಲ್ಲ. ನಮ್ಮ ಕಾಲದವರೆಗೂ, ಅನುಭವೈಕವಾದಿಗಳಾದರೂ ಗಣಿತಕ್ಕೆ ಸೂಕ್ತ ಪ್ರಾಮುಖ್ಯವನ್ನು ನೀಡುವ ತತ್ವಜ್ಞಾನಿಗಳು ಬರಲೇ ಇಲ್ಲ. ಈ ವಿಷಯದಲ್ಲಿ, ಹಾಬ್ಸ್‌ನ ಹಿರಿಮೆ ದೊಡ್ಡದು. ಆದರೆ ಅವನಲ್ಲಿ ಗಂಭೀರ ದೋಷಗಳಿವೆ, ಹೀಗಾಗಿ ಅವನನ್ನು ಮೊದಲ ಪಂಕ್ತಿಯಲ್ಲಿ ಕೂರಿಸಲು ಸಾಧ್ಯವಿಲ್ಲ. ಅವನು ಸೂಕ್ಷ್ಮತೆಗಳ ಬಗ್ಗೆ ಅಸಹಿಷ್ಣು, ಮತ್ತು ಕಗ್ಗಂಟುಗಳನ್ನು ಬಿಡಿಸುವುದರಲ್ಲಿ ಅತೀವ ಆಸಕ್ತಿ. ಸಮಸ್ಯೆಗಳ ಬಗೆಗಿನ ಅವನ ಪರಿಹಾರಗಳು ತಾರ್ಕಿಕವಾದವು, ಆದರೆ ಕ್ಷುದ್ರ ವಾಸ್ತವಗಳನ್ನು ಹೊರತುಪಡಿಸಿ ರೂಪಿಸಿದವು. ಅವನು ವೀರ್ಯವಂತ, ಆದರೆ ಒರಟ; ಅವನು ಯುದ್ಧ ಖಡ್ಗವನ್ನು ಇರಿಗತ್ತಿಗಿಂತ ಚೆನ್ನಾಗಿ ಬಳಸಬಲ್ಲ. ಇಷ್ಟಾದರೂ, ಅವಕಾಶದ ಬಗೆಗಿನ ಅವನ ಸಿದ್ಧಾಂತವು ಎಚ್ಚರದ ಪರಿಗಣನೆಗೆ ಅರ್ಹವಾದುದು, ಹಿಂದಿನ ಯಾವುದಕ್ಕಿಂತಲೂ, ಮೆಕಿಯವೆಲ್ಲಿಯದಕ್ಕಿಂತಲೂ, ಅದು ಹೆಚ್ಚು ಆಧುನಿಕ ಸಿದ್ಧಾಂತವಾದುದರಿಂದ ಮತ್ತೂ ಹೆಚ್ಚಿನ ಎಚ್ಚರವನ್ನು ಬೇಡುವಂತಹುದು.

ಹಾಬ್ಸ್‌ನ ತಂದೆ ಒಬ್ಬ ವಿಕರ್ ಆಗಿದ್ದವನು, ಅವನೊಬ್ಬ ಮುಂಗೋಪಿ, ಅಲ್ಲದೆ ಅವಿದ್ಯಾವಂತ; ನೆರೆಯ ವಿಕರ್ ಒಬ್ಬನ ಜೊತೆಗೆ ಚರ್ಚ್ ಆವರಣದಲ್ಲೇ ಜಗಳವಾಡಿ ಅವನು ತನ್ನ ನೌಕರಿಯನ್ನು ಕಳೆದುಕೊಂಡ. ಇದಾದ ನಂತರ, ಹಾಬ್ಸ್‌ನನ್ನು ಅವನ ಚಿಕ್ಕಪ್ಪನೊಬ್ಬ ಸಾಕಿದ. ಅವನಿಗೆ ಪ್ರಾಚೀನ ಗ್ರಂಥಗಳ ಆಳ ಜ್ಞಾನ ಲಭಿಸಿತು, ತನ್ನ ಹದಿನಾಲ್ಕನೆಯ ವಯಸ್ಸಿಗೇ ಅವನು ಯೂರಿಪಿಡೀಸ್‌ನ 'ಮೀಡಿಯ'ವನ್ನು ಲ್ಯಾಟಿನ್‌ನಲ್ಲಿ ಅಯಾಂಬಿಕ್ ಛಂದಸ್ಸಿನಲ್ಲಿ ಅನುವಾದಿಸಿದ. (ಆನಂತರದ ಬದುಕಿನಲ್ಲಿ, ತಾನು ಪ್ರಾಚೀನ ಗ್ರಂಥಗಳಿಂದ ಉದ್ಧೃತಗಳನ್ನು ಕೊಡದಿರುವುದಕ್ಕೆ ಕಾರಣ, ತನಗೆ ಅವುಗಳ ಪರಿಚಯವಿಲ್ಲದ್ದರಿಂದ ಅಲ್ಲ ಎಂದು ಸಮರ್ಥನೀಯವಾಗಿ ಜಂಬ ಪಡುತ್ತಿದ್ದ). ಹದಿನೈದನೆಯ ವಯಸ್ಸಿನಲ್ಲಿ ಅವನು ಆಕ್ಸ್‌ಫರ್ಡ್‌ಗೆ ಹೋದ, ಅಲ್ಲಿ ಅವನಿಗೆ ಸೂಕ್ಷ್ಮತರ್ಕವನ್ನೂ ಅರಿಸ್ಟಾಟಲ್‌ನ ತತ್ತ್ವಜ್ಞಾನವನ್ನೂ ಕಲಿಸಿದರು. ಇವೇ ಮುಂದಿನ ಬದುಕಿನ ಗುಮ್ಮಗಳಾದವು; ತನಗೆ ವಿಶ್ವವಿದ್ಯಾನಿಲಯದಿಂದಾದ ಲಾಭವು ಅತ್ಯಲ್ಪ ಎಂದು ಹೇಳುತ್ತಲೇ ಇದ್ದ; ತನ್ನ ಬರವಣಿಗೆಗಳಲ್ಲಿ ಅವನು ವಿಶ್ವವಿದ್ಯಾನಿಲಯಗಳನ್ನು ಪದೇ ಪದೇ ಟೀಕಿಸುತ್ತಾನೆ. ೧೬೧೦ ರಲ್ಲಿ, ಅವನಿಗೆ ಇಪ್ಪತ್ತೆರಡು ವರ್ಷಗಳಾಗಿದ್ದಾಗ, ಅವನು ಲಾರ್ಡ್ ಹಾರ್ಡ್‌ವಿಕ್‌ಗೆ (ಆಮೇಲೆ ಡಾವೆನ್‌ಶೈರ್‌ನ ಎರಡನೆಯ ಡ್ಯೂಕ್) ಖಾಸಗಿ ಶಿಕ್ಷಕ (ಟ್ಯೂಟರ್) ನಾದ, ಅವನೊಡನೆ ಭರ್ಜರಿ ಪ್ರವಾಸ ಕೈಗೊಂಡ. ಈ ಅವಧಿಯಲ್ಲೇ ಅವನು ಗೆಲಿಲಿಯೋ ಮತ್ತು ಕೆಪ್ಲರ್‌ಗಳ ಕಾರ್ಯಗಳ ಬಗ್ಗೆ ತಿಳಿದಕೊಂಡದ್ದು; ಅವುಗಳ ಆಳ ಪ್ರಭಾವಕ್ಕೊಳಗಾದ. ಅವನ ವಿದ್ಯಾರ್ಥಿ ಅವನ ಪೋಷಕನಾದ, ೧೬೨೮ ರಲ್ಲಿ ಅವನು ಸಾಯುವವರೆಗೂ ಹಾಗೆಯೇ ಇದ್ದ. ಅವನ ಮೂಲಕ ಹಾಬ್ಸ್ ಬೆನ್ ಜಾನ್ಸನ್ ಮತ್ತು ಬೇಕನ್ ಮತ್ತು ಚೆರ್‌ಬರಿಯ ಲಾರ್ಡ್ ಹರ್ಬರ್ಟ್ ಮತ್ತಿತರ ಪ್ರಮುಖ ವ್ಯಕ್ತಿಗಳನ್ನು ಭೇಟಿಯಾದ. ಸ್ವಲ್ಪ ಕಾಲ ಹಾಬ್ಸ್ ಪ್ಯಾರಿಸ್‌ನಲ್ಲಿಯೂ ಇದ್ದ, ಅಲ್ಲಿಯೇ ಅವನು ಯೂಕ್ಲಿಡ್ ಅನ್ನು ಅಭ್ಯಸಿಸಿದ್ದು; ಆನಂತರ ಅವನು ಹಿಂದಿನ ವಿದ್ಯಾರ್ಥಿಯ ಮಗನ ಖಾಸಗಿ ಶಿಕ್ಷಕನಾದ. ಅವನ ಜೊತೆಯಲ್ಲಿ ಇಟಲಿಯಲ್ಲಿ ಪ್ರವಾಸ ಮಾಡಿದ, ಅಲ್ಲಿ ಅವನು ೧೬೩೬ ರಲ್ಲಿ ಗೆಲಿಲಿಯೋನನ್ನು ಭೇಟಿಯಾದ. ೧೬೩೭ ರಲ್ಲಿ ಅವನು ಇಂಗ್ಲಂಡ್‌ಗೆ ಮರಳಿದ.

'ಲೇವಿಯಾಥನ್'ನಲ್ಲಿ ವ್ಯಕ್ತಪಡಿಸಿರುವ ರಾಜಕೀಯ ಅಭಿಪ್ರಾಯಗಳು ಅತಿರೇಕವಾಗಿ ರಾಜಪ್ರಭುತ್ವಪರವಾದವು, ಅವು ಹಾಬ್ಸ್‌ನ ಅಭಿಪ್ರಾಯಗಳಾಗಿ ಬಹು ಕಾಲ ಉಳಿದಿದ್ದವು. ೧೬೨೮ ರಲ್ಲಿ ಸಂಸತ್ತು ಹಕ್ಕುಗಳ ಘೋಷಣೆ (ಪಿಟಿಷನ್ ಆಫ್ ರೈಟ್ಸ್) ಯನ್ನು ಒಪ್ಪಿದಾಗ, ಅವನು ಥೈಸಿಡೈಡೀಸ್‌ನ ಅನುವಾದವನ್ನು ಪ್ರಕಟಿಸಿದ, ಪ್ರಜಾಪ್ರಭುತ್ವದ ಕೆಡುಕುಗಳನ್ನು ಸ್ಪಷ್ಟಪಡಿಸುವುದೇ ಅದರ ಉದ್ದೇಶವಾಗಿತ್ತು. ೧೬೪೦ ರಲ್ಲಿ ದೀರ್ಘ ಸಂಸತ್ತು ಸಮಾವೇಶಗೊಂಡಾಗ, ಹಾಗೂ ಲಾಡ್ ಮತ್ತು

ಸ್ಟ್ರಾಫರ್ಡ್‌ರನ್ನು ಸೆರೆಮನೆಗಟ್ಟಿದಾಗ, ಹಾಬ್ಸ್ ಭಯಗ್ರಸ್ತನಾಗಿ ಫ್ರಾನ್ಸ್‌ಗೆ ಓಡಿಹೋದ. ೧೬೪೧ ರಲ್ಲಿ ರಚಿತವಾದರೂ ೧೬೪೭ ರವರೆಗೂ ಪ್ರಕಟವಾಗದಿದ್ದ ಅವನ ಪುಸ್ತಕ 'ಡೆ ಸೈವ್'ನಲ್ಲಿ ಸಾರತಃ 'ಲೀವಿಯಾಥನ್' ನ ಸಿದ್ಧಾಂತವನ್ನೇ ಮಂಡಿಸುತ್ತದೆ. ಅವನ ಅಭಿಪ್ರಾಯಗಳನ್ನು ರೂಪಿಸಲು ಕಾರಣವಾದುದು ಸಾಕ್ಷಾತ್ ಸಂಭವಿಸಿದ ಅಂತರ್ಯುದ್ಧಗಳಲ್ಲ, ಅವುಗಳ ಸಂಭಾವ್ಯತೆ; ಆದರೆ ಅವನ ಭಯಗಳು ನಿಜವಾದಾಗ ಅವನ ಅಭಿಪ್ರಾಯಗಳು ಸಹಜವಾಗಿಯೇ ದೃಢವಾದವು.

ಪ್ಯಾರಿಸ್‌ನಲ್ಲಿ ಅವನನ್ನು ಅನೇಕ ಮಂದಿ ಗಣ್ಯ ಗಣಿತಜ್ಞರೂ ವಿಜ್ಞಾನಿಗಳೂ ಸ್ವಾಗತಿಸಿದರು. ಡೆಕಾರ್ಟೆಯ 'ಮೆಡಿಟೇಷನ್ಸ್' ಪ್ರಕಟಗೊಳ್ಳುವ ಮುಂಚೆಯೇ ಅದನ್ನು ಓದಿದವರಲ್ಲಿ ಇವನೂ ಒಬ್ಬನಾಗಿದ್ದ, ಅಲ್ಲದೆ ಅದರ ಬಗ್ಗೆ ಅನೇಕ ತೊಡಕುಗಳನ್ನು ವ್ಯಕ್ತಪಡಿಸಿದ, ಅವುಗಳೂ ಡೆಕಾರ್ಟೆಯ ಉತ್ತರಗಳೊಂದಿಗೆ ಪ್ರಕಟವಾದವು. ಬಹು ಬೇಗ ಅವನಿಗೆ ಇಂಗ್ಲಿಷ್ ರಾಜಪ್ರಭುತ್ವಪರರಾದ ನಿರಾಶ್ರಿತರ ಗುಂಪು ಸ್ನೇಹಿತರಾದರು. ೧೬೪೬ ರಿಂದ ೧೬೪೮ ರವರೆಗೆ ಸ್ವಲ್ಪ ಕಾಲ ಅವನು ಭವಿಷ್ಯದ ಎರಡನೆಯ ಚಾರ್ಲ್ಸ್‌ಗೆ ಗಣಿತವನ್ನು ಹೇಳಿಕೊಟ್ಟ. ಆದರೆ, ೧೬೫೧ ರಲ್ಲಿ ಅವನು 'ಲೀವಿಯಾಥನ್' ಅನ್ನು ಪ್ರಕಟಿಸಿದಾಗ, ಅದು ಯಾರಿಗೂ ಇಷ್ಟವಾಗಲಿಲ್ಲ. ಬಹುತೇಕ ನಿರಾಶ್ರಿತರನ್ನು ಪುಸ್ತಕದಲ್ಲಿನ ವೈಚಾರಿಕತೆ ರೇಗಿಸಿತು, ಅಲ್ಲದೆ ಕ್ಯಾಥೋಲಿಕ್ ಚರ್ಚ್ ವಿರುದ್ಧನ ಅದರಲ್ಲಿನ ಟೀಕೆಗಳು ಫ್ರೆಂಚ್ ಸರ್ಕಾರದ ಕಣ್ಣು ಕೆಂಪಗಾಗಿಸಿತು. ಹೀಗಾಗಿ ಹಾಬ್ಸ್ ಗುಟ್ಟಾಗಿ ಇಂಗ್ಲಂಡ್‌ಗೆ ಪರಾರಿಯಾದ, ಅಲ್ಲಿ ಅವನು ಕ್ರಾಮ್‌ವೆಲ್‌ಗೆ ಶರಣಾಗಿ ಎಲ್ಲ ರಾಜಕೀಯ ಚಟುವಟಿಕೆಗಳಿಂದ ದೂರವಾದ.

ಈ ಸಲವಾಗಲೀ ತನ್ನ ನೀಳ ಬದುಕಿನ ಇನ್ನಾವಾಗಲಾಗಲೀ ಅವನು ಸೋಮಾರಿಯಾಗಿರಲಿಲ್ಲ. ಅವನು ಬಿಷಪ್ ಬ್ರಾಮ್‌ಹಲ್ ಜೊತೆಗೆ ಸ್ವತಂತ್ರಇಚ್ಛಾಶಕ್ತಿದ ಬಗ್ಗೆ ವಿವಾದಕ್ಕಿಳಿದ; ತಾನೇ ಕಡು ನಿಯಂತ್ರಣವಾದಿ (ಡಿಟರ್ಮಿನಿಸ್ಟ್)ಯಾಗಿದ್ದ. ಜ್ಯಾಮಿತಿಜ್ಞ (ಜಿಯೋಮೀಟರ್) ನಾಗಿ ತನ್ನ ಸಾಮರ್ಥ್ಯದ ಬಗ್ಗೆ ಅತೀವ ಹೆಮ್ಮೆ ತಾಳಿ, ವರ್ತುಲದ ಮೇಲಿನ ವರ್ಗವನ್ನು ತಾನು ಕಂಡುಹಿಡಿದಿರುವುದಾಗಿ ಕಲ್ಪಿಸಿಕೊಂಡ; ಈ ವಿಷಯದಲ್ಲವನು ಆಕ್ಸ್‌ಫರ್ಡ್‌ನಲ್ಲಿ ಜ್ಯಾಮಿತಿಯ ಪ್ರಾಧ್ಯಾಪಕನಾಗಿದ್ದ ವಾಲಿಸ್ ಜೊತೆಗೆ ಪೆದ್ದು ವಿವಾದವೊಂದರಲ್ಲಿ ಸಿಲುಕಿಕೊಂಡ. ಅವನನ್ನು ಪ್ರಾಧ್ಯಾಪಕನು ಪೆಚ್ಚುಗೊಳಿಸಿದ್ದು ಸಹಜವೇ ಆಗಿತ್ತು.

ಮತಧರ್ಮಸುಧಾರಣೆಯಲ್ಲಿ ರಾಜನ ಅಲ್ಪಪ್ರಾಮಾಣಿಕ ಸ್ನೇಹಿತರೂ ಹಾಬ್ಸ್ ಚಿತ್ರವನ್ನು ಗೋಡೆಯ ಮೇಲೆ ತೂಗು ಹಾಕಿದ್ದ ಹಾಗೂ ಅವನಿಗೆ ವಾರ್ಷಿಕ ಒಂದು ನೂರು ಪೌಂಡ್‌ಗಳ ಪಿಂಚಣಿಯನ್ನು ದಯಪಾಲಿಸಿದ್ದ, ಆದರೆ ಕೊಡುವುದನ್ನು ಮರೆತಿದ್ದ, ರಾಜನೂ ಹಾಬ್ಸ್ ಅನ್ನು ತರಾಟೆಗೆ ತೆಗೆದುಕೊಂಡ. ಒಬ್ಬ ನಾಸ್ತಿಕನೆಂಬ ಸಂಶಯಕ್ಕೊಳಗಾಗಿದ್ದ ವ್ಯಕ್ತಿಯೊಬ್ಬನಿಗೆ ತೋರಿಸಿದ ಈ ಸೌಲಭ್ಯವನ್ನು ಕಂಡು

ಲಾರ್ಡ್ ಛಾನ್ಸೆಲರ್ ಆಘಾತಗೊಂಡ, ಹಾಗೆಯೇ ಸಂಸತ್ತು ಕೂಡ. ಪ್ಲೇಗ್ ಮತ್ತು ಮಹಾ ಬೆಂಕಿ ಅವಘಡಗಳ ನಂತರ, ಜನರ ಮೂಢನಂಬಿಕೆಗಳು ಮೇಲೆದ್ದಿದ್ದಾಗ, ಪ್ರಜಾಪ್ರತಿನಿಧಿ ಸಭೆಯು (ಹೌಸ್ ಆಫ್ ಕಾಮನ್ಸ್) ನಾಸ್ತಿಕ ಬರವಣಿಗೆಗಳ ಬಗ್ಗೆ, ವಿಶೇಷವಾಗಿ ಹಾಬ್ಸ್‌ನ ಬರವಣಿಗೆಗಳನ್ನು ಉಲ್ಲೇಖಿಸಿ, ವಿಚಾರಣಾ ಸಮಿತಿಯೊಂದನ್ನು ನೇಮಿಸಿತು. ಈ ಕಾಲದಿಂದಾಚೆಗೆ, ಅವನಿಗೆ ಇಂಗ್ಲಂಡ್‌ನಲ್ಲಿ ವಿವಾದಿತ ವಿಷಯಗಳ ಬಗ್ಗೆ ಏನನ್ನೂ ಪ್ರಕಟಿಸಲು ಅನುಮತಿ ದೊರೆಯಲಿಲ್ಲ. ದೀರ್ಘ ಸಂಸತ್ತಿನ ಬಗೆಗಿನ ಅವನ ಇತಿಹಾಸವೂ, ಅದಕ್ಕೆ 'ಬೆಹೆಮಾತ್' ಎಂಬ ಶೀರ್ಷಿಕೆಯಿತ್ತಿದ್ದ, ಅತ್ಯಂತ ಸಂಪ್ರದಾಯನಿಷ್ಠ ಸಿದ್ಧಾಂತಗಳನ್ನು ಮಂಡಿಸಿದ್ದರೂ, ವಿದೇಶದಲ್ಲಿ (೧೬೬೮) ಪ್ರಕಟಗೊಳ್ಳಬೇಕಾಯಿತು.. ೧೬೮೮ ರಲ್ಲಿ ಅವನ ಸಮಗ್ರ ಬರವಣಿಗೆಗಳು ಆಮ್‌ಸ್ಟರ್‌ಡ್ಯಾಂನಲ್ಲಿ ಪ್ರಕಟವಾಯಿತು. ತನ್ನ ಮುಪ್ಪಿನಲ್ಲಿ, ಅವನ ಕೀರ್ತಿ ಇಂಗ್ಲಂಡ್‌ಗಿಂತ ಬೇರೆ ದೇಶಗಳಲ್ಲಿ ಹೆಚ್ಚಾಗಿತ್ತು. ತನ್ನ ವಿರಾಮ ಕಾಲವನ್ನು ಕಳೆಯಲು ತನ್ನ ಎಂಬತ್ತನಾಲ್ಕನೆಯ ವಯಸ್ಸಿನಲ್ಲಿ ಲ್ಯಾಟಿನ್ ಪದ್ಯರೂಪದಲ್ಲಿ ಆತ್ಮಚರಿತ್ರೆಯನ್ನು ಬರೆದ, ಹೋಮರ್‌ನ ಭಾಷಾಂತರವನ್ನು ತನ್ನ ಎಂಬತ್ತೇಳನೇ ವಯಸ್ಸಿನಲ್ಲಿ ಪ್ರಕಟಿಸಿದ. ಎಂಬತ್ತೇಳನೇ ವಯಸ್ಸಿನ ನಂತರ ಅವನು ದೀರ್ಘ ಕೃತಿಗಳನ್ನು ಬರೆದುದನ್ನು ನಾನು ಕಂಡುಹಿಡಿಯಲಾಗಲಿಲ್ಲ.

ನಾವೀಗ 'ಲೀವಿಯಾಥನ್'ನಲ್ಲಿನ ಸಿದ್ಧಾಂತಗಳನ್ನು ಪರಿಗಣಿಸಬಹುದು, ಆ ಕೃತಿಯ ಮೇಲೆಯೇ ಹಾಬ್ಸ್‌ನ ಕೀರ್ತಿ ನಿಂತಿರುವುದು.

ತನ್ನ ಪುಸ್ತಕದ ಆರಂಭದಲ್ಲಿಯೇ ಅವನು ತನ್ನ ಕಡು ಭೌತವಾದವನ್ನು ಘೋಷಿಸಿಕೊಳ್ಳುತ್ತಾನೆ. ಜೀವನ ಎಂದರೆ ಅಂಗಾಂಗಗಳ ಚಲನೆ, ಅಷ್ಟೆ; ಹೀಗಾಗಿ ಸ್ವಯಂಚಾಲಕತೆ (ಆಟೋಮ್ಯಾಟ) ಗಳಲ್ಲಿರುವುದು ಕೃತಕ ಬದುಕು, ಎನ್ನುತ್ತಾನೆ. ಲೀವಿಯಾಥನ್ ಎಂದು ಅವನು ಕರೆಯುವ ಜನತಾಸಮುದಾಯವೆಂದರೆ ಕಲೆ, ಅಂದರೆ ವಾಸ್ತವದಲ್ಲಿ ಕೃತಕ ಮನುಷ್ಯ. ಇದನ್ನು ಸಾದೃಶ್ಯಕ್ಕಿಂತ ಹೆಚ್ಚಿನ ಅರ್ಥದಲ್ಲಿ ಬಳಸಲಾಗಿದೆ, ಅದನ್ನು ವಿವರಗಳಿಂದ ಸ್ಪಷ್ಟಪಡಿಸಲಾಗಿದೆ. ಸಾರ್ವಭೌಮತೆ ಎನ್ನುವುದೊಂದು ಕೃತಕ ಆತ್ಮ. ಲೀವಿಯಾಥನ್ ಮೊದಲು ಸೃಷ್ಟಿತವಾಗಿರುವ ಕರಾರುಗಳೂ ಒಡಂಬಡಿಕೆಗಳೂ 'ನಾವು ಮನುಷ್ಯನನ್ನು ಸೃಷ್ಟಿಸೋಣ' ಎಂಬ ದೇವರ ಆಜ್ಞೆಯ ಸ್ಥಾನದಲ್ಲಿ ಕೂತಿದೆ.

ಮೊದಲನೆಯ ಭಾಗವು ಮನುಷ್ಯನನ್ನು, ಹಾಬ್ಸ್ ಪರಿಗಣಿಸುವ ಆವಶ್ಯಕತೆಯ ಸಾಮಾನ್ಯ ತಾತ್ವಿಕತೆಯಿಂದ, ಒಬ್ಬ ವ್ಯಕ್ತಿಯೆಂದು ವ್ಯವಹರಿಸುತ್ತದೆ. ಸಂವೇದನೆಗಳಿಗೆ ಕಾರಣ ವಸ್ತುಗಳ ಒತ್ತಡ; ಬಣ್ಣಗಳು, ಶಬ್ದಗಳು ಮುಂತಾದವು ವಸ್ತುಗಳಲ್ಲಿಲ್ಲ. ನಮ್ಮ ಸಂವೇದನೆಗಳಿಗೆ ಸಂವಾದಿಯಾಗಿ ವಸ್ತುಗಳಲ್ಲಿರುವ ಗುಣಗಳೆಂದರೆ ಚಲನೆಗಳು. ಮೊದಲನೆಯ ಚಲನೆಯ ನಿಯಮವನ್ನು ಹೇಳಿ, ಅದನ್ನು ತಕ್ಷಣವೇ ಮನಸ್ಸಿಗೆ

ಅನ್ವಯಿಸಲಾಗಿದೆ: ಕಲ್ಪನೆಯು ಇಂದ್ರಿಯಗ್ರಾಹ್ಯತೆಯನ್ನು ಕುಂಠಿತಗೊಳಿಸುತ್ತದೆ, ಎರಡೂ ಚಲನೆಗಳೇ. ನಿದ್ದೆಯಲ್ಲಿನ ಕಲ್ಪನೆಯೇ ಕನಸು ಕಾಣುವಿಕೆ, ಕ್ರೈಸ್ತೇತರ (ಜೆಂಟೈಲ್) ರ ಮತಧರ್ಮಗಳು ಎಚ್ಚರದ ಬದುಕಿನಿಂದ ಕನಸುಗಳನ್ನು ಬೇರ್ಪಡಿಸದಿದ್ದುದರಿಂದಾಗಿ ಹುಟ್ಟಿದವು. (ದುಡುಕು ಓದುಗ ಇದನ್ನು ಕ್ರೈಸ್ತಮತಕ್ಕೂ ಅನ್ವಯಿಸಬಹುದು, ಆದರೆ ಹಾಬ್ಸ್ ತಾನೇ ಹಾಗೆ ಮಾಡಿಬಿಡುವ ಬಗ್ಗೆ ತುಂಬ ಎಚ್ಚರಿದಿಂದಿದ್ದಾನೆ.[೨೫೬]) ಕನಸುಗಳು ಭವಿಷ್ಯಸೂಚಕ ಎನ್ನುವುದು ಒಂದು ಭ್ರಮೆ; ಅಂತೆಯೇ ಮಾಟ ಮತ್ತು ದೆವ್ವಗಳಲ್ಲಿನ ನಂಬಿಕೆಯೂ.

ನಮ್ಮ ಆಲೋಚನೆಗಳ ಅನುಕ್ರಮವು ಯಾದೃಚ್ಛಿಕವಲ್ಲ, ನಿಯಮಬದ್ಧವಾದವು – ಕೆಲವೊಮ್ಮೆ ಸಂಬಂಧದಿಂದಾದವು, ಮತ್ತೆ ಕೆಲವೊಮ್ಮೆ ನಮ್ಮ ಆಲೋಚನೆಗಳ ಉದ್ದೇಶದಿಂದಾವು. (ಮನೋವಿಜ್ಞಾನದಲ್ಲಿನ ನಿಯತಿವಾದವನ್ನು ಅನ್ವಯಿಸುವಲ್ಲಿ ಇದು ಮುಖ್ಯವಾಗುತ್ತದೆ.)

ನಾವು ನಿರೀಕ್ಷಿಸಬಹುದಾದಂತೆಯೇ ಹಾಬ್ಸ್ ಒಬ್ಬ ಕಟ್ಟಾ ನಾಮಮಾತ್ರವಾದಿ (ನಾಮಿನಲಿಸ್ಟ್). ಹೆಸರುಗಳ ಹೊರತು ಯಾವುದೂ ಸಾರ್ವತ್ರಿಕವಲ್ಲ, ಶಬ್ದಗಳಿಲ್ಲದಿದ್ದರೆ ನಾವು ಸಾಮಾನ್ಯ ಕಲ್ಪನೆಯನ್ನು ಹೊಂದಲಾಗುತ್ತಿರಲಿಲ್ಲ ಎನ್ನುತ್ತಾನೆ. ಭಾಷೆಯಿಲ್ಲದಿದ್ದರೆ ಸತ್ಯಗಳೂ ಮಿಥ್ಯಗಳೂ ಇರುತ್ತಿರಲಿಲ್ಲ, ಯಾಕೆಂದರೆ 'ಸತ್ಯ' ಮತ್ತು 'ಮಿಥ್ಯ'ಗಳು ಮಾತಿನ ವಿಶೇಷಣಗಳು.

ಇದುವರೆಗೆ ಸೃಷ್ಟಿತವಾದ ಅಸಲಿ ವಿಜ್ಞಾನವೆಂದರೆ ಜ್ಯಾಮಿತಿ ಮಾತ್ರ ಎಂದವನು ಪರಿಗಣಿಸುತ್ತಾನೆ. ವೈಚಾರಿಕತೆಯು ಅಭಿಪ್ರಾಯಗಳ ಸ್ವರೂಪ, ಅವು ಸೂತ್ರೀಕರಣದಿಂದ ಆರಂಭವಾಗಬೇಕಾಗುತ್ತದೆ. ಆದರೆ ಸೂತ್ರೀಕರಣದಲ್ಲಿ ಸ್ವಯಂವಿರೋಧಿ ಅನಿಸಿಕೆಗಳನ್ನು ದೂರವಿಡುವುದು ಆವಶ್ಯಕ, ಆದರೆ ತಾತ್ವಿಕತೆಯಲ್ಲಿ ಸಾಮಾನ್ಯವಾಗಿ ಹೀಗೆ ಮಾಡುವುದಿಲ್ಲ. ನಿದರ್ಶನಕ್ಕೆ, 'ಅಮೂರ್ತ ಸತ್ವ' (ಇನ್‌ಕಾರ್ಪೋರಿಯಲ್ ಸಬ್‌ಸ್ಟೆನ್ಸ್) ಎಂಬುದು ಅಸಂಬದ್ಧ. ದೇವರು ಅಮೂರ್ತ ಸತ್ವವಲ್ಲ ಎಂಬ ಆಕ್ಷೇಪಕ್ಕೆ ಹಾಬ್ಸ್ ಎರಡು ಉತ್ತರಗಳನ್ನು ನೀಡುತ್ತಾನೆ: ಮೊದಲನೆಯದು, ದೇವರು ತತ್ವಜ್ಞಾನದ ವಸ್ತುವಲ್ಲ; ಎರಡನೆಯದು, ಅನೇಕ ತತ್ವಜ್ಞಾನಿಗಳು ದೇವರನ್ನು ಮೂರ್ತರೂಪದಲ್ಲಿ ಒಪ್ಪಿಕೊಂಡಿದ್ದಾರೆ. ಸಾಮಾನ್ಯ ಹೇಳಿಕೆಗಳ ಎಲ್ಲ ದೋಷಗಳೂ ಅಸಂಗತತೆಯಿಂದ ಬರುತ್ತವೆ (ಅಂದರೆ, ಸ್ವಯಂವಿರೋಧ) ಎನ್ನುತ್ತಾನೆ; ಅವನು ಸ್ವಯಂವಿರೋಧಕ್ಕೆ ನೀಡುವ ಉದಾಹರಣೆಗಳೆಂದರೆ ಸ್ವತಂತ್ರ ಚಿಂತನೆಯ ಪರಿಕಲ್ಪನೆ ಮತ್ತು ಚೀಸ್‌ನಲ್ಲಿರುವ ಬ್ರೆಡ್‌ನ ಆನುಷಂಗಿಕ ಲಕ್ಷಣಗಳು (ಕ್ಯಾಥೋಲಿಕ್ ನಂಬಿಕೆಯ ಪ್ರಕಾರ, ಬ್ರೆಡ್‌ನ ಆನುಷಂಗಿಕ ಲಕ್ಷಣಗಳು ಬ್ರೆಡ್ ಅಲ್ಲದ ವಸ್ತುವಿನಲ್ಲಿಯೂ

---

೨೫೬ ಬೇರೆಡೆ ಅವನೇ ಹೀಗೆನ್ನುತ್ತಾನೆ: ಕ್ರೈಸ್ತೇತರ ದೇವತೆಗಳು ಸೃಷ್ಟಿತವಾದದ್ದು ಮಾನವನ ಭಯದಿಂದಾಗಿ, ಆದರೆ ನಮ್ಮ ದೇವರು ಮೊದಲ ಚಲನೆಗಾರ (ಫಸ್ಟ್ ಮೂವರ್).

ಅಂತರ್ಗತವಾಗಿರಬಹುದು – ಎಂಬುದು ನಮಗೆಲ್ಲ ತಿಳಿದಿರುವಂತದೇ.)

ಈ ಭಾಗದಲ್ಲಿ ಹಾಬ್ಸ್ ಹಳೆಯ ಮಾದರಿಯ ವೈಚಾರಿಕತೆಯನ್ನು ಪ್ರದರ್ಶಿಸುತ್ತಾನೆ. ಕೆಪ್ಲರ್ ಒಂದು ಸಾಮಾನ್ಯ ಪ್ರತಿಪಾದನೆಯನ್ನು ನೀಡಿದ್ದ: 'ಗ್ರಹಗಳು ಸೂರ್ಯನ ಸುತ್ತ ಅಂಡಾಕೃತಿಯಲ್ಲಿ ಚಲಿಸುತ್ತವೆ'; ಆದರೆ ಇತರ ಅಭಿಪ್ರಾಯಗಳು, ಅಂದರೆ ಟಾಲೆಮಿಯ ಹೇಳಿಕೆಯಂತಹವು, ತಾರ್ಕಿಕವಾಗಿ ಅಸಂಗತವೇನಲ್ಲ. ಗೆಲಿಲಿಯೋ ಮತ್ತು ಕೆಪ್ಲರ್‌ಗಳ ಬಗ್ಗೆ ಮೆಚ್ಚಿಕೆಯಿದ್ದರೂ, ಸಾಮಾನ್ಯ ನಿಯಮಗಳನ್ನು ಸಾಧಿಸುವಲ್ಲಿ ನಿಗಮನದ ಬಳಕೆಯನ್ನು ಹಾಬ್ಸ್ ಪರಿಗಣಿಸಿರಲಿಲ್ಲ.

ಪ್ಲೇಟೋ ವಿರುದ್ಧವಾಗಿ ಹಾಬ್ಸ್ ಹೇಳುವುದೆಂದರೆ, ವೈಚಾರಿಕೆಯು ಸಹಜವಾದುದಲ್ಲ, ಶ್ರಮದಿಂದ ರೂಪಿತವಾದವು.

ಆನಂತರ ಅವನು ಬರುವುದು ರಾಗಭಾವಗಳ ಪರಿಗಣನೆಯ ಕಡೆಗೆ. 'ಪ್ರಯತ್ನ' ಎಂದರೆ ಚಲನೆಯ ಸಣ್ಣ ಆರಂಭ ಎಂದು ಹೇಳಬಹುದು; ಯಾವುದರ ಕಡೆಗಾದರೂ ಆಗಿದ್ದರೆ ಅದು 'ಬಯಕೆ'ಯಾಗುತ್ತದೆ, ಯಾವುದರಿಂದಲಾದರೂ ದೂರವಾದುದಾಗಿದ್ದರೆ ಅದು 'ಹೇವರಿಕೆ'ಯಗುತ್ತದೆ. ಪ್ರೇಮವು ಬಯಕೆಯೇ, ದ್ವೇಷವು ಹೇವರಿಕೆಯೇ. ಒಂದು ವಸ್ತುವು ಬಯಕೆಯದಾಗಿದ್ದರೆ ಅದು 'ಒಳ್ಳೆಯದು', ವಸ್ತುವು ಹೇವರಿಕೆಯದಾಗಿದ್ದರೆ 'ಕೆಟ್ಟುದು'. (ಈ ಸೂತ್ರಗಳು 'ಒಳ್ಳೆಯದು', 'ಕೆಟ್ಟುದು' ಎಂಬುವುಗಳಿಗೆ ವಸ್ತುನಿಷ್ಠತೆಯನ್ನು ನೀಡುವುದಿಲ್ಲ ಎಂಬುದನ್ನು ಗಮನಿಸಬೇಕು; ವ್ಯಕ್ತಿಗಳು ತಮ್ಮ ಬಯಕೆಗಳಲ್ಲಿ ವ್ಯತ್ಯಾಸ ಹೊಂದಿದ್ದರೆ ಅವರ ವ್ಯತ್ಯಾಸಗಳನ್ನು ಅರ್ಥೈಸುವ ಸೈದ್ಧಾಂತಿಕ ವಿಧಾನವಾವುದೂ ಇಲ್ಲ.) ರಾಗಭಾವಗಳಿಗೆ ಸಂಬಂಧಿಸಿದ ಅನೇಕ ಸೂತ್ರೀಕರಣಗಳಿವೆ, ಬಹುತೇಕ ಬದುಕಿನ ಬಗೆಗಿನ ಸ್ಪರ್ಧಾತ್ಮಕ ದೃಷ್ಟಿಕೋನವನ್ನು ಆಧರಿಸಿದವು; ನಿದರ್ಶನಕ್ಕೆ, ನಗುವು ಇದ್ದಕ್ಕಿಂತಾಗುವ ಹೆಮ್ಮೆ. ಅಗೋಚರ ಶಕ್ತಿಯ ಬಗೆಗಿನ ಭಯವೇ, ಸಾರ್ವಜನಿಕವಾಗಿದ್ದರೆ, ಮತಧರ್ಮ; ಹಾಗಿರದಿದ್ದರೆ ಮೂಢನಂಬಿಕೆ. ಹೀಗೆ ಮತಧರ್ಮವೆಂದರೇನು ಅಥವಾ ಮೂಢಂಬಿಕೆ ಎಂದರೇನು ಎಂಬ ನಿರ್ಧಾರವು ಶಾಸಕನನ್ನು ಆಧರಿಸಿರುತ್ತದೆ. ಸುಖವು ನಿರಂತರ ಪ್ರಗತಿಯಲ್ಲಿರುತ್ತದೆ; ಅದರಲ್ಲಿರುವುದು ಏಳಿಗೆಯಾಗುವುದು, ಏಳಿಗೆ ಹೊಂದಿರುವುದರಲ್ಲಲ್ಲ; ಸ್ಥಾವರ ಸೌಖ್ಯ ಎಂಬುದಿಲ್ಲ – ಸ್ವರ್ಗಸುಖದ ಹೊರತು, ಆದರೆ ಅದು ನಮ್ಮ ಗ್ರಹಿಕೆಯನ್ನು ಮೀರಿದ್ದು.

'ಇಚ್ಛೆ' ಎಂಬುದು ವಿವೇಚನೆಗಳಲ್ಲಿ ಉಳಿದಿರುವ ಕೊನೆಯ ಬಯಕೆ, ಅಷ್ಟೆ. ಅಂದರೆ, ಇಚ್ಛೆಯು ಬಯಕೆ ಮತ್ತು ಹೇವರಿಕೆಗಳಿಂದ ಭಿನ್ನವಾದುದಲ್ಲ, ಆದರೆ ಸಂಘರ್ಷ ಕಾಲದಲ್ಲಿ ಅತ್ಯಂತ ಬಲಿಷ್ಠವಾಗಿರುವುದು. ಹೀಗಾಗಿ ಇದು ಹಾಬ್ಸ್‌ನ ಸ್ವತಂತ್ರಚಿಂತನೆಯ ನಿರಾಕರಣೆಗೆ ಸಂಬಂಧಪಟ್ಟುದು.

ನಿರಂಕುಶಾಧಿಕಾರದ ಬಹುತೇಕ ಸಮರ್ಥಕರಿಗಿಂತ ಭಿನ್ನವಾಗಿ ಹಾಬ್ಸ್ ಎಲ್ಲ

ಮನುಷ್ಯರೂ ಸಹಜವಾಗಿ ಸಮಾನರು ಎನ್ನುತ್ತಾನೆ. ಸಹಜಸ್ಥಿತಿಯಲ್ಲಿ, ಯಾವುದೇ ಆಡಳಿತವ್ಯವಸ್ಥೆಯಿಲ್ಲದಿರುವಾಗ, ಪ್ರತಿಯೊಬ್ಬನೂ ತನ್ನ ಸ್ವಾತಂತ್ರ್ಯವನ್ನುಳಿಸಿಕೊಳ್ಳಲು ಬಯಸುತ್ತಾನೆ, ಆದರೆ ಇತರರ ಮೇಲೆ ಅಧಿಕಾರ ಹೊಂದುವುದು – ಈ ಎರಡೂ ಸ್ವರಕ್ಷಣಾಪ್ರವೃತ್ತಿಯ ಒತ್ತಡದಿಂದ ಉಂಟಾಗುತ್ತವೆ. ಇವುಗಳ ನಡುವಣ ಸಂಘರ್ಷದಿಂದಲೇ ಎಲ್ಲವೂ ಎಲ್ಲದರ ವಿರುದ್ಧವೂ ಯುದ್ಧ ಉಂಟಾಗುತ್ತದೆ, ಮತ್ತು ಇದರಿಂದ ಬದುಕು 'ಕ್ಷುಲ್ಲಕ, ಕ್ರೂರ ಮತ್ತು ಹ್ರಸ್ವ'ವಾಗತ್ತದೆ. ಸಹಜಸ್ಥಿತಿಯಲ್ಲಿ, ಬಡತನವೇ ಇರುವುದಿಲ್ಲ, ಆಸ್ತಿಯಿರುವುದಿಲ್ಲ, ನ್ಯಾಯ–ಅನ್ಯಾಯಗಳೇ ಇರುವುದಿಲ್ಲ; ಅಲ್ಲಿರುವುದು ಕೇವಲ ಯುದ್ಧ ಮತ್ತು 'ಬಲ ಮತ್ತು ವಂಚನೆಗಳು, ಯುದ್ಧದಲ್ಲಿನ, ಎರಡು ಪ್ರಧಾನಗುಣಗಳು.'

ಎರಡನೆಯ ಭಾಗದ ವಸ್ತುವೆಂದರೆ, ಕೇಂದ್ರಾಧಿಕಾರಕ್ಕೊಳಪಟ್ಟ ಸಮುದಾಯಗಳಾಗಿ ಸೇರಿ ಮನುಷ್ಯರು ಈ ಕೆಡುಕುಗಳಿಂದ ಹೇಗೆ ತಪ್ಪಿಸಿಕೊಳ್ಳುತ್ತಾರೆ ಎಂಬುದು. ಇದು ನಡೆಯುವುದು ಸಾಮಾಜಿಕ ಒಪ್ಪಂದದ ಮೂಲಕ ಎಂದು ಹೇಳಲಾಗಿದೆ. ಅನೇಕ ಜನರು ಒಗ್ಗೂಡಿ ಸಾರ್ವಭೌಮನನ್ನೋ ಸಾರ್ವಭೌಮ ಸಂಸ್ಥೆಯನ್ನೂ ಆಯ್ಕೆಮಾಡಿಕೊಂಡು ತಮ್ಮ ಮೇಲೆ ಅಧಿಕಾರ ನಡೆಸಲು ಮತ್ತು ಆ ಮೂಲಕ ಸಾರ್ವತ್ರಿಕ ಯುದ್ಧಗಳನ್ನು ಕೊನೆಗೊಳಿಸಲು ಒಪ್ಪುತ್ತಾರೆಂದು ಭಾವಿಸಲಾಗಿದ್ದ ಈ 'ಒಡಂಬಡಿಕೆ'ಯು (ಸಾಮಾನ್ಯವಾಗಿ ಹಾಗೆಂದು ಹಾಬ್ಸ್ ಕರೆಯುತ್ತಾನೆ) ಖಚಿತವಾದ ಚಾರಿತ್ರಿಕ ಸಂಗತಿಯೆಂಬಂತೆ ಭಾವಿಸಲಾಗಿದೆ; ಆದರೆ ಅದನ್ನು ಆ ರೀತಿಯಲ್ಲಿ ಪರಿಭಾವಿಸುವುದು ಅಸಂಗತವಾಗುತ್ತದೆ. ಜನರೇಕೆ ತಮ್ಮ ವೈಯಕ್ತಿಕ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿಕೊಂಡು ಅಂತಹ ಅಧಿಕಾರಕ್ಕೆ ಮಣಿಯುತ್ತಾರೆ, ಮಣಿಯಬೇಕು ಎಂಬುದಕ್ಕೆ ಅದೊಂದು ಊಹಾತ್ಮಕ ವಿವರಣೆ, ಜನರು ತಮ್ಮ ಮೇಲೆ ನಿಯಂತ್ರಣವನ್ನು ಹೇರಿಕೊಳ್ಳುವ ಉದ್ದೇಶವೆಂದರೆ, ಹಾಬ್ಸ್ ವಿವರಣೆಯಂತೆ, ನಮ್ಮ ಸ್ವಾತಂತ್ರ್ಯಪ್ರೇಮ ಮತ್ತು ಇತರರ ಮೇಲಿನ ಅಧಿಕಾರ ಇವುಗಳ ನಡುವಣ ನಿರಂತರ ಯುದ್ಧಗಳಿಂದ ಪಾರಾಗುವುದು.

ಜನರೇಕೆ ಇರುವೆಗಳಂತೆಯೋ ದುಂಬಿಗಳಂತೆಯೋ ಸಹಕಾರ ಹೊಂದಲಾರರು ಎಂಬ ಪ್ರಶ್ನೆಯನ್ನು ಹಾಬ್ಸ್ ವಿಶ್ಲೇಷಿಸುತ್ತಾನೆ. ಒಂದೇ ಹುಟ್ಟಿನಲ್ಲಿರುವ ಜೇನುನೊಣಗಳು ಪರಸ್ಪರ ಸ್ಪರ್ಧಿಸುವುದಿಲ್ಲ; ಅವಕ್ಕೆ ಗೌರವದ ಬಯಕೆಯಿಲ್ಲ; ಅವು ಆಡಳಿತವನ್ನು ಟೀಕಿಸಲು ತರ್ಕವನ್ನು ಬಳಸುವುದಿಲ್ಲ ಎಂದವನು ವಿವರಿಸುತ್ತಾನೆ. ಅವುಗಳ ಸಹಕಾರವು ಸಹಜವಾದುದು, ಆದರೆ ಮನುಷ್ಯರ ನಡುವಣ ಒಡಂಬಡಿಕೆಯು ಕೃತಕವಾಗಿರಬಹುದಷ್ಟೆ, ಈ ಒಡಂಬಡಿಕೆಯು ಒಬ್ಬ ವ್ಯಕ್ತಿಗೋ ಒಂದು ಸಂಘಟನೆಗೋ ಅಧಿಕಾರವನ್ನು ಒಪ್ಪಿಸಬೇಕು, ಅಲ್ಲದಿದ್ದರೆ ಅದನ್ನು ಜಾರಿಗೊಳಿಸಲಾಗುವುದಿಲ್ಲ. 'ಕತ್ತಿಗಳಿಲ್ಲದ ಒಡಂಬಡಿಕೆ ಎಂಬುದು ಬರಿಯ ಮಾತು.'

(ಪ್ರೆಸಿಡೆಂಟ್ ವಿಲ್ಸನ್ ದುರದೃಷ್ಟವಶಾತ್ ಇದನ್ನು ಮರೆತ.) ಈ ಒಡಂಬಡಿಕೆಯು, ಮುಂದೆ ಲಾಕ್ ಮತ್ತು ರೂಸೋಗಳಲ್ಲಿನಂತೆ, ಪ್ರಜೆಗಳು ಮತ್ತು ಆಳುವ ಅಧಿಕಾರದ ನಡುವಣದ್ದಲ್ಲ; ಅದು ಪ್ರಜೆಗಳು ಬಹುಮತದ ಮೂಲಕ ತಮ್ಮತಮ್ಮಲ್ಲಿಯೇ ಮಾಡಿಕೊಂಡ ಒಡಂಬಡಿಕೆ. ಅವರು ಹಾಗೆ ಆಯ್ಕೆಮಾಡಿಕೊಂಡ ಮೇಲೆ ಅವರ ರಾಜಕೀಯ ಅಧಿಕಾರ ಇನ್ನೊಂದು ತುದಿಯಲ್ಲಿರುತ್ತದೆ. ಅಲ್ಪಮತದವರೂ ಬಹುಮತಕ್ಕೆ ಬದ್ಧವಾಗಬೇಕು, ಯಾಕೆಂದರೆ ಬಹುಮತದ ಸರ್ಕಾರಕ್ಕೆ ಅಧೀನವಾಗಿರಬೇಕಾದುದೇ ಈ ಒಡಂಬಡಿಕೆ. ಸರ್ಕಾರವನ್ನು ಆಯ್ಕೆ ಮಾಡಿಯಾದ ಮೇಲೆ, ಸರ್ಕಾರವು ಆವಶ್ಯಕವೆಂದು ನೀಡುವಷ್ಟನ್ನು ಹೊರತುಪಡಿಸಿ ಜನರು ತಮ್ಮ ಎಲ್ಲ ಸ್ವಾತಂತ್ರ್ಯವನ್ನೂ ಕಳೆದುಕೊಳ್ಳುತ್ತಾರೆ. ಬಂಡಾಯದ ಹಕ್ಕು ಇರುವುದಿಲ್ಲ, ಯಾಕೆಂದರೆ ಆಡಳಿತಗಾರನು ಯಾವುದೇ ಕರಾರಿಗೆ ಒಳಪಟ್ಟಿರುವುದಿಲ್ಲ, ಆದರೆ ಪ್ರಜೆಗಳು ಒಳಪಟ್ಟಿರುತ್ತಾರೆ.

ಹೀಗೆ ಒಟ್ಟಾಗಿ ಸೇರುವ ಗುಂಪೇ ಪ್ರಜಾಸರ್ಕಾರ. 'ಲೀವಿಯಾಥನ್' ಎಂಬುದು ಮರ್ತ್ಯ ದೇವತೆ.

ಹಾಬ್ಸ್ ರಾಜಪ್ರಭುತ್ವದ ಪರವಾಗಿರುವವನು, ಆದರೆ ಅವನ ವಾದಗಳು, ಇತರ ಸಂಸ್ಥೆಗಳ ಕಾನೂನಾತ್ಮಕ ಹಕ್ಕುಗಳಿಂದ ಸೀಮಿತಗೊಳ್ಳದ ಪರಮೋಚ್ಚ ಅಧಿಕಾರವಿರುವ, ಎಲ್ಲ ಬಗೆಯ ಸರ್ಕಾರಗಳಿಗೂ ಒಂದೇ ರೀತಿಯಲ್ಲಿ ಅನ್ವಯವಾಗುವಂತಹುವು. ಅವನು ಸಂಸತ್ತನ್ನು ಮಾತ್ರ ಸಹಿಸಿಕೊಳ್ಳಬಲ್ಲ, ಆದರೆ ಸರ್ಕಾರದ ಅಧಿಕಾರವು ಸಂಸತ್ತು ಮತ್ತು ರಾಜರ ನಡುವೆ ಹಂಚಿಕೊಂಡ ವ್ಯವಸ್ಥೆಯನ್ನಲ್ಲ. ಇದು ಲಾಕ್ ಮತು ಮಾಂಟೆಸ್ಕ್ಯೂಗಳ ದೃಷ್ಟಿಕೋನಕ್ಕೆ ತದ್ವಿರುದ್ಧವಾದುದು. ಇಂಗ್ಲಿಷ್ ಅಂತರ್ಯುದ್ಧವು ಸಂಭವಿಸಿದ್ದು, ಹಾಬ್ಸ್ ಪ್ರಕಾರ, ಅಧಿಕಾರವು ರಾಜ, ಪ್ರಜಾಸರ್ಕಾರ ಮತ್ತು ಲಾರ್ಡ್‌ಗಳ ನಡುವೆ ಹಂಚಿಕೆಗೊಂಡದ್ದು.

ಪರಮೋಚ್ಚ ಅಧಿಕಾರವು, ವ್ಯಕ್ತಿಯೋ ಅಥವಾ ಸಂಸ್ಥೆಯೋ, ಸಾರ್ವಭೌಮ ಎನಿಸಿಕೊಳ್ಳುತ್ತದೆ. ಹಾಬ್ಸ್‌ನ ವ್ಯವಸ್ಥೆಯಲ್ಲಿ, ಪರಮೋಚ್ಚ ಅಧಿಕಾರವು ಅಸೀಮವಾದದ್ದು. ಅದಕ್ಕೆ ಎಲ್ಲ ಅಭಿವ್ಯಕ್ತಿ ರೂಪಗಳ ಮೇಲೆ ನಿರ್ಬಂಧ ಹೇರುವ ಅಧಿಕಾರವಿರುತ್ತದೆ. ಅದರ ಮುಖ್ಯ ಉದ್ದೇಶವು ಆಂತರಿಕ ಶಾಂತಿಯ ರಕ್ಷಣೆ, ಹೀಗಾಗಿ ಅದು ಸತ್ಯವನ್ನು ದಮನಿಸುವ ರೀತಿಯಲ್ಲಿ ಅಧಿಕಾರವನ್ನು ಚಲಾಯಿಸುವುದಿಲ್ಲ. ಯಾಕೆಂದರೆ ಶಾಂತಿಭಂಗಕ್ಕೆ ಕಾರಣವಾಗುವ ಸಿದ್ಧಾಂತವು ಸತ್ಯವಾಗಿರಲು ಸಾಧ್ಯವಿಲ್ಲ. (ವಿಶಿಷ್ಟವಾಗಿ, ವಾಸ್ತವ ದೃಷ್ಟಿಕೋನ!) ಆಸ್ತಿಯ ನಿಯಮಗಳು ಸಾರ್ವಭೌಮ ಅಧಿಕಾರಕ್ಕೆ ಒಳಪಟ್ಟದ್ದು. ಸಹಜ ಸ್ಥಿತಿಯಲ್ಲಿ ಆಸ್ತಿಯೇ ಇರುವುದಿಲ್ಲ, ಹೀಗಾಗಿ ಆಸ್ತಿ ಎಂಬುದು ಸರ್ಕಾರವೇ ಸೃಷ್ಟಿಸುವಂತಹುದು, ತನ್ನ ಸೃಷ್ಟಿಯನ್ನು ತನಗೆ ಬೇಕಾದಂತೆ ಅದು ನಿಯಂತ್ರಿಸಬಹುದು.

ಸಾರ್ವಭೌಮವು ನಿರಂಕುಶವಾಗಿರಬಹುದೆಂಬುದನ್ನು ಹಾಬ್ಸ್ ಒಪ್ಪುತ್ತಾನೆ, ಆದರೆ ಅತ್ಯಂತ ಕೆಟ್ಟ ಸರ್ವಾಧಿಕಾರವೂ ಅನಾಯಕತ್ವಕ್ಕಿಂತ ಉತ್ತಮವೇ. ಮೇಲಾಗಿ, ಅನೇಕ ವಿಷಯಗಳಲ್ಲಿ ಸಾರ್ವಭೌಮದ ಆಸಕ್ತಿಯು ಪ್ರಜೆಗಳ ಆಸಕ್ತಿಯವುಗಳಂತೆಯೇ ಇರುತ್ತದೆ. ಅವರು ಶ್ರೀಮಂತರಾದರೆ, ಅದೂ ಶ್ರೀಮಂತವಾಗಿರುತ್ತದೆ, ಅವರು ಕಾನೂನುಬದ್ಧವಾಗಿದ್ದರೆ ಅದೂ ಸುರಕ್ಷಿತವಾಗಿರುತ್ತದೆ, ಹೀಗೇ. ಬಂಡಾಯವು ತಪ್ಪು, ಅದಕ್ಕೆ ಕಾರಣ ಸಾಮಾನ್ಯವಾಗಿ ಅದು ಸೋಲುವುದು, ಮತ್ತು ಅದು, ಯಶಸ್ವಿಯಾದರೆ, ಕೆಟ್ಟ ಮೇಲ್ಪಂಕ್ತಿಯನ್ನು ಹಾಕಿಕೊಡುತ್ತದೆ, ಇತರರೂ ಬಂಡೇಳುವಂತೆ ಮಾಡುತ್ತದೆ. ದೌರ್ಜನ್ಯ ಮತ್ತು ರಾಜಪ್ರಭುತ್ವಗಳ ನಡುವಣ ಅರಿಸ್ಟಾಟಲ್ ಮಾಡುವ ವ್ಯತ್ಯಾಸವನ್ನು ಈ ಕೃತಿ ತಿರಸ್ಕರಿಸುತ್ತದೆ. ಹಾಬ್ಸ್ ಪ್ರಕಾರ 'ದೌರ್ಜನ್ಯ'ವೆಂದರೆ ಮಾತಾಡುವವನು ಇಷ್ಟಪಡದ ರಾಜಪ್ರಭುತ್ವ, ಅಷ್ಟೆ.

ರಾಜಪ್ರಭುತ್ವವು ಸಂಘಟನಾ ಪ್ರಭುತ್ವಕ್ಕಿಂತ ಉತ್ತಮವೆಂದು ತೀರ್ಮಾನಿಸಲು ಅನೇಕ ಕಾರಣಗಳನ್ನಿಲ್ಲಿ ಕೊಡಲಾಗಿದೆ. ಹಿತಾಸಕ್ತಿಗಳ ತಿಕ್ಕಾಟವಿದ್ದಾಗ ರಾಜನು ಸಾರ್ವಜನಿಕವಾದವಕ್ಕಿಂತ ತನ್ನ ಆಸಕ್ತಿಗಳನ್ನೇ ಗಮನಿಸುತ್ತಾನೆ, ಹಾಗೆಯೇ ಸಂಘಟನಾಧಿಕಾರವೂ, ಎಂಬುದನ್ನು ಒಪ್ಪಲಾಗಿದೆ. ರಾಜನಿಗೆ ತನ್ನವೇ ಆದ ಆಸಕ್ತಿಗಳಿರಬಹುದು, ಹಾಗೆಯೇ ಸಂಘಟನಾಧಿಕಾರದ ಪ್ರತಿ ಸದಸ್ಯನಿಗೂ; ಹೀಗಾಗಿ ಅವರೆಲ್ಲರ ಆಸಕ್ತಿಗಳ ಮೊತ್ತಕ್ಕಿಂತ ಒಬ್ಬ ರಾಜನ ಆಸಕ್ತಿ ಕಡಿಮೆಯಿರುವ ಸಾಧ್ಯತೆಯಿರುತ್ತದೆ. ರಾಜನು ಯಾರದೇ ಸಲಹೆಯನ್ನು ರಹಸ್ಯವಾಗಿ ಪಡೆಯಬಹುದು, ಆದರೆ ಸಂಘಟನಾಧಿಕಾರವು ತನ್ನ ಸದಸ್ಯರ ಸಲಹೆಗಳನ್ನು ಮಾತ್ರ ಪಡೆಯಬಹುದು, ಅದೂ ಬಹಿರಂಗವಾಗಿ. ಸಂಘಟನಾಧಿಕಾರದಲ್ಲಿ, ಯಾರಾದರೂ ಗೈರುಹಾಜರಾದರೆ, ಬೇರೆ ಪಕ್ಷವು ಬಹುಮತ ಹೊಂದಬಹುದು, ಇದರಿಂದಾಗಿ ಧೋರಣೆಯೇ ಬದಲಾಗಬಹುದು. ಅದಕ್ಕೂ ಮಿಗಿಲಾಗಿ, ಸಂಘಟನಾಧಿಕಾರದಲ್ಲಿ ಒಡಕು ತಲೆದೋರಿದರೆ, ಅದು ಅಂತರ್ಯುದ್ಧಕ್ಕೆ ಕಾರಣವಾಗಬಹುದು. ಈ ಎಲ್ಲ ಕಾರಣಗಳಿಂದಾಗಿ ರಾಜಪ್ರಭುತ್ವವೇ ಅತ್ಯಂತ ಶ್ರೇಷ್ಠ ಎಂದು ಹಾಬ್ಸ್ ತೀರ್ಮಾನಿಸುತ್ತಾನೆ.

ಸಂಘಟನೆಗಳ ಸದಸ್ಯರ ವೈಯಕ್ತಿಕ ಹಿತಾಸಕ್ತಿಗಳಿಗಾಗಿ ಸಾರ್ವಜನಿಕ ಹಿತವನ್ನು ಬಲಿಗೊಡುವ ಪ್ರವೃತ್ತಿಯನ್ನು ನಿರ್ಬಂಧಗೊಳಿಸಲು ಪ್ರಭಾವ ಬೀರುವ ಸಾಧ್ಯತೆಯನ್ನು ಕುರಿತಂತೆ ಇಡೀ 'ಲೀವಿಯಾಥನ್'ನಲ್ಲಿ ಎಲ್ಲಿಯೂ ಪ್ರಸ್ತಾಪವೇ ಇಲ್ಲ. ಪ್ರಾಯಶಃ ಅವನು ಪ್ರಜಾಪ್ರಭುತ್ವಾತ್ಮಕವಾಗಿ ಚುನಾಯಿತವಾದ ಸಂಸತ್ತುಗಳ ಬಗ್ಗೆ ಯೋಚಿಸುತ್ತಲೇ ಇರಲಿಲ್ಲವೆನ್ನಿಸುತ್ತದೆ, ಪ್ರಾಯಶಃ ಅವನ ತಲೆಯಲ್ಲಿದ್ದುದು ವೆನಿಸ್‌ನ ಗ್ರಾಂಡ್ ಕೌನ್ಸಿಲ್ ಅಥವಾ ಇಂಗ್ಲಂಡ್‌ನ ಹೌಸ್ ಆಫ್ ಲಾರ್ಡ್ಸ್ ಬಗ್ಗೆ ಮಾತ್ರ. ಅವನು ಪ್ರಜಾಪ್ರಭುತ್ವದ ಕಲ್ಪನೆಯನ್ನೇನೋ ಮಾಡಿಕೊಳ್ಳುತ್ತಾನೆ, ಆದರೆ ಪ್ರಾಚೀನ

ಮಾದರಿಯಲ್ಲಿ, ಅದೂ ಕಾನೂನು ರಚನೆ ಮತ್ತು ಆಡಳಿತಗಳಲ್ಲಿ ಪ್ರತಿ ಪ್ರಜೆಯೂ ನೇರವಾಗಿ ಭಾಗವಹಿಸುವ ರೀತಿಯದು. ಕನಿಷ್ಠ ಪಕ್ಷ, ಇದು ಅವನ ದೃಷ್ಟಿಕೋನವೆನಿಸುತ್ತದೆ.

ಹಾಬ್ಸ್ ವ್ಯವಸ್ಥೆಯಲ್ಲಿ, ಜನರ ಪಾತ್ರವು ಸಾರ್ವಭೌಮನ ಮೊದಲ ಆಯ್ಕೆಯಲ್ಲಿಯೇ ಕೊನೆಯಾಗುತ್ತದೆ. ಉತ್ತರಾಧಿಕಾರಿತ್ವವೂ ಸಾರ್ವಭೌಮನಿಂದಲೇ ನಿರ್ಧರಿತವಾಗಬೇಕು, ದಂಗೆಗಳು ಪರಿಣಾಮ ಬೀರದಿದ್ದ ರೋಮನ್ ಸಾಮ್ರಾಜ್ಯದಲ್ಲಿನಂತೆ. ಸಾರ್ವಭೌಮನು ತನ್ನ ಮಕ್ಕಳಲ್ಲಿಯೇ ಒಬ್ಬನನ್ನು, ಅಥವಾ ತನಗೆ ಮಕ್ಕಳಿಲ್ಲದ ಪಕ್ಷದಲ್ಲಿ ತನ್ನ ಸಮೀಪ ಬಂಧುವೊಬ್ಬನನ್ನು, ಆಯ್ಕೆಮಾಡುತ್ತಿದ್ದುದು ಸಾಮಾನ್ಯ ಪರಿಪಾಟವಾಗಿತ್ತು, ಅಲ್ಲದೆ ಇವಕ್ಕೂ ಹೊರತಾದ ಮಾರ್ಗವನ್ನನುಸರಿಸುವುದಕ್ಕೆ ಅಡ್ಡಿಪಡಿಸುವ ಯಾವ ಕಾನೂನೂ ಇರಲಿಲ್ಲ.

ಪ್ರಜೆಗಳ ಸ್ವಾತಂತ್ರ್ಯ ಕುರಿತ ಒಂದು ಅಧ್ಯಾಯವಿದೆ, ಅದು ಆರಂಭವಾಗುವುದು ಒಂದು ನಿಖರ ಸೂತ್ರದೊಂದಿಗೆ: ಸ್ವಾತಂತ್ರ್ಯವೆಂದರೆ ಚಲನೆಗೆ ಬಾಹ್ಯ ತೊಡಕುಗಳಾವುದೂ ಇಲ್ಲದಿರುವುದು. ಈ ಅರ್ಥದಲ್ಲಿ, ಸ್ವಾತಂತ್ರ್ಯವು ಆವಶ್ಯಕತೆಗನುಗುಣವಾಗಿರುವಂತಹುದು; ನಿದರ್ಶನಕ್ಕೆ, ಅದರ ಚಲನೆಗೆ ಯಾವುದೇ ಅಡ್ಡಿಗಳಿಲ್ಲದಿರುವಾಗ ನೀರು ಕೆಳಮಟ್ಟದ ಕಡೆಗೆ 'ಆವಶ್ಯಕ'ವಾಗಿ ಹರಿಯುತ್ತದೆ, ಆಗ ಅದು, ಈ ಸೂತ್ರದ ಪ್ರಕಾರ, ಸ್ವತಂತ್ರವಾದುದು. ವ್ಯಕ್ತಿಯೊಬ್ಬ ತನಗೆ ಇಷ್ಟವಾದುದನ್ನು ಮಾಡಲು ಸ್ವತಂತ್ರನಾಗಿರುತ್ತಾನೆ, ಆದರೆ ದೇವರ ಇಚ್ಛೆಯಂತೆ ನಡೆಯುವುದು ಆವಶ್ಯಕವಾಗುತ್ತದೆ. ನಮ್ಮ ಎಲ್ಲ ಇಚ್ಛೆಗಳಿಗೂ ಕಾರಣಗಳಿರುತ್ತವೆ, ಈ ಅರ್ಥದಲ್ಲಿ ಅವು ಆವಶ್ಯಕತೆಗಳು. ಪ್ರಜೆಗಳ ಸ್ವಾತಂತ್ರ್ಯ ಕುರಿತಂತೆ, ಕಾನೂನುಗಳು ಮಧ್ಯಪ್ರವೇಶಿಸದಿರುವವರೆಗೂ ಅವರು ಸ್ವತಂತ್ರರೇ; ಇದು ಸಾರ್ವಭೌಮತೆಯ ಮಿತಿಯಲ್ಲ, ಸಾರ್ವಭೌಮನು ನಿರ್ಧರಿಸಿದರೆ ಕಾನೂನುಗಳು ಅಡ್ಡಿಪಡಿಸಬಹುದು. ತಾನೇ ಸ್ವಯಂಪ್ರೇರಿತನಾಗಿ ಬಿಟ್ಟುಕೊಡದ ಹೊರತು, ಪ್ರಜೆಗಳಿಗೆ ಸಾರ್ವಭೌಮನ ವಿರುದ್ಧವಾದ ಯಾವ ಹಕ್ಕುಗಳೂ ಇರುವುದಿಲ್ಲ. ಊರಿಯನನ್ನು ಕೊಲ್ಲಲು ಡೇವಿಡ್ ಕಾರಣನಾದಾಗ, ಅವನು ಊರಿಯನಿಗೆ ಯಾವ ನೋವನ್ನೂ ಉಂಟುಮಾಡಲಿಲ್ಲ, ಯಾಕೆಂದರೆ ಊರಿಯ ಅವನ ಪ್ರಜೆಯಾಗಿದ್ದುದು; ಆದರೆ ಅವನು ಅನ್ಯಾಯವನ್ನು ಮಾಡಿದ್ದು ದೇವರಿಗೆ, ಯಾಕೆಂದರೆ ಅವನು ದೇವರ ಪ್ರಜೆಯಾಗಿದ್ದುದು ಮತ್ತು ದೇವರ ಆಜ್ಞೆಯನ್ನು ಮೀರಿದ್ದುದು.

ಪ್ರಾಚೀನ ಲೇಖಕರು, ಸ್ವಾತಂತ್ರ್ಯ ಕುರಿತ ತಮ್ಮ ಹೊಗಳಿಕೆಯಲ್ಲಿ, ಹಾಬ್ಸ್‌ನ ಪ್ರಕಾರ, ಜನರು ದೊಂಬಿ ಮತ್ತು ರಾಜದ್ರೋಹಗಳನ್ನು ಮಾಡಲು ಪ್ರೇರಿಸಿದರು. ಅವರನ್ನು ಸರಿಯಾಗಿ ಅರ್ಥೈಸಿಕೊಂಡರೆ, ಆಗ ಗೊತ್ತಾಗುತ್ತದೆ, ಅವರು ಹೊಗಳಿದ್ದು ಸಾರ್ವಭೌಮನ ಸ್ವಾತಂತ್ರ್ಯವನ್ನು, ಅಂದರೆ ವಿದೇಶೀ ಪ್ರಾಬಲ್ಯದ ವಿರುದ್ಧವಾದ

ಸ್ವಾತಂತ್ರ್ಯ ಎಂದು. ಸಾರ್ವಭೌಮನ ವಿರುದ್ಧವಾದ ಆಂತರಿಕ ಪ್ರತಿರೋಧವು ಅತ್ಯಂತ ಸಮರ್ಥನೀಯವೆಂದು ಕಂಡುಬಂದರೂ ಅದು ಖಂಡನಾರ್ಹವೇ. ಉದಾಹರಣೆಗೆ, ಸಂತ ಆಂಬ್ರೋಸ್‌ಗೆ ಥೆಸ್ಸಲೋನಿಕ ಮಾರಣಹೋಮದ ಬಳಿಕ ಚಕ್ರವರ್ತಿ ಥಿಯೋಡೋಸಿಯಸ್‌ನನ್ನು ಬಹಿಷ್ಕರಿಸಲು ಯಾವ ಅಧಿಕಾರವೂ ಇರಲಿಲ್ಲ ಎಂಬುದು ಅವನ ಅಭಿಪ್ರಾಯ. ಪೆಪಿನ್‌ರ ಪರವಾಗಿ ಮೆರೋವಿಂಗಿಯನ್‌ರಲ್ಲಿ ಕೊನೆಯವನ ನೇಮಕವನ್ನು ರದ್ದುಗೊಳಿಸಿದ ಪೋಪ್ ಝಕಾರಿಯನನ್ನು ಅವನು ತೀವ್ರವಾಗಿ ಟೀಕಿಸುತ್ತಾನೆ.

ಆದರೆ, ಸಾರ್ವಭೌಮನಿಗೆ ವಿಧೇಯವಾಗಿರುವ ಕರ್ತವ್ಯದಲ್ಲಿ ಒಂದು ಪರಿಮಿತಿಯನ್ನವನು ಒಪ್ಪಿಕೊಳ್ಳುತ್ತಾನೆ. ಸ್ವಯಂರಕ್ಷಣೆಯು ಆತ್ಯಂತಿಕವಾದುದು, ರಾಜನ ವಿರುದ್ಧವಾದರೂ ಸರಿಯೆ, ಸ್ವಯಂರಕ್ಷಣೆಯ ಹಕ್ಕು ಪ್ರಜೆಗಳಿಗಿದೆ ಎಂದವನು ಅಭಿಪ್ರಾಯಪಡುತ್ತಾನೆ. ಇದು ತರ್ಕಬದ್ಧವಾಗಿದೆ, ಯಾಕೆಂದರೆ ಸರ್ಕಾರವನ್ನು ಸ್ಥಾಪಿಸುವ ಹಿಂದಿನ ಉದ್ದೇಶವೂ ಸ್ವಯಂರಕ್ಷಣೆಯೇ. ಈ ಕಾರಣದಿಂದಾಗಿ (ಸೀಮಿತವಾದರೂ) ಸರ್ಕಾರವು ಆಜ್ಞಾಪಿಸಿದರೂ ವ್ಯಕ್ತಿಗೆ ಯುದ್ಧ ಮಾಡದಿರಲು ನಿರ್ಧರಿಸುವ ಹಕ್ಕು ಇದೆ ಎನ್ನುತ್ತಾನೆ. ಈ ಹಕ್ಕನ್ನು ಯಾವ ಆಧುನಿಕ ಸರ್ಕಾರವೂ ಕೊಡಮಾಡುವುದಿಲ್ಲ. ಅವನ ಆತ್ಮಪ್ರತ್ಯಯ ನಿಯಮದ ಕೌತುಕಮಯ ಪರಿಣಾಮವೆಂದರೆ, ಸಾರ್ವಭೌಮನ ಬಗೆಗಿನ ಪ್ರತಿರೋಧವು ಸ್ವಯಂರಕ್ಷಣೆಯ ಸಂದರ್ಭದಲ್ಲಿ ಸಮರ್ಥನೀಯವಾಗುವುದು; ಆದರೆ ಮತ್ತೊಬ್ಬನ ರಕ್ಷಣೆಯ ವಿಷಯದಲ್ಲಿನ ಪ್ರತಿರೋಧವು ಶಿಕ್ಷಾರ್ಹ.

ಮತ್ತೊಂದು ತರ್ಕಬದ್ಧ ಅಪವಾದವೂ ಇದೆ: ತನ್ನನ್ನು ರಕ್ಷಿಸುವ ಅಧಿಕಾರವಿರದ ಸಾರ್ವಭೌಮನ ಬಗೆಗಿನ ಯಾವ ಕರ್ತವ್ಯವೂ ಇರಬೇಕಾದುದಿಲ್ಲ. ಎರಡನೆಯ ಚಾರ್ಲ್ಸ್ ದೇಶಭ್ರಷ್ಟನಾಗಿರುವಾಗ ಹಾಬ್ಸ್ ಕ್ರಾಮ್‌ವೆಲ್‌ಗೆ ಶರಣಾದುದು ಸಮರ್ಥನೀಯವಾಗುತ್ತದೆ.

ರಾಜಕೀಯ ಪಕ್ಷಗಳಂತಹ ಯಾವುದೇ ಸಂಘಟನೆಗಳಿರಬಾರದು ಅಥವಾ ಈಗ ನಾವು ಕರೆಯುವ ಕಾರ್ಮಿಕ ಸಂಘಟನೆಗಳಿರಬಾರದು. ಎಲ್ಲ ಬೋಧಕರೂ ಸಾರ್ವಭೌಮನ ಮಂತ್ರಿಗಳಾಗಿರಬೇಕು, ಅವರು ಬೋಧಿಸಬೇಕಾದುದು ಯಾವುದನ್ನು ಸಾರ್ವಭೌಮನು ಉಪಯುಕ್ತವೆಂದು ಭಾವಿಸುತ್ತಾನೋ ಅವುಗಳನ್ನು ಮಾತ್ರ. ಆಸ್ತಿಯ ಹಕ್ಕುಗಳು ಇತರ ಪ್ರಜೆಗಳಿಗೆ ಸಂಬಂಧಪಟ್ಟಂತೆ ಮಾತ್ರವೇ ಸಿಂಧುವಾಗಿರುತ್ತವೆಯೇ ವಿನಾ ಸಾರ್ವಭೌಮನ ವಿರುದ್ಧವಲ್ಲ. ಸಾರ್ವಭೌಮನಿಗೆ ವಿದೇಶಿ ವ್ಯಾಪಾರವನ್ನು ಕ್ರಮಬದ್ಧಗೊಳಿಸುವ ಅಧಿಕಾರವಿರುತ್ತದೆ. ಅವನು ನಾಗರಿಕ ಕಾನೂನುಗಳಿಗೆ ಒಳಪಡುವುದಿಲ್ಲ. ಶಿಕ್ಷಿಸುವ ಅಧಿಕಾರವು ಅವನಿಗೆ ಸಹಜವಾಗಿರುತ್ತದೆ, ಯಾವುದೇ ಪರಿಕಲ್ಪನೆ ಅಥವಾ ನ್ಯಾಯದ ದೃಷ್ಟಿಯಿಂದಲ್ಲ. ಅದಕ್ಕೆ ಕಾರಣ,

ಮತ್ತೊಬ್ಬನಿಗೆ ಗಾಸಿಮಾಡುವುದನ್ನು ಬೇರಾರೂ ಪ್ರಶ್ನಿಸುವಂತಿರಲಿಲ್ಲವಾದ ಸಹಜಸ್ಥಿತಿಯಲ್ಲಿ ಎಲ್ಲರಿಗೂ ಇದ್ದ ಸ್ವಾತಂತ್ರ್ಯವನ್ನು ಅವನು ಈಗಲೂ ಉಳಿಸಿಕೊಂಡಿರುತ್ತಾನೆ.

ಪ್ರಜಾಸರ್ಕಾರವನ್ನು ರದ್ದುಗೊಳಿಸಲು ಅವನು ನೀಡುವ ಹತ್ತು ಕಾರಣಗಳು (ವಿದೇಶೀ ಆಕ್ರಮಣದ ಹೊರತಾಗಿ) ಕುತೂಹಲ ಹುಟ್ಟಿಸುತ್ತವೆ. ಅವುಗಳೆಂದರೆ: ಸಾರ್ವಭೌಮನಿಗೆ ನೀಡುವ ಅತಿ ಕಡಿಮೆ ಅಧಿಕಾರ; ಪ್ರಜೆಗಳಿಗೆ ವೈಯಕ್ತಿಕ ತೀರ್ಮಾನ ಕೈಗೊಳ್ಳುವ ಅವಕಾಶ; ಸಾಕ್ಷಿಪ್ರಜ್ಞೆಗೆ ವಿರುದ್ಧವಾದುದೆಲ್ಲ ಪಾಪಕರ ಎಂಬ ಸಿದ್ಧಾಂತ; 'ಸಾರ್ವಭೌಮನು ನಾಗರಿಕ ನಿಯಮಗಳಿಗೆ ಬದ್ಧನಾಗಬೇಕೆಂಬ ನಿಲವು' ಖಾಸಗಿ ಆಸ್ತಿಯ ಮೇಲಣ ಆತ್ಯಂತಿಕ ಹಕ್ಕಿನ ಪರಿಗಣನೆ; ಸಾರ್ವಭೌಮ ಅಧಿಕಾರದ ವಿಭಜನೆ; ಗ್ರೀಕ್ ಮತ್ತು ರೋಮನ್‌ರ ಅನುಕರಣೆ; ಐಹಿಕ ಮತ್ತು ಆಧ್ಯಾತ್ಮಿಕ ಅಧಿಕಾರಗಳ ವಿಭಜನೆ; ಸಾರ್ವಭೌಮನ ತೆರಿಗೆ ವಿಧಿಸುವ ಅಧಿಕಾರದ ನಿರಾಕರಣೆ; ಸಮರ್ಥ ಪ್ರಜೆಗಳ ಜನಪ್ರಿಯತೆ; ಮತ್ತು ಸಾರ್ವಭೌಮನೊಡನೆ ವಿವಾದಕ್ಕಿಳಿಯುವ ಸ್ವಾತಂತ್ರ್ಯ ಇವುಗಳಗೆಲ್ಲ, ಆ ಕಾಲದ ಇಂಗ್ಲಂಡ್ ಮತ್ತು ಫ್ರಾನ್ಸ್‌ಗಳಲ್ಲಿ ಬೇಕಾದಷ್ಟು ನಿದರ್ಶನಗಳು ದೊರೆಯುತ್ತವೆ.

ಸಾರ್ವಭೌಮನ ಹಕ್ಕುಗಳನ್ನು ನಂಬುವಂತೆ ಜನರಿಗೆ ಬೋಧಿಸುವುದಕ್ಕೆ ಹೆಚ್ಚಿನ ತೊಂದರೆಯಿರಬಾರದು – ಎಂಬುದು ಹಾಬ್ಸ್‌ನ ಅಭಿಪ್ರಾಯ; ಯಾಕೆಂದರೆ ಅವರಿಗೆ ಕ್ರೈಸ್ತಮತಧರ್ಮವನ್ನು, ಅಥವಾ ತರ್ಕವಿರುದ್ಧವೆಂದು ಸತ್ವಪರಿವರ್ತನವನ್ನು ನಂಬುವಂತೆ ಹೇಳಿಕೊಡದಿದ್ದರೆ? ವಿಧೇಯತೆಯ ಕರ್ತವ್ಯವನ್ನು ಕಲಿಸಿಕೊಡಲು ನಿರ್ದಿಷ್ಟ ದಿನಗಳನ್ನು ಗೊತ್ತುಪಡಿಸಬೇಕು. ಜನರಿಗೆ ಬೋಧಿಸುವುದು ವಿಶ್ವವಿದ್ಯಾನಿಲಯಗಳ ಸಮರ್ಪಕ ಬೋಧನೆಯನ್ನು ಅವಲಂಬಿಸುತ್ತದೆ, ಹೀಗಾಗಿ ಅದನ್ನು ಎಚ್ಚರಿಕೆಯಿಂದ ಮೇಲುಸ್ತುವಾರಿಗೊಳಪಡಿಸಬೇಕು. ಪೂಜಾವಿಧಾನವು ಒಂದೇ ಬಗೆಯದಾಗಿರಬೇಕು, ಸಾರ್ವಭೌಮನು ಆಜ್ಞೆಮಾಡಿದುದೇ ಮತಧರ್ಮವಾಗುತ್ತದೆ.

ತನ್ನ ಪುಸ್ತಕವನ್ನು ಕೆಲವು ಮಂದಿ ಸಾರ್ವಭೌಮರಾದರೂ ಓದಿ ಅಧಿಕಾರವನ್ನು ಆತ್ಯಂತಿಕಗೊಳಿಸಿಕೊಳ್ಳುತ್ತಾರೆ ಎಂಬ ನಿರೀಕ್ಷೆಯೊಡನೆ ಎರಡನೆಯ ಭಾಗ ಮುಗಿಯುತ್ತದೆ; ಯಾರಾದರೂ ರಾಜರು ತತ್ವಜ್ಞಾನಿಗಳಾಗುತ್ತಾರೆ ಎಂಬ ಪ್ಲೇಟೋನ ನಿರೀಕ್ಷೆಗಿಂತ ಇದು ಕಡಿಮೆ ಅವಾಸ್ತವವಾದುದು. ಪುಸ್ತಕನ್ನೋದುವುದು ಸುಲಭ ಹಾಗೂ ಸಾಕಷ್ಟು ಆಸಕ್ತಿದಾಯಕವಾದುದು ಎಂದು ರಾಜರುಗಳಿಗೆ ಭರವಸೆ ಕೊಡುತ್ತದೆ.

'ಕ್ರೈಸ್ತ ಪ್ರಜಾಸರ್ಕಾರ' ಎಂಬ ಮೂರನೆಯ ಭಾಗವು ಸಾರ್ವತ್ರಿಕ ಚರ್ಚ್ ಎಂಬುದಿಲ್ಲ, ಯಾಕೆಂದರೆ ಚರ್ಚ್ ನಾಗರಿಕ ಸರ್ಕಾರದ ಅಧೀನ ಎಂಬುದನ್ನು

ವಿವರಿಸುತ್ತದೆ. ಪ್ರತಿ ದೇಶದಲ್ಲಿಯೂ, ರಾಜನೇ ಚರ್ಚ್‌ನ ಮುಖ್ಯಸ್ಥನಾಗಿರಬೇಕು; ಪೋಪ್‌ನ ಪರಮಾಧಿಕಾರ ಮತ್ತು ದೋಷಾತೀತತೆಯನ್ನು ಒಪ್ಪಲಾಗುವುದಿಲ್ಲ. ಕ್ರೈಸ್ತೇತರ ಸಾರ್ವಭೌಮನ ಪ್ರಜೆಯಾಗುವ ಕ್ರೈಸ್ತನು ಹೆದರಿಕೆಯಿಂದ ವಿಧೇಯನಾಗಬೇಕು, ಯಾಕೆಂದರೆ ರಿಮನ್‌ನ ಆಸ್ಥಾನದಲ್ಲಿ ತಲೆಬಾಗಬೇಕಾದ ಯಾತನೆಯನ್ನು ಅನುಭವಿಸಬೇಕಾಗಿಲಿಲ್ಲವೇ? ಹೀಗೆಂಬುದು, ಇಲ್ಲಿನ ವಾದಸರಣಿ.

'ಕತ್ತಲ ಸಾಮ್ರಾಜ್ಯದ ಬಗ್ಗೆ' ಎಂಬ ನಾಲ್ಕನೆಯ ಭಾಗವು ಮುಖ್ಯವಾಗಿ ರೋಮ್‌ನ ಚರ್ಚ್‌ನ ಟೀಕೆಗೆ ಮೀಸಲಾಗಿದೆ; ಅದನ್ನು ಹಾಬ್ಸ್ ದ್ವೇಷಿಸಲು ಕಾರಣ ಅಲ್ಲಿ ಐಹಿಕ ಅಧಿಕಾರಕ್ಕಿಂತ ಆಧ್ಯಾತ್ಮಿಕ ಅಧಿಕಾರವು ಮಿಗಿಲೆಂಬ ಪರಿಸ್ಥಿತಿಯಿದೆ. ಅಧ್ಯಾಯದ ಉಳಿದ ಭಾಗವು 'ವ್ಯರ್ಥ ತತ್ವಜ್ಞಾನ'ದ ಬಗೆಗಿನ ಟೀಕೆಯಿಂದ ಕೂಡಿದೆ, ಅದು ಸಾಮಾನ್ಯವಾಗಿ ಅರಿಸ್ಟಾಟಲ್‌ನನ್ನು ಕುರಿತದ್ದು.

'ಲೀವಿಯಾಥನ್' ಬಗ್ಗೆ ನಾವು ಯಾವ ಅಭಿಪ್ರಾಯವನ್ನು ತಾಳಬೇಕು ಎಂಬ ಬಗ್ಗೆ ಈಗ ನಿರ್ಧರಿಸೋಣ. ಇದು ಸುಲಭವೇನಲ್ಲ, ಯಾಕೆಂದರೆ ಅದರಲ್ಲಿ ಒಳ್ಳೆಯವು ಮತ್ತು ಕೆಟ್ಟವು ನಿಕಟವಾಗಿ ಬೆಸೆದುಕೊಂಡಿವೆ.

ರಾಜಕೀಯದಲ್ಲಿ ಎರಡು ವಿಭಿನ್ನ ಪ್ರಶ್ನೆಗಳಿವೆ: ಒಂದು, ಅತ್ಯುತ್ತಮ ಸರ್ಕಾರ ಯಾವುದು ಎಂಬುದು; ಇನ್ನೊಂದು ಅದರ ಅಧಿಕಾರಗಳಿಗೆ ಸಂಬಂಧಿಸಿದವು. ಹಾಬ್ಸ್‌ನ ಪ್ರಕಾರ ಅತ್ಯುತ್ತಮವಾದುದೆಂದರೆ ರಾಜಪ್ರಭುತ್ವ, ಆದರೆ ಇದು ಅವನ ಸಿದ್ಧಾಂತದ ಮುಖ್ಯ ಭಾಗವಲ್ಲ. ಅವನ ವಾದದ ಮುಖ್ಯಾಂಶವೆಂದರೆ, ಸರ್ಕಾರದ ಅಧಿಕಾರವು ಆತ್ಯಂತಿಕವಾಗಿರಬೇಕು ಎಂಬುದು. ನವೋದಯ ಮತ್ತು ಮತಧರ್ಮಸುಧಾರಣೆಯ ಕಾಲಗಳಲ್ಲಿ ಪಶ್ಚಿಮ ಯೂರೋಪ್‌ನಲ್ಲಿ ಇಂತಹದೊಂದು ಸಿದ್ಧಾಂತವು ಮೂಡಿತ್ತು. ಮೊದಲನೆಯದಾಗಿ, ಊಳಿಗಮಾನ್ಯ ಪ್ರಭುಗಳನ್ನು ಹನ್ನೊಂದನೆಯ ಲೂಯಿ, ನಾಲ್ಕನೆಯ ಎಡ್ವರ್ಡ್ ಮತ್ತು ಇಸಾಬೆಲ್ಲ ಮತ್ತವರ ನಂತರ ಬಂದ ರಾಜರುಗಳು ಮಣಿಸಿದ್ದರು. ಆನಂತರ, ಪ್ರಾಟೆಸ್ಟೆಂಟ್ ಅವಕಾಶಗಳಲ್ಲಿ ಮತಧರ್ಮಸುಧಾರಣೆಯಿಂದಾಗಿ ಪ್ರಜಾಸರ್ಕಾರವು ಚರ್ಚ್‌ಗಿಂತ ಉತ್ತಮ ಸ್ಥಾನದಲ್ಲಿತ್ತು. ಬೇರಾವನೇ ಇಂಗ್ಲಿಷ್ ರಾಜನಿಗಿಂತ ಎಂಟನೆಯ ಹೆನ್ರಿ ಹೆಚ್ಚಿನ ಅಧಿಕಾರವನ್ನು ಅನುಭವಿಸಿದ್ದ. ಆದರೆ ಮತಧರ್ಮಸುಧಾರಣೆಯು ಫ್ರಾನ್ಸ್‌ನಲ್ಲಿ, ಮೊದಲನೆಯದಾಗಿ ತದ್ವಿರುದ್ಧ ಪರಿಣಾಮವನ್ನು ಬೀರಿತ್ತು; ಗೈಸ್‌ಗಳು ಮತ್ತು ಹ್ಯೂಜೆನಾಟ್‌ಗಳ ನಡುವೆ, ರಾಜರಿಗೆ ಯಾವ ಅಧಿಕಾರವೂ ಇರಲಿಲ್ಲ. ನಾಲ್ಕನೆಯ ಹೆನ್ರಿ ಮತ್ತು ರಿಚೆಲಿಯೂ, ಹಾಬ್ಸ್ ಬರೆಯುವ ಮುಂಚೆಯೇನಲ್ಲ, ರಾಜನ ಆತ್ಯಂತಿಕ ಅಧಿಕಾರದ ಅಸ್ತಿವಾರವನ್ನು ಹಾಕಿದ್ದರು, ಅದು ಫ್ರಾನ್ಸ್‌ನಲ್ಲಿ ಕ್ರಾಂತಿಯವರೆಗೂ ಮುಂದುವರಿಯಿತು. ಐದನೆಯ ಚಾರ್ಲ್ಸ್ ಶಾಸನಸಭೆ (ಕಾರ್ಟೆಸ್) ಗಿಂತ ಹೆಚ್ಚಿನ ಅಧಿಕಾರ ಪಡೆದಿದ್ದ, ಎರಡನೆಯ ಫಿಲಿಪ್ ಚರ್ಚ್ ವಿಷಯಕ್ಕೆ

ಹೊರತಾದ ಆತ್ಯಂತಿಕ ಅಧಿಕಾರವನ್ನು ಹೊಂದಿದ್ದ. ಅದರೆ 'ಇಂಗ್ಲಂಡ್‌ನಲ್ಲಿ ಎಂಟನೆಯ ಹೆನ್ರಿಯ ಕೆಲಸವನ್ನು ಪ್ಯೂರಿಟನ್‌ರು ಹಾಳುಗೆಡವಿದ್ದರು; ಸಾರ್ವಭೌಮನಿಗೆ ಒಡ್ಡುವ ಪ್ರತಿರೋಧವು ಅನಾಯಕತ್ವದಲ್ಲಿ ಪರ್ಯವಸಾನವಾಗಬಹುದು ಎಂಬುದನ್ನು ಹಾಬ್ಸ್‌ನಿಗೆ ಅದು ತೋರಿಸಿತು.

ಎಲ್ಲ ಸಮುದಾಯಗಳೂ ಎರಡು ಅಪಾಯಗಳನ್ನೆದುರಿಸುತ್ತವೆ: ಅನಾಯಕತ್ವ ಮತ್ತು ನಿರಂಕುಶಪ್ರಭುತ್ವ. ಪ್ಯೂರಿಟನ್‌ರು, ಅದರಲ್ಲೂ ಸ್ವತಂತ್ರವರ್ತಿಗಳು, ನಿರಂಕುಶಾಧಿಕಾರದ ಅಪಾಯಗಳನ್ನು ಬಲ್ಲವರು, ಅದಕ್ಕೆ ವ್ಯತಿರಿಕ್ತವಾಗಿ, ಮತಾಂಧ ಪ್ರತಿಸ್ಪರ್ಧಿಗಳ ನಡುವಣ ಸಂಘರ್ಷವನ್ನು ಅನುಭವಿಸಿದ್ದ ಹಾಬ್ಸ್‌ನಲ್ಲಿ ಅನಾಯಕತ್ವದ ಭಯ ತುಂಬಿಕೊಂಡಿತ್ತು. ಮತಧರ್ಮಸುಧಾರಣೆಯ ನಂತರ ಬಂದ, ಮತ್ತು ೧೬೮೮ ರ ನಂತರ ಹತೋಟಿ ಸಾಧಿಸಿದ, ಉದಾರವಾದಿ ತತ್ತ್ವಜ್ಞಾನಿಗಳಿಗೆ ಇಬ್ಬರ ಅಪಾಯದ ಅರಿವಿತ್ತು; ಅವರು ಸ್ಟ್ರಾಫರ್ಡ್ ಮತ್ತು ಅನಾಬ್ಯಾಪ್ಟಿಸ್ಟ್ ಇಬ್ಬರನ್ನೂ ಇಷ್ಟಪಡಲಿಲ್ಲ. ಇದರಿಂದ ಲಾಕ್ ಅಧಿಕಾರ ವಿಭಜನೆ ಸಿದ್ಧಾಂತದ ಕಡೆ, ಮತ್ತು ಪರಿಮಿತಿಗಳ ವಾಲುವಂತಾಯಿತು. ಇಂಗ್ಲಂಡ್‌ನಲ್ಲಿ ರಾಜನು ಪ್ರಭಾವ ಹೊಂದಿರುವವರೆಗೂ ಈ ಅಧಿಕಾರವಿಭಜನೆಯಿತ್ತು; ಆನಂತರ ಸಂಸತ್ತು ಪರಮೋಚ್ಚವಾಯಿತು, ಕೊನೆಗೆ ಸಚಿವ ಸಂಪುಟ. ಅಮೆರಿಕದಲ್ಲಿ, ಪ್ರತಿನಿಧಿ ಸಭೆ (ಕಾಂಗ್ರೆಸ್) ಮತ್ತು ಸರ್ವೋಚ್ಚ ನ್ಯಾಯಾಲಯಗಳು ಆಡಳಿತಕ್ಕೆ ಪ್ರತಿರೋಧ ಒಡ್ಡಬಹುದಾದಷ್ಟು ಮಟ್ಟಿಗೆ ಈಗಲೂ ಪರಿಮಿತಿಗಳಿವೆ. ಜರ್ಮನಿ, ಇಟಲಿ, ರಷ್ಯಾ, ಮತ್ತು ಜಪಾನ್‌ಗಳಲ್ಲಿ ಹಾಬ್ಸ್ ಅಪೇಕ್ಷಣೀಯವೆಂದು ಭಾವಿಸಿದುದಕ್ಕಿಂತ ಹೆಚ್ಚಿನ ಅಧಿಕಾರ ಅಲ್ಲಿನ ಸರ್ಕಾರಗಳಿಗಿತ್ತು. ಹೀಗಾಗಿ, ಒಟ್ಟಾರೆ, ಸರ್ಕಾರದ ಅಧಿಕಾರಗಳಿಗೆ ಸಂಬಂಧಿಸಿದಂತೆ, ಜಗತ್ತು ಹಾಬ್ಸ್ ಬಯಸಿದ ದಿಕ್ಕಿನೆಡೆಗೇ ಸಾಗಿದೆ; ಹೀಗಾಗಿರುವುದು, ಹೊರನೋಟಕ್ಕಾದರೂ, ಅದಕ್ಕೆ ವಿರುದ್ಧವಾದ ದಿಕ್ಕಿನೆಡೆ ಹೋಗುತ್ತಿದೆ ಎನಿಸುವ ದೀರ್ಘ ಉದಾರೀ ಅವಧಿಯ ನಂತರ. ಪ್ರಸ್ತುತ ಯುದ್ಧ ಪರಿಣಾಮವೇನೇ ಇರಲಿ, ಸರ್ಕಾರದ ಕೆಲಸಗಳು ಹೆಚ್ಚಾಗುತ್ತಲೇ ಇರಬೇಕು, ಮತ್ತು ಅದಕ್ಕೆ ಪ್ರತಿರೋಧವು ಹೆಚ್ಚು ಹೆಚ್ಚು ಕಷ್ಟಕರವೆನಿಸಬೇಕು.

ಅನಾಯಕತ್ವಕ್ಕಿರುವ ಏಕೈಕ ಪರ್ಯಾಯವೆಂದು ಸರ್ಕಾರವನ್ನು ಬೆಂಬಲಿಸಲು ಹಾಬ್ಸ್ ಕೊಡುವ ಕಾರಣವು ಮುಖ್ಯವಾಗಿ ಸಮಂಜಸವಾದುದು. ಆದರೆ ಸರ್ಕಾರವು ಎಷ್ಟು ಕೆಡಬಹುದೆಂದರೆ, ೧೭೮೯ ರಲ್ಲಿ ಫ್ರಾನ್ಸ್, ೧೯೧೭ ರಲ್ಲಿನ ರಷ್ಯಾಗಳಲ್ಲಿದ್ದಂತೆ, ಅದಕ್ಕಿಂತ ಸ್ವಲ್ಪ ಕಾಲ ಅನಾಯಕತ್ವ ಮುಂದುವರಿಯುವುದೇ ಲೇಸು ಎನ್ನಿಸಬಹುದು. ಮೇಲಾಗಿ, ಸರ್ಕಾರಗಳಿಗೆ ಬಂಡಾಯದ ಒಂದಷ್ಟು ಭಯವಿಲ್ಲದಿದ್ದರೆ, ಸರ್ಕಾರಗಳ ನಿರಂಕುಶಾಧಿಕಾರ ಪ್ರವೃತ್ತಿಯನ್ನು ತಡೆಯಲು ಸಾಧ್ಯವಿಲ್ಲ. ಪ್ರಜೆಗಳು ಸಾರ್ವತ್ರಿಕವಾಗಿ ಹಾಬ್ಸ್ ಹೇಳುವ ವಿಧೇಯತೆಯನ್ನು ಅನುಸರಿಸಿದ್ದೇ ಆದರೆ ಸರ್ಕಾರಗಳು ಈಗಿಗಿಂತ

ಕೆಟ್ಟವಾಗಬಹುದು. ಇದು ರಾಜಕೀಯ ವರ್ತುಲಗಳಲ್ಲಿ ನಿಜ, ಸಾಧ್ಯವಾದರೆ ಸರ್ಕಾರದ ಭಾಗವಾಗಿರುವವರು ತಮ್ಮನ್ನು ವೈಯಕ್ತಿಕವಾಗಿ ಭದ್ರಗೊಳಿಸಿಕೊಳ್ಳುತ್ತಾರೆ; ಅದು ಆರ್ಥಿಕ ವಲಯದಲ್ಲೂ ನಿಜ, ಸಾರ್ವಜನಿಕ ಹಿತವನ್ನು ಬಲಿಗೊಟ್ಟು ತಮ್ಮನ್ನೂ ತಮ್ಮ ಗೆಳೆಯರನ್ನೂ ಆದಷ್ಟೂ ಹಣವಂತರನ್ನಾಗಿಸಿಕೊಳ್ಳುತ್ತಾರೆ; ಅದು ಬೌದ್ಧಿಕವಲಯದಲ್ಲೂ ನಿಜ, ತಮ್ಮ ಅಧಿಕಾರಕ್ಕೆ ಕಂಟಕವೆನಿಸುವ ಹೊಸ ಅನ್ವೇಷಣೆಯನ್ನೋ ಸಿದ್ಧಾಂತವನ್ನೂ ದಮನಿಸುತ್ತಾರೆ. ಅನಾಯಕತ್ವದ ಅಪಾಯಗಳಷ್ಟಕ್ಕೇ ಸೀಮಿತಗೊಳಿಸಿ ಈ ಕಾರಣಗಳನ್ನು ನೀಡುತ್ತಿಲ್ಲ, ಜೊತೆಗೆ ಸರ್ಕಾರದ ಸರ್ವಶಕ್ತಿಯ ಕಾರಣದಿಂದಾಗುವ ಅನ್ಯಾಯ ಮತ್ತು ಜಡತೆಗಳನ್ನೂ ಗಮನಿಸಿ.

ಅವನಿಗಿಂತ ಹಿಂದಿನ ರಾಜಕೀಯ ಸಿದ್ಧಾಂತಿಗಳೊಂದಿಗಿನ ವೈದೃಶ್ಯದಲ್ಲಿ ಹಾಬ್ಸ್‌ನ ಹೆಚ್ಚುಗಾರಿಕೆಯಿದೆ. ಅವನು ಮೂಢನಂಬಿಕೆಗಳಿಂದ ಸಂಪೂರ್ಣ ಸ್ವತಂತ್ರನಾದವನು; ಮಹಾಪತನ ಕಾಲದಲ್ಲಿ ಆಡಮ್ ಮತ್ತು ಈವ್‌ರಿಗೆ ಏನಾಯಿತೆಂಬ ನೆಲೆಯಲ್ಲಿ ಅವನು ಚರ್ಚಿಸುವುದಿಲ್ಲ. ಅವನ ವಿಚಾರಗಳು ಸ್ಪಷ್ಟ ಮತ್ತು ತರ್ಕಬದ್ಧ; ಅವನ ನೀತಿಸಂಹಿತೆಯು, ಸರಿಯೋ ತಪ್ಪೋ, ಸಂಪೂರ್ಣವಾಗಿ ಅರ್ಥವಾಗುವಂತಹವು, ಯಾವುದೇ ಸಂಶಯಾಸ್ಪದ ಪರಿಕಲ್ಪನೆಗಳನ್ನು ಎಳೆದು ತರುವುದಿಲ್ಲ. ಇವನಿಗಿಂತ ಹೆಚ್ಚು ಪರಿಮಿತಿಗಳ ಮೆಕಿಯವೆಲ್ಲಿಯನ್ನು ಬಿಟ್ಟರೆ, ಅವನೇ ರಾಜಕೀಯ ಸಿದ್ಧಾಂತಗಳ ಬಗೆಗಿನ ಮೊದಲ ಆಧುನಿಕ ಲೇಖಕ. ಅವನು ಎಲ್ಲಿ ಎಡವುತ್ತಾನೆಂದರೆ, ಅತಿ ಸರಳೀಕರಣದಲ್ಲಿ, ಅದಕ್ಕೆ ಕಾರಣ ಅವನ ಚಿಂತನೆಗಳು ಅವಾಸ್ತವವೋ ಕಲ್ಪಕವೋ ಎಂಬುದಲ್ಲ. ಇದಕ್ಕಾಗಿಯೇ ಅವನನ್ನು ಈಗಲೂ ತಿರಸ್ಕರಿಸಲು ಸಾಧ್ಯ.

ಹಾಬ್ಸ್‌ನ ತತ್ವಜಿಜ್ಞಾಸೆ ಮತ್ತು ನೈತಿಕತೆಯನ್ನು ಟೀಕಿಸದೆ, ಅವನಲ್ಲಿರುವ ಎರಡು ದೋಷಗಳನ್ನು ಹೇಳಬೇಕು. ಮೊದಲನೆಯದೆಂದರೆ, ಅವನು ಯಾವಾಗಲೂ ಒಟ್ಟಾರೆ ದೇಶದ ಹಿತವನ್ನು ಗಮನಿಸುತ್ತಾನೆ, ಮತ್ತು ಎಲ್ಲ ಪ್ರಜೆಗಳ ಮುಖ್ಯ ಆಸಕ್ತಿಗಳೂ ಒಂದೇ ಎಂದು ಭಾವಿಸುತ್ತಾನೆ. ವಿವಿಧ ವರ್ಗಗಳ ನಡುವಣ ಸಂಘರ್ಷದ ಪ್ರಾಮುಖ್ಯವನ್ನವನು ಗಮನಿಸುವುದೇ ಇಲ್ಲ, ಇದನ್ನೇ ಮಾರ್ಕ್ಸ್ ಸಾಮಾಜಿಕ ಬದಲಾವಣೆಯ ಮುಖ್ಯ ಕಾರಣವನ್ನಾಗಿಸುವುದು. ರಾಜನ ಆಸಕ್ತಿಗಳೂ ಅವನ ಪ್ರಜೆಗಳ ಆಸಕ್ತಿಗಳೂ ಸರ್ವಸಮಾನವಾದವು ಎಂಬ ಭಾವನೆಗೂ ಇದಕ್ಕೂ ಸಂಬಂಧವಿದೆ. ಯುದ್ಧಸಮಯದಲ್ಲಿ ಆಸಕ್ತಿಗಳ ಏಕತೆಯಿರುತ್ತದೆ, ಅದರಲ್ಲೂ ಯುದ್ಧವು ಉಗ್ರವಾಗಿದ್ದಾಗ; ಆದರೆ ಶಾಂತಿಕಾಲದಲ್ಲಿ ಒಂದು ವರ್ಗದ ಆಸಕ್ತಿಗಳು ಮತ್ತು ಇನ್ನೊಂದರ ಆಸಕ್ತಿಗಳ ನಡುವಣ ಸಂಘರ್ಷವು ದೊಡ್ಡದಾಗಿರಬಹುದು. ಅಂತಹ ಸನ್ನಿವೇಶದಲ್ಲಿ, ಅನಾಯಕತ್ವವನ್ನು ತಡೆಯಲು ಸಾರ್ವಭೌಮನಿಗೆ

ಪರಮಾಧಿಕಾರವನ್ನು ದತ್ತಮಾಡಿಬಿಡುವುದೇ ಅತ್ಯುತ್ತಮ ಮಾರ್ಗ ಎಂಬುದು ಯಾವಾಗಲೂ ಸರಿಯಲ್ಲ. ಅಂತರ್ಯುದ್ಧವನ್ನು ದೂರವಿಡಲು ಒಂದು ಬಗೆಯ ಅಧಿಕಾರ ಹಂಚಿಕೆಯೇ ಏಕೈಕ ಪರಿಹಾರವಾಗಬಹುದು. ಇಂಗ್ಲಂಡ್‌ನ ಇತ್ತೀಚಿನ ಚರಿತ್ರೆಯಿಂದ ಹಾಬ್ಸ್‌ಗೆ ಇದು ಸ್ಪಷ್ಟವಾಗಬೇಕಾಗಿತ್ತು.

ಹಾಬ್ಸ್‌ನ ಸಿದ್ಧಾಂತವು ತೀರ ಸೀಮಿತವಾಗಲು ಇರುವ ಮತ್ತೊಂದು ಅಂಶವೆಂದರೆ, ವಿವಿಧ ದೇಶಗಳ ನಡುವಣ ಸಂಬಂಧವನ್ನು ಕುರಿತಂತೆ. ಯುದ್ಧ ಮತ್ತು ಗೆಲವುಗಳ ಹೊರತಾಗಿ, ಮಧ್ಯೆ ಮಧ್ಯೆ ಪ್ರಾಸಂಗಿಕವಾಗಲ್ಲದೆ, ಅವುಗಳ ನಡುವಣ ಸಂಬಂಧಗಳ ಕುರಿತಂತೆ 'ಲೀವಿಯಾಥನ್'ನಲ್ಲಿ ಒಂದು ಶಬ್ದವೂ ಇಲ್ಲ. ಎಲ್ಲ ದೇಶಗಳೂ ಎಲ್ಲ ಇತರ ದೇಶಗಳ ನಡುವೆ ಯುದ್ಧಕ್ಕೆ ತೊಡಗುವ ಸಹಜಸ್ಥಿತಿಯು, ಅವನ ತತ್ವಕ್ಕನುಗುಣವಾಗಿ ಯಾವುದೇ ಅಂತಾರಾಷ್ಟ್ರೀಯ ಸರ್ಕಾರವಿಲ್ಲದಿರುವುದರ ಪರಿಣಾಮ. ಅಂತಾರಾಷ್ಟ್ರೀಯ ಅನಾಯಕತ್ವವು ಇರುವವರೆಗೂ, ಪ್ರತ್ಯೇಕ ದೇಶಗಳ ಸಾಮರ್ಥ್ಯ ಹೆಚ್ಚುವುದು ಮನುಕುಲದ ಆಸಕ್ತಿಯಿಂದಲೇ ಎನ್ನುವುದು ಸ್ಪಷ್ಟವಾಗಿಲ್ಲ; ಯಾಕೆಂದರೆ ಅದರಿಂದ ಯುದ್ಧದ ಉಗ್ರತೆ ಮತ್ತು ವಿನಾಶಕಾರಕತೆಗಳು ಹೆಚ್ಚಾಗುತ್ತವೆ. ಸರ್ಕಾರದ ಪರವಾಗಿ ಅವನು ಮಂಡಿಸುವ ಪ್ರತಿ ವಾದವೂ, ಅದು ಸಮಂಜಸವೇ ಆಗಿದ್ದರೆ, ಅದು ಅಂತಾರಾಷ್ಟ್ರೀಯ ಸರ್ಕಾರದ ಪರವಾಗಿರುವಂತಹುದು. ಎಲ್ಲಿಯವರೆಗೆ ರಾಷ್ಟ್ರೀಯ ಸರ್ಕಾರಗಳಿದ್ದು ಅವು ತಮ್ಮ ತಮ್ಮಲ್ಲಿಯೇ ಕಿತ್ತಾಡಿಕೊಳ್ಳುತ್ತವೆಯೋ, ಅಲ್ಲಿಯವರೆಗೆ ಅಸಾಮರ್ಥ್ಯವೇ ಮನುಕುಲವನ್ನು ಉಳಿಸಬಲ್ಲದು. ಯುದ್ಧಗಳನ್ನು ತಡೆಗಟ್ಟುವ ಯಾವುದೇ ಮಾರ್ಗವಿಲ್ಲದೆ ಪ್ರತ್ಯೇಕ ಅವಕಾಶಗಳ ಯುದ್ಧಸಾಮರ್ಥ್ಯವನ್ನು ಹೆಚ್ಚಿಸುವುದು ವಿಶ್ವವಿನಾಶದ ದಾರಿಯಾಗುತ್ತದೆ.

೯
ಡೆಕಾರ್ಟೆ

ರೀನೇ ಡೆಕಾರ್ಟೆಯನ್ನು ಆಧುನಿಕ ತತ್ವಜ್ಞಾನದ ಸ್ಥಾಪಕನೆಂದು ಸಾಮಾನ್ಯವಾಗಿ ಹೇಳುತ್ತಾರೆ, ಇದು ಸರಿಯೆಂದೇ ನನ್ನ ಭಾವನೆ. ಹೊಸ ಭೌತವಿಜ್ಞಾನ ಮತ್ತು ಖಗೋಳವಿಜ್ಞಾನಗಳಿಂದ ಆಳವಾಗಿ ಪ್ರಭಾವಿತವಾದ ದೃಷ್ಟಿಕೋನವನ್ನು ಹೊಂದಿದ್ದ ಅವನು ಪ್ರೌಢವಾದ ತಾತ್ವಿಕ ಸಾಮರ್ಥ್ಯವನ್ನು ಪಡೆದಿದ್ದ ಮೊದಲ ವ್ಯಕ್ತಿ. ಅವನು ಸೂಕ್ಷ್ಮತರ್ಕವನ್ನು ಸಾಕಷ್ಟು ಉಳಿಸಿಕೊಂಡಿರುವನೆಂಬುದು ಸತ್ಯವಾದರೂ, ತನ್ನ ಪೂರ್ವಿಕರು ಹಾಕಿಕೊಟ್ಟ ಅಸ್ತಿವಾರಗಳನ್ನು ಒಪ್ಪಿಕೊಳ್ಳದೆ, ಹೊಚ್ಚ ಹೊಸ ತತ್ವಜಿಜ್ಞಾಸಾತ್ಮಕ ಸೌಧವನ್ನು ನಿರ್ಮಿಸುವ ಪ್ರಯತ್ನ ಅವನದು. ಇಂತಹ ಪ್ರಯತ್ನವು ಅರಿಸ್ಟಾಟಲ್‌ನ ಕಾಲದಿಂದ ನಡೆದಿರಲೇ ಇಲ್ಲ, ಅಲ್ಲದೆ ಇದು ವಿಜ್ಞಾನದ ಮುನ್ನಡೆಯಿಂದಾಗಿ ಪಡೆದ ಹೊಸ ಆತ್ಮವಿಶ್ವಾಸದ ಪ್ರತೀಕವೂ ಆಗಿದೆ. ಪ್ಲೇಟೋ ನಂತರ ಮತ್ತಾವ ಗಣ್ಯ ತತ್ವಜ್ಞಾನಿಗಳಲ್ಲಿಯೂ ಕಾಣದಿರುವ ಹೊಸತನವು ಅವನ ಕಾರ್ಯದಲ್ಲಿದೆ. ಈ ಮಧ್ಯದ ಉಳಿದ ತತ್ವಜ್ಞಾನಿಗಳೆಲ್ಲ ಅಧ್ಯಾಪಕರು, ತಮ್ಮ ವೃತ್ತಿಗೆ ಸಹಜವಾದ ಮೇಲರಿಮೆಯನ್ನು ತಾಳಿದ್ದವರು. ಡೆಕಾರ್ಟೆ ಬರೆಯುವುದು ಅಧ್ಯಾಪಕನಂತಲ್ಲ, ತಾನು ಕಂಡುದನ್ನು ಹೇಳಿಕೊಳ್ಳಲು ತವಕಿಸುವ ಒಬ್ಬ ಅನ್ವೇಷಕನಂತೆ, ಅನಾವರಣಕಾರನಂತೆ. ಅವನದು ವಿದ್ಯಾರ್ಥಿಗಳಿಗಿಂತ ಬುದ್ಧಿವಂತರನ್ನು ಕುರಿತದ್ದೂ ಆದ ಸರಳ ಮತ್ತು ಶುಷ್ಕಪಾಂಡಿತ್ಯರಹಿತ ಶೈಲಿ. ಅಲ್ಲದೆ, ಅದು ಅಸಾಧಾರಣ ಬಗೆಯ ಸುಂದರ ಶೈಲಿ. ಅಂತಹ ಅಪ್ರತಿಮ ಸಾಹಿತ್ಯಾಭಿರುಚಿಯ ಮಾರ್ಗಪ್ರವರ್ತಕನು ದೊರೆತದ್ದು ಆಧುನಿಕ ತತ್ವಜ್ಞಾನದ ಅದೃಷ್ಟ. ಇಂಗ್ಲಂಡ್ ಮತ್ತಿತರ ಐರೋಪ್ಯ ದೇಶಗಳ ಕ್ಯಾಂಟ್‌ವರೆಗಿನ ಅವನ ನಂತರ ಬಂದವರು ಅವನ ವೃತ್ತಿರಹಿತ ಲಕ್ಷಣವನ್ನುಳಿಸಿಕೊಂಡರು, ಅವರಲ್ಲಿ ಕೆಲವರು ಅವನ ಶೈಲಿಯ ಗುಣವನ್ನೂ ಅನುಸರಿಸಿದರು.

ಡೆಕಾರ್ಟೆಯ ತಂದೆ ಬ್ರಿಟನಿ ಸಂಸತ್ತಿನ ಸದಸ್ಯನಾಗಿ ತಕ್ಕಮಟ್ಟಿಗಿನ ಜಮೀನಿನ ಒಡೆಯನಾಗಿದ್ದವನು. ತಂದೆ ಸತ್ತು ಡೆಕಾರ್ಟೆಗೆ ಆ ಆಸ್ತಿ ಬಂದಾಗ ತನ್ನ ಜಮೀನನ್ನೆಲ್ಲ

ಮಾರಿ ಬಂದ ಹಣವನ್ನು ಹೂಡಿ ವರ್ಷಕ್ಕೆ ಏಳೆಂಟು ಸಾವಿರ ಫ್ರಾಂಕ್‌ಗಳ ಆದಾಯ ಬರುವಂತೆ ಮಾಡಿಕೊಂಡ. ೧೬೦೪ ರಿಂದ ೧೬೧೨ ರವರೆಗೆ ಅವನು ಲ ಫ್ಲೆಶ್‌ನಲ್ಲಿನ ಜ್ಯೂಸ್ಯುಟ್ ಕಾಲೇಜಿನಲ್ಲಿ ಓದಿದ, ಇದರಿಂದಾಗಿ ಅವನಿಗೆ ಆ ಕಾಲದ ಯಾವುದೇ ವಿಶ್ವವಿದ್ಯಾಲಯದಲ್ಲಿ ಸಿಕ್ಕುವುದಕ್ಕಿಂತ ಉತ್ತಮವಾದ ಪ್ರವೇಶ ಆಧುನಿಕ ಗಣಿತದಲ್ಲಿ ಸಿಕ್ಕುವಂತಾಯಿತು. ೧೬೧೨ ರಲ್ಲಿ ಅವನು ಪ್ಯಾರಿಸ್‌ಗೆ ಹೋದ, ಅಲ್ಲಿನ ಸಾಮಾಜಿಕ ಬದುಕು ಅವನಿಗೆ ಬೇಸರ ತರಿಸಿತು, ಹೀಗಾಗಿ ಫೌಬೋರ್ಗ್ ಸೈಂಟ್ ಜರ್ಮೇನ್‌ನ ಏಕಾಂತ ಸ್ಥಳದಲ್ಲಿ ವಾಸಿಸತೊಡಗಿ, ಜ್ಯಾಮಿತಿಯ ಬಗ್ಗೆ ಕೆಲಸ ಮಾಡತೊಡಗಿದ. ಸ್ನೇಹಿತರು ಅವನನ್ನು ಅಲ್ಲಿಂದ ಹೊರಗೆಳೆದರು, ಆದರೆ ಮತ್ತಷ್ಟು ಶಾಂತತೆಯನ್ನು ಪಡೆಯಲು ಅವನು ೧೬೧೭ ರಲ್ಲಿ ಸೈನ್ಯ ಸೇರಿದ. ಆ ಕಾಲದಲ್ಲಿ ಹಾಲಂಡ್ ಶಾಂತವಾಗಿದ್ದುದರಿಂದ ಅವನು ಎರಡು ವರ್ಷಗಳ ಕಾಲ ಅನಿರ್ಬಂಧಿತ ಧ್ಯಾನನಿರತನಾದ. ಆದರೆ, ಮೂವತ್ತು ವರ್ಷಗಳ ಯುದ್ಧ ಆರಂಭವಾದುದರಿಂದ ಅವನು ೧೬೧೯ ರಲ್ಲಿ ಬವೇರಿಯದ ಸೈನ್ಯವನ್ನು ಸೇರಿಕೊಂಡ. ೧೬೧೯–೨೦ ರ ಚಳಿಗಾಲದಲ್ಲಿ ಬವೇರಿಯದಲ್ಲಿ ಅವನಿಗೆ ತನ್ನ 'ಡಿಸ್ಕೋರ್ಸ್ ದ ಮೆಥಡ್' ನಲ್ಲಿ ನಿರೂಪಿಸಿರುವ ಅನುಭವವುಂಟಾಯಿತು. ತೀರ ಚಳಿಯಿದ್ದುದರಿಂದಾಗಿ ಬೆಳಿಗ್ಗೆ ಅವನು ಒಂದು ಅಗ್ಗಿಷ್ಟಿಕೆಯ[೨೫೭] ಒಳಹೊಕ್ಕು, ಇಡೀ ದಿನವನ್ನು ಅಲ್ಲಿಯೇ ಧ್ಯಾನದಲ್ಲಿ ಕಳೆದ; ಅವನೇ ಹೇಳಿಕೊಳ್ಳುವಂತೆ ಹೊರಗೆ ಬರುವ ಹೊತ್ತಿಗೆ ಅವನ ತತ್ವಜ್ಞಾನದ ಅರ್ಧಭಾಗ ಸಿದ್ಧವಾಗಿತ್ತು, ಆದರೆ ಇದನ್ನು ಅಕ್ಷರಶಃ ಒಪ್ಪಬೇಕಾದುದಿಲ್ಲ. ಸಾಕ್ರಟೀಸ್ ದಿನ ಪೂರ್ತಿ ಹಿಮದಲ್ಲಿ ಕುಳುತುಕೊಂಡು ಧ್ಯಾನಮಗ್ನನಾಗುತ್ತಿದ್ದನಂತೆ, ಆದರೆ ಡೆಕಾರ್ಟೆಯ ಬುದ್ಧಿ ಚುರುಕಾಗಿರುತ್ತಿದ್ದುದು ಬಿಸುಪಿನಲ್ಲಿ.

೧೬೨೧ ರಲ್ಲಿ ಅವನು ಸೈನಿಕವೃತ್ತಿಯನ್ನು ಬಿಟ್ಟ; ಇಟಲಿಗೆ ಒಮ್ಮೆ ಹೋಗಿಬಂದ ಮೇಲೆ, ೧೬೨೫ ರಲ್ಲಿ ಅವನು ಪ್ಯಾರಿಸ್‌ನಲ್ಲಿಯೇ ನೆಲಸಿದ. ಆದರೆ ಅಲ್ಲಿಯೂ ಅವನು ಬೆಳಗಾಗ ಏಳುವ ಮುಂಚೆಯೇ ಸ್ನೇಹಿತರು ನೋಡಲು ಬರುತ್ತಿದ್ದರು (ಅವನು ಏಳುತ್ತಿದ್ದುದೇ ಮಧ್ಯಾಹ್ನದ ಹೊತ್ತಿಗೆ). ಹೀಗಾಗಿ ೧೬೨೮ ರಲ್ಲಿ, ಹ್ಯೂಗ್‌ನಾಟ್‌ನ ಬಲಿಷ್ಠ ನೆಲೆಯಾದ ಲ ರಾಶೆಲ್ ಅನ್ನು ಮುತ್ತಿಗೆ ಹಾಕಿದ್ದ ಸೈನ್ಯವನ್ನು ಸೇರಿದ. ಈ ವಿದ್ಯಮಾನ ಮುಗಿದಾಗ, ಅವನು ಹಾಲಂಡ್‌ನಲ್ಲಿ ವಾಸಿಸಲು ನಿರ್ಧರಿಸಿದ, ಪ್ರಾಯಶಃ ಚಿತ್ರಹಿಂಸೆಯ ಅಪಾಯದಿಂದ ಪಾರಾಗಲು. ಅವನೊಬ್ಬ

---

೨೫೭. ಅದನ್ನು ಡೆಕಾರ್ಟೆ ಅಗ್ಗಿಷ್ಟಿಕೆ (ಪೊಯೆಲ್) ಎನ್ನುತ್ತಾನೆ; ಆದರೆ ಬಹುಪಾಲು ವ್ಯಾಖ್ಯಾನಕಾರರು ಇದು ಸಾಧ್ಯವೆಂದು ಭಾವಿಸುತ್ತಾರೆ. ಆದರೆ ಹಳೆಯ ಕಾಲದ ಬವೇರಿಯನ್ ಮನೆಗಳ ಬಗ್ಗೆ ಗೊತ್ತಿರುವವರು ಅದು ಸಂಪೂರ್ಣವಾಗಿ ನಂಬುವಂತಹುದು ಎಂದು ಹೇಳಿದ್ದಾರೆ.

ಪುಕ್ಕಲು ವ್ಯಕ್ತಿ, ಒಬ್ಬ ನಿಷ್ಠಾವಂತ ಕ್ಯಾಥೋಲಿಕ್, ಆದರೆ ಅವನೂ ಗೆಲಿಲಿಯೋನ ಪಾಷಂಡಿತನದ ವಾರಸುದಾರ. ೧೬೧೬ ರಲ್ಲಿ ಗೆಲಿಲಿಯೋ ಮೊದಲ ಬಾರಿಗೆ (ರಹಸ್ಯದಲ್ಲಿ) ಖಂಡನೆಗೊಳಗಾಗಿದ್ದುದು ಅವನಿಗೆ ತಿಳಿದಿತ್ತೆಂದು ಕೆಲವರು ಹೇಳುತ್ತಾರೆ. ಅದೇನೇ ಆದರೂ, 'ಲ ಮಾಂಡ್' ಎಂಬ ದೊಡ್ಡ ಪುಸ್ತಕವನ್ನು ಪ್ರಕಟಿಸದಿರಲು ಅವನು ನಿರ್ಧರಿಸಿದ, ಆಗ ಅದನ್ನವನು ಇನ್ನೂ ಬರೆಯುತ್ತಿದ್ದ. ಅದಕ್ಕೆ ಕಾರಣ ಅದರಲ್ಲಿ ಎರಡು ಪಾಷಂಡಿ ಸಿದ್ಧಾಂತಗಳಿದ್ದವು: ಭೂಮಿಯ ಪರಿಭ್ರಮಣೆ ಮತ್ತು ವಿಶ್ವದ ಅನಂತತೆ. (ಈ ಪುಸ್ತಕ ಸಂಪೂರ್ಣವಾಗಿ ಎಂದೂ ಪ್ರಕಟವಾಗಲೇ ಇಲ್ಲ, ಅದರ ಕೆಲವು ಭಾಗಗಳನ್ನು ಅವನ ಮರಣಾನಂತರ ಪ್ರಕಟಿಸಲಾಯಿತು.)

ಅವನು ಹಾಲಂಡ್‌ನಲ್ಲಿ ಇಪ್ಪತ್ತು ವರ್ಷಗಳ ಕಾಲ (೧೬೨೯–೪೯) ವಾಸಿಸಿದ, ಆದರೆ ಮಧ್ಯೆ ಮಧ್ಯೆ ಫ್ರಾನ್ಸ್ ಮತ್ತು ಇಂಗ್ಲಂಡ್‌ಗಳಿಗೆ ವ್ಯವಹಾರದ ಮೇಲೆ ಹೋಗಿ ಬಂದಿದ್ದ. ಹದಿನೇಳನೆಯ ಶತಮಾನದಲ್ಲಿ ಹಾಲಂಡ್‌ನ ಪ್ರಾಮುಖ್ಯದ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ, ಏಕೆಂದರೆ ಆ ದೇಶದಲ್ಲಿ ಮಾತ್ರವೇ ಕಲ್ಪನಾಸ್ವಾತಂತ್ರ್ಯವಿದ್ದುದು. ಹಾಬ್ಸ್ ತನ್ನ ಪುಸ್ತಕಗಳನ್ನು ಅಲ್ಲಿಯೇ ಪ್ರಕಟಿಸಿದುದು; ೧೬೮೮ ಕ್ಕೆ ಮುಂಚಿನ ಇಂಗ್ಲಂಡ್‌ನ ಅತ್ಯಂತ ಕೆಟ್ಟ ಪ್ರತಿಗಾಮಿತ್ವದ ಐದು ವರ್ಷಗಳು ಲಾಕ್ ಅಲ್ಲಿಯೇ ವಾಸವಾಗಿದ್ದುದು; ಬಾಯ್ಲ್ (ಡಿಕ್ಷನರಿ ಬರೆದ) ಅಲ್ಲಿ ವಾಸಮಾಡುವುದು ಅನಿವಾರ್ಯವೆಂದು ಭಾವಿಸಿದ; ಮತ್ತು ಸ್ಪಿನೋಜ಼ ಅಲ್ಲದೆ ಬೇರಾವ ದೇಶದಲ್ಲಿಯೂ ತನ್ನ ಕೆಲಸವನ್ನು ಮಾಡಲು ಸಾಧ್ಯವಾಗುತ್ತಲೇ ಇರಲಿಲ್ಲ.

ಡೆಕಾರ್ಟೆ ಪುಕ್ಕಲು ವ್ಯಕ್ತಿಯೆಂದು ಹೇಳಿದೆ, ಪ್ರಾಯಶಃ ಅಡ್ಡಿಗಳಿಲ್ಲದೆ ತನ್ನ ಕೆಲಸವನ್ನು ಪ್ರಶಾಂತ ಸ್ಥಿತಿಯಲ್ಲಿ ಮುಂದುವರಿಸಲು ಬಯಸುತ್ತಿದ್ದ ವ್ಯಕ್ತಿ ಎನ್ನುವುದು ಹೆಚ್ಚು ಸೂಕ್ತವಾದೀತೇನೋ. ಅವನು ಸದಾ ಮತಧರ್ಮಬೋಧಕರನ್ನು ಓಲೈಸುತ್ತಿದ್ದ, ಅದರಲ್ಲೂ ಜೆಸ್ಯೂಟ್‌ರನ್ನು, ತಾನು ಅವರ ಅಧೀನದಲ್ಲಿದ್ದಾಗ ಮಾತ್ರವಲ್ಲ, ಹಾಲಂಡ್‌ಗೆ ವಲಸೆ ಹೋದ ಮೇಲೆಯೂ. ಅವನ ಮನಸ್ಥಿತಿ ಅಸ್ಪಷ್ಟವಾದುದು, ಆದರೆ ಅವನೊಬ್ಬ ಪ್ರಾಮಾಣಿಕ ಕ್ಯಾಥೋಲಿಕ್ ಆಗಿದ್ದ ಎಂದು ಭಾವಿಸುವುದು ಸರಿಯೇನೋ. ತನ್ನ ಮತ್ತು ಅದರ ಹಿತದ ದೃಷ್ಟಿಯಿಂದ, ಆಧುನಿಕ ವಿಜ್ಞಾನದ ದೃಷ್ಟಿಯಿಂದ ಗೆಲಿಲಿಯೋನನ್ನು ನಡೆಸಿಕೊಂಡುದಕ್ಕಿಂತ ಕಡಿಮೆ ದ್ವೇಷದಿಂದ ಕೂಡಿರುವಂತೆ, ಚರ್ಚ್ ಅನ್ನು ಒಪ್ಪಿಸುವುದಕ್ಕೆ ಅವನು ಬಯಸುತ್ತಿದ್ದ. ಅವನ ಸಂಪ್ರದಾಯನಿಷ್ಠೆಯು ಕೇವಲ ತೋರಿಕೆಯದು ಎಂದು ಕೆಲವರು ಅಭಿಪ್ರಾಯಪಡುತ್ತಾರೆ, ಆದರೆ ಇದು ಸಾಧ್ಯವಾದುದಾದರೂ, ಅದು ಅಷ್ಟೊಂದು ಸಂಭವನೀಯವೆಂದು ನನಗನ್ನಿಸುವುದಿಲ್ಲ.

ಹಾಲಂಡ್‌ನಲ್ಲಿಯೂ ಅವನು ಕಿರುಕುಳಗಳಿಗೆ ಒಳಗಾಗುತ್ತಿದ್ದ, ರೋಮನ್ ಕ್ಯಾಥೋಲಿಕ್ ಚರ್ಚ್‌ನಿಂದಲ್ಲ, ಪ್ರಾಟೆಸ್ಟೆಂಟ್ ಮತಾಂಧರಿಂದ. ಅವನ ದೃಷ್ಟಿಕೋನವು ನಾಸ್ತಿಕವಾದಕ್ಕೆ ಎಡೆಮಾಡಿಕೊಡುವಂತಹುದು ಎಂದು ಹೇಳುತ್ತಿದ್ದರು, ಫ್ರೆಂಚ್

ರಾಯಭಾರಿ ಮತ್ತು ಆರೆಂಜ್‌ನ ರಾಜನ ಮಧ್ಯಪ್ರವೇಶವಿಲ್ಲದಿದ್ದರೆ, ಅವನನ್ನು ಹಿಂಸೆಗೊಳಪಡಿಸಬಹುದಾದ ಸಾಧ್ಯತೆಯಿತ್ತು. ಈ ಹಲ್ಲೆಯು ವಿಫಲವಾದುದರಿಂದಾಗಿ, ಕೆಲವು ವರ್ಷಗಳ ಬಳಿಕ, ಅಷ್ಟು ನೇರವಲ್ಲದ ಮತ್ತೊಂದು ಹಲ್ಲೆಯು ಲೇಯ್ಡನ್ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಂದ ನಡೆಯಿತು, ಪರವಾಗಿಯಾಗಲೀ ವಿರೋಧವಾಗಿಯಾಗಲೀ ಆಗ ಅವನ ಹೆಸರನ್ನೆಲ್ಲೂ ಉಲ್ಲೇಖಿಸಲಿಲ್ಲ. ಮತ್ತೆಯೂ ಆರೆಂಜ್‌ನ ರಾಜ ಮಧ್ಯಪ್ರವೇಶಿಸಿದ, ಬುದ್ಧಿಗೇಡಿಯಾಗಬಾರದೆಂದು ವಿಶ್ವವಿದ್ಯಾನಿಲಯವನ್ನು ಛೇಡಿಸಿದ. ಸರ್ಕಾರಕ್ಕೆ ಚರ್ಚ್ ಅಧೀನವಾಗಿದ್ದ, ಮತ್ತು ಅಂತಾರಾಷ್ಟ್ರೀಯವಾಗದಿದ್ದ ಚರ್ಚ್‌ಗಳ ಸಾಪೇಕ್ಷ ದೌರ್ಬಲ್ಯವಿದ್ದ ಪ್ರಾಟೆಸ್ಟಂಟ್ ದೇಶಗಳ ಅನುಕೂಲಕರ ವಾತಾವರಣವನ್ನು ತೋರಿಸಲು ಇದೊಂದು ನಿದರ್ಶನ.

ದುರದೃಷ್ಟವಶಾತ್, ಸ್ಟಾಕ್‌ಹೋಮ್‌ನಲ್ಲಿನ ಫ್ರೆಂಚ್ ರಾಯಭಾರಿಯಾದ ಶಾನಟ್ ಮೂಲಕ ಡೆಕಾರ್ಟೆ ಸ್ವೀಡನ್‌ನ ರಾಣಿ ಕ್ರಿಸ್ಟೈನ ಜೊತೆ ಪತ್ರವ್ಯವಹಾರ ನಡೆಸಿದ; ಅವಳು ವಿದ್ಯಾವಂತಳೂ ಭಾವಭರಿತಳೂ ಆದ ಹೆಣ್ಣು, ಆದರೆ ಸಾರ್ವಭೌಮೆಯಾಗಿ ಗಣ್ಯ ಮಹನೀಯರ ವೇಳೆಯನ್ನು ವ್ಯರ್ಥಮಾಡುವುದು ತನ್ನ ಹಕ್ಕು ಎಂದು ಭಾವಿಸಿದ್ದವಳು. ಅವನು ಪ್ರೇಮದ ಬಗೆಗಿನ ಪುಸ್ತಕವನ್ನೊಂದನ್ನು ಅವಳಿಗೆ ಕಳಿಸಿಕೊಟ್ಟ, ಆ ವಿಷಯವನ್ನು ಇದುವರೆಗೂ ಅವನು ಕಡೆಗಣಿಸಿದ್ದ. ಜೊತೆಗೆ ಆತ್ಮದ ಭಾವನೆಗಳ ಕುರಿತ ಪುಸ್ತಕವೊಂದನ್ನೂ ಕಳಿಸಿಕೊಟ್ಟ; ಅದನ್ನು ಮೂಲತಃ ಅವನು ರಚಿಸಿದ್ದು ಚುನಾಯಕ (ಎಲೆಕ್ಟರ್) ಪ್ಯಾಲಟೈನ್‌ನ ಮಗಳು ರಾಜಕುಮಾರಿ ಎಲಿಜ಼ಬೆತ್‌ಗೆಂದು. ಈ ಬರಹಗಳಿಂದಾಗಿ ತನ್ನ ಆಸ್ಥಾನಕ್ಕೆ ಹಾಜರಾಗುವಂತೆ ಅವನನ್ನು ಕೇಳಿಕೊಳ್ಳುವಂತಾಯಿತು; ಕೊನೆಗೆ ಅವನು ಒಪ್ಪಿದ. ಅವನನ್ನು ಕರೆತರಲು ಒಂದು ಯುದ್ಧದ ಹಡಗನ್ನು ಕಳಿಸಿದಳು (೧೬೪೯ ಸೆಪ್ಟೆಂಬರ್). ಅವನಿಂದ ನಿತ್ಯ ಪಾಠವನ್ನು ಬಯಸಿದಳು, ಆದರೆ ಅದಕ್ಕಾಗಿ ಅವಳು ಬೆಳಗಿನ ಜಾವ ಐದು ಗಂಟೆಯ ಹೊರತಾಗಿ ಉಳಿದ ವೇಳೆಯನ್ನು ವಿನಿಯೋಗಿಸುವ ಸ್ಥಿತಿಯಲ್ಲಿರಲಿಲ್ಲ. ಅಭ್ಯಾಸವಿರದ ಈ ಬೆಳಗಿನ ಜಾವ ಏಳುವ ಪರಿಪಾಟ, ಅದೂ ಚಳಿ ಹವಾಮಾನದ ಸ್ಕ್ಯಾಂಡಿನೇವಿಯದಲ್ಲಿ, ಅವನಂಥ ಸೂಕ್ಷ್ಮ ವ್ಯಕ್ತಿಗೆ ತಕ್ಕುದಾಗಿರಲಿಲ್ಲ. ಮೇಲಾಗಿ, ಶಾನಟ್ ಉಲ್ಬಣ ರೋಗಕ್ಕೊಳಗಾದ, ಅವನನ್ನು ಡೆಕಾರ್ಟೆ ನೋಡಿಕೊಳ್ಳಬೇಕಾಗಿತ್ತು. ರಾಯಭಾರಿ ಚೇತರಿಸಿಕೊಂಡ, ಆದರೆ ಡೆಕಾರ್ಟೆ ಕಾಯಿಲೆ ಮಲಗಿ ೧೬೫೦ ರ ಫೆಬ್ರವರಿಯಲ್ಲಿ ತೀರಿಕೊಂಡ.

ಡೆಕಾರ್ಟೆ ಮದುವೆಯೇ ಆಗಲಿಲ್ಲ, ಆದರೆ ಅವನಿಗೊಬ್ಬ ಸಹಜ ಮಗಳಿದ್ದಳು, ಆದರೆ ಐದನೆಯ ವಯಸ್ಸಿಗೇ ತೀರಿಕೊಂಡಿದ್ದಳು; ಅದೇ ಅವನ ಬದುಕಿನ ಅತ್ಯಂತ ದುಃಖಮಯ ಘಟನೆ ಎಂದವನು ಹೇಳುತ್ತಿದ್ದ. ಅವನು ಸದಾ ಒಳ್ಳೆಯ ಉಡುಪುಗಳನ್ನು ಧರಿಸುತ್ತಿದ್ದ, ಜೊತೆಗೆ ಕತ್ತಿಯೊಂದನ್ನು ಕಟ್ಟಿಕೊಂಡಿರುತ್ತಿದ್ದ.

ಅವನೇನೂ ಅಂಥ ಶ್ರಮಜೀವಿಯಲ್ಲ, ಅವನು ಕಾರ್ಯಪ್ರವೃತ್ತನಾಗುತ್ತಿದ್ದುದು ಸ್ವಲ್ಪವೇ ಕಾಲ, ಓದುತ್ತಿದ್ದುದು ಕಡಿಮೆ. ಅವನು ಹಾಲಂಡ್‌ಗೆ ಹೋದಾಗ ತನ್ನೊಡನೆ ಕೆಲವು ಪುಸ್ತಕಗಳನ್ನೊಯ್ದಿದ್ದ, ಅವುಗಳಲ್ಲಿ ಬೈಬಲ್ ಮತ್ತು ಥಾಮಸ್ ಆಕ್ವಿನಾಸ್‌ನ ಕೃತಿಗಳಿದ್ದವು. ಈ ಕಿರು ಅವಧಿಗಳಲ್ಲಿ ತನ್ನ ಕೆಲಸದಲ್ಲಿ ಅವನು ಆಳವಾದ ಚಿತ್ತೈಕಾಗ್ರತೆಯಿಂದ ಕೂಡಿರುತ್ತಿದ್ದನೆನಿಸುತ್ತದೆ. ಆದರೆ ತಾನಿನ್ನೂ ಸಂಭಾವಿತ ಹವ್ಯಾಸಿ ಎಂದು ತೋರಿಸಿಕೊಳ್ಳುವಂತೆ ವರ್ತಿಸುತ್ತಿದ್ದಿರಬಹುದು, ಇಲ್ಲದಿದ್ದರೆ ಅವನು ಮಾಡಿದ ಕೆಲಸದ ಅಗಾಧತೆ ಸಾಧ್ಯವಾಗುತ್ತಿರಲಿಲ್ಲ.

ಡೆಕಾರ್ಟೆ ಒಬ್ಬ ತತ್ವಜ್ಞಾನಿ, ಒಬ್ಬ ಗಣಿತಜ್ಞ ಮತ್ತು ಒಬ್ಬ ವಿಜ್ಞಾನಿ, ತತ್ವಜ್ಞಾನ ಮತ್ತು ಗಣಿತಗಳಲ್ಲಿ ಅವನು ಮಾಡಿದ ಕೆಲಸ ಅತ್ಯುನ್ನತ ಮಟ್ಟದ್ದು; ವಿಜ್ಞಾನದಲ್ಲಿ, ನಂಬುವಂತಹುದಾದರೂ, ತನ್ನ ಸಮಕಾಲೀನರ ಕೆಲಸದಷ್ಟು ಸಮರ್ಪಕವಾದುದಲ್ಲ.

ಜ್ಯಾಮಿತಿಗೆ ಅವನು ನೀಡಿದ ಮಹಾ ಕೊಡುಗೆಯೆಂದರೆ, ವಿಶ್ಲೇಷಕ ಜ್ಯಾಮಿತಿಯ ನಿರ್ಮಿತಿ, ಆದರೆ ತನ್ನ ಅಂತಿಮ ರೂಪದಲ್ಲೇನಲ್ಲ. ಅವನು ವಿಶ್ಲೇಷಕ ವಿಧಾನವನ್ನನುಸರಿಸಿದ, ಅದೆಂದರೆ ಸಮಸ್ಯೆಯೊಂದು ಪರಿಹಾರವಾದಂತೆಣಿಸಿ, ಅದರ ಪರಿಣಾಮಗಳನ್ನು ಅನ್ವೇಷಿಸುವುದು; ಅವನು ಜ್ಯಾಮಿತಿಗೆ ಬೀಜಗಣಿತವನ್ನು ಅನ್ವಯಿಸಿದ. ಈ ಎರಡು ಕಾರ್ಯಗಳನ್ನು ಮಾಡಿದವರು ಅವನಿಗಿಂತ ಹಿಂದೆ ಇದ್ದರು, ಮೊದಲನೆಯದಕ್ಕೆ ಸಂಬಂಧಿಸಿದಂತೆ, ಪ್ರಾಚೀನರೂ ಇದ್ದರು. ಅವನ ಕಾರ್ಯದ ಸ್ವಂತಿಕೆಯೆಂದರೆ, ನಿರ್ದೇಶಾಂಕಗಳ (ಕೋಆರ್ಡಿನೇಟ್ಸ್) ಬಳಕೆ, ಅಂದರೆ ಒಂದು ರೇಖೆಯ ಮೇಲಿನ ಬಿಂದುವನ್ನು ಎರಡು ಸ್ಥಿರ ರೇಖೆಗಳ ದೂರದಿಂದ ನಿರ್ದೇಶಿಸುವುದು. ಈ ವಿಧಾನದ ಎಲ್ಲ ಅಂಶಗಳನ್ನೂ ಅವನೇ ಕಂಡುಕೊಳ್ಳಲಿಲ್ಲ. ಅದರೆ ಮುಂದಿನ ಪ್ರಗತಿ ಸುಲಭವಾಗುವಂತೆ ಮಾಡಿದ. ಇಷ್ಟು ಮಾತ್ರ ಗಣಿತಕ್ಕೆ ಅವನು ಕೊಟ್ಟ ಕೊಡುಗೆಯಲ್ಲ, ಆದರೆ ಅವುಗಳಲ್ಲಿ ಅತ್ಯಂತ ಮುಖ್ಯವಾದುದು.

ತನ್ನ ವೈಜ್ಞಾನಿಕ ಸಿದ್ಧಾಂತಗಳನ್ನೊಳಗೊಂಡ ಅವನ ಪುಸ್ತಕವೆಂದರೆ 'ಪ್ರಿನ್ಸಿಪಿಯ ಫಿಲಾಸಫಿಯ', ಅದು ೧೬೪೪ ರಲ್ಲಿ ಪ್ರಕಟವಾಯಿತು. ಇನ್ನೂ ಕೆಲವು ಮುಖ್ಯ ಪುಸ್ತಕಗಳೂ ಇರುವುದು ನಿಜ: 'ಎಸೇಸ್ ಫಿಲಾಸಫಿಯ' (೧೬೩೭)ವು ದೃಗ್ವಿಜ್ಞಾನ (ಆಪ್ಟಿಕ್ಸ್) ಮತ್ತು ಜ್ಯಾಮಿತಿಗಳನ್ನು ಕುರಿತಾದುದು; ಅವನ ಒಂದು ಪುಸ್ತಕದ ಶೀರ್ಷಿಕೆಯೆಂದರೆ 'ದ ಲ ಫಾರ್ಮೇಸಿಯೋ ದ್ಯ ಫೀಟಸ್'. ಅವನು ಹಾರ್ವೇಯ ರಕ್ತಪರಿಚಲನೆಯ ಅನಾವರಣವನ್ನು ಸ್ವಾಗತಿಸಿದ, ಮತ್ತು ವೈದ್ಯವಿಜ್ಞಾನದಲ್ಲಿ ಪ್ರಮುಖ ಅನಾವರಣವನ್ನು ಮಾಡುವ ಬಯಕೆಯುನ್ನಿಟ್ಟುಕೊಂಡಿದ್ದ (ಆದರಿದು ಸಫಲವಾಗಲಿಲ್ಲ). ಮನುಷ್ಯ ಮತ್ತು ಪ್ರಾಣಿಗಳ ದೇಹವನ್ನವನು ಯಂತ್ರವೆಂದು ಪರಿಗಣಿಸಿದ್ದ; ಪ್ರಾಣಿಗಳದು ಸ್ವಯಂಚಾಲಕ (ಆಟೋಮೇಟ), ಸಂಪೂರ್ಣವಾಗಿ

ಭೌತ ನಿಯಮಗಳಿಗನುಗುಣವಾಗಿ ಪ್ರವರ್ತಿಸುವಂತಹುದು, ಅವುಗಳಲ್ಲಿ ಯಾವುದೇ ಭಾವನೆಯಾಗಲೀ ಪ್ರಜ್ಞೆಯಾಗಲೀ ಇರುವುದಿಲ್ಲ. ಮನುಷ್ಯರು ಭಿನ್ನರು: ಅವರಿಗೆ ಆತ್ಮವಿದೆ, ಅದು ನೆಲೆಸಿರುವುದು ಪಿನಿಯಲ್ ಗ್ರಂಥಿಯಲ್ಲಿ (ಪಿನಿಯಲ್ ಗ್ಲಾಂಡ್). ಅಲ್ಲಿಂದ ಆತ್ಮವು ಜೀವಧಾರಕ ಸತ್ವಗಳೊಡನೆ (ವೈಟಲ್ ಸ್ಪಿರಿಟ್ಸ್) ಸಂಪರ್ಕಕ್ಕೆ ಬರುತ್ತದೆ, ಮತ್ತು ಈ ಸಂಪರ್ಕದಿಂದಾಗಿ ದೇಹ ಮತ್ತು ಆತ್ಮಗಳ ನಡುವಣ ಪರಸ್ಪರ ಕ್ರಿಯೆಗಳುಂಟಾಗುತ್ತವೆ. ವಿಶ್ವದಲ್ಲಿನ ಒಟ್ಟು ಚಲನೆಯ ಪರಿಮಾಣ ಸ್ಥಿರವಾದುದು, ಹೀಗಾಗಿ ಆತ್ಮವು ಅದನ್ನು ಪ್ರಭಾವಗೊಳಿಸಲಾರದು; ಆದರೆ ಜೀವಧಾರಕ ಸತ್ವಗಳ ಚಲನೆಯ ದಿಕ್ಕನ್ನು ಬದಲಿಸಬಹುದು, ಹೀಗಾಗಿ, ಪರೋಕ್ಷವಾಗಿ, ದೇಹದ ಇತರ ಭಾಗಗಳನ್ನು.

ಅವನ ಸಿದ್ಧಾಂತದ ಈ ಭಾಗವನ್ನು ಅವನ ಪಂಥದವರೇ ಕೈಬಿಟ್ಟರು, ಮೊದಲಲ್ಲಿ, ಅವನ ಡಚ್ ಶಿಷ್ಯ ಗ್ಯೂಲಿಂಕ್ಸ್, ಆನಂತರ ಮಲೆಬ್ರಾಂಶೆ ಮತ್ತು ಸ್ಪಿನೋಜ಼. ಭೌತವಿಜ್ಞಾನಿಗಳು ಆವೇಗಸ್ಥಾಯಿತ್ವ (ಕನ್ಸರ್ವೇಷನ್ ಆಫ್ ಮೊಮೆಂಟಂ) ಅನ್ನು ಅನಾವರಣಗೊಳಿಸಿದರು, ಅದರ ಪ್ರಕಾರ, ಜಗತ್ತಿನ ಯಾವುದೇ ದಿಕ್ಕಿನ ಚಲನೆಗಳ ಒಟ್ಟು ಪರಿಮಾಣವು ಸ್ಥಾಯಿಯಾದುದು. ಡೆಕಾರ್ಟೆ ಕಲ್ಪಿಸಿಕೊಂಡಿದ್ದ ಭೌತದ್ರವ್ಯದ ಮೇಲಿನ ಮನಸ್ಸಿನ ಕ್ರಿಯೆಯ ಬಗೆಯು ಅಸಾಧ್ಯ ಎಂಬುದನ್ನು ತೋರಿಸಿಕೊಟ್ಟಿತು. ಕಾರ್ಟೀಸಿಯನ್ ಪಂಥದವರು ಕಲ್ಪಿಸಿಕೊಂಡಿದ್ದಂತೆ, ಎಲ್ಲ ಭೌತಿಕ ಕ್ರಿಯೆಯೂ ಪರಿಣಾಮದ ಸ್ವರೂಪದ್ದು ಎಂದು ಭಾವಿಸಿಕೊಂಡರೆ, ಬಲವೈಜ್ಞಾನಿಕ ನಿಯಮಗಳೇ ಭೌತದ್ರವ್ಯದ ಚಲನೆಯನ್ನು ನಿರ್ಧರಿಸಬಲ್ಲವು, ಅಲ್ಲಿ ಮನಸ್ಸಿನ ಯಾವುದೇ ಪರಿಣಾಮಕ್ಕೆ ಆಸ್ಪದವಿರಬೇಕಾದ್ದಿಲ್ಲ. ಆದರೆ ಇದು ಒಂದು ತೊಡಕನ್ನು ಸೃಷ್ಟಿಸುತ್ತದೆ. ಚಲಿಸಬೇಕೆಂದು ನಾನು ಮನಸ್ಸಿನಲ್ಲಿ ಸಂಕಲ್ಪಿಸಿದಾಗ ನನ್ನ ತೋಳು ಚಲಿಸುತ್ತದೆ, ಆದರೆ ನನ್ನ ಇಚ್ಛಾಶಕ್ತಿಯು ಮಾನಸಿಕ ವಿದ್ಯಮಾನವಾದರೆ, ನನ್ನ ತೋಳಿನ ಚಲನೆಯು ಭೌತಿಕ ವಿದ್ಯಮಾನ. ಹಾಗಾದರೆ, ಮನಸ್ಸು ಮತ್ತು ಭೌತದ್ರವ್ಯಗಳು ಪರಸ್ಪರ ಕ್ರಿಯಾತ್ಮಕವಾಗಿರದಿದ್ದರೆ, ನನ್ನ ದೇಹವು ನನ್ನ ಮನಸ್ಸಿನ ನಿಯಂತ್ರಣಕ್ಕೊಳಗಾದಂತೆ ವರ್ತಿಸುತ್ತದೆಯೇ? ಇದಕ್ಕೆ ಗ್ಯೂಲಿಂಕ್ಸ್ ಒಂದು ಉತ್ತರವನ್ನು ಕಂಡುಹಿಡಿದ, ಅದರ ಹೆಸರು 'ಎರಡು ಗಡಿಯಾರಗಳ' ಸಿದ್ಧಾಂತ. ಒಂದೇ ಬಗೆಯ ಪರಿಪೂರ್ಣ ಕಾರ್ಯನಿರ್ವಹಿಸುವ ಎರಡು ಗಡಿಯಾರಗಳು ನಿಮ್ಮ ಬಳಿ ಇದೆ ಎಂದುಕೊಳ್ಳಿ; ಒಂದು ಗಂಟೆಯನ್ನು ತೋರಿಸಿದಾಗ, ಮತ್ತೊಂದು ಹೊಡೆಯುತ್ತದೆ, ಹಾಗೆಯೇ ನೀವು ಒಂದನ್ನು ನೋಡಿ ಮತ್ತೊಂದನ್ನು ಕೇಳಿದರೆ, ಒಂದು ಇನ್ನೊಂದನ್ನ ಹೊಡೆಯುವಂತೆ ಮಾಡಲು ಕಾರಣ ಎಂದುಕೊಳ್ಳುತ್ತೀರಿ. ಮನಸ್ಸು ಮತ್ತು ದೇಹಗಳ ವಿಷಯವೂ ಹಾಗೆಯೇ. ಒಂದೊಂದನ್ನೂ ದೇವರು ಮತ್ತೊಂದರ ಜೊತೆಯಲ್ಲಿ ಹೊಡೆಯುವಂತೆ ಕೀಲಿಕೊಟ್ಟಿರುತ್ತಾನೆ. ಹೀಗಾಗಿ

ನನ್ನ ಇಚ್ಛಾಶಕಿಯ ಸನ್ನಿವೇಶದಲ್ಲಿ, ನನ್ನ ಇಚ್ಛಾಶಕ್ತಿಯು ನನ್ನ ದೇಹದ ಮೇಲೆ ಪರಿಣಾಮ ಬೀರದಿದ್ದರೂ, ಭೌತಿಕ ನಿಯಮಗಳಷ್ಟೇ ನನ್ನ ತೋಳು ಚಲಿಸುವಂತೆ ಮಾಡಲು ಕಾರಣವಾಗುತ್ತದೆ.

ಈ ಸಿದ್ಧಾಂತದಲ್ಲಿಯೂ ತೊಡಕುಗಳು ಇದ್ದುವು. ಮೊದಲನೆಯದಾಗಿ, ಅದು ವಿಚಿತ್ರ ವಾದವಾಗಿತ್ತು; ಎರಡನೆಯದಾಗಿ, ಭೌತಿಕ ಕ್ರಿಯಾಸರಣಿಯನ್ನು ಪ್ರಕೃತಿ ನಿಯಮಗಳು ಕಟ್ಟುನಿಟ್ಟಾಗಿ ನಿರ್ಧರಿಸಿದರೂ, ಅದಕ್ಕೆ ಸಮಾನಾಂತರವಾದ ಮನೋಸರಣಿಯು ಕೂಡ ಅಷ್ಟೇ ನಿಯತವಾಗಿರಬೇಕು. ಈ ಸಿದ್ಧಾಂತವು ಸಿಂಧುವಾಗಿದ್ದರೆ, ಅದರಲ್ಲಿ ಮಿದುಳಿನಲ್ಲಿನ ಪ್ರತಿ ಪ್ರೇರಣೆಯನ್ನೂ ಅನುಗುಣವಾದ ಮನೋವ್ಯಾಪಾರವಾಗಿ ಭಾಷಾಂತರಿಸುವ, ಅದಕ್ಕನುಗುಣವಾದ ಸಾಧ್ಯ ನಿಘಂಟೊಂದು ಇರಬೇಕಾಗಿತ್ತು. ಆದರ್ಶ ಲೆಕ್ಕಾಚಾರಯಂತ್ರವು (ಕ್ಯಾಲ್ಕ್ಯುಲೇಟರ್) ಮನೋವ್ಯಾಪಾರವನ್ನು ಚಲನವೈಜ್ಞಾನಿಕ ನಿಯಮಗಳಿಗನುಗುಣವಾಗಿ ಲೆಕ್ಕಾಚಾರ ಹಾಕಿ, 'ನಿಘಂಟಿನ' ಮೂಲಕ ಸಹವರ್ತಿ ಮನೋವ್ಯಾಪಾರವನ್ನು ಊಹಿಸುವಂತಿರುತ್ತಿತ್ತು. 'ನಿಘಂಟು' ಇಲ್ಲದಿದ್ದರೂ, ಲೆಕ್ಕಾಚಾರಯಂತ್ರವು ಪದಗಳನ್ನೂ ಕ್ರಿಯೆಗಳನ್ನೂ ಊಹಿಸಿಕೊಳ್ಳುವಂತಿರುತ್ತಿತ್ತು, ಏಕೆಂದರೆ ಇವು ದೈಹಿಕ ಚಲನೆಗಳು. ಈ ದೃಷ್ಟಿಕೋನವು ಕ್ರೈಸ್ತ ನೈತಿಕತೆ ಮತ್ತು ಪಾಪಕ್ಕೆ ತಕ್ಕನಾದ ಶಿಕ್ಷೆಗೆ ಹೊಂದಿಕೊಳ್ಳಲು ಕಷ್ಟಕರವಾಗಿತ್ತಿತ್ತು.

ಆದರೆ ಈ ಪರಿಣಾಮಗಳು, ತಕ್ಷಣ ಎದ್ದು ಕಾಣುವಂತಹುದಾಗಿರಲಿಲ್ಲ. ಈ ಸಿದ್ಧಾಂತದಲ್ಲಿ ಎರಡು ಹಿರಿಮೆಗಳಿದ್ದುವು. ಮೊದಲನೆಯದು, ಅದು ಒಂದು ಅರ್ಥದಲ್ಲಿ ಆತ್ಮವನ್ನು ದೇಹದಿಂದ ಸಂಪೂರ್ಣವಾಗಿ ಭಿನ್ನವಾಗಿಸುತ್ತದೆ, ಯಾಕೆಂದರೆ ಅದು ಎಂದಿಗೂ ದೇಹದ ಮೇಲೆ ಪರಿಣಾಮ ಬೀರುತ್ತಿರಲಿಲ್ಲ. ಎರಡನೆಯದು, 'ಒಂದು ಮೂಲತತ್ವವು (ಸಬ್‌ಸ್ಟೆನ್ಸ್) ಮತ್ತೊಂದರ ಮೇಲೆ ಪರಿಣಾಮ ಬೀರಲಾರದು' ಎಂಬ ಸಾಮಾನ್ಯ ತತ್ವಕ್ಕೆ ಅದು ಅನುಗುಣವಾಗಿರುತ್ತಿತ್ತು. ಅಲ್ಲಿ ಎರಡು ಮೂಲತತ್ವಗಳಿವೆ, ಮನಸ್ಸು ಮತ್ತು ದೇಹ, ಅವೆರಡೂ ಎಷ್ಟು ಭಿನ್ನವೆಂದರೆ ಅವುಗಳ ನಡುವಣ ಪರಸ್ಪರಕ್ರಿಯೆ ಊಹಾತೀತವೆನ್ನುವಂತಹುದು. ಗ್ಯೂಲೆಂಕ್ಸ್‌ನ ಸಿದ್ಧಾಂತವು ಪರಸ್ಪರಕ್ರಿಯೆಯ ತೋರಿಕೆಯನ್ನು ವಿವರಿಸುತ್ತಲೇ ಅದರ ವಾಸ್ತವತೆಯನ್ನು ನಿರಾಕರಿಸುತ್ತದೆ.

ಯಂತ್ರವಿಜ್ಞಾನದಲ್ಲಿ ಡೆಕಾರ್ಟೆ ಮೊದಲನೆಯ ಚಲನ ನಿಯಮವನ್ನು ಒಪ್ಪಿಕೊಳ್ಳುತ್ತಾನೆ, ಅದರ ಪ್ರಕಾರ ಭೌತವಸ್ತುವೊಂದು ತನ್ನ ಪಾಡಿಗೆ ಬಿಟ್ಟರೆ ಒಂದೇ ವೇಗದಲ್ಲಿ ಸರಳ ರೇಖಾತ್ಮಕವಾಗಿ ಚಲಿಸುತ್ತದೆ. ಆದರೆ ಮುಂದೆ ನ್ಯೂಟನ್‌ನ ಗುರುತ್ವಾಕರ್ಷಣದಲ್ಲಿ ದೂರದಲ್ಲಿ ಯಾವುದೇ ಕ್ರಿಯೆಯಿಲ್ಲ. ನಿರ್ವಾತವೆಂಬುದೇ ಇಲ್ಲ, ಪರಿಮಾಣುಗಳೇ ಇಲ್ಲ, ಆದರೆ ಎಲ್ಲ ಪರಸ್ಪರ ಕ್ರಿಯೆಗಳೂ ನಿಸರ್ಗದ

ಪರಿಣಾಮ. ನಮಗೆ ಸಾಕಷ್ಟು ತಿಳಿದಿದ್ದರೆ, ನಾವು ರಸಾಯನವಿಜ್ಞಾನ ಮತ್ತು ಜೀವವಿಜ್ಞಾನಗಳನ್ನೂ ಯಂತ್ರವಿಜ್ಞಾನದಲ್ಲಿ ಅಳವಡಿಸಬಹುದಾಗಿತ್ತು; ಆ ಕೇವಲ ಯಾಂತ್ರಿಕ ಪ್ರಕ್ರಿಯೆಯ ಪ್ರಕಾರ, ಒಂದು ಬೀಜವು ಪ್ರಾಣಿಯಾಗಿಯೋ ಗಿಡವಾಗಿಯೋ ಬೆಳೆಯುತ್ತದೆ. ಅರಿಸ್ಟಾಟಲ್‌ನ ಮೂರು ಆತ್ಮಗಳ ಆವಶ್ಯಕತೆಯೇ ಇರುವುದಿಲ್ಲ, ಅವುಗಳಲ್ಲಿ ಒಂದು, ವೈಚಾರಿಕ ಆತ್ಮವು, ಇರುತ್ತದೆ, ಅದೂ ಮನುಷ್ಯನಲ್ಲಿ ಮಾತ್ರ.

ಮತಧಾರ್ಮಿಕ ಖಂಡನೆಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ, ಕೆಲವು ಪ್ಲೇಟೋಪೂರ್ವ ತತ್ತ್ವಜ್ಞಾನಗಳದಕ್ಕಿಂತ ಭಿನ್ನವಲ್ಲದ ವಿಶ್ವೋತ್ಪತ್ತಿ ಸಿದ್ಧಾಂತ (ಕಾಸ್ಮೋಗನಿ) ವೊಂದನ್ನು ಡೆಕಾರ್ಟೆ ರೂಪಿಸುತ್ತಾನೆ. ಜಗತ್ತು ಸೃಷ್ಟಿಯಾದುದು ಜೆನೆಸಿಸ್‌ನಲ್ಲಿರುವ ರೀತಿಯಲ್ಲಿ ಎಂಬುದು ನಮಗೆ ಗೊತ್ತು, ಆದರೆ ಅದು ಹೇಗೆ ಸಹಜವಾಗಿ ಬೆಳೆದಿರಬಹುದೆಂಬುದು ತುಂಬ ಕುತೂಹಲಕಾರಿ ಎಂದವನು ಹೇಳುತ್ತಾನೆ. ಆವರ್ತ (ವೋರ್ಟೆಕ್ಸ್) ಗಳು ಹೇಗೆ ರೂಪುಗೊಳ್ಳುವುದೆಂಬ ಬಗ್ಗೆ ಅವನೊಂದು ಸಿದ್ಧಾಂತವನ್ನು ಮಂಡಿಸುತ್ತಾನೆ. ಆ ಸಿದ್ಧಾಂತವು ಜಾಣತನದಿಂದ ಕೂಡಿದೆಯಾದರೂ ಯಾಕೆ ಗ್ರಹಗಳ ಚಲನೆಯು ವರ್ತುಲಾಕೃತಿಯಲ್ಲಿರದೆ ಅಂಡಾಕೃತಿಯಲ್ಲಿರುತ್ತದೆ ಎಂದು ವಿವರಿಸಲಾರದು. ಅದನ್ನು ಒಟ್ಟಾರೆ ಫ್ರಾನ್ಸ್‌ನಲ್ಲಿ ಒಪ್ಪಿಕೊಳ್ಳಲಾಗಿತ್ತು, ಕ್ರಮೇಣ ಅಲ್ಲಿ ಇದನ್ನು ನ್ಯೂಟನ್‌ನ ಸಿದ್ಧಾಂತವು ಉಚ್ಚಾಟನೆ ಮಾಡಿತು. ನ್ಯೂಟನ್‌ನ 'ಪ್ರಿನ್ಸಿಪಿಯ'ದ ಮೊದಲ ಇಂಗ್ಲಿಷ್ ಆವೃತ್ತಿಯ ಸಂಪಾದಕನಾದ ಕೋಟ್ಸ್, ಘೂರ್ಣಭಾಗ ಸಿದ್ಧಾಂತವು ನಾಸ್ತಿಕತೆಗೆ ಎಡೆ ಮಾಡಿಕೊಡುತ್ತದೆ, ಆದರೆ ನ್ಯೂಟನ್ ದೇವರು ಸೂರ್ಯನ ದಿಕ್ಕಿನೆಡೆಗೆ ಹೊರತು ಬೇರೆಡೆಗೆ ಗ್ರಹಗಳು ಚಲಿಸದಂತೆ ಮಾಡಿದ ಎಂಬುದನ್ನು ವಿವರವಾಗಿ ಬಣ್ಣಿಸಿದ. ಈ ನೆಲೆಯಲ್ಲಿ, ನ್ಯೂಟನ್ ಅನ್ನು ಒಪ್ಪಬೇಕು ಎಂದು ಅವನು ಅಭಿಪ್ರಾಯಪಡುತ್ತಾನೆ.

ಈಗ ನಾನು ಬರುವುದು, ಶುದ್ಧ ತತ್ತ್ವಜ್ಞಾನಕ್ಕೆ ಸಂಬಂಧಿಸಿದ ಡೆಕಾರ್ಟೆಯ ಎರಡು ಅತ್ಯಂತ ಪ್ರಮುಖ ಕೃತಿಗಳ ಕುರಿತು. ಇವುಗಳೆಂದರೆ, 'ಡಿಸ್ಕೋರ್ಸ್ ಆನ್ ಮೆಥಡ್' (೧೬೩೭) ಮತ್ತು 'ದ ಮೆಡಿಟೇಷನ್ಸ್' (೧೬೪೨). ಅವುಗಳಲ್ಲಿ ಸಾಕಷ್ಟು ಪುನರುಕ್ತಿಗಳಿರುವುದರಿಂದ, ಆ ಕೃತಿಗಳನ್ನು ಬೇರೆ ಬೇರೆಯಾಗಿ ನೋಡುವುದು ಅನವಶ್ಯಕ.

ಈ ಕೃತಿಗಳಲ್ಲಿ ಡೆಕಾರ್ಟೆ ಮೊದಲಿಗೆ 'ಕಾರ್ಟೀಸಿಯನ್ ಸಂಶಯ' (ಕಾರ್ಟೀಸಿಯನ್ ಸ್ಕೆಪ್ಟಿಸಿಸ್ಮ್) ಎಂದು ಜನಜನಿತವಾಗಿರುವ ವಿಧಾನವನ್ನು ವಿವರಿಸುತ್ತಾನೆ. ತನ್ನ ತಾತ್ವಿಕತೆಗೆ ಭದ್ರ ಬುನಾದಿಯನ್ನು ನೀಡಲು ತನ್ನ ಕಲ್ಪನೆಗೆ ಬಂದುದೆಲ್ಲದರ ಬಗ್ಗೆಯೂ ಸಂಶಯ ತಾಳುವುದೆಂದು ನಿರ್ಧರಿಸುತ್ತಾನೆ. ಈ ಪ್ರಕ್ರಿಯೆಗೆ ಸ್ವಲ್ಪ ಕಾಲ ಬೇಕಾಗುತ್ತದೆಂಬುದು ಅವನಿಗೆ ತಿಳಿದಿದ್ದರಿಂದ, ಈ ಮಧ್ಯೆ ಅವನು, ಸಾಮಾನ್ಯವಾಗಿ ಒಪ್ಪಿತವಾದ ನಿಯಮಗಳನ್ನು ಕ್ರಮಬದ್ಧಗೊಳಿಸಲು

ನಿರ್ಧರಿಸುತ್ತಾನೆ; ಇದರಿಂದಾಗಿ ವಾಡಿಕೆಗೆ ಸಂಬಂಧಿಸಿದಂತೆ ತನ್ನ ಸಂಶಯಗಳ ಸಾಧ್ಯ ಪರಿಣಾಮಗಳಿಂದ ಅವನ ಮನಸ್ಸು ಅಡ್ಡಿಗೊಳಗಾಗುವುದಿಲ್ಲ.

ಅವನು ಆರಂಭಿಸುವುದು ಇಂದ್ರಿಯಗಳಿಗೆ ಸಂಬಂಧಿಸಿದ ಸಂಶಯಗಳಿಂದ. ಅಗ್ಗಿಷ್ಟಿಕೆಯ ಪಕ್ಕದಲ್ಲಿ ನಾನು ಗೌನ್ ಧರಿಸಿ ಕುಳಿತಿರುವುದನ್ನು ನಾನು ಸಂದೇಹಿಸಬಹುದೇ ಎಂದವನು ಕೇಳುತ್ತಾನೆ. ಹೌದು, ಯಾಕೆಂದರೆ ಕೆಲವು ವೇಳೆ ವಾಸ್ತವದಲ್ಲಿ ನಾನು ಮಂಚದ ಮೇಲೆ ಬತ್ತಲೆ ಮಲಗಿರುವಾಗ ಇಲ್ಲಿ ಕುಳಿತಿರುವಂತೆ ಕನಸು ಕಂಡಿದ್ದೇನೆ. (ಆಗ ಪೈಜಾಮವಾಗಲೀ ರಾತ್ರಿ ಅಂಗಿಯಾಗಲೀ ಇರಲಿಲ್ಲ.) ಮೇಲಾಗಿ, ಹುಚ್ಚರಿಗೆ ಕೆಲವು ವೇಳೆ ಭ್ರಮೆಗಳುಂಟಾಗುತ್ತವೆ, ಪ್ರಾಯಶಃ ನಾನೂ ಹಾಗೆಯೇ ಇದ್ದಿರಲು ಸಾಧ್ಯ.

ಆದರೆ ಕನಸುಗಳು ನಮಗೆ ವರ್ಣಚಿತ್ರಕಾರನಂತೆ ವಸ್ತುಗಳ ವಾಸ್ತವ ನಕಲುಗಳನ್ನು ನೀಡುತ್ತವೆ, ಕನಿಷ್ಠ ಪಕ್ಷ ಅವುಗಳ ಮೂಲವಸ್ತುಗಳಿಗೆ ಸಂಬಂಧಿಸಿದಂತೆ. (ನಿಮಗೆ ರೆಕ್ಕೆಯಿರುವ ಕುದುರೆಯ ಕನಸು ಬೀಳಬಹುದು, ಅದಕ್ಕೆ ಕಾರಣ ನೀವು ಕುದುರೆಗಳನ್ನೂ ರೆಕ್ಕೆಗಳನ್ನೂ ಕಂಡಿರುವುದು.) ಹೀಗಾಗಿ, ಸಾಮಾನ್ಯವಾಗಿ ವಿಷಯ, ಸಂಖ್ಯೆ ಹಾಗೂ ಗಾತ್ರಗಳನ್ನು ಅರ್ಥವ್ಯಾಪ್ತಿ (ಎಕ್ಸ್‌ಟೆನ್ಷನ್) ಯನ್ನಾಗಿ ಸೇರಿಸಿಕೊಂಡ ಇಂತಹ ಭೌತಿಕ ಸ್ವಭಾವವನ್ನು ಸಂದೇಹಿಸುವುದು ನಿರ್ದಿಷ್ಟ ವಸ್ತುಗಳ ಬಗೆಗಿನ ನಂಬಿಕೆಗಳನ್ನು ಸಂದೇಹಿಸುವುದರಷ್ಟು ಸುಲಭವಲ್ಲ. ನಿರ್ದಿಷ್ಟ ವಸ್ತುಗಳಗೆ ಸಂಬಂಧಿಸದ ಅಂಕಗಣಿತ ಮತ್ತು ಜ್ಯಾಮಿತಿಗಳು ಭೌತವಿಜ್ಞಾನ ಮತ್ತು ಖಗೋಳವಿಜ್ಞಾನಗಳಿಗಿಂತ ಹೆಚ್ಚು ನಿಖರವಾದವು. ಸಂಖ್ಯೆ ಮತ್ತು ಅರ್ಥವ್ಯಾಪ್ತಿಗಳಲ್ಲಿ ವ್ಯತ್ಯಾಸವಿಲ್ಲದ ಕನಸಿನ ವಸ್ತುಗಳ ವಿಷಯವೂ ಅಷ್ಟೇ ಸತ್ಯ. ಆದರೆ ಅಂಕಗಣಿತ ಮತ್ತು ಜ್ಯಾಮಿತಿಗಳಲ್ಲಿಯೂ ಸಂದೇಹ ಸಾಧ್ಯ. ವರ್ಗವೊಂದರ ಭುಜಗಳನ್ನು ಎಣಿಸುವಾಗಲೋ ಎರಡಕ್ಕೆ ಮೂರನ್ನು ಸೇರಿಸಲು ಪ್ರಯತ್ನಿಸುವಾಗಲೋ ನಾನು ತಪ್ಪು ಮಾಡುವಂತೆ ದೇವರು ಮಾಡುತ್ತಾನೆಂಬುದರ ಬಗ್ಗೆ ಸಂದೇಹ ಇರಬಹುದು. ದೇವರ ವಿಷಯದಲ್ಲಿ ಅಂಥ ದಯಾಹೀನತೆಯನ್ನು ಕಲ್ಪನೆಯಲ್ಲಿ ಆರೋಪಿಸುವುದೂ ಪ್ರಾಯಶಃ ತಪ್ಪು, ಯಾಕೆಂದರೆ, ನನ್ನನ್ನು ತಪ್ಪು ದಾರಿಗೆಳೆಯಬಲ್ಲ ಸಾಮರ್ಥ್ಯದಷ್ಟೇ ವಂಚನೆ ಮತ್ತು ಕುಂತ್ರಗಳಿಂದ ಕೂಡಿದ ಕೆಡುಕು ದೆವ್ವವಿರಬಹುದು. ಅಂಥ ದೆವ್ವವೊಂದಿರುವುದಾದರೆ, ನಾನು ಕಾಣುವುದೆಲ್ಲವೂ ಭ್ರಮೆಗಳಾಗಿದ್ದು, ಅವುಗಳ ಮೂಲಕ ನನ್ನ ಭೋಳೇತನವನ್ನು ಬಲೆಗೆ ಬೀಳಿಸಿಕೊಳ್ಳುವ ಹುನ್ನಾರವಾಗಿರಹುದೇ?

ಆದರೆ ನಾನು ಸಂದೇಹಿಸಲಾಗದ ಯಾವುದೋ ಒಂದು ಉಳಿಯುತ್ತದೆ: ಎಷ್ಟೇ ಕುತಂತ್ರಿಯಾಗಿರುವ ದೆವ್ವವೂ ನಾನು ಅಸ್ತಿತ್ವದಲ್ಲೇ ಇರದಿದ್ದರೇ ನನ್ನನ್ನು ವಂಚಿಸಲಾರದು. ನನಗೆ ದೇಹವೇ ಇರದಿರಬಹುದು, ಇದು ಭ್ರಮೆಯೇ ಇರಬಹುದು. ಆದರೆ ಆಲೋಚನೆ ಬೇರೆಯದು. 'ಎಲ್ಲವನ್ನೂ ಸುಳ್ಳೆಂದು ತಿಳಿಯಲು ನಾನು

ಬಯಸಿದರೂ, ಆಲೋಚನೆ ಮಾಡಿದ ನಾನು *ಖಂಡಿತ* ಯಾವುದೋ ಆಗಿರಬೇಕು; ನಾನು ಆಲೋಚಿಸುತ್ತೇನೆ, ಹೀಗಾಗಿ ನಾನು ಇದ್ದೇನೆ ಎಂಬ ಈ ಸತ್ಯವು ಎಷ್ಟು ಗಟ್ಟಿಯಾದುದು ಮತ್ತು ನಿಶ್ಚಿತವಾದುದು ಎಂದರೆ ಸಂದೇಹವಾದಿಗಳ ಎಲ್ಲ ಅತಿರೇಕ ಊಹೆಗಳೂ ಅದನ್ನು ಅಲ್ಲಗಳೆಯಲು ಸಮರ್ಥವಾಗಿರಲಿಲ್ಲ. ನಾನು ಬಯಸುವ ತತ್ವಜ್ಞಾನದ ಮೊದಲ ತತ್ವವಾಗಿ ಅದನ್ನು ಎಳ್ಳಷ್ಟೂ ಹಿಂಜರಿಕೆಯಿಲ್ಲದೆ ಸ್ವೀಕರಿಸಬಹುದೆಂದು ತೀರ್ಮಾನಿಸಿದೆ.'[೨೫೮]

ಈ ಭಾಗವು ಡೆಕಾರ್ಟೆಯ ಜ್ಞಾನಸಿದ್ಧಾಂತದ ತಿರುಳು, ಮತ್ತು ಅವನ ತಾತ್ವಿಕತೆಯ ಅತ್ಯಂತ ಮುಖ್ಯವಾದುದನ್ನು ಒಳಗೊಳ್ಳುತ್ತದೆ. ಡೆಕಾರ್ಟೆಯ ನಂತರ ಬಹುತೇಕ ತತ್ವಜ್ಞಾನಿಗಳು ಈ ಜ್ಞಾನಸಿದ್ಧಾಂತಕ್ಕೆ ಪ್ರಾಮುಖ್ಯವನ್ನು ನೀಡಿದ್ದಾರೆ, ಅವರು ಹಾಗೆ ಮಾಡಿರುವುದಕ್ಕೆ ಮುಖ್ಯ ಕಾರಣ ಅವನೇ. 'ನಾನು ಆಲೋಚಿಸುತ್ತೇನೆ, ಹಾಗಾಗಿ ನಾನು ಇದ್ದೇನೆ' ಎಂಬುದು ವಿಷಯಕ್ಕಿಂತ ಮನಸ್ಸನ್ನು ಮುಖ್ಯವಾಗಿಸುತ್ತದೆ, ಮತ್ತು (ನನ್ನ ಮಟ್ಟಿಗೆ) ನನ್ನ ಮನಸ್ಸು ಇತರರ ಮನಸ್ಸುಗಳಿಗಿಂತ ಹೆಚ್ಚು ನಿಶ್ಚಿತ ಎನಿಸುತ್ತದೆ. ಹೀಗೆ ಡೆಕಾರ್ಟೆಯಿಂದ ಸಾಧಿತವಾದ ತತ್ವಜ್ಞಾನದಲ್ಲೆಲ್ಲ ವ್ಯಕ್ತಿನಿಷ್ಠೆಯ ಪ್ರವೃತ್ತಿಯು ಕಾಣಿಸುತ್ತದೆ ಮತ್ತು ವಿಷಯವು, ಮನಸ್ಸು ತಿಳಿದಿರುವುದರ ಆಧಾರದ ಮೇಲೆ ಊಹಿಸುವುದಾದರೆ, ಜ್ಞೇಯವೆಂದಷ್ಟೇ ಸೂಚಿಸುತ್ತದೆ. ಈ ಎರಡೂ ಪ್ರವೃತ್ತಿಗಳು ಯೂರೋಪ್‌ನ ಆದರ್ಶವಾದದಲ್ಲಿಯೂ ಬ್ರಿಟಿಶ್ ಅನುಭವೈಕವಾದ (ಎಂಪಿರಿಸಿಸಂ) ದಲ್ಲಿಯೂ ಇದೆ – ಮೊದಲನೆಯದರಲ್ಲಿ ಭರ್ಜರಿಯಾಗಿ ಮತ್ತು ಎರಡನೆಯದರಲ್ಲಿ ವಿಷಾದಪೂರ್ಣವಾಗಿ. ಈಚಿನ ದಿನಗಳಲ್ಲಿ, ಸಾಧನ ಸಿದ್ಧಾಂತ (ಇನ್‌ಸ್ಟ್ರುಮೆಂಟಲಿಸಂ) ಎಂಬ ತಾತ್ವಿಕತೆಯ ಮೂಲಕ ಈ ವ್ಯಕ್ತಿನಿಷ್ಠತೆಯಿಂದ ದೂರ ಓಡುವ ಪ್ರಯತ್ನ ನಡೆದಿದೆ. ಆದರೆ ಈ ಕುರಿತು ನಾನೀಗಲೇ ಏನನ್ನೂ ಹೇಳುವುದಿಲ್ಲ. ಇಷ್ಟು ಹೊರತು, ಆಧುನಿಕ ತತ್ವಜ್ಞಾನವು ಡೆಕಾರ್ಟೆ ರೂಪಿಸಿದ ಸಮಸ್ಯೆಗಳನ್ನು ವ್ಯಾಪಕವಾಗಿ ಅನುಮೋದಿಸಿದೆ, ಆದರೆ ಅವನು ಸೂಚಿಸಿದ ಪರಿಹಾರಗಳನ್ನಲ್ಲ.

ಕೋಗಿಟೋವನ್ನು ಹೋಲುವ ವಾದವೊಂದನ್ನು ಸಂತ ಆಗಸ್ಟೈನ್ ಮುಂದಿಟ್ಟನೆಂಬುದನ್ನು ಓದುಗರು ನೆನಪಿಸಿಕೊಳ್ಳಬಹುದು. ಆದರೆ ಅವನು ಅದಕ್ಕೆ ಪ್ರಾಮುಖ್ಯವನ್ನು ನೀಡಲಿಲ್ಲವೆನ್ನುವುದು ನಿಜ, ಅದು ಪರಿಹರಿಸಬಯಸಿದ್ದ ಸಮಸ್ಯೆಯು ಅವನ ಆಲೋಚನೆಗಳ ಸಣ್ಣ ಭಾಗಕ್ಕಷ್ಟೇ ಸೀಮಿತವಾಗಿತ್ತು. ಹೀಗಾಗಿ, ಡೆಕಾರ್ಟೆಯ ಸ್ವೋಪಜ್ಞತೆಯನ್ನು ಮೆಚ್ಚಬಹುದು, ಆದರೆ ಅದು ಇರುವುದು ಅದನ್ನು

---

೨೫೮. 'ನಾನು ಆಲೋಚಿಸುತ್ತೇನೆ, ಹೀಗಾಗಿ ನಾನು ಇದ್ದೇನೆ' (ಕೋಗಿಟೋ ಎರ್ಗೋ ಸಮ್) ಎಂಬ ಈ ಮೇಲಿನ ವಾದವು ಡೆಕಾರ್ಟೆಯ ಕೋಗಿಟೋ ಎಂದು ಭಾವಿಸಲಾಗಿದೆ, ಮತ್ತು ಅದನ್ನು ತಲುಪಿದ ಈ ಪ್ರಕ್ರಿಯೆಯು 'ಕಾರ್ಟೀಸಿಯನ್ ಸಂಶಯ' ಎಂದು ಪ್ರಸಿದ್ಧವಾಗಿದೆ.

ಕಂಡುಹಿಡಿಯುವುದಲ್ಲಿರದೆ ಅದರ ಪ್ರಾಮುಖ್ಯವನ್ನು ಗುರುತಿಸುವುದರಲ್ಲಿ.

ಈಗ ಭದ್ರ ಬುನಾದಿಯನ್ನು ಹಾಕಿದ ಮೇಲೆ, ಡೆಕಾರ್ಟೆ ಜ್ಞಾನಸೌಧವನ್ನು ಪುನರ್ನಿರ್ಮಿಸಲು ತೊಡಗಿದ. ನಾನು ಅಸ್ತಿತ್ವದಲ್ಲಿರುವುದನ್ನು ಸಾಧಿಸಿದ ಬಳಿಕ, ಅದು ನಾನು ಆಲೋಚಿಸುತ್ತೇನೆ ಎನ್ನುವುದರಿಂದ ಸಾಬೀತುಪಡಿಸಲಾಗಿದೆ, ಹೀಗಾಗಿ ನಾನು ಆಲೋಚಿಸುವುದರಲ್ಲಿ ಅಸ್ತಿತ್ವದಲ್ಲಿರುತ್ತೇನೆ, ಮತ್ತು ಆಗ ಮಾತ್ರ. ಆಲೋಚಿಸುವುದನ್ನು ನಿಲ್ಲಿಸಿದರೆ, ನಾನು ಅಸ್ತಿತ್ವದಲ್ಲಿರುವ ಯಾವ ಪುರಾವೆಯೂ ಉಳಿದಿರುವುದಿಲ್ಲ. ನಾನು ಆಲೋಚಿಸುವ ವಸ್ತು, ಅದರ ಸಮಸ್ತ ಸತ್ವವಿರುವುದು ಆಲೋಚನೆಯಲ್ಲಿ, ಅದು ಅಸ್ತಿತ್ವದಲ್ಲಿರಲು ಯಾವುದೇ ಭೌತ ವಸ್ತುವಾಗಲೀ ಸ್ಥಳವಾಗಲೀ ಆವಶ್ಯಕವಿಲ್ಲ. ಹೀಗಾಗಿ, ಆತ್ಮವು ದೇಹದಿಂದ ಸಂಪೂರ್ಣವಾಗಿ ಭಿನ್ನ, ಮತ್ತು ದೇಹಕ್ಕಿಂತ ಹೆಚ್ಚು ಸುಲಭವಾಗಿ ಅರ್ಥಮಾಡಿಕೊಳ್ಳಬಹುದಾದುದು; ದೇಹವಿಲ್ಲದಿದ್ದರೂ ಅದು ಇರುವಂತೆಯೇ ಇರುತ್ತದೆ.

ಡೆಕಾರ್ಟೆ ತನಗೆ ತಾನೆ ಹಾಕಿಕೊಳ್ಳುವ ಮುಂದಿನ ಪ್ರಶ್ನೆ: ಕೋಗಿಟೋ ಯಾಕೆ ಅಷ್ಟೊಂದು ಎದ್ದು ಕಾಣುವಂತಹುದು? ಅದಕ್ಕೆ ಅವನ ಉತ್ತರವೆಂದರೆ, ಅದು ಸ್ಪಷ್ಟವೂ ಎದ್ದು ಕಾಣುವಂತಹುದೂ ಆಗಿದೆ, ಆದ್ದರಿಂದ. ಹೀಗಾಗಿ ಅವನೊಂದು ಸಾಮಾನ್ಯ ನಿಯಮವನ್ನು ಒಂದು ತತ್ವವಾಗಿ ಅಳವಡಿಸಿಕೊಳ್ಳುತ್ತಾನೆ: ಅದೆಂದರೆ, ನಾವು ಸ್ಪಷ್ಟವಾಗಿಯೂ ಎದ್ದು ಕಾಣುವಂತೆಯೂ ಪರಿಕಲ್ಪಿಸಿಕೊಳ್ಳುವ ಎಲ್ಲ ವಿಷಯಗಳೂ ನಿಜ. ಆದರೆ, ಈ ವಿಷಯಗಳು ಯಾವುದೆಂಬುದನ್ನು ಅರ್ಥಮಾಡಿಕೊಳ್ಳುವುದು ಕೆಲವು ವೇಳೆ ಕಷ್ಟಕರವಾಗುತ್ತದೆಂಬುದನ್ನು ಅವನು ಒಪ್ಪಿಕೊಳ್ಳುತ್ತಾನೆ.

'ಆಲೋಚಿಸುವುದು' ಎಂಬುದನ್ನು ಡೆಕಾರ್ಟೆ ಬಹು ವ್ಯಾಪಕಾರ್ಥದಲ್ಲಿ ಬಳಸುತ್ತಾನೆ. ಅವನ ಪ್ರಕಾರ, ಆಲೋಚಿಸುವ ವಸ್ತುವು ಸಂದೇಹಿಸುವಂತಹುದು, ಅರ್ಥಮಾಡಿಕೊಳ್ಳುವಂತದು, ಪರಿಕಲ್ಪಿಸಿಕೊಳ್ಳುವಂತಹುದು. ಸ್ಥಿರಪಡಿಸುವಂತಹುದು, ಸಂಕಲ್ಪಿಸುವಂತಹುದು, ಕಲ್ಪನೆಮಾಡಿಕೊಳ್ಳುವಂತಹುದು, ಮತ್ತು ಅನುಭವಿಸುವಂತಹುದು, ಯಾಕೆಂದರೆ ಕನಸುಗಳ ಕಾಲದಲ್ಲಾಗುವ ಅನುಭವವು ಕೂಡ ಒಂದು ಬಗೆಯ ಆಲೋಚನೆಯೇ. ಆಲೋಚನೆಯು ಮನಸ್ಸಿನ ಸಾರಸತ್ವವಾದ್ದರಿಂದ ಮನಸ್ಸು ಸದಾ ಆಲೋಚಿಸಬೇಕು, ನಿದ್ದೆಯ ಸಮಯದಲ್ಲಿಯೂ.

ಡೆಕಾರ್ಟೆ ಈಗ ನಮ್ಮ ದೇಹಗಳ ಜ್ಞಾನದ ಸಮಸ್ಯೆಗೆ ಹಿಂದಿರುತ್ತಾನೆ. ಉದಾಹರಣೆಯಾಗಿ ಅವನು ತೆಗೆದುಕೊಳ್ಳುವುದು ಜೇನುಹುಟ್ಟಿನ ಮೇಣದ ಚೂರನ್ನು. ಕೆಲವು ವಸ್ತುಗಳು ಇಂದ್ರಿಯಗಳಿಗೆ ಕಾಣುವಂತಹುವು: ಅದರಲ್ಲಿ ಜೇನುತುಪ್ಪದ ರುಚಿಯಿರುತ್ತದೆ, ಹೂವಿನ ಪರಿಮಳವಿರುತ್ತದೆ, ಅದರಲ್ಲಿ ಕಣ್ಣಿಗೆ ಕಾಣುವ ಒಂದು ಬಣ್ಣ, ಗಾತ್ರ ಮತ್ತು ಆಕಾರವಿರುತ್ತವೆ, ಅದು ಗಟ್ಟಿಯಾಗಿಯೂ ತಣ್ಣಗೂ ಇರುತ್ತದೆ,

ಹೊಡೆದರೆ ಅದರಿಂದ ಒಂದು ಶಬ್ದ ಹೊಮ್ಮುತ್ತದೆ. ಆದರೆ ಅದನ್ನು ಬೆಂಕಿಯ ಬಳಿಯಿಟ್ಟರೆ, ಮೇಣವಿದ್ದರೂ ಈ ಗುಣಗಳೆಲ್ಲ ಬದಲಾಗುತ್ತವೆ, ಹೀಗಾಗಿ ಇಂದ್ರಿಯಗ್ರಾಹ್ಯವಾದವುಗಳು ಮೇಣವೇ ತಾನಲ್ಲ. ಮೇಣವು ಅರ್ಥವ್ಯಾಪ್ತಿ, ನಮ್ಯತೆ, ಮತ್ತು ಚಲನೆಗಳನ್ನು ಹೊಂದಿರುವಂತಹುದು, ಅವುಗಳನ್ನು ಮನಸ್ಸು ಅರ್ಥಮಾಡಿಕೊಳ್ಳಬಹುದೇ ಹೊರತು ಕಲ್ಪನೆಯಲ್ಲ. ಮೇಣವೆಂಬ ವಸ್ತು ತನ್ನಷ್ಟಕ್ಕೇ ಇಂದ್ರಿಯಗ್ರಾಹ್ಯವಲ್ಲ, ಅದು ವಿವಿಧ ಇಂದ್ರಿಯಗಳು ಗ್ರಹಿಸಿಕೊಳ್ಳುವುದರೆಲ್ಲದರ ಒಟ್ಟಂದದಲ್ಲಿ, ಮೇಣದ ಇಂದ್ರಿಯಗ್ರಹಿಕೆಯು 'ಒಂದು ಕಾಣ್ಕೆಯಲ್ಲ, ಅಥವಾ ಕಲ್ಪನೆಯ ಸ್ಪರ್ಶವಲ್ಲ, ಅದು ಮನಸ್ಸಿನ ಒಂದು ಪರಿಶೀಲನೆ.' ಬೀದಿಯಲ್ಲಿ ಹ್ಯಾಟ್‌ಗಳನ್ನೂ ಕೋಟುಗಳನ್ನು ಹಾಕಿಕೊಂಡಿರುವ ಜನರನ್ನು ನೋಡುವುದಕ್ಕೇನೂ ಹೆಚ್ಚಿನದಲ್ಲದ ರೀತಿಯಲ್ಲೇ ನಾನು ಮೇಣವನ್ನು ನೋಡುವುದು. 'ನಾನು ಅರ್ಥಮಾಡಿಕೊಳ್ಳುವುದು ನಿರ್ಧಾರಸಾಮರ್ಥ್ಯದಿಂದ ಮಾತ್ರ, ಅದು ನನ್ನ ಮನಸ್ಸಿನಲ್ಲಿರುವಂತಹುದು, ನಾನು ನೋಡಿದೆನೆಂದು ಆಲೋಚಿಸಿದ್ದು ನನ್ನ ಕಣ್ಣುಗಳಿಂದ.' ಇಂದ್ರಿಯಗಳಿಂದ ಪಡೆಯುವ ಜ್ಞಾನವು ಗೊಂದಲಮಯವಾದುದು, ಪ್ರಾಣಿಗಳಲ್ಲಿರುವಂತಹುದು; ಆದರೆ ನಾನೀಗ ಮೇಣದ ಆವರಣಗಳನ್ನು ಕಳಚಿದ್ದೇನೆ, ಮತ್ತು ಅದನ್ನು ಬತ್ತಲೆ ರೂಪದಲ್ಲಿ ನೋಡುತ್ತೇನೆ. ಇಂದ್ರಿಯಗ್ರಹಿಕೆಯ ಮೂಲಕ ನೋಡುವುದನ್ನು ನನ್ನ ಅಸ್ತಿತ್ವವು ಖಚಿತವಾಗಿ ಅನುಸರಿಸುತ್ತದೆ, ಆದರೆ ಮೇಣದ ಅಸ್ತಿತ್ವವನ್ನಲ್ಲ. ಬಾಹ್ಯ ವಸ್ತುಗಳ ಜ್ಞಾನವು ಮನಸ್ಸಿನಿಂದಲೇ ಹೊರತು ಇಂದ್ರಿಯಗಳಿಂದಲ್ಲ.

ಇದು ವಿಭಿನ್ನ ಚಿಂತನೆಗಳ ಪರಿಶೀಲನೆಗೆ ಎಡೆಮಾಡಿಕೊಡುತ್ತದೆ. ಡೆಕಾರ್ಟೆಯ ಪ್ರಕಾರ ಅತ್ಯಂತ ಸಾಮಾನ್ಯ ದೋಷವೆಂದರೆ, ನನ್ನ ಚಿಂತನೆಗಳು ಬಾಹ್ಯ ವಸ್ತುಗಳಂತೆ ಎಂದು ಆಲೋಚಿಸುವುದು. (ಡೆಕಾರ್ಟೆಯ ಪ್ರಕಾರ 'ಚಿಂತನೆ' ಎಂಬ ಶಬ್ದವು ಇಂದ್ರಿಯಗ್ರಹಿಕೆಗಳನ್ನೂ ಒಳಗೊಳ್ಳುತ್ತದೆ.) 'ಚಿಂತನೆ' ಮೂರು ಬಗೆಯಾಗಿರುವಂತೆ ತೋರುತ್ತದೆ: (೧) ಅಂತರ್ಗತವಾಗಿರುವಂತಹುವು; (೨) ಹೊರಗಿನ ಮತ್ತು ಹೊರಗಿನಿಂದ ಬರುವಂತಹುವು; (೩) ನನ್ನಿಂದ ಅನಾವರಣಗೊಂಡಂಥವು. ಚಿಂತನೆಗಳ ಎರಡನೆಯ ಬಗೆಯು ಬಾಹ್ಯ ವಸ್ತುಗಳಂತೆ ಎಂದು ನಾವು ಸಹಜವಾಗಿ ಭಾವಿಸುತ್ತೇವೆ. ಹೀಗೆ ನಾವು ಭಾವಿಸುವುದು, ಭಾಗಶಃ ಪ್ರಕೃತಿಯು ನಮ್ಮನ್ನು ಆ ರೀತಿ ಚಿಂತಿಸುವಂತೆ ಕಲಿಸುವುದರಿಂದ, ಮತ್ತು ಭಾಗಶಃ ಅಂಥ ಚಿಂತನೆಗಳು ಮನಸ್ಸಿನಿಂದ ಹೊರತಾಗಿ ಸ್ವತಂತ್ರವಾಗಿ (ಅಂದರೆ, ಸಂವೇದನೆಯಿಂದ) ಮೂಡುವುದರಿಂದ; ಹೀಗಾಗಿ ಬಾಹ್ಯ ವಸ್ತುವೊಂದು ತನ್ನ ಸ್ವರೂಪವನ್ನು ನನ್ನ ಮೇಲೆ ಪಡಿಮೂಡಿಸುವುದೆಂದು ತೋರುವುದು ಸಕಾರಣವಾಗಿದೆ. ಆದರೆ ಇವು ಸಮಂಜಸ ಕಾರಣಗಳೇ? ಈ ಸಂದರ್ಭದಲ್ಲಿ 'ಪ್ರಕೃತಿಯು ಕಲಿಸುವ' ಕುರಿತು

ನಾನು ಮಾತನಾಡುವುದು ಎಂದರೆ ಅದನ್ನು ನಂಬುವುದರ ಕಡೆ ನನಗೆ ಒಲವಿದೆ ಎಂದರ್ಥವೇ ಹೊರತು ಪ್ರಕೃತಿಯ ಸಹಜ ಬೆಳಕಿನಲ್ಲಿ ಎಂದಲ್ಲ. ಪ್ರಕೃತಿಯ ಸಹಜ ಬೆಳಕಿನಲ್ಲಿ ನಾನು ಕಾಣುವುದನ್ನು ನಿರಾಕರಿಸಲಾಗದಾದರೂ, ಒಲವು ತಪ್ಪಾದುದರ ಕಡೆಗಿರಬಹುದು. ಇಂದ್ರಿಯ ಚಿಂತನೆಗಳು ಯಾದೃಚ್ಛಿಕವೆನ್ನುವ ಮಟ್ಟಿಗೆ, ಅದು ಸಮಂಜಸ ವಾದವಲ್ಲ, ಯಾಕೆಂದರೆ ಒಳಗಿನಿಂದಲೇ ಮೂಡಿಬಂದರೂ ಕನಸುಗಳು ಯಾದೃಚ್ಛಿಕವಾದವು. ಹೀಗಾಗಿ ಇಂದ್ರಿಯಗಳ ಚಿಂತನೆಯು ಹೊರಗಿನಿಂದ ಬಂದುದು ಎಂದು ಭಾವಿಸುವ ಕಾರಣಗಳು ಅಂತಿಮವಲ್ಲ.

ಮಿಗಿಲಾಗಿ, ಕೆಲವು ವೇಳೆ ಒಂದೇ ಬಾಹ್ಯ ವಸ್ತುವಿನ ಬಗ್ಗೆ ಎರಡು ವಿಭಿನ್ನ ಚಿಂತನೆಗಳಿರುತ್ತವೆ, ಉದಾಹರಣೆಗೆ, ಇಂದ್ರಿಯಗಳಿಗೆ ಕಾಣುವ ಸೂರ್ಯ ಮತ್ತು ಖಗೋಳವಿಜ್ಞಾನಿಗಳು ನಂಬುವ ಸೂರ್ಯ. ಇವೆರಡೂ ಸೂರ್ಯನಂತೆ ಇರಲು ಸಾಧ್ಯವಿಲ್ಲ, ಕಾರಣವೆಂದರೆ ಅನುಭವದ ಮೂಲಕ ನೇರವಾಗಿ ಬರುವಂತಹುದು ಆ ಎರಡರಲ್ಲಿ ಕಡಿಮೆ ಇರುವುದು.

ಆದರೆ ಈ ಪರಿಗಣನೆಗಳು ಬಾಹ್ಯ ಜಗತ್ತಿನ ಅಸ್ತಿತ್ವದ ಬಗ್ಗೆ ಸಂದೇಹವು ಎತ್ತುವ ಸಂದೇಹಾತ್ಮಕ ವಾದಗಳನ್ನು ಪರಿಹರಿಸಲಿಲ್ಲ. ದೇವರ ಅಸ್ತಿತ್ವವನ್ನು ಮೊದಲು ಸಾಬೀತುಪಡಿಸುವುದರಿಂದ ಮಾತ್ರವೇ ಇದನ್ನು ಬಗೆಹರಿಸಬಹುದು.

ಡೆಕಾರ್ಟೆ ದೇವರ ಅಸ್ತಿತ್ವದ ಬಗ್ಗೆ ನೀಡುವ ಆಧಾರಗಳು ಅಷ್ಟು ಸ್ವೋಪಜ್ಞವಲ್ಲ; ಮುಖ್ಯವಾಗಿ ಅವು ಸೂಕ್ಷ್ಮತರ್ಕಾತ್ಮಕ ತಾತ್ವಿಕತೆಯಿಂದ ಬಂದವು. ಅವುಗಳನ್ನು ಲೀಬ್‌ನಿಜ಼್ ಇನ್ನೂ ಉತ್ತಮವಾಗಿ ನಿರೂಪಿಸುತ್ತಾನೆ, ಅವನವರೆಗೂ ಬರುವ ತನಕ ನಾನು ಇದರ ಪರಿಶೀಲನೆಯನ್ನು ಕೈಬಿಡುತ್ತೇನೆ.

ದೇವರ ಅಸ್ತಿತ್ವವನ್ನು ಸಾಬೀತುಪಡಿಸಿದ ನಂತರ, ಮುಂದಿನವು ಸಲೀಸಾಗಿ ಮುಂದುವರಿಯುತ್ತವೆ. ದೇವರು ಒಳ್ಳೆಯವನಾದ್ದರಿಂದ, ಅವನು ಸಂದೇಹಕ್ಕೆ ನೆಲೆಯಾಗಿ ಡೆಕಾರ್ಟೆ ಕಲ್ಪಿಸಿಕೊಂಡ ವಂಚಕತನದ ದೆವ್ವದಂತೆ ವರ್ತಿಸುವುದಿಲ್ಲ. ಈಗ ದೇವರು ನಂಬಲು ನನಗೆ ಎಂತಹ ಪ್ರಬಲ ಒಲವನ್ನು ನೀಡಿದ್ದಾನೆಂದರೆ, ಅದಿಲ್ಲದಿದ್ದರೆ ಅವನು ವಂಚಕನೆನಿಸಿಕೊಳ್ಳುತ್ತಿದ್ದ; ಹೀಗಾಗಿ ದೇಹಗಳು ಅಸ್ತಿತ್ವದಲ್ಲಿವೆ. ಮೇಲಾಗಿ, ದೋಷಗಳನ್ನು ಸರಿಪಡಿಸಿಕೊಳ್ಳುವ ಸಾಮರ್ಥ್ಯವನ್ನು ನನಗೆ ಕೊಟ್ಟಿರಬೇಕು. ಯಾವುದು ಸ್ಪಷ್ಟವೂ ವಿಭಿನ್ನವೂ ಆಗಿದೆಯೋ ಅದೇ ಸತ್ಯ ಎಂಬ ತತ್ವವನ್ನು ಬಳಸಿಕೊಂಡಾಗ ನಾನು ಈ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳುತ್ತೇನೆ. ಇದರಿಂದ ನನಗೆ ಗಣಿತವನ್ನು, ಮತ್ತು ದೇಹಗಳ ಬಗೆಗಿನ ಸತ್ಯವನ್ನು ಮನಸ್ಸಿನಿಂದ ಅರಿಯಬೇಕೇ ಹೊರತು ದೇಹ ಮತ್ತು ಮನಸ್ಸುಗಳೆರಡರ ಮೂಲಕವೂ ಅಲ್ಲ ಎಂಬುದನ್ನು ನೆನಪಿಸಿಕೊಂಡರೆ, ಭೌತವಿಜ್ಞಾನವನ್ನು ಕೂಡ, ತಿಳಿಯುವಂತಾಗುತ್ತದೆ.

ಡೇಕಾರ್ಟೆಯ ಜ್ಞಾನ ಸಿದ್ಧಾಂತದ ರಚನಾತ್ಮಕ ಭಾಗವು ಹಿಂದಿನ ವಿನಾಶಾತ್ಮಕ ಭಾಗಕ್ಕಿಂತ ಕಡಿಮೆ ಆಸಕ್ತಿದಾಯಕವಾದುದು. ಪರಿಣಾಮವು ಆರಂಭಿಕ ಪರಿಶೀಲನೆಯನ್ನು ಹೇಗೋ ತಪ್ಪಿಸಿಕೊಂಡ ಅದರ ಕಾರಣಕ್ಕಿಂತ ಹೆಚ್ಚು ಪರಿಪೂರ್ಣವಾಗಿರಲಾರದು ಎಂಬಂತಹ ಎಲ್ಲ ಬಗೆಯ ಸೂಕ್ಷ್ಮತಾರ್ಕಿಕ ವಿಧಿ (ಮ್ಯಾಕ್ಸಿಮ್)ಗಳನ್ನು ಅದು ಬಳಸಿಕೊಳ್ಳುತ್ತದೆ. ಹಲವಾರು ವಿಧಗಳಿಂದ ಸಾಧಿತವಾದ ತನ್ನ ಅಸ್ತಿತ್ವಕ್ಕಿಂತ ಖಂಡಿತವಾಗಿ ಕಡಿಮೆ ಸ್ವಯಂವೇದ್ಯವಾಗಿದ್ದರೂ, ಈ ವಿಧಿಗಳನ್ನು ಒಪ್ಪಿಕೊಳ್ಳಲು ಯಾವುದೇ ಕಾರಣಗಳನ್ನು ನೀಡಿಲ್ಲ. 'ಮೆಡಿಟೇಷನ್ಸ್'ನಲ್ಲಿನ ಬಹುಪಾಲು ಹೇಳಿಕೆಗಳು ಪ್ಲೇಟೋ, ಸಂತ ಆಗಸ್ಟೈನ್, ಮತ್ತು ಸಂತ ಥಾಮಸ್ ಅವರುಗಳಲ್ಲಿವೆ.

ಡೇಕಾರ್ಟೆಯೇ ಅರೆಮನಸ್ಸಿನಿಂದ ಅನ್ವಯಿಸಿದರೂ, ವಿಮರ್ಶಾತ್ಮಕ ಸಂದೇಹ ವಿಧಾನವು ತಾತ್ವಿಕವಾಗಿ ಬಹು ಮುಖ್ಯವಾದುದು. ಸಂದೇಹವಾದವು ಎಲ್ಲೋ ಒಂದು ಕಡೆ ನಿಲ್ಲಬೇಕಾದರೆ ಅದು ಧನಾತ್ಮಕ ಪರಿಣಾಮವನ್ನು ನೀಡಬಲ್ಲ ಒಂದು ತರ್ಕವಿಧಾನವಾಗಿ ಸ್ಪಷ್ಟವಾದುದು. ತಾರ್ಕಿಕ ಹಾಗೂ ಅನುಭವೈಕ ಜ್ಞಾನವಿರಬೇಕಾದರೆ ಅದಕ್ಕೆ ಎರಡು ರೀತಿಯ ನಿಲುಗಡೆಯ ಬಿಂದುಗಳಿರಬೇಕು: ಸಂದೇಹಾತೀತ ವಸ್ತುಸ್ಥಿತಿಗಳು ಮತ್ತು ಸಂದೇಹಾತೀತ ಊಹನ ತತ್ವಗಳು. ಡೇಕಾರ್ಟೆಯ ಸಂದೇಹಾತೀತ ವಸ್ತುಸ್ಥಿತಿಗಳು ಎಂದರೆ ಅವನ ಆಲೋಚನೆಗಳೇ, ಅದರ ಅತ್ಯಂತ ವ್ಯಾಪಕ ಅರ್ಥದಲ್ಲಿ. 'ನಾನು ಆಲೋಚಿಸುತ್ತೇನೆ' ಎಂಬುದು ಅವನ ಅಂತಿಮ ಸಾಧ್ಯವಾಕ್ಯ (ಪ್ರೆಮಿಸ್). ಇಲ್ಲಿನ 'ನಾನು' ಎಂಬ ಪದವು ವಾಸ್ತವದಲ್ಲಿ ನ್ಯಾಯಸಮ್ಮತವಲ್ಲ; ಅವನು ತನ್ನ ಅಂತಿಮ ಸಾಧ್ಯವಾಕ್ಯವನ್ನು 'ಆಲೋಚನೆಗಳಿರುತ್ತವೆ' ಎಂದು ಮಂಡಿಸಬೇಕಾಗಿತ್ತು. 'ನಾನು' ಎಂಬ ಪದವು ವ್ಯಾಕರಣಾತ್ಮಕವಾಗಿ ಅನುಕೂಲಕರವಾದುದು, ಆದರೆ ದತ್ತಾಂಶವನ್ನದು ವರ್ಣಿಸಲಾರದು. 'ನಾನು ಆಲೋಚಿಸುವ ಒಂದು ವಸ್ತು' ಎಂದು ಅವನು ಮುಂದುವರಿದಾಗ, ಸೂಕ್ಷ್ಮತರ್ಕದಿಂದ ಇಳಿದು ಬಂದ ವರ್ಗಗಳ (ಕ್ಯಾಟೆಗೊರೀಸ್) ಸಾಧನದಿಂದ ವಿಮರ್ಶೆ ಮಾಡದೆ ಬಳಸುತ್ತಿರುತ್ತಾನೆ. ಆಲೋಚನೆಗಳಿಗೆ ಆಲೋಚಕನೊಬ್ಬನಿರಬೇಕು ಎಂದವನು ಎಲ್ಲಿಯೂ ಸಾಧಿಸುವುದಿಲ್ಲ, ಅಥವಾ ಅದನ್ನು ನಂಬಲು ವ್ಯಾಕರಣಾತ್ಮಕ ಅರ್ಥದ ಹೊರತು ಬೇರಾವ ಕಾರಣವೂ ಇಲ್ಲ. ಆದರೆ ಪ್ರಮುಖ ಅನುಭವೈಕ ಖಚಿತತೆಗಳನ್ನಾಗಿ ಬಾಹ್ಯ ವಸ್ತುಗಳಿಗಿಂತಲೂ ಆಲೋಚನೆಗಳನ್ನು ಪರಿಗಣಿಸುವ ಈ ನಿರ್ಧಾರವು ಬಹು ಮುಖ್ಯವಾದುದಾಗಿತ್ತು, ಮತ್ತು ಅದು ಮುಂದಿನ ತತ್ವಜ್ಞಾನದ ಮೇಲೆ ಗಾಢ ಪ್ರಭಾವವನ್ನು ಬೀರಿತು.

ಇನ್ನೂ ಎರಡು ಅಂಶಗಳಲ್ಲಿ ಡೇಕಾರ್ಟೆಯ ತಾತ್ವಿಕತೆಯು ಬಹು ಮುಖ್ಯವಾದುದು. ಮೊದಲನೆಯದು: ಪ್ಲೇಟೋನಿಂದ ರೂಪಿತವಾಗಿ, ಬಹುತೇಕ ಮತಧಾರ್ಮಿಕ ನೆಲೆಗಳಲ್ಲಿ, ಕ್ರಿಶ್ಚಿಯನ್ ತತ್ವಜ್ಞಾನವು ಮುಂದುವರಿಸಿದ ಮನಸ್ಸು

ಮತ್ತು ವಸ್ತುಗಳ ದ್ವೈವಿಧ್ಯವು ಪರಿಪೂರ್ಣತೆಗೆ, ಅಥವಾ ಪರಿಪೂರ್ಣತೆಯ ಹತ್ತಿರಕ್ಕೆ ಬರುವಂತೆ ಅದು ಮಾಡಿತು. ಡೇಕಾರ್ಟೆಯ ಅನುಯಾಯಿಗಳು ಕೈಬಿಟ್ಟ ಪಿನಿಯಲ್ ಗ್ರಂಥಿಯಲ್ಲಿನ ವ್ಯಾಪಾರಗಳನ್ನು ಬದಿಗಿಟ್ಟರೆ, ಕಾರ್ಟೀಸಿಯನ್ ವಿಧಾನವು ಎರಡು ಸ್ವತಂತ್ರ ಸಮಾನಾಂತರ ಜಗತ್ತುಗಳನ್ನು ಮುಂದಿಡುತ್ತದೆ, ಒಂದು ಮನಸ್ಸಿನದು, ಮತ್ತೊಂದು ವಸ್ತುವಿನದು, ಇವೆರಡನ್ನೂ ಒಂದನ್ನು ಬಿಟ್ಟು ಇನ್ನೊಂದನ್ನು ಸ್ವತಂತ್ರವಾಗಿ ಅಧ್ಯಯನ ಮಾಡಬಹುದು. ಮನಸ್ಸು ದೇಹವನ್ನು ಚಲಿಸುವಂತೆ ಮಾಡುವುದಿಲ್ಲ ಎಂಬುದು, ನೇರವಾಗಿ ಗ್ಯೂಲಿಂಕ್ಸ್‌ಗೆ ಮತ್ತು ಪರೋಕ್ಷವಾಗಿ ಡೇಕಾರ್ಟೆಗೆ ಋಣಿಯಾಗಿರುವ, ಒಂದು ಹೊಸ ಚಿಂತನೆ. ದೇಹವು ಮನಸ್ಸನ್ನು ಚಲಿಸುವುದಿಲ್ಲ ಎಂದು ಹೇಳಲು ಸಾಧ್ಯವಾಗಿಸುವ ಅನುಕೂಲತೆ ಅದರಲ್ಲಿತ್ತು. ದೇಹಕ್ಕೆ ಬಾಯಾರಿಕೆಯಾದಾಗ ಮನಸ್ಸು ಯಾತಕ್ಕೆ ವಿಷಾದಗೊಳ್ಳುತ್ತದೆ ಎಂಬುದರ ಕುರಿತು 'ಮೆಡಿಟೇಷನ್ಸ್'ನಲ್ಲಿ ಸಾಕಷ್ಟು ಚರ್ಚೆಯಿದೆ. ಅದಕ್ಕೆ ಸಮರ್ಪಕವಾದ ಕಾರ್ಟೀಸಿಯನ್ ಉತ್ತರವೆಂದರೆ, ದೇಹ ಮತ್ತು ಮನಸ್ಸುಗಳು ಎರಡು ಗಡಿಯಾರಗಳಂತೆ, ಒಂದು ಬಾಯಾರಿಕೆಯನ್ನು ತೋರಿಸಿದರೆ, ಮತ್ತೊಂದು ವಿಷಾದವನ್ನು ತೋರಿಸುತ್ತದೆ ಎಂಬುದು. ಆದರೆ ಮತಧಾರ್ಮಿಕ ದೃಷ್ಟಿಕೋನದಿಂದ ಈ ಸಿದ್ಧಾಂತಕ್ಕೆ ಒಂದು ಗಂಭೀರವಾಧ ತೊಡಕಿತ್ತು; ಇದು ಮೇಲೆ ನಾನು ಉಲ್ಲೇಖಿಸಿದ ಕಾರ್ಟೀಸಿಯನ್‌ವಾದದ ಎರಡನೆಯ ಲಕ್ಷಣದತ್ತ ನಮ್ಮನ್ನು ಕರೆದೊಯ್ಯುತ್ತದೆ.

ಇಡೀ ಭೌತದ್ರವ್ಯ ಸಿದ್ಧಾಂತದಲ್ಲಿ, ಕಾರ್ಟೀಸಿಯನ್‌ವಾದವು ನಿಷ್ಠುರ ನಿಯತಿವಾದದ್ದು. ಸಜೀವಿ ಸಾವಯವಿಗಳು, ನಿರ್ಜೀವಿ ಭೌತದ್ರವ್ಯದಂತೆಯೇ, ಭೌತವಿಜ್ಞಾನದ ನಿಯಮಗಳಿಗೆ ಒಳಪಟ್ಟವು; ಅರಿಸ್ಟಾಟಲ್ ತತ್ವಜ್ಞಾನದಲ್ಲಿನಂತೆ, ಸಾವಯವಿಯ ಬೆಳವಣಿಗೆಗೆ ಮತ್ತು ಪ್ರಾಣಿಗಳ ಚಲನೆಯನ್ನು ವಿವರಿಸಲು ಪರಿಪೂರ್ಣಾವಸ್ಥೆ (ಎಂಟೆಲೆಕಿ) ಅಥವಾ ಆತ್ಮವು ಆವಶ್ಯಕ ಎಂಬ ಆವಶ್ಯಕತೆಯೇ ಇಲ್ಲವಾಯಿತು. ಡೇಕಾರ್ಟೆಯೇ ಇದಕ್ಕೊಂದು ಸಣ್ಣ ಅಪವಾದವನ್ನು ಒಪ್ಪಿಕೊಂಡ: ಮಾನವ ಆತ್ಮವು ತನ್ನ ಇಚ್ಛಾಶಕ್ತಿಯಿಂದ ಜೈವಿಕ ಸತ್ವಗಳ ಚಲನೆಯ ಗುಣಮಟ್ಟವನ್ನಲ್ಲದಿದ್ದರೂ ದಿಕ್ಕನ್ನು ಬದಲಾಯಿಸಬಲ್ಲದು. ಆದರೆ ಇದು ಅವನ ವಿಧಾನಕ್ಕೆ ವ್ಯತಿರಿಕ್ತವಾದುದು, ಮತ್ತು ಯಂತ್ರವಿಜ್ಞಾನದ ನಿಯಮಗಳಿಗೆ ವಿರುದ್ಧವಾದುದು; ಹೀಗಾಗಿ ಅದನ್ನು ಕೈಬಿಡಲಾಯಿತು. ಇದರ ಪರಿಣಾಮವೆಂದರೆ, ಭೌತದ್ರವ್ಯದ ಎಲ್ಲ ಚಲನೆಗಳನ್ನೂ ಭೌತ ನಿಯಮಗಳು ನಿರ್ಧರಿಸುತ್ತವೆ, ಮತ್ತು ಸಮಾನಾಂತರತೆಯಿಂದ ಮಾನಸಿಕ ವ್ಯಾಪಾರಗಳೂ ಅಷ್ಟೇ ನಿಶ್ಚಿತ. ಇದರ ಪರಿಣಾಮವಾಗಿ ಸ್ವತಂತ್ರಇಚ್ಛಾಶಕ್ತಿಯ ಬಗೆಗೆ ಕಾರ್ಟೀಸಿಯನ್‌ವಾದಿಗಳಿಗೆ ಕಷ್ಟವೊದಗಿತು. ಡೇಕಾರ್ಟೆಯ ಜ್ಞಾನಸಿದ್ಧಾಂತಕ್ಕಿಂತ ಡೇಕಾರ್ಟೆಯ ವಿಜ್ಞಾನಕ್ಕೆ ಹೆಚ್ಚು ಮಾನ್ಯತೆಯಿತ್ತವರಿಗೆ, ಪ್ರಾಣಿಗಳು ಸ್ವಯಂಚಾಲಕಗಳು ಎಂಬ ಸಿದ್ಧಾಂತವನ್ನು

ಇದಕ್ಕೂ ವಿಸ್ತರಿಸುವುದು ಕಷ್ಟವಾಗಲಿಲ್ಲ; ಇದನ್ನು ಮನುಷ್ಯರಿಗೂ ಯಾಕೆ ಅನ್ವಯಿಸಿ ಒಂದೇ ಬಗೆಯ ಭೌತವಾದವನ್ನು ನಿರೂಪಿಸಿ ಈ ವಿಧಾನವನ್ನು ಸರಳಗೊಳಿಸಬಾರದು? ಈ ಪ್ರಶ್ನೆಯನ್ನು ಹದಿನೆಂಟನೆಯ ಶತಮಾನದಲ್ಲಿ ಕೈಗೆತ್ತಿಕೊಳ್ಳಲಾಯಿತು.

ಸಮಕಾಲೀನ ವಿಜ್ಞಾನದ ಕಲಿಕೆ ಮತ್ತು ಲಾ ಫ್ಲೆಶೆ ಕಲಿಸಿದ ಸೂಕ್ಷ್ಮತರ್ಕ ಇವುಗಳ ನಡುವಣ ಡೆಕಾರ್ಟೆಯ ದ್ವೈವಿಧ್ಯವು ಬಗೆಹರಿದಿಲ್ಲ. ಇದರಿಂದಾಗಿ ಅವನಲ್ಲಿ ಅಸಾಂಗತ್ಯಗಳು ಕಾಣಿಸಿಕೊಂಡವು, ಆದರೆ ಅವನ ಚಿಂತನೆಗಳನ್ನು ಸಂಪೂರ್ಣ ತರ್ಕಬದ್ಧ ತತ್ವಜ್ಞಾನಿಗಿಂತ ಹೆಚ್ಚು ಸತ್ವಭರಿತವಾಗಿಸಲು ಅವು ಸಹಾಯಕವೂ ಆದವು. ಸುಸಾಂಗತ್ಯವು ಅವನನ್ನು ಹೊಸ ಸೂಕ್ಷ್ಮತರ್ಕದ ಸ್ಥಾಪಕನನ್ನಾಗಿ ಮಾಡುತ್ತಿತ್ತು, ಆದರೆ ಅಸಾಂಗತ್ಯವು ಅವನನ್ನು ಎರಡು ಪ್ರಮುಖ ಮತ್ತು ವಿಭಿನ್ನ ತತ್ವಜ್ಞಾನಪಂಥಗಳ ಮೂಲ ಆಕರವನ್ನಾಗಿಸಿತು.

೧೦
ಸ್ಪಿನೋಜ಼

ಸ್ಪಿನೋಜ಼ (೧೬೩೨-೭೭) ಮಹಾ ತತ್ವಜ್ಞಾನಿಗಳಲ್ಲೆಲ್ಲ ಅತ್ಯಂತ ಉದಾತ್ತನೂ ಸೌಜನ್ಯಯುತನೂ ಆದವನು. ಬೌದ್ಧಿಕತೆಯಲ್ಲಿ ಅವನನ್ನು ಮೀರಿಸಿದ ಕೆಲವರಿಬಹುದುದಾದರೂ ನೈತಿಕತೆಯಲ್ಲಿ ಅವನು ಪರಮೋಚ್ಚ. ಇದರ ಸಹಜ ಪರಿಣಾಮವಾಗಿ, ಅವನ ಜೀವಿತ ಕಾಲದಲ್ಲಿ ಮತ್ತು ಅವನ ಮರಣಾನಂತರ ನೂರು ವರ್ಷಗಳಲ್ಲಿ ಅವನನ್ನು ಭೀಕರ ವ್ಯಕ್ತಿ ಎಂದು ಪರಿಗಣಿಸಲಾಯಿತು. ಅವನು ಹುಟ್ಟಿದ್ದು ಯೆಹೂದಿಯಾಗಿ, ಆದರೆ ಯೆಹೂದಿಗಳು ಅವನನ್ನು ಬಹಿಷ್ಕರಿಸಿದರು. ಕ್ರೈಸ್ತರೂ ಅವನನ್ನು ಅಷ್ಟೇ ಮಟ್ಟಿಗೆ ದ್ವೇಷಿಸಿದರು; ಅವನ ತತ್ವಜ್ಞಾನವು ದೇವರ ಬಗೆಗಿನ ಚಿಂತನೆಗಳಿಂದ ತುಂಬಿದ್ದರೂ, ಸಂಪ್ರದಾಯವಾದಿಗಳು ಅವನನ್ನು ನಾಸ್ತಿಕನೆಂದರು. ಅವನಿಗೆ ತುಂಬ ಋಣಿಯಾಗಿರುವ ಲೀಬ್‌ನಿಜ಼್ ಅವನ ಋಣವನ್ನು ಬಚ್ಚಿಟ್ಟ, ಅವನನ್ನು ಹೊಗಳುವ ಒಂದು ಪದವನ್ನೂ ಬಳಸಲಿಲ್ಲ; ಈ ಪಾಷಂಡಿ ಯೆಹೂದಿಯ ವೈಯಕ್ತಿಕ ಪರಿಚಯವಿತ್ತೆನ್ನುವವರೆಗೂ ಅವನು ಹೋದ.

ಸ್ಪಿನೋಜ಼ನ ಜೀವನವು ತುಂಬ ಸರಳವಾದುದು. ಅವನ ಕುಟುಂಬವು ಮತಧರ್ಮಾಧಿಕರಣದಿದ ತಪ್ಪಿಸಿಕೊಳ್ಳಲು ಸ್ಪೆಯಿನ್‌ನಿಂದ, ಅಥವಾ ಪ್ರಾಯಶಃ ಪೋರ್ಚುಗಲ್‌ನಿಂದ, ಹಾಲಂಡ್‌ಗೆ ಬಂದಿತ್ತು. ಅವನು ಸ್ವತಃ ಯೆಹೂದಿ ಕಲಿಕೆಯನ್ನು ಪಡೆದವನು, ಆದರೆ ಸಂಪ್ರದಾಯನಿಷ್ಠನಾಗಲು ಅವನಿಗೆ ಸಾಧ್ಯವಾಗಲಿಲ್ಲ. ತನ್ನ ಸಂದೇಹಗಳನ್ನು ಮುಚ್ಚಿಟ್ಟುಕೊಳ್ಳಲು ಅವನಿಗೆ ಒಂದು ಸಾವಿರ ಫ್ಲೋರಿನ್‌ಗಳನ್ನು ನೀಡಲಾಗುವುದೆಂದು ಹೇಳಿದರೂ, ಅವನು ಅದನ್ನು ಒಪ್ಪದಿರಲು ಅವನನ್ನು ಕೊಲೆ ಮಾಡುವ ಪ್ರಯತ್ನವೊಂದೂ ನಡೆಯಿತು; ಇದೂ ವಿಫಲವಾದಾಗ, ಅವನನ್ನು ಸಾಧ್ಯವಾದ ರೀತಿಯಲ್ಲೆಲ್ಲ ಶಪಿಸಲಾಯಿತು: ಮಕ್ಕಳನ್ನು ಎಲಿಶಾ ಶಪಿಸಿದಾಗ ಅವರನ್ನು ಹೆಣ್ಣು ಕರಡಿಗಳು ಛಿದ್ರಮಾಡಿದಂತಹ ಡ್ಯೂಟೆರಾನಮಿಯ (ಹಳೆ ಒಡಂಬಡಿಕೆಯ ಪ್ರಥಮ ಪಂಚಕದ ಪಂಚಮಗ್ರಂಥ) ಶಾಪವನ್ನೂ ಅದು

ಒಳಗೊಂಡಿತ್ತು. ಆದರೆ ಯಾವ ಹೆಣ್ಣುಕರಡಿಯೂ ಸ್ಪಿನೋಜ಼ನ ಮೇಲೆ ಎರಗಲಿಲ್ಲ. ಮಸೂರಗಳನ್ನು ಹೊಳಪುಗೊಳಿಸುವ ಕಾಯಕ ಮಾಡುತ್ತ ಅವನು, ಮೊದಲಿಗೆ ಆಮ್‌ಸ್ಟೆರ್‌ಡ್ಯಾಂನಲ್ಲಿ, ಆನಂತರ ಹೇಗ್‌ನಲ್ಲಿ, ಶಾಂತವಾಗಿ ಬದುಕಿದ್ದ. ಅವನ ಆವಶ್ಯಕತೆಗಳು ಕೆಲವು ಮತ್ತು ಸರಳವಾದವು, ತನ್ನ ಜೀವನದುದಕ್ಕೂ ಹಣದ ಬಗೆಗಿನ ಅಪರೂಪವೆನಿಸುವ ಅನಾದರವನ್ನು ತೋರಿಸಿದ. ಅವನನ್ನು ಬಲ್ಲ ಕೆಲವೇ ಮಂದಿ, ಅವನ ತತ್ವಗಳನ್ನು ಒಪ್ಪದಿದ್ದರೂ, ಅವನನ್ನು ಪ್ರೀತಿಸಿದರು. ಡಚ್ ಸರ್ಕಾರವು ತನ್ನ ಎಂದಿನ ಉದಾರನೀತಿಯಿಂದ ಮತಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಅವನ ಅಭಿಪ್ರಾಯಗಳ ಬಗ್ಗೆ ತಾಳ್ಮೆ ತೋರಿಸಿತು; ಆದರೆ, ಆರೆಂಜ್ ಭವನದ ವಿರುದ್ಧವಾಗಿದ್ದ ಡಿ ವಿಟ್ಸ್‌ನ ಪರವಾಗಿದ್ದುದರಿಂದ ಅವನು ಒಮ್ಮೆ ಮಾತ್ರ ರಾಜಕೀಯ ಕೆಂಗಣ್ಣಿಗೆ ಗುರಿಯಾಗಿದ್ದ. ತನ್ನ ನಲವತ್ತಮೂರನೆಯ ಕಿರಿಯ ವಯಸ್ಸಿಗೆ ಪುಪ್ಪುಸಕ್ಷಯದಿಂದ ಮರಣ ಹೊಂದಿದ.

ಅವನ ಮುಖ್ಯ ಕೃತಿ 'ಎಥಿಕ್ಸ್' ಮರಣಾನಂತರ ಪ್ರಕಟವಾಯಿತು. ಅದರ ಬಗ್ಗೆ ಹೇಳುವ ಮುಂಚೆ, ಅವನ ಇತರ ಎರಡು ಪುಸ್ತಕಗಳ ಬಗ್ಗೆ ಕೆಲವು ಮಾತುಗಳನ್ನಾಡಬೇಕು; ಅವುಗಳೆಂದರೆ 'ಟ್ರಾಕ್ಟಟಸ್ ಥಿಯೋಲಾಜಿಕೋ-ಪೊಲಿಟಿಕಸ್' ಮತ್ತು 'ಟ್ರಾಕ್ಟಟಸ್ ಪೊಲಿಟಿಕಸ್'. ಮೊದಲನೆಯದು ಬೈಬಲ್‌ನ ವಿಮರ್ಶೆ ಮತ್ತು ರಾಜಕೀಯ ಸಿದ್ಧಾಂತಗಳ ಕುತೂಹಲಕಾರೀ ಮಿಶ್ರಣ; ಎರಡನೆಯದು ರಾಜಕೀಯ ಸಿದ್ಧಾಂತಗಳನ್ನಷ್ಟೇ ಕುರಿತದ್ದು. ಬೈಬಲ್‌ನ ವಿಮರ್ಶೆಯಲ್ಲಿ ಸ್ಪಿನೋಜ಼ ಆಧುನಿಕ ದೃಷ್ಟಿಕೋನವನ್ನು ಭಾಗಶಃ ಮುನ್ನರಿಯುತ್ತಾನೆ, ಅದರಲ್ಲೂ ಹಳೆಯ ಒಡಂಬಡಿಕೆಯ ಕೆಲವು ಭಾಗಗಳ ಕಾಲವನ್ನು ಸಂಪ್ರದಾಯ ಸೂಚಿಸುವ ಕಾಲಕ್ಕಿಂತ ತೀರ ಈಚೆಗೆಂದು ಹೇಳುವಲ್ಲಿ. ಮತಧಾರ್ಮಿಕ ಗ್ರಂಥಗಳನ್ನು ಉದಾರ ಮತಧರ್ಮಶಾಸ್ತ್ರಕ್ಕನುಗುಣವಾಗಿ ವ್ಯಾಖ್ಯಾನಿಸಬಹುದೆಂದು ತೋರಿಸಲು ಅವನು ಗ್ರಂಥದ ಮೊದಲಿನಿಂದ ಕೊನೆಯವರೆಗೂ ಪ್ರಯತ್ನಿಸುತ್ತಾನೆ.

ಸ್ಪಿನೋಜ಼ನ ರಾಜಕೀಯ ಸಿದ್ಧಾಂತವು ಮುಖ್ಯವಾಗಿ ಹಾಬ್ಸ್‌ನಿಂದ ಪಡೆದುಕೊಂಡದ್ದು, ಆದರೆ ಈ ಇಬ್ಬರು ಮಹನೀಯರ ಮನೋಧರ್ಮಗಳಲ್ಲಿ ಅಗಾಧ ವ್ಯತ್ಯಾಸಗಳಿದ್ದವು. ಅವನ ಪ್ರಕಾರ, ಸಹಜ ಸ್ಥಿತಿಯಲ್ಲಿ ತಪ್ಪು ಒಪ್ಪುಗಳೆಂಬುವುಗಳೇ ಇರುವುದಿಲ್ಲ, ಯಾಕೆಂದರೆ ತಪ್ಪು ಎನ್ನುವುದು ನಿಯಮಗಳಿದ್ದಾಗ ಮಾತ್ರ. ಸಾರ್ವಭೌಮನು ತಪ್ಪು ಮಾಡಲಾರ, ಚರ್ಚ್ ಸರ್ಕಾರಕ್ಕೆ ಸಂಪೂರ್ಣವಾಗಿ ಅಧೀನದಲ್ಲಿರಬೇಕೆಂಬ ಹಾಬ್ಸ್‌ನ ಅಭಿಪ್ರಾಯವನ್ನು ಅನುಮೋದಿಸುತ್ತಾನೆ. ಕೆಟ್ಟ ಸರ್ಕಾರದ ವಿರುದ್ಧವಾದರೂ ಸರಿಯೆ, ಅವನೂ ಎಲ್ಲ ಬಂಡಾಯಗಳ ವಿರುದ್ಧವಾಗಿದ್ದವನು. ಅಧಿಕಾರದ ವಿರುದ್ಧದ ಬಲವಂತ ಪ್ರತಿರೋಧದಿಂದಾಗುವ ಹಾನಿಗಳ ಬಗ್ಗೆ ಅವನು ಇಂಗ್ಲಂಡ್‌ನ ನಿದರ್ಶನಗಳನ್ನು

ಆಧಾರಗಳಾಗಿ ನೀಡುತ್ತಾನೆ. ಆದರೆ ಪ್ರಜಾಪ್ರಭುತ್ವವು 'ಅತ್ಯಂತ ಸಹಜ' ರೂಪದ ಸರ್ಕಾರ ಎಂಬ ಹಾಬ್ಸ್‌ನ ಅಭಿಪ್ರಾಯವನ್ನವನು ಒಪ್ಪುವುದಿಲ್ಲ. ಪ್ರಜೆಗಳು ಸಾರ್ವಭೌಮನಿಗಾಗಿ ತಮ್ಮ ಎಲ್ಲ ಹಕ್ಕುಗಳನ್ನೂ ತ್ಯಜಿಸಬಾರದೆಂಬ ಹಾಬ್ಸ್‌ನ ಅಭಿಪ್ರಾಯವನ್ನೂ ಅವನು ಒಪ್ಪುವುದಿಲ್ಲ. ಅದರಲ್ಲೂ, ಅಭಿವ್ಯಕ್ತಿ ಸ್ವಾತಂತ್ರ್ಯ ಮುಖ್ಯವೆನ್ನುವ ಅವನ ಅಭಿಪ್ರಾಯ. ಇದಕ್ಕೂ ಮತಧಾರ್ಮಿಕ ಪ್ರಶ್ನೆಗಳನ್ನು ಸರ್ಕಾರವು ಬಗೆಹರಿಸಬೇಕು ಎಂಬುದಕ್ಕೂ ಅವನ ಹೇಗೆ ಸಾಮಂಜಸ್ಯವನ್ನು ಕಾಣುತ್ತಾನೆ ಎಂಬುದು ನನಗೆ ಅರ್ಥವಾಗದು. ಇದನ್ನು ಹೇಳುವಾಗ ಇಂತಹವನ್ನು ಚರ್ಚ್‌ಗಿಂತ ಸರ್ಕಾರವೇ ಬಗೆಹರಿಸಬೇಕೆಂಬುದು ಅವನ ಅಭಿಪ್ರಾಯವಾಗಿರಬಹುದು; ಹಾಲಂಡ್‌ನಲ್ಲಿ ಸರ್ಕಾರವು ಚರ್ಚ್‌ಗಿಂತ ತುಂಬ ಉದಾರವಾಗಿತ್ತು.

ಸ್ಪಿನೋಜ಼ನ 'ಎಥಿಕ್ಸ್' ಮೂರು ಬೇರೆ ಬೇರೆ ವಿಷಯಗಳನ್ನು ಕುರಿತು ಚಿಂತಿಸುತ್ತದೆ. ಅದು ಮೊದಲಾಗುವುದು ತತ್ವಜಿಜ್ಞಾಸೆಯ ಮೂಲಕ; ಆನಂತರ ಅದು ರಾಗಭಾವಗಳು ಮತ್ತು ಇಚ್ಛಾಶಕ್ತಿಗಳ ಕುರಿತ ಮನೋವಿಜ್ಞಾನದತ್ತ ಸಾಗುತ್ತದೆ; ಕೊನೆಯಲ್ಲಿ ಹಿಂದೆ ಚರ್ಚಿಸಿದ ತತ್ವಜಿಜ್ಞಾಸೆ ಮತ್ತು ಮನೋವಿಜ್ಞಾನಗಳ ಆಧಾರದ ಮೇಲೆ ನೈತಿಕತೆಯನ್ನು ರೂಪಿಸುತ್ತದೆ. ತತ್ವಜಿಜ್ಞಾಸೆಯು ಡೆಕಾರ್ಟೆಯದರ ಪರಿಷ್ಕೃತ ರೂಪ, ಮನೋವಿಜ್ಞಾನವು ಹಾಬ್ಸ್ ಅನ್ನು ನೆನಪಿಸುವಂತಹುದು, ಆದರೆ ನೈತಿಕತೆಯು ಸ್ವಂತದ್ದು, ಮತ್ತು ಇಡೀ ಗ್ರಂಥದಲ್ಲಿ ತುಂಬ ಬೆಲೆಬಾಳುವಂತಹುದು. ಡೆಕಾರ್ಟೆಯ ಜೊತೆಗಿನ ಸ್ಪಿನೋಜ಼ನ ಸಂಬಂಧವು ಕೆಲವು ರೀತಿಗಳಲ್ಲಿ ಪ್ಲಾಟಿನಸ್ ಮತ್ತು ಪ್ಲೇಟೋಗಳ ಸಂಬಂಧದಂತಹುದು. ಡೆಕಾರ್ಟೆಯು ಬಹುಮುಖಿ ವ್ಯಕ್ತಿ, ಅವನಲ್ಲಿ ಬೌದ್ಧಿಕ ಕುತೂಹಲ ತುಂಬಿತ್ತು, ಆದರೆ ಅವನಲ್ಲಿ ನೈತಿಕ ಪ್ರಾಮಾಣಿಕತೆಯ ಭಾರವಿರಲಿಲ್ಲ. ಸಾಂಪ್ರದಾಯಿಕ ನಂಬಿಕೆಗಳ ಸಮರ್ಥನೆಗೆ ಅವನು ಆಧಾರಗಳನ್ನು ನಿರ್ಮಿಸಿದರೂ, ಪ್ಲೇಟೋನನ್ನು ಕಾರ್ನಿಯಡೀಸ್ ಬಳಸಿಕೊಂಡಂತೆ, ಅವುಗಳನ್ನು ಸಂದೇಹವಾದಿಗಳು ಬಳಸಿಕೊಳ್ಳಬಹುದಾಗಿದ್ದವು. ವೈಜ್ಞಾನಿಕ ಆಸಕ್ತಿಗಳಿಲ್ಲ ಎನ್ನಲಾಗದಿದ್ದರೂ, ಮತ್ತು ಕಾಮನಬಿಲ್ಲಿನ ಬಗ್ಗೆ ಪುಸ್ತಕವೊಂದನ್ನೇ ಬರೆದಿದ್ದರೂ, ಸ್ಪಿನೋಜ಼ನ ಮುಖ್ಯ ಆಸಕ್ತಿ ಮತಧರ್ಮ ಮತ್ತು ಸನ್ನಡತೆಗಳು. ಡೆಕಾರ್ಟೆ ಮತ್ತವನ ಸಮಕಾಲೀನರ ಭೌತವಾದ ಮತ್ತು ನಿಯತಿವಾದಗಳ ಭೌತವಿಜ್ಞಾನವನ್ನು ಅವನು ಒಪ್ಪಿಕೊಂಡಿದ್ದರೂ, ಈ ಚೌಕಟ್ಟಿನಲ್ಲಿ ಅವನು ಪೂಜ್ಯಭಾವ ಮತ್ತು ಒಳಿತಿಗೆ ಬದ್ಧವಾದ ಜೀವನಗಳ ಸ್ಥಾನದ ಬಗ್ಗೆ ಚಿಂತಿಸಿದ. ಅವನ ಪ್ರಯತ್ನವು ಅದ್ಭುತವಾದದ್ದು, ಅದು ಯಶಸ್ವಿಯಾಗುವುದರ ಬಗ್ಗೆ ಅನುಮಾನ ಹೊಂದಿದವರಲ್ಲೂ ಮೆಚ್ಚಿಕೆಯನ್ನು ಮೂಡಿಸುವಂತಹುದು.

ಸ್ಪಿನೋಜ಼ ಅನುಸರಿಸಿದ ತತ್ವಜಿಜ್ಞಾಸಾತ್ಮಕ ವಿಧಾನವು ಪಾರ್ಮನೈಡೀಸ್ ಆರಂಭಿಸಿದ ರೀತಿಯದು. ಒಂದೇ ಮೂಲತತ್ವ (ಸಬ್‌ಸ್ಟೆನ್ಸ್) ವಿರುವುದು, 'ದೇವರು

ಅಥವಾ ಪ್ರಕೃತಿ'; ಯಾವುದೇ ಪರಿಮಿತವೂ ಸ್ವ-ಅಸ್ತಿತ್ವದವಲ್ಲ. ಡೆಕಾರ್ಟೆ ಮೂರು ಮೂಲತತ್ವಗಳನ್ನು ಒಪ್ಪಿದ, ದೇವರು ಮನಸ್ಸು ಮತ್ತು ಭೌತದ್ರವ್ಯ; ಅವನಿಗೂ, ದೇವರು ಒಂದರ್ಥದಲ್ಲಿ ಮನಸ್ಸು ಮತ್ತು ಭೌತದ್ರವ್ಯಗಳಿಗಿಂತ ಹೆಚ್ಚು ಮೂಲತಾತ್ವಿಕವಾದುದು (ಸಬ್‌ಸ್ಟಾನ್ಷಿಯಲ್) ಎಂಬುದು ನಿಜ. ಅವನು ಅವುಗಳನ್ನು ಸೃಷ್ಟಿಸಿದ್ದಾನೆ, ಮತ್ತು ಹಾಗಂದುಕೊಂಡರೆ, ಅವುಗಳನ್ನು ನಾಶಪಡಿಸಬಹುದು. ದೇವರ ಸಾಮರ್ಥ್ಯದ ವಿಚಾರವನ್ನು ಹೊರತುಪಡಿಸಿ, ಮನಸ್ಸು ಮತ್ತು ಭೌತದ್ರವ್ಯಗಳು ಸ್ವತಂತ್ರ ಮೂಲತತ್ವಗಳು, ಕ್ರಮವಾಗಿ ಚಿಂತನೆ ಮತ್ತು ಅರ್ಥವ್ಯಾಪ್ತಿ ಎಂಬ ಗುಣಗಳಿಂದ ನಿರ್ದೇಶಿತವಾಗುವಂಥದು. ಸ್ಪಿನೋಜ಼ನ ಪ್ರಕಾರ ಇವಾವುವೂ ಇಲ್ಲ, ಚಿಂತನೆ ಮತ್ತು ಅರ್ಥವ್ಯಾಪ್ತಿಗಳೂ ದೇವರ ಗುಣಗಳು. ದೇವರಿಗೆ ಇತರ ಅಸಂಖ್ಯ ಗುಣಗಳೂ ಇವೆ, ಯಾಕೆಂದರೆ ಅವನು ಪ್ರತಿ ಅಂಶದಲ್ಲಿಯೂ ಅಪರಿಮಿತವಾಗಿರಬೇಕು; ಆದರೆ ಇತರ ಆ ಗುಣಗಳು ಯಾವುದೆಂಬುದು ನಮಗೆ ತಿಳಿಯದು. ಪ್ರತ್ಯೇಕ ಆತ್ಮಗಳೂ ಬಿಡಿ ಭೌತದ್ರವ್ಯಗಳೂ ಸ್ಪಿನೋಜ಼ನ ಪ್ರಕಾರ, ವಿಶೇಷಣಗಳು; ಅವು ವಸ್ತುಗಳಲ್ಲ, ದೈವಿಕ ಅಸ್ತಿತ್ವದ ಅಂಶಗಳು ಮಾತ್ರ. ಕ್ರೈಸ್ತರು ನಂಬುವಂತೆ ವೈಯಕ್ತಿಕ ಅನೀತಿ ಎಂಬುದು ಇರಲಾರದು, ಆದರೆ ದೇವರೊಡನೆ ಹೆಚ್ಚು ಹೆಚ್ಚಾಗಿ ಒಂದಾಗುವ ವ್ಯಕ್ತ್ಯತೀತ ವಿಧದಲ್ಲಿ ಮಾತ್ರ. ಪರಿಮಿತ ವಸ್ತುಗಳನ್ನು ಅವುಗಳ ಭೌತಿಕವೋ ತಾರ್ಕಿಕವೋ ಆದ ಎಲ್ಲೆಗಳ ಮೂಲಕ ನಿರ್ದೇಶಿಸಬಹುದು, ಅಂದರೆ ಅವು ಏನಲ್ಲ ಎನ್ನುವುದರ ಮೂಲಕ: 'ಎಲ್ಲ ವ್ಯಾಪ್ತಿಗಳೂ (ಡಿಟರ್ಮಿನೇಷನ್) ಅಭಾವ.' ಸಂಪೂರ್ಣವಾಗಿ ವಾಸ್ತವವೆನ್ನುವುದು ಒಂದೇ, ಹೀಗಾಗಿ ಅವನು ಕೇವಲ ಅಪರಿಮಿತ. ಹೀಗೆ ಸ್ಪಿನೋಜ಼ ಸಂಪೂರ್ಣವೂ ಗಟ್ಟಿಯಾದುದೂ ಆದ ಸರ್ವದೇವಾತ್ಮಕವಾದದ ಕಡೆಗೆ ಸಾಗುತ್ತಾನೆ.

ಸ್ಪಿನೋಜ಼ನ ಪ್ರಕಾರ, ಪ್ರತಿಯೊಂದೂ ಒಂದು ಆತ್ಯಂತಿಕ ತಾರ್ಕಿಕ ಆವಶ್ಯಕತೆಗೆ ಬದ್ಧವಾಗಿರುತ್ತದೆ. ಮನೋವಲಯದಲ್ಲಿ ಸ್ವತಂತ್ರಇಚ್ಛಾಶಕ್ತಿಯೆನ್ನುವಂತಹುದು ಮತ್ತು ಭೌತ ಜಗತ್ತಿನಲ್ಲಿ ಆಕಸ್ಮಿಕವಾದುದು ಇಲ್ಲ. ಸಂಭವಿಸುವ ಪ್ರತಿಯೊಂದೂ ದೇವರ ದುರ್ಭೇದ್ಯ ಸ್ವಭಾವದ ಕುರುಹು, ಘಟನೆಗಳು ಅವು ಸಂಭವಿಸುವುದಕ್ಕಿಂತ ಭಿನ್ನವಾಗಿರಬಹುದಾದುದು ತಾರ್ಕಿಕವಾಗಿ ಅಸಾಧ್ಯ. ಇದು ಪಾಪಕ್ಕೆ ಸಂಬಂಧಿಸಿದಂತೆ ಕೆಲವು ತೊಡಕುಗಳನ್ನು ಉಂಟುಮಾಡುತ್ತದೆ, ಇದನ್ನು ವಿಮರ್ಶಕರು ಬಹು ಬೇಗ ಗುರುತಿಸಿದರು. ಅವುಗಳಲ್ಲಿ ಒಂದು, ಸ್ಪಿನೋಜ಼ನ ಪ್ರಕಾರ ಪ್ರತಿಯೊಂದೂ ದೇವರಿಂದ ನಿರ್ಣೀತವಾದುದು ಮತ್ತು ಹೀಗಾಗಿ ಒಳ್ಳೆಯದು ಎಂಬುದನ್ನು ಗಮನಿಸಿ ಹೀಗೆ ಟೀಕಿಸುತ್ತದೆ: ನೀರೋ ತನ್ನ ತಾಯಿಯನ್ನು ಕೊಂದದ್ದು ಒಳ್ಳೆಯದೇ? ಆಡಮ್ ಸೇಬನ್ನು ತಿಂದದ್ದು ಒಳ್ಳೆಯದೇ? ಇವುಗಳಲ್ಲಿನ ಸಕಾರಾತ್ಮಕ ಅಂಶಗಳು ಒಳ್ಳೆಯವೇ, ನೇತ್ಯಾತ್ಮಕವಾದು ಮಾತ್ರ ಕೆಟ್ಟುದು ಎಂಬುದು ಸ್ಪಿನೋಜ಼ನ ಉತ್ತರ;

ಆದರೆ ಅಭಾವ ಅಥವಾ ನೇತ್ಯಾತ್ಮಕತೆಯಿರುವುದು ಪರಿಮಿತ ಜೀವಿಗಳ ದೃಷ್ಟಿಕೋನದಲ್ಲಿ ಮಾತ್ರ. ಸಂಪೂರ್ಣ ವಾಸ್ತವವಾದ ದೇವರಲ್ಲಿ ನೇತ್ಯಾತ್ಮಕತೆಯೇ ಇಲ್ಲ. ಹೀಗಾಗಿ ನಮಗೆ ಪಾಪವೆಂದು ಕಾಣುವವುಗಳಲ್ಲಿನ ಕೆಡುಕು ಅವು ಇಡಿಯ ಭಾಗಗಳೆಂದು ಪರಿಭಾವಿಸಿದಾಗ ಅಸ್ತಿತ್ವದಲ್ಲಿಯೇ ಇರುವುದಿಲ್ಲ. ಈ ಸಿದ್ಧಾಂತವನ್ನು ಒಂದಲ್ಲ ಒಂದು ರೀತಿಯಲ್ಲಿ ಎಲ್ಲ ಅನುಭಾವಿಗಳು ಮಂಡಿಸಿದ್ದರೂ, ಅದನ್ನು ಸಂಪ್ರದಾಯವಾದಿಗಳ ಪಾಪ ಮತ್ತು ಖಂಡನೆಗಳ ಸಿದ್ಧಾಂತದೊಡನೆ ಸರಿಹೊಂದಿಸಲಾಗುವುದಿಲ್ಲ. ಅದು ಸ್ಪಿನೋಜ಼ನ ಸ್ವತಂತ್ರಇಚ್ಛಾಶಕ್ತಿಯ ಸಂಪೂರ್ಣ ನಿರಾಕರಣೆಯೊಂದಿಗೆ ಹೆಣೆದುಕೊಂಡಿದೆ. ವಿವಾದಾತ್ಮಕವಲ್ಲದ್ದರೂ, ಸಮಕಾಲೀನರಿಗೆ ಅದೆಷ್ಟೇ ಆಘಾತಕಾರಿಯಾಗಬಹುದಾದರೂ ಅವನು ತನ್ನ ಅಭಿಪ್ರಾಯಗಳನ್ನು ಮುಚ್ಚಿಡಲಾರದಷ್ಟು ಪ್ರಾಮಾಣಿಕನಾಗಿದ್ದ; ಹೀಗಾಗಿ ಅವನ ಬೋಧನೆಯ ಬಗೆಗಿನ ವಿರೋಧ ಆಶ್ಚರ್ಯಕರವೇನಲ್ಲ.

'ಎಥಿಕ್ಸ್' ಯೂಕ್ಲಿಡ್‌ನ ರೀತಿಯಲ್ಲಿ ನಿರೂಪಿತವಾಗಿದೆ, ಸೂತ್ರವಾಕ್ಯ, ಆಧಾರಸೂತ್ರಗಳು, ಮತ್ತು ಪ್ರಮೇಯಗಳು: ಆಧಾರಸೂತ್ರಗಳ ನಂತರದ ಪ್ರತಿಯೊಂದೂ ನಿಗಮನ ವಾದದ ಮೂಲಕ ಪ್ರಬಲವಾಗಿ ಪ್ರತಿಪಾದಿತವಾಗಿದೆ. ಇದರಿಂದಾಗಿ ಅವನನ್ನು ಓದುವುದು ಕಷ್ಟಕರ. ಅವನು ಸ್ಥಾಪಿಸಿದೆನೆಂದು ಭಾವಿಸುವ ವಿಷಯಗಳಿಗೆ ಪ್ರಬಲ 'ಆಧಾರ'ಗಳಿವೆಯೆಂದು ಊಹಿಸಿಕೊಳ್ಳಲಾಗದ ಆಧುನಿಕ ವಿದ್ಯಾರ್ಥಿಯು ಅಲ್ಲಿನ ದೃಷ್ಟಾಂತಗಳ ವಿವರಗಳ ಬಗ್ಗೆ – ವಾಸ್ತವವಾಗಿ ಅವು ಅನುಸರಿಸಬೇಕಾದವೂ ಅಲ್ಲ – ಅಸಹನೆಗೊಳ್ಳುವುದು ನಿಶ್ಚಿತ. ಪ್ರತಿಪಾದನೆಗಳ ವಿವರಣೆಯನ್ನು ಓದುವುದು, 'ಎಥಿಕ್ಸ್'ನಲ್ಲಿನ ಅತ್ಯಂತ ಮುಖ್ಯವಾದುವನ್ನೊಳಗೊಂಡ ವ್ಯಾಖ್ಯಾನಗಳನ್ನು ಆಭ್ಯಾಸ ಮಾಡುವುದಷ್ಟೇ ಸಾಕು. ಅವನ ಜ್ಯಾಮಿತೀಯ ವಿಧಾನಕ್ಕಾಗಿ ಸ್ಪಿನೋಜ಼ನನ್ನು ಟೀಕಿಸುವುದು ಅವನನ್ನು ಅರ್ಥಮಾಡಿಕೊಳ್ಳುವುದರ ಕೊರತೆಯನ್ನು ತೋರಿಸುತ್ತದೆ. ನೈತಿಕವಾಗಿ ಮತ್ತು ತತ್ವಜಿಜ್ಞಾಸಾತ್ಮಕವಾಗಿ ಎಲ್ಲವನ್ನೂ ನಿದರ್ಶಿಸಬಹುದು ಎಂಬುದು ಅವನ ವಿಧಾನದ ಮುಖ್ಯಾಂಶ, ಹೀಗಾಗಿ ನಿದರ್ಶನಗಳನ್ನು ನೀಡುವುದು ಆವಶ್ಯಕವಾಗಿತ್ತು. ನಾವು ಅವನ ವಿಧಾನವನ್ನು ಒಪ್ಪದಿರಬಹುದು, ಅದಕ್ಕೆ ಕಾರಣ ನಾವು ಅವನ ತತ್ವಜಿಜ್ಞಾಸೆಯನ್ನು ಒಪ್ಪಲಾಗದ್ದು. ವಿಶ್ವದ ವಿವಿಧ ಭಾಗಗಳ ಸಂಬಂಧವು ತಾರ್ಕಿಕವಾದುದು ಎಂದು ನಾವು ನಂಬಲು ಸಾಧ್ಯವಿಲ್ಲ, ಯಾಕೆಂದರೆ ವೈಜ್ಞಾನಿಕ ನಿಯಮಗಳನ್ನು ಪರಿವೀಕ್ಷಣೆಯ ಮೂಲಕ ಕಂಡುಕೊಳ್ಳಬೇಕೇ ಹೊರತು ಕೇವಲ ತರ್ಕದಿಂದಲ್ಲ ಎಂಬುದು ನಮ್ಮ ನಿಲವು. ಆದರೆ ಸ್ಪಿನೋಜ಼ನಿಗೆ ಜ್ಯಾಮಿತೀಯ ವಿಧಾನವು ಆವಶ್ಯಕವಾಗಿತ್ತು, ಮತ್ತು ಅದು ಅವನ ಸಿದ್ಧಾಂತದ ಮುಖ್ಯ ಅಂಶಗಳೊಡನೆ ನಿಕಟವಾಗಿ ಬೆಸೆದುಕೊಂಡಿತ್ತು.

ಈಗ ನಾನು ಬರುವುದು ಸ್ಪಿನೋಜ಼ನ ಭಾವನಾಸಿದ್ಧಾಂತದ (ಥಿಯರಿ ಆಫ್ ಎಮೋಷನ್ಸ್) ಕಡೆಗೆ. ಇದು ಬರುವುದು ಮನಸ್ಸಿನ ಸ್ವರೂಪ ಮತ್ತು ಮೂಲದ ಬಗೆಗಿನ ತತ್ವಜಿಜ್ಞಾಸಾತ್ಮಕ ಚರ್ಚೆಯ ಬಳಿಕ; ಈ ಚರ್ಚೆಯು ಪರ್ಯವಸಾನಗೊಳ್ಳುವುದು 'ಮಾನವ ಮನಸ್ಸು ದೇವರ ಚಿರಂತನ ಹಾಗೂ ಅಪರಿಮಿತ ಸಾರಸತ್ವದ ಸಾಕಷ್ಟು ಜ್ಞಾನವನ್ನು ಹೊಂದಿದೆ' ಎಂಬ ಆಶ್ಚರ್ಯಕರ ಪ್ರತಿಪಾದನೆಯಲ್ಲಿ. 'ಎಥಿಕ್ಸ್'ನ ಮೂರನೆಯ ಭಾಗದಲ್ಲಿ ಚರ್ಚಿಸಿರುವ ರಾಗಭಾವಗಳು ಇಡಿಯ ಬಗೆಗಿನ ನಮ್ಮ ಬೌದ್ಧಿಕ ಕಾಣ್ಕೆಯನ್ನು ಭಂಗಗೊಳಿಸುತ್ತವೆ ಮತ್ತು ಅಸ್ಪಷ್ಟಗೊಳಿಸುತ್ತವೆ. 'ತನ್ನ ಪಾಡಿಗೆ ತಾನಿರುವಷ್ಟರ ಮಟ್ಟಿಗೆ, ಪ್ರತಿಯೊಂದೂ ತನ್ನ ಇರುವಿಕೆಯನ್ನು ಸಂರಕ್ಷಿಸಿಕೊಳ್ಳಲು ಹೆಣಗುತ್ತದೆ' ಎನ್ನುತ್ತಾನೆ ಅವನು. ಇದರಿಂದಾಗಿ ಪ್ರೀತಿ ಹಗೆ ಮತ್ತು ತಿಕ್ಕಾಟಗಳುಂಟಾಗುತ್ತವೆ. ಮೂರನೆಯ ಭಾಗದ ಮನೋವಿಜ್ಞಾನವು ಸಂಪೂರ್ಣವಾಗಿ ಆತ್ಮಾರ್ಥಕವಾದುದು. 'ತನ್ನ ಹಗೆಯ ವಸ್ತುವು ನಾಶಗೊಂಡಿದೆ ಎಂದು ಕಲ್ಪಿಸಿಕೊಳ್ಳುವವನು ಸಂತೋಷವನ್ನನುಭವಿಸುತ್ತಾನೆ.' 'ಒಬ್ಬನು ಮಾತ್ರ ಹೊಂದಿರಬಹುದಾದ ಯಾವುದೋ ಒಂದರಲ್ಲಿ ಯಾರೋ ಒಬ್ಬನು ಆನಂದವನ್ನು ಹೊಂದುತ್ತಾನೆಂದು ನಾವು ಕಲ್ಪಿಸಿಕೊಂಡರೆ, ಅಂಥವನು ಅದನ್ನು ಹೊಂದಿರದಂತೆ ಮಾಡಲು ನಾವು ಹೆಣಗುತ್ತೇವೆ.' ಆದರೆ ಈ ಭಾಗದಲ್ಲಿಯೂ, ಗಣಿತಾತ್ಮಕವಾಗಿ ನಿದರ್ಶಿಸಬಹುದಾದ ಸಿನಿಕತೆಯ ಕಾಣ್ಕೆಯನ್ನು ಸ್ಪಿನೋಜ಼ ತ್ಯಜಿಸುವ ಕ್ಷಣಗಳಿವೆ. ಅಂತಹುದೊಂದು: 'ಪರಸ್ಪರ ಹಗೆತನವು ಅದನ್ನು ಹೆಚ್ಚಿಸುತ್ತದೆ, ಮತ್ತು ಅದನ್ನು ಪ್ರೀತಿಯು ನಾಶಪಡಿಸುತ್ತದೆ.' ಹಾಬ್ಸ್‌ನ ಪ್ರಕಾರ, ಸ್ವರಕ್ಷಣೆಯೇ ರಾಗಭಾವಗಳ ಮೂಲಭೂತ ಉದ್ದೇಶ; ಆದರೆ, ಸ್ಪಿನೋಜ಼ನ ಪ್ರಕಾರ, ನಮ್ಮಲ್ಲಿನ ವಾಸ್ತವವೂ ಇತ್ಯಾತ್ಮಕವೂ ಆದುದು ನಮ್ಮನ್ನು ಇಡಿಯೊಂದಿಗೆ ಬೆಸೆಯುತ್ತದೆಯೇ ವಿನಾ ಪ್ರತ್ಯೇಕತೆಯ ಕಾಣ್ಕೆಯನ್ನು ರಕ್ಷಿಸುವುದಲ್ಲ ಎಂಬುದನ್ನು ಅರಿತುಕೊಂಡರೆ ಸ್ವರಕ್ಷಣೆಯು ತನ್ನ ಲಕ್ಷಣವನ್ನು ಬದಲಾಯಿಸಿಕೊಳ್ಳುವುದು.

ಕ್ರಮವಾಗಿ, 'ಮಾನವ ಬೆಸುಗೆ ಅಥವಾ ಭಾವನೆಗಳ ಸಾಮರ್ಥ್ಯವನ್ನು ಕುರಿತು' ಮತ್ತು 'ಅರ್ಥವಂತಿಕೆಯ ಸಾಮರ್ಥ್ಯ ಅಥವಾ ಮಾನವ ಸ್ವಾತಂತ್ರ್ಯ' ಎಂಬ 'ಎಥಿಕ್ಸ್'ನ ಕೊನೆಯ ಎರಡು ಭಾಗಗಳು ತುಂಬ ಆಸಕ್ತಿದಾಯಕವಾಗಿವೆ. ನಮಗೆ ಬಾಹ್ಯ ಕಾರಣಗಳಿಂದಾಗುವುದಕ್ಕೆ ಪ್ರಮಾಣಗುಣವಾಗಿ ನಾವು ಬಂಧಿತರಾಗಿರುತ್ತೇವೆ, ಮತ್ತು ಎಷ್ಟು ಸ್ವಯಂನಿರ್ಧಾರಕತೆಯನ್ನು ಹೊಂದಿರುತ್ತೇವೋ ಅದಕ್ಕನುಗುಣವಾಗಿ ಸ್ವತಂತ್ರರಾಗಿರುತ್ತೇವೆ. ಸಾಕ್ರಟೀಸ್ ಮತ್ತು ಪ್ಲೇಟೋರ ಹಾಗೆಯೇ ಸ್ಪಿನೋಜ಼ ಕೂಡ ಎಲ್ಲ ತಪ್ಪು ಕಾರ್ಯಗಳೂ ಬೌದ್ಧಿಕ ದೋಷದಿಂದ ಸಂಭವಿಸುತ್ತವೆ ಎಂದು ನಂಬುತ್ತಾನೆ: ತನ್ನ ಪರಿಸ್ಥಿತಿಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ ವ್ಯಕ್ತಿಯು ವಿವೇಕದಿಂದ ವರ್ತಿಸುತ್ತಾನೆ, ಜೊತೆಗೆ ಮತ್ತೊಬ್ಬನಿಗೆ ದುರದೃಷ್ಟವೆಂಬಂತೆ ಕಾಣುವ

ಸಂದರ್ಭಗಳಲ್ಲಿಯೂ ಸುಖವಾಗಿರುತ್ತಾನೆ. ಅವನೇನೂ ನಿಸ್ವಾರ್ಥದ ಕಾರಣ ಹೇಳುವುದಿಲ್ಲ; ಒಂದರ್ಥದಲ್ಲಿ, ಸ್ವ-ಅನ್ವೇಷಣೆಯು ಅದರಲ್ಲೂ ವಿಶೇಷವಾಗಿ ಸ್ವರಕ್ಷಣೆಯು, ಎಲ್ಲ ಮಾನವ ವರ್ತನೆಯನ್ನು ನಿಯಂತ್ರಿಸುತ್ತದೆ ಎಂದವನು ಭಾವಿಸುತ್ತಾನೆ. 'ಯಾವ ಸದ್ಗುಣವೂ ತನ್ನನ್ನು ತಾನು ರಕ್ಷಿಸಿಕೊಳ್ಳುವ ಪ್ರಯತ್ನಕ್ಕಿಂತ ಮುಂಚಿನದು ಎಂದು ಕಲ್ಪಿಸಿಕೊಳ್ಳಲಾಗುವುದಿಲ್ಲ.' ಆದರೆ ವಿವೇಕಿಯಾದವನು ಆಯ್ಕೆ ಮಾಡಿಕೊಳ್ಳುವ ಸ್ವ-ಅನ್ವೇಷಣೆಯ ಗುರಿಯ ಕಲ್ಪನೆಯು ಸಾಮಾನ್ಯ ಸ್ವಾರ್ಥಿಯದಕ್ಕಿಂತ ಭಿನ್ನವಾಗಿರುತ್ತದೆ. 'ಮನಸ್ಸಿನ ಅತ್ಯಂತ ಶ್ರೇಷ್ಠ ಒಳಿತು ಎಂದರೆ ದೇವರ ಜ್ಞಾನ, ಮನಸ್ಸಿನ ಅತ್ಯಂತ ಶ್ರೇಷ್ಠ ಗುಣವು ದೇವರನ್ನು ಅರಿಯುವುದು.' ಅಸಮರ್ಪಕ ಚಿಂತನೆಗಳಿಂದ ಕೂಡಿದ ಭಾವನೆಗಳನ್ನು 'ರಾಗಭಾವ'ಗಳೆಂದು ಕರೆಯಲಾಗಿದೆ; ವಿಭಿನ್ನ ವ್ಯಕ್ತಿಗಳಲ್ಲಿನ ರಾಗಭಾವಗಳು ತಿಕ್ಕಾಡಬಹುದು, ಆದರೆ ವೈಚಾರಿಕತೆಗೆ ಅಧೀನರಾಗಿರುವವರಲ್ಲಿ ಅವು ಹೊಂದಿಕೊಂಡಿರುತ್ತವೆ. ಸುಖವು ತನ್ನಲ್ಲಿ ತಾನು ಒಳ್ಳೆಯದು, ಆದರೆ ಭಯ ಮತ್ತು ನಿರೀಕ್ಷೆಗಳು ಕೆಟ್ಟವು, ಹೀಗೆಯೇ ವಿನಯವಂತಿಕೆ ಮತ್ತು ಪಶ್ಚಾತ್ತಾಪಗಳು: 'ಒಂದು ಕಾರ್ಯದ ಬಗ್ಗೆ ಪಶ್ಚಾತ್ತಾಪಪಡುವವನು ಮತ್ತಷ್ಟು ಕೆಡುಕ ಅಥವಾ ದುರ್ಬಲ.' ಸ್ಪಿನೋಜ಼ನ ಪ್ರಕಾರ ಕಾಲ ಎಂಬುದು ಅವಾಸ್ತವವಾದುದು, ಹೀಗಾಗಿ ಹಿಂದಿನ ಅಥವಾ ಮುಂದಿನ ಘಟನೆಗೆ ಮುಖ್ಯವಾಗಿ ಸಂಬಂಧಿಸಿದ ರಾಗಭಾವಗಳು ವೈಚಾರಿಕತೆಗೆ ವಿರುದ್ಧವಾದವು. 'ವೈಚಾರಿಕತೆಗನುಗುಣವಾಗಿ ಮನಸ್ಸು ಪರಿಕಲ್ಪಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ, ಭೂತ ವರ್ತಮಾನ ಅಥವಾ ಭವಿಷ್ಯದ ಚಿಂತನೆಯೂ ಅದರಷ್ಟೇ ಪ್ರಭಾವಕ್ಕೊಳಗಾಗುತ್ತದೆ.'

ಇದು ಕಠಿಣ ಹೇಳಿಕೆ, ಆದರೆ ಅದು ಸ್ಪಿನೋಜ಼ನ ವಿಧಾನದಲ್ಲಿ ಸಾರವತ್ತಾದುದು, ಹೀಗಾಗಿ ಅದರ ಬಗ್ಗೆ ನಾವು ಸ್ವಲ್ಪ ಆಲೋಚನೆ ಮಾಡುವುದು ಸಮಂಜಸವಾದುದು. ಜನರ ತಿಳಿವಳಿಕೆಯಲ್ಲಿ, 'ಒಳ್ಳೆಯ ಮುಕ್ತಾಯ ಹೊಂದುವುದೆಲ್ಲ ಒಳ್ಳೆಯವೇ'; ವಿಶ್ವವು ಕ್ರಮೇಣ ಉತ್ತಮಗೊಳ್ಳುತ್ತಿದ್ದರೆ, ಅದೇನು ಕ್ರಮೇಣ ಹದಗೆಡುತ್ತಿದೆಯೇ ಎನ್ನುವುದಕ್ಕಿಂತ ಉತ್ತಮ ರೀತಿಯಲ್ಲಿ ಆಲೋಚಿಸುತ್ತಿರುತ್ತೇವೆ, ಆದರೆ ಎರಡೂ ಸಂದರ್ಭಗಳಲ್ಲಿ ಒಳಿತು ಕೆಡುಕುಗಳ ಒಟ್ಟಂದವು ಒಂದೇ ರೀತಿಯಲ್ಲಿರುತ್ತವೆ. ನಮ್ಮ ಕಾಲದಲ್ಲಿನ ವಿನಾಶದ ಬಗ್ಗೆ ನಾವು ಜೆಂಗೇಜ್‌ಖಾನನ ಕಾಲದಲ್ಲಿನದಕ್ಕಿಂತ ಹೆಚ್ಚು ಕಳಕಳಿಯಿಂದ ಕೂಡಿರುತ್ತೇವೆ. ಸ್ಪಿನೋಜ಼ನ ಪ್ರಕಾರ ಇದು ಅವೈಚಾರಿಕ. ಏನು ಸಂಭವಿಸಿದರೂ ಅದು ದೇವರು ಕಾಣುವ ಚಿರಂತನವೂ ಕಾಲಾತೀತವೂ ಆದ ಜಗತ್ತಿನ ಭಾಗ; ಅವನಿಗೆ ಕಾಲ ಮುಖ್ಯವಲ್ಲ. ಮಾನವನ ಮಿತಿಯ ಪರಿಧಿಯಲ್ಲಿ ವಿವೇಕಿಯಾದವನು ದೇವರು ಕಾಣುವ ದೃಷ್ಟಿಯಲ್ಲಿ, ಚಿರಂತನೆಯ ಪರಿಪ್ರೇಕ್ಷ್ಯದಲ್ಲಿ (ಸಬ್ ಸ್ಪೀಸೀ ಇಟರ್ನಿಟ್ಯಾಟಿಸ್), ಜಗತ್ತನ್ನು ಕಾಣಲು ಪ್ರಯತ್ನಿಸುತ್ತಾನೆ. ಆದರೆ,

ಭವಿಷ್ಯದ ವಿನಾಶಗಳ ಬಗ್ಗೆ ನಮಗೆ ಹೆಚ್ಚು ಕಳವಳವಿರುವುದು, ಅದನ್ನು ತಪ್ಪಿಸಿಕೊಳ್ಳಬಹುದಾದುರ ಬಗ್ಗೆ ಚಿಂತಿಸುವುದು, ನಾವೇನೂ ಮಾಡಲಾಗದ ಹಿಂದಿನ ವಿನಾಶಗಳ ಬಗ್ಗೆ ಆಲೋಚಿಸುವುದಕ್ಕಿಂತ ಸಹಜವೇ ತಾನೇ ಎಂದು ನೀವು ಪ್ರತಿರೋಧ ಒಡ್ಡಬಹುದು. ಇದಕ್ಕೆ ಸ್ಪಿನೋಜ಼ನ ನಿಯತಿವಾದವು ಉತ್ತರವನ್ನು ನೀಡುತ್ತದೆ. ಭವಿಷ್ಯವನ್ನು ಬದಲಾಯಿಸಬಹುದೆಂದು ಭಾವಿಸುವುದು ಅಜ್ಞಾನವೇ ಸರಿ; ಏನಾಗಬೇಕೋ ಅದು ಆಗಿಯೇ ಆಗುತ್ತದೆ, ಭವಿಷ್ಯವೂ ಭೂತದಷ್ಟೆ ಬದಲಿಸಲಾಗದುದು. ಅದರಿಂದಾಗಿಯೇ ಭಯ ಮತ್ತು ನಿರೀಕ್ಷೆಗಳನ್ನು ಖಂಡಿಸುವುದು: ಎರಡೂ ಭವಿಷ್ಯವನ್ನು ಅನಿಶ್ಚಿತ ಎಂದು ಭಾವಿಸುವುದನ್ನು ಅವಲಂಬಿಸುತ್ತದೆ, ಹೀಗಾಗಿ ಅದು ವಿವೇಕದ ಕೊರತೆಯಿಂದ ಮೂಡುವಂತಹುದು.

ನಮಗೆ ಸಾಧ್ಯವಾದ ಮಟ್ಟಿಗೆ ದೇವರ ದೃಷ್ಟಿಯಲ್ಲಿನ ಜಗತ್ತಿನ ಕಾಣ್ಕೆಯನ್ನು ಹೊಂದಿದರೆ, ಆಗ ಎಲ್ಲವೂ ಇಡಿಯ ಭಾಗಗಳಾಗಿ ಮತ್ತು ಇಡಿಯ ಒಳಿತಿಗೆ ಆವಶ್ಯಕವಾದುದಾಗಿಯೇ ತೋರುತ್ತವೆ. ಹೀಗಾಗಿ 'ಕೆಡುಕಿನ ಅರಿವು ಅಸಮರ್ಪಕ ಜ್ಞಾನ.' ದೇವರಿಗೆ ಕೆಡುಕಿನ ಪರಿಜ್ಞಾನವೇ ಇಲ್ಲ, ಯಾಕೆಂದರೆ ತಿಳಿಯಬೇಕಾದ ಕೆಡುಕೇ ಇಲ್ಲ; ಕೆಡುಕಿನ ತೋರಿಕೆ ಉಂಟಾಗುವುದು ವಿಶ್ವದ ಭಾಗಗಳನ್ನು ಅವು ಸ್ವಯಂಪೂರ್ಣವೆಂಬಂತೆ ಪರಿಗಣಿಸುವುದರಿಂದಾಗಿ.

ಸ್ಪಿನೋಜ಼ನ ದೃಷ್ಟಿಕೋನವು ಜನರನ್ನು ಭಯದ ಉಪದ್ರವದಿಂದ ಬಿಡುಗಡೆಗೊಳಿಸುವ ಉದ್ದೇಶವುಳ್ಳುದು. 'ಸ್ವತಂತ್ರ ವ್ಯಕ್ತಿಯು ಸಾವಿಗಿಂತ ಕಡಿಮೆಯಾದುದರ ಬಗ್ಗೆ ಚಿಂತಿಸುವುದಿಲ್ಲ; ಅವನ ವಿವೇಕವು ಸಾವಿನ ಬಗೆಗಿನದಲ್ಲ, ಬದುಕಿನ ಬಗೆಗಿನ ಧ್ಯಾನ.' ಸ್ಪಿನೋಜ಼ ಈ ತತ್ವಕ್ಕೆ ಸಂಪೂರ್ಣವಾಗಿ ಬದ್ಧನಾಗಿದ್ದವನು. ತನ್ನ ಬದುಕಿನ ಕೊನೆಯ ದಿನವೂ ಅವನು ಉತ್ತೇಜಿತನಾಗಿರದಿದ್ದರೂ, ಮಿಕ್ಕ ದಿನಗಳಂತೆಯೇ ತನ್ನ ಸಂವಾದಕನ ಆಸಕ್ತಿಗನುಗುಣವಾದ ವಿಷಯಗಳ ಬಗ್ಗೆ ಮಾತನಾಡುತ್ತಿದ್ದ 'ಫೇಡೋ'ದ ಸಾಕ್ರಟೀಸ್‌ನಂತೆಯೇ, ಪೂರ್ತಿ ಶಾಂತಿಯಿಂದಿದ್ದ. ಮಿಕ್ಕ ಕೆಲವು ಮಂದಿ ತತ್ವಜ್ಞಾನಿಗಳಿಗಿಂತ ಭಿನ್ನವಾಗಿ, ತನ್ನ ಸಿದ್ಧಾಂತಗಳನ್ನು ಅವನು ನಂಬಿದ್ದುದೇ ಅಲ್ಲದೆ, ಅವುಗಳನ್ನು ಅನುಷ್ಠಾನಕ್ಕೂ ತಂದಿದ್ದ; ಎಂತಹ ಪ್ರಚೋದನೆಯಿದ್ದರೂ ಅವನು ತನ್ನ ನೈತಿಕತೆಯು ಖಂಡಿಸಿದ ಉದ್ರೇಕ ಅಥವಾ ಕೋಪಕ್ಕೊಳಗಾದ ಒಂದು ಸಂದರ್ಭವೂ ನನ್ನ ಗಮನಕ್ಕೆ ಬಂದಿಲ್ಲ. ವಿವಾದದಲ್ಲಿಯೂ ಅವನು ಸೌಜನ್ಯಯುತನೂ ವಿಚಾರಶೀಲನೂ ಆಗಿರುತ್ತಿದ್ದ, ಯಾವತ್ತೂ ಖಂಡಿಸದೆ ತನ್ನಿಂದ ಸಾಧ್ಯವಾದ ಮಟ್ಟಿಗೂ ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದ.

ನಮಗೆ ಆಗುವುದು ಒಳಗಿನಿಂದಲೇ ಮೂಡಿ ಬಂದಿರುವ ಮಟ್ಟಿಗೆ, ಅವು ಒಳ್ಳೆಯವು; ಹೊರಗಿನಿಂದ ಬರುವಂತಹುವು ನಮಗೆ ಕೆಟ್ಟವು. 'ಮನುಷ್ಯನೇ ನಿಮಿತ್ತ ಕಾರಣವಾದ ಎಲ್ಲವೂ ಒಳ್ಳೆಯವೇ, ಬಾಹ್ಯ ಕಾರಣದ ಹೊರತಾಗಿ ಯಾವುದೇ

ಕೆಟ್ಟುದು ಸಂಭವಿಸಲಾರದು.' ಹೀಗಾಗಿ, ಇಡೀ ವಿಶ್ವಕ್ಕೆ ಕೆಟ್ಟುದಾದ ಯಾವುದೂ ಸಂಭವಿಸಲಾರದು, ಯಾಕೆಂದರೆ ಅದು ಬಾಹ್ಯ ಕಾರಣಗಳಿಗೆ ಒಳಗಾಗುವುದಿಲ್ಲ ಎಂಬುದು ವಿದಿತವಾಗುತ್ತದೆ. 'ನಾವು ವಿಶ್ವಪ್ರಕೃತಿಯ ಒಂದು ಭಾಗ, ನಾವು ಅದರ ನಿಯಮಗಳನ್ನು ಅನುಸರಿಸುತ್ತೇವೆ. ಇದು ನಮಗೆ ಸ್ಪಷ್ಟವೂ ಖಚಿತವೂ ಆಗಿ ಅರ್ಥವಾದರೆ, ಬುದ್ಧಿವಂತಿಕೆಯಿಂದ ರೂಪಿತವಾದ ನಮ್ಮ ಸ್ವಭಾವವು, ಅಂದರೆ ನಮ್ಮ ಉತ್ತಮ ಭಾಗವು, ಏನಾಗುತ್ತದೋ ಅದಕ್ಕೆ ಹೊಂದಿಕೊಳ್ಳುತ್ತದೆ, ಅಂಥ ಹೊಂದಿಕೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತದೆ.' ತಾನು ಹಿರಿದಾದ ಇಡಿಯ ಭಾಗವಾಗಲು ವ್ಯಕ್ತಿಯು ಇಷ್ಟಪಡದ ಮಟ್ಟಿಗೆ, ಅವನು ಬಂಧಿತನಾಗಿರುತ್ತಾನೆ; ಅರ್ಥಮಾಡಿಕೊಳ್ಳುವುದರ ಮೂಲಕ ಅವನು ಇಡಿಯ ವಾಸ್ತವತೆಯನ್ನು ಗ್ರಹಿಸಿಕೊಂಡಿರುವ ಮಟ್ಟಿಗೆ, ಅವನು ಸ್ವತಂತ್ರನಾಗಿರುತ್ತಾನೆ. ಈ ಸಿದ್ಧಾಂತದ ಸೂಚ್ಯಾರ್ಥಗಳನ್ನು ಅವನ ಗ್ರಂಥ 'ಎಥಿಕ್ಸ್'ನ ಕೊನೆಯ ಭಾಗದಲ್ಲಿ ವಿವರಿಸಲಾಗಿದೆ.

ಸಂಯಮವಾದಿಗಳಂತೆ ಸ್ಪಿನೋಜ಼ ಎಲ್ಲ ಭಾವನೆಗಳಿಗೂ ವಿರೋಧವಾದವನಲ್ಲ; ಬಾಹ್ಯ ಶಕ್ತಿಗಳ ಕಾರ್ಯದಲ್ಲಿ ನಮಗೆ ನಾವು ಕ್ರಿಯಾಹೀನರಾಗಿ ಕಾಣುವಂತೆ ಮಾಡುವ 'ರಾಗಭಾವ'ಗಳ ಬಗ್ಗೆ ಮಾತ್ರ ಅವನ ತಕರಾರು, 'ರಾಗಭಾವವಾಗುವ ಒಂದು ಭಾವನೆಯು, ನಾವು ಅದರ ಬಗ್ಗೆ ಸ್ಪಷ್ಟವೂ ಖಚಿತವೂ ಆದ ಚಿಂತನೆಯನ್ನು ರೂಪಿಸಿಕೊಂಡ ತಕ್ಷಣ ರಾಗಭಾವವಾಗುವುದು ಕೊನೆಯಾಗುತ್ತದೆ.' ಎಲ್ಲ ವಸ್ತುಗಳೂ ಆವಶ್ಯಕ ಎಂಬ ತಿಳಿವಳಿಕೆಯು ಮನಸ್ಸು ಭಾವನೆಗಳನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಪಡೆಯಲು ಸಹಾಯ ಮಾಡುತ್ತದೆ. 'ಯಾರು ತನ್ನನ್ನು ತಾನು ಮತ್ತು ತನ್ನ ಭಾವನೆಗಳನ್ನು ಸ್ಪಷ್ಟವೂ ಖಚಿತವೂ ಆದ ರೀತಿಯಲ್ಲಿ ತಿಳಿದಿರುತ್ತಾನೋ ಅವನು ದೇವರನ್ನು ಪ್ರೀತಿಸುತ್ತಾನೆ, ತನ್ನ ಬಗ್ಗೆ ಮತ್ತು ತನ್ನ ಭಾವನೆಗಳ ಬಗ್ಗೆ ಹೆಚ್ಚು ಹೆಚ್ಚು ತಿಳಿದಷ್ಟೂ ಅಷ್ಟಷ್ಟು ಹೆಚ್ಚು ಪ್ರೀತಿಸುತ್ತಾನೆ.' ಈ ಪ್ರತಿಪಾದನೆಯು 'ದೇವರ ಬಗೆಗಿನ ಬೌದ್ಧಿಕ ಪ್ರೇಮ' ಎಂದವನು ಕರೆಯುತ್ತಾನೆ, ಅದರಲ್ಲಿ ವಿವೇಕವಿರುತ್ತದೆ. 'ದೇವರ ಬಗೆಗಿನ ಬೌದ್ಧಿಕ ಪ್ರೇಮ'ವು ಚಿಂತನೆ ಮತ್ತು ಭಾವನೆಗಳ ಸಂಗಮ; ಸತ್ಯದ ಗ್ರಹಿಕೆಯ ಆನಂದ ಸೇರಿರುವ ನಿಜವಾದ ಚಿಂತನೆಯಲ್ಲಿ ಅದಿರುತ್ತದೆ ಎಂದು ಹೇಳಬಹುದೆಂದು ತೋರುತ್ತದೆ. ನಿಜವಾದ ಚಿಂತನೆಯಲ್ಲಿ ಆನಂದವೆಲ್ಲವೂ ದೇವರ ಬಗೆಗಿನ ಬೌದ್ಧಿಕ ಪ್ರೇಮದ ಭಾಗವಾಗುತ್ತದೆ; ಯಾಕೆಂದರೆ ಅದರಲ್ಲಿ ನೇತ್ಯಾತ್ಮಕವಾದುದು ಯಾವುದೂ ಇಲ್ಲ; ಹೀಗಾಗಿ, ಅದು ಬಿಡಿ ಬಿಡಿ ವಸ್ತುಗಳು ಚಿಂತನೆಗೆ ಹೊರತಾಗಿ ಕೆಡುಕಿನಂತೆ ಕಾಣುವ ಬರೀ ತೋರಿಕೆಯದು ಮಾತ್ರವಾಗಿರದೆ, ನಿಜವಾಗಿ ಇಡಿಯ ಭಾಗವಾಗಿರುತ್ತದೆ.

ದೇವರ ಬಗೆಗಿನ ಬೌದ್ಧಿಕ ಪ್ರೇಮದಲ್ಲಿ ಆನಂದವಿರುತ್ತದೆ ಎಂದು ಒಂದು ಕ್ಷಣದ ಹಿಂದಷ್ಟೇ ನಾನು ಹೇಳಿದ್ದೆ, ಆದರೆ ಇದು ಪ್ರಾಯಶಃ ತಪ್ಪು, ಯಾಕೆಂದರೆ

ಸ್ಪಿನೋಜ಼ನ ಪ್ರಕಾರ ದೇವರಿಗೆ ನೋವು ಅಥವಾ ಸಂತೋಷವೆಂಬ ಭಾವನೆಗಳು ತಟ್ಟಲಾರವು, ಹೀಗಾಗಿ ಅವನು 'ದೇವರ ಬಗೆಗಿನ ಬೌದ್ಧಿಕ ಪ್ರೇಮವು ದೇವರು ತನ್ನನ್ನು ತಾನು ಪ್ರೀತಿಸುವ ಅಪರಿಮಿತ ಪ್ರೀತಿಯ ಒಂದು ಭಾಗ' ಎನ್ನುತ್ತಾನೆ. ಆದರೂ, ಈ 'ಬೌದ್ಧಿಕ ಪ್ರೇಮ'ದಲ್ಲಿ ಕೇವಲ ಬೌದ್ಧಿಕವಲ್ಲದ ಬೇರೇನೋ ಇರುತ್ತದೆ, ಪ್ರಾಯಶಃ ಅಲ್ಲಿನ ಆನಂದವು ಸಂತೋಷಕ್ಕಿಂತ ಮಿಗಿಲಾದ ಉನ್ನತವಾದುದು.

'ದೇವರ ಬಗೆಗಿನ ಪ್ರೇಮವು ಮನಸ್ಸಿನಲ್ಲಿ ಮುಖ್ಯ ಭಾಗವನ್ನಾಕ್ರಮಿಸಬೇಕು' ಎನ್ನುತ್ತಾನೆ. ನಾನು ಸ್ಪಿನೋಜ಼ನ ನಿದರ್ಶನವನ್ನು ಬಿಟ್ಟಿದ್ದೇನೆ, ಆದರೆ ಹಾಗೆ ಮಾಡುವಲ್ಲಿ ನಾನು ಅವನ ಚಿಂತನೆಯ ಅಪೂರ್ಣ ಚಿತ್ತವನ್ನು ನೀಡಿದ್ದೇನೆ, ಅಷ್ಟೆ. ಮೇಲಿನ ಪ್ರತಿಪಾದನೆಯ ಆಧಾರವು ಸಂಕ್ಷಿಪ್ತವಾದುದು, ನಾನದನ್ನು ಪೂರ್ತಿ ಉಲ್ಲೇಖಿಸುತ್ತೇನೆ; ಆನಂತರ ಓದುಗನು ತನ್ನ ಊಹೆಯಲ್ಲಿ ಇತರ ಪ್ರತಿಪಾದನೆಗಳಿಗೆ ಆಧಾರಗಳನ್ನು ನೀಡಬಹುದು. ಮೇಲಿನ ಪ್ರತಿಪಾದನೆಯ ಆಧಾರವು ಹೀಗಿದೆ:

'ಯಾಕೆಂದರೆ ಈ ಪ್ರೇಮವು ದೇಹದಲ್ಲಿನ ಎಲ್ಲ ಪರಿಷ್ಕರಣೆಗಳಿಗೂ ಸಂಬಂಧಿಸಿರುತ್ತದೆ (೫, ೧೪) ಮತ್ತು ಅವೆಲ್ಲವುಗಳಿಂದ ಪೋಷಿತವಾಗಿರುತ್ತದೆ (೫, ೧೫); ಹೀಗಾಗಿ (೫, ೧೧) ಅದು ಮನಸ್ಸಿನ ಮುಖ್ಯ ಭಾಗವನ್ನು ಆಕ್ರಮಿಸಿರಬೇಕು, ಹೀಗೆ (ಕ್ಯು ಇ ಡಿ).'

ಮೇಲಿನ ಆಧಾರದಲ್ಲಿ ಸೂಚಿತವಾದ ಪ್ರತಿಪಾದನೆಯಲ್ಲಿ, ೫., ೧೪ ಹೀಗೆನ್ನುತ್ತದೆ: 'ದೇಹದ ಎಲ್ಲ ಪರಿಷ್ಕರಣೆಗಳನ್ನೂ ಅಥವಾ ವಸ್ತುಗಳ ಪ್ರತಿಮೆಗಳನ್ನೂ ದೇವರ ಬಗೆಗಿನ ಚಿಂತನೆಯಲ್ಲಿ ಉಲ್ಲೇಖಿಸಬಹುದು ಎಂಬುದನ್ನು ಮನಸ್ಸು ಉಂಟುಮಾಡಬಹುದು'; ೫, ೧೫ ಹೀಗೆನ್ನುತ್ತದೆ: 'ಯಾರು ತನ್ನನ್ನು ತಾನು ಮತ್ತು ತನ್ನ ಭಾವನೆಗಳನ್ನು ಸ್ಪಷ್ಟವಾಗಿಯೂ ಖಚಿತವಾಗಿಯೂ ಅರ್ಥಮಾಡಿಕೊಳ್ಳುತ್ತಾನೆಯೋ ಅವನು ದೇವರನ್ನು ಪ್ರೀತಿಸುತ್ತಾನೆ, ತನ್ನನ್ನು ತಾನು ಮತ್ತು ತನ್ನ ಭಾವನೆಗಳನ್ನು ಅರ್ಥಮಾಡಿಕೊಂಡಿರುವಷ್ಟರ ಮಟ್ಟಿಗೆ'; ೫, ೧೧ ಹೀಗೆನ್ನುತ್ತದೆ: 'ಹೆಚ್ಚು ವಸ್ತುಗಳಿಗೆ ಸಂಬಂಧಿಸಿದಂತೆ ಇರುವ ಮಾನಸಿಕ ಪ್ರತಿಮೆಗಳ ಪ್ರಮಾಣಾನುಗುಣವಾಗಿ, ಅದು ಹೆಚ್ಚು ಕಡಿಮೆ ಆಗಿರುತ್ತದೆ, ಅಥವಾ ಹೆಚ್ಚು ಸ್ಪಷ್ಟವಾಗಿ ಮತ್ತು ಮನಸ್ಸನ್ನು ಹೆಚ್ಚಾಗಿ ಆಕ್ರಮಿಸಿರುತ್ತದೆ.'

ಮೇಲೆ ಉಲ್ಲೇಖಿಸಿರುವ 'ಆಧಾರ'ಗಳನ್ನು ಹೀಗೆ ವಿವರಿಸಬಹುದು: ನಮಗೆ ಆಗುವಂಥವುಗಳ ಬಗೆಗಿನ ಜ್ಞಾನದ ಪ್ರತಿ ಹೆಚ್ಚುವಿಕೆಯೂ ದೇವರ ಚಿಂತನೆಯ ಸಂಬಂಧಪಟ್ಟ ಘಟನೆಗಳಿಗೆ ಸಂಬಂಧಿಸಿರುತ್ತದೆ, ಯಾಕೆಂದರೆ, ಸತ್ಯದಲ್ಲಿ, ಪ್ರತಿಯೊಂದೂ ದೇವರ ಭಾಗವೇ. ಪ್ರತಿಯೊಂದನ್ನೂ ದೇವರ ಭಾಗವೆಂದು ಅರ್ಥಮಾಡಿಕೊಳ್ಳುವುದು ದೇವರ ಬಗೆಗಿನ ಪ್ರೇಮವೇ. ಎಲ್ಲ ವಸ್ತುಗಳನ್ನೂ ದೇವರಿಗೆ ಸಂಬಂಧಿಸಿದರೆ, ದೇವರ ಚಿಂತನೆಯು ಮನಸ್ಸನ್ನೆಲ್ಲ ಆವರಿಸುತ್ತದೆ.

ಹೀಗೆ 'ದೇವರ ಬಗೆಗಿನ ಪ್ರೇಮವು ಮನಸ್ಸಿನ ಮುಖ್ಯ ಭಾಗವನ್ನಾಕ್ರಮಿಸಬೇಕು' ಎಂಬ ಹೇಳಿಕೆಯು ಮೂಲತಃ ನೈತಿಕ ಬೋಧನೆಯಲ್ಲ, ಬದಲಿಗೆ ಅದು ನಾವು ಜ್ಞಾನವನ್ನು ಪಡೆದಾಗ ಅನಿವಾರ್ಯವಾಗಿ ಉಂಟಾಗುವುದರ ವಿವರಣೆ.

ಯಾರೂ ದೇವರನ್ನು ದ್ವೇಷಿಸಲು ಸಾಧ್ಯವಿಲ್ಲ ಎನ್ನಲಾಗಿದೆ, ಆದರೆ ಮತ್ತೊಂದು ಕಡೆ, 'ದೇವರನ್ನು ಪ್ರೇಮಿಸುವವನು ದೇವರೂ ತನ್ನನ್ನು ಪ್ರೇಮಿಸಬೇಕು ಎಂದು ಪ್ರತೀಕ್ಷಿಸುವಂತಿಲ್ಲ' ಎಂದೂ ಹೇಳಿದೆ. ಸ್ಪಿನೋಜ಼ನನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸದೆಯೇ ಅವನನ್ನು ಮೆಚ್ಚಿಕೊಂಡಿದ್ದ ಗಯಟೆಯು ಈ ಪ್ರತಿಪಾದನೆಯನ್ನು ಸ್ವಹಿತತ್ಯಾಗದ ನಿದರ್ಶನ ಎಂದು ಭಾವಿಸಿದ. ಇದು ಅಂಥದಾವುದೂ ಅಲ್ಲ, ಸ್ಪಿನೋಜ಼ನ ತತ್ವಜಿಜ್ಞಾಸೆಯ ತಾರ್ಕಿಕ ಪರಿಣಾಮ. ಯಾರೂ ದೇವರು ತನ್ನನ್ನು ಪ್ರೀತಿಸಲೇಬಾರದೆಂದೇನೂ ಅವನು ಹೇಳಲಿಲ್ಲ, ಅವನು ಹೇಳುವುದು ದೇವರನ್ನು ಪ್ರೇಮಿಸುವ ವ್ಯಕ್ತಿಯು ದೇವರೂ ತನ್ನನ್ನು ಪ್ರೀತಿಸಬೇಕೆಂದು ಅಪೇಕ್ಷಿಸುವಂತಿಲ್ಲ ಎಂದು. ಇದು ಹೀಗೆನ್ನುವ ಆಧಾರದಿಂದ ಪ್ರತಿಪಾದಿತವಾಗಿದೆ: 'ಅವನು ಹಾಗೆಂದು ಪ್ರಯತ್ನಪಟ್ಟರೆ ಅವನಿಗೆ ಆಸೆಯಿದೆ ಎಂದರ್ಥ (೫, ೧೭, ಉಪಸಿದ್ಧಾಂತ), ತಾನು ಪ್ರೇಮಿಸುವ ದೇವರು ದೇವರಾಗಿರಬಾರದು ಮತ್ತು ಹಾಗಾಗಿ ಅವನು ನೋವನನ್ನನುಭವಿಸಲು ಬಯಸಬೇಕು (೩, ೧೯) , ಅದು ಅಸಂಗತ (೩, ೨೮). ನಾವಾಗಲೇ ಗಮನಿಸಿರುವ ಪ್ರತಿಪಾದನೆಯು (೫, ೧೭) ಹೇಳುವುದೇನೆಂದರೆ ದೇವರಿಗೆ ಸಂತೋಷವಾಗಲೀ ರಾಗಭಾವಗಳಾಗಲೀ ನೋವಾಗಲೀ ಇಲ್ಲ ಎಂದು; ಮೇಲೆ ಉಲ್ಲೇಖಿಸಿರುವ ಉಪಸಿದ್ಧಾಂತವು ದೇವರು ಯಾರನ್ನೂ ಪ್ರೇಮಿಸುವುದೂ ಇಲ್ಲ ದ್ವೇಷಿಸುವದೂ ಇಲ್ಲ ಎಂದು ತರ್ಕಿಸುತ್ತದೆ. ಇಲ್ಲಿ ಮತ್ತೆ ಸೇರಿರುವುದು ಒಂದು ನೈತಿಕ ಬೋಧನೆಯಲ್ಲ, ತಾರ್ಕಿಕ ಆವಶ್ಯಕತೆ: ದೇವರನ್ನು ಪ್ರೇಮಿಸುವ ಮನುಷ್ಯ ತನ್ನನ್ನು ದೇವರೂ ಪ್ರೇಮಿಸಬೇಕೆಂದು ಬಯಸಿದರೆ ಅವನು ನೋವನ್ನು ಅನುಭವಿಸಲು ಇಚ್ಛಿಸುತ್ತಾನೆ ಎಂದರ್ಥ, 'ಅದು ಅಸಂಬದ್ಧ.'

ದೇವರು ಯಾರನ್ನೂ ಪ್ರೀತಿಸಲಾರ ಎಂಬ ಹೇಳಿಕೆಯು, ದೇವರು ತನ್ನ ಬಗ್ಗೆ ಅಸೀಮ ಬೌದ್ಧಿಕ ಪ್ರೇಮವನ್ನು ಹೊಂದಿದ್ದಾನೆ ಎಂಬ ಹೇಳಿಕೆಯ ವಿರುದ್ಧವಾದುದೇನಲ್ಲ. ಅವನು ತನ್ನನ್ನೇ ಪ್ರೇಮಿಸಬಹುದು, ಇದಕ್ಕೆ ಕಾರಣ ಮಿಥ್ಯಾನಂಬಿಕೆಯಿಲ್ಲದೆಯೇ ಇದು ಇರಲು ಸಾಧ್ಯ, ಮತ್ತು ಏನೇ ಆಗಲಿ, ಬೌದ್ಧಿಕ ಪ್ರೇಮವೆಂಬುದು ವಿಶೇಷ ಬಗೆಯ ಪ್ರೇಮ.

ಈ ಹಂತದಲ್ಲಿ ಸ್ಪಿನೋಜ಼ ತಾನೀಗ ನಮಗೆ ಕೊಟ್ಟಿರುವುದನ್ನು 'ಎಲ್ಲ ಭಾವನೆಗಳಿಗೆ ವಿರುದ್ಧವಾದ ಪರಿಹಾರ' ಎನ್ನುತ್ತಾನೆ. ಮಹಾ ಪರಿಹಾರವೆಂದರೆ ಸ್ಪಷ್ಟವೂ ಖಚಿತವೂ ಆದ ಭಾವನೆಗಳ ಸ್ವರೂಪ ಮತ್ತು ಅವು ಬಾಹ್ಯ ಕಾರಣಗಳೊಡನೆ ಹೊಂದಿರುವ ಸಂಬಂಧಗಳ ಬಗೆಗಿನ ಚಿಂತನೆ. ಮನುಷ್ಯರನ್ನು ಪ್ರೇಮಿಸುವುದಕ್ಕೆ

ಹೋಲಿಸಿದರೆ ದೇವರನ್ನು ಪ್ರೇಮಿಸುವುದು ಮತ್ತೂ ಅನುಕೂಲಕರ. 'ಆಧ್ಯಾತ್ಮಿಕ ಅನಾರೋಗ್ಯ ಮತ್ತು ದುರದೃಷ್ಟಗಳ ಕಾರಣವೆಂದರೆ ಬಗೆ ಬಗೆಯ ಮಾರ್ಪಾಟುಗಳಿಗೆ ಒಳಪಡಬಹುದಾದ ಯಾವುದರ ಬಗ್ಗೆಯೋ ಇರುವ ಅತಿರೇಕ ಪ್ರೀತಿ.' ಆದರೆ ಸ್ಪಷ್ಟವೂ ಖಚಿತವೂ ಆದ ಜ್ಞಾನವು 'ಬದಲಾವಣೆಯಿಲ್ಲದ ಹಾಗೂ ಚಿರಂತನವಾದ ವಸ್ತುವಿನ ಬಗ್ಗೆ ಪ್ರೇಮವನ್ನುಂಟುಮಾಡುತ್ತದೆ'; ಅಂಥ ಪ್ರೇಮಕ್ಕೆ ನಶ್ವರವೂ ಬದಲಾಗುವಂತಹುದೂ ಆದ ವಸ್ತುವೊಂದರ ಬಗೆಗಿನ ಪ್ರೇಮದ ಪ್ರಕ್ಷುಬ್ಧತೆ ಹಾಗೂ ವ್ಯಾಕುಲತೆಯ ಲಕ್ಷಣಗಳಿರುವುದಿಲ್ಲ.

ಸಾವಿನ ನಂತರ ವೈಯಕ್ತಿಕ ಉಳಿವು ಭ್ರಮೆಯಾದರೂ, ಮನುಷ್ಯನ ಮನಸ್ಸಿನಲ್ಲಿ ಚಿರಂತನವಾದುದು ಯಾವುದೋ ಇದೆ. ಮನಸ್ಸು ಕಲ್ಪಿಸಿಕೊಳ್ಳಬಹುದು ಅಥವಾ ನೆನಪಿಸಿಕೊಳ್ಳಬಹುದು, ಆದರೆ ದೇಹವು ಸಹಿಸಿಕೊಳ್ಳುತ್ತದೆ, ಆದರೆ ದೇವರಲ್ಲಿ ಇದೋ ಅದೋ ಮಾನವ ದೇಹದ ಸಾರಸತ್ವವನ್ನು ಚಿರಂತನತೆಯ ರೂಪದಲ್ಲಿ ವ್ಯಕ್ತಗೊಳಿಸುವ ಚಿಂತನೆಯಿರುತ್ತದೆ, ಮತ್ತು ಈ ಚಿಂತನೆಯು ಮನಸ್ಸಿನ ಚಿರಂತನ ಭಾಗ. ವ್ಯಕ್ತಿಯೊಬ್ಬನು ಅನುಭವಿಸುವ ದೇವರ ಬಗೆಗಿನ ಬೌದ್ಧಿಕ ಪ್ರೇಮವು ಮನಸ್ಸಿನ ಈ ಚಿರಂತನ ಭಾಗದಲ್ಲಿ ಅಡಕಗೊಂಡಿರುತ್ತದೆ.

ದೇವರ ಬಗೆಗಿನ ಪ್ರೇಮವನ್ನು ಹೊಂದಿರುವ ದೈವಾನುಗ್ರಹವು ಸದ್ಗುಣಕ್ಕೆ ನೀಡಿದ ಫಲವಲ್ಲ, ಆದರೆ ಸದ್ಗುಣವೇ; ನಾವು ಅದರಲ್ಲಿ ಸಂತೋಷ ಕಾಣುವುದಿಲ್ಲ, ಯಾಕೆಂದರೆ ನಾವು ನಮ್ಮ ಕಾಮನೆಗಳನ್ನು ನಿಯಂತ್ರಿಸಿಕೊಳ್ಳುತ್ತೇವೆ, ಆದರೆ ನಾವು ಕಾಮನೆಗಳನ್ನು ನಿಯಂತ್ರಿಸಿಕೊಳ್ಳುವುದು ನಮಗೆ ಸಂತೋಷ ತರುವಂತಹುದ್ದು ಆದ್ದರಿಂದ.

'ಎಥಿಕ್ಸ್' ಈ ಮಾತುಗಳಿಂದ ಮುಕ್ತಾಯಗೊಳ್ಳುತ್ತದೆ:

'ವಿವೇಕಿಯಾದ ಮನುಷ್ಯನು, ಅವನನ್ನು ಹಾಗೆಂದು ಪರಿಗಣಿಸುವವರೆಗೂ, ತನ್ನ ಸತ್ವದಲ್ಲಿ ಎಂದೂ ಪ್ರಕ್ಷುಬ್ಧತೆಯನ್ನು ಅನುಭವಿಸುವುದಿಲ್ಲ; ಆದರೆ ಚಿರಂತನವಾದ ಬಾಹ್ಯ ಆವಶ್ಯಕತೆಯಿಂದ ತನ್ನ ಹಾಗೂ ದೇವರ ಮತ್ತು ವಸ್ತುಗಳ ಬಗ್ಗೆ ಪ್ರಜ್ಞಾಪೂರ್ವಕವಾದಾಗ, ಅವನೆಂದೂ ಅದನ್ನು ಕಳೆದುಕೊಳ್ಳದೆ, ತನ್ನ ಸತ್ವದ ಮೌನಸಮ್ಮತಿಯನ್ನು ಪಡೆದಿರುತ್ತಾನೆ. ಈ ಗುರಿಯ ಕಡೆಗೆ ಸಾಗುವುದೆಂದು ನಾನು ಸೂಚಿಸಿರುವ ಮಾರ್ಗವು ತುಂಬ ಕಠಿಣವೆಂಬಂತೆ ಕಾಣುತ್ತದೆ, ಆದರೆ ಅದನ್ನು ಕಂಡುಕೊಳ್ಳಬಹುದು. ಅದು ಕಠಿಣವಾಗಿಯೇ ಇರಬೇಕು ಯಾಕೆಂದರೆ ಅದನ್ನು ಕಾಣುವುದೇ ಕಷ್ಟಕರವಾದುದು. ಮೋಕ್ಷವು ನಮ್ಮ ಕೈಗೆಟುಕುವಂತಿದ್ದರೆ, ಮತ್ತು ಕಷ್ಟವಿಲ್ಲದೆಯೇ ಪಡೆಯುವಂತಿದ್ದರೆ, ಎಲ್ಲರೂ ಅದನ್ನು ಕಡೆಗಣಿಸಿಬಿಡುವುದು ಹೇಗೆ ಸಾಧ್ಯವಾದೀತು? ಆದರೆ ಎಲ್ಲ ಶ್ರೇಷ್ಠ ವಸ್ತುಗಳು ತಾವಿರುವಂತೆ ಕಷ್ಟಕರವೇ.'

ಪ್ರಮುಖ ತತ್ವಜ್ಞಾನಿಯಾಗಿ ಸ್ಪಿನೋಜ಼ನ ಬಗ್ಗೆ ವಿಮರ್ಶಾತ್ಮಕವಾಗಿ

ಬೆಲೆಗಟ್ಟುವುದಾದರೆ, ಅವನ ನೈತಿಕತೆ ಮತ್ತು ತತ್ವಜಿಜ್ಞಾಸೆಗಳನ್ನು ಭಿನ್ನವಾಗಿ ಪರಿಶೀಲಿಸುವುದು ಮತ್ತು ಅವನ ತತ್ವಜಿಜ್ಞಾಸೆಯನ್ನು ಅಲ್ಲಗಳೆದರೂ ಅವನ ನೈತಿಕತೆಯ ಎಷ್ಟು ಭಾಗ ಉಳಿಯಬಲ್ಲದು ಎಂದು ಪರಿಶೀಲಿಸುವುದು ಆವಶ್ಯಕ.

ಸ್ಪಿನೋಜ಼ನ ತತ್ವಜಿಜ್ಞಾಸೆಯು 'ತಾರ್ಕಿಕ ಏಕತ್ವವಾದ'ದ ಅತ್ಯುತ್ತಮ ಉದಾಹರಣೆ; ಆ ಸಿದ್ಧಾಂತದ ಪ್ರಕಾರ, ಜಗತ್ತು ಇಡಿಯಾಗಿ ಒಂದೇ ಸಾರಸತ್ವ, ಅದರ ಯಾವುದೇ ಭಾಗವೂ ಸ್ವತಂತ್ರವಾಗಿ ಅಸ್ತಿತ್ವದಲ್ಲಿರಲಾರದು. ಈ ದೃಷ್ಟಿಕೋನದ ಆತ್ಯಂತಿಕ ಬುನಾದಿಯೆಂದರೆ, ಪ್ರತಿ ಪ್ರತಿಪಾದನೆಯಲ್ಲಿಯೂ ಒಂದು ಕರ್ತೃ ಮತ್ತು ಒಂದು ವಿಧೇಯವಿರುತ್ತದೆ (ಸಬ್ಜೆಕ್ಟ್ ಅಂಡ್ ಪ್ರೆಡಿಕೇಟ್), ಇದರಿಂದ ಸಂಬಂಧಗಳು ಮತ್ತು ಬಹುತ್ವವು ಭ್ರಮಾತ್ಮಕವಾದವೆಂಬ ತೀರ್ಮಾನಕ್ಕೆ ನಾವು ಬರುವಂತಾಗುತ್ತದೆ. ಜಗತ್ತು ಮತ್ತು ಮನುಷ್ಯ ಸ್ವಭಾವಗಳ ಸ್ವರೂಪವನ್ನು ಸ್ವಯಂವೇದ್ಯ ಆಧಾರಸೂತ್ರಗಳಿಂದ ತಾರ್ಕಿಕವಾಗಿ ಸಾಧಿಸಬಹುದು ಎಂದು ಸ್ಪಿನೋಜ಼ ಭಾವಿಸಿದ; ಎರಡಕ್ಕೆ ಎರಡು ಸೇರಿದರೆ ನಾಲ್ಕು ಆಗುತ್ತದೆ ಎಂಬುದರಲ್ಲಿನಂತೆಯೇ ನಾವು ಎಲ್ಲ ವಿದ್ಯಮಾನಗಳ ಬಗ್ಗೆ ನಿರ್ಭಾವುಕವಾಗಿರಬೇಕು, ಯಾಕೆಂದರೆ ಅವೂ ತಾರ್ಕಿಕ ಆವಶ್ಯಕತೆಯ ಫಲಿತಾಂಶವೇ. ಈ ತತ್ವಜಿಜ್ಞಾಸೆಯೆಲ್ಲವನ್ನೂ ಪೂರ್ತಿಯಾಗಿ ಒಪ್ಪುವುದು ಅಸಾಧ್ಯ; ಅದು ಆಧುನಿಕ ತರ್ಕಕ್ಕೆ ಮತ್ತು ವೈಜ್ಞಾನಿಕ ವಿಧಾನಕ್ಕೆ ಹೊಂದಲಾರದು. ವಸ್ತುಸ್ಥಿತಿಗಳನ್ನು ಗುರುತಿಸಬೇಕಾದುದು ಪರಿವೀಕ್ಷಣೆಯಿಂದಲೇ ವಿನಾ ತರ್ಕದಿಂದಲ್ಲ. ನಾವು ಭವಿಷ್ಯದ ಬಗ್ಗೆ ಯಶಸ್ವಿಯಾಗಿ ಊಹನೆ ಮಾಡಿಕೊಂಡರೆ, ನಾವು ಹಾಗೆ ಮಾಡುವುದು ತಾರ್ಕಿಕವಾಗಿ ಆವಶ್ಯಕವಾದ ತತ್ವಗಳ ಮೂಲಕ ಆಗಿರದೆ, ಅನುಭವೈಕ ದತ್ತಾಂಶಗಳಿಂದ ಸೂಚಿತವಾದುವಾಗಿರುತ್ತದೆ. ಅಲ್ಲದೆ, ಸ್ಪಿನೋಜ಼ ಆಧರಿಸುವ ಮೂಲತತ್ವ ಪರಿಕಲ್ಪನೆಯು ವಿಜ್ಞಾನವಾಗಲೀ ಈಚಿನ ತತ್ವಜ್ಞಾನವಾಗಲೀ ಒಪ್ಪಲಾರದ್ದು.

ಆದರೆ ನಾವು ಸ್ಪಿನೋಜ಼ನ ನೈತಿಕತೆಗೆ ಬಂದರೆ, ಅವುಗಳ ತತ್ವಜಿಜ್ಞಾಸಾತ್ಮಕ ಬುನಾದಿಯು ತಿರಸ್ಕೃತವಾಗಿದ್ದರೂ, ಎಲ್ಲವನ್ನಲ್ಲದಿದ್ದರೂ, ಅವುಗಳಲ್ಲಿನ ಕೆಲವನ್ನು ಒಪ್ಪಬಹುದೆಂದು ನಾವು ಭಾವಿಸಬಹುದು – ನಾನಂತೂ ಹಾಗೆ ಭಾವಿಸಿದ್ದೇನೆ. ಸ್ಥೂಲವಾಗಿ ಹೇಳುವುದಾದರೆ, ಸ್ಪಿನೋಜ಼ನ ಕಾಳಜಿಯೆಂದರೆ ಮಾನವ ಸಾಮರ್ಥ್ಯದ ಪರಿಮಿತಿಗಳನ್ನು ಗಮನಿಸಿಯೂ ಉದಾತ್ತವಾಗಿ ಬದುಕುವುದು ಸಾಧ್ಯ ಎಂದು ತೋರಿಸುವುದು. ತನ್ನ ಆವಶ್ಯಕತೆಯ ಸಿದ್ಧಾಂತದ ಮೂಲಕ ಈ ಪರಿಮಿತಿಗಳನ್ನು ಅವನು ಅವುಗಳಿರುವುದಕ್ಕಿಂತಲೂ ಹೆಚ್ಚು ಸಂಕುಚಿತಗೊಳಿಸುತ್ತಾನೆ; ಆದರೆ ಅವು ನಿರ್ವಿವಾದವಾಗಿ ಅಸ್ತಿತ್ವದಲ್ಲಿರುವಾಗ, ಸ್ಪಿನೋಜ಼ನ ನೀತಿಗಳು ಪ್ರಾಯಶಃ ಅತ್ಯುತ್ತಮವಾದವುಗಳು. ನಿದರ್ಶನಕ್ಕೆ, 'ಸಾವು' ಬಗ್ಗೆ ತೆಗೆದುಕೊಳ್ಳಿ: ಮನುಷ್ಯನಿಗೆ ಸಾಧ್ಯವಾಗುವ ಯಾವುದರಿಂದಲೂ ಅವನನ್ನು ಅಮರನನ್ನಾಗಿಸಲು ಸಾಧ್ಯವಿಲ್ಲ, ಹೀಗಾಗಿ ನಾವು ಸಾಯಲೇಬೇಕು ಎಂಬುದರ ಬಗ್ಗೆ ಭಯಪಡುವುದರಲ್ಲಾಗಲೀ

ಗೋಳಾಡುವುದರಲ್ಲಾಗಲೀ ಕಾಲಹರಣ ಮಾಡುವುದು ನಿಷ್ಫಲವಾಗುದು. ಸಾವಿನ ಭಯವನ್ನು ತುಂಬಿಕೊಂಡಿರುವುದು ಒಂದು ಬಗೆಯ ದಾಸ್ಯ; 'ಸ್ವತಂತ್ರ ವ್ಯಕ್ತಿಯು ಸಾವಿಗಿಂತ ಕಡಿಮೆಯಾದುದರ ಬಗ್ಗೆ ಆಲೋಚಿಸುವುದಿಲ್ಲ' ಎಂದು ಸ್ಪಿನೋಜ಼ ಹೇಳುವುದು ಸಮಂಜಸವಾಗಿದೆ. ಆದರೆ ಈ ವಿಷಯದಲ್ಲಿಯೂ, ಸಾಮಾನ್ಯವಾದ ಸಾವು ಎಂಬುದನ್ನು ಕುರಿತು ಪರಿಶೀಲಿಸಬೇಕು; ನಿರ್ದಿಷ್ಟ ರೋಗವೊಂದರಿಂದ ಉಂಟಾಗುವ ಸಾವನ್ನು, ಸಾಧ್ಯವಾದರೆ, ವೈದ್ಯಕೀಯ ಮೇಲ್ವಿಚರಣೆಗೊಳಗಾಗಿಸಿ ತಪ್ಪಿಸಬೇಕು. ಈ ವಿಷಯದಲ್ಲಿಯೂ ನಾವು ಪಾರಾಗಬೇಕಾದುದು ಒಂದು ಬಗೆಯ ಆತಂಕ ಅಥವಾ ಭಯದಿಂದ; ಆವಶ್ಯಕವಾದ ಕ್ರಮಗಳನ್ನು ಪ್ರಶಾಂತವಾಗಿ ಸ್ವೀಕರಿಸಬೇಕು, ಮತ್ತು ನಮ್ಮ ಆಲೋಚನೆಗಳು, ಸಾಧ್ಯವಾದ ಮಟ್ಟಿಗೂ, ಇತರ ವಿಷಯಗಳ ಕಡೆಗೆ ಹರಿಯಬೇಕು. ಮಿಕ್ಕ ಎಲ್ಲ ವೈಯಕ್ತಿಕ ದುರದೃಷ್ಟಗಳ ಬಗ್ಗೆಯೂ ಈ ಪರಿಗಣನೆಗಳೇ ಅನ್ವಯಿಸುತ್ತವೆ.

ಹಾಗಾದರೆ ನೀವು ಪ್ರೀತಿಸುವ ಜನರ ದುರದೃಷ್ಟಗಳ ಬಗ್ಗೆ ಏನು ಹೇಳುವುದು? ನಮ್ಮ ಕಾಲದಲ್ಲಿ ಯೂರೋಪ್ ಮತ್ತು ಚೈನಾಗಳ ನಿವಾಸಿಗಳಿಗೆ ಸಂಭವಿಸಬಹುದಾದ ಘಟನೆಗಳ ಬಗ್ಗೆ ಆಲೋಚಿಸೋಣ. ನೀವು ಯೆಹೂದಿಯೆಂದೂ, ನಿಮ್ಮ ಕುಟುಂಬವೆಲ್ಲ ಹತ್ಯೆಗೀಡಾಗಿದೆಯೆಂದೂ ಭಾವಿಸೋಣ, ನೀವು ನಾಜ಼ಿಗಳ ವಿರುದ್ಧದ ಭೂಗತ ಕಾರ್ಯಕರ್ತನೆಂದೂ, ನೀವು ಸಿಕ್ಕದಿದ್ದ ಕಾರಣ ನಿಮ್ಮ ಹೆಂಡತಿಯನ್ನು ಗುಂಡಿಕ್ಕಿ ಕೊಲ್ಲಲಾಗಿದೆಯೆಂದೂ ಭಾವಿಸೋಣ. ಯಾವುದೋ ಕಾಲ್ಪನಿಕ ಅಪರಾಧಕ್ಕಾಗಿ ನಿಮ್ಮ ಗಂಡನನ್ನು ಆರ್ಕ್‌ಟಿಕ್‌ನ ಶ್ರಮಶಿಬಿರದಲ್ಲಿರಿಸಿದ್ದರಿಂದ ಆತ ಕ್ರೌರ್ಯ ಮತ್ತು ಹಸಿವಿನಿಂದಾಗಿ ಸತ್ತನೆಂದು ಎಂದುಕೊಳ್ಳೋಣ. ನಿಮ್ಮ ಮಗಳ ಮೇಲೆ ಅತ್ಯಾಚಾರವೆಸಗಿ ಆನಂತರ ಅವಳನ್ನು ಶತ್ರು ಸೈನಿಕರು ಕೊಂದರೆಂದು ಇಟ್ಟುಕೊಳ್ಳೋಣ. ಇಂತಹ ಪರಿಸ್ಥಿತಿಗಳಲ್ಲಿ ನೀವು ತಾತ್ವಿಕತೆಯು ಪ್ರಶಾಂತತೆಯನ್ನು ಹೊಂದಿರಬೇಕೇ?

ನೀವೇನಾದರೂ ಕ್ರಿಸ್ತನ ಬೋಧನೆಯನ್ನು ಅನುಸರಿಸಿದರೆ, ಆಗ ನೀವನ್ನುವುದು, 'ತಂದೆಯೇ, ತಾವೇನು ಮಾಡುತ್ತಿದ್ದೇವೆಂದು ಅರಿಯದ ಅವರನ್ನು ಕ್ಷಮಿಸಿಬಿಡು' ಎಂದು. ಇದನ್ನು ಪ್ರಾಮಾಣಿಕವಾಗಿಯೂ ಗಾಢವಾಗಿಯೂ ಹೇಳುತ್ತಿದ್ದ ಕ್ವೇಕರ್‌ಗಳ ಪರಿಚಯ ನನಗಿತ್ತು; ಅವರ ಬಗ್ಗೆ ನನಗೆ ಮೆಚ್ಚಿಕೆಯಿರಲು ಕಾರಣ, ಅವರು ಹಾಗಿರಲು ಸಾಧ್ಯವಾಗಿದ್ದುದು. ಆದರೆ ಮೆಚ್ಚಿಕೆಯನ್ನು ವ್ಯಕ್ತಪಡಿಸುವುದಕ್ಕಿಂತ ಮುಂಚೆ ಅವರು ಆ ದುರದೃಷ್ಟವನ್ನು ಅದಕ್ಕೆ ತಕ್ಕ ಅಗಾಧತೆಯಿಂದ ಅನುಭವಿಸಿದ್ದರೆಂದು ಖಚಿತವಾಗಿರಬೇಕು. ಸಂಯಮವಾದಿಗಳಲ್ಲಿ, 'ನನ್ನ ತಂದೆ ನರಳಿದರೆ ನನಗೇನು? ನಾನೀಗಲೂ ಸದ್ಗುಣಿಯಾಗಿದ್ದೇನೆ' ಎಂದು ಹೇಳುವ ಕೆಲವರ ಮನೋಭಾವವನ್ನು ಒಪ್ಪಲು ಸಾಧ್ಯವಿಲ್ಲ. 'ನಿಮ್ಮ ಶತ್ರುಗಳನ್ನೂ ಪ್ರೀತಿಸಿ' ಎಂಬ ಕ್ರೈಸ್ತ ತತ್ತ್ವವು ಒಳ್ಳೆಯದೇ,

ಆದರೆ ಸಂಯಮವಾದಿಗಳ ತತ್ವವಾದ 'ನಿಮ್ಮ ಸ್ನೇಹಿತರ ಬಗ್ಗೆ ಅನಾದರದಿಂದಿರಿ' ಎಂಬುದು ಕೆಟ್ಟುದು. ಅಲ್ಲದೆ ಕ್ರೈಸ್ತ ತತ್ವವು ಪ್ರಶಾಂತತೆಯನ್ನು ಬೋಧಿಸುವುದಿಲ್ಲ, ಅದು ಹೇಳುವುದು ಅತ್ಯಂತ ಕೆಟ್ಟ ಮನುಷ್ಯರ ಬಗೆಗಿನ ನಿಷ್ಕಲ್ಮಷ ಪ್ರೀತಿ. ನಮ್ಮಲ್ಲಿ ಬಹುಮಂದಿಗೆ ಅದರಂತೆ ಪ್ರಾಮಾಣಿಕವಾಗಿ ನಡೆಯಲು ಸಾಧ್ಯವಾಗುವುದಿಲ್ಲ ಎಂಬುದನ್ನು ಬಿಟ್ಟರೆ ಅದರ ಬಗ್ಗೆ ಹೇಳಬೇಕಾದ್ದೇನೂ ಇಲ್ಲ.

ಅಂತಹ ದುರಂತಗಳಿಗೆ ಪ್ರಾಚೀನ ಕಾಲದಲ್ಲಿದ್ದ ಮನೋಭಾವ ಪ್ರತೀಕಾರದ್ದು. ಮ್ಯಾಕ್‌ಬೆತ್ ತನ್ನ ಹೆಂಡತಿ ಮಕ್ಕಳನ್ನು ಕೊಂದಿದ್ದಾನೆಂದು ಮ್ಯಾಕ್‌ಡಫ್ ತಿಳಿದಾಗ, ಆ ದೌರ್ಜನ್ಯಕಾರನನ್ನೇ ಕೊಲ್ಲಲು ಅವನು ಪ್ರತಿಜ್ಞೆ ಮಾಡುತ್ತಾನೆ. ಪರಿಣಾಮವು ಅನಾಸಕ್ತ ಜನರಲ್ಲಿ ನೈತಿಕ ಭಯಾನಕತೆಯನ್ನುಂಟುಮಾಡುವಷ್ಟು ಘೋರವಾಗಿದ್ದಾಗ, ಇಂತಹ ಪ್ರತಿಕ್ರಿಯೆಯನ್ನು ಈಗಲೂ ಬಹುತೇಕ ಜನರು ಒಪ್ಪುತ್ತಾರೆ. ಅಥವಾ ಅದನ್ನು ಸಂಪೂರ್ಣವಾಗಿ ಖಂಡಿಸಲೂ ಸಾಧ್ಯವಿಲ್ಲ, ಯಾಕೆಂದರೆ ಅದು ಶಿಕ್ಷೆಯನ್ನು ಅನಿವಾರ್ಯವಾಗಿಸುವ ಶಕ್ತಿ ಎಂಬುದು, ಮತ್ತು ಶಿಕ್ಷೆಯು ಕೆಲವು ವೇಳೆ ಆವಶ್ಯಕ. ಅದಕ್ಕೂ ಮಿಗಿಲಾಗಿ, ಮಾನಸಿಕ ಆರೋಗ್ಯದ ದೃಷ್ಟಿಯಿಂದ, ಪ್ರತೀಕಾರ ಭಾವನೆಯು ಎಷ್ಟು ತೀವ್ರವಾಗಿರಬಹುದೆಂದರೆ, ಅದನ್ನು ಬೇರೆ ಬಗೆಯಲ್ಲಿ ತೋರಿಸದಾದಾಗ, ಜೀವನದ ಬಗೆಗಿನ ವ್ಯಕ್ತಿಯ ಮನೋಭಾವವೇ ಸಂಪೂರ್ಣವಾಗಿ ಬದಲಾಗಿ ಹೆಚ್ಚು ಕಡಿಮೆ ಹುಚ್ಚಾಗಿಸಿಬಿಡಬಹುದು. ಇದು ಸಾರ್ವತ್ರಿಕವಾಗಿ ನಿಜವಲ್ಲವಾದರೂ, ಬಹುತೇಕ ಸಂದರ್ಭಗಳಲ್ಲಿ ಇದು ನಿಜ. ಮತ್ತೊಂದೆಡೆಯಲ್ಲಿ, ಸೇಡು ಬಹು ಅಪಾಯಕಾರಿ ಪರಿಣಾಮದ್ದು. ಸಮಾಜವು ಅದನ್ನು ಒಪ್ಪಿಕೊಳ್ಳುವ ಮಟ್ಟಿಗೆ, ಅದು ವ್ಯಕ್ತಿಗೆ ಸಂಬಂಧಿಸಿದ ಪ್ರಸಂಗದಲ್ಲಿ ಅವನೇ ನ್ಯಾಯಾಧಿಪತಿಯೂ ಆಗುವಂತೆ ಮಾಡಿಬಿಡುತ್ತದೆ, ಇದನ್ನೇ ಕಾನೂನು ತಪ್ಪಿಸಲು ಪ್ರಯತ್ನಿಸುವುದು. ಅದಕ್ಕೂ ಮೇಲಾಗಿ, ಸಾಮಾನ್ಯವಾಗಿ ಅದು ಅತಿರೇಕ ಮನೋಭಾವ; ಅಪೇಕ್ಷಣೀಯವಾದದ್ದಕ್ಕಿಂತ ಹೆಚ್ಚಿನ ಶಿಕ್ಷೆಯನ್ನು ನೀಡಲು ಬಯಸುವಂತಹುದು. ನಿದರ್ಶನಕ್ಕೆ, ಚಿತ್ರಹಿಂಸೆಯನ್ನು ಚಿತ್ರಹಿಂಸೆಯ ಮೂಲಕವಾಗಿಯೇ ಶಿಕ್ಷಿಸಬಾರದು, ಆದರೆ ಸೇಡಿನ ಮನೋಭಾವದಿಂದ ಹುಚ್ಚನಾದ ವ್ಯಕ್ತಿಯು ತನ್ನ ಶತ್ರುವಿಗೆ ನೋವಿಲ್ಲದ ಸಾವು ಸಮಂಜಸವಲ್ಲವೆಂದು ಭಾವಿಸುತ್ತಾನೆ. ಅದಕ್ಕೂ ಮಿಗಿಲಾಗಿ – ಇಲ್ಲೇ ಸ್ಪಿನೋಜ಼ ಸರಿ ಎನಿಸುವುದು – ಒಂದೇ ರಾಗಭಾವದಿಂದ ಕೂಡಿದ ಬದುಕು ಸಂಕುಚಿತವಾದುದು, ಎಲ್ಲ ಬಗೆಯ ವಿವೇಕಕ್ಕೆ ಬಾಹಿರವಾದುದು. ಹೀಗಾಗಿ ಸೇಡು ನೋವಿಗೆ ತೋರಿಸುವ ಶ್ರೇಷ್ಠ ಪ್ರತಿಕ್ರಿಯೆಯಲ್ಲ.

ಕ್ರೈಸ್ತನು ಹೇಳುವುದನ್ನೇ ಸ್ಪಿನೋಜ಼ನೂ ಹೇಳುವುದು, ಕೆಲವೊಮ್ಮೆ ಮತ್ತೂ ಹೆಚ್ಚಿನದನ್ನು. ಅವನ ಪ್ರಕಾರ, ಪಾಪಗಳೆಲ್ಲ ಉಂಟಾಗುವುದು ಅಜ್ಞಾನದಿಂದ; ಅವನು 'ಅವರನ್ನು ಕ್ಷಮಿಸು, ತಾವೇನು ಮಾಡುತ್ತಿದ್ದೇವೆಂಬುದು ಅವರಿಗೆ ತಿಳಿಯದು'

ಎನ್ನುವವನು. ಪಾಪದ ಮೂಲಕಾರಣವಾದ ಸಂಕುಚಿತ ದೃಷ್ಟಿಯನ್ನು ಬಿಡು ಎಂದೇ ಅವನು ಹೇಳುವುದು, ಮತ್ತು ಅತ್ಯಂತ ದುರದೃಷ್ಟಕರ ದುರಂತದಲ್ಲಿಯೂ, 'ನಿನ್ನ ದುಃಖ ಜಗತ್ತಿನಲ್ಲಿಯೇ ಬಂಧಿತನಾಗಿರುವುದರಿಂದ. ಅದರಿಂದ ಹೊರಗೆ ಬಾ' ಎನ್ನುವುದು. ಅದನ್ನು ಅದಕ್ಕೆ ಕಾರಣವಾದುದರ ಹಿನ್ನೆಲೆಯಲ್ಲಿ ಮತ್ತು ಇಡೀ ಪ್ರಕೃತಿ ವ್ಯವಸ್ಥೆಯಲ್ಲಿನ ಒಂದು ಭಾಗವಾಗಿ ನೋಡಬೇಕೆಂದೇ ಅವನು ಹೇಳುವುದು. ದ್ವೇಷವನ್ನು ಪ್ರೇಮದಿಂದ ಗೆಲ್ಲಬಹುದೆಂಬುದು ಅವನ ನಂಬಿಕೆ ಎಂಬುದನ್ನಾಗಲೇ ನೋಡಿದ್ದೇವೆ. 'ದ್ವೇಷವು ಪರಸ್ಪರತೆಯಿಂದ ಹೆಚ್ಚಾಗುತ್ತದೆ, ಆದರೆ ಮತ್ತೊಂದೆಡೆಯಲ್ಲಿ ಅದನ್ನು ಪ್ರೇಮದಿಂದ ನಾಶಗೊಳಿಸಬಹುದು. ಪ್ರೇಮದಿಂದ ಸಂಪೂರ್ಣವಾಗಿ ಸೋಲುವ ದ್ವೇಷವು ಪ್ರೇಮದಲ್ಲಿ ಸೇರಿಹೋಗುತ್ತದೆ; ಮತ್ತು ಅದಕ್ಕೆ ಮುಂಚೆ ದ್ವೇಷ ಎದುರಾಗಿರದಿದ್ದರೆ ಇದ್ದುದಕ್ಕಿಂತ ಆನಂತರ ಅದು ಹಿರಿದಾಗುತ್ತದೆ.' ಇದನ್ನು ನಂಬಬೇಕೆನಿಸುತ್ತದೆ, ಆದರೆ ನನಗದು ಸಾಧ್ಯವಿಲ್ಲ. ದ್ವೇಷಿಸುವ ವ್ಯಕ್ತಿಯು ಪ್ರತಿಯಾಗಿ ದ್ವೇಷಿಸಲು ಸುತರಾಂ ಒಪ್ಪದ ವ್ಯಕ್ತಿಯ ಸಂಪೂರ್ಣ ಹಿಡಿತದಲ್ಲಿರುವ ಸಂದರ್ಭಗಳು ಇದಕ್ಕೆ ಹೊರತು. ಅಂಥ ಸಂದರ್ಭಗಳಲ್ಲಿ, ಶಿಕ್ಷೆಗೊಳಗಾಗದಿರುವ ಆಶ್ಚರ್ಯವು ಅಪರಾಧಿಯಲ್ಲಿ ಸುಧಾರಣೆಯಾಗಲು ಕಾರಣವಾಗಬಹುದು. ಆದರೆ ಕೆಡುಕರ ಕೈಯಲ್ಲೇ ಅಧಿಕಾರವಿರುವವರೆಗೆ, ಅವರನ್ನು ದ್ವೇಷಿಸಬೇಡ ಎಂದು ಹೇಳುವುದು ಅಷ್ಟು ಪ್ರಯೋಜನಕಾರಿಯಾಗಲಾರದು, ಯಾಕೆಂದರೆ ಅವರು ನಿಮ್ಮ ಮಾತುಗಳನ್ನು ದುರುದ್ದೇಶಕ್ಕೆ ಬಳಸಿಕೊಳ್ಳಬಹುದು. ಅಲ್ಲದೆ ಪ್ರತಿರೋಧದಿಂದಲ್ಲದೆ ನೀವು ಅವರ ಅಧಿಕಾರವನ್ನು ಕಿತ್ತುಕೊಳ್ಳಲಾರಿರಿ.

ಈ ಸಮಸ್ಯೆಯು ವಿಶ್ವದ ಆತ್ಯಂತಿಕ ಒಳಿತಿನಲ್ಲಿ ನಂಬಿಕೆಯಿಲ್ಲದ ವ್ಯಕ್ತಿಗಿಂತ ಸ್ಪಿನೋಜಃನಿಗೆ ಸುಲಭವೆನಿಸುತ್ತದೆ. ನಿಮ್ಮ ದುರದೃಷ್ಟಗಳನ್ನು ಅವುಗಳ ವಾಸ್ತವಿಕ ನೆಲೆಯಲ್ಲಿ, ಅಂದರೆ ಕಾಲದ ಆದಿಯಿಂದ ಕೊನೆಯವರೆಗಿನ ಕಾರಣಗಳ ಸರಪಳಿಯಲ್ಲಿ ಇಟ್ಟು ನೋಡಿದರೆ, ಅವುಗಳು ನಿಮ್ಮ ಮಟ್ಟಿಗಿನ ದುರದೃಷ್ಟಗಳೇ ಹೊರತು ವಿಶ್ವದ ದೃಷ್ಟಿಯಿಂದಲ್ಲ, ಅವು ಆತ್ಯಂತಿಕ ಸಾಮರಸ್ಯವನ್ನು ಎತ್ತರಿಸುವ ಪ್ರಾಸಂಗಿಕ ವಿಸಂಗತಿಗಳಷ್ಟೇ ಎಂಬುದು ಸ್ಪಿನೋಜಃನ ವಾದ. ನಾನಿದನ್ನು ಒಪ್ಪಲಾರೆ; ನಿರ್ದಿಷ್ಟ ಸಂಗತಿಗಳು ಅವುಗಳು ಇದ್ದಂತೆಯೇ ಇರುತ್ತವೆಯೇ ಹೊರತು ಇಡಿಯಲ್ಲಿ ಕರಗಿಹೋಗುವ ಮೂಲಕ ಬೇರೆಯಾಗುವುದಿಲ್ಲ. ಕ್ರೌರ್ಯದ ಪ್ರತಿ ಸಂದರ್ಭವೂ ವಿಶ್ವದ ಚಿರತಂತನೆಯ ಒಂದು ಭಾಗ; ಆನಂತರ ಸಂಭವಿಸುವ ಯಾವುದೂ ಅದನ್ನು ಕೆಟ್ಟುದನ್ನಾಗಿಯೇ ಇರಿಸುತ್ತದೆಯೇ ಹೊರತು ಒಳ್ಳೆಯದಾಗಿಯಲ್ಲ, ಅಥವಾ ತಾನು ಭಾಗವಾಗಿರುವ ಇಡಿಯ ಪರಿಪೂರ್ಣತೆಗೆ ಕಾರಣವಾಗುವುದೂ ಇಲ್ಲ.

ಇಷ್ಟಾದರೂ, ಸಾಮಾನ್ಯವಾಗಿ ಜನರಿಗೆ ಆಗುವುದಕ್ಕಿಂತ ಹೆಚ್ಚಿನ ಯಾತನೆಯನ್ನು ನೀವು ಅನುಭವಿಸಬೇಕಾದ ಪ್ರಸಂಗಗಳಲ್ಲಿ, ಇಡಿಯ ಬಗೆಗಿನ ಅಥವಾ ನಿಮ್ಮ

ದುಃಖಕ್ಕಿಂತ ದೊಡ್ಡದಾದ ವಿಷಯಗಳ ಬಗೆಗಿನ ಸ್ಪಿನೋಜ಼ನ ಆಲೋಚನೆಯು ಉಪಯುಕ್ತವಾಗುತ್ತದೆ. ತನ್ನೆಲ್ಲ ಕೆಡುಕು ಮತ್ತು ದುಃಖಗಳಿಂದ ಕೂಡಿದ ಮಾನವನ ಬದುಕು ವಿಶ್ವದ ಬದುಕಿನ ಒಂದು ನಗಣ್ಯ ಭಾಗವಾಗಿ ಆಲೋಚಿಸುವುದು ಕೆಲವೊಮ್ಮೆ ಸಾಂತ್ವನಕಾರಿಯಾಗಬಹುದು. ಅಂಥ ಚಿಂತನೆಗಳು ಮತಧರ್ಮದ ಉದಯಕ್ಕೆ ಸಾಕಾಗಲಾರವಾದರೂ, ಯಾತನಾಮಯ ಜಗತ್ತಿನಲ್ಲಿ ಅವು ವಿವೇಕ ಹೊಂದಲು ಮತ್ತು ಗಾಢ ಹತಾಶೆಗೆ ಹಚ್ಚಬಹುದಾದ ಮುಲಾಮಿನಂತೆ ಸಹಾಯ ಮಾಡುತ್ತದೆ.

೦

೧೧
ಲೀಬ್‌ನಿಝ್

ಲೀಬ್‌ನಿಝ್ (೧೬೪೬-೧೭೧೬) ಎಲ್ಲ ಕಾಲದ ಅತ್ಯಂತ ಮೇಧಾವಿಗಳಲ್ಲಿ ಒಬ್ಬನಾದರೂ ಒಬ್ಬ ಮನುಷ್ಯನಾಗಿ ಅವನೇನೂ ಅಂಥ ಪ್ರಶಂಸಾರ್ಹನಲ್ಲ. ಭವಿಷ್ಯದ ನೌಕರದಾರನಿಗೆ ಶಿಫಾರಸು ಪತ್ರಗಳಲ್ಲಿ ನಮೂದಿಸಬೇಕಾದ ಸನ್ನಡತೆಗಳನ್ನು ಇವನೂ ಹೊಂದಿದ್ದನೆಂಬುದೇನೋ ನಿಜವೇ; ಅವನು ಕಷ್ಟಜೀವಿ, ಮಿತವ್ಯಯಿ, ಸಂಯಮಿ, ಮತ್ತು ಹಣಕಾಸು ವಿಚಾರದಲ್ಲಿ ಪ್ರಾಮಾಣಿಕನಾಗಿದ್ದ. ಆದರೆ ಸ್ಪಿನೋಜ಼ನಲ್ಲಿ ಎದ್ದು ಕಾಣುವ ಉನ್ನತ ತಾತ್ವಿಕ ಸನ್ನಡತೆಗಳು ಅವನಲ್ಲಿ ಇಲ್ಲದಿದ್ದುದು ಎದ್ದು ಕಾಣುವಂತಿತ್ತು. ಅವನ ಅತ್ಯಂತ ಶ್ರೇಷ್ಠ ಚಿಂತನೆಯೂ ಜನಪ್ರಿಯತೆಯನ್ನು ತಂದುಕೊಡುವಂತಹುದಲ್ಲ, ಅವುಗಳ ದಾಖಲೆಗಳನ್ನೆಲ್ಲ ಅವನು ಮೇಜಿನಲ್ಲಿಯೇ ಅಪ್ರಕಟಿತವಾಗಿಯೇ ಉಳಿಸಿದ. ಅವನು ಪ್ರಕಟಿಸಿದ್ದೆಲ್ಲ ರಾಜರು ಮತ್ತು ರಾಣಿಯರ ಮೆಚ್ಚುಗೆಯನ್ನು ಗಳಿಸುವಂತಹುದು. ಇದರಿಂದಾದ ಪರಿಣಾಮವೆಂದರೆ ಲೀಬ್‌ನಿಝ್‌ನನ್ನು ಪ್ರತಿನಿಧಿಸುವುವೆಂದು ಹೇಳಬಹುದಾದ ಎರಡು ಪದ್ಧತಿಗಳು ನಮಗೆ ಎದುರಾಗುತ್ತವೆ, ಅವುಗಳಲ್ಲಿ ಒಂದು, ಅವನ ಪ್ರಕಾರ ಆಶಾದಾಯಕ, ಸಂಪ್ರದಾಯಬದ್ಧ, ಅದ್ಭುತ, ಮತ್ತು ಟೊಳ್ಳಾದವು; ಮತ್ತೊಂದು, ಸುಮಾರು ಇತ್ತೀಚಿನವರೆಂದು ಹೇಳಬಹುದಾದ ಸಂಪಾದಕರು ಅವನ ಹಸ್ತಪ್ರತಿಗಳಿಂದ ಹೆಕ್ಕಿ ಹೊರತೆಗೆದಿರುವ ಗಾಢ, ಸುಸಂಗತ, ವ್ಯಾಪಕವಾಗಿ ಸ್ಪಿನೋಜ಼ನದರಂತಿರುವ ಮತ್ತು ಆಶ್ಚರ್ಯಕರವಾಗಿ ತಾರ್ಕಿಕವಾದವು. ಜನಪ್ರಿಯ ಲೀಬ್‌ನಿಝ್ ಸೃಷ್ಟಿಸಿದ್ದ ಸಿದ್ಧಾಂತವೆಂದರೆ ಇದು ಎಲ್ಲ ಜಗತ್ತುಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು (ಅದಕ್ಕೆ ಎಫ್. ಎಚ್. ಬ್ರಾಡ್ಲೇ ಸೇರಿಸಿದ ವಿಕಟ ವ್ಯಾಖ್ಯಾನವೆಂದರೆ, 'ಮತ್ತು ಅದರಲ್ಲಿರುವ ಎಲ್ಲವೂ ಅನಿವಾರ್ಯ ಕೆಡುಕುಗಳೇ'); ಈ ಲೀಬ್‌ನಿಝ್‌ನನ್ನೇ ವಾಲ್ಟೇರ್ ಡಾಕ್ಟರ್ ಪ್ಯಾಂಗ್ಲಾಸ್ ಎಂದು ಅಣಕದಿಂದ ಚಿತ್ರಿಸಿದ್ದು. ಈ ಲೀಬ್‌ನಿಝ್‌ನನ್ನು ಕಡೆಗಣಿಸುವುದು ಅನೈತಿಹಾಸಿಕವಾಗುತ್ತದೆ, ಆದರೆ ಮತ್ತೊಬ್ಬನು ತುಂಬ ದೊಡ್ಡ ತಾತ್ವಿಕ ಪ್ರಾಮುಖ್ಯದಿಂದ ಕೂಡಿರುವಂತಹವನು.

ಲೀಬ್‌ನಿಝ್ ಹುಟ್ಟಿದ್ದು ಮೂವತ್ತು ವರ್ಷಗಳ ಯುದ್ಧ ಕೊನೆಗೊಳ್ಳುವುದಕ್ಕಿಂತ ಎರಡು ವರ್ಷಗಳ ಮುಂಚೆ, ಲೀಪ್‌ಝಿಗ್‌ನಲ್ಲಿ, ಅಲ್ಲಿ ಅವನ ತಂದೆ ನೀತಿ ತತ್ವಜ್ಞಾನದ ಪ್ರಾಧ್ಯಾಪಕನಾಗಿದ್ದ. ವಿಶ್ವವಿದ್ಯಾನಿಲಯದಲ್ಲಿ ಅವನು ಕಾನೂನನ್ನು ಅಧ್ಯಯನ ಮಾಡಿ, ೧೬೬೬ ರಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದ, ಅಲ್ಲಿಯೇ ಅವನಿಗೆ ಪ್ರಾಧ್ಯಾಪಕ ಹುದ್ದೆಗೆ ಆಹ್ವಾನ ಬಂತು, ಆದರೆ ಅವನು ಅದನ್ನು ತನಗೆ 'ತೀರ ಬೇರೆಯೇ ಆದ ದೃಷ್ಟಿಕೋನವಿದೆ' ಎಂದು ತಿರಸ್ಕರಿಸಿದ. ೧೬೬೭ ರಲ್ಲಿ, ಇತರ ಪಶ್ಚಿಮ ಜರ್ಮನಿಯ ರಾಜರುಗಳಂತೆಯೇ ಹದಿನಾಲ್ಕನೆಯ ಲೂಯಿಯ ಭಯದಿಂದಾಗಿ ದಮನಿತನಾಗಿದ್ದ, ಮೈಂಝ್‌ನ ಆರ್ಚ್‌ಬಿಷಪ್‌ನ ಸೇವಾವೃತ್ತಿಯನ್ನು ಸೇರಿದ. ಆರ್ಚ್‌ಬಿಷಪ್‌ನ ಒಪ್ಪಿಗೆಯಿಂದ ಲೀಬ್‌ನಿಝ್ ಜರ್ಮನಿಯ ಬದಲು ಈಜಿಪ್ಟ್ ಮೇಲೆ ದಾಳಿ ಮಾಡುವಂತೆ ಫ್ರೆಂಚ್ ದೊರೆಯ ಮನವೊಲಿಸಲು ಪ್ರಯತ್ನಿಸಿದ; ಆದರೆ ಅವನಿಗೆ ಸಿಕ್ಕಿದ್ದು – ಸಂತ ಲೂಯಿಸ್ ಕಾಲದಿಂದಲೂ ನಾಸ್ತಿಕರ ವಿರುದ್ಧದ ಧರ್ಮಯುದ್ಧವು ಚಾಲತಿಯಲ್ಲಿಲ್ಲ – ಎಂಬ ಸೌಮ್ಯರೂಪದ ಎಚ್ಚರಿಕೆ. ತನ್ನದೇ ವಿಫಲ ಪ್ರಯತ್ನದ ನಾಲ್ಕು ವರ್ಷಗಳ ಆನಂತರ ೧೮೦೩ ರಲ್ಲಿ ಹ್ಯಾನೋವರ್ ಅನ್ನು ಆಕ್ರಮಿಸಿದಾಗ ನೆಪೋಲಿಯನ್ ಕಂಡುಹಿಡಿಯುವವರೆಗೂ ಅವನ ಯೋಜನೆಯು ಸಾರ್ವಜನಿಕ ದೃಷ್ಟಿಗೆ ಬೀಳಲಿಲ್ಲ. ೧೬೭೨ ರಲ್ಲಿ ಈ ಯೋಜನೆಗೆ ಸಂಬಂಧಿಸಿದಂತೆ, ಲೀಬ್‌ನಿಝ್ ಪ್ಯಾರಿಸ್‌ಗೆ ಹೋದ, ಅಲ್ಲಿ ಮುಂದಿನ ನಾಲ್ಕು ವರ್ಷಗಳ ಬಹು ಮುಖ್ಯ ಭಾಗವನ್ನು ಕಳೆದ. ಪ್ಯಾರಿಸ್‌ನಲ್ಲಿಯ ಅವನ ಸಂಪರ್ಕಗಳು ಅವನ ಬೌದ್ಧಿಕ ಬೆಳವಣಿಗೆ ದೃಷ್ಟಿಯಿಂದ ಬಹು ಮುಖ್ಯವಾದವು; ಆ ಕಾಲದಲ್ಲಿ ಪ್ಯಾರಿಸ್ ಗಣಿತ ಮತ್ತು ತತ್ವಜ್ಞಾನಗಳಲ್ಲಿ ಜಗತ್ತಿನಲ್ಲಿಯೇ ಮುಂಚೂಣಿಯಲ್ಲಿತ್ತು. ೧೬೭೫–೭೬ ರಲ್ಲಿ ಅವನು ಅಲ್ಲಿಯೇ, ಹಿಂದೆಯೇ ನ್ಯೂಟನ್ ಅದೇ ವಿಷಯವನ್ನು ಸೃಷ್ಟಿಸಿದ್ದ – ಆದರೆ ಪ್ರಕಟವಾಗಿರದಿದ್ದ ವಿಷಯ ತಿಳಿಯದೆ – ಅನಂತಸೂಕ್ಷ್ಮ ಕಲನವಿಜ್ಞಾನ (ಇನ್‌ಫಿಟೆಸಿಮಲ್ ಕ್ಯಾಲ್‌ಕ್ಯುಲಸ್) ಅನ್ನು ಸೃಷ್ಟಿಸಿದ್ದು. ಲೀಬ್‌ನಿಝ್‌ನ ಕೃತಿಯು ೧೬೮೪ ರಲ್ಲಿ ಮೊದಲು ಪ್ರಕಟವಾಯಿತು, ನ್ಯೂಟನ್‌ನದು ೧೬೮೭ ರಲ್ಲಿ. ಯಾವುದು ಮುಖ್ಯ ಎಂಬುದರ ಬಗೆಗಿನ ಮುಂದಿನ ವಿವಾದವು ದುರದೃಷ್ಟಕರವಾದುದು, ಉಭಯಪಕ್ಷಗಳಿಗೂ ಶೋಭೆ ತರುವಂತಹುದಲ್ಲ.

ಲೀಬ್‌ನಿಝ್ ಹಣದ ವಿಚಾರದಲ್ಲಿ ಬಹು ಸಂಕುಚಿತ ಮನಸ್ಸಿನವನು. ಹ್ಯಾನೋವರ್ ಆಸ್ಥಾನದಲ್ಲಿ ಯಾವಳಾದರೂ ಯುವತಿ ಮದುವೆಯಾದರೆ, 'ಮದುವೆ ಉಡುಗೊರೆ' ಎಂದು ತಾನು ಕರೆಯುತ್ತಿದ್ದ ಉಪಯುಕ್ತ ನೀತಿವಚನಗಳನ್ನು, ಅವುಗಳ ಕೊನೆಯಲ್ಲಿ ಗಂಡನೊಬ್ಬನು ಸಿಕ್ಕಿದನೆಂದು ಸ್ನಾನವನ್ನು ಬಿಡಬಾರದೆಂಬ ಬೋಧನೆ ಇರುತ್ತಿತ್ತು. ವಧುಗಳು ಅವನಿಗೆ ಕೃತಜ್ಞರಾಗಿರುತ್ತಿದ್ದರೇ ಎಂಬ ವಿಷಯವು ಇತಿಹಾಸದಲ್ಲಿ ದಾಖಲೆಯಾಗಿಲ್ಲ.

ಲೀಬ್‌ನಿಝ್ ಜರ್ಮನಿಯಲ್ಲಿ ನವಸೂಕ್ಷ್ಮತಾರ್ಕಿಕ ಅರಿಸ್ಟಾಟೆಲಿಯನ್ ತತ್ವಜ್ಞಾನವನ್ನು ಕಲಿತಿದ್ದ, ಅದರ ಒಂದಷ್ಟು ಭಾಗವನ್ನವನು ತನ್ನ ಜೀವಮಾನ ಪೂರ್ತಿ ಉಳಿಸಿಕೊಂಡಿದ್ದ. ಆದರೆ ಪ್ಯಾರಿಸ್‌ನಲ್ಲಿ ಅವನಿಗೆ ಕಾರ್ಟೀಸಿಯನ್ ಪಂಥ ಮತ್ತು ಗ್ಯಾಸೆಂಡಿಯ ಭೌತವಾದಗಳ ಪರಿಚಯವಾಯಿತು, ಎರಡೂ ಅವನನ್ನು ಪ್ರಭಾವಿಸಿದವು. ಈ ಹೊತ್ತಿನಲ್ಲಿ ಅವನು ಹೇಳಿದ್ದೆಂದರೆ, ತಾನು 'ಕ್ಷುಲ್ಲಕ ಪಂಥ'ಗಳನ್ನು, ಅಂದರೆ ಸೂಕ್ಷ್ಮತಾರ್ಕಿಕತೆಯನ್ನು, ಕೈಬಿಟ್ಟಿರುವುದಾಗಿ ಹೇಳಿಕೊಂಡಿದ್ದ. ಪ್ಯಾರಿಸ್‌ನಲ್ಲಿ ಅವನಿಗೆ ಮ್ಯಾಲೆಬ್ರಾಂಶೆ ಮತ್ತು ಜೇನ್ಸೆನಿಸ್ಟ್ ಆಗಿದ್ದ ಆರ್ನಾಲ್ಡ್‌ರ ಪರಿಚಯವಾಯಿತು. ಅವನ ಮೇಲೆ ಪ್ರಭಾವ ಬೀರಿದ ಕೊನೆಯ ತತ್ವಜ್ಞಾನವೆಂದರೆ ಸ್ಪಿನೋಜ಼ನದು, ಅವನನ್ನು ೧೬೭೬ ರಲ್ಲಿ ಭೇಟಿಮಾಡಿದ. ಒಂದು ತಿಂಗಳ ಕಾಲ ಅವನೊಡನೆ ಆಗಾಗ ಚರ್ಚಿಸುತ್ತಿದ್ದ ಹಾಗೂ 'ಎಥಿಕ್ಸ್' ನ ಹಸ್ತಪ್ರತಿಯ ಸ್ವಲ್ಪ ಭಾಗವನ್ನು ಸಂಪಾದಿಸಿದ. ಆನಂತರ ವರ್ಷಗಳಲ್ಲಿ ಅವನು ಸ್ಪಿನೋಜ಼ನನ್ನು ಟೀಕಿಸತೊಡಗಿದ, ಅಲ್ಲದೆ ಅವನೊಡನೆ ಎಲ್ಲ ಸಂಬಂಧವನ್ನು ಕನಿಷ್ಠಗೊಳಿಸಿಕೊಂಡ; ತಾನು ಒಮ್ಮೆ ಸ್ಪಿನೋಜ಼ನನ್ನು ಭೇಟಿ ಮಾಡಿದ್ದುದಾಗಿಯೂ, ಅವನು ರಾಜಕೀಯದ ಬಗ್ಗೆ ಕೆಲವು ಒಳ್ಳೆಯ ಸಂಗತಿಗಳನ್ನು ಹೇಳಿದ್ದಾಗಿಯೂ ಹೇಳುತ್ತಿದ್ದ.

ತನ್ನ ಮುಂದಿನ ಜೀವನವಿಡೀ ಸೇವೆಯಲ್ಲಿದ್ದ ಹೌಸ್ ಆಫ್ ಹ್ಯಾನೋವರ್ ಜೊತೆಗಿನ ಅವನ ಸಂಬಂಧವು ೧೬೭೩ ರಲ್ಲಿ ಆರಂಭವಾಯಿತು. ೧೬೮೦ ರ ನಂತರ ಅವನು ವೂಲ್ಫೆನ್‌ಬ್ಯುಟೆಲ್‌ನ ಅವರ ಗ್ರಂಥಪಾಲಕನಾಗಿದ್ದ, ಬ್ರೂನ್ಸ್‌ವಿಕ್‌ನ ಅಧಿಕೃತ ಚರಿತ್ರೆಯನ್ನು ಬರೆಯಲು ಅವನನ್ನು ಅಧಿಕೃತವಾಗಿ ನೇಮಿಸಲಾಯಿತು. ಅವನು ಸತ್ತಾಗ ೧೦೦೯ ವರೆಗಿನ ಚರಿತ್ರೆಯನ್ನು ತಲುಪಿದ್ದ. ೧೮೪೩ ರವರೆಗೂ ಈ ಕೃತಿಯು ಪ್ರಕಟವಾಗಲಿಲ್ಲ. ಅವನ ಬದುಕಿನ ಸ್ವಲ್ಪ ಕಾಲ ಚರ್ಚ್‌ಗಳ ಪುನರ್ಮಿಲನದ ಬಗೆಗಿನ ಯೋಜನೆಗೆ ವಿನಿಯೋಗವಾಯಿತು, ಆದರೆ ಆ ಪ್ರಯತ್ನ ವಿಫಲಗೊಂಡಿತು. ಬ್ರೂನ್ಸ್‌ವಿಕ್ ಡ್ಯೂಕ್‌ಗಳು ಎಸ್ಟೆ ಕುಟುಂಬದೊಡನೆ ಸಂಬಂಧಿಸಿದ್ದವರು ಎಂಬುದರ ಸಾಕ್ಷ್ಯಾಧಾರಗಳ ಸಂಗ್ರಹಕ್ಕಾಗಿ ಅವನು ಇಟಲಿಗೆ ಹೋದ. ಆದರೆ ಈ ಸೇವೆಗಳ ಹೊರತಾಗಿಯೂ, ಮೊದಲನೆಯ ಜಾರ್ಜ್ ಇಂಗ್ಲಂಡ್‌ನ ದೊರೆಯಾದಾಗ ಅವನನ್ನು ಹ್ಯಾನೋವರ್‌ನಲ್ಲಿ ಉಳಿಸಲಾಯಿತು. ಅದಕ್ಕೆ ಮುಖ್ಯ ಕಾರಣವೆಂದರೆ ಅವನು ನ್ಯೂಟನ್‌ನೊಡನೆ ಜಗಳ ಕಾದಿದ್ದರಿಂದಾಗಿ ಇಂಗ್ಲಂಡ್‌ನ ಅಸಮಾಧಾನಕ್ಕೊಳಗಾದದ್ದು. ಆದರೆ, ತನ್ನ ಪತ್ರವ್ಯಹಾರಗಳನ್ನೆಲ್ಲ ವಿವರಿಸಿದ್ದರಿಂದ, ವೇಲ್ಸ್‌ನ ಮಹಾರಾಣಿಯು ನ್ಯೂಟನ್ ವಿರುದ್ಧವಾಗಿ ಅವನ ಪರ ವಹಿಸಿದಳು. ಅವಳ ಕೃಪೆಯಾದರೂ ಅವನು ಅನಾದರಗೊಂಡು ಸತ್ತ.

ಲೀಬ್‌ನಿಝ್‌ನ ಜನಪ್ರಿಯ ತತ್ವಜ್ಞಾನವನ್ನು 'ಮೋನಡಾಲಜಿ' ಮತ್ತು 'ಪ್ರಿನ್ಸಿಪಲ್ಸ್ ಆಫ್ ನೇಚರ್ ಅಂಡ್ ಆಫ್ ಗ್ರೇಸ್'ಗಳಲ್ಲಿ ಕಾಣಬಹುದು. ಇವುಗಳಲ್ಲಿ ಒಂದನ್ನು

ಅವನು ಬರೆದದ್ದು ಮಾರ್ಲ್‌ಬರೋನ ಸಹೋದ್ಯೋಗಿ ಸವಾಯ್‌ನ ರಾಜ ಯೂಜೀನ್‌ಗಾಗಿ, ಆದರೆ ಯಾವುದು ಎಂಬುದು ನಿಶ್ಚಿತವಾಗಿ ಗೊತ್ತಿಲ್ಲ. ಅವನ ಮತಧರ್ಮಶಾಸ್ತ್ರ ಆಶಾವಾದದ ನೆಲೆಯು 'ಥೆಯೋಡೈಸೀ'ಯಲ್ಲಿ ಮಂಡಿತವಾಗಿದೆ, ಈ ಕೃತಿಯನ್ನವನು ಬರೆದದ್ದು ಪ್ರಷ್ಯಾದ ರಾಣಿ ಶಾರ್ಲಟ್‌ಗಾಗಿ. ಈ ಕೃತಿಗಳಲ್ಲಿ ಪ್ರತಿಪಾದಿತವಾದ ತತ್ವಜ್ಞಾನದ ಬಗ್ಗೆ ನಾನು ಆರಂಭಿಸುತ್ತೇನೆ, ಆನಂತರ ಅವನು ಪ್ರಕಟಿಸದಿದ್ದ ಆದರೆ ಹೆಚ್ಚು ಗಟ್ಟಿಯಾದ ಅವನ ಕಾರ್ಯದ ಕಡೆ ಗಮನ ಹರಿಸುತ್ತೇನೆ.

ಡೆಕಾರ್ಟೆ ಮತ್ತು ಸ್ಪಿನೋಜ಼ರ ಹಾಗೆಯೇ ಲೀಬ್‌ನಿಜ಼್ ಕೂಡ ತನ್ನ ತಾತ್ವಿಕತೆಯನ್ನು ಮೂಲತತತ್ವದ ಕಲ್ಪನೆಯ ಮೇಲೆ ಆಧರಿಸಿದ; ಆದರೆ ಮನಸ್ಸು ಮತ್ತು ಭೌತದ್ರವ್ಯಗಳ ನಡುವಣ ಸಂಬಂಧವನ್ನು ಕುರಿತಂತೆ ಹಾಗೂ ಮೂಲತತ್ವಗಳ ಸಂಖ್ಯೆಯ ಬಗ್ಗೆ ಸಂಪೂರ್ಣವಾಗಿ ಭಿನ್ನನಾದ. ಡೆಕಾರ್ಟೆ ಮೂರು ಮೂಲತತ್ವಗಳನ್ನು ಒಪ್ಪಿದ: ದೇವರು, ಮನಸ್ಸು ಮತ್ತು ಭೌತದ್ರವ್ಯ; ಸ್ಪಿನೋಜ಼ ದೇವರನ್ನು ಮಾತ್ರ ಒಪ್ಪಿದ. ಡೆಕಾರ್ಟೆಗಾದರೆ ಅರ್ಥವ್ಯಾಪ್ತಿಯು ಭೌತದ್ರವ್ಯದ ಸಾರಸತ್ವ; ಸ್ಪಿನೋಜ಼ನಿಗೆ ಅರ್ಥವ್ಯಾಪ್ತಿ ಮತ್ತು ಚಿಂತನೆಗಳೆರಡೂ ದೇವರ ಗುಣಲಕ್ಷಣಗಳು. ಲೀಬ್‌ನಿಜ಼್ ಅರ್ಥವ್ಯಾಪ್ತಿಯು ಮೂಲತತ್ವದ ಗುಣಲಕ್ಷಣವೆಂದು ಒಪ್ಪಲಾಗದೆಂದ. ಅವನು ನೀಡಿದ ಕಾರಣವೆಂದರೆ ಅರ್ಥವ್ಯಾಪ್ತಿಯು ಬಹುತ್ವವನ್ನೊಳಗೊಳ್ಳುತ್ತದೆ ಮತ್ತು ಹೀಗಾಗಿ ಅದು ಮೂಲತತ್ವಗಳ ಒಟ್ಟಂದಕ್ಕೆ ಅನ್ವಯವಾಗುತ್ತದೆ ಎಂದ; ಪ್ರತಿ ಬಿಡಿ ಮೂಲತತ್ವವೂ ಅರ್ಥವ್ಯಾಪ್ತಿರಹಿತವಾಗುರಬೇಕು. ಅದರ ಪರಿಣಾಮವಾಗಿ, ಅಸಂಖ್ಯ ಮೂಲತತ್ವಗಳ ಬಗ್ಗೆ ನಂಬಿಕೆ ಹೊಂದಿದ್ದ, ಅವುಗಳನ್ನು 'ಏಕಗಳು' (ಮೊನಾಡ್ಸ್) ಎಂದು ಕರೆದ; ಇವುಗಳಲ್ಲಿ ಪ್ರತಿಯೊಂದಕ್ಕೂ ಭೌತ ನೆಲೆಯಲ್ಲಿ ಕೆಲವು ಗುಣಗಳಿರುತ್ತವೆ, ಆದರೆ ಅಮೂರ್ತವಾಗಿ ನೋಡಿದಾಗ ಮಾತ್ರ; ವಾಸ್ತವವಾಗಿ, ಪ್ರತಿ ಏಕವೂ ಒಂದು ಆತ್ಮ. ಮೂಲತತ್ವದ ಗುಣವಾಗಿ ಅರ್ಥವ್ಯಾಪ್ತಿಯನ್ನು ನಿರಾಕರಿಸಿದ್ದರಿಂದ ಇದು ಸಹಜವಾಯಿತು; ಉಳಿದ ಏಕೈಕ ಸಾಧ್ಯ ಮೂಲ ಗುಣವೆಂದರೆ ಚಿಂತನೆಯೆಂಬಂತೆ ಕಾಣುತ್ತದೆ. ಹೀಗೆ ಲೀಬ್‌ನಿಜ಼್ ಭೌತದ್ರವ್ಯದ ವಾಸ್ತವತೆಯನ್ನು ನಿರಾಕರಿಸಿ, ಅದರ ಬದಲು ಆತ್ಮಗಳ ಅಪರಿಮಿತ ಕುಟುಂಬವನ್ನು ನಿಲ್ಲಿಸುವಂತಾಯಿತು.

ಡೆಕಾರ್ಟೆಯ ಅನುಯಾಯಿಗಳು ಬೆಳೆಸಿದ್ದ ಮೂಲತತ್ವಗಳು ಪರಸ್ಪರ ಪ್ರತಿಕ್ರಿಯಿಸಲಾರವು ಎಂಬ ಸಿದ್ಧಾಂತವನ್ನು ಲೀಬ್‌ನಿಜ಼್ ಉಳಿಸಿಕೊಂಡ, ಇದರಿಂದ ಕುತೂಹಲಕರ ಪರಿಣಾಮಗಳಿಗೆ ಎಡೆಯಾಯಿತು. ಯಾವುದೇ ಎರಡು ಏಕಗಳು ಯಾವತ್ತೂ ಪರಸ್ಪರ ಯಾವುದೇ ಕಾರಣಾರ್ಥಕ ಸಂಬಂಧವನ್ನು ಹೊಂದಲಾರವು ಎಂದವನು ಹೇಳಿದ; ಹಾಗಿರುವುದೆಂದು ತೋರಿದರೆ ಅದು ಭ್ರಮಾತ್ಮಕವಷ್ಟೆ. ಏಕಗಳು 'ಕಿಟಕಿಯಿಲ್ಲದವು' ಎಂದ. ಇದು ಎರಡು ತೊಡಕುಗಳಿಗೆ ಕಾರಣವಾಯಿತು:

ಒಂದು, ಕಾಯಗಳು ಪರಸ್ಪರ ಪ್ರಭಾವ ಬೀರುವಂತೆ, ಅದರಲ್ಲೂ ಪರಿಣಾಮದಲ್ಲಿ, ಕಾಣುವ ಚಲನವಿಜ್ಞಾನದಲ್ಲಿ; ಮತ್ತೊಂದು, ಸಂಬಂಧಿಸಿದುದು ಪರಿಕಲ್ಪನೆಗೆ, ಅದು ಪರಿಕಲ್ಪಕನ ಮೇಲೆ ಪರಿಕಲ್ಪಿಸಿಕೊಂಡ ವಸ್ತುವಿನ ಪ್ರಭಾವದಂತೆ ಕಾಣುವುದು. ಸದ್ಯಕ್ಕೆ ಚಲನವಿಜ್ಞಾನದಲ್ಲಿನ ತೊಡಕನ್ನು ಕೈಬಿಟ್ಟು, ಪರಿಕಲ್ಪನೆಗೆ ಸಂಬಂಧಿಸಿದ ತೊಡಕಿನ ಬಗ್ಗೆ ನೋಡೋಣ. ಪ್ರತಿ ಏಕವೂ ವಿಶ್ವವನ್ನು ಕನ್ನಡಿಸುವಂತಹುದು, ಅದಕ್ಕೆ ಕಾರಣ ವಿಶ್ವವು ಅದನ್ನು ಪ್ರಭಾವಿಸುತ್ತದೆ ಎಂಬುದರಿಂದಲ್ಲ, ದೇವರು ಅದಕ್ಕೆ ಕೊಟ್ಟ ಸ್ವಭಾವವು ಈ ಪರಿಣಾಮವನ್ನು ತಾನಾಗಿಯೇ ಮೂಡಿಸುತ್ತದೆ ಎಂದು ಲೀಬ್‌ನಿಜ಼್ ಹೇಳಿದ. ಒಂದು ಏಕದ ಮತ್ತು ಇತರ ಏಕಗಳಲ್ಲಿನ ಬದಲಾವಣೆಗಳ ನಡುವೆ 'ಪೂರ್ವಸ್ಥಾಪಿತ ಸಾಮರಸ್ಯ'ವಿರುತ್ತದೆ, ಇದು ಪರಸ್ಪರ ಪ್ರತಿಕ್ರಿಯೆಯನ್ನು ಉಂಟುಮಾಡುತ್ತದೆ. ಎರಡೂ ಸಂಪೂರ್ಣ ನಿಖರ ಸಮಯವನ್ನು ತೋರಿಸುವುದರಿಂದ ಒಂದೇ ಕ್ಷಣದಲ್ಲಿ ಹೊಡೆಯುವ ಎರಡು ಗಡಿಯಾರಗಳ ವಿಸ್ತರಣ ಇದು ಎಂಬುದು ಸ್ಪಷ್ಟ. ಲೀಬ್‌ನಿಜ಼್‌ಗೆ ಅಸಂಖ್ಯ ಗಡಿಯಾರಗಳಿವೆ, ಎಲ್ಲವೂ ಒಂದೇ ವೇಳೆಯಲ್ಲಿ ಹೊಡೆಯುವಂತೆ ದೇವರಿಂದ ನಿಗದಿತವಾಗಿವೆ, ಅವು ಪರಸ್ಪರ ಪ್ರಭಾವ ಬೀರುವುದರಿಂದಲ್ಲ, ಅದರಲ್ಲಿನ ಪ್ರತಿಯೊಂದೂ ಸಂಪೂರ್ಣವಾಗಿ ನಿಖರ ಯಂತ್ರವಿನ್ಯಾಸ ಹೊಂದಿರುವುದರಿಂದ. 'ಪೂರ್ವಸ್ಥಾಪಿತ ಸಾಮರಸ್ಯ'ವು ವಿಚಿತ್ರವೆಂಬಂತೆ ತೋರಿದವರಿಗೆ ಲೀಬ್‌ನಿಜ಼್, ದೇವರ ಅಸ್ತಿತ್ವವನ್ನು ಸಾಬೀತುಪಡಿಸಲು ಇದಕ್ಕಿಂತ ಉತ್ತಮ ಆಧಾರ ಎಲ್ಲಿದೆ ಎಂದ.

ಏಕಗಳಲ್ಲಿ ಶ್ರೇಣೀಕರಣವಿದೆ, ಎಷ್ಟು ಸ್ಪಷ್ಟವಾಗಿಯೂ ನಿಖರವಾಗಿಯೂ ಅವು ವಿಶ್ವವನ್ನು ಕನ್ನಡಿಸುತ್ತವೆ ಎಂಬುದಕ್ಕನುಗುಣವಾಗಿ ಕೆಲವು ಮಿಕ್ಕವಕ್ಕಿಂತ ಉತ್ತಮವಾದವು. ಒಟ್ಟಾರೆ ಪರಿಕಲ್ಪನೆಯಲ್ಲಿ ಸ್ವಲ್ಪ ಮಟ್ಟಿಗಿನ ಗೊಂದಲವಿದೆ, ಆದರೆ ಈ ಗೊಂದಲದ ಪ್ರಮಾಣವು ಏಕದ ಘನತೆಯನ್ನವಲಂಬಿಸಿ ವ್ಯತ್ಯಾಸಗೊಳ್ಳುತ್ತದೆ. ಅವುಗಳಲ್ಲಿ ಪ್ರತಿಯೊಂದೂ ಒಂದು ಆತ್ಮ, ಮತ್ತು ಪ್ರತಿಯೊಂದೂ ಅಮರವಾದುದು; ಆದರೆ ಒಂದು ಪ್ರಮುಖ ಆತ್ಮವೊಂದಿದೆ, ಅದೆಂದರೆ ಮನುಷ್ಯನ ದೇಹವನ್ನು ಭಾಗವಾಗಿಸಿಕೊಂಡ 'ಆ ಆತ್ಮ' (ದ ಸೋಲ್). ಈ ಏಕವು ಪ್ರಮುಖವಾಗುವುದು ಅದಕ್ಕೆ ಇತರವಕ್ಕಿಂತ ಹೆಚ್ಚು ಸ್ಪಷ್ಟವಾದ ಪರಿಕಲ್ಪನೆಯಿದೆ ಎಂಬರ್ಥದಲ್ಲಿ ಮಾತ್ರವಲ್ಲದೆ, ಮತ್ತೊಂದು ಅರ್ಥದಲ್ಲಿಯೂ. ಒಂದು ಮಾನವ ದೇಹದಲ್ಲಿನ ಬದಲಾವಣೆಗಳು (ಸಾಮಾನ್ಯ ಸಂದರ್ಭಗಳಲ್ಲಿ) ಈ ಪ್ರಮುಖ ಏಕದ ಕಾರಣದಿಂದಲೇ ಆಗುವಂತಹುವು: ನನ್ನ ತೋಳು ಚಲಿಸಿದಾಗ, ಈ ಚಲನೆಯ ಉದ್ದೇಶವು ಪ್ರಮುಖ ಏಕದಲ್ಲಿರುತ್ತದೆ, ಅಂದರೆ ನನ್ನ ಮನಸ್ಸಿನಲ್ಲಿಯೇ ಹೊರತು ನನ್ನ ತೋಳನ್ನು ರೂಪಿಸಿರುವ ಏಕಗಳಲ್ಲಲ್ಲ. ಈ ಸತ್ಯವು ಸಾಮಾನ್ಯ ತಿಳಿವಳಿಕೆಗೆ ಕಾಣುವಂತಹುದು, ನನ್ನ ಇಚ್ಛಾಶಕ್ತಿಯು ನನ್ನ ತೋಳನ್ನು ನಿಯಂತ್ರಿಸುತ್ತದೆಂದು.

ಇಂದ್ರಿಯಗಳಿಗೆ ಕಾಣುವಂತಹ ಮತ್ತು ಭೌತವಿಜ್ಞಾನದಲ್ಲಿ ಊಹಿಸುವ ಅವಕಾಶವು ವಾಸ್ತವವಲ್ಲ, ಆದರೆ ಅದಕ್ಕೆ ವಾಸ್ತವವಾದ ಪ್ರತಿರೂಪ (ಕೌಂಟರ್‌ಪಾರ್ಟ್) ವಿರುತ್ತದೆ, ಅದೆಂದರೆ ಜಗತ್ತನ್ನು ಕನ್ನಡಿಸುವ ದೃಷ್ಟಿಕೋನಕ್ಕನುಗುಣವಾಗಿ ಮೂರು ಆಯಾಮಗಳಲ್ಲಿ ಜೋಡಿಸಿರುವ ಏಕಗಳ ಕ್ರಮ. ಪ್ರತಿ ಏಕವೂ ಜಗತ್ತನ್ನು ನೋಡುವುದು ತನಗೆ ವಿಶಿಷ್ಟವಾದ ಒಂದು ನಿರ್ದಿಷ್ಟ ಪರಿಪ್ರೇಕ್ಷ್ಯದಲ್ಲಿ. ಈ ಅರ್ಥದಲ್ಲಿ ಸ್ಥೂಲವಾಗಿ ಹೇಳಬಹುದಾದರೆ, ಏಕಕ್ಕೆ ಒಂದು ದೈಶಿಕ (ಅವಕಾಶದ) ಸ್ಥಾನವಿರುತ್ತದೆ.

ಈ ಬಗೆಯಲ್ಲಿ ಮಾತನಾಡಲು ಅವಕಾಶ ಪಡೆದು ನಾವು ಶೂನ್ಯಪ್ರದೇಶ ಎಂಬುದೇ ಇಲ್ಲ, ಒಂದು ವಾಸ್ತವ ಏಕವು, ಒಂದೇ ಏಕವು ಪ್ರತಿ ಸಾಧ್ಯ ದೃಷ್ಟಿಕೋನದಲ್ಲಿಯೂ ತುಂಬಿಕೊಂಡಿರುತ್ತದೆ ಎಂದು ಹೇಳಬಹುದು. ಯಾವ ಎರಡು ಏಕಗಳೂ ಒಂದೇ ನಿರ್ದಿಷ್ಟ ಬಗೆಯವಲ್ಲ; ಇದು ಲೀಬ್‌ನಿಜ಼್‌ನ 'ಅವಿವೇಚನೀಯ ಅನನ್ಯತೆ' (ಐಡೆಂಟಿಟಿ ಆಫ್ ಇನ್‌ಡಿಸರ್ನಿಬಲ್ಸ್).

ಸ್ಪಿನೋಜ಼ನಿಗೆ ವ್ಯತಿರಿಕ್ತವಾಗಿ ಲೀಬ್‌ನಿಜ಼್ ತನ್ನ ವ್ಯವಸ್ಥೆಯಲ್ಲಿ ಸ್ವತಂತ್ರಇಚ್ಛಾಶಕಿಗೆ ಬೇಕಾದಷ್ಟು ಅವಕಾಶ ನೀಡುತ್ತಾನೆ. ಅವನಲ್ಲಿ 'ಸಾಕಾಗುವ ಕಾರಣ ತತ್ವ' (ಪ್ರಿನ್ಸಿಪಲ್ ಆಫ್ ಸಫಿಷಿಯಂಟ್ ರೀಸನ್) ಎಂಬುದೊಂದಿತ್ತು, ಅದರ ಪ್ರಕಾರ, ಯಾವುದೂ ಕಾರಣವಿಲ್ಲದೆ ಸಂಭವಿಸುವುದಿಲ್ಲ; ಆದರೆ ನಾವು ಸ್ವತಂತ್ರ ಕಾರಕಗಳ (ಏಜೆಂಟ್ಸ್) ಬಗ್ಗೆ ಯೋಚಿಸಿದರೆ, ಅವುಗಳ ಕ್ರಿಯೆಗಳ ಕಾರಣಗಳು 'ಆವಶ್ಯಕವಾಗಿಸದಂತೆ ವಾಲಿರುತ್ತವೆ'. ಮನುಷ್ಯ ಮಾಡುವುದಕ್ಕೆ ಸದಾ ಒಂದು ಕಾರಣವಿರುತ್ತದೆ, ಆದರೆ ಅವನ ಕ್ರಿಯೆಗೆ ಸಾಕಾಗುವ ಕಾರಣಕ್ಕೆ ತಾರ್ಕಿಕ ಆವಶ್ಯಕತೆಯಿರುವುದಿಲ್ಲ. ಹೀಗಾಗಿ, ಕನಿಷ್ಠ ಪಕ್ಷ, ಲೀಬ್‌ನಿಜ಼್ ಜನಪ್ರಿಯ ದೃಷ್ಟಿಯಿಂದ ಬರೆಯುವಾಗ ಹೇಳುತ್ತಾನೆ. ಆದರೆ ಮುಂದೆ ನಾವು ನೋಡುವ ಹಾಗೆ, ಆರ್ನಾಲ್ಡ್ ಆಘಾತಕಾರಿಯೆಂದು ಭಾವಿಸಿದ್ದರಿಂದಾಗಿ ತನ್ನಲ್ಲಿಯೇ ಮುಚ್ಚಿಟ್ಟುಕೊಂಡಿದ್ದ ಬೇರೊಂದು ಸಿದ್ಧಾಂತವೂ ಅವನಲ್ಲಿತ್ತು.

ದೇವರ ಕ್ರಿಯೆಗಳು ಇಂತಹುದೇ ಬಗೆಯ ಸ್ವಾತಂತ್ರ್ಯವನ್ನು ಹೊಂದಿರುತ್ತವೆ. ಅವನು ಸದಾ ಅತ್ಯುತ್ತಮವಾದುದಕ್ಕಾಗಿಯೇ ಕ್ರಿಯಾಶೀಲನಾಗುತ್ತಾನೆ, ಆದರೆ ಹಾಗೆ ಮಾಡಲು ಅವನಿಗೆ ಯಾವುದೇ ತಾರ್ಕಿಕ ಒತ್ತಡವೂ ಇರುವುದಿಲ್ಲ. ದೇವರು ತಾರ್ಕಿಕ ನಿಯಮಗಳ ವಿರೋಧವಾಗಿ ನಡೆಯಲಾರ, ಆದರೆ ತಾರ್ಕಿಕವಾಗಿ ಸಾಧ್ಯವಾದವುಗಳನ್ನು ಆಜ್ಞಾಪಿಸಬಲ್ಲ, ಇದರಿಂದ ಅವನಿಗೆ ಆಯ್ಕೆಯ ವಿಶಾಲ ವ್ಯಾಪ್ತಿಯು ಪ್ರಾಪ್ತವಾಗುತ್ತದೆ ಎಂಬುದರಲ್ಲಿ ಲೀಬ್‌ನಿಜ಼್ ಸಂತ ಆಕ್ವಿನಾಸ್‌ನೊಡನೆ ಸಹಮತ ಹೊಂದಿದ್ದಾನೆ.

ದೇವರ ಅಸ್ತಿತ್ವದ ಬಗೆಗಿನ ತತ್ವಜಿಜ್ಞಾಸಾತ್ಮಕ ಸಾಕ್ಷ್ಯಗಳನ್ನು ಅಂತಿಮ ರೂಪದಲ್ಲಿ ಮಂಡಿಸುತ್ತಾನೆ. ಇವುಗಳಿಗೆ ದೀರ್ಘ ಇತಿಹಾಸವಿತ್ತು, ಅವು ಅರಿಸ್ಟಾಟಲ್‌ನಿಂದ,

ಅಥವಾ ಪ್ಲೇಟೋನಿಂದಲೇ, ಆರಂಭಗೊಳ್ಳುತ್ತವೆ; ಅವುಗಳನ್ನು ಸೂಕ್ಷ್ಮತಾರ್ಕಿಕರು ವಿಧ್ಯುಕ್ತಗೊಳಿಸುತ್ತಾರೆ, ಮತ್ತು ಅವುಗಳಲ್ಲಿ ಒಂದಾದ ಮೂಲತತ್ವವಾದವನ್ನು ಸಂತ ಆನ್‌ಸೆಲ್ಮ್ ಸೃಷ್ಟಿಸಿದ. ಈ ವಾದವನ್ನು ಸಂತ ಆಕ್ವಿನಾಸ್ ತಿರಸ್ಕರಿಸಿದರೂ ಡೆಕಾರ್ಟೆ ಅದನ್ನು ಪುನರುಜ್ಜೀವನಗೊಳಿಸಿದ. ತರ್ಕಸಾಮರ್ಥ್ಯವು ಅತ್ಯುಚ್ಚವಾಗಿದ್ದ ಲೀಬ್‌ನಿಝ್ ಅದನ್ನು ಹಿಂದೆ ಮಂಡಿತವಾದುದಕ್ಕಿಂತಲೂ ಉತ್ತಮ ರೂಪದಲ್ಲಿ ಮಂಡಿಸಿದ. ಅವನಿಗೆ ಸಂಬಂಧಿಸಿದಂತೆ ನಾನು ಅವುಗಳನ್ನು ಪರಿಶೀಲಿಸುವುದಕ್ಕೆ ಕಾರಣ ಇದೇ.

ಅವನ ವಾದವನ್ನು ವಿವರವಾಗಿ ಪರಿಶಿಲಿಸುವ ಮುಂಚೆ, ನಾವು ತಿಳಿಯಬೇಕಾದ್ದೆಂದರೆ ಆಧುನಿಕ ಮತಧರ್ಮಶಾಸ್ತ್ರಜ್ಞರು ಅವುಗಳನ್ನು ಅವಲಂಬಿಸುವುದಿಲ್ಲ ಎಂಬುದು. ಮಧ್ಯಕಾಲೀನ ಮತಧರ್ಮಶಾಸ್ತ್ರವು ಗ್ರೀಕ್ ಬೌದ್ಧಿಕತೆಯಿಂದ ಸಾಧಿತವಾದದ್ದು. ಹಳೆ ಒಡಂಬಡಿಕೆಯ ದೇವರು ಅಧಿಕಾರದ ದೇವರು, ಹೊಸ ಒಡಂಬಡಿಕೆಯ ದೇವರು ಪ್ರೇಮದ ದೇವರೂ ಹೌದು; ಆದರೆ ಮತಧರ್ಮಶಾಸ್ತ್ರಜ್ಞರ ದೇವರು, ಅರಿಸ್ಟಾಟಲ್‌ನಿಂದ ಹಿಡಿದು ಕಾಲ್ವಿನ್‌ವರೆಗೆ, ಬೌದ್ಧಿಕತೆಯನ್ನು ಉದ್ದೇಶಿಸುವಂತಹುದ್ದು: ಅವನ ಅಸ್ತಿತ್ವವು ವಿಶ್ವವನ್ನು ಅರ್ಥಮಾಡಿಕೊಳ್ಳಲು ಬೇರೆ ರೀತಿಯಲ್ಲಾದರೆ ತಾರ್ಕಿಕ ತೊಡಕುಗಳನ್ನು ಸೃಷ್ಟಿಸುವ ಕೆಲವು ನಿಗೂಢಗಳನ್ನು ನಿವಾರಿಸುವಂತಹುದ್ದು. ಒಂದಷ್ಟು ತರ್ಕದ ನಂತರ ಕಾಣಸಿಗುವ ಈ ದೈವವು, ಜ್ಯಾಮಿತಿಯ ಪ್ರತಿಪಾದನೆಯ ಸಾಕ್ಷ್ಯದಂತೆ, ರೂಸೋನನ್ನು ತೃಪ್ತಿಗೊಳಿಸಲಿಲ್ಲ, ಅವನು ಸುವಾರ್ತೆಗಳಿಗೆ ಹೆಚ್ಚು ಹೊಂದುವ ದೇವರ ಪರಿಕಲ್ಪನೆಯ ಕಡೆಗೆ ಮರಳಿದ. ಮುಖ್ಯವಾಗಿ, ಆಧುನಿಕ ಮತಧರ್ಮಶಾಸ್ತ್ರಜ್ಞರು, ಅದರಲ್ಲೂ ಪ್ರಾಟೆಸ್ಟೆಂಟರಂಥವರು, ಈ ವಿಷಯದಲ್ಲಿ ರೂಸೋನನ್ನು ಅನುಸರಿಸಿದ್ದಾರೆ. ತತ್ವಜ್ಞಾನಿಗಳು ಹೆಚ್ಚು ಸಂಪ್ರದಾಯಪ್ರಿಯರು; ಹೆಗೆಲ್, ಲೋಟ್ಸೆ ಮತ್ತು ಬ್ರಾಡ್ಲೇ ಅವರುಗಳಲ್ಲಿ, ಅಂಥ ವಾದಗಳನ್ನು ಸಂಪೂರ್ಣವಾಗಿ ಇಲ್ಲವಾಗಿಸಿಬಿಟ್ಟಿದ್ದೇನೆ ಎಂದು ಕ್ಯಾಂಟ್ ಘೋಷಿಸಿಕೊಂಡರೂ, ತತ್ವಜಿಜ್ಞಾಸಾತ್ಮಕ ವಾದಗಳು ಉಳಿದುಕೊಂಡಿವೆ.

ದೇವರ ಅಸ್ತಿತ್ವವನ್ನು ಕುರಿತ ಲೀಬ್‌ನಿಝ್‌ನ ವಾದಗಳು ನಾಲ್ಕು: ಅವುಗಳೆಂದರೆ, (೧) ಮೂಲತತ್ವಾತ್ಮಕ (ಆಂಟೋಲಾಜಿಕಲ್) ವಾದ, (೨) ವಿಶ್ವವಿಜ್ಞಾನಾತ್ಮಕ (ಕಾಸ್ಮೊಲಾಜಿಕಲ್) ವಾದ, (೩) ಚಿರಂತನ ಸತ್ಯಗಳ ಕುರಿತ ವಾದ, ಮತ್ತು (೪) ಪೂರ್ವನಿಶ್ಚಿತ ಸಾಮರಸ್ಯ ಕುರಿತ ವಾದ, ಅದನ್ನು ವಿನ್ಯಾಸದಿಂದಾಗುವ, ಕ್ಯಾಂಟ್ ಪ್ರಾಕೃತಿಕ–ಮತಧಾರ್ಮಿಕ (ಫಿಸಿಕೋ–ಥಿಯೊಲಾಜಿಕಲ್) ವಾದವೆಂದು ಕರೆಯುವ, ವಾದದೊಂದಿಗೆ ಸಮೀಕರಿಸಬಹುದಾದುದು. ಈ ವಾದಗಳನ್ನು ನಾವು ಒಂದೊಂದಾಗಿ ಪರಿಶೀಲಿಸೋಣ.

ಮೂಲತತ್ವಾತ್ಮಕ ವಾದವು ಅಸ್ತಿತ್ವ ಮತ್ತು ಸಾರಸತ್ವಗಳ ನಡುವಣ ಭಿನ್ನತೆಯನ್ನು

ಆಧರಿಸುತ್ತದೆ. ಯಾವನೇ ಸಾಮಾನ್ಯ ವ್ಯಕ್ತಿ ಅಥವಾ ವಸ್ತುವು ಒಂದು ಕಡೆ ಅಸ್ತಿತ್ವದಲ್ಲಿದ್ದರೆ, ಮತ್ತೊಂದೆಡೆ ಅದರ 'ಸಾರಸತ್ವ'ವನ್ನು ರೂಪಿಸುವ ಕೆಲವು ಲಕ್ಷಣಗಳನ್ನು ಹೊಂದಿರುತ್ತದೆ ಎನ್ನಬಹುದು. ಅಸ್ತಿತ್ವದಲ್ಲಿಲ್ಲದಿದ್ದರೂ ಹ್ಯಾಮ್ಲೆಟ್, ಒಂದು ನಿರ್ದಿಷ್ಟ ಸಾರಸತ್ವವನ್ನು ಹೊಂದಿದ್ದಾನೆ; ಅವನು ವಿಷಾದಭರಿತ, ನಿರ್ಧಾರರಹಿತ, ಚತುರ ಮಾತುಗಾರ ಮುಂತಾದವು. ನಾವು ಒಬ್ಬ ವ್ಯಕ್ತಿಯನ್ನು ವರ್ಣಿಸಿದರೆ, ಎಷ್ಟು ಸಂಕ್ಷಿಪ್ತವಾಗಿಯಾದರೂ ಸರಿ, ಅವನು ಅಸ್ತಿತ್ವದಲ್ಲಿರುವವನೋ ಕಲ್ಪನಾತ್ಮಕ ವ್ಯಕ್ತಿಯೋ ಎಂಬ ಪ್ರಶ್ನೆ ಏಳುತ್ತದೆ. ಇದನ್ನು ಸೂಕ್ಷ್ಮತರ್ಕಾತ್ಮಕ ಪರಿಭಾಷೆಯಲ್ಲಿ ಹೇಳುವುದಾದರೆ, ಯಾವುದೇ ಸೀಮಿತ ವಸ್ತುವಿಗೆ ಸಂಬಂಧಿಸಿದಂತೆ, ಅದರ ಸಾರಸತ್ವವು ಅದರ ಅಸ್ತಿತ್ವವನ್ನು ಸೂಚಿಸಲಾರದು. ಆದರೆ ಅತ್ಯಂತ ಪರಿಪೂರ್ಣ ಎಂದು ವರ್ಣಿಸುವ ದೇವರ ಅಸ್ತಿತ್ವಕ್ಕೆ ಸಂಬಂಧಿಸಿದಂತೆ, ಸಂತ ಆಗಸ್ಟೈನ್, ನಂತರ ಡೆಕಾರ್ಟೆ, ಹೇಳುವುದೆಂದರೆ ಸಾರಸತ್ವವು ಅಸ್ತಿತ್ವವನ್ನು ಸೂಚಿಸಲಾರದು ಎಂದು, ಅದಕ್ಕೆ ಕಾರಣ ಮಿಕ್ಕೆಲ್ಲ ಪರಿಪೂರ್ಣತೆಗಳನ್ನು ಹೊಂದಿರುವ ಪರಮವಸ್ತುವು ಅಸ್ತಿತ್ವದಲ್ಲಿದ್ದರೆ ಇಲ್ಲದಿರುವುದಕ್ಕಿಂತ ಉತ್ತಮ; ಅದರಿಂದ ಹೊರಡುವುದೆಂದರೆ, ಅವನು ಅಸ್ತಿತ್ವದಲ್ಲಿಲ್ಲದಿದ್ದರೆ ಅವನು ಅತ್ಯಂತ ಶ್ರೇಷ್ಠ ಪರಮವಸ್ತುವಾಗಲು ಸಾಧ್ಯವಿಲ್ಲ ಎಂಬುದು.

ಲೀಬ್‌ನಿಜ್ ಈ ವಾದವನ್ನು ಸಂಪೂರ್ಣವಾಗಿ ಒಪ್ಪುವುದೂ ಇಲ್ಲ, ಸಂಪೂರ್ಣವಾಗಿ ಅಲ್ಲಗಳೆಯುವುದೂ ಇಲ್ಲ; ಅದಕ್ಕೆ ಪೂರಕವಾಗಿ, ಹಾಗೆ ವರ್ಣಿತನಾದ ದೇವರು ಸಾಧ್ಯ ಎಂಬುದನ್ನು ಆಧಾರಸಹಿತ ಸೇರಿಸಬೇಕು ಎಂದು ಅವನು ಹೇಳುತ್ತಾನೆ. ದೇವರ ಕುರಿತ ಚಿಂತನೆ ಸಾಧ್ಯ ಎಂದವನು ಒಂದು ಸಾಕ್ಷ್ಯವನ್ನು ರಚಿಸಿ ಅದನ್ನು ಹೇಗ್‌ನಲ್ಲಿ ತಾನು ಭೇಟಿಮಾಡಿದ ಸ್ಪಿನೋಜನಿಗೆ ತೋರಿಸಿದ. ಈ ಸಾಕ್ಷ್ಯವು ದೇವರನ್ನು ಅತ್ಯಂತ ಪರಿಪೂರ್ಣ ಪರಮವಸ್ತುವೆಂದು, ಅಂದರೆ ಎಲ್ಲ ಪರಿಪೂರ್ಣತೆಗಳ ವಿಷಯವೆಂದು ಸೂತ್ರೀಕರಿಸುತ್ತದೆ, ಮತ್ತು ಪರಿಪೂರ್ಣತೆಯೆಂದರೆ 'ಇತ್ಯಾತ್ಮಕವೂ ಆತ್ಯಂತಿಕವೂ ಅದ ಸರಳ ಗುಣ, ಮತ್ತು ಅದು ವ್ಯಕ್ತಪಡಿಸುವುದನ್ನು ಎಣೆಯಿಲ್ಲದಂತೆ ವರ್ಣಿಸುತ್ತದೆ.' ಮೇಲೆ ಸೂತ್ರೀಕರಿಸಲಾದ ಎರಡು ಪರಿಪೂರ್ಣತೆಗಳು ಒಂದೇ ಬಗೆಯವಾಗಿರಬೇಕಾಗಿಲ್ಲ ಎಂದು ಲೀಬ್‌ನಿಜ್ ಸುಲಭವಾಗಿ ಸಾಧಿಸುತ್ತಾನೆ. 'ಹೀಗಾಗಿ, ಅಥವಾ ಹೇಗೆಂದು ಕಲ್ಪಿಸಿಕೊಳ್ಳಬಹುದಾದಂತೆ, ಎಲ್ಲ ಪರಿಪೂರ್ಣತೆಗಳ ವಸ್ತುವೆಂದೋ ಅತ್ಯಂತ ಪರಿಪೂರ್ಣ ಪರಮವಸ್ತುವೆಂದೋ ಪರಿಕಲ್ಪಿಸಿಕೊಳ್ಳಬಹುದು. ಅದರಿಂದ, ಅವನು ಅಸ್ತಿತ್ವದಲ್ಲಿದ್ದಾನೆ ಎಂದೂ, ಯಾಕೆಂದರೆ ಅಸ್ತಿತ್ವವೆಂಬುದು ಅಸಂಖ್ಯ ಪರಿಪೂರ್ಣತೆಗಳಲ್ಲಿ ಒಂದು ಎಂದೂ ಒಡಮೂಡುತ್ತದೆ.' ಎಂದು ಅವನು ಮುಗಿಸುತ್ತಾನೆ.

'ಅಸ್ತಿತ್ವ'ವು ಒಂದು ವಿಶೇಷಣವಲ್ಲ (ಪ್ರೆಡಿಕೇಟ್) ಎಂದು ಹೇಳುವ ಮೂಲಕ ಕ್ಯಾಂಟ್ ಈ ವಾದವನ್ನು ಎದುರಿಸುತ್ತಾನೆ. ವರ್ಣನೆಗಳ ಬಗೆಗಿನ ನನ್ನ ಸೂತ್ರವಾಕ್ಯದಿಂದ ಇದನ್ನು ಅಲ್ಲಗಳೆಯುವ ಮತ್ತೊಂದು ವಾದವು ಹೊಮ್ಮುತ್ತದೆ. ಆಧುನಿಕ ಮನಸ್ಸಿಗೆ ಈ ವಾದವು ಒಪ್ಪುವಂತಹುದಲ್ಲವೆನಿಸುತ್ತದೆ. ಆದರೆ, ಭ್ರಮಾತ್ಮಕತೆಯು ಅದರಲ್ಲಿ ಎಲ್ಲಿದೆ ಎಂದು ನಿರ್ದಿಷ್ಟವಾಗಿ ಕಾಣುವುದಕ್ಕಿಂತ ಅದು ಭ್ರಮಾತ್ಮಕವಾಗಿರಬೇಕು ಎಂದು ಒಪ್ಪಿಕೊಳ್ಳುವುದು ಸುಲಭ.

ವಿಶ್ವವಿಜ್ಞಾನಾತ್ಮಕ ವಾದವು ಮೂಲತತ್ವಾತ್ಮಕ ವಾದಕ್ಕಿಂತ ಹೆಚ್ಚು ಸಮಂಜಸವೆಂದು ತೋರುತ್ತದೆ. ಅದೊಂದು ಬಗೆಯ ಪ್ರಥಮ–ಕಾರಣ ವಾದ, ಅದು ಬಂದಿರುವುದು ಅರಿಸ್ಟಾಟಲ್‌ನ ಚಲನರಹಿತ ಚಾಲಕ ವಾದದಿಂದ. ಪ್ರಥಮ–ಕಾರಣ ವಾದವು ಸರಳವಾದುದು. ಸೀಮಿತವಾದುದೆಲ್ಲಕ್ಕೂ ಕಾರಣವಿರುತ್ತದೆ, ಅದಕ್ಕೂ ಒಂದು ಕಾರಣವಿರುತ್ತದೆ ಇತ್ಯಾದಿ. ಹಿಂದಿನ ಕಾರಣಗಳ ಈ ಸರಣಿಯು ಅನಂತವಾಗಿದ್ದರೆ, ಸರಣಿಯ ಮೊದಲನೆಯ ವಸ್ತುವಿಗೆ ಕಾರಣವಿರುವುದಿಲ್ಲ, ಯಾಕೆಂದರೆ ಹಾಗಿಲ್ಲದಿದ್ದರೆ ಅದು ಮೊದಲನೆಯ ವಸ್ತುವಾಗಲಾರದು. ಹೀಗಾಗಿ ಪ್ರತಿಯೊಂದಕ್ಕೂ ಕಾರಣವಿಲ್ಲದ ಕಾರಣವೊಂದು ಇರುತ್ತದೆ, ಮತ್ತು ಇದೇ ದೇವರೆಂಬುದು ಸ್ಪಷ್ಟ.

ಈ ವಾದವು ಲೀಬ್‌ನಿಝ್‌ನಲ್ಲಿ ಸ್ವಲ್ಪ ಬೇರೆಯಾದ ರೂಪವನ್ನು ಪಡೆಯುತ್ತದೆ. ಅವನ ವಾದವೆಂದರೆ: ಜಗತ್ತಿನಲ್ಲಿರುವ ಪ್ರತಿ ನಿರ್ದಿಷ್ಟ ವಸ್ತುವೂ 'ಆನುಷಂಗಿಕ' (ಕಾಂಟಿಂಜೆಂಟ್), ಅಂದರೆ ಅದು ಅಸ್ತಿತ್ವದಲ್ಲಿಲ್ಲದಿರುವುದು ತಾರ್ಕಿಕವಾಗಿ ಸಾಧ್ಯ; ಇದು ಪ್ರತಿ ನಿರ್ದಿಷ್ಟ ವಸ್ತುವಿನ ವಿಚಾರದಲ್ಲಿಯೂ ಸತ್ಯ ಮಾತ್ರವಲ್ಲ, ಇಡೀ ವಿಶ್ವಕ್ಕೂ ಅದು ಅನ್ವಯಿಸುವಂತಹುದು. ವಿಶ್ವವು ಎಲ್ಲ ಕಾಲಕ್ಕೂ ಅಸ್ತಿತ್ವದಲ್ಲಿತ್ತೆಂದು ಒಪ್ಪಿದರೂ, ಅದು ಯಾಕೆ ಅಸ್ತಿತ್ವದಲ್ಲಿದೆ ಎಂಬುದನ್ನು ಅದರಲ್ಲಿರುವ ಯಾವುದೂ ತೋರಿಸಲಾರದು. ಆದರೆ ಲೀಬ್‌ನಿಝ್‌ನ ತಾತ್ವಿಕತೆಯ ಪ್ರಕಾರ, ಪ್ರತಿಯೊಂದಕ್ಕೂ ಒಂದು ಸೂಕ್ತ ಕಾರಣವಿರಬೇಕು, ಅದು ವಿಶ್ವದ ಹೊರಗಿರಬೇಕು. ಈ ಸೂಕ್ತ ಕಾರಣವೇ ದೇವರು.

ಈ ವಾದವು ನೇರವಾದ ಪ್ರಥಮ–ಕಾರಣ ವಾದಕ್ಕಿಂದ ಉತ್ತಮವಾದುದು, ಹೀಗಾಗಿ ಅದನ್ನು ಅಷ್ಟು ಸುಲಭವಾಗಿ ಅಲ್ಲಗಳೆಯಲು ಸಾಧ್ಯವಿಲ್ಲ. ಪ್ರಥಮ–ಕಾರಣ ವಾದವು ಆಧರಿಸಿರುವುದು ಪ್ರತಿ ಸರಣಿಗೂ ಒಂದು ಮೊದಲ ವಸ್ತುವಿರಬೇಕು ಎಂಬ ಊಹನೆಯಲ್ಲಿ, ಅದು ತಪ್ಪು; ಉದಾಹರಣೆಗೆ, ಭಿನ್ನರಾಶಿಗಳ (ಫ್ರಾಕ್ಷನ್) ಸರಣಿಯೊಂದಕ್ಕೆ ಮೊದಲ ವಸ್ತು ಇಲ್ಲ. ಆದರೆ ಲೀಬ್‌ನಿಝ್‌ನ ವಾದವು ವಿಶ್ವವು ಕಾಲದಲ್ಲಿ ಒಂದು ಆರಂಭವನ್ನು ಹೊಂದಿರಬೇಕು ಎಂಬ ದೃಷ್ಟಿಕೋನವನ್ನು ಆಧರಿಸುವುದಿಲ್ಲ. ಲೀಬ್‌ನಿಝ್‌ನ ಸೂಕ್ತ ಕಾರಣ ತತ್ವವನ್ನು ಒಪ್ಪಿಕೊಂಡರೆ ಮಾತ್ರ ಈ ವಾದವು ಸಿಂಧುವಾಗುತ್ತದೆ, ಒಪ್ಪಿಕೊಳ್ಳದಿದ್ದರೆ ಕುಸಿದು ಬೀಳುತ್ತದೆ. ಲೀಬ್‌ನಿಝ್

ಪ್ರಕಾರ ಸೂಕ್ತ ಕಾರಣ ತತ್ವ ಎಂದರೆ ಖಚಿತವಾಗಿ ಏನು ಎಂಬುದೇ ವಿವಾದಾತ್ಮಕವಾದುದು. ಕೋಟುರ್‍ಯಾಟ್‌ನ ಪ್ರಕಾರ, ಹಾಗೆಂದರೆ ಪ್ರತಿಯೊಂದು ಸತ್ಯವಾದ ಪ್ರತಿಪಾದನೆಯೂ 'ವಿಶ್ಲೇಷಣಾತ್ಮಕ' ಎಂದು, ಅಂದರೆ ಅದರ ವಿರುದ್ಧವಾದುದು ಸ್ವವಿರುದ್ಧವಾಗಿರುತ್ತದೆ. ಆದರೆ ಈ ವ್ಯಾಖ್ಯಾನವು (ಇದಕ್ಕೆ ಬೆಂಬಲವು ಲೀಬ್‌ನಿಜ್ ಪ್ರಕಟಿಸದಿದ್ದ ಅವನ ಬರಹದಲ್ಲಿದೆ), ಅದು ನಿಜವೇ ಆದರೆ, ನಿಗೂಢ ಸಿದ್ಧಾಂತಕ್ಕೆ ಸಂಬಂಧಿಸಿದ್ದು. ತನ್ನ ಪ್ರಕಟಿತ ಬರಹಗಳಲ್ಲಿ ಅವನು ಹೇಳುವುದೆಂದರೆ, ಆವಶ್ಯಕ ಮತ್ತು ಆನುಷಂಗಿಕ ಪ್ರತಿಪಾದನೆಗಳಲ್ಲಿ ವ್ಯತ್ಯಾಸವಿರುತ್ತದೆ, ಅವುಗಳಲ್ಲಿನ ಮೊದಲನೆಯದು ಮಾತ್ರ ತಾರ್ಕಿಕ ನಿಯಮಗಳಣ್ನು ಅನುಸರಿಸುತ್ತದೆ, ಮತ್ತು ಅಸ್ತಿತ್ವವನ್ನು ಪುಷ್ಟೀಕರಿಸುವ ಎಲ್ಲ ವಾದಗಳೂ ಆನುಷಂಗಿಕ, ಅದಕ್ಕಿರುವ ಏಕೈಕ ಅಪವಾದವೆಂದರೆ, ದೇವರ ಅಸ್ತಿತ್ವ. ದೇವರು ಖಂಡಿತವಾಗಿ ಅಸ್ತಿತ್ವದಲ್ಲಿದ್ದರೂ, ಅವನಿಗೆ ಜಗತ್ತನ್ನು ಸೃಷ್ಟಿಸಬೇಕೆಂಬುದು ಯಾವುದೇ ತರ್ಕದಿಂದಲೂ ಆವಶ್ಯಕವಾಗಲಿಲ್ಲ; ಇದಕ್ಕೆ ವ್ಯತಿರಿಕ್ತವಾಗಿ, ಇದೊಂದು ಸ್ವತಂತ್ರ ಆಯ್ಕೆ, ಅವನ ಒಳ್ಳೆಯತನದಿಂದ ಪ್ರೇರಿತವಾದುದೇ ಹೊರತು ಆವಶ್ಯಕತೆಯಿಂದಲ್ಲ.

ಈ ವಾದವು ಮೂಲತತ್ವಾತ್ಮಕ ವಾದವನ್ನು ಆಧರಿಸುವುದೆಂದು ಕ್ಯಾಂಟ್ ಹೇಳಿದ್ದು ಸರಿಯಾಗಿಯೇ ಇದೆ. ಜಗತ್ತಿನ ಅಸ್ತಿತ್ವಕ್ಕೆ ಒಂದು ಆವಶ್ಯಕ ವಸ್ತುವಿನ ಅಸ್ತಿತ್ವವೇ ಕಾರಣವೆಂದು ಹೇಳುವುದಾದರೆ, ಆ ಆವಶ್ಯಕ ವಸ್ತುವಿನ ಸಾರಸತ್ವದಲ್ಲಿ ಅಸ್ತಿತ್ವವು ಸೇರಿರಬೇಕು, ಯಾಕೆಂದರೆ ಆವಶ್ಯಕ ವಸ್ತು ಎಂಬುದರ ಅರ್ಥ ಅದೇ ತಾನೇ. ತನ್ನ ಸಾರಸತ್ವದಲ್ಲಿ ಅಸ್ತಿತ್ವವು ಸೇರಿರುವ ಒಂದು ವಸ್ತು ಇರಲು ಸಾಧ್ಯವಾಗುವುದಾದರೆ, ಕಾರಣವೊಂದೇ, ಅನುಭವವಿಲ್ಲದೆಯೇ, ಅಂಥ ವಸ್ತುವಿನ ವ್ಯಾಖ್ಯೆ ಸೂಚಿಸಬೇಕು; ಆಗ ಅದರ ಅಸ್ತಿತ್ವವು ಮೂಲತತ್ವಾತ್ಮಕ ವಾದಕ್ಕನುಗುಣವಾಗಿರುತ್ತದೆ; ಯಾಕೆಂದರೆ ಸಾರಸತ್ವವನ್ನು ಮಾತ್ರ ಹೊಂದಿರುವ ಪ್ರತಿಯೊಂದನ್ನೂ ಅನುಭವವಿಲ್ಲದೆಯೇ ಸ್ವತಂತ್ರವಾಗಿ ತಿಳಿಯಬಹುದು, ಇದೇ ಲೀಬ್‌ನಿಜ್‌ನ ದೃಷ್ಟಿಯಾಗಿರಬೇಕು. ಹೀಗಾಗಿ ವಿಶ್ವಾತ್ಮಕ ವಾದವು ಹೆಚ್ಚು ಸಮಂಜಸವೆಂದು ತೋರುವ ಮೂಲತತ್ವಾತ್ಮಕ ವಾದವು ದಾರಿ ತಪ್ಪಿಸುವಂತಹುದು.

ಚಿರಂತನ ಸತ್ಯಗಳಿಂದ ಕೂಡಿದ ವಾದವನ್ನು ನಿಖರವಾಗಿ ಮಂಡಿಸುವುದು ಸ್ವಲ್ಪ ಕಷ್ಟಕರವಾದುದು. ಸ್ಥೂಲವಾಗಿ ಈ ವಾದವು ಹೀಗಿದೆ: 'ಮಳೆ ಬರುತ್ತಿದೆ' ಎಂಬಂತಹ ಹೇಳಿಕೆಗಳು ಕೆಲವು ವೇಳೆ ಸತ್ಯ ಮತ್ತೆ ಕೆಲವು ವೇಳೆ ಸುಳ್ಳು, ಆದರೆ 'ಎರಡರ ಜೊತೆ ಎರಡನ್ನು ಸೇರಿದರೆ ನಾಲ್ಕು' ಎಂಬುದು ಯಾವಾಗಲೂ ಸತ್ಯ. ಸಾರಸತ್ವಕ್ಕೆ ಮಾತ್ರ ಸಂಬಂಧಿಸಿರುವ ಮತ್ತು ಅಸ್ತಿತ್ವಕ್ಕೆ ಸಂಬಂಧಿಸಿರದ ಹೇಳಿಕೆಗಳು ಎಲ್ಲ ಕಾಲಕ್ಕೂ ಸತ್ಯ ಅಥವಾ ಎಂದೂ ಸತ್ಯವಲ್ಲ. ಎಲ್ಲ ಕಾಲಕ್ಕೂ ಸತ್ಯವಾಗಿರುವಂತಹುವೇ 'ಚಿರಂತನ ಸತ್ಯಗಳು'. ಈ ವಾದದ ಸಾರಾಂಶವೆಂದರೆ

ಸತ್ಯಗಳು ಮನಸ್ಸಿನಲ್ಲಿ ತುಂಬಿರುವುದರಲ್ಲಿನ ಒಂದು ಭಾಗ, ಮತ್ತು ಒಂದು ಚಿರಂತನ ಸತ್ಯವು ಚಿರಂತನ ಮನಸ್ಸಿನಲ್ಲಿ ತುಂಬಿರುವುದರಲ್ಲಿನ ಒಂದು ಭಾಗ ಎಂಬುದು. ಇದಕ್ಕೆ ಭಿನ್ನವಲ್ಲದ ಒಂದು ವಾದವು ಪ್ಲೇಟೋನಲ್ಲಿಯೇ ಇದೆ, ಅಲ್ಲಿ ಅವನು ಅಮರತ್ವವನ್ನು ಆದರ್ಶರೂಪದ ಚಿರಂತನೆಯಿಂದ ಸಾಧಿಸುತ್ತಾನೆ. ಆದರೆ ಲೀಬ್‌ನಿಝ್‌ನಲ್ಲಿ ಇದು ಹೆಚ್ಚೇ ಬೆಳೆದಿದೆ. ಅವನ ಪ್ರಕಾರ, ಆನುಷಂಗಿಕ ಸತ್ಯಗಳ ಆತ್ಯಂತಿಕ ಕಾರಣವನ್ನು ಆವಶ್ಯಕ ಸತ್ಯಗಳಲ್ಲಿ ಕಾಣಬೇಕು. ಇಲ್ಲಿನ ವಾದವು ವಿಶ್ವಾತ್ಮಕವಾದದಲ್ಲಿಯೇ ಇದೆ: ಇಡೀ ಆನುಷಂಗಿಕ ಜಗತ್ತಿಗೆ ಒಂದು ಕಾರಣವಿರಬೇಕು, ಆದರೆ ಈ ಕಾರಣ ತಾನೇ ಆನುಷಂಗಿಕವಾಗಿರಲಾರದು, ಅದನ್ನು ಚಿರಂತನ ಸತ್ಯಗಳಲ್ಲಿ ಕಾಣಬೇಕು. ಆದರೆ ಅಸ್ತಿತ್ವದಲ್ಲಿರುವುದರ ಕಾರಣವು ಅಸ್ತಿತ್ವದಲ್ಲಿಬೇಕು; ಹೀಗಾಗಿ ಚಿರಂತನ ಸತ್ಯಗಳು, ಒಂದರ್ಥದಲ್ಲಿ, ಅಸ್ತಿತ್ವದಲ್ಲಿರಬೇಕು, ಅವು ದೇವರ ಮನಸ್ಸಿನ ಚಿಂತನೆಯಾಗಿ ಮಾತ್ರ ಇರಬಹುದು. ಈ ವಾದವು ವಾಸ್ತವವಾಗಿ ವಿಶ್ವಾತ್ಮಕ ವಾದದ ಮತ್ತೊಂದು ರೂಪ. ಆದರೆ ಅದಕ್ಕೆ ಮುಂದೆಯೂ ತೊಡಕುಗಳು ಎದುರಾಗಬಹುದು, ಅದೆಂದರೆ ಸತ್ಯವು ಅದನ್ನು ಗ್ರಹಿಸಬಲ್ಲ ಮನಸ್ಸಿನಲ್ಲಿ ಮಾತ್ರ 'ಅಸ್ತಿತ್ವ'ದಲ್ಲಿರಬಲ್ಲದು ಎಂದು ಹೇಳುವುದು ಕಷ್ಟ.

ಪೂರ್ವನಿಶ್ಚಿತ ಸಾಮರಸ್ಯದಿಂದ ಕೂಡಿದ ವಾದವು, ಲೀಬ್‌ನಿಝ್ ಮಂಡಿಸುವ ರೀತಿಯಲ್ಲಿ ಸಿಂಧುವೆನಿಸುವುದು, ಅವನ ಪರಿಕಲ್ಪನೆಯ ವಿಶ್ವವನ್ನು ಕನ್ನಡಿಸುವ ಕಿಟಕಿಯಿಲ್ಲದ ಏಕಗಳನ್ನು ಒಪ್ಪಿಕೊಳ್ಳುವವರಿಗೆ ಮಾತ್ರ. ಪರಸ್ಪರ ಕಾರಣಾತ್ಮಕ ಪ್ರತಿಕ್ರಿಯೆಯಿಲ್ಲದೆಯೇ ಎಲ್ಲ ಗಡಿಯಾರಗಳೂ ಒಂದೇ ಸಮಯವನ್ನು ತೋರಿಸುವುದಕ್ಕೆ ಅವೆಲ್ಲವನ್ನೂ ಕ್ರಮಬದ್ಧಗೊಳಿಸಿದ ಒಂದು ಬಾಹ್ಯ ಕಾರಣವಿರಬೇಕು ಎಂದು ಅದು ಹೇಳುತ್ತದೆ. ಈ ತೊಡಕು ಇಡೀ ಮೂಲದ್ರವ್ಯಶಾಸ್ತ್ರವನ್ನು (ಮೊನಡಾಲಜಿ) ವ್ಯಾಪಿಸುವಂತಹುದು: ಏಕಗಳು ಎಂದಿಗೂ ಪರಸ್ಪರ ಪ್ರತಿಕ್ರಿಯಿಸಲಾರವಾದರೆ, ಅವುಗಳಲ್ಲಿನ ಯಾವುದೊಂದಕ್ಕೆ ಮಿಕ್ಕವು ಇವೆ ಎಂದು ತಿಳಿಯುವುದಾದರೂ ಹೇಗೆ? ವಿಶ್ವವನ್ನು ಕನ್ನಡಿಸುತ್ತವೆ ಎಂಬಂತೆ ಕಾಣುವುದು ಕೇವಲ ಒಂದು ಕನಸಾಗಿರಬಹುದು. ಲೀಬ್‌ನಿಝ್ ಹೇಳುವುದು ಸರಿಯಾದರೆ, ಅದೊಂದು ಕನಸೇ ಸರಿ, ಆದರೆ ಎಲ್ಲ ಏಕಗಳೂ ಒಂದೇ ಕಾಲದಲ್ಲಿ ಒಂದೇ ಬಗೆಯ ಕನಸುಗಳನ್ನು ಕಾಣುತ್ತವೆ. ಇದು ಅದ್ಭುತವಾದುದು, ಕಾರ್ಟೀಸಿಯನ್ ಪಂಥದ ಹಿಂದಿನ ಚರಿತ್ರೆಯನ್ನು ಹೊರತುಪಡಿಸಿ, ಯಾವತ್ತೂ ನಂಬಲರ್ಹವಲ್ಲ ಎನಿಸುವುದು.

ಆದರೆ ಲೀಬ್‌ನಿಝ್‌ನ ಈ ವಾದವನ್ನು ಅವನ ವಿಚಿತ್ರ ತತ್ವಜಿಜ್ಞಾಸಾತ್ಮಕತೆಯಿಂದ ಪಾರುಮಾಡಿ, ವಿನ್ಯಾಸರೂಪಿತವೆನ್ನುವ ಒಂದು ವಾದವಾಗಿ ಮಾರ್ಪಡಿಸಬಹುದು. ಈ ವಾದವು ಹೇಳುವುದೆಂದರೆ, ಜ್ಞೇಯ ಜಗತ್ತನ್ನು ಅವಲೋಕಿಸಿದರೆ, ನಾವು

ಕಾಣುವ ವಸ್ತುಗಳು ಕುರುಡು ಪ್ರಾಕೃತಿಕ ಸತ್ವಗಳ ಉತ್ಪನ್ನಗಳೆಂದು ಹೇಳುವುದು ಸಮಂಜಸವೆನಿಸಲಾರದು, ಅವುಗಳನ್ನು ಒಂದು ಪ್ರಯೋಜನಕಾರಿ ಉದ್ದೇಶದ ನಿದರ್ಶನಗಳೆಂದು ಭಾವಿಸುವುದು ಹೆಚ್ಚು ಸಕಾರಣವಾದುದು.

ಈ ವಾದದಲ್ಲಿ ಯಾವುದೇ ತರ್ಕಸಮ್ಮತ ದೋಷವಿಲ್ಲ; ಅದರ ಸಾಧ್ಯವಾಕ್ಯವು ಅನುಭವೈಕವಾಗಿದೆ, ಮತ್ತು ಅದರ ನಿರ್ಣಯವು ಅನುಭವೈಕ ಊಹನೆಯ ಸಾಮಾನ್ಯ ನಿಯಮಗಳಿಗೆ ಅನುಗುಣವಾಗಿದೆ. ಹೀಗಾಗಿ ಅದನ್ನು ಒಪ್ಪಬೇಕೇ ಬೇಡವೇ ಎಂಬ ಪ್ರಶ್ನೆಯು ಎಂದಿನ ತತ್ವಜಿಜ್ಞಾಸಾತ್ಮಕ ಪ್ರಶ್ನೆಯಾಗಿರದೆ, ಸಾಪೇಕ್ಷವಾಗಿ ಸೂಕ್ಷ್ಮವಾದ ಪರಿಶೀಲನೆಯನ್ನು ಅವಲಂಬಿಸುತ್ತದೆ. ಈ ವಾದಕ್ಕೂ ಮಿಕ್ಕವುಗಳಿಗೂ ಒಂದು ಮುಖ್ಯವಾದ ವ್ಯತ್ಯಾಸವಿದೆ, ಅದೆಂದರೆ, ಅದು ನಿದರ್ಶಿಸುವ ದೇವರು (ಸರಿಯೇ ಆದ ಪಕ್ಷದಲ್ಲಿ) ಎಲ್ಲ ಸಾಮಾನ್ಯ ತತ್ವಜಿಜ್ಞಾಸಾತ್ಮಕ ಲಕ್ಷಣಗಳನ್ನು ಹೊಂದಿದೆಯೇ ಎಂಬುದು. ಅವನು ಸರ್ವಶಕ್ತನಾಗಲೀ ಸರ್ವವ್ಯಾಪಿಯಾಗಲೀ ಆಗಿರಬೇಕಾದುದಿಲ್ಲ; ಅವನು ನಮಗಿಂತ ಬಹುಪಾಲು ವಿವೇಕಶಾಲಿಯೂ ಹೆಚ್ಚು ಸಮರ್ಥನೂ ಆಗಿದ್ದರಷ್ಟೇ ಸಾಕು: 'ಜಗತ್ತಿನಲ್ಲಿ ಕೆಡುಕುಗಳಿರುವುದು ಅವನ ಸೀಮಿತ ಸಾಮರ್ಥ್ಯದ ಕಾರಣದಿಂದ ಆಗಿರಬಹುದು. ಕೆಲವು ಆಧುನಿಕ ಮತಧರ್ಮಶಾಸ್ತ್ರಜ್ಞರು ಈ ಸಾಧ್ಯತೆಗಳನ್ನು ಬಳಸಿಕೊಂಡು ತಮ್ಮ ಪರಿಕಲ್ಪನೆಯ ದೇವರನ್ನು ರೂಪಿಸಿಕೊಂಡಿದ್ದಾರೆ, ಆದರೆ ಅಂಥ ಕಲ್ಪನೆಗಳು ಲೀಬ್‌ನಿಜ್‌ನ ತತ್ವಜ್ಞಾನದಿಂದ ತುಂಬ ದೂರ, ಅದರ ಕಡೆಗೆ ನಾವೀಗ ತಿರುಗೋಣ.

ಆ ತತ್ವಜ್ಞಾನದ ಒಂದು ಪ್ರಮುಖ ಲಕ್ಷಣವೆಂದರೆ ಅನೇಕ ಜಗತ್ತುಗಳ ಸಾಧ್ಯತೆ. ಒಂದು ಜಗತ್ತು 'ಸಾಧ್ಯ'ವಾಗುವುದು ಅದು ತರ್ಕನಿಯಮಗಳ ವಿರುದ್ಧವಾಗಿಲ್ಲದಿರುವುದರಿಂದ. ಅಸಂಖ್ಯ ಸಾಧ್ಯ ಜಗತ್ತುಗಳಿರಬಹುದು, ಅವೆಲ್ಲ ವಾಸ್ತವ ಜಗತ್ತನ್ನು ಸೃಷ್ಟಿಸುವ ಮೊದಲಿಗೆ ದೇವರು ಆಲೋಚಿಸಿದ್ದವು. ಒಳ್ಳೆಯವನಾಗಿದ್ದದರಿಂದ ಅತ್ಯುತ್ತಮ ಜಗತ್ತನ್ನು ಸೃಷ್ಟಿಸಲು ಅವನು ನಿರ್ಧರಿಸಿದ, ಅವನ ನಿರ್ಧಾರದ ಪ್ರಕಾರ ಯಾವುದರಲ್ಲಿ ಅತ್ಯಧಿಕ ಒಳಿತು ಕೆಡುಕುಗಳಿರುತ್ತವೋ ಅದೇ ಅತ್ಯುತ್ತಮವಾದುದು. ಕೆಡಕೇ ಇಲ್ಲದಿದ್ದ ಜಗತ್ತನ್ನವನು ಸೃಷ್ಟಿಸಬಹುದಾಗಿತ್ತು, ಆದರೆ ಅದು ವಾಸ್ತವ ಜಗತ್ತಿನಷ್ಟು ಉತ್ತಮವಾದುದಾಗುತ್ತಿರಲಿಲ್ಲ. ಅದಕ್ಕೆ ಕಾರಣವೆಂದರೆ ಕೆಲವು ಮಹಾ ಒಳಿತುಗಳು ತಾರ್ಕಿಕವಾಗಿ ಕೆಲವು ಕೆಡುಕುಗಳೊಡನೆ ಸೇರಿಕೊಂಡಿರುವುದು. ಒಂದು ಸಣ್ಣ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ನೀವು ಸೆಕೆಯಿಂದ ಬಾಯಾರಿರುವಾಗ ತಣ್ಣೀರನ್ನು ಕುಡಿಯುವುದು ನಿಮಗೆ ಎಂತಹ ಸಂತೋಷವನ್ನು ತರಬಲ್ಲುದೆಂದರೆ, ನಿಮ್ಮ ಹಿಂದಿನ ಬಾಯಾರಿಕೆಯನ್ನು, ಅಸಹನೀಯವಾಗಿದ್ದರೂ, ಸಹಿಸಿಕೊಂಡುದು ಸಾರ್ಥಕವಾಯಿತು, ಇಲ್ಲದಿದ್ದರೆ ಆನಂತರದ ಸಂತೋಷವು ಅಷ್ಟೊಂದು ಇರುತ್ತಿರಲಿಲ್ಲ. ಮತಧರ್ಮಶಾಸ್ತ್ರದ

ವಿಷಯದಲ್ಲಿ, ಅಂತಹ ನಿದರ್ಶನಗಳು ಮುಖ್ಯವಲ್ಲ, ಆದರೆ ಸ್ವತಂತ್ರಇಚ್ಛಾಶಕಿಯ ಜೊತೆಗೆನ ಪಾಪ. ಸ್ವತಂತ್ರಇಚ್ಛಾಶಕಿಯು ಶ್ರೇಷ್ಠವಾದುದು, ಆದರೆ ಸ್ವತಂತ್ರಇಚ್ಛಾಶಕಿಯ ಜೊತೆಗೆ ಪಾಪವಿರಬಾರದೆಂಬ ನಿರ್ಣಯವು ದೇವರ ವಿಷಯದಲ್ಲಿ ತಾರ್ಕಿಕವಾಗಿ ಅಸಾಧ್ಯವಾಗುತ್ತಿತ್ತು. ಹೀಗಾಗಿ, ಆಡಮ್ ಸೇಬನ್ನು ತಿನ್ನುತ್ತಾನೆಂಬುದು ತನಗೆ ಮೊದಲೇ ಗೊತ್ತಿದ್ದರೂ, ಪಾಪವು ಅನಿವಾರ್ಯವಾಗಿ ಶಿಕ್ಷೆಯನ್ನು ತರುತ್ತದಾದರೂ, ದೇವರು ಮನುಷ್ಯನನ್ನು ಸ್ವತಂತ್ರನಾಗಿಸಲು ನಿರ್ಣಯಿಸಿದ. ಹೀಗೆ ಸೃಷ್ಟಿತವಾದ ಜಗತ್ತು ಕೆಡುಕನ್ನು ಹೊಂದಿದ್ದರೂ, ಮಿಕ್ಕ ಯಾವುದೇ ಸಾಧ್ಯ ಜಗತ್ತಿಗಿಂತಲೂ, ಕೆಡುಕುಗಳಿಗಿಂತ ಹೆಚ್ಚಿನ ಪ್ರಮಾಣದ ಒಳಿತುಗಳನ್ನು ಹೊಂದಿದೆ; ಹೀಗಾಗಿ ಅದು ಎಲ್ಲ ಸಾಧ್ಯ ಜಗತ್ತುಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು, ಮತ್ತು ಅದರಲ್ಲಿನ ಕೆಡುಕುಗಳು ದೇವರ ಒಳ್ಳೆಯತನಕ್ಕೆ ಯಾವುದೇ ಬಗೆಯಲ್ಲಿ ವಿರೋಧವಾದುದಲ್ಲ.

ಈ ವಾದವು ಪ್ರಷ್ಯದ ರಾಣಿಯನ್ನು ತೃಪ್ತಿಪಡಿಸಿರಬೇಕು. ಅವಳ ಗುಲಾಮರು ಕೆಡುಕುಗಳನ್ನು ಅನುಭವಿಸುತ್ತಲೇ ಹೋದರು, ಅವಳೂ ಸಂತೋಷವನ್ನು ಅನುಭವಿಸುತ್ತಲೇ ಹೋದಳು. ಇದು ನ್ಯಾಯಸಮ್ಮತವಾದುದು ಮತ್ತು ಸರಿಯಾದುದು ಎಂಬ ದೊಡ್ಡ ತತ್ವಜ್ಞಾನಿಯ ವಾದವು ತುಂಬ ಸಮಾಧಾನ ನೀಡುವಂತಹುದಾಗಿತ್ತು.

ಕೆಡುಕಿನ ಸಮಸ್ಯೆಗೆ ಲೀಬ್‌ನಿಝ್ ನೀಡಿದ ಪರಿಹಾರವು, ಅವನ ಬಹುತೇಕ ಇತರ ಜನಪ್ರಿಯ ಸಿದ್ಧಾಂತಗಳಂತೆಯೇ, ತಾರ್ಕಿಕವಾಗಿ ಸಾಧ್ಯವಾದವು, ಆದರೆ ಮನವೊಲಿಸುವಂತಹುವಲ್ಲ. ಇರುವ ಒಳಿತುಗಳು ಕೆಡುಕುಗಳನ್ನು ಔನ್ನತ್ಯಕ್ಕೇರಿಸುವ ಇದು ಸಾಧ್ಯ ಜಗತ್ತುಗಳಲ್ಲೆಲ್ಲ ಅತ್ಯಂತ ಕೆಟ್ಟುದು ಎಂದು ಒಬ್ಬ ಮ್ಯಾನಿಕಿಯನ್ ಪ್ರತಿಭಟಿಸಬಹುದು. ಈ ಜಗತ್ತನ್ನು ಸೃಷ್ಟಿಸಿದವನು ಒಬ್ಬ ಕಟುಕ ಸೃಷ್ಟಿಕರ್ತ, ಅವನು ಸ್ವತಂತ್ರಇಚ್ಚಾಶಕ್ತಿಗೆ ಅವಕಾಶವಿತ್ತ, ಕೆಟ್ಟುದಾದ ಪಾಪವನ್ನು ಖಚಿತಪಡಿಸುವುದರಿಂದ ಅದು ಒಳ್ಳೆಯದು, ಅದರಿಂದಾಗಿ ಸ್ವತಂತ್ರಇಚ್ಛಾಶಕಿಯ ಒಳ್ಳೆಯದಕ್ಕಿಂತ ಕೆಡುಕು ಬಲಿಷ್ಠವಾಯಿತು ಎಂದವನು ವಾದಿಸಬಹುದು. ಮುಂದುವರಿದು, ಈ ಕಟುಕ ಸೃಷ್ಟಿಕರ್ತನು ಕೆಡುಕು ಜನಗಳಿಂದ ಶಿಕ್ಷೆಗೊಳಗಾಗಲೆಂದು ಕೆಲವು ಸದ್ಗುಣಿಗಳನ್ನು ಸೃಷ್ಟಿಸಿದ; ಯಾಕೆಂದರೆ ಸದ್ಗುಣಿಗಳನ್ನು ಶಿಕ್ಷಿಸುವುದು ಎಷ್ಟು ಶ್ರೇಷ್ಠವಾದ ಕೆಡುಕೆಂದರೆ ಒಳ್ಳೆಯ ಜನಗಳು ಇಲ್ಲದಿದ್ದರೆ ಇರುತ್ತಿದ್ದುದಕ್ಕಿಂತ ಅದು ಕೆಟ್ಟದಾಗಿದೆ. ನಾನು ಈ ಅಭಿಪ್ರಾಯವನ್ನು ಸಮರ್ಥಿಸುತ್ತಿಲ್ಲ, ಇದು ಅದ್ಭುತವೆಂಬುದು ನನ್ನ ಭಾವನೆ; ನಾನು ಹೇಳುತ್ತಿರುವುದು ಅದು ಲೀಬ್‌ನಿಝ್ ಸಿದ್ಧಾಂತಕ್ಕಿಂತ ಹೆಚ್ಚಿನ ಅದ್ಭುತವಲ್ಲ ಎನ್ನಲು. ವಿಶ್ವವು ಒಳ್ಳೆಯದೆಂದು ಭಾವಿಸಲು ಜನರು ಬಯಸುತ್ತಾರೆ, ಅದು ಹಾಗಿದೆಯೆಂಬ ಕೆಟ್ಟ ವಾದಗಳ ಬಗ್ಗೆ ಔದಾರ್ಯದಿಂದಿರುತ್ತಾರೆ; ಅದೇ ಜಗತ್ತು ಕೆಟ್ಟದಾಗಿದೆ ಎಂದು ತೋರಿಸುವ ಒಳ್ಳೆಯ ವಾದಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಾರೆ. ವಾಸ್ತವವಾಗಿ, ಜಗತ್ತು ಭಾಗಶಃ

ಒಳ್ಳೆಯದು ಮತ್ತು ಭಾಗಶಃ ಕೆಟ್ಟುದು, ಈ ಸುಸ್ಪಷ್ಟ ವಸ್ತುಸ್ಥಿತಿಯನ್ನು ಅಲ್ಲಗಳೆಯುವರೆಗೆ 'ಕೆಡುಕಿನ ಸಮಸ್ಯೆ'ಯು ಉದ್ಭವಿಸುವುದಿಲ್ಲ.

ನಾನೀಗ ಲೀಬ್‌ನಿಜ಼್‌ನ ಗುಟ್ಟಾದ ತತ್ವಜ್ಞಾನದ ಕಡೆ ಬರುತ್ತೇನೆ. ಅದರಲ್ಲಿ, ಎಲ್ಲರಿಗೂ ತಿಳಿದಿದ್ದರೆ ಒಪ್ಪಿತವಾಗುತ್ತಿದ್ದುದು ತೀರ ಕಡಿಮೆ ಎನಿಸುವ ಬಹು ಪಾಲಿನವಕ್ಕೆ – ಯಾದೃಚ್ಛಿಕವೋ ಅದ್ಭುತವೋ ಎನ್ನಿಸುವಂತೆ ಕಾಣುವ ಜನಪ್ರಿಯ ನಿರೂಪಣೆಗಳಿಗೆ ಮತ್ತು ಸಿದ್ಧಾಂತಗಳ ವ್ಯಾಖ್ಯಾನಗಳಿಗೆ – ನಾವು ಕಾರಣಗಳನ್ನು ಕಾಣುತ್ತೇವೆ. ಅವನ ಅಪರಿಮಿತ ಬರವಣಿಗೆಗಳಲ್ಲಿನ ಆಯ್ದ ಭಾಗಗಳನ್ನು ಸಂಪಾದಿಸಿದ ಆನಂತರದ ಸಂಪಾದಕರುಗಳು ಅವನ ಪದ್ಧತಿಯ ಸ್ವೀಕೃತ ವ್ಯಾಖ್ಯಾನಗಳನ್ನು ಪುಷ್ಟೀಕರಿಸುವ ಭಾಗಗಳನ್ನು ಇಷ್ಟಪಟ್ಟು, ತನ್ನ ಬಗ್ಗೆ ಇತರರು ಆಲೋಚಿಸುವುದಕ್ಕಿಂತಲೂ ಅತ್ಯಂತ ಗಾಢ ಚಿಂತಕನೆಂಬುದಕ್ಕೆ ಪುರಾವೆಯಾದ ಉಳಿದುವನ್ನು ಮುಖ್ಯವಲ್ಲವೆಂದು ತಿರಸ್ಕರಿಸಿದುದನ್ನೇ ತತ್ವಜ್ಞಾನದ ಈಚಿನ ವಿದ್ಯಾರ್ಥಿಗಳ ಮೇಲೆ ಹೇರಿರುವುದು ಗಣನೀಯವಾಗಿದೆ. ಅವನ ಗುಟ್ಟಾದ ಸಿದ್ಧಾಂತಗಳನ್ನು ಅರ್ಥಮಾಡಿಕೊಳ್ಳಲು ನಾವು ಅನುಸರಿಸಬೇಕಾದ ಹೆಚ್ಚಿನ ಪಠ್ಯಗಳು ಲೂಯಿಸ್ ಕೂಟೂರ್ಯಾಟ್‌ನ ಎರಡು ಗ್ರಂಥಗಳು ೧೯೦೧ ರಲ್ಲಿಯೋ ೧೯೦೩ ರಲ್ಲಿಯೋ ಮೊದಲು ಪ್ರಕಟಗೊಂಡವು. ಇವುಗಳಲ್ಲೊಂದರ ಶೀರ್ಷಿಕೆಯು 'ಇಲ್ಲಿ ನಾನು ಅಪರಿಮಿತ ಪ್ರಗತಿಯನ್ನು ಸಾಧಿಸಿದ್ದೇನೆ' ಎಂಬ ಲೀಬ್‌ನಿಜ಼್‌ನ ಷರಾದಿಂದ ಕೂಡಿತ್ತು. ಇಷ್ಟಾಗಿಯೂ, ಲೀಬ್‌ನಿಜ಼್ ಸತ್ತ ಎರಡು ಶತಮಾನಗಳ ನಂತರವೂ, ಅದನ್ನು ಪ್ರಕಟಿಸಬೇಕೆಂದು ಯಾವ ಸಂಪಾದಕನಿಗೂ ಅನ್ನಿಸಲಿಲ್ಲ. ಅವನು ಆರ್ನಾಲ್ಡ್‌ಗೆ ಬರೆದ ಪತ್ರಗಳಲ್ಲಿ ಅವನ ಆಳವಾದ ಚಿಂತನೆಗಳ ಒಂದಷ್ಟು ಭಾಗ ಸೇರಿದೆಯೆಂಬುದು ನಿಜವೇ, ಅವು ಪ್ರಕಟವಾದುದು ಹತ್ತೊಂಬತ್ತನೆಯ ಶತಮಾನದಲ್ಲಿ; ಅವುಗಳ ಪ್ರಾಮುಖ್ಯವನ್ನು ಮೊದಲು ಗುರುತಿಸಿದ್ದು ನಾನೇ. ಆರ್ನಾಲ್ಡ್ ಅವುಗಳನ್ನು ಕಂಡ ರೀತಿ ನಿರಾಶಾದಾಯಕವಾಗಿತ್ತು. ಅವನು ಹೀಗೆ ಬರೆಯುತ್ತಾನೆ: 'ಇವುಗಳಲ್ಲಿನ ಅನೇಕ ಚಿಂತನೆಗಳು ನನಗೆ ಗಾಬರಿ ಹುಟ್ಟಿಸುವಂತಹುವು, ನಾನು ತಪ್ಪಾಗಿ ಅರ್ಥೈಸದಿದ್ದರೆ, ಬಹುತೇಕ ಜನರು ಅವುಗಳನ್ನು ಎಷ್ಟು ಆಘಾತಕಾರಿಯಾಗಿ ಕಾಣುತ್ತಾರೆಂದರೆ, ಜಗತ್ತೆಲ್ಲವೂ ತಿರಸ್ಕರಿಸುವ ಬರವಣಿಗೆಯಿಂದ ಏನು ಪ್ರಯೋಜನವೆಂದು ನನಗನ್ನಿಸುತ್ತದೆ.' ಈ ವಿದ್ವೇಷದ ಅಭಿಪ್ರಾಯವು ಲೀಬ್‌ನಿಜ಼್‌ನನ್ನು ಆನಂತರದಲ್ಲಿ ತನ್ನ ತಾತ್ವಿಕ ಚಿಂತನೆಗಳೆಂಬುದನ್ನು ಗುಟ್ಟಾಗಿರಿಸಿಕೊಳ್ಳುವಂತೆ ಮಾಡಿತು.

ಡೆಕಾರ್ಟೆ, ಸ್ಪಿನೋಜ಼ ಮತ್ತು ಲೀಬ್‌ನಿಜ಼್‌ರ ತತ್ವಜ್ಞಾನಗಳಲ್ಲಿ ಮೂಲಭೂತವಾಗ ಸಾರಸತ್ವದ ಪರಿಕಲ್ಪನೆಯು ಕರ್ತೃ ಮತ್ತು ವಿಶೇಷಣವೆಂಬ ತಾರ್ಕಿಕ ವರ್ಗದಿಂದ ಸಾಧಿತವಾದುದು. ಕೆಲವು ಪದಗಳು ಕರ್ತೃಗಳೂ ಆಗಿರಬಹುದು ವಿಶೇಷಣಗಳೂ ಆಗಿರಬಹುದು; ಉದಾಹರಣೆಗೆ, 'ಆಕಾಶವು ನೀಲಿಯಾಗಿದೆ' ಮತ್ತು 'ನೀಲಿ ಎಂಬುದು

ಒಂದು ಬಣ್ಣ' ಎಂದು ನಾನು ಹೇಳಬಹುದು. ಇತರ ಪದಗಳು – ಅವುಗಳಲ್ಲಿ ಅಂಕಿತನಾಮಗಳು ಅತ್ಯಂತ ಸ್ಪಷ್ಟ ನಿದರ್ಶನಗಳು – ಎಂದಿಗೂ ವಿಶೇಷಣಗಳಾಗಲಾರವು, ಕರ್ತೃಪದಗಳೋ ಅಥವಾ ಸಂಬಂಧಸೂಚಕ ಪದಗಳೋ ಆಗಿರಬೇಕು. ಅಂಥ ಪದಗಳು ಸಾರಸತ್ವವನ್ನು ಸೂಚಿಸುತ್ತವೆ ಎನ್ನುತ್ತಾರೆ. ತಾರ್ಕಿಕ ಲಕ್ಷಣವಲ್ಲದೆ, ದೇವರ ಸರ್ವಶಕ್ತಿಯು ನಾಶಗೊಳಿಸದಿದ್ದರೆ, ಸಾರಸತ್ವವು ಕಾಲದುದ್ದಕ್ಕೂ ಉಳಿದಿರುತ್ತದೆ (ಆದರೆ ಇದು ಎಂದಿಗೂ ಸಂಭವಿಸಲಾರದು ಎಂದು ಊಹಿಸಬಹುದು). ಸತ್ಯವಾದ ಪ್ರತಿ ಪ್ರತಿಪಾದನೆಯೂ, 'ಎಲ್ಲ ಮನುಷ್ಯರೂ ಮರ್ತ್ಯರು' ಎಂಬಂತೆ ಸಾಮಾನ್ಯವಾದುದು, ಅದರಲ್ಲಿ ಒಂದು ವಿಶೇಷಣವು ಮತ್ತೊಂದನ್ನು ಸೂಚಿಸುತ್ತದೆ; ಇಲ್ಲವೇ 'ಸಾಕ್ರಟೀಸ್ ಮರ್ತ್ಯ' ಎಂಬಂತೆ ನಿರ್ದಿಷ್ಟವಾಗಿರಬಹುದು, ಅದರಲ್ಲಿ ವಿಶೇಷಣವು ಕರ್ತೃವಿನಲ್ಲಿಯೇ ಸೇರಿದೆ, ಮತ್ತು ವಿಶೇಷಣವು ಸೂಚಿಸುವ ಗುಣವು ಕರ್ತೃ ಸೂಚಿಸುವ ಸಾರಸತ್ವ ಪರಿಕಲ್ಪನೆಯ ಭಾಗವಾಗಿದೆ. ಸಾಕ್ರಟೀಸ್‌ಗೆ ಏನೇ ಸಂಭವಿಸಿದರೂ 'ಸಾಕ್ರಟೀಸ್' ಕರ್ತೃಪದವಾಗಿರುವ ವಾಕ್ಯದಲ್ಲಿ ದೃಢಗೊಂಡಿರುತ್ತದೆ ಮತ್ತು ಪ್ರಸ್ತುತ ಸಂಭವಿಸುವಿಕೆಯನ್ನು ವರ್ಣಿಸುವ ಪದಗಳು ಆಖ್ಯಾತವಾಗಿರುತ್ತವೆ. ಈ ಎಲ್ಲ ವಿಶೇಷಣಗಳೂ ಒಟ್ಟಾಗಿ 'ಸಾಕ್ರಟೀಸ್'ನ ಕಲ್ಪನೆ (ನೋಷನ್) ಯನ್ನು ಹೊಂದಿರುತ್ತವೆ. ಎಲ್ಲವೂ ಅವನಿಗೇ ಖಚಿತವಾಗಿ ಸೇರಿದವು, ಈ ಅರ್ಥದಲ್ಲಿ ಅದರ ಸಾರಸತ್ವವನ್ನು ನಿಜವಾಗಿಯೂ ದೃಢಪಡಿಸಲಾಗದವು ಸಾಕ್ರಟೀಸ್ ಆಗಿರದೆ ಬೇರೊಬ್ಬನಾಗಿರುತ್ತಾನೆ.

ಲೀಬ್‌ನಿಜ಼್ ತರ್ಕದ ಪ್ರಾಮುಖ್ಯವನ್ನು ದೃಢವಾಗಿ ನಂಬಿದ್ದವನು, ತನ್ನ ವಲಯವಷ್ಟಕ್ಕೆ ಮಾತ್ರವಲ್ಲದೆ, ತತ್ವಜಿಜ್ಞಾಸೆಯ ತಳಹದಿಯಾಗಿಯೂ. ಅವನು ಗಣಿತ ತರ್ಕದ ಬಗ್ಗೆಯೂ ಕೆಲಸ ಮಾಡಿದ, ಅವು ಪ್ರಕಟಗೊಂಡಿದ್ದರೆ ಅತೀವ ಪ್ರಾಮುಖ್ಯವನ್ನು ಪಡೆಯುತ್ತಿತ್ತು; ಹಾಗಾಗಿದ್ದರೆ, ಅವನೇ ಗಣಿತ ತರ್ಕದ ಸ್ಥಾಪಕನೆನಿಸಿಕೊಳ್ಳುತ್ತಿದ್ದ, ಅಲ್ಲದೆ ಈಗಾಗಿರುವುದಕ್ಕಿಂತ ಒಂದೂವರೆ ಶತಮಾನದಷ್ಟು ಹಿಂದೆಯೇ ಅದು ತಿಳಿಯುತ್ತಿತ್ತು. ಅವನು ಪ್ರಕಟಿಸಲಿಲ್ಲ, ಅದಕ್ಕೆ ಕಾರಣ ಸಾಕ್ರಟೀಸ್‌ನ ತರ್ಕ ಸಿದ್ಧಾಂತವು ಕೆಲವಂಶಗಳಲ್ಲಿ ದೋಷಪೂರ್ಣ ಎಂದು ಸಾಧಿಸಲು ಅವನು ಪುರಾವೆಗಳಿಗಾಗಿ ಅನ್ವೇಷಿಸುತ್ತಿದ್ದುದು; ಅರಿಸ್ಟಾಟಲ್ ಬಗೆಗಿನ ಅವನ ಗೌರವವು ಅವನಿಗೆ ಇದನ್ನು ನಂಬಲು ಕಷ್ಟಕರವೆನಿಸಿತು, ಹೀಗಾಗಿ ದೋಷಗಳೆಲ್ಲ ತನ್ನವೇ ಎಂದವನು ಭಾವಿಸುವಂತಾಯಿತು. ಆದರೆ ತನ್ನ ಜೀವಮಾನಪರ್ಯಂತ ಅವನು ಒಂದು ಬಗೆಯ ಸಾಮಾನ್ಯೀಕೃತ ಗಣಿತವನ್ನು ಅನಾವರಣಗೊಳಿಸುವ ಭರವಸೆಯನ್ನು ಉಳಿಸಿಕೊಂಡು ಬಂದಿದ್ದ; ಅದನ್ನವನು 'ಕ್ಯಾರೆಕ್ಟರಿಸ್ಟಿಕ ಯೂನಿವರ್ಸಾಲಿಸ್' ಎಂದು ಕರೆದ ಮತ್ತು ಅದರ ಮೂಲಕ ಲೆಕ್ಕಾಚಾರವು ಚಿಂತನೆಯ ಸ್ಥಾನವನ್ನು ಆಕ್ರಮಿಸಬಹುದು ಎಂದು ಭಾವಿಸಿದ್ದ. 'ಅದು ಸಾಧ್ಯವಾಗಿದ್ದರೆ, ಜ್ಯಾಮಿತಿ ಮತ್ತು

ವಿಶ್ಲೇಷಣೆಗಳಲ್ಲಿನಂತೆಯೇ ತತ್ವಜಿಜ್ಞಾಸೆ ಮತ್ತು ನೀತಿಶಾಸ್ತ್ರಗಳಲ್ಲಿಯೂ ನಾವು ತರ್ಕಿಸಲು ಸಾಧ್ಯವಾಗುತ್ತಿತ್ತು' ಎಂದವನು ಹೇಳುತ್ತಾನೆ. 'ವಿವಾದಗಳು ಉಂಟಾದಾಗ, ಇಬ್ಬರು ತತ್ವಜ್ಞಾನಿಗಳ ನಡುವಣ ವಿವಾದವು ಇಬ್ಬರು ಲೆಕ್ಕಿಗರ ನಡುವಣ ವಿವಾದಕಿಂತ ದೊಡ್ಡದಾಗಲು ಆಸ್ಪದವಾಗುತ್ತಿರಲಿಲ್ಲ. ತಮ್ಮ ಕೈನಲ್ಲಿ ಪೆನ್ಸಿಲ್ ಹಿಡಿದು ಕಾಗದದ ಮುಂದೆ ಕುಳಿತು ಪರಸ್ಪರರಿಗೆ (ಅವರು ಇಷ್ಟಪಟ್ಟರೆ, ಒಬ್ಬ ಸ್ನೇಹಿತನನ್ನು ಸಾಕ್ಷಿಯಾಗಿ ಮಧ್ಯದಲ್ಲಿ ಕುಳ್ಳಿರಿಸಿಕೊಂಡು): ನಾವೀಗ ಲೆಕ್ಕ ಹಾಕೋಣ ಎನ್ನಬಹುದಾಗಿತ್ತು.'

ಲೀಬ್‌ನಿಝ್ ತನ್ನ ತಾತ್ವಿಕತೆಯನ್ನು ಎರಡು ತಾರ್ಕಿಕ ಆಧಾರವಾಕ್ಯಗಳ ಮೇಲೆ ಆಧರಿಸಿದ: ಈ ಎರಡೂ 'ವಿಶ್ಲೇಷಣಾತ್ಮಕ' ಪ್ರತಿಪಾದನೆಯ ಕಲ್ಪನೆಯನ್ನು ಆಧರಿಸಿದ್ದವು, ಅದರಲ್ಲಿ ವಿಶೇಷಣವು ಕರ್ತೃವಿನಲ್ಲಿಯೇ ಸೇರಿರುತ್ತದೆ – ನಿದರ್ಶನಕ್ಕೆ, 'ಎಲ್ಲ ಬಿಳಿಯ ಜನರೂ ಜನರೇ'. ನಿರಾಕರಣ ನಿಯಮವು ಹೇಳುವುದೇನೆಂದರೆ, ಎಲ್ಲ 'ವಿಶ್ಲೇಷಣಾತ್ಮಕ' ಪ್ರತಿಪಾದನೆಗಳೂ ಸತ್ಯವಾದವು ಎಂದು. ಅಗತ್ಯ ತರ್ಕ ನಿಯಮವು ಹೇಳುವುದು (ರಹಸ್ಯ ವಿಧಾನದಲ್ಲಿ ಮಾತ್ರ) ಎಲ್ಲ ಸತ್ಯವಾದ ಪ್ರತಿಪಾದನೆಗಳೂ 'ವಿಶ್ಲೇಷಣಾತ್ಮಕ'ವಾದವು ಎಂದು. ವಸ್ತುಸ್ಥಿತಿಗಳನ್ನು ಕುರಿತ ಅನುಭವೈಕ ಹೇಳಿಕೆಗಳೆನ್ನುವವುಗಳಿಗೂ ಇದು ಅನ್ವಯಿಸುತ್ತದೆ. ನಾನು ಪ್ರಯಾಣ ಮಾಡಿದರೆ, ನನ್ನ ಬಗೆಗಿನ ಕಲ್ಪನೆಯು ಎಲ್ಲ ಕಾಲಕ್ಕೂ ಈ ಪ್ರಯಾಣದ ಕಲ್ಪನೆಯನ್ನು ಒಳಗೊಂಡಿರುತ್ತದೆ, ಅದೇ ನನ್ನ ವಿಶೇಷಣ. 'ಒಂದು ನಿರ್ದಿಷ್ಟ ಸಾರಸತ್ವದ, ಅಥವಾ ಸಂಪೂರ್ಣ ಇರುವಿಕೆಯ, ಸ್ವಭಾವವು ಹೀಗೆ ಸಂಪೂರ್ಣಗೊಳಿಸಿದ ಕಲ್ಪನೆಯನ್ನು ಪಡೆದಿರುವಂತಹುದು ಗ್ರಹಿಕೆಗೆ ಸಾಕು, ಮತ್ತು ಇದರಿಂದ ಈ ಕಲ್ಪನೆಯು ಅನ್ವಯಿಸುವ ಎಲ್ಲ ಗುಣಲಕ್ಷಣಗಳ ಕರ್ತೃವಿನ ವಿಶೇಣಗಳನ್ನು ಅನುಮಾನಿಸಲು ಸಾಧ್ಯವಾಗಿಸುತ್ತದೆ. ಹೀಗೆ ಅಲೆಕ್ಸಾಂಡರ್ ಮಹಾಶಯನಿಗೆ ಅನ್ವಯಿಸುವ ರಾಜನ ಗುಣವು, ಕರ್ತೃವಿನಿಂದ ಅಮೂರ್ತಗೊಳಿಸಿದರೆ, ಒಬ್ಬ ವ್ಯಕ್ತಿಗೆ ಆವಶ್ಯಕವಾದ ನಿರ್ದಿಷ್ಟತೆಯನ್ನು ನೀಡಲಾರದು, ಮತ್ತು ಅದರಲ್ಲಿ ಅದೇ ಕರ್ತೃವಿನ ಇತರ ಗುಣಗಳನ್ನು ಅಥವಾ ಈ ರಾಜನ ಬಗೆಗಿನ ಕಲ್ಪನೆಯಲ್ಲಿ ಅಂತರ್ಗತವಾಗಿರುವವುಗಳನ್ನೆಲ್ಲ ಒಳಗೊಳ್ಳಲಾರದು; ಅದೇ ದೇವರು ಅಲೆಕ್ಸಾಂಡರ್‌ನ ವ್ಯಕ್ತಿಗತ ಕಲ್ಪನೆ ಅಥವಾ 'ಇದುತನ'ವನ್ನು (ಹೆಕ್ಸಿಯಿಟಿ) ಮನಗಂಡು, ಅದೇ ವೇಳೆಯಲ್ಲಿ ಅವನಿಗೆ ನಿಜವಾಗಿಯೂ ಅನ್ವಯಿಸಬಹುದಾದ ಎಲ್ಲ ವಿಶೇಷಣಗಳ ಆಧಾರ ಮತ್ತು ಕಾರಣಗಳನ್ನು, ನಿದರ್ಶನಕ್ಕೆ, ಅವನು ಡೇರಿಯಸ್ ಅಥವಾ ಪುರೂರವನನ್ನು ಗೆಲ್ಲುತ್ತಾನೆಯೇ ಎಂಬುದನ್ನು ಪೂರ್ವಕಲ್ಪಿತವಾಗಿ (ಏಪ್ರಿಯರಿ) (ಅನುಭವದ ಮೂಲಕ ಅಲ್ಲ) ತಿಳಿದುಕೊಂಡು, ಮತ್ತು ನಾವು ಇತಿಹಾಸದಿಂದ ಮಾತ್ರ ಅರಿಯಲು ಸಾಧ್ಯವಾದ ಅವನು ಸತ್ತದ್ದು ಸಹಜವಾಗಿಯೋ ವಿಷದಿಂದಲೋ ಎಂಬುದನ್ನು, ಕಂಡುಕೊಳ್ಳುತ್ತಾನೆ.

ತನ್ನ ತತ್ವಜಿಜ್ಞಾಸಾತ್ಮಕ ಆಧಾರವನ್ನು ಕುರಿತ ಖಚಿತ ಹೇಳಿಕೆಯು ಅವನು ಆರ್ನಾಲ್ಡ್‌ಗೆ ಬರೆದ ಒಂದು ಪತ್ರದಲ್ಲಿದೆ:

'ಪ್ರತಿಯೊಂದು ಸತ್ಯವಾದ ಪ್ರತಿಪಾದನೆಯ ಕಲ್ಪನೆಯ ಬಗೆಗಿನ ನನ್ನ ವಿಚಾರವನ್ನು ಕುರಿತು ಆಲೋಚಿಸುವಾಗ, ನನಗೆ ಕಂಡುಬಂದುದೆಂದರೆ, ಪ್ರತಿ ವಿಶೇಷಣವೂ, ಆವಶ್ಯಕವೋ ಆನುಷಂಗಿಕವೋ, ಹಿಂದಿನದೋ ಇಂದಿನದೋ ಮುಂದಿನದೋ, ಕರ್ತೃವಿನಲ್ಲಿಯೇ ಸೇರಿರುತ್ತದೆ, ಮತ್ತು ನಾನು ಹೆಚ್ಚೇನೂ ಕೇಳುವುದಿಲ್ಲ .. .. ಪ್ರಸ್ತುತ ಪ್ರತಿಪಾದನೆಯು ಬಹು ಮುಖ್ಯವಾದುದು, ಅದನ್ನು ಸುಸ್ಥಾಪಿಸಬೇಕಾದುದು ಅನಿವಾರ್ಯ, ಯಾಕೆಂದರೆ ಅದರಿಂದಾಗಿ ಪ್ರತಿ ಆತ್ಮವೂ ಪ್ರತ್ಯೇಕ ಜಗತ್ತು, ದೇವರನ್ನು ಬಿಟ್ಟು ಮಿಕ್ಕೆಲ್ಲ ಅಂಶಗಳಲ್ಲಿಯೂ ಸ್ವತಂತ್ರವಾದುದು; ಅದು ಅಮರವಾಗಿರುವುದಷ್ಟೇ ಅಲ್ಲದೆ ದುರ್ಗಮವೆಂದು ಹೇಳಬಹುದಾದುದು, ಆದರೆ ತನ್ನ ಸಾರಸತ್ವದಲ್ಲಿ ಅದು ತನಗೆ ಸಂಭವಿಸುವುದರೆಲ್ಲದರ ಕುರುಹನ್ನು ಅಡಗಿಸಿಕೊಂಡಿರುತ್ತದೆ.'

ಮುಂದುವರಿದು, ಸಾರಸತ್ವಗಳೂ ಪರಸ್ಪರ ಪರಿಣಾಮ ಬೀರಲಾರದು ಎಂದು ಹೇಳಿದರೂ, ಪ್ರತಿಯೊಂದೂ ತನ್ನದೇ ದೃಷ್ಟಿಕೋನದಿಂದ ವಿಶ್ವವನ್ನು ಕನ್ನಡಿಸುವುದನ್ನು ಒಪ್ಪಿಕೊಳ್ಳುತ್ತಾನೆ. ಅವುಗಳಲ್ಲಿ ಪರಸ್ಪರ ಪ್ರತಿಕ್ರಿಯೆಗಳಿರಬಹುದು, ಯಾಕೆಂದರೆ ಪ್ರತಿ ವಿಷಯದಲ್ಲಿಯೂ ಸಂಭವಿಸುವುದೆಲ್ಲ ತನ್ನ ಕಲ್ಪನೆಯ ಭಾಗವಾಗುತ್ತದೆ, ಮತ್ತು ಆ ಸಾರಸತ್ವವು ಅಸ್ತಿತ್ವದಲ್ಲಿದೆಯೇ ಎಂಬುದನ್ನು ಚಿರಂತನವಾಗಿ ನಿರ್ಧರಿಸುತ್ತದೆ.

ಈ ಪದ್ಧತಿಯು ಸ್ಪಿನೋಜಿಸದರಷ್ಟೇ ಪೂರ್ವನಿಶ್ಚಿತವಾದುದು. ಆರ್ನಾಲ್ಡ್ ಈ ಹೇಳಿಕೆಯನ್ನು ಗಾಬರಿಯಿಂದ ನೋಡುತ್ತಾನೆ (ಲೀಬ್‌ನಿಜ್ ಮಾಡಿದ): 'ಪ್ರತಿ ವ್ಯಕ್ತಿಯ ವ್ಯಕ್ತಿಗತ ಕಲ್ಪನೆಯು ಅವನಿಗೆ ಸಂಭವಿಸುವುದೆಲ್ಲವನ್ನೂ ಸಂಪೂರ್ಣವಾಗಿ ಒಳಗೊಳ್ಳುತ್ತದೆ.' ಇಂತಹ ದೃಷ್ಟಿಕೋನವು ಪಾಪ ಮತ್ತು ಮುಕ್ತ ಇಚ್ಛಾಶಕ್ತಿಯಂತಹ ಕ್ರೈಸ್ತ ಸಿದ್ಧಾಂತಗಳಿಗೆ ಅನುಗುಣವಾಗಿಲ್ಲದಿರುವುದು ಸ್ಪಷ್ಟ. ಅದನ್ನು ಆರ್ನಾಲ್ಡ್ ಒಪ್ಪಿಕೊಳ್ಳದಿದ್ದುದನ್ನು ಕಂಡು, ಲೀಬ್‌ನಿಜ್ ಅದನ್ನು ಪ್ರಕಟಿಸದಿರಲು ಎಚ್ಚರ ವಹಿಸುತ್ತಾನೆ.

ಮಾನವರು ತರ್ಕದಿಂದ ಕಂಡುಕೊಂಡ ಸತ್ಯಗಳಿಗೂ ಮತ್ತು ಅನುಭವದಿಂದ ಕಂಡುಕೊಂಡ ಸತ್ಯಗಳಿಗೂ ವ್ಯತ್ಯಾಸವಿರುವುದು ನಿಜ. ಈ ವ್ಯತ್ಯಾಸವು ಎರಡು ಬಗೆಯಲ್ಲಿ ಆಗುತ್ತವೆ. ಮೊದಲನೆಯದಾಗಿ, ಆಡಮ್‌ಗೆ ಸಂಭವಿಸಿದ ಪ್ರತಿಯೊಂದೂ, ಅವನ ಕಲ್ಪನೆಯಿಂದ ಸೂಚಿತವಾದುದು, ಅವನು ಇದ್ದರೆ, ಅದನ್ನು ನಮ್ಮ ಅನುಭವದಿಂದಷ್ಟೇ ದೃಢಪಡಿಸಿಕೊಳ್ಳಬಹುದು. ಎರಡನೆಯದಾಗಿ, ಯಾವುದೇ ವ್ಯಕ್ತಿಯ ಸಾರಸತ್ವದ ಬಗೆಗಿನ ಕಲ್ಪನೆಯು ಅತ್ಯಂತ ಸಂಕೀರ್ಣವಾದುದು, ಅವನ ವಿಶೇಷಣಗಳನ್ನು ಸಾಧಿಸಿ ತೋರಿಸುವುದಕ್ಕೆ ಬೇಕಾದ ವಿಶ್ಲೇಷಣೆಯು ದೇವರಿಂದ

ಮಾತ್ರ ಸಾಧ್ಯ. ಆದರೆ ಈ ವ್ಯತ್ಯಾಸಗಳು ನಮ್ಮ ಅಜ್ಞಾನ ಮತ್ತು ಬೌದ್ಧಿಕ ಸೀಮಿತತೆಯಿಂದ ಉಂಟಾಗಿರುವಂತಹುವು; ದೇವರಿಗೆ ಇವು ಇಲ್ಲ. ಆಡಮ್‌ನ ಬಗೆಗಿನ ಕಲ್ಪನೆಯನ್ನು ತನ್ನೆಲ್ಲ ಸಂಕೀರ್ಣತೆಯೊಡನೆ ದೇವರು ಗ್ರಹಿಸಬಲ್ಲ, ಮತ್ತು ಹೀಗಾಗಿ ಆಡಮ್ ಕುರಿತ ಸತ್ಯವಾದ ಪ್ರತಿಪಾದನೆಗಳು ವಿಶ್ಲೇಷಣಾತ್ಮಕವಾದವು ಎಂದು ಕಾಣಬಲ್ಲ. ಆಡಮ್ ಇದ್ದಾನೆಯೇ ಎಂಬುದನ್ನೂ ದೇವರು ಪೂರ್ವಕಲ್ಪಿತವಾಗಿಯೂ ದೃಢಪಡಿಸಿಕೊಳ್ಳಬಲ್ಲ. ದೇವರಿಗೆ ತನ್ನ ಒಳ್ಳೆಯತನದ ಅರಿವಿದೆ, ಅದರಿಂದಾಗಿ ಅವನು ಅತ್ಯಂತ ಶ್ರೇಷ್ಠ ಸಾಧ್ಯ ಜಗತ್ತನ್ನು ಸೃಷ್ಟಿಸುತ್ತಾನೆ; ಅಲ್ಲದೆ ಆಡಮ್ ಈ ಜಗತ್ತಿನ ಭಾಗವೋ ಅಲ್ಲವೋ ಎಂಬುದೂ ಅವನಿಗೆ ಗೊತ್ತಿದೆ ಎಂಬುದು ವಿದಿತವಾಗುತ್ತದೆ. ಹೀಗಾಗಿ ನಮ್ಮ ಅಜ್ಞಾನದ ಕಾರಣದಿಂದ ಪೂರ್ವನಿಶ್ಚಿತತೆಯಿಂದ ನಿಶ್ಚಿತವಾಗಿಯೂ ಪಾರಾಗಲಾರೆವು.

ಆದರೆ ಇದರಲ್ಲಿ ಮತ್ತೊಂದು ಅಂಶವೂ ಇದೆ, ಅದು ತುಂಬ ಕುತೂಹಲಕಾರಿಯಾದುದು. ಬಹುತೇಕ ಸಂದರ್ಭಗಳಲ್ಲಿ, ಸೃಷ್ಟಿಯು ದೇವರ ಮುಕ್ತ ಕ್ರಿಯೆ, ಅದಕ್ಕೆ ಬೇಕಾದುದು ಅವನ ಇಚ್ಛಾಶಕ್ತಿಯ ಬಳಕೆ ಎಂದು ಲೀಬ್‌ನಿಝ್ ಹೇಳುತ್ತಾನೆ. ಈ ಸಿದ್ಧಾಂತದ ಪ್ರಕಾರ, ಯಾವುದು ವಾಸ್ತವವಾಗಿ ಅಸ್ತಿತ್ವದಲ್ಲಿದೆ ಎಂಬುದರ ನಿರ್ಧಾರವು ಪರಿವೀಕ್ಷಣೆಯಿಂದ ಆಗಲಾರದು, ಅದಕ್ಕಾಗಿ ದೇವರ ಒಳ್ಳೆಯತನದ ಮಾರ್ಗದಲ್ಲಿ ಸಾಗಬೇಕು. ಅತ್ಯಂತ ಶ್ರೇಷ್ಠ ಸಾಧ್ಯ ಜಗತ್ತನ್ನು ಸೃಷ್ಟಿಸಲು ಕಾರಣವಾದ ದೇವರ ಒಳ್ಳೆಯತನವನ್ನು ಹೊರತುಪಡಿಸಿ, ಒಂದು ವಸ್ತು ಇರುವುದಕ್ಕೂ ಇಲ್ಲದಿರುವುದಕ್ಕೂ ಬೇರಾವುದೇ ಪೂರ್ವಕಲ್ಪಿತ ಕಾರಣವಿಲ್ಲ.

ಆದರೆ ಕೆಲವು ವೇಳೆ, ಯಾವ ವ್ಯಕ್ತಿಗೂ ತೋರಿಸದಿರುವ ಲೇಖನಗಳಲ್ಲಿ, ಕೆಲವು ವಸ್ತು ಇರುವುದಕ್ಕೂ ಮತ್ತೆ ಕೆಲವು ಇಲ್ಲದಿರುವುದಕ್ಕೂ ಸಂಬಂಧಿಸಿದಂತೆ ವಿಭಿನ್ನವಾದ ಸಿದ್ಧಾಂತವೊಂದಿದೆ. ಈ ದೃಷ್ಟಿಕೋನದ ಪ್ರಕಾರ, ಅಸ್ತಿತ್ವದಲ್ಲಿಲ್ಲದಿರುವ ಪ್ರತಿಯೊಂದೂ ಅಸ್ತಿತ್ವದಲ್ಲಿರಲು ಹೆಣಗುತ್ತದೆ, ಆದರೆ ಎಲ್ಲ ಸಾಧ್ಯಗಳೂ ಅಸ್ತಿತ್ವಕ್ಕೆ ಬರಲು ಆಗುವುದಿಲ್ಲ, ಯಾಕೆಂದರೆ ಅವು 'ಹೊಂದಿಕೊಂಡಿರ'ಲಾರವು (ನಾಟ್ ಕಂಪಾಟಿಬಲ್). ಎ ಅಸ್ತಿತ್ವದಲ್ಲಿರಲು ಸಾಧ್ಯವಾಗಬಹುದು, ಹಾಗೆಯೇ ಬಿ ಅಸ್ತಿತ್ವದಲ್ಲಿರಲು ಸಾಧ್ಯವಾಗಬಹುದು, ಆದರೆ ಎ ಮತ್ತು ಬಿ ಎರಡೂ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ಎ ಮತ್ತು ಬಿ 'ಹೊಂದಿಕೊಂಡಿರ'ಲಾರವು. ಅವೆಲ್ಲವೂ ಅಸ್ತಿತ್ವದಲ್ಲಿರಲು ಸಾಧ್ಯವಾದರೂ ಅವುಗಳಲ್ಲಿನ ಎರಡೋ ಹೆಚ್ಚಿನವೋ 'ಹೊಂದಿಕೊಂಡಿರ'ಲಾರವು. ಅಸ್ತಿತ್ವದಲ್ಲಿರಲು ಪ್ರಯತ್ನಿಸುವ ಸಾರಸತ್ವಗಳಿಂದ ಕೂಡಿದ ಅಧೋಲೋಕದಲ್ಲಿ (ಲಿಂಬೋ) ಅವುಗಳ ನಡುವೆ ಒಂದು ಬಗೆಯ ಯುದ್ಧವನ್ನು ಲೀಬ್‌ನಿಝ್ ಕಲ್ಪಿಸಿಕೊಳ್ಳುವಂತೆ ಕಾಣುತ್ತದೆ. ಈ ಯುದ್ಧದಲ್ಲಿ 'ಹೊಂದಿಕೊಂಡಿರ'ಬಲ್ಲ ಗುಂಪುಗಳು ಒಂದಾಗುತ್ತವೆ, ಮತ್ತು, ರಾಜಕೀಯ ಸ್ಪರ್ಧೆಯಲ್ಲಿನ ದೊಡ್ಡ ಒತ್ತಾಯ

ತಂಡ (ಪ್ರೆಷರ್ ಗ್ರೂಪ್) ದಂತೆ, ಅತ್ಯಂತ ದೊಡ್ಡ 'ಹೊಂದಿಕೊಂಡಿರ'ಬಲ್ಲ ಗುಂಪು ಗೆಲ್ಲುತ್ತದೆ. ಅಸ್ತಿತ್ವದ ವ್ಯಾಖ್ಯೆ ನೀಡಲೂ ಲೀಬ್‌ನಿಝ್ ಈ ಪರಿಕಲ್ಪನೆಯನ್ನೂ ಬಳಸುತ್ತಾನೆ. ಅವನು ಹೇಳುವುದೆಂದರೆ: 'ತನ್ನೊಂದಿಗೇ ಹೊಂದಿಕೊಳ್ಳಲಾರದಕ್ಕಿಂತ ಹೆಚ್ಚಿನವುಗಳೊಡನೆ ಹೊಂದಿಕೊಳ್ಳಬಲ್ಲವು ಅಸ್ತಿತ್ವದಲ್ಲಿರುತ್ತವೆ ಎಂದು ನಿರ್ಧರಿಸಬಹುದು.' ಅಂದರೆ, ಎಯು ಬಿ ಒಂದಿಗೆ ಹೊಂದಿಕೊಳ್ಳಲಾಗದೆ, ಆದರೆ ಎಯು ಸಿ ಡಿ ಮತ್ತು ಇ ಗಳ ಜೊತೆಗೆ ಹೊಂದಿಕೊಳ್ಳಬಲ್ಲುದಾದರೆ, ಮತ್ತು ಬಿಯು ಎಫ್ ಮತ್ತು ಜಿಗಳೊಡನೆ ಮಾತ್ರ ಹೊಂದಿಕೊಳ್ಳಬಹುದಾದರೆ, ಈ ವ್ಯಾಖ್ಯೆಯ ಪ್ರಕಾರ, ಆಗ ಎ ಅಸ್ತಿತ್ವದಲ್ಲಿರುತ್ತದೆಯೇ ಹೊರತು ಬಿ ಅಲ್ಲ. 'ಅಸ್ತಿತ್ವದಲ್ಲಿರುವುದು ಎಂದರೆ ಬಹುತೇಕ ವಸ್ತುಗಳೊಡನೆ ಹೊಂದಿಕೊಳ್ಳಬಲ್ಲಂಥದು' ಎಂದವನು ಹೇಳುತ್ತಾನೆ.

ಈ ವಿವರಣೆಯಲ್ಲಿ ದೇವರ ಪ್ರಸ್ತಾಪವಿಲ್ಲ, ಮತ್ತು ಸೃಷ್ಟಿಕ್ರಿಯೆಯೂ ಕಾಣಿಸುವುದಿಲ್ಲ. ಮತ್ತು ಯಾವುದು ಅಸ್ತಿತ್ವದಲ್ಲಿದೆ ಎಂಬುದಕ್ಕೆ ಶುದ್ಧ ತರ್ಕದ ಹೊರತೂ ಬೇರಾವುದರ ಆವಶ್ಯಕತೆಯೂ ಇಲ್ಲ. ಎ ಮತ್ತು ಬಿಗಳು ಹೊಂದಿಕೊಳ್ಳಬಲ್ಲವೇ ಎಂಬ ಪ್ರಶ್ನೆಯೂ ಲೀಬ್‌ನಿಝ್‌ಗೆ ಒಂದು ತಾರ್ಕಿಕ ಪ್ರಶ್ನೆಯಾಗಿಯೇ ಇದೆ, ಅದೆಂದರೆ: ಎ ಮತ್ತು ಬಿಗಳೆರಡರ ಅಸ್ತಿತ್ವವು ವಿರೋಧವನ್ನೊಳಗೊಂಡಿದೆಯೇ? ಅದರಿಂದಾಗಿ, ಸಿದ್ಧಾಂತರೂಪದಲ್ಲಿ, ಯಾವ ಹೊಂದಿಕೊಳ್ಳಬಲ್ಲ ಗುಂಪು ಅತ್ಯಂತ ದೊಡ್ಡದು ಎಂಬುದನ್ನು ಮತ್ತು ಈ ಗುಂಪು ಅಸ್ತಿತ್ವದಲ್ಲಿರುತ್ತದೆ ಎಂಬುದನ್ನು ತರ್ಕವೇ ನಿರ್ಣಯಿಸಬಲ್ಲುದು ಎಂಬುದು ಸಿದ್ಧವಾಗುತ್ತದೆ.

ಆದರೆ, ಮೇಲಿನದು ಅಸ್ತಿತ್ವದ ವ್ಯಾಖ್ಯೆಯೇ ಎಂದು ಲೀಬ್‌ನಿಝ್ ಪ್ರಾಯಶಃ ನಿಜವಾಗಿಯೂ ಭಾವಿಸಿರಲಿಕ್ಕಿಲ್ಲ. ಅದು ಒಂದು ಮಾನದಂಡ, ಅಷ್ಟೆ, ಅದನ್ನು ಅವನ ಜನಪ್ರಿಯ ದೃಷ್ಟಿಕೋನಗಳೊಡನೆ, 'ತತ್ವಜಿಜ್ಞಾಸಾತ್ಮಕ ಪರಿಪೂರ್ಣತೆ' ಎಂದು ಅವನೇ ಕರೆಯುವ ಸಾಧನಗಳ ಮೂಲಕ, ವಿರೋಧವೆನಿಸದಂತೆ ಮಾಡಬಹುದು. ಅವನು ಬಳಸುವ ರೀತಿಯಲ್ಲಿ ತತ್ವಜಿಜ್ಞಾಸಾತ್ಮಕ ಪರಿಪೂರ್ಣತೆ ಎಂದರೆ ಅಸ್ತಿತ್ವದ ಪರಿಮಾಣ ಎಂದು ಕಾಣುತ್ತದೆ. ಅದು 'ನಿಖರವಾಗಿ ಅರ್ಥಮಾಡಿಕೊಂಡ ಇತ್ಯಾತ್ಮಕ ವಸ್ತುಸ್ಥಿತಿಯ ಪ್ರಮಾಣ' ಎಂದವನು ಹೇಳುತ್ತಾನೆ. ದೇವರು ಸಾಧ್ಯವಾದಷ್ಟೂ ಸೃಷ್ಟಿ ಮಾಡಿದ ಎಂದವನು ಸದಾ ವಾದಿಸುತ್ತಾನೆ; ಅವನು ನಿರ್ವಾತಪ್ರದೇಶವನ್ನು ನಿರಾಕರಿಸಲು ಇದೂ ಒಂದು ಕಾರಣ. ಅಸ್ತಿತ್ವದಲ್ಲಿರುವುದು ಅಸ್ತಿತ್ವದಲ್ಲಿಲ್ಲದಿರುವುದಕ್ಕಿಂತ ಒಳ್ಳೆಯದು ಎಂಬ ಸಾಮಾನ್ಯ ನಂಬಿಕೆಯೊಂದಿದೆ (ಹಾಗಂದರೇನೆಂಬುದು ನನಗೆ ಅರ್ಥವೇ ಆಗಿಲ್ಲ); ಈ ನೆಲೆಯಲ್ಲಿ ಮಕ್ಕಳು ತಂದೆತಾಯಿಯರಿಗೆ ದೇವರಿತ್ತ ವರ ಎಂದು ನಂಬಿಸುತ್ತಾರೆ. ಲೀಬ್‌ನಿಝ್ ಈ ದೃಷ್ಟಿಕೋನವನ್ನು ಹೊಂದಿದ್ದುದು ಸ್ಪಷ್ಟ,

ಇದರಿಂದಾಗಿ ಅವನು ದೇವರು ಸಾಧ್ಯವಾದಷ್ಟೂ ತುಂಬಿದ ವಿಶ್ವವನ್ನು ಸೃಷ್ಟಿಸಿದ ಎಂದು ಭಾವಿಸುವಂತಾಯಿತು. ಇದರಿಂದ ಹೊರಡುವುದೆಂದರೆ, ವಾಸ್ತವ ಜಗತ್ತಿನಲ್ಲಿ ಅತ್ಯಂತ ದೊಡ್ಡದಾದ ಹೊಂದಿಕೊಂಡಿರಬಲ್ಲ ಗುಂಪು ಇರುತ್ತದೆ ಎಂಬುದು. ಇಷ್ಟಾದರೂ, ತರ್ಕ ಮಾತ್ರವೇ, ಸಮರ್ಥನಾದ ತಾರ್ಕಿಕನಿದ್ದರೆ, ಒಂದು ಸಾಧ್ಯ ಸಾರಸತ್ವವು ಅಸ್ತಿತ್ವದಲ್ಲಿರಬಲ್ಲುದೇ ಇಲ್ಲವೇ ಎಂಬುದನ್ನು ನಿರ್ಣಯಿಸಬಹುದು.

ತನ್ನ ಸ್ವಂತ ಆಲೋಚನೆಯಲ್ಲಿ ಲೀಬ್‌ನಿಝ್, ತತ್ವಜಿಜ್ಞಾಸೆಯಲ್ಲಿ ತರ್ಕವನ್ನು ಪ್ರಮುಖ ಸಾಧನವಾಗಿ ಬಳಸಿಕೊಳ್ಳುವ ತತ್ವಜ್ಞಾನಿಗಳಲ್ಲಿ ಅತ್ಯುತ್ತಮನಾದವನು. ಈ ಬಗೆಯ ತತ್ವಜ್ಞಾನವು ಪಾರ್ಮನೈಡೀಸ್‌ನಿಂದ ಆರಂಭಗೊಂಡು, ನಾನಾ ತರ್ಕಾತೀತ ಪ್ರತಿಪಾದನೆಗಳನ್ನು ಸಾಬೀತುಪಡಿಸಲು ಪ್ಲೇಟೋನ ಆದರ್ಶರೂಪಗಳ ಸಿದ್ಧಾಂತದಲ್ಲಿ ಅದು ಮುಂದುವರಿಯಿತು. ಸ್ಪಿನೋಜ಼ನೂ ಇದೇ ವರ್ಗಕ್ಕೆ ಸೇರಿದವನು, ಅಂತೆಯೇ ಹೆಗೆಲ್ ಕೂಡ. ಆದರೆ ವಾಸ್ತವ ಜಗತ್ತಿಗೆ ಸಂಬಂಧಿಸಿದ ಊಹನೆಗಳನ್ನು ವಾಕ್ಯರಚನೆಯ ಮೂಲಕ ಮಾಡುವುದರಲ್ಲಿ ಇವರಾರೂ ಲೀಬ್‌ನಿಝ್‌ನಂತೆ ನಿರ್ದಿಷ್ಟವಾಗಿರಲಿಲ್ಲ. ಅನುಭವೈಕವಾದದ ಬೆಳವಣಿಗೆಯಿಂದಾಗಿ ಈ ಬಗೆಯ ವಾದವು ವಿವಾದಕ್ಕೊಳಗಾಗಿದೆ. ಭಾಷೆಯ ಮೂಲಕ ಭಾಷೇತರ ವಸ್ತುಸ್ಥಿತಿಗಳ ಬಗ್ಗೆ ಸಿಂಧುವೆನಿಸುವ ಊಹನೆ ಸಾಧ್ಯವೇ ಎಂಬ ಪ್ರಶ್ನೆಯನ್ನು ನಾನು ಆಧಿಕಾರಯುತವಾಗಿ ಮಾಡಲಾರೆ; ಆದರೆ ಲೀಬ್‌ನಿಝ್ ಮತ್ತಿತರ ಪೂರ್ವಕಲ್ಪಿತ ತತ್ವಜ್ಞಾನಿಗಳಲ್ಲಿ ಕಾಣುವಂತಹ ಊಹನೆಗಳು ಖಂಡಿತವಾಗಿಯೂ ಸಿಂಧುವಲ್ಲ, ಯಾಕೆಂದರೆ ಅವೆಲ್ಲ ಆಗಿರುವುದು ದೋಷಪೂರ್ಣ ತರ್ಕದಿಂದಾಗಿ. ಹಿಂದಿನ ಅಂಥ ತತ್ವಜ್ಞಾನಿಗಳು ಕಲ್ಪಿಸಿಕೊಂಡ ಕರ್ತೃ–ವಿಶೇಷಣ ತರ್ಕವು ಸಂಬಂಧಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತದೆ, ಇಲ್ಲವೇ ಅಂಥ ಸಂಬಂಧಗಳು ಅವಾಸ್ತವ ಎಂದು ಸಾಬೀತುಪಡಿಸಲು ಭ್ರಮಾತ್ಮಕ ವಾದಗಳನ್ನು ಸೃಷ್ಟಿಸುತ್ತದೆ. ಕರ್ತೃ–ವಿಶೇಷಣ ತರ್ಕದೊಡನೆ ಬಹುತ್ವವಾದ (ಪ್ಲೂರಲಿಸಂ) ವನ್ನು ಸೇರಿಸುವುದರ ಮೂಲಕ ಲೀಬ್‌ನಿಝ್ ವಿಶಿಷ್ಟ ಅಸಾಂಗತ್ಯವನ್ನು ಮಾಡುತ್ತಾನೆ; ಯಾಕೆಂದರೆ 'ಅನೇಕ ಏಕಗಳು ಇವೆ' ಎಂಬ ಪ್ರತಿಪಾದನೆಯು ಕರ್ತೃ–ವಿಶೇಷಣ ಸ್ವರೂಪದ್ದಲ್ಲ. ಸುಸಂಗತವಾಗಲು ಎಲ್ಲ ಪ್ರತಿಪಾದನೆಗಳೂ ಈ ರೂಪದವು ಎಂದು ನಂಬುವ ತತ್ವಜ್ಞಾನಿಯು ಸ್ಪಿನೋಜ಼ನಂತೆ ಏಕತ್ವವಾದಿಯಾಗಿರಬೇಕು. ಲೀಬ್‌ನಿಝ್ ಏಕತ್ವವಾದವನ್ನು ತಿರಸ್ಕರಿಸಿದ್ದು ಚಲನವಿಜ್ಞಾನದಲ್ಲಿನ ತನ್ನ ಆಸಕ್ತಿಯಿಂದ, ಮತ್ತು ಅವನ ವಾದವು ಅರ್ಥವ್ಯಾಪ್ತಿಯು ಪುನರಾವರ್ತನೆಯನ್ನು ಒಳಗೊಳ್ಳುತ್ತದೆ, ಹೀಗಾಗಿ ಅದು ಏಕ ಸಾರಸತ್ವದ ಲಕ್ಷಣವಾಗಲಾರದು.

ಲೀಬ್‌ನಿಝ್ ಏಕತಾನದ ಬರಹಗಾರ, ಅವನು ಜರ್ಮನ್ ತತ್ವಜ್ಞಾನದ ಮೇಲೆ ಬೀರಿದ ಪ್ರಭಾವದಿಂದಾಗಿ ಆದು ಪಾಂಡಿತ್ಯಪೂರ್ಣವೂ ಒಣಕಲೂ ಆಯಿತು.

ಕ್ಯಾಂಟ್‌ನ 'ಕ್ರಿಟೀಕ್ ಆಫ್ ಪ್ಯೂರ್ ರೀಸನ್' ಪ್ರಕಟಗೊಳ್ಳುವವರೆಗೂ ಜರ್ಮನ್ ವಿಶ್ವವಿದ್ಯಾನಿಲಯಗಳಲ್ಲಿ ವಿಜೃಂಭಿಸಿದ ಲೀಬ್‌ನಿಝ್‌ನ ಶಿಷ್ಯನಾದ ವೂಲ್ಫ್, ಗುರುವಿನಲ್ಲಿನ ಅತ್ಯಂತ ಆಸಕ್ತಿದಾಯಕವಾದುದನ್ನು ಕೈಬಿಟ್ಟು ಶುಷ್ಕ ಪ್ರಾಧ್ಯಾಪಕ ಮಾದರಿಯ ಚಿಂತನೆ ನಡೆಸಿದ. ಜರ್ಮನಿಯ ಹೊರಗೆ, ಲೀಬ್‌ನಿಝ್‌ನ ತತ್ವಜ್ಞಾನವು ಅತ್ಯಲ್ಪ ಪ್ರಭಾವ ಬೀರಿತು; ಅವನ ಸಮಕಾಲೀನನಾದ ಲಾಕ್ ಬ್ರಿಟಿಷ್ ತತ್ವಜ್ಞಾನವನ್ನು ನಿರ್ವಹಿಸಿದ, ಅದೇ ಫ್ರಾನ್ಸ್‌ನಲ್ಲಿ ವಾಲ್ಟೇರ್ ಮೇಲುಗೈ ಆಗುವವರೆಗೂ ಇಂಗ್ಲಿಷ್ ಅನುಭವೈಕವಾದವನ್ನು ಫ್ಯಾಷನಬಲ್ ಆಗುವಂತೆ ಮಾಡಿ ಡೆಕಾರ್ಟೆ ಪ್ರಭಾವಿಯಾಗಿದ್ದ.

ಇಷ್ಟಾದರೂ, ಲೀಬ್‌ನಿಝ್ ದೊಡ್ಡ ಮನುಷ್ಯ, ಅವನ ಹಿರಿತನವು ಹಿಂದೆಂದಿಗಿಂತಲೂ ಈಗ ಹೆಚ್ಚು ಎದ್ದು ಕಾಣುತ್ತಿದೆ. ಒಬ್ಬ ಗಣಿತಜ್ಞನಾಗಿ ಮತ್ತು ವಿಶ್ಲೇಷಣಾತ್ಮಕ ಕಲನವಿಜ್ಞಾನದ ಸೃಷ್ಟಿಕರ್ತನಾಗಿ ಹೊಂದಿದ ಅವನ ಹಿರಿಮೆಯಲ್ಲದೆ, ಅವನು ಗಣಿತಾತ್ಮಕ ತರ್ಕದ ಪಿತಾಮಹನಾಗಿದ್ದ, ಬೇರೆಯವರು ಯಾರೂ ಕಾಣದಿದ್ದಂತಹ ಅದರ ಮಹತ್ವವನ್ನು ಅವನು ಗುರುತಿಸಿದ್ದ. ಅವನ ತಾತ್ವಿಕ ಆಧಾರಕಲ್ಪನೆಗಳು ಅತಿರೇಕದವಾಗಿದ್ದರೂ, ಸ್ಪಷ್ಟವಾಗಿವೆ, ನಿರ್ದಿಷ್ಟ ಅಭಿವ್ಯಕ್ತಿಯನ್ನು ಹೊಂದಿವೆ. ಅವು ಕಿಟಕಿಯಿಲ್ಲದವೆಂದು ಭಾವಿಸಲಾಗದಿದ್ದರೂ, ಅವನ ಏಕಗಳು ಪರಿಕಲ್ಪನೆಯನ್ನು ನೋಡುವ ಸಾಧ್ಯ ಮಾರ್ಗಗಳನ್ನು ಈಗಲೂ ಸೂಚಿಸಬಹುದಾಗಿವೆ. ನನ್ನ ಮಟ್ಟಿಗೆ ಹೇಳುವುದಾದರೆ, ಅವನ ಏಕಗಳ ಚರಿತ್ರೆಯಲ್ಲಿನ ಅತ್ಯುತ್ತಮವಾದುದೆಂದರೆ ಅವನ ಇಬ್ಬಗೆಯ ಅವಕಾಶಗಳು, ಒಂದು, ಪ್ರತಿಯೊಂದು ಏಕದ ಪರಿಕಲ್ಪನೆಯಲ್ಲಿ ವ್ಯಕ್ತಿನಿಷ್ಠವಾದುದು; ಮತ್ತೊಂದು, ವಿವಿಧ ಏಕಗಳ ದೃಷ್ಟಿಕೋನಗಳನ್ನು ಹೊಂದಿರುವ ಸಂಯೋಜನೆಯಾಗಿ ವಸ್ತುನಿಷ್ಠವಾದುದು. ಭೌತವಿಜ್ಞಾನಕ್ಕೆ ಪರಿಕಲ್ಪನೆಗಳನ್ನು ಸಂಬಂಧಿಸುವ ವಿಷಯದಲ್ಲಿ ಅದು ಈಗಲೂ ಉಪಯುಕ್ತ ಎಂಬುದು ನನ್ನ ನಂಬಿಕೆ.

❍

೧೨
ತಾತ್ವಿಕ ಉದಾರವಾದ (ಫಿಲಸಾಫಿಕಲ್ ಲಿಬರಲಿಸಂ)

ಉದಾರವಾದದ ಉದಯವು ರಾಜಕಾರಣ ಮತ್ತು ತತ್ವಜ್ಞಾನಗಳೆರಡರಲ್ಲಿಯೂ ತುಂಬ ಸಾಮಾನ್ಯ ಹಾಗೂ ತುಂಬ ಮುಖ್ಯ ಪ್ರಶ್ನೆಗಳನ್ನು ಕುರಿತ ಅಧ್ಯಯನಕ್ಕೆ ಸಾಮಗ್ರಿಯನ್ನೊದಗಿಸುತ್ತದೆ, ಅದೆಂದರೆ: ಸ್ವಂತಿಕೆಯ ಗಣ್ಯ ಚಿಂತಕರ ಚಿಂತನೆಗಳ ಮೇಲೆ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗಳು ಮಾಡಿದ ಪ್ರಭಾವವೆಂಥದು, ಮತ್ತಿದಕ್ಕೆ ವ್ಯತಿರಿಕ್ತವಾಗಿ, ಆನಂತರದ ರಾಜಕೀಯ ಮತ್ತು ಸಾಮಾಜಿಕ ಬೆಳವಣಿಗೆಗಳ ಮೇಲೆ ಈ ಚಿಂತಕರು ಮಾಡಿದ ಪ್ರಭಾವವೆಂತಹುದು?

ಸಾಮಾನ್ಯವಾದ ಎರಡು ಪರಸ್ಪರ ವಿರುದ್ಧವಾದ ದೋಷಗಳಿಂದ ನಾವು ದೂರವಿರಬೇಕು. ಒಂದೆಡೆ, ವಿದ್ಯಮಾನಗಳಿಗಿಂತಲೂ ಪುಸ್ತಕಗಳಲ್ಲಿ ಹೆಚ್ಚು ಆಸಕ್ತರಾದ ಜನರು ತತ್ವಜ್ಞಾನಿಗಳ ಪ್ರಭಾವವನ್ನು ಉತ್ಪ್ರೇಕ್ಷಿಸುವ ಸಾಧ್ಯತೆಯಿರುತ್ತದೆ. ಯಾರದೋ ಬೋಧನೆಯಿಂದ ತಾನು ಪ್ರಭಾವಿತವಾಗಿರುವುದಾಗಿ ಒಂದು ರಾಜಕೀಯ ಪಕ್ಷವು ಘೋಷಿಸಿಕೊಂಡುದನ್ನು ಕಂಡು, ಆ ಪಕ್ಷವು ತಾನು ಸ್ಫೂರ್ತಿ ಪಡೆದ ತತ್ವಜ್ಞಾನಿಯನ್ನು ಒಂದೆರಡು ಬಾರಿ ಹೆಸರಿಸುವುದನ್ನು ಬಿಟ್ಟರೆ ತನಗೆ ಬೇಕಾದ್ದನ್ನು ಮಾಡುತ್ತಲೇ ಬಂದಿದ್ದರೂ, ಅವರು ಆ ಪಕ್ಷವು ಇಂತಹವರಿಂದ ಸ್ಫೂರ್ತಗೊಂಡಿದೆ ಎಂದು ಭಾವಿಸಬಹುದು. ಇತ್ತೀಚಿನವರೆಗೂ ಪುಸ್ತಕಗಳ ಲೇಖಕರು ತಮ್ಮ ವೃತ್ತಿಯ ಪೂರ್ವಿಕರ ಕೆಲಸವನ್ನು ಬಹುಮಟ್ಟಿಗೆ ಉತ್ಪ್ರೇಕ್ಷಿಸುತ್ತಲೇ ಬಂದಿದ್ದಾರೆ. ಅದಕ್ಕೆ ವ್ಯತಿರಿಕ್ತವಾಗಿ, ಹಳೆಯದರ ವಿರುದ್ಧದ ಪ್ರತಿಕ್ರಿಯೆಯಾಗಿ ಹೊಸ ದೋಷವೊಂದು ಉದ್ಭವಿಸಿದೆ, ಅದೆಂದರೆ ತಾತ್ವಿಕ ಸಿದ್ಧಾಂತಿಗಳೆಲ್ಲ ತಮ್ಮ ಕಾಲದ ಪರಿಸ್ಥಿತಿಗಳ ಬಗೆಗಿನ ಕ್ರಿಯಾಹೀನ ಉತ್ಪನ್ನಗಳೆಂದೂ, ಅವರು ತಮ್ಮ ಕಾಲದ ಆಗುಹೋಗುಗಳ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲವೆಂದು ತಿಳಿಯುವುದು. ಈ ದೃಷ್ಟಿಕೋನದ ಪ್ರಕಾರ, ಚಿಂತನೆಯು ಭೌತಿಕ ಮತ್ತು ತಾಂತ್ರಿಕ ಕಾರಣಗಳಿಂದ ಉದ್ಭವಿಸಿದ ಆಳವಾದ ಸುಳಿಗಳ ಮೇಲಣ ನೊರೆ ಮಾತ್ರ: ಹರಿವಿನಿಂದುಂಟಾದ ನೊರೆಗುಳ್ಳೆಗಳು ನದಿಯ ದಿಕ್ಕನ್ನು ನೋಡುಗರಿಗೆ ತೋರಿಸುವುದಕ್ಕಿಂತಲೂ ಹೆಚ್ಚೇನೂ ಮಾಡದಂತೆ, ಚಿಂತನೆಯಿಂದ ಯಾವುದೇ ಸಾಮಾಜಿಕ ಬದಲಾವಣೆ ಆಗಲಿಲ್ಲ. ನನ್ನ ಮಟ್ಟಿಗೆ,

ಸತ್ಯವು ಈ ಎರಡೂ ಅತಿರೇಕಗಳ ನಡುವೆ ಇದೆ. ಚಿಂತನೆ ಮತ್ತು ವಾಸ್ತವಿಕ ಬದುಕುಗಳ ನಡುವೆ, ಮಿಕ್ಕೆಲ್ಲದರಂತೆಯೇ, ಪ್ರತಿಕ್ರಿಯೆಗಳು ಪರಸ್ಪರವಾಗಿರುತ್ತವೆ; ಕಾರಣವಾವುದು ಪರಿಣಾಮ ಯಾವುದು ಎಂದು ಕೇಳುವುದು ವ್ಯರ್ಥ, ಅದು ಕೋಳಿ–ಮೊಟ್ಟೆಗಳ ಪ್ರಶ್ನೆಯಂತೆ. ನಾನು ಅಮೂರ್ತದಲ್ಲಿ ಈ ಪ್ರಶ್ನೆಯನ್ನು ಕುರಿತಂತೆ ಮಾತನಾಡಿ ವೇಳೆಯನ್ನು ಹಾಳುಮಾಡುವುದಿಲ್ಲ. ಬದಲಿಗೆ, ಒಂದು ಮುಖ್ಯ ಸಾಮಾನ್ಯ ಪ್ರಶ್ನೆಯನ್ನು ಐತಿಹಾಸಿಕವಾಗಿ ಪರಿಶೀಲಿಸುತ್ತೇನೆ, ಅದೆಂದರೆ ಹದಿನೇಳನೆಯ ಶತಮಾನದ ಕೊನೆಯಿಂದ ಇವತ್ತಿನವರೆಗೂ ಉದಾರವಾದ ಮತ್ತದರ ವಿವಿಧ ಟಿಸಿಲುಗಳ ಬೆಳವಣಿಗೆಯ ರೀತಿ.

ಮೊದಲಿನ ಉದಾರವಾದವು ಇಂಗ್ಲಂಡ್ ಮತ್ತು ಹಾಲಂಡ್‌ಗಳ ಉತ್ಪನ್ನ, ಅದಕ್ಕೆ ಕೆಲವು ಸ್ಪಷ್ಟ ಲಕ್ಷಣಗಳಿದ್ದವು. ಅದು ಮತಧಾರ್ಮಿಕ ಸಹಿಷ್ಣುತೆಯ ಪರವಾಗಿತ್ತು; ಅದು ಪ್ರತಿಭಟನಾತ್ಮಕ (ಪ್ರಾಟೆಸ್ಟೆಂಟ್) ಆಗಿತ್ತು, ಆದರೆ ದುರಭಿಮಾನದ್ದಾಗಿರದೆ ಉದಾರಮನಸ್ಸಿನದಾಗಿತ್ತು; ಮತಧರ್ಮಗಳ ನಡುವಣ ಕದನವು ಹುಚ್ಚುತನದ್ದೆಂದು ಅದು ಭಾವಿಸಿತ್ತು. ಅದು ವಾಣಿಜ್ಯ ಮತ್ತು ಕೈಗಾರಿಕೆಗಳ ಪರವಾಗಿತ್ತು, ರಾಜಪ್ರಭುತ್ವ ಮತ್ತು ಶ್ರೀಮಂತಪ್ರಭುತ್ವಗಳ ಬದಲಿಗೆ ಮಧ್ಯಮ ವರ್ಗದ ಉಚ್ಛ್ರಾಯಕ್ಕೆ ಬದ್ಧವಾಗಿತ್ತು; ಆಸ್ತಿಯ ಹಕ್ಕುಗಳ ಪರವಾಗಿ ಬಲವಾಗಿ ನಿಂತಿತ್ತು, ವಿಶೇಷವಾಗಿ ವ್ಯಕ್ತಿಯ ಸ್ವಂತ ದುಡಿಮೆಯಿಂದ ಗಳಿಸಿ ಕೂಡಿಟ್ಟುಕೊಂಡುದು. ಪಾರಂಪರಿಕ ತತ್ವವನ್ನು ನಿರಾಕರಿಸದಿದ್ದರೂ, ಅದರ ವ್ಯಾಪ್ತಿಯನ್ನು ಹಿಂದಿದ್ದುದಕ್ಕಿಂತ ಹೆಚ್ಚು ಮಿತಗೊಳಿಸಿತು; ಅದರಲ್ಲೂ, ರಾಜರ ದೈವದತ್ತ ಅಧಿಕಾರವನ್ನು ತಿರಸ್ಕರಿಸಿ, ಅದರ ಬದಲಿಗೆ ಪ್ರತಿಯೊಂದು ಸಮಾಜಕ್ಕೂ, ಕನಿಷ್ಠ ಪಕ್ಷ, ಮೊದಲಿಗೆ, ತನ್ನ ಸರ್ಕಾರದ ಸ್ವರೂಪವನ್ನು ತಾನೇ ಆಯ್ಕೆಮಾಡಿಕೊಳ್ಳುವ ಹಕ್ಕನ್ನು ಪ್ರತಿಪಾದಿಸಿತು. ಹಿಂದಿದ್ದ ಉದಾರವಾದದ ಸ್ವರೂಪವು ನಿಸ್ಸಂದಿಗ್ಧವಾಗಿ ಆಸ್ತಿಯ ಹಕ್ಕಿನಿಂದ ಹದಗೊಳಿಸಿದ ಪ್ರಜಾಪ್ರಭುತ್ವದ ಪರವಾಗಿತ್ತು. ಎಲ್ಲರೂ ಸಮಾನವಾಗಿ ಹುಟ್ಟುತ್ತಾರೆ, ಮತ್ತು ಆನಂತರದ ಅವರಲ್ಲಿನ ಅಸಮಾನತೆಯು ಪರಿಸ್ಥಿತಿಯಿಂದಾದುದು ಎಂಬ ನಂಬಿಕೆ–ಮೊದಲಿಗೆ ಅಷ್ಟೊಂದು ದೃಢವಾಗಿ ಅಲ್ಲ–ನೆಲೆಗೊಂಡಿತ್ತು; ಇದರಿಂದಾಗಿ ಜನ್ಮಜಾತ ಲಕ್ಷಣಗಳ ಬದಲಿಗೆ ಶಿಕ್ಷಣಕ್ಕೆ ಒತ್ತು ನೀಡುವ ಪ್ರವೃತ್ತಿ ಬೆಳೆಯಿತು. ಸರ್ಕಾರದ ವಿರುದ್ಧವಾದ ಒಂದು ಬಗೆಯ ಪಕ್ಷಪಾತ ನೆಲೆಗೊಂಡಿತ್ತು, ಇದಕ್ಕೆ ಕಾರಣ ಎಲ್ಲ ಕಡೆಗಳಲ್ಲೂ ಬಹುತೇಕವಾಗಿ ಸರ್ಕಾರಗಳು ರಾಜರುಗಳ ಅಥವಾ ಶ್ರೀಮಂತರ ಕೈಗಳಲ್ಲಿದ್ದುದು; ವ್ಯಾಪಾರಿಗಳ ಆವಶ್ಯಕತೆಗಳನ್ನು ಅರ್ಥಮಾಡಿಕೊಳ್ಳುವುದಾಗಲೀ ಅವರನ್ನು ಗೌರವಿಸುವುದಾದಲೀ ಅವರಿಗೆ ಬೇಕಿರಲಿಲ್ಲ, ಇದು ಹೋಗಿ ಅವರನ್ನು ಅರ್ಥಮಾಡಿಕೊಳ್ಳುವ ಮತ್ತು ಗೌರವಿಸುವ ಪ್ರವೃತ್ತಿ ಹೆಚ್ಚಾಗಲು ದೀರ್ಘ ಕಾಲ ಬೇಕಾಗಲಾರದೆಂಬ ಭರವಸೆಯಿಂದ ಇದನ್ನು ನಿಯಂತ್ರಿಸಲಾಗಿತ್ತು.

ಮೊದಲಿನ ಉದಾರವಾದವು ಆಶಾವಾದದಿಂದ ಕೂಡಿತ್ತು, ವೀರ್ಯವಂತವಾಗಿತ್ತು ಮತ್ತು ತತ್ವವಿವೇಕದಿಂದ ಕೂಡಿತ್ತು, ಯಾಕೆಂದರೆ ಹೆಚ್ಚು ಕಷ್ಟವಿಲ್ಲದೆ ಗೆಲವು ಸಾಧಿಸುವುದು ಮತ್ತು ಅದರಿಂದಾಗಿ ಮಾನವ ಸಂಕುಲಕ್ಕೆ ಹೆಚ್ಚಿನ ಅನುಕೂಲಗಳನ್ನು ಒದಗಿಸುವ ಕಾಲ ಅಷ್ಟೇನೂ ದೂರವಿಲ್ಲವೆಂಬ ಭಾವನೆಯಿಂದ ಬೆಳೆಯುತ್ತಿರುವ ಪ್ರಬಲ ಶಕ್ತಿಗಳನ್ನು ಅದು ಪ್ರತಿನಿಧಿಸುತ್ತಿತ್ತು. ರಾಜಕೀಯವಾಗಲೀ ತಾತ್ವಿಕವಾಗಲೀ ಮಧ್ಯಕಾಲೀನವಾದುದೆಲ್ಲಕ್ಕೂ ಅದು ವಿರೋಧವಾಗಿತ್ತು, ಯಾಕೆಂದರೆ ಮಧ್ಯಕಾಲೀನ ಸಿದ್ಧಾಂತಗಳು ಚರ್ಚ್ ಮತ್ತು ರಾಜರ ಅಧಿಕಾರವನ್ನು, ಚಿತ್ರಹಿಂಸೆಯನ್ನು ಸಮರ್ಥಿಸಲು ಮತ್ತು ವಿಜ್ಞಾನದ ಬೆಳವಣಿಗೆಯನ್ನು ತಡೆಯಲು ಬಳಕೆಯಾಗುತ್ತಿದ್ದವು; ಅಲ್ಲದೆ ಅವು ಕಾಲ್ವಿನ್‌ಪಂಥ ಮತ್ತು ಅನಬ್ಯಾಪ್ಟಿಸ್ಟ್‌ಗಳ ಆಧುನಿಕತೆಯ ದುರಭಿಮಾನವನ್ನು ಕೂಡ ಅಷ್ಟೇ ವಿರೋಧಿಸುತ್ತಿದ್ದವು. ರಾಜಕೀಯ ಮತ್ತು ಮತಧಾರ್ಮಿಕ ತಿಕ್ಕಾಟವು ಕೊನೆಯಾಗಿ, ಅದಕ್ಕಾಗಿ ವ್ಯರ್ಥವಾಗುತ್ತಿದ್ದ ಜನರ ಸಾಮರ್ಥ್ಯವು ಈಸ್ಟ್ ಇಂಡಿಯಾ ಕಂಪನಿ ಮತ್ತು ಬ್ಯಾಂಕ್ ಆಫ್ ಇಂಗ್ಲಂಡ್‌ನಂತಹ ವಾಣಿಜ್ಯ ಪ್ರಯತ್ನಗಳಿಗೆ ಮತ್ತು ಗುರುತ್ವಾಕರ್ಷಣ ಸಿದ್ಧಾಂತ ಮತ್ತು ರಕ್ತಪರಿಚಲನೆಯ ಅನಾವರಣಗಳಂತಹ ವಿಜ್ಞಾನಗಳ ರೋಚಕ ಪ್ರಯತ್ನಗಳಿಗೆ ಬಳಕೆಗೊಳ್ಳಬೇಕೆಂಬುದು ಅದರ ಬಯಕೆಯಾಗಿತ್ತು. ಪಾಶ್ಚಾತ್ಯ ಜಗತ್ತಿನಾದ್ಯಂತ ಮತಾಂಧತೆಯ ಜಾಗವನ್ನು ತಿಳಿವಳಿಕೆಯು ಆಕ್ರಮಿಸಿಕೊಳ್ಳುತ್ತಿತ್ತು, ಸ್ಪಾನಿಶ್ ಅಧಿಕಾರದ ಭಯ ಕೊನೆಗೊಳ್ಳತೊಡಗಿತ್ತು, ಎಲ್ಲ ವರ್ಗಗಳೂ ಸಮೃದ್ಧಿಗೊಳ್ಳುತ್ತಿದ್ದವು, ಅತ್ಯಂತ ಸಮಚಿತ್ತದ ತೀರ್ಮಾನಗಳಿಂದಾಗಿ ಮಹಾ ಭರವಸೆಗಳು ಮೂಡತೊಡಗಿದ್ದವು. ಒಂದು ನೂರು ವರ್ಷಗಳ ಕಾಲ, ಈ ಭರವಸೆಗಳನ್ನು ಯಾವುದೇ ಶಕ್ತಿಯೂ ಕುಂಠಿತಗೊಳಿಸುವಂತೆ ಕಾಣಲಿಲ್ಲ; ಆನಂತರ, ಕೊನೆಗೆ ಅವುಗಳಿಂದಲೇ ಫ್ರೆಂಚ್ ಕ್ರಾಂತಿ ಮೊಳಕೆಯೊಡೆಯುವಂತಾಯಿತು, ಅದರಿಂದಾಗಿ ನೆಪೋಲಿಯನ್ ಮೇಲೆ ಬಂದ ಮತ್ತು ಆನಂತರ ಪವಿತ್ರ ಒಪ್ಪಂದ (ಹೋಲಿ ಅಲಯನ್ಸ್) ಏರ್ಪಟ್ಟಿತು. ಈ ಘಟನೆಗಳ ಬಳಿಕ, ಉದಾರವಾದದ ಗಾಳಿಯು ಎರಡನೆಯ ಬಾರಿ ಬೀಸಿ ಹತ್ತೊಂಬತ್ತನೆಯ ಶತಮಾನದಲ್ಲಿ ಆಶಾಭಾವನೆಯು ಮತ್ತೆ ಚಿಗುರಲು ಶುರುವಾಯಿತು.

ವಿವರಗಳನ್ನು ನೀಡುವ ಮುಂಚೆ, ಹದಿನೇಳರಿಂದ ಹತ್ತೊಂಬತ್ತನೆಯ ಶತಮಾನದರೆಗಿನ ಉದಾರವಾದ ಚಳುವಳಿಯ ಸಾಮಾನ್ಯ ವಿನ್ಯಾಸವನ್ನು ಕುರಿತು ಪರಿಶೀಲಿಸುವುದು ಸಮಂಜಸವೆನಿಸುತ್ತದೆ. ಈ ವಿನ್ಯಾಸವು ಮೊದಲಿಗೆ ಸರಳವಾಗಿದ್ದು, ಬರಬರುತ್ತ ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತ ಹೋಯಿತು. ಇಡೀ ಚಳುವಳಿಯ ಎದ್ದು ಕಾಣುವ ಲಕ್ಷಣವೆಂದರೆ, ವಿಶಾಲ ಅರ್ಥದಲ್ಲಿ, ವ್ಯಕ್ತಿವಾದ; ಆದರೆ ಮತ್ತಷ್ಟು ವಿವರಿಸುವವರೆಗೆ ಇದು ಅಸ್ಪಷ್ಟವೆನಿಸುತ್ತದೆ. ಅರಿಸ್ಟಾಟಲ್‌ವರೆಗಿನ ಗ್ರೀಸ್‌ನ

ತತ್ವಜ್ಞಾನಿಗಳು ನಾನು ಬಳಸುವ ಮತ್ತು ಬಯಸುವ ಅರ್ಥದಲ್ಲಿ ವ್ಯಕ್ತಿವಾದದ ಪರವಾಗಿರಲಿಲ್ಲ. ಅವರು ವ್ಯಕ್ತಿಯನ್ನು ಸಮುದಾಯವೊಂದರ ಸದಸ್ಯನಾಗಿ ಪರಿಭಾವಿಸಿದರು; ಉದಾಹರಣೆಗೆ, ಪ್ಲೇಟೋನ 'ರಿಪಬ್ಲಿಕ್' ಒಳ್ಳೆಯ ಸಮುದಾಯವೊಂದರ ವ್ಯಾಖ್ಯೆಯನ್ನು ನೀಡಲು ಪ್ರಯತ್ನಿಸುತ್ತದೆಯೇ ಹೊರತು ಒಳ್ಳೆಯ ವ್ಯಕ್ತಿಯನ್ನಲ್ಲ. ಅಲೆಕ್ಸಾಂಡರ್‌ನ ಕಾಲದಿಂದ ತೊಡಗಿ ರಾಜಕೀಯ ಸ್ವಾತಂತ್ರ್ಯವು ಕಡಿಮೆಯಾಗಿ ವ್ಯಕ್ತಿವಾದವು ಬೆಳೆಯಿತು, ಇದು ಸಿನಿಕರಲ್ಲಿಯೂ ಸಂಯಮವಾದಿಗಳಲ್ಲಿಯೂ ಕಾಣಿಸಿಕೊಂಡಿತು. ಸಂಯಮವಾದದ ತಾತ್ವಿಕತೆಯ ಪ್ರಕಾರ, ಸಾಮಾಜಿಕ ಪರಿಸ್ಥಿತಿಗಳು ಹೇಗೇ ಇರಲಿ, ವ್ಯಕ್ತಿಯು ಒಳ್ಳೆಯ ಬದುಕನ್ನು ನಡೆಸಬಹುದು ಎಂದು ಹೇಳಿತು. ಇದು ಕ್ರೈಸ್ತ ತಾತ್ವಿಕತೆಯ ನಿಲವೂ ಹೌದು, ಅದರಲ್ಲೂ ಅದು ಸರ್ಕಾರದ ನಿಯಂತ್ರಣವನ್ನು ಪಡೆಯುವವರೆಗೆ. ಆದರೆ ಮಧ್ಯ ಯುಗದಲ್ಲಿ, ಕ್ರೈಸ್ತ ನೈತಿಕತೆಯಲ್ಲಿನ ಮೂಲವ್ಯಕ್ತಿವಾದ ಪ್ರವೃತ್ತಿಯನ್ನು ಅನುಭಾವಿಕರು ಮುಂದುವರಿಸಿದರೂ, ಬಹು ಪಾಲು ತತ್ವಜ್ಞಾನಿಗಳನ್ನೂ ಒಳಗೊಂಡಂತೆ ಬಹುತೇಕ ಜನರ ದೃಷ್ಟಿಕೋನದಲ್ಲಿ, ಶಾಸ್ತ್ರಪ್ರಾಮಾಣ್ಯ ನಿಯಮಸಂಹಿತೆ ಮತ್ತು ರೂಢಿಗಳ ಸ್ಥಿರಮಿಶ್ರಣದ ರೂಪದಲ್ಲಿ ಪ್ರಬಲವಾಯಿತು. ಇದರಿಂದಾಗಿ ಜನರ ಸೈದ್ಧಾಂತಿಕ ನಂಬಿಕೆಗಳು ಮತ್ತು ವ್ಯಾವಹಾರಿಕ ನೀತಿಗಳನ್ನು ಒಂದು ಸಾಮಾಜಿಕ ಸಂಸ್ಥೆಯು, ಅಂದರೆ ಕ್ಯಾಥೋಲಿಕ್ ಚರ್ಚ್, ನಿಯಂತ್ರಿಸುವ ಪರಿಸ್ಥಿತಿ ಉಂಟಾಯಿತು: ಯಾವುದು ಸತ್ಯ, ಯಾವುದು ಒಳ್ಳೆಯದು ಎಂಬುದನ್ನು ನಿರ್ಧರಿಸುವುದು ವೈಯಕ್ತಿಕ ಚಿಂತನೆಯಾಗಿರದೆ ಧರ್ಮಪರಿಷತ್ತುಗಳ ಸಾಮೂಹಿಕ ವಿವೇಕವಾಯಿತು.

ಇದರಲ್ಲಿ ಮೊದಲಿಗೆ ಮಹಾ ಬಿರುಕನ್ನು ಉಂಟುಮಾಡಿದ್ದು ಪ್ರಾಟೆಸ್ಟೆಂಟ್‌ವಾದ; ಧರ್ಮಪರಿಷತ್ತುಗಳೂ ತಪ್ಪೆಸಗಬಹುದು ಎಂಬುದನ್ನದು ಒತ್ತಿ ಹೇಳಿತು. ಹೀಗೆ ಸತ್ಯವನ್ನು ನಿರ್ಧರಿಸುವುದು ಸಾಮಾಜಿಕ ಪ್ರಯತ್ನವಾಗಿ ಉಳಿಯದೆ ವ್ಯಕ್ತಿಯದಾಯಿತು. ವಿವಿಧ ವ್ಯಕ್ತಿಗಳು ವಿವಿಧ ಬಗೆಯ ನಿಲವುಗಳನ್ನು ತಳೆದದ್ದರಿಂದಾಗಿ ತಿಕ್ಕಾಟ ಪ್ರಾರಂಭವಾಯಿತು, ಇದಕ್ಕೆ ಮತಧಾರ್ಮಿಕ ನಿರ್ಣಯಗಳನ್ನು ಕಂಡುಕೊಳ್ಳಬೇಕಾಯಿತು, ಆದರೆ ಬಿಷಪ್‌ಗಳ ಕೂಟಗಳಲ್ಲಲ್ಲ, ಯುದ್ಧರಂಗದಲ್ಲಿ. ಆದರೆ ಈ ಪಕ್ಷಗಳಲ್ಲಿ ಯಾವುದೂ ಮತ್ತೊಂದನ್ನು ನಿರ್ನಾಮ ಮಾಡಲು ಸಾಧ್ಯವಿಲ್ಲದ್ದರಿಂದಾಗಿ, ಕೊನೆಯಲ್ಲಿ ಬೌದ್ಧಿಕ ಮತ್ತು ನೈತಿಕ ವ್ಯಕ್ತಿವಾದ ಮತ್ತು ವ್ಯವಸ್ಥಿತ ಸಾಮಾಜಿಕ ಬದುಕುಗಳೆರಡರಲ್ಲಿ ಹೊಂದಾಣಿಕೆಯ ಆವಶ್ಯಕತೆ ಕಂಡುಬಂತು. ಆರಂಭಿಕ ಉದಾರವಾದವು ಪರಿಹರಿಸಬೇಕಾದ ಮುಖ್ಯ ಪ್ರಶ್ನೆಗಳಲ್ಲಿ ಇದು ಪ್ರಮುಖವಾದುದಾಗಿತ್ತು.

ಈ ಮಧ್ಯೆ, ವ್ಯಕ್ತಿವಾದವು ತತ್ವಜ್ಞಾನದಲ್ಲಿಯೂ ಹೊಕ್ಕಿತ್ತು. ಡೆಕಾರ್ಟೆಯ ಮೂಲಭೂತ ನಿಶ್ಚಿತತೆಯಾದ 'ನಾನು ಆಲೋಚಿಸುತ್ತೇನೆ, ಹೀಗಾಗಿ ನಾನು ಇದ್ದೇನೆ'

ಎಂಬುದು ವಿವಿಧ ವ್ಯಕ್ತಿಗಳ ಜ್ಞಾನಕ್ಕೆ ಭಿನ್ನ ನೆಲೆಯನ್ನೊದಗಿಸಿತು, ಯಾಕೆಂದರೆ ಪ್ರತಿ ವ್ಯಕ್ತಿಗೂ ಆರಂಭಿಕ ಬಿಂದುವು ತನ್ನ ಅಸ್ತಿತ್ವವೇ ಆಯಿತೇ ಹೊರತು ಬೇರೆ ವ್ಯಕ್ತಿಗಳೂ ಅಲ್ಲ, ಸಮುದಾಯವೂ ಅಲ್ಲ. ಸ್ಪಷ್ಟವೂ ನಿರ್ದಿಷ್ಟವೂ ಆದ ಚಿಂತನೆಗೆ ಅವನು ನೀಡಿದ ಒತ್ತು ಇದೇ ದಿಕ್ಕಿನಲ್ಲಿ ಸಾಗಿತು, ಯಾಕೆಂದರೆ ನಮ್ಮ ಚಿಂತನೆಗಳು ಸ್ಪಷ್ಟವೂ ನಿರ್ದಿಷ್ಟವೂ ಆಗಿವೆಯೇ ಎಂಬುದನ್ನು ಆತ್ಮಾವಲೋಕನದ ಮೂಲಕ ನಿರ್ಧರಿಸಬಹುದೆಂದು ಆಲೋಚಿಸುವಂತಾಯಿತು. ಡೆಕಾರ್ಟೆ ನಂತರದ ಬಹುತೇಕ ತತ್ವಜ್ಞಾನವು ಹೆಚ್ಚು ಕಡಿಮೆ ಪ್ರಮಾಣದಲ್ಲಿ ಈ ಬೌದ್ಧಿಕ ವ್ಯಕ್ತಿವಾದದ ಅಂಶವನ್ನು ಹೊಂದುವಂತಾಯಿತು.

ಆದರೆ ಈ ಸಾಮಾನ್ಯ ನಿಲವಿನಲ್ಲಿ ಅನೇಕ ಬಗೆಗಳಿವೆ, ಮತ್ತು ಇದರಿಂದಾಗಿ ನಡವಳಿಕೆಯಲ್ಲಿ ವಿವಿಧ ಪರಿಣಾಮಗಳುಂಟಾದವು. ಮಾದರಿ ಎನಿಸುವ ವಿಜ್ಞಾನ ಅನ್ವೇಷಕನ ದೃಷ್ಟಿಕೋನದಲ್ಲಿ ವ್ಯಕ್ತಿವಾದದ ಕನಿಷ್ಠ ಪ್ರಮಾಣವಿರುತ್ತದೆ. ಒಂದು ಹೊಸ ಸಿದ್ಧಾಂತವನ್ನವನು ತಲುಪಿದರೆ, ಅವನು ಹಾಗೆ ಮಾಡುವುದು ಅದು ಸರಿಯೆಂದು ಅವನಿಗೆ ಅನಿಸಿದ್ದರಿಂದಾಗಿಯೇ ಹೊರತು ಯಾವುದೇ ಅಧಿಕಾರಪ್ರಾಮಾಣ್ಯಕ್ಕೆ ಬಾಗಿಯಲ್ಲ; ಯಾಕೆಂದರೆ ಅವನೇನಾದರೂ ಹಾಗೆ ಮಾಡಿದರೆ, ಅವನು ತನ್ನ ಹಿಂದಿನವರ ಸಿದ್ಧಾಂತಗಳನ್ನೇ ಒಪ್ಪಿಕೊಳ್ಳಬೇಕಾಗುತ್ತದೆ. ಅದೇ ವೇಳೆಯಲ್ಲಿ, ಅವನು ಮೊರೆಹೋಗುವುದು ಸಾಮಾನ್ಯವಾಗಿ ಒಪ್ಪಿತವಾದ ಸತ್ಯದ ಮಾರ್ಗವನ್ನು; ಅವನು ಇತರರನ್ನು ಒಪ್ಪಿಸಲು ಪ್ರಯತ್ನಿಸುವುದು ತನ್ನ ಅಧಿಕಾರಪ್ರಾಮಾಣ್ಯದಿಂದಲ್ಲ, ವ್ಯಕ್ತಿಗಳಾಗಿ ಅವರೂ ಒಪ್ಪುವಂತಹ ವಾದಗಳ ಮೂಲಕ. ವಿಜ್ಞಾನದಲ್ಲಿ ವ್ಯಕ್ತಿ ಮತ್ತು ಸಮಾಜಗಳ ನಡುವಿನ ಯಾವುದೇ ತಿಕ್ಕಾಟವೂ ತಾತ್ಕಾಲಿಕವಾದುದು, ಯಾಕೆಂದರೆ ವಿಜ್ಞಾನಿಗಳು, ಸ್ಥೂಲವಾಗಿ ಹೇಳುವುದಾದರೆ, ಒಂದೇ ಬೌದ್ಧಿಕ ಮಾನದಂಡವನ್ನು ಅನುಸರಿಸುವವರು; ಹೀಗಾಗಿ ಅವರು ವಾದ ಮಾಡುತ್ತಾರೆ, ಮತ್ತು ಅನ್ವೇಷಣೆಗಳು ಕೊನೆಯಲ್ಲಿ ಒಪ್ಪಿಗೆಯನ್ನು ತರುತ್ತವೆ. ಆದರೆ ಇದು ಆಧುನಿಕ ಬೆಳವಣಿಗೆ; ಗೆಲಿಲಿಯೋ ಕಾಲದಲ್ಲಿ, ಅರಿಸ್ಟಾಟಲ್ ಮತ್ತು ಚರ್ಚ್‌ಗಳ ಅಧಿಕಾರಪ್ರಾಮಾಣ್ಯವು ಇಂದ್ರಿಯಗ್ರಾಹ್ಯವಾದುವಷ್ಟೇ ನಿಖರವೆಂದು ಪರಿಗಣಿತವಾಗಿತ್ತು. ಇದರಿಂದ ವಿದಿತವಾಗುವುದೆಂದರೆ, ವೈಜ್ಞಾನಿಕ ವಿಧಾನದಲ್ಲಿ ವ್ಯಕ್ತಿವಾದದ ಅಂಶವು, ಎದ್ದು ಕಾಣದಿದ್ದರೂ, ಅತ್ಯವಶ್ಯಕ ಎಂಬುದು.

ಮೊದಲಿನ ಉದಾರವಾದವು ಬೌದ್ಧಿಕ ವಿಷಯಗಳಲ್ಲಿ ಹಾಗೂ ಆರ್ಥಿಕ ವ್ಯವಸ್ಥೆಯಲ್ಲಿ ವ್ಯಕ್ತಿವಾದದ ಪರವಾಗಿತ್ತು, ಆದರೆ ಭಾವನಾತ್ಮಕವಾಗಿಯೂ ನೈತಿಕವಾಗಿಯೂ ಆತ್ಮಪ್ರತ್ಯಯದ್ದಾಗಿರಲಿಲ್ಲ. ಈ ಬಗೆಯ ಉದಾರವಾದವು ಹದಿನೆಂಟನೆಯ ಶತಮಾನದ ಇಂಗ್ಲಂಡ್‌ನಲ್ಲಿ, ಅಮೆರಿಕದ ಸಂವಿಧಾನ ಸ್ಥಾಪಕರಲ್ಲಿ, ಮತ್ತು ಫ್ರೆಂಚ್ ವಿಶ್ವಕೋಶಕರ್ತರಲ್ಲಿ ವ್ಯಾಪಕವಾಗಿತ್ತು. ಫ್ರೆಂಚ್ ಕ್ರಾಂತಿಯ ಹೊತ್ತಿನಲ್ಲಿ,

ಹೆಚ್ಚು ಸೌಮ್ಯ ಪಕ್ಷಗಳಲ್ಲಿಯೂ ಅದು ನೆಲೆಸಿತ್ತು, ಗಿರೋಂಡಿನ್‌ರನ್ನೂ ಒಳಗೊಂಡಂತೆ; ಆದರೆ ಅವರು ನಿರ್ನಾಮಗೊಂಡ ಬಳಿಕ ಒಂದು ಪೀಳಿಗೆಯ ಕಾಲ ಅದು ಫ್ರೆಂಚ್ ರಾಜಕೀಯದಿಂದ ಕಣ್ಮರೆಯಾಯಿತು. ನೆಪೋಲಿಯನ್ ಯುದ್ಧಗಳ ಬಳಿಕ ಇಂಗ್ಲೆಂಡ್‌ನಲ್ಲಿ ಬೆಂಥಮ್‌ವಾದಿಗಳು ಮತ್ತು ಮ್ಯಾಂಚೆಸ್ಟರ್ ಪಂಥಗಳ ಉದಯದಿಂದಾಗಿ ಅದು ಮತ್ತೆ ಪ್ರಭಾವಶಾಲಿಯಾಯಿತು. ಅದು ಅತ್ಯಂತ ಹೆಚ್ಚಿನ ಯಶಸ್ಸು ಗಳಿಸಿದ್ದು ಅಮೆರಿಕದಲ್ಲಿ, ಊಳಿಗಮಾನ್ಯ ವ್ಯವಸ್ಥೆ ಮತ್ತು ದೇಶದ ಏಕೈಕ ಚರ್ಚ್‌ನಿಂದ ಕುಂಠಿತಗೊಳ್ಳದೆ ಅಲ್ಲಿ ೧೭೭೬ ರಿಂದ ಇಲ್ಲಿಯವರೆಗೂ. ಕನಿಷ್ಠ ಪಕ್ಷ ೧೯೩೩ ರವೆಗೆ, ವ್ಯಾಪಕವಾಗಿದೆ.

ಉದಾರವಾದದ ವಿರುದ್ಧವಾದವಾಗಿ ಕ್ರಮೇಣ ರೂಪುಗೊಂಡ ಚಳುವಳಿಯೊಂದು ರೂಸೋನಿಂದ ಆರಂಭಗೊಳ್ಳುತ್ತದೆ, ಆಮೇಲೆ ರೊಮ್ಯಾಂಟಿಕ್ ಮನೋಭಾವ ಮತ್ತು ರಾಷ್ಟ್ರೀಯತೆಗಳಿಂದ ಪ್ರಬಲಗೊಂಡಿತು. ಈ ಚಳುವಳಿಯಲ್ಲಿ, ವ್ಯಕ್ತಿವಾದವು ಬೌದ್ಧಿಕ ವಲಯದಿಂದ ರಾಗಭಾವಗಳ ವಲಯದವರೆಗೂ ವಿಸ್ತೃತಗೊಂಡಿತು, ಮತ್ತು ವ್ಯಕ್ತಿವಾದದ ಅನಾಯಕತ್ವದ ಅಂಶಗಳನ್ನು ಸ್ಫುಟಗೊಳಿಸಿತು. ಕಾರ್ಲೈಲ್ ಮತ್ತು ನೀಷೆಯರಿಂದ ಬೆಳೆದು ನಿಂತ ವಿಭೂತಿಪೂಜೆಯು ಈ ತಾತ್ವಿಕತೆಯ ವೈಶಿಷ್ಟ್ಯವಾಗಿದೆ. ನಾನಾ ಅಂಶಗಳು ಅದರಲ್ಲಿ ಮೇಳೈಸಿದವು. ಮೊದಲಿಗೆ ಕೈಗಾರಿಕೀಕರಣದ ಬಗೆಗಿನ ಅಸಹನೆ, ಅದರಿಂದ ಉಂಟಾಗುವ ವಿಕೃತಿಯ ಬಗೆಗಿನ ಕೋಪ, ಮತ್ತು ಅದರ ಕ್ರೌರ್ಯದ ವಿರುದ್ಧವಾದ ಹೇವರಿಕೆ. ಆಧುನಿಕ ಜಗತ್ತಿನ ದ್ವೇಷದಿಂದಾಗಿ ಆದರ್ಶೀಕರಣಗೊಂಡ ಮಧ್ಯಯುಗದ ಬಗೆಗಿನ ಹಂಬಲ ಉಂಟಾಯಿತು. ಕ್ಷೀಣಗೊಳ್ಳುತ್ತಿರುವ ಚರ್ಚ್‌ನ ಸವಲತ್ತುಗಳು ಮತ್ತು ಶ್ರೀಮಂತಪ್ರಭುಗಳ ಬೆಂಬಲದೊಡನೆ ಉದ್ಯಮಪತಿಗಳ ದೌರ್ಜನ್ಯಕ್ಕೊಳಗಾದ ದುಡಿಮೆಗಾರರ ರಕ್ಷಣೆಯನ್ನು ಒಗ್ಗೂಡಿಸುವ ಪ್ರಯತ್ನ ನಡೆಯಿತು. ರಾಷ್ಟ್ರೀಯತೆಯ ಹೆಸರಿನಲ್ಲಿ ಬಂಡಾಯದ ಹಕ್ಕಿನ ಪ್ರತಿಪಾದನೆ ಮತ್ತು 'ಸ್ವಾತಂತ್ರ್ಯ'ದ ರಕ್ಷಣೆಗಾಗಿ ಯುದ್ಧದ ವೈಭವೀಕರಣ ಪ್ರಬಲವಾಯಿತು. ಈ ಚಳುವಳಿಯ ಕವಿ ಬೈರನ್; ಫ್ಲಿಷ್ಟೆ, ಕಾರ್ಲೈಲ್ ಮತ್ತು ನೀಷೆ ಅದರ ತತ್ವಜ್ಞಾನಿಗಳು.

ನಾವೆಲ್ಲ ನಾಯಕಮಣಿಗಳಾಗುವ ಸಾಧ್ಯತೆಯಿಲ್ಲದ್ದರಿಂದಾಗಿ, ಮತ್ತು ನಮ್ಮ ಬೌದ್ಧಿಕ ಇಚ್ಛೆಯು ಮೇಲುಗೈ ಪಡೆಯಲು ಆಗದಿರುವುದರಿಂದಾಗಿ ಈ ತಾತ್ವಿಕತೆಯನ್ನು ಅಳವಡಿಸಿಕೊಂಡರೆ, ಮಿಕ್ಕೆಲ್ಲ ಬಗೆಯ ಅರಾಜಕತೆಯಂತೆಯೇ, ಬಹು ಯಶಸ್ವೀ 'ನಾಯಕ'ನ ದೌರ್ಜನ್ಯಕಾರಕ ಸರ್ಕಾರ ರಚಿತವಾಗಲು ಕಾರಣವಾಗುತ್ತದೆ. ಅವನ ದೌರ್ಜನ್ಯವು ಸ್ಥಾಪಿತಗೊಂಡರೆ, ತಾನು ಅಧಿಕಾರಕ್ಕೇರಲು ಕಾರಣವಾದ ಇತರರ ಆತ್ಮಪ್ರತ್ಯಯವನ್ನು ಹತ್ತಿಕ್ಕುವ ನೀತಿಯನ್ನು ದಮನ ಮಾಡುತ್ತಾನೆ. ಹೀಗಾಗಿ, ಬದುಕಿನ ಬಗೆಗಿನ ಈ ಇಡೀ ಸಿದ್ಧಾಂತವು ಸ್ವನಿರಾಕರಣೆಯದು, ಅಂದರೆ ಅದನ್ನು ರೂಢಿಯಲ್ಲಿ

ತಂದರೆ ಅದರಿಂದ ವಿಪರೀತ ಪರಿಣಾಮವೇ ಉಂಟಾಗುತ್ತದೆ: ವ್ಯಕ್ತಿಯು ತೀವ್ರ ದಮನಕ್ಕೊಳಗಾಗುವ ನಿರಂಕುಶ ಸರ್ಕಾರ.

ಮತ್ತೊಂದು ತಾತ್ವಿಕತೆಯೂ ಇದೆ, ಮುಖ್ಯವಾಗಿ ಅದು ಉದಾರವಾದದ ಒಂದು ಟಿಸಿಲು, ಅಂದರೆ ಮಾರ್ಕ್ಸ್‌ನದು. ಅವನ ಬಗ್ಗೆ ನಾನು ಆಮೇಲೆ ಹೇಳುತ್ತೇನೆ. ಸದ್ಯಕ್ಕೆ ಅವನನ್ನು ನೆನಪಿಸಿಕೊಂಡರಷ್ಟೇ ಸಾಕು.

ಉದಾರವಾದಿ ತತ್ವಜ್ಞಾನದ ಮೊದಲ ಸಮಗ್ರ ಹೇಳಿಕೆಯನ್ನು ಲಾಕ್‌ನಲ್ಲಿ ಕಾಣಬಹುದು; ಅವನು ಆಧುನಿಕ ತತ್ವಜ್ಞಾನಿಗಳಲ್ಲಿ ಅತ್ಯಂತ ಮಹತ್ವದವನಲ್ಲದಿದ್ದರೂ ಅತ್ಯಂತ ಪ್ರಭಾವಶಾಲಿಯಾದವನು. ಇಂಗ್ಲಂಡ್‌ನಲ್ಲಿ ಅವನ ಅಭಿಪ್ರಾಯಗಳು ಅತ್ಯಂತ ಬುದ್ಧಿವಂತ ಜನರದರೊಡನೆ ಎಷ್ಟು ಸಂಪೂರ್ಣವಾಗಿ ಹೊಂದಿಕೊಳ್ಳುವಂತಹವಾಗಿದ್ದಿತೆಂದರೆ, ಸೈದ್ಧಾಂತಿಕ ತತ್ವಜ್ಞಾನದ ಹೊರತಾಗಿ ಅವರ ಪ್ರಭಾವಗಳನ್ನು ಗುರುತಿಸುವುದು ಕಷ್ಟಕರ. ಮತ್ತೊಂದೆಡೆ, ಫ್ರಾನ್ಸ್‌ನಲ್ಲಿ ಅವನ ಪ್ರಭಾವವು ಆಗಿನ ಆಡಳಿತಕ್ಕೆ ವಾಸ್ತವ ನೆಲೆಯಲ್ಲಿಯೂ, ರೂಢಿಯಲ್ಲಿದ್ದ ಕಾರ್ಟೀಸಿಯನ್ ಸಿದ್ಧಾಂತಕ್ಕೂ ಎಷ್ಟು ವಿರೋಧವನ್ನುಂಟುಮಾಡಿತು ಎಂದರೆ, ಘಟನಾವಳಿಗಳು ರೂಪುಗೊಳ್ಳುವುದರಲ್ಲಿ ಸಾಕಷ್ಟು ಪರಿಣಾಮವನ್ನು ಉಂಟುಮಾಡಿದ್ದವು. ಇದು ಸಾಮಾನ್ಯ ತತ್ವದ ಒಂದು ನಿದರ್ಶನ: ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಮುಂದುವರಿದ ದೇಶದಲ್ಲಿ ಬೆಳೆದ ತತ್ವಜ್ಞಾನವೊಂದು, ತನ್ನ ಜನ್ಮಸ್ಥಳದಲ್ಲಿ ವ್ಯಾಪಕವಾಗಿದ್ದ ಜನಾಭಿಪ್ರಾಯದ ಸ್ಪಷ್ಟೀಕರಣ ಮತ್ತು ವ್ಯವಸ್ಥೀಕರಣಕ್ಕಿಂತ ಕೊಂಚವೇ ಮಿಗಿಲಾಗಿದ್ದರೆ, ಬೇರೆಡೆಯಲ್ಲಿ ಕ್ರಾಂತಿಕಾರಕ ಉತ್ಸಾಹದ ಆಕರವಾಗಿ, ಅಂತಿಮದಲ್ಲಿ ವಸ್ತುತಃ ಕ್ರಾಂತಿಯೇ ಆಗಿಬಿಡುವಂತೆ ಮಾಡಬಹುದು. ಮುಂದುವರಿದ ದೇಶಗಳ ಧೋರಣೆಯನ್ನು ಕ್ರಮಬದ್ಧಗೊಳಿಸುವ ಸೂಕ್ತವಾಕ್ಯಗಳು ಕಡಿಮೆ ಮುಂದುವರಿದ ದೇಶಗಳಲ್ಲಿ ಗೊತ್ತಾಗುವುದು ಮುಖ್ಯವಾಗಿ ತಾತ್ವಿಕ ಸಿದ್ಧಾಂತಿಗಳ ಮೂಲಕವಾಗಿಯೇ. ಮುಂದುವರಿದ ದೇಶಗಳಲ್ಲಿ ನಡಾವಳಿಯು ಸಿದ್ಧಾಂತಗಳಿಗೆ ಪ್ರೇರಣೆಯೊದಗಿಸಿದರೆ, ಮಿಕ್ಕವುಗಳಲ್ಲಿ ಸಿದ್ಧಾಂತಗಳು ನಡಾವಳಿಯನ್ನು ರೂಪಿಸುತ್ತವೆ. ತಮ್ಮ ಹುಟ್ಟು ಜಾಗದಲ್ಲಿ ಪಡೆದಷ್ಟು ಯಶಸ್ಸನ್ನು ನಾಟಿಮಾಡಿದ ಚಿಂತನೆಗಳು ಪಡೆಯದಿರುವುದಕ್ಕೆ ಇದೂ ಒಂದು ಕಾರಣ.

ಲಾಕ್‌ನ ತಾತ್ವಿಕತೆಯನ್ನು ಪರಿಶೀಲಿಸುವುದಕ್ಕೆ ಮುಂಚೆ, ಹದಿನೇಳನೆಯ ಶತಮಾನದ ಇಂಗ್ಲಂಡ್‌ನಲ್ಲಿ ಅವನ ಅಭಿಪ್ರಾಯಗಳನ್ನು ರೂಪಿಸುವಲ್ಲಿ ಪ್ರಭಾವ ಬೀರಿದ್ದ ಪರಿಸ್ಥಿತಿಗಳನ್ನು ಸಮೀಕ್ಷಿಸೋಣ.

ಅಂತರ್ಯುದ್ಧದಲ್ಲಿನ ರಾಜ ಮತ್ತು ಸಂಸತ್ತುಗಳ ನಡುವಣ ತಿಕ್ಕಾಟವು, ಇಂಗ್ಲಿಷ್ ಜನರಲ್ಲಿ ಇವತ್ತಿನವರೆಗೂ ಆವರಿಸಿದ್ದ ಯಾವುದೇ ಸಿದ್ಧಾಂತವನ್ನು ಅದರ ತಾರ್ಕಿಕ ಅಂತ್ಯದೆಡೆಗೆ ನೂಕುವುದರ ಭಯವು, ಒಮ್ಮೆಗೇ ಸಂಧಾನ

ಮತ್ತು ಪರಿಷ್ಕರಣೆಗಳ ಒಲವನ್ನು ಉಂಟುಮಾಡಿತು. ಮೊದಲಿಗೆ ದೀರ್ಘ ಸಂಸತ್ತು ಬೆಂಬಲಿಸಿದ್ದ ತತ್ವಗಳು ವ್ಯಾಪಕ ಜನಬೆಂಬಲವನ್ನು ಪಡೆಯಿತು. ವ್ಯಾಪಾರದ ಏಕಸ್ವಾಮ್ಯವನ್ನು ನೀಡುವ ಹಕ್ಕನ್ನು ರಾಜನಿಗೆ ನಿರಾಕರಿಸುವ ಹಾಗೂ ಸಂಸತ್ತಿಗೆ ತೆರಿಗೆಗಳನ್ನು ವಿಧಿಸುವ ಪ್ರತ್ಯೇಕ ಅಧಿಕಾರವನ್ನು ಅವನು ಒಪ್ಪುವಂತೆ ಮಾಡುವ ಬಯಕೆಯನ್ನು ಅವರು ಹೊಂದಿದ್ದರು. ಅಭಿಪ್ರಾಯಗಳು ಮತ್ತು ಅನುಷ್ಠಾನಗಳಿಗಾಗಿ ಆರ್ಚ್‌ಬಿಷಪ್ ಲಾಡ್ ಖಂಡನೆಗೊಳಪಡಿಸುತ್ತಿದ್ದ ಇಂಗ್ಲಂಡ್‌ನ ಚರ್ಚ್‌ನಲ್ಲಿ ಅವರು ಸ್ವಾತಂತ್ರ್ಯವನ್ನು ಬಯಸಿದರು. ಸಂಸತ್ತು ನಿರ್ದಿಷ್ಟ ಅವಧಿಗಳಲ್ಲಿ ಸೇರಬೇಕೇ ಹೊರತು ಅದರ ಅನುಮೋದನೆಯು ಅನಿವಾರ್ಯವೆನಿಸಿದಾಗ ರಾಜನು ಸೇರಿಸುವ ಅಪರೂಪದ ಸಂದರ್ಭಗಳಲ್ಲಲ್ಲ ಎಂದವರು ಒತ್ತಾಯಿಸಿದರು. ಬೇಕಾದಾಗ ದಸ್ತಗಿರಿ ಮಾಡುವ ಪದ್ಧತಿಯನ್ನೂ, ನ್ಯಾಯಾಧಿಪತಿಗಳು ರಾಜರ ಇರಾದೆಗಳಿಗೊಳಪಡುವುದನ್ನೂ ಅವರು ವಿರೋಧಿಸಿದರು. ಆದರೆ ಈ ಉದ್ದೇಶಗಳ ಈಡೇರಿಕೆಗಾಗಿ ಪ್ರತಿಭಟಿಸಲು ಸಿದ್ಧರಾಗಿದ್ದ ಅನೇಕರು ರಾಜನ ವಿರುದ್ಧ ಯುದ್ಧ ಹೂಡಲು ಸಿದ್ಧರಿರಲಿಲ್ಲ, ಅದು ಅವರಿಗೆ ರಾಜದ್ರೋಹವೂ ಅಪವಿತ್ರವೂ ಆಗಿ ಕಾಣಿಸಿತು. ವಾಸ್ತವ ಯುದ್ಧವು ಆರಂಭಗೊಂಡ ತಕ್ಷಣವೇ, ಶಕ್ತಿಗಳ ವಿಭಜನೆಯು ಹೆಚ್ಚು ಸಮಾನವಾಯಿತು.

ಕ್ರಾಮ್‌ವೆಲ್‌ನನ್ನು ಲಾರ್ಡ್ ಪ್ರೊಟೆಕ್ಟರ್ ಆಗಿ ಸ್ಥಾಪಿಸುವ ಸಲುವಾಗಿ ಆರಂಭವಾದ ಅಂತರ್ಯುದ್ಧದ ರಾಜಕೀಯ ಬೆಳವಣಿಗೆಯು ಈಗ ಸ್ಪಷ್ಟವಾಗಿರುವುದಾದರೂ ಆಗ ಏನಾಗುತ್ತದೆಂದು ಹೇಳುವಂತಿರಲಿಲ್ಲ. ಸಂಸತ್ತಿನ ಪಕ್ಷವು ಎರಡು ಬಣಗಳನ್ನು ಹೊಂದಿದ್ದಿತು, ಪ್ರೆಸ್ಬಿಟೇರಿಯನ್‌ರು ಮತ್ತು ಸ್ವತಂತ್ರರು; ಪ್ರೆಸ್ಬಿಟೇರಿಯನ್‌ರು ಸರ್ಕಾರದ ಆಶ್ರಯದಲ್ಲಿ ಚರ್ಚ್ ಅನ್ನು ಉಳಿಸಿ, ಬಿಷಪ್‌ರನ್ನು ರದ್ದುಪಡಿಸಲು ಬಯಸಿದರೆ, ಸ್ವತಂತ್ರರು ಅವರೊಡನೆ ಬಿಷಪ್‌ರ ವಿಷಯದಲ್ಲಿ ಅನುಮೋದನೆ ನೀಡಿದರೂ, ಕೇಂದ್ರೀಕೃತ ಮತಧಾರ್ಮಿಕ ಆಡಳಿತ ನಿಯಂತ್ರಣವಿಲ್ಲದೆ ಪ್ರತಿ ಸಮಾವೇಶವೂ ತನ್ನದೇ ಮತಧರ್ಮಶಾಸ್ತ್ರವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಹೊಂದಿರಬೇಕು ಎಂಬ ನಿಲವನ್ನು ತಾಳಿದರು. ಮುಖ್ಯವಾಗಿ ಪ್ರೆಸ್ಬಿಟೇರಿಯನ್‌ರು ಸ್ವತಂತ್ರರಿಗಿಂತ ಹೆಚ್ಚಿನ ಸಾಮಾಜಿಕ ವರ್ಗಕ್ಕೆ ಸೇರಿದ್ದವರು, ಅವರ ರಾಜಕೀಯ ಅಭಿಪ್ರಾಯಗಳು ಹೆಚ್ಚು ಹಾಳತವಾದುದಾಗಿದ್ದವು. ಸೋಲಿನಿಂದಾಗಿ ರಾಜನು ಸಂಧಾನಕ್ಕೆ ಒಪ್ಪಿಕೊಳ್ಳಲು ಸಿದ್ಧನಾದಾಗ ಅವರು ಅವನೊಡನೆ ಒಪ್ಪಂದಕ್ಕೆ ಬರಲು ಹವಣಿಸಿದರು. ಆದರೆ ಅವರ ಧೋರಣೆಯು ಎರಡು ಪರಿಸ್ಥಿತಿಗಳಿಂದಾಗಿ ಅಸಾಧ್ಯವಾಯಿತು: ಮೊದಲನೆಯದಾಗಿ, ಬಿಷಪ್‌ರ ವಿಚಾರದಲ್ಲಿ ರಾಜನು ಹುತಾತ್ಮ ಮನೋಭಾವವನ್ನು ತಾಳಿದ್ದು; ಎರಡನೆಯದಾಗಿ, ರಾಜನ ಸೋಲು ಕಷ್ಟಕರವಾಗಿ ತೋರಿದಾಗ, ಸ್ವತಂತ್ರರು ತುಂಬಿದ್ದ ಕ್ರಾಮ್‌ವೆಲ್‌ನ

ಹೊಸತಾಗಿ ರೂಪಿತವಾದ ಸೈನ್ಯದ (ನ್ಯೂ ಮಾಡಲ್ ಆರ್ಮಿ) ಸಹಾಯದಿಂದ ಗೆದ್ದುದು. ಇದರ ಪರಿಣಾಮವಾಗಿ, ರಾಜನ ಸೈನಿಕ ವಿರೋಧವನ್ನು ಬಗ್ಗು ಬಡಿದಾಗ, ಅವನು ಆಗಲೂ ಸಂಧಾನವನ್ನು ಮಾಡಿಕೊಳ್ಳಲಾಗದ ಪರಿಸ್ಥಿತಿಯಲ್ಲಿದ್ದ, ಯಾಕೆಂದರೆ ಸಂಸತ್ತಿನ ಸೈನ್ಯದೆದುರು ಪ್ರೆಸ್ಬಿಟೇರಿಯನ್ನರು ತಮ್ಮ ಮೇಲುಗೈಯನ್ನು ಕಳೆದುಕೊಂಡಿದ್ದರು. ಪ್ರಜಾಪ್ರಭುತ್ವದ ರಕ್ಷಣೆಯು ಅಧಿಕಾರವನ್ನು ಅಲ್ಪಸಂಖ್ಯಾತರ ಕೈಗೆ ಒಪ್ಪಿಸಿತ್ತು; ಪ್ರಜಾಪ್ರಭುತ್ವಕ್ಕೆ ಹಾಗೂ ಸಂಸದೀಯ ಆಡಳಿತಕ್ಕೆ ಕಿಂಚಿತ್ತೂ ಬೆಲೆ ಕೊಡದೆ ಅದು ತನ್ನ ಅಧಿಕಾರವನ್ನು ಚಲಾಯಿಸಿತು, ಐದು ಮಂದಿಯನ್ನು ಮೊದಲನೆಯ ಚಾರ್ಲ್ಸ್ ಸೆರೆ ಹಿಡಿಯಲು ಪ್ರಯತ್ನಿಸಿದಾಗ, ಅದರಿಂದ ಸಾರ್ವತ್ರಿಕ ಗಲಭೆಯುಂಟಾಯಿತು, ಮತ್ತು ಅವನ ಸೋಲು ಅವನನ್ನು ಅಪಹಾಸ್ಯಕ್ಕೊಳಗಾಗಿಸಿತು. ಆದರೆ ಕ್ರಾಮ್‌ವೆಲ್‌ಗೆ ಅಂಥ ತೊಂದರೆಗಳಾವುವೂ ಇರಲಿಲ್ಲ. ಹೆಮ್ಮೆಯ ಶುದ್ಧೀಕರಣ (ಪ್ರೈಡ್ಸ್ ಪರ್ಜ್) ದಿಂದ ಅವನು ಸುಮಾರು ನೂರು ಮಂದಿ ಪ್ರೆಸ್ಬಿಟೇರಿಯನ್ ಸದಸ್ಯರನ್ನು ವಜಾಗೊಳಿಸಿ ಸದ್ಯಕ್ಕೆ ತನಗೆ ವಿಧೇಯವಾದ ಬಹುಸಂಖ್ಯೆಯನ್ನು ಸಾಧಿಸಿಕೊಂಡ. ಅಂತಿಮವಾಗಿ, ಅವನು ಸಂಸತ್ತನ್ನು ಸಂಪೂರ್ಣವಾಗಿ ರದ್ದುಪಡಿಸಲು ನಿರ್ಧರಿಸಿದಾಗ 'ಒಂದು ನಾಯಿ ಕೂಡ ಬಗುಳಲಿಲ್ಲ' – ಯುದ್ಧದಿಂದಾಗಿ ಸೈನ್ಯವೇ ಮುಖ್ಯವೆನಿಸುವಂತಾಯಿತು, ಸಂವಿಧಾನಾತ್ಮಕ ರೂಪಗಳ ಬಗ್ಗೆ ಅವಜ್ಞೆಯುಂಟಾಯಿತು. ಕ್ರಾಮ್‌ವೆಲ್‌ನ ಉಳಿದ ಆಯುಸ್ಸಿನಲ್ಲಿ ಇಂಗ್ಲಂಡ್ ಸರ್ಕಾರವು ಸೈನಿಕ ದೌರ್ಜನ್ಯದ್ದಾಗಿತ್ತು, ದೇಶದ ಬಹುಸಂಖ್ಯಾತ ಜನರು ಅದನ್ನು ದ್ವೇಷಿಸುವಂತಾಯಿತು, ಆದರೆ ಅದು ಅಸಾಧ್ಯವಾಗಿತ್ತು, ಯಾಕೆಂದರೆ ಅವನ ಕಡೆಯವರು ಮಾತ್ರವೇ ಶಸ್ತ್ರಸಜ್ಜಿತವಾಗಿದ್ದುದು.

ಓಕ್ ಮರಗಳ ನಡುವೆ ಅವಿತುಕೊಂಡು ಹಾಲಂಡ್‌ನಲ್ಲಿ ನಿರಾಶ್ರಿತನಂತೆ ಬದುಕಿದ್ದ ಎರಡನೆಯ ಚಾರ್ಲ್ಸ್, ರಾಜತ್ವ ಪುನಃಪ್ರತಿಷ್ಠಾಪನೆಯ (ರೆಸ್ಟೋರೇಷನ್) ಕಾಲದಲ್ಲಿ, ತಾನು ಮತ್ತೆ ಈ ಬಗೆಯ ಪ್ರವಾಸ ಕೈಗೊಳ್ಳಬಾರದೆಂದು ನಿರ್ಧರಿಸಿದ. ಇದರಿಂದಾಗಿ ಕೆಲವು ಸುಧಾರಣೆಗಳನ್ನು ತರುವಂತಾಯಿತು. ಸಂಸತ್ತು ಒಪ್ಪದಿರುವ ಯಾವ ತೆರಿಗೆಯನ್ನೂ ವಿಧಿಸುವ ಅಧಿಕಾರವನ್ನೂ ಅವನು ಬಯಸಲಿಲ್ಲ. ಹೇಬಿಯಸ್ ಕಾರ್ಪಸ್ ವಿಧಿಗೆ ಅವನು ಒಪ್ಪಿಗೆಯಿತ್ತ, ಇದರಿಂದಾಗಿ ರಾಜಪ್ರಭುತ್ವವು ಬೇಕಾದವರನ್ನು ಸೆರೆಗೆ ತಳ್ಳುವುದು ಅಸಾಧ್ಯವಾಯಿತು. ಕೆಲವು ಸಂದರ್ಭಗಳಲ್ಲಿ ಅವನು ಹದಿನಾಲ್ಕನೆಯ ಲೂಯಿಯಿಂದ ಅನುದಾನದ ರೂಪದಲ್ಲಿ ಸಂಸತ್ತಿನ ಹಣಕಾಸಿನ ಅಧಿಕಾರವನ್ನು ಮೀರಬಹುದಾಗಿತ್ತು, ಆದರೆ ಮುಖ್ಯವಾಗಿ ಅವನು ಸಂವಿಧಾನಾತ್ಮಕ ರಾಜನಾದ. ಮೊದಲನೆಯ ಚಾರ್ಲ್ಸ್‌ನ ವಿರೋಧಿಗಳು ಬಯಸಿದ್ದ ಬಹುತೇಕ ರಾಜಾಧಿಕಾರದ ಪರಿಮಿತಿಗಳಿಗೆ ರಾಜತ್ವ ಪುನಃಸ್ಥಾಪನೆಯ ಕಾಲದಲ್ಲಿ ಒಪ್ಪಿಗೆ ನೀಡಲಾಯಿತು; ಅವನ್ನು ಎರಡನೆಯ ಚಾರ್ಲ್ಸ್ ಮಾನ್ಯಮಾಡಿದ, ಯಾಕೆಂದರೆ ರಾಜನು ತನ್ನ

ಪ್ರಜೆಗಳಿಂದಲೇ ಕಷ್ಟಗಳಿಗೊಳಗಾಗುವ ಸಾಧ್ಯತೆಯಿದ್ದುದು.

ತನ್ನ ಸೋದರನಿಗಿಂತ ಭಿನ್ನನಾಗಿದ್ದ ಎರಡನೆಯ ಜೇಮ್ಸ್ ಒಂದಿಷ್ಟೂ ಸೂಕ್ಷ್ಮತೆ ಮತ್ತು ನಯವಂತಿಕೆಗಳನ್ನು ಹೊಂದಿರದಿದ್ದವನು. ತನ್ನ ಕುರುಡು ಕ್ಯಾಥೋಲಿಕ್ ನಂಬಿಕೆಯಿಂದಾಗಿ, ಸಂಸತ್ತನ್ನು ಧಿಕ್ಕರಿಸಿ ಎರಡನೆಯ ಪಂಗಡದವರಿಗೆ ಸಹಿಷ್ಣುತೆಯನ್ನು ನೀಡಿ ಓಲೈಸಲು ಮಾಡಿದ ಪ್ರಯತ್ನಗಳ ಹೊರತಾಗಿ, ಆಂಗ್ಲಿಕನ್‌ರನ್ನೂ ಬ್ರಿಟಿಷ್ ಸಂಪ್ರದಾಯಶರಣರನ್ನು (ಕನ್‌ಫಾರ್ಮಿಸ್ಟ್ಸ್) ತನ್ನ ವಿರುದ್ಧವಾಗಿಯೇ ಒಂದುಗೂಡಿಸಿದ. ವಿದೇಶಾಂಗನೀತಿಯೂ ಇದರ ಒಂದು ಭಾಗವಾಗಿತ್ತು. ಯುದ್ಧಕಾಲದಲ್ಲಿ ಸಂಸತ್ತನ್ನು ಅವಲಂಬಿಸಬೇಕಾಗಿದ್ದ ಅನಿವಾರ್ಯ ತೆರಿಗೆಗಳಿಂದ ತಪ್ಪಿಸಿಕೊಳ್ಳಲು ಸ್ಟೂಅರ್ಟ್‌ರು ದಾಸ್ಯಮನೋಭಾವವನ್ನು ಅನುಸರಿಸಿದರು, ಮೊದಲು ಸ್ಪೆಯಿನ್‌ಗೆ ಆನಂತರ ಫ್ರಾನ್ಸ್‌ಗೆ. ಹೆಚ್ಚುತ್ತಿದ್ದ ಫ್ರಾನ್ಸ್‌ನ ಅಧಿಕಾರವು ಪ್ರಮುಖ ಯುರೋಪ್ ದೇಶದ ಬಗೆಗಿನ ಇಂಗ್ಲಿಷ್ ದ್ವೇಷಭಾವನೆಯನ್ನು ಕೆರಳಿಸಿತಲ್ಲದೆ, ನ್ಯಾಂಟೆ ಶಾಸನ (ಎಡಿಕ್ಟ್ ಆಫ್ ನ್ಯಾಂಟೆ) ವನ್ನು ರದ್ದುಮಾಡಿ ಪ್ರಾಟೆಸ್ಟೆಂಟ್‌ರು ಹದಿನಾಲ್ಕನೆಯ ಲೂಯಿಯನ್ನು ಕಟುವಾಗಿ ವಿರೋಧಿಸುವಂತೆ ಮಾಡಿತು. ಕೊನೆಯಲ್ಲಿ, ಇಂಗ್ಲಂಡ್‌ನ ಬಹುತೇಕ ಪ್ರತಿಯೊಬ್ಬನೂ ಜೇಮ್ಸ್‌ನನ್ನು ಮುಗಿಸಲು ಬಯಸಿದರು. ಆದರೆ ಬಹುತೇಕ ಪ್ರತಿಯೊಬ್ಬನೂ ಅಂತರ್ಯುದ್ಧದ ದಿನಗಳಿಗೆ ಮತ್ತು ಕ್ರಾಮ್‌ವೆಲ್‌ನ ಸರ್ವಾಧಿಕಾರಕ್ಕೆ ಮರಳದಿರಲೂ ಅಷ್ಟೇ ಕಠಿಣ ನಿರ್ಧಾರ ಮಾಡಿದರು. ಜೇಮ್ಸ್‌ನನ್ನು ಕೊನೆಗೊಳಿಸುವ ಯಾವುದೇ ಸಂವಿಧಾನಾತ್ಮಕ ಮಾರ್ಗವಿಲ್ಲದ್ದರಿಂದ ಕ್ರಾಂತಿಯೇ ಆಗಬೇಕಾಯಿತು; ಆದರೆ ವಿನಾಶಕಾರಿಗಳಿಗೆ ಅವಕಾಶ ನೀಡದಂತೆ ಅದು ಬೇಗ ಮುಗಿಯಬೇಕಾಗಿತ್ತು. ಸಂಸತ್ತಿನ ಹಕ್ಕುಗಳನ್ನು ಮತ್ತೆ ಸಂಪೂರ್ಣವಾಗಿ ರಕ್ಷಿಸಬೇಕಾಗಿತ್ತು. ರಾಜನು ತೊಲಗಬೇಕು, ಆದರೆ ರಾಜಪ್ರಭುತ್ವ ಉಳಿಯಬೇಕು, ಆದರೆ ಅದು ದೈವದತ್ತ ಅಧಿಕಾರದ್ದಾಗಿರದೆ, ಕಾನೂನಿನ ಒಪ್ಪಿಗೆಯನ್ನು ಮತ್ತು ಹಾಗೆಯೇ ಸಂಸತ್ತನ್ನು ಅವಲಂಬಿಸುವ ರಾಜಪ್ರಭುತ್ವವಾಗಿರಬೇಕು. ಶ್ರೀಮಂತವರ್ಗ ಮತ್ತು ದೊಡ್ಡ ವ್ಯಾಪಾರಿಗಳ ಒಗ್ಗೂಡುವಿಕೆಯಿಂದ ಇದನ್ನೆಲ್ಲ, ಗುಂಡು ಹಾರಿಸದೆಯೇ, ಒಂದು ಕ್ಷಣದಲ್ಲಿ ನನಸು ಮಾಡಲಾಯಿತು. ಎಲ್ಲ ಬಗೆಯ ಹಟವಾದಿತನವನ್ನು ಪ್ರಯತ್ನಿಸಿ ಅದೆಲ್ಲ ವಿಫಲವಾದ ಮೇಲೆ, ಸಂಧಾನ ಮತ್ತು ಪರಿಷ್ಕರಣಗಳು ಯಶಸ್ವಿಯಾದವು.

ಡಚ್ ಆಗಿದ್ದ ಹೊಸ ರಾಜನು ತನ್ನ ದೇಶವು ಪ್ರಖ್ಯಾತವಾಗಿದ್ದ ವಾಣಿಜ್ಯ ಮತ್ತು ಮತಧಾರ್ಮಿಕ ವಿವೇಕವನ್ನು ತನ್ನೊಡನೆ ತಂದ. ಬ್ಯಾಂಕ್ ಆಫ್ ಇಂಗ್ಲಂಡ್ ಅನ್ನು ಸೃಷ್ಟಿಸಲಾಯಿತು; ರಾಷ್ಟ್ರೀಯ ಋಣಭಾರವನ್ನು ಸುರಕ್ಷಿತ ಹೂಡಿಕೆಯಾಗಿ ಪರಿವರ್ತಿಸಲಾಯಿತು, ಇದರಿಂದಾಗಿ ಅದನ್ನು ರಾಜನ ತಿಕ್ಕಲುತನವು ತಿರಸ್ಕರಿಸಬಹುದಾದ ಸಾಧ್ಯತೆ ಇಲ್ಲವಾಯಿತು. ಸಹಿಷ್ಣುತೆಯ ವಿಧಿಯು (ಆಕ್ಟ್

ಆಫ್ ಟಾಲರೇಷನ್), ಕ್ಯಾಥೋಲಿಕ್‌ರನ್ನೂ ಸಂಪ್ರದಾಯಶರಣರಲ್ಲದವರನ್ನೂ ನಾನಾ ಬಗೆಯ ಅನರ್ಹತೆಗಳಿಗೆ ಗುರಿಮಾಡಿ, ವಾಸ್ತವ ಚಿತ್ರಹಿಂಸೆಯನ್ನು ಕೊನೆಗಾಣಿಸಿತು. ವಿದೇಶಾಂಗನೀತಿಯು ನಿರ್ದುಷ್ಟವಾಗಿ ಫ್ರೆಂಚ್‌ವಿರೋಧಿಯಾಯಿತು, ಮತ್ತು ಸ್ವಲ್ಪ ಕಾಲದ ಬಿಡುವಿನ ಹೊರತು, ನೆಪೋಲಿಯನ್‌ನ ಸೋಲಿನವರೆಗೂ ಮುಂದುವರಿಯಿತು.

❍

೧೩
ಲಾಕ್‌ನ ಜ್ಞಾನ ಸಿದ್ಧಾಂತ

ಜಾನ್ ಲಾಕ್ (೧೬೩೨-೧೭೦೪) ಎಲ್ಲ ಕ್ರಾಂತಿಗಳಲ್ಲಿಯೂ ಅತ್ಯಂತ ಹದವಾದುದೂ ಯಶಸ್ವಿಯಾದುದೂ ಆದ ೧೬೮೮ ರ ಕ್ರಾಂತಿಯ ಪ್ರವರ್ತಕ. ಅದರ ಗುರಿಗಳೂ ಅತಿರೇಕವಲ್ಲದ್ದು, ಅವುಗಳನ್ನು ಯಥಾವತ್ತಾಗಿ ತಲುಪಲಾಯಿತು, ಆನಂತರ ಇಲ್ಲಿಯವರೆಗೂ ಇಂಗ್ಲಂಡ್‌ನಲ್ಲಿ ಯಾವುದೇ ಬೇರೆ ಕ್ರಾಂತಿಯು ಆವಶ್ಯಕವೆಂದು ಕಂಡುಬಂದಿಲ್ಲ. ಲಾಕ್ ಅದರ ಸತ್ವವನ್ನು ಯಥಾವತ್ತಾಗಿ ಅಳವಡಿಸಿಕೊಂಡವನು, ಅವನ ಬಹುಪಾಲು ಕೃತಿಗಳು ೧೬೮೮ ರ ಆಜುಬಾಜಿನಲ್ಲಿ ರಚಿತವಾದವು. ಸೈದ್ಧಾಂತಿಕ ತತ್ವಜ್ಞಾನದ ಬಗೆಗಿನ ಅವನ ಮುಖ್ಯ ಕೃತಿಯಾದ 'ಎಸ್ಸೇ ಕನ್‌ಸರ್ನಿಂಗ್ ಹ್ಯೂಮನ್ ಅಂಡರ್‌ಸ್ಟಾಂಡಿಗ್' ಮುಗಿದದ್ದು ೧೬೮೭ ರಲ್ಲಿ ಮತ್ತು ಪ್ರಕಟಗೊಂಡದ್ದು ೧೬೯೦ ರಲ್ಲಿ. ಅವನ 'ಫಸ್ಟ್ ಲೆಟರ್ ಆನ್ ಟಾಲರೇಷನ್' ಮೂಲದಲ್ಲಿ ಲ್ಯಾಟಿನ್‌ನಲ್ಲಿ ೧೬೮೯ ರಲ್ಲಿ ಹಾಲಂಡ್‌ನಲ್ಲಿ ಪ್ರಕಟವಾಯಿತು, ೧೬೮೩ ರಲ್ಲಿ ಅಲ್ಲಿ ಹೋಗಿ ವಾಸಿಸಬೇಕೆಂದು ಲಾಕ್ ನಿರ್ಧರಿಸಿದ್ದ. ಟಾಲರೇಷನ್‌ಗೆ ಸಂಬಂಧಿಸಿದ ಆನಂತರದ ಮಿಕ್ಕೆರಡು ಪತ್ರಗಳು ೧೬೯೦ ಮತ್ತು ೧೬೯೨ ರಲ್ಲಿ ಪ್ರಕಟವಾದವು. ಅವನ 'ಟ್ರೀಟೈಸಸ್ ಆನ್ ಗವರ್ನಮೆಂಟ್' ಎಂಬ ಎರಡು ಕೃತಿಗಳು ೧೬೮೯ ರಲ್ಲಿ ಪ್ರಕಟಗೊಳ್ಳಲು ಅನುಮತಿಯನ್ನು ಪಡೆದಿದ್ದವು ಮತ್ತು ಆನಂತರ ಬೇಗ ಪ್ರಕಟವಾದವು. 'ಎಜುಕೇಷನ್' ಬಗೆಗಿನ ಅವನ ಕೃತಿಯು ೧೬೯೩ ರಲ್ಲಿ ಬೆಳಕು ಕಂಡಿತು. ಅವನು ದೀರ್ಘಾಯುವಾದರೂ, ಅವನ ಪರಿಣಾಮಕಾರೀ ಕೃತಿಗಳೆಲ್ಲ ೧೬೮೭ ಮತ್ತು ೧೬೯೩ ರ ನಡುವಣ ಅವಧಿಗೆ ಸೀಮಿತವಾದವು. ಅವುಗಳಲ್ಲಿ ನಂಬಿಕೆಯಿಟ್ಟವರಿಗೆ ಯಶಸ್ವಿ ಕ್ರಾಂತಿಗಳು ಪ್ರೇರಕಗಳಾಗಿವೆ.

ಲಾಕ್‌ನ ತಂದೆ ಒಬ್ಬ ಪ್ಯೂರಿಟನ್, ಅವನು ಸಂಸತ್ತಿನ ಪರವಾಗಿ ಹೋರಾಡಿದ್ದ. ಕ್ರಾಮ್‌ವೆಲ್‌ನ ಕಾಲದಲ್ಲಿ, ಲಾಕ್ ಆಕ್ಸ್‌ಫರ್ಡ್‌ನಲ್ಲಿದ್ದಾಗ, ಅದಿನ್ನೂ ತತ್ವಶಾಸ್ತ್ರದ ಮಟ್ಟಿಗೆ ಸೂಕ್ಷ್ಮತರ್ಕವವನ್ನು ಅನುಸರಿಸುತ್ತಿತ್ತು. ಲಾಕ್‌ಗೆ ಸೂಕ್ಷ್ಮತರ್ಕ ಹಾಗೂ

ಸ್ವತಂತ್ರರ ದುರಭಿಮಾನಗಳೆರಡೂ ಇಷ್ಟವಾಗಲಿಲ್ಲ. ಅವನ ಮೇಲೆ ಡೆಕಾರ್ಟೆಯ ಪ್ರಭಾವ ಆಳವಾಗಿತ್ತು. ಅವನೊಬ್ಬ ವೈದ್ಯನಾದ, ಲಾರ್ಡ್ ಶಾಫ್ಟ್‌ಸ್‌ಬರಿ, ಡ್ರೈಡನ್‌ನ 'ಅಕಿಟೋಫೆಲ್', ಅವನ ಪೋಷಕನಾಗಿದ್ದ. ಶಾಫ್ಟ್‌ಸ್‌ಬರಿ ೧೬೮೩ ರಲ್ಲಿ ರೋಗಪೀಡಿತನಾದಾಗ ಲಾಕ್ ಅವನೊಡನೆ ಹಾಲಂಡ್‌ಗೆ ಓಡಿಹೋಗಿ ಕ್ರಾಂತಿಯವರೆಗೂ ಅಲ್ಲಿಯೇ ಇದ್ದ. ಕ್ರಾಂತಿಯ ಬಳಿಕ, ಮಧ್ಯೆ ಕೆಲವು ಕಾಲ ವಾಣಿಜ್ಯ ಮಂಡಲಿ (ಬೋರ್ಡ್ ಆಫ್ ಟ್ರೇಡ್)ಯ ನೌಕರನಾಗಿದ್ದುದರ ಹೊರತು, ಅವನ ಬದುಕು ಸಾಹಿತ್ಯ ಕೃತಿರಚನೆಗೆ ಮೀಸಲಾಗಿತ್ತು, ಅವನ ಕೃತಿಗಳಿಂದ ಹಲವಾರು ವಿವಾದಗಳೂ ಸೃಷ್ಟಿತವಾದವು.

೧೬೮೮ ಕ್ರಾಂತಿಯ ಮುಂಚಿನ ಅವಧಿಯಲ್ಲಿ, ಸೈದ್ಧಾಂತಿಕವಾಗಿಯಾಗಲೀ ನಡಾವಳಿಯಲ್ಲಾಗಲೀ ಇಂಗ್ಲಿಷ್ ರಾಜಕೀಯದಲ್ಲಿ ಅಪಾಯರಹಿತವಾಗಿ ಯಾವುದರಲ್ಲೂ ಭಾಗವಹಿಸಲಾಗದಿದ್ದ ಲಾಕ್, 'ಎಸ್ಸೇ ಕನ್‌ಸರ್ನಿಂಗ್ ಹ್ಯೂಮನ್ ಅಂಡರ್‌ಸ್ಟಾಂಡಿಗ್' ಕೃತಿ ರಚನೆ ಕೈಗೊಂಡಿದ್ದ. ಇದು ಅವನ ಅತ್ಯಂತ ಮುಖ್ಯ ಕೃತಿ, ಇದರ ಮೇಲೇಯೇ ಅವನ ಬಹುಪಾಲು ಕೀರ್ತಿಯು ನಿಂತಿರುವುದು. ಆದರೆ ರಾಜಕೀಯ ತಾತ್ವಿಕತೆಯ ವಿಷಯದಲ್ಲಿನ ಅವನ ಪ್ರಭಾವವು ಎಷ್ಟು ವ್ಯಾಪಕವೂ ದೀರ್ಘಕಾಲಿಕವೂ ಆಗಿತ್ತೆಂದರೆ, ಜ್ಞಾನಸಿದ್ಧಾಂತದಲ್ಲಿನ ಅನುಭವೈಕವಾದದಂತೆಯೇ ಅವನನ್ನು ತಾತ್ವಿಕ ಉದಾರವಾದದ ಸ್ಥಾಪಕನೆಂದು ಪರಿಗಣಿಸಬೇಕು.

ತತ್ವಜ್ಞಾನಿಗಲ್ಲೆಲ್ಲ ಲಾಕ್ ತುಂಬ ಅದೃಷ್ಟವಂತ. ಸೈದ್ಧಾಂತಿಕ ತತ್ವಜ್ಞಾನದ ಬಗೆಗಿನ ಕೃತಿಗಳನ್ನು ಅವನು ಬರೆದು ಮುಗಿಸುವ ಹೊತ್ತಿಗೆ ಸರಿಯಾಗಿ, ಅವನ ದೇಶದ ಸರ್ಕಾರವು ಅವನ ರಾಜಕೀಯ ಅಭಿಪ್ರಾಯಗಳನ್ನು ಒಪ್ಪುತ್ತಿದ್ದವರ ಹಿಡಿತಕ್ಕೆ ಬಂತು. ಅವನು ಹೊಂದಿದ್ದ ದೃಷ್ಟಿಕೋನವನ್ನೇ ಮುಂದಿನ ಅನೇಕ ವರ್ಷಗಳ ಕಾಲ, ಅತ್ಯಂತ ಪ್ರಭಾವಶಾಲೀ ರಾಜಕಾರಣಿಗಳೂ ತತ್ವಜ್ಞಾನಿಗಳೂ – ಅನುಷ್ಠಾನ ಮತ್ತು ಸಿದ್ಧಾಂತಗಳೆರಡರಲ್ಲಿಯೂ – ಎತ್ತಿ ಹಿಡಿದರು. ಮಾಟೆಸ್ಕ್ಯೂ ಕಾರಣದಿಂದಾಗಿ ಮೂಡಿದ ಅವನ ರಾಜಕೀಯ ಸಿದ್ಧಾಂತಗಳು ಅಮೆರಿಕನ್ ಸಂವಿಧಾನದಲ್ಲಿ ಹೆಣೆದುಕೊಂಡಿವೆ, ಅಲ್ಲದೆ ಅಧ್ಯಕ್ಷ ಮತ್ತು ಕಾಂಗ್ರೆಸ್‌ಗಳ ನಡುವೆ ವಿವಾದವುಂಟಾದಾಗ ಅದು ಮೇಲೆದ್ದು ಕಾಣುತ್ತದೆ. ಐವತ್ತು ವರ್ಷಗಳ ಹಿಂದಿನವರೆಗೂ, ಬ್ರಿಟಿಷ್ ಸಂವಿಧಾನವು ಕೂಡ ಅವನ ಸಿದ್ಧಾಂತಗಳನ್ನೇ ಆಧರಿಸಿದ್ದವು, ೧೮೭೧ ರಲ್ಲಿ ಫ್ರೆಂಚ್‌ರು ಅಳವಡಿಸಿಕೊಂಡದ್ದೂ ಅದನ್ನೇ.

ಹದಿನೆಂಟನೆಯ ಶತಮಾನದ ಫ್ರಾನ್ಸ್‌ನಲ್ಲಿನ ಅವನ ಪ್ರಭಾವವು ಆಳವಾದುದಾಗಿತ್ತು; ಅದಕ್ಕೆ ಮೂಲತಃ ಕಾರಣ ತನ್ನ ತಾರುಣ್ಯದ ಕೆಲವು ವರ್ಷಗಳನ್ನು ಇಂಗ್ಲಂಡ್‌ನಲ್ಲಿ ಕಳೆದಿದ್ದ ವಾಲ್ಟೇರ್; ಅವನು ಇಂಗ್ಲಿಷ್ ಚಿಂತನೆಗಳನ್ನು ತನ್ನ ದೇಶೀಯರಿಗೆ ತನ್ನ 'ಲೆಟರ್ಸ್ ಫಿಲಾಸಫೀಕ್' ಮೂಲಕ ವ್ಯಾಖ್ಯಾನಿಸಿದ.

ತತ್ತ್ವಜ್ಞಾನಿಗಳು ಸೌಮ್ಯ ಸುಧಾರಣಾವಾದಿಗಳೂ ಅವನನ್ನು ಅನುಸರಿಸಿದರು; ಅತಿರೇಕ ಕ್ರಾಂತಿಕಾರಿಗಳು ರೂಸೋನನ್ನು ಅನುಸರಿಸಿದರು. ಅವನ ಫ್ರೆಂಚ್ ಅನುಯಾಯಿಗಳು, ಸರಿಯೋ ತಪ್ಪೋ, ಅವನ ಜ್ಞಾನಸಿದ್ಧಾಂತ ಮತ್ತು ಅವನ ರಾಜಕೀಯಗಳ ನಡುವಣ ನಿಕಟ ಸಂಬಂಧವನ್ನು ನಂಬಿದ್ದರು.

ಇಂಗ್ಲಂಡ್‌ನಲ್ಲಿ ಈ ಸಂಬಂಧವು ಕಡಿಮೆ ಎದ್ದು ಕಾಣುವಂತಹುದು. ಅವನ ಇಬ್ಬರು ಗಣ್ಯ ಅನುಯಾಯಿಗಳಲ್ಲಿ, ಬರ್ಕ್ಲೀ ರಾಜಕೀಯವಾಗಿ ಮುಖ್ಯನಾದವನು, ಮತ್ತು ಹಂಟ್ ತನ್ನ 'ಹಿಸ್ಟರಿ ಆಫ್ ಇಂಗ್ಲಂಡ್'ನಲ್ಲಿ ಅವನ ದೃಷ್ಟಿಕೋನವನ್ನು ಅಳವಡಿಸಿದ್ದ ಒಬ್ಬ ಟೋರಿ. ಕ್ಯಾಂಟ್ ಕಾಲಾನಂತರ, ಜರ್ಮನಿಯ ಆದರ್ಶವಾದವು (ಐಡಿಯಲಿಸಂ) ಇಂಗ್ಲಿಷ್ ಚಿಂತನೆಯ ಮೇಲೆ ಪ್ರಭಾವ ಬೀರಲು ತೊಡಗಿದಾಗ, ಮತ್ತೆ ತತ್ವಜ್ಞಾನ ಮತ್ತು ರಾಜಕೀಯಗಳ ನಡುವೆ ಸಂಬಂಧ ಉಂಟಾಯಿತು: ಮುಖ್ಯವಾಗಿ, ಜರ್ಮನ್‌ರನ್ನು ಅನುಸರಿಸಿದ ತತ್ವಜ್ಞಾನಿಗಳು 'ಕನ್ಸರ್ವೇಟಿವ್'ಗಳಾದರು, ಆದರೆ ತೀವ್ರಗಾಮಿಗಳಾದ ಬೆಂಥಮ್‌ವಾದಿಗಳು ಲಾಕ್ ಸಂಪ್ರದಾಯದವರು. ಈ ಸಮೀಕರಣವೇನೂ ನಿರ್ದಿಷ್ಟವಾದುದಲ್ಲ; ಉದಾಹರಣೆಗೆ, ಟಿ.ಎಚ್. ಗ್ರೀನ್ ಉದಾರವಾದಿಯಾದರೂ ಆದರ್ಶವಾದಿ.

ಲಾಕ್‌ನ ಸಮಂಜಸ ಅಭಿಪ್ರಾಯಗಳು ಮಾತ್ರವಲ್ಲದೆ ಅವನ ದೋಷಗಳೂ ಅನುಷ್ಠಾನದಲ್ಲಿ ಉಪಯಕ್ತವಾದವು. ನಿದರ್ಶನಕ್ಕೆ, ಅವನ ಮೂಲ ಮತ್ತು ಪೂರಕ ಗುಣಗಳು (ಪ್ರೈಮರಿ ಅಂಡ್ ಸೆಕಂಡರಿ ಕ್ವಾಲಿಟೀಸ್). ಮೂಲಗುಣಗಳೆಂದರೆ ದೇಹದಿಂದ ಅಭಿನ್ನವಾದವು, ಅವುಗಳೆಂದರೆ ದಾರ್ಢ್ಯ (ಸಾಲಿಡಿಟಿ), ವಿಸ್ತರಣ (ಎಕ್ಸ್‌ಟೆನ್ಷನ್), ಆಕಾರ (ಫಿಗರ್), ಚಲನೆ (ಮೋಷನ್) ಅಥವಾ ವಿಶ್ರಾಂತಿ (ರೆಸ್ಟ್) ಮತ್ತು ಸಂಖ್ಯೆ (ನಂಬರ್). ಮಿಕ್ಕವುಗಳೆಲ್ಲ ಪೂರಕ ಗುಣಗಳು: ಬಣ್ಣಗಳು, ಶಬ್ದಗಳು, ವಾಸನೆಗಳು, ಮುಂತಾದವು. ಅವನ ಪ್ರಕಾರ, ಮೂಲ ಗುಣಗಳು ದೇಹಗಳಲ್ಲಿಯೇ ಇರುವಂತಹುವು; ಅದಕ್ಕೆ ವ್ಯತಿರಿಕ್ತವಾಗಿ, ಪೂರಕ ಗುಣಗಳು ಗ್ರಾಹಿಯಲ್ಲಿ (ಪರ್ಸಿಪಿಯೆಂಟ್) ಮಾತ್ರವಿರುವಂತಹುವು. ಕಣ್ಣಿಲ್ಲದೆ ಬಣ್ಣವಿರಲಾರದು, ಕಿವಿಯಿಲ್ಲದೆ ಶಬ್ದವಿರಲಾರದು, ಮೂಗಿಲ್ಲದೆ ವಾಸನೆಯಿರಲಾರದು ಇತ್ಯಾದಿ. ಪೂರಕ ಗುಣಗಳ ವಿಷಯದಲ್ಲಿನ ಲಾಕ್ ದೃಷ್ಟಿಕೋನಕ್ಕೆ ಸಮರ್ಥ ನೆಲೆಗಳಿವೆ – ಕಾಮಾಲೆ, ನೀಲಿ ಕನ್ನಡಕಗಳು, ಮುಂತಾದವು. ಆದರೆ ಬರ್ಕ್ಲೀ ಗುರುತಿಸಿದ್ದೇನೆಂದರೆ, ಇವೇ ವಾದಗಳನ್ನು ಮೂಲಗುಣಗಳಿಗೂ ಅನ್ವಯಿಸಬಹುದು ಎಂದು. ಬರ್ಕ್ಲೀಯ ಕಾಲದಿಂದಲೂ, ಈ ವಿಷಯವಾದ ಲಾಕ್‌ನ ದ್ವೈವಿಧ್ಯವು ತಾತ್ವಿಕವಾಗಿ ಹಳೆಯದಾಗಿದೆ. ಇಷ್ಟಾದರೂ, ಅದು ವಸ್ತುಸ್ಥಿತಿ ಭೌತವಿಜ್ಞಾನದಲ್ಲಿ ನಮ್ಮ ಕಾಲದ ಕ್ವಾಂಟಂ ಸಿದ್ಧಾಂತವು ಬರುವವರೆಗೂ ನೆಲೆಯೂರಿತ್ತು. ವಾಚ್ಯದಲ್ಲಿಯೋ ಸೂಚ್ಯದಲ್ಲಿಯೋ ಅಂತೂ ಭೌತವಿಜ್ಞಾನಿಗಳು ಅದನ್ನು ಒಪ್ಪಿಕೊಂಡಿದ್ದರು, ಆದರೆ ಅದು ಇನ್ನಿತರ ಅನೇಕ

ಮುಖ್ಯ ಅನಾವರಣಗಳಿಗೆ ಕಾರಣವಾಯಿತು. ಚಲನಶೀಲ ಭೌತದ್ರವ್ಯಕ್ಕೆ ಸೀಮಿತವಾದಂತೆ ಭೌತಜಗತ್ತು ಒಪ್ಪುವ ಸಿದ್ಧಾಂತವು ಶಬ್ದ, ಶಾಖ, ಬೆಳಕು ಮತ್ತು ವಿದ್ಯುತ್ತುಗಳಿಗೆ ಸಂಬಂಧಿಸಿದ ಒಪ್ಪಿತ ಸಿದ್ಧಾಂತಗಳಿಗೆ ಕಾರಣ. ಸೈದ್ಧಾಂತಿಕ ನೆಲೆಯಲ್ಲಿ ಈ ಸಿದ್ಧಾಂತವು ಎಷ್ಟೇ ತಪ್ಪು ತಿಳಿವಳಿಕೆಯನ್ನುಂಟುಮಾಡಿದರೂ, ಅದು ವ್ಯಾವಹರಿಕವಾಗಿ ಉಪಯುಕ್ತವಾಗಿತ್ತು. ಇದು ಲಾಕ್‌ನ ಸಿದ್ಧಾಂತಗಳ ವೈಶಿಷ್ಟ್ಯ.

'ಎಸ್ಸೇ'ಯಲ್ಲಿ ಕಾಣಬರುವ ಲಾಕ್‌ನ ತಾತ್ವಿಕತೆಯು ಆದ್ಯಂತವಾಗಿ ಕೆಲವು ಗುಣಗಳನ್ನೂ ಕೆಲವು ದೋಷಗಳನ್ನೂ ಹೊಂದಿವೆ. ಅವೆರಡೂ ಉಪಯುಕ್ತವಾದವು: ದೋಷಗಳು ಎಂಬುದು ಸೈದ್ಧಾಂತಿಕ ದೃಷ್ಟಿಕೋನದಲ್ಲಿ ಮಾತ್ರ. ಅವನು ಸದಾ ಸಂವೇದನಾಶೀಲ, ಸ್ವವಿರುದ್ಧವಾಗುವುದಕ್ಕಿಂತ ತರ್ಕವನ್ನು ಕೈಬಿಡುವುದೇ ಲೇಸೆಂದು ಭಾವಿಸಿದ್ದವನು. ಅವನು ಪ್ರತಿಪಾದಿಸುವ ಸಾಮಾನ್ಯ ತತ್ವಗಳು ವಿಚಿತ್ರ ಪರಿಣಾಮಗಳಿಗೆ ಕಾರಣವಾಗುತ್ತವೆಂಬುದನ್ನು ಓದುಗರೂ ಸುಲಭವಾಗಿ ಗುರುತಿಸಬಹುದು. ಆದರೆ ವಿಚಿತ್ರ ಪರಿಣಾಮಗಳು ಕಾಣಿಸಿಕೊಳ್ಳುವ ಹೊತ್ತಿಗೆ ಲಾಕ್ ಅವುಗಳ ಪ್ರಕಾರ ನಿರ್ಣಯಿಸದೆ ನಿಯಂತ್ರಿಸಿಕೊಳ್ಳುತ್ತಾನೆ. ತರ್ಕಪಂಡಿತನಿಗೆ ಇದು ಕಿರಿಕಿರಿಯುಂಟುಮಾಡುವಂತಹುದು; ಆದರೆ ವ್ಯವಹಾರಜ್ಞನಿಗೆ ಅದು ನಿಖರ ತೀರ್ಮಾನದ ಸಾಕ್ಷ್ಯ. ಹೀಗಿರುವ ರೀತಿಯ ಜಗತ್ತು, ಸೂಕ್ತ ತತ್ವಗಳಿಂದ ಮಂಡಿಸುವ ಸಮಂಜಸ ಕಾರಣಗಳು ದೋಷಗಳನ್ನುಂಟುಮಾಡಲಾರವು; ಆದರೆ ಒಂದು ತತ್ವವು ಸೈದ್ಧಾಂತಿಕ ಗೌರವಕ್ಕೆ ಪಾತ್ರವಾಗುವಷ್ಟು ಸತ್ಯಕ್ಕೆ ಹತ್ತಿರವಾಗಿರಬಹುದು, ಆದರೆ ಅದು ವ್ಯಾವಹಾರಿಕ ಪರಿಣಾಮಗಳಿಗೆ ಕಾರಣವಾಗಿ ನಮಗೆ ಅಸಂಗತ ಎನ್ನಿಸಬಹುದು. ಹೀಗಾಗಿ ವ್ಯವಹಾರಜ್ಞಾನಕ್ಕೆ ತತ್ವಜ್ಞಾನದಲ್ಲಿ ಸಮರ್ಥನೆಯಿದೆ, ಅವುಗಳ ಪರಿಣಾಮಗಳು ವ್ಯಾವಹಾರಿಕ ದೃಷ್ಟಿಯಿಂದಲೂ ತಡೆದುಕೊಳ್ಳಲಾಗದಷ್ಟು ಖಂಡನಾರ್ಹವಲ್ಲ ಎಂದು ತೋರುವವರೆಗೂ, ನಮ್ಮ ಸೈದ್ಧಾಂತಿಕ ತತ್ವಗಳು ಸರಿಯಾಗಲಾರವು.

ಲಾಕ್‌ನ ಒಂದು ವೈಶಿಷ್ಟ್ಯವೆಂದರೆ ಶಾಸ್ತ್ರಪ್ರಾಮಾಣ್ಯ ರಹಿತತೆ, ಅದು ಇಡೀ ಉದಾರವಾದೀ ಚಳುವಳಿಗೆ ಹರಿದು ಬಂತು. ಕೆಲವು ನಿರ್ಣಯಗಳನ್ನವನು ತನ್ನ ಹಿಂದಿನವರಿಂದ ಪಡೆದುಕೊಳ್ಳುತ್ತಾನೆ: ನಮ್ಮ ಅಸ್ತಿತ್ವ, ದೇವರ ಅಸ್ತಿತ್ವ, ಮತ್ತು ಗಣಿತ ಸತ್ಯ. ಅವನ ಸಿದ್ಧಾಂತಗಳು ಮುಂದಿನವರಿಗಿಂತ ಎಲ್ಲಿಯೇ ಭಿನ್ನವಾಗಿರಲಿ, ಅದು ಸತ್ಯವನ್ನು ಖಚಿತಪಡಿಸುವುದು ಕಷ್ಟ, ಮತ್ತು ವಿಚಾರವಂತನೂ ತನ್ನ ಅಭಿಪ್ರಾಯಗಳೊಡನೆ ಒಂದಷ್ಟು ಸಂದೇಹಗಳನ್ನೂ ಹೊಂದಿರುತ್ತಾನೆ ಎಂಬ ಮಟ್ಟಿಗೆ. ಮನಸ್ಸಿನ ಈ ಸ್ಥಿತಿಯು, ಮತಧರ್ಮಸಹಿಷ್ಣುತೆ, ಸಂಸದೀಯ ಪ್ರಜಾಪ್ರಭುತ್ವದ ಗೆಲವು, ತಾಟಸ್ಥ್ಯನೀತಿ (ಲೇಸೆಜ್-ಫೇರ್), ಮತ್ತು ಉದಾರವಾದದ ಸಮಗ್ರ ಸೂತ್ರವಾಕ್ಯಗಳಿಗೆ ಸಂಬಂಧಿಸಿದುದು ಎಂಬುದು ನಿಸ್ಸಂದೇಹ. ಸ್ವತಃ ಗಾಢ

ಮತಧಾರ್ಮಿಕ ವ್ಯಕ್ತಿಯಾಗಿದ್ದರೂ, ದಿವ್ಯಜ್ಞಾನವನ್ನು ಜ್ಞಾನದ ಒಂದು ಆಕರವೆಂದು ನಂಬುವಷ್ಟು ಕ್ರೈಸ್ತ ಮತತತ್ವಗಳಲ್ಲಿ ನಂಬಿಕೆ ಹೊಂದಿದ್ದವನಾದರೂ, ದಿವ್ಯಜ್ಞಾನದ ಸುತ್ತ ವೈಚಾರಿಕ ಬೇಲಿಯನ್ನು ಹಾಕುವವನಲ್ಲ. ಒಂದು ಸಂದರ್ಭದಲ್ಲಿ ಅವನು ಹೇಳುವುದು ಹೀಗೆ: 'ಬರಿಯ ದಿವ್ಯಜ್ಞಾನದ ಸಾಕ್ಷ್ಯವು ಅತ್ಯಂತ ನಿಶ್ಚಿತವಾದದ್ದು,' ಅದೇ ಮತ್ತೊಂದು ಸನ್ನಿವೇಶದಲ್ಲಿ ಹೇಳುವುದೆಂದರೆ, 'ದಿವ್ಯಜ್ಞಾನವನ್ನು ವೈಚಾರಿಕತೆಯಿಂದ ಒರೆಗೆ ಹಚ್ಚಬೇಕು.' ಹೀಗೆ ಕೊನೆಯಲ್ಲಿ ವೈಚಾರಿಕತೆಗೇ ಪಟ್ಟ.

'ಆಫ್ ಎನ್‌ಥ್ಯೂಸಿಯಾಸಂ' ಕುರಿತ ಅವನ ಅಧ್ಯಾಯವು ತುಂಬ ಬೋಧಪ್ರದವಾದುದು. ಎನ್‌ಥ್ಯೂಸಿಯಾಸಂ ಪದಕ್ಕೆ ಈಗಿರುವ ಅರ್ಥ ಅವನ ಕಾಲದಲ್ಲಿರಲಿಲ್ಲ; ಒಬ್ಬ ಮತಧರ್ಮ ನಾಯಕನಿಗೋ ಅವನ ಅನುಯಾಯಿಗೋ ಆಗುತ್ತಿದ್ದ ವೈಯಕ್ತಿಕ ದಿವ್ಯಜ್ಞಾನದ ಬಗೆಗಿನ ನಂಬಿಕೆ ಎಂಬುದು ಆಗಿನ ಅರ್ಥ. ರಾಜತ್ವ ಪುನಃಸ್ಥಾಪನೆಯಲ್ಲಿ ಸೋತಿದ್ದ ಆರಾಧನಾಪಂಥಗಳ ಒಂದು ಲಕ್ಷಣ ಅದಾಗಿತ್ತು. ಅಂತಹ ವೈಯಕ್ತಿಕ ದಿವ್ಯಜ್ಞಾನಗಳ ಸಂಖ್ಯೆ ಹೆಚ್ಚಾದಾಗ, ಮತ್ತು ಒಂದಕ್ಕೊಂದು ತಾಳೆಯಾಗದಿದ್ದಾಗ, ಸತ್ಯವೋ ಅಥವಾ ಅಂಥದೊಂದೋ, ಕೇವಲ ವೈಯಕ್ತಿಕವಾಗಿಬಿಡುತ್ತದೆ, ಮತ್ತು ತನ್ನ ಸಾಮಾಜಿಕ ಸ್ವರೂಪವನ್ನು ಕಳೆದುಕೊಳ್ಳುತ್ತದೆ. ಲಾಕ್ ಅತ್ಯವಶ್ಯಕವೆಂದು ಪರಿಗಣಿಸಿದ್ದ ಸತ್ಯದ ಪ್ರೇಮವು ಸತ್ಯವೆಂಬಂತೆ ಘೋಷಿತವಾದ ಯಾವುದೋ ಒಂದು ಸಿದ್ಧಾಂತದ ಬಗೆಗಿನ ಪ್ರೇಮಕ್ಕಿಂತ ತೀರ ಬೇರೆಯಾದುದು. ಸತ್ಯದ ಬಗೆಗಿನ ಪ್ರೇಮದ ತಪ್ಪಾಗದ ಲಕ್ಷಣವೆಂದರೆ, 'ಅದನ್ನು ಸಾಬೀತುಪಡಿಸಲು ಮಂಡಿತವಾದ ಸಾಕ್ಷ್ಯಗಳ ಸಾಚಾತನದ ಬಗ್ಗೆಗಿಂತ ಹೆಚ್ಚಿನ ಪ್ರತಿಪಾದನೆಯನ್ನು ಮಾಡದಿರುವುದು' ಎಂದವನು ಹೇಳುತ್ತಾನೆ. ಅಧಿಕಾರವಾಣಿಯಿಂದ ಹೇಳುವುದು ಸತ್ಯದ ಬಗೆಗಿನ ಪ್ರೇಮದ ಸೋಲು ಎಂದವನ ಅಭಿಪ್ರಾಯ. 'ಎನ್‌ಥ್ಯೂಸಿಯಾಸಂನ ವೈಚಾರಿಕ ಮಂಡನೆಯಿಲ್ಲದೆಯೇ ದಿವ್ಯಜ್ಞಾನವು ದೃಢಪಡುತ್ತದೆ; ಅದರ ಪರಿಣಾಮವಾಗಿ ವೈಚಾರಿಕತೆ ಮತ್ತು ದಿವ್ಯಜ್ಞಾನ ಎರಡನ್ನೂ ಅದು ತೆಗೆದು ಹಾಕುತ್ತದೆ ಮತ್ತು ಅದರ ಸ್ಥಾನದಲ್ಲಿ ವ್ಯಕ್ತಿಯೊಬ್ಬನ ಮನಸ್ಸಿನ ಕಲ್ಪನೆಗಳ ಒರಟು ರೂಪವನ್ನು ನಿಲ್ಲಿಸುತ್ತದೆ.' ವಿಷಾದ ಅಥವಾ ವಂಚಕತನದಿಂದ ತುಂಬಿದ ಜನರು 'ದೈವದ ಜೊತೆಗಿನ ತಕ್ಷಣದ ಓಲೈಕೆ'ಯನ್ನು ಹೊಂದಿರುವಂತೆ ಮಾಡುತ್ತದೆ. ಹೀಗಾಗಿ ವಿಚಿತ್ರ ಕಾರ್ಯಗಳೋ ಅಭಿಪ್ರಾಯಗಳೋ ದಿವ್ಯಜ್ಞಾನದ ಆಶೀರ್ವಾದವನ್ನು ಹೊಂದುತ್ತವೆ; ಅದು 'ಜನರ' ಸೋಮಾರಿತನ, ಅಜ್ಞಾನ ಮತ್ತು ಡೌಲುಗಳನ್ನು ಪ್ರೋತ್ಸಾಹಿಸುತ್ತದೆ. ತನ್ನ ಈ ಅಧ್ಯಾಯವನ್ನು ಅವನು ಮುಗಿಸುವುದು ಈಗಾಗಲೇ ಉಲ್ಲೇಖಿಸಿರುವ ಸೂತ್ರವಾಕ್ಯದಿಂದ: 'ದಿವ್ಯಜ್ಞಾನವನ್ನು ವೈಚಾರಿಕತೆಯಿಂದ ತೀರ್ಮಾನಿಸಬೇಕು.'

'ವೈಚಾರಿಕತೆ' ಎಂದು ಲಾಕ್ ಹೇಳುವುದನ್ನು ಅವನ ಇಡೀ ಕೃತಿಯಿಂದ ಅರ್ಥವಿಸಿಕೊಳ್ಳಬೇಕು. 'ವೈಚಾರಿಕತೆಯನ್ನು ಕುರಿತು' ಎಂಬ ಒಂದು ಅಧ್ಯಾಯವೇ ಅದರಲ್ಲಿದೆ ಎಂಬುದು ನಿಜ, ಆದರೆ ಅದು ಹೇಳುವುದು ವೈಚಾರಿಕತೆಯು ಕೇವಲ ನಿಗಮನದಿಂದ ಕೂಡಿರುವುದಲ್ಲ ಎಂದು ಸಾಧಿಸಲು; ಅದರ ಸಾರಾಂಶವನ್ನು ಈ ಒಂದು ವಾಕ್ಯದಿಂದ ತಿಳಿಸಲಾಗಿದೆ: 'ಜನರನ್ನು ಕೇವಲ ಎರಡು ಕಾಲುಗಳುಳ್ಳ ಜೀವಿಗಳಾಗಿ ಮಾಡಿ, ಅವರನ್ನು ವಿಚಾರವಂತರನ್ನಾಗಿ ಮಾಡಲು ಅರಿಸ್ಟಾಟಲ್‌ಗೆ ಒಪ್ಪಿಸಲು ದೇವರು ಕಷ್ಟಪಡಲಿಲ್ಲ.' ಲಾಕ್ ಬಳಸುವ ರೀತಿಯಲ್ಲಿ, ವೈಚಾರಿಕತೆಯಲ್ಲಿ ಎರಡು ಭಾಗಗಳಿವೆ: ಮೊದಲನೆಯದು, ನಮಗೆ ಖಚಿತವೆಂದು ತಿಳಿದಿರುವುದು ಎಷ್ಟು ಸರಿ ಎಂದು ಅನ್ವೇಷಿಸುವುದು; ಎರಡನೆಯದು, ಖಚಿತತೆಯಿಲ್ಲದಿದ್ದರೂ ಸಂಭವನೀಯವಾದ ಪ್ರತಿಪಾದನೆಗಳನ್ನು ನಾವು ಅನುಸರಣೆಯಲ್ಲಿ ಒಪ್ಪಿ ಅವುಗಳ ಬಗ್ಗೆ ಅನ್ವೇಷಣೆ ಮಾಡುವುದು. 'ಸಂಭವನೀಯತೆಯ ಆಧಾರಗಳು ಎರಡು: ನಮ್ಮ ಅನುಭವದೊಂದಿಗೆ ಹೊಂದಿಕೊಳ್ಳುವಿಕೆ; ಅಥವಾ ಇತರರ ಅನುಭವಗಳ ಸಾಕ್ಷ್ಯ' ಎಂದವನು ಹೇಳುತ್ತಾನೆ. ಸಯಾಮ್‌ನ ರಾಜನು ತನಗೆ ಯೂರೋಪಿಯನ್‌ರು ಹೇಳಿದ್ದನ್ನು ನಂಬುವುದನ್ನು ಅವರು ಹಿಮವನ್ನು ಉಲ್ಲೇಖಿಸಿದಾಗ ನಿಲ್ಲಿಸಿದ ಎಂದವನು ನುಡಿಯುತ್ತಾನೆ.

'ಡಿಗ್ರೀಸ್ ಆಫ್ ಸೆಂಟ್' ಎಂಬ ಅಧ್ಯಾಯದಲ್ಲಿ ಅವನು ಹೇಳುವುದೆಂದರೆ, ಯಾವುದೇ ಪ್ರತಿಪಾದನೆಗೆ ನಾವು ನೀಡುವ ಒಪ್ಪಿಗೆಯ ಪ್ರಮಾಣವು ಅದರ ಪರವಾಗಿರುವ ಸಂಭವನೀಯತೆಯ ಪ್ರಮಾಣವನ್ನು ಆಧರಿಸಿರಬೇಕು. ಖಚಿತತೆಗೆ ಕಿಂಚಿದೂನವಾದ ಸಂಭವನೀಯತೆಗಳ ಆಧಾರದ ಮೇಲೆ ಕೆಲವೊಮ್ಮೆ ನಾವು ಕ್ರಿಯಾಶೀಲವಾಗಬೇಕೆಂದು ಹೇಳಿದ ಬಳಿಕ, ಈ ಪರಿಗಣನೆಯ ಸಮಂಜಸ ಉಪಯೋಗವು 'ಪರಸ್ಪರ ಔದಾರ್ಯ ಮತ್ತು ಸಹನೆ. ಅವುಗಳ ಸತ್ಯತೆಯ ಬಗ್ಗೆ ಖಂಡಿತವೂ ಸಂದೇಹಾತೀತವೂ ಆದ ಸಾಕ್ಷ್ಯಗಳಿಲ್ಲದಿದ್ದರೂ ವಿಭಿನ್ನ ಅಭಿಪ್ರಾಯಗಳನ್ನು ಹೊಂದಿರುವುದು, ಎಲ್ಲರಿಗೂ ಅಲ್ಲದಿದ್ದರೂ, ಬಹು ಮಂದಿಗೆ ಅನಿವಾರ್ಯವಾಗುತ್ತದೆ; ಜನರು ತಕ್ಷಣವೇ ಅದಕ್ಕೆ ಉತ್ತರಿಸುವ ಅಥವಾ ಅದರ ಕೊರತೆಯಯನ್ನು ತೋರಿಸಲಾಗದೆ ತಮ್ಮ ಹಳೆಯ ಅಭಿಪ್ರಾಯಗಳನ್ನು ಕೈಬಿಡುವುದರಿಂದಾಗಿ ಅದನ್ನು ಭಾರಿ ಅಜ್ಞಾನ. ತೂಕವಿಲ್ಲದ್ದು, ಅಥವಾ ತಪ್ಪಾದದ್ದು ಮುಂತಾದ ಈ ಆರೋಪವನ್ನೂ ಹೊರಿಸಲಾಗುತ್ತದೆ. ವಿವಿಧ ಅಭಿಪ್ರಾಯಗಳಿರುವ ಸಂದರ್ಭದಲ್ಲಿ ಶಾಂತಿ ಮತ್ತು ಸಾಮಾನ್ಯ ಮಾನವೀಯತೆ ಮತ್ತು ಸ್ನೇಹವನ್ನು ಕಾಪಾಡಿಕೊಂಡು ಬರುವುದು ಸಮಂಜಸವೆಂಬುದು ನನ್ನ ಭಾವನೆ, ಯಾಕೆಂದರೆ ತಮ್ಮ ಅಭಿಪ್ರಾಯವನ್ನು ಬಿಟ್ಟು ಯಾವುದೋ ಅಧಿಕಾರಪ್ರಾಮಾಣ್ಯದಿಂದ ಕುರುಡಾಗಿ ಯಾರಾದರೂ ತಕ್ಷಣವೇ ನಮ್ಮದನ್ನು ಒಪ್ಪಿಕೊಳ್ಳುವರೆಂದು ನಾವು ನಿರೀಕ್ಷಿಸುವಂತಿಲ್ಲ.

ಆದರೆ ಇದು ಎಷ್ಟೋ ವೇಳೆ ತಪ್ಪೂ ಆಗಬಹುದು, ಅದು ವಿಚಾರವನ್ನು ಹೊರತುಪಡಿಸಿ ಬೇರಾವುದನ್ನೂ ಒಪ್ಪಿಕೊಳ್ಳದಿರಬಹುದು ಅಥವಾ ಮತ್ತೊಬ್ಬನ ಇಚ್ಛೆ ಮತ್ತು ಅವಕಾಶಕ್ಕೆ ಕಣ್ಮುಚ್ಚಿಕೊಂಡು ಬಾಗದೆಯೂ ಇರಬಹುದು. ನಿಮ್ಮ ಭಾವನೆಯನ್ನು ಒಪ್ಪಿಕೊಳ್ಳುವಂತೆ ಮಾಡಬಯಸುವ ವ್ಯಕ್ತಿಯು ಒಪ್ಪುವುದಕ್ಕೆ ಮುಂಚೆ ಪರೀಕ್ಷೆ ಮಾಡುವಂತಹವನೂ ಆಗಬಹುದು, ಅವನಿಗೆ ಕೂಲಂಕಷವಾಗಿ ಪರಿಶೀಲಿಸಲು ನೀವು ಸಾಕಷ್ಟು ಸಮಯವೀಯಬೇಕು, ಮತ್ತು ಅವನ ಮನಸ್ಸಿನಲ್ಲಿಲ್ಲದಿರುವುದನ್ನು ನೆನಪಿಸಿ ಅದರ ವಿವರಗಳನ್ನು ಪರೀಕ್ಷಿಸುವಂತೆಯೂ ಆನಂತರ ಯಾವ ಕಡೆಯಾದರೆ ಸಮಂಜಸವೆಂದು ನಿರ್ಧರಿಸಲು ಅವಕಾಶ ನೀಡಬೇಕು. ಅವನು ತೂಕದ ಅಭಿಪ್ರಾಯಗಳ ಬಗ್ಗೆ ಯೋಚನೆ ಮಾಡಿ ತೀರ್ಮಾನಿಸುವ ಕಷ್ಟವನ್ನು ತೆಗೆದುಕೊಳ್ಳುವವನಾಗಿರದಿದ್ದರೆ, ಅದೇನೂ ಆಶ್ಚರ್ಯಕರವಲ್ಲ, ನಾವೇ ಎಷ್ಟೋ ವೇಳೆ ಹಾಗೆ ಮಾಡಿರುತ್ತೇವೆ. ಯಾವ ಅಂಶಗಳನ್ನು ಕುರಿತು ಪರಿಶೀಲಿಸಬೇಕು ಎಂದು ಕೇಳಿದರೆ ನಾವು ತಪ್ಪು ತಿಳಿಯಲೂ ಬಾರದು. ಅವನೇನಾದರೂ ವಿಶ್ವಾಸದ ಮೇಲೆ ತನ್ನ ಅಭಿಪ್ರಾಯಗಳನ್ನು ಹೊಂದುವವನಾದರೆ, ದೀರ್ಘ ಕಾಲ ಮತ್ತು ರೂಢಿಗಳಿಂದ ಮನಸ್ಸಿನಲ್ಲಿ ನೆಲೆಯೂರಿರುವ ಅಭಿಪ್ರಾಯಗಳನ್ನು ಕೈಬಿಡುವನೆಂದು ಹೇಗೆ ತಾನೇ ಕಲ್ಪಿಸಿಕೊಳ್ಳಲು ಸಾಧ್ಯ, ಅವುಗಳನ್ನವನು ಸ್ವಯಂವೇದ್ಯವೆಂದೂ ಪ್ರಶ್ನಾತೀತವಾಗಿ ನಿಶ್ಚಿತವಾದುದೆಂದೂ ಭಾವಿಸಬಹುದು. ಅಥವಾ ಅವುಗಳನ್ನು ದೇವರೇ ಅಥವಾ ದೇವರ ಪ್ರತಿನಿಧಿಯು ತನ್ನ ಮೇಲೆ ಅಚ್ಚೊತ್ತಿರುವನೆಂದು ನಂಬುವುದಾದರೆ? ಹೀಗೆ ನೆಲೆಯೂರಿರುವ ಅಭಿಪ್ರಾಯಗಳನ್ನು ಅಪರಿಚಿತನ ಅಥವಾ ವಿರೋಧಿಯ ವಾದಗಳಿಗೋ ಅಧಿಕಾರಪ್ರಾಮಾಣ್ಯಕ್ಕೋ ಮಣಿದು ತೊರೆಯಬಹುದೆಂದು ಯೋಚಿಸಲು ಸಾಧ್ಯವೇ ಎಂದು ನಾನು ಕೇಳುವುದು. ಅದರಲ್ಲೂ ಹಿತಾಸಕ್ತಿ ಅಥವಾ ಸಂಚಿನ ವಾಸನೆ ಬಡಿದರೆ? ತಮ್ಮನ್ನು ಸರಿಯಾಗಿ ನಡೆಸಿಕೊಳ್ಳದಿರುವಾಗ ಜನರಿಗೆ ಇಂಥ ಅನುಮಾನ ಬರುವುದರಲ್ಲಿ ಸಂದೇಹವೇ ಇಲ್ಲ. ನಮ್ಮ ಅಜ್ಞಾನಗಳ ಬಗ್ಗೆ ಪರಸ್ಪರ ಅನುಕಂಪ ಹೊಂದುವುದು, ಮತ್ತು ನಯವಾಗಿಯೂ ಸೂಕ್ತವಾಗಿಯೂ ವಿಚಾರಗಳ ಮೂಲಕ ಪ್ರಯತ್ನಿಸುವುದು ಸರಿಯಾದುದು. ಅದರ ಬದಲು ತಕ್ಷಣವೇ ತಮ್ಮ ಅಭಿಪ್ರಾಯಗಳನ್ನು ಬಿಟ್ಟು ನಮ್ಮದನ್ನು ಅಥವಾ ನಾನು ಬಲವಂತವಾಗಿ ಹೇರುವುದನ್ನು ಒಪ್ಪಿಕೊಳ್ಳದಿದ್ದರೆ ಅಂತಹವರನ್ನು ಹಟವಾದಿಗಳೆಂದೂ ವಿಕೃತರೆಂದೂ ಕರೆಯುವುದು ಸರಿಯಲ್ಲ; ಬೇರಾರದೋ ಅಭಿಪ್ರಾಯಗಳನ್ನು ಸ್ವೀಕರಿಸುವ ವಿಷಯದಲ್ಲಿ ನಾವೇ ಹಟವಾದಿಗಳಾಗಿರುತ್ತೇವಲ್ಲವೇ? ತನ್ನ ಅಭಿಪ್ರಾಯವು ಪ್ರಶ್ನಾತೀತವಾಗಿ ಸತ್ಯವೆಂದೂ, ತಾನು ಖಂಡಿಸುವ ಅಭಿಪ್ರಾಯವು ಅಸತ್ಯವೆಂದೂ ಅಥವಾ ತಾನು ತನ್ನ ಇತರರ ಅಭಿಪ್ರಾಯಗಳನ್ನು ತಳಮಟ್ಟ ಪರೀಕ್ಷಿಸಿರುವೆನೆಂದೂ ಹೇಳಬಲ್ಲವನು ಯಾರಿದ್ದಾನೆ?

ನಾವಿರುವ ಕ್ಷಿಪ್ರ ಬದಲಾವಣೆಗಳು ಮತ್ತು ಅಂಧಕಾರಗಳಲ್ಲಿ ತಿಳಿವಳಿಕೆಯಿಲ್ಲದೆ, ಎಷ್ಟೋ ವೇಳೆ ತೀರ ತೆಳುವಾದ ಕಾರಣದಿಂದ, ನಂಬಿಬಿಡುವ ಆವಶ್ಯಕತೆಯು ನಮ್ಮನ್ನು ಹೆಚ್ಚು ಕ್ರಿಯಾಶೀಲರಾಗಿಯೂ ಮತ್ತು ಬೇರೆಯವರನ್ನು ತಡೆಯುವುದರ ಬದಲಿಗೆ ನಮ್ಮದೇ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳುವಂತೆಯೂ ಮಾಡಬೇಕು .. .. ಜನರಿಗೆ ತನಗೆ ತಾನೇ ತಿಳಿವಳಿಕೆ ಬಂದರೆ ಅವರೂ ಇತರರ ಮೇಲೆ ಅಭಿಪ್ರಾಯಗಳನ್ನು ಹೇರಲಾರರೆಂದು ತಿಳಿಯಲು ಅವಕಾಶವಿದೆ.'[೨೫]

ಇಲ್ಲಿ ನಾನು ಹೇಳಿರುವುದು 'ಎಸ್ಸೇ'ಯ ಈಚಿನ ಅಧ್ಯಾಯಗಳನ್ನು ಕುರಿತಂತೆ, ಅಲ್ಲಿ ಮಾನವ ಜ್ಞಾನದ ಸ್ವರೂಪ ಮತ್ತು ಪರಿಮಿತಿಗಳನ್ನು ಕುರಿತಂತೆ ಹಿಂದಿನ ಅನ್ವೇಷಣೆಗಳಲ್ಲಿನ ನೀತಿಯನ್ನು ಲಾಕ್ ಬಳಸಿಕೊಳ್ಳುತ್ತಾನೆ. ಈ ಕುರಿತು ಅವನು ಹೆಚ್ಚು ಶುದ್ಧ ತಾತ್ವಿಕ ನೆಲೆಯಲ್ಲಿ ಏನು ಹೇಳುತ್ತಾನೆಂಬುದರ ಬಗ್ಗೆ ಚರ್ಚಿಸುವ ಸಮಯ ಇದು.

ಲಾಕ್‌ಗೆ ಸದಾ ತತ್ವಜಿಜ್ಞಾಸೆಯ ಬಗ್ಗೆ ತಿರಸ್ಕಾರ, ಸಾಂದರ್ಭಿಕವಾಗಿ ಲೀಬ್‌ನಿಜ್‌ನ ಊಹಾಕಲ್ಪನೆಗಳನ್ನು ಕುರಿತಂತೆ ಅವನು ತನ್ನ ಸೇಹಿತನೊಬ್ಬನಿಗೆ ಹೀಗೆ ಬರೆದಿದ್ದಾನೆ: 'ನನಗೂ ನಿನಗೂ ಈ ಬಗೆಯ ಪಿಟೀಲು ಕುಯ್ಯುವಿಕೆಯ ಅನುಭವ ಸಾಕಷ್ಟಾಗಿದೆ.' ತನ್ನ ಕಾಲದ ತತ್ವಜಿಜ್ಞಾಸೆಯಲ್ಲಿ ಪ್ರಮುಖವಾಗಿದ್ದ ಸಾರಸತ್ವದ ಪರಿಕಲ್ಪನೆಯನ್ನವನು ಅಸ್ಪಷ್ಟ ಮತ್ತು ನಿರುಪಯುಕ್ತ ಎಂದು ಪರಿಗಣಿಸುತ್ತಾನಾದರೂ ಅದನ್ನು ಸಂಪೂರ್ಣವಾಗಿ ಅಲ್ಲಗಳೆಯುವುದಿಲ್ಲ. ದೇವರ ಅಸ್ತಿತ್ವ ಕುರಿತ ತತ್ವಜಿಜ್ಞಾಸಾತ್ಮಕ ವಾದಗಳನ್ನು ಮಾನ್ಯಮಾಡುತ್ತಾನಾದರೂ, ಅವುಗಳನ್ನು ಕುರಿತು ಚರ್ಚಿಸುವುದಿಲ್ಲ, ಅವುಗಳ ಬಗ್ಗೆ ಅವನಿಗೆ ಮುಜುಗರವಿದ್ದಂತೆ ತೋರುತ್ತದೆ. ಸಾಂಪ್ರದಾಯಿಕವಾದುದನ್ನು ಪುನರಾವರ್ತನೆ ಮಾಡುವುದನ್ನು ಬಿಟ್ಟು ಹೊಸ ಚಿಂತನೆಯನ್ನು ವ್ಯಕ್ತಪಡಿಸುವಾಗ ವ್ಯಾಪಕ ಅಮೂರ್ತತೆಗಳ ಬದಲು ಅವನು ಖಚಿತವಾಗಿ ಆಲೋಚಿಸುತ್ತಾನೆ. ಅವನ ತಾತ್ವಿಕತೆಯು ಚೂರುಪಾರು, ವಿಜ್ಞಾನದ ಕಾರ್ಯದಂತೆ, ಇಡಿಯಾಗಿಲ್ಲದ್ದು, ಹದಿನೇಳನೆಯ ಶತಮಾನದ ಐರೋಪ್ಯ ಪದ್ಧತಿಗಳಂತೆ.

ಲಾಕ್‌ನನ್ನು ಅನುಭವೈಕವಾದದ ಸ್ಥಾಪಕನೆಂದು ಪರಿಗಣಿಸಬಹುದು, ಆ ಸಿದ್ಧಾಂತದ ಮೇಲೆಯೇ ನಮ್ಮೆಲ್ಲರ ಜ್ಞಾನವು (ತರ್ಕ ಮತ್ತು ಗಣಿತಗಳನ್ನು ಪ್ರಾಯಶಃ ಹೊರತುಪಡಿಸಿದಂತೆ) ಅನುಭವದಿಂದ ಸಾಧಿತವಾಗಿರುವುದು. ಅದಕ್ಕನುಗುಣವಾಗಿ 'ಎಸ್ಸೇ'ಯ ಮೊದಲ ಭಾಗವು, ಪ್ಲೇಟೋ, ಡೆಕಾರ್ಟೆ ಮತ್ತು ಸೂಕ್ಷ್ಮತಾರ್ಕಿಕರ ವಿರುದ್ಧವಾಗಿ ಅಂತರ್ನಿಹಿತ ತತ್ವಗಳಾಗಲೀ ಚಿಂತನೆಗಳಾಗಲೀ ಇಲ್ಲ ಎಂಬ ವಾದದಲ್ಲಿ

---

೨೫. 'ಎಸ್ಸೇಸ್ ಕನ್ಸರ್ನಿಂಗ್ ಹ್ಯೂಮನ್ ಅಂಡರ್‌ಸ್ಟಾಂಡಿಂಗ್', ಭಾಗ ೪, ಅಧ್ಯಾಯ ೧೪, ವಿಭಾಗ ೪.

ನಿರತವಾಗುತ್ತದೆ. ಎರಡನೆಯ ಭಾಗದಲ್ಲಿ ಅನುಭವವು ಹೇಗೆ ನಾನಾ ಬಗೆಯ ಚಿಂತನೆಗಳಿಗೆ ಎಡೆಮಾಡಿಕೊಡುತ್ತದೆ ಎಂಬುದನ್ನು ಕುರಿತು ವಿವರವಾಗಿ ಪರಿಶೀಲಿಸುತ್ತಾನೆ. ಅಂತರ್ನಿಹಿತ ಚಿಂತನೆಗಳನ್ನು ತಿರಸ್ಕರಿಸಿ ಅವನು ಹೇಳುವುದೆಂದರೆ:

'ಹೀಗಾಗಿ ನಾವು ನಮ್ಮ ಮನಸ್ಸು ಬಿಳಿಯ ಹಾಳೆ ಎನ್ನುತ್ತೇವಲ್ಲ ಅಂಥದು ಎಂದು ಭಾವಿಸೋಣ; ಅದರಲ್ಲಿ ಯಾವ ವ್ಯಕ್ತಿತ್ವವೂ ಇಲ್ಲ, ಯಾವುದೇ ಚಿಂತನೆಗಳಿಲ್ಲ, ಹಾಗಾದರೆ ಅದರಲ್ಲಿರುವುದೇನು? ಕೊನೆಯಿಲ್ಲದ ಕಲ್ಪನೆಯಿಂದ ಕೂಡಿನ ಮನುಷ್ಯನ ಮನಸ್ಸು ಕಾರ್ಯನಿರತವಾಗಿ ಅದರ ಮೇಲೆ ಎಣೆಯಿಲ್ಲದ ವೈವಿಧ್ಯದಿಂದ ಕೂಡಿರುವಂತೆ ಚಿತ್ರಿಸುವ ಅಂತಹ ಅಗಾಧ ಸರಕು ಎಲ್ಲಿಂದ ಬರುತ್ತದೆ? ವೈಚಾರಿಕತೆ ಮತ್ತು ಜ್ಞಾನದ ಸಾಮಗ್ರಿಯೆಲ್ಲ ಎಲ್ಲಿಂದ ಬಂತು? ನಾನಿದಕ್ಕೆ ಒಂದೇ ಶಬ್ದದಲ್ಲಿ ಉತ್ತರಿಸುತ್ತೇನೆ: ಅನುಭವದಿಂದ: ನಮ್ಮೆಲ್ಲ ಜ್ಞಾನವೂ ಅದರಿಂದಲೇ ಉಂಟಾಯಿತು, ಅದರಿಂದಲೇ ಕೊನಗೆ ತನ್ನನ್ನೂ ಸಾಧಿಸಿಕೊಳ್ಳುತ್ತದೆ' (ಭಾಗ ೨, ಅಧ್ಯಾಯ ೧, ಉಪವಿಭಾಗ ೨).

ನಮ್ಮ ಚಿಂತನೆಗಳು ಎರಡು ಮೂಲಗಳಿಂದ ಸಾಧಿತವಾಗುತ್ತವೆ, (ಅ) ಸಂವೇದನೆ, ಮತ್ತು (ಆ) ನಮ್ಮದೇ ಮನಸ್ಸಿನ ಕಾರ್ಯಶೀಲತೆಯಿಂದಾದ ಪರಿಕಲ್ಪನೆ, ಅದನ್ನು ನಾವು ಆಂತರಿಕ ಇಂದ್ರಿಯ ಎನ್ನಬಹುದು. ನಾವು ಚಿಂತನೆಗಳ ಮೂಲಕವಾಗಿ ಮಾತ್ರ ಆಲೋಚಿಸಬಲ್ಲೆವಾದ್ದರಿಂದ, ಮತ್ತು ಎಲ್ಲ ಚಿಂತನೆಗಳೂ ಅನುಭವದಿಂದ ಬರುವುದರಿಂದ, ನಮ್ಮ ಯಾವುದೇ ಜ್ಞಾನವೂ ಹಿಂದಿನ ಅನುಭವದಿಂದ ಬಂದದ್ದಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಪರಿಕಲ್ಪನೆಯು 'ಜ್ಞಾನದೆಡೆಗಿನ ಮೊದಲ ಹೆಜ್ಜೆ ಮತ್ತು ಹಂತ ಮತ್ತು ಅದರೊಳಗಿನದೆಲ್ಲವನ್ನೂ ಒಳಬಿಡುವ ಕಿಂಡಿ' ಎನ್ನುತ್ತಾನೆ. ಆಧುನಿಕ ವ್ಯಕ್ತಿಗೆ ಇದೊಂದು ಸಾಮಾನ್ಯೋಕ್ತಿ ಎನ್ನಿಸಬಹುದು, ಯಾಕೆಂದರೆ ಅದೀಗ ವಿದ್ಯಾವಂತರ ಸಾಮಾನ್ಯ ಜ್ಞಾನದಲ್ಲಿ ಸೇರಿಹೋಗಿದೆ, ಕನಿಷ್ಠ ಪಕ್ಷ ಇಂಗ್ಲಿಷ್ ಭಾಷಿಕರ ದೇಶಗಳಲ್ಲಿ. ಆದರೆ ಅವನ ಕಾಲದಲ್ಲಿ ಮನಸ್ಸು ತನ್ನ ಹಿಂದಿನದೆಲ್ಲವನ್ನೂ ತಿಳಿದಿರುತ್ತದೆ, ಮತ್ತು ಪರಿಕಲ್ಪನೆಗಳ ಮೇಲೆಯೇ ಅದು ಸಂಪೂರ್ಣವಾಗಿ ಅವಲಂಬಿಸಿರುತ್ತದೆ ಎಂಬ ಭಾವನೆಯಿತ್ತು; ಅದನ್ನವನು ಹೊಸತೂ ಕ್ರಾಂತಿಕಾರಕವೂ ಆದ ಸಿದ್ಧಾಂತವಾಗಿ ಮಂಡಿಸಿದ. ಪ್ಲೇಟೋ ತನ್ನ 'ಥಿಯಾಕ್ಟೆಟಸ್' ನಲ್ಲಿ ಜ್ಞಾನ ಮತ್ತು ತತ್ತ್ವಗಳ ಸಮೀಕರಣವನ್ನು ನಿರಾಕರಿಸಲು ತೊಡಗಿದ್ದ, ಮತ್ತು ಅವನ ಕಾಲಾನಂತರದಲ್ಲಿ ಬಹುತೇಕ ಎಲ್ಲ ತತ್ತ್ವಜ್ಞಾನಿಗಳೂ – ಡೆಕಾರ್ಟೆ ಮತ್ತು ಲೀಬ್‌ನಿಜ್‌ರನ್ನು ಒಳಗೊಂಡಂತೆ ಅವನವರೆಗೂ – ನಮ್ಮ ಅಮೂಲ್ಯ ಜ್ಞಾನದ ಬಹುಪಾಲು ಅನುಭವದಿಂದ ಬಂದದ್ದಲ್ಲ ಎಂದು ಬೋಧಿಸಿದ್ದರು. ಹೀಗಾಗಿ ಲಾಕ್‌ನ ಪರಿಪೂರ್ಣ ಅನುಭವೈಕವಾದವು ಒಂದು ಸಾಹಸಪೂರ್ಣ ಅನಾವರಣ.

'ಎಸ್ಸೇ'ಯ ಮೂರನೆಯ ಭಾಗವು ಪದಗಳನ್ನು ಕುರಿತಾದುದು, ಮತ್ತು ಮುಖ್ಯವಾಗಿ ಜ್ಞಾನಜಿಜ್ಞಾಸುಗಳು ಜಗತ್ತಿನ ಬಗೆಗಿನ ಜ್ಞಾನವೆಂದು ಹೇಳುವುದು ಪೂರ್ತಿ ಮಾತುಗಾರಿಕೆಯದು. ಮೂರನೆಯ ಅಧ್ಯಾಯವಾದ 'ಸಾಮಾನ್ಯ ಶಬ್ದಗಳ ಕುರಿತಂತೆ' ಎಂಬುದು ವೈಶ್ವಿಕಗಳ ಬಗ್ಗೆ – ಅದು ಅತಿರೇಕದ ನಾಮಮಾತ್ರ ಸಿದ್ಧಾಂತವೆಂಬ ನಿಲವನ್ನು ತಾಳುತ್ತದೆ. ಅಸ್ತಿತ್ವದಲ್ಲಿರುವ ಎಲ್ಲ ವಸ್ತುಗಳೂ ನಿರ್ದಿಷ್ಟಗಳು, ಆದರೆ ನಾವು ಅನೇಕ ನಿರ್ದಿಷ್ಟಗಳಿಗೆ ಅನ್ವಯಿಸುವ ಸಾಮಾನ್ಯ ಚಿಂತನೆಗಳನ್ನು ರೂಪಿಸಿಕೊಳ್ಳಬಹುದು, 'ಮನುಷ್ಯ' ಎಂಬಂತೆ, ಇಂಥ ಸಾಮಾನ್ಯ ಚಿಂತನೆಗಳಿಗೆ ನಾವು ಹೆಸರುಗಳನ್ನೂ ಕೊಡಬಹುದು. ಅವುಗಳ ನಿರ್ದಿಷ್ಟತೆಯಿರುವುದು ಮುಖ್ಯವಾಗಿ ಅವು ಇರುವುದು ಅಥವಾ ಇರಬಹುದಾದುದು, ವಿವಿಧ ನಿರ್ದಿಷ್ಟ ವಸ್ತುಗಳಿಗೆ ಸಂಬಂಧಪಟ್ಟಂತೆ ಅವುಗಳ ಇರುವಿಕೆಗೆ ಅನ್ವಯಿಸಬಹುದಾದುದು, ನಮ್ಮ ಮನಸ್ಸಿನಲ್ಲಿ ಚಿಂತನೆಯಾಗುತ್ತದೆ; ಅವು ಅಸ್ತಿತ್ವದಲ್ಲಿರುವ ಮಿಕ್ಕೆಲ್ಲದರಂತೆಯೇ ನಿರ್ದಿಷ್ಟ ವಸ್ತುಗಳೇ ಆಗಿರುತ್ತವೆ.

ಮೂರನೆಯ ಭಾಗದ ನಾಲ್ಕನೆಯ ಅಧ್ಯಾಯವು, 'ದ್ರವ್ಯದ ಹೆಸರುಗಳನ್ನು ಕುರಿತು' ಎಂಬುದು; ಅದು ಸತ್ವದ ಸಿದ್ಧಾಂತವನ್ನು ಅಲ್ಲಗಳೆಯುವುದಕ್ಕೆ ಮೀಸಲಾದುದು. ವಸ್ತುಗಳಿಗೆ ತಮ್ಮ ಭೌತ ರಚನೆಯ ವಾಸ್ತವ ಸತ್ವವಿರಬಹುದು, ಆದರೆ ಪ್ರಮುಖವಾಗಿ ನಮಗೆ ತಿಳಿದಿಲ್ಲ ಎಂಬುದು, ಆದರೆ ಅದು ಸೂಕ್ಷ್ಮತಾರ್ಕಿಕರು ಹೇಳುವ 'ಸತ್ವ' ಅಲ್ಲ. ನಾವು ತಿಳಿಯಬಹುದಾದಂತೆ 'ಸತ್ವ'ವು ಬರೀ ಮಾತಿನದು; ಅದಿರುವುದು ಸಾವಾನ್ಯ ಶಬ್ದದ ಸೂತ್ರೀಕರಣದಲ್ಲಿ. ನಿದರ್ಶನಕ್ಕೆ, ವಾದಮಾಡುವುದಾದರೆ, ದೇಹವೊಂದರ ಸತ್ವವು ಅದರ ವಿಸ್ತರಣಮಾತ್ರವೇ, ಅಥವಾ ಅದರ ವಿಸ್ತರಣ ಮತ್ತು ದೃಢತೆ ಎಂದು ವಾದಿಸುವುದು ಬರಿಯ ಮಾತಿನ ವಾದ. ನಾವು 'ದೇಹ' ಎಂಬುದನ್ನು ಈ ಎರಡೂ ರೀತಿಗಳಲ್ಲಿಯೂ ಸೂತ್ರೀಕರಿಸಿ ಹೇಳಬಹುದು, ಮತ್ತು ನಾವು ನಮ್ಮ ಸೂತ್ರಕ್ಕೆ ಬದ್ಧರಾಗಿರುವವರೆಗೆ ಯಾವ ಹಾನಿಯೂ ಉಂಟಾಗಲಾರದು. ನಿರ್ದಿಷ್ಟ ಜೀವಜಾತಗಳು ಪ್ರಾಕೃತಿಕ ವಾಸ್ತವವಲ್ಲ, ಅದು ಭಾಷಿಕವಾದುದು. ಅವು 'ಬೇರೆ ಬೇರೆ ಹೆಸರುಗಳನ್ನು ಲಗತ್ತಿಸಿದ ನಿರ್ದಿಷ್ಟ ಸಂಕೀರ್ಣ ಚಿಂತನೆಗಳು.' ಪ್ರಕೃತಿಯಲ್ಲಿ ಬೇರೆ ಬೇರೆ ವಸ್ತುಗಳಿರುವುದೆಂಬುದು ನಿಜ, ಆದರೆ ಈ ವಿಭಿನ್ನತೆಗಳು ಮುಂದುವರಿಯುವುದು ನಿರಂತರ ವರ್ಗೀಕರಣದಿಂದ: 'ಜೀವಜಾತಗಳ ಪರಿಮಿತಿಗಳು, ಅವುಗಳನ್ನು ಮನುಷ್ಯರು ವಿಂಗಡಿಸುತ್ತಾರೆ, ಹಾಗಾಗಿ ಅವರೇ ಮಾಡಿರುವುದು.' ಅವನು ಮುಂದುವರಿದು ಪಿಶಾಚಿಗಳ ನಿದರ್ಶನಗಳನ್ನು ಕೊಡುತ್ತಾನೆ, ಆದರೆ ಅವು ಗಂಡಸರೋ ಹೆಂಗಸರೋ ಎಂಬುದು ಸಂದೇಹಾಸ್ಪದವಾದುದು. ಈ ದೃಷ್ಟಿಕೋನವನ್ನು ಜನರು ವ್ಯಾಪಕವಾಗಿ ಒಪ್ಪಿಕೊಂಡಿರಲಿಲ್ಲ, ಆದರೆ ಡಾರ್ವಿನ್ ಕ್ರಮೇಣ ಆದ ಬದಲಾವಣೆಗಳ ಮೂಲಕದ

ವಿಕಾಸವಾದವನ್ನು ಒಪ್ಪುವಂತೆ ಮಾಡಿದ. ಸೂಕ್ಷ್ಮತರ್ಕದಿಂದ ಪ್ರಭಾವಿತರಾದವರು ಮಾತ್ರ ಎಷ್ಟರ ಮಟ್ಟಿಗೆ ಅದು ತತ್ವಜಿಜ್ಞಾಸಾತ್ಮಕ ಮುರುಕಲು ವಸ್ತುಗಳನ್ನು ಗುಡಿಸಿ ಹಾಕಿತು ಎಂಬುದನ್ನು ಮನಗಾಣಬಲ್ಲರು.

ಅನುಭವೈಕವಾದ ಮತ್ತು ಆದರ್ಶವಾದಗಳು ಎದುರಿಸಿದ ಒಂದು ಸಮಾನ ಪ್ರಶ್ನೆಗೆ ಇಲ್ಲಿಯವರೆಗೆ ತತ್ವಜ್ಞಾನವು ಯಾವುದೇ ತೃಪ್ತಿಕರ ಪರಿಹಾರವನ್ನು ಒದಗಿಸಿಲ್ಲ. ನಮ್ಮ ಬಗ್ಗೆ ಮತ್ತು ನಮ್ಮ ಮನಸ್ಸುಗಳ ಕ್ರಿಯೆಯ ಬಗೆಗೆ ಹೊರತಾಗಿ ಮಿಕ್ಕ ವಸ್ತುಗಳ ಜ್ಞಾನ ನಮಗೆಷ್ಟು ಮಟ್ಟಿಗೆ ಇದೆ ಎಂಬುದೇ ಆ ಪ್ರಶ್ನೆ. ಲಾಕ್ ಈ ಪ್ರಶ್ನೆಯನ್ನು ಕುರಿತು ಪರಿಶೀಲಿಸುತ್ತಾನೆ, ಆದರೆ ಆ ಕುರಿತು ಅವನು ಹೇಳುವುದೂ ಅತೃಪ್ತಿಕರ ಎಂಬುದು ಸ್ಪಷ್ಟ. ಒಂದು ಸ್ಥಳದಲ್ಲಿ[೨೬೦] ಅವನೆನ್ನುತ್ತಾನೆ: 'ತನ್ನೆಲ್ಲ ಆಲೋಚನೆ ಮತ್ತು ವಿಚಾರಗಳಲ್ಲಿ ಮನಸ್ಸಿಗೆ ತನ್ನ ಚಿಂತನೆಗಳ ಹೊರತಾಗಿ ಬೇರಾವುದೇ ತಕ್ಷಣದ ಉದ್ದೇಶವಿಲ್ಲ, ಅದರ ಬಗ್ಗೆ ಮಾತ್ರವೇ ಅದು ಮಾಡಬಲ್ಲುದು ಅಥವಾ ಧೇನಿಸಬಲ್ಲುದು, ನಮ್ಮ ಜ್ಞಾನವು ಅವುಗಳ ಬಗ್ಗೆ ಮಾತ್ರ ಪರಿಚಯ ಹೊಂದಿರುತ್ತದೆಂಬುದು ಸ್ಪಷ್ಟ.' ಮತ್ತೆಯೂ: 'ಜ್ಞಾನವು ಎರಡು ಚಿಂತನೆಗಳ ನಡುವೆ ಒಡಂಬಡಿಕೆ ಇರುವ ಅಥವಾ ಇಲ್ಲದಿರುವುದರ ಬಗೆಗಿನ ಪರಿಕಲ್ಪನೆ.' ಇದರಿಂದ ತಕ್ಷಣವೇ ಹೊರಡುವುದೆಂದರೆ, ನಮಗೆ ಇತರರು ಅಥವಾ ಭೌತಿಕ ಜಗತ್ತು ಅಸ್ತಿತ್ವದಲ್ಲಿರುವುದು ತಿಳಿಯಲಾರದು, ಅವು ಅಸ್ತಿತ್ವದಲ್ಲಿದ್ದರೆ, ಅವು ನನ್ನ ಮನಸ್ಸಿನ ಚಿಂತನೆಗಳಷ್ಟೇ ಅಲ್ಲ. ಅದಕ್ಕನುಗುಣವಾಗಿ, ನಮ್ಮಲ್ಲಿ ಪ್ರತಿಯೊಬ್ಬನೂ, ಜ್ಞಾನಕ್ಕೆ ಸಂಬಂಧಪಟ್ಟಂತೆ, ತನ್ನಲ್ಲಿ ತಾನು ಗೂಡಾಗಿರಬೇಕು, ಇತರ ಜಗತ್ತಿನೆಲ್ಲದರಿಂದ ದೂರ ಉಳಿಯಬೇಕು ಎಂಬುದು.

ಆದರೆ ಇದೊಂದು ವಿರೋಧಾಭಾಸ, ಮತ್ತು ಲಾಕ್ ವಿರೋಧಾಭಾಸಗಳಿಗೆ ಹೊರತು. ಅದರಂತೆ, ಮತ್ತೊಂದು ಅಧ್ಯಾಯದಲ್ಲಿ, ಒಂದು ವಿಭಿನ್ನ ಸಿದ್ಧಾಂತವನ್ನು ಮಂಡಿಸುತ್ತಾನೆ, ಆದರೆ ಅದು ತನ್ನ ಹಿಂದಿನದರೊಡನೆ ಅಸಂಗತವಾಗಿತ್ತದೆ. ನಮಗೆ ವಾಸ್ತವ ಅಸ್ತಿತ್ವಗಳ ಬಗ್ಗೆ ಮೂರು ಬಗೆಯ ಜ್ಞಾನವಿದೆ: ನಮ್ಮ ಅಸ್ತಿತ್ವದ ಬಗೆಗಿನ ನಮ್ಮ ಜ್ಞಾನವು ಅಂತರ್ಬೋಧಾತ್ಮಕ (ಇನ್‌ಟ್ಯೂಟಿವ್), ದೇವರ ಅಸ್ತಿತ್ವದ ಬಗೆಗಿನ ನಮ್ಮ ಜ್ಞಾನವು ಪ್ರದರ್ಶನಾತ್ಮಕ (ಡೆಮಾನ್‌ಸ್ಟ್ರೇಟಿವ್), ಮತ್ತು ಇಂದ್ರಿಯಗೋಚರವಾಗುವ ವಸ್ತುಗಳ ಬಗೆಗಿನ ಜ್ಞಾನವು ಇಂದ್ರಿಯಗ್ರಾಹ್ಯಾತ್ಮಕ (ಸೆನ್ಸಿಟಿವ್) (ಭಾಗ ೪, ಅಧ್ಯಾಯ ೩).

ಮುಂದಿನ ಅಧ್ಯಾಯದಲ್ಲಿ, ಅದರ ಹೆಚ್ಚುಕಡಿಮೆ ಅಸಾಂಗತ್ಯದ ಬಗ್ಗೆ ಅವನ ಅರಿವಿಗೆ ಬರುತ್ತದೆ. 'ಜ್ಞಾನವೆಂದರೆ ಚಿಂತನೆಗಳ ಒಡಂಬಡಿಕೆ ಎಂದು ಯಾರಾದರೂ

---

೨೬೦. ಪೂರ್ವೋಕ್ತ, ಭಾಗ ೪, ಅಧ್ಯಾಯ ೧.

ಹೇಳಿದರೆ ಉತ್ಸಾಹಶಾಲಿ ಮತ್ತು ಚಿತ್ತಸ್ತಿಮಿತತೆ ಎರಡೂ ಒಂದೇ ಎಂದಂತೆ' ಎನ್ನುತ್ತಾನೆ. ಅದಕ್ಕವನ ಉತ್ತರ: 'ಹಾಗಲ್ಲ, ಚಿಂತನೆಗಳು ವಸ್ತುಗಳೊಡನೆ ಒಡಂಬಟ್ಟರೆ.' ತನ್ನ ವಾದವನ್ನು ಮುಂದುವರಿಸಿ, ಎಲ್ಲ ಸರಳ ಚಿಂತನೆಗಳು ವಸ್ತುಗಳೊಡನೆ ಹೊಂದಿಕೆಯಾಗಬೇಕು, ಯಾಕೆಂದರೆ 'ಮನಸ್ಸು, ಈಗಾಗಲೇ ತೋರಿಸಿರುವಂತೆ, ತನಗೆ ತಾನೇ ಯಾವುದೇ ಸರಳ ಚಿಂತನೆಗಳನ್ನು ಮಾಡಲಾರದು', ಇವೆಲ್ಲವೂ 'ಮನಸ್ಸಿನ ಮೇಲೆ ಸಹಜ ರೀತಿಯಲ್ಲಿ ಪ್ರಭಾವ ಬೀರುವ ಒಟ್ಟಂದ'. ದ್ರವ್ಯದ ಸಂಕೀರ್ಣ ಚಿಂತನೆಗಳಿಗೆ ಸಂಬಂಧಿಸಿದಂತೆ, 'ಅವುಗಳ ಬಗೆಗಿನ ನಮ್ಮೆಲ್ಲ ಸಂಕೀರ್ಣ ಚಿಂತನೆಗಳು ಹೇಗಿರಬೇಕೆಂದರೆ, ಹೇಗೆ ಮಾತ್ರ ಇರಬೇಕೆಂದರೆ, ಪ್ರಕೃತಿಯಲ್ಲಿ ಸಹಅಸ್ತಿತ್ವ ಹೊಂದಿರುವ ಸರಳವಾದವುಗಳಿಂದ ರೂಪಿತವಾಗಿರಬೇಕು.' ಮತ್ತೆ, ಇವುಗಳ ಹೊರತಾಗಿ ನಮಗೆ ಜ್ಞಾನ ದೊರಕಲಾರದು: (೧) ಅಂತರ್ಬೋಧೆ, (೨) ವೈಚಾರಿಕತೆ, ಎರಡು ಚಿಂತನೆಗಳ ನಡುವಣ ಹೊಂದಾಣಿ ಇರುವ ಇಲ್ಲದಿರುವ ಬಗ್ಗೆ ಪರೀಕ್ಷೆ, ಮತ್ತು (೩) ಇಂದ್ರಿಯಗ್ರಹಿಕೆ, ನಿರ್ದಿಷ್ಟ ವಸ್ತುಗಳ ಅಸ್ತಿತ್ವದ ಪರಿಕಲ್ಪನೆ.' (ಭಾಗ ೪, ಅಧ್ಯಾಯ ೩, ಉಪವಿಭಾಗ ೨).

ಇದರಲ್ಲೆಲ್ಲ ಲಾಕ್, ಕೆಲವು ಮಾನಸಿಕ ಘಟನೆಗಳಿಗೆ – ಅವನು ಅವುಗಳನ್ನು ಇಂದ್ರಿಯಗ್ರಹಿಕೆ ಎನ್ನುತ್ತಾನೆ – ಅವುಗಳ ಬಾಹ್ಯವಾದ ಕಾರಣಗಳಿರುತ್ತವೆ, ಮತ್ತು ಈ ಕಾರಣಗಳು ಕನಿಷ್ಠ ಪಕ್ಷ ಒಂದಷ್ಟು ಪ್ರಮಾಣದಲ್ಲಿ ಮತ್ತು ಕೆಲವು ಅಂಶಗಳಲ್ಲಿ ಅವುಗಳ ಪರಿಣಾಮಗಳಾದ ಇಂದ್ರಿಯಗ್ರಹಿಕೆಯನ್ನು ಹೋಲುತ್ತವೆ. ಆದರೆ ಅನುಭವೈಕವಾದದ ತತ್ವಗಳಿಗೆ ಅನುಗುಣವಾಗಿ ಇದನ್ನು ತಿಳಿಯುವುದು ಹೇಗೆ? ನಮಗೆ ಇಂದ್ರಿಯಗ್ರಹಿಕೆಯು ಅನುಭವಕ್ಕೆ ಬರುತ್ತದೆಯೇ ವಿನಾ ಅವುಗಳ ಕಾರಣಗಳಲ್ಲ; ನಮ್ಮ ಇಂದ್ರಿಯಗಳು ಸಹಜಸ್ಫೂರ್ತವಾಗಿದ್ದರೆ ನಮ್ಮ ಅನುಭವವು ಅದಕ್ಕೆ ತದ್ವತ್ತಾಗಿರುತ್ತದೆ. ಇಂದ್ರಿಯಗ್ರಹಿಕೆಗೆ ಕಾರಣಗಳಿರುತ್ತವೆ ಎಂಬ ನಂಬಿಕೆಯು, ಅದಕ್ಕಿಂತಲೂ ಹೆಚ್ಚಾಗಿ ಅವು ಕಾರಣಗಳನ್ನು ಹೋಲುತ್ತವೆ ಎಂಬ ನಂಬಿಕೆಯು, ಎಂತಹುದೆಂದರೆ, ಅದನ್ನು ಸಮರ್ಥಿಸಬೇಕಾದರೆ, ಅನುಭವಕ್ಕೆ ಸಂಪೂರ್ಣ ಸ್ವತಂತ್ರವಾದುದಾಗಿ ಸಮರ್ಥಿಸಬೇಕಾಗುತ್ತದೆ. 'ಜ್ಞಾನವೆಂದರೆ ಎರಡು ಚಿಂತನೆಗಳ ನಡುವೆ ಹೊಂದಾಣಿಕೆ ಇರುವುದು ಅಥವಾ ಇಲ್ಲದಿರುವುದರ ಪರಿಕಲ್ಪನೆ' ಎಂಬ ದೃಷ್ಟಿಕೋನವು ಲಾಕ್‌ನ ಸ್ವಂತದ್ದು. ಆದರೆ ಅದರಿಂದ ಉದ್ಭವವಾಗುವ ವಿರೋಧಾಭಾಸದಿಂದ ಅವನು ಪಾರಾಗುವುದು ಒಂದು ಅಸಾಮಂಜಸ್ಯದಿಂದ, ಅದು ಎಷ್ಟು ದೊಡ್ಡದೆಂದರೆ ಸಾಮಾನ್ಯ ತಿಳಿವಳಿಕೆಗೆ ಅವನು ನಿರ್ಧಾರದಿಂದ ಬದ್ಧನಾಗಿದ್ದಿದ್ದರೆ ಸಾಕಾಗಿತ್ತು.

ಇವತ್ತಿಗೂ ಈ ತೊಡಕಿನಿಂದ ಅನುಭವೈಕವಾದವು ಪಾರಾಗಿಲ್ಲ. ಇಂದ್ರಿಯಗ್ರಹಿಕೆಗೆ ಬಾಹ್ಯ ಕಾರಣಗಳಿರುತ್ತವೆ ಎಂಬ ಊಹೆಯನ್ನು ಕೈಬಿಡುವುದರಿಂದ

ಹ್ಯೂಮ್ ಅದನ್ನು ದೂರಸರಿಸಿದ, ಆದರೆ ತನ್ನ ತತ್ವಗಳನ್ನು ಮರೆತಾಗ ಅವನೂ ಅದನ್ನುಳಿಸಿಕೊಂಡ, ಇದು ಪದೇ ಪದೇ ನಡೆಯಿತು. ಅವನ ಮೂಲಭೂತ ಸೂತ್ರವಾಕ್ಯವೆಂದರೆ, 'ಪೂರ್ವಭಾವಿ ಪ್ರಭಾವ (ಇಂಪ್ರೆಷನ್) ವಿಲ್ಲದೆ ಚಿಂತನೆ ಇಲ್ಲ' ಎಂಬುದು; ಇದನ್ನವನು ಲಾಕ್‌ನಿಂದ ಪಡೆಯುತ್ತಾನೆ; ಪ್ರಭಾವಗಳಿಗೆ ಬಾಹ್ಯ ಕಾರಣಗಳಿರುತ್ತವೆ ಎಂದು ಭಾವಿಸುವವರೆಗೂ ಇದು ಸಮಂಜಸವಾಗುತ್ತದೆ, ಅದನ್ನು 'ಪ್ರಭಾವ' ಎಂಬ ಪದವೇ ಅನಿವಾರ್ಯವೆಂದು ಸೂಚಿಸುತ್ತದೆ. ಹ್ಯೂಮ್ ಒಂದಷ್ಟು ಮಟ್ಟಿಗಿನ ಸಾಂಗತ್ಯವನ್ನು ಸಾಧಿಸಿದ ತಕ್ಷಣವೇ ಅವನು ಸಿಕ್ಕಾಪಟ್ಟೆ ವಿರೋಧಾಭಾಸಗಳಿಂದ ಕೂಡಿರುತ್ತಾನೆ.

ಒಮ್ಮೆಗೇ ನಂಬಲರ್ಹವಾದುದೂ ಸುಸಂಗತವಾದುದೂ ಆದ ತಾತ್ವಿಕತೆಯೊಂದನ್ನು ಸೃಷ್ಟಿಸುವುದರಲ್ಲಿ ಇದುವರೆಗೆ ಯಾರೂ ಯಶಸ್ವಿಯಾಗಿಲ್ಲ. ಲಾಕ್‌ನ ಗಮನ ನಂಬಲರ್ಹತೆಯ ಕಡೆಗೆ, ಆದರೆ ಸುಸಂಗತತೆಯನ್ನು ಬಲಿಗೊಟ್ಟು ಅದನ್ನು ಸಾಧಿಸಿದ. ಬಹುಮಂದಿ ದೊಡ್ಡ ತತ್ವಜ್ಞಾನಿಗಳು ಇದಕ್ಕೆ ವ್ಯತಿರಿಕ್ತವಾದುದನ್ನು ಸಾಧಿಸಿದ್ದಾರೆ. ಸುಸಂಗತವಾಗಿಲ್ಲದ ತಾತ್ವಿಕತೆಯು ಪೂರ್ತಿ ಸತ್ಯವಾಗಿರಲು ಸಾಧ್ಯವಿಲ್ಲ, ಆದರೆ ಸುಸಂಗತವಾದ ತಾತ್ವಿಕತೆಯು ಸಂಪೂರ್ಣವಾಗಿ ತಪ್ಪಾಗಿರಲೂ ಸಾಧ್ಯ. ಬಹು ಫಲಕಾರಕವಾದ ತಾತ್ವಿಕತೆಗಳು ಎದ್ದು ಕಾಣುವ ವಿಸಂಗತಿಯಿಂದ ಕೂಡಿರುತ್ತವೆ, ಮತ್ತು ಇದೇ ಕಾರಣಕ್ಕಾಗಿಯೇ ಅವು ಭಾಗಶಃ ಸತ್ಯವಾಗುವುದು. ಸುಸಂಗತ ತಾತ್ವಿಕತೆಯಲ್ಲಿ, ಲಾಕ್‌ನಲ್ಲಿಯಂತೆ ಹೆಚ್ಚು ಕಡಿಮೆ ತಪ್ಪಾಗಿರುವ ತಾತ್ವಿಕತೆಗಿಂತ ಹೆಚ್ಚು ಸತ್ಯಾಂಶವಿರುತ್ತದೆ ಎಂದು ಭಾವಿಸುವುದಕ್ಕೆ ಕಾರಣವಿಲ್ಲ.

ಲಾಕ್‌ನ ನೈತಿಕ ಸಿದ್ಧಾಂತಗಳು ಕುತೂಹಲಕಾರಿಯಾಗಿವೆ, ಅದಕ್ಕೆ ಕಾರಣ ಸ್ವಲ್ಪಮಟ್ಟಿಗೆ ಅವುಗಳ ನಿರೂಪಣೆಯಾದರೆ, ಮತ್ತೆ ಸ್ವಲ್ಪ ಮಟ್ಟಿಗೆ ಬೆಂಥಮ್‌ನ ನಿರೀಕ್ಷೆಯಾಗಿ. ನಾನು ಅವನ ನೈತಿಕ ಸಿದ್ಧಾಂತಗಳ ಬಗ್ಗೆ ಮಾತನಾಡುವಾಗ, ಒಬ್ಬ ವ್ಯಕ್ತಿಯಾಗಿ ಅವನಿದ್ದ ವ್ಯಾವಹಾರಿಕ ನೈತಿಕತೆಯ ಬಗೆ ಎಂಬುದು ನನ್ನ ಅರ್ಥವಲ್ಲ, ಆದರೆ ಜನರು ಹೇಗೆ ನಡೆದುಕೊಳ್ಳುತ್ತಾರೆ ಮತ್ತು ಹೇಗೆ ನಡೆದುಕೊಳ್ಳಬೇಕು ಎಂಬುದರ ಕುರಿತು. ಬೆಂಥಮ್‌ನಂತೆಯೇ ಲಾಕ್‌ನಲ್ಲಿಯೂ ಮೃದು ಭಾವನೆಗಳು ತುಂಬಿದ್ದವು, ಆದರೆ ಪ್ರತಿಯೊಬ್ಬರೂ (ತನ್ನನ್ನೂ ಒಳಗೊಂಡಂತೆ) ತನ್ನದೆ ಸುಖ ಅಥವಾ ಸಂತೋಷದ ಬಯಕೆಯಿಂದ ಪ್ರೇರಿತವಾದ ಕ್ರಿಯೆಗಳಲ್ಲಿ ತೊಡಗಿರಬೇಕು ಎಂಬ ಅಭಿಪ್ರಾಯವನ್ನವನು ತಳೆದಿದ್ದ.

'ನೋವು ಅಥವಾ ನಲಿವಿಗೆ ಸಂಬಂಧಿಸಿದಂತೆ ಮಾತ್ರವೇ ಒಳ್ಳೆಯವು ಕೆಟ್ಟವು ಎನಿಸುತ್ತವೆ. "ಒಳ್ಳೆಯದು" ಎಂದು ನಾವು ಕರೆಯುವುದು ಯಾವುದು ನಮ್ಮಲ್ಲಿ ಸಂತೋಷವನ್ನು ಉಂಟುಮಾಡುತ್ತದೋ ಅಥವಾ ಹೆಚ್ಚಿಸುತ್ತದೋ ಅಥವಾ ನೋವನ್ನು ಕಡಿಮೆ ಮಾಡುತ್ತದೆಯೋ ಅದನ್ನು.'

'ನಮ್ಮ ಬಯಕೆಯನ್ನು ಪ್ರೇರಿಸುವುದು ಯಾವುದು? ನನ್ನ ಉತ್ತರವೆಂದರೆ, ಸುಖ ಮತ್ತು ಸುಖ ಮಾತ್ರವೇ.'

'ಸುಖವೆಂದರೆ, ತನ್ನ ಪೂರ್ಣ ಪ್ರಮಾಣದಲ್ಲಿ, ನಮಗೆ ಸಾಧ್ಯವಾಗುವ ಅತ್ಯಂತ ಹೆಚ್ಚಿನ ಸಂತೋಷ.'

'ಸದ್ಗುಣಕ್ಕಿಂತ ಕೆಡುಕನ್ನೇ ಆಯ್ಕೆಮಾಡಿಕೊಳ್ಳುವುದು ತಪ್ಪು ತೀರ್ಮಾನದ ವ್ಯಕ್ತ ರೂಪ.'

'ನಮ್ಮ ರಾಗದ್ವೇಷಗಳ ನಿರ್ವಹಣೆಯೇ ಸ್ವಾತಂತ್ರ್ಯದ ನಿಜವಾದ ಹೆಚ್ಚಳ.'[೨೬೧]

ಈ ಹೇಳಿಕೆಗಳಲ್ಲಿ ಕೊನೆಯದು ಮುಂದಿನ ಲೋಕದಲ್ಲಿ ದೊರೆಯುವ ಪ್ರತಿಫಲ ಮತ್ತು ಶಿಕ್ಷೆಗಳ ಸಿದ್ಧಾಂತವನ್ನು ಅವಲಂಬಿಸಿರುವಂತೆ ತೋರುತ್ತದೆ. ದೇವರು ಕೆಲವು ನೈತಿಕ ನಿಯಮಗಳಣ್ನು ಹಾಕಿಕೊಟ್ಟಿದ್ದಾನೆ; ಅವುಗಳನ್ನು ಅನುಸರಿಸುವವರು ಸ್ವರ್ಗಕ್ಕೆ ಹೋಗುತ್ತಾರೆ, ಅದನ್ನು ಮೀರುವವರು ನರಕಕ್ಕಿಳಿಯುವ ಅಪಾಯುವನ್ನು ಹೊಂದಿರುತ್ತಾರೆ. ಹೀಗಾಗಿ ವಿವೇಕಯುತವಾದ ಸಂತೋಷಾನ್ವೇಷಿಯು ಸದ್ಗುಣಿಯಾಗಿರುತ್ತಾನೆ. ಪಾಪದಿಂದ ನರಕ ಎಂಬ ನಂಬಿಕೆ ನಶಿಸಿರುವುದರ ಕಾರಣದಿಂದಾಗಿ ಸದ್ಗುಣಶೀಲ ಬದುಕಿನ ಪರವಾದ ಪರಿಶುದ್ಧ ವಾದವನ್ನು ಮುಂದಿಡುವುದು ಕಷ್ಟಕರ. ಮುಕ್ತ ಚಿಂತಕನಾಗಿದ್ದ ಬೆಂಥಮ್ ದೇವರ ಜಾಗದಲ್ಲಿ ಮಾನವ ಕಾನೂನುರಚಕನನ್ನಿರಿಸಿದ: ಸಾರ್ವಜನಿಕ ಹಾಗೂ ಖಾಸಗಿ ಹಿತಾಸಕ್ತಿಗಳಲ್ಲಿ ಸಾಮರಸ್ಯವನ್ನು ತರುವುದು ಕಾನೂನು ಮತ್ತು ಸಾಮಾಜಿಕ ಸಂಸ್ಥೆಗಳ ಕೆಲಸ ಎಂದವನು ವಾದಿಸಿದ; ಇದರಿಂದಾಗಿ ಪ್ರತಿ ವ್ಯಕ್ತಿಯೂ ತನ್ನ ಹಿತವನ್ನು ಪಡೆಯುವ ಪ್ರಯತ್ನದಲ್ಲಿ ಸಾರ್ವತ್ರಿಕ ಸುಖವನ್ನೂ ಉಂಟುಮಾಡುವ ಒತ್ತಡವಿರಬೇಕು. ಆದರೆ ಇದು ಸ್ವರ್ಗ ಮತ್ತು ನರಕಗಳ ಕಲ್ಪನೆಯುಂಟುಮಾಡುವ ಸಾರ್ವತ್ರಿಕ ಮತ್ತು ಖಾಸಗಿ ಹಿತಗಳ ಸಾಮರಸ್ಯಕ್ಕಿಂತ ಕಡಿಮೆ ತೃಪ್ತಿಕರವೆನಿಸುವಂತಹದು, ಅದಕ್ಕೆ ಕಾರಣ ಕಾನೂನು ರಚಕರು ಯಾವಾಗಲೂ ವಿವೇಕಶಾಲಿಗಳೂ ಸದ್ಗುಣಿಗಳೂ ಆಗಿರುವುದಿಲ್ಲ, ಮತ್ತು ಮಾನವ ನಿರ್ಮಿತ ಆಡಳಿತವು ಸರ್ವಜ್ಞತ್ವವನ್ನು ಹೊಂದಿರುವುದಿಲ್ಲ.

ವೈಚಾರಿಕ ಲೆಕ್ಕಾಚಾರದ ಪ್ರಕಾರ, ಯಾವುದು ಮಾನವರಿಗೆ ಅತ್ಯಂತ ಹೆಚ್ಚಿನ ಸುಖವನ್ನು ಉಂಟುಮಾಡಬಹುದು ಎಂಬುದು ಸ್ಪಷ್ಟವಾಗಿದೆಯೋ ಅದರಂತೆ ಸದಾ ನಡೆದುಕೊಳ್ಳುವುದಿಲ್ಲ ಎಂಬುದನ್ನು ಲಾಕ್ ಒಪ್ಪಿಕೊಳ್ಳಬೇಕಾಯಿತು. ನಮಗೆ ಇವತ್ತಿನ ಸುಖವು ನಾಳಿನ ಸುಖಕ್ಕಿಂತ ಹೆಚ್ಚು ಮುಖ್ಯ, ಹಾಗೆಯೇ ಇಷ್ಟರಲ್ಲಿಯೇ ಒದಗುವ ಸುಖವು ಮುಂದೆ ಯಾವತ್ತೋ ಒದಗುವ ಸುಖಕ್ಕಿಂತ ಮುಖ್ಯ.

---

೨೬೧. ಮೇಲಿನ ಉದ್ಧರಣಗಳು ಭಾಗ ೨, ಅಧ್ಯಾಯ ೨೦ ರಲ್ಲಿನವು.

ಅಂದರೆ ಆಸಕ್ತಿಯ ದರದ ಪ್ರಮಾಣವು ಮುಂದಿನ ಸುಖಗಳಿಗೆ ನೀಡುವ ರಿಯಾಯಿತಿ ಎಂದು ಹೇಳಬಹುದು, ಇದನ್ನು ಲಾಕ್ ಹೇಳಲಿಲ್ಲ. ಒಂದು ವರ್ಷದ ನಂತರ ಒಂದು ಸಾವಿರ ಪೌಂಡ್‌ಗಳನ್ನು ವೆಚ್ಚ ಮಾಡಬಹುದಾದ ಸಂಭಾವ್ಯತೆಯು ಅದನ್ನು ಇವತ್ತೇ ವೆಚ್ಚ ಮಾಡುವುದರಷ್ಟೇ ಸಂತೋಷಕರವಾಗಿದ್ದರೆ, ನನ್ನ ಸಂತೋಷವನ್ನು ಮುಂದೂಡಲು ನನಗೆ ಯಾವ ಪ್ರತಿಫಲವನ್ನೂ ನೀಡುವ ಆವಶ್ಯಕತೆಯಿರುತ್ತಿರಲಿಲ್ಲ. ಗಾಢ ಶ್ರದ್ಧೆಯ ಜನರೂ ಎಷ್ಟೋ ವೇಳೆ, ತಮ್ಮ ಪಂಥವೇ ನಿಷೇಧಿಸುವ ಪಾಪಗಳನ್ನು ಮಾಡಿ ನರಕಕ್ಕೆ ಭಾಜನರಾಗುತ್ತಾರೆ ಎಂಬುದನ್ನೂ ಲಾಕ್ ಒಪ್ಪಿಕೊಳ್ಳುತ್ತಾನೆ. ತಮ್ಮ ಸಂತೋಷಾನ್ವೇಷಣೆಯಲ್ಲಿ ತೊಡಗಿಕೊಂಡಿರುವವರು ದಂತವೈದ್ಯನನ್ನು ನೋಡಬೇಕಾದ ತೇದಿಯನ್ನು ಅನ್ಯತಃ ಮಾಡುವುದಕ್ಕಿಂತ ಹೆಚ್ಚಿನ ಕಾಲ ಮುಂದೂಡುತ್ತಾರೆ ಎಂಬುದನ್ನು ನಾವೆಲ್ಲ ಬಲ್ಲೆವು. ಹೀಗೆ ಸಂತೋಷ ಅಥವಾ ನೋವಿನ ಪರಿಹಾರವು ನಮ್ಮ ಉದ್ದೇಶವಾಗಿದ್ದರೂ, ಭವಿಷ್ಯದಲ್ಲಿನ ದೂರದ ಪ್ರಮಾಣಕ್ಕನುಗುಣವಾಗಿ ಸಂತೋಷಗಳು ತಮ್ಮ ಆಕರ್ಷಣೆಯನ್ನೂ ನೋವಿನ ಪರಿಹಾರಗಳು ತಮ್ಮ ಭಯಾನಕತೆಯನ್ನೂ ಕಳೆದುಕೊಳ್ಳುತ್ತವೆ ಎಂಬುದನ್ನೂ ಸೇರಿಸಬೇಕು.

ದೂರಭವಿಷ್ಯದಲ್ಲಿಯಷ್ಟೇ ಸ್ವಹಿತ ಮತ್ತು ಸಾರ್ವತ್ರಿಕ ಹಿತಗಳು ಒಂದಾಗುವುದರಿಂದ, ಸಾಧ್ಯವಾದ ಮಟ್ಟಿಗೂ ಜನರನ್ನು ದೂರಭವಿಷ್ಯದ ಹಿತಗಳ ಕಡೆಗೆ ಮುನ್ನಡೆಸಬೇಕು ಎಂದು ಲಾಕ್ ಅಭಿಪ್ರಾಯಪಡುತ್ತಾನೆ. ಅಂದರೆ, ಜನರು ವಿವೇಕಿಗಳಾಗಬೇಕು. ವಿವೇಕವು ಹೇಳಿಕೊಡಬೇಕಾದ ಒಂದು ಸದ್ಗುಣ, ಯಾಕೆಂದರೆ ಸದ್ಗುಣದಿಂದ ಒಂದು ಹೆಜ್ಜೆ ದೂರ ಸರಿದರೆ ಅಷ್ಟರಮಟ್ಟಿಗೆ ವಿವೇಕವು ವಿಫಲವಾದಂತೆ. ವಿವೇಕಕ್ಕೆ ನೀಡುವ ಪ್ರಾಮುಖ್ಯವೇ ಉದಾರವಾದದ ಲಕ್ಷಣ. ಆದರೆ ಅದು ಬಂಡವಾಳಶಾಹಿಯ ಏಳಿಗೆಯೊಡನೆ ತಳುಕುಹಾಕಿಕೊಂಡಿದೆ, ಯಾಕೆಂದರೆ ವಿವೇಕಿಯು ಹಣವಂತನಾದರೆ ಅವಿವೇಕಿಯು ಬಡವನಾಗಿಯೇ ಉಳಿದ. ಅದು ಕೆಲವು ಬಗೆಯ ಪ್ರಾಟೆಸ್ಟೆಂಟ್ ಮತಧರ್ಮಶ್ರದ್ಧೆಯ ಜೊತೆಗೂ ಸೇರಿಕೊಂಡಿದೆ: ಸ್ವರ್ಗದ ಮೇಲೆ ಕಣ್ಣಿಟ್ಟ ಸದ್ಗುಣವು ಮನೋವೈಜ್ಞಾನಿಕವಾಗಿ ಹೂಡಿಕೆಯ ಕಾರಣದಿಂದ ಮಾಡುವ ಉಳಿತಾಯವನ್ನು ಹೋಲುತ್ತದೆ.

ಖಾಸಗಿ ಮತ್ತು ಸಾರ್ವತ್ರಿಕ ಹಿತಗಳ ಸಾಮರಸ್ಯದಲ್ಲಿನ ನಂಬಿಕೆಯು ಉದಾರವಾದದ ಲಕ್ಷಣ; ಲಾಕ್‌ನಲ್ಲಿನ ಮತಧಾರ್ಮಿಕ ಬುನಾದಿಯು ದೀರ್ಘ ಕಾಲ ಉಳಿದು ಬಂದಿತ್ತು.

ಸ್ವಾತಂತ್ರ್ಯ ಎಂಬುದು ನಿಜವಾದ ಸುಖವನ್ನು ಅನ್ವೇಷಿಸುವ ಆವಶ್ಯಕತೆಯನ್ನು ಮತ್ತು ನಮ್ಮ ರಾಗದ್ವೇಷಗಳ ಮೇಲೆನ ನಿಯಂತ್ರಣವನ್ನು ಅವಲಂಬಿಸಿರುತ್ತದೆ ಎಂದು ಲಾಕ್ ಹೇಳಿದ. ಈ ಅಭಿಪ್ರಾಯವನ್ನವನು ಸ್ವಹಿತ ಮತ್ತು ಸಾರ್ವತ್ರಿಕ

ಹಿತಗಳು ದೂರಭವಿಷ್ಯದಲ್ಲಿ, ಸಮೀಪ ಭವಿಷ್ಯದಲ್ಲಲ್ಲದಿದ್ದರೂ, ಒಂದೇ ಅಗುತ್ತವೆ ಎಂಬ ತನ್ನ ಸಿದ್ಧಾಂತದಿಂದ ಪಡೆಯುತ್ತಾನೆ. ಈ ಸಿದ್ಧಾಂತದಿಂದ ಮೂಡುವುದೆಂದರೆ ಎಲ್ಲ ಪ್ರಜೆಗಳು ಧರ್ಮಶ್ರದ್ಧೆಯವರೂ ವಿವೇಕಿಗಳೂ ಆಗಿರುವ ಸಮಾಜದಲ್ಲಿ, ಸ್ವಾತಂತ್ರ್ಯವಿತ್ತರೆ, ಅವರೆಲ್ಲ ಸಾರ್ವತ್ರಿಕ ಹಿತವನ್ನು ಸಾಧಿಸುವ ನಿಟ್ಟಿನಲ್ಲಿ ಕ್ರಿಯಾಶೀಲರಾಗುತ್ತಾರೆ. ಅವರನ್ನು ನಿಯಂತ್ರಿಸುವ ಮಾನವನಿರ್ಮಿತ ಕಾನೂನುಗಳ ಆವಶ್ಯಕತೆಯೇ ಆಗ ಇರುವುದಿಲ್ಲ, ದೈವನಿಯಮಗಳೇ ಸಾಕಾಗುತ್ತವೆ. ಇಲ್ಲಿಯವರೆಗೆ ಸದ್ಗುಣಿಯಾಗಿರುವವನು ದರೋಡೆಕೋರನಾಗುವ ಆಮಿಷಕ್ಕೊಳಗಾದರೆ ತನಗೆ ತಾನೇ ಹೀಗೆಂದುಕೊಳ್ಳುತ್ತಾನೆ: 'ನಾನು ಮಾನವ ಮ್ಯಾಜಿಸ್ಟ್ರೇಟ್‌ನಿಂದ ತಪ್ಪಿಸಿಕೊಳ್ಳಬಹುದು, ಆದರೆ ದೇವರೆಂಬ ಮ್ಯಾಜಿಸ್ಟ್ರೇಟ್‌ನ ಕೈಯಿಂದ ಶಿಕ್ಷೆಯನ್ನು ತಪ್ಪಿಸಿಕೊಳ್ಳಲಾದೀತೇ?' ಇದರಿಂದ ಅವನು ತನ್ನ ಕ್ಷುದ್ರ ಆಮಿಷವನ್ನು ಬದಿಗೊತ್ತಿ, ತಾನೆಲ್ಲಿ ಪೋಲೀಸನಿಗೆ ಸಿಕ್ಕಿಹಾಕಿಕೊಳ್ಳುವೆನೋ ಎಂಬ ಭಯದಿಂದಿರುವಷ್ಟೇ ಎಚ್ಚರದಿಂದ ಬದುಕುತ್ತಾನೆ. ಹೀಗಾಗಿ ಕಾನೂನುದತ್ತ ಸ್ವಾತಂತ್ರ್ಯವು ಸಂಪೂರ್ಣವಾಗಿ ಸಾಧ್ಯವಾಗುವುದು ವಿವೇಕ ಮತ್ತು ಧರ್ಮಶ್ರದ್ಧೆಗಳು ಸಾರ್ವತ್ರಿಕವಾಗಿರುವಾಗ; ಮಿಕ್ಕ ಕಡೆಯಲ್ಲಿ ಅಪರಾಧಸಂಹಿತೆಯ ನಿಯಂತ್ರಣಗಳು ಅನಿವಾರ್ಯವಾಗುತ್ತವೆ.

ನೈತಿಕತೆಯು ನಿದರ್ಶನಸಾಧ್ಯವಾದುದು ಎಂದು ಲಾಕ್ ಮತ್ತೆ ಮತ್ತೆ ಹೇಳುತ್ತಾನೆ, ಆದರೆ ಈ ಕಲ್ಪನೆಯನ್ನು ಬಯಸಿದಂತೆ ಬೆಳೆಸಲಿಲ್ಲ. ಅತ್ಯಂತ ಮುಖ್ಯ ಭಾಗವೆಂದರೆ: 'ನೈತಿಕತೆಯು ನಿದರ್ಶನಸಾಧ್ಯವಾದುದು. ಶಕ್ತಿ, ಒಳ್ಳೆಯತನ ಮತ್ತು ವಿವೇಕಗಳಿಂದ ಕೂಡಿದ ಮತ್ತು ನಮ್ಮ ನಿರ್ಮಾತೃವಾದ, ಮತ್ತು ನಾವು ಅವಲಂಬಿಸಿರುವ ಪರಮಪುರುಷ ಕಲ್ಪನೆ; ಮತ್ತು ಅರ್ಥಮಾಡಿಕೊಳ್ಳುವ ವೈಚಾರಿಕರಾದ ಮತ್ತು ನಮಗೆ ಸ್ಪಷ್ಟವಾಗಿರುವ ನಮ್ಮದೇ ಬಗೆಗಿನ ಕಲ್ಪನೆಯು, ಸರಿಯಾದ ರೀತಿಯಲ್ಲಿ ಪರಿಗಣಿಸಿ ಮುಂದುವರಿಸಿದರೆ ನಮ್ಮ ಕರ್ತವ್ಯ ಮತ್ತು ಕ್ರಿಯಾನಿಯಮಗಳ ತಳಹದಿಗಳಲ್ಲಿಯಂತೆಯೇ ನಿದರ್ಶನಸಾಧ್ಯ ವಿಜ್ಞಾನಗಳಲ್ಲಿ ನೈತಿಕತೆಯನ್ನು ನೆಲೆನಿಲ್ಲಿಸಬಹುದೆಂಬುದು ನನ್ನ ಭಾವನೆ: ಇದರಲ್ಲಿ ನನಗೆ ಅನುಮಾನವೇ ಇಲ್ಲವಾದರೂ, ಸ್ವಯಂವೇದ್ಯ ಪ್ರತಿಪಾದನೆಗಳಿಂದಾದ, ವಿಜ್ಞಾನಗಳಲ್ಲಿನ ಬೇರೆಯದರ ಬಗ್ಗೆ ತೋರಿಸುವ ಅವಗಣನೆ ಮತ್ತು ಗಮನಗಳನ್ನು ತನಗೂ ಅನ್ವಯಿಸಿಕೊಂಡರೆ, ಗಣಿತದಲ್ಲಿನವುಗಳಂತೆಯೇ ಪ್ರಶ್ನಾತೀತವಾದ ಅನಿವಾರ್ಯ ಪರಿಣಾಮಗಳಿಂದ ಸರಿ ಮತ್ತು ತಪ್ಪುಗಳ ಪ್ರಮಾಣವನ್ನು ನಿಗದಿಪಡಿಸಬಹುದು. ಇತರ ವಿಧಾನಗಳ ಹಾಗೆಯೇ ಸಂಖ್ಯೆ ಮತ್ತು ವಿಸ್ತರಣಗಳ ಸಂಬಂಧವನ್ನು ಖಂಡಿತವಾಗಿ ಉಳಿಸಿಕೊಳ್ಳಬಹುದು. ಅವುಗಳ ಹೊಂದಾಣಿಕೆ ಇರುವ ಅಥವಾ ಇಲ್ಲದಿರುವ ಕುರಿತ ಅನ್ವೇಷಣೆ ಅಥವಾ ಪರೀಕ್ಷೆಯ ವಿಧಾನಗಳ ಬಗ್ಗೆ ಆಲೋಚಿಸಿದರೆ ಅವುಗಳನ್ನೂ ನಿದರ್ಶನಾತ್ಮಕವಾಗಿ ಮಾಡಲು ಯಾಕೆ ಸಾಧ್ಯವಿಲ್ಲ ಎಂಬುದಕ್ಕೆ ನನಗೆ ಯಾವ

ಕಾರಣವೂ ಕಾಣಿಸುತ್ತಿಲ್ಲ. "ಆಸ್ತಿಯಿಲ್ಲದ ಕಡೆ ನ್ಯಾಯವಿರದು" ಎಂಬ ಪ್ರತಿಪಾದನೆಯು ಯೂಕ್ಲಿಡ್‌ನಲ್ಲಿ ನಿದರ್ಶನದಷ್ಟೇ ಖಂಡಿತವಾದುದು: ಯಾಕೆಂದರೆ ಆಸ್ತಿಯ ಕಲ್ಪನೆಯು ಯಾವುದಕ್ಕಾದರೂ ಹಕ್ಕಾಗಿದ್ದು, ಯಾವುದನ್ನು "ಅನ್ಯಾಯ" ಎಂದು ಕರೆಯುತ್ತಾರೋ ಆ ಕಲ್ಪನೆಯು ಅಂತಹ ಹಕ್ಕಿನ ಮೇಲಿನ ಆಕ್ರಮಣ ಅಥವಾ ಮೀರುವಿಕೆ ಆಗಿರುತ್ತದೆ; ಮತ್ತು ಈ ಕಲ್ಪನೆಗಳನ್ನು ಹೀಗೆ ಸ್ಥಾಪನೆಮಾಡಿ ಈ ಹೆಸರುಗಳನ್ನು ಅವುಗಳಿಗೆ ಕೊಟ್ಟರೆ, ಈ ಪ್ರತಿಪಾದನೆಯೂ ತ್ರಿಭುಜದ ಮೂರು ಕೋನಗಳ ಮೊತ್ತವು ಎರಡು ಲಂಬಕೋನಗಳ ಮೊತ್ತಕ್ಕೆ ಸಮ ಎಂಬುದರಷ್ಟೇ ಸತ್ಯವಾಗಿರುತ್ತದೆ. ಮತ್ತೆ, "ಯಾವುದೇ ಸರ್ಕಾರವೂ ಸಂಪೂರ್ಣ ಸ್ವಾತಂತ್ರ್ಯಕ್ಕೆ ಅವಕಾಶ ನೀಡಲಾರದು"; ಸರ್ಕಾರ ಎಂದರೆ ಒಪ್ಪಿಗೆಯನ್ನು ಹೊಂದಬೇಕಾದ ಕೆಲವು ಕಾನೂನಾತ್ಮಕ ನಿಯಮಗಳ ಮೇಲೆ ನಿಂತ ಸಮಾಜದ ಸ್ಥಾಪನೆ ಎಂಬ ಕಲ್ಪನೆ; ತನಗೆ ಬೇಕಾದ್ದನ್ನು ಮಾಡುವ ಅವಕಾಶವೇ ಸ್ವಾತಂತ್ರ್ಯ ಎಂಬ ಕಲ್ಪನೆ; ಇದು ಗಣಿತದ ಯಾವುದೇ ಪ್ರತಿಪಾದನೆಯಷ್ಟೇ ಸತ್ಯ ಎಂಬುದರ ಬಗ್ಗೆಯೂ ನನಗೆ ಮನವರಿಕೆಯಾಗಿದೆ.'[೨೭]"

ಈ ಭಾಗವು ಒಗಟಿನಂತಿರಲು ಕಾರಣ, ಮೊದಲಿಗೆ, ಅದು ನೈತಿಕ ನಿಯಮಗಳನ್ನು ದೇವರ ತೀರ್ಪನ್ನವಲಂಬಿಸುವ ಹಾಗೆ ಮಾಡುವುದೆಂದು ತೋರುವುದು, ಆದರೆ ಇಲ್ಲಿ ನೀಡಿರುವ ನಿದರ್ಶನಗಳು ನೈತಿಕ ನಿಯಮಗಳೂ ವಿಶ್ಲೇಷಣಾತ್ಮಕ ಎಂದು ಸೂಚಿಸುತ್ತವೆ. ನೈತಿಕತೆಯ ಕೆಲವು ಭಾಗಗಳು ವಿಶ್ಲೇಷಣಾತ್ಮಕವಾದವು ಮತ್ತು ಮಿಕ್ಕವು ದೇವರ ತೀರ್ಪುಗಳನ್ನು ಅವಲಂಬಿಸುವುದೆಂದು ವಾಸ್ತವವಾಗಿಯೂ ಲಾಕ್ ಭಾವಿಸುವನೆಂದು ನನ್ನ ಅನಿಸಿಕೆ. ಮತ್ತೊಂದು ಒಗಟೆಂದರೆ, ನೀಡಿರುವ ನಿದರ್ಶನಗಳು ನೈತಿಕ ನಿಯಮಗಳಂತೆ ಕಾಣುವುದೇ ಇಲ್ಲ ಎಂಬುದು.

ಪರಿಶೀಲನಾರ್ಹವೆಂದು ಯಾರಿಗಾದರೂ ಅನ್ನಿಸುವ ಮತ್ತೊಂದು ತೊಡಕೂ ಇಲ್ಲಿದೆ. ದೇವರ ತೀರ್ಮಾನಗಳು ಯಾದೃಚ್ಛಿಕವಲ್ಲ, ಅವು ಅವನ ಒಳ್ಳೆಯತನ ಮತ್ತು ವಿವೇಚನೆಗಳ ಫಲ ಎಂಬುದು ಮತಧರ್ಮಶಾಸ್ತ್ರಜ್ಞರ ಸಾಮಾನ್ಯ ಭಾವನೆ. ಅಂದರೆ ದೇವರ ತೀರ್ಮಾನಗಳಿಗೂ ಮುಂಚೆ ಒಳ್ಳೆಯತನದ ಪರಿಕಲ್ಪನೆಯಿತ್ತು ಎನ್ನಬೇಕಾಗುತ್ತದೆ, ಅದರ ಆಧಾರದ ಮೇಲೆಯೇ ಅವನು ಮಿಕ್ಕವನ್ನು ಬಿಟ್ಟು ಅವೇ ತೀರ್ಮಾನಗಳನ್ನು ಮಾಡುತ್ತಾನೆ. ಈ ಪರಿಕಲ್ಪನೆಯು ಯಾವುದೇ ಆಗಿರಲಿ, ಅದನ್ನು ಲಾಕ್‌ನಿಂದ ಕಂಡುಹಿಡಿಯುವುದು ಅಸಾಧ್ಯ. ಅವನು ಹೇಳುವುದೇನೆಂದರೆ, ವಿವೇಕಶಾಲಿಯಾದವನು ಇಂತಿಂತಹ ರೀತಿಯಲ್ಲಿ ನಡೆದುಕೊಳ್ಳುತ್ತಾನೆ, ಇಲ್ಲದಿದ್ದರೆ ದೇವರು ಅವನನ್ನು ಶಿಕ್ಷಿಸುತ್ತಾನೆ; ಕೆಲವು ಕ್ರಿಯೆಗಳಿಗೆ ಮಾತ್ರವೇ ಶಿಕ್ಷೆಯನ್ನು

---

೨೭. ಪೂರ್ವೋಕ್ತ, ಭಾಗ ೪, ಅಧ್ಯಾಯ ೩, ಉಪವಿಭಾಗ ೧೮.

ವಿಧಿಸಿ ಅವುಗಳ ವಿರೋಧವಾದವುಗಳಿಗೆ ವಿಧಿಸದಿರುವುದರ ಬಗ್ಗೆ ನಮಗೆ ಏನೂ ತಿಳಿಯದಿರುವುದು.

ಲಾಕ್‌ನ ನೈತಿಕ ಸಿದ್ಧಾಂತಗಳು ಸಮರ್ಥನೀಯವಲ್ಲ ಎಂಬುದು ಸುವೇದ್ಯ. ವಿವೇಚನೆಯೊಂದೇ ನಿಜವಾದ ಸನ್ನಡತೆ ಎಂದು ಪರಿಗಣಿಸುವ ವ್ಯವಸ್ಥೆಯಲ್ಲಿ ಸ್ವಲ್ಪ ಮಟ್ಟಿಗಿನ ಬಂಡಾಯ ಮನೋವೃತ್ತಿ ಇದೆ ಎನ್ನುವುದರ ಹೊರತಾಗಿ, ಕಡಿಮೆ ಭಾವನಾತ್ಮಕವಾದ ಕೆಲವು ಇತರ ಆಕ್ಷೇಪಣೆಗಳಿವೆ.

ಮೊದಲನೆಯದಾಗಿ, ಜನರು ಸುಖವನ್ನಷ್ಟೇ ಬಯಸುತ್ತಾರೆ ಎಂಬುದು ಕುದುರೆಯ ಮುಂದೆ ಗಾಡಿಯನ್ನು ನಿಲ್ಲಿಸಿದಂತೆ. ನಾನು ಏನನ್ನೇ ಬಯಸಲಿ, ಅದನ್ನು ಪಡೆಯುವುದೇ ನನಗೆ ಸಂತೋಷ; ಆದರೆ ಖಚಿತವಾಗಿ ಸಂತೋಷವಾಗುವುದು ಬಯಕೆಯಿಂದಾಗಿಯೇ ಹೊರತು ಬಯಕೆಯು ಸಂತೋಷದಿಂದಲ್ಲ. ಸ್ವಹಿಂಸಾಸ್ವಾದಿ (ಮ್ಯಾಸೋಕಿಸ್ಟ್) ಗಳಿಗಾದಂತೆ, ನೋವನ್ನೇ ಬಯಸುವ ಸಾಧ್ಯತೆಯಿರುತ್ತದೆ. ಅಂತಹ ಸಂದರ್ಭದಲ್ಲಿ, ಬಯಕೆಯು ಸಲ್ಲುವುದರಲ್ಲಿ ಆಗಲೂ ಸಂತೋಷವಿರುತ್ತದೆ, ಆದರೆ ಅದರಲ್ಲಿ ತದ್ವಿರುದ್ಧವಾದುದೂ ಸೇರಿರುತ್ತದೆ. ಲಾಕ್‌ನದೇ ಸಿದ್ಧಾಂತದಲ್ಲಿಯೂ, ಸಂತೋಷವನ್ನಷ್ಟೇ ಅಲ್ಲ ಬಯಸುವುದು, ಯಾಕೆಂದರೆ ಬಯಸುವುದು ಹತ್ತಿರದ ಸಂತೋಷವನ್ನೇ ಹೊರತು ದೂರವಾದದ್ದನ್ನಲ್ಲ. ಲಾಕ್ ಮತ್ತವನ ಬೆಂಬಲಿಗರು ಮಾಡಿದಂತೆ, ನೈತಿಕತೆಯನ್ನು ಬಯಕೆಯ ಮನೋವೃತ್ತಿಯಿಂದ ಸಾಧಿಸಬಹುದಾದರೆ, ದೂರ ಸಂತೋಷಗಳನ್ನು ಕೀಳುಗಳೆಯುವುದಕ್ಕಾಗಲೀ, ವಿವೇಚನೆಯನ್ನು ನೈತಿಕ ಕರ್ತವ್ಯ ಎಂದು ಹೇಳುವುದಕ್ಕಾಗಲೀ ಕಾರಣವಿರುವುದಿಲ್ಲ. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಅವನ ವಾದವೆಂದರೆ: 'ನಾವು ಸಂತೋಷವನ್ನಷ್ಟೇ ಬಯಸುತ್ತೇವೆ. ಆದರೆ ವಾಸ್ತವದಲ್ಲಿ ಜನರು ಬಯಸುವುದು ಸಂತೋಷವೆಂಬುದನ್ನೇ ಅಲ್ಲ, ಹತ್ತಿರದ ಸಂತೋಷವನ್ನು. ಅವರು ಸಂತೋಷವನ್ನಷ್ಟೇ ಬಯಸುತ್ತಾರೆ ಎಂದುದಕ್ಕೆ ಇದು ವಿರುದ್ಧವಾಗಿದೆ, ಹೀಗಾಗಿ ಕೆಟ್ಟುದು.' ಬಹುತೇಕ ತತ್ವಜ್ಞಾನಗಳೆಲ್ಲ, ತಮ್ಮ ನೈತಿಕ ವ್ಯವಸ್ಥೆಯಲ್ಲಿ, ಒಂದು ತಪ್ಪು ಸಿದ್ಧಾಂತವನ್ನು ಮಂಡಿಸುತ್ತಾರೆ, ಆನಂತರ ಅದನ್ನು ತಪ್ಪೆಂದು ಸಾಧಿಸುವ ರೀತಿಯಲ್ಲಿ ಕ್ರಿಯಾಶೀಲವಾಗುವುದು ಕೆಡುಕು ಎಂದು ವಾದಿಸುತ್ತಾರೆ; ಆದರೆ ಸಿದ್ಧಾಂತವು ಸತ್ಯವಾದುದೇ ಆದರೆ ಅದು ಸಾಧ್ಯವೇ ಆಗಬಾರದು. ಈ ಬಗೆಯದಕ್ಕೆ ಲಾಕ್ ಒಂದು ಉದಾಹರಣೆಯಾಗುತ್ತಾನೆ.

೦

೧೪
ಲಾಕ್‌ನ ರಾಜಕೀಯ ತಾತ್ವಿಕತೆ

ಅ. ಆನುವಂಶಿಕ ತತ್ವ

೧೬೭೯ ಮತ್ತು ೧೬೯೦ ನೇ ಇಸವಿಗಳಲ್ಲಿ, ೧೬೮೮ ರ ಕ್ರಾಂತಿಯಾದ ಬಳಿಕ ಸ್ವಲ್ಪ ಕಾಲದಲ್ಲೇ, ಲಾಕ್ ತನ್ನ ಎರಡು 'ಟ್ರೀಟೈಸಸ್ ಆನ್ ಗವರ್ನಮೆಂಟ್' ಸಂಪುಟಗಳನ್ನು ಬರೆದ. ಇವುಗಳಲ್ಲಿ ಎರಡನೆಯದು ರಾಜಕೀಯ ಚಿಂತನೆಗಳ ಇತಿಹಾಸದಲ್ಲಿ ವಿಶೇಷ ಮಹತ್ವದ್ದು.

ಇವುಗಳಲ್ಲಿ ಮೊದಲನೆಯದು ಆನುವಂಶಿಕ ಅಧಿಕಾರ ಸಿದ್ಧಾಂತದ ಟೀಕೆ. ಇದು ೧೬೮೦ ರಲ್ಲಿ ಪ್ರಕಟವಾದ, ಮತ್ತು ಮೊದಲನೆಯ ಚಾರ್ಲ್ಸ್‌ನ ಉಸ್ತುವಾರಿಯಲ್ಲಿ ಬರೆದ ಸರ್ ರಾಬರ್ಟ್ ಫಿಲ್ಮರ್‌ನ 'ಪೇಟ್ರಿಯಾರ್ಕ: ಆರ್ ದ ನ್ಯಾಚುರಲ್ ಪವರ್ ಆಫ್ ಕಿಂಗ್ಸ್' ಕೃತಿಗೆ ಕೊಟ್ಟ ಉತ್ತರ. ರಾಜರ ದೈವಿಕ ಅಧಿಕಾರವನ್ನು ನಿಷ್ಠೆಯಿಂದ ಎತ್ತಿ ಹಿಡಿಯುತ್ತಿದ್ದ ಸರ್ ರಾಬರ್ಟ್ ಫಿಲ್ಮರ್ ದುರದೃಷ್ಟವಶಾತ್ ೧೬೫೩ ರವರೆಗೆ ಮಾತ್ರ ಬದುಕಿದ್ದ, ಮೊದಲನೆಯ ಚಾರ್ಲ್ಸ್‌ನ ಶಿರಚ್ಛೇದನ ಮತ್ತು ಕ್ರಾಮ್‌ವೆಲ್‌ನ ಗೆಲವಿನಿಂದ ತೀವ್ರ ಯಾತನೆಗೊಳಗಾದವನು. ಆದರೆ 'ಪೇಟ್ರಿಯಾರ್ಕ' ರಚಿತವಾದದ್ದು ಈ ದುರ್ಘಟನೆಗಳಿಗಿಂತ ಮುಂಚೆ, ಆದರೆ ಅಂತರ್ಯುದ್ಧಕ್ಕೂ ಮುಂಚೆಯಲ್ಲ; ಅದಕ್ಕೆ ವಿರುದ್ಧವಾದ ಸಿದ್ಧಾಂತಗಳಿದ್ದುದಕ್ಕೆ ಸಹಜವಾಗಿಯೇ ಅದು ಸೂಚನೆಯಾಗುತ್ತದೆ. ಫಿಲ್ಮರ್ ಹೇಳುವ ಅಂತಹ ಸಿದ್ಧಾಂತಗಳು ೧೬೪೦ ರಲ್ಲಿ ಹೊಸತೇನಲ್ಲ. ಹಾಗೆ ನೋಡಿದರೆ, ಪ್ರಾಟೆಸ್ಟೆಂಟ್ ಮತ್ತು ಕ್ಯಾಥೋಲಿಕ್ ದೇವತಾಶಾಸ್ತ್ರಜ್ಞರು ಕ್ರಮವಾಗಿ ತಮ್ಮ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟೆಂಟ್ ರಾಜರುಗಳ ವಿರುದ್ಧದ ಸೆಣಸಾಟದಲ್ಲಿ, ನಿರಂಕುಶಾಧಿಕಾರದ ವಿರುದ್ಧವಾದ ಪ್ರಜೆಗಳ ಹಕ್ಕನ್ನು ತೀವ್ರವಾಗಿ ಪ್ರತಿಪಾದಿಸಿದರು; ಅವರ ಬರಹಗಳು ಫಿಲ್ಮರ್‌ಗೆ ಈ ವಿವಾದದ ಕುರಿತಾದ ಅಪಾರ ಸಾಮಗ್ರಿಯನ್ನೊದಗಿಸಿತ್ತು.

ಸರ್ ರಾಬರ್ಟ್ ಫಿಲ್ಮರ್‌ಗೆ ಮೊದಲನೆಯ ಚಾರ್ಲ್ಸ್ ನೈಟ್ ಪದವಿ ನೀಡಿದ್ದ, ಮತ್ತು ಸಂಸತ್‌ಪರವಾಗಿದ್ದ ಚಳುವಳಿಗಾರರು ಹತ್ತು ಬಾರಿ ಅವನ ಮನೆಯನ್ನು

ಲೂಟಿಮಾಡಿದ್ದರು. ನೋಹ್ ಮೆಡಿಟರೇನಿಯನ್ ಸಮುದ್ರದ ಮೇಲೆ ನಾವೆಯಲ್ಲಿ ಹೋಗಿ ಆಫ್ರಿಕ, ಏಷ್ಯಾ ಮತ್ತು ಯೂರೋಪ್‌ಗಳನ್ನು ಹ್ಯಾಮ್, ಶೆಮ್ ಮತ್ತು ಜಾಫೇತ್‌ರಿಗೆ ಕೊಟ್ಟದ್ದನ್ನು ಅಸಂಭವವೆಂದವನು ಭಾವಿಸಲಿಲ್ಲ. ಇಂಗ್ಲಿಷ್ ಸಂವಿಧಾನದ ಆಧಾರದ ಮೇಲೆ, ಅವನು ಲಾರ್ಡ್‌ಗಳು ರಾಜನಿಗೆ ಸಲಹೆ ನೀಡುವವರು ಮತ್ತು ಜನಪ್ರತಿನಿಧಿಗಳಿಗೆ ಕಡಿಮೆ ಅಧಿಕಾರ; ರಾಜನೇ ನಿಜವಾದ ಕಾನೂನುಗಳನ್ನು ಮಾಡುವವನು, ಅವನ ಇಚ್ಛೆಯಂತೆಯೇ ಅದು ಮುಂದುವರಿಯುತ್ತದೆ. ಫಿಲ್ಮರ್‌ನ ಪ್ರಕಾರ, ರಾಜನು ಎಲ್ಲ ಮಾನವ ನಿಯಂತ್ರಣಗಳಿಂದ ಸಂಪೂರ್ಣ ಮುಕ್ತನಾಗಿರುವವನು, ತನ್ನ ಹಿಂದಿನವರ, ಅಷ್ಟೇಕೆ ತನ್ನದೇ, ಕಾರ್ಯಗಳಿಗೆ ಅವನು ಬದ್ಧನಲ್ಲ, ಯಾಕೆಂದರೆ 'ಮನುಷ್ಯನೊಬ್ಬನು ತನಗೇ ಕಾನೂನುಗಳನ್ನು ಮಾಡಿಕೊಳ್ಳುವುದು ನಿಸರ್ಗವಿರುದ್ಧ.'

ಈ ಅಭಿಪ್ರಾಯಗಳು ತೋರಿಸುವಂತೆ, ಫಿಲ್ಮರ್ ಅತ್ಯಂತ ಅತಿರೇಕದ ದೈವಿಕ ಅಧಿಕಾರಪರವಾದ ಪಕ್ಷಕ್ಕೆ ಸೇರಿದ್ದ.

'ಪೇಟ್ರಿಯಾರ್ಕ' ಆರಂಭವಾಗುವುದು ಮಾನವನು ಸ್ವತಂತ್ರನಾಗಿಯೂ ಎಲ್ಲ ಬಗೆಯ ಅಧಿನತೆಯಿಂದ ಮುಕ್ತನಾಗಿಯೂ ಹುಟ್ಟಿದ್ದಾನೆ, ತನಗೆ ಇಷ್ಟವಾದ ಬಗೆಯ ಸರ್ಕಾರವನ್ನು ಹೊಂದಲು ಅವನಿಗೆ ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯವಿದೆ, ಒಬ್ಬನಿಗೆ ಮಿಕ್ಕೆಲ್ಲರಿಗಿಂತ ಹೆಚ್ಚಿನ ಅಧಿಕಾರವನ್ನು ಕೊಟ್ಟದ್ದು ಜನಸಮುದಾಯದ ನಿರ್ಧಾರದಿಂದ ಎಂಬ 'ಸಾಮಾನ್ಯ ಅಭಿಪ್ರಾಯ'ಗಳ ವಿರುದ್ಧದ ಮಾತುಗಳಿಂದ. 'ಈ ತತ್ವವು ಮೊದಲು ಮೊಟ್ಟೆಯೊಡೆದುಕೊಂಡು ಬಂದದ್ದು ಶಾಲೆಗಳಲ್ಲಿ' ಎಂದವನು ಹೇಳುತ್ತಾನೆ. ಅವನ ಪ್ರಕಾರ, ಸತ್ಯವೆಂಬುದು ಬೇರೆಯೇ ಆದುದು; ಮೊದಲಿಗೆ ದೇವರು ರಾಜಾಧಿಕಾರವನ್ನು ದಯಪಾಲಿಸಿದ್ದು ಆಡಮ್‌ಗೆ, ಅವನಿಂದ ಅವನ ವಂಶಜರಿಗೆ ಅದು ಇಳಿದು ಬಂತು, ಆನಂತರ ಆಧುನಿಕ ಕಾಲದ ಬೇರೆ ಬೇರೆ ರಾಜರುಗಳಿಗೆ ದತ್ತವಾಯಿತು. ಈಗ ರಾಜರು 'ಇಡೀ ಮಾನವ ಜನಾಂಗದ ಸಹಜ ತಾಯ್ತಂದೆಯರಾಗಿದ್ದ ಮೂಲಪುರುಷರ ಉತ್ತರಾಧಿಕಾರಿಗಳಾಗಿದ್ದಾರೆ, ಅಥವಾ ಹಾಗೆಂದು ಪ್ರಖ್ಯಾತರಾಗಿದ್ದಾರೆ' ಎಂದವನು ಹೇಳುತ್ತಾನೆ. ನಮ್ಮ ಮೂಲ ಜನಕನು ವಿಶ್ವದ ರಾಜನೆಂಬುದನ್ನು ಸಮರ್ಪಕವಾಗಿ ತಿಳಿದುಕೊಳ್ಳಲಿಲ್ಲವೆಂದು ಕಾಣುತ್ತದೆ, ಯಾಕೆಂದರೆ, 'ಸ್ವಾತಂತ್ರ್ಯದ ಬಯಕೆಯೇ ಆಡಮ್‌ನ ಆದಿಮ ಪತನಕ್ಕೆ ಮೂಲ ಕಾರಣವಾಯಿತು.' ಸ್ವಾತಂತ್ರ್ಯದ ಬಯಕೆಯನ್ನು ಸರ್ ರಾಬರ್ಟ್ ಫಿಲ್ಮರ್ ಅಧಾರ್ಮಿಕ ಭಾವನೆಯೆಂದು ಭಾವಿಸುತ್ತಾನೆ.

ಮೊದಲನೆಯ ಚಾರ್ಲ್ಸ್ ಮತ್ತವನ ಪರವಾಗಿದ್ದವರ ಹಕ್ಕುಮಂಡನೆಯು ಆ ಹಿಂದೆ ರಾಜರು ಅನುಭವಿಸುತ್ತಿದ್ದ ಅಧಿಕಾರಕ್ಕಿಂತ ತುಂಬ ಅಧಿಕವಾದುದಾಗಿತ್ತು. ಬೇರಾವುದರಲ್ಲೂ ಒಮ್ಮತವಿರದ ಪಾರ್ಸನ್, ಇಂಗ್ಲಿಷ್ ಜೆಸ್ಯೂಟ್‌ಗಳು, ಮತ್ತು

ಸ್ಕಾಟಿಶ್ ಕಾಲ್ವಿನ್‌ವಾದಿಯಾಗಿದ್ದ ಬುಖನನ್ ಅವರುಗಳು ದುರಧಿಕಾರದ ಕಾರಣದಿಂದ ಜನರು ಸಾರ್ವಭೌಮನನ್ನು ಪದಚ್ಯುತಿಗೊಳಿಸಬಹುದು ಎಂಬುದರ ಕಡೆಗೆ ಫಿಲ್ಮರ್ ನಮ್ಮ ಗಮನ ಸೆಳೆಯುತ್ತಾನೆ. ಪಾರ್ಸನ್‌ರ ಮನಸ್ಸಿನಲ್ಲಿದ್ದುದು ಪ್ರಾಟೆಸ್ಟೆಂಟ್ ಆಗಿದ್ದ ಎಲಿಝಬೆತ್ ಮಹಾರಾಣಿ, ಬುಖನನ್ ಮನಸ್ಸಿನಲ್ಲಿದ್ದುದು ಕ್ಯಾಥೋಲಿಕ್ ಆಗಿದ್ದ ಸ್ಕಾಟ್ಲಂಡ್‌ನ ಮೇರಿ ಮಹಾರಾಣಿ. ಬುಖನ್‌ನ ಸಿದ್ಧಾಂತವು ಯಶಸ್ಸಿನಿಂದ ಒಪ್ಪಿತವಾಗಿದ್ದರೆ, ಪಾರ್ಸನ್‌ನದು ತನ್ನ ಸಹೋದ್ಯೋಗಿ ಕ್ಯಾಂಪಿಯನ್‌ನ ಮರಣದಂಡನೆಯಿಂದ ತಿರಸ್ಕೃತವಾಗಿತ್ತು.

ಮತಧರ್ಮಸುಧಾರಣೆಗೂ ಮುಂಚೆಯೇ, ರಾಜರ ಅಧಿಕಾರಕ್ಕೆ ಮಿತಿಯನ್ನು ಹೇರುವ ಪ್ರವೃತ್ತಿಯನ್ನು ಮತಧರ್ಮಶಾಸ್ತ್ರಜ್ಞರು ತೋರಿಸಿದ್ದರು. ಇದು ಚರ್ಚ್ ಮತ್ತು ಸರ್ಕಾರಗಳ ನಡುವಣ ಹೋರಾಟದ ಭಾಗವಾಗಿತ್ತು, ಮತ್ತು ಅದು ಮಧ್ಯಯುಗದಲ್ಲಿ ಯೂರೋಪ್‌ನಾದ್ಯಂತ ವ್ಯಾಪಕವಾಗಿತ್ತು. ಈ ಹೋರಾಟದಲ್ಲಿ, ಸರ್ಕಾರವು ನಚ್ಚಿದ್ದುದು ಸೈನಿಕಬಲವನ್ನು, ಚರ್ಚ್ ಆಧರಿಸಿದ್ದುದು ಜಾಣ್ಮೆ ಮತ್ತು ಧರ್ಮನಿಷ್ಠೆಯನ್ನು. ಎಲ್ಲಿಯವರೆಗೆ ಈ ಗುಣಗಳನ್ನು ಚರ್ಚ್ ಪಡೆದಿದ್ದಿತೋ ಅಲ್ಲಿಯವರೆಗೆ ಅದು ಗೆದ್ದಿತು; ಅದರಲ್ಲಿ ಜಾಣ್ಮೆ ಮಾತ್ರ ಉಳಿದಾಗ ಅದು ಸೋತಿತು. ಆದರೆ ರಾಜರ ಅಧಿಕಾರದ ವಿರುದ್ಧವಾಗಿ ಗಣ್ಯರೂ ದೈವಿಕರೂ ಹೇಳಿದ್ದ ವಿಷಯಗಳು ದಾಖಲೆಗಳಲ್ಲಿ ಉಳಿದಿದ್ದುವು. ಪೋಪ್‌ನ ಪರವಾಗಿರಲು ಬಯಸಿದ್ದರೂ, ಅವುಗಳನ್ನು ಜನತೆಯ ಸ್ವಯಮಾಧಿಕಾರದ ಪರವಾಗಿಯೂ ಬಳಸಿಕೊಳ್ಳಬಹುದಾಗಿತ್ತು. 'ಸೂಕ್ಷ್ಮವಂತ ಜಾಣರು ಪೋಪ್‌ನ ಅಡಿಯಲ್ಲಿ ರಾಜರನ್ನು ನೂಕುವುದಕ್ಕಾಗಿ, ಜನರು ರಾಜರಿಗಿಂತ ಮಿಗಿಲೆಂದು ಪ್ರತಿಪಾದಿಸುವುದು ಕ್ಷೇಮವೆಂದೂ, ಮತ್ತು ಇದರಿಂದ, ಪೋಪ್ ಅಧಿಕಾರವು ರಾಜಾಧಿಕಾರದ ಸ್ಥಾನದಲ್ಲಿರಬಹುದೆಂದೂ ಭಾವಿಸಿದರು' ಎಂದು ಫಿಲ್ಮರ್ ಹೇಳುತ್ತಾನೆ. ಮತಧರ್ಮೇತರ ಅಧಿಕಾರವನ್ನು ಜನರು ನೀಡುತ್ತಾರೆ (ಅಂದರೆ ದೇವರಲ್ಲ), ಮತ್ತು 'ರಾಜನಿಗೆ ನೀಡುವುದಕ್ಕೆ ಮುಂಚೆ ಅದು ಜನರಲ್ಲಿಯೇ ಉಳಿದಿರುತ್ತದೆ' ಎಂಬ ಬೆಲ್ಲಾರ್‌ಮೈನ್ ಎಂಬ ಮತಧರ್ಮಶಾಸ್ತ್ರಜ್ಞನ ಮಾತುಗಳನ್ನವನು ಉಲ್ಲೇಖಿಸುತ್ತಾನೆ; ಹೀಗೆ, ಫಿಲ್ಮರ್ ಪ್ರಕಾರ, ಬೆಲ್ಲಾರ್‌ಮೈನ್ 'ದೇವರನ್ನು ಪ್ರಜಾಪ್ರಭುತ್ವಾತ್ಮಕ ಜತಾವರ್ಗದ ನಿರ್ಮಾತೃವನ್ನಾಗಿಸುತ್ತಾನೆ.' ಇದು ಅವನಿಗೆ, ದೇವರು ಬಾಲ್ಶೆವಿಸಂನ ನಿರ್ಮಾತೃ ಎಂಬುದನ್ನು ಆಧುನಿಕ ಶ್ರೀಮಂತಪ್ರಭುತ್ವವಾದಿ ಕೇಳಿದರೆ ಹೇಗೋ ಹಾಗೆ, ಆಘಾತಕಾರಿಯಾಗಿ ಕೇಳಿಸುತ್ತದೆ.

ರಾಜಕೀಯ ಅಧಿಕಾರವನ್ನು ಫಿಲ್ಮರ್ ಸಾಧಿಸುವುದು ಯಾವುದೇ ಒಪ್ಪಂದದಿಂದಲ್ಲ, ಅಥವಾ ಸಾರ್ವಜನಿಕ ಹಿತದ ಪರಿಗಣನೆಯಿಂದಲ್ಲ, ತಂದೆಗೆ ತನ್ನ ಮಕ್ಕಳ ಮೇಲಿರುವ ಅಧಿಕಾರದ ಮೇಲೆ ಸಂಪೂರ್ಣವಾಗಿ ಅವಲಂಬಿಸಿ.

ಅವನ ದೃಷ್ಟಿಕೋನವೆಂದರೆ: ರಾಜಾಧಿಕಾರದ ಮೂಲವಿರುವುದು ಮಕ್ಕಳು ತಮ್ಮ ತಾಯ್ತಂದೆಯರಿಗೆ ತೋರಿಸಬೇಕಾದ ವಿಧೇಯತೆಯಲ್ಲಿ, ಜೆನೆಸಿಸ್‌ನಲ್ಲಿನ ಪ್ರವರ್ತಕರು (ಪೇಟ್ರಿಯಾರ್ಕ್) ರಾಜರು ಎಂಬುದರಲ್ಲಿ; ರಾಜರು ಆಡಮ್‌ನ ಉತ್ತರಾಧಿಕಾರಿಗಳು ಅಥವಾ, ಕನಿಷ್ಠ ಪಕ್ಷ, ಹಾಗೆ ಭಾವಿಸಬೇಕು, ಎಂಬುದರಲ್ಲಿ; ರಾಜನ ಸಹಜ ಹಕ್ಕುಗಳು ಎಂದರೆ ತಂದೆಯದರಂತೆಯೇ ಎಂಬುದರಲ್ಲಿ; ಮತ್ತು ಮಕ್ಕಳ ಮೇಲಿನ ತಂದೆಯ ಅಧಿಕಾರವು ಸಹಜವಾಗಿ ಯಾವಾಗಲೂ, ಮಕ್ಕಳು ಪ್ರಾಪ್ತವಯಸ್ಕರಾಗಿ ತಂದೆ ವೃದ್ಧನಾಗಿದ್ದರೂ, ಇರುತ್ತದೆ ಎಂಬುದರಲ್ಲಿ.

ಇಡೀ ಈ ಸಿದ್ಧಾಂತವು ಆಧುನಿಕ ಮನಸ್ಸಿಗೆ ಎಷ್ಟು ವಿಚಿತ್ರವಾಗಿ ಕಾಣುತ್ತದೆಂದರೆ, ಅದನ್ನು ಗಂಭೀರವಾಗಿ ಎತ್ತಿ ಹಿಡಿಯಲಾಯಿತೇ ಎಂಬುದನ್ನು ನಂಬಲಾಗದಷ್ಟು. ರಾಜಕೀಯ ಅಧಿಕಾರವನ್ನು ಆಡಮ್ ಮತ್ತು ಈವ್‌ರ ಕತೆಯಿಂದ ಸಾಧಿಸುವುದು ನಮಗೆ ಪರಿಚಿತವಲ್ಲ. ಮಗನೋ ಮಗಳೋ ಇಪ್ಪತ್ತೊಂದು ವರ್ಷಗಳನ್ನು ಪೂರೈಸಿದಾಗ ಅವರ ಮೇಲಿನ ತಾಯ್ತಂದೆಯರ ಅಧಿಕಾರವು ಸಂಪೂರ್ಣವಾಗಿ ಕೊನೆಗೊಳ್ಳುತ್ತದೆ, ಮತ್ತು ಅದಕ್ಕೆ ಮುಂಚೆಯೂ ಅದು ಸರ್ಕಾರದಿಂದ ಮತ್ತು ಕಿರಿಯರು ಕ್ರಮೇಣ ಪಡೆಯುವ ಸ್ವತಂತ್ರ ಪ್ರಯತ್ನದ ಹಕ್ಕಿನಿಂದ ಕಟ್ಟುನಿಟ್ಟಿಗೊಳಗಾಗುತ್ತದೆ ಎಂಬುದು ನಮಗೆ ಸುಪರಿಚಿತವಾದುದು. ತಾಯಿಗೆ ಮಕ್ಕಳ ಮೇಲೆ ತಂದೆಯಷ್ಟೇ ಹಕ್ಕಿರುತ್ತದೆ ಎಂಬುದನ್ನು ನಾವು ಮಾನ್ಯಮಾಡುತ್ತೇವೆ. ಆದರೆ ಈ ಎಲ್ಲ ಪರಿಗಣನೆಗಳ ಹೊರತಾಗಿ, ಜಪಾನೀಯನಲ್ಲದ ಯಾವುದೇ ಆಧುನಿಕ ವ್ಯಕ್ತಿಗೆ ರಾಜಕೀಯ ಅಧಿಕಾರವು ಯಾವುದೇ ರೀತಿಯಲ್ಲಿ ಮಕ್ಕಳ ಮೇಲೆ ತಾಯ್ತಂದೆಯರಿಗಿರುವ ಅಧಿಕಾರದೊಡನೆ ಸಮೀಕರಿಸಬಹುದು ಎಂದು ಅನ್ನಿಸುವುದಿಲ್ಲ. ಜಪಾನ್‌ನಲ್ಲಿ, ಫಿಲ್ಮರ್ ಮಂಡಿಸಿದ ಸಿದ್ಧಾಂತವನ್ನು ಹೋಲುವಂತಹದು ಇದೆ, ಮತ್ತು ಇದನ್ನು ಎಲ್ಲ ಪ್ರಾಧ್ಯಾಪಕರೂ ಶಾಲಾ ಅಧ್ಯಾಪಕರೂ ಮಕ್ಕಳಿಗೆ ಹೇಳಿಕೊಡಬೇಕು ಎಂಬುದು ಇರುವುದೂ ಸತ್ಯವೇ. ತನ್ನ ವಂಶದ ಮೂಲಪುರುಷ ಸೂರ್ಯದೇವತೆ, ಮತ್ತು ತಾನು ಅವಳ ಉತ್ತರಾಧಿಕಾರಿ ಎಂದು ಮಿಕಾಡೋ ಗುರುತಿಸುತ್ತಾನೆ; ಮಿಕ್ಕ ಜಪಾನೀಯರೂ ಅವಳಿಂದಲೇ ಬಂದವರು, ಆದರೆ ಅವಳ ತೀರ ಚಿಕ್ಕ ಮಗನ ಕುಟುಂಬಗಳಿಂದ ಬಂದವರು. ಹೀಗಾಗಿ ಮಿಕಾಡೊ ದೈವಿಕವ್ಯಕ್ತಿ, ಮತ್ತು ಅವಳಿಗೆ ತೋರಿಸುವ ಪ್ರತಿರೋಧವೂ ಧರ್ಮಬಾಹಿರವಾದುದು. ಮುಖ್ಯವಾಗಿ ಈ ಸಿದ್ಧಾಂತವನ್ನು ಸೃಷ್ಟಿಸಿದ್ದು ೧೮೬೮ ರಲ್ಲಾದರೂ, ಈಗ ಅದು ಜಗತ್ತಿನ ಸೃಷ್ಟಿಯಿಂದಲೇ ಆರಂಭವಾದುದು ಎಂದು ಸಂಪ್ರದಾಯವು ಹೇಳುತ್ತದೆ.

ಇಂತಹುದೇ ಸಿದ್ಧಾಂತವನ್ನು ಯೂರೋಪ್‌ನ ಮೇಲೆ ಹೇರುವ ಪ್ರಯತ್ನವು – ಫಿಲ್ಮರ್‌ನ 'ಪೇಟ್ರಿಯಾರ್ಕ'ದ' ಒಂದು ಭಾಗ ಮಾತ್ರ – ವಿಫಲವಾಯಿತು.

ಯಾತಕ್ಕೆ? ಅಂತಹ ಸಿದ್ಧಾಂತವನ್ನು ಒಪ್ಪುವುದು ಮನುಷ್ಯ ಸ್ವಭಾವಕ್ಕೇನೂ ಹೊರತಾದುದಲ್ಲ; ಉದಾಹರಣೆಗೆ, ಜಪಾನ್ ಅಲ್ಲದೆ, ಪ್ರಾಚೀನ ಈಜಿಪ್ಷಿಯನ್‌ರೂ, ಮೆಕ್ಸಿಕನ್‌ರೂ ಮತ್ತು ಸ್ಪೈಯಿನ್ ಆಕ್ರಮಣಕ್ಕಿಂತ ಮುಂಚೆ ಪೆರೂವಿಯನ್‌ರೂ ಅಂತಹ ನಂಬಿಕೆಯನ್ನು ಹೊಂದಿದ್ದರು. ಮಾನವ ಬೆಳವಣಿಗೆಯ ಒಂದು ಹಂತದಲ್ಲಿ ಅದು ಸಹಜವಾದುದೇ. ಸ್ಟೂಅರ್ಟ್ ಕಾಲದ ಇಂಗ್ಲಂಡ್ ಆ ಹಂತವನ್ನು ದಾಟಿತ್ತು, ಆದರೆ ಆಧುನಿಕ ಜಪಾನ್ ದಾಟಿಲ್ಲ.

ಇಂಗ್ಲಂಡ್‌ನಲ್ಲಿ ದೈವಿಕ ಅಧಿಕಾರ ಸಿದ್ಧಾಂತವು ವಿಫಲವಾಗಲು ಎರಡು ಪ್ರಬಲ ಕಾರಣಗಳಿವೆ. ಒಂದೆಂದರೆ, ಮತಧರ್ಮಗಳ ಸಂಖ್ಯೆ ಬೆಳೆದದ್ದು; ಮತ್ತು ಮತ್ತೊಂದು, ಅಧಿಕಾರಕ್ಕಾಗಿ ರಾಜಪ್ರಭುತ್ವ, ಶ್ರೀಮಂತಪ್ರಭುತ್ವ ಮತ್ತು ಮೇಲು ಮಧ್ಯಮವರ್ಗಗಳ ನಡುವಣ ಸಂಘರ್ಷ. ಮತಧರ್ಮಕ್ಕೆ ಸಂಬಂಧಿಸಿದಂತೆ, ಎಂಟನೆಯ ಹೆನ್ರಿಯ ಆಡಳಿತಾನಂತರ ರಾಜನು ಚರ್ಚ್ ಆಫ್ ಇಂಗ್ಲಂಡ್‌ನ ಮುಖ್ಯಸ್ಥನೂ ಆಗಿದ್ದ, ಅದನ್ನು ರೋಮ್ ಮತ್ತು ಬಹುತೇಕ ಪ್ರಾಟೆಸ್ಟೆಂಟ್ ಪಂಥಗಳು ವಿರೋಧಿಸಿದವು. ಚರ್ಚ್ ಆಫ್ ಇಂಗ್ಲಂಡ್ ಇವೆರಡರ ನಡುವಣ ಸಾಮರಸ್ಯ ಎಂದು ಭಾವಿಸಿತ್ತು: (ಬೈಬಲ್‌ನ) ಅಧಿಕೃತ ಆವೃತ್ತಿಯ ಪ್ರಸ್ತಾವನೆ ಆರಂಭವಾಗುವುದು 'ತನ್ನ ಆರಾಧನಾ ಸೂತ್ರಗಳ (ಲಿಟರ್ಜಿ) ಮೊದಲ ಸಂಕಲನದಿಂದಲೂ, ಎರಡು ಅತಿರೇಕಗಳ ನಡುವಣ ಸುವರ್ಣಮಾಧ್ಯಮವನ್ನು ಕಾಪಾಡುವುದು ಚರ್ಚ್ ಆಫ್ ಇಂಗ್ಲಂಡ್‌ನ ವಿವೇಕದಿಂದ ಸಾಧ್ಯವಾಗಿದೆ' ಎಂಬ ಮಾತಿನಿಂದ. ಒಟ್ಟಾರೆ, ಈ ಸಂಧಾನವು ಬಹು ಜನರಿಗೆ ಸೂಕ್ತವೆನಿಸಿತು. ಮಹಾರಾಣಿ ಮೇರಿ ಮತ್ತು ಮಹಾರಾಜ ಎರಡನೆಯ ಜೇಮ್ಸ್ ದೇಶವನ್ನು ರೋಮ್ ಕಡೆಗೆ ಎಳೆಯುವ ಪ್ರಯತ್ನ ಮಾಡಿದರೆ, ಅಂತರ್ಯುದ್ಧದಲ್ಲಿ ಗೆದ್ದವರು ಅದನ್ನು ಜಿನೀವದತ್ತ ಎಳೆಯಲು ಪ್ರಯತ್ನಿಸಿದರು, ಆದರೆ ಇಬ್ಬರೂ ಸೋತರು; ೧೬೮೮ ರ ನಂತರ ಚರ್ಚ್ ಆಫ್ ಇಂಗ್ಲಂಡ್‌ನ ಅಧಿಕಾರವು ಪ್ರಶ್ನಾರ್ಹವಾಗಲಿಲ್ಲ. ಆದರೆ ಅದರ ವಿರೋಧಿಗಳು ಉಳಿದರು. ವಿಶೇಷವಾಗಿ ಆಂಗ್ಲಿಕನ್ ಚರ್ಚ್ ಅನ್ನು ವಿರೋಧಿಸಿದ ನಾನ್‌ಕನ್‌ಫಾರ್ಮಿಸ್ಟ್‌ರು ಬಲಿಷ್ಠರಾಗಿದ್ದರು, ಮತ್ತು ಹಣವಂತ ವ್ಯಾಪಾರಿಗಳಲ್ಲಿಯೂ ಬ್ಯಾಂಕರ್‌ಗಳಲ್ಲಿಯೂ ಅವರೇ ಹೆಚ್ಚಾಗಿದ್ದವರು, ಅವರ ಅಧಿಕಾರವು ನಿರಂತರವಾಗಿ ಹೆಚ್ಚುತ್ತಲೇ ಇತ್ತು.

ರಾಜನ ಮತಧಾರ್ಮಿಕ ಸ್ಥಾನವು ಒಂದು ಬಗೆಯಲ್ಲಿ ವಿಚಿತ್ರವಾದುದಾಗಿತ್ತು, ಯಾಕೆಂದರೆ ಅವನು ಚರ್ಚ್ ಆಫ್ ಇಂಗ್ಲಂಡ್‌ನ ಮಾತ್ರವಲ್ಲ, ಚರ್ಚ್ ಆಫ್ ಸ್ಕಾಟ್ಲಂಡ್‌ನ ಮುಖ್ಯಸ್ಥನೂ ಆಗಿದ್ದ. ಇಂಗ್ಲಂಡ್‌ನಲ್ಲಿ ಅವನು ಬಿಷಪ್‌ರನ್ನು ನಂಬಿ ಕಾಲ್ವಿನಿಸ್ಟ್‌ರನ್ನು ತಿರಸ್ಕರಿಸಬೇಕಾಗಿತ್ತು; ಸ್ಕಾಟ್ಲಂಡ್‌ನಲ್ಲಾದರೋ ಬಿಷಪ್‌ರನ್ನು ತಿರಸ್ಕರಿಸಿ ಕಾಲ್ವಿನಿಸ್ಟ್‌ರನ್ನು ನಂಬಬೇಕಾಗಿತ್ತು. ಸ್ಟೂಅರ್ಟ್‌ರಿಗೆ ಪ್ರಾಮಾಣಿಕ

ಮತಧಾರ್ಮಿಕ ನಂಬಿಕೆಯಿತ್ತು, ಈ ಸಂದಿಗ್ಧ ಮನೋಭಾವವು ಅವರಿಗೆ ಅಸಾಧ್ಯವಾದುದಾಗಿತ್ತು., ಮತ್ತು ಇದು ಅವರಿಗೆ ಸ್ಕಾಟ್ಲಂಡ್‌ನಲ್ಲಿ ಇಂಗ್ಲಂಡ್‌ಗಿಂತ ಹೆಚ್ಚಿನ ತೊಂದರೆಯನ್ನುಂಟುಮಾಡಿತ್ತು. ಆದರೆ ೧೬೮೮ ರ ನಂತರ ರಾಜಕೀಯ ಅನುಕೂಲವು ರಾಜರು ಒಟ್ಟಿಗೇ ಎರಡೂ ಮತಧರ್ಮಗಳಿಗೆ ಹೊಂದಿಕೊಳ್ಳುವಂತೆ ಮಾಡಿತು. ಇದರಿಂದ ರಾಜನ ಮನೋಭಾವದ ವಿರುದ್ಧವಾಗಿ ಅವರನ್ನು ದೈವೀಪುರುಷರಂತೆ ಕಾಣುವುದು ಅವರಿಗೆ ಕಷ್ಟಕರವಾಯಿತು. ಏನೇ ಆದರೂ, ಕ್ಯಾಥೋಲಿಕ್‌ರಾಗಲೀ ನಾನ್‌ಕನ್‌ಫರ್ಮಿಸ್ಟ್‌ರಾಗಲೀ ರಾಜಪ್ರಭುತ್ವದ ಪರವಾಗಿ ಯಾವುದೇ ಮತಧಾರ್ಮಿಕ ಹಕ್ಕುಗಳ ಪ್ರತಿಪಾದನೆಗಳಿಗೆ ಹೊಂದಿಕೊಳ್ಳದಂತಾಯಿತು.

ರಾಜ, ಶ್ರೀಮಂತವರ್ಗ ಮತ್ತು ಹಣವಂತ ಮಧ್ಯಮವರ್ಗಗಳು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಸಂಯೋಜನೆಗೊಳ್ಳುತ್ತಿದ್ದರು. ನಾಲ್ಕನೆಯ ಎಡ್ವರ್ಡ್ ಮತ್ತು ಹನ್ನೊಂದನೆಯ ಲೂಯಿಗಳ ನೇತೃತ್ವದಲ್ಲಿ ರಾಜ ಮತ್ತು ಮಧ್ಯಮವರ್ಗವು ಶ್ರೀಮಂತವರ್ಗದ ವಿರುದ್ಧ ಒಂದಾದರು; ಹದಿನಾಲ್ಕನೆಯ ಲೂಯಿಯ ನೇತೃತ್ವದಲ್ಲಿ ರಾಜ ಮತ್ತು ಶ್ರೀಮಂತವರ್ಗವು ಮಧ್ಯಮವರ್ಗದ ವಿರುದ್ಧ ಒಂದಾದರು; ೧೬೮೮ ರಲ್ಲಿ ಇಂಗ್ಲಂಡ್‌ನಲ್ಲಿ ಶ್ರೀಮಂತವರ್ಗ ಮತ್ತು ಮಧ್ಯಮವರ್ಗಗಳು ರಾಜನ ವಿರುದ್ಧ ನಿಂತವು. ರಾಜನ ಜೊತೆಗೆ ಮಿಕ್ಕವುಗಳಲ್ಲಿ ಒಂದು ಪಕ್ಷವು ಸೇರಿದಾಗ, ಅವನು ಬಲಿಷ್ಠನಾಗುತ್ತಿದ್ದ; ಅವೆರಡೂ ತನ್ನ ವಿರುದ್ಧ ನಿಂತಾಗ ದುರ್ಬಲನಾಗುತ್ತಿದ್ದ.

ಮಿಕ್ಕವುಗಳ ಜೊತೆಗೆ ಈ ಕಾರಣಗಳಿಗಾಗಿಯೂ ಲಾಕ್‌ಗೆ ಫಿಲ್ಮರ್‌ನ ಸಿದ್ಧಾಂತವನ್ನು ಹುಡಿಗುಟ್ಟಲು ಕಷ್ಟವೆನಿಸಲಿಲ್ಲ.

ವೈಚಾರಿಕತೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಲಾಕ್‌ಗೆ ಕೆಲಸ ಸುಲಭವಾಯಿತು. ತಾಯ್ತಂದೆಯರ ಅಧಿಕಾರಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ, ತಾಯಿಯ ಅಧಿಕಾರವು ತಂದೆಯದರಷ್ಟೇ ಇರಬೇಕು. ಅವನು ಜ್ಯೇಷ್ಠಾಧಿಕಾರದ (ಪ್ರೈಮೋಜೆನಿಚರ್) ಅನ್ಯಾಯವನ್ನು ಒತ್ತಿ ಹೇಳಿದ, ರಾಜಪ್ರಭುತ್ವಕ್ಕೆ ಆನುವಂಶಿಕತೆಯೇ ತಳಹದಿಯಾದರೆ ಅದು ಅನಿವಾರ್ಯವಾಗುತ್ತದೆ. ರಾಜರಾಗಿರುವವರು ನಿಜವಾಗಿಯೂ ಆಡಮ್‌ನ ಉತ್ತರಾಧಿಕಾರಿಗಳೇ ಎಂಬುದರ ಅಸಂಬದ್ಧತೆಯ ಬಗ್ಗೆ ಅವನು ಗೇಲಿ ಮಾಡುತ್ತಾನೆ. ಆಡಮ್‌ಗೆ ಒಬ್ಬನೇ ಒಬ್ಬ ಉತ್ತರಾಧಿಕಾರಿಯಿರಬಹುದಾಗಿತ್ತು, ಆದರೆ ಅವನು ಯಾರೆಂದು ಯಾರಿಗೂ ಗೊತ್ತಿಲ್ಲ. ಅವನ ನಿಜವಾದ ಉತ್ತರಾಧಿಕಾರಿಯನ್ನು ಕಂಡುಹಿಡಿದರೆ, ಈಗಿನ ಎಲ್ಲ ರಾಜರುಗಳು ತಮ್ಮ ಕಿರೀಟಗಳನ್ನು ಅವನ ಪಾದತಲಕ್ಕೆ ಒಪ್ಪಿಸಬೇಕು ಎಂದು ಫಿಲ್ಮರ್ ಒಪ್ಪುತ್ತಾನೆಯೇ ಎಂದವನು ಕೇಳುತ್ತಾನೆ. ರಾಜತ್ವದ ತಳಹದಿಯೆಂದು ಫಿಲ್ಮರ್ ಹೇಳುವುದನ್ನು ಒಪ್ಪುವುದಾದರೆ, ಎಲ್ಲ ರಾಜರೂ, ಪ್ರಾಯಶಃ ಒಬ್ಬನನ್ನು

ಉಳಿದಂತೆ, ಅತಿಕ್ರಮಣಕಾರರಾಗುತ್ತಾರೆ, ಮತ್ತು ಅವರು ತಮ್ಮ ವಾಸ್ತವ ಪ್ರಜೆಗಳ ವಿಧೇಯತೆಯನ್ನು ನಿರೀಕ್ಷಿಸುವ ಹಾಗಿರುವುದಿಲ್ಲ. ಅದಕ್ಕೂ ಮಿಗಿಲಾಗಿ, ತಾಯ್ತಂದೆಯರ ಅಧಿಕಾರವು ತಾತ್ಕಾಲಿಕವಾದುದು, ಅದು ಜೀವಮಾನಪೂರ್ತಿಯಾಗಿ ಆಗಲೀ ಆಸ್ತಿಯ ವಿಷಯಕ್ಕಾಗಲೀ ವಿಸ್ತರಣೆಗೊಳ್ಳುವುದಿಲ್ಲ ಎಂಬುದವನ ವಾದ.

ಹೆಚ್ಚಿನ ಮೂಲಭೂತ ಕಾರಣಗಳ ಜೊತೆಗೆ ಇಂತಹ ಕಾರಣಗಳಿಗಾಗಿಯೂ, ಲಾಕ್‌ನ ಪ್ರಕಾರ, ಆನುವಂಶಿಕತೆಯು ನ್ಯಾಯಬದ್ಧ ರಾಜಕೀಯ ಅಧಿಕಾರದ ತಳಹದಿ ಎಂಬುದನ್ನು ಒಪ್ಪಲಾಗದು. ಇದಕ್ಕೆ ಅನುಸಾರವಾಗಿ, ಸರ್ಕಾರದ ಬಗೆಗಿನ ತನ್ನ ಎರಡನೆಯ ಸಂಪುಟದಲ್ಲಿ ಅವನು ಮತ್ತಷ್ಟು ಸಮರ್ಥನೀಯ ತಳಹದಿಯನ್ನು ಹುಡುಕುತ್ತಾನೆ.

ಆನುವಂಶಿಕ ತತ್ತ್ವವು ಈಗ ರಾಜಕೀಯದಿಂದ ಸಂಪೂರ್ಣವಾಗಿ ಕಣ್ಮರೆಯಾಗಿದೆ. ನನ್ನ ಜೀವಿತಕಾಲದಲ್ಲಿಯೇ, ಬ್ರೆಜಿಲ್, ಚೈನಾ, ರಷ್ಯಾ, ಜರ್ಮನಿ ಮತ್ತು ಆಸ್ಟ್ರಿಯಗಳ ಚಕ್ರವರ್ತಿಗಳು ಕಣ್ಮರೆಯಾಗಿದ್ದಾರೆ, ಅವರ ಸ್ಥಾನವನ್ನು ಸರ್ವಾಧಿಕಾರಿಗಳು ಆಕ್ರಮಿಸಿದ್ದಾರೆ, ಅವರೇನೂ ಆನುವಾಂಶಿಕತೆಯ ತಳಹದಿಯನ್ನು ಮುಂದೊಡ್ಡುತ್ತಿಲ್ಲ. ಯೂರೋಪ್‌ನಾದ್ಯಂತ ಶ್ರೀಮಂತವರ್ಗವು ತನ್ನ ಸವಲತ್ತುಗಳನ್ನು ಕಳೆದುಕೊಂಡಿದೆ, ಇಂಗ್ಲಂಡ್‌ನಲ್ಲಿ ಮಾತ್ರ ಅವರು ಇತಿಹಾಸದ ಪಳೆಯುಳಿಕೆಯ ರೂಪವನ್ನು ಹೊಂದಿದ್ದಾರೆ. ಬಹುತೇಕ ದೇಶಗಳಲ್ಲಿ ಇದೆಲ್ಲವೂ ಆದುದು ಇತ್ತೀಚೆಗೆ, ಅಧಿಕಾರದ ಸಾಂಪ್ರದಾಯಿಕ ತಳಹದಿಗಳು ನಾಶಗೊಂಡಿರುವುದರಿಂದಲೂ ಯಶಸ್ವೀ ಪ್ರಜಾಪ್ರಭುತ್ವ ಸ್ಥಾಪನೆಗೆ ಆವಶ್ಯಕವಾದ ನಡಾವಳಿಗೆ ಮನಸ್ಸು ಸಿದ್ಧಗೊಳ್ಳಲು ಸಾಕಷ್ಟು ಸಮಯ ಸಿಕ್ಕದಿರುವುದರಿಂದಲೂ, ಅದು ಸರ್ವಾಧಿಕಾರದ ಉದಯಕ್ಕೆ ಕಾರಣವಾಗಿದೆ.. ಯಾವತ್ತೂ ಆನುವಂಶಿಕ ಆಂಶವನ್ನು ಹೊಂದಿರದಿದ್ದ ಒಂದು ಮಹಾ ಸಂಸ್ಥೆಯೆಂದರೆ ಕ್ಯಾಥೋಲಿಕ್ ಚರ್ಚ್. ಉಳಿದುಕೊಂಡು ಬಂದರೆ ಸರ್ವಾಧಿಕಾರವು ಕ್ರಮೇಣ ಚರ್ಚ್ ಅನ್ನು ಹೋಲುವ ಆಡಳಿತವಾಗಿ ರೂಪುಗೊಳ್ಳುವುದೆಂದು ನಿರೀಕ್ಷಿಸಬಹುದು. ಅಮೆರಿಕದ ದೊಡ್ಡ ಕಾರ್ಪೋರೇಷನ್‌ಗಳ ವಿಷಯದಲ್ಲಿ ಇದಾಗಲೇ ಸಂಭವಿಸಿದೆ, ಅವು ಸರ್ಕಾರ ಹೊಂದಿದಂತಹ ಅಧಿಕಾರವನ್ನೇ ಹೊಂದಿರುತ್ತವೆ, ಕೊನೆಯ ಪಕ್ಷ ಪರ್ಲ್ ಹಾರ್ಬರ್ ಪ್ರಕರಣದವರೆಗೂ ಹೊಂದಿದ್ದವು.

ರಾಜಕೀಯದಲ್ಲಿ ಆನುವಂಶಿಕ ತತ್ತ್ವದ ತಿರಸ್ಕಾರವು ಪ್ರಜಾಪ್ರಭುತ್ವ ದೇಶಗಳಲ್ಲಿ ಆರ್ಥಿಕ ವಲಯದಲ್ಲಿ ಯಾವುದೇ ಪರಿಣಾಮವನ್ನು ಬೀರಲಿಲ್ಲ ಎಂಬುದು ಕುತೂಹಲಕಾರಿಯಾದುದು. (ಕಮ್ಯುನಿಸ್ಟ್ ದೇಶಗಳಲ್ಲಿ ಆರ್ಥಿಕ ಅಧಿಕಾರವನ್ನು ರಾಜಕೀಯ ಅಧಿಕಾರವೇ ಕಬಳಿಸಿರುತ್ತದೆ). ವ್ಯಕ್ತಿಯು ತನ್ನ ಆಸ್ತಿಯನ್ನೆಲ್ಲ ತನ್ನ ಮಕ್ಕಳಿಗೆ ಬಿಡುವುದು ಸಹಜವೆಂದೇ ನಾವು ಭಾವಿಸುತ್ತೇವೆ, ಅಂದರೆ, ನಾವು

ರಾಜಕೀಯದಲ್ಲಿ ಆನುವಂಶಿಕ ಅಧಿಕಾರವನ್ನು ತಿರಸ್ಕರಿಸಿದ್ದರೂ, ಆರ್ಥಿಕ ಅಧಿಕಾರಕ್ಕೆ ಸಂಬಂಧಿಸಿದಂತೆ ನಾವು ಆನುವಂಶಿಕ ತತ್ವವನ್ನು ಒಪ್ಪಿಕೊಂಡಿದ್ದೇವೆ ಎಂಬಂತಾಯಿತು.. ರಾಜಕೀಯಾಧಿಕಾರ ವಂಶಗಳು ಕಣ್ಮರೆಯಾಗಿವೆ, ಆದರೆ ಆರ್ಥಿಕ ವಂಶಗಳು ಮುಂದುವರಿಯುತ್ತಿವೆ. ಈ ಎರಡೂ ಬಗೆಯ ಅಧಿಕಾರದ ವಿಷಯದಲ್ಲಿನ ವಿಭಿನ್ನ ಪರಿಗಣನೆಯು ಬಗೆಗೆ ನಾನು ಸದ್ಯದಲ್ಲಿ ಪರವಾಗಿಯಾಗಲೀ ವಿರೋಧವಾಗಿಯಾಗಲೀ ವಾದಿಸುತ್ತಿಲ್ಲ; ಅವು ಇವೆ ಎಂದಷ್ಟೇ ನಾನು ಸೂಚಿಸುತ್ತಿರುವುದು, ಬಹುತೇಕ ಜನರು ಆ ಬಗ್ಗೆ ಯೋಚಿಸಿರುವುದೇ ಇಲ್ಲ. ಆನುವಂಶಿಕವಾಗಿ ಬಂದ ಅಪಾರ ಶ್ರೀಮಂತಿಕೆಯಿಂದಾಗಿ ಇತರರ ಜೀವಗಳ ಮೇಲಿನ ಅಧಿಕಾರವು ಸಹಜವಾದುದು ಎಂದು ನಾವು ಭಾವಿಸುವುದರ ಬಗ್ಗೆ ಆಲೋಚಿಸಿದರೆ, ಸರ್ ರಾಬರ್ಟ್ ಫಿಲ್ಮರ್ ಅಂತಹವರು ಇದೇ ದೃಷ್ಟಿಕೋನವನ್ನು ರಾಜಾಧಿಕಾರದ ಪರವಾಗಿ ಏಕೆ ಹೊಂದಿರುತ್ತಾರೆ ಎನ್ನುವುದರ ಬಗ್ಗೆ, ಮತ್ತು ಲಾಕ್ ಅಂತಹ ಜನರು ಮಾಡಿದ ಹೊಸ ಆವಿಷ್ಕಾರವು ಎಷ್ಟು ಮುಖ್ಯವಾದವು ಎಂಬುದನ್ನು, ನೀವು ಮತ್ತಷ್ಟು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ.

ಫಿಲ್ಮರ್‌ನ ಸಿದ್ಧಾಂತವನ್ನು ಹೇಗೆ ನಂಬಬಹುದು, ಮತ್ತು ಲಾಕ್‌ನ ತದ್ವಿರುದ್ಧವಾದ ಸಿದ್ಧಾಂತವು ಕ್ರಾಂತಿಕಾರಕವಾದುದು ಎಂಬುದನ್ನು ಅರ್ಥಮಾಡಿಕೊಳ್ಳಲು, ಆಗ ಸಾಮ್ರಾಜ್ಯವೆಂದರೆ ಈಗಿನ ಭೂಆಸ್ತಿಯಂತೆಯೇ ಎಂದು ಭಾವಿಸಿದ್ದುದರ ಬಗ್ಗೆ ಚಿಂತಿಸಬೇಕು, ಅಷ್ಟೆ ಭೂ ಒಡೆಯನಿಗೆ ಮುಖ್ಯವಾದ ನಾನಾ ಬಗೆಯ ಕಾನೂನುಬದ್ಧ ಹಕ್ಕುಗಳಿರುತ್ತವೆ, ಅವುಗಳಲ್ಲಿ ಬಹು ಮುಖ್ಯವಾದುದು ಆ ಭೂಮಿಯಲ್ಲಿ ಯಾರಿರಬೇಕು ಎಂಬುದರ ಆಯ್ಕೆ ಕುರಿತಾದುದು. ಒಡೆತನವನ್ನು ಆನುವಂಶೀಯವಾಗಿ ವರ್ಗಾಯಿಸಬಹುದು, ಮತ್ತು ಆಸ್ತಿಯೊಂದನ್ನು ಆನುವಂಶಿಕವಾಗಿ ಹೊಂದಿರುವ ವ್ಯಕ್ತಿಯು ಕಾನೂನು ನೀಡುವ ಎಲ್ಲ ಸವಲತ್ತುಗಳನ್ನು ಹೊಂದಲು ಹಕ್ಕುದಾರನಾಗಿರುತ್ತಾನೆ. ಆದರೂ ಬುಡದಲ್ಲಿ ಅವನ ಸ್ಥಾನವು ರಾಜನದರಂತೆಯೇ ಇರುತ್ತದೆ, ಅಂತಹ ಹಕ್ಕುಗಳನ್ನೇ ಸರ್ ಫಿಲ್ಮರ್ ಸಮರ್ಥಿಸುವುದು. ಸ್ಪೇಯಿನ್ ರಾಜನು ವಾಸ್ತವವಾಗಿ ನೀಡಿದ ಅಥವಾ ನೀಡಿದನೆಂದು ಹೇಳಲಾಗುವ ಮತ್ತು ಅವುಗಳ ಹಕ್ಕುಗಳು ಪರಂಪರಾನುಗತವಾಗಿ ಇಳಿದು ಬಂದಿರುವ ಭಾರಿ ಭೂಆಸ್ತಿಗಳ ಕ್ಯಾಲಿಫೋರ್ನಿಯದಲ್ಲಿ ಈಗಲೂ ಇವೆ. ಅವನು ಅಂತಹ ಉಂಬಳಿಗಳನ್ನು ನೀಡುವ ಅಧಿಕಾರವನ್ನಷ್ಟೇ ಹೊಂದಿದ್ದ (ಅ) ಯಾಕೆಂದರೆ ಸ್ಪೇಯಿನ್ ಫಿಲ್ಮರ್ ಒಪ್ಪಿಕೊಂಡಿದ್ದಂತಹ ದೃಷ್ಟಿಕೋನದಂತಹುದನ್ನೇ ಹೊಂದಿದ್ದುದು, ಮತ್ತು (ಆ) ಸ್ಪೇಯಿನ್ ಸೈನಿಕರು ಇಂಡಿಯನ್ ಜನರನ್ನು ಯುದ್ಧದಲ್ಲಿ ಸೋಲಿಸಿದರು ಎಂಬುದು. ಇಷ್ಟಾದರೂ, ಅವನು ಕೊಟ್ಟ ಉಂಬಳಿಗಳ ವಾರಸುದಾರರು ನ್ಯಾಯಯುತ ಹಕ್ಕುಗಳನ್ನು ಹೊಂದಿರುವರೆಂದೇ ನಾವು ತಿಳಿಯುತ್ತೇವೆ. ಪ್ರಾಯಶಃ

ಮುಂದಿನ ದಿನಗಳಲ್ಲಿ ಇದೂ, ಈಗ ಫಿಲ್ಮರ್‌ನ ಸಮರ್ಥನೆ ಎಷ್ಟು ಅದ್ಭುತವಾದುದು ಎನಿಸಿದೆಯೂ, ಹಾಗೆಯೇ ಕಾಣಿಸಬಹುದು.

ಆ. ಪ್ರಕೃತಿಯ ಸ್ಥಿತಿ ಮತ್ತು ಪ್ರಕೃತಿ ನಿಯಮ

'ಟ್ರೀಟೈಸ್ ಆನ್ ಗವರ್ನಮೆಂಟ್' ಗ್ರಂಥದ ಎರಡನೆಯ ಸಂಪುಟವನ್ನು ಲಾಕ್ ಆರಂಭಿಸುವುದು, ತಂದೆಯ ಅಧಿಕಾರದಂತೆ ಸರ್ಕಾರದ ಅಧಿಕಾರವನ್ನು ಸಾಧಿಸಿಕೊಳ್ಳುವುದರ ಅಸಾಧ್ಯತೆಯನ್ನು ತೋರಿಸಿದ ಬಳಿಕ, ಈಗ ಸರ್ಕಾರದ ವಾಸ್ತವ ಅಧಿಕಾರ ಯಾವುದು ಎಂಬುದರ ನಿರ್ವಚನಕ್ಕೆ ತೊಡಗುತ್ತಾನೆ.

ಅವನು ಆರಂಭಿಸುವುದು, ಮಾನವಾಡಳಿತಕ್ಕೆಲ್ಲ ಮೂಲಭೂತವಾದ 'ಪ್ರಕೃತಿಯ ಸ್ಥಿತಿ'ಯೆಂದು ಕರೆಯುವುದನ್ನು ಭಾವಿಸಿಕೊಳ್ಳುವ ಮೂಲಕ. ಇಂತಹ ಸ್ಥಿತಿಯಲ್ಲಿ ಒಂದು 'ಪ್ರಕೃತಿ ನಿಯಮ'ವೂ ಇರುತ್ತದೆ; ಆದರೆ ಪ್ರಕೃತಿ ನಿಯಮದಲ್ಲಿ ದೈವಿಕ ಆಜ್ಞೆಗಳಿರುತ್ತವೆ, ಅವುಗಳನ್ನು ಯಾವುದೇ ಮಾನವಾಧಿಕಾರವು ನಿಯಮಿಸಿರುವುದಿಲ್ಲ. ಪ್ರಕೃತಿ ಸ್ಥಿತಿಯು ಎಷ್ಟರ ಮಟ್ಟಿಗೆ ನಿಜವೋ ಸ್ಪಷ್ಟವಾಗುವುದಿಲ್ಲ, ಯಾಕೆಂದರೆ ಲಾಕ್‌ಗೆ ಇದೊಂದು ನಿದರ್ಶನಾತ್ಮಕ ಆಧಾರಕಲ್ಪನೆ ಮಾತ್ರ, ಅದಕ್ಕೆ ಎಂತಹ ಐತಿಹಾಸಿಕ ಅಸ್ತಿತ್ವದ ಬಗ್ಗೆ ಅವನು ಏನು ಭಾವಿಸುತ್ತಾನೆಯೋ ತಿಳಿಯುವುದಿಲ್ಲ; ಆದರೆ ಅದು ವಾಸ್ತವವಾಗಿ ಸಂಭವಿಸಿರುವುದೆಂದು ಅವನು ಭಾವಿಸುತ್ತಾನೆಂದು ನನಗನ್ನಿಸುತ್ತದೆ. ಮನುಷ್ಯರು ಪ್ರಕೃತಿಯ ಸ್ಥಿತಿಯಿಂದ ಮೂಡಿದುದು ಒಂದು ವಾಸ್ತವ ಸಾಮಾಜಿಕ ಒಪ್ಪಂದದ ಮೂಲಕ, ಅದೇ ನಾಗರಿಕ ಸರ್ಕಾರಗಳ ಸ್ಥಾಪನೆಗೆ ಕಾರಣವಾದುದು. ಆದರೆ ಸದ್ಯಕ್ಕೆ ನಮಗೆ ಬೇಕಾಗಿರುವುದು ಪ್ರಕೃತಿ ಸ್ಥಿತಿ ಮಾತ್ರ.

ಪ್ರಕೃತಿ ಸ್ಥಿತಿ ಮತ್ತು ಪ್ರಕೃತಿ ನಿಯಮಗಳ ಬಗ್ಗೆ ಲಾಕ್ ಹೇಳುವುದೇನು ಎಂದರೆ, ಮುಖ್ಯವಾಗಿ, ಅದು ಸ್ವಂತದ್ದಾಗಿರದೆ ಮಧ್ಯಕಾಲದ ಸೂಕ್ಷ್ಮತರ್ಕ ಸಿದ್ಧಾಂತದ ಪುನರಾವರ್ತನೆ ಎಂಬುದು. ಸಂತ ಥಾಮಸ್ ಆಕ್ವಿನಾಸ್ ಹೀಗೆನ್ನುತ್ತಾನೆ:

'ಮನುಷ್ಯನು ರೂಪಿಸಿರುವ ಪ್ರತಿ ನಿಯಮವೂ ಪ್ರಕೃತಿ ನಿಯಮದಿಂದ ರೂಪಿತವಾಗಿರುವಷ್ಟೇ ನಿಬಂಧನೆಯ ಲಕ್ಷಣವನ್ನು ಹೊಂದಿರುತ್ತದೆ. ಆದರೆ ಯಾವುದಾದರೊಂದು ಅಂಶದಲ್ಲಿ ಅದು ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿದ್ದರೆ ಅದು ನಿಬಂಧನೆಯಾಗಿ ಉಳಿಯುವುದಿಲ್ಲ, ಅದು ನಿಬಂಧನೆಯ ವಿಕೃತಿಯಾಗುತ್ತದೆ.'[೨೬೩]

ಮಧ್ಯಯುಗದಾದ್ಯಂತ ಪ್ರಕೃತಿ ನಿಯಮವು 'ಬಡ್ಡಿ'ಯನ್ನು (ಯುಷರಿ), ಅಂದರೆ ದುಬಾರಿ ಬಡ್ಡಿಗೆ ಹಣ ಕಡಕೊಡುವುದನ್ನು, ಖಂಡಿಸಲು ಬಳಸಿಕೊಳ್ಳಲಾಯಿತು.

---

೨೬೩. ಉದ್ಧೃತ, ಟಾನಿ ತನ್ನ 'ರಿಲಿಜನ್ ಅಂಡ್ ದ ರೈಸ್ ಆಫ್ ಕ್ಯಾಪಿಟಲಿಸಂ' ಪುಸ್ತಕದಲ್ಲಿ.

ಚರ್ಚ್‌ನ ಆಸ್ತಿಯು ಬಹುತೇಕ ಜಮೀನಿನ ಸ್ವರೂಪದಲ್ಲಿತ್ತು, ಭೂ ಒಡೆಯರು ಸಾಮಾನ್ಯವಾಗಿ ಸಾಲ ಕೊಡುವವರಾಗಿದ್ದರೇ ಹೊರತು ಸಾಲ ತೆಗೆದುಕೊಳ್ಳುವವರಲ್ಲ. ಆದರೆ ಪ್ರಾಟೆಸ್ಟೆಂಟ್‌ವಾದವು ಹುಟ್ಟಿಕೊಂಡಾಗ, ಅದರ ಬೆಂಬಲವು – ಅದರಲ್ಲೂ ವಿಶೇಷವಾಗಿ ಕಾಲ್ವಿನಿಸ್ಟ್‌ರ ಬೆಂಬಲ – ಬಂದುದು ಸಾಲ ಕೊಡುವವರಾಗಿದ್ದವರ ಮತ್ತು ಸಾಲ ತೆಗೆದುಕೊಳ್ಳದ ಹಣವಂತ ಮಧ್ಯಮವರ್ಗದ ಮೂಲಕ. ಅದಕ್ಕನುಗುಣವಾಗಿ, ಮೊದಲಿಗೆ ಕಾಲ್ವಿನ್, ಮತ್ತು ಆನಂತರ ಪ್ರಾಟೆಸ್ಟೆಂಟ್‌ರು ಮತ್ತು ಕೊನೆಯಲ್ಲಿ ಕ್ಯಾಥೋಲಿಕ್ ಚರ್ಚ್ ಬಡ್ಡಿಯನ್ನು ಕ್ರಮಬದ್ಧಗೊಳಿಸಿದರು. ಹೀಗೆ ಪ್ರಕೃತಿ ನಿಯಮವನ್ನು ಭಿನ್ನ ರೀತಿಯಲ್ಲಿ ಪರಿಕಲ್ಪಿಸಿಕೊಳ್ಳಲಾಯಿತು, ಆದರೆ ಯಾರೂ ಅಂಥದೊಂದು ಪದ್ಧತಿಯಿದ್ದುದನ್ನು ಅನುಮಾನಿಸಲಿಲ್ಲ.

ಪ್ರಾಕೃತಿಕ ನಿಯಮಗಳಲ್ಲಿನ ನಂಬಿಕೆಯ ರೂಪದಲ್ಲಿ ಉಳಿದು ಬಂದ ಅನೇಕ ಸಿದ್ಧಾಂತಗಳು ಅದಕ್ಕೆ ಋಣಿಯಾಗಿವೆ; ಉದಾಹರಣೆಗೆ, ತಾಟಸ್ಥ್ಯನೀತಿ (ಲೇಸೆಝ್-ಫೇರ್) ಮತ್ತು ಮಾನವನ ಹಕ್ಕುಗಳು. ಈ ಸಿದ್ಧಾಂತಗಳು ಪ್ಯೂರಿಟಾನಿಸಂನೊಂದಿಗೆ ಸಂಬಂಧ ಹೊಂದಿರುವುದರ ಜೊತೆಗೆ ಎರಡೂ ಅದರಿಂದಲೇ ಮೂಡಿಬಂದವು. ಟಾನಿ ನೀಡುವ ಎರಡು ಉದ್ಧರಣೆಗಳು ಇದನ್ನು ಶ್ರುತಪಡಿಸುತ್ತವೆ. ೧೬೦೪ ರಲ್ಲಿ ರಚಿತವಾದ ಜನಪ್ರತಿನಿಧಿ ಸಭೆಯ (ಹೌಸ್ ಆಫ್ ಕಾಮನ್ಸ್) ಒಂದು ಸಮಿತಿಯು ಹೀಗೆ ಹೇಳುತ್ತದೆ:

'ಎಲ್ಲ ಸ್ವತಂತ್ರ ಪ್ರಜೆಗಳೂ ಆನುವಂಶಿಕವಾಗಿ ಹುಟ್ಟಿರುತ್ತಾರೆ, ತಮ್ಮ ಜಮೀನಿನಂತೆ ಮತ್ತು ತಮ್ಮ ಸ್ವತಂತ್ರ ವೃತ್ತಿಯಲ್ಲಿ, ತಮ್ಮ ಕಾರ್ಯವನ್ನು ಅದರಲ್ಲಿ ತೊಡಗಿಸಿ ಮತ್ತು ಬದುಕು ಕಂಡುಕೊಳ್ಳಲು.'

೧೬೫೬ ರಲ್ಲಿ ಜೋಸೆಫ್ ಲೀ ಹೀಗೆ ಬರೆಯುತ್ತಾನೆ:

'ಪ್ರಕೃತಿಯ ಬೆಳಕು ಮತ್ತು ವಿಚಾರಗಳ ಮೂಲಕ ತನಗೆ ಹೆಚ್ಚು ಅನುಕೂಲವಾದುದನ್ನು ಪ್ರತಿಯೊಬ್ಬನೂ ಮಾಡಬಹುದಾದುದು ನಿರಾಕರಿಸಲಾಗದ ನೀತಿವಾಕ್ಯವಾಗಿದೆ .. .. ಖಾಸಗಿ ವ್ಯಕ್ತಿಗಳ ಏಳಿಗೆಯಿಂದಾಗಿ ಸಾರ್ವತ್ರಿಕ ಅನುಕೂಲ ಉಂಟಾಗುತ್ತದೆ.'

'ಪ್ರಕೃತಿಯ ಬೆಳಕು ಮತ್ತು ವಿಚಾರಗಳ ಮೂಲಕ' ಎಂಬ ಶಬ್ದಗಳನ್ನು ಬಿಟ್ಟರೆ, ಇದನ್ನು ಹತ್ತೊಂಬತ್ತನೆಯ ಶತಮಾನದಲ್ಲಿ ಬರೆದಿರಬಹುದು.

ಲಾಕ್‌ನ ಸರ್ಕಾರದ ಬಗೆಗಿನ ಸಿದ್ಧಾಂತದಲ್ಲಿ ಸ್ವಂತವಾದದ್ದು ಅತ್ಯಲ್ಪ ಎಂಬುದನ್ನು ಮತ್ತೆ ಹೇಳುತ್ತೇನೆ. ತಮ್ಮ ಚಿಂತನೆಗಳಿಗಾಗಿ ಕೀರ್ತಿಯನ್ನು ಪಡೆದಿರುವ ಬಹುತೇಕ ಜನರನ್ನು ಲಾಕ್ ಹೋಲುತ್ತಾನೆ. ಹೊಸ ಚಿಂತನೆಯನ್ನು ಮೊದಲ ಬಾರಿಗೆ ಹೊಂದುವ ವ್ಯಕ್ತಿಯು ತನ್ನ ಕಾಲಕ್ಕಿಂತ ತುಂಬ ಮುಂದಿರುವುದರಿಂದ ಅವನನ್ನು ಮೂರ್ಖನೆಂದೇ ತಿಳಿದಿರುವುದು ನಿಯಮದಂತೆ ಸಾಮಾನ್ಯ, ಹೀಗಾಗಿ

ಅವನು ಮರೆಯಲ್ಲಿ ಉಳಿಯುತ್ತಾನೆ ಆನಂತರ ಜನ ಅವನನ್ನು ಮರೆತುಬಿಡುತ್ತಾರೆ. ಆನಂತರ ಕ್ರಮೇಣವಾಗಿ ಜಗತ್ತು ಅವನ ಚಿಂತನೆಯನ್ನು ಸ್ವೀಕರಿಸಲು ಸಿದ್ಧವಾಗುತ್ತದೆ, ಅದನ್ನು ಅತ್ಯಂತ ಸೂಕ್ತ ಸಮಯದಲ್ಲಿ ಘೋಷಿಸುವ ವ್ಯಕ್ತಿಯು ಅದರ ಯಶಸ್ಸಿಗೆ ಭಾಜನನಾಗುತ್ತಾನೆ. ನಿದರ್ಶನಕ್ಕೆ ಡಾರ್ವಿನ್ ವಿಷಯಕ್ಕೆ ನಿಜ; ಬಡಪಾಯಿ ಮಾನ್‌ಬೋಡೋ ನಗೆಪಾಟಲಾದ.

ಪ್ರಕೃತಿ ಸ್ಥಿತಿಯ ಬಗ್ಗೆ ಹೇಳುವುದಾದರೆ, ಅದರಲ್ಲಿ ಪ್ರತಿಯೊಂದೂ ಉಳಿದೆಲ್ಲದರ ಜೊತೆ ಕಿತ್ತಾಟದಲ್ಲಿ ತೊಡಗಿರುವ, ಜೀವನವು ಕ್ಷುಲ್ಲಕವೂ, ಕ್ರೂರವೂ ಮತ್ತು ಹ್ರಸ್ವವೂ ಆಗಿರುತ್ತಿದ್ದ ಸ್ಥಿತಿ ಎಂದು ಪರಿಗಣಿಸಿದ್ದ ಹಾಬ್ಸ್‌ಗಿಂತ ಲಾಕ್ ಕಡಿಮೆ ಸ್ವಂತಿಕೆಯಿದ್ದವನು. ಆದರೆ ಹಾಬ್ಸ್ ನಾಸ್ತಿಕನೆಂಬುದು ಜನಜನಿತವಾಗಿತ್ತು. ತನ್ನ ಹಿಂದಿನವರಿಂದ ಪಡೆದು ಲಾಕ್ ಒಪ್ಪಿಕೊಂಡಿದ್ದ ಪ್ರಕೃತಿ ಸ್ಥಿತಿ ಮತ್ತು ಪ್ರಕೃತಿ ನಿಯಮಗಳ ಕುರಿತ ದೃಷ್ಟಿಕೋನವನ್ನು ಅದರ ಮತಧಾರ್ಮಿಕ ನೆಲೆಯಿಂದ ಬೇರ್ಪಡಿಸಲಾಗದು. ಅಲ್ಲಿ ಅದು ಆಧುನಿಕ ಉದಾರವಾದದಲ್ಲಿಯ ಬಹುತೇಕದರಂತೆ ಸ್ಪಷ್ಟವೂ ತಾರ್ಕಿಕವೂ ಆದ ತಳಹದಿಯಿಲ್ಲದೆ ಉಳಿದಿರಬಲ್ಲುದು.

'ಪ್ರಕೃತಿ ಸ್ಥಿತಿ'ಯಲ್ಲಿನ ನಂಬಿಕೆಯು ಬಹು ಹಿಂದಿನ ಕಾಲದಲ್ಲಿ ಭಾಗಶಃ ಬೈಬಲ್‌ನ ಪೇಟ್ರಿಯಾರ್ಕ್‌ರ ಕಾಲದ ನಿರೂಪಣೆಯಿಂದಲೂ, ಭಾಗಶಃ ಚಿನ್ನದ ಕಾಲದ ಬಗೆಗಿನ ಪೌರಾಣಿಕ ಕಲ್ಪನೆಯಿಂದಲೂ ಬಂದಿರುವಂಥದು. ಬಹು ಹಿಂದಿನ ಕಾಲದ ಕೆಟ್ಟ ಪರಿಸ್ಥಿತಿಯ ಬಗೆಗಿನ ನಂಬಿಕೆಯು ಬಂದಿರುವುದು ವಿಕಾಸವಾದದ ಸಿದ್ಧಾಂತದೊಡನೆ.

'ಪ್ರಕೃತಿ ಸ್ಥಿತಿ'ಯ ಬಗೆಗಿನ ವ್ಯಾಖ್ಯೆಗೆ ತುಂಬ ಹತ್ತಿರವಾದುದನ್ನು ಲಾಕ್‌ನ ಕೆಳಗಿನ ಮಾತುಗಳಲ್ಲಿ ಕಾಣಬಹುದು:

'ಎಲ್ಲರಿಗೂ ಸಮಾನವಾದ ಸರ್ವೋಚ್ಚವಾದುದಿಲ್ಲದೆ, ವಿಚಾರವಂತಿಕೆಯಿಂದಾಗಿ ತಮ್ಮಲ್ಲಿ ಅಧಿಕಾರಯುತವಾಗಿ ತೀರ್ಮಾನಮಾಡುವವರಿಲ್ಲದೆ, ಭೂಮಿಯ ಮೇಲೆ ಒಟ್ಟಿಗೆ ಜನರು ಬದುಕಿರುವುದು ಪ್ರಕೃತಿ ಸ್ಥಿತಿಯೇ ಆಗಿರುತ್ತದೆ.'

ಇದೇನೂ ಅನಾಗರಿಕರ ಜೀವನದ ವರ್ಣನೆಯಲ್ಲ, ಅದು ಸನ್ನಡತೆಯ ಅನಾಯಕತ್ವದ ಜನರಿಂದ ಕೂಡಿದ ಪ್ರತಿಭಾವಂತ ಸಮುದಾಯದ ವರ್ಣನೆ. ಅವರಿಗೆ ಪೋಲೀಸರ ಅಥವಾ ನ್ಯಾಯಾಸ್ಥಾನಗಳ ಆವಶ್ಯಕತೆಯಿಲ್ಲ, ಯಾಕೆಂದರೆ ಅವರು ಯಾವಾಗಲೂ 'ವಿಚಾರವಂತಿಕೆ'ಯನ್ನು, ಅದರಲ್ಲಿರುವ ನಡಾವಳಿಯ ನಿಯಮಗಳು ದೈವಮೂಲದವೆಂಬ ಭಾವನೆಯಿಂದ, ಅಂದರೆ 'ಪ್ರಕೃತಿ ನಿಯಮ'ವನ್ನು ಅನುಸರಿಸುವವರು. (ಉದಾಹರಣೆಗೆ, 'ನೀನು ಕೊಲ್ಲಬಾರದು' ಎಂಬುದು ಪ್ರಕೃತಿ ನಿಯಮದ ಭಾಗವಾದರೆ, ರಸ್ತೆಯ ನಿಯಮಗಳು ಅಲ್ಲ.)

ಇನ್ನೂ ಕೆಲವು ಭಾಗಗಳು ಲಾಕ್‌ನ ಅರ್ಥವನ್ನು ಹೆಚ್ಚು ಸ್ಪಷ್ಟಗೊಳಿಸುತ್ತವೆ.

'ರಾಜಕೀಯ ಅಧಿಕಾರವನ್ನು ಹಕ್ಕು ಎಂದು, ಮತ್ತು ಮೂಲದಿಂದ ಅದನ್ನು ಸಾಧಿಸುವುದನ್ನು ಅರ್ಥಮಾಡಿಕೊಳ್ಳುವುದಕ್ಕೆ ಜನರು ಸಹಜವಾಗಿ ಯಾವ ಸ್ಥಿತಿಯಲ್ಲಿರುತ್ತಾರೆ ಎಂಬುದನ್ನು ಪರಿಗಣಿಸಬೇಕು. ಅಂದರೆ ಅದು, ಪ್ರಕೃತಿ ನಿಯಮಗಳ ಪರಿಧಿಯಲ್ಲಿ ತಮ್ಮ ಕ್ರಿಯೆಗಳನ್ನು ಕ್ರಮಬದ್ಧಗೊಳಿಸಿಕೊಳ್ಳಲು ಮತ್ತು ತಮಗೆ ಸೇರಿರುವ ವಸ್ತುಗಳನ್ನೂ ಜನರನ್ನೂ, ಯಾರ ಅನುಮತಿಯ ಆವಶ್ಯಕತೆಯಿಲ್ಲದೆ ಮತ್ತು ಬೇರಾವುದೇ ವ್ಯಕ್ತಿಯ ಇಂಗಿತವನ್ನು ಅವಲಂಬಿಸದೆ, ತಮಗೆ ಸರಿಬಂದ ರೀತಿಯಲ್ಲಿ ವಿಲೇವಾರಿ ಮಾಡಬಹುದಾದ ಪರಿಪೂರ್ಣ ಸ್ವಾತಂತ್ರ್ಯದ ಸ್ಥಿತಿ.

'ಅದು ಸಮಾನತೆಯ ಸ್ಥಿತಿಯೂ ಹೌದು, ಅದರಲ್ಲಿ ಎಲ್ಲ ಅಧಿಕಾರ ಮತ್ತು ವ್ಯಾಪ್ತಿಗಳು ಪರಸ್ಪರವಾಗಿರುತ್ತವೆ, ಮತ್ತು ಯಾರೊಬ್ಬನೂ ಬೇರೆಯವರಿಗಿಂತ ಹೆಚ್ಚಿನದನ್ನು ಹೊಂದಿರದ ಸ್ಥಿತಿ; ಅದು ಪ್ರಕೃತಿಯ ಅನುಕೂಲಗಳಿಗೊಳಪಟ್ಟು ಅವ್ಯವಸ್ಥಿತ ರೀತಿಯಲ್ಲಿ ಹುಟ್ಟಿದ, ಮತ್ತು ಒಂದೇ ಬಗೆಯ ಸಾಮರ್ಥ್ಯಗಳನ್ನು ಬಳಸುವ ಒಂದೇ ಜೀವಜಾತ ಮತ್ತು ಒಂದೇ ಹಂತದ ಜೀವಿಗಳು ಇತರರ ಅಧೀನತೆಗೋ ವಿಧೇಯತೆಗೋ ಒಳಪಡದೆ ತಮ್ಮತಮ್ಮಲ್ಲಿ ಸಮಾನರಾಗಿರುವ ಸ್ಥಿತಿ; ತಮ್ಮೆಲ್ಲರ ಪ್ರಭುವೂ ಯಜಮಾನನೂ ಆದವನು ಸ್ಪಷ್ಟವಾದ ರೀತಿಯಲ್ಲಿ ತೋರಿಸಿಕೊಂಡು ಒಬ್ಬರನ್ನು ಇನ್ನೊಬ್ಬರ ವಿರುದ್ಧ ನಿಲ್ಲಿಸಿ, ಅವನಿಗೆ ಸ್ಪಷ್ಟವೂ ಖಚಿತವೂ ಆದ ಆಜ್ಞೆಯಿಂದ ಸಂದೇಹಾತೀತ ಹಕ್ಕುಗಳನ್ನೂ ಅಧಿಕಾರವನ್ನೂ ಸ್ಥಾಪಿಸುವವರೆಗೂ ಇರುವ ಸ್ಥಿತಿ.

'ಆದರೆ ಈ (ಪ್ರಕೃತಿ ಸ್ಥಿತಿಯು) ಸ್ವಾತಂತ್ರ್ಯದ ಸ್ಥಿತಿಯಾದರೂ, ಅದು ಸ್ವೇಚ್ಛೆಯ ಸ್ಥಿತಿಯಲ್ಲ: ಆ ಸ್ಥಿತಿಯಲ್ಲಿ ಜನರಿಗೆ ತಮ್ಮ ವಸ್ತುಗಳನ್ನೋ ವ್ಯಕ್ತಿಗಳನ್ನೂ ಬೇಕಾದಂತೆ ವಿಲೇವಾರಿ ಮಾಡುವ ಸ್ವಾತಂತ್ರ್ಯವಿದ್ದರೂ, ತನ್ನ ಕೇವಲ ಇರುವಿಕೆಗಿಂತ ಹೆಚ್ಚಿನ ಉದಾತ್ತ ಕಾರಣಗಳ ಹೊರತು, ಅವನಿಗೆ ತನ್ನನ್ನಾಗಲೀ ತನ್ನ ವಶದಲ್ಲಿರುವ ಬೇರಾವ ಜೀವಿಯನ್ನಾಗಲೀ ನಾಶಪಡಿಸುವ ಸ್ವಾತಂತ್ರವಿರುವುದಿಲ್ಲ, ಪ್ರಕೃತಿ ಸ್ಥಿತಿಯಲ್ಲಿ ಪ್ರಕೃತಿನಿಯಮಗಳಿರುತ್ತವೆ, ಅದು ಎಲ್ಲರನ್ನೂ ಪರಿಗಣಿಸುತ್ತದೆ; ನಿಯಮವೇ ಆದ ವಿಚಾರವಂತಿಕೆಯು, ಅದಕ್ಕನುಗುಣವಾಗಿ ನಡೆಯುವ ಪ್ರತಿಯೊಬ್ಬನಿಗೆ, ಸಮಾನವೂ ಅನವಲಂಬಿಗಳೂ ಆಗಿರುವುದನ್ನೂ, ತನ್ನ ಜೀವಮಾನದಲ್ಲಿ ಒಬ್ಬನು ಇನ್ನೊಬ್ಬನ ಬದುಕು, ಆರೋಗ್ಯ, ಸ್ವಾಮರ್ಥ್ಯ ಅಥವಾ ಆಸ್ತಿಗೆ ಹಾನಿಮಾಡದಿರುವುದನ್ನೂ ಕಲಿಸುತ್ತದೆ.'[೨೬೪] (ಯಾಕೆಂದರೆ ನಾವೆಲ್ಲರೂ ದೇವರ ಆಸ್ತಿ).[೨೬೫]

---

೨೬೪. ನೋಡಿ, ಸ್ವಾತಂತ್ರ್ಯ ಘೋಷಣೆ (ದ ಡಿಕ್ಲರೇಷನ್ ಆಫ್ ಇಂಡಿಪೆಂಡೆನ್ಸ್)

೨೬೫. 'ಅವರು ದೇವರ ಆಸ್ತಿ, ಅವರು ಅವನ ಕೈಚಳಕದಿಂದಾದವರು, ತನ್ನ ಸಂತೋಷಕ್ಕಾಗಿ, ಬೇರೆಯವನದಲ್ಲ, ಬದುಕಿರಲು ಸೃಷ್ಟಿತನಾದವನು.'

ಬಹುತೇಕ ಜನರು ಪ್ರಕೃತಿ ಸ್ಥಿತಿಗನುಸಾರವಾಗಿ ಬದುಕಿದರೂ, ಕೆಲವರು ಅದರಂತೆ ನಡೆದುಕೊಳ್ಳುತ್ತಿಲ್ಲವೆಂದೂ, ಪ್ರಕೃತಿ ಸ್ಥಿತಿಯು ಸ್ವಲ್ಪ ಮಟ್ಟಿಗೆ ಅಂತಹ ಅಪರಾಧಿಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸುವಂತೆಯೂ ತೋರಬಹುದು, ಪ್ರಕೃತಿ ಸ್ಥಿತಿಯು ತನ್ನನ್ನು ಮತ್ತು ತನ್ನದನ್ನು ಕಾಪಾಡಿಕೊಳ್ಳಬಹುದು. 'ಮಾನವ ನೆತ್ತರನ್ನು ಯಾರೇ ಹರಿಸಲಿ, ಅಂತಹವನ ನೆತ್ತರನ್ನು ಮನುಷ್ಯನೇ ಹರಿಸುತ್ತಾನೆ' ಎಂಬುದು ಪ್ರಕೃತಿ ನಿಯಮದ ಭಾಗ. ನನ್ನ ಆಸ್ತಿಯನ್ನು ಕದಿಯುತ್ತಿರುವ ಕಳ್ಳನನ್ನು ನಾನು ಕೊಲ್ಲಲೂಬಹುದು, ಸರ್ಕಾರವಿರುವ ಕಡೆ ಕಳ್ಳನು ತಪ್ಪಿಸಿಕೊಂಡರೂ ನಾನು ಸ್ವಂತ ದ್ವೇಷವನ್ನು ಬದಿಗಿರಿಸಿ ನಿಯಮಕ್ಕೆ ಬದ್ಧವಾಗಿರಬೇಕಾದರೂ, ಈ ಹಕ್ಕು ಆಡಳಿತ ಸರ್ಕಾರದಲ್ಲಿಯೂ ಉಳಿಯುತ್ತದೆ.

ಪ್ರಕೃತಿ ಸ್ಥಿತಿಗಿರುವ ದೊಡ್ಡ ಆಕ್ಷೇಪಣೆಯೆಂದರೆ, ತನ್ನದೇ ಕಾರಣದಿಂದ ಪ್ರತಿ ವ್ಯಕ್ತಿಗೂ ತೀರ್ಮಾನ ಕೈಗೊಳ್ಳುವ ಹಕ್ಕಿರುತ್ತದೆ ಎಂದು ಪ್ರತಿಪಾದಿಸಿದರೂ, ತನ್ನ ಹಕ್ಕುಗಳ ರಕ್ಷಣೆಗಾಗಿ ಅವನು ತನ್ನನ್ನೇ ಅವಲಂಬಿಸಿರಬೇಕು ಎಂಬುದು. ಈ ಕೆಡುಕಿಗೆ, ಸರ್ಕಾರವೇ ಮದ್ದು, ಆದರಿದು ಪ್ರಕೃತಿಸಿದ್ಧ ಮದ್ದು ಅಲ್ಲ. ಲಾಕ್‌ನ ಪ್ರಕಾರ, ಒಪ್ಪಂದವು ಸರ್ಕಾರವನ್ನು ಹೊಂದಲೋಸುಗ ಪ್ರಕೃತಿ ಸ್ಥಿತಿಯನ್ನು ತಪ್ಪಿಸಿಕೊಂಡಿತು. ಯಾವುದಾದರೂ ಒಪ್ಪಂದವು, ರಾಜ್ಯವನ್ನು ಸೃಷ್ಟಿಸುವುದರ ಹೊರತಾಗಿ, ಪ್ರಕೃತಿ ಸ್ಥಿತಿಯನ್ನು ಕೊನೆಗೊಳಿಸಲಾರದು. ಸ್ವತಂತ್ರ ರಾಜ್ಯಗಳ ವಿವಿಧ ಸರ್ಕಾರಗಳು ಈಗ ಪರಸ್ಪರವಾಗಿ ಪ್ರಕೃತಿ ಸ್ಥಿತಿಯಲ್ಲಿವೆ.

ಹಾಬ್ಸ್ ವಿರುದ್ಧವಾಗಿ ರಚಿತವಾಗಿರಬಹುದಾದ ಭಾಗವೊಂದರಲ್ಲಿ, ಪ್ರಕೃತಿ ಸ್ಥಿತಿಯು ಯುದ್ಧ ಸ್ಥಿತಿಯಲ್ಲ, ಬಹುತೇಕ ಅದಕ್ಕೆ ವಿರುದ್ಧವಾದ ಸ್ಥಿತಿ ಎನ್ನುತ್ತಾನೆ. ಕಳ್ಳನು ತನ್ನ ವಿರುದ್ಧ ಯುದ್ಧ ಹೂಡಿರುವನೆಂದು ಭಾವಿಸಿ ಅವನನ್ನು ಕೊಲ್ಲುವ ಹಕ್ಕಿನ ಬಗ್ಗೆ ವಿವರಿಸಿದ ಬಳಿಕ ಲಾಕ್ ಹೀಗೆನ್ನುತ್ತಾನೆ:

'ಇಲ್ಲಿ "ಪ್ರಕೃತಿ ಸ್ಥಿತಿ ಮತ್ತು ಯುದ್ಧ ಸ್ಥಿತಿಗಳ ನಡುವಣ ವ್ಯತ್ಯಾಸ"ದ ಸ್ಪಷ್ಟತೆ ಕಾಣಿಸುತ್ತದೆ; ಕೆಲವರು ಇದನ್ನು ಎಷ್ಟು ದೂರವೆಂದರೆ ಶಾಂತಿ, ಸೌಹಾರ್ದ, ಪರಸ್ಪರ ಸಹಾಯ ಮತ್ತು ರಕ್ಷಣೆಯ ಸ್ಥಿತಿಯ ಬದಲಿಗೆ ಮತ್ತು ದ್ವೇಷ ಸ್ಥಿತಿ, ಕಿಡಿಗೇಡಿತನ ಮತ್ತು ಪರಸ್ಪರ ವಿನಾಶ ಎನ್ನುವವರೆಗೂ, ಗೊಂದಲಗೊಳಿಸಿದ್ದಾರೆ.'

ಪ್ರಕೃತಿ ನಿಯಮವನ್ನು ಪ್ರಕೃತಿ ಸ್ಥಿತಿಗಿಂತ ತುಂಬ ವ್ಯಾಪಕತೆ ಹೊಂದಿದೆಯೆಂದು ಪ್ರಾಯಶಃ ಪರಿಗಣಿಸಬೇಕು; ಏಕೆಂದರೆ ಮೊದಲನೆಯದು ಕಳ್ಳರು ಮತ್ತು ಕೊಲೆಗಡುಕರಿಗೆ ಸಂಬಂಧಿಸಿದ್ದರೆ, ಎರಡನೆಯದರಲ್ಲಿ ಅಂತಹ ವೈಷಮ್ಯಗಳೇ ಇರುವುದಿಲ್ಲ. ಇದು ಪ್ರಕೃತಿ ಸ್ಥಿತಿಯಲ್ಲಿ ಎಲ್ಲರೂ ಸನ್ನಡತೆಯವರು ಮತ್ತು ಇತರ ಸಂದರ್ಭಗಳಲ್ಲಿ ಪ್ರಕೃತಿ ಸ್ಥಿತಿಯಲ್ಲಿ ಮನುಷ್ಯರ ಆಕ್ರಮಣಶೀಲತೆಯನ್ನು ತಡೆಗಟ್ಟಲು ಏನು ಮಾಡಬಹುದು ಎನ್ನುವ ಚರ್ಚೆಗಳ ನಡುವಣ ಲಾಕ್‌ನ ಸಿದ್ಧಾಂತದ

ಮೇಲ್ನೋಟದ ಅಸಾಂಗತ್ಯವನ್ನು ದೂರಮಾಡಬಹುದಾದುದನ್ನು ಸೂಚಿಸುತ್ತದೆ.

ಲಾಕ್ ಪ್ರಕೃತಿ ನಿಯಮಗಳನ್ನು ವಿವರಿಸುವ ಕೆಲವು ಭಾಗಗಳು ಅಚ್ಚರಿಯನ್ನು ಹುಟ್ಟಿಸುತ್ತವೆ. ಉದಾಹರಣೆಗೆ, ನ್ಯಾಯಯುತವಾದ ಯುದ್ಧದಲ್ಲಿ ಸೆರೆಸಿಕ್ಕವರು ಪ್ರಕೃತಿ ನಿಯಮಕ್ಕನುಗುಣವಾಗಿ ತೊತ್ತುಗಳಾಗುತ್ತಾರೆ ಎನ್ನುತ್ತಾನೆ. ಅಲ್ಲದೆ ಪ್ರತಿ ವ್ಯಕ್ತಿಗೂ ತನ್ನ ಮತ್ತು ತನ್ನ ಆಸ್ತಿಯ ಮೇಲಾಗುವ ಆಕ್ರಮಣದಿಂದ, ಕೊಂದಾದರೂ, ರಕ್ಷಿಸಿಕೊಳ್ಳುವ ಪ್ರಕೃತಿಸಿದ್ಧ ಹಕ್ಕು ಇರುತ್ತದೆ ಎಂದೂ ಹೇಳುತ್ತಾನೆ. ಇದಕ್ಕೆ ಅವನು ಯಾವುದೇ ವಿಶೇಷಣಗಳನ್ನು ಜೋಡಿಸುವುದಿಲ್ಲ, ಹೀಗಾಗಿ ನನ್ನ ಕೊಂಚ ಹಣವನ್ನು ಯಾರಾದರೂ ಕದಿಯುತ್ತಿದ್ದರೆ ಅವನನ್ನು ಗುಂಡಿಕ್ಕಿಕೊಲ್ಲುವ ಹಕ್ಕು ಪ್ರಕೃತಿ ನಿಯಮವಾಗಿಬಿಡುತ್ತದೆ.

ಲಾಕ್‌ನ ರಾಜಕೀಯ ತತ್ವಜ್ಞಾನದಲ್ಲಿ ಆಸ್ತಿ ಬಹು ಮುಖ್ಯ ವಿಷಯವಾಗುತ್ತದೆ, ಮತ್ತದು ಅವನ ಪ್ರಕಾರ, ನಾಗರಿಕ ಸರ್ಕಾರದ ರಚನೆಗಿರುವ ಬಹು ಮುಖ್ಯ ಕಾರಣ.

'ಜನರು ಪ್ರಜಾರಾಜ್ಯ ಸ್ಥಾಪನೆ ಮಾಡಿಕೊಳ್ಳುವುದು ಮತ್ತು ತಾವು ಸರ್ಕಾರಕ್ಕೆ ಅಧೀನವಾಗಿರುವುದಕ್ಕೆ ಮುಖ್ಯವೂ ಮಹತ್ವದ್ದೂ ಆದ ಕಾರಣವೆಂದರೆ, ತಮ್ಮ ಆಸ್ತಿಗಳ ಸಂರಕ್ಷಣೆ; ಪ್ರಕೃತಿ ಸ್ಥಿತಿಯಲ್ಲಿ ಇದರ ಬಗ್ಗೆ ಅನೇಕ ಅಂಶಗಳ ಕೊರತೆಯಿದೆ.'

ಪ್ರಕೃತಿ ಸ್ಥಿತಿ ಮತ್ತು ಪ್ರಕೃತಿ ನಿಯಮಗಳ ಇಡೀ ಸಿದ್ಧಾಂತವು ಒಂದರ್ಥದಲ್ಲಿ ಸ್ಪಷ್ಟವಾಗಿದ್ದರೂ, ಮತ್ತೊಂದು ರೀತಿಯಲ್ಲಿ ಗೊಂದಲಮಯವಾಗಿದೆ. ಲಾಕ್‌ನ ಆಲೋಚನೆ ಎಂತಹುದು ಎಂಬುದು ಸ್ಪಷ್ಟವಾದರೂ, ಅದರ ಬಗ್ಗೆ ಹೀಗೇಕೆ ಆಲೋಚನೆ ಮಾಡುತ್ತಾನೆ ಎಂಬುದು ಸ್ಪಷ್ಟವಾಗುವುದಿಲ್ಲ. ಈಗಾಗಲೇ ನೋಡಿರುವಂತೆ, ಲಾಕ್‌ನ ನೈತಿಕತೆಯು ಪ್ರಯೋಜನವಾದಿಯಾದುದು, ಆದರೆ 'ಹಕ್ಕುಗಳ' ಬಗ್ಗೆ ಕೇಂದ್ರೀಕರಿಸುವುದರಲ್ಲಿ ಪ್ರಯೋಜನವಾದಿ ಪರಿಗಣನೆ ಕಾಣುವುದಿಲ್ಲ. ಇಂಥದು ವಕೀಲರು ಕಲಿಸಿಕೊಡುವ ನ್ಯಾಯದ ಬಗೆಗಿನ ಇಡೀ ತಾತ್ವಿಕತೆಯಲ್ಲಿ ವ್ಯಾಪಕವಾಗಿದೆ. ಕಾನೂನುಬದ್ಧ ಹಕ್ಕುಗಳನ್ನು ಸ್ಥೂಲವಾಗಿ, ತನಗಾದ ಅಪಚಾರದ ವಿರುದ್ಧವಾಗಿ ತನ್ನನ್ನು ರಕ್ಷಿಸುವಂತೆ ಕಾನೂನಿಗೆ ಮನವಿ ಮಾಡಿಕೊಳ್ಳಬಹುದಾದ ವ್ಯಕ್ತಿಯ ಕಾನೂನುಬದ್ಧ ಹಕ್ಕು ಎಂದು ಸೂತ್ರೀಕರಿಸಿ ಹೇಳಬಹುದು. ವ್ಯಕ್ತಿಗೆ ತನ್ನ ಆಸ್ತಿಯ ಬಗ್ಗೆ ಕಾನೂನುಬದ್ಧ ಹಕ್ಕಿರುತ್ತದೆ, ಆದರೆ ಅವನು ಅದನ್ನು ಅಕ್ರಮ ಕೊಕೇನ್ ಸಂಗ್ರಹದ ರೂಪದಲ್ಲಿ ಹೊಂದಿದ್ದರೆ, ಅದನ್ನು ಕಳ್ಳತನ ಮಾಡಿದವನ ವಿರುದ್ಧ ಒಡೆಯನಿಗೆ ಯಾವುದೇ ಕಾನೂನುಬದ್ಧ ಹಕ್ಕು ಇರುವುದಿಲ್ಲ. ಆದರೆ ಎಂತಹ ಕಾನೂನುಬದ್ಧ ಹಕ್ಕುಗಳನ್ನು ಮಾಡಬೇಕು ಎಂಬುದನ್ನು ನಿರ್ಧರಿಸುವವರು ಶಾಸನಕರ್ತರು, ಮತ್ತು ಯಾವುದನ್ನು ಕಾನೂನು ರಕ್ಷಿಸಬೇಕು ಎಂಬ ವಿಷಯದಲ್ಲಿ ಇದು ಸಹಜವಾಗಿಯೇ 'ಪ್ರಕೃತಿ' ಹಕ್ಕುಗಳ ಮೇಲೆ ವಾಲಿಕೊಳ್ಳುತ್ತದೆ.

ಲಾಕ್‌ನ ಸಿದ್ಧಾಂತವನ್ನು ಸಾಧ್ಯವಾದಷ್ಟು ಮಟ್ಟಿಗೂ ಮತಧರ್ಮಶಾಸ್ತ್ರೇತರ ಮಾತುಗಳಲ್ಲಿ ನಿರೂಪಿಸುವ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ನೈತಿಕತೆ ಮತ್ತು ಕ್ರಿಯೆಗಳ 'ಸರಿ' ಮತ್ತು 'ತಪ್ಪು' ಎಂಬ ವರ್ಗೀಕರಣಗಳು ವಾಸ್ತವ ಕಾನೂನಿಗೆ ಮೊದಲು ಎಂದು ತಾರ್ಕಿಕವಾಗಿ ಭಾವಿಸಿದರೆ, ಆಗ ಯಾವುದೇ ಪೌರಾಣಿಕ ಚರಿತ್ರೆಯನ್ನು ಆಧರಿಸದೆಯೇ ಈ ಸಿದ್ಧಾಂತವನ್ನು ಪುನರ್ಮಂಡನೆ ಮಾಡುವುದು ಸಾಧ್ಯವಾಗುತ್ತದೆ. ಪ್ರಕೃತಿ ನಿಯಮದತ್ತ ಬರಬೇಕಾದರೆ ನಾವು ಪ್ರಶ್ನೆಯನ್ನು ಹೀಗೆ ಕೇಳಬಹುದು: ಯಾವುದೇ ಕಾನೂನು ಮತ್ತು ಸರ್ಕಾರಗಳಿಲ್ಲದೆ ಇರುವಾಗ, 'ಬಿ'ಯು 'ಎ'ಯ ವಿರುದ್ಧ ಸೇಡು ತೀರಿಸಿಕೊಳ್ಳುವುದನ್ನು 'ಬಿ' ವಿರುದ್ಧವಾಗಿ 'ಎ'ಯನ್ನು ಯಾವ ಬಗೆಯ ವಿಧಿಗಳು ಸಮರ್ಥಿಸುತ್ತವೆ, ಮತ್ತು ವಿವಿಧ ಸಂದರ್ಭಗಳಲ್ಲಿ ಯಾವ ಬಗೆಯ ಪ್ರತೀಕಾರಗಳು ಸಮರ್ಥನೀಯ? ತನ್ನ ಮೇಲೆ ಮಾರಣಾಂತಿಕ ಹಲ್ಲೆ ನಡೆದಾಗ, ಅದನ್ನು ತಡೆಯಲು, ಆವಶ್ಯಕವಾದರೆ, ಹಲ್ಲೆಕೋರನನ್ನು ಕೊಂದರೂ ಅಂತಹ ವ್ಯಕ್ತಿಯನ್ನು ತೆಗಳಲಾಗುವುದಿಲ್ಲ ಎಂಬುದು ಸಾಮಾನ್ಯ ತಿಳಿವಳಿಕೆ. ಹಾಗೆಯೇ ಅವನು ತನ್ನ ಹೆಂಡಿರು ಮಕ್ಕಳನ್ನೂ, ಅಥವಾ ಯಾವುದೇ ಸಾರ್ವಜನಿಕನನ್ನು ಕಾಪಾಡಬಹುದು. ಅಂತಹ ಸಂದರ್ಭಗಳಲ್ಲಿ, ಮತ್ತು ಸುಲಭವಾಗಿ ಸಂಭವಿಸಬಹುದಾದಂತೆ, ಹಲ್ಲೆಗೊಳಗಾದ ವ್ಯಕ್ತಿಯು ಪೋಲೀಸರು ಬರುವ ಮುಂಚೆಯೇ ಸತ್ತರೆ, ಆಗ ಕೊಲೆಯ ವಿರುದ್ಧದ ಕಾನೂನು ಅಸಂಗತವಾಗುತ್ತದೆ. ಹೀಗಾಗಿ, ನಾವು 'ಪ್ರಕೃತಿಸಿದ್ಧ' ಹಕ್ಕಿನ ಕಡೆ ವಾಲಬೇಕಾದ್ದಿಲ್ಲ. ವ್ಯಕ್ತಿಗೆ ತನ್ನ ಆಸ್ತಿಯನ್ನು ಜೋಪಾನ ಮಾಡಿಕೊಳ್ಳುವ ಹಕ್ಕು ಇರುತ್ತದೆ, ಆದರೆ ಅವನು ಕಳ್ಳನನ್ನು ಎಷ್ಟರ ಮಟ್ಟಿಗೆ ಗಾಯಗೊಳಿಸಬಹುದು ಎಂಬುದರ ಕುರಿತ ಅಭಿಪ್ರಾಯಗಳು ವ್ಯತ್ಯಾಸಗೊಳ್ಳುತ್ತವೆ.

ರಾಜ್ಯಗಳ ನಡುವಣ ಸಂಬಂಧವನ್ನು ಕುರಿತಂತೆ, 'ಪ್ರಕೃತಿಸಿದ್ಧ' ನಿಯಮವೇ ಶ್ರೇಷ್ಠ ಎಂದು ಲಾಕ್ ಹೇಳುತ್ತಾನೆ. ಎಂತಹ ಸಂದರ್ಭಗಳಲ್ಲಿ ಯುದ್ಧವು ಸಮರ್ಥನೀಯ? ಅಂತಾರಾಷ್ಟ್ರೀಯ ಸರ್ಕಾರವೊಂದು ಸ್ಥಾಪಿತವಾಗುವವರೆಗೂ, ಈ ಪ್ರಶ್ನೆಗೆ ನೀಡಬಹುದಾದ ಉತ್ತರ, ಶುದ್ಧ ನೈತಿಕ ಸ್ವರೂಪದ್ದೇ ಹೊರತು ಕಾನೂನುಬದ್ಧವಲ್ಲ. ಅದಕ್ಕೆ ಉತ್ತರವು ಅನಾಯಕತ್ವದಲ್ಲಿ ಬದುಕುವ ವ್ಯಕ್ತಿಯೊಬ್ಬನು ನೀಡುವ ರೀತಿಯಲ್ಲಿಯೇ ಇರುತ್ತದೆ.

ಕಾನೂನು ಸಿದ್ಧಾಂತವು, ವ್ಯಕ್ತಿಗಳ 'ಹಕ್ಕುಗಳ'ನ್ನು ಸರ್ಕಾರವು ರಕ್ಷಿಸಬೇಕು ಎಂಬ ದೃಷ್ಟಿಕೋನವನ್ನು ಆಧರಿಸಿರುತ್ತದೆ. ಅಂದರೆ ಯಾವುದೇ ವ್ಯಕ್ತಿಗೆ ಉಂಟಾಗುವ ತೊಂದರೆಗೆ ಸೇಡುತೀರಿಸಿಕೊಳ್ಳುವುದು ಪ್ರಕೃತಿ ನಿಯಮಗಳಿಗನುಸಾರವಾಗಿ ಸಮರ್ಥನೀಯವೋ ಅಂತಹ ಸಂದರ್ಭಗಳಲ್ಲಿ, ಪ್ರತೀಕಾರವನ್ನು ಸರ್ಕಾರ ಮಾಡಬೇಕು ಎಂಬ ವಿಧಿಬದ್ಧ ಕಾನೂನು ಆಗಬೇಕು. ನಿಮ್ಮ ಸೋದರನ ಮೇಲೆ

ಯಾವನೋ ಒಬ್ಬನು ಮಾರಣಾಂತಿಕ ಹಲ್ಲೆಯನ್ನು ನಡೆಸುವ ಸಂದರ್ಭದಲ್ಲಿ, ಬೇರೆ ರೀತಿಯಲ್ಲಿ ನಿಮ್ಮ ಸೋದರನನ್ನು ರಕ್ಷಿಸಲಾರದೆ ಹೋದರೆ, ನಿಮಗೆ ಅವನನ್ನು ಕೊಲ್ಲುವ ಹಕ್ಕಿರುತ್ತದೆ. ಪ್ರಕೃತಿ ಸ್ಥಿತಿಯಲ್ಲಿ – ಕನಿಷ್ಠ ಪಕ್ಷ, ಲಾಕ್ ಹೇಳುವುದೆಂದರೆ – ನಿಮ್ಮ ಸೋದರನನ್ನು ಆ ವ್ಯಕ್ತಿಯು ಕೊಲ್ಲುವುದರಲ್ಲಿ ಸಫಲನಾದರೆ, ಅವನನ್ನು ಕೊಲ್ಲುವ ಹಕ್ಕು ನಿಮಗೂ ಬರುತ್ತದೆ. ಆದರೆ ಕಾನೂನು ಅಸ್ತಿತ್ವದಲ್ಲಿರುವ ಕಡೆ, ನಿಮಗೆ ಈ ಹಕ್ಕು ಇರದೆ, ಅದನ್ನು ಸರ್ಕಾರವು ತಾನು ತೆಗೆದುಕೊಳ್ಳುತ್ತದೆ. ನೀವು ಸ್ವರಕ್ಷಣೆಗಾಗಿಯೋ ಬೇರೊಬ್ಬನನ್ನು ಉಳಿಸುವುದಕ್ಕಾಗಿಯೋ ಕೊಂದರೆ, ಕೊಲ್ಲುವುದಕ್ಕೆ ಇದೇ ಕಾರಣ ಎಂದು ನೀವು ನ್ಯಾಯಾಲಯದಲ್ಲಿ ಸಾಬೀತುಪಡಿಸಬೇಕು.

ಆಗ ನಾವು 'ಪ್ರಕೃತಿ ನಿಯಮ'ವನ್ನು ನೈತಿಕ ನಿಯಮಗಳೊಡನೆ, ಅವು ಎಲ್ಲಿಯವರೆಗೆ ವಿಧಿಬದ್ಧ ಕಾನೂನು ವ್ಯಾಪ್ತಿಗೆ ಬರುವುದಿಲ್ಲವೋ ಅಷ್ಟರ ಮಟ್ಟಿಗೆ, ಸಮೀಕರಿಸಬಹುದು. ಒಳ್ಳೆಯ ಮತ್ತು ಕೆಟ್ಟ ಕಾನೂನುಗಳ ನಡುವೆ ವ್ಯತ್ಯಾಸವಿರಬೇಕಾದರೆ ಅಂತಹ ನಿಯಮಗಳಿರಬೇಕು. ಲಾಕ್‌ನ ದೃಷ್ಟಿಯಲ್ಲಿ, ವಿಷಯವು ಸರಳವಾದುದು, ಯಾಕೆಂದರೆ ನೈತಿಕ ನಿಯಮಗಳನ್ನು ದೇವರೇ ಹಾಕಿಕೊಟ್ಟಿದ್ದಾನೆ, ಅಂತಹವುಗಳನ್ನು ಬೈಬಲ್‌ನಲ್ಲಿ ಕಾಣಬಹುದು. ಈ ಮತಧಾರ್ಮಿಕ ತಳಹದಿಯನ್ನು ಕಿತ್ತು ಹಾಕಿದರೆ, ವಿಷಯವು ಮತ್ತಷ್ಟು ಗೋಜಲಿನದಾಗುತ್ತದೆ. ಸರಿ ಮತ್ತು ತಪ್ಪು ಕ್ರಿಯೆಗಳ ನಡುವೆ ನೈತಿಕ ವ್ಯತ್ಯಾಸವಿರುತ್ತದೆ ಎಂಬುದನ್ನು ಒಪ್ಪಿಕೊಳ್ಳುವ ಮಟ್ಟಿಗೆ, ನಾವು ಹೇಳಬಹುದಾದುದು: ಸರ್ಕಾರವೇ ಇಲ್ಲದ ಸಮಾಜದಲ್ಲಿ ಯಾವ ಕ್ರಿಯೆಗಳು ನೈತಿಕವಾಗಿ ಸರಿ ಮತ್ತು ಯಾವುವು ತಪ್ಪು ಎಂಬುದನ್ನು ಪ್ರಕೃತಿ ನಿಯಮಗಳು ತೀರ್ಮಾನಿಸುತ್ತವೆ. ಅಲ್ಲದೆ ವಿಧಿಬದ್ಧ ಕಾನೂನುಗಳಿಗೆ ಸಾಧ್ಯವಾದ ಮಟ್ಟಿಗೂ ಪ್ರಕೃತಿಸಿದ್ಧ ನಿಯಮಗಳು ಮಾರ್ಗದರ್ಶಕ ಹಾಗೂ ಪ್ರೇರಕವಾಗಿರಬೇಕು.

ತನ್ನ ಆತ್ಯಂತಿಕ ಸ್ವರೂಪದಲ್ಲಿ, ವ್ಯಕ್ತಿಗೆ ಕೆಲವು ವರ್ಗಾಯಿಸಲಾಗದ ಹಕ್ಕುಗಳಿರುತ್ತವೆ ಎಂಬ ಸಿದ್ಧಾಂತವು ಪ್ರಯೋಜನವಾದಕ್ಕೆ, ಅಂದರೆ ಸರಿಯಾದ ಕ್ರಿಯೆಗಳೆಂದರೆ ಸಾರ್ವತ್ರಿಕ ಸುಖವನ್ನುಂಟುಮಾಡುವಂತಹವು ಎಂಬ ಸಿದ್ಧಾಂತಕ್ಕೆ ವ್ಯತಿರಿಕ್ತವಾದುದು. ಸಿದ್ಧಾಂತವೊಂದು ಸಾರ್ವತ್ರಿಕ ಕಾನೂನಿಗೆ ಸೂಕ್ತ ತಳಹದಿಯಾಗಬೇಕಾದರೆ, ಅದು ಎಲ್ಲ ಸಾಧ್ಯ ರೀತಿಗಳಲ್ಲಿಯೂ ಸತ್ಯವಾಗಿರಬೇಕು ಎಂಬುದು ಆವಶ್ಯಕವಲ್ಲ, ಆದರೆ ಬಹುಪಾಲು ಸಂದರ್ಭಗಳಲ್ಲಿ ಸತ್ಯವಾಗಿರಬೇಕು. ಕೊಲ್ಲುವುದು ಯಾವ ಸಂದರ್ಭಗಳಲ್ಲಿ ಸಮರ್ಥನೀಯ ಎಂಬುದನ್ನು ನಾವೆಲ್ಲ ಊಹಿಸಿಕೊಳ್ಳಬಹುದು, ಆದರೆ ಅಂತಹವು ಕೆಲವು ಮಾತ್ರ, ಅವು ಯಾವುವೂ ಕೊಲೆಯ ಕಾನೂನುಬಾಹಿರತೆಯ ವಿರುದ್ಧದ ವಾದವಾಗುವುದಿಲ್ಲ. ಹಾಗೆಯೇ, ಪ್ರತಿಯೊಬ್ಬ ವ್ಯಕ್ತಿಗೂ ಸ್ವಲ್ಪ ಮಟ್ಟಿಗಿನ ವೈಯಕ್ತಿಕ ಸ್ವಾತಂತ್ರ್ಯವನ್ನುಳಿಸುವ

ಪ್ರಯೋಜನವಾದಿ ದೃಷ್ಟಿಯಲ್ಲಿ, ಅಪೇಕ್ಷಣಿಯವಾಗಿರಬಹುದು, ಆಗಿರುತ್ತದೆ ಎಂದು ನಾನು ಹೇಳುತ್ತಿಲ್ಲ. ಹಾಗಾದರೆ, ಮಾನವ ಹಕ್ಕುಗಳ ಸಿದ್ಧಾಂತವು ಸೂಕ್ತ ಕಾನೂನುಗಳಿಗೆ ಸೂಕ್ತ ತಳಹದಿಯಾಗುತ್ತದೆ, ಆದರೆ ಇದಕ್ಕೂ ಕೆಲವು ಅಪವಾದಗಳಿರಬಹುದು. ಪ್ರಯೋಜನವಾದಿಯು, ವ್ಯಾವಹಾರಿಕ ಪ್ರಯೋಜನಗಳ ದೃಷ್ಟಿಯಿಂದ ಈ ಸಿದ್ಧಾಂತವು ಕಾನೂನುಗಳಿಗೆ ಹೇಗೆ ತಳಹದಿಯಾಗಬಹುದು ಎಂಬ ನೆಲೆಯಲ್ಲಿ ಪರಿಗಣಿಸಬೇಕು; ಅದು ಮೊದಲಿನಿಂದಲೂ ತನ್ನ ನೈತಿಕತೆಗೆ ವಿರುದ್ಧವಾದುದು ಎಂದು ಅದನ್ನು ಖಂಡಿಸಬಾರದು.

ಇ. ಸಾಮಾಜಿಕ ಒಪ್ಪಂದ

ಹದಿನೇಳನೆಯ ಶತಮಾನದ ರಾಜಕೀಯ ಚಿಂತನೆಗಳಲ್ಲಿ ಸರ್ಕಾರದ ಮೂಲದ ಬಗೆಗಿನ ಎರಡು ಮುಖ್ಯ ರೀತಿಗಳ ಸಿದ್ಧಾಂತಗಳಿದ್ದವು. ಒಂದು ರೀತಿಯದರಲ್ಲಿ ಸರ್ ರಾಬರ್ಟ್ ಫಿಲ್ಮರ್ ಒಂದು ನಿದರ್ಶನ: ಈ ಸಿದ್ಧಾಂತದ ಪ್ರಕಾರ ಕೆಲವು ವ್ಯಕ್ತಿಗಳಿಗೆ ವಿಶೇಷ ಅಧಿಕಾರವನ್ನು ದೇವರೇ ನೀಡಿದ್ದಾನೆ ಹಾಗೂ ಈ ವ್ಯಕ್ತಿಗಳು ಅಥವಾ ಅವರ ಉತ್ತರಾಧಿಕಾರಿಗಳು ನ್ಯಾಯಬದ್ಧ ಸರ್ಕಾರವೇ ಆಗಿರುತ್ತಾರೆ, ಅಂತಹವರ ವಿರುದ್ಧದ ಬಂಡಾಯವು ರಾಜದ್ರೋಹವಾಗುವುದಲ್ಲದೆ ಅನೈತಿಕವೂ ಆಗಿರುತ್ತದೆ. ಈ ದೃಷ್ಟಿಕೋನಕ್ಕೆ ಮೂಲವೇ ತಿಳಿಯದ ಪ್ರಾಚೀನತೆಯೇ ಸಮರ್ಥನೆ; ಬಹುತೇಕ ಎಲ್ಲ ನಾಗರಿಕತೆಗಳಲ್ಲಿಯೂ ರಾಜನು ದೇವಾಂಶಸಂಭೂತ. ಸಹಜವಾಗಿಯೇ ರಾಜರು ಅದನ್ನು ಸಮಂಜಸ ಸಿದ್ಧಾಂತವೆಂದು ಒಪ್ಪಿಕೊಂಡಿದ್ದರು. ಶ್ರೀಮಂತವರ್ಗಕ್ಕೆ ಅದನ್ನು ಬೆಂಬಲಿಸಲು ಹಾಗೂ ಅದನ್ನು ವಿರೋಧಿಸಲು ಉದ್ದೇಶಗಳಿದ್ದವು. ಅದರ ಪರವಾಗಿದ್ದ ಅಂಶವೆಂದರೆ, ಅದು ಆನುವಂಶೀಯತೆಗೆ ಒತ್ತು ನೀಡಿದ್ದು, ಮತ್ತು ದಿಢೀರ್ ಶ್ರೀಮಂತ ವ್ಯಾಪಾರಿಗಳ ವಿರುದ್ಧದ ಪ್ರತಿರೋಧಕ್ಕೆ ಘನತೆಯ ಬೆಂಬಲ ನೀಡಿದ್ದು. ಎಲ್ಲೆಲ್ಲಿ ಮಧ್ಯಮವರ್ಗದ ಬಗ್ಗೆ ಶ್ರೀಮಂತವರ್ಗ ಹಾಗೂ ರಾಜರುಗಳಿಗೆ ಭಯ ಅಥವಾ ದ್ವೇಷವಿತ್ತೋ ಅಂತಹ ಕಡೆಗಳಲ್ಲಿ ಇದು ಪ್ರಬಲವೆನಿಸಿತು. ಇದಕ್ಕೆ ವ್ಯತಿರಿಕ್ತವಾದ ಸಂದರ್ಭಗಳಲ್ಲಿ, ಅದರಲ್ಲಿಯೂ ಶ್ರೀಮಂತಪ್ರಭುತ್ವವು ಸಾರ್ವಭೌಮ ಅಧಿಕಾರ ಹೊಂದುವ ಸಂಭವವಿದ್ದೆಡೆಯಲ್ಲಿ, ಅದು ರಾಜನನ್ನು ವಿರೋಧಿಸಿತು, ಮತ್ತು ದೈವಿಕ ಅಧಿಕಾರದ ಸಿದ್ಧಾಂತವನ್ನು ವಿರೋಧಿಸುವ ಪ್ರವೃತ್ತಿಯನ್ನು ತೋರಿಸಿತು.

ಲಾಕ್ ಪ್ರತಿನಿಧಿಸುವ ಮತ್ತೊಂದು ಮುಖ್ಯವಾದ ಬಗೆಯ ಸಿದ್ಧಾಂತವು – ನಾಗರಿಕ ಸರ್ಕಾರವು ಒಂದು ಒಪ್ಪಂದದ ಫಲ, ಅದು ಸಂಪೂರ್ಣವಾಗಿ ಲೌಕಿಕವಾದುದೇ ಹೊರತು ದೈವಿಕ ಪ್ರಾಮಾಣ್ಯವು ಸ್ಥಾಪಿಸಿರುವಂತಹುದಲ್ಲ ಎಂದು ಪ್ರತಿಪಾದಿಸುತ್ತದೆ. ಸಾಮಾಜಿಕ ಒಪ್ಪಂದವನ್ನು ಕೆಲವು ಲೇಖಕರು ಒಂದು ಐತಿಹಾಸಿಕ

ಸತ್ಯವೆಂದು ಪರಿಗಣಿಸುತ್ತಾರೆ, ಮತ್ತೆ ಕೆಲವರು ನ್ಯಾಯಪುರಸ್ಕೃತ ಕಲ್ಪನೆಯನ್ನುತ್ತಾರೆ; ಮುಖ್ಯ ವಿಷಯವೆಂದರೆ, ಅವರೆಲ್ಲರಿಗೂ ಸರ್ಕಾರದ ಅಧಿಕಾರವು ಐಹಿಕ ಮೂಲವನ್ನು ಹೊಂದಿದೆ ಎಂಬುದನ್ನು ಕಂಡುಕೊಳ್ಳುವುದು. ವಾಸ್ತವವಾಗಿ, ಸಾಮಾಜಿಕ ಒಪ್ಪಂದದ ಹೊರತು ದೈವಿಕ ಅಧಿಕಾರಕ್ಕೆ ಬೇರಾವುದೆ ಪರ್ಯಾಯ ಸಿದ್ಧಾಂತವನ್ನು ಸೂಚಿಸುವುದಕ್ಕೆ ಅವರಿಗೆ ಸಾಧ್ಯವಾಗದೇ ಹೋದುದು. ಬಂಡಾಯಗಾರರನ್ನು ಬಿಟ್ಟು ಮಿಕ್ಕೆಲ್ಲರಿಗೂ ಸರ್ಕಾರಕ್ಕೆ ವಿಧೇಯವಾಗಿರಲು ಯಾವುದೋ ಒಂದು ಕಾರಣವನ್ನು ಕಂಡುಕೊಳ್ಳಬೇಕಾಗಿತ್ತು; ಬಹುತೇಕ ಜನಗಳಿಗೆ ಸರ್ಕಾರದ ಅಧಿಕಾರವು ಅನುಕೂಲಕರ ಎಂದಷ್ಟೇ ಹೇಳುವುದು ಸಾಕಾಗಲಿಲ್ಲ. ಒಂದರ್ಥದಲ್ಲಿ, ಸರ್ಕಾರಕ್ಕೆ ವಿಧೇಯತೆಯನ್ನು ಹೇರುವ ಅಧಿಕಾರ ಆವಶ್ಯಕ, ಮತ್ತು ಅದಕ್ಕಾಗಿ ಒಪ್ಪಂದವು ಅದನ್ನು ನೀಡಿತು ಎಂಬುದು ರಾಜರ ದೈವಿಕ ಅಧಿಕಾರಕ್ಕೆ ಇರುವ ಏಕೈಕ ಪರ್ಯಾಯವೆನಿಸಿತು. ಇದರ ಪರಿಣಾಮವಾಗಿ, ಸರ್ಕಾರವು ಒಡಂಬಡಿಕೆಯೊಂದರಿಂದ ಸ್ಥಾಪಿತವಾಯಿತು ಎಂಬ ಸಿದ್ಧಾಂತವು ದೈವಿಕ ಅಧಿಕಾರಕ್ಕೆ ವಿರುದ್ಧವಾಗಿದ್ದವರೆಲ್ಲರಲ್ಲಿ ಜನಪ್ರಿಯವಾಯಿತು. ಈ ಸಿದ್ಧಾಂತದ ಸೂಚನೆಯು ಸಂತ ಥಾಮಸ್ ಆಕ್ವಿನಾಸ್‌ನಲ್ಲಿಯೇ ಇದೆಯಾದರೂ ಅದರ ಮೊದಲ ಗಂಭೀರ ಮಂಡನೆಯಾದುದು ಗ್ರೀಷಿಯಸ್‌ನಿಂದ.

ಒಪ್ಪಂದ ಸಿದ್ಧಾಂತವು ನಿರಂಕುಶಾಧಿಕಾರವನ್ನು ಸಮರ್ಥಿಸುವ ಹಲವಾರು ರೂಪಗಳನ್ನು ಪಡೆಯುವ ಸಾಮರ್ಥ್ಯ ಹೊಂದಿದ್ದಿತು. ಉದಾಹರಣೆಗೆ, ಆಯ್ಕೆಗೊಂಡ ಸಾರ್ವಭೌಮನಿಗೆ ತಮ್ಮೆಲ್ಲ ಸಾಮರ್ಥ್ಯವನ್ನು ದತ್ತ ಮಾಡುವ ಒಪ್ಪಂದವು ಆಯಿತು, ಆದರೆ ಅದರಲ್ಲಿ ಸಾರ್ವಭೌಮನು ಭಾಗಿಯಾಗಿರಲಿಲ್ಲ, ಹೀಗಾಗಿ ಅನಿವಾರ್ಯವಾಗಿ ಅಪರಿಮಿತ ಅಧಿಕಾರವನ್ನು ಹೊಂದಿದ ಎಂದು ಹಾಬ್ಸ್ ಹೇಳಿದ. ಮೊದಲಿಗೆ ಈ ಸಿದ್ಧಾಂತವು ಕ್ರಾಮ್‌ವೆಲ್‌ನ ವಾಲ್ಟೇರ್ ಪ್ರಣೀತ ರಾಜ್ಯವನ್ನು (ವಾಲ್ಟೇರಿಯನ್ ಸ್ಟೇಟ್) ಸಮರ್ಥಿಸಿತು; ರಾಜತ್ವ ಪುನಃಸ್ಥಾಪನೆಯ ಬಳಿಕ ಅದು ಎರಡನೆಯ ಚಾರ್ಲ್ಸ್ ಅನ್ನು ಸಮರ್ಥಿಸಿತು. ಆದರೆ ಲಾಕ್ ಮಂಡಿಸಿದ ಈ ಸಿದ್ಧಾಂತದ ರೂಪದಲ್ಲಿ ಸರ್ಕಾರವೂ ಒಪ್ಪಂದದಲ್ಲಿ ಭಾಗಿ, ಮತ್ತು ಅದಕ್ಕನುಗುಣವಾಗಿ ನಡೆದುಕೊಳ್ಳದಿದ್ದರೆ ನ್ಯಾಯಯುತವಾಗಿಯೇ ಅದರ ವಿರುದ್ಧ ಪ್ರತಿಭಟಿಸಬಹುದು. ಲಾಕ್‌ನ ಸಿದ್ಧಾಂತ ಸಾರತಃ ಹೆಚ್ಚು ಕಡಿಮೆ ಪ್ರಜಾಪ್ರಭುತ್ವಾತ್ಮಕವಾದುದು, ಆದರೆ ಆಸ್ತಿಯಿಲ್ಲದವರನ್ನು ಪ್ರಜೆಗಳೆಂದು ಪರಿಗಣಿಸಲಾಗದು ಎಂಬ (ನೇರವಾಗಲ್ಲದಿದ್ದರೂ ಸೂಚಿತವಾದ) ಅಂಶಕ್ಕೆ ಪ್ರಜಾಪ್ರಭುತ್ವಾತ್ಮಕತೆಯು ಸೀಮಿತವಾಯಿತು.

ಪ್ರಸ್ತುತ ವಿಷಯದಲ್ಲಿ ಲಾಕ್ ಏನು ಹೇಳುತ್ತಾನೆ ಎಂಬುದನ್ನೀಗ ಪರಿಶೀಲಿಸೋಣ. ಮೊದಲಿಗೆ ರಾಜಕೀಯ ಅಧಿಕಾರ ಕುರಿತ ವ್ಯಾಖ್ಯೆಯೊಂದಿದೆ.

'ರಾಜಕೀಯ ಅಧಿಕಾರವೆಂದರೆ, ಆಸ್ತಿಯನ್ನು ಕ್ರಮಬದ್ಧಗೊಳಿಸುವ ಮತ್ತು ಅದನ್ನು ರಕ್ಷಿಸಲು ಮರಣದಂಡನೆಯನ್ನೂ ಮತ್ತು ಅದಕ್ಕೆ ಕೆಳಗಿನ ದಂಡನೆಗಳನ್ನು ಒಳಗೊಂಡಂತೆ, ಕಾನೂನುಗಳನ್ನು ರಚಿಸುವ ಮತ್ತು ಅವುಗಳ ನಿರ್ವಹಣೆಯಲ್ಲಿ, ಮತ್ತು ರಾಜ್ಯವನ್ನು ವಿದೇಶೀ ಆಕ್ರಮಣದಿಂದ ರಕ್ಷಿಸುವಲ್ಲಿ ಸಾರ್ವಜನಕ ಹಿತಕ್ಕಾಗಿ ಮಾತ್ರವೇ ಸಮಾಜದ ಶಕ್ತಿಯನ್ನು ಬಳಸಿಕೊಳ್ಳುವ ಅಧಿಕಾರ ಎಂಬುದು ನನ್ನ ಭಾವನೆ.'

ಸರ್ಕಾರವು ಪ್ರಕೃತಿ ಸ್ಥಿತಿಯಲ್ಲಿ ಉದ್ಭವಿಸುವ ಅನನುಕೂಲಗಳನ್ನು ನಿವಾರಿಸುವ ಒಂದು ಪರಿಹಾರ, ಯಾಕೆಂದರೆ ಅಂತಹ ಸ್ಥಿತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ನೇರಕ್ಕೆ ತಾನೇ ನ್ಯಾಯಮೂರ್ತಿಯಾಗಿರುತ್ತಾನೆ. ಆದರೆ ರಾಜನು ವಿವಾದದಲ್ಲಿ ಒಂದು ಪಕ್ಷವಾಗಿ ಸೇರಿದ್ದರೆ ಅದು ಪರಿಹಾರವನ್ನೊದಗಿಸಲಾರದು; ಯಾಕೆಂದರೆ ಆಗ ರಾಜನು ನ್ಯಾಯಮೂರ್ತಿಯೂ ಆಗಿರುತ್ತಾನೆ, ಫಿರ್ಯಾದುದಾರನೂ ಆಗಿರುತ್ತಾನೆ. ಈ ಪರಿಗಣನೆಗಳಿಂದಾಗಿ ಸರ್ಕಾರವು ಆತ್ಯಂತಿಕವಾಗಿರಬಾರದು, ಮತ್ತು ನ್ಯಾಯಾಂಗವು ಕಾರ್ಯಾಂಗದಿಂದ ಸ್ವತಂತ್ರವಾಗಿರಬೇಕು ಎಂಬ ದೃಷ್ಟಿಕೋನವು ಮೂಡಿತು. ಅಂತಹ ವಾದಗಳು ಇಂಗ್ಲಂಡ್ ಮತ್ತು ಅಮೆರಿಕಗಳಲ್ಲಿ ಭವ್ಯಭವಿಷ್ಯವನ್ನು ಹೊಂದಿದ್ದವು, ಆದರೆ ಸದ್ಯಕ್ಕೆ ಅವು ನಮಗೀಗ ಸಂಬಂಧಿಸಿದ್ದಲ್ಲ.

ತನ್ನ ಮೇಲಾಗಲೀ ತನ್ನ ಆಸ್ತಿಯ ಮೇಲಾಗಲೀ ನಡೆಯುವ ದಾಳಿಯನ್ನು, ಮರಣದ ಮೂಲಕವಾದರೂ, ಶಿಕ್ಷಿಸುವ ಅಧಿಕಾರವು ಪ್ರತಿ ವ್ಯಕ್ತಿಗೂ ಪ್ರಕೃತಿದತ್ತವಾಗಿ ಇರುತ್ತದೆ ಎಂದು ಲಾಕ್ ಹೇಳುತ್ತಾನೆ. ಎಲ್ಲಿ, ಜನರು ತಮ್ಮ ಈ ಅಧಿಕಾರವನ್ನು ಸಮಾಜಕ್ಕೋ ಕಾನೂನಿಗೋ ಒಪ್ಪಿಸಿರುತ್ತಾರೆಯೋ ಅಲ್ಲಿ ಮತ್ತು ಅಲ್ಲಿ ಮಾತ್ರವೇ ರಾಜಕೀಯ ಸಮಾಜವಿರುತ್ತದೆ.

ಆತ್ಯಂತಿಕ ರಾಜಪ್ರಭುತ್ವವು ನಾಗರಿಕ ಸರ್ಕಾರದ ಒಂದು ರೂಪವಲ್ಲ, ಯಾಕೆಂದರೆ ಅಲ್ಲಿ ರಾಜ ಮತ್ತು ಅವನ ಪ್ರಜೆಯೊಬ್ಬನ ನಡುವಣ ವಿವಾದವನ್ನು ಬಗೆಹರಿಸುವ ತಟಸ್ಥ ಅಧಿಕಾರವಿರುವುದಿಲ್ಲ. ಹಾಗೆ ನೋಡಿದರೆ ರಾಜನು, ತನ್ನ ಪ್ರಜೆಗಳೊಡನೆ ಹೋಲಿಸಿದರೆ, ಇನ್ನೂ ಪ್ರಕೃತಿ ಸ್ಥಿತಿಯಲ್ಲೇ ಇರುತ್ತಾನೆ. ರಾಜನಾಗಿರುವುದರಿಂದ ಕ್ರೂರ ವ್ಯಕ್ತಿಯು ಸದ್ಗುಣಭರಿತನಾಗಿಬಿಡುತ್ತಾನೆ ಎಂದು ನಿರೀಕ್ಷಿಸುವುದು ನಿರುಪಯುಕ್ತವಾದುದೇ ಸರಿ.

'ಅಮೆರಿಕದ ಕಾಡುಗಳಲ್ಲಿ ದೌರ್ಜನ್ಯಕಾರಿಯೂ ಹಿಂಸಾರಭಸಮತಿಯೂ ಆಗಿರುವ ವ್ಯಕ್ತಿಯು ಪ್ರಾಯಶಃ ಸಿಂಹಾಸನದ ಮೇಲೆ ಉತ್ತಮನಾಗಿಬಿಡಲಾರ; ಅವನು ತನ್ನ ಪ್ರಜೆಗಳಿಗೆ ಮಾಡುವ ಎಲ್ಲವನ್ನೂ ಸಮರ್ಥಿಸುವ ವಿದ್ವತ್ತು ಮತ್ತು ಮತಧರ್ಮಗಳನ್ನು ಅಲ್ಲಿ ಕಂಡುಹಿಡಿಯಲಾಗುತ್ತದೆ, ಮತ್ತು ಅದನ್ನು ಪ್ರಶ್ನಿಸುವ ಧೈರ್ಯ ತೋರುವ ಎಲ್ಲರನ್ನೂ ಕತ್ತಿಯು ಸುಮ್ಮನಾಗಿಸಿಬಿಡುತ್ತದೆ.'

ಆತ್ಯಂತಿಕ ರಾಜಪ್ರಭುತ್ವ ಎಂಬುದು ಜನರು ತಮ್ಮನ್ನು ಕೋಳಿಬೆಕ್ಕು (ಪೋಲ್–

ಕ್ಯಾಟ್) ಮತ್ತು ನರಿಗಳಿಂದ ರಕ್ಷಿಸಿಕೊಳ್ಳುವ ಹಾಗೆ, 'ಆದರೆ ಸಿಂಹಗಳಿಗೆ ಆಹಾರವಾಗುವುದರಲ್ಲಿ ತೃಪ್ತರಾಗುತ್ತಾರೆ, ಉಹ್ಞೂ, ಅದೇ ಸುರಕ್ಷಿತವೆಂದು ಭಾವಿಸುತ್ತಾರೆ.'

ನಾಗರಿಕ ಸಮಾಜದಲ್ಲಿ, ಮತ್ತಷ್ಟು ಹೆಚ್ಚಿನ ಸಂಖ್ಯೆ ಆವಶ್ಯಕವೆಂದು ಭಾವಿಸದಿದ್ದರೆ, ಬಹುಸಂಖ್ಯಾತ ಆಡಳಿತವಿರುತ್ತದೆ. (ಉದಾಹರಣೆಗೆ, ಸಂಯುಕ್ತ ಸಂಸ್ಥಾನಗಳಲ್ಲಿ, ಸಂವಿಧಾನ ತಿದ್ದುಪಡಿ ಅಥವಾ ಒಪ್ಪಂದಕ್ಕೆ ಅನುಮೋದನೆಯಲ್ಲಿರುವಂತೆ). ಇದು ಪ್ರಜಾಪ್ರಭುತ್ವಾತ್ಮಕವಾಗಿ ಕಾಣುತ್ತದೆ, ಆದರೆ ಲಾಕ್ ಹೆಂಗಸರನ್ನೂ ಬಡಜನರನ್ನೂ ಪ್ರಜೆಗಳ ಹಕ್ಕುಗಳಿಂದ ದೂರವಿರಿಸುತ್ತಾನೆ ಎಂಬುದನ್ನು ನೆಪಿನಲ್ಲಿಟ್ಟುಕೊಳ್ಳಬೇಕು.

'ರಾಜಕೀಯ ಸಮಾಜದ ಆರಂಭವು ಆಧರಿಸುವುದು ವ್ಯಕ್ತಿಗಳು ಸೇರಿ ಒಂದು ಸಮಾಜವನ್ನು ರೂಪಿಸಿಕೊಳ್ಳಲು ಒಪ್ಪುವುದನ್ನು.' ಸರ್ಕಾರದ ಆರಂಭವು ಯೆಹೂದ್ಯರ ಹೊರತು ಬೇರೆಲ್ಲ ಕಡೆಯೂ ವಾಸ್ತವಕ್ಕಿಂತ ಹಿಂತೇದಿಯಾಗಿ (ಆಂಟೀಡೇಟ್) ನಮೂದಿತವಾಗಿದೆ ಎಂದು ಹೇಳಿಯೂ, ಅಂತಹ ಒಪ್ಪಿಗೆಯು, ಯಾವುದೋ ಒಂದು ಸಂದರ್ಭದಲ್ಲಿ, ವಾಸ್ತವವಾಗಿ ನಡೆದೇ ಇದೆ, ಎಂದು ವಾದಿಸಲಾಗಿದೆ – ಅರೆಮನಸ್ಸಿನಿಂದಲೇ.

ಸರ್ಕಾರವನ್ನು ಸ್ಥಾಪಿಸುವ ನಾಗರಿಕ ಒಪ್ಪಂದವು ಅದನ್ನು ಮಾಡಿದವರನ್ನು ಮಾತ್ರ ಬದ್ಧವಾಗಿಸುತ್ತದೆ; ತನ್ನ ತಂದೆ ಮಾಡಿದ ಒಡಂಬಡಿಕೆಗೆ ಮಗ ಹೊಸದಾಗಿ ಒಪ್ಪಿಗೆ ನೀಡಬೇಕು (ಲಾಕ್‌ನ ತತ್ವಗಳಿಂದ ಇದು ಹೇಗೆ ಹೊರಪಡುತ್ತದೆ ಎಂಬುದು ಸ್ಪಷ್ಟವಾಗಿದ್ದರೂ, ಅದು ವಾಸ್ತವಿಕವಾಗಿಲ್ಲ. ಇಪ್ಪತ್ತೊಂದು ವರ್ಷ ಪೂರೈಸಿದ ಅಮೆರಿಕನ್ ಯುವಕನು, 'ಸಂಯುಕ್ತ ಸಂಸ್ಥಾನವನ್ನು ಆರಂಭಿಸಿದ ಈ ಒಡಂಬಡಿಕೆಗೆ ಬದ್ಧವಾಗಿರಲು ನಾನು ಒಪ್ಪುವುದಿಲ್ಲ' ಎಂದು ಹೇಳಿದರೆ ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತಾನೆ.

ಒಪ್ಪಂದದ ಸರ್ಕಾರದ ಸಾಮರ್ಥ್ಯವು ಸಾರ್ವಜನಿಕ ಹಿತದಿಂದ ಹೊರಹೋಗುವುದಿಲ್ಲ ಎಂದು ಹೇಳಲಾಗಿದೆ. ಒಂದು ಕ್ಷಣದ ಹಿಂದಷ್ಟೇ ನಾನು ಸರ್ಕಾರದ ಅಧಿಕಾರದ ಬಗೆಗಿನ ವಾಕ್ಯವೊಂದನ್ನು ಉದ್ಧರಿಸಿದ್ದೇನೆ, ಅದರ ಕೊನೆಯಲ್ಲಿ, 'ಸಾರ್ವಜನಕ ಹಿತಕ್ಕಾಗಿ ಮಾತ್ರವೇ' ಎಂಬ ಮಾತುಗಳಿವೆ. ಸಾರ್ವಜನಿಕ ಹಿತ ಎಂದರೆ ಯಾವುದು ಎಂದು ತೀರ್ಮಾನಿಸುವವನು ಯಾರು ಎಂಬ ಬಗ್ಗೆ ಲಾಕ್‌ಗೆ ಯಾವ ಆಲೋಚನೆಯೂ ಇಲ್ಲ. ಸರ್ಕಾರವೇ ಅದನ್ನು ತೀರ್ಮಾನಿಸುವುದಾದರೆ, ತನ್ನ ಹಿತವನ್ನೇ ಅದು ಕಾಪಾಡಿಕೊಳ್ಳುತ್ತದೆ ಎಂಬುದು ಸುವಿದಿತ. ಬಹುಸಂಖ್ಯಾತ ಜನತೆಯೇ ಹಾಗೆ ಮಾಡುತ್ತದೆ ಎಂದು ಲಾಕ್ ಹೇಳುತ್ತಾನೆಂದು ಭಾವಿಸಬಹುದು. ಆದರೆ ಜನರ ಅಭಿಪ್ರಾಯವನ್ನು ಸ್ಪಷ್ಟಗೊಳಿಸಿಕೊಳ್ಳುವ ಮುಂಚೆ ಅನೇಕ ಪ್ರಶ್ನೆಗಳನ್ನು ಬೇಗ ಪರಿಹರಿಸಿಕೊಳ್ಳಬೇಕಾಗುತ್ತದೆ; ಇವುಗಳಲ್ಲಿ ಬಹಳ ಮುಖ್ಯವಾದುದು ಶಾಂತಿ

ಮತ್ತು ಯುದ್ಧಗಳು. ಅಂಥ ಸಂದರ್ಭಗಳಿಗಿರುವ ಏಕೈಕ ಪರಿಹಾರವೆಂದರೆ ಸಾರ್ವಜನಿಕ ಅಭಿಪ್ರಾಯ ಅಥವಾ ಅದರ ಪ್ರತಿನಿಧಿಗಳಿಗೆ – ದೋಷಾರೋಪಣೆಯಂತಹ (ಇಮ್‌ಪೀಚ್‌ಮೆಂಟ್) – ಒಂದಷ್ಟು ಅಧಿಕಾರ ನೀಡುವುದು, ಅಂದರೆ ಜನಹಿತಕ್ಕೆ ವಿರುದ್ಧವಾದುದೆಂದು ಸಾಬೀತಾದರೆ ಅದಕ್ಕೆ ಕಾರಣವಾದ ಕಾರ್ಯಾಂಗದ ಅಧಿಕಾರಿಗಳನ್ನು ಶಿಕ್ಷಿಸುವ ಅಧಿಕಾರ. ಆದರೆ ಇದೂ ಎಷ್ಟೋ ವೇಳೆ ಸಾಕಾಗುವುದಿಲ್ಲ.

ನಾನು ಹಿಂದೆ ಒಂದು ವಾಕ್ಯವನ್ನು ಉದ್ಧರಿಸಿದ್ದೆ, ಈಗ ಅದನ್ನು ಮತ್ತೊಮ್ಮೆ ಹೇಳಬೇಕಾಗಿದೆ:

'ಸ್ವತಂತ್ರ ರಾಜ್ಯದ ಸರ್ಕಾರದ ಅಡಿಯಲ್ಲಿ ಒಂದಾಗುವ ಜನರ ಮಹತ್ವದ್ದೂ ಮುಖ್ಯವಾದುದೂ ಆದ ಉದ್ದೇಶವೆಂದರೆ ಆಸ್ತಿಯ ಸಂರಕ್ಷಣೆ.'

ಇದಕ್ಕನುಗುಣವಾಗಿ ಲಾಕ್ ಹೇಳುತ್ತಾನೆ:

'ಸಾರ್ವಭೌಮ ಅಧಿಕಾರವೂ ಯಾರದೇ ಆಸ್ತಿಯ ಭಾಗವನ್ನು, ಅವನ ಅನುಮತಿಯಿಲ್ಲದೆ, ವಶಪಡಿಸಿಕೊಳ್ಳಲು ಸಾಧ್ಯವಿಲ್ಲ.'

ಇದಕ್ಕೂ ಹೆಚ್ಚಿನ ಆಶ್ಚರ್ಯಕರ ಹೇಳಿಕೆಯೆಂದರೆ, ಸೈನ್ಯಾಧಿಕಾರಿಗಳಿಗೆ ತಮ್ಮ ಸೈನಿಕರ ಬದುಕು ಮತ್ತು ಸಾವಿನ ಮೇಲೆ ಅಧಿಕಾರವನ್ನು ಹೊಂದಿದ್ದರೂ, ಅವರಿಗೆ ಹಣ ತೆಗೆದುಕೊಳ್ಳುವ ಅಧಿಕಾರವಿಲ್ಲ. (ಅದರಿಂದಾಗಿ, ಹೀಗಾಗಿ ಸಣ್ಣಪುಟ್ಟ ತಪ್ಪುಗಳಿಗಾಗಿ ಜುಲ್ಮಾನೆಯನ್ನು ಸಂಗ್ರಹಿಸುವುದು ತಪ್ಪು, ಆದರೆ ಶಿಸ್ತಿನ ಉಲ್ಲಂಘನೆಗಾಗಿ ಛಡಿ ಏಟಿನಂತಹ ದೈಹಿಕ ಶಿಕ್ಷೆಯನ್ನು ಅವರಿಗೆ ನೀಡಬಹುದು. ಆಸ್ತಿಯ ಬಗೆಗಿನ ಭಕ್ತಿಯಿಂದ ಲಾಕ್‌ನ ಅಸಂಬದ್ಧತೆ ಎಷ್ಟು ದೂರ ಹೋಗಬಲ್ಲದು ಎಂಬುದನ್ನು ತೋರಿಸುತ್ತದೆ.)

ತೆರಿಗೆ ವಿಧಿಸುವ ಪ್ರಶ್ನೆಯು ಲಾಕ್‌ಗೆ ತೊಡಕುಗಳನ್ನು ಉಂಟುಮಾಡುತ್ತದೆಂದು ಭಾವಿಸಬಹುದು, ಆದರೆ ಅವನು ಯಾವುದನ್ನೂ ಮನಗಂಡಿಲ್ಲ. ಸರ್ಕಾರದ ವೆಚ್ಚಗಳನ್ನು ಪ್ರಜೆಗಳು ವಹಿಸಿಕೊಳ್ಳಬೇಕು, ಆದರೆ ಅವರ ಒಪ್ಪಿಗೆಯಿಂದ, ಅಂದರೆ ಆಸ್ತಿಯಂತಹುದು. ಆದರೆ ಇದಕ್ಕೆ ಬಹುಸಂಖ್ಯಾತರ ಒಪ್ಪಿಗೆ ಮಾತ್ರ ಸಾಕೇ ಎಂದು ಕೇಳಬಹುದು. ಆಸ್ತಿಯ ಯಾವುದೇ ಭಾಗವನ್ನು ವಶಪಡಿಸಿಕೊಳ್ಳುವುದಕ್ಕೆ ಪ್ರತಿ ಪ್ರಜೆಯ ಒಪ್ಪಿಗೆಯೂ ಆವಶ್ಯಕ ಎಂದೂ ಹೇಳಲಾಗುತ್ತದೆ. ಅಂದರೆ ಬಹುಸಂಖ್ಯಾತರ ಒಪ್ಪಿಗೆಯಿಂದ ವಿಧಿಸುವ ತೆರಿಗೆಗೆ ಅವನು ಪರೋಕ್ಷವಾಗಿ ಒಪ್ಪಿಗೆ ನೀಡುವುದು, ಅದಕ್ಕೆ ಪ್ರತಿಯಾಗಿ, ಅವನ ಪ್ರಜೆಯ ಪರಿಕಲ್ಪನೆಯಲ್ಲಿ ಸೇರಿಕೊಂಡಿದೆ, ಆದರೆ ಅವನ ಒಪ್ಪಿಗೆಯಿಂದ, ಎನ್ನಬಹುದು. ಇದೆಲ್ಲವೂ ಕೆಲವು ವೇಳೆ ವಸ್ತುಸ್ಥಿತಿಗೆ ವಾಸ್ತವವಾಗಿ ವಿರುದ್ಧವಾದವು. ಬಹುಜನರಿಗೆ ತಾವು ಪ್ರಜೆಗಳಾಗಿರುವ ಸರ್ಕಾರದ ಬಗ್ಗೆ ಯಾವುದೇ ಆಯ್ಕೆಯ ಸ್ವಾತಂತ್ರ್ಯ ಇರುವುದಿಲ್ಲ,

ಮತ್ತು ಈಚಿನ ದಿನಗಳಲ್ಲಿಯಂತೂ, ಯಾವ ದೇಶಕ್ಕೂ ಸೇರದೇ ಇರುವ ಯಾವುದೇ ಸ್ವಾತಂತ್ರ್ಯವಿರುವುದಿಲ್ಲ, ಉದಾಹರಣೆಗೆ, ನೀವೊಬ್ಬ ಶಾಂತಿವಾದಿ, ಯುದ್ಧವಿರೋಧಿ ಎಂದುಕೊಳ್ಳಿ. ನೀವು ಎಲ್ಲಿಯೇ ವಾಸಿಸಲಿ, ಯುದ್ಧದಂತಹ ಉದ್ದೇಶಗಳಿಗಾಗಿ ಸರ್ಕಾರವು ನಿಮ್ಮ ಆಸ್ತಿಯ ಒಂದಷ್ಟು ಭಾಗವನ್ನು ತೆಗೆದುಕೊಳ್ಳುತ್ತದೆ. ಇದಕ್ಕೆ ನೀವು ಒಳಗಾಗುವಂತೆ ಒತ್ತಡ ಹೇರುವುದು ಹೇಗೆ ಸಮರ್ಥನೀಯ? ಇದಕ್ಕೆ ಅನೇಕ ಉತ್ತರಗಳನ್ನು ಊಹಿಸಿಕೊಳ್ಳಬಹುದು, ಆದರೆ ಅವುಗಳಲ್ಲಿ ಯಾವುದೂ ಲಾಕ್‌ನ ತತ್ವಗಳಿಗೆ ಅನುಗುಣವಾಗಿರಲಾರದು. ಸಾಕಷ್ಟು ವಿವೇಚನೆಯಿಲ್ಲದೆಯೇ ಬಹುಸಂಖ್ಯಾತರ ಆಳ್ವಿಕೆಯ ಧ್ಯೇಯವಾಕ್ಯವನ್ನವನು ಮುಂದೊಡ್ಡುತ್ತಾನೆ, ಆದರೆ ವ್ಯಕ್ತಿಯ ನೆಲೆಯಿಂದ ಇದಕ್ಕೆ ಸಂಕ್ರಮಣಗೊಳ್ಳುವ, ಕಾಲ್ಪನಿಕ ಸಾಮಾಜಿಕ ಒಪ್ಪಂದದ ಹೊರತು, ಬೇರಾವ ಬಗೆಯನ್ನು ಸೂಚಿಸುವುದಿಲ್ಲ.

ಬೇಕಾದ ಅರ್ಥದಲ್ಲಿ ಸಾಮಾಜಿಕ ಒಪ್ಪಂದವು ಕಾಲ್ಪನಿಕವಾದುದು; ಹಿಂದಿನ ಕಾಲಗಳಲ್ಲಿಯೂ, ಪ್ರಸ್ತುತ ಸರ್ಕಾರವನ್ನು ರಚಿಸುವುದರಲ್ಲಿನ ವಾಸ್ತವದಲ್ಲಿಯೂ ಒಂದು ಬಗೆಯ ಒಪ್ಪಂದವಿರುತ್ತಿತ್ತು. ಸಂಯುಕ್ತ ಸಂಸ್ಥಾನಗಳು ಅದಕ್ಕೊಂದು ಉದಾಹರಣೆ. ಸಂವಿಧಾನವನ್ನು ಅಳವಡಿಸಿಕೊಳ್ಳುವ ಕಾಲದಲ್ಲಿ ಪ್ರಜೆಗಳಿಗೆ ಆಯ್ಕೆಯ ಸ್ವಾತಂತ್ರ್ಯವಿತ್ತು. ಆಗಲೂ, ಅನೇಕರು ಅದರ ವಿರುದ್ಧವಾಗಿ ಮತ ನೀಡಿದರು, ಹೀಗಾಗಿ ಅವರು ಆ ಒಪ್ಪಂದದಲ್ಲಿ ಭಾಗಿಗಳಾಗಲಿಲ್ಲ. ಅವರು ದೇಶವನ್ನು ಬಿಟ್ಟು ಹೋಗಬಹುದಾಗೇನೋ ಇತ್ತು, ಆದರೆ ಅಲ್ಲಿಯೇ ಉಳಿದುಕೊಳ್ಳುವ ಮೂಲಕ ತಾವು ಒಪ್ಪಿಕೊಳ್ಳದ ಒಪ್ಪಂದವೊಂದರಲ್ಲಿ ಭಾಗಿಗಳಾದರು. ಆದರೆ ಕಾರ್ಯತಃ ತನ್ನ ದೇಶವನ್ನು ಬಿಟ್ಟು ಹೋಗುವುದು ವ್ಯಕ್ತಿಗೆ ಕಷ್ಟಕರವಾದುದು. ಸಂವಿಧಾನದ ಅಳವಡಿಕೆಯ ನಂತರ ಹುಟ್ಟಿದ ಜನರಿಗೆ ಸಂಬಂಧಪಟ್ಟಂತೆ ಅವರ ಒಪ್ಪಿಗೆಯು ಇನ್ನೂ ಅಸ್ಪಷ್ಟವಾಗುತ್ತದೆ.

ಸರ್ಕಾರದ ವಿರುದ್ಧದ ವ್ಯಕ್ತಿಯ ಹಕ್ಕುಗಳ ಪ್ರಶ್ನೆಯು ತುಂಬ ತೊಡಕಿನದು. ಸರ್ಕಾರವು ಬಹುಸಂಖ್ಯಾತರನ್ನು ಪ್ರತಿನಿಧಿಸುವುದರಿಂದ ಅದಕ್ಕೆ ಅಲ್ಪಸಂಖ್ಯೆಯ ಜನರ ಮೇಲೆ ಒತ್ತಾಯ ಹೇರುವುದಕ್ಕೆ ಅಧಿಕಾರವಿದೆ ಎಂಬುದನ್ನು ಪ್ರಜಾಪ್ರಭುತ್ವವಾದಿಗಳು ತಕ್ಷಣವೇ ಒಪ್ಪಿಕೊಳ್ಳುತ್ತಾರೆ. ಒಂದು ಹಂತದವರೆಗೂ, ಇದು ನಿಜವಾಗಿರಬೇಕು, ಯಾಕೆಂದರೆ ಬಲವಂತ ಎಂಬುದು ಸರ್ಕಾರದ ಸಾರಸತ್ವದ ಭಾಗ. ಆದರೆ ಬಹುಸಂಖ್ಯಾತ ಜನಗಳ ದೈವಿಕ ಅಧಿಕಾರವು, ತೀರ ದೂರಕ್ಕೆ ಒಯ್ದರೆ, ರಾಜರ ದೈವಿಕ ಅಧಿಕಾರದಷ್ಟೇ ನಿರಂಕುಶತೆಯನ್ನು ಪಡೆಯಬಹುದು. ಈ ವಿಷಯದಲ್ಲಿ ಲಾಕ್ ತನ್ನ 'ಎಸ್ಸೇಸ್ ಆನ್ ಗವರ್ನಮೆಂಟ್'ನಲ್ಲಿ ಹೇಳುವುದು ಅತ್ಯಲ್ಪವಾದರೂ, ಆ ವಿಷಯವನ್ನು ಕುರಿತು ತನ್ನ 'ಲೆಟರ್ಸ್ ಆನ್ ಟಾಲರೇಷನ್' ನಲ್ಲಿ ಸುದೀರ್ಘವಾಗಿ ಪ್ರಸ್ತಾಪಿಸುತ್ತಾನೆ: ದೇವರಲ್ಲಿ ನಂಬಿಕೆಯಿಟ್ಟವನ ಮೇಲೆ

ಅವನ ಮತಧಾರ್ಮಿಕ ಅಭಿಪ್ರಾಯಗಳ ಆಧಾರದ ಮೇಲೆ ದಂಡನೆ ವಿಧಿಸಬಾರದು ಎಂದವನು ವಾದಿಸುತ್ತಾನೆ.

ಸರ್ಕಾರವು ಒಂದು ಒಪ್ಪಂದದ ಮೂಲಕ ಸೃಷ್ಟಿತವಾದುದು ಎಂಬ ಸಿದ್ಧಾಂತವು ವಿಕಾಸಪೂರ್ವ ಹಂತದ್ದು. ದಡಾರ ಮತ್ತು ನಾಯಿ ಕೆಮ್ಮಿನಂತೆಯೇ ಸರ್ಕಾರವೂ ಕ್ರಮೇಣ ಮೂಡಿರಬೇಕು, ಆದರೆ ಅವುಗಳಂತೆಯೇ ದಕ್ಷಿಣ ಸಮುದ್ರ ದ್ವೀಪಗಳಲ್ಲಿನಂತಹ ಹೊಸ ಪ್ರದೇಶಗಳಲ್ಲಿ ತಕ್ಷಣ ಸೇರಿಸಬಹುದು. ಮಾನವಶಾಸ್ತ್ರವನ್ನು (ಆಂತ್ರೋಪಾಲಜಿ) ಅಧ್ಯಯನ ಮಾಡುವ ಮುಂಚೆ ಜನರಿಗೆ ಸರ್ಕಾರದ ಹುಟ್ಟಿನಲ್ಲಿನ ಮನೋವೈಜ್ಞಾನಿಕ ಪ್ರಕ್ರಿಯೆಗಳ ಬಗ್ಗೆಯಾಗಲೀ, ಮುಂದಿನ ಕಾಲಗಳಲ್ಲಿ ಉಪಯುಕ್ತವಾದ ಸಂಸ್ಥೆಗಳನ್ನೂ ಪದ್ಧತಿಗಳನ್ನೂ ಒಪ್ಪಿಕೊಳ್ಳುವ ಅದ್ಭುತ ಕಾರಣಗಳ ಬಗ್ಗೆಯಾಗಲೀ ಯಾವುದೇ ಕಲ್ಪನೆಯಿರಲಿಲ್ಲ. ಆದರೆ ಸರ್ಕಾರವನ್ನು ಸಮರ್ಥಿಸುವ ಒಂದು ಕಾನೂನು ಕಲ್ಪನೆಯಾಗಿ ಸಾಮಾಜಿಕ ಒಪ್ಪಂದದ ಸಿದ್ಧಾಂತದಲ್ಲಿ ತಕ್ಕ ಮಟ್ಟಿಗಿನ ಸತ್ಯಾಂಶವಿದೆ.

ಈ. ಆಸ್ತಿ

ಆಸ್ತಿಯ ಬಗೆಗಿನ ಲಾಕ್‌ನ ದೃಷ್ಟಿಕೋನವನ್ನು ಇಲ್ಲಿಯವರೆಗೆ ವಿವರಿಸಿದ್ದರ ಆಧಾರದ ಮೇಲೆ, ಅವನು ತಮ್ಮ ಸಾಮಾಜಿಕ ಮೇಲ್ಮಟ್ಟದವರು ಮತ್ತು ಸಾಮಾಜಿಕ ಕೆಳಮಟ್ಟದವರ ವಿರುದ್ಧವಾದ ಬಂಡವಾಳಶಾಹಿಯ ಮಹಾ ಪ್ರವರ್ತಕ ಎಂಬಂತೆ ಕಾಣಬಹುದು; ಆದರೆ ಇದು ಪೂರ್ತಿ ಸತ್ಯವಲ್ಲ. ಪುಷ್ಟಿಗೊಂಡ ಬಂಡವಾಳಶಾಹಿಯನ್ನು ಮುನ್‌ಸೂಚಿಸುವ ಮತ್ತು ಹೆಚ್ಚು ಕಡಿಮೆ ಸಾಮಾಜಿಕ ದೃಷ್ಟಿಕೋನಗಳು ಅಡಕಗೊಳ್ಳುವ ಸಿದ್ಧಾಂತಗಳೆರಡೂ ಅವನಲ್ಲಿ ಅಕ್ಕಪಕ್ಕದಲ್ಲಿ ಮತ್ತು ಒಂದಕ್ಕೊಂದು ವಿರೋಧವಾಗಿರುವಂತೆ ಕಂಡುಬರುತ್ತದೆ. ಏಕಪಕ್ಷೀಯವಾದ ಉದ್ಧರಣೆಗಳಿಂದ ಅವನನ್ನು ತಪ್ಪಾಗಿ ಬಿಂಬಿಸುವುದು ಸುಲಭ, ಈ ವಿಷಯದಲ್ಲಿ ಮಾತ್ರವಲ್ಲ ಮಿಕ್ಕೆಲ್ಲದರಲ್ಲಿಯೂ.

ಆಸ್ತಿಯ ವಿಚಾರಕ್ಕೆ ಸಂಬಂಧಿಸಿದಂತೆ ಲಾಕ್‌ನ ತತ್ವವನ್ನು ಅದು ಮಂಡಿತವಾದ ಕ್ರಮದಲ್ಲಿ ಈಗ ನಾನು ಮಂಡಿಸುತ್ತೇನೆ.

ಮೊದಲಿಗೆ ಹೇಳುವುದೆಂದರೆ, ಪ್ರತಿ ವ್ಯಕ್ತಿಗೂ ತನ್ನ ದುಡಿಮೆಯಿಂದ ಗಳಿಸಿದ ಆಸ್ತಿ ಇರುತ್ತದೆ, ಅಥವಾ ಕನಿಷ್ಠ ಪಕ್ಷ, ಹಾಗೆ ಇರಬೇಕು. ಕೈಗಾರಿಕೀಕರಣಪೂರ್ವ ದಿನಗಳಲ್ಲಿ, ಈ ಮಾತು, ಈಚೆಗೆ ಆಗಿರುವಂತೆ, ಅಷ್ಟೊಂದು ಅವಾಸ್ತವವಾದುದಾಗಿರಲಿಲ್ಲ. ನಗರದ ಉತ್ಪಾದನೆಯು ಮುಖ್ಯವಾಗಿ ಕರಕುಶಲಿಗಳಿಂದಾದುದು, ಅವರಿಗೆ ತಮ್ಮ ಸಲಕರಣೆಗಳಿರುತ್ತಿದ್ದು ಮತ್ತು ತಮ್ಮ ಉತ್ಪನ್ನವನ್ನು ಮಾರಾಟಮಾಡುತ್ತಿದ್ದರು. ಕೃಷಿ ಉತ್ಪನ್ನಕ್ಕೆ ಸಂಬಂಧಿಸಿದಂತೆ, ರೈತ

ಒಡೆತನವು ಅತ್ಯಂತ ಶ್ರೇಷ್ಠ ವ್ಯವಸ್ಥೆ ಎಂದು ಹೇಳಿದ ಲಾಕ್ ಸೇರಿದ್ದ ಪಂಥವು ಇದನ್ನು ಎತ್ತಿ ಹಿಡಿಯಿತು. ಅವನ ಪ್ರಕಾರ, ವ್ಯಕ್ತಿಯು ತಾನು ಬೇಸಾಯ ಮಾಡಲು ಸಾಧ್ಯವಿರುವಷ್ಟು ಜಮೀನನ್ನು ಹೊಂದಿರಬಹುದು, ಆದರೆ ಅದಕ್ಕಿಂತ ಹೆಚ್ಚಿಗೆ ಅಲ್ಲ. ಯೂರೋಪ್‌ನ ಎಲ್ಲ ದೇಶಗಳಲ್ಲೂ, ಈ ಆದರ್ಶವನ್ನು ಹಿಂಸಾತ್ಮಕ ಕ್ರಾಂತಿಯಿಂದಲ್ಲದೆ ವಾಸ್ತವವಾಗಿಸಲು ಸಾಧ್ಯವಿಲ್ಲವಾಗಿತ್ತು ಎಂಬುದರ ಬಗ್ಗೆ ಲಾಕ್ ತೀರ ಕುರುಡಾಗಿದ್ದಾನೆ. ಎಲ್ಲ ಕಡೆಗಳಲ್ಲಿಯೂ ಬಹುತೇಕ ಜಮೀನು ಶ್ರೀಮಂತರ ಒಡೆತನದಲ್ಲಿರುತ್ತಿತ್ತು, ಅವರೂ ರೈತರಿಂದ ದುಡಿಮೆಯ ಉತ್ಪನ್ನದಲ್ಲಿನ ಪಾಲನ್ನು (ಎಷ್ಟೋ ಬೇಳೆ ಅರ್ಧದಷ್ಟನ್ನು) ಕಿತ್ತುಕೊಳ್ಳುತ್ತಿದ್ದರು ಇಲ್ಲವೇ ಅಥವಾ ಜಮೀನಿಗೆ ಬಾಡಿಗೆ ತೆಗೆದುಕೊಳ್ಳುತ್ತಿದ್ದರು, ಮತ್ತು ಅದು ಕಾಲಕಾಲಕ್ಕೆ ಬದಲಾಗುತ್ತಿತ್ತು. ಮೊದಲಿನ ವ್ಯವಸ್ಥೆಯು ಫ್ರಾನ್ಸ್ ಮತ್ತು ಇಟಲಿಗಳಲ್ಲಿ ರೂಢಿಯಲ್ಲಿಯೂ, ಎರಡನೆಯದು ಇಂಗ್ಲಂಡ್, ದೂರಪ್ರಾಚ್ಯ ದೇಶಗಳು, ರಷ್ಯಾ, ಮತ್ತು ಪ್ರಷ್ಯಾಗಳಲ್ಲಿಯೂ ರೂಢಿಯಲ್ಲಿತ್ತು. ಕೆಲಸಗಾರರು ಗುಲಾಮರಾಗಿರುತ್ತಿದ್ದರು, ಅವರು ದುಡಿಯುತ್ತಿದ್ದುದು ಭೂ ಒಡೆಯರಿಗಾಗಿಯೇ ಹೊರತು ಅವರಿಗೆ ಜಮೀನಿನ ಮೇಲೆ ಯಾವ ಹಕ್ಕೂ ಇರಲಿಲ್ಲ. ಹಳೆಯ ಪದ್ಧತಿಯು ಫ್ರಾನ್ಸ್‌ನಲ್ಲಿ ಫ್ರೆಂಚ್ ಕ್ರಾಂತಿಯಿಂದಾಗಿಯೂ, ಉತ್ತರ ಇಟಲಿಯಲ್ಲಿ ಹಾಗೂ ಪಶ್ಚಿಮ ಜರ್ಮನಿಯಲ್ಲಿಯೂ ಫ್ರೆಂಚ್ ಕ್ರಾಂತಿಕಾರಿ ಸೈನ್ಯದ ಗೆಲವಿನಿಂದಾಗಿಯೂ ಕೊನೆಗೊಂಡಿತು. ಕ್ರಿಮಿಯ ಯುದ್ಧದ ಬಳಿಕ ಪ್ರಷ್ಯಾದಲ್ಲಿ ಗುಲಾಮಪದ್ಧತಿಯು ನೆಪೋಲಿಯನ್‌ನ ಗೆಲವಿನಿಂದಾಗಿ ರದ್ದಾಯಿತು. ಆದರೆ ಎರಡೂ ದೇಶಗಳಲ್ಲಿ ಶ್ರೀಮಂತರು ತಮ್ಮ ಭೂ ಒಡೆತನವನ್ನು ಉಳಿಸಿಕೊಂಡರು. ಪೂರ್ವ ಪ್ರಷ್ಯಾದಲ್ಲಿ, ಈ ಪದ್ಧತಿಯನ್ನು ನಾಝಿಗಳು ಬಹಳವಾಗಿ ನಿಯಂತ್ರಿಸಿದರೂ, ಅದು ಈಗಲೂ ಉಳಿದುಕೊಂಡು ಬಂದಿದೆ. ರಷ್ಯಾದಲ್ಲಿಯೂ, ಮತ್ತು ಈಗ ಲಿಥುವೇನಿಯ, ಲಾಟ್ವಿಯ ಮತ್ತು ಎಸ್ತೀನಿಯ ಎಂದು ಕರೆಯಲಾಗುವ ಕಡೆಗಳಲ್ಲಿ ಶ್ರೀಮಂತವರ್ಗದ ಜನರು ರಷ್ಯನ್ ಕ್ರಾಂತಿಯಿಂದಾಗಿ ತಮ್ಮ ಒಡೆತನವನ್ನು ಕಳೆದುಕೊಂಡರು. ಹಂಗರಿ, ಮತ್ತು ಪೋಲಂಡ್‌ಗಳಲ್ಲಿ ಅವರು ಉಳಿದುಕೊಂಡರು; ಪೂರ್ವ ಪೋಲಂಡ್‌ನಲ್ಲಿ ಅವುಗಳನ್ನು ಸೋವಿಯತ್ ಸರ್ಕಾರವು ೧೯೪೦ ರಲ್ಲಿ ಕೊನೆಗೊಳಿಸಿತು. ಆದರೆ ಸೋವಿಯತ್ ಸರ್ಕಾರವು ಅದರ ಬದಲು ಸಾಮೂಹಿಕ ಬೇಸಾಯಪದ್ಧತಿಯನ್ನು ರಷ್ಯಾದಾದ್ಯಂತ ಜಾರಿಮಾಡಲು ಸರ್ವಪ್ರಯತ್ನ ನಡೆಸಿತೇ ವಿನಾ ರೈತ ಒಡೆತನವನ್ನಲ್ಲ.

ಇಂಗ್ಲಂಡ್‌ನಲ್ಲಿ ಆದ ಬೆಳವಣಿಗೆಗಳು ತುಂಬ ಸಂಕೀರ್ಣ ಸ್ವರೂಪದ್ದು. ಲಾಕ್‌ನ ದಿನಗಳಲ್ಲಿ, ಹಳ್ಳಿಗಳ ಕಾರ್ಮಿಕರ ಸ್ಥಾನಮಾನಗಳನ್ನು ಜನಪ್ರತಿನಿಧಿ ಸಭೆಯ (ಹೌಸ್ ಆಫ್ ಕಾಮನ್ಸ್) ಅಸ್ತಿತ್ವವು ಉತ್ತಮಪಡಿಸಿತು. ಅವರಿಗೆ ಕೆಲವು ಮುಖ್ಯ ಹಕ್ಕುಗಳು ದೊರೆತು, ಅವರು ತಮ್ಮ ಆಹಾರವನ್ನು ತಕ್ಕಮಟ್ಟಿಗೆ ತಾನೇ ಬೆಳೆದುಕೊಳ್ಳುವ

ಅವಕಾಶವುಂಟಾಯಿತು. ಈ ಪದ್ಧತಿಯು ಮಧ್ಯಯುಗಗಳಿಂದ ಉಳಿದುಕೊಂಡು ಬಂದುದು, ಮತ್ತು ಅದನ್ನು ಆಧುನಿಕ ಮನೋಭಾವದವರು ಒಪ್ಪದವರಂತೆ ನೋಡಿದರು; ಉತ್ಪಾದನೆಯ ದೃಷ್ಟಿಕೋನದಿಂದ ಅದು ವ್ಯರ್ಥವೆಂದವರು ಭಾವಿಸಿದರು. ಅದಕ್ಕನುಗುಣವಾಗಿ, ಊರೊಟ್ಟಿನ ಜಮೀನಿನ ವಶಕ್ಕಾಗಿ (ಎನ್‌ಕ್ಲೋಷರ್) ಚಳುವಳಿಯೊಂದು ಎಂಟನೆಯ ಹೆನ್ರಿ ಕಾಲದಿಂದ ಆರಂಭಗೊಂಡು, ಕ್ರಾಮ್‌ವೆಲ್ ಕಾಲವನ್ನೂ ಹಾದು, ೧೭೫೦ ವರೆಗೂ ಮುಂದುವರಿಯಿತು. ಆ ಕಾಲದ ಬಳಿಕ, ಸುಮಾರು ತೊಂಬತ್ತು ವರ್ಷಗಳ ಕಾಲ, ಒಂದಾದ ಮೇಲೊಂದರಂತೆ ಊರೊಟ್ಟಿನ ಜಮೀನನ್ನು ವಶಪಡಿಸಿಕೊಂಡು ಸ್ಥಳೀಯ ಭೂಮಾಲೀಕರಿಗೆ ನೀಡಲಾಯಿತು. ಇಂತಹದು ಪ್ರತಿಯೊಂದು ವಶಪಡಿಸಿಕೊಳ್ಳುವಿಕೆಗೂ ಸಂಸತ್ತಿನಲ್ಲಿ ಮಸೂದೆ ಒಪ್ಪಿತವಾಗಬೇಕಾಗಿತ್ತು; ಮತ್ತು ಸಂಸತ್ತಿನ ಎರಡೂ ಸದನಗಳನ್ನು ನಿಯಂತ್ರಿಸುತ್ತಿದ್ದ ಶ್ರೀಮಂತರು, ನಿರ್ದಾಕ್ಷಿಣ್ಯವಾಗಿ ಕೃಷಿ ಕಾರ್ಮಿಕರನ್ನು ಹಸಿವಿನ ಪಾತಾಳಕ್ಕೆ ನೂಕಿ ತಮ್ಮ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಂಡರು. ಕ್ರಮೇಣ, ಕೈಗಾರಿಕೆಗಳ ಬೆಳವಣಿಗೆಯಿಂದಾಗಿ, ಕೃಷಿ ಕಾರ್ಮಿಕರ ಪರಿಸ್ಥಿತಿಯು ಉತ್ತಮಗೊಂಡಿತು, ಇಲ್ಲದಿದ್ದರೆ ಅವರು ನಗರಗಳಿಗೆ ವಲಸೆ ಹೋಗುವುದನ್ನು ತಪ್ಪಿಸಲಾಗುತ್ತಿರಲಿಲ್ಲ. ಸದ್ಯಕ್ಕೆ, ಲಾಯ್ಡ್ ಜಾರ್ಜ್‌ನಿಂದಾದ ತೆರಿಗೆಪದ್ಧತಿಯ ಪರಿಣಾಮವಾಗಿ, ಶ್ರೀಮಂತವರ್ಗವು ತಮ್ಮ ಗ್ರಾಮೀಣ ಆಸ್ತಿಯ ಬಹುಪಾಲನ್ನು ಬಿಟ್ಟುಕೊಡಬೇಕಾದ ಪರಿಸ್ಥಿತಿಯುಂಟಾಯಿತು. ಆದರೆ ನಗರಗಳಲ್ಲಿನ ಕೈಗಾರಿಕೆಗಳ ಆಸ್ತಿಯನ್ನು ಹೊಂದಿದ್ದವರು ತಮ್ಮ ಜಮೀನುಗಳನ್ನು ಹೊಂದಿರಲು ಅವಕಾಶ ಮಾಡಿಕೊಂಡರು. ಯಾವುದೇ ಕ್ಷಿಪ್ರ ಕ್ರಾಂತಿ ನಡೆಯಲಿಲ್ಲ, ಆದರೆ ನಿಧಾನವಾಗಿ ಬದಲಾವಣೆಗಳಾದುವು, ಅದು ಈಗಲೂ ಮುಂದುವರಿದಿದೆ. ಈಗ ಇನ್ನೂ ಶ್ರೀಮಂತರಾಗಿರುವವರು ನಗರದ ಕೈಗಾರಿಕೆಗಳ ಆಸ್ತಿಯಿಂದ ಹಾಗೆ ಉಳಿಯುವಂತಾಗಿದೆ.

ಈ ದೀರ್ಘ ಬೆಳವಣಿಗೆಯು, ರಷ್ಯಾವನ್ನು ಹೊರತುಪಡಿಸಿ, ಲಾಕ್ ತತ್ವಗಳಿಗನುಸಾರವಾಗಿದೆ. ವಿಚಿತ್ರವೆನಿಸುವುದೆಂದರೆ, ಅವನ ತತ್ವಗಳು ಅನುಷ್ಠಾನಕ್ಕೆ ಬರುವ ಮುಂಚೆ ಇಷ್ಟೊಂದು ಕ್ರಾಂತಿಗಳು ನಡೆಯಬೇಕಾದಂತಹ ಸಿದ್ಧಾಂತಗಳನ್ನು ಮಂಡಿಸಿದ ಎನ್ನುವುದು, ಮತ್ತು ತನ್ನ ಕಾಲದಲ್ಲಿದ್ದ ಪದ್ಧತಿಯು ನ್ಯಾಯಯುತವಾದುದಲ್ಲ, ಅಥವಾ ಅದು ತಾನು ಪರಿಕಲ್ಪಿಸಿಕೊಂಡ ವ್ಯವಸ್ಥೆಗಿಂತ ಭಿನ್ನವಾದುದು ಎಂಬುದರ ಸುಳಿವನ್ನೂ ಕೊಡದಿರುವುದು.

ಮೌಲ್ಯದ ಕಾರ್ಮಿಕ ಸಿದ್ಧಾಂತವನ್ನು (ಲೇಬರ್ ಥಿಯರಿ ಆಫ್ ವ್ಯಾಲ್ಯೂ) – ಅಂದರೆ ಉತ್ಪನ್ನವೊಂದರ ಬೆಲೆಯು ಅದನ್ನು ತಯಾರಿಸಲು ಆವಶ್ಯಕವಾದ ಶ್ರಮವನ್ನು ಅವಲಂಬಿಸಿರುವುದು – ಕೆಲವರು ಕಾರ್ಲ್ ಮಾರ್ಕ್ಸ್‌ನದು ಎಂದೂ

ಮತ್ತೆ ಕೆಲವರು ರೆಕಾರ್ಡೋದು ಎಂದೂ ಎನ್ನುತ್ತಾರೆ, ಆದರೆ ಅದು ಮೂಲತಃ ಇರುವುದು ಲಾಕ್‌ನಲ್ಲಿ; ಅದು ಸೂಚಿತವಾದುದು ಆಕ್ವಿನಾಸ್‌ನವರೆಗೂ ಚಾಚಿಕೊಳ್ಳುವ ಅವನ ಪೂರ್ವಿಕರ ಸಾಲಿನಿಂದ. ಸೂಕ್ಷ್ಮ ತರ್ಕವನ್ನು ಅಡಕವಾಗಿ ಟಾನಿ ಹೇಳುವಂತೆ:

'ಆ ವಾದದ ಸಾರವೆಂದರೆ, ತಾನು ಮಾಡುವ ವಸ್ತುಗಳಿಗೆ ಸೂಕ್ತ ಬೆಲೆಯನ್ನು ಕರಕುಶಲಿಗಳು ಅಥವಾ ಅವುಗಳನ್ನು ಸಾಗಿಸುವ ವ್ಯಾಪಾರಿಗಳು ಮುಂದಿಡಬೇಕು, ಯಾಕೆಂದರೆ ಅವರಿಬ್ಬರೂ ತಮ್ಮ ವೃತ್ತಿಗಳ ಮೂಲಕ ಅವುಗಳ ಉಪಯುಕ್ತತೆಯಲ್ಲಿ ಸಮಾನಭಾಗಿಗಳು. ಕ್ಷಮಿಸಲಾಗದ ಪಾಪವೆಂದರೆ ಮಧ್ಯವರ್ತಿ ಅಥವಾ ದಳ್ಳಾಳಿಯದು, ಅವನು ವ್ಯಕ್ತಿಗತ ಲಾಭವನ್ನು ಸಾರ್ವಜನಿಕ ಆವಶ್ಯಕತೆಗಳನ್ನು ಸುಲಿಗೆ ಮಾಡಿ ಕಿತ್ತುಕೊಳ್ಳುತ್ತಾನೆ. ಆಕ್ವಿನಾಸ್‌ನ ಸಿದ್ಧಾಂತಗಳ ನಿಜವಾದ ಉತ್ತರಾಧಿಕಾರಿಯೆಂದರೆ ಮೌಲ್ಯದ ಕಾರ್ಮಿಕ ಸಿದ್ಧಾಂತ. ಆ ಬೋಧಕ ಪರಂಪರೆಯಲ್ಲಿ ಕೊನೆಯವನು ಕಾರ್ಲ್ ಮಾರ್ಕ್ಸ್.'

ಮೌಲ್ಯದ ಕಾರ್ಮಿಕ ಸಿದ್ಧಾಂತವು ಎರಡು ಮುಖಗಳನ್ನು ಹೊಂದಿದೆ: ಒಂದು ನೈತಿಕವಾದುದಾದರೆ, ಮತ್ತೊಂದು ಆರ್ಥಿಕವಾದದ್ದು. ಅಂದರೆ, ಉತ್ಪನ್ನವೊಂದರ ಬೆಲೆಯು ಅದರ ಉತ್ಪಾದನೆಗೆ ಬಳಕೆಯಾದ ಶ್ರಮಕ್ಕೆ ಅನುಗುಣವಾಗಿರಬೇಕು, ಅಥವಾ ಶ್ರಮವು ಬೆಲೆಯನ್ನು ನಿರ್ಧರಿಸುತ್ತದೆ ಎಂಬುದು. ಲಾಕ್ ಗುರುತಿಸುವಂತೆ, ಶ್ರಮಸಿದ್ಧಾಂತದ ಎರಡನೆಯ ಅಂಶವು ಸ್ಥೂಲವಾಗಿ ಮಾತ್ರ ನಿಜ. ಬೆಲೆಯ ಹತ್ತನೇ ಒಂಬತ್ತು ಭಾಗವು ಶ್ರಮದಿಂದ ಬಂದುದು; ಆದರೆ ಉಳಿದ ಹತ್ತನೇ ಒಂದಂಶದ ಬಗ್ಗೆ ಅವನು ಏನೂ ಹೇಳುವುದಿಲ್ಲ. ಅವನು ಇದಕ್ಕಾಗಿ ನೀಡುವ ನಿದರ್ಶನವು ಇಂಡಿಯನ್‌ರು ಆಕ್ರಮಿಸಿರುವ ಅಮೆರಿಕದ ಭೂಮಿಗೆ ಸಂಬಂಧಿಸಿದ್ದು, ಆದರೆ ಅದನ್ನು ಉಳುವುದಿಲ್ಲವಾದ್ದರಿಂದ, ಅದಕ್ಕೆ ಬೆಲೆಯೇ ಇಲ್ಲ. ಅದರಲ್ಲಿ ಕೆಲಸಮಾಡಲು ತೊಡಗುವ ಮುಂಚೆ ಹಾಗೆ ಮಾಡಲು ಇಷ್ಟಪಟ್ಟಾಗ ಭೂಮಿಗೆ ಬೆಲೆಯು ಬರುತ್ತದೆ ಎಂಬುದನ್ನವನು ತಿಳಿದಂತೆ ತೋರುವುದಿಲ್ಲ. ನೀವು ಹೊಂದಿರುವ ಮರಳುಗಾಡಿನ ಭೂಮಿಯ ತುಣುಕೊಂದರಲ್ಲಿ ಬೇರೊಬ್ಬನು ತೈಲನಿಕ್ಷೇಪವಿರುವುದನ್ನು ಪತ್ತೆ ಹಚ್ಚಿದರೆ, ಅದರಲ್ಲಿ ಯಾವ ಕೆಲಸವನ್ನೂ ಮಾಡದೆ ಒಳ್ಳೆಯ ಬೆಲೆಗೆ ಅದನ್ನು ಮಾರಬಹುದು. ಅವನ ಕಾಲದಲ್ಲಿ ಸಾಮಾನ್ಯವಾಗಿದ್ದಂತೆ, ಅವನು ಅಂತಹ ಸಂದರ್ಭಗಳನ್ನು ಕಲ್ಪಿಸಿಕೊಳ್ಳುವುದಿಲ್ಲ, ಅವನ ಗಮನವಿರುವುದು ಬೇಸಾಯದ ಕಡೆಗೆ ಮಾತ್ರ. ಅವನು ಇಷ್ಟಪಡುವ ರೈತಾಪಿ ಒಡೆತನವು ಭಾರಿ ಪ್ರಮಾಣದ ಗಣಿಗಾರಿಕೆಯಂತಹ ಸಂದರ್ಭಗಳಲ್ಲಿ ಅನ್ವಯವಾಗುವುದಿಲ್ಲ, ಯಾಕೆಂದರೆ ಅದಕ್ಕೆ ತುಂಬ ದುಬಾರಿ ಸಲಕರಣೆಗಳೂ ಕೆಲಸಗಾರರೂ ಆವಶ್ಯಕ.

ತನ್ನ ಶ್ರಮದಿಂದ ಉತ್ಪನ್ನವಾದ ವಸ್ತುವಿನ ಮೇಲೆ ವ್ಯಕ್ತಿಗೆ ಹಕ್ಕಿರುತ್ತದೆ ಎಂಬ

ತತ್ವವು ಕೈಗಾರಿಕಾ ನಾಗರಿಕತೆಯಲ್ಲಿ ನಿರುಪಯುಕ್ತವಾಗುತ್ತದೆ. ಫೋರ್ಡ್ ಕಾರುಗಳ ಉತ್ಪಾದನೆಯ ಒಂದು ಹಂತದಲ್ಲಿ ನೀವು ತೊಡಗಿಕೊಂಡಿದ್ದೀರಿ ಎಂದು ಭಾವಿಸೋಣ, ಆಗ ನಿಮ್ಮ ಶ್ರಮವು ಕಾರುಗಳ ಉತ್ಪಾದನೆಗೆ ಬೇಕಾದ ಒಟ್ಟು ಶ್ರಮದ ಎಷ್ಟನೇ ಭಾಗ ಎಂದು ಯಾರು ತಾನೇ ಬೆಲೆಗಟ್ಟಬಹುದು? ಅಥವಾ ಸರಕು ಸಾಗಣೆ ಮಾಡುವ ರೈಲ್ವೆ ಕಂಪನಿಯಲ್ಲಿ ನೀವೊಬ್ಬರು ನೌಕರರೆಂದು ಭಾವಿಸೋಣ; ಸರಕುಗಳ ಉತ್ಪಾದನೆಯಲ್ಲಿ ನಿಮ್ಮ ಶ್ರಮದ ಪಾಲೆಷ್ಟು ಎಂದು ಯಾರು ತಾನೇ ನಿರ್ಧರಿಸಬಲ್ಲರು? ಇಂತಹ ಪರಿಗಣನೆಗಳು, ಶ್ರಮಶೋಷಣೆಯನ್ನು ತಡೆಗಟ್ಟಬಯಸುವವರನ್ನು, ನಿಮ್ಮ ಉತ್ಪಾದನೆಯ ಮೇಲಿನ ನಿಮ್ಮ ಹಕ್ಕನ್ನು ಬಿಟ್ಟು ಉತ್ಪಾದನೆ ಮತ್ತು ಹಂಚಿಕೆಗಳನ್ನು ಹೆಚ್ಚು ಸಾಮಾಜಿಕತೆಯ ವಿಧಾನದಲ್ಲಿ ಸಂಘಟಿಸುವತ್ತ ದೂಡುತ್ತದೆ.

ಮೌಲ್ಯದ ಕಾರ್ಮಿಕ ಸಿದ್ಧಾಂತವನ್ನು ಸಾಮಾನ್ಯವಾಗಿ ಪರಭಕ್ಷಕರೆಂದು (ಪ್ರಿಡೇಟರ್) ಪರಿಗಣಿಸುವ ವರ್ಗದ ವಿರುದ್ಧ ದ್ವೇಷಸಾಧನೆಯಲ್ಲಿ ಸಮರ್ಥಿಸಲಾಗುತ್ತದೆ. ಮತಧರ್ಮಶಾಸ್ತ್ರಜ್ಞರು ಸಾಲಿಗನನ್ನು, ಅಂತಹವರು ಸಾಮಾನ್ಯವಾಗಿ ಯೆಹೂದಿಗಳು, ವಿರೋಧಿಸುವ ಸಂದರ್ಭಗಳಲ್ಲಿ ಅದನ್ನು ಬಳಸಿದರು. ರಿಕಾರ್ಡೋ ಅದನ್ನು ಭೂಮಿಯೊಡೆಯರ ವಿರುದ್ಧ ಬಳಸುತ್ತಾನೆ, ಮಾರ್ಕ್ಸ್ ಬಂಡವಾಳಶಾಹಿಗಳ ವಿರುದ್ಧ. ಆದರೆ ಲಾಕ್ ಅದನ್ನು, ಯಾವುದೇ ವರ್ಗದ ವಿರೋಧವೂ ಇಲ್ಲದೆ, ಗುರಿಯಿಲ್ಲದೆ ಬಳಸುವಂತೆ ತೋರುತ್ತದೆ. ಅವನ ದ್ವೇಷವಿದ್ದುದು ರಾಜರ ಬಗ್ಗೆ ಮಾತ್ರ, ಆದರೆ ಅದಕ್ಕೂ ಅವನ ಬೆಲೆಯ ಪರಿಕಲ್ಪನೆಗೂ ಸಂಬಂಧವೇ ಇಲ್ಲ.

ಲಾಕ್‌ನ ಕೆಲವು ಅಭಿಪ್ರಾಯಗಳು ಎಷ್ಟು ವಿಚಿತ್ರವಾದುವೆಂದರೆ, ಅವು ಅರ್ಥಪೂರ್ಣ ಎಂದು ಹೇಳಲು ನನಗೆ ಗೊತ್ತೇ ಆಗುವುದಿಲ್ಲ. ತಾನು ಮತ್ತು ತನ್ನ ಕುಟುಂಬದವರು ತಿಂದು ಉಳಿದುದು ಕೊಳೆಯುವ ಅವಕಾಶವಿರುವಷ್ಟು ಹೆಚ್ಚಿನ ಪ್ಲಮ್ ಹಣ್ಣುಗಳನ್ನು ವ್ಯಕ್ತಿಯು ಹೊಂದಿರಬಾರದು, ಆದರೆ ನ್ಯಾಯಯುತವಾಗಿ ಹೊಂದಿರಬಹುದಾದಷ್ಟು ಚಿನ್ನ ಮತ್ತು ವಜ್ರಗಳನ್ನು ಅವನು ಹೊಂದಿರಬಹುದು, ಯಾಕೆಂದರೆ ಅವು ಕೆಡುವುದಿಲ್ಲ, ಎಂದವನು ಹೇಳುತ್ತಾನೆ. ಆದರೆ ಹೆಚ್ಚುವರಿ ಪ್ಲಮ್ ಹಣ್ಣುಗಳನ್ನು ಹೊಂದಿರುವವನು ಅವು ಕೊಳೆಯುವ ಮುಂಚೆ ಮಾರಬಹುದಲ್ಲವೇ ಎಂಬ ಯೋಚನೆ ಅವನಿಗೆ ಬರುವುದೇ ಇಲ್ಲ.

ಕೆಡಲಾರದ ಬೆಲೆಬಾಳುವ ಲೋಹಗಳ ಬಗ್ಗೆ ಅವನು ಸಾಕಷ್ಟು ಚಿಂತಿಸುತ್ತಾನೆ, ಅದೇ ಹಣ ಮತ್ತು ಆಸ್ತಿಯ ಅಸಮಾನತೆಯ ಆಕರವೆಂದೂ ಅವನು ಹೇಳುತ್ತಾನೆ. ಆರ್ಥಿಕ ಅಸಮಾನತೆಯನ್ನವನು ಅಮೂರ್ತವೂ ಸಂಶಯಾತ್ಮಕವೂ ಆದ ವಿಷಾದಭರಿತ ದೃಷ್ಟಿಯಿಂದ ನೋಡುತ್ತಾನೆಯೇ ಹೊರತು ಅದನ್ನು ಹೋಗಲಾಡಿಸಲು ಯಾವ ಸಮಂಜಸ ವಿಧಾನಗಳನ್ನನುಸರಿಸಬಹುದು ಎಂಬುದರ ಬಗ್ಗೆ

ಆಲೋಚಿಸುವುದಿಲ್ಲ. ತನ್ನ ಕಾಲದ ಎಲ್ಲ ಬುದ್ಧಿವಂತರಂತೆ ಅವನೂ, ಮುಖ್ಯವಾಗಿ ಕಲೆ ಮತ್ತು ಸಾಹಿತ್ಯಗಳ ಪೋಷಕರಾದ ಹಣವಂತರಿಂದ ನಾಗರಿಕತೆಯ ಲಾಭಗಳು, ಪ್ರಯೋಜನಕಾರಿಯಾಗಿವೆ ಎಂಬ ಬಗ್ಗೆ ಪ್ರಭಾವಿತನಾದಂತೆ ಕಂಡುಬರುತ್ತಾನೆ. ಇದೇ ಭಾವನೆಯು ಆಧುನಿಕ ಅಮೆರಿಕದಲ್ಲಿಯೂ ಇದೆ, ಅಲ್ಲಿ ವಿಜ್ಞಾನ ಮತ್ತು ಕಲೆಗಳು ಬಹುವಾಗಿ ದೊಡ್ಡ ದೊಡ್ಡ ಶ್ರೀಮಂತರನ್ನು ಅವಲಂಬಿಸಿವೆ. ಸ್ವಲ್ಪ ಮಟ್ಟಿಗೆ, ನಾಗರಿಕತೆ ಬೆಳೆದಿರುವುದು ಸಾಮಾಜಿಕ ಅನ್ಯಾಯದಿಂದಲೇ. ಈ ಅಂಶವೇ ಸಂಪ್ರದಾಯಪ್ರೀತಿಯಲ್ಲಿನ ಬಹು ಗೌರವಾನ್ವಿತ ಅಂಶ.

ಉ. ಪರಿಮಿತಿಗಳು (ಚೆಕ್ಸ್ ಅಂಡ್ ಬ್ಯಾಲೆನ್ಸಸ್)

ಶಾಸಕಾಂಗ, ಕಾರ್ಯಾಂಗ ಮತ್ತು ಸರ್ಕಾರದ ನ್ಯಾಯ ಪ್ರಕ್ರಿಯೆಗಳು ಸ್ವತಂತ್ರವಾಗಿರಬೇಕೆಂಬುದು ಉದಾರವಾದದ ಒಂದು ಲಕ್ಷಣ; ಇಂಗ್ಲಂಡ್‌ನಲ್ಲಿ ಸ್ಟೂಅರ್ಟ್‌ರ ವಿರೋಧದ ಕಾಲದಲ್ಲಿ ಅದು ತಲೆಯೆತ್ತಿತು, ಅದನ್ನು, ಕನಿಷ್ಠ ಪಕ್ಷ ಶಾಸಕಾಂಗ, ಕಾರ್ಯಾಂಗಗಳ ವಿಚಾರದಲ್ಲಿ, ಲಾಕ್ ಸ್ಪಷ್ಟವಾಗಿ ರೂಪಿಸಿದ್ದಾನೆ. ಅಧಿಕಾರದ ದುರುಪಯೋಗವನ್ನು ತಡೆಯಲು ಶಾಸಕಾಂಗ, ಕಾರ್ಯಾಂಗಗಳು ಸ್ವತಂತ್ರವಾಗಿರಬೇಕು ಎಂದವನು ಹೇಳುತ್ತಾನೆ. ಶಾಸಕಾಂಗ ಎಂದವನು ಹೇಳುವಾಗ ಅವನ ಮನಸ್ಸಿನಲ್ಲಿರುವುದು ಸಂಸತ್ತು, ಮತ್ತು ಅವನು ಕಾರ್ಯಾಂಗ ಎನ್ನುವಾಗ ರಾಜ ಎಂಬುದನ್ನು ನಾವು ಮನಗಾಣಬೇಕು. ತಾರ್ಕಿಕವಾಗಿ ಯಾವುದೇ ಅರ್ಥವಿದ್ದಿರಲಿ, ಭಾವನಾತ್ಮಕವಾಗಿ ಅವನ ಮನಸ್ಸಿನಲ್ಲಿದ್ದುದು ಇದೇ. ಅದಕ್ಕನುಗುಣವಾಗಿ, ಅವನು ಶಾಸಕಾಂಗವನ್ನು ಸಜ್ಜನಿಕೆಯದು ಎಂದೂ, ಕಾರ್ಯಾಂಗವು ಸಾಮಾನ್ಯವಾಗಿ ಕೆಟ್ಟುದು ಎಂದೂ ಭಾವಿಸುತ್ತಾನೆ.

ಅದನ್ನು ಸಮಾಜವು ರದ್ದುಗೊಳಿಸುವಂತಿರಬೇಕು ಎನ್ನುವುದನ್ನು ಬಿಟ್ಟರೆ, ಶಾಸಕಾಂಗವು ಸರ್ವೋಚ್ಚವಾಗಿರಬೇಕು ಎಂಬುದು ಅವನ ಅಭಿಪ್ರಾಯ. ಇಂಗ್ಲಂಡ್‌ನ ಜನಪ್ರತಿನಿಧಿ ಸಭೆ (ಹೌಸ್ ಆಫ್ ಕಾಮನ್ಸ್)ಯಂತೆ ಶಾಸಕಾಂಗವನ್ನು ಜನತೆಯು ಕಾಲಕಾಲಕ್ಕೆ ಆಯ್ಕೆ ಮಾಡಬೇಕು. ಅದನ್ನು ಜನತೆಯು ರದ್ದುಗೊಳಿಸುವಂತಿರಬೇಕು ಎಂಬ ಷರತ್ತು, ಗಂಭೀರವಾಗಿ ಪರಿಗಣಿಸಿದರೆ, ಲಾಕ್‌ನ ಕಾಲದಲ್ಲಿ ರಾಜ ಮತ್ತು ಲಾರ್ಡ್‌ಗಳು ಶಾಸಕಾಂಗದ ಅಧಿಕಾರದಲ್ಲಿ ಭಾಗಿಗಳು ಎಂಬ ನಿಲವನ್ನು ಖಂಡಿಸುತ್ತದೆ.

ಎಲ್ಲ ಸುಸಂಬದ್ಧ ಸರ್ಕಾರಗಳಲ್ಲಿಯೂ, ಶಾಸಕಾಂಗ ಮತ್ತು ಕಾರ್ಯಾಂಗಗಳು ಸ್ವತಂತ್ರವಾಗಿರುತ್ತವೆ ಎಂದು ಲಾಕ್ ಹೇಳುತ್ತಾನೆ. ಅದರಿಂದ ಉದ್ಭವಿಸುವ ಪ್ರಶ್ನೆಯೆಂದರೆ, ಅವುಗಳ ನಡುವೆ ತಿಕ್ಕಾಟವುಂಟಾದರೆ ಏನು ಮಾಡಬೇಕು? ಎಂಬುದು. ಕಾರ್ಯಾಂಗವು ಶಾಸಕಾಂಗವನ್ನು ಸೂಕ್ತ ಸಮಯದಲ್ಲಿ ಸಮಾವೇಶಗೊಳಿಸಲು ವಿಫಲವಾದರೆ, ಕಾರ್ಯಾಂಗವು ಜನತೆಯೊಡನೆ ಸಂಘರ್ಷದಲ್ಲಿ ತೊಡಗುತ್ತದೆ,

ಮತ್ತು ಅದನ್ನು ರದ್ದುಗೊಳಿಸಬಹುದು ಎಂದವನು ಹೇಳುತ್ತಾನೆ. ಈ ಅಭಿಪ್ರಾಯವು ವ್ಯಕ್ತಗೊಂಡದ್ದು ಮೊದಲನೆಯ ಚಾರ್ಲ್ಸ್ ಕಾಲದಲ್ಲಿ ನಡೆದುದನ್ನು ಆಧರಿಸಿ ಎಂಬುದು ಸ್ಪಷ್ಟವಾಗಿದೆ. ೧೬೨೮ ರಿಂದ ೧೬೪೦ ರವರೆಗೆ ಅವನು ಸಂಸತ್ತು ಇಲ್ಲದೆಯೇ ಕಾರ್ಯನಿರ್ವಹಿಸಲು ಪ್ರಯತ್ನಿಸಿದ, ಇಂತಹ ಸನ್ನಿವೇಶವನ್ನು, ಆವಶ್ಯಕವಾದರೆ ಅಂತರ್ಯುದ್ಧದಿಂದ, ತಪ್ಪಿಸಬೇಕು ಎಂಬುದು ಲಾಕ್‌ನ ಅಭಿಪ್ರಾಯ.

'ಅನ್ಯಾಯ ಮತ್ತು ಕಾನೂನುಬಾಹಿರ ಶಕ್ತಿಗಳ ವಿರುದ್ಧವಲ್ಲದೆ ಬಲಪ್ರಯೋಗವನ್ನು ವಿರೋಧಿಸಬೇಕು' ಎಂಬುದು ಅವನ ಸಲಹೆ. ಶಕ್ತಿಗಳು ಯಾವಾಗ 'ಅನ್ಯಾಯ ಮತ್ತು ಕಾನೂನುಬಾಹಿರ'ವಾಗುತ್ತದೆ ಎಂದು ತೀರ್ಮಾನಿಸುವ ಕಾನೂನುಬದ್ಧ ಅಧಿಕಾರವಿರುವ ಸಂಸ್ಥೆಯೊಂದಿಲ್ಲದಿದ್ದರೆ ಈ ತತ್ವವು ಕಾರ್ಯತಃ ನಿರುಪಯುಕ್ತವಾಗುತ್ತದೆ. ಸಂಸತ್ತಿನ ಅನುಮತಿಯಿಲ್ಲದೆ ಮೊದಲನೆಯ ಚಾರ್ಲ್ಸ್ ಹಡಗುಸುಂಕ (ಷಿಪ್‌ಮನಿ)ವನ್ನು ಹೇರಲು ಮಾಡಿದ ಪ್ರಯತ್ನವನ್ನು ಅವನ ವಿರೋಧಿಗಳು ಅನ್ಯಾಯ ಮತ್ತು ಕಾನೂನುಬಾಹಿರ ಎಂದು ಘೋಷಿಸಿದರು. ಅಂತರ್ಯುದ್ಧದ ಸೈನಿಕ ವಿಷಯಕ್ಕೆ ಸಂಬಂಧಿಸಿದಂತೆ ಮಾತ್ರ ಸಂವಿಧಾನದ ಅವನ ಈ ವ್ಯಾಖ್ಯಾನವು ತಪ್ಪು ಎಂದು ತೀರ್ಮಾನಿಸಲಾಯಿತು. ಇದೇ ಬಗೆಯದು ಅಮೆರಿಕದ ಅಂತರ್ಯುದ್ಧದ ಸಂದರ್ಭದಲ್ಲಿಯೂ ನಡೆಯಿತು. ರಾಜ್ಯಗಳಿಗೆ ಸ್ವತಂತ್ರವಾಗುವ ಅಧಿಕಾರವಿದೆಯೇ? ಇದಕ್ಕೆ ಉತ್ತರ ಯಾರಿಗೂ ತಿಳಿಯಲಿಲ್ಲ, ಉತ್ತರದ ಗೆಲವು ಈ ಕಾನೂನು ವಿಷಯವನ್ನು ತೀರ್ಮಾನಿಸಿತು. ಯಾವುದು ನ್ಯಾಯಯುತ ಮತ್ತು ಕಾನೂನುಬದ್ಧ ಎಂಬುದನ್ನು ಪ್ರಾಮಾಣಿಕ ವ್ಯಕ್ತಿಯು ತೀರ್ಮಾನಿಸಬಲ್ಲ ಎಂಬ ಲಾಕ್ ಮತ್ತವನ ಕಾಲದ ಬಹುತೇಕ ಲೇಖಕರಲ್ಲಿ ಕಾಣಬರುವ ನಂಬಿಕೆಯು ಮಾತ್ರ. ಎರಡೂ ಕಡೆಯ ಪಕ್ಷಗಳ ಸಂಖ್ಯಾಬಲವನ್ನು, ಅಥವಾ ಬಾಹ್ಯದಲ್ಲಾಗಲೀ ಮನುಷ್ಯರ ಪ್ರಜ್ಞೆಗಳಲ್ಲಾಗಲೀ ತೊಡಕಿನ ಪ್ರಶ್ನೆಗಳನ್ನು ಅಧಿಕಾರಯುತವಾಗಿ ಬಗೆಹರಿಸುವ ಸಾಮರ್ಥ್ಯವಿರುವ ಒಂದು ನ್ಯಾಯಮಂಡಲಿ (ಟ್ರಿಬ್ಯೂನಲ್)ಯನ್ನು ಸ್ಥಾಪಿಸುವ ತೊಡಕನ್ನು ಒಪ್ಪುವುದಿಲ್ಲ. ಕಾರ್ಯತಃ, ಸಾಕಷ್ಟು ಪ್ರಮುಖವಾಗಿರುವ ಅಂಥ ಪ್ರಶ್ನೆಗಳು ಅಧಿಕಾರದಿಂದ ನೇರವಾಗಿ ಬಗೆಹರಿಸಲಾಗುತ್ತದೆಯೇ ಹೊರತು ನ್ಯಾಯಯುತ ಮತ್ತು ಕಾನೂನುಬದ್ಧ ರೀತಿಯಲ್ಲಲ್ಲ.

ಒಂದು ಹಂತದವರೆಗೆ, ಮುಸುಕಿನ ಭಾಷೆಯಲ್ಲಿ ಲಾಕ್ ಇದನ್ನು ಗುರುತಿಸುತ್ತಾನೆ. ಶಾಸಕಾಂಗ ಮತ್ತು ಕಾರ್ಯಾಂಗಗಳ ನಡುವಣ ವಿವಾದದಲ್ಲಿ, ಕೆಲವು ಸಂದರ್ಭಗಳಲ್ಲಿ, ತೀರ್ಮಾನಿಸಬಲ್ಲ ನ್ಯಾಯಮೂರ್ತಿಯು ಸ್ವರ್ಗದಡಿಯಲ್ಲಿಯೇ ಇಲ್ಲ ಎಂದವನು ಹೇಳುತ್ತಾನೆ. ಸ್ವರ್ಗವು ನೇರವಾಗಿ ತೀರ್ಮಾನಗಳನ್ನು ನೀಡುವುದಿಲ್ಲವಾದ್ದರಿಂದ, ವಸ್ತುತಃ ಇದನ್ನು ಯುದ್ಧದ ಮೂಲಕ ಮಾತ್ರ ತೀರ್ಮಾನಿಸಬಹುದು, ಯಾಕೆಂದರೆ

ಸ್ವರ್ಗವು ಉತ್ತಮ ಉದ್ಧೇಶ ಹೊಂದಿದ ಪಕ್ಷಕ್ಕೆ ಗೆಲವನ್ನು ನೀಡುತ್ತದೆ. ಸರ್ಕಾರದ ಅಧಿಕಾರವನ್ನು ವಿಭಜಿಸುವ ಸಿದ್ಧಾಂತಕ್ಕೆ ಇಂಥದೊಂದು ದೃಷ್ಟಿಕೋನವು ಆವಶ್ಯಕವಾಗುತ್ತದೆ. ಅಂತಹ ಸಿದ್ಧಾಂತವೊಂದನ್ನು ಒಳಗೊಂಡಿರುವ ಸಂವಿಧಾನವು ಪ್ರಚಲಿತವಾಗಿರುವಾಗ, ಆಗಾಗ ನಡೆಯುಬಹುದಾದ ಅಂತಃಕಲಹವನ್ನು ತಡೆಗಟ್ಟಲು ಇರುವ ಏಕೈಕ ಮಾರ್ಗವೆಂದರೆ ಸಂಧಾನ ಮತ್ತು ಸಾಮಾನ್ಯ ಜ್ಞಾನ. ಆದರೆ ಸಂಧಾನ ಮತ್ತು ಸಾಮಾನ್ಯ ಜ್ಞಾನಗಳು ಮನಸ್ಸಿನ ಅಭ್ಯಾಸಗಳು, ಅವುಗಳನ್ನು ಬರಹರೂಪದ ಸಂವಿಧಾನದಲ್ಲಿ ಸೇರಿಸಲು ಸಾಧ್ಯವಿಲ್ಲ.

ಅವನ ಕಾಲದಲ್ಲಿ ಇದೊಂದು ಜ್ವಲಂತ ಪ್ರಶ್ನೆಯಾಗಿದ್ದರೂ, ಲಾಕ್ ನ್ಯಾಯಾಂಗವನ್ನು ಕುರಿತು ಏನನ್ನೂ ಹೇಳದಿರುವುದು ಅಚ್ಚರಿಯ ವಿಷಯ. ಕ್ರಾಂತಿಯವರೆಗೂ, ನ್ಯಾಯಮೂರ್ತಿಗಳನ್ನು ರಾಜನು ಯಾವ ಕ್ಷಣದಲ್ಲಿ ಬೇಕಾದರೂ ತೆಗೆದುಹಾಕಬಹುದಾಗಿತ್ತು; ಇದರ ಪರಿಣಮವಾಗಿ, ಅವರು ಅವನ ಶತ್ರುಗಳಿಗೆ ಶಿಕ್ಷೆ ವಿಧಿಸಿ ಅವನ ಸ್ನೇಹಿತರನ್ನು ಖುಲಾಸೆಗೊಳಿಸಿದರು. ಕ್ರಾಂತಿಯ ನಂತರ, ಸಂಸತ್ತಿನ ಎರಡೂ ಸದನಗಳ ಒಪ್ಪಿಗೆಯಿಲ್ಲದೆ ಅವರನ್ನು ತೆಗೆದುಹಾಕಲು ಸಾಧ್ಯವಾಗದಂತಾಯಿತು. ಇದರಿಂದಾಗಿ ಅವರ ತೀರ್ಪುಗಳು ಕಾನೂನಿಗೆ ಅನುಗುಣವಾಗಿರುವುದೆಂದು ನಿರೀಕ್ಷಿಸಲಾಯಿತು; ವಾಸ್ತವದಲ್ಲಿ, ಪಕ್ಷನಿಷ್ಠೆಯನ್ನೊಳಗೊಂಡ ವಿಷಯಗಳಲ್ಲಿ, ಅದು ರಾಜಪರವಾದ ನಿಲವಿನ ಸ್ಥಾನದಲ್ಲಿ ಬಂದು ಕೂತಿದೆ, ಅಷ್ಟೆ. ಅದೇನೇ ಆದರೂ, ಎಲ್ಲಿ ಪರಿಮಿತಿಗಳ ತತ್ವವು ಮೇಲುಗೈಯಾಯಿತೋ ಅಲ್ಲೆಲ್ಲ ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗಗಳ ಜೊತೆಗೆ ಸರ್ಕಾರದ ಮೂರನೆಯ ಶಾಖೆಯಾಯಿತು. ಅತ್ಯಂತ ಮುಖ್ಯ ಉದಾಹರಣೆಯೆಂದರೆ, ಸಂಯುಕ್ತ ಸಂಸ್ಥಾನಗಳ ಸರ್ವೋಚ್ಚ ನ್ಯಾಯಾಲಯ.

ಪರಿಮಿತಿಗಳ ಇತಿಹಾಸವು ಕುತೂಹಲಕಾರಿಯಾದುದು.

ಅದರ ಉಗಮಸ್ಥಾನವಾದ ಇಂಗ್ಲಂಡ್‌ನಲ್ಲಿ ಅದರ ಉದ್ದೇಶ ರಾಜನ ಅಧಿಕಾರವನ್ನು ಮಿತಿಗೊಳಿಸುವುದಾಗಿತ್ತು; ಕ್ರಾಂತಿಯವರೆಗೂ ಕಾರ್ಯಾಂಗವು ಅವನ ಸಂಪೂರ್ಣ ಹಿಡಿತದಲ್ಲಿತ್ತು. ಆದರೆ ಕ್ರಮೇಣವಾಗಿ, ಕಾರ್ಯಾಂಗವು ಸಂಸತ್ತನ್ನು ಅವಲಂಬಿಸುವಂತಾಯಿತು, ಯಾಕೆಂದರೆ ಜನಪ್ರತಿನಿಧಿ ಸಭೆಯಲ್ಲಿ ಬಹುಸಂಖ್ಯಾತವಾಗಿರದೆ ಕೇವಲ ಸಚಿವ ಸಂಪುಟವು ಕಾರ್ಯನಿರ್ವಹಿಸಲು ಸಾಧ್ಯವಿರಲಿಲ್ಲ. ಇದರ ಪರಿಣಾಮವಾಗಿ, ಕಾರ್ಯಾಂಗವು ಸಂಸತ್ತು ರೂಪಿಸದಿದ್ದರೂ ಆದು ಆಯ್ಕೆಮಾಡಿದೊಂದು ಸಮಿತಿ ಎಂಬಂತಾಯಿತು; ಇದರ ಪರಿಣಾಮವಾಗಿ, ಶಾಸಕಾಂಗ ಮತ್ತು ಕಾರ್ಯಾಂಗಗಳ ಅಧಿಕಾರಗಳು ಕ್ರಮೇಣ ಕಡಿಮೆ ಕಡಿಮೆ ಸ್ವತಂತ್ರವಾದವು. ಕಳೆದ ಸರಿಸುಮಾರು ಐವತ್ತು ವರ್ಷಗಳಲ್ಲಿ, ಪ್ರಧಾನ ಮಂತ್ರಿಯ ಸಂಸತ್ ವಿಸರ್ಜನೆಯ ಅಧಿಕಾರ ಮತ್ತು ಹೆಚ್ಚಿದ ಪಕ್ಷ ಶಿಸ್ತಿನ ಕಾರಣಗಳಿಂದಾಗಿ,

ಅದನ್ನು ಮೀರಿದ ಬೆಳವಣಿಗೆಯಾಯಿತು. ಈಗ ಯಾವ ಪಕ್ಷವು ಅಧಿಕಾರದಲ್ಲಿರಬೇಕೆಂಬುದು ಸಂಸತ್ತಿನಲ್ಲಿನ ಬಹುಸಂಖ್ಯೆಯು ನಿರ್ಧರಿಸುತ್ತದೆ; ಆದರೆ ಹಾಗೆ ಮಾಡಿದ ಮೇಲೆ, ಅದು ಕಾರ್ಯತಃ ಬೇರೇನನ್ನೂ ನಿರ್ಧರಿಸದಾಯಿತು. ಸರ್ಕಾರವು ಸಂಸತ್ತಿನಲ್ಲಿ ಮಂಡಿತವಾಗದೆ ಸೂಚಿತ ಮಸೂದೆಯಯನ್ನು ಕಾನೂನಿನಂತೆ ಜಾರಿ ಮಾಡಲು ಸಾಧ್ಯವಿಲ್ಲವಾಯಿತು. ಹೀಗೆ ಸರ್ಕಾರವು ಶಾಸಕಾಂಗವೂ ಹೌದು, ಕಾರ್ಯಾಂಗವೂ ಹೌದು, ಅದರ ಅಧಿಕಾರವನ್ನು ಮಿತಿಗೊಳಿಸುವುದು ಆಗಾಗ ನಡೆಯಬೇಕಾದ ಸಾರ್ವತ್ರಿಕ ಚುನಾವಣೆಗಳು ಮಾತ್ರ. ಈ ಪದ್ಧತಿಯು ಲಾಕ್‌ನ ತತ್ವಗಳಿಗೆ ಸಂಪೂರ್ಣ ವ್ಯತಿರಿಕ್ತವಾದುದೆಂಬುದು ಸ್ಪಷ್ಟವಾಗಿದೆ.

ಫ್ರಾನ್ಸ್‌ನಲ್ಲಿ ಈ ಸಿದ್ಧಾಂತವನ್ನು ಮಾಂಟೆಸ್ಕ್ಯೂ ಪ್ರಬಲವಾಗಿ ಪ್ರತಿಪಾದಿಸಿದ, ಅದನ್ನು ಫ್ರೆಂಚ್ ಕ್ರಾಂತಿಯ ಕಾಲದಲ್ಲಿ ಹೆಚ್ಚು ಸೌಮ್ಯ ಪಕ್ಷಗಳು ಎತ್ತಿ ಹಿಡಿದವಾದರೂ ಜಾಕೋಬಿಯನ್‌ರ ಗೆಲವಿನಿಂದಾಗಿ ತಾತ್ಕಾಲಿಕವಾಗಿ ಹಿಂದೆ ಸರಿಯಿತು. ನೆಪೋಲಿಯನ್‌ಗೆ ಅದು ಯಾವುದೇ ಪ್ರಯೋಜನಕ್ಕೆ ಬಾರದಾಯಿತು, ಆದರೆ ಅದು ರಾಜತ್ವ ಪುನಃಸ್ಥಾಪನೆಯ ಕಾಲದಲ್ಲಿ ಪುನರುಜ್ಜೀವಿತಗೊಂಡಿತು, ಆದರೆ ಮೂರನೆಯ ನೆಪೋಲಿಯನ್‌ನ ಅಧಿಕಾರದಿಂದಾಗಿ ಮತ್ತೆ ಕಣ್ಮರೆಯಾಯಿತು. ಅದನ್ನು ೧೮೭೧ ರಲ್ಲಿ ಮತ್ತೆ ಜೀವಂತವಾಗಿಸಲಾಯಿತು, ಇದರಿಂದಾಗಿ ಒಂದು ಸಂವಿಧಾನವನ್ನು ಅಳವಡಿಸಿಕೊಳ್ಳಲು ಕಾರಣವಾಯಿತು, ಅದರ ಪ್ರಕಾರ ರಾಷ್ಟ್ರಾಧ್ಯಕ್ಷನ ಅಧಿಕಾರ ತೀರ ಮೊಟಕಾಗಿ, ಸರ್ಕಾರವು ಸದನಗಳನ್ನು (ಚೇಂಬರ್) ವಿಸರ್ಜಿಸುವ ಅಧಿಕಾರವನ್ನು ಕಳೆದುಕೊಂಡಿತು. ಇದರ ಪರಿಣಾಮವೆಂದರೆ, ಸರ್ಕಾರದ ಬದಲಾಗಿ ಮತ್ತು ಮತದಾರರ ಬದಲಾಗಿ ಹೆಚ್ಚಿನ ಅಧಿಕಾರವನ್ನು ಪ್ರತಿನಿಧಿಸಭೆ (ಚೇಂಬರ್ ಆಫ್ ಡೆಪ್ಯೂಟೀಸ್) ಹೊಂದುವಂತಾದುದು. ಆಧುನಿಕ ಇಂಗ್ಲಂಡ್‌ಗಿಂತ ಅಲ್ಲಿ ಹೆಚ್ಚಿನ ಅಧಿಕಾರ ವಿಭಜನೆ ನಡೆಯಿತಾದರೂ ಲಾಕ್ ತತ್ವಗಳಲ್ಲಿನದಕ್ಕಿಂತ ಕಡಿಮೆ ಪ್ರಮಾಣದಲ್ಲಿಯೇ; ಯಾಕೆಂದರೆ ಶಾಸಕಾಂಗವು ಕಾರ್ಯಾಂಗವನ್ನು ಮಂಕುಗೊಳಿಸುವಂತಾದುದು. ಪ್ರಸ್ತುತ ಯುದ್ಧದ ಬಳಿಕ, ಫ್ರೆಂಚ್ ಸಂವಿಧಾನವು ಹೇಗಿರುತ್ತದೆ ಎಂಬುದನ್ನು ಹೇಳುವುದು ಅಸಾಧ್ಯ.

ಲಾಕ್‌ನ ಅಧಿಕಾರ ವಿಭಜನೆಯ ತತ್ವವು ಸಂಪೂರ್ಣವಾಗಿ ಅನ್ವಯಗೊಂಡಿರುವ ದೇಶವೆಂದರೆ ಸಂಯುಕ್ತ ಸಂಸ್ಥಾನಗಳು; ಅಲ್ಲಿ ಅಧ್ಯಕ್ಷ ಮತ್ತು ಕಾಂಗ್ರೆಸ್‌ಗಳು ಪರಸ್ಪರ ಸಂಪೂರ್ಣ ಸ್ವತಂತ್ರವಾದವು, ಇವೆರಡರಿಂದ ಸ್ವತಂತ್ರವಾಗಿರುವುದು ಸರ್ವೋಚ್ಚ ನ್ಯಾಯಾಲಯ. ಮರೆವಿನಿಂದಾಗಿ, ಸರ್ವೋಚ್ಚ ನ್ಯಾಯಾಲಯವನ್ನು ಸಂವಿಧಾನವು ಶಾಸಕಾಂಗದ ಒಂದು ಭಾಗವಾಗಿಸಿತು, ಯಾಕೆಂದರೆ ಸರ್ವೋಚ್ಚ ನ್ಯಾಯಾಲಯವು ಅಲ್ಲ ಅಂದರೆ ಅಲ್ಲಿ ಯಾವುದೂ ಕಾನೂನಾಗುವುದಿಲ್ಲ. ಅದರ ಅಧಿಕಾರಗಳು ನಾಮಮಾತ್ರವಾಗಿದ್ದು ವಾಸ್ತವವಾಗಿ

ವ್ಯಾಖ್ಯಾನಾತ್ಮಕವಾಗಿ ಮಾತ್ರವಾಗಿರುವುದು ಈ ಅಧಿಕಾರಗಳನ್ನು ಹೆಚ್ಚಿಸುತ್ತದೆ, ಯಾಕೆಂದರೆ ಅದರಿಂದ ಶುದ್ಧ ಕಾನೂನಾತ್ಮಕವೆನ್ನಲಾಗುವ ವಾದಗಳನ್ನು ಟೀಕಿಸುವುದು ಕಷ್ಟಕರವಾಗುತ್ತದೆ. ಸಂವಿಧಾನವು ಒಮ್ಮೆ ಮಾತ್ರ ಶಸ್ತ್ರಸಜ್ಜಿತ ಹೋರಾಟಕ್ಕೆ ಕಾರಣವಾಗಿದೆ ಎಂಬುದು ಅಮೆರಿಕನ್‌ರ ರಾಜಕೀಯ ಸೂಕ್ಷ್ಮಪ್ರಜ್ಞೆಯ ಪ್ರತೀಕವಾಗಿದೆ.

ಒಟ್ಟಾರೆ, ಲಾಕ್‌ನ ರಾಜಕೀಯ ತಾತ್ವಿಕತೆಯು ಕೈಗಾರಿಕಾ ಕ್ರಾಂತಿಯವರೆಗೂ ಉಪಯುಕ್ತವೂ ಸೂಕ್ತವಾದುದೂ ಆಗಿತ್ತು. ಆನಂತರದಲ್ಲಿ, ಪ್ರಮುಖ ಪ್ರಶ್ನೆಗಳನ್ನು ಎದುರಿಸುವುದು ಹೆಚ್ಚು ಹೆಚ್ಚು ಕಷ್ಟಕರವಾಗಿದೆ. ವಿಶಾಲ ವ್ಯಾಪ್ತಿಯ ಸಂಘಟನೆಗಳಲ್ಲಿ ಆಸ್ತಿಯ ಹಕ್ಕು ಲಾಕ್‌ನ ಊಹೆಯನ್ನು ಮೀರಿದೆ. ಸರ್ಕಾರದ ಆವಶ್ಯಕ ಕಾರ್ಯಗಳು – ನಿದರ್ಶನವಾಗಿ, ಶಿಕ್ಷಣ – ಬೃಹತ್ತಾಗಿ ಬೆಳೆದಿವೆ. ರಾಷ್ಟ್ರೀಯತೆಯು, ಕೆಲವು ವೇಳೆ ಆರ್ಥಿಕ ಮತ್ತು ರಾಜಕೀಯ ಅಧಿಕಾರಗಳ ವಿಲೀನದಲ್ಲಿ, ಒಕ್ಕೂಟವನ್ನು ಸಾಧ್ಯವಾಗಿಸಿ ಯುದ್ಧವನ್ನು ಸ್ಪರ್ಧೆಯ ಮುಖ್ಯ ಸಾಧನವನ್ನಾಗಿಸಿದೆ. ಲಾಕ್‌ನ ಊಹಾಪ್ರಪಂಚದಲ್ಲಿನ ಅಧಿಕಾರ ಮತ್ತು ಸ್ವಾತಂತ್ರ್ಯಗಳನ್ನು ಈಗ ಬಿಡಿ ಪ್ರಜೆಯು ಕಳೆದುಕೊಂಡಿದ್ದಾನೆ. ನಮ್ಮ ಕಾಲವು ಸಂಘಟನೆಯ ಕಾಲ, ಅದರ ಸಂಘರ್ಷಗಳು ಸಂಘಟನೆಗಳ ನಡುವಿನವು, ವ್ಯಕ್ತಿಗಳ ನಡುವಿನವಲ್ಲ. ಲಾಕ್ ಹೇಳುವಂತೆ, ಪ್ರಕೃತಿ ಸ್ಥಿತಿಯು ದೇಶಗಳ ನಡುವೆ ಈಗಲೂ ಅಸ್ತಿತ್ವದಲ್ಲಿದೆ. ಸರ್ಕಾರದ ಉದ್ದೇಶಿತ ಸೌಲಭ್ಯಗಳನ್ನು ಪಡೆಯಬೇಕಾದರೆ, ಹೊಸದಾದ ಅಂತಾರಾಷ್ಟ್ರೀಯ ಸಾಮಾಜಿಕ ಒಪ್ಪಂದವು ಆವಶ್ಯಕವಾಗಿದೆ. ಅಂತಾರಾಷ್ಟ್ರೀಯ ಸರ್ಕಾರವು ಒಂದೊಮ್ಮೆ ಸೃಷ್ಟಿತವಾದರೆ, ಲಾಕ್ ಸಿದ್ಧಾಂತದ ಬಹುಭಾಗವು, ಖಾಸಗಿ ಆಸ್ತಿಯ ವಿಚಾರದಲ್ಲಿನ ಅಲ್ಲಿನ ಅಂಶದ ಹೊರತು, ಮತ್ತೆ ಅನ್ವಯಯೋಗ್ಯವಾಗುತ್ತದೆ.

೦

೧೫
ಲಾಕ್‌ನ ಪ್ರಭಾವ

ಲಾಕ್‌ನ ಕಾಲದಿಂದ ಇಲ್ಲಿಯವರೆಗೂ, ಯೂರೋಪ್‌ನಲ್ಲಿ ಅನೇಕ ಬಗೆಯ ತತ್ವಜ್ಞಾನಗಳು ಹುಟ್ಟಿಕೊಂಡಿವೆ; ಮತ್ತು ಅವುಗಳಲ್ಲಿ ಒಂದು ತನ್ನ ಸಿದ್ಧಾಂತ ಮತ್ತು ವಿಧಾನಗಳಿಗೆ ಲಾಕ್‌ಗೆ ಋಣಿಯಾಗಿದೆ, ಮತ್ತೊಂದು ಮೊದಲಿಗೆ ಡೆಕಾರ್ಟೆಯಿಂದಲೂ, ಆನಂತರ ಕ್ಯಾಂಟ್‌ನಿಂದಲೂ ಸಾಧಿತವಾಗಿದ್ದು. ತಾನು ತನ್ನ ತತ್ವಜ್ಞಾನದಲ್ಲಿ ಡೆಕಾರ್ಟೆಯಿಂದ ಸಾಧಿತವಾದ ಹಾಗೂ ಲಾಕ್‌ನಿಂದ ಸಾಧಿತವಾದವುಗಳನ್ನು ಸಂಶ್ಲೇಷಣೆಗೊಳಿಸಿದ್ದೇನೆ ಎಂದು ಕ್ಯಾಂಟ್‌ನೇ ಭಾವಿಸಿದ್ದ; ಆದರೆ ಇದನ್ನು ಒಪ್ಪಲಾಗದು, ಕನಿಷ್ಠ ಪಕ್ಷ, ಐತಿಹಾಸಿಕ ದೃಷ್ಟಿಯಿಂದ; ಯಾಕೆಂದರೆ ಕ್ಯಾಂಟ್‌ನ ಅನುಯಾಯಿಗಳು ಲಾಕ್‌ನ ಬದಲಿಗೆ ಡೆಕಾರ್ಟೆಯ ಪರಂಪರೆಗೆ ಸೇರಿದವರು. ಲಾಕ್‌ನ ಉತ್ತರಾಧಿಕಾರಿಗಳಲ್ಲಿ ಮೊದಲನೆಯವರೆಂದರೆ ಬರ್ಕ್ಲೀ ಮತ್ತು ಹ್ಯೂಮ್; ಎರಡನೆಯವರಾಗಿ ರೂಸೋನ ಪಂಥಕ್ಕೆ ಸೇರದ ಫ್ರೆಂಚ್ ತತ್ವಜ್ಞಾನಿಗಳು; ಮೂರನೆಯವರು ಬೆಂಥಮ್ ಮತ್ತು ತಾತ್ವಿಕ ತೀವ್ರಗಾಮಿಗಳು; ನಾಲ್ಕನೆಯವರು, ಯೂರೋಪ್ ತತ್ವಜ್ಞಾನಗಳನ್ನೊಳಗೊಂಡ, ಮಾರ್ಕ್ಸ್ ಮತ್ತವನ ಶಿಷ್ಯರು. ಆದರೆ ಮಾರ್ಕ್ಸ್‌ನ ವಿಧಾನವು ಸಾರಸಂಗ್ರಹಿಯಾದದ್ದು, ಹೀಗಾಗಿ ಅದರ ಬಗೆಗಿನ ಯಾವುದೇ ಸರಳ ಹೇಳಿಕೆಯು ಖಂಡಿತವಾಗಿ ತಪ್ಪಾಗಿರುತ್ತದೆ; ಹೀಗಾಗಿ ನಾನು ಅವನನ್ನು ಒತ್ತಟ್ಟಿಗಿರಿಸಿ, ಅವನ ಬಗ್ಗೆ ಆನಂತರ ಚರ್ಚಿಸುತ್ತೇನೆ.

ಲಾಕ್‌ನ ಕಾಲದಲ್ಲಿಯೇ, ಅವನ ಪ್ರಮುಖ ತಾತ್ವಿಕ ವಿರೋಧಿಗಳು ಕಾರ್ಟೀಸಿಯನ್‌ರು ಮತ್ತು ಲೀಬ್‌ನಿಜ್. ಸಾಕಷ್ಟು ಅತಾರ್ಕಿಕವಾಗಿ, ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳಲ್ಲಿನ ಲಾಕ್ ತತ್ವಜ್ಞಾನದ ಗೆಲವು ವಿಶೇಷವಾಗಿ ನ್ಯೂಟನ್‌ನ ಘನತೆಯ ಕಾರಣದಿಂದಾದುದು. ಡೆಕಾರ್ಟೆಯ ತಾತ್ವಿಕ ಪ್ರಾಮಾಣ್ಯವು ಅವನ ಕಾಲದಲ್ಲಿಯೇ, ಗಣಿತ ಮತ್ತು ಪ್ರಕೃತಿ ತತ್ವಜ್ಞಾನಗಳಲ್ಲಿನ ಅವನ ಕೆಲಸದಿಂದಾಗಿ, ಹೆಚ್ಚಿತು. ಆದರೆ ಆವರ್ತಗಳ ಕುರಿತ ಸಿದ್ಧಾಂತವು ಖಂಡಿತವಾಗಿ ಸೌರಮಂಡಲವನ್ನು ಕುರಿತಂತೆ ನ್ಯೂಟನ್‌ನ ಗುರುತ್ವಾಕರ್ಷಣ ನಿಯಮಕ್ಕಿಂತಲೂ ಕಡಿಮೆ ಮಟ್ಟದ್ದು.

ನ್ಯೂಟನ್‌ನ ವಿಶ್ವಮೂಲ ಸಿದ್ಧಾಂತದ ಗೆಲವು ಜನರಲ್ಲಿ ಡೆಕಾರ್ಟೆಯ ಬಗೆಗಿನ ಗೌರವವನ್ನು ಕಡಿಮೆ ಮಾಡಿ ಇಂಗ್ಲಂಡ್ ಬಗೆಗಿನ ಹೆಮ್ಮೆಯನ್ನು ಹೆಚ್ಚಿಸಿತು. ಈ ಎರಡೂ ಕಾರಣಗಳು ಜನರನ್ನು ಲಾಕ್‌ನ ಬಗ್ಗೆ ಹೆಚ್ಚು ಒಲವನ್ನು ತಾಳುವಂತೆ ಮಾಡಿದವು. ಹದಿನೆಂಟನೆಯ ಶತಮಾನದಲ್ಲಿ, ಹಿಂದಿನ, ಭ್ರಷ್ಟಗೊಂಡ ಮತ್ತು ದುರ್ಬಲವಾದ ನಿರಂಕುಶಾಧಿಕಾರಗಳ ಬಗ್ಗೆ ಬಂಡಾಯ ಮನೋಭಾವ ಹೊಂದಿದ ಬುದ್ಧಿಜೀವಿಗಳಿದ್ದ ಫ್ರಾನ್ಸ್‌ನಲ್ಲಿ ಇಂಗ್ಲಂಡ್ ಅನ್ನು ಸ್ವಾತಂತ್ರ್ಯದ ತವರು ಎಂದು ಭಾವಿಸಲಾಗಿತ್ತು, ಮತ್ತು ರಾಜಕೀಯ ಸಿದ್ಧಾಂತಗಳಿಗಾಗಿ ಲಾಕ್‌ನ ಬಗ್ಗೆ ಒಲವು ಹೊಂದುವಂತಾಯಿತು. ಕ್ರಾಂತಿಯ ಮುಂಚಿನ ಕೊನೆಯ ದಿನಗಳಲ್ಲಿ, ಫ್ರಾನ್ಸ್‌ನಲ್ಲಿ ಲಾಕ್‌ನ ಪ್ರಭಾವವು, ಸ್ವಲ್ಪ ಕಾಲ ಫ್ರಾನ್ಸ್‌ನಲ್ಲಿ ವಾಸಿಸಿ ಅನೇಕ ವಿದ್ವಾಂಸರ ಪರಿಚಯ ಹೊಂದಿದ್ದ, ಹ್ಯೂಮ್‌ನದರಿಂದಾಗಿ ಮತ್ತಷ್ಟು ಗಟ್ಟಿಯಾಯಿತು.

ಫ್ರಾನ್ಸ್‌ಗೆ ಇಂಗ್ಲಿಷ್ ಪ್ರಭಾವವನ್ನು ಸಂವಹಿಸಿದವರಲ್ಲಿ ಪ್ರಮುಖನಾದವನು ವಾಲ್ಟೇರ್.

ಇಂಗ್ಲಂಡ್‌ನಲ್ಲಿ ಲಾಕ್‌ನ ತಾತ್ವಿಕ ಅನುಯಾಯಿಗಳಲ್ಲಿ, ಫ್ರೆಂಚ್ ಕ್ರಾಂತಿಯವರೆಗೆ, ಅವನ ರಾಜಕೀಯ ಸಿದ್ಧಾಂತಗಳ ಬಗ್ಗೆ ಆಸಕ್ತಿ ತಾಳಲಿಲ್ಲ. ಬರ್ಕ್ಲೇಯು ಒಬ್ಬ ಬಿಷಪ್ ಆಗಿದ್ದು ರಾಜಕೀಯದಲ್ಲಿ ಆಸಕ್ತಿ ಹೊಂದಿರಲಿಲ್ಲ; ಹ್ಯೂಮ್ ಒಬ್ಬ ಟೋರಿಯಾಗಿದ್ದು ಬೋಲಿಂಗ್‌ಬ್ರೋಕ್‌ನ ನಾಯಕತ್ವವನ್ನು ಒಪ್ಪಿಕೊಂಡಿದ್ದ. ಅವರ ಕಾಲದಲ್ಲಿ ಇಂಗ್ಲಂಡ್ ರಾಜಕೀಯವಾಗಿ ನಿಷ್ಕ್ರಿಯವಾಗಿತ್ತು; ತತ್ವಜ್ಞಾನಿಯಾದವನು ಜಗತ್ತಿನ ಆಗುಹೋಗುಗಳ ಕಡೆ ಗಮನ ಕೊಡದೆ ತಾತ್ವಿಕತೆಗಳನ್ನು ಮಂಡಿಸುವುದರಲ್ಲಿ ತೃಪ್ತನಾಗಿದ್ದ. ಫ್ರೆಂಚ್ ಕ್ರಾಂತಿಯು ಇದನ್ನು ಬದಲಾಯಿಸಿ, ಶ್ರೇಷ್ಠ ಮನಸ್ಸುಗಳು ಯಥಾಸ್ಥಿತಿಯನ್ನು ವಿರೋಧಿಸುವಂತೆ ಒತ್ತಾಯಿಸಿತು. ಇಷ್ಟಾದರೂ, ಶುದ್ಧ ತತ್ವಜ್ಞಾನದ ಸಂಪ್ರದಾಯವು ಅಖಂಡವಾಗಿತ್ತು. ಶೆಲ್ಲಿಯ *'ನೆಸೆಸಿಟಿ ಆಫ್ ಎಥೀಯಿಸಂ'* – ಈ ಕಾರಣಕ್ಕಾಗಿಯೇ ಅವನನ್ನು ಆಕ್ಸ್‌ಫರ್ಡ್‌ನಿಂದ ಉಚ್ಚಾಟಿಸಿದುದು – ಲಾಕ್‌ನ ಪ್ರಭಾವವನ್ನು ತುಂಬಿಕೊಂಡಿದೆ.[೨೬೬]

ಕ್ಯಾಂಟ್‌ನ *'ಎ ಕ್ರಿಟೀಕ್ ಆಫ್ ಪ್ಯೂರ್ ರೀಸನ್'* ೧೭೮೧ ರಲ್ಲಿ ಪ್ರಕಟವಾಗುವವರೆಗೆ, ಡೆಕಾರ್ಟೆ, ಸ್ಪಿನೋಜ಼ ಮತ್ತು ಲೀಬ್‌ನಿಜ಼್‌ರ ಹಳೆಯ ತಾತ್ವಿಕ ಸಿದ್ಧಾಂತ ಪರಂಪರೆಯನ್ನು ಖಚಿತವಾಗಿ ಹೊಸ ಅನುಭವೈಕವಾದದ ವಿಧಾನವು ಹಿಂದಿಕ್ಕಿತು. ಆದರೆ ಈ ಹೊಸ ವಿಧಾನವು ಯಾವತ್ತೂ ಜರ್ಮನ್ ವಿಶ್ವವಿದ್ಯಾನಿಲಯಗಳಲ್ಲಿ ಉಳಿಯಲಿಲ್ಲ, ಮತ್ತು ೧೭೯೨ ರ ನಂತರ ಅದನ್ನು

೨೬೬ ಉದಾಹರಣೆಗೆ ಶೆಲ್ಲಿಯ ಧ್ಯೇಯವಾಕ್ಯವನ್ನು ನೋಡಿ: 'ಮನಸ್ಸಿಗೆ ಒಂದು ಪ್ರತಿಪಾದನೆಯನ್ನು ನೀಡಿದಾಗ, ಅದು ಒಳಗೊಂಡಿರುವ ಚಿಂತನೆಗಳ ಸುಸಂಬದ್ಧತೆ ಅಥವಾ ಅಥವಾ ಅಸಂಬದ್ಧತೆಯನ್ನು ಪರಿಕಲ್ಪಿಸಿಕೊಳ್ಳುತ್ತದೆ.'

ಕ್ರಾಂತಿಯ ಭಯಾನಕತೆಗೆ ಕಾರಣವೆಂದು ಭಾವಿಸಲಾಯಿತು. ಕಾಲೆರಿಜ್‌ನಂತಹ ತಪ್ಪೊಪ್ಪಿಕೊಂಡ ಕ್ರಾಂತಿಕಾರಿಗಳು ತಮ್ಮ ಫ್ರೆಂಚ್ ನಾಸ್ತಿಕತೆಯ ಬಗೆಗಿನ ವಿರೋಧಕ್ಕೆ ಕ್ಯಾಂಟ್‌ನಲ್ಲಿ ಬೌದ್ಧಿಕ ಬೆಂಬಲವನ್ನು ಕಂಡುಕೊಂಡರು. ಫ್ರೆಂಚ್‌ರನ್ನು ವಿರೋಧಿಸಿದ ಜರ್ಮನ್‌ರಲ್ಲಿ ತಮ್ಮನ್ನು ಬೆಂಬಲಿಸುವ ಜರ್ಮನ್ ತತ್ವಜ್ಞಾನದ ಬಗ್ಗೆ ಸಂತೋಷಗೊಂಡರು. ಫ್ರೆಂಚ್‌ರು ಕೂಡ, ನೆಪೋಲಿಯನ್‌ನ ಪತನಾನಂತರ, ಜಾಕೋಬಿನಿಸಂಗೆ ವಿರುದ್ಧವಾದ ಯಾವುದೇ ಅಸ್ತ್ರದ ಬಗ್ಗೆ ಸಂತೋಷ ತಾಳಿದರು. ಈ ಎಲ್ಲವೂ ಕ್ಯಾಂಟ್‌ನನ್ನು ಬೆಂಬಲಿಸಿದವು.

ಡಾರ್ವಿನ್‌ನಂತೆಯೇ ಕ್ಯಾಂಟ್ ತಾನೇ ಇಷ್ಟಪಡದಿದ್ದಿರಬಹುದಾದ ಚಳುವಳಿಯೊಂದಕ್ಕೆ ಪ್ರೇರಕನಾದ. ಕ್ಯಾಂಟ್ ಉದಾರವಾದಿ, ಪ್ರಜಾಪ್ರಭುತ್ವವಾದಿ, ಶಾಂತಿಪ್ರಿಯನಾದರೂ ಅವನ ತತ್ವಜ್ಞಾನವನ್ನು ಬೆಳೆಸುತ್ತೇವೆಂದು ಹೇಳಿಕೊಂಡವರು ಇವಾವುವೂ ಆಗಿರಲಿಲ್ಲ. ಅಥವಾ, ಅವರು ತಮ್ಮನ್ನು ಉದಾರವಾದಿಗಳೆಂದು ಕರೆದುಕೊಂಡರೂ, ಅವರು ಹೊಸ ಜಾತಿಯ ಉದಾರವಾದಿಗಳಾಗಿದ್ದರು. ರೂಸೋ ಮತ್ತು ಕ್ಯಾಂಟ್‌ರ ಕಾಲದಿಂದ ಉದಾರವಾದದ ಎರಡು ಪಂಥಗಳಿವೆ; ಅವುಗಳನ್ನು ವಾಸ್ತವದೃಷ್ಟಿಯವರ ಮತ್ತು ಮೃದುಹೃದಯಿಗಳ ಪಂಥಗಳು ಎಂದು ಕರೆಯಬಹುದು. ಬೆಂಥಮ್, ರಿಕಾರ್ಡೋ ಮತ್ತು ಮಾರ್ಕ್ಸ್‌ಗಳ ಮೂಲಕ ತಾರ್ಕಿಕ ಹಂತಗಳಿಂದ ಸ್ಟಾಲಿನ್‌ವರೆಗೂ ವಾಸ್ತವದೃಷ್ಟಿಯವರು ಬೆಳೆದರು; ಮತ್ತೊಂದು ತಾರ್ಕಿಕ ಹಂತಗಳ ಮೂಲಕ ಫ್ಹಿಷ್ತೆ, ಬೈರನ್, ಕಾರ್ಲೈಲ್ ಮತ್ತು ನೀಷೆ ಇವರುಗಳ ಮೂಲಕ ಹಿಟ್ಲರ್‌ವರೆಗೂ ಮೃದುಹೃದಯಿಗಳು ಬೆಳೆದರು. ಈ ಹೇಳಿಕೆಯು ಸ್ಥೂಲರೂಪದ್ದೇ ಹೊರತು ಸತ್ಯಸ್ಯ ಸತ್ಯವಲ, ಆದರೆ ಅದೊಂದು ನಕ್ಷೆ, ನೆನಪಿನ ಸಾಧನ. ಚಿಂತನೆಗಳ ಬೆಳವಣಿಗೆಯ ಹಂತಗಳು ಬಹುತೇಕ ಹೆಗೆಲಿಯನ್ ತತ್ವಜಿಜ್ಞಾಸೆಯದು: ಪ್ರತಿ ಹಂತವೂ ಸಹಜವೆನ್ನಿಸುವಂತೆ ಸಿದ್ಧಾಂತಗಳು ತಮಗೆ ವಿರುದ್ಧವಾಗಿ ಬೆಳೆದಿವೆ. ಆದರೆ ಉದ್ದಕ್ಕೂ ಬೆಳೆದಿರುವುದು ಚಿಂತನೆಗಳ ಚಲನಶೀಲತೆಯಿಂದ ಮಾತ್ರವೇ ಅಲ್ಲ; ಉದ್ದಕ್ಕೂ ಅವುಗಳನ್ನು ನಿಯಂತ್ರಿಸಿರುವುದು ಬಾಹ್ಯ ಪರಿಸ್ಥಿತಿಗಳು ಮತ್ತು ಮಾನವ ಮನಸ್ಸುಗಳಲ್ಲಿನ ಅಂತಹ ಪರಿಸ್ಥಿತಿಗಳ ಪ್ರತಿಬಿಂಬಗಳು. ಇದು ನಿಜ ಎನ್ನುವುದು ಒಂದು ಎದ್ದು ಕಾಣುವ ವಸ್ತುಸ್ಥಿತಿಯಿಂದ ವಿದಿತವಾಗುತ್ತದೆ: ಉದಾರವಾದಿ ಚಿಂತನೆಗಳು ಅಮೆರಿಕದಲ್ಲಿ ಈ ಹಂತಗಳನ್ನು ಹೊಂದದೆ ಇಂದಿಗೂ ಲಾಕ್‌ನದರಂತೆಯೇ ಇವೆ.

ರಾಜಕೀಯವನ್ನು ಬದಿಗಿರಿಸಿ, ಈ ಎರಡು ತತ್ವಜ್ಞಾನ ಪಂಥಗಳ ವ್ಯತ್ಯಾಸವನ್ನು ಕುರಿತು ನೋಡೋಣ: ಅವುಗಳನ್ನು ಕ್ರಮವಾಗಿ ಯೂರೋಪ್‌ನದು ಮತ್ತು ಇಂಗ್ಲಂಡ್‌ನದು ಎಂದು ವಿಂಗಡಿಸಬಹುದು.

ಎಲ್ಲಕ್ಕಿಂತ ಮೊದಲಿಗೆ ಇರುವುದು ವಿಧಾನದ ವ್ಯತ್ಯಾಸ. ಬ್ರಿಟಿಷ್ ತತ್ವಜ್ಞಾನವು ಯೂರೋಪ್‌ನದಕ್ಕಿಂತ ಹೆಚ್ಚು ವಿವರಣಾತ್ಮವಾದದ್ದು ಮತ್ತು ತುಂಡುತುಂಡಾದದ್ದು; ಸಾಮಾನ್ಯ ತತ್ವವೊಂದು ಕಾಣಿಸಿದರೂ, ಅದರ ವಿವಿಧ ಅನ್ವಯಗಳನ್ನು ಅನುಗಮನಾತ್ಮಕವಾಗಿ ಸಾಧಿಸಲು ಅದರ ವಿಧಾನವು ತೊಡಗುತ್ತದೆ. ಅನಂತರದ ಗುರುತು ಇಲ್ಲದೆ ಚಿಂತೆಯಿರಲಾರದು ಎಂದು ಹ್ಯೂಮ್ ಹೇಳಿದ ಮೇಲೆ, ತಕ್ಷಣವೇ ಈ ಮುಂದಿನ ಆಕ್ಷೇಪಣೆಯನ್ನು ಪರಿಶೀಲಿಸಲು ತೊಡಗುತ್ತಾನೆ: ಒಂದೇ ರೀತಿಯವಾಗಿದ್ದರೂ ಸರ್ವಸಮವಲ್ಲದ ಬಣ್ಣವೊಂದರ ಎರಡು ಛಾಯೆಗಳನ್ನು ನೀವು ನೋಡುತ್ತಿದ್ದೀರಿ, ಹಾಗೂ ಆ ಎರಡರ ನಡುವಣ ಛಾಯೆಯನ್ನು ಈ ಹಿಂದೆ ನೀವು ಎಂದೂ ಕಂಡಿಲ್ಲ ಎಂದುಕೊಳ್ಳಿ, ಆಗಲೂ ನೀವು ಬಣ್ಣದ ಆ ಛಾಯೆಯನ್ನು ನೀವು ಕಲ್ಪಿಸಿಕೊಳ್ಳಬಲ್ಲಿರಾ? ಈ ಪ್ರಶ್ನೆಗೆ ಅವನು ಯಾವುದೇ ಪರಿಹಾರವನ್ನು ಸೂಚಿಸುವುದಿಲ್ಲ ಮತ್ತು ತನ್ನ ಸಾಮಾನ್ಯ ತತ್ವಕ್ಕೆ ವಿರುದ್ಧವಾದ ನಿಮ್ಮ ನಿರ್ಧಾರವು ಅವನಿಗೆ ಮಾರಕವಾಗುವುದಿಲ್ಲವೆಂದು ಭಾವಿಸುತ್ತಾನೆ, ಯಾಕೆಂದರೆ ತನ್ನ ತತ್ವವು ತಾರ್ಕಿಕವಾದುದಾಗಿರದೆ ಅನುಭವೈಕವಾದುದಾಗಿರುವುದು. ಇದಕ್ಕೆ ವಿದೃಶವಾದುದನ್ನು ತೆಗೆದುಕೊಳ್ಳುವುದಾದರೆ, ಲೀಬ್‌ನಿಝ್ ತನ್ನ ಮೂಲತತ್ವಜ್ಞಾನವನ್ನು ಸ್ಥಾಪಿಸಬಯಸಿದರೆ, ಅವನು ಸ್ಥೂಲವಾಗಿ ಹೀಗೆ ವಾದಿಸುತ್ತಾನೆ: ಸಂಕೀರ್ಣವಾಗಿರುವುದು ಸರಳ ಭಾಗಗಳಿಂದ ಕೂಡಿರಬೇಕು; ಸರಳವಾದುದು ವಿಸ್ತರಣಗೊಳ್ಳಲಾರದು; ಹೀಗಾಗಿ ಪ್ರತಿಯೊಂದೂ ವಿಸ್ತರಣರಹಿತವಾದ ಭಾಗಗಳಿಂದ ಕೂಡಿದೆ. ಆದರೆ ವಿಸ್ತರಣಗೊಳ್ಳಲಾರದ್ದು ಭೌತದ್ರವ್ಯವಾಗಲಾರದು. ಆದ್ದರಿಂದ ವಸ್ತುಗಳ ಆತ್ಯಂತಿಕ ಘಟಕಗಳು ಭೌತದ್ರವ್ಯವಲ್ಲ, ಮತ್ತು ಭೌತದ್ರವ್ಯವಲ್ಲದಿದ್ದರೆ, ಅವು ಮಾನಸಿಕವಾದವು. ಪರಿಣಾಮವಾಗಿ, ಒಂದು ಮೇಜು ಎನ್ನುವುದು ಆತ್ಮಗಳ ವಸಾಹತು.

ವಿಧಾನದ ವ್ಯತ್ಯಾಸದ ಲಕ್ಷಣವನ್ನು ಈ ರೀತಿ ಹೇಳಬಹುದು: ಲಾಕ್ ಅಥವಾ ಹ್ಯೂಮ್‌ನಲ್ಲಿ, ಅನೇಕ ವಸ್ತುಸ್ಥಿತಿಗಳ ವ್ಯಾಪಕ ಸಮೀಕ್ಷೆಯಿಂದ ಸಾಪೇಕ್ಷವಾಗಿ ಸಾಧಾರಣ ತೀರ್ಮಾನವೊಂದಕ್ಕೆ ಬರಬಹುದು; ಆದರೆ ಲೀಬ್‌ನಿಝ್‌ನಲ್ಲಿ, ತಾರ್ಕಿಕ ತತ್ವವೊಂದರ ಮೊನೆಯಂತಹ ಬಿಂದುವಿನ ಮೇಲೆ ನಿಗಮನದ ಪಿರಮಿಡ್‌ನಂತೆ ಪೇರಿಸಿದ ವಿಶಾಲ ಸೌಧವಿರುತ್ತದೆ. ಲೀಬ್‌ನಿಝ್‌ನಲ್ಲಿ ತತ್ವವೊಂದು ಸಂಪೂರ್ಣವಾಗಿ ಸತ್ಯವಾಗಿದ್ದರೆ, ಮತ್ತು ನಿಗಮನವು ಪೂರ್ಣವಾಗಿ ಸಿಂಧುವಾಗಿದ್ದರೆ, ಎಲ್ಲ ಸರಿ; ಆದರೆ ಭವನವೇ ಅಸ್ಥಿರವಾದುದು, ಎಲ್ಲಾದರೂ ಒಂದು ಸಣ್ಣ ದೋಷವಿದ್ದರೆ ಅದು ಕುಸಿದು ಬೀಳುತ್ತದೆ. ಲಾಕ್ ಅಥವಾ ಹ್ಯೂಮ್‌ನಲ್ಲಾದರೋ, ಇದಕ್ಕೆ ವ್ಯತಿರಿಕ್ತವಾಗಿ, ಪಿರಮಿಡ್‌ನ ಬುಡವು ಪರಿವೀಕ್ಷಿಸಿದ ವಸ್ತುಸ್ಥಿತಿಗಳ ಗಟ್ಟಿ ನೆಲದ ಮೇಲೆ ನಿಂತಿದ್ದು, ಅದು ಬರಬರುತ್ತ ಕಿರಿದಾಗುತ್ತ ಹೋಗುವುದು ಮೇಲಕ್ಕೇ

ಹೊರತು ಕೆಳಗಲ್ಲ; ಇದರ ಪರಿಣಾಮವಾಗಿ, ಸಮತೋಲನವು ಸ್ಥಿರವಾಗಿರುತ್ತದೆ, ಅಲ್ಲೊಂದು ಇಲ್ಲೊಂದು ಇರಬಹುದಾದ ದೋಷವನ್ನು, ಒಟ್ಟಾರೆ ವಿನಾಶವಿಲ್ಲದೆ, ಸರಿಪಡಿಸಬಹುದು. ವಿಧಾನಗಳ ಈ ವ್ಯತ್ಯಾಸವು ಅನುಭವೈಕವಾದದ ತತ್ತ್ವಜ್ಞಾನದಲ್ಲಿ ಒಂದಷ್ಟನ್ನು ಅಳವಡಿಸಿಕೊಳ್ಳುವ ಕ್ಯಾಂಟ್‌ನ ಪ್ರಯತ್ನವನ್ನು ಮೀರಿ ಉಳಿದುಕೊಂಡಿತು; ಒಂದು ಕಡೆ, ಡೆಕಾರ್ಟೆಯಿಂದ ಹೆಗೆಲ್‌ವರೆಗೆ, ಮತ್ತೊಂದು ಕಡೆ ಲಾಕ್‌ನಿಂದ ಜಾನ್ ಸ್ಟೂಅರ್ಟ್ ಮಿಲ್‌ವರೆಗೆ ಅದು ಬದಲಾಗದೆ ಹಾಗೆಯೇ ಉಳಿದುಕೊಂಡಿದೆ.

ವಿಧಾನದ ವ್ಯತ್ಯಾಸವು ಇತರ ಅನೇಕ ವ್ಯತ್ಯಾಸಗಳೊಂದಿಗೆ ಸಂಬಂಧಪಟ್ಟಿದೆ; ಮೊದಲಿಗೆ ತತ್ತ್ವಜಿಜ್ಞಾಸೆಯನ್ನು ತೆಗೆದುಕೊಳ್ಳೋಣ.

ಡೆಕಾರ್ಟೆ ದೇವರ ಅಸ್ತಿತ್ವ ಕುರಿತ ತತ್ತ್ವಜಿಜ್ಞಾಸಾತ್ಮಕ ಆಧಾರಗಳನ್ನು ಒದಗಿಸಿದ, ಅವುಗಳಲ್ಲಿ ಅತ್ಯಂತ ಪ್ರಮುಖವಾದುದನ್ನು ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ ಆಗಿದ್ದ ಸಂತ ಆನ್‌ಸೆಲ್ಮ್ ಹನ್ನೊಂದನೆಯ ಶತಮಾನದಲ್ಲಿ ನಿರ್ಮಿಸಿದ್ದ. ಸ್ಪಿನೋಜ಼ನ ದೇವರು ಸರ್ವದೇವಾತ್ಮಕ, ಅದು ಸಂಪ್ರದಾಯವಾದಿಗಳ ದೃಷ್ಟಿಯಲ್ಲಿ ದೇವರೇ ಇಲ್ಲ ಎಂದಂತೆಯೇ; ಅದೇನೇ ಆಗಲಿ, ಸ್ಪಿನೋಜ಼ನ ವಾದಗಳು ಸಾರತಃ ತತ್ತ್ವಜಿಜ್ಞಾಸಾತ್ಮಕವಾದವು, ಅದರ ಮೂಲವನ್ನು (ಅವನಿಗೆ ಇದರ ಅರಿವಿದ್ದಿರಲಾರದಾದರೂ) ಪ್ರತಿಯೊಂದು ಪ್ರತಿಪಾದನೆಗೂ ಒಂದು ಕರ್ತೃ ಮತ್ತು ಒಂದು ವಿಶೇಷಣವಿರಬೇಕು ಎಂಬ ಸಿದ್ಧಾಂತದಲ್ಲಿ ಗುರುತಿಸಬಹುದು. ಲೀಬ್‌ನಿಜ಼್‌ನ ತತ್ತ್ವಜಿಜ್ಞಾಸಾತ್ಮಕ ಮೂಲವೂ ಇದೇ.

ಲಾಕ್‌ನಲ್ಲಿ ಅವನು ಆರಂಭಿಸಿದ ತಾತ್ವಿಕ ದಿಸೆಯು ಇನ್ನೂ ಪೂರ್ತಿ ಬೆಳೆದಿಲ್ಲ; ದೇವರ ಅಸ್ತಿತ್ವ ಕುರಿತಂತೆ ಅವನು ಡೆಕಾರ್ಟೆಯ ಸಿಂಧುವೆನಿಸಿದ ವಾದಗಳನ್ನು ಒಪ್ಪುತ್ತಾನೆ. ಬರ್ಕ್ಲೀ ಸಂಪೂರ್ಣವಾಗಿ ಹೊಸತಾದ ವಾದವನ್ನು ಸೃಷ್ಟಿಸುತ್ತಾನೆ; ಆದರೆ ಹ್ಯೂಮ್ – ಅವನಲ್ಲಿಯೇ ಹೊಸ ತತ್ತ್ವಜ್ಞಾನವು ಪೂರ್ಣಗೊಳ್ಳುವುದು – ತತ್ತ್ವಜಿಜ್ಞಾಸೆಯನ್ನು ಸಂಪೂರ್ಣವಾಗಿ ಅಲ್ಲಗಳೆದ, ಮತ್ತು ತತ್ತ್ವಜಿಜ್ಞಾಸೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತರ್ಕಿಸಿ ಏನನ್ನೇ ಆಗಲಿ ಕಂಡುಕೊಳ್ಳುವುದು ಸಾಧ್ಯವಿಲ್ಲ ಎಂಬ ನಿಲವನ್ನು ತಳೆದಿದ್ದ. ಈ ದೃಷ್ಟಿಕೋನವು ಅನುಭವೈಕವಾದದ ಪಂಥದಲ್ಲಿ ಉಳಿಯಿತು, ಅದೇ ವಿರುದ್ಧ ದೃಷ್ಟಿಕೋನವು, ಸ್ವಲ್ಪ ಪರಿಷ್ಕರಣೆಗೊಂಡು, ಕ್ಯಾಂಟ್ ಮತ್ತವನ ಶಿಷ್ಯರುಗಳಲ್ಲಿ ಉಳಿದುಕೊಂಡಿತು.

ಎರಡೂ ಪಂಥಗಳ ನೀತಿಶಾಸ್ತ್ರದಲ್ಲಿಯೂ ಇಂತಹುದೇ ವ್ಯತ್ಯಾಸವನ್ನು ಕಾಣಬಹುದು.

ಈಗಾಗಲೇ ಗಮನಿಸಿರುವಂತೆ ಲಾಕ್ ಸಂತೋಷವನ್ನು ಒಳ್ಳೆಯದು ಎಂದು ನಂಬಿದ್ದ; ಮತ್ತು ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಈ ದೃಷ್ಟಿಕೋನವು ಅನುಭವೈಕವಾದಿಗಳಲ್ಲಿ ವ್ಯಾಪಕವಾಗಿತ್ತು. ಇದಕ್ಕೆ ವ್ಯತಿರಿಕ್ತವಾಗಿ

ಅವರ ವಿರೋಧಿಗಳು ಸಂತೋಷವು ಅನುದಾತ್ತವಾದುದು ಎಂದು ತಿರಸ್ಕರಿಸಿ, ಹೆಚ್ಚು ಉದಾತ್ತವಾದ ವಿವಿಧ ನೀತಿಸಂಹಿತೆಯನ್ನು ಹೊಂದಿದ್ದರು. ಹಾಬ್ಸ್ ಅಧಿಕಾರಕ್ಕೆ ಬೆಲೆಯಿತ್ತ, ಮತ್ತು ಒಂದು ಹಂತದವರೆಗೂ, ಸ್ಪಿನೋಜ಼ ಹಾಬ್ಸ್ ಅನ್ನು ಅನುಮೋದಿಸಿದ್ದ. ಸ್ಪಿನೋಜ಼ನಲ್ಲಿ ನೀತಿಶಾಸ್ತ್ರದ ಬಗೆಗಿನ ಎರಡು ಪರಸ್ಪರ ವಿರುದ್ಧ ದೃಷ್ಟಿಕೋನಗಳಿದ್ದವು, ಒಂದು ಹಾಬ್ಸ್‌ನದಾದರೆ, ಮತ್ತೊಂದು ಒಳ್ಳೆಯದು ದೇವರೊಡನೆಯ ಆನುಭಾವಿಕ ಐಕ್ಯದಲ್ಲಿರುತ್ತದೆ ಎಂಬುದು. ಲೀಬ್‌ನಿಜ಼್ ನೀತಿಶಾಸ್ತ್ರಕ್ಕೆ ಯಾವುದೇ ಮುಖ್ಯವಾದ ಕೊಡುಗೆಯನ್ನು ನೀಡಲಿಲ್ಲ, ಆದರೆ ಕ್ಯಾಂಟ್ ನೀತಿಶಾಸ್ತ್ರವನ್ನು ಸರ್ವೋತ್ತಮವೆಂದು ಪರಿಗಣಿಸಿ ತನ್ನ ತತ್ವಜಿಜ್ಞಾಸೆಯನ್ನು ನೀತಿಶಾಸ್ತ್ರದ ನೆಲೆಯಲ್ಲಿಯೇ ಸಾಧಿಸಿದ. ಕ್ಯಾಂಟ್‌ನ ನೀತಿಯು ಮುಖ್ಯವಾದುದು, ಯಾಕೆಂದರೆ ಅದು ಉಪಯುಕ್ತತಾವಿರೋಧಿಯಾದುದು ಮತ್ತು ತರ್ಕಸಿದ್ಧವಾಗಿ 'ಉದಾತ್ತ'ವಾದುದು.

ನೀವು ನಿಮ್ಮ ಸೋದರನನ್ನು ಕಂಡರೆ ಪ್ರೀತಿಯಿದ್ದು ಅವನ ಬಗ್ಗೆ ವಾತ್ಸಲ್ಯಪೂರ್ಣವಾಗಿದ್ದರೆ, ಅದೇನೂ ನೈತಿಕವಾಗಿ ದೊಡ್ಡ ಗುಣವೇನಲ್ಲ: ನೈತಿಕ ಗುಣವೆನ್ನಿಸಿಕೊಳ್ಳುವುದು ನೀತಿಶಾಸ್ತ್ರವು ವಿಧಿಸುವ ಕಾರ್ಯವನ್ನು ಮಾಡಿದಾಗ ಮಾತ್ರ. ಸಂತೋಷವು ಒಳ್ಳೆಯದಲ್ಲವಾದರೂ, ಸದ್ಗುಣಿಗಳು ಯಾತನೆಪಡುವುದು ಅನ್ಯಾಯವೇ ಸರಿ ಎಂದು ಕ್ಯಾಂಟ್ ಹೇಳುತ್ತಾನೆ. ಆದರೆ ಜಗತ್ತಿನಲ್ಲಿ ಹೀಗೆ ಆಗಾಗ ಆಗುವುದರಿಂದ, ಸಾವಿನ ಬಳಿಕ ಅವರಿಗೆ ಫಲ ನೀಡುವ ಮತ್ತೊಂದು ಲೋಕವಿರಬೇಕು, ಮತ್ತು ಮುಂದಿನ ಲೋಕದಲ್ಲಿ ಅವರಿಗೆ ನ್ಯಾಯವೊದಗಿಸುವ ದೇವರೊಬ್ಬ ಇರಲೇ ಬೇಕು. ದೇವರ ಅಸ್ತಿತ್ವ ಮತ್ತು ಅಮರತ್ವಗಳನ್ನು ಕುರಿತ ಹಿಂದಿನ ಎಲ್ಲ ತತ್ವಜಿಜ್ಞಾಸಾತ್ಮಕ ವಾದಗಳನ್ನವನು ತಿರಸ್ಕರಿಸುತ್ತಾನೆ; ತನ್ನ ಹೊಸ ನೈತಿಕ ವಾದವು ವಿವಾದಾತೀತವಾದದ್ದು ಎಂದು ಪರಿಗಣಿಸುತ್ತಾನೆ.

ವ್ಯಾವಹಾರಿಕ ವಿಷಯಗಳ ಬಗ್ಗೆ ಆರ್ದ್ರವೂ ಮಾನವೀಯವೂ ಆದ ದೃಷ್ಟಿಕೋನದ ವ್ಯಕ್ತಿ ಕ್ಯಾಂಟ್; ಆದರೆ ಸಂತೋಷವು ಒಳ್ಳೆಯದು ಎಂಬುದನ್ನು ತಿರಸ್ಕರಿಸುವವರಲ್ಲಿ ಬಹುತೇಕ ಜನರು ಹೀಗಿರುವುದಿಲ್ಲವೆಂದು ಹೇಳುತ್ತಾನೆ. 'ಉದಾತ್ತ' ಎಂದು ಕರೆಯಲಾಗುವ ನೈತಿಕತೆಯು ಜನರು ಮತ್ತಷ್ಟು ಸುಖವಾಗಿರಬೇಕಾದರೆ ಮಾಡಬೇಕಾದ ಹೆಚ್ಚು ಐಹಿಕ ದೃಷ್ಟಿಕೋನಕ್ಕಿಂತ ಜಗತ್ತನ್ನು ಉತ್ತಮಗೊಳಿಸುವ ಪ್ರಯತ್ನಗಳಿಗೆ ಕಡಿಮೆ ಸಂಬಂಧಿಸಿರುತ್ತದೆ. ಇದೇನೂ ಆಶ್ಚರ್ಯಕರವಲ್ಲ. ಸಂತೋಷವು ನಮಗೆ ಸಂಬಂಧಪಟ್ಟುದಾಗಿರದೆ ಬೇರೆಯವರದಾಗಿದ್ದರೆ ಸಂತೋಷದ ಬಗ್ಗೆ ತಿರಸ್ಕಾರ ಹೊಂದುವುದು ಸುಲಭ. ಸಂತೋಷಕ್ಕಿರುವ ಪರ್ಯಾಯವೆಂದರೆ ಸಾಮಾನ್ಯವಾಗಿ ಒಂದು ಬಗೆಯ ವೀರತನ. ಇದರಿಂದ ಅಧಿಕಾರಪ್ರವೃತ್ತಿಯ ಅಭಿವ್ಯಕ್ತಿಗೆ ಅಪರಿಮಿತ ಅವಕಾಶಗಳೂ, ಕ್ರೌರ್ಯಕ್ಕೆ ಬೇಕಾದಷ್ಟು ನೆವಗಳೂ ಒದಗುತ್ತದೆ. ಅಥವಾ ಬೆಲೆ ಕೊಡುವುದು ತೀವ್ರ ಭಾವುಕತೆಗೆ; ಇದು ರೊಮ್ಯಾಂಟಿಕ್‌ರ

ವಿಷಯದಲ್ಲಿ ನಿಜ. ಇದು ದ್ವೇಷ ಮತ್ತು ಸೇಡುಗಳಂತಹ ರಾಗದ್ವೇಷಗಳ ಬಗೆಗಿನ ಸಹನೆಗೆ ಕಾರಣವಾಗಬಹುದು. ಬೈರನ್‌ನ ನಾಯಕರು ಇದರ ಮಾದರಿಗಳು, ಅವರೆಂದೂ ಉದಾತ್ತ ನಡವಳಿಕೆಯ ನಿದರ್ಶನಗಳಲ್ಲ. ಮಾನವ ಸೌಖ್ಯವನ್ನು ಉತ್ತಮಪಡಿಸುವಲ್ಲಿ ಹೆಚ್ಚು ಕೆಲಸ ಮಾಡಿದವರು – ನಿರೀಕ್ಷಿಸಬಹುದಾದಂತೆಯೇ – ಸೌಖ್ಯವು ಮುಖ್ಯವೆಂದು ಭಾವಿಸಿದವರೇ ಹೊರತು ಸಂತೋಷವನ್ನು ಇನ್ನಾವುದೋ 'ಮಹೋನ್ನತ'ವಾದುದಕ್ಕಾಗಿ ತಿರಸ್ಕರಿಸಿದವರಲ್ಲ. ಅದಕ್ಕೂ ಮಿಗಿಲಾಗಿ, ವ್ಯಕ್ತಿಯ ನೈತಿಕತೆಯು ಅವನ ವ್ಯಕ್ತಿತ್ವಕ್ಕೆ ಅನುಗುಣವಾಗಿರುತ್ತದೆ, ಹೀಗಾಗಿ ಉಪಕಾರಬುದ್ಧಿಯು ಎಲ್ಲರ ಸೌಖ್ಯವನ್ನು ಬಯಸುತ್ತದೆ. ಹೀಗೆ ಸೌಖ್ಯವು ಜೀವನದ ಉದ್ದೇಶ ಎಂದು ಭಾವಿಸಿದವರು ಹೆಚ್ಚು ಉಪಕಾರಬುದ್ಧಿಯುಳ್ಳವರಾಗಿರುತ್ತಾರೆ, ಅದೇ ಇತರ ಉದ್ದೇಶಗಳನ್ನು ಮುಂದುಮಾಡುವವರು ಎಷ್ಟೋ ವೇಳೆ, ತಮಗೆ ಗೊತ್ತಿಲ್ಲದೆಯೇ, ಕ್ರೌರ್ಯದಿಂದಲೂ ಅಧಿಕಾರದಾಹದಿಂದಲೋ ಪ್ರಬಲರಾಗಿರುತ್ತಾರೆ.

ಈ ನೈತಿಕ ವ್ಯತ್ಯಾಸಗಳು, ಯಾವಾಗಲೂ ಅಲ್ಲದಿದ್ದರೂ ಸಾಮಾನ್ಯವಾಗಿ, ರಾಜಕೀಯದಲ್ಲಿನ ಭಿನ್ನಾಭಿಪ್ರಾಯಗಳಿಗೆ ಸಂಬಂಧಿಸಿರುತ್ತವೆ. ಈಗಾಗಲೇ ನೋಡಿರುವಂತೆ, ಲಾಕ್ ತನ್ನ ನಂಬಿಕೆಗಳ ವಿಷಯದಲ್ಲಿ ತಾತ್ಕಾಲಿಕ, ಯಾವತ್ತೂ ಅಧಿಕಾರಯುತನಲ್ಲ, ಪ್ರತಿ ವಿಷಯದ ಬಗ್ಗೆಯೂ ತೀರ್ಮಾನವನ್ನು ಕೈಗೊಳ್ಳಲು ಮುಕ್ತ ಚರ್ಚೆಗೆ ಒಪ್ಪಿಸುತ್ತಿದ್ದವನು. ಇದರ ಫಲಿತಾಂಶವೆಂದರೆ, ಅವನ ವಿಷಯದಲ್ಲಿ ಮಾತ್ರವಲ್ಲದೆ ಅವನ ಅನುಯಾಯಿಗಳ ವಿಷಯದಲ್ಲಿಯೂ, ಕ್ರಮೇಣ ಸಂಭವಿಸುವ ಸುಧಾರಣೆಯ ಬಗೆಗಿನ ನಂಬಿಕೆ. ಅವರ ಚಿಂತನೆಗಳ ವಿಧಾನವು ತುಂಡುತುಂಡಾಗಿರುವುದರಿಂದಾಗಿಯೂ, ವಿವಿಧ ಪ್ರಶ್ನೆಗಳನ್ನು ಕುರಿತಾದ ಪರಿಶೀಲನೆಯು ವಿವಿಧವಾಗಿದ್ದುದರಿಂದಲೂ, ಅವರ ರಾಜಕೀಯ ದೃಷ್ಟಿಕೋನಗಳೂ ಸಹಜವಾಗಿ ಇದೇ ಬಗೆಯ ಲಕ್ಷಣದಿಂದ ಕೂಡಿದ್ದವು. ದೊಡ್ಡದಾದ 'ಅಖಂಡ' ಕಾರ್ಯಕ್ರಮಗಳ ಬಗ್ಗೆ ಅವರಿಗೆ ನಾಚಿಕೆ, ಹೀಗಾಗಿ ಪ್ರತಿ ಪ್ರಶ್ನೆಯನ್ನೂ ಅವರು ಅದರ ಗುಣಾವಗುಣಗಳ ನೆಲೆಯಲ್ಲಿ ಪರಿಶೀಲಿಸಿದರು. ರಾಜಕೀಯದಲ್ಲಿ, ತತ್ವಜ್ಞಾನದಲ್ಲಿನಂತೆಯೇ, ಅವರು ತಾತ್ಕಾಲಿಕವೂ ಪ್ರಯೋಗಾತ್ಮಕವೂ ಆಗಿದ್ದರು. ಅದಕ್ಕೆ ವ್ಯತಿರಿಕ್ತವಾಗಿ, ಅವರ ವಿರೋಧಿಗಳು 'ವಸ್ತುಸ್ಥಿತಿಗಳ ವಿಷಾದವನ್ನು ಇಡಿಯಾಗಿ ಹಿಡಿಯಲು' ಸಾಧ್ಯವೆಂದು ಭಾವಿಸಿದರು, 'ಅದನ್ನು ಹುಡಿಗುಟ್ಟಿ ತಮಗೆ ಬೇಕಾಗುವಂತೆ ಪುನರ್‌ನಿರ್ಮಿಸಲು' ಬಯಸಿದರು. ಇದನ್ನು ಕ್ರಾಂತಿಕಾರಿಗಳಾಗಿ ಅವರು ಮಾಡಬಹುದಾಗಿತ್ತು, ಅಥವಾ ಶಕ್ತಿಸ್ಥಾನಗಳ ಅಧಿಕಾರವನ್ನು ಹೆಚ್ಚಿಸುವ ಇಚ್ಛೆಯುಳ್ಳವರಾಗಿ ಮಾಡಬಹುದಾಗಿತ್ತು. ಎರಡೂ ಸಂದರ್ಭಗಳಲ್ಲಿ ವಿಶಾಲ ಉದ್ದೇಶಗಳ ಸಾಧನೆಗೆ ಅವರು ಹಿಂಸೆಯಿಂದ ಹಿಂದೆ ಸರಿಯಲಿಲ್ಲ, ಶಾಂತಿಯ ಬಗೆಗಿನ ಒಲವು ಅನುದಾತ್ತವೆಂದು ಅವರು ಬಗೆದರು.

ಲಾಕ್ ಮತ್ತವನ ಶಿಷ್ಯರುಗಳ ದೊಡ್ಡ ರಾಜಕೀಯ ದೋಷವೆಂದರೆ, ಅವರ ಆಸ್ತಿಯ ಆರಾಧನೆ. ಆದರೆ ಈ ವಿಷಯದಲ್ಲಿ ಅವರನ್ನು ಟೀಕಿಸಿದವರು ಅನೇಕ ಬಾರಿ ಹೀಗೆ ಮಾಡಿದ್ದು ಬಂಡವಾಳಶಾಹಿಗಳಿಗಿಂತಲೂ ಹೆಚ್ಚು ಅಪಾಯಕಾರಿಗಳಾಗಿದ್ದ ರಾಜರು, ಶ್ರೀಮಂತರು, ಮತ್ತು ಸೈನ್ಯಪರರಾದ ವರ್ಗಗಳ ಪರವಾಗಿ. ಮೂಲವೇ ತಿಳಿಯದ ಸಂಪ್ರದಾಯಗಳಿಗೆ ಅನುಗುಣವಾಗಿ ಯಾವುದೇ ದುಡಿಮೆಯಿಲ್ಲದೆ ತಮ್ಮ ಆದಾಯವನ್ನು ಪಡೆಯುವ ಶ್ರೀಮಂತವರ್ಗದ ಭೂಮಾಲೀಕರು ತಮ್ಮನ್ನು ಹಣದಾಹಿಗಳೆಂದು ಬಗೆಯುವುದಿಲ್ಲ, ಹಾಗೆಯೇ ವರ್ಣಮಯ ಮೇಲ್ಮೈಯ ಕೆಳಗೆ ನೋಡದ ಜನರು ಕೂಡ ಹಾಗೆ ಭಾವಿಸುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ವ್ಯವಹಾರಸ್ಥರು ಪ್ರಜ್ಞಾಪೂರ್ವಕವಾಗಿಯೇ ಹಣವನ್ನು ಹಿಂಬಾಲಿಸಿರುತ್ತಾರೆ, ಅವರ ಕಾರ್ಯಗಳು ಹೆಚ್ಚು ಕಡಿಮೆ ಹೊಸವಾಗಿದ್ದು, ಭೂಮಾಲೀಕರ ಸಭ್ಯರೂಪದ ಸುಲಿಗೆಯ ಬಗ್ಗೆ ಅವರೆಂದೂ ಖೇದವನ್ನು ವ್ಯಕ್ತಪಡಿಸುವುದಿಲ್ಲ. ಅಂದರೆ, ಇದು ಮಧ್ಯಮ ವರ್ಗದ ಲೇಖಕರ ಮತ್ತು ಅವುಗಳನ್ನು ಓದುವವರ ವಿಷಯ; ಫ್ರೆಂಚ್ ಮತ್ತು ರಷ್ಯನ್ ಕ್ರಾಂತಿಗಳಲ್ಲಿ ಕಾಣಿಸಿದಂತೆ, ರೈತರ ವಿಷಯದಲ್ಲಿ ಹಾಗಿರಲಿಲ್ಲ. ಆದರೆ ರೈತರು 'ಬಿನ್ನಹಕೆ ಬಾಯಿಲ್ಲದವರು'.

ಲಾಕ್ ಪಂಥದ ಬಹುಪಾಲು ವಿರೋಧಿಗಳು ಯುದ್ಧಪ್ರಿಯರು, ಹಾಗೆಯೇ ಸೌಕರ್ಯ ಮತ್ತು ಸೌಲಭ್ಯಗಳ ಬಗ್ಗೆ ತಿರಸ್ಕಾರವಿದ್ದ ವೀರತನವುಳ್ಳವರು. ಉಪಯುಕ್ತ ನೈತಿಕತೆಯನ್ನು ಅಳವಡಿಸಿಕೊಂಡಿದ್ದವರು, ಇದಕ್ಕೆ ವಿರುದ್ಧವಾಗಿ, ಬಹುತೇಕ ಯುದ್ಧಗಳು ತಪ್ಪು ಎಂದು ಪರಿಗಣಿಸಿದ್ದವರು. ಇದು ಮತ್ತೆ, ಕನಿಷ್ಠ ಪಕ್ಷ ಹತ್ತೊಂಬತ್ತನೆಯ ಶತಮಾನದಲ್ಲಿ, ತಮ್ಮ ವ್ಯಾಪಾರಕ್ಕೆ ಧಕ್ಕೆಯುಂಟಾಗುವುದೆಂದು ಯುದ್ಧವನ್ನು ಇಷ್ಟಪಡದಿದ್ದ ಅವರು ಬಂಡವಾಳಶಾಹಿಗಳ ಜೊತೆ ಶಾಮೀಲಾಗುವಂತೆ ಮಾಡಿತು. ಬಂಡವಾಶಾಹಿಗಳ ಧ್ಯೇಯವೆಂದರೆ ಶುದ್ಧ ಸ್ವಹಿತಾಸಕ್ತಿ ಎಂಬುದು ಸ್ಪಷ್ಟವಾದರೂ ಇದು ಸೈನ್ಯಪರರು ಮತ್ತು ಸಾಹಿತ್ಯಕ ಬೆಂಬಲಿರಿಗಿಂತಲೂ ಸಾಮಾನ್ಯ ಹಿತಕ್ಕೆ ಹೆಚ್ಚು ಅನುಗುಣವಾಗಿರುವಂತೆ ಮಾಡಿತು. ಬಂಡವಾಳಶಾಹಿಗಳ ಯುದ್ಧಪರವಾದ ನಿಲವು ಡೋಲಾಯಮಾನವಾದುದು ಎಂಬುದು ನಿಜ. ಹದಿನೆಂಟನೆಯ ಶತಮಾನದ ಇಂಗ್ಲಂಡ್‌ನ ಯುದ್ಧಗಳನ್ನು, ಅಮೆರಿಕನ್ ಯುದ್ಧವನ್ನು ಹೊರತುಪಡಿಸಿ, ವ್ಯವಹಾರಸ್ಥರು ಬೆಂಬಲಿಸಿದರು; ಆದರೆ ಕೊನೆಯ ಕೆಲವು ವರ್ಷಗಳನ್ನು ಬಿಟ್ಟು ಹತ್ತೊಂಬತ್ತನೆಯ ಶತಮಾನದುದ್ದಕ್ಕೂ ಅವರು ಶಾಂತಿಯ ಪರವಾಗಿದ್ದರು. ಆಧುನಿಕ ಕಾಲದಲ್ಲಿ, ದೊಡ್ಡ ವ್ಯಾಪಾರಸ್ಥರು ಎಲ್ಲೆಡೆಯೂ ರಾಷ್ಟ್ರೀಯ ಸರ್ಕಾರದೊಡನೆ ಎಷ್ಟು ನಿಕಟ ಸಂಪರ್ಕಕ್ಕೆ ಬಂದರೆಂದರೆ ಪರಿಸ್ಥಿತಿಯು ತೀರ ಬದಲಾವಣೆ ಹೊಂದಿತು. ಆದರೆ ಈಗ ಕೂಡ, ಇಂಗ್ಲಂಡ್ ಮತ್ತು ಅಮೆರಿಕಗಳೆರಡರಲ್ಲಿಯೂ, ದೊಡ್ಡ ವ್ಯಾಪಾರಿವರ್ಗವು ಒಟ್ಟಾರೆ ಯುದ್ಧದ ಪರವಾಗಿಲ್ಲ.

ಸ್ವಪ್ರಜ್ಞೆಯ ಸ್ವಹಿತವು ಉದಾತ್ತ ಧ್ಯೇಯವೇನಲ್ಲ ಎಂಬುದು ನಿಜವಾದರೂ, ಅದನ್ನು ಟೀಕಿಸುವವರು ಎಷ್ಟೋ ವೇಳೆ ಅದರ ಸ್ಥಾನದಲ್ಲಿ ದ್ವೇಷ, ಮತ್ಸರ ಮತ್ತು ಅಧಿಕಾರದಾಹದಂತಹ ಧ್ಯೇಯಗಳನ್ನು, ಆಕಸ್ಮಿಕವಾಗಿಯೋ ಹುನ್ನಾರದಿಂದಲೋ, ಸೇರಿಸುತ್ತಾರೆ. ಒಟ್ಟಾರೆ, ಲಾಕ್‌ಗೆ ಋಣಿಯಾಗಿರುವ ಮತ್ತು ಸ್ವಪ್ರಜ್ಞೆಯ ಸ್ವಹಿತವನ್ನು ಬೋಧಿಸಿದ ಪಂಥವು, ಅದನ್ನು ವೀರತನ ಮತ್ತು ಸ್ವಹಿತ ತ್ಯಾಗಗಳ ಹೆಸರಿನಲ್ಲಿ ತಿರಸ್ಕರಿಸಿದ ಪಂಥಗಳಿಗಿಂತಲೂ ಹೆಚ್ಚಾಗಿ ಮಾನವ ಸೌಖ್ಯವನ್ನು ಹೆಚ್ಚಿಸಲು ಮತ್ತು ಮಾನವ ಕಷ್ಟಗಳನ್ನು ಕಡಿಮೆ ಮಾಡಲು ತುಂಬ ಶ್ರಮಿಸಿತು. ಕೈಗಾರಿಕೀಕರಣದ ಮೊದಮೊದಲ ಭಯಾನಕತೆಯನ್ನು ನಾನು ಮರೆಯಲಾರೆನಾದರೂ ಇವುಗಳನ್ನು ವ್ಯವಸ್ಥೆಯೊಳಗೇ ನಿವಾರಿಸಲಾಯಿತು. ಅದರ ವಿರುದ್ಧ ನಾನು ನಿಲ್ಲಿಸುವುದು ರಷ್ಯದ ಜೀತದಾಳು ಪದ್ಧತಿ, ಯುದ್ಧದ ಕೆಡುಕು ಮತ್ತು ಅದರ ಬಗೆಗಿನ ಭಯ ಮತ್ತು ದ್ವೇಷಗಳನ್ನು ಮತ್ತು ತಮ್ಮ ಸಾರವನ್ನು ಕಳೆದುಕೊಂಡಿದ್ದರೂ ಪ್ರಾಚೀನ ವ್ಯವಸ್ಥೆಯನ್ನು ಉಳಿಸಬಯಸಲು ಪ್ರಯತ್ನಿಸುವವರ ಅನಿವಾರ್ಯ ಪ್ರಗತಿವಿರೋಧವನ್ನು.

೦

೧೬
ಬರ್ಕ್ಲೇ

ಜಾರ್ಜ್ ಬರ್ಕ್ಲೇ (೧೬೮೫-೧೭೫೩) ತತ್ವಜ್ಞಾನಿಗಳಲ್ಲಿ ಪ್ರಮುಖನೆನಿಸಿರುವುದು ಭೌತದ್ರವ್ಯದ ಅಸ್ತಿತ್ವವನ್ನು ತನ್ನದೇ ಆದ ಅನೇಕ ಸ್ವಂತ ವಾದಗಳ ಮೂಲಕ ನಿರಾಕರಿಸಿ; ಭೌತದ್ರವ್ಯಗಳು ಅಸ್ತಿತ್ವದಲ್ಲಿರುವುದು ಕೇವಲ ಗ್ರಹಿಕೆಗಳ ಮೂಲಕ, ಅಷ್ಟೆ, ನಿದರ್ಶನಕ್ಕೆ ಯಾರೂ ಅದರತ್ತ ನೋಡದಿದ್ದರೆ ಒಂದು ಮರವು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆಯಲ್ಲವೇ ಎಂಬ ಪ್ರಶ್ನೆಗೆ ಅವನು ದೇವರು ಎಲ್ಲವನ್ನೂ ನೋಡುತ್ತಿರುತ್ತಾನೆ ಎಂದು ಉತ್ತರಿಸಿದ. ದೇವರೇ ಇಲ್ಲದಿದ್ದರೆ, ಭೌತದ್ರವ್ಯವೆಂದು ನಾವು ಭಾವಿಸುವುದು ಸಂಕುಚಿತ ಬದುಕನ್ನು ಹೊಂದಿರುತ್ತವೆ, ಅಂದರೆ ನಾವು ಅದನ್ನು ನೋಡುವಾಗ ತಕ್ಷಣ ಅಸ್ತಿತ್ವಕ್ಕೆ ಬರುತ್ತದೆ; ಆದರೆ ದೇವರು ನೋಡುತ್ತಿರುವುದರಿಂದಾಗಿ ಮರಗಳೂ ಬಂಡೆಗಳೂ ಕಲ್ಲುಗಳೂ ಸಾಮಾನ್ಯ ತಿಳಿವಳಿಕೆಯಂತೆ ನಿರಂತರ ಅಸ್ತಿತ್ವವನ್ನು ಹೊಂದಿರುತ್ತವೆ. ಅವನ ಅಭಿಪ್ರಾಯದಂತೆ, ಇದು ದೇವರ ಅಸ್ತಿತ್ವವನ್ನು ಕುರಿತ ಒಂದು ಗಂಭೀರ ವಾದ. ರೊನಾಲ್ಡ್ ನಾಕ್ಸ್‌ನ ಉತ್ತರವನ್ನೊಳಗೊಂಡ ಚುಟಕವೊಂದು ಬರ್ಕ್ಲೇಯ ಭೌತದ್ರವ್ಯವನ್ನು ಕುರಿತ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ.

ಒಂದಾನೊಂದು ಕಾಲದಲ್ಲಿದ್ದ ಯುವಕ ಹೀಗೆಂದ:
'ಚೌಕದಲ್ಲಿ ಬೇರೆ ಯಾರೂ ಇಲ್ಲದಿದ್ದಾಗ,
ಈ ಮರವು ಯಾವಾಗಲೂ
ಇಲ್ಲಿಯೇ ಇರುವುದನ್ನು ಕಂಡರೆ
ದೇವರಿಗೆ ವಿಚಿತ್ರವೆನಿಸುತ್ತದೆ.'

ಉತ್ತರ

ಮಹಾಸ್ವಾಮಿ,
ನಿಮ್ಮ ಆಶ್ಚರ್ಯವೇ ವಿಚಿತ್ರವಾಗಿದೆ:

ನಾನು ಸದಾ ಈ ಚೌಕದಲ್ಲಿಯೇ ಇರುತ್ತೇನೆ
ಆದ್ದರಿಂದ ಈ ಮರವು
ಯಾವಾಗಲೂ ಇರುತ್ತದೆ,
ಯಾಕೆಂದರೆ ಅದನ್ನು ಕಾಣುವವನು
ನಿಮ್ಮ ವಿಶ್ವಾಸದ
ದೇವರು.

ಬರ್ಕ್ಲೇ ಒಬ್ಬ ಐರಿಶ್ ವ್ಯಕ್ತಿ, ತನ್ನ ಇಪ್ಪತ್ತರೆಡನೆಯ ವಯಸ್ಸಿನಲ್ಲಿ ಅವನು ಡಬ್ಲಿನ್‌ನ ಟ್ರಿನಿಟಿ ಕಾಲೇಜಿನ ಫೆಲೋ ಆದ. ಅವನನ್ನು ಸಭೆಗೆ ಪರಿಚಯಿಸಿದವನು ಸ್ವಿಫ್ಟ್; ಅಲ್ಲದೆ ಸ್ವಿಫ್ಟ್‌ನ ವನೆಸ ಅವನಿಗೆ ತನ್ನ ಆಸ್ತಿಯ ಅರ್ಧವನ್ನು ಕೊಟ್ಟಳು. ಅವನು ಬರ್ಮುಡದಲ್ಲಿ ಕಾಲೋಜೊಂದಕ್ಕೆ ಯೋಜನೆಯನ್ನು ಹಾಕಿದ, ಈ ಉದ್ದೇಶದಿಂದಲೇ ಅವನು ಅಮೆರಿಕಕ್ಕೆ ಹೋದ; ಆದರೆ ರೋಡ್ ದ್ವೀಪದಲ್ಲಿ ಮೂರು ವರ್ಷಗಳನ್ನು (೧೭೨೮-೩೧) ಕಳೆದ ಮೇಲೆ ಅವನು ಊರಿಗೆ ಮರಳಿ ಆ ಯೋಜನೆಯನ್ನು ಕೈಬಿಟ್ಟ. ಅವನು 'ಸಾಮ್ರಾಜ್ಯದ ಪಶ್ಚಿಮಾಭಿಮುಖ ಯಾತ್ರೆಯು ಮುಂದುವರಿಯುತ್ತದೆ' ಎಂಬ ಪ್ರಖ್ಯಾತ ಸಾಲಿನ ಲೇಖಕ. ಈ ಸಾಲಿನ ಕಾರಣದಿಂದಾಗಿ ಕ್ಯಾಲಿಫೋರ್ನಿಯದಲ್ಲಿನ ಬರ್ಕ್ಲೇ ಪಟ್ಟಣವು ಅವನ ಹೆಸರನ್ನು ಪಡೆಯಿತು. ೧೭೩೪ ರಲ್ಲಿ ಅವನು ಕ್ಲೋಯ್ನೆಯ ಬಿಷಪ್ ಆದ. ತನ್ನ ಬದುಕಿನ ಕೊನೆಕೊನೆಗೆ ಅವನು ತತ್ತ್ವಜ್ಞಾನವನ್ನು ಅಮೋಘ ವೈದ್ಯಕೀಯ ಗುಣಗಳುಳ್ಳದೆಂದು ಭಾವಿಸಿದ್ದ ಟಾರ್ ಕಷಾಯಕ್ಕಾಗಿ (ಟಾರ್ ವಾಟರ್) ಕೈಬಿಟ್ಟ. ಟಾರ್ ಕಷಾಯವನ್ನು ಕುರಿತಂತೆಯೇ ಅವನು ಈ ರೀತಿ ಬರೆದ: 'ಇವು ಗೆಲವನ್ನು ನೀಡುವ ಪೇಯಬಟ್ಟಲುಗಳು, ಆದರೆ ಮತ್ತೇರಬೇಡ', ಇದೇ ಭಾವನೆಯನ್ನು ಮುಂದೆ ಕೌಪರ್ ಚಹಾ ವಿಷಯದಲ್ಲಿ ಹೆಚ್ಚು ಜನಪ್ರಿಯವನ್ನಾಗಿಸಿದ.

ಬಹು ಚಿಕ್ಕ ವಯಸ್ಸಿನಲ್ಲಿಯೇ ತನ್ನ ಮುಖ್ಯ ಕೃತಿಗಳನ್ನವನು ರಚಿಸಿದ್ದು. 'ಎ ನ್ಯೂ ಥಿಯರಿ ಆಫ್ ವಿಷನ್' ಅನ್ನು ೧೭೦೯ ರಲ್ಲಿ, 'ದ ಪ್ರಿನ್ಸಿಪಲ್ಸ್ ಆಫ್ ಹ್ಯೂಮನ್ ನಾಲೆಡ್ಜ್' ಅನ್ನು ೧೭೧೦ ರಲ್ಲಿ, 'ದ ಡಯಲಾಗ್ಸ್ ಆಫ್ ಹೈಲಾಸ್ ಅಂಡ್ ಫಿಲೊನೋಸ್' ಅನ್ನು ೧೭೧೩ ರಲ್ಲಿ ಪ್ರಕಟಿಸಿದ. ಅವನು ಬಹಳ ಆಕರ್ಷಕ ಶೈಲಿಯ ಬರಹಗಾರ.

ಭೌತದ್ರವ್ಯದ ವಿಷಯಕವಾದ ವಾದವು ತುಂಬ ಮನಮುಟ್ಟುವಂತೆ ಮಂಡಿತವಾಗಿರುವುದು 'ದ ಡಯಲಾಗ್ಸ್ ಆಫ್ ಹೈಲಾಸ್ ಅಂಡ್ ಫಿಲೊನೂಸ್' ಪುಸ್ತಕದಲ್ಲಿ. ಈ ಸಂವಾದಗಳಲ್ಲಿ ನಾನು ಮೊದಲನೆಯದು ಮತ್ತು ಎರಡನೆಯದರ ಮೊದಲ ಭಾಗವನ್ನಷ್ಟೇ ಕುರಿತು ಚರ್ಚಿಸುತ್ತೇನೆ, ಏಕೆಂದರೆ ಆ ಮುಂದೆ ಹೇಳಿರುವುದೆಲ್ಲ ಅಷ್ಟು ಮುಖ್ಯವಲ್ಲವೆಂಬುದು ನನ್ನ ಭಾವನೆ. ನಾನು ಪರಿಗಣಿಸುವ

ಭಾಗದ ಸಂವಾದಗಳಲ್ಲಿ, ಬರ್ಕ್ಲೇ ಕೆಲವು ಪ್ರಮುಖ ತೀರ್ಮಾನಗಳ ಪರವಾದ ಸಮಂಜಸ ವಾದಗಳನ್ನು ಮುಂದಿಡುತ್ತಾನೆ. ಅವನು ಸಾಧಿಸಬಯಸುವುದು ಎಲ್ಲ ವಾಸ್ತವಗಳೂ ಮಾನಸಿಕವಾದವು ಎಂಬುದನ್ನು. ಅವನು ಸಾಧಿಸಿದವುಗಳಲ್ಲಿ ನಾವು ಕಾಣುವುದು ಗುಣಗಳನ್ನೇ ಹೊರತು ವಸ್ತುಗಳನ್ನಲ್ಲ, ಮತ್ತು ಗುಣಗಳು ನೋಡುವವನು ದೃಷ್ಟಿಯಲ್ಲಿ ಸಾಪೇಕ್ಷವಾದವು.

ಸಂವಾದಗಳಲ್ಲಿ ನನಗೆ ಮುಖ್ಯವೆನಿಸಿದುದನ್ನು ಮೊದಲಿಗೆ ವಿಮರ್ಶಾರಹಿತವಾಗಿ ನಿರೂಪಿಸುತ್ತೇನೆ: ಆನಂತರ ಅದರ ಬಗ್ಗೆ ವಿಮರ್ಶೆ ಮಾಡುತ್ತೇನೆ, ಹಾಗೂ ಕೊನೆಯಲ್ಲಿ, ಅವುಗಳಿಗೆ ಸಂಬಂಧಿಸಿದಂತೆ ನನಗೆ ತೋಚಿದ ಸಮಸ್ಯೆಗಳನ್ನು ಮುಂದಿಡುತ್ತೇನೆ.

ಸಂವಾದಗಳಲ್ಲಿರುವುದು ಎರಡು ಪಾತ್ರಗಳು: ವೈಜ್ಞಾನಿಕವಾಗಿ ಶಿಕ್ಷಣವನ್ನು ಪಡೆದವರ ಪ್ರತಿನಿಧಿಯಾದ ಹೈಲಾಸ್ ಮತ್ತು ಬರ್ಕ್ಲೇಯೇ ಆಗಿರುವ ಫಿಲೋನೂಸ್.

ಕೆಲವು ಸ್ನೇಹಮಯ ಮಾತುಗಳ ನಂತರ, ಭೌತದ್ರವ್ಯಗಳಲ್ಲಿ ತನಗೆ ನಂಬಿಕೆಯಿಲ್ಲವೆಂಬ ಫಿಲೋನೂಸ್‌ನ ವಿಚಿತ್ರ ಅಭಿಪ್ರಾಯಗಳ ಬಗ್ಗೆ ತಾನು ವಿಚಿತ್ರ ವರದಿಗಳನ್ನು ಕೇಳಿರುವುದಾಗಿ ಹೈಲಾಸ್ ಹೇಳುತ್ತಾನೆ. 'ಭೌತದ್ರವ್ಯ ಎಂಬುದು ಇಲ್ಲವೇ ಇಲ್ಲ ಎಂಬುದಕ್ಕಿಂತ ಅದ್ಭುತವಾದುದು, ಸಾಮಾನ್ಯ ತಿಳಿವಳಿಕೆಗೆ ಹೇವರಿಕೆಯಾಗುವಂತಹುದು, ಸಂದೇಹವಾದದ ಮತ್ತಷ್ಟು ಸ್ಪಷ್ಟ ಹೇಳಿಕೆ ಬೇರಾವುದಾದರೂ ಇರಲು ಸಾಧ್ಯವೇ?' ಇದಕ್ಕೆ ಫಿಲೊನೂಸ್ ಉತ್ತರಿಸುವುದು ಹೀಗೆ: ನಾನು ಇಂದ್ರಿಯಗ್ರಾಹ್ಯ ವಿಷಯಗಳನ್ನು, ಅಂದರೆ ಇಂದ್ರಿಯಗಳು ತಕ್ಷಣ ಗುರುತಿಸುವಂತಹವುಗಳನ್ನು ಅಲ್ಲಗಳೆಯುವುದಿಲ್ಲವಾದರೂ ನಾವು ಬಣ್ಣಗಳ ಕಾರಣಗಳನ್ನು ಕಾಣಲಾರೆವು, ಅಥವಾ ಶಬ್ದಗಳ ಕಾರಣಗಳನ್ನು ಕೇಳಲಾರೆವು. ಇಂದ್ರಿಯಗಳು ಯಾವುದೇ ಊಹೆಯನ್ನು ಮಾಡುವುದಿಲ್ಲ ಎಂಬುದನ್ನು ಇಬ್ಬರೂ ಒಪ್ಪಿಕೊಳ್ಳುತ್ತಾರೆ. ನೋಟದಿಂದ ನಾವು ಬೆಳಕು, ಬಣ್ಣ ಮತ್ತು ಆಕಾರಗಳನ್ನು ಕಾಣುತ್ತೇವೆ; ಕೇಳುವಿಕೆಯಿಂದ ಬರಿ ಶಬ್ದಗಳನ್ನು; ಹೀಗೇ. ಇದರಿಂದಾಗಿ, ಇಂದ್ರಿಯಗ್ರಾಹ್ಯ ಗುಣಗಳ ಹೊರತಾಗಿ, ಇಂದ್ರಿಯಗ್ರಾಹ್ಯವಾಗುವುದು ಯಾವುದೂ ಇಲ್ಲ, ಮತ್ತು ಇಂದ್ರಿಯಗ್ರಾಹ್ಯ ವಿಷಯಗಳು ಎಂದರೆ ಇಂದ್ರಿಯಗ್ರಾಹ್ಯ ಗುಣಗಳು ಅಥವಾ ಇಂದ್ರಿಯಗ್ರಾಹ್ಯ ಗುಣಗಳ ಸಂಯೋಜನೆಗಳ ಹೊರತಾಗಿ ಬೇರೇನೂ ಅಲ್ಲ.

'ಅಸ್ತಿತ್ವದಲ್ಲಿರುವುದು ಒಂದು, ಪರಿಕಲ್ಪಿಸುವುದು ಇನ್ನೊಂದು' ಎಂಬ ಹೈಲಾಸ್‌ನ ಅಭಿಪ್ರಾಯದ ವಿರುದ್ಧ ಫಿಲೊನೂಸ್, 'ಇಂದ್ರಿಯಗ್ರಾಹ್ಯ ವಿಷಯಗಳ ವಾಸ್ತವತೆಯು ಗ್ರಹಿಕೆಯಲ್ಲಿ ಅಡಗಿರುತ್ತವೆ' ಎಂದು ಸಾಧಿಸಲು ತೊಡಗುತ್ತಾನೆ. ಇಂದ್ರಿಯ-ದತ್ತಾಂಶವು ಮಾನಸಿಕವಾದುದು ಎಂಬ ಪ್ರಮೇಯವನ್ನು ಫಿಲೊನೂಸ್ ವಿವಿಧ

ಇಂದ್ರಿಯಗಳ ವಿವರವಾದ ಪರಿಶೀಲನೆಯ ಮೂಲಕ ಬೆಂಬಲಿಸುತ್ತಾನೆ. ಅವನು ಆರಂಭಿಸುವುದು ಶಾಖ ಮತ್ತು ತಂಪುಗಳ ಮೂಲಕ. ಹೆಚ್ಚಿನ ಶಾಖವು ನೋವುಂಟುಮಾಡುವಂತಹುದು, ಅದು ಮನಸ್ಸಿನಲ್ಲಿರುವಂಥದು. ಹೀಗಾಗಿ ಶಾಖ ಎಂಬುದು ಮಾನಸಿಕವಾದುದು; ಹೀಗೆಯೇ ಇದು ತಂಪು ಎನ್ನುವುದಕ್ಕೂ ಅನ್ವಯಿಸುತ್ತದೆ. ಇದನ್ನು ಪುಷ್ಟಿಗೊಳಿಸಲು ಅವನು ಉಗುರು ಬೆಚ್ಚಗಿನ ನೀರಿಗೆ ಸಂಬಂಧಿಸಿದ ಪ್ರಖ್ಯಾತ ವಾದವನ್ನು ಉಲ್ಲೇಖಿಸುತ್ತಾನೆ. ನಿಮ್ಮ ಕೈಗಳಲ್ಲಿ ಒಂದು ಬಿಸಿಯಾಗಿದ್ದು ಮತ್ತೊಂದು ತಣ್ಣಗಿದ್ದು ಎರಡೂ ಕೈಗಳನ್ನು ನೀವು ನೀರಿನಲ್ಲಿ ಅದ್ದಿದರೆ, ಒಂದು ಕೈಗೆ ಬೆಚ್ಚಗೂ ಮತ್ತೊಂದಕ್ಕೆ ತಣ್ಣಗೂ ಇರುವ ಅನುಭವವಾಗುತ್ತದೆಯೇ ಹೊರತು ನೀರು ಮಾತ್ರ ಒಮ್ಮೆಗೇ ಬಿಸಿಯಾಗಿಯೂ ತಣ್ಣಗೂ ಇರಲಾರದು. ಇದು ಹೈಲಾಸ್‌ನನ್ನು ಮಣಿಸುತ್ತದೆ, ಅವನು ಹೇಳುತ್ತಾನೆ: 'ಶಾಖ ಮತ್ತು ತಂಪುಗಳು ನಮ್ಮ ಮನಸ್ಸಿನಲ್ಲಿ ಅಸ್ತಿತ್ವದಲ್ಲಿರುವ ಸಂವೇದನೆಗಳು.' ಆದರೆ ಇತರ ಇಂದ್ರಿಯಗ್ರಾಹ್ಯ ಗುಣಗಳು ಉಳಿಯುತ್ತವೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸುತ್ತಾನೆ.

ಫಿಲೋನೂಸ್ ಮುಂದೆ ತೆಗೆದುಕೊಳ್ಳುವುದು ರುಚಿಗಳ ಕುರಿತು. ಸಿಹಿ ಎಂಬುದು ಸಂತೋಷದಾಯಕ ಮತ್ತು ಕಹಿ ನೋವುಂಟುಮಾಡುವಂಥದು, ಮತ್ತು ಸಂತೋಷ ಮತ್ತು ನೋವುಗಳು ಮಾನಸಿಕವಾದವು ಎಂಬದರ ಕಡೆಗೆ ಅವನು ಗಮನ ಸೆಳೆಯುತ್ತಾನೆ. ಇದೇ ವಾದವು ವಾಸನೆಗಳಿಗೂ ಅನ್ವಯಿಸುತ್ತದೆ, ಯಾಕೆಂದರೆ ಅವೂ ಸಂತೋಷದಾಯಕ ಅಥವಾ ಅಸಂತೋಷದಾಯಕವಾಗಿರುತ್ತವೆ.

ಶಬ್ದವನ್ನು ಇದರಿಂದ ಪಾರುಮಾಡಲು ಹೈಲಾಸ್ ತೀವ್ರವಾಗಿ ಸೆಣಸುತ್ತಾನೆ, ಅವನ ಪ್ರಕಾರ ಅದು ಗಾಳಿಯಲ್ಲಿನ ಚಲನೆ, ಯಾಕೆಂದರೆ ನಿರ್ವಾತದಲ್ಲಿ ಯಾವುದೇ ಶಬ್ದವೂ ಕೇಳಿಸಲಾರದು ಎಂಬುದು ಸ್ಪಷ್ಟ ಎನ್ನುತ್ತಾನೆ. ನಾವು 'ಶಬ್ದವು ನಮಗೆ ಕೇಳಿಸುವ ರೀತಿ ಮತ್ತು ತನ್ನಲ್ಲೇ ಅದಿರುವ ರೀತಿ ಅಥವಾ ನಮಗೆ ತಕ್ಷಣ ಗ್ರಾಹ್ಯವಾಗುವ ಶಬ್ದ ಮತ್ತು ನಮ್ಮ ಹೊರತಾಗಿ ಅಸ್ತಿತ್ವದಲ್ಲಿರುವ ಶಬ್ದ – ಇವೆರಡರ ವ್ಯತ್ಯಾಸವನ್ನು ಗುರುತಿಸಬೇಕು' ಎನ್ನುತ್ತಾನೆ. ಹೈಲಾಸ್ ಚಲನೆಯಲ್ಲಿರುವ 'ವಾಸ್ತವ' ಶಬ್ದ ಎಂದು ಕರೆಯುವುದನ್ನು, ಕಾಣಲು ಅಥವಾ ಅನುಭವಿಸಲು ಸಾಧ್ಯವಾಗಬಹುದಾದರೂ ಕೇಳಲು ಸಾಧ್ಯವಿಲ್ಲ ಹೀಗಾಗಿ ಅದು ನಮ್ಮ ಗ್ರಹಿಕೆಯಲ್ಲಿರುವುದು ಶಬ್ದವಲ್ಲ ಎಂದು ಫಿಲೊನೂಸ್ ವಾದಿಸುತ್ತಾನೆ; ಇದನ್ನು ಕುರಿತಂತೆ ಹೈಲಾಸ್ 'ಶಬ್ದಗಳು ಕೂಡ ಮನಸ್ಸು ಇಲ್ಲದಿದ್ದರೆ ವಾಸ್ತವವಾದವಲ್ಲ' ಎಂದು ಒಪ್ಪಿಕೊಳ್ಳುತ್ತಾನೆ.

ಈಗ ಅವರು ಬಣ್ಣಗಳ ಕಡೆ ಬರುತ್ತಾರೆ. ಈಗ ಹೈಲಾಸ್ ಆತ್ಮವಿಶ್ವಾಸದಿಂದ ಆರಂಭಿಸುತ್ತಾನೆ: 'ಕ್ಷಮಿಸಿ, ಬಣ್ಣದ ವಿಷಯ ತೀರ ಭಿನ್ನವಾದುದು. ವಸ್ತುಗಳಲ್ಲಿ

ನಾವು ಕಾಣುವುದಕ್ಕಿಂತ ಹೆಚ್ಚು ಸ್ಪಷ್ಟವಾಗಿರಲು ಸಾಧ್ಯವೇ?' ಮನಸ್ಸು ಇಲ್ಲದೆಯೇ ಅಸ್ತಿತ್ವದಲ್ಲಿರುವ ವಸ್ತುಗಳಲ್ಲಿ ಮೇಲೆ ಅವುಗಳ ಮೇಲಿನ ಬಣ್ಣಗಳಿರುತ್ತವೆ. ಆದರೆ ಈ ದೃಷ್ಟಿಕೋನವನ್ನು ಎದುರಿಸಲು ಫಿಲೊನೂಸ್‌ಗೆ ಯಾವುದೇ ಕಷ್ಟವಿಲ್ಲ. ಅವನು ವಾದವನ್ನಾರಂಭಿಸುವುದು ಸೂರ್ಯಾಸ್ತ ಕಾಲದ ಮೋಡಗಳಿಂದ, ಅವುಗಳು ಕೆಂಪು ಹಳದಿಗಳಿಂದ ಕೂಡಿರುತ್ತವೆ, ಆದರೆ ನೀವು ಹತ್ತಿರವಿದ್ದಾಗ ಮೋಡವು ಅಂತಹ ಯಾವ ಬಣ್ಣವನ್ನೂ ಹೊಂದಿರುವುದಿಲ್ಲ ಎಂದು ಹೇಳುತ್ತಾನೆ. ಸೂಕ್ಷ್ಮದರ್ಶಕ ಮತ್ತು ಕಾಮಾಲೆ ಕಣ್ಣಿಗೆ ಕಾಣುವ ಹಳದಿ – ಈ ಎರಡರ ವ್ಯತ್ಯಾಸವನ್ನು ಗಮನಿಸುತ್ತಾನೆ. ತೀರ ಸಣ್ಣ ಕೀಟಗಳು ನಾವು ನೋಡುವುದಕ್ಕಿಂತಲೂ ಹೆಚ್ಚು ಸಣ್ಣ ವಸ್ತುಗಳನ್ನು ಕಾಣಬೇಕು. ಅದನ್ನೆದುರಿಸಿ ಹೈಲಾಸ್, ಬಣ್ಣಗಳು ವಸ್ತುಗಳಲ್ಲಿಲ್ಲ, ಬೆಳಕಿನಲ್ಲಿರುತ್ತವೆ ಎನ್ನುತ್ತಾನೆ; ಅದು ತೆಳುವಾದ ದ್ರವ ವಸ್ತು. ಶಬ್ದಗಳ ವಿಷಯದಲ್ಲಿನಂತೆಯೇ, ಹೈಲಾಸ್‌ನ ದೃಷ್ಟಿಯಲ್ಲಿ 'ವಾಸ್ತವ' ಎನಿಸುವ ಬಣ್ಣಗಳು ನಾವು ನೋಡುವ ಕೆಂಪು ಹಳದಿ ಬಣ್ಣಗಳಿಗಿಂತ ಭಿನ್ನವಾದವು, ಹೀಗಾಗಿ ಈ ವಾದ ಸಮಂಜಸವಲ್ಲ ಎಂದು ಫಿಲೊನೂಸ್ ಹೇಳುತ್ತಾನೆ.

ಈಗ ಹೈಲಾಸ್ ಎಲ್ಲ ಆನುಷಂಗಿಕ ಗುಣಗಳನ್ನು ಕುರಿತಂತೆ ವಾದಿಸುವುದನ್ನು ಬಿಟ್ಟು ಮೂಲ ಗುಣಗಳು, ಅದರಲ್ಲಿಯೂ ಆಕಾರ ಮತ್ತು ಚಲನೆ, ಯೋಚಿಸದ ಬಾಹ್ಯ ವಸ್ತುಗಳಲ್ಲಿ ಅಂತರ್ಗತವಾಗಿರುತ್ತವೆ ಎನ್ನುತ್ತಾನೆ. ಹತ್ತಿರವಿದ್ದಾಗ ವಸ್ತುಗಳು ನಮಗೆ ದೊಡ್ಡವಾಗಿ ಕಾಣಿಸುತ್ತವೆ, ದೂರ ಹೋದಾಗ ಸಣ್ಣವಾಗಿ ಕಾಣಿಸುತ್ತವೆ, ಮತ್ತು ಚಲನೆಯು ಒಬ್ಬನಿಗೆ ವೇಗವಾಗಿರುವಂತೆಯೂ ಮತ್ತೊಬ್ಬನಿಗೆ ನಿಧಾನವಾಗಿರುವಂತೆಯೂ ಕಾಣಿಸಬಹುದು ಎಂದು ಫಿಲೊನೂಸ್ ಉತ್ತರಿಸುತ್ತಾನೆ.

ಈ ಹಂತದಲ್ಲಿ ಹೈಲಾಸ್ ಹೊಸ ಹಾದಿಯೊಂದನ್ನು ಹಿಡಿಯುತ್ತಾನೆ. ವಸ್ತು ಮತ್ತು ಸಂವೇದನೆಗಳ ನಡುವೆ ವ್ಯತ್ಯಾಸವರಿಯದೆ ತಾನು ತಪ್ಪು ಮಾಡಿದುದಾಗಿ ಅವನು ಹೇಳುತ್ತಾನೆ; ಗ್ರಹಿಕೆಯ ಕ್ರಿಯೆಯು ಮಾನಸಿಕವಾದುದೆಂದು ಒಪ್ಪಿಕೊಂಡರೂ, ಗ್ರಹಿಸಿದುದಲ್ಲ; ನಿದರ್ಶನಕ್ಕೆ, ಬಣ್ಣಗಳು, 'ಮನಸ್ಸಿನ ಹೊರತಾಗಿಯೂ ಯೋಚನೆಗೆ ಬಾರದ ವಸ್ತುವಿನಲ್ಲಿ ವಾಸ್ತವ ಅಸ್ತಿತ್ವವನ್ನು ಹೊಂದಿರುತ್ತವೆ' ಎಂದು ವಾದಿಸುತ್ತಾನೆ. ಇದಕ್ಕೆ ಫಿಲೊನೂಸ್ ಕೊಡುವ ಉತ್ತರ ಹೀಗಿದೆ: 'ಇಂದ್ರಿಯಗಳ ತಕ್ಷಣದ ವಸ್ತುವು– ಅಂದರೆ ಯಾವುದೇ ಚಿಂತನೆ ಅಥವಾ ಚಿಂತನೆಗಳ ಮೊತ್ತವು–ಯೋಚನೆಗೆ ಬಾರದ ವಸ್ತುವಿನಲ್ಲಿ ಅಥವಾ ಎಲ್ಲ ಮನಸ್ಸುಗಳ ಹೊರಗೆ ಅಸ್ತಿತ್ವದಲ್ಲಿರಬೇಕು ಎಂಬದು ಸ್ವವಿರೋಧದಿಂದ ಕೂಡಿರುವುದು ಸ್ಪಷ್ಟ' ಈ ಹಂತದಲ್ಲಿ, ವಾದವು ತಾರ್ಕಿಕವಾಗುತ್ತದೆ, ಅನುಭವೈಕವಾಗಿ ಉಳಿಯುವುದಿಲ್ಲ ಎಂಬುದನ್ನು ಕಾಣಬಹುದು. ಕೆಲವು ಪುಟಗಳ ನಂತರ, ಫಿಲೊನೂಸ್ ಹೇಳುತ್ತಾನೆ: 'ತಕ್ಷಣ ಗ್ರಹಿಕೆಗೆ ಒಳಗಾಗುವುದು ಒಂದು ಚಿಂತನೆ; ಮನಸ್ಸಿನ ಹೊರಗೆ ಯಾವುದೇ ಚಿಂತನೆಗೆ ಅಸ್ತಿತ್ವ ಇರುವುದು ಸಾಧ್ಯವೇ?'

ಸಾರಸತ್ವದ ಬಗೆಗಿನ ತತ್ವಜಿಜ್ಞಾಸಾತ್ಮಕ ಚರ್ಚೆ ನಡೆಸಿದ ಬಳಿಕ ಹೈಲಾಸ್, ತಾನು ವಸ್ತುಗಳನ್ನು ಕಾಣುವುದು ದೂರದಿಂದ ಎಂಬುದರೊಡನೆ, ಚಾಕ್ಷುಷ ಸಂವೇದನೆಯ ಚರ್ಚೆಯ ಕಡೆಗೆ ಹೊರಳುತ್ತಾನೆ. ಇದಕ್ಕೆ ಫಿಲೋನೂಸ್ ಹೊಡುವ ಉತ್ತರವೆಂದರೆ, ಇದು ಕನಸಿನಲ್ಲಿ ಕಾಣುವ ವಸ್ತುಗಳಿಗೂ ಅನ್ವಯಿಸುತ್ತದೆ, ಅದು ಮಾನಸಿಕವಾದುದು ಎಂದು ಎಲ್ಲರೂ ಒಪ್ಪುತ್ತಾರೆ; ಅಲ್ಲದೆ, ದೂರವನ್ನು ನೋಟದಿಂದ ಗ್ರಹಿಸುವುದಿಲ್ಲ, ಆದರೆ ಅದನ್ನು ಅನುಭವದ ಆಧಾರದ ಮೇಲೆ ಅಂದಾಜಿಸಲಾಗುತ್ತದೆ, ಹುಟ್ಟು ಕುರುಡನಾಗಿದ್ದು ಮೊದಲ ಬಾರಿಗೆ ನೋಡುವ ಸಾಮರ್ಥ್ಯ ಪಡೆದವನಿಗೆ ಚಾಕ್ಷುಷ ವಸ್ತುಗಳು ದೂರದವೆಂದು ಅನ್ನಿಸುವುದಿಲ್ಲ.

ಎರಡನೆಯ ಸಂವಾದದ ಮೊದಲಿಗೆ, ಮಿದುಳಿನಲ್ಲಿನ ಕೆಲವು ಕುರುಹುಗಳು ಸಂವೇದನೆಯ ಕಾರಣದಿಂದಾದುವು ಎಂದು ಹೈಲಾಸ್ ಸೂಚಿಸುತ್ತಾನೆ, ಆದರೆ ಫಿಲೊನೂಸ್ 'ಮಿದುಳು, ಸಂವೇದನೆಯ ವಸ್ತುವಾದ್ದರಿಂದ ಮನಸ್ಸಿನಲ್ಲಿ ಮಾತ್ರ ಅಸ್ತಿತ್ವದಲ್ಲಿರುತ್ತದೆ' ಎಂದು ಅದನ್ನೆದುರಿಸುತ್ತಾನೆ.

ಉಳಿದ ಸಂವಾದಗಳು ಅಷ್ಟು ಆಸಕ್ತಿದಾಯಕವಾದುವಲ್ಲ, ಹೀಗಾಗಿ ಅವುಗಳನ್ನು ಪರಿಗಣಿಸಬೇಕಾಗಿಲ್ಲ.

ಈಗ ಬರ್ಕ್ಲೀಯ ವಾದವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸೋಣ. ಒಂದೆಡೆಯಲ್ಲಿ, ನಾವು ಭೌತದ್ರವ್ಯವನ್ನು ಗ್ರಹಿಸುವುದಿಲ್ಲ, ಗ್ರಹಿಸುವುದು ಬಣ್ಣ, ಶಬ್ದ ಮುಂತಾದುವನ್ನು ಎಂದೂ, ಅವು ಮಾನಸಿಕವಾದುವೆಂದೂ ಅಥವಾ ಮನಸ್ಸಿನಲ್ಲಿರುವುವೆಂದೂ ಅವನು ವಾದಿಸುತ್ತಾನೆ. ಅವನ ತರ್ಕವು ಮೊದಲಿನ ಅಂಶದ ವಿಷಯದಲ್ಲಿ ಸಂಪೂರ್ಣವಾಗಿ ಸುಸಂಗತವಾಗಿದೆ, ಆದರೆ ಎರಡನೆಯದಕ್ಕೆ ಸಂಬಂಧಿಸಿದಂತೆ, ಅದು 'ಮಾನಸಿಕ' ಎಂಬ ಪದದ ಯಾವುದೇ ವ್ಯಾಖ್ಯೆ ಇಲ್ಲದೆ ಕೊರತೆಯನ್ನನುಭವಿಸುತ್ತದೆ. ಅವನು ವಾಸ್ತವವಾಗಿ ಅವಲಂಬಿಸುವುದು, ಪ್ರತಿಯೊಂದೂ ಇಲ್ಲ ಭೌತದ್ರವ್ಯವಾಗಿರಬೇಕು ಅಥವಾ ಮಾನಸಿಕವಾಗಿರಬೇಕು ಮತ್ತು ಯಾವುದೂ ಎರಡೂ ಆಗಿರಲಾರದು ಎಂಬ ದೃಷ್ಟಿಕೋನವನ್ನು.

ನಾವು ಗ್ರಹಿಸುವುದು ಗುಣಗಳನ್ನೇ ಹೊರತು 'ವಸ್ತು'ಗಳು ಅಥವಾ 'ಭೌತದ್ರವ್ಯ'ಗಳನ್ನಲ್ಲ, ಮತ್ತು ಸಾಮಾನ್ಯ ತಿಳಿವಳಿಕೆಯು ಭಿನ್ನ ಗುಣಗಳು ಒಂದೇ 'ವಸ್ತು'ವಿಗೆ ಅಂತರ್ಗತರೂಪದಲ್ಲಿ ಸಂಬಂಧಿಸಿದವು ಹಾಗೂ ಅವು ಪರಸ್ಪರವಾಗಿ ಹಾಗೂ ಎಲ್ಲಕ್ಕಿಂತಲೂ ಭಿನ್ನವೆಂದು ಪರಿಗಣಿಸಲು ಯಾವುದೇ ಕಾರಣವಿಲ್ಲವೆಂಬ ಅವನ ವಾದವನ್ನು ಒಪ್ಪಿಕೊಳ್ಳಬಹುದು. ಆದರೆ ಮುಂದುವರಿದು ಅವನು, ಐಂದ್ರಿಯಕ ಗುಣಗಳು – ಮೂಲ ಗುಣಗಳನ್ನೂ ಒಳಗೊಂಡಂತೆ – 'ಮಾನಸಿಕ' ಎಂದು ಹೇಳಿದಾಗ, ವಾದಗಳು ಭಿನ್ನವಾಗುತ್ತವೆ ಮತ್ತು ಅವುಗಳ ಸಿಂಧುತ್ವದ ಪ್ರಮಾಣವೂ ವಿಭಿನ್ನವಾಗುತ್ತದೆ. ಅವುಗಳಲ್ಲಿ ಕೆಲವು ತಾರ್ಕಿಕ ಅನಿವಾರ್ಯತೆಯನ್ನು

ಸಾಧಿಸುವ ಪ್ರಯತ್ನಗಳಿವೆ, ಜೊತೆಗೆ ಮಿಕ್ಕವು ಹೆಚ್ಚಾಗಿ ಅನುಭವೈಕವಾಗಿವೆ, ನಾವು ಮೊದಲನೆಯದನ್ನು ಪರಿಶೀಲಿಸೋಣ.

ಫಿಲೊನೂಸ್ ಹೇಳುತ್ತಾನೆ: 'ತಕ್ಷಣ ಗ್ರಹಿಕೆಗೆ ಒಳಗಾಗುವುದು ಒಂದು ಚಿಂತನೆ; ಮನಸ್ಸಿನ ಹೊರಗೆ ಯಾವುದೇ ಚಿಂತನೆಗೆ ಅಸ್ತಿತ್ವ ಇರುವುದು ಸಾಧ್ಯವೇ?' ಇದರಲ್ಲಿನ 'ಚಿಂತನೆ' ಎಂಬುದನ್ನು ವಿವರವಾಗಿ ಚರ್ಚಿಸಬೇಕು. ಆಲೋಚನೆ ಮತ್ತು ಗ್ರಹಿಕೆಗಳು ಜ್ಞಾತೃ ಮತ್ತು ಜ್ಞೇಯಗಳ ನಡುವಣ ಸಂಬಂಧವನ್ನೊಳಗೊಂಡಿರುತ್ತವೆ ಎಂದು ಹೇಳಿದರೆ, ಆಗ ಮನಸ್ಸನ್ನು ಜ್ಞಾತೃವಿನ ಜೊತೆಗೆ ಗುರುತಿಸಿ, ಮನಸ್ಸಿನಲ್ಲಿ ಯಾವುದೂ ಇಲ್ಲ, ಕೇವಲ ವಸ್ತುಗಳು ಅದರ ಮುಂದಿರುತ್ತವೆ ಎಂದು ಹೇಳಲು ಸಾಧ್ಯವಾಗುತ್ತದೆ. ಗ್ರಹಿಕೆಯ ಕ್ರಿಯೆ ಮತ್ತು ಗೃಹೀತ ವಸ್ತುವಿನ ನಡುವೆ ನಾವು ವ್ಯತ್ಯಾಸವನ್ನು ಗಮನಿಸಬೇಕೆಂಬ ಹಾಗೂ ಮೊದಲಿನದು ಮಾನಸಿಕವಾದರೆ ಎರಡನೆಯದು ಅಲ್ಲ ಎಂಬ ದೃಷ್ಟಿಕೋನವನ್ನು ಬರ್ಕ್ಲೀ ಚರ್ಚಿಸುತ್ತಾನೆ. ಈ ದೃಷ್ಟಿಕೋನದ ವಿರುದ್ಧವಾದ ಅವನ ವಾದವು ಅಸ್ಪಷ್ಟವಾಗಿದೆ, ಯಾಕೆಂದರೆ ಬರ್ಕ್ಲೀಯಂತೆ ಮಾನಸಿಕ ವಸ್ತುವಿನ ಬಗ್ಗೆ ನಂಬಿಕೆಯಿಟ್ಟವನನ್ನು ವಿರೋಧಿಸಲು ಯಾವುದೇ ಸಮರ್ಪಕ ಕಾರಣವಿಲ್ಲ. ಬರ್ಕ್ಲೀ ಹೇಳುತ್ತಾನೆ: 'ಇಂದ್ರಿಯಗಳ ತಕ್ಷಣದ ವಸ್ತುವು – ಅಂದರೆ ಯಾವುದೇ ಚಿಂತನೆ ಅಥವಾ ಚಿಂತನೆಗಳ ಮೊತ್ತವು – ಯೋಚನೆಗೆ ಬಾರದ ವಸ್ತುವಿನಲ್ಲಿ ಅಥವಾ ಎಲ್ಲ ಮನಸ್ಸುಗಳ ಹೊರಗೆ ಅಸ್ತಿತ್ವದಲ್ಲಿರಬೇಕು ಎಂಬದು ಸ್ವವಿರೋಧದಿಂದ ಕೂಡಿರುವುದು ಸ್ಪಷ್ಟ.' ಇದರಲ್ಲೊಂದು ತರ್ಕದೋಷವಿದೆ (ಫ್ಯಾಲಸಿ), ಅದು ಕೆಳಗಿನದರಂತಹದಂತಿದೆ: 'ಸೋದರಳಿಯನಿಲ್ಲದೆ ಸೋದರಮಾವನಿರಲು ಸಾಧ್ಯವಿಲ್ಲ; ಹೀಗಾಗಿ, ಶ್ರೀ ಎ ಒಬ್ಬ ಸೋದರಳಿಯ, ಹಾಗಾಗಿ ಅವರಿಗೊಬ್ಬ ಸೋದರಮಾವನಿರಬೇಕು.' ಇದರಲ್ಲಿ ಆಗ, ಶ್ರೀ ಎ ಒಬ್ಬ ಸೋದರಳಿಯ, ಆದರೆ ಶ್ರೀ ಎ ಹಾಗಿರುವುದನ್ನು ಯಾವುದೇ ವಿಶ್ಲೇಷಣೆಯಿಂದ ಕಂಡುಹಿಡಿಯಲಾಗುವುದಿಲ್ಲ ಎಂದು ಹೇಳುವುದು ತಾರ್ಕಿಕವಾಗಿ ಆವಶ್ಯಕವಾಗುತ್ತದೆ. ಹೀಗಾಗಿ, ಯಾವುದಾದರೂ ಇಂದ್ರಿಯಗಳ ವಸ್ತುವಾಗಿದ್ದರೆ, ಅದರೊಂದಿಗೆ ಯಾವುದೋ ಒಂದು ಮನಸ್ಸು ಸಂಬಂಧಿಸಿರುತ್ತದೆ; ಆದರೆ ಇದರಿಂದ ಆ ವಸ್ತುವು ಇಂದ್ರಿಯಗ್ರಾಹ್ಯ ವಸ್ತುವಾಗಿಲ್ಲದಿದ್ದರೆ ಅದು ಅಸ್ತಿತ್ವದಲ್ಲಿರಲಾರದು ಎಂಬುದು ಸರಿಯಲ್ಲ.

ಇಂಥದೇ ತರ್ಕದೋಷವು ಗೃಹೀತವಾದುದಕ್ಕೆ ಸಂಬಂಧಪಟ್ಟಂತೆಯೂ ಇದೆ. ಬೇರಾರೂ ಗ್ರಹಿಸಿಕೊಳ್ಳಲಾರದ ಮತ್ತು ನನ್ನ ಮನಸ್ಸಿನಲ್ಲಿ ಇರದ ಮನೆಯೊಂದನ್ನು ತಾನು ಕಲ್ಪಿಸಿಕೊಳ್ಳಬಲ್ಲೆ ಎಂದು ಹೈಲಾಸ್ ಹೇಳುತ್ತಾನೆ. ಇದನ್ನು ಫಿಲೊನೂಸ್ ಎದುರಿಸುವುದು ಹೀಗೆ: ಯಾವುದನ್ನು ಹೈಲಾಸ್ ತನ್ನ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತಾನೆಯೋ ಅದು ಅವನ ಮನಸ್ಸಿನಲ್ಲಿಯೇ ಇದೆ, ಹೀಗಾಗಿ ಆ

ಮನೆಯು ಎಷ್ಟೇ ಆಗಲಿ ಮಾನಸಿಕವಾದುದು ಎಂದು ವಾದಿಸುವುದರ ಮೂಲಕ. ಇದಕ್ಕೆ ಹೈಲಾಸ್ ಈ ರೀತಿ ಉತ್ತರಿಸಬೇಕಾಗಿತ್ತು: 'ನನ್ನ ಮನಸ್ಸಿನಲ್ಲಿ ಮನೆಯ ಆಕೃತಿಯೊಂದಿದೆ ಎಂಬುದು ನನ್ನ ಅರ್ಥವಲ್ಲ; ಬೇರಾರೂ ಗ್ರಹಿಸಲು ಸಾಧ್ಯವಾಗದ ಒಂದು ಮನೆಯನ್ನು ನಾನು ಕಲ್ಪಿಸಿಕೊಳ್ಳಬಲ್ಲೆ ಎಂದು ಹೇಳಿದರೆ, "ಯಾರೂ ಗ್ರಹಿಸಿಕೊಳ್ಳಲಾರದ ಮನೆ ನನ್ನ ಬಳಿಯಿದೆ" ಎಂಬುದನ್ನು ಅರ್ಥಮಾಡಿಕೊಳ್ಳಬಲ್ಲೆ, ಅಥವಾ ಇನ್ನೂ ಉತ್ತಮವಾಗಿ ಹೇಳಬೇಕೆಂದರೆ, "ಯಾರೂ ಗ್ರಹಿಸಲಾರದ ಮತ್ತು ಕಲ್ಪಿಸಿಕೊಳ್ಳಲಾರದ ಮನೆಯೊಂದಿದೆ" ಎಂಬುದು ನನ್ನ ನಿಜವಾದ ಅರ್ಥ.' ಈ ಹೇಳಿಕೆಯನ್ನು ಸಂಪೂರ್ಣವಾಗಿ ಅರ್ಥವಾಗುವ ಶಬ್ದಗಳಿಂದ ರಚಿಸಲಾಗಿದೆ, ಮತ್ತು ಶಬ್ದಗಳನ್ನು ಸರಿಯಾದ ಅನುಕ್ರಮದಲ್ಲಿ ಇರಿಸಲಾಗಿದೆ. ಈ ಹೇಳಿಕೆಯು ನಿಜವಾದುದೋ ಅಥವಾ ಸುಳ್ಳಾದುದೋ ನನಗೆ ತಿಳಿಯದು; ಆದರೆ ಅದು ಸ್ವಯಂವಿರೋಧಿಯೆಂದು ಸ್ಥಾಪಿಸಲು ಸಾಧ್ಯವಿಲ್ಲ. ಇದಕ್ಕೆ ನಿಕಟವಾಗಿ ಹೋಲುವ ಪ್ರತಿಪಾದನೆಗಳನ್ನು ಸಾಧಿಸಬಹುದು. ಉದಾಹರಣೆಗೆ, ಎರಡು ಪೂರ್ಣಾಂಕಗಳ ಸಾಧ್ಯ ಗುಣಾಕಾರಗಳು ಅಮಿತವಾದವು, ಹೀಗಾಗಿ ಕೆಲವನ್ನು ಎಂದೂ ಯಾರೂ ಯೋಚಿಸಿರಲಾರರು. ಬರ್ಕ್ಲೀಯ ವಾದವು, ಸಿಂಧುವಾದುದಾದರೆ, ಇದನ್ನು ಅಸಾಧ್ಯವೆಂದು ಸಾಧಿಸಬಹುದು.

ಇಲ್ಲಿನ ತರ್ಕದೋಷವು ತೀರ ಸಾಮಾನ್ಯವಾದುದು. ಅನುಭವದ ಮೂಲಕ ಸೃಷ್ಟಿಸಿಕೊಂಡ ಪರಿಕಲ್ಪನೆಗಳ ಸಹಾಯದಿಂದ, ಕೆಲವು ಮಂದಿ ಅಥವಾ ಯಾರೂ ಅನುಭವಸ್ಥರಿಲ್ಲದ ವರ್ಗಗಳ ಬಗ್ಗೆ ಹೇಳಿಕೆಗಳನ್ನು ರಚಿಸಬಹುದು. ಕೆಲವು ಸಂಪೂರ್ಣ ಸಾಧಾರಣವಾದ ಪರಿಕಲ್ಪನೆಗಳನ್ನು ತೆಗೆದುಕೊಳ್ಳಿ: ನಿದರ್ಶನಕ್ಕೆ 'ಉರುಟುಗಲ್ಲು' (ಪೆಬಲ್); ಇದು ಗ್ರಹಿಕೆಯಿಂದ ಸಾಧಿತವಾದ ಒಂದು ಅನುಭವೈಕ ಪರಿಕಲ್ಪನೆ. ಆದರೆ 'ಉರುಟುಗಲ್ಲು' ಬಗೆಗಿನ ನಮ್ಮ ವ್ಯಾಖ್ಯೆಯಲ್ಲಿ 'ಪರಿಕಲ್ಪಿಸಿಕೊಳ್ಳಬಹುದಾದ' ಎಂಬುದನ್ನು ಸೇರಿಸಿಕೊಳ್ಳದಿದ್ದರೆ, ಎಲ್ಲ ಉರುಟುಗಲ್ಲುಗಳೂ ಪರಿಕಲ್ಪಿತವಾದವು ಎಂದರ್ಥವಲ್ಲ. ಹೀಗೆ ಮಾಡದಿದ್ದರೆ, ಅಂಥದೊಂದನ್ನು ಪರಿಕಲ್ಪಿಸಿಕೊಳ್ಳುವುದು ತಾರ್ಕಿಕವಾಗಿ ಅಸಾಧ್ಯವಾಗುತ್ತದೆ ಎಂಬುದು ವಸ್ತುಸ್ಥಿತಿಯಾದರೂ 'ಪರಿಕಲ್ಪಿತವಲ್ಲದ ಉರುಟುಗಲ್ಲು' ಎಂಬುದು ತಾರ್ಕಿಕವಾಗಿ ಆಕ್ಷೇಪಣಾರಹಿತವಾಗುತ್ತದೆ.

ಸಾರಾಂಶರೂಪದಲ್ಲಿ ಆ ವಾದವು ಈ ರೀತಿಯಲ್ಲಿದೆ. ಬರ್ಕ್ಲೀ ಹೇಳುತ್ತಾನೆ: 'ಇಂದ್ರಿಯಗ್ರಾಹ್ಯ ವಸ್ತುಗಳು ಇಂದ್ರಿಯಗ್ರಾಹ್ಯ ವಸ್ತುಗಳಾಗಿರಬೇಕು. ಎ ಒಂದು ಇಂದ್ರಿಯಗ್ರಾಹ್ಯ ವಸ್ತು. ಆದ್ದರಿಂದ ಎ ಇಂದ್ರಿಯಗ್ರಾಹ್ಯವಾಗಿರಬೇಕು.' ಆದರೆ 'ಆಗಿರಬೇಕು' ಎಂಬುದು ತಾರ್ಕಿಕ ಆವಶ್ಯಕತೆಯನ್ನು ಸೂಚಿಸುತ್ತದೆ, ಈ ವಾದವು ಸಿಂಧುವಾಗುವುದು ಎ ಒಂದು ಇಂದ್ರಿಯಗ್ರಾಹ್ಯ ವಸ್ತುವಾಗಿದ್ದಾಗ ಮಾತ್ರ. ಈ

ವಾದವು, ಇಂದ್ರಿಯಗ್ರಾಹ್ಯತೆಯ ಹೊರತಾದ ಎ ದ ಗುಣಲಕ್ಷಣಗಳಿಂದ ಎ ಇಂದ್ರಿಯಗ್ರಾಹ್ಯ ವಸ್ತು ಎಂದು ಸಾಧಿಸಲಾಗುವುದಿಲ್ಲ. ಉದಾಹರಣೆಗೆ, ಅದು ನಾವು ನೋಡುವವುಗಳಿಂದ ಅಂತರ್ಗತವಾಗಿ ಪ್ರತ್ಯೇಕಿಸಲಾಗದ ಬಣ್ಣಗಳು ಕಾಣಿಸದಂತೆ ಅಸ್ತಿತ್ವದಲ್ಲಿಲ್ಲದಿರಬಹುದು. ಇದು ಆಗಲಾರದು ಎಂದು ಮಾನಸಿಕ ನೆಲೆಗಳಿಂದ ನಾವು ನಂಬಬಹುದು, ಆದರೆ ಅಂಥ ನೆಲೆಗಳು ಅನುಭವೈಕವಾದವು; ತರ್ಕದ ಮಟ್ಟಿಗೆ, ಕಣ್ಣು ಅಥವಾ ಮಿದುಳು ಇಲ್ಲದ ಕಡೆ ಬಣ್ಣಗಳು ಯಾಕಿರಬಾರದು ಎಂಬುದಕ್ಕೆ ಕಾರಣವಿಲ್ಲ.

ಈಗ ನಾನು ಬರುವುದು ಬರ್ಕ್ಲೇಯ ಅನುಭವೈಕವಾದದ ಕಡೆಗೆ. ಆರಂಭಕ್ಕೆ, ಅನುಭವೈಕವಾದ ಮತ್ತು ತಾರ್ಕಿಕ ವಾದಗಳನ್ನು ಒಗ್ಗೂಡಿಸುವುದು ದೌರ್ಬಲ್ಯದ ಲಕ್ಷಣ, ಯಾಕೆಂದರೆ ಎರಡನೆಯದು ಸಮಂಜಸವಾದರೆ ಮೊದಲನೆಯದು ಅನಗತ್ಯವಾಗುತ್ತದೆ.[೨೬೭] ಚೌಕವು ವೃತ್ತವಾಗಲಾರದು ಎಂದು ವಾದಿಸುತ್ತಿದ್ದರೆ, ನಾನೇನೂ ನಮಗೆ ತಿಳಿದಿರುವ ಯಾವುದೇ ನಗರದಲ್ಲಿ ಯಾವುದೇ ಚೌಕವು ಗುಂಡಗಿರುವುದಿಲ್ಲ ಎಂಬ ವಾಸ್ತವವನ್ನು ಮೊರೆಹೊಕ್ಕಿರುವುದಿಲ್ಲ. ಆದರೆ ನಾವು ತಾರ್ಕಿಕ ವಾದಗಳನ್ನು ತಿರಸ್ಕರಿಸಿರುವುದರಿಂದ, ಅನುಭವೈಕವಾದವನ್ನು ಗುಣವನ್ನಾಧರಿಸಿ ಪರಿಗಣಿಸುವುದು ಆವಶ್ಯಕವಾಗುತ್ತದೆ.

ಅನುಭವೈಕವಾದಗಳಲ್ಲಿನ ಮೊದಲನೆಯದು ವಿಚಿತ್ರವಾಗಿದೆ: 'ಅತ್ಯಂತ ಪ್ರಚಂಡವೂ ಗಾಢವೂ ಆದ ಶಾಖವು ನೋವನ್ನುಂಟುಮಾವುದರಿಂದ', ಶಾಖವು ವಸ್ತುವಿನಲ್ಲಿರಲಾರದು, ಆದರೆ 'ನೋವು ಅಥವಾ ಸಂತೋಷವನ್ನು ಹೊಂದಿರುವ ಯಾವುದೇ ಗ್ರಾಹ್ಯವಲ್ಲದ ವಸ್ತುವನ್ನು ಊಹಿಸಿಕೊಳ್ಳಲಾರೆವು.' ನೋವು ಎಂಬ ಪದದಲ್ಲಿ ಅಸ್ಪಷ್ಟತೆಯಿದೆ, ಇದರ ಅನುಕೂಲವನ್ನು ಬರ್ಕ್ಲೇ ಬಳಸಿಕೊಳ್ಳುತ್ತಾನೆ. ಅದು ಇಂದ್ರಿಯಗ್ರಹಿಕೆಯ ನೋವಿನಿಂದ ಕೂಡಿದ ಗುಣ ಎಂಬ ಅರ್ಥವನ್ನಾದರೂ ಕೊಡಬಹುದು, ಅಥವಾ ಈ ಗುಣವನ್ನುಳ್ಳ ಇಂದ್ರಿಯಗ್ರಹಿಕೆ ಎಂಬ ಅರ್ಥವನ್ನಾದರೂ ಕೊಡಬಹುದು. ಕಾಲು ಮನಸ್ಸಿನಲ್ಲಿರುವುದಿಲ್ಲ ಎಂದೇನೂ ಸೂಚಿಸದೆಯೇ, ಮುರಿದ ಕಾಲು ನೋವಿನಿಂದ ಕೂಡಿದೆ ಎನ್ನುತ್ತೇವೆ; ಹಾಗೆಯೇ ಅದು ಶಾಖವು ನೋವನ್ನು ಉಂಟುಮಾಡುತ್ತದೆ ಮತ್ತು ನೋವು ಎಂದಾಗ ನಾವು ಅರ್ಥೈಸಬೇಕಾದುದು ಹೀಗೆಯೇ ಎಂದಾದರೂ ಆಗಬಹುದು. ಹೀಗಾಗಿ ಇದು ದುರ್ಬಲವಾದುದು.

ಕೈಗಳನ್ನು ಉಗುರು ಬೆಚ್ಚಗಿನ ನೀರಲ್ಲಿಡುವ ಬಿಸಿ ಮತ್ತು ತಂಪುಗಳ ಬಗೆಗಿನ ವಾದವು, ನಿಖರವಾಗಿ ಹೇಳುವುದಾದರೆ, ಆ ಪ್ರಯೋಗದಲ್ಲಿ ನಾವು ಪರಿಗ್ರಹಿಸುವುದು

---

೨೬೭. ಉದಾಹರಣೆಗೆ, 'ನಿನ್ನೆ ರಾತ್ರಿ ನಾನು ಕುಡಿದಿರಲಿಲ್ಲ, ನನ್ನ ಹತ್ತಿರ ಎರಡು ಗ್ಲಾಸುಗಳಿದ್ದವು; ಅಲ್ಲದೆ, ನಾನು ಸಂಪೂರ್ಣವಾಗಿ ಮದ್ಯವರ್ಜಿಸಿದವನು.'

ಬಿಸಿ ತಂಪುಗಳನ್ನಲ್ಲ, ಆದರೆ ಹೆಚ್ಚು ಬಿಸಿ ಮತ್ತು ಹೆಚ್ಚು ತಣ್ಣಗಿರುವುದನ್ನು. ಇವು ವಸ್ತುನಿಷ್ಠ ಎನ್ನಲು ಯಾವುದೇ ಸಾಕ್ಷ್ಯಗಳಿಲ್ಲ.

ಇನ್ನು ರುಚಿಗಳಿಗೆ ಸಂಬಂಧಿಸಿದಂತೆಯೂ ಸಂತೋಷ ಮತ್ತು ನೋವುಗಳ ವಾದವು ಪುನರಾವರ್ತನೆಗೊಳ್ಳುತ್ತದೆ. ಸಿಹಿ ಸಂತೋಷ ಮತ್ತು ಕಹಿ ನೋವು, ಹೀಗಾಗಿ ಎರಡೂ ಮಾನಸಿಕವಾದವು. ನಾನು ಆರೋಗ್ಯವಾಗಿರುವಾಗ ಸಿಹಿಯಾಗಿರುವ ವಸ್ತುವು ನನಗೆ ಕಾಯಿಲೆ ಬಂದಾಗ ಕಹಿಯೆನಿಸಬಹುದು. ಇಂಥವೇ ವಾದಗಳನ್ನು ವಾಸನೆಗಳ ಬಗ್ಗೆಯೂ ಮಂಡಿಸಲಾಗಿದೆ: ಯಾಕೆಂದರೆ ಅವು ಇಷ್ಟವಾಗುವ ಅಥವಾ ಆಗದಿರುವಂತಹವು, 'ಗ್ರಹಿಕೆಯ ವಸ್ತು ಅಥವಾ ಮನಸ್ಸಿನ ಹೊರತಾಗಿ ಬೇರೆಡೆ ಅವು ಅಸ್ತಿತ್ವದಲ್ಲಿರಲಾರವು.' ಇಲ್ಲಿ ಮತ್ತು ಎಲ್ಲೆಡೆಯೂ ಬರ್ಕ್ಲೇ ಊಹಿಸಿಕೊಳ್ಳುವುದೆಂದರೆ, ಯಾವುದು ಭೌತದ್ರವ್ಯದಲ್ಲಿ ಅಂತರ್ಗತವಾಗಿರುವುದಿಲ್ಲವೋ ಅದು ಮನಸ್ಸಿನ ವಸ್ತುವಿನಲ್ಲಿ ಅಂತರ್ಗತವಾಗಿರಬೇಕು, ಮತ್ತು ಯಾವುದೂ ಮಾನಸಿಕವೂ ಭೌತದ್ರವ್ಯರೂಪದ್ದೂ ಆಗಿರಲಾರದು ಎಂದು.

ಶಬ್ದಕ್ಕೆ ಸಂಬಂಧಿಸಿದ ವಾದವು ವ್ಯಕ್ತಿಕೇಂದ್ರಿತವಾದದ್ದು. ಹೈಲಾಸ್‌ನ ವಾದವೆಂದರೆ ಶಬ್ದಗಳು ವಾಸ್ತವವಾಗಿ ಗಾಳಿಯಲ್ಲಿನ ಚಲನೆಗಳು ಎಂದು: ಫಿಲೋನೂಸ್ ಇದನ್ನು ಪ್ರತಿಭಟಿಸುವುದು ಚಲನೆಯನ್ನು ನೋಡಬಹುದು ಅಥವಾ ಅನುಭವಿಸಬಹುದು ಎನ್ನುವುದರ ಮೂಲಕ, ಹೀಗಾಗಿ 'ವಾಸ್ತವ' ಶಬ್ದಗಳನ್ನು ಕೇಳಲು ಸಾಧ್ಯವಿಲ್ಲ. ಇದನ್ನು ಸಮಂಜಸ ವಾದ ಎಂದು ಹೇಳಲಾಗುವುದಿಲ್ಲ; ಯಾಕೆಂದರೆ ಚಲನೆಯ ಗ್ರಹಿಕೆಯು, ಬರ್ಕ್ಲೇ ಪ್ರಕಾರ, ಇತರ ಗ್ರಹಿಕೆಗಳಂತೆಯೇ ಕೇವಲ ವ್ಯಕ್ತಿಗತವಾದುದು. ಹೈಲಾಸ್ ಹೇಳುವ ಚಲನೆಗಳು ಅಗ್ರಾಹ್ಯವೂ ಗ್ರಾಹ್ಯಸಾಧ್ಯವಲ್ಲದ್ದೂ ಆಗಿರಬೇಕು. ಆದರೆ ಕೇಳುವ ಶಬ್ದವನ್ನು ಗಾಳಿಯ ಚಲನೆಯ (ಅದನ್ನು ಭೌತವಿಜ್ಞಾನವು ಕಾರಣ ಎನ್ನುತ್ತದೆ) ಮೂಲಕ ಗುರುತಿಸಲು ಸಾಧ್ಯವಿಲ್ಲ ಎಂಬಷ್ಟರ ಮಟ್ಟಿಗೆ ಅದು ಸಿಂಧುವಾಗುತ್ತದೆ.

ಆನುಷಂಗಿಕ ಗುಣಗಳನ್ನು ಕೈಬಿಟ್ಟ ನಂತರ ಹೈಲಾಸ್, ವಿಸ್ತರಣೆ, ಗಟ್ಟಿತನ, ಗುರುತ್ವ, ಚಲನೆ, ಮತ್ತು ವಿಶ್ರಾಂತಿ ಎಂಬ ಮೂಲಗುಣಗಳನ್ನು ಕೈಬಿಡಲು ಇನ್ನೂ ಸಿದ್ಧನಿಲ್ಲ. ಈ ವಾದವು ಸಹಜವಾಗಿಯೇ ವಿಸ್ತರಣೆ ಮತ್ತು ಚಲನೆಯ ಮೇಲೇ ಗಮನವನ್ನು ಕೇಂದ್ರೀಕರಿಸುತ್ತದೆ. ವಸ್ತುಗಳಿಗೆ ವಾಸ್ತವ ಗಾತ್ರಗಳಿರುವುದಾದರೆ, ಒಂದೇ ಕಾಲದಲ್ಲಿ ಅದಕ್ಕೆ ವಿವಿಧ ಗಾತ್ರಗಳಿರಲು ಸಾಧ್ಯವಿಲ್ಲವಾದರೂ ಹತ್ತಿರವಿದ್ದಾಗ ದೊಡ್ಡದಾಗಿಯೂ ದೂರದಲ್ಲಿರುವಾಗ ಚಿಕ್ಕದಾಗಿಯೂ ಕಾಣುತ್ತದೆ ಎಂದು ಫಿಲೊನೂಸ್ ಹೇಳುತ್ತಾನೆ. ಚಲನೆಯು ವಾಸ್ತವವಾಗಿ ವಸ್ತುವಿನಲ್ಲಿದ್ದರೆ ತಾನೇ ಆಗ ಅದು ಒಬ್ಬನಿಗೆ ವೇಗವಾಗಿಯೂ ಮತ್ತೊಬ್ಬನಿಗೆ ನಿಧಾನವಾಗಿಯೂ ಇರುವಂತೆ ತೋರಲು ಸಾಧ್ಯ? ಇಂಥ ವಾದಗಳು ಗ್ರಹಿಸುವ ಅವಕಾಶದ ವ್ಯಕ್ತಿನಿಷ್ಠತೆಯನ್ನು

ಸಾಧಿಸುವ ಅವಕಾಶ ನೀಡಬೇಕು ಎಂದು ನನಗನ್ನಿಸುತ್ತದೆ. ಆದರೆ ವ್ಯಕ್ತಿನಿಷ್ಠತೆಯು ಭೌತಿಕವಾದದ್ದು: ಇದು ಕ್ಯಾಮೆರಾ ವಿಷಯಕ್ಕೂ ನಿಜ, ಹೀಗಾಗಿ ಆಕಾರವು 'ಮಾನಸಿಕ' ಎನ್ನಲು ಸಾಧ್ಯವಿಲ್ಲ. ಎರಡನೆಯ ಸಂವಾದದಲ್ಲಿ ಫಿಲೊನೂಸ್ ಇಲ್ಲಿಯವರೆಗಿನ ವಾದದ ಸಾರಾಂಶವನ್ನು ಈ ಮಾತುಗಳಲ್ಲಿ ನೀಡುತ್ತಾನೆ: 'ಚೇತನಗಳಲ್ಲದೆ ನಮಗೆ ಗೊತ್ತಿರುವ ಅಥವಾ ಗ್ರಹಿಸುವ ಎಲ್ಲವೂ ನಮ್ಮ ಚಿಂತನೆಗಳೇ.' ಚೇತನಗಳನ್ನವನು ಹೊರತುಪಡಿಸಬೇಕಾಗಿರಲಿಲ್ಲ ಎಂಬುದು ಸ್ಪಷ್ಟವಾಗಿದೆ, ಯಾಕೆಂದರೆ ಭೌತದ್ರವ್ಯವನ್ನು ತಿಳಿಯುವಂತೆ ಚೇತನವನ್ನು ತಿಳಿಯಲು ಸಾಧ್ಯವಿಲ್ಲ. ವಾಸ್ತವವಾಗಿ, ಈ ವಾದಗಳು, ಎರಡೂ ಸಂದರ್ಭಗಳಲ್ಲಿ ಬಹುಪಾಲು ಒಂದೇ ಬಗೆಯವು.

ಬರ್ಕ್ಲೇ ಆರಂಭಿಸಿದ ವಾದಗಳ ಸ್ವರೂಪದ ಬಗ್ಗೆ ನಾವು ಯಾವ ತೀರ್ಮಾನಗಳನ್ನು ಕೈಗೊಳ್ಳಬಹುದು ಎಂಬ ಬಗ್ಗೆ ನಾವೀಗ ಗಮನ ಹರಿಸೋಣ.

ನಮಗೆ ತಿಳಿದಿರುವತೆ ವಸ್ತುಗಳೆಂದರೆ ಇಂದ್ರಿಯಗ್ರಾಹ್ಯ ಗುಣಗಳ ಮೊತ್ತ; ಉದಾಹರಣೆಗೆ ಮೇಜು ತನ್ನ ಚಾಕ್ಷುಷ ಆಕಾರ, ಗಟ್ಟಿತನ ಬಡಿದರೆ ಉಂಟುಮಾಡುವ ಸದ್ದು (ಇರುವುದಾದರೆ) ವಾಸನೆ – ಇವುಗಳಿಂದ ಕೂಡಿರುತ್ತದೆ. ಈ ವಿಭಿನ್ನ ಗುಣಗಳಲ್ಲಿ ಕೆಲವು ಅನುಭವಕ್ಕೆ ಹತ್ತಿರವಾಗಿರುತ್ತವೆ, ಸಾಮಾನ್ಯ ತಿಳಿವಳಿಕೆಯು ಇವುಗಳೆಲ್ಲ ಒಂದೇ ;ವಸ್ತು;ವಿಗೆ ಸಂಬಂಧಿಸಿದ್ದೆಂದು ತಿಳಿಯುವಂತೆ ಮಾಡುತ್ತದೆ, ಆದರೆ 'ದ್ರವ್ಯ' ಅಥವಾ 'ವಸ್ತು'ವಿನ ಗ್ರಹಿಕೆಯು ಗುರುತಿಸಿದ ಗುಣಗಳಿಗೆ ಏನನ್ನೂ ಸೇರಿಸಲಾರದು, ಅದು ಅನವಶ್ಯಕ. ಇಲ್ಲಿಯವರೆಗೆ ನಾವು ಗಟ್ಟಿ ನೆಲದ ಮೇಲೆ ನಿಲ್ಲುವಂತಾಯಿತು.

ಆದರೆ ಈಗ ನಮ್ಮನ್ನು ನಾವೇ 'ಗ್ರಹಿಸುವುದು' ಎಂದರೆ ಏನು ಎಂದು ಪ್ರಶ್ನಿಸಿಕೊಳ್ಳಬೇಕಾಗಿದೆ. ಇಂದ್ರಿಯಗ್ರಾಹ್ಯ ವಸ್ತುಗಳಿಗೆ ಸಂಬಂಧಿಸಿದಂತೆ, ಅವುಗಳ ವಾಸ್ತವತೆಯು ಅವುಗಳ 'ಗ್ರಾಹ್ಯತೆ'ಯಲ್ಲಿಯೇ ಇರುತ್ತದೆ ಎಂಬ ನಿಲವನ್ನು ಫಿಲೊನೂಸ್ ತಾಳುತ್ತಾನೆಯೇ ವಿನಾ ಗ್ರಹಿಕೆ ಎಂದರೆ ಏನು ಎಂದವನು ಹೇಳುವುದಿಲ್ಲ. ಗ್ರಹಿಕೆಯೆಂದರೆ ವಸ್ತು ಮತ್ತು ಗ್ರಾಹ್ಯವಾದುದರ ನಡುವಣ ಸಂಬಂಧ ಎಂಬ ವಾದವಿರುವುದಾದರೂ, ಅದನ್ನವನು ಒಪ್ಪುವುದಿಲ್ಲ. ಅವನು ತನ್ನತನವನ್ನು ಸಾರಸತ್ವ ಎಂದು ಭಾವಿಸಿದ್ದರಿಂದ, ಅವನು ಈ ಸಿದ್ಧಾಂತವನ್ನು ಒಪ್ಪಿಕೊಳ್ಳಬಹುದಾಗಿತ್ತು; ಆದರೆ ಅವನು ಅದನ್ನು ವಿರೋಧಿಸಿದ. ಸಾರಸತ್ವ ರೂಪದ ತನ್ನತನ ಪರಿಕಲ್ಪನೆಯನ್ನು ತಿರಸ್ಕರಿಸುವವರಿಗೆ ಈ ಸಿದ್ಧಾಂತವು ಅಸಾಧ್ಯವಾದುದು. ಹಾಗಾದರೆ ಯಾವುದನ್ನಾದರೂ 'ಗ್ರಾಹ್ಯ' ಎನ್ನುವುದರ ಅರ್ಥವೇನು? ಆ ಯಾವುದಾದರೂ ಸಂಭವಿಸುವುದಕ್ಕಿಂತ ಹೆಚ್ಚಿನ ಏನನ್ನಾದರೂ ಅದು ಸೂಚಿಸುತ್ತದೆಯೇ? ನಾವು ಬರ್ಕ್ಲೇಯ ಮಾತನ್ನು ತಿರಸ್ಕರಿಸಿ, ಗ್ರಹಿಕೆಗೊಳಗಾಗುವುದರಲ್ಲಿಯೇ ವಾಸ್ತವತೆಯಿದೆ ಎನ್ನುವುದರ ಬದಲು ವಾಸ್ತವವಾಗಿರುವುದರಿಂದಲೇ ಗ್ರಹಿಕೆ ಸಾಧ್ಯವಾಗುತ್ತದೆ

ಎನ್ನಬಹುದೇ? ಅದೇನಾದರೂ ಆಗಿರಲಿ, ಚೇತನಗಳಂತಹ ಕೆಲವು ವಾಸ್ತವ ವಸ್ತುಗಳು ಗ್ರಾಹ್ಯವಲ್ಲದ್ದರಿಂದಾಗಿ ಗ್ರಹಿಕೆಗೊಳಗಾಗದ ವಸ್ತುಗಳಿರುತ್ತವೆ ಎಂಬುದನ್ನು ಬರ್ಕ್ಲೇ ತಾರ್ಕಿಕವಾಗಿ ಸಾಧ್ಯವೆಂದು ತೋರಿಸುತ್ತಾನೆ. ಒಂದು ಘಟನೆಯು ಗ್ರಹಿಕೆಗೊಳಗಾಗಿದೆ ಎಂದಾಗ, ಅದು ಸಂಭವಿಸುವುದಕ್ಕಿಂತ ಹೆಚ್ಚಿನದೇನನ್ನೋ ನಾವು ಸೂಚಿಸುತ್ತಿರುತ್ತೇವೆ.

ಈ ಹೆಚ್ಚಿನದು ಯಾವುದು? ಗ್ರಾಹ್ಯ ಮತ್ತು ಅಗ್ರಾಹ್ಯಗಳ ನಡುವಣ ಒಂದು ಮುಖ್ಯ ಸ್ಪಷ್ಟವಾದ ವ್ಯತ್ಯಾಸವೆಂದರೆ, ಮೊದಲಿನದನ್ನು, ಎರಡನೆಯದನ್ನಲ್ಲ, ನೆನಪಿಸಿಕೊಳ್ಳಬಹುದಾದುದು. ಮತ್ತಾವುದಾದರೂ ವ್ಯತ್ಯಾಸವಿದೆಯೇ?

ನಾವು ಸಹಜವಾಗಿ 'ಮಾನಸಿಕ' ಎಂದು ಕರೆಯುವ ವಿದ್ಯಮಾನಕ್ಕೆ ವಿಶಿಷ್ಟವಾದ ಪರಿಣಾಮಗಳ ಇಡಿಯ ಗುಂಪಿನಲ್ಲಿ ಒಂದಾದ ನೆನಪು ಒಂದು ಮಾತ್ರ. ಈ ಪರಿಣಾಮಗಳು ಅಭ್ಯಾಸಕ್ಕೆ ಸಂಬಂಧಿಸಿರುವಂಥವು. ಕೈಸುಟ್ಟುಕೊಂಡ ಮಗುವು ಬೆಂಕಿಯನ್ನು ಕಂಡು ಹೆದರುತ್ತದೆ; ಆದರೆ ಸುಟ್ಟ ಸಲಾಕಿಯಲ್ಲ. ಆದರೆ ಶರೀರವಿಜ್ಞಾನಿಯು ಅಭ್ಯಾಸ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ನರವ್ಯವಸ್ಥೆಯ ಒಂದು ಲಕ್ಷಣವೆಂದೂ, ಭೌತವಾದಿಯ (ಫಿಸಿಕಲಿಸ್ಟ್) ವ್ಯಾಖ್ಯಾನಕ್ಕೆ ಹೊರತಾಗಬೇಕಾದ್ದಿಲ್ಲವೆಂದೂ ಹೇಳುತ್ತಾನೆ. ಭೌತವಾದಿಯ ಪರಿಭಾಷೆಯಲ್ಲಿ ಹೇಳುವುದಾದರೆ, ಒಂದು ಸಂಗತಿಯು 'ಗ್ರಾಹ್ಯ'ವಾಗುವುದು ಅದಕ್ಕೆ ಕೆಲವು ಬಗೆಯ ಪರಿಣಾಮಗಳಿದ್ದಾಗ; ಈ ಅರ್ಥದಲ್ಲಿ ನಾವು ತೊರೆಯು ತನ್ನನ್ನು ಆಳವಾಗಿಸುವುದರಿಂದ ಅದನ್ನು 'ಗ್ರಹಿಸುತ್ತದೆ' ಎಂದೂ, ನದಿಕಣಿವೆಯು ಹಿಂದಾದ ಮಳೆಗಳ 'ನೆನಪು' ಎಂದೂ ಹೇಳಬಹುದೇನೋ. ಭೌತವಾದಿಯ ಭಾಷೆಯಲ್ಲಿ ಅಭ್ಯಾಸ ಮತ್ತು ನೆನಪುಗಳನ್ನು ವರ್ಣಿಸಿದರೆ, ಅವು ನಿರ್ಜೀವ ವಸ್ತುಗಳಲ್ಲಿ ಸಂಪೂರ್ಣವಾಗಿ ಇಲ್ಲದಿರುವುದೇನಲ್ಲ; ಈ ವಿಷಯದಲ್ಲಿ, ಸಜೀವ ಹಾಗೂ ನಿರ್ಜೀವ ವಸ್ತುಗಳಲ್ಲಿನ ವ್ಯತ್ಯಾಸವು ಕೇವಲ ಪ್ರಮಾಣದ್ದು.

ಈ ದೃಷ್ಟಿಕೋನದಲ್ಲಿ, ಒಂದು ಸಂಗತಿಯು 'ಗ್ರಾಹ್ಯ'ವಾಯಿತು ಎಂದರೆ ಅದಕ್ಕೆ ಕೆಲವು ಬಗೆಯ ಪರಿಣಾಮಗಳಿವೆ ಎಂದ ಹಾಗೆಯೇ, ಮತ್ತು ಎಲ್ಲ ಸಂಗತಿಗಳು ಈ ಬಗೆಯ ಪರಿಣಾಮಗಳನ್ನು ಹೊಂದಿರುತ್ತದೆ ಎನ್ನಲು ತಾರ್ಕಿಕವಾದ ಅಥವಾ ಅನುಭವೈಕವಾದದ ಕಾರಣವಿಲ್ಲ.

ಜ್ಞಾನ ಸಿದ್ಧಾಂತವು ಬೇರೊಂದು ನಿಲವನ್ನು ತೋರಿಸುತ್ತದೆ. ಇಲ್ಲಿ ನಾವು ಆರಂಭಿಸುವುದು ಪೂರ್ಣಗೊಂಡ ವಿಜ್ಞಾನದಿಂದಲ್ಲ, ವಿಜ್ಞಾನದಲ್ಲಿನ ನಮ್ಮ ನಂಬಿಕೆಗೆ ನೆಲೆಯಾದ ಜ್ಞಾನದಿಂದ. ಬರ್ಕ್ಲೇ ಮಾಡುತ್ತಿರುವುದೂ ಇದನ್ನೇ. ಇಲ್ಲಿ 'ಗ್ರಹಿಕೆ'ಯ ಕುರಿತು ಮುಂಚೆಯೇ ನಿರ್ವಚಿಸುವ ಆವಶ್ಯಕತೆಯಿರುವುದಿಲ್ಲ. ಈ ವಿಧಾನದ ರೂಪುರೇಷೆಗಳು ಹೀಗಿರುತ್ತದೆ: ಊಹನೆಯಿಲ್ಲದೆ ನಮಗೆ ತಿಳಿದಿರುವುವೆಂದು

ನಂಬಲಾದ ಪ್ರತಿಪಾದನೆಗಳನ್ನು ಕಲೆಹಾಕುತ್ತೇವೆ, ಮತ್ತು ಇವುಗಳಲ್ಲಿನ ಬಹುಪಾಲು ತೇದಿಯುಳ್ಳ ದಾಖಲಿತ ವಿವರಗಳನ್ನೊಳಗೊಂಡಿರುತ್ತವೆ. ಈ ವಿವರಗಳನ್ನು ನಾವು 'ಗ್ರಹಿಕೆಗಳು' ಎಂದು ಕರೆಯುತ್ತೇವೆ. ಹೀಗಾಗಿ ಗ್ರಹಿಕೆಗಳೆಂದರೆ ಊಹನೆಯಿಲ್ಲದೆಯೇ ನಾವು ತಿಳಿದಿರುವ ಸಂಗತಿಗಳು; ಅಥವಾ ಕನಿಷ್ಠ ಪಕ್ಷ, ನೆನಪಿಗೆ ಅವಕಾಶ ನೀಡಲು – ಅಂತಹ ಸಂಗತಿಗಳು ಒಂದು ಕಾಲದಲ್ಲಿ ಗ್ರಹಿಕೆಗಳಾಗಿದ್ದವು. ಆನಂತರ ನಮ್ಮೆದುರು ನಿಲ್ಲುವ ಪ್ರಶ್ನೆಯೆಂದರೆ: ನಮ್ಮದೇ ಗ್ರಹಿಕೆಗಳಿಂದಾಗಿ ನಾವು ಬೇರೆ ಸಂಗತಿಗಳನ್ನು ಊಹನೆ ಮಾಡಿಕೊಳ್ಳಬಹುದೇ? ಎಂಬುದು. ಈ ಹಂತದಲ್ಲಿ ನಾಲ್ಕು ನಿಲವುಗಳು ಸಾಧ್ಯ, ಅವುಗಳಲ್ಲಿ ಮೊದಲ ಮೂರು ಆದರ್ಶವಾದದ ರೂಪಗಳು.

(೧) ನನ್ನ ಈಗಿನ ಗ್ರಹಿಕೆಗಳು ಮತ್ತು ಇತರ ಸಂಗತಿಗಳ ನೆನಪುಗಳ ಊಹನೆಗಳಿಂದ ಎಲ್ಲ ಊಹನೆಗಳ ಸಿಂಧುತ್ವವನ್ನು ಅಲ್ಲಗಳೆಯುವುದು. ನಿಗಮನಕ್ಕೆ ಊಹನೆಗಳ ಬಳಕೆಗೆ ಯಾರು ಸೀಮಿತಗೊಳ್ಳುತ್ತಾರೆಯೋ ಅಂತಹವರು ಈ ದೃಷ್ಟಿಕೋನವನ್ನು ಹೊಂದಬಹುದು. ಯಾವುದೇ ಸಂಗತಿ, ಅಥವಾ ಸಂಗತಿಗಳ ಗುಂಪು, ತಾರ್ಕಿಕವಾಗಿ ಬೇರೆಯಾಗಿ ನಿಲ್ಲಲು ಸಮರ್ಥವಾಗಿರುತ್ತದೆ, ಹೀಗಾಗಿ ಇತರ ಸಂಗತಿಗಳ ಇರುವಿಕೆಯ ನಿದರ್ಶನಾತ್ಮಕ ಸಾಕ್ಷ್ಯಗಳಾಗಲು ಯಾವುದೇ ಸಂಗತಿಗಳ ಗುಂಪು ಸಮರ್ಥವಾಗುವುದಿಲ್ಲ. ಆದ್ದರಿಂದ ನಮ್ಮ ಊಹನೆಯನ್ನು ನಿಗಮನಕ್ಕೆ ಸೀಮಿತಗೊಳಿಸಿದರೆ, ತಿಳಿಯುವ ಜಗತ್ತು ನಮ್ಮ ಜೀವಮಾನದಲ್ಲಿನ ಗ್ರಹಿಸಿರುವ ಅಥವಾ ನೆನಪಿಗನುಗುಣವಾಗಿ ಗ್ರಹಿಸಿದ್ದ ಸಂಗತಿಗಳಿಗೆ ಮಾತ್ರವೇ ನಾವು ಸೀಮಿತಗೊಳ್ಳುತ್ತೇವೆ.

(೨) ಎರಡನೆಯ ಪ್ರಶ್ನೆಯೆಂದರೆ, ಸಾಮಾನ್ಯವಾಗಿ ತಿಳಿದಂತೆ ಸ್ವಾತ್ಮೈಕಸಾಕ್ಷ್ಯತಾವಾದ (ಸಾಲಿಪ್ಸಿಸಂ)ದಿಂದ ನಮ್ಮ ಗ್ರಹಿಕೆಗಳಿಂದ ಒಂದಷ್ಟು ಊಹನೆಗಳಿಗೆ, ನನ್ನ ಜೀವಮಾನದಲ್ಲಿನ ಇತರ ಸಂಗತಿಗಳಿಗೆ ಸಂಬಂಧಪಟ್ಟಂತೆ ಮಾತ್ರ, ಅವಕಾಶವಿರುತ್ತದೆ. ಈ ಉದಾಹರಣೆಯನ್ನು ತೆಗೆದುಕೊಳ್ಳಿ: ಎಚ್ಚರ ಸ್ಥಿತಿಯಲ್ಲಿನ ಯಾವುದೇ ಕ್ಷಣದಲ್ಲಾದರೂ ನಾವು ಗಮನಿಸದೇ ಹೋಗುವ ಇಂದ್ರಿಯಗ್ರಾಹ್ಯ ವಸ್ತುಗಳಿರುತ್ತವೆ ಎಂಬ ದೃಷ್ಟಿಕೋನ. ಅವುಗಳನ್ನು ನೋಡುತ್ತೇವೆ, ಅಥವಾ ಹೇಗೆ ತೋರುತ್ತದೆ, ಎಂದು ನಮಗೆ ನಾವು ಹೇಳಿಕೊಳ್ಳದೆಯೇ ಅನೇಕ ವಸ್ತುಗಳನ್ನು ನೋಡಬಹುದು. ಚಲನೆಯಿಲ್ಲದ ಪರಿಸರದಲ್ಲಿ ನಮ್ಮ ಕಣ್ಣುಗಳನ್ನು ನೆಟ್ಟಾಗ ಒಂದಾದ ಮೇಲೊಂದರಂತೆ ಅನೇಕ ವಸ್ತುಗಳನ್ನು ಗಮನಿಸಬಹುದು, ಮತ್ತು ಅವುಗಳನ್ನು ಗಮನಿಸುವುದಕ್ಕೆ

ಮುಂಚೆ ಕಾಣುತ್ತಿದ್ದೆವು ಎಂದು ಅಂದುಕೊಳ್ಳಬಹುದು; ಆದರೆ ನಾವು ಗಮನಿಸುವುದಕ್ಕೆ ಮುಂಚಿನ ಅವು ಜ್ಞಾನ ಸಿದ್ಧಾಂತದ ದತ್ತಾಂಶವಾಗಲಾರದು. ನಾವು ಗಮನಿಸುವುದನ್ನು ಆಧರಿಸುವ ಈ ಪ್ರಮಾಣದ ಊಹನೆಯನ್ನು ಯೋಚಿಸದೆಯೇ ಎಲ್ಲರೂ, ತಮ್ಮ ಅನುಭವಕ್ಕೆ ಹೊರತಾಗಿ ಜ್ಞಾನವನ್ನು ವಿಸ್ತರಿಸಿಕೊಳ್ಳಲು ಬಯಸದವರೂ, ಮಾಡಿರುತ್ತಾರೆ.

(೩) ಮೂರನೆಯ ನಿಲವು: ನಿದರ್ಶನಕ್ಕೆ ಈ ನಿಲವನ್ನು ಎಡಿಂಗ್‌ಟನ್ ಹೊಂದಿದ್ದಂತೆ ಕಾಣುತ್ತದೆ. ಈ ನಿಲವೆಂದರೆ ನಮ್ಮ ಅನುಭವದಲ್ಲಿ ಇರುವಂಥವುಗಳನ್ನೇ ಹೋಲುವ ಇತರ ಸಂಗತಿಗಳ ಬಗ್ಗೆ ಊಹನೆ ಮಾಡಲು ಸಾಧ್ಯ; ಮತ್ತು ಹೀಗಾಗಿ, ನಾವೇ ನೋಡದ ಆದರೆ ಇತರರು ನೋಡುವ ಬಣ್ಣಗಳು, ಅನುಭವಿಸುವ ಹಲ್ಲುನೋವುಗಳು, ಇತರರು ಪಡೆದ ಸಂತೋಷಗಳು ಮತ್ತು ಯಾತನೆಗಳು ಮುಂತಾದವನ್ನು ನಂಬಲು ನಮಗೆ ಹಕ್ಕು ಇರುತ್ತದೆಯೇ ವಿನಾ ಯಾರೂ ಅನುಭವಿಸದ ಮತ್ತು 'ಮನಸ್ಸಿ'ನ ಭಾಗವಾಗಿರದ ಸಂಗತಿಗಳ ಬಗ್ಗೆ ಊಹನೆ ಮಾಡಲು ನಮಗೆ ಹಕ್ಕು ಇರುವುದಿಲ್ಲ ಎಂಬುದು. ನನ್ನ ಪರಿವೀಕ್ಷಣೆಯ ಕಕ್ಷೆಯ ಹೊರಗಿರುವ ಸಂಗತಿಗಳನ್ನು ಕುರಿತ ಎಲ್ಲ ಊಹನೆಗಳೂ ಸಾಮ್ಯದಿಂದಾದವು, ಮತ್ತು ಯಾರೂ ಅನುಭವಿಸದ ಸಂಗತಿಗಳು, ಸಾಮ್ಯಾಧಾರಿತ ಊಹನೆಗಳನ್ನು ಮಾಡಬಹುದಾದಂತೆ, ನನ್ನ ದತ್ತಾಂಶದೊಡನೆ ಸಾಕಷ್ಟು ಸಾಮ್ಯವನ್ನು ಹೊಂದಿಲ್ಲ ಎಂಬ ನೆಲೆಯಲ್ಲಿ ಈ ದೃಷ್ಟಿಕೋನವನ್ನು ಸಮರ್ಥಿಸಬಹುದು.

(೪) ನಾಲ್ಕನೆಯ ನಿಲವೆಂದರೆ, ಸಾಮಾನ್ಯ ತಿಳಿವಳಿಕೆ ಮತ್ತು ಸಾಂಪ್ರದಾಯಿಕ ಭೌತವಿಜ್ಞಾನಗಳ ಪ್ರಕಾರ, ನನ್ನವೇ ಅನುಭವಗಳು ಮತ್ತು ಇತರರವು ಮತ್ತು ಯಾರೂ ಅನುಭವಿಸಿರದ ಸಂಗತಿಗಳು – ಉದಾಹರಣೆಗೆ, ನಾನು ನಿದ್ರಿಸುವಾಗ ನನ್ನ ಕೋಣೆಯಲ್ಲಿನ ಮರಮುಟ್ಟುಗಳು ಮತ್ತು ಕತ್ತಲು ಆವರಿಸಿರುವುದು – ಸೇರುತ್ತವೆ. ತಾವು ರೈಲಲ್ಲಿ ಕುಳಿತಿರುವಾಗ ಅದರ ಗಾಲಿಗಳನ್ನು ನೋಡಲಾರರಾದ್ದರಿಂದಾಗಿ, ನಿಲ್ದಾಣಗಳಲ್ಲಿ ನಿಂತಿರುವಾಗ ಮಾತ್ರ ರೈಲುಗಳಿಗೆ ಗಾಲಿಗಳಿರುತ್ತವೆ ಎಂಬುದು ಆದರ್ಶವಾದಿಗಳ ನಿಲವು ಎಂದು ಜಿ. ಇ. ಮೂರ್ ಒಮ್ಮೆ ಆರೋಪಿಸಿದ್ದ. ನೀವು ನೋಡಿದಾಗ ಗಾಲಿಗಳು ಇದ್ದಕ್ಕಿದ್ದಂತೆಯೇ ಮೂಡುತ್ತವೆ, ಪರೀಕ್ಷಿಸದಿರುವಾಗ ಅವುಗಳನ್ನು ಯಾರೂ ನೋಡುವ

ಶ್ರಮ ತೆಗೆದುಕೊಳ್ಳುವುದಿಲ್ಲ ಎಂದು ನಂಬಲು ಸಾಮಾನ್ಯ ತಿಳಿವಳಿಕೆ ತಿರಸ್ಕರಿಸುತ್ತದೆ. ಈ ದೃಷ್ಟಿಕೋನವು ವೈಜ್ಞಾನಿಕವಾದಾಗ, ಗ್ರಹಿಸದಿರುವ ಸಂಗತಿಗಳ ಬಗೆಗಿನ ಅದರ ಊಹನೆಯು ಕಾರಣಾತ್ಮಕ ನಿಯಮವನ್ನು ಆಧರಿಸುತ್ತದೆ.

ಈ ನಾಲ್ಕು ದೃಷ್ಟಿಕೋನಗಳ ಬಗೆಗೆ ಯಾವುದೇ ನಿರ್ಧಾರವನ್ನು ಸದ್ಯಕ್ಕೆ ನಾನು ತೆಗೆದುಕೊಳ್ಳುವುದಿಲ್ಲ. ಸಾಧ್ಯವೇ ಆಗುವುದಾದರೆ, ನಿದರ್ಶನಾತ್ಮಕವಲ್ಲದ ಊಹನೆಗಳ ಸೂಕ್ಷ್ಮ ಪರೀಕ್ಷೆಗಳು ಮತ್ತು ಸಂಭಾವ್ಯತೆಯ ಸಿದ್ಧಾಂತಕ್ಕನುಗುಣವಾಗಿ ನಿರ್ಧಾರವನ್ನು ತೆಗೆದುಕೊಳ್ಳಬಹುದು. ನಾನಿಲ್ಲಿ ಮಾಡಬಯಸುವುದು ಈ ಪ್ರಶ್ನೆಗಳನ್ನು ಚರ್ಚಿಸಿದವರು ಅನುಸರಿಸಿರುವ ತಾರ್ಕಿಕ ದೋಷಗಳನ್ನು ತೋರಿಸಿಕೊಡುವುದು.

ಹಿಂದೆಯೇ ನೋಡಿದಂತೆ, ಬರ್ಕ್ಲೀಯ ಅಭಿಪ್ರಾಯವೆಂದರೆ ಮನಸ್ಸುಗಳು ಮತ್ತು ಮಾನಸಿಕ ಸಂಗತಿಗಳಿಗೆ ಮಾತ್ರವೇ ಅಸ್ತಿತ್ವವಿರುತ್ತದೆ ಎಂಬುದನ್ನು ಸಾಬೀತುಪಡಿಸಲು ತಾರ್ಕಿಕ ಕಾರಣಗಳಿವೆ ಎಂಬುದು. ಇತರ ನೆಲೆಗಳಲ್ಲಿ ಈ ದೃಷ್ಟಿಕೋನವನ್ನು ಹೆಗೆಲ್ ಮತ್ತವನ ಅನುಯಾಯಿಗಳೂ ಹೊಂದಿದ್ದರು. ಇದು ಸಂಪೂರ್ಣ ತಪ್ಪು ಎಂಬುದು ನನ್ನ ಅಭಿಪ್ರಾಯ. 'ಈ ಗ್ರಹದ ಮೇಲೆ ಬದುಕು ಅಸ್ತಿತ್ವಕ್ಕೆ ಬರುವ ಮುಂಚೆ ಒಂದು ಕಾಲವಿತ್ತು' ಎಂಬಂತಹ ಹೇಳಿಕೆಯನ್ನು, ಅದು ನಿಜವಾಗಿರಲಿ ಸುಳ್ಳಾಗಿರಲಿ, 'ಯಾರೂ ಎಂದಿಗೂ ಮಾಡಿಲ್ಲದ ಗುಣಾಕಾರದ ಲೆಕ್ಕಗಳಿವೆ' ಎಂಬುದಕ್ಕಿಂತ ಹೆಚ್ಚಾಗಿ, ತಾರ್ಕಿಕವಾಗಿ ಖಂಡಿಸಲು ಸಾಧ್ಯವಿಲ್ಲ. ಪರಿವೀಕ್ಷಣೆಗೊಳಗಾಗುವುದು ಅಥವಾ ಗ್ರಹಿಕೆಗೊಳಗಾಗುವುದು ಎನ್ನುವುದು ಕೆಲವು ಬಗೆಯ ಪರಿಣಾಮಗಳನ್ನು ಹೊಂದುವುದಷ್ಟೆ; ಆದರೆ ಇಂತಹ ಪರಿಣಾಮಗಳು ಎಲ್ಲ ಸಂಗತಿಗಳಿಗೂ ಇರುತ್ತವೆ ಎನ್ನುವುದಕ್ಕೆ ತಾರ್ಕಿಕ ಕಾರಣವಿಲ್ಲ.

ಏನೇ ಆದರೂ, ಮತ್ತೊಂದು ಬಗೆಯ ವಾದವೂ ಇದೆ; ಅದು ಆದರ್ಶವಾದವನ್ನು ತತ್ವಜಿಜ್ಞಾಸಾನುಸಾರವಾಗಿ ಸ್ಥಾಪಿಸದಿದ್ದರೂ, ಅದು ಸಿಂಧುವಾಗುವುದಾದರೆ, ಅದನ್ನೊಂದು ವ್ಯಾವಹಾರಿಕ ಧೋರಣೆಯಾಗಿ ಸ್ಥಾಪಿಸುತ್ತದೆ. ಪ್ರಮಾಣೀಕರಿಸಲಾಗದ ಪ್ರತಿಪಾದನೆಯೊಂದಕ್ಕೆ ಅರ್ಥವಿಲ್ಲದಿದ್ದರೆ, ಆ ಪ್ರಮಾಣೀಕರಣವು ಗ್ರಾಹ್ಯಗಳನ್ನು ಅವಲಂಬಿಸುತ್ತದೆ ಎನ್ನಲಾಗುತ್ತದೆ. ಹೀಗಾಗಿ, ವಾಸ್ತವ ಅಥವಾ ಸಾಧ್ಯವಲ್ಲದ ಗ್ರಾಹ್ಯಗಳ ಕುರಿತ ಯಾವುದೇ ಪ್ರತಿಪಾದನೆಯೂ ಅರ್ಥವಿಹೀನವಾದದ್ದು. ನಿರ್ದುಷ್ಟವಾಗಿ ವ್ಯಾಖ್ಯಾನಿಸಿದಾಗ ಈ ದೃಷ್ಟಿಕೋನವು ಮೇಲೆ ಹೇಳಿದ ನಾಲ್ಕು ಸಿದ್ಧಾಂತಗಳಲ್ಲಿ ಮೊದಲನೆಯದಕ್ಕೆ ನಮ್ಮನ್ನು ಸೀಮಿತಗೊಳಿಸುತ್ತದೆ, ಹಾಗೂ ನಾವೇ ಖುದ್ದಾಗಿ ಗಮನಿಸದ ವಸ್ತುವಿನ ಬಗ್ಗೆ ಮಾತನಾಡುವುದನ್ನು ನಿಷೇಧಿಸುತ್ತದೆ. ಹಾಗಾದಾಗ, ಈ ದೃಷ್ಟಿಕೋನವನ್ನು ಯಾರೂ ವ್ಯಾವಹಾರಿಕವಾಗಿ ಹೊಂದಲು ಸಾಧ್ಯವಾಗುವದಿಲ್ಲ; ವ್ಯಾವಹಾರಿಕ ನೆಲೆಯಲ್ಲಿ

ಸಮರ್ಥಿತವಾಗಿರುವುದೇ ಈ ಸಿದ್ಧಾಂತದ ದೋಷ. ಪ್ರಮಾಣೀಕರಿಸುವ ಇಡೀ ಪ್ರಶ್ನೆ ಮತ್ತು ಜ್ಞಾನದೊಡನೆಯ ಅದರ ಸಂಬಂಧ ಕಷ್ಟಕರ ಮತ್ತು ಸಂಕೀರ್ಣ. ಹೀಗಾಗಿ ಅದನ್ನು ಒಂದು ಪಕ್ಕದಲ್ಲಿಡುತ್ತೇನೆ.

ಯಾರೂ ಗ್ರಹಿಸಲಾರದ ಸಂಗತಿಗಳನ್ನು ಒಪ್ಪುವ ಮೇಲಿನ ಸಿದ್ಧಾಂತಗಳಲ್ಲಿನ ನಾಲ್ಕನೆಯದನ್ನು ಕೂಡ ಅಸಿಂಧುವಾದ ವಾದಗಳಿಂದ ಸಮರ್ಥಿಸಬಹುದು. ಕಾರಣಾತ್ಮಕತೆಯು ಪೂರ್ವನಿಶ್ಚಿತವಾದದ್ದು ಮತ್ತು ಗ್ರಹಿಕೆಗೊಳಗಾಗದ ಸಂಗತಿಗಳಿಲ್ಲದಿದ್ದಲ್ಲಿ ಕಾರಣಾತ್ಮಕ ನಿಯಮಗಳು ಅಸಾಧ್ಯ ಎಂದು ವಾದಿಸಬಹುದು. ಇದಕ್ಕೆ ವ್ಯತಿರಿಕ್ತವಾಗಿ, ಕಾರಣಾತ್ಮಕತೆಯು ಪೂರ್ವನಿಶ್ಚಿತವಲ್ಲ, ಹಾಗೂ ಗಮನಿಸಬಹುದಾದ ಯಾವುದೇ ಕ್ರಮಬದ್ಧತೆಯು ಗ್ರಾಹ್ಯವಾದುವಕ್ಕೆ ಸಂಬಂಧಿಸಿದವುಗಳಾಗಿರಬೇಕು ಎಂದು ಸೂಚಿಸಬಹುದು. ಭೌತವಿಜ್ಞಾನ ನಿಯಮಗಳನ್ನು ನಂಬಲು ಕಾರಣವಿರುವ ಯಾವುದನ್ನಾದರೂ ಗ್ರಾಹ್ಯವಾದವುಗಳ ದೃಷ್ಟಿಯಿಂದ ಮಂಡಿಸಲು ಸಾಧ್ಯವಾಗಿರಬೇಕು. ಈ ಹೇಳಿಕೆಯು ವಿಚಿತ್ರವಾಗಿಯೂ ಗೊಂದಲಮಯವಾಗಿಯೂ ಕಾಣಿಸಬಹುದು; ಅದರಲ್ಲಿ, ಭೌತವಿಜ್ಞಾನ ನಿಯಮದಲ್ಲಿ ಇತ್ತೀಚಿನವರೆಗೂ ನಿರೀಕ್ಷಿಸುತ್ತಿದ್ದ, ನಿರಂತರತೆಯ ಲಕ್ಷಣ ಇಲ್ಲದಿರಬಹುದು. ಆದರೆ ಅದು ಅಸಾಧ್ಯವೇ ಆಗಿರಲಾರದು.

ನಾಲ್ಕೂ ಸಿದ್ಧಾಂತಗಳ ವಿರುದ್ಧವಾಗಿ ಯಾವುದೇ ಪೂರ್ವನಿರ್ಧಾರಿತ ಆಕ್ಷೇಪಗಳಿಲ್ಲ ಎಂದು ಹೇಳಿ ಮುಗಿಸುತ್ತೇನೆ. ಇಷ್ಟಾದರೂ, ಎಲ್ಲ ಸತ್ಯಗಳೂ ವ್ಯಾವಹಾರಿಕವಾದವು ಹಾಗೂ ನಾಲ್ಕರ ನಡುವೆ ಯಾವುದೇ ವ್ಯಾವಹಾರಿಕ ಭಿನ್ನತೆಯಿಲ್ಲ ಎಂದು ಹೇಳುವುದೂ ಸಾಧ್ಯ. ಇದು ಸತ್ಯವಾದರೆ, ನಮಗೆ ಇಷ್ಟವಾದುದನ್ನು ಅಳವಡಿಸಿಕೊಳ್ಳಬಹುದು, ಅವುಗಳ ನಡುವಣ ವ್ಯತ್ಯಾಸವು ಕೇವಲ ಭಾಷಿಕವಾದದ್ದು. ನಾನು ಈ ಅಭಿಪ್ರಾಯವನ್ನು ಒಪ್ಪಲಾರೆ; ಇದೂ ಸಹ ಮುಂದಿನ ಒಂದು ಹಂತದಲ್ಲಿ ಒಂದು ಚರ್ಚೆಯ ವಿಷಯ.

'ಮನಸ್ಸು' ಮತ್ತು 'ಭೌತದ್ರವ್ಯ' ಎಂಬ ಪದಗಳಿಗೆ ಏನಾದರೂ ಅರ್ಥವನ್ನು ನೀಡಬಹುದೇ ಎಂದು ಕೇಳಬೇಕಾಗಿದೆ. 'ಮನಸ್ಸು' ಎಂಬುದರ ಹೊರತು ಬೇರೇನೂ ಇಲ್ಲ ಎಂಬುದು ಆದರ್ಶವಾದಿಯ ಅಭಿಪ್ರಾಯ ಎನ್ನುವುದು ಎಲ್ಲರಿಗೂ ಗೊತ್ತು, ಆದರೆ 'ಭೌತದ್ರವ್ಯ' ಎಂಬುದರ ಬಗ್ಗೆ ಭೌತವಾದಿಯದು ಅದೇ ಅಭಿಪ್ರಾಯವೇ. ಅಲ್ಲದೆ, ಆದರ್ಶವಾದಿಗಳು ಸದ್ಗುಣಭರಿತರು ಮತ್ತು ಭೌತವಾದಿಗಳು ಕೆಡುಕರು ಎಂಬುದನ್ನು ಓದುಗರು ಬಲ್ಲರು ಎಂದು ನಿರೀಕ್ಷಿಸುತ್ತೇನೆ. ಆದರೆ ಪ್ರಾಯಶಃ ಹೇಳಬೇಕಾದದ್ದು ಇನ್ನೂ ಇದೆ ಅನ್ನಿಸುತ್ತದೆ.

'ಭೌತದ್ರವ್ಯ'ದ ಬಗೆಗಿನ ನನ್ನ ವ್ಯಾಖ್ಯೆಯು ತೃಪ್ತಿಕರವಲ್ಲ ಎನ್ನಿಸಬಹುದು: ಅದನ್ನು ನಾನು ಭೌತವಿಜ್ಞಾನದ ಸಮೀಕರಣಗಳಿಗೆ ಅನುಗುಣವಾಗಿ ನಿರ್ವಚಿಸಬೇಕು.

ಈ ಸಮೀಕರಣಗಳಿಗೆ ಅನುಸಾರವಾಗಿರುವ ಯಾವುದೂ ಇಲ್ಲದಿರಬಹುದು. ಆಗ ಭೌತವಿಜ್ಞಾನ ಅಥವಾ 'ಭೌತದ್ರವ್ಯ' ಎಂಬ ಪರಿಕಲ್ಪನೆ – ಇವೆರಡರಲ್ಲಿ ಒಂದು ತಪ್ಪಾಗಿರುತ್ತದೆ. ಸಾರಸತ್ವವನ್ನು ನಾವು ಅಲ್ಲಗಳೆಯುವುದಾದರೆ, 'ಭೌತದ್ರವ್ಯ'ವು ಒಂದು ತಾರ್ಕಿಕ ರಚನೆಯಾಗಬೇಕು. ಅದು ಸಂಗತಿಗಳಿಂದ ಕೂಡಿರುವ ರಚನೆಯೇ – ಅದನ್ನು ಭಾಗಶಃ ಊಹನೆ ಮಾಡಿಕೊಳ್ಳಬಹುದು – ಎಂಬುದು ಕಠಿಣವಾದ ಸಂಗತಿಯಾದರೂ, ಅದೇನೂ ಪರಿಹಾರಕ್ಕೆ ಹೊರತಾದುದಲ್ಲ.

'ಮನಸ್ಸು' ಎಂಬುದಕ್ಕೆ ಸಂಬಂಧಿಸಿದಂತೆ: ಸಾರಸತ್ವವನ್ನು ಅಲ್ಲಗಳೆದಿರುವಾಗ ಮನಸ್ಸು ಎಂಬುದು ಯಾವುದೋ ಒಂದು ಅಥವಾ ಒಂದು ಗುಂಪಿನ ಸಂಗತಿಗಳಿಂದ ಕೂಡಿದ ರಚನೆಯಾಗಿರಬೇಕು. ಗುಂಪನ್ನು ನಾವು ಸಂಬಂಧಗಳನ್ನಾಧರಿಸಿ, ಅದು 'ಮಾನಸಿಕ' ಎನ್ನುವಂತಹ ಒಂದು ಬಗೆಯ ವಿದ್ಯಮಾನದ ಲಕ್ಷಣವಾದ್ದರಿಂದ, ಪರಿಕಲ್ಪಿಸಿಕೊಳ್ಳಬೇಕು. ನೆನಪನ್ನು ಒಂದು ಮಾದರಿಯಾಗಿ ತೆಗೆದುಕೊಳ್ಳಬಹುದು. 'ಮಾನಸಿಕ' ಎಂಬುದನ್ನು ನೆನಪಿಸಿಕೊಳ್ಳುವ ಅಥವಾ ನೆನಪಿಗೊಳಗಾಗುವ ಸಂಗತಿ, ಇದು ತೀರ ಸರಳವೆನ್ನಿಸಿದರೂ, ಎಂದು ನಿರ್ವಚಿಸಬಹುದು. ಆಗ ಪ್ರಸ್ತುತ ಮಾನಸಿಕ ಸಂಗತಿ ಸೇರಿರುವ 'ಮನಸ್ಸು', ಆ ಸಂಗತಿಗೆ, ಹಿಂದೆಯೋ ಮುಂದೆಯೋ, ಸಂಬಂಧಿಸಿರುವ ಸಂಗತಿಗಳ ನೆನಪುಗಳ ಸರಣಿಯಾಗುತ್ತದೆ.

ಮೇಲಿನ ನಿರ್ವಚನಕ್ಕನುಗುಣವಾಗಿ, ಮನಸ್ಸು ಮತ್ತು ಭೌತದ್ರವ್ಯಗಳಲ್ಲಿ ಒಂದೊಂದೂ ಸಂಗತಿಗಳ ಒಂದು ಗುಂಪಾಗುತ್ತದೆ. ಪ್ರತಿಯೊಂದು ಸಂಗತಿಯೂ ಯಾವುದಾದರೊಂದು ಗುಂಪಿಗೆ ಯಾಕೆ ಸಂಬಂಧಿಸಿರಬೇಕು ಎಂಬುದಕ್ಕೆ ಯಾವುದೇ ಕಾರಣವಿಲ್ಲ, ಹಾಗೆಯೇ ಒಂದು ಸಂಗತಿಯು ಎರಡೂ ಗುಂಪುಗಳಿಗೆ ಯಾಕೆ ಸಂಬಂಧಿಸಿರಬಾರದು ಎಂಬುದಕ್ಕೂ ಕಾರಣವಿಲ್ಲ. ಹೀಗಾಗಿ, ಕೆಲವು ಸಂಗತಿಗಳು ಮಾನಸಿಕವೂ ಅಲ್ಲದ ಭೌತದ್ರವ್ಯವೂ ಅಲ್ಲದವಾಗಿರಬಹುದು, ಮತ್ತೆ ಕೆಲವು ಎರಡೂ ಆಗಿರಬಹುದು. ಇದನ್ನು ಅನುಭವೈಕ ಪರಿಗಣನೆಗಳು ಮಾತ್ರ ನಿರ್ಧರಿಸಬಹುದು.

○

೧೭
ಹ್ಯೂಮ್

ಡೇವಿಡ್ ಹ್ಯೂಮ್ (೧೭೧೧-೭೬) ಬಹು ಮುಖ್ಯ ತತ್ವಜ್ಞಾನಿಗಳಲ್ಲಿ ಒಬ್ಬ; ಯಾಕೆಂದರೆ ಅವನು ಲಾಕ್ ಮತ್ತು ಬರ್ಕ್ಲೀಯ ಅನುಭವೈಕ ತತ್ವಜ್ಞಾನದ ತಾರ್ಕಿಕ ಅಂತ್ಯವನ್ನು ಬೆಳೆಸಿದವನು ಹಾಗೂ ಅದನ್ನು ಸ್ವಯಂಪೂರ್ಣವಾಗುವಂತೆ ಮಾಡಿ ನಂಬಲಾಗದಂತೆ ಮಾಡಿದವನು. ಒಂದರ್ಥದಲ್ಲಿ ಅವನು ಕೊಟ್ಟ ಕೊನೆಯನ್ನು ಪ್ರತೀಕಿಸುತ್ತಾನೆ; ಅದರ ದಿಸೆಯಲ್ಲಿ ಇನ್ನೂ ಮುಂದುವರಿಯುವುದು ಅಸಾಧ್ಯ. ಅವನು ಬರೆದ ಕಾಲದಿಂದ ಅವನನ್ನು ಅಲ್ಲಗಳೆಯುವುದು ತತ್ವಜಿಜ್ಞಾಸುಗಳಲ್ಲಿ ಒಂದು ಕಾಲಹರಣ ಕಾರಣವಾಯಿತು. ನನ್ನ ಮಟ್ಟಿಗೆ, ಅವರ ಯಾವ ಆಕ್ಷೇಪಗಳೂ ಸಕಾರಣವಲ್ಲ; ಇಷ್ಟಾದರೂ, ಹ್ಯೂಮ್‌ನ ವಿಧಾನದಕ್ಕಿಂತ ಕಡಿಮೆ ಸಂದೇಹಾತ್ಮಕವಾದುದನ್ನು ಕಂಡುಕೊಳ್ಳಲು ಸಾಧ್ಯ ಎಂಬುದು ನನ್ನ ನಿರೀಕ್ಷೆ.

ಅವನ ಮುಖ್ಯ ತಾತ್ವಿಕ ಗ್ರಂಥ, 'ದ ಟ್ರೀಟೈಸ್ ಆನ್ ಹ್ಯೂಮನ್ ನೇಚರ್' ಅವನು ಫ್ರಾನ್ಸ್‌ನಲ್ಲಿ ಜೀವಿಸುತ್ತಿದ್ದ ೧೭೩೪ ರಿಂದ ೧೭೩೭ ರ ಅವಧಿಯಲ್ಲಿ ರಚಿತವಾದುದು. ಮೊದಲ ಎರಡು ಸಂಪುಟಗಳು ಪ್ರಕಟವಾದುದು ೧೭೩೯ ರಲ್ಲಿ ಹಾಗೂ ಮೂರನೆಯದು ೧೭೪೦ ರಲ್ಲಿ. ಅವನಿನ್ನೂ ಯುವಕ, ಮೂವತ್ತರ ವರ್ಷಗಳವನೂ ಅಲ್ಲ; ಅವನೇನೂ ಹೆಸರುವಾಸಿಯಾಗಿರಲಿಲ್ಲ, ಅವನ ತೀರ್ಮಾನಗಳು ಎಲ್ಲ ಪಂಥಗಳವರಿಗೂ ಅಪಥ್ಯವಾಗುವಂತಿತ್ತು. ಅವನು ತೀವ್ರ ದಾಳಿಯನ್ನು ನಿರೀಕ್ಷಿಸಿದ, ಅದನ್ನು ತಾನು ಅಮೋಘವಾಗಿ ಎದುರಿಸಬಹುದೆಂದುಕೊಂಡಿದ್ದ. ಅದರ ಬದಲಿಗೆ, ಆ ಪುಸ್ತಕವನ್ನಾರೂ ಗಮನಿಸಲಿಲ್ಲ, ಅವನೇ ಹೇಳುವಂತೆ 'ಅದು ಮುದ್ರಣಾಲಯದಲ್ಲಿ ಸತ್ತು ಹುಟ್ಟಿತು.' ಜೊತೆಗೆ 'ಆದರೆ ಉಲ್ಲಾಸಭರಿತನೂ ಆಶಾವಾದಿಯೂ ಆದ ನಾನು ಬಹುಬೇಗ ಆ ಹೊಡೆತದಿಂದ ಚೇತರಿಸಿಕೊಂಡೆ' ಎಂದೂ ಹೇಳಿಕೊಳ್ಳುತ್ತಾನೆ. ಅವನು ಪ್ರಬಂಧಗಳನ್ನು ಬರೆಯುವುದರಲ್ಲಿ ತನ್ನನ್ನು ತೊಡಗಿಸಿಕೊಂಡ, ಅವುಗಳ ಮೊದಲ ಸಂಪುಟವು ೧೭೪೧ ರಲ್ಲಿ ಪ್ರಕಟವಾಯಿತು. ೧೭೪೪ ರಲ್ಲಿ ಅವನು ಎಡಿನ್‌ಬರೋದಲ್ಲಿ

ಪ್ರಾಧ್ಯಾಪಕನಾಗಲು ವಿಫಲ ಪ್ರಯತ್ನ ನಡೆಸಿದ. ಇದರಲ್ಲಿ ಸಫಲನಾಗದಿದ್ದರೂ, ಮೊದಲಿಗೆ ಹುಚ್ಚನೊಬ್ಬನಿಗೆ ಖಾಸಗಿ ಶಿಕ್ಷಕನಾಗಿಯೂ ಆನಂತರ ಜನರಲ್‌ಗೆ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ. ಈ ಪ್ರಮಾಣಪತ್ರಗಳಿಂದ ಸಜ್ಜಿತನಾಗಿ ಅವನು ಮತ್ತೆ ತತ್ವಜ್ಞಾನದ ಸಾಹಸಕ್ಕೆ ಕೈಹಾಕಿದ. ತನ್ನ 'ದ ಟ್ರೀಟೈಸ್ ಆನ್ ಹ್ಯೂಮನ್ ನೇಚರ್' ಅನ್ನು ಅದರ ಅತ್ಯುತ್ತಮ ಭಾಗಗಳನ್ನೂ ತನ್ನ ತೀರ್ಮಾನಗಳಲ್ಲಿ ಬಹುಪಾಲನ್ನೂ ಕೈಬಿಟ್ಟು ಸಂಗ್ರಹಿಸಿದ; ಅದರ ಪರಿಣಾಮವಾಗಿ ಹೊರಬಂದುದು 'ಇನ್‌ಕ್ವೈರಿ ಇನ್‌ಟು ಹ್ಯೂಮನ್ ಅಂಡರ್‌ಸ್ಟಾಂಡಿಂಗ್'; ಅದು ಮೂಲಕ್ಕಿಂತ ಹೆಚ್ಚು ಕಾಲ ಪ್ರಸಿದ್ಧವಾಗಿತ್ತು. ಈ ಪುಸ್ತಕವೇ ಕ್ಯಾಂಟ್‌ನನ್ನು 'ಮತತಾತ್ವಿಕ ನಿದ್ದೆ'ಯಿಂದ ಎಚ್ಚರಿಸಿದ್ದು; ಅವನಿಗೆ ಮೂಲಗ್ರಂಥದ ಪರಿಚಯ ಇದ್ದಂತಿರಲಿಲ್ಲ.

ಅವನು 'ಡಯಲಾಗ್ಸ್ ಕನ್ಸರ್ನಿಂಗ್ ನ್ಯಾಚುರಲ್ ರಿಲಿಜನ್' ಎನ್ನುವ ಪುಸ್ತಕವನ್ನು ಬರೆದರೂ, ತನ್ನ ಜೀವಮಾನದಲ್ಲಿ ಅದನ್ನು ಪ್ರಕಟಿಸಲಿಲ್ಲ. ಅವನ ಸೂಚನೆಯಂತೆ, ಅದು ೧೭೭೯ ರಲ್ಲಿ ಮರಣೋತ್ತರವಾಗಿ ಪ್ರಕಟವಾಯಿತು. ಅವನ 'ಎಸ್ಸೇಸ್ ಆನ್ ಮಿರಕಲ್ಸ್' ಪ್ರಸಿದ್ಧವಾಯಿತು; ಅಂತಹ ಘಟನೆಗಳಿಗೆ ಸೂಕ್ತ ಚಾರಿತ್ರಿಕ ಪುರಾವೆಗಳನ್ನು ಒದಗಿಸುವುದು ಎಂದಿಗೂ ಸಾಧ್ಯವಿಲ್ಲ ಎಂದು ಅದರಲ್ಲಿ ಪ್ರತಿಪಾದಿಸಿದ್ದ.

ಅವನ 'ಹಿಸ್ಟರಿ ಆಫ್ ಇಂಗ್ಲಂಡ್' ಪ್ರಕಟವಾದುದು ೧೭೫೫ ರಲ್ಲಿ, ಆನಂತರದ ವರ್ಷಗಳಲ್ಲಿ, ವ್ಹಿಗ್‌ಗಳಿಗಿಂತ ಟೋರಿಗಳು ಹಾಗೂ ಇಂಗ್ಲಿಷ್ ಜನರಿಗಿಂತ ಸ್ಕಾಟ್‌ಲಂಡ್ ಜನರು ಶ್ರೇಷ್ಠರೆಂದು ಸಾಧಿಸಲು ಅದು ಮೀಸಲಾಯಿತು; ಚರಿತ್ರೆಯಲ್ಲಿ ತಾತ್ವಿಕ ನಿರಾಸಕ್ತಿ ಮುಖ್ಯವೆಂದವನು ಭಾವಿಸಲಿಲ್ಲ. ೧೭೬೩ ರಲ್ಲಿ ಅವನು ಪ್ಯಾರಿಸ್‌ಗೆ ಹೋದ, ಅಲ್ಲಿನ ತತ್ವಜ್ಞಾನಿಗಳು ಅವನಿಗೆ ಅತಿ ಮಹತ್ವ ಕೊಟ್ಟರು. ದುರದೃಷ್ಟವಶಾತ್, ಅವನು ರೂಸೋನ ಸ್ನೇಹ ಬೆಳೆಸಿದ, ಮತ್ತು ಅವನೊಡನೆ ಸುಪ್ರಸಿದ್ಧ ಜಗಳವೊಂದರಲ್ಲಿ ತೊಡಗಿದ. ಹ್ಯೂಮ್ ಮೆಚ್ಚಲರ್ಹವಾದ ತಾಳ್ಮೆಯಿಂದ ನಡೆದುಕೊಂಡನಾದರೂ, ರೂಸೋ ಅದನ್ನವನು ಮೀರುವಂತಹ ರೀತಿಯಲ್ಲಿ ಜಗಳಗಂಟತನದ ಗೀಳಿನಿಂದ ಕೂಡಿದ್ದ.

ತನ್ನ ವ್ಯಕ್ತಿತ್ವವನ್ನು ಹ್ಯೂಮ್ ಸ್ವಯಂಸಂತಾಪ ಸ್ವರೂಪದಲ್ಲಿ ಅಥವಾ 'ಮರಣ ಗೌರವ'ದ ರೂಪದಲ್ಲಿ ಹೀಗೆ ವರ್ಣಿಸಿಕೊಳ್ಳುತ್ತಾನೆ: 'ನಾನು ಸೌಮ್ಯ ಸ್ವಭಾವದ ವ್ಯಕ್ತಿಯಾಗಿದ್ದೆ, ನನ್ನ ರಾಗಭಾವಗಳ ಮೇಲೆ ನಿಯಂತ್ರಣ ಹೊಂದಿದ್ದೆ, ಮುಕ್ತವೂ ಉಲ್ಲಾಸಭರಿತವೂ ಆದ ಸಾಮಾಜಿಕ ಮನೋಭಾವದವನಾಗಿದ್ದೆ. ನಿರಾಸಕ್ತನಾದರೂ ಕೊಂಚವೇ ಆದ ಮತ್ಸರಗ್ರಸ್ತನೂ ಆಗಿದ್ದೆ. ನನ್ನೆಲ್ಲ ರಾಗಭಾವಗಳಲ್ಲಿ ಹದವರಿತವನೂ ಆಗಿದ್ದೆ. ಪದೇ ಪದೇ ಆಗುತ್ತಿದ್ದ ನಿರಾಸೆಗಳ ನಡುವೆಯೂ, ನನ್ನ ಮುಖ್ಯ ಹಂಬಲವಾಗಿದ್ದ ಸಾಹಿತ್ಯಕ ಪ್ರೀತಿಯೂ ನನ್ನ ಮನೋಭಾವವನ್ನು ಕಹಿಗೊಳಿಸಲಿಲ್ಲ.' ಅವನ ಬಗ್ಗೆ ನಮಗೆ ತಿಳಿದುಬರುವುದು ಇಷ್ಟೇ.

ಹ್ಯೂಮ್‌ನ 'ದ ಟ್ರೀಟೈಸ್ ಆನ್ ಹ್ಯೂಮನ್ ನೇಚರ್' ಅನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ; ಅವುಗಳು ಕ್ರಮವಾಗಿ ವಿವೇಚನೆ, ರಾಗಭಾವಗಳು ಮತ್ತು ನೀತಿಗಳು – ಇವುಗಳನ್ನು ಕುರಿತಿವೆ. ಮೊದಲ ಭಾಗದಲ್ಲಿನ ಅವನ ಸಿದ್ಧಾಂತಗಳಲ್ಲಿನ ಮುಖ್ಯವೂ ಹೊಸತೂ ಆದ ಗುಣದ ವಿವೇಚನೆಯ ಕುರಿತು ನಾನು ನನ್ನನ್ನು ಸೀಮಿತಗೊಳಿಸಿಕೊಳ್ಳುತ್ತೇನೆ.

ಅವನು ಆರಂಭಿಸುವುದು 'ಪ್ರಭಾವಗಳು' (ಇಂಪ್ರೆಷನ್ಸ್) ಮತ್ತು 'ಪರಿಕಲ್ಪನೆಗಳು' (ಐಡಿಯಾಸ್) ಇವುಗಳಲ್ಲಿನ ವ್ಯತ್ಯಾಸದ ವಿವೇಚನೆಯಿಂದ. ಇವೆರಡೂ ವಿಭಿನ್ನ ಬಗೆಯ ಗ್ರಹಿಕೆಗಳು; ಅವುಗಳಲ್ಲಿ 'ಪ್ರಭಾವಗಳಿ'ಗೆ ಹೆಚ್ಚು ತೀವ್ರತೆಯೂ ಬಿರುಸೂ ಇರುತ್ತವೆ. 'ಪರಿಕಲ್ಪನೆಗಳು, ಎಂದರೆ ನನ್ನ ಪ್ರಕಾರ, ಇವುಗಳ ಆಲೋಚನೆ ಮತ್ತು ತರ್ಕಗಳ ದುರ್ಬಲ ಪ್ರತೀಕಗಳು.' ಪರಿಕಲ್ಪನೆಗಳು, ಕನಿಷ್ಠ ಪಕ್ಷ ಸರಳವಾಗಿದ್ದಾಗ, ಪ್ರಭಾವಗಳಂತಿರುತ್ತವೆಯಾದರೂ ಮತ್ತಷ್ಟು ದುರ್ಬಲವಾಗಿರುತ್ತವೆ. 'ಪ್ರತಿ ಸರಳ ಪರಿಕಲ್ಪನೆಗೂ ಅದನ್ನು ಹೋಲುವ ಸರಳ ಪ್ರಭಾವವಿರುತ್ತದೆ ಮತ್ತು ಪ್ರತಿ ಪ್ರಭಾವಕ್ಕೂ ಅದಕ್ಕನುಗುಣವಾದ ಪರಿಕಲ್ಪನೆಯಿರುತ್ತದೆ.' 'ನಮ್ಮೆಲ್ಲ ಸರಳ ಪರಿಕಲ್ಪನೆಗಳೂ ಮೊದಲಿಗೆ ಅವುಗಳಿಗೆ ಅನುಗುಣವಾದ ಸರಳ ಪ್ರಭಾವಗಳಿಂದ ಹೊಮ್ಮಿರುತ್ತವೆ ಮತ್ತು ತದ್ವತ್ತಾಗಿ ಪ್ರತೀಕಿಸುತ್ತವೆ.' ಮತ್ತೊಂದು ಕಡೆಯಲ್ಲಿ, ಸಂಕೀರ್ಣ ಪರಿಕಲ್ಪನೆಗಳು ಪ್ರಭಾವಗಳನ್ನು ಹೋಲಬೇಕೆಂದಿಲ್ಲ. ಯಾವತ್ತೂ ನೋಡಿರದ ರೆಕ್ಕೆಯಿರುವ ಕುದುರೆಯನ್ನು ನಾವು ಕಲ್ಪಿಸಿಕೊಳ್ಳಬಹುದು, ಆದರೆ ಈ ಸಂಕೀರ್ಣ ಪರಿಕಲ್ಪನೆಯ ಘಟಕಗಳೆಲ್ಲವೂ ಪ್ರಭಾವಗಳಿಂದ ಸಾಧಿತವಾದವು. ಪ್ರಭಾವಗಳು ಮೊದಲಿಗೆ ಮೂಡುತ್ತವೆ ಎನ್ನುವುದರ ಸಾಕ್ಷ್ಯವು ಅನುಭವಗಳಿಂದ ಒದಗುತ್ತವೆ; ಉದಾಹರಣೆಗೆ, ಹುಟ್ಟು ಕುರುಡನಾದ ವ್ಯಕ್ತಿಯು ಬಣ್ಣಗಳ ಕಲ್ಪನೆ ಹೊಂದಿರಲಾರ. ಮೂಲ ಪ್ರಭಾವಗಳ ತಾಜಾತನವನ್ನು ಸಾಕಷ್ಟು ಪ್ರಮಾಣದಲ್ಲಿ ಉಳಿಸಿಕೊಳ್ಳುವ ಪರಿಕಲ್ಪನೆಗಳು ನೆನಪುಗಳ ಗುಂಪಿಗೆ ಸೇರಿದವು, ಮಿಕ್ಕವು ಊಹೆಗೆ ಸೇರಿದವು.

'ಅಮೂರ್ತ ಚಿಂತನೆಗಳನ್ನು ಕುರಿತು' ಎಂಬ ಭಾಗವೊಂದಿದೆ (ಭಾಗ ೧, ವಿಭಾಗ ೧, ಉಪವಿಭಾಗ ೭). ಅದು ಆರಂಭವಾಗುವುದು ಬರ್ಕ್ಲೀಯ 'ಎಲ್ಲ ಸಾಮಾನ್ಯ ಪರಿಕಲ್ಪನೆಗಳೂ, ಯಾವುದೋ ಒಂದು ಪದಕ್ಕೆ ಆನುಷಂಗಿಕವಾಗಿರುವ ಮತ್ತು ಅವುಗಳಿಗೆ ವ್ಯಾಪಕ ಅರ್ಥಪೂರ್ಣತೆಯನ್ನು ತಂದುಕೊಟ್ಟು, ಸಂದರ್ಭ ಬಂದಾಗ ಅವರನ್ನು ಹೋಲುವ ಇತರ ವ್ಯಕ್ತಿಗಳನ್ನು ನೆನಪಿಸುವಂತಹ ನಿರ್ದಿಷ್ಟವಾದವುಗಳೇ ಹೊರತು ಬೇರೆಯಲ್ಲ' ಎಂಬ ಮಾತನ್ನು ಬಲವಾಗಿ ಅನುಮೋದಿಸುವ ಮೂಲಕ. ಒಬ್ಬ ವ್ಯಕ್ತಿಯ ಬಗ್ಗೆ ನಮಗೊಂದು ಪರಿಕಲ್ಪನೆ ಇದ್ದರೆ ಅದರಲ್ಲಿ ಆ ವ್ಯಕ್ತಿ ಪ್ರಭಾವಗಳ ನಿರ್ದಿಷ್ಟತೆಗಳನ್ನು ಒಳಗೊಂಡಿರುತ್ತದೆ ಎಂದವನು ವಾದಿಸುತ್ತಾನೆ. 'ಮನಸ್ಸು ಪ್ರಮಾಣ ಅಥವಾ ಗುಣದ ಬಗ್ಗೆ, ಅವೆರಡರಲ್ಲಿ

ಪ್ರತಿಯೊಂದರ ಪ್ರಮಾಣದ ಅಂದಾಜಿಲ್ಲದೆ ಯಾವುದೇ ಅಂದಾಜು ಮಾಡಲಾರದು.' 'ಅಮೂರ್ತ ಪರಿಕಲ್ಪನೆಗಳು ತಾವೇ ಬಿಡಿಬಿಡಿಯಾದವು, ಆದರೂ ತಮ್ಮ ಪ್ರತೀಕಿಸುವಿಕೆಯಲ್ಲಿ ಸಾಮಾನ್ಯವಾಗಬಹುದು.' ನಾಮಮಾತ್ರಸಿದ್ಧಾಂತದ ಆಧುನಿಕ ರೂಪವಾದ ಈ ಸಿದ್ಧಾಂತವು ಎರಡು ದೋಷಗಳಿಂದ ಕೂಡಿದೆ, ಒಂದು ತಾರ್ಕಿಕವಾದರೆ, ಎರಡನೆಯದು ಮಾನಸಿಕವಾದುದು. ಮೊದಲಿಗೆ ತಾರ್ಕಿಕ ಆಕ್ಷೇಪವನ್ನು ನೋಡೋಣ. 'ಹಲವು ವಸ್ತುಗಳಲ್ಲಿ ನಾವು ಸಾಮ್ಯವನ್ನು ಕಂಡುಕೊಂಡಾಗ ಅವುಗಳೆಲ್ಲಕ್ಕೂ ನಾವು ಒಂದೇ ಹೆಸರನ್ನು ಅನ್ವಯಿಸುತ್ತೇವೆ.' ಇದನ್ನು ಎಲ್ಲ ನಾಮಮಾತ್ರ ಸಿದ್ಧಾಂತಿಗಳೂ ಒಪ್ಪುತ್ತಾರೆ. ಆದರೆ ವಾಸ್ತವದಲ್ಲಿ, 'ಬೆಕ್ಕು' ಎಂಬಂತಹ ಸಮಾನವಾದ ಹೆಸರು, ವೈಶ್ವಿಕ 'ಬೆಕ್ಕು' ಅಗಿರುವಷ್ಟೇ ಅವಾಸ್ತವವಾದುದು. ವೈಶ್ವಿಕಗಳ ಸಮಸ್ಯೆಯ ನಾಮಮಾತ್ರಸಿದ್ಧಾಂತದ ಪರಿಹಾರವು, ತನ್ನವೇ ತತ್ವಗಳನ್ನು ಅನ್ವಯಿಸುವಲ್ಲಿ ಸಾಕಷ್ಟು ತೀವ್ರತೆಯಿಲ್ಲದ ಕಾರಣದಿಂದಾಗಿಯೇ, ವಿಫಲವಾಗುತ್ತದೆ. ಅದು ಈ ತತ್ವಗಳನ್ನು ತಪ್ಪಾಗಿ 'ವಸ್ತು'ಗಳಿಗೆ ಮಾತ್ರ ಅನ್ವಯಿಸುತ್ತದೆಯೇ ಹೊರತು ಪದಗಳಿಗೂ ಅಲ್ಲ.

ಮನೋವೈಜ್ಞಾನಿಕ ಆಕ್ಷೇಪಗಳು ಹೆಚ್ಚು ಗಂಭೀರವಾದವು, ಕೊನೆಯ ಪಕ್ಷ ಹ್ಯೂಮ್‌ಗೆ ಸಂಬಂಧಿಸಿದಂತೆ. ಪ್ರಭಾವಗಳ ನಕಲುಗಳು ಎಂಬ ಪರಿಕಲ್ಪನೆಗಳ ಇಡೀ ಸಿದ್ಧಾಂತವು, ಅವನ ಮಂಡನೆಯಲ್ಲಿ, ಅಸ್ಪಷ್ಟತೆಯಿಂದ ನರಳುತ್ತದೆ. ಉದಾಹರಣೆಗೆ, ನಿರ್ದಿಷ್ಟ ಬಣ್ಣದ ಹೂವೊಂದನ್ನು ನಾನು ನೋಡಿ, ಆನಂತರ ಅದರ ಪ್ರತೀಕವನ್ನು ನೆನಪಿಸಿಕೊಂಡಾಗ, ಆ ಪ್ರತೀಕದಲ್ಲಿ ಖಚಿತತೆಯ ಕೊರತೆಯಿರುತ್ತದೆ; ಈ ಅರ್ಥದಲ್ಲಿ, ಹ್ಯೂಮ್‌ನ ಭಾಷೆಯಲ್ಲಿ ಅದು ಆ ಬಣ್ಣದ ನಿಕಟ ಸಾದೃಶ್ಯವುಳ್ಳ ಯಾವುದೋ ಒಂದು ಛಾಯೆಯ ಪ್ರತೀಕ ಅಥವಾ ಪರಿಕಲ್ಪನೆಯಾಗಿರಬಹುದು. 'ಗುಣ ಮತ್ತು ಗಾತ್ರಗಳ ಪ್ರಮಾಣದ ನಿಖರ ಪರಿಭಾವನೆಯಿಲ್ಲದೆ ಮನಸ್ಸು ಅವುಗಳ ಬಗೆಗೆ ಯಾವುದೇ ರೂಪವನ್ನು ಪರಿಭಾವಿಸಲಾರದು' ಎಂಬುದು ನಿಜವಲ್ಲ. ನೀವು ಆರು ಅಡಿ ಒಂದು ಅಂಗುಲ ಎತ್ತರದ ವ್ಯಕ್ತಿಯೊಬ್ಬನನ್ನು ನೋಡಿದ್ದೀರಿ ಎಂದುಕೊಳ್ಳೋಣ. ನೀವು ಅವನ ಪ್ರತೀಕವೊಂದನ್ನು ಉಳಿಸಿಕೊಳ್ಳುತ್ತೀರಿ, ಆದರೆ ಅದು ಎತ್ತರದಲ್ಲಿ ಅವನಿಗಿಂತ ಒಂದು ಅಂಗುಲವೋ ಅರ್ಧ ಅಂಗುಲವೋ ಹೆಚ್ಚು ಕಡಿಮೆ ಇರುವ ವ್ಯಕ್ತಿಗೆ ಸರಿಹೊಂದಬಹುದು. ಅಸ್ಪಷ್ಟತೆಯು ಸಾಮಾನ್ಯತೆಗಿಂತ ಬೇರೆಯಾದುದು, ಆದರೆ ಅವೇ ಲಕ್ಷಣಗಳಲ್ಲಿನ ಕೆಲವನ್ನು ಹೊಂದಿರುತ್ತದೆ. ಅದನ್ನು ಗಮನಿಸದೆ, ಹ್ಯೂಮ್ ಅನವಶ್ಯಕ ಗೋಜಲುಗಳಲ್ಲಿ ಸಿಲುಕಿಕೊಳ್ಳುತ್ತಾನೆ. ಉದಾಹರಣೆಗೆ, ನೀವು ಎಂದೂ ನೋಡಿರದ, ಬಣ್ಣದ ನಿಕಟ ಸಾಮ್ಯತೆಯುಳ್ಳ ಎರಡು ಛಾಯೆಗಳ ನಡುವಣ ಛಾಯೆಯೊಂದನ್ನು ಪರಿಭಾವಿಸುವ ಸಾಧ್ಯತೆಯ ಬಗ್ಗೆ. ಇವೆರಡೂ ಸಾಕಷ್ಟು

ಮಟ್ಟಿಗೆ ಸಾಮ್ಯತೆ ಹೊಂದಿದ್ದರೆ, ನೀವು ಪರಿಭಾವಿಸಿಕೊಳ್ಳುವ ಯಾವುದೇ ಪ್ರತೀಕವು ಅವೆರಡಕ್ಕೂ ಮತ್ತು ಎರಡರ ನಡುವಣದಕ್ಕೂ ಒಂದೇ ರೀತಿಯಲ್ಲಿ ಅನ್ವಯಿಸುತ್ತದೆ. ಪರಿಕಲ್ಪನೆಗಳು ಯಥಾವತ್ತಾಗಿ ಪ್ರಭಾವಗಳಿಂದ ಸಾಧಿತವಾಗುತ್ತವೆ ಎಂದು ಹ್ಯೂಮ್ ಹೇಳುವಾಗ, ಅವನು ಮನೋವೈಜ್ಞಾನಿಕ ಸತ್ಯವನ್ನು ಮೀರುತ್ತಾನೆ.

ಸಾರಸತ್ವದ ಪರಿಕಲ್ಪನೆಯನ್ನು, ಬರ್ಕ್ಲೀ ಭೌತವಿಜ್ಞಾನದಿಂದ ಹೊರದಬ್ಬಿದಂತೆ, ಹ್ಯೂಮ್ ಮನೋವಿಜ್ಞಾನದಿಂದ ಹೊರದಬ್ಬುತ್ತಾನೆ. ತನ್ನತನದ ಪ್ರಭಾವವಿಲ್ಲ, ಹೀಗಾಗಿ ತನ್ನತನದ ಪರಿಕಲ್ಪನೆ ಇಲ್ಲ ಎಂಬುದು ಅವನ ಅಭಿಪ್ರಾಯ (ಭಾಗ ೧, ವಿಭಾಗ ೪, ಉಪವಿಭಾಗ ೬). 'ನನ್ನ ಮಟ್ಟಿಗೆ, ನನ್ನತನ ಎಂದು ಕರೆದುಕೊಳ್ಳುವುದರಲ್ಲಿ ನಾನು ನಿಕಟವಾಗಿ ಒಳಹೊಕ್ಕಾಗ, ನಾನು ಯಾವುದೋ – ಶಾಖ ಅಥವಾ ತಂಪು, ಬೆಳಕು ಅಥವಾ ನೆರಳು, ಪ್ರೀತಿ ಅಥವಾ ದ್ವೇಷ, ನೋವು ಅಥವಾ ನಲಿವು – ನಿರ್ದಿಷ್ಟ ಪರಿಕಲ್ಪನೆಗೆ ಎದುರಾಗುತ್ತೇನೆ. ಪರಿಕಲ್ಪನೆಯಿಲ್ಲದೆಯೇ ನನ್ನತನವನ್ನು ನಾನು ಕಾಣಲಾರೆ, ಅಲ್ಲದೆ ಪರಿಕಲ್ಪನೆಯಿಲ್ಲದೆ ಯಾವುದನ್ನೂ ಪರಿವೀಕ್ಷಿಸಲಾರೆ.' ತನ್ನತನವನ್ನು ಕಾಣಬಲ್ಲ ಕೆಲವು ತತ್ವಜ್ಞಾನಿಗಳಿದ್ದರೂ ಇರಬಹುದು ಎಂದು ವ್ಯಂಗ್ಯವಾಗಿ ಹೇಳಿ, 'ಈ ಬಗೆಯ ಕೆಲವು ತತ್ವಜಿಜ್ಞಾಸುಗಳನ್ನು ಬದಿಗೆ ಸರಿಸಿ, ನಾನು ಮಿಕ್ಕ ಮಾನವಸಂಕುಲದ ಬಗ್ಗೆ ಖಂಡಿತಪಡಿಸಬಹುದಾದುದು ಎಂದರೆ, ಅವು ವಿವಿಧ ಬಗೆಯ ಪರಿಕಲ್ಪನೆಗಳ ಗುಂಪು ಅಥವಾ ಮೊತ್ತವಲ್ಲದೆ ಬೇರೇನೂ ಅಲ್ಲ, ಅವು ಅನೂಹ್ಯ ವೇಗದಲ್ಲಿ ಒಂದನ್ನೊಂದು ಹಿಂಬಾಲಿಸುತ್ತವೆ, ಮತ್ತು ನಿರಂತರ ಧಾರೆ ಮತ್ತು ಚಲನೆಯಲ್ಲಿರುತ್ತವೆ.'

ತನ್ನತನದ ಪರಿಕಲ್ಪನೆಯ ತಿರಸ್ಕಾರವು ತುಂಬ ಮುಖ್ಯವಾದುದು. ಅದು ಖಚಿತವಾಗಿ ಏನನ್ನು ಪ್ರತಿಪಾದಿಸುತ್ತದೆ ಹಾಗೂ ಎಷ್ಟರ ಮಟ್ಟಿಗೆ ಸಿಂಧು ಎಂಬುದನ್ನು ನೋಡೋಣ. ಮೊದಲಿಗೆ, ತನ್ನತನವು, ಅಂಥದೊಂದು ಇಲ್ಲದಿದ್ದರೆ, ಅದು ಗ್ರಹಿಕೆಗೆ ದಕ್ಕುವುದೇ ಇಲ್ಲ, ಹೀಗಾಗಿ ಅದರ ಬಗೆಗಿನ ಪರಿಕಲ್ಪನೆ ಸಾಧ್ಯವೇ ಇಲ್ಲ. ಈ ವಾದವನ್ನು ಒಪ್ಪಿಕೊಳ್ಳುವುದಾದರೆ, ಅದನ್ನು ಎಚ್ಚರಿಕೆಯಿಂದ ಮಂಡಿಸಬೇಕಾಗುತ್ತದೆ. ಯಾವ ವ್ಯಕ್ತಿಯೂ ತನ್ನ ಮಿದುಳನ್ನು ಪರಿಗ್ರಹಿಸಿಕೊಳ್ಳಲಾರನಾದರೂ, ಒಂದು ಮುಖ್ಯ ಅರ್ಥದಲ್ಲಿ, ಅವನಿಗೆ ಅದರ 'ಪರಿಕಲ್ಪನೆ' ಒಂದಿರುತ್ತದೆ. ಗ್ರಹಿಕೆಯ ಪ್ರಭಾವಗಳಾದ ಅಂತಹ ಪರಿಕಲ್ಪನೆಗಳು ಮೂಲಭೂತ ತಾರ್ಕಿಕ ಪರಿಕಲ್ಪನೆಗಳ ಒಟ್ಟಿನಲ್ಲಿ ಸೇರಿರುವುದಿಲ್ಲ; ಅವು ಸಂಕೀರ್ಣವೂ ವರ್ಣನಾತ್ಮಕವೂ ಆದವು – ಎಲ್ಲ ಸರಳ ಪರಿಕಲ್ಪನೆಗಳೂ ಸರಳ ಪ್ರಭಾವಗಳಿಂದ ಸಾಧಿತವಾದವು ಎಂಬ ಹ್ಯೂಮ್‌ನ ತತ್ವವು ಸತ್ಯವಾಗಿದ್ದಲ್ಲಿ ಇದು ಸರಿಯಾಗಿರಬೇಕು, ಮತ್ತು ಈ ತತ್ವವನ್ನು ತಿರಸ್ಕರಿಸಿದಲ್ಲಿ ನಾವು 'ಅಂತರ್ಗತ' ಪರಿಕಲ್ಪನೆಗಳತ್ತಲೇ ಸಾಗಬೇಕಾಗುತ್ತದೆ. ಆಧುನಿಕ ಪರಿಭಾಷೆಯನ್ನು ಬಳಸಿಕೊಂಡು, ನಾವು ಹೀಗೆ ಹೇಳಬಹುದು: ಗ್ರಹಿಕೆಗೊಳಗಾಗದ ವಸ್ತುಗಳ

ಅಥವಾ ಸಂಗತಿಗಳ ಬಗೆಗಿನ ಪರಿಕಲ್ಪನೆಗಳನ್ನು ಗ್ರಹಿಕೆಗೊಳಗಾದ ವಸ್ತುಗಳ ಅಥವಾ ಸಂಗತಿಗಳ ಹಿನ್ನೆಲೆಯಲ್ಲಿಯೇ ಸೂತ್ರೀಕರಿಸಬೇಕು, ಮತ್ತು ಹೀಗಾಗಿ ಸೂತ್ರೀಕೃತವಾದುದರ ಸ್ಥಾನದಲ್ಲಿ ಸೂತ್ರವನ್ನು ನಿಲ್ಲಿಸಿದರೆ, ಯಾವುದೇ ಗ್ರಹಿಕೆಗೊಳಗಾಗದ ವಸ್ತುಗಳ ಅಥವಾ ಸಂಗತಿಗಳ ಪ್ರಸ್ತಾಪವಿಲ್ಲದೆಯೇ, ಅನುಭವೈಕ ನೆಲೆಯಲ್ಲಿ ನಮಗೆ ತಿಳಿದಿದೆ ಎಂದು ಯಾವಾಗಲೂ ಹೇಳಬಹುದು. ಪ್ರಸ್ತುತ ಸಮಸ್ಯೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಎಲ್ಲ ಮನೋವೈಜ್ಞಾನಿಕ ತಿಳಿವಳಿಕೆಯನ್ನೂ 'ತನ್ನತನ'ದ ಪ್ರಸ್ತಾಪವಿಲ್ಲದೆಯೇ ಮಂಡಿಸಬಹುದು. ಇನ್ನೂ ಮುಂದೆ ಹೋಗಿ, 'ತನ್ನತನ' ಎಂಬುದು, ಸೂತ್ರೀಕರಿಸಿರುವಂತೆ ವಿವಿಧ ಬಗೆಯ ಪರಿಕಲ್ಪನೆಗಳ ಗುಂಪು ಅಥವಾ ಮೊತ್ತವಲ್ಲದೆ ಬೇರೇನೂ ಅಲ್ಲ ಎಂಬುದು, ಹೊಸ ಸರಳ 'ಸಂಗತಿ'ಯೇನಲ್ಲ. ಈ ಬಗ್ಗೆ ಯಾವುದೇ ಕಟ್ಟಾ ಅನುಭವೈಕವಾದಿಯೂ ಹ್ಯೂಮ್‌ನೊಡನೆ ಸಹಮತ ಹೊಂದಬೇಕು.

ಇದರಿಂದಾಗಿ ಸರಳ ತನ್ನತನ ಇಲ್ಲ ಎಂದೇನೂ ಅಲ್ಲ; ಅದರರ್ಥ, ಅಂತಹುದೊಂದು ಇರುವುದೋ ಇಲ್ಲವೋ ನಮಗೆ ತಿಳಿಯಲು ಸಾಧ್ಯವಿಲ್ಲ, ಮತ್ತು ತನ್ನತನವು ವಿವಿಧ ಬಗೆಯ ಪರಿಕಲ್ಪನೆಗಳ ಗುಂಪು ಅಥವಾ ಮೊತ್ತವಲ್ಲದೆ ಬೇರೇನೂ ಅಲ್ಲ ಎಂಬುದರ ಹೊರತಾಗಿ ನಮ್ಮ ಜ್ಞಾನದ ಯಾವ ಭಾಗದಲ್ಲಿಯೂ ಸೇರಲಾರದು. ಈ ತೀರ್ಮಾನವು, 'ಸಾರಸತ್ವ'ದ ಬಳಕೆಯ ಅಳಿದುಳಿದ ಬಳಕೆಯನ್ನು ಕೊನೆಗೊಳಿಸುವಲ್ಲಿ, ತತ್ವಜಿಜ್ಞಾಸೆಯಲ್ಲಿ ಮುಖ್ಯವಾದುದು. 'ಆತ್ಮ'ದ ಕುರಿತಾದ ಎಲ್ಲ ಜ್ಞಾನವನ್ನೂ ತಿರಸ್ಕರಿಸುವಲ್ಲಿ ಅದು ಮತಧರ್ಮಶಾಸ್ತ್ರದಲ್ಲಿಯೂ ಮುಖ್ಯವಾದುದು. ಕರ್ತೃ ಮತ್ತು ವಿಧೇಯಗಳ ವರ್ಗೀಕರಣವು ಮೂಲಭೂತವಲ್ಲ ಎಂದು ತೋರಿಸಿದುದರಿಂದ ಅದು ಜ್ಞಾನವಿಶ್ಲೇಷಣೆಯಲ್ಲಿಯೂ ಮುಖ್ಯವಾದುದು. ಅಹಂನ ವಿಷಯದಲ್ಲಿ, ಹ್ಯೂಮ್ ಬರ್ಕ್ಲೀಗಿಂತ ಹೆಚ್ಚಿನ ಸಾಧನೆ ಮಾಡಿದ.

ಇಡೀ 'ಟ್ರೀಟೈಸ್' ನ ಅತ್ಯಂತ ಪ್ರಮುಖ ಭಾಗವೆಂದರೆ 'ಜ್ಞಾನ ಮತ್ತು ಸಂಭಾವ್ಯತೆಯನ್ನು ಕುರಿತು' ಎಂಬುದು. 'ಸಂಭಾವ್ಯತೆ' ಎಂಬುದು ಹ್ಯೂಮ್‌ನ ಅರ್ಥದಲ್ಲಿ, ಎರಡು ದಾಳಗಳಲ್ಲಿ ಎರಡು ಆರುಗಳನ್ನು ಹಾಕುವ ಸಂಭಾವ್ಯತೆಯು ಮೂವತ್ತಾರನೇ ಒಂದರಷ್ಟು ಎಂಬಂತಹ 'ಸಂಭಾವ್ಯತೆ'ಯ ಗಣಿತಾತ್ಮಕ ಸಿದ್ಧಾಂತದ ಬಗೆಗಿನದಲ್ಲ. ಈ ತಿಳಿವಳಿಕೆಯು ಯಾವುದೇ ವಿಶೇಷಾರ್ಥದಲ್ಲಿ ತಾನೇ ಸಂಭಾವ್ಯವಲ್ಲ; ಅದರ ಖಚಿತತೆಯು ಜ್ಞಾನ ಹೊಂದುವಷ್ಟರ ಮಟ್ಟಿಗೆ ಮಾತ್ರ. ಹ್ಯೂಮ್‌ಗೆ ಪ್ರಸ್ತುತವಾದುದೆಂದರೆ, ನಿದರ್ಶನಾತ್ಮಕವಾಗಿ ಸಾಧ್ಯವಲ್ಲದ ಊಹನೆಗಳ ಅನುಭವೈಕ ದತ್ತಾಂಶಗಳಿಂದ ಹೊಂದುವಂತಹ ಖಚಿತವಲ್ಲದ ಜ್ಞಾನ. ಭವಿಷ್ಯದ ಬಗೆಗಿನ, ಮತ್ತು ಭೂತ ಭವಿಷ್ಯತ್ತುಗಳ ಪರಿವೀಕ್ಷಿಸದ ಭಾಗಗಳ ಬಗೆಗಿನ ಜ್ಞಾನ – ಇವೂ ಇದರಲ್ಲಿ ಸೇರುತ್ತದೆ. ಹಾಗೆ ನೋಡಿದರೆ, ಒಂದೆಡೆ ಸ್ವಯಂ ಪರಿವೀಕ್ಷಣೆ, ಮತ್ತು

ಮತ್ತೊಂದೆಡೆ ತರ್ಕ ಮತ್ತು ಗಣಿತಗಳನ್ನು ಬಿಟ್ಟು, ಮತ್ತೆಲ್ಲವೂ ಅದರಲ್ಲಿ ಸೇರುತ್ತದೆ. ಅಂತಹ 'ಸಂಭಾವ್ಯ' ಜ್ಞಾನದ ವಿಶ್ಲೇಷಣೆಯು ಹ್ಯೂಮ್‌ನನ್ನು ಕೆಲವು ಸಂದೇಹಾತ್ಮಕ ತೀರ್ಮಾನಗಳನ್ನು ಕೈಗೊಳ್ಳುವತ್ತ ಕರೆದೊಯ್ಯುತ್ತದೆ, ಅವುಗಳನ್ನು ಒಪ್ಪುವುದೂ ಕಷ್ಟ, ತಿರಸ್ಕರಿಸುವುದೂ ಕಷ್ಟ. ಇದು ತತ್ವಜ್ಞಾನಿಗಳಿಗೆ ಒಂದು ಸವಾಲಾಯಿತು, ಆದರೆ ಇವುಗಳ ಬಗ್ಗೆ ಇನ್ನೂ ಸೂಕ್ತವೆನ್ನಬಹುದಾದ ಬೆಳವಣಿಗೆಯೇನೂ ಆಗಿಲ್ಲ.

ಹ್ಯೂಮ್ ಆರಂಭಿಸುವುದು ತಾತ್ವಿಕ ಸಂಬಂಧಗಳ ಏಳು ಬಗೆಗಳಲ್ಲಿನ ವ್ಯತ್ಯಾಸಗಳನ್ನು ತೋರಿಸುವುದರ ಮೂಲಕ: ಸಾದೃಶ್ಯ, ಸಾಮ್ಯ, ಕಾಲ ಮತ್ತು ಅವಕಾಶಗಳ ಸಂಬಂಧ, ಪರಿಮಾಣ ಅಥವಾ ಸಂಖ್ಯೆಯ ಅನುಪಾತ, ಯಾವುದೇ ಗುಣದ ಪ್ರಮಾಣ, ವೈದೃಶ್ಯ ಮತ್ತು ಕಾರಣಾತ್ಮಕತೆ. ಇವುಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದೆಂದು ಅವನು ಹೇಳುತ್ತಾನೆ: ಪರಿಕಲ್ಪನೆಗಳಷ್ಟನ್ನೇ ಆಧರಿಸುವಂತಹವು, ಮತ್ತು ಪರಿಕಲ್ಪನೆಗಳನ್ನು ಬದಲಾಯಸದೆಯೇ ಬದಲಾಯಿಸಬಹುದಾದಂತಹವು. ಮೊದಲ ಗುಂಪಿನಲ್ಲಿ ಸಾದೃಶ್ಯ, ವೈದೃಶ್ಯ, ಗುಣ ಪ್ರಮಾಣ, ಮತ್ತು ಪರಿಮಾಣ ಅಥವಾ ಸಂಖ್ಯೆಯ ಅನುಪಾತ ಇವು ಸೇರುತ್ತವೆ. ಆದರೆ ಕಾಲ-ಅವಕಾಶ ಮತ್ತು ಕಾರಣಾತ್ಮಕ ಸಂಬಂಧಗಳು ಎರಡನೆಯ ಗುಂಪಿಗೆ ಸೇರುತ್ತವೆ. ಮೊದಲ ಗುಂಪಿನ ಸಂಬಂಧಗಳು ಮಾತ್ರ ನಿರ್ದಿಷ್ಟ ಜ್ಞಾನವನ್ನು ನೀಡುತ್ತದೆ; ಇತರವುಗಳಿಗೆ ಸಂಬಂಧಿಸಿದ ನಮ್ಮ ಜ್ಞಾನವು 'ಸಂಭಾವ್ಯ' ಮಾತ್ರ. ನಿರ್ದಿಷ್ಟತೆಯನ್ನು ಬಲಿಗೊಡದೆ ದೀರ್ಘವಾಗಿ ಕಾರಣಗಳನ್ನು ನೀಡಬಹುದಾದವು ವಿಜ್ಞಾನಗಳಲ್ಲಿ ಬೀಜಗಣಿತ ಮತ್ತು ಅಂಕಗಣಿತಗಳು ಮಾತ್ರ. ಜ್ಯಾಮಿತಿಯು ಬೀಜಗಣಿತ ಮತ್ತು ಅಂಕಗಣಿತಗಷ್ಟು ನಿರ್ದಿಷ್ಟವಲ್ಲ, ಯಾಕೆಂದರೆ ಅದರ ಆಧಾರಸೂತ್ರಗಳ ಸತ್ಯತೆಯ ಬಗ್ಗೆ ಖಚಿತವಾಗಿ ಹೇಳಲಾಗುವುದಿಲ್ಲ. ಅನೇಕ ತತ್ವಜ್ಞಾನಿಗಳು ತಿಳಿದಿರುವಂತೆ, ಗಣಿತದ ಚಿಂತನೆಗಳನ್ನು 'ಶುದ್ಧ ಮತ್ತು ಬೌದ್ಧಿಕ ದೃಷ್ಟಿಕೋನದಿಂದ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯ, ಇದು ಆತ್ಮದ ಉನ್ನತ ಸಾಮರ್ಥ್ಯಗಳಿಗಷ್ಟೇ ಎಟುಕುವಂತಹುದು' ಎಂಬು ಭಾವಿಸುವುದು ಸರಿಯಲ್ಲ. 'ನಮ್ಮ ಪರಿಕಲ್ಪನೆಗಳನ್ನೆಲ್ಲ ನಮ್ಮ ಪ್ರಭಾವಗಳೇ ಆವರಿಸಿವೆ' ಎಂಬುದನ್ನು ನೆನಪಿಸಿಕೊಂಡರೆ ಈ ಅಭಿಪ್ರಾಯದ ಮಿಥ್ಯೆಯು ಸ್ಪಷ್ಟವಾಗುತ್ತದೆ ಎಂದು ಹ್ಯೂಮ್ ಹೇಳುತ್ತಾನೆ.

ಪರಿಕಲ್ಪನೆಗಳನ್ನು ಮಾತ್ರವೇ ಆಧರಿಸದ ಮೂರು ಸಂಬಂಧಗಳು ಎಂದರೆ ಸಾಮ್ಯತೆ, ಕಾಲ-ಅವಕಾಶ ಸಂಬಂಧಗಳು ಮತ್ತು ಕಾರಣಾತ್ಮಕತೆ. ಮೊದಲೆರಡರಲ್ಲಿ, ಮನಸ್ಸು ಇಂದ್ರಿಯಗಳಿಗೆ ನೇರವಾಗಿ ಗ್ರಾಹ್ಯವಾದವುಗಳನ್ನು ಮೀರಿ ತಕ್ಷಣವೇ ಮುಂದೆ ಹೋಗುವುದಿಲ್ಲ. (ಹ್ಯೂಮ್ ಪ್ರಕಾರ, ಕಾಲ-ಅವಕಾಶ ಸಂಬಂಧಗಳನ್ನು ಗ್ರಹಿಸಬಹುದು ಮತ್ತು ಹೀಗಾಗಿ ಅವು ಪ್ರಭಾವಗಳು.) ಇತರ ವಸ್ತು ಅಥವಾ ಸಂಗತಿಗಳಲ್ಲಿ ಒಂದು ವಸ್ತುವನ್ನೋ ಸಂಗತಿಯನ್ನೋ ಊಹನೆ ಮಾಡಿಕೊಳ್ಳುವುದನ್ನು

ಕಾರಣಾತ್ಮಕತೆಯು ಮಾತ್ರ ಉದ್ದೀಪಿಸಬಲ್ಲದು. 'ಕಾರಣಾತ್ಮಕತೆಯು ಮಾತ್ರವೇ – ಒಂದು ವಸ್ತುವಿನ ಅಸ್ತಿತ್ವ ಅಥವಾ ಕ್ರಿಯೆಯನ್ನು ಇತರ ಅಸ್ತಿತ್ವ ಮತ್ತು ಕ್ರಿಯೆಯ ಕಾರಣವೇ ಅಥವಾ ಪರಿಣಾಮವೇ ಎಂಬುದರ ಬಗ್ಗೆ ಭರವಸೆ ನೀಡುವ – ಅಂತಹ ಸಂಬಂಧವನ್ನು ಉಂಟುಮಾಡಬಲ್ಲದು.

ಕಾರಣಾತ್ಮಕ ಸಂಬಂಧದಲ್ಲಿ ಪ್ರಭಾವ ಇರುವುದಿಲ್ಲ ಎಂಬ ಹ್ಯೂಮ್‌ನ ವಾದವು ಒಂದು ತೊಡಕನ್ನು ಸೃಷ್ಟಿಸುತ್ತದೆ. ಎಯು ಬಿಗಿಂತ ಮೇಲಿದೆಯೋ ಅಥವಾ ಎ ಯು ಬಿಯ ಬಲದಲ್ಲಿದೆಯೋ ಎ ಮತ್ತು ಬಿ ಗಳನ್ನು ನಾವು ನೋಡುವುದರಿಂದಲೇ ನಾವು ಗ್ರಹಿಸಬಲ್ಲೆವು, ಆದರೆ ಎ ಯು ಬಿಯ ಕಾರಣ ಎಂಬುದನ್ನು ಗ್ರಹಿಸಲು ಸಾಧ್ಯವಿಲ್ಲ. ಹಿಂದೆಯಾದರೆ, ಕಾರಣಾತ್ಮಕ ಸಂಬಂಧವು ತರ್ಕದಲ್ಲಿ ಭೂಮಿಕೆ ಮತ್ತು ಪರಿಣಾಮಗಳಲ್ಲಿ ಹೆಚ್ಚು ಕಡಿಮೆ ಸೇರಿಹೋಗಿರುತ್ತಿತ್ತು; ಆದರೆ ಇದು ಹ್ಯೂಮ್ ಸರಿಯಾಗಿ ಕಂಡುಕೊಂಡಂತೆ ತಪ್ಪಾದುದು.

ಸೂಕ್ಷ್ಮತಾರ್ಕಿಕರಲ್ಲಿನಂತೆಯೇ ಕಾರ್ಟೀಸಿಯನ್ ತಾತ್ವಿಕತೆಯಲ್ಲಿ ಕಾರ್ಯ ಕಾರಣಗಳ ಸಂಬಂಧವು ಆವಶ್ಯಕವೆಂದು ಭಾವಿಸಲಾಗಿತ್ತು. ಈ ಅಭಿಪ್ರಾಯದ ವಿರುದ್ಧ ಮೊದಲ ಗಂಭೀರ ಸವಾಲು ಹ್ಯೂಮ್‌ನಿಂದಲೇ ಎದುರಾಯಿತು, ಅವನಿಂದಲೇ ಆಧುನಿಕ ಕಾರಣಾತ್ಮಕ ತತ್ವಜ್ಞಾನವು ಆರಂಭವಾದುದು. ಬರ್ಗ್‌ಸನ್‌ನನ್ನೂ ಒಳಗೊಂಡಂತೆ ಅವನವರೆಗಿನ ಎಲ್ಲ ತತ್ವಜ್ಞಾನಿಗಳೂ ಭಾವಿಸಿದುದೆಂದರೆ, 'ಎ' ಮತ್ತು 'ಬಿ'ಗಳು ಸಂಗತಿಗಳ ವರ್ಗಗಳಾಗಿರುವ 'ಎ' ಮತ್ತು 'ಬಿ' ರೂಪದ ಪ್ರತಿಪಾದನೆಗಳ ನಿಯಮದ ಸ್ವರೂಪ ಎಂಬುದು; ವಾಸ್ತವವಾಗಿ ಅಂತಹ ನಿಯಮಗಳು ಸುಪುಷ್ಟವಾದ ವಿಜ್ಞಾನದಲ್ಲಿ ಇಲ್ಲದಿರುವುದು ತತ್ವಜ್ಞಾನಿಗಳಿಗೆ ಗೊತ್ತೇ ಇಲ್ಲ. ಆದರೆ ಅವರು ಹೇಳಿರುವ ಬಹುತೇಕವಾದವು ಸಂಭವಿಸುವ ಕಾರಣಾತ್ಮಕ ನಿಯಮಗಳಿಗೆ ಅನ್ವಯಿಸುವ ರೀತಿಯಲ್ಲಿ ಮಂಡಿಸಬಹುದು; ಹೀಗಾಗಿ ನಾವು ಈ ಅಂಶವನ್ನು ಸದ್ಯಕ್ಕೆ ಕಡೆಗಣಿಸಬಹುದು.

ಹ್ಯೂಮ್ ಆರಂಭಿಸುವುದು ಒಂದು ವಿಷಯವು ಮತ್ತೊಂದನ್ನು ಸೃಷ್ಟಿಸಬಹುದಾದ ಸಾಮರ್ಥ್ಯವನ್ನು ಆ ಎರಡೂ ವಸ್ತುಗಳ ಪರಿಕಲ್ಪನೆಗಳ ಮೂಲಕ ಕಂಡುಕೊಳ್ಳಲು ಸಾಧ್ಯವಿಲ್ಲ; ಹೀಗಾಗಿ ಕಾರಣ ಮತ್ತು ಕಾರ್ಯಗಳನ್ನು ತಿಳಿಯುವುದು ಅನುಭವದಿಂದ ಮಾತ್ರವೇ ಹೊರತು ತರ್ಕದಿಂದಲೂ ಅಲ್ಲ ಚಿಂತನೆಯಿಂದಲೂ ಅಲ್ಲ ಎಂಬುದನ್ನು ಗಮನಿಸುವುದರ ಮೂಲಕ. 'ಆರಂಭಗೊಳ್ಳುವುದಕ್ಕೆ ಒಂದು ಕಾರಣವಿರಬೇಕು' ಎಂಬ ಹೇಳಿಕೆಯು ತರ್ಕದ ಪ್ರತಿಪಾದನೆಗಳಂತೆ ಪ್ರಾತಿಭ ನಿಶ್ಚಿತತೆಯನ್ನು ಹೊಂದಿರುವುದಿಲ್ಲ. ಅದನ್ನವನು ಹೀಗೆ ಹೇಳುತ್ತಾನೆ: 'ಈ ವಸ್ತುಗಳನ್ನಷ್ಟೇ ಪರಿಗಣಿಸಿ, ಅವುಗಳಿಂದ ರೂಪಿಸಿಕೊಳ್ಳುವ ಪರಿಕಲ್ಪನೆಗಳಿಂದ ಆಚೆಗೆ ನೋಡದಿದ್ದರೆ, ಮತ್ತೊಂದರ ಅಸ್ತಿತ್ವವನ್ನು ಸೂಚಿಸುವ ಯಾವುದೇ ವಸ್ತು

ಇಲ್ಲ.' ಇದರಿಂದ ಹ್ಯೂಮ್ ವಾದಿಸುವುದೆಂದರೆ, ಅನುಭವವೇ ಕಾರಣ ಮತ್ತು ಕಾರ್ಯದ ತಿಳಿವಳಿಕೆಯನ್ನು ನೀಡುವಂತಹದು, ಆದರೆ ಅದು ಪರಸ್ಪರ ಕಾರಣಾತ್ಮಕ ಸಂಬಂಧವನ್ನು ಹೊಂದಿರುವ ಎ ಮತ್ತು ಬಿ ಗಳ ಅನುಭವವು ಮಾತ್ರ ಆಗಿರಬಾರದು. ಸಂಬಂಧವು ತಾರ್ಕಿಕವಾಗಿಲ್ಲದಿರುವುದರಿಂದ ಅನುಭವವೇ ಆಗಿರಬೇಕು, ಅದರೆ ಅದು ನಿರ್ದಿಷ್ಟವಾದ ಎ ಮತ್ತು ಬಿ ಎಂಬ ಸಂಗತಿಗಳ ಅನುಭವ ಮಾತ್ರ ಆಗಿರಬಾರದು, ಯಾಕೆಂದರೆ ಬಿ ಅನ್ನು ಸೃಷ್ಟಿಸಲು ಕಾರಣವಾಗುವುದನ್ನು ಎ ಅಷ್ಟನ್ನೇ ಗಮನಿಸಿ ಕಂಡುಹಿಡಿಯಲು ಸಾಧ್ಯವಿಲ್ಲ. ಹೀಗಾಗಿ ಆವಶ್ಯಕವಾದುದೆಂದರೆ, ಎ ಅಂತಹ ಸಂಗತಿಗಳು ಮತ್ತು ಬಿ ಅಂತಹ ಸಂಗತಿಗಳು ಇವುಗಳು ನಿರಂತರವಾಗಿ ಒಂದಾಗಿರುವ ಸಂಗತಿಗಳ ಅನುಭವ. ಅನುಭವದಲ್ಲಿ, ಎರಡು ವಸ್ತುಗಳ ನಿರಂತರವಾಗಿ ಒಟ್ಟಿಗಿರುವ ಸಂದರ್ಭದಲ್ಲಿ ವಾಸ್ತವವಾಗಿ ಒಂದರಿಂದ ಇನ್ನೊಂದನ್ನು ಊಹನೆ ಮಾಡಿಕೊಳ್ಳುತ್ತೇವೆ. ('ಊಹನೆ ಮಾಡು' ಎಂದರೆ ಒಂದನ್ನು ಪರಿಗ್ರಹಿಸುವುದು ನಮ್ಮನ್ನು ಇನ್ನೊಂದನ್ನು ನಿರೀಕ್ಷಿಸುವಂತೆ ಮಾಡುತ್ತದೆ ಎಂಬುದು ಅವನ ಅರ್ಥ; ಸಾಂಪ್ರದಾಯಿಕ ಅಥವಾ ಸ್ಪಷ್ಟ ಊಹನೆ ಅಲ್ಲ.) 'ಪ್ರಾಯಶಃ ಆವಶ್ಯಕವಾದ ಸಂಬಂಧವು ಊಹನೆಯನ್ನು ಅವಲಂಬಿಸುತ್ತದೆ', ತದ್ವಿರುದ್ಧ ರೀತಿಯದಲ್ಲ. ಅಂದರೆ, ಎ ಅನ್ನು ನೋಡುವುದು ಬಿ ಅನ್ನು ನಿರೀಕ್ಷಿಸುವಂತೆ ಮಾಡುತ್ತದೆ, ಮತ್ತು ಇದರಿಂದಾಗಿ ಎ ಮತ್ತ ಬಿ ಗಳಲ್ಲಿ ಅನಿವಾರ್ಯ ಸಂಬಂಧವಿರುವುದನ್ನು ನಂಬುವಂತೆ ಮಾಡುತ್ತದೆ. ಈ ಊಹನೆಯು ತರ್ಕದಿಂದ ಸಿದ್ಧಿಸಿದುದಲ್ಲ, ಯಾಕೆಂದರೆ ಪ್ರಕೃತಿಯ ಸಮರೂಪತೆಯನ್ನು ಊಹಿಸುವಂತೆ ಮಾಡುತ್ತದೆ, ಅದು ಆವಶ್ಯಕವಲ್ಲ, ಬೇಕಾದುದು ಅನುಭವದಿಂದ ಊಹನೆ ಮಾಡಿಕೊಳ್ಳುವುದನ್ನು.

ಈ ರೀತಿಯಲ್ಲಿ ಹ್ಯೂಮ್, ಎ ಯು ಬಿ ಗೆ ಕಾರಣ ಎಂದಾಗ, ನಮ್ಮ ಅರ್ಥವೆಂದರೆ ವಾಸ್ತವವಾಗಿ ಎ ಮತ್ತು ಬಿ ಗಳು ನಿರಂತರವಾಗಿ ಒಟ್ಟಿಗಿರುತ್ತವೆ ಎಂಬುದೇ ಹೊರತು, ಅವೆರಡರಲ್ಲಿ ಅನಿವಾರ್ಯ ಸಂಬಂಧವಿದೆ ಎಂಬುದಲ್ಲ. 'ನಿರಂತರವಾಗಿ ಒಟ್ಟಿಗಿರುವ ನಿರ್ದಿಷ್ಟ ವಸ್ತುಗಳದರ ಹೊರತು ನಮಗೆ ಬೇರೆ ಯಾವುದೇ ಕಾರಣ ಮತ್ತು ಕಾರ್ಯದ ಪರಿಕಲ್ಪನೆಯಿಲ್ಲ .. .. ಈ ಒಟ್ಟಿಗಿರುವಿಕೆ ಕಾರಣದ ಒಳಹೊಗಲು ನಮಗೆ ಸಾಧ್ಯವಿಲ್ಲ.'

ತನ್ನ ಸಿದ್ಧಾಂತವನ್ನವನು ಬೆಂಬಲಿಸುವುದು 'ನಂಬಿಕೆ'ಯ ವ್ಯಾಖ್ಯೆಯ ಮೂಲಕ, ಅದೆಂದರೆ, 'ಸದ್ಯದ ಪ್ರಭಾವಕ್ಕೆ ಸಬಂಧಿಸಿದ ಅಥವಾ ಅದರ ಜೊತೆಗೂಡಿರುವ ಜೀವಂತ ಪರಿಕಲ್ಪನೆ.' ಹಿಂದಿನ ಅನುಭವದಲ್ಲಿ ಎ ಮತ್ತು ಬಿ ನಿರಂತರವಾಗಿ ಒಟ್ಟಾಗಿದ್ದರೆ – ಜೊತೆಗೂಡಿರುವಿಕೆಯ ಮೂಲಕ – ಎ ಯ ಪ್ರಭಾವವು ಬಿ ಯ ಬಗೆಗಿನ ಜೀವಂತ ಪರಿಕಲ್ಪನೆಯನ್ನು ಉಂಟುಮಾಡುತ್ತದೆ, ಅಂದರೆ ಬಿ ಯಲ್ಲಿ

ನಂಬಿಕೆಯನ್ನು ರೂಪಿಸುತ್ತದೆ. ಎ ಮತ್ತು ಬಿ ಸಂಬಂಧಿಸಿರುವುದನ್ನು ಇದು ವಿವರಿಸುತ್ತದೆ: ಎ ಯ ಬಗೆಗಿನ ಗ್ರಹಿಕೆಯು ಬಿ ಯ ಬಗೆಗಿನ ಪರಿಕಲ್ಪನೆಗೆ ಸಂಬಂಧಿಸಿದೆ, ಹೀಗಾಗಿ ಎ ಯು ಬಿ ಜೊತೆಗೆ ಸಂಬಂಧವನ್ನು ಹೊಂದಿದೆ ಎಂದು – ಇದು ವಾಸ್ತವದಲ್ಲಿ ಆಧಾರರಹಿತವಾದರೂ – ಭಾವಿಸುತ್ತೇವೆ. 'ಒಟ್ಟಿಗಿರುವ ವಸ್ತುಗಳ ಸಂಬಂಧವು ಕಂಡುಕೊಳ್ಳಬಹುದಾದುದಲ್ಲ; ಒಂದನ್ನು ನೋಡುವುದರ ಮೂಲಕ ಮತ್ತೊಂದರ ಅನುಭವವನ್ನು ಯಾವುದೇ ಬಗೆಯ ಊಹನೆ ಮಾಡಿಕೊಳ್ಳುವುದು ರೂಢಿಯು ನಮ್ಮ ಕಲ್ಪನೆಯ ಮೇಲೆ ಮುದ್ರೆಯೊತ್ತಿರುವುದರ ಹೊರತಾಗಿ ಬೇರಾವ ತತ್ವಗಳಿಂದಲೂ ಅಲ್ಲ.' ವಸ್ತುಗಳ ನಡುವಣ ಅನಿವಾರ್ಯ ಸಂಬಂಧ ಎಂದು ನಮಗೆ ಕಾಣುವುದು ವಾಸ್ತವವಾಗಿ ಆ ವಸ್ತುಗಳ ಬಗೆಗಿನ ಪರಿಕಲ್ಪನೆಗಳ ಸಂಬಂಧ ಅಷ್ಟೆ ಎಂಬುದನ್ನವನು ಮತ್ತೆ ಮತ್ತೆ ಹೇಳುತ್ತಾನೆ; ಮನಸ್ಸು ರೂಢಿಯಿಂದ ನಿರ್ಧಾರಿತವಾಗಿರುತ್ತದೆ, ಮತ್ತು 'ಈ ಪ್ರಭಾವವು ಅಥವಾ ನಿರ್ಧಾರವು ನನ್ನಲ್ಲಿ ಅನಿವಾರ್ಯದ ಪರಿಕಲ್ಪನೆಯನ್ನು ದೃಢಪಡಿಸುತ್ತದೆ'. ನಮ್ಮನ್ನು ನಂಬುವಂತೆ ಮಾಡುವ 'ಎ' ಯು 'ಬಿ' ಯ ಕಾರಣ ಎಂಬಂತಹ ನಿದರ್ಶನಗಳ ಪುನರಾವರ್ತನೆಯು ವಸ್ತುವಿಗೆ ಹೊಸತನವನ್ನೇನೂ ನೀಡಲಾರದು, ಆದರೆ ಮನಸ್ಸಿನಲ್ಲಿ ಪರಿಕಲ್ಪನೆಗಳ ಸಂಬಂಧ ಮೂಡುವಂತೆ ಮಾಡುತ್ತದೆ.; ಈ ರೀತಿಯಲ್ಲಿ, 'ಅನಿವಾರ್ಯತೆ ಎಂಬುದು ಮನಸ್ಸಿನಲ್ಲಿ ಅಸ್ತಿತ್ವ ಹೊಂದಿರುವಂತಹುದೇ ಹೊರತು, ವಸ್ತುಗಳಲ್ಲಲ್ಲ.'

ಹ್ಯೂಮ್‌ನ ಸಿದ್ಧಾಂತದ ಬಗ್ಗೆ ನಾವು ಹೇಗೆ ಪರಿಭಾವಿಸಬೇಕು ಎಂಬುದರ ಕುರಿತು ಈಗ ನಮ್ಮನ್ನೇ ಪ್ರಶ್ನಿಸಿಕೊಳ್ಳೋಣ. ಅದರಲ್ಲಿ ಎರಡು ಭಾಗಗಳಿವೆ: ಒಂದು ವಸ್ತುನಿಷ್ಠ, ಮತ್ತೊಂದು ವ್ಯಕ್ತಿನಿಷ್ಠ. ವಸ್ತುನಿಷ್ಠ ಭಾಗವು ಹೇಳುವುದೆಂದರೆ, ಎ ಯು ಬಿ ಯ ಕಾರಣ ಎಂದು ನಾವು ತೀರ್ಮಾನಿಸಿದಾಗ, ಎ ಮತ್ತು ಬಿ ಗಳಿಗೆ ಸಂಬಂಧಿಸಿದಂತೆ ವಾಸ್ತವವಾಗಿ ಆಗಿರುವುದೆಂದರೆ, ಅವುಗಳು ನಿರಂತರ ಒಟ್ಟಿಗಿರುವುದನ್ನು ಪದೇ ಪದೇ ಕಂಡಿದ್ದೇವೆ ಎಂಬುದು, ಅಂದರೆ ಎ ಯನ್ನು ತಕ್ಷಣವೇ ಅಥವಾ ಬಹು ಬೇಗ ಬಿಯು ಅನುಸರಿಸಿದೆ ಎಂದು; ಎ ಯನ್ನು ಬಿ ಯು ಅನುಸರಿಸಲೇಬೇಕು ಅಥವಾ ಮುಂದೆಯೂ ಎ ಯನ್ನು ಬಿ ಯು ಅನುಸರಿಸಬೇಕು ಎಂದು ಹೇಳಲು ನಮಗೆ ಅಧಿಕಾರವಿಲ್ಲ. ಅಂತೆಯೇ, ಎ ಅನ್ನು ಬಿ ಯು ಎಷ್ಟೇ ಸಲ ಅನುಸರಿಸಿದ್ದರೂ, ಅದರಲ್ಲಿ ಕ್ರಮಾನುಗತವನ್ನು ಮೀರಿದ ಸಂಬಂಧವನ್ನು ಊಹಿಸಿಕೊಳ್ಳಲು ನಮಗೆ ಯಾವುದೇ ಆಧಾರವಿಲ್ಲ. ವಾಸ್ತವವಾಗಿ, ಕಾರಣಾತ್ಮಕತೆಯನ್ನು ಕ್ರಮಾನುಗತವಾಗಿ ಸೂತ್ರೀಕರಿಸಬಹುದೇ ಹೊರತು ಅದಕ್ಕೆ ಸ್ವತಂತ್ರ ಪರಿಕಲ್ಪನೆಯಿಲ್ಲ.

ಸಿದ್ಧಾಂತದ ವ್ಯಕ್ತಿನಿಷ್ಠ ಭಾಗವು ಹೀಗೆ ಹೇಳುತ್ತದೆ: ಕಂಡು ಬಂದ ಎ ಮತ್ತು

ಬಿ ಗಳ ಪುನರಾವರ್ತಿತ ಒಟ್ಟಿಗಿರುವಿಕೆಯು ಬಿ ಯ ಪರಿಕಲ್ಪನೆಯನ್ನು ಎ ಉಂಟುಮಾಡುವುದೆಂಬ ಪ್ರಭಾವಕ್ಕೆ ಕಾರಣವಾಗುತ್ತದೆ. ಆದರೆ ಸಿದ್ಧಾಂತದ ವಸ್ತುನಿಷ್ಠ ಭಾಗದಲ್ಲಿನ ನಾವು 'ಕಾರಣವಾಗು' ಎಂಬುದನ್ನು ಸೂತ್ರೀಕರಿಸಬೇಕಾದರೆ, ಮೇಲಿನದನ್ನು ನಾವು ಬೇರೆ ಮಾತುಗಳಲ್ಲಿ ಹೇಳಬೇಕಾಗುತ್ತದೆ. 'ಕಾರಣವಾಗು' ಎಂಬುದರ ಸೂತ್ರವನ್ನು ಬದಲಾಯಿಸಿದಾಗ, ಮೇಲಿನದು ಹೀಗಾಗುತ್ತದೆ:

'ಎ ಮತ್ತು ಬಿ ಗಳ ಒಟ್ಟಿಗಿರುವಿಕೆಯನ್ನು ಪುನರಾವರ್ತಿತವಾಗಿ ಪರಿವೀಕ್ಷಿಸಿ ಎ ಯ ಪ್ರಭಾವವನ್ನು ಬಿ ಯ ಪರಿಕಲ್ಪನೆಯು ಅನುಸರಿಸುತ್ತದೆ ಎಂಬುದನ್ನು ಪುನರಾವರ್ತಿತವಾದ ಸಂದರ್ಭಗಳಲ್ಲಿ ಕಂಡುಕೊಳ್ಳಲಾಗಿದೆ.'

ಈ ಹೇಳಿಕೆಯು ನಿಜವಾದರೂ, ಅದಕ್ಕೆ ಹ್ಯೂಮ್ ಆರೋಪಿಸುವ ವ್ಯಾಪ್ತಿಯು ಅವನ ಸಿದ್ಧಾಂತದ ವ್ಯಕ್ತಿನಿಷ್ಠ ಭಾಗಕ್ಕೆ ಅನ್ವಯಗೊಳ್ಳುವುದು ಕಷ್ಟ. ಮತ್ತೆ ಮತ್ತೆ ಅವನು ವಾದಿಸುವುದೆಂದರೆ, ಎ ಮತ್ತು ಬಿ ಗಳ ಪುನರಾವರ್ತಿತ ಒಟ್ಟಿಗಿರುವಿಕೆಯು ಮುಂದೆಯೂ ಅವು ಒಟ್ಟಿಗಿರುತ್ತದೆ ಎಂದು ನಿರೀಕ್ಷಿಸಲು ಯಾವುದೇ ಕಾರಣವಿಲ್ಲ, ಆದರೆ ಅದು ಈ ನಿರೀಕ್ಷೆಯು ಕಾರಣ ಅಷ್ಟೆ ಅಂದರೆ, ಪುನರಾವರ್ತಿತ ಒಟ್ಟಿಗಿರುವುದರ ಅನುಭವವು ರೂಢಿಯ ಪುನರಾವರ್ತಿತ ಸಂಬಂಧದೊಡನೆ ಒಟ್ಟಿಗಿರುತ್ತದೆ. ಆದರೆ, ಹ್ಯೂಮ್‌ನ ವಸ್ತುನಿಷ್ಠ ಭಾಗವನ್ನು ಒಪ್ಪಿಕೊಂಡರೆ, ಹಿಂದೆ ಅಂಥ ಪರಿಸ್ಥಿತಿಗಳಲ್ಲಿ ಸಂಬಂಧವು ಪುನರಾವರ್ತಿತವಾಗಿ ರೂಪುಗೊಂಡಿರುತ್ತವೆ ಎಂಬ ವಾಸ್ತವವು ಅದು ಹಾಗೆಯೇ ಮುಂದುವರಿಯುತ್ತದೆ ಅಥವಾ ಅಂಥವೇ ಸಂದರ್ಭಗಳಲ್ಲಿ ಹೊಸವು ರೂಪುಗೊಳ್ಳುತ್ತವೆ ಎಂದು ಭಾವಿಸಲು ಕಾರಣವಿಲ್ಲ. ವಾಸ್ತವವೆಂದರೆ, ಮನೋವಿಜ್ಞಾನವು ಸಂಬಂಧಿಸಿರುವೆಡೆಯಲ್ಲಿ, ಸಾಮಾನ್ಯವಾಗಿ ತಾನು ಖಂಡಿಸುವ ಕಾರಣಾತ್ಮಕತೆಯನ್ನು ಒಂದರ್ಥದಲ್ಲಿ ನಂಬುತ್ತಾನೆ. ಒಂದು ನಿದರ್ಶನವನ್ನು ತೆಗೆದುಕೊಳ್ಳೋಣ. ನಾನೊಂದು ಸೇಬನ್ನು ನೋಡುತ್ತೇನೆ ಮತ್ತು ಅದನ್ನು ತಿಂದರೆ ನನಗೆ ಒಂದು ಬಗೆಯ ರುಚಿಯ ಅನುಭವವಾಗುತ್ತದೆ ಎಂದು ನಿರೀಕ್ಷಿಸುತ್ತೇನೆ. ಹ್ಯೂಮ್‌ನ ಪ್ರಕಾರ, ನಾನು ಈ ಬಗೆಯ ರುಚಿಯ ಅನುಭವವನ್ನು ಪಡೆಯುವುದಕ್ಕೆ ಕಾರಣವಿಲ್ಲ: ರೂಢಿಯ ನಿಯಮವು ಅಂಥ ನಿರೀಕ್ಷೆ ಇರುವುದನ್ನು ವಿವರಿಸುತ್ತದೆ, ಆದರೆ ಅದನ್ನು ಸಮರ್ಥಿಸುವುದಿಲ್ಲ. ಆದರೆ ರೂಢಿಯ ನಿಯಮವೇ ಒಂದು ಕಾರಣಾತ್ಮಕ ನಿಯಮ. ಹೀಗಾಗಿ ನಾವೇನಾದರೂ ಹ್ಯೂಮ್‌ನನ್ನು ಗಂಭೀರವಾಗಿ ಪರಿಗಣಿಸಿದರೆ ಹೀಗೆನ್ನಬೇಕಾಗುತ್ತದೆ: ಹಿಂದೆ ಸೇಬನ್ನು ನೋಡುವುದು ಒಂದು ಬಗೆಯ ರುಚಿಯನ್ನು ನಿರೀಕ್ಷಿಸುವುದರೊಡನೆ ಸಂಬಂಧವನ್ನು ಹೊಂದಿದ್ದರೂ, ಅದು ಹೀಗೆ ಸಂಬಂಧವನ್ನು ಹೊಂದಿರುವುದನ್ನು ಮುಂದುವರಿಸಲು ಕಾರಣವಿಲ್ಲ; ಮುಂದಿನ ಬಾರಿ ನಾನು ಸೇಬನ್ನು ನೋಡಿದಾಗ ನಾನು ಅದು ಕರಿದ ಗೋಮಾಂಸದಂತಹ ರುಚಿಯನ್ನು ಹೊಂದಿರುತ್ತದೆಂದು ನಿರೀಕ್ಷಿಸುತ್ತೇನೆ. ಆ

ಕ್ಷಣದಲ್ಲಿ ನೀವು ಇದನ್ನು ಅಸಂಭವವೆಂದು ಭಾವಿಸಬಹುದು; ಆದರೆ ಅದನ್ನು ಮುಂದಿನ ಐದು ನಿಮಿಷಗಳಲ್ಲಿ ಅಸಂಭವವೆಂದು ನಿರೀಕ್ಷಿಸಲು ಯಾವ ಕಾರಣವೂ ಇಲ್ಲ. ಹ್ಯೂಮ್‌ನ ವಸ್ತುನಿಷ್ಠ ಸಿದ್ಧಾಂತವು ಸರಿಯಾದರೆ, ಮನೋವಿಜ್ಞಾನದಲ್ಲಿ ನಿರೀಕ್ಷೆಗಳಿಗೆ ಭೌತಿಕ ಜಗತ್ತಿನಲ್ಲಿಗಿಂತಲೂ ಯಾವುದೇ ಉತ್ತಮ ಕಾರಣವಿಲ್ಲ. ಹ್ಯೂಮ್‌ನ ಸಿದ್ಧಾಂತವನ್ನು ಹೀಗೆ ನಿರೂಪಿಸಬಹುದು: ' "ಎ ಯು ಬಿಯ ಕಾರಣ" ಎಂಬ ಪ್ರತಿಪಾದನೆಯ ಅರ್ಥ "ಎಯ ಪ್ರಭಾವಗಳು ಬಿಯ ಪರಿಕಲ್ಪನೆಗೆ ಕಾರಣ".' ಸೂತ್ರವಾಕ್ಯವಾಗಿ ಇದೇನೂ ಸಮಂಜಸವಾದ ಪ್ರಯತ್ನವಲ್ಲ.

ಹೀಗಾಗಿ ನಾವು ಹ್ಯೂಮ್‌ನ ವಸ್ತುನಿಷ್ಠ ಸಿದ್ಧಾಂತವನ್ನು ಮತ್ತಷ್ಟು ಸೂಕ್ಷ್ಮವಾಗಿ ಪರಿಶೀಲಿಸಬಹುದು. ಈ ಸಿದ್ಧಾಂತಕ್ಕೆ ಎರಡು ಮಗ್ಗುಲುಗಳಿವೆ: (೧) 'ಎ ಯು ಬಿಯ ಕಾರಣ' ಎಂದರೆ, ನಮಗೆ ಹೇಳಲು ಹಕ್ಕು ಇರುವುದು, ಹಿಂದಿನ ಅನುಭವದಲ್ಲಿ ಎ ಮತ್ತು ಬಿಗಳು ಒಂದನ್ನೊಂದು ಕ್ಷಿಪ್ರಗತಿಯಲ್ಲಿ ಒಟ್ಟಿಗಿದ್ದವು, ಮತ್ತು ಎ ನಂತರ ಅಥವಾ ಜೊತೆಗೆ ಬಿ ಇಲ್ಲದಿರುವ ಸಂದರ್ಭವನ್ನು ಕಾಣಲಿಲ್ಲ ಎನ್ನುವುದಕ್ಕೆ. (೨) ಇಷ್ಟಾದರೂ, ಎ ಮತ್ತು ಬಿ ಒಟ್ಟಿಗಿರುವುದನ್ನು ನಾವು ಕಂಡಿರುವ ಸನ್ನಿವೇಶಗಳಿರಬಹುದು, ಆದರೆ ಅದು ಈ ನಿರೀಕ್ಷೆಯ ಕಾರಣವಾದರೂ ಇದು ಮುಂದಿನ ಸನ್ನಿವೇಶದಲ್ಲಿಯೂ ಒಟ್ಟಿಗಿರುವುದನ್ನು ನಿರೀಕ್ಷಿಸುವುದಕ್ಕೆ ಕಾರಣವಾಗುವುದಿಲ್ಲ, ಅಂದರೆ ಅದು ಅಂಥ ನಿರೀಕ್ಷೆಯೊಡನೆ ಸೇರಿರುವುದನ್ನು ಪದೇ ಪದೇ ಕಾಣಲಾಗಿದೆ. ಸಿದ್ಧಾಂತದ ಈ ಎರಡೂ ಭಾಗಗಳನ್ನು ಈ ರೀತಿ ಮಂಡಿಸಬಹುದು: (೧) ಕಾರಣಾತ್ಮಕತೆಯಲ್ಲಿ ಒಟ್ಟಿಗಿರುವಿಕೆ ಮತ್ತು ಅನುಕ್ರಮಗಳ ಹೊರತಾಗಿ ನಿರ್ಣಯಿಸಲಾಗದ ಸಂಬಂಧವಿಲ್ಲ; (೨) ಸರಳ ವಿವರಗಳ ಮೂಲಕವಾದ ಅನುಗಮನವು ಸಿಂಧುವಾದ ವಾದದ ರೂಪವಲ್ಲ. ಅನುಭವೈಕವಾದಿಗಳು ಒಟ್ಟಿನಲ್ಲಿ ಇವುಗಳಲ್ಲಿನ ಮೊದಲನೆಯ ಪ್ರಮೇಯವನ್ನು ಒಪ್ಪಿ ಎರಡನೆಯದನ್ನು ತಿರಸ್ಕರಿಸಿದ್ದಾರೆ. ಅವರು ಎರಡನೆಯದನ್ನು ತಿರಸ್ಕರಿಸಿದ್ದಾರೆ ಎಂದರೆ, ನನ್ನ ಅರ್ಥ, ಒಟ್ಟಗಿರುವುದರ ಹಲವಾರು ನಿದರ್ಶನಗಳನ್ನು ಮುಂದಿಟ್ಟಾಗ, ಮುಂದಿನ ಸಂದರ್ಭದಲ್ಲಿ ಅಂಥ ಒಟ್ಟಿಗಿರುವಿಕೆಯನ್ನು ಕಾಣುವುದು ಅರ್ಧದಷ್ಟನ್ನು ಮೀರುತ್ತದೆ ಎಂದು ಅವರು ಒಪ್ಪಿದ್ದಾರೆ; ಅಥವಾ, ಅವರ ಅಭಿಪ್ರಾಯ ನಿರ್ದಿಷ್ಟವಾಗಿ ಇದೇ ಆಗಿರದಿದ್ದರೂ, ಇಂಥ ಪರಿಣಾಮಗಳನ್ನು ಹೊಂದಿರುವ ಯಾವುದೋ ಸಿದ್ಧಾಂತವನ್ನು ಅವರು ಒಪ್ಪಿಕೊಂಡಿದ್ದಾರೆ ಎಂಬುದು.

ನಾನೀಗ ಸದ್ಯಕ್ಕೆ ಅನುಗಮನದ ಬಗ್ಗೆ ಮಾತನಾಡಲು ಇಚ್ಛಿಸುವುದಿಲ್ಲ, ಯಾಕೆಂದರೆ ಅದು ವ್ಯಾಪಕವೂ ಕಷ್ಟಕರವೂ ಆದ ವಿಷಯ. ಹೀಗಾಗಿ, ಹ್ಯೂಮ್‌ನ ಸಿದ್ಧಾಂತದ ಮೊದಲ ಭಾಗವನ್ನು ಒಪ್ಪಿದರೆ, ಅನುಗಮನದ ತಿರಸ್ಕಾರವು, ನಾವು ನಿರೀಕ್ಷೆಗಳನ್ನು ಹೊಂದುವುದನ್ನು ಮುಂದುವರಿಸುತ್ತೇವೆ ಎಂಬ ನಿರೀಕ್ಷೆಯನ್ನೂ

ಒಳಗೊಂಡಂತೆ, ಭವಿಷ್ಯಕ್ಕೆ ಸಂಬಂಧಿಸಿದ ಎಲ್ಲ ನಿರೀಕ್ಷೆಗಳೂ ಅವಿಚಾರಿತವಾಗುತ್ತದೆ ಎಂದು ಹೇಳುವುದಕ್ಕಷ್ಟೇ ನನ್ನನ್ನು ಸೀಮಿತಗೊಳಿಸಿಕೊಳ್ಳುತ್ತೇನೆ. ನಮ್ಮ ನಿರೀಕ್ಷೆಗಳು ತಪ್ಪಾಗಿರಬಹುದು ಎಂಬುದಷ್ಟೇ ನನ್ನ ಮಾತಿನ ಅರ್ಥವಲ್ಲ, ಅದು ಎಲ್ಲ ಸಂದರ್ಭಕ್ಕೂ ಅನ್ವಯಿಸಬಹುದಾದುದು. ನನ್ನ ಅರ್ಥವೆಂದರೆ, ನಾಳೆ ಸೂರ್ಯನು ಹುಟ್ಟುತ್ತಾನೆ ಎಂಬಂತಹ ನಮ್ಮ ಅತ್ಯಂತ ದೃಢ ನಿರೀಕ್ಷೆಗಳೂ ಸೇರಿದಂತೆ ಅವುಗಳನ್ನು ರುಜುವಾತುಪಡಿಸಬಹುದೆಂಬುದಕ್ಕೆ ಯಾವುದೇ ಕಾರಣದ ಛಾಯೆಯೂ ಇಲ್ಲ ಎಂಬುದು. ಈ ನಿಬಂಧನೆಯೊಡನೆ ನಾನು 'ಕಾರಣ' ಎಂಬುದರ ಅರ್ಥದ ಕಡೆಗೆ ಮರಳುತ್ತೇನೆ.

ಹ್ಯೂಮ್‌ನನ್ನು ಒಪ್ಪದವರು 'ಕಾರಣ'ವು ನಿರ್ದಿಷ್ಟ ಸಂಬಂಧ, ಅದಕ್ಕೆ ಅನುಕ್ರಮವು ಅನಿವಾರ್ಯವಾಗುತ್ತದೆ, ಆದರೆ ಅನಿವಾರ್ಯವಾಗಿರದ್ದು ಮತ್ತೆ ಕಾರ್ಟೀಸಿಯನ್‌ರ ಗಡಿಯಾರಗಳಿಗೆ ಮರಳಿದರೆ: ಪರಿಪೂರ್ಣವಾಗಿ ಕರಾರುವಾಕ್ಕಾಗಿರುವ ಎರಡು ಕಾಲಮಾಪಕ (ಕ್ರೋನೋಮೀಟರ್)ಗಳು, ಒಂದು ಇನ್ನೊಂದರ ಹೊಡೆಯುವಿಕೆಗೆ ಕಾರಣವಾಗಿರದೆ, ಎಲ್ಲ ಕಾಲದಲ್ಲೂ ಗಂಟೆಗಳನ್ನು ಒಂದಾದ ಮೇಲೊಂದು ಹೊಡೆಯಬಹುದು. ಈ ದೃಷ್ಟಿಕೋನದವರು ಸಾಮಾನ್ಯವಾಗಿ, ನಾವು ಕೆಲವೊಮ್ಮೆ ಕಾರಣಾತ್ಮಕ ಸಂಬಂಧಗಳನ್ನು ಗ್ರಹಿಸಬಹುದು ಎಂಬ ನಿಲವನ್ನು ತಾಳುತ್ತಾರೆ, ಆದರೆ ಬಹುತೇಕ ಸಂದರ್ಭಗಳಲ್ಲಿ ನಾವು ಅದನ್ನು, ನಿರಂತರ ಒಟ್ಟಿಗಿರುವುದರಿಂದಾಗಿ, ಹೆಚ್ಚು ಕಡಿಮೆ ಅನಿಶ್ಚಿತತೆಯಿಂದಲೇ ಊಹನೆ ಮಾಡಿಕೊಳ್ಳುತ್ತೇವೆ. ಈ ಅಂಶವನ್ನು ಕುರಿತಂತೆ ಹ್ಯೂಮ್‌ನ ಪರ ಮತ್ತು ವಿರೋಧ ವಾದಗಳಿವೆ ಎಂಬುದನ್ನೀಗ ನೋಡೋಣ.

ಹ್ಯೂಮ್ ತನ್ನ ವಾದಗಳನ್ನು ಈ ರೀತಿ ಸಂಕ್ಷೇಪಿಸಿ ಮಂಡಿಸುತ್ತಾನೆ:

'ನಾನು ಎದುರಿಸಿರುವ ಅಥವಾ ಗ್ರಂಥದ ನಿರೂಪಣೆಯಲ್ಲಿ ಮುಂದೆ ಎದುರಿಸಲಿರುವ ಎಲ್ಲ ವಿರೋಧಾಭಾಸಗಳಲ್ಲಿಯೂ, ಈಗಿನದು ಅತ್ಯಂತ ಪ್ರಚಂಡವಾದುದು ಎಂಬ ಬಗ್ಗೆ ನನಗೆ ಅರಿವಿದೆ; ಅಲ್ಲದೆ ಗಟ್ಟಿಯಾದ ಸಾಕ್ಷ್ಯ ಹಾಗೂ ತರ್ಕಗಳಿಂದ ಮಾತ್ರವೇ ಅದನ್ನು ಒಪ್ಪಿಕೊಳ್ಳುವಂತೆ ಮಾಡಬಹುದು ಮತ್ತು ಮನುಸಂಕುಲದಲ್ಲಿ ಬೇರುಬಿಟ್ಟಿರುವ ಪೂರ್ವಾಗ್ರಹಗಳನ್ನು ಮೆಟ್ಟಿ ನಿಲ್ಲಬಹುದೆಂಬುದೂ ಗೊತ್ತಿದೆ. ಈ ಸಿದ್ಧಾಂತವನ್ನು ಒಪ್ಪಿಕೊಳ್ಳುವ ಮುಂಚೆ, ಎಷ್ಟೇ ನಿಕಟವಾಗಿ ಸಂಬಂಧಿಸಿರಲಿ, ಎರಡು ವಸ್ತುಗಳು ಅಥವಾ ಕ್ರಿಯೆಗಳ ಸರಳ ದೃಷ್ಟಿಕೋನವು ನಮಗೆ ಅವುಗಳ ಸಾಮರ್ಥ್ಯದ ಅಥವಾ ಅವುಗಳ ನಡುವಣ ಸಂಬಂಧದ ಪರಿಕಲ್ಪನೆಯನ್ನು ನೀಡಲಾರದು ಎಂಬುದನ್ನು ನಮಗೆ ನಾವೇ ಅನೇಕ ಬಾರಿ ಹೇಳಿಕೊಳ್ಳಬೇಕಲ್ಲವೇ: ಈ ಪರಿಕಲ್ಪನೆಯು ಉಂಟಾಗುವುದು ಅವುಗಳ ಸೇರುವಿಕೆಯ ಪುನರಾವರ್ತನೆಯಿಂದ: ಪುನರಾವರ್ತನೆಯು ಆ

ವಸ್ತುಗಳಲ್ಲಿನ ಯಾವುದನ್ನೂ ಕಂಡುಕೊಳ್ಳಲಾರದು ಅಥವಾ ಉಂಟುಮಾಡಲಾರದು, ಆದರೆ ಅದರ ರೂಢಿಗತ ಬದಲಾವಣೆಯ ಪರಿಣಾಮವು ನಮ್ಮ ಮನಸ್ಸಿನ ಮೇಲಾಗುತ್ತದೆಯಲ್ಲವೇ: ಹೀಗಾಗಿ ರೂಢಿಗತ ಬದಲಾವಣೆಯು ಸಾಮರ್ಥ್ಯ ಮತ್ತು ಅನಿವಾರ್ಯತೆಯಲ್ಲಿ ಅದೇ ಆಗಿರುತ್ತದೆ ಮತ್ತು ನಂತರ ಅದು ಆತ್ಮದ ಭಾವನೆಯಾಗುತ್ತದೆಯೇ ಹೊರತು ದೇಹದಲ್ಲಿ ಹೊರಗೆ ಕಾಣಿಸುವುದಿಲ್ಲವಲ್ಲವೇ?'

ಹ್ಯೂಮ್‌ನಲ್ಲಿ ಪರಿಕಲ್ಪನೆಯ ಬಗೆಯು ಅತಿರೇಕದ ಪರಮಾಣುವಾದದಿಂದ ಕೂಡಿದೆ ಎಂಬ ಆರೋಪವಿದೆ, ಆದರೆ ಕೆಲವು ಸಂಬಂಧಗಳನ್ನು ಪರಿಕಲ್ಪಿಸಿಕೊಳ್ಳಬಹುದೆಂಬುದನ್ನವನು ಒಪ್ಪುತ್ತಾನೆ. 'ಅನನ್ಯತೆ' ಗೆ ಸಂಬಂಧಿಸಿದ ನಮ್ಮ ಯಾವುದೇ ಪರಿವೀಕ್ಷಣೆಯನ್ನು ಮತ್ತು ಕಾಲ-ಅವಕಾಶಗಳ ಸಂಬಂಧವನ್ನು ಕಾರಣವೆಂದು ನಾವು ಒಪ್ಪಿಕೊಳ್ಳಬಾರದು; ಯಾಕೆಂದರೆ ಅವುಗಳಲ್ಲಿ ಯಾವುದರಲ್ಲೂ ಮನಸ್ಸು ಇಂದ್ರಿಯಗಳಿಗೆ ಗ್ರಹಿಕೆಯಾಗುವ ಸಂಗತಿಗಳನ್ನು ಮೀರಿ ಹೋಗಲು ಸಾಧ್ಯವಿಲ್ಲ' ಎಂದವನು ಹೇಳುತ್ತಾನೆ. ಕಾರಣಾತ್ಮಕತೆಯೇ ಬೇರೆ, ಅದು ನಮ್ಮನ್ನು ಇಂದ್ರಿಯ ಪ್ರಭಾವದ ಸಂಗತಿಗಳಾಚೆ ಕರೆದೊಯ್ದು, ಪರಿಕಲ್ಪಿತವಲ್ಲದ ಅಸ್ತಿತ್ವಗಳ ಬಗ್ಗೆ ಹೇಳುತ್ತದೆ. ಒಂದು ವಾದವಾಗಿ, ಇದು ಅಸಿಂಧುವಾಗಿ ಕಾಣುತ್ತದೆ. ನಾವು ಪರಿಕಲ್ಪಿಸಿಕೊಳ್ಳಲಾಗದ ಕಾಲ-ಅವಕಾಶಗಳ ಅನೇಕ ಸಂಬಂಧಗಳನ್ನು ನಾವು ನಂಬುತ್ತೇವೆ: ಕಾಲವು ಹಿಂದಕ್ಕೂ ಮುಂದಕ್ಕೂ ವಿಸ್ತರಣೆಗೊಳ್ಳುತ್ತದೆ, ಅವಕಾಶವು ನಮ್ಮ ಕೋಣೆಯ ಗೋಡೆಗಳಾಚೆಗೂ ವಿಸ್ತರಿಸುತ್ತದೆ ಎಂದು ನಂಬುತ್ತೇವೆ. ಹ್ಯೂಮ್‌ನ ನಿಜವಾದ ವಾದವೆಂದರೆ, ನಾವು ಕೆಲವು ವೇಳೆಗಳಲ್ಲಿ ಕಾಲ-ಅವಕಾಶಗಳ ಸಂಬಂಧವನ್ನು ಪರಿಕಲ್ಪಿಸಿಕೊಂಡರೂ ಕಾರಣಾತ್ಮಕ ಸಂಬಂಧಗಳನ್ನು ಪರಿಕಲ್ಪಿಸಿಕೊಳ್ಳಲಾರೆವು, ಹೀಗಾಗಿ ಅವುಗಳನ್ನು ಒಪ್ಪಿಕೊಂಡರೆ ಪರಿಕಲ್ಪಿಸಿಕೊಳ್ಳಬಹುದಾದ ಸಂಬಂಧಗಳಿಂದ ಊಹನೆ ಮಾಡಿಕೊಳ್ಳಬಹುದು ಎಂಬುದು. ಹೀಗೆ ವಿವಾದವು ಅನುಭವೈಕ ವಸ್ತುಸ್ಥಿತಿಯ ಮಟ್ಟಕ್ಕೆ ಕುಗ್ಗುತ್ತದೆ: ಕಾರಣಾತ್ಮಕ ಎನ್ನಬಹುದಾದ ಕೆಲವು ಸಂಬಂಧಗಳನ್ನು ನಾವು ಪರಿಕಲ್ಪಿಸಿಕೊಳ್ಳುತ್ತೇವೆಯೋ ಇಲ್ಲವೋ? ಹ್ಯೂಮ್ ಇದಕ್ಕೆ ಇಲ್ಲ ಎನ್ನುತ್ತಾನೆ, ಅವನ ವಿರೋಧಿಗಳು ಹೌದು ಎನ್ನುತ್ತಾರೆ, ಆದರೆ ಎರಡೂ ಕಡೆಗಳಲ್ಲಿ ಇದಕ್ಕೆ ಆಧಾರವನ್ನು ಒದಗಿಸುವುದು ಸುಲಭವಲ್ಲ.

ಹ್ಯೂಮ್ ಪರವಾದ ಅತ್ಯಂತ ಪ್ರಬಲವಾದ ವಾದವೆಂದರೆ. ಭೌತವಿಜ್ಞಾನದ ಕಾರಣಾತ್ಮಕ ನಿಯಮಗಳಲ್ಲಿ ಕಾಣುವ ಲಕ್ಷಣಗಳಿಂದ ಸಾಧಿಸಬಹುದು ಎಂದು ನನಗನ್ನಿಸುತ್ತದೆ. ಮೊದಮೊದಲ ಹಂತಗಳಲ್ಲಿನ ಸ್ಥೂಲ ಸೂಚನೆಗಳಾಗಿ ಹೊರತು, 'ಎ' ಮತ್ತು 'ಬಿ'ಗಳಂತಹ ಸರಳ ರೂಪಗಳನ್ನು ವಿಜ್ಞಾನದಲ್ಲಿ ಎಂದಿಗೂ ಒಪ್ಪಿಕೊಳ್ಳುವುದಿಲ್ಲ, ಅಂತಹ ಸರಳ ನಿಯಮಗಳ ಬದಲಿಗೆ ಸುವ್ಯಸ್ಥಿತ ವಿಜ್ಞಾನಗಳಲ್ಲಿ

ಬರುವ ಕಾರಣಾತ್ಮಕ ನಿಯಮಗಳು ಎಷ್ಟು ಸಂಕೀರ್ಣವಾದುವೆಂದರೆ ಪರಿಕಲ್ಪನೆಯಲ್ಲಿ ನೀಡಲು ಸಾಧ್ಯವೆಂದು ಭಾವಿಸುವಂತಹವಲ್ಲ; ಅವೆಲ್ಲವೂ ಪ್ರಕೃತಿಯ ವಿದ್ಯಮಾನಗಳ ಪರಿವೀಕ್ಷಿಸಿದ ಸುದೀರ್ಘ ಊಹನೆಗಳೆಂಬುದು ಸ್ಪಷ್ಟ. ಆಧುನಿಕ ಕ್ವಾಂಟಂ ಸಿದ್ಧಾಂತವನ್ನು ಈ ವ್ಯಾಪ್ತಿಯಿಂದ ಹೊರಗಿರಿಸುತ್ತಿದ್ದೇನೆ, ಅದು ಮೇಲಿನ ನಿರ್ಣಯವನ್ನು ದೃಢಪಡಿಸುತ್ತದೆ. ಭೌತಿಕ ವಿಜ್ಞಾನಗಳಿಗೆ ಸಂಬಂಧಿಸಿದಂತೆ, ಹ್ಯೂಮ್ ಸಂಪೂರ್ಣವಾಗಿ ಸರಿ; 'ಎ' ಯು 'ಬಿ' ಯ ಕಾರಣ ಎಂಬಂತಹ ಪ್ರತಿಪಾದನೆಗಳನ್ನೆಂದಿಗೂ ಒಪ್ಪಲಾಗುವುದಿಲ್ಲ, ಮತ್ತು ಅವುಗಳನ್ನು ಒಪ್ಪುವ ಕಡೆಗಿನ ನಮ್ಮ ಒಲವನ್ನು ರೂಢಿ ಮತ್ತು ಒಡನಾಟಗಳ ನಿಯಮದಿಂದ ವಿವರಿಸಬೇಕಾಗುತ್ತದೆ. ಕರಾರುವಾಕ್ಕಾದ ರೂಪದಲ್ಲಿ ಈ ನಿಯಮಗಳು ತಮ್ಮಷ್ಟಕ್ಕೇ ನರಮಂಡಲಕ್ಕೆ ಸಂಬಂಧಿಸಿದಂತಹ ಹೇಳಿಕೆಗಳಂತೆ ಸುದೀರ್ಘವಾಗಿರುತ್ತವೆ. ಮೊದಲಿಗೆ ಅದರ ರಚನೆ, ಆನಂತರ ಅದರ ರಾಸಾಯನಿಕತೆ, ಮತ್ತು ಕೊನೆಯಲ್ಲಿ ಅದರ ಭೌತಿಕತೆ.

ಭೌತಿಕ ವಿಜ್ಞಾನಗಳ ಬಗ್ಗೆ ಈಗಷ್ಟೇ ಹೇಳಿದ ಸಂಗತಿಗಳನ್ನೆಲ್ಲ ಒಪ್ಪಿಕೊಂಡರೂ ಹ್ಯೂಮ್‌ನ ವಿರೋಧಿಯು, ತಾನು ಪೂರ್ತಿ ಸೋತಿರುವೆನೆಂದು ಒಪ್ಪಿಕೊಳ್ಳದಿರಬಹುದು. ದೇಹರಚನೆಯಲ್ಲಿ ಕಾರಣಾತ್ಮಕ ಸಂಬಂಧಗಳನ್ನು ಗ್ರಹಿಸಿಕೊಳ್ಳಬಹುದು ಎಂದವನು ಹೇಳಬಹುದು. ಕಾರಣದ ಬಗೆಗಿನ ಇಡೀ ಪರಿಕಲ್ಪನೆಯು ಪ್ರಾಯಶಃ ಸಾಧಿತವಾಗಿರುವುದು ಇಚ್ಛಾಶಕ್ತಿಯಿಂದ, ಮತ್ತು ಇಚ್ಛಾಶಕ್ತಿ ಮತ್ತದರ ಪರಿಣಾಮವಾದ, ಅಪರಿವರ್ತನೀಯ ಪರಿಣಾಮಕ್ಕಿಂತ ಹೆಚ್ಚಿನದಾದ ಕ್ರಿಯೆಯ ನಡುವಣ ಸಂಬಂಧವನ್ನು ನಾವು ಗ್ರಹಿಸಿಕೊಳ್ಳಬಹುದು. ಇದ್ದಕ್ಕಿದ್ದಂತೆ ಆಗುವ ನೋವು ಮತ್ತು ಕಿರಿಚಾಟಗಳ ನಡುವಣ ಸಂಬಂಧದ ಬಗ್ಗೆಯೂ ಇದನ್ನೇ ಹೇಳಬಹುದು. ಆದರೆ ಇಂಥ ಅಭಿಪ್ರಾಯಗಳು ದೇಹರಚನೆಯಲ್ಲಿ ಕಷ್ಟಕರವಾಗುತ್ತವೆ. ತೋಳನ್ನು ಆಡಿಸುವ ನನ್ನ ಸಂಕಲ್ಪ ಹಾಗೂ ಅದರ ಪರಿಣಾಮವಾದ ಆಡಿಸುವಿಕೆಗಳ ನಡುವೆ, ನರಗಳಲ್ಲಿಯೂ ಮಾಂಸಖಂಡಗಳಲ್ಲಿಯೂ ಆಗುವ ಪ್ರಕಿಯೆಗಳ, ಸುದೀರ್ಘವಾದ ಮಧ್ಯಸ್ಥ ಕಾರಣಗಳಿರುತ್ತವೆ. ನಾವು ನೋಡುವುದು ಸಂಕಲ್ಪ ಮತ್ತು ಚಲನೆಯ ಪ್ರಕ್ರಿಯೆಯ ಕೊನೆಯ ರೂಪವನ್ನು ಮಾತ್ರ, ಆದರೆ ನಾವು ಇವುಗಳ ನಡುವಣ ನೇರವಾದ ಕಾರಣಾತ್ಮಕ ಸಂಬಂಧವನ್ನು ನೋಡುತ್ತಿದ್ದೇವೆಂದು ಭಾವಿಸುವುದು ತಪ್ಪಾಗುತ್ತದೆ. ಈ ವಾದವು ಸಾಮಾನ್ಯ ವಿಷಯದ ಬಗ್ಗೆ ಅಂತಿಮವಾದುದಲ್ಲವಾದರೂ, ನಾವು ಕಾರಣಾತ್ಮಕ ಸಂಬಂಧವನ್ನು ನೋಡುತ್ತಿದ್ದೇವೆಂದು ಭಾವಿಸಿಕೊಳ್ಳುವುದು ದುಡುಕಿನ ತೀರ್ಮಾನವಾಗುತ್ತದೆ. ಹೀಗಾಗಿ, ಅಪರಿವರ್ತನೀಯ ಪರಿಣಾಮಗಳ ಹೊರತಾಗಿ ಕಾರಣದಲ್ಲಿ ಏನೂ ಇಲ್ಲ ಎಂಬ ಹ್ಯೂಮ್‌ನ ಅಭಿಪ್ರಾಯದ ಪರವಾಗಿದೆ. ಇಷ್ಟಾದರೂ, ಸಾಕ್ಷ್ಯವು ಹ್ಯೂಮ್ ಭಾವಿಸಿದಷ್ಟು ನಿರ್ದುಷ್ಟವಾದುದಲ್ಲ.

ಕಾರಣಾತ್ಮಕ ಸಂಬಂಧದ ಸಾಕ್ಷ್ಯವನ್ನು ಪುನರಾವರ್ತಿತ ಒಗ್ಗೂಡುವಿಕೆಯ ಅನುಭವಕ್ಕಿಳಿಸುವುಷ್ಟರಿಂದಲೇ ಹ್ಯೂಮ್ ತೃಪ್ತನಾಗುವುದಿಲ್ಲ: ಅಂಥ ಅನುಭವವು ಮುಂದೆಯೂ ಅಂತಹ ಒಗ್ಗೂಡುವಿಕೆಯ ನಿರೀಕ್ಷೆಯನ್ನು ಸಮರ್ಥಿಸುವುದಿಲ್ಲ ಎಂದು ಮುಂದೆ ವಾದಿಸುತ್ತಾನೆ. ನಿದರ್ಶನಕ್ಕೆ: (ಹಿಂದಿನ ಉದಾಹರಣೆಯನ್ನೇ ಮತ್ತೆ ತೆಗೆದುಕೊಳ್ಳುವುದಾದರೆ) ನಾನು ಒಂದು ಸೇಬನ್ನು ನೋಡಿದಾಗ, ಅದು ಸೇಬಿನ ರುಚಿಯನ್ನು ನೀಡುತ್ತದೆಯೇ ಹೊರತು ಕರಿದ ಗೋಮಾಂಸದಂತಹುದಲ್ಲ ಎಂದು ಹಿಂದಿನ ಅನುಭವವು ನಿರೀಕ್ಷಿಸುವಂತೆ ಮಾಡುತ್ತದೆ; ಆದರೆ ಈ ನಿರೀಕ್ಷಣೆಗೆ ಯಾವುದೇ ವೈಚಾರಿಕ ಸಮರ್ಥನೆಯಿಲ್ಲ. ಅಂತಹುದೊಂದು ಸಮರ್ಥನೆಯಿರುವುದಾದರೆ, ಅದು 'ನಮಗೆ ಅನುಭವವಿಲ್ಲದ ಆ ನಿದರ್ಶನಗಳು ನಮಗೆ ಅನುಭವವಾದವುಗಳನ್ನು ಹೋಲುತ್ತವೆ' ಎಂಬ ತತ್ವದಿಂದ ಮೂಡಬೇಕು. ಈ ತತ್ವವು ತಾರ್ಕಿಕವಾಗಿ ಆವಶ್ಯಕವಲ್ಲ, ಯಾಕೆಂದರೆ ಪ್ರಕೃತಿಯ ಆಗುಹೋಗುಗಳಲ್ಲಿನ ಬದಲಾವಣೆಗಳನ್ನು ನಾವು ಕಲ್ಪಿಸಿಕೊಳ್ಳಬಹುದು. ಹೀಗಾಗಿ ಅದೊಂದು ಸಂಭಾವ್ಯ ತತ್ವವಾಗಿರಬೇಕು. ಆದರೆ ಎಲ್ಲ ಸಂಭಾವ್ಯ ವಾದಗಳೂ ಈ ತತ್ವವನ್ನು ಊಹಿಸಿಕೊಳ್ಳುವುದಿಲ್ಲ, ಹೀಗಾಗಿ ಅದನ್ನು ಯಾವುದೇ ಸಂಭಾವ್ಯ ವಾದವು ತಾನಾಗಿಯೇ ಸಾಧಿಸಲಾಗಲೀ ಅಂಥ ಯಾವುದೇ ವಾದದಿಂದ ಸಂಭಾವ್ಯವಾಗಲು ಕೂಡ ಸಾಧ್ಯವಾಗುವುದಿಲ್ಲ. 'ಭವಿಷ್ಯವು ಭೂತವನ್ನು ಹೋಲುತ್ತದೆ ಎಂಬ ಊಹೆಯು ಯಾವುದೇ ವಿಧದ ವಾದದ ಮೇಲೆ ಸ್ಥಾಪಿತವಾದುದದಲ್ಲ, ಅದು ಸಂಪೂರ್ಣವಾಗಿ ರೂಢಿಯಿಂದ ಸಾಧಿತವಾದುದು.'[೨೬೮] ಈ ತೀರ್ಮಾನವು ಸಂಪೂರ್ಣವಾಗಿ ಸಂದೇಹವಾದದ್ದು.

ಎಲ್ಲ ತಾರ್ಕಿಕ ಸಂಭಾವ್ಯಗಳೂ ಸಂವೇದನೆಗಳ ಒಂದು ವರ್ಗ. ಅದು ಕೇವಲ ಕಾವ್ಯ ಮತ್ತು ಸಂಗೀತದಲ್ಲಿಲ್ಲ, ನಾವು ನಮ್ಮ ಅಭಿರುಚಿ ಮತ್ತು ಭಾವನೆಗಳನ್ನು ಅನುಸರಿಸಬೇಕು, ಹಾಗೆಯೇ ತತ್ವಶಾಸ್ತ್ರದಲ್ಲಿಯೂ. ತತ್ವವೊಂದರ ಬಗ್ಗೆ ನನಗೆ ಮನವರಿಕೆಯಾಗಿದ್ದರೆ, ಅದು ನನ್ನ ಮೇಲೆ ಪ್ರಬಲ ಪರಿಣಾಮವನ್ನುಂಟುಮಾಡುವ ಒಂದು ಪರಿಕಲ್ಪನೆಯಷ್ಟೆ ನಾನೇನಾದರೂ ಯಾವುದೋ ಒಂದನ್ನು ಬಿಟ್ಟು ಮತ್ತೊಂದು ವಾದಸರಣಿಗೆ ಒಲವು ತೋರಿದರೆ, ಅದರ ಪ್ರಭಾವದ ಗಾಢತೆಯನ್ನುಸರಿಸಿದ ಭಾವನೆಯಿಂದ ನಿರ್ಧರಿಸುತ್ತೇನೆ. ವಸ್ತುಗಳ ನಡುವೆ ಎದ್ದು ಕಾಣುವ ಯಾವುದೇ ಸಂಬಂಧವಿರುವುದಿಲ್ಲ; ನಮಗೆ ಕಾಣಿಸುವ ಒಂದು ವಸ್ತುವಿನ ಆಧಾರದ ಮೇಲಿನಿಂದ ಮತ್ತೊಂದರ ಅಸ್ತಿತ್ವವನ್ನು ಊಹಿಸುವುದು ನಮ್ಮ ಕಲ್ಪನೆಯಲ್ಲಿ ಕ್ರಿಯಾಶೀಲವಾಗಿರುವ ರೂಢಿಯಲ್ಲದೆ ಬೇರಾವ ತತ್ವ ಆಧಾರದಿಂದಲೂ ಅಲ್ಲ.'[೨೬೯]

೨೬೮. ಭಾಗ ೧, ವಿಭಾಗ ೩, ಉಪವಿಭಾಗ ೪.
೨೬೯. ಭಾಗ ೧, ವಿಭಾಗ ೩, ಉಪವಿಭಾಗ ೮.

ಜ್ಞಾನದ ಬಗ್ಗೆ ಹ್ಯೂಮ್‌ನ ಅನ್ವೇಷಣೆಯಿಂದ ನೆಲೆ ನಿಲ್ಲುವ ಅಂತಿಮ ಫಲಿತವೆಂಬುದು ಅವನ ಬಯಸಿದ್ದೇ ಎಂದು ನಾವು ತಿಳಿಯಬಾರದು. ಅವನ ಗ್ರಂಥದ ಉಪಶೀರ್ಷಿಕೆಯು 'ನೈತಿಕ ವಿಷಯಗಳಲ್ಲಿ ವೈಚಾರಿಕತೆಯ ಪ್ರಾಯೋಗಿಕ ವಿಧಾನವನ್ನು ಗಮನಿಸುವುದು' ಎಂಬುದು. ವೈಜ್ಞಾನಿಕ ವಿಧಾನವು ಸತ್ಯದತ್ತ, ಪೂರ್ಣ ಸತ್ಯದತ್ತ, ಸತ್ಯವಲ್ಲದೆ ಬೇರೆಯಲ್ಲದರತ್ತ, ಕರೆದೊಯ್ಯುತ್ತದೆ ಎಂಬ ನಂಬಿಕೆಯೊಡನೆ ಅವನು ಆರಂಭಿಸಿದನೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಆದರೆ ಅವನು ಮುಕ್ತಾಯಗೊಳಿಸಿದ್ದು ನಂಬಿಕೆಯು ಎಂದಿಗೂ ವೈಚಾರಿಕವಾಗಿರಲಾರದು, ಯಾಕೆಂದರೆ ನಮಗೆ ಏನೂ ತಿಳಿಯದು, ಎಂಬ ಮನವರಿಕೆಯೊಡನೆ. ಸಂದೇಹವಾದದ ಪರವಾದ ವಾದಗಳನ್ನು (ಭಾಗ ೧, ವಿಭಾಗ. ೪. ಉಪವಿಭಾಗ. ೧) ಮಂಡಿಸಿದ ಬಳಿಕ, ಅವನು ಮುಂದುವರಿಯುವುದು ಆ ವಾದಗಳನ್ನು ಅಲ್ಲಗಳೆಯುವುದಕ್ಕಲ್ಲ, ಪ್ರಕೃತಿದತ್ತ ನಂಬಿಕೆಯತ್ತ ಹೊರಳುವುದಕ್ಕೆ.

'ಪ್ರಕೃತಿಯು ಆತ್ಯಂತಿಕವೂ ಅನಿಯಂತ್ರಿತವೂ ಆದ ಅನಿವಾರ್ಯತೆಯಿಂದಾಗಿ ಉಸಿರಾಟ ಹಾಗೂ ಭಾವನೆಗಳಂತೆಯೇ ತೀರ್ಮಾನಕ್ಕೆ ಬರಲು ನಿರ್ಧರಿಸುತ್ತದೆ; ಹೆಚ್ಚು ಪ್ರಬಲವೂ ಪರಿಪೂರ್ಣವೂ ಆದ ಬೆಳಕಿನಲ್ಲಿ ಕೆಲವು ವಸ್ತುಗಳತ್ತ ನೋಡುವುದನ್ನು ನಾವು ಸಹಿಸಿಕೊಳ್ಳಲಾರೆವು, ಇದಕ್ಕೆ ಕಾರಣ, ಎಚ್ಚರವಾಗಿರುವವರೆಗೆ ಆಲೋಚಿಸುವುದನ್ನು ತಡೆಯುವುದಕ್ಕಾಗಲೀ, ನಡುಹಗಲ ಬೆಳಕಿನಲ್ಲಿ ನಮ್ಮ ಕಣ್ಣುಗಳನ್ನು ಹಾಯಿಸಿದಾಗ ಸುತ್ತಲಿನ ಕಾಯಗಳನ್ನು ನೋಡುವುದರಿಂದಾಗಲೀ, ತಪ್ಪಿಸಿಕೊಳ್ಳಲಾರದ್ದಕ್ಕೆ ಸದ್ಯದ ಪ್ರಭಾವದಿಂದಾದ ರೂಢಿಗ್ರಸ್ತ ಸಂಬಂಧವೇ ಕಾರಣ. ಈ ಪೂರ್ಣ ಸಂದೇಹವಾದವನ್ನು ಅಲ್ಲಗಳೆಯುವ ಕಷ್ಟ ತೆಗೆದುಕೊಂಡವರು ನಿಜವಾಗಿಯೂ ಆಕ್ಷೇಪಿಸುವುದು ಎದುರಾಳಿಯೇ ಇಲ್ಲದಿರುವ ಸನ್ನಿವೇಶವನ್ನು, ಮತ್ತು ಪ್ರಕೃತಿಯು ನಮ್ಮ ಮನಸ್ಸಿನಲ್ಲಿ ಪೂರ್ವಭಾವಿಯಾಗಿ ಅಳವಡಿಸಿ ಅನಿವಾರ್ಯವಾಗಿಸಿರುವ ಸಾಮರ್ಥ್ಯವೊಂದನ್ನು ವಾದಗಳಿಂದ ಸ್ಥಾಪಿಸಲು ಪ್ರಯತ್ನಿಸುವುದರ ಮೂಲಕ. ಆ ವಿಚಿತ್ರ ವರ್ಗದ ವಾದಗಳನ್ನು ನಾನು ಎಚ್ಚರಿಕೆಯಿಂದ ಬಿಡಿಸಿ ತೋರಿಸಲು ಕಾರಣವೆಂದರೆ, ಕಾರಣಗಳ ಮತ್ತು ಕಾರ್ಯಗಳ ಬಗೆಗಿನ ನಮ್ಮ ವೈಚಾರಿಕತೆಯೆಲ್ಲವೂ ರೂಢಿಯಿಂದ ಸಾಧಿತವಾಗಿರುವುದೇ ಹೊರತು ಬೇರೆಯಲ್ಲ; ಮತ್ತು '*ನಂಬಿಕೆಯು ನಮ್ಮ ಸ್ವಭಾವದ ಚಿಂತನಶೀಲ ಭಾಗಕ್ಕಿಂತಲೂ ಹೆಚ್ಚಾಗಿ ಸಂವೇದನಾಶೀಲ ಭಾಗದ ಕೆಲಸ*' ಎಂಬ ನನ್ನ ಆಧಾರಕಲ್ಪನೆಯ ಸತ್ಯತೆಯ ಬಗ್ಗೆ ಓದುಗನು ವಿವೇಚನಾಶೀಲನಾಗುವಂತೆ ಮಾಡುವುದು.

ಮುಂದುವರಿದು ಅವನು ಹೀಗೆನ್ನುತ್ತಾನೆ: 'ಸಂದೇಹವಾದಿಯು, ತನ್ನ ತರ್ಕವನ್ನು ತರ್ಕದಿಂದ ಸಮರ್ಥಿಸಲು ಸಾಧ್ಯವಿಲ್ಲವೆಂದು ಒಪ್ಪಿಕೊಂಡರೂ ಇನ್ನೂ ವಿಚಾರವನ್ನೂ ಮಾಡುತ್ತಾನೆ, ನಂಬಿಕೆಯನ್ನೂ ಹೊಂದಿರುತ್ತಾನೆ; ಅದೇ

ನಿಯಮಕ್ಕನುಗುಣವಾಗಿ, ಅದರ ಪ್ರಾಮಾಣಿಕತೆಯನ್ನು ತತ್ವಜ್ಞಾನದ ಯಾವುದೇ ವಾದದಿಂದಲಾದರೂ ಸಮರ್ಥಿಸಬಹುದೆಂದು ಹೇಳಲಾರನಾದರೂ, ದೇಹದ ಅಸ್ತಿತ್ವಕ್ಕೆ ಸಂಬಂಧಿಸಿದ ತತ್ವವನ್ನು ಅವನು ಒಪ್ಪಿಕೊಳ್ಳಬೇಕಾಗುತ್ತದೆ .. .. ದೇಹದ ಅಸ್ತಿತ್ವದಲ್ಲಿ ನಮಗೆ ನಂಬಿಕೆಯುಂಟಾಗಲು ಏನು ಕಾರಣ? ಎಂದು ನಾವು ಕೇಳಬಹುದು. ಆದರೆ ದೇಹ ಇದೆಯೋ ಇಲ್ಲವೋ? ಎಂದು ಕೇಳುವುದು ಮಾತ್ರ ವ್ಯರ್ಥ. ನಮ್ಮೆಲ್ಲ ತಾರ್ಕಿಕತೆಯಲ್ಲಿಯೂ ನಾವು ಹಿನ್ನೆಲೆಯಲ್ಲಿರಿಸಿಕೊಳ್ಳಬೇಕಾದ ಅಂಶ ಇದು.' (ಭಾಗ. ೧, ವಿಭಾಗ, ೪, ಉಪವಿಭಾಗ. ೨).

ಈ ಮೇಲಿನದು 'ಇಂದ್ರಿಯಗಳಿಗೆ ಸಂಬಂಧಿಸಿದ ಸಂದೇಹವಾದವನ್ನು ಕುರಿತು' ಎಂಬ ಭಾಗದ ಆರಂಭವಾಕ್ಯಗಳು. ಸುದೀರ್ಘ ಚರ್ಚೆಯ ಬಳಿಕ, ಈ ಭಾಗವು ಕೆಳಗಿನ ವಾಕ್ಯಗಳಿಂದ ಮುಕ್ತಾಯಗೊಳ್ಳುತ್ತದೆ:

'ವೈಚಾರಿಕತೆ ಮತ್ತು ಇಂದ್ರಿಯಗಳಿಗೆ ಸಂಬಂಧಿಸಿದ ಈ ಸಂದೇಹವಾದಿಯ ಸಂಶಯವು ಒಂದು ರೋಗ, ಅದನ್ನು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಿಲ್ಲ; ಎಷ್ಟೇ ಓಡಿಸಿದರೂ, ಕೆಲವೊಮ್ಮೆ ಅದಿಂದ ಸಂಪೂರ್ಣ ಮುಕ್ತರಾಗಿದ್ದೇವೆಂದು ಭಾವಿಸಿದರೂ, ಅದು ಪ್ರತಿ ಕ್ಷಣವೂ ನಮ್ಮೆದುರು ಬಂದು ನಿಲ್ಲುತ್ತದೆ .. .. ಅಜಾಗರೂಕತೆ ಮತ್ತು ಅನವಧಾನಗಳು ಮಾತ್ರ ನಮಗೆ ಯಾವುದಾದರೂ ಪರಿಹಾರವನ್ನೊದಗಿಸಬಲ್ಲದು. ಈ ಕಾರಣಕ್ಕಾಗಿಯೇ ನಾನು ಅವುಗಳ ಮೇಲೆ ಪೂರ್ತಿಯಾಗಿ ಅವಲಂಬಿಸುತ್ತೇನೆ; ಓದುಗನ ಸದ್ಯದ ಅಭಿಪ್ರಾಯವು ಏನೇ ಆಗಿರಲಿ, ಒಂದು ಗಂಟೆಯ ಬಳಿಕ, ಬಾಹ್ಯ ಮತ್ತು ಆಂತರಿಕ ಎರಡೂ ಆದ ಜಗತ್ತು ಇರುವುದರ ಬಗ್ಗೆ ಅವನಿಗೆ ಶ್ರುತವಾಗಿರುತ್ತದೆ, ಎಂಬುದನ್ನು ಹೇಳಲೇ ಬೇಕಾಗಿಲ್ಲ.'

ಕೆಲವು ಮನೋಭಾವದ ಜನರಿಗೆ ಇದು ಕಾಲಹರಣದ ಒಳ್ಳೆಯ ಮಾರ್ಗವೆಂಬುದನ್ನು ಬಿಟ್ಟರೆ ತತ್ವಜ್ಞಾನವನ್ನು ಅಧ್ಯಯನ ಮಾಡಲು ಕಾರಣವೇ ಇಲ್ಲ ಎಂದು ಹ್ಯೂಮ್ ಹೇಳುತ್ತಾನೆ. 'ನಮ್ಮ ಬದುಕಿನ ಎಲ್ಲ ಘಟನೆಗಳಲ್ಲಿ ನಮ್ಮ ಸಂದೇಹವನ್ನು ಕಾಯ್ದುಕೊಳ್ಳಬೇಕಾದ ಆವಶ್ಯಕತೆಯಿದೆ. ಮಿಂಚು ಹುಳುಗಳು ಅಥವಾ ನೀರು ಉಲ್ಲಾಸಕರವೆಂದು ನಾವು ನಂಬಿದರೆ, ಅದಕ್ಕೆ ಕಾರಣ ಅದಲ್ಲದೆ ಬೇರೆ ಬಗೆಯಲ್ಲಿ ಅವುಗಳ ಬಗ್ಗೆ ಯೋಚನೆ ಮಾಡುವುದು ಯಾತನಾಮಯವಾದುದು ಎಂಬುದು. ಉಹ್ಞೂ, ನಾವು ತತ್ವಜ್ಞಾನಿಗಳಾಗಿದ್ದರೆ, ಅದು ಕೇವಲ ಸಂದೇಹಾತ್ಮಕ ತತ್ವಗಳ ಮೇಲೆ ಅವಲಂಬಿಸಿರುವಂತಹುದು ಮತ್ತು ಆ ವಿಷಯದ ಕುರಿತು ನಮ್ಮನ್ನು ತೊಡಗಿಸಿಕೊಳ್ಳುವ ಒಲವಿನಿಂದ.' ಅವನು ಊಹೆಯನ್ನು ಕೈಬಿಟ್ಟರೆ, 'ಸಂತೋಷದ ವಿಷಯದಲ್ಲಿ ಅವನು ನಷ್ಟ ಅನುಭವಿಸುವನೆಂದು ಭಾವಿಸುತ್ತೇನೆ, ಹಾಗೂ ಇದೇ ತತ್ವಜ್ಞಾನದ ಮೂಲ.'

ಸರಿಯೋ ತಪ್ಪೋ ಹ್ಯೂಮ್‌ನ ತತ್ವಜ್ಞಾನವು ಹದಿನೆಂಟನೆಯ ಶತಮಾನದಲ್ಲಿನ ವೈಚಾರಿಕತೆಯ ದಿವಾಳಿಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಲಾಕ್‌ನಂತೆಯೇ ಅವನೂ ಯಾವುದಕ್ಕೂ ನಂಬಿಕೆಯನ್ನು ಒಪ್ಪದೆ, ಸಂವೇದನಾಶೀಲವೂ ಅನುಭವೈಕವೂ ಆಗುವ ಇರಾದೆಯಿಂದ, ಆದರೆ ಅನುಭವ ಮತ್ತು ಪರಿವೀಕ್ಷಣೆಗಳಿಂದ ಸಿಕ್ಕುವ ತಿಳಿವಳಿಕೆಯನ್ನು ಅರಸಿ, ಆರಂಭಿಸುತ್ತಾನೆ. ಆದರೆ ಲಾಕ್‌ಗಿಂತಲೂ ಹೆಚ್ಚು ತೀಕ್ಷ್ಣ ಬೌದ್ಧಿಕತೆ ಮತ್ತು ವಿಶ್ಲೇಷಣಾಸೂಕ್ಷ್ಮತೆ, ಮತ್ತು ಸಣ್ಣಪುಟ್ಟ ಅನುಕೂಲಕರ ಅಸಾಂಗತ್ಯಗಳನ್ನು ಒಪ್ಪಿಕೊಳ್ಳುವ ಮುಕ್ತತೆಗಳಿಂದಾಗಿ ಅವನು ಅನುಭವ ಮತ್ತು ಪರಿವೀಕ್ಷಣೆಯಿಂದ ಏನನ್ನೂ ಕಲಿಯಲಾಗದ ಆಘಾತಕಾರಿ ತೀರ್ಮಾನಗಳನ್ನು ತಲುಪುತ್ತಾನೆ. ವೈಚಾರಿಕ ನಂಬಿಕೆ ಎಂಬುದು ಯಾವುದೂ ಇಲ್ಲ: 'ಮಿಂಚು ಹುಳುಗಳು ಅಥವಾ ನೀರು ಉಲ್ಲಾಸಕರವೆಂದು ನಾವು ನಂಬಿದರೆ, ಅದಕ್ಕೆ ಕಾರಣ ಅದಲ್ಲದೆ ಬೇರೆ ಬಗೆಯಲ್ಲಿ ಅವುಗಳ ಬಗ್ಗೆ ಯೋಚನೆ ಮಾಡುವುದು ಯಾತನಾಮಯವಾದುದು ಎಂಬುದು.' ನಂಬದೆ ಇರಲು ನಮಗೆ ಸಾಧ್ಯವಿಲ್ಲ, ಆದರೆ ಯಾವ ನಂಬಿಕೆಯನ್ನೂ ವೈಚಾರಿಕ ನೆಲೆಯಲ್ಲಿ ನಿಲ್ಲಿಸಲಾಗುವುದಿಲ್ಲ. ಅಥವಾ ಒಂದು ಕ್ರಿಯಾಸರಣಿ ಮತ್ತೊಂದಕ್ಕಿಂತ ಹೆಚ್ಚು ವೈಚಾರಿಕವಾಗಿರಲಾರದು, ಯಾಕೆಂದರೆ ಎಲ್ಲವೂ ಅವೈಚಾರಿಕ ನಂಬಿಕೆಯನ್ನೇ ಆಧರಿಸಿರುತ್ತವೆ. ಆದರೆ ಈ ಕೊನೆಯ ತೀರ್ಮಾನವು ಹ್ಯೂಮ್‌ನದಲ್ಲವೆಂದು ತೋರುತ್ತದೆ. ಅತ್ಯಂತ ಸಂದೇಹಾತ್ಮಕ ಅಧ್ಯಾಯದಲ್ಲಿಯೂ, ಅಂದರೆ ಭಾಗ ಒಂದನ್ನು ಸಂಗ್ರಹ ರೂಪದಲ್ಲಿ ಹೇಳುವ ಭಾಗದಲ್ಲಿಯೂ, ಅವನು ಹೇಳುವುದು ಇದು: 'ಒಟ್ಟಾರೆ ಹೇಳುವುದಾದರೆ, ಮತಧರ್ಮಗಳಲ್ಲಿನ ದೋಷಗಳು ಅಪಾಯಕಾರಿಯಾದವು, ತತ್ವಜ್ಞಾನದವು ನಗೆಪಾಟಲಿನವು ಮಾತ್ರ.' ಹೀಗೆ ಹೇಳಲು ಅವನಿಗೆ ಅಧಿಕಾರವಿಲ್ಲ. 'ಅಪಾಯಕಾರಿ' ಎಂಬುದು ಕಾರಣಾತ್ಮಕ ಪದ, ಕಾರಣಾತ್ಮಕತೆಯ ಬಗ್ಗೆ ಸಂದೇಹವಾದಿಯಾದವನು ಯಾವುದೇ ಆದರೂ 'ಅಪಾಯಕಾರಿ' ಎಂದು ತಿಳಿಯಲಾರ.

ಹಾಗೆ ನೋಡಿದರೆ, ಈ ಗ್ರಂಥದ ಉತ್ತರಾರ್ಧದಲ್ಲಿ, ಹ್ಯೂಮ್ ತನ್ನ ಎಲ್ಲ ಸಂದೇಹಗಳನ್ನೂ ಮರೆತುಬಿಡುತ್ತಾನೆ, ತನ್ನ ಕಾಲದ ಯಾವನೇ ಪರಿಣತ ನೀತಿಬೋಧಕನು ಬರೆಯಬಹುದಾದಂತೆ ಸಾಕಷ್ಟು ಬರೆಯುತ್ತಾನೆ; ತಾನೇ ಶಿಫಾರಸು ಮಾಡುವ ಪರಿಹಾರವನ್ನು ಅವನು ತನ್ನ ಸಂದೇಹಗಳಿಗೆ ಅನ್ವಯಿಸುತ್ತಾನೆ, ಅದೆಂದರೆ 'ಅಜಾಗರೂಕತೆ ಮತ್ತು ಅನವಧಾನ'. ಒಂದು ಅರ್ಥದಲ್ಲಿ, ಅವನ ಸಂದೇಹವಾದವು ಅಪ್ರಾಮಾಣಿಕವಾದುದು, ಯಾಕೆಂದರೆ ಅವನು ಅದನ್ನು ಅನುಷ್ಠಾನದಲ್ಲಿ ತರಲಾರದೇ ಹೋದ. ಆದರೆ, ಅದರಿಂದಾದ ಎಡವಟ್ಟಿನ ಪರಿಣಾಮವೆಂದರೆ, ಒಂದಕ್ಕಿಂತ ಮತ್ತೊಂದು ಕ್ರಿಯಾಸರಣಿಯು ಉತ್ತಮವೆಂದು ಸಾಧಿಸುವ ಪ್ರತಿ ಪ್ರಯತ್ನವೂ ಕುಂಠಿತವಾಗುವಂತಾಯಿತು.

ಅಂತಹ ವೈಚಾರಿಕತೆಯ ಸ್ವಖಂಡನೆಯನ್ನು ಅನುಸರಿಸಿ ಸಾಂಪ್ರದಾಯಿಕ ಶ್ರದ್ಧೆಯು ನೆಲೆಯೂರುವಂತೆ ಆದುದು ಅನಿವಾರ್ಯವಾಯಿತು. ಹ್ಯೂಮ್ ಮತ್ತು ರೂಸೋರ ನಡುವಣ ಜಗಳವು ಸಾಂಕೇತಿಕವಾದುದು: ರೂಸೋ ಹುಚ್ಚನಾದರೂ ಪ್ರಭಾವಶಾಲಿಯಾಗಿದ್ದ, ಹ್ಯೂಮ್ ವಿವೇಕಶಾಲಿಯಾಗಿದ್ದ, ಆದರೆ ಅವನಿಗೆ ಅನುಯಾಯಿಗಳಿರಲಿಲ್ಲ. ಆನಂತರದ ಬ್ರಿಟಿಷ್ ಅನುಭವೈಕವಾದಿಗಳು ಅದನ್ನು ಖಂಡಿಸದೆಯೇ ತಿರಸ್ಕರಿಸಿದರು; ರೂಸೋ ಮತ್ತವನ ಅನುಯಾಯಿಗಳು ಯಾವ ನಂಬಿಕೆಗೂ ವೈಚಾರಿಕ ತಳಹದಿಯಿಲ್ಲ ಎಂಬ ಹ್ಯೂಮ್‌ನ ಅಭಿಪ್ರಾಯವನ್ನು ಒಪ್ಪಿದರು, ಆದರೆ ಹೃದಯವು ವೈಚಾರಿಕತೆಗಿಂತ ಹಿರಿದಾದುದು ಎಂಬ ಅಭಿಪ್ರಾಯ ಹೊಂದಿ, ಹ್ಯೂಮ್ ಅನುಷ್ಠಾನದಲ್ಲಿ ಉಳಿಸಿಕೊಂಡಿದ್ದುದಕ್ಕಿಂತ ಭಿನ್ನವಾದ ನಂಬಿಕೆಗಳನ್ನು ಹೊಂದಿದರು. ಕ್ಯಾಂಟ್‌ನಿಂದ ಹೆಗೆಲ್‌ವರೆಗಿನ ಜರ್ಮನ್ ತತ್ವಜ್ಞಾನಿಗಳು ಹ್ಯೂಮ್‌ನ ವಾದಗಳನ್ನು ಅರಗಿಸಿಕೊಂಡಿರಲಿಲ್ಲ. ಅವನ 'ಕ್ರಿಟೀಕ್ ಆಫ್ ಪ್ಯೂರ್ ರೀಸನ್' ಹ್ಯೂಮ್‌ನಿಗೆ ನೀಡಿದ ಉತ್ತರ ಎಂಬ ಕ್ಯಾಂಟ್‌ನಂತಹುದೇ ನಂಬಿಕೆಯನ್ನು ಹೊಂದಿದ್ದ ಅನೇಕ ತತ್ವಜ್ಞಾನಿಗಳಿದ್ದರೂ, ಈ ಮಾತನ್ನು ನಾನು ಉದ್ದೇಶಪೂರ್ವಕವಾಗಿ ಹೇಳುತ್ತಿದ್ದೇನೆ. ಹಾಗೆ ನೋಡಿದರೆ, ಈ ತತ್ವಜ್ಞಾನಿಗಳು – ಕನಿಷ್ಠ ಪಕ್ಷ, ಕ್ಯಾಂಟ್ ಮತ್ತು ಹೆಗೆಲ್ – ಹ್ಯೂಮ್‌ಪೂರ್ವದ ವೈಚಾರಿಕತೆಯ ಪ್ರತಿನಿಧಿಗಳು, ಅವರನ್ನು ಹ್ಯೂಮ್‌ನ ವಾದಗಳಿಂದ ಅಲ್ಲಗಳೆಯಬಹುದು. ಈ ರೀತಿಯಲ್ಲಿ ಅಲ್ಲಗಳೆಯಲಾಗದ ತತ್ವಜ್ಞಾನಿಗಳೆಂದರೆ ವೈಚಾರಿಕತೆಯ ಸೋಗು ಹಾಕದವರು, ರೂಸೋ, ಶಾಪೆನ್‌ಹಾವರ್ ಮತ್ತು ನೀಷೆ. ಹತ್ತೊಂಬತ್ತನೆಯ ಶತಮಾನದುದ್ದಕ್ಕೂ ಇದ್ದು ಇಪ್ಪತ್ತನೆಯ ಶತಮಾನದಲ್ಲಿ ಹಿಂದೆ ಸರಿದ ಅವಿವೇಕವು (ಅನ್‌ರೀಸನ್) ಅನುಭವೈಕವಾದವನ್ನು ಹ್ಯೂಮ್ ವಿನಾಶ ಮಾಡಿದುದರ ಪರಿಣಾಮ.

ಪೂರ್ತಿ ಅಥವಾ ಮುಖ್ಯವಾಗಿ ಅನುಭವೈಕವಾದ ತತ್ವಜ್ಞಾನದ ಪರಿಧಿಯೊಳಗೆ ಹ್ಯೂಮ್‌ಗೆ ನೀಡಬಹುದಾದ ಯಾವುದಾದರೂ ಉತ್ತರವಿದೆಯೇ ಎಂದು ಹುಡುಕುವುದು ಮುಖ್ಯ. ಇಲ್ಲದಿದ್ದರೆ, ಹುಚ್ಚುತನಕ್ಕೂ ವಿವೇಕಕ್ಕೂ ಬೌದ್ಧಿಕ ವ್ಯತ್ಯಾಸವಿಲ್ಲ. ತಾನು ಬೇಯಿಸಿದ ಮೊಟ್ಟೆ ಎಂದು ಭಾವಿಸುವ ಹುಚ್ಚನನ್ನು ಅವನಿಗೆ ಸಂಖ್ಯಾಬಲವಿಲ್ಲವೆಂಬ ಕಾರಣದಿಂದಲೋ, ಅಥವಾ–ನಾವು ಪ್ರಜಾಪ್ರಭುತ್ವವನ್ನು ಊಹಿಸಿಕೊಳ್ಳಬಾರದುದರಿಂದಾಗಿ–ಸರ್ಕಾರವು ಅವನ ಅಭಿಪ್ರಾಯವನ್ನು ಒಪ್ಪುವುದಿಲ್ಲ ಎಂಬ ಕಾರಣದಿಂದಲೋ ಸೋಲಿಸಬೇಕು. ಇದೊಂದು ಹತಾಶ ದೃಷ್ಟಿಕೋನ ಮತ್ತು ಅದರಿಂದ ಪಾರಾಗುವ ಯಾವುದೋ ಮಾರ್ಗವಿದೆ ಎಂಬ ಭರವಸೆ ಹೊಂದಬೇಕು.

ಹ್ಯೂಮ್‌ನ ಸಂದೇಹವಾದವು ನಿಂತಿರುವುದು ಅವನು ಅನುಗಮನ ತತ್ವದ ನಿರಾಕರಣೆಯನ್ನು ಆಧರಿಸುತ್ತದೆ ಎಂಬುದನ್ನು. ಕಾರಣಾತ್ಮಕತೆಗೆ ಅನ್ವಯಿಸಿದ ಅನುಗಮನ ತತ್ವವು ಹೇಳುವುದೇನೆಂದರೆ, ಎ ಯನ್ನು ಬಿ ಜೊತೆಗೆ ಅಥವಾ ಬಿ ಯ

ನಂತರ ಅನೇಕ ಸಲ ಜೊತೆಗಿರುವುದನ್ನು ಕಂಡರೆ, ಅಥವಾ ಎ ಯು ಬಿ ಯ ಜೊತೆಗಿಲ್ಲದಿರುವ ಯಾವುದೇ ಸಂದರ್ಭವನ್ನು ಕಂಡಿರದಿದ್ದರೆ, ಮುಂದಿನ ಸಂದರ್ಭದಲ್ಲಿ ಎ ಯನ್ನು ಕಂಡರೆ ಅದರ ಹಿಂದೆ ಬಿ ಬರುವುದನ್ನು ನಿರೀಕ್ಷಿಸಬಹುದಾದ ಸಂಭಾವ್ಯವಾಗಿರುತ್ತದೆ ಎಂದು. ಈ ತತ್ವವು ಸಾಕಾಗುವಷ್ಟಾಗಬೇಕಾದರೆ ಈ ಸಂಭಾವ್ಯತೆಯು ಖಚಿತತೆಗೆ ಹತ್ತಿರವಾಗಿರಬೇಕಾದರೆ ಅಂತಹ ಸಾಕಾದಷ್ಟು ಸಂದರ್ಭಗಳು ಇರಬೇಕು. ಇದು ಅಥವಾ ಅದರಿಂದ ಸಾಧಿಸಬಹುದಾದ ಬೇರಾವುದೇ ತತ್ವವು ನಿಜವಾದರೆ, ಆಗ ಹ್ಯೂಮ್ ತಿರಸ್ಕರಿಸುವ ಕಾರಣಾತ್ಮಕ ಊಹನೆಗಳು ಸಿಂಧುವಾಗುತ್ತವೆ, ಖಚಿತತೆಯಿಂದಲ್ಲವಾದರೂ, ವ್ಯಾವಹಾರಿಕ ಉದ್ದೇಶಕ್ಕೆ ಅದು ಸಾಕಷ್ಟು ಸಂಭಾವ್ಯವಾಗುತ್ತದೆ. ಈ ತತ್ವವು ನಿಜವಲ್ಲವಾದರೆ, ನಿರ್ದಿಷ್ಟ ಪರಿವೀಕ್ಷಣೆಗಳಿಂದ ಸಿದ್ಧಿಸಿಕೊಳ್ಳಬಹುದಾದ ಸಾಮಾನ್ಯ ವೈಜ್ಞಾನಿಕ ನಿಯಮಗಳನ್ನು ತಲುಪುವ ಪ್ರತಿ ಪ್ರಯತ್ನವೂ ಭ್ರಮಾತ್ಮಕವಾಗುತ್ತದೆ, ಮತ್ತು ಹ್ಯೂಮ್‌ನ ಸಂದೇಹಾತ್ಮಕತೆಯು ಅನುಭವೈಕವಾದಿಗೆ ಅನಿವಾರ್ಯವಾಗುತ್ತದೆ. ಚಲಾವಣೆಯಿಲ್ಲದೆ ಈ ತತ್ವವನ್ನೇ, ಅಂತಹ ಊಹನೆಯನ್ನು ಸಮರ್ಥಿಸಬೇಕಾದದ್ದರಿಂದಾಗಿ, ಪರಿವೀಕ್ಷಿಸಿದ ಸಮರೂಪಗಳಿಂದ ಊಹನೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ, ಅನುಭವವನ್ನು ಆಧರಿಸಿರದ ಸ್ವತಂತ್ರ ತತ್ವವೊಂದರಿಂದ ಅಥವಾ ಅದರಿಂದ ಸಾಧಿತವಾದ ತತ್ವವೊಂದರಿಂದ ಸಾಧಿತವಾಗಬೇಕಾಗುತ್ತದೆ. ಇಷ್ಟರ ಮಟ್ಟಿಗೆ, ಶುದ್ಧ ಅನುಭವೈಕವಾದವು ವಿಜ್ಞಾನಕ್ಕೆ ಸೂಕ್ತ ತಳಹದಿಯಾಗಲಾರದು ಎಂದು ಹ್ಯೂಮ್ ಸಾಬೀತುಪಡಿಸಿದ್ದಾನೆ. ಆದರೆ ಈ ಒಂದು ತತ್ವವನ್ನು ಒಪ್ಪಿಕೊಂಡರೆ, ಮಿಕ್ಕೆಲ್ಲವೂ, ನಮ್ಮ ಜ್ಞಾನವೆಲ್ಲವೂ ಅನುಭವದ ತಳಹದಿಯ ಮೇಲೆ ನಿಂತಿದೆ ಎಂಬ ಸಿದ್ಧಾಂತಕ್ಕೆ ಅನುಗುಣವಾಗಿ ಸಾಗುತ್ತದೆ. ಇದು ಶುದ್ಧ ಅನುಭವೈಕವಾದದಿಂದ ತೀರ ಭಿನ್ನವಾದ ಮಾರ್ಗ ಹಿಡಿದಿರುವಂಥದು ಎಂಬುದನ್ನು, ಮತ್ತು ಒಂದು ಭಿನ್ನ ಹಾದಿಯನ್ನು ಒಪ್ಪುವುದಾದರೆ ಮಿಕ್ಕವನ್ನೇಕೆ ನಿಷೇಧಿಸಬೇಕು ಎಂದು ಅನುಭವೈಕವಾದಿಗಳಲ್ಲದವರು ಕೇಳಬಹುದಲ್ಲವೇ ಎಂಬುದನ್ನು ಒಪ್ಪಿಕೊಳ್ಳಬೇಕು. ಆದರೆ ಇವು ಹ್ಯೂಮ್‌ನ ವಾದದಿಂದ ನೇರವಾಗಿ ಸಿಡಿಯುವ ಪ್ರಶ್ನೆಗಳಲ್ಲ. ಈ ವಾದಗಳು ಸಾಧಿಸುವುದೆಂದರೆ–ಈ ಸಾಕ್ಷ್ಯವನ್ನು ವಿರೋಧಿಸಬಹುದು ಎಂದು ನನ್ನಗನ್ನಿಸುವುದಿಲ್ಲ–ಅನುಗಮನವು ಅನುಭವದಿಂದಲಾಗಲೀ ಇತರ ತಾರ್ಕಿಕ ತತ್ವಗಳಿಂದಲಾಗಲೀ ಊಹನೆ ಮಾಡಲು ಸಾಧ್ಯವಿಲ್ಲದ ಒಂದು ಸ್ವತಂತ್ರ ತಾರ್ಕಿಕ ತತ್ವ, ಮತ್ತು ಈ ತತ್ವವಿಲ್ಲದೆ ವಿಜ್ಞಾನವು ಅಸಾಧ್ಯ ಎಂಬುದು. ❍

ಭಾಗ ೨

ರೂಸೋನಿಂದ ಹಿಡಿದು ಇಂದಿನವರೆಗೆ

೧೮
ರೊಮ್ಯಾಂಟಿಕ್ ಚಳುವಳಿ

ಹದಿನೆಂಟನೆಯ ಶತಮಾನದ ಉತ್ತರಾರ್ಧದಿಂದ ಇಂದಿನವರೆಗಿನ ಕಲೆ, ಸಾಹಿತ್ಯ ಮತ್ತು ತತ್ವಜ್ಞಾನಗಳು, ಮತ್ತು ರಾಜಕೀಯವು ಕೂಡ, ವಿಶಾಲ ಅರ್ಥದಲ್ಲಿ, ರೊಮ್ಯಾಂಟಿಕ್ ಚಳುವಳಿಯ ಲಕ್ಷಣ ಎನ್ನಲಾಗುವ ಒಂದು ಬಗೆಯ ಭಾವನಾತ್ಮಕತೆಯಿಂದ, ಧನಾತ್ಮಕವಾಗಿಯೋ ಋಣಾತ್ಮಕವಾಗಿಯೋ, ಪ್ರಭಾವಿತಗೊಂಡಿವೆ. ಈ ಭಾವನೆಯಿಂದ ದೂರ ಸರಿದವರು ಕೂಡ ಅದನ್ನು ಗಮನಿಸಲೇಬೇಕಾದ ಪರಿಸ್ಥಿತಿ ಉಂಟಾಯಿತು, ಮತ್ತು ಅನೇಕ ಸಂದರ್ಭಗಳಲ್ಲಿ ತಮಗೆ ಅರಿವಿಗೂ ಬಾರದ ರೀತಿಯಲ್ಲಿ ಅದರ ಪ್ರಭಾವಕ್ಕೆ ಒಳಗಾದರು. ಈ ಅಧ್ಯಾಯದಲ್ಲಿ ನಾನು, ಅದರಲ್ಲೂ ವಿಶೇಷವಾಗಿ, ಖಚಿತವಾಗಿ ತಾತ್ವಿಕ ಎಂದು ಕರೆಯಲು ಸಾಧ್ಯವಿಲ್ಲದ ವಿಚಾರಗಳಲ್ಲಿ, ರೊಮ್ಯಾಂಟಿಕ್ ಮನೋಭಾವದ ಸ್ಥೂಲ ಚಿತ್ರಣವನ್ನು ನೀಡಲು ಪ್ರಯತ್ನಿಸುತ್ತೇನೆ: ಯಾಕೆಂದರೆ ನಾವೀಗ ಪರಿಗಣಿಸುತ್ತಿರುವ ಅವಧಿಯಲ್ಲಿನ ಅತ್ಯಂತ ತಾತ್ವಿಕ ಸ್ವರೂಪದ ಚಿಂತನೆಗಳ ಸಾಂಸ್ಕೃತಿಕ ಹಿನ್ನೆಲೆಯು ಇದೇ ಆಗಿದ್ದುದು.

ರೊಮ್ಯಾಂಟಿಕ್ ಚಳುವಳಿಯು ಮೊದಲಲ್ಲಿ ತತ್ವಜ್ಞಾನದೊಡನೆ ಸಂಬಂಧ ಹೊಂದಿರಲಿಲ್ಲ, ಆದರೆ ಅದರ ಜೊತೆ ಸಂಬಂಧ ಹೊಂದಲು ಅದಕ್ಕೆ ಹೆಚ್ಚಿನ ಕಾಲವೇನೂ ಬೇಕಾಗಲಿಲ್ಲ. ರಾಜಕೀಯವು ರೂಸೋನ ಮೂಲಕ ಮೊದಲಿನಿಂದಲೂ ಅದರೊಡನೆ ಸಂಬಂಧ ಪಡೆದಿತ್ತು. ಆದರೆ ಅದರ ರಾಜಕೀಯ ಹಾಗೂ ತಾತ್ವಿಕ ಪ್ರಭಾವಗಳನ್ನು ಅರ್ಥಮಾಡಿಕೊಳ್ಳುವ ಮುಂಚೆ ನಾವು ಅದರ ಅತ್ಯಂತ ಪ್ರಮುಖ ರೂಪದಲ್ಲಿ ಅದನ್ನು ಪರಿಶೀಲಿಸಬೇಕು; ಒಪ್ಪಿತ ನೈತಿಕ ಹಾಗೂ ಸೌಂದರ್ಯಕ ಮಾನದಂಡಗಳ ವಿರುದ್ಧದ ಬಂಡಾಯ ಅದು.

ಈ ಚಳುವಳಿಯ ಮೊದಲ ದೊಡ್ಡ ಹೆಸರು ರೂಸೋನದು, ಆದರೆ ಸ್ವಲ್ಪ ಮಟ್ಟಿಗೆ ಈಗಾಗಲೇ ಇದ್ದ ಪ್ರವೃತ್ತಿಗಳನ್ನು ವ್ಯಕ್ತಪಡಿಸಲು ಅವನು ಅದನ್ನು ಬಳಸಿಕೊಂಡ. ಫ್ರಾನ್ಸ್‌ನ ಹದಿನೆಂಟನೆಯ ಶತಮಾನದ ನಾಗರಿಕ ವ್ಯಕ್ತಿಗಳು ಸಂವೇದನೆ

(ಸೆನ್ಸಿಬಿಲಿಟಿ) ಎದು ಕರೆಯಲಾಗುವುದನ್ನು ಬಹುವಾಗಿ ಮೆಚ್ಚಿಕೊಂಡಿದ್ದರು; ಆ ಶಬ್ದದ ಅರ್ಥ ಭಾವರಾಗಗಳ, ಅದರಲ್ಲಿಯೂ ಸಹಾನುಭೂತಿಯ, ಬಗೆಗಿನ ಒಲವು ಎಂದು. ಸಂಪೂರ್ಣ ತೃಪ್ತಿಕರವಾಗಬೇಕಾದರೆ ಭಾವರಾಗಗಳು ನೇರವಾಗಿಯೂ ತೀವ್ರವಾಗಿಯೂ ಇರಬೇಕು, ಆಲೋಚನೆಗೆ ಅವಕಾಶವೇ ಅಲ್ಲಿರಬಾರದು. ಸಂವೇದನಾಶೀಲ ವ್ಯಕ್ತಿಯು ಬಡ ರೈತಕುಟುಂಬವನ್ನು ಕಂಡು ಕಣ್ಣೀರು ಹರಿಸುತ್ತಾನೆಯೇ ವಿನಾ ಆದಕ್ಕೆ ಸಂಬಂಧಿಸಿದ ವರ್ಗದ ಸ್ಥಿತಿಗತಿಗಳನ್ನು ಸುಧಾರಿಸುವ ಸುಯೋಜಿತ ಚಿಂತನೆಗಳ ಬಗ್ಗೆ ನಿರಾಸಕ್ತನಾಗಿರುತ್ತಾನೆ. ಬಡವರಲ್ಲಿ ಶ್ರೀಮಂತರಿಗಿಂತ ಹೆಚ್ಚಿನ ಒಳ್ಳೆಯತನವಿರುತ್ತದೆ; ಸಂತನೆಂದರೆ ಸರಳ ಗ್ರಾಮೀಣ ಶಾಂತಮಯ ಜೀವನದ ಆನಂದವನ್ನು ಅನುಭವಿಸಲು ಆಸ್ಥಾನಗಳ ಲಂಚಗುಳಿತನದಿಂದ ದೂರನಾದವನು ಎಂದು ಭಾವಿಸಲಾಗುತ್ತಿತ್ತು. ಒಂದು ನೆಲೆಯಲ್ಲಿ ಮತ್ತು ಸ್ವಲ್ಪ ಮಟ್ಟಿಗೆ ಈ ಭಾವನೆಯು ಎಲ್ಲ ಕಾಲದ ಕವಿಗಳಲ್ಲಿಯೂ ಕಾಣಬರುತ್ತದೆ. 'ಆ್ಯಸ್ ಯು ಲೈಕ್ ಇಟ್'ನ ದೇಶಭ್ರಷ್ಟ ಡ್ಯೂಕ್ ಅದನ್ನು ವ್ಯಕ್ತಪಡಿಸುತ್ತಾನೆ, ಆದರೆ ತನ್ನ ಡ್ಯೂಕ್‌ರಾಜ್ಯವು ದೊರೆತ ತಕ್ಷಣ ಅಲ್ಲಿಗೆ ವಾಪಸಾಗುತ್ತಾನೆ; ವಿಷಾದಭರಿತ ಜಾಕ್ಸ್ ಮಾತ್ರ ಅರಣ್ಯವಾಸವನ್ನು ಪ್ರಾಮಾಣಿಕವಾಗಿ ಬಯಸುವವನು. ರೊಮ್ಯಾಂಟಿಕ್ ಚಳುವಳಿಯು ಪ್ರತೀಕಿಸುತ್ತಿದ್ದ ಎಲ್ಲ ಬಂಡಾಯ ಮನೋಧರ್ಮದ ಪರಿಪೂರ್ಣ ನಿದರ್ಶನವಾದ ಪೋಪ್ ಕವಿಯು ಕೂಡ ಹೀಗೆ ಹೇಳುತ್ತಾನೆ:

ಯಾವನ ಬಯಕೆ ಮತ್ತು ಚಿಂತೆಗಳು
ಕೆಲವು ಪಿತ್ರಾರ್ಜಿತ ಎಕರೆಗಳಿಗೆ ಸೀಮಿತವೋ,
ತನ್ನೂರಿನ ತನ್ನ ನೆಲದ ಗಾಳಿಯನ್ನು
ಉಸಿರಾಡಲು ತೃಪ್ತನೋ ಅವನೇ ಸುಖಿ.

ಸಂವೇದನಾಶೀಲತೆಯನ್ನು ರೂಢಿಸಿಕೊಂಡಿದ್ದವರ ಕಲ್ಪನೆಯ ಬಡವನು ಯಾವಾಗಲೂ ಕೆಲವು ಪಿತ್ರಾರ್ಜಿತ ಎಕರೆಗಳ ಒಡೆಯ, ಹೊರಗಿನ ವ್ಯಾಪಾರದ ಹಂಗಿಲ್ಲದೆ ತನ್ನ ದುಡಿಮೆಯ ಫಲವಾದ ಉತ್ಪಾದನೆಯನ್ನು ಮಾತ್ರ ಅವಲಂಬಿಸಿ ಬದುಕುವವನು. ಕಷ್ಟಕರ ಸಂದರ್ಭಗಳಲ್ಲಿ ಅಂತಹವರು ತಮ್ಮ ಎಕರೆಗಳನ್ನು ಕಳೆದುಕೊಳ್ಳುತ್ತಿದ್ದುದು ನಿಜ, ಯಾಕೆಂದರೆ ವಯಸ್ಸಾದ ತಂದೆ ದುಡಿಯಲಾರ, ಸುಂದರಿ ಮಗಳು ಕ್ಷಯಪೀಡಿತೆ, ಕ್ರೂರ ಭೋಗ್ಯದಾರ ಅಥವಾ ಭೂ ಒಡೆಯ ಎಕರೆಗಳ ಮೇಲೋ ಸುಂದರಿ ಮಗಳ ಮೇಲೋ ಆಕ್ರಮಣ ಮಾಡಲು ಕಾಯುತ್ತಿರುವವನು. ರೊಮ್ಯಾಂಟಿಕ್‌ರ ದೃಷ್ಟಿಯಲ್ಲಿ ಬಡವನು ಯಾವತ್ತೂ ನಗರದವಾಸಿಯಲ್ಲ, ಕೈಗಾರಿಕಾ ದುಡಿಮೆಗಾರನಲ್ಲ. ಹತ್ತೊಂಬತ್ತನೆಯ ಶತಮಾನದ ಪಾಮರವರ್ಗದ ಪರಿಕಲ್ಪನೆಯೂ ಹೀಗೆಯೇ ರೋಮ್ಯಾಂಟೀಕೃತವಾದದ್ದು, ಆದರೆ ವಿಭಿನ್ನ ಬಗೆಯದು.

ಆಗಲೇ ಪ್ರಚಲಿತವಾಗಿದ್ದ ಸಂವೇದನಾಶೀಲ ಪಂಥವನ್ನುದ್ದೇಶಿಸುವ ರೂಸೋ ಅದಕ್ಕೆ, ತಾನಾಗಿಯೆ ಒದಗದೆ ಇದ್ದಿರಬಹುದಾದ, ವಿಶಾಲ ಉದ್ದಗಲಗಳನ್ನು ಕೊಟ್ಟ. ಅವನೊಬ್ಬ ಪ್ರಜಾಪ್ರಭುತ್ವವಾದಿ, ತನ್ನ ಸಿದ್ಧಾಂತಗಳಲ್ಲಿ ಮಾತ್ರವಲ್ಲದೆ ತನ್ನ ಅಭಿರುಚಿಗಳಲ್ಲಿಯೂ. ಅವನ ಜೀವನದ ದೀರ್ಘ ಅವಧಿಗಳಲ್ಲಿ ಅವನೊಬ್ಬ ಬಡ ಉಡಾಳನಾಗಿದ್ದ, ತನಗಿಂತ ಕಡಿಮೆ ಬಡವರಾಗಿದ್ದ ಜನಗಳ ಕರುಣೆ–ಔದಾರ್ಯಗಳಿಂದ ಬದುಕಿದ. ಇದನ್ನವನು ಔದಾರ್ಯದ ರೂಪದಲ್ಲಿ, ಕ್ರಿಯೆಯಲ್ಲಿ, ಎಷ್ಟೋ ವೇಳೆ ಅತೀವ ಕೃತಘ್ನತೆಯಿಂದಲೇ ಮುಯ್ಯಿ ತೀರಿಸಿದ; ಆದರೆ ಅತ್ಯಂತ ಸೂಕ್ಷ್ಮ ಸಂವೇದನಾಶೀಲನೂ ಅವನ ಭಾವನಾತ್ಮಕ ಪ್ರತಿಕ್ರಿಯೆಯನ್ನು ನಿರೀಕ್ಷಿಸುವುದರಲ್ಲಿ ಮಾತ್ರವೇ ತೃಪ್ತನಾದವನು. ಅಲೆಮಾರಿಯ ಅಭಿರುಚಿಗಳನ್ನು ಹೊಂದಿದ್ದ ಅವನಿಗೆ ಪ್ಯಾರಿಸ್ ಸಮಾಜದ ನಿರ್ಬಂಧಗಳು ಇರಿಸುಮುರಿಸು ಉಂಟುಮಾಡಿದವು. ರೊಮ್ಯಾಂಟಿಕ್‌ರು ಸಂಪ್ರದಾಯದ ಅಡ್ಡಿಗಳ ಬಗೆಗಿನ ತಮ್ಮ ತಿರಸ್ಕಾರವನ್ನು ರೂಸೋನಿಂದಲೇ ಕಲಿತದ್ದು – ಮೊದಲು ಉಡುಪು ಮತ್ತು ನಡತೆಗೆ, ದ್ವಂದ್ವನೃತ್ಯ ಮತ್ತು ಉದ್ದೀಪಕ ದ್ವಿಪದಿಗಳಿಗೆ ಸಂಬಂಧಿಸಿದಂತೆ, ಆನಂತರ ಕಲೆ ಮತ್ತು ಪ್ರಣಯಗಳಿಗೆ ಸಂಬಂಧಿಸಿದಂತೆ, ಮತ್ತು ಕೊನೆಯಲ್ಲಿ ಇಡೀ ಪಾರಂಪರಿಕ ನೈತಿಕತೆಯ ವಿರುದ್ಧ.

ರೊಮ್ಯಾಂಟಿಕ್‌ರೇನೂ ನೀತಿಬಾಹಿರರಲ್ಲ; ತದ್ವಿರುದ್ಧವಾಗಿ ಅವರ ನೈತಿಕ ಪರಿಕಲ್ಪನೆಗಳು ತೀಕ್ಷ್ಣವೂ ಆವೇಗದವೂ ಆಗಿದ್ದವು. ಆದರೆ ಅವು ನೆಲೆಗೊಂಡಿದ್ದುದು ತಮ್ಮ ಪೂರ್ವಿಕರು ಒಳ್ಳೆಯದೆಂದು ಭಾವಿಸಿದ್ದವುಗಳಿಗೆ ಭಿನ್ನವಾದ ತತ್ವಗಳ ಮೇಲೆ. ೧೬೬೦ ರಿಂದ ರೂಸೋನವರಗಿನ ಅವಧಿಯಲ್ಲಿ ಇಂಗ್ಲಂಡ್ ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಮತಧರ್ಮ ಯುದ್ಧಗಳ ಬಗೆಗಿನ ನೆನಪುಗಳು ತುಂಬಿಕೊಂಡಿದ್ದವು. ಅಸ್ತವ್ಯಸ್ತತೆಯ ಆಪತ್ತುಗಳ ಬಗ್ಗೆ ಮತ್ತು ತೀವ್ರ ಭಾವೋದ್ವೇಗಗಳ ಅನಾಯಕತ್ವ ಪ್ರವೃತ್ತಿಯ ಬಗ್ಗೆ ಮತ್ತು ಸುರಕ್ಷತೆಯ ಪ್ರಾಮುಖ್ಯ ಮತ್ತದನ್ನು ಸಾಧಿಸಲು ಮಾಡಬೇಕಾದ ತ್ಯಾಗಗಳ ಬಗ್ಗೆ ಜನರಿಗೆ ಅರಿವಿತ್ತು. ವಿವೇಕವೇ ಅತ್ಯಂತ ಮುಖ್ಯ ಸದ್ಗುಣವೆಂದು ಭಾವಿಸಿದ್ದರು; ಬೌದ್ಧಿಕತೆಯು ದಮನಕಾರೀ ದುರಭಿಮಾನಿಗಳ ವಿರುದ್ಧದ ಪರಿಣಾಮಕಾರಿ ಅಸ್ತ್ರವೆಂದು ಜನರು ಭಾವಿಸಿದ್ದರು; ನಯನಾಜೂಕಿನ ನಡತೆಯು ಅನಾಗರಿಕ ನಡವಳಿಕೆಯ ಬೇಲಿ ಎಂದು ತಿಳಿದಿದ್ದರು. ನ್ಯೂಟನ್‌ನ ಸುವ್ಯವಸ್ಥಿತ ವಿಶ್ವ, ಮತ್ತು ಅದರಲ್ಲಿನ ಗ್ರಹಗಳು ಸೂರ್ಯನ ಸುತ್ತಲ ಕಕ್ಷೆಯಲ್ಲಿ ತಿರುಗುವ ನಿಯಮಬದ್ಧತೆ – ಇವುಗಳು ಒಳ್ಳೆಯ ಸರ್ಕಾರದ ಕಲ್ಪನಾತ್ಮಕ ಪ್ರತೀಕದಂತೆ ಗೋಚರಿಸಿದವು. ರಾಗಭಾವಗಳ ಅಭಿವ್ಯಕ್ತಿಯಲ್ಲಿನ ನಿಯಂತ್ರಣವೇ ವಿದ್ಯಾಭ್ಯಾಸದ ಮುಖ್ಯ ಗುರಿಯಾಯಿತು, ಮತ್ತು ಅದೇ ಸಭ್ಯವ್ಯಕ್ತಿಯ ಕುರುಹೆನಿಸಿತು. ಕ್ರಾಂತಿಯಲ್ಲಿ, ರೊಮ್ಯಾಂಟಿಕ್‌ಪೂರ್ವದ ಫ್ರೆಂಚ್ ಶ್ರೀಮಂತವರ್ಗ ಶಾಂತರೀತಿಯಲ್ಲಿ ಸತ್ತರು;

ರೊಮ್ಯಾಂಟಿಕ್‌ರಾಗಿದ್ದ ಮೇಡಂ ರೋಲ್ಯಾಂಡ್ ಮತ್ತು ಡಾಂಟನ್‌ರು ಆಲಂಕಾರಿಕವಾಗಿ ಸಾವನ್ನಪ್ಪಿದರು.

ರೂಸೋನ ಕಾಲಕ್ಕೆ, ಅನೇಕ ಜನರಿಗೆ ಸುರಕ್ಷತೆಯ ಮಾತು ಸಾಕಾಗಿಹೋಗಿತ್ತು, ಅವರು ಬಯಸುತ್ತಿದ್ದುದು ಸಂಭ್ರಮೋದ್ರೇಕವನ್ನು. ಫ್ರೆಂಚ್ ಕ್ರಾಂತಿ ಮತ್ತು ನೆಪೋಲಿಯನ್‌ರು ಅದನ್ನು ಮೊಗೆ ಮೊಗೆದು ಕೊಟ್ಟರು. ೧೮೧೫ ರಲ್ಲಿ ರಾಜಕೀಯ ಜಗತ್ತು ಪ್ರಶಾಂತತೆಗೆ ಮರಳಿದಾಗ, ಆ ಪ್ರಶಾಂತತೆ ಹೇಗೆ ಶ್ಮಶಾನಶಾಂತಿಯಾಗಿತ್ತೆಂದರೆ, ಎಷ್ಟು ಜಡವೂ, ಜೀವಂತ ಬದುಕಿನ ಬಗ್ಗೆ ಎಷ್ಟು ದ್ವೇಷಪೂರಿತವೂ ಆಗಿತ್ತೆಂದರೆ, ಭಯಗ್ರಸ್ತ ಸಂಪ್ರದಾಯನಿಷ್ಠರು ಮಾತ್ರ ಸಹಿಸಿಕೊಳ್ಳುವಂತಹುದಾಗಿತ್ತು. ಇದರ ಪರಿಣಾಮವಾಗಿ, ರಾಯ್ ಸೋಲೆಯಿಲ್‌ನ ಆಳ್ವಿಕೆಯ ಫ್ರಾನ್ಸ್‌ನಲ್ಲಿ ಮತ್ತು ಫ್ರೆಂಚ್ ಕ್ರಾಂತಿಯವರೆಗಿನ ಇಂಗ್ಲಂಡ್‌ನಲ್ಲಿದ್ದಂತಹ ಯಥಾಸ್ಥಿತಿಗೆ ಯಾವುದೇ ಬೌದ್ಧಿಕ ಮೂಗೊಪ್ಪಿಗೆಯೂ ಇರಲಿಲ್ಲ. ಪವಿತ್ರ ಮೈತ್ರಿಯ ವಿರುದ್ಧದ ಹತ್ತೊಂಬತ್ತನೆಯ ಶತಮಾನದ ಬಂಡಾಯವು ಎರಡು ರೂಪಗಳನ್ನು ಪಡೆಯಿತು. ಒಂದೆಡೆಯಲ್ಲಿ, ಬಂಡವಾಳಶಾಹಿ ಹಾಗೂ ಪಾಮರವರ್ಗದ ಕೈಗಾರಿಕೀಕರಣದ ವಿರುದ್ಧದ ಬಂಡಾಯ, ಹಾಗೂ ರಾಜಪ್ರಭುತ್ವ ಮತ್ತು ಶ್ರೀಮಂತವರ್ಗಪ್ರಭುತ್ವಗಳ ವಿರುದ್ಧದ ಬಂಡಾಯ; ಇವುಗಳನ್ನು ರೊಮ್ಯಾಂಟಿಕ್ ಪಂಥವು ತಲುಪಲೇ ಇಲ್ಲ, ಮತ್ತು ಹಲವು ವಿಧಗಳಲ್ಲಿ ಹದಿನೆಂಟನೆಯ ಶತಮಾನಕ್ಕೆ ಹಿಂಜರಿಯಿತು. ಈ ಚಳುವಳಿಯನ್ನು ತೀವ್ರಗಾಮಿ ತತ್ವಜ್ಞಾನಿಗಳು, ಮುಕ್ತವ್ಯಾಪಾರ ಚಳುವಳಿ, ಮತ್ತು ಮಾರ್ಕ್ಸ್‌ಪಂಥೀಯ ಸಮಾಜವಾದಗಳು ಪ್ರತೀಕಿಸುತ್ತವೆ. ಇದಕ್ಕೆ ವಿರುದ್ಧವಾದುದು ರೊಮ್ಯಾಂಟಿಕ್ ಬಂಡಾಯ, ಅದು ಒಂದು ಮಟ್ಟಿಗೆ ಪ್ರತಿಗಾಮಿಯಾದುದು, ಕೆಲ ಮಟ್ಟಿಗೆ ಕ್ರಾಂತಿಕಾರಿಯಾದುದು. ರೊಮ್ಯಾಂಟಿಕ್‌ರ ಗುರಿ ಶಾಂತಿ ಮತ್ತು ನಿರಾಳತೆಗಳಲ್ಲ, ವೀರ್ಯವಂತ ರಾಗೋದ್ವೇಗಗಳಿಂದ ಕೂಡಿದ ವೈಯಕ್ತಿಕ ಬದುಕು. ಅವರಿಗೆ ಕೈಗಾರಿಕೀಕರಣದ ಬಗ್ಗೆ ಸಹಾನುಭೂತಿಯಿರಲಿಲ್ಲ, ಅದು ಕುರೂಪವೆಂಬ, ಹಣಸಂಪಾದನೆಯು ಅನೈತಿಕ ಆತ್ಮದ ಕೆಟ್ಟ ದಾರಿ ಎಂಬ, ಜೊತೆಗೆ ಆಧುನಿಕ ಆರ್ಥಿಕ ಸಂಸ್ಥೆಗಳ ಬೆಳವಣಿಗೆಯು ವ್ಯಕ್ತಿ ಸ್ವಾತಂತ್ರ್ಯದಲ್ಲಿ ಮೂಗು ತೂರಿಸುವುದೆಂಬ ಭಾವನೆಯಿತ್ತು. ಕ್ರಾಂತಿನಂತರದ ಅವಧಿಯಲ್ಲಿ ಅವು ರಾಜಕೀಯವನ್ನು ರಾಷ್ಟ್ರೀಯತೆಯ ಮೂಲಕ ನಿಧಾನಗತಿಯಲ್ಲಿ ಹೊಕ್ಕವು; ಪ್ರತಿ ರಾಷ್ಟ್ರಕ್ಕೂ ತನ್ನದೇ ಆದ ಏಕೀಕೃತ ಆತ್ಮವಿದೆ, ಮತ್ತು ಎಲ್ಲಿಯವರೆಗೆ ರಾಷ್ಟ್ರೀಯ ಗಡಿಗಳು ಮತ್ತು ಅವಕಾಶದ ಗಡಿಗಳು ಭಿನ್ನವಾಗಿರುವುವೋ ಅಲ್ಲಿಯವರೆಗೆ ಅವು ಸ್ವತಂತ್ರವಾಗಿರಲಾರವು ಎಂಬ ಭಾವನೆ ಬೆಳೆಯಿತು. ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗದಲ್ಲಿ, ರಾಷ್ಟ್ರೀಯತೆಯು ಅತ್ಯಂತ ಪ್ರಬಲ ಕ್ರಾಂತಿಕಾರಿ ತತ್ವವಾಗಿತ್ತು, ಅದನ್ನು ಬಹುತೇಕ ರೊಮ್ಯಾಂಟಿಕ್‌ರು ತಮ್ಮದಾಗಿಸಿಕೊಂಡರು.

ಒಟ್ಟಾರೆ ರೊಮ್ಯಾಂಟಿಕ್ ಚಳುವಳಿಯ ಲಕ್ಷಣವೆಂದರೆ, ಉಪಯುಕ್ತವಾದವುಗಳ ಸ್ಥಾನವನ್ನು ರಸಾಭಿಜ್ಞ ಮಾನದಂಡಗಳು ಆಕ್ರಮಿಸಿದ್ದು. ಎರೆಹುಳು ಉಪಯುಕ್ತ, ಆದರೆ ಸುಂದರವಲ್ಲ; ಹುಲಿ ಸುಂದರ, ಆದರೆ ಉಪಯುಕ್ತವಲ್ಲ. ಡಾರ್ವಿನ್ (ಅವನು ರೊಮ್ಯಾಂಟಿಕ್ ಅಲ್ಲ) ಎರೆಹುಳುವನ್ನು ಹೊಗಳಿದ; ಬ್ಲೇಕ್ ಹುಲಿಯನ್ನು ಹೊಗಳಿದ. ರೊಮ್ಯಾಂಟಿಕ್‌ರ ನೀತಿಯಲ್ಲಿ ಮೂಲತಃ ರಸಾಭಿಜ್ಞ ಗುರಿಗಳಿದ್ದವು. ಆದರೆ ರೊಮ್ಯಾಂಟಿಕ್‌ರ ಲಕ್ಷಣವನ್ನು ಸೂಚಿಸಲು, ರಸಾಭಿಜ್ಞ ಉದ್ದೇಶಗಳ ಪ್ರಾಮುಖ್ಯವನ್ನು ಮಾತ್ರವಲ್ಲದೆ, ಅವರು ತಮ್ಮ ಪೂರ್ವಿಕರದಕ್ಕಿಂತ ಭಿನ್ನವಾದ ಸೌಂದರ್ಯಪ್ರಜ್ಞೆ ಹೊಂದಿದ ಪರಿಯನ್ನು ಗಣನೆಗೆ ತೆಗೆದುಕೊಳ್ಳುವುದು ಆವಶ್ಯಕ. ಇವುಗಳಲ್ಲಿ ಅವರ ಗಾಥಿಕ್ ವಾಸ್ತುಶಿಲ್ಪದ ಒಲವು ಬಹುವಾಗಿ ಎದ್ದು ಕಾಣುವ ಅಂಶ. ಯಾವುದೇ ಗ್ರಾಮೀಣ ದೃಶ್ಯಕ್ಕಿಂತ ಡಾ। ಜಾನ್‌ಸನ್ ಮೆಚ್ಚಿದ್ದು ಫ್ಲೀಟ್ ರಸ್ತೆಯನ್ನು; ಅಲ್ಲದೆ ಯಾರಿಗೆ ಲಂಡನ್ ಬೇಸರವಾಗಿದೆಯೋ ಅವನಿಗೆ ಬದುಕೇ ಬೇಸರವಾಗಿರಬೇಕು ಎಂಬ ಅಭಿಪ್ರಾಯದವನಾಗಿದ್ದ. ರೂಸೋನ ಪೂರ್ವಿಕರು ಹಳ್ಳಿಗಳಲ್ಲಿ ಯಾವುದನ್ನಾದರೂ ಮೆಚ್ಚಿಕೊಂಡಿದ್ದರೆ ಅದು ಹಸಿರುಮಯವಾದ ಹುಲ್ಲುಗಾವಲು ಮತ್ತು ಹುಲ್ಲು ಮೇಯುವ ಹಸುಗಳಿಂದ ಕೂಡಿದ ಫಲವಂತಿಕೆಯ ದೃಶ್ಯವನ್ನು. ಒಬ್ಬ ಸ್ವಿಸ್ ಆಗಿದ್ದ ರೂಸೋ ಆಲ್ಪ್ಸ್ ಅನ್ನು ಮೆಚ್ಚಿದ್ದು ಸಹಜವೇ ಆಗಿತ್ತು. ಅವನ ಶಿಷ್ಯರ ಕಾದಂಬರಿಗಳು ಮತ್ತು ಕತೆಗಳಲ್ಲಿ ನಾವು ಕಾಣುವುದು ರಭಸವಾಗಿ ಹರಿಯುವ ನಿರ್ಝರಗಳು, ಭಯಾನಕ ಕಂದಕಗಳು, ದಾರಿಯಿಲ್ಲದ ಅರಣ್ಯಗಳು, ಗುಡುಗುಮಿಂಚುಸಿಡಿಲುಗಳು, ಸಮುದ್ರದಲ್ಲಿ ಎದ್ದ ಬಿರುಗಾಳಿಗಳು, ಮುಂತಾದ ಅನುಪಯುಕ್ತವೂ ವಿನಾಶಕಾರಿಗಳೂ ಪ್ರಚಂಡವೂ ಆದವುಗಳನ್ನು. ಈ ಬದಲಾವಣೆಯು ಹೆಚ್ಚುಕಡಿಮೆ ಶಾಶ್ವತವೆಂಬಂತೆ ತೋರುತ್ತದೆ; ಈಗಂತೂ ಬಹುತೇಕ ಪ್ರತಿಯೊಬ್ಬನೂ ಬಯಸುವುದು ಹಸಿರು ಪೈರುಪಚ್ಚೆ ಮತ್ತು ತೂಗಾಡುವ ತೆನೆಗಳಿರುವ ಹೊಲಗಳಿಗಿಂತ ನಯಾಗರ ಮತ್ತು ಗ್ರಾಂಡ್ ಕ್ಯಾನ್ಯನ್‌ಗಳನ್ನು. ಈ ದೃಶ್ಯಗಳ ಬಗೆಗಿನ ಒಲವಿಗೆ ಪ್ರವಾಸಿ ಹೋಟಲ್‌ಗಳು ಪುರಾವೆ ಒದಗಿಸಬಲ್ಲವು.

ರೊಮ್ಯಾಂಟಿಕ್‌ರ ಮನೋಭಾವವು ಅತ್ಯಂತ ಚೆನ್ನಾಗಿ ಕಾಣಬರುವುದು ಅವರ ಕತೆ ಕಾದಂಬರಿಗಳಲ್ಲಿ. ಅವರಿಗೆ ವಿಚಿತ್ರವಾದವುಗಳನ್ನು ಕಂಡರೆ ತುಂಬ ಇಷ್ಟ: ದೆವ್ವಗಳು, ಹಳೆಯ ಪಾಳುಬಿದ್ದ ಕೋಟೆಗಳು, ಒಮ್ಮೆ ದೊಡ್ಡ ಕುಟುಂಬಗಳೆನ್ನಿಸಿಕೊಂಡಿದ್ದು ಅವುಗಳಲ್ಲಿ ಈಗ ಉಳಿದಿರುವ ಒಬ್ಬನೇ ವಿಷಾದಭರಿತ ವ್ಯಕ್ತಿ, ವಶೀಕರಣ ಮುಂತಾದ ನಿಗೂಢ ವಿದ್ಯೆಗಳನ್ನು ಕಲಿತು ಅವುಗಳನ್ನು ಪ್ರಯೋಗಿಸುವ ವ್ಯಕ್ತಿ, ಪತನಗೊಳ್ಳುತ್ತಿರುವ ನಿರಂಕುಶಪ್ರಭುಗಳು, ಮತ್ತು ಕಡಲ್ಗಳ್ಳರು. ಫೀಲ್ಡಿಂಗ್ ಮತ್ತು ಸ್ಮಾಲೆಟ್ ಬರೆದದ್ದು ಸಾಮಾನ್ಯ ಜನರ ಬಗ್ಗೆ, ಸಂಭವಿಸಬಹುದಾದ ಘಟನೆಗಳ ಬಗ್ಗೆ, ಅಂತೆಯೇ ರೊಮ್ಯಾಂಟಿಕ್ ಮನೋಭಾವದ ವಿರುದ್ಧ ಪ್ರತಿಕ್ರಿಯಿಸಿದ

ವಾಸ್ತವವಾದಿಗಳು. ಆದರೆ ರೊಮ್ಯಾಂಟಿಕ್‌ರಿಗೆ ಅವೆಲ್ಲ ತೀರ ಕಳಪೆ ಸಾಮಗ್ರಿಗಳು; ಅವರನ್ನು ಆಕರ್ಷಿಸಿದ್ದು ಭವ್ಯವಾದವು, ಪುರಾತನವಾದವು, ಮತ್ತು ಭಯಾನಕತೆಗಳು. ಆಶ್ಚರ್ಯಕರವಾದುದರತ್ತ ಒಯ್ಯುವುದಾದರೆ, ಒಂದು ಬಗೆಯ ಸಂಶಯಾಸ್ಪದ ವಿಜ್ಞಾನವನ್ನು ಬಳಸಿಕೊಳ್ಳಬಹುದು; ಆದರೆ ಮುಖ್ಯವಾಗಿ ಮಧ್ಯಯುಗಗಳಲ್ಲಿ, ಸಮಕಾಲೀನದಲ್ಲಿ ಯಾವುದು ತೀರ ಪ್ರಾಚೀನವೋ ಅಂಥವು ರೊಮ್ಯಾಂಟಿಕ್‌ರನ್ನು ಬಹುವಾಗಿ ಆಕರ್ಷಿಸುತ್ತಿದ್ದವು. ಹಳೆಯದೋ ಸಮಕಾಲೀನವಾದದ್ದೋ, ಎಷ್ಟೋ ಸಲ ಅವರು ವಾಸ್ತವತೆಯಿಂದ ದೂರವಾಗುತ್ತಿದ್ದರು. 'ದ ಏನ್ಷಿಯಂಟ್ ಮ್ಯಾರಿನರ್' ಈ ವಿಷಯದಲ್ಲಿ ಪ್ರಾತಿನಿಧಿಕವಾದುದು, ಅಲ್ಲದೆ ಕೊಲೆರಿಜ್‌ನ 'ಕುಬ್ಲಾ ಖಾನ್' ಮಾರ್ಕೋ ಪೋಲೋನ ಐತಿಹಾಸಿಕ ರಾಜನಲ್ಲ. ರೊಮ್ಯಾಂಟಿಕ್‌ರ ಭೂಗೋಳವು ಕುತೂಹಲದಾಯಕವಾದುದು: ಕ್ಸನಡುವಿನಿಂದ 'ಖೊರಾಸಮಿಯನ್ ತೀರ'ದವರೆಗೆ – ಅವರಲ್ಲಿ ಆಸಕ್ತಿ ಹುಟ್ಟಿಸುವುದು ಇಂಥ ಏಷ್ಯಾದ ದೂರದ ಅಥವಾ ಪ್ರಾಚೀನವಾದ ಸ್ಥಳಗಳು.

ತನ್ನ ಮೂಲವನ್ನು ರೂಸೋನಲ್ಲಿ ಹೊಂದಿದ್ದರೂ, ರೊಮ್ಯಾಂಟಿಕ್ ಚಳುವಳಿಯು ಮೊದಲಿಗೆ ಪ್ರಮುಖವಾಗಿ ಜರ್ಮನ್ ಆಗಿತ್ತು. ಜರ್ಮನ್ ರೊಮ್ಯಾಂಟಿಕ್‌ರು ಹದಿನೆಂಟನೆಯ ಶತಮಾನದ ಕೊನೆಯ ಭಾಗದ ಹೊತ್ತಿಗೆ ಚಿಕ್ಕ ಪ್ರಾಯದವರಾಗಿದ್ದರು, ಮತ್ತು ಚಿಕ್ಕವರಾಗಿದ್ದಾಗಲೇ ಅವರು ತಮ್ಮ ಮನೋಭಾವದ ಲಕ್ಷಣಕ್ಕೆ ತೀರ ಹತ್ತಿರವಾದುದಕ್ಕೆ ಅಭಿವ್ಯಕ್ತಿ ನೀಡಿದರು. ಚಿಕ್ಕ ಪ್ರಾಯದಲ್ಲಿ ಸಾಯುವ ಅದೃಷ್ಟವಿಲ್ಲದವರು ಕೊನೆಯಲ್ಲಿ ಕ್ಯಾಥೋಲಿಕ್ ಚರ್ಚ್‌ನ ಜೊತೆ ಗುರುತಿಸಿಕೊಳ್ಳುವ ಮೂಲಕ ತಮ್ಮ ವೈಯುಕ್ತಿಕತೆಯುನ್ನು ಕೊನೆಗೊಳಿಸಿಕೊಂಡರು. (ತಾನು ಪ್ರಾಟೆಸ್ಟೆಂಟ್ ಆಗಿ ಹುಟ್ಟಿದ್ದರೆ ಒಬ್ಬ ರೊಮ್ಯಾಂಟಿಕ್ ಕ್ಯಾಥೋಲಿಕ್ ಆಗಬಹುದಾಗಿತ್ತು, ಆದರೆ ಇತರತ್ರ ಅವನು ಕ್ಯಾಥೋಲಿಕ್ ಆಗಲು ಸಾಧ್ಯವಿರಲಿಲ್ಲ, ಯಾಕೆಂದರೆ ಕ್ಯಾಥೋಲಿಕ್ ಮನೋಧರ್ಮದಲ್ಲಿ ಬಂಡಾಯವನ್ನು ಸೇರಿಸುವುದು ಆವಶ್ಯಕವಾಗಿತ್ತು). ಜರ್ಮನ್ ರೊಮ್ಯಾಂಟಿಕ್‌ರು ಕಾಲೆರಿಜ್ ಮತ್ತು ಶೆಲ್ಲಿಯನ್ನು ಪ್ರಭಾವಿಸಿತು, ಮತ್ತು ಜರ್ಮನ್ ಪ್ರಭಾವದ ಹೊರತಾಗಿಯೂ ಆ ಮನೋಭಾವವು ಇಂಗ್ಲಂಡ್‌ನಲ್ಲಿಯೂ ಹತ್ತೊಂಬತ್ತನೆಯ ಶತಮಾನದ ಮೊದಲ ವರ್ಷಗಳಲ್ಲಿ ಸಾಮಾನ್ಯವಾಗಿತ್ತು. ಫ್ರಾನ್ಸ್‌ನಲ್ಲಿ, ದುರ್ಬಲ ಸ್ವರೂಪದಲ್ಲಿ, ಅದು ರಾಜಪ್ರಭುತ್ವ ಪುನರುದ್ಧಾರದ ನಂತರ ವಿಕ್ಟರ್ ಹ್ಯೂಗೋವರೆಗೂ ಮುನ್ನೆಲೆಗೆ ಬಂತು. ಅಮೆರಿಕದಲ್ಲಿ, ಬಹುತೇಕ ಅದರ ಶುದ್ಧ ಸ್ವರೂಪದಲ್ಲಿ ಮೆಲ್‌ವಿಲ್, ಥೋರೋ, ಮತ್ತು ಬ್ರೂಕ್ ಫಾರ್ಮ್‌ರಲ್ಲಿ, ಮತ್ತು ಸ್ವಲ್ಪ ಮಟ್ಟಿಗಿನ ಸೌಮ್ಯ ರೂಪದಲ್ಲಿ ಎಮರ್ಸನ್ ಮತ್ತು ಹಾದಾರ್ನ್‌ರಲ್ಲಿ ಕಾಣಬಹುದು. ರೊಮ್ಯಾಂಟಿಕ್‌ರು ಕ್ಯಾಥೋಲಿಕ್ ಮನೋಭಾವದ ಕಡೆಗೆ ಒಲವು ಹೊಂದಿದ್ದರೂ, ಅವರ

ಮನೋಭಾವದ ವೈಯಕ್ತಿಕತೆಯಲ್ಲಿ ಅಳಿಸಲಾರದ ಒಂದು ಬಗೆಯ ಪ್ರಾಟೆಸ್ಟೆಂಟ್ ಮನೋಭಾವ ಸೇರಿಹೋಗಿತ್ತು; ಪದ್ಧತಿಗಳನ್ನೂ, ಅಭಿಪ್ರಾಯಗಳನ್ನೂ ಸಂಸ್ಥೆಗಳನ್ನೂ ಶಾಶ್ವತವಾಗಿ ನೆಲೆಗೊಳಿಸುವುದರಲ್ಲಿ ಅವರು ಪ್ರಾಟೆಸ್ಟೆಂಟ್ ದೇಶಗಳಿಗೆ ಸಂಪೂರ್ಣವಾಗಿ ಸೀಮಿತರಾಗಿದ್ದರು.

ಇಂಗ್ಲಂಡ್‌ನಲ್ಲಿನ ರೊಮ್ಯಾಂಟಿಕ್ ಮನೋಭಾವದ ಆರಂಭವನ್ನು ವಿಡಂಬನ ಸಾಹಿತಿಗಳ ಬರಹಗಳಲ್ಲಿ ಕಾಣಬಹುದು. ಶೆರಿಡನ್‌ನ 'ರೈವಲ್ಸ್' (೧೭೭೫) ನಲ್ಲಿ ನಾಯಕಿಯು ಶ್ರೀಮಂತನನ್ನು ಕೈಹಿಡಿದು ತಂದೆತಾಯಿಯರನ್ನು ಸಂತೋಷಪಡಿಸುವುದಕ್ಕಿಂತ ಹೆಚ್ಚಾಗಿ ಪ್ರೇಮಕ್ಕಾಗಿ ಒಬ್ಬ ಬಡವನನ್ನು ಮದುವೆಯಾಗಲು ನಿರ್ಧರಿಸುತ್ತಾಳೆ, ಆದರೆ ತಾಯ್ತಂದೆಯರು ಆಯ್ಕೆ ಮಾಡಿದ್ದವನು ಅವಳ ಪ್ರೇಮವನ್ನು ಗೆಲ್ಲುವುದಕ್ಕಾಗಿ ಒಂದು ಸೃಷ್ಟಿತ ಹೆಸರನ್ನು ಹೊಂದಿ ತಾನು ಬಡವನೆಂದು ತೋರಿಸಿಕೊಳ್ಳುತ್ತಾನೆ. ಜೇನ್ ಆಸ್ಟೆನ್ ತನ್ನ 'ನಾರ್ದೇಂಜರ್ ಅಬೆ' ಮತ್ತು 'ಸೆನ್ಸ್ ಅಂಡ್ ಸೆನ್ಸಿಬಿಲಿಟಿ'ಗಳಲ್ಲಿ (೧೭೯೭-೮) ರೊಮ್ಯಾಂಟಿಕ್ ಮನೋಭಾವವನ್ನು ಗೇಲಿ ಮಾಡುತ್ತಾಳೆ. 'ನಾರ್ದೇಂಜರ್ ಅಬೆ'ಯ ನಾಯಕಿಯು ಶ್ರೀಮತಿ ರಾಡ್‌ಕ್ಲಿಫ್‌ಳ ೧೭೯೪ ರಲ್ಲಿ ಪ್ರಕಟವಾದ 'ಮಿಸ್ಟರೀಸ್ ಆಫ್ ರುಡಾಲ್ಫೋ' ದಲ್ಲಿನ ಅತಿರೇಕ ರೊಮ್ಯಾಂಟಿಕ್ ಮನೋಭಾವದಿಂದಾಗಿ ಹಾದಿ ತಪ್ಪುತ್ತಾಳೆ. ಇಂಗ್ಲಂಡ್‌ನಲ್ಲಿನ ಮೊದಲ ಒಳ್ಳೆಯ ರೊಮ್ಯಾಂಟಿಕ್ ಕೃತಿಯು – ಏಕಾಂಗಿ ಸ್ವೀಡನ್‌ಬೊರ್ಗಿಯನ್ ಆಗಿದ್ದ ಹಾಗೂ ಯಾವುದೇ ಚಳವಳಿಯಲ್ಲಿ ಭಾಗಿಯಾಗದ ಬ್ಲೇಕ್‌ನದರ ಹೊರತಾಗಿ – ೧೭೯೯ ರಲ್ಲಿ ಪ್ರಕಟವಾದ ಕಾಲೆರಿಜ್‌ನ 'ಏನ್ಷಿಯಂಟ್ ಮ್ಯಾರಿನರ್'. ಆ ಮುಂದಿನ ವರ್ಷ, ದುರದೃಷ್ಟವಶಾತ್ ವೆಡ್ಜ್‌ವುಡ್ಸ್ ಕೊಟ್ಟ ಹಣದ ಕಾರಣದಿಂದಾಗಿ, ಅವನು ಗೋಟಿಂಜೆನ್‌ಗೆ ಹೋಗಿ ಕ್ಯಾಂಟ್‌ನಿಂದ ಆವೃತನಾದ, ಅದರಿಂದ ಅವನ ಕಾವ್ಯಶಕ್ತಿಯೇನೂ ಉತ್ತಮಗೊಳ್ಳಲಿಲ್ಲ.

ಕಾಲೆರಿಜ್‌ನ ನಂತರ ವರ್ಡ್ಸ್‌ವರ್ತ್ ಮತ್ತು ಸದೆ ಪ್ರತಿಗಾಮಿಗಳಾಗಿದ್ದರು, ಕ್ರಾಂತಿ ಮತ್ತು ನೆಪೋಲಿಯನ್‌ರ ವಿರುದ್ಧದ ದ್ವೇಷವು ಇಂಗ್ಲಿಷ್ ರೊಮ್ಯಾಂಟಿಕ್ ಚಳುವಳಿಗೆ ತಾತ್ಕಾಲಿಕ ನಿಲುಗಡೆಯನ್ನು ತಂದಿತು. ಅದರೆ ಅದು ಬೇಗ ಬೈರನ್, ಶೆಲ್ಲಿ, ಮತ್ತು ಕೀಟ್ಸ್‌ರಿಂದ ಪುನರುಜ್ಜೀವನಗೊಂಡಿತು, ಒಂದು ಪ್ರಮಾಣದಲ್ಲಿ ಇಡೀ ವಿಕ್ಟೋರಿಯನ್ ಯುಗದಲ್ಲಿ ಮೇಲುಗೈ ಹೊಂದಿತ್ತು.

ಆಲ್ಪ್ಸ್‌ನ ರೊಮ್ಯಾಂಟಿಕ್ ದೃಶ್ಯದ ಹಿನ್ನೆಲೆಯಲ್ಲಿ ಬೈರನ್ ಜೊತೆ ಮಾಡಿದ ಸಂಭಾಷಣೆಯಿಂದ ಸ್ಫೂರ್ತಿಗೊಂಡು ಬರೆದ ಮೇರಿ ಶೆಲ್ಲಿಯ 'ಫ್ರಾಂಕೆನ್‌ಸ್ಟೈನ್' ಅನ್ನು ರೊಮ್ಯಾಂಟಿಕ್ ಮನೋಭಾವದ ಅನ್ಯೋಕ್ತಿರೂಪದ ಭವಿಷ್ಯವಾದಿ ಚರಿತ್ರೆಯೆಂದು ಪರಿಗಣಿಸಬಹುದು. ಗಾದೆ ಮಾತಿನಲ್ಲಿ ಕೇವಲ ದೈತ್ಯನಾಗಿರುವಂತೆ, 'ಫ್ರಾಂಕೆನ್‌ಸ್ಟೈನ್'ನ ದೈತ್ಯನು, ಮೊದಲಿಗೆ ಮಾನವ ವಿಶ್ವಾಸಕ್ಕಾಗಿ ಹಂಬಲಿಸುವ

ಸಾಧುವ್ಯಕ್ತಿಯಾಗಿದ್ದ, ಆದರೆ ತಾನು ವಿಶ್ವಾಸ ಗಳಿಸಲು ಪ್ರಯತ್ನಿಸುತ್ತಿದ್ದ ವ್ಯಕ್ತಿಗಳು ತನ್ನ ವಿಕೃತ ರೂಪದಿಂದಾಗಿ ತೋರಿಸುತ್ತಿದ್ದ ಭಯಾನಕತೆಯಿಂದಾಗಿ ದ್ವೇಷ ಮತ್ತು ಹಿಂಸೆಗಳನ್ನು ಅಳವಡಿಸಿಕೊಳ್ಳುವಂತಾಯಿತು. ಗೊತ್ತಾಗದ ರೀತಿಯಲ್ಲಿ ಅವನು ಗುಡಿಸಲಿನಲ್ಲಿದ್ದ ಒಂದು ಸಜ್ಜನಿಕೆಯ ಬಡ ಕುಟುಂಬವನ್ನು ನೋಡಿ ಒಳಗೊಳಗೇ ಅವರ ಶ್ರಮದಲ್ಲಿ ಸಹಾಯಕನಾದ. ಕೊನೆಗೆ ಅವರಿಗೆ ಗೊತ್ತಾಗಲು ನಿರ್ಧರಿಸಿದ.

'ಅವರನ್ನು ನೋಡಿದಷ್ಟೂ ಅವರ ರಕ್ಷಣೆ ಮಾಡುವ ಮತ್ತು ಅವರಿಗೆ ಸಹಾಯ ಮಾಡುವ ನನ್ನ ಬಯಕೆಯು ಹೆಚ್ಚಾಯಿತು; ಈ ಸ್ನೇಹಪರ ಜೀವಿಗಳಿಗೆ ತಾನು ಯಾರೆಂದು ತಿಳಿಯಬೇಕು ಮತ್ತು ಅವರ ಪ್ರೀತಿಗೆ ಪಾತ್ರನಾಗಬೇಕು, ಅವರ ಪ್ರೇಮಲ ನೋಟ ನನ್ನ ಮೇಲೆ ಬೀಳಬೇಕು ಎಂದು ನನ್ನ ಹೃದಯ ಕಾತರಿಸಿತು, ಅದು ನನ್ನ ಆಕಾಂಕ್ಷೆಯ ತುತ್ತತುದಿಯಾಗಿತ್ತು. ಅವರು ತಿರಸ್ಕಾರ ಮತ್ತು ಭಯಗಳಿಂದಾಗಿ ಯೋಚಿಸಲೂ ನನಗೆ ನನ್ನಿಂದ ಎಂದು ಧೈರ್ಯವಾಗಲಿಲ್ಲ.'

ಆದರೆ ಅವರು ಹಾಗೆಯೇ ಮಾಡಿದರು. ಇದರಿಂದಾಗಿ ತನ್ನಂತೆಯೇ ಇರುವ ಹೆಣ್ಣೊಂದನ್ನು ಸೃಷ್ಟಿಸಲು ಅವನು ಸೃಷ್ಟಿಕರ್ತನಲ್ಲಿ ಮೊರೆಯಿಟ್ಟ, ಮತ್ತು ಅದು ತಿರಸ್ಕೃತವಾದಾಗ, ತಾನು ಪ್ರೀತಿಸಿದವರನ್ನು ಒಬ್ಬರ ನಂತರ ಒಬ್ಬರನ್ನು ಕೊಲೆ ಮಾಡುವುದರಲ್ಲಿ ಫ್ರಾಂಕಿನ್‌ಸ್ಟೈನ್ ನಿರತನಾದ. ಎಲ್ಲರನ್ನು ಕೊಲೆ ಮಾಡಿದ ಮೇಲೆಯೂ, ಫ್ರಾಂಕಿನ್‌ಸ್ಟೈನ್‌ನ ಹೆಣವನ್ನು ನೋಡುತ್ತಿರುವಾಗಲೂ ದೈತ್ಯನ ಭಾವನೆಗಳು ಉದಾತ್ತವಾಗಿಯೇ ಇದ್ದವು:

'ಅವನೂ ನನ್ನ ಬಲಿಪಶುವೇ! ಅವನ ಕೊಲೆಯಿಂದ ನನ್ನ ಅಪರಾಧಗಳೆಲ್ಲ ಸಾಂಗಗೊಂಡವು; ನನ್ನ ದರಿದ್ರ ಪ್ರತಿಭೆಯ ಇರುವಿಕೆಯು ತನ್ನಲ್ಲಿಯೇ ಪೂರ್ಣಗೊಂಡಿದೆ! ಓ, ಫ್ರಾಂಕಿನ್‌ಸ್ಟೈನ್! ಉದಾರಿಯಾದ ಸ್ವನಿವೇದಿತ ಜೀವಿಯೇ! ನನ್ನ ಕ್ಷಮಿಸು ಎಂದು ಈಗ ನಿನ್ನನ್ನು ಕೇಳಿಕೊಳ್ಳುವುದರಿಂದೇನು ಪ್ರಯೋಜನ? ನಿನ್ನನ್ನು ಒಂದೇ ಸಮನೆ ನಾಶಮಾಡುತ್ತ ನೀನು ಪ್ರೀತಿಸಿದ ಎಲ್ಲರನ್ನೂ ನಾಶಗೈದೆ! ಅವನು ನಿರುದ್ವಿಗ್ನ, ನನಗೆ ಉತ್ತರಿಸಲಾರ .. .. ನನ್ನ ಭಯಾನಕ ಪಾಪಕೃತ್ಯಗಳ ಪಟ್ಟಿಯನ್ನು ನೋಡಿದಾಗ, ಚೆಲುವು ಮತ್ತು ಒಳಿತಿನ ಉದಾತ್ತತೆಗಳ ಬಗ್ಗೆ ಭವ್ಯವೂ ಅತ್ಯುಚ್ಚವೂ ಆದ ಕಾಣ್ಕೆಗಳು ತುಂಬಿದ ಆಲೋಚನೆಗಳ ಆ ಜೀವಿಯೇ ನಾನು ಎಂಬುದನ್ನು ನಂಬಲೇ ಸಾಧ್ಯವಿಲ್ಲ. ಆದರೆ ಅದು ಇರುವುದು ಹಾಗೆಯೇ; ಪತನಗೊಂಡ ದೇವತೆಯು ಕ್ರೂರ ದೆವ್ವವಾಗುತ್ತಾನೆ. ಆದರೂ ಒಂಟಿಯಾಗಿರುವಾಗ ದೇವರ ಮತ್ತು ಮಾನವನ ಶತ್ರುವಿಗೆ ಸ್ನೇಹಿತರು ಮತ್ತು ಒಡನಾಡಿಗಳಿದ್ದರು; ನಾನು ಒಂಟಿ!.'

ರೊಮ್ಯಾಂಟಿಕ್ ಸ್ವರೂಪವನ್ನು ಕಳಚಿಕೊಂಡರೂ, ಇದರಲ್ಲಿನ ಮಾನಸಿಕ ಚಿತ್ರವು ಅವಾಸ್ತವವಾಗಿಲ್ಲ, ಕಳ್ಳರು ಮತ್ತು ದೌರ್ಜನ್ಯಪೂರಿತ ರಾಜರ ಸಮಸ್ವರೂಪರನ್ನು

ಹುಡುಕುವುದಕ್ಕೆ ಇದು ಅನಿವಾರ್ಯ. ಕೈಸರ್ ಆಗಿದ್ದವನು ಡೂರ್ನ್‌ನಲ್ಲಿ ಇಂಗ್ಲಿಷ್ ಸಂದರ್ಶಕನೊಬ್ಬನಿಗೆ ತನ್ನನ್ನು ಈಗ ಯಾವ ಇಂಗ್ಲಿಷ್‌ರೂ ಪ್ರೀತಿಸುವುದಿಲ್ಲವೆಂದು ಹೇಳಿದನಂತೆ. ಏಳು ವರ್ಷದ ಹುಡುಗನೊಬ್ಬ ಮತ್ತೊಬ್ಬ ಹುಡುಗನನ್ನು ರೀಜೆಂಟ್ ಕಾಲುವೆಯಲ್ಲಿ ಮುಳುಗಿಸಿದ ಬಾಲಾಪರಾಧಿಯ ಬಗ್ಗೆ ಬರೆದ ತಮ್ಮ ಪುಸ್ತಕದಲ್ಲಿ ಡಾ। ಬರ್ಟ್ ಇದನ್ನು ಉಲ್ಲೇಖಿಸುತ್ತಾರೆ. ಅವನಿಗಿದ್ದ ಕಾರಣವೆಂದರೆ ತನ್ನ ಕುಟುಂಬದ ಸದಸ್ಯರಾಗಲೀ ಸಮಕಾಲೀನರಾಗಲೀ ಯಾರೂ ತನ್ನ ಬಗ್ಗೆ ವಿಶ್ವಾಸ ತೋರಿಸದಿರುವುದು. ಡಾ। ಬರ್ಟ್ ಅವನ ಬಗ್ಗೆ ಸಹಾನುಭೂತಿಯುಳ್ಳವರಾಗಿದ್ದರು, ಹೀಗಾಗಿ ಅವನು ಮುಂದೆ ಗೌರವಾನ್ವಿತ ಪ್ರಜೆಯಾದ; ಆದರೆ ಫ್ರಾಂಕಿನ್‌ಸ್ಟೈನ್‌ನ ರಾಕ್ಷಸತನವನ್ನು ಬದಲಾಯಿಸುವ ಡಾ। ಬರ್ಟ್ ಇರಲಿಲ್ಲ.

ತಪ್ಪು ರೊಮ್ಯಾಂಟಿಕ್‌ರ ಮನಃಸ್ಥಿತಿಯದಲ್ಲ: ತಪ್ಪು ಇರುವುದು ಅವರ ಮೌಲ್ಯಗಳ ಮಾನದಂಡದಲ್ಲಿ. ಅವರು ಮೆಚ್ಚಿದ್ದು ಯಾವುದೇ ಬಗೆಯ ಹಾಗೂ ಯಾವುದೇ ಸಾಮಾಜಿಕ ಪರಿಣಾಮಗಳ ಗಾಢ ಭಾವರಾಗಗಳನ್ನು. ರೊಮ್ಯಾಂಟಿಕ್ ಪ್ರೇಮವು, ಅದರಲ್ಲೂ ಭಗ್ನವಾದಾಗ, ಅವರ ಒಪ್ಪಿಗೆಯನ್ನು ಪಡೆಯುವುದರಲ್ಲಿ ಮೇಲುಗೈ ಪಡೆದಿತ್ತು, ಆದರೆ – ದ್ವೇಷ, ವಿಷಾದ ಮತ್ತು ಮಾತ್ಸರ್ಯ, ಖೇದ ಮತ್ತು ಹತಾಶೆ, ಹಿಂಸಾತ್ಮಕ ಹೆಮ್ಮೆ ಮತ್ತು ಅನ್ಯಾಯವಾದಿ ದಮನಿತರಾದವರ ಕೋಪ, ಯುದ್ಧದ ತೀವ್ರತೆ ಮತ್ತು ಗುಲಾಮರ ಮತ್ತು ಹೇಡಿಗಳ ಬಗೆಗಿನ ತಿರಸ್ಕಾರ ಮುಂತಾದ – ಬಹುಪಾಲು ಗಾಢ ರಾಗಭಾವಗಳು ಹಾನಿಕಾರಕವಾದವು. ಹೀಗಾಗಿ ರೊಮ್ಯಾಂಟಿಕ್ ಮನೋಭಾವವು, ಅದರಲ್ಲೂ ಬೈರನ್ ರೀತಿಯದು, ಉತ್ತೇಜಿಸಿದ ಮಾನವನ ಸ್ವಭಾವವು ಹಿಂಸಾತ್ಮಕವೂ ಸಮಾಜವಿರೋಧಿಯೂ ಆದುದು, ಅನಿಯಂತ್ರಿತ ಬಂಡಾಯಗಾರ ಅಥವಾ ಗೆದ್ದ ಪ್ರಜಾಪೀಡಕನದು.

ಈ ಮನೋಭಾವವು ಗುರಿಯಾಗಿಸಿಕೊಳ್ಳುವುದು ಮನುಷ್ಯನ ಸ್ವಭಾವ ಮತ್ತು ಅವನ ಪರಿಸ್ಥಿತಿಗಳ ಆಳವನ್ನು. ಸ್ವಹಿತಾಸಕ್ತಿಯಿಂದ ಮನುಷ್ಯನು ಸಮೂಹಜೀವಿಯಾಗಿದ್ದಾನೆ, ಆದರೆ ಪ್ರವೃತ್ತಿಯಲ್ಲಿ ಮಾತ್ರ ಬಹುತೇಕ ಪಾಲು ಒಂಟಿಯಾಗಿದ್ದಾನೆ; ಹೀಗಾಗಿ ಆ ಸ್ವಹಿತಾಸಕ್ತಿಯನ್ನು ಪುಷ್ಟಿಗೊಳಿಸಲು ಮತಧರ್ಮ ಮತ್ತು ನೈತಿಕತೆಗಳು ಆವಶ್ಯಕವೆನಿಸುತ್ತವೆ. ಆದರೆ ಮುಂದಿನ ಅನುಕೂಲಗಳಿಗಾಗಿ ಇಂದಿನ ತೃಪ್ತಿಗಳನ್ನು ಬಲಿಗೊಡುವುದು ಎಡವಟ್ಟಿನದು: ಅಲ್ಲದೆ ರಾಗಭಾವಗಳನ್ನು ಉದ್ರೇಕಿಸಿದಾಗ ಸಾಮಾಜಿಕ ನಡಾವಳಿಯ ವಿವೇಕಯುತ ನಿಯಂತ್ರಣಗಳನ್ನು ಸಹಿಸಿಕೊಳ್ಳಲು ಕಷ್ಟವೆನಿಸುತ್ತದೆ. ಅಂಥ ಸಂದರ್ಭಗಳಲ್ಲಿ ಅವುಗಳನ್ನು ಮೀರುವವರು ತಮ್ಮ ಆಂತರಿಕ ಸಂಘರ್ಷವನ್ನು ಕಡೆಗಣಿಸಿ ಹೊಸ ಶಕ್ತಿಯನ್ನೂ ಅಧಿಕಾರವನ್ನೂ ಪಡೆದುಕೊಂಡು, ಕೊನೆಯಲ್ಲಿ ಅವು ವಿನಾಶಕಾರಕವೆಂದು ಅನ್ನಿಸಿದರೂ, ಅಲ್ಲಿಯವರೆಗೆ ದೇವಸಮಾನ ಆನಂದವನ್ನು ಅನುಭವಿಸಿತ್ತಾರೆ; ಅಂಥ ಆನಂದವು

ಮಹಾ ಅನುಭಾವಿಗಳಿಗೆ ಪರಿಚಯವಿರಬಹುದಾದರೂ ಅದನ್ನು ಸಾಮಾನ್ಯ ಸದ್ಗುಣಗಳಿಂದ ಸಾಧಿಸಲು ಆಗುವುದಿಲ್ಲ. ಅವರ ಏಕಾಕಿತನವು ಅದನ್ನು ಸಮರ್ಥಿಸುತ್ತದೆ, ಆದರೆ ಬೌದ್ಧಿಕತೆಯು ಉಳಿದಿದ್ದರೆ ಈ ಸಮರ್ಥನೆಯು ಪೌರಾಣಿಕತೆಯ ವೇಷ ತೊಡುತ್ತದೆ. ಅನುಭಾವಿಯು ದೇವರಲ್ಲಿ ಐಕ್ಯನಾಗುತ್ತಾನೆ, ಅನಂತವಾದುದರ ಧ್ಯಾನದಲ್ಲಿ ಅವನು ತನ್ನ ನೆರೆಹೊರೆಯವರ ಬಗೆಗಿನ ಕರ್ತವ್ಯಗಳಿಂದ ಮುಕ್ತನಾದೆನೆಂದು ಭಾವಿಸುತ್ತಾನೆ. ಅನಿಯಂತ್ರಿತ ಬಂಡಾಯಗಾರನು ಮತ್ತೂ ಉತ್ತಮವಾದುದನ್ನು ಸಾಧಿಸುತ್ತಾನೆ: ತಾನು ದೇವರಲ್ಲಿ ಒಂದಾದೆನೆಂದು ಅವನು ಭಾವಿಸುವುದಿಲ್ಲ, ದೇವರೇ ಆಗಿಬಿಟ್ಟೆನೆಂದುಕೊಳ್ಳುತ್ತಾನೆ. ಭೌತದ್ರವ್ಯ ಮತ್ತು ನೆರೆಹೊರೆಯವರಿಗೆ ನಾವು ಅಧೀನವಾಗಿರುವುದನ್ನು ಪ್ರತಿನಿಧಿಸುವ ಸತ್ಯ ಮತ್ತು ಕರ್ತವ್ಯಗಳು ದೇವರೇ ಆಗಿಬಿಟ್ಟವನಿಗೆ ಅನ್ವಯಿಸುವುದೇ ಇಲ್ಲ; ಅವನು ಸತ್ಯ ಸ್ಥಾಪಕ, ಕರ್ತವ್ಯ ಅವನು ಆಜ್ಞಾಪಿಸುವುದು. ನಾವೆಲ್ಲ ಒಂಟಿಯಾಗಿಯೇ ದುಡಿಮೆಯೇ ಇಲ್ಲದೆ ಬದುಕುವ ಹಾಗಿದ್ದರೆ ಎಲ್ಲರೂ ಸ್ವಾತಂತ್ರ್ಯದ ಈ ಪರಮಾನಂದವನ್ನು ಅನುಭವಿಸಬಹುದಾಗಿತ್ತು, ನನಗೆ ಅಂಥದು ಸಾಧ್ಯವಿಲ್ಲ, ಅಂಥ ಆನಂದವು ಹುಚ್ಚರಿಗೂ ಸರ್ವಾಧಿಕಾರಿಗಳಿಗೂ ದೊರೆಯುವಂಥದು.

ಸಾಮಾಜಿಕ ಬಂಧಗಳ ವಿರುದ್ಧದ ಏಕಾಕಿತನ ಪ್ರವೃತ್ತಿಯು ಬಂಡಾಯವ ರೊಮ್ಯಾಂಟಿಕ್ ಚಳುವಳಿಯೆಂದು ಕರೆಯಲಾಗುವುದರ ತತ್ವಜ್ಞಾನ; ಅದು – ರಾಜಕೀಯ, ಮತ್ತು ಭಾವನೆಗಳ ಕೀಲಿಕೈ ಆಗಿದ್ದುದು ಮಾತ್ರವಲ್ಲದೆ – ಅದನ್ನು ಈಗಿನ ಪೀಳಿಗೆಯಲ್ಲೂ ಕಾಣಬಹುದು. ಜರ್ಮನ್ ಆದರ್ಶವಾದಿಗಳ ಪ್ರಭಾವದ ತತ್ವಜ್ಞಾನವು ಸ್ವಾತ್ಮೈಕವಾಯಿತು (ಸಾಲಿಪ್ಸಿಸ್ಟಿಕ್); ಆತ್ಮವೃದ್ಧಿಯನ್ನು ನೈತಿಕತೆಯ ಮೂಲತತ್ವವೆಂದು ಘೋಷಿಸಲಾಯಿತು. ಭಾವನೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಏಕಾಕಿತನದ ಹುಡುಕಾಟ ಮತ್ತು ರಾಗಭಾವ ಮತ್ತು ಆರ್ಥಿಕತೆಯ ಆವಶ್ಯಕತೆಗಳು ರುಚಿಯಿಲ್ಲದ ರಾಜಿಯಾಗಬೇಕಾಯಿತು. ಡಿ.ಎಚ್. ಲಾರೆನ್ಸ್‌ನ 'ದ್ವೀಪಗಳನ್ನು ಪ್ರೀತಿಸಿದವನ ಕತೆ'ಯ ನಾಯಕನು ಅಂಥ ರಾಜಿಯನ್ನು ಹೆಚ್ಚು ಹೆಚ್ಚಾಗಿ ಧಿಕ್ಕರಿಸುತ್ತ ಹೋದವನು, ಮತ್ತು ಸಂಪೂರ್ಣ ಏಕಾಕಿತನದ ಆನಂದದಲ್ಲಿ ಕೊನೆಗೆ ಹಸಿವು ಮತ್ತು ಚಳಿಯಿಂದಾಗಿ ಸತ್ತವನು; ಆದರೆ ಏಕಾಕಿತನವನ್ನು ಹೊಗಳುವ ಲೇಖಕರು ಈ ಮಟ್ಟದ ಸುಸಂಗತೆಯನ್ನು ಸಾಧಿಸಲಿಲ್ಲ. 'ನಾಗರಿಕ ಬದುಕಿನ ಸೌಲಭ್ಯಗಳು ಸಂತನಿಗೆ ದೊರೆಯುವುದಿಲ್ಲ, ಪುಸ್ತಕಗಳನ್ನು ಬರೆಯುವ ಅಥವಾ ಕಲಾಕೃತಿಗಳನ್ನು ನಿರ್ಮಿಸುವ ಹಂಬಲವುಳ್ಳವನು, ತನ್ನ ಕೃತಿಗಗಳನ್ನು ಸಿದ್ಧಪಡಿಸಬೇಕಾದರೆ, ಇತರರನ್ನು ಓಲೈಸಬೇಕು. ಏಕಾಕಿತನದ ಭಾವನೆಯನ್ನು ಅನುಭವಿಸಲು ತನ್ನ ಅಹಂಗೆ ಧಕ್ಕೆಯುಂಟುಮಾಡುವ ಸಹಾಯಕರನ್ನು ತಡೆಗಟ್ಟಬೇಕು, ಅದು ಸಾಧ್ಯವಾಗುವುದು ಅವರು ಗುಲಾಮರಾದಾಗ ಮಾತ್ರ. ಆದರೆ ತೀವ್ರ

ಪ್ರೇಮವು ಮತ್ತಷ್ಟು ಕಷ್ಟಕರ ವಿಷಯ. ಗಾಢ ಪ್ರೇಮಿಗಳನ್ನು ಎಲ್ಲಿಯವರೆಗೆ ಸಾಮಾಜಿಕ ಕಟ್ಟುಪಾಡುಗಳ ವಿರುದ್ಧದ ಬಂಡಾಯಗಾರರೆಂದು ಪರಿಗಣಿಸಲಾಗುವುದೋ ಅಲ್ಲಿಯವರೆಗೆ ಅವರಿಗೆ ಮಾನ್ಯತೆ; ಆದರೆ ವಾಸ್ತವ ಬದುಕಿನಲ್ಲಿ ಅಂಥ ಪ್ರೇಮವೇ ಬಹು ಬೇಗ ಸಾಮಾಜಿಕ ಕಟ್ಟುಪಾಡಾಗುತ್ತದೆ, ಪ್ರೇಮಿಯನ್ನು ದ್ವೇಷಿಸುವಂತಾಗುತ್ತದೆ, ಇಬ್ಬರ ಬಂಧವೂ ಒಡೆಯಲಾಗದಷ್ಟು ಗಟ್ಟಿಯಾಗಿದ್ದರೆ ಆಗ ದ್ವೇಷವು ಮತ್ತಷ್ಟು ಹೆಚ್ಚಾಗುತ್ತದೆ. ಹೀಗಾಗಿ ಪ್ರೇಮವನ್ನು ಯುದ್ಧವೆಂದು ಪರಿಗಣಿಸುವಂತಾಗುತ್ತದೆ, ಪರಸ್ಪರವಾಗಿ ಅಹಂ ಅನ್ನು ಛಿದ್ರಗೊಳಿಸುವ ಮೂಲಕ ನಾಶಮಾಡಿಬಿಡುವ ಛಲ ಮೂಡುತ್ತದೆ. ಈ ಮನೋಭಾವವು ಸ್ಟ್ರಿಂಡ್‌ಬರ್ಗ್‌ನ ಕೃತಿಗಳಲ್ಲಿ, ಮತ್ತು ಮತ್ತಷ್ಟು ಹೆಚ್ಚಾಗಿ ಡಿ. ಎಚ್. ಲಾರೆನ್ಸ್‌ನಲ್ಲಿ ಪರಿಚಯವಾಗುತ್ತದೆ.

ಗಾಢಪ್ರೇಮ ಮಾತ್ರವಲ್ಲ, ಇತರರೊಂದಿಗಿನ ಸ್ನೇಹಪರ ಸಂಬಂಧವೂ, ಈ ರೀತಿಯಾಗಿ ಮಾರ್ಪಡಲು ಸಾಧ್ಯವಾಗುವುದು ಇತರರನ್ನು ತನ್ನತನದ ವಿಸ್ತೃತ ರೂಪ ಎಂದು ಪರಿಗಣಿಸುವುದರಿಂದ. ಆ ಇತರರು ರಕ್ತಸಂಬಂಧಿಗಳಾಗಿದ್ದರೆ ಇದು ಸಾಧ್ಯ, ಹೆಚ್ಚು ಹತ್ತಿರದ ಸಂಬಂಧಿಯಾಗಿದ್ದರೆ ಅಷ್ಟರ ಮಟ್ಟಿಗೆ ಹೆಚ್ಚು. ಹೀಗಾಗಿ ಜನಾಂಗಕ್ಕೆ ನೀಡುವ ಪ್ರಾಮುಖ್ಯವು ಟಾಲೆಮಿಗಳ ವಿಷಯಕ್ಕೆ ಸಂಬಂಧಿಸಿದಂತೆಯೇ, ಅಂತರ್ವಿವಾಹ (ಎಂಡೋಗಮಿ)ಕ್ಕೆ ನಾಂದಿಯಾಗುತ್ತದೆ. ಇದು ಬೈರನ್ ಮೇಲೆ ಎಂತಹ ಪರಿಣಾಮವುಂಟುಮಾಡಿತೆಂಬುದು ನಮಗೆ ತಿಳಿದಿದೆ; ಸೀಗ್ಮಂಡ್ ಮತ್ತು ಸೀಗ್ಲಿಂಡ್‌ರ ಪ್ರೇಮದ ಮೂಲಕ ವ್ಯಾಗ್ನರ್ ಕೂಡ ಇಂತಹ ಭಾವನೆಯನ್ನು ವ್ಯಕ್ತಪಡಿಸುತ್ತಾನೆ. ಲಜ್ಜಾಸ್ಪದವಾಗಲ್ಲದಿದ್ದರೂ, ನೀಷೆಯು ಇತರ ಎಲ್ಲ ಹೆಂಗಸರಿಗಿಂತ ತನ್ನ ಸೋದರಿಯನ್ನೇ ಹೆಚ್ಚು ಇಷ್ಟಪಟ್ಟ: ಅವಳಿಗೆ ಅವನು ಬರೆದದ್ದು ಹೀಗೆ: 'ನೀನು ಹೇಳುವ ಮತ್ತು ಮಾಡುವ ಎಲ್ಲದರ ಬಗ್ಗೆ ನನಗೆ ಎಂಥ ತೀವ್ರ ಭಾವನೆಯಿದೆಯೆಂದರೆ ನಾವು ಒಂದೇ ರೀತಿಯವರು ಎನಿಸುತ್ತದೆ. ಮಿಕ್ಕವರಿಗಿಂತ ನೀನು ನನ್ನನ್ನು ಅರ್ಥಮಾಡಿಕೊಳ್ಳಬಲ್ಲೆ, ಯಾಕೆಂದರೆ ಒಂದೇ ತಾಯ್ತಂದೆಯರ ಮಕ್ಕಳು. ಇದು ನನ್ನ "ತತ್ವಜ್ಞಾನ"ಕ್ಕೆ ಚೆನ್ನಾಗಿ ಹೊಂದಿಕೆಯಾಗುತ್ತದೆ.'

ಬೈರನ್ ಸಮರ್ಥಿಸಿದ ರಾಷ್ಟ್ರೀಯತೆಯ ತತ್ವವೂ ಇದೇ ತಾತ್ವಿಕತೆಯದು. ಒಂದು ರಾಷ್ಟ್ರವೆಂದರೆ ಒಂದೇ ಮೂಲದಿಂದ ಇಳಿದು ಬಂದ ಒಂದು ಜನಾಂಗ ಮತ್ತು ಎಲ್ಲರೂ ಒಂದೇ 'ರಕ್ತಪ್ರಜ್ಞೆ'ಯವರು ಎಂದು ನಂಬಲಾಗಿದೆ. ಬೈರನ್ ಅನ್ನು ಮೆಚ್ಚಿಕೊಳ್ಳದ ಇಂಗ್ಲಿಷ್‌ರ ಬಗ್ಗೆ ಸದಾ ತಪ್ಪು ಹುಡುಕುತ್ತಿದ್ದ ಮ್ಯಾಜಿನಿಯು ರಾಷ್ಟ್ರವೆಂಬುದು ಅನುಭಾವಿಕ ವ್ಯಕ್ತಿತ್ವವನ್ನು ಹೊಂದಿರುತ್ತದೆಂದು ನಂಬಿದ್ದ, ಇತರ ರೊಮ್ಯಾಂಟಿಕ್‌ರು ತಮ್ಮ ನಾಯಕರಲ್ಲಿ ಕಂಡ ಹಿರಿತನವನ್ನು ಅವನು ಒಂದು ರಾಷ್ಟ್ರ ಜನತೆಯಲ್ಲಿ ಕಂಡುಕೊಂಡ. ರಾಷ್ಟ್ರಗಳ ಸ್ವಾತಂತ್ರ್ಯವು ಒಂದು ರೀತಿಯಲ್ಲಿ

ಆತ್ಯಂತಿಕವಾದುದೆಂದು ಮ್ಯಾಜಿನಿಯಷ್ಟೇ ಅಲ್ಲ, ಇತರ ಹೆಚ್ಚು ಸಮಚಿತ್ತದ ಮುತ್ಸದ್ದಿಗಳೂ, ಪರಿಗಣಿಸಿದರು; ಇದು ಅಂತಾರಾಷ್ಟ್ರೀಯ ಸಹಕಾರವನ್ನು ಅಸಾಧ್ಯವನ್ನಾಗಿಸಿತು.

ರಕ್ತ ಮತ್ತು ಜನಾಂಗದ ನಂಬಿಕೆಯು ಸಹಜವಾಗಿ ಯೆಹೂದ್ಯದ್ವೇಷಕ್ಕೆ ಸಂಬಂಧಿಸಿದೆ. ಜೊತೆಗೆ, ರೊಮ್ಯಾಂಟಿಕ್ ಮನೋಭಾವವು, ಭಾಗಶಃ ಅದು ಶ್ರೀಮಂತಪರವೂ ಭಾಗಶಃ ಲೆಕ್ಕಾಚಾರಕ್ಕಿಂತ ರಾಗಭಾವಗಳ ಪರವೂ ಆಗಿದ್ದರಿಂದ, ವಾಣಿಜ್ಯ ಮತ್ತು ಆರ್ಥಿಕತೆಗಳ ಬಗ್ಗೆ ಆಳವಾದ ತಿರಸ್ಕಾರವನ್ನು ಹೊಂದಿದೆ. ಹೀಗಾಗಿ ಅದು ಬಂಡವಾಳಶಾಹಿಯ ವಿರುದ್ಧವಾಗಲು ಕಾರಣವಾಯಿತು, ಆದರೆ ಇದು ಜನಸಾಮಾನ್ಯರ ಹಿತಾಸಕ್ತಿಯ ಪರವಾಗಿ ನಿಲ್ಲುವ ಸಮಾಜವಾದಿಯದಕ್ಕಿಂತ ಭಿನ್ನವಾದುದು. ಅದರದ್ದು ಆರ್ಥಿಕ ವ್ಯವಹಾರಗಳ ವಿರುದ್ಧದಿಂದಾದುದು, ಅದನ್ನು ಬಲಗೊಳಿಸಿದ್ದು ಬಂಡವಾಳಶಾಹಿ ವರ್ಗವು ಯೆಹೂದಿಗಳ ನಿಯಂತ್ರಣದಲ್ಲಿದೆ ಎಂಬ ಭಾವನೆ. ಈ ದೃಷ್ಟಿಕೋನವನ್ನು, ಆರ್ಥಿಕ ಅಧಿಕಾರಕ್ಕಿಂತ ಕ್ಷುದ್ರವಾದುದಿಲ್ಲ ಎಂದು ಹೇಳುವ ಅಪರೂಪದ ಸನ್ನಿವೇಶದಲ್ಲಿ ಬೈರನ್ ವ್ಯಕ್ತಪಡಿಸುತ್ತಾನೆ:

ಜಗತ್ತಿನ ತಕ್ಕಡಿ ಹಿಡಿದವರಾರು? ಗೆದ್ದವರನ್ನೂ
ಆಳುವವರಾರು, ರಾಜಪರರೋ ಉದಾರವಾದಿಗಳೋ ?
ಸ್ಪೆಯಿನ್‌ನ ಬರಿಮೈಯ ದೇಶಪ್ರೇಮಿಗಳನ್ನೆಬ್ಬಿಸುವವರಾರು?
(ಹಳೆಯ ಯೂರೋಪ್‌ನ ದಿನಚರಿಯು ಕೀರುವಂತೆ ಮಾಡಿದ)
ಹಳೆ ಹೊಸ ಜಗತ್ತನ್ನು ನೋವಿನಲ್ಲಿಯೋ ನಲವಿನಲ್ಲಿಯೋ ಇರಿಸಿದವರಾರು?
ಎಲ್ಲರೂ ಕಿರುಗುಟ್ಟುವಂತೆ ಮಾಡುವ ರಾಜಕೀಯ ಮಾಡುವವರಾರು?
ಬೋನಾಪಾರ್ಟೆಯ ಧೀರ ಸಾಹಸದ ನೆರಳೇನು?
ಯೆಹೂದಿ ರಾತ್‌ಚೈಲ್ಡ್ ಮತ್ತವನ ಕ್ರೈಸ್ತ ಸಹಚರ.

ಈ ಪದ್ಯವು ಅಷ್ಟೊಂದು ಗೇಯವಾಗಿಲ್ಲ, ಆದರೆ ಭಾವನೆ ಮಾತ್ರ ಹಳೆಯ ಕಾಲದ್ದು, ಮತ್ತು ಅದನ್ನು ಬೈರನ್ ಅನುಯಾಯಿಗಳು ಪ್ರತಿಧ್ವನಿಸುತ್ತಲೇ ಇದ್ದಾರೆ.

ರೊಮ್ಯಾಂಟಿಕ್ ಚಳುವಳಿಯು, ತನ್ನ ಸಾರದಲ್ಲಿ, ಗುರಿಯಾಗಿ ಹೊಂದಿದ್ದುದು ವ್ಯಕ್ತಿಯನ್ನು ಸಾಮಾಜಿಕ ರೂಢಿಗಳ ಮತ್ತು ಸಾಮಾಜಿಕ ನೈತಿಕತೆಯ ಬಂಧನದಿಂದ ಮುಕ್ತಗೊಳಿಸುವುದನ್ನು. ಬೇಕಾದ ಚಟುವಟಿಕೆಗಳಲ್ಲಿ ತೊಡಗಲು ಈ ಬಂಧನಗಳು ನಿರುಪಯುಕ್ತ ತೊಡಕುಗಳಾಗಿದ್ದುದು ಸ್ವಲ್ಪ ಮಟ್ಟಿಗೆ ನಿಜ, ಯಾಕೆಂದರೆ ಪ್ರತಿಯೊಂದು ಪ್ರಾಚೀನ ಸಮುದಾಯವೂ ನಡತೆಯ ಕಟ್ಟುಪಾಡುಗಳನ್ನು ಬೆಳೆಸಿಕೊಂಡು ಬಂದಿವೆ, ಅವುಗಳು ಸಾಂಪ್ರದಾಯಿಕ ಎನ್ನುವುದನ್ನು ಬಿಟ್ಟರೆ ಬೇರೇನನ್ನೂ ಹೇಳಲು ಸಾಧ್ಯವಿಲ್ಲ. ಆದರೆ ಅಹಂಕಾರದ ರಾಗಭಾವಗಳು ಒಮ್ಮೆ ಸಡಿಲಗೊಂಡರೆ ಮತ್ತೆ ಅದನ್ನು ಸಾಮಾಜಿಕ ಆವಶ್ಯಕತೆಗಳ ಅಧೀನಕ್ಕೆ ತರುವುದು ಕಷ್ಟ. ಕ್ರೈಸ್ತವು ಅಹಂ ಅನ್ನು

ಕುಗ್ಗಿಸುವುದರಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದೆಯಾದರೂ ಆರ್ಥಿಕ, ರಾಜಕೀಯ, ಮತ್ತು ಬೌದ್ಧಿಕ ಕಾರಣಗಳು ಚರ್ಚ್ ವಿರುದ್ದ ಬಂಡೇಳಲು ಪ್ರೇರಿಸಿದವು, ಮತ್ತು ರೊಮ್ಯಾಂಟಿಕ್ ಚಳುವಳಿಯು ಈ ಬಂಡಾಯವನ್ನು ನೀತಿಯ ವಲಯದಲ್ಲಿ ತಂದು ನಿಲ್ಲಿಸಿತು. ನಿಯಂತ್ರಣವಿಲ್ಲದ ಅಹಂ ಅನ್ನು ಉತ್ತೇಜಿಸುವ ಮೂಲಕ ಅದು ಸಾಮಾಜಿಕ ಸಹಕಾರವನ್ನು ಅಸಾಧ್ಯವಾಗಿಸಿತು, ತನ್ನ ಅನುಯಾಯಿಗಳು ಅನಾಯಕತ್ವ ಅಥವಾ ನಿರಂಕುಪ್ರಭುತ್ವಗಳ ಪರ್ಯಾಯವನ್ನು ಎದುರಿಸುವಂತೆ ಮಾಡಿತು. ಅಹಂಕಾರವು ಮೊದಲಿಗೆ, ಇತರರಿಂದ ಪೋಷಕ ಮಾರ್ದವತೆಯನ್ನು ನಿರೀಕ್ಷಿಸುವಂತೆ ಜನರನ್ನು ಮಾಡಿತು; ಆದರೆ ಇತರರಿಗೂ ತಮ್ಮದೇ ಅಹಂ ಇದೆ ಎಂದು ತಿಳಿದಾಗ ಅವರು ಕ್ರುದ್ಧರಾದರು, ಮಾರ್ದವತೆಯ ಬಯಕೆ ಸಫಲವಾಗದೆ ಅದು ದ್ವೇಷ ಮತ್ತು ಹಿಂಸೆಗಳಿಗೆ ಎಡೆ ಮಾಡಿಕೊಟ್ಟಿತು. ಮನುಷ್ಯ ಒಂಟಿಜೀವಿಯಲ್ಲ, ಮತ್ತು ಎಲ್ಲಿಯವರೆಗೆ ಸಾಮಾಜಿಕ ಬದುಕು ಮುಂದುವರಿಯುತ್ತದೆಯೋ ಸ್ವಹಿತಾಸಕ್ತಿಯು ನೈತಿಕತೆಯ ಪರಮೋಚ್ಚ ತತ್ವವಾಗಲಾರದು.

೦

೧೯
ರೂಸೋ

ಜೀನ್ ಜಾಕ್ಸ್ ರೂಸೋ (೧೭೧೨-೭೮) ಹದಿನೆಂಟನೆಯ ಶತಮಾನದಲ್ಲಿನ ಒಬ್ಬ ಫ್ರೆಂಚ್ ತತ್ವಜ್ಞಾನಿಯಾದರೂ, ಈಗ ನಾವು 'ತತ್ವಜ್ಞಾನಿ' ಎಂದು ಕರೆಯಬಹುದಾದ ರೀತಿಯವನಲ್ಲ. ಆದರೂ, ಸಾಹಿತ್ಯ ಮತ್ತು ರಾಜಕೀಯ ಅಭಿರುಚಿ ಮತ್ತು ನಡತೆಗಳ ಮೇಲೆ ಹೇಗೆಯೋ ಹಾಗೆಯೇ, ಅವನದು ತತ್ವಜ್ಞಾನದ ಮೇಲೆ ಆಳವಾದ ಪ್ರಭಾವ. ಒಬ್ಬ ಚಿಂತಕನಾಗಿ ಅವನ ಬಗ್ಗೆ ನಮ್ಮ ಅಭಿಪ್ರಾಯವು ಯಾವುದೇ ಬಗೆಯದಾಗಿರಲಿ, ಅವನೊಬ್ಬ ಸಾಮಾಜಿಕ ಶಕ್ತಿಯಾಗಿ ಅಪರಿಮಿತ ಪ್ರಾಮುಖ್ಯವನ್ನು ಪಡೆದವನು ಎಂಬುದನ್ನು ಗಮನಿಸಬೇಕು. ಈ ಪ್ರಾಮುಖ್ಯಕ್ಕೆ ಕಾರಣ ಅವನು ಹೃದಯವನ್ನು ತಲುಪುವ ಬಗೆ, ಅದನ್ನು ಅವನ ಕಾಲದಲ್ಲಿ 'ಸಂವೇದನಾಶೀಲತೆ' ಎನ್ನುತ್ತಿದ್ದರು. ಅವನೇ ರೊಮ್ಯಾಂಟಿಕ್ ಚಳುವಳಿಯ ಜನಕ, ಮಾನವ ಭಾವನೆಗಳಿಂದ ಮಾನವೇತರ ವಸ್ತುಸ್ಥಿತಿಗಳನ್ನು ಕಲ್ಪಿಸಿಕೊಳ್ಳುವ ಚಿಂತನ ವಿಧಾನದ ಪ್ರವರ್ತಕ, ಮತ್ತು ಸಾಂಪ್ರದಾಯಿಕ ಆತ್ಯಂತಿಕ ರಾಜಪ್ರಭುತ್ವಗಳಿಗೆ ವಿರುದ್ಧವಾದ ಹುಸಿ-ಪ್ರಜಾಪ್ರಭುತ್ವವಾದೀ ಸರ್ವಾಧಿಕಾರವೆಂಬ ರಾಜಕೀಯ ತಾತ್ವಿಕತೆಯ ಸೃಷ್ಟಿಕರ್ತ. ಅವನ ಕಾಲದಿಂದಲೂ ತಮ್ಮನ್ನು ಸುಧಾರಕರೆಂದು ಭಾವಿಸಿದ್ದವರು ಎರಡು ಗುಂಪುಗಳಿಗೆ ಸೇರುತ್ತಾರೆ, ಅವನನ್ನು ಅನುಸರಿಸಿದವರು ಮತ್ತು ಲಾಕ್‌ನನ್ನು ಅನುಸರಿಸಿದವರು. ಕೆಲವು ವೇಳೆ ಅವರು ಸಹಕರಿಸಿದರು, ಕೆಲವು ವ್ಯಕ್ತಿಗಳಿಗೆ ಆ ಎರಡರಲ್ಲಿ ಯಾವುದೇ ವಿರೋಧ ಕಾಣಲಿಲ್ಲ. ಆದರೆ ಬರಬರುತ್ತ ವಿರೋಧವು ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತ ಹೋಯಿತು. ಪ್ರಸ್ತುತ ಸನ್ನಿವೇಶದಲ್ಲಿ, ಹಿಟ್ಲರ್ ರೂಸೋನ ಪರಿಣಾಮವಾಗಿದ್ದಾನೆ; ರೂಸ್‌ವೆಲ್ಟ್ ಮತ್ತು ಚರ್ಚಿಲ್ ಲಾಕ್‌ನ ಪರಿಣಾಮ.

ರೂಸೋ ತನ್ನ ಜೀವನವನ್ನು ತಾನೇ 'ಕನ್‌ಫೆಷನ್ಸ್' ನಲ್ಲಿ ವಿವರವಾಗಿ ನಿರೂಪಿಸಿದ್ದಾನೆ, ಆದರೆ ಸತ್ಯದ ಬಗ್ಗೆ ತೀರ ಕುರುಡು ನಂಬಿಕೆಯಿಲ್ಲದೆ. ತನ್ನನ್ನು ದೊಡ್ಡ ಪಾಪಿ ಎಂದು ಮಾಡಿಕೊಳ್ಳಲು ಅವನಿಗೆ ಸಂತೋಷ. ಈ ವಿಷಯದಲ್ಲಿ ಅವನು ಅತಿಶಯೋಕ್ತಿಯನ್ನೂ ಅವಲಂಬಿಸುತ್ತಾನೆ; ಆದರೆ ಅವನಲ್ಲಿ ಸಾಮಾನ್ಯ

ಸದ್ಗುಣಗಳು ಯಥೇಚ್ಛವಾಗಿ ಕೊರತೆಯಾಗಿದ್ದವು ಎಂಬುದಕ್ಕೆ ಬೇಕಾದಷ್ಟು ಸಾಕ್ಷ್ಯಗಳು ದೊರೆಯುತ್ತವೆ. ಇದು ಅವನನ್ನು ವಿಚಲಿತಗೊಳಿಸಲಿಲ್ಲ, ಯಾಕೆಂದರೆ ತನ್ನದು ಆರ್ದ್ರ ಹೃದಯ ಎಂದೇ ಅವನು ಸದಾ ಭಾವಿಸಿದ್ದುದು, ಆದರೆ ಇದು ತನ್ನ ಆಪ್ತ ಮಿತ್ರರ ವಿಷಯದಲ್ಲಿಯೂ ಕ್ಷುಲ್ಲಕವಾಗಿ ನಡೆದುಕೊಳ್ಳಲು ಅವನಿಗೆ ಅಡ್ಡಿಯೆನಿಸಲಿಲ್ಲ. ಅವನ ಚಿಂತನೆ ಮತ್ತು ಪ್ರಭಾವಗಳನ್ನು ಅರ್ಥಮಾಡಿಕೊಳ್ಳಲು ಎಷ್ಟು ಬೇಕೋ ಅಷ್ಟು ಅವನ ಜೀವನ ವಿವರಗಳನ್ನು ನೀಡುತ್ತೇನೆ.

ಅವನು ಹುಟ್ಟಿದ್ದು ಜಿನೀವದಲ್ಲಿ, ಒಬ್ಬ ಸಂಪ್ರದಾಯನಿಷ್ಠ ಕಾಲಿನ್‌ಪಂಥೀಯನಂತೆ. ಅವನ ತಂದೆ ಬಡವ, ಗಡಿಯಾರ ತಯಾರಿಕೆ ಮತ್ತು ನೃತ್ಯಗುರು ಎರಡೂ ವೃತ್ತಿಗಳನ್ನವಲಂಬಿಸಿದ್ದ; ಅವನಿನ್ನೂ ಮಗುವಾಗಿದ್ದಾಗಲೇ ತಾಯಿ ತೀರಿಕೊಂಡಳು. ಅವನನ್ನು ಸಾಕಿದವರು ಚಿಕ್ಕಮ್ಮ. ಹನ್ನೆರಡನೆಯ ವಯಸ್ಸಿಗೇ ಅವನು ಶಾಲೆಯನ್ನು ಬಿಟ್ಟ, ಬೇರೆ ಬೇರೆ ವೃತ್ತಿಗಳಲ್ಲಿ ತರಬೇತಿ ಪಡೆದನಾದರೂ, ಅವೆಲ್ಲವುಗಳ ಬಗ್ಗೆ ಅವನಿಗೆ ದ್ವೇಷವಿತ್ತು; ತನ್ನ ಹದಿನಾರನೆಯ ವಯಸ್ಸಿಗೆ ಜಿನೀವದಿಂದ ಸವಾಯ್‌ಗೆ ಓಡಿಹೋದ. ಜೀವನೋಪಾಯವಾವುದೂ ಇಲ್ಲದೆ ಅವನು ಒಬ್ಬ ಕ್ಯಾಥೋಲಿಕ್ ಪುರೋಹಿತನ ಬಳಿ ಹೋಗಿ ತಾನು ಮತಾಂತರಗೊಳ್ಳ ಬಯಸುವುದಾಗಿ ಹೇಳಿಕೊಂಡ. ಟ್ಯೂರಿನ್‌ನಲ್ಲಿನ ದೀಕ್ಷಾಸ್ನಾತಕರ (ಕ್ಯಾಟೆಕ್ಯೂಮೆನ್) ಸಂಸ್ಥೆಯೊಂದರಲ್ಲಿ ವಿಧ್ಯುಕ್ತವಾಗಿ ಮತಾಂತರವಾಯಿತು; ಈ ಪ್ರಕ್ರಿಯೆ ಒಂಬತ್ತು ದಿನಗಳ ಕಾಲ ಮುಂದುವರಿಯಿತು. ತನ್ನ ಉದ್ದೇಶಗಳೆಲ್ಲ ಹಣಸಂಪಾದನೆಯ ಕಡೆಗಿತ್ತು ಎಂದವನು ಹೇಳಿಕೊಳ್ಳುತ್ತಾನೆ: 'ನಾನು ಆಚರಿಸಲಿರುವ ಪವಿತ್ರ ಕಾರ್ಯವು ಆಳದಲ್ಲಿ ಒಬ್ಬ ದರೋಡೆಕಾರನ ಕೆಲಸವಾಗಿತ್ತು ಎಂಬುದನ್ನು ನಾನು ಮರೆಮಾಚಲಾರೆ.' ಆದರೆ ಈ ಮಾತುಗಳನ್ನವನು ಬರೆದದ್ದು ತಾನು ಪ್ರಾಟೆಸ್ಟೆಂಟ್ ಮತಕ್ಕೆ ವಾಪಸಾದ ಮೇಲೆ. ಕೆಲವು ಕಾಲ ಅವನು ಪ್ರಾಮಾಣಿಕ ಕ್ಯಾಥೋಲಿಕ್ ನಂಬಿಕೆಗಳನ್ನು ಹೊಂದಿದ್ದನೆಂದು ಭಾವಿಸಲು ಕಾರಣಗಳಿವೆ. ೧೭೩೦ ರಲ್ಲಿ ತಾನು ವಾಸಿಸುತ್ತಿದ್ದ ಮನೆಯು ಬೆಂಕಿಗೆ ಆಹುತಿಯಾಗುವುದು ಒಬ್ಬ ಬಿಷಪ್‌ನ ಪ್ರಾರ್ಥನೆಯಿಂದ ಪವಾಡ ಸದೃಶವಾಗಿ ಉಳಿದುಕೊಂಡಿತು ಎಂದು ೧೭೪೨ ರಲ್ಲಿ ಅವನೇ ಹೇಳಿಕೊಳ್ಳುತ್ತಾನೆ.

ತನ್ನ ಜೇಬಿನಲ್ಲಿ ಇಪ್ಪತ್ತು ಫ್ರಾಂಕ್‌ಗಳನ್ನಿರಿಸಿಕೊಂಡು ಟ್ಯೂರಿನ್‌ನ ಸಂಸ್ಥೆಯಿಂದ ಹೊರಬಂದ ಮೇಲೆ, ಅವನು ಮದಾಂ ದ ವರ್ಸೆಲ್ ಎಂಬ ಮಹಿಳೆಯ ಸೇವಕನಾದ, ಆಕೆ ಮೂರು ತಿಂಗಳ ಬಳಿಕ ತೀರಿಕೊಂಡಳು. ಆಕೆ ಸತ್ತ ಮೇಲೆ, ಅವನ ಬಳಿ ಆಕೆಗೆ ಸೇರಿದ್ದ ರೇಷ್ಮೆ ಅಲಂಕಾರಪಟ್ಟಿಯೊಂದು ಇದ್ದುದು ಗೊತ್ತಾಯಿತು, ಅವನು ಅದನ್ನು ಕದ್ದಿದ್ದ. ಆದರೆ ತನಗೆ ಅದನ್ನು ತಾನು ಇಷ್ಟಪಟ್ಟ ಸೇವಕಿಯೊಬ್ಬಳು ಕೊಟ್ಟಳೆಂದು ವಾದಿಸಿದ; ಅವನ ಮಾತನ್ನು ನಂಬಿ ಆ ಸೇವಕಿಗೆ ಶಿಕ್ಷೆ ವಿಧಿಸಲಾಯಿತು.

ಇದಕ್ಕೆ ಅವನು ಹೇಳುವ ನೆವ ವಿಚಿತ್ರವಾಗಿದೆ: 'ಈ ಕ್ರೂರ ಕ್ಷಣದಲ್ಲಿನಂತೆಯೇ ನನ್ನಿಂದ ಕೆಡುಕು ಯಾವತ್ತೂ ದೂರ ಉಳಿಯಲಿಲ್ಲ; ನಾನು ಆ ಬಡಪಾಯಿ ಹುಡುಗಿಯ ಮೇಲೆ ಆಪಾದನೆ ಹೊರಿಸಿದಾಗ, ನಾನು ಹಾಗೆ ಮಾಡಿದುದಕ್ಕೆ ಅವಳ ಮೇಲಿದ್ದ ಪ್ರೀತಿಯೇ ಕಾರಣವೆಂಬುದು ವಿರೋಧದಂತೆ ಕಂಡರೂ ನಿಜ. ಅವಳು ನನ್ನ ಮನಸ್ಸಿನಲ್ಲಿದ್ದಳು, ಹಾಗಾಗಿ ಅಪರಾಧವನ್ನು ನನ್ನಿಂದ ನನ್ನ ಮುಂದಿದ್ದ ಅವಳ ಮೇಲೆ ಹೊರಿಸಿದೆ.' ಎಲ್ಲ ಸಾಮಾನ್ಯ ಸಜ್ಜನಿಕೆಯ ವಿಷಯದಲ್ಲಿ ರೂಸೋನ ನೀತಿಯಾದ 'ಸಂವೇದನಾಶೀಲತೆ'ಯು ಕೆಲಸ ಮಾಡಿತು ಎಂಬುದಕ್ಕೆ ಇದೊಂದು ಒಳ್ಳೆಯ ನಿದರ್ಶನವಾಗಿದೆ.

ಈ ಘಟನೆಯ ಬಳಿಕ ಅವನು ಮದಾಂ ದ ವಾರೆನ್ಸ್ ಎಂಬುವವಳಿಗೆ ಹತ್ತಿರವಾದ, ಅವಳೂ ಅವನಂತೆಯೇ ಪ್ರಾಟೆಸ್ಟೆಂಟ್‌ನಿಂದ ಮತಾಂತರಗೊಂಡಿದ್ದವಳು. ಲವಲವಿಕೆಯ ವ್ಯಕ್ತಿಯಾಗಿದ್ದ ಅವಳಿಗೆ ಮತಧರ್ಮಕ್ಕೆ ಮಾಡಿದ ಅವಳ ಸೇವೆಗಾಗಿ ಸವಾಯ್ ದೊರೆಯಿಂದ ಪಿಂಚಣಿ ದೊರೆಯುತ್ತಿತ್ತು. ಒಂಬತ್ತು ಹತ್ತು ವರ್ಷಗಳಲ್ಲಿ ಬಹುಪಾಲು ಕಾಲ ಅವನು ಅವಳ ಮನೆಯಲ್ಲಿ ಕಳೆದ; ಅವಳು ಒಡತಿಯಾದ ಮೇಲೂ ಅವಳನ್ನು 'ಅಮ್ಮ' (ಮಾಮನ್) ಎಂದೇ ಕರೆಯುತ್ತಿದ್ದ. ಸ್ವಲ್ಪ ಕಾಲ ಅವನು ಅವಳನ್ನು ಅವಳ ಪಾರುಪತ್ತೆದಾರನೊಡನೆ ಹಂಚಿಕೊಂಡಿದ್ದ; ಎಲ್ಲರೂ ತುಂಬ ಸ್ನೇಹಪರವಾಗಿ ವಾಸಿಸುತ್ತಿದ್ದರು; ಪಾರುಪತ್ತೆದಾರ ಸತ್ತಾಗ ರೂಸೋಗೆ ದುಃಖವಾಯಿತು, ಆದರೆ 'ಒಳ್ಳೆಯದು, ಏನೇ ಆಗಲಿ, ನಾನು ಅವನ ಬಟ್ಟೆಗಳನ್ನು ಪಡೆಯುತ್ತೇನಲ್ಲ' ಎಂಬ ಈ ಆಲೋಚನೆಯಿಂದ ತನ್ನನ್ನು ಸಂತೈಸಿಕೊಂಡನಂತೆ.

ತನ್ನ ಮೊದಮೊದಲ ವರ್ಷಗಳಲ್ಲಿ ಅವನು ಅನೇಕ ವೇಳೆ ಒಬ್ಬ ಉಡಾಳನಂತೆ ಕಾಲ ಕಳೆದಿದ್ದ, ಬರಿಗಾಲಲ್ಲಿ ನಡೆಯುತ್ತಿದ್ದ, ತನಗೆ ಸಾಧ್ಯವಾದಷ್ಟೂ ಮಟ್ಟಿಗೆ ಪರಾಶ್ರಯದಲ್ಲಿ ಬದುಕಿದ. ಇಂತಹ ಒಂದು ಅವಧಿಯಲ್ಲಿ, ತನ್ನ ಜೊತೆ ಪ್ರಯಾಣಿಸುತ್ತಿದ್ದ ಸ್ನೇಹಿತ ಲ್ಯೋನ್‌ನ ಬೀದಿಯಲ್ಲಿಯೇ ಮೂರ್ಛೆರೋಗದ ಉನ್ಮಾದಕ್ಕೊಳಗಾದ; ಸೇರಿದ್ದ ಜನಸಂದಣಿಯನ್ನು ಬಳಸಿಕೊಂಡು ಸ್ನೇಹಿತನನ್ನು ಆ ಸ್ಥಿತಿಯಲ್ಲಿಯೇ ಬಿಟ್ಟು ಹೋಗುವ ಉಪಾಯ ಹೂಡಿದ. ಮತ್ತೊಂದು ಸನ್ನಿವೇಶದಲ್ಲಿ, ಯೇಸುವಿನ ಸಮಾಧಿ (ಹೋಲಿ ಸೆಪಲ್‌ಕರ್) ಯ ಕಡೆ ಯಾತ್ರೆಹೋಗುತ್ತಿದ್ದು ತನ್ನನ್ನು ಚರ್ಚ್ ಮಹಂತನೆಂದು ಪರಿಚಯ ಮಾಡಿಕೊಂಡ ವ್ಯಕ್ತಿಯೊಬ್ಬನ ಕಾರ್ಯದರ್ಶಿಯಾದ; ಮತ್ತೂ ಒಂದು ಸಂದರ್ಭದಲ್ಲಿ, ತಾನು ಸ್ಕಾಟ್ ಜಾಕೋಬೈಟ್ ಎಂದೂ ತನ್ನ ಹೆಸರು ಡಡಿಂಗ್ ಎಂದೂ ಹೇಳಿಕೊಂಡು ಶ್ರೀಮಂತ ಮಹಿಳೆಯೊಬ್ಬಳೊಡನೆ ಪ್ರೇಮವ್ಯವಹಾರದಲ್ಲಿ ತೊಡಗಿದ್ದ.

ಇಷ್ಟಾದರೂ, ೧೭೪೩ ರಲ್ಲಿ ಒಬ್ಬ ಉದಾರಿ ಮಹಿಳೆಯ ನೆರವಿನೊಡನೆ ಅವನು ಮಾಂಟೆಗ್ಯೂ ಎಂಬ ಹೆಸರಿನ ವೆನಿಸ್‌ನ ಕುಡುಕನಾದ ಫ್ರೆಂಚ್ ರಾಯಭಾರಿಯ

ಕಾರ್ಯದರ್ಶಿಯಾದ, ಅವನು ಕೆಲಸಗಳನ್ನೆಲ್ಲ ರೂಸೋಗೆ ವಹಿಸಿ ಅವನಿಗೆ ಸಂಬಳ ಕೊಡುವುದನ್ನು ಮರೆತ. ರೂಸೋ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದ, ಮುಂದೆ ಆದ ಅನಿವಾರ್ಯ ಜಗಳಕ್ಕೆ ಅವನು ಕಾರಣನಲ್ಲ. ನ್ಯಾಯ ಪಡೆಯಲು ಅವನು ಪ್ಯಾರಿಸ್‌ಗೆ ಹೋದ; ಅವನು ಹೇಳುವುದು ಸರಿ ಎಂದು ಎಲ್ಲರೂ ಹೇಳಿದರೂ ಬಹಳ ಕಾಲ ಏನೂ ಮಾಡಲಿಲ್ಲ. ಈ ವಿಳಂಬದಿಂದಾದ ಬೇಸರವು, ಕೊನೆಯಲ್ಲಿ ತನಗೆ ಬರಬೇಕಾಗಿದ್ದ ಸಂಬಳದ ಬಾಕಿ ಪಾವತಿಯಾದರೂ, ರೂಸೋನಲ್ಲಿ ಫ್ರಾನ್ಸ್‌ನಲ್ಲಿನ ಪ್ರಚಲಿತ ಸರ್ಕಾರದ ಸ್ವರೂಪದ ವಿರೋಧವಾಗಿ ಬೆಳೆಯಿತು.

ಸುಮಾರು ಇದೇ ಸಮಯದಲ್ಲಿಯೇ (೧೭೪೫) ಪ್ಯಾರಿಸ್‌ನ ಹೋಟೆಲ್ ಒಂದರಲ್ಲಿ ಸೇವಕಳಾಗಿದ್ದ ತೆರೀಸೀ ಲ ವಾಸ್ಯೂರ್ ಎನ್ನುವವಳೊಡನೆ ಸಲಿಗೆ ಬೆಳೆಸಿದ. ತನ್ನ ಉಳಿದ ಜೀವಮಾನವಿಡೀ ಅವನು ಅವಳೊಡನೆ ಕಳೆದ (ಉಳಿದ ವ್ಯವಹಾರಗಳ ಜೊತೆಗೆ); ಅವನಿಂದ ಅವಳಿಗೆ ಐದು ಮಕ್ಕಳಾದವು, ಅವೆಲ್ಲವನ್ನೂ ಅವನು ಅನಾಥಾಲಯಕ್ಕೆ ಸೇರಿಸಿದ. ಅವಳು ಅವನನ್ನು ಹೇಗೆ ಆಕರ್ಷಿಸಿದಳು ಎಂಬುದು ಯಾರಿಗೂ ಅರ್ಥವಾಗುವಂತಿರಲಿಲ್ಲ. ಅವಳು ಕುರೂಪಿಯಾಗಿದ್ದುದರ ಜೊತೆಗೆ ಅಜ್ಞಳೂ ಆಗಿದ್ದಳು; ಅವಳಿಗೆ ಓದುಬರಹವೂ ಗೊತ್ತಿರಲಿಲ್ಲ (ಅವನು ಅವಳಿಗೆ ಬರೆಯುವುದನ್ನೇನೋ ಹೇಳಿಕೊಟ್ಟ, ಆದರೆ ಓದುವುದನ್ನವಳು ಕಲಿಯಲಿಲ್ಲ). ಅವಳಿಗೆ ತಿಂಗಳುಗಳ ಹೆಸರು ಗೊತ್ತಿರಲಿಲ್ಲ, ಅಲ್ಲದೆ ಹಣವನ್ನೆಣಿಸಲೂ ಗೊತ್ತಿರಲಿಲ್ಲ. ಅವಳ ತಾಯಿಯು ಬಿಗಿಹಿಡಿತದವಳೂ ದುರಾಸೆಯವಳೂ ಆಗಿದ್ದಳು; ಅವರಿಬ್ಬರೂ ಸೇರಿ ರೂಸೋ ಮತ್ತವನ ಸ್ನೇಹಿತರನ್ನು ತಮ್ಮ ಆದಾಯದ ಮೂಲವನ್ನಾಗಿ ಮಾಡಿಕೊಂಡಿದ್ದರು. ತನಗೆ ತೆರೀಸೀ ಬಗ್ಗೆ ಲವಲೇಶವಾದರೂ ಪ್ರೀತಿಯಿರಲಿಲ್ಲ ಎಂದು (ನಿಜವೋ ಸುಳ್ಳೋ) ರೂಸೋ ಹೇಳಿಕೊಳ್ಳುತ್ತಾನೆ; ಆನಂತರದ ವರ್ಷಗಳಲ್ಲಿ ಅವಳು ಕುಡಿತ ಕಲಿತಳು, ಲಾಯದ ಹುಡುಗರ ಹಿಂದೆ ಬಿದ್ದಿದ್ದಳು. ತಾನು ಅವಳಿಗಿಂತ ಅನುಮಾನಕ್ಕೆ ಆಸ್ಪದವೇ, ಆರ್ಥಿಕವಾಗಿ ಹಾಗೂ ಬೌದ್ಧಿಕವಾಗಿ, ಇಲ್ಲದಂತೆ ಉತ್ತಮ ವ್ಯಕ್ತಿ ಎಂಬ ಹಾಗೂ ಅವಳು ಹಣದ ವಿಷಯದಲ್ಲಿ ತನಗೆ ಸಂಪೂರ್ಣವಾಗಿ ಅಧೀನಳು ಎಂಬ ಭಾವನೆಯೇ ಪ್ರಾಯಶಃ ಅವನಿಗೆ ಇಷ್ಟವಾಗಿತ್ತೆಂದು ಕಾಣುತ್ತದೆ. ಅವನಿಗೆ ದೊಡ್ಡವರ ಸಹವಾಸ ಇರುಸುಮುರಿಸು ಉಂಟುಮಾಡುತ್ತಿತ್ತು, ಮತ್ತು ಪ್ರಾಮಾಣಿಕವಾಗಿ ಸರಳ ಜನರನ್ನು ಇಷ್ಟಪಡುತ್ತಿದ್ದ.; ಈ ವಿಷಯದಲ್ಲಿ, ಅವನ ಪ್ರಜಾಪ್ರಭುತ್ವಾತ್ಮಕ ಭಾವನೆಯು ಸಂಪೂರ್ಣ ಪ್ರಾಮಾಣಿಕವಾದುದು. ಅವನು ಅವಳನ್ನು ಯಾವತ್ತೂ ಮದುವೆಯಾಗದಿದ್ದರೂ, ಅವಳನ್ನು ಬಹುತೇಕ ಹೆಂಡತಿಯಂತೆಯೇ ಕಾಣುತ್ತಿದ್ದ, ಅವನ ಗೆಳತಿಯರಾಗಿದ್ದ ಮಹಿಳೆಯರು ಅವಳೊಡನೆ ಏಗಬೇಕಾಗಿತ್ತು.

ಅವನ ಸಾಹಿತ್ಯಕ ಯಶಸ್ಸು ಬಂದದ್ದು ತಡವಾಗಿ. ಅಕಾಡೆಮಿ ಆಫ್ ಡಿಜೋನ್, 'ಕಲೆಗಳು ಮತ್ತು ವಿಜ್ಞಾನಗಳು ಮನುಸಂಕುಲಕ್ಕೆ ಅನುಕೂಲಗಳನ್ನು ಮಾಡಿದೆಯೇ?' ಎಂಬ ವಿಷಯದ ಬಗ್ಗೆ ಅವನು ಬರೆದ ಪ್ರಬಂಧಕ್ಕೆ ಬಹುಮಾನ ಕೊಟ್ಟಿತು. ರೂಸೋನ ಉತ್ತರ ನಕಾರಾತ್ಮಕವಾಗಿತ್ತು, ಅದು ಬಹುಮಾನ ಗಳಿಸಿತು (೧೭೫೦). ವಿಜ್ಞಾನ, ಸಾಹಿತ್ಯ ಮತ್ತು ಕಲೆಗಳು ಮಾನವನ ನೈತಿಕತೆಯ ಅದಮ್ಯ ಶತ್ರುಗಳು ಮತ್ತು ಬಯಕೆಗಳನ್ನು ಹೆಚ್ಚು ಮಾಡಿ ಅವು ಮನುಷ್ಯನನ್ನು ಗುಲಾಮನನ್ನಾಗಿಸುತ್ತವೆ ಎಂದವನ ವಾದ; ಯಾಕೆಂದರೆ ಅಮೆರಿಕದ ಅನಾಗರಿಕರಂತೆ ಬತ್ತಲೆಯಿರುವವರ ಮೇಲೆ ಯಾವ ನಿರ್ಬಂಧಗಳನ್ನು ತಾನೇ ಹೇರಲಾದೀತು? ನಿರೀಕ್ಷಿಸಬಹುದಾದಂತೆ ಅವನು ಸ್ಪಾರ್ಟಾ ಪರ ಮತ್ತು ಅಥೆನ್ಸ್ ವಿರುದ್ಧವಾಗಿದ್ದ. ತನ್ನ ಎಳನೆಯ ವಯಸ್ಸಿನಲ್ಲಿಯೇ ಅವನು ಪ್ಲೂಟಾರ್ಕ್‌ನ 'ಲೈವ್ಸ್' ಅನ್ನು ಓದಿದ್ದ, ಅವುಗಳಿ ಗಾಢ ಪ್ರಭಾವಕ್ಕೊಳಗಾಗಿದ್ದ; ಅದರಲ್ಲೂ ಲೈಕರ್ಗಸ್‌ನ ಜೀವನ ಅವನನ್ನು ಆಕರ್ಷಿಸಿತ್ತು. ಸ್ಪಾರ್ಟದವರಂತೆ ಅವನು ಮಿಕ್ಕೆಲ್ಲಕ್ಕಿಂತ ಯುದ್ಧವಿಜಯವೇ ಗುಣದ ಮಾನದಂಡ ಎಂದು ಭಾವಿಸಿದ್ದ; ಮುಂದುವರಿದ ಯೂರೋಪಿಯನ್‌ರು ಯುದ್ಧದಲ್ಲಿ ಸೋಲಿಸಿದ್ದರೂ ಅವನು 'ಉದಾತ್ತ ಅನಾಗರಿಕ'ನನ್ನು ಇಷ್ಟಪಟ್ಟ. ವಿಜ್ಞಾನ ಮತ್ತು ಸದ್ಗುಣ ಎರಡೂ ಹೊಂದಲಾರವು, ಅಲ್ಲದೆ ಎಲ್ಲ ವಿಜ್ಞಾನಗಳ ಮೂಲವೂ ಕ್ಷುಲ್ಲಕವೇ ಎಂದವನ ಅಭಿಪ್ರಾಯ. ಖಗೋಳವಿಜ್ಞಾನವು ಜ್ಯೋತಿಷ್ಯದ ಮೌಢ್ಯದ ಮೂಲದ್ದು, ವಾಕ್ಚಾತುರ್ಯದ ಮೂಲ ಮಹತ್ವಾಕಾಂಕ್ಷೆ, ಜ್ಯಾಮಿತಿ ದುರಾಶೆಯ ಶಿಶು, ಭೌತವಿಜ್ಞಾನವು ನಿಷ್ಫಲ ಕುತೂಹಲದ ಫಲ, ಮತ್ತು ನೈತಿಕತೆಯು ಕೂಡ ಮಾನವ ಹೆಮ್ಮೆಯ ಮೂಲವನ್ನು ಹೊಂದಿದೆ ಎಂಬ ವಾದ ಅವನದು. ಶಿಕ್ಷಣ ಮತ್ತು ಮುದ್ರಣಕಲೆಗಳು ವಿಷಾದನೀಯ; ನಾಗರಿಕ ಮನುಷ್ಯ ಮತ್ತು ಅಶಿಕ್ಷಿತ ಅನಾಗರಿಕ ಇವರ ನಡುವೆ ವ್ಯತ್ಯಾಸ ಮಾಡುವುದು ಕೆಡುಕುತನ.

ಬಹುಮಾನವನ್ನು ಗೆದ್ದು ಈ ಪ್ರಬಂಧದಿಂದ ದಿಢೀರ್ ಪ್ರಸಿದ್ಧಿಗೆ ಬಂದ ರೂಸೋ ಅದರ ಆದರ್ಶಗಳಿಗನುಗುಣವಾಗಿಯೇ ಬದುಕಲು ಆರಂಭಿಸಿದ. ಸರಳ ಜೀವನಶೈಲಿಯನ್ನಾರಿಸಿಕೊಂಡ, ತನಗೆ ವೇಳೆಯನ್ನು ನೋಡುವ ಆವಶ್ಯಕತೆಯೇ ಇಲ್ಲವೆಂಬ ಕಾರಣದಿಂದ ತನ್ನ ಕೈಗಡಿಯಾರವನ್ನೂ ಮಾರಿದ.

ಈ ಮೊದಲ ಪ್ರಬಂಧದ ಆಲೋಚನೆಗಳನ್ನು, 'ಅಸಮಾನತೆಯ ಬಗೆಗಿನ ಚರ್ಚೆ' (೧೭೫೪) ಎಂಬ ಎರಡನೆಯದರಲ್ಲಿ ವಿವರವಾಗಿ ಮಂಡಿಸಿದ. ಆದರೆ ಅದು ಬಹುಮಾನವನ್ನು ಗೆಲ್ಲಲಿಲ್ಲ. 'ಮನುಷ್ಯ ಮೂಲಭೂತವಾಗಿ ಒಳ್ಳೆಯವನು, ಆದರೆ ಸಂಸ್ಥೆಗಳಿಂದಾಗಿ ಕೆಟ್ಟವನಾಗುತ್ತಾನೆ' ಎಂಬುದು ಅವನ ಪ್ರತಿಪಾದನೆ. – ಇದು ಮೂಲಪಾಪ ಹಾಗೂ ಚರ್ಚ್ ಮೂಲಕ ಪಡೆಯುವ ಬಿಡುಗಡೆ ಸಿದ್ಧಾಂತದ ವಿರುದ್ಧವಾದುದು. ತನ್ನ ಕಾಲದ ಬಹುತೇಕ ರಾಜಕೀಯ ಸಿದ್ಧಾಂತಿಗಳಂತೆ ಅವನೂ,

ಆಧಾರಕಲ್ಪನಾತ್ಮಕವಾಗಿ, ಪ್ರಕೃತಿ ಸ್ಥಿತಿಯ ಬಗ್ಗೆ 'ಈ ಸ್ಥಿತಿ ಇವತ್ತು ಇಲ್ಲ, ಪ್ರಾಯಶಃ ಯಾವತ್ತೂ ಇರಲಿಲ್ಲ, ಪ್ರಾಯಶಃ ಮುಂದೆ ಯಾವತ್ತೂ ಇರುವುದಿಲ್ಲ, ಇವತ್ತಿನ ಸ್ಥಿತಿಯ ಬಗ್ಗೆ ಚೆನ್ನಾಗಿ ಆಲೋಚಿಸಲು ಸಹಾಯಕವಾಗುವಂತೆ, ಆ ಬಗ್ಗೆ ನಾವು ಚಿಂತನೆಗಳಷ್ಟನ್ನೇ ಹೊಂದಬಹುದು' ಎಂದು ವಾದಿಸಿದ. ಪ್ರಕೃತಿ ನಿಯಮಗಳನ್ನು ಪ್ರಕೃತಿ ಸ್ಥಿತಿಯಿಂದ ಸಾಧಿಸಬಹುದು, ಆದರೆ ಎಲ್ಲಿಯವರೆಗೆ ನಮಗೆ ಸಹಜ ಮನುಷ್ಯನ ಬಗ್ಗೆ ಗೊತ್ತಿಲ್ಲವೋ ಅಲ್ಲಿಯವರೆಗೆ ಅವನ ಮೇಲೆ ವಿಧಿಸಿದ್ದ ಅಥವಾ ಅವನಿಗೆ ಸರಿಹೊಂದಿದ್ದ ನಿಯಮಗಳನ್ನು ರೂಪಿಸಲು ಸಾಧ್ಯವಿಲ್ಲ. ನಮಗೆ ಗೊತ್ತಾಗಬಹುದಾದುದೆಂದರೆ, ಅದಕ್ಕೆ ಅಧೀನರಾದವರ ಇಚ್ಛೆಗಳು ತಮ್ಮ ಅಧೀನತೆಯ ಬಗ್ಗೆ ಪ್ರಜ್ಞಾಪೂರ್ವಕವಾಗಿರಬೇಕು, ಮತ್ತು ಅದು ನೇರವಾಗಿ ಪ್ರಕೃತಿಯ ಧ್ವನಿಯಾಗಿ ಬರಬೇಕು. ವಯಸ್ಸು, ಆರೋಗ್ಯ, ಬುದ್ಧಿಮತ್ತೆ, ಮುಂತಾದ ಸಹಜ ಅಸಮಾನತೆಯನ್ನು ಅವನು ಆಕ್ಷೇಪಿಸುವುದಿಲ್ಲವಾದರೂ, ರೂಢಿಗಳ ಮೂಲಕ ನೆಲೆನಿಂತ ಸವಲತ್ತುಗಳಿಂದ ಉಂಟಾಗುವ ಅಸಮಾನತೆಯನ್ನು ಅವನು ವಿರೋಧಿಸಿದ.

ನಾಗರಿಕ ಸಮಾಜದ ಆದಿ ಮತ್ತು ಅದರ ಪರಿಣಾಮವಾದ ಸಾಮಾಜಿಕ ಅಸಮಾನತೆಗಳನ್ನು ಖಾಸಗಿ ಆಸ್ತಿಯಲ್ಲಿ ಕಾಣಬಹುದು. 'ಒಂದು ತುಂಡು ಭೂಮಿಗೆ ಬೇಲಿ ಹಾಕಿಕೊಂಡ ಮೊದಲ ವ್ಯಕ್ತಿ ಅದನ್ನು "ತನ್ನದು" ಎಂದು ಭಾವಿಸಿದ, ಸುತ್ತಲಿನ ಸರಳ ವ್ಯಕ್ತಿಗಳು ಅದನ್ನು ನಂಬಿದರು, ಅವನೇ ನಾಗರಿಕ ಸಮಾಜದ ಸ್ಥಾಪಕ.' ಮುಂದುವರಿದು ವಿಷಾದಕರ ಕ್ರಾಂತಿಯಿಂದಾಗಿ ಲೋಹಗಾರಿಕೆ ಮತ್ತು ಬೇಸಾಯಗಳು ಉಂಟಾದವು; ಆಹಾರಧಾನ್ಯವು ದುರದೃಷ್ಟದ ಸಂಕೇತ. ಯೂರೋಪ್ ಅತ್ಯಂತ ಅಸುಖಿ ಭೂಖಂಡ, ಯಾಕೆಂದರೆ ಅದರಲ್ಲಿ ಅತ್ಯಧಿಕ ಆಹಾರಧಾನ್ಯ ಮತ್ತು ಕಬ್ಬಿಣಗಳಿವೆ. ಈ ಕೆಡುಕನ್ನು ಹೋಗಲಾಡಿಸಲು, ನಾಗರಿಕತೆಯನ್ನು ಕಿತ್ತೊಗೆಯುವುದು ಅನಿವಾರ್ಯ, ಯಾಕೆಂದರೆ ಮನುಷ್ಯ ಮೂಲತಃ ಒಳ್ಳೆಯವನು, ಮತ್ತು ಅನಾಗರಿಕ ಮನುಷ್ಯನು *ಊಟಮಾಡಿದಾಗ, ಪ್ರಕೃತಿಯೊಡನೆ ಸಂಪೂರ್ಣವಾಗಿ ಹೊಂದಿಕೊಂಡಿರುತ್ತಿದ್ದ ಮತ್ತು ಎಲ್ಲ ಸಹಜೀವಿಗಳ ಸ್ನೇಹಿತನಾಗಿದ್ದ* (ಅಕ್ಷರಗಳನ್ನು ಓರೆ ಮಾಡಿದ್ದು ನಾನು).

ರೂಸೋ ತನ್ನ ಪ್ರಬಂಧವನ್ನು ವಾಲ್ಟೇರ್‌ಗೆ ಕಳಿಸಿದ, ಅದಕ್ಕೆ ಈ ರೀತಿ ಉತ್ತರ ಬಂತು (೧೭೫೫): 'ಮಾನವ ಜನಾಂಗದ ವಿರುದ್ಧವಾದ ನಿಮ್ಮ ಹೊಸ ಪುಸ್ತಕ ನನಗೆ ತಲುಪಿದೆ, ಅದಕ್ಕಾಗಿ ವಂದನೆಗಳು. ನಮ್ಮನ್ನೆಲ್ಲ ಮೂರ್ಖರನ್ನಾಗಿಸುವ ಜಾಣ್ಮೆಯನ್ನು ಈ ರೀತಿ ಯಾರೂ ವಿನ್ಯಾಸಗೊಳಿಸಿರಲಿಲ್ಲ. ನಿಮ್ಮ ಪುಸ್ತಕವನ್ನು ಓದುವವನಿಗೆ ಕೈಗಳನ್ನೂ ಊರಿ ನಾಲ್ಕರ ಮೇಲೆ ನಡೆದಾಡುವ ಬಯಕೆಯುಂಟಾಗುತ್ತದೆ. ಆದರೆ ಆ ಅಭ್ಯಾಸ ತಪ್ಪಿ ಅರುವತ್ತು ವರ್ಷಗಳಾಗಿರುವುದರಿಂದಾಗಿ ನಾನು ಅದನ್ನು ಮತ್ತೆ ರೂಢಿಸಿಕೊಳ್ಳಲಾರೆನೆಂಬ

ದುಃಖ ನನ್ನದು. ಅಥವಾ ಕೆನಡಾದ ಅನಾಗರಿಕರನ್ನು ಹುಡುಕುವುದೂ ನನಗೆ ಅಸಾಧ್ಯ, ಯಾಕೆಂದರೆ ನನಗೆ ಹತ್ತಿಕೊಂಡಿರುವ ಕಾಯಿಲೆಗಳು ಯೂರೋಪಿಯನ್ ಶಸ್ತ್ರವೈದ್ಯರು ಆವಶ್ಯಕವಾಗುವಂತೆ ಮಾಡಿವೆ; ಯಾಕೆಂದರೆ ಆ ಪ್ರದೇಶಗಳಲ್ಲಿ ಯುದ್ಧ ನಡೆಯುತ್ತಿದೆ; ಮತ್ತು ನಮ್ಮ ಕಾರ್ಯಗಳ ನಿದರ್ಶನಗಳು ಆ ಅನಾಗರಿಕರನ್ನೂ ನಮ್ಮಷ್ಟೇ ಕೆಡುಕರನ್ನಾಗಿ ಮಾಡಿವೆ.'

ಕೊನೆಯಲ್ಲಿ ರೂಸೋ ಮತ್ತು ವಾಲ್ಟೇರ್ ಜಗಳವಾಡಿದುದು ಸಹಜವೇ ಆಗಿದೆ, ವಿಶೇಷವೆಂದರೆ ಅವರು ಬೇಗನೆ ಜಗಳಕ್ಕಿಳಿಯಲಿಲ್ಲ ಎಂಬುದು.

ಇಷ್ಟು ಹೊತ್ತಿಗೆ ಪ್ರಸಿದ್ಧನಾದ ಅವನನ್ನು ೧೭೫೪ರಲ್ಲಿ ಅವನ ಸ್ವಂತ ನಗರವು ನೆನಪಿಸಿಕೊಂಡು ನಗರಕ್ಕೆ ಬರಲು ಆಹ್ವಾನಿಸಿತು; ಅವನೂ ಅದಕ್ಕೆ ಒಪ್ಪಿಗೆಯಿತ್ತ. ಆದರೆ ಕಾಲ್ವಿನಿಸ್ಟ್ ಮಾತ್ರವೇ ಜಿನೀವದ ಪ್ರಜೆಯಾಗಬಹುದಾಗಿದ್ದುದರಿಂದ ಅವನು ಮತ್ತೆ ಮೂಲ ಮತಧರ್ಮಕ್ಕೆ ಪುನರ್ಮತಾಂತರಗೊಂಡ. ತಾನೊಬ್ಬ ಜಿನೀವದ ಸಂಪ್ರದಾಯನಿಷ್ಠ ಮತ್ತು ಒಬ್ಬ ಗಣರಾಜ್ಯವಾದಿ ಎಂದು ತನ್ನನ್ನು ಬಣ್ಣಿಸಿಕೊಳ್ಳುವುದನ್ನು ಅವನಾಗಲೇ ರೂಢಿಸಿಕೊಂಡಿದ್ದ; ಮತ್ತು ಪುನರ್ಮತಾಂತರಗೊಂಡ ಬಳಿಕ ಅವನು ಜಿನೀವದಲ್ಲಿಯೇ ವಾಸಿಸಲು ಆಲೋಚಿಸಿದ. ಅವನು ತನ್ನ 'ಡಿಸ್ಕೋರ್ಸ್ ಆನ್ ಇನೀಕ್ವಾಲಿಟಿ' ಯನ್ನು ನಗರಪಿತೃಗಳಿಗೆ ಸಮರ್ಪಣೆ ಮಾಡಿದ, ಆದರೆ ಅವರು ಅದರಿಂದ ಸುಪ್ರೀತರಾಗಲಿಲ್ಲ, ತಮ್ಮನ್ನು ಸಾಮಾನ್ಯ ಪ್ರಜೆಗಳೊಡನೆ ಸಮೀಕರಿಸಿಕೊಳ್ಳಲು ಅವರಿಗೆ ಇಷ್ಟವಿರಲಿಲ್ಲ. ಜಿನೀವ ಜೀವನದಲ್ಲಿನ ಕೊರತೆ ಅವರ ಅಸಂತುಷ್ಟಿಯಷ್ಟೇ ಆಗಿರಲಿಲ್ಲ; ಇನ್ನೂ ಒಂದು ಕೊರತೆಯಿತ್ತು, ಅದೆಂದರೆ ವಾಲ್ಟೇರ್ ಕೂಡ ಅಲ್ಲಿಯೇ ವಾಸಿಸಲು ಹೋಗಿದ್ದುದು. ವಾಲ್ಟೇರ್ ಒಬ್ಬ ನಾಟಕಕಾರ ಮತ್ತು ರಂಗಕರ್ಮಪ್ರೇಮಿ; ಆದರೆ ಸಂಪ್ರದಾಯನಿಷ್ಠೆಯಿಂದಾಗಿ ಜಿನೀವ ಎಲ್ಲ ನಾಟಕಪ್ರದರ್ಶನಗಳನ್ನೂ ನಿಷೇಧಿಸಿತ್ತು. ಅದನ್ನು ತೆರವುಗೊಳಿಸಲು ವಾಲ್ಟೇರ್ ಪ್ರಯತ್ನಿಸಿದಾಗ ರೂಸೋನ ಹೆಸರು ಸಂಪ್ರದಾಯನಿಷ್ಠರ ಪಟ್ಟಿಯಲ್ಲಿ ಸೇರಿತ್ತು. ಅನಾಗರಿಕರು ಯಾವತ್ತೂ ನಾಟಕಗಳನ್ನಾಡುವುದಿಲ್ಲ, ಪ್ಲೇಟೋ ಅದನ್ನೊಪ್ಪುವುದಿಲ್ಲ, ಕ್ಯಾಥೋಲಿಕ್ ಚರ್ಚ್ ಅವರಿಗೆ ಮದುವೆ ಮಾಡಿಸಲಾಗಲೀ ಸತ್ತರೆ ಹೂಳುವುದನ್ನಾಗಲೀ ಮಾಡುತ್ತಿರಲಿಲ್ಲ, ನಾಟಕವನ್ನು ಬೋಸ್ಯೂಟ್ 'ಕಾಮಾಸಕ್ತ ಪಂಥ' ಎಂದು ಕರೆಯುತ್ತಾನೆ. ವಾಲ್ಟೇರ್‌ನ ಮೇಲೆ ದಾಳಿ ಮಾಡಲು ಇದಕ್ಕಿಂತ ಒಳ್ಳೆಯ ಅವಕಾಶ ಸಿಕ್ಕಲಾರದೆಂದು ರೂಸೋ ತನ್ನನ್ನು ವಿರಕ್ತ ಸಜ್ಜನಿಕೆಯ ಮುಂದಾಳನ್ನಾಗಿ ಬಿಂಬಿಸಿಕೊಂಡ.

ಇದು ಮೇಧಾವಿಗಳಿಬ್ಬರ ನಡುವಣ ಮೊದಲ ಸಾರ್ವಜನಿಕ ಭಿನ್ನಾಭಿಪ್ರಾಯವಾಗಿರಲಿಲ್ಲ. ಮೊದಲನೆಯದು ಎದ್ದಿದ್ದು ಲಿಸ್ಬನ್‌ನ ಭೂಕಂಪದ (೧೭೫೫) ಸಂದರ್ಭದಲ್ಲಿ, ಆಗ ವಾಲ್ಟೇರ್ ಆ ಕುರಿತು ಒಂದು ಕವನವನ್ನು

ಬರೆದಿದ್ದ, ಅದರಲ್ಲಿ ಜಗತ್ತಿನ ದೈವಸಂಕಲ್ಪಾನುಸಾರಿ ಸರ್ಕಾರದ ಬಗ್ಗೆ ಅನುಮಾನ ವ್ಯಕ್ತವಾಗಿತ್ತು. ರೂಸೋ ಕೆಂಡಾಮಂಡಲನಾದ. 'ದೇವರಲ್ಲಿ ನಂಬಿಕೆಯಿರುವಂತೆ ನಟಿಸುವ ವಾಲ್ಟೇರ್ ಯಾವತ್ತೂ ದೆವ್ವವನ್ನು ಹೊರತು ಬೇರಾವುದನ್ನೂ ನಂಬಲಿಲ್ಲ, ಯಾಕೆಂದರೆ ಅವನ ತೋರಿಕೆಯ ದೇವರು ಅಪಾಯಕಾರಿ ಜೀವಿ, ಅವನು ಕುಚೇಷ್ಟೆಗಳ ಮೂಲಕವೇ ಯಾವತ್ತೂ ಸಂತೋಷವನ್ನು ಹೊಂದುವವನು. ಎಲ್ಲ ಬಗೆಯ ಒಳಿತಿನಿಂದ ಸಂತೃಪ್ತನಾದ ವ್ಯಕ್ತಿಗೆ ವಿಶೇಷ ಕ್ರೋಧವನ್ನು ತರುವಂಥ ಈ ಸಿದ್ಧಾಂತದ ಅಬದ್ಧತೆಯು, ತನ್ನ ಸುಖಗಳ ನಡುವಿನಿಂದಲೇ ತಾನು ಮುಕ್ತನಾಗಿರುವ ಪ್ರಕೃತಿವಿಕೋಪಗಳ ಬಗೆಗಿನ ಕ್ರೂರವೂ ಭಯಾನಕವೂ ಆದ ಪ್ರತಿಮೆಗಳಿಂದ ಸಹಜೀವಿಗಳಲ್ಲಿ ಹತಾಶೆಯನ್ನು ತುಂಬಲು ಪ್ರಯತ್ನಿಸುವವನದು.'

ರೂಸೋಗೆ ಭೂಕಂಪದ ಬಗ್ಗೆ ಅಂತಹ ಗೊಂದಲವನ್ನುಂಟುಮಾಡುವ ಅವಕಾಶ ಒದಗಲಿಲ್ಲ. ಆಗೀಗ ಕೆಲವು ಜನರು ಸಾಯುವ ಸ್ಥಿತಿಯು ಒಳ್ಳೆಯದೇ. ಅಲ್ಲದೆ, ಲಿಸ್ಬನ್ ನಗರದ ಜನರು ಏಳು ಮಹಡಿಗಳ ಮನೆಗಳಲ್ಲಿ ವಾಸಿಸುವವರಾದ್ದರಿಂದ ತೊಂದರೆ ಅನುಭವಿಸುತ್ತಾರೆ. ಅವರೆಲ್ಲ ತಮಗೆ ಸಹಜವಾಗಿಯೇ ಕಾಡುಗಳಲ್ಲಿ ಚೆದುರಿ ಹೋಗಿದ್ದರೆ, ಇಂಥ ವಿಪತ್ತಿನಿಂದ ಪಾರಾಗಬಹುದಾಗಿತ್ತು.

ಭೂಕಂಪದ ಬಗೆಗಿನ ಮತಧರ್ಮಶಾಸ್ತ್ರ ಹಾಗೂ ನಾಟಕಪ್ರದರ್ಶನದ ನೈತಿಕತೆಯ ಪ್ರಶ್ನೆಗಳು ವಾಲ್ಟೇರ್ ಮತ್ತು ರೂಸೋರ ನಡುವೆ ಕಹಿಯಾದ ವಿದ್ವೇಷವನ್ನುಂಟುಮಾಡಿದವು, ಅದರಲ್ಲಿ ಎಲ್ಲ ತತ್ವಜ್ಞಾನಿಗಳೂ ಪಾಲ್ಗೊಂಡಿದ್ದರು. ರೂಸೋ ಒಬ್ಬ ಕುಚೇಷ್ಟೆಯ ಹುಚ್ಚ ಎಂದು ವಾಲ್ಟೇರ್ ಭಾವಿಸಿದ್ದರೆ, ರೂಸೋ ವಾಲ್ಟೇರ್ ಬಗ್ಗೆ 'ಅಶ್ರದ್ಧೆಯ ಕಹಳೆ, ಮಹಾಪ್ರತಿಭಾವಂತ ಆದರೆ ಕೀಳು ಆತ್ಮದ ವ್ಯಕ್ತಿ' ಎಂದು ಬಣ್ಣಿಸಿದ. ಆದರೆ ಮೇಲು ಭಾವನೆಗಳು ವ್ಯಕ್ತವಾಗಬೇಕಲ್ಲ, ಹೀಗಾಗಿ ರೂಸೋ ವಾಲ್ಟೇರ್‌ಗೆ ಹೀಗೆ ಬರೆದ (೧೭೬೦): 'ವಾಸ್ತವದಲ್ಲಿ ನಾನು ನಿಮ್ಮನ್ನು ದ್ವೇಷಿಸುತ್ತೇನೆ, ಹಾಗಾಗಬೇಕೆಂಬುದೇ ನಿಮ್ಮ ಆಸೆ. ಆದರೆ ನೀವು ಹಾಗೆ ಬಯಸಿದ್ದರೆ, ನಾನು ಪ್ರೀತಿಸುವವನಿಗಿಂತ ಹೆಚ್ಚು ಮೌಲಿಕವಾದ ವ್ಯಕ್ತಿಯೆಂದು ನಾನು ನಿಮ್ಮನ್ನು ದ್ವೇಷಿಸುತ್ತೇನೆ. ನಿಮ್ಮ ಬಗ್ಗೆ ನನ್ನ ಹೃದಯದಲ್ಲಿ ತುಂಬಿರುವ ಭಾವನೆಗಳಲ್ಲೆಲ್ಲ, ನಿಮ್ಮದು ಮಹಾ ಪ್ರತಿಭೆ ಎಂಬ ಭಾವನೆಯನ್ನು ಮತ್ತು ನಿಮ್ಮ ಬರವಣಿಗೆಗಳ ಬಗೆಗಿನ ಪ್ರೀತಿಯನ್ನು ನಾನು ತಿರಸ್ಕರಿಸಲಾರೆ. ನಿಮ್ಮಲ್ಲಿ ಬೇರೇನೂ ಇಲ್ಲದಿದ್ದರೂ ನಿಮ್ಮ ಪ್ರತಿಭೆಯನ್ನು ನಾನು ಗೌರವಿಸುತ್ತೇನೆ, ಅದು ನನ್ನ ತಪ್ಪಲ್ಲ.'

ಈಗ ನಾವು ರೂಸೋನ ಜೀವನದ ಅತ್ಯಂತ ಫಲಕಾರಿಯಾದ ಅವಧಿಗೆ ಬರುತ್ತೇವೆ. ಅವನ ಕಾದಂಬರಿ 'ಲ ನೂವೆಲ್ ಹೆಲಿಯೋಸ್' ೧೭೬೦ ರಲ್ಲಿ ಪ್ರಕಟವಾಯಿತು; 'ಎಮಿಲಿ' ಮತ್ತು 'ದ ಸೋಷಿಯಲ್ ಕಾಂಟ್ರಾಕ್ಟ್' ಎರಡೂ ೧೭೬೨ ರಲ್ಲಿ ಹೊರಬಂದುವು. 'ಎಮಿಲಿ'ಯು 'ಸಹಜ' ತತ್ವಗಳಿಗನುಗುಣವಾದ

ಶಿಕ್ಷಣದ ಬಗೆಗಿನ ಗ್ರಂಥ; ಅದರಲ್ಲಿ 'ದ ಕನ್‌ಫೆಷನ್ ಆಫ್ ಫೆಯ್ತ್ ಆಫ್ ಎ ಸಾವೊಯಾರ್ಡ್ ವಿಕರ್' ಎಂಬ ಭಾಗವಿರದಿದ್ದರೆ ಅದನ್ನು ಆಡಳಿತವು ಹಾನಿಕರವಲ್ಲವೆಂದೇ ಪರಿಗಣಿಸುತ್ತಿತ್ತು. ಅದರಲ್ಲಿ ರೂಸೋ ಅರ್ಥಮಾಡಿಕೊಂಡಿದ್ದಂತಹ ಸಹಜ ಮತಧರ್ಮದ ತತ್ವಗಳನ್ನು ಬಿಂಬಿಸಲಾಗಿದೆ; ಇದು ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟೆಂಟ್ ಎರಡೂ ಬಣಗಳ ಸಂಪ್ರದಾಯನಿಷ್ಠರನ್ನು ಕೆರಳಿಸಿತು. 'ದ ಸೋಷಿಯಲ್ ಕಾಂಟ್ರಾಕ್ಟ್' ಮತ್ತೂ ಅಪಾಯಕಾರಿ, ಯಾಕೆಂದರೆ ಅದು ಪ್ರಜಾಪ್ರಭುತ್ವವನ್ನು ಎತ್ತಿಹಿಡಿದು ರಾಜರ ದೈವಿಕ ಅಧಿಕಾರವನ್ನು ನಿರಾಕರಿಸಿತು. ಈ ಎರಡೂ ಗ್ರಂಥಗಳು ಅವನ ಕೀರ್ತಿಯನ್ನು ಹೆಚ್ಚಿಸಿದರೂ, ಅವನ ಮೇಲೆ ಅಧಿಕೃತ ಖಂಡನೆಯ ಸುರಿಮಳೆಯನ್ನೇ ಉಂಟುಮಾಡಿದವು, ಅವನು ಫ್ರಾನ್ಸ್‌ನಿಂದ ಹಾರಿಹೋಗುವಂತೆ ಮಾಡಿತು; ಅವನಿಲ್ಲದೆ ಜಿನೀವ ಏನೂ ಆಗಿರಲಿಲ್ಲ.[೨೦] ಅವನಿಗೆ ಆಶ್ರಯ ಕೊಡಲು ಬರ್ನ್ ನಿರಾಕರಿಸಿತು. ಕೊನೆಗೆ ಫ್ರೆಡೆರಿಕ್ ಮಹಾಶಯನು ಅವನ ಬಗ್ಗೆ ಕನಿಕರ ತೋರಿ, ಆ ತತ್ವಜ್ಞಾನಿ ರಾಜನ ಆಡಳಿತಭಾಗವಾಗಿದ್ದ ನ್ಯೂಶ್ಯಾಟೆಲ್ ಬಳಿಯ ಮೊಟಿಯೆರ್ಸ್‌ನಲ್ಲಿ ಇರಲು ಅವನಿಗೆ ಅವಕಾಶ ನೀಡಿದ. ಅಲ್ಲಿ ಅವನು ಮೂರು ವರ್ಷಗಳ ಕಾಲ ಇದ್ದ; ಆದರೆ ಆ ಅವಧಿಯ ಕೊನೆಯಲ್ಲಿ (೧೭೬೫) ಮೊಟಿಯೆರ್ಸ್ ಹಳ್ಳಿಗರು, ಒಬ್ಬ ಧರ್ಮಗುರುವಿನ ಮುಂದಾಳತ್ವದಲ್ಲಿ ಅವನ ಮೇಲೆ ವಿಷವೂಡಿದ ಆರೋಪ ಹೊರಿಸಿ ಅವನನ್ನು ಕೊಲೆಮಾಡಲು ಪ್ರಯತ್ನಿಸಿದರು. ಅವನು ಇಂಗ್ಲಂಡ್‌ಗೆ ಓಡಿಹೋದ, ಅಲ್ಲ ಹ್ಯೂಮ್ ೧೭೬೬ ರಲ್ಲಿ ಆಶ್ರಯವಿತ್ತ.

ಮೊದಮೊದಲಲ್ಲಿ ಇಂಗ್ಲಂಡ್‌ನಲ್ಲಿ ಎಲ್ಲ ಸುಲಲಿತವಾಗಿದ್ದವು. ಅವನು ಸಮಾಜದಲ್ಲಿ ಯಶಸ್ವೀ ವ್ಯಕ್ತಿಯೆನಿಸಿದ, ಮೂರನೆಯ ಜಾರ್ಜ್ ಅವನಿಗೆ ಪಿಂಚಣಿಯನ್ನು ದಯಪಾಲಿಸಿದ. ಅವನು ಬರ್ಕ್‌ನನ್ನು ಬಹುಪಾಲು ಪ್ರತಿದಿನವೂ ಭೇಟಿಯಾಗುತ್ತಿದ್ದ. ಆದರೆ ಬಹುಬೇಗ ಅವರ ಗೆಳೆತನ ತಣ್ಣಗಾಗಿ ಕೊನೆಗೆ ಬರ್ಕ್ ಅವನ ಬಗ್ಗೆ ಹೀಗೆ ಬರೆದ: 'ಅವನು ಹೃದಯದ ಮೇಲೆ ಪ್ರಭಾವ ಬೀರುವ ಅಥವಾ ತನ್ನ ಅರಿವನ್ನು ವಿಸ್ತರಿಸುವಂತಹ ಯಾವುದೇ ತತ್ವವನ್ನು ಪಾಲಿಸದೆ, ಬರಿ ಡಾಂಭಿಕತೆಯನ್ನು ಹೊಂದಿದ್ದ.' ಹ್ಯೂಮ್ ಬಹುಕಾಲ ಅವನ ವಿಶ್ವಾಸಿಯಾಗಿದ್ದ, ತಾನು ಅವನನ್ನು ಪ್ರೀತಿಸುವುದಾಗಿ ಹೇಳಿದ, ತನ್ನ ಜೀವಮಾನಪೂರ್ತಿ ಪರಸ್ಪರ ಸ್ನೇಹ ಮತ್ತು ಗೌರವಗಳೊಡನೆ ಜೀವಿಸಲು ಸಿದ್ಧ ಎಂದ. ಆದರೆ ಈ ಹೊತ್ತಿಗೆ

---

೨೨೦. ಈ ಎರಡೂ ಪುಸ್ತಕಗಳನ್ನು ಸುಟ್ಟು ಹಾಕಲು ಮತ್ತು ಜಿನೀವಕ್ಕೆ ಬಂದರೆ ರೂಸೋನನ್ನು ಸೆರೆಹಿಡಿಯಬೇಕೆಂದು ಜಿನೀವದ ನಗರಸಭೆಯು ಆಜ್ಞೆ ಮಾಡಿತು. ಫ್ರೆಂಚ್ ಸರ್ಕಾರವು ಅವನನ್ನು ಸೆರೆಹಿಡಿಯಲು ಆಜ್ಞಾಪಿಸಿತು; ಸಾರ್ಬೋನ್ ಮತ್ತು ಪ್ಯಾರಿಸ್‌ನ ಸಂಸತ್ತು 'ಎಮಿಲಿ'ಯನ್ನು ಖಂಡಿಸಿದವು.

ರೂಸೋ, ಅಸಹಜವಾಗಿಯೇನೂ ಅಲ್ಲ, ಕಿರುಕುಳಭ್ರಮೆಯಿಂದ (ಪರ್ಸೆಕ್ಯೂಷನ್ ಮೇನಿಯ) ನರಳುತ್ತ ಕೊನೆಗೆ ಹುಚ್ಚನಾದ, ತನ್ನ ಜೀವ ತೆಗೆಯುವ ಹುನ್ನಾರಗಳಲ್ಲಿ ಹ್ಯೂಮ್ ಪಾಲುದಾರ ಎಂದು ಅನುಮಾನಿಸಿದ. ಕೆಲವು ವೇಳೆ ತನ್ನ ಅನುಮಾನಗಳ ಅಸಂಬದ್ಧತೆಯನ್ನು ಅರಿತು ಹ್ಯೂಮ್‌ನನ್ನು ಅಪ್ಪಿಕೊಂಡು 'ಇಲ್ಲ, ಇಲ್ಲ, ಹ್ಯೂಮ್ ರಾಜದ್ರೋಹಿಯಲ್ಲ' ಎಂದು ಉದ್ಗರಿಸುತ್ತಿದ್ದ. ಇರಿಸುಮುರಿಸಿಗೊಳಗಾಗುತ್ತಿದ್ದ ಹ್ಯೂಮ್ ಆಗೆಲ್ಲ '*ಏನಂದಿರಿ ಗೆಳೆಯ ಮಹಾಶಯರೇ?*' ಎಂದು ಉದ್ಗರಿಸುತ್ತಿದ್ದ. ಆದರೆ ಕೊನೆಗೂ ಅವನ ಭ್ರಮೆ ಅವನನ್ನು ಸಂಪೂರ್ಣವಾಗಿ ಆವರಿಸಿ ಅಲ್ಲಿಂದ ಓಡಿಹೋದ. ತನ್ನ ಕೊನೆಯ ದಿನಗಳನ್ನವನು ಪ್ಯಾರಿಸ್‌ನಲ್ಲಿ ತೀರ ಬಡತನದಲ್ಲಿ ಕಳೆದ, ಅವನು ಸತ್ತಾಗ ಜನ ಅದು ಆತ್ಮಹತ್ಯೆಯಿರಬಹುದೇ ಎಂದು ಸಂಶಯಪಟ್ಟರು.

ಹೀಗೆ ಬೇರ್ಪಟ್ಟ ಮೇಲೆ ಹ್ಯೂಮ್ ಹೀಗೆಂದ: 'ತನ್ನ ಜೀವಮಾನ ಪೂರ್ತಿ ಅವರು ಬರಿ ಅನುಭವಿಸುತ್ತಿದ್ದರು, ಈ ವಿಷಯದಲ್ಲಿ ಅವರ ಸಂವೇದನಾಶೀಲತೆಯು ನಾನು ಕಂಡ ಎಲ್ಲ ನಿದರ್ಶನಗಳಿಗಿಂತ ಮಿಗಿಲಾಗಿ ಏರುತ್ತಿತ್ತು; ಆದರೆ ಅದು ಅವರಿಗೆ ಸಂತೋಷಕ್ಕಿಂತಲೂ ನೋವಿನ ತೀವ್ರ ಅನುಭವವನ್ನು ಉಂಟುಮಾಡುತ್ತಿತ್ತು. ಇಂತ ಸನ್ನಿವೇಶಗಳಲ್ಲಿ ಕೇವಲ ಬಟ್ಟೆಗಳನ್ನಷ್ಟೇ ಅಲ್ಲದೆ ಚರ್ಮವನ್ನೇ ಕಿತ್ತುಕೊಂಡ ವ್ಯಕ್ತಿಯಂತೆ ಒರಟು ಮತ್ತು ಅಟ್ಟಹಾಸದ ಜನರೊಡನೆ ಕಾದಾಡುವಂತೆ ಆಗುತ್ತಿದ್ದರು.'

ಇದು ರೂಸೋನ ವ್ಯಕ್ತಿತ್ವದ ಅನುಕಂಪಭರಿತ ವ್ಯಾಖ್ಯೆ, ಇದಕ್ಕಿಂತ ಹೆಚ್ಚು ಸತ್ಯ ಇರಲು ಸಾಧ್ಯವಿಲ್ಲ.

ಮಿಕ್ಕ ವಿಷಯಗಳಲ್ಲಿ ಪ್ರಮುಖವೆನಿಸುವ ರೂಸೋನ ಕೃತಿಗಳು ಬಹಳವಿದ್ದರೂ, ಅವುಗಳಲ್ಲಿ ಅವನ ತಾತ್ವಿಕ ಚಿಂತನೆಗಳ ಇತಿಹಾಸಕ್ಕೆ ಸಂಬಂಧಿಸಿದವುಗಳಲ್ಲ. ಅವನ ಚಿಂತನೆಯ ಎರಡು ಭಾಗಗಳನ್ನಷ್ಟೇ ನಾನು ವಿವರವಾಗಿ ಪರಿಶೀಲಿಸುತ್ತೇನೆ: ಮೊದಲಿಗೆ ಅವನ ಮತಧರ್ಮಶಾಸ್ತ್ರ, ಮತ್ತು ಎರಡನೆಯದು, ಅವನ ರಾಜಕೀಯ ಸಿದ್ಧಾಂತ.

ಮತಧರ್ಮಶಾಸ್ತ್ರದಲ್ಲಿ ಅವನು ಸೃಷ್ಟಿಸಿದ ಹೊಸದನ್ನು ಈಗ ಬಹುತೇಕ ಪ್ರಾಟೆಸ್ಟೆಂಟ್ ಮತಧರ್ಮಶಾಸ್ತ್ರಜ್ಞರು ಒಪ್ಪಿಕೊಂಡಿದ್ದಾರೆ. ಅವನಿಗಿಂತ ಮುಂಚೆ, ಪ್ಲೇಟೋನಿಂದ ಮೊದಲುಗೊಂಡು ಪ್ರತಿಯೊಬ್ಬ ತತ್ವಜ್ಞಾನಿಯೂ, ದೇವರಲ್ಲಿ ನಂಬಿಕೆಯಿದ್ದವನಾದರೆ, ತಮ್ಮ ನಂಬಿಕೆಗೆ ಆಧಾರವಾಗಿ ಬೌದ್ಧಿಕ ವಾದಗಳನ್ನು ಮಂಡಿಸುತ್ತಿದ್ದ.[೨೭೧] ನಮಗೆ ಆ ವಾದಗಳು ಮನವೊಪ್ಪುವಂತಹವಲ್ಲ ಎನ್ನಿಸಬಹುದು, ಈ ತೀರ್ಮಾನದ ಸತ್ಯತೆಯ ಬಗ್ಗೆ ಈಗಾಗಲೇ ಖಚಿತ ನಿಲವಿಲ್ಲದವರಿಗೆ ಇದು

---

೨೭೧. ಇವರಲ್ಲಿ ನಾವು ಪಾಸ್ಕಲ್‌ನನ್ನು ಹೊರತುಪಡಿಸಬೇಕು. 'ಹೃದಯಕ್ಕೆ ಕಾರಣಗಳಿಲ್ಲ, ಅದರ ವಿಷಯ ಅದಕ್ಕೇನೂ ಗೊತ್ತಿಲ್ಲ' ಎಂಬುದು ರೂಸೋನ ಶೈಲಿಯಲ್ಲಿಯೇ ಇದೆ.

ಪ್ರಬಲ ಸಮರ್ಥನೆ ಎನ್ನಿಸಲಾರದು ಎಂದೂ ನಮಗನ್ನಿಸಬಹುದು. ಅದರೆ ಈ ವಾದಗಳನ್ನು ಮುಂದಿಡುತ್ತಿದ್ದ ತತ್ವಜ್ಞಾನಿಯು ಅವು ತಾರ್ಕಿಕವಾಗಿ ಸಿಂಧುವೆಂದು, ಮತ್ತು ಸಾಕಷ್ಟು ಮಟ್ಟಿಗಿನ ತಾತ್ವಿಕ ಸಾಮರ್ಥ್ಯ ಹೊಂದಿದ ಪೂರ್ವಾಗ್ರಹರಹಿತನಾದವನಿಗೆ ದೇವರ ಅಸ್ತಿತ್ವದ ಬಗ್ಗೆ ಖಚಿತತೆಯನ್ನು ಹೊಂದುವಂತೆ ತನ್ನ ವಾದವು ಮಾಡುವುದೆಂದು ದೃಢವಾಗಿ ನಂಬಿರುತ್ತಿದ್ದ. ದೇವರಲ್ಲಿ ನಂಬಿಕೆ ಹೊಂದಿರೆಂದು ಬೋಧಿಸುವ ಆಧುನಿಕ ಪ್ರಾಟೆಸ್ಟೆಂಟರು ಬಹುತೇಕ ಹಳೆಯ 'ಸಾಕ್ಷ್ಯ'ಗಳನ್ನು ತಿರಸ್ಕರಿಸುತ್ತಾರೆ, ಅಲ್ಲದೆ ಮಾನವ ಪ್ರಕೃತಿಯ – ಭಯ ಮತ್ತು ನಿಗೂಢತೆ, ಒಳಿತು ಕೆಡುಕುಗಳ ಸ್ವರೂಪ, ಮಹತ್ವಾಕಾಂಕ್ಷೆ, ಮುಂತಾದ – ಒಂದಂಶದ ಮೇಲೆ ತಮ್ಮ ನಂಬಿಕೆಯನ್ನು ಆಧರಿಸುತ್ತಾರೆ. ಮತಧಾರ್ಮಿಕ ನಂಬಿಕೆಗಳನ್ನು ಸಮರ್ಥಿಸುವ ಈ ಮಾರ್ಗವನ್ನು ಸೃಷ್ಟಿಸಿದವನು ರೂಸೋ. ಅದು ಎಷ್ಟು ಜನಜನಿತವಾಗಿದೆಯೆಂದರೆ, ರೂಸೋನನ್ನು ಡೆಕಾರ್ಟೆ ಅಥವಾ ಲೀಬ್‌ನಿಝ್ ಅಂತಹವರೊಡನೆ ತೌಲನಿಕವಾಗಿ ನೋಡುವ ತೊಂದರೆ ತೆಗೆದುಕೊಳ್ಳದಿದ್ದರೆ, ಆಧುನಿಕ ಓದುಗನು ಅದರ ಸ್ವಂತಿಕೆಯನ್ನು ಸುಲಭವಾಗಿ ಮೆಚ್ಚಿಕೊಳ್ಳುವುದಿಲ್ಲ.

'ಆ, ಮೇಡಂ! ನಮ್ಮ ಅಧ್ಯಯನ ಕೋಣೆಯ ಒಂಟಿತನದಲ್ಲಿ ನನ್ನ ಕಣ್ಣುಗಳನ್ನು ಕೈಗಳಿಂದ ಬಿಗಿಯಾಗಿ ಒತ್ತಿ ಮುಚ್ಚಿಕೊಂಡೋ ಅಥವಾ ರಾತ್ರಿಯ ಕಗ್ಗತ್ತಲಿನಲ್ಲಿಯೋ ದೇವರು ಇಲ್ಲ ಎಂಬುದು ನನ್ನ ಅಭಿಪ್ರಾಯ ಎಂದುಕೊಳ್ಳುತ್ತೇನೆ. ಆದರೆ ದೂರದಲ್ಲಿ ಮೇಲೇಳುತ್ತಿರುವ ಸೂರ್ಯನು ಭೂಮಿಯನ್ನಾವರಿಸಿರುವ ಕಾವಳವನ್ನು ಚೆದುರಿಸುತ್ತ ಪ್ರಕೃತಿಯ ಅದ್ಭುತ ಚೆಲುವನ್ನು ನಮ್ಮ ಎದುರಿಗಿರಿಸುವುದನ್ನು ನೋಡಿದಾಗ ನನ್ನ ಆತ್ಮದಲ್ಲಿನ ಮೋಡವೆಲ್ಲ ಕ್ಷಣಾರ್ಧದಲ್ಲಿ ಕಣ್ಮರೆಯಾಗಿಬಿಡುತ್ತದೆ. ನನಗೆ ಮತ್ತೆ ನಂಬಿಕೆ, ಮತ್ತು ನನ್ನ ದೇವರು, ದೇವರಲ್ಲಿನ ನನ್ನ ನಂಬಿಕೆ ಮತ್ತೆ ಕಾಣಿಸುತ್ತದೆ. ನಾನು ಅವನನ್ನು ಸ್ತುತಿಸುತ್ತೇನೆ, ಪೂಜಿಸುತ್ತೇನೆ, ಅವನೆದುರು ಸಾಷ್ಟಾಂಗ ಬೀಳುತ್ತೇನೆ' ಎಂದು ರೂಸೋ ಒಬ್ಬ ಶ್ರೀಮಂತ ಮಹಿಳೆಗೆ ಬರೆಯುತ್ತಾನೆ.

ಮತ್ತೊಂದು ಸನ್ನಿವೇಶದಲ್ಲಿ ಅವನು ಹೀಗೆನ್ನುತ್ತಾನೆ: 'ಮಿಕ್ಕ ಯಾವುದೇ ಸತ್ಯದಂತೆಯೇ ನಾನು ದೇವರನ್ನು ಆಳವಾಗಿ ನಂಬುತ್ತೇನೆ, ಯಾಕೆಂದರೆ ನಂಬಿಕೆ ಅಪನಂಬಿಕೆಗಳು ನನ್ನನ್ನು ಆಧರಿಸಿರುವ ಜಗತ್ತಿಗೆ ಏನೂ ಅಲ್ಲ.' ಈ ಬಗೆಯ ವಾದವೈಖರಿಗೆ ಖಾಸಗಿಯಾಗಿರುವುದೇ ಕೊರತೆಯಾಗುತ್ತದೆ; ರೂಸೋ ಯಾವುದನ್ನಾದರೂ ನಂಬದೆ ಇರಲು ಸಾಧ್ಯವಿಲ್ಲ ಎಂಬುದು ಇತರರೂ ಅದನ್ನು ನಂಬಬೇಕೆಂದು ನಿರೀಕ್ಷಿಸಲು ಕಾರಣವಾಗಲಾರದು.

ದೈವಿಕತೆಯ ಅವನ ನಂಬಿಕೆಯು ತುಂಬ ಆಳವಾದುದು. ಒಂದು ಸಂದರ್ಭದಲ್ಲಿ ಹೀಗಾಯಿತು: ಔತಣಕೂಟವೊಂದರಲ್ಲಿ ಸಂತ ಲ್ಯಾಂಬರ್ಟ್

(ಅತಿಥಿಗಳಲ್ಲಿ ಒಬ್ಬ) ದೇವರ ಅಸ್ತಿತ್ವದ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದರಿಂದ ರೂಸೋ ತಾನು ಹೊರನಡೆಯುವುದಾಗಿ ಬೆದರಿಕೆ ಹಾಕಿದನಂತೆ. 'ಸ್ವಾಮಿಗಳೇ, ನನಗೆ ದೇವರಲ್ಲಿ ನಂಬಿಕೆಯಿದೆ' ಎಂದು ಕೋಪದಿಂದ ಕೂಗಿದನಂತೆ. ಎಲ್ಲ ವಿಷಯಗಳಲ್ಲಿಯೂ ಅವನ ನಿಷ್ಠಾವಂತ ಶಿಷ್ಯನಾಗಿದ್ದ ರಾಬಸ್‌ಪಿಯರ್ ಈ ವಿಷಯದಲ್ಲಿಯೂ ಅವನನ್ನು ಅನುಸರಿಸಿದನಂತೆ. 'ಪರಮಾತ್ಮನ ಹಬ್ಬ'ವು ರೂಸೋನ ಮನಃಪೂರ್ವಕ ಒಪ್ಪಿಗೆಗೆ ಅನುಗುಣವಾಗಿತ್ತು

'ದ ಕನ್‌ಫೆಷನ್ ಆಫ್ ಫೆಯ್ತ್ ಆಫ್ ಎ ಸಾವೊಯಾರ್ಡ್ ವಿಕರ್' ಎಂಬುದು 'ಎಮಿಲಿ'ಯ ನಾಲ್ಕನೆಯ ಭಾಗದಲ್ಲಿ ಬರುತ್ತದೆ; ಅದು ರೂಸೋನ ಮತಸಿದ್ಧಾಂತಗಳ ಸ್ಪಷ್ಟವೂ ಔಪಚಾರಿಕವೂ ಆದ ಹೇಳಿಕೆ. ಒಬ್ಬ ಅವಿವಾಹಿತ ಹೆಣ್ಣನ್ನು ಶೀಲಭಂಗ ಮಾಡಿದ 'ಸಹಜ' ತಪ್ಪಿಗಾಗಿ ಪದಚ್ಯುತಿಗೊಂಡ ಸಜ್ಜನನಾದ ಪುರೋಹಿತನೊಬ್ಬನಿಗೆ ಘೋಷಿಸಿದ ಪ್ರಕೃತಿಯ ಧ್ವನಿ ಎಂದು ಹೇಳಿಕೊಂಡರೂ, ಅದು ಅರಿಸ್ಟಾಟಲ್, ಸಂತ ಆಗಸ್ಟೈನ್, ಡೆಕಾರ್ಟೆ ಮುಂತಾದವರ ಅಭಿಪ್ರಾಯಗಳನ್ನಾಧರಿಸಿದ ತೇಪೆ ಹಾಕಿದ ವಾದವೆಂಬುದು ಓದುಗನಿಗೆ ಅಚ್ಚರಿ ಹುಟ್ಟಿಸುತ್ತದೆ. ಮೂಲದ ನಿಖರತೆಯಾಗಲೀ ತಾರ್ಕಿಕ ಸುಸಂಗಗತೆಯಾಗಲೀ ಇಲ್ಲಿ ಕಳಚಿಹೋಗಿವೆ; ಅವರನ್ನು ಕ್ಷಮಿಸಿ, ತಾನು ತತ್ವಜ್ಞಾನಿಗಳ ವಿವೇಕಕ್ಕೆ ಸ್ವಲ್ಪವೂ ಗೌರವ ನೀಡುವುದಿಲ್ಲವೆಂದು ಹೇಳಲು ಆ ಶ್ರೇಷ್ಠ ವಿಕರ್‌ಗೆ ಅನುಮತಿ ನೀಡುವುದಕ್ಕಾಗಿ ಬರೆದಿರುವಂತೆ ತೋರುತ್ತದೆ.

'ದ ಕನ್‌ಫೆಷನ್ ಆಫ್ ಫೆಯ್ತ್'ನ ಮುಂದಿನ ಭಾಗಗಳಲ್ಲಿ ಹಿಂದಿನ ಚಿಂತಕರ ನೆನಪುಗಳು ಉಳಿದ ಭಾಗಗಳಿಗಿಂತ ಕಡಿಮೆ ಇವೆ. ದೇವರು ಇದ್ದಾನೆಂದು ದೃಢಪಡಿಸಿಕೊಂಡ ಮೇಲೆ, ನಡತೆಯ ನಿಯಮಗಳನ್ನು ಪರಿಶೀಲಿಸಲು ವಿಕರ್ ತೊಡಗುತ್ತಾನೆ. 'ನಾನು ಈ ನಿಯಮಗಳನ್ನು ಗಾಢ ತಾತ್ವಿಕತೆಯ ತತ್ವಗಳ ಮೂಲಕ ಸಾಧಿಸುವುದಿಲ್ಲ, ಅವುಗಳನ್ನು ನಾನು ಪ್ರಕೃತಿಯೇ ಅಳಿಸಲಾಗದ ಅಕ್ಷರಗಳಲ್ಲಿ ಬರೆದಿರುವ ನನ್ನ ಹೃದಯದಾಳದಲ್ಲಿ ಕಾಣುತ್ತೇನೆ' ಎಂದವನು ಹೇಳುತ್ತಾನೆ. ಇದರಿಂದ ಅವನು ರೂಪಿಸುವ ದೃಷ್ಟಿಕೋನವೆಂದರೆ, ಆತ್ಮಪ್ರಜ್ಞೆಯು ಎಲ್ಲ ಸಂದರ್ಭಗಳಲ್ಲಿಯೂ ಸರಿಯಾದ ಕ್ರಿಯೆಯ ದೋಷರಹಿತ ಮಾರ್ಗದರ್ಶಕ ಎಂಬುದು. 'ದೇವರಿಗೆ ಶರಣು. ನಾವು ಎಲ್ಲ ತತ್ವಜ್ಞಾನಗಳ ಭಯಾನಕ ಸಲಕರಣೆಗಳಿಂದ ಮುಕ್ತರಾಗಿದ್ದೇವೆ, ಸುಶಿಕ್ಷಿತರಾಗದೇ ನಾವು ಮನುಷ್ಯರಾಗಿರಬಹುದು; ನೀತಿಸಂಹಿತೆಯ ಅಧ್ಯಯನದಲ್ಲಿ ಬದುಕನ್ನು ವ್ಯರ್ಥಗೊಳಿಸುವುದರಿಂದ ನಾವು ಮುಕ್ತರು, ಮಾನವ ಅಭಿಪ್ರಾಯಗಳ ಅಪರಿಮಿತ ವ್ಯೂಹದಲ್ಲಿ ನಮಗೆ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಬೆಲೆಬಾಳುವ ಮಾರ್ಗದರ್ಶನ ದೊರೆಯುತ್ತದೆ' ಎಂದು ಈ ಭಾಗದ ವಾದವನ್ನವನು ಮುಗಿಸುತ್ತಾನೆ. ನಮ್ಮ ಸಹಜ ಭಾವನೆಗಳು ಸಕಲರ ಹಿತಾಸಕ್ತಿಗಳಿಗನುಗುಣವಾಗಿ ನಡೆದುಕೊಳ್ಳುವತ್ತ

ನಮ್ಮನ್ನು ಕರೆದೊಯ್ಯುತ್ತವೆ, ಆದರೆ ನಮ್ಮ ವೈಚಾರಿಕತೆಯು ನಮ್ಮನ್ನು ಸ್ವಾರ್ಥದತ್ತ ಎಳೆಯುತ್ತದೆ ಎಂಬುದು ಅವನ ವಾದ. ಹೀಗಾಗಿ ಸಜ್ಜನರಾಗಿ ಬದುಕಲು ನಾವು ಅನುಸರಿಸಬೇಕಾದುದು ನಮ್ಮ ಭಾವನೆಗಳನ್ನೇ ಹೊರತು ವೈಚಾರಿಕತೆಯನ್ನಲ್ಲ.

ತನ್ನ ಸಿದ್ಧಾಂತವನ್ನು ಪ್ರಕೃತಿ ಧರ್ಮ ಎನ್ನುವ ವಿಕರ್ ಅದಕ್ಕೆ ದಿವ್ಯಜ್ಞಾನದ ಆವಶ್ಯಕತೆಯಿಲ್ಲ ಎನ್ನುತ್ತಾನೆ. ತನ್ನ ಹೃದಯಕ್ಕೆ ದೇವರು ಏನು ಹೇಳುತ್ತಾನೆ ಎಂಬುದನ್ನು ಕೇಳಿಸಿಕೊಂಡಿದ್ದಿದ್ದರೆ, ಆಗ ಜಗತ್ತಿನಲ್ಲಿ ಒಂದೇ ಧರ್ಮವು ಇರುತ್ತಿತ್ತು. ದೇವರು ಕೆಲವರಿಗೆ ಮಾತ್ರ ವಿಶೇಷವಾಗಿ ಕಾಣಿಸಿಕೊಂಡಿದ್ದರೆ, ಅದನ್ನು ಮಾನವ ಸಾಕ್ಷ್ಯದ ಮೂಲಕ ತಿಳಿಯಬಹುದು, ಆದರೆ ಅದು ತಪ್ಪು ಮಾಡಬಹುದಾದುದು. ಪ್ರಕೃತಿ ಧರ್ಮದಲ್ಲಿರುವ ಅನುಕೂಲವೆಂದರೆ ಪ್ರತಿ ವ್ಯಕ್ತಿಯಲ್ಲಿಯೂ ಅದು ನೇರವಾಗಿ ಕಾಣಿಸಿಕೊಳ್ಳುವುದು.

ಅದರಲ್ಲಿ ನರಕದ ಬಗ್ಗೆ ಕುತೂಹಲಕಾರಿ ಭಾಗವೊಂದಿದೆ. ಕೆಟ್ಟವನು ಚಿರಂತನ ಯಾತನೆಯನ್ನು ಅನುಭವಿಸುತ್ತಾನೆಯೇ ಎಂಬುದು ವಿಕರ್‌ಗೆ ತಿಳಿಯದು, ಹೀಗಾಗಿ ಕೆಟ್ಟವನಿಗೆ ಏನಾಗುತ್ತದೆ ಎಂಬ ಬಗ್ಗೆ ತನಗೆ ಅಷ್ಟೊಂದು ಆಸಕ್ತಿಯಿಲ್ಲ ಎಂದು ನಿಗೂಢವಾಗಿ ಹೇಳುತ್ತಾನೆ. ಆದರೆ ಒಟ್ಟಾರೆ ಅವನ ಅಭಿಪ್ರಾಯವು, ನರಕಯಾತನೆಯು ಚಿರಂತನವಾದುದಲ್ಲ ಎಂಬುದು. ಇದು ಹೇಗಾದರಾಗಲಿ, ಮುಕ್ತಿಯು ಯಾವುದೇ ಒಂದು ಚರ್ಚ್‌ನ ಸದಸ್ಯರಿಗೆ ಮಾತ್ರ ಸೀಮಿತವಾದುದಲ್ಲ ಎಂಬುದು ಅವನ ಖಚಿತ ನಂಬಿಕೆ.

ದಿವ್ಯಜ್ಞಾನ ಮತ್ತು ನರಕಗಳ ಅಲ್ಲಗಳೆಯುವಿಕೆಗಳು ಫ್ರೆಂಚ್ ಸರ್ಕಾರ ಮತ್ತು ಜಿನೀವದ ಪುರಪಿತೃಗಳನ್ನು ಆಳವಾಗಿ ಘಾತಿಸಿತು ಎಂಬುದನ್ನು ಊಹಿಸಿಕೊಳ್ಳಬಹುದು.

ಹೃದಯವನ್ನು ಒಪ್ಪಿಕೊಂಡು ವೈಚಾರಿಕೆಯನ್ನು ತಿರಸ್ಕರಿಸಿದ್ದು ಹೊಸದೇನೂ ಅಲ್ಲವೆಂದೇ ನನ್ನ ಭಾವನೆ. ಹಾಗೆ ನೋಡಿದರೆ, ವೈಚಾರಿಕತೆಯು ಮತಧಾರ್ಮಿಕ ನಂಬಿಕೆಯ ಪರವಾಗಿರುವವರೆಗೂ ಈ ವಿಧಾನವನ್ನು ಯಾರೂ ಆಲೋಚಿಸಲು ಅವಕಾಶವೇ ಇರಲಿಲ್ಲ. ರೂಸೋ ಇದ್ದ ಪರಿಸರದಲ್ಲಿ, ವಾಲ್ಟೇರ್ ಪ್ರತಿನಿಧಿಸುತ್ತಿದ್ದ ವೈಚಾರಿಕತೆಯು ಮತಧರ್ಮದ ವಿರುದ್ಧವಾಗಿತ್ತು, ಹೀಗಾಗಿ ವೈಚಾರಿಕತೆಗೆ ಧಿಕ್ಕಾರ! ಅದಕ್ಕೂ ಮಿಗಿಲಾಗಿ, ವೈಚಾರಿಕತೆಯು ದುರ್ಜ್ಞೇಯವೂ ಕಷ್ಟಕರವೂ ಆಗಿತ್ತು; ಊಟ ಮಾಡಿದ್ದರೂ ಅನಾಗರಿಕನು ಮೂಲತಾತ್ವಿಕತೆಯ ವಾದವನ್ನು ಅರ್ಥಮಾಡಿಕೊಳ್ಳಲಾರನಾದರೂ ಅವನು ಎಲ್ಲ ಆವಶ್ಯಕ ವಿವೇಕದ ಗಣಿ. ರೂಸೋನ ಅನಾಗರಿಕನು – ಅವನು ಮಾನವಶಾಸ್ತ್ರಜ್ಞರಿಗೆ ಗೊತ್ತಿದ್ದ ಅನಾಗರಿಕನಲ್ಲ – ಒಳ್ಳೆಯ ಗಂಡ ಮತ್ತು ಕಕ್ಕುಲತೆಯ ತಂದೆ; ಅವನಿಗೆ ದುರಾಶೆಯಿರಲಿಲ್ಲ, ಅವನದು ಸಹಜ ಕರುಣೆಯ ಧರ್ಮ. ಅವನೊಬ್ಬ ಅನುಕೂಲಕರ ವ್ಯಕ್ತಿಯಾಗಿದ್ದ, ಆದರೆ

ದೇವರಲ್ಲಿ ನಂಬಿಕೆಯಿಡಲು ಈ ಮಹಾ ವಿಕರ್‌ನ ಕಾರಣಗಳನ್ನು ಅರ್ಥಮಾಡಿಕೊಂಡಿದ್ದರೆ ಅವನ ನಿಷ್ಕಪಟ ವ್ಯಕ್ತಿಗಿಂತಲೂ ಹೆಚ್ಚಿನ ತಾತ್ವಿಕತೆಯನ್ನು ಗಳಿಸಿಕೊಂಡಿರುತ್ತಿದ್ದ.

ರೂಸೋನ 'ಪ್ರಕೃತಿ ಮನುಷ್ಯ'ನ ಕಾಲ್ಪನಿಕ ಸ್ವರೂಪವಲ್ಲದೆ, ಹೃದಯದ ಭಾವನೆಗಳನ್ನು ವಾಸ್ತವಗಳೆಂದು ಆದರಿಸುವ ಅಭ್ಯಾಸದ ಬಗ್ಗೆ ಎರಡು ಆಕ್ಷೇಪಣೆಗಳನ್ನು ಎತ್ತಬಹುದು. ಒಂದು, ಅಂಥ ನಂಬಿಕೆಗಳು ನಿಜವಾಗುತ್ತದೆ ಎನ್ನಲು ಯಾವುದೇ ಕಾರಣಗಳಿಲ್ಲ ಎಂಬುದು; ಮತ್ತೊಂದು, ಅದರ ಫಲಿತವಾದ ನಂಬಿಕೆಗಳು ವ್ಯಕ್ತಿಗತವಾದುದು, ಯಾಕೆಂದರೆ ಹೃದಯವು ಬೇರೆ ಬೇರೆಯವರಿಗೆ ಬೇರೆ ಬೇರೆ ರೀತಿಯಲ್ಲಿ ಹೇಳುತ್ತದೆ ಎಂಬುದು. ಕೆಲವು ಅನಾಗರಿಕರಿಗೆ 'ಪ್ರಕೃತಿಯ ಬೆಳಕು' ಹೇಳುವುದೆಂದರೆ ನರಮಾಂಸ ಭಕ್ಷಣೆ ಅವರ ಕರ್ತವ್ಯವೆಂದು, ಅಲ್ಲದೆ ವೈಚಾರಿಕತೆಯ ಧ್ವನಿಯಿಂದ ಪ್ರೇರಿತರಾದ ವಾಲ್ಟೇರ್‌ನ ಅನಾಗರಿಕರು ಕೂಡ ಹೇಳುವುದು ತಿನ್ನಬೇಕಾದುದು ಜೆಸ್ಯೂಟ್‌ರ ಮಾಂಸವನ್ನು ಮಾತ್ರ ಎಂದು – ಎರಡೂ ಸಂಪೂರ್ಣ ತೃಪ್ತಿಕರವಲ್ಲ. ಬೌದ್ಧರಿಗೆ ಪ್ರಕೃತಿಯ ಬೆಳಕು ದೇವರ ಅಸ್ತಿತ್ವವನ್ನು ತೋರಿಸುವುದಿಲ್ಲ, ಆದರೆ ಪ್ರಾಣಿಗಳ ಮಾಂಸವನ್ನು ತಿನ್ನುವುದು ತಪ್ಪು ಎನ್ನುತ್ತದೆ. ಎಲ್ಲ ವ್ಯಕ್ತಿಗಳಿಗೂ ಹೃದಯವು ಒಂದನ್ನೇ ಹೇಳಿದರೂ, ನಮ್ಮ ಭಾವನೆಗಳ ಹೊರಗಿನ ಯಾವುದೇ ವಸ್ತುವಿನ ಅಸ್ತಿತ್ವದ ಬಗ್ಗೆ ಸಾಕ್ಷ್ಯ ನೀಡಲಾರದು. ನಾನು ಅಥವಾ ಇಡೀ ಮಾನವ ಕುಲವೇ ಮಾನವ ಸೌಖ್ಯಕ್ಕೆ ಅನಿವಾರ್ಯವೆಂದು ಹೇಳುವ ಯಾವುದೇ ಒಂದನ್ನು ಬಯಸಿದರೂ, ಅದು ಅಸ್ತಿತ್ವದಲ್ಲಿದೆ ಎಂದು ಸಾಬೀತುಪಡಿಸಲು ಯಾವುದೇ ಆಧಾರವಿರುವುದಿಲ್ಲ. ಮನುಷ್ಯನು ಸುಖವಾಗಿರಬೇಕೆಂಬ ಪ್ರಕೃತಿ ನಿಯಮವೇ ಇರುವುದು ಗ್ಯಾರಂಟಿಯಿಲ್ಲ. ಈ ಭೂಮಿಯ ಮೇಲಣ ನಮ್ಮ ಬದುಕಿಗೆ ಸಂಬಂಧಿಸಿದಂತೆ ಇದು ನಿಜ ಎಂದು ಎಲ್ಲರಿಗೂ ತಿಳಿದಿದೆ, ಆದರೆ ಬದುಕಿನ ನಮ್ಮ ಯಾತನೆಯೇ ಈ ಬದುಕಿನ ನಂತರ ಸುಖ ಇರುತ್ತದೆ ಎಂದು ವಾದಿಸುವಂತೆ ನಮ್ಮನ್ನು ಮಾರ್ಪಡಿಸಬಹುದು. ಅಂಥ ವಾದವನ್ನು ನಾವು ಬೇರಾವುದೇ ವಿಷಯದಲ್ಲಿ ಅನ್ವಯಿಸಬಾರದು. ಒಬ್ಬನಿಂದ ನೀವು ಹತ್ತು ಡಝನ್ ಮೊಟ್ಟೆಗಳನ್ನು ಖರೀದಿಸಿದ್ದರೆ, ಮತ್ತು ಅದರಲ್ಲಿನ ಮೊದಲ ಡಝನ್ ಕೊಳೆತುಹೋಗಿದ್ದರೆ, ಉಳಿದ ಒಂಬತ್ತು ಡಝನ್ ಶ್ರೇಷ್ಠವಾಗಿರುತ್ತದೆಂದು ಊಹಿಸುವುದಿಲ್ಲ; ಆದರೆ ನಮ್ಮ ಇಲ್ಲಿನ ಯಾತನೆಗಳಿಗೆ ಸಾಂತ್ವನವಾಗಿ ಅಂತಹ ವಾದವನ್ನೇ 'ಹೃದಯ'ವು ಉತ್ತೇಜಿಸುವುದು.

ನನ್ನ ಮಟ್ಟಿಗೆ, ರೂಸೋನಿಂದ ಪ್ರಾಮುಖ್ಯಕ್ಕೆ ಬಂದ ಅತಾರ್ಕಿಕ ಭಾವನಾತ್ಮಕತೆಗಿಂತ ನಾನು ಹೆಚ್ಚು ಇಷ್ಟಪಡುವುದು ಮೂಲತಾತ್ವಿಕ ವಾದವನ್ನು, ವಿಶ್ವಸೃಷ್ಟ್ಯಾತ್ಮಕ ವಾದವನ್ನು, ಮತ್ತು ಉಳಿದ ಹಳೆಯ ಸರಕುಗಳನ್ನು. ಹಳೆಯ

ವಾದಗಳು ಕನಿಷ್ಠ ಪಕ್ಷಕ್ಕೆ ಪ್ರಾಮಾಣಿಕವಾದವು; ಸಿಂಧುವಾದರೆ ಅವುಗಳ ನಿಲವು ಸ್ಪಷ್ಟವಾಗುತ್ತದೆ, ಅಸಿಂಧುವಾದರೆ ಅದು ಹಾಗೆಂದು ಯಾವನೇ ಆದರೂ ಸಕಾರಣವಾಗಿ ವಾದಿಸಬಹುದಾಗಿತ್ತು. ಆದರೆ ಈ ಹೃದಯದ ಹೊಸ ಮತಧರ್ಮಶಾಸ್ತ್ರವು ವಾದವನ್ನೇ ನಿರಾಕರಿಸುತ್ತದೆ; ಅದನ್ನು ಅಲ್ಲಗಳೆಯಲಾಗುವುದಿಲ್ಲ, ಯಾಕೆಂದರೆ ಅದು ತನ್ನ ನಿಲವನ್ನು ಸಾಧಿಸುವ ಇರಾದೆಯನ್ನೇ ಹೊಂದಿರುವುದಿಲ್ಲ. ಅದರ ತಳದಲ್ಲಿ, ಅದನ್ನು ಒಪ್ಪಲು ನೀಡುವ ಏಕೈಕ ಕಾರಣವೆಂದರೆ, ಅದು ನಮ್ಮನ್ನು ಕನಸಿನಲ್ಲಿ ಸುಖಿಸುವ ಅವಕಾಶ ಒದಗಿಸುತ್ತದೆ ಎಂಬುದು. ಇದು ಕ್ಷುಲ್ಲಕ ಕಾರಣ; ಥಾಮಸ್ ಆಕ್ವಿನಾಸ್ ಮತ್ತು ರೂಸೋರ ನಡುವೆ ಆಯ್ಕೆ ಮಾಡಿಕೊಳ್ಳಬಹುದಾದರೆ, ನಾನು ಹಿಂದೆ ಮುಂದೆ ನೋಡದೆ ಸಂತನನ್ನು ಆಯ್ಕೆಮಾಡಿಕೊಳ್ಳುತ್ತೇನೆ.

೧೭೬೨ ರಲ್ಲಿ ಪ್ರಕಟವಾದ 'ಸಾಮಾಜಿಕ ಒಪ್ಪಂದ' ('ಸೋಷಿಯಲ್ ಕಾಂಟ್ರಾಕ್ಟ್')ದಲ್ಲಿ ಅವನ ರಾಜಕೀಯ ಸಿದ್ಧಾಂತಗಳು ಮಂಡಿತವಾಗಿವೆ. ಅವನ ಮಿಕ್ಕೆಲ್ಲ ಬರವಣಿಗೆಗಿಂತ ಈ ಪುಸ್ತಕವು ತುಂಬ ಬೇರೆ ಸ್ವರೂಪವನ್ನು ಹೊಂದಿದೆ; ಅದರಲ್ಲಿರುವ ಭಾವನಾತ್ಮಕತೆ ಅತ್ಯಲ್ಪ ಮತ್ತು ಬೌದ್ಧಿಕ ವೈಚಾರಿಕತೆಗೆ ಅದು ಹೆಚ್ಚು ಹತ್ತಿರವಾಗಿದೆ. ಅದರಲ್ಲಿನ ಸಿದ್ಧಾಂತಗಳು ಪ್ರಜಾಪ್ರಭುತ್ವದ ಬಗ್ಗೆ ಬಾಯಿಮಾತಿನ ಸಹಾನುಭೂತಿಯನ್ನು ತೋರ್ಪಡಿಸಿದರೂ, ನಿರಂಕುಶಾಧಿಕಾರ (ಟೊಟಾಲಿಟೇರಿಯನ್) ಸರ್ಕಾರದ ಕಡೆಗೆ ವಾಲಿಕೊಂಡಿದೆ. ಆದರೆ ಜಿನೀವ ಮತ್ತು ಪ್ರಾಚೀನತೆಗಳು ಸೇರಿ ಅವನು ಫ್ರಾನ್ಸ್ ಮತ್ತು ಇಂಗ್ಲಂಡ್‌ನಂತಹ ದೊಡ್ಡ ಸಾಮ್ರಾಜ್ಯಗಳ ಬದಲಿಗೆ ನಗರ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವಂತೆ ಮಾಡುತ್ತವೆ. ಶೀರ್ಷಿಕೆಯ ಪುಟದಲ್ಲಿ ಅವನು ತನ್ನನ್ನು 'ಜಿನೀವದ ಪ್ರಜೆ' ಎಂದು ಕರೆದುಕೊಳ್ಳುತ್ತಾನೆ, ಅಲ್ಲದೆ ತನ್ನ ಪೀಠಿಕೆಯಲ್ಲಿ ಹೀಗೆ ಬರೆಯುತ್ತಾನೆ: 'ನಾನು ಸ್ವತಂತ್ರ ದೇಶದ ಮತ್ತು ಸಾರ್ವಭೌಮನ ಪ್ರಜೆಯಾಗಿ ಹುಟ್ಟಿದ್ದರಿಂದಾಗಿ, ನನ್ನ ಧ್ವನಿಯು ಸಾರ್ವಜನಿಕ ವ್ಯವಹಾರಗಳ ಮೇಲೆ ಬೀರುವ ಪ್ರಭಾವವು ಎಷ್ಟೇ ಕ್ಷೀಣವಾದುದಾಗಿರಲಿ, ನಾನು ಅವುಗಳ ಪರವಾಗಿರುವ ಹಕ್ಕಿನ ಕಾರಣದಿಂದಾಗಿ ಅವುಗಳನ್ನು ಅಧ್ಯಯನ ಮಾಡುವುದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ.' ಪ್ಲೂಟಾರ್ಕ್‌ನ ಲೈಕರ್ಗಸ್‌ನ ಜೀವನದಲ್ಲಿನಂತೆ, ಮತ್ತೆ ಮತ್ತೆ ಸ್ಪಾರ್ಟಾದ ಬಗೆಗಿನ ಮೆಚ್ಚುಗೆಯ ನುಡಿಗಳನ್ನು ಇದರಲ್ಲಿ ಕಾಣಬಹುದು. ಪ್ರಜಾಪ್ರಭುತ್ವವು ಸಣ್ಣ ದೇಶಗಳಿಗೆ, ಮಧ್ಯಮ ಗಾತ್ರದವುಗಳಿಗೆ ಶ್ರೀಮಂತಪ್ರಭುತ್ವ, ಮತ್ತು ದೊಡ್ಡ ದೇಶಗಳಿಗೆ ರಾಜಪ್ರಭುತ್ವ ಅತ್ಯಂತ ಸೂಕ್ತ ಎನ್ನುತ್ತಾನೆ. ಆದರೆ ಅವನ ಅಭಿಪ್ರಾಯದಲ್ಲಿ ಸಣ್ಣ ದೇಶಗಳು ಶ್ರೇಷ್ಠ ಎಂದು ನಾವು ತಿಳಿಯಬೇಕು, ಅದಕ್ಕೆ ಸ್ವಲ್ಪ ಮಟ್ಟಿಗೆ ಕಾರಣವೆಂದರೆ ಅಲ್ಲಿ ಪ್ರಜಾಪ್ರಭುತ್ವವು ಹೆಚ್ಚು ಕಾರ್ಯಸಾಧ್ಯ ಎಂಬುದು. ಪ್ರಜಾಪ್ರಭುತ್ವವನ್ನು ಕುರಿತು ಅವನು ಮಾತನಾಡುವಾಗ, ಗ್ರೀಕರಂತೆಯೇ ಅವನ ಮನಸ್ಸಿನಲ್ಲಿರುವುದು ಪ್ರತಿ ಪ್ರಜೆಯ ನೇರ ಭಾಗವಹಿಸುವಿಕೆ

ಎಂದು; ಪ್ರತಿನಿಧಿ ಆಧಾರಿತ ಸರ್ಕಾರವನ್ನು ಅವನು 'ಚುನಾಯಿತ ಶ್ರೀಮಂತಪ್ರಭುತ್ವ' ಎನ್ನುತ್ತಾನೆ. ದೊಡ್ಡ ದೇಶಗಳಲ್ಲಿ ನೇರ ಭಾಗವಹಿಸುವಿಕೆ ಸಾಧ್ಯವಿಲ್ಲದ್ದರಿಂದ, ಅವನ ಪ್ರಜಾಪ್ರಭುತ್ವದ ಬಗೆಗಿನ ಮೆಚ್ಚಿಕೆಯೆಂದರೆ ನಗರ ಪ್ರಭುತ್ವದ ಬಗೆಗಿನ ಒಲವು ಎಂದರ್ಥ. ನಗರ ಪ್ರಭುತ್ವದ ಬಗೆಗಿನ ಈ ಪ್ರೀತಿಯನ್ನು ರೂಸೋನ ರಾಜಕೀಯ ತಾತ್ವಿಕತೆಯ ಬಹುತೇಕ ನಿರೂಪಣೆಗಳಲ್ಲಿ ಒತ್ತಿ ಹೇಳಿರುವುದನ್ನು ಕಾಣಲಾರೆವು ಎಂಬುದು ನನ್ನ ತಿಳಿವಳಿಕೆ.

ರೂಸೋನ ಬಹುತೇಕ ಬರವಣಿಗೆಗಿಂತಲೂ ಈ ಪುಸ್ತಕವು ಒಟ್ಟಾರೆ ಕಡಿಮೆ ಆಡಂಬರದಿಂದ ಕೂಡಿದೆ. ಆದರೆ ಮೊದಲನೆಯ ಅಧ್ಯಾಯವು ಅತ್ಯಂತ ಆಡಂಬರದಿಂದ ಹೀಗೆ ಆರಂಭವಾಗುತ್ತದೆ: 'ಮನುಷ್ಯ ಸ್ವತಂತ್ರನಾಗಿ ಹುಟ್ಟಿದ್ದಾನೆ; ಆದರೆ ಎಲ್ಲೆಡೆಯೂ ಅವನು ಬಂಧಿತನಾಗಿದ್ದಾನೆ. ತಾನು ಇತರರ ಯಜಮಾನ ಎಂದು ಅವನು ತಿಳಿಯುತ್ತಾನೆ, ಆದರೆ ಅವರಿಗಿಂತ ತಾನೇ ಹೆಚ್ಚು ಗುಲಾಮತನದಿಂದ ಬದುಕುತ್ತಾನೆ.' ಸ್ವಾತಂತ್ರ್ಯ ಎಂಬುದು ರೂಸೋನ ನಾಮಮಾತ್ರ ಗುರಿ, ಆದರೆ ಅವನು ಬೆಲೆಯೀಯುವುದು ವಾಸ್ತವದಲ್ಲಿ ಸಮಾನತೆಗೆ, ಸ್ವಾತಂತ್ರ್ಯವನ್ನು ಬಲಿಗೊಟ್ಟಾದರೂ ಸಾಧಿಸಬೇಕೆಂದು ಅವನು ಬಯಸುವುದು ಅದನ್ನೇ.

ಸಾಮಾಜಿಕ ಒಪ್ಪಂದದ ಅವನ ಪರಿಕಲ್ಪನೆಯು ಲಾಕ್‌ನದರಂತೆಯೇ ಮೊದಲಿಗೆ ಕಾಣುತ್ತದೆ, ಆದರೆ ಬಹು ಬೇಗ ಅದು ಹಾಬ್ಸ್‌ಗೆ ಹತ್ತಿರವಾಗಿರುವುದು ಗೋಚರಿಸುತ್ತದೆ. ಪ್ರಕೃತಿ ಸ್ಥಿತಿಯಿಂದ ಹೊಂದುವ ಬೆಳವಣಿಗೆಯಲ್ಲಿ ವ್ಯಕ್ತಿಗಳು ತಮ್ಮ ಪ್ರಾಚೀನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲಾರದ ಒಂದು ಹಂತ ಬರುತ್ತದೆ, ಆನಂತರ ಜನರು ತಮ್ಮ ಸ್ವರಕ್ಷಣೆಗಾಗಿ ಸಮಾಜದಲ್ಲಿ ಒಗ್ಗೂಡಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಆದರೆ ಸ್ವಹಿತವನ್ನು ಬಲಿಗೊಡದೆಯೇ ನಾನು ಹೇಗೆ ವ್ಯಕ್ತಿಸ್ವಾತಂತ್ರವನ್ನು ಬಿಟ್ಟುಕೊಡಬಹುದು? 'ಸಮಸ್ಯೆಯೆಂದರೆ, ವ್ಯಕ್ತಿ ಮತ್ತು ಇತರ ಪ್ರತಿಯೊಬ್ಬನ ಒಳಿತನ್ನು ಸಮಷ್ಟಿ ಶಕ್ತಿಯಿಂದ ಬೆಂಬಲಿಸುವ ಮತ್ತು ಸಂರಕ್ಷಿಸುವ, ಅಲ್ಲದೆ ಅದರಲ್ಲಿ ವ್ಯಕ್ತಿಯು ಇತರರೊಡನೆ ಸೇರಿಕೊಂಡರೂ ತನ್ನನ್ನು ಮಾತ್ರ ಅನುಸರಿಸಬಹುದಾದ ಮತ್ತು ಹಿಂದಿನಂತೆಯೇ ಸ್ವತಂತ್ರವಾಗಿರಬಹುದಾದ ಸಂಸ್ಥೆಯನ್ನು ರಚಿಸುವ ಬಗೆಯನ್ನು ಕಂಡುಕೊಳ್ಳುವುದು. ಸಾಮಾಜಿಕ ಒಪ್ಪಂದವು ಈ ಮೂಲಭೂತ ಸಮಸ್ಯೆಗೆ ಒಂದು ಪರಿಹಾರವನ್ನು ಒದಗಿಸುತ್ತದೆ.'

ಈ ಒಪ್ಪಂದದಲ್ಲಿ, 'ಅದರಲ್ಲಿನ ಪ್ರತಿಯೊಬ್ಬನೂ ತನ್ನ ಹಕ್ಕುಗಳ ಸಮೇತ ಸಂಪೂರ್ಣ ತನ್ನತನವನ್ನು ಇಡೀ ಸಮುದಾಯಕ್ಕೆ ಒಪ್ಪಿಸಿಕೊಳ್ಳುವುದು; ಮೊದಲಿಗೆ, ಪ್ರತಿಯೊಬ್ಬನೂ ತನ್ನನ್ನು ಸಂಪೂರ್ಣವಾಗಿ ತೆತ್ತುಕೊಳ್ಳುವುದರಿಂದ, ಈ ಪರಿಸ್ಥಿತಿಯು ಎಲ್ಲರದೂ ಆಗಿರುತ್ತದೆ; ಹೀಗಾಗಿ, ಬೇರೆಯವರ ಮೇಲೆ ಭಾರ ಹೊರಿಸುವ ಆಸಕ್ತಿ ಯಾರಿಗೂ ಇರುವುದಿಲ್ಲ.' ಈ ತೆತ್ತುಕೊಳ್ಳುವಿಕೆ ಯಾವುದೇ ಸಂಕೋಚವಿಲ್ಲದೆ

ಆಗಬೇಕು. 'ವ್ಯಕ್ತಿಗಳು ಕೆಲವು ಹಕ್ಕುಗಳನ್ನು ಉಳಿಸಿಕೊಂಡರೆ, ಅವರ ಮತ್ತು ಸಾರ್ವಜನಿಕರ ನಡುವೆ ನಿರ್ಧಾರ ಕೈಗೊಳ್ಳುವ ಸಮಾನ ಉಚ್ಚವ್ಯಕ್ತಿಯು ಇಲ್ಲದಿರುವುದರಿಂದ, ಪ್ರತಿಯೊಬ್ಬನೂ ಒಂದು ಅಂಶದಲ್ಲಿ ತಾನೇ ತೀರ್ಪುಗಾರನಾಗುವುದರಿಂದ, ಎಲ್ಲದರಲ್ಲಿ ಹಾಗೆಯೇ ಇರಲು ಕೇಳುತ್ತಾನೆ; ಹೀಗೆ ಪ್ರಕೃತಿ ಸ್ಥಿತಿಯು ಮುಂದುವರಿಯುತ್ತದೆ ಮತ್ತು ಸಂಘಟನೆಯು ಕಾರ್ಯಾಸಾಧ್ಯವಾಗುತ್ತದೆ ಅಥವಾ ನಿರಂಕುಶವಾಗುತ್ತದೆ.'

ಇದು ಸೂಚಿಸುವುದು ಸ್ವಾತಂತ್ರ್ಯದ ಸಂಪೂರ್ಣ ರದ್ದತಿ ಮತ್ತು ಮಾನವ ಹಕ್ಕುಗಳ ಸಂಪೂರ್ಣ ನಿರಾಕರಣೆಗಳನ್ನು. ಮುಂದಿನ ಒಂದು ಅಧ್ಯಾಯದಲ್ಲಿ, ಈ ಸಿದ್ಧಾಂತವು ಸೌಮ್ಯರೂಪವನ್ನು ಪಡೆಯುವುದೆಂಬುದೇನೋ ನಿಜ. ಸಾಮಾಜಿಕ ಒಪ್ಪಂದವು ಸರ್ಕಾರಕ್ಕೆ ತನ್ನ ಎಲ್ಲ ಸದಸ್ಯರ ಮೇಲೂ ಆತ್ಯಂತಿಕ ಅಧಿಕಾರವನ್ನು ನೀಡಿದರೂ, ಮನುಷ್ಯರು ವ್ಯಕ್ತಿಗಳಾಗಿ ಸಹಜ ಹಕ್ಕುಗಳನ್ನು ಹೊಂದಿರುತ್ತಾರೆ. 'ಇಡೀ ಸಮುದಾಯಕ್ಕೆ ಉಪಯುಕ್ತವಲ್ಲದ ಯಾವುದೇ ಸಂಕೋಲೆಯನ್ನು ಸಾರ್ವಭೌಮನು ತನ್ನ ಪ್ರಜೆಗಳ ಮೇಲೆ ಹೊರಿಸಕೂಡದು, ಅಥವಾ ಅಂತಹ ಬಯಕೆಯನ್ನು ಹೊಂದಿರಕೂಡದು.' ಆದರೆ ಈ ಸಾರ್ವಭೌಮನೇ ಸಮುದಾಯಕ್ಕೆ ಯಾವುದು ಉಪಯುಕ್ತ ಯಾವುದು ಅಲ್ಲ ಎಂದು ತೀರ್ಮಾನಿಸುವ ಏಕೈಕ ತೀರ್ಪುಗಾರ. ಒಂದು ದುರ್ಬಲ ಅಡ್ಡಿಯೂ ಹೀಗೆ ಸಾಮೂಹಿಕ ನಿರಂಕುಶತೆಗೆ ವಿರುದ್ಧವಾಗಿದೆಯೆಂಬುದು ಸ್ಪಷ್ಟ.

'ಸಾರ್ವಭೌಮ' ಎಂದರೆ ರೂಸೋ ಪ್ರಕಾರ, ರಾಜ ಅಥವಾ ಸರ್ಕಾರವಲ್ಲ, ಸಾಮೂಹಿಕವೂ ಶಾಸನಕರ್ತೃವೂ ಆದ ಸಮುದಾಯ ಎಂಬುದನ್ನು ನಾವು ಗಮನಿಸಬೇಕು.

ಸಾಮಾಜಿಕ ಒಪ್ಪಂದವನ್ನು ಈ ಮುಂದಿನಂತೆ ನಿರೂಪಿಸಬಹುದು: 'ಪ್ರತಿಯೊಬ್ಬನೂ ತನ್ನ ವೈಯಕ್ತಿಕತೆ ಮತ್ತು ತನ್ನೆಲ್ಲ ಅಧಿಕಾರವನ್ನು ಸಾರ್ವತ್ರಿಕ ಸಂಕಲ್ಪದ ಸಾರ್ವಭೌಮತ್ವದ ಅಡಿಯಲ್ಲಿ ಒಪ್ಪಿಸುತ್ತಾನೆ, ಮತ್ತು ನಮ್ಮ ಸಾಂಸ್ಥಿಕ ಸ್ವರೂಪದಲ್ಲಿ ಪ್ರತಿಯೊಬ್ಬನನ್ನೂ ಇಡಿಯ ಒಂದು ಅವಿಭಾಜ್ಯ ಅಂಗವಾಗಿ ಸ್ವೀಕರಿಸುತ್ತೇವೆ.' ಈ ಸಾಂಸ್ಥಿಕತೆಯು ಒಂದು ನೈತಿಕವೂ ಸಾಮೂಹಿಕವೂ ಆದ ಇಡಿಯನ್ನು ಸೃಷ್ಟಿಸುತ್ತದೆ, ಮತ್ತು ಸಕ್ರಿಯವಾಗಿಲ್ಲದಾಗ 'ದೇಶ' ಅನ್ನಿಸಿಕೊಂಡರೆ, ಸಕ್ರಿಯವಾಗಿದ್ದಾಗ 'ಸಾರ್ವಭೌಮ' ಎಂದೂ, ತನ್ನಂತೆಯೇ ಇರುವ ಇತರ ಸಂಸ್ಥೆಗಳಿಗೆ ಸಂಬಂಧಿಸಿದಂತೆ 'ಅಧಿಕಾರ' ಎಂದೂ ಅನ್ನಿಸಿಕೊಳ್ಳುತ್ತದೆ.

ಒಪ್ಪಂದದ ಮೇಲಿನ ಮಾತುಗಳಲ್ಲಿ ಕಂಡು ಬರುವ 'ಸಾರ್ವತ್ರಿಕ ಸಂಕಲ್ಪ'ದ ಪರಿಕಲ್ಪನೆಯು ರೂಸೋನ ವ್ಯವಸ್ಥೆಯಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ಇಷ್ಟರಲ್ಲಿಯೇ ಆ ಕುರಿತು ನಾನು ಹೆಚ್ಚಿಗೆ ಪ್ರಸ್ತಾಪಿಸುತ್ತೇನೆ.

ಸಾರ್ವಭೌಮವು ತನ್ನ ಪ್ರಜೆಗಳಿಗೆ ಯಾವುದೇ ಖಾತರಿಯನ್ನೂ ನೀಡಬೇಕಾಗಿಲ್ಲವೆಂದು ಇಲ್ಲಿ ವಾದಿಸಲಾಗಿದೆ, ಯಾಕೆಂದರೆ ಅದು ಆಗಿರುವುದೇ ವ್ಯಕ್ತಿಗಳನ್ನೊಳಗೊಂಡು, ಅವರ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಅದಿರಲಾರದು. 'ತನ್ನ ಸ್ವರೂಪದಿಂದಾಗಿ ಸಾರ್ವಭೌಮವು ಅದು ಸದಾ ಇರಬೇಕಾದುದೇ ಹಾಗೆ.' ಈ ಸಿದ್ಧಾಂತವು ರೂಸೋನ ವಿಶಿಷ್ಟ ಶಬ್ದಗಳ ಪರಿಚಯವಿಲ್ಲದ ಓದುಗನನ್ನು ಹಾದಿತಪ್ಪಿಸುವಂಥದು, ಸಾರ್ವಭೌಮ ಎಂದರೆ ಸರ್ಕಾರವಲ್ಲ, ಅದು ನಿರಂಕುಶವಾಗಬಹುದು ಎಂದು ಒಪ್ಪಲಾಗಿದೆ; ಸಾರ್ವಭೌಮವು ಸರ್ಕಾರದ ಯಾವುದೇ ಗೋಚರ ಅಂಗದಲ್ಲಿ ಪೂರ್ಣವಾಗಿ ಸೇರಿರದಂತಹ ಹೆಚ್ಚು ಕಡಿಮೆ ಒಂದು ತತ್ವಜಿಜ್ಞಾಸಾತ್ಮಕ ಘಟಕ. ಹೀಗಾಗಿ ಅದರ ಪರಿಶುದ್ಧತೆಯನ್ನು ಒಪ್ಪಿಕೊಂಡರೂ ಅದು ಮಾಡುವುದೆಂದು ಹೇಳಲಾಗುವ ಕಾರ್ಯಸಾಧ್ಯ ಪರಿಣಾಮಗಳನ್ನು ಹೊಂದಿರುವುದಿಲ್ಲ.

ಸಾರ್ವಭೌಮದ ಸಂಕಲ್ಪವು ಸದಾ ಸರಿಯಾದುದು, ಅದು 'ಸಾಮಾನ್ಯ ಸಂಕಲ್ಪ'. ಪ್ರತಿ ಪ್ರಜೆಯೂ, ಪ್ರಜೆಯಾಗಿ ಸಾಮಾನ್ಯ ಸಂಕಲ್ಪದಲ್ಲಿ ಭಾಗಿಯಾಗುತ್ತಾನೆ, ಮತ್ತು ಒಬ್ಬ ವ್ಯಕ್ತಿಯಾಗಿ ಸಾಮಾನ್ಯ ಸಂಕಲ್ಪಕ್ಕೆ ವಿರುದ್ಧವಾದ ಒಂದು ವ್ಯಕ್ತಿಗತ ಸಂಕಲ್ಪವನ್ನು ಹೊಂದಿರುತ್ತಾನೆ. ಸಾಮಾಜಿಕ ಒಪ್ಪಂದದ ಪ್ರಕಾರ ಸಾಮಾನ್ಯ ಸಂಕಲ್ಪಕ್ಕೆ ವಿಧೇಯವಾಗಿಲ್ಲದವನನ್ನು ಹಾಗೆ ನಡೆದುಕೊಳ್ಳುವಂತೆ ಬಲವಂತ ಮಾಡಲಾಗುತ್ತದೆ. 'ಅಂದರೆ ಅವನನ್ನು ಸ್ವತಂತ್ರವಾಗಿರುವಂತೆ ಬಲವಂತ ಮಾಡಲಾಗುತ್ತದೆ ಎಂಬುದಕ್ಕಿಂತ ಕಡಿಮೆಯಾದುದಲ್ಲ.'

'ಸ್ವತಂತ್ರವಾಗಿರುವಂತೆ ಬಲವಂತ ಮಾಡು'ವ ಈ ಪರಿಕಲ್ಪನೆಯು ತೀರ ತತ್ವಜಿಜ್ಞಾಸಾತ್ಮಕವಾದುದು. ಗೆಲಿಲಿಯೋನ ಕಾಲದಲ್ಲಿನ ಸಾಮಾನ್ಯ ಸಂಕಲ್ಪವು ಖಂಡಿತವಾಗಿ ಕೊಪರ್ನಿಸ್ ವಿರುದ್ಧವಾಗಿತ್ತು; ಆದರೆ ಅದು ವಿಚಾರಣಾಧಿಕರಣವು ಹೇಳಿಕೆಯನ್ನು ವಾಪಸು ಪಡೆಯುವಂತೆ ಒತ್ತಾಯ ಮಾಡಿದಾಗ 'ಸ್ವತಂತ್ರವಾಗಿರುವಂತೆ ಬಲವಂತ ಮಾಡಿ'ತೇ? ಉಪದ್ರವಕಾರನನ್ನು ಸೆರೆಯಲ್ಲಿಟ್ಟಾಗ ಅವನನ್ನು 'ಸ್ವತಂತ್ರವಾಗಿರುವಂತೆ ಬಲವಂತ ಮಾಡ'ಲಾಗುತ್ತದೆಯೇ? ಬೈರನ್‌ನ ಕಾರ್ಸೇರ್ ಕುರಿತು ಆಲೋಚನೆ ಮಾಡಿ:

ಗಂಭೀರ ನೀಲ ಸಮುದ್ರದಾಳದ ಸಂತುಷ್ಟ ನೀರಿನ ಮೇಲೆ
ನಮ್ಮ ಚಿಂತನೆಗಳು ಅಷ್ಟೇ ಅಸೀಮ ಮತ್ತು ನಮ್ಮ ಹೃದಯಗಳು ಅಷ್ಟೇ ಸ್ವತಂತ್ರ

ಅಂದರೆ ಸೆರೆಮನೆಯಲ್ಲಿ ವ್ಯಕ್ತಿಯು 'ಸ್ವತಂತ್ರ'ನಾಗಿರುತ್ತಾನೆಂಬುದು ಇದರ ಅರ್ಥವೇ? ವಿಚಿತ್ರವೆಂದರೆ, ಬೈರನ್‌ನ ಉದಾತ್ತ ಕಡಲ್ಗಳ್ಳರು ರೂಸೋನ ನೇರ ಉತ್ತರಾಧಿಕಾರಿಗಳು, ಇಷ್ಟಾದರೂ, ಮೇಲಿನ ಭಾಗದಲ್ಲಿ, ರೂಸೋ ತನ್ನ ರೊಮ್ಯಾಂಟಿಕ್ ಮನೋಭಾವವನ್ನು ಮರೆತು ಆಧುನಿಕ ಪೋಲೀಸ್ ಅಧಿಕಾರಿಯಂತೆ

ಮಾತನಾಡುತ್ತಾನೆ. ರೂಸೋಗೆ ತುಂಬ ಋಣಿಯಾಗಿರುವ ಹೆಗೆಲ್ ಅವನ 'ಸ್ವಾತಂತ್ರ್ಯ' ಎಂಬ ಪದವನ್ನು ಅಪಾರ್ಥಮಾಡಿಕೊಂಡು, ಪೋಲೀಸ್‌ರಿಗೆ ವಿಧೇಯವಾಗಿರುವ ಹಕ್ಕು ಎಂದೋ ಅಥವಾ ಅದರಂತಹ ಇನ್ನಾವುದೋ ರೀತಿಯಲ್ಲಿ ಅರ್ಥವಿಸಿಕೊಳ್ಳುತ್ತಾನೆ.

ಲಾಕ್ ಮತ್ತವನ ಶಿಷ್ಯರಿಗಿದ್ದಂತೆ ರೂಸೋಗೆ ಖಾಸಗಿ ಆಸ್ತಿಯಲ್ಲಿ ಅಷ್ಟೊಂದು ಆಳವಾದ ಗೌರವವಿಲ್ಲ. 'ದೇಶವು ತನ್ನ ಸದಸ್ಯರ ಹಿನ್ನೆಲೆಯಲ್ಲಿ ಅವರ ಸಾಮಗ್ರಿಗಳೆಲ್ಲದರ ಒಡೆಯ.' ಅಥವಾ ಅವನಿಗೆ ಲಾಕ್ ಮತ್ತು ಮಾಂಟೆಸ್ಕ್ಯೂ ಪ್ರತಿಪಾದಿಸಿದ ಅಧಿಕಾರವಿಭಜನೆಯಲ್ಲಿ ನಂಬಿಕೆಯಿಲ್ಲ. ಆದರೆ ಬೇರೆಡೆಯಲ್ಲಿನಂತೆಯೇ ಈ ವಿಷಯದಲ್ಲಿಯೂ ಅವನ ಆನಂತರದ ಚರ್ಚೆಗಳು ಅವನ ಹಿಂದಿನ ಸಾಮಾನ್ಯ ತತ್ವಗಳಿಗೆ ಹೊಂದಿಕೊಳ್ಳುವುದಿಲ್ಲ. ಭಾಗ ೩, ಅಧ್ಯಾಯ ೧ ರಲ್ಲಿ ಸಾರ್ವಭೌಮದ ಅಧಿಕಾರವು ಕಾನೂನು ರಚಿಸುವುದಕ್ಕೆ ಸೀಮಿತವಾಗುತ್ತದೆ, ಹಾಗೂ ಕಾರ್ಯಾಂಗ ಅಥವಾ ಸರ್ಕಾರವು ಸಾರ್ವಭೌಮ ಮತ್ತು ಪ್ರಜೆಗಳ ನಡುವಣ ವ್ಯವಸ್ಥೆಯಾಗಿ ಅವರಿಬ್ಬರ ಪರಸ್ಪರ ವ್ಯವಹಾರಕ್ಕೆ ಸಹಾಯಕವಾಗಿರುತ್ತದೆ ಎನ್ನುತ್ತಾನೆ. ಮುಂದುವರಿದು: 'ಸಾರ್ವಭೌಮವು ಆಡಳಿತ ನಡೆಸಲು ಬಯಸಿದರೆ, ಅಥವಾ ದಂಡಾಧಿಕಾರಿಯು ಕಾನೂನು ಜಾರಿ ಮಾಡಲು ಬಯಸಿದರೆ, ಅಥವಾ ಪ್ರಜೆಗಳು ವಿಧೇಯವಾಗಿರುವುದನ್ನು ಉಲ್ಲಂಘಿಸಿದರೆ ಆಗ ಕ್ರಮಬದ್ಧತೆಯ ಜಾಗದಲ್ಲಿ ಅವ್ಯವಸ್ಥೆ ಮೈದಾಳುತ್ತದೆ, ಅಲ್ಲದೆ .. .. ದೇಶವು ನಿರಂಕುಶಾಧಿಕಾರಕ್ಕೋ ಅನಾಯಕತ್ವಕ್ಕೋ ಪಕ್ಕಾಗುತ್ತದೆ.' ಎನ್ನುತ್ತಾನೆ. ಈ ವಾಕ್ಯದಲ್ಲಿ ಅವನು, ಮಾತುಗಾರಿಕೆಯ ವ್ಯತ್ಯಾಸವನ್ನು ಬದಿಗಿಟ್ಟರೆ, ಮಾಂಟೆಸ್ಕ್ಯೂ ಅಭಿಪ್ರಾಯವನ್ನು ಒಪ್ಪುವಂತೆ ತೋರುತ್ತದೆ.

ಈಗ ನಾನು ಬರುವುದು ಸಾಮಾನ್ಯ ಆಕಾಂಕ್ಷೆಯ ವಿಚಾರಕ್ಕೆ; ಅದು ಮುಖ್ಯವೂ ಹೌದು, ಅಸ್ಪಷ್ಟವೂ ಹೌದು. ಸಾಮಾನ್ಯ ಆಕಾಂಕ್ಷೆಯು ಬಹುಸಂಖ್ಯಾತ ಆಕಾಂಕ್ಷೆಗೆ ಅಥವಾ ಎಲ್ಲ ಪ್ರಜೆಗಳ ಒಟ್ಟು ಆಕಾಂಕ್ಷೆಗೆ ಸಮಾನವಾದುದಲ್ಲ. ಅದನ್ನು ರಾಜಕೀಯ ವ್ಯವಸ್ಥೆಗೆ ಸಂಬಂಧಿಸಿದಂತೆ ಪರಿಕಲ್ಪಿಸಿಕೊಂಡಿರುವಂತೆ ಕಾಣುತ್ತದೆ. ನಾವು ಹಾಬ್ಸ್‌ನ ಅಭಿಪ್ರಾಯವನ್ನು ತೆಗೆದುಕೊಂಡರೆ, ನಾಗರಿಕ ಸಮಾಜವೇ ಒಬ್ಬ ವ್ಯಕ್ತಿ; ಅದು, ಸಂಕಲ್ಪವೂ ಸೇರಿದಂತೆ, ವ್ಯಕ್ತಿತ್ವದ ಲಕ್ಷಣಗಳನ್ನು ಒಳಗೊಂಡಿಯೆಂದು ನಾವು ಭಾವಿಸಬೇಕು. ಆದರೆ ಆಗ ನಮಗೆದುರಾಗುವ ತೊಡಕೆಂದರೆ, ಈ ಆಕಾಂಕ್ಷೆಯ ಚಾಕ್ಷುಷ ಸ್ವರೂಪವಾವುದು ಎಂಬುದು, ಈ ವಿಷಯದಲ್ಲಿ ರೂಸೋ ನಮ್ಮನ್ನು ಕತ್ತಲಲ್ಲಿ ದೂಡುತ್ತಾನೆ. ಸಾಮಾನ್ಯ ಆಕಾಂಕ್ಷೆಯು ಯಾವಾಗಲೂ ಸರಿಯಾಗಿರುತ್ತದೆಯಲ್ಲದೆ ಸಾರ್ವತ್ರಿಕ ಅನುಕೂಲದ ಪರವಾಗಿರುತ್ತದೆ ಎಂದವನು ಹೇಳುತ್ತಾನೆ; ಆದರೆ ಇದರಿಂದ ಜನರ ವಿವೇಚನೆಯು ಕೂಡ ಅಷ್ಟೇ ಸರಿಯಾಗಿರುತ್ತದೆ ಎಂಬ ಅರ್ಥ ಹೊರಡುವುದಿಲ್ಲ; ಯಾಕೆಂದರೆ ಎಷ್ಟೋ

ಸಂದರ್ಭಗಳಲ್ಲಿ ಎಲ್ಲರ ಆಕಾಂಕ್ಷೆ ಮತ್ತು ಸಾರ್ವತ್ರಿಕ ಆಕಾಂಕ್ಷೆಗಳ ನಡುವೆ ಅಪಾರ ವ್ಯತ್ಯಾಸವಿರುತ್ತದೆ. ಹಾಗಾಗಿ, ಸಾರ್ವತ್ರಿಕ ಆಕಾಂಕ್ಷೆಯನ್ನು ತಿಳಿಯುವ ಬಗೆಯೆಂತು? ಅದೇ ಅಧ್ಯಾಯದಲ್ಲಿ ಅದಕ್ಕೊಂದು ಉತ್ತರವಿದೆ:

'ಚರ್ಚೆಗಳ ಮುಖಾಂತರ ಸಾಕಷ್ಟು ಮಟ್ಟಿಗಿನ ವಿಷಯಗಳನ್ನು ಒದಗಿಸಿದಾಗ, ಪ್ರಜೆಗಳು ಪರಸ್ಪರ ಸಂಪರ್ಕ ಹೊಂದಿಲ್ಲದಿದ್ದರೂ, ಸಣ್ಣಪುಟ್ಟ ಭಿನ್ನಾಭಿಪ್ರಾಯಗಳ ಒಟ್ಟಾರೆ ಮೊತ್ತವು ಯಾವಾಗಲೂ ಸಾರ್ವತ್ರಿಕ ಆಕಾಂಕ್ಷೆಯನ್ನು ನೀಡುತ್ತದೆ ಮತ್ತು ಅದು ಯಾವಾಗಲೂ ಸರಿಯಾಗಿರುತ್ತದೆ.'

ರೂಸೋ ಮನಸ್ಸಿನಲ್ಲಿನ ಪರಿಕಲ್ಪನೆಯು ಈ ರೀತಿಯಿದ್ದಂತೆ ತೋರುತ್ತದೆ: ಪ್ರತಿಯೊಬ್ಬ ವ್ಯಕ್ತಿಯ ರಾಜಕೀಯ ಅಭಿಪ್ರಾಯವು ಸ್ವಹಿತದಿಂದ ಕೂಡಿರುತ್ತದೆ, ಆದರೆ ಸ್ವಹಿತದಲ್ಲಿ ಎರಡು ಭಾಗಗಳಿರುತ್ತವೆ, ಒಂದು ವ್ಯಕ್ತಿಗೆ ವಿಶಿಷ್ಟವಾದುದು, ಮತ್ತೊಂದು ಸಮುದಾಯದ ಎಲ್ಲ ಸದಸ್ಯರಿಗೂ ಸಂಬಂಧಿಸಿದುದು. ಪ್ರಜೆಗಳಿಗೆ ಪರಸ್ಪರ ಕೊಡುಕೊಳೆಯ ಆಸ್ಪದವಿಲ್ಲದಾಗ, ಅವರ ವ್ಯಕ್ತಿಗತ ಹಿತಗಳು ಬೇರೆ ಬೇರೆಯಾಗಿರುವುದರಿಂದಾಗಿ, ಅವು ಯಾವುವೂ ಇಲ್ಲವಾಗಿ ಹೊಮ್ಮುವ ಫಲಿತವು ಸಾಮಾನ್ಯ ಆಸಕ್ತಿಯನ್ನು ಪ್ರತಿನಿಧಿಸುತ್ತದೆ; ಈ ಫಲಿತವೇ ಸಾಮಾನ್ಯ ಇಚ್ಛಾಶಕ್ತಿ. ರೂಸೋನ ಪರಿಕಲ್ಪನೆಯನ್ನು ಭೂಮಿಯ ಗುರುತ್ವಾಕರ್ಷಣೆಯ ನಿದರ್ಶನದಿಂದ ಪ್ರಾಯಶಃ ಸ್ಪಷ್ಟಪಡಿಸಬಹುದು. ವಿಶ್ವದಲ್ಲಿನ ಪ್ರತಿ ಕಣವೂ ಇತರವನ್ನು ತನ್ನೆಡೆಗೆ ಪರಸ್ಪರ ಆಕರ್ಷಿಸುತ್ತಿರುತ್ತವೆ; ನಮ್ಮ ಮೇಲಿನ ಗಾಳಿಯು ನಮ್ಮನ್ನು ಮೇಲುಭಾಗಕ್ಕೆ ಆಕರ್ಷಿಸಿದರೆ, ಕೆಳಗಿನ ಭೂಮಿಯು ನಮ್ಮನ್ನು ಕೆಳಗೆ ಆಕರ್ಷಿಸುತ್ತದೆ. ಆದರೆ ಈ ಎಲ್ಲ 'ಸ್ವಾರ್ಥ' ಆಕರ್ಷಣೆಗಳು, ಅವು ಬೇರೆ ಬೇರೆಯಾಗಿರುವುದರಿಂದ, ಪರಸ್ಪರವನ್ನು ಇಲ್ಲವಾಗಿಸಿ, ಉಳಿಯುವುದು ಭೂಕೇಂದ್ರದ ಕಡೆಗಿನ ಆಕರ್ಷಣೆ ಮಾತ್ರ. ಸಮುದಾಯವನ್ನು ಭೂಮಿಯೆಂದು ಕಲ್ಪಿಸಿಕೊಂಡು, ಇದನ್ನು ಸಾಮಾನ್ಯ ಆಕಾಂಕ್ಷೆಯ ಅಭಿವ್ಯಕ್ತಿಯೆಂಬಂತೆ ಊಹಿಸಿಕೊಳ್ಳಬಹುದು.

ಸಾಮಾನ್ಯ ಇಚ್ಛಾಶಕ್ತಿಯು ಯಾವಾಗಲೂ ಸರಿಯಾಗಿರುತ್ತದೆ ಎಂದು ಹೇಳುವುದು, ನಾನಾ ಪ್ರಜೆಗಳ ಸ್ವಹಿತಗಳಲ್ಲಿ ಸಮಾನವಾದುದನ್ನು ಅದು ಪ್ರತಿನಿಧಿಸುವುದರಿಂದ, ಸಮುದಾಯದ ಇಚ್ಛಾಶಕ್ತಿಗಳ ಅತ್ಯಂತ ಹೆಚ್ಚಿನ ಮೊತ್ತವನ್ನು ಅದು ಪ್ರತಿನಿಧಿಸುತ್ತದೆ ಎಂದು ಹೇಳಿದಂತೆ. ರೂಸೋನ ಅರ್ಥವನ್ನು ಈ ರೀತಿ ವ್ಯಾಖ್ಯಾನಿಸುವುದು ನಾನು ಆಲೋಚಿಸಬಹುದಾದ ಬೇರೆಲ್ಲದಕ್ಕಿಂತ ಅವನ ಮಾತುಗಳಿಗೆ ಹೆಚ್ಚು ಹೊಂದುವುದೆಂಬುದು ನನ್ನ ಎಣಿಕೆ.[೨೭೨]

---

೨೭೨. ಉದಾಹರಣೆಗೆ, 'ಎಷ್ಟೋ ವೇಳೆ ಎಲ್ಲರ ಆಕಾಂಕ್ಷೆ ಮತ್ತು ಸಾಮಾನ್ಯ ಆಕಾಂಕ್ಷೆಗಳ ನಡುವೆ ಸಾಕಷ್ಟು ವ್ಯತ್ಯಾಸಗಳಿರುತ್ತವೆ: ಎರಡನೆಯದು ಕೇವಲ ಸಾಮಾನ್ಯ ಹಿತಾಸಕ್ತಿಯನ್ನು ಮಾತ್ರ

ರೂಸೋನ ಅಭಿಪ್ರಾಯದಲ್ಲಿ ಸಾಮಾನ್ಯ ಇಚ್ಛಾಶಕ್ತಿಯ ಅಭಿವ್ಯಕ್ತಿಯ ಕಾರ್ಯಸಾಧ್ಯತೆಗೆ ಅಡ್ಡಿಪಡಿಸುವುದು ದೇಶದಲ್ಲಿನ ಇತರ ಅಧೀನ ಸಂಘಟನೆಗಳು. ಅವುಗಳಲ್ಲಿ ಪ್ರತಿಯೊಂದಕ್ಕೂ ತನ್ನದೇ ಆದ ಹಿತಾಸಕ್ತಿಗಳಿರುತ್ತವೆ, ಅವು ಒಟ್ಟಾರೆ ಸಮುದಾಯದ ಇಚ್ಛಾಶಕ್ತಿಯ ಜೊತೆ ಸಂಘರ್ಷಕ್ಕಿಳಿಯಬಹುದು. 'ಆಗ ಎಷ್ಟು ಜನರಿರುತ್ತಾರೆಯೋ ಅಷ್ಟು ಓಟುಗಳಿರುವುದಿಲ್ಲ, ಇರುವುದು ಎಷ್ಟು ಸಂಘಟನೆಗಳೋ ಅಷ್ಟು ಸಂಖ್ಯೆಯವು ಮಾತ್ರ ಎನ್ನಬೇಕಾಗುತ್ತದೆ.' ಇದರಿಂದ ಒಂದು ಮುಖ್ಯ ಪರಿಣಾಮವುಂಟಾಗುತ್ತದೆ: 'ಸಾಮಾನ್ಯ ಇಚ್ಛಾಶಕ್ತಿಯು ಅಭಿವ್ಯಕ್ತಗೊಳ್ಳಲು ಸಾಧ್ಯವಾಗಬೇಕಾದರೆ, ದೇಶದೊಳಗೆ ಸಾಮಾಜಿಕ ವಿಭಾಗಗಳಿರಬಾರದು, ಹಾಗೂ ಪ್ರತಿ ಪ್ರಜೆಯೂ ತನ್ನ ಆಲೋಚನೆಗಳನ್ನು ಮಾತ್ರ ಹೊಂದಿರಬೇಕು ಎನ್ನುವುದು ಆವಶ್ಯಕವಾಗುತ್ತದೆ; ಲೈಕರ್ಗಸ್ ಮಹಾಶಯನು ಸ್ಥಾಪಿಸಿದ್ದ ಭವ್ಯವೂ ವಿಶಿಷ್ಟವೂ ಆದ ವ್ಯವಸ್ಥೆ ಅಂತಹುದು.' ಅಡಿಟಿಪ್ಪಣಿಯೊಂದರಲ್ಲಿ ರೂಸೋ ತನ್ನ ಅಭಿಪ್ರಾಯದ ಬೆಂಬಲಕ್ಕೆ ಮೆಕಿಯವಿಲ್ಲೆಯ ಪ್ರಮಾಣವಾಕ್ಕನ್ನು ಉಲ್ಲೇಖಿಸುತ್ತಾನೆ.

ಅಂತಹ ವ್ಯವಸ್ಥೆಯು ಕಾರ್ಯಸಾಧ್ಯವಾದರೆ ಹೇಗಿರುತ್ತದೆ ಎಂಬುದನ್ನು ಪರಿಶೀಲಿಸಿ. ದೇಶವು (ದೇಶದ ಏಕೈಕ ಚರ್ಚ್ ಒಂದನ್ನುಳಿದು) ಚರ್ಚ್‌ಗಳನ್ನು, ರಾಜಕೀಯ ಪಕ್ಷಗಳನ್ನು, ಕಾರ್ಮಿಕ ಸಂಘಗಳನ್ನು, ಮತ್ತು ಅಂತಹವೇ ಆರ್ಥಿಕ ಹಿತಾಸಕ್ತಿಗಳ ಎಲ್ಲ ಸಂಘಟನೆಗಳನ್ನೂ ನಿಷೇಧಿಸಬೇಕು. ಇದರ ಪರಿಣಾಮವು ಸ್ಪಷ್ಟವಾಗಿ ಮೈತಳೆಯುವುದು, ವ್ಯಕ್ತಿಯು ಅಧಿಕಾರವನ್ನೆಲ್ಲ ಕಳೆದುಕೊಳ್ಳುವ, ನಿರಂಕುಶ ಸರ್ಕಾರ. ಎಲ್ಲ ಸಂಘಗಳನ್ನೂ ನಿಷೇಧಿಸುವುದು ಕಷ್ಟ ಎಂಬ ಅರಿವು ರೂಸೋಗೆ ಆಗಿರಬೇಕು, ಹೀಗಾಗಿ ಆನಂತರದ ಯೋಚನೆಯಾಗಿ, ಅಧೀನ ಸಂಸ್ಥೆಗಳಿರಲೇಬೇಕಾದರೆ ಎಷ್ಟು ಹೆಚ್ಚೋ ಅಷ್ಟೂ ಸಂಖ್ಯೆಯಲ್ಲಿರಬೇಕು, ಅವು ಪರಸ್ಪರವನ್ನು ತಟಸ್ಥವಾಗಿಸುತ್ತವೆ ಎಂಬ ಮಾತನ್ನು ಸೇರಿಸುತ್ತಾನೆ.

ಪುಸ್ತಕದ ಮುಂದಿನ ಭಾಗವೊಂದರಲ್ಲಿ ಅವನು ಪರಿಗಣಿಸುವುದು, ಕಾರ್ಯಾಂಗವು ತನ್ನದೇ ಆದ ಹಿತಾಸಕ್ತಿ ಮತ್ತು ಸಾಮಾನ್ಯ ಇಚ್ಛಾಶಕ್ತಿಗಳ ಒಂದು ಸಂಘಟನೆಯಾಗುವುದು ಅನಿವಾರ್ಯ, ಮತ್ತು ಅದು ಸಮುದಾಯದ ಇಚ್ಛಾಶಕ್ತಿಯೊಡನೆ ಸಂಘರ್ಷಿಸಬಹುದು ಎಂಬುದನ್ನು. ದೊಡ್ಡ ದೇಶವೊಂದರ ಸರ್ಕಾರವು ಸಣ್ಣ ದೇಶವೊಂದರದಕ್ಕಿಂತ ಪ್ರಬಲವಾಗಿರಬೇಕಾಗುವುದೆಂದೂ, ಸಾರ್ವಭೌಮದ ಮೂಲಕ ಅದನ್ನು ನಿಯಂತ್ರಿಸಬೇಕಾದ ಆವಶ್ಯಕತೆ

ಗಮನಿಸುತ್ತದೆ, ಮೊದಲಿನದು, ಖಾಸಗಿ ಹಿತಾಸಕ್ತಿಯನ್ನು ಹೊಂದಿರುತ್ತದೆ, ಮತ್ತು ಅದು ನಿರ್ದಿಷ್ಟ ಇಚ್ಛಾಶಕ್ತಿಗಳ ಮೊತ್ತ ಅಷ್ಟೆ; ಆದರೆ ಇದೇ ಆಕಾಂಕ್ಷೆಗಳಿಂದ ಹೆಚ್ಚಾದುವನ್ನೂ ಕಡಿಮೆಯಾದಸುವನ್ನೂ ತೆಗೆದು ಹಾಕಿದರೆ ಒಂದನ್ನೊಂದು ನಾಶಪಡಿಸುತ್ತವೆ, ಮತ್ತು ಸಾಮಾನ್ಯ ಆಕಾಂಕ್ಷೆಯು ಈ ವ್ಯತ್ಯಾಸಗಳ ಮೊತ್ತವಾಗಿ ಉಳಿಯುತ್ತದೆ.'

ಹೆಚ್ಚಾಗಿರುವುದೆಂದೂ ಹೇಳುತ್ತಾನೆ. ಸರ್ಕಾರದ ಸದಸ್ಯನಿಗೆ ಮೂರು ಇಚ್ಛಾಶಕ್ತಿಗಳಿರುತ್ತವೆ: ತನ್ನ ವೈಯಕ್ತಿಕ ಇಚ್ಛಾಶಕ್ತಿ, ಸರ್ಕಾರದ ಇಚ್ಛಾಶಕ್ತಿ ಮತ್ತು ಸಾಮಾನ್ಯ ಇಚ್ಛಾಶಕ್ತಿ. ಈ ಮೂರೂ ಆರೋಹಣದಲ್ಲಿರಬೇಕು, ಆದರೆ ವಾಸ್ತವದಲ್ಲಿ ಅದು ಅವರೋಹಣದಲ್ಲಿರುತ್ತದೆ. ಮತ್ತೆ, 'ನ್ಯಾಯ ಮತ್ತು ವೈಚಾರಿಕತೆಗಳ ಪ್ರಾಮಾಣ್ಯವನ್ನು ಹೊಂದಿದ ವ್ಯಕ್ತಿಯಿಂದ ಅಪಹರಿಸಬೇಕೆಂದು ಪ್ರತಿಯೊಂದೂ ಸಂಚು ಹೂಡುತ್ತಿರುತ್ತದೆ.'

'ಸದಾ ಸುಸಂಗತವೂ, ಬದಲಾವಣೆಗೊಳ್ಳದಿರುವುದೂ ಮತ್ತು ಪರಿಶುದ್ಧವೂ' ಆದ ಸಾಮಾನ್ಯ ಆಕಾಂಕ್ಷೆಯ ದೋಷರಾಹಿತ್ಯದ ಹೊರತಾಗಿಯೂ, ನಿರಂಕುಶಾಧಿಕಾರವನ್ನು ತಡೆಗಟ್ಟುವ ಹಳೆಯ ಸಮಸ್ಯೆಗಳೆಲ್ಲ ಹಾಗೆಯೇ ಉಳಿದುಕೊಳ್ಳುತ್ತವೆ. ರೂಸೋ ಈ ಸಮಸ್ಯೆಯ ಬಗೆಗೆ ಹೇಳುವುದೆಂದರೆ, ಇಲ್ಲವೇ ಮರೆಮಾಚಿ ಹೇಳುವ ಮಾಂಟೆಸ್ಕ್ಯೂನ ಅಭಿಪ್ರಾಯದ ಪುನರುಕ್ತಿ ಅಥವಾ ಶಾಸಕಾಂಗದ ಪರಮೋಚ್ಚತೆಯ ಬಗೆಗಿನ ಒತ್ತಾಯದ ಮಾತು. ಅದು ಪ್ರಜಾಪ್ರಭುತ್ವಾತ್ಮಕವಾಗಿದ್ದರೆ ಅದು ಅವನು ಸಾರ್ವಭೌಮ ಎನ್ನುವುದರ ಸರಿಸಮಾನವಾದುದು. ಅವನು ಆರಂಭಿಸುವಾಗಿನ ಮತ್ತು ರಾಜಕೀಯ ಸಮಸ್ಯೆಗಳನ್ನು ಪರಿಹರಿಸಿವೆ ಎಂದು ಅವನು ಹೇಳುವ ವಿಶಾಲ ಸಾಮಾನ್ಯ ತತ್ವಗಳು ವಿವರವಾದ ಪರಿಶೀಲನೆಗೆ ಇಳಿದಾಗ ಕಣ್ಮರೆಯಾಗಿಬಿಡುತ್ತವೆ, ಹೀಗಾಗಿ ಅವು ಸಮಸ್ಯೆಗಳ ಪರಿಹಾರಕ್ಕೆ ಯಾವುದೇ ಕೊಡುಗೆಯನ್ನೂ ನೀಡುವುದಿಲ್ಲ.

ಈ ಪುಸ್ತಕದ ಬಗೆಗಿನ ಸಮಕಾಲೀನ ಪ್ರತಿಗಾಮಿಗಳ ಟೀಕೆಗಳು, ಆಧುನಿಕ ಓದುಗನನ್ನು ಅದರಲ್ಲಿರುವುದಕ್ಕಿಂತ ಆಳವಾದ ಕ್ರಾಂತಿಕಾರಿ ಸಿದ್ಧಾಂತಗಳು ಅದರಲ್ಲಿವೆ ಎಂದು ನಿರೀಕ್ಷಿಸುವಂತೆ ಮಾಡುತ್ತವೆ. ಇದನ್ನು ನಾವು ಪ್ರಜಾಪ್ರಭುತ್ವದ ಬಗೆಗಿನ ಹೇಳಿಕೆಗಳಿಂದ ನಿದರ್ಶಿಸಬಹುದು. ರೂಸೋ ಈ ಪದವನ್ನು ಬಳಸುವಾಗ ಅವನ ಮನಸ್ಸಿನಲ್ಲಿರುವುದು, ನಾವು ಈಗಾಗಲೇ ನೋಡಿರುವಂತೆ, ಪ್ರಾಚೀನ ನಗರ ಪ್ರಭುತ್ವ ಮಾದರಿಯ ಪ್ರಜಾಪ್ರಭುತ್ವ. ಇದನ್ನು ನಾವು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರುವುದು ಅಸಾಧ್ಯ, ಯಾಕೆಂದರೆ ಜನರನ್ನು ಯಾವಾಗಲೂ ಒಟ್ಟಿಗೆ ಸೇರಿಸಲೂ ಸಾಧ್ಯವಾಗುವುದಿಲ್ಲ, ಮತ್ತು ಅವರು ಯಾವಾಗಲೂ ಸಾರ್ವತ್ರಿಕ ವಿಚಾರಗಳನ್ನು ಆಲೋಚಿಸುವಂತೆ ಮಾಡುವುದೂ ಸಾಧ್ಯವಿಲ್ಲ. 'ದೇವತೆಗಳಲ್ಲಿ ಜಗಳಗಳಾಗಿದ್ದರೆ ಅವರ ಸರ್ಕಾರವು ಪ್ರಜಾಪ್ರಭುತ್ವಾತ್ಮಕವಾಗಿರುತ್ತಿತ್ತು. ಹೀಗಾಗಿ ಪರಿಪೂರ್ಣ ಸರ್ಕಾರ ಇರುವುದು ಮನುಷ್ಯರಿಗಾಗಿ ಅಲ್ಲ.'

ನಾವು ಪ್ರಜಾಪ್ರಭುತ್ವ ಎಂದು ಕರೆಯುವುದನ್ನು ಅವನು ಚುನಾಯಿತ ಶ್ರೀಮಂತಪ್ರಭುತ್ವ ಎನ್ನುತ್ತಾನೆ. ಇದೇ ಎಲ್ಲ ಸರ್ಕಾರಗಳಲ್ಲಿ ಅತ್ಯುತ್ತಮವಾದದ್ದು, ಆದರೆ ಇದು ಎಲ್ಲ ದೇಶಗಳಿಗೂ ಸೂಕ್ತವಾಗುವುದಿಲ್ಲ. ಆ ದೇಶದ ಹವಾಗುಣವು

ತೀರ ಉಷ್ಣದ್ದೂ ಆಗಿರಬಾರದು, ಶೀತದ್ದೂ ಆಗಿರಬಾರದು; ಆವಶ್ಯಕತೆಗಿಂತ ಹೆಚ್ಚಿನ ಉತ್ಪಾದನೆಯಿರಬಾರದು; ಯಾಕೆಂದರೆ ಹೆಚ್ಚಾಗಿದ್ದರೆ ವೈಭವದ ಕೆಡುಕು ಅನಿವಾರ್ಯವಾಗುತ್ತದೆ, ಮತ್ತು ಈ ಕೆಡುಕನ್ನು ಜನಸಾಮಾನ್ಯರಲ್ಲಿ ಹರಡುವುದಕ್ಕಿಂತ ರಾಜನಿಗೆ ಮತ್ತವನ ಆಸ್ಥಾನಕ್ಕೆ ಸೀಮಿತಗೊಳಿಸುವುದು ಒಳ್ಳೆಯದು. ಈ ಇತಿಮಿತಿಗಳ ಕಾರಣದಿಂದಾಗಿ, ನಿರಂಕುಶಪ್ರಭುತ್ವಕ್ಕೆ ವಿಶಾಲ ವ್ಯಾಪ್ತಿಯನ್ನು ನೀಡಿದಂತಾಗುತ್ತದೆ. ಇಷ್ಟಾದರೂ, ತನ್ನ ಸೀಮಿತತೆಯೊಡನೆಯೇ, ಅವನ ಪ್ರಜಾಪ್ರಭುತ್ವಪರ ವಾದವು, ಈ ಪುಸ್ತಕದ ಬಗ್ಗೆ ಫ್ರೆಂಚ್ ಸರ್ಕಾರವು ಕಠೋರ ದ್ವೇಷವನ್ನು ಹೊಂದಲು ಒಂದು ಕಾರಣವಾದುದರಲ್ಲಿ ಸಂದೇಹವಿಲ್ಲ; ನಾವು ಊಹಿಸಬಹುದಾದ ಮತ್ತೊಂದು ಕಾರಣವೆಂದರೆ, ರಾಜರ ದೈವಿಕ ಅಧಿಕಾರದ ನಿರಾಕರಣೆ, ಸರ್ಕಾರದ ಮೂಲವು ಸಾಮಾಜಿಕ ಒಪ್ಪಂದ ಎಂಬ ಸಿದ್ಧಾಂತದಲ್ಲಿ ಇದು ಸೂಚಿತವಾಗಿದೆ.

'ಸೋಷಿಯಲ್ ಕಾಂಟ್ರಾಕ್ಟ್' ಫ್ರೆಂಚ್ ಕ್ರಾಂತಿಯ ಬಹುತೇಕ ನಾಯಕರ ಬೈಬಲ್ ಆಯಿತು, ಆದರೆ ಎಲ್ಲ ಬೈಬಲ್‌ಗಳಿಗಾದಂತೆಯೇ, ಅದನ್ನು ಸೂಕ್ಷ್ಮವಾಗಿ ಓದದೆ, ಅದರ ಅನೇಕ ಮಂದಿ ಶಿಷ್ಯರು ಕೂಡ ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಅದು ಪ್ರಜಾಪ್ರಭುತ್ವದ ಬಗೆಗಿನ ಸಿದ್ಧಾಂತಗಳಲ್ಲಿ ತತ್ತ್ವಜಿಜ್ಞಾಸಾತ್ಮಕ ಅಮೂರ್ತತೆಯನ್ನು ಮತ್ತೆ ಚಾಲತಿಗೆ ತಂದಿತು, ಮತ್ತು ಅದರ ಸಾಮಾನ್ಯ ಆಕಾಂಕ್ಷೆಯ ಸಿದ್ಧಾಂತವು ಒಬ್ಬ ನಾಯಕನನ್ನು ಜನರೊಡನೆ ನಿಗೂಢವಾಗಿ ಸಮೀಕರಿಸುವುದನ್ನು ಸಾಧ್ಯಗೊಳಿಸಿತು, ಅದಕ್ಕೆ ಮತಪೆಟ್ಟಿಗೆಯಂತಹ ಸ್ಪಷ್ಟ ಭೌತವಸ್ತುವಿನಲ್ಲಿ ದೃಢೀಕರಿಸುವ ಆವಶ್ಯಕತೆ ಉಂಟಾಗಲಿಲ್ಲ. ಅದರ ಬಹುತೇಕ ತಾತ್ವಿಕತೆಯನ್ನು ಹೆಗೆಲ್[೨೭೩] ತನ್ನ ಪ್ರಷ್ಯದ ಶ್ರೀಮಂತಪ್ರಭುತ್ವದ ಸಮರ್ಥನೆಯಲ್ಲಿ ಬಳಸಿಕೊಳ್ಳುವಂತಾಯಿತು. ಅದರ ಮೊದಲ ಫಲಗಳು ಕಾರ್ಯತಃ ಕಾಣಿಸಿಕೊಂಡದ್ದು ರಾಬಸ್‌ಪಿಯರ್‌ನ ಆಡಳಿತದಲ್ಲಿ; ರಷ್ಯಾ ಮತ್ತು ಜರ್ಮನಿಗಳ ಸರ್ವಾಧಿಕಾರಗಳು (ಅದರಲ್ಲೂ ವಿಶೇಷವಾಗಿ ಎರಡನೆಯದು) ಭಾಗಶಃ ರೂಸೋನ ಬೋಧನೆಗಳ ಪರಿಣಾಮ. ಮುಂದೆ ಎಂತಹ ಫಲಗಳನ್ನು ಅವನ ಪ್ರೇತಕ್ಕೆ ಅದು ನೀಡುತ್ತದೆಯೋ ಅದನ್ನು ನಾನು ಮುನ್ನುಡಿಯುವ ಸಾಹಸಕ್ಕೆ ಕೈಹಾಕಲಾರೆ.

---

೨೭೩. ಎಲ್ಲರ ಆಕಾಂಕ್ಷೆ ಮತ್ತು ಸಾಮಾನ್ಯ ಆಕಾಂಕ್ಷೆಗಳ ನಡುವಣ ವ್ಯತ್ಯಾಸಗಳನ್ನು ಹೆಗೆಲ್ ವಿಶೇಷವಾಗಿ ಹೊಗಳುತ್ತಾನೆ. ಅವನೆನ್ನುತ್ತಾನೆ: 'ಸದಾ ಈ ವ್ಯತ್ಯಾಸವನ್ನು ತನ್ನ ಕಣ್ಣ ಮುಂದೆಯೇ ಇರಿಸಿಕೊಂಡಿದ್ದರೆ, ಸರ್ಕಾರದ ಬಗೆಗಿನ ಸಿದ್ಧಾಂತಕ್ಕೆ ರೂಸೋ ಮತ್ತಷ್ಟು ಪರಿಪುಷ್ಟ ಕೊಡುಗೆಯನ್ನು ನೀಡಬಹುದಾಗಿತ್ತು.' (*ಲಾಜಿಕ್*, ನೋಡಿ, ೧೬೩).

೨೦
ಕ್ಯಾಂಟ್

ಎ. ಒಟ್ಟಾರೆ ಜರ್ಮನ್ ಆದರ್ಶವಾದ

ಹದಿನೆಂಟನೆ ಶತಮಾನದ ತತ್ವಜ್ಞಾನವು ಬ್ರಿಟಿಷ್ ಅನುಭವೈಕವಾದಿಗಳ ಪ್ರಾಬಲ್ಯದಿಂದ ಕೂಡಿತ್ತು, ಅವರ ಪೈಕಿ, ಲಾಕ್, ಬರ್ಕ್ಲೇ ಮತ್ತು ಹ್ಯೂಮ್‌ರನ್ನು ಪ್ರಾತಿನಿಧಿಕರೆಂದು ಪರಿಗಣಿಸಬಹುದು. ಇವರಲ್ಲಿಯೂ ಮನೋಭಾವ ಹಾಗೂ ಸೈದ್ಧಾಂತಿಕ ನಿಲವುಗಳ ಬಗ್ಗೆ, ಒಂದು ಸಂಘರ್ಷವಿತ್ತು, ಅದರ ಬಗ್ಗೆ ಅವರಲ್ಲಿ ಯಾರಿಗೂ ಅರಿವಿದ್ದಂತೆ ಕಾಣುವುದಿಲ್ಲ, ತಮ್ಮ ಮನೋಭಾವದಲ್ಲಿ ಅವರು ಸಾಮಾಜಿಕ ಹೊಣೆಗಾರಿಕೆಯ ಪ್ರಜೆಗಳಾಗಿದ್ದರು, ತಮ್ಮದೇ ಸರಿಯೆಂಬ ನಿಲವಿನವರಾಗಿರಲಿಲ್ಲ, ಅಧಿಕಾರದ ಬಗ್ಗೆ ಅನವಶ್ಯಕವಾಗಿ ಕಾತರರಾಗಿರಲಿಲ್ಲ, ಅಪರಾಧಸಂಹಿತೆಯ ಸೀಮಿತತೆಯಲ್ಲಿಯೇ ಪ್ರತಿಯೊಬ್ಬನಿಗೂ ತನಗೆ ಇಷ್ಟವಾದುದನ್ನು ಮಾಡಬಹುದೆಂಬ ಸಹನಾಮಯ ಜಗತ್ತಿನ ಪರವಾಗಿದ್ದವರು. ಅವರು ಒಳ್ಳೆಯ ಸ್ವಭಾವದವರು, ವಾಸ್ತವಪ್ರಜ್ಞೆಯ ವ್ಯಕ್ತಿಗಳು, ನಯವಂತರು ಹಾಗೂ ಅನುಕಂಪೆಯುಳ್ಳವರಾಗಿದ್ದರು.

ಅವರ ಮನೋಭಾವವು ಸಾಮಾಜಿಕವಾದುದಾಗಿದ್ದರೂ ಅವರ ತಾತ್ವಿಕ ಸಿದ್ಧಾಂತಗಳು ವ್ಯಕ್ತಿನಿಷ್ಠತೆಗೆ ಅನುವು ಮಾಡಿಕೊಡುವಂಥದು. ಇದೇನೂ ಪ್ರವೃತ್ತಿಯಾಗಿರಲಿಲ್ಲ; ಈಚಿನ ಪ್ರಾಚೀನ ಕಾಲದಲ್ಲೂ ಅದು ಅಸ್ತಿತ್ವದಲ್ಲಿತ್ತು, ಅದರಲ್ಲೂ ವಿಶೇಷವಾಗಿ ಸಂತ ಆಗಸ್ಟೈನ್‌ನಲ್ಲಿ, ಮತ್ತು ಅದು ಆಧುನಿಕ ಕಾಲದಲ್ಲಿ ಡೆಕಾರ್ಟೆಯ 'ಕೊಗಿಟೊ'ದಿಂದ ಪುನರುಜ್ಜೀವನಗೊಂಡು, ಒಂದಷ್ಟು ಕಾಲ ಲೀಬ್‌ನಿಝ್‌ನ ಕಿಟಕಿಯಿಲ್ಲದ ಏಕಗಳಲ್ಲಿ ಮೇರುಸ್ಥಿತಿಯಲ್ಲಿತ್ತು. ಉಳಿದ ಜಗತ್ತೆಲ್ಲವೂ ಸಮರೂಪವನ್ನು ಹೊಂದಿದರೂ ತನ್ನ ಅನುಭವದಲ್ಲಿನ ಪ್ರತಿಯೊಂದೂ ಬದಲಾಗದ್ದು ಎಂದವನು ನಂಬಿದ್ದ. ಆದರೂ ಅವನು ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟೆಂಟ್ ಚರ್ಚ್‌ಗಳ ಪುನರ್ಮಿಲನಕ್ಕೆ ಬದ್ಧನಾಗಿದ್ದ. ಅಂತಹುದೇ ಅಸಾಂಗತ್ಯವನ್ನು ಲಾಕ್, ಬರ್ಕ್ಲೇ ಮತ್ತು ಹ್ಯೂಮ್‌ರಲ್ಲಿಯೂ ಕಾಣಬಹುದು.

ಲಾಕ್‌ನಲ್ಲಿ ಅದು ಇನ್ನೂ ಸೈದ್ಧಾಂತಿಕ ನೆಲೆಯಲ್ಲಿ ಮಾತ್ರವಿತ್ತು. ಹಿಂದಿನ ಅಧ್ಯಾಯವೊಂದರಲ್ಲಿ ನಾವು ಉಲ್ಲೇಖಿಸಿದ್ದ ಲಾಕ್‌ನ ಮಾತನ್ನು ಇಲ್ಲಿ ನೆಪಿಸಿಕೊಳ್ಳಬಹುದು: ಒಂದೆಡೆ, 'ಮನಸ್ಸು ತನ್ನೆಲ್ಲ ಆಲೋಚನೆ ಮತ್ತು ವೈಚಾರಿಕತೆಗಳಲ್ಲಿ, ತನ್ನ ಚಿಂತನೆಗಳ ಹೊರತಾಗಿ, ನಮ್ಮ ತಿಳಿವಳಿಕೆಯು ಅವುಗಳ ಬಗ್ಗೆ ಪರಿಚಯ ಹೊಂದಿರಬಹುದಾದರೂ, ತಾನು ಮಾತ್ರ ಧ್ಯಾನಿಸಬಹುದಾದ ಅಥವಾ ಧ್ಯಾನಿಸುವ ಬೇರಾವುದೇ ವಸ್ತು ಅದರ ಕಣ್ಮುಂದಿರುವುದಿಲ್ಲ' ಎಂದು ಹೇಳಿದರೆ; ಮತ್ತೊಂದೆಡೆ, ಜ್ಞಾನ ಎಂಬುದು 'ಎರಡು ಚಿಂತನೆಗಳ ನಡುವಣ ಹೊಂದಾಣಿಕೆ ಅಥವಾ ಅದರ ಅಭಾವದ ಪರಿಕಲ್ಪನೆ ಮಾತ್ರ' ಎಂದ. ಇಷ್ಟಾದರೂ, ಅವನು ವಾಸ್ತವ ಅಸ್ತಿತ್ವದ ಬಗೆಗಿನ ಮೂರು ಜ್ಞಾನಗಳು ನಮಗಿರಬಹುದು ಎಂದ: ಭಾವನಾತ್ಮಕ, ಅಂದರೆ ನಮ್ಮದು; ನಿದರ್ಶನಾತ್ಮಕ, ದೇವರದು; ಮತ್ತು ಇಂದ್ರಿಯಗೋಚರ, ವಸ್ತುಗಳು. ಸರಳ ಚಿಂತನೆಗಳು 'ಮನಸ್ಸಿನಲ್ಲಿ ಸಹಜ ರೀತಿಯಲ್ಲಿ ಕ್ರಿಯಾಶೀಲವಾಗಿರುವ ಆಲೋಚನೆಗಳ ಉತ್ಪನ್ನ'. ಇದನ್ನು ತಾನು ಹೇಗೆ ಬಲ್ಲ ಎಂಬುದನ್ನು ಅವನು ವಿವರಿಸುವುದಿಲ್ಲ; ಖಂಡಿತವಾಗಿ ಅದು 'ಎರಡು ಚಿಂತನೆಗಳ ನಡುವಣ ಹೊಂದಾಣಿಕೆ ಅಥವಾ ಅದರ ಅಭಾವದ ಪರಿಕಲ್ಪನೆ ಮಾತ್ರ' ಎಂಬುದನ್ನು ಮೀರಿ ಸಾಗುತ್ತದೆ.

ಬರ್ಕ್ಲೀಯು ಈ ಅಸಾಂಗತ್ಯವನ್ನು ಕೊನೆಗೊಳಿಸದಿದ್ದರೂ ಒಂದು ಹೆಜ್ಜೆ ಮುಂದಿಟ್ಟ. ಅವನ ಪ್ರಕಾರ ಇರುವುದು ಮನಸ್ಸುಗಳು ಮತ್ತು ಅವುಗಳ ಚಿಹ್ನೆಗಳು ಮಾತ್ರ; ಇದು ಬಾಹ್ಯದ ಭೌತಿಕ ಜಗತ್ತನ್ನು ಕಣ್ಮರೆಯಾಗಿಸುತ್ತದೆ. ಆದರೆ ತಾನು ಲಾಕ್‌ನಿಂದ ಪಡೆದ ಜ್ಞಾನಮೀಮಾಂಸೆಯ ತತ್ವಗಳ ಎಲ್ಲ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ಅವನು ವಿಫಲನಾದ. ಅವನೇನಾದರೂ ಪೂರ್ತಿ ಸುಸಂಗತವಾಗಿದ್ದಿದ್ದರೆ, ಅವನು ದೇವರ ಮತ್ತು ತನ್ನದರ ಹೊರತಾಗಿ ಮಿಕ್ಕ ಮನಸ್ಸುಗಳ ಬಗೆಗಿನ ಜ್ಞಾನವನ್ನು ಅಲ್ಲಗಳೆಯುತ್ತಿದ್ದ. ತಾನೊಬ್ಬ ಮತಧಾರ್ಮಿಕ ಗುರುವಾದುದರಿಂದ ಹಾಗೂ ಸಾಮಾಜಿಕ ಜೀವಿಯಾದ್ದರಿಂದ ಅವುಗಳನ್ನು ಅಲ್ಲಗಳೆಯಲಿಲ್ಲ.

ಹ್ಯೂಮ್ ಸೈದ್ಧಾಂತಿಕ ಸುಸಾಂಗತ್ಯದ ಕಾರಣ ಯಾವುದರಿಂದಲೂ ಹಿಂದೆ ಸರಿಯಲಿಲ್ಲ, ಆದರೆ ತನ್ನ ಕಾರ್ಯನೀತಿಯು ತನ್ನ ಸಿದ್ಧಾಂತಗಳಿಗೆ ಅನುಗುಣವಾಗಿರಬೇಕೆಂಬ ತುಡಿತವೇ ಅವನಲ್ಲಿರಲಿಲ್ಲ. ಹ್ಯೂಮ್ ತನ್ನತನವನ್ನು ಅಲ್ಲಗಳೆದ, ನಿಗಮನ ಮತ್ತು ಕಾರಣಾತ್ಮಕತೆಗಳ ಬಗ್ಗೆ ಸಂದೇಹವುಳ್ಳವನಾಗಿದ್ದ. ಬರ್ಕ್ಲೀಯ ಭೌತದ್ರವ್ಯದ ನಿರಾಕರಣೆಯನ್ನವನು ಒಪ್ಪಿದನಾದರೂ ಬರ್ಕ್ಲೀ ಅದರ ಸ್ಥಾನದಲ್ಲಿ ಸೂಚಿಸಿದ್ದ ದೇವರ ಚಿಂತನೆಗಳನ್ನಲ್ಲ. ಅವನೂ ಲಾಕ್‌ನಂತೆ ಹಿಂದಿನ ಒಂದು ಪರಿಣಾಮವಿಲ್ಲದ ಸರಳ ಚಿಂತನೆಯಿರಲಾರದು ಎಂದು ಒಪ್ಪಿದನಾದರೂ,

ಬಾಹ್ಯ ವಸ್ತುವೊಂದು ಮನಸ್ಸಿನ ಮೇಲೆ ನೇರ ಪರಿಣಾಮ ಬೀರಿದ ಒಂದು ಮನಃಸ್ಥಿತಿಯೇ 'ಪರಿಣಾಮ' ಎಂದು ಕಲ್ಪಿಸಿಕೊಂಡ ಎಂಬದೇನೋ ನಿಜವೇ. ಆದರೆ ಇದನ್ನು ಪರಿಣಾಮದ ವ್ಯಾಖ್ಯೆಯೆಂದು ಅವನು ಒಪ್ಪಲಿಲ್ಲ, ಯಾಕೆಂದರೆ ಅವನು 'ಕಾರಣ' ಎಂಬ ಅಭಿಮತವನ್ನು ಪ್ರಶ್ನಿಸಿದ. ಅವನಾಗಲೀ ಅವನ ಶಿಷ್ಯರಾಗಲೀ ಪರಿಣಾಮ ಕುರಿತ ಈ ಸಮಸ್ಯೆಯ ಸ್ಪಷ್ಟ ಸ್ವರೂಪವನ್ನು ತಿಳಿದಿದ್ದರೇ ಎಂಬುದೂ ಸಂದೇಹಾಸ್ಪದವೇ. ಅವನ ದೃಷ್ಟಿಕೋನದಂತೆ, 'ಪರಿಣಾಮ' ಎಂಬುದನ್ನು 'ಚಿಂತನೆ'ಯಿಂದ ಭಿನ್ನವಾದ ಒಂದು ಅಂತರ್ಗತ ಲಕ್ಷಣದಿಂದ ಸೂತ್ರಿಕರಿಸಬೇಕು ಎಂಬುದು ಸ್ಪಷ್ಟವಾಗಿದೆ; ಯಾಕೆಂದರೆ ಅದನ್ನು ಕಾರಣಾತ್ಮಕವಾಗಿ ಸೂತ್ರೀಕರಿಸಲು ಸಾಧ್ಯವಾಗಿರಲಿಲ್ಲ. ಹೀಗಾಗಿ ಬಾಹ್ಯವಾದ ವಸ್ತುಗಳ ಬಗೆಗಿನ ಜ್ಞಾನವನ್ನು ನಮಗೆ ಪರಿಣಾಮಗಳು ನೀಡುತ್ತವೆ ಎಂದವನು ಲಾಕ್‌ನಂತೆಯೋ ಅಥವಾ ಬರ್ಕ್ಲೀಯ ಪರಿಷ್ಕೃತ ರೂಪದಂತೆಯೋ ವಾದಿಸಲಾಗಲಿಲ್ಲ. ಹೀಗಾಗಿ ಅವನು ತನ್ನ ಮನಃಸ್ಥಿತಿಗಳು ಮತ್ತವುಗಳ ಸಂಬಂಧಗಳ ಹೊರತು ಮಿಕ್ಕದರ ಬಗ್ಗೆ ತಿಳಿವಳಿಕೆಯಿಲ್ಲದ ಸ್ವಾತ್ಮೈಕವಾದಿ ಜಗತ್ತಿನಲ್ಲಿ ಹುದುಗಿಕೊಳ್ಳಬೇಕಾಯಿತು.

ಹ್ಯೂಮ್ ತನ್ನ ಸುಸಾಂಗತ್ಯದಿಂದ ಅನುಭವೈಕವಾದವನ್ನು ಅದರ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದು, ಇದರಿಂದಾಗಿ ಇಡೀ ವಿಜ್ಞಾನದ ಕ್ಷೇತ್ರವನ್ನು ದಾಟಿಕೊಂಡು ವೈಚಾರಿಕ ನಂಬಿಕೆ ಮತ್ತು ಅವಿಚಾರಿತ ನಂಬಿಕೆಗಳ ವ್ಯತ್ಯಾಸವನ್ನು ಕಡೆಗಣಿಸಿ, ಕೆಲವು ವ್ಯಕ್ತಿಗಳು ಮಾತ್ರವೇ ಒಪ್ಪಿಕೊಳ್ಳುವಂತಹ ಫಲಿತಾಂಶಗಳಲ್ಲಿ ಅದು ಪರ್ಯವಸಾನವಾಯಿತು. ಲಾಕ್ ಈ ಅಪಾಯವನ್ನು ಮುಂಗಂಡಿದ್ದ. ಒಬ್ಬ ಟೀಕಾಕಾರನ ಬಾಯಲ್ಲಿ ಅವನು ಈ ವಾದವನ್ನು ಹೇಳಿಸಿದ್ದಾನೆ: 'ಜ್ಞಾನವೆಂಬುದು ಚಿಂತನೆಗಳ ಹೊಂದಾಣಿಕೆಯಾದರೆ, ಉತ್ಸಾಹಶಾಲಿ ಮತ್ತು ನಿರ್ಭಾವುಕ ಇಬ್ಬರೂ ಒಂದೇ ನೆಲೆಯವರು ಎಂದಂತಾಯಿತು.' ಉತ್ಸಾಹದಿಂದ ರೋಸಿಹೋದ ಜನಗಳಿದ್ದ ಕಾಲದವನಾದ ಲಾಕ್, ಈ ಟೀಕೆಗೆ ತಾನು ಕೊಟ್ಟ ಉತ್ತರದ ಸಿಂಧುತ್ವವನ್ನು ಜನರು ಒಪ್ಪಿಕೊಳ್ಳುವಂತೆ ಮಾಡಲು ಕಷ್ಟಪಡಬೇಕಾಗಲಿಲ್ಲ. ಅದಕ್ಕೆ ವಿರುದ್ಧವಾಗಿ, ವೈಚಾರಿಕತೆಯಿಂದ ರೋಸಿ ಹೋದ ಜನರಿದ್ದ ಯುಗದ ರೂಸೋ 'ಉತ್ಸಾಹ'ವನ್ನು ಪುನರುಜ್ಜೀವನಗೊಳಿಸಿದ; ಅಲ್ಲದೆ ವೈಚಾರಿಕತೆಯ ದಿವಾಳಿತನವನ್ನು ಒಪ್ಪಿಕೊಂಡು, ತಲೆಯು ಸಂದೇಹಿಸಿದ್ದ ಪ್ರಶ್ನೆಗಳ ಬಗ್ಗೆ ಹೃದಯವು ನಿರ್ಣಯಿಸಲು ಅವಕಾಶ ನೀಡಿದ. ೧೭೫೦ ರಿಂದ ೧೭೯೪ರ ವರೆಗೆ ಹೃದಯವು ಹೆಚ್ಚು ಹೆಚ್ಚು ಗಟ್ಟಿಯಾಗಿ ಮಾತನಾಡಿತು; ಕೊನೆಗೆ, ಥೆರ್ಮಿಡರ್ ಅದರ ಉದ್ರಿಕ್ತ ಘೋಷಣೆಗಳನ್ನು ಸ್ವಲ್ಪ ಕಾಲ, ಕನಿಷ್ಠ ಪಕ್ಷ ಫ್ರಾನ್ಸ್‌ಗೆ ಸೀಮಿತವಾಗುವಂತೆ, ಸ್ತಬ್ಧಗೊಳಿಸಿದ. ನೆಪೋಲಿಯನ್ ಕಾಲದಲ್ಲಿ ತಲೆ ಮತ್ತು ಹೃದಯಗಳೆರಡೂ ಸ್ತಬ್ಧಗೊಂಡವು.

ಜರ್ಮನಿಯಲ್ಲಿ, ಹ್ಯೂಮ್‌ನ ಅಜ್ಞೇಯತಾವಾದದ ವಿರುದ್ಧವಾದ ಪ್ರತಿಕ್ರಿಯೆಯು, ರೂಸೋ ಅದಕ್ಕೆ ತೋರಿಸಿದ್ದುದಕ್ಕಿಂತ ಮತ್ತಷ್ಟು ಗಂಭೀರವೂ ಸೂಕ್ಷ್ಮವೂ ಆಯಿತು. ಕ್ಯಾಂಟ್, ಫ಼ಿಷ್ತೆ, ಮತ್ತು ಹೆಗೆಲ್ ಹೊಸ ಬಗೆಯ ತತ್ವಜ್ಞಾನಕ್ಕೆ ನಾಂದಿ ಹಾಡಿದರು, ಅದರ ಉದ್ದೇಶ ಹದಿನೆಂಟನೆಯ ಶತಮಾನದ ಕೊನೆಯ ಭಾಗದ ವಿಧ್ವಂಸಕ ಸಿದ್ಧಾಂತಗಳಿಂದ ಜ್ಞಾನ ಮತ್ತು ಸದ್ಗುಣಗಳೆರಡನ್ನೂ ಸಂರಕ್ಷಿಸುವುದು. ಕ್ಯಾಂಟ್‌ನಲ್ಲಿ, ಮತ್ತು ಮತ್ತಷ್ಟು ಹೆಚ್ಚಾಗಿ ಫ಼ಿಷ್ತೆಯಲ್ಲಿ, ಡೆಕಾರ್ಟೆಯಿಂದ ಆರಂಭವಾಗುವ ವ್ಯಕ್ತಿನಿಷ್ಠ ಪ್ರವೃತ್ತಿಯು ಹೊಸ ಅತಿರೇಕವನ್ನು ತಲುಪಿತು; ಈ ವಿಷಯದಲ್ಲಿ, ಮೊದಮೊದಲಿಗೆ ಹ್ಯೂಮ್ ವಿರುದ್ಧ ಯಾವುದೇ ಪ್ರತಿಕ್ರಿಯೆ ಇರಲಿಲ್ಲ. ವ್ಯಕ್ತಿನಿಷ್ಠತೆಯ ವಿರುದ್ಧದ ವಿಷಯದಲ್ಲಿ, ಪ್ರತಿಕ್ರಿಯೆಯು ಆರಂಭಗೊಂಡದ್ದು ಹೆಗೆಲ್‌ನಿಂದ; ಅವನು ತನ್ನ ತರ್ಕದಿಂದ ವ್ಯಕ್ತಿಯು ಜಗತ್ತಿನಲ್ಲಿ ನುಣಿಚಿಕೊಳ್ಳುವ ಒಂದು ಹೊಸ ಬಗೆಯನ್ನು ಸ್ಥಾಪಿಸಿದ.

ಇಡೀ ಜರ್ಮನ್ ಆದರ್ಶವಾದವು ರೊಮ್ಯಾಂಟಿಕ್ ಚಳುವಳಿಯೊಡನೆ ಬೇರುಗಳನ್ನು ಹಂಚಿಕೊಂಡಿದೆ. ಇದು ಫ಼ಿಷ್ತೆ, ಮತ್ತು ಇನ್ನಷ್ಟು ಹೆಚ್ಚಾಗಿ ಸ್ಕೆಲಿಂಗ್‌ನಲ್ಲಿ ಸ್ಪಷ್ಟವಾಗಿದೆ; ಕೊನೆಯ ಪಕ್ಷ ಹೆಗೆಲ್‌ನಲ್ಲಂತೂ ಅದು ಹಾಗಿದೆ.

ಜರ್ಮನ್ ಆದರ್ಶವಾದದ ಸ್ಥಾಪಕನಾದ ಕ್ಯಾಂಟ್ ರಾಜಕೀಯ ವಿಷಯಕವಾದ ಕೆಲವು ಕುತೂಹಲಕಾರಿ ಲೇಖನಗಳನ್ನು ಬರೆದಿದ್ದರೂ, ತಾನೇ ರಾಜಕೀಯವಾಗಿ ಅಷ್ಟೇನೂ ಮುಖ್ಯನಾದವನಲ್ಲ. ಮತ್ತೊಂದು ಕಡೆ, ಫ಼ಿಷ್ತೆ ಮತ್ತು ಹೆಗೆಲ್ ಇಬ್ಬರೂ ರಾಜಕೀಯ ಸಿದ್ಧಾಂತಗಳನ್ನು ಮಂಡಿಸಿದರು; ಅವು ಆಗಲೂ ಮತ್ತು ಈಗಲೂ ಚರಿತ್ರೆಯಲ್ಲಿ ಗಾಢವಾದ ಪ್ರಭಾವವನ್ನು ಹೊಂದಿರುವಂಥವು. ಕ್ಯಾಂಟ್‌ನನ್ನು ಅಧ್ಯಯನ ಮಾಡದೆ ಆ ಇಬ್ಬರನ್ನೂ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ, ನಾನು ಈ ಅಧ್ಯಾಯದಲ್ಲಿ ಅವನನ್ನು ಕುರಿತು ವಿವೇಚಿಸುತ್ತೇನೆ.

ಜರ್ಮನ್ ಆದರ್ಶವಾದದಲ್ಲಿ ಕೆಲವು ಸಾಮಾನ್ಯ ಲಕ್ಷಣಗಳಿವೆ, ವಿವರವಾಗಿ ನೋಡುವುದಕ್ಕೆ ಮುಂಚಿತವಾಗಿ ನಾವು ಅವುಗಳನ್ನು ಉಲ್ಲೇಖಿಸಬಹುದು.

ತಾತ್ವಿಕ ನಿರ್ಣಯಗಳನ್ನು ತಲುಪುವ ಸಾಧನವಾಗಿ ಜ್ಞಾನದ ಬಗೆಗಿನ ವಿವೇಚನೆಯು ಬಹು ಮುಖ್ಯವಾದುದೆಂದು ಕ್ಯಾಂಟ್ ಒತ್ತಿ ಹೇಳಿದ, ಅದನ್ನವನ ಅನುಯಾಯಿಗಳೂ ಒಪ್ಪಿಕೊಂಡರು. ಭೌತದ್ರವ್ಯಕ್ಕಿಂತ ಮನಸ್ಸಿಗೆ ಪ್ರಾಮುಖ್ಯವಿದೆ, ಇದು ಕೊನೆಗೆ ಮನಸ್ಸು ಮಾತ್ರವೇ ಅಸ್ತಿತ್ವದಲ್ಲಿರುವುದು ಎಂಬ ನಿರ್ಣಯವನ್ನು ತಲುಪುತ್ತದೆ. ಉಪಯುಕ್ತತಾ ನೈತಿಕತೆಯನ್ನು ತೀವ್ರವಾಗಿ ವಿರೋಧಿಸುವ, ಮತ್ತು ಅದರ ಬದಲು ಅದನ್ನು ಅಮೂರ್ತ ತಾತ್ವಿಕ ವಾದಗಳಿಂದ ನಿದರ್ಶಿಸಬಹುದಾದ ವ್ಯವಸ್ಥೆಗಳ ಪರವಾದ ಪ್ರವೃತ್ತಿಯೊಂದಿದೆ. ಹಿಂದಿನ ಫ್ರೆಂಚ್ ಮತ್ತು ಇಂಗ್ಲಿಷ್ ತತ್ವಜ್ಞಾನಿಗಳಲ್ಲಿ ಕಾಣದಿದ್ದ ಒಂದು ಸೂಕ್ಷ್ಮತಾರ್ಕಿಕ ಧಾಟಿಯು ಇದರಲ್ಲಿದೆ; ಕ್ಯಾಂಟ್,

ಫ಼ಿಷ್ತೆ ಮತ್ತು ಹೆಗೆಲ್‌ಗಳು ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರಾಗಿದ್ದವರು, ಅವರು ಹೇಳುತ್ತಿದ್ದುದು ವಿದ್ವತ್ ಮಂಡಳಿಗೆ, ಹೀಗಾಗಿ ಅವರು ಹೊಸಬರನ್ನುದ್ದೇಶಿಸಿ ಮಾತನಾಡುವ ಮಹನೀಯರಷ್ಟೇ ಆಗಿರಲಿಲ್ಲ. ಅವರ ಪರಿಣಾಮಗಳು ಕೊಂಚ ಮಟ್ಟಿಗೆ ಕ್ರಾಂತಿಕಾರಕವಾಗಿದ್ದರೂ, ಅವರೆಂದಿಗೂ ಉದ್ದೇಶಪೂರ್ವಕವಾಗಿ ವಿಧ್ವಂಸಕ ಮನೋಭಾವದವರಲ್ಲ. ಫ಼ಿಷ್ತೆ ಮತ್ತು ಹೆಗೆಲ್ ದೇಶದ ರಕ್ಷಣೆಯ ಬಗ್ಗೆ ಖಂಡಿತವಾಗಿ ಕಾಳಜಿಯುಳ್ಳವರಾಗಿದ್ದರು. ಅವರೆಲ್ಲರ ಜೀವನಗಳೂ ಉದಾತ್ತವಾದವು ಮತ್ತು ಜ್ಞಾನಮಾರ್ಗದವು. ನೈತಿಕ ವಿಷಯಗಳ ಬಗೆಗಿನ ಅವರ ದೃಷ್ಟಿಕೋನಗಳು ಕೇವಲ ಸಾಂಪ್ರದಾಯಿಕವಾದವು. ಮತಧರ್ಮಶಾಸ್ತ್ರದಲ್ಲಿ ಅವರು ಹೊಸತನ್ನು ಹೇಳಿದರು, ಅವರು ಹಾಗೆ ಮಾಡಿದ್ದು ಮತಧರ್ಮದ ಹಿತದ ಕಾರಣದಿಂದಲೇ.

ಈ ಪೂರ್ವಪೀಠಿಕೆಯೊಡನೆ ನಾವೀಗ ಕ್ಯಾಂಟ್‌ನ ಅಧ್ಯಯನಕ್ಕೆ ತೊಡಗೋಣ.

ಬಿ. ಕ್ಯಾಂಟ್‌ನ ತಾತ್ವಿಕತೆಯ ರೂಪುರೇಷೆಗಳು

ಇಮ್ಮಾನ್ಯುಯಲ್ ಕ್ಯಾಂಟ್ (೧೭೨೪-೧೮೦೪) ಅನ್ನು ಸಾಮಾನ್ಯವಾಗಿ ಆಧುನಿಕ ತತ್ವಜ್ಞಾನಿಗಳಲ್ಲಿ ಅತ್ಯಂತ ಶ್ರೇಷ್ಠನೆಂದು ಪರಿಗಣಿಸಲಾಗುತ್ತದೆ. ಈ ಬೆಲೆಗಟ್ಟುವಿಕೆಯನ್ನು ನಾನೇ ಒಪ್ಪಿಕೊಳ್ಳುವುದಿಲ್ಲ, ಆದರೆ ಅವನ ಹಿರಿತನವನ್ನು ಪರಿಗಣಿಸದಿದ್ದರೆ ಮೂರ್ಖತನವಾಗುತ್ತದೆ.

ತನ್ನ ಜೀವಮಾನಪರ್ಯಂತ ಕ್ಯಾಂಟ್ ಪೂರ್ವ ಪ್ರಷ್ಯಾದ ಕೋನಿಂಗ್ಸ್‌ಬರ್ಗ್‌ನಲ್ಲಿಯೋ ಅದರ ಹತ್ತಿರವೋ ವಾಸಿಸುತ್ತಿದ್ದ. ಅವನ ಬಾಹ್ಯ ಜೀವನವು ಶಿಕ್ಷಣಸಂಬಂಧಿಯಾದುದು, ಏಳು ವರ್ಷಗಳ ಯುದ್ಧ (ಈ ಅವಧಿಯಲ್ಲಿಯೆ ರಷ್ಯಾವು ಪೂರ್ವ ಪ್ರಷ್ಯಾದ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡಿದ್ದು), ಫ್ರೆಂಚ್ ಕ್ರಾಂತಿ ಮತ್ತು ನೆಪೋಲಿಯನ್ ಆಳ್ವಿಕೆಯ ಮೊದಲ ಭಾಗದಲ್ಲಿ ಬದುಕಿದ್ದರೂ, ಯಾವುದೇ ಏರುಪೇರುಗಳಿಲ್ಲದ್ದು. ಅವನು ಶಿಕ್ಷಣ ಹೊಂದಿದ್ದು ಲೀಬ್‌ನಿಜ್ ತತ್ವಜ್ಞಾನದ ವೂಲ್ಫಿಯನ್ ಆವೃತ್ತಿಯಲ್ಲಿಯಾದರೂ ಎರಡು ಪ್ರಭಾವಗಳಿಂದಾಗಿ ಅವನು ಅದನ್ನು ಕೈಬಿಟ್ಟ: ರೂಸೋ ಮತ್ತು ಹ್ಯೂಮ್. ಕಾರಣಾತ್ಮಕತೆಯ ಪರಿಕಲ್ಪನೆಯ ಟೀಕೆಯಿಂದಾಗಿ ಹ್ಯೂಮ್ ತನ್ನನ್ನು ಮತತಾತ್ವಿಕ ನಿದ್ರೆಯಿಂದ ಎಚ್ಚರಿಸಿದ, ಅವನು ಹಾಗೆಂದು ಹೇಳಿಕೊಳ್ಳುತ್ತಾನೆ. ಆದರೆ ಈ ಎಚ್ಚರವು ಕೇವಲ ತಾತ್ಕಾಲಿಕವಾದದ್ದು, ಬಹು ಬೇಗ ಮತ್ತೆ ನಿದ್ರಾಕಾರಕವನ್ನು ಕಂಡುಕೊಂಡು ಮತ್ತೆ ನಿದ್ದೆಗೆ ಜಾರಿದ. ಕ್ಯಾಂಟ್‌ನ ದೃಷ್ಟಿಯಲ್ಲಿ ಹ್ಯೂಮ್ ತಾನು ಅಲ್ಲಗಳೆಯಬೇಕಾದ ವಿರೋಧಿಯಂತೆ ಕಾಣಿಸಿದ, ಆದರೆ ರೂಸೋನ ಪ್ರಭಾವ ತುಂಬ ಗಾಢವಾಗಿತ್ತು. ಕ್ಯಾಂಟ್ ಕ್ರಮಬದ್ಧ ಅಭ್ಯಾಸವಿದ್ದವನು, ಅವನು ವಿಹಾರಕ್ಕಾಗಿ ಹೊರಟರೆ ನೋಡುತ್ತಿದ್ದ ಜನರು ತಮ್ಮ ಗಡಿಯಾರಗಳನ್ನು ನೋಡಿಕೊಳ್ಳುತ್ತಿದ್ದರಂತೆ;

ಆದರೆ ಒಂದು ಸಂದರ್ಭದಲ್ಲಿ ಮಾತ್ರ ಅವನ ಅಭ್ಯಾಸದಲ್ಲಿ ಕೆಲವು ದಿನಗಳ ಕಾಲ ಏರುಪೇರಾಯಿತು; ಇದು ಆದದ್ದು ಅವನು 'ಎಮಿಲಿ'ಯನ್ನು ಓದುತ್ತಿದ್ದ ಅವಧಿ. ತಾನು ರೂಸೋನ ಪುಸ್ತಕಗಳನ್ನು ಹಲವಾರು ಬಾರಿ ಓದಬೇಕಾಗಿದೆ, ಯಾಕೆಂದರೆ ಮೊದಲನೆಯ ಓದು ಅವನ ಶೈಲಿಯನ್ನು ಗಮನಿಸಿ ವಿಷಯವನ್ನು ಮರೆಯುವಂತೆ ಮಾಡುತ್ತದೆ. ಅವನು ಬೆಳೆದದ್ದು ಗಾಢ ಭಕ್ತಿಯ ವಾತಾವರಣದಲ್ಲಾದರೂ, ಅವನು ರಾಜಕೀಯ ಮತ್ತು ಮತಧರ್ಮಶಾಸ್ತ್ರಗಳ ವಿಷಯದಲ್ಲಿ ಉದಾತ್ತವಾದಿಯಾಗಿದ್ದ. ಅವನು ಭೀತಿಪ್ರಭುತ್ವದವರೆಗಿನ (ರೀನ್ ಆಫ್ ಟೆರರ್) ಫ್ರೆಂಚ್ ಕ್ರಾಂತಿಯ ಬಗ್ಗೆ ಸಹಾನುಭೂತಿ ಹೊಂದಿದ್ದ, ಮತ್ತು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಹೊಂದಿದ್ದ. ನಾವು ಮುಂದೆ ನೋಡುವಂತೆ, ಅವನ ತಾತ್ವಿಕತೆಯು ಮತಧರ್ಮಶಾಸ್ತ್ರ ಪ್ರಣೀತ ನಿರ್ದೇಶನಗಳಿಗೆ ವಿರುದ್ಧವಾಗಿ ಹೃದಯನ್ನು ಉದ್ದೇಶಿಸುವಂಥದು; ಅದನ್ನು ಸ್ವಲ್ಪ ಅತಿಶಯೋಕ್ತಿಯಿಂದ ಹೇಳುವುದಾದರೆ, ಸಾವೋಯಾರ್ಡ್ ವಿಕರ್‌ನ ಪ್ರೌಢ ಆವೃತ್ತಿ ಎಂದು ಕರೆಯಬಹುದು. ಪ್ರತಿಯೊಬ್ಬ ವ್ಯಕ್ತಿಯೂ ತನ್ನಲ್ಲಿ ತಾನು ಪರಿಪೂರ್ಣ ಎಂದು ಭಾವಿಸಬೇಕೆಂಬ ಅವನ ಸಿದ್ಧಾಂತವು ಮಾನವನ ಹಕ್ಕುಗಳ ಸಿದ್ಧಾಂತದ ಮತ್ತೊಂದು ರೂಪ; ಅವನ ಸ್ವಾತಂತ್ರ್ಯಪ್ರೇಮವು (ಮಕ್ಕಳ ಹಾಗೂ ವಯಸ್ಕರ ಬಗ್ಗೆ) 'ವ್ಯಕ್ತಿಯ ಕ್ರಿಯೆಗಳು ಮತ್ತೊಬ್ಬನ ಇಚ್ಛೆಗನುಗುಣವಾಗಿರಬೇಕು ಎಂಬುದಕ್ಕಿಂತ ಭಯಾನಕವಾದುದು ಮತ್ತೊಂದಿರಲಾರದು' ಎಂಬ ಅವನ ಹೇಳಿಕೆಯಲ್ಲಿ ಕಾಣಬರುತ್ತದೆ.

ಕ್ಯಾಂಟ್‌ನ ಮೊದಲ ಕೃತಿಗಳು ತತ್ವಜ್ಞಾನಕ್ಕಿಂತಲೂ ವಿಜ್ಞಾನಕ್ಕೆ ಹೆಚ್ಚು ಸಂಬಂಧಿಸಿದವು. ಲಿಸ್ಬನ್‌ನ ಭೂಕಂಪದ ಬಳಿಕ ಅವನು ಭೂಕಂಪ ಸಿದ್ಧಾಂತದ ಬಗ್ಗೆ ಬರೆದ; ಗಾಳಿಯ ಬಗ್ಗೆ ಗ್ರಂಥವೊಂದನ್ನು ರಚಿಸಿದ, ಯೂರೋಪ್‌ನ ಪಶ್ಚಿಮ ಮಾರುತವು ತೇವದಿಂದ ಕೂಡಿರಲು ಅದು ಅಟ್ಲಾಂಟಿಕ್ ಅನ್ನು ಹಾದು ಬರುವುದೇ ಕಾರಣವೇ ಎಂಬ ಬಗ್ಗೆ ಕಿರುಲೇಖನವೊಂದನ್ನು ಬರೆದ. ಅವನಿಗೆ ತುಂಬ ಆಸಕ್ತಿ ಕೆರಳಿಸಿದ್ದುದು ಪ್ರಾಕೃತಿಕ ಭೂಗೋಳ.

ಅವನ ವಿಜ್ಞಾನ ಬರವಣಿಗೆಗಳಲ್ಲಿ ಅತ್ಯಂತ ಪ್ರಮುಖವಾದುದೆಂದರೆ ಅವನ 'ಜನರಲ್ ನ್ಯಾಚುರಲ್ ಹಿಸ್ಟರಿ ಅಂಡ್ ಥಿಯರಿ ಆಫ್ ಹೆವನ್ಸ್' (೧೭೫೫) ಎಂಬುದು, ಅದರಲ್ಲಿ ಲಾಪ್ಲಾಸ್‌ನ ನೀಹಾರಿಕಾ ಸಿದ್ಧಾಂತ (ನೆಬ್ಯುಲರ್ ಹೈಪಾಥೆಸಿಸ್) ಮುನ್‌ಸೂಚನೆ ಕಾಣುತ್ತದೆ, ಮತ್ತು ಸೌರವ್ಯೂಹದ ಆದಿಯ ಬಗ್ಗೆ ಸಾಧ್ಯತೆಯೊಂದನ್ನು ಮಂಡಿಸುತ್ತದೆ. ಈ ಕೃತಿಯ ಕೆಲವು ಭಾಗಗಳು ಅದ್ಭುತ; ಮಿಲ್ಟನ್ ಮಾದರಿಯ ಭವ್ಯತೆಯುಳ್ಳವು. ಫಲಭರಿತ ಆಧಾರಕಲ್ಪನೆಯನ್ನು ಸೃಷ್ಟಿಸುವ ಗುಣವುಳ್ಳದ್ದು, ಆದರೆ ಲಾಪ್ಲಾಸ್ ಮಾಡಿದಂತೆ ಅದರ ಸಮರ್ಥನೆಗೆ ಗಂಭೀರ ವಾದಗಳನ್ನು ಮಂಡಿಸಲಿಲ್ಲ. ಕೆಲವು ಭಾಗಗಳು ಕಲ್ಪನಾತ್ಮಕವಾಗಿವೆ, ಉದಾಹರಣೆಗೆ, ಎಲ್ಲ ಗ್ರಹಗಳಲ್ಲಿಯೂ

ಜನರಿದ್ದಾರೆ ಎಂಬ, ಅತ್ಯಂತ ದೂರದ ಗ್ರಹಗಳಲ್ಲಿ ಅತ್ಯಂತ ಶ್ರೇಷ್ಠ ಜೀವಿಗಳಿದ್ದಾರೆ ಎಂಬ ಸಿದ್ಧಾಂತಗಳು. ಭೂಮಿಯ ಬಗೆಗಿನ ಅದರ ವಿನಯವು ಪ್ರಶಂಸಾರ್ಹವಾದುದಾದರೂ, ಅದಕ್ಕೆ ಯಾವ ವೈಜ್ಞಾನಿಕ ಆಧಾರಗಳನ್ನೂ ಅವನು ನೀಡುವುದಿಲ್ಲ.

ಮುಂಚೆಯೋ ಆಮೇಲೋ ಅವನು ಸಂದೇಹವಾದಿಗಳ ವಾದಗಳಿಂದ ಕೋಟಲೆಗೊಳಗಾದಾಗ 'ಡ್ರೀಮ್ಸ್ ಆಫ್ ದ ಘೋಸ್ಟ್-ಸೀಯರ್, ಇಲ್ಲಸ್ಟ್ರೇಟೆಡ್ ಬೈ ದ ಡ್ರೀಮ್ಸ್ ಆಫ್ ಮೆಟಫಿಸಿಕ್ಸ್' (೧೭೬೬) ಎಂಬ ಕೌತುಕಪೂರ್ಣ ಗ್ರಂಥವೊಂದನ್ನು ಬರೆದ. ದೆವ್ವ-ಋಷಿ ಎಂದರೆ ಸ್ವೀಡನ್‌ಬೊರ್ಗ್, ನಿಗೂಢ ವ್ಯವಸ್ಥೆಯನ್ನು ಅವನು ಜಗತ್ತಿಗೆ ದೊಡ್ಡ ಕೃತಿಯೊಂದರಲ್ಲಿ ಪರಿಚಯಿಸಿದ್ದ, ಅದರ ನಾಲ್ಕು ಪ್ರತಿಗಳು ಮಾತ್ರ ಮಾರಾಟವಾಗಿದ್ದವು, ಅವರಲ್ಲಿ ಮೂವರು ಅಜ್ಞಾತರಾದರೆ, ನಾಲ್ಕನೆಯವನು ಕ್ಯಾಂಟ್. ಅರ್ಧ ಗಂಭೀರವಾಗಿ ಅರ್ಧ ತಮಾಷೆಯಿಂದ ಹೇಳುವುದೆಂದರೆ, ಸ್ವೀಡನ್‌ಬೊರ್ಗ್ ವ್ಯವಸ್ಥೆಯು ಅದ್ಭುತವಾದುದು, ಅದು ಸಾಂಪ್ರದಾಯಿಕ ಮತಧರ್ಮಶಾಸ್ತ್ರವಲ್ಲದೆ ಬೇರೆಯಲ್ಲ ಎಂದು. ಆದರೆ ಅವನೇನೂ ಸ್ವೀಡನ್‌ಬೊರ್ಗ್‌ನನ್ನು ಪೂರ್ತಿ ತಿರಸ್ಕಾರದಿಂದ ಕಾಣುವುದಿಲ್ಲ. ಇದ್ದರೂ ಬರವಣಿಗೆಗಳಲ್ಲಿ ಕಾಣಿಸಿಕೊಳ್ಳದಿದ್ದ ಅವನ ನಿಗೂಢ ಭಾಗವು ಸ್ವೀಡನ್‌ಬೊರ್ಗ್‌ನನ್ನು ಮೆಚ್ಚಿಕೊಂಡಿತು, ಅವನು ಅವನನ್ನು 'ಭವ್ಯ' ಎಂದು ಹೊಗಳುತ್ತಾನೆ.

ತನ್ನ ಕಾಲದ ಮಿಕ್ಕೆಲ್ಲರಂತೆ ಅವನೂ ಭವ್ಯವೂ ಸುಂದರವೂ ಆದುದರ ಬಗ್ಗೆ ಬರೆದ. ರಾತ್ರಿ ಭವ್ಯ, ಹಗಲು ಸುಂದರ; ಸಮುದ್ರ ಭವ್ಯ, ಭೂಮಿ ಸುಂದರ; ಗಂಡಸು ಭವ್ಯ, ಹೆಂಗಸು ಸುಂದರ ಮುಂತಾದವು.

'ದ ಎನ್‌ಸೈಕ್ಲೋಪೀಡಿಯ ಬ್ರಿಟಾನಿಕ' ಈ ರೀತಿ ಅಭಿಪ್ರಾಯಪಡುತ್ತದೆ: 'ಅವನು ಮದುವೆಯೇ ಆಗದಿದ್ದರಿಂದ, ತನ್ನ ಓದುವ ಹವ್ಯಾಸವನ್ನು ಕೊನೆಯವರೆಗೂ ಉಳಿಸಿಕೊಂಡ.' ಈ ಲೇಖನದ ಕರ್ತೃವು ಅವಿವಾಹಿತನೋ ವಿವಾಹಿತನೋ ತಿಳಿದಿಲ್ಲ.

ಕ್ಯಾಂಟ್‌ನ ಅತ್ಯಂತ ಪ್ರಮುಖ ಕೃತಿ ಎಂದರೆ 'ದ ಕ್ರಿಟೀಕ್ ಆಫ್ ಪ್ಯೂರ್ ರೀಸನ್' (ಮೊದಲ ಮುದ್ರಣ, ೧೭೮೧; ಎರಡನೇ ಮುದ್ರಣ, ೧೭೮೭). ಈ ಪುಸ್ತಕದ ಉದ್ದೇಶವೆಂದರೆ, ನಮ್ಮ ಯಾವುದೇ ಜ್ಞಾನವೂ ಅನುಭವಕ್ಕೆ ಮಿಗಿಲಾಗಲಾರದಾದರೂ, ಅದು ಭಾಗಶಃ ಪೂರ್ವಕಲ್ಪಿತ, ಮತ್ತು ಅನುಭವದಿಂದ ಊಹಿಸದ್ದು ಎಂದು ಸಾಧಿಸುವುದು. ಪೂರ್ವಕಲ್ಪಿತವಾದ ನಮ್ಮ ಜ್ಞಾನವು, ಅವನ ಪ್ರಕಾರ, ಬರಿ ತರ್ಕವನ್ನು ಮಾತ್ರವಲ್ಲ, ತರ್ಕದಲ್ಲಿ ಸೇರಿಸಬಹುದಾದ ಅಥವಾ ಸಾಧಿಸಬಹುದಾದ ಬಹಳಷ್ಟನ್ನು ಹೊಂದಿರುತ್ತದೆ. ಲೀಬ್‌ನಿಝ್‌ನಲ್ಲಿ ಗೊಂದಲಪೂರ್ಣವಾಗಿರುವ ಈ ಎರಡು ವ್ಯತ್ಯಾಗಳನ್ನು ಅವನು

ಬೇರೆಯಾಗಿಸುತ್ತಾನೆ. ಒಂದೆಡೆ, 'ವಿಶ್ಲೇಷಣಾತ್ಮಕ' ಮತ್ತು 'ಸಂಶ್ಲೇಷಣಾತ್ಮಕ' ಪ್ರತಿಪಾದನೆಗಳಲ್ಲಿನ ವ್ಯತ್ಯಾಸ; ಮತ್ತೊಂದೆಡೆ, 'ಪೂರ್ವಕಲ್ಪಿತ' ಮತ್ತು 'ಅನುಭವಾತ್ಮಕ' ಪ್ರತಿಪಾದನೆಗಳ ವ್ಯತ್ಯಾಸ. ಈ ಎರಡೂ ವ್ಯತ್ಯಾಗಳ ಬಗ್ಗೆ ಒಂದಷ್ಟು ವಿವರವಾಗಿ ಹೇಳಬೇಕು.

ಒಂದು 'ವಿಶ್ಲೇಷಣಾತ್ಮಕ' ಪ್ರತಿಪಾದನೆಯಲ್ಲಿ ವಿಶೇಷಣವು ಕರ್ತೃವಿನ ಭಾಗವಾಗಿರುತ್ತದೆ; ಉದಾಹರಣೆಗೆ, 'ಎತ್ತರವಾದ ವ್ಯಕ್ತಿಯು ವ್ಯಕ್ತಿ', ಅಥವಾ 'ಸರ್ವಬಾಹುತ್ರಿಭುಜ ಒಂದು ತ್ರಿಭುಜ'. ಅಂತಹ ಪ್ರತಿಪಾದನೆಗಳು ವಿರೋಧಗಳ ನಿಯಮದಿಂದ ಸಾಧಿತವಾಗುತ್ತವೆ. ಎತ್ತರದ ಮನುಷ್ಯ ಮನುಷ್ಯನಲ್ಲ ಎನ್ನುವುದು ಸ್ವವಿರೋಧದ್ದು. 'ಸಂಶ್ಲೇಷಣಾತ್ಮಕ' ಪ್ರತಿಪಾದನೆಯು ವಿಶ್ಲೇಷಣಾತ್ಮಕವಲ್ಲದ್ದು. ನಮ್ಮ ಅನುಭವಗಳ ಮೂಲಕ ಮಾತ್ರ ಪಡೆಯುವ ಪ್ರತಿಪಾದನೆಗಳೆಲ್ಲ ಸಂಶ್ಲೇಷಣಾತ್ಮಕವೇ. ಪರಿಕಲ್ಪನೆಗಳ ಕೇವಲ ವಿಶ್ಲೇಷಣೆಯಿಂದ ನಾವು 'ಮಂಗಳವಾರ ಮಳೆಯಾದ ದಿನವಾಗಿತ್ತು' ಅಥವಾ 'ನೆಪೋಲಿಯನ್ ಮಹಾ ದಳಪತಿಯಾಗಿದ್ದ' ಎಂಬಂತಹ ಸತ್ಯಗಳನ್ನು ಕಂಡಿಹಿಡಿಯಲಾಗುವುದಿಲ್ಲ. ಆದರೆ ಕ್ಯಾಂಟ್, ಲೀಬ್‌ನಿಜ್ ಮತ್ತಿತರ ಹಿಂದಿನ ತತ್ವಜ್ಞಾನಿಗಳಿಗೆ ವ್ಯತಿರಿಕ್ತವಾಗಿ, ಸಂಶ್ಲೇಷಣಾತ್ಮಕ ಪ್ರತಿಪಾದನೆಗಳೆಲ್ಲ ಅನುಭವಗಳ ಮೂಲಕ ಮಾತ್ರ ಪಡೆಯುವಂಥವು ಎಂಬುದರ ವ್ಯತಿರೇಕವನ್ನು (ಕಾನ್‌ವರ್ಸ್) ಒಪ್ಪುವುದಿಲ್ಲ. ಇದು ನಮ್ಮನ್ನು ಮೇಲಿನ ಎರಡನೆಯ ವ್ಯತ್ಯಾಸದ ಕಡೆಗೆ ಕರೆದೊಯ್ಯುತ್ತದೆ.

'ಅನುಭವೈಕ' ಪ್ರತಿಪಾದನೆಯು ಇಂದ್ರಿಯಗ್ರಹಿಕೆಯು, ಅದು ನಮ್ಮದಾಗಿರಬಹುದು ಅಥವಾ ನಾವು ಒಪ್ಪುವ ಬೇರಾರದೋ ಆಗಿರಬಹುದು, ಸಹಾಯದ ಹೊರತಾಗಿ ಬೇರಾವುದರಿಂದಲೂ ತಿಳಿಯಲಾಗುವುದಿಲ್ಲ. ಚರಿತ್ರೆ ಮತ್ತು ಭೂಗೋಳಗಳ ವಸ್ತುಸ್ಥಿತಿಗಳು ಈ ಬಗೆಯವು; ಅಂತೆಯೇ, ಸತ್ಯದ ಬಗೆಗಿನ ನಮ್ಮ ಜ್ಞಾನವು ಪರಿವೀಕ್ಷಿತ ದತ್ತಾಂಶಗಳನ್ನು ಆಧರಿಸಿರುವ ಸಂದರ್ಭಗಳಲ್ಲಿನ ವಿಜ್ಞಾನ ನಿಯಮಗಳು. ಮತ್ತೊಂದೆಡೆ, 'ಪೂರ್ವಕಲ್ಪಿತ' ಪ್ರತಿಪಾದನೆಯು, ಅನುಭವದ ಮೂಲಕ ಹೊರತರಬಹುದಾದರೂ, ನಮಗೆ ಗೊತ್ತಾದಾಗ, ಅನುಭವದ ಹೊರತಾಗಿ ಅದಕ್ಕೊಂದು ಆಧಾರವಿರುವುದೆಂದು ಗೊತ್ತಾಗುವಂಥದು. ಅಂಕಗಣಿತವನ್ನು ಕಲಿಯುತ್ತಿರುವ ಮಗುವು ಕೈಗಳಲ್ಲಿ ಎರಡೆರಡು ಗೋಲಿಗಳನ್ನು ಹಿಡಿದುಕೊಂಡು ಒಟ್ಟಾರೆ ನಾಲ್ಕು ಗೋಲಿಗಳಿರುವುದನ್ನು ಅನುಭವಿಸುವುದರ ಮೂಲಕ ಕಲಿಯುವಂತೆ ಮಾಡಬಹುದು. ಆದರೆ 'ಎರಡು ಎರಡು ಸೇರಿದರೆ ನಾಲ್ಕು' ಎಂಬ ಸಾಮಾನ್ಯ ಪ್ರತಿಪಾದನೆಯನ್ನು ಅವನು ಗ್ರಹಿಸಿದ ಬಳಿಕ ಅವನಿಗೆ ನಿದರ್ಶನಗಳ ಮೂಲಕ ಸಾಬೀತುಪಡಿಸುವುದು ಬೇಕಾಗುವುದಿಲ್ಲ. ಈ ಪ್ರತಿಪಾದನೆಯಲ್ಲಿ, ನಿಗಮನವು ಸಾಮಾನ್ಯ ನಿಯಮಕ್ಕೆ ನೀಡಲಾರದ ಒಂದು ನಿಖರತೆಯಿದೆ. ಶುದ್ಧ ಗಣಿತದ ಎಲ್ಲ

ಪ್ರತಿಪಾದನೆಗಳೂ ಈ ಅರ್ಥದಲ್ಲಿ ಪೂರ್ವಕಲ್ಪಿತವೇ.

ಕಾರಣಾತ್ಮಕ ನಿಯಮವು ವಿಶ್ಲೇಷಣಾತ್ಮಕವಲ್ಲ ಎಂದು ಹ್ಯೂಮ್ ಸಾಧಿಸಿದ್ದ, ಹಾಗೂ ಅದರ ಸತ್ಯಾಸತ್ಯತೆಯನ್ನು ನಾವು ಊಹಿಸಲು ಸಾಧ್ಯವಿಲ್ಲ ಎಂದಿದ್ದ. ಅದು ಸಂಶ್ಲೇಷಣಾತ್ಮಕ ಎಂಬುದನ್ನೇನೋ ಕ್ಯಾಂಟ್ ಒಪ್ಪಿಕೊಂಡನಾದರೂ ಅದು ಪೂರ್ವಕಲ್ಪಿತವಾಗಿ ತಿಳಿದಿರುವಂಥದು ಎಂದು ಹೇಳಿದ. ಅಂಕಗಣಿತ ಮತ್ತು ಜ್ಯಾಮಿತಿಗಳು ಸಂಶ್ಲೇಷಣಾತ್ಮಕವಾದವೆಂದು ಒಪ್ಪಿಕೊಂಡರೂ, ಅವೂ ಪೂರ್ವಕಲ್ಪಿತವೇ ಎಂದು ಹೇಳಿದ. ಹೀಗಾಗಿ ಅವನು ಈ ಸಮಸ್ಯೆಯನ್ನು ಈ ರೀತಿ ರೂಪಿಸಲು ಸಾಧ್ಯವಾಯಿತು:

ಸಂಶ್ಲೇಷಣಾತ್ಮಕ ತೀರ್ಮಾನಗಳು ಪೂರ್ವಕಲ್ಪಿತವಾಗಲು ಹೇಗೆ ಸಾಧ್ಯ?

ತನ್ನ ಪರಿಣಾಮಗಳೊಂದಿಗಿನ ಈ ಪ್ರಶ್ನೆಗೆ ಉತ್ತರವು 'ದ ಕ್ರಿಟೀಕ್ ಆಫ್ ಪ್ಯೂರ್ ರೀಸನ್' ಗ್ರಂಥದ ವಿಷಯ.

ಈ ಸಮಸ್ಯೆಗೆ ಕ್ಯಾಂಟ್ ನೀಡುವ ಪರಿಹಾರದ ಬಗ್ಗೆ ಅವನಿಗೆ ಅಪಾರ ಆತ್ಮವಿಶ್ವಾಸವಿತ್ತು. ಅದರ ಅನ್ವೇಷಣೆಯಲ್ಲಿ ಅವನು ಹನ್ನೆರಡು ವರ್ಷ ಕಳೆದಿದ್ದ; ಆದರೆ ತನ್ನ ಸಿದ್ಧಾಂತವು ಒಂದು ಸ್ಪಷ್ಟ ರೂಪ ತಳೆದ ಮೇಲೆ ಇಡೀ ಈ ದೀರ್ಘ ಪುಸ್ತಕವನ್ನು ಬರೆಯಲು ಅವನು ತೆಗೆದುಕೊಂಡದ್ದು ಕೆಲವೇ ತಿಂಗಳುಗಳನ್ನು. ಮೊದಲ ಮುದ್ರಣದ ಪೀಠಿಕೆಯಲ್ಲಿ ಅವನು ಹೀಗೆನ್ನುತ್ತಾನೆ: 'ಪರಿಹಾರ ಸಿಗದ ಅಥವಾ ಕನಿಷ್ಠ ಪಕ್ಷ ಪರಿಹಾರದ ಕೀಲಿಕೈ ಆಗಲಿ ಸಿಗದ ಒಂದೇ ಒಂದು ತತ್ವಜಿಜ್ಞಾಸಾತ್ಮಕ ಸಮಸ್ಯೆಯೂ ಉಳಿದಿಲ್ಲ ಎಂದು ನಾನು ಖಡಾಖಂಡಿತವಾಗಿ ಘೋಷಿಸುತ್ತೇನೆ.' ಎರಡನೆಯ ಮುದ್ರಣದ ಪೀಠಿಕೆಯಲ್ಲಿ ಅವನು ತನ್ನನ್ನು ಕೊಪರ್ನಿಕಸ್‌ಗೆ ಹೋಲಿಸಿಕೊಳ್ಳುತ್ತಾನೆ, ಮತ್ತು ಹಾಗೆ ಮಾಡಿದ ನಂತರ, ತಾನು ತತ್ವಜ್ಞಾನದಲ್ಲಿ ಕೊಪರ್ನಿಕನ್ ಕ್ರಾಂತಿಯನ್ನು ಮಾಡಿದೆ ಎನ್ನುತ್ತಾನೆ.

ಕ್ಯಾಂಟ್‌ನ ಪ್ರಕಾರ, ಬಾಹ್ಯ ಜಗತ್ತು ಇಂದ್ರಿಯಗ್ರಾಹ್ಯ ಭೌತದ್ರವ್ಯಕ್ಕೆ ಕಾರಣವಾಗುತ್ತದೆ, ಆದರೆ ನಮ್ಮದೇ ಮನೋಸಲಕರಣೆಯು ಈ ಭೌತದ್ರವ್ಯವನ್ನು ಅವಕಾಶ ಮತ್ತು ಕಾಲಗಳಲ್ಲಿ ವ್ಯವಸ್ಥಿತವಾಗಿಸುತ್ತದೆ, ಹಾಗೂ ನಮ್ಮ ಅನುಭವಗಳನ್ನು ಅರ್ಥಮಾಡಿಕೊಳ್ಳಲು ಬೇಕಾದ ಪರಿಕಲ್ಪನೆಗಳನ್ನು ನೀಡುತ್ತದೆ. ನಮ್ಮ ಗ್ರಹಿಕೆಗಳಿಗೆ ಕಾರಣವಾಗುವ ವಸ್ತುಗಳು ತಮ್ಮಲ್ಲಿ ತಾವೇ ತಿಳಿಯಲಾರದವು; ಅವು ಅವಕಾಶ ಮತ್ತು ಕಾಲಗಳಲ್ಲಿಲ್ಲ, ಅವು ವಸ್ತುಗಳಲ್ಲ ಅಥವಾ ಕ್ಯಾಂಟ್ 'ವರ್ಗಗಳು' ಎಂದು ಕರೆಯುವ ಇತರ ಸಾಮಾನ್ಯ ಪರಿಕಲ್ಪನೆಗಳು ಅವುಗಳನ್ನು ಬಣ್ಣಿಸಲಾರವು. ಅವಕಾಶ ಮತ್ತು ಕಾಲಗಳು ವ್ಯಕ್ತಿನಿಷ್ಠವಾದವು, ನಮ್ಮ ಗ್ರಹಿಕೆಯ ಸಲಕರಣೆಯ ಭಾಗಗಳು. ಆದರೆ ಇದಿಷ್ಟರಿಂದಲೇ, ನಾವು ಅನುಭವಿಸುವುದೆಲ್ಲವೂ ಜ್ಯಾಮಿತಿ ಮತ್ತು ಕಾಲದ ವಿಜ್ಞಾನದಲ್ಲಿ ಬಳಕೆಯಾಗುವ ಲಕ್ಷಣಗಳನ್ನು ತೋರಿಸುತ್ತವೆ ಎಂದು ಖಚಿತವಾಗಿ

ಹೇಳಬಹುದು. ನೀವು ಸದಾ ನೀಲಿ ಕನ್ನಡಕಗಳನ್ನು ಹಾಕಿಕೊಂಡಿದ್ದರೆ, ಎಲ್ಲವನ್ನೂ ನೀಲಿಯಾಗಿ ಕಾಣುವುದರ ಬಗ್ಗೆ ನೀವು ಖಚಿತವಾಗಿರಬಹುದು (ಇದು ಕ್ಯಾಂಟ್ ಕೊಡುವ ನಿದರ್ಶನವಲ್ಲ). ಹಾಗೆಯೇ, ನೀವು ಮನಸ್ಸಿನಲ್ಲಿ ಸದಾ ಅವಕಾಶಬದ್ಧ ಕನ್ನಡಕಗಳನ್ನು ಹಾಕಿಕೊಳ್ಳುವುದರಿಂದಾಗಿ, ನೀವು ಪ್ರತಿಯೊಂದನ್ನೂ ಅವಕಾಶದಲ್ಲಿಯೇ ನೋಡುವುದರ ಬಗ್ಗೆ ಖಚಿತವಾಗಿರುತ್ತೀರಿ. ಹೀಗೆ, ಅನುಭವಿಸಿದ ಪ್ರತಿಯೊಂದರ ವಿಷಯದಲ್ಲಿಯೂ ಆದು ಸತ್ಯವಾಗಿರಬೇಕು ಎಂಬ ಅರ್ಥದಲ್ಲಿ ಜ್ಯಾಮಿತಿಯು 'ಪೂರ್ವಕಲ್ಪಿತ'ವಾದುದು; ಆದರೆ ನಮ್ಮ ಅನುಭವಕ್ಕೆ ಬಾರದ ವಿಷಯಗಳ ಬಗ್ಗೆಯೂ ಸತ್ಯವು ಹೀಗೆಯೇ ಇರುತ್ತದೆಂದು ಊಹಿಸಿಕೊಳ್ಳಲು ಯಾವುದೇ ಕಾರಣವಿಲ್ಲ.

ಅವಕಾಶ ಮತ್ತು ಕಾಲಗಳು ಪರಿಕಲ್ಪನೆಗಳಲ್ಲ ಎಂದು ಕ್ಯಾಂಟ್ ಹೇಳುತ್ತಾನೆ; ಅವು 'ಅಂತರ್ಬೋಧೆ'ಯ ರೂಪಗಳು. (ಇದರ ಜರ್ಮನ್ ಪದವು 'ಆನ್‌ಶ್‌ವಾಂಗ್', ಅದರ ವಾಚ್ಯಾರ್ಥವೆಂದರೆ 'ನೋಡುವುದು' ಅಥವಾ 'ನೋಟ' ಎಂದು. ಅಂತರ್ಬೋಧೆ ಎಂಬ ಪದವನ್ನು ಭಾಷಾಂತರದಲ್ಲಿ ಬಳಸಿದ್ದರೂ, ಇದು ಪೂರ್ತಿ ತೃಪ್ತಿಕರವಾದುದಲ್ಲ.) ಆದರೆ ಪೂರ್ವಕಲ್ಪಿತ ಪರಿಕಲ್ಪನೆಗಳೂ ಇವೆ; ಇವು ಹನ್ನೆರಡು 'ವರ್ಗಗಳು', ಆ ರೂಪಗಳನ್ನು ಕ್ಯಾಂಟ್ ಸಿಲೋಜಿಸಂನಿಂದ ಸಾಧಿಸಿಕೊಳ್ಳುತ್ತಾನೆ. ಹನ್ನೆರಡು ವರ್ಗಗಳನ್ನು ಮೂರರ ನಾಲ್ಕು ವಿಭಾಗಗಲ್ಲಿ ವರ್ಗೀಕರಿಸಲಾಗಿದೆ: (೧) ಪ್ರಮಾಣದ: ಐಕ್ಯ, ಬಹುತ್ವ, ಸಮಷ್ಟಿ; (೨) ಗುಣದ: ವಾಸ್ತವತೆ, ನೇತ್ಯಾತ್ಮಕತೆ, ಪರಿಮಿತಿ; (೩) ಸಂಬಂಧದ: ವಸ್ತು-ಮತ್ತು-ಆಕಸ್ಮಿಕ, ಕಾರಣ-ಕಾರ್ಯ, ಪರಸ್ಪರತೆ; (೪) ಪ್ರಕಾರತೆಯ: ಸಾಧ್ಯತೆ, ಅಸ್ತಿತ್ವ, ಆವಶ್ಯಕತೆ. ಅವಕಾಶ ಮತ್ತು ಕಾಲಗಳು ಹೇಗೋ ಅದೇ ಅರ್ಥದಲ್ಲಿ ಇವು ವ್ಯಕ್ತಿನಿಷ್ಠವಾದವು – ಅಂದರೆ, ನಮ್ಮ ಮನೋರಚನೆಯು ಎಂತಹುದೆಂದರೆ, ಅವು ನಮ್ಮ ಅನುಭವಕ್ಕೆ ಬರುವುದೆಲ್ಲಕ್ಕೂ ಅನ್ವಯಿಸುತ್ತವೆ, ಆದರೆ ಅವು ಅವುಗಳಿಗೇ ಅನ್ವಯಿಸುತ್ತವೆ ಎಂದು ಭಾವಿಸುವುದಕ್ಕೆ ನಮಗೆ ಯಾವುದೇ ಕಾರಣವಿಲ್ಲ. ಆದರೆ ಕಾರಣಕ್ಕೆ ಸಂಬಂಧಿಸಿದಂತೆ, ಒಂದು ಅಸಾಂಗತ್ಯ ತಲೆದೋರುತ್ತದೆ, ವಸ್ತುಗಳು ತಮ್ಮಲ್ಲಿ ತಾವು ಇಂದ್ರಿಯಗ್ರಹಿಕೆಯ ಕಾರಣಗಳು ಎಂದು ಕ್ಯಾಂಟ್ ಪರಿಗಣಿಸುತ್ತಾನೆ ಹಾಗೂ ಮುಕ್ತ ಇಚ್ಛಾಶಕ್ತಿಯು ಅವಕಾಶ ಮತ್ತು ಕಾಲಗಳಲ್ಲಿನ ಘಟನೆಗಳಿಗೆ ಕಾರಣ ಎಂದು ಭಾವಿಸುತ್ತಾನೆ. ಈ ಅಸಾಂಗತ್ಯವು ಕಣ್ತಪ್ಪಿನಿಂದಾದುದಲ್ಲ; ಅದು ಅವನ ವಿಧಾನದ ಒಂದು ಮುಖ್ಯ ಭಾಗವೇ ಆಗಿದೆ.

'ದ ಕ್ರಿಟೀಕ್ ಆಫ್ ಪ್ಯೂರ್ ರೀಸನ್'ನ ಬಹು ಭಾಗವು, ಅನುಭವಕ್ಕೆ ಬಾರದ ವಸ್ತುಗಳ ವಿಷಯದಲ್ಲಿ ಅವಕಾಶ ಮತ್ತು ಕಾಲ ಅಥವಾ ವರ್ಗಗಳನ್ನು ಅನ್ವಯಿಸುವುದರಿಂದ ಉಂಟಾಗುವ ತರ್ಕಾಭಾಸವನ್ನು ತೋರಿಸುವುದಕ್ಕೆ

ಮೀಸಲಾಗಿದೆ. ಇದು ನಡೆದಾಗ, ನಮಗೆ 'ಅಸಾಂಗತ್ಯ'ಗಳು (ಆಂಟಿನಾಮಿ) – ಅಂದರೆ, ಒಂದೊಂದನ್ನೂ ಮೇಲುನೋಟಕ್ಕೆ ಸಾಧಿಸಬಹುದಾದ ಪರಸ್ಪರ ವಿರುದ್ಧ ಪ್ರತಿಪಾದನೆಗಳಿಂದ – ತೊಂದರೆ ಕೊಡುತ್ತವೆ ಎಂದು ಕ್ಯಾಂಟ್ ಹೇಳುತ್ತಾನೆ. ಅಂಥ ನಾಲ್ಕು ಅಸಾಂಗತ್ಯಗಳನ್ನು ಕ್ಯಾಂಟ್ ನೀಡುತ್ತಾನೆ, ಪ್ರತಿಯೊಂದರಲ್ಲಿಯೂ ಪ್ರಮೇಯ ಮತ್ತು ಪ್ರತಿಪ್ರಮೇಯ (ಥೀಸಿಸ್ ಮತ್ತು ಆಂಟಿಥೀಸಿಸ್) ಗಳಿರುತ್ತವೆ.

ಮೊದಲನೆಯದರಲ್ಲಿ, ಪ್ರಮೇಯವು ಹೇಳುವುದೆಂದರೆ 'ಜಗತ್ತು ಕಾಲದಲ್ಲಿ ಒಂದು ಆದಿಯನ್ನು ಹೊಂದಿದೆ, ಮತ್ತು ಅವಕಾಶದ ವಿಷಯದಲ್ಲಿ ಸೀಮಿತವಾಗಿದೆ.' ಪ್ರತಿಪ್ರಮೇಯ ಹೀಗೆನ್ನುತ್ತದೆ: 'ಜಗತ್ತಿಗೆ ಆದಿಯಿಲ್ಲ, ಮತ್ತು ಅವಕಾಶದ ಪರಿಮಿತಿಯಿಲ್ಲ; ಅವಕಾಶ ಮತ್ತು ಕಾಲಗಳ ವಿಷಯದಲ್ಲಿ ಅದು ಅನಂತ.'

ಎರಡನೆಯ ಪ್ರತಿಪ್ರಮೇಯವು ಪ್ರತಿಯೊಂದು ಸಂಯೋಜಿತ ವಸ್ತುವೂ (ಕಾಂಪೋಸಿಟ್ ಥಿಂಗ್) ಸರಳ ಭಾಗಗಳಿಂದ ಆಗಿದೆ ಮತ್ತು ಆಗಿಲ್ಲ ಎಂದು ಸಾಧಿಸುತ್ತದೆ.

ಮೂರನೆಯ ಪ್ರಮೇಯವು ವಾದಿಸುವುದೆಂದರೆ, ಎರಡು ಬಗೆಯ ಕಾರಣಾತ್ಮಕತೆಗಳಿವೆ, ಒಂದು ಪ್ರಕೃತಿನಿಯಮಗಳಿಗೆ ಅನುಗುಣವಾದುದು, ಮತ್ತೊಂದು ಸ್ವಾತಂತ್ರ್ಯದ್ದು; ಪ್ರತಿಪ್ರಮೇಯದ ನಿಲವೆಂದರೆ, ಇರುವುದು ಪ್ರಕೃತಿನಿಯಮಗಳಿಗನುಗುಣವಾದ ಕಾರಣಾತ್ಮಕತೆ ಮಾತ್ರ ಎಂಬುದು.

ನಾಲ್ಕನೆಯ ಅಸಾಂಗತ್ಯವು ಆತ್ಯಂತಿಕ ಆವಶ್ಯಕತೆಯ ಅಸ್ತಿತ್ವವೊಂದಿದೆ ಮತ್ತು ಇಲ್ಲ ಎಂದು ಸಾಧಿಸುತ್ತದೆ.

ಕ್ರಿಟೀಕ್‌ನ ಈ ಭಾಗವು ಹೆಗೆಲ್ ಮೇಲೆ ಆಳವಾದ ಪ್ರಭಾವ ಬೀರಿತು, ಅವನ ದ್ವಂದ್ವಾತ್ಮಕವಾದವು ಸಂಪೂರ್ಣವಾಗಿ ಅಸಾಂಗತ್ಯಗಳ ನೆಲೆಯಲ್ಲೇ ಸಾಗುತ್ತದೆ.

ಇದರಲ್ಲಿನ ಪ್ರಸಿದ್ಧ ಭಾಗವೊಂದರಲ್ಲಿ ಕ್ಯಾಂಟ್, ದೇವರ ಅಸ್ತಿತ್ವದ ಬಗೆಗಿನ ಶುದ್ಧ ಬೌದ್ಧಿಕ ಸಾಕ್ಷ್ಯಗಳನ್ನು ಹುಡಿಗುಟ್ಟುತ್ತಾನೆ. ಅಲ್ಲದೆ, ದೇವರ ಅಸ್ತಿತ್ವದ ನಂಬಿಕೆಯ ಬಗ್ಗೆ ತನ್ನಲ್ಲಿ ಬೇರೆ ಕಾರಣಗಳಿವೆಯೆಂದು ಸ್ಪಷ್ಟಪಡಿಸುತ್ತಾನೆ; ಅವುಗಳನ್ನು ಮುಂದೆ 'ಕ್ರಿಟೀಕ್ ಆಫ್ ಪ್ರಾಕ್ಟಿಕಲ್ ರೀಸನ್' ಎಂಬ ಭಾಗದಲ್ಲಿ ಮಂಡಿಸುತ್ತಾನೆ. ಸದ್ಯಕ್ಕೆ ಅವನ ಉದ್ದೇಶ ಶುದ್ಧ ನೇತ್ಯಾತ್ಮಕವಾದುದು.

ದೇವರ ಅಸ್ತಿತ್ವವನ್ನು ಸ್ಥಿರೀಕರಿಸುವ ಶುದ್ಧ ವೈಚಾರಿಕತೆಯ ಮೂರು ಕಾರಣಗಳು ಮಾತ್ರ ಇವೆಯೆಂದು ಅವನು ಹೇಳುತ್ತಾನೆ; ಇವು ಮೂಲತಾತ್ವಿಕ (ಆಂಟೋಲಾಜಿಕಲ್) ಸಾಕ್ಷ್ಯ, ವಿಶ್ವಸೃಷ್ಟ್ಯಾತ್ಮಕ (ಕಾಸ್ಮೊಲಾಜಿಕಲ್) ಸಾಕ್ಷ್ಯ ಮತ್ತು ಭೌತಿಕ ಮತಧಾರ್ಮಿಕ (ಫಿಸಿಕೋ ಥಿಯೊಲಾಜಿಕಲ್) ಸಾಕ್ಷ್ಯ.

ಮೂಲತಾತ್ವಿಕ ಸಾಕ್ಷ್ಯವು ದೇವರನ್ನು ಅತ್ಯಂತ ವಾಸ್ತವ ಪರಮ ಅಸ್ತಿತ್ವ (ಎನ್ಸ್ ರೆಯಲಿಸ್ಸಿಮಮ್), ಅಂದರೆ ಅಸ್ತಿತ್ವಕ್ಕೆ ಸೇರಿದ ಎಲ್ಲ ವಿಶೇಷಣಗಳ ಕರ್ತೃ

ಎಂದು ಸೂತ್ರೀಕರಿಸುತ್ತಾನೆ. ಈ ಸಾಕ್ಷ್ಯವನ್ನು ಸಿಂಧುವೆಂದು ಪರಿಗಣಿಸುವವರು, ಅಸ್ತಿತ್ವ ಎನ್ನುವುದು ಎಂಥ ವಿಶೇಷಣವೆಂದರೆ ಈ ಕರ್ತೃವಿಗೆ 'ಅಸ್ತಿತ್ವ' ಎಂಬ ವಿಶೇಷಣ ಇರಲೇಬೇಕು ಎಂಬಂಥದು, ಅಂದರೆ ಅಸ್ತಿತ್ವದಲ್ಲಿರಲೇಬೇಕು, ಎಂದು ವಾದಿಸುತ್ತಾರೆ. ನಾನು ಬರಿ ಕಲ್ಪಿಸಿಕೊಳ್ಳುವ ಒಂದು ನೂರು ಥೇಲರ್ (ಬೆಳ್ಳಿಯ ನಾಣ್ಯ)ಕ್ಕೆ ನಿಜವಾದ ಒಂದು ನೂರು ಥೇಲರ್‌ಗಳ ವಿಶೇಷಣಗಳು ಇರಬಹುದು ಎನ್ನುತ್ತಾನೆ.

ವಿಶ್ವಸೃಷ್ಟ್ಯಾತ್ಮಕ ಸಾಕ್ಷ್ಯವು ಹೀಗಿದೆ: ಯಾವುದಾದರೊಂದು ಅಸ್ತಿತ್ವದಲ್ಲಿದ್ದರೆ, ಆಗ ಆವಶ್ಯಕವಾದ ಪರಮ ಅಸ್ತಿತ್ವವೊಂದಿರಲೇಬೇಕು; ನಾನು ಅಸ್ತಿತ್ವದಲ್ಲಿದ್ದೇನೆ ಎಂಬುದು ನನಗೆ ಗೊತ್ತು; ಹೀಗಾಗಿ ಆವಶ್ಯಕ ಪರಮ ಅಸ್ತಿತ್ವವೊಂದಿರಬೇಕು, ಮತ್ತು ಇದು ಅತ್ಯಂತ ವಾಸ್ತವ ಪರಮ ಅಸ್ತಿತ್ವ. ಈ ವಾದದ ಕೊನೆಯ ಹಂತವು ಮತ್ತೆ ಮೂಲತಾತ್ವಿಕ ವಾದವೇ, ಹೀಗಾಗಿ ಈಗಾಗಲೇ ಹೇಳಿರುವುದನ್ನದು ಅಲ್ಲಗಳೆಯುತ್ತದೆ ಎಂಬುದು ಕ್ಯಾಂಟ್‌ನ ನಿಲವು.

ಭೌತಿಕ ಮತಧಾರ್ಮಿಕ ಸಾಕ್ಷ್ಯವು ತತ್ವಜಿಜ್ಞಾಸಾತ್ಮಕ ವೇಷದಲ್ಲಿನ ಚಿರಪರಿಚಿತವಾದ ರಚನೆಯಿಂದ ರಚಕನ ಕಲ್ಪನೆಯ ವಾದ (ಆರ್ಗ್ಯುಮೆಂಟ್ ಫ್ರಂ ಡಿಸೈನ್). ಉದ್ದೇಶದ ಸಾಕ್ಷ್ಯವಾಗಿ ವಿಶ್ವವು ವ್ಯವಸ್ಥೆಯೊಂದನ್ನು ತೋರ್ಪಡಿಸುತ್ತದೆ ಎಂಬುದು ಅದರ ನಿಲವು. ಈ ವಾದವನ್ನು ಕ್ಯಾಂಟ್ ಗೌರವದಿಂದ ಕಾಣುತ್ತಾನಾದರೂ, ಅದು ಹೆಚ್ಚೆಂದರೆ ಒಬ್ಬ ವಾಸ್ತುತಜ್ಞನ ಅಸ್ತಿತ್ವವನ್ನು ಸಾಬೀತುಪಡಿಸುತ್ತದೆಯೇ ಹೊರತು ಸೃಷ್ಟಿಕರ್ತನನ್ನಲ್ಲ. ಹೀಗಾಗಿ ದೇವರ ಬಗೆಗಿನ ಸೂಕ್ತ ಪರಿಕಲ್ಪನೆಯನ್ನು ನೀಡಲಾರದು ಎಂದು ವಾದಿಸುತ್ತಾನೆ. 'ಸಾಧ್ಯವಾಗುವ ಏಕೈಕ ಮತಧಾರ್ಮಿಕ ಕಾರಣವೆಂದರೆ ನೈತಿಕ ನಿಯಮವನ್ನು ಆಧರಿಸುವ ಅಥವಾ ಅದರಿಂದ ಮಾರ್ಗದರ್ಶನ ಬಯಸುವಂಥದು' ಎಂದವನು ವಾದವನ್ನು ಮುಕ್ತಾಯಗೊಳಿಸುತ್ತಾನೆ.

ದೇವರು, ಸ್ವಾತಂತ್ರ್ಯ ಮತ್ತು ಅಮರತ್ವಗಳು ಮೂರು 'ವೈಚಾರಿಕ ಚಿಂತನೆಗಳು' ಎಂದವನ ಅಭಿಪ್ರಾಯ. ಆದರೆ ಶುದ್ಧ ವೈಚಾರಿಕತೆಯು ಈ ಚಿಂತನೆಗಳನ್ನು ರೂಪಿಸಿಕೊಳ್ಳುವಂತೆ ಮಾಡುವುದಾದರೂ, ಅವು ಅವುಗಳ ವಾಸ್ತವತೆಯನ್ನು ಸಾಬೀತುಪಡಿಸಲಾರವು. ಈ ಚಿಂತನೆಗಳ ಪ್ರಾಮುಖ್ಯವು ವ್ಯಾವಹಾರಿಕವಾದುದು, ಅಂದರೆ ಅವು ನೀತಿಯೊಡನೆ ಸಂಬಂಧಿಸಿರುತ್ತವೆ. ಕಾರಣದ ಶುದ್ಧ ಬೌದ್ಧಿಕ ಉಪಯೋಗವು ತರ್ಕದೋಷದಲ್ಲಿ ಪರ್ಯವಸಾನವಾಗುತ್ತದೆ; ಅದರ ಏಕೈಕ ಸಮಂಜಸ ಬಳಕೆ ಎಂದರೆ ನೈತಿಕತೆಯೆಡೆಗೆ ಒಯ್ಯುವುದು.

ವೈಚಾರಿಕತೆ ವ್ಯಾವಹಾರಿಕ ಉಪಯೋಗವನ್ನು 'ದ ಕ್ರಿಟೀಕ್ ಆಫ್ ಪ್ಯೂರ್ ರೀಸನ್'ನ ಕೊನೆಯ ಹೊತ್ತಿಗೆ ಸಂಕ್ಷಿಪ್ತವಾಗಿಯೂ, 'ದ ಕ್ರಿಟೀಕ್ ಆಫ್ ಪ್ರಾಕ್ಟಿಕಲ್ ರೀಸನ್' (೧೭೮೬) ನಲ್ಲಿ ವಿಸ್ತಾರವಾಗಿಯೂ ಮಂಡಿಸಲಾಗಿದೆ. ಆ ವಾದವೆಂದರೆ

ನೈತಿಕ ನಿಯಮವು ನ್ಯಾಯದ ಬಗ್ಗೆ ಒತ್ತಾಯಿಸುತ್ತದೆ, ಅಂದರೆ ಸದ್ಗುಣಕ್ಕನುಗುಣವಾದ ಸಂತೋಷ. ದೈವಾನುಗ್ರಹ ಮಾತ್ರವೇ ಇದನ್ನು ನೀಡಬಲ್ಲದು, ಮತ್ತು ಬದುಕಿನಲ್ಲಿ ಅದಕ್ಕೆ ಖಾತರಿಯಿಲ್ಲದಿರುವುದು ಸ್ಪಷ್ಟ. ಹೀಗಾಗಿ ದೇವರಿದ್ದಾನೆ ಮತ್ತು ಭವಿಷ್ಯದ ಬದುಕಿದೆ; ಅದರಲ್ಲಿ ಸ್ವಾತಂತ್ರ್ಯವಿರಬೇಕು, ಇಲ್ಲದಿದ್ದರೆ, ಸದ್ಗುಣವೆಂಬಂಥದೊಂದು ಇರಲಾರದು.

'ಮೆಟಫಿಸಿಕ್ ಆಫ್ ಮಾರಲ್ಸ್' (೧೭೮೫) ನಲ್ಲಿ ನಿರೂಪಿತವಾಗಿರುವ ಕ್ಯಾಂಟ್‌ನ ನೈತಿಕ ವ್ಯವಸ್ಥೆಗೆ ತಕ್ಕಮಟ್ಟಿಗಿನ ಐತಿಹಾಸಿಕ ಪ್ರಾಮುಖ್ಯವಿದೆ. ಈ ಗ್ರಂಥದಲ್ಲಿ 'ಆತ್ಮಸಾಕ್ಷಿ ಪ್ರಾಮಾಣ್ಯ' (ಕ್ಯಾಟೆಗಾರಿಕಲ್ ಇಂಪರೇಟಿವ್) ಸೇರಿದೆ; ಕನಿಷ್ಠ ಪಕ್ಷ ಒಂದು ನುಡಿಗಟ್ಟಾಗಿ ಅದು ವೃತ್ತಿಪರ ತತ್ವಜ್ಞಾನಿಗಳ ವಲಯದ ಹೊರಗೆ ಚಿರಪರಿಚಿತವಾಗಿದೆ. ನಿರೀಕ್ಷಿಸಬಹುದಾದಂತೆ, ಕ್ಯಾಂಟ್ ಉಪಯುಕ್ತವಾದಕ್ಕೆ, ಅಥವಾ ತನಗೆ ಹೊರತಾದ ಯಾವುದರಲ್ಲೇ ಆಗಲಿ ಉದ್ದೇಶ ಹೊಂದಿರುವ ನೀತಿಯ ಸಿದ್ಧಾಂತಕ್ಕೆ ಮಾನ್ಯತೆ ನೀಡುವುದಿಲ್ಲ. ತನಗೆ ಬೇಕಾದುದು 'ಯಾವುದೇ ಮತಧರ್ಮ ಅಥವಾ ಭೌತವಿಜ್ಞಾನ ಅಥವಾ ಭೌತಾತೀತವಾದುದಕ್ಕೆ ಮಿಶ್ರಣಗೊಂಡಿರದ ಸಂಪೂರ್ಣವಾಗಿ ತನ್ನದೇ ಆದ ನೈತಿಕ ತತ್ವಜಿಜ್ಞಾಸೆ' ಎಂದವನು ಹೇಳುತ್ತಾನೆ. ಎಲ್ಲ ನೈತಿಕ ಪರಿಕಲ್ಪನೆಗಳೂ ತಮ್ಮ ಆಧಾರವನ್ನೋ ಮೂಲವನ್ನೋ ಪೂರ್ವಕಲ್ಪಿತವಾಗಿ ಪೂರ್ತಿ ವೈಚಾರಿಕತೆಯಲ್ಲಿ ಹೊಂದಿರುತ್ತವೆ. ನೈತಿಕತೆಗೆ ಬೆಲೆ ಬರುವುದು ವ್ಯಕ್ತಿಯು ಅದು ಕರ್ತವ್ಯವೆಂಬಂತೆ ನಡೆದುಕೊಂಡಾಗ ಮಾತ್ರ; ಕೇವಲ ನಿಗದಿತ ಕರ್ತವ್ಯಭಾವನೆಯಿಂದ ಹಾಗೆ ನಡೆದುಕೊಂಡರಷ್ಟೇ ಸಾಲದು. ಸ್ವಹಿತದಿಂದ ಪ್ರಾಮಾಣಿಕನಾದ ವ್ಯಾಪಾರಿ, ಅಥವಾ ತನ್ನ ಪರೋಪಕಾರ ಬುದ್ಧಿಯಿಂದ ದಯಾಪರನಾದ ವ್ಯಕ್ತಿಯು ಸದ್ಗುಣಿಯಾಗಲಾರ. ನೈತಿಕತೆಯ ಸತ್ವವು ನಿಯಮದ ಪರಿಕಲ್ಪನೆಯಿಂದ ಸಾಧಿತವಾಗಿರಬೇಕು; ಯಾಕೆಂದರೆ, ನಿಸರ್ಗದಲ್ಲಿನ ಪ್ರತಿಯೊಂದೂ ನಿಯಮಾನುಸಾರವಾಗಿ ಕ್ರಿಯಾಶೀಲವಾದರೂ, ಒಬ್ಬ ವೈಚಾರಿಕ ವ್ಯಕ್ತಿ ಮಾತ್ರವೇ ನಿಯಮದ ಪರಿಕಲ್ಪನೆಗನುಗುಣವಾಗಿ ನಡೆದುಕೊಳ್ಳುವ ಸಾಮರ್ಥ್ಯ, ಅಂದರೆ ಇಚ್ಛಾಶಕ್ತಿಯನ್ನು, ಹೊಂದಿರುತ್ತಾನೆ. ಇಚ್ಛಾಶಕ್ತಿಯನ್ನು ಒತ್ತಾಯಿಸುವಷ್ಟರ ಮಟ್ಟಿಗೆ ವಸ್ತುನಿಷ್ಠ ತತ್ವವನ್ನು ವೈಚಾರಿಕತೆಯ ಪ್ರೇರಣೆ ಎನ್ನಬಹುದು, ಮತ್ತು ಈ ಪ್ರೇರಣೆಯ ಸೂತ್ರವನ್ನು ಪ್ರಾಮಾಣ್ಯ ಎಂದು ಕರೆಯುತ್ತೇವೆ

ಎರಡು ಬಗೆಯ ಪ್ರಾಮಾಣ್ಯಗಳಿವೆ: ಆಧಾರಕಲ್ಪಿತ ಪ್ರಾಮಾಣ್ಯ, ಅಂದರೆ 'ಇಂಥಿಂಥ ಉದ್ದೇಶವನ್ನು ಸಾಧಿಸಿಕೊಳ್ಳಬೇಕಾದರೆ ನೀನು ಇಂಥಿಂಥ ರೀತಿಯಲ್ಲಿ ನಡೆದುಕೊಳ್ಳಬೇಕು' ಎಂಬುದು; ಮತ್ತೊಂದು ಆತ್ಮಸಾಕ್ಷಿ ಪ್ರಾಮಾಣ್ಯ, ಅದರ ಪ್ರಕಾರ, ಒಂದು ಬಗೆಯ ಕ್ರಿಯೆಯು ಯಾವುದೇ ಉದ್ದೇಶವಿಲ್ಲದೆಯೇ ವಸ್ತುನಿಷ್ಠವಾಗಿಯೂ ಆವಶ್ಯಕ. ಆತ್ಮಸಾಕ್ಷಿ ಪ್ರಾಮಾಣ್ಯವು ಸಂಯೋಜಿತವಾದುದು

ಮತ್ತು ಪೂರ್ವಕಲ್ಪಿತವಾದುದು. ಅದರ ಲಕ್ಷಣವನ್ನು ಕ್ಯಾಂಟ್ ನಿಯಮ ಪರಿಕಲ್ಪನೆಯಿಂದ ಸಾಧಿಸುತ್ತಾನೆ:

'ನಾನು ಆತ್ಮಸಾಕ್ಷಿ ಪ್ರಾಮಾಣ್ಯವನ್ನು ಕುರಿತು ಆಲೋಚಿಸಿದರೆ, ತಕ್ಷಣವೇ ಅದರಲ್ಲೇನಿದೆ ಎಂಬುದು ನನಗೆ ತಿಳಿಯುತ್ತದೆ. ಯಾಕೆಂದರೆ ಪ್ರಾಮಾಣ್ಯವು ನಿಯಮವಲ್ಲದೆ, ನಿಯಮಕ್ಕನುಗುಣವಾದ ಸೂತ್ರವಾಕ್ಯದ ಆವಶ್ಯಕತೆಯನ್ನು ಮಾತ್ರ ಹೊಂದಿರುತ್ತದೆ, ಆದರೆ ನಿಯಮವನ್ನು ಪರಿಮಿತಿಗೊಳಿಸುವ ಕರಾರು ಇರುವುದಿಲ್ಲ; ಅದಕ್ಕೂ ಮಿಗಿಲಾಗಿ ಸಾಮಾನ್ಯತೆಯಲ್ಲದೆ ನಿಯಮದಲ್ಲಿ ಬೇರಾವುದೂ ಇರುವುದಿಲ್ಲ, ಕ್ರಿಯೆಯು ಸೂತ್ರವಾಕ್ಯಕ್ಕೆ ಅನುಗುಣವಾಗಿರುವುದಷ್ಟೇ ಅದಕ್ಕೆ ಸಾಕು, ಮತ್ತು ಈ ಅನುಗುಣವಾಗಿರುವಿಕೆಯು ಪ್ರಾಮಾಣ್ಯವನ್ನು ಆವಶ್ಯಕವೆಂದು ಬಿಂಬಿಸುತ್ತದೆ. ಹೀಗಾಗಿ ಆತ್ಮಸಾಕ್ಷಿ ಪ್ರಾಮಾಣ್ಯವು ಒಂದೇ ಆದದ್ದು, ಅದೆಂದರೆ ಇದು: '*ಒಂದು ಸೂತ್ರವಾಕ್ಯಕ್ಕನುಗುಣವಾಗಿ ಮಾತ್ರವೇ ನಡೆದುಕೊ, ಅದರಿಂದ ನೀನು ಜೊತೆಯಲ್ಲಿಯೇ ಅದನ್ನು ಸಾಮಾನ್ಯ ನಿಯಮವಾಗುವಂತೆ ಮಾಡುತ್ತೀಯೆ*' ಅಥವಾ '*ನಿನ್ನ ನಡತೆಯ ಸೂತ್ರವಾಕ್ಯವು ನಿನ್ನ ಅಪೇಕ್ಷೆಯಂತೆ ಒಂದು ಸಾಮಾನ್ಯ ನಿಸರ್ಗ ನಿಯಮವನ್ನು ರೂಪಿಸುವಂತಿರುತ್ತದೆ.*'

ಆತ್ಮಸಾಕ್ಷಿ ಪ್ರಾಮಾಣ್ಯವು ಕ್ರಿಯಾಶೀಲವಾಗುವ ಒಂದು ನಿದರ್ಶನವನ್ನು ಕ್ಯಾಂಟ್ ನೀಡುತ್ತಾನೆ: ಸಾಲ ಮಾಡುವುದು ತಪ್ಪು, ಯಾಕೆಂದರೆ ಎಲ್ಲರೂ ಹಾಗೆಯೇ ಮಾಡಲು ಹೊರಟರೆ ಸಾಲ ಪಡೆಯುವುದಕ್ಕೆ ದುಡ್ಡೇ ಉಳಿದಿರುವುದಿಲ್ಲ. ಅದರಂತೆಯೇ, ಕಳ್ಳತನ ಮತ್ತು ಕೊಲೆಗಳನ್ನು ಆತ್ಮಸಾಕ್ಷಿ ಪ್ರಾಮಾಣ್ಯವು ಖಂಡಿಸುತ್ತದೆ. ಆದರೆ ಕ್ಯಾಂಟ್ ತಪ್ಪು ಎಂದು ಖಂಡಿತ ತಿಳಿಯುವ, ಆದರೆ ತಾತ್ವಿಕವಾಗಿ ತಪ್ಪು ಎಂದು ತೋರಿಸಲಾಗದ ಕೆಲವು ಕ್ರಿಯೆಗಳಿವೆ, ಉದಾಹರಣೆಗೆ ಆತ್ಮಹತ್ಯೆ; ಖಿನ್ನನಾಗಿರುವ ವ್ಯಕ್ತಿಯು ಎಲ್ಲರೂ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಇಚ್ಛಿಸುವ ಸಾಧ್ಯತೆಯಿರುತ್ತದೆ. ವಾಸ್ತವವಾಗಿ, ಸನ್ನಡತೆಗೆ ಆವಶ್ಯಕವಾದ ಆದರೆ ಅಷ್ಟೇ ಸಾಕಾಗದ ಮಾನದಂಡವನ್ನು ಕೊಡುವುದು ಅವನ ಸೂತ್ರವಾಕ್ಯದ ಉದ್ದೇಶವಾಗಿ ಕಾಣುತ್ತದೆ. ಸಾಕಾಗುವ ಮಾನದಂಡವೊಂದನ್ನು ಹೊಂದಲು ನಾನು ಕ್ಯಾಂಟ್‌ನ ಶುದ್ಧ ಔಪಚಾರಿಕ ದೃಷ್ಟಿಕೋನವನ್ನು ಕೈಬಿಟ್ಟು, ನಡತೆಯ ಪರಿಣಾಮಗಳ ಕಾರಣಗಳನ್ನು ಪರಿಗಣಿಸಬೇಕು. ಆದರೆ ಸನ್ನಡತೆಯು ನಡತೆಯ ಉದ್ದೇಶಿತ ಪರಿಣಾಮವನ್ನು ಆಧರಿಸದೆ, ತನ್ನಲ್ಲಿ ತಾನೇ ಪರಿಣಾಮವಾಗುವ ತತ್ವವನ್ನು ಆಧರಿಸಿರುತ್ತದೆ ಎಂದು ಕ್ಯಾಂಟ್ ಒತ್ತಿ ಹೇಳುತ್ತಾನೆ; ಮತ್ತು ಇದನ್ನು ಒಪ್ಪಿಕೊಂಡರೆ, ಅವನ ಸೂತ್ರವಾಕ್ಯಕ್ಕಿಂತ ಮಿಗಿಲಾದ ಮೂರ್ತತ್ವವು ಸಾಧ್ಯವಾಗುವುದಿಲ್ಲ.

ನಾವು ನಡೆದುಕೊಳ್ಳಬೇಕಾದುದು ಪ್ರತಿ ವ್ಯಕ್ತಿಯೂ ಸ್ವಯಂಪೂರ್ಣ ಎಂಬ ಭಾವನೆಯಿಂದ ಎಂಬುದು ಕ್ಯಾಂಟ್‌ನ ನಿಲವು, ಆದರೆ ಅವನ ತತ್ವದಲ್ಲಿ ಇದಕ್ಕೆ

ಅವಕಾಶವಿರುವಂತೆ ಕಾಣುವುದಿಲ್ಲ. ಇದನ್ನು ಮಾನವನ ಹಕ್ಕುಗಳ ಸಿದ್ಧಾಂತದ ಒಂದು ಅಮೂರ್ತ ರೂಪವೆಂದು ಪರಿಗಣಿಸಬಹುದು, ಆದರೆ ಅದಕ್ಕೂ ಅದೇ ಆಕ್ಷೇಪಣೆಗಳು ಎದುರಾಗುತ್ತವೆ. ಇದನ್ನು ಗಂಭೀರವಾಗಿ ತೆಗೆದುಕೊಂಡರೆ, ಆಗ ಇಬ್ಬರು ವ್ಯಕ್ತಿಗಳ ಹಿತಾಸಕ್ತಿಗಳ ಘರ್ಷಣೆಯ ಸನ್ನಿವೇಶದಲ್ಲಿ ತೀರ್ಮಾನಕ್ಕೆ ಬರುವುದು ಬಹುತೇಕ ಅಸಾಧ್ಯವಾಗಿಬಿಡುತ್ತದೆ. ಅದರ ಕಷ್ಟಗಳು ವಿಶೇಷವಾಗಿ ರಾಜಕೀಯ ತಾತ್ವಿಕತೆಯಲ್ಲಿ ಮತ್ತಷ್ಟು ಎದ್ದು ಕಾಣುತ್ತವೆ, ಅದಕ್ಕೆ, ಬಹುಸಂಖ್ಯೆಯ ಇಚ್ಛೆ, ಅಂತಹ ಸಂದರ್ಭದಲ್ಲಿ ಬಹುಸಂಖ್ಯಾತರ ಹಿತಕ್ಕಾಗಿ ಕೆಲವರ ಹಿತವನ್ನು ಬಲಿಗೊಡಬೇಕಾಗಬಹುದು ಎಂಬಂತಹ, ಯಾವುದಾದರೂ ತತ್ವವಿರಬೇಕಾಗುತ್ತದೆ. ಸರ್ಕಾರಕ್ಕೊಂದು ನೀತಿಯು ಆವಶ್ಯಕವಾದರೆ ಅದಕ್ಕೆ ಸಮುದಾಯದ ಒಟ್ಟಾರೆ ಹಿತದ ನೀತಿಯೊಡನೆ ಹೊಂದಿಕೊಳ್ಳಬಲ್ಲ ಒಂದು ಉದ್ದೇಶವಿರಬೇಕು. ಆದರೆ ಕ್ಯಾಂಟ್‌ನ ಅರ್ಥವು ಈ ತತ್ವಕ್ಕನುಗುಣವಾಗಿರುವಂತೆ ವ್ಯಾಖ್ಯಾನಿಸಲು ಸಾಧ್ಯ: ಪ್ರತಿಯೊಬ್ಬ ವ್ಯಕ್ತಿಯೂ ಸ್ವಯಂಪೂರ್ಣನಲ್ಲ, ಅನೇಕರ ಮೇಲೆ ಪರಿಣಾಮ ಬೀರುವ ನಡತೆಯನ್ನು ನಿರ್ಧರಿಸುವಲ್ಲಿ ಎಲ್ಲರನ್ನೂ ಸಮಾನವಾಗಿ ಪರಿಗಣಿಸಬೇಕು. ಹೀಗೆ ಅರ್ಥವಿಸಿದಾಗ ಅದು ಪ್ರಜಾಪ್ರಭುತ್ವಕ್ಕೊಂದು ನೈತಿಕ ಆಧಾರವನ್ನು ಒದಗಿಸುವಂತಾಗುತ್ತದೆ. ಈ ವ್ಯಾಖ್ಯಾನದಲ್ಲಿ ಮೇಲಿನ ಆಕ್ಷೇಪಣೆ ಎತ್ತಲು ಅವಕಾಶವಿರುವುದಿಲ್ಲ.

ವಯಸ್ಸಾದ ಕ್ಯಾಂಟ್‌ನ ಮನಸ್ಸಿನ ವೀರ್ಯವಂತಿಕೆಯೂ ಹೊಸತನವೂ ಅವನ ಉದ್ಗ್ರಂಥವಾದ 'ಪರ್ಪೆಚುವಲ್ ಪೀಸ್'ದಲ್ಲಿ (೧೭೯೫) ಎದ್ದು ಕಾಣುತ್ತವೆ. ಈ ಗ್ರಂಥದಲ್ಲಿ ಅವನು ಯುದ್ಧವನ್ನು ನಿಷೇಧಿಸುವ ಇರಾದೆಯುಳ್ಳ ಸ್ವತಂತ್ರ ದೇಶಗಳ ಒಂದು ಒಕ್ಕೂಟವನ್ನು ಪ್ರತಿಪಾದಿಸುತ್ತಾನೆ. ಒಂದು ಅಂತರಾಷ್ಟ್ರೀಯ ಸರ್ಕಾರವು ಮಾತ್ರ ಯುದ್ಧವನ್ನು ತಪ್ಪಿಸಬಲ್ಲುದು. ಘಟಕ ದೇಶಗಳ ನಾಗರಿಕ ಸಂವಿಧಾನಗಳು, ಅವನ ಪ್ರಕಾರ, 'ಗಣರಾಜ್ಯ'ಪರವಾಗಿರಬೇಕು. ಆದರೆ ಈ ಶಬ್ದವನ್ನವನು ಕಾರ್ಯಾಂಗ ಮತ್ತು ಶಾಸಕಾಂಗಗಳು ಸ್ವತಂತ್ರವಾಗಿರುವುದು ಎಂಬರ್ಥದಲ್ಲಿ ಬಳಸುತ್ತಾನೆ. ದೇಶವಾಗಲು ರಾಜರನ್ನು ಹೊಂದಿರಬಾರದೆಂದೇನೂ ಅವನು ಹೇಳುವುದಿಲ್ಲ; ಹಾಗೆ ನೋಡಿದರೆ, ಅವನ ಪ್ರಕಾರ, ರಾಜಪ್ರಭುತ್ವದಲ್ಲಿ ಪರಿಪೂರ್ಣ ಸರ್ಕಾರವನ್ನು ಹೊಂದುವುದು ಅತ್ಯಂತ ಸುಲಭ. ಭೀತಿಪ್ರಭುತ್ವದ ಪರಿಣಾಮಗಳ ಹಿನ್ನೆಲೆಯಲ್ಲಿ ಅವನಿಗೆ ಪ್ರಜಾಪ್ರಭುತ್ವದ ಬಗ್ಗೆ ಅನುಮಾನ; ಅದು ಕಾರ್ಯಾಂಗದ ಅಧಿಕಾರವನ್ನು ಸ್ಥಾಪಿಸುವುದರಿಂದಾಗಿ ಅದು ಆವಶ್ಯಕತೆಯ ದೌರ್ಜನ್ಯ. ' "ಇಡೀ ಜನತೆ" ಎಂದರೆ ವಾಸ್ತವದಲ್ಲಿ ಎಲ್ಲ ಜನರೂ ಅಲ್ಲ, ಬಹುಸಂಖ್ಯಾತರು ಅಷ್ಟೆ ಹೀಗಾಗಿ ಸಾರ್ವತ್ರಿಕ ಇಚ್ಛಾಶಕ್ತಿ ಎನ್ನುವುದು ಸ್ವವಿರುದ್ಧವಾದದ್ದಲ್ಲದೆ ಸ್ವಾತಂತ್ರ್ಯದ ತತ್ವಕ್ಕೂ ವಿರುದ್ಧವಾದುದು.' ಈಮಾತುಗಳಲ್ಲಿ ರೂಸೋನ ಪ್ರಭಾವವು ಎದ್ದು

ಕಾಣುತ್ತದೆ, ಆದರೆ ಶಾಂತಿಸ್ಥಾಪನೆಗೆ ವಿಶ್ವ ಒಕ್ಕೂಟವೆಂಬ ಪ್ರಮುಖ ಪರಿಕಲ್ಪನೆಯು ರೂಸೋನಿಂದ ಬಂದದ್ದಲ್ಲ.

೧೯೩೩ ರಿಂದಲೂ ಈ ಗ್ರಂಥವು ತನ್ನ ದೇಶದಲ್ಲಿಯೇ ಕ್ಯಾಂಟ್ ವಿರೋಧಕ್ಕೆ ಕಾರಣವಾಗಿದೆ.

ಸಿ. ಅವಕಾಶ ಮತ್ತು ಕಾಲದ ಬಗೆಗಿನ ಕ್ಯಾಂಟ್‌ನ ಸಿದ್ಧಾಂತ

'ದ ಕ್ರಿಟೀಕ್ ಆಫ್ ಪ್ಯೂರ್ ರೀಸನ್'ನ ಅತ್ಯಂತ ಪ್ರಮುಖ ಭಾಗವು ಅವಕಾಶ ಮತ್ತು ಕಾಲದ ಬಗೆಗಿನ ಸಿದ್ಧಾಂತ. ಈ ಭಾಗದಲ್ಲಿ ನಾನು ಈ ಸಿದ್ಧಾಂತದ ಬಗ್ಗೆ ಒಂದು ವಿಮರ್ಶಾತ್ಮಕ ಪರಿಶೀಲನೆಯನ್ನು ಕೈಗೊಳ್ಳುತ್ತೇನೆ..

ಅವಕಾಶ ಮತ್ತು ಕಾಲದ ಬಗೆಗಿನ ಕ್ಯಾಂಟ್‌ನ ಸಿದ್ಧಾಂತವನ್ನು ಸ್ಪಷ್ಟವಾಗಿ ವಿವರಿಸುವುದು ಸುಲಭವಲ್ಲ, ಯಾಕೆಂದರೆ ಸಿದ್ಧಾಂತವೇ ಸ್ಪಷ್ಟವಾಗಿಲ್ಲ. ಅದನ್ನು 'ದ ಕ್ರಿಟೀಕ್ ಆಫ್ ಪ್ಯೂರ್ ರೀಸನ್' ಮತ್ತು 'ಪ್ರೊಲೆಗೊಮೆನ' ಎರಡರಲ್ಲಿಯೂ ಮಂಡಿಸಲಾಗಿದೆ. ಎರಡನೆಯದರ ವಿವರಣೆಯು ಹೆಚ್ಚು ಸುಲಭ, ಆದರೆ 'ಕ್ರಿಟೀಕ್'ನದಲ್ಲಿನದಕ್ಕಿಂತ ಕಡಿಮೆ ಪೂರ್ಣವಾದುದು. ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ನಾನು ಈ ಸಿದ್ಧಾಂತವನ್ನು ವಿವರಿಸಲು ಪ್ರಯತ್ನಿಸುತ್ತೇನೆ. ವಿವರಣೆಯ ಬಳಿಕ ನಾನು ಅದರ ವಿಮರ್ಶೆಗೆ ತೊಡಗುತ್ತೇನೆ.

ನಮ್ಮ ಪರಿಗ್ರಹಿಕೆಗೆ ಸಾಧ್ಯವಾಗುವ ವಸ್ತುಗಳು ಭಾಗಶಃ ಅವು ಚಿರಂತನ ವಸ್ತುಗಳಾಗಿರುವುದರಿಂದ ಮತ್ತು ಭಾಗಶಃ ನಮ್ಮ ಪರಿಗ್ರಹಿಕೆಯ ಸಲಕರಣೆಯಿಂದ. ಲಾಕ್ ಜಗತ್ತನ್ನು ಅಧೀನ (ಸೆಕಂಡರಿ) ಗುಣಗಳಿಂದ – ಬಣ್ಣಗಳು, ಶಬ್ದಗಳು, ವಾಸನೆಗಳು ಇತ್ಯಾದಿ – ರೂಪಿತವಾದ ವ್ಯಕ್ತಿನಿಷ್ಠವಾದ ಮತ್ತು ವಸ್ತುಗಳಿಗೆ ತಮಗೆ ತಾವೇ ಸಂಬಂಧಿಸದಂತಹ ಪರಿಕಲ್ಪನೆಗೆ ಹೊಂದಿಸಿದ್ದ. ಕ್ಯಾಂಟ್, ಬರ್ಕ್ಲೀ ಮತ್ತು ಹ್ಯೂಮ್‌ರಂತೆ, ಅವರದರಂತಹುದೇ ಬಗೆಯಲ್ಲಲ್ಲದಿದ್ದರೂ, ಇನ್ನೂ ಮುಂದೆ ಸಾಗಿ ಪ್ರಧಾನ (ಪ್ರೈಮರಿ) ಗುಣಗಳೂ ವ್ಯಕ್ತಿನಿಷ್ಠವೇ ಎಂದು ವಾದಿಸಿದ. ನಮ್ಮ ಇಂದ್ರಿಯಗಳಿಗೆ ಕಾರಣಗಳಿರುತ್ತವೆ ಎಂಬುದನ್ನು ಕ್ಯಾಂಟ್ ಬಹುತೇಕವಾಗಿ ಪ್ರಶ್ನಿಸುವುದಿಲ್ಲ, ಅವುಗಳನ್ನವನು 'ತಮ್ಮಲ್ಲಿನವು' ಅಥವಾ 'ನೂಮೆನ' ಎಂದು ಕರೆಯುತ್ತಾನೆ. ನಮ್ಮ ಗ್ರಹಿಕೆ ತೋರುವುದು, ಅದನ್ನವನು ವಿದ್ಯಮಾನ ಎನ್ನುತ್ತಾನೆ, ಎರಡು ಭಾಗಗಳಿಂದ ಕೂಡಿರುತ್ತದೆ: ವಸ್ತುವಿನಿಂದಾಗಿ ಆದುದು, ಅದನ್ನವನು ಇಂದ್ರಿಯಗ್ರಹಿಕೆ (ಸೆನ್ಸೇಷನ್) ಎನ್ನುತ್ತಾನೆ; ಮತ್ತು ನಮ್ಮ ವೈಯಕ್ತಿಕ ಸಲಕರಣೆ, ಕೆಲವು ಸಂಬಂಧಗಳಲ್ಲಿ ಆಜ್ಞಾಪಿಸಬಹುದಾದ ಬಹುಮುಖಿಯಾದುದು ಎನ್ನುತ್ತಾನೆ. ಈ ಎರಡನೆಯ ಭಾಗವನ್ನವನು ವಿದ್ಯಮಾನದ ರೂಪ (ಫಾರ್ಮ್) ಎನ್ನುತ್ತಾನೆ. ಈ ಭಾಗವು ತನ್ನಲ್ಲಿ ತಾನು ಇಂದ್ರಿಯಗ್ರಹಿಕೆಯಲ್ಲ, ಹೀಗಾಗಿ ಪರಿಸರದ ಆಕಸ್ಮಿಕಗಳನ್ನು ಆಧರಿಸುವುದಿಲ್ಲ; ಅವು ಯಾವಾಗಲೂ ಒಂದೇ ಬಗೆ, ನಾವು ಅದನ್ನು ನಮ್ಮೊಡನೆ

ಕೊಂಡೊಯ್ಯುತ್ತೇವೆ, ಮತ್ತು ಅದು ಪೂರ್ವಕಲ್ಪಿತ, ಅಂದರೆ ಅದು ಅನುಭವವನ್ನು ಆಧರಿಸಿರುವುದಲ್ಲ. ಪರಿಶುದ್ಧ ಸಂವೇದನಾಶೀಲತೆಯನ್ನು 'ಪರಿಶುದ್ಧ ಅಂತರ್ಬೋಧೆ' (ಆನ್‌ಶ್ವಾಂಗ್); ಅಂತಹ ಎರಡು ರೂಪಗಳಿವೆ, ಅವೆಂದರೆ ಅವಕಾಶ ಮತ್ತು ಕಾಲ, ಒಂದು ಬಾಹ್ಯ ಇಂದ್ರಿಯಕ್ಕೆ, ಮತ್ತೊಂದು ಒಳಗಿನದಕ್ಕೆ.

ಅವಕಾಶ ಮತ್ತು ಕಾಲಗಳು ಪೂರ್ವಕಲ್ಪಿತ ರೂಪಗಳು ಎಂದು ಸಾಧಿಸಲು ಕ್ಯಾಂಟ್ ಎರಡು ಬಗೆಯ ವಾದಗಳನ್ನು ಮಂಡಿಸುತ್ತಾನೆ: ಒಂದು ತತ್ವಜಿಜ್ಞಾಸಾತ್ಮಕವಾದುದಾದರೆ, ಮತ್ತೊಂದು ಜ್ಞಾನಮೀಮಾಂಸಕ (ಎಪಿಸ್ಟೆಮೊಲಾಜಿಕಲ್), ಅಥವಾ ಅವನ ಪ್ರಕಾರ, ಸ್ವಭಾವಸಿದ್ಧ (ಟ್ರಾನ್ಸೆಂಡೆಂಟಲ್). ಮೊದಲ ಬಗೆಯವೆಂದರೆ ನೇರವಾಗಿ ನಿಸರ್ಗದ ಕಾಲ ಮತ್ತು ಅವಕಾಶಗಳಿಂದ ತೆಗೆದುಕೊಂಡಂತಹವು, ಎರಡನೆಯ ಬಗೆಯು ಪರೋಕ್ಷವಾಗಿ ಶುದ್ಧ ಗಣಿತದ ಸಾಧ್ಯತೆಗಳಿಂದ ಪರಿಗಣಿಸಿದವು. ಅವಕಾಶದ ಬಗೆಗಿನ ವಾದಗಳು, ಕಾಲದ ಬಗೆಯದಕ್ಕಿಂತ ಹೆಚ್ಚು ಪೂರ್ಣವಾದವು, ಯಾಕೆಂದರೆ ಅವು ಸಾರತಃ ಮೊದಲನೆಯದರಂತೆಯೇ ಎಂದವನು ಭಾವಿಸುತ್ತಾನೆ. ಅವಕಾಶಕ್ಕೆ ಸಂಬಂಧಿಸಿದಂತೆ, ತತ್ವಜಿಜ್ಞಾಸಾತ್ಮಕ ವಾದಗಳು ನಾಲ್ಕು:

ಅವಕಾಶ ಎಂಬುದು ಅನುಭವೈಕ ಪರಿಕಲ್ಪನೆಯಲ್ಲ, ಅದು ನಮ್ಮ ಅನುಭವಗಳನ್ನು ಅಮೂರ್ತಗೊಳಿಸಿರುವುದಲ್ಲ, ಯಾಕೆಂದರೆ ಅವಕಾಶ ಎಂಬುದು ಬಾಹ್ಯವಾದ ಸಂವೇದನೆಗಳನ್ನು ಸೂಚಿಸಲು ಪೂರ್ವಕಲ್ಪಿತವಾದುದು, ಮತ್ತು ಬಾಹ್ಯ ಅನುಭವವು ಸಾಧ್ಯವಾಗುವುದು ಅವಕಾಶದ ಪ್ರತ್ಯಕ್ಷಜ್ಞಾನದ (ಪ್ರೆಸೆಂಟೇಷನ್) ಮೂಲಕ ಮಾತ್ರ.

(೧) ಅವಕಾಶ ಎಂಬುದು ಪೂರ್ವಕಲ್ಪಿತವಾದ ಒಂದು ಆವಶ್ಯಕ ಪ್ರತ್ಯಕ್ಷಜ್ಞಾನ, ಅದು ಎಲ್ಲ ಬಾಹ್ಯ ಗ್ರಹಿಕೆಗಳನ್ನೂ ಒಳಗೊಳ್ಳುವಂಥದು; ಯಾಕೆಂದರೆ, ಅವಕಾಶದಲ್ಲಿ ಏನೇನೂ ಇಲ್ಲದಿರುವುದನ್ನು ಕಲ್ಪಿಸಿಕೊಳ್ಳಬಹುದಾದರೂ, ಅವಕಾಶವೇ ಇಲ್ಲದಿರುವುದನ್ನು ನಾವು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.

(೨) ಅವಕಾಶ ಎಂಬುದು ಒಟ್ಟಾರೆ ವಸ್ತುಗಳ ಸಂಬಂಧಗಳ ಸಾಧಾರಣ ಪರಿಕಲ್ಪನೆಯಲ್ಲ, ಯಾಕೆಂದರೆ ಇರುವುದು ಒಂದೇ ಅವಕಾಶ, ಅದರ ಭಾಗಗಳನ್ನು 'ಅವಕಾಶಗಳು' ಎಂದು ಕರೆಯುತ್ತೇವೆಯೇ ಹೊರತು ನಿದರ್ಶನಗಳನ್ನಲ್ಲ.

(೩) ಅವಕಾಶವನ್ನು ಅನಂತ ವಿಸ್ತಾರದ ಪ್ರತ್ಯಕ್ಷಜ್ಞಾನ, ಅದರಲ್ಲಿಯೇ ಅವಕಾಶದ ಎಲ್ಲ ಭಾಗಗಳು ಒಳಗೊಂಡಿರುತ್ತವೆ; ಈ ಸಂಬಂಧವು ಅದರ ನಿದರ್ಶನಗಳ ಪರಿಕಲ್ಪನೆಗಿಂತ ಭಿನ್ನವಾದುದು, ಹೀಗಾಗಿ ಅವಕಾಶವು ಪರಿಕಲ್ಪನೆಯಲ್ಲ, ಅದೊಂದು ಪರಿಶುದ್ಧ ಅಂತರ್ಬೋಧೆ.

ಅವಕಾಶಕ್ಕೆ ಸಂಬಂಧಿಸಿದ ಸ್ವಭಾವಸಿದ್ಧ ವಾದವನ್ನು ಜ್ಯಾಮಿತಿಯಿಂದ ಸಾಧಿಸಲಾಗಿದೆ. ಯೂಕ್ಲಿಡಿಯನ್ ಜ್ಯಾಮಿತಿಯು ಸಂಶ್ಲೇಷಣಾತ್ಮಕವಾದುದಾದರೂ ಪೂರ್ವಕಲ್ಪಿತ, ಅಂದರೆ ಕೇವಲ ತರ್ಕದಿಂದ ಸಾಧಿಸಬಹುದಾದುದಲ್ಲ, ಎಂಬುದು ಕ್ಯಾಂಟ್‌ನ ನಿಲವು. ಜ್ಯಾಮಿತೀಯ ಆಧಾರಗಳು ಆಕೃತಿಗಳನ್ನವಲಂಬಿಸಿದವು ಎಂದವನ ಭಾವನೆ; ಉದಾಹರಣೆಗೆ, ಪರಸ್ಪರ ಸಮಕೋನದಲ್ಲಿ ಸೇರಿರುವ ಎರಡು ಲಂಬರೇಖೆಗಳಲ್ಲಿ, ಎರಡೂ ಸೇರುವ ಬಿಂದುವಿನಿಂದ ಸಮಕೋನವನ್ನು ನಿರ್ಮಿಸುವ ಒಂದೇ ಸರಳರೇಖೆಯನ್ನು ಎಳೆಯಬಹುದೆಂಬುದನ್ನು ನೋಡಬಹುದು. ಈ ಜ್ಞಾನವು ಅನುಭವಿಂದ ಪಡೆದುದಲ್ಲ ಎಂದವನ ಭಾವನೆ. ನನ್ನ ಅಂತರ್ಬೋಧೆಯು, ನನ್ನ ಪರಿಗ್ರಹಿಕೆಯ ಆಕೃತಿಯನ್ನು ಮಾತ್ರವೇ ಹೊಂದಿದ್ದರೆ, ನಾನು ವಸ್ತುವಿನಲ್ಲಿ ಅದನ್ನು ಕಾಣುವುದನ್ನು ನಿರೀಕ್ಷಿಸಬಹುದಾದ ಏಕೈಕ ವಿಧಾನವೆಂದರೆ, ನನ್ನಲ್ಲಿ ವೈಯಕ್ತಿಕವಾಗಿ ಆಗಿರುವ ಪರಿಣಾಮಗಳನ್ನೆಲ್ಲ ಪರಿಶೀಲಿಸುವುದು. ಇಂದ್ರಿಯದ ವಸ್ತುಗಳು ಜ್ಯಾಮಿತಿಗೆ ಒಳಪಡುವಂತಿರಬೇಕು, ಯಾಕೆಂದರೆ ಜ್ಯಾಮಿತಿಯು ನಮ್ಮ ಗ್ರಹಿಕೆಯ ರೀತಿಗೆ ಸಂಬಂಧಿಸಿದ್ದು, ಹೀಗಾಗಿ, ಸಂಶ್ಲೇಷಣಾತ್ಮಕವಾಗಿದ್ದರೂ, ಅದು ಪೂರ್ವಕಲ್ಪಿತ ಹಾಗೂ ನಿಸ್ಸಂದಿಗ್ಧ.

ಕಾಲಕ್ಕೆ ಸಂಬಂಧಪಟ್ಟ ವಾದಗಳು ಕೂಡ ಸಾರತಃ ಇವೇ, ಒಂದೇ ಅಪವಾದವೆಂದರೆ, ಎಣಿಸುವುದಕ್ಕೆ ಕಾಲ ಬೇಕು ಎಂಬ ವಾದದೊಂದಿಗೆ ಜ್ಯಾಮಿತಿಯ ಜಾಗದಲ್ಲಿ ಅಂಕಗಣಿತ ಬರುತ್ತದೆ.

ಈ ವಾದಗಳನ್ನು ಒಂದೊಂದಾಗಿ ಈಗ ನೋಡೋಣ.

ಅವಕಾಶಕ್ಕೆ ಸಂಬಂಧಪಟ್ಟ ತತ್ವಜಿಜ್ಞಾಸಾತ್ಮಕ ವಾದಗಳಲ್ಲಿ ಮೊದಲನೆಯದು, 'ಅವಕಾಶ ಎಂಬುದು ಅನುಭವೈಕ ಪರಿಕಲ್ಪನೆಯಲ್ಲ, ಅದು ನಮ್ಮ ಅನುಭವಗಳನ್ನು ಅಮೂರ್ತಗೊಳಿಸಿರುವುದಲ್ಲ, ಯಾಕೆಂದರೆ ಅವಕಾಶ ಎಂಬುದು ಬಾಹ್ಯವಾದ ಸಂವೇದನೆಗಳನ್ನು ಸೂಚಿಸಲು ಪೂರ್ವಕಲ್ಪಿತವಾದುದು. [ಅಂದರೆ, ನಾನು ಇರುವ ಸ್ಥಾನದಿಂದ ಭಿನ್ನವಾದ ಸ್ಥಾನದಲ್ಲಿ ಇರುವುದಕ್ಕೆ], ಅಲ್ಲದೆ ನಾನು ಅದನ್ನು ಬಾಹ್ಯವಾದುದು ಹಾಗೂ ಪರಸ್ಪರ ಒಂದರ ಪಕ್ಕದಲ್ಲಿರುವುದೆಂದು – ಅಂದರೆ ಅವು ಬೇರೆ ಬೇರೆಯಾಗಿರುವುದು ಮಾತ್ರವಲ್ಲದೆ, ಬೇರೆ ಬೇರೆ ಜಾಗಗಳಲ್ಲಿರುವುದನ್ನು – ಪರಿಗ್ರಹಿಸಲು ಸಾಧ್ಯವಾಗುವಂತೆ ಅವಕಾಶದ ಪ್ರತ್ಯಕ್ಷಜ್ಞಾನವು ಆಗಲೇ ಆಧಾರವಾಗಬೇಕು (*ಝುಂ ಗ್ರುಂಡ್ ಲೀಜೆನ್*).' ಹೀಗಾಗಿ ಬಾಹ್ಯ ಅನುಭವವು ಅವಕಾಶದ ಪ್ರತ್ಯಕ್ಷಜ್ಞಾನದಿಂದ ಮಾತ್ರ ಸಾಧ್ಯವಾಗುತ್ತದೆ.

'ನನ್ನ ಹೊರಗಿನ [ಅಂದರೆ, ನಾನು ಇರುವ ಸ್ಥಾನದಿಂದ ಭಿನ್ನವಾದ ಸ್ಥಾನದಲ್ಲಿ ಇರುವುದಕ್ಕೆ] ಎಂಬ ನುಡಿಗಟ್ಟು ಕಷ್ಟಕರವಾದುದು. ತನ್ನಲ್ಲಿಯೇ ಒಂದು ವಸ್ತುವಾಗಿರುವ ನಾನು ಎಲ್ಲಿಯೋ ಇಲ್ಲ, ಮತ್ತು ಯಾವುದೂ ಅವಕಾಶದ ವಿಚಾರದಲ್ಲಿ ನನ್ನಿಂದ

ಬಾಹ್ಯವಲ್ಲ; ಅದು ಒಂದು ವಿದ್ಯಮಾನವಾಗಿ ನನ್ನ ದೇಹವು ಮಾತ್ರ ಎಂದು ಹೇಳಬಹುದು. ಹೀಗೆ ಸೇರಿರುವುಗಳೆಲ್ಲ ವಾಕ್ಯದ ಎರಡನೆಯ ಭಾಗದಲ್ಲಿ, ಅಂದರೆ ನಾನು ಬೇರೆ ಬೇರೆ ವಸ್ತುಗಳನ್ನು ಬೇರೆ ಬೇರೆ ಜಾಗಗಳಲ್ಲಿ ಇರುವುದನ್ನು ನೋಡುವುದು. ಮನಸ್ಸಿನಲ್ಲಿ ಮೂಡುವ ಆಕೃತಿಗಳೆಲ್ಲ ಬೇರೆ ಬೇರೆ ವಸ್ತುಗಳನ್ನು ಬೇರೆ ಬೇರೆಯಾಗಿ ಇರಿಸಿರುವ ಉಗ್ರಾಣ ಕಾವಲುಗಾರನದು; ಆ ವಸ್ತುಗಳು ಈಗಾಗಲೇ ಅಸ್ತಿತ್ವ ಹೊಂದಿರುವಂಥವು, ಆದರೆ ಉಗ್ರಾಣ ಕಾವಲುಗಾರನು ಅವುಗಳನ್ನು ಜೋಡಿಸಿಡುತ್ತಾನೆ.

ಅವಕಾಶ ಮತ್ತು ಕಾಲಗಳ ವ್ಯಕ್ತಿನಿಷ್ಠತೆಯ ಸಿದ್ಧಾಂತದುದ್ದಕ್ಕೂ ಅವನ ಗಮನಕ್ಕೆ ಬಾರದ ತೊಡಕೊಂದಿದೆ. ನಾನು ಗ್ರಹಿಸುವ ವಸ್ತುಗಳನ್ನು ಬೇರೆ ರೀತಿಯಲ್ಲಲ್ಲದೆ ನಾನು ಮಾಡುವಂತೆ ಜೋಡಿಸುವ ಹಾಗೆ ಮಾಡುವುದು ಯಾವುದು? ನಿದರ್ಶನಕ್ಕೆ, ನಾನು ಯಾವಾಗಲೂ ಜನರ ಕಣ್ಣುಗಳು ಅವರ ಬಾಯಿಗಳ ಕೆಳಗಿರದೆ ಮೇಲಿರುವುದನ್ನು ಯಾಕೆ ನೋಡುತ್ತೇನೆ? ಕ್ಯಾಂಟ್‌ನ ಪ್ರಕಾರ, ಕಣ್ಣುಗಳು ಮತ್ತು ಬಾಯಿಗಳು ವಸ್ತುಗಳಾಗಿ ತಮ್ಮ ಪಾಡಿಗೆ ತಾವು ಅಸ್ತಿತ್ವದಲ್ಲಿರುವಂಥವು, ಮತ್ತು ನನ್ನಲ್ಲೆ ಬೇರೆ ಬೇರೆಯಾದ ಗ್ರಹಿಕೆಯುಂಟಾಗುವಂತೆ ಮಾಡುತ್ತವೆ, ಅವುಗಳಲ್ಲಿ ನನ್ನ ಗ್ರಹಿಕೆಯಲ್ಲಿ ಅಸ್ತಿತ್ವದಲ್ಲಿರುವ ದೈಶಿಕ ಜೋಡಣೆಗೆ ಸಂವಾದಿಯಾಗುವಂತಹುದು ಯಾವುದೂ ಇಲ್ಲ. ಇದಕ್ಕೆ ವ್ಯತಿರಿಕ್ತವಾದುದು ಬಣ್ಣಗಳ ಬಗೆಗಿನ ಭೌತಿಕ ಸಿದ್ಧಾಂತ. ನಮಗೆ ಕಾಣುವ ಬಣ್ಣಗಳು ವಸ್ತುಗಳಲ್ಲಿ ಇರುವುದಿಲ್ಲ ಎಂದು ನಾವು ಭಾವಿಸುವುದಿಲ್ಲವಾದರೂ, ಬೇರೆ ಬೇರೆ ಬಣ್ಣಗಳು ಬೇರೆ ಬೇರೆ ತರಂಗಾಂತರಗಳಿಗೆ ಸಂವಾದಿಯಾಗಿರುತ್ತವೆ ಎಂದು ನಾವು ಬಲ್ಲೆವು, ಆದರೆ ತರಂಗಗಳು ಅವಕಾಶ ಮತ್ತು ಕಾಲಗಳನ್ನು ಒಳಗೊಳ್ಳುವುದರಿಂದ, ಕ್ಯಾಂಟ್‌ನ ಪ್ರಕಾರ, ತರಂಗಗಳು ನಮ್ಮ ಗ್ರಹಿಕೆಯ ಕಾರಣಗಳಾಗಿರುವುದಿಲ್ಲ. ಮತ್ತೊಂದೆಡೆ, ನಮ್ಮ ಗ್ರಹಿಕೆಯಲ್ಲಿನ ಅವಕಾಶ ಮತ್ತು ಕಾಲಗಳಿಗೆ ಸಂವಾದಿಯಾದವು, ಭೌತವಿಜ್ಞಾನವು ಊಹಿಸುವಂತೆ, ವಸ್ತುಜಗತ್ತಿನಲ್ಲಿ ಇವೆ ಎನ್ನುವುದಾದರೆ, ಕ್ಯಾಂಟ್‌ನ ವಾದಗಳು ಬಿದ್ದುಹೋಗುತ್ತವೆ. ಕ್ಯಾಂಟ್‌ನ ನಿಲವೆಂದರೆ ಮನಸ್ಸು ಗ್ರಹಿಕೆಯ ಕಚ್ಚಾವಸ್ತುಗಳಿಗೆ ಆಜ್ಞಾಪಿಸುತ್ತದೆ ಎಂಬುದೇ ಹೊರತು, ಅವು ಇರುವಂತಲ್ಲದೆ ಬೇರೆ ರೀತಿಯಲ್ಲಿ ಯಾಕೆ ಆಜ್ಞಾಪಿಸುವುದಿಲ್ಲ ಎಂದು ಆಲೋಚಿಸುವುದೇ ಇಲ್ಲ.

ಕಾಲಕ್ಕೆ ಸಂಬಂಧಿಸಿದಂತೆ ಈ ತೊಡಕು ಮತ್ತಷ್ಟು ಗೋಜಲಾದುದು, ಅದಕ್ಕೆ ಕಾರಣ ಕಾರಣಾತ್ಮಕತೆಯೂ ಅದರಲ್ಲಿ ಸೇರಿಕೊಳ್ಳುವುದು. ಗುಡುಗು ಕೇಳಿಸುವ ಮುಂಚೆಯೇ ಮಿಂಚು ಕಾಣಿಸುತ್ತದೆ; ಒಂದು ವಸ್ತು ತನಗೆ ತಾನೇ ಆದ ಎ ನನ್ನಲ್ಲಿ ಮಿಂಚು ಕಾಣುವಂತೆ ಮಾಡುತ್ತದೆ, ಮತ್ತು ಇನ್ನೊಂದು ತನಗೆ ತಾನೇ ಆದ ವಸ್ತು ಬಿ ನನ್ನಲ್ಲಿ ಗುಡುಗಿನ ಗ್ರಹಿಕೆ ಉಂಟುಮಾಡುತ್ತದೆ. ಆದರೆ ಬಿ ಗಿಂತ ಮೊದಲೇ ಎ

ಇರುವುದಿಲ್ಲ, ಯಾಕೆಂದರೆ ಕಾಲ ಇರುವುದು ಗ್ರಾಹ್ಯಗಳ ಸಂಬಂಧದಲ್ಲಿ ಮಾತ್ರ. ಹಾಗಾದರೆ, ಎರಡು ಕಾಲರಹಿತ ವಸ್ತುಗಳಾದ ಎ ಮತ್ತು ಬಿ ವಿವಿಧ ಕಾಲಗಳ ಪರಿಣಾಮಗಳನ್ನು ಯಾಕೆ ಉಂಟುಮಾಡುತ್ತವೆ? ಕ್ಯಾಂಟ್ ಸರಿಯಾದರೆ, ಇವು ಕೇವಲ ಯಾದೃಚ್ಛಿಕವಾಗಿಬಿಡುತ್ತವೆ, ಮತ್ತು ಎ ಉಂಟುಮಾಡುವ ನೋಡುವ ಗ್ರಹಿಕೆಯು ಬಿ ಉಂಟುಮಾಡುವ ಕೇಳುವ ಗ್ರಹಿಕೆಗೆ ಮುಂಚೆ ಸಂಭವಿಸುವುದಕ್ಕೆ ಸಂವಾದಿಯಾದವು ಮತ್ತು ಎ ಮತ್ತು ಬಿ ಗಳ ನಡುವೆ ಯಾವುದೇ ಸಂಬಂಧ ಇರುವುದಿಲ್ಲ.

ಎರಡನೆಯ ತತ್ವಜಿಜ್ಞಾಸಾತ್ಮಕ ವಾದವು ಹೇಳುವುದೆಂದರೆ, ಅವಕಾಶದಲ್ಲಿ ಏನನ್ನಾದರೂ ಕಲ್ಪಿಸಿಕೊಳ್ಳಲು ಸಾಧ್ಯವಾದರೂ, ಅವಕಾಶವೇ ಇಲ್ಲದಿರುವುದನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯ. ನಾವು ಕಕಲ್ಪಿಸಿಕೊಳ್ಳಬಹುದಾದ ಅಥವಾ ಕಲ್ಪಿಸಿಕೊಳ್ಳಲಾಗದ ಯಾವುದನ್ನಾದರೂ ಆಧರಿಸಿ ಯಾವುದೇ ಗಂಭೀರ ವಾದವನ್ನು ಮಂಡಿಸಲು ಸಾಧ್ಯವಿಲ್ಲ ಎಂಬುದು ನನ್ನ ಭಾವನೆ; ಆದರೆ ಏನೂ ಇಲ್ಲದ ಅವಕಾಶವನ್ನು ಕಲ್ಪಿಸಿಕೊಳ್ಳುವುದನ್ನಂತೂ ನಾನು ಬಲವಾಗಿ ಅಲ್ಲಗಳೆಯುತ್ತೇನೆ. ರಾತ್ರಿ ಆಕಾಶದಲ್ಲಿ ಮೋಡ ತುಂಬಿಕೊಂಡಿರುವುದನ್ನು ನೀವು ಕಲ್ಪಿಸಿಕೊಳ್ಳಬಹುದಾದರೂ, ನೀವೇ ಅವಕಾಶದಲ್ಲಿರುತ್ತೀರಿ, ಆಗ ನೀವು ನೋಡಲಾಗದ ಮೋಡಗಳನ್ನು ಕಲ್ಪಿಸಿಕೊಳ್ಳುತ್ತೀರಿ. ಕ್ಯಾಂಟ್‌ನ ಅವಕಾಶವು, ವೈಥಿಂಗರ್ ತೋರಿಸಿಕೊಟ್ಟ ಹಾಗೆ, ನ್ಯೂಟನ್‌ನದರಂತೆ, ಆತ್ಯಂತಿಕವಾದುದೇ ಹೊರತು ಸಂಬಂಧಗಳ ಒಂದು ಜಾಲವಲ್ಲ. ಆದರೆ ಆತ್ಯಂತಿಕವಾಗಿ ಬರಿದಾದ ಅವಕಾಶವನ್ನು ಕಲ್ಪಿಸಿಕೊಳ್ಳುವುದು ಹೇಗೆ ಸಾಧ್ಯ ಎಂಬುದು ನನಗೆ ಅರ್ಥವಾಗದು.

ಮೂರನೆಯ ತತ್ವಜಿಜ್ಞಾಸಾತ್ಮಕ ವಾದವು ಹೇಳುವುದೆಂದರೆ, 'ಅವಕಾಶ ಎಂಬುದು ತಾರ್ಕಿಕವಾದ ಅಥವಾ ಸಾಮಾನ್ಯವಾದ ವಸ್ತುಗಳ ಸಂಬಂಧಗಳ ಸಾಧಾರಣ ಪರಿಕಲ್ಪನೆ ಎನ್ನುತ್ತೇವಲ್ಲ, ಅದಲ್ಲ; ಅದು ಕೇವಲ ಅಂತರ್ಬೋಧೆ. ಯಾಕೆಂದರೆ ಮೊದಲನೆಯದಾಗಿ, ನಾವು ಒಂದು ಅಖಂಡ ಅವಕಾಶವನ್ನು ಕಲ್ಪಿಸಿಕೊಳ್ಳಬಹುದಷ್ಟೆ (ಸಿಚ್ ವೋರ್ಸ್ಟೆಲೆನ್), ನಾವು ಅವಕಾಶಗಳು ಎಂದು ಹೇಳಿದಾಗ ಅದರರ್ಥ ಏಕೈಕವಾದ ವಿಶಿಷ್ಟ ಅವಕಾಶದ ಭಾಗಗಳು ಎಂದು. ಈ ಭಾಗಗಳು ಭಾಗಗಳಾಗಿ ಇಡಿಯದಕ್ಕಿಂತ ಮುಂಚೆ ಇರಲಾರದು .. .. ಆದರೆ ಅದರಲ್ಲಿರುವಂತೆ ಭಾವಿಸಬಹುದು. ಅವಕಾಶವು ಮೂಲತಃ ವಿಶಿಷ್ಟವಾದುದು, ಅದರಲ್ಲಿನ ಬಹುರೂಪತ್ವವು ಪರಿಮಿತಗಳನ್ನು ಹೊಂದಿರುತ್ತವೆ.' ಇದರಿಂದ, ಅವಕಾಶವು ಪೂರ್ವಕಲ್ಪಿತ ಅಂತರ್ಬೋಧೆ ಎಂದು ತೀರ್ಮಾನಿಸಲಾಗಿದೆ.

ಈ ವಾದದ ತಾತ್ಪರ್ಯವೆಂದರೆ, ಅವಕಾಶದಲ್ಲಿನ ಬಹುತ್ವದ ನಿರಾಕರಣೆ. 'ಅವಕಾಶಗಳು' ಎಂದು ನಾವು ಕರೆಯುವುದು 'ಒಂದು ಅವಕಾಶ' ಎಂಬ

ಸಾಮಾನ್ಯ ಪರಿಕಲ್ಪನೆಯ ನಿದರ್ಶನವೂ ಅಲ್ಲ, ಒಂದು ಇಡಿಯ ಭಾಗಗಳು ಎಂದೂ ಅಲ್ಲ. ಕ್ಯಾಂಟ್‌ನ ಪ್ರಕಾರ ಅವುಗಳ ತಾರ್ಕಿಕ ಸ್ಥಾನ ಯಾವುದು ಎಂಬುದು ನನಗೆ ತಿಳಿಯದಾದರೂ, ಅವು ತಾರ್ಕಿಕವಾಗಿ ಅವಕಾಶದ ಆನಂತರದ್ದು. ಬಹುತೇಕ ಆಧುನಿಕರು ಮಾಡುವಂತೆ, ಅದನ್ನು ಒಪ್ಪುವವರ ಪ್ರಕಾರ, ಈ ವಾದವನ್ನು ಮಂಡಿಸುವುದೇ ಸಾಧ್ಯವಿಲ್ಲ, ಯಾಕೆಂದರೆ 'ಅವಕಾಶ'ವಾಗಲೀ 'ಅವಕಾಶ'ಗಳಾಗಲೀ ಒಂದು ಸ್ಥಿತಿಯಾಗಲು (ಸಬ್‌ಸ್ಟಾನ್ಟಿವ್) ಸಾಧ್ಯವಿಲ್ಲ.

ನಾಲ್ಕನೆಯ ತತ್ವಜಿಜ್ಞಾಸಾತ್ಮಕ ವಾದವು ಮುಖ್ಯವಾಗಿ ಸೂಚಿಸುವುದು ಅವಕಾಶ ಎಂಬುದು ಒಂದು ಅಂತರ್ಬೋಧೆಯೇ ಹೊರತು ಒಂದು ಪರಿಕಲ್ಪನೆಯಲ್ಲ ಎಂಬುದನ್ನು. ಅದರ ಆಧಾರವಾಕ್ಯವೆಂದರೆ 'ಅವಕಾಶವು ಅನಂತವಾದ ದತ್ತ (ಗಿವನ್) ವಿಸ್ತಾರದ್ದು ಎಂದು ಕಲ್ಪಿತವಾದುದು'. ಇದು ಕೋನಿಂಗಸ್‌ಬರ್ಗ್‌ನಂತಹ ಸಮತಲ ಪ್ರದೇಶದಲ್ಲಿ ವಾಸವಾಗಿರುವ ವ್ಯಕ್ತಿಯ ದೃಷ್ಟಿಕೋನ; ಇದನ್ನು ಆಲ್ಪ್ಸ್‌ನ ಕಣಿವೆಯಲ್ಲಿ ವಾಸಿಸುವನು ಹೇಗೆ ಪ್ರತಿಪಾದಿಸಬಹುದು ಎಂಬುದು ನನಗೆ ಅರ್ಥವಾಗದು. ಅನಂತವಾದ ಯಾವುದೇ ಆಗಲಿ 'ದತ್ತ'ವಾಗುವುದು ಹೇಗೆ ಎಂಬುದನ್ನು ಊಹಿಸುವುದು ಕಷ್ಟ ಅವಕಾಶದ ದತ್ತ ಭಾಗ ಎಂದರೆ ಇಂದ್ರಿಯಗ್ರಾಹ್ಯ ವಸ್ತುಗಳಿಂದ ಕೂಡಿರುವಂಥದು, ಮತ್ತು ಉಳಿದ ಭಾಗಗಳ ಬಗ್ಗೆ ನಮಗೆ ಇರುವ ಭಾವನೆಯೆಂದರೆ ಅವುಗಳ ಚಲನೆಯ ಸಾಧ್ಯತೆ ಎಂದು ಆಲೋಚಿಸುವುದು ನನಗೆ ಸ್ಪಷ್ಟವಾಗುತ್ತದೆ. ಅಂಥ ಕ್ಷುಲ್ಲಕ ವಾದದಲ್ಲಿ ಮಧ್ಯೆ ಪ್ರವೇಶಿಸಬಹುದಾದರೆ, ಆಧುನಿಕ ಖಗೋಳವಿಜ್ಞಾನಿಗಳ ನಿಲವೆಂದರೆ ಅವಕಾಶವೆನ್ನುವುದು ಅನಂತವಲ್ಲ, ಅದು ಗೋಲವೊಂದರ ಮೇಲ್ಮೈಯಂತೆ ಸುತ್ತುತ್ತಲೇ ಇರುತ್ತದೆ ಎಂದು.

'ಪ್ರಾಲೆಗೋಮೆನ'ದಲ್ಲಿ ಅತ್ಯುತ್ತಮವಾಗಿ ಮಂಡಿತವಾಗಿರುವ ಸ್ವಭಾವಸಿದ್ಧ (ಅಥವಾ ಜ್ಞಾನಮೀಮಾಂಸಕ) ವಾದವು ತತ್ವಜಿಜ್ಞಾಸಾತ್ಮಕ ವಾದಗಳಿಗಿಂತ ಹೆಚ್ಚು ಖಚಿತವಾದುದು, ಹಾಗೆಯೇ ಹೆಚ್ಚು ನಿಖರವಾಗಿ ನಿರಾಕರಿಸಬಹುದಾದುದು. 'ಜ್ಯಾಮಿತಿ' ಎಂಬುದು ನಾವೀಗ ತಿಳಿದಿರುವಂತೆ ಎರಡು ಬಗೆಯ ಅಧ್ಯಯನಗಳಿಂದ ಕೂಡಿರುವಂಥದು. ಒಂದೆಡೆ, ಶುದ್ಧ ಜ್ಯಾಮಿತಿಯಿದೆ; ಅದು ಸೂತ್ರವಾಕ್ಯಗಳಿಂದ ಪರಿಣಾಮಗಳನ್ನು ಸಾಧಿಸುತ್ತದೆ, ಆದರೆ ಆಧಾರವಾಕ್ಯಗಳು ಸರಿಯೇ ತಪ್ಪೇ ಎಂದು ವಿಚಾರಿಸಹೋಗುವುದಿಲ್ಲ; ತರ್ಕವನ್ನು ಅನುಸರಿಸದ ಯಾವುದೂ ಇದರಲ್ಲಿರುವುದಿಲ್ಲ, ಅದು 'ಸಂಶ್ಲೇಷಣಾತ್ಮಕ'ವಲ್ಲ, ಮತ್ತು ಜ್ಯಾಮಿತಿಯ ಪಠ್ಯಪುಸ್ತಕಗಳಲ್ಲಿನಂತೆ ಅದಕ್ಕೆ ಅಂಕೆಗಳ ಆವಶ್ಯಕತೆಯಿಲ್ಲ. ಮತ್ತೊಂದೆಡೆ, ಭೌತವಿಜ್ಞಾನದ ಭಾಗವಾದ ಜ್ಯಾಮಿತಿಯೊಂದಿದೆ, ಅದು ಉದಾಹರಣೆಗೆ, ಸಾಮಾನ್ಯ ಸಾಪೇಕ್ಷವಾದದಲ್ಲಿರುವಂತೆ ಕಂಡುಬರುತ್ತದೆ; ಇದೊಂದು ಅನುಭವೈಕ ವಿಜ್ಞಾನ, ಅದರಲ್ಲಿನ ಸೂತ್ರವಾಕ್ಯಗಳು ಅಳತೆಗಳಿಂದ ಊಹಿಸಲಾಗಿರುವಂತಹವು, ಮತ್ತು

ಯೂಕ್ಲಿಡ್‌ನದಕ್ಕಿಂತ ಭಿನ್ನವಾದುದು. ಹೀಗೆ ಎರಡು ವಿಧಗಳಲ್ಲಿನ ಒಂದು ಪೂರ್ವಕಲ್ಪಿತವಾದರೂ ಸಂಶ್ಲೇಷಣಾತ್ಮಕವಲ್ಲ, ಆದರೆ ಮತ್ತೊಂದು ಸಂಶ್ಲೇಷಣಾತ್ಮಕವಾದರೂ ಪೂರ್ವಕಲ್ಪಿತವಲ್ಲ. ಇದು ಸ್ವಭಾವಸಿದ್ಧ ವಾದವನ್ನು ತೊಡೆದುಹಾಕುತ್ತದೆ.

ಕ್ಯಾಂಟ್ ಅವಕಾಶದ ಬಗ್ಗೆ ಎತ್ತಿರುವ ಪ್ರಶ್ನೆಗಳನ್ನು ನಾವೀಗ ಹೆಚ್ಚು ಸಾಮಾನ್ಯ ರೀತಿಯಲ್ಲಿ ಪರಿಶೀಲಿಸೋಣ. ಭೌತವಿಜ್ಞಾನದಲ್ಲಿ ಒಪ್ಪಲಾಗಿರುವ, ನಮ್ಮ ಗ್ರಾಹ್ಯವಸ್ತುಗಳಿಗೆ (ಪರ್ಸೆಪ್ಟ್), ಒಂದರ್ಥದಲ್ಲಿ ಭೌತದ್ರವ್ಯರೂಪದ ಬಾಹ್ಯ ಕಾರಣಗಳಿರುತ್ತವೆ ಎಂಬ, ದೃಷ್ಟಿಕೋನವನ್ನು ಅನ್ವಯಿಸಿದರೆ, ಗ್ರಾಹ್ಯವಸ್ತುಗಳ ಎಲ್ಲ ವಾಸ್ತವ ಗುಣಗಳೂ ಅವುಗಳ ಗ್ರಾಹ್ಯವಾಗದ ಕಾರಣಗಳಿಗಿಂತ ಭಿನ್ನವಾದವಾದರೂ, ಗ್ರಾಹ್ಯವಿಷಯಗಳ ವ್ಯವಸ್ಥೆ ಹಾಗೂ ಅವುಗಳ ಕಾರಣಗಳ ವ್ಯವಸ್ಥೆಗಳಲ್ಲಿ ಒಂದು ಬಗೆಯ ರಾಚನಿಕ ಸಾಮ್ಯವಿರುತ್ತದೆ ಎಂಬ ತೀರ್ಮಾನಕ್ಕೆ ನಾವು ಬರುತ್ತೇವೆ. ಉದಾಹರಣೆಗೆ, ಬಣ್ಣಗಳು (ಗ್ರಹಿಕೆಯಾದಂತೆ) ಮತ್ತು ತರಂಗಾಂತರಗಳ (ಭೌತವಿಜ್ಞಾನಿಗಳು ಊಹಿಸುವಂತೆ) ನಡುವೆ ಒಂದು ಪರಸ್ಪರ ಸಂಬಂಧವಿರುತ್ತದೆ. ಅದರಂತೆಯೇ ಗ್ರಾಹ್ಯವಸ್ತುಗಳ ಒಂದು ಘಟಕವಾದ ಅವಕಾಶ ಮತ್ತು ಗ್ರಾಹ್ಯವಸ್ತುಗಳ ಗೃಹೀತವಾಗದ ಕಾರಣಗಳ ವ್ಯವಸ್ಥೆಯ ಘಟಕವಾದ ಅವಕಾಶ ಇವುಗಳ ನಡುವೆ ಪರಸ್ಪರ ಸಂಬಂಧವಿರಬೇಕು. ಇವೆಲ್ಲವೂ ನಿಂತಿರುವುದು 'ಅದೇ ಕಾರಣ, ಅದೇ ಪರಿಣಾಮ' ಮತ್ತದರ ಜೊತೆಗೆ ಅದರ ಪ್ರತಿವರ್ತಿತ ರೂಪ (ಆಬ್‌ವರ್ಸ್) 'ಭಿನ್ನ ಪರಿಣಾಮಗಳು, ಭಿನ್ನ ಕಾರಣಗಳು' ಎಂಬ ಆಧಾರವಾಕ್ಯದ ಮೇಲೆ. ಹೀಗೆ, ನಿದರ್ಶನಕ್ಕೆ, ಚಕ್ಷುಗ್ರಾಹ್ಯವಸ್ತು ಎ ಯು ಚಕ್ಷುಗ್ರಾಹ್ಯವಸ್ತು ಬಿ ಯ ಎಡಭಾಗದಲ್ಲಿರುವಂತೆ ಕಂಡರೆ, ಎ ಯ ಕಾರಣ ಮತ್ತು ಬಿ ಯ ಕಾರಣ ಇವುಗಳ ನಡುವೆ ಸಂವಾದಿಯಾದ ಯಾವುದೋ ಸಂಬಂಧವಿದೆ ಎಂದು ನಾವು ತಿಳಿಯುತ್ತೇವೆ.

ಈ ದೃಷ್ಟಿಕೋನದಿಂದ, ಎರಡು ಅವಕಾಶಗಳಿವೆ, ಒಂದು ವ್ಯಕ್ತಿನಿಷ್ಠವಾದರೆ ಮತ್ತೊಂದು ವಸ್ತುನಿಷ್ಠವಾದುದು, ಒಂದು ಅನುಭವದಲ್ಲಿ ತಿಳಿದಿರುವಂಥದು, ಮತ್ತೊಂದು ಕೇವಲ ಊಹೆಯದು. ಆದರೆ ಈ ವಿಷಯದಲ್ಲಿ ಅವಕಾಶ ಮತ್ತು ಗ್ರಹಿಕೆಯ ಇತರ ಅಂಶಗಳು ಇವುಗಳ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಎಲ್ಲವೂ, ತನ್ನ ವ್ಯಕ್ತಿನಿಷ್ಠ ರೂಪದಲ್ಲಿ ಅನುಭವೈಕವಾಗಿ ತಿಳಿದಿರುತ್ತವೆ; ಎಲ್ಲವೂ, ತಮ್ಮ ವಸ್ತುನಿಷ್ಠ ರೂಪದಲ್ಲಿ, ಕಾರಣಾತ್ಮಕತೆಯ ಆಧಾರಸೂತ್ರದ ಮೂಲಕ ಉಹಿಸಲಾದವು. ಅವಕಾಶದ ಬಗೆಗಿನ ನಮ್ಮ ಜ್ಞಾನವು ಯಾವುದೇ ರೀತಿಯಲ್ಲಿ ನಮ್ಮ ಬಣ್ಣ ಶಬ್ದ ಮತ್ತು ವಾಸನೆಗಳ ಜ್ಞಾನಕ್ಕಿಂತ ಭಿನ್ನವಾದುದು ಎಂದು ತಿಳಿಯಲು ಯಾವುದೇ ಕಾರಣವಿಲ್ಲ.

ಕಾಲಕ್ಕೆ ಸಂಬಂಧಿಸಿದ ವಿಚಾರವೇ ಬೇರೆ, ಯಾಕೆಂದರೆ ನಾವು ಗ್ರಾಹ್ಯವಸ್ತುಗಳ

ಗ್ರಾಹ್ಯವಾಗದ ಕಾರಣಗಳ ನಂಬಿಕೆಯನ್ನು ನಚ್ಚಿಕೊಂಡರೆ, ವಸ್ತುನಿಷ್ಠ ಕಾಲವು ವ್ಯಕ್ತಿನಿಷ್ಠ ಕಾಲದಂತೆಯೇ ಇರಬೇಕಾಗುತ್ತದೆ. ಹೀಗಲ್ಲದಿದ್ದರೆ, ನಾವು ಮಿಂಚು-ಗುಡುಗುಗಳಿಗೆ ಸಂಬಂಧಿಸಿದ ವಿಚಾರದಲ್ಲಿ ಎದುರಿಸಿದ ಕಷ್ಟಕ್ಕೆ ಸಿಲುಕಿಕೊಳ್ಳಬೇಕಾಗುತ್ತದೆ. ಅಥವಾ ಈ ಮುಂದಿನದರಂತಹ ಒಂದು ನಿದರ್ಶನವನ್ನು ತೆಗೆದುಕೊಳ್ಳಿ: ಒಬ್ಬ ವ್ಯಕ್ತಿಯು ಮಾತಾಡುವುದನ್ನು ನೀವು ಕೇಳಿ ಅವನಿಗೆ ಉತ್ತರಿಸುತ್ತೀರಿ, ಮತ್ತು ಅವನು ಅದನ್ನು ಕೇಳುತ್ತಾನೆ. ಅವನು ಮಾತನಾಡುವುದು, ಮತ್ತು ನಿಮ್ಮ ಉತ್ತರವನ್ನವನು ಕೇಳುವುದು, ಎರಡೂ, ನಿಮಗೆ ಸಂಬಂಧಪಟ್ಟಂತೆ, ಗ್ರಾಹ್ಯವಾಗದ ಜಗತ್ತಿನಲ್ಲಿ, ಮತ್ತು ಆ ಜಗತ್ತಿನಲ್ಲಿ ಮೊದಲನೆಯದು ಎರಡನೆಯದಕ್ಕಿಂತ ಮುಂಚೆ ಆಗುತ್ತದೆ. ಅದಕ್ಕೂ ಮಿಗಿಲಾಗಿ, ಭೌತವಿಜ್ಞಾನದ ವಸ್ತುನಿಷ್ಠ ಜಗತ್ತಿನಲ್ಲಿ, ಅವನು ಮಾತನಾಡುವುದು ನಿಮ್ಮ ಕೇಳುವಿಕೆಗೆ ಮುಂಚೆ ನಡೆಯುತ್ತದೆ; ವ್ಯಕ್ತಿನಿಷ್ಠ ಗ್ರಾಹ್ಯವಸ್ತುಗಳ ಜಗತ್ತಿನಲ್ಲಿ, ನಿಮ್ಮ ಕೇಳುವಿಕೆಯು ನಿಮ್ಮ ಉತ್ತರಿಸುವುದಕ್ಕಿಂತ ಮುಂಚೆ ನಡೆಯುತ್ತದೆ; ಭೌತವಿಜ್ಞಾನದ ವಸ್ತುನಿಷ್ಠ ಜಗತ್ತಿನಲ್ಲಿ, ನಿಮ್ಮ ಉತ್ತರವು ಅವನು ಕೇಳುವುದಕ್ಕೆ ಮುಂಚೆ ನಡೆಯುತ್ತದೆ. ಈ ಎಲ್ಲ ಪ್ರತಿಪಾದನೆಗಳಲ್ಲಿಯೂ 'ಮುಂಚೆ ನಡೆಯುತ್ತದೆ' ಎಂಬ ಸಂಬಂಧವು ಒಂದೇ ಆಗಿರಬೇಕು. ಹೀಗಾಗಿ, ನಿರಂತರ ಅವಕಾಶದ ವ್ಯಕ್ತಿನಿಷ್ಠತೆ ಎಂಬುದರಲ್ಲಿ ಮುಖ್ಯ ಅರ್ಥವೊಂದಿದೆ, ಆದರೆ ನಿರಂತರ ಕಾಲದ ವ್ಯಕ್ತಿನಿಷ್ಠತೆಯಲ್ಲಿ ಅರ್ಥವಿಲ್ಲ.

ಗ್ರಾಹ್ಯವಸ್ತುಗಳು 'ತಾವೇ ವಸ್ತುಗಳಾಗಿ' ಕಾರಣಗಳಾಗುತ್ತವೆ, ಅಥವಾ, ಹೇಳಬೇಕಾದಂತೆ, ಭೌತವಿಜ್ಞಾನದ ಜಗತ್ತಿನ ಘಟನೆಗಳಿಂದ, ಎಂದು ಮೇಲಿನ ವಾದಗಳು ಕ್ಯಾಂಟ್‌ನಂತೆಯೇ, ಒಪ್ಪುತ್ತವೆ. ಆದರೆ ಈ ಅಂಗೀಕಾರವು ಯಾವ ಕಾರಣಕ್ಕೂ ತಾರ್ಕಿಕವಾಗಿ ಆವಶ್ಯಕವಾದುದಲ್ಲ. ಅದನ್ನು ತಿರಸ್ಕರಿಸಿದರೆ, ಗ್ರಾಹ್ಯವಸ್ತುಗಳು ಯಾವುದೇ ಮುಖ್ಯ ಅರ್ಥದಲ್ಲಿಯೂ 'ವ್ಯಕ್ತಿನಿಷ್ಠ'ವಾಗಿರಲಾರವು, ಯಾಕೆಂದರೆ ಅವುಗಳೊಂದಿಗ ಹೋಲಿಸುವುದಕ್ಕೆ ವ್ಯತಿರಿಕ್ತವಾದವು ಯಾವುದೂ ಇಲ್ಲ.

'ತಾವೇ ವಸ್ತುಗಳಾಗಿ' ಎಂಬುದು ಕ್ಯಾಂಟ್‌ನ ತಾತ್ವಿಕತೆಯ ಒಂದು ಎಡವಟ್ಟು ಅಂಶ, ಅವನ ತಕ್ಷಣದ ಅನುಯಾಯಿಗಳು ಅದನ್ನು ಕೈಬಿಟ್ಟರು, ಅವರು ಅದಕ್ಕನುಗುಣವಾಗಿ ಸ್ವಾತ್ಮೈಕವಾದದಂತಹುದನ್ನು ಒಪ್ಪಿದರು. ತನ್ನಿಂದ ಪ್ರಭಾವಿತರಾದ ತತ್ವಜ್ಞಾನಿಗಳು ಬೇಗನೇ ಅನುಭವೈಕ ಅಥವಾ ನಿರಂಕುಶತಾತತ್ವದ ದಿಕ್ಕಿನಲ್ಲಿ ಸಾಗುವಂತೆ ಕ್ಯಾಂಟ್‌ನ ಅಸಾಂಗತ್ಯಗಳು ಮಾಡಿದವು. ವಾಸ್ತವದಲ್ಲಿ, ಹೆಗೆಲ್‌ನ ಮರಣಾನಂತರದವರೆಗೂ ಜರ್ಮನ್ ತತ್ವಜ್ಞಾನಿಗಳು ಎರಡನೆಯ ದಿಕ್ಕಿನಲ್ಲಿ ಸಾಗಿದರು.

ಕ್ಯಾಂಟ್ ನಂತರ ನೇರ ಉತ್ತರಾಧಿಕಾರಿ ಫ್ಲಿಷ್ಟೆ (೧೭೬೨–೧೮೧೪) 'ತಾವೇ ವಸ್ತುಗಳಾಗಿ' ಕೈಬಿಟ್ಟು, ವಸ್ತುನಿಷ್ಠವಾದವನ್ನು ಹುಚ್ಚು ಎನ್ನುವಷ್ಟರವರೆಗೆ ಅಳವಡಿಸಿಕೊಂಡ. ಅಹಂ (ಈಗೋ) ಒಂದೇ ಆತ್ಯಂತಿಕ ವಾಸ್ತವ, ತನ್ನನ್ನದು ಸಯುಕ್ತಿಕವೆಂದು (ಪಾಸಿಟ್) ಭಾವಿಸುವುದರಿಂದ ಅದು ಅಸ್ತಿತ್ವದಲ್ಲಿದೆ; ಅಹಂ ಸಯುಕ್ತಿಕವಾಗಿಸುವುದರಿಂದ ಅಧೀನ ವಾಸ್ತವತೆಯನ್ನು ಹೊಂದಿರುವ ಅಹಮೇತರವಾದುದು (ನಾನ್–ಈಗೋ), ಕೂಡ ಅಸ್ತಿತ್ವದಲ್ಲಿರುತ್ತದೆ ಎಂಬುದು ಅವನ ನಿಲವಾಗಿತ್ತು. ಫ್ಲಿಷ್ಟೆ ಒಬ್ಬ ಶುದ್ಧ ತತ್ವಜ್ಞಾನಿಯಾಗಿ ಮುಖ್ಯನಾದವನಲ್ಲವಾದರೂ, ಜೇನಾ ಯುದ್ಧದ ಬಳಿಕ ನೆಪೋಲಿಯನ್ ಅನ್ನು ಪ್ರತಿರೋಧಿಸಲು ಪ್ರೇರೇಪಿಸುವ ಉದ್ದೇಶದ ತನ್ನ 'ಅಡ್ರೆಸಸ್ ಟು ದ ಜರ್ಮನ್ ನೇಷನ್' (೧೮೦೭–೦೮) ಮೂಲಕ ಅವನು ಜರ್ಮನ್ ರಾಷ್ಟ್ರೀಯತಾವಾದದ ಸ್ಥಾಪಕ ಎನಿಸಿದ. ಒಂದು ತತ್ವಜಿಜ್ಞಾಸಾತ್ಮಕ ಪರಿಕಲ್ಪನೆಯಾಗಿ ಅಹಂ ಬಹು ಸುಲಭವಾಗಿ ಅನುಭವೈಕ ಫ್ಲಿಷ್ಟೆಯದರೊಡನೆ ಗೊಂದಲಕ್ಕೀಡಾಯಿತು. ಅಹಂ ಜರ್ಮನ್‌ನವನದಾದ್ದರಿಂದ ಜರ್ಮನ್‌ರು ಇತರರಿಗಿಂತ ಶ್ರೇಷ್ಠರು ಎಂಬ ಭಾವನೆ ಬೆಳೆಯಿತು. 'ವ್ಯಕ್ತಿತ್ವ ಹೊಂದುವುದು ಮತ್ತು ಜರ್ಮನ್ ಆಗಿರುವುದು ನಿಸ್ಸಂಶಯವಾಗಿ ಒಂದೇ' ಎಂದು ಫ್ಲಿಷ್ಟೆ ಹೇಳುತ್ತಾನೆ. ಇದರ ಆಧಾರದ ಮೇಲೆ ಅವನು ರಾಷ್ಟ್ರೀಯತಾವಾದದ ನಿರಂಕುಶತೆಯ ತಾತ್ವಿಕತೆಯನ್ನು ಬೆಳೆಸಿದ. ಅದು ಜರ್ಮನಿಯಲ್ಲಿ ಭಾರಿ ಪ್ರಭಾವಶಾಲಿಯಾಗಿತ್ತು.

ಅವನ ತಕ್ಷಣದ ಉತ್ತರಾಧಿಕಾರಿಯೆಂದರೆ ಸ್ಕೆಲ್ಲಿಂಗ್ (೧೭೭೫–೧೮೫೪). ಅವನು ಹೆಚ್ಚು ಸ್ನೇಹಪರನಾಗಿದ್ದರೂ, ಕಡಿಮೆಯೇನೂ ವ್ಯಕ್ತಿನಿಷ್ಠನಲ್ಲ. ಅವನು ಜರ್ಮನ್ ರೊಮ್ಯಾಂಟಿಕ್‌ರ ಜೊತೆ ನಿಕಟ ಸಂಪರ್ಕ ಹೊಂದಿದ್ದವನು; ತಾತ್ವಿಕತೆಯ ನೆಲೆಯಲ್ಲಿ ತನ್ನ ಕಾಲದಲ್ಲವನು ಪ್ರಸಿದ್ಧನಾಗಿದ್ದರೂ, ಅವನೇನೂ ಮುಖ್ಯನಲ್ಲ. ಕ್ಯಾಂಟ್‌ನ ತಾತ್ವಿಕತೆಯನ್ನು ಮುಖ್ಯ ರೀತಿಯಲ್ಲಿ ಬೆಳೆಸಿದವನೆಂದರೆ ಹೆಗೆಲ್.

೨೧
ಹತ್ತೊಂಬತ್ತನೆಯ ಶತಮಾನದ ಚಿಂತನಧಾರೆಗಳು

ಹತ್ತೊಂಬತ್ತನೆಯ ಶತಮಾನದಲ್ಲಿನ ಬೌದ್ಧಿಕ ಜೀವನವು ಹಿಂದಿನ ಬೇರಾವುದೇ ಕಾಲಕ್ಕಿಂತಲೂ ಹೆಚ್ಚು ಸಂಕೀರ್ಣವಾದುದಾಗಿತ್ತು. ಇದಕ್ಕೆ ಅನೇಕ ಕಾರಣಗಳಿದ್ದವು: ಮೊದನೆಯವಾಗಿ, ಸಂಬಂಧಿಸಿದ ವ್ಯಾಪ್ತಿಯು ಹಿಂದೆಂದಿಗಿಂತಲೂ ಹೆಚ್ಚು ವಿಶಾಲವಾದುದು; ಅಮೆರಿಕ ಮತ್ತು ರಷ್ಯಾಗಳು ಪ್ರಮುಖ ಕೊಡುಗೆಗಳನ್ನು ನೀಡಿದವು, ಮತ್ತು ಯೂರೋಪ್ ಇಂಡಿಯದ ಪ್ರಾಚೀನ ಹಾಗೂ ಆಧುನಿಕ ತತ್ವಜ್ಞಾನಗಳ ಬಗ್ಗೆ ಹಿಂದೆಂದಿಗಿಂತ ಹೆಚ್ಚಿನ ಅರಿವು ಪಡೆದಿತ್ತು. ಎರಡನೆಯದಾಗಿ, ಹದಿನೇಳನೆಯ ಶತಮಾನದಿಂದಲೂ ಹೊಸತನದ ಪ್ರಮುಖ ನೆಲೆಯಾಗಿದ್ದ ವಿಜ್ಞಾನವು, ಅದರಲ್ಲೂ ಭೂವಿಜ್ಞಾನ, ಜೀವವಿಜ್ಞಾನ ಮತ್ತು ಸಾವಯವ ರಸಾಯನವಿಜ್ಞಾನ ಕ್ಷೇತ್ರಗಳಲ್ಲಿ, ಹೊಸ ಆವಿಷ್ಕಾರಗಳನ್ನು ನಡೆಸಿತ್ತು. ಮೂರನೆಯದಾಗಿ, ಯಂತ್ರ ನಿರ್ಮಾಣವು ಸಾಮಾಜಿಕ ಸಂರಚನೆಯನ್ನು ಗಾಢವಾಗಿ ಪಲ್ಲಟಗೊಳಿಸಿತು, ಭೌತಿಕ ಪರಿಸರದ ಹಿನ್ನೆಲೆಯಲ್ಲಿ ಮನುಷ್ಯನಿಗೆ ತಮ್ಮ ಸಾಮರ್ಥ್ಯಗಳ ಬಗ್ಗೆ ಹೊಸ ಪರಿಕಲ್ಪನೆಯನ್ನು ಮೂಡಿಸಿತ್ತು. ನಾಲ್ಕನೆಯದಾಗಿ, ಸಾಂಪ್ರದಾಯಿಕ ಚಿಂತನೆಗಳ ಬಗೆಗಿನ ತಾತ್ವಿಕ ಹಾಗೂ ರಾಜಕೀಯವಾದ ಗಾಢ ಬಂಡಾಯವು ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಇದುವರೆಗೆ ಅನುಲ್ಲಂಘನೀಯ ಎಂದು ಭಾವಿಸಲಾಗಿದ್ದ ನಂಬಿಕೆಗಳು ಮತ್ತು ಸಂಸ್ಥೆಗಳ ಮೇಲೆ ಹೊಸ ಆಕ್ರಮಣಕ್ಕೆ ಎಡೆಮಾಡಿಕೊಟ್ಟಿತ್ತು. ಈ ಬಂಡಾಯಕ್ಕೆ ಎರಡು ವಿಭಿನ್ನ ರೂಪಗಳಿದ್ದವು: ಒಂದು ರೊಮ್ಯಾಂಟಿಕ್, ಮತ್ತೊಂದು ವೈಚಾರಿಕ (ನಾನು ಈ ಶಬ್ದಗಳನ್ನು ವಿಶಾಲ ಅರ್ಥದಲ್ಲಿ ಬಳಸುತ್ತಿದ್ದೇನೆ.) ರೊಮ್ಯಾಂಟಿಕ್ ಬಂಡಾಯವು ಬೈರನ್, ಶೋಪೆನ್‌ಹಾವರ್ ಮತ್ತು ನೀಷೆಗಳಿದ ಮುಸ್ಸೋಲಿನಿ ಮತ್ತು ಹಿಟ್ಲರ್‌ವರೆಗೆ ಸಾಗಿತು; ವೈಚಾರಿಕ ಬಂಡಾಯವು ಕ್ರಾಂತಿಯ ಫ್ರೆಂಚ್ ತತ್ವಜ್ಞಾನಿಗಳಿಂದ ಆರಂಭಗೊಂಡು, ಸೌಮ್ಯರೂಪದಲ್ಲಿ ಮುಂದುವರಿದು ಇಂಗ್ಲೆಂಡ್‌ನ ತಾತ್ವಿಕ ತೀವ್ರಗಾಮಿಗಳವರೆಗೆ ಸಾಗಿಬಂದು, ಆನಂತರ ಮಾರ್ಕ್ಸ್ ಮತ್ತು ಸೋವಿಯತ್ ರಷ್ಯಾದ ಆಗುಹೋಗುಗಳವರೆಗೆ ಮತ್ತಷ್ಟು ಆಳವಾದ ಸ್ವರೂಪವನ್ನುಪಡೆದುಕೊಂಡಿತು.

ಜರ್ಮನಿಯ ಬೌದ್ಧಿಕ ಮೇಲುಗೈತನವು ಒಂದು ಹೊಸ ಅಂಶ, ಅದು ಕ್ಯಾಂಟ್‌ನೊಡನೆ ಆರಂಭವಾಯಿತು. ಜರ್ಮನನೇ ಆಗಿದ್ದರೂ, ಲೀಬ್‌ನಿಙ್ ಬರೆದದ್ದು ಬಹುತೇಕವಾಗಿ ಲ್ಯಾಟಿನ್‌ನಲ್ಲಿ ಅಥವಾ ಫ್ರೆಂಚ್‌ನಲ್ಲಿ, ಅಲ್ಲದೆ ತನ್ನ ತಾತ್ವಿಕತೆಯಲ್ಲಿ ಜರ್ಮನಿಯಿಂದ ಬಹಳ ಕಡಿಮೆ ಪ್ರಭಾವಕ್ಕೊಳಗಾಗಿದ್ದವನು. ಕ್ಯಾಂಟ್‌ನ ನಂತರದ ಜರ್ಮನ್ ಆದರ್ಶವಾದವು ಮತ್ತು ಆನಂತರದ ಜರ್ಮನ್ ತತ್ವಜ್ಞಾನವು, ಇದಕ್ಕೆ ವ್ಯತಿರಿಕ್ತವಾಗಿ, ಜರ್ಮನ್ ಇತಿಹಾಸದ ಗಾಢ ಪ್ರಭಾವಕ್ಕೊಳಗಾಗಿದ್ದವು; ಜರ್ಮನ್ ತಾತ್ವಿಕ ಪರಿಕಲ್ಪನೆಗಳಲ್ಲಿನ ವಿಶಿಷ್ಟವಾದವುಗಳಲ್ಲಿ ಬಹುಪಾಲು, ಐತಿಹಾಸಿಕ ಆಕಸ್ಮಿಕಗಳಿಂದಾಗಿ ತನ್ನ ಸಹಜ ಸಾಮರ್ಥ್ಯದ ಭಾಗದಿಂದ ವಂಚಿತವಾಗಿದ್ದ ಒಂದು ಪ್ರಬಲ ದೇಶದ ವೀರ್ಯವಂತ ಮನಸ್ಸನ್ನು ಪ್ರತಿಬಿಂಬಿಸುತ್ತದೆ. ಜರ್ಮನಿಯು ತನ್ನ ಅಂತಾರಾಷ್ಟ್ರೀಯ ಸ್ಥಾನಮಾನಗಳಿಗೆ ಪವಿತ್ರ ರೋಮನ್ ಸಾಮ್ರಾಜ್ಯಕ್ಕೆ ಋಣಿಯಾಗಿತ್ತು, ಆದರೆ ಸಾಮ್ರಾಟನು ತನ್ನ ನಾಮಮಾತ್ರ ಪ್ರಜೆಗಳ ಮೇಲಿನ ನಿಯಂತ್ರಣವನ್ನು ಕ್ರಮೇಣವಾಗಿ ಕಳೆದುಕೊಂಡಿದ್ದ. ಕೊನೆಯ ಸಮರ್ಥ ಚಕ್ರವರ್ತಿಯೆಂದರೆ ಐದನೆಯ ಚಾರ್ಲ್ಸ್, ಮತ್ತು ಅವನು ತನ್ನ ಅಧಿಕಾರವನ್ನು ಪಡೆದಿದ್ದದ್ದು ಸ್ಪೈಯಿನ್ ಮತ್ತು ಕೆಲ ದೇಶಗಳಲ್ಲಿನ ಆಸ್ತಿಯ ಕಾರಣದಿಂದ. ಮತಧಾರ್ಮಿಕ ಸುಧಾರಣೆ ಮತ್ತು ಮೂವತ್ತು ವರ್ಷಗಳ ಯುದ್ಧವು ಜರ್ಮನಿಯ ಐಕಮತ್ಯದಲ್ಲಿ ಉಳಿದಿದ್ದುದನ್ನೂ ಹಾಳುಗೆಡವಿದವು, ಉಳಿದಿದ್ದವೆಂದರೆ ಫ್ರಾನ್ಸ್ ಕೃಪಾಶ್ರಯಕ್ಕೊಳಗಾಗಿದ್ದ ಸಣ್ಣಪುಟ್ಟ ಪಾಳೆಯಪಟ್ಟುಗಳು. ಹದಿನೆಂಟನೆಯ ಶತಮಾನದಲ್ಲಿ ಮಾತ್ರವೇ ಒಂದು ಜರ್ಮನ್ ದೇಶವಾದ ಪ್ರಷ್ಯಾವು ಫ್ರೆಂಚ್‌ರನ್ನು ಯಶಸ್ವಿಯಾಗಿ ಎದುರಿಸಿದ್ದುದು; ಅದರಿಂದಾಗಿಯೇ, ಫ್ರೆಡೆರಿಕ್ ಅನ್ನು ಮಹಾಶಯ ಎಂದು ಕರೆಯುವುದು. ಆದರೆ ಪ್ರಷ್ಯಾವೇ ನೆಪೋಲಿಯನ್ ವಿರುದ್ಧ ನಿಲ್ಲಲಾರದೇ ಹೋಯಿತು, ಅದು ಜೇನಾ ಯುದ್ಧದಲ್ಲಿ ಸಂಪೂರ್ಣವಾಗಿ ಸೋತುಹೋಯಿತು. ಬಿಸ್‌ಮಾರ್ಕ್‌ನ ಆಳ್ವಿಕೆಯಲ್ಲಿ ಪ್ರಷ್ಯಾದ ಪುನರುಜ್ಜೀವನವು ಅಲರಿಕ್, ಶಾರ್ಲಮೇನ್ ಮತ್ತು ಬಾರ್ಬರೋಸಗಳ ಹಿಂದಿನ ಧೈರ್ಯವಂತಿಕೆಯ ಪುನರುತ್ಥಾನದಂತೆ ಕಾಣಿಸಿತು. (ಜರ್ಮನ್‌ರಿಗೆ ಶಾರ್ಲಮೇನ್ ಜರ್ಮನ್‌ನಾಗಿದ್ದನೇ ಹೊರತು ಫ್ರೆಂಚ್ ಅಲ್ಲ). ಬಿಸ್‌ಮಾರ್ಕ್ 'ನಾವು ಕನೊಸ್ಸಾಗೆ ಹಿಂದಿರುಗುವುದಿಲ್ಲ' ಎಂದಾಗ ಅವನ ಇತಿಹಾಸಪ್ರಜ್ಞೆಯು ಕಂಡುಬರುತ್ತದೆ.

ಆದರೆ ಪ್ರಷ್ಯಾವು ರಾಜಕೀಯವಾಗಿ ಮೇಲುಗೈಯಾಗಿದ್ದರೂ, ಪಶ್ಚಿಮ ಜರ್ಮನಿಯ ಬಹುಭಾಗಗಳಿಗಿಂತ ಸಾಂಸ್ಕೃತಿಕವಾಗಿ ತುಂಬ ಹಿಂದುಳಿದಿತ್ತು; ಗಯಟೆಯನ್ನೂ ಒಳಗೊಂಡಂತೆ, ಅನೇಕ ಗಣ್ಯ ಜರ್ಮನ್‌ರು ಜೇನಾದಲ್ಲಿನ ನೆಪೋಲಿಯನ್‌ನ ಯಶಸ್ಸಿನ ಬಗ್ಗೆ ವಿಷಾದ ತೋರದಿದ್ದುದಕ್ಕೆ ಇದೇ ಕಾರಣ. ಹತ್ತೊಂಬತ್ತನೆಯ ಶತಮಾನದ ಆರಂಭದ ಹೊತ್ತಿಗೆ ಜರ್ಮನಿಯು ಸಾಂಸ್ಕೃತಿಕ

ಹಾಗೂ ಆರ್ಥಿಕವಾದ ಅಸಾಧಾರಣ ವೈವಿಧ್ಯವನ್ನು ಪಡೆದಿತ್ತು. ಪೂರ್ವ ಪ್ರಷ್ಯಾದಲ್ಲಿ ಗುಲಾಮಪದ್ಧತಿಯು ಇನ್ನೂ ಉಳಿದಿತ್ತು; ಹಳ್ಳಿಯ ಶ್ರೀಮಂತವರ್ಗದವರು ಗ್ರಾಮೀಣ ಅಜ್ಞಾನದಲ್ಲಿ ಮುಳುಗಿಹೋಗಿದ್ದರು, ದುಡಿಮೆಗಾರರು ಶಿಕ್ಷಣದ ಅ ಆ ಗಳನ್ನೂ ಹೊಂದಿರಲಿಲ್ಲ. ಮತ್ತೊಂದೆಡೆಯಲ್ಲಿ, ಪಶ್ಚಿಮ ಜರ್ಮನಿಯು ಪ್ರಾಚೀನತೆಯಲ್ಲಿ ಭಾಗಶಃ ರೋಮ್‌ಗೆ ಅಡಿಯಾಳಾಗಿತ್ತು; ಹದಿನೇಳನೆಯ ಶತಮಾನದಿಂದ ಅದು ಫ್ರೆಂಚ್ ಪ್ರಭಾವಗಳಿಗೆ ಒಳಗಾಗಿತ್ತು. ಅದನ್ನು ಫ್ರೆಂಚ್ ಕ್ರಾಂತಿಸೈನಿಕರು ಆಕ್ರಮಿಸಿಕೊಂಡಿದ್ದರು, ಹೀಗಾಗಿ ಫ್ರಾನ್ಸ್‌ನದರಂತಹ ಉದಾರವಾದಿ ಸಂಸ್ಥೆಗಳನ್ನು ಹೊಂದಿತ್ತು. ಕೆಲವು ಮಂದಿ ರಾಜರುಗಳು ಬುದ್ಧಿವಂತರಾಗಿದ್ದರು, ಕಲೆ ಮತ್ತು ವಿಜ್ಞಾನಗಳ ಪೋಷಕರಾಗಿದ್ದರು, ತಮ್ಮ ಆಸ್ಥಾನಗಳಲ್ಲಿ ನವೋದಯದ ರಾಜರನ್ನು ಅನುಕರಿಸುತ್ತಿದ್ದರು; ಅವರಲ್ಲಿ ಮೇಲೆದ್ದು ಕಾಣುವ ಉದಾಹರಣೆಯೆಂದರೆ ವೀಮರ್, ಅಲ್ಲಿ ಈ ಮಹಾ ಮಾಂಡಳಿಕನು ಗಯಟೆಯ ಪೋಷಕನಾಗಿದ್ದ. ತಮ್ಮ ಸ್ವಾತಂತ್ರ್ಯಕ್ಕೆ ಅಡ್ಡಿಯಾಗುವುದೆಂದು ರಾಜರುಗಳು ಸಹಜವಾಗಿಯೇ ಜರ್ಮನ್ ಐಕ್ಯಕ್ಕೆ ಬಹುತೇಕ ವಿರುದ್ಧವಾಗಿದ್ದರು. ಹೀಗಾಗಿ ಅವರು ದೇಶಪ್ರೇಮದ ವಿರೋಧಿಗಳಾಗಿದ್ದರು, ಅಂತೆಯೇ ಅವರನ್ನು ಆಶ್ರಯಿಸಿದ್ದ ಅನೇಕ ಗಣ್ಯರು, ಅವರಿಗೆ ನೆಪೋಲಿಯನ್‌ನು ಜರ್ಮನಿಯದಕಿಂತ ಉನ್ನತ ಸಂಸ್ಕೃತಿಯ ಹರಿಕಾರನಂತೆ ಕಾಣಿಸಿದ.

ಕ್ರಮೇಣವಾಗಿ, ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಾಟೆಸ್ಟೆಂಟ್ ಜರ್ಮನಿಯ ಸಂಸ್ಕೃತಿಯು ಹೆಚ್ಚು ಹೆಚ್ಚಾಗಿ ಪ್ರಷ್ಯನ್ ಆಯಿತು. ಒಬ್ಬ ಮುಕ್ತ ಚಿಂತಕನಾಗಿ ಹಾಗೂ ಫ್ರೆಂಚ್ ತತ್ವಜ್ಞಾನದ ಅಭಿಮಾನಿಯಾಗಿ ಫ್ರೆಡೆರಿಕ್ ಮಹಾಶಯನು ಬರ್ಲಿನ್ ಅನ್ನು ಒಂದು ಸಾಂಸ್ಕೃತಿಕ ಕೇಂದ್ರವಾಗಿ ಮಾಡಲು ಹೆಣಗಿದ; ಒಬ್ಬ ಗಣ್ಯ ಫ್ರೆಂಚ್‌ಮನ್ ಆದ ಮಾಪೆರ್‌ಟ್ಯೂಸ್ ಬರ್ಲಿನ್ ಅಕೆಡೆಮಿಗೆ ನಿರಂತರವಾಗಿ ಅಧ್ಯಕ್ಷನಾಗಿದ್ದ. ಆದರೆ ಅವನು ದುರದೃಷ್ಟವಶಾತ್, ವಾಲ್ಟೇರ್‌ನ ಮಾರಕ ವಿಡಂಬನೆಗೆ ಬಲಿಯಾದ. ಆ ಕಾಲದ ಇತರ ಬುದ್ಧಿವಂತ ನಿರಂಕುಶಾಧಿಕಾರಿಗಳಂತೆಯೇ ಫ್ರೆಡೆರಿಕ್‌ನ ಪ್ರಯತ್ನಗಳು ಆರ್ಥಿಕ ಅಥವಾ ರಾಜಕೀಯ ಸುಧಾರಣೆಗಳನ್ನು ಒಳಗೊಳ್ಳಲಿಲ್ಲ; ನಿಜವಾಗಿ ಸಾಧಿಸಿದ್ದೆಂದರೆ ಬಾಡಿಗೆ ಭಟ್ಟಂಗಿಗಳ ಒಂದು ತಂಡದ ರಚನೆ, ಅಷ್ಟೆ. ಅವನ ಮರಣಾನಂತರ, ಬಹುತೇಕ ಸಂಸ್ಕೃತಿವಂತರನ್ನು ಕಾಣುವಂತಾದುದು ಮತ್ತೆ ಪಶ್ಚಿಮ ಜರ್ಮನಿಯಲ್ಲಿಯೇ.

ಜರ್ಮನ್ ತತ್ವಜ್ಞಾನವು ಜರ್ಮನ್‌ಗಿಂತ ಪ್ರಷ್ಯನ್ ಸಾಹಿತ್ಯ ಮತ್ತು ಕಲೆಗಳಿಗೆ ಹೆಚ್ಚು ಸಂಬಂಧಪಟ್ಟಿತ್ತು. ಕ್ಯಾಂಟ್ ಫ್ರೆಡೆರಿಕ್ ಮಹಾಶಯನ ಪ್ರಜೆಯಾಗಿದ್ದ; ಫ್ಲಿಷ್ತೆ ಮತ್ತು ಹೆಗೆಲ್ ಬರ್ಲಿನ್‌ನಲ್ಲಿ ಪ್ರಾಧ್ಯಾಪಕರಾಗಿದ್ದರು. ಪ್ರಷ್ಯಾದ ಮೇಲೆ ಕ್ಯಾಂಟ್ ಮಾಡಿದ ಪ್ರಭಾವ ಅತ್ಯಲ್ಪ; ಹಾಗೆ ನೋಡಿದರೆ, ತನ್ನ ಉದಾರವಾದಿ ಮತಧಾರ್ಮಿಕ ಚಿಂತನೆಗಳಿಂದಾಗಿ ಪ್ರಷ್ಯಾದ ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿದ್ದ. ಫ್ಲಿಷ್ತೆ ಮತ್ತು

ಹೆಗೆಲ್ ಇಬ್ಬರೂ ಪ್ರಷ್ಯಾದ ತತ್ತ್ವಜ್ಞಾನದ ಮುಖವಾಣಿಗಳಾಗಿದ್ದರು, ಆನಂತರ ಜರ್ಮನ್ ದೇಶಭಕ್ತಿ ಮತ್ತು ಪ್ರಷ್ಯಾದ ಬಗೆಗಿನ ಮೆಚ್ಚಿಕೆಗಳ ಅಭಿನ್ನತೆಯನ್ನು ಗುರುತಿಸುವಲ್ಲಿ ಅವರ ಕಾರ್ಯವು ಹಿರಿದಾಗಿತ್ತು. ಈ ದೃಷ್ಟಿಯಲ್ಲಿ ಅವರ ಕಾರ್ಯವನ್ನು ಪ್ರಷ್ಯಾದ ದೊಡ್ಡ ದೊಡ್ಡ ಇತಿಹಾಸಕಾರರು, ಅದರಲ್ಲಿಯೂ ಮಾಮ್‌ಸೆನ್ ಮತ್ತು ಟ್ರೇಯಿಟ್ಸ್ಕೆ, ಮುಂದುವರಿಸಿದರು. ಕೊನೆಗೆ ಜರ್ಮನ್ ದೇಶವನ್ನು ಪ್ರಷ್ಯಾದಡಿಯಲ್ಲಿ ಒಗ್ಗೂಡಿಸಲು ಬಿಸ್ಮಾರ್ಕ್ ಅನ್ನು ಒಪ್ಪಿಸಿ, ಜರ್ಮನ್ ಸಂಸ್ಕೃತಿಯಲ್ಲಿನ ಕಡಿಮೆ ಅಂತಾರಾಷ್ಟ್ರೀಯ ಮನೋಭಾವದ ಜನರು ಗೆಲವು ಸಾಧಿಸಲು ಅನುವು ಮಾಡಿಕೊಟ್ಟ.

ಹೆಗೆಲ್ ಸಾವಿನ ನಂತರದ ಅವಧಿಯಾದ್ಯಂತ ಜರ್ಮನ್ ತತ್ತ್ವಜ್ಞಾನದ ಬಹುತೇಕ ಭಾಗವು ಸಾಂಪ್ರದಾಯಿಕವಾಗಿಯೇ ಉಳಿಯಿತು, ಹೀಗಾಗಿ ಅದು ಅಷ್ಟು ಮುಖ್ಯವಲ್ಲ. ಬ್ರಿಟಿಷ್ ಅನುಭವೈಕ ತಾತ್ವಿಕತೆಯು ಇಂಗ್ಲಂಡ್‌ನಲ್ಲಿ ಶತಮಾನದ ಕೊನೆಯ ಭಾಗದವರೆಗೂ, ಮತ್ತು ಫ್ರಾನ್ಸ್‌ನಲ್ಲಿ ಇನ್ನೂ ಸ್ವಲ್ಪ ಮುಂಚಿನವರೆಗೂ, ಪ್ರಬಲವಾಗಿತ್ತು; ಆನಂತರ, ಕ್ರಮೇಣವಾಗಿ, ಕ್ಯಾಂಟ್ ಮತ್ತು ಹೆಗೆಲ್, ತಾಂತ್ರಿಕ ತತ್ತ್ವಜ್ಞಾನದ ತಮ್ಮ ಗುರುಗಳಿಗೆ ಸಂಬಂಧಿಸಿದಂತೆ, ಫ್ರಾನ್ಸ್ ಮತ್ತು ಇಂಗ್ಲಂಡ್‌ಗಳ ವಿಶ್ವವಿದ್ಯಾನಿಲಯಗಳನ್ನು ಗೆದ್ದರು. ಆದರೆ ಸಾಮಾನ್ಯ ಸುಶಿಕ್ಷಿತ ಜನರ ಮೇಲೆ ಈ ಚಳುವಳಿಯ ಪ್ರಭಾವ ಅಷ್ಟಾಗಿ ಇರಲಿಲ್ಲ, ವಿಜ್ಞಾನಿಗಳಲ್ಲಿ ಕೆಲವರು ಮಾತ್ರ ಅದಕ್ಕೆ ಅಂಟಿಕೊಂಡಿದ್ದರು. ಅಕೆಡೆಮಿಕ್ ಪರಂಪರೆಯನ್ನು ಮುಂದುವರಿಸಿದ್ದ ಲೇಖಕರು – ಅನುಭವೈಕವಾದಿಗಳ ಕಡೆಯಲ್ಲಿ ಜಾನ್ ಸ್ಟೂಅರ್ಟ್ ಮಿಲ್, ಮತ್ತು ಜರ್ಮನ್ ಆದರ್ಶವಾದದ ಪಕ್ಷದಲ್ಲಿ ಲಾಟ್ಜೆ, ಸಿಗ್ವರ್ಟ್, ಬ್ರಾಡ್ಲೇ ಮತ್ತು ಬೊಸಾಂಕೆಟ್ – ಯಾರೂ ಮೊದಲ ಶ್ರೇಣಿಯ ತತ್ತ್ವಜ್ಞಾನಿಗಳ ಸಾಲಿಗೆ ಸೇರಿದವರಾಗಿರಲಿಲ್ಲ, ಅಂದರೆ ತಾವು ಒಟ್ಟಾರೆಯಾಗಿ ಅವರು ಅನುಸರಿಸುತ್ತಿದ್ದ ವಿಧಾನಗಳ ಪ್ರವರ್ತಕರ ಸಮಾನರಾಗಿರಲಿಲ್ಲ. ಅಕೆಡೆಮಿಕ್ ತತ್ತ್ವಜ್ಞಾನವು ಆ ಕಾಲದ ಅತ್ಯಂತ ವೀರ್ಯವಂತ ಚಿಂತನೆಗಳ ಸಂಪರ್ಕ, ಉದಾಹರಣೆಗೆ, ಹದಿನಾರು ಮತ್ತು ಹದಿನೇಳನೇ ಶತಮಾನಗಳಲ್ಲಿ – ಆಗಿನ್ನೂ ಮುಖ್ಯವಾಗಿ ಸೂಕ್ಷ್ಮತಾರ್ಕಿಕವಾಗಿದಾಗಿದ್ದಂತೆ – ಪಡೆದಿರಲಿಲ್ಲ. ಇದು ನಡೆದಾಗಲೆಲ್ಲ, ತತ್ತ್ವಜ್ಞಾನದ ಇತಿಹಾಸಕಾರನು ವೃತ್ತಿಪರರಲ್ಲದ ಮತಧರ್ಮ ವಿರೋಧಿಗಳಿಗಿಂತ ಪ್ರಾಧ್ಯಾಪಕರಿಗೆ ಕಡಿಮೆ ಪ್ರಾಮುಖ್ಯ ನೀಡುತ್ತಾನೆ.

ಫ್ರೆಂಚ್ ಕ್ರಾಂತಿಯ ಬಹುತೇಕ ತತ್ತ್ವಜ್ಞಾನಿಗಳು ವಿಜ್ಞಾನವನ್ನು ರೂಸೋಗೆ ಸಂಬಂಧಿಸಿದ ನಂಬಿಕೆಗಳೊಡನೆ ಸೇರಿಸಿದ್ದರು. ಹೆಲ್ವೇಷಿಯಸ್ ಮತ್ತು ಕಂಡಾರ್ಸೆಟ್ ಅವರನ್ನು ವೈಚಾರಿಕತೆ ಮತ್ತು ಉತ್ಸಾಹಗಳ ಸಮ್ಮಿಶ್ರಣದ ಮಾದರಿಗಳೆಂದು ಪರಿಗಣಿಸಬಹುದು.

ಹೆಲ್ವೇಷಿಯಸ್ (೧೭೧೫–೭೧)ನ 'ದ ಲ'ಸ್ಪಿಪಿರಿತ್' (೧೭೫೮) ಗ್ರಂಥವನ್ನು ಸೊರ್ಬೋನ್ ಖಂಡನೆಗೊಳಪಡಿಸಿತ್ತು, ಅದನ್ನು ವಧಕಾರ ಸುಟ್ಟಿದ್ದ. ಆ ಪುಸ್ತಕವನ್ನು

ಬೆಂಥೆಮ್ ೧೭೬೯ ರಲ್ಲಿ ಓದಿ, ತಕ್ಷಣವೇ ಕಾನೂನುರಚನೆಯ ತತ್ವಗಳಿಗೆ ತನ್ನ ಬದುಕನ್ನು ಮುಡಿಪಾಗಿಡಲು ನಿರ್ಧರಿಸಿ, 'ಭೌತವಿಜ್ಞಾನದ ಜಗತ್ತಿಗೆ ಬೇಕನ್ ಹೇಗೋ ನೈತಿಕತೆಗೆ ಹೆಲ್ವೇಷಿಯಸ್ ಹಾಗೆ. ಹೀಗಾಗಿ ನೈತಿಕ ಜಗತ್ತು ತನ್ನ ಬೇಕನ್ ಅನ್ನು ಹೊದಿದಂತಾಯಿತು, ಆದರೆ ಅದರ ಬ್ಯೂಟನ್ ಇನ್ನೂ ಉದಯಿಸಬೇಕಾಗಿದೆ' ಎಂದು ಉದ್ಗರಿಸಿದ. ಜೇಮ್ಸ್ ಮಿಲ್ ಹೆಲ್ವೇಷಿಯಸ್ ಅನ್ನು ತನ್ನ ಮಗ ಜಾನ್ ಸ್ಟೂಅರ್ಟ್‌ನ ಶಿಕ್ಷಣದ ಮಾರ್ಗದರ್ಶಕನೆಂದು ಪರಿಗಣಿಸಿದ.

ಮನಸ್ಸು ಎಂಬುದು ಖಾಲಿ ಹಲಗೆ (ಟ್ಯಾಬ್ಯುಲ ರಾಸ) ಎಂಬ ಲಾಕ್‌ನ ಸಿದ್ಧಾಂತಕ್ಕನುಗುಣವಾಗಿ ಹೆಲ್ವೇಷಿಯಸ್ ವ್ಯಕ್ತಿಗಳ ನಡುವಣ ವ್ಯತ್ಯಾಸವನ್ನು ಸಂಪೂರ್ಣವಾಗಿ ಶಿಕ್ಷಣದ ವ್ಯತ್ಯಾಸದಿಂದ ಆದದ್ದು ಎಂದು ಪರಿಗಣಿಸಿದ. ಪ್ರತಿ ವ್ಯಕ್ತಿಯಲ್ಲಿಯೂ, ಅವನ ಪ್ರತಿಭೆ ಮತ್ತು ನಡತೆಗಳು ಅವನು ಪಡೆದ ಶಿಕ್ಷಣದ ಪರಿಣಾಮಗಳು. ಮೇಧಾವಿಯು ಎಷ್ಟೋ ವೇಳೆ ಆಕಸ್ಮಿಕ: ಷೇಕ್ಸ್‌ಪಿಯರ್‌ನ ಕಳ್ಳತನವನ್ನು ಕಂಡಿಹಿಡಿಯದಿದ್ದರೆ ಅವನೊಬ್ಬ ಉಣ್ಣೆ ವ್ಯಾಪಾರಿಯಾಗುತ್ತಿದ್ದ. ಕಾನೂನುರಚನೆಯ ಅವನ ಆಸಕ್ತಿಯು ಬಂದದ್ದು ಹದಿಹರೆಯದ ಪ್ರಮುಖ ಶಿಕ್ಷಕರೆಂದರೆ ಸರ್ಕಾರದ ರೀತಿ ಮತ್ತು ಅದರ ಪರಿಣಾಮವಾದ ನಡಾವಳಿ ಮತ್ತು ರೂಢಿಗಳು ಎಂಬ ತತ್ವದಿಂದ. ಮನುಷ್ಯರು ತಿಳಿವಳಿಕೆಯಿಲ್ಲದೆ ಹುಟ್ಟುತ್ತಾರೆ, ಆದರೆ ಮೂರ್ಖರಲ್ಲ, ಅವರನ್ನು ಮೂರ್ಖರನ್ನಾಗಿಸುವುದು ಶಿಕ್ಷಣ.

ನೈತಿಕತೆಗೆ ಸಂಬಂಧಿಸಿದಂತೆ, ಹೆಲ್ವೇಷಿಯಸ್ ಒಬ್ಬ ಉಪಯುಕ್ತತಾವಾದಿ, ಸುಖವನ್ನು ಅವನು ಒಳ್ಳೆಯದೆಂದು ಪರಿಗಣಿಸಿದ್ದ. ಮತಧಾರ್ಮಿಕವಾಗಿ ಅವನೊಬ್ಬ ತಾರ್ಕಿಕ ದೈವವಾದಿ (ಡೀಯಿಸ್ಟ್), ಆದರೆ ಮತಧರ್ಮಬೋಧಕವಿರೋಧಿ. ಜ್ಞಾನಸಿದ್ಧಾಂತದಲ್ಲಿ ಅವನು ಲಾಕ್‌ನ ಸರಳೀಕೃತ ರೂಪವನ್ನು ಅಳವಡಿಸಿಕೊಂಡ: 'ಲಾಕ್‌ನಿಂದ ತಿಳಿವಳಿಕೆ ಪಡೆದು, ನಮ್ಮ ಪರಿಕಲ್ಪನೆಗಳಿಗೆ ನಾವು ಇಂದ್ರಿಯಗಳಿಗೆ, ಅದರ ಪರಿಣಾಮವಾಗಿ ಮನಸ್ಸಿಗೆ ಋಣಿಗಳು ಎಂಬುದು ನಮಗೆ ಗೊತ್ತಿದೆ.' ಭೌತಿಕ ಸಂವೇದನೆಯೇ ನಮ್ಮ ಕ್ರಿಯೆಗಳು, ಚಿಂತನೆಗಳು, ರಾಗಭಾವಗಳು ಮತ್ತು ನಮ್ಮ ಸಾಮಾಜಿಕತೆಗಳ ಏಕೈಕ ಕಾರಣ. ಜ್ಞಾನದ ಮೌಲಿಕತೆಯ ವಿಷಯದಲ್ಲಿ ಅವನು ಲಾಕ್‌ಗೆ ತೀವ್ರ ವಿರೋಧಿ, ಅವನು ಅದಕ್ಕೆ ಅತೀವ ಮಹತ್ವ ನೀಡುತ್ತಾನೆ.

ಅವನ ಸಿದ್ಧಾಂತವು ಆಶಾವಾದದ್ದು, ಜನರನ್ನು ಪರಿಪೂರ್ಣ ಮನುಷ್ಯರನ್ನಾಗಿ ಮಾಡುವುದು ಪರಿಪೂರ್ಣ ಶಿಕ್ಷಣ ಎಂದವನ ನಿಲವು. ಪುರೋಹಿತರು ದಾರಿ ತಪ್ಪಿದರೆ ಪರಿಪೂರ್ಣ ಶಿಕ್ಷಣವು ಯಾವುದೆಂದು ತಿಳಿಯುವುದು ಸುಲಭವೆಂಬ ಒಂದು ಸೂಚನೆಯಿದೆ.

ಕಂಡಾರ್ಸೆಟ್ (೧೭೪೩–೯೪) ಹೆಲ್ವೇಷಿಯಸ್‌ನದರಂತಹ ಅಭಿಪ್ರಾಯಗಳನ್ನು ಹೊಂದಿದ್ದ, ಆದರೆ ಅವನ ಮೇಲೆ ರೂಸೋನ ಪ್ರಭಾವ ಹೆಚ್ಚಾಗಿತ್ತು. ಮಾನವನು

ಸೂಕ್ಷ್ಮ ಚೇತಸ, ವಿಚಾರ ಮಾಡುವ ಮತ್ತು ನೈತಿಕ ಪರಿಕಲ್ಪನೆಗಳನ್ನು ರೂಪಿಸಿಕೊಳ್ಳಬಲ್ಲವನು, ಅದರಿಂದಾಗಿ ಮನುಷ್ಯರನ್ನು ಆಳುವವರು ಮತ್ತು ಪ್ರಜೆಗಳು, ಸುಳ್ಳುಗಾರರು ವಂಚಕರು ಎಂದು ವಿಭಜಿಸಲು ಸಾಧ್ಯವಿಲ್ಲ, ಎಂಬ ಒಂದು ಸತ್ಯದಿಂದ ಮಾನವನ ಹಕ್ಕುಗಳು ಸಾಧಿತವಾಗುತ್ತವೆ. 'ಉದಾರಿಯಾದ ಸಿಡ್ನಿ ಯಾವುದಕ್ಕೆ ತನ್ನ ಬದುಕನ್ನೇ ಕೊಟ್ಟನೋ ಮತ್ತು ಅವಕ್ಕೆ ತನ್ನ ಹೆಸರಿನ ಅಧಿಕೃತತೆಯನ್ನು ನೀಡಿದನೋ ಅಂಥ ಈ ತತ್ತ್ವಗಳನ್ನು ಆನಂತರ ರೂಸೋ ಮತ್ತಷ್ಟು ನಿಖರವಾಗಿ ರೂಪಿಸಿದ.' ಮಾನವ ಜ್ಞಾನದ ಪರಿಮಿತಿಯನ್ನು ಲಾಕ್ ಮೊದಲ ಬಾರಿಗೆ ತೋರಿಸಿಕೊಟ್ಟ. ಅವನ 'ವಿಧಾನವು ಬಹು ಬೇಗ ಎಲ್ಲ ತತ್ತ್ವಜ್ಞಾನಗಳದ್ದೂ ಆಯಿತು, ಅದನ್ನು ನೈತಿಕತೆ, ರಾಜಕೀಯ ಮತ್ತು ಆರ್ಥಿಕತೆಗಳಿಗೆ ಅನ್ವಯಿಸಿ ಈ ವಿಜ್ಞಾನಗಳಲ್ಲಿ ಪ್ರಾಕೃತಿಕ ವಿಜ್ಞಾನಗಳಲ್ಲಿನಂತಹ ಖಚಿತತೆಯನ್ನು ತರುವುದರಲ್ಲಿ ಅವರು ಯಶಸ್ಸಿಗಳಾದರು.'

ಕಂಡಾರ್ಸೆಟ್ ಅಮೆರಿಕನ್ ಕ್ರಾಂತಿಯನ್ನು ಹೆಚ್ಚು ಮೆಚ್ಚಿದ್ದ. 'ಅಟ್ಲಾಂಟಿಕ್‌ನ ಆ ಕಡೆಯ ತೀರದಲ್ಲಿ ಹುಟ್ಟಿದ ಇಂಗ್ಲಿಷ್ ಜನರು ಗ್ರೀನ್‌ವಿಚ್‌ನ ರೇಖೆಯಲ್ಲಿ ಹುಟ್ಟಿದ ಜನಗಳದರಂತಹುದೇ ಹಕ್ಕುಗಳಿಗೆ ಬಾಧ್ಯರಾಗಿರುತ್ತಾರೆ ಎಂದು ಬ್ರಿಟಿಷ್ ವಸಾಹತುಗಳ ನಿವಾಸಿಗಳಿಗೆ ಸರಳ ವ್ಯವಹಾರ ಜ್ಞಾನವು ಕಲಿಸಿತು.' ಸಂಯುಕ್ತ ಸಂಸ್ಥಾನಗಳ ಸಂವಿಧಾನವು ಸಹಜ ಹಕ್ಕುಗಳನ್ನು ಆಧರಿಸಿದೆ, ಮತ್ತು ಅಮೆರಿಕನ್ ಕ್ರಾಂತಿಯು ಮಾನವನ ಹಕ್ಕುಗಳನ್ನು, ನೇವಾದಿಂದ ಗೌಡಲ್‌ಕ್ವಿವಿರ್‌ನವರೆಗಿನ ಯೂರೋಪ್‌ನಾದ್ಯಂತ ತಿಳಿಯುವಂತೆ ಮಾಡಿತು. ಆದರೆ ಫ್ರೆಂಚ್ ಕ್ರಾಂತಿಯ ತತ್ವಗಳು 'ಅಮೆರಿಕನ್‌ರಿಗೆ ಮಾರ್ಗದರ್ಶಕವಾಗಿದ್ದವುಗಳಿಗಿಂತ ಹೆಚ್ಚು ಪರಿಶುದ್ಧ, ಹೆಚ್ಚು ನಿಖರ, ಹೆಚ್ಚು ಆಳ.' ಈ ಮಾತುಗಳನ್ನವನು ಬರೆದದ್ದು ಅವನು ರಾಬೆಸ್‌ಪಿಯರ್‌ನಿಂದ ಓಡಿ ಹೋಗಿ ಅಡಗಿಕೊಂಡಿದ್ದಾಗ; ಸ್ವಲ್ಪ ಕಾಲದ ಬಳಿಕ ಅವನನ್ನು ಹಿಡಿದು ಸೆರೆಯಲ್ಲಿಡಲಾಯಿತು. ಅವನು ಸೆರೆಮನೆಯಲ್ಲಿಯೇ ಸತ್ತನಾದರೂ, ಅವನು ಹೇಗೆ ಸತ್ತ ಎಂಬುದು ಖಚಿತವಾಗಿ ತಿಳಿಯದು.

ಅವನು ಹೆಂಗಸರ ಸಮಾನ ಹಕ್ಕುಗಳಲ್ಲಿ ನಂಬಿಕೆಯಿಟ್ಟುಕೊಂಡಿದ್ದವನು. ಮಾಲ್ತಸ್‌ನ ಜನಸಂಖ್ಯಾ ಸಿದ್ಧಾಂತವನ್ನು ಸೃಷ್ಟಿಸಿದವನೂ ಅವನೇ ಆದರೂ, ಅದು ಮಾಲ್ತಸ್ ಮೇಲೆ ಬೀರಿದ ದುಷ್ಪರಿಣಾಮಗಳಿಗೆ ಇವನು ಪಕ್ಕಾಗಲಿಲ್ಲ, ಯಾಕೆಂದರೆ ಅದನ್ನು ಸಂತಾನ ನಿಯಂತ್ರಣದ ಜೊತೆಗೆ ಸೇರಿಸಿದ್ದ.. ಮಾಲ್ತಸ್‌ನ ತಂದೆಯು ಕಂಡಾರ್ಸೆಟ್‌ನ ಶಿಷ್ಯ, ಅವನ ಮೂಲಕವಾಗಿ ಮಾಲ್ತಸ್‌ಗೆ ಈ ಸಿದ್ಧಾಂತ ಪರಿಚಯವಾಯಿತು. ಕಂಡಾರ್ಸೆಟ್ ಹೆಲ್ವೇಷಿಯಸ್‌ಗಿಂತ ಹೆಚ್ಚು ಉತ್ಸಾಹಶಾಲಿ ಮತ್ತು ಆಶಾವಾದಿ. ಫ್ರೆಂಚ್ ಕ್ರಾಂತಿಯ ತತ್ವಗಳನ್ನು ಪ್ರಚಾರ ಮಾಡುವುದರ ಮೂಲಕ ಎಲ್ಲ ಸಾಮಾಜಿಕ ರೋಗಗಳನ್ನು ಬಹುಬೇಗ ನಿವಾರಿಸಬಹುದು

ಎಂದವನು ನಂಬಿದ್ದ. ೧೮೩೪ ರ ನಂತರ ಅವನು ಬದುಕಿರದಿದ್ದುದು ಪ್ರಾಯಶಃ ಅವನ ಅದೃಷ್ಟ.

ಫ್ರೆಂಚ್ ಕ್ರಾಂತಿಯು ತತ್ವಜ್ಞಾನಿಗಳ ಸಿದ್ಧಾಂತವನ್ನು ಕಡಿಮೆ ಉತ್ಸಾಹಶೀಲವೂ ಹೆಚ್ಚು ನಿಖರವೂ ಆಗಿ ಮಾಡಿ ತಾತ್ವಿಕ ತೀವ್ರಗಾಮಿಗಳು ಇಂಗ್ಲಂಡ್‌ಗೆ ತಂದರು, ಅವರಲ್ಲಿ ಬೆಂಥಮ್‌ನನ್ನು ಮುಖ್ಯನೆಂದು ಗುರುತಿಸಲಾಗುತ್ತದೆ. ಮೊದಲಿಗೆ ಬೆಂಥಮ್ ಬಹುತೇಕ ಕಾನೂನಿನಲ್ಲಿ ಆಸಕ್ತನಾಗಿದ್ದ; ಕ್ರಮೇಣ, ವಯಸ್ಸಾದಂತೆ, ಅವನ ಆಸಕ್ತಿಗಳು ವಿಸ್ತಾರಗೊಂಡು ಅವನ ಅಭಿಪ್ರಾಯಗಳು ಹೆಚ್ಚು ದಮನಶೀಲವಾದವು. ೧೮೦೮ ರ ಬಳಿಕ ಅವನೊಬ್ಬ ಗಣರಾಜ್ಯವಾದಿಯಾದ, ಸ್ತ್ರೀಯರ ಸಮಾನ ಹಕ್ಕುಗಳ ಪ್ರತಿಪಾದಕನಾದ, ಸಾಮ್ರಾಜ್ಯಶಾಹಿಯ ಶತ್ರುವಾದ, ಮತ್ತು ರಾಜಿಯಾಗದ ಪ್ರಜಾಪ್ರಭುತ್ವವಾದಿಯಾದ. ತನ್ನ ಕೆಲವು ಅಭಿಪ್ರಾಯಗಳನ್ನವನು ಜೇಮ್ಸ್ ಮಿಲ್‌ನಿಂದ ಪಡೆದಿದ್ದ. ಇಬ್ಬರಿಗೂ ಶಿಕ್ಷಣದ ಸರ್ವಶಕ್ತತೆಯ ಬಗ್ಗೆ ನಂಬಿಕೆಯಿತ್ತು. 'ಬಹು ಹೆಚ್ಚು ಜನರ ಬಹು ಹೆಚ್ಚು ಸುಖ' ಎಂಬ ತತ್ವವನ್ನು ಬೆಂಥಮ್ ಅಳವಡಿಸಿಕೊಂಡುದು ಅವನ ಪ್ರಜಾಪ್ರಭುತ್ವವಾದಿ ನಿಲವಿನ ಕಾರಣ ಎಂಬುದರಲ್ಲಿ ಸಂದೇಹವಿಲ್ಲ, ಆದರೆ ಅದರಲ್ಲಿ ಮಾನವನ ಹಕ್ಕುಗಳ ಸಿದ್ಧಾಂತದ ವಿರೋಧವೂ ಸೇರಿಕೊಂಡಿತ್ತು, ಆದರೆ ಅದನ್ನವನು 'ಅವಿವೇಕಿತನ' ಎಂದು ಕಟುವಾಗಿ ಅಲ್ಲಗಳೆದ.

ತಾತ್ವಿಕ ತೀವ್ರಗಾಮಿಗಳು ಹೆಲ್ವೇಷಿಯಸ್ ಮತ್ತು ಕಂಡಾರ್ಸೆಟ್‌ರಂತಹವರಿಂದ ಅನೇಕ ರೀತಿಗಳಲ್ಲಿ ಭಿನ್ನ ನಿಲವು ತಾಳಿದವರು. ಅವರು ತಾತ್ಕಾಲಿಕವಾಗಿ ತಾಳ್ಮೆ ಹೊಂದಿ ತಮ್ಮ ಸಿದ್ಧಾಂತಗಳ ಕಾರ್ಯಸಾಧ್ಯ ವಿವರಗಳಲ್ಲಿ ತೊಡಗಿದ್ದರು. ಅವರು ಆರ್ಥಿಕತೆಗೆ ಹೆಚ್ಚು ಪ್ರಾಮುಖ್ಯವಿತ್ತರು, ತಾವು ಅದನ್ನೊಂದು ವಿಜ್ಞಾನವಾಗಿ ಬೆಳೆಸಿದ್ದೇವೆಂಬ ಭಾವನೆ ಅವರದು. ಬೆಂಥಮ್ ಮತ್ತು ಜಾನ್ ಸ್ಟೂವರ್ಟ್ ಮಿಲ್‌ರಲ್ಲಿದ್ದ, ಆದರೆ ಮಾಲ್ತಸ್ ಮತ್ತು ಜೇಮ್ಸ್ ಮಿಲ್‌ರಲ್ಲಿ ಇಲ್ಲದಿದ್ದ, ಉತ್ಸಾಹಶೀಲ ಪ್ರವೃತ್ತಿಗೆ ಈ 'ವಿಜ್ಞಾನ'ದಿಂದ, ಅದರಲ್ಲೂ ಮಾಲ್ತಸ್‌ನ ಜನಸಂಖ್ಯಾ ಸಿದ್ಧಾಂತದ ನಿರಾಶಾಭಾವನೆಯಿಂದ ತೀವ್ರ ತಡೆಯುಂಟಾಯಿತು. ಸಾಂಕ್ರಾಮಿಕ ರೋಗ ಬಂದ ನಂತರದ ಹೊರತು, ತಮ್ಮ ಮತ್ತು ತಮ್ಮ ಕುಟುಂಬದವರು ಜೀವನಕ್ಕೆ ಬೇಕಾದ ಕನಿಷ್ಠ ಹಣವನ್ನು ಮಾತ್ರ ಬಹುತೇಕ ದುಡಿಮೆಗಾರರು ಗಳಿಸಬೇಕೆಂದು ಆ ಸಿದ್ಧಾಂತವು ಪ್ರತಿಪಾದಿಸಿತ್ತು. ಬೆಂಥಮ್‌ವಾದಿಗಳು ಮತ್ತು ಅವರ ಫ್ರೆಂಚ್ ಪೂರ್ವವರ್ತಿಗಳಲ್ಲಿನ ದೊಡ್ಡ ವ್ಯತ್ಯಾಸವೆಂದರೆ ಕೈಗಾರಿಕಾಕೃತ ಇಂಗ್ಲಂಡ್‌ನಲ್ಲಿ ಯಜಮಾನರು ಮತ್ತು ದುಡಿಮೆಗಾರರ ನಡುವೆ ಉಗ್ರ ಸಂಘರ್ಷವಿದ್ದುದು, ಇದರಿಂದಾಗಿ ಕಾರ್ಮಿಕಸಂಘಟನೆ ಮತ್ತು ಸಮಾಜವಾದಗಳಿಗೆ ಎಡೆ ಮಾಡಿಕೊಟ್ಟುದು. ಈ ಸಂಘರ್ಷದಲ್ಲಿ ಬೆಂಥಮ್‌ವಾದಿಗಳು, ಸ್ಥೂಲವಾಗಿ ಹೇಳಬೇಕೆಂದರೆ, ಯಜಮಾನರ ಪರವಾಗಿ ನಿಂತರೇ ವಿನಾ ಕಾರ್ಮಿಕರ ಪರವಾಗಿ

ಅಲ್ಲ. ಆದರೆ ಅವರ ಕೊನೆಯ ಪ್ರತಿನಿಧಿಯಾದ ಜಾನ್ ಸ್ಟೂಅರ್ಟ್ ಮಿಲ್ ಕ್ರಮೇಣ ತನ್ನ ತಂದೆಯ ಕಠಿಣ ನಿಯಮಗಳಿಗೆ ಬದ್ಧನಾಗದೆ, ವಯಸ್ಸಾದಂತೆ, ಸಮಾಜವಾದಕ್ಕೆ ಕಡಿಮೆ ವಿರೋಧಿಯಾದ, ಹಾಗೂ ಸಾಂಪ್ರದಾಯಿಕ ಆರ್ಥಿಕತೆಯ ಚಿರಂತನ ಸತ್ಯದ ಬಗ್ಗೆ ಕಡಿಮೆ ನಂಬಿಕೆಯುಳ್ಳವನಾದ. ಅವನ ಆತ್ಮಚರಿತ್ರೆಯ ಪ್ರಕಾರ, ಈ ಮೃದುವಾಗುವ ಪ್ರಕ್ರಿಯೆಯು ಆರಂಭಗೊಂಡದ್ದು ರೊಮ್ಯಾಂಟಿಕ್ ಕವಿಗಳ ಕೃತಿಗಳನ್ನು ಓದುವುದರ ಪರಿಣಾಮವಾಗಿ.

ಮೊದಮೊದಲು ಸೌಮ್ಯರೂಪದ ಕ್ರಾಂತಿಕಾರಿಗಳಾಗಿದ್ದ ಬೆಂಥಮ್‌ವಾದಿಗಳು ಕ್ರಮೇಣ ಹಾಗೆ ಉಳಿಯಲಿಲ್ಲ, ಇದಕ್ಕೆ ಭಾಗಶಃ ಕಾರಣ ಬ್ರಿಟಿಷ್ ಸರ್ಕಾರವು ತಮ್ಮ ಕೆಲವು ಅಭಿಪ್ರಾಯಗಳನ್ನು ಅಳವಡಿಸಿಕೊಳ್ಳುವಂತೆ ಮಾಡುವುದರಲ್ಲಿ ಯಶಸ್ವಿಗಳಾದದ್ದು, ಮತ್ತು ಭಾಗಶಃ ಪ್ರಬಲಗೊಳ್ಳುತ್ತಿದ್ದ ಕಾರ್ಮಿಕಸಂಘಟನೆ ಮತ್ತು ಸಮಾಜವಾದಗಳ ಬಗೆಗಿನ ವಿರೋಧಭಾವನೆ. ಸಂಪ್ರದಾಯದ ವಿರುದ್ಧ ಬಂಡೇಳಬೇಕಾಗಿದ್ದ ಜನರೇ, ಈಗಾಗಲೇ ಹೇಳಿರುವಂತೆ, ಎರಡು ಗುಂಪುಗಳಲ್ಲಿದ್ದರು, ವೈಚಾರಿಕ ಮನೋಭಾವದವರು ಮತ್ತು ರೊಮ್ಯಾಂಟಿಕ್ ಮನೋಭಾವದವರು; ಆದರೆ ಈ ಎರಡೂ ಕಂಡಾರ್ಸೆಟ್ ಅಂತಹವರಲ್ಲಿ ಮಿಶ್ರಣಗೊಂಡಿತ್ತು. ಬೆಂಥಮ್‌ವಾದಿಗಳು ಬಹುತೇಕ ವೈಚಾರಿಕ ಮನೋಭಾವದವರು, ಮತ್ತು ಅವರಂತೆಯೇ, ಅವರ ಹಾಗೂ ಪ್ರಚಲಿತ ಆರ್ಥಿಕ ವ್ಯವಸ್ಥೆಗಳ ವಿರುದ್ಧ ಬಂಡಾಯವೆದ್ದಿದ್ದ ಸಮಾಜವಾದಿಗಳು. ಈ ಚಳುವಳಿಯು ಮಾರ್ಕ್ಸ್ ಬರುವವರೆಗೆ ಯಾವುದೇ ಪರಿಪೂರ್ಣ ತಾತ್ವಿಕ ಆಯಾಮವನ್ನು ಪಡೆದುಕೊಳ್ಳಲಿಲ್ಲ. ಅವನ ಬಗ್ಗೆ ಮುಂದೆ ಒಂದು ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಫ್ರೆಂಚ್ ಕ್ರಾಂತಿ ಮತ್ತು ಅದರ ನಿಕಟಪೂರ್ವದಲ್ಲಿದ್ದ ತತ್ವಜ್ಞಾನಿಗಳಿಂದ ಈ ಎರಡೂ ಪ್ರೇರಣೆಗೊಂಡಿದ್ದರೂ, ರೊಮ್ಯಾಂಟಿಕ್ ಬಂಡಾಯವು ವೈಚಾರಿಕ ಬಂಡಾಯದ ಸ್ವರೂಪಕ್ಕಿಂತ ಭಿನ್ನವಾದುದು. ರೊಮ್ಯಾಂಟಿಕ್ ಮಾದರಿಯನ್ನು ಬೈರನ್‌ನಲ್ಲಿ ತಾತ್ವಿಕೇತರ ವೇಷದಲ್ಲಿ ಕಾಣಬಹುದು, ಆದರೆ ಶಾಪೆನ್‌ಹಾವರ್ ಮತ್ತು ನೀಷೆ ಇವರುಗಳಲ್ಲಿ ಅದು ತಾತ್ವಿಕ ಭಾಷೆಯನ್ನು ಕಲಿತುಕೊಂಡಿತು. ಅದು ಬೌದ್ಧಿಕತೆಗಿಂತ ಇಚ್ಛಾಶಕ್ತಿಗೆ ಹೆಚ್ಚು ಮಾನ್ಯತೆ ಕೊಡುತ್ತದೆ, ಅದಕ್ಕೆ ತರ್ಕಸರಣಿಯ ಬಗ್ಗೆ ತಾಳ್ಮೆಯಿಲ್ಲ, ಹಾಗೂ ಕೆಲವು ಬಗೆಯ ಉಗ್ರತೆಯ ಪರವಾಗಿಯೂ ಇಲ್ಲ. ವ್ಯಾವಹಾರಿಕ ರಾಜಕೀಯದಲ್ಲಿ ಅದು ರಾಷ್ಟ್ರೀಯತೆಯ ಜೊತೆಗಿನ ಪ್ರಮುಖ ಪಾಲುದಾರ. ಎಲ್ಲ ಕಾಲದಲ್ಲಿ ಅಲ್ಲದಿದ್ದರೂ, ಪ್ರವೃತ್ತಿಯಲ್ಲಿ, ಸಾಮಾನ್ಯವಾಗಿ ವೈಚಾರಿಕತೆ ಎನ್ನುವುದಕ್ಕೆ ಅದು ವಿರುದ್ಧವಾದುದು ಹಾಗೂ ವಿಜ್ಞಾನವಿರುದ್ಧವಾದುದು. ಅದರ ಕೆಲವು ಅತಿರೇಕದ ರೂಪಗಳನ್ನು ರಷ್ಯಾದ ಅನಾಯಕತ್ವಪರರಾದವರಲ್ಲಿ ಕಾಣಬಹುದಾದರೂ ಕೊನೆಗೆ ರಷ್ಯಾದಲ್ಲಿ ಯಶಸ್ವಿಯಾದುದು ವೈಚಾರಿಕ ರೂಪದ

ಬಂಡಾಯ. ಎಲ್ಲ ಕಾಲದಲ್ಲಿಯೂ ಮಿಕ್ಕ ದೇಶಗಳಿಗಿಂತ ಹೆಚ್ಚಾಗಿ ರೊಮ್ಯಾಂಟಿಕ್ ಮನೋಭಾವದತ್ತ ವಾಲಿದ್ದ ಜರ್ಮನಿಯಲ್ಲಿ ಅದು ಸರ್ಕಾರದ ಬತ್ತಲೆ ಇಚ್ಛಾಶಕ್ತಿಯ ವಿಚಾರಶೂನ್ಯ ತಾತ್ವಿಕತೆಗೆ ಒಂದು ಹೊರದಾರಿಯನ್ನು ಒದಗಿಸಿತು.

ಇಲ್ಲಿಯವರೆಗೆ, ನಾವು ಪರಿಗಣಿಸುತ್ತಿದ್ದ ತಾತ್ವಿಕತೆಗಳು ಪ್ರೇರಣೆ ಪಡೆದದ್ದು ಸಾಹಿತ್ಯಕ ಅಥವಾ ರಾಜಕೀಯ ಸಾಂಪ್ರದಾಯಿಕತೆಯಿಂದ. ಆದರೆ ಇದರ ಮೂಲದಲ್ಲಿ ಬೇರೆ ಎರಡು ತಾತ್ವಿಕ ಅಭಿಪ್ರಾಯಗಳಿದ್ದವು, ಅವುಗಳೆಂದರೆ ವಿಜ್ಞಾನ ಮತ್ತು ಯಂತ್ರೋತ್ಪಾದಕತೆ. ಇವುಗಳಲ್ಲಿನ ಎರಡನೆಯದರ ಸೈದ್ಧಾಂತಿಕ ಪರಿಣಾಮವು ಆರಂಭವಾದದ್ದು ಮಾರ್ಕ್ಸ್‌ನಿಂದ, ಆಗಿನಿಂದ ಅದು ಕ್ರಮೇಣವಾಗಿ ಹೆಚ್ಚು ಪ್ರಾಮುಖ್ಯವನ್ನು ಹೊಂದಿದೆ. ಮೊದಲನೆಯದು ಪ್ರಮುಖವಾದದ್ದು ಹದಿನೇಳನೆಯ ಶತಮಾನದಿಂದಲಾದರೂ, ಅದು ಹತ್ತೊಂಬತ್ತನೆಯ ಶತಮಾನದಲ್ಲಿ ಹೊಸ ರೂಪಗಳನ್ನು ಪಡೆಯಿತು.

ಗೆಲಿಲಿಯೋ ಮತ್ತು ನ್ಯೂಟನ್‌ರುಗಳು ಹದಿನೇಳನೆಯ ಶತಮಾನದಲ್ಲಿ ಹೇಗೋ ಹಾಗೆ ಡಾರ್ವಿನ್ ಹತ್ತೊಂಬತ್ತನೆಯ ಶತಮಾನದಲ್ಲಿ. ಡಾರ್ವಿನ್ ಸಿದ್ಧಾಂತದಲ್ಲಿ ಎರಡು ಭಾಗಗಳಿವೆ: ಒಂದು ಕಡೆ, ಎಲ್ಲ ಬಗೆಯ ಜೀವಿಗಳು ಒಂದೇ ಮೂಲದಿಂದ ಬಂದವು ಎಂದು ಪ್ರತಿಪಾದಿಸುವ ವಿಕಾಸವಾದ. ಈಗ ಸಾಮಾನ್ಯವಾಗಿ ಒಪ್ಪಿತವಾಗಿರುವ ಈ ಸಿದ್ಧಾಂತವು ಹೊಸತೇನಾಗಿರಲಿಲ್ಲ. ಅದನ್ನು ಲಮಾರ್ಕ್ ಮತ್ತು ಡಾರ್ವಿನ್‌ನ ತಾತ ಎರಾಸ್ಮಸ್‌ರ ನಿಲವೂ ಆಗಿತ್ತು, ಅನಾಕ್ಸಿಮಾಂಡರ್‌ನನ್ನು ಉಲ್ಲೇಖಿಸಲೇಬೇಕಾಗಿಲ್ಲ. ಈ ಸಿದ್ಧಾಂತದ ಪುಷ್ಟಿಗೆ ಡಾರ್ವಿನ್ ಅಪಾರ ಪ್ರಮಾಣದ ಆಧಾರಗಳನ್ನು ಕಲೆಹಾಕಿದ; ಮತ್ತು ಅವನ ಸಿದ್ಧಾಂತದ ಎರಡನೆಯ ಭಾಗದಲ್ಲಿ ತಾನು ವಿಕಾಸದ ಕಾರಣವನ್ನು ಕಂಡುಹಿಡಿದಿರುವುದಾಗಿ ನಂಬಿಕೆಯನ್ನು ವ್ಯಕ್ತಪಡಿಸಿದ. ಈ ರೀತಿ ಅವನು ಈ ಸಿದ್ಧಾಂತಕ್ಕೆ ಹಿಂದೆ ಅದು ಹೊಂದಿರದಿದ್ದ ಜನಪ್ರಿಯತೆಯನ್ನೂ ವೈಜ್ಞಾನಿಕ ದೃಢತೆಯನ್ನೂ ತಂದಿತ್ತನಾದರೂ ಅವನೇನೂ ಅದರ ಜನಕನಲ್ಲ.

ಡಾರ್ವಿನ್‌ನ ಸಿದ್ಧಾಂತದ ಎರಡನೆಯ ಭಾಗ ಎಂದರೆ ಜೀವನ ಸಂಗ್ರಾಮ (ಸ್ಟ್ರಗಲ್ ಫಾರ್ ಎಕ್ಸಿಸ್ಟೆನ್ಸ್) ಮತ್ತು ಅರ್ಹತಮದ ಉಳಿವು (ಸರ್ವೈವಲ್ ಆಫ್ ದ ಫಿಟೆಸ್ಟ್). ಎಲ್ಲ ಪ್ರಾಣಿಗಳೂ ಸಸ್ಯಗಳೂ ತಮ್ಮ ಉಳಿವಿಗೆ ಆವಶ್ಯಕವಾದುದನ್ನು ಒದಗಿಸುವುದಕ್ಕಿಂತ ಹೆಚ್ಚು ವೇಗವಾಗಿ ಸಂತಾನೋತ್ಪತ್ತಿ ಮಾಡುತ್ತವೆ; ಹೀಗಾಗಿ ಪ್ರತಿ ಪೀಳಿಗೆಯಲ್ಲಿಯೂ ತಾವು ಸಂತಾನೋತ್ಪತ್ತಿ ಮಾಡುವ ಪ್ರಾಯ ತಲುಪುವ ಮುಂಚೆಯೇ ಸಾಯುತ್ತವೆ. ಯಾವುದು ಉಳಿಯುತ್ತವೆ ಎಂಬುದನ್ನು ನಿರ್ಧರಿಸುವುದು ಯಾವುದು? ಸ್ವಲ್ಪ ಮಟ್ಟಿಗೆ ಕೇವಲ ಅದೃಷ್ಟ ಎಂಬುದು ನಿಜವಾದರೂ, ಅದಕ್ಕೆ ಹೆಚ್ಚು ಮುಖ್ಯವಾದ ಬೇರೊಂದು ಕಾರಣವೂ ಇದೆ. ಪ್ರಾಣಿಗಳೂ ಸಸ್ಯಗಳೂ,

ಒಂದು ನಿಯಮದಂತೆ, ತಮ್ಮ ತಾಯ್ತಂದೆಯರ ತದ್ವತ್ತಾಗಿರದೆ ಸ್ವಲ್ಪಮಟ್ಟಿಗೆ, ತಿಳಿಯಬಹುದಾದ ಎಲ್ಲ ಲಕ್ಷಣಗಳಲ್ಲೂ ಹೆಚ್ಚೋ ಕಡಿಮೆಯೋ ಆಗಿದ್ದು ಭಿನ್ನವಾಗಿರುತ್ತವೆ. ಪರಿಸರವೊಂದರಲ್ಲಿ, ಒಂದೇ ಜೀವಜಾತದ ಸದಸ್ಯರು ತಮ್ಮ ಉಳಿವಿಗಾಗಿ ಸ್ಪರ್ಧಿಸುತ್ತವೆ, ಮತ್ತು ಯಾವುವು ಪರಿಸರಕ್ಕೆ ಹೆಚ್ಚು ನಿಕಟವಾಗಿ ಹೊಂದಿಕೊಂಡಿರುತ್ತವೆಯೋ ಅಂಥವು ಉಳಿವಿನ ಹೆಚ್ಚಿನ ಸಾಧ್ಯತೆಯನ್ನು ಹೊಂದುತ್ತವೆ. ಹೀಗಾಗಿ, ಆಕಸ್ಮಿಕ ಬದಲಾವಣೆಗಳಲ್ಲಿ, ಯಾವುವು ಉಳಿದುಕೊಳ್ಳುತ್ತವೆಯೋ ಅವು ಪ್ರತಿ ಪೀಳಿಗೆಯ ವಯಸ್ಕರಲ್ಲಿ ಮಿಗಿಲಾದವಾಗುತ್ತವೆ. ಹೀಗೆ ಕಾಲ ಕಾಲಕ್ಕೆ ಜಿಂಕೆಯು ಹೆಚ್ಚು ಹೆಚ್ಚು ಜೋರಾಗಿ ಓಡುತ್ತದೆ, ಬೆಕ್ಕುಗಳು ಹೆಚ್ಚು ಮೌನವಾಗಿ ತಮ್ಮ ಆಹಾರವನ್ನು ಕೂಡಿಡುತ್ತವೆ, ಮತ್ತು ಜಿರಾಫೆಗಳ ಕತ್ತು ನೀಳವಾಗುತ್ತ ಹೋಗುತ್ತವೆ. ಸಾಕಷ್ಟು ಕಾಲವಾದ ಬಳಿಕ, ಈ ವ್ಯವಸ್ಥೆಯು ಏಕಜೀವಿಯಿಂದ ಮಾನವ ಸಂಕುಲದವರೆಗಿನ ಬೆಳವಣಿಗೆಯನ್ನು ವಿವರಿಸಬಲ್ಲುದು ಎಂದು ಡಾರ್ವಿನ್ ವಾದಿಸಿದ.

ಡಾರ್ವಿನ್‌ನ ಸಿದ್ಧಾಂತದ ಈ ಭಾಗವು ಸಾಕಷ್ಟು ವಿವಾದಕ್ಕೊಳಗಾಗಿದೆ, ಹಾಗೂ ಬಹುತೇಕ ಜೀವವಿಜ್ಞಾನಿಗಳು ಅದು ಅನೇಕ ಪ್ರಮುಖ ಪರಿಮಿತಿಗಳಿಗೆ ಒಳಗಾಗುವಂತಹುದು ಎಂದು ಪರಿಗಣಿಸುತ್ತಾರೆ. ಆದರೆ ಹತ್ತೊಂಬತ್ತನೆಯ ಶತಮಾನದ ಚಿಂತನೆಗಳ ಇತಿಹಾಸಕಾರನಿಗೆ ಇವು ಅಷ್ಟೊಂದು ಮುಖ್ಯವಲ್ಲ. ಐತಿಹಾಸಿಕ ದೃಷ್ಟಿಕೋನದಿಂದ, ಕುತೂಹಲದಾಯಕವಾದುದೆಂದರೆ ತಾತ್ವಿಕ ತೀವ್ರಗಾಮಿಗಳ ಆರ್ಥಿಕತೆಯ ಲಕ್ಷಣವನ್ನು ಡಾರ್ವಿನ್ ಇಡೀ ಜೀವಸಂಕುಲಕ್ಕೆ ಅನ್ವಯಿಸಿದ್ದು. ಅವನ ಪ್ರಕಾರ, ವಿಕಾಸದ ಪ್ರೇರಕ ಶಕ್ತಿ ಎಂದರೆ ಮುಕ್ತ ಸ್ಪರ್ಧೆಯ ಜಗತ್ತಿನಲ್ಲಿನ ಒಂದು ಬಗೆಯ ಜೈವಿಕ ಆರ್ಥಿಕತೆ. ಮಾಲ್ತಸ್‌ನ ಜನಸಂಖ್ಯಾ ಸಿದ್ಧಾಂತವನ್ನು ಪ್ರಾಣಿಗಳು ಮತ್ತು ಸಸ್ಯಗಳ ಜಗತ್ತಿಗೂ ಅನ್ವಯಿಸಿದ್ದು, ಡಾರ್ವಿನ್‌ನಿಗೆ ಜೀವನ ಸಂಗ್ರಾಮ ಮತ್ತು ಅರ್ಹತಮದ ಉಳಿವುಗಳು ವಿಕಾಸದ ಮೂಲ ಎಂಬ ಸೂಚನೆ ನೀಡಿತು.

ಡಾರ್ವಿನ್ ಸ್ವತಃ ಉದಾರವಾದಿಯಾಗಿದ್ದ, ಆದರೆ ಅವನ ಸಿದ್ಧಾಂತಗಳು ಸಾಂಪ್ರದಾಯಿಕ ಉದಾರವಾದಕ್ಕೆ ಸ್ವಲ್ಪ ಮಟ್ಟಿಗೆ ವಿರುದ್ಧವಾದುದಾಗಿತ್ತು. ಎಲ್ಲ ಮನುಷ್ಯರೂ ಹುಟ್ಟಿನಲ್ಲಿ ಸಮಾನರು ಎಂಬ, ಮತ್ತು ವಯಸ್ಕರಲ್ಲಿನ ವ್ಯತ್ಯಾಸಗಳಿಗೆ ಶಿಕ್ಷಣವೇ ಕಾರಣ ಎಂಬ ಸಿದ್ಧಾಂತವು ಒಂದೇ ಜೀವಜಾತದ ಸದಸ್ಯರ ನಡುವಣ ಹುಟ್ಟಿನ ವ್ಯತ್ಯಾಸಗಳಿಗೆ ಅವನು ನೀಡಿದ್ದ ಪ್ರಾಮುಖ್ಯಕ್ಕೆ ಹೊಂದಿಕೆಯಾಗುವಂತಿರಲಿಲ್ಲ. ಲಮಾರ್ಕ್ ಹೇಳಿದಂತೆ ಮತ್ತು ಒಂದು ಹಂತದವರೆಗೆ ಡಾರ್ವಿನ್‌ನೂ ಒಪ್ಪಲು ಸಿದ್ಧವಾಗಿದ್ದಂತೆ, ಗಳಿಸಿದ ಲಕ್ಷಣಗಳು ವಾಂಶಿಕವಾಗಿ ಬಂದವು ಎಂಬ ಹೆಲ್ವೇಷಿಯಸ್‌ನ ದೃಷ್ಟಿಕೋನಕ್ಕೆ ವಿರುದ್ಧವಾಗಿ ಸ್ವಲ್ಪಮಟ್ಟಿಗೆ ಮೃದುವಾಗಬಹುದಾಗಿತ್ತು;

ಆದರೆ ಕೆಲವು ಮುಖ್ಯವಲ್ಲದ ಅಪವಾದಗಳನ್ನು ಬಿಟ್ಟರೆ, ಕೇವಲ ಹುಟ್ಟಿನಿಂದ ಬಂದ ಲಕ್ಷಣಗಳು ವಾಂಶಿಕವಾದವು ಎಂದು ತೋರುತ್ತದೆ. ಹೀಗೆ ಜನರ ನಡುವಣ ವಾಂಶಿಕ ವ್ಯತ್ಯಾಸಗಳು ಮೂಲಭೂತ ಪ್ರಾಮುಖ್ಯವನ್ನು ಗಳಿಸುತ್ತದೆ.

ವಿಕಾಸವಾದದ ಮತ್ತೊಂದು ಪರಿಣಾಮವೂ ಇದೆ, ಅದು ಡಾರ್ವಿನ್ ಸೂಚಿಸಿದ್ದ ನಿರ್ದಿಷ್ಟ ವ್ಯವಸ್ಥೆಗೆ ಬೇರೆಯಾದದ್ದು. ಮನುಷ್ಯರು ಮತ್ತು ಪ್ರಾಣಿಗಳಿಗೆ ಒಂದೇ ಮೂಲವಿದ್ದರೆ, ಮನುಷ್ಯರು ಅಷ್ಟೊಂದು ನಿಧಾನವಾಗಿ ವಿಕಾಸಗೊಂಡಿದ್ದರೆ, ಇದ್ದ ಎಷ್ಟೋ ಜೀವಿಗಳು ಮಾನವ ಅಥವಾ ಅಲ್ಲ ಎಂದು ನಾವು ತಿಳಿಯಲಾರದ ಸ್ಥಿತಿಯಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ: ವಿಕಾಸದ ಯಾವ ಹಂತದಲ್ಲಿ ಮಾನವರು ಅಥವಾ ಅವರ ಅರೆಮಾನವ ಪೂರ್ವಿಕರು, ಸಮಾನವಾಗಲು ತೊಡಗಿದರು? ಪಿತಿಕ್ಯಾಂಥ್ರೊಪಸ್ ಇರಕ್ಟಸ್‌ಗೆ ಸಮರ್ಪಕ ರೀತಿಯ ಶಿಕ್ಷಣ ನೀಡಿದ್ದರೆ ಅವನೂ ನ್ಯೂಟನ್ ಮಾಡಿದಂತಹ ಕೆಲಸವನ್ನು ಮಾಡುತ್ತಿದ್ದನೇ? ಪಿಲ್ಟ್‌ಡೌನ್ ಮನುಷ್ಯನು, ಅವನಿಗೆ ಕಳ್ಳತನ ಮಾಡಲು ಹೇಳಿಕೊಟ್ಟಿದ್ದರೆ, ಷೇಕ್ಸ್‌ಪಿಯರ್ ಬರೆದಂತಹ ಕಾವ್ಯವನ್ನು ಅವನೂ ರಚಿಸುತ್ತಿದ್ದನೇ? ಈ ಪ್ರಶ್ನೆಗಳಿಗೆ ಉತ್ತರಿಸುವ ದೃಢನಾದ ಸಮಾನತಾವಾದಿಯು ಹೌದು ಎಂದು ಉತ್ತರಿಸಿದರೆ, ಅವನು ಮಾನವಕಪಿಗಳನ್ನು ಮಾನವರಿಗೆ ಸಮಾನವೆಂದು ಒಪ್ಪಿಕೊಳ್ಳಲೇಬೇಕಾಗುತ್ತದೆ. ಮಾನವಕಪಿಗಳಿಗೆ ಏಕೆ ನಿಲ್ಲಿಸುವುದು? ಸಿಂಪಿಗೆ ಮತದಾನದ ಹಕ್ಕಿರಬೇಕೆಂದು ಯಾರಾದರೂ ವಾದಿಸಿದರೆ ಅಂಥವನನ್ನು ವಿರೋಧಿಸುವುದು ಹೇಗೆ? ವಿಕಾಸವಾದಕ್ಕೆ ಅಂಟಿಕೊಂಡಿರುವವನು ಎಲ್ಲ ವ್ಯಕ್ತಿಗಳ ನಡುವಣ ಸಮಾನತೆಯನ್ನು ಒಪ್ಪಿಕೊಳ್ಳಬೇಕಲ್ಲದೆ, ಮಾನವನ ಹಕ್ಕುಗಳನ್ನೂ ಒಪ್ಪಿಕೊಳ್ಳಬೇಕು ಎನ್ನುವುದನ್ನು ಅಜೈವಿಕವೆಂದು ಖಂಡಿಸಬೇಕು, ಯಾಕೆಂದರೆ ಅದು ಮನುಷ್ಯ ಮತ್ತು ಇತರ ಪ್ರಾಣಿಗಳ ನಡುವಣ ವ್ಯತ್ಯಾಸಕ್ಕೆ ತೀರ ಹೆಚ್ಚಿನ ಮಹತ್ವ ನೀಡುತ್ತದೆ.

ಆದರೆ ಉದಾರವಾದಕ್ಕೆ ಮತ್ತೊಂದು ಆಯಾಮವೂ ಇದೆ, ಅದು ವಿಕಾಸವಾದ ಸಿದ್ಧಾಂತದಿಂದ ತುಂಬ ಪುಷ್ಟಿ ಪಡೆಯಿತು, ಅದೆಂದರೆ ಪ್ರಗತಿಯ ಬಗೆಗಿನ ನಂಬಿಕೆ. ಎಲ್ಲಿಯವರೆಗೆ ಜಗತ್ತಿನ ಪರಿಸ್ಥಿತಿಯು ಆಶಾವಾದಕ್ಕೆ ಪೂರಕವಾಗಿರುವುದೋ, ಅಲ್ಲಿಯವರೆಗೆ ಉದಾರವಾದಿಗಳು ವಿಕಾಸವನ್ನು ಸ್ವಾಗತಿಸಿದರು, ಈ ಕಾರಣದಿಂದಲ್ಲದೆ, ಅದು ಸಂಪ್ರದಾಯನಿಷ್ಠ ಮತಧರ್ಮಶಾಸ್ತ್ರದ ವಿರುದ್ಧ ಹೊಸ ವಾದಗಳಿಗೆ ಎಡೆಗೊಟ್ಟಿತು. ಅವನ ಸಿದ್ಧಾಂತಗಳು ಕೆಲವಂಶಗಳಲ್ಲಿ ಡಾರ್ವಿನ್ ಪೂರ್ವದವಾಗಿದ್ದರೂ ಮಾರ್ಕ್ಸ್‌ನೇ ತನ್ನ ಪುಸ್ತಕವನ್ನು ಡಾರ್ವಿನ್‌ಗೆ ಸಮರ್ಪಿಸಲು ಬಯಸಿದ.

ವಿಜ್ಞಾನದಿಂದ ಪ್ರಭಾವಿತರಾಗಿದ್ದವರು ಜೀವವಿಜ್ಞಾನ ಹೊಂದಿದ್ದ ಘನತೆಯ ಸ್ಥಾನದಿಂದಾಗಿ ಜಗತ್ತಿಗೆ ಯಾಂತ್ರಿಕತೆ ಬದಲು ಜೀವವೈಜ್ಞಾನಿಕ ವರ್ಗೀಕರಣವನ್ನು

ಅನ್ವಯಿಸುವಂತೆ ಮಾಡಿತು. ಪ್ರತಿಯೊಂದೂ ವಿಕಾಸಶೀಲವಾಗಿದೆಯೆಂದು ಭಾವಿಸಲಾಯಿತು, ಮತ್ತು ಒಂದು ಸಮೀಪದ ಗುರಿಯನ್ನು ಕಂಡುಕೊಳ್ಳುವುದು ಸುಲಭವಾಗಿತ್ತು. ಡಾರ್ವಿನ್‌ನ ಹೊರತಾಗಿಯೂ ಅನೇಕರು ವಿಕಾಸಶೀಲತೆಯು ವಿಶ್ವಾತ್ಮಕ ಉದ್ದೇಶವನ್ನು ಸಮರ್ಥಿಸುತ್ತದೆ ಎಂದು ನಂಬಿದರು. ಜೀವಿಯ ಪರಿಕಲ್ಪನೆಯು ಪ್ರಕೃತಿ ನಿಯಮಗಳು ವೈಜ್ಞಾನಿಕ ಹಾಗೂ ತಾತ್ವಿಕ ವಿವರಣೆಗಳಿಗೆ ಕೀಲಿಕೈ ಎಂದು ಮತ್ತು ಹದಿನೆಂಟನೆಯ ಶತಮಾನದ ಅಣುಸಿದ್ಧಾಂತವನ್ನು ಓಬಿರಾಯನ ಕಾಲದ್ದು ಎಂದು ಭಾವಿಸಲಾಯಿತು. ಈ ದೃಷ್ಟಿಕೋನವು ಕೊನೆಯಲ್ಲಿ ಸೈದ್ಧಾಂತಿಕ ಭೌತವಿಜ್ಞಾನದ ಮೇಲೂ ಪ್ರಭಾವ ಬೀರಿತು. ರಾಜಕೀಯದಲ್ಲಿ ಅದು ಸಹಜವಾಗಿಯೇ ವ್ಯಕ್ತಿಯ ಬದಲಿಗೆ ಸಮುದಾಯಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡಲು ಈ ದೃಷ್ಟಿಕೋನವು ಸಹಾಯಕವಾಯಿತು. ಹೆಚ್ಚುತ್ತಿದ್ದ ಸರ್ಕಾರದ ಅಧಿಕಾರದ ಜೊತೆ ಮತ್ತು ಡಾರ್ವಿನ್‌ನ ಅರ್ಹತಮದ ಉಳಿವು ಸಿದ್ಧಾಂತವು ವ್ಯಕ್ತಿಗಿಂತ ರಾಷ್ಟ್ರಗಳಿಗೆ ಅನ್ವಯಿಸಲು ಅನುಕೂಲಕರವಾಗಿ ಇದು ರಾಷ್ಟ್ರೀಯತೆಗೂ ಹೊಂದಿಕೊಂಡಿತು. ಈಗ ನಾವಿಲ್ಲಿ ಹಾದು ಹೋಗುತ್ತಿರುವುದು ವೈಜ್ಞಾನಿಕ ಸಿದ್ಧಾಂತಗಳನ್ನು ತಪ್ಪಾಗಿ ಅರ್ಥೈಸುವುದರ ಮೂಲಕ ಸಾಮಾನ್ಯ ಜನತೆಯಲ್ಲಿ ಉಂಟುಮಾಡಿದ ವೈಜ್ಞಾನಿಕಾತೀತ ದೃಷ್ಟಿಕೋನಗಳನ್ನು.

ಜೀವವಿಜ್ಞಾನವು ಜಗತ್ತಿನ ಬಗೆಗಿನ ಯಾಂತ್ರಿಕ ದೃಷ್ಟಿಕೋನದ ವಿರುದ್ಧವಾಗಿರುವುದರ ಜೊತೆಗೆ, ಆಧುನಿಕ ಆರ್ಥಿಕ ತಂತ್ರವು ತದ್ವಿರುದ್ಧವಾದ ಪರಿಣಾಮವನ್ನು ಬೀರಿತು. ಹದಿನೆಂಟನೆಯ ಶತಮಾನದ ಕೊನೆಯವರೆಗೂ ವೈಜ್ಞಾನಿಕ ಸಿದ್ಧಾಂತಗಳ ಬದಲಾಗಿ ವೈಜ್ಞಾನಿಕ ತಂತ್ರಗಳು ಸಾರ್ವಜನಿಕ ಅಭಿಪ್ರಾಯದ ಮೇಲೆ ಪ್ರಮುಖ ಬದಲಾವಣೆಯನ್ನೇನೂ ಉಂಟುಮಾಡಲಿಲ್ಲ. ಕೈಗಾರಿಕೀಕರಣದ ಬೆಳವಣಿಗೆಯಿಂದಾಗಿಯೇ ತಂತ್ರಗಳು ಜನರ ಆಲೋಚನಾಕ್ರಮದ ಮೇಲೆ ಪ್ರಭಾವ ಬೀರುವಂತಾದುದು. ಆಗಲೂ ಕೂಡ, ಬಹಳ ದೀರ್ಘ ಕಾಲ, ಈ ಪ್ರಭಾವವು ಹೆಚ್ಚು ಕಡಿಮೆ ಪರೋಕ್ಷವಾದುದು. ತಾತ್ವಿಕ ಸಿದ್ಧಾಂತಗಳನ್ನು ಸೃಷ್ಟಿಸುವ ಜನರು ಒಂದು ನಿಯಮವೆಂಬಂತೆ ಯಂತ್ರಗಳ ಜೊತೆಗೆ ಕನಿಷ್ಠ ಸಂಬಂಧವನ್ನು ಹೊಂದಿದ್ದರು. ಇದುವರೆಗೂ ಸುಂದರವಾಗಿದ್ದ ಜಾಗಗಳಲ್ಲಿ ಕೈಗಾರಿಕೀಕರಣವು ಉಂಟುಮಾಡುತ್ತಿದ್ದ ವಿಕೃತಿಯನ್ನು ಹಾಗೂ 'ವ್ಯಾಪಾರ'ದ ಮೂಲಕ ಹಣ ಗಳಿಸಿದ್ದ ಜನರ (ಅವರು ಭಾವಿಸಿದ್ದಂತೆ) ಕೀಳುತನವನ್ನು ಕಂಡು ರೊಮ್ಯಾಂಟಿಕ್‌ರು ಅದನ್ನು ಗಮನಿಸಿದರು ಮತ್ತು ದ್ವೇಷಿಸಿದರು. ಇದರಿಂದಾಗಿ ಅವರು, ತಮ್ಮನ್ನು ಸಾಮಾನ್ಯ ಜನತೆಯ ಸಮರ್ಥಕರೆಂದು ಬಿಂಬಿಸಿದ್ದ ಮಧ್ಯಮವರ್ಗಕ್ಕೆ ವಿರುದ್ಧವಾಗಿ ನಿಂತರು. ಇಂಗ್ಲಿಷ್‌ರು, ಕಾರ್ಲೈಲ್ ಬಯಸಿದ್ದು ದುಡಿಮೆಗಾರರ ವಿಮೋಚನೆಯನ್ನಲ್ಲ, ಬದಲಿಗೆ ತಮ್ಮ ಮಧ್ಯಮವರ್ಗದ ಯಜಮಾನರಿಗೆ ಅವರು ಅಧೀನರಾಗಿರಬೇಕು ಎಂಬುದನ್ನು

ಎಂದು ಗಮನಿಸದೆ, ಕಾರ್ಲೈಲ್ ಅನ್ನು ಹೊಗಳಿದರು. ಸಮಾಜವಾದಿಗಳು ಕೈಗಾರಿಕೀಕರಣವನ್ನು ಸ್ವಾಗತಿಸಿದರು, ಆದರೆ ಕೈಗಾರಿಕಾ ಕಾರ್ಮಿಕರನ್ನು ಯಜಮಾನರ ಅಡಿಯಾಳಾಗಿರುವುದರಿಂದ ತಪ್ಪಿಸಬೇಕೆಂದು ಆಶಿಸಿದರು. ತಾವು ಪರಿಗಣಿಸಿದ್ದ ಕೈಗಾರಿಕೀಕರಣದ ಸಮಸ್ಯೆಗಳಿಂದ ಅವರು ಪ್ರಭಾವಿತರಾಗಿದ್ದರೇ ಹೊರತು ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ವಿಷಯದಲ್ಲಿ ಹೆಚ್ಚೇನೂ ಯೋಚಿಸಲಿಲ್ಲ.

ಜಗತ್ತಿನ ಕಲ್ಪನೆಯ ಮೇಲೆ ಯಂತ್ರೋತ್ಪನ್ನವು ಮಾಡಿದ ಅತ್ಯಂತ ಪ್ರಮುಖ ಪರಿಣಾಮವೆಂದರೆ, ಮಾನವ ಸಾಮರ್ಥ್ಯದ ಅಪರಿಮಿತ ಸಾಧ್ಯತೆಗಳ ಬಗ್ಗೆ. ಇದು ಚರಿತ್ರೆಯ ಮುಂಬೆಳಗಿಗೆ ಮುಂಚೆ, ಜನರು ಕಾಡುಪ್ರಾಣಿಗಳ ಬಗೆಗಿನ ಭಯವನ್ನು ಆಯುಧಗಳನ್ನು ಸೃಷ್ಟಿಸಿಕೊಳ್ಳುವ ಮೂಲಕವೂ ಹಸಿವಿನ ಭಯವನ್ನು ಕೃಷಿಯ ಮೂಲಕವೂ ಹೋಗಲಾಡಿಸಿಕೊಂಡಿದ್ದ ಪ್ರಕ್ರಿಯೆಯು ಪಡೆದುಕೊಂಡಿದ್ದ ತೇಜಿ ಮಾತ್ರವಾಗಿತ್ತು. ಆದರೆ ಈಗ ಉಂಟಾದ ವೇಗವರ್ಧನೆಯು ಎಷ್ಟು ತೀವ್ರವಾಗಿತ್ತೆಂದರೆ, ಆಧುನಿಕ ತಂತ್ರಗಳು ಸೃಷ್ಟಿಸಿದ್ದ ಹೊಸ ಸಾಮರ್ಥ್ಯವನ್ನು ನಿಭಾಯಿಸುತ್ತಿದ್ದವರಲ್ಲಿ ಇದು ಮೂಲಭೂತವಾದ ಹೊಸ ದೃಷ್ಟಿಕೋನವನ್ನು ಉಂಟುಮಾಡಿತ್ತು. ಹಿಂದಿನ ಕಾಲಗಳಲ್ಲಾದರೆ ಪರ್ವತಗಳೂ ಜಲಪಾತಗಳೂ ಸಹಜ ವಿದ್ಯಮಾನಗಳಾಗಿದ್ದವು; ಈಗಲಾದರೋ ಅನನುಕೂಲ ಪರ್ವತವನ್ನು ತೊಡೆದುಹಾಕಬಹುದು ಮತ್ತು ಅನುಕೂಲಕರ ಜಲಪಾತವನ್ನು ಸೃಷ್ಟಿಸಬಹುದಾಗಿತ್ತು. ಹಿಂದಿನ ಕಾಲಗಳಲ್ಲಿ, ಮರಳುಗಾಡುಗಳೂ ಬೇಸಾಯಯೋಗ್ಯ ಭೂಮಿಗಳೂ ಇದ್ದವು, ಈಗಲಾದರೋ ಜನರು ಬಯಸಿದರೆ ಮರಳುಗಾಡು ಗುಲಾಬಿಯಂತೆ ಅರಳುವ ಹಾಗೆ ಮಾಡಬಹುದಾಗಿತ್ತು, ಹಾಗೂ ಬೇಸಾಯಯೋಗ್ಯ ಪ್ರದೇಶವನ್ನು ಅರೆಬೆಂದ ವಿಜ್ಞಾನ ಆಶಾವಾದಿಗಳು ಮರಳುಗಾಡಾಗಿ ಪರಿವರ್ತಿಸಬಹುದಾಗಿತ್ತು. ಹಳೆಯ ಕಾಲದಲ್ಲಾದರೆ, ರೈತರು ತಮ್ಮ ಪೂರ್ವಿಕರಂತೆ ಬದುಕಿದ್ದರು, ತಮ್ಮ ಪೂರ್ವಿಕರ ನಂಬಿಕೆಗಳನ್ನೇ ಹೊಂದಿದ್ದರು; ಚರ್ಚ್‌ನ ಯಾವ ಅಧಿಕಾರವೂ ಅಕ್ರೈಸ್ತ ಆಚರಣೆಗಳು ತೊಡೆದುಹಾಕಲಾಗಿರಲಿಲ್ಲ, ಅದರ ಬದಲಿಗೆ ಸ್ಥಳಿಯ ಸಂತರೊಡನೆ ತಳುಕು ಹಾಕಿ ಅವುಗಳಿಗೆ ಕ್ರೈಸ್ತ ವೇಷ ತೊಡಿಸಬೇಕಾಗಿತ್ತು. ಈಗಾಲಾದರೆ ರೈತರ ಮಕ್ಕಳು ಶಾಲೆಯಲ್ಲಿ ಏನೇನು ಕಲಿಯಬೇಕೆಂಬುದನ್ನು ಅಧಿಕಾರಿಗಳು ನಿರ್ಧರಿಸಬಹುದಾಗಿತ್ತು, ಒಂದೇ ಪೀಳಿಗೆಯಲ್ಲಿ ಕೃಷಿಯ ಬಗೆಗಿನ ಮನೋಭಾವವನ್ನು ಬದಲಿಸಬಹುದಾಗಿತ್ತು; ಇದನ್ನು ರಷ್ಯಾದಲ್ಲಿ ಸಾಧಿಸಲಾಗಿದೆಯೆಂದು ತಿಳಿದುಬರುತ್ತದೆ.

ಹೀಗೆ, ಆಗುಹೋಗುಗಳನ್ನು ನಿರ್ಧರಿಸುವವರು ಅಥವಾ ಅಂತಹವರ ಸಂಪರ್ಕವಿರುವವರು ಅಧಿಕಾರದಲ್ಲಿ ಹೊಸ ನಂಬಿಕೆಯನ್ನು ತಳೆಯುವಂತಾಯಿತು; ಮೊದಲಿಗೆ, ಪ್ರಕೃತಿಯೊಡನೆ ಸಂಘರ್ಷಿಸಬೇಕಾದ ಮನುಷ್ಯನ ಸಾಮರ್ಥ್ಯ, ಆನಂತರ ಆಳ್ವಿಕೆ ಮಾಡುವವರ ಅಧಿಕಾರದ ವಿರುದ್ಧವಾಗಿ ತಾವು ನಿಯಂತ್ರಿಸಬಯಸುವ

ಜನರ ನಂಬಿಕೆಗಳು ಮತ್ತು ಆಕಾಂಕ್ಷೆಗಳನ್ನು ಬದಲಾಯಿಸಬಹುದಾದ ವೈಜ್ಞಾನಿಕ ಪ್ರಚಾರದ, ವಿಶೇಷವಾಗಿ ಶಿಕ್ಷಣದ, ಸಾಮರ್ಥ್ಯ. ಇದರ ಪರಿಣಾಮವೆಂದರೆ ಸ್ಥಿರತೆಯ ಇಳಿಕೆ; ಯಾವ ಬದಲಾವಣೆಯೂ ಈಗ ಅಸಾಧ್ಯವಾಗಿ ಕಾಣಿಸುವುದಿಲ್ಲ. ಪ್ರಕೃತಿ ಎಂಬುದು ಕಚ್ಚಾ ವಸ್ತು; ಅದರಂತೆಯೇ ಸರ್ಕಾರದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಿದ ಜನತಾವರ್ಗ. ಮಾನವನ ಸಾಮರ್ಥ್ಯದ ಪರಿಮಿತಿಯ ಬಗ್ಗೆ ಹೊಂದಿರುವ ನಂಬಿಕೆಗಳನ್ನು ಪ್ರತಿನಿಧಿಸುವ ಕೆಲವು ಹಳೆಯ ಪರಿಕಲ್ಪನೆಗಳಿವೆ; ಇವುಗಳಲ್ಲಿನ ಮುಖ್ಯವಾದ ಎರಡು ಎಂದರೆ ದೇವರು ಮತ್ತು ಸತ್ಯ. (ಇವೆರಡೂ ತಾರ್ಕಿಕವಾಗಿ ಸಂಬಂಧಿಸಿವೆಯೆಂದು ನಾನು ಭಾವಿಸುವುದಿಲ್ಲ.) ಇಂಥ ಪರಿಕಲ್ಪನೆಗಳು ಕರಗಿಹೋಗುವಂಥವು; ನೇರವಾಗಿ ವಿರೋಧಿಸದಿದ್ದರೂ ತಮ್ಮ ಪ್ರಾಮುಖ್ಯವನ್ನವು ಕಳೆದುಕೊಳ್ಳುತ್ತವೆ, ಮತ್ತು ಉಳಿಯುವುದು ಮೇಲ್ಪದರದಲ್ಲಿ ಮಾತ್ರ. ಇಡೀ ಈ ದೃಷ್ಟಿಕೋನವು ಹೊಸತಾದುದು, ಅದನ್ನು ಮನುಸಂಕುಲವು ಹೇಗೆ ಅಳವಡಿಸಿಕೊಳ್ಳುವುದೆಂದು ಹೇಳುವುದು ಕಷ್ಟಕರವೇ ಸರಿ. ಇದು ಈಗಾಗಲೇ ಅಪರಿಮಿತ ಬಿರುಕನ್ನು ಉಂಟುಮಾಡಿದೆ, ಮುಂದೆಯೂ ಮತ್ತಷ್ಟು ಬಿರುಕುಗಳನ್ನುಂಟುಮಾಡುವುದು ನಿಶ್ಚಿತ. ಹೆಚ್ಚು ಕಡಿಮೆ ಕೊನೆಯಿಲ್ಲದ ಅಧಿಕಾರದ ಕಲ್ಪನೆಯ ಅಮಲಿನಲ್ಲಿರುವ ಜನರು ಮತ್ತು ಅಧಿಕಾರರಹಿತರ ಜಡತೆಗಳನ್ನು ನಿಭಾಯಿಸುವ ಸಾಮರ್ಥ್ಯವುಳ್ಳ ತಾತ್ವಿಕತೆಯೊಂದನ್ನು ರೂಪಿಸುವುದು ಈಗ ನಮ್ಮ ಮುಂದಿರುವ ಜರೂರು.

ಸೈದ್ಧಾಂತಿಕವಾಗಿ ಮಾನವ ಸಮಾನತೆಯಲ್ಲಿಯೂ ಪ್ರಜಾಪ್ರಭುತ್ವದಲ್ಲಿಯೂ ಪ್ರಾಮಾಣಿಕವಾದ ನಂಬಿಕೆಯನ್ನು ಹೊಂದಿರುವವರು ಈಗಲೂ ಇದ್ದರೂ, ಆಧುನಿಕ ಜನರ ಕಲ್ಪನೆಯ ಮೇಲೆ, ಮೂಲಭೂತವಾಗಿ ಅಪ್ರಜಾಪ್ರಭುತ್ವಾತ್ಮಕವಾಗಿದ್ದ ಹತ್ತೊಂಬತ್ತನೆಯ ಶತಮಾನದ ಕೈಗಾರಿಕಾ ಸಂಘಟನೆಯಿಂದ ಪ್ರೇರಣೆ ಹೊಂದಿದ ಸಾಮಾಜಿಕ ಸಂಘಟನೆಯ ವಿನ್ಯಾಸವು ಗಾಢವಾಗಿ ಪ್ರಭಾವ ಬೀರಿದೆ. ಒಂದೆಡೆಯಲ್ಲಿ, ಕೈಗಾರಿಕೆಗಳ ಪ್ರಮುಖರಿದ್ದಾರೆ; ಮತ್ತೊಂದೆಡೆಯಲ್ಲಿ, ಕಾರ್ಮಿಕ ಸಮೂಹವಿದೆ. ಒಳಗಿನಿಂದಲೇ ಉಂಟಾಗುವ ಪ್ರಜಾಪ್ರಭುತ್ವದ ಛಿದ್ರತೆಯನ್ನು ಪ್ರಜಾಪ್ರಭುತ್ವಾತ್ಮಕ ದೇಶಗಳ ಪ್ರಜೆಗಳು ಇನ್ನೂ ಮನಗಂಡಿಲ್ಲವಾದರೂ, ಹೆಗೆಲ್‌ನಿಂದ ಹಿಡಿದು ಅದು ಬಹುತೇಕ ತತ್ವಜ್ಞಾನಿಗಳ ಮನಸ್ಸನ್ನಾವರಿಸಿದೆ; ಅವರು ಕಂಡುಕೊಂಡ ಬಹುಜನರ ಹಿತಾಸಕ್ತಿ ಮತ್ತು ಕೆಲವರ ಹಿತಾಸಕ್ತಿಗಳ ನಡುವಣ ತೀಕ್ಷ್ಣ ವಿರೋಧವು ಫ್ಯಾಸಿಸಂನಲ್ಲಿ ವ್ಯಾವಹಾರ್ಯ ಅಭಿವ್ಯಕ್ತಿಯನ್ನು ಕಂಡಿದೆ. ಈ ತತ್ವಜ್ಞಾನಿಗಳಲ್ಲಿ ನೀಷೆಯು ಕೆಲವರ ಪರವಾಗಿದ್ದುದು ವಿಷಾದನೀಯ. ಹಿತಾಸಕ್ತಿಗಳ ಸಮತೋಲನದ ಬಗ್ಗೆ ತಲೆಕೆಡಿಸಿಕೊಂಡವರಲ್ಲಿ ಪ್ರಾಯಶಃ ಬೆಂಥಮ್ ಮಾತ್ರವೇ ಮುಖ್ಯನಾದವನು; ಹೀಗಾಗಿ ಅವನು ಎರಡೂ ಪಕ್ಷಗಳ ದ್ವೇಷಕ್ಕೆ ಒಳಗಾಗಬೇಕಾಯಿತು.

ಮಾನವ ಸಂಬಂಧಗಳ ಬಗೆಗಿನ ಆಧುನಿಕ ನೀತಿಸಂಹಿತೆಯೊಂದನ್ನು ತೃಪ್ತಿಕರವಾಗಿ ರೂಪಿಸಲು, ಮಾನವೇತರ ಪರಿಸರದ ಸಾಮರ್ಥ್ಯದ ಹಿನ್ನೆಲೆಯಲ್ಲಿ ಮಾನವ ಸಾಮರ್ಥ್ಯದ ಪರಿಮಿತಿಯನ್ನು ಮತ್ತು ಪರಸ್ಪರರಲ್ಲಿ ಸಾಮರ್ಥ್ಯಗಳ ಅಪೇಕ್ಷಣಿಯ ಸೀಮಿತತೆಯನ್ನು ಗುರುತಿಸುವುದು ಆವಶ್ಯಕ.

❍

೨೨
ಹೆಗೆಲ್

ಹೆಗೆಲ್ (೧೭೭೦–೧೮೩೧) ಕ್ಯಾಂಟ್‌ನಿಂದ ಆರಂಭಗೊಂಡ ಜರ್ಮನ್ ತಾತ್ವಿಕತೆಯ ಚಳುವಳಿಯ ಶೃಂಗವಾಗಿದ್ದಾನೆ; ಕೆಲವೊಮ್ಮೆ ಅವನು ಕ್ಯಾಂಟ್‌ನನ್ನು ಟೀಕಿಸಿದರೂ, ಕ್ಯಾಂಟ್ ಇಲ್ಲದಿದ್ದರೆ ಅವನ ವಿಧಾನವೇ ಅಸ್ತಿತ್ವಕ್ಕೆ ಬರುತ್ತಿರಲಿಲ್ಲ. ಈಗ ಕಡಿಮೆಯಾಗುತ್ತಿದ್ದರೂ, ಅವನ ಪ್ರಭಾವವು ಬಹು ಗಾಢವಾಗಿತ್ತು, ಜರ್ಮನಿಯಲ್ಲಿ ಮಾತ್ರವಲ್ಲ ಅಥವಾ ಅಲ್ಲೇ ಪ್ರಮುಖವಾಗಿಯೂ ಅಲ್ಲ. ಹತ್ತೊಂಬತ್ತನೆಯ ಶತಮಾನದ ಕೊನೆಯ ಹೊತ್ತಿಗೆ, ಅಮೆರಿಕ ಮತ್ತು ಗ್ರೇಟ್ ಬ್ರಿಟನ್‌ಗಳ ಮುಖ್ಯರಾದ ಅಕೆಡೆಮಿಕ್ ತತ್ವಜ್ಞಾನಿಗಳು ಬಹುತೇಕ ಹೆಗೆಲ್‌ಪಂಥೀಯರಾಗಿದ್ದರು. ಶುದ್ಧ ತತ್ವಜ್ಞಾನದ ಹೊರಗೆ, ಅನೇಕ ಮಂದಿ ಪ್ರಾಟೆಸ್ಟೆಂಟ್ ಮತಧರ್ಮಶಾಸ್ತ್ರಜ್ಞರು ಅವನ ಸಿದ್ಧಾಂತಗಳನ್ನು ಅಳವಡಿಸಿಕೊಂಡರು; ಅವನ ಇತಿಹಾಸದ ತಾತ್ವಿಕತೆಯು ರಾಜಕೀಯ ಸಿದ್ಧಾಂತಗಳ ಮೇಲೆ ಅತೀವ ಪರಿಣಾಮ ಬೀರಿತು. ಎಲ್ಲರಿಗೂ ತಿಳಿದಂತೆ, ತನ್ನ ಹದಿಹರೆಯದಲ್ಲಿ ಮಾರ್ಕ್ಸ್ ಹೆಗೆಲ್‌ನ ಶಿಷ್ಯನಾಗಿದ್ದ, ಮತ್ತು ತನ್ನದೇ ಆಗಿ ರೂಪುಗೊಂಡಿದ್ದ ವ್ಯವಸ್ಥೆಯಲ್ಲಿ ಅನೇಕ ಹೆಗೆಲಿಯನ್ ಅಂಶಗಳನ್ನು ಉಳಿಸಿಕೊಂಡಿದ್ದ. ಹೆಗೆಲ್‌ನ ಎಲ್ಲ ಸಿದ್ಧಾಂತಗಳು ಸುಳ್ಳಾಗಿದ್ದರೂ, (ನಾನೂ ನಂಬಿಕೊಂಡಿರುವಂತೆ) ಕೇವಲ ಐತಿಹಾಸಿಕ ಕಾರಣದಿಂದಲ್ಲದೆ, ಇತರರಲ್ಲಿ ಕಡಿಮೆ ಸುಸಂಬದ್ಧವೂ ವ್ಯಾಪಕವೂ ಆಗಿದ್ದ ಒಂದು ಬಗೆಯ ತಾತ್ವಿಕತೆಯ ಪ್ರತಿನಿಧಿಯಾಗಿ, ಅವನು ತನ್ನ ಪ್ರಾಮುಖ್ಯವನ್ನು ಉಳಿಸಿಕೊಳ್ಳುತ್ತಾನೆ.

ಅವನ ಬದುಕಿನಲ್ಲಿ ಕೆಲವು ಪ್ರಮುಖ ಘಟನೆಗಳಿದ್ದವು. ಯೌವನದಲ್ಲಿ ಅವನು ಆನುಭಾವಿಕತೆಯಿಂದ ಆಕರ್ಷಿತನಾಗಿದ್ದ, ಅವನ ಆನಂತರದ ದೃಷ್ಟಿಕೋನವನ್ನು, ಸ್ವಲ್ಪ ಮಟ್ಟಿಗೆ, ಅವನಿಗೆ ಮೊದಲು ಆನುಭಾವಿಕ ಒಳನೋಟದಂತೆ ಕಂಡಿದ್ದುದರ ಬೌದ್ಧಿಕೀಕರಣವೆಂದು ಪರಿಗಣಿಸಬಹುದು. ಅವನು ತತ್ವಜ್ಞಾನವನ್ನು ಬೋಧಿಸಿದ, ಮೊದಲಿಗೆ ಜೇನಾದ ಪ್ರೈವೆಟೋಝೆಂಟ್ ನಲ್ಲಿ – ಜೇನಾದ ಯುದ್ಧ ಆರಂಭಗೊಳ್ಳುವ ಹಿಂದೆಯೇ ತಾನು ಅಲ್ಲಿ ತನ್ನ 'ಫೆನಾಮೆನಾಲಜಿ ಆಫ್ ಮೈಂಡ್' ಅನ್ನು

ಪೂರ್ಣಗೊಳಿಸಿದುದಾಗಿ ಹೇಳಿಕೊಂಡಿದ್ದಾನೆ - ಆನಂತರ ನ್ಯೂರೆಂಬರ್ಗ್‌ನಲ್ಲಿ, ಆಮೇಲೆ ಹೈಡೆಲ್‌ಬರ್ಗ್‌ನಲ್ಲಿ ಪ್ರಾಧ್ಯಾಪಕನಾಗಿ (೧೮೧೬-೧೮), ಮತ್ತು ಕೊನೆಯದಾಗಿ ಬರ್ಲಿನ್‌ನಲ್ಲಿ ೧೮೧೮ ರಿಂದ ತನ್ನ ಸಾವಿನವರೆಗೆ. ತನ್ನ ಆನಂತರದ ವರ್ಷಗಳಲ್ಲಿ ಅವನೊಬ್ಬ ದೇಶಪ್ರೇಮಿಯಾಗಿದ್ದ, ಸರ್ಕಾರದ ನಿಷ್ಠಾವಂತ ಸೇವಕನಾಗಿದ್ದ, ಮತ್ತು ತನ್ನ ತಾತ್ವಿಕತೆಯ ಗಣ್ಯತೆಯ ಕೀರ್ತಿಯನ್ನು ಅನುಭವಿಸಿದ. ಆದರೆ ತನ್ನ ಯೌವನದಲ್ಲಿ ಅವನಿಗೆ ಪ್ರಷ್ಯಾದ ಬಗ್ಗೆ ತಿರಸ್ಕಾರವಿತ್ತು ಮತ್ತು ನೆಪೋಲಿಯನ್ ಅನ್ನು ಮೆಚ್ಚಿಕೊಂಡಿದ್ದ, ಎಷ್ಟರ ಮಟ್ಟಿಗೆ ಎಂದರೆ, ಜೇನಾವನ್ನು ಫ್ರೆಂಚ್‌ರು ಗೆದ್ದಾಗ ಸಂಭ್ರಮಿಸುವಷ್ಟು.

ಹೆಗೆಲ್‌ನ ತಾತ್ವಿಕತೆಯು ತುಂಬ ಕ್ಲಿಷ್ಟದ್ದು, ಎಲ್ಲ ತತ್ವಜ್ಞಾನಿಗಳ ಪೈಕಿ ಅವನನ್ನು ಅರ್ಥಮಾಡಿಕೊಳ್ಳುವುದು ತುಂಬ ಕಷ್ಟ ಎಂದು ನಾನೂ ಭಾವಿಸುತ್ತೇನೆ. ಯಾವುದೇ ವಿವರಗಳಿಗೆ ಕೈಹಾಕುವ ಮುಂಚೆ, ಸಾಮಾನ್ಯ ಲಕ್ಷಣಗಳ ವಿವರಣೆ ಸಹಾಯಕವಾಗಬಹುದು.

ಅನುಭಾವಿಕತೆಯ ಆಸಕ್ತಿಯ ತನ್ನ ಚಿಕ್ಕಂದಿನಿಂದಲೂ ಪ್ರತ್ಯೇಕತೆಯ ಅವಾಸ್ತವತೆಯಲ್ಲಿ ಅವನಿಗೆ ನಂಬಿಕೆ: ಅವನ ದೃಷ್ಟಿಕೋನದಂತೆ, ಜಗತ್ತು, ಪ್ರತಿಯೊಂದೂ ಸಂಪೂರ್ಣವಾಗಿ ಸ್ವಯಂ-ಪೂರ್ಣವಾದ, ಪರಮಾಣುಗಳಾಗಲೀ ಆತ್ಮಗಳಾಗಲೀ, ಕೇವಲ ಗಟ್ಟಿಯಾದ ಘಟಕಗಳ ಒಂದು ಸಂಗ್ರಹವಲ್ಲ. ಮೇಲುನೋಟಕ್ಕೆ ಕಾಣುವ ಸ್ವಯಂ-ಪೂರ್ಣತೆಯುಳ್ಳ ಪರಿಮಿತ ಜ್ಞೇಯ ವಸ್ತುಗಳು ಅವನಿಗೆ ಭ್ರಮೆಯಂತೆ ಕಾಣಿಸಿದವು; ಇಡಿಯಲ್ಲದೆ ಯಾವುದೂ ತಾನೇ ಆತ್ಯಂತಿಕವೂ ಪರಿಪೂರ್ಣವೂ ಆದ ವಾಸ್ತವತೆಯಲ್ಲ. ಆದರೆ ಇಡಿಯ ಪರಿಕಲ್ಪನೆಯಲ್ಲಿ ಅವನದು ಪಾರ್ಮನೈಡೀಸ್ ಮತ್ತು ಸ್ಪಿನೋಜ಼ನದರಕ್ಕಿಂತ ಭಿನ್ನ ನಿಲವು, ಒಂದು ಸರಳ ಜ್ಞೇಯ ವಸ್ತುವಾಗಿರದೆ ನಾವು ಸಾವಯವ ಜೀವಿ ಎನ್ನುವುದರಂತಹ ಸಂಕೀರ್ಣ ವ್ಯವಸ್ಥೆ. ಜಗತ್ತು ಒಳಗೊಂಡಿರುವ, ಮೇಲುನೋಟಕ್ಕೆ ಭಿನ್ನವಾಗಿರುವಂತೆ ಕಾಣುವ, ಜ್ಞೇಯ ವಸ್ತುಗಳು ಕೇವಲ ಭ್ರಮೆಯಲ್ಲ; ಪ್ರತಿಯೊಂದಕ್ಕೆ ಹೆಚ್ಚು ಕಡಿಮೆ ಪ್ರಮಾಣದ ವಾಸ್ತವತೆ ಇರುತ್ತದೆ, ಮತ್ತು ಅದರ ವಾಸ್ತವತೆ ಇರುವುದು ಅದು ಇಡಿಯ ಒಂದು ಭಾಗವಾಗಿರುವ ಅಂಶದಲ್ಲಿ, ಅದನ್ನು ಸತ್ಯರೂಪದಲ್ಲಿ ನೋಡಿದಾಗ ಅದು ಕಾಣುವುದು ಹೀಗೆಯೇ. ಸಹಜವಾಗಿಯೇ, ಈ ದೃಷ್ಟಿಕೋನದೊಡನೆ ಕಾಲ ಮತ್ತು ಅವಕಾಶಗಳ ವಾಸ್ತವತೆಯ ಬಗೆಗಿನ ಅಪನಂಬಿಕೆಯೂ ಜೊತೆಗೂಡುತ್ತದೆ; ಅವುಗಳನ್ನು ಹಾಗೆಯೇ ಸಂಪೂರ್ಣವಾಗಿ ವಾಸ್ತವವೆಂದು ಪರಿಗಣಿಸಿದರೆ ಅವುಗಳು ಪ್ರತ್ಯೇಕತೆ ಮತ್ತು ಸಂಖ್ಯಾಬಾಹುಳ್ಯವನ್ನು ಪಡೆದಿರುತ್ತವೆ ಎಂದಂತಾಗುತ್ತದೆ. ಇವೆಲ್ಲ ಅವನಿಗೆ ಅನುಭಾವಿಕತೆಯ ಒಳನೋಟದ ರೂಪದಲ್ಲಿ ಬಂದಿರಬೇಕು; ಅವನ ಪುಸ್ತಕಗಳಲ್ಲಿ ಕಾಣಬರುವ ಅವುಗಳ ಬೌದ್ಧಿಕ ವಿವರಣೆಗಳು ಆನಂತರದವಾಗಿರಬೇಕು.

ವಾಸ್ತವವಾದುದು ವೈಚಾರಿಕವಾದುದು, ಮತ್ತು ವೈಚಾರಿಕವಾದುದು ವಾಸ್ತವ ಎಂದು ಹೆಗೆಲ್ ಒತ್ತಿ ಹೇಳುತ್ತಾನೆ. ಆದರೆ ಅವನು ಇದನ್ನು ಹೇಳುವಾಗ, ಅವನ ಅರ್ಥದಲ್ಲಿ 'ವಾಸ್ತವ' ಎಂದರೆ ಅನುಭವೈಕವಾದಿಯ ಅರ್ಥವಲ್ಲ. ಅನುಭವೈಕವಾದಿಗೆ ವಾಸ್ತವಗಳೆಂದು ಕಾಣಿಸುವಂಥದ್ದು, ಅವೈಚಾರಿಕವಾದವುಗಳಾಗಿರಬೇಕು ಎಂದವನು ಹೇಳುವುದು ಮಾತ್ರವಲ್ಲ ಹಾಗೆಂದು ವಾದಿಸುತ್ತಾನೆ. ಅವುಗಳ ಮೇಲುನೋಟದ ಲಕ್ಷಣವನ್ನು ಕಡೆಗಣಿಸಿ ಅವುಗಳನ್ನು ಇಡಿಯ ಭಾಗಗಳೆಂಬ ದೃಷ್ಟಿಯಿಂದ ನೋಡುವ ಹಾಗೆ ಪರಿವರ್ತಿಸಿದಾಗ ಮಾತ್ರ ಅವು ವೈಚಾರಿಕವಾಗಿ ಕಾಣಿಸುತ್ತವೆ. ಇಷ್ಟಾದರೂ, ವಾಸ್ತವ ಮತ್ತು ವೈಚಾರಿಕತೆಗಳ ಅನನ್ಯತೆಯು, 'ಏನೆಲ್ಲ ಇದೆಯೋ, ಅದೆಲ್ಲ ಸರಿ' ಎಂಬ ನಂಬಿಕೆಯಿಂದ ಬೇರ್ಪಡಿಸಲಾಗದ ಕೆಲವು ಅನಿವಾರ್ಯ ಸಂತೃಪ್ತಿಯ ಕಡೆ ಕರೆದೊಯ್ಯುತ್ತದೆ.

ತನ್ನೆಲ್ಲ ಸಂಕೀರ್ಣತೆಯೊಂದಿಗಿನ ಇಡಿಯನ್ನು ಹೆಗೆಲ್ 'ಸ್ವಯಂಪೂರ್ಣ' (ದ ಆಬ್ಸಲ್ಯೂಟ್) ಎಂದು ಕರೆಯುತ್ತಾನೆ. 'ಸ್ವಯಂಪೂರ್ಣವಾದುದು ಆಧ್ಯಾತ್ಮಿಕವಾದುದು; ಅದಕ್ಕೆ ವಿಸ್ತರಣೆ ಮತ್ತು ಚಿಂತನೆಗಳಿವೆ' ಎಂಬ ಸ್ಪಿನೋಜ಼ನ ದೃಷ್ಟಿಕೋನವನ್ನು ಇದು ತಿರಸ್ಕರಿಸುತ್ತದೆ.

ಎರಡು ವಿಷಯಗಳು ಹೆಗೆಲ್ ಅನ್ನು ಇಂತಹುದೇ ತತ್ವಜಿಜ್ಞಾಸಾತ್ಮಕ ದೃಷ್ಟಿಕೋನವನ್ನು ಹೊಂದಿದ ಬೇರೆಯವರಿಂದ ಭಿನ್ನವಾಗಿಸುತ್ತವೆ. ಇವುಗಳಲ್ಲಿನ ಒಂದು ಎಂದರೆ, ತರ್ಕದ ಬಗೆಗಿನ ಪ್ರಾಮುಖ್ಯ: ವಾಸ್ತವತೆಯ ಸ್ವರೂಪವನ್ನು ಅದು ಸ್ವಯಂವಿರೋಧಿಯಲ್ಲ ಎಂಬುದಾಗಿರಬೇಕು ಎಂಬ ಏಕೈಕ ಪರಿಗಣನೆಯಿಂದ ಸಾಧಿಸಬಹುದು ಎಂದು ಹೆಗೆಲ್ ಭಾವಿಸುತ್ತಾನೆ. ಮತ್ತೊಂದು ಭಿನ್ನ ಅಂಶವೆಂದರೆ (ಮೊದಲಿನದರೊಂದಿಗೆ ನಿಕಟವಾಗಿ ಸಂಬಂಧಿಸಿರುವ) 'ದ್ವಂದ್ವೀಯ' (ಡಯಲೆಕ್ಟಿಕ್) ಎಂದು ಕರೆಯಲಾಗುವ ತ್ರಿಯಾತ್ಮಕ ಚಲನೆ (ಟ್ರಯಾಡಿಕ್ ಮೂವ್‌ಮೆಂಟ್). ಅವನ ಅತ್ಯಂತ ಪ್ರಮುಖ ಪುಸ್ತಕಗಳೆಂದರೆ ಅವನ ಎರಡು 'ಲಾಜಿಕ್ಸ್' ಸಂಪುಟಗಳು; ಇತರ ವಿಷಯಗಳ ಬಗೆಗಿನ ಅವನ ದೃಷ್ಟಿಕೋನವನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಇವುಗಳನ್ನು ಮನನ ಮಾಡಬೇಕು.

ಹೆಗೆಲ್ ಅರ್ಥವಿಸುವಂತೆ, ತರ್ಕವು ತತ್ವಜಿಜ್ಞಾಸೆಯೇ ಆಗಿದೆ ಎಂಬುದು ಅವನ ಘೋಷಣೆ; ಅದು ಸಾಮಾನ್ಯವಾಗಿ ಕರೆಯಲಾಗುವ ತರ್ಕಕ್ಕಿಂತ ಭಿನ್ನವಾದುದು. ಅವನ ದೃಷ್ಟಿಕೋನವೆಂದರೆ, ಯಾವುದೇ ಸಾಮಾನ್ಯ ವಿಶೇಷಣವು, ವಾಸ್ತವತೆಯನ್ನು ಇಡಿಯಾಗಿ ವಿಶೇಷಿಸುವಂತೆ ಭಾವಿಸಿದರೆ, ಸ್ವಯಂವಿರೋಧಿಯಾಗಿಬಿಡುತ್ತದೆ. ತಾನು ಮಾತ್ರವೇ ವಾಸ್ತವವಾಗಿರುವ ಆ 'ಒಂದು' ಗೋಲಾಕಾರದಲ್ಲಿದೆ ಎಂಬ ಪಾರ್ಮೆನೈಡೀಸ್‌ನ ಸಿದ್ಧಾಂತವನ್ನು ಒಂದು ಒರಟು ನಿದರ್ಶನವಾಗಿ ಪರಿಗಣಿಸಬಹುದು. ಪರಿಧಿಯಿಲ್ಲದೆ ಯಾವುದೂ ಗೋಲಾಕಾರವನ್ನು

ಹೊಂದಲಾರದು, ಮತ್ತು ಅದರ ಹೊರಗೆ ಏನೂ ಇರದಿದ್ದರೆ (ಕನಿಷ್ಠ ಖಾಲಿ ಅವಕಾಶ) ಅದು ಗೋಲಾಕಾರದಲ್ಲಿರಲಾರದು. ಹೀಗಾಗಿ ವಿಶ್ವವು ಇಡಿಯಾಗಿ ಗೋಲಾಕಾರದಲ್ಲಿದೆ ಎಂದು ಭಾವಿಸುವುದು ಸ್ವಯಂವಿರೋಧವಾದುದು. (ಯೂಕ್ಲಿಡೇತರ ಜ್ಯಾಮಿತಿಯ ಸಹಾಯದಿಂದ ಈ ವಾದವನ್ನು ಅಲ್ಲಗಳೆಯಬಹುದಾದರೂ, ಒಂದು ಉದಾಹರಣೆಯಾಗಿ ಮಾತ್ರ ಬಳಸಬಹುದು.) ಅಥವಾ ಇನ್ನೂ ಒರಟಾಗಿರುವ, ಹೆಗೆಲ್ ನಿದರ್ಶನವಾಗಿಯೂ ತೆಗೆದುಕೊಳ್ಳಲಾಗದ, ಮತ್ತೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ: ಮೇಲುನೋಟಕ್ಕೆ ಸ್ವಯಂವಿರೋಧವಲ್ಲದ ರೀತಿಯಲ್ಲಿ, ಶ್ರೀ ಎ ಒಬ್ಬ ಸೋದರಮಾವ; ಮತ್ತು ವಿಶ್ವವು ನಿಮ್ಮ ಸೋದರಮಾವ ಎಂದು ಕರೆಯುವುದಾದರೆ, ನೀವು ತೊಂದರೆಯಲ್ಲಿ ಸಿಲುಕಿಕೊಳ್ಳುತ್ತೀರಿ. ಸೋದರಮಾವ ಸೋದರಳಿಯನಿರುವ ಒಬ್ಬ ಮನುಷ್ಯ; ಸೋದರಳಿಯನು ತನ್ನ ಸೋದರಮಾವನಿಗಿಂತ ಭಿನ್ನನಾದ ವ್ಯಕ್ತಿ; ಹೀಗಾಗಿ ಸೋದರಮಾವನು ಇಡಿಯ ವಾಸ್ತವತೆಯಾಗಲಾರ.

ಈ ನಿದರ್ಶನವನ್ನು ದ್ವಂದ್ವೀಯವನ್ನು ಸಾಬೀತುಪಡಿಸಲೂ ಬಳಸಬಹುದು, ಇದರಲ್ಲಿ ವಾದ, ಪ್ರತಿವಾದ ಮತ್ತು ಸಂಶ್ಲೇಷಣೆಗಳಿವೆ. ಮೊದಲು ನಾವು ಹೀಗೆ ಹೇಳುತ್ತೇವೆ: 'ಸೋದರಮಾವ ಎಂಬುದು ವಾಸ್ತವ' ಇದು ವಾದ. ಆದರೆ ಸೋದರಮಾವನೊಬ್ಬನ ಅಸ್ತಿತ್ವವು ಸೋದರಳಿಯನ ಅಸ್ತಿತ್ವವನ್ನು ಸೂಚಿಸುತ್ತದೆ. ಯಾಕೆಂದರೆ ಸ್ವಯಂಪೂರ್ಣವಾದುದರ ಹೊರತು ನಿಜವಾಗಿ ಯಾವುದೂ ಅಸ್ತಿತ್ವದಲ್ಲಿರುವುದಿಲ್ಲ, ಹೀಗಾಗಿ ನಾವು ಸೋದರಳಿಯನೊಬ್ಬನ ಅಸ್ತಿತ್ವಕ್ಕೆ ಬದ್ಧರಾಗುತ್ತೇವೆ, ನಾವು ಹೀಗೆ ಮುಕ್ತಾಯಗೊಳಿಸಬೇಕು: 'ಸ್ವಯಂಪೂರ್ಣವು ಸೋದರಳಿಯ.' ಇದು ಪ್ರತಿವಾದ. ಆದರೆ ಸ್ವಯಂಪೂರ್ಣವೆಂದರೆ ಸೋದರಮಾವ ಎಂಬುದಕ್ಕಿರುವಂತೆ ಇದಕ್ಕೂ ಅದೇ ಆಕ್ಷೇಪವಿದೆ; ಹೀಗಾಗಿ ಸ್ವಯಂಪೂರ್ಣವೆಂದರೆ ಸೋದರ ಮಾವ ಮತ್ತು ಸೋದರಳಿಯರನ್ನು ಒಳಗೊಂಡ ಇಡಿ ಎಂದು ಸಂಶ್ಲೇಷಣೆ. ಆದರೆ ಈ ಸಂಶ್ಲೇಷಣೆ ಇನ್ನೂ ಅತೃಪ್ತಿಕರವಾದುದು, ಯಾಕೆಂದರೆ ಒಬ್ಬನು ಸೋದರಮಾವನಾಗುವುದು ಅವನಿಗೆ ಸೋದರಳಿಯನಿಗೆ ತಂದೆಯೋ ತಾಯಿಯೋ ಆದ ಒಬ್ಬ ಸೋದರಿಯೋ ಸೋದರನೋ ಇದ್ದಾಗ ಮಾತ್ರ. ಹೀಗಾಗಿ ಸೋದರಿಯೋ ಸೋದರನೋ ತನ್ನ ಗಂಡ ಅಥವಾ ಹೆಂಡತಿಯೊಡನೆ ಇರುವಂತೆ ನಾವು ನಮ್ಮ ವಿಶ್ವವನ್ನು ವಿಸ್ತರಿಸಬೇಕಾದ ಅನಿವಾರ್ಯವೊದಗುತ್ತದೆ. ಈ ರೀತಿಯ ವಿಧಾನದಲ್ಲಿ, ನಮ್ಮನ್ನು ತಾರ್ಕಿಕವಾಗಿ, ಸ್ವಯಂಪೂರ್ಣವಾದುದರ ಯಾವುದೇ ವಿಶೇಷಣದಿಂದ 'ಪಾರಮಾರ್ಥಿಕ ಸತ್ಯ' ಎಂದು ಕರೆಯಲಾಗುವ ದ್ವಂದ್ವೀಯದ ಮುಕ್ತಾಯದವರೆಗೂ, ಮುಂದೂಡುತ್ತಲೇ ಇರಬಹುದು ಎಂದು ವಾದಿಸಬಹುದು. ಈ ಪ್ರಕ್ರಿಯೆಯ ಆದ್ಯಂತವೂ ಇಡಿಯ ವಾಸ್ತವತೆಯ ಬಗೆಗೆ ಹೊರತು ಯಾವುದೂ

ವಾಸ್ತವವಾಗಲು ಸಾಧ್ಯವಿಲ್ಲ ಎಂಬ ಊಹೆಯು ಅಂತರ್ವಾಹಿನಿಯಾಗಿರುತ್ತದೆ.

ಈ ಅಂತರ್ವಾಹಿನಿಯಾದ ಊಹೆಗೆ ಸಾಂಪ್ರದಾಯಿಕ ತರ್ಕಶಾಸ್ತ್ರದಲ್ಲಿ ಒಂದು ಆಧಾರವಿದೆ, ಅದರ ಪ್ರಕಾರ, ಪ್ರತಿ ಪ್ರತಿಪಾದನೆಯಲ್ಲೂ ಒಂದು ಕರ್ತೃ ಮತ್ತು ಒಂದು ವಿಶೇಷಣವಿರುತ್ತದೆ. ಈ ದೃಷ್ಟಿಕೋನಕ್ಕನುಗುಣವಾಗಿ, ಪ್ರತಿಯೊಂದು ವಸ್ತುಸ್ಥಿತಿಯೂ ಯಾವುದಾದರೂ ಲಕ್ಷಣವುಳ್ಳ ಯಾವುದನ್ನೋ ಒಳಗೊಳ್ಳುತ್ತದೆ. ಇದರಿಂದಾಗಿ, ಸಂಬಂಧಗಳು ವಾಸ್ತವವಾಗಲಾರವು, ಯಾಕೆಂದರೆ ಅದರಲ್ಲಿ ಒಂದಲ್ಲ, ಎರಡು ಜ್ಞೇಯ ವಸ್ತುಗಳಿರಬೇಕು. 'ಸೋದರಮಾವ' ಒಬ್ಬ ಸಂಬಂಧಿ, ಮತ್ತು ಒಬ್ಬ ವ್ಯಕ್ತಿಯು ಅದನ್ನು ಅರಿಯದೆ ಒಬ್ಬ ಸೋದರಮಾವನಾಗಬಹುದು. ಹೀಗಾದರೆ, ಅನುಭವೈಕವಾದದ ಪ್ರಕಾರ, ವ್ಯಕ್ತಿಯು ಸೋದರಮಾವನಾಗುವ ಮೂಲಕ ಪ್ರಭಾವಿತನಾಗಲಾರ; ಅವನಿಗೆ ಹಿಂದೆ ಇರದಿದ್ದ ಯಾವುದೇ ಲಕ್ಷಣವೂ – 'ಲಕ್ಷಣ' ಎಂದರೆ ಇತರ ಜನರು ಅಥವಾ ಜ್ಞೇಯ ವಸ್ತುಗಳಿಗೆ ಸಂಬಂಧಿಸಿದಂತಹವನ್ನು ಹೊರತುಪಡಿಸಿದಂತೆ ಅವನನ್ನು ಅವನಿರುವ ಹಾಗೆ ವರ್ಣಿಸಲು ಆವಶ್ಯಕವಾದ ಯಾವುದೋ ಒಂದು – ಪ್ರಾಪ್ತವಾಗುವುದಿಲ್ಲ. ಕರ್ತೃ–ವಿಶೇಷಣಗಳ ಈ ತೊಡಕನ್ನು ನಿವಾರಿಸಬಹುದಾದ ಒಂದೇ ಬಗೆಯೆಂದರೆ, ಸತ್ಯ ಎನ್ನುವುದು ಸೋದರಮಾನ ಲಕ್ಷಣ ಮಾತ್ರವಲ್ಲ, ಅಥವಾ ಸೋದರಳಿಯನ ಲಕ್ಷಣ ಮಾತ್ರವಲ್ಲ, ಸೋದರಮಾವ–ಸೋದರಳಿಯರಿಂದ ಕೂಡಿದ ಇಡಿಯ ಲಕ್ಷಣ ಎಂದು ಹೇಳುವುದು. ಇಡಿಯನ್ನುಳಿದ ಪ್ರತಿಯೊಂದೂ, ಹೊರಗಿನ ಜ್ಞೇಯ ವಸ್ತುಗಳೊಡನೆ ಸಂಬಂಧ ಹೊಂದಿರುವುದರಿಂದ, ಪ್ರತ್ಯೇಕ ಜ್ಞೇಯ ವಸ್ತುಗಳ ವಿಷಯದಲ್ಲಿ ಸತ್ಯವಾದುದೇನನ್ನೂ ಹೇಳಲು ಸಾಧ್ಯವಾಗುವುದಿಲ್ಲ, ಮತ್ತು ವಾಸ್ತವದಲ್ಲಿ ಇಡಿಯು ಮಾತ್ರ ಸತ್ಯ ಎಂದು ಹೇಳಬೇಕಾಗುತ್ತದೆ. ಇದು ಮತ್ತಷ್ಟು ನೇರವಾಗಿ 'ಎ ಮತ್ತು ಬಿ ಇಬ್ಬರು' ಎಂಬುದು ಕರ್ತೃ–ವಿಶೇಷಣ ಪ್ರತಿಪಾದನೆಯಲ್ಲ, ಮತ್ತು ಹೀಗಾಗಿ ಸಾಂಪ್ರದಾಯಿಕ ತರ್ಕಶಾಸ್ತ್ರದ ಆಧಾರದಿಂದ ಅಂತಹ ಪ್ರತಿಪಾದನೆ ಇರಲು ಸಾಧ್ಯವಿಲ್ಲ. ಹೀಗಾಗಿ ಜಗತ್ತಿನಲ್ಲಿ ಎಷ್ಟೋ ಎರಡು ಜ್ಞೇಯ ವಸ್ತುಗಳಿಲ್ಲ; ಆದ್ದರಿಂದ ಒಂದು ಐಕ್ಯವೆಂದು ಭಾವಿಸಲಾಗುವ ಇಡಿಯು ಮಾತ್ರವೇ ಸತ್ಯ.

ಈ ಮೇಲಿನ ವಾದವು ಬೇರೆಯ ತತ್ವಜಿಜ್ಞಾಸುಗಳಲ್ಲಿರುವಂತೆ ಹೆಗೆಲ್‌ನಲ್ಲಿ ಸ್ಪಷ್ಟವಾಗಿಲ್ಲ, ಕೇವಲ ಸೂಚಿತವಾಗಿದೆ.

ಹೆಗೆಲ್‌ನ ದ್ವಂದ್ವೀಯ ವಿಧಾನದ ಕೆಲವು ನಿದರ್ಶನಗಳು ಮತ್ತಷ್ಟು ಸ್ಪಷ್ಟತೆಯನ್ನು ಒದಗಿಸಬಹುದು. ತನ್ನ ತರ್ಕದ ವಾದವನ್ನವನು ಆರಂಭಿಸುವುದು 'ಸ್ವಯಂಪೂರ್ಣವಾದುದು ಶುದ್ಧ ಅಸ್ತಿತ್ವ' ಎಂಬ ಊಹೆಯಿಂದ; ಅದಕ್ಕೆ ಯಾವುದೇ ಲಕ್ಷಣವನ್ನು ಆರೋಪಿಸದೆ, ಅದು ಇದೆ ಎಂದು ನಾವು ಊಹಿಸುತ್ತೇವೆ. ಆದರೆ ಯಾವುದೇ ಲಕ್ಷಣವಿರದ ಶುದ್ಧ ಅಸ್ತಿತ್ವವು ಏನೂ ಅಲ್ಲ; ಹೀಗಾಗಿ ನಾವು ಪ್ರತಿವಾದದತ್ತ

ಹೊರಳುತ್ತೇವೆ: 'ಸ್ವಯಂಪೂರ್ಣವೆಂದರೆ ಏನೂ ಅಲ್ಲದ್ದು.' ಈ ವಾದ ಪ್ರತಿವಾದಗಳಿಂದ ನಾವು ಸಂಶ್ಲೇಷಣೆಯತ್ತ ಸಾಗುತ್ತೇವೆ: ಇರುವುದು ಮತ್ತು ಇಲ್ಲದಿರುವುದರ ಸಂಯೋಜನೆಯೇ ಆಗುವುದು, ಹೀಗಾಗಿ ನಾವು ಹೇಳುವುದು: 'ಸ್ವಯಂಪೂರ್ಣವೆಂದರೆ ಆಗುವುದು.' ಇದು ಕೂಡ ಸರಿಯಾಗುವುದಿಲ್ಲ, ಯಾಕೆಂದರೆ ಆಗುವುದಕ್ಕೆ ಏನಾದರೂ ಇರಲೇಬೇಕು. ಈ ರೀತಿಯಲ್ಲಿ, ಸತ್ಯದ ಬಗೆಗಿನ ನಮ್ಮ ದೃಷ್ಟಿಕೋನಗಳು ಹಿಂದಿನ ತಪ್ಪುಗಳ ನಿರಂತರ ತಿದ್ದುಪಾಟುಗಳ ಮೂಲಕ ಬೆಳೆಯುತ್ತದೆ; ಇವೆಲ್ಲ ಉಂಟಾಗುವುದು ಅನುಚಿತ ಅಮೂರ್ತೀಕರಣದಿಂದಾಗಿ, ಪರಿಮಿತವೋ ಸೀಮಿತವೋ ಆದುದು ಇಡಿಯಾಗಬಲ್ಲದು ಎಂದು ಭಾವಿಸುವುದರಿಂದಾಗಿ. 'ಸೀಮಿತವಾದುದರ ಪರಿಮಿತಿಗಳು ಹೊರಗಿನಿಂದ ಮಾತ್ರವೇ ಉಂಟಾಗುವುದಿಲ್ಲ; ಅದರ ಸ್ವಭಾವವೇ ಅದರ ನಿರಾಕರಣಕ್ಕೆ ಕಾರಣ, ತನ್ನ ಕ್ರಿಯೆಯಿಂದಾಗಿಯೇ ಅದು ಪ್ರತಿರೂಪವನ್ನು ತಾಳುತ್ತದೆ.'

ಹೆಗೆಲ್‌ನ ಪ್ರಕಾರ ಈ ಪ್ರಕ್ರಿಯೆಯು ಫಲಿತಾಂಶವನ್ನು ಅರ್ಥಮಾಡಿಕೊಳ್ಳಲು ಆವಶ್ಯಕವಾದುದು. ದ್ವಂದ್ವೀಯದ ಮುಂದಿನ ಪ್ರತಿ ಹಂತವೂ, ಒಂದು ರೀತಿಯಲ್ಲಿ ಪರಿಹಾರದಲ್ಲಿ, ಹಿಂದಿನ ಎಲ್ಲ ಹಂತಗಳೆಲ್ಲವನ್ನೂ ಒಳಗೊಳ್ಳುತ್ತದೆ; ಅವುಗಳಲ್ಲಿ ಯಾವುದೂ *ಸಂಪೂರ್ಣವಾಗಿ* ರದ್ದಾಗುವುದಿಲ್ಲ, ಆದರೆ ಇಡಿಯಲ್ಲಿ ಅದಕ್ಕೆ ಸೂಕ್ತ ಸ್ಥಾನವನ್ನು ನೀಡಲಾಗುತ್ತದೆ. ಹೀಗಾಗಿ ದ್ವಂದ್ವೀಯದ ಎಲ್ಲ ಹಂತಗಳನ್ನೂ ಹಾದು ಹೋಗುವ ಮೂಲಕವಲ್ಲದೆ ಸತ್ಯವನ್ನು ತಲುಪುವುದು ಅಸಾಧ್ಯವಾಗುತ್ತದೆ.

ಜ್ಞಾನಕ್ಕೆ ಇಡಿಯಾಗಿ ಒಂದು ತ್ರಿಯಾತ್ಮಕ ಚಲನೆಯಿರುತ್ತದೆ. ಅದು ಆರಂಭವಾಗುವುದು ಇಂದ್ರಿಯಗ್ರಹಿಕೆಯಿಂದ, ಅದರಲ್ಲಿ ಜ್ಞೇಯ ವಸ್ತುವಿನ ಬಗೆಗಿನ ಅರಿವು ಮಾತ್ರ ಇರುತ್ತದೆ, ಆನಂತರ, ಇಂದ್ರಿಯಗಳ ಬಗೆಗಿನ ಸಂದೇಹಾತ್ಮಕ ವಿಮರ್ಶೆಯೊಡನೆ, ಅದು ಸಂಪೂರ್ಣವಾಗಿ ವ್ಯಕ್ತಿನಿಷ್ಠವಾಗುತ್ತದೆ, ಕೊನೆಯಲ್ಲಿ, ಅದು ಸ್ವಯಂಜ್ಞಾನದ ಹಂತವನ್ನು ತಲುಪುತ್ತದೆ, ಅದರಲ್ಲಿ ಜ್ಞೇಯ ವಸ್ತು ಮತ್ತು ವ್ಯಕ್ತಿ ಎರಡೂ ಬೇರೆ ಬೇರೆಯಲ್ಲ. ಹೀಗೆ ಸ್ವಯಂಪ್ರಜ್ಞೆಯು ಅತ್ಯಂತ ಶ್ರೇಷ್ಠ ರೂಪದ ಜ್ಞಾನ. ಇದು ಹೆಗೆಲ್‌ನ ವಿಧಾನದಲ್ಲಿ ಇದೇ ತಿರುಳಿರಬೇಕು, ಯಾಕೆಂದರೆ ಅತ್ಯಂತ ಶ್ರೇಷ್ಠ ಜ್ಞಾನವು ಸ್ವಯಂಪೂರ್ಣವಾದುದು ಹೊಂದಿರುವಂಥದು, ಮತ್ತು ಆತ್ಯಂತಿಕವಾದುದು. ಇಡಿಯಾದ್ದರಿಂದ ತಾನು ತಿಳಿಯಬೇಕಾದ ಯಾವುದೂ ಅದಕ್ಕೆ ಹೊರತಾಗಿರುವುದಿಲ್ಲ.

ಹೆಗೆಲ್ ಪ್ರಕಾರ, ಅತ್ಯಂತ ಶ್ರೇಷ್ಠ ಪರಮ ಸತ್ಯವೆಂದರೆ, ಆಲೋಚನೆಗಳು ಸುಲಲಿತವಾಗಿ ಸೇರಿಕೊಳ್ಳುವುದು. ಸಾಮಾನ್ಯವಾಗಿ ತಿಳಿದಿರುವಂತೆ ಸತ್ಯ ಮತ್ತು ಸುಳ್ಳುಗಳು ಗೆರೆ ಕೊರೆದಂತೆ ಖಚಿತ ವಿರೋಧಗಳಲ್ಲ; ಯಾವುದೂ ಸಂಪೂರ್ಣ ಸುಳ್ಳೂ ಅಲ್ಲ, ಯಾವುದೂ ನಾವು ತಿಳಿಯಬಹುದಾದಂತಹ ಪೂರ್ತಿ ಸತ್ಯವೂ

ಅಲ್ಲ. 'ಅದು ಸುಳ್ಳು ಎಂಬುದನ್ನು ಒಂದು ರೀತಿಯಲ್ಲಿ ನಾವು ತಿಳಿಯಬಹುದು'; ಇದು ಆಗುವುದು ಬಿಡಿಯಾದ ಒಂದು ಮಾಹಿತಿಗೆ ಸ್ವಯಂಪೂರ್ಣ ಸತ್ಯವನ್ನು ಆರೋಪಿಸಿದಾಗ. 'ಸೀಸರ್ ಎಲ್ಲಿ ಹುಟ್ಟಿದ?' ಎಂಬಂತಹ ಪ್ರಶ್ನೆಗೆ ನೇರವಾದ ಉತ್ತರವಿದೆ, ಒಂದರ್ಥದಲ್ಲಿ ಅದು ಸತ್ಯ, ಆದರೆ ತಾತ್ವಿಕ ಅರ್ಥದಲ್ಲಿ ಅಲ್ಲ. ತತ್ವಜ್ಞಾನಕ್ಕೆ 'ಸತ್ಯವೆಂದರೆ ಇಡಿ', ಮತ್ತು ಯಾವುದೇ ಭಾಗವೂ ಪೂರ್ತಿ ಸತ್ಯವಲ್ಲ.

'ವೈಚಾರಿಕತೆಯು ಎಲ್ಲ ವಾಸ್ತವವಾಗಿರುವ ಪ್ರಜ್ಞಾಪೂರ್ವಕ ನಿಶ್ಚಿತತೆ.' ಹಾಗೆಂದರೆ, ಒಬ್ಬ ಪ್ರತ್ಯೇಕ ವ್ಯಕ್ತಿಯು ಸಂಪೂರ್ಣ ಸತ್ಯ ಎಂದಲ್ಲ; ಅವನ ಪ್ರತ್ಯೇಕತೆಯಲ್ಲಿ ಅವನು ಪೂರ್ತಿ ಸತ್ಯವಲ್ಲ, ಆದರೆ ಅವನಲ್ಲಿ ಯಾವುದು ವಾಸ್ತವವೆಂದರೆ ಇಡಿಯಾಗಿರುವ ವಾಸ್ತವತೆಯಲ್ಲಿನ ಅವನ ಭಾಗವಹಿಸುವಿಕೆ. ನಾವು ವೈಚಾರಿಕವಾಗುವುದರ ಪ್ರಮಾಣಾನುಗುಣವಾಗಿ ಈ ಭಾಗವಹಿಸುವಿಕೆಯು ಹೆಚ್ಚಾಗುತ್ತದೆ.

ತರ್ಕವು ಕೊನೆಗೊಳ್ಳುವ ಪಾರಮಾರ್ಥಿಕ ಸತ್ಯವು ಅರಿಸ್ಟಾಟಲ್‌ನ ದೇವರಂತಹುದು. ಅದು ತನ್ನ ಬಗ್ಗೆ ಚಿಂತಿಸುತ್ತದೆ ಎಂದು ಭಾವಿಸಲಾಗುತ್ತದೆ. ಸ್ವಯಂಪೂರ್ಣವಾದುದು ತನ್ನ ಬಗ್ಗೆಯಲ್ಲದೆ ಅನ್ಯದ ಬಗ್ಗೆ ಚಿಂತಿಸಲಾರದು ಎಂಬುದು ಸ್ಪಷ್ಟವಾಗಿದೆ, ಯಾಕೆಂದರೆ, ವಾಸ್ತವತೆಯನ್ನು ಅರ್ಥಮಾಡಿಕೊಳ್ಳುವ ನಮ್ಮ ಆಂಶಿಕ ಹಾಗೂ ದೋಷಪೂರ್ಣ ಮಾರ್ಗಗಳ ಹೊರತಾದ ಬೇರೆ ಏನೂ ಇಲ್ಲ. ಆತ್ಮವು ಮಾತ್ರವೇ ವಾಸ್ತವ ಎಂದು ಮತ್ತು ಅದರ ಪರಮ ಸತ್ಯವು ಆತ್ಮಪ್ರಜ್ಞಾಪೂರ್ವಕವಾಗಿರುವ ಅದರಲ್ಲಿಯೇ ಪ್ರತಿಬಿಂಬಿತವಾಗುವುದೆಂದು ಹೇಳಲಾಗುತ್ತದೆ. ಪಾರಮಾರ್ಥಿಕ ಸತ್ಯವನ್ನು ಸೂತ್ರೀಕರಿಸಿರುವ ನಿರ್ದಿಷ್ಟ ಶಬ್ದಗಳು ತುಂಬ ಸಂದಿಗ್ಧವಾದವು. ವಾಲೇಸ್ ಅದನ್ನು ಹೀಗೆ ಅನುವಾದಿಸುತ್ತಾನೆ:

'ದ ಆಬ್ಸಲ್ಯೂಟ್ ಐಡಿಯ.' ವ್ಯಕ್ತಿನಿಷ್ಠ ಮತ್ತು ವಸ್ತುನಿಷ್ಠ ಸತ್ಯಗಳು ಒಗ್ಗೂಡಿದ ಪರಮ ಸತ್ಯವು, ಪರಮ ಸತ್ಯದ ಕಲ್ಪನೆಯು – ಯಾವುದರ ಜ್ಞೇಯ ವಸ್ತುವು (ಜೆಜೆನ್‌ಸ್ಟಾಂಡ್) ಪರಮ ಸತ್ಯವೇ ಆಗಿದೆಯೋ, ಮತ್ತು ಯಾವುದಕ್ಕೆ ಬಾಹ್ಯವಸ್ತುವು (ಆಬ್ಜೆಕ್ಟ್) ಪರಮ ಸತ್ಯವೋ – ತನ್ನ ಒಗ್ಗೂಡುವಿಕೆಯಲ್ಲಿ ಎಲ್ಲ ಲಕ್ಷಣಗಳನ್ನೂ ಒಳಗೊಳ್ಳುತ್ತದೆಯೋ ಅಂಥ ಜ್ಞೇಯ ವಸ್ತು.'

ಮೂಲ ಜರ್ಮನ್ ಇನ್ನೂ ಕಠಿಣವಾದುದು.[೨೭೪] ಆದರೆ ವಿಷಯದ ಸಾರವೆಂದರೆ, ಹೆಗೆಲ್ ತೋರಿಸುವುದಕ್ಕಿಂತ ಕಡಿಮೆ ಸಂಕೀರ್ಣವಾದುದು. ಪಾರಮಾರ್ಥಿಕ ಸತ್ಯವು ಶುದ್ಧ ಪರಮ ಸತ್ಯದ ಬಗೆಗೆ ಆಲೋಚಿಸುವ ಶುದ್ಧ ಚಿಂತನೆ. ಇದನ್ನೇ ದೇವರು ಎಲ್ಲ ಯುಗಗಳಲ್ಲೂ ಮಾಡುತ್ತಿರುವುದು – ನಿಜವಾಗಿ

---

೨೭೪. ಹೆಗೆಲ್ ಹೊರತಾಗಿ, ಜೆಜೆನ್‌ಸ್ಟಾಂಡ್ ಮತ್ತು ಆಬ್ಜೆಕ್ಟ್ ಸಮಾನಾರ್ಥಕವಾದವು.

ಪ್ರಾಧ್ಯಾಪಕನ ದೇವರು. ಹೆಗೆಲ್ ಮುಂದುವರಿದು ಹೇಳುವುದೇನೆಂದರೆ: 'ಈ ಐಕ್ಯವು ಇದರ ಪರಿಣಾಮವಾದ ಪಾರಮಾರ್ಥಿಕ ಮತ್ತು ಪೂರ್ಣ ಸತ್ಯ, ತನ್ನ ಬಗ್ಗೆಯೇ ಚಿಂತಿಸುವ ಪರಮ ಸತ್ಯ.'

ನಾನೀಗ ಬರುವುದು ಹೆಗೆಲ್‌ನ ತಾತ್ವಿಕತೆಯ ವಿಶಿಷ್ಟ ಲಕ್ಷಣದ ಕಡೆಗೆ; ಇದು ಪ್ಲೇಟೋ ಅಥವಾ ಪ್ಲಾಟಿನಸ್ ಅಥವಾ ಸ್ಪಿನೋಜ಼ನ ತಾತ್ವಿಕತೆಗಿಂತ ಭಿನ್ನವಾಗಿರುವಂಥದು. ಸ್ವಯಂಪೂರ್ಣ ವಾಸ್ತವತೆಯು ಕಾಲಾತೀತವಾದರೂ – ಮತ್ತು ಕಾಲ ಎಂಬುದು ನಾವು ಇಡಿಯನ್ನು ಕಾಣಲಾಗದ ಅಸಮರ್ಥತೆಯಿಂದ ಉಂಟಾದ ಭ್ರಮೆಯಾದರೂ – ಕಾಲ ಪ್ರಕ್ರಿಯೆಯು ದ್ವಂದ್ವೀಯದ ಶುದ್ಧ ತಾರ್ಕಿಕ ಪ್ರಕ್ರಿಯೆಗೆ ನಿಕಟವಾಗಿ ಸಂಬಂಧಿಸಿದೆ. ಹಾಗೆ ನೋಡಿದರೆ, ಜಗತ್ತಿನ ಇತಿಹಾಸವು, ವರ್ಗಗಳ ಮುಖಾಂತರ ಮುಂದುವರಿದಿದೆ, ಚೈನಾದಲ್ಲಿನ ಶುದ್ಧ ಪರಮಪದ (ಪ್ಯೂರ್ ಬೀಯಿಂಗ್ – ಹೆಗೆಲ್‌ಗೆ ಅದು ಇತ್ತು ಎನ್ನುವುದರ ಹೊರತು ಹೆಚ್ಚೇನೂ ತಿಳಿಯದು)ದಿಂದ ಪಾರಮಾರ್ಥಿಕ ಸತ್ಯದವರೆಗೆ, ಪ್ರಷ್ಯಾದಲ್ಲಿ, ಪೂರ್ತಿ ಅಲ್ಲದಿದ್ದರೂ, ಹೆಚ್ಚು ಕಡಿಮೆ ಕೈಗೂಡಿಸಿಕೊಳ್ಳಲಾಗಿತ್ತು. ಅವನ ತತ್ವಜಿಜ್ಞಾಸೆಯ ಆಧಾರದಿಂದ, ಜಗತ್ತಿನ ಇತಿಹಾಸವು ದ್ವಂದ್ವೀಯದ ಸಂಕ್ರಮಣಸ್ಥಿತಿಗಳನ್ನು ಪುನರಾವರ್ತಿಸುತ್ತದೆ ಎಂಬುದಕ್ಕೆ ಯಾವುದೇ ಸಮರ್ಥನೆಯನ್ನು ನಾನು ಕಾಣಲಾರೆನಾದರೂ, ಅವನು ತನ್ನ 'ಫಿಲಾಸಫಿ ಆಫ್ ಹಿಸ್ಟರಿ' ಯಲ್ಲಿ ಬೆಳೆಸಿದ್ದು ಅದನ್ನೇ. ಅದೊಂದು ಕುತೂಹಲಕಾರಕ ಸಿದ್ಧಾಂತ; ಮಾನವ ವ್ಯವಹಾರಗಳ ಕ್ರಾಂತಿಗಳಿಗೆ ಐಕ್ಯ ಮತ್ತು ಅರ್ಥವನ್ನು ನೀಡುವಂಥದು. ಇನ್ನಿತರ ಐತಿಹಾಸಿಕ ಸಿದ್ಧಾಂತಗಳಂತೆಯೇ, ಅದನ್ನು ಸಮಂಜಸವೆನ್ನುವಂತೆ ಮಾಡಲು, ವಸ್ತುಸ್ಥಿತಿಗಳ ತಿರುಚುವಿಕೆ ಮತ್ತು ಸಾಕಷ್ಟು ಅಜ್ಞಾನಗಳನ್ನು ಹೊಂದಬೇಕಾಯಿತು. ತನ್ನ ನಂತರದ ಮಾರ್ಕ್ಸ್ ಮತ್ತು ಸ್ಪೆನ್‌ಗ್ಲರ್‌ರಂತೆ ಹೆಗೆಲ್ ಕೂಡ ಈ ಎರಡೂ ಗುಣಗಳನ್ನು ಹೊಂದಿದ್ದ. ವೈಶ್ವಿಕವೆಂದು ಕರೆಯಲ್ಪಡುವ ಪ್ರಕ್ರಿಯೆಯೆಲ್ಲ ನಮ್ಮ ಗ್ರಹದ ಮೇಲೆ, ಅದೂ ಅವುಗಳಲ್ಲಿ ಬಹುತೇಕ ಮೆಡಿಟರೇನಿಯನ್ ಸಮೀಪವೇ ಸಂಭವಿಸುವುದು ವಿಚಿತ್ರವಾಗಿ ಕಾಣುತ್ತದೆ. ವಾಸ್ತವವು ಕಾಲಾತೀತವಾದರೆ, ಈ ಪ್ರಕ್ರಿಯೆಯ ಉತ್ತರ ಭಾಗವು ಹಿಂದಿನವಕ್ಕಿಂತ ಹೆಚ್ಚು ಉನ್ನತ ವರ್ಗಗಳನ್ನು ಒಳಗೊಳ್ಳಬೇಕಾಗಿತ್ತು ಎಂದು ಭಾವಿಸಲು, ವಿಶ್ವವು ಹೆಗೆಲ್‌ನ ತಾತ್ವಿಕತೆಯನ್ನು ಕ್ರಮೇಣವಾಗಿ ಕಲಿಯುತ್ತಿತ್ತು ಎಂಬ ಪಾಷಂಡ ಕಲ್ಪನೆಯನ್ನು ಹೊಂದಿರದಿದ್ದರೆ, ಯಾವ ಕಾರಣವೂ ಇಲ್ಲ.

ಹೆಗೆಲ್‌ನ ಪ್ರಕಾರ, ಕಾಲ–ಪ್ರಕ್ರಿಯೆಯು, ನೈತಿಕ ಹಾಗೂ ತಾರ್ಕಿಕ ಅರ್ಥಗಳಲ್ಲಿ, ಕಡಿಮೆಯಿಂದ ಹೆಚ್ಚು ಪರಿಪೂರ್ಣತೆಯತ್ತ ಸಾಗುವಂತಹುದು, ಅವನ ದೃಷ್ಟಿಯಲ್ಲಿ ಈ ಎರಡೂ ಅರ್ಥಗಳು ಬೇರೆ ಬೇರೆಯಾದುವೇ ಅಲ್ಲ, ಯಾಕೆಂದರೆ ತಾರ್ಕಿಕ ಪರಿಪೂರ್ಣತೆಯು – ಜೂಲುಜೂಲು ತುದಿಗಳಿಲ್ಲದ, ಸ್ವತಂತ್ರ ಭಾಗಗಳಿಲ್ಲದ,

ಆದರೂ ಮಾನವ ದೇಹದಂತೆ ಏಕವಾದ, ಅದಕ್ಕೂ ಮೀರಿ ಸಕಾರಣವಾದ ಮನಸ್ಸಿನಂತೆ, ಸ್ವತಂತ್ರ ಭಾಗಗಳುಳ್ಳ ಮತ್ತು ಒಂದೇ ಗುರಿಯತ್ತ ಸಾಗುತ್ತಿರುವ ಸಾವಯವ ಜೀವಿಯಂತೆ, ಒತ್ತಾಗಿ ಹೆಣೆದ – ಇಡಿಯಲ್ಲಿಯೇ ಇರುತ್ತದೆ. ಮತ್ತು ಇದರಲ್ಲಿಯೂ ನೈತಿಕ ಪರಿಪೂರ್ಣತೆ ಇರುತ್ತದೆ. ಹೆಗೆಲ್‌ನ ಸಿದ್ಧಾಂತವನ್ನು ಕೆಲವು ಉದ್ಧೃತಗಳು ಸ್ಪಷ್ಟಗೊಳಿಸುತ್ತವೆ.

'ಆತ್ಮ–ಮಾರ್ಗದರ್ಶಕ ಮರ್ಕ್ಯುರಿಯಂತೆ, ಪರಮ ಸತ್ಯವು ವಾಸ್ತವದಲ್ಲಿ ಜನರ ಮತ್ತು ಜಗತ್ತಿನ ಮುಂದಾಳು; ಚೈತನ್ಯವು, ಆ ಮಾರ್ಗದರ್ಶಕನ ವೈಚಾರಿಕವೂ ಅನಿವಾರ್ಯವೂ ಆದ ಇಚ್ಛಾಶಕ್ತಿಯು, ಜಗತ್ತಿನ ಇತಿಹಾಸದ ಆಗುಹೋಗುಗಳ ನಿರ್ದೇಶಕವಾಗಿದೆ ಮತ್ತು ಆಗಿತ್ತು. ಮಾರ್ಗದರ್ಶಕ ಸ್ಥಾನದಲ್ಲಿರುವ ಚೈತನ್ಯದ ಪರಿಚಯ ಹೊಂದುವುದು ನಮ್ಮ ಪ್ರಸ್ತುತ ಪ್ರಯತ್ನದ ಉದ್ದೇಶ.'

'ಇತಿಹಾಸದ ಬಗೆಗಿನ ಚಿಂತನೆಯಲ್ಲಿ ತಾತ್ವಿಕತೆಯು ಹೊಂದಿರುವ ಏಕೈಕ ಚಿಂತನೆಯೆಂದರೆ ವೈಚಾರಿಕತೆಯ ಸರಳ ಪರಿಕಲ್ಪನೆ; ವೈಚಾರಿಕತೆಯು ಜಗತ್ತಿನ ಸಾರ್ವಭೌಮ; ಹೀಗಾಗಿ ಜಗತ್ತಿನ ಇತಿಹಾಸವು ಒಂದು ವೈಚಾರಿಕ ಪ್ರಕ್ರಿಯೆಯನ್ನು ಮುಂದಿರಿಸುತ್ತದೆ. ಇಂಥ ಮನಗಾಣ್ಕೆ ಮತ್ತು ಅಂತರ್ಬೋಧೆಗಳು ಇತಿಹಾಸ ಸಾಮ್ರಾಜ್ಯದಲ್ಲಿನ ಒಂದು ಆಧಾರಕಲ್ಪನೆ. ತಾತ್ವಿಕತೆಯಲ್ಲಿ ಅದು ಆಧಾರಕಲ್ಪನೆಯಲ್ಲ – ವಿಶ್ವ ಮತ್ತು ದೈವಿಕ ಪರಮಪದದೊಡನೆ ಹೊಂದಿರುವ ಸತತ ಸಂಬಂಧವನ್ನು ಕುರಿತ ಅನ್ವೇಷಣೆ ಮಾಡದ, ಈ ಶಬ್ದವು ಇಲ್ಲಿ ಸಾಕಾಗಬಹುದು – ಮೂಲತತ್ವ ಮತ್ತು ಅನಂತ ಸಾಮರ್ಥ್ಯ; ತಾನು ಸೃಷ್ಟಿಸುವ ಎಲ್ಲ ಸಹಜ ಮತ್ತು ಚೈತನ್ಯಾತ್ಮಕ ಜೀವ ಹಾಗೂ ಭೌತದ್ರವ್ಯವನ್ನು ಚಲನೆಯಲ್ಲಿಡುವ ಅನಂತ ರೂಪದಲ್ಲಿ ಅಂತರ್ವಾಹಿನಿಯಾದ ತನ್ನದೇ ಅನಂತ ಭೌತದ್ರವ್ಯ ಎಂಬ ವೈಚಾರಿಕತೆಯು ಅಲ್ಲಿ ಊಹನದ ಗ್ರಹಿಕೆಯಿಂದ ಸಾಧಿತವಾಗುತ್ತದೆ. ವೈಚಾರಿಕತೆಯು ವಿಶ್ವದ ಮೂಲತತ್ವ.

'ಈ ಚಿಂತನೆ ಅಥವಾ ವೈಚಾರಿಕತೆಯು ಸತ್ಯ ಮತ್ತು ಚಿರಂತನ, ಸ್ವಯಂಪೂರ್ಣ ಸಾಮರ್ಥ್ಯವುಳ್ಳ ಸತ್ವ; ಅದು ಜಗತ್ತಿನಲ್ಲಿ ತನ್ನನ್ನು ತಾನು ಬಯಲುಗೊಳಿಸಿಕೊಳ್ಳುತ್ತದೆ, ಮತ್ತು ಜಗತ್ತಿನಲ್ಲಿ ಇದು ಮತ್ತು ಇದರ ಗೌರವ ಮತ್ತು ಭವ್ಯತೆಗಳ ಹೊರತು ಇನ್ನಾವುದೂ ಪ್ರಕಟಗೊಳ್ಳುವುದಿಲ್ಲ – ಎಂಬುದೇ ಸಿದ್ಧಾಂತ. ಅದು, ನಾವಾಗಲೇ ಹೇಳಿದಂತೆ, ತತ್ವಜ್ಞಾನದಲ್ಲಿ ಸಾಬೀತಾಗಿದೆ, ಮತ್ತು ಇಲ್ಲಿ ಅದು ನಿದರ್ಶಿತವಾಯಿತೆಂದು ಪರಿಗಣಿತವಾಗಿದೆ.'

'ಬುದ್ಧಿವಂತಿಕೆ ಮತ್ತು ಪ್ರಜ್ಞಾಪೂರ್ವಕ ಇಚ್ಛಾಶಕ್ತಿಗಳನ್ನು ಆಕಸ್ಮಿಕಕ್ಕಾಗಿ ಬಲಿಗೊಟ್ಟಿಲ್ಲ, ಆದರೆ ಅದು ಸ್ವಯಂಗ್ರಹೀತ ಚಿಂತನೆಯ ಬೆಳಕಿನಲ್ಲಿ ಪ್ರಕಟವಾಗಬೇಕು.'

ಇದು 'ನಾನು ಇಡೀ ಕ್ಷೇತ್ರವನ್ನು ಸುತ್ತಿರುವುದರಿಂದಾಗಿ ಅದು ನನಗೆ ತಿಳಿಯುವಂತೆ ಮಾಡುವ ಫಲಿತ.'

ಈ ಎಲ್ಲ ಉದ್ಧೃತಗಳೂ 'ಫಿಲಾಸಫಿ ಆಫ್ ಹಿಸ್ಟರಿ' ಗ್ರಂಥದ ಪೀಠಿಕೆಯವು.

'ಚೈತನ್ಯ ಮತ್ತದರ ಬೆಳವಣಿಗೆಯ ಮಾರ್ಗವು ಇತಿಹಾಸ ತಾತ್ವಿಕತೆಯ ಮುಖ್ಯ ಉದ್ದೇಶ. ಚೈತನ್ಯದ ಸ್ವರೂಪವನ್ನು ಅದರ ವಿರುದ್ಧವಾದುದರ, ಅಂದರೆ ಭೌತದ್ರವ್ಯದ, ವೈದೃಶ್ಯದ ಮೂಲಕ ಅರ್ಥಮಾಡಿಕೊಳ್ಳಬಹುದು. ಭೌತದ್ರವ್ಯದ ಸಾರವೆಂದರೆ ಗುರುತ್ವ; ಚೈತನ್ಯದ ಸಾರ ಸ್ವಾತಂತ್ರ್ಯ. ಭೌತದ್ರವ್ಯವು ತನಗೆ ಬಾಹ್ಯವಾದುದು, ಆದರೆ ಚೈತನ್ಯದ ಕೇಂದ್ರವು ಅದರಲ್ಲಿಯೇ ಇದೆ. ಚೈತನ್ಯವು ಸ್ವಯಂಪೂರ್ಣ ಅಸ್ತಿತ್ವ.' ಇದು ಸ್ಪಷ್ಟವಾಗದಿದ್ದರೆ, ಈ ಕೆಳಗಿನ ಸೂತ್ರವು ಮತ್ತಷ್ಟು ಬೆಳಕನ್ನು ಚೆಲ್ಲುವುದೆಂದು ಹೇಳಬಹುದು:

'ಆದರೆ ಚೈತನ್ಯ ಎಂದರೆ ಏನು? ಅದು ಅಪರಿವರ್ತನೀಯ ಏಕರೂಪದ ಅನಂತವಾದ ಒಂದು – ಶುದ್ಧ ಅನನ್ಯತೆ – ಅದು ತನ್ನ ಎರಡನೆಯ ಘಟ್ಟದಲ್ಲಿ ತನ್ನಿಂದ ತಾನು ಬೇರ್ಪಡುತ್ತದೆ ಮತ್ತು ಈ ಎರಡನೆಯ ಮುಖವನ್ನು ತನ್ನದೇ ತದ್ವಿರುದ್ಧವಾಗಿ, ಅಂದರೆ ವೈಶ್ವಿಕವಾದುದಕ್ಕೆ ವಿದೃಶವಾದ ತನಗೆ ತನ್ನಲ್ಲಿಯೇ ಅಸ್ತಿತ್ವವಾಗಿ, ಮಾಡಿಕೊಳ್ಳುತ್ತದೆ'

ಚೈತನ್ಯದ ಐತಿಹಾಸಿಕ ಬೆಳವಣಿಗೆಯಲ್ಲಿ ಮೂರು ಮುಖ್ಯ ಘಟ್ಟಗಳಿವೆ: ಪೌರ್ವಾತ್ಯರು, ಗ್ರೀಕರು ಮತ್ತು ರೋಮನ್‌ರು. 'ಜಗತ್ತಿನ ಇತಿಹಾಸವು ಅನಿಯಂತ್ರಿತ ಸಹಜ ಇಚ್ಛಾಶಕ್ತಿಯ ಶಿಸ್ತು, ಅದನ್ನು ವೈಶ್ವಿಕ ತತ್ವಕ್ಕೆ ಅಧೀನವಾಗುವಂತೆ ಮಾಡಿ ಮತ್ತು ವೈಯಕ್ತಿಕ ಸ್ವಾತಂತ್ರ್ಯವನ್ನು ನೀಡುವಂಥದು. ಒಂದು ಮಾತ್ರವೇ ಸ್ವತಂತ್ರ ಎಂಬುದನ್ನು, ಈಗಿನ ಕಾಲದಲ್ಲಿ ತಿಳಿದಿರುವಂತೆ, ಪೂರ್ವವು ತಿಳಿದಿತ್ತು; ಗ್ರೀಕ್ ಮತ್ತು ರೋಮನ್ ಜಗತ್ತು, ಕೆಲವು ಸ್ವತಂತ್ರ ಎಂದು ತಿಳಿದಿತ್ತು; ಜರ್ಮನ್ ಜಗತ್ತು ಎಲ್ಲವೂ ಸ್ವತಂತ್ರ ಎಂದು ತಿಳಿದಿದೆ. ಎಲ್ಲರೂ ಸ್ವತಂತ್ರರಾಗಿರುವ ಎಡೆಯಲ್ಲಿ ಪ್ರಜಾಪ್ರಭುತ್ವವು ಸೂಕ್ತವಾದುದು ಎಂದು ಭಾವಿಸಬಹುದಾದರೂ, ಅದು ಹಾಗಿಲ್ಲ. ಪ್ರಜಾಪ್ರಭುತ್ವ ಮತ್ತು ಶ್ರೀಮಂತಪ್ರಭುತ್ವಗಳೆರಡೂ ಕೆಲವರು ಮಾತ್ರ ಸ್ವತಂತ್ರರಾಗಿರುವ ಘಟ್ಟಕ್ಕೆ ಸೇರುತ್ತನೆ, ಒಬ್ಬನು ಮಾತ್ರ ಸ್ವತಂತ್ರವಾಗಿರುವ ಕಡೆಯಲ್ಲಿ ನಿರಂಕುಶಪ್ರಭುತ್ವ ಇರುತ್ತದೆ, ಮತ್ತು ರಾಜಪ್ರಭುತ್ವವು ಎಲ್ಲರೂ ಸ್ವತಂತ್ರರಾಗಿರುವ ಕಡೆಯಲ್ಲಿರುತ್ತದೆ. ಇದು ಹೆಗೆಲ್ ಬಳಸುವ 'ಸ್ವತಂತ್ರ' ಎಂಬ ಪದದ ತೀರ ಪ್ರಾಚೀನ ಅರ್ಥಕ್ಕೆ ಸಂಬಂಧಿಸಿದ್ದು. ಅವನಿಗೆ (ನಾವೂ ಒಪ್ಪಬಹುದಾದಷ್ಟು ಮಟ್ಟಿಗೆ) ಕಾನೂನು ಇಲ್ಲದೆ ಸ್ವಾತಂತ್ರ್ಯ ಇರಲಾರದು; ಆದರೆ ಇದನ್ನವನು ಮಾರ್ಪಡಿಸುವಂತೆ ತೋರುತ್ತದೆ ಹಾಗೂ ಎಲ್ಲಿ ಕಾನೂನಿದೆಯೋ ಅಲ್ಲೆಲ್ಲ ಸ್ವಾತಂತ್ರ್ಯವಿರುತ್ತದೆ ಎಂದು ವಾದಿಸುವಂತೆ ತೋರುತ್ತದೆ. ಹೀಗೆ ಅವನ ದೃಷ್ಟಿಯಲ್ಲಿ 'ಸ್ವಾತಂತ್ರ್ಯ'ವು ಕಾನೂನಿಗೆ ವಿಧೇಯವಾಗಿರುವುದಕ್ಕಿಂತ ಸ್ವಲ್ಪವೇ ಹೆಚ್ಚಿನದು ಎಂಬಂತೆ ತೋರುತ್ತದೆ.

ನಿರೀಕ್ಷಿಸಬಹುದಾದಂತೆಯೇ, ಹೆಗೆಲ್ ಚೈತನ್ಯದ ಪ್ರಾಪಂಚಿಕ ಬೆಳವಣಿಗೆಯಲ್ಲಿ ಜರ್ಮನ್‌ರಿಗೆ ಅತ್ಯಂತ ಹಿರಿದಾದ ಪಾತ್ರವನ್ನು ನೀಡುತ್ತಾನೆ. 'ಜರ್ಮನ್ ಚೈತನ್ಯವು ಹೊಸ ಜಗತ್ತಿನ ಚೈತನ್ಯ. ಅದರ ಉದ್ದೇಶವು ಸ್ವಾತಂತ್ರ್ಯದ ಅಪರಿಮಿತ ಸ್ವಯಂ-ನಿರ್ಣಯವಾದ ಸ್ವಯಂಪೂರ್ಣ ಸತ್ಯದ ಸಾಕ್ಷಾತ್ಕಾರ – ತನ್ನದೇ ಸ್ವಯಂಪೂರ್ಣ ರೂಪವನ್ನು ಹೊಂದಿರುವ ಮತ್ತು ತನ್ನದೇ ಅರ್ಥವನ್ನು ಹೊಂದಿರುವ ಸ್ವಾತಂತ್ರ್ಯ ಅದು.

ಇದು ಪರಮೋಚ್ಚ ರೂಪವಾದ ಸ್ವಾತಂತ್ರ್ಯ. ನಿಮ್ಮನ್ನು ಶ್ರಮಶಿಬಿರದಿಂದ ಹೊರಗೇ ಉಳಿಯಬಹುದೆಂದು ಅದು ಹೇಳುವುದಿಲ್ಲ. ಇದು ಪ್ರಜಾಪ್ರಭುತ್ವವನ್ನು, ಅಥವಾ ಸ್ವತಂತ್ರ ಪತ್ರಿಕೆಗಳನ್ನಾಗಲೀ,[೨೭೫] ಅಥವಾ ಇನ್ನಾವುದೇ ಉದಾರವಾದಿ ತತ್ವಗಳನ್ನಾಗಲೀ ಸೂಚಿಸುವುದಿಲ್ಲ, ಅವುಗಳನ್ನು ಹೆಗೆಲ್ ತಿರಸ್ಕಾರದಿಂದ ಕಾಣುತ್ತಾನೆ. ಚೈತನ್ಯವು ತನಗೆ ಕಾನೂನುಗಳನ್ನಿತ್ತುಕೊಂಡರೆ, ಅದು ಹಾಗೆ ಮಾಡುವುದು ಮುಕ್ತವಾಗಿ. ನಮ್ಮ ಪಾಮರ ಬುದ್ಧಿಗೆ, ಚೈತನ್ಯವು ನೀಡುವ ಕಾನೂನುಗಳು ರಾಜನಲ್ಲಿ ಸೇರಿರುತ್ತವೆ, ಮತ್ತು ಚೈತನ್ಯಗಳಿಗೆ ನೀಡಲಾಗುವ ಕಾನೂನುಗಳು ಅವನ ಪ್ರಜೆಗಳಲ್ಲಿರುತ್ತವೆ ಎಂಬ ಅರ್ಥ ಸ್ಫುರಿಸುತ್ತದೆ. ಆದರೆ ಸ್ವಯಂಪೂರ್ಣವಾದುದರ ದೃಷ್ಟಿಕೋನದಿಂದ ರಾಜ ಮತ್ತವನ ಪ್ರಜೆಗಳ ನಡುವಣ ವ್ಯತ್ಯಾಸವು, ಮಿಕ್ಕೆಲ್ಲ ವ್ಯತ್ಯಾಸಗಳಂತೆಯೇ, ಭ್ರಮಾತ್ಮಕವಾದದ್ದು; ರಾಜನು ಉದಾರ ದೃಷ್ಟಿಕೋನದ ಪ್ರಜೆಯನ್ನು ಸೆರೆಯಲ್ಲಿರಿಸಿದರೆ, ಚೈತನ್ಯವು ತನ್ನ ಪಾಡಿಗೆ ತಾನು ಮುಕ್ತವಾಗಿ ನಿರ್ಧರಿಸುವುದೇ ಆಗುತ್ತದೆ. ರೂಸೋ ಮಾಡುವ ಸಾಮಾನ್ಯ ಇಚ್ಛಾಶಕ್ತಿ ಮತ್ತು ಎಲ್ಲರ ಇಚ್ಛಾಶಕ್ತಿಗಳ ವ್ಯತ್ಯಾಸದ ಬಗ್ಗೆ ಹೆಗೆಲ್ ಹೊಗಳುತ್ತಾನೆ. ರಾಜನು ಸಾಮಾನ್ಯ ಇಚ್ಛಾಶಕ್ತಿಯನ್ನು ಹೊಂದಿರುತ್ತಾನೆ, ಅದೇ ಸಂಸದೀಯ ಪ್ರಜಾಪ್ರಭುತ್ವವು ಕೇವಲ ಎಲ್ಲರ ಇಚ್ಛಾಶಕ್ತಿಯನ್ನು ಹೊಂದಿರುತ್ತದೆ. ತುಂಬ ಜಾಣತನದ ಸಿದ್ಧಾಂತ.

ಜರ್ಮನ್ ಇತಿಹಾಸವನ್ನು ಹೆಗೆಲ್ ಮೂರು ಅವಧಿಗಳಾಗಿ ವಿಭಜಿಸುತ್ತಾನೆ: ಮೊದಲನೆಯದು, ಶಾರ್ಲಮೇನ್‌ವರೆಗಿನದು; ಎರಡನೆಯದು, ಶಾರ್ಲಮೇನ್‌ನಿಂದ ಮತಧರ್ಮಸುಧಾರಣೆಯವರೆಗೆ; ಮತ್ತು, ಮೂರನೆಯದು, ಮತಧರ್ಮಸುಧಾರಣೆಯಿಂದ ಮುಂದಕ್ಕೆ. ಈ ಮೂರು ಅವಧಿಗಳನ್ನು ಕ್ರಮವಾಗಿ ತಂದೆ, ಮಗ ಮತ್ತು ಪವಿತ್ರಾತ್ಮಗಳ ಸಾಮ್ರಾಜ್ಯ ಎಂದು ವಿಂಗಡಿಸಲಾಗಿದೆ. ಪವಿತ್ರಾತ್ಮದ ಸಾಮ್ರಾಜ್ಯವು ಮೊದಲಾಗುವುದು ರೈತ ಚಳುವಳಿಯನ್ನು ಹತ್ತಿಕ್ಕಲು ನಡೆಸಿದ

೨೭೫. ಪತ್ರಿಕಾ ಸ್ವಾತಂತ್ರ್ಯವು ತನಗೆ ಬೇಕಾದುದನ್ನು ಬರೆಯುವ ಸ್ವಾತಂತ್ರ್ಯವನ್ನು ನೀಡುವುದಿಲ್ಲ, ಎನ್ನುತ್ತಾನೆ ಅವನು. ಇದು ಒರಟಾದುದೂ ಕೃತಕವಾದುದೂ ಆದ ದೃಷ್ಟಿಕೋನ. ನಿದರ್ಶನಕ್ಕೆ, 'ಪತ್ರಿಕೆಗಳು ಸರ್ಕಾರವನ್ನಾಗಲೀ ಪೋಲಿಸ್ ವ್ಯವಸ್ಥೆಯನ್ನಾಗಲೀ ತಿರಸ್ಕಾರದಿಂದ ನೋಡುವ ಪರಿಗೆ ಅವಕಾಶವನ್ನು ನೀಡಬಾರದು.'

ರಕ್ತಸಿಕ್ತವೂ ಕ್ಷುದ್ರವೂ ಆದ ಹಿಂಸಾಚಾರಗಳಿಂದ ಎಂಬುದು ವಿಚಿತ್ರವೆನಿಸುತ್ತದೆ; ಆದರೆ ಹೆಗೆಲ್ ಅಂತಹ ಸಣ್ಣ ಪುಟ್ಟ ಘಟನೆಗಳನ್ನು ಸಹಜವಾಗಿ ಉಲ್ಲೇಖಿಸುವುದೇ ಇಲ್ಲ. ಅದರ ಬದಲು, ನಾವು ನಿರೀಕ್ಷಿಸಬಹುದಾದಂತೆ, ಅವನು ಮೆಕಿಯವೆಲ್ಲಿಯ ಹೊಗಳಿಕೆಯ ಕಡೆಗೆ ಸಾಗುತ್ತಾನೆ.

ರೋಮನ್ ಸಾಮ್ರಾಜ್ಯದ ಪತನದಿಂದ ಮುಂದಿನ ಇತಿಹಾಸದ ಹೆಗೆಲ್‌ನ ವ್ಯಾಖ್ಯಾನವು, ಜರ್ಮನ್ ಶಾಲೆಗಳಲ್ಲಿ ಬೋಧಿಸುತ್ತಿದ್ದ ಇತಿಹಾಸ ಪಾಠಗಳ ಭಾಗಶಃ ಪರಿಣಾಮ, ಭಾಗಶಃ ಕಾರಣ. ಇಟಲಿ ಮತ್ತು ಫ್ರಾನ್ಸ್‌ಗಳಲ್ಲಿ ಟ್ಯಾಸಿಟಸ್ ಮತ್ತು ಮೆಕಿಯವೆಲ್ಲಿಯಂತಹ ಕೆಲವರಲ್ಲಿ, ಒಟ್ಟಾರೆಯಾಗಿ, ಜರ್ಮನ್‌ರ ಬಗ್ಗೆ ರೊಮ್ಯಾಂಟಿಕ್ ಎನ್ನಬಹುದಾದ ಮೆಚ್ಚಿಕೆಯಿದ್ದರೂ, ಅವರನ್ನು 'ಬಾರ್ಬೇರಿಯನ್ ಆಕ್ರಮಣ'ಗಳ ಕರ್ತೃಗಳಾಗಿ ಮತ್ತು ಮೊದಲು ಚಕ್ರವರ್ತಿಗಳ ಮತ್ತು ಆನಂತರ ಮತಧರ್ಮಸುಧಾರಣೆಯ ನಾಯಕರಾಗಿ ಚರ್ಚ್‌ನ ವಿರೋಧಿಗಳಾಗಿ ಕಾಣುವ ದೃಷ್ಟಿಕೋನವಿತ್ತು. ಹತ್ತೊಂಬತ್ತನೆಯ ಶತಮಾನದವರೆಗೂ, ಲ್ಯಾಟಿನ್ ದೇಶಗಳು ಜರ್ಮನ್‌ರನ್ನು ನಾಗರಿಕತೆಯಲ್ಲಿ ತಮಗಿಂತ ಕೀಳೆಂದು ಪರಿಗಣಿಸಿದ್ದರು ಜರ್ಮನಿಯಲ್ಲಿನ ಪ್ರಾಟೆಸ್ಟೆಂಟ್‌ರು ಸಹಜವಾಗಿಯೇ ಬೇರೊಂದು ದೃಷ್ಟಿಕೋನವನ್ನು ತಾಳಿದ್ದರು, ಆವರು ಆನಂತರದ ರೋಮನ್‌ರನ್ನು ದುರ್ಬಲರೆಂದು ಪರಿಗಣಿಸಿದ್ದರು, ಮತ್ತು ಪಶ್ಚಿಮ ಯೂರೋಪ್‌ನ ಮೇಲಣ ಜರ್ಮನ್ ಗೆಲವನ್ನು ಪುರುಜ್ಜೀವನದ ಕಡೆಗಿನ ಹೆಜ್ಜೆ ಎಂದು ಪರಿಗಣಿಸಿದರು. ಮಧ್ಯ ಯುಗಗಳಲ್ಲಿನ ಚಕ್ರವರ್ತಿ ಮತ್ತು ಪೋಪ್‌ಪ್ರಭುತ್ವಗಳ ಸಂಘರ್ಷವನ್ನು ಅವರು ಗಿಬ್ಬಲೈನ್ ದೃಷ್ಟಿಕೋನದಿಂದ ನೋಡಿದರು. ಇವತ್ತಿಗೂ, ಜರ್ಮನ್ ಶಾಲಾ ಮಕ್ಕಳ ತಲೆಗಳಲ್ಲಿ ಶಾರ್ಲಮೇನ್ ಮತ್ತು ಬಾರ್ಬರೋಸಾಗಳ ಬಗ್ಗೆ ಅಪಾರ ಮೆಚ್ಚಿಕೆಯನ್ನು ತುಂಬುತ್ತಾರೆ. ಮತಧರ್ಮಸುಧಾರಣೆಯ ನಂತರದ ಕಾಲಗಳಲ್ಲಿ, ಜರ್ಮನ್‌ರ ರಾಜಕೀಯ ದೌರ್ಬಲ್ಯ ಮತ್ತು ಅನೈಕಮತ್ಯವನ್ನು ವಿಷಾದದಿಂದ ಕಾಣಲಾಯಿತು, ಕ್ರಮೇಣ ಪ್ರಷ್ಯಾವು ಮೇಲೆದ್ದುದನ್ನು ಪ್ರಾಟೆಸ್ಟೆಂಟ್ ಮುಂದಾಳುತ್ವದಲ್ಲಿ, ಕ್ಯಾಥೋಲಿಕ್ ಮತ್ತು ಆಸ್ಟ್ರಿಯದ ದುರ್ಬಲ ನಾಯಕತ್ವದಲ್ಲಿ ಅಲ್ಲ, ಜರ್ಮನಿಯನ್ನು ಶಕ್ತಿಶಾಲಿಯನ್ನಾಗಿ ಮಾಡುವುದೆಂದು ಸ್ವಾಗತಿಸಲಾಯಿತು. ಇತಿಹಾಸ ತಾತ್ವಿಕತೆಯನ್ನು ರೂಪಿಸುವ ಹೆಗೆಲ್ ತನ್ನ ಮನಸ್ಸಿನಲ್ಲಿ ಥಿಯೋಡರ್, ಶಾರ್ಲಮೇನ್, ಬಾರ್ಬರೋಸ, ಲೂಥರ್ ಮತ್ತು ಫ್ರೆಡೆರಿಕ್ ಮಹಾಶಯ ಇರಿಸಿಕೊಳ್ಳುತ್ತಾನೆ. ಅವರ ಸಾಹಸಗಳ ಹಿನ್ನೆಲೆಯಲ್ಲಿ, ಮತ್ತು ಹಾಗೆಯೇ ನೆಪೋಲಿಯನ್ ಜರ್ಮನ್‌ರನ್ನು ಅವಮಾನಿಸಿದ ಹಿನ್ನೆಲೆಯಲ್ಲಿ ನಾವು ಅವನನ್ನು ವ್ಯಾಖ್ಯಾನಿಸಬೇಕು

ಜರ್ಮನಿಯನ್ನು ಎಷ್ಟರ ಮಟ್ಟಿಗೆ ವೈಭವೀಕರಿಸಲಾಗಿದೆಯೆಂದರೆ, ಮುಂದೆ ಬೆಳವಣಿಗೆ ಅಸಾಧ್ಯವಾಗುವಂತೆ ಅದು ಸ್ವಯಂಪೂರ್ಣ ಪರಮ ಸತ್ಯದ

ಸಾಕ್ಷಾತ್ಕಾರವೆಂದು ಭಾವಿಸುವಷ್ಟರ ಮಟ್ಟಿಗೆ. ಆದರೆ ಇದು ಹೆಗೆಲ್‌ನ ದೃಷ್ಟಿಕೋನವಲ್ಲ. ಅದಕ್ಕೆ ವ್ಯತಿರಿರಿಕ್ತವಾಗಿ, ಅಮೆರಿಕವು ಭವಿಷ್ಯದ ದೇಶ, 'ಅಲ್ಲಿ ನಮ್ಮ ಮುಂದೆ ಇರುವ ಕಾಲದಲ್ಲಿ, ಜಗತ್ತಿನ ಇತಿಹಾಸದ ಹೊರೆ ಪ್ರಕಟಗೊಳ್ಳುತ್ತದೆ – ಪ್ರಾಯಶಃ [ಅವನು ವಿಶಿಷ್ಟತೆಯಿಂದ ಸೇರಿಸುವುದೆಂದರೆ] ಉತ್ತರ ಮತ್ತು ದಕ್ಷಿಣ ಅಮೆರಿಕಗಳ ಸ್ಪರ್ಧೆಯಲ್ಲಿ' ಎಂದು ಅವನು ಹೇಳುತ್ತಾನೆ. ಎಲ್ಲ ಮುಖ್ಯವಾದುದೂ ಯುದ್ಧದ ರೂಪ ತಾಳುತ್ತದೆ ಎಂದವನು ಭಾವಿಸಿರುವಂತೆ ತೋರುತ್ತದೆ. ಜಗತ್ತಿನ ಇತಿಹಾಸಕ್ಕೆ ಅಮೆರಿಕದ ಕೊಡುಗೆಯು ಬಡತನದ ಅತಿರೇಕವಿಲ್ಲದ ಅಭಿವೃದ್ಧಿಯಾಗಬಹುದು ಎಂದವನು ಸೂಚಿಸುತ್ತಿದ್ದರೆ, ಅವನೇನೂ ಆಸಕ್ತಿದಾಯಕನಾಗುವುದಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ನಿಜವಾದ ದೇಶವೆಂದರೆ ಬಡವರು ಬಲ್ಲಿದರು ಎಂಬ ವರ್ಗಗಳ ವಿಭಜನೆಯಿರಬೇಕು, ಹೀಗಾಗಿ ಅಮೆರಿಕದಲ್ಲಿ ಇನ್ನೂ ವಾಸ್ತವವಾಗಿ ದೇಶವೇ ಇಲ್ಲ ಎಂದವನು ಹೇಳುತ್ತಾನೆ.

ಮಾರ್ಕ್ಸ್‌ನಲ್ಲಿ ವರ್ಗಗಳು ವಹಿಸುವ ಪಾತ್ರಗಳನ್ನು ಹೆಗೆಲ್‌ನಲ್ಲಿ ರಾಷ್ಟ್ರಗಳು ವಹಿಸುತ್ತವೆ. ಐತಿಹಾಸಿಕ ಬೆಳವಣಿಗೆಯ ತತ್ವವೆಂದರೆ ರಾಷ್ಟ್ರಗಳ ಪ್ರತಿಭೆಗಳು. ಪ್ರತಿಯೊಂದು ಯುಗದಲ್ಲೂ, ಯಾವುದೋ ಒಂದು ರಾಷ್ಟ್ರವು ತಾನು ತಲುಪಿರುವ ದ್ವಂದ್ವೀಯ ಘಟ್ಟದ ಮೂಲಕ ಜಗತ್ತನ್ನು ಮುಂದುವರಿಸುವ ಮಣಿಹವನ್ನು ಹೊರಬೇಕಾಗುತ್ತದೆ. ನಮ್ಮ ಕಾಲದಲ್ಲಿ, ಈ ರಾಷ್ಟ್ರವೆಂದರೆ ಜರ್ಮನಿ. ಆದರೆ ರಾಷ್ಟ್ರಗಳ ಜೊತೆಗೆ, ನಾವು ಜಗತ್ತಿನ ಐತಿಹಾಸಿಕ ವ್ಯಕ್ತಿಗಳನ್ನೂ ಪರಿಗಣಿಸಬೇಕು; ಅವರ ಗುರಿಗಳಲ್ಲಿ ಅವರ ಹೆಸರಿನಲ್ಲಿಯೇ ನಡೆಯಬೇಕಾದ ದ್ವಂದ್ವೀಯ ಸಂಕ್ರಮಣಗಳು ಮಿಳಿತವಾಗಿರುತ್ತವೆ. ಈ ವ್ಯಕ್ತಿಗಳು ಧೀರಪುರುಷರು, ಅವರು ಸಾಮಾನ್ಯ ನೈತಿಕ ನಿಯಮಗಳನ್ನು ಸಮರ್ಥನೀಯವಾಗಿಯೇ ಉಲ್ಲಂಘಿಸುತ್ತಾರೆ. ಅಲೆಕ್ಸಾಂಡರ್, ಸೀಸರ್, ಮತ್ತು ನೆಪೋಲಿಯನ್ ಅವರನ್ನು ಉದಾಹರಣೆಗಳಾಗಿ ನೀಡುತ್ತಾನೆ. ಸೈನಿಕ ಗೆಲವನ್ನು ಪಡೆಯದೆಯೇ ಒಬ್ಬ ವ್ಯಕ್ತಿಯು ಧೀರಪುರುಷನಾಗಬಹುದು ಎಂಬುದು ಹೆಗೆಲ್‌ನ ಅಭಿಪ್ರಾಯ ಎಂಬುದರ ಬಗ್ಗೆ ನನಗೆ ಅನುಮಾನವಿದೆ.

'ಸ್ವಾತಂತ್ರ್ಯ'ದ ಬಗೆಗಿನ ತನ್ನ ವಿಚಿತ್ರ ಪರಿಕಲ್ಪನೆಯೊಂದಿಗೆ ಹೆಗೆಲ್ ರಾಷ್ಟ್ರಕ್ಕೆ ನೀಡುವ ಪ್ರಾಮುಖ್ಯವು ಅವನ ಸರ್ಕಾರದ ವೈಭವೀಕರಣದ ವಿವರಣೆಯಾಗುತ್ತದೆ. ಇದು ಅವನ ರಾಜಕೀಯ ತಾತ್ವಿಕತೆಯ ಒಂದು ಬಹು ಮುಖ್ಯ ಅಂಶ, ಆ ಕಡೆಗೆ ನಾವೀಗ ಗಮನ ಹರಿಸಬೇಕಾಗಿದೆ. ಸರ್ಕಾರದ ಬಗೆಗಿನ ಅವನ ತಾತ್ವಿಕತೆಯ ವಿವರಣೆಯನ್ನು 'ಫಿಲಾಸಫಿ ಆಫ್ ಹಿಸ್ಟರಿ' ಮತ್ತು 'ಫಿಲಾಸಫಿ ಆಫ್ ಲಾ' ಎರಡೂ ಗ್ರಂಥಗಳಲ್ಲಿ ಕಾಣಬಹುದು. ಅದು ಒಟ್ಟಾರೆ ಅವನ ಸಾಮಾನ್ಯ ತತ್ವಜಿಜ್ಞಾಸೆಯೊಡನೆ ಹೊಂದಿಕೆಯಾಗುತ್ತದೆಯೇ ವಿನಾ ಅದರಿಂದಾಗಿ ಅನಿವಾರ್ಯವೆನಿಸುವುದಿಲ್ಲ.

ಆದರೂ, ನಿದರ್ಶನಕ್ಕೆ, ಸರ್ಕಾರಗಳ ನಡುವಣ ಸಂಬಂಧಗಳಿಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಸರ್ಕಾರದ ಬಗೆಗಿನ ಅವನ ಅಭಿಮಾನವು ಭಾಗಗಳ ಬದಲು ಇಡಿಗಳನ್ನು ಸಾಮಾನ್ಯವಾಗಿ ಒಪ್ಪುವುದರೊಂದಿಗೆ ಸುಸಸಂಗತವಾಗದಿರುವಷ್ಟು ಮುಂದುವರಿಯುತ್ತದೆ.

ಆಧುನಿಕ ಕಾಲಗಳಿಗೆ ಸಂಬಂಧಿಸಿದಂತೆ, ಸರ್ಕಾರದ ವೈಭವೀಕರಣವು ಆರಂಭವಾಗುವುದು ಮತಧರ್ಮಸುಧಾರಣೆಯಿಂದ. ರೋಮನ್ ಸಾಮ್ರಾಜ್ಯದಲ್ಲಿ, ಚಕ್ರವರ್ತಿಯು ದೈವಾಂಶಸಂಭೂತನಾಗಿದ್ದ, ಹೀಗಾಗಿ ಸರ್ಕಾರಕ್ಕೂ ಒಂದು ದೈವಿಕ ಸ್ವರೂಪ ಪ್ರಾಪ್ತವಾಗಿತ್ತು. ಆದರೆ, ಕೆಲವರನ್ನು ಹೊರತುಪಡಿಸಿದಂತೆ, ಮಧ್ಯ ಯುಗಗಳ ತತ್ವಜ್ಞಾನಿಗಳು ಮತಧರ್ಮಬೋಧಕರು, ಅವರೆಲ್ಲ ಸರ್ಕಾರಕ್ಕಿಂತ ಚರ್ಚ್‌ಗೆ ಪ್ರಾಮುಖ್ಯವಿತ್ತರು. ಪ್ರಾಟೆಸ್ಟೆಂಟ್ ರಾಜರ ನೆರವಿನಿಂದಾಗಿ ಲೂಥರ್ ಇದನ್ನು ವಿರೋಧಿಸಿದ; ಲೂಥೆರನ್ ಚರ್ಚ್, ಒಟ್ಟಾರೆಯಾಗಿ, ಎರಾಸ್ಟಿಯನ್ ಆಗಿತ್ತು. ರಾಜಕೀಯವಾಗಿ ಪ್ರಾಟೆಸ್ಟೆಂಟ್ ಆಗಿದ್ದ ಹಾಬ್ಸ್, ಸರ್ಕಾರದ ಸರ್ವೋತ್ತಮತೆಯ ಸಿದ್ಧಾಂತವನ್ನು ಮುಂದಿಟ್ಟ, ಮತ್ತು ಸ್ಪಿನೋಜ಼ ಒಟ್ಟಾರೆ ಅವನ ನಿಲವನ್ನು ಒಪ್ಪಿದ. ಈಗಾಗಲೇ ನೋಡಿದಂತೆ, ರೂಸೋ ಪ್ರಕಾರ ಸರ್ಕಾರವು ಇತರ ರಾಜಕೀಯ ಸಂಘಟನೆಗಳನ್ನು ಸಹಿಸಿಕೊಳ್ಳಬಾರದು. ಹೆಗೆಲ್ ಲೂಥೆರಿಯನ್ ಬಣದ ಕಟ್ಟಾ ಪ್ರಾಟೆಸ್ಟೆಂಟ್; ಪ್ರಷ್ಯನ್ ಸರ್ಕಾರದ್ದು ಎರಾಸ್ಟಿಯನ್ ಪಂಥದ ಆತ್ಯಂತಿಕ ರಾಜಪ್ರಭುತ್ವ. ಈ ಕಾರಣಗಳಿಂದಾಗಿ ಹೆಗೆಲ್ ಸರ್ಕಾರದ ಬಗ್ಗೆ ಅತೀವ ಗೌರವವಿಟ್ಟುಕೊಂಡಿದ್ದನೆಂದು ಭಾವಿಸಬಹುದು; ಇಷ್ಟಾದರೂ, ಅವನು ಆಶ್ಚರ್ಯಕರ ಅತಿರೇಕಗಳತ್ತ ಹೋಗುತ್ತಾನೆ.

'ಫಿಲಾಸಫಿ ಆಫ್ ಹಿಸ್ಟರಿ'ಯಲ್ಲಿ 'ನೈತಿಕ ಬದುಕು ಮೂರ್ತಗೊಂಡ ವಾಸ್ತವ ಅಸ್ತಿತ್ವವೇ ಸರ್ಕಾರ' ಎಂದು ಹೇಳಲಾಗಿದೆ; ಮತ್ತು ಮಾನವನು ಹೊಂದಿರುವ ಎಲ್ಲ ಆತ್ಮಿಕ ವಾಸ್ತವವೂ ಅವನು ಸರ್ಕಾರದಿಂದಾಗಿಯೇ ಹೊಂದಿರುವುದು, 'ಯಾಕೆಂದರೆ, ಅವನ ಆಧ್ಯಾತ್ಮಿಕ ವಾಸ್ತವತೆಯು ನಿಜವಾಗಿ ಇರುವುದು, ಅವನ ಸ್ವಂತ ಸತ್ವವನ್ನು–ವೈಚಾರಿತೆ–ವಸ್ತುನಿಷ್ಠವಾಗಿ ಇಲ್ಲಿ ದತ್ತವಾಗಿಸಲಾಗಿದೆ, ಅದರಿಂದ ಅವನಿಗೆ ಈ ಕ್ಷಣದ ವಸ್ತುನಿಷ್ಠ ಅಸ್ತಿತ್ವವು ದೊರಕುತ್ತದೆ .. .. ಸತ್ಯವೆಂದರೆ ವೈಶ್ವಿಕ ಹಾಗೂ ವ್ಯಕ್ತಿನಿಷ್ಠ ಇಚ್ಛಾಶಕ್ತಿಗಳ ಸಂಗಮ, ಮತ್ತು ಆ ವೈಶ್ವಿಕತೆಯನ್ನು ಸರ್ಕಾರದಲ್ಲಿ, ಅದರ ಕಾನೂನುಗಳಲ್ಲಿ, ಅದರ ಸಾರ್ವತ್ರಿಕ ಮತ್ತು ವೈಚಾರಿಕ ವ್ಯವಸ್ಥೆಗಳಲ್ಲಿ ಕಾಣಬಹುದು. ಸರ್ಕಾರವು ಭೂಮಿಯ ಮೇಲೆ ಅಸ್ತಿತ್ವದಲ್ಲಿರುವ ದೈವಿಕ ಸತ್ಯ.' ಮತ್ತೆ, 'ಸರ್ಕಾರವು, ವಸ್ತುನಿಷ್ಠ ರೂಪದಲ್ಲಿ ಸಕ್ಷಾತ್ಕಾರಗೊಳಿಸುತ್ತಿರುವ ಹಾಗೂ ಮಾನ್ಯತೆ ನೀಡುತ್ತಿರುವ ವೈಚಾರಿಕ ಸ್ವಾತಂತ್ರ್ಯದ ಮೂರ್ತರೂಪ.... ಮಾನವ ಇಚ್ಛಾಶಕ್ತಿ ಮತ್ತು ಸ್ವಾತಂತ್ರ್ಯಗಳ ಬಾಹ್ಯದಲ್ಲಿ ಅಭಿವ್ಯಕ್ತಿಗೊಳ್ಳುವ ಆಧ್ಯಾತ್ಮಿಕ ಸತ್ಯವೇ ಸರ್ಕಾರ.'

'ದ ಫಿಲಾಸಫಿ ಆಫ್ ಲಾ'ನಲ್ಲಿನ ಸರ್ಕಾರದ ಬಗೆಗಿನ ಭಾಗದಲ್ಲಿ, ಅದೇ ಸಿದ್ಧಾಂತವನ್ನು ಮತ್ತಷ್ಟು ಪೂರ್ಣ ಪ್ರಮಾಣದಲ್ಲಿ ವಿವರಿಸುತ್ತಾನೆ. 'ನೈತಿಕ ಸತ್ಯದ ವಾಸ್ತವರೂಪವೇ ಸರ್ಕಾರ – ತನಗೆ ಸ್ಪಷ್ಟವಾಗಿರುವ ಕಾಣುವ ಇಚ್ಛಾಶಕ್ತಿ ವಾಸ್ತವರೂಪದ ನೈತಿಕ ಸತ್ವ, ತನ್ನಲ್ಲೇ ಆಲೋಚಿಸಬಲ್ಲದು, ಮತ್ತು ತನ್ನನ್ನು ಅರಿಯಬಲ್ಲದು, ಮತ್ತು ತನಗೆ ತಿಳಿದ ಮಟ್ಟಿಗೆ ಅದನ್ನು ಪೂರೈಸಬಲ್ಲದು.' ಸರ್ಕಾರವು ತನ್ನಲ್ಲಿ ಮತ್ತು ತನಗಾಗಿ ವೈಚಾರಿಕವಾದುದು. (ಉದಾರವಾದಿಗಳು ವಾದಿಸುವಂತೆ) ವ್ಯಕ್ತಿಗಳ ಹಿತಾಸಕ್ತಿಗಳಿಗಾಗಿಯೇ ಸರ್ಕಾರವು ಅಸ್ತಿತ್ವದಲ್ಲಿದ್ದಿದ್ದರೆ, ಆದರೆ ವ್ಯಕ್ತಿಯು ಸರ್ಕಾರದ ಸದಸ್ಯನಾಗಿರಬಹುದು ಆಗದಿರಬಹುದು. ವ್ಯಕ್ತಿಯ ಜೊತೆಗಿನ ಅದರ ಸಂಬಂಧವು ವಿಭಿನ್ನವಾದುದು: ಅದು ವಸ್ತುನಿಷ್ಠ ಸತ್ವವಾದುದರಿಂದ ಮತ್ತು ವ್ಯಕ್ತಿಯಲ್ಲಿ ವಸ್ತುನಿಷ್ಠತೆ, ಸತ್ಯ ಮತ್ತು ನೈತಿಕತೆಗಳು ಮಾತ್ರ ಇರುವುದರಿಂದ, ಅವನು ಸರ್ಕಾರದ ಸದಸ್ಯನಾಗಿರುವ ಮಟ್ಟಿಗೆ, ಅವನ ನಿಜವಾದ ಸತ್ವ ಮತ್ತು ಉದ್ದೇಶಗಳು ಅದರೊಡನೆ ಸೇರಿಹೋಗಬೇಕು. ಕೆಟ್ಟ ಸರ್ಕಾರಗಳೂ ಇರಬಹುದೆಂಬುದನ್ನು ಒಪ್ಪಿಕೊಳ್ಳಲಾಗಿದೆಯಾದರೂ, ಅವು ಕೇವಲ ಅಸ್ತಿತ್ವದಲ್ಲಿರುತ್ತವೆ, ಅಷ್ಟೆ, ಅವಕ್ಕೆ ವಾಸ್ತವತೆಯಿರುವುದಿಲ್ಲ, ಅದೇ ವೈಚಾರಿಕ ಸರ್ಕಾರವು ತನ್ನಲ್ಲಿಯೇ ಅನಂತವಾದುದು.

ಸರ್ಕಾರದ ಪರವಾಗಿ ಹೆಗೆಲ್ ವಾದಿಸುತ್ತಿರುವುದೆಲ್ಲವೂ ಸಂತ ಆಗಸ್ಟೈನ್ ಮತ್ತವನ ಉತ್ತರಾಧಿಕಾರಿಗಳು ಕ್ಯಾಥೋಲಿಕ್ ಚರ್ಚ್ ಪರವಾಗಿ ಮಂಡಿಸಿದ ವಾದಗಳಂತೆಯೇ ಇವೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಆದರೆ ಕ್ಯಾಥೋಲಿಕ್‌ರ ಎರಡು ಅಂಶಗಳ ಬಗೆಗಿನ ಪ್ರತಿಪಾದನೆಗಳು ಹೆಗೆಲ್‌ನವಕ್ಕಿಂತ ಹೆಚ್ಚು ಒಪ್ಪಬಹುದಾದವು. ಮೊದಲನೆಯದಾಗಿ, ಚರ್ಚ್ ಎಂಬುದು ಆಕಸ್ಮಿಕವಾದ ಭೌಗೋಳಿಕ ಸಂಸ್ಥೆಯಾಗಿರದೆ, ಸದಸ್ಯರುಗಳೆಲ್ಲ ಅತ್ಯಂತ ಮುಖ್ಯವೆಂದು ನಂಬಿಕೊಂಡಿರುವ ಸಮಾನ ತತ್ವಗಳ ಅಡಿಯಲ್ಲಿ ಒಂದಾಗಿರುವ ಸಂಸ್ಥೆ; ಹೀಗಾಗಿ ಮೂಲಭೂತವಾಗಿಯೇ ಅದು ಹೆಗೆಲ್ ಕರೆಯುವ 'ಸತ್ಯ'ದ ಸಾಕಾರ. ಎರಡನೆಯದಾಗಿ, ಇರುವುದು ಒಂದೇ ಕ್ಯಾಥೋಲಿಕ್ ಚರ್ಚ್, ಆದರೆ ಸರ್ಕಾರಗಳು ಎಷ್ಟೋ, ತನ್ನ ಪ್ರಜೆಗಳ ವಿಷಯದಲ್ಲಿ ಪ್ರತಿಯೊಂದು ಸರ್ಕಾರವೂ ಹೆಗೆಲ್ ಮಾಡುವಂತೆ ಸ್ವಯಂಪೂರ್ಣವಾಗಿಬಿಟ್ಟರೆ, ವಿವಿಧ ಸರ್ಕಾರಗಳ ಸಂಬಂಧಗಳನ್ನು ಕ್ರಮಬದ್ಧಗೊಳಿಸುವ ಯಾವುದೇ ತಾತ್ವಿಕ ನೆಲೆಯನ್ನು ಕಂಡುಕೊಳ್ಳುವುದು ಕಷ್ಟವಾಗುತ್ತದೆ. ಹಾಗೆ ನೋಡಿದರೆ, ಹೆಗೆಲ್ ಈ ಹಂತದಲ್ಲಿ ತನ್ನ ತಾತ್ವಿಕ ಮಾತನ್ನು ನಿಲ್ಲಿಸಿ, ಪ್ರಕೃತಿ ಸ್ಥಿತಿಗೆ ಮತ್ತು ಹಾಬ್ಸ್‌ನ ಎಲ್ಲರ ವಿರುದ್ಧದ ಎಲ್ಲರ ಯುದ್ಧಕ್ಕೆ ಹಿಂದಿರುಗುತ್ತಾನೆ.

ಇರುವುದು ಒಂದೇ ಎಂಬಂತೆ 'ಸರ್ಕಾರ'ದ ಬಗ್ಗೆ ಮಾತನಾಡುವ ಹವ್ಯಾಸವು ಜಗತ್ತಿನ ಸರ್ಕಾರವಿಲ್ಲದ್ದರಿಂದಾಗಿ ಹಾದಿಯನ್ನು ತಪ್ಪಿಸುತ್ತದೆ. ಹೆಗೆಲ್ ದೃಷ್ಟಿಯಲ್ಲಿ ಕರ್ತವ್ಯವು ಸರ್ಕಾರ ಮತ್ತು ಅದರ ಪ್ರಜೆಯ ನಡುವಣ ಸಂಬಂಧ

ಮಾತ್ರವಾಗಿರುವುದರಿಂದ, ಸರ್ಕಾರಗಳ ನಡುವಣ ಸಂಬಂಧಗಳನ್ನು ನೀತಿಬದ್ಧವಾಗಿಸುವ ಯಾವುದೇ ತತ್ವವು ಉಳಿಯುವುದಿಲ್ಲ. ಅದನ್ನು ಹೆಗೆಲ್ ಕೂಡ ಗುರುತಿಸುತ್ತಾನೆ. ಬಾಹ್ಯ ಸಂಬಂಧಗಳಲ್ಲಿ ಸರ್ಕಾರವೇ ಒಬ್ಬ ವ್ಯಕ್ತಿಯಂತೆ, ಪ್ರತಿಯೊಂದು ಸರ್ಕಾರವೂ ಮಿಕ್ಕವುಗಳ ಎದುರಲ್ಲಿ ಸ್ವತಂತ್ರವಾದುದು. 'ಈ ಸ್ವಾತಂತ್ರ್ಯದಲ್ಲಿ ವಾಸ್ತವ ಸತ್ವವು ತನಗಾಗಿ-ಇರುವುದಕ್ಕೆ ಆಸ್ಪದವಿರುವುದರಿಂದ, ಅದು ಮೊದಲ ಸ್ವಾತಂತ್ರ್ಯ ಮತ್ತು ಸಮಾಜವೊಂದರ ಅತ್ಯಂತ ಹೆಚ್ಚಿನ ಗೌರವ.' ಮುಂದುವರಿದು ಅವನು ರಾಷ್ಟ್ರಗಳ ಯಾವುದೇ ಒಕ್ಕೂಟದ ವಿರುದ್ಧವಾಗಿ ವಾದಿಸುತ್ತಾನೆ, ಇದರಿಂದ ಪ್ರತ್ಯೇಕ ರಾಷ್ಟ್ರಗಳ ಸ್ವಾತಂತ್ರ್ಯವು ಸೀಮಿತಗೊಳ್ಳಬಹುದು ಎನ್ನುತ್ತಾನೆ. ಪ್ರಜೆಯ ಕರ್ತವ್ಯವೆಂದರೆ (ಸರ್ಕಾರದ ಬಾಹ್ಯ ಸಂಬಂಧಗಳಿಗೆ ಸಂಬಂಧಪಟ್ಟಂತೆ) ತನ್ನ ದೇಶದ ವಾಸ್ತವ ವ್ಯಕ್ತಿತ್ವ ಮತ್ತು ಸಾರ್ವಭೌಮ ಸ್ವಾತಂತ್ರ್ಯಗಳನ್ನು ಎತ್ತಿ ಹಿಡಿಯುವುದಕ್ಕೆ ಸಂಪೂರ್ಣವಾಗಿ ಸೀಮಿತವಾದುದು. ಮುಂದುವರಿದು, ಯುದ್ಧವು ಪೂರ್ತಿ ಕೆಟ್ಟುದಲ್ಲ, ಅದನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ಬಯಸಬಾರದು. ಸರ್ಕಾರದ ಉದ್ದೇಶವು ತನ್ನ ಪ್ರಜೆಗಳ ಜೀವ ಮತ್ತು ಆಸ್ತಿಗಳ ರಕ್ಷಣೆ ಮಾತ್ರವಲ್ಲವಾದ್ದರಿಂದ, ಇದೇ ಯುದ್ಧದ ನೈತಿಕ ಸಮರ್ಥನೆಯನ್ನು ಒದಗಿಸುತ್ತದೆ, ಹಾಗಾಗಿ ಅದನ್ನು ಮಹಾ ಕೆಟ್ಟಿದು ಎಂದಾಗಲೀ ಆಕಸ್ಮಿಕವೆಂದಾಗಲೀ, ಅಥವಾ ಅದರ ಉದ್ದೇಶ ಹೊಂದಿರಬಾರದ್ದಲ್ಲ ಎಂದಾಗಲೀ ಭಾವಿಸಬಾರದು

ಹೆಗೆಲ್ ಅರ್ಥ ಇಷ್ಟೇ ಅಲ್ಲ, ಕೆಲವು ಸನ್ನಿವೇಶಗಳಲ್ಲಿ ರಾಷ್ಟ್ರವೊಂದು ಯುದ್ಧ ಮಾಡಬೇಕಾದ ಅನಿವಾರ್ಯತೆಯನ್ನು ಅವನು ಪ್ರತಿಪಾದಿಸುತ್ತಾನೆ. ಅವನ ಅರ್ಥ ಇದನ್ನೂ ಮೀರಿದುದು. ಅಂತಹ ಸನ್ನಿವೇಶಗಳು ಉಂಟಾಗುವುದನ್ನೇ ತಪ್ಪಿಸುವ ಸಂಸ್ಥೆಗಳ ಸ್ಥಾಪನೆಯನ್ನು – ಜಾಗತಿಕ ಸರ್ಕಾರದಂತಹುದು – ಅವನು ವಿರೋಧಿಸುತ್ತಾನೆ. ಆಗಾಗ್ಗೆ ಯುದ್ಧಗಳು ನಡೆಯುವುದು ಒಳ್ಳೆಯದು ಎಂಬುದೇ ಅವನ ನಂಬಿಕೆ. ಐಹಿಕ ಸಾಮಗ್ರಿಗಳು ಹಾಗೂ ವಿಷಯಗಳ ವ್ಯರ್ಥತೆಯ ಬಗ್ಗೆ ಯುದ್ಧಕಾಲದಲ್ಲಿ ಗಂಭೀರವಾಗಿ ಯೋಚಿಸುವಂತಾಗುತ್ತದೆ. (ಈದೃಷ್ಟಿಕೋನವು, ಎಲ್ಲ ಯುದ್ಧಗಳ ಹಿಂದೆಯೂ ಆರ್ಥಿಕ ಕಾರಣಗಳಿರುತ್ತವೆ ಎಂಬ ಸಿದ್ಧಾಂತದೊಡನೆ ವೈದೃಶ್ಯ ಹೊಂದಿದೆ.) ಯುದ್ಧಕ್ಕೊಂದು ಇತ್ಯಾತ್ಮಕ ನೈತಿಕ ಮೌಲ್ಯವಿದೆ. 'ಯುದ್ಧಕ್ಕೆ ಹೆಚ್ಚಿನ ಅರ್ಥವಂತಿಕೆಯಿದೆ, ಅದೆಂದರೆ ಸೀಮಿತ ನಿರ್ಧಾರಗಳನ್ನು ಸ್ಥಿರಗೊಳಿಸುವುದರ ಬಗೆಗಿನ ಅನಾದರದ ಮೂಲಕ ಜನರ ನೈತಿಕ ಆರೋಗ್ಯದ ರಕ್ಷಣೆಯಾಗುತ್ತದೆ.' ಶಾಂತಿ ಎಂಬುದು ಜಡ್ಡುಗೊಳಿಸುವಂಥದು; ಪವಿತ್ರ ಸಂಬಂಧ, ಕ್ಯಾಂಟ್‌ನ ಶಾಂತಿ ಒಡಂಬಡಿಕೆಗಳನ್ನವನು ತಪ್ಪು ತಿಳಿಯುತ್ತಾನೆ. ಸರ್ಕಾರಗಳ ಕುಟುಂಬಕ್ಕೆ ಒಂದು ಶತ್ರು ಇರಬೇಕು. ದೇಶಗಳ ನಡುವಣ ಸಂಘರ್ಷಗಳನ್ನು ಯುದ್ಧದ ಮೂಲಕ

ಮಾತ್ರ ಬಗೆಹರಿಸಬಹುದು; ದೇಶಗಳ ಪರಸ್ಪರ ಪ್ರಕೃತಿ ಸ್ಥಿತಿಯಲ್ಲಿರುವುದರಿಂದ, ಅವುಗಳ ಸಂಬಂಧ ಕಾನೂನಾತ್ಮಕವಾದುದೂ ಅಲ್ಲ ನೈತಿಕವಾದುದೂ ಅಲ್ಲ. ಅವುಗಳ ಹಕ್ಕುಗಳಿರುವುದು ಅವುಗಳ ನಿರ್ದಿಷ್ಟ ಇಚ್ಛಾಶಕ್ತಿಗಳಲ್ಲಿ, ಪ್ರತಿ ದೇಶದ ಹಿತಾಸಕ್ತಿಯು ಅದರ ಸರ್ವೋತ್ಕೃಷ್ಟ ಕಾನೂನು. ಅದರಲ್ಲಿ ನೀತಿಗಳ ಅಥವಾ ರಾಜಕೀಯದ ವಿರೋಧವಿಲ್ಲ, ದೇಶಗಳು ಸಾಧಾರಣ ನೈತಿಕ ನಿಯಮಗಳಿಗೆ ಬದ್ಧವಾದುವಲ್ಲ.

ಸರ್ಕಾರದ ಬಗೆಗಿನ ಹೆಗೆಲ್‌ನ ಸಿದ್ಧಾಂತ ಇಂತಹುದು. ಇದನ್ನು ಒಪ್ಪಿಕೊಂಡರೆ, ನಾವು ಊಹಿಸಿಕೊಳ್ಳಬಹುದಾದ ಎಲ್ಲ ಆಂತರಿಕ ನಿರಂಕುಶತೆ ಮತ್ತು ಬಾಹ್ಯ ಅತಿಕ್ರಮಣಗಳನ್ನು ಸಮರ್ಥಿಸಿದಂತೆ. ಅವನ ಈ ಸಿದ್ಧಾಂತವು ಅವನದೇ ತಾತ್ವಿಕತೆಗೆ ವ್ಯಾಪಕ ಅಸಾಂಗತ್ಯವನ್ನು ಹೊಂದಿರುವುದರಲ್ಲಿಯೇ ಅವನ ಪಕ್ಷಪಾತದ ಬಲ ಕಾಣಿಸುತ್ತದೆ; ಈ ಅಸಾಂಗತ್ಯಗಳೆಲ್ಲ ಕ್ರೌರ್ಯ ಮತ್ತು ಅಂತಾರಾಷ್ಟ್ರೀಯ ಸುಲಿಗೆಗಳನ್ನು ಸಮರ್ಥಿಸುವಂತಹವು. ಅಪರಾಧಗಳನ್ನು ಸಮರ್ಥಿಸಲು ಅನುವಾಗುವಂತೆ ತರ್ಕದಿಂದ ದೂರ ನಿಲ್ಲುವ ಬದಲು, ತಾನೇ ಒಪ್ಪದ ನಿರ್ಣಯಗಳಿಗೆ ತರ್ಕಬದ್ಧತೆಯಿಂದಾಗಿ ಅನಿವಾರ್ಯವಾಗಿ ಬರಬೇಕಾದ ವ್ಯಕ್ತಿಯನ್ನು ನಾವು ಕ್ಷಮಿಸಬಹುದು. ತನ್ನ ತರ್ಕದಿಂದಾಗಿ, ಇಡಿಯು ಅದರ ಭಾಗಗಳಿಗಿಂತ ಹೆಚ್ಚು ವಾಸ್ತವವಾದುದು ಮತ್ತು ಆ ಇಡಿಯು ಹೆಚ್ಚು ಹೆಚ್ಚು ಸುಸಂಘಟಿತವಾದರೆ ಅದರ ವಾಸ್ತವತೆಯನ್ನೂ ಹಿರಿಮೆಯನ್ನೂ (ಅವನ ದೃಷ್ಟಿಯಲ್ಲಿ ಅವೆರಡೂ ಸಮಾನಾರ್ಥಕಗಳು) ಹೆಚ್ಚಿಸುತ್ತದೆ ಎಂದು, ಹೆಗೆಲ್ ಭಾವಿಸುವಂತಾಯಿತು. ಅನಾಯಕ ವ್ಯಕ್ತಿಗಳ ಗುಂಪಿಗಿಂತ ದೇಶದ ಬಗ್ಗೆ ಒಲವು ತೋರಲು ಅವನಿಗೆ ಇದು ಸಮರ್ಥನೆ ಒದಗಿಸಿತು. ಆದರೆ ಅದೇ ಅನಾಯಕ ದೇಶಗಳ ಗುಂಪಿಗಿಂತ ಜಾಗತಿಕ ಸರ್ಕಾರ ಹೆಚ್ಚು ಉತ್ತಮ ಎಂಬ ತೀರ್ಮಾನಕ್ಕೆ ಅವನು ಬರಬೇಕಾಗಿತ್ತು. ದೇಶದೊಳಗಿನ ವ್ಯಕ್ತಿಗೆ ತಾನು ಭಾವಿಸಿದುದಕ್ಕಿಂತ ಹೆಚ್ಚು ಗೌರವ ನೀಡಬೇಕಾದ ಆವಶ್ಯಕತೆಯನ್ನು ಅವನ ಸಾಮಾನ್ಯ ತಾತ್ವಿಕತೆಯು ಸಮರ್ಥಿಸಬೇಕಾಗಿತ್ತು. ಯಾಕೆಂದರೆ ಅವನ ತರ್ಕವು ಪರಿಗಣಿಸುವ ಇಡಿಗಳು ಪಾರ್ಮನೈಡೀಸ್‌ನ ರೀತಿಯವಲ್ಲ, ಅಥವಾ ಸ್ಪಿನೋಜನ ದೇವರ ರೀತಿಯದಲ್ಲ; ಆ ಇಡಿಗಳಲ್ಲಿ ವ್ಯಕ್ತಿಯು ಕಣ್ಮರೆಯಾಗುವುದಿಲ್ಲ, ಅದರ ಬದಲು ವಿಶಾಲ ಸಂಘಟನೆಯೊಂದಿಗಿನ ಸಾಮರಸ್ಯದಿಂದಾಗಿ ಹೆಚ್ಚಿನ ವಾಸ್ತವತೆಯನ್ನು ಗಳಿಸುತ್ತಾನೆ. ವ್ಯಕ್ತಿಯನ್ನು ಪರಿಗಣಿಸದ ದೇಶವು ಹೆಗೆಲ್‌ನ ಸ್ವಯಂಪೂರ್ಣ ಸತ್ಯದ ಕಿರಿದಾದ ಬಿಂಬವಲ್ಲ.

ಹೆಗೆಲ್‌ನ ತತ್ವಜಿಜ್ಞಾಸೆಯಲ್ಲಿ ಮಿಕ್ಕ ಸಂಘಟನೆಗಳಿಗಿಂತ ಸರ್ಕಾರದ ಬಗೆಗಿನ ಈ ಮಹತ್ವಕ್ಕೆ ಯಾವುದೇ ಒಳ್ಳೆಯ ಕಾರಣವಿಲ್ಲ. ಅವನು ಚರ್ಚ್‌ಗಿಂತ ಸರ್ಕಾರಕ್ಕೆ ಹೆಚ್ಚಿನ ಮಹತ್ವವನ್ನು ನೀಡುವುದಕ್ಕೆ ಅವನ ಪ್ರಾಟೆಸ್ಟೆಂಟ್ ಪಕ್ಷಪಾತವನ್ನು ಬಿಟ್ಟು

ಬೇರಾವುದೂ ಕಾಣಿಸುವುದಿಲ್ಲ. ಅದಕ್ಕೂ ಮಿಗಿಲಾಗಿ, ಹೆಗೆಲ್ ನಂಬಿದ್ದಂತೆ ಸಮಾಜವು ಸಾಧ್ಯವಾದಷ್ಟೂ ಸಾವಯವವಾಗುವುದು ಒಳ್ಳೆಯದಾದರೆ, ಆಗ ಸರ್ಕಾರ ಮತ್ತು ಚರ್ಚ್‌ಗಳ ಜೊತೆಗೆ, ಅನೇಕ ಸಾಮಾಜಿಕ ಸಂಘಟನೆಗಳು ಆವಶ್ಯಕವಾಗುತ್ತವೆ. ಸಮಾಜಕ್ಕೆ ಹಾನಿಕರವಲ್ಲದ ಮತ್ತು ಸಹಕಾರದಿಂದ ಉತ್ತೇಜಿಸಬಹುದಾದ ಯಾವುದೇ ಹಿತಾಸಕ್ತಿಗೂ ಒಂದು ಸೂಕ್ತ ಸಂಘಟನೆಯಿರಬೇಕು ಮತ್ತು ಅಂತಹ ಪ್ರತಿಯೊಂದು ಸಂಘಟನೆಯೂ ತನ್ನ ಭಾಗದ ಸೀಮಿತ ಸ್ವಾತಂತ್ರ್ಯವನ್ನು ಹೊಂದಿರಬೇಕು ಎಂಬುದು ಹೆಗೆಲ್‌ನ ತತ್ವದ ಮುಂದಿನ ಹೆಜ್ಜೆಯಾಗಬೇಕು. ಅಂತಿಮ ಅಧಿಕಾರವು ಎಲ್ಲಿಯಾದರೂ ಇರಬೇಕು, ಮತ್ತು ಸರ್ಕಾರದ ಹೊರತು ಬೇರೆ ಕಡೆಯಲ್ಲಲ್ಲ ಎಂಬುದನ್ನು ವಿರೋಧಿಸಬಹುದು. ಹಾಗಾದರೂ, ಈ ಅಂತಿಮ ಅಧಿಕಾರವು ಒಂದು ಹಂತವನ್ನು ಮೀರಿ ದಮನಕಾರಿಯಾದರೆ ಅದನ್ನು ನಿಗ್ರಹಿಸುವ ಪ್ರಯತ್ನಗಳಿಗೆ ಎಡೆಯಿರಬೇಕು.

ಹೆಗೆಲ್‌ನ ಇಡೀ ತಾತ್ವಿಕತೆಯ ಬೆಲೆಗಟ್ಟಬೇಕಾದಾಗ ಇದರಿಂದ ಒಂದು ಮೂಲಭೂತ ಪ್ರಶ್ನೆ ಉದ್ಭವವಾಗುತ್ತದೆ. ಇಡಿಯಲ್ಲಿ ಅದರ ಭಾಗಗಳಿಗಿಂತ ಮತ್ತೂ ವಾಸ್ತವವಾದುದು ಇದೆಯೇ, ಇನ್ನೂ ಹೆಚ್ಚು ಮೌಲ್ಯವಿದೆಯೇ? ಎಂಬುದು. ಈ ಎರಡಕ್ಕೂ ಹೆಗೆಲ್ ಹೌದು ಎಂದೇ ಉತ್ತರಿಸುತ್ತಾನೆ. ವಾಸ್ತವತೆಯ ಪ್ರಶ್ನೆಯು ತತ್ವಜಿಜ್ಞಾಸಾತ್ಮಕವಾದುದು, ಮೌಲ್ಯದ ಪ್ರಶ್ನೆಯು ನೈತಿಕವಾದುದು. ಅವೆರಡಕ್ಕೂ ವ್ಯತ್ಯಾಸವೇ ಇಲ್ಲವೇನೋ ಎಂಬಂತೆ ಅವೆರಡನ್ನು ಪರಿಗಣಿಸಲಾಗಿದೆ, ಅದರೆ ನನಗೆ ತೋಚುವಂತೆ, ಅವೆರಡನ್ನೂ ಬೇರೆ ಬೇರೆಯಾಗಿರಿಸುವುದು ಮುಖ್ಯ. ನಾವೀಗ ತತ್ವಜಿಜ್ಞಾಸಾತ್ಮಕ ಪ್ರಶ್ನೆಯಿಂದ ಆರಂಭಿಸೋಣ.

ಹೆಗೆಲ್ ಹಾಗೂ ಇನ್ನೂ ಅನೇಕ ತತ್ವಜ್ಞಾನಿಗಳ ದೃಷ್ಟಿಕೋನವೆಂದರೆ, ವಿಶ್ವದ ಒಂದು ಭಾಗದ ಲಕ್ಷಣವು ಅದು ಇತರ ಭಾಗಗಳೊಂದಿಗೂ ಇಡಿಯೊಂದಿಗೂ ಹೊಂದಿರುವ ಸಂಬಂಧಗಳಿಂದ ಗಾಢವಾದ ಪ್ರಭಾವಕ್ಕೊಳಗಾಗುತ್ತದೆ, ಮತ್ತು ಇಡಿಯಲ್ಲಿ ಅದರ ಸ್ಥಾನವನ್ನು ನಿರ್ದೇಶಿಸುವುದರ ಹೊರತಾಗಿ ಯಾವುದೇ ಭಾಗದ ಬಗ್ಗೆ ನಿಜವಾದ ಹೇಳಿಕೆಯನ್ನು ನೀಡಲು ಆಗುವುದಿಲ್ಲ ಎಂಬುದು. ಇಡಿಯಲ್ಲಿನ ಅದರ ಸ್ಥಾನವು ಇತರ ಎಲ್ಲ ಭಾಗಗಳನ್ನು ಅವಲಂಬಿಸುವುದರಿಂದ, ಅದರ ಸ್ಥಾನದ ಬಗೆಗಿನ ನಿಜವಾದ ಹೇಳಿಕೆಯು ಮಿಕ್ಕೆಲ್ಲ ಭಾಗಗಳು ಇಡಿಯಲ್ಲಿ ಯಾವ ಸ್ಥಾನವನ್ನು ಹೊಂದಿದೆ ಎಂಬುದನ್ನೂ ಸೂಚಿಸಬೇಕು. ಹೀಗೆ ಒಂದು ನಿಜವಾದ ಹೇಳಿಕೆಯು ಮಾತ್ರ ಇರಬಲ್ಲದು, ಇಡಿ ಸತ್ಯಕ್ಕಿಂತ ಬೇರೆ ಸತ್ಯವಿಲ್ಲ. ಹಾಗೆಯೇ, ಇಡಿಯಿಲ್ಲದೆ ಯಾವುದೂ ವಾಸ್ತವವಾಗಲಾರದು, ಯಾಕೆಂದರೆ ಯಾವುದೇ ಭಾಗವು ಬೇರ್ಪಟ್ಟಾಗ ಅದರ ಲಕ್ಷಣವು ಬದಲಾಗುತ್ತದೆ, ಹಾಗಾಗಿ ಅದರ ನಿಜ ಸ್ವರೂಪವು ಗೋಚರಿಸುವುದಿಲ್ಲ. ಮತ್ತೊಂದು ಕಡೆಯಲ್ಲಿ, ಒಂದು ಭಾಗವನ್ನು ಇಡಿಯ ಹಿನ್ನೆಲೆಯಲ್ಲಿ ನೋಡಿದಾಗ, ಅದು ಹಾಗೆಯೇ ಆಗಬೇಕು, ಅದು

ಸ್ವಯಂಪೂರ್ಣವಾಗಿರುವಂತೆ ಕಾಣಿಸುವುದಿಲ್ಲ, ನಿಜವಾಗಿ ವಾಸ್ತವವಾಗಿರುವ ಇಡಿಯ ಭಾಗದ ಹೊರತಾಗಿ ಅದಕ್ಕೆ ಅಸ್ತಿತ್ವದಲ್ಲಿರುವ ಸಾಮರ್ಥ್ಯ ಇರದು. ಇದು ತತ್ವಜಿಜ್ಞಾಸಾತ್ಮಕ ಸಿದ್ಧಾಂತ.

ತತ್ವಜಿಜ್ಞಾಸಾತ್ಮಕ ಸಿದ್ಧಾಂತವು ನಿಜವಾದರೆ, ಮೌಲ್ಯವು ಇರುವುದು ಇಡಿಯಲ್ಲಿಯೇ ಹೊರತು ಅದರ ಭಾಗಗಳಲ್ಲಲ್ಲ ಎಂಬ ನೈತಿಕ ಸಿದ್ಧಾಂತವು ನಿಜವಾಗಬೇಕು, ಆದರೆ ತತ್ವಜಿಜ್ಞಾಸಾತ್ಮಕ ಸಿದ್ಧಾಂತವು ಸುಳ್ಳಾದರೆ ನೈತಿಕ ಸಿದ್ಧಾಂತವು ಸುಳ್ಳಾಗಬೇಕಾದ್ದಿಲ್ಲ. ಮೇಲಾಗಿ, ಅದು ಕೆಲವು ಇಡಿಗಳ ವಿಷಯದಲ್ಲಿ ನಿಜವಾಗಿರಬಹುದು, ಇತರವುಗಳ ವಿಷಯದಲ್ಲಿ ಅಲ್ಲ. ಒಂದರ್ಥದಲ್ಲಿ, ಜೀವಂತ ಕಾಯದ ಮಟ್ಟಿಗೆ ಅದು ನಿಜ. ದೇಹದಿಂದ ಬೇರ್ಪಡಿಸಿದಾಗ ಕಣ್ಣು ನಿಷ್ಪ್ರಯೋಜಕವಾಗುತ್ತದೆ; ಚೂರುಪಾರುಗಳ (ಡಿಸ್ಜೆಕ್ಟ ಮೆಂಬ್ರ) ಗುಂಪು ಸಂಪೂರ್ಣವಾಗಿದ್ದರೂ, ಅವು ತಾವು ದೇಹದ ಭಾಗಗಳಾಗಿದ್ದಾಗ ಪಡೆದಿದ್ದಂತಹ ಬೆಲೆ ಪಡೆಯಲಾರವು. ಪ್ರಜೆಯು ಸರ್ಕಾರದೊಡನೆ ಹೊಂದಿರುವ ನೈತಿಕ ಸಂಬಂಧವನ್ನು ಕಣ್ಣು–ದೇಹಗಳ ಸಂಬಂಧದಂತೆ ಎಂದು ಹೆಗೆಲ್ ಪರಿಭಾವಿಸುತ್ತಾನೆ; ತನ್ನ ಸ್ಥಾನದಲ್ಲಿ ಪ್ರಜೆಯು ಒಂದು ಮೌಲಿಕವಾದ ಇಡಿಯ ಭಾಗ, ಆದರೆ ಬೇರ್ಪಟ್ಟಾಗ ಅವನು ಬೇರ್ಪಟ್ಟ ಕಣ್ಣಿನಂತೆಯೇ ನಿರುಪಯುಕ್ತ. ಈ ಹೋಲಿಕೆಯು ಒಂದು ಮುಕ್ತ ಪ್ರಶ್ನೆ: ಕೆಲವು ಇಡಿಗಳ ನೈತಿಕ ಪ್ರಾಮುಖ್ಯದಿಂದ ಎಲ್ಲ ಇಡಿಗಳದೂ ಅಷ್ಟೆ ಎಂದಾಗುವುದಿಲ್ಲ.

ನೈತಿಕ ಸಮಸ್ಯೆಯ ಮೇಲಿನ ಪ್ರಶ್ನೆಯು ಒಂದು ಮುಖ್ಯ ಅಂಶದಲ್ಲಿ ದೋಷಯುಕ್ತವಾಗಿದೆ, ಅದೆಂದರೆ, ಅದು ಉದ್ದೇಶಗಳು ಮತ್ತು ಸಾಧನಗಳ ನಡುವಣ ವ್ಯತ್ಯಾಸವನ್ನು ಗಮನಿಸುವುದಿಲ್ಲ. ಜೀವಂತ ದೇಹದಲ್ಲಿ ಕಣ್ಣು ಉಪಯುಕ್ತ, ಅಂದರೆ ಒಂದು ಸಾಧನವಾಗಿ ಅದಕ್ಕೆ ಮೌಲ್ಯವಿದೆ; ಆದರೆ ದೇಹದಿಂದ ಬೇರ್ಪಡಿಸಿದಾಗ ಅದಕ್ಕೆ ಹೆಚ್ಚಿನದಾದ ಒಂದು ಅಂತರ್ಗತ ಮೌಲ್ಯವಿಲ್ಲ. ವಸ್ತುವೊಂದು ತನ್ನಲ್ಲಿ ತಾನು ಬೆಲೆ ಬಾಳಿದಾಗ ಅದಕ್ಕೆ ಅಂತರ್ಗತ ಮೌಲ್ಯವಿರುತ್ತದೆಯೇ ಹೊರತು ಬೇರಾವುದೋ ಒಂದರ ಸಾಧನವಾಗಿದ್ದಾಗಲ್ಲ. ನಾವು ಕಣ್ಣಿಗೆ ಬೆಲೆ ಕೊಡುವುದು ನೋಡುವುದರ ಸಾಧನವಾಗಿ, ನೋಡುವುದು ಉದ್ದೇಶವೂ ಆಗಿರಬಹುದು ಸಾಧನವೂ ಆಗಿರಬಹುದು: ಅದು ಆಹಾರವನ್ನೂ ಶತ್ರುಗಳನ್ನೂ ಕಾಣಲು ಸಹಾಯಕವಾದಾಗ ಅದೊಂದು ಸಾಧನ, ನಮಗೆ ಸುಂದರವಾದುದುನ್ನು ತೋರಿಸಿದಾಗ ಅದು ಉದ್ದೇಶ. ಸರ್ಕಾರವು ಒಂದು ಸಾಧನವಾಗಿ ಉಪಯುಕ್ತ ಎಂಬುದು ಸ್ಪಷ್ಟವಾಗುತ್ತದೆ: ಕಳ್ಳರಿಂದಲೂ ಕೊಲೆಗಡುಕರಿಂದಲೂ ಅದು ನಮ್ಮನ್ನು ರಕ್ಷಿಸುತ್ತದೆ, ಮತ್ತು ರಸ್ತೆಗಳನ್ನೂ ಶಾಲೆಗಳನ್ನೂ ಹಾಗೆಯೇ ಇನ್ನೂ ಅನೇಕವನ್ನೂ ನಿರ್ಮಿಸುತ್ತದೆ. ಅದು ಒಂದು ಕೆಟ್ಟ ಸಾಧನವೂ ಆಗಬಹುದು, ನಿದರ್ಶನಕ್ಕೆ,

ಒಂದು ಅನ್ಯಾಯದ ಯುದ್ಧದಲ್ಲಿ ತೊಡಗಿದಾಗ. ನಾವು ಹೆಗೆಲ್‌ಗೆ ಕೇಳಬೇಕಾದ ನಿಜವಾದ ಪ್ರಶ್ನೆಯು ಇದಲ್ಲವಾದರೂ, ಸರ್ಕಾರವು ಒಂದು ಉದ್ದೇಶವಾಗಿ ತನಗೆ ತಾನೇ ಒಳ್ಳೆಯದೇ ಎಂಬುದು: ಪ್ರಜೆಗಳು ಸರ್ಕಾರಕ್ಕೋಸ್ಕರವಾಗಿ ಬದುಕಿರುತ್ತಾರೆಯೇ ಅಥವಾ ಸರ್ಕಾರವು ಪ್ರಜೆಗಳಿಗಾಗಿ ಇರುತ್ತದೆಯೇ? ಹೆಗೆಲ್ ಮೊದಲನೆಯ ದೃಷ್ಟಿಕೋನವನ್ನು ಹೊಂದುತ್ತಾನೆ; ಲಾಕ್‌ನಿಂದ ಪ್ರಣೀತವಾದ ಉದಾರವಾದಿ ದೃಷ್ಟಿಕೋನವು ಎರಡನೆಯದನ್ನು ಹೊಂದಿದೆ. ಸರ್ಕಾರಕ್ಕೆ ನಾವು ಅಂತರ್ಗತ ಮೌಲ್ಯವನ್ನು ಆರೋಪಿಸುವುದು ಅದಕ್ಕೊಂದು, ಒಂದರ್ಥದಲ್ಲಿ ವ್ಯಕ್ತಿಯೊಬ್ಬನಿಗೆ ಇದ್ದಂತೆ, ತನ್ನದೇ ಆದ ಜೀವವಿದ್ದಾಗ ಮಾತ್ರ. ಈ ಹಂತದಲ್ಲಿ, ಹೆಗೆಲ್‌ನ ತತ್ವಜಿಜ್ಞಾಸೆಯು ಮೌಲ್ಯದ ಪ್ರಶ್ನೆಯ ವಿಚಾರದಲ್ಲಿ ಸುಸಂಗತವಾಗುತ್ತದೆ. ವ್ಯಕ್ತಿಯು ಸಂಕೀರ್ಣವಾದ ಒಂದು ಇಡಿ, ಅವನಿಗೊಂದು ಜೀವವಿದೆ; ದೇಹದ ಭಾಗಗಳಂತೆ ವ್ಯಕ್ತಿಗಳನ್ನು ತನ್ನ ದೇಹದ ಭಾಗಗಳಾಗಿ ಮತ್ತು ಸಂಯೋಜಿತ ವ್ಯಕ್ತಿಗಳ ಜೀವಿಗಳ ಒಂದೇ ಜೀವವನ್ನು ಹೊಂದಿರುವ ಅತೀತ ಪುರುಷ ಇರಬಹುದೇ? ಅಂಥ ಅತೀತ ಪುರುಷನೊಬ್ಬ ಇರಬಹುದಾದರೆ, ಹೆಗೆಲ್ ಆಲೋಚಿಸುವಂತೆ, ಸರ್ಕಾರವು ಅಂತಹುದೊಂದು ಜೀವಿಯಾಗಬಹುದು, ಮತ್ತು ಆಗ ದೇಹವು ಕಣ್ಣಿಗಿಂತ ಶ್ರೇಷ್ಠವಾಗಿರುವಂತೆ ಸರ್ಕಾರವು ವ್ಯಕ್ತಿಗಳಿಗಿಂತ ಶ್ರೇಷ್ಠವಾಗಬಹುದು. ಆದರೆ ಈ ಅತೀತ ಪುರುಷನನ್ನು ಕೇವಲ ತತ್ವಜಿಜ್ಞಾಸಾತ್ಮಕ ದೈತ್ಯನೆಂದು ಆಲೋಚಿಸಿದಾಗ, ಸಮಾಜವೊಂದರ ಅಂತರ್ಗತ ಮೌಲ್ಯವು ತನ್ನ ಸದಸ್ಯರಿಂದ ಸಾಧಿತವಾದುದು, ಮತ್ತು ಸರ್ಕಾರವು ಒಂದು ಸಾಧನವೇ ಹೊರತು ಉದ್ದೇಶವಲ್ಲ, ಎಂದು ಹೇಳುತ್ತೇವೆ. ಹೀಗೆ ನಾವು ನೈತಿಕ ಪ್ರಶ್ನೆಯಿಂದ ತತ್ವಜಿಜ್ಞಾಸಾತ್ಮಕ ಪ್ರಶ್ನೆಯತ್ತ ಬರುತ್ತೇವೆ. ತತ್ವಜಿಜ್ಞಾಸಾತ್ಮಕ ಪ್ರಶ್ನೆಯು ತನ್ನಲ್ಲಿಯೇ ತರ್ಕದ ಒಂದು ಪ್ರಶ್ನೆ ಎಂಬುದನ್ನು ನೋಡುತ್ತೇವೆ.

ಪ್ರಸಕ್ತ ಪ್ರಶ್ನೆಯು ಹೆಗೆಲ್ ತಾತ್ವಿಕತೆಯು ಸರಿಯೋ ತಪ್ಪೋ ಎಂಬುದನ್ನು ಮೀರಿ ವಿಶಾಲವಾದುದು; ಅದು ವಿಶ್ಲೇಷಣೆಯ ಮಿತ್ರರಿಂದ ಅದರ ಶತ್ರುಗಳನ್ನು ಬೇರ್ಪಡಿಸುವಂಥದು. ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. 'ಜಾನ್ ಜೇಮ್ಸ್‌ನ ತಂದೆ' ಎಂದು ನಾನು ಹೇಳಿದೆ ಎಂದುಕೊಳ್ಳೋಣ.. ಹೆಗೆಲ್ ಮತ್ತು ಮಾರ್ಷಲ್ ಸ್ಮಟ್ಸ್ 'ಸಮಗ್ರತಾ ಸಿದ್ಧಾಂತ' (ಹೋಲಿಸಂ)ವೆಂದು ಕರೆಯುವುದರಲ್ಲಿ ನಂಬಿಕೆಯಿರುವವರು ಹೀಗೆನ್ನುತ್ತಾರೆ: 'ಈ ಹೇಳಿಕೆಯನ್ನು ಅರ್ಥಮಾಡಿಕೊಳ್ಳುವ ಮುಂಚೆ, ಜಾನ್ ಮತ್ತು ಜೇಮ್ಸ್ ಯಾರು ಎಂದು ನೀವು ತಿಳಿದುಕೊಳ್ಳಬೇಕು, ಆಮೇಲೆ ಜಾನ್ ಯಾರು ಎಂದು ತಿಳಿಯಬೇಕಾದರೆ, ಅವನ ಗುಣಲಕ್ಷಣಗಳನ್ನು ತಿಳಿಯಬೇಕು, ಯಾಕೆಂದರೆ ಅವುಗಳಿಲ್ಲದೆ ಅವನನ್ನು ಇತರರಿಂದ ಭಿನ್ನವಾದವನೆಂದು ಗುರುತಿಸಲಾಗದು. ಆದರೆ ಅವನ ಗುಣಲಕ್ಷಣಗಳು ಇತರ ವ್ಯಕ್ತಿಗಳನ್ನೂ ವಸ್ತುಗಳನ್ನೂ

ಒಳಗೊಳ್ಳುತ್ತದೆ. ತನ್ನ ತಾಯ್ತಂದೆಯರ ಜೊತೆಗಿನ, ಹೆಂಡತಿಯ ಜೊತೆಗಿನ ಮತ್ತು ತನ್ನ ಮಕ್ಕಳ ಜೊತೆಗಿನ ಅವನ ಸಂಬಂಧಲಕ್ಷಣಗಳು, ಅವನ ದೇಶ ಯಾವುದು ಎಂಬುದರಿಂದ ಅವನು ಒಳ್ಳೆಯ ಪ್ರಜೆಯೇ ಅಥವಾ ಕೆಟ್ಟವನೇ ಎಂಬುದನ್ನು ತಿಳಿದುಕೊಳ್ಳಬೇಕು, ಆಗ ಮಾತ್ರ ನೀವು "ಜಾನ್" ಎಂಬ ವ್ಯಕ್ತಿಯ ಬಗ್ಗೆ ನಿಮಗೆ ತಿಳಿದಿದೆ ಎನ್ನಬಹುದು. ಹಂತ ಹಂತವಾಗಿ, ಜಾನ್ ಎಂಬ ಶಬ್ದ ಏನನ್ನು ಸೂಚಿಸುತ್ತದೆ ಎಂದು ತಿಳಿಯುವ ಪ್ರಯತ್ನದಲ್ಲಿ ನೀವು ಇಡೀ ವಿಶ್ವದ ಬಗೆಗೆ ತಿಳಿದುಕೊಳ್ಳಬೇಕದ ಪ್ರಮೇಯ ಉಂಟಾಗುತ್ತದೆ. ಆಗ ನಿಮ್ಮ ಮೂಲ ಹೇಳಿಕೆಯು ನಿಮಗೆ ವಿಶ್ವದ ಬಗ್ಗೆ ಕೆಲವು ಮಾಹಿತಿಗಳನ್ನು ನೀಡುವುದಾಗುತ್ತದೆಯೇ ಹೊರತು, ಜಾನ್ ಮತ್ತು ಜೇಮ್ಸ್ ಎಂಬ ಇಬ್ಬರು ಬೇರೆ ಬೇರೆ ವ್ಯಕ್ತಿಗಳ ಬಗ್ಗೆ ಅಲ್ಲ.'

ಇದೆಲ್ಲ ಆಯಿತು, ಆದರೆ ಅದಕ್ಕೆ ಆರಂಭದಲ್ಲಿಯೇ ಒಂದು ಆಕ್ಷೇಪಣೆ ಎತ್ತಬಹುದು. ಮೇಲಿನ ವಾದವು ಸಮಂಜಸವಾಗಿದ್ದರೆ, ಜ್ಞಾನ ಎಂಬುದು ಹೇಗೆ ಆರಂಭವಾಗುತ್ತದೆ? 'ಎಯು ಬಿಯ ತಂದೆ' ಎಂಬ ಹೇಳಿಕೆಯ ಅನೇಕ ರೂಪಗಳನ್ನು ನಾನು ಮಂಡಿಸಬಹುದು, ಆದರೆ ನನಗೆ ಇಡೀ ವಿಶ್ವ ತಿಳಿದಿಲ್ಲ. ಎಲ್ಲ ಜ್ಞಾನವೂ ಇಡಿಯ ವಿಶ್ವದ ಜ್ಞಾನವೇ ಆಗಿಬಿಟ್ಟರೆ, ಆಗ ಜ್ಞಾನವೇ ಇರುವುದಿಲ್ಲ. ಇದರಿಂದಾಗಿಯೇ ಎಲ್ಲಿಯೋ ಏನೋ ತಪ್ಪಾಗಿದೆ ಎಂದು ಸಂಶಯಪಡುವಂತಾಗುತ್ತದೆ.

ವಾಸ್ತವವೆಂದರೆ, 'ಜಾನ್' ಎಂಬ ಪದವನ್ನು ಸರಿಯಾಗಿಯೂ ಬುದ್ಧಿವಂತಿಕೆಯಿಂದಲೂ ಬಳಸುವುದಕ್ಕೋಸ್ಕರ, ಅವನ ಬಗ್ಗೆ ಎಲ್ಲವನ್ನೂ ನಾನು ತಿಳಿದುಕೊಳ್ಳಬೇಕಾಗಿಲ್ಲವಾದರೂ, ಅವನನ್ನು ಗುರುತಿಸುವಷ್ಟು ತಿಳಿದಿದ್ದರೆ ಸಾಕು. ಅವನಿಗೆ ಹತ್ತಿರದ ಅಥವಾ ದೂರದ ಸಂಬಂಧಿಗಳಿಂದ ಹಿಡಿದು ವಿಶ್ವದ ಎಲ್ಲದರ ಬಗ್ಗೆ ವಿಷಯವಿರುವುದರಲ್ಲಿ ಸಂದೇಹವಿಲ್ಲ, ಆದರೆ ಅದಾವುದನ್ನೂ ಪರಿಗಣಿಸದೆ, ಏನು ಹೇಳುವೆನೋ ಅದಕ್ಕೆ ನೇರವಾಗಿ ಸಂಬಂಧಪಟ್ಟದ್ದರ ಬಗ್ಗೆ ತಿಳಿದು, ಅವನ ಬಗ್ಗೆ ಸತ್ಯವಾಗಿ ಮಾತನಾಡಲು ಸಾಧ್ಯ. ಅವನು ಜೇಮ್ಸ್ ಜೊತೆಗೆ ಜೆಮಿನಳ ತಂದೆಯೂ ಆಗಿರಬಹುದು, ಆದರೆ ಅವನು ಜೇಮ್ಸ್‌ನ ತಂದೆ ಎಂದು ತಿಳಿಯಲು ಇವೆಲ್ಲವನ್ನೂ ನಾನು ತಿಳಿದುಕೊಳ್ಳಬೇಕಾಗಿಲ್ಲ. ಹೆಗೆಲ್ ವಾದ ಸರಿಯಾಗಿದ್ದರೆ, 'ಜಾನ್ ಜೇಮ್ಸ್‌ನ ತಂದೆ' ಎಂಬುದರ ಪೂರ್ಣ ಅರ್ಥವನ್ನು, ಅವನು ಜೆಮಿನಳ ತಂದೆ ಎಂದೂ ಉಲ್ಲೇಖಿಸದೆ ಹೇಳುವುದು ಸಾಧ್ಯವಿರುತ್ತಿರಲಿಲ್ಲ: 'ಜೆಮಿನಳ ತಂದೆಯಾದ ಜಾನ್ ಜೇಮ್ಸ್‌ನ ತಂದೆ' ಎಂದು ಹೇಳಬೇಕಾಗಿತ್ತು. ಇದೂ ಸಾಕಾಗುತ್ತಿರಲಿಲ್ಲ; ಅವನ ತಾಯ್ತಂದೆಯರು ಅಜ್ಜಿತಾತಂದಿರು, ಅವನ ಇಂಥಿಂಥವರು ಎಲ್ಲವನ್ನೂ ಹೇಳುತ್ತ ಹೋಗಬೇಕಾಗಿತ್ತು. ಆದರೆ ಇದೆಲ್ಲ ನಮ್ಮನ್ನು ಅಸಂಬದ್ಧತೆಯ ಕೂಪದಲ್ಲಿ ಕೆಡವುತ್ತದೆ. ಹೆಗೆಲಿಯನ್ ಅಭಿಪ್ರಾಯವನ್ನು ಈ ರೀತಿ ಹೇಳಬಹುದು: ' "ಜಾನ್" ಎಂಬ ಪದ ಎಂದರೆ ಜಾನ್‌ನ ಬಗ್ಗೆ ಸತ್ಯವಾಗಿರುವುದೆಲ್ಲ ಎಂದರ್ಥ.'

ಆದರೆ ಒಂದು ಸೂತ್ರವಾಗಿ ಇದು ಚಕ್ರೀಯವಾಗಿದೆ, ಯಾಕೆಂದರೆ ಜಾನ್ ಎಂಬುದು ಸೂತ್ರದ ಪದಗುಚ್ಛದಲ್ಲಿ ಸೇರುತ್ತದೆ. ಹೆಗೆಲ್ ವಾದವು ಸರಿಯಾಗಿದ್ದರೆ, ಯಾವ ಪದವೂ ಅರ್ಥವನ್ನು ಹೊಂದಿ ಆರಂಭಗೊಳ್ಳಬಾರದು, ಆ ಪದವು ಸೂಚಿಸುವ ಏನೆಲ್ಲವನ್ನೂ ಹೇಳುವ ಇತರ ಎಲ್ಲ ಪದಗಳ ಅರ್ಥವನ್ನೂ ಮೊದಲೇ ತಿಳಿದಿರಬೇಕು, ಸಿದ್ಧಾಂತದ ಪ್ರಕಾರ, ಅದೇ ಅದರ ಅರ್ಥ.

ಈ ವಿಷಯವನ್ನು ಅಮೂರ್ತವಾಗಿ ಮಂಡಿಸುವುದಾದರೆ: ನಾವು ವಿವಿಧ ಬಗೆಯ ಲಕ್ಷಣಗಳ ವ್ಯತ್ಯಾಸಗಳನ್ನು ಗಮನಿಸಬೇಕು. ಯಾವುದೋ ಒಂದಕ್ಕೆ ಬೇರೆ ಯಾವುದರದೋ ಲಕ್ಷಣವನ್ನು ಒಳಗೊಳ್ಳದ ಲಕ್ಷಣವಿರಬಹುದು; ಈ ಬಗೆಯದನ್ನು 'ಗುಣಲಕ್ಷಣ' (ಕ್ವಾಲಿಟಿ) ಎನ್ನುತ್ತಾರೆ. ಅಥವಾ ಅದರಲ್ಲಿ ಮತ್ತೊಂದು ವಸ್ತುವಿನ ಲಕ್ಷಣವಿರಬಹುದು; ಅಂತಹ ಗುಣಲಕ್ಷಣಗಳು ಜೊತೆಯಾಗುತ್ತವೆ. ಅಥವಾ ಅದರೊಡನೆ ಇತರ ಎರಡು ವಸ್ತುಗಳ ಲಕ್ಷಣಗಳು ಸೇರಿರಬಹುದು, ಬಾವಮೈದುನನಂತೆ. ಯಾವುದೋ ಒಂದು ಎಂಥದೋ ಲಕ್ಷಣಗಳ ಗುಂಪನ್ನು ಒಳಗೊಳ್ಳುವುದಾದರೆ, ಮತ್ತು ಬೇರಾವುದೂ ಈ ಲಕ್ಷಣಗಳನ್ನು ಹೊಂದಿರದಿದ್ದರೆ, ಆಗ ಅದನ್ನು 'ಇಂಥಿಂಥ ಲಕ್ಷಣಗಳುಳ್ಳ ವಸ್ತು' ಎಂದು ಸೂತ್ರೀಕರಿಸಬಹುದು. ಈ ಲಕ್ಷಣಗಳನ್ನು ಹೊಂದುವುದರಿಂದ ಶುದ್ಧ ತರ್ಕದಿಂದ ಅದಕ್ಕೆ ಸಂಬಂಧಿಸಿದ ಯಾವ ಲಕ್ಷಣವನ್ನೂ ಸಾಧಿಸಲು ಸಾಧ್ಯವಾಗದು. ಒಂದು ವಸ್ತುವಿನ ಬಗ್ಗೆ, ಅದನ್ನು ಬೇರೆಯವುಗಳಿಂದ ಬೇರ್ಪಡಿಸಿ ನೋಡಲು ಸಾಧ್ಯವಾಗುವಂತೆ, ಸಾಕಷ್ಟು ತಿಳಿದಿದ್ದರೆ, ಆಗ ಅದರ ಎಲ್ಲ ಗುಣಲಕ್ಷಣಗಳನ್ನೂ ತರ್ಕದಿಂದ ಊಹಿಸಬಹುದು ಎಂದು ಹೆಗೆಲ್ ಭಾವಿಸಿದ. ಅದರಲ್ಲೊಂದು ದೋಷವಿತ್ತು, ಈ ತಪ್ಪಿನಿಂದಲೇ ಅವನ ವಿಧಾನದ ಇಡೀ ಭವ್ಯ ಸೌಧ ಎದ್ದು ನಿಂತಿತು. ಇದು ಒಂದು ಮುಖ್ಯ ಸತ್ಯವನ್ನು ನಿದರ್ಶಿಸುತ್ತದೆ, ಅದೆಂದರೆ ನಿಮ್ಮ ತರ್ಕ ಕೆಟ್ಟುದಾಗಿದ್ದಷ್ಟೂ ಅದರಿಂದ ಉದ್ಭವಿಸುವ ಪರಿಣಾಮಗಳು ಹೆಚ್ಚು ಕುತೂಹಲಕಾರಿಯಾಗುತ್ತವೆ.

೦

೨೩
ಬೈರನ್

ಪ್ರಸ್ತುತ ಕಾಲಕ್ಕೆ ಹೋಲಿಸಿದರೆ, ಹತ್ತೊಂಬತ್ತನೆಯ ಶತಮಾನವು ವೈಚಾರಿಕವೂ, ಪ್ರಗತಿಪರವೂ ತೃಪ್ತಿದಾಯಕವೂ ಆಗಿತ್ತು: ಅದರೂ ಅವುಗಳ ವಿರುದ್ಧವಾದ ನಮ್ಮ ಕಾಲದ ಗುಣಗಳೂ ಉದಾರವಾದೀ ಆಶಾವಾದದ ಈ ಯುಗದಲ್ಲಿನ ಅನೇಕ ಗಣ್ಯ ವ್ಯಕ್ತಿಗಳಲ್ಲಿ ಇದ್ದವು. ಕಲೆಗಾರರು ಸೃಷ್ಟಿಶೀಲರೂ ಎನ್ನದೆ, ನಮ್ಮ ಅಭಿರುಚಿಗಳಿಗೆ ಅನುಗುಣವಾಗಿ ಅಥವಾ ವಿರುದ್ಧವಾಗಿರುವವರು ಎನ್ನದೆ, ಮೌಲ್ಯಮಾಪನದಲ್ಲಿ ಅಥವಾ ಬೌದ್ಧಿಕ ದೃಷ್ಟಿಕೋನದಲ್ಲಿ ಸಾಮಾಜಿಕ ಸಂರಚನೆಯ ಬದಲಾವಣೆಯ ಶಕ್ತಿಗಳೆಂದು ಈ ವ್ಯಕ್ತಿಗಳನ್ನು ನಾವು ಪರಿಗಣಿಸಿದರೆ, ಈಚಿನ ದಿನಗಳಲ್ಲಿನ ಆಗುಹೋಗುಗಳ ಮಾರ್ಗವು ನಮ್ಮ ಅಂದಾಜುಗಳನ್ನು ಮರುಹೊಂದಿಸಬೇಕಾದ ಆವಶ್ಯಕತೆ ಉಂಟಾಗುತ್ತದೆ, ಆಗ ಕೆಲವರು ತಾವು ಕಾಣುವುದಕ್ಕಿಂತಲೂ ಕಡಿಮೆ ಮುಖ್ಯರೆನಿಸಿದರೆ, ಮತ್ತೆ ಕೆಲವರು ಹೆಚ್ಚು ಮುಖ್ಯರು ಎನಿಸುತ್ತಾರೆ. ಕಾಣಿಸಿದುದಕ್ಕಿಂತಲೂ ಹೆಚ್ಚು ಪ್ರಮುಖವಾಗಿ ಕಾಣಬರುವವರಲ್ಲಿ ಬೈರನ್‌ಗೆ ಉನ್ನತ ಸ್ಥಾನವಿದೆ. ಯೂರೋಪ್ ಖಂಡದಲ್ಲಿ ಅಂತಹ ದೃಷ್ಟಿಕೋನವು ಆಶ್ಚರ್ಯಕರವೆನ್ನಿಸದೆ ಇರಬಹುದು; ಆದರೆ ಇಂಗ್ಲಿಷ್ ಭಾಷಿಕರ ಜಗತ್ತಿನಲ್ಲಿ ಅದನ್ನು ವಿಚಿತ್ರವೆಂದು ಕಾಣಬಹುದಾಗಿತ್ತು. ಬೈರನ್ ಪ್ರಭಾವಶಾಲಿಯಾಗಿದ್ದು ಯೂರೋಪ್ ಖಂಡದಲ್ಲಿ, ಹೀಗಾಗಿ ಅವನ ಆಧ್ಯಾತ್ಮಿಕ ಪೀಳಿಗೆಯನ್ನು ಇಂಗ್ಲಂಡ್‌ನಲ್ಲಿ ಕಾಣಲಾಗುವುದಿಲ್ಲ. ನಮ್ಮಲ್ಲಿ ಬಹುತೇಕರಿಗೆ, ಅವನ ಪದ್ಯಗಳು ಎಷ್ಟೋ ವೇಳೆ ಸಪ್ಪೆ ಎಂದೂ ಅವನ ಭಾವಗಳು ಆಡಂಬರದವೆಂದೂ ಎನ್ನಿಸಬಹುದು, ಆದರೆ ಅವನ ಭಾವಗಳೂ ಬದುಕಿನ ಬಗೆಗಿನ ಅವನ ದೃಷ್ಟಿಕೋನವೂ ಹಬ್ಬಿ ಬೆಳೆದು ಪ್ರಸಾರಗೊಂಡು ವ್ಯಾಪಕವಾಗಿ ದೊಡ್ಡ ಘಟನೆಗಳ ಕಾರ್ಯಭಾಗಿಯಾದವು.

ತನ್ನ ಕಾಲದ ಶ್ರೀಮಂತವರ್ಗದ ಬಂಡಾಯಗಾರರ ನಿದರ್ಶನವಾಗಿದ್ದ ಬೈರನ್, ರೈತ–ಪಾಮರ ಬಂಡಾಯದ ನಾಯಕನಿಗಿಂತ ಭಿನ್ನನಾದವನು. ಹಸಿವಾದವರಲ್ಲಿ

ಅಸಂತೃಪ್ತಿಯನ್ನು ಉದ್ದೀಪಿಸಲು ವಿಸ್ತಾರವಾದಿ ತಾತ್ವಿಕತೆಯ ಆವಶ್ಯಕತೆಯೇನೂ ಇರುವುದಿಲ್ಲ, ಇಂತಹ ಯಾವುದೇ ಪ್ರಯತ್ನವೂ ಸೋಮಾರಿ ಶ್ರೀಮಂತರಲ್ಲಿ ತಮಾಷೆಯ ವಿಷಯವಾಗಿ ಕಾಣಬಹುದು. ಇತರರು ಹೊಂದಿರುವುದು ಅವರಿಗೆ ಬೇಕೇ ವಿನಾ ಸೂಕ್ಷ್ಮವೂ ತಾತ್ವಿಕವಾಗಿ ಘನವಾದುದೂ ಅಲ್ಲ. ಮಧ್ಯಕಾಲೀನ ಕಮ್ಯುನಿಸ್ಟರು ಮಾಡಿದಂತೆ ಅವರು ಕ್ರೈಸ್ತ ಪ್ರೇಮವನ್ನು ಬೋಧಿಸಿದರೂ, ಅವರು ಹಾಗೆ ಮಾಡಿದ್ದರ ಕಾರಣಗಳು ತುಂಬ ಸರಳವಾದವು: ಶ್ರೀಮಂತರಲ್ಲಿನ ಅವುಗಳ ಕೊರತೆ ಮತ್ತು ಬಡವರ ಯಾತನೆಯ ಹಿಂದಿನ ಬಲಿಷ್ಠ ಕಾರಣಗಳು, ಮತ್ತು ಬಂಡಾಯದ ಸಂಗಾತಿಗಳಲ್ಲಿ ಅವು ಇರುವುದು ಯಶಸ್ಸಿಗೆ ಅವು ಬೇಕು ಎಂಬ ನೆವದಿಂದ. ಆದರೆ ಹೋರಾಟದ ಅನುಭವವು ಪ್ರೇಮದ ಸಾಮರ್ಥ್ಯದಲ್ಲಿನ ಹತಾಶೆಗೆ ಕಾರಣವಾಗುತ್ತದೆ, ದ್ವೇಷವೇ ಪ್ರೇರಕಶಕ್ತಿಯಾಗುತ್ತದೆ. ಈ ಬಗೆಯ ಬಂಡಾಯಗಾರನು, ಮಾರ್ಕ್ಸ್‌ನಂತೆ, ಒಂದು ತಾತ್ವಿಕತೆಯನ್ನು ಸೃಷ್ಟಿಸುತ್ತಾನೆ, ತನ್ನ ಪಕ್ಷದ ಅಂತಿಮ ಗೆಲವನ್ನು ಸಾಧಿಸಲು ಬೇಕಾದ ವಿನ್ಯಾಸವಿರುವಂತೆ ಅದನ್ನು ಸೃಷ್ಟಿಸುತ್ತಾನೆ, ಮೌಲ್ಯಕ್ಕೆ ಸಂಬಂಧಪಟ್ಟಂತೆ ಅಲ್ಲ. ಅವನ ಮೌಲ್ಯಗಳು ಓಬೀರಾಯನ ಕಾಲದವಾಗುತ್ತವೆ; ಒಳ್ಳೆಯದೆಂದರೆ ತಿನ್ನಲು ಬೇಕಾದಷ್ಟಿರುವುದು, ಮಿಕ್ಕನಾದುದೆಲ್ಲ ಬರೀ ಮಾತು. ಹಸಿವಿನಿಂದ ಕೂಡಿದವನು ಇಷ್ಟಲ್ಲದೆ ಬೇರೆ ಬಗೆಯಲ್ಲಿ ಯೋಚಿಸಲಾರ.

ತನಗೆ ತಿನ್ನಲು ಬೇಕಾದಷ್ಟಿರುವುದರಿಂದಾಗಿ ಶ್ರೀಮಂತವರ್ಗದ ಬಂಡಾಯಗಾರನ ಅತೃಪ್ತಿಗೆ ಬೇರೆ ಕಾರಣಗಳಿರಬೇಕು. ಬಂಡಾಯಗಾರರಲ್ಲಿ ನಾನು ತಾತ್ಕಾಲಿಕವಾಗಿ ಅಧಿಕಾರದಿಂದ ಹೊರಗುಳಿದ ಬಣಗಳ ನಾಯಕರನ್ನು ಸೇರಿಸುವುದಿಲ್ಲ; ನಾನು ಸೇರಿಸುವುದು ತಮ್ಮ ವೈಯಕ್ತಿಕ ಯಶಸ್ಸಿಗಿಂತ ಮಿಗಿಲಾದ ಬದಲಾವಣೆಗಳನ್ನು ತರಬಯಸುವ ತಾತ್ವಿಕತೆಯುಳ್ಳ ವ್ಯಕ್ತಿಗಳನ್ನು ಮಾತ್ರ. ಅವರ ಅತೃಪ್ತಿಯ ಆಳದಲ್ಲಿ ಅಧಿಕಾರದ ಒಲವು ಇರಬಹುದಾದರೂ, ಅವರ ಪ್ರಜ್ಞಾಪೂರ್ವಕ ಆಲೋಚನೆಗಳಲ್ಲಿ ಇರುವುದು ಜಗತ್ತಿನ ಸರ್ಕಾರಗಳ ಬಗೆಗಿನ ಟೀಕೆ; ಇದು ಆಳವಾಗಿ ಬೇರೂರಿದರೆ ಸ್ವಪ್ರತಿಷ್ಠಾಪನೆಯ ದೈತ್ಯ ರೂಪವನ್ನು, ಅಥವಾ ಮೂಢನಂಬಿಕೆಗಳನ್ನು ಹೊಂದಿರುವವರಲ್ಲಿ, ಸೈತಾನಪ್ರವೃತ್ತಿಯನ್ನು ತಾಳಬಹುದು. ಈ ಎರಡನ್ನೂ ಬೈರನ್‌ನಲ್ಲಿ ಕಾಣಬಹುದು. ಅವನು ಪ್ರಭಾವಿಸಿದ ವ್ಯಕ್ತಿಗಳಲ್ಲಿ ವ್ಯಾಪಕವಾಗಿ ಕಂಡುಬರುವ ಈ ಎರಡೂ ಶ್ರೀಮಂತವರ್ಗ ಎಂದು ಹೇಳಲು ಸಾಧ್ಯವಿಲ್ಲದ ಸಮಾಜದ ಬಹು ಎಡೆಗಳಲ್ಲಿ ಸಾಮಾನ್ಯವಾಯಿತು. ಬಂಡಾಯದ ಶ್ರೀಮಂತವರ್ಗದ ತಾತ್ವಿಕತೆಯು ಬೆಳೆಯುತ್ತ, ವಿಸ್ತಾರಗೊಳ್ಳುತ್ತ ಮತ್ತು ಪಕ್ವಗೊಂಡಂತೆಲ್ಲ ಬದಲಾಗುತ್ತ ಬಂದಂತೆ, ನೆಪೋಲಿಯನ್‌ನ ಪತನಾನಂತರದ ಕಾರ್ಬೋನರಿಯಿಂದ ೧೯೩೩ ರ ಹಿಟ್ಲರ್‌ನ 'ಹೊಡೆತ' (ಕೂ) ವರೆಗೂ, ಕ್ರಾಂತಿಕಾರಕ ಚಳುವಳಿಗಳ ದೀರ್ಘ ಸರಣಿಯನ್ನು ಉದ್ದೀಪಿಸಿತು. ಪ್ರತಿ ಹಂತದಲ್ಲಿಯೂ ಅದು

ಬುದ್ಧಿಜೀವಿಗಳಲ್ಲಿಯೂ ಕಲೆಗಾರರಲ್ಲಿಯೂ ಸಂವಾದಿಯಾದ ಒಂದು ಚಿಂತನ ರೀತಿಗೆ ಸ್ಫೂರ್ತಿ ನೀಡಿತು.

ತನ್ನ ಮನೋಭಾವ ಮತ್ತು ಪರಿಸ್ಥಿತಿಗಳು ಕೆಲವು ರೀತಿಗಳಲ್ಲಿ ವಿಶಿಷ್ಟವಾಗಿರದಿದ್ದರೆ ಶ್ರೀಮಂತವರ್ಗದವನೊಬ್ಬನು ಬಂಡಾಯಗಾರನಾಗುವುದು ಸಾಧ್ಯವಿಲ್ಲ. ಬೈರನ್ ಇದ್ದ ಪರಿಸ್ಥಿತಿಗಳು ತೀರ ವಿಶಿಷ್ಟವಾದವು. ಅವನ ನೆನಪಿನಲ್ಲಿದ್ದ ಅತ್ಯಂತ ಹಳೆಯ ವಿಷಯವೆಂದರೆ ತನ್ನ ತಾಯ್ತಂದೆಯರ ಜಗಳಗಳು; ತಾಯಿಯು ಕ್ರೂರಿಯಾಗಿದ್ದುದರಿಂದ ಅವಳ ಬಗ್ಗೆ ಹೆದರಿಕೆ ಹಾಗೂ ಅವಳ ಕೀಳ್ತನದ ಬಗ್ಗೆ ತಿರಸ್ಕಾರ; ಅವನ ದಾದಿಯು ಕೆಡುಕು ಮತ್ತು ಕಾಲ್ವಿನಿಸ್ಟಿಕ್ ಮತಧರ್ಮಶಾಸ್ತ್ರದ ಕಠಿಣತೆಯಿಂದ ಕೂಡಿದವಳು; ತನ್ನ ಕುಂಟುತನ ಅವನಲ್ಲಿ ಅಪಮಾನಕಾರಕವೆನಿಸಿತು, ಇದರಿಂದಾಗಿ ಅವನು ಶಾಲೆಯ ಗುಂಪಿನಲ್ಲಿ ಗೋವಿಂದವಾಗಲು ಸಾಧ್ಯವಾಗಲಿಲ್ಲ. ಹತ್ತು ವರ್ಷದವನಾಗಿರುವಾಗ, ಬಡತನದಲ್ಲಿ ಜೀವಿಸಿದ ನಂತರ, ಇದ್ದಕ್ಕಿದ್ದಂತೆ ತಾನೊಬ್ಬ ಲಾರ್ಡ್ ಆಗಿ ನ್ಯೂಸ್ಟೆಡ್‌ನ ಒಡೆಯನಾಗಿಬಿಟ್ಟ. ಇದನ್ನೆಲ್ಲ ಅವನು ತನ್ನ ದೊಡ್ಡ ಸೋದರಮಾವನಿಂದ ಪಡೆದ. ಅವನೊಬ್ಬ 'ಕೆಡುಕ ಲಾರ್ಡ್', ಮೂವತ್ತು ವರ್ಷಗಳ ಹಿಂದೆ ಅವನು ದ್ವಂದ್ವಯುದ್ಧದಲ್ಲಿ ಒಬ್ಬ ಪ್ರತಿಸ್ಪರ್ಧಿಯನ್ನು ಕೊಂದಿದ್ದ, ಆಗಿನಿಂದ ಅವನ ನೆರೆಹೊರೆಯವರು ಅವನನ್ನು ಬಹಿಷ್ಕರಿಸಿದ್ದರು; ಅಂಥವನಿಂದ ಅವನಿಗೆ ಈ ಎಲ್ಲ ಬಂದದ್ದು. ಬೈರನ್‌ರದು ಕಾನೂನು ಮೀರಿದ ಕುಟುಂಬ, ಅವನ ತಾಯಿಯ ಗೋರ್ಡನ್ ವಂಶದವರು ಮತ್ತಷ್ಟು ಹೀಗಿದ್ದವರು. ಅಬರ್ಡೀನ್‌ನ ಸಣ್ಣ ಓಣಿಯ ಹೀನಸ್ಥಿತಿಯ ಬಳಿಕ, ಈ ಹುಡುಗ ಸಹಜವಾಗಿಯೇ ತನ್ನ ಪದವಿ ಮತ್ತು ಅಬೆಗಳಲ್ಲಿ, ತಾನು ಪಡೆದ ಭೂಮಿಯ ಕಾರಣದಿಂದ ತನ್ನ ಪೂರ್ವಿಕರ ಗುಣಲಕ್ಷಣಗಳನ್ನು ಹೊಂದಲು ಬಯಸುತ್ತಿದ್ದ. ಈಚಿನ ವರ್ಷಗಳಲ್ಲಿ ಅವರ ಜಗಳಗಂಟಿತನದಿಂದ ಅವನಿಗೆ ತೊಂದರೆಯುಂಟಾಗಿದ್ದರೆ, ಹಿಂದಿನ ಶತಮಾನಗಳಲ್ಲಿ ಅವರಿಗೆ ಕೀರ್ತಿಯನ್ನು ತಂದಿತ್ತಿತ್ತು ಎಂಬುದನ್ನು ತಿಳಿದ. ಅವನ ಅತ್ಯಂತ ಹಳೆಯ ಕವನಗಳಲ್ಲಿ ಒಂದು 'ನ್ಯೂಸ್ಟೆಡ್ ಅಬೆಯನ್ನು ಬಿಟ್ಟಾಗ' ತನ್ನ ಆ ಕಾಲದ ಭಾವನೆಗಳಿಗೆ ಸಂಬಂಧಿಸಿದೆ; ಕ್ರೇಸಿ ಮತ್ತು ಮಾರ್ಸ್ಟನ್ ಮೂರ್‌ಗಳ ಮತಧರ್ಮಯುದ್ಧಗಳಲ್ಲಿ ಹೋರಾಡಿದ ತನ್ನ ಪೂರ್ವಿಕರ ಬಗೆಗಿನ ಗೌರವ ಅಲ್ಲಿ ವ್ಯಕ್ತವಾಗಿದೆ. ಶ್ರದ್ಧಾಪೂರ್ವಕತೆಯಲ್ಲಿ ಕವನವನ್ನು ಮುಗಿಸುತ್ತಾನೆ:

ನಿನ್ನಂತೆಯೇ ಅವನು ಬದುಕುತ್ತಾನೆ, ಅಥವಾ ನಿನ್ನಂತೆಯೇ ನಾಶ ಹೊಂದುತ್ತಾನೆ:
ಮಣ್ಣುಗೂಡಿದಾಗ ಅವನು ನಿನ್ನ ಹುಡಿಯೊಡನೆ ಒಂದಾಗುವಂತಾಗಲಿ.

ಇದು ಬಂಡಾಯಗಾರನೊಬ್ಬನ ಮನೋಭಾವವಲ್ಲ, ಆದರೆ ಅದು ಸೂಚಿಸುವುದು, ಮಧ್ಯಯುಗದ ಬೇರನ್ ಅನ್ನು ಅನುಕರಿಸುವ ಆಧುನಿಕ ಸಂವಾದಿಯಾದ ಚೈಲ್ಡ್ ಹೆರಾಲ್ಡ್ ಅನ್ನು. ಸ್ನಾತಕಪೂರ್ವದಲ್ಲಿ, ತನ್ನ ಸ್ವಂತ

ಸಂಪಾದನೆಯನ್ನು ಮೊದಲ ಬಾರಿಗೆ ಪಡೆದಾಗ, ತಾನು 'ತನ್ನದೇ ನಾಣ್ಯಗಳನ್ನು ಟಂಕಿಸುವ ಜರ್ಮನ್ ರಾಜನಂತೆ, ಅಥವಾ ಯಾವುದೇ ನಾಣ್ಯವು ಇಲ್ಲದಿದ್ದರೂ ಅದಕ್ಕಿಂತ ಅಮೂಲ್ಯವಾದ ಸ್ವಾತಂತ್ರ್ಯವನ್ನು ಅನುಭವಿಸುವ ಚೆರೂಕೀ ಚೀಫ್‌ನಂತೆ ಸ್ವತಂತ್ರನೆಂಬಂತೆ ಭಾವಿಸಿದೆ. ನನ್ನ ಪ್ರೀತಿಯ ಅಮ್ಮ ಅಷ್ಟೊಂದು ನಿರಂಕುಶಳಾಗಿದ್ದುದರಿಂದ ಆ ದೇವತೆಯ ಬಗ್ಗೆ ಮನದುಂಬಿ ಹೇಳಿದೆ.' ಆನಂತರದಲ್ಲಿ, ಸ್ವಾತಂತ್ರ್ಯವನ್ನು ಕುರಿತು ಇನ್ನೂ ಉದಾತ್ತ ಕವನಗಳನ್ನು ಬರೆದನಾದರೂ ನಾವು ಅರ್ಥಮಾಡಿಕೊಳ್ಳಬೇಕಾದುದು ಅವನು ಹೊಗಳಿದ್ದು ಜರ್ಮನ್ ರಾಜ ಅಥವಾ ಚೆರೂಕೀ ಚೀಫ್‌ನ ಸ್ವಾತಂತ್ರ್ಯವನ್ನೇ ಹೊರತು ಸಾಮಾನ್ಯ ಜನರು ಅನುಭವಿಸುವ ಕೀಳು ರೀತಿಯ ಸ್ವಾತಂತ್ರ್ಯವನ್ನಲ್ಲ.

ತನ್ನ ವಂಶ ಮತ್ತು ಪದವಿಗಳ ಹೊರತಾಗಿಯೂ ಶ್ರೀಮಂತ ಸಂಬಂಧಿಕರು ಅವನಿಂದ ದೂರವಿದ್ದರು, ಹೀಗಾಗಿ ತಾನು ಸಾಮಾಜಿಕವಾಗಿ ಅವರ ವರ್ಗಕ್ಕೆ ಸೇರಿದವನಲ್ಲ ಎಂಬ ಭಾವನೆಯನ್ನು ಅವನು ಹೊಂದಬೇಕಾಯಿತು. ಅವನಿಗೆ ತಾಯಿಯ ಬಗ್ಗೆ ಆಳವಾದ ಸಿಟ್ಟು, ತನ್ನನ್ನು ಅವಳು ಸಂಶಯದಿಂದ ನೋಡುತ್ತಿದ್ದಳು. ಅವಳು ಕೀಳು ನಡತೆಯವಳೆಂಬುದು ಅವನಿಗೆ ತಿಳಿದಿತ್ತು, ತನಗೂ ಅಂಥ ದೋಷವಿರಬಹುದೇ ಎಂಬ ಬಗ್ಗೆ ಆಳವಾದ ಹೆದರಿಕೆಯಿತ್ತು. ಈ ಕಾರಣದಿಂದ ಅವನಲ್ಲಿ ವಿಶಿಷ್ಟ ಲಕ್ಷಣವಾದ ದೊಡ್ಡಸ್ತಿಕೆ ಮತ್ತು ಬಂಡಾಯಗಳ ವಿಚಿತ್ರ ಮಿಶ್ರಣವಿತ್ತು. ಆಧುನಿಕ ರೀತಿಯಲ್ಲಿ ಅವನು ಸಭ್ಯ ವ್ಯಕ್ತಿಯಾಗಲು ಸಾಧ್ಯವಿರದಿದ್ದರೆ, ಮತಧರ್ಮಯುದ್ಧದ ತನ್ನ ಪೂರ್ವಿಕರಂತೆ ಅವನೂ ಧೈರ್ಯಸ್ಥ ಬೇರನ್‌ನೇ ಆಗಿರುತ್ತಿದ್ದ, ಅಥವಾ ಹೆಚ್ಚು ಉಗ್ರತೆ ಮತ್ತು ಹೆಚ್ಚು ರೊಮ್ಯಾಂಟಿಕ್ ಶೈಲಿಯಲ್ಲಿ ದೇವರು ಮತ್ತು ಮಾನವರಿಂದ ಶಪಿತನಾಗಿ ಮಹಾಪತನ ಹೊಂದಿದ ಘಿಬ್ಬಲೈನ್ ಮುಖಂಡನಾಗಿರುತ್ತಿದ್ದ. ಮಧ್ಯಯುಗದ ಕಲ್ಪನಾಕೃತಿಗಳೂ ಇತಿಹಾಸಗಳೂ ಅವನ ಶಿಷ್ಟಾಚಾರದ ಗ್ರಂಥಗಳಾಗಿದ್ದವು. ಹೋಹೆನ್‌ಸ್ಟಾಫೆನ್ ವಂಶದವನಂತೆ ಅವನೂ ಪಾಪ ಮಾಡಿದ, ಮತ್ತು ಮತಧರ್ಮಯೋಧರಂತೆ ಅವನು ಮುಸ್ಲಿಮರ ವಿರುದ್ಧ ಹೋರಾಡುತ್ತ ಸತ್ತ.

ಅವನ ನಾಚಿಕೆ ಮತ್ತು ಸ್ನೇಹಪರತೆಗಳು ಪ್ರಣಯದಲ್ಲಿ ಸಾಂತ್ವನವನ್ನು ಪಡೆಯಲು ಹವಣಿಸಿದವು. ಆದರೆ ಅಪ್ರಜ್ಞಾಪೂರ್ವಕವಾಗಿ ಬಯಸುತ್ತಿದ್ದುದು ಪ್ರಣಯಿನಿಯನ್ನಲ್ಲ, ಒಬ್ಬ ತಾಯಿಯನ್ನು; ಆದರೆ ಆಗಸ್ಟಾಳ ಹೊರತು ಮಿಕ್ಕವರೆಲ್ಲ ನಿರಾಸೆಗೊಳಿಸಿದರು. ತಾನೆಂದೂ ಬಿಡಲಾರದ ಕಾಲ್ವಿನಿಸಂ – ೧೮೧೬ ರಲ್ಲಿ ಶೆಲ್ಲಿಗೆ, ತನ್ನನ್ನು 'ಒಬ್ಬ ಮೆಥಡಿಸ್ಟ್, ಕಾಲ್ವಿನಿಸ್ಟ್ ಮತ್ತು ಆಗಸ್ಟಿನಿಯನ್' ಎಂದು ಬಣ್ಣಿಸಿಕೊಂಡ – ತನ್ನ ಜೀವನಶೈಲಿಯು ಕೆಡುಕುತನದ್ದು ಎಂಬ ಭಾವನೆಯನ್ನು ಮೂಡಿಸಿತು. ಆದರೆ ತನ್ನ ಕೆಡುಕುತನವು ತನ್ನ ವಂಶದ ಶಪಿತ ರಕ್ತದ ಕಾರಣ, ದೇವರೇ ತನ್ನ ದುರ್ಗತಿಯನ್ನು

ನಿಶ್ಚಯಿಸಿದ್ದಾನೆ, ಎಂದು ಹೇಳಿಕೊಂಡ. ಅದು ನಿಜವಾಗಿದ್ದರೆ, ಏನಾದರೂ ಅವನು ಗಣ್ಯನಾಗಬೇಕಾದ್ದರಿಂದ, ಪಾತಕಿಯಾಗಿಯೂ ಗಣ್ಯನಾಗಿರುತ್ತಿದ್ದ, ತಾನು ತಿರಸ್ಕರಿಸಬಯಸುತ್ತಿದ್ದ ಥಳುಕುಪಳುಕಿನ ಲಂಪಟರ ಧೈರ್ಯವನ್ನು ಮೀರಿಸುತ್ತಿದ್ದ. ಆಗಸ್ಟಾಳನ್ನು ಅವನು ಪ್ರಾಮಾಣಿಕವಾಗಿ ಪ್ರೀತಿಸಿದ, ಅದಕ್ಕೆ ಕಾರಣ ಅವಳೂ ತನ್ನ ವಂಶದವಳು – ಬೈರನ್‌ರ ಇಶ್ಮಾಲೈಟ್ ವಂಶದವಳು ಎಂಬುದು, ಅದಕ್ಕಿಂತ ಹೆಚ್ಚಾಗಿ ತನ್ನ ಬೇಕುಬೇಡಗಳನ್ನು ಅಕ್ಕನಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು ಎಂಬುದು. ಆದರೆ ಅವಳು ಇಷ್ಟನ್ನು ಮಾತ್ರವೇ ಅವನಿಗೆ ನೀಡಲಿಲ್ಲ. ತನ್ನ ಸರಳತೆ ಮತ್ತು ಅತ್ಯಂತ ರುಚಿಕರವಾದ ಸ್ವಾಭಿನಂದನಕರವಾದ ಪಶ್ಚಾತ್ತಾಪದ ಒಂದು ಸಾಧನವನ್ನು ಒದಗಿಸಿದಳು. ತಾನು ಮಹಾಪಾತಕಿಗಳ ಸಾಲಿನಲ್ಲಿ ನಿಲ್ಲುವವನು – ಮ್ಯಾನ್‌ಫ್ರೆಡ್, ಕೇನ್, ಹೆಚ್ಚು ಕಡಿಮೆ ಸೈತಾನ – ಎಂಬ ಭಾವನೆ ಅವನಿಗಾಗುತ್ತಿತ್ತು. ಕಾಲ್ವಿನಿಸ್ಟ್, ಶ್ರೀಮಂತ ಲಾರ್ಡ್, ಮತ್ತು ಬಂಡಾಯಗಾರರೆಲ್ಲ ಸಮಾನ ರೀತಿಯಲ್ಲಿ ತೃಪ್ತಿಗೊಂಡರು; ಅಂತೆಯೇ ರೊಮ್ಯಾಂಟಿಕ್ ಪ್ರಿಯಕರನೂ. ತನ್ನ ಹೃದಯದಲ್ಲಿ ಕರುಣೆ ನಿಷ್ಠೆಗಳಂತಹ ಮೃದುಲ ಭಾವನೆಗಳನ್ನೂ ಉದ್ರೇಕಿಸಬಲ್ಲ ಏಕೈಕ ಮರ್ತ್ಯಜೀವಿಯ ನಷ್ಟದಿಂದ ಅವನ ಹೃದಯ ಬಿರಿದುಹೋಯಿತು.

ಬೈರನ್ ತನ್ನನ್ನು ಸೈತಾನನಿಗೆ ಹೋಲಿಸಿಕೊಂಡರೂ ದೇವರ ಸ್ಥಾನದಲ್ಲಿ ನಿಲ್ಲಿಸಿಕೊಳ್ಳಲು ಯಾವತ್ತೂ ಸಾಹಸ ಮಾಡಲಿಲ್ಲ. ಹೆಮ್ಮೆಯ ಬೆಳವಣಿಗೆಯ ಮುಂದಿನ ಹೆಜ್ಜೆಯನ್ನು ನೀಷೆ ಇರಿಸಿದ; ಅವನು ಹೇಳುವುದೆಂದರೆ, 'ದೇವರುಗಳಿದ್ದರೆ, ನಾನು ಹೇಗೆ ತಾನೇ ದೇವರಲ್ಲ ಎಂಬುದನ್ನು ಸಹಿಸಿಕೊಳ್ಳಲು ಸಾಧ್ಯ? ಹೀಗಾಗಿ ದೇವರುಗಳೇ ಇಲ್ಲ.' ಈ ತರ್ಕದ ದಮನಿತ ಆಧಾರಕಲ್ಪನೆಯನ್ನು ನೋಡಿ. 'ನನ್ನ ಹೆಮ್ಮೆಯನ್ನು ವಿನೀತಗೊಳಿಸುವುದೆಲ್ಲ ಸುಳ್ಳು!' ಬೈರನ್‌ನಂತೆಯೇ ನೀಷೆಯೂ, ಇನ್ನೂ ಸ್ವಲ್ಪ ಹೆಚ್ಚಿಗೆ, ಶ್ರದ್ಧಾವಂತ ಪರಿಸರದಲ್ಲಿ ಬೆಳೆದವನು; ಆದರೆ ಇನ್ನೂ ಉತ್ತಮ ಬುದ್ಧಿವಂತಿಕೆಯಿಂದಾಗಿ ಅವನು ಸೈತಾನನಿಗಿಂತ ಉತ್ತಮ ವಿಮೋಚನಾ ಮಾರ್ಗವನ್ನು ಕಂಡುಕೊಂಡ. ಅವನು ಬೈರನ್ ಬಗ್ಗೆ ಸಹಾನುಭೂತಿಪರನಾಗಿದ್ದ. ಅವನು ಹೇಳುವುದು ಹೀಗೆ:

'ದುರಂತವೆಂದರೆ, ನಮ್ಮ ಹೃದಯ ಮತ್ತು ತಲೆಗಳಲ್ಲಿ ಸತ್ಯದ ಮಾರ್ಗಗಳನ್ನು ಹೊಂದಿದ್ದರೆ, ನಾವು ಮತಧರ್ಮದ ಅಥವಾ ತತ್ವಜಿಜ್ಞಾಸೆಯ ತತ್ವಗಳನ್ನು ನಂಬುವುದಿಲ್ಲ; ಆದರೆ ಮತ್ತೊಂದೆಡೆಯಲ್ಲಿ, ಸೂಕ್ಷ್ಮವಾದ ಯಾತನೆಯ ಅನುಭವಗಳ ಮಾನವೀಯತೆಯ ಬೆಳವಣಿಗೆಯ ಮೂಲಕ ನಾವು ಹೇಗೆ ಆಗಿಬಿಟ್ಟಿದ್ದೇವೆಂದರೆ, ನಮಗೆ ಬಿಡುಗಡೆ ಮತ್ತು ಸಾಂತ್ವನಗಳನ್ನು ನೀಡಲು ಅತ್ಯಂತ ಶ್ರೇಷ್ಠ ಬಗೆಯ ಸಾಧನಗಳೇ ಬೇಕಾಗುತ್ತವೆ; ಅಲ್ಲಿಂದ ಮಾನವನು ತಾನು ಗುರುತಿಸುವ ಸತ್ಯದ ಮೂಲಕ ರಕ್ತಕಾರಿ ಸಾಯುವಂತಹ ಅಪಾಯ ಆರಂಭವಾಗುತ್ತದೆ. ಬೈರನ್

ಇದನ್ನು ತನ್ನ ಅಮರವಾದ ಸಾಲುಗಳ ಮೂಲಕ ಅಭಿವ್ಯಕ್ತಗೊಳಿಸುತ್ತಾನೆ:

ದುಃಖವೇ ಜ್ಞಾನ: ಅದನ್ನು ಅತ್ಯಂತ ಹೆಚ್ಚು ಬಲ್ಲವರು
ಅಪಾಯಕಾರಿ ಸತ್ಯದಿಂದ ಮಹಾಯಾತನೆಗೊಳಗಾಗಬೇಕಾಗುತ್ತದೆ,
ಜ್ಞಾನವೃಕ್ಷವು ಜೀವಂತಿಕೆಯಿಂದ ಕೂಡಿರುವುದಲ್ಲ.

ಅಪರೂಪವಾದರೂ, ಕೆಲವು ವೇಳೆ ಬೈರನ್ ನೀಷೆಯ ದೃಷ್ಟಿಕೋನಕ್ಕೆ ಹೆಚ್ಚು ಸಮೀಪ ಬರುತ್ತಾನೆ. ಆದರೆ ಒಟ್ಟಾರೆಯಾಗಿ, ಬೈರನ್‌ನ ನೈತಿಕ ಸಿದ್ಧಾಂತವು, ಅವನ ಕಾರ್ಯಶೀಲತೆಗೆ ವಿರುದ್ಧವಾಗಿ, ಕಟ್ಟುನಿಟ್ಟಾಗಿ ಸಂಪ್ರದಾಯಬದ್ಧವಾಗುತ್ತದೆ.

ನೀಷೆಯ ಪ್ರಕಾರ ದೊಡ್ಡ ವ್ಯಕ್ತಿಯು ದೇವರಂತೆ, ಬೈರನ್‌ಗೆ ಎಂದಿನಂತೆಯೇ, ಒಬ್ಬ ತನ್ನೊಡನೆಯೇ ಯುದ್ಧನಿರತನಾದ ಒಬ್ಬ ದೈತ್ಯ. ಆದರೆ ಕೆಲವು ವೇಳೆ, ಅವನು ಜ಼ರಾತುಷ್ಟ್ರನಂತಹ ಋಷಿಯನ್ನು ಚಿತ್ರಿಸುತ್ತಾನೆ – ತನ್ನ ಅನುಯಾಯಿಗಳೊಡನೆ ವ್ಯವಹರಿಸುವಾಗಿನ ಕಾರ್ಸೇರ್

ಅದೇ ಉತ್ಕೃಷ್ಟ ಕಲೆಯಿಂದ ಆತ್ಮಗಳನ್ನು ಅಲುಗಾಡಿಸುತ್ತಾನೆ
ಅದು ಕೋರೈಸುತ್ತದೆ, ದಾರಿ ತೋರಿಸುತ್ತದೆ,
ಆದರೂ ಕ್ಷುದ್ರ ಹೃದಯಕ್ಕೆ ತಂಪೆರೆಯುತ್ತದೆ.

ಇದೇ ನಾಯಕನು 'ವಿಷಾದಪಡುವಷ್ಟರ ಮಟ್ಟಿಗೆ ಮನುಷ್ಯನನ್ನು ದ್ವೇಷಿಸಿದ.' ಇಂತಹುದೇ ಲಕ್ಷಣಗಳನ್ನು ದರೋಡೆಕೋರರ ರಾಜನಾದ ಜೆನ್‌ಸೆರಿಕ್, ಘಿಬ್ಬೆಲಿಯನ್ ನಿರಂಕುಶಾಧಿಪತಿಯಾದ ಎಜ್ಜೆಲೀನೋ ಮತ್ತು ಕೆಲವರು ಲೂಯಿಸಿಯಾನ ಕಡಲ್ಗಳ್ಳರೂ ಹೊಂದಿದ್ದು, ಕಾರ್ಸೇಸ್ ಮಾನವ ಸ್ವಭಾವಕ್ಕೆ ಅನುಗುಣವಾದವನೆಂದು ಅಡಿಟಿಪ್ಪಣಿಯೊಂದು ಸಮಾಧಾನಪಡಿಸುತ್ತದೆ.

ಲೇವಂಟ್ ಮತ್ತು ಮಧ್ಯಯುಗದಲ್ಲಿ ಮಾತ್ರ ಬೈರನ್ ತನ್ನ ನಾಯಕರನ್ನು ಹುಡುಕಲಿಲ್ಲ, ಯಾಕೆಂದರೆ ರೊಮ್ಯಾಂಟಿಕ್ ವೇಷ ತೊಟ್ಟ ನೆಪೋಲಿಯನ್ ಅನ್ನು ಸೃಷ್ಟಿಸುವುದು ಕಷ್ಟವೇನಾಗಿರಲಿಲ್ಲ. ಹತ್ತೊಂಬತ್ತನೆಯ ಶತಮಾನದ ಯೂರೋಪ್‌ನ ಮನಸ್ಸಿನ ಮೇಲೆ ನೆಪೋಲಿಯನ್ ಬೀರಿದ ಪ್ರಭಾವ ತುಂಬ ಆಳವಾದುದು; ಅವನು ಕ್ಲಾಸ್‌ವಿಟ್ಸ್, ಸ್ಟೆಂಡಲ್, ಹಿಯಿನ್, ಫಿಷ್ತೆ ಮತ್ತು ನೀಷೆಯರ ಚಿಂತನೆಗಳು ಮತ್ತು ಇಟಾಲಿಯನ್ ಅವಕಾಶಪ್ರೇಮಿಗಳ ಕಾರ್ಯಗಳಿಗೆ ಸ್ಫೂರ್ತಿದಾಯಕನಾದ. ಯುಗದುದ್ದಕ್ಕೂ ಅವನ ಪ್ರೇತ ಸಾಗುತ್ತದೆ, ಕೈಗಾರಿಕೀಕರಣ ಮತ್ತು ವ್ಯಾಪಾರಗಳಿಗೆ ಸೆಡ್ಡುಹೊಡೆದ ಮತ್ತು ಶಾಂತಿಧೋರಣೆ ಮತ್ತು ಅಂಗಡಿ ಮೇಲುಸ್ತುವಾರಿಗಳ ಬಗ್ಗೆ ತಿರಸ್ಕಾರ ಸುರಿಯುವ ಏಕೈಕ ಶಕ್ತಿ ಅದು. ಟಾಲ್‌ಸ್ಟಾಯ್‌ನ 'ವಾರ್ ಅಂಡ್ ಪೀಸ್' ಈ ಪ್ರೇತವನ್ನು ಓಡಿಸುವ ಒಂದು ಪ್ರಯತ್ನ, ಆದರೆ ನಿಷ್ಫಲವಾದುದು, ಯಾಕೆಂದರೆ ಪ್ರಸಕ್ತ ಕಾಲದ ಅದರ ಪ್ರಭೆ ಹೆಚ್ಚು ಶಕ್ತಿಶಾಲಿಯಾಗಿತ್ತು.

ಒಂದು ನೂರು ದಿನಗಳಲ್ಲಿ ಬೈರನ್ ನೆಪೋಲಿಯನ್‌ನ ಗೆಲವಿನ ಬಗ್ಗೆ ತನ್ನ ಒಲವನ್ನು ಪ್ರಕಟಪಡಿಸಿದ, ಮತ್ತು ವಾಟರ್‌ಲೂ ಬಗ್ಗೆ ಕೇಳಿದಾಗ ಅವನು ಹೇಳಿದ: 'ನನಗೆ ಅತೀವ ನೋವಾಗಿದೆ.' ಒಮ್ಮೆ ಮಾತ್ರ, ಅದೂ ಒಂದು ಕ್ಷಣ, ತನ್ನ ನಾಯಕನಿಗೆ ಅವನು ವಿಮುಖನಾಗಿದ್ದ: ೧೮೧೪ ರಲ್ಲಿ, ಪದಚ್ಯುತಿಗಿಂತ (ತನಗೆ ಹಾಗೆನಿಸಿದಾಗ) ಆತ್ಮಹತ್ಯೆಯೇ ಉತ್ತಮ ಎನಿಸಿತ್ತು. ಈ ಕ್ಷಣದಲ್ಲಿ, ಅವನು ವಾಷಿಂಗ್‌ಟನ್‌ನ ಸಜ್ಜನಿಕೆಯಲ್ಲಿ ಸಾಂತ್ವನವನ್ನರಸಿದನಾದರೂ ಎಲ್ಬದಿಂದ ವಾಪಸಾದಾಗ ಇದು ಆವಶ್ಯಕವೆನಿಸಲಿಲ್ಲ. ಬೈರನ್ ಸತ್ತಾಗ, ಫ್ರಾನ್ಸ್‌ನಲ್ಲಿ 'ಶತಮಾನದ ಇಬ್ಬರು ಅತ್ಯಂತ ಶ್ರೇಷ್ಠ ವ್ಯಕ್ತಿಗಳಾದ ನೆಪೋಲಿಯನ್ ಮತ್ತು ಬೈರನ್‌ರು ಸುಮಾರು ಒಂದೇ ವೇಳೆಯಲ್ಲಿ ಕಣ್ಮರೆಯಾದರು ಎಂದು ಅನೇಕ ಪತ್ರಿಕೆಗಳು ಬರೆದವು.'[೨೭೬] ಕಾರ್ಲೈಲ್ ಆ ಸಮಯದಲ್ಲಿ ಬೈರನ್ ಅನ್ನು 'ಯೂರೋಪ್‌ನಲ್ಲಿ ಅತ್ಯಂತ ಉದಾತ್ತ ಸತ್ವ' ಎಂದು ಪರಿಗಣಿಸಿದ್ದ, ಅವನ ಸಾವಿನಿಂದ ತಾನು 'ಸೋದರನೊಬ್ಬನನ್ನು ಕಳೆದುಕೊಂಡೆ' ಎಂದ; ಆನಂತರ ಗಯಟೆಯನ್ನು ಅವನು ಮೆಚ್ಚಿಕೊಂಡರೂ ಬೈರನ್ ಮತ್ತು ನೆಪೋಲಿಯನ್‌ರನ್ನು ಜೊತೆಯಲ್ಲಿರಿಸಿದ್ದ.

'ನಿಮ್ಮ ಉದಾತ್ತ ಮನಸ್ಸುಗಳಿಗೆ ಯಾವುದಾದರೊಂದು ಭಾಷೆಯಲ್ಲಿ ಅಂತಹ ಕಲಾಕೃತಿಯನ್ನು ಪ್ರಕಟಿಸುವುದು ಒಂದು ಆವಶ್ಯಕತೆಯೇ ಆಗುತ್ತದೆ. ಅವನೊಡನೆ ಪ್ರಾಮಾಣಿಕವಾಗಿ ಹೋರಾಡುವ ಮುಂಚೆ ಅದು ದೆವ್ವದೊಡನೆಯ ಹೋರಾಟವಲ್ಲದೆ ಮತ್ತೇನು? ನಿಮ್ಮ ಬೈರನ್ ಸಾರೋಸ್ ಆಫ್ ಲಾರ್ಡ್ ಜಾರ್ಜ್ ಅನ್ನು ಗದ್ಯ ಮತ್ತು ಪದ್ಯಗಳಲ್ಲಿ ಮತ್ತು ಅನ್ಯತಃ ವಿಸ್ತಾರವಾಗಿ ಬರೆದು ಪ್ರಕಟಿಸುತ್ತಾನೆ; ನಿಮ್ಮ ಬೋನಾಪಾರ್ಟೆ ತನ್ನ ಸಾರೋಸ್ ಆಫ್ ಲಾರ್ಡ್ ಜಾರ್ಜ್ ಸಂಗೀತನಾಟಕವನ್ನು ತನ್ನೆಲ್ಲ ಭವ್ಯ ಶೈಲಿಯಲ್ಲಿ – ಕಾನೂನಾತ್ಮಕ ಪ್ರಶ್ನೋತ್ತರಗಳ, ಮತ್ತು ಜಗತ್ತಿನ ಕೊಲೆಯ ಕೇಕೆಗಳೊಡನೆ – ಪ್ರದರ್ಶಿಸುತ್ತಾನೆ; ಅವನ ರಂಗದ ಬೆಳಕೆಲ್ಲ ದಳ್ಳುರಿ; ಅವನ ಪ್ರಾಸಗಳು ಮತ್ತು ಪಲ್ಲವಿಗಳೆಲ್ಲ ಆತಿಥೇಯರ ಹೆಜ್ಜೆಗಳು ಮತ್ತು ಪತನಗೊಳ್ಳುವ ನಗರಗಳ ಶಬ್ದಗಳು.'[೨೭೭]

ಮುಂದೆ ಮೂರು ಅಧ್ಯಾಯಗಳ ನಂತರ, ಅವನು ಪ್ರಬಲವಾದ ಆಜ್ಞೆಯೊಂದನ್ನು ಕೊಡುತ್ತಾನೆ: 'ನಿನ್ನ ಬೈರನ್ ಅನ್ನು ಮುಚ್ಚು, ಗಯಟೆಯನ್ನು ತೆರೆ.' ಆದರೆ ಬೈರನ್ ಅವನಲ್ಲಿ ರಕ್ತಗತವಾಗಿದ್ದ, ಆದರೆ ಗಯಟೆ ಕೇವಲ ಅಭಿಲಾಷೆಯಾಗಿದ್ದ.

ಕಾರ್ಲೈಲ್ ದೃಷ್ಟಿಯಲ್ಲಿ ಗಯಟೆ ಮತ್ತು ಬೈರನ್‌ರು ವಿರೋಧನ್ಯಾಸಗಳು (ಆಂಟಿಥೀಸೆಸ್); ಆಲ್‌ಫ್ರೆಡ್ ದ ಮ್ಯೂಸೆಟ್‌ಗೆ, ಉಲ್ಲಾಸದ ಗ್ಯಾಲಿಕ್ (ಫ್ರೆಂಚ್)

೨೭೬. ಮೌರೋಯಿಸ್, 'ಲೈಫ್ ಆಫ್ ಬೈರನ್'
೨೭೭. ಸಾರ್ಟರ್ ರೆಸಾರ್ಟಸ್, ಭಾಗ ೨, ಅಧ್ಯಾಯ ೬.

ಆತ್ಮದಲ್ಲಿ ಖಿನ್ನತೆಯ ವಿಷವನ್ನು ಹಾಕಿದ ಕೆಡುಕು ಕೆಲಸದಲ್ಲಿ ಇಬ್ಬರೂ ಷಾಮೀಲಾದವರು. ಆ ಕಾಲದ ಬಹುತೇಕ ಫ್ರೆಂಚ್ ಜನರಿಗೆ ಗಯಟೆ ಗೊತ್ತಿದ್ದುದು 'ದ ಸಾರೋಸ್ ಆಫ್ ವರ್ದರ್' ಮೂಲಕ, ಒಲಿಂಪಿಯನ್ ಆಗಿ ಅಲ್ಲ ಎಂದು ತೋರುತ್ತದೆ. ಮ್ಯೂಸೆಟ್ ಬೈರನ್ ಅನ್ನು ತೆಗಳಿದ್ದು ಏಡ್ರಿಯಾಟಿಕ್ ಮತ್ತು ಗಿಕ್ಸಿಯೋಲಿಗಳಿಂದ ಸಮಾಧಾನಗೊಳ್ಳದಿದ್ದುದಕ್ಕೆ – ತಪ್ಪಾಗಿ, ಯಾಕೆಂದರೆ ಅವನಿಗೆ ಅವಳು ಪರಿಚಯವಾದ ಬಳಿಕ ಅವನು ಮ್ಯಾನ್‌ಫ್ರೆಡ್'ಗಳನ್ನು ಬರೆಯಲಿಲ್ಲ. ಆದರೆ ಡಾನ್ ಜುವಾನ್ ಅನ್ನು ಗಯಟೆಯ ಹೆಚ್ಚು ಉಲ್ಲಾಸಕರ ಕಾವ್ಯವಾಗಿ ಫ್ರಾನ್ಸ್‌ನಲ್ಲಿ ಸ್ವಲ್ಪ ಮಟ್ಟಿಗೆ ಓದಿದ್ದರು. ಮ್ಯೂಸೆಟ್‌ನ ಹೊರತಾಗಿಯೂ, ಬಹುತೇಕ ಫ್ರೆಂಚ್ ಕವಿಗಳು ಆಗಿನಿಂದಲೂ ತಮ್ಮ ಕಾವ್ಯಗಳಿಗೆ ಬೈರನ್‌ನ ಅಸುಖವನ್ನೇ ಅತ್ಯುತ್ತಮ ವಸ್ತುವೆಂದು ಭಾವಿಸಿದ್ದಾರೆ.

ನೆಪೋಲಿಯನ್ ನಂತರ ಬೈರನ್ ಮತ್ತು ಗಯಟೆ ಶತಮಾನದ ಅತ್ಯಂತ ದೊಡ್ಡ ಪ್ರತಿಭಾವಂತರೆಂದು ಮ್ಯೂಸೆಟ್ ಭಾವಿಸಿದ್ದ. ೧೮೧೦ ರಲ್ಲಿ ಹುಟ್ಟಿದ ಮ್ಯೂಸೆಟ್ ಸಾಮ್ರಾಜ್ಯದ ವೈಭವ ಮತ್ತು ದುರಂತಗಳ ಭಾವಗೀತಾತ್ಮಕ ವರ್ಣನೆಯಲ್ಲಿ 'ಕದನಯುಗಳದಲ್ಲಿ ಭಾಗವಹಿಸುವ ಅವಕಾಶ' (ಕನ್‌ಕಸ್ ಆನ್‌ತ್ರ್ ದ್ಯೂ ಬೆಟೈಲಿಸ್) ವನ್ನು ಹೊಂದಿದ್ದ ಪೀಳಿಗೆಯಲ್ಲಿ ಒಬ್ಬನಾಗಿದ್ದವನು. ಜರ್ಮನಿಯಲ್ಲಿ ನೆಪೋಲಿಯನ್ ಬಗೆಗಿನ ಭಾವನೆ ವಿಭಿನ್ನವಾಗಿತ್ತು. ಹೆಯಿನ್‌ನಂತೆ ಅವನನ್ನು ಸ್ವಾತಂತ್ರ್ಯದ ಬಲಿಷ್ಠ ಕಾರಣಿಕ ಎಂದು ಕೆಲವರು ಭಾವಿಸಿದ್ದರೆ, ಮತ್ತೆ ಕೆಲವರು ಕಾನೂನುವಿರೋಧಿಯಾದ ಗುಲಾಮತನದ ವಿನಾಶಕ ಹಾಗೂ ಆನುವಂಶಿಕ ರಾಜತ್ವವನ್ನು ತಲ್ಲಣಗೊಳಿಸಿದವನು ಎಂದು ಭಾವಿಸಿದ್ದರು; ಹಾಗೆಯೇ ಮತ್ತೂ ಕೆಲವರು ಅವನನ್ನು ಅನಾಯಕತ್ವವಾದಿ, ಆಗಲಿರುವ ಜರ್ಮನ್ ರಾಷ್ಟ್ರದ ವಿನಾಶಕ, ಕೊನೆಗೊಳ್ಳದ ಫ್ರೆಂಚ್ ದ್ವೇಷದಿಂದ ಮಾತ್ರ ಟ್ಯೂಟೋನಿಕ್ ಸದ್ಗುಣವನ್ನು ಒಮ್ಮೆಗೇ ಉಳಿಸಿಕೊಳ್ಳಬಹುದು ಎಂದು ತೋರಿಸಿದ ಅನೈತಿಕವಾದಿ ಎಂದು ಪರಿಗಣಿಸಿದ್ದರು. ಲಿಬಿಸ್‌ಮಾರ್ಕ್ ಎರಡನ್ನೂ ಸೇರಿಸಿದ: ನೆಪೋಲಿಯನ್ ಒಬ್ಬ ಅನಾಯಕತ್ವವಾದಿ, ಆದರೆ ಅನುಕರಣೀಯ ಅನಾಯಕತ್ವವಾದಿಯೇ ವಿನಾ ದ್ವೇಷಿಸತಕ್ಕವನಲ್ಲ ಎಂದ. ಇದನ್ನು ಒಪ್ಪಿಕೊಂಡ ನೀಷೆ ಪೈಶಾಚಿಕ ಸಂತೋಷದಿಂದ ಉದ್ಗರಿಸಿದ್ದೆಂದರೆ ಯುದ್ಧಗಳ ಮಹಾಯುಗ ಬರಲಿದೆ, ಈ ವರಕ್ಕೆ ನಾವು ಕೃತಜ್ಞರಾಗಿರಬೇಕಾದುದು ಫ್ರೆಂಚ್ ಕ್ರಾಂತಿಗಲ್ಲ ನೆಪೋಲಿಯನ್‌ಗೆ ಎಂದು. ಈ ರೀತಿಯಲ್ಲಿ ರಾಷ್ಟ್ರೀಯತಾವಾದ, ಸೈತಾನವಾದ ಮತ್ತು ಬೈರನ್ ಬಿಟ್ಟುಹೋದ ಆಸ್ತಿಯಾದ ವಿಭೂತಿಪೂಜೆಗಳು ಜರ್ಮನಿಯ ಸಂಕೀರ್ಣ ಆತ್ಮದ ಭಾಗಗಳಾದವು.

ಬೈರನ್ ಏನೂ ಮೃದುವಲ್ಲ, ಸಿಡಿಲಿನಂತೆ ಉಗ್ರ. ರೂಸೋ ಬಗ್ಗೆ ಅವನು ಹೇಳಿದ್ದು ಅವನಿಗೂ ಅನ್ವಯಿಸುತ್ತದೆ. ಅವನ ಪ್ರಕಾರ, ರೂಸೋ

ರಾಗಭಾವಗಳ ಮೇಲೆ
ಮಾಟ ಮಾಡಿದವನು, ಮತ್ತು ಸಂಕಟದಿಂದ
ಪ್ರಚಂಡ ವಾಗ್ಝರಿಯನ್ನು ಹಿಂಡಿ ಸುರಿಸಿದವನು .. ..
ಆದರೂ ಅವನಿಗೆ ತಿಳಿದಿತ್ತು
ಹುಚ್ಚುತನವನ್ನು ಚೆಲುವಾಗಿಸುವ, ತಪ್ಪು ಕಾರ್ಯ ಮತ್ತು
ಆಲೋಚನೆಗಳ ಮೇಲೆ ಸ್ವರ್ಗೀಯ ಬಣ್ಣ ಲೇಪಿಸುವ ಪರಿ.

ಆದರೆ ಈ ಇಬ್ಬರೂ ವ್ಯಕ್ತಿಗಳಲ್ಲಿ ಅಪಾರ ವ್ಯತ್ಯಾಸವಿದೆ. ರೂಸೋ ವಿಷಾದಮಯ, ಬೈರನ್ ಉಗ್ರ, ರೂಸೋನ ಪುಕ್ಕಲುತನ ಎದ್ದು ಕಾಣುವಂಥದು, ಬೈರನ್‌ನದು ಮರೆಮಾಚಿರುವಂಥದು. ಸರಳವಾಗಿದ್ದಾಗ ರೂಸೋ ಸದ್ಗುಣವನ್ನು ಮೆಚ್ಚಿದವನು, ಆದರೆ ಬೈರನ್ ತನ್ನ ಮೂಲರೂಪದ ಪಾಪವನ್ನು ಮೆಚ್ಚಿದವನು. ಅಸಾಮಾಜಿಕ ಪ್ರವೃತ್ತಿಯ ವಿರುದ್ಧದ ಬಂಡಾಯದಲ್ಲಿ, ಎರಡು ಹಂತಗಳಿಗೆ ಮಾತ್ರ ಸೀಮಿತವಾದ ಈ ವ್ಯತ್ಯಾಸವು ಮುಖ್ಯವಾದುದು, ಚಳುವಳಿಯು ಹೇಗೆ ಬೆಳೆಯುತ್ತಿತ್ತು ಎಂಬುದನ್ನು ಇದು ತೋರಿಸುತ್ತದೆ.

ಬೈರನ್‌ನ ರೊಮ್ಯಾಂಟಿಸಿಸಂ ಅರ್ಧ ಮಾತ್ರ ಪ್ರಾಮಾಣಿಕವಾದುದು ಎಂದು ಒಪ್ಪಿಕೊಳ್ಳಬೇಕು. ತನ್ನದಕ್ಕಿಂತ ಪೋಪ್‌ನ ಕಾವ್ಯ ಉತ್ತಮವೆಂದು ಕೆಲವು ವೇಳೆ ಅವನೇ ಹೇಳಿಕೊಳ್ಳುತ್ತಿದ್ದ, ಆದರೆ ಈ ತೀರ್ಮಾನವೂ ಪ್ರಾಯಶಃ ಕೆಲವು ಮನಃಸ್ಥಿತಿಗಳಲ್ಲಿ ಮಾತ್ರ ಎನಿಸುತ್ತದೆ. ಜಗತ್ತು ಅವನನ್ನು ಸರಳಗೊಳಿಸಲು ಹಾಗೂ ತನ್ನ ವೈಶ್ವಿಕ ಹತಾಶೆಯ ಸೋಗು ಹಾಗೂ ಮನುಸಂಕುಲದ ಬಗೆಗಿನ ತೋರಿಕೆಯ ತಿರಸ್ಕಾರವನ್ನು ತೊರೆಯುವಂತೆ ಒತ್ತಾಯಿಸಿತು. ಇನ್ನೂ ಅನೇಕ ಗಣ್ಯ ವ್ಯಕ್ತಿಗಳಂತೆಯೇ ಅವನೂ ವಾಸ್ತವದಲ್ಲಿ ಇದ್ದುದಕ್ಕಿಂತ ಹೆಚ್ಚಿನ ಪೌರಾಣಿಕವ್ಯಕ್ತಿಯಾಗಿ ಮುಖ್ಯನಾಗುತ್ತಾನೆ. ಯೂರೋಪ್ ಖಂಡದಲ್ಲಿ ಪೌರಾಣಿಕ ವ್ಯಕ್ತಿಯಾಗಿ ಅವನ ಪ್ರಾಮುಖ್ಯವು ಅಪಾರವಾದುದು.

೦

೨೪
ಶೋಪೆನ್‌ಹಾವರ್

ಶೋಪೆನ್‌ಹಾವರ್ (೧೭೮೮–೧೮೬೦) ತತ್ವಜ್ಞಾನಿಗಳಲ್ಲಿಯೇ ಅನೇಕ ರೀತಿಗಳಲ್ಲಿ ವಿಶಿಷ್ಟನಾದವನು. ಅವನೊಬ್ಬ ನಿರಾಶಾವಾದಿ, ಆದರೆ ಮಿಕ್ಕವರೆಲ್ಲ ಒಂದರ್ಥದಲ್ಲಿ ಆಶಾವಾದಿಗಳಾಗಿದ್ದವರು. ಕ್ಯಾಂಟ್ ಮತ್ತು ಹೆಗೆಲ್‌ರಂತೆ ಅವನು ಸಂಪೂರ್ಣವಾಗಿ ಅಕೆಡೆಮಿಕ್ ಅಲ್ಲ, ಆದರೂ ಅಕೆಡೆಮಿಕ್ ಪರಂಪರೆಯಿಂದ ಸಂಪೂರ್ಣ ದೂರವಾಗಿದ್ದವನಲ್ಲ. ಅವನು ಕ್ರೈಸ್ತವನ್ನು ಇಷ್ಟಪಡಲಿಲ್ಲ, ಇಂಡಿಯದ ಮತಧರ್ಮವನ್ನು ಮೆಚ್ಚಿಕೊಂಡವನು, ಹಿಂದೂ ಮತ್ತು ಬೌದ್ಧ ಎರಡನ್ನೂ. ಅವನದು ಸಂಸ್ಕೃತಿವೈಶಾಲ್ಯ, ಎಲ್ಲ ಬಗೆಯ ನೈತಿಕತೆ ಮತ್ತು ಕಲೆಗಳಲ್ಲಿ ಆಸಕ್ತನಾಗಿದ್ದವನು. ಅಪರೂಪವೆಂಬಂತೆ ಅವನು ರಾಷ್ಟ್ರೀಯತೆಯ ಮನೋಭಾವದಿಂದ ದೂರನಾಗಿದ್ದವನು, ಇಂಗ್ಲಿಷ್ ಮತ್ತು ಫ್ರೆಂಚ್‌ಗಳ ಮೇಲೆ ತನ್ನ ದೇಶದ ಭಾಷೆಗಳ ಮೇಲಿನಂತೆಯೇ ಪ್ರಭುತ್ವ ಹೊಂದಿದ್ದವನು. ಅವನು ತಲುಪಲು ಬಯಸಿದ್ದು ವೃತ್ತಿಪರ ತತ್ವಜ್ಞಾನಿಗಳಿಗಿಂತ ಹೆಚ್ಚಾಗಿ ತಾವು ನಂಬಬಹುದಾದ ತಾತ್ವಿಕತೆಯ ಅನ್ವೇಷಕರಾಗಿದ್ದ ಕಲೆಗಾರರು ಮತ್ತು ಸಾಹಿತಿಗಳಂಥ ಜನರನ್ನು. ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನಗಳ ತಾತ್ವಿಕತೆಯ ಲಕ್ಷಣವಾಗಿದ್ದ ಇಚ್ಛಾಶಕ್ತಿಯ ಮೇಲೆ ಅವನು ಒತ್ತು ನೀಡುತ್ತಿದ್ದ; ಆದರೆ ಅವನ ಮಟ್ಟಿಗೆ ಇಚ್ಛಾಶಕ್ತಿಯು, ತತ್ವಜಿಜ್ಞಾಸಾತ್ಮಕವಾಗಿ ಮುಖ್ಯವಾದರೂ, ನೈತಿಕವಾಗಿ ಕೆಡುಕೆಂದು ಭಾವಿಸಿದ್ದ – ಇದು ಸಾಧ್ಯವಾಗುವುದು ನಿರಾಶಾವಾದಿಗೆ ಮಾತ್ರ. ತನ್ನ ತಾತ್ವಿಕತೆಯ ಮೂರು ಮೂಲಗಳನ್ನು ಅವನು ಒಪ್ಪಿಕೊಳ್ಳುತ್ತಾನೆ: ಕ್ಯಾಂಟ್, ಪ್ಲೇಟೋ ಮತ್ತು ಉಪನಿಷತ್ತುಗಳು; ಆದರೆ ಅವನು ಭಾವಿಸಿದ್ದಷ್ಟು ಮಟ್ಟಿಗೆ ಪ್ಲೇಟೋಗೆ ಋಣಿಯಾಗಿಲ್ಲ ಎಂಬುದು ನನ್ನ ಎಣಿಕೆ. ಅವನ ಮನೋಧರ್ಮವು ಹೆಲೆನಿಸ್ಟಿಕ್ ಯುಗದ ಮನೋಭಾವವನ್ನು ಸ್ವಲ್ಪ ಮಟ್ಟಿಗೆ ಹೋಲುವಂಥದು; ಅದು ದಣಿದಿರುವಂಥದು ಮತ್ತು ರೋಗಿಷ್ಠವೆನಿಸುವಂಥದು, ಗೆಲವಿಗಿಂತ ಶಾಂತಿಯನ್ನು ಬಯಸುವಂಥದು,

ಅನಿವಾರ್ಯವಾಗಿ ವ್ಯರ್ಥವೆಂದು ಅವನು ಭಾವಿಸಿದ್ದ ಸುಧಾರಣೆಗಿಂತ ಸುಮ್ಮನಿರುವುದನ್ನು ಇಚ್ಛಿಸುವಂಥದು.

ಅವನ ತಾಯ್ತಂದೆಯರಿಬ್ಬರೂ ಡ್ಯಾನ್‌ಜ಼ಿಗ್‌ನ ಪ್ರಮುಖ ವ್ಯಾಪಾರಿ ಕುಟುಂಬಕ್ಕೆ ಸೇರಿದವರು, ಅವನು ಅಲ್ಲಿಯೇ ಹುಟ್ಟಿದ. ಅವನ ತಂದೆ ವಾಲ್ಟೇರ್‌ನ ಅಭಿಮಾನಿ, ಇಂಗ್ಲಂಡ್ ಸ್ವಾತಂತ್ರ್ಯ ಮತ್ತು ಬುದ್ಧಿವಂತಿಕೆಗಳ ತವರು ಎಂದು ಭಾವಿಸಿದ್ದವನು. ಡ್ಯಾನ್‌ಜ಼ಿಗ್‌ನ ಪ್ರಮುಖ ಪ್ರಜೆಗಳಂತೆಯೇ, ಸ್ವತಂತ್ರ ನಗರವನ್ನು ಪ್ರಷ್ಯಾ ಆಕ್ರಮಿಸಿಕೊಂಡುದನ್ನು ಅವನು ದ್ವೇಷಿಸುತ್ತಿದ್ದ, ಮತ್ತು ೧೭೯೩ ರಲ್ಲಿ ಅದನ್ನು ಪ್ರಷ್ಯಾದಲ್ಲಿ ವಿಲೀನಗೊಳಿಸಿದಾಗ ಕ್ರುದ್ಧನಾಗಿದ್ದ, ಎಷ್ಟರ ಮಟ್ಟಿಗೆ ಎಂದರೆ ಅವನು ಹ್ಯಾಂಬರ್ಗ್‌ಗೆ ಹೋದ, ಇದರಿಂದ ಸಾಕಷ್ಟು ಆರ್ಥಿಕ ನಷ್ಟ ಅನುಭವಿಸಬೇಕಾಯಿತು. ಶೋಪೆನ್‌ಹಾವರ್ ಅಲ್ಲಿ ತನ್ನ ಕುಟುಂಬದ ಜೊತೆಯಲ್ಲಿ ೧೭೯೩ ರಿಂದ ೧೭೯೭ ರವರೆಗೂ ಇದ್ದ; ಆಮೇಲೆ ಎರಡು ವರ್ಷಗಳ ಕಾಲ ಪ್ಯಾರಿಸ್‌ನಲ್ಲಿ ಕಳೆದ, ಆ ಅವಧಿಯ ಕೊನೆಯಲ್ಲಿ, ಮಗ ಜರ್ಮನಿಯನ್ನು ಹೆಚ್ಚು ಕಡಿಮೆ ಮರೆತುಬಿಟ್ಟನೆಂದು ಸಂತಸಗೊಂಡ. ೧೮೦೩ ರಲ್ಲಿ ಅವನನ್ನು ಇಂಗ್ಲಂಡ್‌ನಲ್ಲಿ ವಸತಿಶಾಲೆಯೊಂದಕ್ಕೆ ಸೇರಿಸಲಾಯಿತು., ಆದರೆ ಅಲ್ಲಿನ ಡಾಂಭಿಕತೆ ಮತ್ತು ಬೂಟಾಟಿಕೆಗಳು ಅವನಿಗೆ ಸರಿಹೋಗಲಿಲ್ಲ. ಎರಡು ವರ್ಷಗಳ ಬಳಿಕ, ತನ್ನ ತಂದೆಯ ಸಂತೋಷಕ್ಕಾಗಿ, ಹ್ಯಾಂಬರ್ಗ್‌ನ ಒಂದು ವ್ಯಾಪಾರಿ ಸಂಸ್ಥೆಯಲ್ಲಿ ಅವನು ಗುಮಾಸ್ತನಾದ, ಆದರೆ ಅವನಿಗೆ ವ್ಯಾಪಾರದಲ್ಲಿ ಆಸಕ್ತಿಯಿರಲಿಲ್ಲ, ತಾನು ಸಾಹಿತ್ಯಕ ಹಾಗೂ ಆಕೆಡೆಮಿಕ್ ವ್ಯಕ್ತಿಯಾಗಬೇಕೆಂಬುದು ಅವನ ಆಸೆಯಾಗಿತ್ತು. ಅವನ ತಂದೆ, ಪ್ರಾಯಶಃ ಆತ್ಮಹತ್ಯೆಯಿಂದ, ಸತ್ತ ಬಳಿಕ ಇದು ನೆರವೇರಿತು; ಅವನ ತಾಯಿಯೂ ಅವನು ವ್ಯಾಪಾರವನ್ನು ಬಿಟ್ಟು ಶಾಲೆ ಮತ್ತು ವಿಶ್ವವಿದ್ಯಾನಿಲಯಗಳನ್ನು ಸೇರಿ ಓದಬೇಕೆಂದು ಬಯಸಿದಳು. ಇದರ ಪರಿಣಾಮವಾಗಿ, ಅವನಿಗೆ ತಂದೆಗಿಂತ ತಾಯಿಯ ಬಗ್ಗೆ ಒಲವು ಹೆಚ್ಚಾಗಬೇಕಾಗಿತ್ತು; ಆದರೆ ಆದುದು ಮಾತ್ರ ತದ್ವಿರುದ್ಧವಾದುದು, ತಾಯಿಯ ಬಗ್ಗೆ ಒಲವು ಹೋಗಿ ತಂದೆಯ ಮಧುರ ನೆನಪು ಅವನಲ್ಲಿ ಉಳಿಯಿತು.

ಶೋಪೆನ್‌ಹಾವರ್‌ನ ತಾಯಿಯು ಸಾಹಿತ್ಯಕ ಆಕಾಂಕ್ಷೆಗಳಿದ್ದ ಮಹಿಳೆಯಾಗಿದ್ದಳು, ಜೇನಾ ಯುದ್ಧಕ್ಕಿಂತ ಎರಡು ವಾರಗಳ ಮುಂಚೆ ಅವಳು ವೀಮರ್‌ನಲ್ಲಿ ನೆಲೆಸಿದಳು. ಅಲ್ಲಿ ಅವಳೊಂದು ಸಾಹಿತ್ಯಕ ಅಂಗಡಿ ತೆರೆದಳು, ಪುಸ್ತಕಗಳನ್ನು ರಚಿಸಿದಳು, ಸಂಸ್ಕೃತಿವಂತರ ಸಖ್ಯವನ್ನು ಬೆಳೆಸಿಕೊಂಡಳು. ಅವಳಿಗೂ ತನ್ನ ಮಗನ ಬಗ್ಗೆ ಇದ್ದ ವಾತ್ಸಲ್ಯ ಅಷ್ಟಕ್ಕಷ್ಟೆ, ಅವನ ತಪ್ಪುಗಳ ಮೇಲೇಯೇ ಅವಳ ಕಣ್ಣು. ಶಬ್ದಾಡಂಬರ ಮತ್ತು ವ್ಯರ್ಥ ಕರುಣರಸಗಳ ವಿರುದ್ಧ ಅವನನ್ನು ಎಚ್ಚರಿಸಿದಳು; ಅವಳ ಪ್ರಣಯಗಳಿಂದ ಅವನು ಇರಿಸುಮುರಿಸುಗೊಂಡ. ಅವನು ಪ್ರಾಪ್ತವಯಸ್ಕನಾದಾಗ ಅವನಿಗೆ ತಕ್ಕಮಟ್ಟಿಗಿನ ಆಸ್ತಿ ಬಂತು; ಇದಾದ ಬಳಿಕ

ಅವನೂ ತಾಯಿಯೂ ಬರಬರುತ್ತ ಒಬ್ಬರೊಬ್ಬರ ಬಗ್ಗೆ ತಾಳ್ಮೆ ಕಳೆದುಕೊಳ್ಳತೊಡಗಿದರು. ಹೆಂಗಸರ ಬಗೆಗಿನ ಅವನ ಅಗೌರವಕ್ಕೆ ತನ್ನ ತಾಯಿಯ ಜೊತೆಗಿನ ಜಗಳಗಳೆ, ಕನಿಷ್ಠ ಪಕ್ಷ ಭಾಗಶಃ, ಕಾರಣ ಎಂಬುದರಲ್ಲಿ ಸಂಶಯವಿಲ್ಲ.

ಹ್ಯಾಂಬರ್ಗ್‌ನಲ್ಲಿ ಈಗಾಗಲೇ ರೊಮ್ಯಾಂಟಿಕ್‌ರ ಅದರಲ್ಲೂ, ಟಿಯೆಕ್, ನೊಬಾಲ್ಸ್ ಮತ್ತು ಹಾಫ್‌ಮನ್‌ರ, ಪ್ರಭಾವಕ್ಕೆ ಅವನು ಒಳಗಾಗಿದ್ದ, ಅವರಿಂದಾಗಿ ಗ್ರೀಕ್ ಅನ್ನು ಮೆಚ್ಚುವುದನ್ನು ಮತ್ತು ಕ್ರೈಸ್ತದಲ್ಲಿನ ಹೀಬ್ರೂ ಅಂಶಗಳ ಬಗ್ಗೆ ಅನಿಚ್ಛೆಯನ್ನು ಕಲಿತ. ಮತ್ತೊಬ್ಬ ರೊಮ್ಯಾಂಟಿಕ್ ಆದ ಫ್ರೆಡೆರಿಕ್ ಷ್ಲೆಗೆಲ್ ಅವನ ಇಂಡಿಯನ್ ತತ್ವಜ್ಞಾನದ ಬಗೆಗಿನ ಒಲವನ್ನು ಸ್ಥಿರಗೊಳಿಸಿದ. ಅವನಿಗೆ ಪ್ರಾಪ್ತವಯಸ್ಸು ಬಂದಾಗ (೧೮೦೯), ಅವನು ಗಾಟಿಂಗ್‌ಜೆನ್ ವಿಶ್ವವಿದ್ಯಾನಿಲಯಕ್ಕೆ ಸೇರಿ, ಕ್ಯಾಂಟ್ ಅನ್ನು ಮೆಚ್ಚಿಕೊಂಡ. ಎರಡು ವರ್ಷಗಳ ಬಳಿಕ ಬರ್ಲಿನ್‌ಗೆ ಹೋದ, ಅಲ್ಲಿ ಅವನು ಕಲಿತದ್ದು ಮುಖ್ಯವಾಗಿ ವಿಜ್ಞಾನವನ್ನು; ಫ್ಲಿಷ್ತೆಯ ಉಪನ್ಯಾಸಗಳನ್ನು ಕೇಳಿದರೂ ಅವನನ್ನು ತಿರಸ್ಕರಿಸಿದ. ಸ್ವಾತಂತ್ರ್ಯ ಹೋರಾಟದುದ್ದಕ್ಕೂ ಅದರ ಉದ್ವಿಗ್ನತೆಯ ಬಗ್ಗೆ ಅವನು ಅನಾದರದಿಂದಲೇ ಇದ್ದ. ೧೮೮೯ ರಲ್ಲಿ ಅವನು ಬರ್ಲಿನ್‌ನಲ್ಲಿ ಪ್ರೈವಾಟ್‌ಜೋಃನೆಂಟ್ ಹುದ್ದೆಯನ್ನು ಪಡೆದ, ಮತ್ತು ತನ್ನ ಉಪನ್ಯಾಸಗಳನ್ನು ಹೆಗೆಲ್ ಹೊಂದಿದ್ದ ಕಾಲದಲ್ಲಿಯೇ ಹಾಕಿಕೊಳ್ಳುವ ಜಂಬ ತೋರಿಸಿಕೊಂಡ. ಹೆಗೆಲ್ ಕೇಳುಗರನ್ನು ತನ್ನತ್ತ ಸೆಳೆಯುವಲ್ಲಿ ವಿಫಲನಾಗಿ, ಅವನು ಬಹು ಬೇಗ ಉಪನ್ಯಾಸಗಳನ್ನು ನೀಡುವುದನ್ನೇ ನಿಲ್ಲಿಸಿದ. ಕೊನೆಯಲ್ಲಿ ಅವನು ಫ್ರಾಂಕ್‌ಫರ್ಟ್‌ನಲ್ಲಿ ಅವಿವಾಹಿತನಾಗಿಯೇ ನೆಲೆಗೊಂಡ. 'ಆತ್ಮ' ಎಂಬ ಹೆಸರಿನ ಒಂದು ನಾಯಿಮರಿಯನ್ನು ಸಾಕಿಕೊಂಡ, ಪ್ರತಿದಿನ ಎರಡು ಮೈಲಿ ನಡೆದುಕೊಂಡು ಹೋಗುತ್ತಿದ್ದ, ನೀಳ ಪೈಪ್ ಸೇದುತ್ತಿದ್ದ, ಲಂಡನ್‌ನ 'ಟೈಮ್ಸ್' ಓದುತ್ತಿದ್ದ, ತನ್ನ ಕೀರ್ತಿಯ ವ್ಯಾಪಕತೆಯನ್ನು ತಿಳಿಯಲು ಪ್ರತಿನಿಧಿಗಳನ್ನು ನೇಮಿಸಿಕೊಂಡ. ಅವನು ಪ್ರಜಾಪ್ರಭುತ್ವವಿರೋಧಿ, ೧೮೪೮ ರ ಕ್ರಾಂತಿಯನ್ನು ದ್ವೇಷಿಸುತ್ತಿದ್ದ, ಅವನಿಗೆ ಆಧ್ಯಾತ್ಮ ಮತ್ತು ಯಕ್ಷಿಣಿಗಳಲ್ಲಿ ನಂಬಿಕೆ; ತನ್ನ ಅಧ್ಯಯನ ಕೋಣೆಯಲ್ಲಿ ಅವನು ಕ್ಯಾಂಟ್‌ನ ಎದೆಮಟ್ಟದ ಪ್ರತಿಮೆ ಹಾಗೂ ಬುದ್ಧನ ಕಂಚಿನ ವಿಗ್ರಹವೊಂದನ್ನು ಇರಿಸಿಕೊಂಡಿದ್ದ. ಅವನ ಜೀವನವಿಧಾನದಲ್ಲಿ, ಬೆಳಿಗ್ಗೆ ಬೇಗ ಏಳುವುದನ್ನು ಹೊರತುಪಡಿಸಿ, ಅವನು ಕ್ಯಾಂಟ್‌ನನ್ನು ಅನುಕರಿಸಲು ಪ್ರಯತ್ನಿಸಿದ.

ಅವನ ಪ್ರಮುಖ ಕೃತಿ 'ದ ವರ್ಲ್ಡ್ ಆಸ್ ವಿಲ್ ಅಂಡ್ ಐಡಿಯ' ೧೮೧೮ ರ ಕೊನೆಯ ಹೊತ್ತಿಗೆ ಪ್ರಕಟವಾಯಿತು. ಅದು ಬಹಳ ಮುಖ್ಯವಾದುದೆಂದಬ ನಂಬಿಕೆ ಅವನಿಗಿತ್ತು, ಅದರ ಕೆಲವು ಭಾಗಗಳನ್ನು ದಿವ್ಯಾತ್ಮವೇ ತನಗೆ ಉಕ್ತಲೇಖನ ರೂಪದಲ್ಲಿ ಹೇಳಿ ಬರೆಸಿತು ಎಂದು ಹೇಳಿಕೊಳ್ಳುತ್ತಿದ್ದ. ಆದರೆ ದುರದೃಷ್ಟವಶಾತ್ ಪುಸ್ತಕಕ್ಕೆ ಯಾವ ಮಾನ್ಯತೆಯೂ ದೊರೆಯಲಿಲ್ಲ. ೧೮೪೪ ರಲ್ಲಿ ಅದರ ಎರಡನೆಯ

ಮುದ್ರಣವನ್ನು ಹೊರತರಲು ಪ್ರಕಾಶಕನನ್ನು ಪುಸಲಾಯಿಸಿದ; ಆದರೆ ಕೆಲವು ವರ್ಷಗಳ ನಂತರದವರೆಗೂ ಅದು ಆಗಲಿಲ್ಲ. ಆಮೇಲೆ ಅವನಿಗೆ ಅವನು ಬಯಸಿದ್ದ ಮಾನ್ಯತೆ ದೊರೆಯಲಾರಂಭವಾಯಿತು.

ಶೋಪೆನ್‌ಹಾವರ್‌ನ ವಿಧಾನವು ಕ್ಯಾಂಟ್‌ನದರ ಅಳವಡಿಕೆ, ಆದರೆ ಫಿಷ್ತೆ ಅಥವಾ ಹೆಗೆಲ್ ಅವರು ಮುಖ್ಯವೆಂದು ಭಾವಿಸಿದ್ದ 'ಕ್ರಿಟೀಕ್'ನ ಕೆಲವು ಅಂಶಗಳನ್ನು ಬಿಟ್ಟು ಬೇರೆಯದರ ಮೇಲೆ ಇವನು ಒತ್ತು ನೀಡಿದ್ದ. ಅವರು 'ತಾವೇ ವಸ್ತುಗಳಾಗಿ' ಅದನ್ನು ಕೈಬಿಟ್ಟು ಜ್ಞಾನ ಎಂಬುದು ತತ್ವಜಿಜ್ಞಾಸಾತ್ಮಕವಾಗಿ ಮೂಲಭೂತವಾದುದನ್ನಾಗಿಸಿದ್ದರು. ಆದರೆ ಶೋಪೆನ್‌ಹಾವರ್ 'ತಾವೇ ವಸ್ತುಗಳಾಗಿ' ಅನ್ನು ಉಳಿಸಿಕೊಂಡ, ಆದರೆ ಅದನ್ನು ಇಚ್ಛಾಶಕ್ತಿಯೊಡನೆ ಅನನ್ಯವಾಗಿಸಿದ. ನನ್ನ ದೇಹವೆಂದು ಇಂದ್ರಿಯಗ್ರಾಹ್ಯವಾಗುವುದು ನನ್ನ ಇಚ್ಛಾಶಕ್ತಿಯೇ ಎಂಬುದು ಅವನ ನಿಲವು. ಕ್ಯಾಂಟ್‌ಪಂಥಿಯರು ಗುರುತಿಸುವುದಕ್ಕಿಂತಲೂ ಹೆಚ್ಚಾಗಿ ಇದು ಕ್ಯಾಂಟ್‌ನ ಬೆಳವಣಿಗೆ ಎನ್ನಲು ಈ ದೃಷ್ಟಿಕೋನದ ಬಗ್ಗೆ ಹೆಚ್ಚು ಹೇಳಬೇಕಾಗಿತ್ತು. ನೈತಿಕ ನಿಯಮಗಳ ಅಧ್ಯಯನವು ನಮ್ಮನ್ನು ವಿದ್ಯಮಾನಗಳ ಹಿಂದಕ್ಕೆ ಒಯ್ದು, ಇಂದ್ರಿಯಗ್ರಹಿಕೆಯು ನೀಡಲು ಸಾಧ್ಯವಾಗದ ಜ್ಞಾನವನ್ನು ನಮಗೆ ನೀಡುತ್ತದೆ ಎಂದು ಕ್ಯಾಂಟ್ ಹೇಳಿದ್ದ; ಜೊತೆಗೆ, ನೈತಿಕ ನಿಯಮವು ಸಾರತಃ ಇಚ್ಛಾಶಕ್ತಿಗೆ ಸಂಬಂಧಿಸಿದ್ದು ಎಂದೂ ಹೇಳಿದ. ಕ್ಯಾಂಟ್ ದೃಷ್ಟಿಯಲ್ಲಿ, ಒಳ್ಳೆಯ ವ್ಯಕ್ತಿ ಮತ್ತು ಕೆಟ್ಟ ವ್ಯಕ್ತಿಯ ನಡುವಣ ವ್ಯತ್ಯಾಸವು ಜಗತ್ತಿನಲ್ಲಿನ ವಸ್ತುಗಳಲ್ಲಿನ ವ್ಯತ್ಯಾಸ, ಮತ್ತು ಇಚ್ಛಾಶಕ್ತಿಗಳ ವ್ಯತ್ಯಾಸವೂ ಹೌದು ಎಂದು ಹೇಳಿದ್ದ ಕ್ಯಾಂಟ್‌ನಲ್ಲಿ ಅದು ಮುಂದುವರಿದು, ಇಚ್ಛಾಶಕ್ತಿಗಳು ವಾಸ್ತವ ಜಗತ್ತಿಗೆ ಸೇರಿದವೇ ಹೊರತು ವಿದ್ಯಮಾನಗಳಿಗೆ ಸೇರಿದವಲ್ಲ ಎಂದೂ ಹೇಳಿದ್ದ. ಇಚ್ಛಾಶಕ್ತಿಗೆ ಸಂವಾದಿಯಾದ ವಿದ್ಯಮಾನವೊಂದು ದೇಹಚಲನೆ; ಅದರಿಂದಾಗಿಯೇ, ಶೋಪೆನ್‌ಹಾವರ್ ಪ್ರಕಾರ, ದೇಹವು ತೋರಿಕೆಯದು, ವಾಸ್ತವವಾದುದು ಇಚ್ಛಾಶಕ್ತಿಯೇ.

ವಿದ್ಯಮಾನಗಳ ಹಿಂದಿರುವ ಇಚ್ಛಾಶಕ್ತಿಯು ಅನೇಕ ಇಚ್ಛೆಗಳನ್ನು ಹೊಂದಿರಲಾರದು. ಕ್ಯಾಂಟ್‌ನ ಪ್ರಕಾರ, ಕಾಲ ಮತ್ತು ಅವಕಾಶಗಳೆರಡೂ – ಈ ವಿಷಯದಲ್ಲಿ ಶೋಪೆನ್‌ಹಾವರ್ ಕ್ಯಾಂಟ್ ಜೊತೆ ಸಹಮತ ವ್ಯಕ್ತಪಡಿಸುತ್ತಾನೆ – ವಿದ್ಯಮಾನಗಳಿಗೆ ಮಾತ್ರವೇ ಸಂಬಂಧಿಸಿರುವಂಥವು. ಹೀಗಾಗಿ ನನ್ನ ಇಚ್ಛಾಶಕ್ತಿಯು, ಅದು ವಾಸ್ತವವಾಗಿರುವ ಅರ್ಥದಲ್ಲಿ, ತೇದಿಯನ್ನು ಹೊಂದಿರಲಾರದು, ಅಥವಾ ಅದು ಇಚ್ಛೆಯ ಬೇರೆ ಬೇರೆ ಕ್ರಿಯೆಗಳಿಂದ ಕೂಡಿ ಆಗಲಾರದು – ಯಾಕೆಂದರೆ ಬಹುತ್ವದ – ಶೋಪೆನ್‌ಹಾವರ್ ಇಷ್ಟಪಡುವ ಪ್ರೌಢ ಪರಿಭಾಷೆಯನ್ನು ಬಳಸುವುದಾದರೆ, ವ್ಯಕ್ತೀಕರಣ ತತ್ವ (ಪ್ರಿನ್ಸಿಪಲ್ ಆಫ್ ಇನ್‌ಡಿವಿಜುವೇಷನ್) – ಮೂಲ ಎಂದರೆ ಕಾಲ ಮತ್ತು ಅವಕಾಶಗಳು. ಹೀಗಾಗಿ ನನ್ನ ಇಚ್ಛಾಶಕ್ತಿಯು

ಒಂದೇ ಮತ್ತು ಅದು ಕಾಲಾತೀತವಾದುದು. ಉಹ್ಞೂ, ಅದಕ್ಕಿಂತ ಮಿಗಿಲಾದುದು, ಅದನ್ನು ಇಡೀ ವಿಶ್ವದ ಇಚ್ಛಾಶಕ್ತಿಯೊಡನೆ ಸಮೀಕರಿಸಬಹುದು. ನನ್ನ ಪ್ರತ್ಯೇಕತೆ ಎಂಬುದು ಒಂದು ಭ್ರಮೆ, ನನ್ನ ಕಾಲ-ಅವಕಾಶಬದ್ಧ ಗ್ರಹಿಕೆಯ ಫಲವಾದ ವೈಯಕ್ತಿಕ ಸಲಕರಣೆಯ ಫಲ. ವಾಸ್ತವವಾದುದೆಂಬುದು ಒಂದು ವಿಶಾಲ ಇಚ್ಛಾಶಕ್ತಿ, ಸಜೀವ ಮತ್ತು ನಿರ್ಜೀವಗಳನ್ನೊಳಗೊಂಡ ಪ್ರಕೃತಿಯ ಇಡೀ ಆಗುಹೋಗುಗಳಲ್ಲಿ ವ್ಯಕ್ತವಾಗುವಂಥದು.

ಇಲ್ಲಿಯವರೆಗೆ, ಶೊಪೆನ್‌ಹಾವರ್ ವೈಶ್ವಿಕ ಇಚ್ಛಾಶಕ್ತಿಯನ್ನು ದೇವರೊಡನೆ ಸಮೀಕರಿಸಬಹುದು, ಸ್ಪಿನೋಜ಼ನ ಸರ್ವದೇವತಾವಾದ ಸಿದ್ಧಾಂತವನ್ನು – ಸದ್ಗುಣವೆಂದರೆ ದೈವಿಕ ಇಚ್ಛಾಶಕ್ತಿಗೆ ಅನುಗುಣವಾಗಿರುವುದು ಎಂಬುದೂ ಅದರಲ್ಲಿ ಸೇರುತ್ತದೆ – ಬೋಧಿಸುವುದೆಂದು ನಿರೀಕ್ಷಿಸಬಹುದು. ವೈಶ್ವಿಕ ಇಚ್ಛಾಕ್ತಿಯು ಕೆಡುಕಾದುದು; ಇಚ್ಛಾಶಕ್ತಿಯು ಪೂರ್ತಿ ಕೆಡುಕಾದುದು, ಅಥವಾ ಕನಿಷ್ಠ ಪಕ್ಷ, ನಮ್ಮ ಕೊನೆಯಿಲ್ಲದ ಯಾತನೆಗಳ ಮೂಲವಾದುದು. ಎಲ್ಲ ಜೀವಕ್ಕೂ ಯಾತನೆಯು ಆವಶ್ಯಕ, ಜ್ಞಾನ ಹೆಚ್ಚಿದಂತೆ ಅದೂ ಹೆಚ್ಚುತ್ತದೆ. ಇಚ್ಛಾಶಕ್ತಿಗೆ ನಿಶ್ಚಿತ ಗುರಿಯಿಲ್ಲ, ಅದನ್ನು ಸಾಧಿಸಿದರೆ ತೃಪ್ತಿ ದೊರಕುತ್ತದೆ. ಕೊನೆಯಲ್ಲಿ ಸಾವು ಗೆಲ್ಲತ್ತದೆಯಾದರೂ, ನಾವು ನಮ್ಮ ಉದ್ದೇಶಗಳೆಡೆ ವ್ಯರ್ಥವಾಗಿ ಸಾಗುತ್ತೇವೆ – 'ನಾವು ಸೋಪಿನ ಗುಳ್ಳೆಯನ್ನು ಸಾಧ್ಯವಾದಷ್ಟೂ, ಅದು ಕೊನೆಗೆ ಒಡೆಯುತ್ತದೆಂದು ಗೊತ್ತಿದ್ದರೂ, ದೊಡ್ಡದಾಗಿ ಊದುವಂತೆ'. ಸುಖ ಎಂಬ ಯಾವುದೂ ಇಲ್ಲ, ಯಾಕೆಂದರೆ ಪೂರ್ಣಗೊಳ್ಳದ ಆಸೆಯು ನೋವಿಗೆ ಕಾರಣವಾಗುತ್ತದೆ, ಮತ್ತು ಅದರ ಪೂರ್ಣಗೊಳ್ಳುವಿಕೆಯು ಕಟ್ಟರೆಯನ್ನುಂಟುಮಾಡುತ್ತದೆ. ಪ್ರವೃತ್ತಿಯು ಮನುಷ್ಯನನ್ನು ಸಂತಾನೋತ್ಪತ್ತಿಗೆ ಪ್ರೇರಿಸುತ್ತದೆ, ಅದರಿಂದ ಹೊಸ ಯಾತನೆ ಮತ್ತು ಸಾವುಗಳಿಗೆ ಅವಕಾಶ ಒದಗುತ್ತದೆ; ಇದರಿಂದಾಗಿಯೇ ಲೈಂಗಿಕ ಕ್ರಿಯೆಯೊಡನೆ ನಾಚಿಕೆ ಸೇರಿರುವುದು. ಆತ್ಮಹತ್ಯೆ ನಿರುಪಯುಕ್ತವಾದುದು; ಜನ್ಮಾಂತರದ ಸಿದ್ಧಾಂತವು ಅಕ್ಷರಶಃ ನಿಜವಲ್ಲವಾದರೂ, ನಿಗೂಢ ಬಗೆಯಲ್ಲಿ ಸತ್ಯವನ್ನು ಅಭಿವ್ಯಕ್ತಿಸುತ್ತದೆ.

ಇವೆಲ್ಲವೂ ದುಃಖಕರವಾದುದು, ಆದರೆ ಇದರಿಂದ ಹೊರಬರಲು ಒಂದು ದಾರಿಯಿದೆ, ಅದನ್ನು ಇಂಡಿಯದಲ್ಲಿ ಕಂಡುಕೊಂಡಿದ್ದರು.

ಪರಮ ಪೌರಾಣಿಕತೆ ಎಂದರೆ ನಿರ್ವಾಣ (ಶೋಪೆನ್‌ಹಾವರ್ ಇದನ್ನು 'ಆರಿಹೋಗುವುದು' ಎಂದು ಅನುವಾದಿಸುತ್ತಾನೆ). ಇದು ಕ್ರೈಸ್ತ ಸಿದ್ಧಾಂತಕ್ಕೆ ವಿರುದ್ಧವಾದುದೆಂದು ಅವನು ಒಪ್ಪಿಕೊಳ್ಳುತ್ತಾನೆ, ಆದರೆ 'ಮಾನವ ಸಂಕುಲದ ಪ್ರಾಚೀನ ವಿವೇಕವು ಗೆಲಿಲಿಯಲ್ಲಿ ಏನಾಯಿತೆಂಬುದು ಬದಲಾಯಿಸಲಾರದು'. ಯಾತನೆಯ ಕಾರಣವೆಂದರೆ ಇಚ್ಛೆಯ ತೀವ್ರತೆ, ಕಡಿಮೆ ಇಚ್ಛೆಯನ್ನು ಹೊಂದಿದ್ದರೆ ನರಳುವಿಕೆಯೂ ಕಡಿಮೆಯಾಗುತ್ತದೆ. ಇಲ್ಲಿ ಜ್ಞಾನವು ಒಂದು ನಿರ್ದಿಷ್ಟ

ಬಗೆಯದಾಗಿದ್ದರೆ ಅದು ಉಪಯುಕ್ತವಾಗಿ ಪರಿಣಮಿಸುತ್ತದೆ. ಒಬ್ಬ ವ್ಯಕ್ತಿಗೂ ಮತ್ತೊಬ್ಬನಿಗೂ ಇರುವ ವ್ಯತ್ಯಾಸವು ಇಂದ್ರಿಯಗೋಚರ ಜಗತ್ತಿನ ಭಾಗವೇ ಆಗಿದೆ, ಅಲ್ಲದೆ ಜಗತ್ತನ್ನು ನಿಜವಾಗಿ ನೋಡಿದರೆ ಇದು ಇಲ್ಲವಾಗುತ್ತದೆ. ಒಳ್ಳೆಯ ವ್ಯಕ್ತಿಗೆ ಮಾಯೆಯ ತೆರೆಯು ಪಾರದರ್ಶಕವಾಗಿರುತ್ತದೆ; ಅವನಿಗೆ ಎಲ್ಲವೂ ಒಂದೇ ಎಂಬಂತೆ ಗೋಚರಿಸುತ್ತದೆ, ತನ್ನ ಮತ್ತು ಇನ್ನೊಬ್ಬನ ನಡುವಣ ವ್ಯತ್ಯಾಸವು ತೋರಿಕೆಯದು ಎಂಬುದು ವೇದ್ಯವಾಗುತ್ತದೆ. ಅವನು ಈ ಒಳನೋಟವನ್ನು ಪಡೆಯುವುದು ಪ್ರೇಮದಿಂದ, ಅದು ಸದಾ ಸಹಾನುಭೂತಿಪರವಾದುದು, ಇತರರ ನೋವಿಗೆ ಸ್ಪಂದಿಸುವಂಥದು. ಮಾಯೆಯು ಹರಿದರೆ ವ್ಯಕ್ತಿಯು ಇಡೀ ಜಗತ್ತಿನ ನೋವನ್ನು ತನ್ನದಾಗಿಸಿಕೊಳ್ಳುತ್ತಾನೆ. ಒಳ್ಳೆಯ ವ್ಯಕ್ತಿಯಲ್ಲಿಇಡಿಯ ಜ್ಞಾನವು ಇಚ್ಛೆಯನ್ನು ಸುಮ್ಮನಾಗಿಸುತ್ತದೆ; ಅವನ ಇಚ್ಛಾಶಕ್ತಿಯು ಜೀವನದಿಂದ ವಿಮುಖವಾಗುತ್ತದೆ ಮತ್ತು ತನ್ನ ಸ್ವಭಾವವನ್ನು ಅಲ್ಲಗಳೆಯುತ್ತದೆ. 'ತನ್ನ ಇಂದ್ರಿಯಗೋಚರ ಅಸ್ತಿತ್ವವು ಪ್ರಕೃತಿಯ ಭಯಾನಕತೆಯ ಅಭಿವ್ಯಕ್ತಿ ಎಂಬ, ಜಗತ್ತಿನ ತಿರುಳು ಮತ್ತು ಒಳ ಸ್ವಭಾವವು ಸಂಕಟಕರ ಎಂಬ ಅರಿವು ಅವನಲ್ಲಿ ಉದಿಸುತ್ತದೆ.'

ಹೀಗಾಗಿ ಶೋಪೆನ್‌ಹಾವರ್ ಅದನ್ನು ಸಂಪೂರ್ಣವಾಗಿ ಅನುಮೋದಿಸುತ್ತಾನೆ, ಕನಿಷ್ಠ ಪಕ್ಷ, ಅನುಷ್ಠಾನದಲ್ಲಿ, ವೈರಾಗ್ಯದಿಂದ ಕೂಡಿದ ಆನುಭಾವಿಕತೆಯಲ್ಲಿ. ಎಕ್ಹಾರ್ಟ್ ಮತ್ತು ಏಂಜೆಲಸ್ ಸೈಲೀಸಿಯಸ್‌ಗಳು ಹೊಸ ಒಡಂಬಡಿಕೆಗಿಂತ ಉತ್ತಮವಾದವು. ಸನಾತನ ಕ್ರೈಸ್ತದಲ್ಲಿ ಕೆಲವು ಒಳ್ಳೆಯ ಅಂಶಗಳಿವೆ, ವಿಶೇಷವಾಗಿ 'ಕ್ಷುಲ್ಲಕ ಪೆಲಾಜಿಯನಿಸಂ'ನ ಬದಲಿಗೆ ಸಂತ ಆಗಸ್ಟೈನ್ ಮತ್ತು ಲೂಥರ್‌ಗಳು ಬೋಧಿಸಿದ ಆದಿಮ ಪಾಪದ ಸಿದ್ಧಾಂತ. ಆದರೆ ಸುವಾರ್ತೆಗಳಲ್ಲಿ ತತ್ವಜಿಜ್ಞಾಸೆಯು ವಿಷಾದನೀಯವಾಗಿ ಕೊರೆಯಾಗಿದೆ. ಬೌದ್ಧವು ಅತ್ಯುನ್ನತ ಮತಧರ್ಮ; ಮತ್ತು ತನ್ನ ನೈತಿಕ ಸಿದ್ದಾಂತಗಳು, 'ಅಸಹ್ಯಕರ ಇಸ್ಲಾಂ' ಇರುವ ಕಡೆಗಳನ್ನು ಹೊರತುಪಡಿಸಿ, ಏಷ್ಯಾದಲ್ಲೆಲ್ಲ ಸಂಪ್ರದಾಯನಿಷ್ಠವಾದವು ಎಂದು ಅವನು ಹೇಳುತ್ತಾನೆ.

ಒಳ್ಳೆಯ ವ್ಯಕ್ತಿಯು ಬ್ರಹ್ಮಚರ್ಯವನ್ನು, ಸ್ವಯಂಪ್ರೇರಿತ ಬಡತನವನ್ನು, ಉಪವಾಸವನ್ನು, ಮತ್ತು ಆತ್ಮದಂಡನೆಯನ್ನು ಪಾಲಿಸುತ್ತಾನೆ. ಎಲ್ಲ ಅಂಶಗಳಲ್ಲಿಯೂ ತನ್ನ ವ್ಯಕ್ತಿಗತ ಇಚ್ಛೆಯನ್ನು ಅವನು ಹುಡಿಗುಟ್ಟುತ್ತಾನೆ. ಆದರೆ ದೇವರೊಡನೆ ಸಮರಸವಾಗಿ ಬೆರೆಯಲು, ಪಾಶ್ಚಿಮಾತ್ಯ ಅನುಭಾವಿಗಳಂತೆ, ಅವನೇ ಇದನ್ನು ಮಾಡುವುದಿಲ್ಲ; ಅಂತಹ ಧನಾತ್ಮಕ ಒಳಿತನ್ನು ಅರಸುವುದಿಲ್ಲ. ಅರಸುವ ಒಳಿತು ಎಂದರೆ ಇಡಿಯಾಗಿ ಮತ್ತು ಸಂಪೂರ್ಣವಾಗಿ ನೇತ್ಯಾತ್ಮಕವಾದುದು.

'ತಮ್ಮ ಅಂತಿಮ ಗುರಿಯಾದ ಎಲ್ಲ ಸದ್ಗುಣಗಳ ಮತ್ತು ಪಾವಿತ್ರ್ಯದ ಹಿಂದೆ ನಾವು ಗುರುತಿಸಿ, ಮಕ್ಕಳು ಕತ್ತಲಿಗೆ ಹೆದರುವಂತೆ, ನಾವು ಹೆದರುವ ಶೂನ್ಯವು ಕತ್ತಲಮಯವೆಂಬ ಭಾವನೆಯನ್ನು ದೂರೀಕರಿಸಬೇಕು. ಇಂಡಿಯನ್‌ರಂತೆ

ಪೌರಾಣಿಕತೆ ಮತ್ತು ಬ್ರಹ್ಮದಲ್ಲಿ ಐಕ್ಯವಾಗುವುದು ಅಥವಾ ಬೌದ್ಧರ ನಿರ್ವಾಣದಂತಹ ಅರ್ಥಹೀನ ಮಾತುಗಳಿಂದ ನಾವು ತಪ್ಪಿಸಿಕೊಳ್ಳಬಾರದು. ಅದರ ಬದಲು ಇಚ್ಛೆಯ ಸಂಪೂರ್ಣ ನಿಷೇಧದ ನಂತರ ಉಳಿಯುವುದು ನಿಶ್ಚಿತವಾಗಿ ಏನೂ ಅಲ್ಲ, ಆದರೆ ಇನ್ನೂ ಇಚ್ಛೆಯನ್ನು ತುಂಬಿಕೊಂಡಿರುವವರ ಸಲುವಾಗಿ ಎಂಬುದನ್ನು ಮುಕ್ತವಾಗಿ ಒಪ್ಪಿಕೊಳ್ಳಬೇಕು. ಅದಕ್ಕೆ ವಿರುದ್ಧವಾಗಿ, ಯಾರಲ್ಲಿ ಇಚ್ಛಾಶಕ್ತಿಯು ಎದುರಾಗಿ ತನ್ನನ್ನು ನಿರಾಕರಿಸಿದೆಯೋ ಅವರಲ್ಲಿ ಈ ಜಗತ್ತು, ತನ್ನ ಎಲ್ಲ ಸೂರ್ಯರು ಮತ್ತು ನೀಹಾರಿಕೆಗಳೊಡನೆ – ಶೂನ್ಯವಾದುದು.

ಸಂತನು ಧನಾತ್ಮಕವಾದ ಏನನ್ನೋ ಕಾಣುತ್ತಾನೆ, ಅದು ಬೇರೆಯವರಿಗೆ ಕಾಣಿಸುವುದಿಲ್ಲ ಎಂಬ ಒಂದು ಅಸ್ಪಷ್ಟ ಸೂಚನೆ ಇಲ್ಲಿದೆಯಾದರೂ, ಅದು ಏನು ಎಂಬುದರ ಬಗ್ಗೆ ಯಾವುದೇ ಸೂಚನೆಯಿಲ್ಲ. ಹೀಗಾಗಿ ಆ ಸೂಚನೆಯು ಕೇವಲ ಆಲಂಕಾರಿಕ ಎಂದು ನನಗನ್ನಿಸುತ್ತದೆ. ಜಗತ್ತು ಮತ್ತು ಅದರ ಎಲ್ಲ ವಿದ್ಯಮಾನಗಳೂ ಇಚ್ಛಾಶಕ್ತಿಯ ಮೂರ್ತೀಕರಣ (ಆಬ್ಜೆಕ್ಟಿಫಿಕೇಷನ್) ಎಂದು ಶೋಪೆನ್‌ಹಾವರ್ ಹೇಳುತ್ತಾನೆ. ಇಚ್ಛಾಶಕ್ತಿಯನ್ನು ಒಪ್ಪಿಸಿಬಿಟ್ಟಾಗ,

> **'ಜಗತ್ತಿನಲ್ಲಿ ತುಂಬಿರುವ ಮತ್ತು ಜಗತ್ತು ಹೊಂದಿರುವ, ಗುರಿಯಿಲ್ಲದ ಹಾಗೂ ವಿಶ್ರಾಂತಿ ಮತ್ತು ಶ್ರೇಣೀಕೃತ ವಸ್ತುನಿಷ್ಠತೆಯಿಲ್ಲದ, ನಿರಂತರ ಕಷ್ಟ ಮತ್ತು ಪ್ರಯತ್ನಗಳು ಹಾಗೂ ವಿದ್ಯಮಾನಗಳು; ಒಂದರ ನಂತರ ಮತ್ತೊಂದು ಬರುವ ಅಸಂಖ್ಯ ಶ್ರೇಣೀಕೃತ ರೂಪಗಳು; ಇಚ್ಛಾಶಕ್ತಿಯ ಇಡೀ ಮೈದೋರುವಿಕೆ; ಮತ್ತು ಅಂತಿಮವಾಗಿ ಈ ಮೈದೋರುವಿಕೆಗಳ ವೈಶ್ವಿಕ ರೂಪಗಳಾದ ಕಾಲ ಮತ್ತು ಅವಕಾಶಗಳು ಮತ್ತು ಅದರ ಕೊನೆಯ ಮೂಲರೂಪವಾದ ವಸ್ತು ಮತ್ತು ವ್ಯಕ್ತಿಗಳು ಎಲ್ಲವೂ ಇಲ್ಲವಾಗುತ್ತವೆ. ಇಚ್ಛಾಶಕ್ತಿ ಇಲ್ಲ, ಪರಮಸತ್ಯವಿಲ್ಲ, ಜಗತ್ತು ಇಲ್ಲ. ನಮ್ಮ ಮುಂದೆ ಇರುವುದು ಕೇವಲ ಇಲ್ಲದಿರುವಿಕೆ.'**

ಸಂತನ ಉದ್ದೇಶವು ಅನಸ್ತಿತ್ವಕ್ಕೆ (ನಾನ್–ಎಕ್ಸಿಸ್ಟೆನ್ಸ್) ಸಾಧ್ಯವಾದಷ್ಟೂ ಹತ್ತಿರವಾಗುವುದು ಎಂಬುದರ ಹೊರತು ನಾವು ಈ ಭಾಗಕ್ಕೆ ಬೇರೇನೂ ವ್ಯಾಖ್ಯಾನ ಮಾಡಲಾರೆವು. ಆದರೆ ಇದನ್ನು ಆತ್ಮಹತ್ಯೆಯ ಮೂಲಕ ಸಾಧಿಸಲಾಗದು ಎಂಬುದನ್ನು ಯಾವ ಕಾರಣದಿಂದಲೋ ಸ್ಪಷ್ಟವಾಗಿ ವಿವರಿಸಿಲ್ಲ. ಯಾವಾಗಲೂ ಕುಡಿದು ಬಿದ್ದವನಿಗಿಂತ ಸಂತನನ್ನು ನಾವೇಕೆ ಬಯಸಬೇಕು ಎಂಬುದನ್ನು ವಿವರಿಸುವುದು ಕಷ್ಟಕರ; ಪ್ರಾಯಶಃ ಸಮಚಿತ್ತದ ಕ್ಷಣಗಳು ದುಃಖಕರವಾಗಿ ಮತ್ತೆ ಮತ್ತೆ ಬರುತ್ತವೆ ಎಂದು ಶೋಪೆನ್‌ಹಾವರ್ ಯೋಚಿಸಿರಬೇಕು.

ಶೋಪೆನ್‌ಹಾವರ್‌ನ ಆತ್ಮಾರ್ಪಣ ಸುವಾರ್ತೆಯು ಅಷ್ಟೊಂದು ಸುಸಂಬದ್ಧವಾಗಿಲ್ಲ ಹಾಗೂ ಪ್ರಾಮಾಣಿಕವಾಗಿಲ್ಲ. ಅವನು ಹೇಳುವ ಅನುಭಾವಿಗಳು, ದಿವ್ಯ ದರ್ಶನದಲ್ಲಿ ಅತ್ಯಂತ ಆಳವಾದ ಜ್ಞಾನವು ಹೊಮ್ಮುವುದೆಂದು, ಇಂತಹ

ಜ್ಞಾನವು ಸರ್ವೋತ್ಕೃಷ್ಟವಾದುದೆಂದು, ಧ್ಯಾನದಲ್ಲಿ ನಂಬಿಕೆಯಿಟ್ಟಿದ್ದವರು. ಪಾರ್ಮೆನೈಡೀಸ್‌ನ ಕಾಲದಿಂದಲೂ, ತೋರಿಕೆಯ ಭ್ರಮಾತ್ಮಕ ಜ್ಞಾನವನ್ನು ಮತ್ತೊಂದು ಬಗೆಯ ಜ್ಞಾನದ ವಿರುದ್ಧವೆಂಬಂತೆ ವಿವರಿಸಲಾಗುತ್ತಿತ್ತೇ ಹೊರತು ಪೂರ್ತಿ ವಿಭಿನ್ನವಾದ ಜ್ಞಾನದ ವಿರುದ್ಧವಾಗಲ್ಲ. ದೇವರ ಜ್ಞಾನವು ನಮ್ಮ ಚಿರಂತನ ಜೀವನಕ್ಕೆ ಕಾರಣವೆಂದು ಕ್ರೈಸ್ತತತ್ವವು ಬೋಧಿಸುತ್ತದೆ. ಆದರೆ ಶೋಪೆನ್‌ಹಾವರ್ ಇಂಥದಾವುದನ್ನೂ ಹೇಳುವುದಿಲ್ಲ. ಸಾಮಾನ್ಯವಾಗಿ ಜ್ಞಾನ ಎಂದು ಹೇಳಲಾಗುವುದೆಲ್ಲವೂ ಮಾಯೆ ಎಂದವನು ಒಪ್ಪುತ್ತಾನೆ, ಆದರೆ ಆ ತೆರೆಯನ್ನು ಹರಿದು ಹಾಕಿದಾಗ, ನಮಗೆ ಕಾಣುವುದು ದೇವರಲ್ಲ, ಸರ್ವಶಕ್ತ ಕೆಡುಕು ಇಚ್ಛಾಶಕ್ತಿಯಾದ, ಜೀವಿಗಳಿಗಾಗಿ ಸಂಕಟದ ಬಲೆಯನ್ನು ಹೆಣೆಯುವುದರಲ್ಲಿ ಸದಾ ನಿರತನಾದ ಸೈತಾನ. ಈ ಸೈತಾನದೃಶ್ಯದಿಂದ ಭಯಗ್ರಸ್ತನಾಗಿ ಸಂತನು 'ತೊಲಗು!' (ಅವಾನ್ಟ್) ಎಂದು ಕಿರುಚಿ, ಅನಸ್ತಿತ್ವದ ಮೊರೆಹೊಗುತ್ತಾನೆ. ಇಂತಹ ಪೌರಾಣಿಕತೆಯಲ್ಲಿ ನಂಬಿಕೆಯಿಟ್ಟವರು ಎಂದು ಅನುಭಾವಿಗಳನ್ನು ಕರೆಯುವುದು ಅವರಿಗೆ ಮಾಡುವ ಅವಮಾನ. ಸಂಪೂರ್ಣ ಅನಸ್ತಿತ್ವವನ್ನು ಸಾಧಿಸದೆಯೇ ಸ್ವಲ್ಪ ಮೌಲಿಕವಾದ ಬದುಕನ್ನು ನಡೆಸಬಹುದು ಎಂಬುದನ್ನು ಶೋಪೆನ್‌ಹಾವರ್‌ನ ನಿರಾಶಾವಾದದೊಡನೆ ಹೊಂದಿಸುವುದು ಸಾಧ್ಯವಾಗುವುದಿಲ್ಲ. ಎಲ್ಲಿಯವರೆಗೂ ಸಂತನಿರುತ್ತಾನೆಯೋ, ಅವನು ಅಸ್ತಿತ್ವದಲ್ಲಿರುವುದು ತನ್ನ ಇಚ್ಛಾಶಕ್ತಿಯನ್ನು, ಅಂದರೆ ಕೆಡುಕನ್ನು, ಉಳಿಸಿಕೊಂಡಿರುವುದರಿಂದ. ತನ್ನ ಇಚ್ಛಾಶಕ್ತಿಯನ್ನು ದುರ್ಬಲಗೊಳಿಸುವ ಮೂಲಕ ಅವನು ಕೆಡುಕಿನ ಪ್ರಮಾಣವನ್ನು ತಗ್ಗಿಸಬಹುದೇ ಹೊರತು ಯಾವುದೇ ಇತ್ಯಾತ್ಮಕ ಒಳಿತನ್ನು ಪಡೆಯಲಾರ.

ಶೋಪೆನ್‌ಹಾವರ್‌ನ ಜೀವನವನ್ನು ಗಮನಿಸಿದರೆ ಅವನ ಸಿದ್ಧಾಂತವೂ ಪ್ರಾಮಾಣಿಕವಾದುದಲ್ಲ. ಸಾಮಾನ್ಯವಾಗಿ ಅವನು ಒಳ್ಳೆಯ ಹೋಟಲೊಂದರಲ್ಲಿ ಚೆನ್ನಾಗಿ ಊಟಮಾಡುತ್ತಿದ್ದ; ಅವನೂ ಕೆಲವು ಸಣ್ಣಪುಟ್ಟ ಪ್ರಣಯಪ್ರಸಂಗಗಳನ್ನು ಹೊಂದಿದ್ದ, ಆದರೆ ಅವು ಲೈಂಗಿಕವಾದವೇ ಹೊರತು ಪ್ರೇಮಪೂರಿತವಲ್ಲ; ಅವನು ಮಹಾ ಜಗಳಗಂಟ, ಹಾಗೆಯೇ ವಿಪರೀತ ಆಸೆಬುರುಕ. ಒಂದು ಸಂದರ್ಭದಲ್ಲಿ, ತನ್ನ ಮನೆಯ ಬಾಗಿಲ ಬಳಿ ನಿಂತುಕೊಂಡು ಮುದುಕಳಾದ ದರ್ಜಿಯವಳೊಬ್ಬಳು ತನ್ನ ಸ್ನೇಹಿತರೊಂದಿಗೆ ಜೋರಾಗಿ ಮಾತಾಡುತ್ತಿದ್ದುದು ಇವನಿಗೆ ಕಿರಿಕಿರಿಯುಂಟುಮಾಡಿತು. ಅವನು ಮೇಲಿನಿಂದಲೇ ಅವಳನ್ನು ಕೆಳಕ್ಕೆ ದಬ್ಬಿದ, ಅದರಿಂದ ಅವಳಿಗೆ ಶಾಶ್ವತ ಊನವಾಯಿತು. ಅವಳು ನ್ಯಾಯಾಲಯದ ಮೆಟ್ಟಿಲು ಹತ್ತಿ ತನಗೆ ಪರಿಹಾರವೆಂದು ತಾನು ಬದುಕಿರುವವರೆಗೂ ಪ್ರತಿ ಮೂರು ತಿಂಗಳಿಗೆ ಒಂದು ಮೊತ್ತ (೧೫ ಥೇಲರ್‌ಗಳು) ತೆರಲು ಆಜ್ಞೆ ತಂದಳು. ಇಪ್ಪತ್ತು ವರ್ಷಗಳ ಬಳಿಕ ಕೊನೆಗೂ ಅವಳು ಸತ್ತಾಗ, ತನ್ನ ಲೆಕ್ಕದ ಪುಸ್ತಕದಲ್ಲಿ ಅವನು ಹೀಗೆ

ಬರೆದ: 'ಓಬಿಟ್ ಆನಸ್, ಓಬಿಟ್ ಓನಸ್' (ಮುದುಕಿ ಸತ್ತಳು, ಭಾರ ಇಳಿಯಿತು). ಪ್ರಾಣಿಗಳ ಬಗೆಗಿನ ಕರುಣೆಯ ಹೊರತು – ಅದು ಎಷ್ಟು ಅತಿರೇಕದ್ದಾಗಿತ್ತೆಂದರೆ ವಿಜ್ಞಾನದ ಕಾರಣಕ್ಕಾಗಿ ಅದನ್ನು ಕತ್ತರಿಸುವುದನ್ನೂ ಅವನು ಅಡ್ಡಿಪಡಿಸುತ್ತಿದ್ದ – ಅವನ ಜೀವಮಾನದಲ್ಲಿ ಯಾವುದೇ ಒಂದು ಸದ್ಗುಣ ತೋರಿದ ಪ್ರಸಂಗ ಕಾಣಬರುವುದಿಲ್ಲ. ಮಿಕ್ಕೆಲ್ಲ ವಿಷಯಗಳಲ್ಲಿ ಅವನು ಸಂಪೂರ್ಣ ಸ್ವಾರ್ಥಿಯಾಗಿದ್ದ. ವೈರಾಗ್ಯ ಮತ್ತು ತ್ಯಾಗದ ಒಳಿತಿನ ಬಗ್ಗೆ ಗಾಢ ನಂಬಿಕೆಯನ್ನಿಟ್ಟಿದ್ದ ವ್ಯಕ್ತಿಯೊಬ್ಬನು ತನ್ನ ನಂಬಿಕೆಗಳನ್ನು ಕಾರ್ಯಗತಗೊಳಿಸುವ ಒಂದು ಪ್ರಯತ್ನವನ್ನೂ ಮಾಡದಿದ್ದುದು ಸೋಜಿಗವೇ ಸರಿ.

ಐತಿಹಾಸಿಕವಾಗಿ, ಶೋಪೆನ್‌ಹಾವರ್ ಬಗ್ಗೆ ಎರಡು ವಿಷಯಗಳು ಮುಖ್ಯವಾದವು: ಅವನ ನಿರಾಶಾವಾದ ಮತ್ತು ಇಚ್ಛಾಶಕ್ತಿಯು ಜ್ಞಾನಕ್ಕಿಂತ ಮಿಗಿಲಾದುದು ಎಂಬ ಅವನ ಸಿದ್ಧಾಂತ. ಅವನ ನಿರಾಶೆಯ ಕಾರಣದಿಂದಾಗಿ, ಎಲ್ಲ ಕೆಡುಕುಗಳನ್ನೂ ವಿವರಿಸಲು ಸಾಧ್ಯ ಎಂದು ತಲೆಕೆಡಿಸಿಕೊಳ್ಳದೆಯೇ ತತ್ವಜ್ಞಾನದ ಕಡೆ ಜನರು ಹೊರಡಲು ಕಾರಣವಾಯಿತು; ಈ ರೀತಿಯಲ್ಲಿ ಒಂದು ಪರಿಹಾರರೂಪವಾಗಿ ಅದು ಪ್ರಯೋಜನಕಾರಿಯಾಯಿತು. ವೈಜ್ಞಾನಿಕ ದೃಷ್ಟಿಕೋನದಿಂದ, ಆಶಾವಾದ ಮತ್ತು ನಿರಾಶಾವಾದಗಳೆರಡೂ ಆಕ್ಷೇಪಾರ್ಹವಾದವು: ವಿಶ್ವವು ಇರುವುದೇ ನಮ್ಮನ್ನು ಸಂತೋಷಗೊಳಿಸಲೋಸುಗ ಎಂದು ನಂಬಿಸಲು ಆಶಾವಾದವು ಪ್ರಯತ್ನಿಸಿದರೆ, ಅದಿರುವುದೇ ನಮಗೆ ದುಃಖ ತರಲು ಎಂದು ನಿರಾಶಾವಾದವು ಹೇಳುತ್ತದೆ. ವೈಜ್ಞಾನಿಕವಾಗಿ, ವಿಶ್ವವು ಯಾವುದೇ ರೀತಿಯಲ್ಲಿ ನಮ್ಮೊಡನೆ ಸಂಬಂಧವಿರಿಸಿಕೊಂಡಿರುವುದಕ್ಕೆ ಆಧಾರಗಳಿಲ್ಲ. ಆಶಾವಾದ ಅಥವಾ ನಿರಾಶಾವಾದದಲ್ಲಿನ ನಮ್ಮ ನಂಬಿಕೆಯು ಮನೋಧರ್ಮಕ್ಕೆ ಸಂಬಂಧಿಸಿದ್ದೇ ಹೊರತು ವಿಚಾರಕ್ಕಲ್ಲವಾದರೂ ಆಶಾವಾದದ ಮನೋಭಾವವು ಪಾಶ್ಚಾತ್ಯ ತತ್ವಜ್ಞಾನಿಗಳಲ್ಲಿ ಹೆಚ್ಚು ಸಾಮಾನ್ಯ. ಹೀಗಾಗಿ ವಿರೋಧ ಪಕ್ಷದ ಪ್ರತಿನಿಧಿಯೊಬ್ಬನು ಉಪಯುಕ್ತನಾಗುವ ರೀತಿಯೆಂದರೆ, ಮಿಕ್ಕಂತೆ ಪರಿಗಣನೆಗೆ ಬಾರದೇ ಹೋಗಬಹುದಾದ ಅಂಶಗಳನ್ನು ಮುನ್ನೆಲೆಗೆ ತರುವುದು.

ನಿರಾಶಾವಾದಕ್ಕಿಂತ ಮುಖ್ಯವಾದುದು ಇಚ್ಛಾಶಕ್ತಿಯ ಪ್ರಾಧಾನ್ಯದ ಅವನ ಸಿದ್ಧಾಂತ. ಈ ಸಿದ್ಧಾಂತಕ್ಕೂ ನಿರಾಶಾವಾದಕ್ಕೂ ಯಾವುದೇ ತಾರ್ಕಿಕ ಸಂಬಂಧವಿಲ್ಲವೆಂಬುದು ಸ್ಪಷ್ಟವಾಗಿದ್ದರೂ, ಮತ್ತು ಶೋಪೆನ್‌ಹಾವರ್ ನಂತರದಲ್ಲಿ ಹಲವರು ಅದು ಆಶಾವಾದಕ್ಕೆ ಕಾರಣ ಎಂಬುದನ್ನು ಕಂಡುಕೊಂಡರು. ಒಂದಲ್ಲ ಒಂದು ಬಗೆಯಲ್ಲಿ, ಇಚ್ಛಾಶಕ್ತಿಯ ಪಾರಮ್ಯ ಸಿದ್ಧಾಂತವನ್ನು ಹಲವು ಮಂದಿ ಆಧುನಿಕ ತತ್ವಜ್ಞಾನಿಗಳು, ವಿಶೇಷವಾಗಿ ನೀಷೆ, ಬರ್ಗ್‌ಸನ್, ಜೇಮ್ಸ್ ಮತ್ತು ಡ್ಯೂಯಿ ಅವರುಗಳು, ಎತ್ತಿ ಹಿಡಿದಿದ್ದಾರೆ. ಅದಕ್ಕೆ ಮಿಗಿಲಾಗಿ, ವೃತ್ತಿಪರ ತತ್ವಜ್ಞಾನಿಗಳ

ವಲಯದ ಹೊರಗೆ ಆ ಸಿದ್ಧಾಂತವನ್ನು ರೂಢಿಸಿಕೊಂಡವರಿದ್ದಾರೆ. ಇದಕ್ಕನುಗುಣವಾಗಿ, ಇಚ್ಛಾಶಕ್ತಿಯ ತೂಕ ಹೆಚ್ಚಾಗಿದೆ, ಮತ್ತು ಜ್ಞಾನದ್ದು ಕಡಿಮೆಯಾಗಿದೆ. ಇದು ನಮ್ಮ ಕಾಲದ ತತ್ವಜ್ಞಾನದ ಮನೋಭಾವದಲ್ಲಿ ಆಗಿರುವ ಮುಖ್ಯ ಬದಲಾವಣೆ ಎಂಬುದು ನನ್ನ ತಿಳಿವಳಿಕೆ. ಅದಕ್ಕೆ ರೂಸೋ ಮತ್ತು ಕ್ಯಾಂಟ್ ಭೂಮಿಕೆಯನ್ನು ಸಿದ್ಧಪಡಿಸಿದ್ದರು, ಆದರೆ ಅದನ್ನು ಶುದ್ಧರೂಪದಲ್ಲಿ ಮೊದಲು ಮಂಡಿಸಿದವನು ಶೋಪೆನ್‌ಹಾವರ್. ಈ ಕಾರಣಕ್ಕಾಗಿ, ಅಸಂಬದ್ಧತೆ ಮತ್ತು ಟೊಳ್ಳುತನಗಳ ನಡುವೆಯೂ, ಐತಿಹಾಸಿಕ ಬೆಳವಣಿಗೆಯ ಒಂದು ಹಂತವಾಗಿ ಅವನ ತಾತ್ವಿಕತೆಯು ತಕ್ಕಮಟ್ಟಿಗೆ ಮುಖ್ಯವಾಗುತ್ತದೆ.

೨೫
ನೀಷೆ

ನೀಷೆ (೧೮೪೪-೧೯೦೦) ತನ್ನನ್ನು ಶೋಪೆನ್‌ಹಾವರ್‌ನ ಉತ್ತರಾಧಿಕಾರಿಯೆಂದು ಸರಿಯಾಗಿಯೇ ಗುರುತಿಸಿಕೊಂಡಿದ್ದಾನೆ; ಆದರೆ ಅನೇಕ ವಿಧಗಳಲ್ಲಿ, ಅದರಲ್ಲಿಯೂ ತನ್ನ ಸಿದ್ಧಾಂತದ ಸುಸಂಬದ್ಧತೆ ಮತ್ತು ತಾರ್ಕಿಕತೆಗಳಲ್ಲಿ ಇವನು ಅವನಿಗಿಂತ ಮೇಲ್ಮಟ್ಟದವನು. ಶೋಪೆನ್‌ಹಾವರ್‌ನ ಪೌರ್ವಾತ್ಯದ ವಿರಕ್ತಿಪರ ನೈತಿಕತೆಯು ಅವನ ಇಚ್ಛಾಶಕ್ತಿ ಪಾರಮ್ಯದ ಸಿದ್ಧಾಂತದೊಡನೆ ಹೊಂದಾಣಿಕೆಯಾಗುವುದಿಲ್ಲ; ನೀಷೆಯಲ್ಲಾದರೋ, ಇಚ್ಛಾಶಕ್ತಿಗೆ ನೈತಿಕ ಹಾಗೂ ತತ್ವಜಿಜ್ಞಾಸಾತ್ಮಕ ಪಾರಮ್ಯವಿದೆ. ಒಬ್ಬ ಪ್ರಾಧ್ಯಾಪಕನಾಗಿದ್ದರೂ ನೀಷೆಯು ಅಕೆಡೆಮಿಕ್‌ಗಿಂತಲೂ ಒಬ್ಬ ಸಾಹಿತ್ಯಕ ತತ್ವಜ್ಞಾನಿಯಾಗಿದ್ದ. ಅವನು ಮೂಲತಾತ್ವಿಕತೆಯಲ್ಲಾಗಲೀ ಜ್ಞಾನಮೀಮಾಂಸೆಯಲ್ಲಾಗಲೀ ಹೊಸ ತಾಂತ್ರಿಕ ಸಿದ್ಧಾಂತಗಳನ್ನು ಸೃಷ್ಟಿಸಲಿಲ್ಲ; ಅವನ ಪ್ರಾಮುಖ್ಯವೇನಿದ್ದರೂ ಮೂಲತಃ ನೈತಿಕತೆಯ ವಲಯದಲ್ಲಿ, ಆನಂತರದಲ್ಲಿ ಒಬ್ಬ ತೀಕ್ಷ್ಣ ಐತಿಹಾಸಿಕ ವಿಮರ್ಶಕನಾಗಿ. ನಾನು ಬಹುತೇಕ ಅವನ ನೈತಿಕತೆಗೆ ಮತ್ತು ಅವನ ಮತಧಾರ್ಮಿಕ ವಿಮರ್ಶೆಗಳಿಗೆ ಸೀಮಿತನಾಗಿರುತ್ತೇನೆ, ಯಾಕೆಂದರೆ ಅವನನ್ನು ಪ್ರಭಾವಶಾಲಿಯಾಗಿ ಮಾಡಿದ್ದು ಅವನ ಬರವಣಿಗೆಯ ಈ ಮಗ್ಗುಲು.

ಅವನ ಜೀವನ ಸರಳವಾದುದು. ಅವನ ತಂದೆಯು ಒಬ್ಬ ಪ್ರಾಟೆಸ್ಟೆಂಟ್ ಪ್ಯಾಸ್ಟರ್, ಮತ್ತು ಬೆಳೆದದ್ದು ಸಂಪ್ರದಾಯನಿಷ್ಠ ಪರಿಸರದಲ್ಲಿ. ವಿಶ್ವವಿದ್ಯಾನಿಲಯದಲ್ಲಿ ಅಭಿಜಾತ ಸಾಹಿತ್ಯ ಮತ್ತು ಭಾಷಾಧ್ಯಯನ (ಫಿಲಾಲಜಿ)ಗಳಲ್ಲಿ ಅವನೊಬ್ಬ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದ. ಇದರಿಂದಾಗಿ ೧೮೬೯ ರಲ್ಲಿ, ಅವನಿನ್ನೂ ಪದವಿಯನ್ನು ಪಡೆಯುವುದಕ್ಕೆ ಮುಂಚೆಯೇ, ಅವನಿಗೆ ಬೇಸೆಲ್‌ನಲ್ಲಿ ಭಾಷಾಧ್ಯಯನ ಪ್ರಾಧ್ಯಾಪಕ ಹುದ್ದೆಯನ್ನು ನೀಡಲಾಯಿತು, ಅವನು ಅದನ್ನು ಒಪ್ಪಿಕೊಂಡ. ಅವನು ಎಂದೂ ಆರೋಗ್ಯವಂತನಾಗಿರಲಿಲ್ಲ, ಕಾಯಿಲೆಯೆಂದು ಅನೇಕ ಸಲ ರಜೆ ತೆಗೆದುಕೊಂಡ ಬಳಿಕ, ಅವನು ೧೮೭೯ ರಲ್ಲಿ ಆ ಹುದ್ದೆಯಿಂದ ನಿವೃತ್ತನಾದ. ಇದಾದ ಬಳಿಕ,

ಅವನು ಸ್ವಿಟ್ಸರ್‌ಲಂಡ್ ಮತ್ತು ಇಟಲಿಗಳಲ್ಲಿದ್ದ; ೧೮೮೮ ರಲ್ಲಿ ಅವನು ಹುಚ್ಚನಾದ, ಮತ್ತು ಕೊನೆತನಕ ಹಾಗೆಯೇ ಇದ್ದ. ಅವನಿಗೆ ವ್ಯಾಗ್ನರ್ ಬಗ್ಗೆ ಅಪಾರ ಒಲವು, ಆದರೆ ಅವನೊಡನೆ ಜಗಳ ಮಾಡಿಕೊಂಡ, ಅದೂ 'ಪಾರ್ಸಿಫಾಲ್' ತೀರ ಕ್ರೈಸ್ತಪರವೂ ವಿರಕ್ತಿಪರವೂ ಆಗಿದೆಯೆಂಬ ಕ್ಷುಲ್ಲಕ ಕಾರಣಕ್ಕಾಗಿ. ಜಗಳದ ನಂತರ ಅವನು ವ್ಯಾಗ್ನರ್‌ನನ್ನು ತೀರ ಒರಟಾಗಿ ಟೀಕಿಸಿದ, ಅವನೊಬ್ಬ ಯೆಹೂದಿಯೆಂದು ಕರೆಯುವ ಮಟ್ಟಿಗೆ. ಅವನ ಸಾಮಾನ್ಯ ಮನೋಭಾವವು 'ರಿಂಗ್'ನಲ್ಲಿ ವ್ಯಾಗ್ನರ್‌ನದಕ್ಕೆ ತೀರ ನಿಕಟವಾಗಿಯೇ ಇತ್ತು; ನೀಷೆಯ ಅತಿಮಾನವನು (ಸೂಪರ್‌ಮ್ಯಾನ್), ಅವನಿಗೆ ಗ್ರೀಕ್ ತಿಳಿದಿತ್ತೆಂಬುದನ್ನು ಹೊರತಪಡಿಸಿ, ಬಹುತೇಕ ಸೀಗ್‌ಫ್ರೈಡ್‌ನಂತೆಯೇ ಇದೆ. ಇದು ವಿಚಿತ್ರವಾಗಿ ಕಾಣಬಹುದಾದರೂ ಅದು ನನ್ನ ತಪ್ಪಲ್ಲ.

ನೀಷೆಯು ಒಬ್ಬ ಪ್ರಜ್ಞಾಪೂರ್ವಕ ರೊಮ್ಯಾಂಟಿಕ್ ಅಲ್ಲ; ಎಷ್ಟೋ ವೇಳೆ ಅವನು ರೊಮ್ಯಾಂಟಿಕ್‌ರನ್ನು ತೀಕ್ಷ್ಣವಾಗಿಯೇ ಟೀಕಿಸುತ್ತಿದ್ದ. ಅವನ ಪ್ರಜ್ಞಾಪೂರ್ವಕ ಮನೋಭಾವವು ಆರ್ಫಿಕ್ ಅಂಶಗಳನ್ನು ಹೊರತುಪಡಿಸಿದಂತಹ ಹೆಲೆನಿಕ್ ಆದುದು. ಅವನು ಸಾಕ್ರೇಟಸ್‌ಪೂರ್ವದವರ ಬಗ್ಗೆ, ಪೈಥಾಗೊರಾಸ್‌ನನ್ನು ಬಿಟ್ಟು, ಮೆಚ್ಚಿಕೆ ಹೊಂದಿದ್ದ. ಅವನಿಗೆ ಹೆರಾಕ್ಲಿಟಸ್ ಬಗ್ಗೆ ತುಂಬ ಒಲವು. ಅರಿಸ್ಟಾಟಲ್‌ನ ಉದಾತ್ತ ಮನುಷ್ಯನು ನೀಷೆ ಪರಿಕಲ್ಪನೆಯ 'ಶ್ರೇಷ್ಠ ವ್ಯಕ್ತಿ' (ನೋಬಲ್ ಮ್ಯಾನ್) ನನ್ನು ನಿಕಟವಾಗಿ ಹೋಲುತ್ತಾನೆ. ಆದರೆ ಅವನ ದೃಷ್ಟಿಯಲ್ಲಿ ಸಾಕ್ರಟೀಸ್‌ನಿಂದ ಹಿಡಿದು ಮುಂದಿನವರು ತಮ್ಮ ಪೂರ್ವಿಕರಿಗಿಂತ ಕಡಿಮೆ ಮಟ್ಟದವರು. ತನ್ನ ಸಾಮಾನ್ಯ ಮೂಲದ ಕಾರಣಕ್ಕೆ ಅವನು ಸಾಕ್ರಟೀಸ್‌ನನ್ನು ಕ್ಷಮಿಸಲಾರ; ಅವನನ್ನು 'ಕೀಳುವ್ಯಕ್ತಿ' (ರೊಟೂರಿಯೆರ್) ಎಂದು ಕರೆಯುತ್ತಾನೆ, ಪ್ರಜಾಪ್ರಭುತ್ವಪರವಾಗಿದ್ದ ಉದಾತ್ತ ಅಥೀನಿಯನ್ ಯುವಕರನ್ನು ಹಾಳುಮಾಡಿದವನೆಂದು ಆರೋಪಿಸುತ್ತಾನೆ. ವಿಶೇಷವಾಗಿ, ಪ್ಲೇಟೋನ ಆತ್ಮೋನ್ನತಿ (ಎಡಿಫಿಕೇಷನ್)ಯ ಅಭಿರುಚಿಯನ್ನು ಅವನು ಖಂಡಿಸುತ್ತಾನೆ. ಇಷ್ಟಾದರೂ ನೀಷೆಯು ಅವನನ್ನು ಖಂಡಿಸಲು ಇಷ್ಟಪಡುವುದಿಲ್ಲವೆಂಬುದು ಸ್ಪಷ್ಟವಾಗಿದೆ, ಯಾಕೆಂದರೆ ಅವನನ್ನು – ಕೆಳವರ್ಗದವರನ್ನು ಹದ್ದುಬಸ್ತಿನಲ್ಲಿಡಲು ಸದ್ಗುಣಗಳನ್ನು ಬೋಧಿಸಿದ – ಅಪ್ರಾಮಾಣಿಕ ಎಂದು ಕರೆದು ಕ್ಷಮಿಸಲು ಮುಂದಾಗುತ್ತಾನೆ. ಒಂದು ಸಂದರ್ಭದಲ್ಲಿ ಅವನನ್ನು 'ಮಹಾ ಕ್ಯಾಗ್ಲಿಯೋಸ್ಟರೋ' ಎಂದು ಕರೆಯುತ್ತಾನೆ. ಅವನಿಗೆ ಡೆಮಾಕ್ರಿಟಸ್ ಮತ್ತು ಎಪಿಕ್ಯೂರಸ್‌ಗಳ ಬಗ್ಗೆ ಮೆಚ್ಚಿಕೆ, ಆದರೆ ಎಪಿಕ್ಯೂರಸ್ ಬಗೆಗಿನ ಅವನ ವಿಶ್ವಾಸವು, ಅದನ್ನು ಲ್ಯೂಕ್ರೇಷಿಯಸ್ ಬಗೆಗಿನ ಮೆಚ್ಚಿಕೆ ಎಂದು ವ್ಯಾಖ್ಯಾನಿಸದಿದ್ದರೆ, ಅದು ಅತಾರ್ಕಿಕವಾಗಿರುವಂತೆ ಕಾಣುತ್ತದೆ.

ನಿರೀಕ್ಷಿಸಬಹುದಾದಂತೆ, ಕ್ಯಾಂಟ್ ಬಗ್ಗೆ ಅವನಿಗೆ ಒಳ್ಳೆಯ ಅಭಿಪ್ರಾಯವಿಲ್ಲ, ಅವನನ್ನು 'ರೂಸೋ ಮಾದರಿಯ ನೈತಿಕ ಅಂಧಾಭಿಮಾನಿ' ಎಂದು ಕರೆಯುತ್ತಾನೆ.

ರೋಮ್ಯಾಂಟಿಕ್‌ರನ್ನು ನೀಷೆಯು ಟೀಕಿಸಿದರೂ ತನ್ನ ಮನೋಧರ್ಮಕ್ಕೆ ಅವನು ಅವರಿಗೆ ಋಣಿಯಾಗಿದ್ದಾನೆ; ಬೈರನ್‌ನದರಂತೆ, ಅವನದೂ ಶ್ರೀಮಂತವರ್ಗದ ಅನಾಯಕತ್ವ., ಹೀಗಾಗಿ ಅವನು ಬೈರನ್ ಬಗ್ಗೆ ಮೆಚ್ಚಿಕೆ ವ್ಯಕ್ತಪಡಿಸುವುದೇನೂ ಆಶ್ಚರ್ಯಕರವಾಗಿ ಕಾಣಿಸುವುದಿಲ್ಲ. ಸುಲಭವಾಗಿ ಹೊಂದಿಕೊಳ್ಳದ ಎರಡು ವರ್ಗದ ಮೌಲ್ಯಗಳನ್ನು ಒಗ್ಗೂಡಿಸಲು ಅವನು ಪ್ರಯತ್ನಿಸುತ್ತಾನೆ: ಒಂದೆಡೆಯಲ್ಲಿ, ಅವನಿಗೆ ಯುದ್ಧ ಮತ್ತು ಶ್ರೀಮಂತವರ್ಗದ ಹೆಮ್ಮೆಗಳಂತಹ ದಯಾಹೀನತೆ ಇಷ್ಟ; ಮತ್ತೊಂದೆಡೆ, ಅವನಿಗೆ ಕಲೆ, ಅದರಲ್ಲೂ ಸಂಗೀತ, ಸಾಹಿತ್ಯ ಮತ್ತು ತತ್ವಜ್ಞಾನಗಳ ಬಗ್ಗೆ ಒಲವು. ಐತಿಹಾಸಿಕವಾಗಿ, ಈ ಎರಡೂ ಬಗೆಯ ಮೌಲ್ಯಗಳು ನವೋದಯದ ಅವಧಿಯಲ್ಲಿದ್ದಂಥವು; ಬೊಲೋಗ್ನ ಪರವಾಗಿ ಹೋರಾಡುತ್ತ ಮೈಕೇಲೇಂಜೆಲೋನನ್ನು ನೇಮಿಸಿಕೊಂಡಿದ್ದ ಪೋಪ್ ಎರಡನೆಯ ಜೂನಿಯಸ್ ಅಂತಹವರು ಸರ್ಕಾರವನ್ನು ನಿಯಂತ್ರಿಸಬೇಕೆಂಬುದು ನೀಷೆಯ ಇಚ್ಛೆ. ಇಬ್ಬರ ನಡುವೆ ಮುಖ್ಯ ವ್ಯತ್ಯಾಸಗಳಿದ್ದರೂ ನೀಷೆಯನ್ನು ಮೆಕಿಯವೆಲ್ಲಿಯೊಡನೆ ಹೋಲಿಸುವುದು ಸಹಜವಾದುದು. ಈ ವ್ಯತ್ಯಾಸಗಳ ಬಗ್ಗೆ ಹೇಳುವುದಾದರೆ: ಮೆಕಿಯವೆಲ್ಲಿ ವ್ಯವಹಾರಸ್ಥ ವ್ಯಕ್ತಿ, ಅವನ ಅಭಿಪ್ರಾಯಗಳೆಲ್ಲ ರೂಪುಗೊಂಡದ್ದು ಸಾರ್ವಜನಿಕ ವಿದ್ಯಮಾನಗಳಲ್ಲಿ ಭಾಗಿಯಾಗುವ ಮೂಲಕ, ಮತ್ತು ಅವು ಅವನ ವಯಸ್ಸಿಗೆ ಅನುಗುಣಾಗಿಯೂ ಇದ್ದವು; ಅವನೆಂದೂ ಪ್ರೌಢನಾಗಿರಲಿಲ್ಲ ಅಥವಾ ಕ್ರಮಬದ್ಧನಾಗಿರಲಿಲ್ಲ, ಅವನ ರಾಜಕೀಯ ಸಿದ್ಧಾಂತವು ಒಂದು ಸುಸಂಬದ್ಧ ಇಡಿಯಾಗಿ ಕಾಣಿಸುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ನೀಷೆಯು ಒಬ್ಬ ಪ್ರಾಧ್ಯಾಪಕ, ಪುಸ್ತಕಕ್ರಿಮಿ, ತನ್ನ ಕಾಲದ ಪ್ರಮುಖ ರಾಜಕೀಯ ಹಾಗೂ ನೈತಿಕ ಪ್ರವೃತ್ತಿಗಳೇನೇ ಇದ್ದರೂ ಅದಕೆ ಪ್ರಜ್ಞಾಪೂರ್ವಕವಾಗಿ ವಿರುದ್ಧವಾದ ತಾತ್ವಿಕತೆಯನ್ನು ಹೊಂದಿದ್ದವನು. ಆದರೆ ಅವರಿಬ್ಬರ ಹೋಲಿಕೆಗಳು ಮತ್ತಷ್ಟು ಆಳವಾದವು. ನೀಷೆಯ ರಾಜಕೀಯ ತಾತ್ವಿಕತೆಯು, ಅದನ್ನು ವಿಶಾಲ ಭಿತ್ತಿಯಲ್ಲಿ ಬೆಳೆಸಿ ಅನ್ವಯಿಸಿದ್ದರೂ, 'ದ ಪ್ರಿನ್ಸ್' ನನ್ನು ಹೋಲುವಂಥದು ('ದ ಡಿಸ್‌ಕೋರ್ಸಸ್' ಅಲ್ಲ). ನೀಷೆ ಮತ್ತು ಮೆಕಿಯವೆಲ್ಲಿ ಇಬ್ಬರೂ ಅಧಿಕಾರದ ಉದ್ದೇಶವನ್ನು ಹೊಂದಿದ ನೈತಿಕತೆಯವರು, ಮತ್ತು ಉದ್ದೇಶಪೂರ್ವಕವಾಗಿ ಕ್ರೈಸ್ತವಿರೋಧಿಗಳು, ಆದರೆ ಈ ವಿಷಯದಲ್ಲಿ ಮೆಕಿಯವೆಲ್ಲಿ ಹೆಚ್ಚು ಪ್ರಾಮಾಣಿಕ. ಮೆಕಿಯವೆಲ್ಲಿಗೆ ಸೀಸರ್ ಬೋರ್ಗಿಯೋ ಹೇಗೆಯೋ ನೀಷೆಗೆ ನೆಪೋಲಿಯನ್ ಹಾಗೆ: ಕ್ಷುಲ್ಲಕವಿರೋಧಿಗಳಿಂದ ಸೋತ ಮಹಾಪುರುಷರು.

ಮತಧರ್ಮ ಮತ್ತು ತತ್ವಜ್ಞಾನಗಳ ಬಗೆಗಿನ ನೀಷೆಯ ಟೀಕೆಯು ನೈತಿಕ ಸ್ವರೂಪದಿಂದ ಕೂಡಿರುವಂಥದು. ಶ್ರೀಮಂತ ಅಲ್ಪಸಂಖ್ಯಾತವರ್ಗಕ್ಕೆ ಮಾತ್ರ ಸಾಧ್ಯವೆಂದು ಅವನು (ಸರಿಯಾಗಿಯೇ) ನಂಬಿದ್ದ ಕೆಲವು ಗುಣಗಳನ್ನು ಅವನು ಮೆಚ್ಚಿಕೊಳ್ಳುತ್ತಾನೆ; ಬಹುಸಂಖ್ಯಾತವರ್ಗವು, ಅವನ ದೃಷ್ಟಿಯಲ್ಲಿ, ಕೆಲವರ ಉನ್ನತಿಕೆಯ

ಸಾಧನಗಳು ಮಾತ್ರವಾಗಿರಬೇಕು, ಅವರಿಗೆ ಸುಖ ಅಥವಾ ಒಳ್ಳೆಯ ಬದುಕಿನ ಯಾವ ಹಕ್ಕೂ ಇರಬಾರದು. ಸಾಮಾನ್ಯ ಜನರನ್ನು 'ಕೆಟ್ಟುದಾಗಿ ತೇಪೆ ಹಾಕುವವರು' (ಬಂಗಲ್ಡ್ ಅಂಡ್ ಬಾಚ್ಡ್) ಎಂದು ಕರೆಯುವುದು ಅವನ ರೂಢಿ, ಒಬ್ಬ ಮಹಾವ್ಯಕ್ತಿಯ ಬೆಳವಣಿಗೆಗಾಗಿ ಅವರು ಕಷ್ಟಪಡುವುದು ಆವಶ್ಯಕವಾದರೆ ಅದಕ್ಕೆ ಅವನ ಆಕ್ಷೇಪಣೆಯಿಲ್ಲ. ಹೀಗೆ ೧೭೮೯ ರಿಂದ ೧೮೧೫ ರವರೆಗಿನ ಮುಖ್ಯ ಅವಧಿಯ ಪ್ರಾಮುಖ್ಯವನ್ನು ನೀಷೆ ಹೀಗೆ ಸಂಕ್ಷಿಪ್ತವಾಗಿ ಹೇಳುತ್ತಾನೆ: 'ಕ್ರಾಂತಿಯು ನೆಪೋಲಿಯನ್ ಬರಲು ಕಾರಣವಾಯಿತು; ಅದರ ಸಾರ್ಥಕ್ಯ ಅದೇ. ಅಂತಹ ಫಲವು ದೊರೆಯುವುದಾದರೆ, ನಮ್ಮ ನಾಗರಿಕತೆಯ ಇಡಿಯು ಅನಾಯಕತ್ವದಿಂದ ಕುಸಿದುಬೀಳಬೇಕೆಂದು ನಾವು ಬಯಸಬೇಕು. ನೆಪೋಲಿಯನ್ ರಾಷ್ಟ್ರೀಯತೆಯನ್ನು ಸಾಕಾರಗೊಳಿಸಿದ; ಇದೇ ಎರಡನೆಯದರ ಸಮರ್ಥನೆ.' ಈ ಶತಮಾನದ ಬಹುತೇಕ ಉನ್ನತ ನಿರೀಕ್ಷೆಗಳಿಗೆಲ್ಲ ನೆಪೋಲಿಯನ್‌ನೇ ಕಾರಣ ಎಂಬುದು ಅವನ ಅಭಿಪ್ರಾಯ.

ವಿರೋಧಾಭಾಸದಿಂದ ಕೂಡಿದ ಮತ್ತು ಸಾಂಪ್ರದಾಯಿಕ ಓದುಗರನ್ನು ಬೆಚ್ಚಿಬೀಳಿಸುವ ಬಗೆಯಲ್ಲಿ ಅಭಿವ್ಯಕ್ತಿಸುವುದು ಅವನಿಗೆ ಇಷ್ಟ. ಇದನ್ನವನು 'ಒಳ್ಳೆಯ' ಮತ್ತು 'ಕೆಡುಕಿನ' ಎಂಬ ಶಬ್ದಗಳನ್ನು ಅವುಗಳ ಸಾಮಾನ್ಯಾರ್ಥದಲ್ಲಿ ಬಳಸಿ, ಆನಂತರ ತನಗೆ 'ಒಳ್ಳೆಯದ'ಕ್ಕಿಂತ 'ಕೆಡುಕಾ'ದುದು ಇಷ್ಟವೆಂದು ಹೇಳುವ ಮೂಲಕ ಮಾಡುತ್ತಾನೆ. ಅವನ ಪುಸ್ತಕವಾದ 'ಬಿಯಾಂಡ್ ಗುಡ್ ಅಂಡ್ ಇವಿಲ್' ಒಳ್ಳೆಯದು ಮತ್ತು ಕೆಟ್ಟುದರ ಬಗೆಗಿನ ಓದುಗರ ಅಭಿಪ್ರಾಯಗಳನ್ನು ಬದಲಿಸುವ ನಿಜವಾದ ಉದ್ದೇಶದಿಂದ ರಚಿತವಾಗಿದೆಯಾದರೂ, ಕೆಲವು ಸಂದರ್ಭಗಳನ್ನು ಹೊರತುಪಡಿಸಿ, 'ಕೆಡುಕಾ'ದುದು ಮತ್ತು ಕ್ಷೀಣಿಸುತ್ತಿರುವುದೇ ನಿಜವಾದ 'ಒಳ್ಳೆಯದು' ಎಂದು ಹೊಗಳುತ್ತದೆಂದು ಹೇಳಿಕೊಳ್ಳುತ್ತದೆ. ಉದಾಹರಣೆಗೆ, ಒಳ್ಳೆಯದು ಗೆಲವು ಸಾಧಿಸಬೇಕೆಂಬ ಹಾಗೂ ಕೆಡುಕಾದುದು ನಾಶವಾಗಬೇಕೆಂಬ ಉದ್ದೇಶವು ಕರ್ತವ್ಯವೆಂದು ಭಾವಿಸುವುದು ತಪ್ಪು ಎಂದವನು ಹೇಳುತ್ತಾನೆ; ಇದು ಇಂಗ್ಲಿಷ್ ದೃಷ್ಟಿಕೋನ, 'ಆ ಹೆಡ್ಡನಾದ ಜಾನ್ ಸ್ಟೂಅರ್ಟ್ ಮಿಲ್'ನ ಅಭಿಪ್ರಾಯ, ಅವನ ಬಗ್ಗೆ ಅವನಿಗೆ ತೀವ್ರವಾದ ತಿರಸ್ಕಾರ ಭಾವನೆ. ಅವನ ಬಗ್ಗೆ ಹೀಗೆನ್ನುತ್ತಾನೆ:

'ಅವನು "ಒಬ್ಬನಿಗೆ ಸರಿಯಾದದ್ದು ಮತ್ತೊಬ್ಬನಿಗೆ ತಪ್ಪಾಗಿರುತ್ತದೆ; ಬೇರೆಯವರು ತನಗೆ ಮಾಡಬಾರದೆಂದು ಬಯಸುವುದನ್ನು ನೀನು ಬೇರೆಯವರಿಗೆ ಮಾಡಬೇಡ";[೨೭೮] ಎಂದು ಹೇಳುವ ಆ ಮನುಷ್ಯನ ಕೀಳುತನವನ್ನು ನಾನು ದ್ವೇಷಿಸುತ್ತೇನೆ. ಇಂಥ ತತ್ವಗಳು ಪರಸ್ಪರ ಸೇವೆಗಳ ಮೇಲೆ ಇಡೀ ಮಾನವ

---

೨೭೮. ಈ ಹೇಳಿಕೆಯಲ್ಲಿ ಮಿಲ್ ಯಾರನ್ನೋ ನಿರೀಕ್ಷಿಸಿದಂತೆ ನನಗೆ ಕಾಣುತ್ತದೆ.

ಮಾರ್ಗವನ್ನು ಸ್ಥಾಪಿಸುತ್ತವೆ, ಆಗ ನಾವು ಮಾಡಿದ ಯಾವುದಕ್ಕೋ ನೀಡಿದ ನಗದು ಬೆಲೆಯಂತೆ ಪ್ರತಿ ಕ್ರಿಯೆಯೂ ಕಾಣುತ್ತದೆ. ಇಲ್ಲಿನ ಊಹಾಕಲ್ಪನೆಯು ಕನಿಷ್ಠ ಮಟ್ಟದವರೆಗೂ ಅನುದಾತ್ತವಾದುದು· ನನ್ನ ಕ್ರಿಯೆಗಳಿಗೂ ನಿನ್ನದಕ್ಕೂ ನಡುವೆ ಒಂದು ಬಗೆಯ ಸಮಾನತೆ ಇರುವುದೆದು ಭಾವಿಸಲಾಗಿದೆ.'[೨೭೯]

ಸಾಂಪ್ರಾದಾಯಿಕವಾದುದಕ್ಕೆ ವಿರುದ್ಧವಾದ ನಿಜವಾದ ಸದ್ಗುಣವು ಎಲ್ಲರಿಗೂ ಅಲ್ಲ, ಶ್ರೀಮಂತವರ್ಗದ ಅಲ್ಪಸಂಖ್ಯೆಯವರ ಲಕ್ಷಣವಾಗಿ ಉಳಿದಿರಬೇಕು. ಅದು ಲಾಭದಾಯಕವೂ ಅಲ್ಲ, ವಿವೇಕಯುತವಾದುದೂ ಅಲ್ಲ; ಅದನ್ನು ಹೊಂದಿದವನನ್ನು ಅದು ಇತರರಿಂದ ಬೇರೆಯಾಗಿಸುತ್ತದೆ; ಅದು ನಿಯಮಬದ್ಧತೆಗೆ ವಿರುದ್ಧವಾದುದು, ಮತ್ತು ಕೆಳಮಟ್ಟದವರಿಗೆ ಹಾನಿಯನ್ನುಂಟುಮಾಡುತ್ತದೆ. ಮೇಲುವರ್ಗಗಳವರು ಜನಸಮೂಹದ ಮೇಲೆ ಯುದ್ಧ ಹೂಡುವುದು, ಕಾಲದ ಪ್ರಜಾಪ್ರಭುತ್ವವಾದಿ ಪ್ರವೃತ್ತಿಯನ್ನು ತಡೆಗಟ್ಟುವುದು, ಅನಿವಾರ್ಯ; ಯಾಕೆಂದರೆ ಎಲ್ಲ ದಿಕ್ಕುಗಳಲ್ಲಿಯೂ ಕೆಳಮಟ್ಟದವರು ತಮ್ಮನ್ನು ಯಜಮಾನರನ್ನಾಗಿ ಮಾಡಿಕೊಳ್ಳಲು ಕೈಜೋಡಿಸುತ್ತಿದ್ದಾರೆ. '"ಕೀಳುಮಟ್ಟದ ಜನ"ರನ್ನು ಮತ್ತು "ಹೆಂಗಸ"ರನ್ನು ಪ್ರೋತ್ಸಾಹಿಸುವ, ಮಿದುಗೊಳಿಸುವ ಪ್ರತಿಯೊಂದೂ ಸಾರ್ವತ್ರಿಕ ಮತಾಧಿಕಾರದ ಪರವಾದ – ಅಂದರೆ "ಕೀಳುಮಟ್ಟದ ಜನ"ರ ಸಾಮ್ರಾಜ್ಯದ ಪರವಾಗಿ – ಕ್ರಿಯಾಶೀಲವಾಗುತ್ತದೆ. ಇಂಥ ದುರ್ಮಾರ್ಗಪ್ರೇರಕ ರೂಸೋ; ಅವನು ಹೆಂಗಸರನ್ನು ಆಸಕ್ತಿಯುತರನ್ನಾಗಿ ಮಾಡಿದ; ಆನಂತರ ಬಂದವನು ಹ್ಯಾರಿಯೆಟ್ ಬೀಚರ್ ಸ್ಟೋವ್ ಮತ್ತು ಗುಲಾಮರು; ಆನಂತರ ಬಂದವರು ಕಾರ್ಮಿಕರು ಮತ್ತು ಬಡವರ ಪರವಾಗಿ ಧ್ವನಿಯೆತ್ತಿದ ಸಮಾಜವಾದಿಗಳು. ಇವರೆಲ್ಲರ ವಿರುದ್ಧವಾಗಿ ಹೋರಾಡಬೇಕಾಗಿದೆ'.

ನೀಷೆಯ ನೈತಿಕತೆಯು ಯಾವುದೇ ಅರ್ಥದಲ್ಲಿ ಲಂಪಟತನದ್ದಾಗಿರಲಿಲ್ಲ; ಅವನಿಗೆ ಸ್ಪಾರ್ಟನ್ ಶಿಸ್ತಿನಲ್ಲಿ ಮತ್ತು ಪ್ರಮುಖ ಉದ್ದೇಶಸಾಧನೆಗಾಗಿ ನೋವು ನೀಡುವ ಮತ್ತು ಸಹಿಸಿಕೊಳ್ಳುವ ಸಾಮರ್ಥ್ಯದಲ್ಲಿ ನಂಬಿಕೆ. ಎಲ್ಲದಕ್ಕಿಂತ ಮಿಗಿಲಾಗಿ ಅವನು ಇಚ್ಛಾಶಕ್ತಿಯ ಸಾಮರ್ಥ್ಯದಲ್ಲಿ ಮೆಚ್ಚಿಕೆ ಹೊಂದಿದವನು. 'ನಾನು ಇಚ್ಛಾಶಕ್ತಿಯ ಸಾಮರ್ಥ್ಯವನ್ನು ಪರೀಕ್ಷಿಸುವುದು ಅದು ಒಡ್ಡಬಹುದಾದ ಪ್ರತಿರೋಧದ ಪ್ರಮಾಣಕ್ಕನುಗುಣವಾಗಿ, ಹಾಗೂ ನೋವನ್ನು ನೀಡುವ ಮತ್ತು ಸಹಿಸಿಕೊಳ್ಳುವ ಮತ್ತು ಅದನ್ನು ತನ್ನ ಅನುಕೂಲಕ್ಕೆ ಒಗ್ಗಿಸಿಕೊಳ್ಳುವ ಪ್ರಮಾಣಕ್ಕನುಗುಣವಾಗಿ; ನಾನು ಅಸ್ತಿತ್ವದ ಕೆಡುಕು ಮತ್ತು ನೋವುಗಳತ್ತ ಬೈಗುಳದ ಮೂಲಕ ತೋರಿಸುವುದಿಲ್ಲ, ಆದರೆ ಹಾಗೆ ಮಾಡುವುದು ಅದು ಹಿಂದೆಂದಿಗಿಂತಲೂ ಹೆಚ್ಚು ಕೆಡುಕುತನದಿಂದಲೂ ಮತ್ತು ಹೆಚ್ಚು ಯಾತನಾಮಯವಾಗಿಯೂ ಆಗುವ ನಿರೀಕ್ಷೆಯಿಂದ.' ಅವನು

---

೨೭೯. ನೀಷೆಯ ಎಲ್ಲ ಉದ್ಧೃತಗಳಲ್ಲೂ ಇರುವ ಓರೆ ಅಕ್ಷರಗಳು ಮೂಲದಲ್ಲೇ ಇರುವಂಥವು.

ಅನುಕಂಪೆಯನ್ನು ಒಂದು ದೌರ್ಬಲ್ಯವೆಂದೂ, ಅದನ್ನು ಹೊಡೆದೋಡಿಸಬೇಕೆಂದೂ ಪರಿಗಣಿಸುತ್ತಾನೆ. 'ಅದರ ಉದ್ದೇಶವು ಭವಿಷ್ಯದ ಮನುಷ್ಯನನ್ನು ಶಿಸ್ತು ಮತ್ತು ಲಕ್ಷಾಂತರ ಮಂದಿ ಕೆಟ್ಟುದಾಗಿ ತೇಪೆ ಹಾಕುವವರನ್ನು ನಿರ್ಮೂಲಗೊಳಿಸುವ ಮೂಲಕ ಅಪರಿಮಿತ 'ಹಿರಿತನದ ಶಕ್ತಿ'ಯಿಂದ ರೂಪಿಸುವುದು; ಮತ್ತು ಅದು ಅದು ಹಿಂದೆಂದೂ ಇರದಿದ್ದ ಹಾಗೂ ಕಾಣದಿದ್ದಂತಹ ರೀತಿಯಲ್ಲಿ ಸೃಷ್ಟಿಸುವ ಯಾತನೆಯನ್ನು ನೋಡಿ ನಾಶವಾಗುವುದನ್ನು ನಿವಾರಿಸುವುದು.' ಅವನು ಯುದ್ಧಗಳ ಪರ್ವವು ಮುಂದೆ ಬರಲಿರುವುದನ್ನು ಉಲ್ಲಾಸದಿಂದ ನುಡಿಯುತ್ತಾನೆ; ತನ್ನ ಭವಿಷ್ಯವು ನಿಜವಾದುದನ್ನು ನೋಡಿದ್ದರೆ ಅವನು ಸಂತೋಷಗೊಳ್ಳುತ್ತಿದ್ದನೇ ಎಂದು ನಾವು ಆಲೋಚಿಸುವಂತಾಗುತ್ತದೆ.

ಆದರೆ ಅವನೇನೂ ಸರ್ಕಾರದ ಆರಾಧಕನಲ್ಲ; ಅದರಿಂದ ತುಂಬ ದೂರ. ಅವನು ತೀವ್ರ ವೈಯಕ್ತಿಕವಾದಿ, ವಿಭೂತಿಪುರುಷರಲ್ಲಿ ನಂಬಿಕೆಯಿಟ್ಟವನು. ಇಡೀ ದೇಶವೊಂದರ ಸಂಕಟವು ಮಹಾಪುರುಷನೊಬ್ಬನ ಯಾತನೆಯಷ್ಟು ಪ್ರಮುಖವಲ್ಲವೆಂದು ಅವನು ಹೇಳುತ್ತಾನೆ. 'ಈ ಸಣ್ಣ ಮನುಷ್ಯರ ದುರದೃಷ್ಟವೆಲ್ಲ ಸೇರಿದರೂ ಬಲಿಷ್ಠ ವ್ಯಕ್ತಿಗಳ ಭಾವನೆಗಳಲ್ಲಿ ಅಲ್ಲದೆ ಒಟ್ಟಂದವಾಗುವುದಿಲ್ಲ.'

ನೀಷೆ ರಾಷ್ಟ್ರೀಯವಾದಿಯಲ್ಲ, ಜರ್ಮನಿಯ ಬಗ್ಗೆ ಅತಿರೇಕದ ಮೆಚ್ಚಿಕೆಯನ್ನೇನೂ ವ್ಯಕ್ತಪಡಿಸುವುದಿಲ್ಲ. ಒಂದು ಅಂತಾರಾಷ್ಟ್ರೀಯ ಆಳುವ ಜನಾಂಗವನ್ನು, ಅವರು ಇಡೀ ಭೂಮಿಯ ಪ್ರಭುಗಳಾಗಬೇಕೆಂದು ಅವನು ಬಯಸುತ್ತಾನೆ: 'ಮತ್ತಷ್ಟು ಹೆಚ್ಚು ಕಠಿಣ ಸ್ವಯಂ-ಶಿಸ್ತಿನ ಮೇಲೆ ಹಾಗೂ ಸಮರ್ಥ ತತ್ವಜ್ಞಾನಿಗಳ ಮತ್ತು ಕಲಾನಿರಂಕುಶರ ಇಚ್ಛಾಶಕ್ತಿಯು ಸಾವಿರಾರು ವರ್ಷಗಳ ಕಾಲ ಮುದ್ರೆಯೊತ್ತಿರುವುದನ್ನು ಆಧರಿಸಿದ ಒಂದು ವಿಶಾಲ ಶ್ರೀಮಂತವರ್ಗ.'

ಅವನು ನಿರ್ದಿಷ್ಟವಾಗಿ ಯೆಹೂದಿವಿರೋಧಿಯೂ ಅಲ್ಲ, ಆದರೆ ಜರ್ಮನಿಯು ತಾನು ಅರಗಿಸಿಕೊಳ್ಳಬಲ್ಲಷ್ಟು ಸಂಖ್ಯೆಯಲ್ಲಿ ಯೆಹೂದಿಗಳನ್ನು ಹೊಂದಿದೆ ಎಂದು ತಿಳಿದಿದ್ದ, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಯೆಹೂದಿಗಳು ಬರುವುದನ್ನು ತಡೆಯಬೇಕೆಂದು ಭಾವಿಸುತ್ತಾನೆ. ಅವನಿಗೆ ಹೊಸ ಒಡಂಬಕೆಯನ್ನು ಕಂಡರೆ ಆಗುವುದಿಲ್ಲ, ಆದರೆ ಹಳೆಯದನ್ನಲ್ಲ, ಅದರ ಬಗ್ಗೆ ಅವನು ಅಪಾರ ಗೌರವದಿಂದ ಮಾತನಾಡುತ್ತಾನೆ. ಅವನ ಸಾಮಾನ್ಯ ನೈತಿಕ ದೃಷ್ಟಿಕೋನಕ್ಕೆ ಸಂಬಂಧಿಸಿದ ಅನೇಕ ಆಧುನಿಕ ಬೆಳವಣಿಗೆಗಳು ಅವನು ಸ್ಪಷ್ಟವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ವ್ಯತಿರಿಕ್ತವಾದುದೆಂಬುದನ್ನು ಒತ್ತಿ ಹೇಳಬೇಕು.

ಅವನ ನೈತಿಕತೆಯ ಎರಡು ಅನ್ವಯಗಳ ಬಗ್ಗೆ ಗಮನ ನೀಡಬೇಕು: ಒಂದು, ಹೆಂಗಸರ ಬಗೆಗಿನ ಅವನ ತಿರಸ್ಕಾರ, ಮತ್ತು ಎರಡು, ಕ್ರೈಸ್ತಮತದ ಬಗೆಗಿನ ತೀಕ್ಷ್ಣ ಟೀಕೆ.

ಹೆಂಗಸರ ಬಗೆಗೆ ಎಷ್ಟು ಹೀನಾಯದಿಂದ ಮಾತಾಡಿದರೂ ಅವನಿಗೆ ದಣಿವಿಲ್ಲ. ತನ್ನ ಅರೆ–ಭವಿಷ್ಯವಾದಿ ಪುಸ್ತಕ 'ದಸ್ ಸ್ಪೇಕ್ ಜ಼ರಾತುಷ್ಟ್ರ' ಎಂಬ ಗ್ರಂಥದಲ್ಲಿ ಅವನು ಹೇಳುವುದೆಂದರೆ, ಹೆಂಗಸರು ಇನ್ನೂ ಸ್ನೇಹಯೋಗ್ಯರಾಗಿಲ್ಲ; ಅವರಿನ್ನೂ ಬೆಕ್ಕುಗಳಾಗಿದ್ದಾರೆ, ಅಥವಾ ಹಕ್ಕಿಗಳಾಗಿದ್ದಾರೆ, ಕನಿಷ್ಠ ಪಕ್ಷ ಹಸುಗಳಾಗಿದ್ದಾರೆ. 'ಗಂಡಸನ್ನು ಯುದ್ಧಕ್ಕೆ ಅಣಿಗೊಳಿಸಬೇಕು, ಹೆಂಗಸನ್ನು ಯೋಧರ ಮನರಂಜಕಳಾಗಿ ಅಣಿಗೊಳಿಸಬೇಕು. ಮಿಕ್ಕದ್ದೆಲ್ಲ ತಪ್ಪು.' ಯೋಧನ ಮನರಂಜನೆ ಎಂಬುದು, ಆ ವಿಷಯದ ಅವನ ಮಹಾ ಪ್ರಮುಖ ಸಾರೋಕ್ತಿಯಾದ 'ನೀನು ಹೆಂಗಸರ ಬಳಿ ಹೋಗುತ್ತೀಯೇನು? ನಿನ್ನ ಚಾವಟಿಯನ್ನು ಮರೆಯಬೇಡ' ಎಂಬುದನ್ನು ನಂಬಿದರೆ ವಿಚಿತ್ರವಾದುದಾಗಿ ಕಾಣುತ್ತದೆ.

ನೀಷೆ ಕ್ರೈಸ್ತದ ಬಗ್ಗೆ ಹೊಂದಿದ್ದ ಆಕ್ಷೇಪಣೆಗೆ ಕಾರಣ ಅದು ಅವನೆನ್ನುವ 'ಗುಲಾಮ ನೈತಿಕತೆ'ಯನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ ಎಂಬುದು. ಅವನ ವಾದಗಳ ಹಾಗೂ ಫ್ರೆಂಚ್ ಕ್ರಾಂತಿಗೆ ಮುಂದೆ ಇದ್ದ ತತ್ವಜ್ಞಾನಗಳ ವಾದಗಳ ನಡುವಣ ವೈದೃಶ್ಯವನ್ನು ನೋಡುವುದು ಕುತೂಹಲಕಾರಿಯಾದುದು. ಕ್ರೈಸ್ತ ಮತತತ್ವಗಳು ನಿಜವಾದುವಲ್ಲ; ದೈವಸಂಕಲ್ಪ ಎಂಬುದಕ್ಕೆ ಶರಣಾಗಬೇಕೆಂದು ಅದು ಬೋಧಿಸುತ್ತದೆ, ಯಾಕೆಂದರೆ ಆತ್ಮಗೌರವವುಳ್ಳ ಯಾರೂ ಉನ್ನತ ಶಕ್ತಿಗೆ ಬಾಗಬೇಕಾದುದಿಲ್ಲ; ಹಾಗೂ ಕ್ರೈಸ್ತ ಚರ್ಚ್‌ಗಳು ನಿರಂಕುಶರ ಜೊತೆ ಕೈಗೂಡಿಸಿ, ಸ್ವಾತಂತ್ರ್ಯವನ್ನು ನಿರಾಕರಿಸುವ ಪ್ರಜಾಪ್ರಭುತ್ವವಿರೋಧಿಗಳಿಗೆ ಸಹಾಯ ಮಾಡುವುದಲ್ಲದೆ, ಬಡವರ ಮುಖಗಳನ್ನು ಮುರಿಯುತ್ತವೆ; ಎಂದು ಅವರು ವಾದಿಸಿದರು. ಕ್ರೈಸ್ತ ಇಲ್ಲವೇ ಬೇರಾವುದೇ ಮತಧರ್ಮದ ತತ್ವಜಿಜ್ಞಾಸಾತ್ಮಕ ಸತ್ಯದ ಬಗ್ಗೆ ಆಸಕ್ತನಾಗಿರಲಿಲ್ಲ; ಯಾವ ಮತಧರ್ಮವೂ ಸತ್ಯವಲ್ಲ ಎಂದು ಮನವರಿಕೆಮಾಡಿಕೊಂಡಿದ್ದ ಅವನು ಎಲ್ಲ ಮತಧರ್ಮಗಳನ್ನೂ ಸಾಮಾಜಿಕ ಪರಿಣಾಮಗಳ ದೃಷಿಕೋನದಿಂದ ನೋಡುತ್ತಾನೆ. ದೈವಸಂಕಲ್ಪಕ್ಕೆ ತಲೆಬಾಗುವುದಕ್ಕೆ ತತ್ವಜ್ಞಾನಿಗಳು ಮಾಡಿದ ಆಕ್ಷೇಪಣೆಯನ್ನವನು ಒಪ್ಪುತ್ತಾನೆ, ಆದರೆ ಅವನು ಅದರ ಜಾಗದಲ್ಲಿ ಇಲ್ಲಿನ 'ಕಲಾತ್ಮಕ–ನಿರಂಕುಶ'ರನ್ನು ಕುಳ್ಳಿರಿಸುತ್ತಾನೆ. ಈ ಅತಿಮಾನುಷರಿಗೆ ಶರಣಾಗುವುದು ಸರಿಯಾದುದೇ, ಆದರೆ ಕ್ರೈಸ್ತ ದೇವರುಗಳಿಗಲ್ಲ. ಕ್ರೈಸ್ತ ಚರ್ಚ್‌ಗಳು ನಿರಂಕುಶರು ಮತ್ತು ಪ್ರಜಾಪ್ರಭುತ್ವವಿರೋಧಿಗಳೊಡನೆ ಕೈಜೋಡಿಸುವುದಕ್ಕೆ ಸಂಬಂಧಿಸಿದಂತೆ, ಅದು ಸತ್ಯದ ಪ್ರತಿಲೋಮ ಎಂದು ಹೇಳುತ್ತಾನೆ. ಫ್ರೆಂಚ್ ಕ್ರಾಂತಿ ಮತ್ತು ಸಮಾಜವಾದಗಳು, ಅವನ ಪ್ರಕಾರ, ಸತ್ವದಲ್ಲಿ ಕ್ರೈಸ್ತದೊಡನೆ ಮೂಲಭೂತವಾಗಿ ಸಾಮ್ಯ ಹೊಂದಿದೆ; ಹೀಗಾಗಿ ಅವೆಲ್ಲಕ್ಕೂ ಅವನ ವಿರೋಧವಿದೆ: ಯಾವುದೇ ರೀತಿಯಲ್ಲಿಯೂ ತಾನು ಎಲ್ಲ ವ್ಯಕ್ತಿಗಳನ್ನೂ ಸಮಾನರು ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂಬುದು ಅವನ ನಿಲವು.

ಬೌದ್ಧ ಮತ್ತು ಕ್ರೈಸ್ತಗಳು ಎರಡೂ 'ಶೂನ್ಯವಾದಿ' ಮತಧರ್ಮಗಳು; ಒಬ್ಬನಿಗೂ ಇನ್ನೊಬ್ಬನಿಗೂ ಮೌಲ್ಯದಲ್ಲಿ ಯಾವುದೇ ಅಂತಿಮ ವ್ಯತ್ಯಾಸವಿಲ್ಲ ಎಂಬುದರಲ್ಲಿ ಅವೆರಡೂ ಒಂದೇ, ಆದರೆ ಬೌದ್ಧವು ಈ ಎರಡರಲ್ಲಿ ಕಡಿಮೆ ಆಕ್ಷೇಪಾರ್ಹವಾದುದು. ಕ್ರೈಸ್ತವು ಪತಿತವಾದುದು, ವಿನಾಶಕಾರಕ ಹಾಗೂ ಅಸಹ್ಯ ಅಂಶಗಳಿಂದ ಕೂಡಿರುವಂಥದು; ಅದರ ಪ್ರೇರಕಶಕ್ತಿಯೆಂದರೆ 'ಕೆಟ್ಟುದಾಗಿ ತೇಪೆ ಹಾಕುವವರು'. ಈ ಬಂಡಾಯವನ್ನು ಆರಂಭಿಸಿದವರು ಯೆಹೂದಿಗಳು, ಅದನ್ನು ಕ್ರೈಸ್ತಕ್ಕೆ ತಂದವರು ಪ್ರಾಮಾಣಿಕತೆಯಿರದ ಸಂತ ಪೌಲ್‌ನಂತಹ 'ಪವಿತ್ರ ಅಪಸ್ಮಾರಿಗಳು'. 'ಹೊಸ ಒಡಂಬಡಿಕೆಯು ಸಂಪೂರ್ಣ ಹೀನಜನ್ಮದ ಮಾನವ ಕುಲದ ಸುವಾರ್ತೆಗಳು'. ಕ್ರೈಸ್ತವು ಎಲ್ಲ ಕಾಲದಲ್ಲಿನ ಅತ್ಯಂತ ಮಾರಕ ಹಾಗೂ ಹೀನಮಾರ್ಗಕ್ಕೆಳೆಯುವ ಸುಳ್ಳುಬುರುಕತನ. ಯಾವ ಗಣ್ಯ ವ್ಯಕ್ತಿಯೂ ಯಾವತ್ತೂ ಕ್ರೈಸ್ತ ಆದರ್ಶವನ್ನು ಪಾಲಿಸಿದವನಲ್ಲ; ಪ್ಲೂಟಾರ್ಕ್‌ನ 'ಲೈವ್ಸ್'ನ ನಿದರ್ಶನ ತೆಗೆದುಕೊಳ್ಳಿ. 'ಹೆಮ್ಮೆ, ಅಂತರದ ವಿಷಾದ, ದೊಡ್ಡ ಜವಾಬ್ದಾರಿ, ಉಲ್ಲಾಸಕಾರಕ ಸತ್ವ, ಭವ್ಯ ಪಶುಧರ್ಮ, ಯುದ್ಧ ಮತ್ತು ಗೆಲವುಗಳ ಸ್ವಭಾವ, ರಾಗಭಾವಗಳ ದೈವೀಕರಣ, ಸೇಡು, ಕೋಪ, ಲಾಂಪಟ್ಯ, ಸಾಹಸ, ಜ್ಞಾನ'ಗಳನ್ನು ನಿರಾಕರಿಸುವ ಕಾರಣದಿಂದ ಕ್ರೈಸ್ತವನ್ನು ಖಂಡಿಸಬೇಕು. ಇವೆಲ್ಲವೂ ಒಳ್ಳೆಯವು, ಆದರೆ ಕ್ರೈಸ್ತವು ಅವುಗಳನ್ನು ಕೆಟ್ಟವೆಂದು ಸಾರುತ್ತದೆ ಎಂದು ನೀಷೆ ವಾದಿಸುತ್ತಾನೆ.

ಮನುಷ್ಯನಲ್ಲಿರುವ ಹೃದಯವನ್ನು ಪಳಗಿಸುವ ಕೆಲಸವನ್ನು ಕ್ರೈಸ್ತ ಮಾಡುತ್ತದೆ, ಇದು ತಪ್ಪು. ಕಾಡುಪ್ರಾಣಿಗೆ ತನ್ನದೇ ಆದ ಭವ್ಯತೆಯಿದೆ, ಪಳಗಿಸಿದಾಗ ಅದನ್ನು ಕಳೆದುಕೊಳ್ಳುತ್ತದೆ. ದಾಸ್ತೋವ್‌ಸ್ಕಿ ಒಡನಾಡಿದ್ದ ಅಪರಾಧಿಗಳು ಅವನಿಗಿಂತ ಉತ್ತಮರಾದವರು, ಯಾಕೆಂದರೆ ಅವರಿಗೆ ಹೆಚ್ಚು ಆತ್ಮಗೌರವವಿತ್ತು. ಪಶ್ಚಾತ್ತಾಪ ಮತ್ತು ಪ್ರಾಯಶ್ಚಿತ್ತಗಳೆಂದರೆ ನೀಷೆಗೆ ವಾಕರಿಕೆ, ಅವುಗಳನ್ನವನು ಮಂಡಲ ಭ್ರಮೆ (ಫೋಲೀ ಸರ್ಕ್ಯುಲೇರ್) ಎನ್ನುತ್ತಾನೆ. ಮಾನವನ ನಡವಳಿಕೆಯ ಬಗ್ಗೆ ಈ ರೀತಿ ಆಲೋಚಿಸುವುದರಿಂದ ಬಿಡುಗಡೆ ಹೊಂದುವುದು ನಮಗೆ ಕಷ್ಟ: ಎರಡು ಸಾವಿರ ವರ್ಷಗಳ 'ಪ್ರಜ್ಞಾ-ಛೇದನ ಮತ್ತು ಸ್ವಮಾರಣ' (ಕಾನ್‌ಷನ್ಸ್-ವಿವಿಸೆಕ್ಷನ್ ಅಂಡ್ ಸೆಲ್ಫ್-ಕ್ರೂಸಿಫಿಕ್ಷನ್)ಗಳಿಗೆ ನಾವು ವಾರಸುದಾರರಾಗಿದ್ದೇವೆ. ಪ್ಯಾಸಲ್ ಬಗ್ಗೆ ಒಂದು ಉಜ್ವಲವಾದ ಭಾಗವಿದೆ, ಅದರಿಂದ ಉದ್ಧರಿಸುವುದು ಒಳ್ಳೆಯದು, ಯಾಕೆಂದರೆ ಅವು ಕ್ರೈಸ್ತದ ಬಗೆಗಿನ ನೀಷೆಯ ಆಕ್ಷೇಪಣೆಗಳನ್ನು ಅತ್ಯುತ್ತಮ ರೀತಿಯಲ್ಲಿ ವ್ಯಕ್ತಪಡಿಸುತ್ತವೆ.

'ನಾವು ಕ್ರೈಸ್ತದಲ್ಲಿ ಯಾವುದರ ವಿರುದ್ಧ ಹೋರಾಡುತ್ತಿದ್ದೇವೆ? ಸತ್ವವನ್ನು ಹಾಳುಮಾಡಿ ಬಲಿಷ್ಠವಾದುದನ್ನು ನಾಶಪಡಿಸುವುದು, ದಣಿವು ಮತ್ತು ದೌರ್ಬಲ್ಯದ ಕ್ಷಣಗಳನ್ನು ಸುಲಿಗೆಮಾಡುವುದು ಹಾಗೂ ಹೆಮ್ಮೆಯ ಆತ್ಮವಿಶ್ವಾಸವನ್ನು ಆತಂಕ

ಮತ್ತು ಪ್ರಜ್ಞಾಸಂಕಟಗಳನ್ನುಂಟುಮಾಡಿ ಹಾಳುಗೈಯುವುದು ಅದರ ಉದ್ದೇಶ; ಅತ್ಯುದಾತ್ತ ಪ್ರವೃತ್ತಿಗಳನ್ನು ವಿಷಮವಾಗಿಸಿ ರೋಗಿಷ್ಠವನ್ನಾಗಿ ಮಾಡಿ ಅವುಗಳ ಸಾಮರ್ಥ್ಯ, ಇಚ್ಛಾಶಕ್ತಿಗಳು ತಮ್ಮ ವಿರುದ್ಧವಾಗಿಯೇ ಅಂತರ್ಮುಖಿಗಳಾಗುವಂತೆ ಮಾಡುತ್ತದೆ; ವಿಪರೀತ ಸ್ವಭರ್ತ್ಸನೆ ಮತ್ತು ಸ್ವದಂಡನೆಗಳಿಂದ ಬಲಿಷ್ಠರು ನಾಶವಾಗುವಂತೆ ಮಾಡುತ್ತದೆ: ಅಂತಹ ಭಯಾನಕ ರೀತಿಯ ವಿನಾಶದ ಅತ್ಯಂತ ಪ್ರಸಿದ್ಧ ಉದಾಹರಣೆಯೆಂದರೆ ಪ್ಯಾಸ್ಕಲ್.'

ಕ್ರೈಸ್ತ ಸಂತನ ಜಾಗದಲ್ಲಿ ನೀಷೆಯು 'ಉದಾತ್ತ' ವ್ಯಕ್ತಿಯನ್ನಿರಿಸಲು ಬಯಸುತ್ತಾನೆ. ಅವನೇನೂ ವೈಶ್ವಿಕ ಮಾದರಿಯಲ್ಲ, ಅವನೊಬ್ಬ ಆಡಳಿತವರ್ಗದ ಶ್ರೀಮಂತ. ಈ ಉದಾತ್ತ ವ್ಯಕ್ತಿಯು ಕ್ರೂರಿಯಾಗಬಲ್ಲವನು, ಕೆಲವು ವೇಳೆ, ಪಾಮರಜನರು ಅಪರಾಧವೆನ್ನುವುದನ್ನು ಮಾಡುವವನು; ಅವನು ಸಮಾನರಿಗೆ ಮಾತ್ರ ಕರ್ತವ್ಯಗಳನ್ನು ವಹಿಸುವವನು. ಕಲೆಗಾರರು ಮತ್ತು ಕವಿಗಳನ್ನು ಮತ್ತು ಯಾವುದೇ ಕೆಲಸದಲ್ಲಿ ಕುಶಲರಾದವರನ್ನು ಅವನು ಸಂರಕ್ಷಿಸುತ್ತಾನೆ, ಆದರೆ ಅವನು ಹಾಗೆ ಮಾಡುವುದು ಯಾವುದನ್ನೋ ಮಾಡಬಲ್ಲವರಿಗಿಂತ ತಾನು ಉನ್ನತ ವರ್ಗಕ್ಕೆ ಸೇರಿದ ಸದಸ್ಯನಾಗಿ. ಯೋಧರ ಉದಾಹರಣೆಗಳ ಮೂಲಕ ಅವನು ಹೋರಾಡುತ್ತಿರುವ ಉದ್ದೇಶಕ್ಕಾಗಿ ಪ್ರಾಣಬಿಡುವುದರೊಂದಿಗೆ ತಳುಕುಹಾಕುತ್ತಾನೆ; ಸಂಖ್ಯೆಗಳನ್ನು ಬಿಡುವುದು, ವ್ಯಕ್ತಿಯ ಉದ್ದೇಶವನ್ನು ಸಾಕಷ್ಟು ಗಂಭೀರವಾಗಿ ಪರಿಗಣಿಸುವುದು; ಕನಿಕರರಹಿತ ಶಿಸ್ತುಪಾಲನೆ; ಯುದ್ಧದಲ್ಲಿ ಕುತಂತ್ರ ಮತ್ತು ಸ್ವಹಿಂಸೆಗಳ ಅಭ್ಯಾಸ. ಶ್ರೀಮಂತವೈಭವದಲ್ಲಿ ಕ್ರೌರ್ಯ ವಹಿಸುವ ಪಾತ್ರವನ್ನವನು ಗಮನಿಸುತ್ತಾನೆ: 'ನಾವು "ಉನ್ನತ ಸಂಸ್ಕೃತಿ" ಎಂದು ಕರೆಯುವ ಬಹುತೇಕ ಎಲ್ಲವೂ ನಮ್ಮ ಕ್ರೌರ್ಯವನ್ನು ಆಧ್ಯಾತ್ಮೀಕರಣ ಮತ್ತು ತೀವ್ರವಾಗಿಸುವಿಕೆಗಳನ್ನು ಆಧರಿಸುತ್ತವೆ.' ಉದಾತ್ತ ವ್ಯಕ್ತಿಯು ಸಾರತಃ ಅಧಿಕಾರ ಹೊಂದುವ ಇಚ್ಛಾಶಕ್ತಿಯ ಸಾಕಾರ.

ನಾವು ನೀಷೆಯ ಸಿದ್ಧಾಂತಗಳ ಬಗ್ಗೆ ಯಾವ ಅಭಿಪ್ರಾಯವನ್ನು ಹೊಂದಬಹುದು? ಅವು ಎಷ್ಟರ ಮಟ್ಟಿಗೆ ಸತ್ಯ? ಅವು ಯಾವ ಪ್ರಮಾಣದಲ್ಲಾದರೂ ಉಪಯುಕ್ತವೇ? ಅವುಗಳಲ್ಲಿ ಏನಾದರೂ ವಸ್ತುನಿಷ್ಠತೆಯಿದೆಯೇ, ಅಥವಾ ಅವು ಒಬ್ಬ ಊನದೇಹಿಯ ಅಧಿಕಾರ-ಕಲ್ಪನೆಗಳೇ?

ನೀಷೆಯು ತುಂಬ ಪ್ರಭಾವಶಾಲಿಯಾಗಿದ್ದು ತಾಂತ್ರಿಕ ತತ್ವಜ್ಞಾನಗಳ ವಲಯದಲ್ಲಲ್ಲ, ಸಾಹಿತ್ಯಕ ಮತ್ತು ಕಲಾ ಸಂಸ್ಕೃತಿಗಳ ವ್ಯಕ್ತಿಗಳ ವಲಯಗಳಲ್ಲಿ. ಭವಿಷ್ಯದ ಬಗೆಗಿನ ಅವನ ನುಡಿಗಳು ಉದಾರವಾದಿಗಳು ಮತ್ತು ಸಮಾಜವಾದಿಗಳವಕ್ಕಿಂತ ಹೆಚ್ಚು ಸರಿಯಾಗಿದ್ದವು ಎಂಬುದನ್ನು ಒಪ್ಪಿಕೊಳ್ಳಬೇಕು. ಅವನು ರೋಗದ ಚಿಹ್ನೆ ಮಾತ್ರವಾಗಿದ್ದರೆ, ಈ ರೋಗವು ಆಧುನಿಕ ಜಗತ್ತಿನಲ್ಲಿ ಹೆಚ್ಚು ವ್ಯಾಪಕವಾಗಿರಬೇಕು.

ಏನೇ ಆದರೂ, ಆತ್ಮವೈಭವದವೆಂದು ತಿರಸ್ಕರಿಸಬಹುದಾದ ಸಾಕಷ್ಟು ಅಂಶಗಳು ಅವನಲ್ಲಿವೆ. ಸ್ಪಿನೋಜ಼ನ ಬಗ್ಗೆ ಅವನು ಹೀಗೆ ಬರೆಯುತ್ತಾನೆ: 'ಈ ರೋಗಿಷ್ಠ ನಿಸ್ಸಂಗಿಯ ಮುಖವಾಡಗಳು ಅವನ ವೈಯಕ್ತಿಕ ಪುಕ್ಕಲುತನ ಮತ್ತು ನೋವುಗಳನ್ನು ಎಷ್ಟೊಂದು ತೋರಿಸುತ್ತವೆ!' ಇದನ್ನೇ ಅವನ ಬಗ್ಗೆಯೂ ಹೇಳಬಹುದು, ಸ್ವಲ್ಪ ಕಡಿಮೆ ಹಿಂಜರಿಕೆಯಿಂದ, ಯಾಕೆಂದರೆ ಅವನು ಈಗಾಗಲೇ ಅದನ್ನು ಸ್ಪಿನೋಜ಼ನ ಬಗ್ಗೆ ಹೇಳಿದ್ದಾನೆ. ತನ್ನ ಹಗಲುಗನಸುಗಳಲ್ಲಿ ಅವನೊಬ್ಬ ಪ್ರಾಧ್ಯಾಪಕನಾಗಿರದೆ ಯೋಧನಾಗಿದ್ದನೆಂಬುದು ಸ್ಪಷ್ಟವಾಗಿದೆ; ಅವನು ಮೆಚ್ಚಿಕೊಳ್ಳುವವರೆಲ್ಲ ಸೈನಿಕರು. ಪ್ರತಿ ಗಂಡಸಿನದರಂತೆ, ಹೆಂಗಸರ ಬಗೆಗಿನ ಅವನ ಅಭಿಪ್ರಾಯವು, ಅವರ ಬಗೆಗಿನ ತನ್ನದೇ ಭಾವನೆಗಳ – ಅಂದರೆ ಭಯದ – ವಸ್ತುಪ್ರತಿರೂಪಗಳು ಎಂಬುದೂ ಸ್ಪಷ್ಟ. 'ನಿನ್ನ ಚಾವಟಿಯನ್ನು ಮರೆಯಬೇಡ' – ಆದರೆ ಹತ್ತರಲ್ಲಿ ಒಂಬತ್ತು ಮಂದಿ ಹೆಂಗಸರು ಅವನ ಚಾವಟಿಯನ್ನು ಕಿತ್ತುಕೊಳ್ಳುತ್ತಾರೆ, ಅದನ್ನು ಅವನೂ ಬಲ್ಲ, ಹೀಗಾಗಿಯೇ ಅವನು ಹೆಂಗಸರಿಂದ ದೂರವಿದ್ದ, ತನ್ನ ಅಮಾನವೀಯ ಮಾತುಗಳ ಮೂಲಕ ತನ್ನ ಗಾಯಗೊಂಡ ಡೌಲನ್ನು ಸಮಾಧಾನಪಡಿಸಿದ.

ಅವನು ಕ್ರೈಸ್ತ ಪ್ರೇಮವನ್ನು ಖಂಡಿಸಲು ಕಾರಣ ಅದು ಭಯದಿಂದ ಉಂಟಾದುದು ಎಂಬುದು: ನನ್ನ ನೆರೆಯವನು ನನ್ನನ್ನು ಗಾಸಿಗೊಳಿಸಬಹುದು ಎಂಬ ಭಯ ನನಗೆ, ಹೀಗಾಗಿ ನಾನವನನ್ನು ಪ್ರೀತಿಸುತ್ತೇನೆ ಎನ್ನುತ್ತಾನೆ. ನಾನು ಇನ್ನಷ್ಟು ಬಲಿಷ್ಠನೂ ಧೈರ್ಯವಂತನೂ ಅಗಿದ್ದರೆ, ಅವನ ಬಗ್ಗೆ ನನ್ನಲ್ಲಿರುವ ತಿರಸ್ಕಾರವನ್ನು ಬಹಿರಂಗವಾಗಿಯೇ ತೋರಿಸಬಹುದಾಗಿತ್ತು, ಒಬ್ಬ ವ್ಯಕ್ತಿಯು ಪ್ರಾಮಾಣಿಕವಾಗಿಯೇ ಎಲ್ಲವನ್ನೂ ಪ್ರೀತಿಸಲು ಸಾಧ್ಯ ಎಂಬುದು ನೀಷೆಗೆ ಹೊಳೆಯುವುದೇ ಇಲ್ಲ, ಇದಕ್ಕೆ ಕಾರಣ ಸ್ಪಷ್ಟವಾಗಿದೆ – ಅವನಿಗಿರುವುದು ಸಾರ್ವತ್ರಿಕವಾದ ದ್ವೇಷ ಮತ್ತು ಭಯಗಳು, ಅದನ್ನವನು ಮಹಾ ದೊಡ್ಡಸ್ತಿಕೆಯಿಂದ ಮರೆಮಾಚಿಕೊಳ್ಳುತ್ತಾನೆ. ಅವನ ಉದಾತ್ತ ವ್ಯಕ್ತಿಗೆ – ತನ್ನ ಹಗಲುಗನಸುಗಳಲ್ಲಿನವನು ತಾನೇ – ಸಹಾನುಭೂತಿಯೇ ಇಲ್ಲ, ಅವನು ನಿಷ್ಕರುಣಿ, ಕುತಂತ್ರಿ, ಕ್ರೂರಿ, ತನ್ನ ಅಧಿಕಾರದ ಬಗ್ಗೆ ಮಾತ್ರ ಆಲೋಚಿಸುವವನು. ಹುಚ್ಚು ಹಿಡಿಯುವ ಸನ್ನಿವೇಶದಲ್ಲಿ ಲಿಯರ್ ಮಹಾರಾಜನು ಹೀಗೆ ನುಡಿಯುತ್ತಾನೆ:

ನಾನು ಅಂಥವನ್ನೇ ಮಾಡುತ್ತೇನೆ –
ನಾನು ಮಾಡಬಲ್ಲೆನೆಂದು ಅವರಾರು ಇನ್ನೂ ತಿಳಿಯದ –
ಭೂಮಿಯ ಮೇಲಣ ಭಯಾನಕ ಕೃತ್ಯಗಳನ್ನು.

ಸಂಕ್ಷಿಪ್ತವಾಗಿ ಹೇಳಬೇಕಾದರೆ ಇದೇ ನೀಷೆಯ ತಾತ್ವಿಕತೆ.

ತಾನು ತನ್ನ ಅತಿಮಾನವರಿಗೆ ದತ್ತಮಾಡುವ ಅಧಿಕಾರದಾಹವು ಭಯದಿಂದ

ಉಂಟಾದುದು ಎಂಬುದು ನೀಷೆಗೆ ಅರ್ಥವೇ ಆಗಲಿಲ್ಲ. ನೆರೆಹೊರೆಯವರ ಬಗ್ಗೆ ಭಯವಿಲ್ಲದವರಿಗೆ ಅವರ ಮೇಲೆ ದೌರ್ಜನ್ಯವೆಸಗುವುದು ಆವಶ್ಯಕ ಎನ್ನಿಸುಸುವುದಿಲ್ಲ. ಭಯವನ್ನು ಗೆದ್ದ ವ್ಯಕ್ತಿಗಳು ನೀಷೆ ಹೇಳುವ 'ಕಲಾದೌರ್ಜನ್ಯ'ದ ನೀರೋಗಳ ಉದ್ರಿಕ್ತ ಗುಣವನ್ನು ಹೊಂದಿರುವುದಿಲ್ಲ. ಹೃದಯದಲ್ಲಿ ಅರಮನೆಯ ದಂಗೆಯ ಅನಿವಾರ್ಯ ಭಯವನ್ನು ತುಂಬಿಕೊಂಡಿರುವವರು ಕೊಲೆಗೈಯುತ್ತ ಸಂಗೀತವನ್ನು ಸವಿಯಲು ಯತ್ನಿಸುತ್ತಾರೆ. ಭಾಗಶಃ ಅವನ ಬೋಧನೆಯಿಂದಾಗಿ ವಾಸ್ತವ ಜಗತ್ತು ಅವನ ದುಃಸ್ವಪ್ನದಂತೆಯೇ ಆಗಿದೆ ಎಂಬುದನ್ನು ನಾನು ನಿರಾಕರಿಸುವುದಿಲ್ಲವಾದರೂ, ಅದರಿಂದ ಅದರ ಭಯಾನಕತೆಯೇನೂ ಕಡಿಮೆಯಾಗಲಾರದು.

ನೀಷೆಯ ಖಂಡನೆಯನ್ನು ಸಮರ್ಥನೀಯವಾಗಿಯೇ ಅನ್ವಯಿಸಬಹುದಾದ ಕೆಲವು ಬಗೆಯ ಕ್ರಿಶ್ಚಿಯನ್ ನೈತಿಕತೆಯಿದೆ ಎಂಬುದನ್ನೇನೋ ಒಪ್ಪಬಹುದು. ಅವನು ನಿದರ್ಶನಗಳಾಗಿ ನೀಡುವ ಪ್ಯಾಸ್ಕಲ್ ಮತ್ತು ದಾಸ್ತೋವ್‌ಸ್ಕಿಗಳು ತಮ್ಮ ಸ್ವಭಾವದಲ್ಲಿಯೇ ಯಾವುದೋ ನೀಚತನವನ್ನು ಹೊಂದಿದ್ದಾರೆ. ತನ್ನ ಅದ್ಭುತ ಗಣಿತ ಬೌದ್ಧಿಕತೆಯನ್ನು ತನ್ನ ದೇವರಿಗಾಗಿ ತ್ಯಾಗಮಾಡಿ, ಆ ಮೂಲಕ ಪ್ಯಾಸ್ಕಲ್ ತನ್ನ ರೋಗಗ್ರಸ್ತ ಮಾನಸಿಕ ಹಿಂಸೆಯ ವಿಶ್ವವಿಶಾಲ ಬರ್ಬರತೆಯನ್ನು ಅವನಿಗೆ ಆರೋಪಿಸಿದ. ದಾಸ್ತೋವ್‌ಸ್ಕಿಗೂ ತನ್ನ 'ಸಮರ್ಥನೀಯ ಹೆಮ್ಮೆ'ಗೂ ಯಾವುದೇ ಸಂಬಂಧವಿಲ್ಲ; ಅವನು ಪಾಪ ಮಾಡುವುದೇ ಪಶ್ಚಾತ್ತಾಪಪಡಲು ಮತ್ತು ತಪ್ಪೊಪ್ಪಿಗೆಯ ವೈಭವವನ್ನು ಆನಂದಿಸಲು. ಕ್ರಿಶ್ಚಿಯಾನಿಟಿಯ ವಿರುದ್ಧ ಅಂತಹ ತಪ್ಪುದಾರಿಯ ಆರೋಪವನ್ನು ಎಷ್ಟರ ಮಟ್ಟಿಗೆ ಅನ್ವಯಿಸಬಹುದು ಎಂಬ ಪ್ರಶ್ನೆಯ ಬಗ್ಗೆ ನಾನು ವಾದಿಸ ಹೋಗುವುದುಲ್ಲ, ಆದರೆ ದಾಸ್ತೋವ್‌ಸ್ಕಿಯ ಶರಣಾಗತಿಯು ತಿರಸ್ಕಾರಾರ್ಹವಾದುದು ಎಂಬ ನೀಷೆಯ ವಾದದನ್ನು ನಾನು ಒಪ್ಪುತ್ತೇನೆ. ಒಂದು ಮಟ್ಟದ ಎದೆಗಾರಿಕೆ ಹಾಗೂ ಹೆಮ್ಮೆಗಳು ಮತ್ತು ಒಂದು ಬಗೆಯ ಸ್ವಪ್ರತಿಷ್ಠಾಪನೆಗಳು ಅತ್ಯುತ್ತಮ ವ್ಯಕ್ತಿಯ ಲಕ್ಷಣಗಳು ಎಂಬುದನ್ನು ನಾನೂ ಒಪ್ಪುತ್ತೇನೆ; ತನ್ನ ಮೂಲವನ್ನು ಭಯದಲ್ಲಿ ಹೊಂದಿರದ ಎಲ್ಲ ಸದ್ಗುಣಗಳೂ ಮೆಚ್ಚಿಗೆಗೆ ಅರ್ಹವಾದವೇ.

ಸಂತರಲ್ಲಿ ಎರಡು ರೀತಿಯವರಿರುತ್ತಾರೆ: ಸ್ವಭಾವತಃ ಸಂತರು, ಭಯದಿಂದ ಸಂತರಾಗುವವರು. ಸ್ವಭಾವತಃ ಸಂತರಾದವರು ಮನುಕುಲದ ಬಗ್ಗೆ ಸ್ವಯಂಪ್ರೇರಿತ ಪ್ರೇಮವನ್ನು ಹೊಂದಿರುತ್ತಾರೆ; ಅವರು ಒಳ್ಳೆಯದನ್ನೇ ಮಾಡುತ್ತಾರೆ, ಅದೇ ಅವರಿಗೆ ಸಂತೋಷ ನೀಡುವಂಥದು. ಮತ್ತೊಂದೆಡೆಯಲ್ಲಿ, ಭಯದಿಂದ ಸಂತರಾಗುವವರು, ಪೋಲೀಸರ ಭಯದಿಂದ ಕಳ್ಳತನ ಮಾಡದಿರುವವರಂತೆ, ನರಕದ ಕಲ್ಪನೆ ಅಥವಾ ನೆರೆಯುವರ ಪ್ರತೀಕಾರದ ಕಾರಣದಿಂದ ಸಂಯಮದಿಂದಿರುತ್ತಾರೆ, ಇಲ್ಲದಿದ್ದರೆ ಅವರು ಕೆಡುಕರಾಗುತ್ತಾರೆ. ನೀಷೆ ಕೇವಲ ಎರಡನೆಯ ಬಗೆಯ ಸಂತರನ್ನು ಮಾತ್ರ ಕಲ್ಪಿಸಿಕೊಳ್ಳಬಲ್ಲ; ಅವರನ್ನು ಭಯ

ಮತ್ತು ದ್ವೇಷ ಎಷ್ಟು ಆವರಿಸಿರುತ್ತದೆಂದರೆ, ಅವರಿಗೆ ಸ್ವಯಂಪ್ರೇರಿತ ಪ್ರೇಮವು ಅಸಾಧ್ಯವೆಂಬಂತೆ ತೋರುತ್ತದೆ. ಅತಿಮಾನವನ ಭಯ ಮತ್ತು ಮೊಂಡು ಹೆಮ್ಮೆಗಳಿಂದ ಕೂಡಿಯೂ, ಸ್ವಯಂಪ್ರೇರಿತನಾಗಿ ಬೇರೆಯವರಿಗೆ ನೋವುಂಟುಮಾಡದ ವ್ಯಕ್ತಿಯನ್ನು ನೀಷೆ ಎಂದೂ ಕಲ್ಪಿಸಿಕೊಳ್ಳಲಾರ. ಲಿಂಕನ್ ಹಾಗೆ ನಡೆದುಕೊಂಡದ್ದು ನರಕದ ಭಯದಿಂದಲೇ? ಆದರೂ ನೀಷೆಯ ಪ್ರಕಾರ, ಲಿಂಕನ್ ತಿರಸ್ಕಾರಾರ್ಹ, ನೆಪೋಲಿಯನ್ ಭವ್ಯ ವ್ಯಕ್ತಿ.

ನೀಷೆ ಎತ್ತಿರುವ ಪ್ರಮುಖ ನೈತಿಕ ಪ್ರಶ್ನೆಯನ್ನು ಪರಿಶೀಲಿಸುವುದೊಂದು ಬಾಕಿ ಇದೆ. ಅದೆಂದರೆ: ನಮ್ಮ ನೈತಿಕತೆಯು ಶ್ರೀಮಂತವರ್ಗದ್ದೇ ಅಥವಾ ಎಲ್ಲರನ್ನೂ ಸಮಾನವೆಂದು ಪರಿಗಣಿಸುವಂಥದ್ದೇ? ಇದೀಗ ನಾನು ಹೇಳಿದಂತೆ, ಈ ಪ್ರಶ್ನೆಗೆ ಸ್ಪಷ್ಟವಾದ ಅರ್ಥವಿಲ್ಲ, ಮತ್ತು ಅದನ್ನು ಈ ವಿಷಯವನ್ನು ಮತ್ತಷ್ಟು ನಿಖರಗೊಳಿಸುವುದು ನಾವು ಮಾಡಬೇಕಾದ ಮೊದಲ ಕೆಲಸ.

ಮೊದಲನೆಯದಾಗಿ ನಾವು ಮಾಡಬೇಕಾದುದೆಂದರೆ, ಶ್ರೀಮಂತವರ್ಗದ ನೈತಿಕತೆ ಮತ್ತು ಶ್ರೀಮಂತವರ್ಗದ ರಾಜಕೀಯ ಸಿದ್ಧಾಂತಗಳ ನಡುವಣ ವ್ಯತ್ಯಾಸವನ್ನು ಗುರುತಿಸುವುದು. ಬಹು ಹೆಚ್ಚು ಜನರ ಬಹು ಪ್ರಮಾಣದ ಸೌಖ್ಯವು ಪ್ರಜಾಪ್ರಭುತ್ವಾತ್ಮಕ ನೈತಿಕತೆ ಎಂಬ ಬೆಂಥಮ್‌ನ ತತ್ತ್ವವನ್ನು ನಂಬಿದವನು, ಶ್ರೀಮಂತವರ್ಗದ ಸರ್ಕಾರವು ಸಾಮಾನ್ಯ ಸೌಖ್ಯವನ್ನು ಅತ್ಯಂತ ಸಮರ್ಥವಾಗಿ ಸಾಧಿಸಬಲ್ಲದು ಎಂದು ಆಲೋಚಿಸಬಹುದು. ನೀಷೆಯ ರೀತಿ ಇಂತಹುದಲ್ಲ. ಸಾಮಾನ್ಯ ಜನರ ಸೌಖ್ಯವು ಒಳಿತಿನ ಭಾಗವೇ ಅಲ್ಲ ಎಂಬುದು ಅವನ ನಿಲವು. ಒಳ್ಳೆಯದೋ ಕೆಟ್ಟದೋ ಇರುವುದು ಮೇಲುವರ್ಗದ ಕೆಲವರಿಗೆ ಸಂಬಂಧಿಸಿದಂತೆ ಮಾತ್ರ; ಮಿಕ್ಕವರಿಗೆ ಏನಾದರೂ ಆ ಕಡೆ ಗಮನವಿಲ್ಲ.

ಮುಂದಿನ ಪ್ರಶ್ನೆಯೆಂದರೆ: ಮೇಲುವರ್ಗದ ಕೆಲವರು ಅಂದರೆ ಯಾರು? ಎಂಬುದು. ಕಾರ್ಯತಃ, ಅವರು ಸಾಮಾನ್ಯವಾಗಿ ಗೆದ್ದ ಜನಾಂಗ ಅಥವಾ ಆನುವಂಶಿಕ ಶ್ರೀಮಂತವರ್ಗ, ಮತ್ತು ಶ್ರೀಮಂತಪ್ರಭುತ್ವವು ಸಾಮಾನ್ಯವಾಗಿ, ಕನಿಷ್ಠ ಪಕ್ಷ ಸೈದ್ಧಾಂತಿಕವಾಗಿ, ಗೆದ್ದ ಜನಾಂಗಗಳ ವಂಶೀಯರು. ನೀಷೆ ಈ ವ್ಯಾಖ್ಯೆಯನ್ನು ಒಪ್ಪಬಹುದೆಂದು ನಾನು ಭಾವಿಸುತ್ತೇನೆ. 'ಒಳ್ಳೆಯ ಹುಟ್ಟಿನಿಂದಲ್ಲದೆ ನೈತಿಕತೆ ಸಾಧ್ಯವಿಲ್ಲ' ಎಂದು ಅವನು ಹೇಳುತ್ತಾನೆ. ಉದಾತ್ತ ವರ್ಗವು ಯಾವಾಗಲೂ ಮೊದಲಿಗೆ ಬರ್ಬರರಾಗಿದ್ದು, ಮನುಷ್ಯನ ಪ್ರತಿ ಉನ್ನತಿಕೆಯೂ ಶ್ರೀಮಂತವರ್ಗದ ಸಮಾಜದಿಂದ ಸಾಧ್ಯವಾಗಿರುತ್ತದೆ ಎಂಬುದೂ ಅವನ ನಂಬಿಕೆ.

ಶ್ರೀಮಂತವರ್ಗದವರ ಔನ್ನತ್ಯಕ್ಕೆ ಅವರ ಆನುವಂಶೀಯತೆ ಕಾರಣವೋ ಅಥವಾ ಶಿಕ್ಷಣ ಅಥವಾ ಪರಿಸರವೋ ಎಂಬುದನ್ನು ನೀಷೆ ಪರಿಗಣಿಸುವ ಬಗೆ ಸ್ಪಷ್ಟವಾಗುವುದಿಲ್ಲ. ಅವನ ಆಯ್ಕೆ ಎರಡನೆಯದಾಗಿದ್ದರೆ, ಅದಕ್ಕನುಗುಣವಾಗಿ

ತಾವೂ ಅಷ್ಟೇ ಸಮಾನರಾಗಿರುವ ಉಳಿದವರನ್ನು ಸವಲತ್ತುಗಳಿಂದ ಹೊರತಾಗಿಸುವುದಕ್ಕೆ ಯಾವ ಸಮರ್ಥನೆಯೂ ಇರುವುದಿಲ್ಲ. ಹೀಗಾಗಿ, ಅವನ ಪ್ರಕಾರ ಗೆದ್ದ ಶ್ರೀಮಂತವರ್ಗದವರು ಮತ್ತವರ ವಂಶೀಯರು, ಮನುಷ್ಯರು ಸಾಕುಪ್ರಾಣಿಗಳಿಗಿಂತ, ಮತ್ತಷ್ಟು ಕಡಿಮೆ ಪ್ರಮಾಣದಲ್ಲಿ ಉತ್ತಮರಾಗಿರುವಂತೆ, ತಮ್ಮ ಪ್ರಜೆಗಳಿಗಿಂತ ಜೈವಿಕವಾಗಿ ಉತ್ತಮರು ಎಂಬುದು ಅವನ ನಿಲವು ಎಂದು ನಾನು ಊಹಿಸಿಕೊಳ್ಳಬೇಕಾಗುತ್ತದೆ.

'ಜೈವಿಕವಾಗಿ ಉತ್ತಮರಾಗಿರುವುದು' ಎಂದರೇನು? ನೀಷೆಯನ್ನು ವ್ಯಾಖ್ಯಾನಿಸುವಾಗ, ನಮ್ಮ ಅರ್ಥವು ಉತ್ತಮ ಜನಾಂಗದ ವ್ಯಕ್ತಿಗಳು ಮತ್ತವರ ವಂಶೀಯರು, ನೀಷೆಯ ಪ್ರಕಾರ 'ಉದಾತ್ತ'ರಾಗುವ ಹೆಚ್ಚು ಸಾಧ್ಯತೆಯನ್ನು ಪಡೆದಿರುತ್ತಾರೆ; ಅವರಿಗೆ ಹೆಚ್ಚಿನ ಇಚ್ಛಾಶಕ್ತಿ, ಹೆಚ್ಚು ಧೈರ್ಯ ಅಧಿಕಾರದ ಬಗೆಗಿನ ಹೆಚ್ಚಿ ತುಡಿತ, ಮತ್ತು ಕಡಿಮೆ ಸಹಾನುಭೂತಿ, ಕಡಿಮೆ ಭಯ ಮತ್ತು ಕಡಿಮೆ ಸೌಜನ್ಯಗಳಿರುತ್ತವೆ ಎಂಬುದಾಗಿರಬೇಕು.

ನಾವೀಗ ನೀಷೆಯ ನೈತಿಕತೆಯನ್ನು ಮಂಡಿಸಬಹುದು. ಮುಂದಿನದು ಅದರ ನಿಷ್ಪಕ್ಷಪಾತ ವಿಶ್ಲೇಷಣೆ ಎಂಬುದು ನನ್ನ ಭಾವನೆ.

ಯುದ್ಧದಲ್ಲಿ ಗೆಲವನ್ನು ಪಡೆದವರು ಮತ್ತವರ ವಂಶೀಯರು ಸಾಮಾನ್ಯವಾಗಿ ಸೋತವರಿಗಿಂತ ಜೈವಿಕವಾಗಿ ಉತ್ತಮರಾಗಿರುತ್ತಾರೆ. ಹೀಗಾಗಿ, ಅವರೇ ಎಲ್ಲ ಅಧಿಕಾರಗಳನ್ನು ಹೊಂದಿರಬೇಕಾದುದು ಅಪೇಕ್ಷಣೀಯ ಮತ್ತು ತಮ್ಮ ಹಿತಾಸಕ್ತಿಗಳಿಗೆ ಅನುಗುಣವಾಗಿ ವ್ಯವಹಾರಗಳನ್ನು ನಿಭಾಯಿಸಬೇಕು.

ಇಲ್ಲಿ ಇನ್ನೂ 'ಅಪೇಕ್ಷಣೀಯ' ಎಂಬ ಶಬ್ದ ಉಳಿದಿದೆ, ಅದರರ್ಥವನ್ನು ಸ್ಪಷ್ಟಪಡಿಸಬೇಕು. ನೀಷೆಯ ದೃಷ್ಟಿಕೋನದಂತೆ, ನೀಷೆ ಯಾವುದನ್ನು ಅಪೇಕ್ಷಣೀಯ ಎನ್ನುತ್ತಾನೆಯೋ ಅದು ನೀಷೆ ಅಪೇಕ್ಷಿಸುವಂಥದು. ಈ ವ್ಯಾಖ್ಯಾನದೊಡನೆ, ನೀಷೆಯ ಸಿದ್ಧಾಂತವನ್ನು ಹೆಚ್ಚು ಸರಳತೆ ಮತ್ತು ಪ್ರಾಮಾಣಿಕತೆಯಿಂದ ಒಂದೇ ವಾಕ್ಯದಲ್ಲಿ ಹೀಗೆ ಮಂಡಿಸಬಹುದು: 'ನಾನು ಪೆರಿಕ್ಲೀಸ್‌ನ ಅಥೆನ್ಸ್‌ನಲ್ಲಿಯೋ ಮೆಡಿಸಿಯ ಫ್ಲಾರೆನ್ಸ್‌ನಲ್ಲಿಯೋ ಬದುಕಿರಬೇಕಾಗಿತ್ತು ಎಂಬುದು ನನ್ನ ಅಪೇಕ್ಷೆ.' ಆದರೆ ಇದು ತಾತ್ವಿಕತೆಯಲ್ಲ; ಯಾವುದೋ ಒಬ್ಬ ವ್ಯಕ್ತಿಯ ಆತ್ಮಚರಿತ್ರಾತ್ಮಕ ವಾಸ್ತವ. 'ಅಪೇಕ್ಷಣೀಯ' ಎಂಬ ಪದವು 'ನಾನು ಇಷ್ಟಪಡುವಂತೆ' ಎಂಬುದರ ಸಮಾನಾರ್ಥಕವಲ್ಲ; ಎಷ್ಟೇ ಅನಿರ್ದಿಷ್ಟವಾಗಿಯಾಗಲೀ ಅದಕ್ಕೆ ಸಾರ್ವತ್ರಿಕವಾಗಿ ಅನ್ವಯವಾಗುವ ಯೋಗ್ಯತೆಯಿರುತ್ತದೆ. ದೇವರಲ್ಲಿ ನಂಬಿಕೆ ಹೊಂದಿದವನ ದೃಷ್ಟಿಯಲ್ಲಿ ದೇವರ ಇಚ್ಛೆ ಮಾತ್ರ ಅಪೇಕ್ಷಣೀಯವಾದುದು, ಆದರೆ ನೀಷೆ ಇದನ್ನು ಹೇಳುವಂತಿಲ್ಲ. ತನ್ನ ನೈತಿಕ ಅಂತರ್ಬೋಧೆಯಿಂದ ತಾನು ಹಾಗೆ ತಿಳಿದಿರುವುದಾಗಿ ಹೇಳಬಹುದು. ಅವನು ಇದನ್ನೂ ಹೇಳಲಾರ, ಯಾಕೆಂದರೆ ಅದು ತೀರ ಕ್ಯಾಂಟ್‌ನದರಂತೆ

ಕಾಣುತ್ತದೆ. 'ಅಪೇಕ್ಷಣೀಯ' ಎಂಬುದರ ವಿವರಣಾತ್ಮಕವಾಗಿ ಅವನೇನು ಹೇಳಬಹುದು ಎಂದರೆ ಇದು: 'ಜನರು ನನ್ನ ಪುಸ್ತಕವನ್ನು ಓದಿದರೆ, ಅವರಲ್ಲಿನ ಕೆಲವರು ಸಮಾಜದ ಸಂಘಟನೆಯ ಬಗೆಗಿನ ನನ್ನ ಅಪೇಕ್ಷೆಗಳಾವುವು ಎನ್ನುವುದನ್ನು ಒಪ್ಪಬಹುದು; ಈ ಜನರು ನನ್ನ ತಾತ್ವಿಕತೆಯು ನೀಡುವ ಸಾಮರ್ಥ್ಯ ಮತ್ತು ನಿರ್ಧಾರಕತೆಯಿಂದ ಪ್ರೇರಿತರಾಗಿ, ತಾವೇ ಶ್ರೀಮಂತವರ್ಗದವರಾಗಿ ಅಥವಾ (ನನ್ನಂತೆ) ಶ್ರೀಮಂತಪ್ರಭುತ್ವದ ಹೊಗಳುಭಟ್ಟರಾಗಿ, ಶ್ರೀಮಂತಪ್ರಭುತ್ವವನ್ನು ಪುನರುಜ್ಜೀವನಗೊಳಿಸಿಬಹುದು ಮತ್ತು ಸಂರಕ್ಷಿಸಬಹುದು. ಈ ರೀತಿಯಲ್ಲಿ ಅವರು ಜನರ ಸೇವಕರಾಗಿ ಪಡೆಯುವುದಕ್ಕಿಂತ ಹೆಚ್ಚಿನ ಪರಿಪೂರ್ಣ ಬದುಕನ್ನು ಸಾಧಿಸಬಹುದು.'

ನೀಷೆಯಲ್ಲಿ ಮತ್ತೊಂದು ಅಂಶವೂ ಇದೆ, ಅದು ಕಾರ್ಮಿಕ ಸಂಘಟನೆಗಳ ವಿರುದ್ಧವಾಗಿ ಒರಟು ವ್ಯಕ್ತಿವಾದಿಗಳು ಮುಂದೊಡ್ಡುವ ಆಕ್ಷೇಪಣೆಗೆ ತೀರ ಸನಿಹವಾದುದು. ಎಲ್ಲರೂ ಎಲ್ಲರೊಡನೆ ಮಾಡುವ ಯುದ್ಧದಲ್ಲಿ ಗೆದ್ದವರು, ಧೈರ್ಯ, ವ್ಯವಹಾರಕೌಶಲ, ಮತ್ತು ಇಚ್ಛಾಶಕ್ತಿಯ ಸಾಮರ್ಥ್ಯಗಳಂತಹ, ನೀಷೆ ಮೆಚ್ಚಿಕೊಳ್ಳುವ, ಕೆಲವು ಗುಣಗಳನ್ನು ಪಡೆಯುವ ಅವಕಾಶರುತ್ತದೆ. ಆದರೆ ಈ ಶ್ರೀಮಂತವರ್ಗದ ಗುಣಗಳನ್ನು ಪಡೆದಿರದ ಜನರು (ಆಂತಹವರೇ ಬಹುಸಂಖ್ಯಾತರು) ತಮ್ಮದೇ ಗುಂಪನ್ನು ಮಾಡಿಕೊಳ್ಳುತ್ತಾರೆ, ತಮ್ಮ ವೈಯಕ್ತಿಕ ಕೀಳ್ತನದ ಹೊರತಾಗಿಯೂ ಅವರು ಗೆಲ್ಲಬಹುದು. ಈ ಸಾಮಾನ್ಯ ಜನಸಮೂಹ ಮತ್ತು ಶ್ರೀಮಂತವರ್ಗದ ನಡುವಣ ಹೋರಾಟದಲ್ಲಿ, ಕ್ರಿಶ್ಚಿಯಾನಿಟಿಯು ಆದರ್ಶ ಹೊಂದಿದ ಮುಂಚೂಣಿ ಬಣ, ಫ್ರೆಂಚ್ ಕ್ರಾಂತಿಯು ಹೋರಾಟದ ಮುಂಚೂಣಿಯಾಗಿದ್ದಂತೆ. ಹೀಗಾಗಿ ವೈಯಕ್ತಿಕವಾಗಿ ದುರ್ಬಲರಾದವರ ಯಾವುದೇ ಬಗೆಯ ಸಂಘಟನೆಯನ್ನು ನಾವು ತಡೆಗಟ್ಟಬೇಕು, ಇಲ್ಲದಿದ್ದರೆ ವೈಯಕ್ತಿಕವಾಗಿ ಬಲಿಷ್ಠರಾದವರ ಬಣಕ್ಕಿಂತ ಪ್ರಬಲವಾಗಿಬಿಡಬಹುದು; ಮತ್ತೊಂದು ಕಡೆಯಲ್ಲಿ, ಜನರಲ್ಲಿನ ಗಡಸು ವ್ಯಕ್ತಿಗಳು ಹಾಗೂ ವೀರ್ಯವಂತರ ಒಗ್ಗೂಡುವಿಕೆಯನ್ನು ಪ್ರೋತ್ಸಾಹಿಸಬೇಕು. ಅಂಥ ಸಂಘಟನೆಯನ್ನು ಆಗುಮಾಡುವ ದಿಸೆಯಲ್ಲಿನ ಮೊದಲ ಹೆಜ್ಜೆಯೆಂದರೆ, ನೀಷೆ ತಾತ್ವಿಕತೆಯ ಬೋಧನೆ. ನೈತಿಕತೆ ಮತ್ತು ರಾಜಕೀಯಗಳ ನಡುವಣ ವ್ಯತ್ಯಾಸವನ್ನು ಉಳಿಸಿಕೊಳ್ಳುವುದು ಸುಲಭವಲ್ಲ ಎಂಬುದು ಇದರಿಂದ ತಿಳಿಯುತ್ತದೆ.

ನೀಷೆಯ ನೈತಿಕತೆ ಮತ್ತು ರಾಜಕೀಯಗಳ ವಿರುದ್ಧದ ವಾದಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸಿದರೆ – ನಾನಂತೂ ಇದನ್ನು ಬಯಸುತ್ತೇನೆ – ಯಾವ ವಾದಗಳನ್ನು ಕಾಣಬಹುದು?

ಕೆಲವು ತೂಕದ ಕಾರ್ಯಸಾಧ್ಯವಾದ ವಾದಗಳಿವೆ, ಅವನ ಉದ್ದೇಶಗಳು

ಸಫಲಗೊಳ್ಳುವ ಬದಲು ಅವಕ್ಕೆ ಭಿನ್ನವಾದ ಉದ್ದೇಶಗಳು ನೆರವೇರುವುದೆಂಬುದನ್ನು ಅವುಗಳೂ ತೋರಿಸುತ್ತವೆ. ಹುಟ್ಟಿನಿಂದ ಶ್ರೀಮಂತವರ್ಗಕ್ಕೆ ಸೇರಿದವರನ್ನು ಈಗ ಯಾರೂ ಮರ್ಯಾದೆಯಿಂದ ಕಾಣುವುದಿಲ್ಲ; ಕಾರ್ಯಸಾಧ್ಯವಾದ ಒಂದು ಬಗೆಯ ಶ್ರೀಮಂತವರ್ಗದ ರೂಪವೆಂದರೆ ಫ್ಯಾಸಿಸ್ಟ್ ಅಥವಾ ನಾಜ಼ಿ ಪಕ್ಷಗಳಂತಹ ಸಂಘಟನೆ. ಅಂಥ ಸಂಘಟನೆಯು ವಿರೋಧದ ಅಲೆಗಳನ್ನೆಬ್ಬಿಸುತ್ತದೆ, ಮತ್ತು ಯುದ್ಧದಲ್ಲಿ ಅದು ಸೋಲುವ ಸಂಭವವಿರುತ್ತದೆ. ಅದನ್ನು ಸೋಲಿಸಲಾಗದಿದ್ದರೆ, ಅದು ಅನತಿ ಕಾಲದಲ್ಲಿಯೇ, ಪೋಲೀಸ್ ರಾಜ್ಯವಾಗಿಬಿಡಬಹುದು. ಆಗ ಆಳ್ವಿಕೆ ನಡೆಸುವವರು ಕೊಲೆಯ ಭಯದ ಮೂಲಕ ಆಡಳಿತ ನಡೆಸಬಹುದು, ಆಗ ಮುಂದಾಳುಗಳು ಶ್ರಮಶಿಬಿರಗಳಲ್ಲಿ ಇರಬೇಕಾಗುತ್ತದೆ. ಇಂಥ ಸಮಾಜದಲ್ಲಿ, ನಂಬಿಕೆ ಮತ್ತು ಗೌರವಗಳನ್ನು ಆಪಾದನೆಗಳ ಮೂಲಕ ಹಿಂಡಿಹಾಕಬಹುದು, ಭವಿಷ್ಯದ ಶ್ರೀಮಂತವರ್ಗದ ಅತಿಮಾನವರು ನಡುಗುವ ಅಂಜುಕುಳಿಗಳ ಒಂದು ಕೂಟವಾಗಿ ಅವನತಿ ಹೊಂದಬಹುದು.

ಇವು ನಮ್ಮ ಕಾಲದ ವಾದಗಳು; ಹಿಂದೆ ಶ್ರೀಮಂತವರ್ಗವು ಪ್ರಶ್ನಾತೀತವಾಗಿದ್ದ ಕಾಲಗಳಲ್ಲಿ ಅವುಗಳನ್ನು ಯಾರೂ ಮಂಡಿಸಿದ್ದಿರಲಾರರು. ಹಲವಾರು ಸಾವಿರ ವರ್ಷಗಳ ಕಾಲ ಈಜಿಪ್ಷಿಯನ್ ಸರ್ಕಾರವು ನೀಷೆಯ ತತ್ವಗಳಿಗನುಗುಣವಾಗಿಯೇ ನಡೆಯುತ್ತಿತ್ತು. ಅಮೆರಿಕನ್ ಮತ್ತು ಫ್ರೆಂಚ್ ಕ್ರಾಂತಿಗಳವರೆಗೂ ಬಹುತೇಕ ಎಲ್ಲ ದೊಡ್ಡ ದೇಶಗಳ ಸರ್ಕಾರಗಳೂ ಶ್ರೀಮಂತಪ್ರಭುತ್ವದವೇ ಆಗಿದ್ದವು. ಹೀಗಾಗಿ ನಮಗೆ ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ, ಇಷ್ಟು ದೀರ್ಘವಾದ ಯಶಸ್ವೀ ಸರ್ಕಾರಗಳ ಇತಿಹಾಸವಿದ್ದರೂ ಅದರ ಬದಲಾಗಿ ನಾವು ಪ್ರಜಾಪ್ರಭುತ್ವ ಸರ್ಕಾರವನ್ನು ಬಯಸುವುದಕ್ಕೆ ಸಮಂಜಸ ಕಾರಣವಿದೆಯೇ ಎಂಬುದು; ಅಥವಾ, ನಾವು ರಾಜಕೀಯಕ್ಕೆ ಹೊರತಾದ ತಾತ್ವಿಕತೆಯ ಬಗ್ಗೆ ಆಲೋಚಿಸುತ್ತಿರುವುದರಿಂದ, ಶ್ರೀಮಂತಪ್ರಭುತ್ವವನ್ನು ಬೆಂಬಲಿಸುವ ನೀಷೆಯ ನೈತಿಕತೆಯನ್ನು ತಿರಸ್ಕರಿಸಲು ನಮಗೆ ಗಟ್ಟಿಯಾದ ನೆಲೆಯಿದೆಯೇ ಎಂಬುದು.

ರಾಜಕೀಯಕ್ಕೆ ವ್ಯತಿರಿಕ್ತವಾದ ನೈತಿಕ ಪ್ರಶ್ನೆಯು ಸಹಾನುಭೂತಿಗೆ ಸಂಬಂಧಿಸಿದ್ದು. ಇತರರ ನರಳುವಿಕೆಯಿಂದ ಅಸಂತೋಷವಾಗುವ ಅರ್ಥದಲ್ಲಿ ಸಹಾನುಭೂತಿಯು, ಒಂದು ಪ್ರಮಾಣದಲ್ಲಿ ಮಾನವರಿಗೆ ಸಹಜವಾದುದು; ಮಿಕ್ಕ ಮಕ್ಕಳು ಅಳುವುದನ್ನು ಕಂಡು ಚಿಕ್ಕ ಮಕ್ಕಳೂ ಅಳುತ್ತವೆ. ಆದರೆ ಈ ಭಾವನೆಯ ಬೆಳವಣಿಗೆಯು ಬೇರೆ ಬೇರೆ ಜನಗಳಲ್ಲಿ ಬೇರೆ ಬೇರೆ ರೀತಿಯಾಗಿರುತ್ತದೆ. ನೋವು ಕೊಡುವುದರಲ್ಲಿಯೇ ಕೆಲವರಿಗೆ ಸಂತೋಷ; ಬುದ್ಧನಂತಹ ಇತರರು, ಯಾವುದೇ ಜೀವಿಯು ನರಳುತ್ತಿರುವವರೆಗೂ ತಾವು ಪೂರ್ತಿ ಸಂತೋಷದಿಂದಿರಲು ಸಾಧ್ಯವಿಲ್ಲವೆಂದು ಭಾವಿಸುತ್ತಾರೆ. ಬಹುತೇಕ ಜನ ಭಾವನಾತ್ಮಕವಾಗಿ ಮಾನವ

ಸಂಕುಲವನ್ನು ಗೆಳೆಯರು ಮತ್ತು ಶತ್ರುಗಳೆಂದು ಸ್ಥೂಲವಾಗಿ ವಿಭಾಗಿಸುತ್ತಾರೆ; ಮೊದಲನೆ ಗುಂಪಿನ ಬಗ್ಗೆ ಅವರಿಗೆ ಸಹಾನುಭೂತಿ, ಆದರೆ ಎರಡನೆಯ ಗುಂಪಿನ ಬಗ್ಗೆಯಲ್ಲ. ಕ್ರೈಸ್ತ ಅಥವಾ ಬೌದ್ಧ ನೈತಿಕತೆಯು ಸಾರ್ವತ್ರಿಕ ಸಹಾನುಭೂತಿಯನ್ನು ತನ್ನ ಭಾವನಾತ್ಮಕ ನೆಲೆಯಾಗಿ ಹೊಂದಿರುತ್ತದೆ; ಆದರೆ ನೀಷೆಯದರಲ್ಲಿ ಸಹಾನುಭೂತಿಯು ಕೊಂಚವಾದರೂ ಇಲ್ಲ. (ಅವನು ಸಹಾನುಭೂತಿಯ ವಿರುದ್ಧವಾಗಿಯೇ ಪದೇ ಪದೇ ಬೋಧಿಸುತ್ತಾನೆ, ತನ್ನ ತತ್ವಗಳ ಪಾಲನೆಯಲ್ಲಿ ಅವನಿಗೆ ಯಾವುದೇ ಕಷ್ಟ ಎದುರಾಗುವುದಿಲ್ಲವೆಂಬ ಭಾವನೆ ಉಂಟಾಗುತ್ತದೆ.) ಪ್ರಶ್ನೆಯೆಂದರೆ, ಬುದ್ಧ ಮತ್ತು ನೀಷೆ ಎದುರುಬದುರಾಗಿದ್ದರೆ, ನಿಷ್ಪಕ್ಷಪಾತ ಕೇಳುಗನಿಗೆ ಮನವರಿಕೆ ಮಾಡುವ ಯಾವುದಾದರೂ ವಾದವನ್ನು ಮಂಡಿಸುತ್ತಿದ್ದರೇ? ನಾನು ರಾಜಕೀಯ ವಾದಗಳ ಬಗ್ಗೆ ಯೋಚಿಸುತ್ತಿಲ್ಲ. ಜೋಬ್‌ನ ಮೊದಲ ಅಧ್ಯಾಯದಲ್ಲಿನಂತೆ, ಅವರಿಬ್ಬರೂ ದೇವರ ಮುಂದೆ ನಿಂತು, ಎಂತಹ ಜಗತ್ತನ್ನು ಸೃಷ್ಟಿಸಬೇಕೆಂಬ ಬಗ್ಗೆ ಸಲಹೆ ನೀಡುತ್ತಿದ್ದರು. ಇಬ್ಬರೂ ಏನು ಹೇಳಬಹುದಾಗಿತ್ತು?

ಬುದ್ಧ ತನ್ನ ಮಾತುಗಳನ್ನು ಕುಷ್ಠರೋಗಿಗಳು, ದಲಿತರು ಮತ್ತು ದರಿದ್ರರ ಬಗ್ಗೆ; ತಿನ್ನಲು ಸಾಕಷ್ಟಿಲ್ಲದೆ ಹೇಗೋ ಜೀವಿಸುತ್ತಿರುವ ನೋಯುವ ಕೈಕಾಲುಗಳ ಮೂಲಕ ದುಡಿಯುವ ಬಡವರ ಬಗ್ಗೆ; ಯುದ್ಧದಲ್ಲಿ ಗಾಯಗೊಂಡು ನರಳುತ್ತ ಸಾಯುತ್ತಿರುವವರ ಬಗ್ಗೆ; ಪೋಷಕರ ದೌರ್ಜನ್ಯಕ್ಕೊಳಗಾದ ಅನಾಥರ ಬಗ್ಗೆ; ಸೋಲು ಮತ್ತು ಸಾವುಗಳ ಆಲೋಚನೆಯಿಂದ ಜರ್ಜರಿತವಾದ ಯಶಸ್ವೀ ಜನಗಳ ಬಗ್ಗೆ ಕೂಡ; ಪ್ರಸ್ತಾಪಿಸುವುದರ ಮೂಲಕ ಆರಂಭಿಸುತ್ತಿದ್ದ. ದುಃಖದ ಈ ಎಲ್ಲ ಭಾರದಿಂದ ಪಾರಾಗುವ ಮಾರ್ಗವನ್ನು ಕಂಡುಕೊಳ್ಳಬೇಕು, ಮತ್ತು ಅದು ಪ್ರೇಮದಿಂದ ಮಾತ್ರವೇ ಸಾಧ್ಯವಾಗುತ್ತದೆ ಎನ್ನುತ್ತಿದ್ದ.

ಸರ್ವಶಕ್ತಿಯು ಮಾತ್ರ ವ್ಯಾಖ್ಯಾನಿಸುವುದನ್ನು ನಿಯಂತ್ರಿಸಬಹುದಾಗಿದ್ದ ನೀಷೆಯು ತನ್ನ ಸರದಿ ಬಂದಾಗ ಹೀಗೆ ಬೊಬ್ಬಿರಿಯುತ್ತಿದ್ದ: 'ದೇವರೇ, ಮನುಷ್ಯನೇ, ನೀನು ನಾರಿಗಿಂತ ಜಿಗುಟಾಗಿರುವುದನ್ನು ಕಲಿತುಕೋ. ಯಾರೋ ಕೆಲಸಕ್ಕೆ ಬಾರದವರು ನರಳುತ್ತಾರೆಂದು, ಅಥವಾ, ಮಹಾ ಪುರುಷರು ನರಳುತ್ತಾರೆ ಎಂದೂ ಆಗಬಹುದು, ನೀನೇಕೇ ಮೂಗೊರೆಸಿಕೊಳ್ಳಬೇಕು? ಕ್ಷುಲ್ಲಕ ಜನಗಳು ಕ್ಷುಲ್ಲಕ ರೀತಿಯಲ್ಲಿ ನರಳುತ್ತಾರೆ, ಮಹಾ ಪುರುಷರು ಮಹಾ ರೀತಿಯಲ್ಲಿ ನರಳುತ್ತಾರೆ, ಇಂಥ ಮಹಾ ನರಳಿಕೆಗಳ ಬಗ್ಗೆ ದುಃಖಿಸಬಾರದು, ಯಾಕೆಂದರೆ ಅವರು ಉದಾತ್ತರು. ನಿಮ್ಮ ಆದರ್ಶವು ಪೂರ್ತಿ ನೇತ್ಯಾತ್ಮಕವಾದುದು, ಅದು ಸಂಪೂರ್ಣ ಅನಸ್ತಿತ್ವದಿಂದ ಮಾತ್ರ ಸಾಧಿಸಬಹುದು. ಮತ್ತೊಂದೆಡೆಯಲ್ಲಿ, ನನಗೆ ಇತ್ಯಾತ್ಮಕ ಆದರ್ಶಗಳಿವೆ: ನಾನು ಆಲ್ಸಿಬಿಯಾಡೀಸ್‌ನನ್ನು, ಎರಡನೆಯ ಫ್ರೆಡೆರಿಕ್ ಚಕ್ರವರ್ತಿಯನ್ನು, ಮತ್ತು

ನೆಪೋಲಿಯನ್‌ನನ್ನು ಮೆಚ್ಚಿಕೊಳ್ಳುತ್ತೇನೆ. ಅಂತಹ ವ್ಯಕ್ತಿಗಳಿಗಾಗಿ ಯಾವುದೇ ಬಗೆಯ ಯಾತನೆಯೂ ಸಾರ್ಥಕವೇ. ದೇವರೇ, ನಾನು ಕೇಳಿಕೊಳ್ಳುವುದಿಷ್ಟೇ: ಅತ್ಯಂತ ಶ್ರೇಷ್ಠ ಸೃಜನಾತ್ಮಕ ಕಲೆಗಾರನಾದ ನೀನು ನಿನ್ನ ಕಲಾತ್ಮಕ ಪ್ರವೃತ್ತಿಯನ್ನು ಈ ಕ್ಷುದ್ರ ಬಡಪಾಯಿ ಮನೋವಿಕಾರಿಗಳ ಭಯಗ್ರಸ್ತ ಬಡಬಡಿಕೆಗಳಿಂದ ಕುಂಠಿತಗೊಳಿಸಬೇಡ.

'ಸತ್ತ ಬಳಿಕ ಚರಿತ್ರೆಯನ್ನೆಲ್ಲ ಸ್ವರ್ಗದಲ್ಲಿಯೇ ತಿಳಿದುಕೊಂಡ, ಹಾಗೂ ವಿಜ್ಞಾನವನ್ನು ಸಂತೋಷದಿಂದ ತಿಳಿವಳಿಕೆಯ ಭಾಗವಾಗಿ ಕೈವಶಮಾಡಿಕೊಂಡ ಹಾಗೂ ಅದನ್ನು ಮನುಷ್ಯರು ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ದುಃಖಿತನಾದ ಸುಸಂಸ್ಕೃತ ಬುದ್ಧನು ಪ್ರಶಾಂತನಾಗಿ ಹೀಗೆ ಉತ್ತರಿಸುತ್ತಿದ್ದ: 'ಪ್ರಾಧ್ಯಾಪಕ ನೀಷೆಯವರೇ, ನನ್ನ ಆದರ್ಶವು ಸಂಪೂರ್ಣವಾಗಿ ನೇತ್ಯಾತ್ಮಕವಾದುದೆಂದು ತಾವು ತಪ್ಪು ತಿಳಿದಿದ್ದೀರಿ. ಅದರಲ್ಲಿ ಒಂದು ನೇತ್ಯಾತ್ಮಕ ಅಂಶವಿರುವುದು ನಿಜ, ಅದೆಂದರೆ ನರಳುವಿಕೆಯೇ ಇಲ್ಲದಿರುವುದು. ಆದರೆ ಅದರಲ್ಲಿ ನಿಮ್ಮ ಸಿದ್ಧಾಂತದಲ್ಲಿರುವ ಸಾಕಷ್ಟು ಇತ್ಯಾತ್ಮಕ ಅಂಶಗಳೂ ಸೇರಿವೆ. ನನಗೆ ಆಲ್ಸಿಬಿಯಾಡೀಸ್ ಮತ್ತು ನೆಪೋಲಿಯನ್‌ರ ಬಗ್ಗೆ ವಿಶೇಷ ಮೆಚ್ಚಿಕೆಯಿಲ್ಲದಿದ್ದರೂ, ನನಗೆ ನನ್ನವರೇ ಆದ ಮಹಾಪುರುಷರಿದ್ದಾರೆ: ನನ್ನ ಉತ್ತರಾಧಿಕಾರಿ ಜೀಸಸ್, ಯಾಕೆಂದರೆ ಶತ್ರುಗಳನ್ನೂ ಪ್ರೀತಿಸಿ ಎಂದು ಜನರಿಗೆ ಹೇಳಿದ; ಪ್ರಕೃತಿಯ ಶಕ್ತಿಗಳ ಮೇಲೆ ಹಿಡಿತ ಸಾಧಿಸಿ ಕಡಿಮೆ ಶ್ರಮದಿಂದ ಆಹಾರವನ್ನು ಸಂಪಾದಿಸುವುದನ್ನು ಕಂಡುಹಿಡಿದ ಜನರು; ಕಾಯಿಲೆಗಳನ್ನು ಹೇಗೆ ಕಡಿಮೆಗೊಳಿಸಬಹುದೆಂದು ಕಂಡುಹಿಡಿದ ವೈದ್ಯಕೀಯ ವ್ಯಕ್ತಿಗಳು; ದೈವಾನುಗ್ರಹದ ಸೆಳಕುಗಳನ್ನು ಸೆರೆಹಿಡಿದ ಕವಿಗಳು, ಕಲೆಗಾರರು ಮತ್ತು ಸಂಗೀತಗಾರರು. ಪ್ರೇಮ ಮತ್ತು ತಿಳಿವಳಿಕೆ ಹಾಗೂ ಚೆಲುವಿನಲ್ಲಿನ ಸಂತೋಷ ಇವುಗಳಾವುವೂ ನೇತ್ಯಾತ್ಮಕವಲ್ಲ. ಎಲ್ಲ ಕಾಲದ ಮಹಾಪುರುಷರ ಬದುಕುಗಳನ್ನು ತುಂಬಲು ಇಷ್ಟು ಸಾಕು.'

ನೀಷೆಯ ಉತ್ತರ: 'ಅದೇ ವೇಳೆಗೆ, ನಿಮ್ಮ ಜಗತ್ತು ಸಪ್ಪೆಯಾಗಿರುತ್ತದೆ. ನೀವು ಹೆರಾಕ್ಲಿಟಸ್ ಅನ್ನು ಓದಬೇಕು, ಅವನ ಸಮಗ್ರ ಕೃತಿಗಳು ಸ್ವರ್ಗದ ಗ್ರಂಥಾಲಯದಲ್ಲಿ ದೊರಕುತ್ತವೆ. ನಿಮ್ಮ ಪ್ರೇಮ ಎಂಬುದು ಅನುಕಂಪೆ, ಅದನ್ನು ನೋವಿನಿಂದ ಹಿಂಡಿ ತೆಗೆಯಲಾಗಿದೆ; ನಿಮ್ಮ ಸತ್ಯ, ನೀವು ಪ್ರಾಮಾಣಿಕರಾಗಿದ್ದರೆ, ಅಸಂತೋಷಕರವಾದುದು, ಅದನ್ನು ನರಳುವಿಕೆಯ ಮೂಲಕ ಮಾತ್ರವೇ ತಿಳಿಯಬಹುದು; ಇನ್ನು ಚೆಲುವಿನ ಬಗ್ಗೆ, ಹುಲಿಗಿಂತ ಹೆಚ್ಚು ಸುಂದರವಾದುದು ಎಲ್ಲಿದೆ? ತನ್ನ ಉಗ್ರತೆಯಿಂದಲೇ ಅದಕ್ಕೆ ಭವ್ಯತೆ ಪ್ರಾಪ್ತವಾಗಿರುವುದು. ದೇವರು ನಿಮ್ಮ ಕಲ್ಪನೆಯ ಜಗತ್ತನ್ನು ಸೃಷ್ಟಿಸಲು ನಿರ್ಧರಿಸಿದರೆ, ನಾವೆಲ್ಲ ಬೇಸರದಿಂದಲೇ ಸಾಯುತ್ತೇವೆ.'

ಬುದ್ಧನ ಉತ್ತರ: 'ನಿಮ್ಮ ವಿಷಯದಲ್ಲಿ ಹಾಗಾಗಬಹುದು, ಯಾಕೆಂದರೆ ನಿಮಗೆ ನೋವು ಎಂದರೆ ಇಷ್ಟ, ನಿಮ್ಮ ಜೀವನಪ್ರೀತಿ ಎಂಬುದು ಒಂದು ಸೋಗು. ಯಾರು ಜೀವನವನ್ನು ಪ್ರೀತಿಸುತ್ತಾರೋ ಅವರು ಈಗಿರುವ ರೀತಿಯ ಜಗತ್ತಿನಲ್ಲಿಯೇ ಬೇರಾರಿಗಿಂತಲೂ ಸಂತೋಷವಾಗಿರುಬಲ್ಲರು.'

ನಾನಂತೂ, ನಾನು ಕಲ್ಪಿಸಿಕೊಂಡಿರುವ ರೀತಿಯ, ಬುದ್ಧನ ಪರವಾಗಿರುವವನು. ಆದರೆ ಗಣಿತದಲ್ಲಿಯೋ ವೈಜ್ಞಾನಿಕ ಸಮಸ್ಯೆಯಲ್ಲಿಯೋ ಬಳಸುವ ರೀತಿಯ ಯಾವುದೇ ವಾದದಿಂದ ಅವನು ಸರಿ ಎಂದು ಸಾಧಿಸಿ ತೋರಿಸುವುದು ನನಗೆ ತಿಳಿಯದು. ನೋವಿನ ಬಗ್ಗೆ ಧ್ಯಾನಿಸುವುದರಿಂದ, ಅವನು ಕರ್ತವ್ಯದಲ್ಲಿ ಜಂಬವನ್ನು ಸೇರಿಸುವುದರಿಂದ, ಅವನು ಬಹುವಾಗಿ ಮೆಚ್ಚಿಕೊಳ್ಳುವುದು ಜಾಣ್ಮೆಯಿಂದ ಜನರನ್ನು ಬಲಿಗೊಡುವ ಮೂಲಕ ತನ್ನ ವೈಭವವನ್ನು ತಂದುಕೊಳ್ಳುವ ಗೆದ್ದವರನ್ನು ಮಾತ್ರ ಎಂಬುದರಿಂದ, ನನಗೆ ನೀಷೆ ಇಷ್ಟವಾಗುವುದಿಲ್ಲ. ಆದರೆ, ಅಸಂತುಷ್ಟಕರವಾದರೂ ಆಂತರಿಕವಾಗಿ ಸುಸಂಬದ್ಧವಾದ ನೈತಿಕತೆಯಂತೆಯೇ, ಅವನ ತಾತ್ವಿಕತೆಯ ವಿರುದ್ಧವಾದ ಅಂತಿಮ ವಾದವೆಂದರೆ, ವಾಸ್ತವಗಳಿಗೆ ಮೊರೆಹೊಗುವ ಮೂಲಕವಲ್ಲ, ಭಾವನೆಗಳನ್ನು ತಾಕುವುದರ ಮೂಲಕ. ನೀಷೆಯು ಸಾರ್ವತ್ರಿಕ ಪ್ರೇಮವನ್ನು ದ್ವೇಷಿಸುತ್ತಾನೆ; ಈ ಜಗತ್ತಿಗೆ ಸಂಬಂಧಪಟ್ಟಂತೆ ನಾನು ಬಯಸುವುದಕ್ಕೆಲ್ಲ ಮೂಲ ಪ್ರೇರಕಶಕ್ತಿಯೆಂದರೆ ಅದೇ ಎಂಬುದು ನನ್ನ ನಂಬಿಕೆ. ಅವನ ಅನುಯಾಯಿಗಳ ಕಾಲವೆಲ್ಲ ಮುಗಿದುಹೋಗಿದೆ, ಅದು ಆದಷ್ಟು ಬೇಗ ಕೊನೆಗೊಳ್ಳಲಿ ಎಂದು ನಾವು ಆಶಿಸೋಣ.

೨೬
ಉಪಯುಕ್ತತಾವಾದಿಗಳು[೨೮೦]

ಕ್ಯಾಂಟ್‌ನಿಂದ ನೀಷೆಯವರೆಗಿನ ಇಡೀ ಅವಧಿಯಲ್ಲಿ, ಬ್ರಿಟನ್‌ನ ವೃತ್ತಿಪರ ತತ್ವಜ್ಞಾನಿಗಳು ತಮ್ಮ ಜರ್ಮನ್ ಸಮಕಾಲೀನರ ಬಹುತೇಕ ಯಾವುದೇ ಪ್ರಭಾವಕ್ಕೆ ಒಳಗಾಗಲಿಲ್ಲ, ಅದರಲ್ಲಿನ ಏಕೈಕ ಅಪವಾದವೆಂದರೆ, ಸರ್ ವಿಲಿಯಂ ಹ್ಯಾಮಿಲ್ಟನ್, ಅವನ ಮೇಲೂ ಆದ ಪ್ರಭಾವ ಅಲ್ಪವೇ. ಕೊಲೆರಿಜ್ ಮತ್ತು ಕಾರ್ಲೈಲ್ ಅವರು ಕ್ಯಾಂಟ್, ಫ್ಲಿಷ್ತೆ ಮತ್ತು ಜರ್ಮನ್ ರೊಮ್ಯಾಂಟಿಕ್‌ರ ಗಾಢ ಪ್ರಭಾವಕ್ಕೊಳಗಾದರೆಂಬುದು ನಿಜವಾದರೂ, ಇವರಾರೂ ತಾಂತ್ರಿಕವಾಗಿ ತತ್ವಜ್ಞಾನಿಗಳಲ್ಲ. ಯಾರೋ ಒಮ್ಮೆ ಜೇಮ್ಸ್ ಮಿಲ್‌ನ ಮುಂದೆ ಕ್ಯಾಂಟ್ ಬಗ್ಗೆ ಉಲ್ಲೇಖಿಸಿದನಂತೆ, ಸ್ವಲ್ಪ ನೋಡಿ ಅವನು ಹೀಗೆಂದನಂತೆ: 'ಬಡಪಾಯಿ ಕ್ಯಾಂಟ್ ಯಾವುದನ್ನು ಬಯಸುತ್ತಾನೆಂಬುದು ಗೊತ್ತಾಯಿತು.' ಆದರೆ ಈ ಮಟ್ಟಿಗಿನ ತಿಳಿವಳಿಕೆಯು ತೀರ ಅಪರೂಪ; ಒಟ್ಟಾರೆ, ಜರ್ಮನ್‌ರ ಬಗ್ಗೆ ಇರುವುದು ಸಂಪೂರ್ಣ ಮೌನ. ಬೆಂಥಮ್ ಮತ್ತವನ ಪಂಥವು, ತಮ್ಮ ತಾತ್ವಿಕತೆಯ ಮುಖ್ಯ ರೂಪುರೇಷೆಗಳನ್ನು ಲಾಕ್, ಹಾರ್ಟ್ಲೇ, ಮತ್ತು ಹೆಲ್ವೇಷಿಯಸ್‌ರಿಂದ ಪಡೆಯಿತು; ಆದರೆ ಬ್ರಿಟಿಷ್ ತೀವ್ರಗಾಮಿಗಳೂ ಅವರ ಪ್ರಾಮುಖ್ಯವು ರಾಜಕೀಯವಾಗಿರುಷ್ಟು ತಾತ್ವಿಕವಾದುದಲ್ಲ; ತಮಗೇ ತಿಳಿಯದಂತೆ ಸಮಾಜವಾದಕ್ಕೆ ಮಾರ್ಗವೊಂದನ್ನು ನಿರ್ಮಿಸಿದ್ದರು.

'ತಾತ್ವಿಕ ತೀವ್ರಗಾಮಿ'ಗಳ ನಾಯಕನೆಂದು ಪರಿಗಣಿತನಾಗಿದ್ದ ಜೆರೆಮಿ ಬೆಂಥಮ್, ಇಂಥದೊಂದು ಚಳುವಳಿಯ ಮುಂದಾಳಾಗುವಂತೆ ನಿರೀಕ್ಷಿಸಬಹುದಾದವನಾಗಿರಲಿಲ್ಲ. ಅವನು ಹುಟ್ಟಿದ್ದು ೧೭೪೮ರಲ್ಲಿ, ಆದರೆ ೮೦೮ರವರೆಗೂ ಅವನು ತೀವ್ರಗಾಮಿಯಾಗಿರಲಿಲ್ಲ. ಅವನೋ ತೀರ

---

೨೮೦. ಈ ವಿಷಯದ, ಮತ್ತು ಮಾರ್ಕ್ಸ್ ಬಗೆಗಿನ ವಿವರವಾದ ವಿಶ್ಲೇಷಣೆಗಳಿಗೆ ನನ್ನ 'ಫ್ರೀಡಮ್ ಅಂಡ್ ಆರ್ಗನೈಜೇಷನ್' ಕೃತಿಯ ಎರಡನೆಯ ಭಾಗ, ೧೮೧೪-೧೯೧೪ ಅನ್ನು ನೋಡಿ.

ನಾಚಿಕೆಸ್ವಭಾವವನು, ಅಪರಿಚಿತರೊಡನೆ ಅವನು ನಡುಕವಿಲ್ಲದೆ ಸೇರಲು ಸಾಧ್ಯವೇ ಇರಲಿಲ್ಲ. ಅವನು ಯಥೇಚ್ಛವಾಗೇನೋ ಬರೆದನಾದರೂ ಅವುಗಳನ್ನು ಪ್ರಕಟಿಸುವ ಗೋಜಗೆ ಹೋಗಲಿಲ್ಲ; ಅವನ ಹೆಸರಿನಲ್ಲಿ ಪ್ರಕಟವಾದುದೆಲ್ಲವೂ ಅವನ ಸ್ನೇಹಿತರು ಕದ್ದು ಮಾಡಿದ್ದು. ಅವನ ಮುಖ್ಯ ಆಸಕ್ತಿಯ ವಿಷಯ ನ್ಯಾಯಶಾಸ್ತ್ರ (ಜೂರಿಸ್‌ಪ್ರೂಡೆನ್ಸ್). ಆ ಕ್ಷೇತ್ರದಲ್ಲಿ ಅವನು ಹೆಲ್ವೇಷಿಯಸ್ ಮತ್ತು ಬೆಕಾರಿಯರನ್ನು ತನ್ನ ಮುಖ್ಯ ಪೂರ್ವಜರೆಂದು ಭಾವಿಸಿದ್ದ. ನ್ಯಾಯಸಿದ್ಧಾಂತದ ಮೂಲಕವೇ ಅವನು ನೈತಿಕತೆ ಮತ್ತು ರಾಜಕೀಯಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡ.

ತನ್ನ ತಾತ್ವಿಕತೆಯನ್ನೆಲ್ಲ ಅವನು ಸಂಪೂರ್ಣವಾಗಿ ಎರಡು ಆಧಾರಗಳ ಮೇಲೆ ಕಟ್ಟುತ್ತಾನೆ: 'ಸಾಹಚರ್ಯ ತತ್ವ' (ಅಸೋಸಿಯೇಷನ್ ಪ್ರಿನ್ಸಿಪಲ್) ಮತ್ತು 'ಅತ್ಯಂತ ಸುಖ ತತ್ವ' (ಗ್ರೇಟೆಸ್ಟ್ ಹ್ಯಾಪಿನೆಸ್ ಪ್ರಿನ್ಸಿಪಲ್). ಸಾಹಚರ್ಯ ತತ್ವವನ್ನು ಹಾರ್ಟ್ಲೇ ೧೭೪೯ ರಲ್ಲಿಯೇ ಒತ್ತಿ ನುಡಿದಿದ್ದ; ಆದರೆ ಅವನಿಗಿಂತ ಮುಂಚೆಯೇ ವಿಚಾರಸಾಹಚರ್ಯದ ತತ್ವವನ್ನು ಗುರುತಿಸಲಾಗಿತ್ತು. ನಿದರ್ಶನಕ್ಕೆ, ಲಾಕ್ ಅದನ್ನು ಸಣ್ಣಪುಟ್ಟ ತಪ್ಪುಗಳ ಮೂಲವೆಂದು ಪರಿಗಣಿಸಿದ್ದ. ಬೆಂಥಮ್ ಹಾರ್ಟ್ಲೇಯನ್ನು ಅನುಸರಿಸಿ ಅದನ್ನು ಮನೋವಿಜ್ಞಾನದ ಮೂಲತತ್ವವನ್ನಾಗಿ ಮಾಡಿದವನು. ವಿಚಾರಸಾಹಚರ್ಯ ಮತ್ತು ಭಾಷೆಯ ಸಂಬಂಧ ಹಾಗೂ ವಿಚಾರಸಾಹಚರ್ಯ ಮತ್ತು ವಿಚಾರಗಳ ಸಂಬಂಧಗಳನ್ನು ಅವನು ಗುರುತಿಸಿದ. ಈ ತತ್ವಗಳ ಮುಖಾಂತರವಾಗಿ ಮಾನಸಿಕ ವಿದ್ಯಮಾನಗಳ ನಿರ್ಧಾರಾತ್ಮಕ ಕಾರಣಗಳನ್ನು ಕಂಡುಕೊಳ್ಳುವುದು ಅವನ ಗುರಿ. ಈ ಸಿದ್ಧಾಂತವು ಸಾರತಃ ಹೆಚ್ಚು ಕಡಿಮೆ, ಪಾವ್ಲೋವ್‌ನ ಪ್ರಯೋಗಗಳನ್ನು ಆಧರಿಸಿದ ಆಧುನಿಕ ಸಿದ್ಧಾಂತವಾದ 'ರೂಢ ಪ್ರತಿವರ್ತನೆ' (ಕಂಡಿಷನ್ಡ್ ರಿಫ್ಲೆಕ್ಸ್)ವೇ ಆಗಿದೆ. ಇವುಗಳ ನಡುವಣ ಒಂದೇ ಮುಖ್ಯ ವ್ಯತ್ಯಾಸವೆಂದರೆ, ಪಾವ್ಲೋವ್‌ನ 'ರೂಢ ಪ್ರತಿವರ್ತನೆ'ಯು ಶರೀರವೈಜ್ಞಾನಿಕವಾದುದು, ಆದರೆ ವಿಚಾರಸಾಹಚರ್ಯವು ಶುದ್ಧಾಂಗವಾಗಿ ಮಾನಸಿಕವಾದುದು. ಹೀಗಾಗಿ ಪಾವ್ಲೋವ್‌ನ ಕಾರ್ಯಕ್ಕೆ, ವರ್ತನವಿಜ್ಞಾನಿಗಳು ನೀಡಿರುವಂತಹ, ಭೌತವಾದೀಯ ವಿವರಣೆ ಸಾಧ್ಯ; ಆದರೆ ವಿಚಾರಸಾಹಚರ್ಯವು ಶರೀರವೈಜ್ಞಾನಿಕವಾದನ್ನು ಹೊರತುಪಡಿಸಿದ ಮನೋವಿಜ್ಞಾನದ ಕಡೆಗೆ ವಾಲಿಕೊಂಡಿತು. 'ರೂಢ ಪ್ರತಿವರ್ತನೆ' ಸಿದ್ಧಾಂತವು ತನ್ನ ಹಿಂದಿನ ಹಳೆಯ ತತ್ವಗಳಿಗಿಂತ ವೈಜ್ಞಾನಿಕವಾಗಿ ಹೆಚ್ಚು ಸಮಂಜಸವಾದುದು ಎಂಬುದರಲ್ಲಿ ಸಂಶಯವಿಲ್ಲ. ಪಾವ್ಲೋವ್‌ನ ಸಿದ್ಧಾಂತವು ಇದು: ಬಿ ಎಂಬ ಪ್ರೇರಣೆಯು ಸಿ ಎಂಬ ಪ್ರತಿಕ್ರಿಯೆಯನ್ನು ಉಂಟುಮಾಡುವ ಒಂದು ರೂಢಿಯು, ಮತ್ತು ಪ್ರಾಣಿಯೊಂದು ಎ ಎಂಬ ಪ್ರೇರಣೆಯನ್ನು ಮತ್ತು ಅದೇ ವೇಳೆಗೆ ಬಿ ಪ್ರೇರಣೆಯನ್ನು ಅನುಭವಿಸಿದರೆ, ಎಷ್ಟೋ ವೇಳೆಯಲ್ಲಿ ಎ ಎಂಬ ಪ್ರೇರಣೆಯು ಸಿ ಎಂಬ

ಪ್ರತಿಕ್ರಿಯೆಯನ್ನು, ಬಿ ಎಂಬ ಪ್ರೇರಣೆ ಇಲ್ಲದಿದ್ದರೂ, ಉಂಟುಮಾಡುತ್ತದೆ. ಇದು ಸಂಭವಿಸುವುದು ಯಾವ ಸನ್ನಿವೇಶದಲ್ಲಿ ಎಂಬುದನ್ನು ನಿರ್ಧರಿಸುವುದು ಪ್ರಯೋಗಸಾಧ್ಯ. ಎ, ಬಿ ಮತ್ತು ಸಿ ಗಳ ಜಾಗದಲ್ಲಿ ನಾವು ವಿಚಾರಗಳನ್ನಿಟ್ಟರೆ, ಪಾವ್ಲೋವ್‌ನ ತತ್ವವು ವಿಚಾರಸಾಹಚರ್ಯವಾಗುತ್ತದೆ.

ಎರಡೂ ತತ್ವಗಳು ಕೆಲವು ಕ್ಷೇತ್ರಗಳಲ್ಲಿ ನಿಸ್ಸಂಶಯವಾಗಿ ಸಿಂಧುವಾದವು. ಇರುವ ಏಕೈಕ ವಿವಾದವೆಂದರೆ ಈ ಕ್ಷೇತ್ರದ ವ್ಯಾಪ್ತಿಯ ಬಗ್ಗೆ. ಬೆಂಥಮ್ ಮತ್ತವನ ಅನುಯಾಯಿಗಳು ಹಾರ್ಟ್ಲೇಯ ತತ್ವದ ವಿಷಯದಲ್ಲಿ ವ್ಯಾಪ್ತಿಯನ್ನು ಅತಿಶಯಿಸಿದರು, ಹಾಗೆಯೇ ಕೆಲವು ವರ್ತನವಿಜ್ಞಾನಿಗಳು ಪಾವ್ಲೋವ್‌ನ ತತ್ವದ ವಿಷಯದಲ್ಲಿ ಹಾಗೆಯೇ ಮಾಡಿದರು.

ಬೆಂಥಮ್‌ಗೆ ನಿಯತಿವಾದವು ಮನೋವಿಜ್ಞಾನದಲ್ಲಿ ಮುಖ್ಯವೆನಿಸಿತು, ಯಾಕೆಂದರೆ ಅವನು ಜನರನ್ನು ತಂತಾನೇ ಸದ್ಗುಣಿಗಳನ್ನಾಗಿ ಮಾಡುವ ಒಂದು ನಿಯಮಸಂಹಿತೆಯನ್ನು – ಮತ್ತು ಹೆಚ್ಚು ಸಾಮಾನ್ಯವಾಗಿ, ಒಂದು ಸಾಮಾಜಿಕ ವ್ಯವಸ್ಥೆಯನ್ನು – ರೂಪಿಸಲು ಬಯಸಿದ. ಅವನ ಎರಡನೆಯ ತತ್ವವು, ಅಂದರೆ ಅತ್ಯಂತ ಸುಖದ ತತ್ವವು, 'ಸದ್ಗುಣ' ಎಂಬುದನ್ನು ನಿರ್ವಚಿಸಲು ಆವಶ್ಯಕವಾಯಿತು.

ಒಳ್ಳೆಯದೆಂದರೆ ಸಂತೋಷ ಅಥವಾ ಸುಖ – ಈ ಶಬ್ದಗಳನ್ನವನು ಸಮಾನಾರ್ಥಕಗಳಂತೆ ಬಳಸಿದ – ಎಂದೂ, ಕೆಟ್ಟುದೆಂದರೆ ನೋವು ಎಂದೂ ಬೆಂಥಮ್ ಹೇಳಿದ. ಹೀಗಾಗಿ ನೋವಿನ ಮೇಲೆ ಸಂತೋಷವು ಹೆಚ್ಚಿನ ಸಮತೋಲನವನ್ನು ಸಾಧಿಸುವಂತಿದ್ದರೆ, ಅಥವಾ ಸಂತೋಷದ ಮೇಲೆ ನೋವು ಕಡಿಮೆ ಸಮತೋಲನವನ್ನು ಸಾಧಿಸುವಂತಿದ್ದರೆ – ಇಂಥ ಒಂದು ಪರಿಸ್ಥಿತಿಯು ಮತ್ತೊಂದಕ್ಕಿಂತ ಉತ್ತಮವಾದುದು. ಎಲ್ಲ ಸಾಧ್ಯ ಪರಿಸ್ಥಿತಿಗಳಲ್ಲಿ, ಯಾವುದು ನೋವಿನ ಮೇಲೆ ಸಂತೋಷವು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಸಮತೋಲನವನ್ನು ಸಾಧಿಸುತ್ತದೋ ಅದು ಅತ್ಯಂತ ಉತ್ತಮವಾದುದು.

ಈ ಸಿದ್ಧಾಂತದಲ್ಲಿ ಹೊಸತಾದುದೇನೂ ಇಲ್ಲ, ಇದನ್ನೇ 'ಉಪಯುಕ್ತತಾವಾದ' ಎಂದು ಕರೆಯುತ್ತಾರೆ. ಹಚಿನ್‌ಸನ್ ಅದನ್ನು ೧೭೨೫ ರಷ್ಟು ಹಿಂದೆಯೇ ಪ್ರತಿಪಾದಿಸಿದ್ದ. ಬೆಂಥಮ್ ಅದನ್ನು ಪ್ರೀಸ್ಟ್‌ಲೇಯದು ಎನ್ನುತ್ತಾನೆ, ಆದರೆ ಅವನು ಅದಕ್ಕೆ ಅರ್ಹನಲ್ಲ. ಅದು ಸಾರತಃ ಲಾಕ್‌ನಲ್ಲಿಯೇ ಅಂತರ್ಗತವಾಗಿದೆ. ಬೆಂಥಮ್‌ನ ಸಾಧನೆಯಿರುವುದು ಸಿದ್ಧಾಂತಸೃಷ್ಟಿಯಲ್ಲಲ್ಲ, ಅದನ್ನು ಅನೇಕ ಸಮಸ್ಯೆಗಳಿಗೆ ವ್ಯಾವಹಾರಿಕವಾಗಿ ಅನ್ವಯಿಸಿದುದರಲ್ಲಿ.

ಬೆಂಥಮ್ ಒಟ್ಟಾರೆ ಒಳ್ಳೆಯದು ಸಂತೋಷದಾಯಕವಾದುದು ಎಂದು ಹೇಳುವುದರ ಜೊತೆಗೆ, ಪ್ರತಿ ವ್ಯಕ್ತಿಯೂ ತನ್ನ ನಂಬಿಕೆಯ ಸಂತೋಷವನ್ನು ಹುಡುಕುತ್ತಾನೆ ಎಂದೂ ಹೇಳಿದ. ಹೀಗಾಗ ಶಾಸನಕರ್ತರ ಕರ್ತವ್ಯವೆಂದರೆ

ಖಾಸಗಿ ಮತ್ತು ಸಾರ್ವಜನಿಕ ಹಿತಾಸಕ್ತಿಗಳ ನಡುವಣ ಸಾಮರಸ್ಯವನ್ನು ಸಾಧಿಸುವುದು. ಸಾರ್ವಜನಿಕ ಹಿತದೃಷ್ಟಿಯಿಂದಲೇ ನಾನು ಕಳ್ಳತನದಿಂದ ದೂರವಿರಬೇಕು, ಆದರೆ ಪರಿಣಾಮಕಾರಿಯಾದ ಅಪರಾಧಸಂಹಿತೆಯಿಲ್ಲದಿದ್ದರೆ ಅದು ನನ್ನ ಹಿತದೃಷ್ಟಿ ಆಗುವುದಿಲ್ಲ. ಹೀಗೆ ಅಪರಾಧಸಂಹಿತೆಯು ವ್ಯಕ್ತಿಯ ಹಿತ ಮತ್ತು ಸಮಾಜದ ಹಿತಗಳು ಒಂದೇ ಆಗಿರುವಂತೆ ಮಾಡುವ ಮಾರ್ಗ; ಇದು ಅವನು ನೀಡುವ ಸಮರ್ಥನೆ.

ಜನರನ್ನು ಅಪರಾಧಸಂಹಿತೆಗನುಗುಣವಾಗಿ ಶಿಕ್ಷಿಸಬೇಕೇ ಹೊರತು ನಾವು ಅಪರಾಧಿಯನ್ನು ದ್ವೇಷಿಸುವುದಕ್ಕೆ ಎಂದಲ್ಲ. ಶಿಕ್ಷೆಯು ಖಚಿತವಾಗಿರುವುದರ ಜೊತೆಗೆ ಅದು ಸಾಕಷ್ಟು ತೀವ್ರವಾಗಿರುವುದೂ ಮುಖ್ಯ. ಅವನ ಕಾಲದ ಇಂಗ್ಲಂಡ್‌ನಲ್ಲಿ ಸಣ್ಣ ಪುಟ್ಟ ತಪ್ಪುಗಳಿಗೂ ಮರಣ ದಂಡನೆ ವಿಧಿಸಲಾಗುತ್ತಿತ್ತು, ಇದರ ಪರಿಣಾಮವಾಗಿ ನ್ಯಾಯಮಂಡಳಿಯು ಮರಣದಂಡನೆಯು ಹೆಚ್ಚಾದುದು ಎಂಬ ಕಾರಣಕ್ಕಾಗಿ ಎಷ್ಟೋ ವೇಳೆ ಅಪರಾಧಿ ಎಂದು ಘೋಷಿಸಲು ನಿರಾಕರಿಸುತ್ತಿತ್ತು. ಅತ್ಯಂತ ಹೀನ ಅಪರಾಧಗಳ ಹೊರತಾಗಿ ಮರಣ ದಂಡನೆಯನ್ನು ರದ್ದುಪಡಿಸಬೇಕೆಂಬುದು ಬೆಂಥಮ್‌ನ ಅಭಿಮತ; ಅವನು ಸಾಯುವ ಮೊದಲೇ ಅಪರಾಧಸಂಹಿತೆಯನ್ನು ಇದಕ್ಕನುಗುಣವಾಗಿ ಬದಲಾಯಿಸಲಾಯಿತು.

ನಾಗರಿಕ ಸಂಹಿತೆಯು ನಾಲ್ಕು ಗುರಿಗಳನ್ನು ಹೊಂದಿರಬೇಕೆಂದು ಅವನು ಹೇಳಿದ: ಜೀವನೋಪಾಯ, ಸಮೃದ್ಧಿ, ಸುರಕ್ಷೆ ಮತ್ತು ಸಮಾನತೆ. ಅವನು ಸ್ವಾತಂತ್ರ್ಯವನ್ನು ಹೇಳದಿರುವುದನ್ನು ಗಮನಿಸಬೇಕು. ಹಾಗೆ ನೋಡಿದರೆ, ಅವನು ಸ್ವಾತಂತ್ರ್ಯಕ್ಕೆ ಅಷ್ಟಾಗಿ ಮಹತ್ವ ನೀಡಲಿಲ್ಲ. ಫ್ರೆಂಚ್ ಕ್ರಾಂತಿಗಿಂತ ಮುಂಚೆ ಇದ್ದ ಉಪಕಾರಿ ನಿರಂಕುಶರನ್ನು – ಕ್ಯಾದರೀನ್ ಮಹಾಶಯೆ ಮತ್ತು ಚಕ್ರವರ್ತಿ ಫ್ರಾನ್ಸಿಸ್ – ಅವನು ಮೆಚ್ಚಿಕೊಂಡಿದ್ದ. ಮಾನವನ ಹಕ್ಕುಗಳ ಸಿದ್ಧಾಂತದ ಬಗ್ಗೆ ಅವನಿಗೆ ಮಹಾ ತಿರಸ್ಕಾರ. ಮಾನವನ ಹಕ್ಕುಗಳು ಬರೀ ಅವಿವೇಕದ್ದು; ಜಾರಿಮಾಡಲಾಗದ ಮಾನವ ಹಕ್ಕುಗಳು ಮರಗಾಲುಗಳ ಮೇಲೆ ನಿಂತ ಅವಿವೇಕ ಎನ್ನುತ್ತಿದ್ದ. ಫ್ರೆಂಚ್ ಕ್ರಾಂತಿಕಾರಿಗಳು ತಮ್ಮ ಮಾನವನ ಮತ್ತು ಪ್ರಜೆಗಳ ಹಕ್ಕುಗಳ ಘೋಷಣೆಯನ್ನು ಮಾಡಿದಾಗ, ಬೆಂಥಮ್ ಅದು ಒಂದು 'ತತ್ವಜಿಜ್ಞಾಸಾತ್ಮಕ ಕಾರ್ಯ – ತತ್ವಜಿಜ್ಞಾಸೆಯ ಅತ್ಯಂತ ಹಿರಿಯ ಸಾಧನೆ (ನೆ ಪ್ಲೂ ಉಟ್ರಾ)' ಎಂದು ಕರೆದ. ಅದರ ವಿಧಿಗಳನ್ನು ಮೂರು ನುಡಿಗುಚ್ಛಗಳಾಗಿ ವಿಭಾಗಿಸಬಹುದು ಎಂದ: (೧) ಅರ್ಥವಾಗದವು, (೨) ಸುಳ್ಳಾದವು, ಮತ್ತು (೩) ಈ ಎರಡೂ ಆದವು.

ಬೆಂಥಮ್‌ನ ಆದರ್ಶವು, ಎಪಿಕ್ಯೂರಸ್‌ನದರಂತೆ, ಸುರಕ್ಷೆಯೇ ಹೊರತು ಸ್ವಾತಂತ್ರ್ಯವಲ್ಲ. 'ಯುದ್ಧಗಳು ಮತ್ತು ಬಿರುಗಾಳಿಗಳ ವರದಿಗಳನ್ನೋದಲು ಚೆಂದ, ಆದರೆ ಶಾಂತಿ ಮತ್ತು ಪ್ರಶಾಂತತೆಗಳು ಅನುಭವಿಸಲು ಹೆಚ್ಚು ಚೆನ್ನ.'

ಅವನು ಕ್ರಮೇಣ ತೀವ್ರಗಾಮಿತ್ವಕ್ಕೆ ಬದಲಾದದ್ದು ಎರಡು ಕಾರಣಗಳಿಂದ; ಒಂದೆಡೆ, ಸಂತೋಷ ಮತ್ತು ಸಂಕಟಗಳ ತರ್ಕದ ಮೂಲಕ ಸಾಧಿಸಿದ ಸಮಾನತೆಯಲ್ಲಿನ ನಂಬಿಕೆ; ಮತ್ತೊಂದೆಡೆ, ತಾನು ಅರ್ಥಮಾಡಿಕೊಂಡಂತೆ ವೈಚಾರಿಕತೆ ಮಧ್ಯಸ್ಥಿಕೆಗೆ ಎಲ್ಲವನ್ನೂ ಒಪ್ಪಿಸುವ ಬದಲಾಗದ ನಿರ್ಧಾರ. ಸಮಾನತೆಯ ಬಗೆಗಿನ ಒಲವಿನಿಂದ ಅವನು ಮೊದಲಿಗೆ ಮಕ್ಕಳಿಗೆ ಆಸ್ತಿಯಲ್ಲಿ ಸಮಾನ ಪಾಲನ್ನು ಕೊಡುವುದರ ಪರವಾಗಿ ವಾದಿಸಿದ, ಮತ್ತು ಉಯಿಲು ಬರೆದಿಡುವ ಸ್ವಾತಂತ್ರ್ಯವನ್ನು ವಿರೋಧಿಸಿದ. ಆನಂತರ ವರ್ಷಗಳಲ್ಲಿ, ಅವನನ್ನು ಅದು ರಾಜಪ್ರಭುತ್ವ ಮತ್ತು ಆನುವಂಶಿಕ ಶ್ರೀಮಂತಪ್ರಭುತ್ವವನ್ನು ವಿರೋಧಿಸುವಂತೆ ಹಾಗೂ, ಹೆಂಗಸರ ಮತದಾನದ ಹಕ್ಕೂ ಒಳಗೊಂಡಂತೆ, ಸಂಪೂರ್ಣ ಪ್ರಜಾಪ್ರಭುತ್ವವನ್ನು ಸಮರ್ಥಿಸುವಂತೆಯೂ ಮಾಡಿತು. ವೈಚಾರಿಕ ತಳಹದಿಯಿಲ್ಲದೆ ನಂಬುವುದನ್ನು ನಿರಾಕರಿಸಿದ ಅವನು ದೇವರನ್ನೂ ಒಳಗೊಂಡಂತೆ ಮತಧರ್ಮವನ್ನು ತಿರಸ್ಕರಿಸುವಂತೆ ಮಾಡಿತು; ಅವುಗಳ ಐತಿಹಾಸಿಕತೆ ಎಷ್ಟೇ ಗೌರವನೀಯವಾಗಿರಲಿ ಕಾನೂನುಗಳಲ್ಲಿರುವ ಅಸಂಬದ್ಧತೆ ಹಾಗೂ ದೋಷಗಳನ್ನು ಟೀಕೆ ಮಾಡುವಂತೆ ಮಾಡಿತು. ಸಾಂಪ್ರದಾಯಿಕವೆಂಬ ಕಾರಣಕ್ಕೆ ಅವನು ಯಾವುದನ್ನೂ ಒಪ್ಪುತ್ತಿರಲಿಲ್ಲ. ಯೌವನದ ಆರಂಭದಿಂದ ಅವನು ಸಾಮ್ರಾಜ್ಯಶಾಹಿಗೆ, ಅದು ಅಮೆರಿಕದಲ್ಲಿನ ಬ್ರಿಟಿಷ್‌ರು ಆಗಿರಬಹುದು, ಅಥವಾ ಬೇರೆ ದೇಶಗಳದ್ದಾಗಿರಬಹುದು, ವಿರೋಧಿಯಾಗಿದ್ದ; ವಸಾಹತುಗಳನ್ನು ತಪ್ಪು ಎಂದು ಹೇಳಿದ.

ಜೇಮ್ಸ್ ಮಿಲ್‌ನ ಪ್ರಭಾವದ ಕಾರಣದಿಂದಾಗಿ ಬೆಂಥಮ್ ವ್ಯವಹಾರ ರಾಜಕೀಯದಲ್ಲಿ ಪಕ್ಷಗಳ ಪರ ವಹಿಸಲು ತೊಡಗಿದ. ಜೇಮ್ಸ್ ಮಿಲ್ ಬೆಂಥಮ್‌ಗಿಂತ ಇಪ್ಪತ್ತೈದು ವರ್ಷಗಳಷ್ಟು ಕಿರಿಯ ಮತ್ತು ತನ್ನ ಸಿದ್ಧಾಂತಗಳ ನಿಷ್ಠಾವಂತ ಅನುಯಾಯಿ, ಆದರೆ ಅವನೂ ಕಾರ್ಯಶೀಲ ತೀವ್ರಗಾಮಿ. ಬೆಂಥಮ್ ಮಿಲ್‌ಗೆ ಒಂದು ಮನೆಯನ್ನು (ಹಿಂದೆ ಅದು ಮಿಲ್ಟನ್‌ಗೆ ಸೇರಿದ್ದುದು) ಕೊಟ್ಟ, ಮತ್ತು ಅವನು ಇಂಡಿಯದ ಚರಿತ್ರೆಯನ್ನು ಬರೆಯುವ ಅವಧಿಯಲ್ಲಿ ಅವನಿಗೆ ಆರ್ಥಿಕ ಸಹಾಯವನ್ನು ಮಾಡಿದ. ಈ ಚರಿತ್ರೆಯು ಪೂರ್ಣಗೊಂಡಾಗ, ಈಸ್ಟ್ ಇಂಡಿಯ ಕಂಪೆನಿಯು ಜೇಮ್ಸ್ ಮಿಲ್‌ಗೆ, ಆನಂತರ ಅವನ ಮಗನಿಗೆ ಒಂದು ಹುದ್ದೆಯನ್ನು ನೀಡಿತು; ಆದರೆ ಅದು ದಂಗೆಯ ಕಾರಣದಿಂದ ರದ್ದಾಯಿತು. ಜೇಮ್ಸ್ ಮಿಲ್ ಕಂಡಾರ್ಸೆಟ್ ಮತ್ತು ಹೆಲ್ವೇಷಿಯಸ್‌ರ ಕಡು ಅಭಿಮಾನಿಯಾಗಿದ್ದ. ಆ ಕಾಲದ ಎಲ್ಲ ತೀವ್ರಗಾಮಿಗಳಂತೆಯೇ, ಅವನಿಗೆ ಶಿಕ್ಷಣದ ಸರ್ವಶಕ್ತತೆಯ ಬಗ್ಗೆ ಅಪಾರ ನಂಬಿಕೆ. ಅವನು ತನ್ನ ಸಿದ್ಧಾಂತಗಳನ್ನೆಲ್ಲ ತನ್ನ ಮಗ ಜಾನ್ ಸ್ಟೂಅರ್ಟ್ ಮಿಲ್‌ನ ವಿಷಯದಲ್ಲಿ ಅನ್ವಯಿಸಿದ. ಅದರ ಪರಿಣಾಮ ಸ್ವಲ್ಪ ಒಳ್ಳೆಯದು, ಮತ್ತು ಸ್ವಲ್ಪ ಕೆಟ್ಟದ್ದೂ ಆಯಿತು. ಅತ್ಯಂತ ಮುಖ್ಯ ಕೆಟ್ಟ ಪರಿಣಾಮವೆಂದರೆ ಜಾನ್ ಸ್ಟೂಅರ್ಟ್

ಮಿಲ್‌ಗೆ, ತನ್ನ ತಂದೆಯ ದೃಷ್ಟಿಕೋನವು ತೀರ ಸಂಕುಚಿತವಾದುದೆಂದು ಮನವರಿಕೆಯಾದಾಗಲೂ, ಅವನ ಪ್ರಭಾವದಿಂದ ಹೊರಬರಲು ಸಾಧ್ಯವಾಗಲೇ ಇಲ್ಲ.

ಜೇಮ್ಸ್ ಮಿಲ್ ಬೆಂಥಮ್‌ನಂತೆಯೇ ಸಂತೋಷವೇ ಏಕೈಕ ಒಳಿತು ಮತ್ತು ನೋವು ಏಕೈಕ ಕೆಡುಕು ಎಂದು ಪರಿಗಣಿಸಿದ. ಅದರೆ ಎಪಿಕ್ಯೂರಸ್‌ನಂತೆ ಅವನು ಹೆಚ್ಚು ಮಾನ್ಯತೆ ಕೊಟ್ಟದ್ದು ಹಿತಮಿತ ಸಂತೋಷಕ್ಕೆ. ಬೌದ್ಧಿಕ ಆನಂದವು ಅತ್ಯಂತ ಶ್ರೇಷ್ಠವೆಂದೂ, ಆತ್ಮಸಂಯಮವು ಅತ್ಯಂತ ಶ್ರೇಷ್ಠ ಗುಣವೆಂದೂ ಅವನು ಭಾವಿಸಿದ್ದ. 'ತೀವ್ರ ಎಂಬುದು ಅವನಿಗೆ ತಿರಸ್ಕಾರಪೂರ್ವಕ ಅಸಮ್ಮತಿಯ ಪರ್ಯಾಯ ಪದ' ಎಂದು ಮಗ ಹೇಳಿ, ಜೊತೆಗೆ ತನ್ನ ತಂದೆಯು ಆಧುನಿಕರ ಭಾವನೆಗಳಿಗೆ ಪ್ರಾಮುಖ್ಯ ನೀಡುವುದನ್ನು ವಿರೋಧಿಸುತ್ತಿದ್ದ ಎಂದೂ ಸೇರಿಸುತ್ತಾನೆ. ಒಟ್ಟು ಉಪಯುಕ್ತತಾವಾದಿ ಪಂಥದಂತೆಯೇ ಎಲ್ಲ ಬಗೆಯ ರೊಮ್ಯಾಂಟಿಸಿಸಂಗೆ ಅವನು ವಿರೋಧಿಯಾಗಿದ್ದ. ರಾಜಕೀಯವನ್ನು ವೈಚಾರಿಕವಾಗಿ ಮುನ್ನಡೆಸಬಹುದು ಎಂದವನು ನಂಬಿದ್ದ, ಹಾಗೆಯೇ ಜನಾಭಿಪ್ರಾಯವನ್ನು ಆಧಾರಗಳ ಮೇಲೆ ನಿರ್ಧರಿಸಬಹುದೆಂದು ಭಾವಿಸಿದ್ದ. ವಿವಾದದ ಸಂದರ್ಭದಲ್ಲಿ ಪ್ರತಿಸ್ಪರ್ಧಿ ಪಕ್ಷಗಳು ಸಮಾನ ಕೌಶಲವನ್ನು ತೋರ್ಪಡಿಸಿದರೆ – ಒಂದು ನೈತಿಕ ನಿಶ್ಚಿತತೆ – ಅಂದರೆ ಬಹುಸಂಖ್ಯಾತ ಜನರು ನಿರ್ಧರಿಸುವುದೇ ಸರಿ. ಅವನ ಸ್ವಭಾವದಲ್ಲಿನ ಭಾವನಾದಾರಿದ್ರ್ಯವು ಅವನ ದೃಷ್ಟಿಕೋನವನ್ನು ಸಂಕುಚಿತಗೊಳಿಸಿತ್ತು; ಆದರೆ ತನ್ನ ಪರಿಮಿತಿಯಲ್ಲಿಯೇ ಅವನಲ್ಲಿ ಶ್ರಮ, ಅನಾಸಕ್ತಿ ಮತ್ತು ವೈಚಾರಿಕತೆಗಳೆಂಬ ಗುಣಗಳು ತುಂಬಿದ್ದವು.

೧೮೦೬ ರಲ್ಲಿ ಹುಟ್ಟಿದ ಅವನ ಮಗ ಜಾನ್ ಸ್ಟೂಅರ್ಟ್ ಮಿಲ್ ಒಂದು ಬಗೆಯ ಸೌಮ್ಯ ಬೆಂಥಮ್‌ಪಂಥದ ಸಿದ್ಧಾಂತವನ್ನು ೧೮೭೩ ರಲ್ಲಿ ತಾನು ಸಾಯುವವರೆಗೂ ಮುಂದುವರಿಸಿಕೊಂಡು ಬಂದ.

ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಾದ್ಯಂತ, ಬ್ರಿಟಿಷ್ ಕಾನೂನುರಚನೆ ಮತ್ತು ಧೋರಣೆಗಳ ಮೇಲೆ ಬೆಂಥಮ್‌ವಾದಿಗಳ ಪ್ರಭಾವವು, ಅವರಲ್ಲಿ ಭಾವನಾತ್ಮಕ ಪ್ರಚೋದನೆ ಒಂದಷ್ಟೂ ಇರದಿದ್ದರೂ, ಆಶ್ಚರ್ಯಕರವೆಂಬಷ್ಟು ಹಿರಿದಾದುದು.

ಸಾಮಾನ್ಯ ಸಂತೋಷವೇ ಪರಮ ಪುರುಷಾರ್ಥ (ಸಮಮ್ ಬೋನಮ್) ಎಂಬ ದೃಷ್ಟಿಕೋನದ ಪರವಾಗಿ ನಾನಾ ವಾದಗಳನ್ನು ಬೆಂಥಮ್ ಮುಂದಿಟ್ಟ. ಅವುಗಳಲ್ಲಿ ಕೆಲವು ನೈತಿಕ ಸಿದ್ಧಾಂತಗಳ ಕಟು ಟೀಕೆಗಳಾಗಿದ್ದವು. ರಾಜಕೀಯ ಸತ್ಯಭ್ರಾಂತಿಯ ಬಗೆಗಿನ ತನ್ನ ಕೃತಿಯಲ್ಲಿ, ಮಾರ್ಕ್ಸ್‌ನನ್ನು ಮೊದಲೇ ನಿರೀಕ್ಷಿಸುವಂತಹ ಭಾಷೆಯಲ್ಲಿ, ಭಾವನಾತ್ಮಕ ಮತ್ತು ವೈರಾಗ್ಯಪರ ನೈತಿಕತೆಗಳು ಆಡಳಿತವರ್ಗದ ಹಿತಾಸಕ್ತಿಗಳನ್ನು ರಕ್ಷಿಸುತ್ತವೆ ಎಂದೂ, ಅವು ಶ್ರೀಮಂತಪ್ರಭುತ್ವದ ಉತ್ಪನ್ನಗಳೆಂದೂ, ಅವನು ಹೇಳಿದ. ತ್ಯಾಗದ ನೈತಿಕತೆಯನ್ನು ಬೋಧಿಸುವವರು ದೋಷಗಳಿಂದ

ಕಷ್ಟಗಳಲ್ಲಿ ಸಿಲುಕಿಕೊಂಡವರಲ್ಲ; ಇತರರು ತಮಗಾಗಿ ತ್ಯಾಗಮಾಡಬೇಕೆಂದು ನಿರೀಕ್ಷಿಸುವವರು ಎನ್ನುತ್ತಾನೆ. ನೈತಿಕ ವ್ಯವಸ್ಥೆಯಿರುವ ಹಿತಾಸಕ್ತಿಗಳ ಸಮತೋಲನದಲ್ಲಿ. ಆಡಳಿತಗಾರರ ಮತ್ತು ಜನರ ಹಿತಾಸಕ್ತಿಗಳ ನಡುವೆ ಈಗಾಗಲೇ ತಾದಾತ್ಮ್ಯವಿದೆ ಎಂದು ಆಡಳಿತ ಸಂಸ್ಥೆಗಳು ನಟಿಸುತ್ತವೆಯಾದರೂ, ಅಂತಹ ತಾದಾತ್ಮ್ಯ ಇನ್ನೂ ಸಾಧ್ಯವಾಗಿಲ್ಲವೆಂದು, ಅದನ್ನು ಸಾಧ್ಯವಾಗಿಸುವುದೇ ಗುರಿಯೆಂದೂ ಸುಧಾರಣಾವಾದಿಗಳು ತರ್ಕಿಸುತ್ತಾರೆ. ಉಪಯುಕ್ತತಾ ತತ್ವವು ಮಾತ್ರವೇ ನೈತಿಕತೆ ಮತ್ತು ಕಾನೂನು ರಚನೆಗಳಿಗೆ ಒರೆಗಲ್ಲು ಒದಗಿಸಬಲ್ಲುದು ಎಂದೂ, ಅದು ಸಾಮಾಜಿಕ ವಿಜ್ಞಾನಕ್ಕೆ ತಳಹದಿಯಾಗಬಲ್ಲುದೆಂದೂ ಅವನು ಭಾವಿಸಿದ್ದ. ತನ್ನ ಸಿದ್ಧಾಂತದ ಪರವಾದ ಅವನ ಮುಖ್ಯ ಇತ್ಯಾತ್ಮಕ ವಾದವೆಂದರೆ, ವಿವಿಧ ನೈತಿಕ ವ್ಯವಸ್ಥೆಗಳ ವಾಸ್ತವವಾದ ವ್ಯತ್ಯಾಸಗಳಲ್ಲಿಯೇ ಸೂಚಿತವಾಗುತ್ತದೆ ಎಂಬುದು. ಆದರೆ ಇದು ಅವನ ತೀರ ಪರಿಮಿತವಾದ ಸಮೀಕ್ಷೆಯ ಫಲವಾಗಿ ಮೇಲು ನೋಟಕ್ಕೆ ಕಾಣುವಂಥದು, ಅಷ್ಟೆ.

ಬೆಂಥಮ್‌ನ ವ್ಯವಸ್ಥೆಯಲ್ಲಿ ಎದ್ದು ಕಾಣುವ ಒಂದು ಕೊರತೆಯಿದೆ. ಅದೆಂದರೆ, ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಸುಖವನ್ನರಸುವುದರಲ್ಲಿ ನಿರತನಾದರೆ, ಶಾಸನಕರ್ತನು ಒಟ್ಟಾರೆ ಹಿತವನ್ನು ಕಾಪಾಡುವ ಬಗೆ ಹೇಗೆ? ಬೆಂಥಮ್‌ನೇ ಹೇಳುವ ಪ್ರವೃತ್ಯಾತ್ಮಕ ಉಪಕಾರಬುದ್ಧಿಯು (ಅವನ ಮನೋವೈಜ್ಞಾನಿಕ ಸಿದ್ಧಾಂತಗಳು ಅದನ್ನು ಅವನು ಗಮನಿಸದಂತೆ ಮಾಡಿದವು) ಅದನ್ನು ಅವನಿಂದ ಬಚ್ಚಿಟ್ಟುಕೊಂಡಿತು. ಯಾವುದಾದರೂ ದೇಶಕ್ಕೆ ಅವನು ನಿಯಮಸಂಹಿತೆಯನ್ನು ರೂಪಿಸುವ ಕೆಲಸದಲ್ಲಿ ತೊಡಗಿಕೊಂಡಿದ್ದರೆ, ತನ್ನ ಸಂಹಿತೆಯನ್ನವನು, ತನ್ನ ವೈಯಕ್ತಿಕ ಅಥವಾ ತನ್ನ ವರ್ಗದ ಹಿತವನ್ನು ಬದಿಗಿರಿಸಿ, ಸಾರ್ವತ್ರಿಕ ಹಿತದ ದೃಷ್ಟಿಯಿಂದ ರೂಪಿಸುತ್ತಿದ್ದ. ಆದರೆ ಈ ವಸ್ತುಸ್ಥಿತಿಯನ್ನವನು ಗಮನಿಸಿದ್ದರೆ, ಅವನು ತನ್ನ ಮನೋವೈಜ್ಞಾನಿಕ ಸಿದ್ಧಾಂತಗಳನ್ನು ಪರಿಷ್ಕರಿಸುತ್ತಿದ್ದ. ಸಾರ್ವಜನಿಕ ಹಿತಕ್ಕಾಗಿ ಕೆಲಸ ಮಾಡುವ ಮೂಲಕ ಮಾತ್ರವೇ ಶಾಸಕರು ತಮ್ಮ ವೈಯಕ್ತಿಕ ಹಿತವನ್ನು ಕಾಪಾಡಿಕೊಳ್ಳಲು ಸಾಧ್ಯವಾಗುವಂತಹ ಮೇಲ್ವಿಚಾರಣೆಗೊಳಪಟ್ಟ ಪ್ರಜಾಪ್ರಭುತ್ವದ ಮೂಲಕ, ಅದರ ಬಗ್ಗೆ ಅವನು ಯೋಚಿಸಿದಂತೆ ಕಾಣುತ್ತದೆ. ಅವನ ಕಾಲದಲ್ಲಿ ಪ್ರಜಾಪ್ರಭುತ್ವಾತ್ಮಕ ಸಂಸ್ಥೆಗಳ ಕಾರ್ಯವಿಧಾನವನ್ನು ನಿರ್ಧರಿಸಲು ಬೇಕಾದ ಸಾಕಷ್ಟು ಸಾಮಗ್ರಿಗಳು ಇರಲಿಲ್ಲ, ಹೀಗಾಗಿ ಅವನ ಆಶಾವಾದವವನ್ನು ಪ್ರಾಯಶಃ ಕ್ಷಮಿಸಬಹುದು. ಆದರೆ ನಮ್ಮ ಭ್ರಮನಿರಸನಗೊಂಡ ಯುಗದಲ್ಲಿ ಅದು ಕೊಂಚ ಮಟ್ಟಿಗೆ ಮುಗ್ಧತೆಯವಾಗಿ ಕಾಣುತ್ತವೆ.

ಜಾನ್ ಸ್ಟೂಅರ್ಟ್ ಮಿಲ್ ತನ್ನ 'ಯುಟಿಲಿಟೇರಿಯನಿಸಂ'ನಲ್ಲಿ ಒಂದು ಭ್ರಮಾತ್ಮಕ ವಾದವನ್ನು ಮಂಡಿಸುತ್ತಾನೆ, ಅದನ್ನವನು ಸಮಂಜಸವೆಂದು ಹೇಗೆ

ಭಾವಿಸಿದ ಎಂಬುದೇ ಚೋದ್ಯವಾಗಿ ಕಾಣುತ್ತದೆ. ಅವನು ಹೇಳುತ್ತಾನೆ: ಸಂತೋಷವೊಂದೇ ಬಯಸುವಂಥದು; ಹೀಗಾಗಿ, ಸಂತೋಷವೊಂದೇ ಬಯಸಬಹುದಾದದ್ದು. ನಾವು ನೋಡುವುದು ಕಾಣಬಲ್ಲಂತಹ ವಸ್ತುಗಳನ್ನು ಮಾತ್ರ, ಕೇಳಬಹುದಾದಂತಹವು ಮಾತ್ರ ಕೇಳಿಸುತ್ತವೆ, ಹಾಗೆಯೇ ಬಯಸಬಹುದಾದಂತಹವನ್ನು ಮಾತ್ರ ಬಯಸುತ್ತೇವೆ. ಕಾಣುವಂತಿದ್ದರೆ ವಸ್ತುವೊಂದು 'ಕಾಣುತ್ತದೆ, ಆದರೆ 'ಬಯಸುವಂಥದು' ಅದನ್ನು ಬಯಸಲೇಬೇಕಿದ್ದರೆ ಎಂಬುದನ್ನವನು ಗಮನಿಸುವುದಿಲ್ಲ. ಹೀಗೆ 'ಬಯಸುವಂಥದ್ದು' ಎಂಬ ಪದವು ನೈತಿಕ ತತ್ವವೊಂದನ್ನು ಊಹಿಸಿಕೊಳ್ಳುವಂಥದು. ಬಯುಸುವುದರಿಂದ ಬಯಸಬೇಕಾದದ್ದನ್ನು ನಾವು ಊಹಿಸಿಕೊಳ್ಳಲು ಸಾಧ್ಯವಿಲ್ಲ.

ಮತ್ತೆ: ಪ್ರತಿ ವ್ಯಕ್ತಿಯೂ ಅನಿವಾರ್ಯವಾಗಿ ತನ್ನ ಹಿತವನ್ನೇ ಅರಸುವವನಾದರೆ, ಅವನು ಬೇರೆ ಯಾವುದನ್ನೋ ಮಾಡಬೇಕು ಎಂದು ಹೇಳುವುದರಲ್ಲಿ ಅರ್ಥವಿಲ್ಲ. 'ನೀನು ಮಾಡಬೇಕು' ಎಂಬುದು 'ನೀನು ಮಾಡಬಲ್ಲೆ' ಎಂಬುದನ್ನು ಸೂಚಿಸುತ್ತದೆ ಎಂದು ಕ್ಯಾಂಟ್ ಹೇಳಿದ; ಇದಕ್ಕೆ ವಿರುದ್ಧವಾಗಿ, ನೀನು ಮಾಡಲಾಗದಿದ್ದರೆ, ಆಗ ನೀನು ಮಾಡಲೇಬೇಕು ಎಂದು ಹೇಳುವುದು ವ್ಯರ್ಥವಾಗುತ್ತದೆ. ಪ್ರತಿಯೊಬ್ಬನೂ ಯಾವಾಗಲೂ ತನ್ನದೇ ಹಿತವನ್ನು ಅರಸಬೇಕಾಗಿದ್ದರೆ ನೈತಿಕತೆ ಎಂಬುದು ವಿವೇಚನೆಯಾಗುತ್ತದೆ; ಅದರಿಂದ ಸ್ವಹಿತವು ನೆರವೇರುತ್ತದೆ ಎಂಬ ಕಾರಣದಿಂದ ಇತರರ ಹಿತವನ್ನು ಕಾಪಾಡುವುದರಲ್ಲಿ ಯಶಸ್ವಿಯೇ ಆಗಬಹುದು. ಹಾಗೆಯೇ ರಾಜಕೀಯದಲ್ಲಿ ಎಲ್ಲ ಸಹಕಾರವೂ ದಿಮ್ಮಿ ಉರುಳಿಸುವ ಕೆಲಸವಾಗುತ್ತದೆ. ಉಪಯುಕ್ತತಾವಾದಿಗಳ ನೆಲೆಯಿಂದ ನೋಡಿದರೆ ಮಿಕ್ಕಾವುದೇ ನಿರ್ಣಯವನ್ನೂ ಸಮಂಜಸವಾಗಿ ಸಾಧಿಸಲಾಗುವುದಿಲ್ಲ.

ಇದರಲ್ಲಿ ಎರಡು ಬೇರೆ ಬೇರೆ ಪ್ರಶ್ನೆಗಳು ಸೇರಿವೆ. ಮೊದಲನೆಯದಾಗಿ, ಪ್ರತಿ ವ್ಯಕ್ತಿಯೂ ತನ್ನದೇ ಸಂತೋಷವನ್ನು ಅರಸುತ್ತಾನೆಯೇ? ಎರಡನೆಯದು, ಸಾರ್ವತ್ರಿಕ ಹಿತಸಾಧನೆಯು ಎಲ್ಲ ಮಾನವ ಪ್ರಯತ್ನಗಳ ಸರಿಯಾದ ಉದ್ದೇಶವೇ?

ಪ್ರತಿ ವ್ಯಕ್ತಿಯೂ ತನ್ನ ಸಂತೋಷವನ್ನು ಬಯಸುತ್ತಾನೆ ಎಂದಾಗ, ಅದಕ್ಕೆ ಎರಡು ಅರ್ಥಗಳು ಹೊಳೆಯುತ್ತವೆ; ಅವುಗಳಲ್ಲಿ ಒಂದು ವಾಚ್ಯಾರ್ಥ, ಮತ್ತೊಂದು ಸುಳ್ಳು. ನಾನು ಏನನ್ನು ಬಯಸಿದರೂ, ನನ್ನ ಬಯಕೆಯನ್ನು ಪೂರೈಸಿಕೊಳ್ಳುವುದರಲ್ಲಿ ನನಗೆ ಸಂತೋಷ ಸಿಕ್ಕುತ್ತದೆ; ಅಂದರೆ ನಾನು ಬಯಸುವುದೆಲ್ಲ ಸಂತೋಷಕರವೇ, ಹೀಗಾಗಿ, ಸ್ಥೂಲವಾಗಿ ಹೇಳುವುದಾದರೆ, ಸಂತೋಷ ಎನ್ನುವುದು ನಾನು ಬಯಸುವುದು. ಇದು ವಾಚ್ಯಾರ್ಥದ ಸಿದ್ಧಾಂತ.

ಅದರ ಅರ್ಥ ಅದೇ ಆಗಿದ್ದರೆ, ನಾನು ಏನನ್ನಾದರೂ ಬಯಸಿದರೆ, ನಾನು ಅದನ್ನು ಬಯಸುವುದು ಅದು ನನಗೆ ನೀಡುವ ಸಂತೋಷದ ಕಾರಣದಿಂದ,

ಅದು ಸಾಮಾನ್ಯವಾಗಿ ಸುಳ್ಳು. ನನಗೆ ಹಸಿವಾಗಿರುವಾಗ ಆಹಾರದ ಬಯಕೆ ಉಂಟಾಗುತ್ತದೆ, ಮತ್ತು ನನ್ನ ಹಸಿವು ಇರುವವರೆಗೂ ಆಹಾರವು ನನಗೆ ಸಂತೋಷವನ್ನು ನೀಡುತ್ತದೆ. ಆದರೆ ಒಂದು ಬಯಕೆಯಾಗಿರುವ ಹಸಿವು ಮೊದಲಿಗೆ ಬರುತ್ತದೆ; ಸಂತೋಷವು ಆ ಬಯಕೆಯ ಪರಿಣಾಮ. ಕೆಲವು ಪ್ರಸಂಗಗಳಲ್ಲಿ ಸಂತೋಷವೇ ನೇರವಾದ ಬಯಕೆ ಎಂಬುದನ್ನು ನಾನು ಅಲ್ಲಗಳೆಯುವುದಿಲ್ಲ. ನಾಟಕ ನೋಡಬೇಕೆಂದು ನೀವು ಒಂದು ಸಂಜೆ ಬಿಡುವು ಮಾಡಿಕೊಂಡರೆ, ನೀವು ನಿಮಗೆ ಗರಿಷ್ಠ ಸಂತೋಷ ನೀಡುವ ನಾಟಕವಿರುವ ರಂಗವನ್ನು ಆಯ್ಕೆಮಾಡಿಕೊಳ್ಳುತ್ತೀರಿ. ಆದರೆ ಹಾಗೆ ಕ್ರಿಯೆಗಳನ್ನು ನಿರ್ಧರಿಸುವ ಸಂತೋಷದ ಬಯಕೆಯು ಅಪರೂಪದ್ದು ಮತ್ತು ಮುಖ್ಯವಲ್ಲದ್ದು. ಪ್ರತಿಯೊಬ್ಬನ ಮುಖ್ಯ ಕ್ರಿಯೆಗಳೆಲ್ಲ ನಿರ್ಧರಿತವಾಗುವುದು ಸಂತೋಷ ಅಥವಾ ದುಃಖ ಕುರಿತ ಲೆಕ್ಕಾಚಾರದ ಹಿಂದಿನ ಬಯಕೆ.

ಬಯಕೆಯ ವಸ್ತು ಯಾವುದೇ ಆಗಬಹುದು; ಸ್ವಪೀಡನಸಂತೋಷಿಯು (ಮ್ಯಾಸೋಕಿಸ್ಟ್) ತನ್ನ ನೋವನ್ನು ಬಯಸಬಹುದು. ತಾನು ಬಯಸುವ ನೋವಿನಲ್ಲಿಯೇ ಸ್ವಪೀಡನಸಂತೋಷಿಯು ಸಂತೋಷವನ್ನು ಪಡೆಯುತ್ತಾನೆಂಬುದರಲ್ಲಿ ಅನುಮಾನವಿಲ್ಲ, ಆದರೆ ಸಂತೋಷವುಂಟಾಗುವುದು ಬಯಕೆಯಿಂದ, ಅದರ ವ್ಯತಿರಿಕ್ತ ಸ್ಥಿತಿಯಲ್ಲ. ತನ್ನ ಬಯಕೆಯಿಂದಾಗುವುದರ ಹೊರತಾಗಿ ತನ್ನ ಮೇಲೆ ವೈಯಕ್ತಿಕವಾಗಿ ಪರಿಣಾಮ ಬೀರದ ಏನನ್ನೋ ಬಯಸಬಹುದು; ಉದಾಹರಣೆಗೆ, ತನ್ನ ದೇಶವು ತಟಸ್ಥ ನಿಲವು ತಾಳಿರುವ ಯುದ್ಧದಲ್ಲಿನ ಒಂದು ಪಕ್ಷದ ಗೆಲವು. ಅವನು ಸಾಮಾನ್ಯ ಸೌಖ್ಯದ ಹೆಚ್ಚಿಕೆಯನ್ನು ಅಥವಾ ಸಾಮಾನ್ಯ ಸಂಕಟದ ಇಳಿಕೆಯನ್ನು ಬಯಸಬಹುದು. ಅಥವಾ, ಕಾರ್ಲೈಲ್‌ನಂತೆ, ತದ್ವಿರುದ್ಧವಾದುದನ್ನು ಬಯಸಬಹುದು. ಅವನ ಬಯಕೆಗಳು ವ್ಯತ್ಯಾಸಗೊಳ್ಳುವುದರಿಂದ ಸಂತೋಷಗಳೂ ವ್ಯತ್ಯಾಸಗೊಳ್ಳುತ್ತವೆ.

ವ್ಯಕ್ತಿಗಳ ಬಯಕೆಗಳು ಎದುರುಬದುರಾಗುವುದರಿಂದ ನೈತಿಕ ಭಾಗವು ಆವಶ್ಯಕವಾಗುತ್ತದೆ. ಸಂಘರ್ಷದ ಮೂಲ ಕಾರಣ ಅಹಂಭಾವ; ಬಹುತೇಕ ಜನರು ಮಿಕ್ಕವರದಕ್ಕಿಂತ ತಮ್ಮ ಸಂತೋಷದ ಕಡೆಗೇ ಗಮನ ನೀಡುವವರು. ಆದರೆ ಅಹಂಭಾವದ ಅಂಶವಿಲ್ಲದಿದ್ದರೂ ಸಂಘರ್ಷಗಳು ಅಷ್ಟೇ ಮಟ್ಟಿಗೆ ಸಾಧ್ಯವಾಗಬಹುದು. ಎಲ್ಲರೂ ಕ್ಯಾಥೋಲಿಕ್‌ರಾಗಬೇಕೆಂದು ಒಬ್ಬ ಬಯಸಬಹುದು, ಪ್ರತಿಯೊಬ್ಬನೂ ಕಾಲ್ವಿನಿಸ್ಟ್ ಆಗಬೇಕು ಎಂಬುದು ಇನ್ನೊಬ್ಬನ ಬಯಕೆಯಾಗಿರಬಹುದು. ಅಂಥ ಅಹಂಭಾವರಹಿತ ಬಯಕೆಗಳು ಮತ್ತೆ ಮತ್ತೆ ಸಾಮಾಜಿಕ ಸಂಘರ್ಷಗಳೊಡನೆ ತಳುಕು ಹಾಕಿಕೊಂಡಿರುತ್ತವೆ. ನೈತಿಕತೆಗೆ ಇಬ್ಬಗೆಯ ಉದ್ದೇಶಗಳಿವೆ: ಮೊದಲನೆಯದಾಗಿ, ಒಳ್ಳೆಯ ಮತ್ತು ಕೆಟ್ಟ ಬಯಕೆಗಳ ನಡುವಣ

ವ್ಯತ್ಯಾಸವನ್ನು ಗುರುತಿಸುವ ಒರೆಗಲ್ಲು; ಮತ್ತು ಎರಡನೆಯದು, ಹೊಗಳಿಕೆ ತೆಗಳಿಕೆಗಳ ಮೂಲಕವಾಗಿ, ಒಳ್ಳೆಯದನ್ನು ಪ್ರೋತ್ಸಾಹಿಸುವುದು ಮತ್ತು ಕೆಟ್ಟುದನ್ನು ಅಡಗಿಸುವುದು.

ಉಪಯುಕ್ತತಾ ಸಿದ್ಧಾಂತದ ಮನೋವೈಜ್ಞಾನಿಕ ಭಾಗಕ್ಕಿಂತ ತಾರ್ಕಿಕವಾಗಿ ಬೇರೆಯಾದ ನೈತಿಕ ಭಾಗವು ಹೀಗೆ ಹೇಳುತ್ತದೆ: ಸಾಮಾನ್ಯ ಸೌಖ್ಯವನ್ನು ಹೆಚ್ಚಿಸಲು ಸಹಾಯಕವಾಗುವ ಬಯಕೆಗಳು ಮತ್ತು ಕಾರ್ಯಗಳು ಒಳ್ಳೆಯವು. ಇದು ಒಂದು ಕಾರ್ಯದ ಉದ್ದೇಶವಾಗಿರಬೇಕಾದ್ದಿಲ್ಲ, ಅದು ಅದರ ಪರಿಣಾಮವಾಗಿರಬೇಕು. ಈ ಸಿದ್ಧಾಂತದ ಪರವಾಗಿಯಾಗಲೀ ವಿರುದ್ಧವಾಗಿಯಾಗಲೀ ಯಾವುದಾದರೂ ಸುಸಂಬದ್ಧ ವಾದವಿದೆಯೇ? ನೀಷೆಗೆ ಸಂಬಂದಪಟ್ಟಂತೆಯೂ ನಾವು ಇಂತಹ ಒಂದು ಪ್ರಶ್ನೆಯನ್ನೆದುರಿಸಿದ್ದೆವು. ಅವನ ನೈತಿಕತೆಯು ಉಪಯುಕ್ತತಾವಾದಿಗಳದಕ್ಕಿಂತ ಭಿನ್ನವಾದುದು, ಯಾಕೆಂದರೆ ಅದರ ನಿಲವು ಮಾನವ ಸಂಕುಲದ ಒಂದು ಅಲ್ಪಸಂಖ್ಯಾತ ವರ್ಗವು ಮಾತ್ರ ನೈತಿಕವಾಗಿ ಪ್ರಮುಖ, ಹೀಗಾಗಿ ಉಳಿದವರ ಸುಖ ದುಃಖಗಳು ನಗಣ್ಯ ಎಂಬುದು. ಈ ಭಿನ್ನಾಭಿಪ್ರಾಯವನ್ನು, ವೈಜ್ಞಾನಿಕ ಪ್ರಶ್ನೆಯೊಂದಕ್ಕೆ ಸಂಬಂಧಿಸಿದಂತೆ ಬಳಸುವ, ಸೈದ್ಧಾಂತಿಕ ವಾದಗಳಿಂದ ಎದುರಿಸಬಹುದೆಂಬುದರ ಬಗ್ಗೆ ನನಗೆ ನಚ್ಚಿಕೆಯಿಲ್ಲ. ನೀಷೆಯ ಶ್ರೀಮಂತಪ್ರಭುತ್ವದಿಂದ ಹೊರತಾಗಿರುವವರು ಇದನ್ನು ಒಪ್ಪುವುದಿಲ್ಲ ಎಂಬುದು ಸ್ಪಷ್ಟ, ಹೀಗಾಗಿ ಈ ವಿಷಯವು ಸೈದ್ಧಾಂತಿಕವಾಗುವುದರ ಬದಲು ರಾಜಕೀಯವಾಗುತ್ತದೆ. ಉಪಯುಕ್ತತಾ ನೈತಿಕತೆಯು ಪ್ರಜಾಪ್ರಭುತ್ವಪರ ಹಾಗೂ ರೊಮ್ಯಾಂಟಿಕ್ ವಿರೋಧಿಯಾದುದು. ಪ್ರಜಾಪ್ರಭುತ್ವವಾದಿಗಳು ಅದನ್ನು ಒಪ್ಪಿಕೊಳ್ಳುವ ಸಂಭವವಿದೆ, ಆದರೆ ಜಗತ್ತಿನ ಬಗ್ಗೆ ಹೆಚ್ಚು ಬೈರಾನಿಕ್ ದೃಷ್ಟಿಕೋನವನ್ನು ಹೊಂದಿದವರನ್ನು, ನನ್ನ ಅಭಿಪ್ರಾಯದಲ್ಲಿ, ವಿರೋಧಿಸಬಹುದಾದುದು ವಾಸ್ತವ ನೆಲೆಗಟ್ಟಿನಲ್ಲಿ ಮಾತ್ರ ಪರಿಗಣಿಸುವ ಮೂಲಕ ಅಲ್ಲ, ಬಯಕೆಗಳ ಮೂಲಕ.

ತಾತ್ವಿಕ ತೀವ್ರಗಾಮಿಗಳದು ಒಂದು ಸಂಕ್ರಮಣ ಪಂಥ. ಅವರ ವಿಧಾನವು ತನಗಿಂತಲೂ ಹೆಚ್ಚು ಮುಖ್ಯವಾದ ಮಿಕ್ಕೆರಡರ ಹುಟ್ಟಿಗೆ ಕಾರಣವಾಯಿತು, ಅವುಗಳೆಂದರೆ ಡಾರ್ವಿನ್‌ವಾದ ಮತ್ತು ಸಮಾಜವಾದ. ಡಾರ್ವಿನ್‌ವಾದವು ಅನ್ವಯವಾದುದು ಮಾಲ್ತಸ್‌ನ ಜನಸಂಖ್ಯಾವಾದದ ಇಡೀ ಪ್ರಾಣಿ ಮತ್ತು ಸಸ್ಯವರ್ಗ ಜೀವಿಗಳಿಗೆ; ಇದು ಬೆಂಥಮ್‌ವಾದಿಗಳ ರಾಜಕೀಯ ಮತ್ತು ಆರ್ಥಿಕತೆಗಳ ಅವಿಭಾಜ್ಯ ಅಂಗ – ಭೂಗೋಳದಾದ್ಯಂತದ ಮುಕ್ತ ಸ್ಪರ್ಧೆ, ಅದರಲ್ಲಿ ಗೆಲವು ಉಂಟಾಗುವುದು ಬಹುತೇಕ ಬಂಡವಾಳಶಾಹಿಗಳಂತಿರುವ ಪ್ರಾಣಿಗಳಿಗೆ. ಡಾರ್ವಿನ್‌ನೇ ಮಾಲ್ತಸ್‌ನಿಂದ ಪ್ರಭಾವಿತನಾಗಿದ್ದ, ಮತ್ತು ಒಟ್ಟಾರೆ ತಾತ್ವಿಕ ತೀವ್ರಗಾಮಿಗಳೊಡನೆ ಸಹಮತ ವ್ಯಕ್ತಪಡಿಸಿದ್ದ. ಆದರೆ ಸಂಪ್ರದಾಯವಾದಿ ಆರ್ಥಿಕತಜ್ಞರು ಮೆಚ್ಚಿಕೊಂಡಿದ್ದ ಸ್ಪರ್ಧೆಗೂ ಡಾರ್ವಿನ್ ವಿಕಾಸದ ಪ್ರೇರಕಶಕ್ತಿಯೆಂದು ಪ್ರತಿಪಾದಿಸಿದ್ದ ಅರ್ಹತಮರ ಉಳಿವಿಗೂ

ಭಾರಿ ಅಂತರವಿತ್ತು. ಸಂಪ್ರದಾಯವಾದೀ ಅರ್ಥವ್ಯವಸ್ಥೆಯಲ್ಲಿ 'ಮುಕ್ತ ಸ್ಪರ್ಧೆ'ಯು ಕಾನೂನುಗಳ ನಿಯಂತ್ರಣದ ಚೌಕಟ್ಟಿಗೊಳಗಾದ ಒಂದು ಕೃತಕ ಪರಿಕಲ್ಪನೆ. ನೀವು ಪ್ರತಿಸ್ಪರ್ಧಿಗಿಂತ ಕಡಿಮೆ ಬೆಲೆಯಲ್ಲಿ ಸರಕನ್ನು ಮಾರಬಹುದು, ಆದರೆ ಅವನನ್ನು ಕೊಲ್ಲಬಾರದು. ಇನ್ನೂ ಉತ್ತಮ ಉತ್ಪಾದಕರಿಗೆ ಸಹಾಯ ಮಾಡಲೋಸುಗ ನೀವು ದೇಶದ ಸೈನಿಕಬಲವನ್ನು ಬಳಸಿಕೊಳ್ಳಬಾರದು. ಬಂಡವಾಳವನ್ನು ಹಾಕಲಾರದ ದುರದೃಷ್ಟವಂತರು ತಮ್ಮನ್ನು ತಾವು ಕ್ರಾಂತಿಯ ಮೂಲಕ ಉತ್ತಮಪಡಿಸಿಕೊಳ್ಳಲು ಪ್ರಯತ್ನಿಸಬಾರದು. ಬೆಂಥಮ್‌ವಾದಿಗಳ ಅರ್ಥದಲ್ಲಿ 'ಮುಕ್ತ ಸ್ಪರ್ಧೆ' ಎಂದರೆ ವಾಸ್ತವವಾಗಿ ಮುಕ್ತವಲ್ಲ.

ಡಾರ್ವಿನ್‌ವಾದದ ಸ್ಪರ್ಧೆಯು ಇಂತಹ ಪರಿಮಿತ ವ್ಯಾಪ್ತಿಯದಲ್ಲ; ಸೊಂಟದ ಕೆಳಗೆ ಹೊಡೆಯುವುದನ್ನು ಬೆಂಬಲಿಸುವ ಯಾವುದೇ ನಿಯಮಗಳಿರಲಿಲ್ಲ. ಪ್ರಾಣಿಗಳಲ್ಲಿ ನಿಯಮಗಳ ಚೌಕಟ್ಟು ಅಸ್ತಿತ್ವದಲ್ಲಿಲ್ಲ, ಅಥವಾ ಸ್ಪರ್ಧೆಯ ವಿಧಾನವಾಗಿ ಯುದ್ಧವನ್ನು ಅದು ಹೊರತುಪಡಿಸುವುದಿಲ್ಲ. ಸ್ಪರ್ಧೆಯಲ್ಲಿ ಗೆಲವನ್ನು ಸಾಧಿಸಲು ದೇಶವನ್ನು ಬಳಸಿಕೊಳ್ಳುವುದು ಬೆಂಥಮ್‌ವಾದಿಗಳ ಪರಿಕಲ್ಪನೆಯಲ್ಲಿ ನಿಯಮಬಾಹಿರವಾದುದು, ಆದರೆ ಇದನ್ನು ಡಾರ್ವಿನ್‌ವಾದದ ಹೋರಾಟದಿಂದ ಬೇರ್ಪಡಿಸಲಾಗಿರಲಿಲ್ಲ. ಹಾಗೆ ನೋಡಿದರೆ, ಡಾರ್ವಿನ್ ಸ್ವತಃ ಉದಾರವಾದಿಯಾದರೂ, ನೀಷೆಯು ಅವನನ್ನು ತಿರಸ್ಕಾರಪೂರ್ವಕವಾಗಿ ಹೊರತು ಅವನನ್ನು ಉಲ್ಲೇಖಿಸುವುದಿಲ್ಲವಾದರೂ, ಡಾರ್ವಿನ್‌ನ 'ಅರ್ಹತಮದ ಉಳಿವು', ಸಂಪೂರ್ಣವಾಗಿ ರಕ್ತಗತವಾದಾಗ, ಬೆಂಥಮ್‌ನದಕ್ಕಿಂತ ನೀಷೆಯ ತಾತ್ವಿಕತೆಗೆ ಹೆಚ್ಚು ಹತ್ತಿರವಾದ ಮತ್ತೊಂದಕ್ಕೆ ಎಡೆಮಾಡಿಕೊಟ್ಟಿತು. ಆದರೆ ಈ ಬೆಳವಣಿಗೆಗಳು ಅನಂತರದ ಕಾಲಕ್ಕೆ ಸಂಬಂಧಪಟ್ಟವು, ಯಾಕೆಂದರೆ ಡಾರ್ವಿನ್‌ನ 'ಆರಿಜಿನ್ ಆಫ್ ಸ್ಪೀಸೀಶ್' ಪ್ರಕಟವಾದುದು ೧೮೫೯ ರಲ್ಲಿ, ಮತ್ತು ಅದರ ರಾಜಕೀಯ ಪ್ರಭಾವಗಳನ್ನು ಮೊದಮೊದಲಲ್ಲಿ ಗುರುತಿಸಿರಲಿಲ್ಲ.

ಇದಕ್ಕೆ ವ್ಯತಿರಿಕ್ತವಾಗಿ, ಸಮಾಜವಾದವು ಬೆಂಥಮ್‌ವಾದದ ಉಚ್ಛ್ರಾಯಸ್ಥಿತಿಯಲ್ಲಿ, ಸಂಪ್ರದಾಯನಿಷ್ಠ ಆರ್ಥಿಕತೆಯ ನೇರ ಪರಿಣಾಮವಾಗಿಯೂ, ಆರಂಭವಾಯಿತು. ಬೆಂಥಮ್, ಮಾಲ್ತಸ್ ಮತ್ತು ಜೇಮ್ಸ್ ಮಿಲ್‌ರ ಜೊತೆ ನಿಕಟವಾಗಿದ್ದ ರಿಕಾರ್ಡೋ, ಸರಕಿನ ವಿನಿಮಯ ಮೌಲ್ಯವು ಅದರ ಉತ್ಪತ್ತಿಗೆ ಕಾರಣವಾದ ಶ್ರಮಕ್ಕೆ ಸಂಪೂರ್ಣವಾಗಿ ಋಣಿಯಾದುದು ಎಂದು ಹೇಳಿದರು. ಅವನು ಈ ಸಿದ್ಧಾಂತವನ್ನು ಪ್ರಕಟಿಸಿದ್ದು ೧೮೧೭ ರಲ್ಲಿ, ಆಮೇಲೆ ಎಂಟು ವರ್ಷಗಳ ಬಳಿಕ, ಮಾಜಿ ನೌಕಾದಳದ ಅಧಿಕಾರಿ, ಥಾಮಸ್ ಹಾಡ್ಗ್‌ಸ್ಕಿನ್ ಮೊದಲ ಸಮಾಜವಾದೀ ಉತ್ತರವನ್ನು 'ಲೇಬರ್ ಡಿಫೆಂಡೆಡ್ ಅಗೇನ್ಸ್ಟ್ ದ ಕ್ಲೇಮ್ಸ್ ಆಫ್ ಕ್ಯಾಪಿಟಲ್' ಪ್ರಕಟಿಸಿದ. ರಿಕಾರ್ಡೋ ಹೇಳಿದಂತೆ ಎಲ್ಲ ಮೌಲ್ಯಕ್ಕೂ ಶ್ರಮವೇ ಕಾರಣವಾಗುವುದಾದರೆ, ಎಲ್ಲ ಲಾಭವೂ

ಶ್ರಮಿಕರಿಗೇ ಸೇರಬೇಕು; ಈಗ ಭೂಮಾಲೀಕ ಮತ್ತು ಬಂಡವಾಳಗಾರನು ಪಡೆಯುತ್ತಿರುವ ಪಾಲು ಬರಿ ಸುಲಿಗೆಯಾಗುತ್ತದೆ. ಈ ಮಧ್ಯೆ ರಾಬರ್ಟ್ ಆವೆನ್, ಒಬ್ಬ ಉತ್ಪಾದಕನಾಗಿ ಪಡೆದಿದ್ದ ಅನುಭವದ ಹಿನ್ನೆಲೆಯಲ್ಲಿ, ಅದನ್ನು ಅನುಮೋದಿಸಿದ, ಮತ್ತು ಅನತಿ ಕಾಲದಲ್ಲಿಯೇ ಅದು ಸಮಾಜವಾದ ಎಂಬ ಹೆಸರು ಪಡೆಯಿತು. (ಆವೆನ್‌ನ ಅನುಯಾಯಿಗಳಿಗೆ ಅನ್ವಯಿಸಿದಂತೆ, ಸೋಷಿಯಲಿಸ್ಟ್ ಎಂಬ ಪದದ ಮೊದಲ ಬಳಕೆ ೧೮೨೭ ರಲ್ಲಿ ಆಯಿತು.) ಅವನ ಪ್ರಕಾರ, ಯಂತ್ರೋಪಕರಣಗಳು ಶ್ರಮಕ್ಕೆ ಪರ್ಯಾಯವಾಗುತ್ತಿವೆ, ಮತ್ತು ಸರ್ಕಾರದ ತಾಟಸ್ಥ್ಯ ನೀತಿಯು (ಲೇಸೇಫೇರ್) ಶ್ರಮಿಕವರ್ಗದ ಯಂತ್ರಶಕ್ತಿವಿರೋಧಿ ಹೋರಾಟಕ್ಕೆ ಸೂಕ್ತ ಸಾಧನವನ್ನೊದಗಿಸುತ್ತಿಲ್ಲ ಎಂದು ಹೇಳಿದ. ಈ ಅನಿಷ್ಟದ ವಿರುದ್ಧದ ಹೋರಾಟವಿಧಾನವಾಗಿ ಅವನು ಸೂಚಿಸಿದುದೇ ಆಧುನಿಕ ಸಮಾಜವಾದದ ಅತ್ಯಂತ ಹಿಂದಿನ ರೂಪವಾಗಿತ್ತು.

ಆವೆನ್ ತನ್ನ ವ್ಯವಹಾರದಲ್ಲಿ ದೊಡ್ಡ ಮೊತ್ತವನ್ನು ಹೂಡಿದ್ದ ಬೆಂಥಮ್‌ನ ಸ್ನೇಹಿತನಾಗಿದ್ದರೂ, ತಾತ್ವಿಕ ತೀವ್ರಗಾಮಿಗಳು ಅವನ ಸಿದ್ಧಾಂತಗಳನ್ನು ಇಷ್ಟಪಡಲಿಲ್ಲ; ಹಾಗೆ ನೋಡಿದರೆ, ಸಮಾಜವಾದದ ಮುನ್ನಡೆ ಅವರನ್ನು ಮುಂಚೆಗಿಂತಲೂ ಕಡಿಮೆ ತೀವ್ರಗಾಮಿಗಳಾಗಿಯೂ ಕಡಿಮೆ ತಾತ್ವಿಕವಾಗಿಯೂ ಮಾಡಿತು. ಹಾಡ್ಗ್‌ಸ್ಕಿನ್‌ಗೆ ಲಂಡನ್‌ನಲ್ಲಿ ಸಾಕಷ್ಟು ಮಂದಿ ಅನುಯಾಯಿಗಳು ದೊರಕಿದರು, ಇದರಿಂದ ಜೇಮ್ಸ್ ಮಿಲ್ ಗಾಬರಿಗೊಂಡ. ಆಗ ಅವನು ಬರೆದದ್ದು:

'ಅವರ ಅಭಿಪ್ರಾಯಗಳು ವಿಕೃತವಾದವು .. .. ಅದು ಉಳಿಯಬಾರದೆಂಬುದು ಅವರ ಆಲೋಚನೆಯಾಗಿರಬೇಕು, ಅದರ ಇರುವಿಕೆಯು ಈ ಮೂರ್ಖರಿಗೆ ಒಂದು ಕೆಡುಕಿನಂತೆ ಕಾಣುತ್ತದೆ. ಅವರ ನಡುವೆ ಕಾರ್ಯಶೀಲರಾಗಿರುವವರು ದುರ್ಮಾರ್ಗಿಗಳು ಎಂಬುದರಲ್ಲಿ ನನಗೆ ಅನುಮಾನ ಉಳಿದಿಲ್ಲ .. .. ತಾವು ಅಷ್ಟೊಂದು ಇಷ್ಟಪಡುವುದೇ ಅವರಿಗೆ ಆಘಾತಕಾರಿಯಾಗುತ್ತದೆ ಎಂದು ಆ ಮೂಢರಿಗೆ ಅರ್ಥವಾಗುತ್ತಿಲ್ಲ, ಬೇರಾರದೂ ಅಲ್ಲ ಅವರದೇ ಕೈಗಳೇ ಅದನ್ನು ಮಾಡುತ್ತವೆ.'

೧೮೩೧ ರಲ್ಲಿ ಬರೆದ ಈ ಪತ್ರವನ್ನು ಬಂಡವಾಳಶಾಹಿತ್ವ ಮತ್ತು ಸಮಾಜವಾದಗಳ ನಡುವಣ ದೀರ್ಘ ಯುದ್ಧದ ಆರಂಭ ಎಂದು ಪರಿಗಣಿಸಬಹುದು. ಆನಂತರದ ಮತ್ತೊಂದು ಪತ್ರದಲ್ಲಿ, ಜೇಮ್ಸ್ ಮಿಲ್ ಆ ಸಿದ್ಧಾಂತಕ್ಕೆ ಹಾಡ್ಗ್‌ಸ್ಕಿನ್‌ನ 'ಹುಚ್ಚು ಅವಿವೇಕ'ವೇ ಕಾರಣ ಎಂದು ಆರೋಪಿಸಿದ. ಜೊತೆಗೆ ಹೀಗೆನ್ನುತ್ತಾನೆ: 'ಈ ಅಭಿಪ್ರಾಯಗಳು ವ್ಯಾಪಕವಾಗಿ ಹರಡಿದರೆ ಅವು ನಾಗರಿಕ ಸಮಾಜವನ್ನು, ಹೂಣರು ಮತ್ತು ಟಾರ್ಟರ್‌ಗಳು ಮಾಡಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ, ಬುಡಮೇಲು ಮಾಡುತ್ತವೆ.'

ಕೇವಲ ರಾಜಕೀಯವೋ ಆರ್ಥಿಕವೋ ಆದ ಸ್ವರೂಪದಲ್ಲಿನ ಸಮಾಜವಾದವು ತಾತ್ವಿಕತೆಯ ಇತಿಹಾಸದ ಪರಿಧಿಯಲ್ಲಿ ಬರುವುದಿಲ್ಲ. ಅದರೆ ಕಾರ್ಲ್ ಮಾರ್ಕ್ಸ್‌ನ ಕೈಯಲ್ಲಿ ಸಮಾಜವಾದವು ತಾತ್ವಿಕತೆಯ ಸ್ವರೂಪವನ್ನು ಪಡೆಯಿತು. ಅವನ ತಾತ್ವಿಕತೆಯನ್ನು ಮುಂದಿನ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

೨೭
ಕಾರ್ಲ್ ಮಾರ್ಕ್ಸ್

ಕಾರ್ಲ್ ಮಾರ್ಕ್ಸ್ ಬಗ್ಗೆ ಇರುವ ಸಾಮಾನ್ಯ ಭಾವನೆಯೆಂದರೆ, ಅವನು ಸಮಾಜವಾದವನ್ನು ವೈಜ್ಞಾನಿಕವಾಗಿ ಮಾಡಿದವನೆಂದು ಹೇಳಿಕೊಳ್ಳುವ, ಹಾಗೂ ಮಿಕ್ಕ ಯಾರಿಗಿಂತಲೂ ಅದನ್ನು ಒಂದು ಹೆಚ್ಚು ಬಲಶಾಲಿ ಚಳುವಳಿಯನ್ನಾಗಿ ಮಾಡಿ, ಅದನ್ನು ತನ್ನ ಆಕರ್ಷಣೆ ಮತ್ತು ವಿಕರ್ಷಣೆಗಳ ಮೂಲಕವೇ ಈಚಿನ ಯೂರೋಪ್ ಚರಿತ್ರೆಯಲ್ಲಿ ಬಹು ಪ್ರಬಲವಾಗಿ ಹಬ್ಬುವಂತೆ ಮಾಡಿದ ಎಂಬುದು. ಕೆಲವು ಸಾಮಾನ್ಯ ವಿಚಾರಗಳ ಹೊರತಾಗಿ ಅವನ ಆರ್ಥಿಕತೆಯನ್ನಾಗಲೀ ರಾಜಕೀಯವನ್ನಾಗಲೀ ಪರಿಶೀಲಿಸುವುದು ಪ್ರಸ್ತುತ ಕೃತಿಯ ವ್ಯಾಪ್ತಿಯಲ್ಲಿ ಬರುವುದಿಲ್ಲ; ಒಬ್ಬ ತತ್ವಜ್ಞಾನಿಯನ್ನಾಗಿ ಮತ್ತು ಇತರ ತತ್ವಜ್ಞಾನಿಗಳ ಮೇಲೆ ಬೀರಿದ ಪ್ರಭಾವಶಾಲಿಯಾಗಿ ನೋಡುವುದಷ್ಟೇ ನನ್ನ ಉದ್ದೇಶ. ಈ ವಿಷಯದಲ್ಲಿ ಅವನನ್ನು ವರ್ಗೀಕರಿಸುವುದು ಕಷ್ಟ. ಒಂದು ಅಂಶದಲ್ಲಿ, ಹಾಡ್ಗ್‌ಸ್ಕಿನ್‌ನಂತೆಯೇ ಅವನೂ ತಾತ್ವಿಕ ತೀವ್ರಗಾಮಿಗಳ ಪರಿಣಾಮವಾಗಿ, ಅವರ ವೈಚಾರಿಕತೆಯನ್ನು ಹಾಗೂ ಅವರ ರೊಮ್ಯಾಂಟಿಕ್‌ರ ವಿರೋಧವನ್ನೂ ಮುಂದುವರಿಸಿಕೊಂಡು ಬಂದವನು. ಮತ್ತೊಂದು ದೃಷ್ಟಿಯಲ್ಲಿ, ಅವನು ಭೌತವಾದದ ಪುನರುಜ್ಜೀವಕ, ಅದಕ್ಕೊಂದು ಹೊಸ ವ್ಯಾಖ್ಯಾನವನ್ನು ನೀಡಿದವನು ಮತ್ತು ಮಾನವೇತಿಹಾಸದೊಡನೆ ಅದಕ್ಕೊಂದು ಹೊಸ ಸಂಬಂಧವನ್ನು ಕಲ್ಪಿಸಿದವನು. ಮತ್ತೂ ಒಂದು ದೃಷ್ಟಿಯಲ್ಲಿ ನೋಡಿದರೆ, ಮಹಾ ವ್ಯವಸ್ಥಾನಿರ್ಮಾಪಕರಲ್ಲಿ ಕೊನೆಯವನು, ಹೆಗೆಲ್‌ನ ಉತ್ತರಾಧಿಕಾರಿ, ಮತ್ತು ಅವನಂತೆಯೇ ಮನುಷ್ಯಸಂಕುಲದ ವಿಕಾಸವನ್ನು ಪುನರಾವರ್ತಿಸುವ ಸೂತ್ರದಲ್ಲಿ ನಂಬಿಕೆ ಹೊಂದಿದವನು. ಇವುಗಳಲ್ಲಿ ಮಿಕ್ಕವುಗಳನ್ನು ಕಡೆಗಣಿಸಿ ಯಾವುದೋ ಒಂದಕ್ಕೆ ಒತ್ತು ನೀಡುವುದು ಅವನ ತಾತ್ವಿಕತೆಯನ್ನು ತಪ್ಪಾಗಿ ತಿರುಚಿದಂತೆ.

ಅವನ ಜೀವನದ ಘಟನೆಗಳು ಅವನ ಸಂಕೀರ್ಣತೆಗೆ ಭಾಗಶಃ ಕಾರಣಗಳನ್ನು ನೀಡುತ್ತವೆ. ಅವನು ಹುಟ್ಟಿದ್ದು ೧೮೧೮ ರಲ್ಲಿ, ಸಂತ ಆಂಬ್ರೋಸ್‌ನಂತೆಯೇ, ಟ್ರೀವ್ಸ್‌ನಲ್ಲಿ. ಕ್ರಾಂತಿ ಹಾಗೂ ನೆಪೋಲಿಯನ್‌ರ ಅವಧಿಗಳಲ್ಲಿ ಟ್ರೀವ್ಸ್ ಫ್ರೆಂಚ್‌ರ

ಗಾಢ ಪ್ರಭಾವಕ್ಕೊಳಗಾಗಿತ್ತು, ಹಾಗೂ ತನ್ನ ದೃಷ್ಟಿಕೋನದಲ್ಲಿ ಜರ್ಮನಿಯ ಇತರ ಭಾಗಗಳಿಗಿಂತ ಹೆಚ್ಚು ಕಾಸ್ಮೋಪಾಲಿಟನ್ ಆಗಿತ್ತು. ಅವನ ಪೂರ್ವಿಕರು ರ್‍ಯಾಬೈಗಳು, ಅವನ ತಾಯ್ತಂದೆಯರು ಅವನಿನ್ನೂ ಹುಡುಗನಾಗಿದ್ದಾಗ ಕ್ರೈಸ್ತಕ್ಕೆ ಮತಾಂತರಗೊಂಡವರು; ಅವನು ಮದುವೆಯಾದದ್ದು ಒಬ್ಬ ಯೆಹೂದ್ಯೇತರ ಶ್ರೀಮಂತಳನ್ನು, ಅವಳ ಬಗ್ಗೆ ಅವನು ಕೊನೆಯವರೆಗೂ ನಿಷ್ಠೆಯಿಂದಿದ್ದ. ವಿಶ್ವವಿದ್ಯಾನಿಲಯದಲ್ಲಿ ಅವನ ಮೇಲೆ ಪ್ರಭಾವ ಬೀರಿದ್ದು ಆಗಿನ್ನೂ ಪ್ರಚಲಿತವಾಗಿದ್ದ ಹೆಗೆಲಿಯನಿಸಂನಿಂದ ಮತ್ತು ಹೆಗೆಲ್ ಅನ್ನು ವಿರೋಧಿಸಿ ಭೌತವಾದಕ್ಕೆ ತಿರುಗಿಬಿದ್ದ ಫ್ಯೂರ್‌ಬಾಕ್‌ನಿಂದ. ಪತ್ರಿಕಾಕರ್ತನಾಗಲು ಪ್ರಯತ್ನಿಸಿದನಾದರೂ, ಅವನು ಸಂಪಾದಿಸುತ್ತಿದ್ದ 'ರ್‍ಹೀಯಿನ್‌ಷೆ ಜ಼ೀತುಂಗ್' ಅನ್ನು ಅದರ ತೀವ್ರಗಾಮಿ ದೃಷ್ಟಕೋನದ ಕಾರಣ ದಮನಗೊಳಿಸಲಾಯಿತು. ಇದಾದ ಬಳಿಕ, ೧೮೪೩ ರಲ್ಲಿ, ಸಮಾಜವಾದವನ್ನು ಅಧ್ಯಯನ ಮಾಡಲೆಂದು ಅವನು ಫ್ರಾನ್ಸ್‌ಗೆ ಹೋದ. ಅಲ್ಲಿ ಅವನು ಮ್ಯಾಂಚೆಸ್ಟರ್‌ನ ಕಾರ್ಖಾನೆಯೊಂದರ ವ್ಯವಸ್ಥಾಪಕನಾಗಿದ್ದ ಎಂಗೆಲ್ಸ್‌ನನ್ನು ಭೇಟಿಯಾದ. ಅವನ ಮೂಲಕ ಇಂಗ್ಲಿಷ್ ಕಾರ್ಮಿಕ ಪರಿಸ್ಥಿತಿ ಮತ್ತು ಇಂಗ್ಲಿಷ್ ಆರ್ಥಿಕತೆಗಳ ಪರಿಚಯವಾಯಿತು. ಹೀಗೆ ಅವನು ೧೮೪೮ ರ ಕ್ರಾಂತಿಗಿಂತ ಮುಂಚೆಯೇ ಅಪರೂಪವಾದ ಅಂತಾರಾಷ್ಟ್ರೀಯ ಸಂಸ್ಕೃತಿಯನ್ನು ರೂಢಿಸಿಕೊಂಡ. ಪಶ್ಚಿಮ ಯೂರೋಪ್‌ಗೆ ಸಂಬಂಧಿಸಿದಂತೆ, ಅವನೇನೂ ಪಕ್ಷಪಾತವನ್ನು ಹೊಂದಿರಲಿಲ್ಲ, ಅವನಿಗೆ ಯಾವಾಗಲೂ ಸ್ಲಾವ್‌ರ ಬಗ್ಗೆ ತಿರಸ್ಕಾರ.

೧೮೪೮ ರ ಫ್ರೆಂಚ್ ಮತ್ತು ಜರ್ಮನ್ ಕ್ರಾಂತಿಗಳಲ್ಲಿ ಅವನು ಭಾಗಿಯಾದ, ಆದರೆ ಪ್ರತಿಗಾಮಿತ್ವದಿಂದಾಗಿ ೧೮೪೯ ರಲ್ಲಿ ಅವನು ಇಂಗ್ಲಂಡ್‌ನಲ್ಲಿ ಆಶ್ರಯ ಪಡೆಯುವಂತಾಯಿತು. ಕೆಲವು ಅವಧಿಗಳನ್ನು ಹೊರತುಪಡಿಸಿದರೆ, ಅವನು ತನ್ನ ಉಳಿದ ಬದುಕನ್ನು ಲಂಡನ್‌ನಲ್ಲಿಯೇ ಕಳೆದ; ಬಡತನ, ಕಾಯಿಲೆ, ಮಕ್ಕಳ ಸಾವು ಅವನನ್ನು ಕಾಡಿದವಾದರೂ, ಅವನು ದಣಿವರಿಯದೆ ಬರಹ ಮತ್ತು ಅಧ್ಯಯನಗಳಲ್ಲಿ ತೊಡಗಿದ್ದ. ಅವನ ಕಾರ್ಯಗಳ ಹಿಂದಿನ ಪ್ರೇರಕಶಕ್ತಿಯೆಂದರೆ, ತನ್ನ ಜೀವಿತ ಕಾಲದಲ್ಲಿ ಅಲ್ಲವಾದರೂ, ಅನತಿ ಭವಿಷ್ಯದಲ್ಲಿ, ನಡೆಯುವ ಸಾಮಾಜಿಕ ಕ್ರಾಂತಿಯಲ್ಲಿನ ಭರವಸೆ.

ಬೆಂಥಮ್ ಮತ್ತು ಜೇಮ್ಸ್ ಮಿಲ್‌ರಂತೆಯೇ ಮಾರ್ಕ್ಸ್ ಕೂಡ ರೊಮ್ಯಾಂಟಿಸಿಸಂನ ಲವಲೇಶವನ್ನೂ ಹೊಂದಿರಲಿಲ್ಲ; ವೈಜ್ಞಾನಿಕವಾಗಿ ಉಳಿಯುವುದೇ ಅವನ ಇಚ್ಛೆಯಾಗಿತ್ತು. ಅವನ ಆರ್ಥಿಕತೆಯು ಪ್ರಾಚೀನ ಬ್ರಿಟಿಷ್ ಆರ್ಥಿಕತೆಯ ಫಲ. ಪ್ರಾಚೀನ ಆರ್ಥಿಕತೆಯು, ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ, ಭೂಮಾಲೀಕ ಮತ್ತು ದುಡಿಮೆಗಾರರದಕ್ಕೆ ಬದಲಾಗಿ ಬಂಡವಾಳಶಾಹಿಯ ಹಿತಾಸಕ್ತಿಯನ್ನು ಗುರಿಯಾಗಿಸಿಕೊಂಡಿತ್ತು. ಅದಕ್ಕೆ ವಿರುದ್ಧವಾಗಿ,

ಮಾರ್ಕ್ಸ್ ದುಡಿಮೆಗಾರರ ಹಿತಾಸಕ್ತಿಯ ಪರವಾಗಿ ಕಾರ್ಯಶೀಲನಾಗಲು ಪ್ರಯತ್ನಿಸಿದ. ತನ್ನ ತಾರುಣ್ಯದಲ್ಲಿ ಅವನು – ೧೮೪೮ ರ ಕಮ್ಯುನಿಸ್ಟ್ ಪ್ರಣಾಲಿಕೆಯಲ್ಲಿ ಕಾಣಿಸುವಂತೆ – ಒಂದು ಹೊಸ ಕ್ರಾಂತಿಕಾರಿ ಚಳುವಳಿಗೆ ಸೂಕ್ತವಾದ, ಮಿಲ್ಟನ್‌ನ ಕಾಲದಲ್ಲಿ ಉದಾರವಾದವು ಹೊಂದಿದ್ದಂತಹ, ತೀಕ್ಷ್ಣತೆ ಮತ್ತು ತೀವ್ರತೆಗಳನ್ನು ಹೊಂದಿದ್ದ. ಅದರೆ ಅವನು ಆಧಾರಗಳನ್ನು ಅವಲಂಬಿಸುವುದರಲ್ಲಿ ಆಸಕ್ತನಾಗಿದ್ದವನು, ವೈಜ್ಞಾನಿಕೇತರ ಅಂತರ್ಬೋಧೆಯಲ್ಲಿ ಎಂದೂ ನಚ್ಚಿಕೆಯಿಲ್ಲದಿದ್ದವನು.

ತನ್ನನ್ನವನು ಭೌತವಾದಿ ಎಂದು ಕರೆದುಕೊಂಡ, ಆದರೆ ಹದಿನೆಂಟನೆಯ ಶತಮಾನದ ಮಾದರಿಯದಲ್ಲ. ಅವನ ಮಾದರಿಯದೆಂದರೆ, ಹೆಗೆಲಿಯನ್ ಪ್ರಭಾವದಲ್ಲಿ, ಅವನೇ ಹೇಳುವಂತೆ 'ದ್ವಂದ್ವಾತ್ಮಕ'ವಾದುದು, ಸಾಂಪ್ರದಾಯಿಕ ಭೌತವಾದದಿಂದ ಮುಖ್ಯರೂಪದಲ್ಲಿ ಭಿನ್ನವಾದುದು, ಕಾರಣವಾದ (ಇನ್‌ಸ್ಟ್ರುಮೆಂಟಲಿಸಂ) ಎಂದು ಈಗ ಕರೆಯುವುದಕ್ಕೆ ಅದು ಹತ್ತಿರವಾದುದು. ಹಳೆಯ ಭೌತವಾದವು ಸಂವೇದನೆಯನ್ನು ಕ್ರಿಯಾಹೀನವೆಂದು ತಪ್ಪಾಗಿ ಭಾವಿಸಿ, ಅದರಿಂದಾಗಿ ಕ್ರಿಯಾತ್ಮಕತೆಯನ್ನು ಪ್ರಾಥಮಿಕವಾಗಿ ವಸ್ತುವಿಗೆ ಆರೋಪಿಸಿತ್ತು. ಮಾರ್ಕ್ಸ್‌ನ ದೃಷ್ಟಿಯಲ್ಲಿ, ಎಲ್ಲ ಸಂವೇದನೆ ಅಥವಾ ಪರಿಕಲ್ಪನೆಯು ಕರ್ತೃ ಮತ್ತು ಉದ್ದೇಶಗಳ ನಡುವಣ ಪ್ರತಿಕ್ರಿಯೆ; ಬರಿ ವಸ್ತುವು, ಗ್ರಾಹಿಯ (ಪರ್ಸಿಪಿಯೆಂಟ್) ಕ್ರಿಯೆಯಾಗಿರುವುದರ ಜೊತೆಗೆ, ಗ್ರಹಿಕೆಯಾಗುವ ಪ್ರಕ್ರಿಯೆಯಲ್ಲಿ ಬದಲಾವಣೆಗೊಳ್ಳುವ ಒಂದು ಬರೀ ಕಚ್ಚಾವಸ್ತು. ಜ್ಞಾನವು ಕ್ರಿಯಾಹೀನ ಧ್ಯಾನ ಎಂಬ ಹಳೆಯ ಅರ್ಥದಲ್ಲಿ ಅದು ಅವಾಸ್ತವ ಅಮೂರ್ತೀಕರಣ; ನಿಜವಾಗಿ ಸಂಭವಿಸುವ ಪ್ರಕ್ರಿಯೆಯೆಂದರೆ ವಸ್ತುಗಳ ನಿರ್ವಹಣೆ. 'ವಸ್ತುನಿಷ್ಠ ಸತ್ಯವು ಮನುಷ್ಯನ ಆಲೋಚನೆಗೆ ಸಂಬಂಧಿಸಿದ್ದಲ್ಲವೇ ಎನ್ನುವುದು ಸಿದ್ಧಾಂತದ ಪ್ರಶ್ನೆಯಲ್ಲ, ಅದೊಂದು ವ್ಯಾವಹಾರಿಕ ಪ್ರಶ್ನೆ. ಸತ್ಯವು, ಅಂದರೆ ಆಲೋಚನೆಯ ವಸ್ತುಸ್ಥಿತಿ ಮತ್ತು ಸಾಮರ್ಥ್ಯಗಳನ್ನು ಕಾರ್ಯತಃ ನಿದರ್ಶಿಸಬೇಕು. ಕಾರ್ಯಶೀಲತೆಯಿಂದ ಬೇರ್ಪಡಿಸಿದ ಆಲೋಚನೆಯೊಂದರ ವಸ್ತುಸ್ಥಿತಿ ಅಥವಾ ಅವಸ್ತುಸ್ಥಿತಿ ಎಂಬ ವಿವಾದವು ಶುದ್ಧ ತಾರ್ಕಿಕ ಪ್ರಶ್ನೆ. .. .. ತತ್ತ್ವಜ್ಞಾನಿಗಳು ಜಗತ್ತನ್ನು ನಾನಾ ವಿಧಗಳಲ್ಲಿ ವ್ಯಾಖ್ಯಾನಿದ್ದಾರೆಯೇ ಹೊರತು, ಅದರ ನಿಜವಾದ ಕಾರ್ಯವಿರುವುದು ಅದನ್ನು ಬದಲಾಯಿಸುವುದರಲ್ಲಿ.'[೨೮೧]

ತತ್ತ್ವಜ್ಞಾನಿಗಳು ಜ್ಞಾನಾನ್ವೇಷಣೆ ಎಂದು ಕರೆದಿರುವ ಪ್ರಕ್ರಿಯೆಯು, ನಾವು ತಿಳಿದಂತೆ, ವಸ್ತುವು ಸ್ಥಿರವಾಗಿದ್ದು ಎಲ್ಲ ಹೊಂದಾಣಿಕೆಗಳೂ ಜ್ಞಾನಿಯ ಪಾಲಿನದಾಗಿರುತ್ತವೆ ಎಂಬುದು ಮಾರ್ಕ್ಸ್‌ನ ಅರ್ಥ ಎಂದು ವ್ಯಾಖ್ಯಾನಿಸುವುದು ಸೂಕ್ತ ಎಂದು ನನಗೆ ತೋರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಕರ್ತೃ ಮತ್ತು ಉದ್ದೇಶ

---

೨೮೧. 'ಇಲೆವೆನ್ ಥೀಸೆಸ್ ಆನ್ ಫ್ಯೂರ್‌ಬ್ಯಾಕ್', ೧೮೪೫.

ಎರಡೂ, ಜ್ಞಾತೃ ಮತ್ತು ಜ್ಞೇಯ ಎರಡೂ, ನಿರಂತರ ಹೊಂದಾಣಿಕೆಯ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ. ಈ ಪ್ರಕ್ರಿಯೆಯನ್ನವನು 'ದ್ವಂದ್ವಾತ್ಮಕ' ಎಂದು ಕರೆಯುತ್ತಾನೆ, ಯಾಕೆಂದರೆ ಅದೆಂದಿಗೂ ಮುಗಿಯುವುದಿಲ್ಲ.

ಬ್ರಿಟಿಷ್ ಅನುಭವೈಕವಾದಿಗಳು ಪರಿಕಲ್ಪಿಸಿಕೊಂಡ 'ಸಂವೇದನೆ'ಯ ವಾಸ್ತವತೆಯನ್ನು ಅಲ್ಲಗಳೆಯುವುದು ಈ ಸಿದ್ಧಾಂತಕ್ಕೆ ಅನಿವಾರ್ಯವಾಗುತ್ತದೆ. ಅವರ ಪ್ರಕಾರ 'ಸಂವೇದನೆ' ಉಂಟಾದಾಗ ಅವರು ಕೊಡುವ ಅರ್ಥಕ್ಕೆ ತೀರ ಹತ್ತಿರವಾದಂತೆ ಏನಾಗುತ್ತದೆ ಎಂಬುದನ್ನು 'ಗಮನಿಸುವುದು' ಎಂದು ಹೇಳುವುದು ಹೆಚ್ಚು ಸಮಂಜಸವಾದುದು, ಅದು ಕ್ರಿಯೆಯನ್ನು ಸೂಚಿಸುತ್ತದೆ. ಹಾಗೆ ನೋಡಿದರೆ – ಮಾರ್ಕ್ಸ್ ಹೀಗೆ ವಾದಿಸಬಹುದು – ಅವುಗಳಿಗೆ ಸಂಬಂಧಿಸಿದ ಕ್ರಿಯೆಗಳ ಪ್ರಕ್ರಿಯೆಯನ್ನಷ್ಟೇ ನಾವು ಗಮನಿಸುವುದು, ಮತ್ತು ಕ್ರಿಯೆಯನ್ನು ಹೊರತುಪಡಿಸುವ ಯಾವುದೇ ಸಿದ್ಧಾಂತವೂ ಹಾದಿ ತಪ್ಪಿಸುವ ಅಮೂರ್ತೀಕರಣ.

ನನಗೆ ತಿಳಿದ ಮಟ್ಟಿಗೆ, 'ಸತ್ಯ'ದ ಪರಿಭಾವನೆಯನ್ನು ಕ್ರಿಯಾತ್ಮಕ ದೃಷ್ಟಿಕೋನದಿಂದ ಟೀಕಿಸಿದ ತತ್ವಜ್ಞಾನಿಗಳಲ್ಲಿ ಮಾರ್ಕ್ಸ್‌ನೇ ಮೊದಲನೆಯವನು. ಅವನಲ್ಲಿ ಈ ಟೀಕೆಯು ಹೆಚ್ಚು ಪ್ರಾಮುಖ್ಯವನ್ನು ಪಡೆಯಲಿಲ್ಲ, ಹೀಗಾಗಿ ನಾನು ಆ ಬಗ್ಗೆ ಹೆಚ್ಚಿಗೇನೂ ಹೇಳುವುದಿಲ್ಲ, ಈ ಸಿದ್ಧಾಂತದ ಪರಿಶೀಲನೆಯನ್ನು ಮುಂದಿನ ಅಧ್ಯಾಯಕ್ಕೆ ಮೀಸಲಿರಿಸುತ್ತೇನೆ.

ಮಾರ್ಕ್ಸ್‌ನ ಇತಿಹಾಸದ ತಾತ್ವಿಕತೆಯು ಹೆಗೆಲ್ ಮತ್ತು ಬ್ರಿಟಿಷ್ ಅರ್ಥತಜ್ಞರ ಮಿಶ್ರಣ. ಹೆಗೆಲ್‌ನಂತೆಯೇ ಅವನೂ ಜಗತ್ತು ಬೆಳೆಯುವುದು ಒಂದು ದ್ವಂದ್ವಾತ್ಮಕ ಸೂತ್ರಕ್ಕನುಗುಣವಾಗಿ, ಆದರೆ ಈ ಬೆಳವಣಿಗೆಯ ಪ್ರೇರಕಶಕ್ತಿಯ ಬಗ್ಗೆ ಹೆಗೆಲ್‌ನ ಅಭಿಪ್ರಾಯವನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತಾನೆ. ಹೆಗೆಲ್ 'ಸತ್ವ' ಎಂಬ ನಿಗೂಢ ಘಟಕದಲ್ಲಿ ನಂಬಿಕೆಯಿಟ್ಟಿದ್ದವನು, ಅದೇ ಮಾನವೇತಿಹಾಸವನ್ನು ದ್ವಂದ್ವಾತ್ಮಕ ಸೂತ್ರಾನುಗುಣವಾಗಿ ವಿವಿಧ ಹಂತಗಳಲ್ಲಿ ಬೆಳೆಯುವಂತೆ ಮಾಡುವ ಕಾರಣ ಎಂದು ಹೆಗೆಲ್ ತರ್ಕಿಸುತ್ತಾನೆ. ಸತ್ವವು ಈ ಹಂತಗಳನ್ನು ಯಾಕೆ ಹಾದು ಹೋಗಬೇಕು ಎಂಬುದು ಸ್ಪಷ್ಟವಾಗುವುದಿಲ್ಲ. ಸತ್ವವು ಹೆಗೆಲ್ ಅನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲು ಆಶಿಸುತ್ತಿದೆ ಎಂದು ಊಹಿಸಬೇಕಾಗುತ್ತದೆ, ಮತ್ತು ಪ್ರತಿ ಹಂತವೂ ತಾನು ಓದುತ್ತಿರುವುದನ್ನು ದುಡುಕಿನಿಂದ ಮೂರ್ತೀಕರಿಸುತ್ತಿರುತ್ತದೆ (ಆಬ್ಜೆಕ್ಟಿಫೈ). ಮಾರ್ಕ್ಸ್‌ನ ದ್ವಂದ್ವಾತ್ಮಕತೆಯಲ್ಲಿ, ಕೆಲವು ಅನಿವಾರ್ಯತೆಗಳನ್ನು ಬಿಟ್ಟರೆ, ಈ ಗುಣವಿಲ್ಲ. ಮಾರ್ಕ್ಸ್‌ನಿಗೆ, ಭೌತದ್ರವ್ಯವೇ ಪ್ರೇರಕಶಕ್ತಿ, ಸತ್ವವಲ್ಲ. ಆದರೆ ನಾವು ವಸ್ತುವನ್ನು ಪರಿಗಣಿಸುತ್ತಿರುವುದು ವಿಶಿಷ್ಟ ಅರ್ಥದಿಂದಲೇ ಹೊರತು ಪರಮಾಣುವಾದಿಗಳ ಸಂಪೂರ್ಣವಾಗಿ ಅಮಾನವೀಕರಣಗೊಂಡ ಭೌತದ್ರವ್ಯದಂತೆ ಅಲ್ಲ. ಅಂದರೆ, ಮಾರ್ಕ್ಸ್‌ನ ಪ್ರಕಾರ ಪ್ರೇರಕಶಕ್ತಿಯು ಮನುಷ್ಯನಿಗೆ ಸಂಬಂಧಪಟ್ಟಂತಹ ಭೌತದ್ರವ್ಯ,

ಅದರಲ್ಲಿ ಅತ್ಯಂತ ಪ್ರಮುಖವಾದುದು ಅದನ್ನು ಅವನು ಉತ್ಪಾದಿಸುವ ಬಗೆ. ಈ ರೀತಿಯಲ್ಲಿ ಮಾರ್ಕ್ಸ್‌ನ ಭೌತವಾದವು, ವ್ಯಾವಹಾರಿಕವಾಗಿ, ಆರ್ಥಿಕತೆಯೇ ಆಗುತ್ತದೆ.

ಮಾನವನ ಇತಿಹಾಸದಲ್ಲಿನ ಯಾವುದೇ ಕಾಲದ ರಾಜಕೀಯ, ಮತಧರ್ಮ, ತಾತ್ವಿಕತೆ ಮತ್ತು ಕಲೆಗಳು, ಮಾರ್ಕ್ಸ್‌ನ ಪ್ರಕಾರ, ಅದರ ಉತ್ಪಾದನಾ ಮಾರ್ಗಗಳ ಪರಿಣಾಮ, ಮತ್ತು ಸ್ವಲ್ಪ ಕಡಿಮೆ ಪ್ರಮಾಣದಲ್ಲಿ, ಅದರ ಹಂಚಿಕೆ. ಪರಿಗಣಿಸುತ್ತಿರುವ ಇದನ್ನು ಅನ್ವಯಿಸುವುದು ಅದರ ಸ್ಥೂಲ ರೂಪರೇಷೆಗಳಿಗೇ ಹೊರತು ಸಂಸ್ಕೃತಿಯ ಸೂಕ್ಷ್ಮತೆಗಳಿಗೆ ಅಲ್ಲ ಎಂಬುದು ನನ್ನ ತಿಳಿವಳಿಕೆ. ಈ ಸಿದ್ಧಾಂತವನ್ನು 'ಇತಿಹಾಸದ ಭೌತವಾದೀಯ ಪರಿಕಲ್ಪನೆ' ಎನ್ನಲಾಗುತ್ತದೆ. ಇದು ಬಹು ಮುಖ್ಯವಾದ ಪ್ರಮೇಯ, ಅದರಲ್ಲೂ ವಿಶೇಷವಾಗಿ, ಅದು ತಾತ್ವಿಕತೆಯ ಇತಿಹಾಸಕಾರನಿಗೆ ಅನ್ವಯಿಸುವಂಥದು. ಅದು ಇರುವಂತೆಯೇ ನಾನು ಈ ಪ್ರಮೇಯವನ್ನು ಒಪ್ಪುವುದಿಲ್ಲವಾದರೂ, ಅದರಲ್ಲಿ ಸತ್ಯದ ಬಹು ಮುಖ್ಯ ಅಂಶಗಳಿವೆ ಎಂಬುದು ನನ್ನ ತಿಳಿವಳಿಕೆ. ಅದು ತಾತ್ವಿಕ ಬೆಳವಣಿಗೆಗಳ ಬಗೆಗಿನ ನನ್ನದೇ ದೃಷ್ಟಿಕೋನವನ್ನು ಪ್ರಭಾವಿಸಿದೆ ಎಂಬುದು ನನಗೆ ತಿಳಿದಿದೆ, ಈ ಕೃತಿಯಲ್ಲಿ ಕಾರ್ಯಶೀಲವಾಗಿರುವುದೂ ಅದೇ ದೃಷ್ಟಿಕೋನವೇ. ಮೊದಲಿಗೆ, ಮಾರ್ಕ್ಸ್‌ನ ಸಿದ್ಧಾಂತದ ಹಿನ್ನೆಲೆಯಲ್ಲಿ ತಾತ್ವಿಕತೆಯ ಇತಿಹಾಸವನ್ನು ಪರಿಶೀಲಿಸೋಣ.

'ಸತ್ಯ' ಎಂದು ಕರೆಯಬಹುದಾದುದರ ಅನ್ವೇಷಣೆಯಲ್ಲಿ ಪ್ರತಿಯೊಬ್ಬ ತತ್ವಜ್ಞಾನಿಯೂ ತೊಡಗುವುದು ವ್ಯಕ್ತಿನಿಷ್ಠವಾಗಿಯೇ. 'ಸತ್ಯ' ಎಂಬುದರ ವ್ಯಾಖ್ಯೆಯ ಬಗ್ಗೆ ತತ್ವಜ್ಞಾನಿಗಳಲ್ಲಿ ಭಿನ್ನಾಭಿಪ್ರಾಯವಿರಬಹುದಾದರೂ, ಒಟ್ಟಾರೆ ಅದು ವಸ್ತುನಿಷ್ಠವಾದುದು, ಇದನ್ನು ಒಂದರ್ಥದಲ್ಲಿ, ಎಲ್ಲರೂ ಒಪ್ಪಬೇಕು. ತಾತ್ವಿಕತೆ ಎಂಬುದು ಕೇವಲ ಅವೈಚಾರಿಕ ಪಕ್ಷಪಾತದ ಅಭಿವ್ಯಕ್ತಿ ಎಂದು ಭಾವಿಸಿದರೆ, ಯಾರೂ ತಾತ್ವಿಕ ಅನ್ವೇಷಣೆಯಲ್ಲಿ ತೊಡಗುವುದಿಲ್ಲ. ಆದರೆ ಇತರ ಅನೇಕ ತತ್ವಜ್ಞಾನಿಗಳು ಪಕ್ಷಪಾತದಿಂದ ಪ್ರಭಾವಿತರಾಗಿ, ತಮ್ಮ ಅಭಿಪ್ರಾಯಗಳಿಗೆ, ತಮ್ಮ ಅರಿವಿಗೇ ಬಾರದಂತಹ ರೀತಿಯಲ್ಲಿ, ವಿಚಾರಾತೀತ ಕಾರಣಗಳನ್ನು ಹೊಂದಿರುತ್ತಾರೆ – ಎಂದು ಪ್ರತಿಯೊಬ್ಬ ತತ್ವಜ್ಞಾನಿಯೂ ಒಪ್ಪುತ್ತಾನೆ. ಮಿಕ್ಕವರಂತೆಯೇ ಮಾರ್ಕ್ಸ್ ಕೂಡ ಸತ್ಯವನ್ನು ತನ್ನ ಸಿದ್ಧಾಂತಕ್ಕನುಗುಣವಾಗಿ ನಂಬುತ್ತಾನೆ; ಅದು ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದ ಜರ್ಮನ್ ಯೆಹೂದಿ ಮಧ್ಯಮವರ್ಗದ ಒಬ್ಬ ಬಂಡಾಯಗಾರ ವ್ಯಕ್ತಿಯ ಸಹಜ ಭಾವನೆಗಳ ಅಭಿವ್ಯಕ್ತಿ ಮಾತ್ರ ಎಂದವನು ಪರಿಗಣಿಸುವುದಿಲ್ಲ. ಒಂದು ತಾತ್ವಿಕತೆಯ ವ್ಯಕ್ತಿನಿಷ್ಠ ಹಾಗೂ ವಸ್ತುನಿಷ್ಠ ದೃಷ್ಟಿಕೋನಗಳ ನಡುವಣ ಈ ಸಂಘರ್ಷದ ಬಗ್ಗೆ ಏನು ಹೇಳಬಹುದು?

ಸ್ಥೂಲವಾಗಿ ಹೀಗೆ ಹೇಳಬಹುದು: ಅರಿಸ್ಟಾಟಲ್‌ವರೆಗಿನ ಗ್ರೀಕ್ ತತ್ವಜ್ಞಾನವು ನಗರ ಪ್ರಭುತ್ವಗಳ ಮನೋಭಾವಕ್ಕೆ ಅನುಗುಣವಾಗಿ ಅಭಿವ್ಯಕ್ತಿಗೊಂಡಿದೆ;

ವಿಶಾಲದೃಷ್ಟಿಯ ನಿರಂಕುಶತೆಗೆ ಸಂಯಮವಾದವು ಸೂಕ್ತವಾದುದು; ಸೂಕ್ಷ್ಮತಾರ್ಕಿಕ ತಾತ್ವಿಕತೆಯು ಒಂದು ಸಂಘಟನೆಯಾದ ಚರ್ಚ್ ಪರವಾದ ಬೌದ್ಧಿಕ ಅಭಿವ್ಯಕ್ತಿ; ಡೆಕಾರ್ಟೆಯ ತಾತ್ವಿಕತೆಯು, ಕನಿಷ್ಠ ಪಕ್ಷ ಲಾಕ್‌ವರೆಗಿನದು, ವ್ಯಾಪಾರಸ್ಥ ಮಧ್ಯಮ ವರ್ಗದ ಪೂರ್ವಾಗ್ರಹಗಳನ್ನು ಹೊಂದಿರುವುದು; ಮತ್ತು ಮಾರ್ಕ್ಸಿಸಂ ಮತ್ತು ಫ್ಯಾಸಿಸಂಗಳು ಆಧುನಿಕ ಕೈಗಾರಿಕಾಕೃತ ದೇಶಕ್ಕೆ ಸೂಕ್ತವಾಗಿರುವ ತಾತ್ವಿಕತೆಗಳು. ಇದು ಸತ್ಯವಾಗಿರುವುದಷ್ಟೇ ಅಲ್ಲದೆ ಮುಖ್ಯವಾದುದೂ ಹೌದು. ಆದರೆ, ಮಾರ್ಕ್ಸ್ ಎರಡು ಅಂಶಗಳಿಂದ ತಪ್ಪು ಎಂದು ನಾನು ಭಾವಿಸುತ್ತೇನೆ. ಮೊದಲನೆಯದಾಗಿ, ಪರಿಗಣಿತವಾಗುವ ಸಾಮಾಜಿಕ ಸನ್ನಿವೇಶಗಳು ರಾಜಕೀಯ ಮತ್ತು ಆರ್ಥಿಕವಾದವೂ ಹೌದು; ಮತ್ತು ಅವು ಅಧಿಕಾರಕ್ಕೆ ಸಂಬಂಧಿಸಿದವು, ಅದರಲ್ಲಿ ಹಣ ಒಂದು ರೂಪ ಮಾತ್ರ ಎಂಬುದು. ಎರಡನೆಯದಾಗಿ, ಸಮಸ್ಯೆಯು ವ್ಯಾಪಕವೂ ತಾಂತ್ರಿಕವೂ ಆದಾಗ ಸಾಮಾಜಿಕ ಕಾರಣಾತ್ಮಕತೆಯು ಬಹುವಾಗಿ ಅನ್ವಯವಾಗಲಾರವು ಎಂಬುದು. ಇವುಗಳಲ್ಲಿ ಮೊದಲ ಆಕ್ಷೇಪಣೆಯನ್ನು ನಾನು ನನ್ನ 'ಪವರ್' ಎಂಬ ಗ್ರಂಥದಲ್ಲಿ ಪರಿಶೀಲಿಸಿದ್ದೇನೆ, ಹೀಗಾಗಿ ಆ ಕುರಿತು ನಾನು ಬೇರೇನನ್ನೂ ಹೇಳುವುದಿಲ್ಲ. ಎರಡನೆಯದು ತಾತ್ವಿಕತೆಯ ಇತಿಹಾಸಕ್ಕೆ ಹೆಚ್ಚು ನಿಕಟವಾಗಿ ಸಂಬಂಧಿಸುವಂಥದು, ನಾನು ಅದರ ವ್ಯಾಪ್ತಿಯ ಬಗ್ಗೆ ಕೆಲವು ನಿದರ್ಶನಗಳನ್ನು ನೀಡುತ್ತೇನೆ.

ಮೊದಲನೆಯದಾಗಿ, ವೈಶ್ವಿಕಗಳ ಸಮಸ್ಯೆಯನ್ನು ತೆಗೆದುಕೊಳ್ಳಿ. ಈ ಸಮಸ್ಯೆಯನ್ನು ಮೊದಲು ಚರ್ಚಿಸಿದವನು ಪ್ಲೇಟೋ, ಆನಂತರ ಅರಿಸ್ಟಾಟಲ್, ಮತಧರ್ಮಶಾಸ್ತ್ರಜ್ಞರು, ಬ್ರಿಟಿಷ್ ಅನುಭವೈಕವಾದಿಗಳು ಮತ್ತು ಅತ್ಯಂತ ಆಧುನಿಕ ತಾರ್ಕಿಕರು. ಈ ಸಮಸ್ಯೆಯ ಬಗೆಗಿನ ತತ್ವಜ್ಞಾನಿಗಳ ಅಭಿಪ್ರಾಯಗಳ ಮೇಲೆ ಪಕ್ಷಪಾತವು ಪ್ರಭಾವ ಬೀರಿದೆ ಎಂಬುದನ್ನು ಅಲ್ಲಗಳೆಯುವುದು ಅಸಂಬದ್ಧವಾಗುತ್ತದೆ. ಪ್ಲೇಟೋ ಪಾರ್ಮನೈಡೀಸ್ ಮತ್ತು ಆರ್ಫಿಸಂಗಳಿಂದ ಪ್ರಭಾವಿತನಾಗಿದ್ದ; ಅವನು ಬಯಸಿದ್ದು ಒಂದು ಚಿರಂತನ ಜಗತ್ತು, ಅವನು ಜಗತ್ತಿನ ಬದಲಾವಣೆಗಳ ಸ್ವಯಂಪೂರ್ಣ ವಾಸ್ತವವನ್ನು ನಂಬಲಾರದಾದ. ಅರಿಸ್ಟಾಟಲ್ ಹೆಚ್ಚು ಅನುಭವೈಕವಾದಿಯಾಗಿದ್ದು ದೈನಂದಿನ ಜಗತ್ತಿನ ಬಗ್ಗೆ ಅವನಿಗೆ ಬೇಸರವಿರಲಿಲ್ಲ. ಆಧುನಿಕ ಕಾಲದ ಕಟ್ಟಾ ಅನುಭವೈಕವಾದಿಗಳು ಪ್ಲೇಟೋನದಕ್ಕೆ ವಿರುದ್ಧವಾದ ನಂಬಿಕೆಯ ಬಗ್ಗೆ ಪಕ್ಷಪಾತ ಹೊಂದಿದವರು; ಅವರಿಗೆ ಅತಿಸಂವೇದನಾತ್ಮಕ ಜಗತ್ತಿನ ಆಲೋಚನೆಯು ಹಿತಕರವೆನಿಸಲಿಲ್ಲ, ಅದನ್ನು ನಂಬುವುದಕ್ಕಾಗಿ ಎಷ್ಟು ದೂರ ಬೇಕಾದರೂ ಹೋಗುವುದಕ್ಕೆ ಸಿದ್ಧರಾದವರಲ್ಲ. ಈ ಬಗೆಯ ಭಿನ್ನ ಪಕ್ಷಪಾತಗಳು ನಿರಂತರವಾದವು, ಅವುಗಳು ಸಾಮಾಜಿಕ ವ್ಯವಸ್ಥೆಯೊಡನೆ ಹೊಂದಿರುವ ಸಂಬಂಧವು ತುಂಬ ದೂರದ್ದು. ಚಿರಂತನತೆಯ ಬಗೆಗಿನ ಪ್ರೇಮವು, ಇತರರ ಶ್ರಮದ ಫಲದಿಂದ ಬದುಕುವ, ಆರಾಮ ವರ್ಗದ ಲಕ್ಷಣ ಎನ್ನುತ್ತಾರೆ. ಇದು ನಿಜವೇ ಎಂಬುದರ

ಬಗ್ಗೆ ನನಗೆ ಅನುಮಾನವಿದೆ. ಎಪಿಕ್ಟೆಟಸ್ ಮತ್ತು ಸ್ಪಿನೋಜ಼ ಅವರೇನೂ ವಿರಾಮವರ್ಗದ ವ್ಯಕ್ತಿಗಳಾಗಿರಲಿಲ್ಲ. ಇದಕ್ಕೆ ವಿರುದ್ಧವಾಗಿ, ಏನೂ ಮಾಡಬೇಕಾಗಿಲ್ಲದ ಸ್ವರ್ಗದ ಪರಿಕಲ್ಪನೆಯು ವಿಶ್ರಾಂತಿಯನ್ನಲ್ಲದೆ ಬೇರೇನನ್ನೂ ಬಯಸದ ದಣಿದ ಶ್ರಮದುಡಿಮೆಗಾರರದು ಎನ್ನಬಹುದು. ಅಂಥ ವಾದಸರಣಿಯನ್ನು ಕೊನೆಯಿಲ್ಲದಂತೆ ಮುಂದುವರಿಸಬಹುದು, ಆದರೆ ಅದು ನಮ್ಮನ್ನು ಎಲ್ಲಿಗೂ ತಲುಪಿಸುವುದಿಲ್ಲ.

ಮತ್ತೊಂದೆಡೆಯಲ್ಲಿ, ವೈಶ್ವಿಕಗಳ ಬಗೆಗಿನ ಈ ವಿವಾದದ ವಿವರಗಳಿಗೆ ಬಂದರೆ, ಎದುರು ಪಕ್ಷವೂ ಸಿಂಧುವೆಂದು ಒಪ್ಪಿಕೊಳ್ಳುವ ವಾದಗಳನ್ನು ಪ್ರತಿಯೊಂದು ಗುಂಪೂ ಸೃಷ್ಟಿಸಬಹುದು ಎಂಬುದು ಸ್ಪಷ್ಟವಾಗಿದೆ. ಈ ಸಮಸ್ಯೆಯ ಬಗೆಗೆ ಪ್ಲೇಟೋ ವಿರುದ್ಧ ಅರಿಸ್ಟಾಟಲ್ ಎತ್ತಿದ ಆಕ್ಷೇಪಣೆಗಳನ್ನು ಬಹುತೇಕ ಎಲ್ಲರೂ ಒಪ್ಪಿದ್ದಾರೆ. ಇತ್ತೀಚಿನ ದಿನಗಳಲ್ಲಿ, ಯವುದೇ ನಿರ್ಧಾರಕ್ಕೆ ಬರಲಾಗದಿದ್ದರೂ, ಒಂದು ಹೊಸ ತಂತ್ರವನ್ನು ಕಂಡುಹಿಡಿಯಲಾಗಿದೆ, ಮತ್ತು ಅದರಿಂದ ಅನೇಕ ಆನುಷಂಗಿಕ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗಿದೆ. ಈ ಸಮಸ್ಯೆಯ ಬಗ್ಗೆ ತಾರ್ಕಿಕರು ಅನತಿ ಕಾಲದಲ್ಲಿಯೇ ಒಂದು ನಿಖರ ನಿರ್ಧಾರವನ್ನು ಮಾಡಬಹುದೆಂದು ನಿರೀಕ್ಷಿಸುವುದು ಅವೈಚಾರಿಕವಾದುದೇನೂ ಆಗಲಾರದು.

ಎರಡನೆಯ ನಿದರ್ಶನವನ್ನು ತೆಗೆದುಕೊಳ್ಳಿ, ಅದೆಂದರೆ ಮೂಲತಾತ್ವಿಕವಾದ. ನಾವಾಗಲೇ ನೋಡಿದಂತೆ, ಇದನ್ನು ಆನ್‌ಸ್ಲೆಮ್ ಕಂಡುಹಿಡಿದ, ಆದರೆ ಥಾಮಸ್ ಆಕ್ವಿನಾಸ್ ಅದನ್ನು ತಿರಸ್ಕರಿಸಿದ; ಡೆಕಾರ್ಟೆ ಒಪ್ಪಿದ, ಕ್ಯಾಂಟ್ ತಿರಸ್ಕರಿಸಿದ, ಹೆಗೆಲ್ ಅದನ್ನು ಪುನರ್‌ಪ್ರತಿಷ್ಠಾಪಿಸಿದ. 'ಅಸ್ತಿತ್ವ'ದ ಪರಿಕಲ್ಪನೆಯ ವಿಶ್ಲೇಷಣೆಯಿಂದಾಗಿ, ಆಧುನಿಕ ತರ್ಕವು ಅದು ಅಸಿಂಧುವೆಂದು ನಿಖರವಾಗಿ ತೀರ್ಮಾನಿಸಿದೆ ಎಂದು ಹೇಳಬಹುದೆಂಬುದು ನನ್ನ ಭಾವನೆ. ಇದು ಮನೋಭಾವದ ಅಥವಾ ಸಾಮಾಜಿಕ ವ್ಯವಸ್ಥೆಯ ವಿಷಯವಲ್ಲ, ಅದೊಂದು ಶುದ್ಧ ತಾಂತ್ರಿಕ ವಿಷಯ. ಈ ವಾದದ ತಿರಸ್ಕಾರದಿಂದಾಗಿ, ಅದು, ಅಂದರೆ ದೇವರ ಅಸ್ತಿತ್ವವು ಸುಳ್ಳು ಎಂಬುದರಿಂದಾಗಿ, ಅದು ಮುಂದುವರಿಯುವುದಿಲ್ಲವೆಂದು ಹೇಳಲಾಗುವುದಿಲ್ಲ, ನಾವೇನಾದರೂ ಹಾಗೆ ಮಾಡಿದರೆ, ಥಾಮಸ್ ಆಕ್ವಿನಾಸ್ ಆ ವಾದವನ್ನು ತಿರಸ್ಕರಿಸುತ್ತಿದ್ದನೆಂದು ಭಾವಿಸಲಾಗುವುದಿಲ್ಲ.

ಅಥವಾ ಭೌತವಾದದ ಪ್ರಶ್ನೆಯನ್ನು ತೆಗೆದುಕೊಳ್ಳಿ. ಈ ಶಬ್ದವು ನಾನಾ ಅರ್ಥಗಳನ್ನು ಹೊಮ್ಮಿಸುವ ಸಾಮರ್ಥ್ಯವುಳ್ಳದು; ಮಾರ್ಕ್ಸ್ ಅದರ ಸ್ವರೂಪವನ್ನು ಮೂಲಭೂತವಾಗಿ ಹೇಗೆ ಮಾರ್ಪಡಿಸಿದನೆಂಬುದನ್ನೂ ಈಗಾಗಲೇ ನೋಡಿದ್ದೇವೆ. ಅದರ ಸರಿ ತಪ್ಪುಗಳ ಬಗೆಗಿನ ಉಗ್ರ ವಿವಾದಗಳು ಬಹುವಾಗಿ ಆಧರಿಸಿರುವುದು, ವ್ಯಾಖ್ಯೆಯಿಂದ ದೂರ ನಿಲ್ಲಬಹುದಾದ ಅವುಗಳ ಜೀವಂತಿಕೆಯಿಂದ. ಆ ಶಬ್ದವನ್ನು ಸೂತ್ರೀಕರಿಸಿದರೆ, ಕೆಲವು ಸಾಧ್ಯ ವ್ಯಾಖ್ಯೆಗಳಿಂದಾಗಿ, ಭೌತವಾದವು ಸುಳ್ಳೆಂದು

ಸಾಬೀತುಪಡಿಸಬಹುದು; ಮಿಕ್ಕ ಕೆಲವದರ ಪ್ರಕಾರ, ಹಾಗೆಂದು ನಂಬಲು ಇತ್ಯಾತ್ಮಕ ಕಾರಣವಿಲ್ಲದಿದ್ದರೂ, ಅದು ಸತ್ಯವಾಗಿರಬಹುದು; ಮತ್ತೆ ಇನ್ನೂ ಕೆಲವು ವ್ಯಾಖ್ಯೆಗಳ ಪ್ರಕಾರ, ಅವು ಕೊನೆಯುವಾಗದಿದ್ದರೂ, ಅದರ ಪರವಾದ ಕೆಲವು ಕಾರಣಗಳಿರಬಹುದು. ಮತ್ತೆ ಇವೆಲ್ಲವೂ ತಾಂತ್ರಿಕ ಪರಿಗಣನೆಗಳನ್ನು ಆಧರಿಸಿದವೇ ಹೊರತು ಸಾಮಾಜಿಕ ವ್ಯವಸ್ಥೆಗೆ ಯಾವುದೇ ಸಂಬಂಧ ಹೊಂದಿರುವುದಲ್ಲ.

ವಿಷಯದ ಸತ್ಯತೆಯು ಹಾಗೆ ನೋಡಿದರೆ ತುಂಬ ಸರಳವಾದುದು. ಯಾವುದನ್ನು ಸಾಂಪ್ರದಾಯಿಕವಾಗಿ 'ತತ್ವಜ್ಞಾನ' ಎನ್ನುತ್ತಾರೆಯೋ ಅದು ಎರಡು ತೀರ ವಿಭಿನ್ನ ಅಂಶಗಳ್ನೊಳಗೊಂಡಿರುತ್ತದೆ. ಒಂದೆಡೆ, ವೈಜ್ಞಾನಿಕವಾದ ಅಥವಾ ತಾರ್ಕಿಕವಾದ ಪ್ರಶ್ನೆಗಳು; ಇವು ಒಟ್ಟಾರೆ ಒಪ್ಪಿಗೆಯಿರುವ ವಿಧಾನಗಳಿಗೆ ಒಳಪಡುವಂಥವು. ಮತ್ತೊಂದೆಡೆ, ಹೆಚ್ಚು ಜನರಿಗೆ ಭಾವನಾತ್ಮಕವಾಗಿ ಆಸಕ್ತಿದಾಯಕವಾದಂಥವು, ಅಂಥವಕ್ಕೆ ಎರಡೂ ಕಡೆಗಳಲ್ಲಿ ಯಾವದೇ ಗಟ್ಟಿಯಾದ ಆಧಾರಗಳಿರುವುದಿಲ್ಲ. ಈ ಎರಡನೆಯ ಗುಂಪಿನವುಗಳಲ್ಲಿ ಪ್ರತ್ಯೇಕವಾಗಿಡಲಾರದ ವ್ಯಾವಹಾರಿಕ ಸಮಸ್ಯೆಗಳಿರುತ್ತವೆ. ಯುದ್ಧವುಂಟಾದಾಗ, ನಾನು ನನ್ನ ದೇಶವನ್ನು ಬೆಂಬಲಿಸಬೇಕು, ಇಲ್ಲದಿದ್ದರೆ ಸ್ನೇಹಿತರು ಮತ್ತು ಅಧಿಕಾರಗಳ ಜೊತೆ ಸಂಕಟಕರ ಸಂಘರ್ಷಕ್ಕೆ ನಿಲ್ಲಬೇಕು. ಎಷ್ಟೋ ಸಂದರ್ಭಗಳಲ್ಲಿ ಅಧಿಕೃತ ಮತಧರ್ಮವನ್ನು ಒಪ್ಪುವ ಅಥವಾ ಬಿಡುವುದರ ನಡುವೆ ಮಧ್ಯಮಾರ್ಗವೊಂದು ಇರುವುದಿಲ್ಲ. ಬೇರೆ ಬೇರೆ ಕಾರಣಗಳಿಗಾಗಿ, ಶುದ್ಧ ತರ್ಕವು ಮೌನವಾಗಿರುವ ಅನೇಕ ವಿಷಯಗಳ ಬಗ್ಗೆ ನಾವು ಸಂಶಯಾತ್ಮಕ ಅನಾಸಕ್ತಿಯ ಮನೋಭಾವವನ್ನು ತಾಳುವುದು ಅಸಾಧ್ಯವಾಗಬಹುದು. ಒಂದು 'ತಾತ್ವಿಕತೆ'ಯು, ತೀರ ಸಾಧಾರಣ ಅರ್ಥದಲ್ಲಿ, ಅಂಥ ತರ್ಕಾತೀತ ನಿರ್ಧಾರಗಳ ಒಂದು ಸಾವಯವ ಇಡಿಯಾಗಿರುತ್ತದೆ. ಈ ಅರ್ಥದಲ್ಲಿನ 'ತಾತ್ವಿಕತೆ'ಯ ಮಾರ್ಕ್ಸ್‌ನ ವಾದವು ಬಹುತೇಕ ಸತ್ಯ. ಆದರೆ ಈ ಅರ್ಥದಲ್ಲಿಯೂ, ತಾತ್ವಿಕತೆಯನ್ನು ನಿರ್ಧರಿಸುವುದು ಇತರ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು. ವಿಶೇಷವಾಗಿ, ಯುದ್ಧಕ್ಕೆ ಐತಿಹಾಸಿಕ ಕಾರಣಾತ್ಮಕತೆಯಲ್ಲಿ ತನ್ನದೇ ಆದ ಪಾಲಿದೆ, ಮತ್ತು ಯುದ್ಧದಲ್ಲಿನ ಗೆಲವು ಸದಾ ಭಾರಿ ಆರ್ಥಿಕ ಸಂಪನ್ಮೂಲಗಳಿರುವ ಕಡೆಗೇ ಲಭಿಸುವುದಿಲ್ಲ.

ಮಾರ್ಕ್ಸ್ ತನ್ನ ಇತಿಹಾಸದ ತಾತ್ವಿಕತೆಯನ್ನು ಹೆಗೆಲಿಯನ್ ದ್ವಂದ್ವಾತ್ಮಕತೆಯ ಚೌಕಟ್ಟಿನಲ್ಲಿ ಅಳವಡಿಸಿದ, ಹಾಗೆ ನೋಡಿದರೆ, ಅವನು ತಲೆಕೆಡಿಸಿಕೊಂಡದ್ದು ಒಂದು ತ್ರಿತಯದ ಬಗ್ಗೆ: ಭೂಮಾಲೀಕರು ಪ್ರತಿನಿಧಿಸುತ್ತಿದ್ದ ಊಳಿಗಮಾನ್ಯತೆ; ಕೈಗಾರಿಕೋದ್ಯಮಿಯು ಪ್ರತಿನಿಧಿಸುತ್ತಿದ್ದ ಬಂಡವಾಳಶಾಹಿತ್ವ; ಮತ್ತು ಬಹುಪಾಲು ಕಾರ್ಮಿಕರು ಪ್ರತಿನಿಧಿಸುತ್ತಿದ್ದ ಸಮಾಜವಾದ. ದೇಶಗಳನ್ನು ದ್ವಂದ್ವಾತ್ಮಕ ಚಲನೆಯ ವಾಹಕಗಳೆಂದು ಹೆಗೆಲ್ ಪರಿಗಣಿಸಿದ್ದ; ಮಾರ್ಕ್ಸ್ ಅದರ ಸ್ಥಾನದಲ್ಲಿ

ವರ್ಗಗಳನ್ನಿರಿಸಿದ. ಸಮಾಜವಾದವನ್ನು ಎತ್ತಿ ಹಿಡಿಯಲು ಅಥವಾ ಕಾರ್ಮಿಕರ ಪರ ವಹಿಸಲು ಅವನು ಎಲ್ಲ ವೇಳೆಗಳಲ್ಲಿಯೂ ನೈತಿಕ ಅಥವಾ ಮಾನವೀಯ ಕಾರಣಗಳನ್ನು ಬದಿಗಿರಿಸಿದ್ದ. ನೈತಿಕವಾಗಿ ಹೆಚ್ಚು ಸರಿಯಾದ ಪಕ್ಷದ ಪರವಾಗಿರದೆ, ಅವನು ಇಡಿಯಾದ ನಿರ್ಧಾರಾತ್ಮಕ ಚಲನೆಯಲ್ಲಿನ ದ್ವಂದ್ವಾತ್ಮಕತೆಯ ಪಕ್ಷದ ಪರವಾಗಿರುತ್ತಿದ್ದ. ತಾನು ಸಮಾಜವಾದವನ್ನು ಸಮರ್ಥಿಸುವುದಿಲ್ಲವಾದರೂ ಅದು ಭವಿಷ್ಯದಲ್ಲಿ ಸಂಭವಿಸುವಂಥದು ಎಂದವನು ಹೇಳಬಹುದಾಗಿತ್ತು. ಆದರೆ ಇದು ಪೂರ್ತಿ ಸತ್ಯವಾದುದಾಗುತ್ತಿರಲಿಲ್ಲ. ಎಲ್ಲ ದ್ವಂದ್ವಾತ್ಮಕ ಚಲನೆಯೂ ವ್ಯಕ್ತ್ಯತೀತ ನೆಲೆಯಲ್ಲಿ ಪ್ರಗತಿಯೇ ಎಂಬುದರಲ್ಲಿ ಅವನಿಗೆ ನಿಸ್ಸಂಶಯವಾದ ನಂಬಿಕೆಯಿತ್ತು; ಹಾಗೂ ಒಮ್ಮೆ ಸ್ಥಾಪಿತವಾಗಿಬಿಟ್ಟರೆ ಸಮಾಜವಾದವು ಊಳಿಗಮಾನ್ಯತೆ ಅಥವಾ ಬಂಡವಾಳಶಾಹಿತ್ವ ಮಾಡಿದುದಕ್ಕಿಂತ ಹೆಚ್ಚಿನ ರೀತಿಯಲ್ಲಿ ಮಾನವ ಸೌಖ್ಯವನ್ನು ಸಾಧಿಸುವಂತಹುದು ಎಂದವನು ಖಚಿತವಾಗಿ ಹೇಳಿದ. ಈ ನಂಬಿಕೆಗಳು ಅವನ ಬದುಕನ್ನು ನಿಯಂತ್ರಿಸಿರಬಹುದಾದರೂ, ಅವನ ಬರವಣಿಗೆಗಳಿಗೆ ಸಂಬಂಧಿಸಿದಂತೆ ಸಂಪೂರ್ಣವಾಗಿ ಹಿನ್ನೆಲೆಯಲ್ಲೇ ಇದ್ದವು. ಆದರೆ, ಆಗೊಮ್ಮೆ ಈಗೊಮ್ಮೆ, ಅವನು ಪ್ರಶಾಂತವಾಗಿ ಭವಿಷ್ಯದ ಬಗ್ಗೆ ಹೇಳುವುದರ ಬದಲು ಬಂಡಾಯಕ್ಕೆ ಉಗ್ರ ಉತ್ತೇಜಕನಾಗಿರುತ್ತಿದ್ದ. ಭಾವನಾತ್ಮಕ ಆಧಾರಗಳಿದ್ದ ಆದರೆ ಮೇಲುನೋಟಕ್ಕೆ ವೈಜ್ಞಾನಿಕವಾಗಿ ಕಾಣುವ ಭವಿಷ್ಯನುಡಿಗಳು ಅವನ ಎಲ್ಲ ಬರಹಗಳಲ್ಲಿಯೂ ಕಾಣಿಸುತ್ತದೆ.

ಒಬ್ಬ ಶುದ್ಧ ತತ್ವಜ್ಞಾನಿಯಾಗಿ ನೋಡಿದರೆ, ಮಾರ್ಕ್ಸ್‌ನಲ್ಲಿ ಗಂಭೀರ ಲೋಪಗಳಿವೆ. ಅವನು ತೀರ ವ್ಯಾವಹಾರಿಕ, ತನ್ನ ಕಾಲದ ಸಮಸ್ಯೆಗಳಲ್ಲಿ ಮುಳುಗಿಹೋಗಿದ್ದವನು. ಅವನ ಪರಿಪ್ರೇಕ್ಷ್ಯವು ಕೇವಲ ತಾನಿರುವ ಗ್ರಹಕ್ಕೆ, ಮತ್ತು ಅದರಲ್ಲಿನ ಮಾನವನಿಗೆ, ಸೀಮಿತವಾದುದು. ವಿಶ್ವದಲ್ಲಿನ ಮಾನವನ ಸ್ಥಾನದ ಬಗ್ಗೆ ಹಿಂದೆ ತುಂಬ ಪ್ರಾಶಸ್ತ್ಯವಿದ್ದು ಅವನನ್ನು ಅಟ್ಟಕ್ಕೇರಿಸಿದ್ದುದು ಕೊಪರ್ನಿಕಸ್‌ನ ಕಾಲದಿಂದ ಆ ಪ್ರಾಮುಖ್ಯವನ್ನು ಕಳೆದುಕೊಂಡಿತು. ಈ ವಾಸ್ತವವನ್ನು ಅರಿತುಕೊಳ್ಳದ ಯಾವ ವ್ಯಕ್ತಿಯೂ ತನ್ನ ತಾತ್ವಿಕತೆಯು ವೈಜ್ಞಾನಿಕವಾದುದೆಂದು ಹೇಳಿಕೊಳ್ಳಲು ಅರ್ಹನಲ್ಲ.

ಈ ಗ್ರಹಕ್ಕೆ ಸೀಮಿತವಾಗಿರುವ ಪರಿಮಿತಿಯ ಜೊತೆಯಲ್ಲಿಯೇ ಪ್ರಗತಿಯು ವೈಶ್ವಿಕ ನಿಯಮ ಎಂದು ಸಟಕ್ಕನೆ ನಂಬಿಬಿಡುವುದೂ ಪರಿಮಿತಿಯೇ. ಇದು ಹತ್ತೊಂಬತ್ತನೆಯ ಶತಮಾನದ ದೃಷ್ಟಿಕೋನದ ಲಕ್ಷಣ, ಮಾರ್ಕ್ಸ್‌ನಲ್ಲಿ ಮಾತ್ರವಲ್ಲದೆ ಅವನ ಸಮಕಾಲೀನರಲ್ಲೆಲ್ಲ ಇತ್ತು. ಪ್ರಗತಿಯ ಅನಿವಾರ್ಯತೆಯ ಬಗೆಗಿನ ನಂಬಿಕೆಯಿಂದಾಗಿ ಮಾರ್ಕ್ಸ್ ನೈತಿಕ ಸಮಸ್ಯೆಗಳನ್ನೂ ಬಗೆಹರಿಸಬಹುದೆಂದು ಭಾವಿಸಿದ್ದ. ಸಮಾಜವಾದವು ಬರುವುದಾದರೆ ಅದು ಉತ್ತಮಿಕೆಯೇ ಸರಿ.

ಭೂಮಾಲೀಕರಿಗೂ ಬಂಡವಾಳಶಾಹಿಗಳಿಗೂ ಅದು ಅಭಿವೃದ್ಧಿಯಂತೆ ಕಾಣಿಸುವುದಿಲ್ಲ ಎಂಬುದನ್ನವನು ದಿಢೀರನೆ ಒಪ್ಪಿಕೊಂಡುಬಿಡುತ್ತಿದ್ದ, ಆದರೆ ಕಾಲದ ದ್ವಂದ್ವಾತ್ಮಕ ಚಲನೆಯ ಜೊತೆಯಲ್ಲಿ ಅವರು ಸಾಮರಸ್ಯದಿಂದ ಇರಲಿಲ್ಲ ಎಂಬುದನ್ನಿದು ತೋರಿಸುತ್ತದೆ. ಮಾರ್ಕ್ಸ್ ತನ್ನನ್ನು ನಾಸ್ತಿಕನೆಂದು ಭಾವಿಸಿದ್ದ, ಆದರೆ ಆಸ್ತಿಕತೆಯು ಮಾತ್ರವೇ ಸಮರ್ಥಿಸಬಹುದಾದ ಆಶಾವಾದವನ್ನು ಅವನು ಹೊಂದಿದ್ದ.

ಸ್ಥೂಲವಾಗಿ ಹೇಳುವುದಾದರೆ, ಹೆಗೆಲ್‌ನಿಂದ ಸಾಧಿಸಿಕೊಂಡಿರುವ ಮಾರ್ಕ್ಸ್‌ನ ತಾತ್ವಿಕತೆಯ ಎಲ್ಲ ಅಂಶಗಳೂ ಅವೈಜ್ಞಾನಿಕವೇ, ಯಾಕೆಂದರೆ ಅವುಗಳನ್ನು ಸತ್ಯವೆಂದು ಪರಿಗಣಿಸಲು ಯಾವುದೇ ಕಾರಣವಿಲ್ಲ.

ತನ್ನ ಸಮಾಜವಾದಕ್ಕೆ ಮಾರ್ಕ್ಸ್ ಕೊಟ್ಟ ತಾತ್ವಿಕ ಪೋಷಾಕು ತನ್ನ ಅಭಿಪ್ರಾಯಗಳ ಆಧಾರಗಳೊಡನೆ ಅಷ್ಟಾಗಿ ಸಂಬಂಧ ಹೊಂದಿರಲಿಲ್ಲ. ಅವನು ಹೇಳಬೇಕಾಗಿದ್ದ ಮುಖ್ಯವಾದುದೆಲ್ಲವನ್ನೂ ದ್ವಂದ್ವಾತ್ಮಕತೆಯನ್ನು ಉಲ್ಲೇಖಿಸದೆಯೇ ಪುನರ್‌ಮಂಡನೆ ಮಾಡುವುದು ಸುಲಭ. ಒಂದು ನೂರು ವರ್ಷಗಳ ಹಿಂದೆ ಇಂಗ್ಲಂಡ್‌ನಲ್ಲಿದ್ದ ಗಾಬರಿಗೊಳಿಸುವ ಕೈಗಾರಿಕಾ ವ್ಯವಸ್ಥೆಯ ಕ್ರೌರ್ಯವು ಅವನ ಮೇಲೆ ಪರಿಣಾಮ ಬೀರಿತು, ಅದನ್ನವನು ತಪಶೀಲಾಗಿ ತಿಳಿಯಲು ಸಾಧ್ಯವಾದುದು ಎಂಗೆಲ್ಸ್ ಮತ್ತು ರಾಯಲ್ ಕಮಿಷನ್‌ನ ವರದಿಗಳಿಂದಾಗಿ. ಆ ವ್ಯವಸ್ಥೆಯು ಮುಕ್ತ ಸ್ಪರ್ಧೆಯಿಂದ ಏಕಸ್ವಾಮ್ಯದೆಡೆಗೆ ಪರಿವರ್ತನೆಗೊಳ್ಳುವುದನ್ನು, ಮತ್ತು ಆ ಅನ್ಯಾಯವು ಸಾಮಾನ್ಯ ಜನತೆಯಲ್ಲಿ ಬಂಡಾಯದ ಚಳುವಳಿಯನ್ನು ಉದ್ದೀಪನಗೊಳಿಸುವುದೆಂಬುದನ್ನು ಅವನು ಕಂಡುಕೊಂಡಿದ್ದ. ಸಂಪೂರ್ಣವಾಗಿ ಕೈಗಾರಿಕಾಕೃತ ಸಮಾಜದಲ್ಲಿ ಖಾಸಗಿ ಬಂಡವಾಳಶಾಹಿತ್ವಕ್ಕೆ ಇರುವ ಏಕೈಕ ಪರ್ಯಾಯವೆಂದರೆ ಭೂ ಮತ್ತು ಬಂಡವಾಳಗಳ ದೇಶದ ಒಡೆತನ. ಈ ಯಾವುವೂ ತಾತ್ವಿಕತೆಯ ವಿಷಯಗಳಲ್ಲ, ಹೀಗಾಗಿ ನಾನು ಅವುಗಳ ಸತ್ಯಾಸತ್ಯತೆಯನ್ನು ಪರಿಗಣಿಸುವುದಿಲ್ಲ. ಅವು ನಿಜವೇ ಆಗಿದ್ದರೆ ಅವನ ವ್ಯವಸ್ಥೆಯಲ್ಲಿ ಅವುಗಳನ್ನು ವ್ಯಾವಹಾರಿಕವಾಗಿ ಸ್ಥಾಪಿಸುವುದಷ್ಟೇ ಸಾಕು. ಹೀಗಾಗಿ ಹೆಗೆಲಿಯನ್ ಪರಿಕರಗಳನ್ನು ಅನುಕೂಲಕರವಾಗಿ ಬಿಟ್ಟುಬಿಡಬಹುದು.

ಮಾರ್ಕ್ಸ್‌ನ ಪ್ರಸಿದ್ಧಿಯ ಇತಿಹಾಸವು ವಿಚಿತ್ರವಾದುದು. ಅವನ ದೇಶದಲ್ಲಿಯೇ ಅವನ ಸಿದ್ಧಾಂತಗಳು ಸೋಷಿಯಲಿಸ್ಟ್ ಡೆಮೋಕ್ರಾಟಿಕ್ ಪಕ್ಷದ ಕಾರ್ಯಕ್ರಮಗಳಿಗೆ ಸ್ಫೂರ್ತಿ ನೀಡಿತು. ಅದು ಬೆಳೆಯುತ್ತ ಹೋಗಿ ಕೊನೆಯಲ್ಲಿ, ೧೯೧೨ ರ ಸಾರ್ವತ್ರಿಕ ಚುನಾವಣೆಯಲ್ಲಿ ಮೂರನೇ ಒಂದು ಭಾಗದಷ್ಟು ಮತಗಳನ್ನು ಪಡೆಯಿತು. ಮೊದಲನೇ ಮಹಾಯುದ್ಧ ಮುಗಿದ ತಕ್ಷಣವೇ ಸೋಷಿಯಲಿಸ್ಟ್ ಡೆಮೋಕ್ರಾಟಿಕ್ ಪಕ್ಷವು ಸ್ವಲ್ಪ ಕಾಲ ಅಧಿಕಾರಕ್ಕೆ ಬಂತು, ಮತ್ತು ವೀಮರ್ ಗಣರಾಜ್ಯದ ಮೊದಲನೇ

ಅಧ್ಯಕ್ಷನಾದ ಏಬರ್ಟ್ ಅದರ ಸದಸ್ಯನಾಗಿದ್ದ; ಆದರೆ ಇಷ್ಟು ಹೊತ್ತಿಗೆ ಆ ಪಕ್ಷವು ಮಾರ್ಕ್ಸಿಸ್ಟ್ ಸಂಪ್ರದಾಯಕ್ಕೆ ಬದ್ಧವಾಗಿರುವುದನ್ನು ನಿಲ್ಲಿಸಿತ್ತು. ಈ ಮಧ್ಯೆ, ರಷ್ಯಾದಲ್ಲಿ, ಮಾರ್ಕ್ಸ್‌ನಲ್ಲಿ ಕುರುಡು ನಂಬಿಕೆಯಿಟ್ಟಿದ್ದವರು ಸರ್ಕಾರವನ್ನು ರಚಿಸಿದರು. ಪಶ್ಚಿಮದಲ್ಲಿ, ಯಾವುದೇ ದೊಡ್ಡ ದುಡಿಮೆಗಾರರ ಚಳುವಳಿಯೂ ಅಷ್ಟೇನೂ ಮಾರ್ಕ್ಸ್‌ತನದಿಂದ ಕೂಡಿರಲಿಲ್ಲ; ಬ್ರಿಟಿಷ್ ಲೇಬರ್ ಪಕ್ಷವು ಕೆಲವು ವೇಳೆ ಆ ದಿಸೆಯಲ್ಲಿ ಸಾಗುತ್ತಿರುವಂತೆ ತೋರಿತಾದರೂ, ಅದು ಒಂದು ಬಗೆಯ ಅನುಭವೈಕ ಸಮಾಜವಾದದ ಮಾದರಿಗೆ ಅಂಟಿಕೊಂಡಿತ್ತು. ಆದರೆ ಅಮೆರಿಕ ಮತ್ತು ಇಂಗ್ಲಂಡ್‌ಗಳಲ್ಲಿನ ಬಹು ಸಂಖ್ಯೆಯ ಬುದ್ಧಿಜೀವಿಗಳು ಅವನ ಗಾಢ ಪ್ರಭಾವಕ್ಕೊಳಗಾಗಿದ್ದರು. ಜರ್ಮನಿಯಲ್ಲಿ ಅವನ ಸಿದ್ಧಾಂತಗಳ ಎಲ್ಲ ಸಮರ್ಥನೆಯನ್ನು ಬಲವಂತವಾಗಿ ನಿಗ್ರಹಿಸಲಾಯಿತಾದರೂ, ನಾಝಿಗಳನ್ನು ಪದಚ್ಯುತಿಗೊಳಿಸಿದಾಗ ಅದು ಮತ್ತೆ ಜೀವಂತಿಕೆಯನ್ನು ಪಡೆಯಬಹುದೆಂದು ನಿರೀಕ್ಷಿಸಬಹುದು.

ಹೀಗೆ ಆಧುನಿಕ ಯೂರೋಪ್ ಮತ್ತು ಅಮೆರಿಕಗಳು ರಾಜಕೀಯವಾಗಿಯೂ ಆದರ್ಶಗಳಲ್ಲಿಯೂ ಮೂರು ಬಣಗಳಾಗಿ ಬಿರುಕುಗೊಂಡಿವೆ. ಮೊದಲನೆಯದು, ಇನ್ನೂ ಲಾಕ್ ಮತ್ತು ಬೆಂಥಮ್‌ರನ್ನು ಅನುಸರಿಸುವ, ಆದರೆ ಕೈಗಾರಿಕಾ ಸಂಘಟನೆಯ ಆವಶ್ಯಕತೆಗಳಿಗನುಗುಣವಾಗಿ ಬೇರೆ ಬೇರೆ ಪ್ರಮಾಣಗಳಲ್ಲಿ ಅದನ್ನು ಅಳವಡಿಸಿಕೊಂಡ ಉದಾರವಾದಿಗಳದು. ಎರಡನೆಯದು, ರಷ್ಯಾದ ಸರ್ಕಾರವನ್ನು ಹಿಡಿತದಲ್ಲಿರಿಸಿಕೊಂಡಿರುವ ಮತ್ತು ಬೇರೆ ಬೇರೆ ದೇಶಗಳಲ್ಲಿ ಹೆಚ್ಚು ಹೆಚ್ಚು ಪ್ರಭಾವಶಾಲಿಗಳಾಗಬಹುದಾದ ಮಾರ್ಕ್ಸಿಸ್ಟ್‌ರದು. ಈ ಎರಡೂ ಅಭಿಪ್ರಾಯಗಳ ಬಣಗಳು ತಾತ್ವಿಕವಾಗಿ ಅಷ್ಟೇನೂ ದೊಡ್ಡ ಪ್ರಮಾಣದ ವ್ಯತ್ಯಾಸವನ್ನು ಹೊಂದಿಲ್ಲ, ಎರಡೂ ವೈಚಾರಿಕವಾದವು, ಮತ್ತು ಎರಡೂ ತಮ್ಮ ಉದ್ದೇಶದಲ್ಲಿ ವೈಜ್ಞಾನಿಕವೂ ಅನುಭವೈಕನಿಷ್ಠವೂ ಆದವು. ಆದರೆ ವ್ಯಾವಹಾರಿಕ ರಾಜಕೀಯದ ದೃಷ್ಟಿಕೋನದಲ್ಲಿ ಅವರ ನಡುವಣ ಬಿರುಕು ಹಿರಿದಾದುದು. ಹಿಂದಿನ ಅಧ್ಯಾಯದಲ್ಲಿ ಉಲ್ಲೇಖಿಸಿರುವ ಜೇಮ್ಸ್ ಮಿಲ್‌ನ ಪತ್ರವೊಂದರಲ್ಲಿ ಕಾಣಿಸಿಕೊಂಡಿದೆ, ಅದೆಂದರೆ 'ಆಸ್ತಿಯ ಬಗೆಗಿನ ಅವರ ಭಾವನೆಯು ವಿಕೃತವಾದುದು.'

ಆದರೆ ಮಾರ್ಕ್ಸ್‌ನ ವೈಚಾರಿಕತೆಯ ಕೆಲವು ಅಂಶಗಳು ಪರಿಮಿತಿಗೊಳಗಾದವು ಎಂಬುದನ್ನು ಒಪ್ಪಬೇಕು. ಬೆಳವಣಿಗೆಯ ಪ್ರವೃತ್ತಿಯ ಬಗೆಗಿನ ತನ್ನ ವ್ಯಾಖ್ಯಾನವು ಸತ್ಯವೆಂದೂ, ಘಟನೆಗಳಲ್ಲಿ ಅದು ಸಾಬೀತಾಗುವುದೆಂದೂ ಅವನು ಹೇಳಿಕೊಂಡರೂ, ಆ ವಾದಗಳು (ಅಪರೂಪದ ಅಪವಾದಗಳನ್ನು ಹೊರತುಪಡಿಸಿ) ಅದಕ್ಕನುಗುಣವಾದ ವರ್ಗಾಸಕ್ತಿಯನ್ನು ಹೊಂದಿರುವವರಿಗೆ ಮಾತ್ರ ತಲುಪುತ್ತವೆ. ಅವನಿಗೆ ಒಲಿಸಿಕೊಳ್ಳುವುದರಲ್ಲಿನ ನಿರೀಕ್ಷೆ ಬಹು ಅಲ್ಪ, ಎಲ್ಲವೂ ವರ್ಗಸಂಘರ್ಷದಿಂದ ಮಾತ್ರ ಆಗಬೇಕು. ಹೀಗೆ ಅವನು ವ್ಯಾವಹಾರಿಕವಾಗಿ ಅಧಿಕಾರ ರಾಜಕೀಯಕ್ಕೆ

ಮತ್ತು ಯಜಮಾನ ಜನಾಂಗಕ್ಕಲ್ಲದಿದ್ದರೂ, ಯಜಮಾನ ವರ್ಗದ ಸಿದ್ಧಾಂತಕ್ಕೆ ಅವನು ಬದ್ಧನಾಗಿದ್ದಾನೆ. ಸಾಮಾಜಿಕ ಕ್ರಾಂತಿಯ ಫಲವಾಗಿ ವರ್ಗಗಳ ನಡುವಣ ವ್ಯತ್ಯಾಸಗಳು ಅಂತಿಮವಾಗಿ ಕಣ್ಮರೆಯಾಗಿ ಸಂಪೂರ್ಣ ರಾಜಕೀಯ ಹಾಗೂ ಆರ್ಥಿಕ ಸಾಮರಸ್ಯಕ್ಕೆ ಎಡೆಮಾಡಿಕೊಡುತ್ತದೆ ಎಂಬುದು ನಿಜ. ಆದರೆ ಇದು ಎರಡನೆಯ ಅವತಾರದಂತೆ (ಸೆಕೆಂಡ್ ಕಮಿಂಗ್) ದೂರದ ಆದರ್ಶ; ಈ ಮಧ್ಯೆ, ಯುದ್ಧ ಮತ್ತು ನಿರಂಕುಶಾಧಿಕಾರ ಹಾಗೂ ಆದರ್ಶದಲ್ಲಿ ಸಂಪ್ರದಾಯನಿಷ್ಠೆಗಳು ಇರುತ್ತವೆ.

ಮೂರನೆಯ ಬಣವೆಂದರೆ, ರಾಜಕೀಯವಾಗಿ ನಾಜ಼ಿಗಳನ್ನೂ ಫ್ಯಾಸಿಸ್ಟ್‌ರನ್ನೂ ಪ್ರತಿನಿಧಿಸುವ ಆಧುನಿಕ ಅಭಿಪ್ರಾಯ ಹೊಂದಿದವರದು, ಇವರು ತಾತ್ವಿಕತೆಯಲ್ಲಿ, ಆ ಎರಡೂ ಪರಸ್ಪರ ಭಿನ್ನಾಭಿಪ್ರಾಯ ಹೊಂದಿರುವುದಕ್ಕಿಂತಲೂ ಹೆಚ್ಚಾಗಿ, ಮಿಕ್ಕ ಎರಡಕ್ಕಿಂತಲೂ ಭಿನ್ನ. ಅದು ವೈಚಾರಿಕತೆ ಮತ್ತು ವೈಜ್ಞಾನಿಕತೆಗೆ ವಿರುದ್ಧವಾದುದು. ಅದರ ತಾತ್ವಿಕ ಪೂರ್ವಸೂರಿಗಳೆಂದರೆ ರೂಸೋ, ಫ಼ಿಷ್ತೆ ಮತ್ತು ನೀಷೆ. ಅದು ಒತ್ತು ಹಾಕುವುದು ಇಚ್ಛಾಶಕ್ತಿ, ಅಧಿಕಾರ ಇಚ್ಛಾಶಕ್ತಿಯ ಮೇಲೆ; ಇದು ಪ್ರಮುಖವಾಗಿ ಕೆಲವು ಜನಾಂಗಗಳಲ್ಲಿ ಹಾಗೂ ವ್ಯಕ್ತಿಗಳಲ್ಲಿ ಕೇಂದ್ರೀಕೃತವಾಗಿರುತ್ತದೆ, ಹಾಗಾಗಿ ಆಳುವುದು ಅವರ ಹಕ್ಕು ಎಂಬುದು ಅವರ ನಂಬಿಕೆ.

ರೂಸೋವರೆಗೆ, ತಾತ್ವಿಕ ಜಗತ್ತು ಒಂದು ಬಗೆಯ ಐಕ್ಯವನ್ನು ಹೊಂದಿತ್ತು. ಇದು ಸದ್ಯದಲ್ಲಿ ಕಣ್ಮರೆಯಾಗಿದೆ, ಇದು ಪ್ರಾಯುಶಃ ಹೆಚ್ಚು ಕಾಲ ಮುಂದುವರಿಯಲಾರದು. ಯಜಮಾನಿಕೆಯ ಹಕ್ಕು ಸಂಘರ್ಷಕ್ಕೆ ಎಡೆ ಮಾಡಿಕೊಡಬಹುದು ಎಂಬ ಕಾರಣದಿಂದಾಗಿ, ಜನರ ಮನಸ್ಸುಗಳನ್ನು ವೈಚಾರಿಕತೆಯಿಂದ, ಆದರೆ ಬೇರಾವುದೇ ವಿಧಾನದಿಂದಲ್ಲ, ಮತ್ತೆ ಗೆದ್ದು ಇದನ್ನು ಪುನರುಜ್ಜೀವನಗೊಳಿಸಬಹುದು.

೦

೨೮
ಬರ್ಗ್‌ಸನ್

ಹೆನ್ರಿ ಬರ್ಗ್‌ಸನ್ ಈ ಶತಮಾನದ ಬಹು ಮುಖ್ಯ ಫ್ರೆಂಚ್ ತತ್ವಜ್ಞಾನಿಯಾಗಿದ್ದ. ಅವನ ಮೇಲೆ ವಿಲಿಯಂ ಜೇಮ್ಸ್ ಮತ್ತು ವೈಟ್‌ಹೆಡ್‌ರ ಪ್ರಭಾವವಾಗಿತ್ತು, ಮತ್ತು ಅವನ ಪ್ರಭಾವ ತಕ್ಕಮಟ್ಟಿಗೆ ಫ್ರೆಂಚ್ ಚಿಂತನೆಯ ಮೇಲೆ ಆಗಿತ್ತು. ಕಾರ್ಮಿಕಸ್ವಾಮ್ಯವಾದದ ಪ್ರಚಂಡ ಸಮರ್ಥಕನಾಗಿದ್ದ ಹಾಗೂ 'ರಿಫ್ಲೆಕ್ಷನ್ಸ್ ಆನ್ ವೈಲೆನ್ಸ್' ಕೃತಿಯ ಲೇಖಕನಾದ ಸೋರೆಲ್ ಬರ್ಗ್‌ಸನ್‌ನ ಅವೈಚಾರಿಕತೆಯ ಸಿದ್ಧಾಂತವನ್ನು ಬಳಸಿಕೊಂಡು ಯಾವುದೇ ನಿರ್ದಿಷ್ಟ ಗುರಿಯಿಲ್ಲದ ಕ್ರಾಂತಿಕಾರಿ ಕಾರ್ಮಿಕ ಚಳುವಳಿಯನ್ನು ಸಮರ್ಥಿಸಿದ. ಕೊನೆಯಲ್ಲಿ, ಸೊರೆಲ್ ಕಾರ್ಮಿಕಸ್ವಾಮ್ಯವಾದವನ್ನು ಕೈಬಿಟ್ಟು ರಾಜಪರನಾದ. ಬರ್ಗ್‌ಸನ್‌ನ ತಾತ್ವಿಕತೆಯ ಪ್ರಮುಖ ಪ್ರಭಾವವೆಂದರೆ ಸಂಪ್ರದಾಯನಿಷ್ಠೆ ಮತ್ತು ಅದು ಸುಲಭವಾಗಿ ವೀಷೀಯಲ್ಲಿ ತುತ್ತತುದಿಗೇರಿದ ಚಳವಳಿಯೊಡನೆ ಹೊಂದಿಕೊಂಡಿತು. ಆದರೆ ಬರ್ಗ್‌ಸನ್‌ನ ಅವೈಚಾರಿಕತೆಯು ರಾಜಕೀಯದೊಡನೆ ಸಂಬಂಧಪಡದ ರೀತಿಯಲ್ಲಿ ಮುಂದುವರಿಯಿತು, ಉದಾಹರಣೆಗೆ, ಬರ್ನಾರ್ಡ್ ಶಾನ 'ಬ್ಯಾಕ್ ಟು ಮೆಥುಸೆಲಾ' ಶುದ್ಧ ಬರ್ಗ್‌ಸನ್‌ವಾದ. ರಾಜಕೀಯವನ್ನು ಮರೆತು, ಅದನ್ನು ನಾವು ಶುದ್ಧ ತಾತ್ವಿಕ ದೃಷ್ಟಿಕೋನದಿಂದ ನೋಡಬೇಕು. ರೂಸೋನಿಂದ ಆರಂಭವಾದ ವೈಚಾರಿಕತೆಯ ವಿರುದ್ಧ ಬಂಡಾಯವು ಜಗತ್ತಿನ ಬದುಕು ಮತ್ತು ಚಿಂತನೆಗಳ ಮೇಲೆ ವ್ಯಾಪಕ ಪ್ರಭಾವವನ್ನು ಬೀರಿದ ರೀತಿಯನ್ನು ಅದು ಪ್ರಶಂಸಾರ್ಹ ರೀತಿಯಲ್ಲಿ ನಿದರ್ಶಿಸುವುದರಿಂದ ನಾನು ಅದನ್ನು ಸಂಪೂರ್ಣವೆನ್ನುವಷ್ಟರ ಮಟ್ಟಿಗೆ ವಿವೇಚಿಸಿದ್ದೇನೆ.

ತತ್ವಜ್ಞಾನಿಗಳನ್ನು ವರ್ಗೀಕರಿಸುವುದು, ನಿಯಮವೆಂಬಂತೆ, ಅವರ ವಿಧಾನಗಳ ಅಥವಾ ಅವುಗಳ ಪ್ರಭಾವದ ಆಧಾರದ ಮೇಲೆ: 'ಅನುಭವೈಕ' ಮತ್ತು 'ಪೂರ್ವಕಲ್ಪಿತ' ಎಂಬುದು ವಿಧಾನಗಳ ಆಧಾರದ ಮೇಲೆ ಮಾಡುವ ವರ್ಗೀಕರಣವಾದರೆ, 'ವಾಸ್ತವವಾದಿ' ಮತ್ತು 'ಆದರ್ಶವಾದಿ' ಎಂಬುದು ಪ್ರಭಾವಗಳ ಮೇಲೆ ಮಾಡಿದ

ವರ್ಗೀಕರಣ. ಈ ಎರಡೂ ಮಾರ್ಗಗಳಲ್ಲಿ ಬರ್ಗ್‌ಸನ್‌ನ ತಾತ್ತ್ವಿಕತೆಯನ್ನು ವರ್ಗೀಕರಿಸುವುದು ಯಶಸ್ವಿಯಾಗಲಾರದು, ಯಾಕೆಂದರೆ ಅದು ಎಲ್ಲ ಪರಿಗಣಿತ ವಿಭಾಗಗಳನ್ನೂ ಒಳಗೊಳ್ಳುತ್ತದೆ.

ಅಲ್ಲದೆ ತತ್ತ್ವಜ್ಞಾನಿಗಳನ್ನು ವರ್ಗೀಕರಿಸುವ ಮತ್ತೊಂದು ಬಗೆಯೂ ಇದೆ, ಅದು ಕಡಿಮೆ ನಿಖರವಾದರೂ ತತ್ತ್ವಜ್ಞಾನಿಯಲ್ಲದವರಿಗೆ ಹೆಚ್ಚು ಉಪಯುಕ್ತವಾಗುವ ಮಾರ್ಗ: ಈ ರೀತಿಯಲ್ಲಿ ವರ್ಗೀಕರಣ ತತ್ತ್ವವು ತತ್ತ್ವಜ್ಞಾನಿಯು ತತ್ತ್ವೀಕರಣಗೊಳಿಸುವುದರ ಹಿಂದಿನ ಮುಖ್ಯ ಉದ್ದೇಶದ ಆಧಾರದ ಮೇಲೆ. ಹೀಗೆ, ಸುಖದ ಮೇಲಿನ ಪ್ರೀತಿಯಿಂದ ಪ್ರೇರಿತವಾದ ಭಾವನಾ ತಾತ್ತ್ವಿಕತೆಯು ಮೂಡುತ್ತದೆ; ಜ್ಞಾನದ ಬಗೆಗಿನ ಪ್ರೀತಿಯಿಂದ ಪ್ರೇರಿತವಾದ ಸೈದ್ಧಾಂತಿಕ ತಾತ್ತ್ವಿಕತೆ; ಮತ್ತು ಕ್ರಿಯೆಯ ಮೇಲಿನ ಪ್ರೇಮದಿಂದ ಪ್ರೇರಿತವಾದ ಕಾರ್ಯಶೀಲ ತಾತ್ತ್ವಿಕತೆ.

ಮೂಲತಃ ಆಶಾವಾದ ಅಥವಾ ನಿರಾಶಾವಾದದಿಂದ ಪ್ರೇರಿತವಾದ, ಬಿಡುಗಡೆಯ ಹಾದಿಯನ್ನು ಸೂಚಿಸುವ ಅಥವಾ ಬಿಡುಗಡೆಯು ಅಸಾಧ್ಯ ಎನ್ನುವವುಗಳನ್ನು ನಾವು ಭಾವನಾ ತಾತ್ತ್ವಿಕತೆಗಳಲ್ಲಿ ಸೇರಿಸುತ್ತೇವೆ; ಬಹುತೇಕ ಮತಧಾರ್ಮಿಕ ತಾತ್ತ್ವಿಕತೆಗಳು ಈ ವರ್ಗಕ್ಕೆ ಸೇರುತ್ತವೆ. ಬಹುತೇಕ ದೊಡ್ಡ ಮಾದರಿಗಳನ್ನು ನಾವು ಸೈದ್ಧಾಂತಿಕ ತಾತ್ತ್ವಿಕತೆಗಳಲ್ಲಿ ಸೇರಿಸುತ್ತೇವೆ; ಜ್ಞಾನದ ಹಂಬಲವು ಅಪರೂಪವಾದರೂ, ಅದೇ ತತ್ತ್ವಜ್ಞಾನದಲ್ಲಿ ಅತ್ಯಂತ ಉತ್ತಮ ಆಕರವಾಗಿರುತ್ತದೆ. ಮತ್ತೊಂದೆಡೆಯಲ್ಲಿ, ಕ್ರಿಯೆಯನ್ನು ಅತ್ಯಂತ ಶ್ರೇಷ್ಠವಾದುದೆಂದು ಪರಿಗಣಿಸಿ, ಸುಖವನ್ನು ಪರಿಣಾಮವೆಂದೂ ಜ್ಞಾನವನ್ನು ಯಶಸ್ವೀ ಕ್ರಿಯೆಯ ಕೇವಲ ಸಾಧನವೆಂದೂ ಪರಿಗಣಿಸುವಂಥವು ಕಾರ್ಯಶೀಲ ತಾತ್ತ್ವಿಕತೆಗಳು. ತತ್ತ್ವಜ್ಞಾನಿಗಳು ಸಾಮಾನ್ಯ ವ್ಯಕ್ತಿಗಳಾಗಿದ್ದಿದ್ದರೆ, ಈ ವರ್ಗದ ತಾತ್ತ್ವಿಕತೆಗಳು ಪಶ್ಚಿಮ ಯೂರೋಪಿಯನ್‌ರಲ್ಲಿ ಸಾಮಾನ್ಯವಾಗಿರುತ್ತಿತ್ತು; ಈಗಿರುವಂತೆ, ಈಚಿನರೆಗೂ ಅಂತಹವು ಅಪರೂಪ; ಹಾಗೆ ನೋಡಿದರೆ, ಅದರ ಮುಖ್ಯ ಪ್ರತಿನಿಧಿಗಳೆಂದರೆ ವ್ಯವಹಾರಸಿದ್ಧಾಂತಿಗಳು (ಪ್ರಾಗ್ಮಾಟಿಸ್ಟ್) ಮತ್ತು ಬರ್ಗ್‌ಸನ್. ಈ ವರ್ಗದ ತಾತ್ತ್ವಿಕತೆಯ ಉಚ್ಛ್ರಾಯದಲ್ಲಿ, ಬರ್ಗ್‌ಸನ್‌ನೇ ಕಂಡ ಹಾಗೆ, ಗ್ರೀಸ್‌ನ – ಅದರಲ್ಲೂ ಪ್ಲೇಟೋನ – ಪ್ರಾಮಾಣ್ಯದ ವಿರುದ್ಧದ ಆಧುನಿಕ ಕ್ರಿಯಾಶೀಲ ವ್ಯಕ್ತಿಯ ಬಂಡಾಯ; ಅಥವಾ ಡಾ। ಷಿಲ್ಲರ್ ಎದ್ದು ಕಾಣುವಂತೆ ಮಾಡಿದ ಹಾಗೆ ನಾವು ಅದನ್ನು ಸಾಮ್ರಾಜ್ಯಶಾಹಿ ಮತ್ತು ಮೋಟರ್‌ಕಾರ್‌ಗಳ ಜೊತೆ ಸಂಬಂಧಿಸಬಹುದು. ಆಧುನಿಕ ಜಗತ್ತಿಗೆ ಅಂಥ ತಾತ್ತ್ವಿಕತೆಯ ಆವಶ್ಯಕತೆಯಿದೆ, ಹೀಗಾಗಿ ಅದು ಸಾಧಿಸಿರುವ ಯಶಸ್ಸು ಆಶ್ಚರ್ಯಕರವೇನಲ್ಲ.

ಹಿಂದಿನ ಬಹುತೇಕ ವಿಧಾನಗಳಿಗೆ ವ್ಯತಿರಿಕ್ತವಾಗಿ, ಬರ್ಗ್‌ಸನ್‌ನ ತಾತ್ತ್ವಿಕತೆಯು ದ್ವಂದ್ವಶೀಲವಾದುದು: ಅವನ ದೃಷ್ಟಿಯಲ್ಲಿ, ಜಗತ್ತು ಎರಡು ಭಿನ್ನ ರೂಪಗಳಲ್ಲಿ

ವಿಭಜನೆಗೊಂಡಿದೆ; ಒಂದೆಡೆ, ಬದುಕು, ಮತ್ತೊಂದೆಡೆ, ಅಥವಾ ಬೌದ್ಧಿಕತೆಯು ಭೌತದ್ರವ್ಯವೆಂದು ಗುರುತಿಸುವ ಅದರಲ್ಲಿನ ಜಡವಾದ ಏನೋ ಒಂದು. ವಿಶ್ವವು ಈ ಎರಡೂ ವಿರುದ್ಧ ಚಲನೆಗಳ ನಿರಂತರ ಸಂಘರ್ಷ ಅಥವಾ ಹೋರಾಟ: ಮೇಲೆ ಏರುವ ಬದುಕು, ಕೆಳಗೆ ಬೀಳುವ ಭೌತದ್ರವ್ಯ. ಬದುಕು ಎಂಬುದು ಒಂದು ದೊಡ್ಡ ಶಕ್ತಿ, ಜಗತ್ತಿನ ಆದಿಯಿಂದಲೂ ಸಮಗ್ರವಾಗಿ ನೀಡಲಾಗಿರುವ ಮತ್ತು ಭೌತದ್ರವ್ಯದ ಸವಾಲನ್ನೆದುರಿಸುವ, ಭೌತದ್ರವ್ಯವನ್ನು ಮಾರ್ಗವನ್ನಾಗಿ ಮಾಡಿಕೊಳ್ಳುವ, ಸಂಘಟನೆಯ ಮೂಲಕ ಭೌತದ್ರವ್ಯವನ್ನು ಕ್ರಮೇಣ ಒಂದು ಸಾಧನವನ್ನಾಗಿ ಮಾರ್ಪಡಿಸಿಕೊಳ್ಳುವ, ಒಂದು ವ್ಯಾಪಕ ಅಂತಃಪ್ರಚೋದನೆ; ತನಗೆ ಎದುರಾಗುವ ಅಡ್ಡಿಗಳಿಂದಾಗಿ ವಿಭಿನ್ನ ವಾಹಿನಿಗಳಾಗಿ, ಬೀದಿಯ ಕೊನೆಯಲ್ಲಿನ ಗಾಳಿಯಂತೆ, ಒಡೆದಿರುವಂಥದು; ಭೌತದ್ರವ್ಯವು ಅನಿವಾರ್ಯವಾಗಿಸುವ ಅಳವಡಿಕೆಗಳಿಂದಲೇ ಭಾಗಶಃ ದಮನಿತವಾಗುವಂಥವು; ಆದರೂ ಮುಕ್ತ ಕ್ರಿಯೆಗೆ ಸದಾ ಅವಕಾಶ ಹೊಂದಿರುವಂಥದು, ಸದಾ ಹೊಸ ದಾರಿಗಳನ್ನು ಕಾಣಲು ಹೆಣಗುತ್ತಿರುವಂಥದು, ಎದುರಿನಲ್ಲಿರುವ ಭೌತದ್ರವ್ಯವೆಂಬ ಗೋಡೆಯ ನಡುವೆಯೇ ಚಲನೆಯ ಹೆಚ್ಚಿನ ಸ್ವಾತಂತ್ರ್ಯಕ್ಕಾಗಿ ಕಾರ್ಯಶೀಲವಾಗಿರುವಂಥದು.

ಪರಿಸರದೊಡನೆ ಹೊಂದಿಕೊಳ್ಳುವ ಮೂಲಕ ವಿಕಾಸವನ್ನು ಮೂಲಭೂತವಾಗಿ ವಿವರಿಸಲಾಗುವುದಿಲ್ಲ; ಹೊಂದಾಣಿಕೆಯು ವಿಕಾಸದ ತಿರುವುಗಳನ್ನು ಬಾಗುಗಳನ್ನಷ್ಟೇ ಸೂಚಿಸುತ್ತವೆ, ಬೆಟ್ಟಗುಡ್ಡಗಳ ನಡುವಣ ತಿರುವುಗಳ ಮೂಲಕ ಊರು ಸೇರಬೇಕಾದ ಹಾದಿಯಂತೆ. ಆದರೆ ಈ ಹೋಲಿಕೆಯು ಪೂರ್ತಿ ಸರಿಯಾದುದಲ್ಲ; ವಿಕಾಸವು ಚಲಿಸುವ ದಾರಿಯ ಕೊನೆಯಲ್ಲಿ ಯಾವ ಊರೂ ಇಲ್ಲ, ಯಾವುದೇ ನಿಶ್ಚಿತ ಗುರಿಯೂ ಇಲ್ಲ. ಯಂತ್ರರಚನೆ (ಮೆಕಾನಿಸಂ) ಮತ್ತು ಮೂಲಸಂಕಲ್ಪಸಿದ್ಧಾಂತ (ಟೆಲಿಯಾಲಜಿ) ಗಳು ಇದೇ ತೊಡಕುಗಳಿಂದ ಕೂಡಿವೆ, ಜಗತ್ತಿನಲ್ಲಿ ಸಾರತಃ ಹೊಸತನವಿಲ್ಲ ಎಂದೇ ಎರಡೂ ಊಹಿಸಿಕೊಳ್ಳುತ್ತವೆ. ಭವಿಷ್ಯವು ಭೂತದಲ್ಲಿಯೇ ಸೂಚಿತವಾಗುತ್ತದೆ ಎಂದು ಯಂತ್ರರಚನೆಯು ಪರಿಗಣಿಸುತ್ತದೆ, ಮತ್ತು ತಾನು ಸಾಧಿಸಬೇಕಾದ ಉದ್ದೇಶವಾವುದೆಂಬುದು ಮೊದಲೇ ಗೊತ್ತಾಗಿರುತ್ತದೆ ಎಂದು ನಂಬುವ ಮೂಲಸಂಕಲ್ಪಸಿದ್ಧಾಂತವು ಪರಿಣಾಮದಲ್ಲಿ ಯಾವುದೇ ಸಾರತಃ ಹೊಸತಾದುದನ್ನು ಹೊಂದುತ್ತದೆ ಎಂಬುದನ್ನು ಅಲ್ಲಗಳೆಯುತ್ತದೆ.

ಈ ಎರಡೂ ದೃಷ್ಟಿಕೋನಗಳ ವಿರುದ್ಧವಾಗಿ, ಆದರೆ ಯಂತ್ರರಚನೆಗಿಂತ ಮೂಲಸಂಕಲ್ಪಸಿದ್ಧಾಂತದ ಬಗ್ಗೆ ಹೆಚ್ಚು ಸಹಾನುಭೂತಿಯಿಂದ ಕೂಡಿ, ಬರ್ಗ್‌ಸನ್ ತಾಳುವ ನಿಲವು ಎಂದರೆ ವಿಕಾಸ ಎಂಬುದು ನಿಜವಾಗಿಯೂ ಕಲೆಗಾರನ ಕೃತಿಯಂತೆ ಸೃಜನಶೀಲವಾದುದು ಎಂಬುದು. ಕ್ರಿಯೆಯ ಅಂತಃಪ್ರೇರಣೆಯು, ಸೂತ್ರೀಕರಿಸಲಾಗದ ಬಯಕೆಯು, ಮೊದಲೇ ಇರುತ್ತದೆ, ಆದರೆ ಆ ಬಯಕೆಯು ಪೂರ್ಣಗೊಳ್ಳುವವರೆಗೂ

ಅದು ಹೇಗೆ ಪೂರ್ಣಗೊಳ್ಳುವುದೆಂಬುದನ್ನು ತಿಳಿಯುವುದು ಅಸಾಧ್ಯ. ಉದಾಹರಣೆಗೆ, ನೋಡಲಾರದ ಜೀವಿಗಳು ಸಂಪರ್ಕಕ್ಕೆ ಬರುವ ಮೊದಲೇ ವಸ್ತುಗಳ ಬಗ್ಗೆ ಅರಿವನ್ನು ಹೊಂದಿರುವುದನ್ನು ನಾವು ಊಹಿಸಿಕೊಳ್ಳಬಹುದು. ಇದು ಕಣ್ಣುಗಳನ್ನು ಪಡೆಯುವ ಪರಿಣಾಮದಲ್ಲಿ ಕೊನೆಗೊಂಡ ಪ್ರಯತ್ನಗಳಿಗೆ ಕಾರಣವಾಯಿತು. ನೋಟವು ಬಯಕೆಯನ್ನು ಪೂರ್ಣಗೊಳಿಸಿತು, ಆದರೆ ಅದನ್ನು ಮೊದಲೇ ಊಹಿಸಿಕೊಳ್ಳಲು ಸಾಧ್ಯವಿರಲಿಲ್ಲ. ಈ ಕಾರಣಕ್ಕಾಗಿ, ವಿಕಾಸವು ಮುಂಗಾಣಲಾಗದ್ದು, ಮತ್ತು ಪೂರ್ವನಿಶ್ಚಿತಸಿದ್ಧಾಂತವು (ಡಿಟರ್ಮಿನಿಸಂ) ಮುಕ್ತ ಇಚ್ಛಾಶಕ್ತಿಯ ಸಮರ್ಥಕರನ್ನು ತಿರಸ್ಕರಿಸಲಾರದು.

ಈ ಸ್ಥೂಲ ರೂಪರೇಷೆಯು ಭೂಮಿಯ ಮೇಲೆ ಜೀವವು ಬೆಳೆದ ಬಗೆಯನ್ನು ತುಂಬುತ್ತದೆ. ಈ ವಾಹಿನಿಯ ಮೊದಲನೆಯ ವಿಭಾಗವು ಸಸ್ಯಗಳು ಮತ್ತು ಪ್ರಾಣಿಗಳ ವಿಷಯದಲ್ಲಿ ಸಾಗಿತು, ಸಸ್ಯಗಳು ಶಕ್ತಿಯನ್ನು ಕೋಶದಲ್ಲಿ ಕೂಡಿಡುವ ಉದ್ದೇಶ ಹೊಂದಿದವು, ಪ್ರಾಣಿಗಳು ತಕ್ಷಣದ ಹಾಗೂ ವೇಗವಾದ ಚಲನೆಯ ಉದ್ದೇಶವನ್ನು ಹೊಂದಿದವು. ಆದರೆ ಪ್ರಾಣಿಗಳಲ್ಲಿ, ಆನಂತರದ ಹಂತದಲ್ಲಿ, ಒಂದು ಹೊಸ ದ್ವಿಭಜನೆಯು ಕಾಣಿಸಿಕೊಂಡಿತು: ಅಂತಃಪ್ರೇರಣೆ ಮತ್ತು ಬೌದ್ಧಿಕತೆ – ಹೆಚ್ಚು ಕಡಿಮೆ ಬೇರೆ ಬೇರೆಯಾದವು. ಅಂತಃಪ್ರೇರಣೆ ಮತ್ತು ಬೌದ್ಧಿಕತೆಗಳ ನಡುವಣ ದ್ವಿಭಜನೆಯು ಅವನ ತಾತ್ವಿಕತೆಯಲ್ಲಿ ಮೂಲಾಧಾರವಾದುದು, ಅದರಲ್ಲಿನ ಬಹುಪಾಲು ಸ್ಯಾಂಡ್‌ಫರ್ಡ್ ಮತ್ತು ಮೆರ್ಟನ್ ರೀತಿಯದು, ಅಂತಃಪ್ರೇರಣೆ ಒಳ್ಳೆಯ ಹುಡುಗ, ಬೌದ್ಧಿಕತೆ ಕೆಟ್ಟ ಹುಡುಗ.

ಅಂತಃಪ್ರೇರಣೆಯನ್ನು ದೊಡ್ಡ ರೀತಿಯಲ್ಲಿ ಅಂತರ್ಬೋಧೆಯೆಂದು ಕರೆಯುತ್ತಾರೆ. 'ಅಂತರ್ಬೋಧೆ ಎಂದರೆ ಅನಾಸಕ್ತಿ ಹೊಂದಿದ, ಪ್ರಜ್ಞಾಪೂರ್ವಕವಾದ, ತನ್ನ ಉದ್ದೇಶದ ಬಗ್ಗೆ ಚಿಂತಿಸಬಹುದಾದ ಮತ್ತು ಅದನ್ನು ಅನಿರ್ದಿಷ್ಟವಾಗಿ ವಿಸ್ತರಿಸಬಲ್ಲ ಅಂತಃಪ್ರೇರಣೆಯೇ ಎಂಬುದು ನನ್ನ ತಿಳಿವಳಿಕೆ' ಎಂದವನು ಹೇಳುತ್ತಾನೆ. ಬೌದ್ಧಿಕತೆಯ ಕ್ರಿಯೆಗಳ ವಿವರಣೆಯನ್ನು ಅರ್ಥಮಾಡಿಕೊಳ್ಳುವುದು ಸುಲಭವಲ್ಲ, ಆದರೆ ಬರ್ಗ್‌ಸನ್ ಅನ್ನು ಅರ್ಥಮಾಡಿಕೊಳ್ಳಬೇಕಾದರೆ ನಾವು ಈ ದಿಸೆಯಲ್ಲಿ ಕಷ್ಟಪಡಬೇಕು.

ಬುದ್ಧಿವಂತಿಕೆ ಅಥವಾ ಬೌದ್ಧಿಕತೆಯು 'ಪ್ರಕೃತಿಯ ಹಿಡಿತದಿಂದ ಹೊರಬಂದು ಅಸಂಘಟಿತ ಘನವಾಗುವುದನ್ನು ತನ್ನ ಮುಖ್ಯ ಉದ್ದೇಶವನ್ನಾಗಿ ಹೊಂದಿದೆ'; ಅದು ನಿರಂತರತಾರಾಹಿತ್ಯ ಮತ್ತು ಚಲನರಹಿತತೆಯ ಸ್ಪಷ್ಟ ಕಲ್ಪನೆಯನ್ನು ಮಾತ್ರ ಹೊಂದಬಲ್ಲುದು; ಅದರ ಗ್ರಹಿಕೆಗಳು ಅವಕಾಶದಲ್ಲಿನ ವಸ್ತುಗಳಂತೆ ಪರಸ್ಪರ ಹೊರತಾದವು, ಒಂದೇ ಸ್ಥಿರತೆಯನ್ನು ಹೊಂದಿದವು. ಬೌದ್ಧಿಕತೆಯು ಅವಕಾಶದಲ್ಲಿ ಬೇರ್ಪಟ್ಟು ಕಾಲದಲ್ಲಿ ಸ್ಥಿರವಾಗುತ್ತದೆ; ಅದು ವಿಕಾಸವನ್ನು ಕುರಿತಂತೆ

ಆಲೋಚಿಸಲಾರದು, ಆದರೆ ಸರಣಿಯ ಹಂತಗಳನ್ನು ಪ್ರತಿನಿಧಿಸುವಂತೆ ಆಗಬಲ್ಲುದು. 'ಬೌದ್ಧಿಕತೆಯು ಬದುಕನ್ನು ಅರ್ಥಮಾಡಿಕೊಳ್ಳುವ ಸಹಜ ಅಸಾಮರ್ಥ್ಯವನ್ನು ಲಕ್ಷಣವಾಗಿ ಹೊಂದಿರುವಂಥದು.' ಅದರ ಪರಮ ಉತ್ಪಾದನೆಗಳಾದ ಜ್ಯಾಮಿತಿ ಮತ್ತು ತರ್ಕಗಳು ನಿಷ್ಕೃಷ್ಟವಾಗಿ ಘನಕಾಯಗಳಿಗೆ ಮಾತ್ರ ಅನ್ವಯಗೊಳ್ಳುವಂತಹವು, ಆದರೆ ಮಿಕ್ಕೆಡೆಗಳಲ್ಲಿ ವೈಚಾರಿಕತೆಯು ವ್ಯವಹಾರ ಜ್ಞಾನದ ನಿರ್ಬಂಧಕ್ಕೆ ಒಳಗಾಗಬೇಕು, ಅದು ಬರ್ಗ್‌ಸನ್ ನಿಜವಾಗಿಯೇ ಹೇಳುವಂತೆ ಬೇರೆಯದೇ ಆದ ವಿಷಯ. ಘನಕಾಯಗಳು, ಬೌದ್ಧಿಕತೆಯನ್ನು ಅನ್ವಯಿಸುವ ಉದ್ದೇಶದಿಂದಲೇ ಮನಸ್ಸು ಸೃಷ್ಟಿಸಿರುವಂತಹವು, ಚದುರಂಗವನ್ನು ಆಡಲೆಂದೇ ಚದುರಂಗದಾಟವನ್ನು ಸೃಷ್ಟಿಸಿದಂತೆ. ಬೌದ್ಧಿಕತೆಯ ಮತ್ತು ಭೌತದ್ರವ್ಯಗಳ ಮೂಲವು ಸಂಬಂಧ ಹೊಂದಿದವು ಎಂದವನು ಹೇಳುತ್ತಾನೆ; ಪರಸ್ಪರ ಹೊಂದಾಣಿಕೆಯ ಮೂಲಕವೇ ಅವೆರಡೂ ಬೆಳೆದಿವೆ. 'ಭೌತದ್ರವ್ಯ ಮತ್ತು ಬೌದ್ಧಿಕತೆಗಳನ್ನು, ಎರಡನ್ನೂ ಒಳಗೊಂಡ ಒಂದೇ ವಸ್ತುವಿನಿಂದ, ಒಂದೇ ಬಗೆಯ ಪ್ರಕ್ರಿಯೆಯು ಒಂದೇ ವೇಳೆಗೆ ಬೇರ್ಪಡಿಸಿರಬೇಕು.'

ಭೌತದ್ರವ್ಯ ಮತ್ತು ಬೌದ್ಧಿಕತೆಗಳ ಸಮಾನಾಂತರ ಬೆಳವಣಿಗೆಯ ಗ್ರಹಿಕೆಯು ಅವನ ಸ್ವಂತದ್ದು, ಹೀಗಾಗಿ ಅದನ್ನು ಅರ್ಥಮಾಡಿಕೊಳ್ಳಬೇಕು. ಸ್ಥೂಲವಾಗಿ ಹೇಳುವುದಾದರೆ, ಅವನು ಹೇಳುವುದಿಷ್ಟು: ಬೌದ್ಧಿಕತೆ ಎಂಬುದು ವಸ್ತುಗಳನ್ನು ಪ್ರತ್ಯೇಕವಾಗಿ ನೋಡಬಲ್ಲ ಸಾಮರ್ಥ್ಯ, ಮತ್ತು ಭೌತದ್ರವ್ಯವು ಪ್ರತ್ಯೇಕಗೊಂಡ ನಿರ್ದಿಷ್ಟ ವಸ್ತುಗಳು. ವಾಸ್ತವದಲ್ಲಿ, ಪ್ರತ್ಯೇಕವಾದ ಘನವಸ್ತುಗಳಿಲ್ಲ, ಆಗುತ್ತಿರುವ ನಿರಂತರ ವಾಹಿನಿ, ಅದರಲ್ಲಿ ಯಾವುದೂ ಆಗುವುದಿಲ್ಲ, ಮತ್ತು ಈ ಆಗದಿರುವುದು ಆಗುವಂತಹ ಯಾವುದೂ ಇಲ್ಲ. ಆದರೆ ಆಗುವುದು ಮೇಲುಗತಿಯ ಅಥವಾ ಕೆಳಗತಿಯ ಚಲನೆಯಾಗಬಹುದು: ಅದು ಮೇಲುಮುಖ ಚಲನೆಯಾದಾಗ ಅದನ್ನು ಬದುಕು ಎನ್ನಬಹುದು, ಕೆಳಮುಖ ಚಲನೆಯಾದಾಗ, ಬೌದ್ಧಿಕತೆಯು ಅಪಾರ್ಥಮಾಡಿಕೊಂಡಂತೆ, ಅದನ್ನು ಭೌತದ್ರವ್ಯ ಎನ್ನಬಹುದು. ವಿಶ್ವವು ಶಂಕುವಿನ ಆಕಾರದಲ್ಲಿದೆ ಎಂದು ನನಗನ್ನಿಸುತ್ತದೆ, ತುದಿಯಲ್ಲಿ ಸ್ವಯಂಪೂರ್ಣತೆಯಿದೆ, ಯಾಕೆಂದರೆ ಮೇಲುಮುಖ ಚಲನೆಯು ವಸ್ತುಗಳನ್ನು ಒಗ್ಗೂಡಿಸುತ್ತದೆ, ಅದೇ ಕೆಳಮುಖ ಚಲನೆಯು ಅವುಗಳನ್ನು ಬೇರ್ಪಡಿಸುತ್ತದೆ, ಅಥವಾ ಹಾಗೆ ಕಾಣುವಂತೆ ಮಾಡುತ್ತದೆ. ಮನಸ್ಸಿನ ಮೇಲುಮುಖ ಚಲನೆಯು ತನ್ನ ಮೇಲೆ ಬೀಳುವ ವಸ್ತುಗಳ ಕೆಳಮುಖ ಚಲನೆಯ ಮೂಲಕ ನುಸುಳಲು ಸಾಧ್ಯವಾಗುವಂತೆ, ಅವುಗಳ ನಡುವೆ ಅದು ತನ್ನ ದಾರಿಯನ್ನು ನಿರ್ಮಿಸಿಕೊಳ್ಳಬೇಕು; ಈ ರೀತಿಯಲ್ಲಿ ಬುದ್ಧಿವಂತಿಕೆಯು ರೂಪುಗೊಂಡಿತು, ರೂಪುರೇಷೆಗಳೂ ದಾರಿಗಳೂ ನಿರ್ಮಾಣಗೊಂಡವು, ಮತ್ತು ಪ್ರಾಚೀನ ಹರಿವು ಬೇರೆ ಬೇರೆ ವಸ್ತುಗಳಾಗಿ ವಿಭಜನೆಗೊಂಡಿತು. ಬೌದ್ಧಿಕತೆಯನ್ನು ಕತ್ತರಿಸುವಿಕೆಗೆ ಹೋಲಿಸಬಹುದು, ಕೋಳಿಯು ವಿವಿಧ ವಸ್ತುಗಳಿಂದ

ಕೂಡಿರುವಂಥದು ಮತ್ತು ಕತ್ತರಿಸುವ ಚಾಕುವಿಗೆ ಅದು ಗೊತ್ತಿದೆ ಎಂಬುದನ್ನು ಕಲ್ಪಿಸಿಕೊಳ್ಳುವ ವೈಶಿಷ್ಟ್ಯ ಅದಕ್ಕೆ ಇದೆ.

ಬೌದ್ಧಿಕತೆಯು ಅವಕಾಶದೊಡನೆ ಸಂಬಂಧ ಹೊಂದಿರುವುದರಿಂದಾಗಿ, ಅಂತಃಪ್ರೇರಣೆ ಅಥವಾ ಅಂತರ್ಬೋಧೆಯು ಕಾಲದೊಡನೆ ಸಂಬಂಧ ಹೊಂದಿರುತ್ತದೆ. ಬಹುತೇಕ ಲೇಖಕರಿಗೆ ವ್ಯತಿರಿಕ್ತವಾಗಿ, ಕಾಲ ಮತ್ತು ಅವಕಾಶಗಳು ಅಪರಿಮಿತವಾಗಿ ವಿದೃಶವಾದವು; ಭೌತದ್ರವ್ಯದ ಲಕ್ಷಣವಾದ ಅವಕಾಶವು, ನಿಜವಾಗಿಯೂ ಭ್ರಮಾತ್ಮಕವಾದ ಧಾರೆಯ ಭೇದನವು ವ್ಯಾವಹಾರಿಕವಾಗಿ ಒಂದು ಹಂತದವರೆಗೂ ಉಪಯುಕ್ತವಾದರೂ, ಸಿದ್ಧಾಂತದಲ್ಲಿ ತೀರ ಹಾದಿ ತಪ್ಪಿಸುವಂಥದು ಎಂಬುದು ಬರ್ಗ್‌ಸನ್ ತಾತ್ವಿಕತೆಯ ಒಂದು ಗಮನಾರ್ಹ ಲಕ್ಷಣ. ಇದಕ್ಕೆ ವ್ಯತಿರಿಕ್ತವಾಗಿ ಕಾಲವು ಬದುಕು ಅಥವಾ ಮನಸ್ಸಿನ ಒಂದು ಸಾರವತ್ತಾದ ಲಕ್ಷಣ. 'ಜೀವಿಯು ಎಲ್ಲಿ ಇರುತ್ತದೆಯೋ ಅಲ್ಲಿ, ಕಾಲವನ್ನು ದಾಖಲುಗೊಳಿಸುವ ಒಂದು ಖಿರ್ದಿಯು ತೆರೆದಿರುತ್ತದೆ' ಎಂದವನು ಹೇಳಿದ. ಆದರೆ ಇಲ್ಲಿ ಹೇಳಿರುವ ಕಾಲವು ಪರಸ್ಪರ ಬಾಹ್ಯವಾದ ಕ್ಷಣಗಳ ಒಗ್ಗೂಡಿಕೆಯಾದ ಗಣಿತಾತ್ಮಕ ಕಾಲವಲ್ಲ. ಬರ್ಗ್‌ಸನ್‌ನ ಪ್ರಕಾರ ಗಣಿತಾತ್ಮಕ ಕಾಲವು ವಾಸ್ತವದಲ್ಲಿ ಒಂದು ಬಗೆಯ ಅವಕಾಶವೇ; ಬದುಕಿನ ಸಾರವತ್ತಾದ ಭಾಗವಾದ ಕಾಲವನ್ನು ಅವನು 'ಅವಧಿ' (ಡ್ಯೂರೇಷನ್) ಎನ್ನುತ್ತಾನೆ. ಅವಧಿಯ ಈ ಗ್ರಹಿಕೆಯು ಅವನ ತಾತ್ವಿಕತೆಯಲ್ಲಿ ಮೂಲಭೂತವಾದುದು; ಅದು ಅವನ ಅತ್ಯಂತ ಹಳೆಯ ಕೃತಿ 'ಟೈಂ ಅಂಡ್ ಫ್ರೀ ವಿಲ್'ನಲ್ಲಿ ಉಲ್ಲೇಖಕೊಂಡಿದೆ; ಅವನ ವಿಧಾನವನ್ನು ಸ್ವಲ್ಪ ಮಟ್ಟಿಗಾದರೂ ಅರ್ಥಮಾಡಿಕೊಳ್ಳಲು ಇದನ್ನು ತಿಳಿದುಕೊಳ್ಳುವುದು ಅವಶ್ಯಕ. ಆದರೆ ಅದು ಬಹು ಕ್ಲಿಷ್ಟಕರ ಪರಿಕಲ್ಪನೆ. ಅದನ್ನೇ ನಾನೇ ಪೂರ್ಣವಾಗಿ ಅರ್ಥಮಾಡಿಕೊಳ್ಳಲಾಗಿಲ್ಲ, ಹೀಗಾಗಿ ಅದನ್ನು ಸೂಕ್ತವಾದ ರೀತಿಯಲ್ಲಿ ವಿವರಿಸುವ ಭರವಸೆ ನನಗಿಲ್ಲ.

'ಶುದ್ಧ ಅವಧಿಯು, ನಮ್ಮ ಅಹಂಭಾವವು ಜೀವಂತಿಕೆಯನ್ನು ಪಡೆದಿರುವಾಗ ನಮ್ಮ ಪ್ರಜ್ಞಾಪೂರ್ವಕ ಸ್ಥಿತಿಗಳು ಧರಿಸುವ ರೂಪ, ಆಗ ಅದು ತನ್ನ ಪ್ರಸ್ತುತ ಸ್ಥಿತಿಯನ್ನು ಹಿಂದಿನ ಸ್ಥಿತಿಗಳಿಂದ ಭಿನ್ನವಾಗುವುದನ್ನು ತಡೆಯುತ್ತದೆ.' ಅದು ಭೂತ ಮತ್ತು ವರ್ತಮಾನಗಳನ್ನು, ಪರಸ್ಪರ ಭೇದನ ಮತ್ತು ಭಿನ್ನತೆಯಿರದ ಅನುಕ್ರಮವನ್ನು ಹೊಂದಿರುವ ಒಂದು ಸಾವಯವ ಇಡಿಯಾಗಿ ರೂಪಿಸುತ್ತದೆ. 'ನಮ್ಮ ಅಹಂಭಾವದಲ್ಲಿಯೇ ಪರಸ್ಪರ ಬಾಹ್ಯತೆಯಿಲ್ಲದಂತಹ ಅನುಕ್ರಮವಿದೆ; ಅಹಂಭಾವದ ಹೊರಗೆ, ಶುದ್ಧ ಅವಕಾಶದಲ್ಲಿ, ಅನುಕ್ರಮವಿಲ್ಲದ ಪರಸ್ಪರ ಬಾಹ್ಯತೆಯಿರುತ್ತದೆ.'

'ಕರ್ತೃ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಪ್ರಶ್ನೆಗಳು, ತಮ್ಮ ವಿಭಿನ್ನತೆ ಮತ್ತು ಒಗ್ಗೂಡಿಕೆಗಳಿಗೆ, ಅವುಗಳನ್ನು ಅವಕಾಶಕ್ಕಿಂತ ಕಾಲದ ಪರಿಭಾಷೆಯಲ್ಲಿ

ವಿವರಿಸಬೇಕು.' ನಾವು *ಕ್ರಿಯಾಶೀಲರಾಗಿ ತೊಡಗಿರುವ* ಅವಧಿಯಲ್ಲಿ ಸಂಬಂಧವಿರದ ಅಂಶಗಳಿರುತ್ತವೆ; ಆದರೆ ನಾವು ಕ್ರಿಯೆಯನ್ನು ಮಾಡುತ್ತಿರುವಾಗ ನಮ್ಮ ಸ್ಥಿತಿಗಳು ಒಂದರೊಡನೊಂದು ಕರಗಿಬಿಡುತ್ತವೆ. ಶುದ್ಧ ಅವಧಿಯು ಬಾಹ್ಯತೆಯಿಂದ ಅತ್ಯಂತ ದೂರವಾದದ್ದು ಮತ್ತು ಬಾಹ್ಯತೆಯಿಂದ ಕನಿಷ್ಠ ಭೇದಿತವಾದದ್ದು, ಅವಧಿಯಲ್ಲಿ ಭೂತವು ದೊಡ್ಡದಾಗಿದ್ದು ವರ್ತಮಾನವು ಸಂಪೂರ್ಣ ಹೊಸದಾಗಿರುತ್ತದೆ. ಆಗ ನಮ್ಮ ಇಚ್ಛಾಶಕ್ತಿ ಬಹುವಾಗಿ ಪ್ರಯಾಸದ್ದಾಗುತ್ತದೆ; ಜಾರಿ ಹೋಗುತ್ತಿರುವ ಭೂತವನ್ನು ನಾವು ಸಂಚಯಿಸಿಕೊಂಡು, ಅದನ್ನು ಇಡಿಯಾಗಿ ಮತ್ತು ವಿಭಾಗಗೊಳ್ಳದಂತೆ ವರ್ತಮಾನಕ್ಕೆ ತಳ್ಳಬೇಕು. ಅಂಥ ಕ್ಷಣಗಳಲ್ಲಿ ನಾವು ನಮ್ಮ ನಿಜವಾದ ಸ್ವಂತಿಕೆಯನ್ನು ಹೊಂದುತ್ತೇವೆ, ಆದರೆ ಅಂಥ ಕ್ಷಣಗಳು ಅಪರೂಪ. ಈ ರೀತಿಯಲ್ಲಿ ಅವಧಿಯು ವಾಸ್ತವತೆಯ ಸತ್ವ, ಅದು ನಿರಂತರ ಆಗುವಿಕೆ, ಯಾವ ಕಾಲಕ್ಕೂ ಏನೂ ಆಗದ್ದು.

ಎಲ್ಲಕ್ಕೂ ಮಿಗಿಲಾಗಿ, ಅವಧಿಯು ಪ್ರದರ್ಶಿತವಾಗುವುದು 'ನೆನಪಿ'ನಲ್ಲಿ, ಯಾಕೆಂದರೆ ಭೂತವು ವರ್ತಮಾನದಲ್ಲಿರುವುದು ನೆನಪಿನಲ್ಲಿಯೇ. ಹೀಗೆ ನೆನಪಿನ ತತ್ವವು ಬರ್ಗ್‌ಸನ್‌ನ ತಾತ್ವಿಕತೆಯಲ್ಲಿ ಬಹು ಮುಖ್ಯವಾದುದಾಗುತ್ತದೆ. 'ಮ್ಯಾಟರ್ ಅಂಡ್ ಮೆಮೊರಿ'ಯ ಕಾಳಜಿಯಿರುವುದು ಮನಸ್ಸು ಮತ್ತು ಭೌತದ್ರವ್ಯಗಳ ಸಂಬಂಧವನ್ನು ವಿವರಿಸುವುದರ ಬಗ್ಗೆ. 'ಮನಸ್ಸು ಮತ್ತು ಭೌತದ್ರವ್ಯಗಳ ಭೇದಕಬಿಂದು'ವೇ ನೆನಪು ಎಂಬ ವಿಶ್ಲೇಷಣೆಯ ಮೂಲಕ ಇವೆರಡೂ ವಾಸ್ತವವಾದುವೇ ಎಂದು ಖಚಿತಪಡಿಸಲಾಗಿದೆ.

ನೆನಪು ಎಂದು ಸಾಮಾನ್ಯವಾಗಿ ಕರೆಯುವುದರಲ್ಲಿ ಎರಡು ಮೂಲಭೂತವಾಗಿ ಭಿನ್ನವಾದ ಅಂಶಗಳಿವೆ; ಇವೆರಡರ ವ್ಯತ್ಯಾಸವನ್ನು ಬರ್ಗ್‌ಸನ್ ಒತ್ತಿ ಹೇಳುತ್ತಾನೆ. 'ಭೂತವು ಎರಡು ವಿಭಿನ್ನ ರೂಪಗಳಲ್ಲಿ ಉಳಿಯುತ್ತದೆ: ಮೊದಲನೆಯದು, ಚಾಲನ ವಿನ್ಯಾಸಗಳಲ್ಲಿ; ಮತ್ತು ಎರಡನೆಯದು, ಸ್ವತಂತ್ರ ಸ್ಮರಣೆಗಳಲ್ಲಿ' ಎಂದವನು ಹೇಳುತ್ತಾನೆ. ಉದಾಹರಣೆಗೆ, ಒಬ್ಬ ವ್ಯಕ್ತಿಯು ಕಂಠಗತವಾದ ಪಠ್ಯವೊಂದನ್ನು ಪುನರುಕ್ತಿಗೊಳಿಸಲು ಸಾಧ್ಯವಾದರೆ ಅವನು ಅದನ್ನು ನೆನಪಿಟ್ಟುಕೊಂಡಿದ್ದಾನೆ ಎನ್ನುತ್ತಾರೆ, ಅಂದರೆ ಹಿಂದಿನ ಕ್ರಿಯೆಯೊಂದನ್ನು ಪುನರಾವರ್ತಿಸುವ ಅಭ್ಯಾಸ ಅಥವಾ ವಿನ್ಯಾಸವನ್ನು ಹೊಂದಿರುವುದು. ಆದರೆ, ಕನಿಷ್ಠ ಪಕ್ಷ ಸೈದ್ಧಾಂತಿಕವಾಗಿ, ಹಿಂದೆ ಓದಿದ ಯಾವುದೇ ಸನ್ನಿವೇಶವನ್ನು ಸ್ಮರಿಸಿಕೊಳ್ಳದೆ ಆ ಪದ್ಯವನ್ನವನು ನೆನಪಿಸಿಕೊಳ್ಳಬಹುದು; ಹೀಗೆ ಈ ನೆನಪಿನ ರೀತಿಯಲ್ಲಿ ಹಿಂದಿನ ಸನ್ನಿವೇಶಗಳ ಪ್ರಜ್ಞಾಪೂರ್ವಕತೆ ಇರುವುದಿಲ್ಲ. ಎರಡನೆಯ ಬಗೆಯೆಂದರೆ, ಅದು ಮಾತ್ರ ನೆನಪು ಎಂದು ಕರೆಸಿಕೊಳ್ಳಲು ಅರ್ಹವಾದದ್ದು, ತಾನು ಪದ್ಯವನ್ನು ಓದಿದ್ದ ಸನ್ನಿವೇಶಗಳನ್ನು ಪ್ರತ್ಯೇಕವಾಗಿ ಸ್ಮರಣೆಗೆ ತಂದುಕೊಂಡು ಅಭಿವ್ಯಕ್ತವಾಗುವುದು. ಇದರಲ್ಲಿ ಅಭ್ಯಾಸದ ಪ್ರಶ್ನೆಯೇ ಇಲ್ಲ, ಯಾಕೆಂದರೆ ತಾನು ಕವನ ಓದಿದ ಪ್ರತಿ ಸನ್ನಿವೇಶವೂ ಒಮ್ಮೆ ಮಾತ್ರ ಸಂಭವಿಸಿರುತ್ತದೆ,

ಹೀಗಾಗಿ ಅವನು ತಕ್ಷಣವೇ ಪ್ರತಿಕ್ರಿಯಿಸಬೇಕು ಎಂದವನು ಭಾವಿಸುತ್ತಾನೆ. ನಮಗೆ ಸಂಭವಿಸಿರುವ ಪ್ರತಿಯೊಂದೂ ಒಂದಲ್ಲ ಒಂದು ಬಗೆಯಲ್ಲಿ ನಮ್ಮ ನೆನಪಿನಲ್ಲಿರುತ್ತದೆಯಾದರೂ ಉಪಯುಕ್ತವಾದುದು ಮಾತ್ರವೇ ಪ್ರಜ್ಞಾಪಾತಳಿಗೆ ಬರುತ್ತದೆ. ನೆನಪಿನ ತೋರ್ಕೆಯ ವೈಫಲ್ಯಗಳು ವಾಸ್ತವವಾಗಿಯೂ ಮನಸ್ಸಿನ ನೆನಪಿನ ಭಾಗದ ವೈಫಲ್ಯಗಳಲ್ಲ, ಅದು ನೆನಪನ್ನು ಕ್ರಿಯೆಯನ್ನಾಗಿಸುವ ಚಾಲನ ವಿನ್ಯಾಸದ ವೈಫಲ್ಯ ಎಂದವನು ವಾದಿಸುತ್ತಾನೆ. ಈ ದೃಷ್ಟಿಕೋನವನ್ನು ಮಿದುಳಿನ ರಚನೆ ಮತ್ತು ಮರೆವುಗಳ ಚರ್ಚೆಯಿಂದ ಸಮರ್ಥಿಸಲಾಗಿದೆ, ಇದರಿಂದ ನಿಜವಾದ ನೆನಪು ಮಿದುಳಿನ ಕಾರ್ಯವಲ್ಲ ಎಂದು ಸಾಧಿಸಲಾಗಿದೆ. ಹಿಂದಿನದನ್ನು ವಸ್ತುವು ಕ್ರಿಯಾತ್ಮಕವಾಗಿಸುತ್ತದೆ, ಮತ್ತು ಮನಸ್ಸು ಕಲ್ಪಿಸಿಕೊಳ್ಳುತ್ತದೆ. ನೆನಪು ಎಂಬುವುದು ಭೌತದ್ರವ್ಯದ ಹೊಮ್ಮುವಿಕೆಯಲ್ಲ; ಹಾಗೆ ನೋಡಿದರೆ, ಭೌತದ್ರವ್ಯವನ್ನು ಮೂರ್ತವಾಗಿ ಪರಿಕಲ್ಪಿಸಿಕೊಂಡರೆ, ಅದು ಒಂದಷ್ಟು ಅವಧಿಯನ್ನು ಆಕ್ರಮಿಸಿಕೊಳ್ಳುತ್ತದೆ ಎಂಬುದನ್ನು ಅರ್ಥಮಾಡಿಕೊಂಡರೆ, ಅದಕ್ಕೆ ವಿರುದ್ಧವಾದುದು ಸತ್ಯಕ್ಕೆ ಹೆಚ್ಚು ಹತ್ತಿರವಾಗುತ್ತದೆ.

'ತಾತ್ವಿಕವಾಗಿ, ನೆನಪು ಎಂಬುದು ಭೌತದ್ರವ್ಯದಿಂದ ಸಂಪೂರ್ಣವಾಗಿ ಸ್ವತಂತ್ರವಾದ ಒಂದು ಸಾಮರ್ಥ್ಯ. ಆಗ, ಸತ್ವವು ವಾಸ್ತವವಾದರೆ, ಅದು ನೆನಪಿನ ವಿದ್ಯಮಾನದಲ್ಲಿರುತ್ತದೆ, ಅದರೊಡನೆ ನಾವು ಪ್ರಯೋಗಾತ್ಮಕವಾಗಿ ಸಂಬಂಧ ಪಡೆಯಬಹುದು.'

ಶುದ್ಧ ನೆನಪಿನ ವಿರುದ್ಧವಾದ ತುದಿಯಲ್ಲಿ ಬರ್ಗ್‌ಸನ್ ಶುದ್ಧ ಗ್ರಹಿಕೆಯನ್ನು ಇರಿಸುತ್ತಾನೆ, ಈ ಬಗ್ಗೆ ಅವನು ಅತಿ-ವಾಸ್ತವ ನಿಲವನ್ನು ಅಳವಡಿಸಿಕೊಳ್ಳುತ್ತಾನೆ. 'ಶುದ್ಧ ಗ್ರಹಿಕೆಯಲ್ಲಿ ನಾವು ನಮಗೆ ಹೊರತಾಗಿರುತ್ತೇವೆ, ತಕ್ಷಣದ ಅಂತರ್ಬೋಧೆಯಿಂದ ವಸ್ತುವಿನ ವಾಸ್ತವತೆಯನ್ನು ಸ್ಪರ್ಶಿಸುತ್ತೇವೆ' ಎಂದವನು ಅಭಿಪ್ರಾಯಪಡುತ್ತಾನೆ. ಹೀಗೆ ಅವನು ಗ್ರಹಿಕೆಯನ್ನು ಅದರ ವಸ್ತುವಿನೊಡನೆ ಸಂಪೂರ್ಣವಾಗಿ ಅನನ್ಯಗೊಳಿಸಿ, ಅದನ್ನು ಮಾನಸಿಕವೇ ಅಲ್ಲ ಎಂದವನು ಪ್ರತಿಪಾದಿಸುತ್ತಾನೆ. 'ಮನಸ್ಸಿನ ಅತ್ಯಂತ ಕೆಳಗಿನ ಹಂತವಾದ ಶುದ್ಧ ಗ್ರಹಿಕೆಯು – ನೆನಪಿಲ್ಲದ ಮನಸ್ಸು – ವಾಸ್ತವವಾಗಿ, ನಾವು ಭೌತವಸ್ತುವನ್ನು ಅರ್ಥಮಾಡಿಕೊಂಡ ರೀತಿಯಲ್ಲಿ, ಶುದ್ಧ ಭೌತವಸ್ತುವಿನ ಭಾಗವೇ' ಎಂಬುದು ಅವನ ನಿಲವು. ಶುದ್ಧ ಗ್ರಹಿಕೆಯು ಸಂಯೋಜನೆಗೊಳ್ಳುವುದು ಮೂಡುತ್ತಿರುವ ಕ್ರಿಯೆಯಿಂದ, ಅದರ ವಾಸ್ತವತೆ ಇರುವುದು ಅದರ ಕ್ರಿಯೆಯಲ್ಲಿ. ಈ ರೀತಿಯಲ್ಲಿ ಗ್ರಹಿಕೆಗೆ ಮಿದುಳು ಪ್ರಸ್ತುತವಾಗುತ್ತದೆ, ಯಾಕೆಂದರೆ ಮಿದುಳು ಕ್ರಿಯೆಯ ಒಂದು ಸಾಧನವಲ್ಲ. ಮಿದುಳಿನ ಕಾರ್ಯವೆಂದರೆ ನಮ್ಮ ಮಾನಸಿಕ ವ್ಯಾಪಾರವನ್ನು ವ್ಯಾವಹಾರಿಕವಾಗಿ ಉಪಯುಕ್ತವಾದುದಷ್ಟಕ್ಕೆ ಮಾತ್ರ ಸೀಮಿತಗೊಳಿಸುವುದು. ಆದರೆ ಮಿದುಳು ಪ್ರತಿಯೊಂದನ್ನೂ ಪರಿಕಲ್ಪಿಸಿಕೊಳ್ಳುತ್ತದೆ ಎಂಬುದು ಸಾಮಾನ್ಯ ತಿಳಿವಳಿಕೆ, ಆದರೆ

ನಾವು ಗ್ರಹಿಸುವುದು ನಮಗೆ ಆಸಕ್ತಿದಾಯಕವಾದುದನ್ನು ಮಾತ್ರ. 'ಸದಾ ಕ್ರಿಯೆಯತ್ತ ಮುಖಮಾಡಿರುವ ದೇಹಕ್ಕೆ, ಸಾರವತ್ತಾದ ಕಾರ್ಯವೆಂದರೆ, ಕ್ರಿಯೆಯ ದೃಷ್ಟಿಯಿಂದ, ಸತ್ವದ ಬದುಕಿಗೆ ಮಾತ್ರ ತನ್ನನ್ನು ಸೀಮಿತಗೊಳಿಸಿಕೊಳ್ಳುವುದು.' ಹಾಗೆ ನೋಡಿದರೆ, ಅದು ಆಯ್ಕೆಯ ಒಂದು ಸಾಧನ.

ಈ ಮೇಲಿನ ರೂಪುರೇಷೆಯಲ್ಲಿ, ಬರ್ಗ್‌ಸನ್‌ನ ದೃಷ್ಟಿಕೋನವನ್ನು ಮಂಡಿಸಲಷ್ಟೇ ನಾನು ಪ್ರಯತ್ನಿಸಿದ್ದೇನೆಯೇ ಹೊರತು ತಮ್ಮ ಸತ್ಯತೆಯ ಸಮರ್ಥನೆಗೆ ಅವನು ನೀಡುವ ಕಾರಣಗಳನ್ನು ನೀಡಿಲ್ಲ. ಬಹುತೇಕ ತತ್ವಜ್ಞಾನಿಗಳ ವಿಷಯದಲ್ಲಿಗಿಂತ ಇದು ಹೆಚ್ಚು ಸುಲಭ, ಯಾಕೆಂದರೆ ಅವನು ತನ್ನ ಅಭಿಪ್ರಾಯಗಳಿಗೆ ಯಾವುದೇ ಕಾರಣಗಳನ್ನು ನೀಡುವುದಿಲ್ಲ, ಅವುಗಳಲ್ಲಿ ಅಂತರ್ಗತವಾದ ಆಕರ್ಷಣೆ ಮತ್ತು ಸುಂದರ ಶೈಲಿಗಳನ್ನು ನಚ್ಚಿಕೊಳ್ಳುತ್ತಾನೆ. ಜಾಹೀರಾತುದಾರರಂತೆ ಅವನು ಆಧರಿಸುವುದು ಚಿತ್ರವತ್ತಾದ ಮತ್ತು ವೈವಿಧ್ಯಪೂರ್ಣವಾದ ಹೇಳಿಕೆಯನ್ನು ಮತ್ತು ಅನೇಕ ಸಂದಿಗ್ಧ ವಿಷಯಗಳ ವಿವರಣೆಯನ್ನು. ಇಡೀ ಪ್ರಕ್ರಿಯೆಯ ಹೆಚ್ಚಿನ ಭಾಗವನ್ನು ದೃಷ್ಟಾಂತಗಳು ಮತ್ತು ಹೋಲಿಕೆಗಳು ಆವರಿಸುತ್ತವೆ, ಆ ಮೂಲಕವೇ ಅವನು ತನ್ನ ದೃಷ್ಟಿಕೋನವನ್ನು ಓದುಗರಿಗೆ ತಲುಪಿಸಲು ಪ್ರಯತ್ನಿಸುತ್ತಾನೆ. ಅವನ ಕೃತಿಗಳಲ್ಲಿ ಕಾಣಬರುವ ಜೀವನವನ್ನು ಕುರಿತಾದ ಹೋಲಿಕೆಗಳು ನನಗೆ ಗೊತ್ತಿರುವ ಯಾವುದೇ ಕವಿಯಲ್ಲಿನ ಹೋಲಿಕೆಗಳನ್ನು ಸಂಖ್ಯೆಯಲ್ಲಿ ಮೀರಿಸುತ್ತವೆ. ಜೀವನವೆಂಬುದು, ಚೂರುಗಳಾಗಿ ಒಡೆದು ಮತ್ತೆ ಚಿಪ್ಪುಗಳಾಗುವ ಚಿಪ್ಪಿನಂತೆ ಎನ್ನುತ್ತಾನೆ. ಅದು ಒಂದೆ ತೆನೆಯಂತೆ. ಮೊದಲಿಗೆ, ಅದು 'ತರಕಾರಿಗಳ ಹಸಿರು ಭಾಗಗಳಲ್ಲಿ ವಿಶಿಷ್ಟವಾಗಿರುವಂತೆ ಕೋಶದಲ್ಲಿ ಸಂಗ್ರಹಗೊಳ್ಳುವ ಪ್ರವೃತ್ತಿ'. ಆದರೆ ಈ ಕೋಶವನ್ನು ಹಬೆಯಾಡುವ ಮರಳುವ ನೀರಿನಿಂದ ತುಂಬಬೇಕು; 'ನಿಲ್ಲದ ರೀತಿಯಲ್ಲಿ ಧಾರೆಯಾಗಿ ಚಿಮ್ಮುತ್ತಿರಬೇಕು, ಅವುಗಳಲ್ಲಿ ಕೆಳಗೆ ಬಿದ್ದ ಪ್ರತಿಯೊಂದೂ ಒಂದು ಜಗತ್ತು.' ಮತ್ತೆ 'ಜೀವನವು ತನ್ನ ಸಮಗ್ರತೆಯಲ್ಲಿ ಒಂದು ಎತ್ತರವಾದ ಅಲೆಯಂತೆ ಕಾಣಿಸಿಕೊಳ್ಳುತ್ತದೆ, ಅದು ಮಧ್ಯದಿಂದ ಆರಂಭವಾಗಿ ಹೊರಕ್ಕೆ ಹರಡಿಕೊಳ್ಳುತ್ತದೆ, ಮತ್ತು ತನ್ನ ಇಡೀ ಪರಿಧಿಯ ಮೇಲೆ ತಡೆಯೊಡ್ಡಿ ಆಂದೋಲನವನ್ನಾಗಿ ಮಾರ್ಪಡಿಸುತ್ತದೆ: ಒಂದೇ ಬಿಂದುವಿನಲ್ಲಿ ತಡೆಯುವ ಬಲವಾಗಿದ್ದು ಚಿಮ್ಮಿಕೆಯು ಸುಲಲಿತವಾಗಿ ಹರಡುತ್ತದೆ.' ಆನಂತರ ಜೀವನವನ್ನು ರಾವುತ ದಳದ ಆವೇಶಕ್ಕೆ ಹೋಲಿಸಲಾದ ಪರಾಕಾಷ್ಠೆಯಿದೆ. 'ದುರ್ಬಲವಾದುದರಿಂದ ಉನ್ನತವಾದುದರವರೆಗೂ, ಎಲ್ಲ ಸಂಘಟಿತ ಜೀವಿಗಳು, ಜೀವದ ಮೊದಲ ಆವಿಷ್ಕಾರದಿಂದ ಮೊದಲುಗೊಂಡು ನಾವಿರುವ ಕಾಲದವರೆಗೂ, ಮತ್ತು ಎಲ್ಲ ಜಾಗಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ, ಒಂದೇ ಚಿಮ್ಮಿಕೆಯನ್ನು ತೋರಿಸುತ್ತವೆ, ಅದೆಂದರೆ ಭೌತದ್ರವ್ಯದ ವ್ಯತಿರಿಕ್ತ ಚಲನೆ, ಮತ್ತು ತಾನೇ ಅವಿಭಕ್ತವಾಗಿ. ಎಲ್ಲ ಜೀವಗಳೂ ಒಟ್ಟಿಗೇ ಇರುತ್ತವೆ, ಮತ್ತು ಎಲ್ಲವೂ ಒಂದೇ ಚಿಮ್ಮಿಕೆಗೆ ಒಳಗಾಗುತ್ತವೆ.

ಪ್ರಾಣಿಯು ಸಸ್ಯದ ಮೇಲೆ ಅವಲಂಬಿಸುತ್ತದೆ, ಮನುಷ್ಯ ಪ್ರಾಣಿತನದ ಮೇಲೆ ಸವಾರಿ ಮಾಡುತ್ತಾನೆ, ಮತ್ತು ಇಡೀ ಮನುಸಂಕುಲವು, ಅವಕಾಶ ಮತ್ತು ಕಾಲಗಳಲ್ಲಿ, ಅಕ್ಕಪಕ್ಕದಲ್ಲಿ ಮತ್ತು ಹಿಂದೆ ಧಾವಿಸುತ್ತಿರುವ ಮಹಾ ಸೈನ್ಯ, ಅಲ್ಲಿನ ಪ್ರತಿಯೊಬ್ಬನೂ ಯಾವುದೇ ತಡೆಯನ್ನು ಮೀರುವಷ್ಟು ಆವೇಶವನ್ನು ಹೊಂದಿದ್ದು ಅಡ್ಡಿಗಳನ್ನು, ಪ್ರಾಯಶಃ ಸಾವನ್ನು ಕೂಡ, ಸೋಲಿಸುತ್ತದೆ.'

ಆದರೆ ತನ್ನನ್ನು ಕೇವಲ ನೋಡುಗನೆಂದು ಭಾವಿಸುವ, ಪ್ರಾಣಿಯ ಮೇಲೆ ಸವಾರಿಮಾಡುವ ಮನುಷ್ಯನ ಬಗ್ಗೆ ಸಹಾನುಭೂತಿ ಹೊಂದಿರದ, ನಿರ್ಭಾವುಕ ವಿಮರ್ಶಕನು, ಪ್ರಶಾಂತವೂ ಜಾಗೃತವಾದುದೂ ಆದ ಚಿಂತನೆಗೆ ಈ ಪರಿಯ ಅಭಿವ್ಯಕ್ತಿಯು ಸಾಟಿಯಾಗಲಾರದು ಎಂದು ಆಲೋಚಿಸಬಹುದು. ಚಿಂತನೆಯು ಕ್ರಿಯೆಯ ಸಾಧನ ಮಾತ್ರ ಎಂದವನು ಹೇಳಿದಾಗ, ಮೈದಾನದಲ್ಲಿ ಅಡ್ಡಿಗಳನ್ನು ಆವೇಶವೇ ನಿವಾರಿಸುತ್ತದೆ ಎಂದಾಗ, ಅದು ರಾವುತ ದಳಪತಿಯ ದೃಷ್ಟಿಕೋನವಾಗಬಹುದೇ ಹೊರತು ತತ್ವಜ್ಞಾನಿಯದಾಗಲಾರದು; ಎಷ್ಟೇ ಆದರೂ ಅವನ ಕೆಲಸವು ಚಿಂತನೆಗೆ ಸಂಬಂಧಪಟ್ಟದ್ದು: ಭಾವೋದ್ವೇಗ ಮತ್ತು ಚಲನೆಯ ತೀವ್ರತೆಯಲ್ಲಿ ವೈಚಾರಿಕತೆಯ ಮೃದು ಸಂಗೀತಕ್ಕೆ ಆಸ್ಪದವಿಲ್ಲ, ರಭಸದ ಬದಲು ವಿಶ್ವದ ಔನ್ನತ್ಯವು ಪ್ರತಿಬಿಂಬಗೊಳ್ಳುವ ಶ್ರೇಷ್ಠತೆಯನ್ನು ಕಾಣುವ ಅನಾಸಕ್ತ ಧ್ಯಾನಕ್ಕೆ ವ್ಯವಧಾನವಿಲ್ಲ. ಅಂತಹ ಸನ್ನಿವೇಶದಲ್ಲಿ, ಜಗತ್ತಿನ ಬಗೆಗಿನ ಅಂತಹ ಅವಿಶ್ರಾಂತ ದೃಷ್ಟಿಕೋನವನ್ನು ಒಪ್ಪಲು ಏನಾದರೂ ಕಾರಣಗಳಿವೆಯೇ ಎಂದವನು ಕೇಳುವ ತುಡಿತವುಂಟಾಗಬಹುದು. ಅವನು ಇಂಥ ಪ್ರಶ್ನೆಯನ್ನು ಕೇಳಿದರೆ, ನಾನು ತಪ್ಪು ತಿಳಿಯದಿದ್ದರೆ, ಅವನಿಗೆ ಅರಿವಾಗುವುದು ವಿಶ್ವದಲ್ಲಾಗಲೀ ಎಂ. ಬರ್ಗ್‌ಸನ್‌ನ ದೃಷ್ಟಿಕೋನದಲ್ಲಾಗಲೀ ಇದನ್ನು ಒಪ್ಪಲು ಯಾವುದೇ ಕಾರಣವಿಲ್ಲ ಎಂಬುದು.

ಬರ್ಗ್‌ಸನ್‌ನದರಂತಹ ಬೌದ್ಧಿಕವಿರೋಧಿ ತತ್ವಜ್ಞಾನದ ಕೆಟ್ಟ ಪರಿಣಾಮಗಳಲ್ಲಿ ಒಂದೆಂದರೆ, ಅದು ಬೌದ್ಧಿಕತೆಯ ದೋಷಗಳು ಮತ್ತು ಗೊಂದಲಗಳಿಂದಾಗಿ ಉಳಿದುಕೊಳ್ಳುತ್ತದೆ ಎಂಬುದು. ಹೀಗಾಗಿ ಅದು ಒಳ್ಳೆಯದಕ್ಕಿಂತ ಕೆಟ್ಟ ಆಲೋಚನೆಗಳಿಗೆ ಎಡೆ ಮಾಡಿಕೊಡುತ್ತದೆ, ತಾತ್ಕಾಲಿಕ ಕಷ್ಟವನ್ನು ಅಪರಿಹಾರ್ಯ ಎಂದು ಬಿಂಬಿಸುತ್ತದೆ, ಮತ್ತು ಕ್ಷುಲ್ಲಕ ತಪ್ಪು ಬೌದ್ಧಿಕತೆಯ ದಿವಾಳಿತನದ ಪ್ರತೀಕ ಮತ್ತು ಅಂತರ್ಬೋಧೆಯ ಜಯಭೇರಿ ಎಂದು ಪರಿಗಣಿಸುತ್ತದೆ. ಬರ್ಗ್‌ಸನ್‌ನ ಕೃತಿಗಳಲ್ಲಿ ಗಣಿತ ಮತ್ತು ವಿಜ್ಞಾನಗಳ ಉಲ್ಲೇಖಗಳು ಬರುತ್ತವೆ, ಅಜಾಗರೂಕ ಓದುಗನ ಮನಸ್ಸಿನಲ್ಲಿ ಅವು ಅವನ ತಾತ್ವಿಕತೆಯನ್ನು ಪುಷ್ಟಿಗೊಳಿಸುವಂತೆ ಕಾಣಿಸಬಹುದು. ವಿಜ್ಞಾನಕ್ಕೆ ಸಂಬಂಧಿಸಿದಂತೆ, ಅದರಲ್ಲೂ ಜೀವವಿಜ್ಞಾನ ಮತ್ತು ದೇಹರಚನಾವಿಜ್ಞಾನಗಳು, ಅವನ ವ್ಯಾಖ್ಯಾನಗಳನ್ನು ವಿಮರ್ಶಿಸುವ ಅರ್ಹತೆ ನನಗಿಲ್ಲ. ಆದರೆ ಗಣಿತಕ್ಕೆ ಸಂಬಂಧಿಸಿದಂತೆ, ಹಿಂದಿನಿಂದ ಬಂದ ದೋಷಗಳನ್ನೂ

ವ್ಯಾಖ್ಯಾನಗಳನ್ನೂ ಅವನು ನಚ್ಚಿಕೊಳ್ಳುತ್ತಾನೆಯೇ ಹೊರತು, ಕಳೆದ ಎಂಟು ವರ್ಷಗಳಲ್ಲಿ ಗಣಿತಜ್ಞರಲ್ಲಿ ಪ್ರಚಲಿತವಾಗಿರುವ ಹೆಚ್ಚು ಆಧುನಿಕವಾದವುಗಳನ್ನಲ್ಲ. ಈ ವಿಷಯದಲ್ಲಿ, ಅವನೂ ಬಹುತೇಕ ತತ್ವಜ್ಞಾನಿಗಳ ದಾರಿಯನ್ನೇ ಹಿಡಿದಿದ್ದಾನೆ. ಹದಿನೆಂಟನೇ ಮತ್ತು ಹತ್ತೊಂಬತ್ತನೇ ಶತಮಾನದ ಮೊದಲಲ್ಲಿನ ಅನಂತಸೂಕ್ಷ್ಮ ಕಲನವಿಜ್ಞಾನ (ಇನ್‌ಫಿನಿಟೆಸಿಮಲ್ ಕ್ಯಾಲ್‌ಕ್ಯುಲಸ್), ಒಂದು ಒಳ್ಳೆಯ ವಿಧಾನವಾಗಿ ರೂಪುಗೊಂಡಿದ್ದರೂ, ತನ್ನ ತಳಹದಿಗಳಿಗಾಗಿ ಅದು ಅನೇಕ ಭ್ರಮೆಗಳನ್ನೂ ಗೊಂದಲಮಯ ಚಿಂತನೆಗಳನ್ನೂ ಆಧರಿಸಿತು. ಹೆಗೆಲ್ ಮತ್ತವನ ಅನುಯಾಯಿಗಳು ಈ ಭ್ರಮೆಗಳನ್ನೂ ಗೊಂದಲಗಳನ್ನೂ ನಂಬಿಕೊಂಡು, ಎಲ್ಲ ಗಣಿತವೂ ಸ್ವವಿರೋಧಿ ಎಂದು ಸಾಬೀತುಪಡಿಸಲು ಪ್ರಯತ್ನಿಸಿದರು. ಆನಂತರ ಈ ವಿಷಯಗಳ ಬಗೆಗಿನ ಹೆಗೆಲಿಯನ್ ವಿವರಣೆಯು ತತ್ವಜ್ಞಾನಿಗಳ ಪ್ರಚಲಿತ ಚಿಂತನಕ್ರಮದಲ್ಲಿ ಸೇರಿಹೋಯಿತು, ತತ್ವಜ್ಞಾನಿಗಳು ಆಧರಿಸಿದ್ದ ತೊಡಕುಗಳನ್ನು ಗಣಿತಜ್ಞರು ನಿವಾರಿಸಿದ ಮೇಲೂ ದೀರ್ಘ ಕಾಲ ಅದು ಹಾಗೆಯೇ ಉಳಿದುಕೊಂಡು ಬಂತು. ನಾವು ಹೆಗೆಲಿಯನ್‌ರಾಗಿದ್ದರೆ ವೈಚಾರಿಕತೆಯ ಹೆಸರಿನಲ್ಲಿ ಮೂರ್ಖರ ಪೂರ್ವಾಗ್ರಹಗಳನ್ನೂ, ಅಥವಾ ನಾವು ಬರ್ಗ್‌ಸನ್‌ವಾದಿಗಳಾಗಿದ್ದರೆ 'ಅಂತರ್ಬೋಧೆ'ಯನ್ನೂ ಎಲ್ಲಿಯವರೆಗೆ ಆರಾಧಿಸುತ್ತಿರುತ್ತೇವೋ, ಮತ್ತು ತತ್ವಜ್ಞಾನಿಗಳು ಹೆಗೆಲ್ ಲಾಭ ಪಡೆದ ದೋಷಗಳನ್ನು ಗಣಿತಜ್ಞರು ಸರಿಪಡಿಸಲು ಹೆಣಗಿರುವುದರ ಬಗ್ಗೆ ಎಲ್ಲಿಯವರೆಗೆ ಅಜ್ಞಾನಿಗಳಾಗಿರುತ್ತಾರೆಯೋ, ಅಲ್ಲಿಯವರೆಗೆ ತತ್ವಜ್ಞಾನಿಗಳ ಮುಖ್ಯ ಉದ್ದೇಶವು ತಾಳ್ಮೆ ಮತ್ತು ಸವಿವರವಾದ ಚಿಂತನೆಯಿಲ್ಲದೆ ಏನನ್ನೂ ಕಲಿಯಲು ಸಾಧ್ಯವಿಲ್ಲ ಎಂಬುದಾಗಿರಬೇಕು.

ನಾವು ಈಗಾಗಲೇ ಪರಿಶೀಲಿಸಿರುವ ಸಂಖ್ಯೆಯ ಪ್ರಶ್ನೆಯನ್ನು ಬಿಟ್ಟು, ಬರ್ಗ್‌ಸನ್ ಗಣಿತವನ್ನು ಆಧರಿಸುವ ಪ್ರಮುಖ ಅಂಶವೆಂದರೆ ಅವನು ಹೇಳುವ ಜಗತ್ತಿನ 'ಸಿನಿಮಾಟೋಗ್ರಾಫಿಕ್' ಪ್ರತಿಬಿಂಬವನ್ನು ತಿರಸ್ಕರಿಸುವುದು. ಗಣಿತವು ಪರಿಸ್ಥಿತಿಗಳ ಸರಣಿಯಿಂದ ಘಟಿತವಾದ ಬದಲಾವಣೆಯನ್ನು, ನಿರಂತರ ಬದಲಾವಣೆಯನ್ನು ಕೂಡ, ಕಲ್ಪಿಸಿಕೊಳ್ಳುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಬರ್ಗ್‌ಸನ್ ನಿರಂತರವಾದುದನ್ನು ಯಾವುದೇ ಪರಿಸ್ಥಿತಿಗಳ ಸರಣಿಯೂ ಪ್ರತಿನಿಧಿಸಲಾರದು, ಮತ್ತು ಬದಲಾವಣೆಯಲ್ಲಿ ಯಾವುದೇ ವಸ್ತುವು ಯಾವುದೇ ಪರಿಸ್ಥಿತಿಯಲ್ಲಿರುವುದಿಲ್ಲ ಎಂದು ವಾದಿಸುತ್ತಾನೆ. ಬದಲಾವಣೆಯು ಪರಿಸ್ಥಿತಿಗಳ ಸರಣಿಯಿಂದ ಘಟಿತವಾಗಿರುತ್ತದೆ ಎಂಬುವ ದೃಷ್ಟಿಕೋನವನ್ನವನು 'ಸಿನಿಮಾಟೋಗ್ರಾಫಿಕ್' ಎನ್ನುತ್ತಾನೆ; ಈ ದೃಷ್ಟಿಕೋನವು ಬೌದ್ಧಿಕತೆಗೆ ಸಹಜವಾದರೂ ತೀವ್ರವಾಗಿ ವಿಷಮವಾದದ್ದು. ನಿಜವಾದ ಬದಲಾವಣೆಯನ್ನು ನಿಜವಾದ ಅವಧಿಯಲ್ಲಿ ಮಾತ್ರವೇ ವಿವರಿಸಬಹುದು; ಅದು ಭೂತ ಮತ್ತು ವರ್ತಮಾನಗಳ ವ್ಯಾಖ್ಯಾನವನ್ನು

ಒಳಗೊಳ್ಳಬೇಕೇ ಹೊರತು ಗಣಿತದ ಪರಿಸ್ಥಿತಿಗಳ ಸ್ಥಿರ ಸರಣಿಯನ್ನಲ್ಲ. ಇದನ್ನು ಜಗತ್ತಿನ ಬಗೆಗಿನ 'ಸ್ಥಿರ'ದ ಬದಲಾಗಿ 'ಸಕ್ರಿಯ' ದೃಷ್ಟಿಕೋನ ಎನ್ನುತ್ತಾರೆ. ಈ ಪ್ರಶ್ನೆಯು ಮುಖ್ಯವಾದುದು, ಅದು ಕ್ಲಿಷ್ಟವಾಗಿದ್ದರೂ ನಾವದನ್ನು ಬಿಡಲು ಸಾಧ್ಯವಿಲ್ಲ.

ಬರ್ಗ್‌ಸನ್‌ನ ಅವಧಿಯ ಸಿದ್ಧಾಂತವು ಅವನ ನೆನಪಿನ ಸಿದ್ಧಾಂತದೊಡನೆ ಸೇರಿಕೊಂಡಿದೆ. ಈ ಸಿದ್ಧಾಂತದ ಪ್ರಕಾರ, ಸ್ಮರಿಸಿಕೊಂಡ ವಸ್ತುಗಳು ನೆನಪಿನಲ್ಲಿ ಉಳಿದಿರುತ್ತವೆ, ಹೀಗೆ ಅವು ವರ್ತಮಾನದ ವಿಷಯಗಳೊಡನೆ ಬೆರೆಯುತ್ತವೆ: ಭೂತ ಮತ್ತು ವರ್ತಮಾನ ಒಂದಕ್ಕೊಂದು ಬಾಹ್ಯವಾದವಲ್ಲ, ಅವು ಪ್ರಜ್ಞೆಯ ಐಕ್ಯದಲ್ಲಿ ಬೆರೆತಿವೆ. ಕ್ರಿಯೆಯು ಜೀವಿಯನ್ನು ರೂಪಿಸುತ್ತದೆ ಎಂದವನು ಹೇಳುತ್ತಾನೆ; ಆದರೆ ಗಣಿತಾತ್ಮಕ ಕಾಲವು ನೇತ್ಯಾತ್ಮಕ ಪಾತ್ರೆ, ಅದು ಏನನ್ನೂ ಮಾಡುವುದಿಲ್ಲ, ಹಾಗಾಗಿ ಇಲ್ಲವೇ ಇಲ್ಲ. ಭೂತ ಎಂದರೆ ಇನ್ನು ಮುಂದೆ ಕ್ರಿಯಾತ್ಮಕವಾಗಿಲ್ಲದುದು, ಮತ್ತು ವರ್ತಮಾನವು ಕ್ರಿಯಾಶೀಲವಾಗಿರುವುದು ಎಂದವನು ಹೇಳುತ್ತಾನೆ. ಆದರೆ ಈ ಹೇಳಿಕೆಯಲ್ಲಿ, ಅಷ್ಟೇ ಏಕೆ ಅವಧಿಯ ಬಗೆಗಿನ ವಿವರಣೆ ಪೂರ್ತಿ, ಬರ್ಗ್‌ಸನ್ ಅಪ್ರಜ್ಞಾಪೂರ್ವಕವಾಗಿ ಸಾಮಾನ್ಯ ಗಣಿತಾತ್ಮಕ ಕಾಲವನ್ನು ಊಹಿಸಿಕೊಳ್ಳುತ್ತಿರುತ್ತಾನೆ. ಇದಿಲ್ಲದೆ ಅವನ ಹೇಳಿಕೆಗಳು ಅರ್ಥಹೀನ. 'ಭೂತವು ಸಾರತಃ ಇನ್ನು ಮುಂದೆ ಕ್ರಿಯಾತ್ಮಕವಾಗಿಲ್ಲದುದು' (ಅಕ್ಷರಗಳ ಓರೆ ಅವನದೇ) ಎಂದವನು ಹೇಳುವುದರ, ಯಾವುದರ ಕ್ರಿಯೆಯ ಹಿಂದಿನದೋ ಅದು ಭೂತ ಎನ್ನುವುದರ ಹೊರತಾಗಿ, ಅರ್ಥವೇನು? 'ಇನ್ನು ಮುಂದೆ ಇಲ್ಲದಿರುವುದು' ಎಂಬುದು ಭೂತವನ್ನು ಸೂಚಿಸುವ ಶಬ್ದಗಳು. ವರ್ತಮಾನಕ್ಕೆ ಹೊರತಾದುದು ಎಂಬ ಭೂತದ ಸಾಮಾನ್ಯ ಕಲ್ಪನೆಯಿಲ್ಲದ ವ್ಯಕ್ತಿಯ ಮಟ್ಟಿಗೆ ಈ ಶಬ್ದಗಳಿಗೆ ಅರ್ಥವೇ ಇಲ್ಲ. ಹೀಗಾಗಿ ಅವನ ವ್ಯಾಖ್ಯೆಯು ಚಕ್ರೀಯವಾದುದು. ಒಟ್ಟಾರೆ ಅವನು ಹೇಳುವುದು 'ಯಾವುದರ ಕ್ರಿಯೆಯು ಹಿಂದೆ ಇತ್ತೋ ಅದೇ ಭೂತ'. ಒಂದು ವ್ಯಾಖ್ಯೆಯಾಗಿ, ಇದನ್ನೊಂದು ಸಾರ್ಥಕ ಪ್ರಯತ್ನ ಎನ್ನಲಾಗುವುದಿಲ್ಲ. ವರ್ತಮಾನ ಎಂಬುದು ವರ್ತಮಾನದ ವಿಷಯದಲ್ಲಿಯೂ ಇದೇ ಅನ್ವಯಿಸುತ್ತದೆ. ವರ್ತಮಾನ ಎಂಬುದು 'ಕ್ರಿಯಾಶೀಲವಾಗಿರುವುದು' (ಅಕ್ಷರಗಳ ಓರೆ ಅವನದೇ) ಎನ್ನುತ್ತಾನೆ. ಆದರೆ 'ಇದು' ಎಂಬುದು ವ್ಯಾಖ್ಯೆಗೊಳಪಡಿಸಬೇಕಾಗಿದ್ದ ವರ್ತಮಾನದ ಕಲ್ಪನೆಯನ್ನು ಮುಂದಿಡುತ್ತದೆ. ವರ್ತಮಾನ ಎಂಬುದು ಹಿಂದೆ ಕ್ರಿಯಾಶೀಲವಾಗಿದ್ದುದಕ್ಕೆ ಅಥವಾ ಮುಂದೆ ಕ್ರಿಯಾಶೀಲವಾಗಿರುವುದಕ್ಕೆ ವ್ಯತಿರಿಕ್ತವಾಗಿ 'ಕ್ರಿಯಾಶೀಲವಾಗಿರುವುದು'. ಅಂದರೆ, ವರ್ತಮಾನ ಎಂಬುದು ಯಾವುದರ ಕ್ರಿಯಾಶೀಲತೆಯು, ಭೂತ ಅಥವಾ ಭವಿಷ್ಯದಲ್ಲಿ ಅಲ್ಲದೆ, ವರ್ತಮಾನದಲ್ಲಿದೆಯೋ ಅದು. ಮತ್ತೆ ಈ ವ್ಯಾಖ್ಯೆಯು ಚಕ್ರೀಯವಾಗಿದೆ. ಅದೇ ಪುಟದಲ್ಲಿನ ಹಿಂದಿನ ಒಂದು ಭಾಗದಲ್ಲಿ ಈ ಭ್ರಮೆಯನ್ನು ಮತ್ತಷ್ಟು ನಿದರ್ಶಿಸುತ್ತದೆ. 'ನಮ್ಮ ಶುದ್ಧಗ್ರಹಿಕೆಯನ್ನು ರೂಪಿಸಿರುವುದು ನಮ್ಮ

ಕ್ರಿಯೆಯ ಉದಯಸ್ಥಿತಿ .. .. ನಮ್ಮ ಗ್ರಹಿಕೆಯ ವಾಸ್ತವತೆಯು ಹೀಗೆ ತನ್ನ ಕ್ರಿಯೆಯಲ್ಲಿ, ಅದನ್ನು ಮುಂದುವರಿಸುವ ಚಲನೆಗಳಲ್ಲಿ, ಇರುತ್ತದೆಯೇ ಹೊರತು ಹೆಚ್ಚಿನ ತೀವ್ರತೆಯಲ್ಲಲ್ಲ: ಭೂತ ಎಂಬುದು ಒಂದು ಕಲ್ಪನೆ, ವರ್ತಮಾನ ಎಂಬುದು ಅಪ್ರಜ್ಞಾಪೂರ್ವಕ ಚಲನೆ (ಐಡಿಯೋ-ಮೋಟಾರ್)'. ಈ ಭಾಗವು ಸ್ಪಷ್ಟಪಡಿಸುವುದೇನೆಂದರೆ, ಬರ್ಗ್‌ಸನ್ ಭೂತದ ಬಗ್ಗೆ ಮಾತನಾಡುವಾಗ, ಅವನ ಮನಸ್ಸಿನಲ್ಲಿ ಭೂತ ಎಂಬ ಅರ್ಥ ಇರುವುದಿಲ್ಲ, ಅದರ ಬದಲು ಇರುವುದು ಭೂತದ ಬಗೆಗಿನ ವರ್ತಮಾನದ ನೆನಪು. ತಾನು ಅಸ್ತಿತ್ವದಲ್ಲಿದ್ದಾಗ ಭೂತವು ವರ್ತಮಾನವು ಈಗಿರುವಂತೆಯೇ ಕ್ರಿಯಾಶೀಲವಾಗಿತ್ತು; ಬರ್ಗ್‌ಸನ್‌ನ ವಿವರಣೆಯು ಸಮರ್ಪಕವಾಗಿದ್ದರೆ, ವರ್ತಮಾನದ ಕ್ಷಣವು ಮಾತ್ರವೇ ಇಡೀ ಜಗತ್ತಿನ ಇತಿಹಾಸದಲ್ಲಿ ಕ್ರಿಯಾಶೀಲವಾದುದು. ಹಿಂದಿನ ಕಾಲಗಳಲ್ಲಾದರೆ ಬೇರೆ ಗ್ರಹಿಕೆಗಳಿದ್ದವು, ನಮ್ಮ ವರ್ತಮಾನದ ಗ್ರಹಿಕೆಗಳಷ್ಟೇ ಕ್ರಿಯಾಶೀಲವಾದ ಮತ್ತು ವಾಸ್ತವವಾದ ರೀತಿಯಲ್ಲಿ; ಅದರ ಕಾಲದಲ್ಲಿ, ಭೂತವು ಕೇವಲ ಕಲ್ಪನೆಗಳಾಗಿರಲಿಲ್ಲ, ವರ್ತಮಾನದವುಗಳಂತೆಯೇ ತನ್ನ ಅಂತರ್ಗತ ಲಕ್ಷಣವನ್ನೊಳಗೊಂಡಿತ್ತು. ಆದರೆ ಈ ವಾಸ್ತವ ಭೂತವನ್ನು ಬರ್ಗ್‌ಸನ್ ಸುಮ್ಮನೆ ಮರೆತುಬಿಡುತ್ತಾನೆ; ಅವನು ಮಾತನಾಡುವುದು ಭೂತದ ಬಗೆಗಿನ ವರ್ತಮಾನದ ಕಲ್ಪನೆಯ ಬಗ್ಗೆ. ನಿಜವಾದ ಭೂತವು ವರ್ತಮಾನದೊಡನೆ ಮಿಳಿತವಾಗುವುದೇ ಇಲ್ಲ, ಯಾಕೆಂದರೆ ಅದು ಅದರ ಭಾಗವೇ ಅಲ್ಲ; ಅದರೆ ಅದು ಬೇರೆಯದೇ ವಿಷಯ.

ಅವಧಿ ಮತ್ತು ಕಾಲಗಳ ಕುರಿತ ಬರ್ಗ್‌ಸನ್‌ನ ಇಡೀ ಸಿದ್ಧಾಂತವು, ಸಂಪೂರ್ಣವಾಗಿ ಸ್ಮರಣೆಯ ವರ್ತಮಾನದ ಸಂಭವ ಮತ್ತು ಸ್ಮರಿಸಿಕೊಂಡ ಭೂತದ ಸಂಭವಗಳ ನಡುವಣ ಗೊಂದಲದ ಮೇಲೆಯೇ ಸಾಗುತ್ತದೆ. ಕಾಲ ಎಂಬುದು ನಮಗೆ ಪರಿಚಿತವಲ್ಲ ಎಂಬ ವಸ್ತುಸ್ಥಿತಿಯ ಹೊರತಾಗಿ, ಭೂತವನ್ನು ಇನ್ನು ಕ್ರಿಯಾಶೀಲವಾಗಿಲ್ಲದಿರುವುದು ಎಂದು ಸಾಧಿಸುವ ಅವನ ಪ್ರಯತ್ನದಲ್ಲಿನ ವಿಷಚಕ್ರವು ಒಮ್ಮೆಗೇ ಎದ್ದು ಕಾಣುತ್ತದೆ. ಅದರ ಸ್ವರೂಪದಲ್ಲಿ, ಬರ್ಗ್‌ಸನ್ ನೀಡಿರುವುದು ಗ್ರಹಿಕೆ ಮತ್ತು ಸ್ಮರಣೆಗಳ ವ್ಯತ್ಯಾಸದ ವಿವರಣೆ – ಎರಡೂ ವರ್ತಮಾನದ ವಾಸ್ತವಗಳು – ತಾನು ನೀಡಿದ್ದೇನೆಂದು ಅವನು ಭಾವಿಸುವುದು ಮಾತ್ರ ಭೂತ ಮತ್ತು ವರ್ತಮಾನಗಳ ನಡುವಣ ವ್ಯತ್ಯಾಸ ಎಂಬುದು. ಈ ಗೊಂದಲವನ್ನು ಪರಿಹರಿಸಿಕೊಂಡಾಗ, ಅವನ ಕಾಲ ಸಿದ್ಧಾಂತವು ಕಾಲವನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟ ಸಿದ್ಧಾಂತವಾಗಿ ತೋರುತ್ತದೆ.

ಬರ್ಗ್‌ಸನ್‌ನ ತಾತ್ವಿಕತೆಯ ಬಹು ಪಾಲು – ಅವುಗಳ ಮೇಲೆಯೇ ಅವನ ಜನಪ್ರಿಯತೆ ನಿಂತಿರುವುದು – ವಾದಗಳ ಮೇಲೆ ನಿಂತಿಲ್ಲ, ಹೀಗಾಗಿ ವಾದದಿಂದ ಅಲ್ಲಗಳೆಯಲಾಗುವುದಿಲ್ಲ. ಜಗತ್ತಿನ ಬಗೆಗಿನ ಅವನ ಕಲ್ಪನಾತ್ಮಕ ಚಿತ್ರವು, ಒಂದು

ಕಾವ್ಯಮಯ ಪ್ರಯತ್ನ ಎಂದು ಪರಿಗಣಿತವಾದುದು, ಮುಖ್ಯವಾಗಿ ಆಧಾರಸಹಿತವೂ ಆಗಿಲ್ಲ ಅಥವಾ ಆಧಾರರಹಿತವೂ ಆಗಿಲ್ಲ. ಬದುಕು ಒಂದು ನಡೆದಾಡುವ ನೆರಳು ಎಂದು ಷೇಕ್ಸ್‌ಪಿಯರ್ ಬಣ್ಣಿಸುತ್ತಾನೆ, ಶೆಲ್ಲಿ ಹೇಳುವುದು ಅನೇಕ ಬಣ್ಣಗಳ ಗಾಜಿನ ಗೋಳ ಎನ್ನುತ್ತಾನೆ. ಬರ್ಗ್‌ಸನ್ ಹೇಳುವುದು, ಚಿಪ್ಪು ಸಿಡಿದ ಚೂರುಗಳು ಚಿಪ್ಪುಗಳೇ ಆಗಿ ಉಳಿಯುವುದು. ಬರ್ಗ್‌ಸನ್‌ನ ಪ್ರತಿಮೆಯನ್ನು ನೀವು ಹೆಚ್ಚು ಇಷ್ಟಪಡುವಿರಾದರೆ, ಅದು ಸರಿಯಾದುದೇ.

ಜಗತ್ತಿನಲ್ಲಿ ವಾಸ್ತವವಾಗುವುದೆಂದು ಬರ್ಗ್‌ಸನ್ ನಿರೀಕ್ಷಿಸುವ ಒಳ್ಳೆಯದು ಕ್ರಿಯೆಯ ಸಲುವಾದ ಕ್ರಿಯೆಯನ್ನು. ಎಲ್ಲ ಶುದ್ಧ ಧ್ಯಾನವನ್ನು ಅವನು 'ಕನಸು ಕಾಣುವುದು' ಎನ್ನುತ್ತಾನೆ, ಮತ್ತು ಸ್ಥಾವರ, ಪ್ಲೆಟಾನಿಕ್, ಗಣಿತಾತ್ಮಕ, ತಾರ್ಕಿಕ, ಬೌದ್ಧಿಕ ಎಂಬ ಶ್ಲಾಘ್ಯವಲ್ಲದ ಶಬ್ದಗಳ ಮೂಲಕ ಖಂಡಿಸುತ್ತಾನೆ. ಕ್ರೊಯೆಯು ಸಾಧಿಸುವ ಕೊನೆಯ ಪೂರ್ವಕಾಣ್ಕೆಯನ್ನು ಬಯಸುವವರಿಗೆ ಅವನು ಹೇಳುವುದಿಷ್ಟೆ: ಪೂರ್ವಭಾವಿಯಾಗಿ ಕಂಡ ಕೊನೆಯು ಹೊಸದೇನೂ ಆಗಿರುವುದಿಲ್ಲ, ಯಾಕೆಂದರೆ ಬಯಕೆಯು, ನೆನಪಿನಂತೆಯೇ ತನ್ನ ಉದ್ದೇಶದೊಡನೆ ಅನನ್ಯತೆಯನ್ನು ಹೊಂದಿರುತ್ತದೆ. ಹೀಗೆ ನಾವು ಕ್ರಿಯೆಯಲ್ಲಿ ಅಂತಃಪ್ರೇರಣೆಯ ಕುರುಡು ಗುಲಾಮರೆಂಬ ಖಂಡನೆಗೆ ಪಾತ್ರವಾಗುತ್ತೇವೆ: ಜೀವಶಕ್ತಿಯು ಹಿಂದಿನಿಂದ ನಮ್ಮನ್ನು ದಣಿವಿಲ್ಲದೆ ಕೊನೆಯಿಲ್ಲದೆ ಮುಂದಕ್ಕೆ ನೂಕುತ್ತದೆ. ಪ್ರಾಣಿಜೀವನದಿಂದ ಮೇಲೆದ್ದು ಮಾನವನನ್ನು ಕ್ರೂರಿಗಳ ಬದುಕಿನಿಂದ ವಿಮುಕ್ತಿಗೊಳಿಸುವ ಮತ್ತಷ್ಟು ಶ್ರೇಷ್ಠ ಗುರಿಗಳ ಬಗ್ಗೆ ಪ್ರಜ್ಞಾವಂತರಾಗುವಂತೆ ಮಾಡುವ ಧ್ಯಾನಶೀಲ ಒಳನೋಟದ ಕ್ಷಣಕ್ಕೆ, ಈ ಸಿದ್ಧಾಂತದಲ್ಲಿ ಆಸ್ಪದವೇ ಇಲ್ಲ. ಉದ್ದೇಶವಿಲ್ಲದ ಕ್ರಿಯಾವಂತಿಕೆಯೇ ಸಾಕಷ್ಟು ಒಳ್ಳೆಯದು ಎಂದು ಭಾವಿಸುವವರಿಗೆ ಬರ್ಗ್‌ಸನ್‌ನ ಪುಸ್ತಕಗಳು ವಿಶ್ವದ ಬಗ್ಗೆ ಸಂತೋಷದಾಯಕ ಚಿತ್ರ ನೀಡುವಂತೆ ತೋರುತ್ತವೆ. ಆದರೆ ಕ್ರಿಯೆಯು ಬೆಲೆಬಾಳುವುದಾಗಬೇಕಾದರೆ ಯಾವುದಾದರೂ, ಕಡಿಮೆ ಯಾತನಾಮಯವಾದ ಹಾಗೂ ನಮ್ಮ ದಿನನಿತ್ಯದ ಜೀವನವು ಕಡಿಮೆ ಕ್ಷುಲ್ಲಕತೆಗಳಿಂದ ಕೂಡಿದ ಜಗತ್ತನ್ನು ಮರೆಯಿಸುವ ಕಲ್ಪನಾತ್ಮಕ ಕಾಣ್ಕೆಯಿಂದ ಅದು ಸ್ಫೂರ್ತಗೊಳ್ಳಬೇಕು ಎಂದು. ಅಂದರೆ ಒಂದೇ ಪದದಲ್ಲಿ ಹೇಳಬೇಕೆಂದರೆ, ಧ್ಯಾನದ ಮೇಲೆ ನಿರ್ಮಿತವಾದ ಕ್ರಿಯೆಯನ್ನು ನಿರೀಕ್ಷಿಸುವರಿಗೆ ಈ ಸಿದ್ಧಾಂತದಲ್ಲಿ ತಾವು ಬಯಸುವ ಯಾವುದೂ ಇಲ್ಲ ಎಂದು ಎಂಬುದು, ಮತ್ತು ಅದನ್ನು ನಿಜವೆಂದು ನಂಬಲು ಯಾವುದೇ ಕಾರಣವಿಲ್ಲ ಎಂಬುದು ತಿಳಿಯುತ್ತದೆ.

೦

೨೯
ವಿಲಿಯಂ ಜೇಮ್ಸ್

ವಿಲಿಯಂ ಜೇಮ್ಸ್ (೧೮೪೨-೧೯೨೧) ಮೂಲತಃ ಒಬ್ಬ ಮನೋವಿಜ್ಞಾನಿಯಾದರೂ ತತ್ವಜ್ಞಾನದಲ್ಲಿಯೂ ಎರಡು ಕಾರಣಗಳಿಂದ ಮುಖ್ಯನಾಗುತ್ತಾನೆ: 'ತೀವ್ರಗಾಮಿ ಅನುಭವೈಕವಾದ' (ರ್‍ಯಾಡಿಕಲ್ ಎಂಪಿರಿಸಿಸಂ) ಎಂಬ ಸಿದ್ಧಾಂತವನ್ನವನು ಪ್ರತಿಪಾದಿಸಿದ, ಅಲ್ಲದೆ 'ವ್ಯವಹಾರ ಸಿದ್ಧಾಂತ'ದ (ಪ್ರಾಗ್ಮಾಟಿಸಂ) ಅಥವಾ 'ಸಾಧನ ಸಿದ್ಧಾಂತ' (ಇನ್‌ಸ್ಟ್ರುಮೆಂಟಲಿಸಂ)ದ ಮೂವರು ಸಮರ್ಥಕರಲ್ಲಿ ಅವನೂ ಒಬ್ಬನಾಗಿದ್ದ. ಆನಂತರದ ತನ್ನ ಬದುಕಿನಲ್ಲಿ, ತನ್ನ ಯೋಗ್ಯತೆಗನುಸಾರವಾಗಿ, ಅವನು ಅಮೆರಿಕನ್ ತತ್ವಜ್ಞಾನದ ಮುಂದಾಳೆಂದು ಪರಿಗಣತನಾದ. ವೈದ್ಯಕೀಯ ಅಧ್ಯಯನದಿಂದ ಅವನು ಮನೋವಿಜ್ಞಾನದತ್ತ ಆಕರ್ಷಿತನಾದ; ಆ ವಿಷಯಕ್ಕೆ ಸಂಬಂಧಿಸಿದ ಅವನ ಮಹತ್ಕೃತಿಯು ೧೮೯೦ ರಲ್ಲಿ ಪ್ರಕಟವಾಯಿತು, ಅದು ಎಲ್ಲ ಸಾಧ್ಯ ಶ್ರೇಷ್ಠತೆಯನ್ನೂ ಹೊಂದಿತ್ತು. ಆದರೆ ನಾನು ಅದರ ಬಗ್ಗೆ ಏನನ್ನೂ ಹೇಳುವುದಿಲ್ಲ, ಯಾಕೆಂದರೆ ಅದು ಅವನು ವಿಜ್ಞಾನಕ್ಕಿತ್ತ ಕೊಡುಗೆಯೇ ಹೊರತು ತತ್ವಜ್ಞಾನಕ್ಕಲ್ಲ.

ವಿಲಿಯಂ ಜೇಮ್ಸ್‌ನ ತಾತ್ವಿಕ ಆಸಕ್ತಿಗೆ ಎರಡು ಮುಖಗಳಿದ್ದುವು, ಒಂದು ವೈಜ್ಞಾನಿಕವಾದುದಾದರೆ, ಮತ್ತೊಂದು ಮತಧಾರ್ಮಿಕ. ವೈಜ್ಞಾನಿಕ ಮುಖದಲ್ಲಿ, ವೈದ್ಯಕೀಯದ ಅಧ್ಯಯನವು ಅವನನ್ನು ಭೌತವಾದದೆಡೆಗೆ ಸೆಳೆದಿತ್ತು, ಆದರೆ ಅದು ಮತಧಾರ್ಮಿಕ ಭಾವನೆಗಳಿಂದ ಸೀಮಿತವಾಯಿತು. ಅವನ ಮತಧಾರ್ಮಿಕ ಭಾವನೆಗಳು ತೀರ ಪ್ರಾಟೆಸ್ಟೆಂಟ್ ಆದವು, ಪ್ರಜಾಪ್ರಭುತ್ವಾತ್ಮಕವಾದವು, ಮತ್ತು ಮಾನವನ ಬಗೆಗಿನ ಕಕ್ಕುಲತೆಯಿಂದ ತುಂಬಿತ್ತು. ತನ್ನ ಅಣ್ಣ ಹೆನ್ರಿಯ ಕಟು ಪ್ರತಿಷ್ಠೆಯ ನಡತೆಯನ್ನವನು ಅನುಸರಿಸಲು ಸಂಪೂರ್ಣವಾಗಿ ನಿರಾಕರಿಸಿದ. 'ನಮಗೆ ಹೇಳಿಕೊಟ್ಟಂತೆ ಕತ್ತಲ ರಾಜನು ಒಬ್ಬ ಸಭ್ಯನಿರಬಹುದು, ಆದರೆ ದೇವರು ಮತ್ತು ಸ್ವರ್ಗಗಳಲ್ಲಿ ಅವನು ಖಂಡಿತ ಸಭ್ಯನಾಗಲಾರ' ಎಂಬುದು ಅವನ ಹೇಳಿಕೆ. ಇದು ಅವನಿಗೆ ತಕ್ಕುದಾದ ವಿಶಿಷ್ಟ ಹೇಳಿಕೆ.

ಅವನ ಕಕ್ಕುಲತೆ ಮತ್ತು ಉಲ್ಲಾಸದಾಯಕ ವಿನೋದವು ಅವನನ್ನು ಬಹುತೇಕ ಎಲ್ಲರೂ ಪ್ರೀತಿಸುವಂತೆ ಮಾಡಿದ್ದವು. ಅವನ ಬಗ್ಗೆ ಪ್ರೀತಿಯನ್ನು ತೋರಿಸದಿದ್ದ ಏಕೈಕ ವ್ಯಕ್ತಿಯೆಂದರೆ, ನನಗೆ ತಿಳಿದಂತೆ, ಸಾಂತಾಯನ, ಅವನ ಡಾಕ್ಟೊರಲ್ ಮಹಾಪ್ರಬಂಧವನ್ನು ವಿಲಿಯಂ ಜೇಮ್ಸ್ 'ಕೊಳಕುತನದ ಪರಿಪೂರ್ಣತೆ' ಎಂದು ಬಣ್ಣಿಸಿದ್ದ. ಈ ಇಬ್ಬರು ಮಹನೀಯರ ನಡುವೆ ಮನೋಭಾವ ವೈರುದ್ಧ್ಯವಿತ್ತು, ಅದನ್ನು ಯಾವುದೂ ಸರಿಪಡಿಸುವಂತಿರಲಿಲ್ಲ. ಸಾಂತಾಯನನಿಗೂ ಮತಧರ್ಮವೆಂದರೆ ಒಲವು, ಆದರೆ ವಿಭಿನ್ನ ರೀತಿಯಲ್ಲಿ. ಅವನು ಅದನ್ನು ಸೌಂದರ್ಯದೃಷ್ಟಿಯಿಂದಲೂ ಐತಿಹಾಸಿಕ ದೃಷ್ಟಿಯಿಂದಲೂ ಇಷ್ಟಪಟ್ಟರೂ ಅದು ನೈತಿಕ ಬದುಕಿಗೆ ಸಹಾಯಕವಾಗುವಂಥದಲ್ಲ; ಇದು ಸಹಜವಾಗಿತ್ತು, ಯಾಕೆಂದರೆ ಅವನು ಪ್ರಾಟೆಸ್ಟೆಂಟಿಸಂಗಿಂತ ಹೆಚ್ಚಾಗಿ ಕ್ಯಾಥೋಲಿಸಿಸಂ ಕಡೆಗೆ ಒಲವಿರಿಸಿಕೊಂಡಿದ್ದ. ಅವನು ಯಾವುದೇ ಕ್ರಿಶ್ಚಿಯನ್ ಮತತತ್ವವನ್ನು ಬೌದ್ಧಿಕವಾಗಿ ಒಪ್ಪಲಿಲ್ಲ, ಇತರರು ಅವನು ನಂಬಬೇಕೆಂಬುದರಲ್ಲಿ ಮಾತ್ರ ಅವನಿಗೆ ತೃಪ್ತಿ, ಅವನು ಕ್ರಿಶ್ಚಿಯನ್ ಪೌರಾಣಿಕತೆಯನ್ನು ಮೆಚ್ಚಿಕೊಂಡಿದ್ದ. ಜೇಮ್ಸ್‌ನಿಗೆ ಅಂಥ ಮನೋಭಾವವು ಅನೈತಿಕವಾಗಿ ಕಂಡಿತು. ತನ್ನ ಸಂಪ್ರದಾಯನಿಷ್ಠ ಪೂರ್ವಿಕರ ಆಳವಾದ ನಂಬಿಕೆಯಾಗಿದ್ದ ಒಳ್ಳೆಯ ನಂಬಿಕೆಯನ್ನು ಅವನೂ ಬಹು ಮುಖ್ಯವೆಂದು ಪರಿಗಣಿಸಿದ್ದ; ತನ್ನ ಪ್ರಜಾಪ್ರಭುತ್ವಪರವಾದ ಒಲವಿನಿಂದಾಗಿ ತತ್ವಜ್ಞಾನಿಗಳಿಗೊಂದು ಸತ್ಯ, ಸಾಮಾನ್ಯರಿಗೊಂದು ಸತ್ಯ ಎಂಬ ನೀತಿಯನ್ನು ಒಪ್ಪಲಾರದವನಾಗಿದ್ದ. ಅದು ಸಂಪ್ರದಾಯಬದ್ಧರಲ್ಲದ ಪ್ರಾಟೆಸ್ಟೆಂಟ್ ಮತ್ತು ಕ್ಯಾಥೋಲಿಕ್ ಪುರೋಹಿತರ ಮನೋಭಾವಗಳ ನಡುವಣ ವಿರೋಧ; ಸಾಂತಾಯನ ಒಬ್ಬ ಮುಕ್ತ ಕ್ಯಾಥೋಲಿಕ್ ಚಿಂತಕನಾದರೆ, ಪ್ರಾಟೆಸ್ಟೆಂಟ್ ಆದ ವಿಲಿಯಂ ಜೇಮ್ಸ್ ಧರ್ಮವಿರೋಧಿ.

ಜೇಮ್ಸ್‌ನ ತೀವ್ರಗಾಮಿ ಅನುಭವೈಕ ಸಿದ್ಧಾಂತವು ಮೊದಲ ಬಾರಿಗೆ ೧೯೦೪ರಲ್ಲಿ 'ಡಸ್ ಕಾನ್ಷಸ್‌ನೆಸ್ ಎಕ್ಸಿಸ್ಟ್' ಎಂಬ ಹೆಸರಿನ ಪ್ರಬಂಧವೊಂದರಲ್ಲಿ ಪ್ರಕಟವಾಯಿತು. ಈ ಪ್ರಬಂಧದ ಮುಖ್ಯ ಉದ್ದೇಶವೆಂದರೆ ಜ್ಞಾತೃ-ಜ್ಞೇಯಗಳ (ಸಬ್ಜೆಕ್ಟ್-ಆಬ್ಜೆಕ್ಟ್) ಸಂಬಂಧವು ಮೂಲಭೂತವಾದುದು ಎಂಬ ನಿಲವನ್ನು ಅಲ್ಲಗಳೆಯುವುದು. ಅಲ್ಲಿಯವರೆಗೂ, 'ಜ್ಞಾನ' ಎಂಬ ಒಂದು ಸಂಗತಿಯು ಇದೆ, ಅದರಲ್ಲಿ ಒಂದು ಘಟಕವು, ತಿಳಿಯುವವನು ಅಥವಾ ಜ್ಞಾತೃ, ಮತ್ತೊಂದರ ಅಂದರೆ ಜ್ಞೇಯದ ಅರಿವನ್ನು ಹೊಂದಿರುತ್ತದೆ ಎಂಬುದು ತತ್ವಜ್ಞಾನಿಗಳ ಸಾಮಾನ್ಯ ತಿಳಿವಳಿಕೆಯಾಗಿತ್ತು. ಜ್ಞಾತೃವನ್ನು ಮನಸ್ಸು ಅಥವಾ ಆತ್ಮ ಎಂದು ಭಾವಿಸಲಾಗಿತ್ತು; ತಿಳಿಯುವುದು ಭೌತವಸ್ತುವಾಗಿರಬಹುದು, ಚಿರಂತನ ಸತ್ವವಾಗಿರಬಹುದು, ಮತ್ತೊಂದು ಮನಸ್ಸಾಗಿರಬಹುದು, ಅಥವಾ ಸ್ವಪ್ರಜ್ಞೆಯಲ್ಲಿ, ಜ್ಞಾತೃವಿನೊಡನೆ ಅನನ್ಯವಾಗಿರಬಹುದು. ಒಪ್ಪಿತವಾಗಿದ್ದ ತತ್ವಜ್ಞಾನದಲ್ಲಿ ಎಲ್ಲವೂ ಜ್ಞಾತೃ-

ಜ್ಞೇಯಗಳೊಡನೆ ತಳುಕುಹಾಕಿಕೊಂಡಿರುತ್ತಿತ್ತು. ಮನಸ್ಸು ಮತ್ತು ಭೌತದ್ರವ್ಯಗಳ ಭಿನ್ನತೆಯು, ಧ್ಯಾನಾತ್ಮಕ ಆದರ್ಶ ಮತ್ತು ಸಾಂಪ್ರದಾಯಿಕ 'ಸತ್ಯ'ದ ಕಲ್ಪನೆಯು – ಜ್ಞಾತೃ–ಜ್ಞೇಯಗಳ ಭಿನ್ನತೆಯನ್ನು ಮೂಲಭೂತವೆಂದು ಒಪ್ಪದಿದ್ದರೆ, ಇವೆಲ್ಲವನ್ನೂ ಮತ್ತೆ ಆಮೂಲಾಗ್ರವಾಗಿ ಪರಿಶೀಲಿಸಬೇಕು.

ನನ್ನ ಮಟ್ಟಿಗೆ ಹೇಳುವುದಾದರೆ, ಜೇಮ್ಸ್ ಈ ವಿಷಯದಲ್ಲಿ ಭಾಗಶಃ ಸರಿಯೆಂದು ನನಗೆ ಮನವರಿಕೆಯಾಗಿದೆ, ಮತ್ತು ಈ ಆಧಾರದ ಮೇಲೆ, ಅವನು ತತ್ವಜ್ಞಾನಿಗಳಲ್ಲಿ ಒಂದು ಉನ್ನತ ಸ್ಥಾನಕ್ಕೆ ಅರ್ಹನಾಗುತ್ತಾನೆ. ಅವನು ಮತ್ತು ಅವನನ್ನು ಒಪ್ಪಿದ್ದವರು ಅವನ ಸಿದ್ಧಾಂತದ ಸತ್ಯತೆಯ ಬಗ್ಗೆ ನನಗೆ ಮನವರಿಕೆ ಮಾಡುವರೆಗೂ ಅವನ ಬಗ್ಗೆ ನನಗೆ ಬೇರೆಯೇ ಭಾವನೆಯಿತ್ತು. ಈಗ ನಾವು ಅವನ ವಾದದ ಕಡೆ ಗಮನ ಹರಿಸೋಣ.

ಅವನ ಪ್ರಕಾರ, ಪ್ರಜ್ಞೆಯು 'ಒಂದು ಅಸ್ತಿತ್ವವಿರದುದರ (ನೊನೆಂಟಿಟಿ) ಹೆಸರು', ಹೀಗಾಗಿ ಅದಕ್ಕೆ ಮೂಲಭೂತ ತತ್ವಗಳಲ್ಲಿ ಜಾಗವಿರಬಾರದು. 'ಈಗಲೂ ಅದಕ್ಕೆ ಜೋತುಬಿದ್ದಿರುವವರು ಪ್ರತಿಧ್ವನಿಗೆ ಜೋತುಬಿದ್ದಿರುವವರು. ಅದು ತತ್ವಜ್ಞಾನದ ಗಾಳಿಯಲ್ಲಿ ತೇಲುತ್ತಿರುವ ಕಣ್ಮರೆಯಾಗುತ್ತಿರುವ "ಆತ್ಮ"ದ ಬಗ್ಗೆ ಉಳಿದಿರುವ ಕ್ಷೀಣವಾದ ವದಂತಿ. ತಮ್ಮನ್ನು ಕುರಿತ ನಮ್ಮ ಚಿಂತನೆಗಳನ್ನು ಸೃಷ್ಟಿಸಿರುವ ಭೌತದ್ರವ್ಯಗಳನ್ನು ಉಂಟುಮಾಡುವ ಯಾವುದಕ್ಕೋ ವಿದೃಶವಾಗಿ ಯಾವುದೇ ಮೂಲಭೂತ ಸಾಮಗ್ರಿ ಅಥವಾ ಗುಣ ಇಲ್ಲ' ಎಂದವನು ಹೇಳುತ್ತಾನೆ. ನಮ್ಮ ಚಿಂತನೆಗಳು ತಿಳಿಯುವ ಕೆಲಸವನ್ನು ಮಾಡುತ್ತವೆ ಎಂಬುದನ್ನು ಮತ್ತು ಈ ಕಾರ್ಯವನ್ನು 'ಪ್ರಜ್ಞಾಪೂರ್ವಕ' ಎಂಬುದನ್ನು ತಾನು ಅಲ್ಲಗಳೆಯುವುದಿಲ್ಲ ಎಂದವನು ಸ್ಪಷ್ಟಪಡಿಸುತ್ತಾನೆ. ಅವನು ಅಲ್ಲಗಳೆಯುವುದನ್ನು ಸ್ಥೂಲವಾಗಿ ಪ್ರಜ್ಞೆ ಎಂಬುದರ ಅಸ್ತಿತ್ವವನ್ನು ಎಂದು ಹೇಳಬಹುದು. 'ಇರುವುದು ಒಂದೇ ಮೂಲಭೂತ ಸಾಮಗ್ರಿ ಅಥವಾ ಭೌತದ್ರವ್ಯ', ಮತ್ತು ಜಗತ್ತಿನ ಎಲ್ಲವೂ ಇದರಿಂದಲೇ ಕೂಡಿದೆ ಎಂಬುದು ಅವನ ನಿಲವು. ಈ ಸಾಮಗ್ರಿಯನ್ನವನು 'ಶುದ್ಧ ಅನುಭವ' ಎಂದು ಕರೆಯುತ್ತಾನೆ. ಜ್ಞಾನ ಎನ್ನುವುದು ಎರಡು ಶುದ್ಧ ಅನುಭವ ಭಾಗಗಳ ನಡುವಣ ಒಂದು ಬಗೆಯ ಸಂಬಂಧ ಎಂಬುದವನ ಹೇಳಿಕೆ. ಜ್ಞಾತೃ–ಜ್ಞೇಯ ಸಂಬಂಧವು ಸಾಧಿತವಾದುದು: 'ಅನುಭವಕ್ಕೆ ಅಂಥ ಆಂತರಿಕ ದ್ವಿತ್ವವಿಲ್ಲ ಎಂಬುದು ನನ್ನ ನಂಬಿಕೆ'. ಅನುಭವದ ಅವಿಭಾಜಿತ ಭಾಗವು ಒಂದು ಸನ್ನಿವೇಶದಲ್ಲಿ ಜ್ಞಾತೃವಾಗಿದ್ದರೆ, ಮತ್ತೊಂದರಲ್ಲಿ ಜ್ಞೇಯವಾಗಿರಬಹುದು.

'ಶುದ್ಧ ಅನುಭವ'ವನ್ನವನು 'ನಮ್ಮ ಆನಂತರದ ಆಲೋಚನೆಗೆ ಸಾಮಗ್ರಿಯನ್ನೊದಗಿಸುವ ಬದುಕಿನ ದಿಢೀರ್ ಹರಿವು' ಎನ್ನುತ್ತಾನೆ.

ಈ ಸಿದ್ಧಾಂತವು ಮನಸ್ಸು ಮತ್ತು ಭೌತದ್ರವ್ಯಗಳ ನಡುವಣ ಭಿನ್ನತೆಯನ್ನು ತಿರಸ್ಕರಿಸುತ್ತದೆ ಎಂಬದು ಗಮನಾರ್ಹ ಅಂಶ; ಹಿಂದೆ ಅವುಗಳನ್ನು ಎರಡು ವಿಭಿನ್ನ (ಜೇಮ್ಸ್ ಕರೆಯುವ) ಸಾಮಗ್ರಿಗಳೆಂದು ತಿಳಿಯಲಾಗಿತ್ತು. ಹೀಗಾಗಿ ಈ ವಿಷಯದಲ್ಲಿ ಜೇಮ್ಸ್‌ನ ಅಭಿಪ್ರಾಯವನ್ನು ಒಪ್ಪುವವರು 'ತಟಸ್ಥ ಏಕತ್ವ'ವನ್ನು ಸಮರ್ಥಿಸುತ್ತಾರೆ; ಅದರ ಪ್ರಕಾರ, ಜಗತ್ತು ನಿರ್ಮಿತವಾಗಿರುವುದು ಮನಸ್ಸಿನಿಂದಲೂ ಅಲ್ಲ ಭೌತದ್ರವ್ಯದಿಂದಲೂ ಅಲ್ಲ, ಎರಡಕ್ಕೂ ಮುಂಚಿನದರಿಂದ. ತನ್ನ ಸಿದ್ಧಾಂತದ ಈ ಸೂಚನೆಯನ್ನು ಜೇಮ್ಸ್ ತಾನೇ ಬೆಳೆಸಲಿಲ್ಲ; ಅದಕ್ಕೆ ವ್ಯತಿರಿಕ್ತವಾಗಿ, 'ಶುದ್ಧ ಅನುಭವ' ಎಂಬ ಪದಗುಚ್ಛವು ಪ್ರಾಯಶಃ ಅಪ್ರಜ್ಞಾಪೂರ್ವಕವಾಗಿ ಬರ್ಕ್ಲೇಯ ಆದರ್ಶವಾದವನ್ನು ಸೂಚಿಸುತ್ತದೆ. 'ಅನುಭವ' ಎಂಬ ಶಬ್ದವನ್ನು ತತ್ವಜ್ಞಾನಿಗಳು ಮತ್ತೆ ಮತ್ತೆ ಬಳಸುತ್ತಾರಾದರೂ ಯಾರೂ ಹಾಗಂದರೇನೆಂದು ಸೂತ್ರೀಕರಿಸಿ ಹೇಳುವುದಿಲ್ಲ. ಅದು ಏನನ್ನು ಸೂಚಿಸಬಹುದು ಎಂಬುದನ್ನು ನಾವು ಒಂದಷ್ಟು ವಿವೇಚಿಸೋಣ.

ಸಂಭವಿಸುವ ಎಷ್ಟೋ ಸಂಗತಿಗಳು 'ಅನುಭವಕ್ಕೆ ಬಾರದವು' ಎಂಬುದು ಎಲ್ಲರಿಗೂ ತಿಳಿದ ಸಂಗತಿಯೇ; ಉದಾಹರಣೆಗೆ, ಚಂದ್ರನ ಅಗೋಚರ ಪಾರ್ಶ್ವದ ಆಗುಹೋಗುಗಳು. ಬರ್ಕ್ಲೇ ಮತ್ತು ಹೆಗೆಲ್ ಅವರು ಬೇರೆ ಬೇರೆ ಕಾರಣಗಳಿಂದ ಅದನ್ನು ತಿರಸ್ಕರಿಸಿದರು. ಅವರ ಪ್ರಕಾರ, ಅನುಭವಕ್ಕೆ ಬಾರದವು ಏನೂ ಅಲ್ಲ. ಅವರ ವಾದಗಳನ್ನು ಈಗ ಬಹುತೇಕ ತತ್ವಜ್ಞಾನಿಗಳು ತಿರಸ್ಕರಿಸುತ್ತಾರೆ; ಅದು ಸರಿ ಎಂಬುದು ನನ್ನ ಅಭಿಪ್ರಾಯ. ಜಗತ್ತಿನ 'ಸಾಮಗ್ರಿ'ಯು 'ಅನುಭವ' ಎಂಬ ಅಭಿಪ್ರಾಯವನ್ನು ಒಪ್ಪಿದರೆ, ಚಂದ್ರನ ಅಗೋಚರ ಪಾರ್ಶ್ವದ ಆಗುಹೋಗುಗಳು ಎಂಬಂಥವು ಎಂದರೆ ಏನು ಎಂಬುದನ್ನು ವಿವರಿಸಲು ಒಪ್ಪಬಹುದೆಂದು ತೋರುವ ಒಂದು ವಿವರಣೆಯನ್ನು ನಾವು ಸೃಷ್ಟಿಸುವುದು ಆವಶ್ಯಕವಾಗುತ್ತದೆ. ಅನುಭವಕ್ಕೆ ಬಾರದವುಗಳನ್ನು ಅನುಭವಕ್ಕೆ ಬಂದಂಥವುಗಳಿಂದ ಊಹಿಸಿಕೊಳ್ಳುವುದು ಸಾಧ್ಯವಾಗದಾದರೆ, ನಮ್ಮ ಹೊರತಾದ ಬೇರಾವುದರ ಅಸ್ತಿತ್ವವನ್ನು ಒಪ್ಪಿಕೊಳ್ಳುವುದಕ್ಕೆ ಆಧಾರವನ್ನು ಕಂಡುಕೊಳ್ಳುವುದು ಕಷ್ಟವಾಗುತ್ತದೆ. ಜೇಮ್ಸ್ ಇದನ್ನು ಅಲ್ಲಗಳೆಯುತ್ತಾನೆಂಬುದು ನಿಜವಾದರೂ ಅವನು ನೀಡುವ ಕಾರಣಗಳು ಸಮಂಜಸವೆನಿಸಲಾರವು.

'ಅನುಭವ' ಎಂದರೆ ಏನು? ಇದಕ್ಕೆ ಉತ್ತರವನ್ನು ಕಂಡುಕೊಳ್ಳುವ ಅತ್ಯಂತ ಶ್ರೇಷ್ಠ ಮಾರ್ಗವೆಂದರೆ ಹೀಗೆ ಕೇಳುವುದು: ಅನುಭವಕ್ಕೆ ಬಾರದ ಮತ್ತು ಅನುಭವಕ್ಕೆ ಬಂದಂಥವುಗಳ ನಡುವಣ ವ್ಯತ್ಯಾಸವೇನು? ಮಳೆ ಬೀಳುವುದನ್ನು ಕಾಣಬಹುದು ಅಥವಾ ಅನುಭವಿಸಬಹುದು, ಆದರೆ ಯಾವ ಜೀವಿಯೂ ಇಲ್ಲದ ಮರಳುಗಾಡಿನಲ್ಲಿ ಮಳೆ ಬೀಳುವುದನ್ನು ಅನುಭವಿಸಲು ಸಾಧ್ಯವಿಲ್ಲ. ಹೀಗೆ ನಾವು ನಮ್ಮ ಮೊದಲ

ಅಂಶಕ್ಕೆ ಬರುತ್ತೇವೆ: ಜೀವವಿಲ್ಲದ ಕಡೆಯಲ್ಲಿ ಅನುಭವ ಇರಲಾರದು. ಆದರೆ ಅನುಭವವು ಜೀವದ ಜೊತೆಗೆ ಸಮವ್ಯಾಪಕತೆ (ಕೋ-ಎಕ್ಸ್‌ಟೆನ್ಸಿವ್) ಹೊಂದಿರುವುದಲ್ಲ. ನಾನು ಗಮನಿಸದೆ ಇರುವ ಅನೇಕ ಸಂಗತಿಗಳನ್ನು ನಾನು ಅನುಭವಿಸುತ್ತೇನೆ; ಇವುಗಳನ್ನು ನಾನು ಅನುಭವ ಎಂದು ಕರೆಯಲಾರೆ. ನನಗೆ ನೆನಪಿರುವುದನ್ನೆಲ್ಲ ನಾನು ಅನುಭವಿಸುವುದು ಸ್ಪಷ್ಟ, ಆದರೆ ನಾನು ಸವಿವರವಾಗಿ ನೆನಪಿಸಿಕೊಳ್ಳಲಾರದವು ನನ್ನಲ್ಲಿ ಇನ್ನೂ ಉಳಿದಿರುವ ಅಭ್ಯಾಸಗಳನ್ನು ಉಂಟುಮಾಡಿರಬಹುದು. ಮೊದಲ ಬಾರಿಗೆ ಕೈಸುಟ್ಟುಕೊಂಡ ಘಟನೆಯನ್ನು ನೆನಪಿಸಿಕೊಳ್ಳಲಾರದ ಕೈಸುಟ್ಟುಕೊಂಡ ಮಗುವಿಗೆ ಬೆಂಕಿಯೆಂದರೆ ಭಯ. ಅಭ್ಯಾಸವನ್ನುಂಟುಮಾಡಿದಾಗ ಸಂಗತಿಯನ್ನು 'ಅನುಭವಿಸು'ತ್ತೇವೆ ಎಂದು ಹೇಳಬಹುದು. (ನೆನಪು ಎಂಬುದೂ ಒಂದು ಬಗೆಯ ಅಭ್ಯಾಸವೇ). ಸ್ಥೂಲವಾಗಿ ಹೇಳುವುದಾದರೆ, ಅಭ್ಯಾಸಗಳು ಜೀವಂತ ಸಾವಯವಿಗಳಲ್ಲಿ ಮಾತ್ರ ಉಂಟಾಗುತ್ತವೆ. ಎಷ್ಟೇ ಬಾರಿ ಬೆಂಕಿಗೊಡ್ಡಿದರೂ, ಸುಟ್ಟ ಕಂಬಿಗೆ ಬೆಂಕಿಯ ಭಯವಿರುವುದಿಲ್ಲ. ಹೀಗಾಗಿ, ಸಾಮಾನ್ಯ ಜ್ಞಾನದ ಮೇಲೆ ಹೇಳುವುದಾದರೆ, 'ಅನುಭವ'ವು ಜಗತ್ತಿನ 'ಸಾಮಗ್ರಿ'ಯೊಡನೆ ಸಮವ್ಯಾಪಕತೆಯನ್ನು ಹೊಂದಿಲ್ಲ ಎಂದು ಹೇಳಬಹುದು. ಈ ಅಂಶದ ವಿಷಯದಲ್ಲಿ ಸಾಮಾನ್ಯ ಜ್ಞಾನವನ್ನು ಬಿಟ್ಟು ಹೋಗಲು ನನಗಂತೂ ಯಾವುದೇ ಸಮರ್ಪಕ ಕಾರಣವೂ ಕಾಣುತ್ತಿಲ್ಲ.

'ಅನುಭವ'ಕ್ಕೆ ಸಂಬಂಧಿಸಿದ ಈ ವಿಷಯದ ಹೊರತು, ನಾನು ಜೇಮ್ಸ್‌ನ ತೀವ್ರಗಾಮಿ ಅನುಭವೈಕ ಸಿದ್ಧಾಂತವನ್ನು ಒಪ್ಪುತ್ತೇನೆ.

ಅವನ ವ್ಯವಹಾರ ಸಿದ್ಧಾಂತ ಮತ್ತು 'ನಂಬುವ ಇಚ್ಛಾಶಕ್ತಿ'ಯ ವಿಷಯವೇ ಬೇರೆ. ವಿಶೇಷವಾಗಿ ಎರಡನೆಯದನ್ನು ಕೆಲವು ಮತಧಾರ್ಮಿಕ ಮತತತ್ವಗಳನ್ನು ತೋರಿಕೆಯ ಆದರೆ ಆಧುನಿಕವಾದ ಸಮರ್ಥನೆಗಳನ್ನು ಮುಂದಿಡಲು ರೂಪಿಸಿರುವಂತೆ ಕಾಣುತ್ತದೆ; ಆದರೆ ಈ ಸಮರ್ಥನೆಯನ್ನು ಮನಃಪೂರ್ವಕವಾಗಿ ಮತಧಾರ್ಮಿಕತೆಯನ್ನು ನಂಬಿದವನೂ ಒಪ್ಪಿಕೊಳ್ಳಲಾರ.

'ದ ವಿಲ್ ಟು ಬಿಲೀವ್' ೧೮೯೬ ರಲ್ಲಿ ಪ್ರಕಟವಾಯಿತು; *'ಪ್ರಾಗ್ಮಾಟಿಸಂ, ಎ ನ್ಯೂ ನೇಮ್ ಫಾರ್ ಸಮ್ ಓಲ್ಡ್ ವೇಸ್ ಆಫ್ ಥಿಂಕಿಂಗ್'* ೧೯೦೭ ರಲ್ಲಿ ಹೊರಬಂತು. ಎರಡನೆಯ ಸಿದ್ಧಾಂತವು ಮೊದಲನೆಯದರ ವಿವರಣೆ.

ವ್ಯಾವಹಾರಿಕ ಬದುಕಿನಲ್ಲಿ ನಾವು ಎಷ್ಟೋ ವೇಳೆ ಸಾಕಷ್ಟು ಆಧಾರವಿಲ್ಲದ ತೀರ್ಮಾನಗಳನ್ನು ಕೈಗೊಳ್ಳಬೇಕಾದ ಪರಿಸ್ಥಿತಿ ಒದಗುತ್ತದೆ, ಯಾಕೆಂದರೆ ಏನೂ ಮಾಡದಂತಿರುವುದೂ ಒಂದು ತೀರ್ಮಾನವೇ ಎಂದು *'ದ ವಿಲ್ ಟು ಬಿಲೀವ್'* ವಾದಿಸುತ್ತದೆ. ಮತಧಾರ್ಮಿಕ ವಿಷಯಗಳು ಈ ರೀತಿಯವು ಎಂದು ಜೇಮ್ಸ್ ಹೇಳುತ್ತಾನೆ: ನಮ್ಮ 'ತಾರ್ಕಿಕ ಬೌದ್ಧಿಕತೆಯ ಮೇಲೆ ಬಲವಂತವನ್ನು ಹೇರದಿದ್ದರೂ'

ನಾವು ನಂಬುವ ಪ್ರವೃತ್ತಿಯನ್ನು ಹೊಂದುವ ಹಕ್ಕು ಇರುತ್ತದೆ. ಇದು ಸಾರತಃ ರೂಸೋನ ಸಾವೋಯಾರ್ಡ್ ವಿಕರ್‌ನ ಮನೋಭಾವ, ಆದರೆ ಅದನ್ನು ಬೆಳೆಸಿರುವ ರೀತಿ ಹೊಸದು.

ಪ್ರಾಮಾಣಿಕತೆಯ ನೈತಿಕ ಕರ್ತವ್ಯವು ಎರಡು ಸಮಾನ ಪ್ರಮುಖ ಗ್ರಾಹ್ಯ ವಿಷಯಗಳನ್ನು – 'ನಂಬುವ ಸತ್ಯ' ಮತ್ತು 'ದೋಷವರ್ಜನೆ' – ಹೊಂದಿರುತ್ತವೆ ಎಂದವನು ಹೇಳುತ್ತಾನೆ. ಸಂದೇಹವಾದಿಯು ತಪ್ಪಾಗಿ ಎರಡನೆಯದರ ಬಗ್ಗೆ ಮಾತ್ರ ಗಮನ ಕೊಡುತ್ತಾನೆ, ಹೀಗಾಗಿ ಕಡಿಮೆ ಪ್ರಜ್ಞಾಪೂರ್ವಕನಾದ ವ್ಯಕ್ತಿಗಿಂತ ವಿವಿಧ ಸತ್ಯಗಳನ್ನು ನಂಬುವುದರಲ್ಲಿ ವಿಫಲನಾಗುತ್ತಾನೆ. ಸತ್ಯವನ್ನು ನಂಬುವುದು ಮತ್ತು ದೋಷವನ್ನು ವರ್ಜಿಸುವುದು ಎರಡೂ ಸಮಾನ ಪ್ರಮುಖವಾದರೆ, ಯಾವುದಾದರೂ ಒಂದು ಸಾಧ್ಯತೆಯನ್ನು ಸ್ವ–ಇಚ್ಛೆಯಿಂದ ನಂಬಹುದಾದ ಪರ್ಯಾಯವಿರುವುದಾದರೆ, ಆಗ ನಾನು ಸತ್ಯವನ್ನು ನಂಬುವ ಸಮಾನ ಸಂಭವವಿರುತ್ತದೆ, ಆದರೆ ತೀರ್ಮಾನವನ್ನು ಕೈಬಿಟ್ಟರೆ ಯಾವುದೂ ಇರುವುದಿಲ್ಲ.

ಈ ಸಿದ್ಧಾಂತವನ್ನು ಗಂಭಿರವಾಗಿ ಪರಿಗಣಿಸಿದರೆ ಅದರಿಂದ ಉಂಟಾಗುವ ನೈತಿಕತೆಯು ವಿಚಿತ್ರವಾದುದಾಗಿರುತ್ತದೆ. ಒಂದು ರೈಲಿನಲ್ಲಿ ಒಬ್ಬ ಅಪರಿಚಿತನನ್ನು ನಾನು ಭೇಟಿಯಾಗಿ, ಅವನ ಹೆಸರು 'ಎಬಿನೇಜ಼ರ್ ವಿಲ್ಕ್ಸ್ ಸ್ಮಿತ್ ಹೌದೇ?' ಎಂದು ಕೇಳಿಕೊಂಡೆನೆಂದು ಭಾವಿಸಿಕೊಳ್ಳಿ. ಗೊತ್ತಿಲ್ಲ ಎಂಬುದನ್ನು ನಾನು ಒಪ್ಪಿಕೊಂಡರೆ, ನಾನು ಅವನ ಹೆಸರಿನ ಬಗ್ಗೆ ನಿಜವಾಗಿಯೂ ನಂಬುತ್ತಿರುವುದಿಲ್ಲ; ಅದೇ, ಅದೇ ಅವನ ಹೆಸರು ಎಂದು ನಂಬಲು ತೀರ್ಮಾನಿಸಿದರೆ, ನಾನು ಸತ್ಯವನ್ನು ನಂಬುತ್ತಿರಬಹುದಾದ ಸಂಭವ ಇರುತ್ತದೆ. ಸಂದೇಹವಾದಿಯು ಮೋಸಹೋಗುವ ಬಗ್ಗೆ ಭಯ ಹೊಂದಿರುತ್ತಾನೆ ಮತ್ತು ತನ್ನ ಭಯದ ಮೂಲಕ ಮುಖ್ಯವಾದ ಸತ್ಯವನ್ನು ಕಳೆದುಕೊಳ್ಳಬಹುದು ಎಂಬುದು ಜೇಮ್ಸ್‌ನ ವಾದ; 'ನಿರೀಕ್ಷೆಯ ಮೂಲಕವಾದ ವಂಚನೆಯು ಭಯದ ಮೂಲಕವಾದ ವಂಚನೆಗಿಂತ ಕೀಳಾದುದೆಂಬುದಕ್ಕೆ ಆಧಾರವಾವುದು?' ಎಂದವನು ಸೇರಿಸುತ್ತಾನೆ. ಅದರಿಂದ ಹೊಮ್ಮುವಂತೆ ಕಾಣುವುದೆಂದರೆ, ಎಬಿನೇಜ಼ರ್ ವಿಲ್ಕ್ಸ್ ಸ್ಮಿತ್ ಎಂಬ ವ್ಯಕ್ತಿಯನ್ನು ಕಾಣಲು ನಾನು ಐದು ವರ್ಷಗಳಿಂದ ನಿರೀಕ್ಷಿಸುತ್ತಿದ್ದರೆ, ನೇತ್ಯಾತ್ಮಕತೆಗೆ ವಿರುದ್ಧವಾಗಿ ಇತ್ಯಾತ್ಮಕ ನಿಖರತೆಯಿಂದ ಭೇಟಿಯಾಗುವ ಪ್ರತಿಯೊಬ್ಬ ಅಪರಿಚಿತನನ್ನೂ, ಅಂತಿಮವಾಗಿ ಅದಕ್ಕೆ ವಿರುದ್ಧವಾದ ಆಧಾರವನ್ನು ಪಡೆಯುವವರೆಗೂ, ನಂಬುವಂತೆ ನನ್ನನ್ನು ಪ್ರೇರಿಸಬೇಕು.

'ಆದರೆ, ನಿದರ್ಶನವೇ ಅಸಂಬದ್ಧವಾದುದು, ಯಾಕೆಂದರೆ, ನಿಮಗೆ ಅಪರಿಚಿತನ ಹೆಸರು ತಿಳಿಯದಿದ್ದರೂ, ಎಬಿನೇಜ಼ರ್ ವಿಲ್ಕ್ಸ್ ಸ್ಮಿತ್ ಎಂಬ ಹೆಸರಿನ ವ್ಯಕ್ತಿಗಳ ಸಂಖ್ಯೆ ತೀರ ಸಣ್ಣದು ಎಂಬುದು ನಿಮಗೆ ತಿಳಿದಿರುತ್ತದೆ. ಹೀಗಾಗಿ, ನಿಮ್ಮ

ಆಯ್ಕೆಯ ಸ್ವಾತಂತ್ರ್ಯದ ಬಗೆಗಿನ ಸಂಪೂರ್ಣ ಅಜ್ಞಾನದ ಸ್ಥಿತಿಯಲ್ಲಿ ನೀವಿರುವುದಿಲ್ಲ', ಎಂದು ನೀವು ಆಕ್ಷೇಪವೆತ್ತಬಹುದು. ಆದರೆ ವಿಚಿತ್ರವೆಂದರೆ, ತನ್ನ ಪ್ರಬಂಧದಾದ್ಯಂತ ಜೇಮ್ಸ್ ಎಲ್ಲಿಯೂ ಸಂಭವನೀಯತೆಯ ಬಗ್ಗೆ ಏನನ್ನೂ ಹೇಳುವುದೇ ಇಲ್ಲವಾದರೂ, ಯಾವುದೇ ಸಮಸ್ಯೆಯ ಬಗೆಗೂ ಎಲ್ಲ ಕಾಲಕ್ಕೂ ಕಂಡುಕೊಳ್ಳಬಹುದಾದ ಸಂಭವನೀಯತೆಯ ಪರಿಗಣನೆ ಇದೆ. ಜಗತ್ತಿನ ಯಾವುದೇ ಮತಧರ್ಮಕ್ಕೆ ಪರವಾದ ಅಥವಾ ವಿರೋಧವಾದ ಆಧಾರವಿಲ್ಲ ಎಂಬುದನ್ನು ಒಪ್ಪಿಕೊಳ್ಳೋಣ (ಆದರೆ ಯಾವ ಸಂಪ್ರದಾಯನಿಷ್ಠ ಶ್ರದ್ಧಾವಂತನೂ ಅದನ್ನು ಒಪ್ಪಲಾರ). ನೀವು ಕನ್‌ಫ್ಯೂಷಿಯನಿಸಂ, ಬೌದ್ಧ ಮತ್ತು ಕ್ರಿಶ್ಚಿಯಾನಿಟಿಗಳೊಡನೆ ಸಂಪರ್ಕಕ್ಕೆ ಬಂದ ಒಬ್ಬ ಚೈನಾದವನು ಎಂದುಕೊಳ್ಳೋಣ. ಆ ಮೂರರಲ್ಲಿ ಯಾವುದೂ ಸತ್ಯವಲ್ಲ ಎಂದು ತಾರ್ಕಿಕ ನಿಯಮಗಳಿಂದಾಗಿ ನೀವು ಒಪ್ಪುವುದಿಲ್ಲ. ಬೌದ್ಧ ಮತ್ತು ಕ್ರಿಶ್ಚಿಯಾನಿಟಿಗಳು ಸಮಾನ ಸಂಭವನೀಯತೆಯನ್ನು ಹೊಂದಿವೆ ಎಂದುಕೊಳ್ಳೋಣ; ಆಗ ಎರಡೂ ಸತ್ಯವಾಗಿರಲಾರದ್ದರಿಂದ, ಅವುಗಳಲ್ಲಿ ಒಂದು ಸತ್ಯವಾದುದಾಗಿರಬೇಕು, ಹೀಗಾಗಿ ಕನ್‌ಫ್ಯೂಷಿಯನಿಸಂ ಸುಳ್ಳಾಗಿರಬೇಕು. ಮೂರೂ ಸಮಾನ ಸಂಭವನೀಯವಾದರೆ, ಅವುಗಳಲ್ಲಿ ಪ್ರತಿಯೊಂದೂ ಸತ್ಯವಾಗುವುದಕ್ಕಿಂತ ಸುಳ್ಳಾಗಿರುವ ಸಂಭವನೀಯತೆ ಹೆಚ್ಚು. ಈ ರೀತಿಯಲ್ಲಿ, ಸಂಭವನೀಯತೆಯ ಪರಿಗಣನೆಯನ್ನು ತಂದ ಕ್ಷಣದಲ್ಲಿಯೇ ಜೇಮ್ಸ್‌ನ ತತ್ತ್ವವು ಕುಸಿದುಹೋಗುತ್ತದೆ.

ತಾನೊಬ್ಬ ಗಣ್ಯ ಮನೋವಿಜ್ಞಾನಿಯಾದರೂ ಜೇಮ್ಸ್ ಇದನ್ನು ಇಂತಹ ವಿಚಿತ್ರ ಸಂದಿಗ್ಧದಲ್ಲಿ ಬಿಟ್ಟಿರುವುದು ಕುತೂಹಲಕಾರಿಯಾಗಿದೆ. ಎಲ್ಲ ಸಂಶಯಛಾಯೆಗಳನ್ನೂ ಬಿಟ್ಟು, ಏಕೈಕ ಆಯ್ಕೆಯೆಂದರೆ ಸಂಪೂರ್ಣ ನಂಬಿಕೆ ಅಥವಾ ಸಂಪೂರ್ಣ ಅಪನಂಬಿಕೆ ಎಂದವನು ಹೇಳಿದ. ಉದಾಹರಣೆಗೆ, ನನ್ನ ಕಪಾಟಿನಲ್ಲಿ ನಾನು ಒಂದು ಪುಸ್ತಕವನ್ನು ಹುಡುಕುತ್ತಿದ್ದೇನೆಂದು ಭಾವಿಸಿಕೊಂಡರೆ, ಆಗ ನಾನು 'ಅದು ಈ ಕಪಾಟಿನಲ್ಲಿರಬಹುದು' ಎಂದುಕೊಂಡು ನೋಡಲು ತೊಡಗುತ್ತೇನೆಯೇ ಹೊರತು 'ಅದು ಈ ಕಪಾಟಿನಲ್ಲಿದೆ' ಎಂದು ಅದು ಸಿಕ್ಕುವವರೆಗೂ ಯೋಚಿಸುವುದಿಲ್ಲ. ನಾವು ಸಾಧಾರಣವಾಗಿ ಕ್ರಿಯಾಶೀಲವಾಗುವುದು ಆಧಾರಕಲ್ಪನೆಗಳ ಮೇಲೆ, ಆದರೆ ನಾವು ನಿಶ್ಚಿತವಾದುವೆಂದು ಭಾವಿಸುವುದರ ಬಗ್ಗೆ ಖಚಿತವಾಗಿ ಕ್ರಿಯಾಶೀಲವಾಗುವುದಿಲ್ಲ, ಯಾಕೆಂದರೆ ನಾವು ಆಧಾರಕಲ್ಪನೆಗಳ ಮೇಲೆ ಕ್ರಿಯಾಶೀಲರಾಗುವಾಗ ನಮ್ಮ ಕಣ್ಣು ಆಧಾರವನ್ನು ಹುಡುಕುತ್ತಿರುತ್ತದೆ.

ಖಚಿತತೆಯ ಆದೇಶವು ಜೇಮ್ಸ್ ಆಲೋಚಿಸುವುದಂಥದಲ್ಲ ಎಂಬುದು ನನ್ನ ಭಾವನೆ. 'ಯಾವುದೇ ಸಮಂಜಸ ಆಧಾರಕಲ್ಪನೆಯಾದರೂ ಸರಿಯೆ, ಅದರ ಬಗ್ಗೆ ಆಧಾರವು ಸಮರ್ಥಿಸುವಷ್ಟೇ ವಿಶ್ವಾಸವನ್ನು ಹೊಂದಿರಬೇಕು' ಎಂದು

ನಾನು ಹೇಳಬೇಕಾಗುತ್ತದೆ. ಆಧಾರಕಲ್ಪನೆಯು ಸಾಕಷ್ಟು ಮುಖ್ಯವಾಗಿದ್ದರೆ ಅದಕ್ಕೆ ಮತ್ತಷ್ಟು ಆಧಾರವನ್ನು ಹುಡುಕುವ ಜವಾಬ್ದಾರಿ ಇರುತ್ತದೆ. ಇದು ಕೇವಲ ಸಾಮಾನ್ಯ ಜ್ಞಾನ, ನ್ಯಾಯಾಲಯಗಳಲ್ಲಿನ ವಿಚಾರಣೆಗೆ ಅದು ಹೊಂದಿಕೊಳ್ಳುವಂಥದಾದರೂ, ಜೇಮ್ಸ್ ಹೇಳುವುದಕ್ಕೆ ಭಿನ್ನವಾದುದು.

ತನ್ನ ನಂಬಿಕೆಯ ಇಚ್ಛಾಶಕ್ತಿಯನ್ನು ಮಾತ್ರವೇ ಪ್ರತ್ಯೇಕವಾಗಿ ಪರಿಗಣಿಸುವುದು ಜೇಮ್ಸ್‌ನಿಗೆ ತಕ್ಕುದಲ್ಲ. ಅದೊಂದು ಸಂಕ್ರಮಣ ಸಿದ್ಧಾಂತ, ಸಹಜ ಬೆಳವಣಿಗೆಯಿಂದ ವ್ಯವಹಾರ ಸಿದ್ಧಾಂತವಾಗಿ ಮಾರ್ಪಡುವಂಥದ್ದು. ವ್ಯವಹಾರ ಸಿದ್ಧಾಂತವು, ಜೇಮ್ಸ್‌ನಲ್ಲಿನಂತೆ, ಮೂಲತಃ ಸತ್ಯದ ಹೊಸ ವ್ಯಾಖ್ಯೆ. ವ್ಯವಹಾರ ಸಿದ್ಧಾಂತದ ಇನ್ನೂ ಇಬ್ಬರು ಪ್ರತಿಪಾದಕರಿದ್ದಾರೆ, ಎಫ್.ಸಿ.ಎಸ್. ಸ್ಕಿಲ್ಲರ್ ಮತ್ತು ಡಾ। ಜಾನ್ ಡ್ಯೂಯಿ. ಮುಂದಿನ ಅಧ್ಯಾಯದಲ್ಲಿ ಡ್ಯೂಯಿ ಬಗ್ಗೆ ವಿವೇಚಿಸುತ್ತೇನೆ. ಸ್ಕಿಲ್ಲರ್ ಮಿಕ್ಕ ಇಬ್ಬರಷ್ಟು ಪ್ರಮುಖನಲ್ಲ. ಜೇಮ್ಸ್ ಮತ್ತು ಡ್ಯೂಯಿಗಳ ನಡುವೆ ಇರುವುದು ತೀವ್ರತೆಯ ವ್ಯತ್ಯಾಸ. ಡಾ। ಡ್ಯೂಯಿಯ ದೃಷ್ಟಿಕೋನವು ವೈಜ್ಞಾನಿಕವಾದುದು, ಅವರ ವಾದಗಳು ಬಹುತೇಕ ವೈಜ್ಞಾನಿಕ ವಿಧಾನದಿಂದ ಸಾಧಿತವಾದವು, ಆದರೆ ಜೇಮ್ಸ್‌ದು ಮೂಲತಃ ಮತಧಾರ್ಮಿಕ ಹಾಗೂ ನೈತಿಕವಾದವು. ಸ್ಥೂಲವಾಗಿ ಹೇಳುವುದಾದರೆ, ಜನರನ್ನು ಸದ್ಗುಣಿಗಳನ್ನಾಗಿಯೂ ಸುಖಿಗಳನ್ನಾಗಿಯೂ ಮಾಡುವಂತಹ ಯಾವುದೇ ಸಿದ್ಧಾಂತವನ್ನವನು ಸಮರ್ಥಿಸಲು ಸಿದ್ಧ; ಹಾಗೆ ಮಾಡಿದರೆ, ಅವನು ನೀಡುವ ಅರ್ಥದಲ್ಲಿ ಅದು 'ಸತ್ಯ'.

ಜೇಮ್ಸ್‌ನ ಪ್ರಕಾರ ವ್ಯವಹಾರ ತತ್ತ್ವವನ್ನು ಮೊದಲು ರೂಪಿಸಿದವನು ಸಿ.ಎಸ್. ಪೇಯಿರ್ಸ್; ಅವನ ದೃಷ್ಟಿಯಲ್ಲಿ, ವಿಷಯವೊಂದರ ಬಗೆಗಿನ ನಮ್ಮ ಚಿಂತನೆಗಳಲ್ಲಿ ಸ್ಪಷ್ಟತೆಯನ್ನು ಸಾಧಿಸಲು ಬೇಕಾದುದು ವಿಷಯವು ಬೀರಬಹುದಾದ ಕಾರ್ಯಸಾಧ್ಯ ಪರಿಣಾಮಗಳನ್ನು ಹೊಂದಿರುತ್ತದೆ ಎಂಬುದನ್ನಷ್ಟೇ ಪರಿಗಣಿಸುವುದು. ಅದರ ವಿವರಣೆಯಾಗಿ, ತತ್ತ್ವಜ್ಞಾನದ ಕೆಲಸವೆಂದರೆ ಅದು ನಿನ್ನಲ್ಲಿ ಮತ್ತು ನನ್ನಲ್ಲಿ ಅಥವಾ ಇದರಲ್ಲಿ ಅಥವಾ ಅದರಲ್ಲಿ ಏನು ವ್ಯತ್ಯಾಸವನ್ನುಂಟುಮಾಡುತ್ತದೆ ಎಂಬುದನ್ನು ಗುರುತಿಸುವುದು ಎಂಬುದು ಜೇಮ್ಸ್‌ನ ಅಭಿಮತ. ಈ ರೀತಿಯಲ್ಲಿ ಸಿದ್ಧಾಂತಗಳು ಸಾಧನಗಳಾಗುತ್ತವೆಯೇ ಹೊರತು ಒಗಟುಗಳ ಉತ್ತರಗಳಲ್ಲ.

ನಮ್ಮ ಅನುಭವದ ಇತರ ಭಾಗಗಳೊಡನೆ ತೃಪ್ತಿಕರವಾದ ಸಂಬಂಧಗಳನ್ನು ಹೊಂದುವಲ್ಲಿ ನಮಗೆ ಸಹಾಯ ಮಾಡುವಷ್ಟರ ಮಟ್ಟಿಗೆ ಚಿಂತನೆಗಳು ಸತ್ಯವಾಗುತ್ತವೆ ಎಂದು ಜೇಮ್ಸ್ ಹೇಳುತ್ತಾನೆ: 'ಒಂದು ಚಿಂತನೆಯು "ಸತ್ಯ"ವೆನಿಸುವುದು ನಮ್ಮ ಬದುಕಿಗೆ ಅದು ಲಾಭದಾಯಕ ಎಂಬ ನಂಬಿಕೆ ಇರುವವರೆಗೆ ಮಾತ್ರ.' ಸತ್ಯ ಎಂಬುದು ಒಳ್ಳೆಯದರ ಒಂದು ಗುಂಪು, ಅದೇ ಬೇರೆ ಪಂಗಡವಲ್ಲ. ಸತ್ಯವು ಚಿಂತನೆಯಲ್ಲಿ ಸಂಭವಿಸುತ್ತದೆ; ಅದನ್ನು ಘಟನೆಗಳು ಸತ್ಯವಾಗಿ ಮಾಡುತ್ತವೆ.

ನಿಜವಾದ ಬೌದ್ಧಿಕವರ್ಗದವರಲ್ಲಿ ಸತ್ಯವಾದ ಚಿಂತನೆಯು ವಾಸ್ತವತೆಗೆ ಅನುರೂಪವಾಗಿರುತ್ತವೆ, ಆದರೆ 'ಅನುರೂಪ' ಎಂದರೆ 'ನಕಲು' ಎಂದರ್ಥವಲ್ಲ. 'ವಾಸ್ತವತೆಗೆ ಅನುರೂಪವಾಗಿರುವುದು ಎಂದರೆ, ವಿಶಾಲವಾದ ಅರ್ಥದಲ್ಲಿ, ನೇರವಾಗಿ ಅದರೆಡೆಗೆ ಅಥವಾ ಅದರ ಸುತ್ತಮುತ್ತಲಿಗೆ ಕರೆದೊಯ್ಯುವುದು ಎಂದು, ಅಥವಾ ಅದನ್ನೋ ಅದಕ್ಕೆ ಸಂಬಂಧಿಸಿದ ಯಾವುದಾದರೊಂದನ್ನೋ ನಿರ್ವಹಿಸಲು, ನಾವು ಒಪ್ಪದಿದ್ದರೆ ಆಗುತ್ತಿದ್ದುದಕ್ಕಿಂತಲೂ ಉತ್ತಮವಾಗಿ, ಕಾರ್ಯಸಾಧ್ಯವಾಗುವಂತೆ ತಗುಳ್ಚಿಸುವುದು ಎಂದಷ್ಟೇ ಅರ್ಥ.' ಜೊತೆಗೆ, 'ನಿಜವಾದುದು ಎಂದರೆ ನಮ್ಮ ಚಿಂತನೆಯ ಮಾರ್ಗದಲ್ಲಿನ ಯುಕ್ತತೆ ಮಾತ್ರ .. .. ದೀರ್ಘಾವಧಿಯಲ್ಲಿ ಮತ್ತು ಮಾರ್ಗದ ಉದ್ದಕ್ಕೂ' ಎಂದೂ ಸೇರಿಸುತ್ತಾನೆ. ಬೇರೆ ರೀತಿಯಲ್ಲಿ ಹೇಳಬೇಕೆಂದರೆ, 'ಸತ್ಯವನ್ನು ಕಾಣುವ ನಮ್ಮ ಹೊಣೆಗಾರಿಕೆಯೆಂದರೆ ಉಪಯುಕ್ತವಾದುದನ್ನು ನೀಡುವ ನಮ್ಮ ಹೊಣೆಗಾರಿಕೆಯ ಒಂದು ಭಾಗ.'

ವ್ಯವಹಾರ ಸಿದ್ಧಾಂತ ಮತ್ತು ಮತಧರ್ಮದ ಮೇಲಿನ ಒಂದು ಅಧ್ಯಾಯದಲ್ಲಿ ಅವನಿಗೆ ಸಮೃದ್ಧ ಫಲ. 'ಪರಿಣಾಮಗಳು ಉಪಯುಕ್ತವಾಗುವ ಯಾವುದೇ ಆಧಾರಕಲ್ಪನೆಯನ್ನು ನಾವು ತಿರಸ್ಕರಿಸಲಾಗುವುದಿಲ್ಲ.' ವಿಶಾಲ ಅರ್ಥದಲ್ಲಿ, 'ದೇವರ ಬಗೆಗಿನ ಆಧಾರಕಲ್ಪನೆಯು ತೃಪ್ತಿಕರವಾಗಿ ಕಾರ್ಯ ನಿರ್ವಹಿಸುವುದಾದರೆ ಅದು ಸತ್ಯವೇ.' 'ಉನ್ನತ ಶಕ್ತಿಗಳಿವೆ ಮತ್ತು ಅವು, ನಮ್ಮ ಆದರ್ಶಗಳಿಗನುಗುಣವಾದ ರೀತಿಗಳಲ್ಲಿ, ಜಗತ್ತನ್ನು ರಕ್ಷಿಸುವಲ್ಲಿ ಕಾರ್ಯಶೀಲವಾಗಿವೆ ಎಂಬ ಬಗ್ಗೆ ಮತಧಾರ್ಮಿಕ ಅನುಭವಗಳು ನೀಡುವ ಸಾಕ್ಷ್ಯಗಳನ್ನು ನಾವು ನಂಬಬಹುದು.'

ಈ ಸಿದ್ಧಾಂತದಲ್ಲಿ ನನಗೆ ಬಹು ದೊಡ್ಡ ಬೌದ್ಧಿಕ ತೊಡಕುಗಳು ಕಾಣಿಸುತ್ತವೆ. ಪರಿಣಾಮಗಳು ಒಳ್ಳೆಯವಾಗಿದ್ದರೆ ನಂಬಿಕೆಯು 'ಸತ್ಯ' ಎಂಬುದನ್ನದು ಊಹಿಸಿಕೊಳ್ಳುತ್ತದೆ. ಈ ವ್ಯಾಖ್ಯೆಯು ಉಪಯುಕ್ತವಾಗಬೇಕಾದರೆ – ಮತ್ತು ವ್ಯವಹಾರ ಸಿದ್ಧಾಂತಿಗಳ ಪರೀಕ್ಷೆಯು ಖಂಡಿಸದಿದ್ದರೆ – ನಮಗೆ (ಎ) ಯಾವುದು ಒಳ್ಳೆಯದು, (ಬಿ) ಈ ಅಥವಾ ಆ ನಂಬಿಕೆಯ ಪರಿಣಾಮಗಳಾವುವು ಎಂಬುದು ತಿಳಿಯಬೇಕು; ಮತ್ತು ಸತ್ಯವನ್ನು ಅರಿಯುವುದಕ್ಕೆ ಮುಂಚೆಯೇ ನಮಗೆ ಇವು ತಿಳಿದಿರಬೇಕು; ಯಾಕೆಂದರೆ ನಂಬಿಕೆಯೊಂದರ ಪರಿಣಾಮಗಳು ಒಳ್ಳೆಯವು ಎಂದು ತಿಳಿದ ಮೇಲೆ ಮಾತ್ರವೇ ಅದನ್ನು 'ಸತ್ಯ'ವೆಂದು ಕರೆಯುವ ನಮಗೆ ಅಧಿಕಾರ ಬರುತ್ತದೆ. ಫಲಿತಾಂಶವು ಊಹಾತೀತ ಗೊಂದಲ. ಉದಾಹರಣೆಗೆ, ೧೪೯೨ ರಲ್ಲಿ ಕೊಲಂಬಸ್ ಅಟ್ಲಾಂಟಿಕ್ ಅನ್ನು ದಾಟಿದನೇ ಎಂಬುದನ್ನು ತಿಳಿದುಕೊಳ್ಳಬೇಕೆಂದು ಬಯಸಿದಿರಿ ಎಂದುಕೊಳ್ಳೋಣ. ಆಗ ನೀವು, ಇತರರು ಮಾಡಿದಂತೆ, ಪುಸ್ತಕವನ್ನು ನೋಡಬಾರದು. ಈ ನಂಬಿಕೆಯ ಪರಿಣಾಮಗಳೇನು ಎಂಬುದನ್ನು ನೀವು ವಿಚಾರಿಸಿ ಮೊದಲು ತಿಳಿದುಕೊಳ್ಳಬೇಕು, ಆನಂತರ, ಆ

ಪರಿಣಾಮಗಳಿಗೂ, ಅವನು ಹಾಗೆ ಮಾಡಿದ್ದು ೧೪೯೧ ಅಥವಾ ೧೪೯೩ ರಲ್ಲಿ ಎಂಬುದನ್ನು ನಂಬಿದರೆ ಅದರಿಂದ ಉಂಟಾಗುತ್ತಿದ್ದ ಪರಿಣಾಮಗಳಿಗೂ ಇರುವ ವ್ಯತ್ಯಾಸಗಳೇನು ಎಂಬುದನ್ನು ತಿಳಿಯಬೇಕು. ಇದು ಕಷ್ಟಕರವೇ ಆದರೂ, ಪರಿಣಾಮಗಳನ್ನು ನೈತಿಕ ದೃಷ್ಟಿಕೋನದಿಂದ ಅಳೆಯುವುದು ಇನ್ನೂ ಕಷ್ಟಕರ. ೧೪೯೨ ರಲ್ಲಾಗಿದ್ದರೆ ಅದರಿಂದಾದ ಪರಿಣಾಮಗಳು ಅತ್ಯಂತ ಉತ್ತಮ ಎಂದು ನೀವು ಭಾವಿಸಬಹುದು, ಯಾಕೆಂದರೆ ಅದರಿಂದ ನಿಮಗೆ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳು ಬರುತ್ತವೆ. ಆದರೆ ನಿಮ್ಮ ಪ್ರತಿಸ್ಪರ್ಧಿಗಳು, ನೀವು ೧೪೯೧ ಅಥವಾ ೧೪೯೩ ಎಂದು ಹೇಳಿದ್ದು ಮತ್ತೂ ಉತ್ತಮ ಅಂಕಗಳನ್ನು ಪಡೆದಿದ್ದರೆ, ತಮ್ಮದಕ್ಕಿಂತಲೂ ನಿಮ್ಮ ಯಶಸ್ಸನ್ನವರು ನೈತಿಕವಾಗಿ ವಿಷಾದಕರವಾದುದೆಂದು ಪರಿಗಣಿಸುತ್ತಾರೆ. ಪರೀಕ್ಷೆಗಳನ್ನು ಬಿಟ್ಟರೆ, ಇತಿಹಾಸಕಾರನ ವಿಷಯವನ್ನು ಹೊರತುಪಡಿಸಿ, ನಂಬಿಕೆಗಳ ಬೇರಾವುದೇ ಪರಿಣಾಮಗಳನ್ನು ನಾನು ಯೋಚಿಸಲಾರೆ.

ಆದರೆ ಇದು ಈ ತೊಡಕುಗಳ ಕೊನೆಯಲ್ಲ. ನಂಬಿಕೆಯೊಂದರ ಪರಿಣಾಮಗಳ, ನೈತಿಕ ಹಾಗೂ ವಾಸ್ತವಿಕ, ಬಗೆಗಿನ ನಿಮ್ಮ ಅಂದಾಜು ಸತ್ಯವಾಗುತ್ತದೆ; ಯಾಕೆಂದರೆ, ಅದು ಸುಳ್ಳಾಗಿದ್ದರೆ ನಂಬಿಕೆಯ ಸತ್ಯತೆಯ ಪರವಾದ ನಿಮ್ಮ ವಾದವನ್ನು ತಪ್ಪಾಗಿ ಭಾವಿಸಲಾಗುತ್ತದೆ. ಪರಿಣಾಮಗಳ ದೃಷ್ಟಿಯಿಂದ ನಿಮ್ಮ ನಂಬಿಕೆಯು ಸರಿ ಎನ್ನುವುದಾದರೆ, ಜೇಮ್ಸ್‌ನ ಪ್ರಕಾರ, ಅದು ಒಳ್ಳೆಯ ಪರಿಣಾಮಗಳನ್ನು ಹೊಂದಿದೆ ಎಂದು ಹೇಳಿದಂತೆಯೇ; ಮತ್ತು ಇದು ಮತ್ತೆ ಒಳ್ಳೆಯ ಪರಿಣಾಮಗಳನ್ನು ಹೊಂದಿದ್ದರೆ ಮಾತ್ರ ಅದು ಸತ್ಯ, ಮತ್ತು ಕೊನೆಯಿಲ್ಲದಂತೆ ವಾದವು ಸಾಗುತ್ತದೆ. ಇದು ಸಮಂಜಸವಲ್ಲ ಎಂಬುದು ಸ್ಪಷ್ಟವಾಗಿದೆ.

ಮತ್ತೊಂದು ತೊಡಕೂ ಇದರಲ್ಲಿದೆ. ಕೊಲಂಬಸ್ ಎಂಬ ಒಬ್ಬ ವ್ಯಕ್ತಿಯಿದ್ದ ಎಂದು ನಾನು ಹೇಳಿದರೆ ಎಲ್ಲರೂ ನಾನು ಹೇಳುವುದನ್ನು ಸತ್ಯವೆಂದು ಒಪ್ಪುತ್ತಾರೆ. ಆದರೆ ಅದು ಯಾವ ಕಾರಣದಿಂದ ಸತ್ಯ? ಯಾಕೆಂದರೆ ರಕ್ತ-ಮಾಂಸಗಳಿಂದ ಕೂಡಿದ ಅಂತಹ ವ್ಯಕ್ತಿಯೊಬ್ಬನು ೪೫೦ ವರ್ಷಗಳ ಹಿಂದೆ ಇದ್ದ – ಸಂಕ್ಷಿಪ್ತವಾಗಿ, ನನ್ನ ನಂಬಿಕೆಗನುಗುಣವಾಗಿಯೇ ಹೊರತು ಅದರ ಪರಿಣಾಮಗಳಿಂದಾಗಿ ಅಲ್ಲ. ಜೇಮ್ಸ್‌ನ ವ್ಯಾಖ್ಯೆಯ ಪ್ರಕಾರ, ವಾಸ್ತವವಾಗಿ ಎ ಅಸ್ತಿತ್ವದಲ್ಲಿಯೇ ಇಲ್ಲದಿದ್ದರೂ, 'ಎ ಅಸ್ತಿತ್ವದಲ್ಲಿದೆ' ಎಂಬುದು ಸತ್ಯ ಎಂಬುದಾಗಬಹುದು. ಸಾಂತ ಕ್ಲಾಸ್‌ನ ಕಲ್ಪನೆಯು 'ಪದದ ವಿಶಾಲ ಅರ್ಥದಲ್ಲಿ ತೃಪ್ತಿಕರವಾಗಿ ಕಾರ್ಯಶೀಲವಾಗುತ್ತದೆ': ಆದ್ದರಿಂದ, ಸಾಂತ ಕ್ಲಾಸ್ ಅಸ್ತಿತ್ವದಲ್ಲಿಲ್ಲದಿದ್ದರೂ, 'ಸಾಂತ ಕ್ಲಾಸ್ ಅಸ್ತಿತ್ವದಲ್ಲಿದ್ದ' ಎಂಬುದು ಸತ್ಯ. ಜೇಮ್ಸ್ ಹೇಳುತ್ತಾನೆ (ನಾನು ಮತ್ತೆ ಉದ್ಧೃತಗೊಳಿಸುತ್ತಿದ್ದೇನೆ): 'ದೇವರ ಬಗೆಗಿನ ಆಧಾರಕಲ್ಪನೆಯು ತೃಪ್ತಿಕರವಾಗಿ ಕಾರ್ಯ ನಿರ್ವಹಿಸುವುದಾದರೆ ಅದು

ಸತ್ಯವೇ.' ದೇವರು ವಾಸ್ತವವಾಗಿಯೂ ತನ್ನ ಸ್ವರ್ಗದಲ್ಲಿದ್ದಾನೆಯೇ ಎಂಬ ಪ್ರಶ್ನೆಯನ್ನು ಅದು ಅಮುಖ್ಯವೆಂದು ಕೈಬಿಡುತ್ತದೆ; 'ಅವನು' ಉಪಯುಕ್ತ ಆಧಾರಕಲ್ಪನೆಯಾದರೆ, ಅಷ್ಟು ಸಾಕು. ವಿಶ್ವವನ್ನು ನಿರ್ಮಿಸಿದ ವಾಸ್ತುಶಿಲ್ಪಿಯಾದ ದೇವರನ್ನು ಮರೆಯಲಾಗಿದೆ; ನೆನಪಿಸಿಕೊಳ್ಳುವುದು ದೇವರ ಬಗೆಗಿನ ನಂಬಿಕೆಯನ್ನು, ಮತ್ತು ಈ ಸಣ್ಣ ಗ್ರಹದಲ್ಲಿ ವಾಸಿಸುವ ಜನರ ಮೇಲಿನ ಅದರ ಪರಿಣಾಮಗಳನ್ನು ಮಾತ್ರ. ಮತಧರ್ಮವನ್ನು ಉಪಯುಕ್ತವಾದಿಗಳು ಸಮರ್ಥಿಸುವುದನ್ನು ಪೋಪ್ ಖಂಡಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ಇಲ್ಲಿ ಜೇಮ್ಸ್‌ನ ಮತಧಾರ್ಮಿಕ ದೃಷ್ಟಿಕೋನ ಹಾಗೂ ಹಿಂದಿನ ಕಾಲದ ಮತಧಾರ್ಮಿಕ ದೃಷ್ಟಿಕೋನಕ್ಕೂ ಇರುವ ವ್ಯತ್ಯಾಸದತ್ತ ನಾವು ಬರುತ್ತೇವೆ. ಜೇಮ್ಸ್ ಮತಧರ್ಮದಲ್ಲಿ ಆಸಕ್ತನಾಗಿರುವುದು ಒಂದು ಮಾನವ ವಿದ್ಯಮಾನವಾಗಿ, ಆದರೆ ಮತಧರ್ಮ ಚಿಂತಿಸುವ ವಿಷಯಗಳ ಬಗ್ಗೆ ಯಾವುದೇ ಆಸಕ್ತಿಯನ್ನು ತೋರಿಸುವುದಿಲ್ಲ. ಜನಗಳು ಸುಖವಾಗಿರಬೇಕಾದುದು ಅವನಿಗೆ ಮುಖ್ಯ, ಹಾಗಾಗಿ ದೇವರಲ್ಲಿನ ನಂಬಿಕೆಯಿಂದ ಅವರಿಗೆ ಸುಖ ದೊರೆಯುವುದಾದರೆ ನಂಬಿಕೊಳ್ಳಲಿ. ಅಷ್ಟರ ಮಟ್ಟಿಗೆ ಇದು ಒಂದು ಹಿತಚಿಂತನೆಯೇ ಹೊರತು ತತ್ತ್ವಜ್ಞಾನವಲ್ಲ; ಅದು ತತ್ತ್ವಜ್ಞಾನವಾಗುವುದು ನಂಬಿಕೆಯು ಸುಖ ತರುವುದಾದರೆ ಅದು ಸತ್ಯ ಎಂಬುದರಲ್ಲಿ. ಪೂಜಾ ವಸ್ತುವನ್ನು ಬಯಸುವ ವ್ಯಕ್ತಿಗೆ ಇದು ಅತೃಪ್ತಿಕರ. 'ದೇವರಲ್ಲಿ ನಂಬಿಕೆಯಿಟ್ಟರೆ ನಾನು ಸುಖವಾಗಿರಬೇಕು' ಎಂದು ಹೇಳುವುದಲ್ಲ ಅವನಿಗೆ ಬೇಕಾಗಿರುವುದು; ಅದರ ಬದಲು 'ನಾನು ದೇವರಲ್ಲಿ ನಂಬಿಕೆಯಿಟ್ಟಿದ್ದೇನೆ, ಹಾಗಾಗಿ ನಾನು ಸುಖಿ' ಎಂದು ಹೇಳುವುದು. ಮತ್ತು ಅವನು ದೇವರಲ್ಲಿ ನಂಬಿಕೆಯಿಟ್ಟಾಗ, ರೂಸ್‌ವೆಲ್ಟ್ ಅಥವಾ ಚರ್ಚಿಲ್‌ರಲ್ಲಿ ನಂಬಿಕೆಯಿಟ್ಟಂತೆಯೇ, ದೇವರ ಅಸ್ತಿತ್ವದಲ್ಲಿ ನಂಬಿಕೆ ಹೊಂದಿರುತ್ತಾನೆ. ಅವನಿಗೆ ದೇವರು ಒಂದು ವಾಸ್ತವ ಅಸ್ತಿತ್ವವೇ ಹೊರತು ಒಳ್ಳೆಯ ಪರಿಣಾಮಗಳನ್ನುಳ್ಳ ಮಾನವನ ಕಲ್ಪನೆಯಲ್ಲ. ಒಳ್ಳೆಯ ಪರಿಣಾಮಗಳನ್ನುಂಟುಮಾಡುವುದು ಈ ಪ್ರಾಮಾಣಿಕ ನಂಬಿಕೆಯೇ ಹೊರತು, ಜೇಮ್ಸ್‌ನ ನಿರ್ವೀರ್ಯ ಪರ್ಯಾಯವಲ್ಲ. 'ಹಿಟ್ಲರ್ ಅಸ್ತಿತ್ವದಲ್ಲಿದ್ದಾನೆ' ಎಂದರೆ 'ಹಿಟ್ಲರ್ ಅಸ್ತಿತ್ವದಲ್ಲಿದ್ದಾನೆ ಎಂಬ ನಂಬಿಕೆಯ ಪರಿಣಾಮಗಳು ಒಳ್ಳೆಯವು' ಎಂದರ್ಥವಲ್ಲ. ಪ್ರಾಮಾಣಿಕ ಶ್ರದ್ಧಾಳುವಿಗೆ ದೇವರ ನಂಬಿಕೆಯೂ ಇಂತಹುದೇ.

ಜೇಮ್ಸ್‌ನ ಸಿದ್ಧಾಂತವು ಸಂದೇಹವಾದದ ತಳಹದಿಯ ಮೇಲೆ ನಂಬಿಕೆಯ ಸೌಧನಿರ್ಮಾಣದ ಒಂದು ಪ್ರಯತ್ನ; ಎಲ್ಲ ಅಂಥ ಪ್ರಯತ್ನಗಳಂತೆಯೇ ಅದು ಭ್ರಮೆಗಳ ಮೇಲೆ ನಿಂತಿದೆ. ಅವನ ವಿಷಯದಲ್ಲಿ ಈ ಭ್ರಮೆಗಳು ಪುಟಿಯುವುದು ಎಲ್ಲ ಮಾನವಾತೀತ ವಸ್ತುಸ್ಥಿತಿಗಳನ್ನು ಕಡೆಗಣಿಸುವ ಪ್ರಯತ್ನದಿಂದ. ಬರ್ಕ್ಲೀಯ ಆದರ್ಶವಾದದೊಡನೆ ಸೇರಿದ ಸಂದೇಹವಾದವು ಅವನನ್ನು ದೇವರ ಬದಲು

ದೇವರ ನಂಬಿಕೆಯನ್ನು ಸ್ಥಾಪಿಸುವಂತೆಯೂ ಇದೂ ನಡೆಯುತ್ತದೆ ಎಂದು ನಟಿಸುವಂತೆಯೂ ಮಾಡುತ್ತದೆ. ಆದರೆ ಇದು, ಬಹುತೇಕ ಆಧುನಿಕ ತತ್ವಜ್ಞಾನಿಗಳ ಲಕ್ಷಣವಾಗಿರುವ, ಒಂದು ಬಗೆಯ ವ್ಯಕ್ತಿನಿಷ್ಠ ಹುಚ್ಚುತನದ ರೂಪ.

೩೦
ಜಾನ್ ಡ್ಯೂಯಿ

೧೮೫೯ ರಲ್ಲಿ ಹುಟ್ಟಿದ ಜಾನ್ ಡ್ಯೂಯಿಯನ್ನು ಅಮೆರಿಕದ ಮಹಾ ಪ್ರಮುಖ ತತ್ವಜ್ಞಾನಿಯೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಈ ಸಮೀಕ್ಷೆಯಲ್ಲಿಯೂ ಈ ಅಭಿಪ್ರಾಯದೊಡನೆ ನನ್ನ ಸಂಪೂರ್ಣ ಸಹಮತವಿದೆ. ತತ್ವಜ್ಞಾನಿಗಳ ಮೇಲೆ ಮಾತ್ರವಲ್ಲದೆ ಶಿಕ್ಷಣ, ಸೌಂದರ್ಯಮೀಮಾಂಸೆ ಮತ್ತು ರಾಜಕೀಯ ಸಿದ್ಧಾಂತಗಳಲ್ಲಿ ಆಸಕ್ತರಾದವರ ಮೇಲೂ ಅವರು ಬೀರಿರುವ ಪ್ರಭಾವ ಗಾಢವಾದುದು. ಅವರು ಅತ್ಯಂತ ಮೇರು ನಡತೆಯುಳ್ಳ ವ್ಯಕ್ತಿ, ಉದಾರ ದೃಷ್ಟಿಕೋನ ಹೊಂದಿದವರು, ಖಾಸಗಿ ಸಂಬಂಧಗಳ ಬಗ್ಗೆ ಔದಾರ್ಯ ಮತ್ತು ಕಕ್ಕುಲತೆಗಳಿಂದ ಕೂಡಿದ ಮನೋಭಾವದವರು, ಕೆಲಸದಲ್ಲಿ ದಣಿವು ತೋರದವರು. ಅವರ ಅನೇಕ ಅಭಿಪ್ರಾಯಗಳನ್ನು ನಾನು ಪೂರ್ತಿಯಾಗಿ ಒಪ್ಪಿಕೊಳ್ಳುತ್ತೇನೆ. ಅವರ ಬಗ್ಗೆ ನನಗಿರುವ ಗೌರವ ಮತ್ತು ವಿಶ್ವಾಸಗಳ ಕಾರಣದಿಂದಾಗಿ, ಅವರ ಕಕ್ಕುಲತೆಯ ಬಗೆಗಿನ ವೈಯಕ್ತಿಕ ಅನುಭವದಿಂದಾಗಿ, ಅವರನ್ನು ಸಂಪೂರ್ಣವಾಗಿ ಅನುಮೋದಿಸಲು ನನ್ನ ಮನಸ್ಸು ಹೇಳಿದರೂ, ಅವರ ಅತ್ಯಂತ ವಿಶಿಷ್ಟ ತಾತ್ವಿಕ ಸಿದ್ಧಾಂತವಾದ 'ಸತ್ಯ'ದ ಸ್ಥಾನದಲ್ಲಿ 'ವಿಚಾರಣೆ'ಯನ್ನು ತರ್ಕದ ಹಾಗೂ ಜ್ಞಾನಮೀಮಾಂಸೆಯ ಮೂಲಭೂತ ಪರಿಕಲ್ಪನೆಯಾಗಿಸುವ ವಿಷಯದಲ್ಲಿ ನಾನು ವಿಷಾದದಿಂದ ಭಿನ್ನಾಭಿಪ್ರಾಯ ವ್ಯಕ್ತಪಡಿಸಬೇಕಾಗಿದೆ.

ವಿಲಿಯಂ ಜೇಮ್ಸ್‌ನಂತೆಯೇ ಡ್ಯೂಯಿ ಅವರೂ ನ್ಯೂ ಇಂಗ್ಲಂಡ್‌ನವರು, ಆದರೆ ನೂರು ವರ್ಷದ ಹಿಂದಿನಿಂದಲೇ ನ್ಯೂ ಇಂಗ್ಲಂಡ್‌ನ ಕೆಲವು ಮಹಾ ವಂಶೀಯರು ಕೈಬಿಟ್ಟಿರುವ ನ್ಯೂ ಇಂಗ್ಲಂಡ್ ಉದಾರವಾದದ ಸಂಪ್ರದಾಯವನ್ನು ಮುಂದುವರಿಸಿದವರು. ಅವರು ಯಾವತ್ತೂ ಕೇವಲ ತತ್ವಜ್ಞಾನಿಯಾಗಿರಲಿಲ್ಲ. ಅದರಲ್ಲೂ ಶಿಕ್ಷಣವು ಅವರ ಪ್ರಮುಖ ಆಸಕ್ತಿಗಳಲ್ಲಿ ಮುಖ್ಯವಾದುದು. ಮತ್ತು ಅಮೆರಿಕದ ಶಿಕ್ಷಣಪದ್ಧತಿಯ ಮೇಲೆ ಬೀರಿರುವ ಅವರ ಪ್ರಭಾವವು ಗಾಢವಾದುದು. ನಾನೂ ಕಡಿಮೆ ರೀತಿಯಲ್ಲಿ ಅವರದರಂತೆಯೇ ಶಿಕ್ಷಣದ ಮೇಲೆ ಪ್ರಭಾವ ಬೀರಲು

ಪ್ರಯತ್ನಿಸಿದ್ದೇನೆ. ನನ್ನಂತೆಯೇ ಪ್ರಾಯಶಃ ಅವರೂ ಅವರ ಬೋಧನೆಯನ್ನು ಅನುಸರಿಸುತ್ತೇವೆಂದು ಹೇಳಿಕೊಳ್ಳುವವರ ಅನುಸರಣೆಯ ಬಗ್ಗೆ ಸದಾ ತೃಪ್ತಿಯನ್ನೇನೂ ಹೊಂದಿಲ್ಲವಾದರೂ, ಯಾವುದೇ ಹೊಸ ಸಿದ್ಧಾಂತವಾದರೂ ಅನುಷ್ಠಾನದಲ್ಲಿ ಸ್ವಲ್ಪ ಮಟ್ಟಿಗಿನ ದುಂದು ಹಾಗೂ ಅತಿಶಯತೆಯಿಂದ ಕೂಡಿರುವುದು ಸಹಜ. ಆದರೆ ಇದು ಯೋಚಿಸುವಷ್ಟೇನೂ ಮುಖ್ಯವಾದುದಲ್ಲ, ಯಾಕೆಂದರೆ ಹೊಸತಾದುದರ ದೋಷಗಳು ಸಾಂಪ್ರದಾಯಿಕವಾದುದರಕ್ಕಿಂತ ಹೆಚ್ಚು ಢಾಳಾಗಿ ಕಾಣುತ್ತವೆ.

ಡ್ಯೂಯಿ ಅವರು ೧೮೯೪ರಲ್ಲಿ ಚಿಕಾಗೋದಲ್ಲಿ ತತ್ವಜ್ಞಾನದ ಪ್ರಾಧ್ಯಾಪಕರಾದಾಗ, ಅವರ ವಿಷಯಗಳಲ್ಲಿ ಬೋಧನಶಾಸ್ತ್ರವೂ (ಪೆಡಾಗಜಿ) ಸೇರಿತ್ತು. ಅವರು ಕಾರ್ಯಕ್ರಮ ಯೋಜನೆಯೊಂದನ್ನು ಆರಂಭಿಸಿದರು ಮತ್ತು ಶಿಕ್ಷಣದ ಬಗ್ಗೆ ಸಾಕಷ್ಟು ಬರೆದರು. ಈ ಅವಧಿಯಲ್ಲಿ ಅವರು ಏನು ಬರೆದರು ಎನ್ನುವುದು ಅವರ ಕೃತಿಯಾದ 'ದ ಸ್ಕೂಲ್ ಅಂಡ್ ಸೊಸೈಟಿ'ಯಲ್ಲಿ ಸೇರಿದೆ, ಇದನ್ನು ಅವರ ಕೃತಿಗಳಲ್ಲೆಲ್ಲ ಅತ್ಯಂತ ಗಾಢ ಪ್ರಭಾವ ಬೀರಿದ್ದೆಂದು ಪರಿಗಣಿಸಲಾಗಿದೆ. ತಮ್ಮ ಜೀವಮಾನದುದ್ದಕ್ಕೂ ಅವರು ಶಿಕ್ಷಣದ ಬಗ್ಗೆ, ತತ್ವಜ್ಞಾನದ ಬಗ್ಗೆ ಬರೆದಷ್ಟೇ, ವಿಪುಲವಾಗಿ ಬರೆಯುತ್ತಲೇ ಬಂದಿದ್ದಾರೆ.

ಅವರ ಆಲೋಚನೆಗಳನ್ನು ಇತರ ರಾಜಕೀಯ ಮತ್ತು ಸಾಮಾಜಿಕ ವಿಷಯಗಳೂ ಅಷ್ಟೇ ಆವರಿಸಿವೆ. ನನ್ನಂತೆಯೇ, ರಷ್ಯಾ ಮತ್ತು ಚೈನಾಗಳ ಸಂದರ್ಶನದಿಂದ ತುಂಬ ಪ್ರಭಾವಕ್ಕೊಳಗಾದವರು, ಮೊದಲನೆಯದರ ಬಗ್ಗೆ ನೇತ್ಯಾತ್ಮಕವಾಗಿ, ಮತ್ತು ಎರಡನೆಯದರ ಬಗ್ಗೆ ಇತ್ಯಾತ್ಮಕವಾಗಿ. ಅವರು ಮೊದಲನೆಯ ಮಹಾಯುದ್ಧಕ್ಕೆ ಮನಸ್ಸಿಲ್ಲದೇ ಬೆಂಬಲವಿತ್ತಿದ್ದರು. ಟ್ರಾಟ್‌ಸ್ಕಿಯ ಮೇಲಿನ ಆರೋಪದ ವಿಚಾರಣೆಯಲ್ಲಿ ಅವರು ಮುಖ್ಯವಾದ ಪಾತ್ರ ವಹಿಸಿದ್ದರು, ಆದರೆ ಆರೋಪಗಳಿಗೆ ಯಾವುದೇ ಆಧಾರವಿಲ್ಲ ಎಂದು ಅವರು ನಂಬಿದ್ದರು; ಸ್ಟಾಲಿನ್‌ನ ಬದಲು ಟ್ರಾಟ್‌ಸ್ಕಿ ಲೆನಿನ್‌ನ ಉತ್ತರಾಧಿಕಾರಿಯಾಗಿದ್ದರೆ ಸೋವಿಯತ್‌ರು ತೃಪ್ತರಾಗುತ್ತಿದ್ದರೆಂದು ಅವರೇನೂ ಭಾವಿಸಿರಲಿಲ್ಲ. ಒಳ್ಳೆಯ ಸಮಾಜವನ್ನು ನಿರ್ಮಿಸಲು ಸರ್ವಾಧಿಕಾರಕ್ಕೆ ಎಡೆ ಮಾಡಿಕೊಡುವ ಹಿಂಸಾತ್ಮಕ ಕ್ರಾಂತಿಯು ಸಮರ್ಪಕ ಮಾರ್ಗವೆಂದು ಅವರಿಗೆ ಮನವರಿಕೆಯಾಗಿರಲಿಲ್ಲ. ಎಲ್ಲ ಆರ್ಥಿಕ ವಿಷಯಗಳಲ್ಲೂ ಉದಾರವಾದಿಯಾಗಿದ್ದರೂ, ಅವರೆಂದೂ ಮಾರ್ಕ್ಸ್‌ವಾದಿಯಾಗಲಿಲ್ಲ. ಒಮ್ಮೆ, ಸಂಪ್ರದಾಯನಿಷ್ಠ ಮತತತ್ವಗಳ ಗೋಜಲಿನಿಂದ ಬಿಡಿಸಿಕೊಂಡ ಬಳಿಕ ತಾವು ಮತ್ತೊಂದರ ಕೋಳಗಳಿಗೆ ಕೈಯೊಡ್ಡುವುದಿಲ್ಲವೆಂದು ಅವರು ಹೇಳಿದ್ದನ್ನು ಕೇಳಿದ್ದೇನೆ. ಇವೆಲ್ಲದರಲ್ಲಿಯೂ ಅವರ ದೃಷ್ಟಿಕೋನವು ಹೆಚ್ಚು ಕಡಿಮೆ ನನ್ನದರಂತೆಯೇ ಇದೆ.

ತಾತ್ವಿಕ ದೃಷ್ಟಿಕೋನಕ್ಕೆ ಮಾತ್ರವೇ ಸಂಬಂಧಿಸಿದಂತೆ, ಡ್ಯೂಯಿ ಅವರ ಕೃತಿಯ ಪ್ರಮುಖ ಸಾಧನೆಯು 'ಸತ್ಯ'ವನ್ನು ಕುರಿತ ಸಾಂಪ್ರದಾಯಿಕ ದೃಷ್ಟಿಕೋನದ ವಿಮರ್ಶೆಯಲ್ಲಿದೆ, ಇದು 'ಸಾಧನಸಿದ್ಧಾಂತ' ಎಂದವರು ಕರೆಯುವುದಲ್ಲಿ ಅಂತರ್ಗತವಾಗಿದೆ. ಬಹುತೇಕ ವೃತ್ತಿಪರ ತತ್ವಜ್ಞಾನಿಗಳ ಪರಿಕಲ್ಪನೆಯಲ್ಲಿ 'ಸತ್ಯ'ವು ಜಡ ಮತ್ತು ಅಂತಿಮ, ಪರಿಪೂರ್ಣ ಮತ್ತು ಚಿರಂತನ; ಮತಧಾರ್ಮಿಕ ಪರಿಭಾಷೆಯಲ್ಲಿ, ಅದನ್ನು ದೈವವಾಕ್ಕುಗಳೊಡನೆ, ಮತ್ತು ವೈಚಾರಿಕ ಜೀವಿಗಳಾಗಿ ನಾವು ದೇವರೊಡನೆ ಹಂಚಿಕೊಳ್ಳುವ ಆಲೋಚನೆಗಳೊಂದಿಗೆ, ಸಮೀಕರಿಸಬಹುದು, ಸತ್ಯದ ಪರಿಪೂರ್ಣ ಮಾದರಿಯೆಂದರೆ ಮಗ್ಗಿಕೋಷ್ಠಕ, ಅದು ನಿಷ್ಕೃಷ್ಟವೂ, ಸಂಕ್ಷಿಪ್ತವೂ ಆಗಿರುವುದಲ್ಲದೆ ಎಲ್ಲ ಐಹಿಕ ವಿನೋದದಿಂದ ಮುಕ್ತವಾಗಿರುವಂಥದು. ಪೈಥಾಗೊರಾಸ್ ಕಾಲದಿಂದಲೂ, ಮತ್ತು ಇನ್ನೂ ಹೆಚ್ಚಾಗಿ ಪ್ಲೇಟೋ ಕಾಲದಿಂದಲೂ, ಗಣಿತವನ್ನು ಮತಧರ್ಮಶಾಸ್ತ್ರದೊಡನೆ ಸಂಬಂಧಿಸಲಾಗಿದೆ, ಹಾಗೂ ಬಹುತೇಕ ವೃತ್ತಿಪರ ತತ್ವಜ್ಞಾನಿಗಳ ಜ್ಞಾನಮೀಮಾಂಸೆಯ ಮೇಲೆ ಆಳವಾದ ಪ್ರಭಾವ ಬೀರಿದೆ. ಡ್ಯೂಯಿ ಅವರ ಆಸಕ್ತಿಗಳು ಗಣಿತಾತ್ಮಕವಾದವಕ್ಕಿಂತ ಹೆಚ್ಚಾಗಿ ಜೀವವೈಜ್ಞಾನಿಕವಾದವು, ಮತ್ತು ಅವರು ಆಲೋಚನೆಯನ್ನು ವಿಕಾಸಪ್ರಕ್ರಿಯೆಯ ರೂಪದಲ್ಲಿ ಪರಿಕಲ್ಪಿಸಿಕೊಳ್ಳುತ್ತಾರೆ. ಮನುಷ್ಯರು ಬರಬರುತ್ತ ಹೆಚ್ಚು ತಿಳಿಯುತ್ತ ಹೋಗುತ್ತಾರೆ ಎಂದು ಒಪ್ಪುವುದು ಸಾಂಪ್ರದಾಯಿಕ ದೃಷ್ಟಿಕೋನವಾದರೂ, ಸಾಧಿಸಿದ ಬಳಿಕ ಪ್ರತಿ ಜ್ಞಾನಾಂಶವನ್ನೂ ಅಂತಿಮವೆಂದು ಪರಿಗಣಿಸುವುದಿಲ್ಲ. ಹೆಗೆಲ್ ಮಾನವನ ಜ್ಞಾನವನ್ನು ಈ ರೀತಿಯಲ್ಲಿ ನೋಡುವುದಿಲ್ಲವೆಂಬುದು ನಿಜ. ಅವನು ಮಾನವ ಜ್ಞಾನವನ್ನು ಸಾವಯವವಾದ ಇಡಿ ಎಂದು ಪರಿಗಣಿಸುತ್ತಾನೆ, ಕ್ರಮೇಣ ಪ್ರತಿ ಭಾಗವೂ ಬೆಳೆಯುತ್ತ ಹೋಗುತ್ತದೆ, ಇಡಿಯು ಪರಿಪೂರ್ಣವಾಗುವದಕ್ಕಿಂತ ಮುಂಚೆ ಯಾವುದೆ ಭಾಗವೂ ಪರಿಪೂರ್ಣವಾಗುವುದಿಲ್ಲ ಎಂಬುದು ಅವನ ಅಭಿಮತ. ಹೆಗೆಲಿಯನ್ ತಾತ್ವಿಕತೆಯು ಡ್ಯೂಯಿ ಅವರನ್ನು ತಾರುಣ್ಯದಲ್ಲಿ ಪ್ರಭಾವಿಸಿದ್ದರೂ, ಅದರ ಪ್ರಕಾರ ತಾತ್ಕಾಲಿಕ ಪ್ರಕ್ರಿಯೆಗಿಂತ ಆತ್ಯಂತಿಕ ಸತ್ಯ ಮತ್ತದರ ಚಿರಂತನ ಜಗತ್ತುಗಳು ಇನ್ನೂ ಇವೆ. ಇವು ಯಾವುವೂ ಡ್ಯೂಯಿ ಅವರ ಚಿಂತನೆಯಲ್ಲಿ ಸೇರಿಲ್ಲ, ಅವರ ಪ್ರಕಾರ ಎಲ್ಲ ವಾಸ್ತವಗಳೂ ತಾತ್ಕಾಲಿಕ, ಪ್ರಕ್ರಿಯೆಯು ವಿಕಾಸಶೀಲವಾದರೂ, ಅದು ಹೆಗೆಲ್‌ನಲ್ಲಿರುವಂತೆ, ಚಿರಂತನ ಚಿಂತನೆಯನ್ನು ಬಿಚ್ಚಿಕೊಳ್ಳುವುದಲ್ಲ.

ಇಲ್ಲಿಯವರೆಗೆ, ನಾನು ಡ್ಯೂಯಿ ಅವರ ವಾದವನ್ನು ಒಪ್ಪಿಕೊಳ್ಳುತ್ತೇನೆ. ಅಥವಾ ಇಷ್ಟನ್ನೇ ನಾನು ಒಪ್ಪಿಕೊಳ್ಳುವುದು ಎಂದೂ ಅಲ್ಲ. ನಾನು ಭಿನ್ನಾಭಿಪ್ರಾಯ ಹೊಂದಿರುವ ಅಂಶಗಳ ಕುರಿತ ಚರ್ಚೆಯನ್ನು ಮುಂದಿಡುವ ಮುಂಚೆ, 'ಸತ್ಯ'ದ ಬಗೆಗಿನ ನನ್ನದೇ ದೃಷ್ಟಿಕೋನದ ಬಗ್ಗೆ ಒಂದೆರಡು ಮಾತುಗಳನ್ನಾಡಲು ಬಯಸುತ್ತೇನೆ.

ಮೊದಲನೆಯ ಪ್ರಶ್ನೆಯೆಂದರೆ: 'ಸತ್ಯ' ಮತ್ತು 'ಸುಳ್ಳು' ಎಂಬುದು ಎಂಥದ್ದು? ಅತ್ಯಂತ ಸರಳ ಉತ್ತರವೆಂದರೆ: 'ಕೊಲಂಬಸ್ ೧೪೯೨ ರಲ್ಲಿ ಸಾಗರವನ್ನು ದಾಟಿದ' ಎಂಬ ವಾಕ್ಯವು ಸತ್ಯ; 'ಕೊಲಂಬಸ್ ಸಾಗರವನ್ನು ದಾಟಿದ್ದು ೧೭೭೬ ರಲ್ಲಿ' ಎಂಬುದು ಸುಳ್ಳು. ಈ ಉತ್ತರವು ಸರಿಯಾದುದುದಾದರೂ, ಅಪೂರ್ಣವಾದುದು. ವಾಕ್ಯಗಳು ಸರಿಯೋ ತಪ್ಪೋ ಆಗಿರಬಹುದು, ಯಾಕೆಂದರೆ ಅವು 'ಅರ್ಥವತ್ತಾ'ದವು, ಮತ್ತು ಅವುಗಳ ಅರ್ಥವಂತಿಕೆಯು ಬಳಸಿರುವ ಭಾಷೆಯನ್ನು ಅವಲಂಬಿಸಿರುತ್ತದೆ. ನೀವು ಕೊಲಂಬಸ್‌ನ ಬಗೆಗಿನ ಪುಸ್ತಕವನ್ನು ಅರೇಬಿಕ್‌ಗೆ ಭಾಷಾಂತರಿಸುತ್ತಿದ್ದರೆ, ನೀವು '೧೪೯೨' ಎಂಬುದನ್ನು ಮಹಮ್ಮದೀಯ ಶಕೆಗೆ ಬದಲಾಯಿಸಿ ಹೇಳಬೇಕು. ಬೇರೆ ಬೇರೆ ಭಾಷೆಗಳಲ್ಲಿನ ವಾಕ್ಯಗಳು ಒಂದೇ ಅರ್ಥವಂತಿಕೆಯನ್ನು ಹೊಂದಿರಬಹುದು, ಮತ್ತು ಆ ಅರ್ಥವಂತಿಕೆಯೇ, ಪದಗಳಲ್ಲ, ವಾಕ್ಯವು 'ಸತ್ಯ'ವೇ 'ಸುಳ್ಳೇ' ಎಂದು ನಿರ್ಧರಿಸುವುದು. ಒಂದು ವಾಕ್ಯವನ್ನು ಒತ್ತಿ ಹೇಳಿದರೆ, ಆಗ ಒಂದು ನಂಬಿಕೆಯನ್ನು ಅಭಿವ್ಯಕ್ತಗೊಳಿಸುತ್ತಿರುತ್ತೀರಿ, ಅದನ್ನು ಅಷ್ಟರ ಮಟ್ಟಿಗೇ ಬೇರೆ ಭಾಷೆಯಲ್ಲಿ ಹೇಳಬಹುದು. 'ನಂಬಿಕೆ' ಎಂಥದ್ದಾದರೂ ಆಗಿರಲಿ, ಅದು 'ಸತ್ಯ' ಅಥವಾ 'ಸುಳ್ಳು' ಆಗಿರುತ್ತದೆ ಅಥವಾ 'ಹೆಚ್ಚು ಕಡಿಮೆ ಸತ್ಯ' ಆಗಿರುತ್ತದೆ. ಹೀಗೆ ನಾವು 'ನಂಬಿಕೆ'ಯ ವಿಚಾರಣೆಯನ್ನು ಕೈಗೊಳ್ಳಬೇಕಾಗುತ್ತದೆ.

ಈಗ, ನಂಬಿಕೆಯೊಂದು ತಕ್ಕಮಟ್ಟಿಗೆ ಸರಳವಾದುದಾದರೆ, ಮಾತುಗಳಲ್ಲಿ ಅಭಿವ್ಯಕ್ತಗೊಳಿಸದೆಯೇ ಅಸ್ತಿತ್ವದಲ್ಲಿರಬಹುದು. ವೃತ್ತವೊಂದರ ಪರಿಧಿ ಮತ್ತು ವ್ಯಾಸದ ಅನುಪಾತವು ಸುಮಾರು ೩.೧೪೧೫೯ ಎಂಬುದನ್ನಾಗಲೀ, ರೂಬಿಕಾನ್ ಅನ್ನು ದಾಟಲು ನಿರ್ಧರಿಸಿದಾಗ ಸೀಸರ್ ರೋಮನ್ ಸಂವಿಧಾನದ ಹಣೆಬರಹವನ್ನು ತೊಡೆದುಬಿಟ್ಟ ಎಂಬುದನ್ನಾಗಲೀ ಪದಗಳನ್ನು ಉಪಯೋಗಿಸದೆ ಹೇಳುವುದು ಕಷ್ಟ. ಆದರೆ ಸರಳ ಸಂದರ್ಭಗಳಲ್ಲಿ ಮಾತುಗಳಿಗೆ ಹೊರತಾದ ನಂಬಿಕೆಗಳು ಸಾಮಾನ್ಯ. ನಿದರ್ಶನಕ್ಕೆ, ಮೆಟ್ಟಿಲಿಗಳನ್ನಿಳಿಯುವಾಗ ಯಾವಾಗ ತಳವನ್ನು ತಲುಪುತ್ತೀರಿ ಎಂಬ ಬಗ್ಗೆ ತಪ್ಪು ಮಾಡುತ್ತೀರಿ ಎಂದುಕೊಳ್ಳಿ; ನೆಲಕ್ಕೆ ತಲುಪುವುದಕ್ಕೆ ಬೇಕಾದ ಹೆಜ್ಜೆಯನ್ನಿಡುತ್ತೀರಿ, ಹೀಗಾಗಿ ದಡಕ್ಕನೆ ನೆಲ ತಲುಪುತ್ತೀರಿ. ಅದರ ಪರಿಣಾಮವೆಂದರೆ 'ಓಹ್' ಎಂಬ ಅಚ್ಚರಿಯ ಉದ್ಗಾರ ಅಥವಾ ಶಾಕ್. ನೀವು ಆಗ ಸಹಜವಾಗಿ ಹೇಳುವುದೆಂದರೆ: 'ನಾನು ಆಗಲೇ ತಳ ತಲುಪಿದ್ದೇನೆಂದು ಭಾವಿಸಿದೆ', ಆದರೆ ವಾಸ್ತವವಾಗಿ ನೀವು ಮೆಟ್ಟಿಲುಗಳ ಬಗ್ಗೆ ಯೋಚಿಸುತ್ತಲೇ ಇರಲಿಲ್ಲ, ಅಥವಾ ತಪ್ಪು ಮಾಡುತ್ತಿರಲಿಲ್ಲ. ನೀವಿನ್ನೂ ಅದನ್ನು ತಲುಪುವುದಕ್ಕೆ ಮುಂಚೆಯೇ ನಿಮ್ಮ ಮಾಂಸಖಂಡಗಳು ತಳಕ್ಕೆ ಸರಿಹೊಂದಿದ್ದವು. ತಪ್ಪು ಮಾಡಿದ್ದು ಮನಸ್ಸಿಗಿಂತ ಹೆಚ್ಚಾಗಿ ನಿಮ್ಮ ದೇಹ, ಅಥವಾ ಏನಾಯಿತು ಎಂಬುದನ್ನು ವಿವರಿಸುವ ಸಹಜ ರೀತಿ ಅದು. ಆದರೆ ವಾಸ್ತವದಲ್ಲಿ ದೇಹ ಮತ್ತು ಮನಸ್ಸುಗಳ ವ್ಯತ್ಯಾಸ ಎನ್ನುವುದು

ಸಂದಿಗ್ಧವಾದುದು. ದೇಹ ಮತ್ತು ಮನಸ್ಸು ಎಂದು ಭಾಗಗಳ ಬಗ್ಗೆ ಮಾತನಾಡುವುದಕ್ಕಿಂತ ಅವುಗಳನ್ನು ಪಕ್ಕಕ್ಕೆ ಸರಿಸಿ ಇಡೀ 'ಶರೀರ'ದ ಬಗ್ಗೆ ಮಾತನಾಡುವುದು ಸಮಂಜಸವಾದುದು. ಆಗ ಒಬ್ಬನು ಹೀಗೆನ್ನಬಹುದು: ನೀವು ತಳದಲ್ಲಿದ್ದರೆ ಇರಬಹುದಾದ ರೀತಿಗೆ ಅನುಗುಣವಾಗಿ ನಿಮ್ಮ ಶರೀರವು ಅಳವಡಿಕೆ ಹೊಂದಿತ್ತು, ಆದರೆ ವಸ್ತುತಃ ಅದು ಸೂಕ್ತವಾಗಿರಲಿಲ್ಲ. ಅಳವಡಿಕೆಯ ಈ ವೈಫಲ್ಯವು ತಪ್ಪಿನಲ್ಲಿತ್ತು, ಹೀಗಾಗಿ ನೀವು ತಪ್ಪು ನಂಬಿಕೆಯನ್ನು ಹೊಂದಿದ್ದಿರಿ ಎಂದು ಹೇಳಬಹುದು.

ಮೇಲಿನ ನಿದರ್ಶನದಲ್ಲಿ ಪರೀಕ್ಷೆ ಅಥವಾ ತಪ್ಪು ಎಂಬುದು ಆಶ್ಚರ್ಯ. ಇದು ಪರೀಕ್ಷಿಸಬಹುದಾದ ಎಲ್ಲ ನಂಬಿಕೆಗಳ ವಿಷಯದಲ್ಲಿಯೂ ಸರಿ ಎಂಬುದು ನನ್ನ ಅಭಿಪ್ರಾಯ. ತಪ್ಪು ನಂಬಿಕೆ ಎಂಬುದು, ಸೂಕ್ತ ಸಂದರ್ಭಗಳಲ್ಲಿ, ವ್ಯಕ್ತಿಯನ್ನು ಆಶ್ಚರ್ಯಕ್ಕೊಳಗಾಗುವಂತೆ ಮಾಡುವಂಥದು, ಅದೇ ಸರಿಯಾದ ನಂಬಿಕೆಯು ಈ ಪರಿಣಾಮವನ್ನು ಹೊಂದಿರುವುದಿಲ್ಲ. ಆಶ್ಚರ್ಯವು ಅನ್ವಯಿಸಬಹುದಾದ ಒಳ್ಳೆಯ ಒರೆಗಲ್ಲಾದರೂ, ಅದು 'ಸತ್ಯ' ಮತ್ತು 'ತಪ್ಪು'ಗಳ ಅರ್ಥಗಳನ್ನು ನೀಡಲಾರದು, ಜೊತೆಗೆ ಯಾವಾಗಲೂ ಅದನ್ನು ಅನ್ವಯಿಸಲೂ ಸಾಧ್ಯವಿಲ್ಲ. ನೀವು ಗುಡುಗಿನಿಂದ ಕೂಡಿದ ವಾತಾವರಣದಲ್ಲಿ ನಡೆಯುತ್ತಿದ್ದೀರಿ ಎಂದು ಭಾವಿಸಿಕೊಳ್ಳಿ, ಆಗ ನೀವು ಹೀಗೆಂದುಕೊಳ್ಳುತ್ತೀರಿ: 'ನಾನು ಸಿಡಿಲಿಗೆ ಬಲಿಯಾಗುವ ಸಂಭವವಿಲ್ಲ'. ಮಾರನೆಯ ಕ್ಷಣವೇ ನಿಮ್ಮ ಮೇಲೆ ಸಿಡಿಲು ಬಿತ್ತು, ಆಗ ನಿಮಗೆ ಆಶ್ಚರ್ಯವಾಗುವುದಿಲ್ಲ, ಯಾಕೆಂದರೆ ನೀವು ಸತ್ತಿರುತ್ತೀರಿ. ಸರ್ ಜೇಮ್ಸ್ ಜೀನ್ಸ್ ನಿರೀಕ್ಷಿಸುವಂತೆ ಕಾಣುವ ಹಾಗೆ, ಒಂದೊಮ್ಮೆ ಸೂರ್ಯನು ಸಿಡಿದರೆ, ನಾವೆಲ್ಲ ತಕ್ಷಣವೇ ಸಾಯುತ್ತೇವೆ, ಹೀಗಾಗಿ ನಮಗೆ ಆಶ್ಚರ್ಯವಾಗುವುದಿಲ್ಲ. ಆದರೆ ನಾವು ಆವಘಡವನ್ನು ನಿರೀಕ್ಷಿಸದಿದ್ದರೆ ನಾವು ತಪ್ಪು ತಿಳಿದಿರುತ್ತೇವೆ. ಅಂಥ ನಿದರ್ಶನಗಳು ಸತ್ಯ ಅಥವಾ ಸುಳ್ಳಿನ ವಸ್ತುನಿಷ್ಠತೆಯನ್ನು ಸೂಚಿಸುತ್ತವೆ; ಶರೀರಕ್ಕೆ ಸಂಬಂಧಿಸಿದಂತೆ ಸತ್ಯ ಅಥವ ಸುಳ್ಳಾದುದು, ಸಾಮಾನ್ಯವಾಗಿ, ಶರೀರದ ಹೊರಗಿನ ಘಟನೆಗಳಿಗೆ ಸಂಬಂಧಪಟ್ಟವು. ಕೆಲವು ವೇಳೆ, ಸರಿ ತಪ್ಪುಗಳನ್ನು ನಿರ್ಧರಿಸಲು ಪ್ರಾಯೋಗಿಕ ಪರೀಕ್ಷೆಗಳಿಂದ ಸಾಧ್ಯವಾಗುತ್ತವೆ, ಮತ್ತೆ ಕೆಲವು ವೇಳೆ ಸಾಧ್ಯವಾಗುವುದಿಲ್ಲ. ಸಾಧ್ಯವಾಗದಿರುವಾಗ ಪರ್ಯಾಯವು ಉಳಿಯುತ್ತದೆ, ಅದು ಅರ್ಥವತ್ತಾಗಿರುತ್ತದೆ.

ಸತ್ಯ ಮತ್ತು ಸುಳ್ಳುಗಳ ಬಗೆಗಿನ ನನ್ನ ದೃಷ್ಟಿಕೋನವನ್ನು ಹೆಚ್ಚಿಗೆ ಬೆಳೆಸುವುದು ನನಗಿಷ್ಟವಿಲ್ಲ, ಈಗ ಡ್ಯೂಯಿ ಅವರ ಸಿದ್ಧಾಂತವನ್ನು ಪರಿಶೀಲಿಸಲು ತೊಡಗುತ್ತೇನೆ.

ಸ್ವಯಂಪೂರ್ಣವಾಗಿ 'ಸತ್ಯ'ವಾಗಿರುವ ಅಥವಾ ಅವುಗಳಿಗೆ ವಿರುದ್ಧವಾಗಿರುವವು ಸ್ವಯಂಪೂರ್ಣವಾಗಿ ತಪ್ಪಾಗಿರುವ ತೀರ್ಮಾನದ ಗುರಿಯು ಡ್ಯೂಯಿ ಅವರದಲ್ಲ. ಅವರ ಅಭಿಪ್ರಾಯದಲ್ಲಿ 'ವಿಚಾರಣೆ' ಎಂಬ ಪ್ರಕ್ರಿಯೆಯೊಂದಿದೆ,

ಅದು ಶರೀರ ಮತ್ತು ಅದರ ಪರಿಸರಗಳ ನಡುವಣ ಪರಸ್ಪರ ಹೊಂದಾಣಿಕೆಯ ಒಂದು ರೂಪ. ನನ್ನ ದೃಷ್ಟಿಕೋನದಿಂದ, ಡ್ಯೂಯಿ ಅವರನ್ನು ಒಪ್ಪಿಕೊಳ್ಳಲು ಸಾಧ್ಯವಾಗುವವರೆಗೂ ಹೋಗಬೇಕೆಂದು ನಾನು ಬಯಸುವುದಾದರೆ, ನಾನು 'ಅರ್ಥವಂತಿಕೆ' ಅಥವಾ 'ಸೂಚ್ಯತೆ'ಯ ವಿಶ್ಲೇಷಣೆಯಿಂದ ಆರಂಭಿಸಬೇಕು. ನೀವು ಮೃಗಾಲಯದಲ್ಲಿದ್ದೀರಿ ಮತ್ತು, ನಿಮಗೆ ಮೆಗಾಫೋನ್ ಮೂಲಕ 'ಸಿಂಹವೊಂದು ಈಗಷ್ಟೇ ತಪ್ಪಿಸಿಕೊಂಡಿದೆ' ಎಂಬ ಒಂದು ಧ್ವನಿ ಕೇಳಿಸುತ್ತದೆ ಎಂದು ಭಾವಿಸಿಕೊಳ್ಳಿ, ಆಗ ನೀವು ಸಿಂಹವನ್ನು ಕಂಡಿದ್ದರೆ ಹೇಗೋ ಹಾಗೆಯೇ ವರ್ತಿಸಲು ತೊಡಗುತ್ತೀರಿ, ಅಂದರೆ, ಆದಷ್ಟೂ ಬೇಗ ಅಲ್ಲಿಂದ ಕಾಲ್ತೆಗೆಯುತ್ತೀರಿ. 'ಸಿಂಹವೊಂದು ಈಗಷ್ಟೇ ತಪ್ಪಿಸಿಕೊಂಡಿದೆ' ಎಂಬ ವಾಕ್ಯದ ಅರ್ಥ ಒಂದು ಘಟನೆ ನಡೆದಿದೆ ಎಂದು, ನೀವು ಕಂಡಿದ್ದರೆ ಹೇಗೋ ಅಂತಹುದೇ ವರ್ತನೆಗೊಳಗಾಗುತ್ತೀರಿ ಎಂಬಂಥದು. ಸ್ಥೂಲವಾಗಿ, ಎ ಎಂಬ ವಾಕ್ಯದ ಅರ್ಥವೆಂದರೆ, ಇ ಎಂಬ ಘಟನೆಯು ಉದ್ದೀಪಿಸುತ್ತಿದ್ದಂತಹ ವರ್ತನೆಯನ್ನು ಉದ್ದೀಪಿಸಿದರೆ, ಇ ಎಂಬ ಘಟನೆಯೇ. ಅಂತಹ ಒಂದು ಘಟನೆ ನಡೆದೇ ಇಲ್ಲದಿದ್ದರೆ, ವಾಕ್ಯವು ಸುಳ್ಳಾಗುತ್ತದೆ. ಇದೇ ರೀತಿಯು ಮಾತಿನಿಂದ ಸೂಚಿತವಾಗದ ನಂಬಿಕೆಗೂ ಅನ್ವಯಿಸುತ್ತದೆ. ನಂಬಿಕೆ ಎಂದರೆ ವಿವೇಚನೆಯಿಂದ ನಿರೂಪಿಸಿದರೆ ಯಾವುದೋ ಘಟನೆಯು ಉದ್ದೀಪಿಸುತ್ತಿದ್ದಂತಹ ವರ್ತನೆಯನ್ನು ಉದ್ದೀಪಿಸುವ ಶರೀರದ ಒಂದು ಸ್ಥಿತಿ – ಎಂದು ಹೇಳಬಹುದು: ಈ ವರ್ತನೆಯನ್ನು ಉದ್ದೀಪಿಸುವ ಘಟನೆಯು ನಂಬಿಕೆಯ ಸೂಚ್ಯತೆ. ಈ ಹೇಳಿಕೆಯನ್ನು ವಿಪರೀತವಾಗಿ ಸರಳೀಕರಿಸಲಾಗಿದೆ. ಆದರೆ ನಾನು ಸಮರ್ಥಿಸುವ ಸಿದ್ಧಾಂತವನ್ನು ಮನವರಿಕೆ ಮಾಡಿಸಲು ಇದರಿಂದ ಸಾಧ್ಯವಾಗಬಹುದು. ಇಲ್ಲಿಯವರೆಗೆ, ನಾನು ಮತ್ತು ಡ್ಯೂಯಿ ತುಂಬ ಭಿನ್ನಾಭಿಪ್ರಾಯವನ್ನು ಹೊಂದಿಲ್ಲ ಎಂದು ತಿಳಿದಿದ್ದೇನೆ. ಆದರೆ ಮುಂದಿನ ಅವರ ಬೆಳವಣಿಗೆಗಳನ್ನು ನಾನು ತೀಕ್ಷ್ಣವಾಗಿ ವಿರೋಧಿಸುತ್ತೇನೆ.

ಡ್ಯೂಯಿ ಅವರು 'ವಿಚಾರಣೆ'ಯನ್ನು ತರ್ಕದ ಸಾರವನ್ನಾಗಿಸುತ್ತಾರೆಯೇ ಹೊರತು ಸತ್ಯ ಅಥವಾ ಜ್ಞಾನವನ್ನಲ್ಲ. ಅವರು ವಿಚಾರಣೆಯನ್ನು ಹೀಗೆ ಸೂತ್ರೀಕರಿಸುತ್ತಾರೆ: 'ವಿಚಾರಣೆ ಎಂದರೆ ಅನಿರ್ದಿಷ್ಟ ಸನ್ನಿವೇಶವೊಂದರ, ಮೂಲ ಸನ್ನಿವೇಶದ ಘಟಕಗಳ ಭಿನ್ನತೆಗಳನ್ನು ಮತ್ತು ಸಂಬಂಧಗಳನ್ನು ನಿರ್ದಿಷ್ಟವೆಂಬಂತೆಯೇ ಒಗ್ಗೂಡಿಸುವಂತಹ ನಿಯಂತ್ರಿತ ಅಥವಾ ನಿರ್ದೇಶಿತ ರೂಪಾಂತರ.' ಜೊತೆಗೆ, 'ವಿಚಾರಣೆ ಎಂದರೆ ಉದ್ದೇಶ ಮತ್ತು ವಸ್ತುವಿಷಯಗಳ ವಸ್ತುನಿಷ್ಠ ರೂಪಾಂತರ' ಎಂದೂ ಸೇರಿಸುತ್ತಾರೆ. ಈ ಸೂತ್ರವು ಪೂರ್ಣವಾದುದಲ್ಲ ಎಂಬುದು ಎದ್ದು ಕಾಣುತ್ತದೆ. ಒಬ್ಬ ಕವಾಯತು ಸೈನ್ಯಾಧಿಕಾರಿಯು ಅನನುಭವಿ ಸೈನಿಕರ ಗುಂಪಿನೊಡನೆ, ಅಥವಾ ಇಟ್ಟಿಗೆ ಕೆಲಸದವನು ಇಟ್ಟಿಗೆಯ ರಾಶಿಯೊಡನೆ ನಡೆದುಕೊಳ್ಳುವ ಬಗೆಯನ್ನು

ನಿದರ್ಶನಕ್ಕೆ ತೆಗೆದುಕೊಳ್ಳಿ; ಇವು ಡ್ಯೂಯಿಯ ವಿಚಾರಣೆಯ ಸೂತ್ರಕ್ಕೆ ಪೂರ್ತಿ ಅನ್ವಯವಾಗುತ್ತವೆ. ಅವುಗಳನ್ನು ಅವರು ಸೇರಿಸುವುದಿಲ್ಲವಾದ್ದರಿಂದ, ಅವರ 'ವಿಚಾರಣೆ'ಯ ಕಲ್ಪನೆಯಲ್ಲಿ ತಮ್ಮ ಸೂತ್ರದಲ್ಲಿ ಸೇರಿಸಲು ಮರೆತ ಅಂಶವೊಂದಿರಬೇಕು. ಈ ಅಂಶ ಯಾವುದು ಎಂಬುದನ್ನು ನಿರ್ಧರಿಸಲು ನಾನು ಇಷ್ಟರಲ್ಲಿಯೇ ಪ್ರಯತ್ನಿಸುತ್ತೇನೆ. ಆದಕ್ಕೂ ಮೊದಲು ಈಗಿರುವಂತೆ ಈ ಸೂತ್ರದಿಂದ ಏನೇನು ಅರ್ಥವುಂಟಾಗುವುದೆಂಬುದನ್ನು ಪರಿಶೀಲಿಸೋಣ.

ಡ್ಯೂಯಿ ಅವರು ಕಲ್ಪಿಸಿಕೊಂಡಂತೆ 'ವಿಚಾರಣೆ'ಯು ಜಗತ್ತನ್ನು ಹೆಚ್ಚು ಸಾವಯವವನ್ನಾಗಿಸಲು ಪ್ರಯತ್ನಿಸುವ ಪ್ರಕ್ರಿಯೆಯ ಒಂದು ಭಾಗ. 'ಏಕೀಕೃತ ಇಡಿಗಳು' ವಿಚಾರಣೆಗಳ ಪರಿಣಾಮಗಳಾಗಬೇಕು. ಸಾವಯವವಾದದ್ದರ ಬಗೆಗಿನ ಡ್ಯೂಯಿ ಅವರ ಪ್ರೇಮವು ಭಾಗಶಃ ಜೀವವೈಜ್ಞಾನಿಕವಾದುದು, ಭಾಗಶಃ ಹೆಗೆಲ್ ಪ್ರಭಾವದ ಗುಂಗು. ಅಪ್ರಜ್ಞಾಪೂರ್ವಕವಾದ ಹೆಗೆಲಿಯನ್ ತತ್ವಜಿಜ್ಞಾಸೆಯ ಆಧಾರದ ಹೊರತು, 'ಏಕೀಕೃತ ಇಡಿಗಳು' ಯಾಕೆ ವಿಚಾರಣೆಯ ಪರಿಣಾಮವಾಗಬೇಕು ಎಂಬುದಕ್ಕೆ ಯಾವ ಕಾರಣವೂ ಇಲ್ಲ. ಕ್ರಮಬದ್ಧವಾಗಿರದ ಎಲೆಗಳಿಂದ ಕೂಡಿದ ಇಸ್ಪೀಟು ಪ್ಯಾಕ್ ಒಂದನ್ನು ನನಗೆ ಕೊಟ್ಟು ಅದರ ಪರಿಣಾಮವನ್ನು ವಿಚಾರಣೆ ಮಾಡು ಎಂದು ಹೇಳಿದರೆ, ನಾನು ಡ್ಯೂಯಿ ಅವರ ವಿಧಿಯನ್ನು ಅನುಸರಿಸಿದರೆ, ಮೊದಲು ಕ್ರಮಬದ್ಧವಾಗಿ ಜೋಡಿಸುವುದು, ಆನಂತರ ವಿಚಾರಣೆಯ ಪರಿಣಾಮ ಇದು ಎಂದು ಹೇಳುವುದು. ನಾನು ಎಲೆಗಳನ್ನು ಕ್ರಮಬದ್ಧಗೊಳಿಸುವಾಗ 'ಉದ್ದೇಶ ಮತ್ತು ವಸ್ತುವಿಷಯಗಳ ವಸ್ತುನಿಷ್ಠ ರೂಪಾಂತರ' ಇರುತ್ತದೆ ಎಂಬುದು ನಿಜ, ಸೂತ್ರವು ಇದನ್ನು ಒಳಗೊಂಡಿದೆ. ಕೊನೆಯಲ್ಲಿ, ನನಗೆ 'ನಿಮಗೆ ಎಲೆಗಳನ್ನು ಕೊಟ್ಟಾಗ ಅವುಗಳ ಕ್ರಮವನ್ನು ತಿಳಿಯುವುದು ನಮ್ಮ ಉದ್ದೇಶವಾಗಿತ್ತೇ ಹೊರತು ಅವುಗಳನ್ನು ಜೋಡಿಸಿದ ನಂತರವಲ್ಲ' ಎಂದು ಹೇಳಿದರೆ, ನಾನು ಡ್ಯೂಯಿ ಅವರ ಶಿಷ್ಯನಾಗಿದ್ದರೆ, 'ನಿಮ್ಮ ಆಲೋಚನೆಗಳು ಒಟ್ಟಾರೆ ಜಡವಾದವು, ನಾನೊಬ್ಬ ಚಲನಶೀಲ ವ್ಯಕ್ತಿ, ಯಾವುದೇ ವಸ್ತುವಿಷಯದ ಬಗ್ಗೆ ವಿಚಾರಣೆ ನಡೆಸಿದಾಗ, ವಿಚಾರಣೆಯನ್ನು ಸುಲಭಗೊಳಿಸುವುದಕ್ಕಾಗಿ ನಾನು ಅದನ್ನು ಮೊದಲು ಬದಲಾಯಿಸುತ್ತೇನೆ' ಎಂದು ಉತ್ತರಿಸುತ್ತೇನೆ. ಇಂತಹ ಪ್ರಕ್ರಿಯೆಯು ನ್ಯಾಯಯುತವಾದುದು ಎಂಬ ಕಲ್ಪನೆಯನ್ನು ಹೆಗೆಲಿಯನ್ ಮಾದರಿಯ ತೋರಿಕೆ ಮತ್ತು ವಾಸ್ತವತೆಗಳ ವ್ಯತ್ಯಾಸದಿಂದ ಮಾತ್ರ ಸಮರ್ಥಿಸಬಹುದು: ತೋರಿಕೆಯು ಗೊಂದಲಮಯ ಮತ್ತು ತುಂಡುಗಳಿಂದಾದುದು ಎಂದು ಅನ್ನಿಸಬಹುದು, ಆದರೆ ವಾಸ್ತವತೆ ಎಂಬುದು ಸದಾ ಕ್ರಮಬದ್ಧ ಮತ್ತು ಸಾವಯವ. ಆದ್ದರಿಂದ ಎಲೆಗಳನ್ನು ಜೋಡಿಸಿದಾಗ ನಾನು ಅವುಗಳ ವಾಸ್ತವ ಚಿರಂತನ ಸ್ವಭಾವವನ್ನು ತೋರಿಸುತ್ತೇನೆ. ಆದರೆ ಸಿದ್ಧಾಂತದ ಈ ಭಾಗವನ್ನು ಸ್ಪಷ್ಟಪಡಿಸಿಯೇ ಇಲ್ಲ. ಡ್ಯೂಯಿ ಅವರ

ಸಿದ್ಧಾಂತಗಳ ಹಿಂದೆ ಶರೀರದ ತತ್ವಜಿಜ್ಞಾಸೆಯು ಇದೆಯಾದರೂ ಅವರಿಗೆ ಅದರ ಬಗ್ಗೆ ಎಷ್ಟು ಅರಿವಿದೆಯೋ ತಿಳಿಯದು.

ಡ್ಯೂಯಿ ಅವರ ಸೂತ್ರಕ್ಕೆ ಪೂರಕವೊಂದನ್ನು ಕಂಡುಕೊಳ್ಳಲು ನಾವೀಗ ಪ್ರಯತ್ನಿಸೋಣ. ವಿಚಾರಣೆ ಮತ್ತು ಕವಾಯತು ಸೈನ್ಯಾಧಿಕಾರಿ ಮತ್ತು ಇಟ್ಟಿಗೆ ಕೆಲಸಗಾರನಂತಹ ಸಂಘಟಿತ ಚಟುವಟಿಕೆಯ ಇತರ ವಿಧಗಳ ನಡುವಣ ವ್ಯತ್ಯಾಸವನ್ನು ಮಾಡಲು ಇದು ಬೇಕಾಗುತ್ತದೆ. ವಿಚಾರಣೆಯನ್ನು ಕೆಲವು ಸತ್ಯವನ್ನು ಖಚಿತಪಡಿಸಕೊಳ್ಳುವ ಅದರ ಉದ್ದೇಶದ ಆಧಾರದ ಮೇಲೆ ವ್ಯತ್ಯಾಸ ಮಾಡಲಾಗುತ್ತದೆ ಎಂದು ಮೊದಲಾದರೆ ಹೇಳುತ್ತಿದ್ದರು. ಆದರೆ ಡ್ಯೂಯಿ ಅವರಿಗೆ 'ಸತ್ಯ'ವನ್ನು 'ವಿಚಾರಣೆ'ಯ ಹಿನ್ನೆಲೆಯಲ್ಲಿ ಸೂತ್ರೀಕರಿಸಬೇಕಾಗುತ್ತದೆಯೇ ಹೊರತು ತದ್ವಿರುದ್ಧವಲ್ಲ; ಪೆಯಿರ್ಸ್‌ನ ಸೂತ್ರವನ್ನು ಒಪ್ಪಿಕೊಂಡು ಅವರು ಇದನ್ನು ಉದ್ಧೃತಗೊಳಿಸುತ್ತಾರೆ: 'ಸತ್ಯ ಎಂದರೆ ಅನ್ವೇಷಿಸುವ ಎಲ್ಲರೂ ಸ್ವಯಂಪೂರ್ಣವಾಗಿ ಒಪ್ಪಿಕೊಳ್ಳಲೇಬೇಕಾದಂತಹ ಅಭಿಪ್ರಾಯ.' ಅನ್ವೇಷಕರು ಏನು ಮಾಡುತ್ತಾರೆ ಎಂಬುದರ ಬಗ್ಗೆ ಇದು ನಮ್ಮನ್ನು ಕಗ್ಗತ್ತಲಲ್ಲಿ ನಿಲ್ಲಿಸುತ್ತದೆ, ಯಾಕೆಂದರೆ ಚಕ್ರೀಯವಾಗಿಲ್ಲದಿದ್ದರೆ ಅವರು ಸತ್ಯವನ್ನು ದೃಢಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ಹೇಳಲು ನಮಗೆ ಸಾಧ್ಯವಾಗುವುದಿಲ್ಲ.

ಡಾ। ಡ್ಯೂಯಿ ಅವರ ಸಿದ್ಧಾಂತವನ್ನು ಈ ರೀತಿ ಮಂಡಿಸಬಹುದು: ಶರೀರವೊಂದು ತನ್ನ ಪರಿಸರದೊಡನೆ ಹೊಂದಿರುವ ಸಂಬಂಧಗಳು ಕೆಲವು ವೇಳೆ ಶರೀರಕ್ಕೆ ತೃಪ್ತಿಕರವಾಗಿದ್ದರೆ, ಮತ್ತೆ ಕೆಲವು ವೇಳೆ ಅತೃಪ್ತಿಕರವಾಗಿರುತ್ತದೆ. ಅವು ಅತೃಪ್ತಿಕರವಾಗಿದ್ದಾಗ, ಪರಸ್ಪರ ಹೊಂದಾಣಿಕೆಯಿಂದ ಪರಿಸ್ಥಿತಿಯನ್ನು ಸುಧಾರಿಸಬಹುದು. ಪರಿಸ್ಥಿತಿಯು ಸುಧಾರಿಸಲು ಕಾರಣವಾಗುವ ಮಾರ್ಪಾಡುಗಳು ಮುಖ್ಯವಾಗಿ ಶರೀರದ ಪರವಾಗಿರುತ್ತವೆ – ಅವು ಎಂದಿಗೂ ಯಾವುದೇ ಕಡೆ ಸಂಪೂರ್ಣವಾಗಿ ಇರುವುದಿಲ್ಲ – ಇಲ್ಲಿ ಕಾರ್ಯಶೀಲವಾಗಿರುವ ಪ್ರಕ್ರಿಯೆಯನ್ನು 'ವಿಚಾರಣೆ' ಎನ್ನುತ್ತಾರೆ. ನಿದರ್ಶನಕ್ಕೆ, ಯುದ್ಧವೊಂದು ನಡೆಯುತ್ತಿರುವಾಗ, ನೀವು ಮುಖ್ಯವಾಗಿ ಸನ್ನಿವೇಶವನ್ನು ಬದಲಾಯಿಸುವ ಕಾಳಜಿ ಹೊಂದಿರುತ್ತೀರಿ, ಅಂದರೆ ಶತ್ರು; ಆದರೆ ಅದರ ಹಿಂದಿನ ಅವಧಿಯಲ್ಲಿನ ಸ್ಥಳಾನ್ವೇಷಣೆಯುಲ್ಲಿ ನಿಮ್ಮ ಮುಖ್ಯ ಕಾಳಜಿಯು ನಿಮ್ಮ ಸೈನ್ಯವನ್ನು ಅವನ ವ್ಯೂಹರಚನೆಗೆ ಅನುಗುಣವಾಗಿಸುವುದು. ಈ ಹಿಂದಿನ ಅವಧಿಯು 'ವಿಚಾರಣೆ'ಯದು.

ಈ ಸಿದ್ಧಾಂತದ ತೊಡಕೆಂದರೆ, ನನಗೆ ತೋರುವಂತೆ, ನಂಬಿಕೆ ಮತ್ತು ವಸ್ತುಸ್ಥಿತಿ ಅಥವಾ ವಸ್ತುಸ್ಥಿತಿಗಳು ಇವುಗಳ ನಡುವಣ ಸಂಬಂಧವನ್ನು 'ತಾಳೆನೋಡುವು'ದೆಂಬ ಹೆಸರಿನಲ್ಲಿ ಅವುಗಳನ್ನು ಬೇರ್ಪಡಿಸುವದರಲ್ಲಿದೆ. ಸೇನಾಧಿಪತಿಯು ಯುದ್ಧವೊಂದನ್ನು ಆಯೋಜಿಸುವ ನಿದರ್ಶನವನ್ನು ನಾವು

ಪರಿಶೀಲಿಸೋಣ. ಸ್ಥಳಾನ್ವೇಷಣೆ ಮಾಡುವ ಅವನ ವಿಮಾನಗಳು ಶತ್ರುವಿನ ಕೆಲವು ಸಿದ್ಧತೆಗಳ ಬಗ್ಗೆ ವರದಿ ನೀಡುತ್ತವೆ, ಅದರ ಪರಿಣಾಮವಾಗಿ ಅವನು ಕೆಲವು ಪ್ರತಿಸಿದ್ಧತೆಗಳನ್ನು ಕೈಗೊಳ್ಳುತ್ತಾನೆ. ಶತ್ರುಗಳು ಮಾಡಿರುವರೆಂದು ಹೇಳುವ ಸಿದ್ಧತೆಗಳನ್ನು ಮಾಡಿರುವ ಪಕ್ಷದಲ್ಲಿ, ಅವನು ಕೈಗೊಳ್ಳುವ ಕ್ರಮಗಳಿಗೆ ಕಾರಣವಾದ ವರದಿಗಳು ಸತ್ಯ; ಮತ್ತು ಅಂತಹ ಸನ್ನಿವೇಶದಲ್ಲಿ ಸೇನಾಧಿಕಾರಿಯು ಯುದ್ಧದಲ್ಲಿ ಸೋತರೂ ವರದಿಗಳು ಸತ್ಯವಾಗಿಯೇ ಉಳಿಯುತ್ತವೆ ಎಂಬುದು ಸಾಮಾನ್ಯ ಜ್ಞಾನ. ಈ ದೃಷ್ಟಿಯನ್ನು ಡ್ಯೂಯಿ ಅಲ್ಲಗಳೆಯುತ್ತಾರೆ. ಅವರು ನಂಬಿಕೆಗಳನ್ನು 'ಸತ್ಯ' ಮತ್ತು 'ಸುಳ್ಳು' ಎಂದು ವಿಭಾಗಿಸುವುದಿಲ್ಲವಾದರೂ ಎರಡು ಬಗೆಯ ನಂಬಿಕೆಗಳಿವೆ; ಸೇನಾಧಿಕಾರಿಯು ಗೆದ್ದರೆ 'ತೃಪ್ತಿಕರ', ಮತ್ತು ಸೋತರೆ 'ಅತೃಪ್ತಿಕರ'. ಯುದ್ಧವು ನಡೆಯುವವರೆಗೂ, ತನ್ನ ಕಡೆಯವರು ನೀಡಿದ ವರದಿಗಳ ಬಗ್ಗೆ ಹೇಗೆ ಯೋಚಿಸಿದನೆಂದು ಅವನು ಹೇಳಲಾರ.

ಸಾಮಾನ್ಯೀಕರಣಗೊಳಿಸಿ ಹೇಳುವುದಾದರೆ, ಮಿಕ್ಕೆಲ್ಲರಂತೆಯೇ ಡಾ। ಡ್ಯೂಯಿ ಅವರೂ ನಂಬಿಕೆಗಳನ್ನು ಒಳ್ಳೆಯವು ಮತ್ರು ಕೆಟ್ಟವು ಎಂದು ಎರಡು ಗುಂಪುಗಳಾಗಿ ಮಾಡುತ್ತಾರೆ. ಆದರೆ ಒಂದು ನಂಬಿಕೆಯು ಒಂದು ಕಾಲಕ್ಕೆ ಒಳ್ಳೆಯದಾಗಿದ್ದು ಮತ್ತೊಂದು ಕಾಲಕ್ಕೆ ಕೆಟ್ಟುದು ಎನಿಸಬಹುದು ಎಂಬುದನ್ನೂ ಅವರು ಒಪ್ಪುತ್ತಾರೆ; ಇದು ಆಗುವುದು ತಮ್ಮ ಹಿಂದಿನವಕ್ಕಿಂತ ಉತ್ತಮವಾದರೂ ಮತ್ತು ಮುಂದಿನವಕ್ಕಿಂತ ಕೆಟ್ಟುದಾದ ಅಪರಿಪೂರ್ಣ ಸಿದ್ಧಾಂತಗಳಿಂದಾಗಿ. ಒಂದು ನಂಬಿಕೆಯು ಒಳ್ಳೆಯದೋ ಕೆಟ್ಟುದೋ ಎಂಬುದು ಅದನ್ನು ಹೊಂದಿರುವ ಶರೀರದಲ್ಲಿ ಅದು ಉದ್ದೀಪಿಸುವ ಚಟುವಟಿಕೆಗಳನ್ನು ಮತ್ತು ಅವುಗಳ ಪರಿಣಾಮಗಳು ತೃಪ್ತಿಕರವೋ ಅತೃಪ್ತಿಕರವೋ ಎಂಬುದನ್ನು ಅವಲಂಬಿಸುತ್ತದೆ. ಹೀಗೆ ಹಿಂದಿನ ಒಂದು ಘಟನೆಯ ಬಗೆಗಿನ ನಂಬಿಕೆಯನ್ನು ಒಳ್ಳೆಯದು ಅಥವಾ ಕೆಟ್ಟುದು ಎಂದು ವರ್ಗೀಕರಿಸಬೇಕಾದುದು, ಆ ಘಟನೆಯು ನಿಜವಾಗಿ ನಡೆಯಿತೇ ಇಲ್ಲವೇ ಎಂಬುದರ ಮೇಲಲ್ಲ, ಆ ನಂಬಿಕೆಯು ಮುಂದೆ ಮಾಡುವ ಪರಿಣಾಮಗಳ ಮೇಲೆ. ಫಲಿತಗಳು ಕುತೂಹಲಕರವಾದವು. ಯಾರಾದರೂ, ನನಗೆ 'ನೀವು ಬೆಳಗಿನ ತಿಂಡಿಯೊಡನೆ ಕಾಫಿ ಕುಡಿದಿದ್ದಿರಾ?' ಎಂದು ಕೇಳಿದರೆಂದುಕೊಳ್ಳೋಣ. ನಾನು ಸಾಮಾನ್ಯ ವ್ಯಕ್ತಿಯಾದರೆ ಅದನ್ನು ನೆನಪಿಸಿಕೊಳ್ಳಲು ಪ್ರಯತ್ನಿಸುತ್ತೇನೆ. ನಾನು ಡಾ। ಡ್ಯೂಯಿ ಅವರ ಶಿಷ್ಯನಾದರೆ, 'ಸ್ವಲ್ಪ ಇರಿ: ಅದನ್ನು ಉತ್ತರಿಸುವ ಮುಂಚೆ ನಾನು ಎರಡು ಪ್ರಯೋಗಗಳನ್ನು ಮಾಡಬೇಕು' ಎನ್ನುತ್ತೇನೆ. ಆನಂತರ ನಾನು ಕಾಫಿ ಕುಡಿದೆ ಎಂದು ಮೊದಲು ನಂಬಿ, ಆನಂತರ ಅದರ ಪರಿಣಾಮಗಳನ್ನು, ಏನಾದರೂ ಇದ್ದರೆ, ವೀಕ್ಷಿಸುತ್ತೇನೆ; ಆನಂತರ ನಾನು ಕಾಫೀ ಕುಡಿಯಲಿಲ್ಲ ಎಂದು ನಂಬುವಂತೆ ಮಾಡಿಕೊಳ್ಳುತ್ತೇನೆ, ಮತ್ತೆಯೂ ನಾನು ಪರಿಣಾಮಗಳನ್ನು, ಏನಾದರೂ ಇದ್ದರೆ,

ವೀಕ್ಷಿಸುತ್ತೇನೆ. ಆಮೇಲೆ ಎರಡೂ ಗುಂಪುಗಳ ಪರಿಣಾಮಗಳನ್ನು ಹೋಲಿಸಿ ಅವುಗಳಲ್ಲಿ ಯಾವುವು ಹೆಚ್ಚು ತೃಪ್ತಿಕರ ಎಂಬುದನ್ನು ಪರಿಶೀಲಿಸುತ್ತೇನೆ. ಅವೆರಡರಲ್ಲಿ ಒಂದು ಹೆಚ್ಚಿನ ತೂಕದ್ದಾಗಿದ್ದರೆ, ನಾನು ಉತ್ತರದ ಬಗ್ಗೆ ನಿರ್ಧರಿಸುತ್ತೇನೆ. ಹಾಗಿಲ್ಲದಿದ್ದರೆ, ನಾನು ಉತ್ತರಿಸಲಾರೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ.

ಆದರೆ ತೊಂದರೆಗಳು ಇಲ್ಲಿಗೇ ಮುಗಿಯುವುದಿಲ್ಲ. ನಾನು ಬೆಳಿಗ್ಗೆ ಕಾಫಿ ಕುಡಿದಿದ್ದೆನೆಂಬ ನಂಬಿಕೆಯ ಪರಿಣಾಮಗಳನ್ನು ಹೇಗೆ ತಿಳಿಯುವುದು? 'ಆದ ಪರಿಣಾಮಗಳು ಇಂಥಿಂಥವು' ಎಂದು ಹೇಳಿದರೆ, ಮತ್ತೆ ಅವುಗಳನ್ನು ಅವುಗಳ ಪರಿಣಾಮಗಳ ಆಧಾರದಿಂದ ನಿರ್ಧರಿಸಿ ಅವು ಒಳ್ಳೆಯವೋ ಕೆಟ್ಟವೋ ಎಂದು ತಿಳಿಯಬೇಕು. ಈ ಕಷ್ಟವನ್ನು ಹೋಗಲಾಡಿಸಿಕೊಂಡರೂ, ಯಾವ ಗುಂಪಿನ ಪರಿಣಾಮಗಳು ಹೆಚ್ಚು ತೃಪ್ತಿಕರ ಎಂದು ತಿಳಿಯುವುದು ಹೇಗೆ? ಕಾಫಿ ಕುಡಿದದ್ದರಿಂದ ನನಗೆ ತೃಪ್ತಿಯಾಯಿತೇ ಎಂಬುದು ಒಂದು ನಿರ್ಣಯವಾದರೆ, ಮತ್ತೊಂದು ಅದಕ್ಕೆ ವಿರುದ್ಧವಾಗಿ ಕಲಹವು ಮುಂದುವರಿಯಬಹುದು. ಈ ಎರಡನ್ನೂ ಒಳ್ಳೆಯವೆಂದು ನಿರ್ಧರಿಸಬಹುದು, ಆದರೆ ಎರಡರಲ್ಲಿ ಯಾವುದು ಹೆಚ್ಚು ಒಳ್ಳೆಯದು ಎಂದು ನಿರ್ಧರಿಸದ ಹೊರತು ನಾನು ಬೆಳಿಗ್ಗೆ ತಿಂಡಿಯೊಡನೆ ಕಾಫಿ ಕುಡಿದಿದ್ದೆನೇ ಎಂಬುದನ್ನು ನಿರ್ಣಯಿಸಲಾರೆ. ಇದು ಶುದ್ಧಾಂಗವಾಗಿ ಅಸಂಬದ್ಧವಾದುದು.

ಇದುವರೆಗೆ ಸಾಮಾನ್ಯ ಜ್ಞಾನವೆಂದು ಪರಿಗಣಿತವಾದುದಕ್ಕೆ ಭಿನ್ನವಾದ ಡ್ಯೂಯಿ ಅವರ ವಾದಕ್ಕೆ ಕಾರಣ ಅವರು 'ವಸ್ತುಸ್ಥಿತಿ'ಗಳನ್ನು – 'ವಸ್ತುಸ್ಥಿತಿ'ಗಳು ಜಗ್ಗದವಾಗಿ ಅವನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬ ಅರ್ಥದಲ್ಲಿ – ತಮ್ಮ ತತ್ವಜಿಜ್ಞಾಸೆಯಲ್ಲಿ ಒಪ್ಪಿಕೊಳ್ಳದ್ದು. ಇದಕ್ಕೆ ಕಾರಣ ಸಾಮಾನ್ಯ ಜ್ಞಾನವೂ ಬದಲಾಗುತ್ತದೆ ಎಂಬುದಿರಬಹುದು, ಮತ್ತು ಈ ದೃಷ್ಟಿಕೋನವು ಹೇಗಾಗುತ್ತಿದೆ ಎಂಬುದಕ್ಕೇನೂ ವಿರುದ್ಧವಾಗಲಾರದು.

ಡಾ। ಡ್ಯೂಯಿ ಮತ್ತು ನನ್ನ ನಡುವಣ ಪ್ರಮುಖ ವ್ಯತ್ಯಾಸವೆಂದರೆ, ಅವರು ನಂಬಿಕೆಗಳ ಬಗ್ಗೆ ಅವುಗಳ ಪರಿಣಾಮದ ಮೇಲೆ ನಿರ್ಣಯಿಸುತ್ತಾರೆ, ಆದರೆ ನಾನು ಹಿಂದಿನ ಘಟನೆಗಳ ವಿಷಯದಲ್ಲಾದರೆ ಅವುಗಳ ಕಾರಣಗಳ ಮೇಲೆ ನಿರ್ಣಯಿಸುತ್ತೇನೆ ಎಂಬುದು. ಅದು ತನ್ನ ಕಾರಣಗಳೊಡನೆ (ಕೆಲವು ವೇಳೆ ಗೋಜಲಿನವಾಗಿರಬಹುದು) ಎಂಥ ಸಂಬಂಧ ಹೊಂದಿದೆ ಎಂಬುದರ ಮೇಲೆ ನಂಬಿಕೆಯನ್ನು 'ಸತ್ಯ' ಅಥವಾ 'ಸುಳ್ಳು' ಎಂದೋ, ಅಥವಾ ಅದಕ್ಕೆ ಹತ್ತಿರವೆಂದೋ ನಾನು ನಿರ್ಣಯಿಸುತ್ತೇನೆ. ಡಾ। ಡ್ಯೂಯಿ ಅವರ ಪ್ರಕಾರ, ಅದಕ್ಕೆ ಕೆಲವು ರೀತಿಯ ಪರಿಣಾಮಗಳಿದ್ದರೆ, ಅದು 'ಪ್ರಮಾಣೀಕೃತ ಸಮರ್ಥನೀಯತೆ' – ಅವರು ಅದನ್ನು 'ಸತ್ಯ'ದ ಜಾಗದಲ್ಲಿ ನಿಲ್ಲಿಸುತ್ತಾರೆ. ಈ ಭಿನ್ನ ದಾರಿಗೆ ಕಾರಣ ಜಗತ್ತಿನ ಬಗೆಗಿನ ದೃಷ್ಟಿಕೋನದ ಭಿನ್ನತೆ. ನಾವು ಮಾಡುವುದು ಹಿಂದಿನದರ ಮೇಲೆ ಪರಿಣಾಮ

ಬೀರದು, ಹೀಗಾಗಿ, ಏನು ಸಂಭವಿಸಿತು ಎಂಬುದರ ಮೇಲೆ ಸತ್ಯವನ್ನು ನಿರ್ಧರಿಸಿದರೆ, ಅದು ವರ್ತಮಾನದ ಅಥವಾ ಭವಿಷ್ಯದ ಬದಲಾವಣೆಗಳಿಗೆ ಹೊರತಾಗಿರುತ್ತದೆ. ತಾರ್ಕಿಕ ರೂಪದಲ್ಲಿ, ಅದು ಮಾನವ ಸಾಮರ್ಥ್ಯದ ಪರಿಮಿತಿಗಳನ್ನು ಸೂಚಿಸುತ್ತದೆ. ಆದರೆ ಸತ್ಯವು, ಅಥವಾ 'ಪ್ರಮಾಣೀಕೃತ ಸಮರ್ಥನೀಯತೆ'ಯು ಭವಿಷ್ಯವನ್ನು ಆಧರಿಸಿದರೆ, ಆಗ ಅದನ್ನು ಏನು ಸೂಚಿಸಬೇಕೋ ಹಾಗೆ ಬದಲಾಯಿಸುವುದು ನಮ್ಮ ಸಾಮರ್ಥ್ಯಕ್ಕೆ ಸಾಧ್ಯವಾಗುತ್ತದೆ. ಇದು ಮಾನವ ಸಾಮರ್ಥ್ಯ ಮತ್ತು ಸ್ವಾತಂತ್ರ್ಯಗಳ ಪರಿಧಿಗಳನ್ನು ವಿಸ್ತರಿಸುತ್ತದೆ. ಸೀಸರ್ ರೂಬಿಕಾನ್ ಅನ್ನು ದಾಟಿದನೇ? ಹಿಂದಿನ ಘಟನೆಯನ್ನು ಬದಲಾಯಿಸಲು ಸಾಧ್ಯವಿಲ್ಲದ್ದರಿಂದ ನಾನು ಹೌದೆಂದು ಉತ್ತರಿಸಬೇಕು. ಭವಿಷ್ಯದ ಆಗುಹೋಗುಗಳ ಮೌಲ್ಯಮಾಪನದ ನಂತರ ಹೌದು ಅಥವಾ ಅಲ್ಲ ಎಂಬುದನ್ನು ಡಾ। ಡ್ಯೂಯಿ ಅವರು ನಿರ್ಧರಿಸಬೇಕು: ಇಲ್ಲ ಎನ್ನುವುದು ಹೆಚ್ಚು ತೃಪ್ತಿಕರವಾಗುವಂತೆ ಮಾಡಲು ಭವಿಷ್ಯದ ಆಗುಹೋಗುಗಳನ್ನು ಸರಿಹೊಂದಿಸಲು ಸಾಧ್ಯವಾಗದು ಎನ್ನುವುದಕ್ಕೆ ಯಾವ ಕಾರಣವೂ ಇಲ್ಲ. ಸೀಸರ್ ರೂಬಿಕಾನ್ ಅನ್ನು ದಾಟಿದ ಎಂಬುದು ನನಗೆ ಸರಿಯೆನಿಸದಿದ್ದರೆ, ನಾನೇನೂ ಹತಾಶೆಯಿಂದ ಮಂಕಾಗಿ ಕೂರಬೇಕಾಗಿಲ್ಲ; ನನಗೆ ತಕ್ಕಷ್ಟು ಕೌಶಲ ಮತ್ತು ಸಾಮರ್ಥ್ಯವಿದ್ದರೆ, ಸೀಸರ್ ರೂಬಿಕಾನ್ ಅನ್ನು ದಾಟಲಿಲ್ಲ ಎನ್ನುವುದಕ್ಕೆ ಬೇಕಾದ 'ಪ್ರಮಾಣೀಕೃತ ಸಮರ್ಥನೀಯತೆ'ಯುನ್ನು ಹೊಂದಿರುವಂತೆ ಸಾಮಾಜಿಕ ಸನ್ನಿವೇಶವನ್ನು ಸಜ್ಜುಗೊಳಿಸಬಹುದು.

ಈ ಗ್ರಂಥದುದ್ದಕ್ಕೂ ಸಾಧ್ಯವಾದ ಕಡೆಗಳಲೆಲ್ಲ ನಾನು ತತ್ವಜ್ಞಾನಿಗಳ ತಾತ್ವಿಕತೆಗೂ ಅವರ ಸಾಮಾಜಿಕ ಸನ್ನಿವೇಶಗಳಿಗೂ ಸಂಬಂಧವನ್ನು ತೋರಿಸಲು ಹೆಣಗಿದ್ದೇನೆ. ಯಂತ್ರೋತ್ಪಾದನೆ ಮತ್ತು ನಮ್ಮ ಭೌತಿಕ ಪರಿಸರದ ವೈಜ್ಞಾನಿಕ ನಿರ್ವಹಣೆಗಳ ಭರವಸೆಗಳು ಮಾನವ ಸಾಮರ್ಥ್ಯದಲ್ಲಿನ ನಂಬಿಕೆ ಮತ್ತು 'ಕಟು ವಾಸ್ತವತೆ'ಗಳನ್ನು ಒಪ್ಪಿಕೊಳ್ಳಲಾರದ ಮನೋಭಾವಗಳಿಗೆ ಸಂಬಂಧಪಟ್ಟಿವೆಯೆಂಬುದನ್ನು ನಾನು ಕಂಡುಕೊಂಡಿದ್ದೇನೆ. ಈ ದೃಷ್ಟಿಕೋನವನ್ನು ಡಾ। ಡ್ಯೂಯಿ ಅವರ ಅನೇಕ ಬೆಂಬಲಿಗರೂ ಒಪ್ಪಿಕೊಂಡಿದ್ದಾರೆ. ಹೀಗಾಗಿ ಡಾ। ಬರ್ನಾರ್ಡ್ ರೇಮಂಡ್ ಗೀಗರ್ ಅವರು ತಮ್ಮ ಅಮೋಘ ಲೇಖನವೊಂದರಲ್ಲಿ, ಡಾ। ಡ್ಯೂಯಿ ಅವರ ವಿಧಾನವು 'ಒಂದು ಶತಮಾನದ ಹಿಂದಿನ ಕೈಗಾರಿಕೆಯಲ್ಲಿನ ಕ್ರಾಂತಿಯಂತೆಯೇ ಬೆರಗುಗೊಳಿಸುವ ಮಧ್ಯಮವರ್ಗದ ಮತ್ತು ಅದ್ಭುತವೆನಿಸದ ಆಲೋಚನೆಯ ಕ್ರಾಂತಿಯಂತೆ ತೋರುತ್ತದೆ.' ನಾನು ಹಿಂದೆ, 'ಡಾ। ಡ್ಯೂಯಿ ಅವರ ದೃಷ್ಟಿಕೋನವು, ವಿಶಿಷ್ಟವಾಗಿರುವೆಡೆಯಲ್ಲಿ, ಕೈಗಾರಿಕೀಕರಣ ಮತ್ತು ಸಾಮೂಹಿಕ ಪ್ರಯತ್ನಗಳ ಯುಗದರಂತೆಯೇ ಇದೆ. ಅವರು ಬಲವಾಗಿ ಉದ್ದೇಶಿಸುವುದು ಅಮೆರಿಕನ್‌ರನ್ನು ಎಂಬುದು ಸ್ಪಷ್ಟವಾಗಿದೆ, ಮತ್ತು ಚೈನಾ ಮತ್ತು ಮೆಕ್ಸಿಕೋಗಳಂತಹ ದೇಶಗಳಲ್ಲಿನ ಪ್ರಗತಿಪರ ವ್ಯಕ್ತಿಗಳು

ಕೂಡ ಅವರನ್ನು ಅಷ್ಟೇ ಒಪ್ಪಬೇಕು' ಎಂದು ಬರೆದಾಗ ನನ್ನ ಮನಸ್ಸಿನಲ್ಲಿದ್ದ ಅರ್ಥವೂ ಇದೇ ಎಂದು ಕಾಣುತ್ತದೆ.

ನನ್ನ ವಿಷಾದ ಮತ್ತು ಆಶ್ಚರ್ಯಗಳೆಂದರೆ, ಸಂಪೂರ್ಣ ನಿರಪಾಯಕಾರಿ ಎಂದು ಭಾವಿಸಿದ್ದ ಈ ಹೇಳಿಕೆಯು ಡಾ। ಡ್ಯೂಯಿ ಅವರನ್ನು ನೋಯಿಸಿತು, ಅದಕ್ಕವರು ಈ ರೀತಿ ಉತ್ತರಿಸಿದರು: 'ತಿಳಿಯುವುದರ ವ್ಯವಹಾರ ಸಿದ್ಧಾಂತ ಮತ್ತು ಹೇವರಿಕೆಯ ಅಮೆರಿಕನ್ ಕೈಗಾರಿಕೀಕರಣಗಳನ್ನು ಸಂಬಂಧಿಸುವ ಮಿ। ರಸೆಲ್ ಅವರ ದೃಢ ಹವ್ಯಾಸವು .. .. ನಾನು ಅವರ ತಾತ್ವಿಕತೆಯನ್ನು ಇಂಗ್ಲಿಷ್ ಭೂಮಾಲೀಕರ ಹಿತಾಸಕ್ತಿಗಳಿಗೆ ಸಂಬಂಧಿಸಿದ್ದರೆ ಹೇಗಿರುತ್ತಿತ್ತೋ ಹಾಗಿದೆ.'

ನನ್ನ ಅಭಿಪ್ರಾಯಗಳನ್ನು ನನ್ನ ಬ್ರಿಟಿಷ್ ಶ್ರೀಮಂತವರ್ಗಕ್ಕೆ ಸಂಬಂಧಿಸಿದಂತೆ ವಿವರಿಸುವ (ವಿಶೇಷವಾಗಿ ಕಮ್ಯುನಿಸ್ಟರು) ರೂಢಿಗೆ, ನನ್ನ ಮಟ್ಟಿಗೆ, ಹೊಂದಿಕೊಂಡಿದ್ದೇನೆ; ನನ್ನ ದೃಷ್ಟಿಕೋನವು, ಬೇರೆಯವರದರಂತೆಯೇ, ಸಾಮಾಜಿಕ ಪರಿಸ್ಥಿತಿಗಳಿಂದ ಪ್ರಭಾವಿತವಾಗಿವೆಯೆಂಬುದನ್ನು ನಾನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ. ಆದರೆ ಡಾ। ಡ್ಯೂಯಿ ಅಂತಹವರಿಗೆ ಸಂಬಂಧಿಸಿದಂತೆ, ಸಾಮಾಜಿಕ ಪ್ರಭಾವಗಳ ಬಗ್ಗೆ ನಾನು ತಪ್ಪು ತಿಳಿದಿದ್ದರೆ, ಅದಕ್ಕಾಗಿ ವಿಷಾದಿಸುತ್ತೇನೆ. ಆದರೆ ಹಾಗೆ ಮಾಡಿದವರಲ್ಲಿ ನಾನೊಬ್ಬನೇ ಇಲ್ಲ. ನಿದರ್ಶನಕ್ಕೆ ಸಾಂತಾಯನ ಅವರು ಹೀಗೆ ಬರೆದಿದ್ದರು: 'ಡ್ಯೂಯಿ ಅವರಲ್ಲಿ, ಈಗಿನ ವಿಜ್ಞಾನ ಮತ್ತು ನೈತಿಕತೆಯಲ್ಲಿನಂತೆ, ವ್ಯಕ್ತಿಯನ್ನು ಅವನ ಸಾಮಾಜಿಕ ಕಾರ್ಯಗಳಲ್ಲಿ, ಹಾಗೆಯೇ ಸತ್ವಯುತವೂ ವಾಸ್ತವವೂ ಆದುವನ್ನು ಸಾಪೇಕ್ಷವೂ ತಾತ್ಕಾಲಿಕವೂ ಆದುವುಗಳಲ್ಲಿ ಕರಗಿಸಿಬಿಡುವ ವ್ಯಾಪಕ ಅರೆ-ಹೆಗೆಲಿಯನ್ ಪ್ರವೃತ್ತಿಯಿದೆ.'

ಡಾ। ಡ್ಯೂಯಿ ಅವರ ಜಗತ್ತು, ಕಲ್ಪನೆಯಿಂದ ತುಂಬಿರುವ ಮಾನವ ಜೀವಿಗಳಿಂದ ಕೂಡಿದುದು ಎಂದು ನನಗನ್ನಿಸುತ್ತದೆ: ಖಗೋಳವಿಜ್ಞಾನದ ವಿಶ್ವವು, ಅಸ್ತಿತ್ವದಲ್ಲಿದೆ ಎಂದು ಒಪ್ಪಲಾಗಿದ್ದರೂ, ಬಹುಪಾಲು ಸನ್ನಿವೇಶಗಳಲ್ಲಿ ನಾವು ಅದನ್ನು ಗಮನಿಸುವುದೇ ಇಲ್ಲ. ಅವರ ತಾತ್ವಿಕತೆಯು ಸಾಮರ್ಥ್ಯದ ತಾತ್ವಿಕತೆ, ಆದರೆ ವ್ಯಕ್ತಿ ಸಾಮರ್ಥ್ಯದ ಬಗೆಗಿನ ನೀಷೆಯ ತಾತ್ವಿಕತೆಯಲ್ಲ, ಅದು ಅನುಭವಕ್ಕೆ ಬರುವ ಸಮಾಜದ ಬೆಲೆಬಾಳುವ ಸಾಮರ್ಥ್ಯ. ಸಾಮಾಜಿಕ ಸಾಮರ್ಥ್ಯದ ಈ ಅಂಶದಿಂದಾಗಿಯೇ ಸಾಧನ ಸಿದ್ಧಾಂತವು, ನೈಸರ್ಗಿಕ ಶಕ್ತಿಗಳ ನಿಯಂತ್ರಣದ ಪರಿಮಿತಿಯ ಬಗ್ಗೆ ಚಿಂತಿಸುವವರಿಗಿಂತ ಹೊಸ ನಿಯಂತ್ರಣದಿಂದ ಪ್ರಭಾವಿತರಾದವರಿಗೆ, ಹೆಚ್ಚು ಆಕರ್ಷಕವಾಗುವಂತೆ ಕಾಣಲು ಕಾರಣ ಎಂದು ನನಗನ್ನಿಸುತ್ತದೆ.

ಮಾನವೇತರ ಪರಿಸರದ ಬಗೆಗಿನ ಮಾನವ ದೃಷ್ಟಿಕೋನವು ಬೇರೆ ಬೇರೆ ಕಾಲಗಳಲ್ಲಿ ತುಂಬ ಭಿನ್ನವಾದುದು. ಅಹಂಕಾರೋನ್ಮಾದದ ಬಗ್ಗೆ ಹೆದರಿಕೆ ಮತ್ತು

ಸ್ಯೂಸ್‌ಗಿಂತ ಉನ್ನತವಾದ ಆವಶ್ಯಕತೆ ಅಥವಾ ವಿಧಿಯ ಬಗೆಗಿನ ನಂಬಿಕೆ ಇವುಗಳಿಂದಾಗಿ ಗ್ರೀಕ್‌ರು, ವಿಶ್ವದ ಬಗ್ಗೆ ಧಾರ್ಷ್ಟ್ಯ ಎನ್ನಿಸಬಹುದಾದುದನ್ನು ಎಚ್ಚರಿಕೆಯಿಂದ ದೂರೀಕರಿಸಿದರು. ಮಧ್ಯ ಯುಗಗಳು ಈ ಶರಣಾಗತಿಯನ್ನು ಮತ್ತೂ ಮುಂದಕ್ಕೆ ಒಯ್ದರು: ಆಗ ದೇವರ ಬಗೆಗಿನ ವಿನಮ್ರತೆಯು ಕ್ರೈಸ್ತಮತಧರ್ಮೀಯನ ಆದ್ಯ ಕರ್ತವ್ಯ ಎನಿಸಿತು. ಈ ಮನೋಭಾವವು ಪ್ರಯತ್ನಶೀಲತೆಯನ್ನು ತುಳಿಯಿತು, ಹೀಗಾಗಿ ಸ್ವಂತಿಕೆಯು ಅಸಾಧ್ಯವೆನಿಸಿತು. ನವೋದಯವು ಮಾನವ ಹೆಮ್ಮೆಯನ್ನು ಪುನರುಜ್ಜೀವನಗೊಳಿಸಿತು, ಆದರೆ ಅದನ್ನು ಅತಿರೇಕಕ್ಕೊಯ್ದುದರಿಂದಾಗಿ ಅನಾಯಕತ್ವ ಮತ್ತು ದುರಂತಗಳಿಗೆ ಎಡೆಯಾಯಿತು. ಅದರ ಸಾಧನೆಯನ್ನು ಬಹುತೇಕವಾಗಿ ಮತಧರ್ಮಸುಧಾರಣೆ ಮತ್ತು ಪ್ರತಿ–ಮತಧರ್ಮಸುಧಾರಣೆಗಳು ಹಾಳುಗೆಡವಿದವು. ಆದರೆ ಆಧುನಿಕ ತಾಂತ್ರಿಕತೆಯು, ನವೋದಯದ ಡೌಲಿನ ವ್ಯಕ್ತಿಗೆ ಅಪಥ್ಯವೆನಿಸಿದರೂ, ಮಾನವ ಸಮುದಾಯಗಳ ಪ್ರಜ್ಞಾಪೂರ್ವಕ ಸಾಮೂಹಿಕ ಪ್ರಯತ್ನವನ್ನು ಪುನರುಜ್ಜೀವನಗೊಳಿಸಿತು. ಹಿಂದೆ ತುಂಬ ವಿನೀತನಾಗಿದ್ದ ಮಾನವನು ತನ್ನನ್ನು ಸರಿಸುಮಾರು ದೇವರ ಸಮಾನನೆಂದು ಭಾವಿಸುವಂತಾಯಿತು. ಇಟಾಲಿಯನ್ ವ್ಯವಹಾರವಾದಿಯಾದ ಪ್ಯಾಪಿನಿಯು 'ಕ್ರಿಸ್ತನ ಅನುಕರಣೆ'ಯ ಸ್ಥಾನದಲ್ಲಿ 'ದೇವರ ಅನುಕರಣೆ'ಯನ್ನು ಇಡಲು ನಮ್ಮನ್ನು ಪ್ರೇರಿಸುತ್ತಾನೆ.

ಇವೆಲ್ಲದರಲ್ಲಿಯೂ ನನಗೆ ಒಂದು ಅಪಾಯ ಕಾಣಿಸುತ್ತದೆ, ಆ ಭಯವನ್ನು ವೈಶ್ವಿಕ ಅಶ್ರದ್ಧೆ (ಕಾಸ್ಮಿಕ್ ಇಂಪಯಟಿ) ಎಂದು ಕರೆಯಬಹುದು. ಮಾನವ ನಿಯಂತ್ರಣಕ್ಕೆ ಹೊರತಾದ ವಸ್ತುಸ್ಥಿತಿಗಳನ್ನು ಬಹುವಾಗಿ ಅವಲಂಬಿಸುವ 'ಸತ್ಯ'ದ ಪರಿಕಲ್ಪನೆಯು ಇಲ್ಲಿಯವರೆಗೆ ವಿನಮ್ರತೆಯ ಮನೋಭಾವವನ್ನು ಆವಶ್ಯಕವೆಂದು ಬಿತ್ತುವ ಮಾರ್ಗಗಳಲ್ಲಿ ತತ್ತ್ವಜ್ಞಾನವೂ ಒಂದು ಎನಿಸಿತ್ತು. ಹೆಮ್ಮೆಗೆ ಹಾಕಿದ್ದ ಈ ತಡೆಯನ್ನು ಯಾವಾಗ ತೆಗೆದುಹಾಕಲಾಯಿತೋ, ಅಂದಿನಿಂದ ಒಂದು ಬಗೆಯ ಹುಚ್ಚುತನದ ಮಾರ್ಗದಲ್ಲಿ, – ಅದೆಂದರೆ ಅಧಿಕಾರೋನ್ಮಾದ – ಮತ್ತೊಂದು ಹೆಜ್ಜೆಯನ್ನಿರಿಸಲಾಗಿದೆ. ಅದು ಕ್ಲಿಷ್ಟತೆಯಿಂದ ತತ್ತ್ವಜ್ಞಾನದ ಮೇಲೆಯೂ ದಾಳಿಮಾಡಿದೆ, ಇದಕ್ಕೆ, ಆಧುನಿಕರು, ತತ್ತ್ವಜ್ಞಾನಿಗಳಾಗಿರಲಿ ಅಲ್ಲದಿರಲಿ, ತಲೆದೂಗುವಂತಾಗಿದೆ. ಈ ಉನ್ಮಾದವು ನಮ್ಮ ಕಾಲದ ಅತ್ಯಂತ ದೊಡ್ಡ ಅಪಾಯವೆಂದು ನಾನು ಭಾವಿಸಿದ್ದೇನೆ; ಎಷ್ಟೇ ಅನುದ್ದಿಷ್ಟವಾಗಿರಲಿ, ಅದಕ್ಕೆ ನೀರೆರೆಯುವ ತಾತ್ವಿಕತೆಯು ವ್ಯಾಪಕ ಸಾಮಾಜಿಕ ದುರಂತದ ಸಾಧ್ಯತೆಯನ್ನು ಹೆಚ್ಚಿಸುತ್ತದೆ.

○

೩೧

ತಾರ್ಕಿಕ ವಿಶ್ಲೇಷಣೆಯ ತಾತ್ವಿಕತೆ

ಪೈಥಾಗೊರಾಸ್‌ನ ಕಾಲದಿಂದಲೂ ತತ್ವಜ್ಞಾನ ಕ್ಷೇತ್ರದಲ್ಲಿ, ಮುಖ್ಯವಾಗಿ ಗಣಿತದಿಂದ ಸ್ಫೂರ್ತಗೊಂಡ ಚಿಂತನೆಗಳನ್ನು ಹೊಂದಿದವರು ಮತ್ತು ಮುಖ್ಯವಾಗಿ ಅನುಭವೈಕ ವಿಜ್ಞಾನಗಳಿಂದ ಪ್ರಭಾವಿತವಾದ ಚಿಂತನೆಗಳುಳ್ಳವರು ಇವರ ನಡುವಣ ಸಂಘರ್ಷವಿದೆ. ಪ್ಲೇಟೋ, ಥಾಮಸ್ ಆಕ್ವಿನಾಸ್, ಸ್ಪಿನೋಜ಼ ಮತ್ತು ಕ್ಯಾಂಟ್ ಇವರುಗಳನ್ನು ಗಣಿತ ಗುಂಪಿನವರು ಎಂದು ಹೇಳಬಹುದು; ಡೆಮಾಕ್ರಿಟಸ್, ಅರಿಸ್ಟಾಟಲ್, ಮತ್ತು ಲಾಕ್‌ನಿಂದೀಚೆಗಿನ ಆಧುನಿಕ ಅನುಭವೈಕವಾದಿಗಳನ್ನು ವಿರೋಧ ಪಕ್ಷದಲ್ಲಿ ಕೂಡಿಸಬಹುದು. ನಮ್ಮ ಕಾಲದಲ್ಲಿ, ಗಣಿತತತ್ವಗಳಿಂದ ಪೈಥಾಗೊರಿಯನ್ ಅಂಶಗಳನ್ನು ಹೊರಹಾಕಲು ಪ್ರಯತ್ನಿಸುವ ಹಾಗೂ ಅನುಭವೈಕವಾದ ಮತ್ತು ಮಾನವಜ್ಞಾನದ ಸಾಧಿತ ಭಾಗಗಳಲ್ಲಿನ ಆಸಕ್ತಿ ಇವುಗಳನ್ನು ಒಗ್ಗೂಡಿಸಲು ಪ್ರಯತ್ನಿಸುವ ಒಂದು ತಾತ್ವಿಕ ಪಂಥವು ಉದಯಿಸಿದೆ. ಈ ಪಂಥದ ಉದ್ದೇಶಗಳು ಹಿಂದಿನ ಬಹುತೇಕ ತಾತ್ವಿಕತೆಗಳಿಗಿಂತ ಕಡಿಮೆ ಢಾಳಾಗಿ ಕಾಣಿಸಿದರೂ, ಅದರ ಸಾಧನೆಗಳಲ್ಲಿ ಕೆಲವು ವಿಜ್ಞಾನಿಗಳದರಷ್ಟೇ ಗಟ್ಟಿಯಾದವು.

ಈ ತಾತ್ವಿಕತೆಯ ಮೂಲವಿರುವುದು, ತಮ್ಮ ವಿಷಯದಲ್ಲಿನ ಭ್ರಾಮಕತೆಗಳನ್ನೂ ಪಡಮೋಸಿ ತಾರ್ಕಿಕತೆಯನ್ನೂ ತೊಡೆಯಲು ನಿರ್ಧರಿಸಿದ ಗಣಿತಜ್ಞರ ಸಾಧನೆಗಳಲ್ಲಿ. ಹದಿನೇಳನೆಯ ಶತಮಾನದ ದೊಡ್ಡ ಗಣಿತಜ್ಞರು ಆಶಾವಾದಿಗಳಾಗಿ ಕ್ಷಿಪ್ರ ಫಲಿತಾಂಶಗಳನ್ನು ಪಡೆಯಲು ಕಾತರರಾಗಿದ್ದರು; ಇದರ ಪರಿಣಾಮವಾಗಿ ಅವರು ವಿಶ್ಲೇಷಣಾತ್ಮಕ (ಬೀಜಗಣಿತೀಯ) ಜ್ಯಾಮಿತಿ ಮತ್ತು ಅನಂತಸೂಕ್ಷ್ಮ ಕಲನಶಾಸ್ತ್ರಗಳ ತಳಹದಿಗಳನ್ನು ಅಸುರಕ್ಷಿತವೆಂದು ಕೈಬಿಟ್ಟರು. ಲೀಬ್‌ನಿಜ಼್ ವಾಸ್ತವ ಸೂಕ್ಷ್ಮಗಳಲ್ಲಿ ನಂಬಿಕೆಯಿಟ್ಟಿದ್ದ, ಈ ನಂಬಿಕೆಯು ಅವನ ತತ್ವಜಿಜ್ಞಾಸೆಯೊಂದಿಗೆ ಹೊಂದಿಕೊಂಡರೂ, ಅದಕ್ಕೆ ಗಣಿತದಲ್ಲಿ ಗಟ್ಟಿ ತಳಹದಿಯಿರಲಿಲ್ಲ. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗಾನಂತರ, ವೀಯಿರ್‌ಸ್ಟ್ರಾಸ್ ಕಲನವನ್ನು ಹೇಗೆ ಸೂಕ್ಷ್ಮಗಳಿಲ್ಲದೆ ಸ್ಥಾಪಿಸಬಹುದು ಎಂಬುದನ್ನು ತೋರಿಸಿ, ಆ ಮೂಲಕ ಅದನ್ನು ತಾರ್ಕಿಕವಾಗಿ

ಸುರಕ್ಷಿತವಾಗಿಸಿದ್ದ. ಆನಂತರ ಬಂದವನು ಜಾರ್ಜ್ ಕ್ಯಾಂಟರ್, ಅವನು ಸಾತತ್ಯ ಮತ್ತು ಅನಂತಸಂಖ್ಯಾ ತತ್ವವನ್ನು ಮಂಡಿಸಿದ. ಅವನು ಸೂತ್ರೀಕರಿಸುವವರೆಗೂ, 'ಸಾತತ್ಯ' ಎಂಬುದು ಅಸ್ಪಷ್ಟವಾಗಿತ್ತು, ಆದರೆ ಗಣಿತದಲ್ಲಿ ತತ್ವಜಿಜ್ಞಾಸಾತ್ಮಕ ಗೊಂದಲಗಳನ್ನು ತುಂಬುವ ಹೆಗೆಲ್‌ನಂತಹ ತಾತ್ವಿಕರಿಗೆ ಅನುಕೂಲಕರವಾಗಿತ್ತು. ಕ್ಯಾಂಟರ್ ಆ ಶಬ್ದಕ್ಕೆ ಒಂದು ನಿಖರ ಅರ್ಥವನ್ನು ನೀಡಿ, ಸಾತತ್ಯವು, ಅವನ ಸೂತ್ರಕ್ಕನುಗುಣವಾಗಿ, ಗಣಿತಜ್ಞರು ಹಾಗೂ ಭೌತವಿಜ್ಞಾನಿಗಳಿಗೆ ಆವಶ್ಯಕವಾದ ಪರಿಕಲ್ಪನೆಯೆಂಬುದನ್ನು ತೋರಿಸಿದ. ಆ ಮೂಲಕ ಬರ್ಗ್‌ಸನ್‌ನದರಂತಹ ನಿಗೂಢತೆಯನ್ನು ಬಹುಪಾಲು ಕಗ್ಗವೆನಿಸಿದ.

ಬಹು ಕಾಲ ಕಗ್ಗಂಟಾಗಿದ್ದ ಅನಂತಸಂಖ್ಯೆಯ ತಾರ್ಕಿಕ ತಬ್ಬಿಬ್ಬುಗಳನ್ನು ಕ್ಯಾಂಟರ್ ಸರಿಪಡಿಸಿದ. ೧ ರಿಂದ ಮೊದಲಾಗುವ ಪೂರ್ಣಾಂಕಗಳನ್ನು ತೆಗೆದುಕೊಳ್ಳಿ; ಅಂಥವು ಎಷ್ಟಿವೆ? ಸಂಖ್ಯೆಯು ನಿರ್ದಿಷ್ಟವಲ್ಲ ಎಂಬುದು ನಿಶ್ಚಿತ. ಒಂದು ಸಾವಿರದವರೆಗೆ, ಒಂದು ಸಾವಿರ ಸಂಖ್ಯೆಗಳಿವೆ; ಹತ್ತು ಲಕ್ಷದವರೆಗೆ, ಹತ್ತು ಲಕ್ಷ. ಯಾವುದೇ ನಿರ್ದಿಷ್ಟ ಸಂಖ್ಯೆಯನ್ನು ಹೇಳಿದರೂ ಅದಕ್ಕಿಂತ ಇನ್ನೂ ಹೆಚ್ಚಿನ ಸಂಖ್ಯೆಗಳಿರುವುದು ಸ್ಪಷ್ಟ, ಯಾಕೆಂದರೆ ಒಂದರಿಂದ ಆರಂಭವಾಗಿ ಅಂದುಕೊಳ್ಳುವ ಯಾವುದೇ ಸಂಖ್ಯೆಯವರೆಗೆ ಅಷ್ಟೇ ಸಂಖ್ಯೆಯ ಸಂಖ್ಯೆಗಳಿರುತ್ತವೆ, ಮತ್ತೆ ಅವುಗಳಿಗಿಂತ ದೊಡ್ಡದಾದವು, ಆನಂತರ ಮತ್ತೂ ದೊಡ್ಡದಾದವು. ಹೀಗಾಗಿ ಪೂರ್ಣಾಂಕಗಳ ಸಂಖ್ಯೆಯು ಅನಂತ ಸಂಖ್ಯೆಯಾಗಿರಬೇಕು. ಈಗ ಕೌತುಕವಾದ ವಿಷಯವೊಂದು ಬರುತ್ತದೆ: ಪೂರ್ಣಾಂಕಗಳ ಸಂಖ್ಯೆಯು ಎಲ್ಲ ಪೂರ್ಣಾಂಕಗಳ ಸಂಖ್ಯೆಯಷ್ಟೇ ಇರುತ್ತದೆ. ಈ ಎರಡು ಸಾಲುಗಳನ್ನು ಗಮನಿಸಿ:

೧, ೨, ೩, ೪, ೫, ೬ .. ..

೨, ೪, ೬, ೮, ೧೦, ೧೨ .. ..

ಮೇಲಿನ ಸಾಲಿನ ಪ್ರತಿ ಉಲ್ಲೇಖಕ್ಕೂ ಕೆಳಗಿನ ಸಾಲಿನಲ್ಲಿ ಒಂದು ಸಂಖ್ಯೆಯಿದೆ; ಹೀಗಾಗಿ, ಎರಡೂ ಸಾಲುಗಳ ಪರಿಮಾಣಗಳ ಸಂಖ್ಯೆಯು ಒಂದೇ ಆಗಿರಬೇಕು, ಆದರೆ ಕೆಳಗಿನ ಸಾಲಿನಲ್ಲಿ ಮೇಲಿನ ಸಾಲಿನ ಪರಿಮಾಣ (ಟರ್ಮ್)ಗಳ ಅರ್ಧದಷ್ಟು ಮಾತ್ರ ಇವೆ. ಇದನ್ನು ಗಮನಿಸಿದ ಲೀಬ್‌ನಿಝ್ ಒಂದು ವಿರೋಧದ ಬಗ್ಗೆ ಚಿಂತನೆ ಮಾಡಿ, ಅನಿರ್ದಿಷ್ಟ ಸಂಗ್ರಹಗಳಿದ್ದರೂ, ಅನಿರ್ದಿಷ್ಟ ಸಂಖ್ಯೆಗಳಿರುವುದಿಲ್ಲ ಎಂದು ತೀರ್ಮಾನಿಸಿದ. ಜಾರ್ಜ್ ಕ್ಯಾಂಟರ್, ಇದಕ್ಕೆ ವ್ಯತಿರಿಕ್ತವಾಗಿ, ಅದು ವಿರೋಧವಲ್ಲವೆಂದು ಧೈರ್ಯದಿಂದ ಸಾರಿದ. ಅವನು ಹೇಳಿದ್ದು ಸರಿ; ಅದೊಂದು ವಿಚಿತ್ರ, ಅಷ್ಟೆ.

ಜಾರ್ಜ್ ಕ್ಯಾಂಟರ್ 'ಅನಿರ್ದಿಷ್ಟ' ಸಂಗ್ರಹವನ್ನು ಇಡೀ ಸಂಗ್ರಹವು ಹೊಂದಿರುವಷ್ಟೇ ಪರಿಮಾಣಗಳನ್ನು ಭಾಗಗಳನ್ನು ಹೊಂದಿರುವಂಥದು ಎಂದು

ಸೂತ್ರೀಕರಿಸಿದ. ಈ ಆಧಾರದ ಮೇಲೆ, ಅವನು ಅನಿರ್ದಿಷ್ಟ ಸಂಖ್ಯೆಗಳ ಕೌತುಕಮಯ ಗಣಿತ ಸಿದ್ಧಾಂತವನ್ನು ಮಂಡಿಸಲು ಸಾಧ್ಯವಾಯಿತು, ಮತ್ತು ಆ ಮೂಲಕ ಹಿಂದೆ ನಿಗೂಢತೆ ಮತ್ತು ಗೊಂದಲಗಳಿಗೆ ಬಲಿಯಾಗಿದ್ದ ಇಡೀ ಕ್ಷೇತ್ರವನ್ನು ನಿಖರ ತರ್ಕದ ವ್ಯಾಪ್ತಿಗೆ ತಂದ.

ಮುಂದಿನ ಮುಖ್ಯ ವ್ಯಕ್ತಿ ಎಂದರೆ ಫ್ರೆಜ್, ಅವನು ತನ್ನ ಮೊದಲ ಕೃತಿಯನ್ನು ೧೮೭೯ ರಲ್ಲಿ ಹೊರತಂದ, ಮತ್ತು 'ಸಂಖ್ಯೆ'ಗೆ ಅವನು ಕೊಟ್ಟ ವ್ಯಾಖ್ಯೆಯು ೧೮೮೪ ರಲ್ಲಿ ಪ್ರಕಟವಾಯಿತು; ಆದರೆ, ಯುಗಪ್ರವರ್ತಕ ಅನಾವರಣಗಳ ಹೊರತಾಗಿಯೂ, ನಾನು ಅವನ ಬಗ್ಗೆ ೧೯೦೩ ರಲ್ಲಿ ವಿವರಿಸುವವರೆಗೂ, ಅವನು ಗಣನೆಗೇ ಬಂದಿರಲಿಲ್ಲ. ಫ್ರೆಜ್‌ಗಿಂತ ಮುಂಚೆ, ಸಂಖ್ಯೆಯ ಬಗ್ಗೆ ಸೂಚಿತವಾದ ಪ್ರತಿ ವ್ಯಾಖ್ಯೆಯೂ ಪ್ರಾಥಮಿಕ ತರ್ಕದೋಷಗಳನ್ನು ಹೊಂದಿತ್ತು. 'ಸಂಖ್ಯೆ'ಯನ್ನು 'ಬಹುತ್ವ'ದೊಂದಿಗೆ ಗುರುತಿಸುವುದು ರೂಢಿಯಾಗಿತ್ತು. ಆದರೆ ಒಂದು ಸಂಖ್ಯೆಯ ನಿದರ್ಶನ ಒಂದು ನಿರ್ದಿಷ್ಟ ಸಂಖ್ಯೆ, ೩ ಎಂದುಕೊಳ್ಳೋಣ; ೩ ರ ನಿದರ್ಶನವು ನಿರ್ದಿಷ್ಟ ತ್ರಿತ್ವ. ತ್ರಿತ್ವ ಎಂಬುದು ಒಂದು ಬಹುತ್ವ, ಆದರೆ ತ್ರಿತ್ವಗಳ ವರ್ಗವು – ಅದನ್ನು ಫ್ರೆಜ್ ೩ ರೊಂದಿಗೆ ಗುರುತಿಸಿದ – ಬಹುತ್ವದ ಬಹುತ್ವ, ಮತ್ತು ೩ ಎಂದು ನಿದರ್ಶನವಾಗಿರುವ, ಸಾಧಾರಣ ಸಂಖ್ಯೆಯು ಬಹುತ್ವದ ಬಹುತ್ವದ ಬಹುತ್ವ, ಇದನ್ನು ಒಂದು ತ್ರಿತ್ವದ ಸರಳ ಬಹುತ್ವದೊಡನೆ ಗೊಂದಲಮಯವಾಗಿ ಮಾಡಿದ್ದ ಪ್ರಾಥಮಿಕ ವ್ಯಾಕರಣದೋಷವು ಇಡೀ ಸಂಖ್ಯೆಯ ತಾತ್ವಿಕತೆಯನ್ನು, ಫ್ರೆಜ್‌ಗೆ ಮುಂಚೆ, ಅರ್ಥಹೀನ ಎಂಬ ನಿಖರ ಅರ್ಥದಲ್ಲಿ ಅರ್ಥಹೀನ ಕಂತೆಯನ್ನಾಗಿಸಿತ್ತು.

ಫ್ರೆಜ್‌ನ ಕಾರ್ಯದಿಂದಾಗಿ, ಅಂಕಗಣಿತವು ಮತ್ತು ಒಟ್ಟಾರೆ ಶುದ್ಧ ಗಣಿತಾತ್ಮಕತೆಯು ಅನುಗಮನ ತರ್ಕದ ಮುಂದುವರಿಕೆಯೇ ಆಗಿದೆ. ಅಂಕಗಣಿತಾತ್ಮಕ ಪ್ರತಿಪಾದನೆಗಳು 'ಸಂಶ್ಲೇಷಿತ' ಮತ್ತು ಅದು ಕಾಲಕ್ಕೆ ಸಂಬಂಧಿಸಿದೆ ಎಂಬ ಕ್ಯಾಂಟ್‌ನ ಸಿದ್ಧಾಂತವು ಬಿದ್ದುಹೋಯಿತು. ತರ್ಕದಿಂದ ಶುದ್ಧ ಗಣಿತವು ಬೆಳೆದು ಬಂದ ಬಗೆಯನ್ನು ವಿವರವಾಗಿ 'ಪ್ರಿನ್ಸಿಪಿಯ ಮ್ಯಾಥಮ್ಯಾಟಿಕ'ದಲ್ಲಿ ವೈಟ್‌ಹೆಡ್ ಮತ್ತು ನನ್ನಿಂದ ನಿರೂಪಿತವಾಗಿದೆ.

ತತ್ವಜ್ಞಾನದ ಬಹು ಭಾಗವನ್ನು 'ವಾಕ್ಯ' (ಸಿನ್‌ಟ್ಯಾಕ್ಸ್) ಎಂದು ಕರೆಯಬಹುದಾದ ರೀತಿಯಲ್ಲಿ ಸರಳೀಕರಿಸಬಹುದೆಂಬುದು ಕ್ರಮೇಣವಾಗಿ ಸ್ಪಷ್ಟವಾಯಿತು, ಆದರೆ ಆ ಶಬ್ದವನ್ನು ಇದುವರೆಗೂ ರೂಢಿಯಲ್ಲಿ ಬಳಸುತ್ತಿದ್ದ ಅರ್ಥಕ್ಕಿಂತ ಹೆಚ್ಚಿನ ಅರ್ಥವ್ಯಾಪ್ತಿಯಿಂದ ಬಳಸಬೇಕು. ಕೆಲವರು, ಅದರಲ್ಲೂ ಕ್ಯಾರ್ನಪ್, ಎಲ್ಲ ತಾತ್ವಿಕ ಸಮಸ್ಯೆಗಳೂ ವಸ್ತುತಃ ವಾಕ್ಯಾತ್ಮಕವಾದವು, ಮತ್ತು ವಾಕ್ಯರಚನೆಯಲ್ಲಿನ ದೋಷಗಳನ್ನು ನಿವಾರಿಸಿಕೊಂಡರೆ ಆಗ ತಾತ್ವಿಕ ಸಮಸ್ಯೆಯೊಂದು

ಇಲ್ಲವೇ ಪರಿಹಾರವಾಗುತ್ತದೆ, ಇಲ್ಲವೇ ಅಪರಿಹಾರ್ಯವೆಂದು ನಿರ್ಧರಿತವಾಗುತ್ತದೆ ಎಂಬ ಸಿದ್ಧಾಂತವೊಂದನ್ನು ಮುಂದಿಟ್ಟಿದ್ದಾನೆ. ಆದರೆ ಇದು ಅತಿರೇಕದ ಹೇಳಿಕೆ ಎಂಬುದು ನನ್ನ ತಿಳಿವಳಿಕೆ, ಮತ್ತು ಅದನ್ನು ಕ್ಯಾರ್ನಪ್ ಒಪ್ಪುತ್ತಾರೆ. ಆದರೆ ಸಾಂಪ್ರದಾಯಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ತಾತ್ವಿಕ ವಾಕ್ಯರಚನೆಯ ಉಪಯುಕ್ತತೆಯು ತುಂಬ ಮಹತ್ವದ್ದು.

ಅದರ ಉಪಯುಕ್ತತೆಯನ್ನು ವರ್ಣನೆಗಳ ಸಿದ್ಧಾಂತದ ಬಗೆಗಿನ ಒಂದು ಸಣ್ಣ ವಿವರಣೆಯ ಮೂಲಕ ಸ್ಪಷ್ಟಪಡಿಸುತ್ತೇನೆ. 'ವರ್ಣನೆ' ಎಂದರೆ 'ಸಂಯುಕ್ತ ಸಂಸ್ಥಾನಗಳ ಈಗಿನ ಅಧ್ಯಕ್ಷರು' ಎಂಬಂತಹ ಒಂದು ಪದಗುಚ್ಛ, ಅದರಲ್ಲಿ ವ್ಯಕ್ತಿಯನ್ನೋ ವಸ್ತುವನ್ನೋ ಹೆಸರಿನಿಂದ ಕರೆಯದೆ ಅವನಿಗೆ ಇರುವ ಅಥವಾ ಅವನಿಗೆ ವಿಶಿಷ್ಟವಾಗಿರುವ ಗುಣದಿಂದ ಸೂಚಿತವಾಗಿರುತ್ತದೆ. ಇಂಥ ಪದಗುಚ್ಛಗಳು ಮಹಾ ತೊಂದರೆಗಳನ್ನು ನಿರ್ಮಿಸಿವೆ. 'ಚಿನ್ನದ ಬೆಟ್ಟವು ಅಸ್ತಿತ್ವದಲ್ಲಿಲ್ಲ' ಎಂದು ನಾನು ಹೇಳಿದರೆ, ಮತ್ತು ನೀವು 'ಅಸ್ತಿತ್ವದಲ್ಲಿಲ್ಲದಿರುವುದು ಯಾವುದು?' ಎಂದು ಕೇಳಿದರೆ, ನಾನು 'ಚಿನ್ನದ ಬೆಟ್ಟ' ಎಂದು ಅದಕ್ಕೆ ಉತ್ತರಿಸಿದರೆ, ಆಗ ನಾನು ಅದಕ್ಕೆ ಒಂದು ಬಗೆಯ ಅಸ್ತಿತ್ವವನ್ನು ಆರೋಪಿಸುತ್ತಿರುತ್ತೇನೆ. ಆದರೆ 'ಗುಂಡಗಿನ ಚೌಕವು ಅಸ್ತಿತ್ವದಲ್ಲಿಲ್ಲ' ಎಂಬಂತಹುದೇ ಹೇಳಿಕೆಯನ್ನು ನಾನು ಖಂಡಿತವಾಗಿಯೂ ಮಾಡುತ್ತಿರುವುದಿಲ್ಲ. ಇದರಿಂದ ಚಿನ್ನದ ಬೆಟ್ಟ ಒಂದು ವಸ್ತುವಾದರೆ, ಗುಂಡಗಿನ ಚೌಕ ಮತ್ತೊಂದು ಎಂದು ಇದು ಸೂಚಿಸುವಂತಿರುತ್ತದೆ, ಆದರೆ ಎರಡೂ ಇಲ್ಲದವು. ವರ್ಣನೆಗಳ ಸಿದ್ಧಾಂತವು ಇದನ್ನು ಮತ್ತು ಇಂತಹ ತೊಂದರೆಗಳನ್ನು ಎದುರಿಸಲು ವಿನ್ಯಾಸಗೊಂಡಂತಹುದು.

ಈ ಸಿದ್ಧಾಂತದ ಪ್ರಕಾರ, 'ಇಂಥಿಂಥವನು' ಎಂಬಂತಹ ಪದಗುಚ್ಛವನ್ನು ಹೊಂದಿದ ಹೇಳಿಕೆಯನ್ನು ಸರಿಯಾಗಿ ವಿಶ್ಲೇಷಿಸಿದಾಗ, 'ಇಂಥಿಂಥವನು' ಎಂಬ ಪದಗುಚ್ಛವು ಕಣ್ಮರೆಯಾಗಿಬಿಡುತ್ತದೆ. ಉದಾಹರಣೆಗೆ, 'ಸ್ಕಾಟ್ ವೇವರ್ಲಿಯ ಲೇಖಕ' ಎಂಬ ಹೇಳಿಕೆಯನ್ನು ತೆಗೆದುಕೊಳ್ಳಿ. ಈ ಸಿದ್ಧಾಂತವು ಈ ಹೇಳಿಕೆಯನ್ನು ಈ ರೀತಿಗಳಲ್ಲಿ ವಿಶ್ಲೇಷಿಸುತ್ತದೆ:

'ವೇವರ್ಲಿಯನ್ನು ಬರೆದದ್ದು ಒಬ್ಬನೇ ಒಬ್ಬ ಲೇಖಕ, ಮತ್ತು ಆ ಮನುಷ್ಯ ಸ್ಕಾಟ್.' ಅಥವಾ ಮತ್ತೂ ಪೂರ್ಣವಾಗಿ,

'ಎಕ್ಸ್‌ಸಿ ಅಗಿದ್ದರೆ ಮತ್ತು ಮಿಕ್ಕಂತೆ ಸುಳ್ಳಾಗಿದ್ದರೆ, ಮೇಲಾಗಿ ಸಿ ಸ್ಕಾಟ್ ಆಗಿದ್ದರೆ ಸತ್ಯವಾಗುವ "ವೇವರ್ಲಿಯನ್ನು ಎಸ್ ಬರೆದ" ಎಂಬ ಹೇಳಿಕೆಯು ಒಂದು ಘಟಕ.'

'ಮೇಲಾಗಿ' ಎಂಬುದಕ್ಕಿಂತ ಮುಂಚಿನ ಇದರ ಮೊದಲ ಭಾಗವನ್ನು ಅರ್ಥ ಎಂದು ಸೂತ್ರೀಕರಿಸಲಾಗುತ್ತದೆ: 'ವೇವರ್ಲಿಯ ಲೇಖಕ ಅಸ್ತಿತ್ವದಲ್ಲಿದ್ದಾನೆ (ಅಥವಾ

ಅಸ್ತಿತ್ವದಲ್ಲಿದ್ದ ಅಥವಾ ಅಸ್ತಿತ್ವದಲ್ಲಿರುತ್ತಾನೆ).' ಹೀಗೆ 'ಚಿನ್ನದ ಬೆಟ್ಟವು ಅಸ್ತಿತ್ವದಲ್ಲಿಲ್ಲ' ಎಂದರೆ'

'ಎಕ್ಸ್ ಸಿ ಆಗಿರುವಾಗ, ಆದರೆ ಮಿಕ್ಕಂತೆ ಅಲ್ಲ, "ಎಕ್ಸ್ ಚಿನ್ನದ್ದು ಮತ್ತು ಪರ್ವತಮಯವಾದದ್ದು" ಎಂಬುದು ಸತ್ಯವಾಗುವ ಘಟಕವು ಇಲ್ಲ.'

ಈ ಸೂತ್ರದ ಪ್ರಕಾರ, 'ಚಿನ್ನದ ಬೆಟ್ಟವು ಅಸ್ತಿತ್ವದಲ್ಲಿಲ್ಲ' ಎಂಬುದರ ಅರ್ಥ ಏನು ಎಂಬ ನಿಗೂಢತೆ ಕಣ್ಮರೆಯಾಗುತ್ತದೆ.

ಈ ಸಿದ್ಧಾಂತದ ಪ್ರಕಾರ, 'ಅಸ್ತಿತ್ವ'ವು ವರ್ಣನೆಗಳ ಮೂಲಕ ಮಾತ್ರ ಖಚಿತಪಡುವಂಥದು. 'ವೇವರ್ಲಿಯ ಲೇಖಕ ಅಸ್ತಿತ್ವದಲ್ಲಿದ್ದಾನೆ' ಎಂದು ಹೇಳಬಹುದಾದರೂ, 'ಸ್ಕಾಟ್ ಅಸ್ತಿತ್ವದಲ್ಲಿದ್ದಾನೆ' ಎಂಬುದು ತಪ್ಪಾದ ವ್ಯಾಕರಣ ಅಥವಾ ದೋಷಪೂರ್ಣ ವಾಕ್ಯರಚನೆ. ಪ್ಲೇಟೋನ 'ಥಿಯೆಕ್ಟಿಟಸ್'ನಿಂದ ಆರಂಭಗೊಂಡ 'ಅಸ್ತಿತ್ವ'ದ ಬಗೆಗಿನ ಎರಡು ಸಾವಿರ ವರ್ಷಗಳ ನಿಗೂಢತೆಯನ್ನು ಇದು ಹೋಗಲಾಡಿಸುತ್ತದೆ.

ನಾವು ಪರಿಗಣಿಸುತ್ತಿದ್ದ ಕಾರ್ಯದ ಒಂದು ಪರಿಣಾಮವೆಂದರೆ, ಪೈಥಾಗೊರಾಸ್ ಮತ್ತು ಪ್ಲೇಟೋರ ಕಾಲದಿಂದ ಆಕ್ರಮಿಸಿದ್ದ ಉನ್ನತ ಸ್ಥಾನದಿಂದ ಗಣಿತವನ್ನು ಕೆಳಗಿಳಿಸಿದ್ದು, ಮತ್ತು ಅದರಿಂದ ಸಾಧಿತವಾದ ಅನುಭವೈಕತೆಯ ವಿರುದ್ಧವಾದ ಪೂರ್ವಕಲ್ಪನೆಯನ್ನು ನಾಶಪಡಿಸಿದ್ದು. ಗಣಿತ ಜ್ಞಾನವು ಅನುಭವದಿಂದ ಅನುಗಮನಗೊಂಡದ್ದಲ್ಲ ಎಂಬುದು ನಿಜ; ಎರಡಕ್ಕೆ ಎರಡು ಸೇರಿದರೆ ನಾಲ್ಕು ಎಂದುದಾಗಲೀ, ಒಂದು ಯುಗಳದ ಜೊತೆ ಮತ್ತೊಂದು ಯುಗಳ ಸೇರಿದರೆ ಚತುಷ್ಕವಾಗುತ್ತದೆ ಎಂಬುದಾಗಲೀ, ನಾವು ಅನೇಕ ಬಾರಿ ಕಣ್ಣಾರೆ ಕಂಡದ್ದಲ್ಲ. ಈ ಅರ್ಥದಲ್ಲಿ, ಗಣಿತ ಜ್ಞಾನವು ಈಗಲೂ ಅನುಭವೈಕವಲ್ಲ. ಆದರೆ ಅದು ಜಗತ್ತಿನ ಬಗೆಗಿನ ಪೂರ್ವಕಲ್ಪಿತ ಜ್ಞಾನವೂ ಅಲ್ಲ. '೩' ಎಂದರೆ '೨' +'೧', ಅಥವಾ '೪' ಎಂದರೆ '೩+೧'. ಹೀಗಾಗಿ ಅದರ ಅರ್ಥವು (ಆಧಾರವು ದೀರ್ಘವಾಗಿದ್ದರೂ) '೪' ಎಂದರೆ '೨+೨' ಎಂದೇ. ಹೀಗೆ ಗಣಿತ ಜ್ಞಾನವು ನಿಗೂಢತೆಯನ್ನು ಹೋಗಲಾಡಿಸಿಕೊಂಡಿದೆ. ಒಂದು ಗಜದಲ್ಲಿ ಮೂರು ಅಡಿ ಎಂಬ 'ಹಿರಿ ಸತ್ಯ'ದಷ್ಟೇ ಸಹಜವಾದದ್ದು.

ಭೌತವಿಜ್ಞಾನ ಮತ್ತು ಶುದ್ಧ ಗಣಿತವು ತಾರ್ಕಿಕ ವಿಶ್ಲೇಷಣೆಗೆ ಸಾಮಗ್ರಿಯನ್ನು ಒದಗಿಸಿದೆ. ಇದು ಸಾಧ್ಯವಾಗಿರುವುದು ವಿಶೇಷವಾಗಿ ಸಾಪೇಕ್ಷತಾ ಸಿದ್ಧಾಂತ ಮತ್ತು ಕ್ವಾಂಟಂ ಸಿದ್ಧಾಂತಗಳಿಂದ.

ಸಾಪೇಕ್ಷತಾ ಸಿದ್ಧಾಂತದಲ್ಲಿ ತತ್ವಜ್ಞಾನಿಗೆ ಮುಖ್ಯವಾದುದೆಂದರೆ, ಅವಕಾಶ ಮತ್ತು ಕಾಲಗಳ ಬದಲು ಅವಕಾಶ-ಕಾಲವನ್ನು ತಂದುದು. ಸಾಮಾನ್ಯ ತಿಳಿವಳಿಕೆಯೆಂದರೆ, ಸ್ವಲ್ಪ ಕಾಲದವರೆಗೆ ಇರುವ ಮತ್ತು ಅವಕಾಶದಲ್ಲಿ ಚಲಿಸುವ

'ವಸ್ತು'ಗಳಿಂದ ಭೌತ ಜಗತ್ತು ಕೂಡಿದೆ ಎಂಬುದು. ತತ್ವಜ್ಞಾನ ಮತ್ತು ಭೌತವಿಜ್ಞಾನಗಳು 'ವಸ್ತು' (ಥಿಂಗ್) ಕಲ್ಪನೆಯನ್ನು 'ಭೌತಿಕ ದ್ರವ್ಯ' (ಮೆಟೀರಿಯಲ್ ಸಬ್‌ಸ್ಟೆನ್ಸ್) ಎಂದು ಮಾಡಿದ್ದು, ಮತ್ತು ಭೌತಿಕ ದ್ರವ್ಯವು, ತೀರ ಸೂಕ್ಷ್ಮವಾದ ಮತ್ತು ಎಲ್ಲ ಕಾಲದಲ್ಲೂ ಉಳಿಯುವ ಕಣಗಳಿಂದ (ಪಾರ್ಟಿಕಲ್ಸ್) ಕೂಡಿದೆ ಎಂಬ ಕಲ್ಪನೆಯನ್ನು. ಐನ್‌ಸ್ಟೈನ್ ಕಣಗಳ ಜಾಗದಲ್ಲಿ ಘಟನೆಗಳನ್ನು (ಇವೆಂಟ್ಸ್) ನಿಲ್ಲಿಸುತ್ತಾರೆ; ಪ್ರತಿ ಘಟನೆಯೂ ಪರಸ್ಪರ 'ವಿರಾಮ' (ಇಂಟರ್‌ವಲ್) ಎಂಬ ಸಂಬಂಧವನ್ನು (ರಿಲೇಷನ್) ಹೊಂದಿರುತ್ತವೆ, ಅದನ್ನು ಕಾಲ–ಅಂಶ (ಟೈಂ–ಎಲಿಮೆಂಟ್) ಮತ್ತು ಅವಕಾಶ–ಅಂಶ (ಸ್ಪೇಸ್– ಎಲಿಮೆಂಟ್) ಎಂಬುದಾಗಿ ಅನೇಕ ವಿಧಗಳಲ್ಲಿ ವಿಶ್ಲೇಷಿಸಬಹುದು. ಈ ವಿವಿಧ ಬಗೆಗಳ ಆಯ್ಕೆ ಯಾದೃಚ್ಛಿಕವಾದದ್ದು, ಅವುಗಳಲ್ಲಿ ಯಾವುದೂ ಮಿಕ್ಕ ಯಾವುದಕ್ಕಿಂತಲೂ ಸೈದ್ಧಾಂತಿಕವಾಗಿ ಮಿಗಿಲಲ್ಲ. ಎರಡು ವಿಭಿನ್ನ ಪ್ರದೇಶಗಳ 'ಎ' ಮತ್ತು 'ಬಿ' ಎಂಬ ಎರಡು ಘಟನೆಗಳಿದ್ದಾಗ, ಒಂದು ಸಂಪ್ರದಾಯದಂತೆ ಅವು ಸಮಾನಾಂತರವಾದವು, ಮತ್ತೊಂದರ ಪ್ರಕಾರ 'ಎ'ಯು 'ಬಿ'ಗಿಂತ ಮೊದಲು, ಮತ್ತೂ ಒಂದರ ಪ್ರಕಾರ 'ಬಿ' 'ಎ'ಗಿಂತ ಮೊದಲು. ಈ ವಿಭಿನ್ನ ಸಂಪ್ರದಾಯಗಳಿಗೆ ಯಾವುದೇ ಭೌತಿಕ ವಸ್ತುಸ್ಥಿತಿಗಳೂ ಸಂವಾದಿಯಲ್ಲ.

ಇವೆಲ್ಲದರಿಂದ ಹೊಮ್ಮುವುದೆಂದರೆ, ಭೌತವಿಜ್ಞಾನದ ಸಾಮಗ್ರಿಯು ಕಣಗಳಲ್ಲ, ಘಟನೆಗಳು ಎಂಬಂತೆ ತೋರುವುದು. ಕಣ ಎಂದು ಪರಿಭಾವಿಸಿಕೊಂಡಿರುವುದನ್ನು ಘಟನೆಗಳ ಸರಣಿ ಎಂದು ಪರಿಭಾವಿಸಿಕೊಳ್ಳಬೇಕು. ಕಣವೊಂದರ ಜಾಗವನ್ನಾಕ್ರಮಿಸುವ ಘಟನೆಗಳ ಸರಣಿಯು ಕೆಲವು ಪ್ರಮುಖ ಭೌತಿಕ ಲಕ್ಷಣಗಳನ್ನು ಹೊಂದಿರುತ್ತವೆ, ಹೀಗಾಗಿ ನಾವು ಅದನ್ನು ಗಮನಿಸಬೇಕು; ಆದರೆ ನಾವು ಯಾದೃಚ್ಛಿಕವಾಗಿ ಬೇರೆ ಮಾಡಬಹುದಾದ ಬೇರಾವುದೇ ಘಟನೆಗಳ ಸರಣಿಗಳಿಗಿಂತ ಹೆಚ್ಚು ಸ್ಥಿರವಲ್ಲ. ಈ ರೀತಿ 'ಭೌತದ್ರವ್ಯ'ವು ಜಗತ್ತಿನ ಸ್ವಯಂಪೂರ್ಣ ಸಾಮಗ್ರಿಯಲ್ಲ, ಘಟನೆಗಳನ್ನು ಕಂತೆಗಳಾಗಿ ಸೇರಿಸುವ ಒಂದು ಅನುಕೂಲಕರ ಮಾರ್ಗ.

ಕ್ವಾಂಟಂ ಸಿದ್ಧಾಂತವು ಈ ನಿರ್ಣಯವನ್ನು ಪುಷ್ಟಿಗೊಳಿಸುತ್ತದೆಯಾದರೂ ಅದರ ತಾತ್ವಿಕ ಪ್ರಾಮುಖ್ಯವಿರುವುದು ಅದು ಭೌತಿಕ ವಿದ್ಯಮಾನವನ್ನು ಪ್ರಾಯಶಃ ಅನಿರಂತರ ಎಂದು ಪರಿಗಣಿಸುವುದು. ಪರಮಾಣುವೊಂದರಲ್ಲಿ (ಮೇಲಿನಂತೆ ವ್ಯಾಖ್ಯಾನಗೊಂಡ) ಕೆಲವು ಸಂಗತಿಗಳು ಕೆಲವು ಕಾಲ ನಡೆಯುತ್ತವೆ ಎಂದು ಸೂಚಿಸುತ್ತದೆ, ಆದರೆ ತಕ್ಷಣವೇ ಅದರ ಸ್ಥಾನದಲ್ಲಿ ಬೇರೊಂದು ಬಗೆಯ ಸಂಗತಿಗಳು ಬರುತ್ತವೆ. ಎಲ್ಲ ಕಾಲದಲ್ಲೂ ಕಲ್ಪಿತಗೊಂಡ ಚಲನೆಯ ನಿರಂತರತೆಯು ಕೇವಲ ಒಂದು ಪೂರ್ವಾಗ್ರಹವೆಂಬಂತೆ ತೋರುತ್ತದೆ. ಆದರೆ ಕ್ವಾಂಟಂ ಸಿದ್ಧಾಂತಕ್ಕೆ ಸೂಕ್ತವಾದ ತಾತ್ವಿಕತೆಯನ್ನು ಇನ್ನೂ ಸಮರ್ಪಕವಾಗಿ ಸಿದ್ಧಪಡಿಸಲಾಗಿಲ್ಲ. ಅವಕಾಶ ಮತ್ತು ಕಾಲಗಳ ಬಗೆಗಿನ ಸಾಂಪ್ರದಾಯಿಕ ಸಿದ್ಧಾಂತಕ್ಕಿಂತ ತೀವ್ರತರ ವ್ಯತ್ಯಾಸಗಳು

ಆ ದಿಸೆಯಲ್ಲಿ ಆವಶ್ಯಕವೆಂದು ನನಗೆ ತೋರುತ್ತದೆ.

ಭೌತವಿಜ್ಞಾನವು ಭೌತದ್ರವ್ಯವನ್ನು ಕಡಿಮೆ ಭೌತಿಕವಾಗಿಸುತ್ತಿದ್ದರೆ, ಮನೋವಿಜ್ಞಾನವು ಮನಸ್ಸನ್ನು ಕಡಿಮೆ ಮಾನಸಿಕವನ್ನಾಗಿಸುತ್ತಿದೆ. ಹಿಂದಿನೊಂದು ಅಧ್ಯಾಯದಲ್ಲಿ, ಚಿಂತನೆಗಳ ಸಾಹಚರ್ಯವನ್ನು ರೂಢ ಪ್ರತಿವರ್ತನೆ (ಕಂಡಿಷನ್ಡ್ ರಿಫ್ಲೆಕ್ಸ್)ಗೆ ಹೋಲಿಸಿದ್ದನ್ನು ನೆನಪಿಸಿಕೊಳ್ಳಬಹುದು. ಇವುಗಳಲ್ಲಿ ಮೊದಲನೆಯದರ ಸ್ಥಾನವನ್ನಾಕ್ರಮಿಸಿಕೊಂಡಿರುವ ಎರಡನೆಯದು ಹೆಚ್ಚಾಗಿ ಶರೀರವೈಜ್ಞಾನಿಕ. (ಇದು ಕೇವಲ ಒಂದು ನಿದರ್ಶನ; ರೂಢ ಪ್ರತಿವರ್ತನೆಯ ವ್ಯಾಪ್ತಿಯನ್ನು ನಾನು ಹಿಗ್ಗಲಿಸಬಯಸುವುದಿಲ್ಲ.) ಹೀಗೆ ಎರಡೂ ತುದಿಗಳಿಂದ ಭೌತವಿಜ್ಞಾನ ಮತ್ತು ಮನೋವಿಜ್ಞಾನಗಳು ಪರಸ್ಪರ ಹತ್ತಿರವಾಗುತ್ತಿವೆ, ಇದು ವಿಲಿಯಂ ಜೇಮ್ಸ್ 'ಜಾಗೃದವಸ್ಥೆ'ಯ ವಿಮರ್ಶೆಯಲ್ಲಿ ಸೂಚಿಸಿದ 'ತಟಸ್ಥ ಏಕತ್ವ'ವಾದವನ್ನು ಹೆಚ್ಚು ಸಾಧ್ಯವಾಗಿಸುತ್ತಿದೆ. ಮನಸ್ಸು ಮತ್ತು ಭೌತದ್ರವ್ಯಗಳ ನಡುವಣ ವ್ಯತ್ಯಾಸವು ತತ್ವಜ್ಞಾನಕ್ಕೆ ಬಂದುದು ಮತಧರ್ಮದ ಮೂಲಕ: ಆದರೆ ಅದು ಗಟ್ಟಿ ತಳಹದಿಯನ್ನು ಹೊಂದಿರುವಂತೆ ದೀರ್ಘ ಕಾಲ ತೋರಿತ್ತು. ಮನಸ್ಸು ಮತ್ತು ಭೌತದ್ರವ್ಯಗಳೆರಡೂ ಸಂಗತಿಗಳನ್ನು ಅನುಕೂಲಕರವಾಗಿ ಒಗ್ಗೂಡಿಸುವ ರೀತಿಗಳು ಎಂದು ನನಗೆ ತೋರುತ್ತದೆ. ಕೆಲವು ಬಿಡಿ ಸಂಗತಿಗಳು ಕೇವಲ ಭೌತದ್ರವ್ಯದ ಗುಂಪಿಗೆ ಸೇರಿದರೂ, ಮಿಕ್ಕವು ಎರಡೂ ಬಗೆಯ ಗುಂಪುಗಳಿಗೆ ಸೇರುತ್ತವೆ, ಹೀಗಾಗಿ ಒಮ್ಮೆಗೇ ಮಾನಸಿಕವೂ ಭೌತದ್ರವ್ಯಾತ್ಮಕವೂ ಆಗುತ್ತವೆ. ಈ ಸಿದ್ಧಾಂತವು ಜಗತ್ತಿನ ಸಂರಚನೆಯ ಬಗೆಗಿನ ನಮ್ಮ ಚಿತ್ರವನ್ನು ಬಹುವಾಗಿ ಸರಳಗೊಳಿಸುತ್ತದೆ.

ಆಧುನಿಕ ಭೌತವಿಜ್ಞಾನ ಮತ್ತು ಮನೋವಿಜ್ಞಾನಗಳು ಗ್ರಹಿಕೆಯ ಬಗೆಗಿನ ಹಿಂದಿನ ಸಮಸ್ಯೆಯ ಮೇಲೆ ಹೊಸ ಬೆಳಕು ಚೆಲ್ಲುತ್ತವೆ. 'ಗ್ರಹಿಕೆ' ಎಂದು ಕರೆಯಬಹುದಾದುದು ಯಾವುದಾದರೂ ಇದ್ದರೆ, ಅದು ಒಂದು ಪ್ರಮಾಣದಲ್ಲಿ ಗ್ರಾಹ್ಯ ವಸ್ತುವಿನ ಪ್ರಭಾವದಿಂದಾಗಬಹುದು, ಮತ್ತು ಅದು ವಸ್ತುವಿನ ಬಗೆಗಿನ ಜ್ಞಾನದ ಮೂಲವಾಗಿ ಹೆಚ್ಚು ಕಡಿಮೆ ವಸ್ತುವನ್ನು ಹೋಲಬಹುದು. ಮೊದಲನೆಯ ಅಗತ್ಯವನ್ನು ಪೂರೈಸಲು ಸಾಧ್ಯವಾಗುವುದು, ಹೆಚ್ಚು ಕಡಿಮೆ ಮಿಕ್ಕ ಜಗತ್ತಿಗಿಂತ ಬೇರೆಯಾಗಿರುವ ಕಾರಣಾತ್ಮಕ ಸರಣಿಗಳಿದ್ದಾಗ ಮಾತ್ರ. ಭೌತವಿಜ್ಞಾನದ ಪ್ರಕಾರ, ವಸ್ತುಸ್ಥಿತಿ ಇದೇ. ಸೂರ್ಯನಿಂದ ಭೂಮಿಯ ಕಡೆಗೆ ಬೆಳಕಿನ ಅಲೆಗಳು ಚಲಿಸುತ್ತವೆ, ಮತ್ತು ಹೀಗೆ ಮಾಡುವಾಗ ಅವು ತಮ್ಮವೇ ನಿಯಮಗಳನ್ನು ಅನುಸರಿಸುತ್ತವೆ. ಇದು ಸ್ಥೂಲವಾಗಿ ಮಾತ್ರ ಸತ್ಯ. ಬೆಳಕಿನ ಕಿರಣಗಳೂ ಗುರುತ್ವಾಕರ್ಷಣದಿಂದ ಪ್ರಭಾವಿತಗೊಳ್ಳುತ್ತವೆ ಎಂದು ಐನ್‌ಸ್ಟೈನ್ ಸಾಬೀತುಪಡಿಸಿದ್ದಾರೆ. ಅವು ವಾತಾವರಣವನ್ನು ಪ್ರವೇಶಿಸಿದಾಗ, ಅವು ವಕ್ರೀಭವಿಸುತ್ತವೆ, ಅವುಗಳಲ್ಲಿ ಕೆಲವು ಮಿಕ್ಕವಕ್ಕಿಂತ ಹೆಚ್ಚಾಗಿ ಚೆದುರುತ್ತವೆ. ಅವು ಮಾನವನ ಕಣ್ಣನ್ನು ತಲುಪಿದಾಗ,

ಬೇರೆಲ್ಲೂ ಸಂಭವಿಸದಂತಹ ಸಂಗತಿಗಳು ಸಂಭವಿಸುತ್ತವೆ, ಕೊನೆಗೆ ನಾವು ಹೇಳುವ 'ಬಿಸಿಲನ್ನು ಕಾಣು'ವುದು ಸಂಭವಿಸುತ್ತದೆ. ಆದರೆ ನಮ್ಮ ನೋಟದ ಅನುಭವದ ಬಿಸಿಲು ಖಗೋಳವಿಜ್ಞಾನಿಯ ಬಿಸಿಲಿಗಿಂತ ಭಿನ್ನವಾದುದು, ಅವನಿಗೆ ಇನ್ನೂ ಅದು ಜ್ಞಾನದ ಒಂದು ಮೂಲ; ಯಾಕೆಂದರೆ, 'ಬಿಸಿಲನ್ನು ಕಾಣು'ವುದು 'ಬೆಳುದಿಂಗಳನ್ನು ನೋಡು'ವುದಕ್ಕಿಂತ ಭಿನ್ನವಾದುದು, ಅವು ಖಗೋಳವಿಜ್ಞಾನಿಯ ಬಿಸಿಲು ಮತ್ತು ಖಗೋಳವಿಜ್ಞಾನಿಯ ಬೆಳುದಿಂಗಳು ಇವುಗಳ ನಡುವಣ ಕಾರಣಾತ್ಮಕವಾಗಿ ಸಂಬಂಧಿಸಿದ ವ್ಯತ್ಯಾಸಗಳಿಗೆ ಅನುಗುಣವಾದವು. ಆದರೆ ಭೌತಿಕ ವಸ್ತುಗಳ ಬಗ್ಗೆ ಈ ರೀತಿಯಲ್ಲಿ ನಾವು ತಿಳಿಯಬಹುದಾದುದು ಸಂರಚನೆಗೆ ಸಂಬಂಧಿಸಿದ ಕೆಲವು ಲಕ್ಷಣಗಳು ಮಾತ್ರ. ಸೂರ್ಯನು ಗುಂಡಗಿದ್ದಾನೆ ಎಂದು ತಿಳಿಯುವುದು ನಾವು ನೋಡುವ ಗುಂಡಗಿನದರಂತಹ ಅರ್ಥದಲ್ಲಲ್ಲ; ಆದರೆ ಅದು ಪ್ರಖರವೋ ಬಿಸುಪೋ ನಾವು ಊಹಿಸಲಾಗುವುದಿಲ್ಲ. ಯಾಕೆಂದರೆ ಅದು ಯಾಕೆ ಹಾಗೆ ಕಾಣುತ್ತದೆ ಎಂದು ಅದು ಹಾಗಿದೆ ಎಂದು ಊಹಿಸದೆಯೇ ಭೌತವಿಜ್ಞಾನವು ವಿವರಿಸಬಲ್ಲುದು. ಹೀಗಾಗಿ, ಭೌತಜಗತ್ತಿನ ನಮ್ಮ ತಿಳಿವಳಿಕೆಯು ಕೇವಲ ಅಮೂರ್ತ ಮತ್ತು ಗಣಿತಾತ್ಮಕ.

ನಾನು ಸ್ಥೂಲ ರೂಪುರೇಷೆಯನ್ನು ನೀಡಲು ಪ್ರಯತ್ನಿಸುತ್ತಿರುವ ಆಧುನಿಕ ವಿಶ್ಲೇಷಣಾತ್ಮಕ ಅನುಭವೈಕವಾದವು, ಗಣಿತವನ್ನು ಹಾಗೂ ಪ್ರಬಲವಾದ ತಾರ್ಕಿಕ ತಂತ್ರವನ್ನು ಅಳವಡಿಸಿಕೊಂಡಿರುವುದರಿಂದ, ಲಾಕ್ ಬರ್ಕ್ಲೇ ಮತ್ತು ಹ್ಯೂಮ್‌ರದಕ್ಕಿಂತ ಭಿನ್ನವಾದುದು. ಹೀಗಾಗಿ, ಕೆಲವು ಸಮಸ್ಯೆಗಳಿಗೆ ಸಂಬಂಧಿಸಿದಂತೆ, ತತ್ವಜ್ಞಾನಕ್ಕಿಂತ ಹೆಚ್ಚಾಗಿ ವಿಜ್ಞಾನದ ಲಕ್ಷಣಗಳನ್ನು ಹೊಂದಿದ, ನಿರ್ದಿಷ್ಟ ಉತ್ತರಗಳನ್ನು ಪಡೆಯಲು ಅದಕ್ಕೆ ಸಾಧ್ಯವಾಗಿದೆ. ಪದ್ಧತಿ–ಪ್ರವರ್ತಕ ತಾತ್ವಿಕತೆಗಳಿಗೆ ಹೋಲಿಸಿದರೆ, ಇಡೀ ವಿಶ್ವಕ್ಕೆ ಸಂಬಂಧಿಸುವ ಮಹಾ ಸಿದ್ಧಾಂತವನ್ನು ಕಂಡುಕೊಳ್ಳಲು ಸಮರ್ಥವಾಗುವ ಬದಲು, ಸಮಸ್ಯೆಗಳನ್ನು ಒಂದೊಂದಾಗಿ ಬಗೆಹರಿಸುವ ಅನುಕೂಲ ಈಗ ಅದರದ್ದಾಗಿದೆ. ಈ ವಿಷಯದಲ್ಲಿ, ಅದರ ವಿಧಾನಗಳು ವಿಜ್ಞಾನದವನ್ನು ಹೋಲುತ್ತವೆ. ತಾತ್ವಿಕ ಜ್ಞಾನವು ಸಾಧ್ಯವಾಗುವ ಮಟ್ಟಿಗೆ, ಅಂಥ ವಿಧಾನಗಳ ಮೂಲಕವಾಗಿಯೇ ಪಡೆಯಬೇಕು ಎಂಬುದರಲ್ಲಿ ನನಗೆ ಸಂಶಯವಿಲ್ಲ; ಅಲ್ಲದೆ, ಈ ವಿಧಾನಗಳ ಮೂಲಕ ಅನೇಕ ಪುರಾತನ ಸಮಸ್ಯೆಗಳನ್ನು ಸಂಪೂರ್ಣವಾಗಿ ಬಗೆಹರಿಸಬಹುದು ಎಂಬುದರಲ್ಲೂ ನನಗೆ ಸಂಶಯವಿಲ್ಲ.

ಆದರೆ, ಸಾಂಪ್ರದಾಯಿಕವಾಗಿ ತತ್ವಜ್ಞಾನಕ್ಕೆ ಸಂಬಂಧಿಸಿದ ವಿಶಾಲ ಕ್ಷೇತ್ರ ಹಾಗೆಯೇ ಉಳಿದಿದೆ, ಅವುಗಳಿಗೆ ವೈಜ್ಞಾನಿಕ ವಿಧಾನಗಳು ಸೂಕ್ತವಾಗುವುದಿಲ್ಲ. ಈ ಕ್ಷೇತ್ರದಲ್ಲಿ ಮೌಲ್ಯದ ಅಂತಿಮ ಸಮಸ್ಯೆ ಸೇರುತ್ತದೆ; ಉದಾಹರಣೆಗೆ, ನೋವನ್ನು ಕೊಟ್ಟು ಆನಂದಿಸುವುದು ಕೆಟ್ಟುದು ಎಂದು ವಿಜ್ಞಾನ ಮಾತ್ರವೇ ಸಾಧಿಸಲಾರದು.

ತಿಳಿಯಬಹುದಾದುದನ್ನು ವಿಜ್ಞಾನದಿಂದ ತಿಳಿಯಬಹುದು; ಆದರೆ ಭಾವನಾತ್ಮಕವಾದವುಗಳು ಅದರ ವ್ಯಾಪ್ತಿಯಿಂದ ಹೊರಗೇ ಉಳಿಯುತ್ತವೆ.

ತನ್ನ ಇತಿಹಾಸದುದ್ದಕ್ಕೂ ತತ್ವಜ್ಞಾನವು ಹೊಂದಿಕೆಯಾಗದ ಎರಡು ಭಾಗಗಳಿಂದ ಕೂಡಿದೆ: ಒಂದೆಡೆ, ಜಗತ್ತಿನ ಸ್ವರೂಪದ ಬಗೆಗಿನ ಸಿದ್ಧಾಂತ, ಮತ್ತೊಂದೆಡೆ ಅತ್ಯುತ್ತಮ ಬದುಕಿಗೆ ಬೇಕಾದ ನೈತಿಕ ಹಾಗೂ ರಾಜಕೀಯ ಸಿದ್ಧಾಂತ. ಇವೆರಡನ್ನೂ ಸಮರ್ಪಕವಾಗಿ ಬೇರ್ಪಡಿಸಲಾಗದ ವೈಫಲ್ಯವೇ ಗೊಂದಲಮಯ ಚಿಂತನೆಗಳಿಗೆ ಕಾರಣ. ಪ್ಲೇಟೋನಿಂದ ಹಿಡಿದು ವಿಲಿಯಂ ಜೇಮ್ಸ್‌ವರೆಗೆ ಎಲ್ಲ ತತ್ವಜ್ಞಾನಿಗಳು ವಿಶ್ವದ ಸ್ವರೂಪದ ಬಗೆಗಿನ ತಮ್ಮ ಅಭಿಪ್ರಾಯಗಳ ಮೇಲೆ ಆತ್ಮೋನ್ನತಿಯ ಬಯಕೆಯು ಪ್ರಭಾವ ಬೀರಲು ಅವಕಾಶವಿತ್ತಿದ್ದಾರೆ. ಅವರು ಅಂದುಕೊಂಡಂತೆ, ಮನುಷ್ಯರನ್ನು ಸದ್ಗುಣಿಗಳನ್ನಾಗಿಸುವುದು ಯಾವ ನಂಬಿಕೆಗಳು ಎಂದು ತಿಳಿಯುವುದು; ಈ ನಂಬಿಕೆಗಳು ಸತ್ಯವೆಂದು ಸಾಧಿಸಲು ತಕ್ಕ ವಾದಗಳನ್ನವರು ಸೃಷ್ಟಿಸಿದರು, ಎಷ್ಟೋ ವೇಳೆ ಅವು ತರ್ಕಾಭಾಸದವು. ನನ್ನ ಮಟ್ಟಿಗೆ, ಇಂಥ ಪಕ್ಷಪಾತವನ್ನು, ನೈತಿಕ ಹಾಗೂ ಬೌದ್ಧಿಕ ನೆಲೆಗಳಲ್ಲಿ, ಖಂಡಿಸುತ್ತೇನೆ. ನೈತಿಕವಾಗಿ, ತನ್ನ ವೃತ್ತಿ ಕೌಶಲವನ್ನು ಸತ್ಯದ ಬಗೆಗಿನ ಅನಾಸಕ್ತ ಅನ್ವೇಷಣೆಯ ಹೊರತಾಗಿ ಬಳಸುವ ತತ್ವಜ್ಞಾನಿಯದು ಒಂದು ಬಗೆಯ ವಿಶ್ವಾಸಘಾತುಕತೆ. ಅನ್ವೇಷಣೆಗೆ ತೊಡಗುವ ಮುಂಚೆಯೇ, ಸರಿಯೋ ತಪ್ಪೋ – ಒಳ್ಳೆಯ ನಡತೆಯನ್ನು ಉಂಟುಮಾಡುತ್ತವೆ ಎಂಬಂತಹ – ಕೆಲವು ನಂಬಿಕೆಗಳನ್ನು ಹೊಂದುವುದು ತಾತ್ವಿಕ ಊಹನೆಗಳ ವ್ಯಾಪ್ತಿಯನ್ನು ಕುಗ್ಗಿಸುವುದಲ್ಲದೆ, ತತ್ವಜ್ಞಾನವನ್ನು ಕ್ಷುಲ್ಲಕವಾಗಿಸುವಂಥದು. ನಿಜವಾದ ತತ್ವಜ್ಞಾನಿಯೆಂದರೆ ಎಲ್ಲ ಪೂರ್ವಕಲ್ಪಿತಗಳನ್ನೂ ಒರೆಗೆ ಹಚ್ಚುವುದಕ್ಕೆ ಸಿದ್ಧನಾಗಿರುವವನು. ಸತ್ಯಾನ್ವೇಷಣೆಯ ಮೇಲೆ, ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ, ಯಾವುದೇ ಮಿತಿಗಳನ್ನು ಹೇರಿದರೆ ತತ್ವಜ್ಞಾನವು ಭಯದಿಂದ ಕುಂಠಿತವಾಗುತ್ತದೆ; 'ಅಪಾಯಕಾರಿ ಚಿಂತನೆ'ಗಳನ್ನು ಮುಂದಿಡುವವರು ಸರ್ಕಾರದ ನಿಷೇಧಕ್ಕೆ ಒಳಗಾಗಲು ಭೂಮಿಕೆಯನ್ನು ಸಿದ್ಧಪಡಿಸಿದಂತೆ, ಅಂಥ ಸನ್ನಿವೇಶದಲ್ಲಿ, ತತ್ವಜ್ಞಾನಿಯು ಅಂಥ ನಿಷೇಧವನ್ನು ತನ್ನದೇ ಅನ್ವೇಷಣೆಗಳ ಮೇಲೆ ಹೇರಿದಂತೆಯೇ ಸರಿ.

ಬೌದ್ಧಿಕವಾಗಿ, ತಪ್ಪು ನೈತಿಕ ಪರಿಗಣನೆಗಳು ತತ್ವಜ್ಞಾನದ ಮೇಲೆ ಮಾಡುವ ಪರಿಣಾಮಗಳಂತೂ ಅಗಾಧ ಪ್ರಮಾಣದಲ್ಲಿ ಪ್ರಗತಿಯನ್ನು ಕುಂಠಿತಗೊಳಿಸುವಂಥದು. ಮತಧಾರ್ಮಿಕ ತತ್ವಗಳ ಸತ್ಯಾಸತ್ಯತೆಯನ್ನು ತತ್ವಜ್ಞಾನವೂ ಸಾಬೀತುಪಡಿಸಲೂ ಸಾಧ್ಯವಿಲ್ಲ, ಹಾಗೆಯೇ ತಳ್ಳಿ ಹಾಕಲೂ ಸಾಧ್ಯವಿಲ್ಲ ಎಂದು ನಾನು ನಂಬುತ್ತೇನಾದರೂ, ಪ್ಲೇಟೋನಿಂದ ಹಿಡಿದು ಬಹುತೇಕ ತತ್ವಜ್ಞಾನಿಗಳು ಅಮರತ್ವದ ಮತ್ತು ದೇವರ ಅಸ್ತಿತ್ವದ ಬಗ್ಗೆ 'ಸಾಕ್ಷ್ಯ'ಗಳನ್ನು ಒದಗಿಸುವುದು ತಮ್ಮ ಕರ್ತವ್ಯದ ಭಾಗವೆಂದು

ಭಾವಿಸುತ್ತ ಬಂದಿದ್ದಾರೆ. ತಮಗಿಂತ ಹಿಂದಿನವರ ಸಾಕ್ಷ್ಯಗಳಲ್ಲಿ ಅವರು ತಪ್ಪುಗಳನ್ನು ಕಂಡುಹಿಡಿದಿದ್ದಾರೆ – ಸಂತ ಥಾಮಸ್ ಆಕ್ವಿನಾಸ್ ಸಂತ ಆನ್‌ಸ್ಲೆಮ್‌ನ ಸಾಕ್ಷ್ಯಗಳನ್ನು, ಕ್ಯಾಂಟ್ ಡೆಕಾರ್ಟೆಯ ಸಾಕ್ಷ್ಯಗಳನ್ನು ತಿರಸ್ಕರಿಸಿದ್ದಾರೆ – ಆದರೆ ಅವರು ತಮ್ಮದೇ ಹೊಸ ಸಾಕ್ಷ್ಯಗಳನ್ನು ಒದಗಿಸಿದ್ದಾರೆ. ತಮ್ಮ ಸಾಕ್ಷ್ಯಗಳು ಸಿಂಧುವೆಂದು ತೋರಿಸಲೋಸುಗ ಅವರು ತರ್ಕವನ್ನೇ ತಪ್ಪಾಗಿಸಿದ್ದಾರೆ, ಗಣಿತವನ್ನು ನಿಗೂಢವಾಗಿಸಿದ್ದಾರೆ, ಆಳವಾದ ಪೂರ್ವಾಗ್ರಹಗಳನ್ನು ಸ್ವರ್ಗದಿಂದ ಇಳಿದ ಸಂಸ್ಥೆಗಳೆಂದು ನಟಿಸಿದ್ದಾರೆ.

ತಾರ್ಕಿಕ ವಿಶ್ಲೇಷಣೆಯನ್ನು ತತ್ವಜ್ಞಾನದ ಮುಖ್ಯ ಕಾರ್ಯವಾಗಿಸಿದ ತತ್ವಜ್ಞಾನಿಗಳು ಇವೆಲ್ಲವನ್ನೂ ತಿರಸ್ಕರಿಸಿದ್ದಾರೆ. ಮಾನವ ಜನಾಂಗಕ್ಕೆ ಅತೀವ ಪ್ರಮುಖವೆನಿಸುವ ಅನೇಕ ಗಾಢ ಸಮಸ್ಯೆಗಳಿಗೆ ನಿಖರವಾದ ಉತ್ತರವನ್ನು ಕಂಡುಕೊಳ್ಳಲು ಮಾನವನ ಬೌದ್ಧಿಕತೆಗೆ ಸಾಧ್ಯವಿಲ್ಲ ಎಂದು ಪ್ರಾಮಾಣಿಕವಾಗಿ ಅವರು ಒಪ್ಪಿಕೊಳ್ಳುತ್ತಾರಾದರೂ, ವಿಜ್ಞಾನ ಮತ್ತು ಮಾನವನ ಬೌದ್ಧಿಕತೆಗೆ ಎಟುಕದ ಸತ್ಯಗಳನ್ನು ತಿಳಿಯುವ 'ಉನ್ನತ' ಮಾರ್ಗವಿದೆಯೆಂಬುದನ್ನು ಅವರು ನಂಬುವುದಿಲ್ಲ. ಇಂತಹ ತ್ಯಾಗಕ್ಕಾಗಿ, ತತ್ವಜ್ಞಾನಾತ್ಮಕ ಕಾವಳದಿಂದ ಮಬ್ಬಾಗಿದ್ದ ಅನೇಕ ಸಮಸ್ಯೆಗಳಿಗೆ, ಜ್ಞಾನದ ಬಯಕೆಯ ಹೊರತಾದ ತತ್ವಜ್ಞಾನಿಯ ಬೇರಾವುದೇ ಮನೋಭಾವವನ್ನು ಹೊಂದಿರದ ವಸ್ತುನಿಷ್ಠ ವಿಧಾನಗಳಿಂದ, ನಿಖರವಾಗಿ ಉತ್ತರಿಸಬಹುದೆಂಬ ಪ್ರತಿಫಲವನ್ನು ಅವರು ಪಡೆದಿದ್ದಾರೆ. ಸಂಖ್ಯೆ ಎಂದರೆ ಏನು? ಅವಕಾಶ ಮತ್ತು ಕಾಲ ಎಂದರೇನು? ಮನಸ್ಸು ಎಂದರೆ ಹಾಗೂ ಭೌತದ್ರವ್ಯ ಎಂದರೆ ಯಾವುದು? – ಎಂಬಂತಹ ಪ್ರಶ್ನೆಗಳನ್ನು ತೆಗೆದುಕೊಳ್ಳಿ. ಈ ಎಲ್ಲ ಹಳೆಯ ಪ್ರಶ್ನೆಗಳಿಗೆ ಈಗಿಂದೀಗಲೇ ನಿಖರವಾದ ಉತ್ತರವನ್ನು ನೀಡಬಹುದೆಂದು ನಾನು ಹೇಳುವುದಿಲ್ಲವಾದರೂ, ಹಿಂದೆ ಆಗಿಹೋದುದನ್ನು ಕೇವಲ ತಿರಸ್ಕರಿಸದೆ, ಪ್ರತಿ ಹೊಸ ಹಂತವೂ ಉತ್ತಮಿಕೆಯತ್ತ ಸಾಗುವ ಮತ್ತು ಸತ್ಯಕ್ಕೆ ಹೆಚ್ಚು ಹೆಚ್ಚು ಹತ್ತಿರವಾದ, ವಿಜ್ಞಾನದಲ್ಲಿ ಅನುಸರಿಸುವಂತಹ ವಿಧಾನವನ್ನು ಕಂಡುಕೊಳ್ಳಲಾಗಿದೆ ಎಂದು ಹೇಳುತ್ತೇನೆ.

ಪರಸ್ಪರ ಸಂಘರ್ಷಿಸುವ ದುರಭಿಮಾನಗಳ ಜಾಲದಲ್ಲಿ, ಒಗ್ಗೂಡಿಸುವ ಶಕ್ತಿಯೆಂದರೆ ವೈಜ್ಞಾನಿಕ ಸತ್ಯಪೂರ್ಣತೆ, ಅಂದರೆ ಮಾನವರಿಗೆ ಸಾಧ್ಯವಾದಷ್ಟೂ ಮಟ್ಟಿಗಿನ ವ್ಯಕ್ತ್ಯತೀತವಾದ ಹಾಗೂ ಪ್ರಾದೇಶಿಕ ಮತ್ತು ತಾತ್ಕಾಲಿಕ ಪಕ್ಷಪಾತಗಳಿಂದ ದೂರವಾದ ನೆಲೆಯ ವೀಕ್ಷಣೆ ಮತ್ತು ಊಹನೆಗಳ ಮೇಲೆ ನಂಬಿಕೆಗಳನ್ನು ಆಧರಿಸುವ ಅಭ್ಯಾಸ. ತತ್ವಜ್ಞಾನದಲ್ಲಿ ಇದನ್ನು ಸೇರಿಸುವಂತೆ ಒತ್ತಾಯಿಸುವುದು, ಮತ್ತು ಫಲಪ್ರದವಾದ ರೀತಿಯಲ್ಲಿ ಅಳವಡಿಸಿಕೊಳ್ಳಬಹುದಾದ ಪ್ರಬಲ ವಿಧಾನವನ್ನು ಸೃಷ್ಟಿಸುವುದು, ನಾನೂ ಒಬ್ಬ ಸದಸ್ಯನಾಗಿರುವ, ತತ್ವಜ್ಞಾನ ಪಂಥದ ಮುಖ್ಯ

ಗುಣಗಳು. ಈ ತಾತ್ವಿಕ ವಿಧಾನದ ಅಳವಡಿಕೆಯ ಮೂಲಕ ಪಡೆದ ಜಾಗರೂಕ ಪ್ರಾಮಾಣಿಕತೆಯನ್ನು ಇಡೀ ಮಾನವ ಚಟುವಟಿಕೆಗಳಿರುವ ಎಲ್ಲ ಕಡೆಗೆ ವಿಸ್ತರಿಸಬಹುದು, ಅದು ಇರುವೆಡೆಯಲ್ಲಿ, ದುರಭಿಮಾನವನ್ನು ಕಡಿಮೆ ಮಾಡಿ ಸಹಾನುಭೂತಿ ಮತ್ತು ಪರಸ್ಪರ ತಿಳಿವಳಿಕೆಗಳನ್ನು ಹೆಚ್ಚಿಸಬಹುದು. ತನ್ನ ಸೈದ್ಧಾಂತಿಕ ದಬ್ಬಾಳಿಕೆಯನ್ನು ಕಡಿಮೆ ಮಾಡಿದರೆ, ಬದುಕಿನ ದಾರಿ ತೋರಿಸುವ ಮತ್ತು ಅದಕ್ಕೆ ಸ್ಫೂರ್ತಿ ನೀಡುವ ಸಾಮರ್ಥ್ಯವನ್ನು ತತ್ವಜ್ಞಾನವು ಕಳೆದುಕೊಳ್ಳುವುದಿಲ್ಲ.

ವಿಶಿಷ್ಟ ಶಬ್ದಗಳ ಸಮಾನಾರ್ಥಕ ಸೂಚಿ

'ಅಂಗುಲೀಯಕ' (ಡಿಜಿಟರಿ) – digitary

ಅಂಡಾಕೃತಿ (ಎಲಿಪ್ಸ್) – ellipse

ಅಂತರ್ಬೋಧಾತ್ಮಕ (ಇನ್‌ಟ್ಯೂಟಿವ್) – intuitive

'ಅಂತರ್ಬೋಧೆ' (ಇದರ ಜರ್ಮನ್ ಪದವು 'ಆನ್‌ಶ್‌ವಾಂಗ್')

ಅಂತರ್ವಿವಾಹ (ಎಂಡೋಗಮಿ) – endogamy

ಅಂತಿಮಗತಿಶಾಸ್ತ್ರ (ಎಸ್ಕಟಾಲಜಿ) – eschatology

'ಅತ್ಯಂತ ಸುಖ ತತ್ವ' (ಗ್ರೇಟೆಸ್ಟ್ ಹ್ಯಾಪಿನೆಸ್ ಪ್ರಿನ್ಸಿಪಲ್) – greatest happiness principle

'ಅಧಿಷ್ಠಾಪನೆ' (ಇನ್‌ವೆಸ್ಟಿಚರ್) – investirure

'ಅಮೂರ್ತ ಸತ್ವ' (ಇನ್‌ಕಾರ್ಪೋರಿಯಲ್ ಸಬ್‌ಸ್ಟೆನ್ಸ್)– incorporeal substance

'ಅಮ್ಮ' (ಮಾಮನ್) – maman

'ಅರಮನೆಯ ಅಧಿಕಾರಿಗಳು' (ಮೇಯರ್ಸ್ ಆಫ್ ದ ಪ್ಯಾಲೇಸ್)– mayors of the palace

'ಅವಧಿ' (ಡ್ಯೂರೇಷನ್) – duration

'ಅವಿವೇಚನೀಯ ಅನನ್ಯತೆ' (ಐಡೆಂಟಿಟಿ ಆಫ್ ಇನ್‌ಡಿಸರ್ನಿಬಲ್ಸ್)– identity of indiscernibles

'ಅಸಾಂಗತ್ಯ' (ಆಂಟಿನಾಮಿ) – anitinomy

'ಆ ಆತ್ಮ' (ದ ಸೋಲ್) – the soul

'ಆತ್ಮಸಾಕ್ಷಿ ಪ್ರಾಮಾಣ್ಯ' (ಕ್ಯಾಟೆಗಾರಿಕಲ್ ಇಂಪರೇಟಿವ್) – categorical imperative

ಅಕರಣಿ (ರ್‍ಯಾಷನಲ್) – rational

ಅಕ್ಷಭ್ರಮಣ (ಪ್ರಿಸೆಷನ್) – precession

ಅಕ್ಷಾಂಶ (ಲ್ಯಾಟಿಟ್ಯೂಡ್) – latitude

ಅಗತ್ಯ ತರ್ಕ ನಿಯಮ (ಲಾ ಆಫ್ ಸಫಿಷಿಯಂಟ್ ರೀಸನ್) – law of sufficient reason

ಅಗ್ಗಿಷ್ಟಿಕೆ (ಪೊಯೆಲ್) – poyel

ಅತ್ಯಂತ ವಾಸ್ತವ ಪರಮ ಅಸ್ತಿತ್ವ (ಎನ್ಸ್ ರೆಯಲಿಸ್ಸಿಯಮ್) – ens resilllium
ಅತ್ಯಂತ ಹಿರಿಯ ಸಾಧನೆ (ನೆ ಪ್ಲೂ ಉಟ್ರಾ) – ne plu uta
ಅತಿಮಾನವ (ಸೂಪರ್‌ಮ್ಯಾನ್) – superman
ಅರ್ಥವ್ಯಾಪ್ತಿ (ಎಕ್ಸ್‌ಟೆನ್ಷನ್) – extension
ಅಧ್ಯಾತ್ಮ ರಹಸ್ಯವಾದ (ನಾಸ್ಟಿಸಿಸಂ) – gnosticism
ಅಧೋಲೋಕ (ಲಿಂಬೋ) – limbo
ಅದೃಷ್ಟಲಕ್ಷ್ಮಿ (ಫಾರ್ಚೂನ್) – fortune
ಅಧಿಕಾರವರ್ಗ (ಎಸ್ಟೇಟ್) – estate
ಅಧಿವರ್ತುಲ (ಎಪಿಸೈಕಲ್) – epicycle
ಅಧಿಸೃಷ್ಟಿಕರ್ತ (ಸೂಪರ್–ಕ್ರಿಯೇಟರ್) – Super Creator
ಅನಂತಸೂಕ್ಷ್ಮ ಕಲನವಿಜ್ಞಾನ (ಇನ್‌ಫಿಟೆಸಿಮಲ್ ಕ್ಯಾಲ್‌ಕ್ಯುಲಸ್) – infinitecimal calculus
ಅನಸ್ತಿತ್ವ (ನಾನ್–ಎಕ್ಸಿಸ್ಟೆನ್ಸ್) – non-existence
ಅನಾವರಣ (ಡಿಸ್ಕವರಿ) – discovery
ಅನಿಶ್ಚಿತತೆಯ ತತ್ವ (ಪ್ರಿನ್ಸಿಪಲ್ ಆಫ್ ಇನ್‌ಡಿಟರ್ಮಿನೆಸಿ) – principle of indeterminacy
ಅನುಕಲನವಿಜ್ಞಾನ ಮತ್ತು ಚರಕಲನವಿಜ್ಞಾನ (ಇಂಟೆಗ್ರಲ್ ಮತ್ತು ಡಿಫೆರೆನ್ಷಿಯಲ್ ಕ್ಯಾಲಕ್ಕುಲಸ್) – integral and differential calculus
ಅಪವರ್ತನಗಳು (ಫ್ಯಾಕ್ಟರ್ಸ್) – factors
ಅಪ್ರಜ್ಞಾಪೂರ್ವಕ ಚಲನೆ (ಐಡಿಯೋ–ಮೋಟಾರ್) – ideo-motor
ಅಭಾಗಲಬ್ಧ (ಇರ್ರಾಷನಲ್ ನಂಬರ್) – irrational number
ಅವಕಾಶ (ಸ್ಪೇಸ್) – space
ಅವಕಾಶ–ಅಂಶ (ಸ್ಪೇಸ್– ಎಲಿಮೆಂಟ್) – space-element
ಅವಕಾಶಗಳ ನಿಯಮ (ಜೂಸ್ ಜೆಂಟಿಯಮ್) – jus gentium
ಅವಧಿವಾದಿ (ಟರ್ಮಿನಿಸ್ಟ್) – termonist
ಅಮೆರಿಕನ್ ಕ್ರಾಂತಿಯ ಮಗಳಂದಿರು (ಡಾಟರ್ಸ್ ಆಫ್ ದ ಅಮೆರಿಕನ್ ರೆವಲ್ಯೂಷನ್) – daughters of the American revolution
ಅಷ್ಟಮುಖಿ (ಆಕ್ಟಾಹೆಡ್ರನ್) – octahedron
ಅಸ್ತಿತ್ವವಿರದುದು (ನೊನೆಂಟಿಟಿ) – nonentity
ಅಹಂ (ಈಗೋ) – ego
ಅಹಮೇತರ (ನಾನ್–ಈಗೋ) – non-ego

ಅಹಮೇತರವಾದುದು (ನಾನ್–ಈಗೋ) – non-ego
ಅರ್ಹತಮದ ಉಳಿವು (ಸರ್ವೈವಲ್ ಆಫ್ ದ ಫಿಟೆಸ್ಟ್) – survival of the fittest
ಆಯ್ದ ವ್ಯಕ್ತಿಗಳು (ಚೋಸನ್ ಪೀಪಲ್) – chosen people
ಆಕಾರ (ಫಿಗರ್) – figure
'ಆನುಷಂಗಿಕ' (ಕಾಂಟಿಂಜೆಂಟ್) – contingent
ಆರಾಧನಾ ಸೂತ್ರಗಳು (ಲಿಟರ್ಜಿ) – liturgy
ಆಟಮಿಸ್ಟ್ (ಪರಮಾಣುವಾದಿ) – atomist
ಆತ್ಮೋನ್ನತಿ (ಎಡಿಫಿಕೇಷನ್) – edification
ಆಧಾರಕಲ್ಪನಾತ್ಮಕ (ಹೈಪಾಥೆಟಿಕಲ್) ತರ್ಕವಿಧಾನ –hypothetical
ಆಧಾರಕಲ್ಪನೆ(ಹೈಪಾಥೆಸಿಸ್) – hypothesis
ಆಧ್ಯಾತ್ಮಿಕರು (ಸ್ಪಿರಿಚುವಲ್ಸ್) – spirituals
ಆದರ್ಶರೂಪಸಿದ್ಧಾಂತ (ಥಿಯರಿ ಆಫ್ ಐಡಿಯಾಸ್)–Theory of ideas
ಆದರ್ಶವಾದವು (ಐಡಿಯಲಿಸಂ) – idealism
ಆನಂದಪರವಶತೆ (ಎಕ್‌ಸ್ಟೆಸಿ) – ecstasy
ಆವರ್ತ (ವೋರ್ಟೆಕ್ಸ್) – Vortex
ಆವೇಗ (ಮೊಮೆಂಟಮ್) – momentum
ಆವೇಗದಿಂದ (ಮೊಮೆಂಟಮ್) – momentum
ಆವೇಗಸ್ಥಾಯಿತ್ವ (ಕನ್ಸರ್ವೇಷನ್ ಆಫ್ ಮೊಮೆಂಟಂ) – conservation of momentum
ಆಲೋಚನಾ ಸಿದ್ಧಾಂತ (ಥಿಯರಿ ಆಫ್ ಐಡಿಯಾಸ್)–Theory of ideas
ಆಶ್ರಮ (ಮೊನಾಸ್ಟರಿ) – monastery
ಆಶ್ರಮಮುಖ್ಯಸ್ಥ (ಆಬ್ಬಟ್) –
ಇಂದ್ರಿಯಗ್ರಹಿಕೆ (ಸೆನ್ಸೇಷನ್) – sensation
ಇಂದ್ರಿಯಗ್ರಾಹ್ಯಾತ್ಮಕ (ಸೆನ್ಸಿಟಿವ್) – sensitive
ಇಂದ್ರಿಯಗ್ರಾಹ್ಯಾತ್ಮಕ (ಸೆನ್ಸಿಟಿವ್) – sensitive
ಇತಿಹಾಸಕರ (ಎವಾಗ್ರಿಯಸ್) – evagrius
'ಇದುತನ' (ಹೆಕ್ಸಿಯಿಟಿ) – haecceity
ಇಸಾಯ ಸಂಪುಟ (ಬುಕ್ ಆಫ್ ಇಸಾಯ) – Book of Isaish
ಉದ್ಧಾರಕ (ದ ಮೆಸಯ) – the messiah
ಉಪಯುಕ್ತತಾವಾದ (ಯುಟಿಲಿಟೇರಿಯನಿಸಂ) – ulilitarianism

'ಉರುಟುಗಲ್ಲು' (ಪೆಬಲ್) –ಣ
ಊರೊಟ್ಟಿನ ಜಮೀನಿನ ವಶಕ್ಕಾಗಿ (ಎನ್‌ಕ್ಲೋಷರ್) ಚಳುವಳಿ – enclosure movement
ಎರಡನೆಯ ಅವತಾರದಂತೆ (ಸೆಕೆಂಡ್ ಕಮಿಂಗ್) – second coming
'ಏಕಗಳು' (ಮೊನಾಡ್ಸ್) – monads
ಏಕದಾಂಪತ್ಯ (ಮಾನೋಗಮಿ) – monogamy
ಏಕಪ್ರಕೃತಿವಾದಿ ಧರ್ಮದ್ರೋಹ (ಮಾನೋಫಿಸೈಟ್ ಹೆರೆಸಿ)– Monophysite heresy
ಏಕಪ್ರಕೃತಿವಾದಿಗಳು (ಮಾನೋಫಿಸೈಟ್‌ರು) – monophysites
'ಒಕ್ಕಾಮ್ ಅಲಗು' (ಒಕ್ಕಾಮ್ಸ್ ರೇಜ಼ರ್) – occam's razor
ಒತ್ತಾಯತಂಡ (ಪ್ರೆಷರ್ ಗ್ರೂಪ್) – pressure group
ಒಮ್ಮತಾಭಿಪ್ರಾಯ (ಕಾನ್‌ಸೆನ್ಸ್ ಜೆಂಟಿಯಮ್) – concensus gentium
ಕಕ್ಷೆ (ಆರ್ಬಿಟ್) – orbit
ಕಣಗಳು (ಪಾರ್ಟಿಕಲ್ಸ್) – particles
ಕರ್ತೃ ಮತ್ತು ವಿಧೇಯ (ಸಬ್ಜೆಕ್ಟ್ ಅಂಡ್ ಪ್ರೆಡಿಕೇಟ್)–subject and predicate
ಕತ್ತಲ ಯುಗದ (ಡಾರ್ಕ್ ಏಜಸ್) – Dark Ages
ಕಲನಶಾಸ್ತ್ರ (ಕ್ಯಾಲ್ಕ್ಯುಲಸ್) – calculus
ಕಲ್ಪನೆ (ನೋಷನ್) – notion
ಕಲ್ಪನೆಯ ವಾದ(ಆರ್ಗ್ಯುಮೆಂಟ್ ಫ್ರಂ ಡಿಸೈನ್)–argument from design
ಕಲ್ಪಿತನಾಮ (ಸೂಡಾನಿಮಿಟಿ) – pseudonimity
ಕಲ್ಪಿಸಿಕೊಳ್ಳಬಹುದಷ್ಟೆ (ಸಿಚ್ ವೋರ್ಸ್ಟೆಲೆನ್) – sich vortelence ?
ಕ್ರಮಣ (ಲೋಕೋಮೋಷನ್) – locomotion-
ಕಾರಕ (ಏಜೆಂಟ್) – agent
ಕಾರಣವಾದ (ಇನ್‌ಸ್ಟ್ರುಮೆಂಟಲಿಸಂ) – instrumentalism
ಕಾಮ್ಯ (ಅಪಿಟೆಟಿವ್) – appetitive
ಕಾವುಬುಟ್ಟಿಗಳು (ಇನ್‌ಕ್ಯುಬೇಟರ್ಸ್) – incubators
ಕಾಲ (ಟೈಂ) – time
ಕಾಲ–ಅಂಶ (ಟೈಂ–ಎಲಿಮೆಂಟ್) – time-element
ಕಾಲಮಾಪಕ (ಕ್ರೋನೋಮೀಟರ್) – chronometer
ಕೈವಾರ (ಕಾಂಪಸಸ್) – compasses
ಕ್ರೈಸ್ತಭಿಕ್ಷುಗಳು (ಫ್ರಯರ್ಸ್) – friars

ಕಿರುಕುಳಭ್ರಮೆ (ಪರ್ಸೆಕ್ಯೂಷನ್ ಮೇನಿಯ) – persecution mania-
ಕಿಟಕಿಯಿಲ್ಲದ ಏಕತ್ವ (ವಿಂಡೋಲೆಸ್ ಮೊನಾಡ್ಸ್)–windowless monads
ಕ್ರಿಯೆ (ಆಕ್ಷನ್) – action
ಕ್ರಿಸ್ತವಿರುದ್ಧ (ಆಂಟಿಕ್ರೈಸ್ಟ್) – antichrist
ಕ್ಷೀರಪಥ (ಮಿಲ್ಕಿ ವೇ) – milky way
ಖಾಲಿ ಹಲಗೆ (ಟ್ಯಾಬ್ಯುಲ ರಾಸ) – tabula rasa
ಖಾಸಗಿ ಶಿಕ್ಷಕ (ಟ್ಯೂಟರ್) – tutor
ಗಂಡ ರಾಜಕುಮಾರ (ಪ್ರಿನ್ಸ್ ಕನ್ಸಾರ್ಟ್) – prince consort
ಗುರು (ಜ್ಯೂಪಿಟರ್) – jupiter
ಗುಣಮಟ್ಟ (ಕ್ವಾಲಿಟಿ) – quality
ಗುಣಲಕ್ಷಣ (ಕ್ವಾಲಿಟಿ) – quality
ಗ್ರಂಥ ಪಂಚಕ (ಪೆಂಟಾಟ್ಯೂಕ್) – pentateuch
(ಗ್ರಹಣದಲ್ಲಿನ) ಬಾಗುವಿಕೆ (ಆಬ್ಲಿಕಿಟಿ) – obliquity
ಗ್ರಹಿಕೆ (ಕಾಗ್ನಿಷನ್) – cognition
ಗಾತ್ರ (ವಾಲ್ಯೂಮ್) – volume
ಗ್ಯಾಲಿಕ್ (ಫ್ರೆಂಚ್) – french
ಗ್ರಾಹ್ಯವಸ್ತು (ಪರ್ಸೆಪ್ಟ್) – percept
ಗ್ರಾಹಿ (ಪರ್ಸಿಪಿಯೆಂಟ್) – percipient
ಗ್ರೀಕ್–ಪ್ರೀತಿಯವರು ('ಫಿಲ್–ಹೆಲೀನ್') – phil-helene
ಘಟನೆಗಳು (ಇವೆಂಟ್ಸ್) – events
ಘನಗಳ (ಕ್ಯೂಬ್) – cube
ಚರ್ಚ್‌ನ ಬೋಧಕರು (ಡಾಕ್ಟರ್‌ಗಳು) – Doctors
ಚತುಃಪಾರ್ಶ್ವ (ಟೆಟ್ರಾಹೆಡ್ರನ್) – tetrahedron
ಚಲನರಹಿತ ಚಲನಕಾರಕ (ಅನ್‌ಮೂವ್ಡ್ ಮೂವರ್) –unmoved mover
ಚಲನೆ (ಮೋಷನ್) – motion
ಚಲಿತನಾಗದ ಚಲನಕಾರ (ಅನ್‌ಮೂವ್ಡ್ ಮೂವರ್)–unmoved mover
ಚುನಾಯಕ (ಎಲೆಕ್ಟರ್) – elector
ಚೂರುಪಾರುಗಳ (ಡಿಸ್ಜೆಕ್ಟ ಮೆಂಬ್ರ) – disjecta membra
ಚಿಕ್ಕಪ್ಪ–ದೊಡ್ಡಪ್ಪರ ಮಕ್ಕಳು (ಕಸಿನ್ಸ್) – cousins
ಚಿರಂತನೆಯ ಪರಿಪ್ರೇಕ್ಷ್ಯ (ಸಬ್ ಸ್ಪೀಸೀ ಇಟರ್ನಿಟ್ಯಾಟಿಸ್)–sub specie eternitatus

ಚಿತ್ತವೃತ್ತಿ (ಅಫೆಕ್ಷನ್) – affection
ಚಿನ್ನದ ದಾಸ್ತಾನು (ಗೋಲ್ಡ್ ರಿಸರ್ವ್) – gold reserve
ಛೇದನ (ಸೆಕ್ಷನ್) – section
ಜಡತ್ವ ನಿಯಮ (ಲಾ ಆಫ್ ಇನರ್ಷಿಯ) – law of inertia
ಜನಪ್ರತಿನಿಧಿ ಸಭೆ (ಹೌಸ್ ಆಫ್ ಕಾಮನ್ಸ್) – house of commons
ಜೀತಗಾರರು (ಹೇಲಟ್ಸ್) – halets
ಜೀವತತ್ವವಾದಿಯ (ವೈಟಲಿಸ್ಟ್) – vitalist
ಜೀವಧಾರಕ ಸತ್ವಗಳು (ವೈಟಲ್ ಸ್ಪಿರಿಟ್ಸ್) – vital spirits
ಜೀವನ ಸಂಗ್ರಾಮ (ಸ್ಟ್ರಗಲ್ ಫಾರ್ ಎಕ್ಸಿಸ್ಟೆನ್ಸ್) – struggle for existence
ಜೀವಾಮೃತ (ಎಲಿಕ್ಸಿರ್ ಆಫ್ ಲೈಫ್) – Elixir of Life
ಜೀವಾಳ (ಬೀಯಿಂಗ್) - being
ಜ್ಞಾತೃ–ಜ್ಞೇಯ (ಸಬ್ಜೆಕ್ಟ್–ಆಬ್ಜೆಕ್ಟ್) – subject-object-
ಜ್ಞಾನಮೀಮಾಂಸಕ (ಎಪಿಸ್ಟೆಮೊಲಾಜಿಕಲ್) epistemological-
ಜ್ಞೇಯ ವಸ್ತು (ಜೆಜೆನ್‌ಸ್ಟಾಂಡ್) – gegenstand
ಜ್ಯಾಮಿತಿಜ್ಞ (ಜಿಯೋಮಿಟರ್) – gemometer
ಜೆನೆಸಿಸ್‌ನಲ್ಲಿನ ಪ್ರವರ್ತಕರು (ಪೇಟ್ರಿಯಾರ್ಕ್) – patriarch
ಜ್ಯೇಷ್ಠಾಧಿಕಾರದ (ಪ್ರೈಮೋಜೆನಿಚರ್) – primogeniture
ತರ್ಕದೋಷ (ಫ್ಯಾಲಸಿ) – fallacy
ತರ್ಕಶಾಸ್ತ್ರ (ಲಾಜಿಕ್) – logic
ತತ್ವಜಿಜ್ಞಾಸೆ (ಮೆಟಫಿಸಿಕ್ಸ್) – metaphysics
ತತ್ವಸೂತ್ರ (ಕ್ರೀಡ್) – creed
ತಪ್ಪು (ಫಾಲಿ) – folly
ತಾಟಸ್ಥ್ಯನೀತಿ (ಲೇಸೆಝ್–ಫೇರ್) – laissez faire
ತಾತ್ವಿಕ ಉದಾರವಾದ(ಫಿಲಸಾಫಿಕಲ್ ಲಿಬರಲಿಸಂ)–philosophical liberalism
ತಾತ್ವಿಕತೆಯವನು (ಅಕೆಡೆಮಿಕ್) – academic
ತೋರಿಕೆ (ಅಪೇರೆಂಟ್) – apparent
ತಿರೋಗಮನ (ರಿಗ್ರೆಸ್) – regresss
ತೀವ್ರ ಅಭ್ಯಂಜನ (ಅಂಕ್ಷನ್) – unction
ತ್ರಿಯಾತ್ಮಕ ಚಲನೆ (ಟ್ರಯಾಡಿಕ್ ಮೂವ್‌ಮೆಂಟ್) – triadic movement
ತ್ರಿಕೋನಮಿತಿ (ಟ್ರಿಗನಾಮೆಟ್ರಿ) – trigonometry

ತ್ರಿಮೂರ್ತಿತ್ವ (ಹೋಲಿ ಟ್ರಿನಿಟಿ) – holy trinity
ಧರ್ಮಾಧಿಕಾರ ವ್ಯಾಪಾರ (ಸೈಮನಿ) – simony
ಧರ್ಮಪರಿಷತ್ತು (ಸಿನಡ್) – synod
ಧರ್ಮಸೈನ್ಯ (ಟೆಂಪ್ಲರ್ಸ್) – templars-
ದಂಡಾಧಿಕಾರಿ (ಕಾನ್ಸಲ್) – consul
ದಂಡಾಧಿಕಾರಿ (ಮ್ಯಾಜಿಸ್ಟ್ರೇಟ್) – magistrate
ದತ್ತ (ಗಿವನ್) – given
ದಶಸೂತ್ರಗಳು (ಡೆಕಾಲೋಗ್) (ಕಮಾಂಡ್‌ಮೆಂಟ್) – Commandments
ದಾರ್ಢ್ಯ (ಸಾಲಿಡಿಟಿ) – solidity
ದೃಗ್ವಿಜ್ಞಾನ (ಆಪ್ಟಿಕ್ಸ್) – optics
ದೇವತಾಶಾಸ್ತ್ರಜ್ಞರು (ಸ್ಕೂಲ್‌ಮೆನ್) – school men
ದೇವದೂತ (ಏಂಜಲ್) – angel
ದೇವವಾಕ್ಕು (ದ ಲಾಗಸ್) – the Logos
ದೋಷಾರೋಪಣೆ (ಇಮ್‌ಪೀಚ್‌ಮೆಂಟ್) – impeachment
ದೈವವಾಣಿಯು (ಒರಾಕಲ್) – oracle
ದೈವವಾದಿ (ಡೀಯಿಸ್ಟ್) – deist
ದೈವೀಕರಣ (ಡೀಯಿಫಿಕೇಷನ್) – deification
ದೈಶಿಕ (ಸ್ಪೇಷಿಯಲ್) – spatial
ದಿವ್ಯಪೂಜೆ (ಮಾಸ್) – mass
ದಿವ್ಯಾಜ್ಞೆಗಳು (ಕಮಾಂಡ್‌ಮೆಂಟ್) – Commandments
ದೀಕ್ಷಾಸ್ನಾತಕರು (ಕ್ಯಾಟೆಕ್ಯೂಮೆನ್) – catecumen
ದೀಕ್ಷಾಸ್ನಾನ (ಬ್ಯಾಪ್ಟಿಸಂ) – baptism
ದೀಕ್ಷಾಸ್ನಾನಿಕ (ಇನಿಷಿಯೇಟ್) – initiant
ದೈವಿಕವಿವೇಕ (ಸೋಫಿಯ) – Sophia
ದೀರ್ಘಾವಧಿಯ ಸಂಸತ್ತು (ದ ಲಾಂಗ್ ಪಾರ್ಲಿಮೆಂಟ್) – the long parliament
ದ್ರವಸ್ಥಿತಿವಿಜ್ಞಾನ (ಹೈಡ್ರೋಸ್ಟಾಟಿಕ್ಸ್) – hydrostatics
ದ್ರವ್ಯರಾಶಿ (ಮಾಸ್) – mass
ದ್ವಾದಶಕೋನ (ಡೊಡೆಕಗನ್) – dodecagon
ದ್ವಾದಶಮುಖಿ (ಡೋಡೆಕಾಹೆಡ್ರನ್) – dedehahedron
ನಕ್ಷತ್ರ ಸ್ಥಾನಾಭಾಸ (ಸ್ಟೆಲರ್ ಪ್ಯಾರಲ್ಲಾಕ್ಸ್) – stellar parallax
ನಗರ ಪ್ರಭುತ್ವ (ಸಿಟಿ ಸ್ಟೇಟ್) – city state

ನರಕ (ಟೋಫೆಟ್) – tophet
ನವಜೀವನ ('ವೈಟಾ ನುವೊವ') – vita nuova
ನಾನು ನಡೆಯುತ್ತೇನೆ, ಆದ್ದರಿಂದ ನಾನಿದ್ದೇನೆ ('ಆಂಬ್ಯುಲೋ ಎರ್ಗೋ ಸಂ') – Ambulo, ergo sum
ನಾಮಮಾತ್ರವಾದಿ (ನಾಮಿನಲಿಸ್ಟ್) – nominalist-
ನಿಯಂತ್ರಣವಾದಿ (ಡಿಟರ್ಮಿನಿಸ್ಟ್) – determinist
ನಿಯಮಸಂಹಿತೆ (ಲಾ) – the law
ನಿಗಮನ (ಇಂಡಕ್ಷನ್) – induction
ನಿರಂಕುಶಾಧಿಕಾರ (ಟೊಟಾಲಿಟೇರಿಯನ್) – totalitarianism
ನಿರಾಕರಣ ನಿಯಮ (ಲಾ ಆಫ್ ಕಾಂಟ್ರಡಿಕ್ಷನ್) – law of contradiction
ನಿತ್ಯನರಕ (ಡ್ಯಾಮ್ನೇಷನ್) – ಣಣ
ನಿರ್ದೇಶಾಂಕ (ಕೋಆರ್ಡಿನೇಟ್) – coordinate
ನಿರ್ದಿಷ್ಟಗಳು ಮತ್ತು ವೈಶ್ವಿಕಗಳು (ಪರ್ಟಿಕ್ಯುಲರ್ಸ್ ಅಡ್ ಯೂನಿವರ್ಸಲ್ಸ್) – particulars and universals
ನಿರ್ದಿಷ್ಟಪೂರ್ವ ಅಸ್ತಿತ್ವದವು(ಯೂನಿವರ್ಸೇಲ್ ಆನ್‌ಟಿ ರೆಮ್)–universaile anti rem
ನಿರ್ದಿಷ್ಟಾನಂತರದ ಅಸ್ತಿತ್ವ (ಯೂನಿವರ್ಸೇಲ್ ಪೋಸ್ಟ್ ರೆಮ್)– universaile post rem
ನಿರ್ವಾತಪ್ರದೇಶ (ವ್ಯಾಕ್ಯೂಮ್) – vacuum
ನಿಮಿತ್ತ ಕಾರಣ (ಎಫಿಷಿಯಂಟ್ ಕಾಸ್) – efficient cause
ನಿಮಿತ್ತವಾದ (ಲಾ ಆಫ್ ಕಾಸಾಲಿಟಿ) – law of causality
ನಿಷ್ಕೃತಿ (ಆಬ್ಸಲ್ಯೂಷನ್) – absolution
ನೀತಿಸಂಹಿತೆ (ಎಥಿಕ್ಸ್) – ethics
ನೀಹಾರಿಕಾ ಸಿದ್ಧಾಂತ (ನೆಬ್ಯುಲರ್ ಹೈಪಾಥೆಸಿಸ್) – nebular hypothesis
ನೀಹಾರಿಕೆ (ನೆಬ್ಯುಲ) – Nebula
ನೈಸರ್ಗಿಕ ನಿಯಮ (ಜೂಸ್ ನಾಚುರಾಲ್) – jus naturale
ನೋದಕ ವಸ್ತು (ಪ್ರೊಜೆಕ್ಟೈಲ್) – projectile
ನ್ಯಾಯಮಂಡಲಿ (ಜ್ಯೂರಿ) – jury
ನ್ಯಾಯಮಂಡಲಿ (ಟ್ರಿಬ್ಯೂನಲ್) – tribunal
ನ್ಯಾಯಶಾಸ್ತ್ರ (ಜೂರಿಸ್‌ಪ್ರೂಡೆನ್ಸ್) – jurisprudence
ನ್ಯಾಂಟೆ ಶಾಸನ (ಎಡಿಕ್ಟ್ ಆಫ್ ನ್ಯಾಂಟೆ) – edict of Nantes

ನ್ಯೂನ (ಡಿಫಿಷಿಯಂಟ್) – deficient
ಪರಕಾಯಪ್ರವೇಶ (ಮೆಟೆಂಪ್‌ಸೈಕಾಸಿಸ್) – metemppsychosis
ಪರಭಕ್ಷಕ (ಪ್ರಿಡೇಟರ್) – predator
ಪರಮ ಪುರುಷಾರ್ಥ (ಸಮಮ್ ಬೋನಮ್) – summom bonum
ಪರುಷ ಶಿಲೆ (ಫಿಲಾಸಫರ್ಸ್ ಸ್ಟೋನ್) – philisopher's stone
ಪರಿಪೂರ್ಣ ('ಪರ್ಫೆಕ್ಟೆಡ್') – perfected
ಪರಿಪೂರ್ಣಾವಸ್ಥೆ (ಎಂಟೆಲೆಕಿ) – entelechy
ಪರಿಪ್ರೇಕ್ಷ್ಯ (ಪರ್ಸ್ಪೆಕ್ಟಿವ್) – perspective
ಪರಿಮಾಣ (ಕ್ವಾಂಟಿಟಿ) – quantity
ಪರಿಮಾಣ (ಟರ್ಮ್) – term
ಪರಿವರ್ತನ ಸಿದ್ಧಾಂತ (ಡಾಕ್ಟ್ರೀನ್ ಆಫ್ ಫ್ಲಕ್ಸ್) – doctrine of flux
ಪರಿವರ್ತಿಸು (ಸರ್ಕಮ್‌ಸ್ಕ್ರೈಬ್) – circumscribe
ಪರ್ವತೋಪದೇಶ (ಸೆರ್ಮನ್ ಆನ್ ದ ಮೌಂಟ್)–sermon on the mount
ಪವಿತ್ರ ಒಪ್ಪಂದ (ಹೋಲಿ ಅಲಯನ್ಸ್) – holy alliance
ಪಾದ್ರಿ ಹುದ್ದೆ (ಹೋಲಿ ಆರ್ಡರ್ಸ್) – Holy Order
ಪಾಪವಿಮೋಚನೆ (ಆಬ್ಸಲ್ಯೂಷನ್) – absolution
ಪಿನಿಯಲ್ ಗ್ರಂಥಿ (ಪಿನಿಯಲ್ ಗ್ಲಾಂಡ್) – pineal gland
ಪ್ರಾಯಶ್ಚಿತ್ತ ಗೀತೆಗಳು (ಪೆನಿಟೆನ್ಷಿಯಲ್ಸ್) – penitentials
ಪುನಃಪ್ರತಿಷ್ಠಾಪನೆ (ರೆಸ್ಟೋರೇಷನ್) – Restoration
ಪುನರ್ಜ್ಞಾನಸ್ನಾನ (ಅನಾಬಾಪ್ಟಿಸಂ) – anabaptism
ಪೂಜಾಸ್ಥಳಗಳು (ಕ್ಯೂರಿಯ) – curia
ಪೂರ್ಣಸಂಖ್ಯೆ (ಇಂಟೆಜರ್) – integer
ಪೂರ್ವಕಲ್ಪಿತವಾಗಿ (ಏಪ್ರಿಯರಿ) – a priori
ಪೂರ್ವನಿಯತಿ (ಪ್ರಿಡೆಸ್ಟಿನೇಷನ್) – pre-destination
ಪೂರ್ವನಿಶ್ಚಿತಸಿದ್ಧಾಂತ (ಡಿಟರ್ಮಿನಿಸಂ) – determinism
ಪೂರ್ವಭಾವಿ ಪ್ರಭಾವ (ಇಂಪ್ರೆಷನ್) – impression
ಪೋಪ್ ನ್ಯಾಯಾಸ್ಥಾನ (ಕ್ಯೂರಿಯ) – curia
ಪೋಪ್ ಪ್ರತಿನಿಧಿ (ಲೆಗಟ್) – legate
ಪ್ರಜಾಪ್ರತಿನಿಧಿ ಸಭೆ (ಹೌಸ್ ಆಫ್ ಕಾಮನ್ಸ್) – house of common
ಪ್ರತ್ಯಕ್ಷಜ್ಞಾನ (ಪ್ರೆಸೆಂಟೇಷನ್) – presentation
ಪ್ರತಿರೂಪ (ಕೌಂಟರ್‌ಪಾರ್ಟ್) – counterpart

ಪ್ರತಿರೋಧ (ರೆಸಿಸ್ಟೆನ್ಸ್) – resistance
ಪ್ರತಿನಿಧಿ ಸಭೆ (ಕಾಂಗ್ರೆಸ್) – congress
ಪ್ರತಿನಿಧಿ ಸಭೆ (ಹೌಸ್ ಆಫ್ ಕಾಮನ್ಸ್) – house of commons
ಪ್ರತಿನಿಧಿಸಭೆ (ಚೇಂಬರ್ ಆಫ್ ಡೆಪ್ಯೂಟೀಸ್) – chamber of deputies
ಪ್ರತಿಭಟನಾತ್ಮಕ (ಪ್ರಾಟೆಸ್ಟೆಂಟ್) – protestant
ಪ್ರಧಾನ (ಪ್ರೈಮರಿ) – primary
ಪ್ರಧಾನ ಚರ್ಚ್ (ಕ್ಯಾಥಿಡ್ರಲ್) – cathedral
ಪ್ರದರ್ಶನಾತ್ಮಕ (ಡೆಮಾನ್‌ಸ್ಟ್ರೇಟಿವ್) – demonstrative
ಪ್ರಭಾವ (ಇಂಪ್ರೆಷನ್) – impression
ಪ್ರಮೇಯ ಮತ್ತು ಪ್ರತಿಪ್ರಮೇಯ (ಥೀಸಿಸ್ ಮತ್ತು ಆಂಟಿಥೀಸಿಸ್)– thesis and antithesis
ಪ್ರವರ್ತಕ (ಪೇಟ್ರಿಯಾರ್ಕ್) – patriarch
ಪ್ರವರ್ತಕರ ವಿಧಿ (ಆಕ್ಟ್ ಆಫ್ ದ ಅಪಾಸಲ್ಸ್) – act of the apostle
ಪ್ರವರ್ತಕಪತ್ರ (ಎಪಿಸಲ್) – epistle
ಪ್ರಾಕರಣಿಕ (ಟಾಪಿಕಲ್) – topical
ಪ್ರಾಕೃತಿಕ–ಮತಧಾರ್ಮಿಕ(ಫಿಸಿಕೋ–ಥಿಯೊಲಾಜಿಕಲ್)–physico-thelogical
ಪ್ರಾಚೀನರು (ಏನ್ಷಿಯಂಟ್ಸ್) – ancients
ಪ್ರಾಮಾಣ್ಯ (ಅಥಾರಿಟಿ) – authority
ಪ್ರೇಮಪೇಯ (ಫಿಲ್ಟರ್) – filter
ಪೌರೋಹಿತ್ಯಾಧಿಕಾರ (ಸಾಸೆರ್‌ಡೋಟಲ್) – sacerdotel
ಫ್ರೆಂಚ್ ತಾತ್ವಿಕರು (ಫಿಲಾಸಫೀಸ್) – philosopies
ಬದಲಾವಣೆಗೊಳ್ಳು (ಪರ್‌ಸೆಪ್ಟ್) – percept
ಬಲ (ಫೋರ್ಸ್) – force
ಬಲವಿಜ್ಞಾನ (ಡೈನಾಮಿಕ್ಸ್) – dynamics
ಬಹುಕೋನ (ಪಾಲಿಗನ್) – polygon
ಬಹುತ್ವವಾದ (ಪ್ಲೂರಲಿಸಂ) – pluralism
ಬಾಹ್ಯವಸ್ತು (ಆಬ್ಜೆಕ್ಟ್) – object
ಬೀಜಗಣಿತ ಜ್ಯಾಮಿತಿ (ಕೋ–ಆರ್ಡಿನೇಟ್ ಅಥವಾ ಅನಲಿಟಿಕಲ್ ಜ್ಯಾಮಿಟ್ರಿ) – co-ordinate or analytical geometry
ಬೆಣೆಲಿಪಿ (ಕ್ಯೂನಿಫಾರ್ಮ್) – cuniform
ಬೆಳ್ಳಿಯ ನಾಣ್ಯ (ಥೇಲರ್) – thalor

ಬೈಬಲ್‌ನ ಲ್ಯಾಟಿನ್ ಪಾಠ (ವಲ್ಗೇಟ್) – vulgate
ಬೋಧನಶಾಸ್ತ್ರ (ಪೆಡಾಗಜಿ) – pedogogy
ಬೌದ್ಧಿಕ ತತ್ವ (ನೌಸ್) – nous
ಬ್ರಹ್ಮಾಂಡ (ಕಾಸ್ಮಾಸ್) – cosmos
ಭಾವನಾಸಿದ್ಧಾಂತ (ಥಿಯರಿ ಆಫ್ ಎಮೋಷನ್ಸ್) – theory of emotions
ಭಾವಲಿಪಿ (ಐಡಿಯೋಗ್ರಾಮ್) – ideogram
ಭಿನ್ನರಾಶಿ (ಫ್ರಾಕ್ಷನ್) – fraction
ಭೀತಿಪ್ರಭುತ್ವ (ರೀನ್ ಆಫ್ ಟೆರರ್) – reign of terror
ಮಾನವ ವಿವೇಕದ ಅರಿಸ್ಟಾಟಲ್ (ಸ್ಟೇಜಿರೈಟ್) – stagirate
ಭಾಷಣಕಲೆಯ ಪ್ರತಿವಾದ (ಆಂಟಿಥೀಸಿಸ್) – antithesis-
ಭಾಷಾಧ್ಯಯನ (ಫಿಲಾಲಜಿ) – philology
ಭೌತದ್ರವ್ಯ (ಮ್ಯಾಟರ್) – matter
ಭೌತವಾದ (ಮೆಟೀರಿಯಲಿಸಂ) – materialism
ಭೌತವಾದಿ (ಫಿಸಿಕಲಿಸ್ಟ್) – physicalist
ಭೌತವಿಜ್ಞಾನ (ಫಿಸಿಕ್ಸ್) – physics
ಭೌತಿಕ ಮತಧಾರ್ಮಿಕ (ಫಿಸಿಕೋ ಥಿಯೊಲಾಜಿಕಲ್) – physico-theological
ಮಾನವತಾವಾದಿ (ಹ್ಯೂಮನಿಸ್ಟ್) – humanist
ಮೌಲ್ಯದ ಕಾರ್ಮಿಕ ಸಿದ್ಧಾಂತವನ್ನು (ಲೇಬರ್ ಥಿಯರಿ ಆಫ್ ವ್ಯಾಲ್ಯೂ) – labour theotr of value
ಮಂಡಲ ಭ್ರಮೆ (ಫೋಲೀ ಸರ್ಕ್ಯುಲೇರ್) – folly circulaire
ಮತಧರ್ಮಾಧಿಕಾರಿ (ಡೀಕನ್) – deacon
ಮತಧರ್ಮಶಾಸ್ತ್ರ (ಥಿಯಾಲಜಿ) – theology
ಮತಧರ್ಮಸಭೆ (ಕನ್‌ಸಿಲಿಯರ್) – conciliar
ಮತಧಾರ್ಮಿಕ ಯುದ್ಧ (ಕ್ರೂಸೇಡ್) – crusade
ಮಹನೀಯ (ಜಂಟಲ್‌ಮೆನ್) – gentleman
ಮಹಾ ಬಿರುಕು (ಗ್ರೇಟ್ ಸ್ಕಿಸ್ಮ್) – great schism
ಮಹಾ ವಿಭಜನೆ (ಗ್ರೇಟ್ ಸ್ಕಿಸಂ) – great schism
ಮಹಾಬಲಿ (ಹೆಕಟೂಮ್) – hecatomb
ಮುನ್ನುಡಿ (ಪ್ರಿಡಿಕ್ಷನ್) – prediction
ಮೂರು ವಿಭಜನೆಗಳು (ತ್ರೀ ಚಾಪ್ಟರ್ಸ್) – three chapters
ಮೂರ್ತೀಕರಣ (ಆಬ್ಜೆಕ್ಟಿಫಿಕೇಷನ್) – objectification

ಮೂರ್ತೀಕರಿಸು (ಆಬ್ಜೆಕ್ಟಿಫೈ) – objectify
ಮೂವತ್ತು ಮಂದಿ ನಿರಂಕುಶಾಧಾಪತಿಗಳು (ಥರ್ಟಿ ಟೈರಾನ್ಟ್ಸ್) – thirty tyrants
ಮೂಲ ಮತ್ತು ಪೂರಕ ಗುಣಗಳು (ಪ್ರೈಮರಿ ಅಂಡ್ ಸೆಕಂಡರಿ ಕ್ವಾಲಿಟೀಸ್) – primary and secondary qualities
ಮೂಲತತ್ವ (ಪ್ರಿನ್ಸಿಪಲ್) – principle
ಮೂಲತತ್ವಜ್ಞಾನದ (ಆಂಟೊಲಾಜಿಕಲ್) – ontological
ಮೂಲತಾತ್ವಿಕವಾದ (ಸಬ್‌ಸ್ಟಾನ್ಷಿಯಲ್) – substantial
ಮೂಲದ್ರವ್ಯ ಮತ್ತು ವಿಸ್ತೃತ (ಮೆಟೀರಿಯಲ್ ಅಂಡ್ ಎಕ್ಸ್‌ಟೆಂಡೆಡ್) – Material and Extended
ಮೂಲದ್ರವ್ಯಶಾಸ್ತ್ರ (ಮೊನಡಾಲಜಿ) – monodology
ಮೂಲವಸ್ತು (ಎಲಿಮೆಂಟ್) – Element
ಮೂಲಸಂಕಲ್ಪಸಿದ್ಧಾಂತ (ಟೆಲಿಯಾಲಜಿ) – teleology
ಮೊದಲ ಚಲನೆಗಾರ (ಫಸ್ಟ್ ಮೂವರ್) – first mover
ರಚಕನ ಕಲ್ಪನೆಯ ವಾದ (ಆರ್ಗ್ಯುಮೆಂಟ್ ಫ್ರಂ ಡಿಸೈನ್) – argument from design
ರಚಿಸು (ಇನ್‌ಸ್ಕ್ರೈಬ್) – inscribe
ರಹಸ್ಯಜ್ಞಾನ (ನಾಸ್ಟಿಕ್) – gnostic
ರೂಢ ಪ್ರತಿವರ್ತನೆ (ಕಂಡಿಷನ್ಡ್ ರಿಫ್ಲೆಕ್ಸ್) – conditioned reflex
ರೂಪ (ಫಾರ್ಮ್) – form
ರಾಜಕೀಯ (ಪಾಲಿಟಿಕ್ಸ್) – politics
ರಾಜನೀತಿ ತತ್ವಜ್ಞಾನ (ಪೊಲಿಟಿಕಲ್ ಫಿಲಾಸಫಿ) – political philosophy
ರೇಖಾಂಶ (ಲಾಂಜಿಟ್ಯೂಡ್) – longitude
ರೋಗಾಣು (ಬ್ಯಾಕ್ಟೀರಿಯ) – bacteria
ವಕ್ರೀಭವನದ (ರಿಫ್ರಾಕ್ಷನ್) – refraction
ವರ್ಗ (ಸ್ಕ್ವೇರ್) – square
ವರ್ಗಗಳು (ಕ್ಯಾಟೆಗೊರೀಸ್) – categories
ವಾಕ್ಯರಚನಾತ್ಮಕ (ಸಿಂಟಾಕ್ಟಿಕಲ್) – syntactical
ವಾಕ್ಯಾರ್ಥ (ಡಯೆಲೆಕ್ಟಿಕ್) – dialectic
ವಾಣಿಜ್ಯ ಮಂಡಲಿ (ಬೋರ್ಡ್ ಆಫ್ ಟ್ರೇಡ್) – board of trade
ವಾಲ್ಟೇರ್ ಪ್ರಣೀತ ರಾಜ್ಯ (ವಾಲ್ಟೇರಿಯನ್ ಸ್ಟೇಟ್) – voltarian state

ವಾಸ್ತವವಾದ ಪ್ರತಿರೂಪ (ಕೌಂಟರ್‌ಪಾರ್ಟ್) – counterpart
ವೇಗೋತ್ಕರ್ಷ (ಆಕ್ಸೆಲರೇಷನ್) – acceleration
ವೈಚಾರಿಕತೆ (ರೀಸನ್) – reason
ವೈಶ್ವಿಕ ಅಶ್ರದ್ಧೆ (ಕಾಸ್ಮಿಕ್ ಇಂಪಯಟಿ) – impiety
ವೈಶ್ವಿಕ ನ್ಯಾಯ (ಕಾಸ್ಮಿಕ್ ಜಸ್ಟಿಸ್) – Cosmic Justice
ವೈಶ್ವಿಕಗಳು ನಿರ್ದಿಷ್ಟಪೂರ್ವ ಅಸ್ತಿತ್ವ (ಯೂನಿವರ್ಸೇಲ್ ಆನ್‌ಟಿ ರೆಮ್) – univerail anti rem
ವೈಶ್ವಿಕಸಿದ್ಧಾಂತ (ಡಾಕ್ಟ್ರೀನ್ ಆಫ್ ಯೂನಿವರ್ಸಲ್ಸ್)–doctrine of universals
ವಿಂಶತಿಮುಖಿ (ಐಕಸಾಹೆಡ್ರನ್) – icosohedron
ವಿಕಲ ಸಮೀಕರಣಗಳ (ಡಿಫರೆನ್ಷಿಯಲ್ ಈಕ್ವೇಷನ್)–differential equation
ವಿಕಲ್ಪಾತ್ಮಕ (ಡಿಸ್‌ಜಂಕ್ಟಿವ್) ತರ್ಕವಿಧಾನ – disjunctive
ವಿಕಿರಣಶೀಲತೆ (ರೇಡಿಯೋಆಕ್ಟಿವ್) – Radioative
ವಿಚಾರಣಾಧಿಕರಣ (ಇನ್‌ಕ್ವಿಸಿಷನ್) – inquisition
ವಿರೋಧನ್ಯಾಸಗಳು (ಆಂಟಿಥೀಸೆಸ್) – antithesis
ವಿರೋಧನಿಯಮ (ಲಾ ಆಫ್ ಕಾಂಟ್ರಡಿಕ್ಷನ್) – law of contradiction
ವಿಧೇಯದ (ಪ್ರೆಡಿಕೇಟ್) –
ವಿನ್ಯಾಸ (ಕಾನ್‌ಫಿಗರೇಷನ್) – configuration
ವಿಶ್ವಮೂಲ ಸಿದ್ಧಾಂತ (ಕಾಸ್ಮೋಗನಿ) – cosmogony
ವಿಶ್ವವಿಜ್ಞಾನ (ಕಾಸ್ಮಾಲಜಿ) – Cosmology
ವಿಶ್ವವಿಜ್ಞಾನಾತ್ಮಕ (ಕಾಸ್ಮೊಲಾಜಿಕಲ್) – cosmological
ವಿಶ್ರಾಂತಿ (ರೆಸ್ಟ್) – rest
ವಿಶೇಷಣ (ಪ್ರೆಡಿಕೇಟ್) – predicate
ವಿಶ್ಲೇಷಕ ಜ್ಯಾಮಿತಿ (ಕೋಆರ್ಡಿನೇಟ್ ಜ್ಯಾಮಿಟ್ರಿ)–coordinate geometry
ವಿಶ್ಲೇಷಣಾತ್ಮಕ (ಬೀಜಗಣಿತೀಯ) – algebraic
ವಿಷುವತ್ಸಂಕ್ರಾಂತಿ (ಈಕ್ವಿನಾಕ್ಸ್) – equinox
ವಿಸ್ತರಣ (ಎಕ್ಸ್‌ಟೆನ್ಷನ್) – extension
ವ್ಯಕ್ತೀಕರಣ ತತ್ವ (ಪ್ರಿನ್ಸಿಪಲ್ ಆಫ್ ಇನ್‌ಡಿವಿಜುವೇಷನ್)–principle of individuation
ವ್ಯತಿರೇಕ (ಕಾನ್‌ವರ್ಸ್) – converse
ವ್ಯವಹಾರಸಿದ್ಧಾಂತಿ (ಪ್ರಾಗ್ಮಾಟಿಸ್ಟ್) – pragmatist
ಲ್ಯಾಟಿನ್ ಪಾಠ (ವಲ್ಗೇಟ್) – vulgate

ಲ್ಯಾಟಿನ್ ಶೈಲಿ (ಲ್ಯಾಟಿನಿಟಿ) – latinity
ಲೆಕ್ಕಾಚಾರಯಂತ್ರ (ಕ್ಯಾಲ್ಕ್ಯುಲೇಟರ್) – calculator
ಲೋಲಕ (ಪೆಂಡ್ಯುಲಮ್) – Pendulum
ಶಂಕುಚ್ಛೇದ (ಕಾನಿಕ್ ಸೆಕ್ಷನ್) – conic section
ಶಕ್ತಿಸ್ಥಾಯಿತ್ವ (ಕನ್ಸರ್ವೇಷನ್ ಆಫ್ ಎನರ್ಜಿ)–conservation of energy
ಶುಕ್ರ (ವೀನಸ್) – venus
ಶುದ್ಧ ಪರಮಪದ (ಪ್ಯೂರ್ ಬೀಯಿಂಗ್) – pure being
ಶುದ್ಧಿಲೋಕ (ಪರ್ಗೇಟರಿ) – purgatory
ಶಾಸನಸಂಗ್ರಹ (ಡೆಕ್ರೆಟಲ್) – decratel
ಶಾಸ್ತ್ರಪ್ರಾಮಾಣ್ಯ (ಡಾಗ್ಮಾ) – dogma
ಶೇಷಪಾಪಕ್ಷಮೆ (ಇಂಡಲ್‌ಜೆನ್ಸಸ್) – indulgences
ಷಟ್ಕೋನ (ಹೆಕ್ಸಗನ್) – hexagon
ಸಂಯಮವಾದ (ಸ್ಟಾಯಿಸಿಸಂ) – stoicism
ಸಂಯಮವಾದಿಗಳು (ಸ್ಟಾಯಿಕ್) – stoics
ಸಂಯೋಜಿತ ವಸ್ತು (ಕಾಂಪೋಸಿಟ್ ಥಿಂಗ್) – composite thing
ಸಂಖ್ಯೆ (ನಂಬರ್) – number
ಸಂದೇಹವಾದ (ಸ್ಕೆಪ್ಟಿಸಿಸಂ) – skepticsm
ಸಂಪ್ರದಾಯಶರಣರು (ಕನ್‌ಫಾರ್ಮಿಸ್ಟ್ಸ್) – conformists
ಸಂಬಂಧ (ರಿಲೇಷನ್) – relation
ಸಂವೇದನೆ (ಸೆನ್ಸಿಬಿಲಿಟಿ) – sensibility
ಸಂಸತ್ತಿನ ಮೇಲ್ಮನೆ (ಹೌಸ್ ಆಫ್ ಲಾರ್ಡ್ಸ್) – house of lords
ಸತ್ವ (ಎಸೆನ್ಸ್) – esssence
ಸತ್ವ (ಸಬ್‌ಸ್ಟೆನ್ಸ್) – substance
ಸತ್ವಪರಿವರ್ತನವಾದ (ಟ್ರಾನ್ಸಬ್‌ಸ್ಟಾನ್ಷಿಯೇಷನ್ – 'ಪ್ರಭುಭೋಜನ ಸಂಸ್ಕಾರದಲ್ಲಿ ರೊಟ್ಟಿ ಮತ್ತು ಮದ್ಯಗಳು ದೇಹ ಮತ್ತು ರಕ್ತಗಳಾಗಿ ಪರಿವರ್ತನೆ ಹೊಂದುವುದೆಂಬ ವಾದ') transubstantiation
ಸದನಗಳು (ಚೇಂಬರ್ಸ್) – chambers
ಸನ್ಯಾಸತತ್ವ (ಅಸೆಟಿಸಿಸಂ) – asceticism
ಸನ್ಯಾಸಿಮಠ (ಅಬೆ) – abbey
ಸಮಾನದೃಷ್ಟಿಯ ಸುವಾರ್ತೆ (ಸಿನಾಪ್ಟಿಕ್ ಗಾಸ್ಪೆಲ್)–synoptic gospel
ಸಮಾನಾಂತರರೇಖಾ ನಿಯಮ(ಪ್ಯಾರಲೆಲೋಗ್ರಂ ಲಾ)–parallelogram law

ಸಮರ್ಥಕ ಮತಧರ್ಮಶಾಸ್ತ್ರ(ಅಫರ್ಮೇಟಿವ್ ಥಿಯಾಲಜಿ)–affirmative theology
ಸಮಮುಖಿ ಘನ (ರೆಗ್ಯುಲರ್ ಸಾಲಿಡ್‌ಸ್) – regular solid
ಸಮವ್ಯಾಪಕತೆ (ಕೋ–ಎಕ್ಸ್‌ಟೆನ್ಸಿವ್) – co-extensive
ಸರ್ವದೇವಾತ್ಮಕವಾದ (ಪ್ಯಾಂಥೀಯಿಸಂ) – pantheism
ಸರ್ವಾಧಿಕಾರ (ಟೊಟಾಲಿಟೇರಿಯನಿಸಂ) – totalitarianism
ಸಸ್ಯೀಯ (ವೆಜಿಟೇಟಿವ್) – vegetative
ಸಹಿಷ್ಣುತೆಯ ವಿಧಿ (ಆಕ್ಟ್ ಆಫ್ ಟಾಲರೇಷನ್) – act of toleration
ಸಹಾಯಕ ಬಿಷಪ್ (ಸಫ್ರಗಾನ್) – suffragan
ಸುಖೈಕವಾದಿಗಳು (ಎಪಿಕ್ಯೂರಿಯನ್ಸ್) – epicurean
ಸುತ್ತುಕರ್ತನ (ಸರ್‌ಕಂಸಿಷನ್) – circumcision
ಸ್ತುತಿಕಾರ (ಸಾಮಿಸ್ಟ್) – psalmist
ಸೂರ್ಯಕೇಂದ್ರಿತ (ಹೀಲಿಯೋಸೆಂಟ್ರಿಕ್) – heliocentric
ಸೂಕ್ಷ್ಮತರ್ಕ (ಸ್ಕೊಲಾಸ್ಟಿಸಿಸಂ) – scholasticism
ಸೂತ್ರಸಂಗ್ರಹ (ಕ್ರೀಡ್) – creed
ಸೃಷ್ಟವಸ್ತು (ಕ್ರಿಯೇಚರ್) – creature
ಸ್ಥಳ (ಪ್ಲೇಸ್) – space
ಸ್ವಯಂಚಾಲಕತೆ (ಆಟೋಮ್ಯಾಟ) – automata
ಸ್ವರ್ಗಚಕ್ರಾಧಿಪತ್ಯ(ದ ಕಿಂಗ್‌ಡಂ ಆಫ್ ಹೆವನ್)–the kingdom of heaven
ಸ್ವರ್ಗಸಮ್ರಾಜ್ಞಿ (ಇಷ್ತರ್) – Ishtar
ಸ್ವಪೀಡನಸಂತೋಷಿ (ಮ್ಯಾಸೋಕಿಸ್ಟ್) – macoshist
ಸ್ವಭಾವಸಿದ್ಧ (ಟ್ರಾನ್ಸೆಂಡೆಂಟಲ್) – transcendental
ಸಾಕ್ಷ್ಯಗಳು (ಪ್ರೂಫ್ಸ್) – proofs
ಸಾಧನ ಸಿದ್ಧಾಂತ (ಇನ್‌ಸ್ಟ್ರುಮೆಂಟಲಿಸಂ) – instrumentalism
ಸಾಧ್ಯವಾಕ್ಯ (ಪ್ರೆಮಿಸ್) – premise
ಸಾಮಾನ್ಯ ಸೋದರರ (ಕಾನ್ವರ್ಸೈ) – conversai
ಸಾಲಗಾರರು (ಡೆಟರ್ಸ್) – debtors
ಸಾಲಿಗರು (ಕ್ರೆಡಿಟರ್ಸ್) – creditors
ಸಾಹಸಪ್ರವೃತ್ತಿ (ಪ್ರೊಮೀಥಿಯನ್) – promethean
ಸ್ಥಾನ (ಪೊಸಿಷನ್) – position

ಸ್ವಾತಂತ್ರ್ಯ ಘೋಷಣೆ (ದ ಡಿಕ್ಲರೇಷನ್ ಆಫ್ ಇಂಡಿಪೆಂಡೆನ್ಸ್) – the declaration of independence
ಸ್ವಾತ್ಮೈಕ (ಸಾಲಿಪ್ಸಿಸ್ಟಿಕ್) – solipsistic
ಸ್ಪೈಯಿನ್‌ನ ಶಾಸನಸಭೆ (ಕಾರ್ಟೆಸ್) – cortes
ಸಿಂಪಿ (ಆಯ್‌ಸ್ಟರ್) – oyster
ಸಿಡಿಮದ್ದು (ಗನ್ ಪೌಡರ್) – gun powder
ಸಿದ್ಧಾಂತಾಂಧತೆ (ಡಾಗ್ಮಾಟಿಸಂ) – dogmatism
ಸ್ಥಿತಿ (ಸ್ಟೇಟ್) – state
ಸ್ಥಿತಿಯಾಗಲು (ಸಬ್‌ಸ್ಟಾನ್ಟಿವ್) – substantive-
ಹಕ್ಕುಗಳ ಘೋಷಣೆ (ಪಿಟಿಷನ್ ಆಫ್ ರೈಟ್ಸ್) – petition if rights
ಹಡಗುಸುಂಕ (ಷಿಪ್‌ಮನಿ) – ship money
ಹಸ್ ಪಂಥ (ಹಸ್ಸೈಟ್) – husite
ಹಸಿವಿನ (ಅಪಿಟಿಟಿವ್) – appetitive
ಹೆಮ್ಮೆಯ ಶುದ್ಧೀಕರಣ (ಪ್ರೈಡ್ಸ್ ಪರ್ಜ್) – pride's purge
ಹೊಸತಾದ ಮಾದರಿ ಸೈನ್ಯ (ನ್ಯೂ ಮಾಡಲ್ ಆರ್ಮಿ)–new model army
ಹಿಂತೇದಿ (ಆಂಟೀಡೇಟ್) – antidate
ಹಿಂದಿನ ಧರ್ಮವಂತರು (ಓಲ್ಡ್ ಬಿಲೀವರ್ಸ್) – Old Believers
ಹಿರಿಯ ಗುರು (ಎಕ್ಸಾರ್ಚ್) – exarch
'ಕದನಯುಗಳದಲ್ಲಿ ಭಾಗವಹಿಸುವ ಅವಕಾಶ' (ಕನ್‌ಕಸ್ ಆನ್‌ತ್ರ್ ದ್ಯೂ ಬೆಟೈಲಿಸ್) – concus anthrogh du betelis
'ಕಾರ್ಟೀಸಿಯನ್ ಸಂಶಯ' (ಕಾರ್ಟೀಸಿಯನ್ ಸ್ಕೆಪ್ಟಿಸಿಸ್ಮ್) – Cartesian skepticism
'ಕೆಟ್ಟುದಾಗಿ ತೇಪೆ ಹಾಕುವವರು' (ಬಂಗಲ್ಡ್ ಅಂಡ್ ಬಾಚ್‌ಡ್) – bungled and batched
'ಕೀಳುವ್ಯಕ್ತಿ' (ರೊಟೂರಿಯೆರ್) – roturier
'ಚಂದ್ರನಡಿಯ' (ಸಬ್‌ಲೂನರಿ) – sublunary
'ಚಲನೆ' 'ಸಾಗುವಿಕೆ' (ಮೋಷನ್ ಮತ್ತು ಮೂವ್‌ಮೆಂಟ್) – motion and movement
'ಜಗತ್ತಿನ ನಿರ್ಣಯವು ಸಮಂಜಸವಾದುದು' (ಸೆಕ್ಯೂರಸ್ ಜ್ಯೂಡಿಕಾಟ್ ಆರ್ಬಿಸ್ ಟೆರಾರಮ್) – securus judicat orbis terrarum
'ಜ್ಞಾನವೇ ಅಧಿಕಾರ' (ನಾಲೆಡ್ಜ್ ಈಸ್ ಪವರ್)–knowledge is power

'ರೂಢ ಪ್ರತಿವರ್ತನೆ' (ಕಂಡಿಷನ್ಡ್ ರಿಫ್ಲೆಕ್ಸ್) – conditioned reflex
'ತರ್ಕ' (ರೀಸನ್) – reason
'ತತ್ವಜ್ಞಾನಿ' (ದ ಫಿಲಾಸಫರ್), ಅಂದರೆ ಅರಿಸ್ಟಾಟಲ್– the phiposopher-
'ತೊಲಗು!' (ಅವಾನ್ಟ್) – avant
'ತಿಳಿವಳಿಕೆ' (ಅಂಡರ್‌ಸ್ಟಾಂಡಿಂಗ್) – understanding
'ತೀವ್ರಗಾಮಿ ಅನುಭವೈಕವಾದ' (ರ್‍ಯಾಡಿಕಲ್ ಎಂಪಿರಿಸಿಸಂ)–radical empiricism
'ಧ್ವನಿಯ ಉಸಿರು' (ಫ್ಲಾಟಸ್ ವೋಸಿಸ್) – flautus vocis
'ದ್ರವ್ಯ' (ಸಬ್‌ಸ್ಟೆನ್ಸ್) –ಣಣ
'ದ್ವಂದ್ವೀಯ' (ಡಯಲೆಕ್ಟಿಕ್) – dialectic
'ನೇರ ಸಂಪರ್ಕದ ಪದಗಳು' (ಟರ್ಮ್ಸ್ ಆಫ್ ಫಸ್ಟ್ ಇನ್‌ಟೆನ್ಷನ್) – terms of first intention
'ಪರೋಕ್ಷಸಂಪರ್ಕದ ಪದಗಳು (ಟರ್ಮ್ಸ್ ಆಫ್ ಸೆಕೆಂಡ್ ಇನ್‌ಟೆನ್ಷನ್) – terms of second intention
'ಪರಿಕಲ್ಪನೆಗಳು' (ಐಡಿಯಾಸ್) – ideas
'ಪರಿಶುದ್ಧ ಅಂತರ್ಬೋಧೆ' (ಆನ್‌ಶ್ವಾಂಗ್) – onshwang
'ಪರ್ವತದ ಮುದುಕ' (ಓಲ್ಡ್ ಮ್ಯಾನ್ ಆಫ್ ದ ಮೌಂಟನ್) – Old Man of the mountain
'ಪ್ರಜ್ಞಾ–ಛೇದನ ಮತ್ತು ಸ್ವಮಾರಣ' (ಕಾನ್‌ಷನ್ಸ್–ವಿವಿಸೆಕ್ಷನ್ ಅಂಡ್ ಸೆಲ್ಫ್–ಕ್ರೂಸಿಫಿಕ್ಷನ್) – conscience vivisection and self-crucifixion
'ಪ್ರಥಮ ಕಾರಣ' (ಫಸ್ಟ್ ಕಾಸ್) – first cause
'ಪ್ರಥಮ ರೂಪ' (ಫಸ್ಟ್ ಫಿಗರ್) – first figure
'ಪ್ರಭಾವಗಳು' (ಇಂಪ್ರೆಷನ್ಸ್) – impressions
'ಬಡ್ಡಿ'ಯನ್ನು (ಯುಷರಿ) – ushery
'ಬಲ' (ಫೋರ್ಸ್) – force
'ಭೌತಿಕ ದ್ರವ್ಯ' (ಮೆಟೀರಿಯಲ್ ಸಬ್‌ಸ್ಟೆನ್ಸ್) – material substance
'ಭೌತಿಕ ದ್ರವ್ಯ' (ಮೆಟೀರಿಯಲ್ ಸಬ್‌ಸ್ಟೆನ್ಸ್) – material substance
'ಬೌದ್ಧಿಕ ತತ್ವ' (ಇಂಟಲೆಕ್ಚುವಲ್ ಪ್ರಿನ್ಸಿಪಲ್)
ಯಂತ್ರರಚನೆ (ಮೆಕಾನಿಸಂ) – mechanism
ಯಂತ್ರವಿಜ್ಞಾನ (ಮೆಕಾನಿಕ್ಸ್) – mechanics
ಯುಗ್ಮಗಳು (ಕಪಲ್ಸ್) – Couples
ಯೆಹೂದ್ಯರ ವಿಮೋಚನಾ ಹಬ್ಬ (ಪಾಸೋವರ್) – passover

ಯೆಹೂದ್ಯರ ವಿಮೋಚನಾ ಹಬ್ಬದ (ಪಾಸೋವರ್) – Passover
ಯೇಸುವಿನ ಸಮಾಧಿ (ಹೋಲಿ ಸೆಪಲ್‌ಕರ್) – holy sepulchre
'ವಸ್ತು' (ಥಿಂಗ್) – thing
'ವ್ಯಕ್ತೀಕರಣ ತತ್ವ' (ಪ್ರಿನ್ಸಿಪಲ್ ಆಫ್ ಇಂಡಿವಿಜುವೇಷನ್) – principle of individuation
'ವ್ಯವಹಾರ ಸಿದ್ಧಾಂತ'ದ (ಪ್ರಾಗ್ಮಾಟಿಸಂ) – pragmatism
'ವಾಕ್ಯ' (ಸಿನ್‌ಟ್ಯಾಕ್ಸ್) – syntax
'ವಿರಾಮ' (ಇಂಟರ್‌ವಲ್) – interval
'ವಿವೇಕ' (ವಿಸ್‌ಡಂ) – wisdom
'ಶಬ್ದ' (ದ ವರ್ಡ್) – the word
'ಶ್ರೇಷ್ಠ ವ್ಯಕ್ತಿ' (ನೋಬಲ್ ಮ್ಯಾನ್) – nobleman
'ಸಂಗತ ಶ್ರೇಣಿ' (ಹಾರ್ಮೋನಿಕ್ ಪ್ರಾಗ್ರೆಷನ್) – Harmonic progression
'ಸಂಗತ ಸಾಧನ' (ಹಾರ್ಮೋನಿಕ್ ಮೀನ್) – Harmonic Mean
'ಸಕಲ' (ದ ಆಲ್) – the all
'ಸತ್ವ' (ಸ್ಪಿರಿಟ್) – spirit
'ಸಮಗ್ರತಾ ಸಿದ್ಧಾಂತ' (ಹೋಲಿಸಂ) – holism
'ಸೃಷ್ಟಿಪರ್ವ' (ಜೆನೆಸಿಸ್) – Genesis
'ಸಾಕಾಗುವ ಕಾರಣ ತತ್ವ' (ಪ್ರಿನ್ಸಿಪಲ್ ಆಫ್ ಸಫಿಷಿಯಂಟ್ ರೀಸನ್) – principle of sufficient reason
'ಸಾರತತ್ವ' (ಕ್ವಿಂಟೆಸೆನ್ಸ್) – quintessence
'ಸಾಧನ ಸಿದ್ಧಾಂತ' (ಇನ್‌ಸ್ಟ್ರುಮೆಂಟಲಿಸಂ) – instrumentalism
'ಸಾವಯವ' (ಆರ್ಗ್ಯಾನಿಕ್) – organic
'ಸಾಮಾಜಿಕ ಒಪ್ಪಂದ' ('ಸೋಷಿಯಲ್ ಕಾಂಟ್ರಾಕ್ಟ್') – social contract
'ಸಾಮಾಜಿಕ ಒಪ್ಪಂದ' ('ಸೋಷಿಯಲ್ ಕಾಂಟ್ರಾಕ್ಟ್') – social contract
'ಸಾಹಚರ್ಯ ತತ್ವ' (ಅಸೋಸಿಯೇಷನ್ ಪ್ರಿನ್ಸಿಪಲ್) – Association principle
'ಹತ್ತರ ಪರಿಷತ್ತು' (ಕೌನ್ಸಿಲ್ ಆಫ್ ಟೆನ್) – council of ten
'ಹೊಂದಿಕೊಂಡಿರ'ಲಾರದ (ನಾಟ್ ಕಂಪಾಟಿಬಲ್) –not compatible

೦೦

ಪಾಶ್ಚಾತ್ಯ ತತ್ತ್ವಜ್ಞಾನಕ್ಕೆ ಸಾಕಷ್ಟು ಸುದೀರ್ಘವಾದ ಇತಿಹಾಸವಿದೆ. ಪ್ರಾಚೀನ ಗ್ರೀಕ್ ಸಂಸ್ಕೃತಿಗೂ ಭಾರತೀಯ ಪ್ರಾಚೀನ ಸಂಸ್ಕೃತಿಗೂ ಸಾಕಷ್ಟು ಹತ್ತಿರದ ಹೋಲಿಕೆಯೂ ಇದೆಯೆನ್ನುತ್ತಾರೆ. ಈಚಿನ ಶತಮಾನಗಳಲ್ಲಿ ವಸಾಹತುಶಾಹಿ ಆಡಳಿತದಿಂದಾಗಿ ಪಶ್ಚಿಮದವರ ಅನುಭವ ವಿಸ್ತಾರವಾಯಿತು. ಅದರ ಪರಿಣಾಮ ಬೇರೆ ಬೇರೆ ರೀತಿಯಲ್ಲಿ ಪಶ್ಚಿಮದ ಆಧುನಿಕ ತತ್ತ್ವಶಾಸ್ತ್ರಜ್ಞರ ಮೇಲೆಯೂ ಆಗಿರಬಹುದು. ಪಶ್ಚಿಮದ ತತ್ತ್ವಶಾಸ್ತ್ರದ ಬಗ್ಗೆ ಬೇಕಾದಷ್ಟು ಇತರ ಪುಸ್ತಕಗಳು ಇವೆಯಾದರೂ ಬರ್ಟ್ರಂಡ್ ರಸೆಲ್ ಅವರ ಕೃತಿಗೆ ವಿಶೇಷ ಮಹತ್ತ್ವ ಇದ್ದೇ ಇದೆ.

ಡಾ. ಅಜಕ್ಕಳ ಗಿರೀಶ ಭಟ್
ಅಧ್ಯಕ್ಷರು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ ಅಂಚೆ
ಮಲ್ಲತ್ತಹಳ್ಳಿ, ಬೆಂಗಳೂರು-೫೬೦೦೫೬

KUVEMPU BHASHA BHARATHI PRADHIKARA
KBBP 0455 PRICE Rs. 500/-
9 789391 812614
ಪಾಶ್ಚಾತ್ಯ ತತ್ತ್ವಜ್ಞಾನದ ಇತಿಹಾಸ